




ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ನಡೆಸುತ್ತಿರುವ ಚಟುವಟಿಕೆಗಳನ್ನು ಸುಮಾರು ನಲವತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಗಮನಿಸುತ್ತಾ ಬಂದಿದ್ದೇನೆ......... ಸಾವಿರ ಸಾವಿರ ಸಂಖ್ಯೆಯ ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆದು. ಉಚಿತವಾಗಿ ಊಟ ವಸತಿಗಳನ್ನು ಕಲ್ಪಿಸಿ ಅನಕ್ಷರಸ್ಥರೋ. ಅಲ್ಪವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣವಿದ್ಯಾವಂತರಾಗುವ ಅವಕಾಶವನ್ನು ಕಲ್ಪಿಸಿದ್ದ ಮಠಾಧೀಶರ ಅಗ್ರಪಂಕ್ತಿಯಲ್ಲಿದ್ದಾರೆ ಶ್ರೀ ಸುತ್ತೂರು ಸ್ವಾಮಿಗಳವರು. ಅಷ್ಟಕ್ಕೆ ನಿಲ್ಲದೆ. ನೂರಾರು ಸಂಖ್ಯೆಯಲ್ಲಿ ಶಾಲೆ. ಕಾಲೇಜುಗಳನ್ನೂ ತಾಂತ್ರಿಕ ಶಿಕ್ಷಣಾಲಯಗಳನ್ನೂ ತೆರೆದು ವಿದ್ಯಾಭ್ಯಾಸದ ಅವಕಾಶದ ದಿಗಂತಗಳನ್ನೂ ಅವರು ವಿಸ್ತರಿಸಿದ್ದಾರೆ... ಶ್ರೀ ಸುತ್ತೂರು ಸ್ವಾಮಿಯವರ ಶಕ್ತಿಪೂರ್ಣವಾದ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ನೂರಾರು ವಿದ್ಯಾಸಂಸ್ಥೆಗಳು 'ವಿಶ್ವಮಾನವ' ರನ್ನು ಸೃಷ್ಟಿಸುವ ತೇಜೋಕೇಂದ್ರಗಳಾಗುತ್ತವೆ ಎಂಬುದು ನಮ್ಮ ಹಾರೈಕೆ. ...ಜಾತಿ ವರ್ಗ ಭೇದವಿಲ್ಲದೆ ಸ್ವಾಮೀಜಿಯವರು ಜನರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಅಧ್ಯಾತ್ಮದ ಹಿನ್ನೆಲೆಯಲ್ಲಿ ಲೋಕಸೇವೆಯ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದು ಇಂದಿನ ಇಂತಹ ಸಾಮಾಜಿಕ ಪರಿಸರದಲ್ಲಿಯೂ ಸಮಾಧಾನವನ್ನು ನೀಡುವ ವಿಷಯವಾಗಿದೆ... ಶ್ರೀ ಸುತ್ತೂರು ಶಿವರಾತ್ರಿರಾಜೇಂದ್ರ ಸ್ವಾಮಿಗಳವರು ನೂರು ವರ್ಷ ಬಾಳಿ ನಮ್ಮ ಈ ಆಸೆ ಪೂರ್ಣವಾಗಲು ಶ್ರಮಿಸುತ್ತಾರೆ ಎಂದು ಹಾರೈಸುತ್ತೇನೆ. ಜಗತ್ತಿನ ಎಲ್ಲ ಪ್ರಾಚೀನ ಮತ್ತು ಅರ್ವಾಚೀನ ಚೇತನಗಳೂ ಈ ಮಹತ್ಕಾರ್ಯಕ್ಕೆ ಬೇಕಾದ ಶಕ್ತಿಯನ್ನು ಅವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.



ಓಂ

ಶ್ರೀ ಗುರುಭ್ಯೋ ನಮಃ

# ಅರ್ಚನ

ಸುತ್ತೂರು ವೀರಸಿಂಹಾಸನಾಧೀಶ್ವರ
ಜಗದ್ಗುರು ಶ್ರೀ ಶ್ರೀ ಶಿವರಾತ್ರಿರಾಜೇಂದ್ರ
ಮಹಾಸ್ವಾಮಿಗಳವರ ದಿವ್ಯಸನ್ನಿಧಿಗೆ
ಪಟ್ಟಾಧಿಕಾರ ಸುವರ್ಣಮಹೋತ್ಸವದ
ಶುಭ ಸಂದರ್ಭದಲ್ಲಿ
ಭಕ್ತಿಪುರಸ್ಸರವಾಗಿ ಸಮರ್ಪಿಸಿದ
ಅಭಿನಂದನ ಗ್ರಂಥ

# ಅರ್ಚನ

೧೯೮೬

## ಸಂಪಾದನ ಸಲಹಾ ಸಮಿತಿ

# ಅರ್ಚನ

ಸಂಪಾದಕ

**ವಿದ್ವಾನ್ ಡಾ. ಎಚ್. ಪಿ. ಮಲ್ಲೇದೇವರು**

ಸ್ನಾತಕೋತ್ತರ ಸಂಸ್ಕೃತ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ

ಮತ್ತು

ಪ್ರಾಚ್ಯವಿದ್ಯಾಸಂಶೋಧನಾಲಯದ ನಿರ್ದೇಶಕ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪ್ರಕಾಶಕರು

ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ

ಪಟ್ಟಾಧಿಕಾರ ಸುವರ್ಣಮಹೋತ್ಸವ ಸಮಿತಿ

ಮೈಸೂರು–೫೭೦ ೦೦೪

*ARCHANA* : Felicitation volume presented to HIS HOLINESS JAGADGURU SRI SRI SHIVARATRI RAJENDRA MAHASWAMIJI OF SRI SUTTURU VEERASIMHASANA MUTT ON THE OCCASION OF THE GOLDEN JUBILEE YEAR OF HIS HOLINESS' ASCENSION OF THE VEERASIMHASANA OF SRI SUTTURU MUTT. Published by the H. H. Jagadguru Shri Shivaratri Rajendra Mahaswamiji Golden Jubilee Celebration Committee, Mysore. Edited by Vidvan Dr. H. P. Malledevarú, M.A. Ph.D. Pages: xx + 96 + 1097.



**Price : Rs. 150-00**

PHOTOS AND JACKET PRINTED AT
MANIPAL POWER PRESS, MANIPAL

PRINTED BY
G. H. KRISHNA MURTHY
MYSORE PRINTING AND PUBLISHING HOUSE
MYSORE

# ಮುನ್ನುಡಿ

ಶ್ರೀ ಸುತ್ತೂರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ನಡೆಸುತ್ತಿರುವ ಚಟುವಟಿಕೆಗಳನ್ನು ಸುಮಾರು ಸಲವತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಗಮನಿಸುತ್ತಾ ಬಂದಿದ್ದೇನೆ. ತಮ್ಮ ವರ್ಗಕ್ಕೇ ಸೇರಿದ ಸಹಸ್ರಾರು ವಿದ್ಯಾರ್ಥಿಗಳು ವಾರಾನ್ನ, ಭಿಕ್ಷಾನ್ನಗಳಿಂದ ಹೊಟ್ಟೆ ಹೊರೆದುಕೊಂಡು ವಿದ್ಯಾಭ್ಯಾಸವನ್ನು ನಡೆಸಲು ಹೋರಾಡುತ್ತಿರುವಾಗ ತಾವು ಮಾತ್ರ ಬೆಳ್ಳಿಯ ಪಲ್ಲಕ್ಕಿಯ ಮೇಲೆ ಕುಳಿತು ಚಿನ್ನದ ಕಿರೀಟವನ್ನು ಧರಿಸಿ ಅಡ್ಡ ಪಲ್ಲಕ್ಕಿ ಉತ್ಸವ ಮಾಡಿಸಿಕೊಳ್ಳುವುದು, ಪಾದಪೂಜೆ ಮಾಡಿಸಿಕೊಳ್ಳುವುದು, ಸಮಾರಾಧನೆಗಳನ್ನು ಏರ್ಪಡಿಸುವಂತೆ ಭಕ್ತಾದಿಗಳನ್ನು ಪ್ರೋತ್ಸಾಹಿಸಿ ಭೂರಿಭೋಜನಗಳನ್ನು ನಡೆಸುವುದು ಅನೇಕ ಜಗದ್ಗುರುಗಳ ನಿತ್ಯನಿಯಮವಾಗಿದ್ದ ಕಾಲದಲ್ಲಿ ಅವನ್ನೆಲ್ಲ ಬಹುಮಟ್ಟಿಗೆ ಬದಿಗಿಟ್ಟು ಸಾವಿರ ಸಾವಿರ ಸಂಖ್ಯೆಯ ಬಡವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ತೆರೆದು, ಉಚಿತವಾಗಿ ಊಟವಸತಿಗಳನ್ನು ಕಲ್ಪಿಸಿ ಅನಕ್ಷರಸ್ಥರೋ, ಅಲ್ಪವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣ ವಿದ್ಯಾವಂತರಾಗುವ ಅವಕಾಶವನ್ನು ಕಲ್ಪಿಸಿದ ಮಠಾಧೀಶರ ಅಗ್ರಪಂಕ್ತಿಯಲ್ಲಿದ್ದಾರೆ ಶ್ರೀ ಸುತ್ತೂರು ಸ್ವಾಮಿಯವರು. ಅಷ್ಟಕ್ಕೆ ನಿಲ್ಲದೆ ನೂರಾರು ಸಂಖ್ಯೆಯಲ್ಲಿ ಶಾಲೆ, ಕಾಲೇಜುಗಳನ್ನೂ ತಾಂತ್ರಿಕ ಶಿಕ್ಷಣಾಲಯಗಳನ್ನೂ ತೆರೆದು ವಿದ್ಯಾಭ್ಯಾಸದ ಅವಕಾಶದ ದಿಗಂತಗಳನ್ನು ಅವರು ವಿಸ್ತರಿಸಿದ್ದಾರೆ. ಜನಸಾಮಾನ್ಯರ ಮನೆಯ ಬಾಗಿಲಿಗೆ ಅಪೂರ್ವವೂ, ಅನರ್ಘ್ಯವೂ ಆದ ಜ್ಞಾನವನ್ನು ಜನರ ಭಾಷೆಯಲ್ಲಿ ಒಯ್ಯದೆ ಅವರನ್ನು ಮತಾಂತರದತ್ತ ನೂಕುವುದು, ನಿರಂತರವಾಗಿ ಅಜ್ಞಾನದಲ್ಲಿ ಉಳಿಸುವುದು ಮುಂತಾದುವಕ್ಕೆ ಕಾರಣರಾದ ಈ ದೇಶದ ಅನೇಕ ಉಚ್ಚವರ್ಗದ "ಜಗದ್ಗುರುಗಳ" ಅಕ್ಷಮ್ಯವಾದ ಅಪರಾಧವನ್ನು ತೊಡೆದುಹಾಕಲೋ ಎಂಬಂತೆ ಅನ್ನದಾಸೋಹ, ಜ್ಞಾನದಾಸೋಹಗಳ ಉಜ್ಜ್ವಲ ಕಾಯಕದಲ್ಲಿ ತೊಡಗಿರುವ ಇಂತಹ ಶ್ರೀಗಳು ಆದರಣೀಯರೂ, ಅಭಿನಂದನೀಯರೂ ಆಗಿದ್ದಾರೆ. ಅಂತಹವರ ಷಷ್ಟ್ಯಬ್ದಿಪೂರ್ತಿಯ ಸಂದರ್ಭದಲ್ಲಿ ಬೃಹದ್ಗ್ರಂಥವೊಂದನ್ನು ಹೊರ ತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ರೀ ಸ್ವಾಮಿಯವರು ಯಾವುದೋ ಒಂದು ಜಾತಿಯವರಿಗೆ ಎಂದು ವಿದ್ಯಾರ್ಥಿನಿಲಯಗಳನ್ನು ತೆರೆದಿದ್ದರೂ ಯಾವ ಜಾತಿಭೇದವೂ ಇಲ್ಲದೆ ಎಲ್ಲರೂ ಅಲ್ಲಿ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುತ್ತಾರೆ ಎಂಬುದನ್ನು ಕೇಳಿ ಸಂತೋಷವಾಗಿದೆ. ಇಲ್ಲಿ ಲೇಖನ ಬರೆದಿರುವ ನನ್ನ ಮಿತ್ರರು ತಮ್ಮ ಪ್ರೋತ್ಸಾಹದಿಂದ ಸ್ವಾಮಿಯವರ ಬಳಿಗೆ ಹೋದ ಮುಸಲ್ಮಾನ ವಿದ್ಯಾರ್ಥಿಗೂ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ದೊರೆತ ಸಂಗತಿಯನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ, ಮತ್ತೊಂದು ಜಾತಿಗೆ ಸೇರಿದ ಅಧ್ಯಾಪಕರೊಬ್ಬರಿಗೆ ಕೆಲಸ ಹೋಗೇಬಿಡುತ್ತದೆ ಎಂದಾಗ ಶ್ರೀಯವರು ಅರ್ಧರಾತ್ರಿಯ ಸುಮಾರಿಗೆ ಉಪಕುಲಪತಿಗಳ ಮನೆಗೆ ಹೋಗಿ ಅವರ ಕೆಲಸವನ್ನು ಉಳಿಸಿಕೊಟ್ಟ ಸಂಗತಿಯನ್ನೂ ಕೇಳಿದ್ದೇನೆ. ಹೀಗೆ ಜಾತಿ, ವರ್ಗ ಭೇದವಿಲ್ಲದೆ ಸ್ವಾಮೀಜಿ ಜನರ ಕಲ್ಯಾಣವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಅಧ್ಯಾತ್ಮದ ಹಿನ್ನೆಲೆಯಲ್ಲಿ ಲೋಕಸೇವೆಯ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದು ಇಂದಿನ ಇಂತಹ ಸಾಮಾಜಿಕ ಪರಿಸರದಲ್ಲಿಯೂ ಸಮಾಧಾನವನ್ನು ನೀಡುವ ವಿಷಯವಾಗಿದೆ.

ನಮ್ಮ ದೇಶ ಮಾತ್ರವಲ್ಲ, ಇಡೀ ಜಗತ್ತು ಅವನತಿಯ ಪಥವನ್ನು ಸರ್ವಕಾಲಕ್ಕೂ ತೊರೆದು, ಬೆಳಕಿನತ್ತ ನಡೆಯಬೇಕಾದರೆ ಈ ಮುಂದಿನ ಪಂಚಮಂತ್ರವನ್ನೂ ಸಪ್ತಸೂತ್ರವನ್ನೂ ಅನುಷ್ಠಾನಕ್ಕೆ ತರಲೇಬೇಕು ಎಂಬುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ದೀರ್ಘಕಾಲದ ಚಿಂತನ, ಮಂಥನದಿಂದ ನಾನು ರೂಪಿಸಿರುವ ಪಂಚಮಂತ್ರ, ಸಪ್ತಸೂತ್ರಗಳು ಹೀಗಿವೆ :

ಸ್ವಾಮಿ ವಿವೇಕಾನಂದರು ಹೇಳಿದರು :

> "ಯಾವ ವ್ಯಕ್ತಿಯೂ ಯಾವುದೇ ಧರ್ಮದಲ್ಲಿ ಹುಟ್ಟಿಲ್ಲ. ಪ್ರತಿಯೊಬ್ಬನ ಆತ್ಮದಲ್ಲಿಯೂ ಅವನದೇ ಆದ ಧರ್ಮವಿದೆ: ಈ ಜಗತ್ತಿನಲ್ಲಿ ಎಷ್ಟು ಜನ ವ್ಯಕ್ತಿಗಳಿದ್ದಾರೆಯೋ ಅಷ್ಟು ಧರ್ಮಗಳಿರಲಿ."

ಪ್ರತಿಯೊಂದು ಮಗುವೂ ಹುಟ್ಟುತ್ತಲೆ—ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಹುಟ್ಟುವಾಗ 'ವಿಶ್ವಮಾನವ'ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು, ಲೋಕ ಉಳಿದು, ಬಾಳಿ ಬದುಕಬೇಕಾದರೆ.

ಮಾನವವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ, ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನ್ನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪುಗುಂಪಾಗಿ ಒಡೆದಿವೆ, ಯುದ್ಧಗಳನ್ನು ಹೊತ್ತಿಸಿವೆ, ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲಕಾರಣವೆಂಬಂತೆ: ವಿಜ್ಞಾನ ಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನುಮೇಲೆ ಮತಮೌಢ್ಯ ಒಪ್ಪಿಗೆಯಾಗದು. ವಿನೋಬಾಭಾವೆಯವರು ಹಿಂದೆ ಒಮ್ಮೆ ಹೇಳಿದಂತೆ 'ಮತ ಮತ್ತು ರಾಜಕೀಯದ ಕಾಲ ಆಗಿಹೋಯಿತು. ಇನ್ನೇನಿದ್ದರೂ ಅಧ್ಯಾತ್ಮ ವಿಜ್ಞಾನದ ಕಾಲ ಬರಬೇಕಾಗಿದೆ.'

**ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ** ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ: ಮನುಜ ಮತ ಆ ಪಥ ಈ ಪಥ ಅಲ್ಲ: ವಿಶ್ವಪಥ. ಆ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ: ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ: ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ: ಎಲ್ಲವನ್ನೂ ಭಗವದ್‌ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಇನ್ನು ಸಪ್ತಸೂತ್ರಗಳೆಂದರೆ: (೧) "ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು. (೨) ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೊಲಿಕ್, ಪ್ರಾಟೆಸ್ಟೆಂಟ್, ಸಿಖ್, ನಿರಂಕಾರಿ ಇತ್ಯಾದಿ ವಿಭಜನೆಯನ್ನು ನಿರ್ನಾಮಮಾಡಬೇಕು. (೩) ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ, ವಿನಾಶಗೊಳಿಸಬೇಕು. (೪) 'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು, (೫) ಮತ 'ಮನುಜಮತ'ವಾಗಬೇಕು. ಪಥ 'ವಿಶ್ವಪಥವಾಗ'ಬೇಕು. ಮನುಷ್ಯ 'ವಿಶ್ವಮಾನವ'ನಾಗಬೇಕು. (೬) ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬರೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. (೭) ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ 'ದರ್ಶನ'ವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

ನನ್ನ "ಅನಿಕೇತನ" ಎಂಬ ಕವನವೂ ಇದನ್ನೇ ಹೇಳುತ್ತದೆ.

## ವಿಶ್ವಮಾನವ ಗೀತೆ—ಅನಿಕೇತನ

ಓ ನನ್ನ ಚೇತನ
ಆಗು ನೀ ಅನಿಕೇತನ :

೧

ರೂಪರೂಪಗಳನು ದಾಟಿ,
ನಾಮಕೋಟಿಗಳನು ಮೀಟಿ
ಎದೆಯ ಬಿರಿಯೆ ಭಾವದೀಟಿ,
ಓ ನನ್ನ ಚೇತನ,
ಆಗು ನೀ ಅನಿಕೇತನ

೨

ಸೂರು ಮತದ ಹೊಟ್ಟ ತೂರಿ
ಎಲ್ಲ ತತ್ತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ

೩

ಎಲ್ಲಿಯೂ ನಿಲ್ಲದಿರು
ಮನೆಯನೆಂದೂ ಕಟ್ಟದಿರು
ಕೊನೆಯನೆಂದೂ ಮುಟ್ಟದಿರು
ಓ ನನ್ನ ಚೇತನ,
ಆಗು ನೀ ಅನಿಕೇತನ

೪

ಅನಂತ ತಾನೆ ಅನಂತವಾಗಿ
ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗು
ಆಗು, ಆಗು, ಆಗು, ಆಗು
ಓ ನನ್ನ ಚೇತನ
ಆಗು ನೀ ಅನಿಕೇತನ

ಶ್ರೀ ಸುತ್ತೂರು ಸ್ವಾಮೀಜಿಯವರ ಶಕ್ತಿಪೂರ್ಣವಾದ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ನೂರಾರು ವಿದ್ಯಾಸಂಸ್ಥೆಗಳು 'ವಿಶ್ವಮಾನವ'ರನ್ನು ಸೃಷ್ಟಿಸುವ ತೇಜೋಕೇಂದ್ರಗಳಾಗುತ್ತವೆ ಎಂಬುದು ನಮ್ಮ ಹಾರೈಕೆ.

ಸ್ವಾಮೀಜಿಯವರ ಅರವತ್ತನೆಯ ಹುಟ್ಟುಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಹೊರತರಲಿರುವ ಗ್ರಂಥವನ್ನು ನೋಡಿ ನಾನು ಆಶ್ಚರ್ಯಚಕಿತನಾಗಿದ್ದೇನೆ. ಗ್ರಂಥಪ್ರಕಟಣೆಯೂ ಮಹಾ ಸಾಹಸವಾಗಿರುವ ಈ ಕಾಲದಲ್ಲಿ ಸಾವಿರದ ನೂರರಷ್ಟು ಪುಟಗಳಿರುವ ಈ ಗ್ರಂಥದ ಆಕಾರಬಾಹುಳ್ಯ ಮಾತ್ರವೇ ನನ್ನ ಆಶ್ಚರ್ಯಕ್ಕೆ ಕಾರಣವಲ್ಲ : ನಾಡಿನ ಅನೇಕಾನೇಕ ಸುಪ್ರಸಿದ್ಧ ವಿದ್ವಾಂಸರ ವಿದ್ವತ್ಪೂರ್ಣವಾದ ಲೇಖನಗಳನ್ನು ಸಂಗ್ರಹಿಸಲು ಸಂಪಾದಕರಾದ ಡಾ. ಎಚ್. ಪಿ. ಮಲ್ಲೇದೇವರು ಪಟ್ಟಿರಬಹುದಾದ ಶ್ರಮವನ್ನು ನೆನೆದು ಅವರು ಸಾಧಿಸಿರುವ ಸಿದ್ಧಿಯನ್ನು ಗಮನಿಸಿ ಕೂಡ ಆಶ್ಚರ್ಯಪಟ್ಟಿದ್ದೇನೆ. ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲ, ಇತರ ಧರ್ಮಗಳಿಗೂ ಸಂಬಂಧಿಸಿದಂತೆ ಅಮೂಲ್ಯವಾದ ಲೇಖನಗಳು ಈ ಅಭಿನಂದನಗ್ರಂಥದಲ್ಲಿ ಸೇರಿರುವುದನ್ನು ಗಮನಿಸಿದ್ದೇನೆ. ಈ ಗ್ರಂಥವನ್ನು ಇಷ್ಟು ಅಚ್ಚುಕಟ್ಟಾಗಿ ಸಂಪಾದಿಸಿರುವ ವಿದ್ವಾಂಸ ಮಿತ್ರರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಬದುಕಿನ ಬಗ್ಗೆ ಅಚಲವಾಗಿ ವಿಶ್ವಾಸವನ್ನು ತಳೆದಿರುವ ನಮ್ಮಂತಹವರ ಆಸೆ ಇಷ್ಟೆ : ನಮ್ಮ ಜನದ ಬದುಕು ಹಸನಾಗಬೇಕು, "ಪುರಾತನರು ಕಟ್ಟಿರುವ ಶಬ್ದಸೋಪಾನವನ್ನೇರಿ" ಬೆಳಕಿನ ಲೋಕವನ್ನು ಸೇರಿ ಅಲ್ಲಿ ಬಾಳಬೇಕು. ಶ್ರೀ ಸುತ್ತೂರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ನೂರುವರ್ಷ ಬಾಳಿ ನಮ್ಮ ಈ ಆಸೆ ಪೂರ್ಣವಾಗಲು ಶ್ರಮಿಸುತ್ತಾರೆ ಎಂದು ಹಾರೈಸುತ್ತೇನೆ. ಜಗತ್ತಿನ ಎಲ್ಲ ಪ್ರಾಚೀನ ಮತ್ತು ಅರ್ವಾಚೀನ ಮಹಾ ಚೇತನಗಳೂ ಈ ಮಹತ್ಕಾರ್ಯಕ್ಕೆ ಬೇಕಾದ ಶಕ್ತಿಯನ್ನು ಅವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಕುವೆಂಪು**

# ಪ್ರಕಾಶಕರ ಮಾತು

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಒಂಬತ್ತನೆಯ ಶತಮಾನದಲ್ಲಿ ಸಂಸ್ಥಾಪಿಸಿದ ಸುತ್ತೂರು ವೀರಸಿಂಹಾಸನ ಮಠವು ಶಾಂತಿ, ದಯೆ, ಸಾಹಿತ್ಯ, ಸತ್ಯಶುದ್ಧ ಕಾಯಕ, ತ್ರಿವಿಧದಾಸೋಹಗಳ ತವರಾಗಿದೆ. ಈ ದಿವ್ಯ ಪರಂಪರೆಗೆ ಸೇರಿದ ಇಪ್ಪತ್ತೆರಡನೆಯ ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಕರಕಮಲಸಂಜಾತರಾದ ಇಪ್ಪತ್ತಮೂರನೆಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಕಲ ಜೀವಾವಳಿಯ ಲೇಸಿಗಾಗಿ ಐದು ದಶಕಗಳಿಂದಲೂ ಸರ್ವಸ್ವವನ್ನೂ ಧಾರೆಯೆರೆದು ಎಸಗುತ್ತಿರುವ ಕಾರ್ಯಗಳು ಪವಾಡಸದೃಶವೇ ಸರಿ. ಈ ಮಹಾವಿಭೂತಿಗಳ ಅದ್ವಿತೀಯ ಸೇವೆಯ ಚಿರಂತನ ನೆನಹಿಗಾಗಿ ಅವರ ಪಟ್ಟಾಧಿಕಾರ ಸುವರ್ಣಮಹೋತ್ಸವವನ್ನು ಆಚರಿಸಿ, ಈ ಸಂದರ್ಭದಲ್ಲಿ ತಮ್ಮ ಕಿರುಕಾಣಿಕೆಯಾಗಿ ಒಂದು ಅಭಿನಂದನ ಸಂಪುಟವನ್ನು ಅರ್ಪಿಸಲು ಭಕ್ತವೃಂದದವರು, ಅಭಿಮಾನಿಗಳು ತೀರ್ಮಾನಿಸಿರುತ್ತಾರೆ.

ಈ ಸಂಪುಟವನ್ನು ಹೊರತರುವ ಗುರುತರ ಜವಾಬ್ದಾರಿಯನ್ನು ಕೇಳಿಕೊಂಡ ಕೂಡಲೇ ಡಾ. ಎಚ್.ಪಿ. ಮಲ್ಲೇದೇವರು ಅವರು ವಹಿಸಿಕೊಂಡು ವಿದ್ವತ್ಪೂರ್ಣವಾದ ಲೇಖನಗಳನ್ನು ಸಂಪಾದಿಸಿ ಪ್ರಕಟಿಸುತ್ತಿರುವುದು ಅವರ ಗುರುಭಕ್ತಿ ಹಾಗೂ ಸಾಹಿತ್ಯಸೇವೆಯ ದ್ಯೋತಕವಾಗಿದೆ. ಅಭಿನಂದನಸಂಪುಟಕ್ಕೆ ಮುನ್ನುಡಿಯನ್ನು ರಾಷ್ಟ್ರಕವಿ ಕುವೆಂಪುರವರು ದಯಪಾಲಿಸಿರುವುದು ಕೃತಿಗೆ ಕಲಶವಿಟ್ಟಂತಿದೆ. ಈ ಮಹತ್ಕೃತಿಯನ್ನು ಭಕ್ತಾದಿಗಳು ಮತ್ತು ಸಾರ್ವಜನಿಕರು ಸ್ವಾಗತಿಸಿ ಓದುವುದಾದರೆ ಪಟ್ಟಿರುವ ಶ್ರಮವೆಲ್ಲ ಸಾರ್ಥಕವಾದಂತೆಯೇ ಸರಿ.

ಮುನ್ನುಡಿಯನ್ನು ದಯಪಾಲಿಸಿದ ಜ್ಞಾನಪೀಠಪ್ರಶಸ್ತಿವಿಜೇತರೂ, ರಾಷ್ಟ್ರಕವಿಗಳೂ ಆದ ಸನ್ಮಾನ್ಯ ಡಾ. ಕುವೆಂಪು ಅವರಿಗೆ ಹಾರ್ದಿಕ ಕೃತಜ್ಞತೆಗಳು. ಈ ಅಭಿನಂದನ ಸಂಪುಟಕ್ಕೆ ಲೇಖನಗಳನ್ನು ಬರೆದುಕೊಟ್ಟ ಖ್ಯಾತಿವೆತ್ತ ಲೇಖಕರೆಲ್ಲರಿಗೂ ನಮ್ಮ ಅಭಿನಂದನೆಗಳು. ಈ ಬೃಹತ್ ಕೃತಿಯನ್ನು ಸಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಎಚ್. ರಾಮರಾವ್ ಮತ್ತು ಶ್ರೀ ಜಿ. ಎಚ್. ಕೃಷ್ಣಮೂರ್ತಿ ಮತ್ತು ಅವರ ಕೆಲಸಗಾರರಿಗೆ ನಮ್ಮ ನೆನಕೆಗಳು.

ಸಹಸ್ರ ಪುಟಗಳಿಗೂ ಮೀರಿದ ಈ ಹೊತ್ತಿಗೆಯನ್ನು ಸಂಪಾದಿಸಿ ಪ್ರಕಟಿಸಲು ಸರ್ವರೀತಿಯಿಂದಲೂ ಶ್ರಮಿಸಿರುವ ಪ್ರೊಫೆಸರ್ ಎಚ್.ಪಿ. ಮಲ್ಲೇದೇವರು ಅವರಿಗೆ ನಮ್ಮ ಅನೇಕಾನೇಕ ವಂದನೆಗಳು.

**ಪರಶಿವಮೂರ್ತಿ**
ನಿವೃತ್ತ ಇಂಜಿನಿಯರ್ ಮತ್ತು
ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ
ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಿತಿ,
ಮೈಸೂರು

# ಸಂಪಾದಕನ ಅರಿಕೆ

ಕಂಡುದೆಲ್ಲ ಪಾವನ, ಹೇಳಿತ್ತೆಲ್ಲ ಪರಮಬೋಧೆ
ಮುಟ್ಟಿತ್ತೆಲ್ಲವು ಪರುಷದ ಸೋಂಕು,
ಒಡನೆ ನುಡಿದವರು ಸದ್ಯೋನ್ಮುಕ್ತರು
ಸುಳಿದ ಸುಳುಹೆಲ್ಲ ಜಗತ್ಪಾವನ
ಮೆಟ್ಟಿದ ಧರೆಯೆಲ್ಲವು ಅವಿಮುಕ್ತಕ್ಷೇತ್ರ
ಸೋಂಕಿದ ಜಲವೆಲ್ಲವು ಪುಣ್ಯತೀರ್ಥಂಗಳು
ಶರಣೆಂದು ಭಕ್ತಿಮಾಡಿದವರೆಲ್ಲರು ಸಾಯುಜ್ಯರು
ಗುಹೇಶ್ವರಾ, ನಿಮ್ಮ ಶರಣರ ಸುಳುಹಿನ ಸೊಗಸನುಪಮಿಸಬಾರದು

ಅಲ್ಲಮಪ್ರಭುಗಳ ಈ ನುಡಿಗಡಣ ಸುತ್ತೂರು ವೀರಸಿಂಹಾಸನಮಠದ ಆದಿಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಮತ್ತು ಅವರ ಭವ್ಯಪರಂಪರೆಯಲ್ಲಿ ಬೆಳಗಿದ ಶ್ರೀ ಗುರುವರ್ಯರ ಹಿರಿಮೆಯನ್ನು ಅರುಹುತ್ತದೆ. ಸುತ್ತೂರು ಶ್ರೀಮಠದ ಇತಿಹಾಸವು ದಿವ್ಯಪರಂಪರೆಯನ್ನು ಹೊಂದಿದೆ. ಚೋಳರಾಜರ ನಮ್ರಕೋರಿಕೆ, ಗಂಗ ರಾಜರ ಗೌರವಪೂರ್ಣ ಅರಿಕೆ ಮತ್ತು ಪ್ರಜೆಗಳ ಭಕ್ತಿಭರಿತ ಪ್ರಾರ್ಥನೆಗೆ ಓಗೊಟ್ಟು ಒಂಬತ್ತನೆಯ ಶತಮಾನದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರು ತಮ್ಮ ತಪೋಭೂಮಿಯಾಗಿದ್ದ ಸುತ್ತೂರಿನಲ್ಲಿ ವೀರಸಿಂಹಾಸನ ಸಂಸ್ಥಾನ ಮಠವನ್ನು ಸಂಸ್ಥಾಪಿಸಿದರು.

ಅಂದಿನ ಸಮಾಜದಲ್ಲಿದ್ದ ಅನೀತಿ, ಅನ್ಯಾಯ, ಅಧಾರ್ಮಿಕತೆ, ಅಶ್ರದ್ಧೆ ಮತ್ತು ಅಸಮಾನತೆಗಳನ್ನು ಪರಿಹರಿಸಿ ನೀತಿ, ನ್ಯಾಯ, ಧರ್ಮ, ಶ್ರದ್ಧೆ ಮತ್ತು ಸಮಾನತೆಗಳನ್ನು ನೆಲೆಗೊಳಿಸಿದರು. ಸಾರಸಂಗ್ರಹವಾಗಿ ಹೇಳುವುದಾದರೆ ಅವರು ಮರ್ತ್ಯವನ್ನು ಮಹವನ್ನಾಗಿಸುವ ಮಣಿಹವನ್ನು ಸಾಧಿಸಿದರು. ಈ ಮಹೋನ್ನತ ಪೀಠಕ್ಕೆ ಅಧಿಪತಿಗಳಾದ ಮಠಾಧೀಶ್ವರರೆಲ್ಲರೂ ಶತಶತಮಾನಗಳಿಂದ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಮುನ್ನತಿಗೆ ಶ್ರಮಿಸುತ್ತ ಭಕ್ತಕೋಟಿಯನ್ನನುಗ್ರಹಿಸುತ್ತಿರುವುದು ನಾಡಿನ ಭಾಗ್ಯ.

ಅಷ್ಟೇ ಅಲ್ಲದೆ ಸಂಸ್ಥಾನಮಠದ ಜಗದ್ಗುರುಗಳಲ್ಲನೇಕರು ಸಾಹಿತ್ಯಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಇತ್ತಿದ್ದಾರೆ. 'ಪರಮಶಿವಾಧಿಕ್ಯಚೂಡಾಮಣಿ', 'ವೃಷಭೇಂದ್ರವಿಜಯಪುರಾಣ', 'ಶಿವಾಧಿಕ್ಯ ಶಿಖಾಮಣಿ', 'ವಚನಗಳು' ಮೊದಲಾದ ಕೃತಿಗಳನ್ನು ರಚಿಸಿರುವುದೇ ಅಲ್ಲದೆ, ಅನೇಕ ಉತ್ಕೃಷ್ಟ ಕೃತಿಗಳಿಗೆ ವ್ಯಾಖ್ಯಾನಗಳನ್ನೂ ಬರೆದು ಕನ್ನಡ ಸಾಹಿತ್ಯದ ಐಸಿರಿಯನ್ನು ಮತ್ತಷ್ಟು ಶ್ರೀಮಂತಗೊಳಿಸಿದ್ದಾರೆ.

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು 'ಶಿವಮಂತ್ರಮಹಿಮೆ' ಎಂಬ ಗ್ರಂಥವನ್ನು ಅನುಭಾವಪೂರ್ಣವಾಗಿ ಸಂಶೋಧಿಸಿ ಪ್ರಕಟಿಸಿದ್ದಾರೆ. ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಶ್ರೀಮಠದ ಗುರುಪರಂಪರೆಗೆ ಸೇರಿದ ಶ್ರೀ ಘನಲಿಂಗಿ ಶಿವಯೋಗಿಗಳ ವಚನಗಳನ್ನು ಪಾಂಡಿತ್ಯಪೂರ್ಣವೂ ವಿಸ್ತೃತವೂ ಆದ ಸಂಪಾದಕೀಯವನ್ನು ಬರೆದು ಪ್ರಕಟಿಸಿದ್ದಾರೆ.

ಅಧ್ಯಾತ್ಮಸಾಧನೆಯಲ್ಲಿ ಚರಮಗುರಿಯನ್ನು ಮುಟ್ಟಿದ ಕಲ್ಯಾಣದ ಮುಸುಡಿ ಚೌಡಯ್ಯನವರು ; ಮಹಾಮಹಿಮರಾದ ಮಲೆಯ ಮಹದೇಶ್ವರರು ಶ್ರೀಮಠದಲ್ಲಿ ಕೆಲಕಾಲವಿದ್ದುದು ಸುತ್ತೂರು ಜಗದ್ಗುರುವರ್ಯರ ಪ್ರಸಿದ್ಧಿಗೆ ದ್ಯೋತಕ. ಸುತ್ತೂರು ಶ್ರೀಮಠಕ್ಕೆ ಚೋಳರಾಜರು, ಗಂಗರಾಜರು, ವಿಜಯನಗರದ ಅರಸರು, ಮೈಸೂರು ರಾಜರು ಭಕ್ತಿಕಾಣಿಕೆಯನ್ನು ಸಲ್ಲಿಸಿ ತಮ್ಮ ಗೌರವವನ್ನರ್ಪಿಸಿರುವುದು ಶ್ರೀ ಗುರುಪರಂಪರೆಯ ಹಿರಿಮೆಗೆ ಸಾಕ್ಷಿ.

೨೨ನೆಯ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಶಿಸ್ತು, ಸಂಘಟನೆ.

ಕಾರ್ಯತತ್ಪರತೆ ಮತ್ತು ಅನುಷ್ಠಾನನಿಷ್ಠೆಗಳಿಗೆ ಹೆಸರಾದವರು. ಅವರು ತಮ್ಮ ಕಾಲವನ್ನೆಲ್ಲ ಮಹಾಮಂತ್ರಜಪ ಮತ್ತು ಮಂತ್ರ ಬರವಣಿಗೆಗೆ ವಿನಿಯೋಗಿಸಿ ಅಸದೃಶ ಸಾಧನೆಯಿಂದ ಮಂತ್ರಮಹರ್ಷಿಗಳೇ ಆದರು.

"Lives of great men all remind us
We can make our lives sublime"

ಎಂಬ ಕವಿವಾಣಿಯಂತೆ ಅವರ ಜೀವನ ಜಗತ್ತಿಗೆ ದಾರಿದೀವಿಗೆಯಾಗಿದೆ. ಅಂತಹ ಮಹಾಮಹಿಮರ ಕರಕಮಲ ಸಂಜಾತರಾಗಿರುವವರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಆದಿಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ದಿವ್ಯಪ್ರಸಾದಮಹಿಮೆಯಿಂದ ಕಾರಣಿಕ ಶಿಶುವಾಗಿ ಸಂಜನಿಸಿದ ಅವರು ಮರುಗದೆಲೆ ಹುಟ್ಟುಹುಟ್ಟುತ್ತಲೆ ಪರಿಮಳವನ್ನು ಬೀರುವಂತೆ ಸೇವಾಧರ್ಮದ ಹಿರಿಮೆಯ ಕಂಪನ್ನು ಮೈಗೂಡಿಸಿಕೊಂಡೇ ಉದಿಸಿ ಕೇವಲ ೧೨ನೆಯ ಬಾಲ್ಯ ವಯಸ್ಸಿನಲ್ಲೇ ಪೀಠಾಧಿಪತಿಗಳಾದರು. ಮಹಾ ಕರುಣಾಳುಗಳೂ, ಸತ್ಯಸಂಕಲ್ಪ ಶಕ್ತಿಮಹಿಮಾನ್ವಿತರೂ ಆದ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರು ಮಾಡಿರುವ ಸಾಧನೆ, ಸಾಧಿಸಿರುವ ಸಿದ್ಧಿ ಉಪಮಾತೀತವಾದುವು.

ಬಡವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಪೂಜ್ಯರು ಸ್ಥಾಪಿಸಿರುವ ಉಚಿತ ಅಶನ-ವಸತಿಗಳನ್ನೊಳಗೊಂಡ ಮೂವತ್ತು ಪ್ರಸಾದನಿಲಯಗಳು, ಐವತ್ತಕ್ಕಿಂತ ಮಿಗಿಲಾಗಿರುವ ಶೈಕ್ಷಣಿಕ ಸಂಸ್ಥೆಗಳು, ಹದಿನೈದು ಪೋಷಿತಸಂಸ್ಥೆಗಳು, ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಶ್ರೀ ಶಿವರಾತ್ರೀಶ್ವರ ಆರೋಗ್ಯಧಾಮ, ಅಖಿಲಭಾರತ ಶರಣಧರ್ಮ ಪರಿಷತ್ ಇತ್ಯಾದಿಗಳು ಶ್ರೀಶ್ರೀಗಳವರ ಕ್ರಿಯಾಸಿದ್ಧಿಗೆ ಸಾಕ್ಷಿ. ಜಗದ್ಗುರುವರ್ಯರೇ ಸ್ಥಾಪಿಸಿರುವ ಬಾಲಜಗತ್ತಿನಲ್ಲಿ ಒಂದು ವರ್ಷದ ಮಗುವನ್ನು ಬಿಟ್ಟರೆ, ಈ ಸಂಸ್ಥೆಗಳಲ್ಲಿ ಆ ಮಗು ವಿದ್ಯಾಭ್ಯಾಸ ಮಾಡಿ ಬಿ.ಎ., ಬಿ.ಎಸ್‌ಸಿ, ಬಿ.ಕಾಂ., ಫಾರ್ಮಿಕಾಲಜಿ, ಇಂಜಿನಿಯರಿಂಗ್, ಆಯುರ್ವೇದ, ಮೆಡಿಕಲ್ ಮೊದಲಾದ ಡಿಗ್ರಿಗಳನ್ನು ಶ್ರೀಗಳು ಸಂಸ್ಥಾಪಿಸಿರುವ ಶೈಕ್ಷಣಿಕ ಸಂಸ್ಥೆಗಳ ಮೂಲಕವೇ ಪಡೆಯಬಹುದು. ಹೀಗೆ ಶೈಕ್ಷಣಿಕ ಸಂಸ್ಥೆಗಳ ಮೂಲಕ ಜ್ಞಾನದಾಸೋಹವನ್ನೂ, ಪ್ರಸಾದನಿಲಯಗಳ ಮೂಲಕ ಅನ್ನದಾಸೋಹವನ್ನೂ, ಧರ್ಮಗ್ರಂಥಗಳ ಪ್ರಕಟಣೆ ಮತ್ತು ಭಕ್ತಕೋಟಿಯನ್ನನು ಗ್ರಹಿಸುವುದರ ಮೂಲಕ ಧರ್ಮದಾಸೋಹವನ್ನು ಮಾಡುತ್ತಾ, ಮಾಡಿದೆವೆಂಬ ಭಾವ ಮನದಲ್ಲಿ ಮೂಡಲಿಕ್ಕೂ ಆಸ್ಪದವನ್ನೀಯದ ಶ್ರೀಗಳವರ ದೇಶಸೇವೆ ಹಾಗೂ ಈಶಸೇವೆ 'ಸೇವಾಧರ್ಮಃ ಪರಮಗಹನಃ' ಎಂಬ ಕವಿವಾಣಿ ಹಾಗೂ "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ" ಎಂಬ ಉಪನಿಷದ್ವಾಣಿಗೆ ನಿದರ್ಶನವಾಗಿದೆ.

ಕಾಷಾಯವಸನ, ಶರಚ್ಚಂದ್ರಧವಲ ತ್ರಿಪುಂಡ್ರ, ಮಂದಸ್ಮಿತಯುಕ್ತವಾದ ಸುಪ್ರಸನ್ನಮುಖ, ಸೌಜನ್ಯಪೂರ್ಣ ಸ್ವಭಾವ, ಹಿತಮಿತಮಧುರ ವಚನ, ಪ್ರಶಾಂತಪೂಜಾನುಷ್ಠಾನ, ಸದಾ ಕಾರ್ಯತತ್ಪರತೆ, ತ್ರಿಕರಣಪೂರ್ವಕವಾಗಿ ಸಕಲರಿಗೆ ಸರ್ವದಾ ಲೇಸ ಬಯಸುವ, ಲೇಸನ್ನೇ ಮಾಡುವ ಸಾತ್ತ್ವಿಕ ಸಂಪನ್ನತೆ—ಇವು ಶ್ರೀಗಳ ದರ್ಶನಭಾಗ್ಯ ಪಡೆದವರ ಮೇಲೆ ನಿರಂತರವಾಗಿ ಪರಿಣಾಮ ಬೀರುವುವು. ಹಿಂದುಗಳು, ಮುಸ್ಲಿಮರು, ಕ್ರೈಸ್ತರು ಎಲ್ಲ ಧರ್ಮಗಳವರೂ ಶ್ರೀಗಳವರ ಬಗೆಗೆ ಗೌರವ, ಪೂಜ್ಯಭಾವನೆ ಹೊಂದಿರುವುದು "ಇವರು ನಮ್ಮವರು, ಇವರು ನಮ್ಮವರು ಎಂದೆನಿಸು" ಎಂಬ ಬಸವಣ್ಣನವರ ನುಡಿಗೆ ಮತ್ತು 'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ಸಂಸ್ಕೃತ ನಾಣ್ಣುಡಿಗೆ ನಿದರ್ಶನ.

ಎಲ್ಲ ಸಮಾಜದ ಶ್ರೀಗುರುವರ್ಯರನ್ನು ಪ್ರೀತಿಗೌರವಗಳಿಂದ ಕಾಣುತ್ತ, ಪರಸ್ಪರ ಮೈತ್ರಿಯನ್ನು ಬೆಳೆಸಿಕೊಂಡು ಯತಿಗಳಲ್ಲಿರಬೇಕಾದ ಸಾಮರಸ್ಯ, ಸದ್ಭಾವ, ಸಂಯಮಗಳಿಗೆ ಶ್ರೀಗಳು ಖ್ಯಾತಿವೆತ್ತಿದ್ದಾರೆ.

ಇಂತಹ ಪರಮಗುರು ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಪೀಠಾರೋಹಣಮಾಡಿದ ಐವತ್ತನೆಯ ವರ್ಷದ ಶುಭಮಹೋತ್ಸವದ ಸಂಸ್ಮರಣೆಗಾಗಿ **ಅರ್ಚನ** ಅಭಿನಂದನಗ್ರಂಥವನ್ನು ಅರ್ಪಿಸಬೇಕೆಂಬ ಹೆಬ್ಬಯಕೆಯಿಂದ ವಿಖ್ಯಾತಸಾಹಿತಿಗಳು, ಶೈಕ್ಷಣಿಕತಜ್ಞರು ಮತ್ತು ಗಣ್ಯರು ಇವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿರುವ ಸಮಿತಿಯ ಸದಸ್ಯರಿಗೆ ಕಾರ್ಯಗೌರವಗಳು ಹೆಚ್ಚಾಗಿದ್ದುದರಿಂದಲೂ, ಎಲ್ಲರೂ ಒಟ್ಟಾಗಿ ಕಲೆತು ಸಂಪಾದನಕಾರ್ಯಮಾಡಲು ಬಿಡುವು ದೊರೆಯದುದರಿಂದಲೂ ಆ ಸಮಿತಿಯು 'ಸಂಪಾದನಸಲಹಾಸಮಿತಿ'ಯಾಗಿ, ಸಂಪಾದನಕಾರ್ಯಗೈಯುವ ಗುರುತರ ಜವಾಬ್ದಾರಿ ನನ್ನ ಪಾಲಿಗೆ ಲಭಿಸಿತು.

'ಅರ್ಚನ' ಗ್ರಂಥವು ಆರು ಸ್ಥಳಗಳಿಂದ (ಭಾಗಗಳಿಂದ) ಕೂಡಿದೆ. ಪ್ರಥಮ ಭಾಗದಲ್ಲಿ ಶ್ರೀಮಠ ಮತ್ತು ಜಗದ್ಗುರುವರ್ಯರ ಬಗೆಗೆ ರಚಿತವಾದ ಕವನಗಳನ್ನೂ; ಮತ್ತು ಸುತ್ತೂರು ಶ್ರೀಮಠದ ಗುರುಪರಂಪರೆ ಮತ್ತು ಪರಮಪೂಜ್ಯ ಶ್ರೀ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಕಾರ್ಯಸಾಧನೆಗಳನ್ನು ಪರಿಚಯಿಸುವ ಲೇಖನಗಳು ಮತ್ತು ಗಣ್ಯಧುರೀಣರ ಅಭಿಪ್ರಾಯಗಳನ್ನೂ; ದ್ವಿತೀಯ ಭಾಗದಲ್ಲಿ ವೀರಶೈವಸಾಹಿತ್ಯ ಪ್ರಕಾರಗಳ ಸ್ಥೂಲಸಮೀಕ್ಷೆಯನ್ನೂ; ಮೂರನೆಯ ಭಾಗದಲ್ಲಿ ನಡೆ-ನುಡಿಗಳೊಂದಾಗಿ ಅನುಭಾವದ ಮೂರ್ತಿಗಳಾದ ಶರಣರ ಜೀವನ ಸಾಧನೆ ಸಿದ್ಧಿಗಳ ಬಗೆಗೆ ಲೇಖನಗಳನ್ನೂ; ನಾಲ್ಕನೆಯ ಭಾಗದಲ್ಲಿ ವೀರಶೈವದರ್ಶನದ ವಿಶಿಷ್ಟ ವಿಷಯಗಳನ್ನೂ; ಐದನೆಯ ಭಾಗದಲ್ಲಿ ವೀರಶೈವ ಮತ್ತು ಭಾರತೀಯ ಹಾಗೂ ಭಾರತೀಯೇತರ ದರ್ಶನಗಳ ತುಲನಾತ್ಮಕ ಅಧ್ಯಯನಗಳ ಬಗೆಗೆ ಲೇಖನಗಳನ್ನೂ; ಆರನೆಯ ಭಾಗದಲ್ಲಿ 'ಪ್ರಕೀರ್ಣಕ' ಶಿರೋನಾಮೆಯಲ್ಲಿ ಮೇಲ್ಕಂಡ ಐದು ಭಾಗಗಳಲ್ಲಿ ಸಕ್ರಮವಾಗಿ ಬರಬೇಕಾಗಿದ್ದರೂ ತಡವಾಗಿ ಬಂದು ಸೇರಿದ ಲೇಖನಗಳನ್ನೂ, ಇತರ ಉಪಯುಕ್ತ ಲೇಖನಗಳನ್ನೂ ಸಂಯೋಜಿಸಲಾಗಿದೆ.

ಆಯಾ ವಿಷಯಗಳಲ್ಲಿ ತಜ್ಞರಾದ ವಿದ್ವಾಂಸರನ್ನು ಪುನಃ ಪುನಃ ಪ್ರಾರ್ಥಿಸಿ ಅವರಿಂದ ಲೇಖನಗಳನ್ನು ಬರೆಸಿ ಸಂಯೋಜಿಸಲು ಸರ್ವವಿಧದಲ್ಲಿಯೂ ಪ್ರಯತ್ನಿಸಲಾಗಿದೆ. 'ಅರ್ಚನ'ವು ಸಂಶೋಧಕರಿಗೆ ಆಕರಗ್ರಂಥವಾಗುವಂತೆಯೂ, ಸಾಹಿತ್ಯ ಮತ್ತು ಧರ್ಮದಲ್ಲಿ ಆಸಕ್ತಿಯುಳ್ಳವರಿಗೆ ಅಧ್ಯಯನ ಮತ್ತು ಮನನಯೋಗ್ಯ ಗ್ರಂಥವಾಗುವಂತೆಯೂ, ಭಕ್ತರಿಗೆ ಭಾವುಕತೆಯನ್ನು ಪ್ರವರ್ಧಿಸುವ ಕೃತಿಯಾಗುವಂತೆಯೂ, ಮಹತ್ತ್ವಪೂರ್ಣ ಐತಿಹಾಸಿಕ ಗ್ರಂಥವಾಗುವಂತೆಯೂ ಪ್ರಯತ್ನಿಸಲಾಗಿದೆ. ಬೆಂಗಳೂರು, ಧಾರವಾಡ, ಹುಬ್ಬಳ್ಳಿ, ಗುಲ್ಬರ್ಗ ಮೊದಲಾದ ಪಟ್ಟಣಗಳಿಗೆ ಹೋಗಿ ವಿದ್ವಾಂಸರನ್ನು ಪ್ರತ್ಯಕ್ಷ ಸಂದರ್ಶಿಸಿ ಲೇಖನಗಳನ್ನು ಬರೆದುಕೊಡಲು ನಮ್ರತೆಯಿಂದ ಅರಿಕೆ ಮಾಡಿದಾಗ ಬಹುಸಂಖ್ಯಾಕ ಮಿತ್ರರು ಆತ್ಮೀಯತೆಯಿಂದ ಲೇಖನಗಳನ್ನು ಬರೆದು ಕಳಿಸಿದ್ದಾರೆ.

ಮುನ್ನುಡಿಯನ್ನು ಬರೆದುಕೊಟ್ಟಿರುವ ಜ್ಞಾನಪೀಠಪ್ರಶಸ್ತಿವಿಜೇತರೂ, ಕನ್ನಡ ಸಾಹಿತ್ಯದ ಧ್ರುವತಾರೆಯಂತಿರುವವರೂ, ರಾಷ್ಟ್ರಕವಿಗಳೂ, ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಆದ ಸನ್ಮಾನ್ಯ ಶ್ರೀ ಕುವೆಂಪು ಅವರಿಗೆ ಹಾರ್ದಿಕ ಪ್ರಣಾಮಗಳು.

ಸುವರ್ಣಮಹೋತ್ಸವಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀಯುತ ಪರಶಿವಮೂರ್ತಿಯವರು 'ಪ್ರಕಾಶಕರ ನುಡಿ'ಯನ್ನು ಬರೆದುಕೊಟ್ಟು ಪ್ರೋತ್ಸಾಹಿಸಿದ್ದಾರೆ.

ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿದ್ಯಾಲಯದ ಪ್ರಾಂಶುಪಾಲರಾದ ಸನ್ಮಾನ್ಯ ಶ್ರೀ ಕೆ. ಎಂ. ರೇವಣಸಿದ್ಧಯ್ಯನವರು ಇಪ್ಪತ್ತೆರಡು ಲೇಖನಗಳನ್ನು ಲೇಖಕರಿಂದ ಬರೆಸಿಕೊಟ್ಟು ಸಹಾಯವೆಸಗಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯರು ಆರು ಲೇಖನಗಳನ್ನು ಮಿತ್ರರಿಂದ ಬರೆಸಿಕೊಟ್ಟು ಸಹಕರಿಸಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ಪ್ರಭುಶಂಕರ್ ಅವರ ಸಹಕಾರವನ್ನೂ ಸ್ಮರಿಸುತ್ತೇನೆ.

ಸುವರ್ಣಮಹೋತ್ಸವಸಮಿತಿಯ ಗೌರವಾನ್ವಿತ ಸದಸ್ಯರ ಮತ್ತು ಅಧ್ಯಕ್ಷರ ಸಂಪೂರ್ಣ ಸಹಕಾರವನ್ನು ಕೃತಜ್ಞತೆಯಿಂದ ಸಂಸ್ಮರಿಸುತ್ತೇನೆ. ಕಾರ್ಯಗೌರವದ ಮಧ್ಯೆಯೂ ಬಿಡುವು ಮಾಡಿಕೊಂಡು ಲೇಖನಗಳನ್ನು ಬರೆದುಕೊಟ್ಟ ಲೇಖಕರೆಲ್ಲರಿಗೂ ಕೃತಜ್ಞ. ಭಾವಚಿತ್ರಗಳನ್ನು ಸುಂದರವಾಗಿ ತೆಗೆಯಲು ಶ್ರಮಿಸಿದ ಮಿತ್ರರಾದ ಶ್ರೀ ಸಿ. ಎಸ್. ಶ್ರೀನಿವಾಸನ್ ಅವರ ಸಹಕಾರವನ್ನು ನೆನೆಯುತ್ತೇನೆ. ಈ ಬೃಹತ್‌ಕೃತಿಯನ್ನು ಹೊರತರುವಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ ಆತ್ಮೀಯ ಮಿತ್ರರೆಲ್ಲರಿಗೂ ವಂದನೆಗಳು.

ಈ ಗ್ರಂಥವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಮಾಲೀಕರೂ ಸೌಜನ್ಯದ ಮೂರ್ತಿಗಳೂ ಆದ ಮಾನ್ಯ ಶ್ರೀ ಜಿ.ಎಚ್. ರಾಮರಾವ್ ಮತ್ತು ಶ್ರೀ ಜಿ.ಎಚ್. ಕೃಷ್ಣಮೂರ್ತಿ ಅವರಿಗೆ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ; ಚಿತ್ರಗಳು ಮತ್ತು ರಕ್ಷಾಕವಚವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಣಿಪಾಲ್ ಪ್ರಿಂಟಿಂಗ್ ಪ್ರೆಸ್‌ನ ಮಾಲಿಕರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ಆಭಾರಿಯಾಗಿದ್ದೇನೆ.

ಸಹೃದಯರು 'ಅರ್ಚನ' ಕೃತಿಯನ್ನು ಓದಿ ಆನಂದಿಸಿ ಆಪ್ಯಾಯನ ಹೊಂದಲಿ, ಜಗದ್ಗುರುಗಳ ಕರುಣಾ ಪೂರ್ಣ ಆಶೀರ್ವಾದಗಳಿಂದ ಕೃತಾರ್ಥರಾಗಲಿ ಎಂದು ಆಶಿಸಿ, ಯಾವ ಮಾತೃಹೃದಯದ ಕಾರುಣ್ಯಪೂರ್ಣರಕ್ಷೆ ಬಾಲ್ಯದಿಂದಲೂ ನನ್ನನ್ನು ರಕ್ಷಿಸುತ್ತಿರುವುದೋ, ಆ ಪರಮಗುರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ಚರಣಾರವಿಂದಗಳಿಗೆ ಎಂದಿಗೂ ಬಾಡದೆ ನಿರಂತರ ಪರಿಮಳ ಸೂಸುವ ಈ 'ಅರ್ಚನ' ಕುಸುಮವನ್ನು ಅರ್ಚನಪೂರ್ವಕವಾಗಿ, ಭಕ್ತಿಪುರಸ್ಸರವಾಗಿ, ಸುವರ್ಣಮಹೋತ್ಸವ ಸಮಿತಿಯ ಪರವಾಗಿ ಸಮರ್ಪಿಸುತ್ತೇನೆ.

**ಎಚ್. ಪಿ. ಮಲ್ಲೇದೇವರು**
ಸಂಪಾದಕ

# ಪರಿವಿಡಿ



## ಜಗದ್ಗುರುವರ್ಯರ ಬಗೆಗೆ ಅಭಿಪ್ರಾಯಗಳು

## ವೀರಶೈವ ಸಾಹಿತ್ಯ ಸಮೀಕ್ಷೆ

## ಶರಣರ ದೀಪ್ತಿ



## ವೀರಶೈವದರ್ಶನ

## ವೀರಶೈವ ಹಾಗೂ ಇತರ ದರ್ಶನಗಳ ತೌಲನಿಕ ಅಧ್ಯಯನ



## ಪ್ರಕೀರ್ಣಕ


# ಶ್ರೀಮಠ ಮತ್ತು ಶ್ರೀಗುರುಪರಂಪರೆ




ಕರ್ತೃ ಗದ್ದುಗೆಯ ಮುಂದಣ ಪ್ರಕೃತಿಯ ಪ್ರಶಾಂತ ಪ್ರದೇಶದಲ್ಲಿ ಜಗದ್ಗುರುವರ್ಯರು.



ಹಿರಿಯ ಜಗದ್ಗುರುಗಳವರು.



ಸುತ್ತೂರು ವೀರಸಿಂಹಾಸನ ಸಂಸ್ಥಾಪಕರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು.



ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಗದ್ದುಗೆ.



ಪರಮಪೂಜ್ಯ ಜಗದ್ಗುರುಗಳಿಂದ ಸಿಂಹಾಸನಾರೋಹಣ.



25-2-1928ರಂದು ಪಟ್ಟಾಭಿಷೇಕ ಸಂದರ್ಭದಲ್ಲಿ ಪೂಜ್ಯರು ಇತರ ಶ್ರೀಗಳವರೊಡನೆ.




ಸುತ್ತೂರು ವೀರಸಿಂಹಾಸನ ಮಠದ ಜಗದ್ಗುರುತ್ರಯರು.
(ಇಂದಿನ ಜಗದ್ಗುರುಗಳು ಅವರ ಗುರುಗಳು ಹಾಗೂ ಪರಮಗುರುಗಳೊಡನೆ)



ಜಗದ್ಗುರುಗಳ ರಜತಾಂದೋಳಿಕಾ ಮಹೋತ್ಸವ.



ಪೂಜ್ಯ ಜಗದ್ಗುರುವರ್ಯರು.



ಹಿರಿಯ ಜಗದ್ಗುರುಗಳವರ ಗದ್ದುಗೆಯ ಸಾನ್ನಿಧ್ಯದಲ್ಲಿ.



ಶ್ರೀಮಠದಲ್ಲಿರುವ ಮಲೆಯ ಮಹದೇಶ್ವರ ಸ್ಮಾರಕ ಮಂದಿರ.



ಮಲೆಯ ಮಹದೇಶ್ವರರ ಸಂಕಲ್ಪದಂತೆ ಸುತ್ತಿದ (ಬೀಸಿದ) ರಾಗಿಕಲ್ಲು.




ಆದಿಜಗದ್ಗುರುಗಳವರ ಉತ್ಸವಮೂರ್ತಿ.



ಕಪಿಲಾನದಿ ತೀರದಲ್ಲಿ ಆದಿಜಗದ್ಗುರುಗಳು ತಪೋನಿರತರಾಗಿದ್ದ ಬಂಡೆ. (ಸುತ್ತೂರು)



ಸುತ್ತೂರಿನ ಕರ್ತೃಗದ್ದುಗೆಯ ಹೊರನೋಟ.



ಸುತ್ತೂರುಶ್ರೀಮಠ, ಸುತ್ತೂರು.



ಪಾವನ ಕಪಿಲೆಯ ತೀರದಿಂದ ಶ್ರೀ ಕ್ಷೇತ್ರ ದೃಶ್ಯ.



ಆದಿಜಗದ್ಗುರುವರ್ಯರ ಗದ್ದುಗೆಗೆ ಜಾತ್ರಾ ಸಂದರ್ಭದ ವಿಶೇಷ ಅಲಂಕಾರ.



ಗದ್ದುಗೆಯಲ್ಲಿ ಪೂಜಾನಿರತರಾದ ಪೂಜ್ಯ ಶ್ರೀಗಳವರು.



ಶ್ರೀಮಠದ ಇತಿಹಾಸದ ಬಗೆಗಿನ ಶಾಸನಗಳು.



ಶ್ರೀಮಠದ ಆವರಣದಲ್ಲಿ ಚೋಳರಾಜರು ಕಟ್ಟಿಸಿದ ಸೋಮೇಶ್ವರ ದೇವಾಲಯ.




ಜೀರ್ಣೋದ್ಧಾರ ಮಾಡಿರುವ ಸೋಮೇಶ್ವರ ದೇವಾಲಯ.



ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು
(ಇಂದಿನ ಜಗದ್ಗುರುಗಳ ಪಿತೃವರ್ಯರು)



ಆದಿಜಗದ್ಗುರುವರ್ಯರ ಗದ್ದುಗೆಯಲ್ಲಿ ಅನ್ನಬ್ರಹ್ಮೋತ್ಸವ ಪೂಜೆ.



ದಾಸೋಹವೀಕ್ಷಣೆಯಲ್ಲಿ ದಾಸೋಹಿ ಜಗದ್ಗುರುಗಳವರು.



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಉತ್ಸವಮೂರ್ತಿಯ ಸನ್ನಿಧಿಯಲ್ಲಿ ಜಗದ್ಗುರುದ್ವಯರು.



ಆದಿಜಗದು ರುಗಳ ಉತ ವ ಸಂದರ್ಭದಲಿ ಪೂಜ, ಜಗದು ರುಗಳವರು.



ಮೈಸೂರಿನಲ್ಲಿ ಆದಿಜಗದ್ಗುರುಮೂರ್ತಿಯನ್ನು ಬಿಜಯಂಗೈಸುವಿಕೆ.



ಆದಿಜಗದ್ಗುರುವರ್ಯರ ಜಾತ್ರಾ ಮಹೋತ್ಸವದಲ್ಲಿ ಸುತ್ತೂರಿನಲ್ಲಿ ದನಗಳ ಪರಿಶೆ.



ಸಿಂಹಾಸನಾರೋಹಣ ಮಾಡಿದ ಜಗದ್ಗುರುಗಳವರಿಂದ ಭಕ್ತಾದಿಗಳಿಗೆ ಆಶೀರ್ವಚನ.



ಸುತ್ತೂರು ಶ್ರೀಮಠದ ಆದಿಜಗದ್ಗುರುಗಳ ರಥೋತ್ಸವ



ಆದಿಜಗದ್ಗುರುವರ್ಯರ ಜಯಂತ್ಯುತ್ಸವ ಸಂದರ್ಭದಲ್ಲಿ ಸಿದ್ಧಗಂಗಾಮಠಾಧೀಶ್ವರರಾದ ಡಾ. ಶಿವಕುಮಾರಸ್ವಾಮಿಗಳವರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ. ಎಸ್. ಹೆಗ್ಡೆ ಅವರೊಡನೆ ಜಗದ್ಗುರುಗಳವರು.



ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಶ್ರೀತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಜಗದ್ಗುರುಗಳವರೊಡನೆ



ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳವರು, ಸಿದ್ಧಗಂಗಾ ಕ್ಷೇತ್ರದ ಅಧಿಪತಿಗಳವರು ಮತ್ತು ಜಗದ್ಗುರುಗಳವರು.



ಸಿರಿಗೆರೆ ಜಗದ್ಗುರುಗಳವರೊಡನೆ ಜಗದ್ಗುರುಗಳವರು.



ಚಿತ್ರದುರ್ಗ ಮತ್ತು ಸುತ್ತೂರಿನ ಜಗದ್ಗುರುದ್ವಯರು.



ಜಗದ್ಗುರುದ್ವಯರ ದಿವ್ಯಸನ್ನಿಧಿಯಲ್ಲಿ ಶಿವರಾತ್ರಿದೇಶಿಕೇಂದ್ರಸ್ವಾಮಿಯವರು.



ಉಜ್ಜೈಯಿನಿ ಜಗದ್ಗುರುಗಳು ಸುತ್ತೂರು ಶ್ರೀಮಠಕ್ಕೆ ಭೇಟಿ ಇತ್ತಾಗ.



ಸಿದ್ಧಗಂಗಾ ಮಠಾಧೀಶರಾದ ಡಾ॥ ಶಿವಕುಮಾರ ಸ್ವಾಮಿಗಳವರೊಡನೆ ಶ್ರೀಗಳವರು, ಆದಿಜಗದ್ಗುರುಗಳವರ ಜಯಂತಿ ಮಹೋತ್ಸವ ಸಂದರ್ಭದಲ್ಲಿ.



ಪೂಜ್ಯ ಜಗದ್ಗುರುವರ್ಯರು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗೆ ಅವರೊಡನೆ ಆದಿಗುರುಗಳ ಜಯಂತ್ಯುತ್ಸವದಲ್ಲಿ.



ಉಡುಪಿಗೆ ಭೆಟ್ಟಿ ಇತ್ತಾಗ ಪರಸ್ಪರ ಸಂಭಾಷಣೆಯಲ್ಲಿ ಆನಂದತುಂದಿಲರಾದ ಅದಮಾರು ಮಠಾಧೀಶ ಪರಮಪೂಜ್ಯ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳು ಮತ್ತು ಜಗದ್ಗುರುಗಳು.




ಜಗದ್ಗುರುಗಳು ಮತ್ತು ಪೂಜ್ಯ ಪರಕಾಲ ಮಠಾಧೀಶ್ವರರು.



ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿಭಟ್ಟಾರಕಸ್ವಾಮಿಗಳವರೊಡನೆ ಜಗದ್ಗುರುಗಳು, ಆದಿಗುರುಗಳ ಜಯಂತ್ಯುತ್ಸವದಲ್ಲಿ.



ಚಿತ್ರದುರ್ಗ, ಸುತ್ತೂರು, ಪೇಜಾವರ ಮಠಗಳ ಜಗದ್ಗುರುತ್ರಯರು ಮತ್ತು ಧಾರವಾಡದ ಶ್ರೀಮಹಾಂತಸ್ವಾಮಿಗಳು.



ಪೂಜ್ಯ ಶ್ರೀಗಳವರು ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಹರ್ಷಾನಂದ ಅವರೊಡನೆ ಆದಿಜಗದ್ಗುರುಗಳ ಜಯಂತ್ಯುತ್ಸವದಲ್ಲಿ

# ಶ್ರೀ ಶಿವರಾತ್ರೀಶ್ವರಾಷ್ಟಕಂ

ಶ್ರೀ.ನಿ.ಪ್ರ.ಸ್ವ. ಗೌರೀಶಂಕರ ಮಹಾಸ್ವಾಮಿಗಳು

ಮೌನೀನ್ದ್ರಮಾನಸಮಹಾಂಬುಜರಾಜಹಂಸೇ
ವಿಖ್ಯಾತನಾಮ್ನಿ ಶಿವಯೋಗಿಜನಾವತಂಸೇ ।
ಸುತ್ತೂರುಧಾಮನಿ ನಿವಾಸರುಚಿಂ ದಧಾನೇ
ಭಕ್ತಿರ್ಮಮಾಸ್ತು ಶಿವರಾತ್ರಿಗುರುಪ್ರಧಾನೇ ॥ ೧ ॥

ಶ್ರೀವೀರಶೈವಸಮಯಾನುಗತೈಕಜೀವೇ
ಮಾಹೇಶ್ವರಪ್ರಕರಮಾನ್ಯಮಹಾಪ್ರಭಾವೇ ।
ಪಾದಾನತಿಪ್ರಣಯಿಪಾತಕದಾವದಾವೇ
ಚೇತೋ ಮಮಾದ್ಯ ರಮತಾಂ ಶಿವರಾತ್ರಿದೇವೇ ॥ ೨ ॥

ಶುದ್ಧಾಂತರಂಗವಿನತಾಯ ಶಮಾನ್ವಿತಾಯ
ಭೂಶಂಕರಾಯ ಶಿವಭಕ್ತಿವಶಂಕರಾಯ ।
ವಿದ್ಯಾಕರಾಯ ಶಿವರಾತ್ರಿಮುನೀಶ್ವರಾಯ
ಕಲ್ಯಾಣಕಲ್ಪತರವೇ ಗುರವೇ ನಮಸ್ತೇ ॥ ೩ ॥

ವ್ಯಾಮೋಹಮುತ್ಸೃಜ ಗೃಹಾಣ ಮಮೋಪದೇಶಂ
ಭೀಮಾನ್ ವಿಹಾಯ ವಿಷಯಾನ್ ವಿಷಯೇಷು ಕಾಮಾನ್ ।
ಕ್ಷೇಮಂಕರಾಯ ಹೃದಯ ಸ್ಪೃಹಯ ಪ್ರಕಾಮಂ
ಶ್ರೀಮತ್ತಮಾಯ ಶಿವರಾತ್ರಿಗುರೂತ್ತಮಾಯ ॥ ೪ ॥

ಮನ್ದೇ ಜನೇಽಪಿ ನಮತಿ ಸ್ವಪದಾರವಿಂದ
ಪ್ರಾಣೇ ಪ್ರಶಾಂತಿಭರಿತೈರ್ನಯನಾಂತಪಾತೈಃ ।
ಬೋಧ್ಯಂ ಕುಶಾಂಕುರಧಿಯಾಂ ತಪಸಾಮಸಾಧ್ಯಂ
ತತ್ತ್ವಂ ತನೋಷಿ ಶಿವರಾತ್ರಿಗುರೂತ್ತಮ ತ್ವಂ ॥ ೫ ॥

ಮಲೈರ್ವ್ಯಾಮೋಹಾದ್ಯೈರ್ಮನಸಿ ಮಲಿನೇ ಹಾ ಶಮಕಥಾ
ವೃಥಾ ನೂನಂ ಕಾಲೇ ಕಲಿಬಲಕರಾಲೇಽತ್ರ ಭಗವನ್ ।
ತಥಾ ಸತ್ಯಸ್ಮಾಕಂ ದುರಿತಶತದುರ್ದಾಂತಮನಸಾಂ
ಭವಾನೇವಾಧಾರೋ ಭವತಿ ಶಿವರಾತ್ರೀಶ್ವರಗುರೋ ॥ ೬ ॥

ಮುದಾ ಭ್ರಾಮಂ ಭ್ರಾಮಂ ಭೃಶಮಿಹ ವನೇ ಕಂಟಕವನೇ
ಮುಹುರ್ಮೋಹಾವೇಶಾತ್ಪ್ರಸರದತಿವೈರಸ್ಯ ವಿರಸಂ ।
ಇದಾನೀಮಾಮೋದಪ್ರಣಯಿ ಶಿವರಾತ್ರೀಶ ಭಗವನ್
ಮದೀಯಂ ಚೇತಸ್ತೇ ಚರಣನಲಿನಂ ಚುಂಬತು ಚಿರಂ ॥ ೭ ॥

ಮೋಹಮಯೇ ನಿಶೀಥಸಮಯೇ ತಮಸಾ ಮಲಿನೀಕೃತೇಕ್ಷಣೋ
ಮೂರ್ಛತಿ ಪಾಪಕೂಪಕುಹರೇ ಪತಿತಃ ಪರಮಾಪ್ತ ಯೋ ಜನಃ
ತಸ್ಯ ಗತಿಸ್ತ್ವಮೇವ ಪರಮಾ ಪಶುಪಾಶವಿಮೋಚಕಪ್ರಭೋ
ಶ್ರೀ ಶಿವರಾತ್ರಿದೇಶಿಕವರೇಣ್ಯ ನಮೋ ನಮೋಽಸ್ತು ತೇ ॥ ೮ ॥

ಪದ್ಯಾಷ್ಟಕಮಿದಂ ಪ್ರೇಮ್ಣಾ ಪಠ್ಯತೇ ಪ್ರತ್ಯಹಂ ಸತಾ ।
ಶಾಶ್ವತಂ ದಿಶತಿ ಶ್ರೇಯೋ ಶಿವರಾತ್ರೀಶ್ವರೋ ಗುರುಃ ॥

# ಶ್ರೀ ಶಿವರಾತ್ರೀಶ್ವರಾಷ್ಟಕಂ

ವೇ॥ ನಂ. ಶಿವಪ್ಪಶಾಸ್ತ್ರಿ

ಶ್ರೀ ಕಲ್ಯಾಣಪ್ರದಂ ವಿದ್ಯಾವಾರಿಧಿಂ ಕರುಣಾಕರಂ
ವಂದಾರುಜನಮಂದಾರಂ ವಂದೇ ಸ್ವೇಷ್ಟಾರ್ಥಸಿದ್ಧಯೇ ॥ ೧ ॥

ಪ್ರದಕ್ಷಿಣಪುರಾಧೀಶಂ ವೀರಸಿಂಹಾಸನಾಧಿಪಂ
ಶ್ರೀವೀರಶೈವವಿಭವಂ ಶಿವರಾತ್ರೀಶ್ವರಂ ಭಜೇ ॥ ೨ ॥

ಅಷ್ಟಾವರಣಸನ್ನಿಷ್ಠಂ ಗರಿಷ್ಠಂ ಶಿವಯೋಗಿನಂ
ಷಟ್ಸ್ಥಲಜ್ಞಾನಸಂಪನ್ನಂ ಶಿವರಾತ್ರೀಶ್ವರಂ ಭಜೇ ॥ ೩ ॥

ಶ್ರೀ ರೇಣುಕಶಿವಾಚಾರ್ಯಪರಂಪರಮತಂದ್ರಿತಂ
ಶಿವಸ್ವರೂಪಮನಿಶಂ ಶಿವರಾತ್ರೀಶ್ವರಂ ಭಜೇ ॥ ೪ ॥

ಸದ್ಭಕ್ತಜನಸಂದೋಹಕಷ್ಟಸಂಚಯನಾಶಕಂ
ಕಾಮಕಾಲಭಯಾತೀತಂ ಶಿವರಾತ್ರೀಶ್ವರಂ ಭಜೇ ॥ ೫ ॥

ಅಂತೇವಾಸಿಜನಸ್ವಾಂತಧ್ವಾಂತೌಘಾಹಸ್ಕರಂ ವಿಭುಂ
ನಿರ್ಮಲಂ ನಿರ್ಗುಣಂ ನಿತ್ಯಂ ಶಿವರಾತ್ರೀಶ್ವರಂ ಭಜೇ ॥ ೬ ॥

ಸಚ್ಚಿತ್ಸುಖಮಯಂ ಶಾಂತಂ ಭಕ್ತಿಜ್ಞಾನಸಮನ್ವಿತಂ
ವೈರಾಗ್ಯಭಾವಭಾಸ್ವಂತಂ ಶಿವರಾತ್ರೀಶ್ವರಂ ಭಜೇ ॥ ೭ ॥

ಕವಿಶೇಖರಸಂಸ್ತುತ್ಯಪಾದಾಬ್ಜಂ ಗುರುಶೇಖರಂ
ಶಿವಧೀಮನ್ನುತಂ ನಿತ್ಯಂ ಶಿವರಾತ್ರೀಶ್ವರಂ ಭಜೇ ॥ ೮ ॥

# ಶ್ರೀ ಶಿವರಾತ್ರೀಶ್ವರ ನವರತ್ನಮಾಲಿಕಾ

ಶ್ರೀ.ನಿ.ಪ್ರ.ಸ್ವ. ಗೌರೀಶಂಕರ ಮಹಾಸ್ವಾಮಿಗಳು

ಸಾದರಸತ್ವಭಕ್ತಿರಸಸಂಭೃತದೊಳ್ ಪರಮಾರ್ಥಬೋಧಸೂ
ರ್ಯೋದಯದಿವ್ಯದೀಪ್ತಿ ಪಡೆದೊಪ್ಪಿರೆ ಬಿತ್ತರಿಸುತ್ತೆ ಮಂಗಳಾ
ಮೋದಮನೆನ್ನ ಮಾನಸದೊಳಾಂತು ವಿಕಸ್ವರಭಾವಮಂ ಭವ
ತ್ಪಾದಪಯೋಜಮಿರ್ಕೆ ಶಿವರಾತ್ರಿಗುರೂತ್ತಮ ಕಂದದಂದದಿಂ ॥ ೧ ॥

ಕುಂಭಿಣಿಯೆಲ್ಲಮಂ ತಿರುಗಿ ಕೋಟಲೆಗೊಂಡು ಸವಿಹಿತಾರ್ಥದಾ
ಲಂಬನಕೆಂದು ನಿತ್ಯನಿಯಮವ್ರತತೀರ್ಥಜಪಾದಿಸೇವನಾ
ಡಂಬರದಿಂದ ಹಂಬಲಿಸದೊಮ್ಮನದಿಂ ಬಳಿಗೊಂಡು ನಂಬಿದ
ರ್ಗಿಂಬು ಭವತ್ಪದಾಂಬುರುಹಮೋ ಶಿವರಾತ್ರಿ ಮಹಾಗುರು ಪ್ರಭೋ ॥ ೨ ॥

ಈಶಪದಾಬ್ಜಭಕ್ತಿರತಿಯಂ ತೊರೆದುತ್ಪಥವೃತ್ತಿದೋಷದಿಂ
ದಾ ಶಮಮಾರ್ಗಮಂ ಮರೆದು ತಾಪದೊಳಹಹ ಬೆಂದು ದುರ್ದಶಾ
ವೈಶಸದಿಂದ ನೊಂದು ಗತಿಕಾಣದೆ ಮಾಣದೆ ನಾಥ ನಿನ್ನನೇ
ಶ್ರೀ ಶಿವರಾತ್ರಿಸದ್ಗುರುವೇ ಮದ್ಗುರುವೇ ಶರಣೆಂದು ನಂಬಿದೆಂ ॥ ೩ ॥

ರಾಗಮದಾದಿದುರ್ಗುಣವಿದೂರನೆ ಸಂಭೃತಸತ್ವಸಾರನೇ
ಭೋಗಿವಿಭೂಷ ಭಕ್ತಿಭೃತಭಾವನೆ ಭಕ್ತಜನೈಕಜೀವನೇ
ತ್ಯಾಗತಪೋಮಯಾಮಲಿನಲೀಲನೆ ಶೀಲಿತಶಾಂತಿಶೀಲನೇ
ಶ್ರೀಗುರುವೇ ನಮೋಽಸ್ತು ಶಿವರಾತ್ರಿ ಮಹಾಗುರುವೇ ನಮೋಽಸ್ತು ತೇ ॥ ೪ ॥

ಮತ್ತೆ ವಿಲಂಬಮೇಕೋ ಮಮತಾ ಮದಿರಾನುಭವಾತಿರೇಕದಿಂ
ಮತ್ತತೆವೆತ್ತು ತತ್ತರಿಸಿ ಸಂಸೃತಿಗರ್ತದೊಳಾಳ್ದು ಬೀಳ್ದಮ
ಚ್ಚಿತ್ತದೊಳೆತ್ತಲುಂ ಕವಿದ ಕಾವಳಮಂ ಕಳೆದಿಂದುನಾಥ ನಿ
ನ್ನತ್ತಣ ಮಾರ್ಗಮಂ ಪಡೆದು ತೋರ್ಪುದು ನೀಂ ಶಿವರಾತ್ರಿಸದ್ಗುರೋ ॥ ೫ ॥

ಆಲಿಸು ದೇವ ದಾರಕನ ಬಿನ್ನಪಮಂ ತರುಣೇಂದುಶೇಖರಾ
ಕಾರ ಕೃಪಾವತಾರ ವಿಲಸದ್ಗುಣಸನ್ಮಣಿಹಾರ ಘೋರಸಂ
ಸಾರವಿಕಾರದೂರ ಶಿವರಾತ್ರಿಜಗದ್ಗುರು ವೀರಪಾವನಾ
ಚಾರವಿಚಾರ ತೋರ ತರಳಂಗೆ ಪರಾತ್ಪರ ತತ್ತ್ವಮಂ ॥ ೬ ॥

ಬಿನ್ನಪಮಿನ್ನಿದೊಂದೆ ಪಡೆದಾಲಿಸು ದೇವ ಮನೋನುರಾಗದಿಂ
ನಿನ್ನನೆ ಕೀರ್ತಿಸುತ್ತೆ ಮಿಗೆ ಗದ್ಗದಮುಣ್ಮೆಗಳಾಂತರಾಳದೊಳ್
ನಿನ್ನಡಿಗಳ್ಗೆ ಸಂದಿರೆ ಶಿರಂ ಶಿವರಾತ್ರಿಗುರೋ ಸಮಾಧಿಯಿಂ
ದೆನ್ನಸು ನಿನ್ನೊಳೇಕರಸ ನಿರ್ಭರಮಕ್ಕೆ ಭವತ್ಪ್ರಸಾದದಿಂ ॥ ೭ ॥

ಶ್ರುತಿ-ತತಿ ಪಾಠಮೇಕೊ ವಿವಿಧಾಗಮಸಂಹತಿವಾದಮೇಕೋ ಭಾ
ರತಮುಖ್ಯಕಾವ್ಯನಾಟಕಕಲಾಕೃತಿನೀತಿಪುರಾಣಗೀತಿಸಂ
ತತಿಗಳ ಮಾತದೇಕೊ ಕಳೆದೀಪರಿಯೀವಚನ ಪ್ರಪಂಚಮಂ
ಗತಿಮತಿ ನೀನೆಯೆಂದು ನೆರೆ ನಂಬಿದೆ ನಾಂ ಶಿವರಾತ್ರಿಸದ್ಗುರೋ ॥ ೮ ॥

ನಯರಹಿತರ್ಕಳುಂ ನಲಿದು ಕೀರ್ತಿಸೆ ನಿನ್ನ ಪದಂಗಳಂ ಭವಾ
ಮಯ ಭಯಮೆಲ್ಲಮುಂ ಪರಿವುದೆಂದರಿದಾಂ ನೆರೆ ನಂಬಿ ನಿನ್ನನೇ
ಜಯ ಶಿವರಾತ್ರಿದೇವ ನಿರ್ಮಲಭಾವ ಮಹಾನುಭಾವನೇ
ಜಯ ಜಯ ಭಕ್ತಕಲ್ಪತರುವೇ ಗುರುವೇ ಶರಣೆಂದು ಪಾಡುವೆಂ ॥ ೯ ॥

ವೀರಸಿಂಹಾಸನಾಸೀನಃ ಶಿವರಾತ್ರೀಶ್ವರೋ ವಿಭುಃ
ದದ್ಯಾತ್ ವಿಶ್ವಸ್ಯ ಜಗತಃ ಶಾಂತಿಭಿಕ್ಷಾಂ ಕೃಪಾನಿಧಿಃ ।
ಪ್ರದಕ್ಷಿಣಮಠಾಧೀಶಂ ವೀರಸಿಂಹಾಸನಾಧಿಪಂ
ವೀರಶೈವಾಬ್ಧಿಚಂದ್ರಂ ತಂ ಶಿವರಾತ್ರೀಶ್ವರಂ ಭಜೇ ॥

# ಶ್ರೀ ಶಿವರಾತ್ರೀಶ್ವರ ನವರತ್ನಮಾಲಿಕಾ

**ವೇ॥ ನಂ. ಶಿವಪ್ಪಶಾಸ್ತ್ರಿ**

ಅನುಪಮನಲ್ಲವೇ ನಿನಗೆ ನೀಂ ಸರಿಯಲ್ಲದೆ ನಿನ್ನ ಪೋಲ್ವರಾರ್
ಮನುಮುನಿಮುಖ್ಯರೊಳ್ ಪೆರರುಮಿಲ್ಲದ ಕಾರಣದಿಂ ಮಹಾತ್ಮನೇ ।
ಘನತೆಯೊಳೋರ್ವನಿಲ್ಲಮೆನುತಂ ಶ್ರವಣಂ ನೆಲೆಗೈದನಾ ಪುರಾ
ಜನಿವಹದಿಂದಲಾಗಮಚಯಂಗಳೊಳಂ ಶಿವರಾತ್ರಿವಲ್ಲಭಾ ॥ ೧ ॥

ಗುರುಜನಯೂಥನಾಥ ಜಯ ಸನ್ನುತಿಪಾತ್ರಚರಿತ್ರ ಸದ್ಯಶೋ
ಭರಿತ ಸುರಾಜ್ಯಪೂಜ್ಯ ಜಯ ಮುಕ್ತಿಕಳತ್ರ ಪವಿತ್ರ ತ್ವತ್ಸಮಾ ।
ನರಹಿತ ನುತ್ಯ ನಿತ್ಯ ಜಯ ಶಂಕರ ಕಿಂಕರಸೇವ್ಯ ಭವ್ಯ ಭಾ
ಸುರತರ ಗಣ್ಯ ಪುಣ್ಯಜಯ ಪಾಲಿಸು ನೀಂ ಶಿವರಾತ್ರಿವಲ್ಲಭಾ ॥ ೨ ॥

ಸ್ಮರಿಸುವೆನಾಗಳುಂ ತವ ಪದಾಬ್ಜಯುಗಂಗಳುಮೆನ್ನ ಹೃತ್ಸರೋ
ವರದೊಳರಳ್ದು ತಾಳ್ದು ಘನಕಾಂತಿಯನೈದುವುದಂ ನಿರಂತರಂ ।
ಸುರಸರಿದರ್ಯಮಾತ್ಮಜೆಯರಿರ್ವರ ಸಂಗಮದಗ್ರಶೈಲದೋಳ್
ಪರಿಪರಿಯಿಂದೆ ಭಾಸಿಪ ನಿಜಾಂಗಮನೇ ಶಿವರಾತ್ರಿವಲ್ಲಭಾ ॥ ೩ ॥

ಸೇವಿಪೆನಾಗಳುಂ ತವಪದಾಂಬುಜಮಂ ಕರಣೇಂದ್ರಿಯಂಗಳಿಂ
ಭಾವಿಸಿ ನಿಚ್ಚಲುಂ ತವಕದಿಂ ಮುದದಿಂ ಭವದೀಯಮೂರ್ತಿಯಂ ।
ತೀವುತೆ ತೈಲಮಂ ಕರಪದಂಗಳ ನೀವುತುರಃಪ್ರದೇಶಮಂ
ದೇವರ ದೇವ ನಿನ್ನವಯವಂಗಳುಮಂ ಶಿವರಾತ್ರಿವಲ್ಲಭಾ ॥ ೪ ॥

ಪೂಜಿಪೆನೋಜೆಯಿಂ ಸಲಿಲಭಸ್ಮಸುಗಂಧತಿಲಾಕ್ಷತಂಗಳಿಂ
ರಾಜಿಪ ಬಿಲ್ವಪಲ್ಲವಶಮೀದಳ ಕೋಮಲಭಾರ್ಗವೀಕುಲಂ ।
ಮಾಜದೆ ಗಂಧದಿಂ ಮಿಸುಪ ಪುಷ್ಪಗಳಿಂ ವರಧೂಪದೀಪನೀ
ರಾಜನನಾರಿಕೇಳಫಲವೀಟಿಗಳಿಂ ಶಿವರಾತ್ರಿವಲ್ಲಭಾ ॥ ೫ ॥

ಕರಚರಣಂಗಳಿಂ ವಚನದಿಂ ಮನದಿಂದುರದಿಂದೆ ಶ್ರೋತ್ರನೇ
ತ್ರರುಚಿರಮಸ್ತಕಂಗಳಿನನಾರತಮುಂ ಧರೆ ಸೋಂಕುವೋಲ್ನಮ ।
ಸ್ಕರಿಸುತನೇಕ ವಂದನೆಗಳಂ ನಿಮಗರ್ಪಿಪೆ ಚಾರುಗಾತ್ರ ಮ
ದ್ಗುರುವರ ರೇಣುಕಾಭಿಜನಸಂಭವನೇ ಶಿವರಾತ್ರಿವಲ್ಲಭಾ ॥ ೬ ॥

ಅಂಜಲಿಬದ್ಧನಾಗಿ ತವ ದಾಸ್ಯತೆಯಂ ಮಿಗೆ ಬೇಡಿಕೊಂಬೆ ಮೃ
ತ್ಯುಂಜಯ ಪಾಲಿಸೈ ದಯೆಯಿನಪ್ಪಣೆಯಂ ಮರುಮಾತದುಂಟೆ ನಾ।
ನಂಜುವನಲ್ಲ ದೇಶಿಕಕುಲಾಗ್ರಣಿಯೇ ನೆರೆಕಾಯ್ದುಕೊಂಡಿಹೇಂ
ಮಂಜುಲಗಾತ್ರ ನಿನ್ನ ಪದಸನ್ನಿಧಿಯೊಳ್ ಶಿವರಾತ್ರಿವಲ್ಲಭಾ ॥ ೭ ॥

ಸಖ್ಯತೆ ಬೇಕು ನಿನ್ನ ಪರಮಾಪ್ತತೆಯಿಂ ತ್ರಿಜಗಂಗಳೊಳ್ಪ್ರಹಾ
ಮುಖ್ಯನುಮಾದಕಾರಣದೆ ನಾಂ ಸುಕೃತಾರ್ಥನುಮಪ್ಪೆ ಮಿತ್ರನಂ।
ಸೌಖ್ಯಕೆ ತಾರದಿರ್ಪರೆ ಸುಖಾಮೃತವಾರಿಧಿಯೇ ನಿಜಾಪ್ತನಂ
ಬಾಖ್ಯೆಯ ಪಾಲಿಸೈ ಗುರುವೆ ಪ್ರಾರ್ಥಿಪೆನೈ ಶಿವರಾತ್ರಿವಲ್ಲಭಾ ॥ ೮ ॥

ಚರಣದೆ ಸುತ್ತಿಸುತ್ತಿ ಕರಯುಗ್ಮದೆ ಪೂಜಿಸಳ್ಕರಿಂ
ದಿರದೆ ಚರಿತ್ರೆಯಂ ಶ್ರವಣದಿಂ ಮುದದಿಂದಲೆ ಕೇಳಿ ಕೇಳಿ ಭಾ।
ಸುರ ತವ ಮೂರ್ತಿಯಂ ನಯನದಿಂ ಪರಿಭಾವಿಸಿ ನೋಡಿನೋಡಿ ಮ
ದ್ಗುರುವೆ ಮದಾತ್ಮನಂ ನಿನಗೆ ಸಲ್ಲಿಸಿದೇಂ ಶಿವರಾತ್ರಿವಲ್ಲಭಾ ॥ ೯ ॥

ನವವಿಧಭಕ್ತಿಯ ಕೃತಿಯಂ
ಶಿವಕವಿಯಿಂತುಸುದರ್ಗಡಂ ಪಠಿಸಿ ಕೇಳುವರಾ।
ಶಿವರಾತ್ರೀಶ್ವರ ಕೃಪೆಯಿಂ
ತವ ಭಕ್ತಿಯನಮಳಮುಕ್ತಿಯಂ ಮಿಗೆ ಪಡೆವರ್ ॥ ೧೦ ॥

# ಶಿವರಾತ್ರಿರಾಜೇಂದ್ರ ರಕ್ಷಿಸು

ಪಿ. ಬಸವಣ್ಣ

ಶಿವರೂಪಮಂ ಧರಿಸಿ ಭುವಿಗಿಳಿದು ನುತಿವೆತ್ತ
ಶಿವಧರ್ಮಮಂ ಹರಡಿ ಮಂತ್ರಮಹಿಮೆಯನರುಹಿ
ನವವಿಧದ ಭಕ್ತಿಯಿಂ ಭವಹರನ ಭಜಿಸಿರೆಂದನವರತ ಬೋಧಿಸುತ್ತೆ ।
ಅವನಿಯೊಳು ಹಲವಾರು ಜನ್ಮಗಳನೆತ್ತುತ್ತ
ಬವಣೆಬಡುತಿಪ ಜನರ ಭವಜಲಧಿ ದಾಂಟಿಸುವ
ಭವಸಾಗರಬಹಿತ್ರ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೧ ॥

ವಸುಧೆಯೊಳ್ಮಿಗಿಲೆನಿಪ ಕರ್ಣಾಟದೇಶದೊಳ
ಗಸಮಗುಣಯುತರೆನಿಸಿ ಲೋಕಹಿತಮಂ ಬಯಸಿ
ಬಸವಳಿದ ಬಡಜನರ ಸಕಲವಿದ್ಯಾಭಿವೃದ್ಧಿಗಳಿಗನವರತ ಶ್ರಮಿಸಿ ।
ಎಸೆಯುತಿಹ ವಿದ್ಯಾರ್ಥಿನಿಲಯಗಳ ನಿರ್ಮಿಸುತ
ಮಸುಳದಿಹ ಪುಣ್ಯಮಯ ಕೀರ್ತಿಯಂ ಗಳಿಸಿರ್ಪ
ಕಿಸಲಯೋಪಮಚರಣ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೨ ॥

ರಾಜಿಸುವ ಮೈಸೂರು ದೇಶಕಧಿಪತಿಯಾಗಿ
ಭೋಜನೋಲ್ಕವಿಗಮಕಿವಿದ್ವಾಂಸರಂ ಪೊರೆದು
ರಾಜಧರ್ಮವ ಬಿಡದೆ ಪ್ರಜೆಗಳಂ ಪಾಲಿಸುತ್ತವರಿಗಧಿದೈವಮಾಗಿ ।
ಓಜೆಯಿಂ ಸಲೆಮೆರೆದು ಸನ್ಮಾರ್ಗಿಯಾಗಿರ್ದ
ರಾಜರ್ಷಿ ಜಯಚಾಮರಾಜೇಂದ್ರಭೂವರನ
ರಾಜಗುರುತಿಲಕ ಶ್ರೀ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೩ ॥

ತ್ರಿಮಲಂಗಳಂ ಕಳೆದು ತ್ರಿಗುಣಂಗಳನ್ನಳಿದು
ಸುಮಬಾಣನಂ ಗೆಲಿದು ಸಮಭಾವಮಂ ತಳೆದು
ಯಮನಿಯಮಗಳ ಪೊರೆದು ಮಮಕಾರಮಂ ತೊರೆದು ಶಮೆದಮೆಗಳೊಡಗೂಡುತ ।
ಸಮತೆಯಂ ಮಿಗೆಯೊರೆದು ಪ್ರಮಥಮಾರ್ಗದಿ ನಡೆಯು
ತಮೃತಾಂಗನೆಯನೊಲಿದು ಸಮರಸದಿ ಬೆರೆಯುತಿಹ
ಸುಮನಸಾಂತಃಕರಣ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೪ ॥

ರಾಗದಿಂ ಪೇಳಿನ್ನು ಭವಬೀಜವಿಲ್ಲೆಂಬ
ಯೋಗೀಶ ನಿಜಗುಣನ ಸದ್ವಾಣಿಯುಂ ಸತತ
ಕೂಗಿ ಸಾರುತ ಜಗಕೆ ನಿತ್ಯವಲ್ಲದ ಹೆಣ್ಣುಹೊನ್ಮಣ್ಣನೊಡಗೂಡಿದ ।
ಭೋಗಜೀವನ ತೊರೆದು ಯೋಗಸಾಧನೆ ಗೈದು
ರೋಗಂಗಳನಳಿದು ತ್ಯಾಗಜೀವನ ನಡೆಸಿ
ಯೋಗಿಜನಸಂಸೇವ್ಯ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೫ ॥

ಜೇಂಗರೆವ ಮೃದುಮಧುರ ಬಂಗಾರನುಡಿಗಳಿಂ
ಕಂಗೆಟ್ಟು ಕಳವಳಿಪ ಭಕ್ತರಂ ಸಂತೈಸಿ
ಹಿಂಗಿಸುತ್ತವರ ಕಷ್ಟಂಗಳಂ ಮೇಣವರಭೀಷ್ಟಂಗಳಂ ಸಲ್ಲಿಸಿ ।
ಅಂಗಜಾರಿಯ ರೂಪವೆತ್ತು ಬಂದೀಧರೆಯ
ಭಂಗಪಡುತಿಪ ಜನರ ಮಂಗಳವ ಬಯಸುತಿಪ
ಚೆಂಗಾವಿಚೆಲುವರಸ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೬ ॥

ದ್ರವಿಡಾಂಧ್ರಕರ್ಣಾಟ ಮೊದಲಾದ ಭಾಷೆಗಳ
ಕವಿಗಮಕಿಪಂಡಿತರ ಗೋಷ್ಠಿಗಳನೇರ್ಪಡಿಸಿ
ವಿವಿಧಕಲೆಗಳನರಿತ ಕೋವಿದರ ಕರೆತರಿಸಿ ಬಹುವಾಗಿ ಸತ್ಕರಿಸುತ ।
ಅವರವರ ಯೋಗ್ಯತೆಗೆ ತಕ್ಕಂತೆ ಗೌರವಿಸಿ
ಬವಣೆಯುಳ್ಳಿರ್ಪವರಿಗಾಶ್ರಯವ ನೀಡುತಿಹ
ಕವಿಜನರ ಕಲ್ಪತರು ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೭ ॥

ರಜತಗಿರಿಯೊಡೆಯನಂ ಭಜಿಸಿರೆಂದರುಪುತ್ತ
ಕುಜನಮಾರ್ಗವ ಬಿಡಿಸಿ, ನಿಜಪಥದಿ ನಡೆಸುತ್ತ
ಯಜನಕರ್ಮವನಳಿಸಿ ತ್ರಿಜಗವಂದಿತಮಾದ ಶಿವಯೋಗಮಾರ್ಗವರುಹಿ ।
ಭುಜಗಭೂಷಣರೂಪವೆತ್ತು ಬಂದೀ ಜಗದ
ಭಜಕರಿಷ್ಟಾರ್ಥಮಂ ಸಲಿಸುತಲಿ ಮೆರೆಯುತಿಹ
ಸುಜನಕುಲಸುರಧೇನು ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೮ ॥

ಕ್ಷಿತಿಯೊಳತಿಶಯವಡೆದ ಸುತ್ತೂರುಸುಕ್ಷೇತ್ರ
ದತಿಮಹಿಮೆಯುಂ ಜಗಕೆ ಪಸರಿಸುತ್ತನವರತ
ಮತಭೇದವೆಣಿಸದೆಯೇ ವಿದ್ಯಾರ್ಥಿಕುಲಕೆಲ್ಲ ವಸತಿಯೋದನವನಿತ್ತು ।
ಅತಿಮಮತೆದೋರುತ್ತ ಪರಿಪೋಷಿಸುತ್ತವರ
ಹಿತಚಿಂತನೆಯೋ ನಿಜಶಿವಧ್ಯಾನವೆನುತಿರ್ಪ
ಪತಿತಜನಪರದೈವ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೯ ॥

ಸುತ್ತುಮುತ್ತಲ ಜನಕೆ ಸತ್ಪಥವದೋರುತ್ತ
ಮತ್ತೆ ಶರಣಾದವಗೆ ಸದ್ಗತಿಯ ನೀಡುತ್ತ
ತತ್ತಳಿಪ ಜಗಕೆಲ್ಲ ಚಿರಶಾಂತಿ ಬಯಸುತ್ತ ಚಿತ್ತಜಾರಿಯ ರೂಪವ ।
ಪೊತ್ತು ಬಂದೀಕ್ಷಿತಿಯ ಕತ್ತಲೆಯ ಕಳೆಯುತ್ತ
ಉತ್ತಮೋತ್ತಮರೆನಿಸುತ್ತೀ ಜಗದಿ ಮೆರೆಯುತಿಹ
ಸುತ್ತೂರುಗುರುಮೂರ್ತಿ ಶಿವರಾತ್ರಿರಾಜೇಂದ್ರ ರಕ್ಷಿಸೆಮ್ಮನನವರತ ॥ ೧೦ ॥

# ಗುರುವಿನಡಿಗೆ ನುಡಿಯ ಎಡೆ

ಜಗದ್ಗುರು ಮಾತೆ ಮಹಾದೇವಿ

ಮನುಕುಲಮಹಾಲತೆಯಲಿ ಅರಳಿ ನಿಂದ ಶ್ರೀ ಗುರುವರ
ಘನನಿಲುವಿನ ಮೂರುತಿ ನೀವು ವಾತ್ಸಲ್ಯದ ಸಾಕಾರ।
ಸಚ್ಚರಿತೆಯ ಸೊಗಸಿನಲಿ ಸದುವಿನಯದ ಸೌರಭದಿ
ಸದ್ಭಾವದ ಮಕರಂದದಿ ಮೆರೆಯುತಿದೆ ತವ ಬಾಳ ಸುಮ॥

ಸಾತ್ವಿಕತೆ ಗುಡಿಗಟ್ಟಿದೆ ಮುಖಮಂಡಲ ನಭರಂಗದಿ
ಕಾರುಣ್ಯವು ಮಡುಗಟ್ಟಿದೆ ನಯನದ್ವಯಸರಸಿಯಲಿ।
ಶಾಂತಿಶಮೆಸಜ್ಜನಿಕೆಯ ಶಿವಸಂಗಮ ತಾವಾಗಿರೆ
ಕ್ಷಾಂತಿಪ್ರೀತಿ ಸ್ವಾನುಭವದ ಮಹಜಂಗಮ ನೀವಹುದು॥

ಬಳಸಿಹುದು ಸುತ್ತಲೂ ವಿಶ್ವದ ವ್ಯಾಪಕ ಸಂಸಾರ
ಕಳೆಯುತಿದೆ ಅದುವೆ ಭವಬದುಕಿನ ಜಂಜಡವ।
ನಿಃಸ್ವಾರ್ಥದ ಕರ್ತವ್ಯದಿ, ವಿದ್ಯಾದಾನದ ಮಣಿಹ ಹೊತ್ತು
ಸೇವೆಯೇ ಪರಿಪಕ್ವಗೊಳಿಪ ತಪವೆಂಬುದ ದಿಟಗೊಳಿಸಿದಿರಿ॥

ಹಿಡಿದಿರುವಿರಿ ಶುಭಹಸ್ತವ ಅಸಂಖ್ಯಾತರ ಶ್ರೀರಕ್ಷೆಯಾಗಿ
ಉದ್ಧರಿಸುತ ಸುಪ್ತಚೇತನಗಳ ಬಾಳ ನಂದಾದೀವಿಗೆಯಾಗಿ।
ಎಲ್ಲ ಜೀವರು ನಿಮ್ಮವರು, ನೀವು ಎಲ್ಲರವರು
ಕ್ಷುಲ್ಲಕ ಜಾತಿಮತಗಳ ಸೊಲ್ಲೆತ್ತದ ಅನುಭಾವಿಗಳು॥

ನಿರ್ಮಿಸಲಿಲ್ಲ ನಶಿಸಿಹೋಹ ಕಲ್ಲಿನ ಜಡಗುಡಿಗಳನು
ಕೆತ್ತಿಸಲಿಲ್ಲ ಕೀರ್ತಿವಾರ್ತೆಯ ಶಿಲಾಶಾಸನಮುಖದಲಿ ;
ಆದರೇಂ ? ರೂಪಿಸಿದಿರಿ ನಡೆಲಿಂಗಗಳ ಕರ್ತನ ಮರ್ತ್ಯಕೆ ಸಲ್ಲುವಂತೆ
ಉಳಿಸಿಕೊಳುತ ಚಿರವಾಗಿ ಅವರೆದೆಯಲಿ ತವ ಹೆಸರನು॥

ಸರಿಯುತಿವೆ ದಶಕಗಳಾರು ಇಹಬಾಳಿನ ಬಟ್ಟೆಯಲಿ
ಚಿರಹೆಸರನು, ಶುಭಹರಕೆಯ ಪಡೆಯುತ ಸದುಹೃದಯಗಳಿಂದ।
ಗುರುವಿನ ಗುರು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ
ಕರಶಿರದಿಂ ಶರಣೆಂಬೆನು ಸುವಿರಕ್ತಿಯ ಪೂರ್ಣಚಂದ್ರ॥

ಉನ್ನತನಡೆ ಚನ್ನನುಡಿಯ ಮನ್ನಣೆಯ ಮೂರುತಿಯೇ
ಬಹುಕಾಲ ಬೆಳಗಿರಿ ಪ್ರಭು ಸಚ್ಚಿದಾನಂದನ ಕಾರುಣ್ಯದಲಿ॥

# ಭಿಕ್ಷಾಟನೆ

**ಹೆಜ್ಜಿಗೆ ಲಿಂಗಣ್ಣ**

ಹುಲ್ಲಳ್ಳಿ ಪುರದೊಳು ನೆಲ್ಲುಭಿಕ್ಷಕೆ ಬಂದು
ಎಲ್ಲರೊಡಗೂಡಿ ನೀ ಹೊರಟ ನೋಟಕೆ ಸಮ
ನಿಲ್ಲ ಇನ್ನಿಲ್ಲ ಕೇಳಯ್ಯಾ ॥ ೧ ॥

ವಾದ್ಯಗಳು ಮೊಳಗುತಿರೆ ಅಸಾಧ್ಯ ಭಕ್ತತತಿ
ಸಾಧುಸಂತರ ಮಿಂತಸಂದಣಿಯು ಮೇಳಿಸಲ
ಸಾಧ್ಯವಸಾಧ್ಯ ನೋಡಯ್ಯಾ ॥ ೨ ॥

ಗುರು ಶಿವರುದ್ರಸುತಿ ಮೊರೆದು ಬರೆ ಕೆಲಬಲದಿ
ಗುರು ನಿನ್ನ.ನಾಮದುಗ್ಘಡಣೆ ನೆರೆ ಉಕ್ಕುಕ್ಕಿ
ಹರಿವುದ ಬಣ್ಣಿಸಲಸದಳವೊ ॥ ೩ ॥

ಭಕ್ತನಾ ಸಿದ್ಧಲಿಂಗ ಶಕ್ತನಾ ನಾಗಪ್ಪ
ಯುಕ್ತವಯಸಿನ ಅಣ್ಣ ನಿನ್ನ ಹಿಂದೆ ಬಪ್ಪ
ಭಕ್ತಿಯು ತೆರನು ಇನ್ನುಂಟೆ ॥ ೪ ॥

ಮನೆಮನೆಗೆ ಕಾರಣೆಯು ಕನ್ನೆಯರ ಆರತಿಯು
ಮುನ್ನಿಲ್ಲದ ಭಕ್ತಿ ಭಾವಾವೇಶದ ನೋಟ
ಇನ್ನೆಲ್ಲು ಕಾಣ್ಬದು ನೋಡಯ್ಯಾ ॥ ೫ ॥

ಭತ್ತವನೆ ಕೊಟ್ಟರು ವಿತ್ತವನೆ ಕೊಟ್ಟರು
ಮತ್ತೆ ಭಕುತಿಯು ಭಾಂಡವನೆ ಬರಿದುಗೈದರು
ಮತ್ತಿದಕೆ ಸಮನುಂಟೆ ಹೇಳ ॥ ೬ ॥

ಮೆಲ್ಲಡಿಯ ಪೂಜಿದರು ಬಲ್ಲಂದದಿ ಹಾಡಿದರು
ಎಲ್ಲರುಣೆ ನೀಡಿದರು ಪ್ರಸಾದವಿದ ನೋಡಿ
ಪಲ್ಲವಿಸಿತು ಭಾವಕುಡಿ ನೋಡ ॥ ೭ ॥

ಓದುವಗಶನವನಿಕ್ಕಿ ಹಾದಿಬೀದಿಯು ನಡೆದ
ಭೇದ್ಯಕಾಯಕವನಂದು ಕೈಗೊಂಡೆ ನಿಜ
ಸಾಧಕನಮಲಭಾವದಿಂದೆ ॥ ೮ ॥

ವರುಷಗಳು ಅರವತ್ತು ಹರಿದು ನಿಂತಿವೆ ನೋಡ
ಪರುಷೆಯು ಜನದಂತೆ ಭಕುತಾಳಿ ನಿನ್ನೆಡೆಗೆ
ನೆರೆ ಹರಿದು ಬಪ್ಪುದಹ ನೋಡ ॥ ೯ ॥

ಆರುಮೂರನೆ ಮೀರಿ ಮೇರುಗಿರಿಯನೆ ಏರಿ
ಆರು ಕಾಣದ ನೆಲೆಯನಿಂತ ನಿನ್ನ ತನುಮನ
ಕಾರು ಅಳತೆಯು ಹಿಡಿವರಯ್ಯ ॥ ೧೦ ॥

ಹಳೆಯ ಜೋಳಿಗೆ ಬಿಸುಟು ಬೆಳಕು ಜೋಳಿಗೆ ಹಿಡಿದು
ಬೆಳಕಾಗಿ ನೀ ಚರಿಸು ಭಕ್ತರ ಮನಕೆ
ಚುಳುಕಾಗಿ ಬಂದು ಹರಸಯ್ಯ ॥ ೧೧ ॥

ಭಕುತರ ಮನೆಯ ಮೆಟ್ಟಿ ಭಕುತರ ಮನವ ಮುಟ್ಟಿ
ಭಕುತರ ಮನದೊಳ ಕಸವ ನಿಜ ಬಿಕ್ಕೆಯ
ಇಕ್ಕಿರೆಂದು ಎಚ್ಚರಿಸು ನೀನಿಂದು ॥ ೧೨ ॥

ಮನದ ಕಸವನೆ ತೆತ್ತು ಘನರು ನೀವಾಗೆಂದು
ಅನುನಯದ ನುಡಿಗೈದು ಭಕುತರ ಕಪ್ಪು
ಮನವ ತೊಳೆದು ಬೆಳಗಿ ನಿಂದು ॥ ೧೩ ॥

ಬೆಳಕಿನ ಪಂಜನೆ ಹಿಡಿದು ಕೊಳಕು ಕಪ್ಪನೆ ಹುಡುಕಿ
ಹುಳುಕು ಹುಸಿಯನೆ ಹಿಡಿದು ನಿನ್ನಮಾರ
ಬೆಳಕು ಜೋಳಿಗೆಯ ತುಂಬಯ್ಯ ॥ ೧೪ ॥

ಮನದಿ ಬೆಳೆಯುವ ಆರು ಕಳೆಯನು ಕೊಯ್ದು ಬಿಕ್ಕೆಯ
ನಿನ್ನ ಜೋಳಿಗೆಗೆ ಶೇಖರಿಸಿ ಭಕುತರ
ಮನವ ತೊಳೆಯಯ್ಯಾ ನೀನಿಂದು ॥ ೧೫ ॥

ಇಂತಪ್ಪ ಭಿಕ್ಷೆಯನೆ ಸಂತಸದಿ ನೀ ಮಾಡು
ಕಂತುಹರನೊಲು ಜಗದಿ ನೀ ಮೆರೆದು ನಿಜಮು
ಸಂತನೆ ಆಗಿ ನೆರೆ ಬಾಳು ॥ ೧೬ ॥

ಶಿವರಾತ್ರೀಶ ನಿಜಗುರುವವತಾರವೆಗ್ಗಳಿಸಿ
ಶಿವವ ಮಾಡಲಿ ಜಗಕೆ ನಿನ್ನಮಾರಪಥಕೆ
ಶಿವ ಬೆಳಕ ಚೆಲ್ಲಿ ಹರಸಲಿ ॥ ೧೭ ॥

ನಿನ್ನ ನುಡಿ ಬೆಳಕಾಗಿ ನಿನ್ನ ನಡೆ ಘನವಾಗಿ
ಸನ್ಮತರಿಗೆ ಗತಿಮತಿಯಾಗಿ ರೂಢಿಯೊ
ಳಿನ್ನು ಬಾಳು ಭಕ್ತರಿಗಾಗಿ ॥ ೧೮ ॥

ಮಂಗಳವು ಗುರುವಿಗೆ ಮಂಗಳವು ಶಿವಯೋಗಿಗೆ
ಮಂಗಳವು ಶಿವರಾತ್ರಿರಾಜೇಂದ್ರಗೆ ಶುಭ
ಮಂಗಳವು ಭಕ್ತಸಂತತಿಗೆ ॥ ೧೯ ॥

# ಅರವತ್ತು ವರ್ಷ ಹರ್ಷ ಸ್ಪರ್ಶ

ಡಾ. ಕೆ. ಚಿದಾನಂದಗೌಡ

ಅರವತ್ತನೆಯ ವರ್ಷ ಹುಟ್ಟು ಹಬ್ಬದ ಹರ್ಷ
ನವಚೇತನದ ಸ್ಪರ್ಶ ತಮ್ಮ ಆದರ್ಶ.

ಸುತ್ತೂರು ಗದ್ದುಗೆಯನೇರಿ ಜನಸತ್ತಿಗೆಯ
ನೆತ್ತಿ ಹರ್ಷವ ಬಿತ್ತಿ ಜನಕಿತ್ತಿರಭಯ.

ಕಾಯಕವೆ ಕೈಲಾಸ ಜನರಭ್ಯುದಯ ಶ್ವಾಸ
ಉಪಕಾರದವಕಾಶ ಮಿತಿಯು ಆಕಾಶ.

ತಮ್ಮ ವಿದ್ಯಾಪೀಠ ಜಗಕೆ ನೀಡುವ ಪಾಠ
ಎದ್ದು ಕಾಣುವ ನೋಟ ದಿಟವು ರಸದೂಟ.

ತಮ್ಮ ಕಾಯಕ ದಿವ್ಯ ತಮ್ಮ ಭಾವನೆ ನವ್ಯ
ತಮ್ಮ ಜೀವನ ಕಾವ್ಯವಿಹುದೆನಿತು ಭವ್ಯ.

ಸದ್ಗುಣದ ಸಂಗಮವು ದೇಗುಲವು ಜಂಗಮವು
ಎಂಬ ಮಾತಿಗೆ ಸಮವು ತಮ್ಮ ಜೀವನವು.

ಜ್ಞಾನವಿಜ್ಞಾನಗಳ ಧ್ಯಾನಮೌನಾದಿಗಳ
ಕರುಣೆಯಾಭರಣಗಳ ಬುದ್ಧಿಶುದ್ಧಿಗಳ

ಧರ್ಮದುತ್ತುಂಗಗಿರಿ ಕರ್ಮಜೀವನದ ಝರಿ
ಮರ್ಮವರಿತಿರುವ ಸಿರಿ ತಾವಾಗಿರುವಿರಿ.

ವರ್ಷ ನೂರಾರುರುಳಿ ಕೀರ್ತಿಕುಸುಮವದರಳಿ
ಸೌರಭವು ಬರುತಿರಲಿ ಜನ್ಮದಿನ ಬರಲಿ.

# ಇರಲಿ ನಿನ್ನಯ ಕೃಪೆ

**ಪಂಚಾಕ್ಷರಿ ಹಿರೇಮಠ**

ವಿಶಾಲ ಲಲಾಟದ ತುಂಬ
ತುಂಬಿರುವ ತ್ರಿಪುಂಡ್ರ
ಅದು ಇನ್ನೇನೂ ಅಲ್ಲ
ಸಹಸ್ರದಳ ಕಮಲದಲಿ
ಬೆಳಗುವ ಚಿದ್ಬೆಳಕು !

ಹೊದ್ದ ಕಾಷಾಯಾಂಬರದ ಮೇಲೆ
ಕೊರಳ ಸುತ್ತೂ ಸುತ್ತಿರುವ
ರುದ್ರಾಕ್ಷಿಗಳ ಮಾಲೆ !
ಆ ತೇಜಃಪುಂಜ ಕಣ್ಣುಗಳು
ಅವು ನಿಜಕ್ಕೂ ಕೃಪಾಕಟಾಕ್ಷ !

ಮೃದುಮಧುರ ಮಾತು
ಅವು ಬರೀಯ ಮಾತೆ ? ಅಲ್ತು—
ಅವು ಮಂತ್ರಸದೃಶ ಕಣಾ !
"ಸಕಲ ಜೀವಾತ್ಮರ ಲೇಸನೇ ಬಯಸು"
ವಚನಕ್ಕೆ ವ್ಯಾಖ್ಯೆ ಶ್ರೀಗಳ ಬದುಕು !

ಜಗದ್ಗುರು ಪಟ್ಟದ ಅಟ್ಟಹಾಸ
ಆಡಂಬರ ಒಂದಿನಿತೂ ಸುಳಿದಿಲ್ಲ ಅಲ್ಲಿ
ಎಲ್ಲ ಎಲ್ಲವೂ ನಿರಾಡಂಬರ !
"ಇವ ನಮ್ಮವ ಇವ ನಮ್ಮವ"
ಎಂಬುದರ ಧ್ವನಿತರಂಗಗಳು ಸುತ್ತೂರ ಸುತ್ತ !

ಜೀವನದ ಎಲ್ಲ ರಾತ್ರಿಗಳು
ಅಲ್ಲಿ ಶಿವರಾತ್ರಿಗಳು!
ಅಲ್ಲಿ ನಿತ್ಯನಿತ್ಯವೂ ಪ್ರಸಾದ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ
ಬಂದ ಎಲ್ಲ ಭಕ್ತರಿಗೂ ಲಭ್ಯ !

ಶಿವನಗೆ ಶಿವಕಳೆ ಎಲ್ಲ ಶಿವಮಯ
ಓಂಕಾರದ ನಾದಮಾಧುರ್ಯದಲ್ಲಿ
ಈ ಪರಮಗುರು ತನ್ಮಯ !
ಅಲ್ಲಿ ಸಲ್ಲದು ಭೇದಭಾವ
ಅಂತೇ ಗುರು-ವಿರಕ್ತ ಸಮನ್ವಯ !

ಅರಿವು ಹೊತ್ತ ಜ್ಯೋತಿಪುಂಜಕೆ
ಜಾಂಗು ಬಹುಪರಾಕು ನಾಡಗುಡಿಯಲಿ
ಶ್ರೀಗುರುವಿಗೆ ಶಿರಸಾಷ್ಟಾಂಗ ಪ್ರಣಾಮಗಳು !
ಓ ! ಪ್ರಣವಮೂರ್ತಿ ಇರಲಿ
ನಿನ್ನಯ ಕೃಪೆ ಸದಾ ನಾಡವರ್ಗೆ

# ಬೆಳೆಯಲಯ್ಯ ನಿನ್ನ ಗುರುಪರಂಪರೆ

ತಿಪ್ಪೇಸ್ವಾಮಿ ಲಕ್ಕೋಳ

ಮಂಗಳದ ನಗೆ ಮಿನುಗು
ಜಗವ ತಣಿಸುವ ಕಣ್ಣ ತಣ್ಬೆಳಗು
ದಿವ್ಯಕಾವಿಯ ಕಾಂತಿ
ಸತ್ಯವು ಶಿವವು ಸುಂದರವು
ಮೇಳವಿಸಿ ಮೈದಳೆದ ದಿವ್ಯಮೂರ್ತಿ.

ಹಗಲೆನದೆ ಇರುಳೆನದೆ
ನಗೆಯೆನದೆ ದಗೆಯೆನದೆ
ಬಡವ-ಬಲ್ಲಿದರೆನದೆ
ಹಿರಿಯ ಕಿರಿಯರೆನದೆ
ಸಕಲರಿಗೂ ಸುಲಭಸಾಧ್ಯ ಸನ್ನಿಧಿ,
ಭಿನ್ನಭಾವವಿಲ್ಲದ ನಿತ್ಯ ಅವಿಮುಕ್ತ ಕ್ಷೇತ್ರ.

ನುಡಿ,
ಮುತ್ತಿನ ಹಾರದಂತೆ
ಮಾಣಿಕ್ಯದ ದೀಪ್ತಿಯಂತೆ
ಸ್ಫಟಿಕದ ಶಲಾಕೆಯಂತೆ
ಲಿಂಗ ಮೆಚ್ಚಿ ಅಹುದಹುದೆನುವಂತೆ
ಇರಬೇಕು ದಿಟ.
ನುಡಿದರೆ ನಿನ್ನಂತೆ ನುಡಿಯಬೇಕು.
ವರ್ಣವರ್ಣದಲಿ ವಿಶ್ವಪ್ರೇಮದ ಕಂಪ ತುಂಬಿ
ನುಡಿನುಡಿಯಲಿ ದಯೆಯ ಧಾರೆಯ ಹರಿಸಿ
ಜಗದ ಜಂಜಡ ಹೊತ್ತು ಕುಸಿಯುತಿಹ ಪದಕೆ
ನೊಂದು ಬೆಂದ ತಪ್ತ ತ್ರಸ್ತ ಮನಕೆ
ತಂಗಾಳಿ ಸೂಸಿದಂತೆ,
ಬೆಂದು ಬೆಂಡಾರಿದ ನೆಲಕೆ
ಮುಂಗಾರು ಕರೆದಂತೆ
ಮನದ ಗಾಯಕೆ ಜೇನು ಸವರಿದಂತೆ

ನುಡಿಯಬೇಕು ;
ನುಡಿದರೆ ನಿನ್ನಂತೆ ನುಡಿಯಬೇಕು.
ಆನೆಕರೋಟಿಯಲ್ಲ ಬಿಡು ;
ಅದು 'ಆನೆ ಕರೋತಿ' ನಿನ್ನ ಕಾರ್ಯಕ್ಷೇತ್ರ.

ಕೋಟಿಜನರ ಬದುಕ ರೂಪಿಸುವ
ನಿನ್ನ ಗುರುಪರಂಪರೆ ಬೆಳೆಯಲೆಂದು
ಎದೆತುಂಬಿ ಹಾರೈಸುವೆನಯ್ಯಾ ನಾ ನಿನ್ನ ಕಿಂಕರ.

# ವಿಶ್ವಾತ್ಮನ ಪೂಜೆ

**ಜಗದ್ಗುರು ಮಾತೆ ಮಹಾದೇವಿ**

ಸೃಷ್ಟಿಯು ದೇವದೇಗುಲದೊಳಗೆ
ಕರ್ತನ ಪೂಜೆಯು ಸಾಗುತಿದೆ ॥ ಪ ॥

ಅರಿಯುವ ಕಣ್ಣು ಇರದಿರೆ ಇಲ್ಲಿ
ತೋರುವುದೆಲ್ಲ ಜಡಕ್ರಿಯೆಯಾಗಿ ॥ ಅ.ಪ. ॥

ಆಗಸ ತುಂಬಿದ ಕಾರ್ಮುಗಿಲುಗಳು
ಮಜ್ಜನವೆರೆಯುವ ಕುಂಭಗಳು ।
ಪ್ರಕೃತಿಯು ಒಡಲಲಿ ಬಿಡಗಿಂದಿರುವ
ಹೂಗಳು ಗೈವವು ಪುಷ್ಪಾರ್ಚನೆಯ ॥ ೧ ॥

ನಭದಲಿ ಇಂದು ಬೆಳಗುವ ರವಿಶಶಿ
ಅಭವಗೆ ಮೀಸಲ ಆರತಿಯು ।
ನೀಲಾಂಬರದಲಿ ಮಿಂಚುವ ಚುಕ್ಕಿಯು
ಚೆಲುವಗೆ ಅರ್ಪಿತ ಅಕ್ಷತೆಯು ॥ ೨ ॥

ಅಗ್ನಿಯು ಅರ್ಪಿತ ದೇವಗೆ ಭಸಿತವು
ನಗ್ನಶರೀರಿಗೆ ದಿಕ್ಕುಗಳಂಬರ ।
ಲೋಕದ ಪರಿಮಳ ಗಂಧವು ಚಂದನ
ಸಕಲ ಧಾನ್ಯಗಳು ಉದರಾರ್ಪಿತವು ॥ ೩ ॥

ಒಯ್ಯಾರದಲಿ ಬೀಸುವ ಗಾಳಿಯು
ಸುಯ್ಯನೆ ಚಾಮರ ಇಕ್ಕುತಿದೆ ।
ಶುಕಪಿಕಕೋಗಿಲೆ ಸಾಸಿರ ಕಂಠದಿ
ಘಂಟಾರವವ ಮಾಡುತಿವೆ ॥ ೪ ॥

ಲೀಲಾಮಯಮಹ ಬ್ರಹ್ಮಾಂಡದಲಿ
ಗೋಲ ಸಾಸಿರ ತಿರುಗುತಿವೆ ।
ಎಡಬಿಡದಂತೆ ಪ್ರದಕ್ಷಿಸುತಿರುವವು
ಮೃಡನ ಚೇತನವ ಒಮ್ಮನದಿ ॥ ೫ ॥

ಶಕ್ತಿಯು ವ್ಯಕ್ತದ ರೂಪದ ಸೃಷ್ಟಿಯು
ಭಕ್ತಿಯಿಂ ತಂದೆಯ ಪೂಜಿಸುತ ।
ಓಂಕಾರದ ರವ ಬಿಂಕದಿ ಹಾಡುತ
ಸಚ್ಚಿದಾನಂದಗೆ ನಮಿಸುತಿದೆ ॥ ೬ ॥

# ಶರಣು ಶರಣು ಶ್ರೀ ಶಿವರಾತ್ರಿರಾಜೇಂದ್ರ

**ಎಲೆತೋಟದಹಳ್ಳಿ ಪ್ರಭುಸ್ವಾಮಿ**

ಇಹವ
ಮಹವ
ಮಾಡಿದಭವನ
ವರಪುತ್ರ
ಶ್ರೀ ಶಿವರಾತ್ರಿರಾಜೇಂದ್ರ ಶರಣು ಶರಣು ॥

ಅಂದು
ಎಂದೋ ಅಂದು
ಉದಿಸಿತು
ನೈದಿಲೆಯು ಜಲಧಿಯಲಿ
ಭಕ್ತಜನ ನೈದಿಲೆಯು
ಅಪಾರ್ಥಿವ ಜಲಧಿಯಲಿ
ಇಂದು—
ಚಿದ್ಬಿಂದು ;
ತಲೆ
ಶಿವತತ್ತ್ವದಾಸೆಲೆ ;
ಮುಂಡ
ಧರ್ಮದ ಬ್ರಹ್ಮಾಂಡ :
ಕರಗಳು
ವಿದ್ಯಾನ್ನದಾನಗಳು
ಪಾದಯುಗ
ಇಹಕ್ಕೊಂದು ಪರಕ್ಕೊಂದು

ವಸನ
ತ್ಯಾಗದ ನಿರ್ವಸನ ;
ಪೂರ್ಣೇಂದು ಸ್ಮಿತವೆಂದೆಂದು ;
ವಿದ್ಯಾಕೇಂದ್ರಗಳು
ಶಾಶ್ವತ ಉಕ್ಕಂದಗಳು ;
ಜ್ಞಾನಚಂದ್ರಿಕೆಯದು ಹಬ್ಬಿ—

ಕಚ್ಚಿದರೆ ಔಡು
ಕತ್ತಲೆಯು ದೌಡು :
ಹಸಿವು ತೃಷೆಯನು
ಮೀರಿನಿಂತ ಜ್ಞಾನಭಾಸ್ಕರನೆ
ಮೆರೆವ ಭವನಿಧಿಯೆ
ಎರೆವ ಫಲಪ್ರದನೆ
ಉಣಿಸಿ ತಣಿಸಿ
ದಿವ್ಯ ತಂಗದಿರ
ಮರೆಮಾರಿ ತೋರುತ್ತಿರು
ಅರಳಿ ಥಳಥಳಿಸಿ
ಕುಡಿಸು ಜ್ಞಾನಪಾನವ

ಶತಮಾರಿ
ಬೆಳಗು ಜೆಳಗೈ
ಇಹವ
ಮಾಡಿದಭವನ
ವರಪುತ್ರ
ಶ್ರೀ ಶಿವರಾತ್ರಿರಾಜೇಂದ್ರ
ರಾಜೇಂದ್ರ . . . . ರಾಜೇಂದ್ರ.

# ಬಾಳ ಬೆಳಗಿಸು ಗುರುವೆ

'ಶ್ರೀ ಸಿದ್ಧವೀರತನಯ'

ಹೃದಯದ ಕದವ ತೆರೆದು
ಶ್ವಪಚತ್ವವ ಗುಡಿಸೆಸೆದು
ಮಲಿನತೆಯ ಕಣಗಳನು ಹೊರದೂಡಿ ಮನದ
ಶುಭ್ರತೆಯ ದಾರಿಯಲಿ ನಿರ್ಮಲತೆಯ ಬೆಳಕನು ಚೆಲ್ಲಿ
ಬಾಳ ಬೆಳಗಿಸು ಗುರುವೆ ನಮಿಪೆ ಜಗದೊಡೆಯ
ಹರ್ಷದ ಹಾಲ್ಜೇನು ಹರಿಸಿ ಕೊಡು ಅಭಯ

    ಬಾಳ ಬಟ್ಟೆಯ ತುಂಬಿ
    ಕಾಂಬ ಕಲ್ಮುಳ್ಳುಗಳ
    ಹೋಗಲಾಡಿಸಿ ನವ್ಯಮತಿ ಕೊಟ್ಟು ಧೃತಿ ತುಂಬಿ
    ನಿತ್ಯಕೃತಿಗಳಿಗಾದ್ಯ ಒಲವು-ಗೆಲುವುಗಳಿತ್ತು
    ನಡೆಸೆನ್ನ ಕೈಬಿಡದೆ ಓ ಜಗದ್ಗುರುವೆ
    ನಾ ನಿಮ್ಮಡಿಯ ಕುರುಡನಿರುವೆ; ನನ್ನ ಬಾಳ್ಗೆ ಗತಿ ನೀವೆ.

ಸುತ್ತ ಮುತ್ತಿಹ ತಮವ
ಕರುಣೆ ಕಿರಣವ ಬೀರಿ
ಭಕ್ತಿಯ ಜಲದಲಿ ಹೃದಯಸ್ನಾನ ಮಾಡಿಸಿ, ಚೆಲುವ
ಚೆಲ್ಲಿ ಕಣಕಣದಲ್ಲಿ; ಸಿಂಗರಿಸು ಎನ್ನೊಡಲ ಮಸ್ತಕ ಮುಟ್ಟಿ ಹರಸಿ
ಬೇಡುವೆನು ಇಹದೊಡೆಯ ಪಾದ ಮುಟ್ಟಿ
ಬಾಳ ಬೆಳಗಿಸು ಗುರುವೆ ಮನವ ತಟ್ಟಿ.

# ಶ್ರೀಗುರುಲೀಲೆ

**ಪುಲಿಕೇಶಿ**

ಆದಿಗುರು ಶಿವರಾತ್ರಿ ಯತಿರಾಜ ಕರುಣಾಳು
ಲೀಲೆಯಿಂ ಸಲಹಿದೆಯೊ ಜಗದಗುರುವ ॥ ಪ ॥

ಬಿರುಗಾಳಿ ಬೀಸಿತ್ತು ಕೆಂದೂಳಿಯೆರಚಿತ್ತು
ತರುಮೂಲವಲುಗಾಡಿ ತಾ ನಿಂತಿತ್ತು ।
ಪರದಾಡಿ ರಪರಪನೆ ಹಕ್ಕಿಗಳು ಭಯಬಿದ್ದು
ಇರುಳು ಕತ್ತಲೆ ಕಳೆಯೆ ಗರಿಯ ಕೆದರೆ ॥ ೧ ॥

ಧಾರವಾಡದ ಪೌರಸನ್ಮಾನಸಭೆಯಲಿ ಭಾಗ
ವಹಿಸಲ್ಕೆ ಬಿಜಯಗೈದಾಗ ಚೌಡ- ।
ದಾನಪುರದೊಳು ಕಾರ್ಯನಿರ್ವಹಿಸೆ ಪೋಪಾಗ
ಊನ ತಾ ಕಾದಿತ್ತು ಮಾರ್ಗದಲ್ಲಿ ॥ ೨ ॥

ತಮದ ಮೊತ್ತವೆ ಕವಿದು ಬಂದಂತೆ
ಬಂತು ಬಂತೊಂದು ರಾಕ್ಷಸಾಕೃತಿಯು ।
ಭುವಿಗಿಳಿದ ಶಿವ ಸಾಕಾರಮೂರ್ತಿಯೆದುರು
ಯಮನಾದೊಡೇನಲ್ಲಿ ಶಿವನಿಗೆದುರೆ? ॥ ೩ ॥

ಲೋಕಕಚ್ಚರಿಯಾಯ್ತು, ಶಿಷ್ಯಕುಲ ಹರ್ಷಿಸಿತು ;
ಲೋಕಗುರುವಿಗದಾವ ನೋವೂ ಇಲ್ಲ ।
ನಾಕವಾಸಿಗಳಲ್ಲಿ ವೃಷ್ಟಿಗೈದಿರಬಹುದು
ಮೂಕಮೊರೆ ನಮದೆಲ್ಲ ಫಲಿಸಲಾಗಿ ॥ ೪ ॥

ತಪದ ಬಲ ಮಂತ್ರಬಲ ಮೇಣ್ಕ್ರಿಯಾಬಲಗಳವು
ವಿಪುಲವಾಗಿಯೆ ಕೂಡಿ ಮೇಳ ನಡೆಸಿ ।
ಉಪಕಾರ ಮಾಡಿದುವು ಭಕ್ತಕೋಟಿಯ ಪುಣ್ಯ
ಸುಪರಿಪೂರ್ಣವದಾಗಿ ಧನ್ಯವೆನಿಸೆ ॥ ೫ ॥

# ಸುತ್ತೂರು ಶ್ರೀ

ಜೀವೂರಹಳ್ಳಿ ಗುರುಸಿದ್ದಪ್ಪ

ಗಂಭೀರ ಗುಣಸಾಂದ್ರ ಶಿವರಾತ್ರಿರಾಜೇಂದ್ರ
ನಿನ್ನ ಸುಂದರ ಬಂಧುರ ಬದುಕದು ರುಂದ್ರ ರುಂದ್ರ

ಅರವಿಂದವನೋಲುವ ಮೊಗವದು ಚೆಂದ ಮತ್ತೆನ್ನ ಮನಕಾನಂದ
ನಿನ್ನ ಗುಣಗಾನದಿಂದ ಓ ಶಿವರಾತ್ರೀಶನ ಕರುಣೆಯ ಕಂದ

ಥಳಥಳನೆ ಹೊಳೆಯುವ ಕಾಂತಿಯ ಕಣ್ಣುಗಳವು ಗುಲಗಂಜಿಯು
ಮೈಯೊಳುದಿಸಿದ ಕಪ್ಪನೆ ಬಣ್ಣದೊಳು ಹೊಳೆಹೊಳೆಯುವುವೋ ಶ್ರೀಗುರುವೇ

ನಿನ್ನ ವರ್ಚಸ್ಸಿನ ಪ್ರಭೆಯದು ಜಗದ್ರಹಸ್ಯಭೇದಕ ತಾರಕಮಂತ್ರ
ಉಪದೇಶಾಮೃತವದು ಸತ್ಯಂ ಶಿವಂ ಸುಂದರಂಗಳರಿಯೆ ಸುಲಭತಂತ್ರ

ಜಗದ್ಗುರುವೇ ನೀ ತೆರೆದ ಪ್ರಸಾದನಿಲಯ ಶಾಲಾ ಕಲಾಗಾರಗಳವು
ನಿನ್ನಯ ಸಾಧನೆ ಸಿದ್ಧಿಗೆ ಒಡ್ಡಿದ ದ್ಯೋತಕರೂಪಾಕಾರಗಳು

ಸಾಧಕನಿಗೆ ಸಿದ್ಧಿಯೇ ಹೆಗ್ಗುರುತೆಂಬೊಲು ನಿಂತಿಹ ಮೈಲಿಗಲ್ಲುಗಳಿವಕೆ
ಮಂತ್ರಾಲೋಚನೆ ಕೋಣೆಯಲಿ ಕುಳಿತು ಚೇತನ ತುಂಬುವ ಪರಿಯೆಂತು ?

ಅತಿಮಹತಿ 'ಕಾವಿ'ಗಿಹುದೆಂಬುದು ಜನಜನಿತ ಲೋಕರೂಢಿಯಾಗಿಹುದು
ನಿಜಸಾಧನೆ ಸಿದ್ಧಿಯಿಂ ಕಾವಿಗೈದಿಸಿರಿ ಮಹೋನ್ನತಿಯ ನಿಜದಿ

ತೊಟ್ಟ ಕಾವಿಬಟ್ಟೆಗಲ್ಲದೆ ನಿನ್ನ ದೇಹಮಾಟಕೆಂದೂ ಬರಲೊಲ್ಲದು ಸುಕ್ಕು
ಎಂಬುದದುವೇ ನಾನಿಷ್ಟು ದಿನವೂ ನಿನ್ನಲಿ ಕಂಡ ವೈಶಿಷ್ಟ್ಯವಾಗಿಹುದು

ಎಡರುತೊಡರುಗಳೇನೇ ಇದ್ದರೂ ಉರಿವ ಸೊಡರಿನಂತಿರಲು ನಾನು
ದಿನದಿನವು ಮರೆಯದಲೆ ಎರೆಯುವೆರೆಯುವಿರಿ ಧರ್ಮತೈಲವನು ನೀವು

ಸದಾ ಮೂಡಲ ಕೆಂಪಿನಂತೊಡಲ ಉದಯರವಿಗಿಂ ಮಿಗಿಲ ಮೊಗದ
ಸದ್ಗುರುವೇ ಆಗಲಾಗಲಿ ನಿನ್ನ ಸುಂದರ ಬಂಧುರ ಬದುಕೊಂದು ನಂದಾದೀವಿಗೆ !

# ಆರತಿ

ಎಂ. ನಾಗಮ್ಮ

ಆರತಿ ಎತ್ತಿರೆ ಬಾಲೆಯರೆಲ್ಲರು
ದೀಕ್ಷಾಗುರು ಶಿವರಾತ್ರಿರಾಜೇಂದ್ರಗೆ ॥ ಪ ॥

ಅಶನ ವಸತಿಯು ಕೊಡುವ ಮೂರ್ತಿಗೆ
ಚಂದದಿಂ ಬೆಳಗಿರಿ ಆರತಿಯಾ
ವಿದ್ಯಾದಾತಗೆ ಮುಕ್ತಿಪ್ರದಾತಗೆ
ಬಡವರ ಬಂಧು ಈಶನಿಗೆ ॥ ೧ ॥

ಲಿಂಗಾಚಾರಗೆ ಲೋಕವಿಖ್ಯಾತಗೆ
ಕನ್ನಡನಾಡಿನ ಕಣ್ಮಣಿಗೆ
ತ್ಯಾಗಶೀಲಗೆ ಭೋಗವಿರಾಗಿಗೆ
ದಕ್ಷಿಣದೇಶದಿ ಸಂಜನಿಸಿಹ ಗುರುವಿಗೆ ॥ ೨ ॥

ಜಂಗಮಜ್ಯೋತಿಗೆ ಜ್ಞಾನಸ್ವರೂಪಗೆ
ಶಿವರಾತ್ರೀಶನ ಕರಸಂಜಾತಗೆ
ಸುತ್ತೂರುವಾಸಿಗೆ ಕೈವಲ್ಯದಾತಗೆ
ಶ್ರೀಗುರು ಶಿವರಾತ್ರಿರಾಜೇಂದ್ರಗೆ ॥ ೩ ॥

# ಸುತ್ತೂರು ಜಗದ್ಗುರು ಶ್ರೀವೀರಸಿಂಹಾಸನ ಮಠದ ಗುರುಪರಂಪರೆ

ಚಂದ್ರಶೇಖರಯ್ಯ

ಒಂದು ಸಾವಿರ ವರ್ಷಗಳಿಗೂ ಮಿಗಿಲಾದ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಪಡೆದಿರುವ ಕಪಿಲಾತೀರದ ಸುತ್ತೂರು ಜಗದ್ಗುರು ವೀರಸಿಂಹಾಸನ ಮಠ ಇಂದು ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಲೋಕೋತ್ತರ ಸೇವೆಯನ್ನು ಸಲ್ಲಿಸುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಸಾವಿರ ವರ್ಷಗಳ ತನ್ನ ಇತಿಹಾಸದಲ್ಲಿ ಈ ಮಠ ಕರ್ನಾಟಕದ ಶೈಕ್ಷಣಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಪಾಲ್ಗೊಂಡು ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ಕೊಟ್ಟಿರುವುದು ಚಾರಿತ್ರಿಕ ಸತ್ಯ. ಈ ಮಠಕ್ಕೆ ಬಂದ ಗುರುವರ್ಯರುಗಳಲ್ಲಿ ಹಲವರು ಕಾರಣಿಕಪುರುಷರೆಂದೂ ಮತ್ತು ಮಹಾತಪಸ್ವಿಗಳೆಂದೂ ಕೀರ್ತಿಪಡೆದವರಾಗಿದ್ದಾರೆ. ಇನ್ನು ಕೆಲವರು ಗ್ರಂಥಕರ್ತರುಗಳಾಗಿ ಧಾರ್ಮಿಕ ಸಿದ್ಧಾಂತಗಳನ್ನು ನಿರೂಪಿಸಿ ಜನಸೇವೆಯನ್ನು ಕೈಗೊಂಡು ಸಮಾಜದ ನೈತಿಕ ಮತ್ತು ಆಧ್ಯಾತ್ಮಿಕ ಬಲವರ್ಧನೆಗೆ ನೆರವಾಗಿದ್ದಾರೆ. ಕಳೆದ ಹತ್ತು ಶತಮಾನಗಳ ಅವಧಿಯಲ್ಲಿ ಶ್ರೀಸಾಮಾನ್ಯನಿಂದ ಹಿಡಿದು ಸಮ್ರಾಟರೂ ಸೇರಿದಂತೆ ಎಲ್ಲರೂ ಈ ಮಠದ ಸತ್ಪ್ರಭಾವಕ್ಕೆ ಒಳಗಾದವರೆ.

ಸುತ್ತೂರು ಶ್ರೀಮಠದ ಜಗದ್ಗುರು ಪರಂಪರೆಯನ್ನು ಕುರಿತು ವಿವೇಚನೆಯನ್ನು ಮಾಡುವಾಗ ಸಾಕಷ್ಟು ಐತಿಹಾಸಿಕ ಸಂಗತಿಗಳು ನಮ್ಮ ಸಹಾಯಕ್ಕೆ ಬರುತ್ತವೆ. ಹಾಗೆ ನೋಡಿದರೆ ನಮಗೆ ಇಂದು ಶ್ರೀಮಠವನ್ನು ಕುರಿತು ಲಭ್ಯವಿರುವ ಐತಿಹಾಸಿಕ ದಾಖಲೆಗಳು ಮತ್ತು ಪುರಾವೆಗಳು ಹೆಚ್ಚೆಂದೇ ಹೇಳಬೇಕು. ಹೀಗೆ ದೊರೆತಿರುವ ಆಧಾರಗಳ ಸಹಾಯದಿಂದ ಶ್ರೀಮಠದ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಚಯಿಸಲು ಈ ಲೇಖನದಲ್ಲಿ ಪ್ರಯತ್ನಿಸಿದೆ. ಈ ದಾಖಲೆಗಳನ್ನು ಕೆಳಕಂಡಂತೆ ಪಟ್ಟಿಮಾಡಬಹುದು: (೧) ಶಿಲಾಶಾಸನಗಳು, (೨) ಪ್ರಾಚ್ಯವಸ್ತು ಇಲಾಖೆಯ ವರದಿಗಳು, (೩) ಸ್ಥಳವರ್ಣನೆ ಸಂಗ್ರಹಗಳು (Gazetteers), (೪) ತಾಮ್ರಶಾಸನಗಳು, (೫) ಸನ್ನದುಗಳು, (೬) ಧಾರ್ಮಿಕ ಗ್ರಂಥಗಳು, ಕಾವ್ಯಗಳು, (೭) ಜಾನಪದ ಹಾಡುಗಳು, ಮತ್ತು (೮) ಶ್ರೀಮಠದಲ್ಲಿ ದೊರೆಯುವ ಇತರ ಕಾಗದಪತ್ರಗಳು. ಇದರ ಜೊತೆಗೆ ವಿಷಯಸಂಗ್ರಹದ ಮತ್ತೊಂದು ಮೂಲವೆಂದರೆ, ಜನರಿಂದ ಜನರು ಹೇಳಿ-ಕೇಳಿ ಉಳಿಸಿಕೊಂಡು ಬಂದಿರುವ ಐತಿಹ್ಯಗಳು ಮತ್ತು ಆಖ್ಯಾಯಿಕೆಗಳು.

## ಸುತ್ತೂರಿನ ಐತಿಹಾಸಿಕ ಹಿನ್ನೆಲೆ

ಶ್ರೀಮಠದ ಗುರುವರ್ಯರುಗಳು ಸುತ್ತೂರನ್ನು ತಮ್ಮ ಆಧ್ಯಾತ್ಮಿಕ ಸಾಧನೆಯ ಕೇಂದ್ರವನ್ನಾಗಿ ಅಂಗೀಕರಿಸುವುದಕ್ಕೆ ಮುನ್ನ, ಈ ಸ್ಥಳ ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಪಡೆದುದಾಗಿತ್ತು. ೧೧ನೆಯ ಶತಮಾನದ ಆರಂಭದಲ್ಲಿ ಶ್ರೋತ್ರಿಯೂರೆಂದು ಪ್ರಸಿದ್ಧವಾಗಿದ್ದ ಈ ಸ್ಥಳಕ್ಕೆ ಅನೇಕ ಶತಮಾನಗಳ ಹಿನ್ನೆಲೆ ಇರಬಹುದೆಂದು ಭಾವಿಸಬಹುದು. ಈ ಗ್ರಾಮವು ಶ್ರೋತ್ರಿಯೂರೆಂದೂ, ಶ್ರುತಿ, ಆಗಮ ಮೊದಲಾದುವುಗಳಲ್ಲಿ ಪಾರಂಗತರಾಗಿದ್ದ ವಿದ್ವಾಂಸರ ಸ್ಥಳವೊಂದಾಗಿತ್ತೆಂದೂ ಊಹಿಸಬಹುದು. ಈ ಮಠದ ಎರಡನೆಯ ಜಗದ್ಗುರುಗಳೆಂದು ಶಾಸನೋಕ್ತರಾಗಿರುವ ಶ್ರೀ ಈಶಾನೇಶ್ವರ ಒಡೆಯರು ೧೧ನೆಯ ಶತಮಾನದ ಮೊದಲರ್ಧಭಾಗದಲ್ಲಿಯೇ ವಿಖ್ಯಾತರಾಗಿರುವುದನ್ನು ಗಮನಿಸಿದರೆ, ೧೨ನೆಯ ಶತಮಾನದಲ್ಲಿ ಬಸವಾದಿ ಶರಣರೆಸಗಿದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಆರ್ಥಿಕ ಕ್ರಾಂತಿಗಿಂತ ಮುನ್ನವೇ ಈ ಮಠ ವೀರಶೈವ ತತ್ತ್ವ ಮತ್ತು ಆದರ್ಶಗಳಿಗೆ ಹೆಸರಾಗಿದ್ದಿತೆಂದು ವ್ಯಕ್ತವಾಗುತ್ತದೆ.

## ಸುತ್ತೂರು ವೀರಸಿಂಹಾಸನ ಮಠದ ಸಂಸ್ಥಾಪನೆ

ಶ್ರೀ ಶ್ರೀ ಶಿವರಾತ್ರೀಶ್ವರ ಭಗವತ್ಪಾದರೇ ಸುತ್ತೂರು ವೀರಸಿಂಹಾಸನ ಮಠದ ಸಂಸ್ಥಾಪನಾಚಾರ್ಯರೆಂದು

ಪರಂಪರಾಗತವಾಗಿ ಬಂದ ಶ್ರುತಿವಾರ್ತೆಯಿಂದ ಮತ್ತು ಐತಿಹ್ಯಗಳಿಂದ ತಿಳಿದುಬರುತ್ತದೆ. ಆದಿಜಗದ್ಗುರುವರ್ಯರ ಪೂರ್ವಾಶ್ರಮದ ತಾಯಿತಂದೆಗಳು, ಸ್ಥಳ ಇವುಗಳ ಬಗೆಗೆ ನಿಖರವಾಗಿ ತಿಳಿದು ಬರುವುದಿಲ್ಲ. ಮುಕ್ತಾಯಕ್ಕ ಅವರು ಅಲ್ಲಮಪ್ರಭುವಿನ ಪೂರ್ವವೃತ್ತಾಂತವನ್ನು ಕೇಳಿದಾಗ ಅಲ್ಲಮಪ್ರಭು ಹೀಗೆ ಹೇಳುತ್ತಾರೆ:

ಧರೆಯಾಕಾಶ ಮನೆಗಟ್ಟದಂದು ಹರಿವ ಅನಿಲ ಅಗ್ನಿ ಜಲ
ಮೊಳೆದೋರದಂದು ಹುಟ್ಟಿದಳೆಮ್ಮವ್ವೆ,
ಅದಕ್ಕೆ ಮುನ್ನವೇ ಹುಟ್ಟದೆ ಬೆಳೆದನೆಮ್ಮಯ್ಯ
ಈ ಇಬ್ಬರ ಬಸಿರಲ್ಲಿ ಬಂದೆ ನಾನು . . .

ಅಂದರೆ ಲೋಕೋದ್ಧಾರಕ್ಕಾಗಿ ಶಿವಶಕ್ತಿಯರ ಕೃಪೆಯಿಂದ ಉದಿಸಿಬಂದವರು. ಈ ಉಕ್ತಿ ಲೋಕಹಿತಾರ್ಥಕ್ಕಾಗಿ ಆಗಮಿಸಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರಿಗೂ ಅನ್ವಯಿಸುತ್ತದೆ. ಮರ್ತ್ಯವನ್ನು ಮಹವನ್ನಾಗಿ ಮಾರ್ಪಡಿಸಲು ಧರೆಗಿಳಿದು ಬಂದ ಕಾರುಣ್ಯಾಂಶವೇ ಆದಿಗುರುವರ್ಯರು. ಅವರ ಪೂರ್ವಾಪರಗಳ ಬಗೆಗೆ ವಿವೇಚಿಸುವುದಕ್ಕಿಂತ ಅವರೆಸಗಿದ ಮಹತ್ಕಾರ್ಯಗಳ ಅರಿವು ಹೆಚ್ಚು ಉಪಯುಕ್ತವಾದುದು.

ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಈಗ್ಗೆ ಸುಮಾರು ಸಹಸ್ರ ವರ್ಷಗಳ ಹಿಂದೆ ಸುಕ್ಷೇತ್ರ ಸಿದ್ಧಗಿರಿಯಿಂದ ಐತಂದು, ಕಪಿಲಾನದಿಯ ತೀರದಲ್ಲಿ ಶಿವಯೋಗಮಗ್ನರಾಗಿದ್ದರು. ಕಂಚಿಯನ್ನಾಳುತ್ತಿದ್ದ ರಾಜರಾಜನಿಗೂ ತಲಕಾಡನ್ನಾಳುತ್ತಿದ್ದ ರಾಚಮಲ್ಲನಿಗೂ ಮೊದಲಿನಿಂದಲೂ ದ್ವೇಷವಿತ್ತು. ರಾಜರಾಜನು ತನ್ನ ಪುತ್ರನಾದ ರಾಜೇಂದ್ರ ಚೋಳನ ನಾಯಕತ್ವದಲ್ಲಿ ರಾಚಮಲ್ಲನನ್ನು ಸದೆಬಡಿಯಲು ಅಪಾರ ಸೈನ್ಯವನ್ನು ಕಳುಹಿಸಿದನು. ದಂಡೆತ್ತಿಬರುವ ಈ ವಿಷಯ ತಿಳಿದು ತಲಕಾಡಿನ ರಾಜನೂ ಯುದ್ಧಕ್ಕೆ ಸಿದ್ಧನಾದನು. ಆಗ ಜನಮನದ ಶಾಂತಿ ಕದಡಿ ಎಲ್ಲೆಡೆ ಭೀತಿಯ ವಾತಾವರಣ ತಲೆದೋರಿತು. ಇದನ್ನು ಗಮನಿಸಿದ ಶ್ರೀ ಶಿವರಾತ್ರೀಶ್ವರರು ದೇಶದಲ್ಲಿ ಶಾಂತಿ ನೆಮ್ಮದಿ ನೆಲಸಲು ಸಂಕಲ್ಪಮಾಡಿ ಕಪಿಲಾನದಿಯ ದಂಡೆಯ ಮೇಲೆ ಅನುಷ್ಠಾನಕ್ಕೆ ಕುಳಿತುಕೊಳ್ಳುವರು. ಸೈನ್ಯದೊಡನೆ ತಲಕಾಡಿನತ್ತ ಧಾವಿಸುತ್ತಿದ್ದ ರಾಜೇಂದ್ರ ಚೋಳನ ದಿವ್ಯಾಶ್ವವು ತನ್ನ ಪ್ರಭುವಿನ ನಿಯಂತ್ರಣವನ್ನು ಮೀರಿ ಅನುಷ್ಠಾನಮಗ್ನರಾದ ಶ್ರೀಗುರುವಿನ ಬಳಿಗೈದಿ, ಪ್ರದಕ್ಷಿಣೆ ಮಾಡಿ ಶಿರಬಾಗಿ ನಿಲ್ಲುವುದು. ಶ್ರೀಗಳ ಅಧ್ಯಾತ್ಮಪ್ರಭೆ ರಾಜೇಂದ್ರ ಚೋಳನ ದ್ವೇಷವೆಂಬ ಅಜ್ಞಾನವನ್ನು ನಿರ್ಮೂಲಮಾಡುವುದು. ಭಕ್ತಿಗೌರವಗಳಿಂದ ರಾಜೇಂದ್ರ ಚೋಳನು ಶ್ರೀಗುರುವಿಗೆ ನಮಸ್ಕರಿಸುವನು. ಭಕ್ತಿಗೆ ಸಂಪ್ರೀತರಾದ ಶ್ರೀಗುರುವು ಕಣ್ತೆರೆದು ಯುದ್ಧದಿಂದುಂಟಾಗುವ ಅನರ್ಥಗಳನ್ನು ವಿವರಿಸಿ, ಆತನಿಗೆ ವಿವೇಕೋದಯವಾಗುವಂತೆ, ನಿಜಶಾಂತಿ ಲಭಿಸುವಂತೆ ಉಪದೇಶಿಸುವರು. ಈ ಪರಿವರ್ತನೆಯ ಸುದ್ದಿ ರಾಚಮಲ್ಲನಿಗೂ ತಿಳಿದು, ಆತನೂ ಒಡನೆಯೇ ಶ್ರೀಗುರುವಿನ ಬಳಿಗೆ ಧಾವಿಸಿ ಶ್ರೀಗುರುದರ್ಶನ ಮಾಡುವನು. ಕಂಚಿಯ ರಾಜ ಮತ್ತು ತಲಕಾಡಿನ ರಾಜ ಇವರಲ್ಲಿ ದ್ವೇಷ ಅಳಿದು ಸ್ನೇಹಸೌಹಾರ್ದಗಳು ಅಂಕುರಿಸಿ ಬೆಳೆಯುವುವು. ತಲ್ಲಣಗೊಂಡಿದ್ದ ಜನತೆಗೆ ಅಪಾರ ಸಂತಸವಾಗುವುದು. ಈ ಉಭಯ ರಾಜರ ಮತ್ತು ಪ್ರಜೆಗಳ ಸಂಪ್ರಾರ್ಥನೆಯನ್ನು ಮನ್ನಿಸಿ, ಅಲ್ಲಿಯೇ ಇರಲು ನಿಶ್ಚಯಿಸಿ, ಶ್ರೀ ಶಿವರಾತ್ರೀಶ್ವರರು 'ವೀರಸಿಂಹಾಸನ ಮಠ'ವನ್ನು ಶ್ರೋತ್ರಿಯೂರು, ಪ್ರದಕ್ಷಿಣಪುರ ಇತ್ಯಾದಿ ಹೆಸರುಗಳಿಂದ ಉಕ್ತವಾದ ಸುತ್ತೂರಿನಲ್ಲಿ ಸಂಸ್ಥಾಪಿಸುವರು. ಈ ರೀತಿಯಿಂದಾಗಿ ಶ್ರೀ ಶಿವರಾತ್ರೀಶ್ವರರು, ರಾಜರು ಮತ್ತು ಪ್ರಜೆಗಳ ಅಭೀಪ್ಸೆಯಂತೆ 'ವೀರಸಿಂಹಾಸನ ಮಠ'ವನ್ನು ಸ್ಥಾಪಿಸಿ, ಅನಂತರ ಸುತ್ತಮುತ್ತಣ ಜನರಲ್ಲಿ ಧರ್ಮಜಾಗೃತಿಯನ್ನುಂಟುಮಾಡಿ, ದೇಶದಲ್ಲಿ ಶಾಂತಿ, ನೆಮ್ಮದಿ ಲಭಿಸಲು ಕಾರಣರಾಗುವರು. ಅಘಟಿತಘಟನೆಗೆ ಕಾರಣರಾದ ಆದಿಗುರು ಶ್ರೀ ಶಿವರಾತ್ರೀಶ್ವರರು ಲಿಂಗದೊಡನೆ ಒಡವೆರೆದು ಒಂದಾಗಿ ನಿಜಭಕ್ತರ ಅಭೀಷ್ಟಗಳನ್ನು ಇಂದಿಗೂ ಕರುಣಿಸುತ್ತಿದ್ದಾರೆ.

## ದ್ವಿತೀಯ ಜಗದ್ಗುರು ಈಶಾನೇಶ್ವರ ಒಡೆಯರು

ಚೋಳ ಚಕ್ರವರ್ತಿಗಳ 'ರಾಜಗುರು'ಗಳಾಗಿ ಸುತ್ತೂರು ವೀರಸಿಂಹಾಸನಕ್ಕೆ ಅದ್ವಿತೀಯ ಸೇವಾಕಾರ್ಯಗಳಿಂದ ಶ್ರೀಪೀಠದ ಅಧ್ಯಾತ್ಮಸೌರಭ ಅಂದಿನ ನಾಡಿಗೆಲ್ಲ ಹರಡುವಂತೆ ಮಾಡಿದವರು ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು. ಇವರ ಐತಿಹಾಸಿಕತೆಯನ್ನು ಕುರಿತಾದ ಶಿಲಾಲೇಖಗಳು, ಕಾವ್ಯಗಳು ಇವರ ಮೇಲ್ಮೆಯನ್ನು ಒತ್ತಿ ಹೇಳುತ್ತವೆ. ಇವರು ತಮ್ಮ ಪೂರ್ವಾಧಿಕಾರಿಗಳೂ ಪೀಠದ ಸಂಸ್ಥಾಪಕರೂ ಆದ ಶ್ರೀ ಶಿವರಾತ್ರೀಶ್ವರರು ಇರುವಾಗಲೇ

ಮಠಕ್ಕೆ ಉತ್ತರಾಧಿಕಾರಿಗಳಾಗಿ ಕ್ರಿ.ಶ. ೧೦೩೦ನೇ ವರ್ಷದಲ್ಲಿ ನಿಯೋಜಿತರಾದರು ಎಂಬುದಾಗಿ ತಿಳಿಯುತ್ತದೆ. ಆ ವೇಳೆಗಾಗಲೆ ಇವರು ಮಹಾನ್ ಸಾಧಕರಾಗಿ ತಮ್ಮದೇ ಆದ ಆಧ್ಯಾತ್ಮದ ವರ್ಚಸ್ಸನ್ನು ಹೊಂದಿದ್ದರು.

ಜಗದ್ಗುರು ಈಶಾನೇಶ್ವರರನ್ನು ಕುರಿತು ನಮಗೆ ದೊರೆಯುವ ಮೊಟ್ಟ ಮೊದಲ ಚಾರಿತ್ರಿಕ ದಾಖಲೆಯೆಂದರೆ, ಒಂದೇ ಕಲ್ಲಿನ ಎರಡೂ ಕಡೆಗಳಲ್ಲಿ ಬರೆದಿರುವ ಎರಡು ಬೇರೆಬೇರೆ ಶಿಲಾಲೇಖಗಳು.[1] ಈ ಎರಡೂ ಶಾಸನಗಳು ಈಶಾನೇಶ್ವರ ಒಡೆಯರ ಕಾರ್ಯಕ್ಷೇತ್ರದ ಸೂಕ್ಷ್ಮ ಪರಿಚಯುವನ್ನು ಮಾಡಿಕೊಡುತ್ತವೆ. ಶಾಸನ ನಂ. ೨೮ (೧೬೪) ರಲ್ಲಿ ಕಾಲನಿರ್ದೇಶನವು ಸ್ಪಷ್ಟವಾಗಿರುವುದರಿಂದಲೂ ಮತ್ತು ಪೂರ್ಣಪಾಠ ದೊರೆಯುವುದರಿಂದಲೂ ಅಭ್ಯಾಸ ಮತ್ತು ವಿಷಯಸಂಗ್ರಹಕ್ಕೆ ತುಂಬ ಅನುಕೂಲವಾಗಿದೆ. ಈ ಶಾಸನದ ಪ್ರಕಾರ ೯೫೫ನೇ ಶಕವರ್ಷದ ಅಂಗಿರಸ ಸಂವತ್ಸರದ ಕಾರ್ತೀಕ ಬಹುಳ ೨ನೇ ಸೋಮವಾರದಂದು ರೋಹಿಣೀ ನಕ್ಷತ್ರದಲ್ಲಿ (ಶಾಸನ ಇಲಾಖೆಯ ಲೆಕ್ಕಾಚಾರ ದಂತೆ ಕ್ರಿ.ಶ. ೨೩-೧೦-೧೦೩೨) ನಡೆದ ಚೋಳ ಚಕ್ರವರ್ತಿ ರಾಜೇಂದ್ರ ಚೋಳನ ೩೧ನೆಯ ಪಟ್ಟಾಭಿಷೇಕದ ಉತ್ಸವ ಸಂದರ್ಭದಲ್ಲಿ, 'ರಾಜೇನ್ದ್ರ ಚೋಳದೇವ ಗುರುಕ್ಕಳ್' ಆದ 'ಈಶಾನ ಈಶ್ವರ ಮುಡಿಯಾರ್ಗ್ಗೆ' ನೀಡಿರುವ ದಾನ-ದತ್ತಿಗಳ ವಿವರಗಳು ಸಿಗುತ್ತವೆ. ಈ ಕಾರ್ಯಕ್ರಮದಲ್ಲಿ, 'ಶ್ರೋತ್ರಿಯ ಗ್ರಾಮದ ಮಹಾಜನಮುಂ' ಎಲ್ಲರೂ ಭಾಗವಹಿಸಿರುವುದು ಗಮನಾರ್ಹ. ಅದರಲ್ಲೂ ಸಮ್ರಾಟನ ಮೂರು ದಶಕಕ್ಕೂ ಹೆಚ್ಚಿನ ಅವಧಿಯ ಯಶಸ್ವಿ ಆಡಳಿತದ ಸಂತೋಷ ಸಂದರ್ಭದಲ್ಲಿ 'ರಾಜಗುರುಗಳಿಗೆ' ನಾಗರಿಕರು ನೀಡಿದ ಅಭೂತಪೂರ್ವ ಸನ್ಮಾನ—ಇದರಿಂದ ಈಶಾನೇಶ್ವರ ಒಡೆಯರು ಎಷ್ಟು ಪ್ರಭಾವಯುತರಾದ ಮಹಿಮಾನ್ವಿತ ರಾಜಗುರುಗಳು ಎಂಬುದು ವೇದ್ಯವಾಗು ವುದರ ಜೊತೆಗೆ ಅವರ ಜನಾನುರಾಗವೆಷ್ಟಿತ್ತು ಎಂಬುದೂ ತಿಳಿಯುತ್ತದೆ. ಹೀಗೆ ಮಠಕ್ಕೆ ಅಯಾಚಿತವಾಗಿ ಬಂದ ಕಾಣಿಕೆಗಳನ್ನು ಸ್ವೀಕರಿಸಿ, ಅಧ್ಯಾತ್ಮ ಮತ್ತು ಲೌಕಿಕ ಸಮನ್ವಯದ ಸಂಕೇತವಾಗಿ ಈಶಾನೇಶ್ವರರು ಕ್ರಿಯಾಶೀಲ ರಾಗಿದ್ದರೆಂದು ತಿಳಿಯುತ್ತದೆ. ಇದೇ ಶಾಸನದಲ್ಲಿ ಸುತ್ತೂರಿನಲ್ಲಿರುವ ದೇವಾಲಯಗಳ ಪೈಕಿ, ಅತ್ಯಂತ ಪುರಾತನ ಚೋಳ ಶಿಲ್ಪ ಮಾದರಿಯ ಮೂಲಸ್ಥಾನೇಶ್ವರ ದೇವಾಲಯದ ಉಲ್ಲೇಖವಿದೆ. ಈಶಾನೇಶ್ವರ ಒಡೆಯರನ್ನು ಈ ಶಾಸನಗಳು ಅಂದಿನ ಮಹಾವ್ಯಕ್ತಿಯನ್ನಾಗಿ ಚಿತ್ರಿಸುತ್ತವೆ. ಇದೇ ಕಾಲಕ್ಕೆ ಸೇರಿದ ಮತ್ತೊಂದು ಶಾಸನ (ನಂಜನ ಗೂಡು ಶಾಸನ ೧೬೫)ದಲ್ಲಿಯೂ ಈಶಾನೇಶ್ವರ ಒಡೆಯರಿಗೆ ವಿಶೇಷವಾಗಿ ಸ್ಥಳದ ನಾಗರಿಕರು ನೀಡಿದ ದಾನ-ದತ್ತಿ ಗಳ ವಿವರಗಳು ದೊರೆಯುತ್ತವೆ: 'ಶ್ರೋತ್ರಿಯೂರ ಸಭೆಯೂರ ಈ ದಿನ ಈಶ್ವರ ಮುಡೆಯಾರ್ಗ್ಗೆ ಕೊಟ್ಟರ್...'

ಹೀಗೆ ಜಗದ್ಗುರು ಈಶಾನೇಶ್ವರ ಒಡೆಯರಿಗೆ ನೇರವಾಗಿ ಸಂಬಂಧಿಸಿದ ಎರಡು ಶಾಸನಗಳು ಅತ್ಯುಪಯುಕ್ತ ವಿವರಗಳನ್ನು ಕೊಡುತ್ತವೆ. 'ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ'ಯಲ್ಲಿ ಬರುವ ಸಾಲುಗಳು ಈ ರೀತಿ ಹೇಳುತ್ತವೆ :

ಬಂದಮೀಶಾನೇಶವೊಡೆಯಂ ।
ಚಂದದಿಂ ರಾಜೇಂದ್ರನೊಡನೆಯೆ ।
ಮುಂದುವರಿಸಿದನಾಶ್ರಮದ ಗದ್ದುಗೆಯ ಕಜ್ಜವನು ॥ (ಸಂಧಿ ೧, ಪ. ೧೩೦)

ಜಗದ್ಗುರು ಈಶಾನೇಶ್ವರ ಒಡೆಯರ ಕಾಲದಲ್ಲಿ ಶ್ರೀಮಠದ ಖ್ಯಾತಿ ಎಲ್ಲೆಡೆಗೂ ಹರಡುವುದರ ಜೊತೆಗೆ, ಅನೇಕ ಧಾರ್ಮಿಕ ಚಟುವಟಿಕೆಗಳಿಗೆ ಮಹತ್ತರ ಪ್ರೋತ್ಸಾಹವಿತ್ತೆಂದು ತಿಳಿಯುತ್ತದೆ.

## ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯರು

ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯರು ಶ್ರೀಮಠದ ಮೂರನೆಯವರಾಗಿ ಕ್ರಿ.ಶ. ೧೦೯೦ರಲ್ಲಿ ಪೀಠಾಧ್ಯಕ್ಷ ರಾದರೆಂದು ತಿಳಿಯುತ್ತದೆ. ಈಶಾನೇಶ್ವರರ ಅನಂತರ ಪಟ್ಟಕ್ಕೆ ಬಂದ ನಿಜಲಿಂಗ ಶಿವಾಚಾರ್ಯರು ಬಹುಕಾಲ ಶ್ರೀಮಠದಲ್ಲಿ ಉಳಿದು ಅದರ ಶ್ರೇಯೋಭಿವೃದ್ಧಿಯ ಕಾರ್ಯವನ್ನು ಕೈಗೊಂಡರು. ಕಲ್ಯಾಣದಲ್ಲಿ ನಡೆದ ಕ್ರಾಂತಿಯ ತರುವಾಯದ ದಿನಗಳಲ್ಲಿದ್ದ ಶ್ರೀ ನಿಜಲಿಂಗ ಶಿವಾಚಾರ್ಯರು ಸುತ್ತೂರು ಪೀಠವನ್ನು ಅಂದಿನ ಅಗತ್ಯಗಳಿಗೆ ಸಜ್ಜುಗೊಳಿಸಿದರು. ರಾಜಕೀಯವಾಗಿ ಚೋಳರ ಪ್ರಾಬಲ್ಯ ಈ ವೇಳೆಗೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಕಡಿಮೆಯಾಗಿ ದೋರಸಮುದ್ರದ ಹೊಯ್ಸಳರು ತಮ್ಮ ನೆಲೆಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಬದಲಾದ ರಾಜಕೀಯ ಪರಿಸ್ಥಿತಿ

[1] ನಂಜನಗೂಡು ತಾಲ್ಲೂಕು ಶಾಸನ, ಸಂ. ೨೮ (೧೬೪) ಮತ್ತು ೧೬೫ ; ಮೈಸೂರು ಪ್ರಾಚ್ಯವಸ್ತು ಇಲಾಖೆಯ ೧೯೪೬ನೇ ವರ್ಷದ ವರದಿ, ಪು. ೫೫–೫೬.

ಯಲ್ಲಿ ಸುತ್ತೂರಿಗೆ ವಿಶೇಷ ಪ್ರಾಶಸ್ತ್ಯ ದೊರಕಿತು. ಶ್ರೀಪೀಠದ ಗುರುವರ್ಯರುಗಳ ಸಾಧನೆ ಮತ್ತು ಪರಿಶ್ರಮಗಳ ಫಲವಾಗಿ ಹೊಯ್ಸಳ ಸಾಮ್ರಾಜ್ಯದಲ್ಲಿ ಸುತ್ತೂರು ಒಂದು ಪ್ರಾಂತೀಯ ರಾಜಧಾನಿಯಾಯಿತು. ಹೊಯ್ಸಳರ ಒಬ್ಬ ದಂಡನಾಯಕನಾಗಿದ್ದ ಲಕ್ಷ್ಮಯ್ಯನೆಂಬುವನು ಸುತ್ತೂರಿನಲ್ಲಿ ಮಹಾಮಂಡಲಾಧಿಪತಿಯಾಗಿದ್ದನೆಂದು ಕ್ರಿ.ಶ. ೧೧೬೮ರ ಶಾಸನವೊಂದರಿಂದ ತಿಳಿದುಬರುತ್ತದೆ.[1] ಹೀಗೆ ಸುತ್ತೂರು ಶ್ರೀ ನಿಜಲಿಂಗ ಶಿವಾಚಾರ್ಯರ ಕಾಲದಲ್ಲಿ ಧಾರ್ಮಿಕ ಮತ್ತು ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ಪ್ರಸಿದ್ಧವಾಯಿತು.

ಸುತ್ತೂರು ಶ್ರೀಮಠದ ಧಾರ್ಮಿಕ ಖ್ಯಾತಿ ಕರ್ನಾಟಕದಲ್ಲೆಲ್ಲ ಹಬ್ಬಿದ್ದಿತು. ಕಲ್ಯಾಣದ ಕ್ರಾಂತಿಯಾಗಿ ಶಿವಶರಣರು ಅಲ್ಲಿಂದ ಬೇರೆಬೇರೆ ಪ್ರದೇಶಗಳಿಗೆ ತೆರಳಿದಾಗ, ಪ್ರಾಯಶಃ ಸುತ್ತೂರು ಶ್ರೀಮಠದ ಹಿರಿಮೆಯನ್ನರಿತ ಮುಸುಡಿ ಚೌಡಯ್ಯನವರು ಕೆಲವು ಶರಣರೊಡನೆ ಸುತ್ತೂರಿಗೆ ಆಗಮಿಸಿ, ನಿಜಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ಧರ್ಮಪ್ರಸಾರದ ಕಾರ್ಯವನ್ನು ಕೈಗೊಂಡು ಜನಮನದಲ್ಲಿ ಧರ್ಮಜಾಗೃತಿಯನ್ನುಂಟುಮಾಡಿದರು.

## ಜಗದ್ಗುರು ಶ್ರೀ ಸಿದ್ಧನಂಜದೇಶಿಕೇಂದ್ರರು

ಶ್ರೀ ಸಿದ್ಧನಂಜದೇಶಿಕೇಂದ್ರರು ವೀರಸಿಂಹಾಸನ ಮಠದ ನಾಲ್ಕನೆಯ ಜಗದ್ಗುರುಗಳಾಗಿ ಕ್ರಿ.ಶ. ೧೧೭೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರೆಂದು ತಿಳಿಯುತ್ತದೆ. ಇವರ ಕಾಲಕ್ಕೆ ಶ್ರೀಮಠದ ಕೀರ್ತಿ ಇನ್ನೂ ಹೆಚ್ಚಿ, ಅಲ್ಲಿಗೆ ಹೊರಗಿನಿಂದ ಬರುತ್ತಿದ್ದ ಶಿವಶರಣರ ಮತ್ತು ಸಾಧಕರ ಸಂಖ್ಯೆ ಅಧಿಕಗೊಂಡಿತು. ಸಿದ್ಧಪುರುಷರಾಗಿ ಅಧ್ಯಾತ್ಮದ ಮೇರುವಂತಿದ್ದ ಶ್ರೀ ಸಿದ್ಧನಂಜದೇಶಿಕೇಂದ್ರರು ತಮ್ಮ ಮಠಕ್ಕೆ ಮಹಾಶಿವಶರಣರೂ ಶೂನ್ಯಪೀಠದ ಆರನೆಯ ಅಧ್ಯಕ್ಷರೆಂದು ತಿಳಿದಿರುವ ನಿರ್ಮಾಯಗಣೇಶ್ವರರೂ ಆದ ಮಲೆಯ ಮಹದೇಶ್ವರರನ್ನು ಆಕರ್ಷಿಸಿದುದು ಒಂದು ವಿಶೇಷ. ಹೀಗೆ ಶ್ರೀಮಠಕ್ಕೆ ಆಗಮಿಸಿದ ಮಹದೇಶ್ವರರು ಹಲವು ಕಾಲ ಅಲ್ಲಿಯೇ ಇದ್ದು ಹಿರಿಯರಾದ ಸಿದ್ಧನಂಜದೇಶಿಕೇಂದ್ರರಿಂದ ಶಿವಯೋಗರಹಸ್ಯಗಳನ್ನೆಲ್ಲ ಅರಿತುಕೊಂಡಂತೆ ತಿಳಿಯುತ್ತದೆ. ಮಹದೇಶ್ವರರು ಶ್ರೀಮಠದಲ್ಲಿ ಉಳಿದಿದ್ದು, ಅನೇಕ ಪವಾಡಗಳನ್ನು ಮೆರೆದ ದಿನಗಳು ಜನಮನದ ನೆನಪಿನಲ್ಲಿ ಇಂದಿಗೂ ಹಸಿರಾಗಿಯೇ ಇವೆ. ಸುತ್ತೂರು ಮತ್ತು ಸುತ್ತಮುತ್ತಲ ಪ್ರಾಂತ್ಯದ ಜನರು ಮಹದೇಶ್ವರರಿಗೆ ಮತ್ತು ಸುತ್ತೂರು ಮಠಕ್ಕೆ ಸಂಬಂಧಿಸಿದ ಅನೇಕ ಹಾಡುಗಳನ್ನು ಇಂದಿಗೂ ಹಾಡುತ್ತಾರೆ. ಸುತ್ತೂರ ಮಠದಲ್ಲಿ ಮಹದೇಶ್ವರರು ಪೂಜೆ ಮಾಡುತ್ತಿದ್ದ ಸ್ಥಳ (ಗದ್ದುಗೆ)ವನ್ನು ಸಂದರ್ಶಿಸಲು ಮಲೆಯ ಮಹದೇಶ್ವರ ಕ್ಷೇತ್ರಕ್ಕೆ ಪರಿಷೆಯ ಸಮಯದಲ್ಲಿ ಹೋಗುವ ಅಪಾರ ಭಕ್ತವೃಂದ ಇಂದಿಗೂ ಸುತ್ತೂರಿಗೆ ಬರುತ್ತದೆ. ಈ ಎಲ್ಲ ಸಂಗತಿಗಳನ್ನು ಮತ್ತು ಶ್ರೀ ಸಿದ್ಧನಂಜದೇಶಿಕೇಂದ್ರರು ಮಹದೇಶ್ವರರ ಜೀವನದ ಮೇಲೆ ಬೀರಿದ ಸತ್ಪ್ರಭಾವವನ್ನು ಗುರುಸಿದ್ಧ ಕವಿಯ 'ಮಹದೇಶ್ವರ ಸಾಂಗತ್ಯ' ದೃಢಪಡಿಸುತ್ತದೆ.

ಶ್ರೀ ಸಿದ್ಧನಂಜದೇಶಿಕೇಂದ್ರರು ಮಠದಲ್ಲಿ ನಡೆಯುತ್ತಿದ್ದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳ ನೇತಾರರಾಗಿದ್ದುದರ ಜೊತೆಗೆ ಮಹಾದಾಸೋಹಿಗಳೂ ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಇವರ 'ಪರಮಶಿವಾಧಿಕ್ಯ ಚೂಡಾಮಣಿ' ವೀರಶೈವ ಧರ್ಮತತ್ತ್ವಗಳನ್ನು ಕುರಿತು ಬರೆದ ಅದ್ವಿತೀಯ ವ್ಯಾಖ್ಯಾನ. ಇವರು ತಮ್ಮ ಕೊನೆಯ ಕಾಲವನ್ನು ಮಹದೇಶ್ವರರು ಐಕ್ಯರಾದ ನಡುಮಲೆಯ ಕ್ಷೇತ್ರದಲ್ಲೇ ಕಳೆದರೆಂದು ತಿಳಿದು ಬರುತ್ತದೆ.

## ಜಗದ್ಗುರು ಶ್ರೀ ಕಪಿನೀನಂಜುಂಡದೇಶಿಕೇಂದ್ರರು

ಜಗದ್ಗುರು ಶ್ರೀ ಕಪಿನೀನಂಜುಂಡದೇಶಿಕೇಂದ್ರರು ಶ್ರೀ ಸಿದ್ಧನಂಜದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ಕ್ರಿ.ಶ. ೧೨೪೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಇವರ ಕಾಲವನ್ನು ಕುರಿತು ವಿವೇಚಿಸುವಾಗ ನಮ್ಮ ಸಹಾಯಕ್ಕೆ ಬರುವ ಉತ್ತಮ ದಾಖಲೆಯೆಂದರೆ, ಜಗದ್ಗುರುಗಳ ಪರಮಾಪ್ತಶಿಷ್ಯನೂ ಸತ್ಕವಿಯೂ ಆದ ಶಿವಲಿಂಗನ 'ಅಮುಗಿದೇವಯ್ಯಗಳ ಸಾಂಗತ್ಯ'. ಈ ಕೃತಿಯಲ್ಲಿ ಬರುವ ಒಂದೆರಡು ಪದ್ಯಗಳು ಶ್ರೀ ಕಪಿನೀನಂಜುಂಡದೇಶಿಕೇಂದ್ರರ ಮಹೋನ್ನತ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತವೆ. ಕವಿ ತನ್ನ ಗುರುವನ್ನು ನೇರವಾಗಿ ಕಂಡು ಅವರ ದಿವ್ಯಸಾನ್ನಿಧ್ಯದ ಕೃಪೆ ತನಗೆ ದೊರೆತುದನ್ನು ಕುರಿತು ಸ್ಮರಿಸುತ್ತ ಹೀಗೆ ಹೇಳುತ್ತಾನೆ:

---

1 ನಂಜನಗೂಡು ಶಾಸನ, ನಂ. ೧೭೫, ಮೈಸೂರು ಪ್ರಾಚ್ಯ ಇಲಾಖೆಯ ೧೯೪೫ನೇ ವರ್ಷದ ವರದಿ, ಪು. ೫೫-೫೬.

ಸುತ್ತೂರ ಸಿಂಹಾಸನಾಧೀಶ ಕಪ್ಪಿನ
ಮುಕ್ತಿದಾಯಕ ನಂಜೇಶ್ವರನ
ಹಸ್ತದಿ ಜನಿಸಿದ ಭೃತ್ಯ ಶಿವಾನಂದ
ವಿಸ್ತರಿಸಿದ ನಿಜಕಥೆಯ[1]

ತನ್ನ ಗುರುವನ್ನು 'ಮುಕ್ತಿದಾಯಕ' ಎಂದು ಕವಿ ಕರೆದಿರುವುದನ್ನು ಗಮನಿಸಿದರೆ, ಕಪಿನೀನಂಜುಂಡರ ವ್ಯಕ್ತಿತ್ವದ ಔನ್ನತ್ಯ ನಮಗೆ ಅರಿವಾಗದೆ ಇರದು. ಇವರು ಸಿದ್ಧಪುರುಷರೂ, ಮಹಾಶಿವಯೋಗಸಂಪನ್ನರೂ ಎಂಬುದು ಗಮನ ಸೆಳೆಯುವ ಅಂಶ. ತನ್ನ ಕಾವ್ಯಕ್ಕೆ ಸ್ಫೂರ್ತಿ ನೀಡಿದವರು ಜಗದ್ಗುರು ಕಪಿನೀನಂಜುಂಡರೇ ಎಂಬುದನ್ನು ಕವಿ ಮತ್ತೊಂದು ಪದ್ಯದಲ್ಲಿ ವಿನಮ್ರವಾಗಿ ತಿಳಿಸುತ್ತಾನೆ:

ಬರೆಬರೆಯೆಂದೆನ್ನ ಕರಸ್ಥಲಧೀಶನು
ಒರೆದೊರೆದೊಂದೊಂದನುಸುರೆ
ಒರೆದೆನಲ್ಲದೆ ಎನ್ನ ಕಿರಿದಿನ ಮಾತಲ್ಲ
ಗುರು ನಂಜರಾಯ ತಾ ಬಲ್ಲ ॥[2]

ಶಿವಲಿಂಗ ಕವಿಯ ಮೇಲಿನ ಪದ್ಯಗಳಿಂದ ಕಪಿನೀನಂಜುಂಡರು ಕವಿ ಮತ್ತು ಸಾಹಿತಿಗಳಿಗೆ ನೀಡಿದ್ದ ಪ್ರೋತ್ಸಾಹದ ನೇರ ಪರಿಚಯವಾಗುತ್ತದೆ. ಜೊತೆಗೆ ಪೂರ್ವದ ತಮ್ಮ ಎಲ್ಲ ಗುರುಗಳಂತೆ ಇವರೂ ಸಹ ಶ್ರೀಮಠದ ಧ್ಯೇಯ ಮತ್ತು ಆದರ್ಶಗಳಿಗೆ ಅದ್ವಿತೀಯ ಪ್ರೋತ್ಸಾಹವನ್ನು ನೀಡಿದ್ದರು.

ಜಗದ್ಗುರು ಕಪಿನೀನಂಜುಂಡದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ **ಶ್ರೀ ಚನ್ನವೀರದೇಶಿಕೇಂದ್ರರು** ಕ್ರಿ.ಶ. ೧೩೧೦ನೇ ವರ್ಷದಲ್ಲಿ ನಿಯೋಜಿತರಾದರು. ಆರನೆಯ ಜಗದ್ಗುರುಗಳಾಗಿ ಇವರು ನಿರ್ವಹಿಸಿದ ಮಹತ್ ಕಾರ್ಯವೆಂದರೆ, ತಮ್ಮ ಶಿಷ್ಯರಲ್ಲಿಯೇ ಒಬ್ಬರಾಗಿದ್ದು ಮುಂದೆ ಪ್ರಖ್ಯಾತ ಜಗದ್ಗುರುಗಳಾಗಲಿದ್ದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರನ್ನು ಪೀಠಕ್ಕೆ ಅನುಗೊಳಿಸಿದುದೇ ಆಗಿದೆ. ಶಿವಯೋಗದ ರಹಸ್ಯಗಳನ್ನೆಲ್ಲ ತಮ್ಮ ಶಿಷ್ಯರಿಗೆ ಅರುಹಿ, ಚನ್ನವೀರದೇಶಿಕೇಂದ್ರರು ಬಹುಬೇಗ ತಮ್ಮ ಮುಕ್ತಿಸಾಧನೆಯ ಕಡೆಗೆ ಗಮನ ಹರಿಸಿದರೆಂದು ತಿಳಿಯುತ್ತದೆ. ಮತ್ತೊಂದು ಐತಿಹ್ಯದ ಪ್ರಕಾರ, ಚಾಮರಾಜನಗರ-ಅರಕಲವಾಡಿಗೆ ಸಮೀಪವಿರುವ ಕೊಂಗಹಳ್ಳಿ ಶಾಂತಮಲ್ಲಿಕಾರ್ಜುನ ಲಿಂಗವನ್ನು ಅರ್ಚಿಸುತ್ತಾ ಸ್ವಲ್ಪಕಾಲ ಅಲ್ಲಿಯೇ ನೆಲಸಿದ್ದು ಕಡೆಗೆ ಅದೇ ಕೊಂಗಹಳ್ಳಿಯ ಮಲೆಗಳಲ್ಲಿ ಶಿವೈಕ್ಯರಾದರು.

## ಜಗದ್ಗುರು ಶ್ರೀ ಸಿದ್ಧಮಲ್ಲಶಿವಾಚಾರ್ಯರು

ಜಗದ್ಗುರು ಶ್ರೀ ಸಿದ್ಧಮಲ್ಲಶಿವಾಚಾರ್ಯರ ಹೆಸರು ಶ್ರೀಪೀಠದ ಗುರುಪರಂಪರೆಯಲ್ಲಿ ಗಮನಾರ್ಹವಾದುದು. ಪೀಠದ ಏಳನೆಯ ಜಗದ್ಗುರುಗಳಾಗಿ ಸಿದ್ಧಮಲ್ಲಚಾರ್ಯರು ಕ್ರಿ.ಶ. ೧೩೮೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಇವರು ಪೀಠದ ಅಧ್ಯಕ್ಷರಾಗಿ, ಮಹಾಶಿವಶರಣರಾಗಿ ತಮ್ಮ ಅಧ್ಯಾತ್ಮಪ್ರಭೆಯನ್ನು ಬೀರಿದ ಕಾಲ ನಾಡಿನ ಇತಿಹಾಸದಲ್ಲಿ ಸ್ಮರಣೀಯವಾದುದು. ಎಲ್ಲೆಡೆಯೂ ರಾಜಕೀಯ ಸ್ಥಿರತೆ ಇದ್ದು ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದ ಆಕರ್ಷಣೆಗೆ ಬಹುಜನರು ಮಾರುಹೋಗಿದ್ದ ಕಾಲ. ಅದರಲ್ಲೂ ವಿಶೇಷವಾಗಿ ವೀರಶೈವ ಧರ್ಮ ೧೨ನೆಯ ಶತಮಾನದನಂತರ ಮತ್ತೊಮ್ಮೆ ಸುವರ್ಣದಿನಗಳನ್ನು ಕಂಡ ಕಾಲ. ಹರಗುರುಚರಮೂರ್ತಿಗಳೂ, ಶಿವಶರಣರೂ ಮತ್ತೊಮ್ಮೆ ನಾಡಿನಾದ್ಯಂತ ಧರ್ಮಜಾಗೃತಿಯನ್ನು ಉಂಟುಮಾಡಿದ ಕಾಲ. ಈ ಮಹಾಕಾರ್ಯದಲ್ಲಿ ಸುತ್ತೂರು ಶ್ರೀಮಠ ಹಿಂದೆ ಬೀಳಲಿಲ್ಲ. ಶ್ರೀಮಠಾಧ್ಯಕ್ಷರಾಗಿದ್ದ ಸಿದ್ಧಮಲ್ಲಶಿವಾಚಾರ್ಯರು ಈ ಆಂದೋಲನದ ನೇತೃತ್ವವನ್ನು ವಹಿಸಿದ್ದವರಲ್ಲಿ ಒಬ್ಬರಾಗಿದ್ದರು.

ನಮಗೆ ತಿಳಿದಿರುವಂತೆ ವೀರಶೈವ ಧಾರ್ಮಿಕ ಇತಿಹಾಸದಲ್ಲಿ ೧೫ನೆಯ ಶತಮಾನ ತೋಂಟದ ಸಿದ್ಧಲಿಂಗರ ಯುಗ. ರಾಜಕೀಯವಾಗಿ ವಿಜಯನಗರದ ವಿರೂಪಾಕ್ಷ ಮತ್ತು ಪ್ರೌಢದೇವರಾಯರುಗಳು ಆಳಿದ ಕಾಲ. ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ಅಸಂಖ್ಯ ಶಿವಶರಣರು ಸಮ್ಮಿಲನಗೊಂಡು ಧಾರ್ಮಿಕ ಪುನರುತ್ಥಾನದ ಕಾರ್ಯವನ್ನು ಕೈಗೊಂಡುದು ಈ ಯುಗದ ಒಂದು ವಿಶೇಷ. ಸಿದ್ಧಲಿಂಗ ಯತಿಗಳು ಕಾರಣಿಕರು ಮತ್ತು ಆ ಯುಗದ

[1] ಅಮುಗಿ ದೇವಯ್ಯಗಳ ಸಾಂಗತ್ಯ, ಸಂಧಿ ೭, ಪದ್ಯ ೮೮೮. [2] ಅದೇ., ಪದ್ಯ ೧೦೯.

ಶಿವಪೂಜಾಪುರುಷರು ಎಂಬುದನ್ನು ಮೊದಲು ಗುರುತಿಸಿದವರಲ್ಲಿ, ಗೋಸಲ ಚನ್ನಬಸವೇಶ್ವರರ ಜೊತೆಗೆ ಶ್ರೀ ಸಿದ್ಧಮಲ್ಲ ಶಿವಾಚಾರ್ಯರೂ ಒಬ್ಬರೆಂದರೆ ತಪ್ಪಾಗಲಾರದು. ಇದಕ್ಕೆ ಚಾರಿತ್ರಿಕ ಕಾರಣವೆನಿಸಬಹುದಾದ ಅಂಶ, ಸುತ್ತೂರು ಮತ್ತು ಹರದನಹಳ್ಳಿಗಳ ಸಾಮೀಪ್ಯ. ಮುಂದೆ ಸಿದ್ಧಮಲ್ಲೇಶ್ವರರು ಸಿದ್ಧಲಿಂಗೇಶ್ವರರನ್ನು ತಮ್ಮ ಮಠಕ್ಕೆ ಅನೇಕ ಸಲ ಆಹ್ವಾನಿಸಿದಂತೆ ತಿಳಿಯುತ್ತದೆ. ಹೀಗೊಮ್ಮೆ ಸಿದ್ಧಲಿಂಗೇಶ್ವರರು ಬಂದಿದ್ದಾಗ, ಆಗಲೇ ಸುತ್ತೂರು ಮಠದಲ್ಲಿ ಬೆಳೆಯುತ್ತಿದ್ದ ಬಾಲಕ ಘನಲಿಂಗದೇವರನ್ನು ಕಂಡಿದ್ದಿರಬಹುದು. ಈ ವಿಚಾರವನ್ನು ಕುರಿತು ಮುಂದೆ ವಿವೇಚಿಸಲಾಗಿದೆ.

ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯರು ಸಿದ್ಧಲಿಂಗಯತಿಗಳ ಮಹೋನ್ನತ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರೆಂದು ತಿಳಿಯುತ್ತದೆ. ಇದು ಸುತ್ತೂರ ಪೀಠದ ಗುರುಗಳ ಹೃದಯವೈಶಾಲ್ಯಕ್ಕೆ ಕನ್ನಡಿ ಹಿಡಿಯುವಂತಹ ಅಂಶ. ಮುಂದೆ ಸಿದ್ಧಮಲ್ಲಶಿವಾಚಾರ್ಯರು ಸಿದ್ಧಲಿಂಗೇಶ್ವರರನ್ನು ಹಿಂಬಾಲಿಸಿಹೋದ ವಿಷಯ, ವಿರಕ್ತ ತೋಂಟದಾರ್ಯನು ಸುಮಾರು ೧೬೬೦ರಲ್ಲಿ ರಚಿಸಿದ 'ಸಿದ್ಧೇಶ್ವರಪುರಾಣ'ದಿಂದ ವ್ಯಕ್ತವಾಗುತ್ತದೆ. ತುಮಕೂರಿನಲ್ಲಿ ನಡೆದ ಸಿದ್ಧಲಿಂಗಯತಿಗಳ ಉತ್ಸವವೊಂದರಲ್ಲಿ ಭಾಗವಹಿಸಿದ್ದ ಅಂದಿನ ಪ್ರಸಿದ್ಧ ಶಿವಾನುಭವಿಗಳಾದ ಗುಮ್ಮಳಾಪುರದ ಸಿದ್ಧಲಿಂಗ, ಕಂಬಳಿಯ ನಾಗಿದೇವ, ಕಂಕಣದೇವ, ಎಡತೊರೆಯ ಸಿದ್ಧವೀರಣ್ಣೊಡೆಯ, ಸುರಗಿಯಾರ್ಯ, ಸಪ್ಪೆಯಾರ್ಯ, ಉಪ್ಪಿನಹಳ್ಳಿ ಅಯ್ಯ, ರಾಚವೀಟಿದೇವ, ಪಟ್ಟಣದ ದೇವ, ಚಂದ್ರಶೇಖರ, ಗಟ್ಟಿಸಿದ್ಧಯ್ಯ, ಬತ್ತಲೆಯ ದೇವ, ಕಟ್ಟಿಯಪುರದ ನಂಜದೇಶಿಕೇಂದ್ರ, ಶೀಲವಂತೇಶ್ವರ, ತೋಂಟದಾರ್ಯ ಮತ್ತು ಇನ್ನು ಮುಂತಾದವರೊಂದಿಗೆ, 'ನಾಗಕಂಕಣನ ಸಮರೂಪನೆಂದೆನಿಸಿ ಸಲೆ ಪೂಗಣೆಯನುನ್ನತಿಕೆಯಿಂ ಬಗೆಗೊಡದ ಕೃಪಾಸಾಗರಂ ಸುತ್ತೂರ ಸಿದ್ಧಮಲ್ಲೇಶನೇ ಕಾಣೆ ಪೆಂಡಿರ ತಲೆವಣಿ' ಎಂದು ಕವಿ ವಿರಕ್ತತೋಂಟದಾರ್ಯರು ಶ್ರೀ ಸಿದ್ಧಮಲ್ಲ ಶಿವಾಚಾರ್ಯರ ಕಡೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಇದೇ ಶರಣಸಮೂಹದಲ್ಲಿ ಮುಂದೆ ಸುತ್ತೂರು ಶ್ರೀಮಠದ ೧೧ನೆಯ ಜಗದ್ಗುರುಗಳಾಗಿ ಬರಲಿದ್ದ ಘನಲಿಂಗದೇವರೂ ಇದ್ದುದು ಒಂದು ವಿಶೇಷ. ಹೀಗೆ ಸಿದ್ಧಮಲ್ಲಶಿವಾಚಾರ್ಯರ ವೀರಶೈವ ಧಾರ್ಮಿಕ ಉತ್ಕ್ರಾಂತಿಯ ದಿನಗಳಲ್ಲಿ ಸ್ವಯಂ ಕಾರ್ಯಕರ್ತರಾಗಿ ಭಾಗವಹಿಸಿದುದು ಹೆಮ್ಮೆಯ ವಿಷಯವಾಗಿದೆ. ಮುಂದೆ ಪರ್ವತೇಂದ್ರ ಶಿವಾಚಾರ್ಯರಿಗೆ ಪಟ್ಟಾಧಿಕಾರವನ್ನು ನೀಡಿ ಶರಣರೊಂದಿಗೆ ಸಂಚರಿಸಹೊರಟ ಸಿದ್ಧಮಲ್ಲಶಿವಾಚಾರ್ಯರು ಕಡೆಗೆ ಯಡೆಯೂರ ಸಮೀಪದ ಕಗ್ಗೆರೆಯಲ್ಲಿ ಶಿವಯೋಗಸಮಾಧಿಯಲ್ಲಿ ಲೀನರಾದರು.

ಪೀಠದ ಎಂಟನೆಯವರಾಗಿ ಕ್ರಿ.ಶ. ೧೪೭೦ನೇ ವರ್ಷದಲ್ಲಿ ಪಟ್ಟಾಧಿಕಾರಕ್ಕೆ ಬಂದ **ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯರು** ಗುಪ್ತಯೋಗಿಗಳಾಗಿ ಸಾಧಕರಾಗಿ ಬಾಳಿದಂತೆ ತಿಳಿಯುತ್ತದೆ. ಐತಿಹ್ಯಗಳ ಪ್ರಕಾರ ಇವರು ಪವಾಡಪುರುಷರಾಗಿ ತಮ್ಮ ಯೋಗಬಲದಿಂದ ಬಹುಜನರಿಗೆ ಹುಟ್ಟಿನೊಂದಿಗೇ ಅಂಟಿಬಂದಿದ್ದ ಅನೇಕ ತೊಂದರೆ ತಾಪತ್ರಯಗಳನ್ನು ನಿವಾರಿಸಿದಂತೆ ತಿಳಿದುಬರುತ್ತದೆ. ಮುಂದೆ ಶ್ರೀಮಠದ ಮಹಿಮೆಯನ್ನು ಉಜ್ವಲವಾಗಿ ಬೆಳಗುವಂತೆ ಮಾಡಲಿದ್ದ ಭಂಡಾರಿ ಬಸಪ್ಪ ಒಡೆಯರನ್ನು ಆಶೀರ್ವದಿಸಿ ಪರ್ವತೇಂದ್ರರು ಸುತ್ತೂರು ಕ್ಷೇತ್ರದಲ್ಲಿಯೇ ಶಿವೈಕ್ಯರಾದರು.

## ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು

ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು ಶ್ರೀಮಠದ ಒಂಬತ್ತನೆಯ ಗುರುಗಳಾಗಿ ಕ್ರಿ.ಶ. ೧೪೯೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ಅವರಿಗೆ ಕಂಡದ್ದು ಶ್ರೀಮಠಕ್ಕೆ ದಿನೇದಿನೇ ಹೆಚ್ಚುತ್ತಿದ್ದ ಶಿಷ್ಯವೃಂದ. ಆ ಕಾಲಕ್ಕಾಗಲೇ ಮಠಕ್ಕೆ ಬಂದು ಹೋಗುತ್ತಿದ್ದ ಭಕ್ತರ ಸಂಖ್ಯೆ ಅಪಾರವೆಂದು ಕಾಣುತ್ತದೆ. ಶಿಷ್ಯರ ಅಭೀಷ್ಟಗಳನ್ನು ನೆರವೇರಿಸಲು ಜಗಜ್ಯೋತಿ ಸಂಗನಬಸವಣ್ಣನವರು ಬೋಧಿಸಿದ್ದ ಕಾಯಕದ ತತ್ತ್ವಗಳನ್ನು ಹಿಂದೆಂದೂ ಇಲ್ಲದಂತೆ ಇವರು ಆಚರಣೆಗೆ ತಂದರು. ಬಸಪ್ಪ ಒಡೆಯರಿಗೆ ಸಂಬಂಧಿಸಿದ ಉಲ್ಲೇಖಗಳು ಇವರು ಮಾಡಿದ ಮತ್ತು ಮಾಡಿಸಿದ ಸ್ತುತ್ಯಕಾರ್ಯಗಳ ಸುಂದರ ಚಿತ್ರವನ್ನು ಕೊಡುತ್ತವೆ. ಕಾಯಕಕ್ಕೆ ಮತ್ತೊಂದು ಹೆಸರು ಬಸಪ್ಪ ಒಡೆಯರು ಎನ್ನುವಷ್ಟರಮಟ್ಟಿಗೆ ಇವರು ಕಾರ್ಯತತ್ಪರರಾಗಿದ್ದರೆಂದು ತಿಳಿಯುತ್ತದೆ. ಜೊತೆಗೆ, ಇವರು ನಾಡಿನ ಅನೇಕ ಕಡೆ ಮಠದ ಶಿಷ್ಯಪರಂಪರೆಯ ದಿನನಿತ್ಯದ ಆಗುಹೋಗುಗಳಲ್ಲಿ ನೇರವಾದ ಪಾತ್ರವನ್ನು ವಹಿಸುತ್ತಿದ್ದರು.

ಇಷ್ಟೆಲ್ಲ ಹಿರಿಮೆಗೆ ಶ್ರೀಮಠ ಪಾತ್ರವಾಗುವಂತೆ ಮಾಡಿದ ಬಸಪ್ಪ ಒಡೆಯರು ವೀರಶೈವ ತತ್ತ್ವದರ್ಶನಗಳಲ್ಲಿ ಅಪಾರ ಪಾಂಡಿತ್ಯವುಳ್ಳವರಾಗಿದ್ದರು. ಇವರು ತಮ್ಮ ಶಿಷ್ಯರಿಗೆ ತಮ್ಮ ಜ್ಞಾನದ ತಿರುಳನ್ನು ಬೋಧಿಸಿದ್ದು ಹೆಚ್ಚು ಇರಬಹುದು. ಆದರೆ ಇವರು ಹೇಳಿದುದನ್ನು ತಾವೇ ಕೃತಿಗಿಳಿಸಿ, ಕಾರ್ಯಬಾಹುಳ್ಯದ ಮಹತ್ವವನ್ನು

ಮೆರೆದುದು ಇನ್ನೂ ಹೆಚ್ಚಿನದು. ಜನತಾಜಗದ್ಗುರುಗಳಾಗಿ ವಿಶೇಷ ಭಕ್ತಿಗೌರವಗಳಿಗೆ ಪಾತ್ರರಾಗಿದ್ದ ಬಸಪ್ಪ ಒಡೆಯರು ಸುತ್ತೂರು ಮಠವನ್ನು ಆಧ್ಯಾತ್ಮಿಕವಾಗಿ ಮತ್ತು ಭೌತಿಕವಾಗಿ ಶ್ರೀಮಂತಗೊಳಿಸಿದರು. ಬಹುಮುಖ ಸೇವೆಗೆ ಶ್ರೀಮಠ ಸಿದ್ಧವಾದುದು ಇವರ ಕಾಲದಲ್ಲಿಯೇ. ಈ ಅಭಿಪ್ರಾಯಗಳನ್ನು ಸಮರ್ಥಿಸಲು ಸಾಕಷ್ಟು ದಾಖಲೆಗಳು ಮತ್ತು ಪುರಾವೆಗಳು ದೊರೆತಿವೆ. ಇವುಗಳು ಬಸಪ್ಪ ಒಡೆಯರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ಮೂಡಿಸುತ್ತವೆ.

ಮೊದಲನೆಯದಾಗಿ, ಇವರ ಹೆಸರು ಮತ್ತು ಇವರ ಸಮಕಾಲೀನ ಹೆಸರುಗಳ ಉಲ್ಲೇಖವುಳ್ಳ ಶಿಲಾಲೇಖಗಳು ನಂಜನಗೂಡು ಮತ್ತು ಆ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ದೊರಕುತ್ತವೆ. ಎರಡನೆಯದಾಗಿ, ಬಸಪ್ಪ ಒಡೆಯರ ಹಿರಿದಾದ ಸೇವಾಕ್ಷೇತ್ರದ ಪರಿಚಯ ಅಂದಿನ ವಿಜಯನಗರದ ಅರಸರಿಗೂ ಇದ್ದಿತೆಂದು ತಿಳಿಯುತ್ತದೆ. ಈ ಶಾಸನಗಳಿಂದ ಅಭಿವ್ಯಕ್ತವಾಗುವ ಮತ್ತೊಂದು ಪ್ರಶಂಸಾರ್ಹವಾದ ವಿಚಾರವೆಂದರೆ ಶ್ರೀಮಠದ ಪರಂಪರೆ ಮತ್ತು ಗುರುವರ್ಯರುಗಳ ಬಗ್ಗೆ ಶ್ರೀಸಾಮಾನ್ಯನಿಂದ ಹಿಡಿದು ಸಮ್ರಾಟರವರೆಗೂ ಇದ್ದಿರಬಹುದಾದ ಆದರ ಅಭಿಮಾನಗಳು. ಈ ಎಲ್ಲ ಕಾರಣಗಳಿಂದಾಗಿ ಬಸಪ್ಪ ಒಡೆಯರ ಕಾಲವನ್ನು ಪೀಠದ ದ್ವಿತೀಯ ಜಗದ್ಗುರು ಈಶಾನೇಶ್ವರ ಒಡೆಯರ ಕಾಲಕ್ಕೆ ಹೋಲಿಸಬಹುದು. ಕ್ರಿ.ಶ. ೧೫೧೫ರ ಶಾಸನವೊಂದರಲ್ಲಿ ಬರುವ ಈ ಸಾಲುಗಳು 'ಶ್ರೀಮನುಮಹಾಸಾಳುವ . . . ಲಿಂಗರಾಜರು ಸುತ್ತೂರ ಸಿಂಹಾಸನದಲು . . .'[1] (ಶಾಸನದ ಉಳಿದ ಭಾಗ ಅಸ್ಪಷ್ಟ) ಸುತ್ತೂರ ಸಿಂಹಾಸನಕ್ಕೂ ವಿಜಯನಗರದ ಅರಸರಿಗೂ ಇದ್ದ ಸಂಬಂಧಗಳನ್ನು ಸೂಚಿಸುತ್ತವೆ. ಆ ಸಮಯದಲ್ಲಿ ದೇವನೂರ ಮಹಾಮಂಡಲಕ್ಕೆ ವಿಜಯನಗರದ ಸಾಳುವ ನರಸಿಂಹನ ಬಂಧುವಾದ ಲಿಂಗರಾಜನು ಮಹಾಮಾಂಡಲಿಕನಾಗಿದ್ದು, ಆತನು ಸುತ್ತೂರ ಮಠದೊಂದಿಗೆ ನಿಕಟಸಂಬಂಧಗಳನ್ನಿಟ್ಟುಕೊಂಡಿದ್ದನೆಂದು ತಿಳಿಯುತ್ತದೆ.

ಜಗದ್ಗುರು ಭಂಡಾರಿ ಬಸಪ್ಪ ಒಡೆಯರು ನಂಜನಗೂಡಿನ ಕಪಿಲಾ-ಕೌಂಡಿನ್ಯ ನದಿಗಳ ಸಂಗಮದಲ್ಲಿ ದೇವಾಲಯವೊಂದನ್ನು ನಿರ್ಮಿಸಿ ಸಂಗಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರೆಂದು ೧೫೧೪ರ ಶಾಸನವೊಂದರಿಂದ ತಿಳಿಯುತ್ತದೆ.[2] ದೇವಾಲಯದ ನಿತ್ಯಕೈಂಕರ್ಯಗಳನ್ನು ನಡೆಸಿಕೊಂಡುಹೋಗಲು ಸಿರಿಗಿರಿ ಒಡೆಯರೆಂಬ ಸ್ಥಾನಾಚಾರ್ಯರನ್ನು ಅಲ್ಲಿಗೆ ನಿಯೋಜಿಸಿದರೆಂದು ಶಾಸನದಲ್ಲಿ ಉಕ್ತವಾಗಿದೆ. ಹುಲ್ಲಹಳ್ಳಿ ಹೋಬಳಿ ಪಟೇಲ್ ಚಿಕ್ಕಲಿಂಗಪ್ಪನವರ ಹೊಲದಲ್ಲಿ ನಿಂತಿರುವ ೧೫೧೪ರ ಮತ್ತೊಂದು ಶಾಸನ ಇದೇ ವಿಚಾರವನ್ನು ತುಂಬ ಮನೋಜ್ಞವಾಗಿ ವಿವರಿಸುತ್ತದೆ.[3] ಭಂಡಾರಿ ಬಸಪ್ಪ ಒಡೆಯರ ಕೀರ್ತಿ ತುಂಬ ವ್ಯಾಪಕವಾಗಿ ಹಬ್ಬಿತ್ತೆಂದು ತಿಳಿಯಲು ಇನ್ನೂ ಅನೇಕ ಶಿಲಾಲೇಖಗಳು ನಮ್ಮ ಸಹಾಯಕ್ಕೆ ಬರುತ್ತವೆ.[4] ಇವುಗಳ ಕೂಲಂಕಷ ಅಭ್ಯಾಸ ಇನ್ನೂ ಹೆಚ್ಚಿನ ಸಂಗತಿಗಳನ್ನು ಹೊರಗೆಡವಬಹುದು. ಪ್ರವಾಸಪ್ರಿಯರಾದ ಜಗದ್ಗುರು ಬಸಪ್ಪ ಒಡೆಯರಿಗೆ ಅಪಾರ ಶಿಷ್ಯವೃಂದದ ಆಹ್ವಾನ ಪದೇಪದೇ ಬರುತ್ತಲೇ ಇತ್ತು. ಇವರು ತಮ್ಮ ಕಡೆಯ ದಿನಗಳನ್ನು ಕೊಡಗಿನ ಪ್ರಶಾಂತ ಪರ್ವತಗಳಲ್ಲಿ ಕಳೆದರೆಂದು ತಿಳಿಯುತ್ತದೆ. ಕೊನೆಯಲ್ಲಿ ಅದೇ ಪ್ರಾಂತದ ಕಲ್ಲೂರಿನಲ್ಲಿ ಬಯಲಾದರು.

## ಜಗದ್ಗುರು ಶ್ರೀ ಕೂಗಲೂರು ನಂಜುಂಡದೇಶಿಕೇಂದ್ರರು

ಜಗದ್ಗುರು ಭಂಡಾರಿ ಬಸಪ್ಪ ಒಡೆಯರ ಉತ್ತರಾಧಿಕಾರಿಗಳಾಗಿ ಕೂಗಲೂರು ನಂಜುಂಡದೇಶಿಕೇಂದ್ರರು ಕ್ರಿ.ಶ. ೧೫೧೫ನೇ ವರ್ಷದಲ್ಲಿ ಶ್ರೀಪೀಠದ ಹತ್ತನೆಯವರಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಅಂದಿನ ಸುತ್ತೂರ ಶ್ರೀಪೀಠದಲ್ಲಿ ಇವರು ಬಹುಬೇಗ ಜನಾನುರಾಗಿಗಳಾದರೆಂದು ತಿಳಿಯುತ್ತದೆ. ಇದಕ್ಕೆ ಕಾರಣ ಇವರ ಪೂರ್ವಾಧಿಕಾರಿಗಳು ಆರಂಭಿಸಿದ್ದ ಕೆಲಸಕಾರ್ಯಗಳನ್ನು ಬಹು ದಕ್ಷತೆಯಿಂದ ನಿರ್ವಹಿಸಿದುದೇ ಆಗಿದೆ. ಕೂಗಲೂರು ನಂಜುಂಡರು ಅಧಿಕಾರ ವಹಿಸಿಕೊಂಡ ಸಮಯವೂ ಶ್ರೀಪೀಠದ ಚರಿತ್ರೆಯಲ್ಲಿ ಮಹತ್ವದ ಸಮಯ. ಇವರ ಪೂರ್ವಾಧಿಕಾರಿಗಳು ಯಶಸ್ವೀ ಜಗದ್ಗುರು, ಭಂಡಾರಿ ಬಸಪ್ಪ ಒಡೆಯರು. ಉತ್ತರಾಧಿಕಾರಿಗಳಾಗಿ ಬರಲಿದ್ದವರು, ತಮ್ಮ ಮಠದಲ್ಲಿಯೇ ಬೆಳೆದು ಪರಿಪೂರ್ಣತೆಯ ಪರಾಕಾಷ್ಠೆಯನ್ನು ಮುಟ್ಟಿದ್ದ ವಿಖ್ಯಾತ ವಚನಕಾರರೂ ಮತ್ತು ಮಹಾಶಿವಶರಣರೂ ಆದ ಘನಲಿಂಗದೇವರು. ಈ ಮಹಾಪುರುಷರಿಬ್ಬರ ನಡುವೆ ಮಹತ್ವದ ಪರಂಪರೆಯ ಸೇತುವಾಗಿ ಕೂಗಲೂರು

---

[1] ನಂಜನಗೂಡು ಶಾಸನ, ನಂ. ೧೨೪, ಮೈಸೂರು ಜಿಲ್ಲೆಯ ಶಾಸನಗಳು, ಭಾಗ I.

[2] ನಂಜನಗೂಡು ಶಾಸನ, ನಂ. ೧೯, ಮೈಸೂರು ಪ್ರಾಚ್ಯವಸ್ತು ಇಲಾಖೆಯ ೧೯೩೩ನೇ ವರ್ಷದ ವರದಿ, ಪು. ೧೧೫–೧೧೬.

[3] *E.C.*, Vol. XIV, Supplementary Inscriptions in Mysore and Mandya Districts, pp. 154–155.

[4] ನಂಜನಗೂಡು ಶಾಸನಗಳು, ನಂ. ೨೦, ೨೯.

ನಂಜುಂಡದೇಶಿಕೇಂದ್ರರು ನಿಂತರು. ಇವರ ಕಾಲದ ಶಾಸನವೊಂದರಲ್ಲಿ ಭದ್ರಯ್ಯನೆಂಬ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಅಧಿಕಾರಿ ಶ್ರೀಮಠಕ್ಕೆ ನೀಡಿದ ದಾನ-ದತ್ತಿಗಳ ವಿವರಗಳು ದೊರಕುತ್ತವೆ.[1] ಎಲ್ಲಕ್ಕಿಂತ ಮಿಗಿಲಾಗಿ ಕೂಗಲೂರು ನಂಜುಂಡರು ಘನಲಿಂಗದೇವರನ್ನು ಪೀಠಕ್ಕೆ ಅನುಗೊಳಿಸುವ ಮಹತ್ಕಾರ್ಯವನ್ನು ನಿರ್ವಹಿಸಿದ ಕಾರಣಿಕರು. ತಮ್ಮ ಅಂತ್ಯದ ದಿನಗಳನ್ನು ಬೆಂಗಳೂರು ಜಿಲ್ಲೆಯ ರೇವಣ್ಣಸಿದ್ಧೇಶ್ವರ ಬೆಟ್ಟದಲ್ಲಿ ಕಳೆದು ಅಲ್ಲಿಯೇ ಬಯಲಾದರು.

## ಜಗದ್ಗುರು ಶ್ರೀ ಘನಲಿಂಗದೇವರು

ಕ್ರಿ.ಶ. ೧೫೬೦ರಲ್ಲಿ ಶ್ರೀ ಘನಲಿಂಗದೇವರು ಶ್ರೀಮಠವ ಹನ್ನೊಂದನೆಯ ಅಧ್ಯಕ್ಷರಾದುದು ಧಾರ್ಮಿಕ ಮತ್ತು ಸಾಹಿತ್ಯಿಕ ದೃಷ್ಟಿಗಳಿಂದ ಕನ್ನಡನಾಡಿನ ಇತಿಹಾಸದಲ್ಲಿ ಉಲ್ಲೇಖಾರ್ಹ ಸಂಗತಿ. ಇವರು ಸುತ್ತೂರು ಶ್ರೀಮಠದ ಮಹಾಮಹಿಮಾನ್ವಿತರಲ್ಲಿ ಒಬ್ಬರು. ಈ ಮಹಾಪುರುಷರನ್ನು ಲಾಲನೆಪಾಲನೆಗಳಿಂದ ಬೆಳೆಸಿ ಮಹಾಜ್ಞಾನನಿಧಿಗಳನ್ನಾಗಿ ಮಾಡಿದ ಸುತ್ತೂರು ಮಠಕ್ಕೆ ಕನ್ನಡನಾಡು-ನುಡಿಗಳು ಯಾವತ್ತೂ ಚಿರಋಣಿಗಳು. ಶರಣಶ್ರೇಷ್ಠರಾಗಿ, ವಚನಕಾರರಾಗಿ ಮತ್ತು ಸುತ್ತೂರು ಶ್ರೀಮಠದ ಶಿವಪುರುಷರಾಗಿ ಬೆಳಗಿದ ಘನಲಿಂಗಿಗಳು—ಅವರ ಹೆಸರೇ ಹೇಳುವಂತೆ—ಈ ಮಣ್ಣಿನ ಮೇಲೆ ನಡೆದಾಡಿದ ಮಹಾಘನ! ಈ ಚೈತನ್ಯ ಬೆಳೆದು ಬೆಳಕಾದ ಬಗೆಯನ್ನು ಅರಿಯುವುದೇ ಒಂದು ಮಹಾಸುಯೋಗ.

ಇಂದು ಘನಲಿಂಗಿಗಳನ್ನು ನಾಡಿನ ಮಹಾಪುರುಷರಲ್ಲಿ ಒಬ್ಬರೆಂದು ಪರಿಗಣಿಸುವುದು ಸುತ್ತೂರು ಶ್ರೀಮಠದ ಜಗದ್ಗುರುಗಳಲ್ಲೊಬ್ಬರು ಎಂಬುದಕ್ಕಾಗಿ ಅಲ್ಲವೆಂದರೆ ತಪ್ಪಾಗದು. ಇದಕ್ಕೆ ಕಾರಣ, ಘನಲಿಂಗದೇವರ ಕಾರ್ಯಕ್ಷೇತ್ರ ಸುತ್ತೂರು ಶ್ರೀಮಠದ ವ್ಯಾಪ್ತಿಯನ್ನು ಮೀರಿ ಹದಿನೈದನೇ ಶತಮಾನದ ಕನ್ನಡನಾಡಿನ ಉದ್ದಗಲಕ್ಕೂ ಹಬ್ಬಿ ಹರವಿಕೊಂಡುದೇ ಆಗಿದೆ. ಇವರ ಕಾಲ ವೀರಶೈವ ಧರ್ಮದ ಶಿವಪುರುಷರಲ್ಲೊಬ್ಬರಾದ ಶ್ರೀ ಸಿದ್ಧಲಿಂಗ ಯತೀಶ್ವರರ ಕಾಲ. ಹನ್ನೆರಡನೆಯ ಶತಮಾನದನಂತರ ಧಾರ್ಮಿಕ ಚಟುವಟಿಕೆಗಳು ಮತ್ತೊಮ್ಮೆ ಚುರುಕುಗೊಂಡು ಸಿದ್ಧಲಿಂಗೇಶ್ವರರ ನೇತೃತ್ವದಲ್ಲಿ ಅದ್ಭುತವಾದ ಸಾಧನೆ-ಸದುಪಯೋಗಗಳಿಂದ ಕೂಡಿದ ಕಾಲ. ಏಳುನೂರು ಮಂದಿ ಚರಮೂರ್ತಿಗಳೂ ಮತ್ತು ನೂರೊಂದು ವಿರಕ್ತರ ಅನುಭಾವಗೋಷ್ಠಿಗೆ ನೇತಾರರಾಗಿದ್ದವರೇ ಸಿದ್ಧಲಿಂಗ ಯತೀಶ್ವರರು. ಇವರ ಶಿಷ್ಯಪ್ರಮುಖರಲ್ಲಿ ಶ್ರೀ ಘನಲಿಂಗದೇವರೂ ಒಬ್ಬರು. ಇವರಿಬ್ಬರ ಪ್ರಥಮ ಸಮಾಗಮ ಸುತ್ತೂರು ಮಠದಲ್ಲಿಯೇ ಆಗಿದ್ದಿರಬಹುದೆಂದು ತಿಳಿಯುತ್ತದೆ. ಚಾಮರಾಜನಗರಕ್ಕೆ ಸಮೀಪವಿರುವ ಹರದನಹಳ್ಳಿಯಿಂದ ಹಬ್ಬಿದ ಸಿದ್ಧಲಿಂಗ ಶಿವಯೋಗಿಗಳೆಂಬ ಮಲ್ಲಿಗೆಯ ಬಳ್ಳಿ ಸುತ್ತೂರು ಮೂಲಕವೇ ಮುಂದೆ ಹರಡಿತು. ಈ ಪೀಠದ ಏಳನೆಯ ಜಗದ್ಗುರುಗಳಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರ ಕಾಲದಲ್ಲಿಯೇ, ಅಂದರೆ ಹದಿನೈದನೆಯ ಶತಮಾನದ ಆರಂಭದಲ್ಲಿಯೇ, ಸಿದ್ಧಲಿಂಗೇಶ್ವರರು ಸುತ್ತೂರಿಗೂ ಬಂದಿದ್ದಿರಬಹುದು.

ಮೇಲಿನ ಸಂಗತಿಗಳು ಸುಮಾರು ೧೬೫೦ರಲ್ಲಿ ರಚಿತವಾದ ಮರಿತೋಂಟದಾರ್ಯರ 'ಸಿದ್ಧೇಶ್ವರಪುರಾಣ'ದಲ್ಲಿ ಸೂಚ್ಯವಾಗಿ ವಿವರಿಸಲ್ಪಟ್ಟಿದೆ. ಇದೇ ಕೃತಿಯ ಎಂಟನೇ ಸಂಧಿಯ ೪೫ನೇ ಪದ್ಯದಲ್ಲಿ ಜಗದ್ಗುರು ಸಿದ್ಧಮಲ್ಲೇಶ್ವರರ ಹೆಸರನ್ನು ಸೂಚಿಸಿದ ಕವಿ. ಅದರ ಮುಂದಿನ ಪದ್ಯದಲ್ಲಿಯೇ (ಪದ್ಯ ೪೬) ಘನಲಿಂಗದೇವರ ಮನಮುಟ್ಟುವ ಚಿತ್ರವನ್ನು ರೂಪಿಸುತ್ತಾನೆ:

ಉರೆ ಕೃಷ್ಣಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂ ಗೆಯ್ದು ಕರತಲದ ಲಿಂಗದೊಳ್
ಬೆರಗುವೊಡದಿತರೇತರವನರಿಯದಿರ್ಪ ನಿಷ್ಕಲವಿರತನಿವನಾರೆ ।
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನಮಾರ್ಗದೊಳು ನಿಂದು ಗುಣ
ಕರಿಗೊಂಡ ಘನಲಿಂಗದೇವನೇ ಕಾಣೆ ಶುಕವಾಣಿ ಕಾಳಾಹಿವೇಣಿ ॥

ಶ್ರೀ ಸಿದ್ಧಮಲ್ಲೇಶ್ವರರೂ ಮತ್ತು ಶ್ರೀ ಘನಲಿಂಗಿಗಳೂ ಏಕಕಾಲದಲ್ಲಿಯೇ ತುಮಕೂರಿನಲ್ಲಿ ನಡೆದ ಉತ್ಸವದಲ್ಲಿ ಭಾಗಿಯಾಗಿದ್ದರೆಂದು ಕವಿಯ ಹೇಳಿಕೆ. ಏಳನೆಯವರಾದ ಸಿದ್ಧಮಲ್ಲೇಶ್ವರರಿಗೂ ಹನ್ನೊಂದನೆಯವರಾದ ಘನ

[1] ನಂಜನಗೂಡು ಶಾಸನ, ನಂ. ೨೯, ಪ್ರಾಚ್ಯವಸ್ತು ಇಲಾಖೆಯ ೧೯೪೬ನೇ ವರ್ಷದ ವರದಿ, ಪು. ೫೭-೫೮.

ಲಿಂಗಿಗಳಿಗೂ ಇರುವ ಕಾಲದ ಅಂತರದಿಂದಾಗಿ ಇದು ಸಾಧ್ಯವೇ ಎನಿಸುತ್ತದೆ. ಆದರೂ ಘನಲಿಂಗದೇವರು ಸುತ್ತೂರ ಮಠದಲ್ಲಿ ಮೊದಲು ಕಾಣಿಸಿಕೊಳ್ಳುವುದು ಬಾಲಕರಾಗಿ ಎಂದು ತಿಳಿದಿರುವುದರಿಂದ ಇವರು ಬೆಳೆದು ಪರಿಪಕ್ವರಾಗಿ ಪೀಠಕ್ಕೆ ನಿಯೋಜಿತರಾಗುವ ವೇಳೆಗೆ ಶ್ರೀ ಪರ್ವತೇಂದ್ರರೂ, ಶ್ರೀ ಬಸಪ್ಪ ಒಡೆಯರೂ ಮತ್ತು ಶ್ರೀ ನಂಜಯ್ಯ ದೇವರೂ ಆಗಿಹೋಗಿದ್ದರು. ಒಟ್ಟಿನಲ್ಲಿ ಘನಲಿಂಗದೇವರು ಶ್ರೀಪೀಠಕ್ಕೆ ನಿಯೋಜಿತರಾದಾಗ ಅವರಾಗಲೇ ಪರಿಪೂರ್ಣ ರಾಗಿದ್ದರು. ಕೆಲವೇ ವರ್ಷಗಳು ಮಠದಲ್ಲಿದ್ದು ಅನಂತರ ಸಿದ್ಧಲಿಂಗಯತಿಗಳ ಜೊತೆಯಲ್ಲಿ ನಾಡಿನ ಉದ್ದಗಲಕ್ಕೂ ಸಂಚರಿಸಿದರು. ಈ ನಡುವೆ ಪೀಠಕ್ಕೆ ಇಮ್ಮಡಿ ಶ್ರೀ ಶಿವರಾತ್ರೀಶ್ವರರನ್ನು ನೇಮಿಸಿ ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದರು. ಕೊನೆಯಲ್ಲಿ ಘನಲಿಂಗದೇವರು ತಮ್ಮ ಅಂತ್ಯದ ದಿನಗಳನ್ನು ಸಿದ್ಧಲಿಂಗಯತಿಗಳ ಜೊತೆಯಲ್ಲಿ ಎಡೆಯೂರಿನಲ್ಲಿಯೇ ಕಳೆದು ಸಮೀಪದ ಕಗ್ಗೆರೆಯಲ್ಲಿ ಬಯಲಾದರು.

ಘನಲಿಂಗದೇವರು ಅನುಭಾವದ ತುಟ್ಟತುದಿ ಮುಟ್ಟಲು ಶ್ರೀಮಠದ ಪರಿಸರಗಳು ತುಂಬ ಪ್ರೋತ್ಸಾಹಕರವಾಗಿದ್ದುವು. ಘನಲಿಂಗಿಗಳು ತಮ್ಮ ವಚನವೊಂದರಲ್ಲಿ ಮಠದ ಶ್ರೀಗುರುಪರಂಪರೆಯನ್ನೂ, ದೀಕ್ಷಾಗುರುಗಳನ್ನೂ, ಪರಮಗುರು ಸಿದ್ಧಲಿಂಗಯತಿಗಳ ಸಮಾಗಮವನ್ನೂ ಕುರಿತು ಹೇಳುವುದರ ಜೊತೆಗೆ ತಾವು ಅಧ್ಯಾತ್ಮದಲ್ಲಿ ಮುನ್ನಡೆದ ಮಾರ್ಗವನ್ನು ಅರುಹಿದ್ದಾರೆ :

ಎಲೆ ತಂಗಿ,
ಶರಣ ಸತಿ ಲಿಂಗ ಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ.
ನಿನ್ನ ಪೂರ್ವಾಪರವಾವುದಮ್ಮ ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯ ದೇವರು,
ಆ ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು ಕೂಗಲು ನಂಜಯ್ಯದೇವರು
ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು !
ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು.
ಆ ತೋಂಟದಾರ್ಯನು ತನ್ನ ಕೃಪೆಯೆಂಬ ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಸ್ವರೂಪತತ್ತ್ವಾರ್ಥವೆಂಬ
ಹಾಲುತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
'ಘನಲಿಂಗಿ' ಎಂಬ ನಾಮಕರಣಮಂ ಕೊಟ್ಟು
ಪ್ರಾಯಸಮರ್ಥೆಯಂ ಮಾಡಿ
ಸತ್ಯ-ಸದಾಚಾರ-ಜ್ಞಾನ-ಕ್ರೀಗಳೆಂಬ ದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಆರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ.[1]

ಘನಲಿಂಗದೇವರ ಎಲ್ಲ ವಚನಗಳೂ ತಮ್ಮ 'ಮೋಹದ ಚನ್ನಮಲ್ಲಿಕಾರ್ಜುನ'ನೊಡನೆ ಸತಿ-ಪತಿ ಭಾವದಲ್ಲಿ ಸಮರಸವನ್ನು ರೂಢಿಸಿಕೊಂಡ ಶರಣವೆಣ್ಣುವೆಂಬುದನ್ನು ಅಭಿವ್ಯಕ್ತಪಡಿಸುತ್ತವೆ. ಅವರ ಈ ವಚನಗಳ ಹಿನ್ನೆಲೆಯಲ್ಲಿಯೇ ಅವರ ಮಹಾನ್ ವ್ಯಕ್ತಿಚಿತ್ರವನ್ನು ರೂಪಿಸಿಕೊಳ್ಳಬಹುದು. ಅನೇಕ ಚಾರಿತ್ರಿಕ ಅಂಶಗಳನ್ನೊಳಗೊಂಡ ಇವರ ವಚನಗಳು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆಗಳು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರ ಅನುಭಾವದ ವಚನಕಾರಂಜಿ ಮುಗಿಲೆತ್ತರಕ್ಕೆ ಚಿಮ್ಮಿದ ಬಳಿಕ ಹದಿಮೂರು-ಹದಿನಾಲ್ಕನೆಯ ಶತಮಾನ

[1] ಜ. ಶ್ರೀ. ಶಿವರಾತ್ರಿರಾಜೇಂದ್ರಸ್ವಾಮಿಗಳು (ಸಂ.), 'ಘನಲಿಂಗದೇವರ ವಚನಗಳು', ಪು. ೫-೬.

ಗಳಲ್ಲಿ ಗುಪ್ತಗಾಮಿನಿಯಾಗಿ ಹರಿದು, ಹದಿನೈದನೆಯ ಶತಮಾನದಲ್ಲಿ ಮತ್ತೊಮ್ಮೆ ಅಷ್ಟೇ ಭರದಿಂದ ಚಿಮ್ಮಿದುದು ತೋಂಟದ ಸಿದ್ಧಲಿಂಗಯತಿಗಳು ಮತ್ತು ಘನಲಿಂಗದೇವರು ಮುಂತಾದವರ ವಚನಗಳಲ್ಲಿ.

## ಜಗದ್ಗುರು ಇಮ್ಮಡಿ ಶ್ರೀ ಶಿವರಾತ್ರೀಶ್ವರಸ್ವಾಮಿಗಳು

ಜಗದ್ಗುರು ಇಮ್ಮಡಿ ಶ್ರೀ ಶಿವರಾತ್ರೀಶ್ವರಸ್ವಾಮಿಗಳು ಘನಲಿಂಗದೇವರ ಉತ್ತರಾಧಿಕಾರಿಗಳಾಗಿ ಮತ್ತು ಶ್ರೀಮಠದ ಹನ್ನೆರಡನೆಯ ಪೀಠಾಧ್ಯಕ್ಷರಾಗಿ ೧೫೫೦ರಲ್ಲಿ ನಿಯೋಜಿತರಾದಾಗ ಸುತ್ತೂರ ಮಠದ ಕೀರ್ತಿ ನಾಡಿನಾದ್ಯಂತ ಹರಡಿತ್ತು. ಘನಲಿಂಗದೇವರ ಕಾಲದಲ್ಲಂತೂ ಶ್ರೀಮಠದ ಮಹಿಮೆ ಮತ್ತು ಆದರ್ಶಗಳು ಲಕ್ಷೋಪಲಕ್ಷ ಜನರ ತುದಿನಾಲಗೆಯ ಮೇಲಿದ್ದುವು. ಇಮ್ಮಡಿ ಶಿವರಾತ್ರೀಶ್ವರರು ಇಂತಹ ಭವ್ಯಪರಂಪರೆಯ ಕಾರ್ಯಭಾರಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇವರು ಸ್ವತಃ ಶ್ರೇಷ್ಠ ವಿದ್ವಾಂಸರು ಮತ್ತು ಗ್ರಂಥಕರ್ತರು. ಕನ್ನಡ ಕವಿಚರಿತೆಕಾರರು ತಿಳಿಸುವಂತೆ ಇಮ್ಮಡಿ ಶಿವರಾತ್ರೀಶ್ವರರು 'ವೃಷಭೇಂದ್ರವಿಜಯಪುರಾಣ'ವೆಂಬ ಗ್ರಂಥವನ್ನು ರಚಿಸಿರುವರೆಂದು ತಿಳಿಯುತ್ತದೆ.[1] ದಿನೇದಿನೇ ಅಧಿಕಗೊಳ್ಳುತ್ತಿದ್ದ ಭಕ್ತರ ಆಗುಹೋಗುಗಳಲ್ಲಿ ಶಿವರಾತ್ರೀಶ್ವರರು ಸಕ್ರಿಯ ಪಾತ್ರವನ್ನು ವಹಿಸಿ, ಅವರು ಧಾರ್ಮಿಕ ಕಾರ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಿದ್ದರು. ಕ್ರಿ.ಶ. ೧೫೬೩ರ ಶಿಲಾಲೇಖವೊಂದರಲ್ಲಿ ಶ್ರೀಮಠದ ಭಕ್ತರೊಬ್ಬರು ಬಸವಪ್ರತಿಷ್ಠೆ ಮಾಡಿಸಿದ ಸಂಗತಿ ಉಕ್ತವಾಗಿದೆ.[2] ಈ ಶಾಸನದಲ್ಲಿ ಹೆಸರಿಸಿರುವ 'ಶಿವಾಚಾರಸಂಪನ್ನ'ರಾದ ಶಿವರಾತ್ರಿದೇವರು ಇಮ್ಮಡಿ ಶಿವರಾತ್ರೀಶ್ವರರೇ ಎಂದು ತಿಳಿಯುತ್ತದೆ. ಈ ಅಂಶ ಇವರ ಉತ್ತರಾಧಿಕಾರಿಗಳ ಕಾಲದ ಶಾಸನವೊಂದರಿಂದ ಸ್ಪಷ್ಟವಾಗುತ್ತದೆ. ಮುಂದೆ ಇವರು ತಮ್ಮ ಶಿಷ್ಯರೇ ಆಗಿದ್ದ ಶ್ರೀ ಚನ್ನಬಸವದೇಶಿಕೇಂದ್ರರಿಗೆ ಪಟ್ಟಾಧಿಕಾರವಿತ್ತು ಸುತ್ತೂರಿನಲ್ಲಿಯೇ ಐಕ್ಯರಾದರು.

## ಜಗದ್ಗುರು ಶ್ರೀ ಚನ್ನಬಸವದೇಶಿಕೇಂದ್ರರು

ಜಗದ್ಗುರು ಶ್ರೀ ಚನ್ನಬಸವದೇಶಿಕೇಂದ್ರರು ಶ್ರೀಪೀಠದ ಹದಿಮೂರನೆಯವರಾಗಿ ೧೫೯೦ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ವಿಜಯನಗರದಲ್ಲಿ ವೆಂಕಟಪತಿರಾಯನು ಆಳುತ್ತಿದ್ದನು. ಸಾಮ್ರಾಜ್ಯಕ್ಕೂ ಮತ್ತು ಶ್ರೀಪೀಠಕ್ಕೂ ಇದ್ದ ನಿಕಟಸಂಪರ್ಕಗಳನ್ನು ತಿಳಿಸುವ ಸಾಂದರ್ಭಿಕ ಉಲ್ಲೇಖಗಳು ದೊರೆಯುತ್ತವೆ. ಸುತ್ತೂರ ಸಿಂಹಾಸನದ ಏಳ್ಗೆಯನ್ನು ಬಯಸಿ ಭಕ್ತಾದಿಗಳು ನೀಡಿದ ದಾನ-ದತ್ತಿಗಳು ಚನ್ನಬಸವದೇಶಿಕೇಂದ್ರರ ಕಾಲದ ವಿಶೇಷ ಮಹತ್ವವುಳ್ಳ ದಾಖಲೆಗಳು. ಚಾಮರಾಜನಗರದ ತಾಲ್ಲೂಕು ಹೊಂಗನೂರು ಹೋಬಳಿಯ ಮೇಲುವಾಳದ ದೇವಳ್ಳಿಯ ಹೊಲದ ಪಶ್ಚಿಮ ಭಾಗದಲ್ಲಿರುವ ಶಿಲಾಲೇಖ ಶ್ರೀ ಚನ್ನಬಸವದೇಶಿಕೇಂದ್ರರಿಗೆ ನೀಡಿದ ದತ್ತಿಯೊಂದರ ವಿವರಗಳನ್ನು ಕೊಡುತ್ತದೆ.[3] ಕ್ರಿ.ಶ. ೧೫೯೩ರ ಈ ಶಾಸನದಲ್ಲಿ 'ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ವೆಂಕಟಪತ್ತಿ ಮಹಾರಾಯರು ಪೃಥ್ವೀರಾಜ್ಯಗಯಿ ಉತ್ತಿರಲು ಹದಿನಾಡ ಸೀಮೆಯ ಪ್ರಭುದೇವಪ್ಪ ಗವುಡರ ಮುಖಳು ಯಿಮ್ಮಡಿ ರಾಮರಾಜನಾಯಕರು ಸಜ್ಜನ ಶುದ್ಧಸಿವಾಚಾರಸಂಪನ್ನರಾದ ದೇವಾಪೃಥ್ವೀ ಮಹಾಮತ್ತಿನೊಳಗಾದ ಸುತ್ತೂರ ಸಿಂಹಾಸನಕ್ಕೆ ಕರ್ತರಾದ ಸಿವರಾತ್ರಿಯ ದೇವರ ಶಿಷ್ಯರು ಚನ್ನಬಸವದೇವರಾಜರಿಗೆ ಕೊಟ್ಟ ಶಿಲಾಶಾಸನದ ಕ್ರಮವೆಂತೆಂದಡೆ...' ಎಂದು ಮುಂದುವರಿಯುತ್ತದೆ. ಈ ಶಾಸನದಲ್ಲಿ ಚನ್ನಬಸವದೇಶಿಕೇಂದ್ರರನ್ನು ಶಿವರಾತ್ರಿದೇವರ ಶಿಷ್ಯರು ಎಂದು ಕರೆದಿರುವುದನ್ನು ಗಮನಿಸಬಹುದು. ಶ್ರೀ ಚನ್ನಬಸವದೇಶಿಕೇಂದ್ರರೂ ಸಹ ತಮ್ಮ ಹಿರಿಯರಂತೆ ಸಂಚಾರಪ್ರಿಯರು. ಹೀಗೆ ಅವರು ತಮ್ಮ ಉತ್ತರ ಭಾರತದ ಪ್ರವಾಸದಲ್ಲಿದ್ದಾಗ ಶಿವೈಕ್ಯರಾದರೆಂದು ತಿಳಿಯುತ್ತದೆ.

ಹದಿನಾಲ್ಕನೆಯ ಪೀಠಾಧ್ಯಕ್ಷರಾದ **ಜಗದ್ಗುರು ಶ್ರೀ ಗುರುನಂಜದೇಶಿಕೇಂದ್ರರು** ೧೬೦೮ನೇ ವರ್ಷದಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಇವರೂ ಸಹ ತಮ್ಮ ಹಿರಿಯರಂತೆ ಹೆಚ್ಚು ಕಾಲವನ್ನು ಸಂಚಾರದಲ್ಲಿ ಕಳೆದು, ಹೋದೆಡೆಯಲ್ಲೆಲ್ಲ ಭಕ್ತವೃಂದಕ್ಕೆ ಉಪದೇಶವಿತ್ತು ಸಂತೈಸುತ್ತಿದ್ದಂತೆ ತಿಳಿಯುತ್ತದೆ. ಈಗಿನ ಕೇರಳದ ಕೆಲವೆಡೆಗಳಲ್ಲಿ ಇವರು ಸಂಚಾರ ಮಾಡಿದಂತೆ ಐತಿಹ್ಯಗಳಿವೆ. ಕೊನೆಯಲ್ಲಿ ಇವರು ವೈನಾಡಿನಲ್ಲಿ ಹುಟ್ಟುವ ಕಪಿಲಾನದಿಯ ಉಗಮ ಸ್ಥಾನದ ಬಳಿ ಬಯಲಾದರು.

---

[1] ಕನ್ನಡ ಕವಿಚರಿತ್ರೆ, ಭಾಗ III, ಪು. ೪೩೦.

[2] ನಂಜನಗೂಡು ಶಾಸನ ನಂ. ೪೭, ಪ್ರಾಚ್ಯವಸ್ತು ಇಲಾಖೆಯ ೧೯೩೦ರ ವರದಿ, ಪು. ೧೯೪.

[3] ನಂಜನಗೂಡು ಶಾಸನ ನಂ. ೩೦, ಮೈಸೂರು ಜಿಲ್ಲೆಯ ಶಾಸನಗಳು, ಭಾಗ I.

## ಜಗದ್ಗುರು ಶ್ರೀ ಗುರುಚನ್ನಬಸವಶಿವಾಚಾರ್ಯರು

ಜಗದ್ಗುರು ಶ್ರೀ ಗುರುಚನ್ನಬಸವಶಿವಾಚಾರ್ಯರು ೧೬೪೧ನೇ ವರ್ಷದಲ್ಲಿ ಶ್ರೀಪೀಠದ ಹದಿನೈದನೆಯವರಾಗಿ ನಿಯೋಜಿತರಾದರು. ಇವರ ಕಾಲದಲ್ಲಿ ಸಾಹಿತ್ಯಚಟುವಟಿಕೆಗಳಿಗೆ ಶ್ರೀಮಠದಲ್ಲಿ ವಿಶೇಷ ಪ್ರೋತ್ಸಾಹ ದೊರೆತಂತೆ ತಿಳಿಯುತ್ತದೆ. 'ಶಿವಾಧಿಕ್ಯಶಿಖಾಮಣಿ' ಗ್ರಂಥಕ್ಕೆ ಜಗದ್ಗುರು ಶ್ರೀ ಚನ್ನಬಸವಶಿವಾಚಾರ್ಯರು ರೇವಣಾರಾಧ್ಯರಿಂದ ಕನ್ನಡದಲ್ಲಿ ಟೀಕೆಯನ್ನು ಬರೆಸಿದರು. ಇವರ ಅಥವಾ ಇವರ ಉತ್ತರಾಧಿಕಾರಿಗಳಾದ ಶ್ರೀ ಗುರುಪಂಚಾಕ್ಷರದೇಶಿಕೇಂದ್ರರ ಕಾಲದಲ್ಲಿ ಸುತ್ತೂರಿನಲ್ಲಿರುವ ಸೋಮೇಶ್ವರ ದೇವಾಲಯದ ಮುಖಮಂಟಪ ನಿರ್ಮಾಣವಾದಂತೆ ತಿಳಿಯುತ್ತದೆ. ೧೬೭೧ರ ಸುಮಾರಿನ ಶಾಸನವೊಂದರಿಂದ ಈ ಅಂಶ ಸ್ಪಷ್ಟವಾಗುತ್ತದೆ.[1] ಈ ಶಾಸನದಲ್ಲಿ ಸೇವಾಕೈಂಕರ್ಯವನ್ನು ಮಾಡಿದ ಚಂದಯ್ಯನೆಂಬುವನ ಬಗ್ಗೆ ವಿವರಗಳು ದೊರೆಯುತ್ತವೆ.

ಮುಂದೆ ಜಗದ್ಗುರು ಶ್ರೀ ಗುರುಚನ್ನಬಸವದೇಶಿಕೇಂದ್ರರು ಶ್ರೀರಂಗಪಟ್ಟಣದ ಸಮೀಪವಿರುವ ಪಶ್ಚಿಮವಾಹಿನಿಯಲ್ಲಿ ಸ್ವಲ್ಪಕಾಲ ಶಿವಯೋಗದಲ್ಲಿ ಮಗ್ನರಾಗಿದ್ದಂತೆ ತಿಳಿಯುತ್ತದೆ. ಆಗ ಮೈಸೂರು ಸೀಮೆಯ ಅರಸರಾಗಿದ್ದ ದೊಡ್ಡ ಕೃಷ್ಣರಾಜ ಒಡೆಯರು ಶ್ರೀಗಳವರನ್ನು ತಮ್ಮ ಅರಮನೆಗೆ ದಯಮಾಡಿಸಬೇಕೆಂದು ಬೇಡಿ, ಸತ್ಕರಿಸಿ ಅನಂತರ ಅಲ್ಲಿಯೇ ಒಂದು ಮಠವನ್ನು ಕಟ್ಟಿಸಿಕೊಟ್ಟಂತೆ ತಿಳಿಯುತ್ತದೆ. ಅನಂತರ ಶ್ರೀ ಪಂಚಾಕ್ಷರದೇಶಿಕೇಂದ್ರರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀಪೀಠಕ್ಕೆ ನೇಮಿಸಿ ಶ್ರೀ ಚನ್ನಬಸವಶಿವಾಚಾರ್ಯರು ಸಂಚಾರದಲ್ಲಿ ನಿರತರಾದರು. ಕೊನೆಯಲ್ಲಿ ಶಿವನಸಮುದ್ರದ ಸಮೀಪ ಕಾವೇರೀತೀರದಲ್ಲಿರುವ ಮುಡಿಪಾಳದಲ್ಲಿ ಲಿಂಗಾರ್ಚನಾನಿರತರಾಗಿದ್ದು ಅನಂತರ ಅಲ್ಲಿಯೇ ಬಯಲಾದರೆಂದು ತಿಳಿಯುತ್ತದೆ.

ಹದಿನಾರನೆಯ ಪೀಠಾಧ್ಯಕ್ಷರಾಗಿ ೧೭೧೩ರಲ್ಲಿ **ಶ್ರೀ ಗುರುಪಂಚಾಕ್ಷರದೇಶಿಕೇಂದ್ರರು** ಶ್ರೀಗುರು ಚನ್ನಬಸವದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ನಿಯೋಜಿತರಾದರು. ಶ್ರೀಮಠದ ಪರಂಪರೆಯನ್ನು ಇವರು ತಮ್ಮ ಹಿರಿಯರ ಆಶೀರ್ವಾದಗಳಿಂದ ಮುಂದುವರಿಸಿಕೊಂಡು ಬಂದು ಅನೇಕ ಭಕ್ತರನ್ನು ಉದ್ಧರಿಸಿದಂತೆ ತಿಳಿಯುತ್ತದೆ. ಕಡೆಯಲ್ಲಿ ಪಶ್ಚಿಮವಾಹಿನಿಯಲ್ಲಿದ್ದ ತಮ್ಮ ಮಠದಲ್ಲಿ ಸ್ವಲ್ಪ ಕಾಲವಿದ್ದು ಅನಂತರ ಅಲ್ಲಿಯೇ ಶಿವೈಕ್ಯರಾದರು. ಇವರ ಉತ್ತರಾಧಿಕಾರಿಗಳಾಗಿ ಮತ್ತು ಶ್ರೀಪೀಠದ ಹದಿನೇಳನೆಯ ಜಗದ್ಗುರುಗಳಾಗಿ **ಶ್ರೀ ಚಿದ್ಘನಶಿವಾಚಾರ್ಯರು** ೧೭೩೦ನೇ ವರ್ಷದಲ್ಲಿ ಪಟ್ಟಾಧಿಕಾರಿಗಳಾದರು. ಕೊಡಗು ಮತ್ತು ಸುತ್ತಲ ಪ್ರಾಂತದಲ್ಲಿ ಚಿದ್ಘನಶಿವಾಚಾರ್ಯರ ಕಾರ್ಯಕ್ಷೇತ್ರ ಹರಡಿತ್ತೆಂದು ತಿಳಿದುಬಂದಿದೆ. ಕೊನೆಯಲ್ಲಿ ಶ್ರೀಪೀಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

## ಜಗದ್ಗುರು ಶ್ರೀ ಚನ್ನವೀರದೇಶಿಕೇಂದ್ರರು

ಜಗದ್ಗುರು ಶ್ರೀ ಚನ್ನವೀರದೇಶಿಕೇಂದ್ರರು ಹದಿನೆಂಟನೆಯ ಪೀಠಾಧ್ಯಕ್ಷರಾಗಿ ೧೭೫೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಕಾಲದಲ್ಲಿ,ಶ್ರೀಮಠದ ಅಪಾರ ಭಕ್ತವೃಂದದ ಮತ್ತುಹತ್ತಾರು ಶಾಖಾಮಠಗಳ ಜವಾಬ್ದಾರಿ ಇದ್ದಂತೆ ತಿಳಿಯುತ್ತದೆ. ಹದಿನೆಂಟನೆಯ ಶತಮಾನದ ದ್ವಿತೀಯಾರ್ಧ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ವಿಪ್ಲವದ ಕಾಲವೆನ್ನಬಹುದು. ರಾಜ್ಯದ ಅಧಿಕಾರ ಹೈದರಾಲಿಯ ಕೈವಶವಾಗಿ ರಾಜರು ಮೂಲೆಗುಂಪಾಗಿದ್ದ ಕಾಲ. ಆದರೆ ಈ ಬದಲಾವಣೆಗಳಾವುವೂ ಶ್ರೀಮಠದ ಅಭಿವೃದ್ಧಿಗೆ ಆತಂಕ ತರಲಿಲ್ಲ. ಮೈಸೂರ ದೊರೆಗಳು ಶ್ರೀಮಠಕ್ಕೆ ಸಲ್ಲಿಸುತ್ತ ಬಂದಿದ್ದ ಎಂದಿನ ಗೌರವಗಳನ್ನು ಹೈದರಾಲಿಯೂ ಮುಂದುವರಿಸಿಕೊಂಡು ಬಂದನು.

ಜಗದ್ಗುರು ಶ್ರೀ ಚನ್ನವೀರದೇಶಿಕೇಂದ್ರರು ತಮ್ಮ ಪೂರ್ವಿಕರಂತೆ, ಕೊಡಗು ಮತ್ತು ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಸಂಚಾರದಲ್ಲಿದ್ದಾಗ ಉಡುಪಿಯ ಸಮೀಪದ ಶಂಕರನಾರಾಯಣದಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಮುಂದೆ ಒಂದು ದಿನ ಹೈದರಾಲಿಯು ಈ ಮಠಕ್ಕೆ ಸಂದರ್ಶನವಿತ್ತು ಶ್ರೀಗಳವರ ತಪಸ್ಸಿನ ಪ್ರಭಾವಕ್ಕೆ ಒಳಗಾಗಿ ಆ ಮಠಕ್ಕೆ ಬೇಕಿದ್ದ ಆಗತ್ಯಗಳನ್ನು ಪೂರೈಸಲು ಆಜ್ಞೆಯೊಂದನ್ನು ಹೊರಡಿಸಿದನು.[2] ಅನಂತರ ಚನ್ನವೀರದೇಶಿಕೇಂದ್ರರು ಕೊಡಗಿನ ಕಾಳಂಗರಡಿ ಎಂಬಲ್ಲಿ ಮತ್ತೊಂದು ಮಠವನ್ನು ಸ್ಥಾಪಿಸಿದರು. ಈ ಮಠಕ್ಕೆ ಬೇಕಿದ್ದ ಸೌಕರ್ಯಗಳನ್ನು

---

[1] ನಂಜನಗೂಡು ಶಾಸನ ನಂ. ೧೭೩, ಮೈಸೂರು ಜಿಲ್ಲೆಯ ಶಾಸನಗಳು, ಭಾಗ I.

[2] ಶ್ರೀಮಠದ ವಶದಲ್ಲಿರುವ ಸನ್ನದು, ಪ್ರಾಚ್ಯವಸ್ತು ಇಲಾಖೆಯ ೧೯೩೦ನೇ ವರ್ಷದ ವರದಿ, ಪು. ೧೯೧-೯೨.

ಒದಗಿಸಲು ಅಲ್ಲಿಯ ಭಕ್ತವೃಂದವೇ ಸ್ವಯಂಪ್ರೇರಿತರಾಗಿ ಮಾರಾಟದ ಸುಂಕವನ್ನು ವಿಧಿಸಿಕೊಂಡು ಶ್ರೀಮಠವನ್ನು ಅಭಿವೃದ್ಧಿಪಡಿಸಿದರು. ಈ ಸ್ವಯಂಪ್ರೇರಿತ ಕಾರ್ಯ ಧರ್ಮಶಾಸನರೂಪದಲ್ಲಿ ಹುಟ್ಟಿತು.[1] ಮುಂದೆ ಚನ್ನವೀರದೇಶಿಕೇಂದ್ರರು ಲಕ್ಷ್ಮಣತೀರ್ಥ ನದೀತೀರದಲ್ಲಿರುವ ಸಿಂಗನಹಳ್ಳಿ ಮಠದಲ್ಲಿ ಕೆಲವು ಕಾಲವಿದ್ದು ಅಲ್ಲಿಯೇ ಐಕ್ಯರಾದರು.

## ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು

ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು ಕ್ರಿ.ಶ. ೧೮೦೧ರಲ್ಲಿ ಪೀಠದ ಹತ್ತೊಂಬತ್ತನೆಯವರಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರ ಪಾಂಡಿತ್ಯ ಮತ್ತು ಪ್ರೌಢಿಮೆಗಳು ಸಮಾಜದಲ್ಲಿ ಇವರಿಗೆ ವಿಶಿಷ್ಟಸ್ಥಾನವನ್ನು ತಂದುಕೊಟ್ಟವು. ಇವರು ಅಧ್ಯಾತ್ಮಚಿಂತಕರೂ, ಸೂಕ್ಷ್ಮಮತಿಗಳೂ ಮತ್ತು ವಿಚಾರವೇತ್ತರೂ ಆಗಿದ್ದರು. ಅಂದಿನ ಮೈಸೂರ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜರು ಶ್ರೀಮಹಾಂತದೇಶಿಕೇಂದ್ರರಲ್ಲಿ ಅಪಾರಭಕ್ತಿ ಗೌರವಗಳನ್ನಿಟ್ಟಿದ್ದರೆಂದು ಶ್ರೀಮಠ ಮತ್ತು ಅರಮನೆಗಳ ನಡುವಿನ ಪತ್ರವ್ಯವಹಾರಗಳಿಂದ ವ್ಯಕ್ತವಾಗುತ್ತದೆ. ಶ್ರೀ ಮಹಾಂತದೇಶಿಕೇಂದ್ರರು ಆದಿಗುರುಗಳ ಗದ್ದುಗೆ ಮತ್ತು ಮಠದ ಜೀರ್ಣೋದ್ಧಾರ ಕೆಲಸಗಳನ್ನು ಕೈಗೊಂಡುದಾಗಿ ತಿಳಿಯುತ್ತದೆ. ಅನಂತರ ಭಕ್ತರ ಅಭೀಷ್ಟದಂತೆ, ಇವರು ಕೊಡಗು ಮತ್ತು ಇಂದಿನ ಕೇರಳದ ಕೆಲವು ಭಾಗಗಳಿಗೆ ಹೋಗಬೇಕಾಗಿ ಬಂದು ಕ್ರಿ.ಶ. ೧೮೨೨ಕ್ಕೆ ಸ್ವಲ್ಪ ಮುಂಚೆ ತಮ್ಮ ಶಿಷ್ಯರೇ ಆಗಿದ್ದ **ಶ್ರೀ ಬಸವದೇಶಿಕೇಂದ್ರ**ರಿಗೆ ಪಟ್ಟಾಧಿಕಾರ ಮಾಡಿ ಸಕಲ ಜವಾಬ್ದಾರಿಗಳನ್ನು ಅವರಿಗೆ ವಹಿಸಿ ನಿಶ್ಚಿಂತೆಯಿಂದ ಪ್ರವಾಸಕ್ಕೆ ತೆರಳಿದರು. ಶ್ರೀ ಬಸವಲಿಂಗದೇಶಿಕೇಂದ್ರರು ಜಗದ್ಗುರು ಶ್ರೀಮಹಾಂತದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ನಿಯೋಜಿತರಾದರೂ ಇವರು ನಿರೀಕ್ಷಿಸಿದ್ದಕ್ಕಿಂತ ಬಹುಮುಂಚೆಯೇ ಸುತ್ತೂರ ಕ್ಷೇತ್ರದಲ್ಲಿ ಶಿವೈಕ್ಯರಾದರು. ಈ ವಾರ್ತೆ ಪ್ರವಾಸದಲ್ಲಿದ್ದ ಗುರುಗಳಿಗೆ ತಿಳಿದು, ಅಲ್ಲಿಂದ ಅವರು ಹಿಂದಿರುಗಿ ಬಂದು ಎಂದಿನಂತೆ ತಮ್ಮ ಮಠದ ಕೈಂಕರ್ಯಗಳನ್ನು ಮುನ್ನಡೆಸಿದರು.

ಈ ನಡುವೆ ಶ್ರೀಮಠದ ಪ್ರಭಾವ ನಾಡಿನ ಅನೇಕ ಕಡೆ ಹಬ್ಬುತ್ತಲೇ ಇತ್ತು. ಮುಮ್ಮಡಿ ಕೃಷ್ಣರಾಜರು ತಮ್ಮ ಅತೀವ ಭಕ್ತಿಗೌರವಗಳನ್ನು ಸಲ್ಲಿಸುತ್ತ ಬಂದರು. ಜಗದ್ಗುರು ಶ್ರೀ ಬಸವಲಿಂಗದೇಶಿಕೇಂದ್ರರಿಗೆ ೧೮೨೨ರಲ್ಲಿ ಬರೆದ ಸನ್ನದಿನಲ್ಲಿ ಶ್ರೀಮಠಕ್ಕೆ ಕೊಟ್ಟ ಭೂಮಿ ಮುಂತಾದುವುಗಳ ವಿವರಗಳು ಸಿಗುತ್ತವೆ.[2] ಇದರ ಜೊತೆಗೆ ಮೈಸೂರಿನಲ್ಲಿ ಅಂದಿನ ಇಂಗ್ಲಿಷ್ ಅಧಿಕಾರಿಯಾಗಿದ್ದ **ಲ್ಯಾಸಿಂಗ್‌ಟನ್** ಎಂಬುವರು ಶ್ರೀಗಳವರ ಕಾರ್ಯಬಾಹುಳ್ಯವನ್ನು ಅರಿತು ಅವರ ಸಂಚಾರಕ್ಕಾಗಿ ಮತ್ತೊಂದು ಸನ್ನದನ್ನು ನೀಡಿದರು. ಈ ದಾಖಲೆಯು ಸಹ ಶ್ರೀಮಠದ ವಶದಲ್ಲಿದೆ.

ಜಗದ್ಗುರು ಮಹಾಂತದೇಶಿಕೇಂದ್ರರು ನ್ಯಾಯನಿಷ್ಠುರರು ಮತ್ತು ನಿಷ್ಪಕ್ಷಪಾತಿಗಳು. ಅಂದಿನ ರಂಭಾಪುರಿ ರೇಣುಕ ಪೀಠದ ಚರ ಮತ್ತು ಸ್ಥಿರ ಮೂರ್ತಿಗಳಿಬ್ಬರಿಗೂ ವ್ಯವಹಾರಗಳಲ್ಲಿ ವೈಷಮ್ಯ ಬೆಳೆದು ದೂರು ಮೈಸೂರು ರಾಜರ ತನಕ ಬಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರವರು ಈ ಸಮಸ್ಯೆಯನ್ನು ಬಗೆಹರಿಸಲು ಸಮರ್ಥರಾಗಿದ್ದ ಶ್ರೀ ಮಹಾಂತದೇಶಿಕೇಂದ್ರರ ಮಧ್ಯಸ್ಥಿಕೆಯನ್ನು ಬಯಸಿದರು. ಎಡೆಯೂರ ಕ್ಷೇತ್ರದಲ್ಲಿ ರಂಭಾಪುರಿಯ ಶ್ರೀಗಳೀರ್ವರೂ ಮತ್ತು ಶ್ರೀ ಮಹಾಂತದೇಶಿಕೇಂದ್ರರೂ ಸೇರುವಂತೆ ವ್ಯವಸ್ಥೆಯಾಯಿತು. ಅಲ್ಲಿ ಶ್ರೀ ಮಹಾಂತದೇಶಿಕೇಂದ್ರರು ತಮ್ಮ ದಿವ್ಯವರ್ಚಸ್ಸಿನಿಂದಲೂ ಮತ್ತು ವ್ಯವಹಾರಕೌಶಲದಿಂದಲೂ ವಿವಾದವನ್ನು ಬಗೆಹರಿಸಿ ಶ್ರೀಗಳಿಬ್ಬರ ನಡುವೆ ಸೌಹಾರ್ದವಾತಾವರಣವುಂಟಾಗುವಂತೆ ಮಾಡಿದರು. ಇದಕ್ಕೆ ಸಂಬಂಧಿಸಿದ ರಾಜೀಪತ್ರವನ್ನು ತಂದು ಮಹಾರಾಜ ಕೃಷ್ಣರಾಜರಿಗೆ ತೋರಿಸಿದಾಗ ಅವರು ಅತೀವ ಸಂತೋಷಗೊಂಡು ಶ್ರೀಗಳವರನ್ನು ಬಹುವಾಗಿ ಶ್ಲಾಘಿಸಿ ಗೌರವಿಸಿದರು. ಈ ಘಟನೆಗೆ ಸಂಬಂಧಿಸಿದ ಪತ್ರವು ಶ್ರೀಸುತ್ತೂರ ಮಠದ ವಶದಲ್ಲಿದೆ. ಹೀಗೆ ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು ಶ್ರೀಮಠದ ವತಿಯಿಂದ ಅನೇಕ ಕೆಲಸಕಾರ್ಯಗಳನ್ನು ಲೋಕಹಿತಕ್ಕಾಗಿ ನಿರ್ವಹಿಸಿ ೧೮೪೨ರಲ್ಲಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

## ಜಗದ್ಗುರು ಶ್ರೀ ಸಿದ್ಧಮಲ್ಲಶಿವಾಚಾರ್ಯರು

ಇಪ್ಪತ್ತನೆಯ ಪೀಠಾಧ್ಯಕ್ಷರಾಗಿ ೧೮೪೨ರಲ್ಲಿ ನಿಯೋಜಿತರಾದ ಜಗದ್ಗುರು ಶ್ರೀ ಸಿದ್ಧಮಲ್ಲಶಿವಾಚಾರ್ಯರು ಕಳೆದ ಶತಮಾನದ ಅಂತ್ಯದವರೆಗೂ ಬದುಕಿದ್ದರು. ಇವರ ಕಾರ್ಯಕ್ಷೇತ್ರ ಧರ್ಮತತ್ತ್ವಗಳ ಪ್ರಸಾರಕ್ಕೆ ಮೀಸ

---

1 ಅದೇ., ಪು. ೧೯೨-೯೩.

2 ಶ್ರೀಮಠದ ವಶದಲ್ಲಿರುವ ಸನ್ನದು, ಪ್ರಾಚ್ಯವಸ್ತು ಇಲಾಖೆಯ ೧೯೩೦ನೇ ವರ್ಷದ ವರದಿ, ಪು. ೧೮೬.

ಲಾಗಿದ್ದು, ಅನೇಕ ತತ್ತ್ವಪ್ರತಿಪಾದಕರಿಗೆ, ಧರ್ಮಜಿಜ್ಞಾಸುಗಳಿಗೆ ಮತ್ತು ದಾರ್ಶನಿಕರಿಗೆ ಶ್ರೀಮಠದ ಪ್ರೋತ್ಸಾಹ ದೊರಕಿತು. ಶ್ರೀಮಠದಲ್ಲಿ ನಡೆಯುತ್ತಿದ್ದ ದಾಸೋಹಕ್ಕೆ ಶ್ರೀಗಳು ಹೆಚ್ಚಿನ ಮಹತ್ವವನ್ನಿತ್ತಿದ್ದರು. ಇದು ನೂರಾರು ಜನರು ಮಠಕ್ಕೆ ಬಂದುಹೋಗಲು ಅನುವು ಮಾಡಿಕೊಟ್ಟಿತು. ನಗರ್ಲೆ ನಂಜುಂಡಶಾಸ್ತ್ರಿಗಳು ರಚಿಸಿದ 'ಸ್ತೋತ್ರ ರತ್ನಾಕರ' ಸಿದ್ದಲಿಂಗಶಿವಾಚಾರ್ಯರ ಅಧ್ಯಾತ್ಮದ ಔನ್ನತ್ಯವನ್ನು ಚಿತ್ತರಿಸುವ ಕೃತಿಯಾಗಿದೆ. ಇವರ ಕಾಲದಲ್ಲಿಯೇ **ಕಂಬಳೀಶಯತಿ** ಸುತ್ತೂರ ಮಠಕ್ಕೆ ಆಗಮಿಸಿ ಅನಂತರ ನಂಜನಗೂಡಿನ ಬಳಿಯ ಮಲ್ಲನಮೂಲೆಯಲ್ಲಿ ಶಿವಯೋಗ ತಪೋನಿರತರಾಗಿ, ಪರಮದಾಸೋಹಮೂರ್ತಿಗಳಾಗಿ ಅನಂತರ ಅಲ್ಲಿಯೇ ಐಕ್ಯರಾದರು.

ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು ಕ್ರಿ.ಶ. ೧೮೮೪ರಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರರಿಗೆ ಆಶೀರ್ವದಿಸಿ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು. ಅನಂತರ ೧೮೯೬ರಲ್ಲಿ ಸುತ್ತೂರ ಕ್ಷೇತ್ರದಲ್ಲಿಯೇ ಶಿವೈಕ್ಯರಾದರು.

## ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರರು

ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರರು ಕ್ರಿ.ಶ. ೧೮೮೪ರಲ್ಲಿ ಶ್ರೀಪೀಠದ ಇಪ್ಪತ್ತೊಂದನೆಯವರಾಗಿ ನಿಯೋಜಿತರಾದರೂ, ಮುಂಬರುವ ಇಪ್ಪತ್ತೆರಡನೆಯವರಾದ ಪಟ್ಟದ ಶ್ರೀ ಶಿವರಾತ್ರೀಶ್ವರರಿಗಾಗಿ ಪೀಠದ ಅಧಿಕಾರ ಸೂತ್ರಗಳನ್ನು ಹಿಡಿದೂ ಹಿಡಿಯದಂತಿದ್ದರೆನಿಸುತ್ತದೆ. ಈ ಮಾತಿನಲ್ಲಿಯೇ ಶಿವರಾತ್ರಿದೇಶಿಕೇಂದ್ರರ ವ್ಯಕ್ತಿತ್ವದ ಪರಿಚಯವಾಗುತ್ತದೆ. ಅಂತರ್ಮುಖಿಗಳೂ ಶಿವಯೋಗಸಂಪನ್ನರೂ ಆಗಿದ್ದ ಇವರು ಲೌಕಿಕಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರೊ ಇಲ್ಲವೊ ತಿಳಿಯದು. ಬಂದ ಭಕ್ತರಿಗೆ ಶಾಂತಮುದ್ರಿತರಾಗಿ ಇವರು ನೀಡುತ್ತಿದ್ದ ಭಸ್ಮ ಭವರೋಗಗಳಿಗೆಲ್ಲ ಮದ್ದಾಗುತ್ತಿತ್ತೆಂದು ಹೇಳುತ್ತಾರೆ. ಕ್ರಿ.ಶ. ೧೮೯೬ರಲ್ಲಿ ತಮ್ಮ ಹಿರಿಯರಾದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಐಕ್ಯರಾದ ಆರು ವರ್ಷಗಳಲ್ಲಿಯೇ ಅಂದರೆ ೧೯೦೨ರಲ್ಲಿ ಪಟ್ಟದ ಶ್ರೀ ಶಿವರಾತ್ರೀಶ್ವರರಿಗೆ ಆಶೀರ್ವದಿಸಿ ತಮ್ಮ ಉಳಿದ ಕಾಲವನ್ನು ಶಿವಯೋಗ, ಧ್ಯಾನಪೂಜಾದಿಗಳಿಗೆ ಸಮರ್ಪಿಸಿಕೊಂಡರು. ಸದಾ ಶಾಂತ ಚಿತ್ತರಾಗಿರುತ್ತಿದ್ದ ಶಿವರಾತ್ರಿದೇಶಿಕೇಂದ್ರರು ೧೯೪೨ರಲ್ಲಿ ಸುತ್ತೂರು ಕ್ಷೇತ್ರದಲ್ಲಿಯೇ ಲಿಂಗೈಕ್ಯರಾದರು.

## ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು

ಮಂತ್ರಮಹರ್ಷಿಗಳೆಂದು ಖ್ಯಾತನಾಮರಾಗಿರುವ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು ಶ್ರೀಪೀಠದ ಇಪ್ಪತ್ತೆರಡನೆಯವರು. ಇವರ ಕಾಲ ಪೀಠದ ಇತಿಹಾಸದಲ್ಲಿ ಒಂದು ಬಹುಮುಖ್ಯ ಅಧ್ಯಾಯ. ಪ್ರಾಚೀನ ಋಷಿಗಳನ್ನು ನೆನಪಿಗೆ ತರುವಂತಿದ್ದ ಈ ಮಹಾತಪಸ್ವಿಯ ಜೀವನ ಶ್ರೀಪೀಠದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಇವರು ೧೯೦೨ರಲ್ಲಿ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರರ ಕರಕಮಲಸಂಜಾತರಾಗಿ ಪೀಠದ ಉತ್ತರಾಧಿಕಾರಿಗಳಾಗಿ ನೇಮಕರಾದುದೇ ತಡ ಸುತ್ತೂರ ಶ್ರೀಮಠದಲ್ಲಿ ನವೋದಯದ ಕಾಲ ಆರಂಭವಾಯಿತು. ಇವರ ಗುರುವಿನ ಗುರು ಪರಮಗುರು ಸಿದ್ಧಲಿಂಗಶಿವಾಚಾರ್ಯರು ಇರುವಾಗಲೇ ಅವರ ಶಿಷ್ಯರ ನಂತರ ಪೀಠಕ್ಕೆ ನಿಯೋಜಿತರಾಗುವ ಅಲಭ್ಯಸೌಭಾಗ್ಯ ಜಗದ್ಗುರು ಶ್ರೀ ಶಿವರಾತ್ರೀಶ್ವರರದಾಗಿತ್ತು. ಅಂದರೆ ತಮ್ಮ ಗುರುಗಳ ಪೂರ್ಣಕೃಪೆ ಬಾಲ್ಯದಿಂದಲೇ ಇವರಿಗೆ ಲಭಿಸಿತ್ತು. ಮಠದ ವಿಶಿಷ್ಟಪರಂಪರೆಗೆ ಅನುಗುಣವಾಗಿ ಹಿರಿಯ ಗುರುಗಳಿಬ್ಬರೂ ಶ್ರೀ ಶಿವರಾತ್ರೀಶ್ವರರಿಗೆ ಶಿಕ್ಷಣ ನೀಡಿ ಇವರ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು.

ತಾರೀಖು ೨೧-೫-೧೮೮೬ರಂದು ಜನಿಸಿದ ಜಗದ್ಗುರು ಶ್ರೀ ಶಿವರಾತ್ರೀಶ್ವರರು, ತಮ್ಮ ಹದಿನಾರನೇ ವಯಸ್ಸಿನಲ್ಲಿಯೇ ಶ್ರೀಮಠದ ಗುರುತರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು. ಪರಮಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯರು ತಮ್ಮ ದಿವ್ಯದೃಷ್ಟಿಗೆ ಗೋಚರಿಸಿದ ಜಗದ್ಗುರು ಶ್ರೀ ಶಿವರಾತ್ರೀಶ್ವರರ ಉತ್ತಮ ಭವಿಷ್ಯವನ್ನು ಕಂಡು ತುಂಬ ಹರ್ಷಿತರಾಗಿದ್ದರು. ಆದಷ್ಟು ಬೇಗ ಇವರಿಗೆ ಪಟ್ಟಾಧಿಕಾರವನ್ನು ನೀಡಬೇಕೆಂದು ಸರ್ವಸಿದ್ಧತೆಗಳು ನಡೆಯುತ್ತಿದ್ದಾಗಲೇ ಸಿದ್ಧಮಲ್ಲಶಿವಾಚಾರ್ಯರು ೧೮೯೬ರಲ್ಲಿ ಲಿಂಗೈಕ್ಯರಾದರು. ಇದಾದ ಆರು ವರ್ಷಗಳ ನಂತರ, ಅಂದರೆ ತಾ. ೧೮-೫-೧೯೦೨ರಂದು ಜಗದ್ಗುರು ಶ್ರೀ ಶಿವರಾತ್ರೀಶ್ವರರಿಗೆ ಜಗದ್ಗುರು ಶಿವರಾತ್ರಿದೇಶಿಕೇಂದ್ರರು ಅಧಿಕಾರವನ್ನು ನೀಡಿದರು. ಅಂದಿನಿಂದಲೇ ಸುತ್ತೂರ ಮಠದ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯ ಆರಂಭವಾಯಿತು.

ಶ್ರೀಪೀಠದ ಸರ್ವತೋಮುಖ ಪ್ರಗತಿಗೆ ತಮ್ಮ ಎಳೆಯ ವಯಸ್ಸಿನಿಂದಲೇ ಕಾರ್ಯಪ್ರವೃತ್ತರಾದ ಜಗದ್ಗುರು ಶ್ರೀ ಶಿವರಾತ್ರೀಶ್ವರರು ನಡೆಸಿದ ದಿವ್ಯಜೀವನ ಇಂದಿಗೂ ಒಂದು ಮಹಾನ್ ಆದರ್ಶವಾಗಿ ಉಳಿದಿದೆ. ಬದಲಾಗುತ್ತಿದ್ದ ಸಮಾಜ ಮತ್ತು ಅದರ ಅಗತ್ಯಗಳನ್ನು ಮನಗಂಡ ಜಗದ್ಗುರುಗಳು ಮುಂದೆ ಶ್ರೀಮಠದ ವತಿಯಿಂದ ಆಗಬೇಕಿದ್ದ ಸೇವಾಕಾರ್ಯಗಳನ್ನು ಕುರಿತ ಆಲೋಚನೆಗಳಿಗೆ ತೊಡಗಿದರು. ಅವರ ವೈಚಾರಿಕ ಸೂಕ್ಷ್ಮಮತಿಗೆ ಹೊಳೆಯದ ವಿಚಾರಗಳಿರಲಿಲ್ಲ. ಎಂತಹ ಜಟಿಲ ಸಮಸ್ಯೆಗಳಿಗೂ ಅವರ ಬಳಿ ಸೂಕ್ತಪರಿಹಾರಗಳಿದ್ದವು. ಅವರು ಮನಗಂಡ ಮೊದಲ ಸತ್ಯವೆಂದರೆ, ಸಮಾಜದ ಎಲ್ಲ ವರ್ಗದವರ ಸರ್ವತೋಮುಖ ಪ್ರಗತಿಯಾಗಬೇಕೆಂಬ ಸದುದ್ದೇಶ. ಈ ಪ್ರಗತಿಗೆ ಅತ್ಯಂತ ಅಗತ್ಯವಾಗಿ ಅಂದು ಬೇಕಿದ್ದುದು ಎಲ್ಲರ ವಿದ್ಯಾಭ್ಯಾಸ. ಅಂದರೆ, ಇಹ-ಪರಗಳ ಸುಖಕ್ಕೆ ಸಾಧನವೇ ಜ್ಞಾನ ಮತ್ತು ಈ ಜ್ಞಾನದ ಪ್ರಸಾರ ಎಷ್ಟು ಹೆಚ್ಚು ನಡೆಯುತ್ತದೆಯೋ ಅಷ್ಟರಮಟ್ಟಿಗೆ ಅದು ಸಮಾಜದ ಸುಖಸಂತೋಷಗಳಿಗೆ ಕಾರಣವಾಗುತ್ತದೆಂದು ತಿಳಿದ ಶ್ರೀಗಳು ಅವಕ್ಕೆ ತಕ್ಷಣ ಬೇಕಿದ್ದ ಅಗತ್ಯಗಳನ್ನು ಪೂರೈಸಲು ಸಿದ್ಧರಾದರು. ಈ ದಿಶೆಯಲ್ಲಿ ಮೊಟ್ಟಮೊದಲು ಆರಂಭವಾದ ಸಂಸ್ಥೆಯೇ ಮೈಸೂರಿನಲ್ಲಿರುವ ಖ್ಯಾತನಮ್ಮ ಸಾಹುಕಾರ್ ಶ್ರೀ ಸಿದ್ಧಲಿಂಗಯ್ಯನವರ ವಿದ್ಯಾರ್ಥಿನಿಲಯ. ಇದರ ಜೊತೆಗೆ ಸಂಸ್ಕೃತ ಪಾಠಶಾಲೆಯೂ ಆರಂಭವಾಗಿ ಹಳ್ಳಿಗಳಿಂದ ಬರುತ್ತಿದ್ದ ಎಲ್ಲ ವರ್ಗದ ಬಡವಿದ್ಯಾರ್ಥಿಗಳಿಗೆ ಮಹದುಪಕಾರವಾಯಿತು. ಹೀಗೆ ಜ್ಞಾನಾನ್ನದಾಸೋಹದ ಮಹಾಯಜ್ಞವನ್ನು ಜಗದ್ಗುರು ಶಿವರಾತ್ರೀಶ್ವರರು ೧೯೩೦ರ ಸುಮಾರಿಗೇ ಆರಂಭಿಸಿದರು. ಅಂದು ಆರಂಭವಾದ ಈ ಯಜ್ಞ ಇಂದಿನ ಸುತ್ತೂರ ಮಠದ ಅದ್ವಿತೀಯ ಕೀರ್ತಿಗೆ ಕಾರಣವಾಯಿತು. ಲಕ್ಷೋಪಲಕ್ಷ ಹೃನ್ಮನಗಳಲ್ಲಿ ಜ್ಞಾನದೀವಿಗೆ ಹಚ್ಚಿ ಇಂದು ಅದೆಷ್ಟು ಜೀವಿಗಳ ಇಹಪರಸುಖಕ್ಕೆ ಸಾಧನವಾಗಿದೆ ಎಂಬುದು ಊಹೆಗೂ ನಿಲುಕದ ವಿಷಯ.

ಜಗದ್ಗುರು ಶ್ರೀ ಶಿವರಾತ್ರೀಶ್ವರರು ಕಾರ್ಯನಿರತರು ಮತ್ತು ಕಾರ್ಯಪ್ರಿಯರು. ಪ್ರತಿವರ್ಷವೂ ಹೆಚ್ಚುತ್ತಿದ್ದ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹತ್ತಾರು ಸಮಸ್ಯೆಗಳನ್ನು ತಂದೊಡ್ಡುತ್ತಿದ್ದಿತು. ಜೊತೆಗೆ ಆಗಿಂದಾಗ್ಗೆ ಬರುತ್ತಿದ್ದ ಅನಿರೀಕ್ಷಿತ ಅಭಾವದ ದಿನಗಳು ಬೇರೆ. ಇದಕ್ಕೆಲ್ಲ ಏಕೈಕ ಪರಿಹಾರವೆಂಬಂತೆ ಜಗದ್ಗುರುಗಳು ಉತ್ತಮ ಬೇಸಾಯದ ಅಗತ್ಯಗಳನ್ನು ಒತ್ತಿಹೇಳತೊಡಗಿ ಸ್ವತಃ ತಾವೇ ಮಠದ ಭೂಮಿಯಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆಯತೊಡಗಿದರು. ಹೀಗೆ ಶ್ರೀಮಠ ಇಂದಿನ ಮಹತ್ವದ ಸೇವಾಕ್ಷೇತ್ರವೆನಿಸಿಗುವ ವಿದ್ಯಾಕ್ಷೇತ್ರಕ್ಕೂ ಪದಾರ್ಪಣೆ ಮಾಡಿತು. ಈ ನಡುವೆ ಶ್ರೀ ಶಿವರಾತ್ರೀಶ್ವರರು ನಾಡಿನ ಅನೇಕ ಕಡೆ ಸಂಚರಿಸಿ ಎಲ್ಲೆಡೆಯೂ ಇದ್ದ ಭಕ್ತರ ಅಗತ್ಯಗಳನ್ನು ಅರಿತು ಬರುತ್ತಿದ್ದರು. ಶ್ರೀಮಠದ ಅಗತ್ಯಗಳಿಗೆ ಬೇಕಿದ್ದ ಹೊಸ ಕಟ್ಟಡಗಳ ನಿರ್ಮಾಣಕಾರ್ಯವೂ ಜೊತೆಜೊತೆಗೇ ಆರಂಭವಾಯಿತು. ಮಠದ ಆವರಣದಲ್ಲಿನ ಶಿಥಿಲಗೊಂಡ ಪುರಾತನ ಶ್ರೀ ಸೋಮೇಶ್ವರ ದೇವಾಲಯದ ಪುನರ್ನಿರ್ಮಾಣಕಾರ್ಯ ಭರದಿಂದ ಸಾಗಿತು. ಹಳೆಯ ದೇವಾಲಯದ ಕಲಾವಿಶೇಷಗಳು ಹಾಳಾಗದಂತೆ ಅನುಭವಸ್ಥ ಶಿಲ್ಪಿಗಳ ಸಹಾಯದಿಂದ ದೇವಾಲಯ ಹೊಸ ರೂಪ ತಳೆಯಿತು. ಅನಂತರ ಶ್ರೀ ವೀರೇಶ್ವರ ದೇವಾಲಯವೂ ಪುನರ್ನಿರ್ಮಾಣವಾಯಿತು. ಹೀಗೆ ನಿರ್ಮಾಣವಾದ ಶ್ರೀ ಸೋಮೇಶ್ವರ ದೇವಾಲಯದ ಪ್ರಾರಂಭೋತ್ಸವವು ತಾ. ೨೧-೨-೧೯೩೫ರಂದು ಸುತ್ತೂರು ಶ್ರೀ ಕ್ಷೇತ್ರದಲ್ಲಿ ನೆರವೇರಿತು. ಈ ಕಾರ್ಯಗಳಿಗೆ ಅಂದು ತಗುಲಿದ ವೆಚ್ಚ ಹತ್ತಾರು ಸಹಸ್ರ ರೂಪಾಯಿಗಳು. ಈ ನಿರ್ಮಾಣಕಾರ್ಯಗಳಿಗೆ ಸಂಬಂಧಿಸಿದ ವಿವರಗಳು ಶ್ರೀಗಳವರೇ ಬರೆದಿಟ್ಟಿರುವ ಸುಮಾರು ಐದುನೂರು ಪುಟಗಳ ಸಮೀಕ್ಷೆಯಲ್ಲಿ ದೊರೆಯುತ್ತವೆ. ಇದರ ಜೊತೆಗೆ ಶ್ರೀಮಠಕ್ಕೆ ಸಂಬಂಧಿಸಿದ ಪುರಾತನ ಶಿಲಾಲೇಖಗಳೂ, ತಾಮ್ರಶಾಸನಗಳೂ, ಸನ್ನದುಗಳೂ ಮತ್ತು ಇನ್ನಿತರ ದಾಖಲೆಗಳೂ ಶ್ರೀಗಳವರ ನಿರ್ದೇಶನದಲ್ಲಿ ವ್ಯವಸ್ಥಿತವಾದ ರಕ್ಷಣೆಯನ್ನು ಪಡೆದವು.

ಈ ಬಹುಮುಖಪ್ರತಿಭೆಯ ಶ್ರೀ ಶಿವರಾತ್ರೀಶ್ವರರು ಅತ್ಯಂತ ಸರಳರೂ ಸಹೃದಯರೂ ಆಗಿದ್ದರು. ಸಕಲ ಜೀವರಾಶಿಗಳಿಗೆ ಲೇಸನೇ ಬಯಸಿ ಬಾಳಿದ ಮಹಾಶಿವಶರಣರ ಆದರ್ಶಗಳನ್ನು ಮುಂದಿಟ್ಟುಕೊಂಡು ಮುಕ್ತಿಯನ್ನು ಸಾಧಿಸಿದ ಮಹಿಮಾನ್ವಿತರು. ಇವರ ಜೀವನವೇ ಒಂದು ತಪಸ್ಸು. ಒಂದಲ್ಲ ಒಂದು ಕಾಯಕದಲ್ಲಿ ಅವರು ತಮ್ಮ ಜೀವನದ ಅಂತ್ಯದವರೆಗೂ ನಿರತರಾಗಿಯೇ ಇದ್ದರು. ಇವರು ತಮ್ಮ ಕೊನೆಯ ವರ್ಷಗಳನ್ನು ವಿಶೇಷವಾಗಿ ಷಡಕ್ಷರೀ ಮಹಾಮಂತ್ರವನ್ನು ಬರೆಯುವುದರಲ್ಲಿ ಕಳೆದರು. ಹಲವು ಕೋಟಿ ಮಂತ್ರಗಳನ್ನು ಬರೆದು ಮಂತ್ರಮಹರ್ಷಿಗಳಾದರು. ಮಂತ್ರಲೇಖನ ಜಪದ ಹಿರಿಮೆಯನ್ನು ಕುರಿತು, 'ಜಪವು ವಾಚಿಕ, ಉಪಾಂಶು ಮತ್ತು ಮಾನಸಿಕವೆಂದು ಮೂರು ವಿಧ. ಇವುಗಳಲ್ಲಿ ಉತ್ತರೋತ್ತರವು ಹೆಚ್ಚು ಫಲಪ್ರದ. ಮಾನಸಿಕ ಜಪವು ಲೇಖನದಿಂದ ಹೆಚ್ಚು ಸಿದ್ಧಿಸು

ತ್ರವೆ' ಎಂದಿದ್ದಾರೆ. ಮಂತ್ರಮಹರ್ಷಿಗಳನ್ನು ಸಂದರ್ಶಿಸಲು ಭಾರತದ ರಾಷ್ಟ್ರಪತಿಗಳಾದಿಯಾಗಿ, ರಾಜಮಹಾರಾಜರುಗಳೂ, ಅನೇಕ ಪುಣ್ಯಪುರುಷರೂ, ಮುಮುಕ್ಷುಗಳೂ ಶ್ರೀಮಠಕ್ಕೆ ಆಗಮಿಸುತ್ತಿದ್ದರು. ಲಿಂಗಜಂಗಮಪ್ರೇಮಿಗಳಾದ ಶ್ರೀಗಳ ಸುತ್ತ ಸದಾ ಹರಗುರುಚರಮೂರ್ತಿಗಳು ಬಂದು ಸೇರಿಯುತ್ತಿದ್ದರು. ಹೀಗೆ ಬಂದು, ಶ್ರೀಗಳವರಿಗೆ ಷಡಕ್ಷರೀ ಮಹಾಮಂತ್ರವನ್ನು ನಿರಂತರವಾಗಿ ಬರೆಯುವಂತೆ ಪ್ರೇರೇಪಿಸಿದ ಮಹಾವಿಭೂತಿಗಳು ಅರಮನೆ ಪಂಚಗವಿ ಮಠಾಧ್ಯಕ್ಷರಾದ ಶ್ರೀ ಗೌರೀಶಂಕರ ಮಹಾಸ್ವಾಮಿಗಳು. ಜ್ಞಾನವೈರಾಗ್ಯಗಳ ಶಿಖರದಂತಿದ್ದ ಶ್ರೀ ಗೌರೀಶಂಕರ ಸ್ವಾಮಿಗಳು ಕಾಶಿಯಿಂದ ಬಂದು ಶ್ರೀಮಠದ ಆಧ್ಯಾತ್ಮದ ವಾತಾವರಣಕ್ಕೆ ಹೊಸ ಮೆರುಗನ್ನು ತಂದರು. ದಿವಂಗತ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರಂತೂ ಶ್ರೀಗಳ ಮತ್ತು ಶ್ರೀಪೀಠದ ಅನನ್ಯಭಕ್ತರಾಗಿದ್ದರು.

ವಿದ್ವಜ್ಜನಪ್ರೇಮಿಗಳಾಗಿದ್ದ ಜಗದ್ಗುರು ಶ್ರೀ ಶಿವರಾತ್ರೀಶ್ವರರು ಸತ್ಕವಿ ಶ್ರೀ ಸಂಗಪ್ಪ ಶಾಸ್ತ್ರಿಗಳಿಗೆ ಪ್ರೋತ್ಸಾಹವಿತ್ತು ಅವರಿಂದ 'ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ' ಎಂಬ ಷಟ್ಪದಿಕಾವ್ಯರಚನೆಯಾಗಲು ಅನುವು ಮಾಡಿಕೊಟ್ಟರು. ಸ್ವತಃ ತಾವೇ, 'ಶಿವಮಂತ್ರಮಹಿಮೆ'ಯೆಂಬ ಸಂಗ್ರಹಗ್ರಂಥವನ್ನು ರಚಿಸಿದ್ದಾರೆ. ಜೊತೆಗೆ, ಅನೇಕ ಧಾರ್ಮಿಕ, ಶೈಕ್ಷಣಿಕ ಸಭೆಸಮಾರಂಭಗಳು ಇವರ ನೇತೃತ್ವದಲ್ಲಿ ಸಮಾವೇಶಗೊಳ್ಳುತ್ತಿದ್ದವು. ವರ್ಷಕ್ಕೊಮ್ಮೆ ನಡೆಯುವ ಮುಡುಕುತೊರೆ ಪರಿಷೆಯ ಸಂದರ್ಭದಲ್ಲಿ ಏರ್ಪಡುತ್ತಿದ್ದ 'ವೀರಶೈವ ಸಂವರ್ಧಿನೀ ಸಭಾ' ಶ್ರೀಗಳವರ ಧರ್ಮಾಭಿಮಾನಕ್ಕೊಂದು ಉತ್ತಮ ನಿದರ್ಶನ. ಆ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಸಂದೇಶಗಳು ಇಂದಿಗೂ ಮನನೀಯವಾದುವುಗಳು. 'ಅನುಭವಮಂಟಪದ ಅಗತ್ಯ'ವನ್ನು ಕುರಿತು ಬೆಂಗಳೂರಿನಲ್ಲಿ ಭಾಷಣ ಮಾಡುತ್ತ, 'ಲೋಕದ ಡೊಂಕುಗಳಿಗೆಲ್ಲ ಮತ್ತು ಸಂಕಷ್ಟಗಳಿಗೆಲ್ಲ ಮನೆಯೊಳಗೆ ಮನೆಯೊಡೆಯನಿಲ್ಲದಿರುವುದೇ ಕಾರಣ'ವೆಂದು ತಿಳಿಸುತ್ತಾರೆ. ಮುಂದುವರಿದು, 'ಕಲ್ಯಾಣದ ಶರಣರು ಕಂಡ ಸಮಸ್ಯೆಗಳಿಗಿಂತ ಇಂದಿನ ಸಮಸ್ಯೆಗಳು ಬೃಹದಾಕಾರ ತಾಳಿವೆ. ಜಗತ್ತು ಅಶಾಂತಿಯ ವಾತಾವರಣದಲ್ಲಿ ತಲ್ಲಣಿಸುತ್ತಿದೆ. ಅದಕ್ಕೆ ರಕ್ಷಣೆ ನೀಡಬಲ್ಲ ಆತ್ಮಶಕ್ತಿಯ ವಿಶ್ವಸಂಸ್ಥೆಯಾಗಿ ಕೆಲಸ ಮಾಡಬಲ್ಲ 'ಅನುಭವಮಂಟಪ' ಇಂದು ನಮಗೆ ಬೇಕಾಗಿದೆ'[1] ಎಂದು ಅಪ್ಪಣೆಕೊಡಿಸಿದ್ದಾರೆ. ಸುಮಾರು ಕಾಲುಶತಮಾನದ ಹಿಂದೆ ಪ್ರವಾದಿಯಂತೆ ನುಡಿದ ಶ್ರೀ ಶಿವರಾತ್ರೀಶ್ವರರ ಈ ಮಾತುಗಳು ಇಂದಿಗೂ ಸತ್ಯವೇ ಆಗಿವೆ.

ತಮ್ಮ ಪೀಠದ ಪರಂಪರೆಯ ಸಂಪ್ರದಾಯದಂತೆ ಜಗದ್ಗುರು ಶ್ರೀ ಶಿವರಾತ್ರೀಶ್ವರರು ತಮ್ಮ ಉತ್ತರಾಧಿಕಾರಿಗಳನ್ನು ೧೯೨೮ರಷ್ಟು ಮುಂಚೆಯೇ ಆಯ್ಕೆಮಾಡಿ ನಿಯೋಜಿಸಿದರು. ಇವರ ಕರಕಮಲ ಸಂಜಾತರಾದವರೇ ಇಂದಿನ **ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು.** ಇವರನ್ನು ಜಗದ್ಗುರು ಶ್ರೀ ಶಿವರಾತ್ರೀಶ್ವರರು ತಾರೀಖು ೨೮-೨-೧೯೨೮ರಂದು ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆದ ಪಟ್ಟಾಧಿಕಾರಮಹೋತ್ಸವದಲ್ಲಿ ತಮ್ಮ ಉತ್ತರಾಧಿಕಾರಿಗಳೆಂದು ಹರಸಿ ಹಾರೈಸಿದರು. ಸುಮಾರು ೧೯೪೧ರ ವೇಳೆಗೆ ಜಗದ್ಗುರು ಶಿವರಾತ್ರೀಶ್ವರರು ತಮ್ಮ ಹೆಚ್ಚಿನ ಜವಾಬ್ದಾರಿಯಿಂದ ವಿರಮಿಸಲು ತೀರ್ಮಾನಿಸಿದಂತೆ ಕಾಣುತ್ತದೆ. ಅಲ್ಲಿಂದ ಮುಂದೆ ಅವರ ಜೀವನದ ಬಹುಪಾಲು ವೇಳೆಯನ್ನು ಶಿವಮಂತ್ರಗಳನ್ನು ಬರೆಯುವ ತಪಸ್ಸಿನಲ್ಲಿ ಕಳೆದರು. ಹೀಗೆ ತಮ್ಮ ದಿವ್ಯಜೀವನದ ಅಂತ್ಯವನ್ನು ಕಳೆದ ಮಹಾಸ್ವಾಮಿಗಳು ತಾ. ೨೨-೧-೧೯೬೭ರಂದು ಶಿವಮಂತ್ರವನ್ನು ಬರೆಯುತ್ತ ಕುಳಿತಿದ್ದಂತೆಯೇ ಶಿವನಲ್ಲಿ ಒಂದಾದರು. ಸುತ್ತೂರ ಶ್ರೀಕ್ಷೇತ್ರದಲ್ಲಿರುವ ಆದಿಜಗದ್ಗುರುಗಳವರ ಗದ್ದುಗೆಯ ಸಮೀಪದಲ್ಲಿ ಈ ಮಂತ್ರಮಹರ್ಷಿಗಳ ಗದ್ದುಗೆಯೂ ಇದೆ. ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳ ಕಾಲ ಪ್ರಾಪಂಚಿಕವಾಗಿ ಮುಗಿಯಿತಾದರೂ, ಅವರ ತಪಸ್ಸು ಇಂದಿನ ಜಗದ್ಗುರು ಪರಮಪೂಜ್ಯ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರಿಗೆ ಪ್ರೇರಕಶಕ್ತಿಯಾಗಿದೆ.

[1] ೧೭-೮-೫೮ರಂದು ಬೆಂಗಳೂರಿನಲ್ಲಿ ಅಪ್ಪಣೆ ಕೊಡಿಸಿದ ಭಾಷಣ. 'ಆಶೀರ್ವಾದ', ಎಚ್. ಗಂಗಾಧರನ್ (ಸಂ.); ಪು. ೧೩೫-೩೭.

# ಆವಜನ್ಮದ ಪುಣ್ಯವೊ!

ಎಂ. ಎಸ್. ಪರಶಿವಮೂರ್ತಿ

ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳಲ್ಲಿ ಮಾನವನ ಪ್ರಗತಿ ಅಸಾಧಾರಣವಾದುದು. ಈ ದಿಶೆಯಲ್ಲಿ ಕಳೆದ ಐದು ದಶಕಗಳಲ್ಲಿ ನಡೆದಿರುವ ಸಾಧನೆ ಮತ್ತು ಅವುಗಳಿಂದ ಕಲ್ಪಿತವಾಗಿರುವ ಸೌಲಭ್ಯಗಳು ಸಹಸ್ರಾರು ವರ್ಷಗಳಿಂದ ನಡೆದಿರುವ ಸಾಧನೆಗಳೆಲ್ಲವನ್ನೂ ಮೀರಿನಿಂತಿವೆ. ಈ ಮಹೋನ್ನತ ಸಾಧನೆಗಳ ಫಲವಾಗಿ ಬಾಹ್ಯಾಕಾಶ ಸಂಚಾರ, ಚಂದ್ರಲೋಕ ಗಮನ ಮುಂತಾದ ಕವಿಕಲ್ಪನೆಗೂ ಮೀರಿದ ಸಾಹಸಗಳಲ್ಲಿ ಮಾನವನು ಯಶಸ್ಸನ್ನು ಗಳಿಸಿರುತ್ತಾನೆ. ಆದರೂ ಮಹಾವಿಜ್ಞಾನಿಗಳ ದೃಷ್ಟಿಯಲ್ಲಿ ಈ ಎಲ್ಲಾ ಸಾಧನೆಗಳೂ ಅತ್ಯಲ್ಪವೆಂದೇ ಪರಿಗಣಿಸಲ್ಪಟ್ಟಿವೆ. ನಡೆಸಬೇಕಾದ ಶೋಧನೆ ಸಾಧಿಸಬೇಕಾದ ಸಮಸ್ಯೆಗಳು ಇನ್ನೂ ಅನೇಕವಿವೆ ಎಂಬುದು ನಿರ್ವಿವಾದ. ನಿಸರ್ಗ ಇನ್ನೂ ಅನೇಕ ವಿಚಾರ ಗಳನ್ನು ನಿಗೂಢವಾಗಿಯೇ ಕಾದಿರಿಸಿಕೊಂಡಿದೆ. ಅವುಗಳಲ್ಲಿ ಜೀವಜಗತ್ತುಗಳ ಸೃಷ್ಟಿಯ ಉದ್ದಿಶ್ಯ, ಜೀವಜೀವರುಗಳ ಪರಸ್ಪರ ಸಂಬಂಧ, ಜನನ ಮರಣದ ಗುಟ್ಟು, ಜೀವನ ಪುನರ್ಜನ್ಮ ಮತ್ತು ಜನ್ಮಾಂತರ ಕರ್ಮಫಲಗಳ ಪರಿಣಾಮ ಇವುಗಳ ಬಗೆಗೆ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾಗಿದ್ದರೂ, ಖಚಿತವಾದ ನಿರ್ಧಾರಗಳು ಸಾಧಿತವಾಗಿಲ್ಲ. ಪುನರ್ ಜನ್ಮವಿದೆಯೆಂಬ ನಂಬಿಕೆಯನ್ನು ದೃಢಪಡಿಸಲು ನೇರ ರುಜುವಾತು ಇಲ್ಲದಿದ್ದರೂ,ಇದರ ಸಾಧನೆಗೆ ಬೇಕಾದ ಪರೋಕ್ಷ ಸಾಕ್ಷ್ಯಗಳು ಸಿಗುತ್ತವೆ. ಇದಕ್ಕೆ ನಿದರ್ಶನ, ಕೆಲವರನ್ನು ಮೊದಲಬಾರಿ ನೋಡಿದ ಕೂಡಲೇ ಎಷ್ಟೋ ದಿನದ ಪರಿಚಯವಾದ ಅನುಭವ, ಸ್ನೇಹಪರತೆ, ಆತ್ಮೀಯತೆ ಮೂಡುತ್ತದೆ. ಅದೇ ಇನ್ನು ಕೆಲವರನ್ನು ನೋಡಿದರೆ ಇದಕ್ಕೆ ವ್ಯತಿರಿಕ್ತವಾದ ಅನುಭವವಾಗುತ್ತದೆ. ಈಚೆಗೆ ಕೆಲವರು ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ಹೇಳುವುದಲ್ಲದೆ, ಅನೇಕ ಘಟನೆಗಳನ್ನು, ಸಂಬಂಧಿಗಳನ್ನು ಮತ್ತು ಕುಟುಂಬವರ್ಗದವರನ್ನು ಗುರ್ತಿಸಿರುವ ವಿಚಾರವನ್ನು ಕೇಳುತ್ತಿರು ತ್ತೇವೆ. ಆದ್ದರಿಂದ ಪೂರ್ವಜನ್ಮ ವೃತ್ತಾಂತವನ್ನು ಅಲ್ಲಗಳೆಯುವಂತಿಲ್ಲ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದರ್ಶನಲಾಭ ನನಗೆ ಮೊದಲ ಬಾರಿಗೆ ಲಭಿಸುದುದು ಶ್ರೀಗಳವರ ಪಟ್ಟಾಧಿಕಾರದ ವಿಶೇಷ ಸಂದರ್ಭದಲ್ಲಿ. ಆಗ ನನಗೆ ಎಂಟು ವರ್ಷ ತುಂಬಿ ಮಿಡ್ಲ್ ಸ್ಕೂಲ್ ಮೊದಲನೆ ತರಗತಿಯಲ್ಲಿ ಓದುತ್ತಿದ್ದೆ. ನಂಜನಗೂಡು ತಾಲ್ಲೋಕಿನ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠವು ಪುರಾತನ ಕಾಲದಿಂದಲೂ ಈ ಪ್ರಾಂತ್ಯದ ಮಹಾಜನತೆಗೆ ಬೌದ್ಧಿಕ, ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರ ವಾಗಿ ಅನೇಕ ಶಿಷ್ಯ ಸಮುದಾಯವನ್ನು ಒಳಗೊಂಡಿದೆ. ಈ ಮಠದಲ್ಲಿ ಯಾವ ಕಾರ್ಯ ನಡೆದರೂ ಸಾವಿರಾರು ಶಿಷ್ಯ ಸಮುದಾಯವನ್ನೇ ಆಕರ್ಷಿಸುತ್ತದೆ. ಈ ಮಠಕ್ಕೆ ಅನೇಕ ತಲೆಮಾರುಗಳಿಂದ ನಡೆದುಕೊಂಡು ಬಂದಿರುವ ಶಿಷ್ಯ ಪರಂಪರೆಯಲ್ಲಿ ತಡಿಮಾಲಂಗಿಯ ನಮ್ಮ ಮನೆತನವೂ ಒಂದು ; ನಮ್ಮ ತಾತನ ತಾತನವರ ಕಾಲದಿಂದಲೂ ಬೆಳೆದು ಬಂದಿರುವ ನಿಕಟವಾದ ಸಂಬಂಧ. ನಮ್ಮ ತಾತನವರಾದ ಮರಿದೇವರು 'ಶ್ರೀ ಓಂ ನಾಮ'ವನ್ನು ಕಲಿತದ್ದು, ನಮ್ಮ ಗ್ರಾಮದಿಂದ ಸುಮಾರು ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿರುವ ವಾಟಾಳಮಠದ ಶ್ರೀಗಳವರ ಮುಖೇನವೇ ಎಂದು ಹೇಳುತ್ತಿದ್ದರು. ವಾಟಾಳುಮಠಕ್ಕೂ, ಸುತ್ತೂರು ಮಠಕ್ಕೂ ಬಹಳ ಕಾಲದಿಂದಲೂ ನಿಕಟ ಸಂಬಂಧ. ಸುತ್ತೂರು ಶಿವರಾತ್ರೀಶ್ವರ ಮಠದ ಯಾವ ಒಂದು ವಿಶೇಷ ಸಮಾರಂಭದಲ್ಲಿ ವಾಟಾಳುಮಠದ ಶ್ರೀಗಳವರು ಮತ್ತು ಅವರ ಶಿಷ್ಯ ಪರಿವಾರದವರು ಇದ್ದೇ ಇರುವ ಸಂಪ್ರದಾಯ. ಸುತ್ತೂರು ಮಠದಲ್ಲಿ ನಡೆಯುವ ಪಟ್ಟಾಧಿ ಕಾರ ಮಹೋತ್ಸವಕ್ಕೆ ನನ್ನ ಅಜ್ಜಿಯವರು (ತಾತನ ತಾಯಿ) ಮತ್ತು ನಮ್ಮ ತಾತನವರೂ ನನ್ನನ್ನು ಕರೆದು ಕೊಂಡು ವಾಟಾಳಿಗೆ ಹೋಗಿ ಅಲ್ಲಿಯ ಪರಿವಾರದವರನ್ನು ಕೂಡಿಕೊಂಡು ಸುತ್ತೂರಿಗೆ ಹೋಗುವುದೆಂದು ನಿಶ್ಚಯಿ ಸಲಾಗಿತ್ತು. ಆಗ ಒಂದು ಊರಿನಿಂದ ಒಂದು ಊರಿಗೆ ಹೋಗಬೇಕಾದರೆ ಎತ್ತಿನ ಗಾಡಿಯಲ್ಲಿಯೇ ಪ್ರಯಾಣ.

ನಮ್ಮೆಲ್ಲರ ಪ್ರಯಾಣವೂ ಎರಡು ಮೂರು ಕಮಾನಿನ ಗಾಡಿಯಲ್ಲಿಯೇ ಸಾಗಿತು. ಸುತ್ತೂರನ್ನು ಸೇರುವಾಗ ಕತ್ತಲಾಗಿತ್ತು. ಮಠದ ಮುಂದುಗಡೆ ಸಮಾರಂಭಕ್ಕೆ ಹಾಕಿದ್ದ ಭವ್ಯವಾದ ಹಸಿರುವಾಣಿ ಚಪ್ಪರ, ಅದಕ್ಕೆ ಬೆಳಕಿಗಾಗಿ ಕಟ್ಟಿರುವ ಗ್ಯಾಸ್ ಲೈಟ್‌ಗಳು ಮತ್ತು ಕಂದೀಲುಗಳು, ಬಾಲಕನಾದ ನನ್ನನ್ನು ದಿಗ್ಭ್ರಮೆಗೊಳಿಸಿದುದೇನಾಶ್ಚರ್ಯವಲ್ಲ. ಪಟ್ಟಾಧಿಕಾರ ಮಹೋತ್ಸವದ ದಿವಸ ಬೆಳಿಗ್ಗೆ ನಡೆದ ಮಹಾಸಭೆಯಲ್ಲಿ ಕಾವಿಧಾರಿಗಳಾದ ನೂರಾರು ಜಂಗಮ ಸಮೂಹದಲ್ಲಿ ಹಿರಿಯ ಗುರುಗಳಾದ ಮಂತ್ರಮಹರ್ಷಿ ಶಿವರಾತ್ರೀಶ್ವರ ಸ್ವಾಮಿಗಳವರ ಪಕ್ಕದಲ್ಲಿಯೇ ಪೀಠಸ್ಥರಾದ ಕೇವಲ ಹನ್ನೆರಡು ವರ್ಷದ ನೂತನ ಅತಿಮುದ್ದಾದ ವಟು ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ನೆರೆದಿದ್ದ ಸಾವಿರಾರು ಭಕ್ತವೃಂದವನ್ನು ಆಕರ್ಷಿಸುವ ಕೇಂದ್ರ ಬಿಂದುವಾಗಿದ್ದರು. ಈ ಮಹೋತ್ಸವ ಮುಗಿದ ಮೇಲೆ. ಚಿಕ್ಕ ಸ್ವಾಮಿಗಳವರನ್ನು ಬೇರೆ ಸ್ನೇಹಿತರೊಡಗೂಡಿ ಮಾತನಾಡಿಸುವ ಸೌಭಾಗ್ಯ ದೊರೆಯಿತು.

ಎರಡನೇ ಬಾರಿಗೆ ಸ್ವಾಮಿಗಳವರ ಸಂದರ್ಶನ ದೊರೆತದ್ದು ಆರು ವರ್ಷಗಳ ನಂತರ. ಆಗ್ಗೆ ಹೈಸ್ಕೂಲುಗಳು ತಾಲ್ಲೋಕುಪಟ್ಟಣಗಳಲ್ಲಿದ್ದುದು ಅತಿ ವಿರಳ. ಇದ್ದ ಕೆಲವು ತಾಲ್ಲೋಕು ಹೈಸ್ಕೂಲಿನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ., ಪರೀಕ್ಷೆಗಾಗಿ ಜಿಲ್ಲಾ ಕೇಂದ್ರಗಳಿಗೆ ಬರಬೇಕಾಗಿತ್ತು.ನಾನು ಮಳವಳ್ಳಿ ಹೈಸ್ಕೂಲಿನಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಗಾಗಿ ಮೈಸೂರುಕೇಂದ್ರಕ್ಕೇ ಬರಬೇಕಾದ್ದರಿಂದ ಮೈಸೂರಿನಲ್ಲಿ ವಸತಿಗಾಗಿ ಏನು ಮಾಡುವುದೆಂಬುದು ಒಂದು ಸಮಸ್ಯೆ ಆಯಿತು. ಮೈಸೂರಿನಲ್ಲಿ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತಪಾಠಶಾಲೆಯಲ್ಲಿ ವ್ಯಾಸಂಗಮಾಡುತ್ತಿರುವ ಚಿಕ್ಕಸ್ವಾಮಿಗಳು (ಶಿವರಾತ್ರಿರಾಜೇಂದ್ರಸ್ವಾಮಿಗಳು) ವಸತಿ ಸೌಕರ್ಯವನ್ನು ಮಾಡಿಕೊಡುತ್ತಾರೆಂಬ ವಿಚಾರವನ್ನು ಹಿರಿಯ ವಿದ್ಯಾರ್ಥಿಗಳೊಬ್ಬರು ನಮ್ಮ ತಂದೆಯವರಿಗೆ ತಿಳಿಸಿದ್ದರು. ನಮ್ಮ ಗ್ರಾಮವಾದ ಮಾಲಂಗಿಯಿಂದ ಗಾಡಿಯಲ್ಲಿ ಬೆಳಗ್ಗೆ ಸೂರ್ಯೋದಯಕ್ಕೆ ಮುಂಚೆಯೇ ಹೊರಟು ಟಿ. ನರಸೀಪುರವನ್ನು ತಲುಪಿ ಕಬಿನಿ ನದಿಯನ್ನು ದೋಣಿಯಲ್ಲಿ ದಾಟಿ ತಿರುಮಕೂಡಲಿನಿಂದ ಬಸ್ಸನ್ನು ಹತ್ತಿ ಮೈಸೂರಿನ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಪಾಠಶಾಲೆಗೆ ಸೇರುವ ಹೊತ್ತಿಗೆ ಸಾಯಂಕಾಲವೇ ಆಯಿತು. ಸ್ವಾಮಿಗಳವರನ್ನು ಭೇಟಿ ಮಾಡಿದ ಕೂಡಲೇ ಪಾಠಶಾಲೆಯ ಒಂದು ಕೋಣೆಯಲ್ಲಿ, ಬೇರೆ ಕಡೆಯಿಂದ ಬಂದಿದ್ದ ಪರೀಕ್ಷಾರ್ಥಿಗಳ ಜೊತೆಯಲ್ಲಿ ಇರಲು ಅನುಕೂಲ ಮಾಡಿಕೊಟ್ಟರು. ಅಲ್ಲದೆ ದಿನಂಪ್ರತಿ ನಮ್ಮೆಲ್ಲರ ಯೋಗಕ್ಷೇಮ ಮತ್ತು ಪರೀಕ್ಷೆಯಲ್ಲಿ ಯಾವ ರೀತಿ ಮಾಡಿದ್ದೇವೆ ಎಂದೆಲ್ಲಾ ವಿಚಾರಿಸಿ ಉತ್ತೇಜನ ಕೊಡುತ್ತಿದ್ದರು. ಚಿಕ್ಕವಯಸ್ಸಿನಲ್ಲಿಯೇ ವಿದ್ಯಾರ್ಥಿಗಳ ಬಗ್ಗೆ ಅವರ ಕಳಕಳಿ, ಸಹಾಯ ನೀಡಲು ಕಾತುರತೆ ಎದ್ದುಕಾಣುತ್ತಿತ್ತು.

ಎಸ್.ಎಸ್.ಎಲ್.ಸಿ., ಪರೀಕ್ಷೆಯಾದಮೇಲೆ ಇಂಟರ್‌ಮೀಡಿಯೇಟ್ ವ್ಯಾಸಂಗ ಮಾಡಲು ನನಗೆ ಮೈಸೂರು ಚಿಕ್ಕಬಸಮ್ಮಯ್ಯನವರ ಉಚಿತ ವಿದ್ಯಾರ್ಥಿನಿಲಯದಲ್ಲಿ ಆಸರೆ ಸಿಕ್ಕಿತು. ಈ ವ್ಯಾಸಂಗದ ಅವಧಿಯಲ್ಲಿ ಶಿವರಾತ್ರಿರಾಜೇಂದ್ರಸ್ವಾಮಿಗಳವರನ್ನು ಅವರ ಸಹಪಾಠಿಗಳಾದ ಶಿವಪ್ರಭು(ಕ್ಯಾತನಹಳ್ಳಿ)ಸ್ವಾಮಿಗಳವರನ್ನು ಸಾಮಾನ್ಯವಾಗಿ ಪ್ರತಿದಿನ ಭೇಟಿ ಮಾಡುವ ಪರಿಪಾಠ ಬೆಳೆಯಿತು. ನಾವು ಸೇರಿದಾಗ ಸ್ವಾಮಿಗಳವರು ಹಳ್ಳಿಗಾಡಿನಲ್ಲಿ ಬೇರೂರಿರುವ ಅಜ್ಞಾನ, ವಿದ್ಯಾಭ್ಯಾಸದ ಮೇಲಿರುವ ಅಸಡ್ಡೆ, ವಿದ್ಯಾಭ್ಯಾಸದ ಕಳಕಳಿ ಇರುವ ಕೆಲವರಿಗಾದರೂ ಪಟ್ಟಣಗಳಿಗೆ ತಮ್ಮ ಮಕ್ಕಳನ್ನು ವ್ಯಾಸಂಗಕ್ಕೆ ಕಳುಹಿಸಲಿರುವ ಅಡ್ಡಿ ಆತಂಕಗಳು, ಇವುಗಳ ನಿವಾರಣೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮ, ಇವುಗಳೆಲ್ಲದರ ಬಗ್ಗೆ ಆಗಾಗ್ಗೆ ಚರ್ಚಿಸುತ್ತಿದ್ದರು. ಇದರಿಂದಾಗಿ ಮುಂದೆ ಶ್ರೀಗಳವರು ಕೈಗೊಳ್ಳಲಿರುವ ಅನೇಕ ಕಾರ್ಯಕ್ರಮಗಳು ಅವರ ಎಳೆಯ ಮನಸ್ಸಿನಲ್ಲಿಯೇ ರೂಪುಗೊಂಡಿದ್ದುವೆಂಬುದು ವ್ಯಕ್ತವಾಗುತ್ತದೆ.

ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದಮೇಲೆ ಸ್ವಾಮಿಗಳವರ ಅಭೀಷ್ಟದಂತೆ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಕೈಗೊಂಡೆ. ಇಷ್ಟರಲ್ಲಿ ದೊಡ್ಡ ಶ್ರೀ ಶಿವಯೋಗಿ ಶಿವರಾತ್ರಿಸ್ವಾಮಿಗಳವರು ಚಿಕ್ಕ ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳವರನ್ನು ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಿಂದ ಬೇರ್ಪಡಿಸಿ ಬೇರೆ ಮನೆಯನ್ನು ಮಾಡಿ ಸಂಸ್ಕೃತ ವಿದ್ವತ್‌ಪರೀಕ್ಷೆಗೆ ಅಭ್ಯಾಸವನ್ನು ಮುಂದುವರಿಸಲು ಅನುವುಮಾಡಿಕೊಟ್ಟರು. ಇವರ ಹೊಸ ತಾಣ ಮನೆಯಾಗಲಿಲ್ಲ ಮಠವೇ ಆಯಿತು: ಗ್ರಾಮಾಂತರದಿಂದ ವಿದ್ಯಾಭ್ಯಾಸಕ್ಕಾಗಿ ಬಂದ ವಿದ್ಯಾರ್ಥಿಗಳೂ ಇತರ ಮಠಗಳ ಸ್ವಾಮಿಗಳವರೂ ಇವರ ಜೊತೆಯಲ್ಲಿಯೇ ಇರುತ್ತಿದ್ದರು. ಕರ್ನಾಟಕದ ಬೇರೆ ಬೇರೆ ಕಡೆಯಿಂದ ಮೈಸೂರಿಗೆ ಆಗಮಿಸುತ್ತಿದ್ದ ಹರಗುರು ಚರಮೂರ್ತಿಗಳಿಗೂ ಸಾಹಿತಿಗಳಿಗೂ ಕವಿಗಳಿಗೂ ವಿದ್ವಾಂಸರಿಗೂ ಈ ಮಠ ಆಶ್ರಯಧಾಮವಾಯಿತು. ಕಾಲೇಜಿನಲ್ಲಿ ರಜೆಯು ದೊರೆತಾಗಲೆಲ್ಲಾ ನಾನು ನಮ್ಮ ಗ್ರಾಮಕ್ಕೆ ಹೋಗುವ ಬದಲು ಈ ಮಠದಲ್ಲಿಯೇ ಎಲ್ಲರ ಜೊತೆಯಲ್ಲಿರು

ತ್ತಿದ್ದೆ. ೧೯೩೯ನೇ ಇಸವಿಯಲ್ಲಿ ನಾನು ಮೂರನೇ ಬಿ.ಇ., ತರಗತಿಗೆ ಕಾಲಿರಿಸುತ್ತಿದ್ದಾಗ ನಮ್ಮ ತಾಯಿಯನ್ನು ಕಳೆದುಕೊಂಡಮೇಲಂತೂ ಮೈಸೂರು ಮಠವೇ ನನಗೂ ಮತ್ತು ನನ್ನ ಸಹೋದರರಿಗೂ ತೌರುಮನೆಯಾಯಿತು. ಸ್ವಾಮಿಗಳ ಸಾನ್ನಿಧ್ಯವೇ ನನಗೆ ಮಾತೃಸಾನ್ನಿಧ್ಯವಾಯಿತು. ನಾನು ಬೆಂಗಳೂರಿನಲ್ಲಿದ್ದಾಗ, ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳವರು ತಮ್ಮ ವ್ಯಾಸಂಗದ, ಮಠದ ಮತ್ತು ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಪಾಠಶಾಲೆಯ ವಿಚಾರಗಳಿಗೆ ಬೆಂಗಳೂರಿಗೆ ದಯಮಾಡಿಸಿ ಒಂದೆರಡು ದಿನ ಉಳಿದುಕೊಳ್ಳಬೇಕಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಬೆಳಿಗ್ಗೆ ಪೂಜೆಯನ್ನು ಯಾವುದಾದರೂ ಮಠದಲ್ಲಿ ಪೂರೈಸಿ ಯಾರಿಗೂ ತೊಂದರೆಯಾಗಬಾರದೆಂಬ ಉದ್ದೇಶದಿಂದ ಒಂದೆರಡು ದಿವಸ ಉಪವಾಸವಿದ್ದ ಸಂದರ್ಭಗಳೂ ಉಂಟು. ಉಪವಾಸವಿರುವ ವಿಚಾರವನ್ನು ನಿಕಟವರ್ತಿಯಾದ ನನಗೂ ತಿಳಿಸುತ್ತಿರಲಿಲ್ಲ. ಈಗಾಗಲೇ ಕಷ್ಟಸಹಿಷ್ಣುತೆಯು, ಪರರ ಶ್ರೇಯಸ್ಸಿಗಾಗಿ ತಮ್ಮನ್ನೇ ತಾವು ಸವೆಸುವ ಶ್ರೀಗಂಧವಾಗತೊಡಗಿದ್ದರು ಶ್ರೀಗಳವರು.

೧೯೪೧ನೇ ಇಸವಿಯಲ್ಲಿ ಕೊನೆಯ ವರ್ಷ ಬಿ.ಇ., ಪರೀಕ್ಷೆಯನ್ನು ಮುಗಿಸಿಕೊಂಡು ಬೇಸಿಗೆಯ ರಜದಲ್ಲಿ ಸ್ವಾಮಿಗಳವರ ಮಠದಲ್ಲಿ ಬೇರೆಯ ವಿದ್ಯಾರ್ಥಿಗಳ ಮತ್ತು ಸ್ವಾಮಿಗಳವರ ಜೊತೆಯಲ್ಲಿರುತ್ತಿದ್ದೆ. ಪರೀಕ್ಷೆಯ ಫಲಿತಾಂಶವು ಏಪ್ರಿಲ್ ತಿಂಗಳ ಕೊನೆವಾರದಲ್ಲಿ ಆಗತಾನೇ ಬಂದಿತ್ತು. ನಾನು ಯಾವ ಕೆಲಸಕ್ಕೂ ಅರ್ಜಿಯನ್ನು ಸಲ್ಲಿಸಿರಲಿಲ್ಲ. ಸ್ವಾಮಿಗಳವರು ಮೇ ತಿಂಗಳ ಮೂರನೇ ತಾರೀಖು ನಿನಗೆ ಕೆಲಸದ ಆರ್ಡರ್ ನಾಳೆ ಬರುತ್ತದೆ, ಕೆಲಸಕ್ಕೆ ಹೋಗುವುದಕ್ಕೆ ತಯಾರಾಗಿರು ಎಂದು ಅಪ್ಪಣೆಕೊಡಿಸಿದರು. ಫಲಿತಾಂಶ ಬಂದು ಕೇವಲ ಒಂದು ವಾರ ವಾಗಿದೆ, ಕೆಲಸಕ್ಕಾಗಿ ಯಾವ ಅರ್ಜಿಯನ್ನೂ ಸಲ್ಲಿಸಿಲ್ಲ, ನಾಳೆ ಕೆಲಸದ ಆರ್ಡರ್ ಬರುತ್ತದೆಂದು ತಮಾಷೆ ಮಾಡು ತ್ತಿದ್ದೀರಾ? ಎಂದು ಹೇಳಿ ಸುಮ್ಮನಾದೆ. ಸ್ವಾಮಿಗಳವರು ಹೇಳಿದಂತೆ ಆರ್ಡರ್ (ಕೆಲಸದ ಆಜ್ಞೆ) ಮೇ ನಾಲ್ಕನೇ ತಾರೀಖು ಟಪಾಲಿನಲ್ಲಿ ಬಂದಿತು. ಇದನ್ನು ನೋಡಿ ನನಗೆ ಅತ್ಯಾಶ್ಚರ್ಯವಾಯಿತು. ಈ ವಿಚಾರವನ್ನು ನನ್ನ ಕೆಲವು ಸ್ನೇಹಿತರಿಗೂ ತಿಳಿಸಿದೆ. ಈ ಭವಿಷ್ಯ ಸ್ವಾಮೀಜೀಯವರಿಗೆ ಹೇಗೆ ಗೊತ್ತಾಯಿತೋ ತಿಳಿಯದು. ಈ ವಿಚಾರದಲ್ಲಿ ವಿಶ್ಲೇಷಣೆ ಅನಗತ್ಯ, ವಾಸ್ತವಾಂಶವನ್ನು ಮಾತ್ರ ನಿವೇದಿಸಲಾಗಿದೆ. ನಾನು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸದಲ್ಲಿದ್ದುದು ವಿಪರೀತ ಮಲೇರಿಯಾ ಪ್ರದೇಶ. ೧೯೪೨ನೇ ಇಸವಿಯಲ್ಲಿ ಜನವರಿ ತಿಂಗಳು ಈ ಮಲೇರಿಯಾ ಜ್ವರಪೀಡಿತನಾಗಿ ಬಂದು ಮಠದಲ್ಲಿ ಇರತೊಡಗಿದೆ. ಒಂದು ರಾತ್ರಿ ಸುಮಾರು ಎರಡು ಗಂಟೆ ಇರಬಹುದು. ಮಲೇರಿಯಾ ಜ್ವರದಿಂದ ಪರಿತಪಿಸುತ್ತಾ ಕಣ್ಣು ಮುಚ್ಚಿದ್ದೆ. ಹಣೆಯ ಮೇಲೆ ಶೀತಲವಾದ ಹಸ್ತಸ್ಪರ್ಶವಾದಂತಾ ಯಿತು. ಕಣ್ಣುತೆರೆದು ನೋಡಿದರೆ ಸ್ವಾಮಿಗಳವರು ನನ್ನ ಹಾಸಿಗೆ ಬಳಿ ತಲೆಯ ಕಡೆ ಕುಳಿತು ಉಪಚರಿಸುತ್ತಿದ್ದು ದನ್ನು ಕಂಡು ರೋಮಾಂಚನವಾಯಿತು. ಸ್ವಾಮಿಗಳವರ ಮಾತೃವಾತ್ಸಲ್ಯ ಮತ್ತು ಉಪಚಾರಗಳು ನನಗಾದಂತೆ ಎಷ್ಟೋ ರೋಗಗ್ರಸ್ತರಾದವರಿಗೆ ಲಭ್ಯವಾಗಿವೆ.

ಹಳ್ಳಿಗಾಡಿನ ಜನತೆಗೆ ಪಟ್ಟಣಗಳಲ್ಲಿ ಬಂದು ವಿದ್ಯಾಭ್ಯಾಸಮಾಡಲು ಇರುವ ತೊಂದರೆ ತೊಡಕುಗಳು ಸ್ವಾಮಿ ಗಳವರಿಗೆ ಈಗಾಗಲೇ ಮನದಟ್ಟಾಗಿತ್ತು. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಗ್ರಾಮಾಂತರ ಪ್ರದೇಶದ ಪದವೀಧರರು ಬೆರಳ ಮೇಲೆ ಎಣಿಕೆಮಾಡುವಷ್ಟು ಮಾತ್ರ ಇದ್ದರು. ಆಕಾಂಕ್ಷೆಯುಳ್ಳ ವಿದ್ಯಾರ್ಥಿಗಳಿಗಾದರೂ ಪಟ್ಟಣದಲ್ಲಿ ವ್ಯಾಸಂಗ ವನ್ನು ಮುಂದುವರಿಸಲು ಅಶನ, ವಸತಿ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟ ಹೊರತು ವಿದ್ಯಾಪ್ರಸಾರವಾಗ ಲಾರದು, ಮುಸುಕಿದ ಮೌಢ್ಯ ತೊಲಗದು ಎಂದು ಮನಗಂಡ ಸ್ವಾಮಿಗಳವರು ಬಾಡಿಗೆ ಮನೆಯನ್ನು ತೆಗೆದು ಕೊಂಡು ಗ್ರಾಮಾಂತರ ಪ್ರದೇಶದಿಂದ ಬಂದಿರುವ ೧೫ ವಿದ್ಯಾರ್ಥಿಗಳಿಗಾಗಿ ೧೯೪೨ನೇ ಇಸವಿಯಲ್ಲಿ ಒಂದು ಉಚಿತ ವಿದ್ಯಾರ್ಥಿನಿಲಯವನ್ನು ಮೈಸೂರಿನಲ್ಲಿ ಪ್ರಾರಂಭಿಸಿದರು. ಇದೇ ಶಿವರಾತ್ರೀಶ್ವರ ಪ್ರಸಾದನಿಲಯಗಳ ಸ್ಥಾಪನೆಗೆ ನಾಂದಿಯಾಯಿತು. ಪ್ರಸಾದನಿಲಯ ಪ್ರಾರಂಭಿಸಿದ ವಿಚಾರವನ್ನು ಹಿರಿಯ ಸ್ವಾಮಿಗಳವರಿಗೆ ವಿದ್ಯಾರ್ಥಿಗಳಿಂದಲೇ ಮನವಿಮಾಡಿಸಿದರು. ಈ ಉಚಿತ ಪ್ರಸಾದ ನಿಲಯವು ಸುಮಾರು ೪ ವರ್ಷ ಬಾಡಿಗೆ ಕಟ್ಟಡದಲ್ಲೇ ನಡೆಯಿತು. ವಿದ್ಯಾಪ್ರಸಾರ ವಿಚಾರದಲ್ಲಿ ಶ್ರೀ ಗುರುಗಳವರಿಗೆ (ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳವರಿಗೆ) ಇರುವ ತೀವ್ರ ಆಸಕ್ತಿ ಯನ್ನು ಮನಗಂಡ ಹಿರಿಯ ಗುರುಗಳವರು (ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರು) ೧೯೪೬ನೇ ಇಸವಿಯಲ್ಲಿ ಮೈಸೂರಿನ ವಾಣೀವಿಲಾಸ ರಸ್ತೆಯಲ್ಲಿ ಒಂದು ಭವ್ಯ ಭವನವನ್ನು ಕೊಂಡುಕೊಂಡುದಲ್ಲದೇ ಈ ಪ್ರಸಾದ ನಿಲಯ ವನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಹೋಗಲು ಶ್ರೀಮಠಕ್ಕೆ ಸೇರಿದ ಇನಾಂ ಗ್ರಾಮವನ್ನು ದಾನವಾಗಿಕೊಟ್ಟು ದಲ್ಲದೆ, ಧನವನ್ನೂ ಪ್ರದುವಟ್ಟಾಗಿ ಇರಿಸಿದರು. ಈ ವಿದ್ಯಾರ್ಥಿನಿಲಯವು ಮುಂದೆ ಜೀವನದ ಎಲ್ಲಾ ಕ್ಷೇತ್ರ

ಗಳಲ್ಲಿಯೂ ಸೇವೆ ಸಲ್ಲಿಸುವ ವಿದ್ಯಾರ್ಥಿಯೋಧರುಗಳನ್ನು ತಯಾರು ಮಾಡುವ ಯೋಗಶಾಲೆಯಾಯಿತು. ಹೀಗೆ ವಿದ್ಯಾಪ್ರಸಾರದ ಮಹತ್ವಾಕಾಂಕ್ಷೆಯಿಂದಾಗಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ಸ್ಥಾಪಿಸಲ್ಪಟ್ಟು ಮೈಸೂರು ಜಿಲ್ಲೆಯ ನಾನಾಭಾಗಗಳಲ್ಲಿ ಹೈಸ್ಕೂಲುಗಳು, ಕಾಲೇಜುಗಳು, ಪ್ರಸಾದನಿಲಯಗಳು ಸ್ಥಾಪಿಸಲ್ಪಟ್ಟವು. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಆಹಾರದ ಕೊರತೆ ಹೆಚ್ಚಾಗಿ ಪಡಿತರ ಪದ್ಧತಿ ಹಳ್ಳಿಗಾಡಿಗೂ ಹರಡಿತು. ಇಂತಹ ದಾರುಣ ಪರಿಸ್ಥಿತಿಯಲ್ಲಿ ಒಂದು ಸಣ್ಣ ಕುಟುಂಬಕ್ಕೆ ಆಹಾರ ಸಾಮಗ್ರಿಗಳನ್ನು ಒದಗಿಸುವುದೇ ಅತಿ ಕಷ್ಟವಾಗಿರುವಾಗ ಸುಮಾರು ೩೦೦೦ ವಿದ್ಯಾರ್ಥಿಗಳಿಗೆ ಆಹಾರಧಾನ್ಯಗಳನ್ನು ಒದಗಿಸುವುದು ಎಂತಹಾ ಕಠಿಣ ಪರಿಸ್ಥಿತಿ ಎಂಬುದನ್ನು ವರ್ಣಿಸುವುದಕ್ಕಿಂತಲೂ ಚೆನ್ನಾಗಿ ಊಹಿಸಬಹುದು. ಶ್ರೀಗಳವರ ಶ್ರಮವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡುವ ಉದ್ದೇಶದಿಂದ ಪಡಿತರ ಪದ್ಧತಿ ಹೋಗುವವರೆಗಾದರೂ ಉಚಿತ ವಿದ್ಯಾರ್ಥಿನಿಲಯಗಳಿಗೆ ಪ್ರವೇಶವನ್ನು ಉತ್ತಮದರ್ಜೆಯ (Merited) ವಿದ್ಯಾರ್ಥಿಗಳಿಗೆ ಸೀಮಿತ ಮಾಡುವುದೊಳ್ಳೆಯದೆಂದು ಸಲಹೆ ಮಾಡಿದೆ. ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ವಿದ್ಯಾಪ್ರಸಾರವಾಗದೆ ಇರುವುದರಿಂದ ಪ್ರಸಾರಕಾರ್ಯ ಇನ್ನೂ ವಿಸ್ತಾರ (Extensive) ಆಗಬೇಕಲ್ಲದೆ, ಸೀಮಿತ ಮಾಡಬೇಕೆಂಬ ಸಲಹೆಯನ್ನು ಒಪ್ಪಲಿಲ್ಲ. ಇಂತಹ ಅತಿದಾರುಣ ಪರಿಸ್ಥಿತಿಯಲ್ಲಿಯೂ ಸ್ವಾಮಿಗಳವರು ತಮ್ಮ ದೇಹಶ್ರಮವನ್ನು ಲೆಕ್ಕಿಸದೆ ೨-೩ ದಿವಸದ ಉಪವಾಸವನ್ನೂ ಸಹಿಸಿಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಭಿಕ್ಷೆಯನ್ನು ಮಾಡಿ ವಿದ್ಯಾರ್ಥಿನಿಲಯಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುತ್ತಿದ್ದುದೇ ಒಂದು ಪವಾಡ.

ಇಷ್ಟರಲ್ಲಾಗಲೇ ಶ್ರೀ ಗುರುಗಳವರ ಒತ್ತಾಯಪೂರ್ವಕ ಬಿನ್ನಹದಮೇಲೆ ಕಾಶಿಯಿಂದ ಮೈಸೂರಿಗೆ ದಯಮಾಡಿಸಿದ ಪರಮಪೂಜ್ಯ ಶ್ರೀ॥ ನಿ॥ ಪ್ರ॥ಸ್ವ॥ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ಕಾರ್ಯನಿರ್ವಹಣೆ, ಯೋಗಕ್ಷೇಮ ಮತ್ತು ಅನುಷ್ಠಾನಗಳಲ್ಲಿ ಭಾಗಿಯಾಗುವ ಸುಯೋಗವು ಶ್ರೀ ಗುರುಗಳವರಿಗೆ ದೊರಕಿತು. ಅತಿದಾರುಣವಾದ ಪರಿಸ್ಥಿತಿಯಲ್ಲಿಯೂ ಸಾವಿರಾರು ವಿದ್ಯಾರ್ಥಿಗಳಿಗೆ ಧನಧಾನ್ಯಗಳನ್ನು ಒದಗಿಸಲು, ದೇಹಾಲಸ್ಯವನ್ನೂ ನಿರ್ಲಕ್ಷಿಸಿರುವ ಶ್ರೀಗಳವರ ಅವಿಶ್ರಾಂತ ದುಡಿಮೆ ಶ್ರೀಗೌರೀಶಂಕರ ಮಹಾಸ್ವಾಮಿಗಳಂತಹ ಮಹಾತಪಸ್ವಿಗಳನ್ನೂ ಅಚ್ಚರಿಗೊಳಿಸದೇ ಇರಲಿಲ್ಲ. ಅವರ ಒಂದು ಭಾಷಣದಲ್ಲಿ ಸತ್ಯಶುದ್ಧ ಕಾಯಕದ ವಿಚಾರವಾಗಿ ಮಾತನಾಡುತ್ತ, ಶ್ರೀಗಳವರ ಕಾಯಕವನ್ನೇ ಉದಾಹರಿಸಿ ಶ್ರೀಗಳವರು ಪ್ರತಿನಿತ್ಯವೂ ಉಚಿತ ವಿದ್ಯಾರ್ಥಿನಿಲಯಗಳಿಗೆ ಎಷ್ಟು ಚೀಲ ಅಕ್ಕಿಯನ್ನು ಒದಗಿಸುತ್ತಾರೋ ಅಷ್ಟು ಹಿಡಿಮಣ್ಣನ್ನು ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ತೆಗೆದುಕೊಂಡು ಹೋಗಿ ಹಾಕುವ ಕಾಯಕವನ್ನು ಕೈಗೊಂಡರೆ ಅದೆಷ್ಟು ಶ್ರಮಸಾಧ್ಯವೆಂಬುದು ಮನದಟ್ಟಾಗುತ್ತದೆ ಎಂದು ಅಪ್ಪಣೆ ಕೊಡಿಸಿದರು. ಶ್ರೀ ಗೌರೀಶಂಕರ ಸ್ವಾಮಿಗಳ ಸಾನ್ನಿಧ್ಯ ದೊರಕಿದಷ್ಟು ದಿವಸವೂ ಶ್ರೀಗಳವರು ಬಹಳ ಉಲ್ಲಾಸಭರಿತರಾಗುತ್ತಿದ್ದರು. ಶ್ರೀ ಗೌರೀಶಂಕರ ಸ್ವಾಮಿಗಳವರು ಶಿವೈಕ್ಯರಾದಮೇಲೆ ಅವರ ಅಗಲಿಕೆಯು ಯೋಗಿಗಳಾದ ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳವರನ್ನು ಶೋಕತಪ್ತರನ್ನಾಗಿ ಮಾಡದೆ ಬಿಡಲಿಲ್ಲ. ಇಷ್ಟರಲ್ಲಾಗಲೆ ದೇಶದ ನಾನಾಭಾಗಗಳಲ್ಲಿ ಸ್ಥಾಪಿತವಾದ ಪ್ರಸಾದನಿಲಯಗಳ ಜೊತೆಯಲ್ಲಿಯೇ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ವತಿಯಿಂದ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜುಗಳು ಸ್ಥಾಪಿಸಲ್ಪಟ್ಟವು. ೧೯೬೨ನೇ ಇಸವಿಯಲ್ಲಿ ತಾಂತ್ರಿಕ ಶಿಕ್ಷಣಕ್ಕೆ ದೇಶದಾದ್ಯಂತ ನೂಕುನುಗ್ಗಲು ಹೆಚ್ಚಾಯಿತು. ಇದನ್ನು ಮನಗಂಡ ಸ್ವಾಮೀಜಿಯವರು ೧೯೬೩ನೇ ಇಸವಿಯಲ್ಲಿ ವಿದ್ಯಾರ್ಥಿಗಳ ಬವಣೆಯನ್ನು ಸ್ವಲ್ಪಮಟ್ಟಿಗಾದರೂ ತಪ್ಪಿಸುವುದಕ್ಕಾಗಿ ಒಂದು ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು. ಈ ತಾಂತ್ರಿಕ ಕಾಲೇಜಿನ ಸ್ಥಾಪನೆಯ ವಿಚಾರವಾಗಿ ಬೇರೆ ಒಂದು ಲೇಖನವೇ ಅಗತ್ಯ. ಈ ತಾಂತ್ರಿಕ ಕಾಲೇಜು ಈಗಾಗಲೇ ೧೮ ವರ್ಷ ತುಂಬಿ ಕರ್ನಾಟಕ ಪ್ರಾಂತದ ಇಂಜಿನಿಯರಿಂಗ್ ಕಾಲೇಜುಗಳ ಶ್ರೇಣಿಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ.

ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ಸ್ಥಾಪಿಸಿದ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಶಾಲೆಗಳು ಮತ್ತು ಉಚಿತ ವಿದ್ಯಾರ್ಥಿನಿಲಯಗಳ ಆಶ್ರಯದಲ್ಲಿ ವಿದ್ಯಾರ್ಜನೆ ಮಾಡಿದ ಅನೇಕ ಮಹನೀಯರು ದೇಶದ ಎಲ್ಲೆಡೆ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿರುವುದಲ್ಲದೆ ಪ್ರಪಂಚದ ಇತರ ಕಡೆಗಳಲ್ಲೂ ಸೇವೆಯನ್ನು ಸಲ್ಲಿಸುತ್ತಾ ಪ್ರತಿಭಾನ್ವಿತರಾಗಿದ್ದಾರೆ. ಶ್ರೀಗಳವರು ಈ ನಾಲ್ಕು ದಶಕಗಳಲ್ಲಿ ಮಾಡಿರುವ ಸರ್ವತೋಮುಖವಾದ ಸಮಾಜಸೇವೆ ಅಸದೃಶವಾದುದು. ಇವರ ಆಶ್ರಯವಿಲ್ಲದಿದ್ದರೆ ಎಷ್ಟೋ ಜನ ಪ್ರತಿಭಾವಂತರು ಮುಂದೆ ಬರಲು ಅವಕಾಶವಾಗುತ್ತಿರಲಿಲ್ಲವೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಸಕಲ ಜೀವಾವಳಿಗೆ ಲೇಸನ್ನೇ ಬಯಸುವುದಲ್ಲದೆ ಅವರ ಸಾರ್ಥಕತೆಗೆ

ತಮ್ಮ ಜೀವಿತವನ್ನೇ ಶ್ರೀಗಂಧದಂತೆ ಸವೆಸಿ ತಮ್ಮ ದಯೆ, ಪ್ರೀತಿ, ಅನುಕಂಪೆ ಮತ್ತು ಕರುಣೆಯಿಂದ ಜನಮನದ ಮನಸ್ಸನ್ನು ಸೂರೆಗೊಂಡಿರುವ ಶ್ರೀಗಳವರ ಜೀವನವೇ ಒಂದು ಪವಾಡವೆಂದರೆ ತಪ್ಪಾಗಲಾರದು. ಇಂತಹ ಮಹನೀಯರ ಸಾಮೀಪ್ಯ, ಸಾನ್ನಿಧ್ಯ ಮತ್ತು ಸಹವಾಸ ದೊರಕೊಳ್ಳುವುದು ಯಾವುದೋ ಜನ್ಮದ ಸುಕೃತವಲ್ಲದೆ ಮತ್ತೇನು ?

ಗುರುದೇವಾ
ಕಾರ್ಯನಿಷ್ಠೆಯಲಿ, ವಿದ್ವತ್ತಿನಲಿ,
ಶಿವಯೋಗದಲಿ, ಅನುಭಾವದಲಿ,
ನಿನಗಿಂತ ಹಿರಿಯರಿದ್ದರೂ ಇರಬಹುದು ;
ಔದಾರ್ಯದಲಿ, ದಾನದಲಿ,
ದಾಸೋಹದಲಿ, ಸೌಜನ್ಯದಲಿ
ನನ್ನೆಯಲಿ, ಕಾರುಣ್ಯದಲಿ
ನಿನಗೆ ಸರಿಸಮರಿಹರೆ ?

---

ಆಚಾರಲಿಂಗಸಂಬಂಧಿಯಾದ ಬಳಿಕ
ಪಂಚಭೂತದ ಪ್ರಕೃತಿಕಾಯ ಅಳಿದಿರಬೇಕಯ್ಯಾ
ಗುರುಲಿಂಗಸಂಬಂಧಿಯಾದ ಬಳಿಕ
ಪಂಚವಿಷಯಂಗಳ ಸಂಚವಂಚನೆಯು ಕೆಡಿಸಿರಬೇಕಯ್ಯಾ
ಶಿವಲಿಂಗಸಂಬಂಧಿಯಾದ ಬಳಿಕ
ಮಾಯಾ ಕರ್ಮೇಂದ್ರಿಯದ ಕುಹಕವಳಿದಿರಬೇಕಯ್ಯಾ
ಜಂಗಮಲಿಂಗಸಂಬಂಧಿಯಾದ ಬಳಿಕ
ಬುದ್ಧೀಂದ್ರಿಯಂಗಳು ಶುದ್ಧಿಯಿಂದರಬೇಕಯ್ಯಾ
ಪ್ರಸಾದಲಿಂಗಸಂಬಂಧಿಯಾದ ಬಳಿಕ
ಅಂತಃಕರಣಚತುಷ್ಟಯ ಸತ್ವರಜತಮಂಗಳ
ಪ್ರವರ್ತನೆಯು ಮೆಟ್ಟಿ ಮುಱಿದಿರಬೇಕಯ್ಯಾ
ಮಹಾಲಿಂಗಸಂಬಂಧಿಯಾದ ಬಳಿಕ
ಷಡುವರ್ಣಧಾತುವನಳಿದು
ವಸ್ತುರೂಪಾಗಿ ಶುದ್ಧ ನಿರ್ಮಲನಾಗಿ
ತನುತ್ರಯ ಜೀವತ್ರಯ ಅವಸ್ಥಾತ್ರಯ ಪ್ರಕೃತಿತ್ರಯ
ಇಂತೀ ನಾನಾ ವಿಧಂಗಳೆಲ್ಲವನು ಒಂದುಮಾಡಿ
ನಾನು ನೀನೆಂಬುಭಯವಿಲ್ಲದೆ
ಜೀವಪರಮೈಕ್ಯವಪ್ಪ ಪರಾಪರ ತಾನಾಗಿರಬೇಕಯ್ಯಾ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ।

ಶ್ರೀ ತೋಂಟದ ಸಿದ್ಧಲಿಂಗ

# ಮಾತೃಹೃದಯೀ ಮಹಾನುಭಾವರು

**ಹೆಚ್. ಗಂಗಾಧರನ್**

ಮಾನವ ಕಲ್ಪನಾಜೀವಿ. ಶಿವನ ಚಿಚ್ಛಕ್ತಿಯ ವೈಶಿಷ್ಟ್ಯವೇ ಈ ಸೃಷ್ಟಿ. ಅಂತೆಯೇ ಸೃಷ್ಟಿಯ ವೈಶಿಷ್ಟ್ಯವೇ ಮಾನವ. ಮಾನವತೆಯ ವೈಶಿಷ್ಟ್ಯವೇ ಅವನ ಕಲ್ಪನಾಶಕ್ತಿ. ಸೃಷ್ಟಿಯಲ್ಲಿ ಕಂಡರಿಯದ ಸಂಗತಿಗಳು ಮಾನವನ ಕಲ್ಪನೆಯಲ್ಲಿ ಮೂಡಿ ಬರುತ್ತವೆ. ಮಾನವನ ಕಲ್ಪನೆಗೆ ಮೀರಿದ ಘಟನೆಗಳು ಸೃಷ್ಟಿಯಲ್ಲಿ ಘಟಿಸುತ್ತವೆ. ಈ ವೈವಿಧ್ಯವನ್ನೂ ವೈಚಿತ್ರ್ಯವನ್ನೂ ಬಿಡಿಸಲು ಮಾನವ ಇತಿಹಾಸದ ಆದಿಯಲ್ಲೇ ಪ್ರಯತ್ನ ನಡೆಸಿ ಅದು ಅಸಾಧ್ಯವೆಂದು ಕಂಡು ಬಂದಾಗ ಇದರ ಹಿಂದೆ ಯಾವುದೋ ಅಗೋಚರವಾದ ಅದ್ವಿತೀಯವಾದ ಚೈತನ್ಯವೊಂದಿದೆಯೆಂದು ನಂಬಿದ. ಆ ಚೈತನ್ಯವು ನಮ್ಮನ್ನು ನಡೆಸಿದತ್ತ ನಡೆಯುವುದೇ ಸೂಕ್ತವೆಂದು ನಂಬಿ ಅಂತರಾತ್ಮನ ಅಪ್ಪಣೆಯಂತೆ ನಡೆದ. ಇದು ವಿಶ್ವಾಸಯುಗ. ಅಂತಶ್ಚೇತನವನ್ನು ಅವಲಂಬಿಸಿದವರು ಅಜ್ಞಾನಿಗಳು, ಅವಿವೇಕಿಗಳು, ಎಂಬ ವಾದವಾಹಿನಿ ಜಗತ್ತಿನಲ್ಲಿ ಮತ್ತೆ ಪ್ರವಹಿಸಲು ಆರಂಭಿಸಿತು. ವಿಶ್ವಾಸದ ನೆಲೆಗಟ್ಟಿನ ಮೇಲೆ ನಿಲ್ಲುವ ಎಲ್ಲ ಪ್ರಸಂಗಗಳನ್ನು ವಿಮರ್ಶಿಸಲು ಮಾನವ ಆರಂಭಿಸಿದ. ವಿಮರ್ಶೆಗೆ ಬುದ್ಧಿಪ್ರಯೋಗ ನಡೆಯಿತು, ತರ್ಕಶಾಸ್ತ್ರದ ಸೃಷ್ಟಿಯಾಯಿತು. ವೈಚಾರಿಕ ಪಂಥ ಬೆಳೆಯಿತು. ವೈಚಾರಿಕ ದೃಷ್ಟಿಯಿಂದ ಅಘಟಿತ ಘಟನೆಗಳನ್ನು ವಿಮರ್ಶೆಮಾಡುವ ಯತ್ನ ನಿರಂತರ ನಡೆಯಿತು. ತರ್ಕಕ್ಕೆ ನಿಲುಕದಿರುವುದೆಲ್ಲಾ ನಿರರ್ಥಕ, ಅಪ್ರಯೋಜಕ ಹಾಗೂ ಮೌಢ್ಯಮಯವೆಂಬ ಭಾವನೆಯು ಪ್ರಚುರಗೊಳ್ಳಲಾರಂಭಿಸಿತು. ಇದು ವೈಚಾರಿಕ ಯುಗ (Age of Reason). ವೈಚಾರಿಕಯುಗದಲ್ಲಿ ನಡೆದ ತಾರ್ಕಿಕ ಸಾಧನೆಯಲ್ಲಿ ಮಾನವ ತನ್ನ ಗುರಿಯನ್ನು ಮುಟ್ಟಲಾಗಲಿಲ್ಲ. ತರ್ಕಕ್ಕೆ ನಿಲುಕದ ಲಕ್ಷೋಪಲಕ್ಷ ಪ್ರಸಂಗಗಳು ಬಿಡಿಸಲಾಗದೆ ಹಾಗೇ ಉಳಿದವು. ಅವರೆ ಅವುಗಳ ಅಂತರಂಗವನ್ನು ಅರಿಯಲೇಬೇಕೆಂಬ ಹಂಬಲು ಮನುಕುಲದಲ್ಲಿ ಬೆಳೆಯಿತು. ಮಾನವ ಪ್ರಯತ್ನಶೀಲನಾದ. ಇದು ಒಂದು ರೀತಿಯ ಪ್ರಗತಿಯೆಂದೇ ಭಾವಿಸಬಹುದು. ಆದರೆ ವೈಚಾರಿಕಯುಗದ ಪರಿಣಾಮವನ್ನು ನೆನೆದು "ಅವಾಙ್ ಮನೋಗೋಚರಃ" ಎಂಬ ಭವಿಷ್ಯವನ್ನು ಉಪನಿಷತ್ತು ಹಿಂದೆಯೇ ಹೇಳಿತ್ತು. ಆದರಿಂದ ಉತ್ಸಾಹ ಕುಂದದೆ ಮಾನವ ಪ್ರಯತ್ನಶೀಲನಾದುದು ಪ್ರಶಂಸನೀಯ. ಮಾನವನ ಸಾಹಸದ ಮುಂದಿನ ಹೆಜ್ಜೆಯೆಂದರೆ ನಿಗೂಢ ಸಂಗತಿಗಳ ವಿಶ್ಲೇಷಣೆ. ಎಲ್ಲ ಘಟನೆಗಳನ್ನು ಹಲವು ರೀತಿಯಿಂದ ವಿಶ್ಲೇಷಿಸಿ ಇದಮಿತ್ಥಂ ಎಂಬ ನಿರ್ಧಾರಕ್ಕೇ ಬರಲೇಬೇಕೆಂಬ ದೃಢಸಂಕಲ್ಪಮಾಡಿ ಮುನ್ನಡೆದ. ಈ ಸಾಧನೆಯಲ್ಲಿ ತೊಡಗಿದಾಗ ಅವನ ಕಲ್ಪನೆಗೆ ನಿಲುಕದಿದ್ದ ಅನೇಕ ಅಂಶಗಳು ಬೆಳಕಿಗೆ ಬಂದವು. ಅವು ಸಾಧಕನ ಮಾರ್ಗದಲ್ಲಿ ಉತ್ತೇಜಕ ಘಟನೆಗಳಾಗಿ ಪರಿಣಮಿಸಿದುವು. ಆದುದರಿಂದ ಈ ಮಾರ್ಗದಲ್ಲೇ ಎಲ್ಲ ನಿಗೂಢ ಸಂಗತಿಗಳನ್ನು ಬಹಿರಂಗಗೊಳಿಸುವೆನೆಂಬ ವಿಶ್ವಾಸ ಬಲವಾಗಿ ಬೆಳೆಯಿತು. ಕಲ್ಪನೆಯಲ್ಲಿದ್ದರೂ ಪ್ರತ್ಯಕ್ಷಾನುಭವಕ್ಕೆ ನಿಲುಕದಿದ್ದ ಚಂದ್ರಲೋಕವನ್ನು ಮುಟ್ಟಿ ಮರಳಿಬಂದ. ಆದರೆ ತನ್ನ ಸಾಧನೆಯು ಪೂರ್ಣವಾಗಿದೆ ಎಂಬ ಭರವಸೆಗೆ ಬದಲಾಗಿ ಇನ್ನೂ ಸಾಗಬೇಕಾದ ದಾರಿ ಬಹುದೂರವಿದೆಯೆಂಬ ನಿರ್ಧಾರಕ್ಕೆ ಈಗ ಬಂದಿದ್ದಾನೆ. ಇದೇ ಇಂದಿನ ಯುಗದ ಪರಮ ಸಾಧನೆ. ಇದೇ ವಿಶ್ಲೇಷಣಯುಗ ಅಥವಾ ವಿಜ್ಞಾನ ಯುಗವೆನ್ನಬಹುದು (Age of Analysis). ಆದರೆ ವಿಶ್ಲೇಷಣ ಮಾರ್ಗದಿಂದ ಪರಿಪೂರ್ಣಗುರಿಯನ್ನು ಮುಟ್ಟಲು ಸಾಧ್ಯವಿಲ್ಲವೆಂಬ ನಿಶ್ಚಯಕ್ಕೆ ಮಾನವ ಬರುತ್ತಿದ್ದಾನೆ. ಆದರಿಂದಾಗಿ ಇಂದಿನ ಪ್ರವೃತ್ತಿ ಮತ್ತೆ ವಿಶ್ವಾಸಯುಗದತ್ತ ಸೆಳೆಯುತ್ತಿದೆ. ಆತ್ಮವಿಶ್ವಾಸದಿಂದ ಸರ್ವಸಿದ್ಧಿ, ಆದರಿಂದಲೇ ಜೀವನ ಸಾಫಲ್ಯವೆಂಬ ಭಾವನೆ ಮೂಡಿಬರುತ್ತಿದೆ. ಇಂತಹ ನಿತ್ಯನೂತನ ಭಾವನೆಗೆ ನೆಲೆವೀಡು ಈ ಭಾರತ. ಈ ಭಾವನೆಯಲ್ಲಿ ಬಾಳಿದ ಸಮಾಜ ಹತಾಶವಾಗಿಲ್ಲ, ಅಪ್ರಯೋಜಕವಾಗಿಲ್ಲ. ಎಲ್ಲಾ ದುರ್ಘಟನೆಗಳ ಧಾಳಿಯನ್ನೂ ಎದುರಿಸುತ್ತಾ ಪ್ರಗತಿಪಥದಲ್ಲೇ ಸಾಗುತ್ತಿದೆ. ಈ

ಪವಿತ್ರ ಪರಿಸರದಲ್ಲಿ ಎಂತಹ ಅದ್ಭುತಗಳು ನಡೆಯುತ್ತವೆಂಬುದು ಇಂದಿಗೂ ಊಹಾತೀತವೂ ಉಪಮಾತೀತವೂ ಆಗಿವೆ. ಅಂತೆಯೇ ಶ್ರೀ ಸುತ್ತೂರು ವೀರಸಿಂಹಾಸನಮಠದ ಮಹಾಕ್ಷೇತ್ರದಲ್ಲಿ ಅಘಟಿತ ಘಟನೆಗಳು ಆಗಿಹೋಗಿವೆ. ಆಗುತ್ತಿವೆ. ಮುಂದೆಯೂ ಆಗುತ್ತವೆ. ಆಗಬೇಕೆಂದು ಅಪೇಕ್ಷಿಸುತ್ತೇವಲ್ಲವೆ?

ಇನ್ನೂ ಮೈಸೂರು ಜಿಲ್ಲೆಯು ರೂಪತಳೆಯದೇ ಇದ್ದ ಕಾಲ. ಮೈಸೂರೆಂಬ ಹೆಸರೇ ಪ್ರಚಲಿತವಾಗಿರಲಿಲ್ಲ. ಪಶ್ಚಿಮಾದ್ರಿಯಿಂದ ಪೂರ್ವಘಟ್ಟದವರೆಗೆ ನಿರಂತರ ಪ್ರವಹಿಸುವ ಕಪಿಲಾ ತೀರದ ಇಕ್ಕೆಲಗಳಲ್ಲಿದ್ದ ಗೊಂಡಾರಣ್ಯದಲ್ಲಿ ಜನನಿಬಿಡವಾದ ಸಣ್ಣಪುಟ್ಟಗ್ರಾಮಗಳು ಚೋಳ ಸಾಮ್ರಾಟರ ಆಳ್ವಿಕೆಯಲ್ಲಿದ್ದ ಪ್ರದೇಶ, ಶಿವಭಕ್ತಿಗೆ ಪ್ರೋತ್ಸಾಹ ಪಡೆದ ಕ್ಷೇತ್ರ. ಸಿದ್ಧಗಿರಿಯಲ್ಲಿ ಅನುಷ್ಠಾನನಿರತರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಚೋಳ ಚಕ್ರಾಧೀಶ್ವರರ ಕೋರಿಕೆಯ ಮೇಲೆ ಈ ಕ್ಷೇತ್ರವನ್ನು ತಮ್ಮ ಲೋಕೋದ್ಧಾರ ಕಾರ್ಯಕ್ಷೇತ್ರವಾಗಿ ಅಪ್ಪಿಕೊಂಡರು. ಹತ್ತನೆಯ ಶತಮಾನಕ್ಕೆ ಮುನ್ನವೇ ಶ್ರೀ ಸುತ್ತೂರು ವೀರಸಿಂಹಾಸನದ ಧರ್ಮಪೀಠದ ಸ್ಥಾಪನೆಯಾಯಿತು. ಶ್ರೀ ಪೀಠದ ಕಾರ್ಯಕ್ಷೇತ್ರ ವಿಸ್ತೃತವಾಯಿತು. ಭಕ್ತವೃಂದದ ಬೆಳೆ ಹುಲುಸಾಗಿ ಬೆಳೆಯಿತು. ದೇಶಭಾಷೆಗಳ ಕುಲ ಗೋತ್ರಗಳ ಗಡಿಯನ್ನು ದಾಟಿ ಪ್ರಭಾಕಿರಣಗಳು ತಮಿಳುನಾಡು, ಕೇರಳ, ಕೊಡಗು ಪ್ರದೇಶದಲ್ಲೆಲ್ಲಾ ಪಸರಿಸಿದುವು. ಆದಿಜಗದ್ಗುರುಗಳವರ ಅಮೃತಹಸ್ತದಲ್ಲಿ ಸಂಜನಿತರಾದ ಇಪ್ಪತ್ತೆರಡು ಮಂದಿ ಜಗದ್ಗುರುಗಳು ಅದ್ವಿತೀಯ ಕಲ್ಯಾಣಕಾರ್ಯಗಳನ್ನೆಸಗಿ ಪರಮಾತ್ಮನೊಳಗೈಕ್ಯಗೊಂಡಿದ್ದಾರೆ. ಅವರೆಲ್ಲರ ಕೈವಲ್ಯ ಸಾಧನಾವಿವರಣೆ ಈ ಲೇಖನ ವ್ಯಾಪ್ತಿಗೆ ಸೇರಿದುದಲ್ಲ. ಇಂದಿನ ಪೀಠಾಧೀಶ್ವರರಾದ ಶ್ರೀಮನ್ಮಹಾರಾಜ ರಾಜಗುರುತಿಲಕ ಶ್ರೀಮಜ್ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಆದಿಜಗದ್ಗುರುಗಳವರ ಕರಕಮಲದಲ್ಲಿ ಇಪ್ಪತ್ತಮೂರನೆಯವರಾಗಿ ಅವತರಿಸಿದ ಮಹಾನುಭಾವರು. ಶ್ರೀಪೀಠದ ಇಪ್ಪತ್ತಮೂರನೆಯ ಜಗದ್ಗುರುಗಳವರ ಮಹಿಮಾದರ್ಶಗಳ ಸ್ಮರಣೆ ಈ ಲೇಖನದ ಆದ್ಯ ವಸ್ತು.

**ಕಾರಣಪುರುಷರ ಉದಯ**

ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಂ ॥
(ಗೀತೆ. ೧೦–೪೧)

ಯಾವ ವಸ್ತುವು ವಿಭೂತಿಮಂತವಾದುದೋ ಅಂದರೆ ಶ್ರೇಷ್ಠವಾದುದೋ, ಶ್ರೀಯುಕ್ತವಾದುದೋ ಅಂದರೆ ಸಂಪದ್ಯುಕ್ತವಾದುದೊ, ಊರ್ಜಿತವಾದುದೋ ಅಂದರೆ ಶಾಶ್ವತ ಕೀರ್ತಿಗೆ ಪಾತ್ರವಾದುದೋ ಅದೆಲ್ಲವೂ ನನ್ನ ತೇಜಸ್ಸಿನ ಅಂಶವೆಂದು ತಿಳಿಯಬೇಕೆಂದು ಪರಮಾತ್ಮನು ಭಗವದ್ಗೀತೆಯಲ್ಲಿ ಅಪ್ಪಣೆಕೊಡಿಸಿದ್ದಾನೆ. ಮಾನವಜನ್ಮ ಮಹತ್ವಪೂರ್ಣವಾದುದೆಂದು ಸಂತರೂ ಶರಣರೂ ಪ್ರವಾದಿಗಳೂ ಹಾಡಿದ್ದಾರೆ ಕೊಂಡಾಡಿದ್ದಾರೆ ಆದರೆ ಮಾನವನ ಅಂದಂದಿನ ಆಗುಹೋಗುಗಳಿಗೆ ಕಾರಣಗಳನ್ನು ಹುಡುಕಿದಾಗ ವೈವಿಧ್ಯತೆಯನ್ನು ಕಾಣುತ್ತೇವೆ. ಅದಕ್ಕೆಲ್ಲಾ ಪರಿಸರವೊಂದೇ ಕಾರಣವೆಂಬ ವಾದವನ್ನು ಪೋಷಿಸಿದವರು ಪಾಶ್ಚಾತ್ಯ ಮನೋವಿಜ್ಞಾನಿಗಳು. ಅವರಲ್ಲಿ ಸಿಗ್ಮಂಡ್‌ಪ್ರಾಯ್ಡ್, ಅಡ್ಲರ್, ಯುಂಗ್ ಮುಂತಾದವರನ್ನು ಹೆಸರಿಸಬಹುದು. ಇದನ್ನು ಬೆಂಬಲಿಸಿದವರು ಅಥವಾ ಈ ಸಿದ್ಧಾಂತವನ್ನು ಪಾಶ್ಚಾತ್ಯ ವೈಚಾರಿಕರಿಗಿಂತಲೂ ಮೊದಲೇ ಸಮರ್ಥಿಸಿದ ಭಾರತೀಯರಲ್ಲಿ ನೈಯ್ಯಾಯಿಕರೂ, ವೈಶೇಷಿಕರೂ, ಭರ್ತೃಹರಿಯೇ ಮುಂತಾದ ವಿಚಾರವಾದಿಗಳೂ ಇದ್ದಾರೆ. ಆದರೆ ಭಾರತೀಯ ದಾರ್ಶನಿಕರು ಪಾಶ್ಚಾತ್ಯವಿಜ್ಞಾನಿಗಳಂತೆ ಪರಿಸರವೊಂದನ್ನೇ ಕಾರಣವನ್ನಾಗಿ ಸಮರ್ಥಿಸಿಲ್ಲ. ಪರಿಸರಕ್ಕಿಂತಲೂ ಮಿಗಿಲಾಗಿ ವಾಸನಾವಿಶೇಷವನ್ನೇ ಅಂದರೆ ಜನ್ಮಜನ್ಮಾಂತರದ ಸಂಸ್ಕಾರದ ವೈಶಿಷ್ಟ್ಯವನ್ನು ಭಾರತದ ದಾರ್ಶನಿಕರು ಸಮರ್ಥಿಸುತ್ತಾ ಬಂದಿದ್ದಾರೆ. ಆದುದರಿಂದ 'ಎನಿಸು ಕಾಲ ಕಲ್ಲು ನೀರೊಳಗಿದ್ದರೇನು ನೆನೆದು ಮೃದುವಾಗಬಲ್ಲುದೇ' 'ಕಾಗೆ ನಂದನವನದೊಳಗಿದ್ದರೇನು ಹೇಳಾ ಕೋಗಿಲೆಯಾಗಬಲ್ಲುದೇ' ಎಂಬ ನುಡಿಯನ್ನು ಶರಣರ ಸಂದೇಶದಲ್ಲಿ ಕಾಣುತ್ತೇವೆ. ಅಂತೆಯೇ ಸಂಸ್ಕಾರದ ಪರಿಣಾಮವನ್ನು ಸಮರ್ಥಿಸುತ್ತಾ, "ಮುನ್ನಿನ ಕರ್ಮ ಬೆನ್ನಬಿಡದು...ಬಾರದ ಭವಂಗಳಲ್ಲಿ ಬಂದೆ" ಮುಂತಾದ ವಾಕ್ಯಗಳೂ ಕಂಡುಬರುತ್ತವೆ.

ಭಾರತೀಯ ದಾರ್ಶನಿಕರು ಪರಿಸರದಂತೆ ಹಿಂದಿನ ಸಂಸ್ಕಾರವೂ ಪ್ರಮುಖ ಕಾರಣವೆಂಬ ಸಿದ್ಧಾಂತವನ್ನು ಸಮರ್ಥಿಸಿದ್ದಾರೆ. ಪಾಶ್ಚಾತ್ಯ ವಿಜ್ಞಾನಿಗಳಲ್ಲಿ ವಿಚಾರವಾದಿಗಳಲ್ಲಿ ಅನೇಕರು ಭಾರತೀಯರ ನಿರ್ಧಾರವನ್ನು ಸಮರ್ಥಿ

ಸುತ್ತಿದ್ದಾರೆ. ಅಮೆರಿಕೆಯ ಸುಪ್ರಸಿದ್ಧ ಮನೋವಿಜ್ಞಾನಿಗಳಾದ ಎಡ್ಗರ್ ಕೈಸಿಯವರ ಲೇಖನಗಳು ಸಂಶೋಧನೆಗಳು ಇದನ್ನೇ ಸಮರ್ಥಿಸುತ್ತವೆ. ಶ್ರೀ ಸುತ್ತೂರು ಮಠದ ಪೀಠಪರಂಪರೆಯ ಕಾರ್ಯಗಳನ್ನು ವಿಶ್ಲೇಷಿಸಿದರೆ ಸಂಸ್ಕಾರವು ಎಷ್ಟು ಪ್ರಭಾವವನ್ನು ಬೀರಿದೆಯೆಂಬುದರ ಅರಿವು ನಮಗಾಗುತ್ತದೆ. ಶ್ರೀಮಠದ ಪರಂಪರೆಯಲ್ಲಿ ಒಂದು ಕುಟುಂಬದ ಪರಂಪರೆ ಅನೇಕ ದಿನಗಳಿಂದ ಬೆಳೆದುಬಂದಿದೆ. ಈ ಪರಂಪರೆಯಲ್ಲಿ ಬಂದವರೇ ಅನೇಕರು ಶ್ರೀಪೀಠವನ್ನು ಅಲಂಕರಿಸಿದ್ದಾರೆ. ಆ ಕುಟುಂಬದ ಉಳಿದವರೆಲ್ಲ ಶ್ರೀಪೀಠದ ಏಳಿಗೆಗಾಗಿ ಪರಿಚಾರಕರಂತೆ ಶ್ರಮಿಸಿದ್ದಾರೆ. ಈ ಕುಟುಂಬದ ಒಂದೇ ಪರಿಸರದಲ್ಲಿ ಬೆಳೆದವರೆಲ್ಲಾ ಏಕ ರೀತಿಯ ಭಾವನೆಯಿಂದ ಶ್ರೀಪೀಠದ ಕೀರ್ತಿಗಾಗಿ ಶ್ರಮಿಸಿದ್ದಾರೆಂದಾಗಲೀ ಅದರ ಪರಿಸರಕ್ಕನುಗುಣವಾಗಿ ಜೀವಿಸಿದ್ದಾರೆಂದಾಗಲೀ ಹೇಳಲು ಅಸಾಧ್ಯವೇ ಆಗುತ್ತದೆ. ಆದರೆ ಸಂಸ್ಕಾರದ ಬಲದಿಂದಲೇ ಕೆಲವು ಮಂದಿ ಚಿರಸ್ಮರಣೀಯರೂ ಆಗಿದ್ದಾರೆ.

ಒಬ್ಬರು ಪೀಠಾಧಿಕಾರಿಗಳಾಗಿರುವಾಗಲೇ ತಮ್ಮ ಉತ್ತರಾಧಿಕಾರಿಯನ್ನು ಗುರ್ತಿಸಿ ಅವರಿಗೆ ಪೀಠಾಧಿಪತ್ಯ ಶಿಕ್ಷಣ ಕೊಡುವ ಸಂಪ್ರದಾಯ ಶ್ರೀ ಸುತ್ತೂರು ವೀರಸಿಂಹಾಸನದಲ್ಲಿ ಅನೇಕ ಸಂವತ್ಸರಗಳಿಂದ ನಡೆದು ಬಂದಿದೆ. ಶ್ರೀಪೀಠದ ಇಪ್ಪತ್ತೆರಡನೆಯ ಜಗದ್ಗುರುಗಳಾದ ಶಿವಯೋಗಿ ಶ್ರೀಶಿವರಾತ್ರೀಶ್ವರ ಮಹಾಸ್ವಾಮಿಗಳವರು ಮಂತ್ರನಿಷ್ಠರೂ, ಸಮರ್ಥ ಕಾರ್ಯನಿಯೋಜಕರೂ, ಶಿವಪೂಜಾನಿಷ್ಠರೂ ಆಗಿದ್ದರು. ಆದಿ ಜಗದ್ಗುರುಗಳವರ ಅನುಷ್ಠಾನದ ಕ್ಷೇತ್ರದಲ್ಲಿ ಕುಳಿತು ಧ್ಯಾನಗೈದು ಯಾವುದೇ ಕಾರ್ಯವನ್ನು ಕೈಗೊಂಡರೂ ಅವರು ಜಯಶಾಲಿಗಳಾಗುತ್ತಿದ್ದರು. ಆ ಅನುಷ್ಠಾನಕ್ಷೇತ್ರದಲ್ಲಿ ನಿಂತಾಗ ಯಾವ ಕಾರ್ಯವನ್ನು ಕೈಗೊಳ್ಳಬಾರದೆಂದು ಮನಸ್ಸಿನಲ್ಲಿ ಮೂಡಿದರೆ ಅಂತಹ ಕಾರ್ಯದಲ್ಲಿ ತೊಡಗುವಂತೆ ಅವರನ್ನು ಪ್ರಚೋದಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ ಅವರ ಕಾಲಕ್ಕೆ ಶ್ರೀಮಠವು ಆರ್ಥಿಕವಾಗಿ ಅಪಾರ ತೊಂದರೆಗೆ ಈಡಾಗಿತ್ತು. ಕಳೆದುಳಿದ ಸಂಪತ್ತನ್ನು ಕಬಳಿಸುವ ಶಕ್ತಿಗಳೇ ಸುತ್ತಲೂ ಬೆಳೆಯ ತೊಡಗಿದ್ದವು. ಶ್ರೀಪೀಠದ ಪರಿಸ್ಥಿತಿಯು ಅತ್ಯಂತ ದಾರುಣವಾಗಿದ್ದ ಸಮಯದಲ್ಲಿ ಆಡಳಿತದ ಹೊಣೆ ಅವರ ಪಾಲಿಗೆ ಬಂದಿತ್ತು. ಶ್ರೀ ಗುರುವಿನ ಅಣತಿಯನ್ನು ಹೊತ್ತು ಮುನ್ನಡೆದರು. ಹಳ್ಳಿಯ ಕಿರಿಯ ಭಕ್ತನ ಮನೆಯಿಂದ ಹಿರಿಯ ಗುರುಪೀಠದವರೆಗೆ ಕೊನೆಗೆ ಅರಮನೆಯವರೆಗೆ ತಮ್ಮ ಪ್ರಭಾವವನ್ನು ಬೆಳೆಸಿದರು. ಆರ್ಥಿಕ ಸ್ಥಿತಿ ಸುಧಾರಿಸಿತು. ಶತ್ರು ಸಮುದಾಯ ಕರಗಿ ಭಕ್ತ ಸಮುದಾಯ ಬೆಳೆಯಿತು. ಶ್ರೀಮಠದ ಅಭ್ಯುದಯಕ್ಕಾಗಿ ಶಿಷ್ಯಕೋಟಿಯ ಉದ್ಧಾರಕ್ಕಾಗಿ ಅವಿರತವಾಗಿ ದುಡಿದ ಜೀವ, ಮುದುಡುತ್ತಿದ್ದ ದೇಹದಲ್ಲಿ ಆಗಾಗ ತಲ್ಲಣಗೊಳ್ಳುತ್ತಿತ್ತು. ನಿತ್ಯ ಪರಿಶ್ರಮದಿಂದ ಸುಧಾರಿತ ಪರಿಸ್ಥಿತಿಯಲ್ಲಿರುವ ಶ್ರೀಮಠದ ಕೀರ್ತಿ ಗೌರವವನ್ನು ಉಳಿಸಿಬೆಳೆಸಿಕೊಂಡು ಬರುವ ಉತ್ತರಾಧಿಕಾರಿಯನ್ನು ಮನಸ್ಸು ಅರಸುತ್ತಿತ್ತು. ನಾಲ್ಕಾರು ವರ್ಷಗಳು ಕಳೆದರೂ ತನ್ನ ಬಯಕೆ ಈಡೇರುವ ಸೂಚನೆಗಳು ಕಂಡುಬರಲಿಲ್ಲ. ಮಹಿಮಾಪುರುಷರು ಅನುಷ್ಠಾನಗೈದು ಅಂತರ್ಮುಖಿಗಳಾಗಿ ವೀಕ್ಷಿಸುತ್ತಿರುವ ಕ್ಷೇತ್ರಕ್ಕೆ ಎಂದಾದರೂ ಕುಂದಾಗುವುದೇ ! ಆದರೆ ಜಗದ್ಗುರುಗಳ ಮನಸ್ಸು ಅದನ್ನೇ ನೆನೆದು ಒಮ್ಮೊಮ್ಮೆ ಸೊರಗುತ್ತಿತ್ತು. ಶ್ರೀಮಠದ ಪರಿಸರದಲ್ಲಿ ಗುರುಪೀಠದ ಪರಂಪರೆಯಲ್ಲಿ ಭಕ್ತಿ ಕೈಂಕರ್ಯವನ್ನು ಸಲ್ಲಿಸುವ ಅನೇಕ ಕುಟುಂಬಗಳಿದ್ದುವು. ಆದರೆ ಮಹಾಪುರುಷನ ಉದಯದ ಸುಳಿವು ಬಹುಕಾಲದ ವರೆಗೆ ಕಂಡುಬರಲಿಲ್ಲ. ಆದಿಜಗದ್ಗುರುಗಳವರು ಇವರ ನಿಷ್ಠೆಯನ್ನು ಪರೀಕ್ಷಿಸುತ್ತಿದ್ದರೋ ಏನೊ ! ಕೈಗೊಂಡ ಕಾರ್ಯ ಯಾವುದಾದರೂ ಅತ್ಯಂತ ನಿಷ್ಠೆಯಿಂದ ನಿರ್ವಹಿಸುವ ಶೀಲಸಂಪತ್ತಿನ ವ್ಯಕ್ತಿಗಳು ಜಗದ್ಗುರುಗಳವರು. ಅವರ ಕ್ರಿಯಾನಿಷ್ಠೆಯ ಪರೀಕ್ಷೆಯೇ ಆರಂಭವಾಯಿತು. ಆದಿಜಗದ್ಗುರುಗಳವರ ತಪೋಕ್ಷೇತ್ರದಲ್ಲಿ ನೂತನ ಮಂದಿರದ ನಿರ್ಮಾಣಮಾಡಿಸುವ ಮಹಾಮಣಿಹವನ್ನು ಕೈಗೊಂಡರು. ಆ ಕ್ಷೇತ್ರಕ್ಕೆ ಹಿಂದಿನಿಂದಲೂ ಕಾಡುಮಠವೆಂಬ ಹೆಸರಿತ್ತು. ಅದು ಮಹಾಕ್ಷೇತ್ರವಾಗಬೇಕೆಂಬುದು ಶ್ರೀಗಳವರ ಹಂಬಲವಾಗಿತ್ತು. ಶುಭಮುಹೂರ್ತದಂದು ನಿರ್ಮಾಣಕಾರ್ಯದ ಪ್ರಾರಂಭೋತ್ಸವವು ನೆರವೇರಿತು. ಕಾರ್ಯಾರಂಭದ ಮೊದಲ ದಿನದಿಂದಲೇ ಶ್ರೀಗಳವರು ವ್ರತನಿಷ್ಠರಾದರು. ಶ್ರೀಮಠದಿಂದ ಬರಿಗಾಲಲ್ಲಿ ಬಂದು ಸಂಜೆಯವರೆಗೆ ಬರಿಗಾಲಲ್ಲೇ ನಿಂದು ತಲೆಯ ಮೇಲೆ ಯಾವ ಶಿರಸ್ತ್ರಾಣವನ್ನೂ ಧರಿಸದೆ ನಿರ್ಮಾಣಕಾರ್ಯ ನಡೆಸಲಾರಂಭಿಸಿದರು. ಒಂದು ವರ್ಷದ ವರೆಗೆ ಈ ಕಾರ್ಯ ನಡೆದು ಪೂರ್ಣಗೊಳ್ಳುವ ಹಂತದಲ್ಲಿತ್ತು. ಅಂತೆಯೇ ಶ್ರೀಗಳವರ ನಿರೀಕ್ಷಣೆ ನಿಜವಾಗುತ್ತಾ ಬಂದಿತ್ತು. ಶ್ರೀಗುರುವಿನ ಕರುಣೆ ಕೈಗೂಡುತ್ತಾ ಬಂದಿತ್ತು.

### ಜಗದ್ಗುರುವಿನ ಉದಯ ಮತ್ತು ಬಾಲ್ಯ

ಶ್ರೀಮಠದ ಭಕ್ತಸಮುದಾಯದಲ್ಲಿ ಧರ್ಮನಿಷ್ಠರೂ ಶಿವಪೂಜಾಧುರಂಧರರೂ ಆದ ಶ್ರೀ ಮಲ್ಲಿಕಾರ್ಜುನ

ದೇವರು ಮತ್ತು ಮರಮ್ಮಣ್ಣಿಯವರ ಪುಣ್ಯದ ಶಿಶುವಾಗಿ ಉದಯಿಸಿದರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಗುರುವರೇಣ್ಯರು. ಮಾತಾಪಿತರೇ ಶ್ರೇಷ್ಠ ಸಂಸ್ಕಾರವನ್ನು ಪಡೆದವರಾಗಿದ್ದರು. ಶ್ರೀ ಮಲ್ಲಿಕಾರ್ಜುನ ದೇವರು ಶ್ರೀಮಠದ ಬಾಹ್ಯದ ವ್ಯವಹಾರವನ್ನೆಲ್ಲಾ ನಿರ್ವಹಿಸುತ್ತಿದ್ದರು. ಸುತ್ತಮುತ್ತಲ ಗ್ರಾಮದ ಜನಸಮುದಾಯದ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆಲ್ಲಾ ಸಮಾಧಾನ ನೀಡುವ ಸಿದ್ಧಪುರುಷರಾಗಿದ್ದರು. ಎಷ್ಟೇ ದ್ವೇಷಸಾಧನೆಯ ಕ್ರೋಧದಿಂದ ಅವರ ಬಳಿಗೆ ಬಂದಿದ್ದರೂ ಕರಗಿ ನೀರಾಗಿ ವಾತ್ಸಲ್ಯಮಯಿಗಳಾಗಿ ಮನೆಗೆ ಹಿಂದಿರುಗುತ್ತಿದ್ದರು. ಇತ್ತ ಶ್ರೀಮಠದ ಒಳಗೆ ಮರಮ್ಮಣ್ಣಿಯವರು ಜನಾನುರಾಗಿಗಳಾಗಿದ್ದ ವ್ಯಕ್ತಿ. ಅವರ ಎದುರಿನಲ್ಲಿ ಯಾರೂ ಕಣ್ಣೀರು ಸುರಿಸುತ್ತಿರಲಿಲ್ಲ. ಅವರ ಅಭಯ ಹಸ್ತ ಸೋಂಕಿದರೆ ಸಾಕು ಎಷ್ಟೇ ದುಃಖತಪ್ತರಾಗಿದ್ದರೂ ಹೆಣ್ಣುಮಕ್ಕಳು ಸಮಾಧಾನ ಹೊಂದಿ ಹಿಂದಿರುಗುತಿದ್ದರು. ಇಂತಹವರ ಶ್ರೇಷ್ಠ ಗರ್ಭಾಂಬುಧಿಯಲ್ಲಿ ಉದಯಿಸಿದ ವ್ಯಕ್ತಿ ಜನಮನದ ಮಹಾಶಕ್ತಿಯಲ್ಲದೆ ಬೇರಾಗಲು ಸಾಧ್ಯವೇ ? ಭೌತಿಕ ಮಾತಾಪಿತೃಗಳು ಜನ್ಮನೀಡುವುದಕ್ಕೆ ನಿಮಿತ್ತ ಮಾತ್ರರು. ಆದರೆ ಶ್ರೀ ಗುರುಕರುಣೆಯೇ ಮೂರ್ತಿರೂಪವಾಗಿ ಅವತರಿಸಿತ್ತು ಎನ್ನುವುದನ್ನು ನಮ್ಮೆಲ್ಲರ ಅನುಭವ ದೃಢಪಡಿಸುತ್ತದೆ.

ಕಾರಣಿಕ ಶಿಶುವು ಆರು ತಿಂಗಳು ಮಾತ್ರ ಸಂಪೂರ್ಣಕಾಲ ಮಾತೆಯ ಮಡಿಲಲ್ಲಿ ನಲಿಯುತ್ತಿತ್ತು. ಅನಂತರ ಹಸುಳೆಗೆ ಅತ್ತಾಗ ಹಾಲುಣಿಸುವುದೊಂದೇ ತಾಯಿಗೆ ದೊರೆತ ಪುಣ್ಯ. ಶ್ರೀ ಶಿವಯೋಗಿಗಳವರ ಪೂಜೆ ಮುಗಿದು ಅವರು ಹೊರಗೆ ಬರುವುದರೊಳಗೆ ಶಿಶುವು ಅವರ ಪಾದದ ಬಳಿ ಇರಬೇಕಾಗುತ್ತಿತ್ತು. ಶ್ರೀಗಳವರ ಅಭಿಮಾನದ ಹಸ್ತ ಶಿಶುವಿನ ಮಸ್ತಕಕ್ಕೆ ಸೋಂಕಿದೊಡನೆ ಶಿಶು ಚೇತನ ಶಕ್ತಿಯಾಗಿ ಮುಗುಳ್ನಕ್ಕು ಮಠದ ಅಂಗಳವನ್ನೆಲ್ಲಾ ಆನಂದ ಹೊನಲಿನಲ್ಲಿ ತೇಲಿಸುತ್ತಿತ್ತು. ದಿನದ ಬಹುಕಾಲ ಶ್ರೀಗಳವರ ಶ್ರೀಪಾದದಲ್ಲಿ ಹೊರಳಿ ಬೆಳೆದ ಕಾರಣಪುರುಷರು ಮಹಾನುಭಾವರಾಗುವರೆಂಬುದು ಅಂದೇ ನಿರ್ವಿವಾದವಾಗಿತ್ತು. ತನ್ನ ಉತ್ತರಾಧಿಕಾರಿಯು ತನ್ನ ಮಠದ ಭೌತಿಕ ಸಂಪತ್ತಿನ ಸಾಸಿರ್ಮಡಿಯಷ್ಟು ಅಧಿಕ ಸಂಪತ್ತೆಂಬ ಭಾವನೆಯಿಂದ ಶಿಶುವನ್ನೇ ಬೆಳೆಸುತ್ತಿದ್ದರು. ಅವರ ಉಸಿರು ಇರುವವರೆಗೆ ಶ್ರೀಗಳವರಿಗೆ ಶ್ರೇಯಸ್ಸನ್ನು ಹಾರೈಸದೆ ಅವರ ಶಿವಪೂಜೆ ಮುಕ್ತಾಯವಾಗುತ್ತಿರಲಿಲ್ಲ. ಅಂತೆಯೇ ಅವರಿಗಾಗುವ ವೇದನೆಯನ್ನು ತನ್ನದೆಂಬಂತೇ ಭಾವಿಸಿ ಪರಿತಪಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅಂದರೆ ಶ್ರೀಗಳವರಿಗೆ ಆರೋಗ್ಯದ ವಿಷಯದಲ್ಲಿ ಕಳವಳವುಂಟಾದಾಗ ಹಗಲಿರುಳೆನ್ನದೆ ಶ್ರೇಯಸ್ಸನ್ನು ಹಾರೈಸುತ್ತಾ ಶ್ರೀಗುರು ಧ್ಯಾನದಲ್ಲಿ ನಿರತರಾಗುತ್ತಿದ್ದುದನ್ನು ಬಲ್ಲವರು ಬಹಳ ಜನರಿದ್ದಾರೆ. ಗುರುಶಿಷ್ಯರಲ್ಲಿ ದೈಹಿಕ ಭಿನ್ನತೆ ಮಾತ್ರ ಉಳಿದಿತ್ತೇ ವಿನಹ ಆತ್ಮೀಯತೆಯಲ್ಲಿ ಅನ್ಯತೆ ಉಳಿದೇ ಇರಲಿಲ್ಲ. ಗುರುಶಿಷ್ಯ ಬಾಂಧವ್ಯ ಹೀಗೆ ಬೆಳೆದ ನಿದರ್ಶನಗಳು ನಮ್ಮ ಇತಿಹಾಸದಲ್ಲಿ ದೊರೆಯುವುದು ಅಪೂರ್ವ. ಹಿರಿಯ ಗುರುವು ತನ್ನ ಶಿಷ್ಯನ ಅಭಿವೃದ್ಧಿಗಾಗಿ ಅಭ್ಯುದಯಕ್ಕಾಗಿ ತನ್ನ ತಪಸ್ಸನ್ನೆಲ್ಲಾ ಧಾರೆಯೆರೆಯುವ ತ್ಯಾಗಶೀಲರ ಸಂಖ್ಯೆ ಸಂನ್ಯಾಸ ಜೀವನದಲ್ಲೂ ವಿರಳವೇ ? ಮಂತ್ರ ಮಹರ್ಷಿಗಳಾದ ಹಿರಿಯ ಜಗದ್ಗುರುಗಳವರು ತಮ್ಮ ಉತ್ತರಾಧಿಕಾರಿಯನ್ನು ಸರ್ವಜ್ಞಾನಸಂಪನ್ನರೂ, ಸರ್ವಕಾರ್ಯ ಸಮರ್ಥರೂ ಆಗುವಂತೆ ಮಾಡಲು ಸರ್ವ ರೀತಿಯ ವ್ಯವಸ್ಥೆಯನ್ನು ಮಾಡಿದರು. ಉತ್ತಮ ಪಂಡಿತರಿಂದ ಶಿಕ್ಷಣ ದೊರೆಯುವ ಏರ್ಪಾಡು ಮಾಡಿದರು. ಆದರೆ ಅವರಿಗೆ ಭೌತಿಕ ಜ್ಞಾನಾರ್ಜನೆಗಿಂತಲೂ ಶಿವಧ್ಯಾನ ಶಿವ ಚಿಂತನೆಗಳು ಆಪ್ಯಾಯಮಾನವಾದುವು. ಶಿವಪೂಜೆಯಲ್ಲಿ ಹರೆಯದಿಂದಲೂ ಅಪಾರ ಆಸಕ್ತಿ ಬೆಳೆದುಬಂದಿತ್ತು. ಆದಿ ಜಗದ್ಗುರುಗಳವರ ಸನ್ನಿಧಿಗೆ ಬಂದರೆ ಶ್ರೀಮಠಕ್ಕೆ ಹಿಂದಿರುಗುವ ಬಯಕೆಯೇ ಅವರಿಗಾಗುತ್ತಿರಲಿಲ್ಲ. ಆ ಪರಿಸ್ಥಿತಿ ಇಂದಿಗೂ ಅದೇ ರೀತಿಯಲ್ಲಿದೆಯೆನ್ನಬಹುದು. ಹೀಗೆ ಅಮೂಲ್ಯ ಸಂಸ್ಕಾರದ ಸಂಪತ್ತಿನಲ್ಲಿ ಸಂಜನಿಸಿ ದೈವೀ ಸಂಪತ್ತಿನ ಪರಿಸರದಲ್ಲಿ ಬೆಳೆದ ಪುಣ್ಯಪುರುಷರು ಜಗತ್ತಿಗೆ ನೀಡಿದ ಕಾಣಿಕೆ ಅಪಾರ.

ತಮ್ಮ ಗುರುಗಳವರ ಮನೋಭೀಷ್ಟದಂತೆ ಶ್ರೀಗಳವರು ತಮ್ಮ ವಿದ್ಯಾಭ್ಯಾಸವನ್ನು ಮೈಸೂರು ನಗರದಲ್ಲಿ ಮುಂದುವರಿಸಿದರು. ಸುತ್ತೂರಿನ ಶ್ರೀಕ್ಷೇತ್ರದಲ್ಲಿ ಅಭಿಮಾನಿ ಗುರುಗಳ ಮಡಿಲಲ್ಲಿ ಬೆಳೆಯುತ್ತಿದ್ದ ಸಮಯದಲ್ಲಿ ಶ್ರೀಗಳವರಿಗೆ ಬಾಹ್ಯ ಜಗತ್ತಿನ ಪೂರ್ಣ ಪರಿಚಯವಾಗುತ್ತಿರಲಿಲ್ಲ. ಮೈಸೂರು ನಗರಕ್ಕೆ ಬಂದಮೇಲೆ ತನ್ನ ಸಹಪಾಠಿಗಳು ಜೀವನ ರಥವನ್ನು ನಡೆಸಲು ಎಷ್ಟು ಪರಿತಪಿಸುತ್ತಿರುವರೆಂಬುದರ ಮನವರಿಕೆಯಾಗತೊಡಗಿತು. ದಾರುಣ ದೃಶ್ಯಗಳನ್ನು ಕಂಡು ಮನ ಮರುಗುತ್ತಿತ್ತು. ಅಂತಹವರಿಗಾಗಿ ಏನನ್ನಾದರೂ ಮಾಡಲು ಸಾಧ್ಯವೇ ಎಂದು ಮನಸ್ಸು ತವಕಪಡುತ್ತಿತ್ತು. ಶ್ರೀಮಠಕ್ಕೆ ಭವಿಷ್ಯದಲ್ಲಿ ಉತ್ತರಾಧಿಕಾರಿಯಾಗುವ ತನ್ನ ಶಿಷ್ಯನ ಮನದಲ್ಲಿ ಯಾವ ಕೊರಗೂ ಬರಬಾರದೆಂದು ಯಾವುದಕ್ಕೂ ಕೊರತೆಯಿರದಂತೆ ಶ್ರೀಗಳವರು ಸರ್ವಸೌಲಭ್ಯವನ್ನು ಒದಗಿಸುತ್ತಿದ್ದರು.

ಏಳಿಯು ಕಂದ ಕೊರಗದಿರಲೆಂದು ಶುಚಿರುಚಿಯಾದ ಭಕ್ಷ್ಯಭೋಜ್ಯಗಳನ್ನು ತಯಾರಿಸಿಕೊಂಡು ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಸುತ್ತೂರಿನಿಂದ ಮೈಸೂರಿಗೆ ಎತ್ತಿನ ಗಾಡಿಯಲ್ಲಿ ಪ್ರತಿವಾರ ತಪ್ಪದೆ ಪ್ರಯಾಣಮಾಡಿ ತನ್ನ ಶಿಷ್ಯನ ಆರೈಕೆ ಮಾಡುತ್ತಿದ್ದರು. ಶ್ರೀಮಂತ ಭಕ್ಷ್ಯಭೋಜ್ಯಗಳ ರುಚಿಯನ್ನೇ ಕಂಡರಿಯದ ಅನೇಕ ನಾಲಿಗೆಗಳಲ್ಲಿ ನೀರೂರಿದಾಗ ಲೋಕಕಲ್ಯಾಣಕಾರಿ ಮಹಾನುಭಾವರು ತನ್ನ ಸುಖಸಂತೋಷವನ್ನೇ ಎಂದಾದರೂ ಹಿರಿದೆಂದು ಭಾವಿಸುವರೇ? ತನಗೆ ಅರ್ಪಿತವಾಗುತ್ತಿದ್ದುದು ಅತ್ಯಲ್ಪ. ಆದರ ಅಪಾರ ಲಾಭವನ್ನು ಪಡೆಯುತ್ತಿದ್ದವರೆಲ್ಲಾ ಅನ್ಯರೇ. ಈ ಬೆಳವಣಿಗೆ ಶ್ರೀಗಳವರ ಜೀವನದಲ್ಲಿ ಅತ್ಯಂತ ಶ್ರೇಷ್ಠ ಪರಿಣಾಮವನ್ನುಂಟುಮಾಡಿದೆ. ತಮ್ಮ ಕಣ್ಣೆದುರಿನಲ್ಲಿ ಯಾರು ಮನಸ್ಸು ತೃಪ್ತಿಯಾಗುವವರೆಗೆ ನಿಸ್ಸಂಕೋಚವಾಗಿ ಭಕ್ಷ್ಯಭೋಜ್ಯಗಳನ್ನು ಭುಂಜಿಸುವರೋ ಅವರನ್ನು ಕಣ್ತುಂಬ ನೋಡಿ ಆನಂದಿಸುವುದರಲ್ಲೇ ತೃಪ್ತರಾಗುವ ಪ್ರವೃತ್ತಿ ಇಂದಿಗೂ ಶ್ರೀಗಳವರಲ್ಲಿ ಮನೆಮಾಡಿಕೊಂಡಿದೆ. ಗುರುಗಳಾಗಲಿ ಹಿರಿಯರಾಗಲಿ ಕಿರಿಯರಾಗಲಿ ಶ್ರೀಗಳವರ ಕೃಪಾಶ್ರಯದ ಉಪಚಾರಕ್ಕೆ ಸಿಕ್ಕಿದವರು ಅದನ್ನು ಜೀವನಪರ್ಯಂತ ಮರೆಯುವುದಿಲ್ಲ. ಏಕೆಂದರೆ ಶ್ರೀಗಳವರು ಅತಿಥಿಗಳಿಗೆ ನೀಡುವ ಭೋಜ್ಯಗಳು ಕೇವಲ ಅಂಗಡಿಯಲ್ಲಿ ಮಾರುವ ಮತ್ತು ಅಡಿಗೆಯವನು ತಯಾರಿಸಿದ ವಸ್ತುಗಳಷ್ಟೇ ಆಗಿರುವುದಿಲ್ಲ. ಅದರೊಡನೆ ತಮ್ಮ ಅಂತಃಕರಣಪೂರ್ವಕವಾದ ವಾತ್ಸಲ್ಯದ ಅಮೃತಧಾರೆ ಹರಿದಿರುತ್ತದೆ. ಅದು ಮನಸ್ಸಿಗೂ ದೇಹಕ್ಕೂ ತೃಪ್ತಿಯನ್ನು ತಂದುಕೊಡುತ್ತದೆ.

ಮೈಸೂರಿನಲ್ಲಿ ಶ್ರೀಗಳವರ ವಿದ್ಯಾಭ್ಯಾಸ ನಿರಾತಂಕವಾಗಿ ಮುಂದುವರಿಯಲು ಹಿರಿಯ ಜಗದ್ಗುರುಗಳವರು ಸರ್ವವ್ಯವಸ್ಥೆಯನ್ನು ಮಾಡಿದ್ದರು. ಆದರೆ ಉದಾರಚರಿತರಾದ ನಮ್ಮ ಜಗದ್ಗುರುಗಳವರಿಗೆ ತಾವು ವಿದ್ವಾಂಸರಾಗುವುದಕ್ಕಿಂತಲೂ ಅನ್ಯರು ವಿದ್ವಾಂಸರಾಗುವುದರಲ್ಲಿ ಅಪಾರ ಆಸಕ್ತಿ ಬೆಳೆದಿತ್ತು. ಅಂದರೆ ಅವರಿಗೆ ಜ್ಞಾನಾರ್ಜನೆಯಲ್ಲಿ ಆಸಕ್ತಿಯಿರಲಿಲ್ಲವೆಂದಲ್ಲ.

ತಮ್ಮ ಹಿರಿಯ ಜಗದ್ಗುರುಗಳವರ ಅಪ್ಪಣೆಯ ವಿನಹ ಯಾವ ಕಾರ್ಯವನ್ನೂ ಮಾಡಬಯಸಿದವರಲ್ಲ. ಆದರೆ ಅವರ ಅಪ್ಪಣೆಯಿಲ್ಲದೆ ಅಂದೇ ಕಾಶೀಕ್ಷೇತ್ರದಲ್ಲಿ ವಿಖ್ಯಾತ ವಿದ್ವಾಂಸರಾಗಿದ್ದ ಮೈಸೂರು ಅರಮನೆ ಪಂಚಗವಿ ಮಠಾಧ್ಯಕ್ಷರಾದ ಶ್ರೀ॥ ನಿ॥ ಪ್ರ॥ ಸ್ವ॥ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಜ್ಞಾನಾರ್ಜನೆ ಮಾಡಬೇಕೆಂದು ಹಂಬಲಿಸಿ ಅಲ್ಲಿಗೆ ತೆರಳಿದ್ದರಷ್ಟೆ. ಆದರೆ ಹಿರಿಯ ಜಗದ್ಗುರುಗಳವರಿಗೆ ತಮ್ಮ ಶಿಷ್ಯರನ್ನು ಒಂದು ವಾರ ನೋಡದಿದ್ದರೆ ಮನಸ್ಸಿಗೆ ಸಮಾಧಾನವೇ ಇರುತ್ತಿರಲಿಲ್ಲ. ಆದುದರಿಂದ ಶ್ರೀಗಳವರು ಕಾಶೀಕ್ಷೇತ್ರದಲ್ಲಿ ವಿದ್ಯಾಭ್ಯಾಸ ಮುಂದುವರಿಸುವುದನ್ನು ಅವರು ಅಪೇಕ್ಷಿಸಲಿಲ್ಲ. ಅಲ್ಲದೆ ಶ್ರೀ॥ ನಿ॥ ಪ್ರ॥ ಸ್ವ॥ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರು ಶ್ರೀಗಳವರ ಭವಿಷ್ಯ ಜೀವನವನ್ನು ತಮ್ಮ ಯೋಗ ದೃಷ್ಟಿಯಿಂದ ಗಮನಿಸಿದರು. ಅವರು ವಿಶ್ವವಿದ್ಯಾನಿಲಯದ ಪದವಿ ಗಳಿಸುವುದಕ್ಕಿಂತ ಪರಮಾತ್ಮನ ವಿಶ್ವವಿದ್ಯಾನಿಲಯದಲ್ಲಿ ಅತ್ಯುನ್ನತ ಪದವಿ ಗಳಿಸಬೇಕಾಗಿದೆ ಎಂದು ಭಾವಿಸಿದರು. ಆದುದರಿಂದ ಶ್ರೀಗಳವರು ಕಾಶೀ ಕ್ಷೇತ್ರದಿಂದ ಹಿಂದಿರುಗಬೇಕಾಯಿತು. ಹಿರಿಯ ಜಗದ್ಗುರುಗಳವರು ನಿಷ್ಠುರವಾದಿಗಳು ಮತ್ತು ದೃಢಸಂಕಲ್ಪಚಿತ್ತರೆಂಬುದು ಸರ್ವವೇದ್ಯ ಸಂಗತಿ. ತಮ್ಮ ಉತ್ತರಾಧಿಕಾರಿಯು ಕಾಶಿಗೆ ಹೋಗುವಾಗ ತಮ್ಮ ಅಪ್ಪಣೆಯಿಲ್ಲದೆ ಹೋದರೆಂದು ಕುಪಿತರಾಗಲಿಲ್ಲ. ಆದರೆ ಅವರನ್ನು ಅಷ್ಟು ದೂರ ದೇಶದಲ್ಲಿ ಬಿಟ್ಟಿರಲು ಅವರ ಮನಸ್ಸು ಒಡಂಬಡಲಿಲ್ಲ. ತಾವೇ ತಮ್ಮ ಪ್ರಯಾಸವನ್ನು ಲೆಕ್ಕಿಸದೆ ಕಾಶಿಗೆ ತೆರಳಿ ಶ್ರೀ ಗೌರೀಶಂಕರ ಸ್ವಾಮಿಗಳವರ ಅಭಿಮತವನ್ನು ಪಡೆದು ಮೈಸೂರಿಗೆ ಕರೆತಂದು ಅವರು ಅಪೇಕ್ಷಿಸುವ ಪ್ರಸಿದ್ಧ ಪಂಡಿತರ ಬಳಿಯಲ್ಲಿ ವಿದ್ಯಾಭ್ಯಾಸ ಮಾಡುವ ಸೌಲಭ್ಯಗಳನ್ನು ಏರ್ಪಡಿಸಿದರು. ಹೀಗೆ ಶ್ರೀಗಳವರ ವಿದ್ಯಾಭ್ಯಾಸ ಮುಂದುವರಿದಿತ್ತು.

## ಸಮಾಜದ ಬೆಳಕಾಗಿ

ಶ್ರೀಗಳವರು ಸಂಜನಿಸಿದ್ದು ಶಾಲಿವಾಹನ ಶಕ ೧೮೩೮ನೆಯ ನಳನಾಮ ಸಂವತ್ಸರದ ಭಾದ್ರಪದ ಮಾಸದ ಶುದ್ಧ ಪಾಡ್ಯದಲ್ಲಿ, ಅಂದರೆ ತಾರೀಖು ೨೯-೮-೧೯೧೬ರಲ್ಲಿ. ತಾ. ೨೪-೨-೧೯೨೮ರಲ್ಲಿ ಅವರಿಗೆ ಸುತ್ತೂರು ವೀರ ಸಿಂಹಾಸನದ ವೀರಪಟ್ಟಾಧಿಕಾರ ಸೂತ್ರವು ಕೊಡಲ್ಪಟ್ಟಿತು. ಅಂದು ಅವರಿಗೆ ಹನ್ನೆರಡು ವರ್ಷ ವಯಸ್ಸು. ವಯಸ್ಸು ಕಿರಿದಾದರೂ ಮನಸ್ಸು ಹಿರಿದಾಗಿತ್ತು. ಜವಾಬ್ದಾರಿ ಬೃಹತ್ತಾಗಿತ್ತು. ಮಹಾಸಂಸ್ಥೆಯ ಬೃಹತ್ ಜವಾಬ್ದಾರಿಯನ್ನು ಹೊರಲೇಬೇಕೆಂಬ ಅರಿವು ಅವರಿಗಿತ್ತು. ಪಟ್ಟಾಧಿಕಾರದ ನಂತರ ಮೈಸೂರಿನಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಲಾಗಿತ್ತು. ಮಠಾಧಿಕಾರಿಯಾಗುವವರು ಸಂಸ್ಕೃತ ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬೇಕು. ಆಂಗ್ಲಭಾಷೆಯನ್ನು ಕಲಿಯು

ವುದು ಮೈಲಿಗೆಯೆಂಬ ಭಾವನೆಯು ಅಂದಿನ ಜನಮನದಲ್ಲಿತ್ತು. ಹಿರಿಯ ಜಗದ್ಗುರುಗಳವರು ಸಹ ಸಂಪ್ರದಾಯನಿಷ್ಠರಾಗಿದ್ದುದರಿಂದ ಶ್ರೀಗಳವರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಗಳಿಸಲೆಂಬುದೇ ಅವರ ಬಯಕೆಯಾಗಿತ್ತು. ಆದರೆ ಶ್ರೀಮಠದ ಆಡಳಿತವು ಫಲಕಾರಿಯಾಗಲು ಲೌಕಿಕಜ್ಞಾನವು ಅಗತ್ಯ. ಅದಕ್ಕೆ ಇಂದಿನ ಸಮಾಜದಲ್ಲಿ ಆಂಗ್ಲಭಾಷೆಯ ಅರಿವೂ ಬೇಕೆಂದು ಶ್ರೀಗಳವರು ಮನಗಂಡು ಸ್ವತಃ ಆಂಗ್ಲಭಾಷೆಯ ಅಭ್ಯಾಸವನ್ನು ಮುಂದುವರಿಸಿದರು. ಸಂಸ್ಕೃತ ಭಾಷಾಪರೀಕ್ಷೆಗೆ ಆಂಗ್ಲಭಾಷೆಯನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಆಂಗ್ಲಭಾಷಾಜ್ಞಾನವನ್ನು ಸಂಪಾದಿಸಿಕೊಂಡರು. ಆಂಗ್ಲಭಾಷಾಭ್ಯಾಸಿ ವಿದ್ಯಾರ್ಥಿಗಳೊಡನೆ ಬೆರೆತು ಅವರ ಕಷ್ಟಸುಖಗಳನ್ನು ಅರಿಯುತ್ತಿದ್ದರು. ಆಂಗ್ಲಭಾಷಾಪತ್ರಿಕೆಗಳನ್ನು ಓದಿ ಭಾರತರಾಷ್ಟ್ರೀಯ ವಿದ್ಯಮಾನಗಳ ಅರಿವನ್ನು ಮಾಡಿಕೊಳ್ಳುತ್ತಿದ್ದರು. ದೇಶದ ಅಂದಿನ ಸ್ಥಿತಿಗತಿಯನ್ನು ಗಂಭೀರವಾಗಿ ದೃಷ್ಟಿಸಿದ ಶ್ರೀಗಳವರು ಭೌತಿಕಜ್ಞಾನವನ್ನು ಕಡೆಗಣಿಸಬಾರದೆಂಬ ಅಭಿಮತಕ್ಕೆ ಬಂದರು. ೧೯೪೦ಕ್ಕೆ ಮುಂಚೆ ಮೈಸೂರು ಜಿಲ್ಲೆಯಲ್ಲಿ ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುವವರು ಹಳ್ಳಿಗೊಬ್ಬರು ಸಿಗುತ್ತಿರಲಿಲ್ಲ. ಎಲ್ಲಾ ತಾಲ್ಲೂಕುಗಳಲ್ಲಿ ಪ್ರೌಢಶಾಲೆಗಳಿರಲಿಲ್ಲ. ಪ್ರೌಢಶಾಲಾಭ್ಯಾಸಕ್ಕೆ ಜಿಲ್ಲೆಯ ಬಹುಭಾಗದಿಂದ ಮೈಸೂರು ನಗರಕ್ಕೆ ಬರುತ್ತಿದ್ದರು. ಇನ್ನು ಕಾಲೇಜು ಶಿಕ್ಷಣಕ್ಕಾಗಿ ಇಡೀ ಮೈಸೂರುರಾಜ್ಯದಿಂದ ಬಹುಜನರು ಮೈಸೂರು ನಗರಕ್ಕೆ ಬರಲೇಬೇಕಾಗಿತ್ತು. ಹೀಗೆ ಬಂದವರು ಅಶನ ವಸತಿಗಳಿಗಾಗಿ ಅನುಭವಿಸುತ್ತಿದ್ದ ಕಾರ್ಪಣ್ಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿದರು. ಮೈಸೂರು ಜಿಲ್ಲೆಯಿಂದ ಕಾಲೇಜು ಶಿಕ್ಷಣ ಪಡೆಯಲು ಬರುತ್ತಿದ್ದವರ ಸಂಖ್ಯೆ ಅತ್ಯಲ್ಪ. ಅದಕ್ಕೆ ಹಳ್ಳಿಗಾಡಿನಲ್ಲಿದ್ದ ಬಡತನ ಮುಖ್ಯ ಕಾರಣವಾಗಿತ್ತು. ದೂರದೂರದ ಜಿಲ್ಲೆಗಳಿಂದ ಮೈಸೂರಿಗೆ ಅಧಿಕ ಸಂಖ್ಯೆಯಲ್ಲಿ ಬಂದು ಕಾಲೇಜಿನಲ್ಲಿ ಅಭ್ಯಾಸ ಮಾಡುವವರನ್ನು ನೋಡಿ ಮೈಸೂರು ಜಿಲ್ಲೆಯ ಗ್ರಾಮಾಂತರದ ಜನತೆಯ ಬಗೆಗೆ ತೀವ್ರ ಅನುಕಂಪವುಂಟಾಯಿತು. ಆದರೇನು? ಶ್ರೀಮಠದ ಧಾರ್ಮಿಕ ಅಧಿಕಾರಸೂತ್ರ ಅವರಿಗೆ ಪ್ರಾಪ್ತವಾಗಿತ್ತೇ ವಿನಹ ವ್ಯಾವಹಾರಿಕಸೂತ್ರ ಸಿಕ್ಕಿರಲಿಲ್ಲ. ಆದರೂ ಅಂತರಂಗದ ಕಳಕಳಿ ಸುಪ್ತವಾಗಿ ಉಳಿಯಲಿಲ್ಲ. ಹಿರಿಯ ಜಗದ್ಗುರುಗಳವರು ಶ್ರೀಗಳವರ ವಿದ್ಯಾಭ್ಯಾಸಕ್ಕೆ ಮಾಡಿದ ವ್ಯವಸ್ಥೆಯಲ್ಲಿ ತಮ್ಮ ಪೋಷಣೆಯನ್ನು ಸರಳಗೊಳಿಸಿಕೊಂಡು ಆಂಗ್ಲಶಿಕ್ಷಣ ಪಡೆಯುತ್ತಿದ್ದ ಹಲವುಮಂದಿ ಮೇಧಾವಿಗಳಿಗೆ ಗುಪ್ತನೆರವು ನೀಡುತ್ತಿದ್ದರು. ಯುವಕರಲ್ಲಿ ಎಂತಹ ಪ್ರತಿಭೆಯಿದ್ದರೂ ಅದು ಬಡತನದ ಸುಳಿಯಲ್ಲಿ ಸಿಕ್ಕಿ ನಾಶವಾಗುವುದನ್ನು ಶ್ರೀಗಳವರು ಸಹಿಸದಾದರು. ಹಗಲಿರುಳು ಅದೇ ಚಿಂತೆಯಲ್ಲಿ ತೊಡಗಿದರು. ಈ ದಿಕ್ಕಿನಲ್ಲಿ ಏನಾದರೂ ಸೇವೆ ಸಲ್ಲಿಸಲೇಬೇಕೆಂದು ಮನಸ್ಸು ಹಾತೊರೆಯುತ್ತಿತ್ತು.

## ಕಾಯಕವೇ ಕೈಲಾಸ

ಮಾನವರಲ್ಲಿ ಕಾರ್ಯವನ್ನು ಕೈಗೊಳ್ಳುವವರಲ್ಲಿ ಅನೇಕ ವರ್ಗಗಳಿವೆ. ಯಾವುದೇ ಕಾರ್ಯಮಾಡಿದರೂ ಅದು ಇಂತಿಷ್ಟು ಗುರಿಯನ್ನುಮುಟ್ಟಲೇಬೇಕು. ಅದು ಸಾಧ್ಯವೆನಿಸುವವರೆಗೆ ಕಾರ್ಯವನ್ನೇ ಆರಂಭಿಸದವರು ಒಂದುವರ್ಗ. ತಾನು ಕೈಗೊಳ್ಳುವ ಕಾರ್ಯ ತನ್ನ ಕಲ್ಪನೆಯ ಗುರಿಯನ್ನು ಮುಟ್ಟಲು ಸಾಧ್ಯವೇ ಇಲ್ಲವೆಂದು ನಿಶ್ಚಯಿಸಿ ಕಾರ್ಯಾರಂಭವನ್ನೇ ಮಾಡದವರು ಮತ್ತೊಂದು ವರ್ಗ. ಅನುಕೂಲಗಳಿರಲಿ, ಇಲ್ಲದಿರಲಿ, ತನ್ನ ಗುರಿಯನ್ನು ತಾವು ಮುಟ್ಟುತ್ತೇವೆಂಬ ದೃಢಸಂಕಲ್ಪಚಿತ್ತರಾಗಿ ಕಾರ್ಯಾರಂಭಮಾಡುವವರು ಮತ್ತೊಂದು ವರ್ಗ. ಶ್ರೀಮಠದ ಹಿರಿಯ ಜಗದ್ಗುರುಗಳವರು ಅವರಲ್ಲಿ ಒಂದನೆಯ ವರ್ಗಕ್ಕೆ ಸೇರಿದವರು. ಎಲ್ಲವೂ ಸಮರ್ಪಕವಾಗಿ ಎಡರು ತೊಡರಿಲ್ಲದೆ ನಡೆಯಬೇಕು. ಹಾಗಿದ್ದರೆ ಮಾತ್ರ ಕಾರ್ಯಾರಂಭ ಮಾಡಬೇಕೆಂಬ ಮನೋಭಾವ ಉಳ್ಳವರು. ಅಷ್ಟೊಂದು ಬೃಹತ್ತಾದ ವ್ಯವಸ್ಥೆ ಮಾಡಲು ಶ್ರೀಮಠಕ್ಕೆ ಸಾಮರ್ಥ್ಯವಿದೆಯೆಂದು ಅವರು ಊಹಿಸಿರಲಿಲ್ಲ. ಆದುದರಿಂದ ಶ್ರೀಪೀಠದ ಗೌರವಕ್ಕೆ ಚ್ಯುತಿಬರಬಾರದೆಂದು ಭಾವಿಸುತ್ತಿದ್ದ ಅವರು ಮುಂದಕ್ಕೆಕೈನೀಡಿ ಮತ್ತೊಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಸುಲಭವಾಗಿ ಅನುಮತಿ ಕೊಡುತ್ತಿರಲಿಲ್ಲ. ಇದೊಂದು ಕಾರ್ಯವನ್ನು ಕೈಗೊಳ್ಳುವಂತೆ ಅಂತರಂಗದ ಪ್ರೇರಣೆಯಾಗಿದೆ. ಇದು ಪರಮಾತ್ಮನ ಆಣತಿಯಲ್ಲದೆ ಬೇರಲ್ಲ. ಮುಂದಿನದನ್ನು ಚಿಂತಿಸುತ್ತಾ ಕುಳಿತುಕೊಳ್ಳುವುದು ದೈವಪ್ರೇರಣೆಗೆ ಧಿಕ್ಕಾರ ಹಾಕಿದಂತಾಗುತ್ತದೆಂದು ಭಾವಿಸಿದವರು ಶ್ರೀಗಳವರು. ಇಂತಹ ಧೀರವರ್ಗಕ್ಕೆ ಸೇರಿದವರು ಲೋಕದಲ್ಲಿ ವಿರಳ. ಯಾರು ಯಾವುದೇ ರೀತಿಯ ಸ್ವಾರ್ಥಭಾವನೆಯಿರದೆ ತಾನು ಕೈಗೊಂಡ ಕಾರ್ಯವನ್ನು ಸೇವೆಯೆಂಬ ಭಾವನೆಯಿಂದ ನಡೆಸುವರೋ ಅವರು ಸಮಾಜದ ಶ್ರೇಷ್ಠತಮ ವ್ಯಕ್ತಿಗಳು. ಆದುದರಿಂದ ಅವರು ಈ ಕಾರ್ಯವನ್ನು ಕೈಗೊಳ್ಳಲೇಬೇಕೆಂದು ಸಂಕಲ್ಪಿಸಿ ಅನೇಕ ದಿನ ಚಿಂತಿಸಿದರು. ಆದರ ರೀತಿ

ನೀತಿಗಳನ್ನು ಆಗುಹೋಗುಗಳನ್ನು ತೀವ್ರವಾಗಿ ಅಧ್ಯಯನ ಮಾಡಿದರು. ಆದರೆ ಅವರ ಅಂತರ್ವಾಣಿ ಈ ಕಾರ್ಯವನ್ನು ಕೈಗೊಳ್ಳಲೇಬೇಕೆಂದು ಪ್ರಚೋದಿಸುತ್ತಿತ್ತು. ಯಾವ ಕಾರ್ಯವನ್ನು ಕೈಗೊಂಡರೂ ದೈವಬಲವನ್ನು ಅವಲಂಬಿಸಿಕೊಂಡೇ ಆರಂಭಿಸುವುದು ಶ್ರೀಗಳವರ ಸಹಜಪ್ರವೃತ್ತಿ. ಅಂತೆಯೇ ಅವರು ಆದಿಜಗದ್ಗುರುಗಳವರ ಕ್ಷೇತ್ರದಲ್ಲಿ ಧ್ಯಾನಮಗ್ನರಾದರು. ತಾವು ನೆನೆದ ಕಾರ್ಯದಲ್ಲಿ ಧೈರ್ಯದಿಂದ ಮುನ್ನಡೆಯುವಂತೆ ಭರವಸೆ ದೊರೆಯಿತು. ಅದೇ ಶ್ರೀಗಳವರ ಭವಿಷ್ಯದ ರಕ್ಷಾಕವಚವಾಯಿತು.

ಹಣಕ್ಕೆ ಅಪಾರ ಬೆಲೆಯಿದ್ದ ಕಾಲ ಅದು. ವಸ್ತು ಯಾವುದಾದರೂ ಸಿಗುತ್ತಿತ್ತು. ಆದರೆ ಹಣ ಸಿಗುವುದು ದುರ್ಲಭವಾಗಿತ್ತು. ಇಂದು ಹಣಕ್ಕೆ ಬೆಲೆ ಇಳಿದಿದೆ. ಹಣ ಸಿಗಬಹುದು, ಆದರೆ ವಸ್ತುಗಳು ಸಿಕ್ಕುತ್ತಿಲ್ಲ. ಅಂತಹ ಕಠಿಣ ಕಾಲದಲ್ಲಿ ಅಧಿಕ ವೆಚ್ಚದ ಕಾರ್ಯವನ್ನು ಸಂಪತ್ತಿನ ಆಶ್ರಯವಿಲ್ಲದೆ ಅವಲಂಬಿಸುವುದು ಸುಲಭದ ಕೆಲಸವಲ್ಲ. ಗುರುವಿನಾಣತಿಯಂತೆ ಕಾರ್ಯಾರಂಭ ಮಾಡುತ್ತಿದ್ದೇನೆ.

ಎನ್ನವಾವುಕ್ಷೇಮ ನಿಮ್ಮದಯ್ಯ,
ಎನ್ನ ಹಾನಿವೃದ್ಧಿ ನಿಮ್ಮದಯ್ಯ,
ಎನ್ನ ಮಾನಾಪಮಾನ ನಿಮ್ಮದಯ್ಯ,
ಬಳ್ಳಿಗೆ ಕಾಯಿದಿಮ್ಮಿತ್ತೆ ಕೂಡಲಸಂಗಮದೇವಾ.

ಎಂಬ ಬಸವಣ್ಣನವರ ಅಮೃತವಾಣಿಯ ಪ್ರೇರಣೆ ಪಡೆದರು. ಲೌಕಿಕ ವಿದ್ಯೆಯನ್ನು ಕಲಿಯುವ ಮಕ್ಕಳಿಗೂ ಅಶನ ವಸತಿ ಸೌಕರ್ಯಗಳನ್ನು ಒದಗಿಸುವ ಸಂಕಲ್ಪ ಮಾಡಿದರು. ಅದಕ್ಕಾಗಿ ಸಂಸ್ಥೆಯನ್ನೇ ಪ್ರಾರಂಭಿಸುವ ಆಲೋಚನೆ ಮಾಡಿದರು. ಯೋಜನೆಗಳು ಮಾನವನ ಮನದಲ್ಲಿ ಪುಂಖಾನುಪುಂಖವಾಗಿ ಬಂದು ಹೋಗುತ್ತವೆ. ಆದರೆ ಅವುಗಳಿಗೆ ರೂಪುಗೊಟ್ಟು ಕಾರ್ಯಗತಗೊಳಿಸುವುದು ಸುಲಭ ಸಾಧ್ಯವಲ್ಲ. ಕ್ಯಾತಸಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತಪಾಠಶಾಲೆಯಲ್ಲಿ ತಾವೂ ವಿದ್ಯಾರ್ಥಿಗಳಾಗಿ, ನಿಲಯದ ಕಾರ್ಯನಿರ್ವಾಹಕರಾಗಿ, ವಿದ್ಯಾರ್ಥಿ ಕ್ಷೇಮಚಿಂತಕರಾಗಿ ಅಲ್ಲೇ ತಮ್ಮ ಸೇವಾಕ್ಷೇತ್ರದ ವಿಸ್ತರಣೆಗೆ ಸನ್ನಾಹ ಮಾಡಿದರು. ಶ್ರೀಗಳವರ ವ್ಯವಸ್ಥೆಗಾಗಿ ಮತ್ತು ಪಾಠಶಾಲೆಯ ವ್ಯವಸ್ಥೆಗಾಗಿ ಹಿರಿಯ ಜಗದ್ಗುರುಗಳವರು ನಿರ್ದಿಷ್ಟ ಅಳತೆಯಲ್ಲಿ ದವಸ ಧಾನ್ಯಗಳನ್ನು ಒದಗಿಸುತ್ತಿದ್ದರು. ಐವತ್ತು ಜನಕ್ಕೆ ಬರುವುದರಲ್ಲಿ ಮತ್ತೆ ಐದು ಜನಕ್ಕಾದರೂ ನೆರವಾಗುವ ವ್ಯವಸ್ಥೆ ಮಾಡುತ್ತಿದ್ದರು. ತಮಗೆಂದು ಬರುವುದರಲ್ಲಿ ಒಬ್ಬಿಬ್ಬರಿಗಾದರೂ ಆಹಾರವನ್ನೊದಗಿಸುತ್ತಿದ್ದರು. ಒಂದು ಸಂಸ್ಥೆಯನ್ನು ಆರಂಭಿಸಬೇಕೆಂಬ ಬಯಕೆ ಬೇರೂರಿದಾಗ ಅದನ್ನು ಈಡೇರಿಸಲು ಅನ್ಯಮಾರ್ಗವೇ ಇರಲಿಲ್ಲ. ಪಟ್ಟಾಧಿಕಾರದಲ್ಲಿ ಬಳುವಳಿಯಾಗಿ ಬಂದ ಬಂಗಾರದ ಉಂಗುರವನ್ನು ಮಾರಿ ಬಂದ ಹಣವಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು, ಮಣ್ಣಿನ ಪಾತ್ರೆಗಳನ್ನು ಕೊಂಡುತಂದು ಹತ್ತುಮಂದಿಗೆ ಅನ್ನ ಕೊಡುವ ಸಂಸ್ಥೆಯ ಅಂಕುರಾರ್ಪಣ ಮಾಡಿದರು. ಭಕ್ತರು ಕೊಡುವ ಕಾಣಿಕೆಯನ್ನು ಪೋಷಕವಾಗಿ ಬಳಸಿದರು. ಆತ್ಮೀಯರೆಲ್ಲರಿಂದಲೂ ಸಾಲಮಾಡಿ ಸಂಸ್ಥೆಯನ್ನು ಮುನ್ನಡೆಸಿದರು. ಪುಟ್ಟ ಸಂಸ್ಥೆಯ ಪ್ರಾರಂಭದ ನಂತರ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಸಂಘದ ಚಟುವಟಿಕೆಗಳಿಗೆ ಶ್ರೀಗಳವರಿಂದ ಪ್ರೇರಣೆ ಪಡೆದರು. ವಿದ್ಯಾರ್ಥಿಸಂಘದ ಸಮಾರಂಭವೊಂದರಲ್ಲಿ ಅಂದಿನ ಹಿರಿಯ ಅಧಿಕಾರಿಗಳಾದ ಶ್ರೀ ಅನಂತರಾಮನ್‌ರವರು ಶ್ರೀಗಳವರು ಕಿರಿಯ ವಯಸ್ಸಿನಲ್ಲಿ ಕೈಗೊಂಡ ಸಾಹಸವನ್ನು ಮುಕ್ತಕಂಠದಿಂದ ಪ್ರಶಂಸೆ ಮಾಡಿದರು. ಶ್ರೀಮಠವು ಭಕ್ತರ ಕಲ್ಯಾಣಕ್ಕೆ ನೆರವಾಗುತ್ತಿರುವ ಅನೇಕ ಪ್ರಸಂಗಗಳನ್ನು ನೆನಪು ಮಾಡಿಕೊಂಡರು. ಶ್ರೀ ಶಿವರಾತ್ರೀಶ್ವರರ ನಾಮಾಂಕಿತದಲ್ಲಿ ಈ ವಿದ್ಯಾರ್ಥಿನಿಲಯದ ಹೆಸರು ಮತ್ತು ಅಂದಿನ ಸಮಾರಂಭದ ವರದಿಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ಶ್ರೀಗಳವರು ಆಂಗ್ಲಭಾಷಾಭ್ಯಾಸಿ ವಿದ್ಯಾರ್ಥಿಗಳಿಗೆ ನೆರವಾಗುವ ಪ್ರಯತ್ನ ನಡೆಸುತ್ತಿರುವ ಸಂಗತಿ ಹಿರಿಯ ಜಗದ್ಗುರುಗಳವರಿಗೆ ಸೂಕ್ಷ್ಮವಾಗಿ ತಿಳಿದಿತ್ತಾದರೂ ಹೀಗೆ ನಿರ್ದಿಷ್ಟರೂಪ ತಳೆದಿರುವುದರ ಪೂರ್ಣ ಮಾಹಿತಿ ದೊರೆತಿರಲಿಲ್ಲ. ಈ ಸಮಾರಂಭದ ನಂತರ ಕೆಲವು ಜನ ಹಿರಿಯ ವಿದ್ಯಾರ್ಥಿಗಳು ಮತ್ತು ಶ್ರೀಮಠದ ಶಿಷ್ಯರು ಈ ಪ್ರಸಂಗವನ್ನು ಹಿರಿಯ ಜಗದ್ಗುರುಗಳವರಲ್ಲಿ ಬಿನ್ನವಿಸಿಕೊಂಡು ಈ ಕಾರ್ಯವನ್ನು ಶಾಶ್ವತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡರು. ತಮ್ಮ ಕರಕಮಲಸಂಜಾತರ ಉದಾರತೆ ಮತ್ತು ಸಾಹಸ ಅಂತರಂಗದಲ್ಲಿ ಆನಂದವನ್ನುಂಟುಮಾಡುತ್ತಿತ್ತು. ಆದರೆ ಶ್ರೀಮಠದ ಆರ್ಥಿಕ ಪರಿಸ್ಥಿತಿ ಇಂತಹ ಬೃಹತ್‌ಕಾರ್ಯಕ್ಕೆ ನೆರವಾಗಬಲ್ಲದೇ? ಈ ಕಾರ್ಯ ಯಾವುದೋ ಒಂದೆರಡು ದಿನದ ಸಮಾರಂಭವನ್ನು ನಡೆಸುವಂತಹುದಲ್ಲ. ಶ್ರೀಮಠದಲ್ಲಿ ಪ್ರತಿವರ್ಷ ಯಾವುದಾದರೊಂದು ಕಾರ್ಯಕ್ರಮ ಜರುಗುತ್ತಿತ್ತು. ಸಾಮೂಹಿಕ

ವಿವಾಹ, ದೇವಾಲಯದ ನಿರ್ಮಾಣಕಾರ್ಯ, ಹಿರಿಯರ ಆರಾಧನೆ ಮುಂತಾದ ಕಾರ್ಯಗಳಲ್ಲಿ ಅಪಾರ ದಾಸೋಹ ನಡೆಯುತ್ತಿತ್ತು. ಅಲ್ಲಲ್ಲಿ ನಡೆಯುವ ವೀರಶೈವ ಸಮ್ಮೇಳನದ ವ್ಯವಸ್ಥೆಯ ಹೊಣೆಯೂ ಜಗದ್ಗುರುಗಳವರ ಪಾಲಿಗೇ ಬರುತ್ತಿತ್ತು. ಹೀಗಾಗಿ ವರ್ಷಂಪ್ರತಿ ನೂರಾರು ಪಲ್ಲ ಅಕ್ಕಿಯು ವೆಚ್ಚವಾಗುತ್ತಲೇ ಇತ್ತು. ಇಷ್ಟಾದರೂ ಒಂದು ಸಂಸ್ಥೆಯಲ್ಲಿ ನಿರಂತರವಾಗಿ ದಾಸೋಹ ನಡೆಸುವ ವ್ಯವಸ್ಥೆ ಮಾಡುವ ಬಗೆಗೆ ದೀರ್ಘವಾಗಿ ಆಲೋಚನೆ ಮಾಡಬೇಕಾಗಿತ್ತು.

ಶ್ರೀಮಠದ ಮುಂದಿನ ಕೀರ್ತಿಜ್ಯೋತಿಯಾಗಿ ಬೆಳಗುತ್ತಿರುವ ತಮ್ಮ ಕರಕಮಲಸಂಜಾತರ ಮನಸ್ಸಿಗೆ ನೋವನ್ನುಂಟುಮಾಡುವ ಅಥವಾ ಅವರನ್ನು ಸಂಕಟಕ್ಕೆ ಸಿಕ್ಕಿಸುವ ಮನೋಭಾವ ಜಗದ್ಗುರುಗಳಿಗಿರಲಿಲ್ಲ. ಭಕ್ತರೊಡನೆ ಸಮಾಲೋಚನೆ ನಡೆಸಿ ವಿದ್ಯಾರ್ಥಿನಿಲಯಕ್ಕೆ ಆಗುವ ವೆಚ್ಚವನ್ನು ದಯಪಾಲಿಸಲು ಒಪ್ಪಿದರು. ಈ ಮಹಾಕಾರ್ಯಕ್ಕೆ ವಿಶಿಷ್ಟ ರೂಪುಕೊಡಲು ಯತ್ನಿಸಿದರು. ಅದಕ್ಕಾಗಿ ಒಂದು ಕಟ್ಟಡವನ್ನು ಕೊಳ್ಳಲಾಯಿತು. ಪ್ರತ್ಯೇಕವಾಗಿ ಗದ್ದೆಯನ್ನು ದತ್ತಿಯಾಗಿ ಕೊಡಲಾಯಿತು. ಹೀಗೆ ಶ್ರೀ ಶಿವರಾತ್ರೀಶ್ವರರ ವಿದ್ಯಾರ್ಥಿನಿಲಯ ವಾಣೀವಿಲಾಸ ರಸ್ತೆಯಲ್ಲಿರುವ ತನ್ನ ಸ್ವಂತ ಕಟ್ಟಡದಲ್ಲಿ ಒಂದು ನಿರ್ಣಾಯಕ ಘಟ್ಟದಲ್ಲಿ ಮುನ್ನಡೆಯಲಾರಂಭಿಸಿತು. ಇದರಿಂದ ಶ್ರೀಗಳವರ ಕಾರ್ಯಕ್ಷೇತ್ರದಲ್ಲಿ ಸಹಸ್ರ ಭುಜಗಳು ಬೆಳೆದಂತಾಯಿತು. ಈ ವಿದ್ಯಾರ್ಥಿನಿಲಯದಲ್ಲಿ ಎಲ್ಲವೂ ಆದರ್ಶಮಯ. ಪ್ರತಿಭಾವಂತ ವಿದ್ಯಾರ್ಥಿಸಮೂಹ, ರಾಷ್ಟ್ರಪ್ರೇಮದ ವಿಚಾರಧಾರೆಯಿಂದ ತುಂಬಿದ ವಿದ್ಯಾಕ್ಷೇತ್ರ, ವಿದ್ಯಾರ್ಥಿಗಳ ಆನಂದಕ್ಕೆ ಯಾವ ಕುಂದು ಇಲ್ಲದಂತಹ ವ್ಯವಸ್ಥೆ, ಸ್ನಾನಕ್ಕೆ ಪ್ರತಿಯೊಬ್ಬರಿಗೂ ಬಿಸಿ ನೀರು, ನಿತ್ಯವೂ ರುಚಿಕರ ಭೋಜನ, ವಾರಕ್ಕೊಮ್ಮೆ ವಿಶೇಷ ಭಕ್ಷ್ಯಭೋಜ್ಯಗಳ ಔತಣ, ಔತಣಗಳಲ್ಲಿ ಬೊಗಸೆತುಂಬ ತುಪ್ಪ—ಹೀಗೆ ಇಲ್ಲಿನ ವೈಭವ ನಗರಕ್ಕೆ ಬಂದು ಜೀವನ ನಿರ್ವಹಿಸುತ್ತಿದ್ದ ಎಲ್ಲಾ ವಿದ್ಯಾರ್ಥಿಗಳ ನಾಲಗೆಯಲ್ಲೂ ನೀರೂರುವಂತೆ ಮಾಡಿತ್ತು. ಅಂತೆಯೇ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಆಕರ್ಷಿತರಾದರು. ಗ್ರಾಮಾಂತರದ ಗಣ್ಯರು ತಮ್ಮ ಮಕ್ಕಳಿಗೂ ಕಾಲೇಜು ಶಿಕ್ಷಣ ಕೊಡಲು ಸಾಧ್ಯವೆಂಬ ಸಮಾಧಾನದ ಉಸಿರು ಬಿಡುವಂತಾಯಿತು. ವಿದ್ಯಾರ್ಥಿನಿಲಯ ಬೆಳೆಯತೊಡಗಿತು. ಕೊಂಡ ಕಟ್ಟಡ ಕಿರಿದಾಯಿತು. ವಿದ್ಯಾರ್ಥಿ ಸಂಖ್ಯೆ ಹಿರಿದಾಯಿತು. ಶ್ರೀಮಠದಿಂದ ಬರುವ ದವಸಧಾನ್ಯಗಳು ಒಂದು ವಾರಕ್ಕೋ ಹತ್ತು ದಿನಕ್ಕೋ ಸಾಕಾಗುತ್ತಿತ್ತು. ಉಳಿದ ದಿನಗಳ ವ್ಯವಸ್ಥೆ ಮತ್ತೆ ಸಾಲ ಹಾಗೂ ತಮಗಾಗಿ ಬರುತ್ತಿದ್ದ ಸಣ್ಣಪುಟ್ಟ ಕಾಣಿಕೆಗಳಿಂದ ನಡೆಯಬೇಕಾಗಿತ್ತು. ಹೀಗಾಗಿ ಸಾಲದ ಹೊರೆ ಭಾರವಾಗುತ್ತಿತ್ತು. ಆದರೆ ಅದರ ಚಿಂತೆ ಶ್ರೀಗಳವರಿಗಿರಲಿಲ್ಲ. ಭಕ್ತಾದಿಗಳಲ್ಲಿ ಕೆಲವರಿಗೆ ಈ ಪ್ರಸಂಗ ಕಳವಳವನ್ನುಂಟುಮಾಡಿತ್ತು. ಶ್ರೀಮಠದ ಗೌರವಕ್ಕೆ ಇದರಿಂದ ಕುಂದು ಬರುತ್ತದೆಂಬ ಆತಂಕ ಅನೇಕರಲ್ಲಿ ಮೂಡಿತ್ತು. ಹಿರಿಯ ಜಗದ್ಗುರುಗಳವರಿಗೆ ಈ ಸಂಗತಿ ಗೊತ್ತಾಯಿತು. ಶ್ರೀಮಠದ ಗೌರವಸಂರಕ್ಷಣೆಗಾಗಿ ಜೀವವನ್ನೇ ಸವೆಸಿದ ಮಹಾಪುರುಷರಾದ ಅವರ ಮನಸ್ಸಿನ ಮೇಲೂ ತೀವ್ರ ಪರಿಣಾಮವಾಗಿತ್ತು. ಈ ಕಾರ್ಯ ಹೀಗೇ ಮುಂದುವರಿದರೆ ಹೇಗೆ ಎಂಬ ಚಿಂತೆ ಕಾಡಲಾರಂಭಿಸಿತು; ಆದರೆ ತಮ್ಮ ಉತ್ತರಾಧಿಕಾರಿಯ ಮನೋಭಾವನೆಗೆ ಕಳಂಕ ತರುವುದಕ್ಕೆ ಅವರ ಮನಸ್ಸು ಸಿದ್ಧವಿರಲಿಲ್ಲ. ಅವರನ್ನು ಒಂದು ಎಲ್ಲೆಗಟ್ಟಿನಲ್ಲಿ ನಡೆಯುವಂತೆ ಮಾಡಬೇಕೆಂದು ಪ್ರಯತ್ನಿಸಿದರು. ಅಂತೆಯೇ ಸಮಾಜದ ಗಣ್ಯರಿಂದ ಶ್ರೀಗಳವರಿಗೆ ಸೂಚನೆ ಕೊಡಲು ಯತ್ನಿಸಿದರು. ಶ್ರೀಗಳವರ ಧೈರ್ಯ, ಸಾಹಸ ಮತ್ತು ಕಾರ್ಯವ್ಯಾಪ್ತಿಯನ್ನು ಕಂಡು ಕಳವಳಗೊಂಡ ಭಕ್ತಾದಿಗಳು ತೀವ್ರವಾದ ಆಲೋಚನೆಯಲ್ಲಿ ಮಗ್ನರಾಗಿ ಶ್ರೀಪೀಠದ ಗೌರವಕ್ಕೆ ಚ್ಯುತಿಬರದಂತೆ ಒಂದು ಮಿತಿಯಲ್ಲಿ ನಡೆಯುವಂತೆ ಶ್ರೀಗಳವರನ್ನು ಪ್ರಾರ್ಥಿಸಿಕೊಳ್ಳಲು ನಿಶ್ಚಯಿಸಿದರು. ಸಮಾಲೋಚನೆ ನಡೆದಾಗ ಆರ್ಥಿಕ ದುಸ್ಥಿತಿಯ ಭಯಂಕರ ಚಿತ್ರವನ್ನು ಶ್ರೀಗಳವರ ಮುಂದಿಟ್ಟರು. ಶ್ರೀಪೀಠದ ಗೌರವದ ಪ್ರಶ್ನೆ ಚರ್ಚೆಗೆ ಬಂದಿತ್ತು. ಶ್ರೀಗಳವರು ಇದರಿಂದ ವಿಚಲಿತರಾಗಲಿಲ್ಲ. ಭಕ್ತಾದಿಗಳ ವಾದವನ್ನೆಲ್ಲ ಕೇಳಿ ಮುಗುಳ್ನಗುತ್ತಾ ಹೇಳಿದರು: "ನಾನು ನನ್ನ ಗುರುವಿನ ಕೃಪೆಪಡೆದು ಈ ಕಾರ್ಯವನ್ನು ಆರಂಭಮಾಡಿದ್ದೇನೆ. ಅವರ ಅಂತರಂಗದ ಪ್ರೇರಣೆಯಂತೆ ಕಾರ್ಯ ನಡೆಸುತ್ತಿದ್ದೇನೆ. ಇದರಿಂದ ಬರುವ ಮಾನ ಅಪಮಾನಗಳು ನಮ್ಮನ್ನು ಕೈಹಿಡಿದು ನಡೆಸುತ್ತಿರುವ ಆದಿಜಗದ್ಗುರು ಭಗವತ್ಪಾದರಿಗೆ ಸೇರಿದ್ದು. ಆದಕ್ಕೆ ನಾವೇಕೆ ಚಿಂತಿಸಬೇಕು" ಎಂದರು. "ಆದರೆ ಶ್ರೀಮಠದಿಂದ ನಡೆಯುವ ಕಾರ್ಯ ಶಾಶ್ವತವಾಗಿ ನಡೆಯಬೇಕಲ್ಲವೆ?" "ನಡೆದೇ ನಡೆಯುತ್ತದೆ. ಅದಕ್ಕೆ ಶಂಕೆ ಏಕೆ?" "ಶ್ರೀಗಳವರು ಅಪಾರ ಸಾಲದ ಸುಳಿಯಲ್ಲಿ ಸಿಕ್ಕಿರುವರೆಂಬ ವದಂತಿ ಊರ ತುಂಬಾ ಹಬ್ಬಿದೆ. ಈ ಪರಿಸ್ಥಿತಿಯಲ್ಲಿ ಈ ಕಾರ್ಯ ಶಾಶ್ವತವಾಗಿ ನಡೆಯುವುದು ಹೇಗೆ?" "ಸಾಲ ಕೊಡಿಸಿದ

ಗುರುವಿಗೆ ಅದನ್ನು ತೀರಿಸುವ ಪರಿವೆ ಇಲ್ಲದಿಲ್ಲ. ಆ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳದೇ ನಾವು ಹಂಬಲಿಸುತ್ತೇವೆ.” “ಇದು ಭಾವುಕತೆಯ ಮಾತಾಗಬಹುದು. ಆದರೆ ವ್ಯಾವಹಾರಿಕ ನಿಜಜೀವನದಲ್ಲಿ ನಡೆಯುವುದು ಸುಲಭವಲ್ಲ. ಒಂದು ದಿನ ದಾರುಣಸ್ಥಿತಿಗೆ ಬಂದು ಸಂಸ್ಥೆಯನ್ನು ಮುಚ್ಚಬೇಕಾಗಿ ಬಂದರೆ ಗತಿ ಏನು?” “ಅದಕ್ಕೆ ನಾವೇಕೆ ಚಿಂತಿಸಬೇಕು. ಲೋಕದಲ್ಲಿ ಯಾರೂ ಯಾವುದನ್ನೂ ಆಚಂದ್ರಾರ್ಕವಾಗಿ ನಡೆಸಿಲ್ಲ. ಹಾಗೆ ನಡೆಸುತ್ತೇವೆಂಬ ಕಲ್ಪನೆ ಮಾನವನ ಭ್ರಮೆ. ತಾನು ಇಂದು ಮಾಡಿದ ಕಾರ್ಯ ಅದೆಷ್ಟು ಫಲಕಾರಿಯೆಂಬುದನ್ನು ಗಮನಿಸಿದರೆ ಸಾಕು. ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವ್ಯಕ್ತಿ ಮುಂದೆ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಅವನು ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಾನೆ. ಹೀಗೆ ಅವನ ಸಂತಾನ ನಾಗರೀಕವಾಗುತ್ತದೆ. ಅವನು ಅಂತೆಯೇ ತನ್ನ ಬಂಧುಬಳಗದ ಹತ್ತಾರು ಜನರನ್ನು ವಿದ್ಯಾವಂತರನ್ನಾಗಿ ಮಾಡಲು ನೆರವೂ ಆಗಬಹುದು. ಆದುದರಿಂದ ನಾವು ಇಂದು ಹತ್ತಿಸಿದ ಒಂದು ದೀವಿಗೆ ಮತ್ತೊಂದನ್ನು ಬೆಳಸುತ್ತಾಹೋದರೆ ಗ್ರಾಮಾಂತರದ ಕುಟುಂಬಗಳಲ್ಲಿ ಜ್ಞಾನಜ್ಯೋತಿ ಬೆಳಗುತ್ತಾ ಹೋಗುತ್ತದೆ. ಅದು ಒಂದು ರೀತಿಯ ಶಾಶ್ವತ ಕಾರ್ಯವೇ ಆದಂತಾಗುತ್ತದೆ. ಆದುದರಿಂದ ಇಂದು ಯಾವ ಜ್ಯೋತಿಯನ್ನು ಬೆಳಗಿಸುತ್ತೇವೆ ಎಂಬುದು ಮುಖ್ಯವೇ ಹೊರತು ನಾಳಿನ ಬಗೆಗೆ ಚಿಂತಿಸುವುದು ಅಗತ್ಯವಿಲ್ಲ”ವೆಂದು ಉದ್ಗರಿಸಿದರು. ಗುರುಲಿಂಗಜಂಗಮ ಸೇವೆಯಲ್ಲಿ ತಮ್ಮನ್ನೇ ತಾವು ಅರ್ಪಣಮಾಡಿಕೊಂಡವರಾದುದರಿಂದ ಪರಮಾತ್ಮನ ಕರುಣೆಯಲ್ಲಿ ಅವರಿಗೆ ಅಪಾರ ವಿಶ್ವಾಸ ಮೂಡಿತ್ತು, ಅಧ್ಯಾತ್ಮ ಅವರ ನರನಾಡಿಯಲ್ಲಿ ಪ್ರವಹಿಸುತ್ತಿತ್ತು. ಲೌಕಿಕಪಾರಮಾರ್ಥಿಕಗಳು ಅವರ ಪ್ರವೃತ್ತಿಯಲ್ಲಿ ಬೆಸುಗೆಯಾಗಿದ್ದುವು. ಭಕ್ತರು ಕಲ್ಪಿಸಿಕೊಂಡಿದ್ದ ಭಯಾನಕ ಚಿತ್ರ ಶ್ರೀಗಳವರ ಆತ್ಮವಿಶ್ವಾಸದ ತಂಗಾಳಿಯಲ್ಲಿ ಅಳಿಸಿಹೋಗಿತ್ತು. ಕಾರಣಿಕ ಪುರುಷರ ಲೀಲೆಗಳನ್ನು ಊಹಿಸುವುದು ಸಾಮಾನ್ಯರಿಗೆ ಸಾಧ್ಯವಿಲ್ಲವೆಂಬ ಭಾವನೆ ಅವರಲ್ಲಿ ಮೂಡಿತ್ತು. ಆದರೆ ಅದರಿಂದ ವ್ಯಾವಹಾರಿಕ ಸಮಸ್ಯೆಗಳು ಬಗೆಹರಿಯುವುದೆಂತು ಎಂಬ ಚಿಂತೆ ಆವರಿಸಿತ್ತು. ಶ್ರೀಗಳವರು ಅವರ ಇಂಗಿತವನ್ನು ಅರ್ಥಮಾಡಿಕೊಂಡು ತಾವೇ ಮಾರ್ಗವನ್ನು ಸೂಚಿಸಿದರು. ಸಮಾಜ ಬರಡಲ್ಲ. ಉದಾರತೆಗೆ ಅಲ್ಲಿ ಕೊರತೆಯಿಲ್ಲ. ನಮ್ಮ ಕಾರ್ಯ ಉಚಿತವಾದುದೆಂದು ಮನವರಿಕೆಯಾದರೆ ನಮ್ಮ ಕಾರ್ಯದಲ್ಲಿ ನೆರವಾಗುವ ಅಂತಃಕರಣಗಳಿವೆ. ನೀವೆಲ್ಲರು ಒಂದುಗೂಡಿ ನಡೆಯಿರಿ. ಸಮಾಜದ ಬಾಗಿಲಿಗೆ ಜೋಳಿಗೆ ಹಿಡಿದು ಹೋಗೋಣ. ಸಮಾಜದ ಅಭ್ಯುದಯಕ್ಕೆ ಪ್ರಾಮಾಣಿಕವಾಗಿ ಶ್ರಮಿಸಿದರೆ ಸಮಾಜ ನಮ್ಮನ್ನು ಕಡೆಗಣಿಸುವುದಿಲ್ಲವೆಂಬ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದರು. ಭಕ್ತಾದಿಗಳಿಗೆ ಶ್ರೀಗಳವರ ಈ ಸಂಕಲ್ಪ ಸಮಾಧಾನವನ್ನು ತಂದುಕೊಟ್ಟಿತು. ಅದೇ ಸಂಗತಿ ಆಮೂಲಾಗ್ರವಾಗಿ ಹಿರಿಯ ಜಗದ್ಗುರುಗಳವರಿಗೆ ಮುಟ್ಟಿತು. ಈ ದೃಢಸಂಕಲ್ಪ ಅವರನ್ನು ಬೆರಗುಗೊಳಿಸಿತು. ತನ್ನ ಶಿಷ್ಯನ ಗೌರವ ರಕ್ಷಣೆಗಾಗಿ ಆದಿಜಗದ್ಗುರುಗಳನ್ನು ಹಗಲಿರುಳು ಪ್ರಾರ್ಥಿಸತೊಡಗಿದರು.

## ತೆರೆದ ಜೋಳಿಗೆ

ಹಿರಿಯ ಜಗದ್ಗುರುಗಳವರಿಗೆ ಶ್ರೀಗಳವರ ಅಚಲನಿರ್ಧಾರದ ಸಂಗತಿ ತಿಳಿಯಿತು. ಅವರನ್ನು ಆದಿಜಗದ್ಗುರುವಿನ ಕೃಪಾಜೋಳಿಗೆಯಲ್ಲಿಟ್ಟು ಅವರ ಕಾರ್ಯಕ್ರಮಗಳನ್ನು ವೀಕ್ಷಿಸತೊಡಗಿದರು. ಶ್ರೀಗಳವರು ಭಕ್ತರಿಗೆ ತಿಳಿಸಿದಂತೆ ಜೋಳಿಗೆ ಹಿಡಿದು ಭಕ್ತಸಮುದಾಯದ ಮುಂದೆ ನಡೆದರು. ತೆರೆದ ಜೋಳಿಗೆ ಬರಿದಾಗುತ್ತಿರಲಿಲ್ಲ. ಆದರೆ ಇಲ್ಲಿನ ವೆಚ್ಚಕ್ಕೆ ಸರಿತೂಕದಲ್ಲಿ ತುಂಬುತ್ತಿರಲಿಲ್ಲ. ಆದರಿಂದ ಶ್ರೀಗಳವರು ವಿಚಲಿತರಾಗಲಿಲ್ಲ. ದಿನದಿನಕ್ಕೆ ವಿದ್ಯಾರ್ಥಿನಿಲಯದಲ್ಲಿ ಸಂಖ್ಯೆ ಬೆಳೆಯತೊಡಗಿತು. ಈ ನಿಲಯದಲ್ಲಿ ದೊರೆಯುತ್ತಿದ್ದ ಸೌಲಭ್ಯಗಳು ಬಡವ ಶ್ರೀಮಂತರೆಲ್ಲರನ್ನೂ ಆಕರ್ಷಿಸತೊಡಗಿದುವು. ಸಂಖ್ಯೆಗನುಗುಣವಾಗಿ ವಸತಿಸೌಲಭ್ಯವನ್ನು ಒದಗಿಸುವುದು ಅಸಾಧ್ಯವಾಯಿತು. ಶ್ರೀಗಳವರ ತಪಸ್ಸಾಧನೆಯ ಫಲವಾಗಿ ಇಂದು ಕೋಟ್ಯಂತರ ರೂಪಾಯಿ ಬೆಲೆಬಾಳುವ ಭವನಗಳ ನಿರ್ಮಾಣವಾದರೂ ಸಹ ಇಂದಿರುವ ಅಪಾರವಿದ್ಯಾರ್ಥಿಸಮುದಾಯಕ್ಕೆ ಸಾಕಷ್ಟು ವಸತಿಸೌಲಭ್ಯವನ್ನು ಒದಗಿಸಲು ಸಾಧ್ಯವಾಗಿಲ್ಲ. ಅದೇ ವೈಭವದ ಭೋಜನವನ್ನು ಇಂದು ಒದಗಿಸಲಾಗದಿದ್ದರೂ ಅಪಾರ ಸಂಖ್ಯೆಗೆ ಹೊಟ್ಟೆ ತುಂಬುವಷ್ಟು ಆಹಾರ ಸರಬರಾಜಾಗುತ್ತಿರುವುದು ದೈವಕೃಪೆಯೆಂದು ಹೇಳಲೇಬೇಕಾಗಿದೆ. ಆದರೆ ಶ್ರೀಗಳವರು ಭಿಕ್ಷಾಯಾತ್ರೆಯನ್ನು ಕೈಗೊಂಡುದರಿಂದ ಅನೇಕ ಸತ್ಪರಿಣಾಮಗಳಾಗಿವೆ. ನಿರೀಕ್ಷಿಸಿದಷ್ಟು ಸಂಪತ್ತು ಭಿಕ್ಷೆಯಿಂದ ದೊರೆಯಲಿಲ್ಲವೆಂಬುದು ಸತ್ಯ. ಶ್ರೀಗಳವರ ಜೋಳಿಗೆ ಮಾತ್ರ ತುಂಬುತ್ತಿತ್ತು. ಅದು ದವಸಧಾನ್ಯಗಳಿಂದಲ್ಲ. ಆದರೆ ಭಕ್ತಜನರ ಸಮಸ್ಯೆಗಳಿಂದ ಮಾತ್ರ. ಮಹಾಜನತೆಗೆ ಮಹಾನುಭಾವರಲ್ಲಿ ತನ್ನ ಕಷ್ಟಸುಖಗಳನ್ನು ನಿವೇದಿಸಿಕೊಂಡರೆ ಅವರಿಗೆ

ಅಪಾರ ಸಂತೃಪ್ತಿ ದೊರೆಯುತ್ತಿತ್ತು. ಶ್ರೀಗಳವರ ತ್ಯಾಗ,ಸೇವೆಯನ್ನುಆಗಲೇ ಸರ್ಕಾರ ಪರಿಚಯಮಾಡಿಕೊಂಡಿತ್ತು. ಅಧಿಕಾರಿಗಳು ಶ್ರೀಗಳವರ ಸೇವಾಕಾರ್ಯದಲ್ಲಿ ನೆರವಾಗುತ್ತಿದ್ದರು. ಇದನ್ನು ಸಮಾಜ ಅರ್ಥಮಾಡಿಕೊಂಡಿತ್ತು. ಆದುದರಿಂದ ಶ್ರೀಗಳವರು ಯಾವ ಗ್ರಾಮಕ್ಕೆ ಆಗಮಿಸಿದರೂ ಸಮಾಜದ, ಇಡೀ ಗ್ರಾಮದ ಹಾಗೂ ವೈಯಕ್ತಿಕ ಸಮಸ್ಯೆಗಳ ರಾಶಿಯೇ ಜೋಳಿಗೆಯನ್ನು ತುಂಬುತ್ತಿತ್ತು. ಜನತೆ ಹತ್ತಿರಾದಂತೆಲ್ಲ ಶ್ರೀಗಳವರು ಪ್ರತಿವ್ಯಕ್ತಿಯ ಮಾತೃಸ್ವರೂಪರಾಗಿ ಅವರ ಸುಖದುಃಖಗಳಲ್ಲಿ ಅನುಕಂಪವನ್ನು ವ್ಯಕ್ತಗೊಳಿಸುತ್ತಿದ್ದರು. ಅವಶ್ಯವಿದ್ದೆಡೆ ಸರ್ವ ಪ್ರಯತ್ನವನ್ನೂ ಮಾಡಿ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಸಣ್ಣಪುಟ್ಟ ಕಾರಣಗಳಿಗಾಗಿ ದಶಕಗಳಿಂದ ವೈರವನ್ನೇ ಸಾಧಿಸುತ್ತಿದ್ದ ಕುಟುಂಬಗಳಲ್ಲಿ ಮೈತ್ರಿಯನ್ನು ಮೂಡಿಸಲು ಹಗಲಿರುಳು ಶ್ರಮಿಸಿದರು. ಆಸುರೀಪ್ರವೃತ್ತಿಯಲ್ಲಿದ್ದ ವ್ಯಕ್ತಿಗಳಲ್ಲಿ ದೈವೀಚಿಂತನೆಯನ್ನು ತುಂಬಿ ಸಮಾಜವನ್ನು ನಾಗರೀಕತೆಯ ನಾವೆಯಲ್ಲಿ ಕುಳ್ಳಿರಿಸಿ ಸಂಸಾರಸಾಗರವನ್ನು ದಾಂಟಿಸುವ ಅಂಬಿಗರಾದರು. ಸಮಾಜ ಚೈತನ್ಯಪೂರ್ಣವಾಗತೊಡಗಿತು. ಹೊಲಮನೆಗಳನ್ನೇ ನಂಬಿ ಜ್ಞಾನದಿಂದ ವಂಚಿತವಾದ ಸಮಾಜದಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸಿದರು. ಗ್ರಾಮಾಂತರದ ಜನರಿಗೂ ತಮ್ಮ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಬೇಕೆಂಬ ಆಸಕ್ತಿಯನ್ನು ಮೂಡಿಸಿದರು. ಹೀಗಾಗಿ ಶ್ರೀಗಳವರು ಒಡ್ಡಿದ ಜೋಳಿಗೆಗೆ ತಮ್ಮ ಕಾಣಿಕೆಯನ್ನು ಸಾಕಷ್ಟು ನೀಡಲಾಗದಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿರೆಂದು ಬೇಡಿ ಅವರನ್ನು ಶ್ರೀಗಳವರ ಮಡಿಲಿಗಿಡುವವರ ಸಂಖ್ಯೆಯೇ ಅಧಿಕವಾಯಿತು. ಆದಕಾರಣ ಶ್ರೀಗಳವರ ಈ ಯೋಜನೆ ಸಮಾಧಾನಕ್ಕಿಂತಲೂ ಸಮಸ್ಯೆಗಳ ಸಂಖ್ಯೆಯನ್ನೇ ಬೆಳೆಸಿತು, ಆದರಿಂದ ಶ್ರೀಗಳವರು ವಿಚಲಿತರಾಗಲಿಲ್ಲ. ಸಮಾಜ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಅರಿತುಕೊಂಡುದನ್ನು ಕಂಡು ಸಂತೋಷಭರಿತರಾದರು. ತಮ್ಮ ನಿರೀಕ್ಷೆಗಿಂತಲೂ ಅಧಿಕವಾಗಿ ವಿದ್ಯಾರ್ಥಿನಿಲಯಕ್ಕಾಗಿ ಬೇಡಿಕೆಗಳು ಬರಲಾರಂಭಿಸಿದುವು. ತಮ್ಮ ಮಕ್ಕಳು ವಿದ್ಯಾವಂತರಾಗುವುದು ಈ ಜನ್ಮದಲ್ಲೇ ಸಾಧ್ಯವಿಲ್ಲವೆಂದು ಭಾವಿಸಿದ್ದ ಅನೇಕ ಕುಟುಂಬಗಳಲ್ಲಿ ಆತ್ಮವಿಶ್ವಾಸ ಮೂಡಿತು. ಆಶಾಜ್ಯೋತಿ ಮೂಡಿಬಂದಿತು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಸಾವಿರಾರು ರೂಪಾಯಿ ಖರ್ಚು ಮಾಡುವುದಕ್ಕಿಂತ ಅದೇ ಹಣದಲ್ಲಿ ಹೊಲಗದ್ದೆಗಳನ್ನು ಕೊಂಡುಕೊಂಡರೆ ತಮ್ಮ ಮಕ್ಕಳಿಗೆ ಶ್ರೇಯಸ್ಸನ್ನು ಉಂಟುಮಾಡುತ್ತಿದ್ದೇವೆಂಬ ಭಾವನೆಯಲ್ಲಿ ಗಮನಾರ್ಹ ಬದಲಾವಣೆಯಾಗಲಾರಂಭಿಸಿತು. ಶ್ರೀಗಳವರು ಅಜ್ಞಸಮಾಜಕ್ಕೆ 'ನಹಿ ಜ್ಞಾನೇನ ಸದೃಶಂ, ವಿದ್ಯಾವಿಹೀನಃ ಪಶುಃ' ಎಂಬ ದಿವ್ಯಸಂದೇಶದ ಪರಿಚಯ ಮಾಡಿಕೊಟ್ಟರು. ಇಡೀ ಜಿಲ್ಲೆಯಲ್ಲಿ ಜ್ಞಾನಪಿಪಾಸೆಯ ಕ್ರಾಂತಿಯನ್ನೆಸಗಿದ ಮಹಾನುಭಾವರು ಶ್ರೀಗಳವರೆಂಬುದು ಉತ್ಪ್ರೇಕ್ಷೆಯ ಮಾತಲ್ಲ.ಸಮಾಜದಲ್ಲಿ ನವ್ಯಕ್ರಾಂತಿಯೇ ಆರಂಭವಾಯಿತು. ಈ ಸಾಧನೆ ಈ ಜಿಲ್ಲೆಯ ಇತಿಹಾಸದಲ್ಲೇ ಸ್ವರ್ಣಸಂಪುಟದಲ್ಲಿ ಲಿಖಿತವಾಗಲು ಅರ್ಹವೆನಿಸಿತು. ಪ್ರತಿಯೊಂದು ಹಳ್ಳಿಯಲ್ಲೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲೇಬೇಕೆಂಬ ಆಸಕ್ತಿ ಬೆಳೆಯಿತು. ಮೊದಮೊದಲು ಶ್ರೀಮಂತರ ಮಕ್ಕಳು ಮಾತ್ರ ವಿದ್ಯಾ ಸೌಲಭ್ಯವನ್ನು ಪಡೆದು ವಿದ್ಯಾಭ್ಯಾಸ ಮುಗಿದಮೇಲೆ ಊರಿನ ಸಂಪರ್ಕ ಕಡಿದುಕೊಂಡು ಉದ್ಯೋಗ ದೊರಕಿಸಿಕೊಂಡು ನಗರವಾಸಿಗಳಾಗುತ್ತಿದ್ದರು. ಅಖಂಡ ಸಮಾಜವನ್ನೇ ಉದ್ಧರಿಸಬೇಕೆಂಬ ಸಂಕಲ್ಪಸಿದ್ಧರಾದ ಶ್ರೀಗಳವರಿಗೆ ಈ ಪರಿಸ್ಥಿತಿ ಸಮಾಧಾನವನ್ನು ತಂದುಕೊಡಲಿಲ್ಲ. ಒಂದು ತಿಂಗಳಿಗೆ ಹತ್ತುರೂಪಾಯಿ ಖರ್ಚು ಮಾಡಿದರೆ ಉತ್ತಮವಾದ ಊಟ ಮತ್ತು ವಸತಿ ಸೌಲಭ್ಯ ಪಡೆದುಕೊಳ್ಳಬಹುದಾಗಿತ್ತು. ಅಂದು ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ನೂರು ರೂಪಾಯಿ ವೆಚ್ಚ ಮಾಡಲಾರದ ಕುಟುಂಬಗಳು ಸಹಸ್ರಾರು. ಅವರ ಬಗೆಗೆ ಶ್ರೀಗಳವರಿಗಿದ್ದ ಅನುಕಂಪ ಅವರ್ಣನೀಯ. ಭಗವಂತನು ತಮ್ಮ ಮನೋವೇಗಕ್ಕೆ ಅನುಗುಣವಾಗಿ ಅನುಕೂಲ ಒದಗಿಸುವುದಾದರೆ ಇಡೀ ಜಿಲ್ಲೆಯಲ್ಲಿ ಅವಿದ್ಯಾವಂತರು ಅಸಂಸ್ಕೃತರು ಇಲ್ಲದಂತಹ ಸ್ಥಿತಿಯನ್ನು ನಿರ್ಮಾಣ ಮಾಡುವೆನೆಂಬ ಹಂಬಲ ಶ್ರೀಗಳವರದು. ಈ ಜನ್ಮದಲ್ಲಿ ತಾವು ವಿದ್ಯಾವಂತರಾಗುವುದು ಸಾಧ್ಯವೇ ಇಲ್ಲವೆಂಬ ನಿರಾಶೆಯಲ್ಲಿ ಮುಳುಗಿದ್ದ ಅನೇಕ ಜೀವಗಳಿಗೆ ಆಶಾಜ್ಯೋತಿಯ ಬೆಳಕು ಮೂಡಿಬಂದಂತಾಗಿ ಗ್ರಾಮಗಳಲ್ಲಿ ಚಟುವಟಿಕೆ ಪ್ರಾರಂಭವಾಯಿತು. ಮನೆಮುಂದಿಯ ಜಗಳದಿಂದ ಹಿಡಿದು ಗ್ರಾಮಾಂತರದ ಎಲ್ಲಾ ಸಮಸ್ಯೆ ಬಿಡಿಸುವ ಹೊಣೆ ಶ್ರೀಗಳವರ ಪಾಲಿಗೆ ಬಂದಿತು. ಭಿಕ್ಷೆ ಕೇಳಲು ಹೋದವರನ್ನೇ ಸಮಾಜ ನಮ್ಮ ಮಗನಿಗೆ ಅನುಗ್ರಹಿಸಬೇಕೆಂದು ಬೇಡಲಾರಂಭಿಸಿತು. ಆದಕಾರಣ ಶ್ರೀಗಳವರ ವಿದ್ಯಾರ್ಥಿಕುಟುಂಬ ಅತ್ಯಧಿಕವಾಗಿ ಬೆಳೆಯತೊಡಗಿತು. ಶ್ರೀಗಳವರ ನಿರೀಕ್ಷಣೆಯ ಎಲ್ಲೆಮೀರಿತು. ಎಷ್ಟು ಜನಕ್ಕಾದರೂ ಅನ್ನ ಕೊಡಬಲ್ಲೆನೆಂಬ ವಿಶಾಲ ಹೃದಯ ಶ್ರೀಗಳವರದು. ಆದರೆ ವಸತಿ ಸೌಕರ್ಯ ಒದಗಿಸುವುದು ಅಸಾಧ್ಯದ ಕಾರ್ಯವೆನಿಸಿತು.

ಅವಕಾಶ ಸಿಕ್ಕಿದಂತೆ ಅನೇಕ ಕಟ್ಟಡಗಳನ್ನು ಬಾಡಿಗೆಗೆ ಪಡೆದರು. ಇದುವರೆಗೆ ಅನೇಕ ಕಟ್ಟಡಗಳು ಸಂಸ್ಥೆಯ

ಸ್ವಂತ ಭವನಗಳಾಗಿವೆ. ಆದಾಗ್ಯೂ ಸಂಖ್ಯೆಗೆ ಅನುಗುಣವಾಗಿ ವಸತಿಯನ್ನು ಒದಗಿಸುವುದು ಅಸಾಧ್ಯವಾಗಿದೆ. ಈ ಸಮಸ್ಯೆ ಶ್ರೀಗಳವರ ಮನಸ್ಸನ್ನು ವಿಧವಿಧದಲ್ಲಿ ಕಾಡುತ್ತಿದೆ ; ಕದಡುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾದ ವಸತಿ ಇಲ್ಲವೆಂಬ ದುಃಖ. ಅವು ಒಂದೆಡೆ ಇಲ್ಲವಾದ ಕಾರಣ ನಿತ್ಯವೂ ಅವರ ಯೋಗಕ್ಷೇಮವನ್ನು ಗಮನಿಸಲಾಗುತ್ತಿಲ್ಲ. ತಮ್ಮ ಆಶ್ರಯದಲ್ಲಿ ಬೆಳೆಯುವವರು ಕೇವಲ ಲೌಕಿಕಜೀವನದಲ್ಲಿ ಗಣ್ಯರಾದರೆ ಅವರಿಗೆ ತೃಪ್ತಿಯಿಲ್ಲ. ಅವರು ನೈತಿಕ ಹಾಗೂ ಧಾರ್ಮಿಕಜೀವನದಲ್ಲೂ ಮಾನ್ಯತೆಯನ್ನು ಪಡೆಯಬೇಕೆಂಬುದು ಶ್ರೀಗಳವರ ಅಪೇಕ್ಷೆ. ಓತಪ್ರೋತವಾಗಿ ಬೆಳೆಯುತ್ತಿರುವ ಶ್ರೀಗಳವರ ಕಾರ್ಯಕ್ಷೇತ್ರದಲ್ಲಿ ನಿತ್ಯವೂ ಸಮಸ್ಯೆಗಳು ಉದಿಸುತ್ತವೆ. ಹೊಸ ಯೋಜನೆಗಳು ಮೂಡಿ ಬರುತ್ತವೆ. ತಾವಾಗಿಯೇ ರೂಪತಾಳುತ್ತವೆ. ಈ ಎಲ್ಲ ಕಾರಣಗಳಿಂದ ಎಲ್ಲಾ ವಿದ್ಯಾರ್ಥಿಗಳನ್ನೂ ಒಂದೆಡೆಯಲ್ಲಿರಿಸಿ ನೇರವಾಗಿ ಅವರ ಭವಿಷ್ಯವನ್ನು ತಮ್ಮ ಅಪೇಕ್ಷೆಗೆ ಅನುಗುಣವಾಗಿ ರೂಪಿಸುವುದು ಅಸಾಧ್ಯವಾಗಿದೆ. ಅದು ಅವರ ಮನಸ್ಸನ್ನು ಬಾಧಿಸುತ್ತಲೇ ಇದೆ. ಈ ಅಭಿಲಾಷೆ ಈಡೇರಲು ಮೃಡನ ಕೃಪೆ ಎಂದಾಗುವುದೋ ತಿಳಿಯದು. ಉದಾರ ಹೃದಯಗಳೆಂದು ಮುಂದೆ ಬರುವವೋ ಗೊತ್ತಾಗುತ್ತಿಲ್ಲ. ಶ್ರೀಗಳವರು ಸಂಕಲ್ಪಸಿದ್ಧರು. ಅವರ ಮನಸ್ಸಿನಲ್ಲಿ ಹೀಗಾಗಬೇಕೆಂದು ಮೂಡಿದ ಕಲ್ಪನೆಯೆಲ್ಲ ನಡೆದೇ ಹೋಗಿದೆ. ಇನ್ನು ಈ ಕಲ್ಪನೆಯು ಒಂದು ದಿನ ಸಾಕಾರಗೊಳ್ಳಬಹುದೆಂಬ ಆತ್ಮವಿಶ್ವಾಸ ಭಕ್ತವೃಂದದವರಿಗಿದೆ. ಆದರ ಯಶಸ್ಸನ್ನು ನಾವು ಹಾರೈಸುವ.

## ಅನ್ನದಾಸೋಹದಿಂದ ಜ್ಞಾನದಾಸೋಹದತ್ತ

ಶ್ರೀಗಳವರ ಕಾರ್ಯವ್ಯಾಪ್ತಿ ಅನ್ನದಾಸೋಹದ ವಿದ್ಯಾರ್ಥಿನಿಲಯಗಳ ಸ್ಥಾಪನೆಯಲ್ಲೇ ಬಹುಕಾಲ ನಿರತವಾಗಿತ್ತು. ಮೈಸೂರು ನಗರವೇ ಕಾರ್ಯಕ್ಷೇತ್ರವಾಗಿತ್ತು. ವಿಧಿಲೀಲೆಯು ಶ್ರೀಗಳವರ ಸೇವಾಕ್ಷೇತ್ರವನ್ನು ವಿಸ್ತೃತಗೊಳಿಸಲಾರಂಭಿಸಿತು. ಚಾಮರಾಜನಗರ, ಯಳಂದೂರು ತಾಲ್ಲೂಕುಗಳ ಭಕ್ತರ ಕೋರಿಕೆಯ ಮೇಲೆ ಚಾಮರಾಜನಗರದಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಟಿ. ನರಸೀಪುರದಲ್ಲಿ, ಕೊಳ್ಳೇಗಾಲ ತಾಲ್ಲೂಕಿನ ರಾಮಾಪುರ, ಬಂಡಳ್ಳಿಗಳಲ್ಲಿ, ಕೃಷ್ಣರಾಜನಗರದಲ್ಲಿ, ಯಳಂದೂರಿನಲ್ಲಿ ಹೀಗೆ ಅವಶ್ಯವಿರುವೆಡೆಯಲ್ಲಿ ಹತ್ತಾರು ವಿದ್ಯಾರ್ಥಿನಿಲಯಗಳು ಪ್ರಾರಂಭಿಸಲ್ಪಟ್ಟುವು. ಜಗದ್ಗುರುಗಳವರ ಔದಾರ್ಯ ಅವರನ್ನು ಗ್ರಾಮಾಂತರದ ಕಡೆಗೆ ಎಳೆದೊಯ್ಯಿತು. ಬಿಡುವಿಲ್ಲದ ಕಾರ್ಯಕ್ರಮಗಳು ಜರುಗಲಾರಂಭಿಸಿದುವು. ಹಳ್ಳಿಗರ ಮನದಲ್ಲಿ ತಮ್ಮ ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂಬ ಅಪೇಕ್ಷೆಯನ್ನೂ ಭರವಸೆಯನ್ನೂ ಶ್ರೀಗಳವರು ಮೂಡಿಸಿದರು. ವಿದ್ಯಾರ್ಥಿನಿಲಯಗಳ ಬೆಳವಣಿಗೆ ಮುಂದುವರಿಯುತ್ತಲೇ ಇದೆ. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯಲಾರಂಭವಾದ ಮೇಲೆ ನಗರದಲ್ಲಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುವುದು ದುರ್ಲಭವಾಯಿತು. ಒಂದು ಸಮಸ್ಯೆಯನ್ನು ಬಗೆಹರಿಸಲೆತ್ನಿಸಿದರೆ ಮತ್ತೊಂದು ಸಮಸ್ಯೆ ಉದ್ಭವಿಸುತ್ತದೆ. ಅದೂ ದೈವಲೀಲೆ. ಮಹಾಪುರುಷರಿಂದ ಸಮಾಜಕ್ಕೆ, ನಾಡಿಗೆ ಮಹತ್ತ್ವಪೂರ್ಣ ಸೇವೆ ಸಲ್ಲಬೇಕೆಂಬುದೇ ದೈವೇಚ್ಛೆಯಿರಬೇಕು. ಈ ಪರಿಸ್ಥಿತಿಯನ್ನು ಮನಗಂಡು ಜಗದ್ಗುರುಗಳವರು ಮೈಸೂರಿನಲ್ಲಿ ಪ್ರೌಢಶಾಲೆಯೊಂದನ್ನು ಪ್ರಾರಂಭಿಸಿದರು. ಅನ್ನದಾಸೋಹ ಕಾರ್ಯದ ಜೊತೆಗೆ ಜ್ಞಾನದಾಸೋಹ ಕಾರ್ಯ ಪ್ರಾರಂಭವಾಯಿತು. ಇಂದು ಅದು ನಮ್ಮ ಊಹೆಗೆ ನಿಲುಕದಷ್ಟು ಬೃಹತ್ತಾಗಿ ಬೆಳೆದಿದೆ. ಮೈಸೂರು ನಗರದಲ್ಲೇ ಮೂರು ಪ್ರೌಢಶಾಲೆಗಳು ನಡೆಯುತ್ತಿವೆ. ಮತ್ತೆ ಬೆಂಗಳೂರು, ಚಾಮರಾಜನಗರ, ತೆರಕಣಾಂಬಿ, ಹುಲ್ಲಹಳ್ಳಿ, ಸುತ್ತೂರು, ರಾಮಾಪುರ, ಬಂಡಳ್ಳಿ, ಕಾಮಗೆರೆ, ಯಳಂದೂರು, ಮುಡಿಗುಂಡ, ದೊಡ್ಡ ಕಾಡನೂರು ಹೀಗೆ ನಾನಾ ಕಡೆಗಳಲ್ಲಿ ಹದಿಮೂರು ಪ್ರೌಢ ಶಾಲೆಗಳೂ ಎಂಟು ಪ್ರಾಥಮಿಕ ಶಾಲೆಗಳೂ ಎರಡು ಶಿಕ್ಷಕರ ತರಬೇತಿಕೇಂದ್ರಗಳೂ ಆರು ವಿಜ್ಞಾನ ಹಾಗೂ ಕಲಾ ಕಾಲೇಜುಗಳೂ, ಒಂದು ಇಂಜನಿಯರಿಂಗ್ ಕಾಲೇಜು, ವೃತ್ತಿ ಶಿಕ್ಷಣ ಸಂಸ್ಥೆಗಳು ಸಂಸ್ಕೃತ ಪಾಠಶಾಲೆಗಳು, ಗ್ರಂಥಾಲಯಗಳು, ಗ್ರಂಥ ಪ್ರಕಟಣಾಶಾಖೆ, ಶರಣ ತತ್ತ್ವ ಪ್ರಚಾರ ಸಮಿತಿ, ಕಲಾ ಸಂಸ್ಥೆ, ವೈದ್ಯ ಕೇಂದ್ರ ಇತ್ಯಾದಿಯಾಗಿ ಅನೇಕ ಸಂಸ್ಥೆಗಳು ಜಗದ್ಗುರುಗಳ ತಪಸ್ಸಿನ ಬಾಹ್ಯ ಸಾಧನೆಗಳಾಗಿ ಬೆಳೆದು ಬೆಳಗುತ್ತಿವೆ. ಹತ್ತಾರು ಸಾವಿರ ಜನರಿಗೆ ಅನ್ನ ಜ್ಞಾನಗಳನ್ನೊದಗಿಸಿ ಅವರ ಅಭ್ಯುದಯ ಸಾಧನೆಗೆ ಶ್ರೀಗಳವರು ಕೃಪೆಮಾಡಿದ್ದಾರೆ. ಇವೆಲ್ಲ ವ್ಯಾವಹಾರಿಕ ಸಾಧನಸಂಪತ್ತು. ಜಗದ್ಗುರುಗಳವರು ತಮ್ಮ ಲೌಕಿಕ ಕಾರ್ಯಸಾಧನೆಯಲ್ಲಿ ಆಧ್ಯಾತ್ಮಶಕ್ತಿಸಾಧನೆಯನ್ನು ಕಡೆಗಣಿಸಿಲ್ಲ. ಆ ಸಾಧನೆಯ ಸಂಕೇತವಾಗಿ ಅವರ ಅಂತಃಕರಣ ದೀನದಲಿತರ ನಿರ್ಭಾಗ್ಯರ ಬಗೆಗೆ ಅನುಕಂಪವನ್ನು ತಾಳಿತು. ಅದಕ್ಕಾಗಿ ಹರಿಜನರಿಗಾಗಿ ಒಂದು ವಿದ್ಯಾರ್ಥಿ

ನಿಲಯವನ್ನೂ, ಅಂಗವಿಕಲರಿಗಾಗಿ ಮತ್ತೊಂದು ಸಂಸ್ಥೆಯನ್ನೂ ಪ್ರಾರಂಭಿಸಿದರು. ಜಗದ್ಗುರುಗಳು ಸಾಹಿತ್ಯ ಪ್ರೇಮಿಗಳೂ ಗುರುಲಿಂಗಜಂಗಮ ಪ್ರೇಮಿಗಳೂ, ಕಲಾಭಿಮಾನಿಗಳೂ, ಅಂತೆಯೇ ಅನೇಕ ಸಾಹಿತಿಗಳಿಗೆ, ಕಲಾವಿದರಿಗೆ, ಸಾಧಕರಿಗೆ ಸಾಕಷ್ಟು ನೆರವು ನೀಡಿದ್ದಾರೆ. ಅವರ ಉದ್ಧಾರವನ್ನು ಹೃದಯಾರ ಹಾರೈಸಿದ್ದಾರೆ.

## ಸಿದ್ಧಪುರುಷರು

ಪ್ರಾರಂಭದ ಕಾಲದಲ್ಲಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಕಡಿಮೆ. ವಿದ್ಯಾರ್ಥಿಗಳ ಸಂಖ್ಯೆ ಬೆಳೆದಂತೆ ಪ್ರವೇಶ ಅವಕಾಶ ದುಸ್ತರವಾಗುತ್ತಿತ್ತು. ಪ್ರಭಾವೀಪುರುಷರ ಕೋರಿಕೆಯನ್ನು ಜಗದ್ಗುರುಗಳು ಕಡೆಗಣಿಸುವಂತಿರಲಿಲ್ಲ. ಸರ್ಕಾರದ ಉನ್ನತಾಧಿಕಾರಿಗಳು, ಸಮಾಜದ ಗಣ್ಯರು ಪ್ರಾರ್ಥಿಸಿದ ಮೇಲೆ ಅವರಿಗೆ ನಕಾರಾತ್ಮಕ ಉತ್ತರ ನೀಡುವುದು ಜಗದ್ಗುರುಗಳವರಂತಹ ಮೃದುಹೃದಯರಿಗೆ ಎಂದೂ ಸಾಧ್ಯವಾಗದ ಕೆಲಸ. ಆದರೆ ಯಾವ ಪ್ರಭಾವದ ಕೃಪೆಯೂ ಇಲ್ಲದವರ ಗತಿ ಏನು ? ಇದನ್ನು ಪಕ್ಷಪಾತವೆಂದು ಭಾವಿಸುವುದು ವಿವೇಕವಲ್ಲವಷ್ಟೆ! ಸಮಾಜದಲ್ಲಿ ಎಲ್ಲೆಡೆ ವಿವೇಕವಿವೇಚನೆಗಳನ್ನು ಅಪೇಕ್ಷಿಸುವುದೂ ಹುಚ್ಚುತನವೇ ಆದೀತು. ಹಾಗೆಂದ ಮಾತ್ರಕ್ಕೆ ಶ್ರೀಗಳವರ ಕೃಪಾದೃಷ್ಟಿಯಿಂದ ದೀನರು ದೂರವಾಗಲಿಲ್ಲ. ಅವರ ಅನುಗ್ರಹವನ್ನು ಪಡೆದವರಲ್ಲಿ ಬಹುಮಂದಿ ತಮ್ಮ ವರ್ತಮಾನ ಪರಿಸ್ಥಿತಿಯನ್ನು ಕಂಡು ತಾವೇ ಅಚ್ಚರಿಪಟ್ಟಿದ್ದಾರೆ. ಅವನು ಬಡವನಿರಬಹುದು, ಬಲ್ಲಿದನಿರಬಹುದು. ಯಾರಲ್ಲಿ ಸಮಾಜದ ಗಣ್ಯವ್ಯಕ್ತಿಯಾಗುವ ಗುಣಗಳಿವೆಯೋ ಅವರನ್ನು ಜಗದ್ಗುರುಗಳವರ ಅಂತಃಕರಣ ಗುರ್ತಿಸುತ್ತಿತ್ತು. ಅವರಿಗೆ ಅವರ ಅಭಯಹಸ್ತ ಎಲ್ಲ ನೆರವನ್ನೂ ನೀಡುತ್ತಿತ್ತು. ಅವರ ಅಭ್ಯುದಯವನ್ನು ಹಾರೈಸುತ್ತಲೇ ಇದ್ದ.

ಈ ಲೇಖಕನ ಜೀವನವೂ ಜಗದ್ಗುರುಗಳ ಅಂತಃಕರಣದ ಅಮೃತಧಾರೆಯಿಂದಲೇ ಪಲ್ಲವಿಸಿದೆಯೆಂದರೆ ಉತ್ಪ್ರೇಕ್ಷೆಯಲ್ಲ. ೧೯೪೨ನೇ ವರ್ಷದ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಮೈಸೂರಿನಲ್ಲಿ ಯಾರ ಪರಿಚಯವೂ ಇಲ್ಲದೆ, ಯಾರ ನೆರವೂ ಇಲ್ಲದೆ, ಎಲ್ಲಿಗೆ ಹೋಗಬೇಕೆಂಬ ಅರಿವೂ ಇಲ್ಲದೆ, ಮುಂದೇನಾಗುವುದೆಂಬ ಪರಿವೆ ಇಲ್ಲದೆ ಪ್ರೌಢಶಾಲಾಭ್ಯಾಸಕ್ಕೆಂದು ಬಂದವನು ಶ್ರೀಗಳವರ ಸಂಸ್ಕೃತ ಪಾಠಶಾಲೆಯಲ್ಲಿ ಮಲಗುವುದಕ್ಕೆ ಅವಕಾಶ ಕಲ್ಪಿಸಿಕೊಂಡು ಭಿಕ್ಷಾನ್ನದೊಡನೆ ಜೀವನಯಾತ್ರೆಯನ್ನು ಪ್ರಾರಂಭಿಸಿದೆನು. ಇದು ಹೇಗೋ ಜಗದ್ಗುರುಗಳವರ ಕಿವಿ ಮುಟ್ಟಿತು. ತಾವೇ ವಾರಾನ್ನದ ಮನೆಗಳನ್ನು ದೊರಕಿಸಿಕೊಟ್ಟು ಉಳಿದ ದಿನಗಳಲ್ಲಿ ತಮ್ಮ ವಿದ್ಯಾರ್ಥಿ ನಿಲಯದಲ್ಲೇ ಪ್ರಸಾದ ಸ್ವೀಕರಿಸುವ ಕರುಣೆ ತೋರಿದರು. ಪ್ರಸಾದವೇನೋ ಪ್ರಾಪ್ತವಾಯಿತು. ಅಭ್ಯಾಸಕ್ಕೆ ಬೇಕಾದ ಹಣಕಾಸಿನ ಸೌಲಭ್ಯಗಳ ಕೊರತೆ ಕಾಡುತ್ತಲೇ ಇತ್ತು. ಪ್ರತಿ ತಿಂಗಳೂ ಶಾಲೆಗೆ ಕೊಡಬೇಕಾದ ವಂತಿಕೆಯನ್ನು ಕೊಡಲಾರದೆ ತರಗತಿಯಿಂದ ಹೊರಬರಬೇಕಾಗಿ ಬಂದ ಪ್ರಸಂಗಗಳು ಅನೇಕ. ಈ ಸಂಗತಿ ಜಗದ್ಗುರುಗಳವರಿಗೆ ಹೇಗೋ ತಿಳಿಯಿತು. ಒಮ್ಮೆ ನನ್ನನ್ನು ಕರೆಸಿ ಯಾರಿಗೂ ಗೊತ್ತಾಗದಂತೆ ವಂತಿಕೆ ಹಣವನ್ನು ಕೊಡಲಾರಂಭಿಸಿದರು. ಈ ಭಾಗ್ಯಕ್ಕೆ ಭಾಗಿಯಾದವನು ನಾನೊಬ್ಬನೇ ಅಲ್ಲ. ನನ್ನಂತಹವರು ನೂರಾರು ಜನರಿದ್ದಾರೆಂಬುದು ಇತ್ತೀಚೆಗೆ ತಿಳಿದುಬಂದಿದೆ. ಜಗದ್ಗುರುಗಳವರ ಈ ಅನುಗ್ರಹವನ್ನು ವ್ಯಕ್ತಪಡಿಸುತ್ತಿರುವುದು ಅಪರಾಧವಾಗಿದ್ದರೆ ಅವರ ಕ್ಷಮೆ ಯಾಚಿಸುತ್ತೇನೆ. ಆದರೆ ನನ್ನಂತೆಯೇ ಇಂತಹ ಭಾಗ್ಯಕ್ಕೆ ಭಾಗಿಗಳಾದವರು ತಮ್ಮ ಆನಂದದ ದಿನಗಳನ್ನು ಸ್ಮರಿಸಿಕೊಳ್ಳಲೆಂದೇ ಈ ಪ್ರಸಂಗವನ್ನು ಸೂಕ್ಷ್ಮವಾಗಿ ಮಾತ್ರ ಹೇಳಿದ್ದೇನೆ.

ನೊಂದವರಿಗೆ ಸಾಂತ್ವನ ನೀಡುವ ಕರುಣಾಳುಗಳ ಜೀವನದ ಘಟನೆಗಳು ಸ್ಮರಣೀಯ ಮತ್ತು ಅನುಕರಣೀಯ. ಈ ಲೇಖಕ ಒಮ್ಮೆ ರೋಗಕ್ಕೆ ತುತ್ತಾಗಿ ಪ್ರಜ್ಞಾಹೀನನಾಗಿ ಮಲಗಿದ್ದನು. ಉಳಿಯುವ ಭರವಸೆಯೇ ಇಲ್ಲದಂತಾಗಿತ್ತು. ವೈದ್ಯರನ್ನು ಕರೆಸಿ ಉಪಚರಿಸಿದರು. ಬೆಳಗಿನವರೆಗೆ ನಿದ್ರಿಸದೆ ನನ್ನ ಆರೋಗ್ಯವನ್ನು ವಿಚಾರಿಸುತ್ತಲೇ ಇದ್ದರು. ಅದಕ್ಕಾಗಿ ಸೇವಕನೊಬ್ಬನನ್ನು ನೇಮಿಸಿದ್ದರು. ಆಗ ನಾನು ಯಾವ ಊರಿನವನು, ಇಲ್ಲಿಗೇಕೆ ಬಂದಿದ್ದೇನೆ ಎಂಬುದನ್ನು ಅರಿಯುವ ಗೋಜಿಗೇ ಹೋಗಿರಲಿಲ್ಲ. ಇದಾದ ಬಹು ವರ್ಷಗಳವರೆಗೆ ನನ್ನ ಪೂರ್ವೇತಿಹಾಸವನ್ನು ತಿಳಿಯುವ ಪ್ರಯತ್ನವನ್ನೂ ಮಾಡದೆ ನನ್ನನ್ನು ಪೋಷಿಸಿಕೊಂಡು ಬಂದಿರುವುದನ್ನು ಈ ಸಮಯದಲ್ಲಿ ಸ್ಮರಿಸದಿರಲಾರೆ. ನನಗೆ ದೊರೆತಂತಹ ಉಪಕಾರ ದೊರೆತಿರುವುದು ನನ್ನಂತಹ ಪರಿಸ್ಥಿತಿಯಲ್ಲಿ ಶ್ರೀಗಳವರ ಆಶ್ರಯ ಪಡೆದ ಕೆಲವು ಮಂದಿಗೆ ಮಾತ್ರ. ೧೯೪೩-೪೪ರಲ್ಲಿ ಆಹಾರ ಪದಾರ್ಥಗಳಿಗೆ ತೀವ್ರ ಅಭಾವವಿದ್ದ ಕಾಲ. ಪಡಿತರ ಪದ್ಧತಿಯಲ್ಲಿ ಜನ ಬದುಕುತ್ತಿದ್ದ ಕಾಲ. ಬಡಜನರು ಸಕ್ಕರೆ, ಗೋಧಿ, ರವೆ, ಉತ್ತಮ ಅಕ್ಕಿ ಇವುಗಳನ್ನು ಅನೇಕ ವರ್ಷಗಳವರೆಗೆ ನೋಡಲೇ ಇಲ್ಲವೆಂದರೆ ಉತ್ಪ್ರೇಕ್ಷೆಯಲ್ಲ. ಅವೆಲ್ಲಾ ಶ್ರೀಮಂತರ ಭೋಗವಸ್ತುಗಳಾಗಿದ್ದುವು. ಆ ಸಮಯ

ದಲ್ಲೀ ನಾನು ತೀವ್ರತರ ರೋಗಗ್ರಸ್ತನಾಗಿ ಮಲಗಿದ್ದೆ. ಜಗದ್ಗುರುಗಳವರು ಹಿರಿಯ ಜಗದ್ಗುರುಗಳವರ ಸಂಪೂರ್ಣ ಹಿಡಿತದಲ್ಲಿದ್ದ ಕಾಲ. ನಮ್ಮ ವಿದ್ಯಾಸಂಸ್ಥೆಗೆ ಪಕ್ಕದಲ್ಲೀ ಇದ್ದ ಮನೆಯೊಂದರಲ್ಲಿ ಶ್ರೀಗಳವರು ವಾಸಮಾಡು ತ್ತಿದ್ದರು. ಹಿರಿಯ ಜಗದ್ಗುರುಗಳವರು ಇವರ ಯೋಗಕ್ಷೇಮವನ್ನು ವಿಚಾರಿಸುವುದಕ್ಕಾಗಿಯೇ ವಾರಕ್ಕೊಮ್ಮೆ ಸುತ್ತೂರಿನಿಂದ ಮೈಸೂರಿಗೆ ಬರುತ್ತಿದ್ದರು. ಅವರು ಬಂದಾಗ ಶ್ರೀಗಳವರಿಗೆ ಬೇಕಾದ ಸಕ್ಕರೆ, ರವೆ ಮುಂತಾದ ವಸ್ತುಗಳ ವ್ಯವಸ್ಥೆ ಮಾಡುತ್ತಿದ್ದರು. ಅವರಿಗಾಗಿ ದಿನನಿತ್ಯ ಎಷ್ಟು ಹಾಲು, ಹಣ್ಣು, ತರಕಾರಿ ತುಪ್ಪ ಬೇಕೆಂಬುದ ನ್ನೆಲ್ಲಾ ಪರಿಶೀಲಿಸಿ ವ್ಯವಸ್ಥೆ ಮಾಡುತ್ತಿದ್ದರು. ಅವರಿಗೆ ದಿನನಿತ್ಯ ಕೊಡಬೇಕಾದ ಖಾದ್ಯಗಳನ್ನೆಲ್ಲಾ ನಿಗದಿ ಮಾಡಿ ಸೇವಕರಿಗೆ ಆಜ್ಞೆ ಮಾಡುತ್ತಿದ್ದರು. ಹಿರಿಯ ಜಗದ್ಗುರುಗಳು ಎಲ್ಲ ವ್ಯವಹಾರದಲ್ಲೂ ಶಿಸ್ತಿನಿಂದ ನಡೆದವರಷ್ಟೆ! ಶ್ರೀಗಳವರ ಆರೈಕೆಯಲ್ಲೂ ಸಹ ಅಷ್ಟೇ ಶಿಸ್ತು, ವಾತ್ಸಲ್ಯ, ನಿಖರತೆಯನ್ನು ನಾವು ಕಾಣಬಹುದಾಗಿತ್ತು. ಆದುದರಿಂದ ಶ್ರೀಗಳವರು ಅವರು ಆಗಮಿಸಿದ ಕಾಲದಲ್ಲಿ ನಿಗದಿಯಂತೆ ಆಹಾರ ವ್ಯವಹಾರಗಳನ್ನು ನಡೆಸಬೇಕಾಗುತ್ತಿತ್ತು. ಇತ್ತ ರೋಗಗ್ರಸ್ತನಾದ ನನಗೆ ರವೆಗಂಜಿಯನ್ನು ಕೊಡಬೇಕೆಂಬುದು ವೈದ್ಯರ ಸಲಹೆಯಾಗಿತ್ತು. ಅದನ್ನು ಸ್ವತಃ ವ್ಯವಸ್ಥೆ ಮಾಡಿಕೊಳ್ಳುವುದು ಸಾಧ್ಯವೇ ಇಲ್ಲದ ಕಾಲ. ಅದನ್ನರಿತ ಜಗದ್ಗುರುಗಳು ತಮ್ಮ ನಿವಾಸದಲ್ಲಿ ಎದುರಿನಲ್ಲಿ ಕುಳಿತ ಹಿರಿಯ ಜಗದ್ಗುರುಗಳ ದೃಷ್ಟಿಗೆ ಬೀಳದಂತೆ ಹಿಂಬಾಗಿಲಿನಿಂದ ಸಕ್ಕರೆ, ರವೆ, ಹಾಲನ್ನು ಗೋಪ್ಯವಾಗಿ ನಮ್ಮ ನಿಲಯಕ್ಕೆ ಕಳುಹಿಸಿ ಗಂಜಿ ಮಾಡಿಕೊಡುವಂತೆ ವ್ಯವಸ್ಥಾಪಕರಿಗೆ ಆಜ್ಞೆ ಕೊಟ್ಟಿದ್ದರು. ಆದರೆ ಬಹುದಿನ ಅವರ ಕರುಣೆಯ ಈ ಭಾಗ್ಯ ನನಗೆ ಲಭ್ಯವಾಗಲಿಲ್ಲ. ಸಕ್ಕರೆಗೆ ಚಿನ್ನಕ್ಕಿರುವ ಮಹತ್ವವಿದ್ದ ಸಮಯ. ವ್ಯವಸ್ಥಾಪಕರು ಅವರ ಮಿತ್ರರು ಚಹಾಪ್ರಿಯರು. ಶ್ರೀಗಳಿಂದ ನನಗಾಗಿ ಬಂದ ವಸ್ತುಗಳು ಅವರ ವಿಲಾಸಕ್ಕೆ ಮೀಸಲಾದುವು. ನನಗೆ ದೊರೆತದ್ದು ಬೆಲ್ಲ ಬೆರೆಸಿದ ಅಕ್ಕಿಯ ಗಂಜಿ. ನನ್ನ ರೋಗ ಶಮನವಾಗಲಿಲ್ಲ. ಬೆಲ್ಲದ ಗಂಜಿ ಹೊಟ್ಟೆಗೆ ಮುಟ್ಟಿದರೆ ವಮನವಾಗುತ್ತಿತ್ತು. ಅದು ನನ್ನ ರೋಗವನ್ನು ದಿನದಿನಕ್ಕೆ ಉಲ್ಬಣಗೊಳಿಸುತ್ತಿತ್ತು. ಕೆಲವೇ ದಿನಗಳಲ್ಲಿ ನನಗಾದ ಗತಿಯ ವರ್ತಮಾನ ಶ್ರೀಗಳವರ ಗಮನಕ್ಕೆ ಹೇಗೆ ಬಂದಿತೋ ತಿಳಿಯದು. ಅವರ ನಿವಾಸದಿಂದಲೇ ಸೇವಕರು ಸಕ್ಕರೆಯ ರವೆಗಂಜಿಯನ್ನು ತಂದು ಕುಡಿಸಿ ಹೋಗುತ್ತಿದ್ದರು. ಆಗಿನ್ನೂ ನಾನು ಪ್ರೌಢಶಾಲಾ ವಿದ್ಯಾರ್ಥಿ. ಶ್ರೀಗಳವರ ವಿದ್ಯಾರ್ಥಿ ಶಿಷ್ಯಪರಂಪರೆಯಲ್ಲಿ ನಾನಿನ್ನೂ ನಗಣ್ಯ.ನನ್ನ ಊರುಕೇರಿಗಳಾಗಲಿ, ಬಂಧುಬಳಗದವರಾಗಲಿ, ಕುಲಗೋತ್ರಗಳಾಗಲಿ,ಶ್ರೀಗಳವರ ಗಮನಕ್ಕೆ ಬರದೇ ಇದ್ದ ಕಾಲವೆಂಬುದನ್ನು ಮತ್ತೊಮ್ಮೆ ಹೇಳಿಕೊಳ್ಳಲು ಮನಸ್ಸು ಹಿಂಜರಿಯುತ್ತಿಲ್ಲ. ಹತ್ತುಬಾರಿ ಹೇಳಿದರು ತೃಪ್ತಿಯಿಲ್ಲ. ಏಕೆಂದರೆ ಅಂದಿನ ನನ್ನ ಅನುಭವವನ್ನು ಇಂದು ವರ್ಣಿಸಲು ನನಗೆ ಸಾಕಷ್ಟು ಸಾಹಿತ್ಯಸಂಪತ್ತಿಲ್ಲ. ಇದು ಅನುಭವವೇದ್ಯವೇ ಹೊರತು ವರ್ಣನೆಯಿಂದ ತೃಪ್ತಿತರುವ ಪ್ರಸಂಗವಲ್ಲ.

ಇನ್ನು ಮುಂದೆ ನಾನು ಪದವೀಧರನಾಗುವವರೆಗೆ ಏಕೆ ವಕೀಲಿವೃತ್ತಿಯನ್ನವಲಂಬಿಸಿ ಕೌಟುಂಬಿಕ ಜೀವಿ ಯಾಗುವವರೆಗೆ, ನಾನು ಉಟ್ಟ ಬಟ್ಟೆ, ಉಂಡ ಅನ್ನ, ಬರೆದ ಮತ್ತು ಓದಿದ ಪುಸ್ತಕ, ಹಿಡಿದ ಲೇಖಣಿ ಎಲ್ಲವೂ ಶ್ರೀಗಳವರ ಅನುಗ್ರಹದ ಫಲವೆಂದಲ್ಲದೆ ಬೇರೆ ಹೇಳಲಾರೆ. ಇದಕ್ಕಿಂತ ಮಿಗಿಲಾಗಿ ನನ್ನ ಆತ್ಮಚರಿತ್ರೆಯನ್ನು ಹೇಳಿ ಕೊಳ್ಳಲು ಇಚ್ಛಿಸುವುದಿಲ್ಲ. ಶ್ರೀಗಳವರು ಪೂಜಾಸಮಯದಲ್ಲಿ ಪ್ರಸಾದ ಸ್ವೀಕರಿಸುವರೇ ವಿನಃ ಅನ್ಯಥಾ ತೀರ್ಥವನ್ನು ಸ್ವೀಕರಿಸುವುದಿಲ್ಲ. ಇದು ಬಾಲ್ಯದಿಂದಲೇ ಅವರಿಗೆ ದೊರೆತ ಶಿಕ್ಷಣ ಮತ್ತು ಶ್ರೀಮಠದ ಪೀಠಾಧಿಪತಿಗಳ ಸಂಪ್ರ ದಾಯ. ತಮ್ಮ ಸಂಸ್ಥೆಗಳ ಕಾರ್ಯಕ್ಕಾಗಿ ಸರ್ಕಾರದಲ್ಲಿ ನಡೆಸಬೇಕಾದ ಕಾರ್ಯಗಳಿಗಾಗಿ ಆಗಾಗ ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಅದೊಂದು ದಿನ ಮಹಾಶಿವರಾತ್ರಿ. ಅಂದು ಎಲ್ಲಾ ವಿದ್ಯಾಸಂಸ್ಥೆಗಳಲ್ಲೂ ಶಾಸ್ತ್ರೀಯವಾದ ಶಿವಪೂಜಾವೈಭವ. ನಂತರ ವಿದ್ಯಾರ್ಥಿಗಳಿಗೆ ರುಚಿಕರವಾದ ಫಲಾಹಾರ. ಶಿವರಾತ್ರಿಗೆ ಮೂರುದಿನ ಮುನ್ನವೇ ಬೆಂಗಳೂರಿಗೆ ತೆರಳಿದ ಶ್ರೀಗಳವರು ಬೆಳಗಿನಿಂದಲೂ ಪೂಜೆಗೆ ಅವಕಾಶವಿಲ್ಲದೆ ಉಪವಾಸವಿದ್ದರು. ರಾತ್ರಿ ಹತ್ತು ಘಂಟೆಗೆ ಮೈಸೂರಿಗೆ ಬಂದು ಎಲ್ಲ ವಿದ್ಯಾರ್ಥಿನಿಲಯಗಳಲ್ಲಿ ನಡೆದಿರುವ ಏರ್ಪಾಡನ್ನು ಪರಿಶೀಲಿಸಿದರು. ಸಾವಿರಾರು ಜನ ವಿದ್ಯಾರ್ಥಿಗಳು ಆನಂದದಿಂದ ಪ್ರಸಾದ ಸ್ವೀಕರಿಸಿ ತೃಪ್ತರಾಗಿದ್ದಾರೆ. ಆದರೆ ಶ್ರೀಗಳವರಿಗೆ ಮೂರುದಿನದ ಉಪವಾಸ. ಮಾತನಾಡಲು ನಾಲಗೆ ತೊದಲುತ್ತಿತ್ತು. ಸಹಸ್ರಾರು ಜನರಿಗೆ ಅನ್ನವಿತ್ತ ಜೀವಕ್ಕೆ ನೀರು ಕುಡಿಯಲು ಅವಕಾಶವಿಲ್ಲ. ಹಿಂದೆ ಯಾರ ಅನ್ನ ನೀರಿಗೆ ತೊಂದರೆ ಮಾಡಿದ್ದೆನೋ ಅದರ ಫಲವನ್ನಿಂದು ನಾನು ಅನುಭವಿಸ ಬೇಕಾಗಿದೆ. ನಮ್ಮ ವಿದ್ಯಾರ್ಥಿಗಳಿಗೆ ತೃಪ್ತಿಯಾದರೆ ಸಾಕು. ಅದರಿಂದ ನಾನು ಧನ್ಯ ಎಂದು ಉದ್ಗರಿಸಿದರು. ಹೀಗೆ ಮೂರು ನಾಲ್ಕು ದಿನಗಳವರೆಗೆ ಉಪವಾಸವಿರಬೇಕಾದ ಅನಿವಾರ್ಯ ಪ್ರಸಂಗಗಳು ಅವರ ಜೀವನದಲ್ಲಿ ವಿರಳವೇನಲ್ಲ. ಚಾಮರಾಜನಗರದ ವಿದ್ಯಾರ್ಥಿನಿಲಯಕ್ಕಾಗಿ ಧನಸಂಗ್ರಹಣೆಯ ಯಾತ್ರೆ ಕೈಗೊಂಡಾಗ ಅನೇಕಬಾರಿ ಇಂತಹ ಪ್ರಸಂಗ

ಗಳು ಬಂದೊದಗಿದುವು. ಕೊನೆಗೆ ಭಕ್ತರು ಶಿವಪೂಜೆ ಮಾಡಲೇಬೇಕೆಂಬ ಒತ್ತಾಯ ತರಬೇಕಾಯಿತು. ಹತ್ತಾರು ಸಾವಿರ ಜನರಿಗೆ ಅನ್ನ ನೀಡುವುದು ನಿತ್ಯಕಾಯಕವಾಗಿ ಪ್ರತಕೈಗೊಂಡ ಜಗದ್ಗುರುಗಳವರಿಗೆ ತಮ್ಮ ಸ್ವಂತ ಜೀವನದ ಪರಿವೆಯೇ ಇರುತ್ತಿರಲಿಲ್ಲ. ಕಾಯಕದಲ್ಲಿ ನಿರತರಾದರೆ ಲಿಂಗದರ್ಶನವಾದರೂ ಮರೆಯಬೇಕೆಂಬ ಬಸವಣ್ಣನವರ ವಾಣಿ ಶ್ರೀಗಳವರ ಜೀವನದಲ್ಲಿ ಪ್ರತಿಬಿಂಬಿಸುತ್ತಿತ್ತು.

ನಿತ್ಯ ಶಿವಮಂತ್ರ ಜಪನಿರತರಾದ ಜಗದ್ಗುರುಗಳವರು ಎಂತಹ ಪ್ರಸಂಗದಲ್ಲಿಯೂ ಕೋಪಿಸಿಕೊಳ್ಳುವುದಿಲ್ಲ. ಕೋಪ ಬಂದಾಗ ಯಾರಿಗೂ ಏನೂ ಅನ್ನುವುದಿಲ್ಲ. ಆದರೂ ಒಮ್ಮೊಮ್ಮೆ ಅವರ ತಾಳ್ಮೆಯನ್ನು ಕೆಡಿಸಿದ ಪ್ರಸಂಗಗಳು ಕೆಲವು ವ್ಯಕ್ತಿಗಳಿಂದ ಒದಗಿಬರುತ್ತಿದ್ದುವು. ಸುತ್ತೂರು ವಿದ್ಯಾರ್ಥಿನಿಲಯ ಸುಖಜೀವನಕ್ಕೆ ಹೆಸರು ಪಡೆದಿತ್ತು. ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿದಿನ ಬಿಸಿನೀರಿನ ಅಭ್ಯಂಜನ ಸ್ನಾನ, ಭಕ್ಷ್ಯಭೋಜ್ಯ ತಯಾರಿಸುತ್ತಿದ್ದ ಮತ್ತು ವಾರಕ್ಕೆ ಒಮ್ಮೆ ತಪ್ಪದೆ ಮಧುರ ವಿಶೇಷ ಭೋಜನ ಏರ್ಪಡಿಸುತ್ತಿದ್ದ ಕಾಲ ಅದು. ವಾರದ ವಿಶೇಷ ಭೋಜನ ಕಾಲದಲ್ಲಿ ಶ್ರೀಗಳವರೇ ತುಪ್ಪ ನೀಡಲು ಬರಬೇಕು. ಇಲ್ಲವಾದರೆ ಯಾರಿಗೂ ತೃಪ್ತಿಯಿಲ್ಲ. ಬಕೆಟ್ ತುಂಬಾ ತುಪ್ಪ ತುಂಬಿಕೊಂಡು ಲೋಟದಲ್ಲಿ ನೀರು ಸುರಿವಂತೆ ಊಟದ ತಟ್ಟೆಗೆ ತುಪ್ಪ ಸುರಿಯುತ್ತಾ ವಿದ್ಯಾರ್ಥಿಗಳಲ್ಲಿ ಭೋಜನದ ಪೈಪೋಟಿಯನ್ನು ಪ್ರಚೋದಿಸುತ್ತಿದ್ದರು. ಶ್ರೀಗಳವರ ಅಂತರಂಗದ ಅಭಿಲಾಷೆಯೇ ಹಾಗೆ! ಅಂದು ವಿದ್ಯಾರ್ಥಿನಿಲಯದಲ್ಲಿದ್ದ ಸೇವಕರು ತಾವು ವಿದ್ಯಾರ್ಥಿಗಳ ಬಂಧುಗಳೆಂಬ ಭಾವನೆಯಿಂದ ದುಡಿಯುತ್ತಿದ್ದರು. ಬೆಳಗಾಗುವುದರೊಳಗೆ ಯಾರಾದರೂ ವಿದ್ಯಾರ್ಥಿ ಬಾರದಿದ್ದರೆ ಅವರನ್ನು ಕರೆದುತಂದು ಭೋಜನವನ್ನು ಆತ್ಮೀಯತೆಯಿಂದ ನೀಡುತ್ತಿದ್ದರು. ಇಷ್ಟೆಲ್ಲಾ ಸವಲತ್ತುಗಳಿದ್ದರೂ ಸದಾ ಅತೃಪ್ತ ಜನರು ಇರುತ್ತಿದ್ದರು. ಮತ್ತೊಬ್ಬರ ಮೇಲ್ಮೆಯನ್ನು ಕಂಡು ಸಹಿಸದವರು ಯಾವಾಗಲೂ ದೋಷಾರೋಪಣೆ ಮಾಡುವುದಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಳ್ಳಲು ಯತ್ನಿಸುತ್ತಿದ್ದರು. ಶ್ರೀಗಳವರಿಂದ ಎಲ್ಲ ರೀತಿಯ ಸಹಾಯ ಪಡೆದರೂ ತೃಪ್ತರಾಗದೆ ಅವರನ್ನೇ ಹಿಂಬದಿಯಲ್ಲಿ ಹೀಯಾಳಿಸುವ ವ್ಯಕ್ತಿಗಳೂ ಇದ್ದರಷ್ಟೆ! ಅವರು ಇಂದಿಗೂ ಸಹ ಎಲ್ಲಿರಲಿ ಏನಾದರಾಗಿರಲಿ ಅದರ ಫಲ ಅನುಭವಿಸುತ್ತಲೇ ಇದ್ದಾರೆನ್ನಬಹುದು.

ಶ್ರೀಗಳವರ ಅನುತಾಪಕ್ಕೆ ಕಾರಣರಾದ ಒಂದೆರಡು ಸಂದರ್ಭಗಳನ್ನು ಸ್ಮರಿಸಬಹುದು. ನಮ್ಮ ಸಮಕಾಲೀನ ಮಿತ್ರರೊಬ್ಬರು ಶ್ರೀಗಳವರಿಂದ ಎಲ್ಲಾ ಸೌಲಭ್ಯ ಪಡೆಯುತ್ತಿದ್ದರು. ಪ್ರತಿಭಾವಂತ ವ್ಯಕ್ತಿಯಾಗುವನೆಂಬ ಸೂಚನೆ ಅವರಲ್ಲಿ ಕಾಣಬರುತ್ತಿತ್ತು. ಅವರ ವಿದ್ಯಾಭ್ಯಾಸ ಪೂರ್ಣವಾಗಿ ನನ್ನಂತೆ ಶ್ರೀಗಳವರನ್ನೇ ಆಶ್ರಯಿಸಿತ್ತು. ಅದು ತನ್ನ ಹಕ್ಕು ಎಂದೇ ನನ್ನ ಮಿತ್ರರು ಭಾವಿಸಿದ್ದರು. ಶ್ರೀಗಳವರಿಗೆ ನಿಕಟವರ್ತಿಗಳೂ ಆಗಿದ್ದರು. ಅನಿವಾರ್ಯ ಕಾರಣಗಳಿಗಾಗಿ ಅವರಿಗೆ ದೊರೆಯುತ್ತಿದ್ದ ಧನಸಹಾಯದಲ್ಲಿ ತಡವಾಗಿರಬಹುದು, ಅಥವಾ ಕಡಮೆಯಾಗಿರಬಹುದು. ಅದಕ್ಕಾಗಿ ಅವರು ತಾಳ್ಮೆಗೆಟ್ಟರು. ಅನೇಕ ವಿದ್ಯಾರ್ಥಿಗಳ ಹಾಗೂ ಭಕ್ತರ ಸಮ್ಮುಖದಲ್ಲಿ ಶ್ರೀಗಳವರನ್ನು ಕುರಿತು ಅವಾಚ್ಯ ಶಬ್ದಗಳನ್ನಾಡಿದರು. ಅದು ಶ್ರೀಗಳವರ ಗಮನಕ್ಕೆ ಬಂದು ಅವರಂದದ್ದು ಒಂದೇ ವಾಕ್ಯ. "ತಾನಾಗಿಯೇ ಅನ್ಯಾಯವಾಗಿ ಕೆಡುತ್ತಾನಲ್ಲಾ" ಎಂದರು. ಮತ್ತೆಯೂ ಆತ ಶ್ರೀಗಳವರ ಆಶ್ರಯ ಪಡೆದಿದ್ದ. ಆದರೆ ತನ್ನ ಅಪರಾಧಕ್ಕೆ ಅವನು ಪಶ್ಚಾತ್ತಾಪಪಡಲಿಲ್ಲ. ತಾನಾಡಿದ ಮಾತು ತನಗೆ ಶ್ರೀಗಳವರಿಂದ ಎಲ್ಲ ಸೌಲಭ್ಯ ಒದಗಿಸುತ್ತಿದೆ, ಇದೊಂದು ದೊಡ್ಡ ಸಾಧನೆಯೆಂಬ ಭಾವನೆ ಅವನಲ್ಲಿ ಮೂಡಿಬಂದಿತ್ತು. ಆದರೆ ಎಲ್ಲ ಸೌಲಭ್ಯಗಳಿದ್ದರೂ ಆತನ ವಿದ್ಯಾಭ್ಯಾಸ ಪೂರ್ಣವಾಗಲಿಲ್ಲ. ಪ್ರತಿಭಾವಂತನಾಗಬೇಕಾದ ವ್ಯಕ್ತಿ ಪದವೀಧರನೂ ಆಗಲಿಲ್ಲ. ಆದರೂ ಸಹ ಅವರಿಗೆ ಪ್ರತಿಷ್ಠಿತಸ್ಥಾನ ಅವರ ಅರ್ಹತೆಗೆ ಮೀರಿದ ಮಾಸಿಕವೇತನ ದೊರೆಯಿತು. ವಿದೇಶಯಾತ್ರೆಯೂ ಲಭಿಸಿತು. ನಂತರ ಶ್ರೀಮಂತರ ಮನೆಯ ಕನ್ಯೆಯನ್ನು ಕೈಹಿಡಿದರು. ಎಲ್ಲ ಭಾಗ್ಯವೂ ಇತ್ತು. ಆದರೆ ಸಂಸಾರದಲ್ಲಿ ವಿರಸವೇರ್ಪಟ್ಟಿತು. ಜೀವನವು ಜಿಗುಪ್ಸೆಯಲ್ಲಿ ಮುಗಿಯಿತು. ಕಾನನದಿ ಪುಟ್ಟಿದ ವನಸುಮದಂತೆ' ಅವರ ಜೀವನ ಗೊತ್ತುಗುರಿಯಿಲ್ಲದೆ ಅಂತ್ಯವಾಯಿತು. ಇದೇ ದಾರಿಯನ್ನನುಸರಿಸಿ ಶ್ರೀಗಳವರಿಂದ ಎಲ್ಲ ಸವಲತ್ತು ಪಡೆಯುತ್ತಿದ್ದವರು, ಅದು ತಮ್ಮ ಜನ್ಮಸಿದ್ಧ ಹಕ್ಕೆಂದು ಭಾವಿಸಿದ್ದುಂಟು. ಇತ್ತ ಸಹಾಯವನ್ನು ಪಡೆದು ಅತ್ತ ಅವರಿಗೆ ಅಪಚಾರವೆಸಗಿದವರೂ ಇದ್ದರು. ಅಂತಹ ಅನೇಕರ ಜೀವನ ಇಂದಿಗೂ ವನಕುಸುಮದಂತೆಯೇ ಪರಿಣಮಿಸುತ್ತಿದೆ.

ಮತ್ತೊಬ್ಬ ಮಿತ್ರರು ತಮ್ಮ ಶ್ರೀಮಂತಿಕೆಯ ಹಮ್ಮಿನಲ್ಲಿ ಶ್ರೀಗಳವರ ಬಗೆಗೆ ಅವಾಚ್ಯ ಶಬ್ದಗಳನ್ನು ಬಳಸಿದರು. ಅವರಿಗೆ ಅಂತಹ ಕಾರಣಗಳೇನೂ ಇರಲಿಲ್ಲ. ತುಚ್ಛಭಾವನೆಯಿಂದ ವರ್ತಿಸಿದ ಅವರ ನಡೆ ಶ್ರೀಗಳವರ ಮನಸ್ಸಿಗೆ ನೋವನ್ನುಂಟುಮಾಡಿತು. ಅದಕ್ಕೆ ಶ್ರೀಗಳವರು ಬಹಿರಂಗವಾಗಿ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸ

ಲಿಲ್ಲ. ಮಹಾನುಭಾವರ ಮನನೋಯಿಸಿದವರು ಅದರ ಫಲ ಅನುಭವಿಸಬೇಕಾದುದು ಅನಿವಾರ್ಯ. ಅಂತೆಯೇ ಅವರು ಪದವೀಧರರಾದರೂ ಮತಿಭ್ರಮಣೆಯಾಗಿ ವಿವಿಧ ರೋಗಗಳಿಂದ ನರಳಿದರು. ಶ್ರೀಮಂತರ ಮನೆಯ ಅಳಿಯನಾದರೂ ಬಂದ ಭಾಗ್ಯವನ್ನು ಅನುಭವಿಸುವ ಯೋಗ ಸಿಗಲಿಲ್ಲ. ಮನೆಗೊಂದು ಸಂತಾನ ಸೌಭಾಗ್ಯ ಪಡೆದು ಕೊಳ್ಳಲಾರದೆ ಅತ್ಯಲ್ಪ ವಯಸ್ಸಿನಲ್ಲೇ ಮೃತ್ಯುವನ್ನಪ್ಪಿದರು. ಬಂದ ಭಾಗ್ಯ ಅನ್ಯರ ಪಾಲಾಯಿತು.

ಮನುಷ್ಯನಿಗೆ ಐಶ್ವರ್ಯ, ಅಧಿಕಾರಗಳು ಬಂದೊಡನೆ ಅಹಂಕಾರಸರ್ಪ ಒಳಗೇ ಹೆಡೆಯೆತ್ತಿ ನಿಲ್ಲುತ್ತದೆ. ಹಾಲು ಉಣಿಸಿದವರನ್ನು ಹಾರೈಕೆ ಮಾಡಿದವರನ್ನು ಕಚ್ಚುವುದೇ ಅದರ ಸ್ವಭಾವ. ಅಂತೆಯೇ ಅಡಿಯಿಂದ ಮುಡಿಯ ವರೆಗೆ ಶ್ರೀಗಳವರ ಕೃಪೆಯಲ್ಲಿ ಬೆಳೆದವರು ಬಹುಮಂದಿ. ಅವರು ಗಳಿಸಿದ ಪದವಿ ಶ್ರೀಗಳವರ ಪ್ರಯತ್ನದ ಫಲವೇ. ಆದರೆ ಅಧಿಕಾರ ಬಂದಾಗ ಹಣ ಕೈಸೇರಿದಾಗ ಅನ್ನವಿತ್ತವರಿಗೇ ಕತ್ತರಿ ಹಾಕುವ ಕಾರ್ಯವೆಸಗಿದವರೂ ಇದ್ದಾರೆ. ತನ್ನಲ್ಲಿ ಹಣವಿದೆ ಎಂಬ ಅಹಂಕಾರದಿಂದ ಪಕ್ಕದ ಬಡಕುಟುಂಬಕ್ಕೆ ಕಷ್ಟವನ್ನುಂಟುಮಾಡಿದವರೊಬ್ಬರ ಬಗೆಗೆ ಶ್ರೀಗಳವರ ಉದ್ರೇಕ ಮಿತಿಮೀರಿತು. ಕೋಪೋದ್ದೀಪಿತರಾಗಿ ಅವರ ಕೃತಿಯನ್ನು ಖಂಡಿಸಿದರು. ಅವರಿಗಾದ ಮನೋವೇದನೆ ಅಂತಹ ಪರಿಸ್ಥಿತಿಯನ್ನುಂಟುಮಾಡಿತ್ತು. ತಮ್ಮ ಕೋಪ ಶ್ರೀಗಳವರ ಆರೋಗ್ಯದಮೇಲೆ ಕ್ಷಣ ಕಾಲ ದುಷ್ಪರಿಣಾಮವನ್ನುಂಟುಮಾಡಿತು. ಈ ಪರಿಸ್ಥಿತಿಗೆ ಕಾರಣರಾದ ಮಿತ್ರರೊಬ್ಬರು ನಿರಂತರ ಸಾಂಸಾರಿಕ ದುಃಖ ಹಾಗೂ ಅನಾರೋಗ್ಯದ ವೇದನೆಯನ್ನು ಅನುಭವಿಸುತ್ತಿದ್ದಾರೆ. ಜಗದ್ಗುರುಗಳವರ ಮನನೋಯಿಸಿದವರು ತಾವೇ ನಿರಂತರ ವಿವಿಧ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ್ದಾರೆ. ಇನ್ನೂ ಅನುಭವಿಸುತ್ತಿರುವವರೂ ಇದ್ದಾರೆ. ಅಂತಹ ನಿದರ್ಶನಗಳು ಹತ್ತಾರು ಇರಬಹುದು. ನೂರಾರು ಇರಬಹುದು. ನನಗೆ ತಿಳಿದ ಎಲ್ಲಾ ನಿದರ್ಶನಗಳನ್ನೂ ಉದಾಹರಿಸಲು ಅಪೇಕ್ಷಿಸುವುದಿಲ್ಲ. ಕೆಲವು ನಿದರ್ಶನಗಳನ್ನು ಉದಾಹರಿಸುವುದು ಶ್ರೀಗಳವರನ್ನು ಪವಾಡಪುರುಷ ರೆಂದಾಗಲಿ, ಇದರಿಂದ ಅವರ ಹಿರಿಮೆ ಪ್ರಚಾರ ಮಾಡಬೇಕೆಂಬ ಉದ್ದಿಶ್ಯವಾಗಲೀ ನನ್ನದಲ್ಲ.

ಜಗದ್ಗುರುಗಳವರು ತಾವು ಸ್ಥಾಪಿಸಿ ನಡೆಸುತ್ತಿರುವ ಸಂಸ್ಥೆಗಳ ವೈಭವದಿಂದ ತಮ್ಮ ಕೃಪಾಶೀರ್ವಾದದಿಂದ ಬೆಳೆದ ವ್ಯಕ್ತಿಗಳ ಕೀರ್ತಿಪ್ರತಿಷ್ಠೆ ಕಣ್ತುಂಬ ನೋಡಿರುವುದರಿಂದ ಅನೇಕವೇಳೆ ತಮ್ಮ ಅಮಿತಾನಂದವನ್ನು ವ್ಯಕ್ತ ಪಡಿಸಿದ್ದಾರೆ. ಸಮಾಜದಲ್ಲಿ ದೊರೆತ ಮಾನಸನ್ಮಾನಗಳು ಬೆಳೆಸಿದ ಸಂಪತ್ತು ಇವುಗಳಿಗಿಂತಲೂ ಅವರಿಗೆ ಅತ್ಯಾನಂದ ವನ್ನುಂಟುಮಾಡುವ ಕಾರ್ಯವೆಂದರೆ ಲಿಂಗಪೂಜೆ. ಶ್ರೀಗಳವರಿಗೆ ಲಿಂಗಪೂಜೆಯಲ್ಲಿ ದೊರೆಯುವ ಆನಂದದ ಮುಂದೆ ಉಳಿದೆಲ್ಲ ಆನಂದವೂ ತೃಣಸಮಾನ. ಏನಾದರೂ ಬಾಹ್ಯಕಾರ್ಯ ನಡೆದಿದ್ದರೆ ಅದರಿಂದ ಸಹಸ್ರಾರು ಜನರ ಉದ್ಧಾರ ವಾಗಿದ್ದರೆ ಅದೆಲ್ಲವೂ ದೈವಪ್ರೇರಿತ ಕರ್ತವ್ಯ ಎನ್ನುತ್ತಾರೆ ಶ್ರೀಗಳವರು. ಹೀಗೆ ಪರ ಶಿವಯೋಗನಿಷ್ಠರಾದ ಜಗದ್ಗುರುಗಳ ವರಮಾನದ ಭಾವನೆಗಳು ತಕ್ಕ ಪರಿಣಾಮವನ್ನುಂಟುಮಾಡದೆ ಇರಲಾರವೆಂಬುದನ್ನು ಅನುಭವಿಗಳು ಮಾತ್ರ ಅರ್ಥಮಾಡಿಕೊಳ್ಳಬಲ್ಲರು. ಅನುಭವವಿಲ್ಲದವರಿಗೆ ಈ ಪ್ರಸಂಗಗಳು ಚೋದ್ಯವಾಗಿ ಕಾಣಬಹುದು. ಆದರೆ ಅವರ ಮನದ ನೋವಿನ ಸುಳಿಗೆ ಸಿಕ್ಕಿ ನರಳುತ್ತಿರುವವರು ಇದನ್ನೋದಿ ತಮ್ಮ ತಾಪ ಪರಿಹರಿಸಿಕೊಳ್ಳುವ ದಾರಿ ಯನ್ನು ತಾವೇ ಕಂಡುಕೊಂಡರೆ ಸಾಕು. ಅವರಿಗೂ ಶ್ರೇಯವುಂಟಾಗಲೆಂಬುದೇ ಜಗದ್ಗುರುಗಳವರ ಅಭಿಲಾಷೆ. ತಪ್ಪುಮಾಡಿದವರೂ ಒಪ್ಪವಾಗಬೇಕೆಂಬುದೇ ನಮ್ಮೆಲ್ಲರ ಆಕಾಂಕ್ಷೆ. ಅದಕ್ಕಾಗಿ ಕೆಲವು ನಿದರ್ಶನಗಳನ್ನು ಮಾತ್ರ ಉಲ್ಲೇಖಿಸಿದೆ. ಶ್ರೀಗಳವರು ತಾವಾಗಿ ಎಂದೂ ಯಾರಿಗೂ ಅಹಿತವನ್ನು ಬಯಸಿದವರಲ್ಲ. ಆದರೆ ಅವರವರ ಕರ್ಮದ ಫಲ ಅವರು ಅನಿವಾರ್ಯವಾಗಿ ಅನುಭವಿಸಬೇಕಾಗುತ್ತದಷ್ಟೆ.

## ಅಭಿಲಾಷೆ ಹುಸಿಯಾಗಲಿಲ್ಲ

ಜಗದ್ಗುರುಗಳವರು ಯಾರ ಬಗೆಗೆ ಏನನ್ನು ಬಯಸಿದರೋ ಅದು ಎಷ್ಟೇ ಕಠಿಣವಾದರೂ ಫಲಕಾರಿಯಾಗಿದೆ. ಪರಮಪೂಜ್ಯ ಶ್ರೀಮನ್ನಿರಂಜನಸ್ವರೂಪಿ ಗೌರೀಶಂಕರ ಮಹಾಸ್ವಾಮಿಗಳವರು ವೆಲ್ಲೂರಿನ ವೈದ್ಯಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಶ್ರೀಗಳವರು ಅವರ ಯೋಗಕ್ಷೇಮದ ಮೇಲ್ವಿಚಾರಣೆಗಾಗಿ ಇಲ್ಲಿನ ಎಲ್ಲ ವ್ಯವಹಾರಗಳನ್ನು ತೊರೆದು ಅಲ್ಲಿಯೇ ಇರಬೇಕಾಯಿತು. ಇತ್ತ ನನ್ನ ಮಿತ್ರರೊಬ್ಬರಿಗೆ ಒಂದು ಕ್ಷೇತ್ರದಲ್ಲಿ ಉನ್ನತ ಶಿಕ್ಷಣಕ್ಕಾಗಿ ಅವಕಾಶ ದೊರಕಿಸಿಕೊಡಬೇಕಾಗಿತ್ತು. ಆಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಟರ್‌ಮೀಡಿಯೇಟ್ ಪರೀಕ್ಷೆ ಮುಗಿದ ನಂತರ ಆನರ್ಸ್ ತರಗತಿಗೆ ಸೇರಿದರೆ ಮಾತ್ರ ಎಂ.ಎ. ಪದವಿ ಪಡೆಯಲು ಅವಕಾಶವಿತ್ತು. ಮಿತ್ರರನ್ನು ಆನರ್ಸ್ ತರಗತಿಗೆ ಸೇರಿಸಬೇಕು. ಆತ ಎಂ.ಎ. ಪದವೀಧರನಾಗಿ ಅಧ್ಯಾಪಕನಾಗಬೇಕೆಂಬ ಬಯಕೆ ಶ್ರೀಗಳವರದು.

ಆತನಿಗೆ ಆನರ್ಸ್ ತರಗತಿಗೆ ಪ್ರವೇಶ ದೊರಕಿಸಲು ಶ್ರೀಗಳವರು ಸತತ ಪ್ರಯತ್ನ ನಡೆಸಿದರು. ಅತ್ತ ಶ್ರೀ ಗೌರೀಶಂಕರಸ್ವಾಮಿಗಳವರ ಸ್ಥಿತಿ ದಿನದಿನಕ್ಕೆ ಉಲ್ಬಣವಾಗುತ್ತಿತ್ತು. ಅತೀವ ದುಃಖದಲ್ಲಿ ಶ್ರೀಗಳವರು ಮುಳುಗಿದ್ದರಾದರೂ ನಮ್ಮ ಮಿತ್ರರ ಹಿತಚಿಂತನೆಯನ್ನು ಮರೆಯಲಿಲ್ಲ. ಅವರಿಗೆ ಪ್ರವೇಶ ದೊರಕಿಸಲು ಸರ್ವರೀತಿಯ ಪ್ರಯತ್ನ ನಡೆಸುವಂತೆ ಪ್ರತಿನಿತ್ಯವೂ ನನಗೆ ಪತ್ರ ಬರೆಯುತ್ತಿದ್ದರು. ನಾನಾರೀತಿಯ ಮಾರ್ಗಗಳನ್ನು ಪತ್ರಮುಖೇನ ಸೂಚಿಸುತ್ತಿದ್ದರು. ಆದರೆ ವಿಶ್ವವಿದ್ಯಾನಿಲಯದ ನಿಯಮಾವಳಿಯನ್ನು ಉಲ್ಲಂಘಿಸಿ ಅವರಿಗೆ ಪ್ರವೇಶ ದೊರಕಿಸಿಕೊಡಲು ಸಾಧ್ಯವಾಗಲಿಲ್ಲ. ಆದರೂ ಅವರನ್ನು ಎಂ.ಎ. ಪದವೀಧರನನ್ನಾಗಿ ಮಾಡುವ ಹಂಬಲ ಇಂಗಲಿಲ್ಲ. ಅವರು ಇಲ್ಲಿ ಬಿ.ಎ. ಪದವೀಧರರಾಗಿ ಬೇರೆ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿಯನ್ನು ಪಡೆದರು. ಅಧ್ಯಾಪಕರೂ ಆದರು. ಪಿಹೆಚ್.ಡಿ. ಪದವೀಧರರಾಗಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಪ್ರಾಧ್ಯಾಪಕರೂ ಆದರು. ಇದು ಶ್ರೀಗಳವರ ಸಂಕಲ್ಪದ ಸಿದ್ಧಿಗೊಂದು ನಿದರ್ಶನ.

ತದನಂತರ ನಾನೂ ಇದೇ ಪರಿಸ್ಥಿತಿಗೆ ತುತ್ತಾದವನು. ತತ್ವಶಾಸ್ತ್ರದ ಅಧ್ಯಯನಕ್ಕಾಗಿ ಆನರ್ಸ್ ತರಗತಿಗೆ ಪ್ರವೇಶ ದೊರಕಿಸಿಕೊಳ್ಳಲು ವಿಫಲನಾದೆ. ಆದರೆ ತತ್ವಶಾಸ್ತ್ರದ ಅಧ್ಯಯನ ನಡೆಸಬೇಕೆಂಬ ಆಸೆ ಬರಿದಾಗಲಿಲ್ಲ. ಬಿ.ಎ. ತರಗತಿಯಲ್ಲಿ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಪತ್ರಿಕೋದ್ಯಮ ವಿಷಯಗಳನ್ನು ಐಚ್ಛಿಕವಾಗಿ ಪಡೆದು ಬಿ.ಎ. ಪದವೀಧರನಾದೆ. ನಂತರ ನ್ಯಾಯಶಾಸ್ತ್ರ ಪದವಿಯನ್ನೂ ಪಡೆದೆ. ಆದರೆ ತತ್ವಶಾಸ್ತ್ರ ಅಧ್ಯಯನದ ಅಪೇಕ್ಷೆ ಅಳಿಸಿಹೋಗಲಿಲ್ಲ. ಶ್ರೀಗಳವರ ಅನುಗ್ರಹದಿಂದ ಬೇರೊಂದು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದಲ್ಲಿ ಎಂ.ಎ. ಪದವೀಧರನಾಗುವ ಪುಣ್ಯ ಲಭ್ಯವಾಯಿತು. ಅನ್ಯರಿಗೆ ಇದು ನಗಣ್ಯ ಸಂಗತಿಯಾಗಿರಬಹುದು. ಆದರೆ ಬಿ.ಎ. ತರಗತಿಯಲ್ಲಿ ಐಚ್ಛಿಕವಾಗಿ ಅಭ್ಯಾಸ ಮಾಡಿದ ವಿಷಯಗಳಿಗೆ ಮಾತ್ರ ಎಂ.ಎ. ತರಗತಿಗೆ ಸೇರಲು ಭಾರತದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ನಿಯಮವಿದೆ. ಆದರೆ ಬಿ.ಎ. ತರಗತಿಯಲ್ಲಿ ಓದದ ವಿಷಯದಲ್ಲಿ ಎಂ.ಎ. ತರಗತಿಗೆ ಪ್ರವೇಶ ದೊರೆತಿರುವುದು ಇತಿಹಾಸದಲ್ಲೇ ಅತ್ಯಂತ ಅಪೂರ್ವ ಸಂಗತಿ. ಇದು ಶ್ರೀಗಳವರ ಅಭಿಲಾಷೆಯ ಫಲವಲ್ಲದೆ ಮತ್ತೇನು ? ಹೀಗೆ ಜಗದ್ಗುರುಗಳವರು ಯಾರ ಬಗೆಗೆ ಏನು ಕನಸನ್ನು ಕಂಡರೋ ಅವೆಲ್ಲವೂ ನನಸಾಗಿವೆ. ಇಂತಹ ನಿದರ್ಶನಗಳು ನೂರಾರು ದೊರೆಯುತ್ತವೆ. ಇದನ್ನೋದಿದ ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾದ ಸನ್ಮಿತ್ರರು ತಮ್ಮ ತಮ್ಮ ಜೀವನದ ಪೂರ್ವೇತಿಹಾಸ ಅವಲೋಕಿಸಿಕೊಳ್ಳಲೆಂದು ಈ ಪ್ರಸಂಗವನ್ನು ಉಲ್ಲೇಖಿಸಿದ್ದೇನೆ.

ಮೇಲಣ ಉದಾಹರಣೆಗಳು ವೈಯಕ್ತಿಕ ಸಾಧನೆಗಳು. ಅವು ಅನ್ಯರಿಗೆ ಸಾಮಾನ್ಯವೆನಿಸಿದರೂ ಅನುಭವಿಸಿದವರಿಗೆ ಅದರ ಹಿರಿಮೆಯು ಅರಿವಾಗಬಹುದು. ಅಂತೆಯೇ ಸಾಮೂಹಿಕವಾದ ಸಾಮಾಜಿಕ ಘಟನೆಗಳು ಶ್ರೀಗಳವರ ಕೃಪಾದೃಷ್ಟಿಯಲ್ಲಿ ನಡೆದುಹೋಗಿವೆ. ಕನ್ನಡದ ಪ್ರಾಥಮಿಕ ಶಿಕ್ಷಣಕ್ಕೂ ಅವಕಾಶವಿಲ್ಲದಿದ್ದ ತಮಿಳುನಾಡಿನ ಮಕ್ಕಳನ್ನು ಕರೆತಂದು ಕನ್ನಡದಲ್ಲಿ ಶಿಕ್ಷಣ ಕೊಡಿಸಿ ಅವರಲ್ಲಿ ಕೆಲವರನ್ನು ವೈದ್ಯರು, ಇಂಜಿನಿಯರ್ ಮತ್ತು ಎಂ.ಎ. ಪದವೀಧರರನ್ನಾಗಿ ಮಾಡಿದ ಸಾಹಸ ಚಿರಸ್ಮರಣೀಯ. ನೀಲಗಿರಿ ಜಿಲ್ಲೆಯ ಅನೇಕ ಮಿತ್ರರು ಈ ಭಾಗ್ಯಕ್ಕೆ ಪಾತ್ರರಾದವರು. ಇದು ಅವರ ಸಂಕಲ್ಪಸಿದ್ಧಿಯ ಜ್ವಲಂತ ನಿದರ್ಶನ.

ಮೈಸೂರು ಜಿಲ್ಲೆಯ ಅನೇಕ ಕಡೆಗಳಲ್ಲಿ ಮನೆತನಗಳಿಗೆ ವೈರತ್ವವು ಅನೇಕ ದಶಕಗಳಿಂದ ಬೆಳೆದುಬಂದಿತ್ತು. ಒಂದು ಕುಟುಂಬವನ್ನು ನಾಶಮಾಡುವುದಕ್ಕೆ ಮತ್ತೊಂದು ಕುಟುಂಬ ಸತತ ಪ್ರಯತ್ನ ನಡೆಸುತ್ತಿತ್ತು. ಈ ದುರ್ವ್ಯಾಪಾರದಲ್ಲಿ ತೊಡಗಿದ ಕುಟುಂಬಗಳು ತಮಗಿರುವ ದೈವದತ್ತವಾದ ಸಂಪತ್ತನ್ನು ಅನುಭವಿಸದೆ ತಾವಾಗಿ ಹಾಳಾಗುತ್ತಿದ್ದುವು. ಆ ಕುಟುಂಬಗಳೆಲ್ಲಾ ಶ್ರೀಗಳವರ ವಾತ್ಸಲ್ಯಕ್ಕೆ ಪಾತ್ರವಾದುವುಗಳೇ ! ಆದರೆ ಬಹುಕಾಲದಿಂದ ಬೆಳೆದು ಬಂದಿರುವ ದ್ವೇಷದ ಕಿಡಿಗಳು ಆಗಾಗ ವಿಕೃತರೂಪವನ್ನು ತಾಳಿ ಕೊಲೆ, ದರೋಡೆಗಳು ನಡೆದು ಸಂಪತ್ತು ಅಗ್ನಿಗೆ ಆಹುತಿಯಾಗಿ ಎಲ್ಲ ಸಂಕಷ್ಟಗಳನ್ನು ಅನುಭವಿಸುವಂತಾಗಿತ್ತು. ಸಮಾಜದ ಗಣ್ಯರನೇಕರು ಈ ಸಮಸ್ಯೆಯನ್ನು ಬಿಡಿಸಲು ಯತ್ನಿಸಿ ವಿಫಲರಾಗಿದ್ದರು. ಆದರೆ ಶ್ರೀಗಳವರ ಅಭಿಲಾಷೆ ಹುಸಿಯಾಗಲಿಲ್ಲ. ಒಬ್ಬರ ನೆರಳನ್ನು ಕಂಡರೆ ಕಿಡಿಕಾರುತ್ತಿದ್ದ ಮತ್ತೊಂದು ಕುಟುಂಬಗಳು ಅನೇಕ. ಆ ಎರಡೂ ಕಡೆಯ ಕುಟುಂಬಕ್ಕೆ ಸೇರಿದ ಮಕ್ಕಳನ್ನು ಬಲವಂತವಾಗಿ ಕರೆತಂದು ಅವರಿಗೆ ನಾಗರೀಕತೆಯ ಶಿಕ್ಷಣವನ್ನು ದೊರಕಿಸಿಕೊಟ್ಟು ಕೊನೆಗೆ ಅದೇ ಕುಟುಂಬಗಳಲ್ಲಿ ಬಾಂಧವ್ಯ ಬೆಳೆಯುವಂತೆ ಮಾಡಿದ ಶ್ರೀಗಳವರ ಸಾಹಸ ಕಿರಿದಲ್ಲ. ಇಂತಹ ಹತ್ತಾರು ಕುಟುಂಬಗಳು ಇಂದು ಶ್ರೀಗಳವರನ್ನು ಈ ಜಿಲ್ಲೆಯಲ್ಲಿ ಸ್ಮರಿಸುತ್ತಿವೆ. ಅಂತೆಯೇ ಅನೇಕರು ತಮ್ಮ ದುರ್ವರ್ತನೆಗಳಿಂದ ಸಮಾಜದಲ್ಲಿ ದೂಷಿತರಾಗಿ ಜೀವನದಲ್ಲಿ ಪತಿತರಾಗಿ ನಿರಾಶೆಯಿಂದ ಕೂಡಿದವರಾಗಿದ್ದರು. ಅಂತಹ ಹತ್ತಾರು ವ್ಯಕ್ತಿಗಳನ್ನು

ಹಿಡಿದು ತಂದು ಹದಗೊಳಿಸಿ ಅವರಿಗೆ ಮತ್ತೆ ಸಮಾಜದಲ್ಲಿ ಮಾನ್ಯತೆಯನ್ನು ಜೀವನದಲ್ಲಿ ಪಾವಿತ್ರ್ಯತೆಯನ್ನು ತಂದು ಕೊಟ್ಟ ನಿದರ್ಶನಗಳಿವೆ. ಅಂತಹ ವೈಯಕ್ತಿಕ ಘಟನೆಗಳನ್ನು ನೇರವಾಗಿ ಉಲ್ಲೇಖಿಸಲು ಇಚ್ಛಿಸದೆ ಅನುಭವಿಗಳ ಆತ್ಮಾವಲೋಕನಕ್ಕಾಗಿ ಈ ಪ್ರಸಂಗವನ್ನು ಸೂಚಿಸಲಾಗಿದೆ.

## ಮೇರೆಮೀರಿದ ಔದಾರ್ಯ

ಶ್ರೀಗಳವರ ಔದಾರ್ಯಕ್ಕೆ ಕಟ್ಟುಕಟ್ಟಳೆಗಳಿಲ್ಲ. ಸೀಮಾಸೀಮೆಗಳಿಲ್ಲ. ಯಾರಿಗೆ ಯೋಗವಿತ್ತೋ ಅವರವರಿಗೆ ಅವರ ಪುಣ್ಯವಿಶೇಷಕ್ಕನುಗುಣವಾಗಿ ಅದರ ಫಲಪ್ರಾಪ್ತಿಯಾಗುತ್ತಾ ಬಂದಿದೆ. ಪ್ರತಿಭಾವಂತ ವಿದ್ಯಾರ್ಥಿಯಿರ ಬಹುದು, ನಿಷ್ಠಾವಂತ ಸೇವಕನಿರಬಹುದು. ಯಾವ ಅಂತರವನ್ನೂ ಇಡದೆ ಕಷ್ಟದಲ್ಲಿ ಕೈಹಿಡಿದು ನಡೆಸಿದ್ದಾರೆ. ಶ್ರೀಗಳವರು ಹೀಗೆ ನೆರವು ನೀಡಿದ ಪ್ರಸಂಗಗಳು ಅತಿಗೋಪ್ಯ. ನೆರವು ಪಡೆದವರಿಗಲ್ಲದೆ ಅನ್ಯರಿಗೆ ಗೊತ್ತಾಗುವಂತಿಲ್ಲ. ಅದನ್ನು ಪ್ರಕಟಿಸಲು ಅವರೆಂದೂ ಅಪೇಕ್ಷಿಸಿಲ್ಲ. ನೆರವು ಪಡೆದವರೇ ತಿರುಗುಬಾಣವಾಗಿ ಬಂದಾಗಲೂ ತಾವು ಮಾಡಿದ ಉಪಕೃತಿಯನ್ನು ಯಾರ ಮುಂದೆಯೂ ಉದ್ಧರಿಸಿಲ್ಲ. ಇದು ನೀಡಿದ ನೆರವಿಗಿಂತ ಮೀರಿದ ಔದಾರ್ಯ. ಶ್ರೀಗಳವರಿಗೆ ಎಡೆಬಿಡದ ಕಾರ್ಯಗಳು. ಸಮಯದ ಹೊಂದಾಣಿಕೆ ತುಂಬಾ ಕಠಿಣ. ಯಾರನ್ನೋ ಕಾಣಬೇಕಾದಾಗ ಗೊತ್ತಾದ ಕಾಲಕ್ಕೆ ಪ್ರಯಾಣ ಪ್ರಾರಂಭಿಸಲು ಅನೇಕ ಅಡಚಣೆಗಳು. ಹೀಗಾಗಿ ಹೊರಡುವುದೇ ತಡ ಗುರಿಯನ್ನು ನಿಯತಕಾಲಕ್ಕೆ ಮುಟ್ಟಬೇಕಾದ ಅಗತ್ಯವಿರುತ್ತಿತ್ತು. ಆದುದರಿಂದ ಕಾರಿನ ಚಾಲಕ ಮೀರಿದ ವೇಗದಲ್ಲಿ ಕಾರನ್ನು ನಡೆಸಬೇಕಾಗುತ್ತಿತ್ತು. ಅದಕ್ಕೆ ಶ್ರೀಗಳವರೇ ಅನುಮತಿ ಕೊಡುತ್ತಿದ್ದರು. ಸಾಮಾಜಿಕ ಕಾರ್ಯದ ಹೊಣೆ ಅವರ ಜೀವನದ ಭದ್ರತೆಗಿಂತಲೂ ಪ್ರಮುಖವೆನಿಸಿತ್ತು. ಅದಕಾರಣ ಚಲಿಸುವ ಕಾರು ಅನೇಕ ಅಪಘಾತಗಳಿಂದ ಪಾರಾಗಿತ್ತೆಂಬುದನ್ನು ಅನೇಕರು ಅರಿತಿದ್ದರು. ಕಾರು ವೇಗವಾಗಿ ಚಲಿಸುವಾಗ ಶ್ರೀಗಳವರ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರು ಚಾಲಕನನ್ನು ಮೂದಲಿಸುತ್ತಿದ್ದರು. ಶ್ರೀಗಳವರು ಮೌನದಿಂದ ಇರುತ್ತಿದ್ದರು. ಅನೇಕಸಾರಿ ಒಬ್ಬ ವ್ಯಕ್ತಿಯನ್ನು ಮೂದಲಿಸಿದರೆ ಯಾರಿಗಾದರೂ ಮನನೋಯುವುದು ಸಹಜ. ಹೀಗೆ ಮೂದಲಿಸುವವರ ನುಡಿಯಿಂದ ಚಾಲಕನ ಮನ ನೋಯುತ್ತಿತ್ತು. ವೇಗವಾಗಿ ಚಲಿಸಬೇಕೆಂಬುದೇ ಶ್ರೀಗಳವರ ಅಭಿಲಾಷೆಯೆಂಬುದು ಮೂದಲಿಸುವವರಿಗೆ ತಿಳಿದಿರಲಿಲ್ಲ. ಇಂತಹ ಪ್ರಸಂಗವೊಂದರಲ್ಲಿ ಚಾಲಕನ ಮನಸ್ಸಿಗೆ ತೀವ್ರತರ ಪರಿಣಾಮವಾಗಿದೆಯೆಂಬುದನ್ನು ಶ್ರೀಗಳವರು ಗಮನಿಸಿದರು. ತಮ್ಮ ಸ್ವಭಾವಸಹಜವಾದ ನಗುಮೊಗದಿಂದ ಹೀಗೆ ಹೇಳಿದರು : "ದೊಡ್ಡ ಕಾರು, ದೊಡ್ಡ ಪೀಠ, ದೊಡ್ಡ ಸಂಸ್ಥೆ, ದೊಡ್ಡ ಕಾರ್ಯ ಹೀಗಿದ್ದ ಮೇಲೆ ಕಾರಿನ ವೇಗವೂ ಹೆಚ್ಚಿಗೆ ಇರಬೇಕಲ್ಲವೆ" ಎಂದರು. ಚಾಲಕನಿಂದ ಹಿಡಿದು ಮೂದಲಿಸುವವರೆಲ್ಲಾ ನಕ್ಕು ಸುಮ್ಮನಾದೆವು. ತಮ್ಮ ಸೇವೆಯನ್ನು ಹೊತ್ತುಗೊತ್ತಿಲ್ಲದೆ ನಡೆಸುವ ಕನಿಷ್ಠ ಸೇವಕನಿಗೂ ಸಹ ಮನಸ್ಸಿಗೆ ನೋವಾಗಬಾರದೆಂಬುದು ಅವರ ಆಶಯ.

ಶ್ರೀಗಳವರ ಜೀವನದ ಒಂದು ಘಟನೆ ಸದಾ ಸ್ಮರಣೀಯ. ಶ್ರೀಗಳವರು ಧಾರವಾಡ ಜಿಲ್ಲೆಯ ಸಮಾರಂಭವೊಂದರಲ್ಲಿ ಭಾಗವಹಿಸಲು ಪ್ರಯಾಣ ಮಾಡುತ್ತಿದ್ದರು. ಕಾರು ವೇಗವಾಗಿ ಚಲಿಸುತ್ತಿತ್ತು. ಅದರಲ್ಲಿ ಹಿಂಭಾಗದ ಬಲಬದಿಯಲ್ಲಿ ಶ್ರೀಗಳವರು ಆಸನಾರೂಢರಾಗಿದ್ದರು. ಕಾರು ಸೇತುವೆಯ ಬಳಿಗೆ ಬರುವ ವೇಳೆಗೆ ಎದುರಾಗಿ ಲಾರಿಯೊಂದು ವೇಗವಾಗಿ ಬರುತ್ತಿತ್ತು. ಲಾರಿಯ ವೇಗ ನೇರವಾಗಿ ಕಾರಿಗೆ ಮುಟ್ಟಿದ್ದರೆ ಕಾರು ಮತ್ತು ಪ್ರಯಾಣಿಕರು ಯಾರೂ ಉಳಿಯುತ್ತಿರಲಿಲ್ಲ. ಚಾಲಕ ಕಾರನ್ನು ಅಪಘಾತದಿಂದ ಪಾರುಮಾಡಲು ಯತ್ನಿಸಿ ಎಡಕ್ಕೆ ತೆಗೆದುಕೊಂಡ. ಆದರೆ ಕಾರು ಸೇತುವೆ ಗೋಡೆಗೆ ಡಿಕ್ಕಿ ಹೊಡೆಯಿತು. ಅದರಿಂದ ಹಿಂದೆ ಕುಳಿತಿದ್ದ ಶ್ರೀಗಳವರು ಮುಂದಕ್ಕೆ ನೂಕಲ್ಪಟ್ಟು ತಮ್ಮ ಕುಳಿತ ಸ್ಥಳದಿಂದ ಎಡಕ್ಕೆ ಜಿಗಿಯಲ್ಪಟ್ಟರು. ಆದರೆ ನಂತರ ಕಾರಿನ ಹಿಂಭಾಗಕ್ಕೆ ಲಾರಿ ಡಿಕ್ಕಿ ಹೊಡೆಯಿತು. ಹಿಂದಿನ ಬಾಗಿಲು ಕಾರಿನ ಒಳಕ್ಕೆ ನುಗ್ಗಿತು. ಶ್ರೀಗಳವರು ಕುಳಿತಿದ್ದ ಸ್ಥಳ ಸಂಪೂರ್ಣವಾಗಿ ಜಜ್ಜಿಹೋಯಿತು. ದೈವ ಕೃಪೆಯಿಂದ ಶ್ರೀಗಳವರು ಅನಾಹುತದಿಂದ ಪಾರಾಗಿದ್ದರು. ಕಾರು ಸಂಪೂರ್ಣವಾಗಿ ನಿರುಪಯುಕ್ತವಾಯಿತು. ಈ ಘಟನೆ ಭಕ್ತಾಭಿಮಾನಿಗಳಲ್ಲಿ ತೀವ್ರ ಕಳವಳವನ್ನುಂಟುಮಾಡಿತು. ಚಾಲಕನ ಅಜಾಗರೂಕತೆಯಿಂದ ಈ ಘಟನೆ ಸಂಭವಿಸಿತೆಂದು ಅನೇಕರು ಅಭಿಪ್ರಾಯಪಟ್ಟರು. ಅವನ ಬಗೆಗೆ ಮನನೋಯುವಂತಹ ಮಾತನ್ನಾಡುವುದಲ್ಲದೆ ಅವನಿಗೆ ತೊಂದರೆಯನ್ನು ಕೊಡಬೇಕೆಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದರು. ಶ್ರೀಗಳವರಿಗೆ ಈ ಅಭಿಮತ ಸಮ್ಮತವೆನ್ನಿಸಲಿಲ್ಲ. ಹತ್ತಾರು ವರ್ಷಗಳಿಂದ ನಿಷ್ಠೆಯಿಂದ ಸೇವೆ ಮಾಡಿದವನಿಗೆ ಅಂದಿನ ಘಟನೆಯ ಬಗೆಗೆ ಪರಿತಾಪವೆನಿಸಿ

ಬಹುದು. ಅದು ವಿಧಿಲೀಲೆ. ಅದಕ್ಕಾಗಿ ಒಬ್ಬರನ್ನು ನೋಯಿಸುವುದು ಧರ್ಮವಲ್ಲವೆಂದು ನೇರವಾಗಿ ಉತ್ತರಿಸಿದರು. ಪ್ರಸಂಗ ಸಾಮಾನ್ಯವಿರಬಹುದು. ಆದರೆ ಶ್ರೀಗಳವರ ಅಂತರಂಗದಲ್ಲಿದ್ದ ಅನುಕಂಪದ ಆಳವನ್ನು ಊಹಿಸುವುದೂ ಕಷ್ಟಸಾಧ್ಯ. ಈ ಘಟನೆಯ ನಂತರ ಶ್ರೀಗಳವರ ದರ್ಶನಕ್ಕಾಗಿ ಭಕ್ತ ಸಮೂಹ ಕಿಕ್ಕಿರಿದು ಸೇರಿತ್ತು. ಅವರ ಮುಂದೆ ಹಸನ್ಮುಖಿಗಳಾಗಿ ನಡೆದ ಘಟನೆಯನ್ನೆಲ್ಲಾ ವಿವರಿಸುತ್ತಾ ಮೈನವಿರೇಳಿಸುವ ಮಾತನ್ನು ಹೇಳಿದರು. "ಹನ್ನೆರಡು ವರ್ಷಗಳ ಕಾಲ ಸತತ ಸೇವೆ ಸಲ್ಲಿಸಿದ ಕಾರು ಕೊನೆಗೂ ನಮ್ಮನ್ನು ಉಳಿಸಿ ತಾನೇ ನಾಶವಾಯಿತು" ಎಂದರು. ಶ್ರೀಗಳವರ ಈ ವಾಣಿ ಅಲ್ಲಿದ್ದ ಬಹುಜನರ ನೇತ್ರಗಳಲ್ಲಿ ಅಶ್ರುಬಿಂದುವನ್ನುದುರಿಸಿತು. ಶ್ರೀಗಳವರ ವಿಚಾರಧಾರೆ ನಮ್ಮನ್ನು ಬೆಕ್ಕಸಬೆರಗುಗೊಳಿಸಿತು.

## ಮಹಿಮರ ಅರಿವು ಮಹಿಮರಿಗೆ

ಮಹಿಮರನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮಹಿಮರಿಗಲ್ಲದೆ ಅನ್ಯರಿಗೆ ಅಸಾಧ್ಯ. ೧೯೬೭ನೇ ವರ್ಷದಲ್ಲಿ ಜಗಜ್ಯೋತಿ ಬಸವಣ್ಣನವರ ಅಷ್ಟ ಶತಮಾನೋತ್ಸವ ರಾಷ್ಟ್ರಾದ್ಯಂತ ವೈಭವಯುತವಾಗಿ ಆಚರಿಸಲ್ಪಟ್ಟಿತು. ಆ ಸಮಯದಲ್ಲಿ ಜಗದ್ಗುರುಗಳವರು ಸಮಾರಂಭವೊಂದರಲ್ಲಿ ಭಾಗವಹಿಸಲು ಬೊಂಬಾಯಿ ನಗರಕ್ಕೆ ಆಹ್ವಾನಿಸಲ್ಪಟ್ಟರು. ಸಮಾರಂಭ ಮುಗಿದಮೇಲೆ ಕೆಲವು ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲು ಏರ್ಪಾಡಾಯಿತು. ಶ್ರೀ ಚಿನ್ಮಯಾನಂದರ ಸಾಂದೀಪನೀ ಆಶ್ರಮ, ವಜ್ರೇಶ್ವರಿ ಮತ್ತು ಗಣೇಶಪುರಿ ಮುಂತಾದ ಸ್ಥಳಗಳನ್ನು ನೋಡಿ ಬರಲು ಜಗದ್ಗುರುಗಳವರು ಅಪೇಕ್ಷಿಸಿದರು. ಬೊಂಬಾಯಿ ನಗರದಲ್ಲಿರುವಾಗ ಜಗದ್ಗುರುಗಳು ಆತ್ಮೀಯರಾದ ಬ್ರಾಹ್ಮಣ ಮಠಾಧಿಪತಿಗಳ ಸುಕ್ಷೇತ್ರದಲ್ಲಿ ಬಿಡಾರ ಮಾಡಿದ್ದರು. ಅಲ್ಲಿನ ಅಭಿಮಾನಿಗಳಿಗೆಲ್ಲಾ ಶ್ರೀಗಳವರ ಸ್ಥಾನಮಾನಗಳು ಮತ್ತು ಸಂಪ್ರದಾಯಗಳಿಗೆ ಯಾವ ತೊಡರು ಬರಬಾರದೆಂಬ ಅಭಿಪ್ರಾಯವುಳ್ಳವರು, ಗಣೇಶಪುರಕ್ಕೆ ಹೋಗುವ ಅಪೇಕ್ಷೆಯನ್ನು ಕೇಳಿ ಕೆಲವು ಸೂಚನೆಗಳನ್ನಿತ್ತರು.

ಗಣೇಶಪುರಿಯು ಬೊಂಬಾಯಿ ನಗರದಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿದೆ. ಅದು ನಿಜಕ್ಕೂ ಒಂದು ಪುಣ್ಯಕ್ಷೇತ್ರ. ಇಂದು ಪವಿತ್ರ ಯಾತ್ರಾಸ್ಥಳವಾಗಿದೆ. ಐತಿಹಾಸಿಕವಾಗಿ ನೋಡಿದರೆ ಇಲ್ಲಿ ಅಗಸ್ತ್ಯರು, ವಸಿಷ್ಠರು, ಪರಶುರಾಮರು, ಅತ್ರಿಅನುಸೂಯೆಯರ ತಪೋನುಷ್ಠಾನಭೂಮಿಯೆಂದು ಉಲ್ಲೇಖಿತವಾಗಿದೆ. ಹಿಂದೆ ಕ್ರೂರಮೃಗಗಳು ಮತ್ತು ವಿಷಸರ್ಪಗಳ ಸಮೂಹದಿಂದ ಕೂಡಿದ ಘೋರಾರಣ್ಯ. ಇಂದು ಸುಂದರ ಕ್ಷೇತ್ರವಾಗಿದೆ. ಈ ರೂಪಕ್ಕೆ ತಂದವರು ಮಹಾಮಹಿಮರಾದ ಸ್ವಾಮಿ ನಿತ್ಯಾನಂದರವರು. ಕೇರಳದಲ್ಲಿ ಜನಿಸಿ ಕರ್ಣಾಟಕದಲ್ಲಿ ಆತ್ಮಶಕ್ತಿಯನ್ನು ಬೆಳಸಿಕೊಂಡು ಮಹಾರಾಷ್ಟ್ರದಲ್ಲಿ ಮುಕ್ತಿಕ್ಷೇತ್ರವನ್ನು ರೂಪಿಸಿದ ಮಹಾತಪಸ್ವಿಗಳು. ನಿತ್ಯವೂ ಸಹಸ್ರಾರು ಭಕ್ತಾದಿಗಳು ಈ ಕ್ಷೇತ್ರದರ್ಶನಕ್ಕೆ ದೇಶವಿದೇಶಗಳಿಂದ ಆಗಮಿಸುತ್ತಾರೆ ಇಲ್ಲಿ ಮೂರು ತೀರ್ಥಕುಂಡಗಳಿವೆ. ಒಂದರಲ್ಲಿ ಯಾವಾಗಲೂ ಕುದಿಯುತ್ತಿರುವ ಬಿಸಿನೀರು, ಮತ್ತೊಂದರಲ್ಲಿ ಸರ್ವರೋಗಾಪಹಾರಿ ಬಿಸಿನೀರು, ಮತ್ತೊಂದರಲ್ಲಿ ತಂಪುನೀರು. ಇವು ಅಕ್ಕಪಕ್ಕದಲ್ಲಿಯೇ ಇರುತ್ತವೆ. ಇದು ಪೂಜ್ಯ ಶ್ರೀ ನಿತ್ಯಾನಂದರ ತಪೋಮಹಿಮೆಯಿಂದ ಪುಟ್ಟ ಸುಂದರ ನಗರವಾಗಿದೆ. ಆದರೆ ಪೂಜ್ಯರು ೧೯೬೧ರಲ್ಲಿ ನಿರ್ವಾಣಹೊಂದಿದರು. ಅವರ ಸಮಾಧಿ ಸುಂದರವಾಗಿ ನಿರ್ಮಿತವಾಗಿದೆ. ಇದೊಂದು ಬೃಹತ್ ಆಶ್ರಮ. ಜೀವನದಲ್ಲಿ ಒಮ್ಮೆಯಾದರೂ ಪ್ರೇಕ್ಷಣೀಯ ಕ್ಷೇತ್ರ. ಸ್ವಾಮಿ ನಿತ್ಯಾನಂದರ ಉತ್ತರಾಧಿಕಾರಿಯಾಗಿ ಸ್ವಾಮಿ ಮುಕ್ತಾನಂದರು ಈ ಕ್ಷೇತ್ರದ ಅಧಿಪತಿಗಳಾಗಿದ್ದಾರೆ. ಅವರೂ ಸಹ ಘನಮಹಿಮರು. ಅವರ ದರ್ಶನಾಶೀರ್ವಾದಕ್ಕೆ ಸಹಸ್ರಾರು ಜನರು ಕಾದಿರುತ್ತಾರೆ. ದೀನದಲಿತರಿಗೆ ಅನ್ನದಾನ ವಸ್ತ್ರದಾನ ನಡೆಯುತ್ತಿರುತ್ತದೆ. ಬಯಸಿಬಂದವರಿಗೆ ಜ್ಞಾನದರ್ಶನಾಶೀರ್ವಾದ ಪುಣ್ಯವೂ ಲಭಿಸುತ್ತದೆ. ಶ್ರೀಗಳವರು ಆತ್ಮಶಕ್ತಿಸಂಪನ್ನರು. ತಮ್ಮ ತಪಶ್ಶಕ್ತಿಯಿಂದ ಸಹಸ್ರಾರು ಜನರನ್ನುದ್ಧರಿಸಿದ ಮಹಾನುಭಾವರು. ಶ್ರೀಗಳವರು ತಮ್ಮ ನಿತ್ಯನೈಮಿತ್ತಿಕ ಆಚರಣೆಗಳನ್ನು ಮುಗಿಸಿಕೊಂಡು ಮಧ್ಯಾಹ್ನ ಎರಡು ಘಂಟೆಗೆ ಬಂದು ತಮಗಾಗಿ ಏರ್ಪಡಿಸಿದ ಸುಂದರ ಪೀಠದಲ್ಲಿ ಮಂಡಿಸಿ ವಸ್ತ್ರದಾನ ಜ್ಞಾನದಾನ ಮಾಡುತ್ತಾರೆ. ಬಂದವರೆಲ್ಲಾ ಮುಂದಿರುವ ಜಮಖಾನದ ಮೇಲೆ ಕುಳಿತುಕೊಳ್ಳುತ್ತಾರೆ. ಈ ಬಗೆಗೆ ನಾವು ಬೊಂಬಾಯಿ ಬಿಡುವಾಗ ಎಚ್ಚರಿಕೆಯ ಸೂಚನೆ ಬಂದಿತ್ತು. ಜಗದ್ಗುರುಗಳವರೊಡನೆ ಕೆಲವು ಜನ ಮಠಾಧೀಶ್ವರರೂ ಕಾವಿಧಾರಿಗಳಾಗಿದ್ದರು. ಜಗದ್ಗುರುಗಳವರ ಸ್ಥಾನಮಾನಗಳಿಗೆ ಸಂಪ್ರದಾಯಕ್ಕೆ ಇಲ್ಲಿನ ವ್ಯವಸ್ಥೆಯಿಂದ ಧಕ್ಕೆ ಬರಬಹುದಾದ ಕಾರಣ ಸ್ವಾಮಿ ಮುಕ್ತಾನಂದರು ಹೊರಗೆ ಬರುವ ಮುನ್ನ ಆಶ್ರಮವನ್ನು ವೀಕ್ಷಿಸಿಬರುವಂತೆ ಸೂಚಿಸಲಾಗಿತ್ತು. ಆದುದರಿಂದ ನಾವು ಅಪರಾಹ್ನ ಒಂದು

ಘಂಟೆಗೆ ಮುನ್ನವೇ ಆಶ್ರಮವನ್ನು ಪ್ರವೇಶಿಸಿ ಅರ್ಧ ಘಂಟೆಯಲ್ಲಿ ಆ ಸ್ಥಳದಿಂದ ನಿರ್ಗಮಿಸಲು ನಿರ್ಧರಿಸಿದೆವು. ನಮ್ಮಂತೆ ನೂರಾರು ಜನರು ಆಶ್ರಮದ ಗ್ರಂಥಾಲಯ, ಚಿತ್ರಪಟಗಳು ಇತ್ಯಾದಿಗಳನ್ನು ವೀಕ್ಷಿಸುತ್ತಾ ಮುಂದು ವರಿಯುತ್ತಿದ್ದರು. ಜಗದ್ಗುರುಗಳು ತ್ವರೆಯಿಂದ ಮುನ್ನಡೆಯಲೆಂದು ಕಾತುರದಿಂದ ನಾನೇ ಸೂಚನೆ ಕೊಡುತ್ತಿದ್ದೆ. ನಿತ್ಯವೂ ಶ್ರೀಗಳವರು ದರ್ಶನ ನೀಡುವ ಕಾಲ ಎರಡು ಘಂಟೆಗೆಂದು ವಿದಿತವಾಗಿತ್ತು. ಮಧ್ಯಾಹ್ನ ಒಂದೂವರೆ ಘಂಟೆಗೆ ಶ್ರೀಗಳವರ ಬಿಡಾರದ ಕೋಣೆಯ ಬಾಗಿಲು ತೆರೆದ ಶಬ್ದವಾಯಿತು. ಜಗದ್ಗುರುಗಳವರ ಸುತ್ತ ನೂರಾರು ಮಂದಿ ಪ್ರೇಕ್ಷಕರು ನಿಂತಿದ್ದರು. ಶ್ರೀಗಳವರು ಬರುವುದಕ್ಕೆ ಇನ್ನೂ ಸಾಕಷ್ಟು ಕಾಲಾವಕಾಶವಿದ್ದುದರಿಂದ ಅನುದಿನ ದಂತೆ ಎಲ್ಲರನ್ನೂ ವ್ಯವಸ್ಥಿತವಾಗಿ ಕೂಡಿಸುವ ಏರ್ಪಾಡನ್ನು ಕಾರ್ಯಕರ್ತರಿನ್ನೂ ಕೈಗೊಂಡಿರಲಿಲ್ಲ. ಅದಾವ ಅಚ್ಚರಿಯೋ ಜನರ ಗುಂಪಿನಲ್ಲಿ ಸ್ವಾಮಿ ಮುಕ್ತಾನಂದರು ನುಗ್ಗಿಬಂದರು. ಭಕ್ತರೆಲ್ಲಾ ಭಯಚಕಿತರಾದರು. ಗುಂಪಿನ ಜನರನ್ನು ತಾವೇ ಸರಿಸುತ್ತ ಮಧ್ಯದಲ್ಲಿದ್ದ ಜಗದ್ಗುರುಗಳವರನ್ನು ಆಲಿಂಗಿಸಿಕೊಂಡು ಅತ್ಯಂತ ವಾತ್ಸಲ್ಯದಿಂದ ತಮ್ಮ ಆಸನದತ್ತ ಕರೆದೊಯ್ದ ದೃಶ್ಯ ನಮ್ಮನ್ನು ಚಕಿತಗೊಳಿಸಿತು. ಜಗದ್ಗುರುಗಳೊಡನೆ ಅದೇ ಕಾಷಾಯಿವಸನ ಧಾರಿಗಳಾದ ಇನ್ನಿಬ್ಬರು ಸ್ವಾಮಿಗಳಿದ್ದರೂ ಇವರೇ ಸುತ್ತೂರು ಶ್ರೀಗಳೆಂದು ಗುರುತಿಸಿದುದು ಅಚ್ಚರಿಯ ವಿಷಯ. ಅಂದು ನಮ್ಮನ್ನು ಬಲ್ಲವರಾಗಲಿ ಕನ್ನಡವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವವರಾಗಲಿ ಯಾರೂ ಇರಲಿಲ್ಲ. ನಾವು ಬರುವ ವರ್ತಮಾನವನ್ನು ಆಶ್ರಮಕ್ಕೆ ನಾವು ಕಳುಹಿಸಿರಲೂ ಇಲ್ಲ. ಜಗದ್ಗುರುಗಳವರನ್ನು ಆತ್ಮೀಯತೆ ಯಿಂದ ಕಂಡು ಉತ್ತರೀಯವನ್ನು ಹೊದಿಸಿ ಗೌರವಿಸಿದ್ದಲ್ಲದೆ ಆಶ್ರಮದಲ್ಲೇ ಒಂದು ದಿನ ಇರಬೇಕೆಂದು ತಮ್ಮ ಸಂಪ್ರದಾಯಕ್ಕೆ ಚ್ಯುತಿಬರದಂತಹ ಎಲ್ಲ ವ್ಯವಸ್ಥೆಗಳನ್ನೂ ಮಾಡುವುದಾಗಿ ವಿನಂತಿಸಿದರು. ಅದಕ್ಕೆ ನಮ್ಮಲ್ಲಿ ಸಿದ್ಧತೆಯಾಗಿರಲಿಲ್ಲ. ಸ್ವಾಮಿ ಮುಕ್ತಾನಂದಜೀಯವರು ಭಕ್ತರ ಕೋರಿಕೆಯ ಮೇಲೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಬೊಂಬಾಯಿಗೆ ಜರೂರಾಗಿ ತೆರಳಬೇಕಾಗಿತ್ತು. ತಮ್ಮ ನಿತ್ಯಕ್ರಿಯೆಗಳನ್ನೆಲ್ಲಾ ಮುಗಿಸಿ ಹೊರಡಲುದ್ಯುಕ್ತರಾಗಿದ್ದರು. ಹೊರಡುವ ಮುನ್ನ ಆಶ್ರಮದ ಎಲ್ಲಾ ವಿಭಾಗಗಳನ್ನು ತೋರಿಸುವಂತೆ ಶಿಷ್ಯರಿಗೆ ಅಪ್ಪಣೆ ಮಾಡಿದರು. ಆ ಕ್ಷೇತ್ರದ ಸುತ್ತಮುತ್ತ ಎಲ್ಲಿಯೂ ತೆಂಗು ಬೆಳೆಯುವುದಿಲ್ಲ. ಆದರೆ ಶ್ರೀಗಳವರ ಮಹಿಮೆಯಿಂದ ಇಲ್ಲಿ ಕೈಎತ್ತರದ ಮರಗಳಲ್ಲಿ ಮುತ್ತಿನಂತೆ ಮುತ್ತಿರುವ ತೆಂಗಿನಕಾಯಿ ಗೊಂಚಲನ್ನು ಕಾಣಬಹುದು. ಆಶ್ರಮದ ಪರವಾಗಿ ನಾಲ್ಕು ಎಳನೀರನ್ನು ಪೂಜಾ ಸಮಯದಲ್ಲಿ ಸ್ವೀಕರಿಸುವಂತೆ ವಿನಂತಿಸಿದರು. ಸ್ವಾಮಿಗಳವರು ತಪಸ್ಸಿದ್ಧರು. ಆದರೆ ಅಲ್ಲಿ ನಡೆದ ಘಟನೆ ಅವರ್ಣನೀಯ. ಚಿರಸ್ಮರಣೀಯ. ಪವಿತ್ರಾತ್ಮಗಳು ಒಂದನ್ನೊಂದು ಹೇಗೆ ಗುರ್ತಿಸಿಕೊಂಡವು ಮತ್ತು ಎಷ್ಟು ಆತ್ಮೀಯತೆಯಿಂದ ವರ್ತಿಸಿದುವೆಂಬುದನ್ನು ಶಬ್ದಗಳಿಂದ ವರ್ಣಿಸಲಾರೆ. ನೋಡಿದ್ದನ್ನು ನೆನೆದರೆ ಮೈನವಿರೇಳುತ್ತದೆ. ಅಲ್ಲಿಂದ ಒಬ್ಬರನ್ನೊಬ್ಬರು ಅಗಲುವುದು ಅತ್ಯಂತ ಕಠಿಣಕಾರ್ಯವೆನಿಸುವಂತೆ ಈರ್ವರ ಭಾವನೆಗಳಲ್ಲಿ ಅಭಿವ್ಯಕ್ತವಾಗುತ್ತಿತ್ತು.

ಬೊಂಬಾಯಿ ನಗರಕ್ಕೆ ಬರುವ ದಾರಿಯಲ್ಲಿ ನನ್ನ ಮನಸ್ಸು ಈ ಘಟನೆಯನ್ನು ಕುರಿತು ಚಿಂತಿಸತೊಡಗಿತ್ತು. ನಮಗೆ ಸೂಚನೆ ಕೊಟ್ಟವರು ಸಾಮಾನ್ಯರಲ್ಲ. ಈ ಆಶ್ರಮದ ಬಗೆಗಾಗಲಿ ಶ್ರೀಗಳವರ ಬಗೆಗಾಗಲಿ ತಪ್ಪು ಅಭಿಪ್ರಾಯವನ್ನು ಹೊಂದಿದವರಲ್ಲ. ಸ್ವಾಮಿ ಮುಕ್ತಾನಂದರು ಕನ್ನಡಿಗರು. ಅವರು ಪರಸ್ಪರ ಬಲ್ಲವರಾಗಿದ್ದರು. ಆದರೆ ಜಗದ್ಗುರುಗಳವರು ವೀರಶೈವ ಸಂಪ್ರದಾಯದ ಮಠಾಧೀಶ್ವರರಾದುದರಿಂದ ಶ್ರೀಪೀಠದ ಘನತೆಗೌರವಗಳಿಗೆ ಚ್ಯುತಿಬಂದು ಭಕ್ತರು ನೊಂದುಕೊಳ್ಳದಿರಲೆಂದು ಸೂಚನೆ ಕೊಟ್ಟಿದ್ದರು. ಆದರೆ ಅಲ್ಲಿ ಈ ವಿಚಿತ್ರ ಘಟನೆ ಹೇಗೆ ನಡೆಯಿತೆಂದು ಜಗದ್ಗುರುಗಳವರನ್ನೇ ಪ್ರಶ್ನೆ ಮಾಡಿದೆ. ಅದಕ್ಕೆ ಅವರ ನೇರ ಉತ್ತರ "ಹೇಗೆ ಮನ ಹಾಗೆ ಘನ" ಎಂದರು. "ಮತ್ತೊಬ್ಬರ ಬಗೆಗೆ ನಮ್ಮ ಮನೋಭಾವನೆ ಹೇಗಿರುವುದೋ ಅದಕ್ಕನುಗುಣವಾಗಿ ಅವರ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಇಂತಹ ಅನುಭವ ನಮಗೆ ಹತ್ತಾರು ನಿದರ್ಶನಗಳಿಂದ ಗೊತ್ತಾಗಿದೆಯೆಂದು ಉತ್ತರಿಸಿದರು. ಈ ಹೃದಯ ವೈಶಾಲ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿ ನನ್ನಂತಹ ಸಾಮಾನ್ಯರಿಗೆ ದುಸ್ಸಾಧ್ಯ.

## ಅನುಗ್ರಹ

ಕಷ್ಟದಲ್ಲಿರುವವರ ಬಗೆಗೆ ಅಪಾರ ಅನುತಾಪಪಡುವ ದಯಾಮಯಿಗಳು ಜಗದ್ಗುರುಗಳವರು. ಸಂಕಟದಲ್ಲಿರು ವವರಿಗೆ ಸ್ವತಃ ನೆರವಾಗಲು ಅವಕಾಶವಿದ್ದರೆ ಕೈಲಾದ ನೆರವನ್ನು ನೀಡುವುದು ಅವರ ಸಹಜ ಸ್ವಭಾವ. ಆದರೆ ಅವರ ಕೃಪಾಶೀರ್ವಾದಕ್ಕೆ ಪಾತ್ರರಾಗುವವರು ಅಷ್ಟೇ ಸಹಜ ಸ್ವಭಾವದವರಾಗಿರಬೇಕು. ನಿಶ್ಚಲಮನಸ್ಕರಾಗಿರ

ಬೇಕು. ಕೃಪೆಯಲ್ಲಿ ವಿಶ್ವಾಸವುಳ್ಳವರಾಗಿರಬೇಕು. ಸಂಸ್ಕಾರಯುತರಾಗಿರಬೇಕು. ಅಂತಹ ನೂರಾರು ಜನರು ಜಗದ್ಗುರುಗಳವರ ಕೃಪೆಗೆ ಪಾತ್ರರಾಗಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಸಹಾಯವನ್ನು ಪಡೆಯುವುದಕ್ಕಾಗಿಯೇ ಸಾಲಾಗಿ ನಿಂತಿರುವ ಜನರು ಬಹಳ. ಸಹಾಯಪಡೆಯಲು ಅಭಿನಯಶೀಲರಾಗಿ ವರ್ತಿಸುವವರ ಸಂಖ್ಯೆ ಅಲ್ಪವೇನಲ್ಲ. ಅನ್ಯಮಾರ್ಗಗಳನ್ನು ಅವಲಂಬಿಸಿ ಲಾಭ ಪಡೆಯುವವರ ಸಂಖ್ಯೆ ಅಧಿಕವಾಗಿದೆ. ಸಹಾಯದ ಕೋರಿಕೆಗಳ ಪಟ್ಟಿಗೆ ಕೊನೆಯೇ ಇರುವುದಿಲ್ಲ. ಸಹಾಯ ಪಡೆಯುವುದು ತಮ್ಮ ಹಕ್ಕೆಂದೂ ಸಹಾಯಮಾಡುವುದು ಗುರುಗಳ ಕರ್ತವ್ಯವೆಂದೂ ಭಾವಿಸಿದವರಿದ್ದಾರೆ. ಒಮ್ಮೆ ನೀಡಿದ ಸಹಾಯದಿಂದ ತೃಪ್ತರಾಗುವುದಿಲ್ಲ. ಹತ್ತಾರುಬಾರಿ ನೆರವು ಪಡೆದಿದ್ದರೂ ಮತ್ತೊಮ್ಮೆ ಸಹಾಯ ಸಿಗದಿದ್ದಾಗ ಕೃತಘ್ನರಾಗಿ ನಡೆದುಕೊಳ್ಳುವ ಸಮುದಾಯ ಅಲ್ಪವೇನಲ್ಲ. ಜಗದ್ಗುರುಗಳವರಿಂದ ತನಗೆ ದೊರೆತ ಕೃಪೆಯೆಷ್ಟು ಎಂದು ಸ್ಮರಿಸಿಕೊಳ್ಳುವವರಿಗಿಂತಲೂ, ಮತ್ತೊಬ್ಬರಿಗೆಷ್ಟು ದೊರೆತಿದೆ ಎಂಬುದನ್ನು ಗುಣಿಸಿ ತುಲನ ಮಾಡುವ ಮನೋಧರ್ಮ ಅನೇಕರಲ್ಲಿ ಅಧಿಕವಾಗಿ ಬೆಳೆದಿದೆ. ಆದುದರಿಂದ ಸಹಾಯ ಪಡೆಯದೆ ಗುರುಭಕ್ತರಾಗಿರುವವರಿಗಿಂತಲೂ ಸಹಾಯಪಡೆದವರೇ ಅನೇಕ ಕಾರ್ಯಗಳಲ್ಲಿ ಕಂಟಕರಾಗಿದ್ದಾರೆ. ಶ್ರೀಗಳವರ ಮನಸ್ಸಿಗೆ ವೇದನೆಯನ್ನುಂಟುಮಾಡಿದ್ದಾರೆ. ಅತೃಪ್ತ ಸ್ವಭಾವದ ಜನಸಮುದಾಯವನ್ನೆಲ್ಲಾ ತೃಪ್ತಿಗೊಳಿಸುವುದು ಸಾಕ್ಷಾತ್ ಪರಮೇಶ್ವರನಿಗೂ ಸಾಧ್ಯವಿಲ್ಲ. ಆದುದರಿಂದಲೇ ಜಗದಲ್ಲಿ ಏರುಪೇರುಗಳನ್ನು ಕಾಣುತ್ತೇವೆ. ನಮ್ಮ ನಮ್ಮ ಪೂರ್ವಪುಣ್ಯ ಎಷ್ಟಿದೆಯೋ ಅಷ್ಟು ಕೃಪೆಗೆ ನಾವು ಪಾತ್ರರಾಗುತ್ತೇವೆ. ನಾವು ಯಾರಿಂದಲಾದರೂ ಯಾವುದೇ ಸಹಾಯವನ್ನು ಪಡೆಯಬೇಕಾದರೂ ನಮ್ಮ ಸುಕೃತಕ್ಕನುಗುಣವಾಗಿ ಪಡೆಯುತ್ತೇವೆಂದು ಮನಗಂಡರೆ ನಮ್ಮ ಉದ್ಧಾರ ತಾನಾಗಿ ಆಗುತ್ತದೆ.

ಮಹಾನುಭಾವರ ಮನಸ್ಸಿಗೆ ಬಂದಾಗ ತಾವೇ ಸಂಕಟದಲ್ಲಿರುವವರನ್ನು ಅನುಗ್ರಹಿಸಿದ ನಿದರ್ಶನಗಳು ಅಪಾರವಾಗಿವೆ. ಒಮ್ಮೆ ಶ್ರೀಗಳವರು ಸಂಸ್ಥೆಯ ಕಾರ್ಯಾರ್ಥ ಬೆಂಗಳೂರಿಗೆ ಪ್ರಯಾಣಮಾಡುತ್ತಿದ್ದರು. ಮಧ್ಯೆ ದಾರಿಯಲ್ಲಿ ಕಾರು ಹದಗೆಟ್ಟಿತು. ಪುನರ್ವ್ಯವಸ್ಥೆಯಾಗಲು ಸಾಕಷ್ಟು ಸಮಯ ಬೇಕಾಗಿತ್ತು. ಕಾರಿನಿಂದ ಇಳಿದು ಕೆಳಗೆ ನಿಲ್ಲಬೇಕಾಗಿತ್ತು. ಹಾಗೆ ರಸ್ತೆಯ ಪಕ್ಕದಲ್ಲಿ ಒಂದು ನಾಡಹೆಂಚಿನ ಮುರುಕು ಮನೆ. ಅದರ ಮುಂದೆ ಸಣ್ಣಪುಟ್ಟ ಹೂಗಿಡಗಳ ಪುಟ್ಟ ಉದ್ಯಾನ. ಅಲ್ಲಿ ಕುಳಿತುಕೊಳ್ಳಲು ಶಿಲಾಸನವೊಂದಿತ್ತು. ಶ್ರೀಗಳವರು ಅನಪೇಕ್ಷಿತವಾಗಿ ಅಲ್ಲಿಗೆ ದಯಮಾಡಿಸಿ ಆಸನಾಸೀನರಾದರು. ಅದು ದೈವಭಕ್ತನಾದವರೊಬ್ಬರ ಬಡ ಕುಟೀರ. ಅದು ಅಸ್ತವ್ಯಸ್ತವಾದ ರಾಗಿ ಬೀಸುವ, ಭತ್ತ ಕುಟ್ಟುವ ಯಂತ್ರಾಗಾರ. ವಯಸ್ಕನಾದ ಮಾಲೀಕ ರೋಗಗ್ರಸ್ತನಾಗಿ ಸಾಲದ ಹೊರೆಯನ್ನು ಹೊರಲಾರದೆ ಮೃತ್ಯುಮಂದಿರದ ಮಹಾದ್ವಾರದತ್ತ ನೋಡುತ್ತಿದ್ದರು. ಜಂಗಮರು ತಾವಾಗಿ ತನ್ನ ಬಳಿಗೆ ಬಂದುದನ್ನು ನೋಡಿ ಅವರಿಗೆ ಅಚ್ಚರಿಯಾಯಿತು. ಗಾಢಾಂಧಕಾರ ಕವಿದ ಮೋಡದಲ್ಲಿ ಮಿಂಚಿನಬಳ್ಳಿ ಸಂಚರಿಸಿದಂತಾಯಿತು. ತನ್ನ ಅಳಲನ್ನು ಕೇಳಿದ ಪರಮಾತ್ಮ ಮತ್ತೊಂದು ರೂಪದಲ್ಲಿ ತನ್ನಲ್ಲಿಗೆ ಬಂದಿರುವನೆಂದು ಭಾವಿಸಿದರು. ಜನ್ಮಾಂತರಗಳಿಂದ ಪರಿಚಿತರಾದ ಬಂಧುವಿನ ಬಳಿಯಲ್ಲಿ ತನ್ನ ಕಷ್ಟವನ್ನು ತೋಡಿಕೊಳ್ಳುವಂತೆ ತನ್ನ ಕರುಣಾಜನಕ ಕಥೆಯನ್ನೆಲ್ಲಾ ಬಿನ್ನವಿಸಿಕೊಂಡರು. ಆದರೆ ಅವರಿಗೆ ಶ್ರೀಗಳವರಿಂದ ಭೌತಿಕವಾದ ನೆರವು ಪಡೆಯಬೇಕೆಂಬ ಸಂಕುಚಿತ ಸ್ವಾರ್ಥ ಭಾವನೆಯೇನೂ ಇರಲಿಲ್ಲ. ದೈವಾನುಗ್ರಹದಿಂದ ಯಾರೋ ಮಹಾನುಭಾವರು ಬಂದಿದ್ದಾರೆ. ಅವರಲ್ಲಿ ನಿವೇದಿಸಿಕೊಂಡು ವೇದನೆಯ ಭಾರವನ್ನು ಇಳಿಸಿಕೊಳ್ಳಬೇಕೆಂಬುದಷ್ಟೇ ಅವರ ಮನದ ಭಾವನೆ. ಅಲ್ಲದೆ ತನ್ನನ್ನು ಅಂತಹ ಪರಿಸ್ಥಿತಿಯಿಂದ ಉದ್ಧರಿಸುವುದು ನರರಿಗೆ ದುಸ್ಸಾಧ್ಯ ಮತ್ತು ಮತ್ತೆ ಅಂತಹ ಸುಂದರ ದಿನಗಳು ತಮ್ಮ ಜೀವನದಲ್ಲಿ ಬರುತ್ತವೆಂಬ ಭರವಸೆ ಅವರಲ್ಲಿರಲಿಲ್ಲ. ಶ್ರೀಗಳವರಲ್ಲಿ ವಿನಂತಿಸಿಕೊಂಡದ್ದು ಕೇವಲ ವ್ಯಾವಹಾರಿಕ. ಆದರೆ ಶ್ರೀಗಳವರ ಹೃದಯಕ್ಕೆ ಅದರಿಂದ ಅಪಾರ ವೇದನೆಯಾಗಿತ್ತು. ಕಥೆಯನ್ನು ಕೇಳಿ ಮುಗಿಯುವುದರೊಳಗೆ ಕಾರು ಸಿದ್ಧವಾಯಿತು. ಭಕ್ತನನ್ನು ಹರಸಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಅಲ್ಲಿ ಸ್ವಕಾರ್ಯಮಗ್ನತೆಗಿಂತಲೂ ಈ ಬಡಭಕ್ತನ ಕರುಣಾಜನಕ ಕಥೆಯ ಸ್ಮರಣೆ ಮನತುಂಬಿತ್ತು. ಬೆಂಗಳೂರಿಂದ ಹೊರಡುವ ದಿನ ಒಂದು ಹೊಸ ವಿಭೂತಿಗಟ್ಟಿಯನ್ನು ಪೂಜಿಸಿ ಮಂತ್ರಿಸಿ ತಮ್ಮ ಜೇಬಿನಲ್ಲಿಟ್ಟುಕೊಂಡರು. ಆದರೆ ತಮ್ಮೊಡನಿರುವ ವ್ಯಾವಹಾರಿಕರೊಡನೆ ತಮ್ಮ ಆತ್ಮಸಂವೇದನೆಯನ್ನು ಹೇಳಿಕೊಳ್ಳುವಂತಿರಲಿಲ್ಲ. ಅಲ್ಲಿಗೆ ಬಂದಾಗ ಅವನನ್ನು ಹುಡುಕಿಕೊಂಡು ಹೋಗುವಂತಿರಲಿಲ್ಲ. ಆದರೆ ದೈವೇಚ್ಛೆ ಬೇರೆಯದಿತ್ತು. ಕಾರು ಅಲ್ಲಿಗೆ ಬರುವ ವೇಳೆಗೆ ಅನಿರೀಕ್ಷಿತವಾಗಿ ಆತನೇ ಎದುರಾಗಿ ಬರುತ್ತಿದ್ದ. ಶ್ರೀಗಳವರ ಆನಂದಕ್ಕೆ ಪಾರವಿಲ್ಲದಾಗಿತ್ತು. ತಾವೇ ಶಿವದರ್ಶನ ಪಡೆದಷ್ಟು ಸಂತೋಷ ಉಕ್ಕಿ ಹರಿದಿತ್ತು. ಕಾರನ್ನು ನಿಲ್ಲಿಸಿ ಭಕ್ತನನ್ನು ಕರೆದು ಭಸ್ಮಧಾರಣೆ ಮಾಡಿ ಆಶೀರ್ವದಿಸಿ ಭಸ್ಮದ ಗಟ್ಟಿಯನ್ನು ಅವನಿಗಿತ್ತು ಮೈಸೂರಿಗೆ

ತೆರಳಿದರು. ಇದು ಭಗವಂತನ ವಿನೋದವೋ ಏನೋ! ಅವರ ಜೀವನದಲ್ಲಿ ಅದ್ಭುತ ಘಟನೆಗಳು ನಡೆದುವು. ಸಹಾಯಕರು ತಾವಾಗಿ ಅವರ ಬಾಗಿಲಿಗೆ ಬಂದರು. ಸಾಲಕ್ಕಾಗಿ ಕಾಡುತ್ತಿದ್ದವರು ತಾವೇ ನೆರವಾಗಲು ಉದ್ಯುಕ್ತರಾದರು. ಒಂದೇ ವರ್ಷದಲ್ಲಿ ದೊಡ್ಡ ಅಕ್ಕಿಗಿರಣಿಯ ಮಾಲೀಕರಾದರು. ಸಂಪತ್ತಿನ ದಾಖಲಾತಿ ಪತ್ರಗಳನ್ನು ನೋಂದಾಯಿಸಿದ ನಂತರ ಶ್ರೀಗಳವರ ದರ್ಶನಾಶೀರ್ವಾದಕ್ಕೆ ಬರಲು ಹೂವು ಹಣ್ಣುಗಳೊಡನೆ ಅವರು ಸಿದ್ಧರಾಗಿ ಮನೆಯ ಬಾಗಿಲಿನಲ್ಲಿದ್ದರು. ಅನಿರೀಕ್ಷಿತವಾಗಿ ಜಗದ್ಗುರುಗಳು ತಾವಾಗಿ ಅಲ್ಲಿಗೆ ಆಗಮಿಸಿದ್ದರು. ಇನ್ನು ಅವರ ಆನಂದಕ್ಕೆ ಪಾರವುಂಟೆ! ತಮ್ಮ ಸಂಪತ್ತಿನ ಕ್ಷೇತ್ರಕ್ಕೆ ಶ್ರೀಗಳವರನ್ನು ಕರೆದೊಯ್ದು ಶ್ರೀಗಳವರ ಪಾದಕ್ಕೆ ತಮ್ಮ ಅಶ್ರುಧಾರೆಗಳ ಅಭಿಷೇಕ ಮಾಡಿದರು. ಗಿರಣಿಯ ಪ್ರಾರಂಭೋತ್ಸವವು ಶ್ರೀಗಳವರ ಪಾದಪೂಜಾಮಹೋತ್ಸವದೊಡನೆ ನೆರವೇರಬೇಕೆಂದು ನಿಶ್ಚಯಿಸಿದರು. ಅದರಂತೆ ನಡೆಯಿತು. ಇಂದು ಅವರಿಲ್ಲ. ತಮ್ಮ ಕೊನೆಯುಸಿರು ಇರುವವರೆಗೆ ಶ್ರೀಗಳವರದೇ ಸ್ಮರಣೆ ಅವರ ನಾಲಿಗೆಯ ಮೇಲೆ ನಲಿಯುತ್ತಿತ್ತು. ಅವರ ಸಂತಾನ ಇಂದಿಗೂ ಅದೇ ಭಕ್ತಿವಿಶ್ವಾಸದಿಂದ ನಡೆದುಕೊಳ್ಳುತ್ತಿದೆ. ಕುಟುಂಬದ ಹಿತಕ್ಕೆ ಯಾವ ಧಕ್ಕೆಯೂ ಇಲ್ಲದಂತೆ ಸಿರಿಸಂತೋಷಗಳು ಆ ಕುಟುಂಬದಲ್ಲಿ ನರ್ತಿಸುತ್ತಿವೆ.

ಈ ಪ್ರಸಂಗವನ್ನು ಉಲ್ಲೇಖಿಸಿಕೊಂಡು ಪ್ರಚುರಮಾಡಿಕೊಳ್ಳುವ ಆಕಾಂಕ್ಷೆ ಶ್ರೀಗಳವರದಲ್ಲ. ಆ ಕುಟುಂಬದಿಂದ ಯಾವ ಸ್ವಾರ್ಥದ ಅಪೇಕ್ಷೆಯನ್ನು ಮಾಡಲಿಲ್ಲ. ಇದನ್ನು ತಮ್ಮ ಪವಾಡವೆಂದು ಅವರು ಭಾವಿಸಿಲ್ಲ. ಕಷ್ಟದಲ್ಲಿರುವ ಸದ್‌ಭಕ್ತರ ಅಭ್ಯುದಯಕ್ಕಾಗಿ ಮನಸಾರೆ ಶ್ರೀಗುರುವನ್ನು ಪ್ರಾರ್ಥಿಸಿಕೊಂಡೆ. ಅವರ ಅನುಗ್ರಹದಿಂದ ಭಕ್ತರ ಭಾಗ್ಯದ ಬಾಗಿಲು ತೆರೆದಿದೆ. ನಾನು ಅವರ ಉದ್ಧಾರಕ್ಕಾಗಿ ಆದಿಜಗದ್ಗುರುಗಳವರನ್ನು ಪ್ರಾರ್ಥಿಸಿಕೊಳ್ಳುವ ಉಪಾಸಕ. ಕೃಪೆ ತೋರುವುದು ಬಿಡುವುದು ಅವರಿಗೆ ಸೇರಿದ್ದು. ಇದರಿಂದ ಬರುವ ಮಾನ ಸನ್ಮಾನಗಳಿಗಾಗಲಿ, ಅಪವಾದಗಳಿಗಾಗಲೀ ತಾನು ಹೊಣೆಯಲ್ಲವೆಂಬ ಸಮದರ್ಶಿಗಳಾಗಿದ್ದಾರೆ ಜಗದ್ಗುರುಗಳವರು. ಇಂತಹ ಘಟನೆಗಳು ಸಮಾಜದಲ್ಲಿ ನೂರಾರು ಸಿಗಬಹುದು. ಕೆಲವರಿಗೆ ಶ್ರೀಮಹಿಮೆಯು ಅರಿವಾಗಿರಬಹುದು, ಅರಿವಿಲ್ಲದಿರಬಹುದು. ಅದರ ಪರಿವೆ ಶ್ರೀಗಳವರಿಗಿಲ್ಲ. ಆಗಿಹೋದುದನ್ನೇ ಸ್ಮರಿಸಿಕೊಳ್ಳುವ ಸ್ವಭಾವ ಶ್ರೀಗಳವರದಲ್ಲ. ತಾನು ಶ್ರೀಗುರುವಿನ ಹಸ್ತದಲ್ಲಿರುವ ಕರುಣ ಶಿಶು. ಅನುಗ್ರಹಿಸುವುದು ಮಹಾಗುರುವಿನ ಹೊಣೆ ಎನ್ನುತ್ತಾರೆ ಶ್ರೀಗಳವರು. ಅವರ ಅನುಗ್ರಹಕ್ಕೆ ಪಾತ್ರರಾದವರು ಅದನ್ನು ನೆನೆಯುತ್ತಾ ಅಧಿಕ ಆನಂದದಿಂದ ಬಾಳಲೆಂದೇ ಈ ಘಟನೆಯೊಂದನ್ನು ಉಲ್ಲೇಖಿಸಿದೆ.

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿಬರ್ಕು
ಹರಿದು ಹೆದ್ದೊರೆಯು ಕೆರೆಗೆ ತುಂಬಿದಂತಯ್ಯ
ನೆರೆಯದ ವಸ್ತು ನೆರೆವುದು ನೋಡಯ್ಯ
ಅರಸು ಪರಿವಾರ ಕೈವಾರ ನೋಡಯ್ಯಾ
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯಕಲ್ಲು ಕೊಂಡಂತೆ
ಕೂಡಲಸಂಗಮದೇವಾ

ಬಸವಣ್ಣನವರ ಈ ಅಮೃತವಾಣಿ ಜಗದ್ಗುರುಗಳವರ ಜೀವನದಲ್ಲಿ ಸಾದೃಶ್ಯವನ್ನು ಪಡೆದಿದೆ. ಯಾರು ಅನುಗ್ರಹಕ್ಕೆ ಪಾತ್ರರಾಗಿದ್ದಾರೋ ಅವರಿಗೆ ಎಲ್ಲ ಭಾಗ್ಯಗಳ ಪ್ರಾಪ್ತಿಯಾಗಿದೆ. ಯಾರು ಅನುಗೃಹೀತರಾದನಂತರ ಕೃತಘ್ನರಾಗಿದ್ದಾರೋ ಅವರ ಜೀವನದ ಹಿರಿತನ ಸಿರಿತನಗಳು ತುಂಬಿದಾಹರವಿಯ ಕಲ್ಲು ಕೊಂಡಂತಾಗಿವೆ.

## ದೃಢಚಿತ್ತರು

ಸಾವಿರಾರು ಜನರಿಗೆ ಅನ್ನವಸ್ತ್ರಗಳನ್ನು ಕರುಣಿಸಿದ ಶ್ರೀಗಳವರು ತಮ್ಮ ಸೌಲಭ್ಯವನ್ನು ಎಂದೂ ಲಕ್ಷಿಸುವುದಿಲ್ಲ. ಇದ್ದುದರಲ್ಲೇ ತೃಪ್ತಿಪಡೆಯುತ್ತಾರೆ. ನಿತ್ಯದ ಆಹಾರದಲ್ಲೂ ಅಷ್ಟೇ ಸರಳತೆಯನ್ನು ಕಾಣಬಹುದು. ಇಷ್ಟಾದರೂ ಅವರ ಮನಸ್ಸಿಗೆ ಬಂದರೆ ಯಾವುದೇ ಬೃಹತ್ ಕಾರ್ಯವನ್ನಾದರೂ ಸಾಧಿಸಬಲ್ಲ ದೃಢಚಿತ್ತರು. ಅವರ ವ್ಯವಹಾರ ಬಾಹುಳ್ಯದಲ್ಲಿ ಕ್ಷಣಕ್ಷಣಕ್ಕೂ ಸಿರಿಯ ಕೊರತೆ ತಲೆದೋರುತ್ತಲೇ ಇರುತ್ತದೆ.ಇಂದು ಮೈಸೂರು ನಗರದ ರಾಮಾನುಜಾ ರಸ್ತೆಯಲ್ಲಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠದ ಆವರಣ ಅರಮನೆಗೆ ಸೇರಿದ ಅನೇಕರೋಟಿ

ಯಾಗಿತ್ತು. ಅದನ್ನು ವಿದ್ಯಾಸಂಸ್ಥೆಗೆ ಪಡೆಯುಲು ಸಂಕಲ್ಪ ಮಾಡಿದರು. ಒಂದು ಲಕ್ಷ ರೂಪಾಯಿಗಳಿಗೆ ಬೆಲೆಮಾಡಲಾಯಿತು. ಆ ಸಮಯದಲ್ಲಿ ಅದರ ಬೆಲೆಯನ್ನು ಕೊಡುವುದಿರಲಿ, ಅದನ್ನು ಪಡೆಯಲು ಬೇಕಾದ ಪತ್ರವನ್ನು ಕೊಂಡುಕೊಳ್ಳಲು ಹಣವಿರಲಿಲ್ಲ. ಇಷ್ಟು ಹಣವನ್ನೊದಗಿಸಿ ಈ ಸ್ಥಳವನ್ನು ಪಡೆಯುವುದಕ್ಕೆ ಹಿರಿಯ ಜಗದ್ಗುರುಗಳವರು ಸಮ್ಮತಿ ನೀಡಲಿಲ್ಲ. ಆದಾಗ್ಯೂ ಜಗದ್ಗುರುಗಳವರು ನಿರಾಶರಾಗಲಿಲ್ಲ. ಕಾಲಕ್ಕೆ ಸರಿಯಾಗಿ ಒದಗಿದ ಅಲ್ಪ ಹಣದಿಂದ ಕಾರ್ಯಸಾಧನೆ ಮಾಡಿದರು. ಅದರಿಂದ ಶ್ರೀಪೀಠದ ಎಲ್ಲಾ ವೈಭವದ ಕಾರ್ಯಕ್ರಮಗಳಿಗೆ ಈ ಸ್ಥಳ ಕೇಂದ್ರವಾಗಿದೆ.

ಅಂತೆಯೇ ನಗರದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸುವ ಸಮಯದಲ್ಲಿ ಅಪಾರ ಹಣದ ಕೊರತೆಯಿತ್ತು. ಪ್ರಾರಂಭೋತ್ಸವವನ್ನು ನೆರವೇರಿಸುವ ದಿನವೂ ಸಹ ಸಂಸ್ಥೆಯ ಮೂಲ ವ್ಯವಸ್ಥೆಗಳನ್ನು ಏರ್ಪಡಿಸಲು ಹಣವಿರಲಿಲ್ಲ. ಎಲ್ಲ ವಸ್ತುಗಳೂ ಎರವಲಾಗಿ ಸಾಲದ ರೂಪದಲ್ಲಿ ಬಂದು ಸೇರಿದುವು. ಅವರ ಸಂಕಲ್ಪಮಾತ್ರದಿಂದ ಇಂದು ಈ ಸಂಸ್ಥೆ ವಿಶಾಲವಾದ ಸ್ಥಳದಲ್ಲಿ ಅತ್ಯುತ್ತಮ ಯಂತ್ರೋಪಕರಣಗಳಿಂದ ಕೂಡಿದ ಆದರ್ಶ ಸಂಸ್ಥೆಯಾಗಿ ಬೆಳಗುತ್ತಿದೆ. ದಿನದಿನಕ್ಕೂ ಬೃಹತ್ತಾಗಿ ಬೆಳೆಯುತ್ತಿದೆ.

ಮತ್ತೊಮ್ಮೆ ನಮ್ಮೆಲ್ಲರ ದೃಷ್ಟಿಯಲ್ಲಿ ಜಗದ್ಗುರುಗಳವರು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದರು. ನಂಜನಗೂಡಿನಲ್ಲಿರುವ ಕಾಲೇಜಿನ ಕಟ್ಟಡ ಅರಮನೆಯದಾಗಿತ್ತು. ಅದನ್ನು ಕೊಂಡುಕೊಳ್ಳುವ ನಿಶ್ಚಯ ಮಾಡಿದರು. ತೀರ್ಮಾನವಾದ ಎರಡನೇ ದಿನದಲ್ಲಿ ಪೂರ್ಣ ಮೊಬಲಗನ್ನು ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಅರಮನೆಯವರಿಗೆ ಅಂದೇ ಹಣದ ಆವಶ್ಯಕತೆಯಿತ್ತು. ಅಷ್ಟೊಂದು ಅಧಿಕ ಮೊತ್ತವನ್ನು ಒಗ್ಗೂಡಿಸುವುದು ಸುಲಭಸಾಧ್ಯವೆಂದು ನಮಗೆ ಕಂಡುಬರಲಿಲ್ಲ. ಶ್ರೀಗಳವರ ಅಂದಿನ ಪರಿಸ್ಥಿತಿಯನ್ನು ಪರಿಗಣಿಸಿದ ನನ್ನಂತಹವರನೇಕರು ತಮ್ಮ ಜೇಬುಗಳನ್ನು ನೋಡಿಕೊಂಡರೂ ಶತಾಂಶವನ್ನೂ ಕೂಡಿಸಲು ಶಕ್ಯವಾಗಲಿಲ್ಲ. ಇನ್ನು ಈ ವ್ಯವಹಾರವನ್ನು ಕೈಬಿಡಬೇಕಾಗುತ್ತದೆಂಬ ಭಾವನೆ ನಮ್ಮಲ್ಲಿ ಮೂಡಿಬಂದಿತು. ಆದರೆ ಇದು ಸಂಸ್ಥೆಯ ಪ್ರತಿಷ್ಠೆಯ ಪರೀಕ್ಷಾಕಾಲವಾಗಿತ್ತು. ನಮ್ಮೆಲ್ಲರ ಮುಖದ ಮೇಲೆ ನಿರಾಶೆ ಮತ್ತು ಆತಂಕದ ಕತ್ತಲು ಮುಸುಗಿತ್ತು. ಜಗದ್ಗುರುಗಳವರು ವಿಚಲಿತರಾಗದೆ ಕಾರ್ಯವನ್ನು ಮುಂದುವರಿಸುತ್ತಲೇ ಇದ್ದರು. ಪತ್ರವನ್ನು ನೋಂದಾಯಿಸಲು ಅಧಿಕಾರಿಗಳ ಬಳಿಗೆ ಹೋಗಬೇಕಾದ ಸಮಯ ಪ್ರಾಪ್ತವೂ ಆಯಿತು. ಅದೇ ಸಮಯಕ್ಕೆ ಹಣ ಪಾವತಿ ಮಾಡಲೇಬೇಕಾದ ಪ್ರಸಂಗ. ಕಾಲಕ್ಕೆ ಸರಿಯಾಗಿ ಆಗತ್ಯವುಳ್ಳವರು ಅಧಿಕಾರಿಗಳ ಬಳಿಗೆ ಆಗಲೇ ಸಿದ್ಧವಾದ ಪತ್ರ ತೆಗೆದುಕೊಂಡು ಹೋಗಿದ್ದಾರೆ. ಆದರೆ ಆಗಬೇಕಾದ ಮೊಬಲಗಿನ ಅರ್ಧದಷ್ಟೂ ಹಣ ಸೇರಲಿಲ್ಲ. ಕಾರ್ಯವನ್ನು ಕೈಬಿಡದಂತೆ ಮುಂದುವರಿಸಲು ಶ್ರೀಗಳವರ ಅಪ್ಪಣೆಯಾಗುತ್ತಲೇ ಇತ್ತು. ಆ ಪತ್ರದ ಪರಿಶೀಲನೆ ನಡೆದು ಕಾರ್ಯಕ್ರಮ ಜರುಗುತ್ತಲಿತ್ತು. ಇದು ಊಹಾತೀತವಾದ ಪ್ರಸಂಗ. ಅರಮನೆಯ ಅಧಿಕಾರಿಗಳು ಹಣವೆಲ್ಲಿ ಎಂದು ಕೇಳುತ್ತಿದ್ದಾರೆ. ನಗದು ಹಣವನ್ನು ಅಲ್ಲಿ ಎಣಿಸಲೇಬೇಕಾಗಿದೆ. ಇಂದು ಸಂಸ್ಥೆಯ ಬಣ್ಣ ಬಯಲಾಗುತ್ತಿದೆಯಲ್ಲಾ ಎಂಬ ತವಕ ನಮ್ಮೆಲ್ಲರ ಮನದಲ್ಲಿ ಕುದಿಯುತ್ತಿದೆ. ದೂರವಾಣಿಯ ಮೂಲಕ ಅಧಿಕಾರಿಗಳ ಕೋಣೆಯಿಂದ ಕೊನೆಯದಾಗಿ ಶ್ರೀಗಳವರನ್ನು ಸಂಪರ್ಕಿಸಿದಾಗ ಹಣ ಕಳುಹಿಸುತ್ತಿದ್ದೇವೆ, ಕಾರ್ಯ ನಡೆಯಲಿ ಎಂದು ಶ್ರೀಗಳವರು ಅಭಯವನ್ನಿತ್ತರು. ಆದರೆ ನಮಗಿನ್ನೂ ವಿಶ್ವಾಸವಿರಲಿಲ್ಲ. ಅಧಿಕಾರಿಗಳು ಎಲ್ಲ ಬರವಣಿಗೆಗಳನ್ನೂ ಮುಗಿಸಿದರು. ತಮ್ಮ ಸಹಿ ಮತ್ತು ಮುದ್ರೆ ಹಾಕುವುದು ಮಾತ್ರ ಉಳಿದಿತ್ತು. ಆ ಸಮಯಕ್ಕೆ ಸರಿಯಾಗಿ ಶ್ರೀಗಳವರ ಪ್ರತಿನಿಧಿಗಳು ಹಣವನ್ನು ತಂದಿಟ್ಟರು. ಅರಮನೆಯ ಅಧಿಕಾರಿಗಳು ಹಣವನ್ನು ಎಣಿಸಿಕೊಳ್ಳುತ್ತಿದ್ದರು. ನಮ್ಮ ಕಣ್ಣುಗಳನ್ನು ನಾವು ನಂಬುವ ಸ್ಥಿತಿಯಲ್ಲಿರಲಿಲ್ಲ. ಕೇಳಬೇಕಾದವರನ್ನೆಲ್ಲಾ ಕೇಳಿದಾಗ ಒಮ್ಮೆಗೇ ಇಷ್ಟೊಂದು ಹಣವನ್ನು ಒದಗಿಸುವುದು ಅಸಾಧ್ಯವೆನ್ನುತ್ತಿದ್ದರು. ಅನಿರೀಕ್ಷಿತವಾಗಿ ಶ್ರೀಗಳವರನ್ನು ಸಂಪರ್ಕಿಸಿದವರು ಹಣವನ್ನೊದಗಿಸಲು ಮುಂದಾದರು. ಇದು ಜಗದ್ಗುರುಗಳವರ ದೃಢಚಿತ್ತದ ಮಹಾನ್ ಘಟನೆಗೆ ಒಂದು ನಿದರ್ಶನ. ಆದರೆ ಇಂತಹ ಪರೀಕ್ಷೆಗಳು ಜಗದ್ಗುರುಗಳವರ ಜೀವನದಲ್ಲಿ ಮೇಲಿಂದಮೇಲೆ ಬರುತ್ತಲೇ ಇವೆ. ಯಾವುದಾದರೂ ಕಾರ್ಯವನ್ನು ಕೈಗೊಳ್ಳಬೇಕೆಂಬ ತೀರ್ಮಾನ ತೆಗೆದುಕೊಳ್ಳುವುದು ಮುಖ್ಯ. ಅನಂತರ ಆ ಕಾರ್ಯ ಹೇಗೆ ನೆರವೇರುತ್ತದೆಂಬುದನ್ನು ಸಾಮಾನ್ಯರು ಊಹಿಸಲು ಅಸಾಧ್ಯ.

ನನ್ನಂತೆಯೇ ಇಂತಹ ಘಟನೆಗಳ ಅನುಭವ ಅನ್ಯರಿಗೂ ಆಗಿರಬಹುದು. ಹೇಳಿಕೊಳ್ಳಲು ಅವಕಾಶವಿಲ್ಲದೆ ಅನೇಕರಲ್ಲಿ ಸ್ಮರಣೀಯ ಪ್ರಸಂಗಗಳು ಸುಪ್ತವಾಗಿರಬಹುದು. ಅಂತಹ ಅನುಭವಗಳು ಹೊರಬಂದರೆ ಸಮಾಜಕ್ಕೆ ಅದರ ಲಾಭವಾಗುತ್ತದೆಂದೇ ನನ್ನ ಭಾವನೆ. ಮೂರು ದಶಕಗಳ ಕಾಲ ಮೈಸೂರು ನಗರದಲ್ಲಿದ್ದು ಸ್ವಂತ ಮನೆ

ಯೊಂದಿಲ್ಲವೆಂಬ ವಿಚಾರ ನನ್ನ ತಲೆಯಲ್ಲಿ ಆಗಾಗ ಸುಳಿಯುತ್ತಿತ್ತು. ನನ್ನ ಪೂಜ್ಯ ತಂದೆಯವರಿಗೆ ಎಂಭತ್ತು ವರ್ಷ ವಯಸ್ಸಾಗಿದ್ದ ಕಾರಣ ಅವರಿಗೆ ಇದೊಂದು ಕೊರಗಾಗಿ ಪರಿತಪಿಸುತ್ತಿದ್ದರು. ಮನೆ ಬೇಕೆಂಬ ಅಪೇಕ್ಷೆ ಇದ್ದಿತಾದರೂ ಅದನ್ನು ಪಡೆಯುವ ಧನಬಲ ನನ್ನಲ್ಲಿರಲಿಲ್ಲ. ಇಲ್ಲದುದಕ್ಕಾಗಿ ವಿಶೇಷ ಪ್ರಯತ್ನ ನಡೆಸುವ ಕುತೂಹಲಕಾರಿ ಸ್ವಭಾವ ನನ್ನದಲ್ಲ. ಆಗುವುದಿದ್ದರೆ ಪರಮಾತ್ಮನ ಇಚ್ಛೆಯಂತೆ ನಡೆಯುತ್ತದೆಂದು ನಂಬುವ ಸ್ವಭಾವ ನನ್ನದು. ಯಾರ ಕೃಪೆಯೋ ಏನೋ ಮನೆಯೊಂದನ್ನು ಕೊಂಡುಕೊಳ್ಳುವ ಕಾಲ ಸನ್ನಿಹಿತವಾಯಿತು. ಅನಿರೀಕ್ಷಿತವಾಗಿ ಮನೆಯೊಂದು ಮಾರಾಟಕ್ಕೆ ಬಂದ ಸುಳಿವು ಸಿಕ್ಕಿತು. ಆದರೆ ಅಂದು ನನ್ನಲ್ಲಿದ್ದ ಬಂಡವಾಳ ಆರು ಸಾವಿರ ರೂಪಾಯಿಗಳು ಮಾತ್ರ. ಐವತ್ತು ಸಹಸ್ರ ರೂಪಾಯಿಗಳಿಗೆ ಮನೆಯ ಬೆಲೆಯನ್ನು ನಿಗದಿಪಡಿಸಲಾಯಿತು. ಇನ್ನು ಹತ್ತು ದಿನದಲ್ಲಿ ಮನೆಯು ನನ್ನದಾಗಬೇಕು. ಹಣ ಅವರದಾಗಬೇಕೆಂದು ತೀರ್ಮಾನವಾಯಿತು. ಹಣಕ್ಕಾಗಿ ನನ್ನ ಬಂಧುಬಳಗದವರನ್ನು ಆಶ್ರಯಿಸಿದೆ. ಸಾಲಕ್ಕಾಗಿ ಸತತ ಪ್ರಯತ್ನ ನಡೆಸಿದೆ. ಅವರೂ ಪ್ರಯತ್ನಿಸಿದರು. ದುರ್ದೈವದಿಂದ ಅವರಾರಿಗೂ ಹಣ ದೊರಕಲಿಲ್ಲ. ಮುಂಗಡವಾಗಿ ಕೊಟ್ಟ ಹಣವನ್ನು ಕಳೆದುಕೊಳ್ಳುವ ಸಮಯ ಬಂದಿತು. ಆ ಸಮಯದಲ್ಲಿ ವಿಧಿಯಿಲ್ಲದೆ ಶ್ರೀಗಳವರಲ್ಲಿ ಬಿನ್ನವಿಸಿದೆ. ಸಾಲಕ್ಕಾಗಿ ಸಹಾಯಕ್ಕಲ್ಲ. ಶ್ರೀಗಳಿಂದ ಖಚಿತವಾದ ಉತ್ತರ ಬಂದಿತ್ತು ಸಾಲವಾಗಲೀ ಸಹಾಯವಾಗಲಿ ದೊರೆಯುವುದು ಸಾಧ್ಯವೇ ಇಲ್ಲವೆಂದು. ನಿರಾಶೆ ಇನ್ನೂ ಅಧಿಕವೇ ಆಯಿತು. ಕ್ರಯದ ವ್ಯವಹಾರ ಮುಗಿಯುವುದಕ್ಕೆ ಮೂರುದಿನ ಮಾತ್ರ ಉಳಿದಿತ್ತು. ಅನ್ಯರಿಂದ ಸ್ವಲ್ಪ ಭಾಗ ಹಣ ಸಾಲವಾಗಿ ದೊರೆಯುವ ಸೂಚನೆ ಕಂಡುಬಂದಿತ್ತು. ಆದರೆ ಅದರಿಂದ ನನ್ನ ಕಾರ್ಯ ಪೂರ್ಣಗೊಳ್ಳುವಂತಿರಲಿಲ್ಲ. ಶ್ರೀಮಠದಿಂದ ಮನೆ ಕೊಂಡುಕೊಳ್ಳಲು ಒಂದು ಕಾಸನ್ನೂ ಅಪೇಕ್ಷಿಸಬಾರದೆಂದು ಬಂದ ಕಾಸನ್ನೂ ಬಳಸಬಾರದೆಂದು ಖಚಿತವಾಗಿ ಶ್ರೀಗಳವರು ಹಿಂದೆಯೇ ತಿಳಿಸಿದ್ದರಿಂದ ಸಾಲವನ್ನಾಗಲೀ ಸಹಾಯವನ್ನಾಗಲೀ ಮತ್ತೆ ನಿರೀಕ್ಷಿಸುವಂತಿರಲಿಲ್ಲ. ಆಕಸ್ಮಿಕವಾಗಿ ಮನೆಯ ವಿಷಯವನ್ನು ಶ್ರೀಗಳವರೇ ಪ್ರಸ್ತಾಪಿಸಿದರು. ನನ್ನ ಅಸಹಾಯಕತೆಯನ್ನೂ ವೈರಾಗ್ಯವನ್ನೂ ವ್ಯಕ್ತಪಡಿಸಿದೆ. ಆರುಸಾವಿರದ ಐದುನೂರು ರೂಪಾಯಿ ಮುಂಗಡದ ಹಣ ಹೋಗುತ್ತಿರುವುದರ ಚಿಂತೆ ನನಗಿತ್ತೇ ವಿನಃ ಮನೆ ಕೊಳ್ಳಲಾಗಲಿಲ್ಲವಲ್ಲಾ ಎಂಬ ಕೊರಗಿರಲಿಲ್ಲ. ಆಗ ಶ್ರೀಗಳವರೇ ಇನ್ನೆಷ್ಟು ಹಣ ಬೇಕೆಂದು ಪ್ರಶ್ನಿಸಿದರು. ಇನ್ನೂ ಹತ್ತು ಸಾವಿರ ರೂಪಾಯಿಗಳ ಆವಶ್ಯಕತೆಯಿತ್ತು. ಅದನ್ನು ಶ್ರೀಗಳವರಿಂದ ನಿರೀಕ್ಷಿಸಿರಲಿಲ್ಲ. ಶ್ರೀಗಳವರಿಂದ ಇಂತಹ ಪ್ರಸಂಗದಲ್ಲಿ ನಮಗೆ ನೆರವು ದೊರೆಯಲಿಲ್ಲವೆಂಬುದು ನನ್ನ ಬಂಧುಬಳಗಕ್ಕೆಲ್ಲಾ ತಿಳಿದಿತ್ತು. ಅನೇಕರು ಅಸಮಾಧಾನಿಗಳಾದರು. ಅವರುಗಳು ಈ ವಿಷಯವನ್ನು ಪ್ರಸ್ತಾಪಿಸಿದಾಗ ಸಾಮಾನ್ಯವಾದ ನನ್ನ ಮನಸ್ಸೂ ಅಳುಕುತ್ತಿತ್ತು. ವಿಧಿವಿಲಾಸದಲ್ಲಿ ವಿಶ್ವಾಸವುಳ್ಳ ನನಗೆ ಇದು ತೀವ್ರ ಪರಿಣಾಮವನ್ನುಂಟುಮಾಡುತ್ತಿರಲಿಲ್ಲ. ಪ್ರತಿಕ್ರಿಯಾ ಮನೋಭಾವನೆಗೆ ಇಂಬುಗೊಡುತ್ತಿರಲಿಲ್ಲ. ಆಗ ಶ್ರೀಗಳವರು ಹತ್ತು ಸಾವಿರ ರೂಪಾಯಿಗಳನ್ನು ಯಾರಿಂದಲಾದರೂ ಸಾಲ ಕೊಡಿಸುವುದಾಗಿಯೂ ಬಡ್ಡಿ ಸಮೇತ ಸಾಲ ತೀರಿಸಬೇಕೆಂದು ಸೂಚಿಸಿದರು. ಒಂದೆರಡು ಕಡೆಗಳಲ್ಲಿ ಪ್ರಯತ್ನ ನಡೆಸಿದ ನಂತರ ಒಬ್ಬ ಆತ್ಮೀಯ ಶಿಷ್ಯರಿಗೆ ಸಾಲಕೊಡುವಂತೆ ತಿಳಿಸಿದರು. ಪತ್ರ ಬರೆದುಕೊಟ್ಟು ಸಾಲ ಪಡೆದೆ. ಮನೆ ನನ್ನದಾಯಿತು. ಮಾಲೀಕರಿಗೆ ಹಣವೂ ಮುಟ್ಟಿತು. ಆಶ್ಚರ್ಯದ ಸಂಗತಿಯೆಂದರೆ ಹತ್ತು ತಿಂಗಳಲ್ಲೇ ಬಡ್ಡೀಸಮೇತ ಈ ಸಾಲ ತೀರಿಹೋಯಿತು. ಶ್ರೀಮಠದಲ್ಲಿ ಆಕಸ್ಮಿಕವಾಗಿ ಪಡೆದ ನೂರು ರೂಪಾಯಿ ಹತ್ತು ವರ್ಷವಾದರೂ ತೀರಲಿಲ್ಲ. ನನ್ನ ದೈವ ನನ್ನನ್ನು ಹೇಗೆ ಋಣದಿಂದ ಮುಕ್ತಗೊಳಿಸಿತೆಂದು ಊಹಿಸಲಾರೆ. ಆದರೆ ಈ ಪ್ರಸಂಗದ ಹಿಂದಿರುವ ಜಗದ್ಗುರುಗಳವರ ಧರ್ಮದರ್ಶನದ ಅರಿವು ನಮಗಾಗಬೇಕಾಗಿದೆ. ಶ್ರೀಗಳವರು ಅಂತರಂಗದಲ್ಲಿ ಹರಸಿ ನೀಡಿದ ತುತ್ತೊಂದು ಹತ್ತಾಗಿ ಮಹತ್ತಾಗಿ ನಮ್ಮನ್ನು ಉದ್ಧರಿಸಬಲ್ಲದೆಂಬುದಕ್ಕೆ ಅನೇಕ ನಿದರ್ಶನಗಳು ಅವರ ಜೀವನಚರಿತ್ರೆಯಲ್ಲಿ ದೊರೆಯುತ್ತವೆ. ಅವುಗಳನ್ನು ಸಂಗ್ರಹಿಸುವ ಸಮಗ್ರ ಕಾರ್ಯ ನಡೆಯಬೇಕಾಗಿದೆ. ಅವರ ಕೃಪೆಯೇ ಈ ಕಾರ್ಯವನ್ನು ನಡೆಸಿಕೊಡಬೇಕಲ್ಲದೆ ನಮ್ಮ ಸಾಧನೆಯಿಂದ ಸಾಧ್ಯವಿಲ್ಲ.

ಹಗಲಿಂದ ಇರುಳಿನವರೆಗೆ ಹಲವಾರು ಜನರ ಅಭ್ಯುದಯದ ಚಿಂತನೆಯಲ್ಲಿ ನಿರತರಾದ ಜಗದ್ಗುರುಗಳವರ ಕೃಪಾನುಗ್ರಹಕ್ಕೆ ಪಾತ್ರರಾದವರು ಬಹಳ ಜನರಿದ್ದಾರೆ. ಅವರ ಶಿಷ್ಯಬಾಂಧವ್ಯ ಶ್ರೀಗಳವರಲ್ಲಿ ಗೋಪ್ಯವಾಗಿಯೇ ಉಳಿದಿದೆ. ಶ್ರೀಗಳವರಲ್ಲಿ ಅಗೋಚರವಾದ ಅನ್ಯರ ಅಭ್ಯುದಯವನ್ನೇ ಹಾರೈಸುವ ಅದ್ಭುತ ಅದಮ್ಯ ಶಕ್ತಿಯಿದೆ. ಈ ಶಕ್ತಿಗಿರುವ ಹಿನ್ನೆಲೆಯನ್ನು ಅಂತಿಮವಾಗಿ ಸ್ಮರಿಸಬೇಕಾಗುತ್ತದೆ. ಜಗದ್ಗುರುಗಳವರಿಗೆ ಗುರುಭಕ್ತಿ ದೈವಭಕ್ತಿಗಳು ಬಾಲ್ಯದಿಂದಲೇ ಮೈಗೂಡಿ ಬಂದಿವೆ. ಶ್ರೀಗಳವರು ಬೆಳೆದ ರೀತಿನೀತಿಗಳನ್ನು ನೆನೆದರೆ ತಮ್ಮ ದೀಕ್ಷಾಗುರುವಿನಲ್ಲಿ

ಅವರಿಗಿದ್ದ ಅಪಾರ ಮಮತೆಯ ಅರಿವು ನಮಗಾಗುತ್ತದೆ. ಹದಿನಾಲ್ಕು ವರ್ಷಗಳಕಾಲ ಪ್ರತಿನಿತ್ಯ ಕುಳಿತ ಸ್ಥಳದಿಂದ ಕದಲದೆ ನಿರಂತರ ಹತ್ತು ಹನ್ನೆರಡು ಘಂಟೆಗಳ ಕಾಲ ಶಿವಪಂಚಾಕ್ಷರೀ ಮಂತ್ರಲೇಖನಯಜ್ಞವನ್ನು ನಡೆಸಿದ ಜಗದ್ಗುರು ಶಿವಯೋಗಿ ಶ್ರೀ ಶಿವರಾತ್ರಿ ಸ್ವಾಮಿಗಳವರು ತಮ್ಮ ತಪಸ್ಸಿನ ಫಲವನ್ನೆಲ್ಲಾ ಶ್ರೀಗಳವರ ಅಭ್ಯುದಯಕ್ಕಾಗಿ ಧಾರೆಯೆರೆದಿದ್ದಾರೆ. ಇದೊಂದು ಬಾಹ್ಯ ರಕ್ಷಾಕವಚ.

ಸಾವಿರ ವರ್ಷಗಳ ಹಿಂದೆಯೇ ಪುಣ್ಯ ಕಪಿಲಾತೀರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರು ಮಠವನ್ನು ಸ್ಥಾಪಿಸಿ ಸುತ್ತೂರಿನಲ್ಲೇ ಭಾವಸಮಾಧಿಸ್ಥಿತರಾಗಿರುವುದು ಇತಿಹಾಸದಿಂದ ವ್ಯಕ್ತವಾಗುತ್ತದೆ. ಅವರ ಸನ್ನಿಧಿಯಲ್ಲಿ ಅವಕಾಶ ದೊರೆತಾಗಲೆಲ್ಲಾ ಜಗದ್ಗುರುಗಳು ಅನುಷ್ಠಾನವೆಸಗುತ್ತಾ ಬಂದಿದ್ದಾರೆ. ಕೋಟ್ಯಂತರ ರೂಪಾಯಿ ಮೊತ್ತದ ಆಸ್ತಿಪಾಸ್ತಿಗಳು ಸಂಸ್ಥೆಗಳು ಸಮಾಜದ ಸೇವೆಗಾಗಿ ಇಂದು ವಿಜೃಂಭಿಸುತ್ತಿವೆ. ಶ್ರೀಗಳವರ ಅನುಗ್ರಹದಿಂದ ಶ್ರೀಮಂತರಾದ ಧೀಮಂತರಾದ ನಾನಾಕ್ಷೇತ್ರದಲ್ಲಿ ಕೀರ್ತಿಗಳಿಸಿದ ಶಿಷ್ಯ ಸಂಪತ್ತಿದೆ. ಇವೆಲ್ಲಾ ಸಾಧನೆ ಶ್ರೀಗಳವರಿಗೆ ಆತ್ಮಾನಂದವನ್ನುಂಟುಮಾಡುತ್ತದೆ. ಆದರೆ ಎಲ್ಲಕ್ಕಿಂತಲೂ ಮಿಗಿಲಾದ ಆನಂದವನ್ನು ಪಡೆದುಕೊಳ್ಳುವ ವಸ್ತುವೆಂದರೆ ಆದಿ ಜಗದ್ಗುರುಗಳವರ ಸನ್ನಿಧಿಯಲ್ಲಿ ತಾವು ನಡೆಸುವ ತಪೋನುಷ್ಠಾನದ ಪುಣ್ಯ ಸಾನ್ನಿಧ್ಯ. ಆ ದಿವ್ಯ ಸನ್ನಿಧಿಯಲ್ಲಿ ಕಾಲದ ಕೊರಗಾಗಲಿ ಬಾಹ್ಯದ ಜಂಜಡವಾಗಲೀ ಅವರನ್ನು ಬಾಧಿಸದು. ತಮಗೆ ತೃಪ್ತಿ ದೊರೆತಾಗಲೇ ಸನ್ನಿಧಾನದಿಂದ ಬಾಹ್ಯಲೋಕಕ್ಕೆ ಬಿನ್ನವಿಸುವುದು. ಆ ಅನುಗ್ರಹಬಲವೇ ತಮ್ಮ ಎಲ್ಲ ಕಾರ್ಯಗಳ ಅಂತಶ್ಶಕ್ತಿಯೆಂಬ ಅಚಲ ವಿಶ್ವಾಸ ಶ್ರೀಗಳವರದು. ಆ ಸಂಪತ್ತಿನ ಹೊಂಬೆಳಕಿನಲ್ಲಿ ಜಗದ್ಗುರುಗಳವರ ಜೀವನ ರಥ ಸಾಗುತ್ತಿದೆ. ಮುಂದೆ ಸಾಗಲಿ ಶತಮಾನದ ಗಡಿಯನ್ನು ನಿರಾತಂಕವಾಗಿ ದಾಟಲೆಂದು ಅನನ್ಯಭಕ್ತಿಯಿಂದ ಪರಮಾತ್ಮನನ್ನು ಪ್ರಾರ್ಥಿಸುವ.

ಯದುವಂಶದ ಕೊನೆಯ ಅರಸರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಶ್ರೀ ಜಗದ್ಗುರುಗಳವರಲ್ಲಿ ಅಪಾರ ಭಕ್ತಿವಿಶ್ವಾಸವನ್ನಿಟ್ಟಿದ್ದರು. ಅವರು ತಮ್ಮ ಪ್ರತಿಯೊಂದು ಕಷ್ಟಸುಖಗಳನ್ನು ಜಗದ್ಗುರುಗಳಲ್ಲಿ ಬಿನ್ನವಿಸಿಕೊಂಡು ನೊಂದ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುತ್ತಿದ್ದರು. ಒಮ್ಮೆ ಸಂಪ್ರದಾಯದಂತೆ ದಸರಾ ಉತ್ಸವದಲ್ಲಿ ಶ್ರೀಗಳವರಿಂದ ತಮಗಾದ ಕೃಪಾಶೀರ್ವಾದಗಳನ್ನು ಸ್ಮರಿಸಿ 'ರಾಜಗುರು ತಿಲಕ' ಎಂಬ ಅಭಿದಾನದ ಭಕ್ತಿಕಾಣಿಕೆಯನ್ನಿತ್ತು ಗೌರವಿಸಿದರು. ಮಹಾರಾಜರಿಗೆ "ರಾಜಗುರುತಿಲಕರಾಗಿ" ದೀನದಲಿತರಿಗೆ "ಪರಮೋದ್ಧಾರಕರಾಗಿ" ಆಶ್ರಯಿಸಿದ ಭಕ್ತಜನಕ್ಕೆ "ಧರ್ಮಗುರುತಿಲಕ"ರಾಗಿ ತಮ್ಮ ಹೃದಯ ವೈಶಾಲ್ಯದಿಂದ "ಮಾನವಕುಲತಿಲಕ"ರಾದ ಮಹಾನುಭಾವರ ಜೀವನದಲ್ಲಿ ಅರವತ್ತೈದು ಸಂವತ್ಸರಗಳು ತುಂಬಿದಾಗ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತಿದ್ದೇವೆ. ಶತಮಾನ ತುಂಬಿಸುವಂತೆ ಪರಮಾತ್ಮನನ್ನು ಮತ್ತೊಮ್ಮೆ ನೆನೆದು ಈ ನುಡಿಕುಸುಮಗಳನ್ನು ಅವರ ಅಡಿದಾವರೆಗಳಿಗೆ ಅರ್ಪಿಸುವ.

---

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲ ಸಂಗಮದೇವಾ,

ಬಸವಣ್ಣ

# ಮಠವ್ಯವಸ್ಥೆಯ ಮರ್ಯಾದೆ ಉಳಿಸಿದವರು

ಡಾ. ಸಿದ್ಧಯ್ಯ ಪುರಾಣಿಕ

ಧಾರವಾಡದ ಮಹಾಶಿವಯೋಗಿ ಮೃತ್ಯುಂಜಯಪ್ಪಗಳು ಲಿಂಗೈಕ್ಯರಾದ ದುಃಖದ ವಾರ್ತೆ ಕಿವಿಗೆ ಬಿದ್ದಾಗ ಇನ್ನೊಬ್ಬ ಮಹಾಶಿವಯೋಗಿಗಳಾಗಿದ್ದ ಮುರಗೋಡು ಮಹಾಂತಜ್ಜನವರು ಉದ್ಗರಿಸಿದರಂತೆ: "ಮೃತ್ಯುಂಜಯಪ್ಪಗಳು ಲಿಂಗೈಕ್ಯರಾದರಂತೆ: ಇನ್ನು ಈ ಕಾವಿ ಬಟ್ಟೆಗೆ ಯಾರು ಬೆಲೆ ಕೊಡುವರಪ್ಪಾ?"

ಇದೊಂದು ಅರ್ಥಗರ್ಭಿತ ಉದ್ಗಾರ? ಭಾರತೀಯ ಮಠವ್ಯವಸ್ಥೆಯೇ ವಿರೋಧ ವಿಡಂಬನೆಗಳ ದಾಳಿಗೆ ಒಳಗಾಗಿರುವ ಈ ವಿಷಮ ಸನ್ನಿವೇಶದಲ್ಲಿ ಆ ಅಸ್ತವ್ಯಸ್ತಗೊಂಡ ವ್ಯವಸ್ಥೆಗೇ ಗೌರವ ತಂದಿದ್ದ ವಿರಳ ವೀರವಿರಾಗಿಗಳೊಬ್ಬರು ಮರೆಯಾದಾಗ ಇದಕ್ಕಿಂತ ಅರ್ಥಪೂರ್ಣ ಉದ್ಗಾರ ಹೊರಡುವುದು ಸಾಧ್ಯವಿಲ್ಲವೆಂದು ತೋರುತ್ತಿದೆ. ಹೀಗೆ ಉದ್ಗರಿಸಿದ ಆ ಮಹಾನುಭಾವ ಮಹಾಂತಜ್ಜನವರೂ ಇಂದಿಲ್ಲ: ಸ್ವಯಂಜ್ಯೋತಿಗಳಾಗಿ ಮಠಗಳನ್ನೂ, ಭಕ್ತರ ಹೃನ್ಮಂದಿರಗಳನ್ನೂ ಬೆಳಗಿದ ಮಹಾನುಭಾವರು ಒಬ್ಬೊಬ್ಬರಾಗಿ ಬೆಳಗಿನೊಳಗಣ ಬೆಳಗಾಗುತ್ತಿದ್ದಾರೆ!

ಆದರೂ ಮಠವ್ಯವಸ್ಥೆಯ ಮರ್ಯಾದೆಯನ್ನು ಉಳಿಸಿದಂಥ ಪರಮಪೂಜ್ಯರು ಅಲ್ಲಲ್ಲಿ ವಿರಾಜಿಸುತ್ತಿರುವುದು ಆಸ್ತಿಕಸಮಾಜದ ಸುದೈವವೆಂದೇ ಹೇಳಬೇಕು. ಇಂಥವರಿಂದಲೆ ಆ ವ್ಯವಸ್ಥೆ ಜಿಗುಪ್ಸೆಯ ಝಂಝಾವಾತಗಳನ್ನು ಎದುರಿಸಿಯೂ ಉಳಿದುಕೊಂಡಿದೆ.

ಇಂಥ ಪರಮಪೂಜ್ಯರಲ್ಲಿ ಸುತ್ತೂರು ವೀರಸಿಂಹಾಸನಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೊದಲಸಾಲಿಗೆ ಸೇರಿದವರು. ಅನತಿದೂರದಲ್ಲಿಯೇ ಆಚರಿಸಲಾಗುತ್ತಿರುವ ಅವರ ಷಷ್ಟ್ಯಬ್ದಿ ಸಮಾರಂಭ ಮತ್ತು ಪಟ್ಟಾಧಿಕಾರ ಸುವರ್ಣಮಹೋತ್ಸವಗಳು ಈ ನಾಡಿನ ಧಾರ್ಮಿಕ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವ ಮಂಗಲಪ್ರಸಂಗಗಳು.

ಪ್ರಾಚೀನತೆ, ಪಾವನತೆ, ಪ್ರಭಾಮಯತೆ, ಪ್ರಭಾವ ಪೂರ್ಣತೆಗಳ ಉಜ್ವಲ ಪರಂಪರೆಯನ್ನು ಪಡೆದಿರುವ ಕೆಲವೇ ಮಹಾಮಠಗಳಲ್ಲಿ ಸುತ್ತೂರ ಶ್ರೀಮಠವೂ ಒಂದಾಗಿದೆ. ಈ ಪರಂಪರೆಯಲ್ಲಿ ಮಹಿಮರು, ರಾಜಮಾನ್ಯರು, ಕವಿಗಳು, ವಚನಕಾರರು, ಟೀಕಾಕಾರರು, ಸಂಪಾದಕರು ಶೋಭಿಸಿರುವಂತೆಯೇ ಲೋಕಕಲ್ಯಾಣಕಾರ್ಯಧುರಂಧರರೂ, ಜನಹಿತ ಸಂಸ್ಥೆಗಳ ಜನಕರೂ, ಅಂತರ್ಜಾತೀಯಸಾಮರಸ್ಯಸಾಧಕರೂ, ದಲಿತೋದ್ಧಾರಕರೂ ವಿರಾಜಿಸಿದ್ದಾರೆ; ಕರ್ನಾಟಕದ ಒಳಗೂ ಹೊರಗೂ ಶ್ರೀಮಠದ ಸತ್ಕೀರ್ತಿಚಂದ್ರಿಕೆ ಪ್ರಸರಿಸುವಂತೆ ಮಾಡಿದ್ದಾರೆ. ಬಹಳ ಹಿಂದಿನ ಇತಿಹಾಸ ಹಾಗಿರಲಿ, ಇಂದಿನ ಜಗದ್ಗುರುಗಳವರ ಮಹತಿಯನ್ನು ಶೈಶವದಲ್ಲಿಯೇ ಗುರುತಿಸಿ, ಅವರನ್ನು ತಮ್ಮ ಶಿಕ್ಷಣ-ರಕ್ಷಣೆಯಲ್ಲಿಯೇ ಶಿಷ್ಯವಾತ್ಸಲ್ಯದೊಡನೆ ಬೆಳೆಸಿ, ಖ್ಯಾತ ಪಂಡಿತರಲ್ಲಿ ವಿದ್ಯಾಭ್ಯಾಸ ಮಾಡಿಸಿ ೧೯೨೮ರಷ್ಟು ಹಿಂದೆಯೇ, ಆಗಿನ್ನೂ ಅವರು ಕೇವಲ ಹನ್ನೆರಡು ವರ್ಷದ ಬಾಲಕರಾಗಿದ್ದರೂ ಸಹ, ಪಟ್ಟಾಧಿಕಾರ ಪ್ರದಾನ ಮಾಡಿದ ಜಗದ್ಗುರು ಶ್ರೀ ಶ್ರೀ ಪಟ್ಟದ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಮಹತ್ಕಾರ್ಯಗಳನ್ನು ಮನದಂದರೂ ಸಾಕು, ಸುತ್ತೂರು ಶ್ರೀಮಠದ ಹಿರಿಮೆ ಗರಿಮೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅವರ ತಪಸ್ಸು, ಶಿವಮಂತ್ರಲೇಖನಯೋಗ, ಆಶ್ರಿತಜನಕ್ಕೆ ನೀಡಿದ ಜಾತಿಮತಾತೀತಮಾನವೀಯದೃಷ್ಟಿಯ ಅನುಗ್ರಹಾಶೀರ್ವಾದಗಳು, ಭಕ್ತೋದ್ಧಾರ, ಕಾಯಕ ನಿಷ್ಠೆ, ನೈತಿಕ ಪುನರುತ್ಥಾನ ಪ್ರಯತ್ನಗಳು, ವಿದ್ಯಾಪ್ರಸಾರಯೋಜನೆಗಳು ನಿಜವಾಗಿಯೂ ಚರಿತ್ರಾರ್ಹವಾದುವುಗಳು.

ಅವರಿಂದ ಸತ್ಪ್ರೇರಣೆ ಪಡೆದ ಇಂದಿನ ಜಗದ್ಗುರುವರ್ಯರೂ ತಮ್ಮ ಗುರುಗಳ ಬಹುಮುಖವಾದ ಮಾನವೋದ್ಧಾರದ ಕಾರ್ಯಕ್ಷೇತ್ರವನ್ನು ಬೃಹದಾಕಾರವಾಗಿ ಬೆಳೆಸಿದ್ದಾರೆ. ಪ್ರಾರಂಭದ ಪಾಂಡಿತ್ಯದ ಹೆಬ್ಬಯಕೆ ಅವರನ್ನು

ಕಾಶಿಗೆ ಸೆಳೆದೊಯ್ಯಿತಾದರೂ ಅಲ್ಲಿ ಸಮಾಜದ ಸುದೈವದಿಂದ ಅವರಿಗೆ ಪಂಡಿತವರೇಣ್ಯ ಶ್ರೀ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರಿಂದ ದೊರೆತುದು ಪಾಂಡಿತ್ಯ ಪ್ರಧಾನವಲ್ಲ—ಸಮಾಜದ ಅಜ್ಞಾನ, ದಾರಿದ್ರ್ಯ, ನಿರುದ್ಯೋಗ ನಿವಾರಣೆಗಳಿಗಾಗಿ ಹೋರಾಡುವ ಕಾಯಕ ಕೈಗೊಳ್ಳಲು ಪ್ರೇರಣೆ; ಕಾಶಿಯಲ್ಲಿ ಅವರ ಒಳಗಣ್ಣಿನೆದುರು ಸುರುಳಿ ಬಿಚ್ಚಿತು ಸಮಾಜದ ಅಧೋಗತಿಯ ಶೋಚನೀಯ ಚಿತ್ರ: ನಗರಗಳ ಅನಾಥರ, ಹಳ್ಳಿಗಳ ಕಡುಬಡವರ ಮಕ್ಕಳು ಚೊಕ್ಕ ಮತಿಯಿದ್ದರೂ ರೊಕ್ಕಕ್ಕೆ ಗತಿಯಿಲ್ಲದೇ ಅವಿದ್ಯೆಯ ಅಂಧಕಾರದಲ್ಲಿಯೇ ಹುಟ್ಟಿ ಬೆಳೆದು, ಬಡತನದ ಬೇಗೆಯಲ್ಲಿಯೇ ಬೆಂದು ಬೂದಿಯಾಗಿ ಹೋಗುತ್ತಲಿದ್ದ ಹೃದಯವಿದ್ರಾವಕ ದೃಶ್ಯ ಅವರ ಅಂತರ್ದೃಷ್ಟಿಯ ಮುಂದೆ ಮೂಡಿ ಮರೆಯಾಗುತ್ತಲೇ ಪಾಂಡಿತ್ಯಸಂಪಾದನೆಯ ಪ್ರಬಲ ಆಕಾಂಕ್ಷೆಗೆ ತಿಲಾಂಜಲಿಯಿತ್ತು ಮೈಸೂರಿಗೆ ಮರಳಿದರು.

ಆಗ ಅವರು ಕಂಡ ಸಮಾಜದ ಶೋಷಿತರ, ದೀನ ದುರ್ಬಲರ ನೈಜ ಚಿತ್ರ ಕಾಶಿಯಲ್ಲಿ ಕಂಡ ಕಾಲ್ಪನಿಕ ಚಿತ್ರಕ್ಕಿಂತ ಘೋರವಾಗಿದ್ದಿತು. ಕೈಯಲ್ಲಿ ಕಾಸಿಲ್ಲದಿದ್ದರೂ ಕೊರಳಲ್ಲಿ ಧರಿಸಿದ್ದ ರುದ್ರಾಕ್ಷಿಮಾಲೆಯ ಗೌರೀಶಂಕರಕ್ಕೆ ಹಾಕಿದ್ದ ಚಿನ್ನದ ಕವಚವನ್ನೇ ಮಾರಿ ಬಂದ ಹಣದಿಂದ ಬಾಡಿಗೆ ಮನೆಯೊಂದರಲ್ಲಿ ಬಡಮಕ್ಕಳಿಗಾಗಿ ಬಡತನದಲ್ಲಿಯೇ ವಿದ್ಯಾರ್ಥಿನಿಲಯವನ್ನು ೧೯೪೧ರಲ್ಲಿಯೇ ಪ್ರಾರಂಭಿಸಿಬಿಟ್ಟರು. ಅದನ್ನು ಉಳಿಸಿ ಬೆಳೆಸಿ ಬಲಿಸುವಲ್ಲಿ ಅವರು ತೋರಿದ ಸಹನೆ, ಕಷ್ಟಸಹಿಷ್ಣುತೆ, ನಿರ್ಧಾರ, ಶ್ರದ್ಧೆ, ಶುದ್ಧಿಗಳು ಅವರ ವ್ಯಕ್ತಿತ್ವವನ್ನೇ ಪ್ರಕಾಶಮಾನಗೊಳಿಸಿದ ಸಾಧನೆಯ ಸೋಪಾನಗಳಾದುವು.

ಕಾರ್ಯಮಾಡುತ್ತಹೋದಂತೆ ಹೆಚ್ಚಿನ ಕಾರ್ಯಮಾಡುವ ಶಕ್ತಿ ತಾನಾಗಿಯೇ ಉದಿಸುತ್ತ ವರ್ಧಿಸುತ್ತ, ವಿಕಸಿಸುತ್ತ ಹೋಗುತ್ತದೆ. ಜಗದ್ಗುರುಗಳವರ ಕಾರ್ಯಕ್ಷಮತೆಯೂ ಬೆಳೆಯುತ್ತ ಸಂಸ್ಥೆಯಿಂದ ಸಂಸ್ಥೆಗಳು ಹುಟ್ಟುತ್ತ ಹೊರಟವು. ಸದುದ್ದೇಶವೊಂದರಿಂದಲೇ ಸತ್ಕಾರ್ಯಗಳು ಘಟಿಸುವುದಿಲ್ಲ. ದುಷ್ಕಾರ್ಯಗಳಿಗೇ ವಿಘ್ನಭಯ ಕಡಿಮೆ: ಸತ್ಕಾರ್ಯಗಳಿಗೆ ಬಹುವಿಘ್ನಗಳು. ಆದ್ದರಿಂದ ಸತ್‌ಸಂಕಲ್ಪದ ಜೊತೆಗೆ ಸತತಪ್ರಯತ್ನ, ಶಿಸ್ತು, ನಿಯಮನಿಷ್ಠೆ, ಸಮಯನಿಷ್ಠೆ, ನಿರಪೇಕ್ಷ ಬುದ್ಧಿ, ಕೀರ್ತಿಮೋಹತ್ಯಾಗ, ನಿಷ್ಕಾರಣ ನಿಂದೆ ಬಂದಾಗಲೂ ಸಮತೆಗೆಡದ ಸ್ಥಿಮಿತತೆ, ಇಂದ್ರಿಯನಿಗ್ರಹಜನ್ಯವಿಲಾಸವಿಮುಖತೆ, ಪವಿತ್ರಜೀವನ ಇತ್ಯಾದಿಗಳು ಮಹಾತ್ಕಾರ್ಯ ಮಾಡಬೇಕೆನ್ನುವವರಿಗೆ ಅತ್ಯಗತ್ಯ.

ಜಗದ್ಗುರುಗಳವರಲ್ಲಿ ಇವೆಲ್ಲ ಸದ್ಗುಣಗಳೂ ಶರಣಜೀವನ ನಡೆಸಿ ಪಾವನತೆಯನ್ನು ಪಡೆದಿದ್ದ ಮಾತಾಪಿತೃಗಳ ಬಳುವಳಿಯಾಗಿ, ಗುರುಗಳ ಕರುಣಪ್ರಸಾದವಾಗಿ ಎಳೆವರೆಯದಲ್ಲಿಯೇ ಮೊಳೆತಿದ್ದುವು. ಎಂತಲೇ ಸಣ್ಣ ವಿದ್ಯಾರ್ಥಿನಿಲಯವೊಂದರಿಂದ ಪ್ರಾರಂಭವಾದ ಅವರ ಪವಿತ್ರಕಾರ್ಯ ಶಾಖೋಪಶಾಖೆಗಳಿಂದ ಶೋಭಿಸುವ ಕಲ್ಪವೃಕ್ಷವಾಗಿ ಬೆಳೆದು ಅದರ ಬೆಳವಣಿಗೆಯಲ್ಲಿ ಭಾಗಿಗಳಾಗಿದ್ದವರನ್ನೂ ಬೆರಗುಗೊಳಿಸುತ್ತಿದೆ. ಅಂದಿನ ಒಂದು ಉಚಿತ ಪ್ರಸಾದನಿಲಯ, ಇಂದು ಅನೇಕ ಕಡೆಗಳಲ್ಲಿ ಅನೇಕ ಉಚಿತ ಪ್ರಸಾದನಿಲಯಗಳಾಗಿ ಹಬ್ಬುಗೆಗೊಂಡಿವೆ. ಅಂಗವಿಕಲರಿಗೇ ಪ್ರತ್ಯೇಕ ಪ್ರಸಾದನಿಲಯಗಳು ಸ್ಥಾಪಿತವಾಗಿರುವುದಂತೂ ಜಗದ್ಗುರುಗಳವರ ಅನಂತ ಅನುಕಂಪೆಗೆ ಹಿಡಿದ ಕನ್ನಡಿಯಾಗಿದೆ. ಅಂದು ಕೆಲವೇ ಬಡ ವಿದ್ಯಾರ್ಥಿಗಳಿಗೆ ಲಭ್ಯವಿದ್ದ ಉದಾರಾಶ್ರಯವಿಂದು ಸಹಸ್ರ ಸಹಸ್ರ ಬಡ ವಿದ್ಯಾರ್ಥಿಗಳಿಗೆ ದೊರೆಯುತ್ತಿದೆ. ಇವಲ್ಲದೆ ಹನ್ನೆರಡು ಪ್ರೌಢಶಾಲೆಗಳು, ನಾಲ್ಕು ಪ್ರಥಮ ಶ್ರೇಣಿಯ ವಿಜ್ಞಾನ-ಕಲಾ-ವಾಣಿಜ್ಯ ಕಾಲೇಜುಗಳು, ಎರಡು ಮೂಲಶಿಕ್ಷಣ ತರಬೇತಿ ಕೇಂದ್ರಗಳು, ನಾಲ್ಕು ಸಂಸ್ಕೃತ ಪಾಠಶಾಲೆಗಳು, ಗುರುಕುಲ, ಎರಡು ಫಾರ್ಮಸಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಇತ್ಯಾದಿ ಉನ್ನತ ವಿದ್ಯಾಸಂಸ್ಥೆಗಳು ತಲೆಯೆತ್ತಿ ಅನ್ಯರೂ ಅನುಸರಿಸಬಹುದಾದ ಆದರ್ಶರೀತಿಯಲ್ಲಿ ಯಾವ ಕುಂದುಕೊರತೆಗಳಿಗೂ ಎಡೆಯಿಲ್ಲದಂತೆ ನಡೆದಿವೆ: ನಾನೀನೆನ್ನುವ ಆಡಳಿತಗಾರರೂ ಬೆರಗಾಗಿ ಬೆರಳುಕಚ್ಚುವ ರೀತಿಯಲ್ಲಿ ನಡೆದಿವೆ. ಅವುಗಳ ಪವಿತ್ರಪರಿಸರ, ಸ್ವೈರಾಚಾರಕ್ಕೆಡೆಗೊಡದ ಶಿಸ್ತಿನ ಶೀಲದ ಶಾಲೀನತೆಯ ವಾತಾವರಣ, ಚಾರಿತ್ರ್ಯನಿರ್ಮಾಣದ ಅಪೂರ್ವ ವಿಕ್ರಮ, ಉತ್ತಮ ಫಲಿತಾಂಶಗಳು, ಸುಮಧುರ ಗುರುಶಿಷ್ಯ ಸಂಬಂಧಗಳು ಸರ್ವರ ಶ್ಲಾಘನೆಗೆ ಪಾತ್ರವಾಗಿವೆ.

ಶ್ರೀಮಠದಲ್ಲಿ ಶಾಖಾಮಠಗಳಲ್ಲಿ, ಶ್ರೀಮಠದ ಸರ್ವಸಂಸ್ಥೆಗಳಲ್ಲಿ ಎದ್ದುಕಾಣುವ ಅಂಶ ಸರ್ವಸಮದೃಷ್ಟಿ, ಸರ್ವಧರ್ಮಸಮಭಾವ.ವಿಭೇದವಾದವೇ ವಿತಂಡತಾಂಡವವನ್ನಾಡುತ್ತಿರುವ ಈ ಕಾಲದಲ್ಲಿ ಶ್ರೀಮಠದ ಭೇದರಾಹಿತ್ಯ ರೀತಿ ನೀತಿಗಳು ಅದೆಷ್ಟು ಆಪ್ಯಾಯನಕರಗಳೆಂಬುದು ಸ್ವಯಂವೇದ್ಯ. ವೀರಶೈವರಲ್ಲಿಯ ಗುರು–ವಿರಕ್ತ ಭೇದ, ಒಳಪಂಗಡಗಳ ಭೇದ ಇತ್ಯಾದಿ ಭೇದಗಳಾಗಲಿ, ಎಲ್ಲರಿಗೂ ಅನ್ವಯಿಸುವ ಪಂಡಿತ–ಪಾಮರ ಭೇದ, ಬಡವ–ಬಲ್ಲಿದ

ಭೇದ, ನೀಚೋಚ್ಚ ಭೇದ, ಸ್ಪೃಶ್ಯಾಸ್ಪೃಶ್ಯಭೇದ, ಸ್ವಜನ-ಪರಜನ ಭೇದಗಳಾಗಲೀ ಜಗದ್ಗುರುಗಳವರ ಸನಿಹಕ್ಕೂ ಸುಳಿದಿಲ್ಲವೆಂದು ಹೇಳಬಹುದು. ಅವರದು ಗುರುವರ್ಗದ ಪೀಠವಾದರೂ ಬಸವಾದಿ ಪ್ರಮಥರಿಗೂ ಪರಮ ಪ್ರಾಶಸ್ತ್ಯವಿಲ್ಲಿ. ಇಷ್ಟೆ ಅಲ್ಲ, ಗುರು-ವಿರಕ್ತರೆನ್ನದೆ ಎಲ್ಲ ಮಠಾಧಿಪತಿಗಳಿಗೆ ಮುಂದಾಳುಗಳವರು. ಇದು ಇಂದಿನ ಪರಿಸ್ಥಿತಿಗೆ ಹೊಂದಿಕೊಳ್ಳುವ ಹವಣಿಕೆಯೇನೂ ಅಲ್ಲ: ಪೂರ್ವದಿಂದ ಬಂದ ಸತ್ಸಂಪ್ರದಾಯದ ಸ್ಥಿರೀಕರಣ. ಇವರ ಪೀಠವನ್ನೇ ಹಿಂದೆ ಅಲಂಕರಿಸಿದ್ದ ಜಗದ್ಗುರು ಘನಲಿಂಗಿ ಚಕ್ರವರ್ತಿಗಳವರ ಘನತೆಯನ್ನಷ್ಟು ನೋಡಿ: "ಎನಗೊಂದ ಕರುಣಿಸಯ್ಯ-ತಂದೆ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ-ಇಂತಪ್ಪ ಶರಣರ ಮನೆಯ ಬಾಗಿಲ ಕಾವ ಶುನಕನ ಮಾಡಿ ನನ್ನ ನಿಲಿಸಯ್ಯ!" ಎಂದು ಕೇಳಿಕೊಂಡ ಅವರ ಹೃದಯದ ಹರಹನ್ನು ಅಳೆಯ ಬಲ್ಲವರಾರು? ಡೋಹರ, ಮಾದಾರ ಎಂಬುದನ್ನೆ ಗಣಿಸದೆ ಶರಣತನಕ್ಕೆ ಶರಣೆಂದ ಇವರು ಗುರು-ವಿರಕ್ತ ಭೇದವನ್ನು ನೆನೆದು ತಮ್ಮ ಗುರು ಶಿವಯೋಗಸಾರ್ವಭೌಮ ತೋಂಟದ ಸಿದ್ಧಲಿಂಗೇಶ್ವರರನ್ನು ಸ್ತುತಿಸದಿರುವರೇ? ಕೇಳಿ: "ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು ಭಂಡಾರಿ ಬಸವಪ್ಪೊಡೆಯರು: ಆ ಭಂಡಾರಿ ಬಸವಪ್ಪೊಡೆಯರ ಶಿಷ್ಯರು ಕೂಗಲೂರು ನಂಜಯ್ಯದೇವರು: ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯಾ ನಾನು! ಎನ್ನ ಗುರುವಿನ ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ ಗುರುಭಕ್ತಿಯಿಂದ ಎನ್ನ ಶರಣು ಮಾಡಿದರು. ಆ ತೋಂಟದಾರ್ಯನು ತನ್ನ ಕೃಪೆಯೆಂಬ ತೊಟ್ಟಿಲೊಳಗೆ ಮಲಗಿಸಿ, ಪ್ರಮಥಗಣಂಗಳ ವಚನ ಸ್ವರೂಪಾರ್ಥವೆಂಬ ಪಾಲು ತುಪ್ಪವಂ ಸದಾ ದಣಿಯಲೆರೆದು ಅಕ್ಕರಿಂದ ರಕ್ಷಣೆಯಂ ಮಾಡಿ 'ಘನಲಿಂಗಿ' ಎಂಬ ನಾಮಕರಣಮಂ ಕೊಟ್ಟು, ಪ್ರಾಯ ಸಮರ್ಥೆಯಂ ಮಾಡಿ, ಸತ್ಯ ಸದಾಚಾರ ಜ್ಞಾನಕ್ರಿಯೆಗಳೆಂಬ ದಿವ್ಯಾಭರಣಗಳಂ ತೊಡಿಸಿ, ಅರುಹೆಂಬ ಬಣ್ಣವ ನಿರಿವಿಡಿದುಡಿಸಿ, ಅರ್ಥಿಯ ಮಾಡುತಿಪ್ಪ ಸಮಯದಲ್ಲಿ ಘನಲಿಂಗಿ ಮೋಹದ ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು ಬೇಡಿ ಕಳುಹಲು ಎಮ್ಮವರು ಅವರಿಂಗೆ ಮಾತಸಿಕ್ಕಿದರಮ್ಮ."

ಈ ಉದಾರ ವಿಚಾರಧಾರೆ ಇಂದಿಗೂ ಶ್ರೀಮಠದಲ್ಲಿ ಜೀವಂತವಾಗಿದೆಯೆಂದೇ ಇಂದಿನ ಜಗದ್ಗುರುಗಳವರೇ ಘನಲಿಂಗಿಯ ವಚನಗಳನ್ನು ಶ್ರದ್ಧೆಯಿಂದ ಸಮರ್ಪಕವಾಗಿ ಸಂಪಾದಿಸಿ ಸರ್ವಾಂಗಸುಂದರವಾಗಿ ಪ್ರಕಟಿಸಿದ್ದಾರೆ; ಹಾಗೂ ಘನಲಿಂಗಿಯವರಂತೆ ಎಲ್ಲರನ್ನೂ ಸಮನಾಗಿ ಕಾಣುವ ಸಮದರ್ಶಿತ್ವದಲ್ಲಿ ಸಿದ್ಧಿಯನ್ನು ಪಡೆದಿದ್ದಾರೆ. ಶ್ರೀಮಠದಲ್ಲಿ, ಶ್ರೀಮಠದ ಸಂಸ್ಥೆಗಳಲ್ಲಿ ಇವನಾರವ, ಇವನಾರವ, ಇವನಾರವನೆಂಬ ಸೊಲ್ಲೇ ಇಲ್ಲ; 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ'ನೆಂಬ ಸೊಲ್ಲೇ ಸುತ್ತೆಲ್ಲ!

ಎಲ್ಲ ಮಠಗಳೂ ಈ ಸುವರ್ಣ ಸೂತ್ರವನ್ನು ಅನುಸರಿಸಿದರೆ, ನಮ್ಮ ಮಠವ್ಯವಸ್ಥೆ ಪ್ರಪಂಚಕ್ಕೇ ಮಾದರಿಯಾದೀತು! ಬೇರೆಲ್ಲಿಯೂ ಈ ಸೂತ್ರದ ಅನುಸರಣೆಯಿಲ್ಲವೆಂದು ಇದರರ್ಥವಲ್ಲ. ಅಲ್ಲಲ್ಲಿ ಉಜ್ವಲ ಉದಾಹರಣೆಗಳಿವೆ. ಆದರೆ ಮಠಗಳಿಂದು ನಿಷ್ಪ್ರಯೋಜಕವಾಗಿವೆಯೆಂಬ ಸಾಮಾನ್ಯ ಆರೋಪಕ್ಕೆ ಇವು ಅಪವಾದಗಳು ಮಾತ್ರ ಅಷ್ಟೆ. ಇಂದಿನ ಸುತ್ತೂರು ಜಗದ್ಗುರುಗಳು ಈ ದಿಶೆಯಲ್ಲಿ ನೇತಾರರಾಗುವ ಅರ್ಹತೆಯನ್ನು ಗಳಿಸಿಕೊಂಡಿದ್ದಾರೆ. ಅವರ ಪೀಠಾರೋಹಣದ ಸುವರ್ಣ ಮಹೋತ್ಸವ ಷಷ್ಟ್ಯಬ್ದಿ ಸಮಾರಂಭಗಳನ್ನು ಏಕಕಾಲಕ್ಕೆ ದರ್ಶಿಸುವ ಧನ್ಯತೆಯನ್ನು ಪಡೆಯಲಿರುವ ಅವರ ಅಸಂಖ್ಯಾತ ಭಕ್ತರೂ ಈ ದಿಶೆಯಲ್ಲಿ ಅವರಿಗೆ ಬೆಂಬಲವಾಗಬೇಕು; ಅವರ ಪರಿಪಕ್ವ ಅನುಭವ, ಪ್ರಚಂಡ ಕಾರ್ಯಶಕ್ತಿ, ಪರಮೋನ್ನತ ಧ್ಯೇಯಾದರ್ಶಗಳ ಪ್ರಯೋಜನ ಹೆಚ್ಚು ಹೆಚ್ಚು ಸಂಸ್ಥೆಗಳಿಗೆ, ಹೆಚ್ಚು ಹೆಚ್ಚು ದುರ್ಬಲರಿಗೆ, ದೀನರಿಗೆ, ದಲಿತರಿಗೆ ದೊರೆಯುವಂತೆ ನೆರವಾಗಬೇಕು.

ಒಟ್ಟಿನಲ್ಲಿ ಹೇಳುವುದಾದರೆ, ಕುಸಿಯುತ್ತಿರುವ ಮಠವ್ಯವಸ್ಥೆಯ ಮರ್ಯಾದೆಯನ್ನು ಉಳಿಸಿರುವ ಕೆಲವೇ ಮಠಾಧೀಶ್ವರರಲ್ಲಿ ಒಬ್ಬರಾದ ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶತಾಯುಗಳಾಗಲೆಂದೂ, ಅವರಿಂದ ಇನ್ನೂ ಶತಶತಸಹಸ್ರ ಬಡವಿದ್ಯಾರ್ಥಿಗಳಿಗೆ, ನಿರ್ಗತಿಕರಿಗೆ, ಅನಾಥರಿಗೆ, ಅಂಗವಿಕಲರಿಗೆ ಸ್ವಾವಲಂಬನೆಯ ಶಕ್ತಿ ದೊರೆಯಲೆಂದೂ, ಕನ್ನಡನಾಡಿನ ಮಠಗಳೆಲ್ಲ ಅವರು ಕೈಕೊಂಡಿರುವಂಥ ರಾಷ್ಟ್ರನಿರ್ಮಾಪಕ ಕಾರ್ಯಗಳನ್ನು ಕೈಗೊಂಡು ಮಠವ್ಯವಸ್ಥೆಯು ಮುನ್ನಿನ ಗೌರವಾದರಗಳನ್ನು ಪಡೆಯುವಂತಾಗಲೆಂದೂ ಸರ್ವ ಸುಜ್ಞರೂ ಹಾರೈಸದಿರರು.

# ಗುರುಪೀಠ - ಶಿಷ್ಯಕೋಟಿ

**ಸದಾಶಿವ ಒಡೆಯರು**

ಭಾರತೀಯ ಜನಾಂಗದ ಜೀವದ್ರವ್ಯ ಧರ್ಮ; ಸಮಾಜಜೀವನವ್ಯವಹಾರದ ಕೇಂದ್ರ ಮಠ-ದೇವಾಲಯ. ಪುರಾತನ ಕಾಲದಿಂದ ಅವ್ಯಾಹತವಾಗಿ ನಡೆದುಬಂದ ಈ ನಂಬಿಕೆ ಹಾಗೂ ವ್ಯವಸ್ಥೆ, ಆಧುನಿಕತೆಯ ಅನಂತ ಪ್ರಭಾವಗಳ ಮಧ್ಯದಲ್ಲಿಯೂ, ಸಜೀವವಾಗಿದೆ. ಸಮಾಜಕ್ಷೇಮ ಹಾಗೂ ವ್ಯಕ್ತಿವಿಕಾಸದ ದೃಷ್ಟಿಯಿಂದಲೂ ಈ ಪರಂಪರೆಯ ಮೌಲ್ಯ ಅಪಮೌಲ್ಯವಾಗಲಾರದು, ಆಗಬಾರದು. ಅನೇಕ ಧರ್ಮಗಳು ಇಂದು ಜಾತಿಗಳಾಗಿ ಸಮೀಕರಣಗೊಂಡಿರುವ ಹಿನ್ನೆಲೆಯಲ್ಲಿ, ಜಾತ್ಯತೀತಸಮಾಜ ರಚನೆಯ ಅಭಿಪ್ರಾಯ ಸ್ವಾಗತಾರ್ಹವಾದುದು; ಆದರೆ, ಜಾತ್ಯತೀತತೆ-ಕೆಲವರು ತಪ್ಪಾಗಿ ವ್ಯಾಖ್ಯಾನಿಸುವಂತೆ, ಧರ್ಮಾತೀತ, ಧರ್ಮ ವಂಚಿತ ಆಗಬಾರದು. ಅದು ಭಾರತೀಯ ರಾಷ್ಟ್ರೀಯ ಸಮಾಜ ಭದ್ರತೆ ಹಾಗೂ ಪ್ರಗತಿಗೆ ಪ್ರತಿಬಂಧಕವಾಗುತ್ತದೆ. ಆಧುನಿಕ ಆವಶ್ಯಕತೆಗಳನ್ನು ಅನುಲಕ್ಷಿಸಿ ನಮ್ಮ ಧರ್ಮ ಹಾಗೂ ಧಾರ್ಮಿಕ ಸಂಸ್ಥೆಗಳನ್ನು ಪರಿಷ್ಕರಿಸಿ, ಸಮಕಾಲೀನ ಬದುಕಿನ 'ಶಕ್ತಿಕೇಂದ್ರ'ಗಳಾಗುವಂತೆ ರೂಪಿಸುವುದು ಸೂಕ್ತ. ಇಂಥ ಆಧುನೀಕರಣ ಹಾಗೂ ಸಾರ್ಥಕ ಬದಲಾವಣೆಯ ಮಾದರಿಯ ಧರ್ಮಪೀಠಗಳ ಬಗೆಗೆ ಚಿಂತಿಸಿದಾಗಲೆಲ್ಲ ನಮ್ಮ ಅನೇಕ ವೀರಶೈವ ಸಂಸ್ಥಾನ-ಪೀಠ-ಮಠಗಳು ಕಣ್ಣೆದುರಿಗೆ ನಿಲ್ಲುತ್ತವೆ. ಅವುಗಳ ಆದರ್ಶ ಕಾರ್ಯವನ್ನು ನೆನೆದಾಗಲೆಲ್ಲ ಹೆಮ್ಮೆಯ ಭಾವನೆ ತುಂಬಿಬರುತ್ತದೆ ; ಕೃತಜ್ಞತೆಯ ಆನಂದಭಾಷ್ಪ ಹೊಮ್ಮುತ್ತವೆ. ಇಂಥ ಪ್ರಾತಃಸ್ಮರಣೀಯ ಪುಣ್ಯಪೀಠಗಳಲ್ಲೊಂದು ಮೈಸೂರಿನ ಶ್ರೀ ಸುತ್ತೂರು ಜಗದ್ಗುರು ಸಂಸ್ಥಾನ. ಅಖಿಲ ಭಾರತೀಯ ಮಟ್ಟದಲ್ಲಿಯೂ ಇಂಥ ಆದರ್ಶ ಸಂಸ್ಥಾನಗಳು ಬಹಳವಿದ್ದಂತೆ ನನಗನಿಸುವುದಿಲ್ಲ. ಅದರಲ್ಲೂ ಈ ಅರ್ಧ ಶತಮಾನದ ಅವಧಿಯಲ್ಲಿ ಇಷ್ಟೊಂದು ಮಹತಿಯನ್ನು ಸಾಧಿಸಿದ ನಾಲ್ಕೈದು ಪೀಠಗಳನ್ನು ಹೆಸರಿಸಬಹುದು. ಆರನೆಯದನ್ನೂ ಹೆಸರಿಸಲು ಸುದೀರ್ಘ ವಿಚಾರಮಾಡಬೇಕಾಗುತ್ತದೆ. ಭಾರತೀಯರಲ್ಲಿ—ಮುಖ್ಯವಾಗಿ ವೀರಶೈವರಲ್ಲಿ ಮಠವೆಂದರೆ, ಅದು ಧರ್ಮ—ತತ್ತ್ವವಿಚಾರದ **ಅಧಿಕೃತ ಅಕಾದೆಮಿ**, ನ್ಯಾಯ-ನಿರ್ಣಯ ನೀಡಬಲ್ಲ **ಅಧಿಕೃತ ನ್ಯಾಯಾಲಯ**, ಶಿಕ್ಷಣ-ಸಂಸ್ಕಾರ ನೀಡಬಲ್ಲ **ಅಧಿಕೃತ ವಿದ್ಯಾಲಯ**, ಸಾಮಾಜಿಕ ನಡೆವಳಿಗಳನ್ನು ನಿರ್ಣಯಿಸುವ, ನಿರೂಪಿಸುವ **ಸಮಾಜ ಶಿಕ್ಷಣ, ಪ್ರತಿಷ್ಠಾನ.** ಅದು ಅರಮನೆ-ಗರಿಮನೆಗಳನ್ನು ಬೆಸೆಯುವ '**ಗುರುಮನೆ**' ಲಕ್ಷ್ಮೀಪುತ್ರರನ್ನೂ, ಸರಸ್ವತೀ ಪುತ್ರರನ್ನೂ, ಅಷ್ಟೇ ಅಲ್ಲದೆ, ಲಕ್ಷ್ಮೀ-ಸರಸ್ವತಿಯರಿಂದ ವಂಚಿತರಾದ ದೀನ-ದಲಿತರನ್ನೂ ಏಕೋಭಾವದಿಂದ ಉದ್ಧರಿಸುವ **ಮಂಗಳ ಗಂಗೋತ್ರಿ.** ಶ್ರೀ ಸುತ್ತೂರು ವೀರಸಿಂಹಾಸನಾಧೀಶ್ವರರು ಚೋಳರಾಜರುಗಳ ರಾಜಗುರುಗಳಾಗಿದ್ದು, ಧರ್ಮಪ್ರಸಾರಮಾಡುತ್ತಿದ್ದುದು ಐತಿಹಾಸಿಕ ಸತ್ಯ. ಆದಿ ಜಗದ್ಗುರು ಶಿವರಾತ್ರೀಶ್ವರ ಭಗವತ್ಪಾದರುಗಳಿಂದ ಪ್ರಾರಂಭಿಸಿ, ಇಂದಿನ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೆಗೆ ಈ 'ಸಂಸ್ಥಾನ' ತನ್ನ ರಾಜಗುರುತ್ವವನ್ನೂ, ಧರ್ಮಗುರುತ್ವವನ್ನೂ, ಶಿಷ್ಯಕೋಟಿಯ ಶಿಕ್ಷಣ-ಸಂಸ್ಕಾರ ಕಾರ್ಯವನ್ನೂ, ಸಮಾಜೋನ್ನತಿಯ ಸೇವಾಕಾರ್ಯವನ್ನೂ ವಿಸ್ತರಿಸುತ್ತಾ ಬಂದಿದೆ. ವೀರಶೈವದ 'ವಿಶ್ವಧರ್ಮೀಯತೆಯನ್ನು ಸಭೆ-ಸಮಾರಂಭ, ಉತ್ಸವ ಜಾತ್ರೆ, ವಿಚಾರ ಸಂಕಿರಣಗಳ ಮೂಲಕ, ಇತರ ಧರ್ಮಗಳ ತೌಲನಿಕ ಅಧ್ಯಯನದ ಮೂಲಕ ಪ್ರಸ್ಥಾಪಿಸುತ್ತಾ ಬಂದಿದೆ. ಪ್ರತಿವರ್ಷವೂ ನೆರವೇರಿಸುತ್ತಿರುವ ಆದಿಜಗದ್ಗುರು ಜಯಂತಿ ಮಹೋತ್ಸವ ಇದಕ್ಕೆ ಜೀವಂತ ಸಾಕ್ಷಿ. ಈಚೆಗೆ ಅಲ್ಲಲ್ಲಿ ನೆರವೇರಿಸುತ್ತಾ ಬಂದಿರುವ ಪೀಠ-ಮಠಾಧಿಕಾರಿಗಳ ಸಮ್ಮೇಳನಗಳು ಧಾರ್ಮಿಕ ಜಾಗೃತಿಯ ಸಾಧಕಗಳಾಗಿವೆ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಪ್ರಕಟಿಸಿರುವ ಗ್ರಂಥಗಳು ಹಾಗೂ ಹನ್ನೆರಡು ವರ್ಷಗಳಿಂದ ಪ್ರಕಟಿಸುತ್ತಾ ಬಂದಿರುವ 'ಪ್ರಸಾದ' ಪತ್ರಿಕೆ ಶ್ರೀ ಸಂಸ್ಥಾನದ ಸಮಾಜ-ಸಾಹಿತ್ಯ ಸೇವೆಯನ್ನೂ ಬಿಂಬಿಸುತ್ತಿವೆ. ಮೈಸೂರು ಅರಸು ಮನೆತನದ ಗೌರವಕ್ಕೆ ಪಾತ್ರವಾದ ಜಗದ್ಗುರು ಪರಂಪರೆ, ಅರಮನೆಯ ಧರ್ಮ

ನಿರ್ದೇಶನಗೈಯುತ್ತಾ ಬಂದಿದೆ. ಮೈಸೂರು ಒಡೆಯರ ಮನೆತನ ಕೈಕೊಂಡ ಅಸಂಖ್ಯ ಧರ್ಮದಾನ-ಸೇವಾಕಾರ್ಯ ಗಳಿಗೆ ಪೂಜ್ಯ ಜಗದ್ಗುರುಗಳ ಆಶೀರ್ವಾದವೇ ಕಾರಣ. ಈ ಅರಮನೆ-ಗುರುಮನೆಗಳ ಮಧುರ ಬಾಂಧವ್ಯ ಶ್ರೀ ಸುತ್ತೂರು ಸಂಸ್ಥಾನದ ವಿಶೇಷ ಸಾಧನೆಯಾಯಿತು. ಲಿಂ. ಶ್ರೀ ಶಿವರಾತ್ರಿಮಹಾಸ್ವಾಮಿಗಳ ಹಾಗೂ ಇಂದಿನ ಜಗದ್ಗುರುಗಳಾಗಿರುವ ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳ ಈ ಇಪ್ಪತ್ತನೆಯ ಶತಮಾನದ ಸಾಧನೆ ಗಳು ಅತ್ಯಂತ ಗಮನಾರ್ಹವಾದುವು. ಮೈಸೂರು ನಗರದಲ್ಲಿ, ಮೈಸೂರು ಜಿಲ್ಲೆಯ ಎಲ್ಲ ತಾಲ್ಲೂಕು ಹಾಗೂ ಪ್ರಮುಖ ಗ್ರಾಮಗಳಲ್ಲಿ ಸ್ಥಾಪಿಸಿ—ನಡೆಯಿಸುತ್ತಿರುವ ಆಧುನಿಕ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ಪ್ರಸಾದನಿಲಯ ಗಳು ಹಾಗೂ ಸಮಾಜಸೇವಾಕೇಂದ್ರಗಳು ಶ್ರೀ ಸಂಸ್ಥಾನಮಠದ ಹೆಗ್ಗಳಿಕೆಯ ಕುರುಹುಗಳಾಗಿವೆ.

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ (ಪ್ರತಿಷ್ಠಾನ ಎನ್ನುವುದೇ ಸೂಕ್ತ) ಮೈಸೂರು ನಗರ ಮತ್ತು ಅದರ ಆಸುಪಾಸಿನಲ್ಲಿ ಹತ್ತಿಪ್ಪತ್ತು ವಿದ್ಯಾಲಯಗಳು, ಆದರ್ಶಮಯವಾದ ಎಂಜಿನಿಯರಿಂಗ್ ಮಹಾವಿದ್ಯಾ ಲಯ ಶಿಕ್ಷಕರ ತರಬೇತಿ ವಿದ್ಯಾಲಯ, ಜೂನಿಯರ್ ಕಾಲೇಜುಗಳು, ಹೈಸ್ಕೂಲುಗಳು, ಪಾಠಶಾಲೆಗಳು, ಶಿಶುವಿಹಾರ ಗಳು, ಮುಂತಾದ ಶಿಕ್ಷಣ ಸಂಸ್ಥೆಗಳನ್ನೆಲ್ಲ ಒಟ್ಟಾಗಿ ಭಾವಿಸಿದರೆ, ಒಂದು ವಿಶ್ವವಿದ್ಯಾಲಯವೇ ಆಗುವಷ್ಟು ಮಹಾ ಸಂಸ್ಥೆಯಾಗಿರುವುದು ಆಶ್ಚರ್ಯಕರವಾಗಿರುವಂತೆ, ಹೆಮ್ಮೆಯ ಭಾವವನ್ನೂ ತುಂಬುತ್ತಿದೆ. ಕೋಟಿಗಟ್ಟಲೆ ಬಂಡವಾಳ ವನ್ನು ಹೂಡಿ, ಶಿಷ್ಯಕೋಟಿಯನ್ನೇ ನಿರ್ಮಿಸಿದೆ ಈ ವಿದ್ಯಾಪೀಠ. ಕರ್ನಾಟಕದ ಯಾವುದೇ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದರೂ, ಅಲ್ಲಿ ಕನಿಷ್ಠ ಒಬ್ಬಿಬ್ಬರು ಈ 'ಸುತ್ತೂರು ಶಿಷ್ಯ'ರನ್ನೂ ಕಾಣಬಹುದು. ಆಡಳಿತದ ಯಾವುದೇ ವಿಭಾಗ ದಲ್ಲಿ ಪರಿಶೀಲಿಸಿದರೂ, ಅತ್ಯುನ್ನತ ಹುದ್ದೆಗಳಷ್ಟೇ ಅಲ್ಲದೆ ಸಾಮಾನ್ಯ ಸ್ಥಾನಗಳಲ್ಲಿಯೂ ಈ 'ಸುತ್ತೂರು ಬಂಟ'ರನ್ನು ಗುರುತಿಸಲು ಸಾಧ್ಯ. ಶ್ರೀಮಠದ ಸಂಸ್ಕಾರ ಪಡೆದ ಅವರ 'ನಡೆ-ನುಡಿ-ಸೇವೆ'ಗಳಲ್ಲಿ ಪರಿಣತಿ, ಪ್ರತಿಭೆಗಳನ್ನು ಕಂಡು ಕೊಳ್ಳಬಹುದಾಗಿದೆ. ಶ್ರೀ ಶ್ರೀ ಜಗದ್ಗುರುಗಳ ಪ್ರಾಗತಿಕ ದೃಷ್ಟಿ, ನಿರಂತರ ಕೃಪೆ ಈ ಶ್ರೀಸಾಮಾನ್ಯರ ಮನೆಯ ನಂದಾದೀಪವಾಗಿದೆ.

ಶ್ರೀ ಸುತ್ತೂರು ಸಂಸ್ಥಾನ ಜ್ಞಾನದಾಸೋಹದ ಜೊತೆಗೆ—ಬಹಳ ಶಿಕ್ಷಣ ಸಂಸ್ಥೆಗಳು ಸಾಧಿಸಲಾರದ 'ಪ್ರಸಾದ ದಾಸೋಹ' ಅಂದರೆ ಬೋರ್ಡಿಂಗ (ಹಾಸ್ಟೆಲು) ಸ್ಥಾಪನೆ ನಿರ್ವಹಣೆ ಕಾರ್ಯವನ್ನೂ ಅತ್ಯಾಶ್ಚರ್ಯಕರ ವಾಗಿ ನೆರವೇರಿಸುತ್ತಾ ಬಂದಿದೆ. ಬಹುಶಃ ಮೈಸೂರು ನಗರದಲ್ಲಿಯೇ ಸುಮಾರು ಎರಡು ಸಾವಿರಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಹಾಗೂ ಇತರ ನಗರಗಳಲ್ಲಿ ಸ್ಥಾಪಿಸಿರುವ 'ಪ್ರಸಾದ ನಿಲಯ'ಗಳಲ್ಲಿ ಮೂರು-ನಾಲ್ಕು ಸಾವಿರ ವಿದ್ಯಾರ್ಥಿಗಳಿಗೆ ನಿತ್ಯಪ್ರಸಾದ ವ್ಯವಸ್ಥೆ ಮಾಡಿರುವುದು, ಅವುಗಳನ್ನೆಲ್ಲ ಸಮರ್ಥವಾಗಿ ನೆರವೇರಿಸುತ್ತಿರುವುದು ಒಂದು ಮಹಾಸಾಧನೆ. ಭಾರತದಲ್ಲಿಯೇ ಒಮ್ಮೆಗೇ ಇಷ್ಟೊಂದು ಅಪರಿಮಿತ ಸಂಖ್ಯೆಯ ಛಾತ್ರರಿಗೆ ಪ್ರಸಾದದ ವ್ಯವಸ್ಥೆ ಮಾಡಿರುವ ಸಂಸ್ಥೆ ನನ್ನ ಗಮನಕ್ಕಂತೂ ಬಂದಿಲ್ಲ. ಈ ಎಲ್ಲ ಸಂಸ್ಥೆಗಳ ಸಂದರ್ಶನವೇ ಒಂದು ಪುಣ್ಯಕ್ಷೇತ್ರ ಪ್ರವಾಸ. ಈ ಸಾವಿರಾರು ಕಿರಿಯ ಚೇತನಗಳ ಕಣ್ಣುಗಳಲ್ಲಿ ಮಿಂಚುವ ಬೆಳಕು ಶಿವರಾತ್ರೀಶ್ವರ ಪ್ರಕಾಶ !

ನಮ್ಮ ಇಂದಿನ ಸಮಕಾಲೀನ ಸಮಾಜಸೇವಕರಲ್ಲಿ ಕೆಲವರು, ಮಠ-ಮಾನ್ಯಗಳೇ ಬೇಡ, ಮಠದ ಆಸ್ತಿಯನ್ನೆಲ್ಲ ರಾಷ್ಟ್ರೀಕರಿಸಬೇಕೆಂಬ ವಾದವನ್ನು ಮುಂದಿಡುವರು. ಅಂಥವರು ಶ್ರೀ ಸುತ್ತೂರು ಸಂಸ್ಥಾನ ಮಠ ಹಾಗೂ ಅದರ ಬಹುಮುಖ ಸೇವಾಕಾರ್ಯವನ್ನು ಪರಿಶೀಲಿಸಿದರೆ ತಮ್ಮ ಅಭಿಪ್ರಾಯವನ್ನು ಖಂಡಿತವಾಗಿ ಬದಲಾಯಿಸುವರು. ಇಂಥ ಧರ್ಮಪೀಠಗಳ ಮಾದರಿಯಲ್ಲಿ ಶಿಥಿಲಗೊಳ್ಳುತ್ತಿರಬಹುದಾದ ಇತರ ಮಠ-ಮಾನ್ಯಗಳನ್ನು ವ್ಯವಸ್ಥಿತಗೊಳಿ ಸಲು ಪ್ರಯತ್ನಿಸುವರು. ಕರ್ನಾಟಕದ ವೀರಶೈವ ಸಂಸ್ಥಾನ-ಮಠಗಳ ಈ ವಿಶಿಷ್ಟ ಸಾಧನೆಯನ್ನು ಅನುಕರಿಸುವ ರೆಂದು ನನಗನಿಸುತ್ತಿದೆ. ಧಾರ್ಮಿಕ ನಂಬಿಕೆ ಹಾಗೂ ಭಾವನೆಗಳಿಂದ ವಂಚಿತವಾಗುವ ಇಂದಿನ ತರುಣ ಪೀಳಿಗೆ ಭಾರತದ 'ಧರ್ಮಕ್ಷೇತ್ರ'ವನ್ನು 'ಕುರುಕ್ಷೇತ್ರ' ಮಾಡದಿರಲಿ. ಧರ್ಮದ ಶ್ರೀರಕ್ಷೆ ಭಾರತೀಯರ ಬದುಕನ್ನೂ ಬಂಗಾರವಾಗಿಸಲಿ, ವಿಶ್ವಕ್ಕೆ 'ಜೀವನಕಲೆ'ಯನ್ನೂ ಬೋಧಿಸಲಿ. ಶ್ರೀ ಸುತ್ತೂರು ಜಗದ್ಗುರುಗಳ ಕೃಪೆ—ಆಶೀರ್ವಾದ ಗಳಿಂದ ದೀನ-ದಲಿತರು, ಬಡವ-ಬಲ್ಲಿದರು ಧರ್ಮದಿಂದ ಬಾಳುವಂತಾಗಲಿ. ಈ ಗುರುಪೀಠ ಶಿಷ್ಯಕೋಟಿಯನ್ನು ರಕ್ಷಿಸಲಿ. ಧರ್ಮವನ್ನು ರಕ್ಷಿಸುವವರನ್ನು ಧರ್ಮವೂ ರಕ್ಷಿಸುವುದೆಂಬ ಮಾತಿನ ಸತ್ಯವನ್ನು ಸುತ್ತೂರು ಮಠದಂಥ ಪುಣ್ಯಕ್ಷೇತ್ರಗಳಲ್ಲಿ ಕಾಣಬಹುದು.

ಪೂಜ್ಯಶ್ರೀಗಳ ದರ್ಶನ ಅದೊಂದು ಪರಮಾನಂದವನ್ನುಂಟುಮಾಡುವ ಚಿರಸ್ಮರಣೀಯ ಅನುಭವ. ಅವರ ವ್ಯಕ್ತಿತ್ವದ ಆಕರ್ಷಣೆಯೇ ಅಂಥದು. ಸಾವಿರ ಜನರ ಸಮುದಾಯದಲ್ಲಿಯೂ ಎದ್ದು ಕಾಣುವ ಶ್ರೀಮಂತ ಆಕೃತಿ.

ಸುಂದರವೂ ಭವ್ಯವೂ ಗಂಭೀರವೂ ಆದ ಮುಖಮಂಡಲ. ಕಾಂತಿಯುತವಾದ ಕಣ್ಣುಗಳು. ಪ್ರಶಾಂತವಾದ ದೃಷ್ಟಿ. ಮುಖದ ಗಾಂಭೀರ್ಯವನ್ನು ಹೆಚ್ಚಿಸುವ ಹಣೆಯ ಮೇಲಿನ ವಿಭೂತಿ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮನದಿಂದ ಹೊರಹೊಮ್ಮುವ ಕರುಣೆಯ ದೃಷ್ಟಿ ಇವುಗಳಿಂದ ದರ್ಶನಪಡೆದವರಿಗೆ ಪುನೀತರಾದವೆಂಬ ಭಾವನೆ ತಾನಾಗಿಯೇ ಮೂಡುತ್ತದೆ. ಇಂಥ ಉಜ್ವಲಮೂರ್ತಿಯಾದ ಮಹಾಸ್ವಾಮಿಗಳು ಬಹುದಿವಸ ಬಾಳಿ ಸಮಾಜವನ್ನು ಉದ್ಧರಿಸಲೆಂದು ದಯಾಮಯನಾದ ದೇವನಲ್ಲಿ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

---

ಮುಂದನರಿಯದ ಮತಿಗೆಟ್ಟ ಮರುಳು ಮನವೇ
ಕಾಲ-ಕಾಮರ ಗೆಲುವ ಉಪಾಯವಾವುದೆಂದು
ತಲೆಯೂರಿ, ನೆಲನ ಬರೆವುತಿಪ್ಪೆ?!
ಮೊಲ-ಜಂಬುಕಂಗಳ ಹುಯ್ಯಲಿಗೆ
ಆನೆಯ ಪೌಜನಡ ಮಾಡಬೇಕೇ ?
ಕಾಲ-ಕಾಮರ ಗೆಲುವುದಕ್ಕೆ ಆಲೋಚನೆಯೇತಕಯ್ಯ, ಮನವೆ?

ಪಂಚೇಂದ್ರಿಯಂಗಳು ಪಂಚಬ್ರಹ್ಮವನಪ್ಪಿ ಅಗಲದಿಪ್ಪುದೇ
ಪಂಚಬಾಣನ ಹರಣದ ಕೇಡು!
ನಾನು ಪರಬ್ರಹ್ಮದಲ್ಲಿಯೇ ಜನನ
ಎನ್ನ ತನು-ಮನ-ಧನಂಗಳ ಪರಬ್ರಹ್ಮಕ್ಕೆ ಮಾರುಕೊಟ್ಟೆನೆಂಬ
ನಿಚ್ಚಟದ ನುಡಿಯೇ ಕಾಲನ ಗಂಟಲ ಗಾಣ

ಅದು ಹೇಗೆಂದರೆ–
ಲಿಂಗಾಂಕಿತವಾದ ವೃಕ್ಷಂಗಳ
ಮಂಡಲಾಧಿಪತಿ ಮೊದಲಾಗಿ ಮುಟ್ಟಲಮ್ಮ
ಆನೆಯ ತನುಜನ ಆಡು ಮುರಿದರೆ
ಹೀನವಾರಿಗಪ್ಪುದಯ್ಯ ?
ಈ ಪ್ರಕಾರದ ಸಮ್ಯಗ್ಜ್ಞಾನದಿಂದ
ನಿಮ್ಮ ಶರಣರು ಕಾಲ-ಕಾಮರ ಗೆಲಿದರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ

ಘನಲಿಂಗಶಿವಯೋಗಿ

# ಕರುಣಾಳು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳವರು

**ತ. ಸು. ಶಾಮರಾಯ**

'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು' ಎಂದು ನನ್ನ ಅಂತರಂಗ ರೋದಿಸುತ್ತಿದ್ದಾಗ ಅದನ್ನು ಸಮಾಧಾನಪಡಿಸಿ ಸಂತಸಗೊಳಿಸಿದ ದಿವ್ಯಶಕ್ತಿ ಶ್ರೀ ಶ್ರೀ ಸ್ವಾಮೀಜಿಯವರು.

ಭಗವಂತನು ಸರ್ವವ್ಯಾಪಿ—ಎಂಬುದು ಕೇವಲ ಸಿದ್ಧಾಂತ. ಆತ ಸ್ವಸ್ವರೂಪದಲ್ಲಿ ನಮಗೆ ಗೋಚರಿಸುವುದು ಅಸಾಧ್ಯ. ನಾವು ಈಗ ಇರುವ ರೀತಿಯಲ್ಲಿ ಆತನನ್ನು ಮಾನವರೂಪಿಯಾಗಿ ಕಾಣುವುದು ಮಾತ್ರ ಸಾಧ್ಯ. ಜನರು ಕ್ರಿಸ್ತನನ್ನು ಕುರಿತು 'ನಮಗೆ ದೇವರನ್ನು ತೋರಿಸು' ಎಂದು ಕೇಳಿದಾಗ ಆತ 'ಯಾರು ನನ್ನನ್ನು ನೋಡಿರುವರೋ ಅವರು ದೇವರನ್ನೂ ನೋಡಿರುವರು' ಎಂದನಂತೆ. ಸ್ವಾಮಿ ವಿವೇಕಾನಂದರು 'ದೇವರನ್ನು ಮನುಷ್ಯ ಎಂದಲ್ಲದೆ ಬೇರೆ ರೀತಿಯಲ್ಲಿ ಊಹಿಸಿಕೊಳ್ಳಲು ನಮ್ಮಲ್ಲಿ ಯಾರಿಗೂ ಸಾಧ್ಯವಿಲ್ಲ!' ಎಂದು ಹೇಳುತ್ತಾರೆ. ಭಗವಂತ ಕರುಣಾಸಾಗರನೇನೊ ನಿಜ. ಆದರೆ ಆ ಸಾಗರದ ನೀರನ್ನು ನಾವು ಕುಡಿಯಲು ಸಾಧ್ಯವೆ? ಭಕ್ತಿಯ ಕಾವಿನಿಂದ ಅದು ಗುರುರೂಪದ ಮೋಡವಾಗಿ ಅದರಿಂದ ಬೋಧನಾರೂಪವಾದ ಅಮೃತವರ್ಷ ಸುರಿದಾಗಲೆ ನಮ್ಮ ಜ್ಞಾನದಾಹ ಅಡಗಬೇಕು. ಭಾರತೀಯ ಸಾಂಸ್ಕೃತಿಕ ಇತಿಹಾಸ ಗುರುಪರಂಪರೆಯ ಭವ್ಯ ಚಿತ್ರಗಳಿಂದ ತುಂಬಿ, ದಿವ್ಯ ಮನೋಹರವಾಗಿದೆ. ಗುರು ಗುರುವೆ, ಲಘುವಲ್ಲ. ಅವರು ಶಿಷ್ಯನ ಲಘುತ್ವವನ್ನು ದೂರಮಾಡಿ ಅವನನ್ನೂ ಗುರುವಾಗಿಯೆ ಮಾಡುತ್ತಾರೆ-ಜ್ಯೋತಿ ಜ್ಯೋತಿಯನ್ನು ಸೃಜಿಸುವಂತೆ. ಆತ್ಮಕ್ಕೆ ಆತ್ಮದರ್ಶನ ಮಾಡಿಸಬಲ್ಲ, ಜೀವ-ದೇವರನ್ನು ಏಕಸೂತ್ರದಲ್ಲಿ ಬಂಧಿಸಬಲ್ಲ ಸದ್ಗುರು ವಿಶ್ವನೌಕೆಯ ಕರ್ಣಧಾರಕ, ಭವಭಯಹಾರಕ, ಸಂಸಾರಸಾಗರೋತ್ತಾರಕ. ಅಂತಹ ಗುರು ಗೋವಿಂದನಿಗಿಂತ ದೊಡ್ಡವ. ಗೋವಿಂದ ಬರಿಯ ಒಂದು ತತ್ತ್ವ. ಗುರುವಾದರೋ ಗೋವಿಂದ ತತ್ತ್ವೋಪದೇಶಕ; ಆತ್ಮವನ್ನು ತಿಳಿದು ಅದನ್ನು ಇತರರಿಗೆ ಸಾಕ್ಷಾತ್ಕಾರ ಮಾಡಿಸಬಲ್ಲ ಸಮರ್ಥ ಗುರುವನ್ನು ತ್ರಿಮೂರ್ತಿಗಳ ಅವತಾರವೆಂದು ಕರೆಯುತ್ತಾರೆ. ಅವತರಣವೆಂದರೆ ಕೆಳಗಿಳಿದುಬರುವುದೆಂದರ್ಥ. ಗೀತೆಯಲ್ಲಿ ಅವತರಣದ ಸಂದರ್ಭವನ್ನು ಹೇಳುತ್ತಾ ಶ್ರೀಕೃಷ್ಣಪರಮಾತ್ಮನು "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಂ॥" "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥" ಎನ್ನುತ್ತಾನೆ. ಸಾಧುಗಳ ಸಂರಕ್ಷಣಾರ್ಥವಾಗಿ, ದುಷ್ಟರ ಶಿಕ್ಷಣಕ್ಕಾಗಿ ಭಗವಂತನು ಯುಗಯುಗಕ್ಕೊಮ್ಮೆ ಅವತರಿಸುತ್ತಾನಂತೆ. ಎಲ್ಲಿಯೋ ಮೇಲೆ ಕುಳಿತಿರುವ ದೇವರು ಮಾನವ ರೋದನಕ್ಕೆ ಕರಗಿ ಕೆಳಗಿಳಿದು ಬರುತ್ತಾನೆ ಎಂದು ಸಾಮಾನ್ಯವಾಗಿ ಭಾವಿಸುತ್ತಾರೆ. ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆದ ಭಗವಂತನು ಕುಳಿತಲ್ಲಿಂದಲೇ ದುಃಖವನ್ನು ಪರಿಹರಿಸಲಾರದಷ್ಟು ಅಶಕ್ತನೆ? ಅವನೇಕೆ ಕೆಳಗಿಳಿದು ಬರಬೇಕು ಎಂಬ ಪ್ರಶ್ನೆ ಜಿಜ್ಞಾಸುಗಳ ತಲೆಯಲ್ಲಿ ಮೂಡಿದರೆ ಆಶ್ಚರ್ಯವೇನೂ ಇಲ್ಲ. ಅವತರಣದ ಅರ್ಥ ನನಗೆ ಹೀಗೆ ಹೊಳೆಯುತ್ತದೆ—ಸಜ್ಜನರು ಸಂಕಟಕ್ಕೆ ಸಿಕ್ಕಿ ದುರ್ಜನರ ಪ್ರಾಬಲ್ಯ ಹೆಚ್ಚಿದಾಗ ಅಂತಹ ಸಮಾಜದ ಪ್ರತಿನಿಧಿಯಾಗಿ ವ್ಯಕ್ತಿಯೊಬ್ಬನು ಉದಿಸುತ್ತಾನೆ. ಇಡೀ ಸಮಾಜದ ಬಾಯಾಗಿ ಅವನು ದಿವ್ಯಶಕ್ತಿಯನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ವ್ಯಕ್ತಿಯ ಭಕ್ತಿ ಉನ್ನತೋನ್ನತವಾದಾಗ ದಿವ್ಯಶಕ್ತಿ ಅದರತ್ತ ಧಾವಿಸುತ್ತದೆ. ವ್ಯಕ್ತಿಯ ಭಕ್ತಿ ಮತ್ತು ದಿವ್ಯಶಕ್ತಿ ಇವೆರಡೂ ಚುಂಬಕಶಕ್ತಿಯುಳ್ಳವು. ಹೀಗೆ ಪರಸ್ಪರ ಆಕರ್ಷಿಸುತ್ತಾ ಯಾವುದೋ ಒಂದು ವಲಯದಲ್ಲಿ ವ್ಯಕ್ತಿಯ ಭಕ್ತಿಯೂ ದಿವ್ಯಶಕ್ತಿಯೂ

ಸಂಗಮಗೊಳ್ಳುತ್ತದೆ. ಹೀಗೆ ದಿವ್ಯಶಕ್ತಿಯನ್ನು ತನ್ನಲ್ಲಿ ಸೆಳೆದುಕೊಂಡ ವ್ಯಕ್ತಿಯೇ ಅವತಾರಪುರುಷ. ಅವನನ್ನೇ ನಾವು ಗುರು ಎಂದು ಕರೆಯುತ್ತೇವೆ. ಸುತ್ತೂರಿನ ಶ್ರೀಶ್ರೀಗಳವರು ಇಂತಹ ಸದ್ಗುರುಗಳು.

ನನ್ನ ಜೀವನದಲ್ಲಿ ಶ್ರೀ ಶ್ರೀಯವರು ಪ್ರವೇಶಿಸಿದ ಒಂದೆರಡು ಸನ್ನಿವೇಶಗಳನ್ನು ನೆನೆದಾಗ ನನ್ನ ಅಂತರಂಗ ಅತ್ಯಂತ ಕೃತಜ್ಞತೆಯಿಂದ ಮಣಿದು ಭಕ್ತಿಯಿಂದ ಪರವಶಗೊಳ್ಳುತ್ತದೆ. ನಾನು ಕಾಲೇಜಿನಲ್ಲಿ ಆಗತಾನೆ ಉಪಾಧ್ಯಾಯನಾಗಿದ್ದೆ. ನನ್ನ ಕೆಲಸವಿನ್ನೂ ಖಾಯಂ ಆಗಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಅತ್ಯಂತ ಜನಪ್ರಿಯನಾಗಿದ್ದೆ. ಇದು ಹಲವರ ಮನಸ್ಸಿನಲ್ಲಿ ಅಸೂಯೆಯ ಕಿಚ್ಚನ್ನು ಹೊತ್ತಿಸಿತ್ತು. ಯಾರು ಹೋಗಿ ಕುಲಪತಿಗಳಲ್ಲಿ ಏನು ಹೇಳಿದ್ದರೊ ನನಗೆ ಗೊತ್ತಿಲ್ಲ. ನನ್ನನ್ನು ಕೆಲಸದಿಂದ ಕಿತ್ತುಹಾಕಿ ಬೇರೊಬ್ಬರನ್ನು ನೇಮಕಮಾಡುವರೆಂಬ ಸುದ್ದಿ ಬಂದಿತ್ತು. ನನಗೆ ಮುಂದೋರದಂತಾಯಿತು. ಕಾಲೇಜಿನ ಕಛೇರಿಯಲ್ಲಿ ಅಧಿಕಾರದಲ್ಲಿದ್ದ ನನ್ನ ಗೆಳೆಯರೊಬ್ಬರು ಒಂದು ಸಣ್ಣ ಸೂಚನೆಯನ್ನು ಕೊಟ್ಟರು. "ಸುತ್ತೂರಿನ ಶ್ರೀ ಶ್ರೀ ಸ್ವಾಮೀಜಿಯವರನ್ನು ಹೋಗಿ ಕಾಣು. ಅವರು ಕುಲಪತಿಗಳನ್ನು ಚೆನ್ನಾಗಿ ಬಲ್ಲವರು. ಅವರೊಂದು ಮಾತು ಹೇಳಿದರೆ ನಿನಗೆ ಸಹಾಯವಾದೀತು" ಎಂದರು. ನನ್ನ ಮನಸ್ಸು ಇದಕ್ಕೆ ಒಪ್ಪಲಿಲ್ಲ. ನನಗೆ ಶ್ರೀಗಳವರ ಪರಿಚಯವಿರಲಿಲ್ಲ. ನನ್ನ ಯೋಗ್ಯತೆಯೊಂದನ್ನಲ್ಲದೆ ಮತ್ತೊಂದನ್ನು ಆಶ್ರಯಿಸಿ ಉಳಿದುಕೊಳ್ಳುವ ಆಸೆಯೂ ಇರಲಿಲ್ಲ. ನಾನು ಸ್ಪಷ್ಟವಾಗಿ ಹೇಳಿದೆ—"ನಾನು ಯಾರನ್ನೂ ನೋಡುವುದಿಲ್ಲ. ಭಗವಂತ ಮಾಡಿದಂತಾಗಲಿ" ಎಂದು. ನಾನು ಹೋಗದಿದ್ದರು ನನ್ನ ಸ್ನೇಹಿತ ಆ ಅಧಿಕಾರಿ, ಸ್ವಾಮಿಗಳ ಬಳಿಗೆ ಹೋದ. ಅವರಿಗೆ ವಿಷಯವನ್ನು ತಿಳಿಸಿದ. ಆ ವೇಳೆಗೆ ಅವರಿಗೂ ನಾನು ಒಳ್ಳೆಯ ಉಪಾಧ್ಯಾಯನೆಂಬ ಸುದ್ದಿ ಮುಟ್ಟಿತ್ತು. ಸುತ್ತೂರು ಮಠದ ವಿದ್ಯಾರ್ಥಿಗಳು ಅವರ ಮುಂದೆ ನನ್ನ ಗುಣಗಾನಮಾಡಿ ಅವರ ಮೆಚ್ಚುಗೆಯನ್ನು ಸೃಷ್ಟಿಸಿದ್ದರು. ಅಂದು ರಾತ್ರಿ ೧೧ ಘಂಟೆಯವೇಳೆಗೆ ಶ್ರೀ ಶ್ರೀ ಸುತ್ತೂರು ಸ್ವಾಮೀಜಿಯವರ ಕಾರು ಕುಲಪತಿಯವರ ಕಾಂಪೌಂಡಿನೊಳಕ್ಕೆ ಹೋಯಿತು. ನನ್ನ ಸ್ನೇಹಿತ ನನ್ನನ್ನು ಮನೆಯಿಂದ ಬಲವಂತವಾಗಿ ಅಲ್ಲಿಗೆ ಎಳೆದು ತಂದಿದ್ದ. ಶ್ರೀ ಶ್ರೀ ಸ್ವಾಮೀಜಿಯವರು ಕಾರಿನಿಂದಿಳಿದು ಕುಲಪತಿಯ ಮನೆಯ ಬಾಗಿಲನ್ನು ಬಡಿದರು. ಅವರನ್ನು ಎಬ್ಬಿಸಿದರು. ಅವರೊಡನೆ ಸುದೀರ್ಘಕಾಲ ಮಾತನಾಡಿ ಹೊರಕ್ಕೆ ಬಂದರು. ಹೊರಗೆ ನಿಂತಿದ್ದ ನನ್ನ ಗೆಳೆಯನೊಡನೆ ನಗುನಗುತ್ತಾ 'ನಿಮ್ಮ ಕೆಲಸವಾಗಿದೆ' ಎಂದು ಹೇಳಿ ಹೊರಟುಹೋದರು. ನನಗೆ ಬಂದಿದ್ದ ಆಪತ್ತು ತೊಲಗಿತು. ಅವ್ಯಾಜ ಕರುಣಾಮೂರ್ತಿಗಳಾದ ಶ್ರೀ ಶ್ರೀಗಳಲ್ಲಿ ಅಂದು ನನಗೆ ಭಕ್ತಿಯುದಿಸಿತು. ಮರುದಿನ ಬೆಳಗ್ಗೆ ಅವರ ಬಳಿಗೆ ಹೋಗಿ ದೀರ್ಘದಂಡ ನಮಸ್ಕಾರ ಮಾಡಿ ಕೃತಜ್ಞತೆಯ ಕಾಣಿಕೆಯನ್ನರ್ಪಿಸಿ ಹೊರಟು ಬಂದೆ. ಅಂದಿನಿಂದ ನಾನು ಶ್ರೀ ಶ್ರೀಗಳವರ ಭಕ್ತವೃಂದದಲ್ಲಿ ಒಬ್ಬನಾದೆ. ಅದೆಷ್ಟೋ ಸಲ ಅವರ ಜತೆಯಲ್ಲಿ ಹತ್ತಾರು ಜನ ಕಾಲೇಜು ಅಧ್ಯಾಪಕರೊಂದಿಗೆ, ಕುಲಪತಿಗಳೊಂದಿಗೆ ಮಠದ ಮೂಲಸ್ಥಾನವಾದ ಸುತ್ತೂರು ಮಠಕ್ಕೆ ಹೋಗಿ ಬಂದಿದ್ದೇನೆ. ಒಮ್ಮೊಮ್ಮೆ ಸಂಧಿಸಿದಾಗಲೂ ಅವರ ನನ್ನ ಭಕ್ತಿಬಾಂಧವ್ಯ ಹೆಚ್ಚು ಹೆಚ್ಚು ನಿಕಟವಾಗುತ್ತಾಹೋಯಿತು.

ಶ್ರೀ ಶ್ರೀಗಳವರನ್ನು ವೈಯಕ್ತಿಕ ಕಾರಣಗಳಿಗಾಗಿ ನಾನೆಂದೂ ಭೇಟಿಮಾಡಿಲ್ಲ. ಒಮ್ಮೆ ಮಾತ್ರ ಅವರನ್ನು ಕೃಪಾಯಾಚನೆ ಮಾಡಬೇಕಾದ ಒಂದು ಸಂದರ್ಭವೊದಗಿತು. ಬಡ ಹುಡುಗನೊಬ್ಬನು ನನ್ನ ಶಿಷ್ಯನಾಗಿದ್ದ. ಒಮ್ಮೆ ತರಗತಿಯಲ್ಲಿ ಬಾಡಿದ ಮುಖದಿಂದ ಕುಳಿತಿದ್ದ ಆತನನ್ನು ಕಂಡು ನನ್ನ ಮನಸ್ಸು ಚುರುಗುಟ್ಟಿತು. ಪಾಠವಾಗುತ್ತಲೆ ಆತನನ್ನು ಕರೆದು 'ನಿನ್ನ ಊಟವಾಯಿತೆ?' ಎಂದು ಪ್ರಶ್ನಿಸಿದೆ. ಕಡುಬಡವನಾದರೂ ತುಂಬ ಆತ್ಮಗೌರವವುಳ್ಳ ಹುಡುಗ ಆತ. 'ಆಗಿದೆ' ಎಂದ. ನಾನು ನಂಬಲಿಲ್ಲ. ಮಾತನಾಡುತ್ತಾ ಆಡುತ್ತಾ ಆತನನ್ನು ನನ್ನ ಮನೆಯ ಬಳಿಗೆ ಕರೆದೊಯ್ದೆ. ಗೃಹಿಣಿಯನ್ನು ಕರೆದು ಅವನಿಗೆ ಊಟಕ್ಕೆ ಬಡಿಸುವಂತೆ ತಿಳಿಸಿದೆ. ಬೇಗ ಮಣಿಯದ ಆತನನ್ನು ಗದರಿಸಿ ಬೈದು ಊಟಕ್ಕೆ ಕೂರಿಸಿದೆ. ಊಟವಾದ ಮೇಲೆ ಆತನ ಇತಿಹಾಸವನ್ನೆಲ್ಲ ತಿಳಿದುಕೊಂಡೆ. ಪ್ರೈಮರಿಶಾಲೆಯ ಉಪಾಧ್ಯಾಯರೊಬ್ಬರ ಮಗನಾಗಿದ್ದ ಆತ ಓದಿನ ಆಶೆಯಿಂದ ಬರಿಗೈಯಲ್ಲಿ ಮೈಸೂರನ್ನು ಸೇರಿದ್ದ. ವಸತಿಗಾಗಲೀ ಊಟಕ್ಕಾಗಲೀ ಯಾವ ಅನುಕೂಲವೂ ಇರಲಿಲ್ಲ. ಒಂದೆರಡು ದಿನ ಆತನನ್ನು ನನ್ನ ಬಳಿಯಲ್ಲಿಯೇ ಇರಿಸಿಕೊಂಡಿದ್ದೆ. ಆದರೆ ಆತನ ಸಂಕೋಚಪ್ರವೃತ್ತಿಯನ್ನು ಕಂಡು ನನ್ನ ತಲೆ ಬಿಸಿಯಾಯಿತು. ಒಂದು ದಿನ ಆ ಹುಡುಗನನ್ನು ಕರೆದುಕೊಂಡು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳ ಬಳಿಗೆ ಹೋದೆ. ಅವರಿಗೆ ಹುಡುಗನ ಪರಿಚಯವನ್ನು ಮಾಡಿಸಿ ಅಶನ-ವಸತಿಗಳನ್ನು ನೀಡುವಂತೆ ಪ್ರಾರ್ಥಿಸಿದೆ. ಅವರೊಮ್ಮೆ ನಕ್ಕರು—"ಇವನು ಲಿಂಗಾಯತ ಹುಡುಗ. ನೀವು ಬ್ರಾಹ್ಮಣರು. ಇವನಲ್ಲಿ ನಿಮಗೇಕೆ ಇಷ್ಟು ಆಸಕ್ತಿ?' ಎಂದರು. ನಾನು ಸ್ವಲ್ಪ ಕಟುವಾಗಿಯೇ ಹೇಳಿದೆ—"ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳು. ಅವರೆಲ್ಲ ಜಾತ್ಯತೀತರು. ಅವರ ಜಾತಿ ವಿದ್ಯಾರ್ಥಿಗಳದು. ನಾನು ಅವರ

ಗುರು" ಎಂದೆ. ಸ್ವಾಮೀಜಿಯವರ ನಗುಮುಖ ಮತ್ತಷ್ಟು ಅರಳಿತು. "ನಾನು ಅದನ್ನು ಬಲ್ಲೆ, ಕೇವಲ ಹಾಸ್ಯಕ್ಕಾಗಿ ಹಾಗೆ ಹೇಳಿದೆ" ಎಂದು ಹೇಳಿ ಆಗಿಂದಾಗಲೇ ಆ ಹುಡುಗನನ್ನು ಮಠದ ವಿದ್ಯಾರ್ಥಿಮಂದಿರಕ್ಕೆ ಸೇರಿಸಿಕೊಂಡರು. ಆತನೇ ಇಂದು ಸುಪ್ರಸಿದ್ಧ ಕನ್ನಡ ಕವಿಯೆಂದು ಪ್ರಖ್ಯಾತನಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕನಾಗಿರುವ ಡಾ॥ ಜಿ. ಎಸ್. ಶಿವರುದ್ರಪ್ಪ.

ಪ್ರಿಯ ಮಲ್ಲೇದೇವರೆ, ನಾನು ಈಗ ಒಂದು ವಾರದೀಂದ ಬೆಂಗಳೂರಿನಲ್ಲಿ ಕಣ್ಣಿನ ಚಿಕಿತ್ಸೆಯನ್ನು ಮಾಡಿಸಿಕೊಂಡು ಮಲಗಿದ್ದೇನೆ. ಆದ್ದರಿಂದ ಕುಳಿತು ಬರೆಯುವ ಶಕ್ತಿಯಿಲ್ಲ; ಪುಣ್ಯವಿಲ್ಲ. ಇನ್ನೂ ಹತ್ತಾರು ಸಂದರ್ಭಗಳಲ್ಲಿ ಶ್ರೀ ಶ್ರೀಯವರು ನನ್ನಲ್ಲಿ ತೋರಿರುವ ಅಪ್ಯಾಜಪ್ರೇಮ ತರಂಗತರಂಗವಾಗಿ ಎದ್ದು ಬಂದು ನನ್ನ ಕಣ್ಣೆದುರಲ್ಲಿ ನಿಲ್ಲುತ್ತದೆ. ಎಷ್ಟೋ ಜನ ನನ್ನ ವಿದ್ಯಾರ್ಥಿಗಳಿಗೆ ಸಹಾಯಬೇಡಿ ಅವರ ಬಳಿಗೆ ಹೋಗಿದ್ದೇನೆ. ಭಾಷಾ ಆಯೋಗದ ಸದಸ್ಯನಾಗಿ ಮೊನ್ನೆ ತಾನೆ ಅವರ ಬಳಿಗೆ ಹೋಗಿ ಆತಿಥ್ಯವನ್ನು ಸವಿದು ಬಂದಿದ್ದೇನೆ. ಅವೆಲ್ಲವನ್ನು ಬರೆದು ಕಳುಹಿಸುವ ಶಕ್ತಿಯಾಗಲೀ ಅನುಕೂಲವಾಗಲೀ ಈಗ ಇಲ್ಲ. ಸದ್ಯಕ್ಕೆ ಈ ನನ್ನ ಎರಡು ನುಡಿ ಪುಷ್ಪಗಳಿಂದಲೇ ಅವರನ್ನು ಪೂಜಿಸಿ ತೃಪ್ತನಾಗುತ್ತೇನೆ. ಅವರ ಅಡಿಯಲ್ಲಿ ನನ್ನ ಮುಡಿಯನ್ನಿಟ್ಟು ಸಂತಸಗೊಳ್ಳುತ್ತೇನೆ.

---

"ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು !
ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು.
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯ ಕಮಲವರಳದವರಲ್ಲಿ ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚೆನ್ನಮಲ್ಲಿಕಾರ್ಜುನಾ ?"

ಅಕ್ಕಮಹಾದೇವಿ

# ಪರಮ ದಾಸೋಹಮೂರ್ತಿ ಶ್ರೀ ಸುತ್ತೂರು ಜಗದ್ಗುರುಗಳವರು

**ಕೋ. ಚನ್ನಬಸಪ್ಪ**

ನಮ್ಮೂರಿನ ಒಬ್ಬ ಮುಸ್ಲಿಂ ವಿದ್ಯಾರ್ಥಿಗೆ ಕಾಲೇಜ್ ವಿದ್ಯಾಭ್ಯಾಸ ಮಾಡಬೇಕೆಂಬ ಹಂಬಲ. ಆದರೆ. ಬಳ್ಳಾರಿಯಂತಾ ನಗರದಲ್ಲಿದ್ದು ಕಾಲೇಜ್ ಓದುವಷ್ಟು ತ್ರಾಣ ಅವನಿಗಿರಲಿಲ್ಲ. ಆ ಕೋಮಿನವರನ್ನು ಸೇರಿಸಿಕೊಳ್ಳುವ ಉಚಿತ ಪ್ರಸಾದನಿಲಯ ಬಳ್ಳಾರಿಯಲ್ಲಿರಲಿಲ್ಲ.

"ಹ್ಯಾಗೆ ಮಾಡ್ಲಿ ಸಾರ್ ?" ಎಂದು ದೈನ್ಯದಿಂದ ಕೇಳಿದ.

"ಮೈಸೂರಿಗೆ ಹೋಗ್ತೀಯಾ ?" ಎಂದು ಕೇಳಿದೆ.

"ಅಲ್ಲಿ ನನಗೆ ಊಟ-ವಸತಿ ಯಾರು ಕೊಡ್ತಾರೆ ಸಾರ್?"

"ಹೋಗೋದಾದ್ರೆ ಹೇಳು. ಸುತ್ತೂರು ಜಗದ್ಗುರುಗಳಿಗೆ ಒಂದು ಕಾಗದ ಕೊಡ್ತೀನಿ. ತಗೊಂಡುಹೋಗಿ ಕೊಡು...."

"ಅವರು ನಮ್ಮ ಜಾತಿಯವರಿಗೆ ಸೇರಿಸಿಕೊಳ್ತಾರೆಯೇ ಸಾರ್."

"ನಿನಗೆ ಯಾಕೆ? ಬೇಕಾದ್ರೆ ಹೇಳು. ಒಂದು ಕಾಗದ ಕೊಡ್ತೀನಿ. ಅದನ್ನ ಕೊಟ್ಟು ಬುದ್ಧಿಗಳ ಮುಂದೆ ಉದ್ದಕ್ಕೆ ಅಡ್ಡಬೀಳು. ಕೈಕಟ್ಟಿಕೊಂಡು ನಿಂತುಕೋ : ಅಷ್ಟೇ ಸಾಕು."

ಅವನು ಒಪ್ಪಿಕೊಂಡ. ಕಾಗದ ಕೊಟ್ಟೆ. ಮೈಸೂರಿಗೆ ಹೋಗಿ. ಶ್ರೀ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮೀಜಿಗಳಿಗೆ ಅದನ್ನು ಮುಟ್ಟಿಸಿ ನಾನು ಹೇಳಿದಂತೆ ಮಾಡಿದ. ಅವನಿಗೆ ಉಚಿತ ಊಟ_ವಸತಿಯ ಏರ್ಪಾಟನ್ನು ಶ್ರೀಗಳವರು ತಮ್ಮ ಪ್ರಸಾದನಿಲಯದಲ್ಲಿ ಮಾಡಿಕೊಟ್ಟರು. ಅವನು ಬಿ.ಎ. ತನಕ ಅಲ್ಲಿದ್ದು ಡಿಗ್ರಿ ಪಡೆದುಕೊಂಡ. ಕನ್ನಡದಲ್ಲಿ ಒಳ್ಳೆ ಬರಹಗಾರನಾದ.

ಹೀಗೆ ಶ್ರೀ ಶ್ರೀ ಸುತ್ತೂರು ಶಿವರಾತ್ರೀಶ್ವರ ರಾಜೇಂದ್ರ ಮಹಾಸ್ವಾಮಿಗಳವರ ಉಚಿತ ಪ್ರಸಾದನಿಲಯದಲ್ಲಿದ್ದು. ಓದಿಕೊಂಡು ಮುಂದಕ್ಕೆ ಬಂದ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳ ಸಂಖ್ಯೆಯೇ, ಈ ಇಪ್ಪತ್ತು ವರ್ಷಗಳಲ್ಲಿ ಒಂದು ಸಾವಿರದಷ್ಟು ಆಗಿರಬಹುದು. ಅಂದಮೇಲೆ ಹಳೇ ಮೈಸೂರು ಸೀಮೆಯಲ್ಲಿ ಕಳೆದ ನಾಲ್ವತ್ತು ವರ್ಷಗಳಿಂದ ಅವರ ಆಶ್ರಯದಲ್ಲಿ ಓದಿ ಬೆಳೆದವರ ಸಂಖ್ಯೆ ಲಕ್ಷಕ್ಕೂ ಮೀರಿದ್ದರೆ ಆಶ್ಚರ್ಯವಿಲ್ಲ.

ಹಾಗೆ ಮುಂದಕ್ಕೆ ಬಂದವರಲ್ಲಿ ಕುಲ ಹದಿನೆಂಟು ಜಾತಿಯ ಜನರಿದ್ದಾರೆ. ನನಗೆ ಗೊತ್ತಿರುವಂತೆ ಹರಿಜನರು. ಗೊಲ್ಲರು. ಬೇಡರು. ಬೆಸ್ತರು. ಕುರುಬರು. ಕುಂಚಿಟಿಗರು ಕೂಡಾ ಅವರ ಹಾಸ್ಟೆಲ್ಲುಗಳಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸ ಮಾಡಿದ್ದಾರೆ. ಒಕ್ಕಲಿಗರು ಗಣನೀಯವಾದ ಸಂಖ್ಯೆಯಲ್ಲಿದ್ದಾರೆ. ಬ್ರಾಹ್ಮಣರೂ ಇದ್ದಾರೆಂದು ನಾನು ಕೇಳಿದ್ದೇನೆ.

ಹೀಗೆ ಎಲ್ಲಾ ಕೋಮಿನವರಿಗೂ ಆಶ್ರಯ ಕೊಟ್ಟು ತಮ್ಮ ಕೃಪಾಶೀರ್ವಾದಗಳಿಂದ ಬಡವರನ್ನು. ವಿಶೇಷ ಸಂದರ್ಭಗಳಲ್ಲಿ ಬಲ್ಲಿದರನ್ನೂ ಕೂಡಾ ಮೇಲಕ್ಕೆತ್ತಿಕೊಂಡ ಪರಮ ದಾಸೋಹಮೂರ್ತಿಗಳು ಶ್ರೀ ಶಿವರಾತ್ರೀಶ್ವರ ಜಗದ್ಗುರುಗಳು.

ಕರ್ನಾಟಕದಲ್ಲಿ ಉಚಿತ ಪ್ರಸಾದನಿಲಯಗಳನ್ನು ನಡೆಸುವುದೇನೂ ಅಪರೂಪದ ಸಂಗತಿಯಲ್ಲ. ಒಂದು "ಉದ್ಯೋಗ"ವೇ ಆಗಿಬಿಟ್ಟಿದೆ. ಕೆಲವು ಸ್ವಾಮಿಗಳಿಗೆ! ಅದರಲ್ಲೂ ಸ್ವಾತಂತ್ರ್ಯಾನಂತರವಂತೂ "ಸಮಾಜ ಸೇವೆ"ಯ ಸೋಗಿನ ಸಂಘ. ಸಂಸ್ಥೆ. ವ್ಯಕ್ತಿಗಳಿಗಂತೂ ಮಿತಿಯೇ ಇಲ್ಲ! ಆದಕಾರಣ ಶ್ರೀ ಶ್ರೀ ಸುತ್ತೂರು ಜಗದ್ಗುರುಗಳವರು ಹಾಸ್ಟೆಲ್ಲುಗಳನ್ನು ನಡೆಸುತ್ತಾರೆಂದರೆ. ಅವುಗಳನ್ನು ಕಾಣದವರು ಅದೇನು ದೊಡ್ಡ ಮಾತು ಎಂದರೂ ಎನ್ನಬಹುದು.

ಆದರೆ, ಶ್ರೀ ಸುತ್ತೂರು ಜಗದ್ಗುರುಗಳ ಪ್ರಸಾದನಿಲಯಗಳು ಎಲ್ಲ ನಿಲಯಗಳಂತೆ ಅಲ್ಲ. ನಾನು ಅಂಥ ಒಂದು ಪ್ರಸಾದನಿಲಯದಲ್ಲೇ ಇದ್ದು ಬದುಕಿದವನಾದ್ದರಿಂದ ಸ್ವಾನುಭವದಿಂದ ಹೇಳುವ ಮಾತು ಇದು. ೧೯೪೦ –೪೧ರಲ್ಲಿ ಒಮ್ಮೆ ಮೈಸೂರಿಗೆ ಹೋದಾಗ ಶ್ರೀ ಗ. ಸ. ಹಾಲಪ್ಪನವರ ಪರಿಚಯವಾಯಿತು. ಅವರು ಆಗ ಆನರ್ಸ್‌ ಕ್ಲಾಸ್‌ನಲ್ಲಿದ್ದರು. ಶ್ರೀ ಸುತ್ತೂರು ಹಾಸ್ಟೆಲ್ಲಿನಲ್ಲಿದ್ದರು. ಕಾಲೇಜಿನಿಂದ ಅವರು ಒಂದು ರೂಮಿಗೆ ಕರೆದೊಯ್ದರು. ಅದು ದೊಡ್ಡ ಬಂಗಲೆಯ ಮಹಡಿಯ ಮೇಲೆ ಒಂದು ಪ್ರತ್ಯೇಕ ಸಿಂಗಲ್ ರೂಮ್ ; ಒಳ್ಳೆ ಪೀಠೋಪಕರಣಗಳು. ಅದನ್ನು ನೋಡಿ ಅದು ಉಚಿತ ಪ್ರಸಾದನಿಲಯವೆಂಬ ನಂಬುಗೆ ನನಗಾಗಲಿಲ್ಲ. ಇನ್ನೂ ಆಶ್ಚರ್ಯ ನನಗಾಗಿ ಕಾದಿತ್ತು. ಆನರ್ಸ್ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ವಸತಿ ; ಪ್ರತ್ಯೇಕವಾದ ಊಟದ ವ್ಯವಸ್ಥೆಯಾಗಿತ್ತು ! ಜೊತೆಗೆ ಆ ದಿನ ಅದೇ ಹಾಸ್ಟೆಲಿನಲ್ಲಿ ನನಗೂ ಪ್ರಸಾದ ವ್ಯವಸ್ಥೆಯಾಗಿತ್ತು. ಸೊಗಸಾದ ಪುಷ್ಕಳ ಭೋಜನ ! ಇಂಥ ಅನುಕೂಲ ನಾನಿದ್ದ ಹಾಸ್ಟೆಲಿನಲ್ಲಿ ಇರಲಿಲ್ಲ. ಮಜ್ಜಿಗೆಯ ನೀರು ಹಾಕಿದರೆ ಸಿದ್ದೆ ಬರುತ್ತದೆ ಎಂದು ಬರೀ ಅನ್ನ, ಸಾರು. ಹುಣಿಸೇ ತೊಕ್ಕು ಉಂಡು ಶಾಲೆಗೆ ಹೋದವರು ನಾವು !! ಆಗ ಭಯಂಕರ ಯುದ್ಧಕಾಲ ; ಪಡಿತರ ಪದ್ಧತಿ ಜಾರಿಯಲ್ಲಿತ್ತು. ಆಗಲೂ ಸುಮಾರು ಇನ್ನೂರು-ಮುನ್ನೂರು ವಿದ್ಯಾರ್ಥಿಗಳಿಗೆ ಊಟ-ವಸತಿಯ ಏರ್ಪಾಡು ಮಾಡಿದ್ದರು ಶ್ರೀಗಳವರು. ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದು ೧೯೫೧ರಲ್ಲಿ ಸುಮಾರು ಹನ್ನೊಂದು ನೂರು ವಿದ್ಯಾರ್ಥಿಗಳಿದ್ದರೆಂದು ನನ್ನ ನೆನಪು. ೧೯೬೧ರಲ್ಲಿ ಸುಮಾರು ಹದಿನೇಳು ನೂರು ವಿದ್ಯಾರ್ಥಿಗಳಿದ್ದರಂತೆ. ಈಗ ಹತ್ತಿರ ಹತ್ತಿರ ಎರಡು ಸಾವಿರ ವಿದ್ಯಾರ್ಥಿಗಳಾದರೂ ಇರಬೇಕು.

"ಇದನ್ನೆಲ್ಲಾ ಬುದ್ಧಿಗಳು ಹೇಗೆ ತೂಗಿಸುತ್ತಾರೆ ಹಾಲಪ್ಪನವರೇ" ಎಂದು ಕೇಳಿದೆ.

"ಅದೇ ಪವಾಡದ ಸಂಗತಿ! ಒಂದೊಂದು ದಿನ ಸ್ಟೋರ್ ರೂಮ್ ಖಾಲಿಯಾಗಿರುತ್ತದೆ. ಮರುದಿನ ಏನು ಮಾಡೋದು ? ಅಂತ ನಾವು ಚಿಂತೆ ಮಾಡುವಾಗ, ಬುದ್ಧಿಗಳು ಕಾರು ಹಾಕಿಕೊಂಡು ಹೊರಡುತ್ತಾರೆ. ಆಗ ರಾತ್ರಿ ಒಂಬತ್ತೋ, ಹತ್ತೋ ಬೆಳಕು ಹರಿಯೋದರ ಒಳಗಾಗಿ ಲಾರಿಗಟ್ಟಲೆ ಭತ್ತ ಬಂದು ಬೀಳ್ತದೆ! ತಮ್ಮ ಜೋಳಿಗೆ ತುಂಬಾ ನೋಟು ತರ್ತಾರೆ! ಒಂದೊಂದು ಚೀಲ ಮೆಣಸು ತರಿಸ್ತಾರೆ. ಸಕ್ಕರೆ, ಗೋಧಿ ರಾಶಿರಾಶಿ !!"

ನಾನು ಕಂಡಹಾಗೆ ಮೂವತ್ತು ವರ್ಷಗಳಿಂದ ಈ ನಿತ್ಯದಾಸೋಹ ಅಂದರೆ ನಿತ್ಯ ಪವಾಡ ನಡೆಯುತ್ತಿದೆ! ಅಷ್ಟು ದವಸ-ಧಾನ್ಯ ಸಾಮಗ್ರಿ, ಹಣ ಎಲ್ಲಿಂದ ಬರುತ್ತದೆ ? ಹಿಂದಿನ ಕಾಲದ ಸ್ವಾಮಿಗಳಂತೆ ನೀರನ್ನು ತುಪ್ಪ ಮಾಡಿ, ಬೆತ್ತ ಮುಟ್ಟಿಸಿ ಅನ್ನದ ಕೊಪ್ಪರಿಗೆಯನ್ನು ಅಕ್ಷಯಪಾತ್ರೆ ಮಾಡಿ ಇಷ್ಟೆಲ್ಲಾ ನಡೆಸುತ್ತಾರೆ ಎಂದೇನೂ ಅಲ್ಲ. ಈಗಿರುವ ಶ್ರೀ ಶ್ರೀಗಳವರು ಪೀಠದ ಉಸ್ತುವಾರಿಯನ್ನು ವಹಿಸಿಕೊಂಡ ಮೇಲೆ ಅವರೊಡನೆ ನಿಕಟ ಪರಿಚಯ ಬೆಳೆದ ಮೇಲೆ ಈ ಬೃಹತ್ ಅನ್ನದಾಸೋಹದ ರಹಸ್ಯವೇನೆಂಬುದನ್ನು ನಾನು ತಿಳಿದುಕೊಂಡಿದ್ದೇನೆ.

"ನಮ್ಮ ಮಠಕ್ಕೆ ಎಲ್ಲ ಜಾತಿಯ ಜನರೂ ನಡೆದುಕೊಳ್ಳುತ್ತಾರೆ. ಎಲ್ಲರೂ ಉದಾರವಾಗಿ ಕಾಣಿಕೆ ಕೊಡುತ್ತಾರೆ. ನಾವು ಕೇಳಬೇಕೆಂದೇನೂ ಇಲ್ಲ. ಮಠಕ್ಕಾಗಿ ಪ್ರತಿಯೊಂದು ಕುಟುಂಬವೂ ಇಂತಿಷ್ಟು ನಿಧಿ ತೆಗೆದಿಡುತ್ತಾರೆ. ಅವರೇ ಗಾಡಿಗಳಲ್ಲಿ ಹೇರಿಕೊಂಡು ಬಂದು ಕೊಡುತ್ತಾರೆ! ಲಿಂಗಾಯತರಲ್ಲದವರೇ ಬಹುಸಂಖ್ಯೆಯಲ್ಲಿರುವ ಈ ಪ್ರದೇಶದಲ್ಲಿ ಅವರೇ ಬಹುಸಂಖ್ಯಾತ ಶಿಷ್ಯರು ಇರುವುದು ಸಹಜ" ಎಂದು ಶ್ರೀಗಳವರೊಮ್ಮೆ ಅಪ್ಪಣೆಕೊಡಿಸಿದರು.

ಜಾತೀಯ ಭಾವನೆ, ಅದರಲ್ಲೂ ಜಾತಿ ದ್ವೇಷದ ಜ್ವಾಲೆ ಹತ್ತಿ ಉರಿಯುತ್ತಿರುವ ಈ ಕಾಲದಲ್ಲೂ ಒಂದು ಮಠದ ಜಗದ್ಗುರುಗಳ ಬಗ್ಗೆ ಇಷ್ಟೊಂದು ಭಕ್ತಿ-ವಿಶ್ವಾಸಗಳು ಎಲ್ಲ ಮಠದವರಿಗೂ ಇನ್ನೂ ಉಳಿದಿರುವುದು ಆಶ್ಚರ್ಯದ ಸಂಗತಿಯೇ ಸರಿ! ಅದಕ್ಕೆ ಏನು ಕಾರಣವಿರಬಹುದು ?

ಯಾವುದೋ ಮಾತು ಬಂದಾಗ, ಶ್ರೀಗಳವರು ಅಪ್ಪಣೆ ಕೊಡಿಸಿದರು : "ನಮಗೆ ಸನ್ಯಾಸಿಗಳಿಗೆ ಯಾವ ಜಾತಿಯ ಬಂಧನವೂ ಇಲ್ಲ. ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೇವೆಯೋ ಅವರೇ ನಮಗೆ ಸಂಬಂಧವಿಲ್ಲದವರಾಗಿ ಹೋಗುತ್ತಾರೆ! ಅವರ ಮನೆತನಕ್ಕೆ ಹೊರಗಾಗಿಬಿಡುತ್ತೇವೆ. ನಮ್ಮ ಜೀವನವೇ ಬೇರೆಯಾಗಿಬಿಡುತ್ತದೆ. 'ಪೂರ್ವಾಶ್ರಮದ ತಂದೆ-ತಾಯಿಗಳು' ಎಂದೇ ಹೇಳುತ್ತೇವೆ. ಹೀಗಿರುವಾಗ ನಮಗೆ ಎಲ್ಲರೂ ಒಂದೇ ! ಎಲ್ಲರನ್ನೂ ಒಂದೇ ರೀತಿಯಾಗಿ ಕಾಣದವರು ಸನ್ಯಾಸಿಗಳಾಗಲಾರರು. ನಮಗೆ ಎಲ್ಲರೂ ಬೇಕು. ನಾವು ಎಲ್ಲರಿಗೂ ಬೇಕು !"

ಈ ಮಾತು ಕೇವಲ ಪುಸ್ತಕದ ಬದನೇಕಾಯಿ ಅಲ್ಲವೆಂಬುದನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೇನೆ. ಪ್ರತ್ಯಕ್ಷವಾಗಿ ಕಂಡರೂ ಪರಾಂಬರಿಸಿದ್ದೇನೆ. ಎರಡು ವರ್ಷಗಳ ಕೆಳಗೆ ಕುಲಪತಿ ಪ್ರೊ. ದೇ. ಜವರೇಗೌಡರೂ. ನಾನೂ ಶ್ರೀ ಶಿವರಾತ್ರೀಶ್ವರ ಜಗದ್ಗುರುಗಳ ಜಯಂತಿ ಉತ್ಸವದಲ್ಲಿ ಪಾಲ್ಗೊಳ್ಳುವ ಸಂದರ್ಭ ಬಂದಿತ್ತು. ಸಭಾಮಂದಿರಕ್ಕೆ

ಹೋಗುವಾಗ ಪ್ರೊ. ಗೌಡರು : "ಯಾರು ಏನೇ ಹೇಳಲಿ ನನಗೆ ದಿಟವಾಗಿದೆ. ಶ್ರೀಗಳವರಿಗೆ ಸಂಕುಚಿತ ಜಾತೀಯ ದೃಷ್ಟಿ ಇಲ್ಲ. ನಿಮಗೆ ಗೊತ್ತೋ ಇಲ್ಲವೋ. ನಾನು ವೈಸ್‌ಛಾನ್ಸಲರ್ ಆಗಬೇಕೆಂದು ಅವರು ಹರಸಿದ್ದೊಂದೇ ಅಲ್ಲದೆ ....ಆದ ಮೇಲೆ ಎಷ್ಟು ಆತ್ಮೀಯವಾಗಿ ಕಂಡು ಗೌರವಿಸಿದರು !!....ಅವರು ಹೇಳಿದ ಇನ್ನೂ ಅನೇಕ ವಿಚಾರಗಳನ್ನು ಇಲ್ಲಿ ಪ್ರಕಟಿಸುವುದು ಸರಿಯಾಗಲಾರದು. ಆದರೆ ಒಂದನ್ನು ಹೇಳಿದರೆ ತಪ್ಪಾಗದೆಂದು ಕಾಣುತ್ತದೆ :

ಮಠಕ್ಕೆ ಹೋದರೆ 'ಪ್ರಸಾದ ತೆಗೆದುಕೊಳ್ಳಿ' ಎನ್ನುತ್ತಾರೆ. 'ಇಲ್ಲ' ಎಂದು ಹೇಳುವ ಮನಸ್ಸಾಗುವುದಿಲ್ಲ.... ಇಷ್ಟೇ ಹೇಳಿದರೆ ಸಾಕು.

## ಶಿಕ್ಷಣಕ್ಕೆ ದಾಸೋಹವೇ ಬುನಾದಿ

ಶ್ರೀ ಸ್ವಾಮಿಗಳಿಗೆ ತಾವು ಕೈಕೊಂಡಿರುವ ದಾಸೋಹ ಕಾಯಕದ ಬಗ್ಗೆ ಯಾವ ಸಂಶಯವೂ ಇಲ್ಲ. ಶಿಕ್ಷಣ-ನಿಜ ವಾದ ಶಿಕ್ಷಣವೇ ನಮ್ಮ ಜನಾಂಗದ ಪುನರುತ್ಥಾನದ ಏಕಮೇವ ಮಾರ್ಗ ಎಂಬುದು ಶ್ರೀಗಳವರ ಬೀಜಮಂತ್ರ. ಆ ಶಿಕ್ಷಣ ಕೇವಲ ಶಾಲಾ-ಕಾಲೇಜುಗಳಲ್ಲಿ ಕಲಿಸುವ ಅಕ್ಷರವಿದ್ಯೆಯಲ್ಲ ; ಹಾಗೆ ಹೇಳಬೇಕೆಂದರೆ ಈಗ ಏನನ್ನು ವಿದ್ಯೆ ಎಂದು ಕಲಿಯುತ್ತಿದ್ದಾರೆಯೋ, ಅದು ಕೇವಲ ಓದು ಅಷ್ಟೆ. ಅದರಿಂದ ಪ್ರಯೋಜನಕ್ಕಿಂತಲೂ ಅಪಾಯವೇ ಅಪಾರವಾಗಿದೆ. ಆದ್ದರಿಂದಲೇ ಈಗ ಓದು ಕಲಿತವರಲ್ಲೇ ಇರಬಾರದ ಲಕ್ಷಣಗಳು ಹೇರಳವಾಗಿ ಮನೆ ಮಾಡಿವೆ. ಬಹುಶಃ ಈ ಅಂಶವನ್ನು ಶ್ರೀಗಳವರು ಬಹು ಹಿಂದೆಯೇ ಗಮನಿಸಿ, ನಮ್ಮ ಯುವಕರ ಮನಸ್ಸು ಒಳ್ಳೆಯ ಚಿಂತನ ಮಾಡಲಿ ಎಂದು ಧಾರ್ಮಿಕ ಗ್ರಂಥ ಪ್ರಕಾಶನವನ್ನು ಹೇರಳವಾಗಿ ಮಾಡುತ್ತಲಿದ್ದಾರೆ. ಆಚಾರ್ಯರ, ಧರ್ಮ ವಿಭೂತಿಗಳ ಜಯಂತಿಗಳನ್ನು ವಿಶೇಷವಾಗಿ ಆಚರಣೆ ಮಾಡಿಸುತ್ತಾರೆ. ಅದರಲ್ಲೂ ಮೈಸೂರು ಶಹರ ಮತ್ತು ಜಿಲ್ಲೆ ಯಲ್ಲಿ ಬಸವೇಶ್ವರರ ಜೀವನ ದರ್ಶನಗಳನ್ನು ಜನ-ಮನದಲ್ಲಿ ಹರಡಲು ಅಪಾರ ಶ್ರಮಿಸಿದ್ದಾರೆ.

"ಧರ್ಮ ಬಡವರ ಅಫೀಮು" ಎಂಬುದು ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರ ಮತ್ತು ರಾಜನೀತಿಜ್ಞರ ನಂಬುಗೆ ಆಗಿರಬಹುದು. ಆದರೆ ನಮ್ಮ ದೇಶದಲ್ಲಿ ಧರ್ಮ ಬಿಟ್ಟು ಅನ್ಯ ದಾರಿಯೇ ಇಲ್ಲ. ಧರ್ಮ ನಮ್ಮ ಜನರ ಜೀವದ ಉಸಿರು. ಈಗ ದೊಡ್ಡರೋಗ (ಲೆಪ್ರಸಿ)ದಿಂದ ನರಳುತ್ತಿರುವ ನಮ್ಮ ಸಮಾಜ ಜೀವನಕ್ಕೆ ಒಂದೇ ಒಂದು ಸಿದ್ಧೌಷಧ ಧರ್ಮ, (ಮೂಢನಂಬುಗೆ ; ಒಣ ಆಚಾರಗಳಲ್ಲ) ಎಂಬುದನ್ನು ಎಷ್ಟು ಬೇಗ ತಿಳಿದಷ್ಟು ಅಷ್ಟೂ ಮೇಲು.

ಈಗಿನ ಶ್ರೀಗಳವರ ಪ್ರಥಮ ಪರಿಚಯ ಆದದ್ದು ೧೯೫೦–೫೧ರಲ್ಲಿ. ನನ್ನ ಮಿತ್ರರೊಬ್ಬರಿಗೆ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಆನರ್ಸ್ ಕ್ಲಾಸ್‌ನಲ್ಲಿ ಸೀಟು ಬೇಕೆಂದು ಪ್ರಯತ್ನಿಸಲು ಬಂದಿದ್ದೆ. ಆಗ ಉಚಿತ ಪ್ರಸಾದಕ್ಕೆ ಏರ್ಪಾಟುಮಾಡಲೆಂದು ಶ್ರೀ ಶ್ರೀಗಳವರನ್ನು ಕಂಡು ಬಿನ್ನವಿಸಿಕೊಂಡೆ. ಅವರು ಆಶ್ರಯ ಕೊಡಲೊಪ್ಪಿ ವಿದ್ಯಾರ್ಥಿ ಯನ್ನು ಕಳಿಸಿಕೊಡಲು ತಿಳಿಸಿದರು. ಅಲ್ಲಿಂದ ಇಲ್ಲಿಗೆ ದಿನ ಕಳೆದಂತೆಲ್ಲಾ ಪರಿಚಯ ನಿಕಟವಾಗಿದೆ. ಎಷ್ಟು ಹತ್ತಿರ ದಿಂದ ನೋಡಿದರೆ ಅಷ್ಟು ಗಾಢವಾಗಿದೆ. ಅವರ ಬಗ್ಗೆ ನನ್ನ ಗೌರವ ಮತ್ತು ಪೂಜ್ಯಬುದ್ಧಿ, ದೂರದ ಗುಡ್ಡ ಕಣ್ಣಿಗೆ ನುಣ್ಣಗೆ. ಹತ್ತಿರ ಬಂದು ನೋಡಿದರೆ, ತಗ್ಗುದಿನ್ನೆ. ಗುಂಡುಬಂಡೆ, ಮರಗಿಡ–ಪೊದೆ. ಹಾವು, ಚೇಳು, ಹುಲಿ..... ಏನೆಲ್ಲಾ ಗೊತ್ತಾಗುತ್ತದೆ. ಹಾಗೆಯೇ ದೂರದಿಂದ ನೋಡಿದ ಜನರ ಬಗೆಗೂ ಹತ್ತಿರ ಬಂದಂತೆಲ್ಲಾ ಅವರ ಹುಳುಕು ತಾನೇತಾನಾಗಿ ತನ್ನ ವಿಕಾರ, ಕರಾಳ ಮುಖವನ್ನು ತೋರಿಸುತ್ತದೆ. ಆದರೆ ಶ್ರೀ ಸುತ್ತೂರು ಜಗದ್ಗುರುಗಳವರನ್ನು ಎಷ್ಟು ಹತ್ತಿರದಿಂದ ನೋಡಿದರೂ ಅಪರಂಜಿಯಂತೆ, ಸ್ಫಟಿಕದ ಶಲಾಕೆಯಂತೆ ಪರಿಶುದ್ಧ ಮತ್ತು ಜಾಜ್ವಲ್ಯಮಾನ ವಾಗಿ ಕಾಣುತ್ತಾರೆ !

ಕೆಲವು ಜನರು, ಅದರಲ್ಲೂ ಸ್ವಾಮಿಗಳು ತಮ್ಮ ದೊಡ್ಡಸ್ತಿಕೆಯನ್ನು ಸ್ಥಾಪಿಸಲು ಏನೇನೋ ಆಡಂಬರ– ಉಡಿಗೆಯಲ್ಲಿ–ತೊಡಿಗೆಯಲ್ಲಿ, ಬಿರುದುಬಾವಲಿಗಳಲ್ಲಿ, ವಸ್ತು-ವಾಹನಗಳಲ್ಲಿ ಇಟ್ಟುಕೊಂಡಿರುತ್ತಾರೆ. ಒಳಗಿಲ್ಲದ ಸಂಪತ್ತನ್ನು ಹೊರಗಿನಿಂದ ಭರ್ತಿಮಾಡಿಕೊಳ್ಳುವ ಹವಣಿಕೆ ಇದು ಎಂದು ಅಂಥವರ ಬಗ್ಗೆ ಗುಮಾನಿಯ ದೃಷ್ಟಿ ನನಗೆ. ಸ್ವಾಮಿಗಳನ್ನು ಯಾರು ಬೇಕಾದರೂ, ಯಾವಾಗ ಬೇಕಾದರೂ (ಅವರ ಲಿಂಗಪೂಜಾ ಸಮಯದ ಹೊರತು) ಕಾಣಬಹುದು. ಯಾವ ವಿಷಯವನ್ನಾದರೂ – ಸಾಮಾನ್ಯ ಮತ್ತು ಅಸಾಮಾನ್ಯ – ಸರಳವಾಗಿ ಮಾತನಾಡ ಬಹುದು. ಯಾವುದೋ ಹಳ್ಳಿಯಲ್ಲಿ ಯಾರೋ ಸಾಮಾನ್ಯ ಜನರಲ್ಲಿ ವಿರಸವಾಗಿದೆ. ಅದನ್ನು ಸರಿಪಡಿಸಬೇಕು ಎಂಬುದರಿಂದ ಹಿಡಿದು, ನಮ್ಮ ನಾಡಿನ ಆಧ್ಯಾತ್ಮಿಕ ಪ್ರವೃತ್ತಿಯ ವೃದ್ಧಿಯನ್ನು ಸಾಧಿಸುವ ಬಗೆ ಹೇಗೆ ಎಂಬುದರ ವರೆಗೆ ಸರಳವಾಗಿ ಮಾತನಾಡಬಹುದು. ಸ್ವಾಮಿಗಳು ಯಾವ ಬಗೆಯ ಆಧಿಕ್ಯವನ್ನೂ ತೋರಿಸಿಕೊಳ್ಳದೆ ಎಲ್ಲ

ರೊಡನೆಯೂ ಸಲೀಸಾಗಿ ಮಾತನಾಡುತ್ತಾರೆ. ಅವರ ಈ ಸರಳತೆಯೇ ಅವರ ಈ ಹಿರಿಮೆಗೆ ಮುಖ್ಯ ಕಾರಣ— ನನ್ನ ದೃಷ್ಟಿಯಲ್ಲಿ.

## ದೇಶ ಉಳಿದರೆ ಧರ್ಮ

ಕೆಲವರು ಸ್ವಾಮಿಗಳು ಭಾವಿಸುತ್ತಾರೆ. ತಮ್ಮ ವೇಷ-ಭೂಷಣ ತಮ್ಮ ಸ್ಥಾನಕ್ಕೆ—ಜಗದ್ಗುರು ಪೀಠಕ್ಕೆ ಅನಿವಾರ್ಯವಾದ ಅಲಂಕಾರ ಎಂಬುದಾಗಿ. ಈ ಮಾನದಂಡದಿಂದ ನೋಡಿದರೆ ಶ್ರೀ ಸುತ್ತೂರು ಶ್ರೀಗಳು ಜಗದ್ಗುರುಗಳೇ ಅಲ್ಲ. ಯಾಕೆಂದರೆ ಅವರು ಖಾದೀ ಉತ್ತರೀಯವನ್ನಲ್ಲದೆ ಬೇರೆ ಬಟ್ಟೆಯನ್ನೇ ಧರಿಸುವುದಿಲ್ಲ. ರೇಶಿಮೆ, ಜರತಾರಿ, ಕಿರೀಟ ಇದೆಲ್ಲ ವಿಶಿಷ್ಟ ಸಮಯಕ್ಕೆ ಬೇಕಾದ ಲಾಂಛನವೇ ಹೊರತು ಅವು ಅವರವಲ್ಲ.

ಶ್ರೀ ಸ್ವಾಮಿಗಳು ಖಾದೀ ಧರಿಸುತ್ತಿರುವುದು ಇಂದು ನಿನ್ನೆಯದಲ್ಲ. ಸ್ವಾತಂತ್ರ್ಯಕ್ಕೆ ಪೂರ್ವದಲ್ಲೇ ಖಾದೀ ಬಟ್ಟೆಗೆ ಕಾವಿಯನ್ನು ಅದ್ದಿ ಉಡುತ್ತಿದ್ದರು. ಅವರ ರಾಷ್ಟ್ರಪ್ರೇಮ, ದೈವಭಕ್ತಿಯಷ್ಟೇ ಪ್ರಾಮುಖ್ಯ ಅವರ ಜೀವನದಲ್ಲಿ. ಅದಕ್ಕೊಂದು ನಿದರ್ಶನ ನೆನಪಾಗುತ್ತದೆ. ೧೯೬೨ರಲ್ಲಿ ನಮ್ಮ ದೇಶದ ಮೇಲೆ ಚೀನೀ ದಾಳಿ ನಡೆದಾಗ, ದೇಶದಾದ್ಯಂತ ಚಿನ್ನದ ಸಂಗ್ರಹ ನಡೆಯಿತು. ಅಂದಿನ ಮೈಸೂರು ಮುಖ್ಯಮಂತ್ರಿಗಳು ಒಂದು ಸಾರ್ವಜನಿಕ ಸಭೆಯಲ್ಲಿ ಚಿನ್ನದ ದೇಣಿಗೆಗಾಗಿ ಮನವಿ ಮಾಡಿದಾಗ, ಶ್ರೀ ಸುತ್ತೂರು ಶ್ರೀಗಳವರು ತಮ್ಮ ಚಿನ್ನದ ಲಿಂಗದ ಕರಡಿಗೆಯನ್ನು ತೆಗೆದು ದಾನ ಮಾಡಿದರು! ವೀರಶೈವ ಸಿದ್ಧಾಂತದ ಪ್ರಕಾರ ಲಿಂಗವೇ ಪ್ರಾಣ—ಲಿಂಗವಂತರಿಗೆ. ಅದನ್ನು ಎಷ್ಟು ಜತನವಾಗಿ ಅಂಗದ ಮೇಲೆ ಧರಿಸುತ್ತಾರೆ, ಕಾದಿಡುತ್ತಾರೆ ಎಂದರೆ ತಮ್ಮ ಪ್ರಾಣಕ್ಕಿಂತಲೂ ಅದನ್ನು ಅಧಿಕವಾಗಿ ನೋಡುತ್ತಾರೆ. ಲಿಂಗದ ಕಾಯವೆಂದರೆ ಭಕ್ತನ ಕಾಯವಿದ್ದಂತೆ. ಇಂಥ ಪವಿತ್ರ ನಿಧಿಯನ್ನು ಸ್ವಾಮಿಗಳು ಬಹಿರಂಗ ಸಭೆಯಲ್ಲಿ ಬಿಚ್ಚಿ ಕೊಟ್ಟರು!

ಶ್ರೀಗಳವರ ಈ ನಡತೆಯನ್ನು ನೆನೆದಾಗಲೆಲ್ಲ ಅದೇ ಕಾಲದಲ್ಲಿ ಬಂಗಾರವನ್ನು ಯಥೇಚ್ಛವಾಗಿ ವಸೂಲಿ ಮಾಡಿಕೊಂಡು "ಬಂಗಾರಸ್ವಾಮಿ"ಗಳಾದವರ ವಿಚಾರ ನೆನಪಾಗುತ್ತದೆ.

ಸ್ವಲ್ಪ ದಿನಗಳಲ್ಲಿ ಒಮ್ಮೆ ಮೈಸೂರಿಗೆ ಹೋದಾಗ ಈ ಘಟನೆಯ ಬಗ್ಗೆ ಮಾತು ಬಂತು. ಸ್ವಾಮಿಗಳು ಹೇಳಿದರು,

"ರಾಜಕಾರಣಿಗಳಿಗೆ ಇದು ದೇಶದ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆ. ವ್ಯಾಪಾರಿಗಳಿಗೆ ತಮ್ಮ ಆರ್ಥಿಕಾಭಿವೃದ್ಧಿಯ ಚಿಂತೆ. ಒಬ್ಬೊಬ್ಬರಿಗೆ ಒಂದೊಂದು ದೃಷ್ಟಿಯಿಂದ ಈ ಸಮಸ್ಯೆ ಮಹತ್ವದ್ದಾಗಿದೆ. ಆದರೆ ನಮ್ಮ ದೃಷ್ಟಿಯಲ್ಲಿ ಇದು ನಮ್ಮ ಆರ್ಷೇಯ ಧರ್ಮದ ಅಳಿವು-ಉಳಿವಿನ ಪ್ರಶ್ನೆ. ಈ ದೇಶ ಉಳಿದರೆ ನಮ್ಮ ಧರ್ಮ ಉಳಿದೀತು. ಇಲ್ಲದಿದ್ದರೆ, ನಮ್ಮ ಗುಡಿಗೋಪುರಗಳು, ಮಠಮಾನ್ಯಗಳು, ಫ್ಯಾಕ್ಟರಿಗಳೋ, ಶಸ್ತ್ರಾಗಾರಗಳೋ ಆಗಿಹೋಗುತ್ತವೆ. ಜೀವ ಇದ್ದರೆ ದೇಹಕ್ಕೆ ಬೆಲೆ. ಹಾಗೆಯೇ ನಮ್ಮ ರಾಷ್ಟ್ರದ ಜೀವ ಧರ್ಮ. ಧರ್ಮ ಉಳಿದರೆ ನಮ್ಮ ದೇಶ ಬದುಕುತ್ತದೆ. ಈ ದಾಳಿ ಬೇರೆಯವರಿಗಿಂತ ಹೆಚ್ಚಾಗಿ ನಮಗೆ ಸಂಬಂಧಿಸಿದ ಪ್ರಶ್ನೆ..."

ಈ ಸಂದರ್ಭದಲ್ಲಿ ೧೯೫೦ರಲ್ಲೇ ಶ್ರೀ ಅರವಿಂದರು ಹೇಳಿದ ಮಾತನ್ನು ನೆನೆಸಿಕೊಳ್ಳಬಹುದು. ಕಮ್ಯುನಿಸ್ಟ್ ಚೀನಾದಿಂದ ಭರತಖಂಡಕ್ಕೆ ಬಂದೊದಗಬಹುದಾದ ವಿಪತ್ತನ್ನು ಅವರು ಸ್ಪಷ್ಟವಾಗಿ ಮನಗಂಡಿದ್ದರು. ಚೀನಾ ದೇಶ, ಟಿಬೆಟ್ ಆಕ್ರಮಣಮಾಡಿ ಆ ತರುವಾಯ ಅಸ್ಸಾಂ ಮಾರ್ಗವಾಗಿ ಭಾರತದ ಮೇಲೆ ದಾಳಿ ನಡೆಸಬಹುದೆಂದು ಅವರು ಮಹಾಸಮಾಧಿ ಹೊಂದುವುದಕ್ಕೆ ನಾಲ್ಕೇ ತಿಂಗಳ ಮೊದಲು, ಭವಿಷ್ಯ ನುಡಿದಿದ್ದರು. ಅದು ಆಗಬಾರದೆಂದೂ ಅದನ್ನು ಪ್ರಬಲವಾಗಿ ವಿರೋಧಿಸುವ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಬೇಕೆಂದೂ ಹೇಳಿದ್ದರು.

ಸ್ವಾಮಿಗಳ ಆ ಮಾತುಗಳನ್ನು ಕೇಳಿ ನಾನು: "ಈ ವಿಪತ್ತನ್ನು ನಿವಾರಿಸಲು ನಮಗೆ ಫ್ಯಾಕ್ಟರಿಗಳೂ ಶಸ್ತ್ರಾಗಾರಗಳೂ ಬೇಕಲ್ಲ ಬುದ್ಧಿ? ನಮ್ಮ ಮಠಗಳೆಲ್ಲ ಈಗ ಫ್ಯಾಕ್ಟರಿಗಳಾಗುವುದೇ ಮೇಲೆಂದು ಕಾಣುತ್ತದೆ" ಎಂದೆ.

"ಈಗ ಆಪತ್ಕಾಲದಲ್ಲಿ—ಬಂದ ಈ ಸಂಕಟ ಪರಿಹಾರಕ್ಕಾಗಿ ಹಾಗೆ ಮಾಡಿದರೂ ತಪ್ಪಲ್ಲ. ಆದರೆ ಮಠಗಳ ಬದಲು ಫ್ಯಾಕ್ಟರಿಗಳಾಗಬೇಕಾಗಿಲ್ಲ. ಮಠಗಳ ಜೊತೆಗೇ ಫ್ಯಾಕ್ಟರಿಗಳಾಗಲೇ ಬೇಕು. ಫ್ಯಾಕ್ಟರಿಗಳು ಚೆನ್ನಾಗಿ ಕೆಲಸ ಮಾಡಲು, ಕೆಲಸ ಮಾಡಿ ಸಂಪತ್ತು-ಸಮೃದ್ಧಿಯಾದ ಮೇಲೆ ಶಾಂತಿ, ನೆಮ್ಮದಿ ನೆಲೆಸಲು ಮಠಗಳು ಅಗತ್ಯವಾಗಿ ಬೇಕು. ಮಠಗಳಿಲ್ಲದ ಫ್ಯಾಕ್ಟರಿಗಳ ದೇಶ ಕೇವಲ ದೈತ್ಯಶಕ್ತಿ" ಎಂದರು.

ಈ ಮಾತು ಎಷ್ಟು ಸತ್ಯ ಎಂಬುದರ ಅರಿವು ನಮ್ಮ ರಾಷ್ಟ್ರಜೀವನದ ಸೂತ್ರಗಳನ್ನು ಹಿಡಿದುಕೊಂಡಿರುವ

ವ್ಯಕ್ತಿ-ಶಕ್ತಿಗಳಿಗೆ ಎಷ್ಟು ಬೇಗ ಆದರೆ ಅಷ್ಟು ಒಳಿತು. ಆಗಲೇ ಈ ದೇಶಕ್ಕೆ ತನ್ಮೂಲಕ ಲೋಕಕ್ಕೆ ಶಾಂತಿ ಎಂಬುದು ಬುದ್ಧಿಮಟ್ಟದ ಜನಕ್ಕೆ ತಿಳಿಯಬೇಕಾಗಿದೆ.

## ವಿದ್ವತ್ ಪಕ್ಷಪಾತಿಗಳು

ಶ್ರೀಗಳು, ಆಧ್ಯಾತ್ಮಮಯ ವ್ಯಾವಹಾರಿಕ ಜೀವನವೇ ನಿಜವಾದ ಬಾಳು ಎಂಬುದನ್ನು ಗಮನಿಸಿಯೇ ಸಂಸ್ಕೃತ ಪಾಠಶಾಲೆ, ಹೈಸ್ಕೂಲು, ಕಾಲೇಜುಗಳ ಜೊತೆಗೆ ಎಂಜಿನಿಯರಿಂಗ್ ಕಾಲೇಜನ್ನು ಕೂಡಾ ನಡೆಸುತ್ತಿದ್ದಾರೆ. ಉಪಾಧ್ಯಾಯರ ತರಬೇತಿ ಕಾಲೇಜನ್ನೂ ತೆರೆದಿದ್ದಾರೆ. ಅವರ ಶಿಕ್ಷಣ ಸಂಸ್ಥೆಗಳ ವಿಸ್ತಾರ ಒಂದು ವಿಶ್ವವಿದ್ಯಾನಿಲಯದ ಬೃಹತ್ ಪ್ರಮಾಣಕ್ಕೆ ಹಬ್ಬಿದೆ. ಒಂದೇ ಒಂದು ಮಠ ಇಷ್ಟೊಂದು ಸಂಸ್ಥೆಗಳನ್ನು ನಡೆಸುವುದು ಆಶ್ಚರ್ಯ ಮತ್ತು ಅಪರೂಪ.

ಶ್ರೀಗಳವರ ಆಸಕ್ತಿ ಪ್ರಥಮತಃ ಆಧ್ಯಾತ್ಮ. ಅವರ ಆಧ್ಯಾತ್ಮ ಇಹಲೋಕವಿಮುಖವಾದುದಲ್ಲ. "ಸ್ವರ್ಗಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ" ಎಂಬುದು ಅವರ ಮೂಲ ಮಂತ್ರ. ಆದ್ದರಿಂದಲೇ ಜೀವನದ ಎಲ್ಲ ಕ್ಷೇತ್ರಕ್ಕೂ ಅವರು ಸಮಾನ ಮಹತ್ವ ಮತ್ತು ಬೆಲೆ ಕೊಡುತ್ತಾರೆ. ಅವರ ಆಸಕ್ತಿ ಸಾಹಿತ್ಯಕ್ಷೇತ್ರಕ್ಕೂ ವ್ಯಾಪಿಸಿದೆ. ಆದ್ದರಿಂದಲೇ ವಿದ್ವಾಂಸರಿಗೆ ಮುಕ್ತಹಸ್ತದಿಂದ ನೆರವೀಯುತ್ತಾರೆ. ಬರಹಗಾರರ ಗ್ರಂಥಗಳನ್ನು ಪ್ರಕಟಿಸುವುದು, ಅವರ ಕೃತಿರಚನಾಶಕ್ತಿಗೆ ಗೊಬ್ಬರ, ನೀರು ಹಾಕಿದಂತೆ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಪ್ರಕಟವಾದ ಅನೇಕ ಕೃತಿರತ್ನಗಳು ಸ್ವಾಮೀಜಿಯ ವಿದ್ವತ್-ಪಕ್ಷಪಾತಕ್ಕೆ ಉತ್ತಮ ನಿದರ್ಶನ.

ಶ್ರೀಗಳು ವಿದ್ವತ್‌ಪಕ್ಷಪಾತಿಗಳಾಗಿರುವಂತೆ ಸಹೃದಯರೂ ಆಗಿದ್ದಾರೆ. ಎರಡು ವರ್ಷಗಳ ಹಿಂದೆ ಶ್ರೀ ನಿಜಗುಣ ಶಿವಯೋಗಿಗಳ ಜಯಂತಿ ಉತ್ಸವಕ್ಕೆ ಅವರೊಡನೆ ಹೋಗಿದ್ದೆ. ಶಂಭುಲಿಂಗನ ಬೆಟ್ಟದ ಬುಡದಲ್ಲಿ ಏರ್ಪಡಿಸಿದ್ದ ಆ ಸಮಾರಂಭಕ್ಕೆ ಸುತ್ತಮುತ್ತ ಗ್ರಾಮಗಳಿಂದ ಕನಿಷ್ಠ ಎರಡು-ಮೂರು ಸಾವಿರ ಜನರಾದರೂ ಸೇರಿದ್ದರು. ಅಂದು ಶ್ರೀಗಳವರು ನಿಜಗುಣಶಿವಯೋಗಿಗಳ ಬಗ್ಗೆ ತಿಳಿಯಾಗಿ ಮಾತನಾಡಿದ್ದನ್ನು ನೋಡಿ ಜನ ತಲೆದೂಗಿದರು. ಅಂದರೆ ಆಡಿದ ಮಾತು ಜನಗಳಿಗೆ ತಿಳಿಯಿತು ಎಂದರ್ಥ. ಕೆಲವು ಸ್ವಾಮಿಗಳು, ಸಂಸ್ಕೃತ ವಾಕ್ಯಗಳನ್ನು, ಶ್ಲೋಕಗಳನ್ನು ಉದ್ಧರಿಸದೆ ಭಾಷಣ ಮಾಡುವುದೇ ಇಲ್ಲ. ಎದುರಿಗೆ ಕುಳಿತವರು ಯಾರು ? ಅವರಿಗೆ ಏನು ಬೇಕು ? ಅರ್ಥವಾಯಿತೇ ಇಲ್ಲವೇ ಎಂಬುದು ಅವರಿಗೆ ಮುಖ್ಯವಲ್ಲ. ತಮ್ಮ ಪಾಂಡಿತ್ಯ ಪ್ರದರ್ಶನವೇ ಅಲ್ಲಿ ಅವರಿಗೆ ಮುಖ್ಯ ! ಅವರ ಮಾತು ಕೇಳಿ ಜನ ನಿಬ್ಬೆರಗಾಗುತ್ತಾರೆ ! ಅದರಿಂದ ಮಬ್ಬು ಮುಚ್ಚುತ್ತದೆ. ಆದರೆ ಬೆಳಕು ಮಾತ್ರ ಇಲ್ಲ. ಶ್ರೀ ಸುತ್ತೂರು ಶ್ರೀಗಳವರು ಅಂಥ ಮಬ್ಬು ಕವಿಸುವ ಕೆಲಸ ಮಾಡುವುದೇ ಇಲ್ಲ.

## ಸರಳ ಸ್ವಭಾವ

ಶ್ರೀ ಶ್ರೀಗಳವರಲ್ಲಿ ನನಗೆ ತೋರಿದ ಅತಿ ಮುಖ್ಯವಾದ ಅಂಶ ಎಂದರೆ ಅವರ ಸರಳತೆ—ಎಲ್ಲ ಅರ್ಥದಲ್ಲೂ ಸರಳತೆ. ಅವರ ಈ ಸರಳ ಸ್ವಭಾವ ಎಲ್ಲಿಯವರೆಗೆ ಹೋಗುತ್ತದೆ ಎಂದರೆ, ಅವರೇ ಪಾಶೆ ಬೀಳುತ್ತಾರೆ ! ಯಾರೋ ಒಬ್ಬ ಸ್ವಾಮಿಗಳು ಬಂದರು. ಅವರು ಬಹಳ ಮಾತನಾಡುತ್ತಿದ್ದರು. ಅವರಿಗೆ ಆಶ್ರಯ ಕೊಟ್ಟರು. ಆದರೆ ಆಮೇಲೆ ತಿಳಿಯಿತು, ಅವರು ನಕಲಿ ಸ್ವಾಮಿಗಳು ಎಂದು. "ಆದರೆ ಏನು ಮಾಡುವಂತಿದೆ ? ಅವರ ನಿಜಬಣ್ಣ ಬಯಲಾದ ಮೇಲೆಯೂ ಅವರ ಬಗ್ಗೆ ನನಗೆ ದ್ವೇಷವಿಲ್ಲವಲ್ಲ ? ಇದೇ ನನಗೆ ಆಶ್ಚರ್ಯದ ಸಂಗತಿ."

ಹೀಗೆ ಶ್ರೀಗಳವರ ಔದಾರ್ಯದ ದುರುಪಯೋಗ ಪಡೆಯುವವರು ಅನೇಕ ಜನ, ಅನೇಕ ಬಗೆಯಾಗಿ. ಒಮ್ಮೆ ದಸರಾ ಕಾಲದಲ್ಲಿ ಬಳ್ಳಾರಿ ಜಿಲ್ಲೆಯವನೆಂದು ಹೇಳಿಕೊಂಡು, ಯಾರೋ ತನ್ನಲ್ಲಿದ್ದ ಹಣವನ್ನೆಲ್ಲಾ ಮೋಸದಿಂದ ಸುಲಿಗೆ ಮಾಡಿದರೆಂದು ಸಣ್ಣ ಮುಖ ಮಾಡಿಕೊಂಡು ಬುದ್ಧಿಗಳ ಮುಂದೆ ಕೈಮುಗಿದು ನಿಂತನಂತೆ. ಅವನಿಗೆ ಅರವತ್ತೋ ಎಪ್ಪತ್ತೋ ರೂಪಾಯಿ ಕೊಟ್ಟರು. ಊರಿಗೆ ಹೋಗಿ ವಾಪಸ್ಸು ಕಳಿಸುವುದಾಗಿ ಹೇಳಿದ ಮನುಷ್ಯನ ಪತ್ತೆಯೇ ಇಲ್ಲ.

"ನಿಮಗೇನಾದರೂ ಅವನು ಗೊತ್ತೇ" ಎಂದು ನನ್ನ ಕೇಳಿದರು.

"ದಸರಾದೊಂಬಿಗೆ ಬರುವ ಜನ ಎಷ್ಟೋ ; ಹೇಗೆ ಗೊತ್ತಾಗಬೇಕು ?" ಎಂದೆ.

"ಆಯ್ತು ಬಿಡಿ" ಎಂದು ಮುಗುಳ್ನಗೆ ನಕ್ಕರು. ಅವರಿಗೆ ಗೊತ್ತಾಗಿರಬೇಕು. ಪಾಶೆ ಬಿದ್ದಿದ್ದೇವೆ ತಾವು ಎಂದು. ತಮ್ಮ ಮುಗ್ಧ ಸ್ವಭಾವದಿಂದ ತಮಗೇ ನಗೆ ಬಂದಿರಬೇಕು !

ಅವರ ಸರಳ ಸ್ವಭಾವದ ಮಾದರಿಗೆ ಒಂದು ಘಟನೆ ನೆನಪಾಗುತ್ತದೆ. ನಾನು ಶಿವಮೊಗ್ಗೆಯಲ್ಲಿದ್ದಾಗ, ಒಂದು ಸಂಜೆ ಆರೂವರೆ, ಏಳರ ಸಮಯದಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಶಿವಮೊಗ್ಗೆ ಊರೊಳಗಿಂದ ಫೋನ್ ಮಾಡಿ :

"ಸ್ವಾಮೀಜಿ ಮೈಸೂರಿಗೆ ಹೊರಟಿದ್ದಾರೆ. ರಾತ್ರಿ ಹನ್ನೊಂದಕ್ಕೆ ಮಠಕ್ಕೆ ತಲುಪುತ್ತಾರೆ—ಅಂತ ಮೈಸೂರಿಗೆ ಫೋನ್ ಮೂಲಕ ತಿಳಿಸಬೇಕಂತೆ" ಎಂದರು.

"ಅಷ್ಟು ಹೊತ್ತಿನಲ್ಲಿ ಯಾಕೆ ಪ್ರಯಾಣ ಮಾಡಬೇಕು. ಬುದ್ಧಿಗಳು ಇಲ್ಲೇ ಲಿಂಗಪೂಜೆ ತೀರಿಸಿಕೊಂಡು ಹೋಗಬಹುದಲ್ಲಾ" ಎಂದೆ ನಾನು.

"ಇಲ್ಲ. ಈ ರಾತ್ರಿಯೇ ಮೈಸೂರು ತಲುಪಬೇಕಂತೆ."

"ಸ್ವಾಮೀಜಿ ಎಲ್ಲಿದ್ದಾರೆ ? ನಾನು ಬಂದು ಮಾತನಾಡುತ್ತೇನೆ."

"ಇಲ್ಲಿಯೇ ಕಾರಿನಲ್ಲಿದ್ದಾರೆ."

"ನಾನು ಬರಲೇ ?"

"ಕೇಳಿ ನೋಡುತ್ತೇನೆ ತಡೆಯಿರಿ."

ನಾನು ಫೋನ್ ಹಿಡಿದು ನಿಂತುಕೊಂಡೆ. ಎರಡು ನಿಮಿಷಗಳಲ್ಲಿ ಆ ತುದಿಯಿಂದ ಸ್ವಾಮಿಗಳೇ ಮಾತನಾಡತೊಡಗಿದರು. ನನಗೆ ಆಶ್ಚರ್ಯವಾಯಿತು. ಅವರಿಗಿರುವ ಅವಸರವನ್ನು ಅವರು ಹೇಳಿದರು. ನಾನು ರಾತ್ರಿ ಪ್ರಯಾಣ ಮಾಡುವ ತೊಂದರೆಯನ್ನು ಹೇಳಬೇಕಾದಷ್ಟು ಮಟ್ಟಿಗೆ ಹೇಳಿ : "ಈ ರಾತ್ರಿ ಇಲ್ಲೇ ತಂಗಿಬಿಡಿ ಬುದ್ಧಿ ; ನಾನು ಬಂದು ಬಿನ್ನವಿಸುತ್ತೇನೆ" ಎಂದೆ.

"ಬೇಡಿ, ಬಂದೇ ಕರೆಯಬೇಕೆಂದೇನೂ ಇಲ್ಲ. ನಿಮ್ಮ ಆಗ್ರಹ ಹಾಗಿದ್ದರೆ ಈ ರಾತ್ರಿ ಇದ್ದೇ ಬೆಳಿಗ್ಗೆ ಹೊರಡುತ್ತೇವೆ" ಎಂದು ಶ್ರೀಗಳು ಮನೆಗೆ ಬಂದೇಬಿಟ್ಟರು ! ಸುತ್ತೂರು ವೀರಸಿಂಹಾಸನಾಧೀಶ್ವರರಾದ ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ಹೀಗೆ ಬಿನ್ನವಿಸಿದೊಡನೆ ಬಿಜಯಂಗೈಯುವುದು ಆಶ್ಚರ್ಯಕರವಲ್ಲವೇ ?

ಒಮ್ಮೆ ಅವರು ಮೈಸೂರಿನಲ್ಲಿ ಹೇಳಿದರು :

"ಅಷ್ಟೇಕೆ ? ನಮ್ಮ ಶಿಷ್ಯರಲ್ಲಿ ಬಹಳ ಬಡವರು ಇದಾರೆ. ಲಿಂಗಾಯತರಲ್ಲದವರೂ ಇದ್ದಾರೆ. ಅವರು ಬಿನ್ನಹ ಮಾಡುತ್ತಾರೆ. ಅವರಲ್ಲಿಗೂ ಹೋಗುತ್ತೇವೆ. ನಮ್ಮ ಪೂಜೆಗಾಗಿ ತಮ್ಮ ಬಡನಿವಾಸದಲ್ಲಿ ಒಂದು ಕಡೆ ಪ್ರತ್ಯೇಕ ಸ್ಥಳ ಏರ್ಪಡಿಸುತ್ತಾರೆ. ಅಲ್ಲಿ ಅವರ ಪ್ರೀತ್ಯರ್ಥವಾಗಿ, ಶ್ರೇಯೋಭಿವೃದ್ಧಿಗಾಗಿ ಪೂಜೆ ತೀರಿಸಿಕೊಂಡು ಬರುತ್ತೇವೆ"— ಎಂಬುದಾಗಿ.

ಇವರನ್ನು ಜಗದ್ಗುರುಗಳು ಎಂಬುದಕ್ಕಿಂತ ಜನತಾ ಗುರುಗಳೆಂದು ಕರೆದರೆ ಹೆಚ್ಚು ಉಚಿತವೆಂದು ಕಾಣುತ್ತದೆ. ಇಂಥ ಸ್ವಾಮಿಗಳಿಂದ ಜನತಾ ಕಲ್ಯಾಣವಾಗಿ, ಭೂಕೈಲಾಸ ಸ್ಥಾಪನೆ ಆದಾಗಲೇ ಈ ಲೋಕಕ್ಕೆ ಕಲ್ಯಾಣ !

---

ಮಡಕೆಯ ಮಾಡುವಡೆ ಮಣ್ಣೇ ಮೊದಲು.
ತೊಡಿಗೆಯ ಮಾಡುವಡೆ ಹೊನ್ನೇ ಮೊದಲು.
ಶಿವಪಥವನಱಿವಡೆ ಗುರುಪಥವೇ ಮೊದಲು.
ಕೂಡಲ ಸಂಗಮದೇವರನಱಿವಡೆ
ಶರಣರ ಸಂಗವೇ ಮೊದಲು.

ಬಸವಣ್ಣ

# ಸುತ್ತೂರು ಮಹಾವಿದ್ಯಾಪೀಠ-ಒಂದು ಮಿನಿ ವಿಶ್ವವಿದ್ಯಾಲಯ

ಪ್ರೊ. ದೇ. ಜವರೇಗೌಡ

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಅಗ್ರಗಣ್ಯ ಸ್ಥಾನವಿದೆ. ಹಿಂದೆ ಕಾಲಗುಣಕ್ಕೆ ಮಠ ಗುಡಿ ಚರ್ಚು ಮಸೀದಿ ಆಶ್ರಮಗಳು ಮೌಢ್ಯ ಸಂಪ್ರದಾಯಗಳಿಗೆ ಪುರಸ್ಕಾರವಿತ್ತರೂ ಸಾಂಸ್ಕೃತಿಕ ವಿಕಾಸಕ್ಕೆ ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೂ ಪ್ರೋತ್ಸಾಹನೀಡಿದುವೆಂಬ ಸಂಗತಿಯು ಬಗ್ಗೆ ಕಿಂಚಿತ್ತೂ ಸಂದೇಹವಿಲ್ಲ. ಅವು ಕಲೆಗಳ ಬೆಳವಣಿಗೆಗೆ ಆಶ್ರಯಸ್ಥಾನವಾಗಿದ್ದುವಲ್ಲದೆ, ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿದ್ದುವು. ಆದರೆ ಅವುಗಳಿಂದ ವಿಶೇಷ ಪ್ರಯೋಜನ ಪಡೆಯುತ್ತಿದ್ದವರು ಸಮಾಜದ ಉತ್ತಮ ವರ್ಗದ ಜನರೇ ಹೊರತು, ಕೆಳವರ್ಗದವರಲ್ಲವೆಂಬ ಮಾತೂ ಸತ್ಯ. ಅರಮನೆ ಮತ್ತು ಗುರುಮನೆಗಳು ಜತೆಜತೆಯಾಗಿ ದೀನದಲಿತರನ್ನು ಮೂಲೆಗುಂಪು ಮಾಡಿದುವೇ ಹೊರತು, ಅವರನ್ನು ಮೇಲೆತ್ತುವ ಕಾರ್ಯಕ್ಕೆ ಕೈಹಾಕಲಿಲ್ಲ.

ಅರಮನೆಗಳ ಪ್ರಾಬಲ್ಯ ಕುಗ್ಗುತ್ತಿದ್ದಂತೆ ಗುರುಮನೆಗಳ ದೃಷ್ಟಿ ಸಾಮಾನ್ಯ ಜನತೆಯ ಕಡೆಗೂ ಹೊರಳಿದ್ದು ಸಮಾಧಾನಕರವಾದ ಸಂಗತಿ. ಅದಕ್ಕೆ ಕಾಲಧರ್ಮವೂ ಕಾರಣವೆಂಬುದನ್ನು ಮತ್ತೆ ಒತ್ತಿ ಹೇಳಬೇಕಾಗಿಲ್ಲ. ಪ್ರಾಚೀನ ಕಾಲದಲ್ಲಿ ಬುದ್ಧ, ನಡುಗಾಲದಲ್ಲಿ ಬಸವೇಶ್ವರಾದಿ ಶರಣರು, ಆಧುನಿಕಕಾಲದಲ್ಲಿ ಮಾರ್ಕ್ಸ್, ಲೆನಿನ್, ಗಾಂಧಿಯವರು ಚಕ್ರವರ್ತಿ ಶ್ರೀಮಂತರಿಗೆ ಹಾಗೂ ಶೋಷಕರಿಗೆ ದುಃಸ್ವಪ್ನವಾಗಿ ಕಾಣಿಸಿಕೊಳ್ಳಲಾಗಿ ಜಗತ್ತಿನ ಆಲೋಚನಾ ವಿಧಾನವೇ ಹೊಸ ದಾರಿ ಹಿಡಿಯಿತು. ಪ್ರಜಾಪ್ರಭುತ್ವನೀತಿ, ವೈಜ್ಞಾನಿಕಪ್ರಗತಿ ಹಾಗೂ ವೈಚಾರಿಕಕ್ರಾಂತಿಗಳು ಜನ ಮನಸ್ಸಿನ ಕಸ ಧೂಳು ಜೇಡರಬಲೆಗಳನ್ನು ನಾಶಮಾಡಿ, ಪರಿಮಾರ್ಜನ ಕಾರ್ಯದಲ್ಲಿ ಪ್ರವೃತ್ತವಾದನಂತರದ ಸಮಾಜದ ಗತಿ ನಿದಾನವಾಗಿಯಾದರೂ ವ್ಯತ್ಯಸ್ತವಾಗುತ್ತಿದೆ. ಸಾಮಾನ್ಯ ಜನತೆಯ ಉದ್ಧಾರದಲ್ಲಿ ತಮ್ಮ ಅಸ್ತಿತ್ವದ ಸಾರ್ಥಕತೆಯಿದೆ ಎಂಬುದನ್ನರಿತು ಮಠಗಳು ಶೈಕ್ಷಣಿಕ ಕಾರ್ಯಗಳಿಗೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡಿರುವುದು ಶುಭೋದಯದ ಸಂಕೇತವಾಗಿದೆ. ಸರ್ವಾಭ್ಯುದಯಕ್ಕೆ ಹಾಗೂ ಸಾಂಸ್ಕೃತಿಕ ಸಂಪತ್ತಿಗೆ ಶಿಕ್ಷಣವೆ ಮೂಲವಷ್ಟೆ ಮತ್ತು ಸಂಜೀವನೀ ಶಕ್ತಿಯಷ್ಟೆ.

ಶಿಕ್ಷಣ ಸಾರ್ಥಕವಾಗಬೇಕಾದರೆ, ಪ್ರಗತಿಮುಖವಾಗಬೇಕಾದರೆ ಸ್ವಾತಂತ್ರ್ಯ ಅತ್ಯವಶ್ಯ. ಗಾಂಧಿಪ್ರಣೀತ ವಿಕೇಂದ್ರೀಕರಣತತ್ವದಿಂದ ಮಾತ್ರ ಸ್ವಾತಂತ್ರ್ಯ ಸಾಧ್ಯ. ಶಾಲಾ ಕಾಲೇಜುಗಳಾಗಲೀ, ಪಠ್ಯಕ್ರಮವಾಗಲೀ, ಪಠ್ಯ ಪುಸ್ತಕಗಳಾಗಲೀ ಒಂದರ ಪಡಿಯಚ್ಚು ಮತ್ತೊಂದಾಗಬಾರದು. ಈ ದೃಷ್ಟಿಯಿಂದ ಅವುಗಳಿಗೆ ಸ್ವಾಯತ್ತತೆ ಅವಶ್ಯಕ. ಸ್ವಾತಂತ್ರ್ಯ ಸ್ವಚ್ಛಂದವಾಗದಂತೆ, ಭ್ರಷ್ಟಾಚಾರಕ್ಕೆಡೆಯಾಗದಂತೆ, ಗುಣಮಟ್ಟ ಕುಸಿಯದಂತೆ ಸರ್ಕಾರ ಜಾಗರೂಕವಾಗಿರಬೇಕು ; ನಿಯಂತ್ರಣವಿಟ್ಟುಕೊಳ್ಳಬೇಕು.

ಸರ್ಕಾರ ಶಿಕ್ಷಣಸಂಸ್ಥೆಗಳನ್ನು ನೇರವಾಗಿ ನಡೆಸಬಾರದೆಂಬುದು ಈ ಮಾತಿನ ಅರ್ಥವಲ್ಲ. ಸಮಾಜದ ಹಿತ ದೃಷ್ಟಿಯಿಂದ ನಡೆಸಲೇಬೇಕು ; ಅವು ಮಾದರಿ ಸಂಸ್ಥೆಗಳಾಗಬೇಕು. ದುರ್ದೈವದಿಂದ ಅವು ಹಾಗಾಗಿಲ್ಲ. ಖಾಸಗಿ ಸಂಸ್ಥೆಗಳಲ್ಲಿರುವ ಗುಣಮಟ್ಟ ಸರ್ಕಾರಿ ಸಂಸ್ಥೆಗಳಲ್ಲಿಲ್ಲ. ಮಣಿಪಾಲ್ ಮೆಡಿಕಲ್ ಕಾಲೇಜು ಈ ಮಾತಿಗೆ ಸಾಕ್ಷಿ. ಕೆಲವು ಮಠಗಳು ನಡೆಸುತ್ತಿರುವ ಕಾಲೇಜುಗಳ ಮಟ್ಟ ತುಂಬ ಎತ್ತರದಲ್ಲಿದೆ. ಅವನ್ನು ಮಾದರಿ ಸಂಸ್ಥೆಗಳೆಂದರೆ ಸಲ್ಲುತ್ತದೆ. ಸರ್ಕಾರಿ ಸಂಸ್ಥೆಗಳು ಅವುಗಳಿಂದ ಪಾಠ ಕಲಿಯಬೇಕಾಗಿದೆ. ಅದು ಬಿಟ್ಟು, ಅವನ್ನು ತನ್ನ ಸಂಸ್ಥೆಗಳ ದರ್ಜೆಗಿಳಿಸುವ ಸರಕಾರದ ಪ್ರಯತ್ನ ಸ್ತುತ್ಯವಲ್ಲ. ಅಧಿಕಾರಕೇಂದ್ರೀಕರಣವೇ ಅಧಿಕಾರಶಾಹಿಯ ಗುರಿ. ಅದರಿಂದ ಆತ್ಮಹಾನಿ, ಸರ್ವನಾಶ.

ಶುಲ್ಕದ ಪ್ರಶ್ನೆಯಿಂದು ವಿವಾದಾಸ್ಪದವಾಗಿದೆ. ಎಲ್ಲಿಯವರೆಗೆ ಸರ್ಕಾರ ಸಮಾಜವಾದವನ್ನು ಕಾರ್ಯಗತ

ಗೊಳಿಸದೆ, ಬಂಡವಾಳಗಾರಿಕೆಯನ್ನು ಬೆಂಬಲಿಸುತ್ತದೆಯೋ ಅಲ್ಲಿಯ ತನಕ ಖಾಸಗಿ ಶಿಕ್ಷಣಸಂಸ್ಥೆಗಳ ಶುಲ್ಕದ ವಿಷಯದಲ್ಲಿ ಚಕಾರವೆತ್ತುವ ನೈತಿಕ ಸಾಮರ್ಥ್ಯ ಅದಕ್ಕಿಲ್ಲ. ಅದು ಅವುಗಳ ಲೆಕ್ಕಪತ್ರಗಳ ಮೇಲೆ ಪತೋಟಿಯಿಟ್ಟು ಕೊಳ್ಳಬೇಕೆಂಬ, ಅವು ವ್ಯಾಪಾರಸಂಸ್ಥೆಗಳಾಗದಂತೆ ನೋಡಿಕೊಳ್ಳಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಉಳ್ಳವರು ಹಣ ತೆತ್ತು ಓದಲಿ; ಇಲ್ಲದವರಿಗಾಗಿ ಸರ್ಕಾರ ಮಾದರಿ ಸಂಸ್ಥೆಗಳನ್ನು ನಡೆಸಲಿ.

ಶಿಕ್ಷಣಕ್ಷೇತ್ರದಲ್ಲಿ ಕರ್ನಾಟಕ-ಕೇರಳ ಬಿಟ್ಟರೆ-ಇತರ ರಾಜ್ಯಗಳಿಗಿಂತ ಮುಂದಿದೆ. ಅದರ ಮುಂದಾಳುತನಕ್ಕೆ ಖಾಸಗಿ ಸಂಸ್ಥೆಗಳೇ ಮುಖ್ಯಕಾರಣ. ಸರ್ಕಾರದ ಉದಾರನೀತಿಯಿಂದಾಗಿ ಖಾಸಗಿ ವಲಯದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿವೆ, ನಿಜ. ಅಂಥ ನೀತಿಯನ್ನನುಸರಿಸದೆ, ತಾನೇ ಎಲ್ಲ ಶಾಲಾಕಾಲೇಜುಗಳನ್ನು ನಡೆಸಿದ್ದರೆ, ಈಗ ಖರ್ಚುಮಾಡುವ ಹಣಕ್ಕಿಂತ ಎರಡು ಪಟ್ಟು ಸರ್ಕಾರವೆಚ್ಚಿಸಬೇಕಾಗುತ್ತಿತ್ತು. ಅಷ್ಟು ದೊಡ್ಡ ಮೊತ್ತವನ್ನು ಸರ್ಕಾರ ಭರಿಸುವ ಬಗೆಯಾದರೂ ಹೇಗೆ? ಖಾಸಗಿ ಸಂಸ್ಥೆ ಮುಗ್ಗರಿಸಿದಾಗ, ಭ್ರಷ್ಟಪಥಹಿಡಿದಾಗ ಅದನ್ನು ವಶ ಪಡಿಸಿಕೊಳ್ಳುವ ಸಾರ್ವಭೌಮಿಕ ಹಕ್ಕು ಸರ್ಕಾರಕ್ಕಿದ್ದೇ ಇದೆ.

೨

ಕರ್ನಾಟಕದ ಶಿಕ್ಷಣಕ್ಷೇತ್ರದಲ್ಲಿ ಮಠಗಳ-ಅದರಲ್ಲಿಯೂ ವೀರಶೈವ ಮಠಗಳ ಪಾತ್ರ ಅದ್ವಿತೀಯವಾದುದು. ಶಿಕ್ಷಣಪ್ರಸಾರವೇ ಈಗ ಅನೇಕ ಮಠಗಳ ಪ್ರಧಾನೋದ್ದೇಶವಾಗಿರುವಂತಿದೆ; ಅದು ಸ್ತುತ್ಯರ್ಹವೂ ಅಹುದು. ದೀನದಲಿತ ಸಮಾಜದ ಕ್ಷೇಮಪಾಲನೆಗಾಗಿ ಮತ್ತು ಗ್ರಾಮೀಣಜನರ ಹಿತಸಾಧನೆಗಾಗಿ ಮಠಗಳು ಸರಸ್ವತಿಯ ತೇರನ್ನು ಅವರವರ ಮನೆಗಳ ಬಳಿಗೆ ಕೊಂಡೊಯ್ಯುತ್ತಿವೆ. ಇತರ ಮಠೀಯ ಶಾಲಾಕಾಲೇಜುಗಳಂತಲ್ಲದೆ ಇವು ಭಾರತೀಯ ಸಂಸ್ಕೃತಿಗೆ ಹೊಂದಿಕೊಳ್ಳುವಂಥ ಶಿಕ್ಷಣವನ್ನು ನೀಡುತ್ತಿವೆ. ಕನ್ನಡ ಭಾಷೆ ಸಾಹಿತ್ಯಗಳಿಗೆ ವಿಶೇಷವಾದ ಪ್ರೋತ್ಸಾಹವನ್ನೊದಗಿಸುತ್ತಿವೆ.

ಇಂಥ ಮಠಗಳಲ್ಲಿ ಶ್ರೀ ಸುತ್ತೂರು ಮಠಕ್ಕೆ ಬಹು ಎತ್ತರದ ಸ್ಥಾನ ಲಭಿಸಬೇಕಾಗಿದೆ. ನಂಜನಗೂಡಿಗೆ ಅನತಿ ದೂರದಲ್ಲಿ ಕಪಿಲಾನದಿಯ ದಡದಲ್ಲಿರುವ ಸುತ್ತೂರು ಅನೇಕ ತಪಸ್ವಿಗಳ ತಪೋಮಹಿಮೆಯಿಂದ ಪಾವನವಾಗಿದೆ; ಪ್ರಖ್ಯಾತವಾಗಿದೆ. ಅಲ್ಲಿಯ ಗುರುಪರಂಪರೆ ಹತ್ತನೆಯ ಶತಮಾನದಷ್ಟು ಪ್ರಾಚೀನವಾದುದು. ಇತ್ತೀಚಿನವರೆಗೆ ಅಲ್ಲಿಯ ಧರ್ಮಗುರುಗಳು ಧರ್ಮಪ್ರಚಾರ, ಅಧ್ಯಾತ್ಮಸಾಧನೆ ಮತ್ತು ಸಾಹಿತ್ಯಾಭಿವೃದ್ಧಿಕಾರ್ಯಗಳಲ್ಲಿ ನಿರತ ರಾಗಿದ್ದುದುಂಟಷ್ಟೆ. ಮಲೆಯ ಮಾದೇಶ್ವರರಿಗೂ ಈ ಮಠ ಆಸರೆಯಾಗಿದ್ದಿತೆಂಬ ಸಂಗತಿ ನೆನಪಿನಲ್ಲಿಡತಕ್ಕದ್ದಾಗಿದೆ. ಮೊನ್ನೆ ಮೊನ್ನೆಯ ತನಕ ಬದುಕಿದ್ದ ಮಹಾತಪಸ್ವಿ ಶ್ರೀ ಶಿವಯೋಗಿ ಶಿವರಾತ್ರಿಸ್ವಾಮಿಗಳ ಕಾಲದಲ್ಲಿ ಮಠದ ಗಮನ ವಿದ್ಯಾಕ್ಷೇತ್ರದ ಕಡೆಗೆ ಹರಿಯುತ್ತದೆ. ಮೈಸೂರು ಜಿಲ್ಲೆಯ ಹಲವು ಊರುಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಅನ್ನದಾಸೋಹದ ಮೂಲಕ ಸಹಸ್ರಾರು ಬಡವಿದ್ಯಾರ್ಥಿಗಳ ವಿದ್ಯಾರ್ಜನೆಗೆ ನೆರವಾಗುತ್ತಾರೆ.

'ನ ಹಿ ಜ್ಞಾನೇನ ಸದೃಶಂ' ಅಮೃತಂತು ವಿದ್ಯಾ 'ವಿದ್ಯಾದಾಸೋಹವೇ ದಾಸೋಹ'ವೆಂಬುವು ಇಂದಿನ ಗುರು ಗಳಾದ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರ ಧ್ಯೇಯಮಂತ್ರಗಳಾಗಿವೆ. ವಿದ್ಯೆಯಿಂದಲೇ ಮುಕ್ತಿ, ವಿದ್ಯೆ ಯಿಂದಲೇ ದೇಶಾಭ್ಯುದಯವೆಂಬ ಸಂಗತಿಯೂ ಅವರಿಗೆ ಮನವರಿಕೆಯಾಗಿದೆ. ಅವರು ವ್ರತನಿಷ್ಠರು, ಸಂಕಲ್ಪ ಸಿದ್ಧರು; ಮಾತಿನಲ್ಲಿ ಮೃದು, ಕ್ರಿಯೆಯಲ್ಲಿ ಚುರುಕು, ತಪೋಧನರಾಗಿಯೂ ವ್ಯವಹಾರಜ್ಞರು; ವೀರಶೈವ ಪೀಠದ ಗುರುಗಳಾಗಿಯೂ ಸರ್ವಧರ್ಮಗಳಲ್ಲಿ ಗೌರವವುಳ್ಳವರು; ತಮ್ಮ ನಿಷ್ಕಪಟ ಮನೋಭಾವದಿಂದ, ಔದಾರ್ಯದಿಂದ ವೀರಶೈವರನ್ನು ಮಾತ್ರವಲ್ಲ, ಎಲ್ಲ ಜಾತಿಯ ಜನರನ್ನು ಚುಂಬಕದಂತೆ ತಮ್ಮೆಡೆಗೆ ಆಕರ್ಷಿಸಿಕೊಂಡಿದ್ದಾರೆ. ಸಹಾಯ ಮಾಡುವಾಗ ಆ ಜಾತಿ, ಈ ಜಾತಿಯೆಂಬುದನ್ನು ಲೆಕ್ಕಿಸುವುದಿಲ್ಲ. ಒಳ್ಳೆಯವರಂತೆ ದುಷ್ಟರೂ ಅವರ ಬಳಿ ಹೋಗು ತ್ತಾರೆ. ದುಷ್ಟರಮೇಲೂ ಪ್ರೇಮವರ್ಷವನ್ನು ಸುರಿಸುತ್ತಾರೆ. ಬೆನ್ನಹಿಂದೆ ಅವರನ್ನು ನಿಂದಿಸಿ, ಮುಂದೆ ಬಂದು ಪಾದಮುಟ್ಟಿ ನಮಸ್ಕರಿಸುವ ವಂಚಕರನ್ನು ಸಹ ಅವರು ದ್ವೇಷಿಸುವುದಿಲ್ಲ, ಉಪಕಾರಕ್ಕೆಂದು ಅವರ ಬಳಿ ಹೋದ ಜನ ನಿರಾಶರಾಗಿ ಹಿಂದಿರುಗಿದಂತಿಲ್ಲ. ಸಿಟ್ಟು ಅವರ ಬಳಿ ಎಂದೂ ಸುಳಿದದ್ದು ಕಾಣೆ. ಪಾದಮುಟ್ಟಿ ನಮಸ್ಕರಿಸಲಿ, ಹಾಗೆಯೇ ನಮಸ್ಕರಿಸಲಿ, ಎಲ್ಲರನ್ನು ಪ್ರಸನ್ನವದನದಿಂದ ಸ್ವಾಗತಿಸಿ, ನಗುವಿನಿಂದ ತಕ್ಕೈಸಿ, ಮೃದುವಾದ ಹಿತವಾದ ಮಾತುಗಳಿಂದ ಕ್ಷಿಪ್ರದಲ್ಲಿಯೇ ಬಂದವರ ಮನವನ್ನು ಸೆರೆಹಿಡಿಯುತ್ತಾರೆ. ಇವರು ಚಿಕ್ಕವರು ಅವರು ದೊಡ್ಡವರು ಎಂಬ ಭೇದ ಅವರಲ್ಲಿಲ್ಲ. ಅಂತೆಯೇ ಎಂಥ ಕೆಲಸವೇ ಆಗಲಿ, ಅದು ಒಳ್ಳೆಯದೆಂದು ಕಂಡರೆ ತಳುವದೆ ಪೂರೈಸು

ತ್ತಾರೆ. ಇತರರು ನೀಡುವ ಸಲಹೆ ಸೂಕ್ತವೆಂದು ತೋರಿದ್ದಾದರೆ ಸ್ವೀಕರಿಸಿ, ಕಾರ್ಯಗತಗೊಳಿಸುತ್ತಾರೆ. ಊಚುನೀಚುಗಳೇನಿದ್ದರೂ ಸರಿಪಡಿಸಿಕೊಂಡು ಹೋಗುವ ಅನುಕಂಪ ಮತ್ತು ಮನೋವೈಶಾಲ್ಯ ಅವರಲ್ಲಿ ನೈಜವಾಗಿವೆ.

ಅವರ ವ್ಯವಹಾರಜ್ಞತೆಗೆ, ಅವರ ದೂರದೃಷ್ಟಿಗೆ ಹಾಗೂ ಹಿಂದಿನ ಗುರುಗಳ ತಪೋಮಹಿಮೆಗೆ ಮಹಾವಿದ್ಯಾಪೀಠದ ಆಸರೆಯಲ್ಲಿ ತಲೆಯೆತ್ತಿ ನಿಂತಿರುವ ವಿದ್ಯಾಲಯಗಳೇ ಸಾಕ್ಷಿ. ಕೇವಲ ವಿದ್ಯಾರ್ಥಿನಿಲಯಗಳಿಂದ ಅಥವಾ ಸಂಸ್ಕೃತಶಾಲೆಗಳಿಂದ ಸಮರ್ಪಕವಾಗಿ ವಿದ್ಯಾಭಿವೃದ್ಧಿ ಸಾಧ್ಯವಿಲ್ಲವೆಂಬುದನ್ನು ಮನಗಂಡ ಸ್ವಾಮಿಜೀಯವರು ೧೯೫೫ರಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭಿಸಿರುತ್ತಾರೆ. ನಾಲ್ಕು ವರ್ಷಗಳ ನಂತರ, ಅಂದರೆ ೧೯೫೯ ಮತ್ತು ೧೯೬೦ನೆಯ ಸಂವತ್ಸರಗಳಲ್ಲಿ ಕ್ರಮವಾಗಿ ಉಪಾಧ್ಯಾಯರ ಮತ್ತು ಉಪಾಧ್ಯಾಯಿನಿಯರ ತರಬೇತಿ ಸಂಸ್ಥೆಗಳನ್ನು ಮೈಸೂರಲ್ಲಿ ತೆರೆದಿರುತ್ತಾರೆ. ಅವುಗಳಿಗೆ ಊರೆಯಾಗಿ ೧೯೬೨ ರಲ್ಲಿ ಪ್ರಾಯೋಗಿಕ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿರುತ್ತಾರೆ. ಎರಡು ಶಿಕ್ಷಕ ತರಬೇತಿ ಕೇಂದ್ರಗಳು, ಎರಡು ಪ್ರಾಥಮಿಕ ಶಾಲೆಗಳು, ಎರಡು ಶಿಶುವಿಹಾರಗಳು, ಮೂರು ಶಿಶುಪಾಲನಾಕೇಂದ್ರಗಳು ಹಾಗೂ ಹದಿಮೂರು ಪ್ರೌಢಶಾಲೆಗಳಲ್ಲಿ ಒಟ್ಟು ೪೬೦೦ಕ್ಕಿಂತಲೂ ಹೆಚ್ಚಿನ ಮಕ್ಕಳು ವ್ಯಾಸಂಗಮಾಡುತ್ತಿದ್ದಾರೆ. ಈ ಪ್ರೌಢಶಾಲೆಗಳ ಪೈಕಿ ಎರಡು ಮಹಿಳೆಯರಿಗಾಗಿ, ಒಂದು ಹಿಂದಿ ಮಾಧ್ಯಮದ ವಿದ್ಯಾರ್ಥಿಗಳಿಗಾಗಿ ಮೀಸಲಾಗಿವೆ, ಒಂಬತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆಗೊಂಡಿವೆಯೆಂಬುದು ಗಮನಾರ್ಹ ಸಂಗತಿ. ಹಳ್ಳಿಗಾಡಿನ ಹಾಗೂ ಹಿಂದುಳಿದ ಗ್ರಾಮಾಂತರ ಜನರ ಬಗ್ಗೆ ಸ್ವಾಮಿಜೀಯವರಿಗಿರುವ ಕಾತರತೆ ಇದರಿಂದ ಅಭಿವ್ಯಕ್ತವಾಗುತ್ತದೆ.

ಮಹಾವಿದ್ಯಾಪೀಠ ಸಂಸ್ಕೃತ ಶಿಕ್ಷಣಕ್ಕೂ ಸಾಕಷ್ಟು ಉತ್ತೇಜನ ನೀಡುತ್ತಿದೆ. ಐದು ಸಂಸ್ಕೃತ ಪಾಠಶಾಲೆಗಳ ಪೈಕಿ ಎರಡು ಮೈಸೂರಿನಲ್ಲಿಯೂ, ಮೂರು ಚಾಮರಾಜನಗರ, ಸುತ್ತೂರು, ಕೃಷ್ಣರಾಜನಗರಗಳಲ್ಲಿಯೂ ಸ್ಥಾಪನೆಗೊಂಡಿದ್ದು, ಒಟ್ಟು ವರ್ಷಂಪ್ರತಿ ೬೩೫ ವಿದ್ಯಾರ್ಥಿಗಳು ಅವುಗಳ ಲಾಭ ಪಡೆಯುತ್ತಿದ್ದಾರೆ. ಮಠಗಳಿಗೆ 'ಮರಿ'ಗಳನ್ನು (ಉತ್ತರಾಧಿಕಾರಿಗಳನ್ನು) ಸೂಕ್ತ ತಳಹದಿಯ ಮೇಲೆ ತಯಾರುಮಾಡುವ ಸಲುವಾಗಿ 'ಗುರುಕುಲ'ವನ್ನು ಸ್ಥಾಪಿಸಲಾಗಿದೆ.

೩

ಪ್ರೌಢಶಿಕ್ಷಣ ವ್ಯವಸ್ಥೆಯಲ್ಲಿ ಪೂರ್ಣಾನುಭವವನ್ನು ಪಡೆದ ಸ್ವಾಮಿಜೀಯವರ ಲಕ್ಷ್ಯ ಉನ್ನತಶಿಕ್ಷಣದ ಕಡೆಗೆ ಹರಿದಿದ್ದು ೧೯೬೩ರಲ್ಲಿ. ಆ ಹೊತ್ತಿಗೆ ಕರ್ನಾಟಕದಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಇಂದಿನಂತೆ ದಟ್ಟವಾಗಿರಲಿಲ್ಲ. ದೇಶದಲ್ಲಿ ಇಂಜಿನಿಯರಿಂಗ್ ಪದವೀಧರರಿಗೆ ಸಾಕಷ್ಟು ಬೇಡಿಕೆಯೂ ಇದ್ದ ಕಾಲ. ಸರ್ಕಾರದ ಧನಸಹಾಯವಿಲ್ಲದೆ ದುಬಾರಿ ಖರ್ಚಿನ ಇಂಜಿನಿಯರಿಂಗ್ ಕಾಲೇಜನ್ನು ಮೈಸೂರು ನಗರದಲ್ಲಿ ಪ್ರಾರಂಭಿಸಿರುತ್ತಾರೆ. ಅಂದಿನಿಂದ ಈವರೆಗೆ ಎರಡು ಮೂರು ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆದು, ದೇಶದ ನಾನಾಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಾಲೇಜಿನ ಗುಣಸಾಮರ್ಥ್ಯದಿಂದ ಆಕರ್ಷಿತರಾಗಿ ನಾಡಿನ ನಾನಾಭಾಗಗಳಿಂದ ವಿದ್ಯಾರ್ಥಿಗಳು ಬಂದು ಒಟ್ಟುಗೂಡುತ್ತಾರೆ. ಇತ್ತೀಚೆಗಂತು ನೈಜೀರಿಯಾದ ವಿದ್ಯಾರ್ಥಿಗಳ ತರಬೇತಿಗೆಂದು ಕೇಂದ್ರಸರ್ಕಾರ ಈ ಕಾಲೇಜನ್ನು ಆರಿಸಿಕೊಂಡಿದೆ. ಅಷ್ಟೇ ಅಲ್ಲ, ಬೇರೆ ಕಡೆ ಸಿಗದ ಕೆಲವು ಹೊಸ ಪಠ್ಯವಿಷಯಗಳು ಸಹ ಇಲ್ಲಿ ಪ್ರವೇಶ ಪಡೆದಿರುವುದರಿಂದ ಇದು ವಿದ್ಯಾರ್ಥಿಗಳಿಗೊಂದು ಆಕರ್ಷಕ ಕೇಂದ್ರವಾಗಿದೆ. ೧೭೦೦ಕ್ಕೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಸಾಗಿಸುತ್ತಿದ್ದಾರೆ.

ಸಮಾಜದ ಎಲ್ಲ ವಿಧದ ವ್ಯಕ್ತಿಗಳಿಗೆ, ದೀನದಲಿತರಿಗೆ, ಶ್ರೀಮಂತರಿಗೆ, ಹಳ್ಳಿಗರಿಗೆ, ಪುರುಷರಿಗೆ, ಸ್ತ್ರೀಯರಿಗೆ ಸಮಾನ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸಬೇಕೆಂಬುದು ಸ್ವಾಮೀಜಿಯವರ ಹೆಬ್ಬಯಕೆ. ಸ್ತ್ರೀಯರು ಕೇವಲ ಪದವೀಧರರಾದರೆ ಸಾಲದು, ಅವರು ಪುರುಷರೊಡನೆ ಸಮಾನತೆಯಿಂದ ಬಾಳಬೇಕು, ಅವರು ಸಮಾಜದ ಬಂದಿಳಿಕೆಗಳಾಗದೆ, ಕುಟುಂಬಕ್ಕೆ ಭಾರವಾಗದೆ, ಸ್ವತಂತ್ರವಾಗಿ ಜೀವನ ನಡೆಸುವ ಸಾಮರ್ಥ್ಯವನ್ನು ಗಳಿಸಬೇಕೆಂಬುದು ಅವರ ಅಭಿಪ್ರಾಯ. ಅವರೆಂದೂ ಅಭಿಪ್ರಾಯಾಭಿವ್ಯಕ್ತಿ ಸಿದ್ಧಾಂತಗಳಲ್ಲಿಯೇ ಸಮಾಧಾನಗೊಂಡವರಲ್ಲ. ಮನಸ್ಸಿನಲ್ಲಿ ಮೂಡಿದ ಭಾವನೆ ಕ್ರಿಯೆಯಲ್ಲಿ ವ್ಯಕ್ತವಾಗಬೇಕೆನ್ನುವ ಛಲ ಅವರದು. ಆ ಛಲ ೧೯೮೦ರಲ್ಲಿ ಮಹಿಳಾ ಪಾಲಿಟೆಕ್ನಿಕ್ ಸ್ಥಾಪನೆಯಲ್ಲಿ ಸಫಲಗೊಂಡಿದೆ. ಅದು ಪೂರ್ಣರೂಪವನ್ನು ತಳೆದಾಗ ಮಹಿಳೆಯರಿಗೊಂದು ವರವಾಗುತ್ತದೆ.

ಇಂಜಿನಿಯರಿಂಗ್ ಮತ್ತು ವೈದ್ಯ ಪದವೀಧರರೇ ಅಪಾರ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗಿರುವಾಗ ವಿಜ್ಞಾನ

ಕಲಾ ಪದವೀಧರರ ಹಣೆಬರಹವನ್ನು ಕೇಳಬೇಕೆ? ಅಧಿಕಪ್ರಮಾಣದಲ್ಲಿ ವಿದ್ಯಾಪ್ರಸಾರವಾಗದಿದ್ದರೆ ಬೌದ್ಧಿಕವಾಗಿ ನಾಡು ಹಿಂದುಳಿದಿರಬೇಕಾಗುತ್ತದೆ; ವಿದ್ಯಾಪ್ರಸಾರವಾದರೆ ನಿರುದ್ಯೋಗ ಸಮಸ್ಯೆ ಭಯಂಕರ ರೂಪದಲ್ಲಿ ತಲೆಯೆತ್ತುತ್ತದೆ. ಇದೊಂದು ವಿಷವೃತ್ತ. ಈ ಎರಡು ಸಮಸ್ಯೆಗಳಲ್ಲಿ ಯಾವುದನ್ನು ಸರ್ಕಾರ ಆರಿಸಿಕೊಳ್ಳಬೇಕಾಗಿದೆ? ಸಾಮಾಜಿಕ ಸಮಾನತೆಯನ್ನು ಸಾಧಿಸಬೇಕೆನ್ನುವ ಸರ್ಕಾರ ವಿದ್ಯಾಪ್ರಸಾರವನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ವಿದ್ಯೆಯನ್ನು ಹಳ್ಳಿಗಳತನಕ ಕೊಂಡೊಯ್ಯಬೇಕಾಗುತ್ತದೆ. ನಿರಕ್ಷರಿ ಉದ್ಯೋಗಸ್ಥನಿಗಿಂತ ನಿರುದ್ಯೋಗಿ ವಿದ್ಯಾವಂತ ಮೇಲು. 'ವಿದ್ಯೆಗೆ ತಕ್ಕ ಉದ್ಯೋಗ ದೊರೆಯುವುದಾದರೆ ನಾಡು ಬಹುಬೇಗನೆ ಪ್ರಗತಿ ಹೊಂದುತ್ತದೆ. ಅಂದ ಮೇಲೆ ನಾಡಿನ ಆರ್ಥಿಕ ಶಕ್ತಿಯನ್ನು ಅಧಿಕಗೊಳಿಸಿ, ಸರ್ವರಿಗೂ ಉದ್ಯೋಗಾವಕಾಶ ಕಲ್ಪಿಸಿಕೊಡತಕ್ಕದ್ದು ಸರ್ಕಾರದ ಆದ್ಯಕರ್ತವ್ಯ. ಉತ್ಪನ್ನಕಾರಕವಲ್ಲದ ಯೋಜನೆಗಳನ್ನು ಸರ್ಕಾರ ರದ್ದುಗೊಳಿಸಬೇಕು.

ಅದೇನೇ ಇರಲಿ ಸಾವಿರಾರು ವರ್ಷಗಳಿಂದ ಅಜ್ಞಾನಾಂಧಕಾರದಲ್ಲಿ ತೊಳಲಾಡುತ್ತಿರುವ, ಹಿಂದುಳಿದವರೇ ಅಧಿಕವಾಗಿರುವ ನಾಡಿನಲ್ಲಿ ವಿದ್ಯಾಪ್ರಸಾರ ವಿಶೇಷ ಪ್ರಮಾಣದಲ್ಲಿ ಸಾಗಬೇಕೆಂಬ ಉದ್ದೇಶದಿಂದ ೧೯೬೪ರಿಂದೀಚೆಗೆ ಸ್ವಾಮಿಗಳು ವಿಜ್ಞಾನ ಕಲಾ ವಾಣಿಜ್ಯ ಮಹಾವಿದ್ಯಾಲಯಗಳನ್ನು ಹಲವು ಕಡೆಗಳಲ್ಲಿ ತೆರೆಯುತ್ತಿದ್ದಾರೆ. ಈ ಮಹಾವಿದ್ಯಾಲಯಗಳು ಜ್ಞಾನಕೇಂದ್ರಗಳೇ ಹೊರತು ಉದ್ಯೋಗವಿನಿಮಯ ಸಂಸ್ಥೆಗಳೆಂಬುದನ್ನು ಮರೆಯುವಂತಿಲ್ಲ. ಮಹಾವಿದ್ಯಾಪೀಠ ಪ್ರಾರಂಭಿಸಿರುವ ನಾಲ್ಕು ಕಾಲೇಜುಗಳಲ್ಲಿ ಎರಡು ಮೈಸೂರಿನಲ್ಲಿವೆ, ಮತ್ತೆರಡು ನಂಜನಗೂಡು, ಚಾಮರಾಜನಗರದಲ್ಲಿವೆ; ಅವುಗಳಲ್ಲೊಂದು ಮಹಿಳೆಯರಿಗೆ ಮೀಸಲಾದದ್ದು. ಕಾಲೇಜು ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಸುಮಾರು ೪೫೦೦.

ಮೈಸೂರು ಸುತ್ತಮುತ್ತಣ ಜಿಲ್ಲೆಗಳಲ್ಲಿ ಫಾರ್ಮಸಿ ಕಾಲೇಜುಗಳೇ ಇಲ್ಲ. ಅಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ವಿಫುಲವಾಗಿದೆ. ಸ್ವಂತ ಉದ್ಯೋಗಕ್ಕೂ ಈ ಶಿಕ್ಷಣ ಸಾಕಷ್ಟು ಅವಕಾಶವೊದಗಿಸುತ್ತದೆ. ಶ್ರೀಗಳವರು ಸ್ಥಾಪಿಸಿರುವ ಫಾರ್ಮಸಿ ಕಾಲೇಜಿನಲ್ಲಿ ಈಗ ೨೩೦ ವಿದ್ಯಾರ್ಥಿಗಳಿದ್ದಾರೆ. ಮುಂದಿನ ವರ್ಷದಿಂದ ಬಿ. ಫಾರ್ಮ ತರಗತಿ ಸಹ ತೆರೆಯಲು ಆಡಳಿತವರ್ಗದವರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಮೈಸೂರು ನಗರ ಇತ್ತೀಚೆಗೆ ವಿಶಾಲವಾಗಿ ಬೆಳೆಯುತ್ತಿದೆ. ಕೈಗಾರಿಕೆಗಳ ಹೆಚ್ಚಳದಿಂದಾಗಿ ಜನಸಂಖ್ಯೆ ಅಪಾರ ಪ್ರಮಾಣದಲ್ಲಿ ಬೆಳೆಯುತ್ತಿದೆ. ಜಿಲ್ಲೆಯ ನಗರಗಳು ಸಹ ಹಿಗ್ಗುತ್ತಿವೆ. ಕೈಗಾರಿಕೆ ಮತ್ತು ನೀರಾವರಿ ಯೋಜನೆಗಳಿಂದಾಗಿ ಆರ್ಥಿಕಶಕ್ತಿ ಹೆಚ್ಚುತ್ತಿದೆ. ಆದ್ದರಿಂದ ಹೊಸ ಕಾಲೇಜುಗಳ ಅಗತ್ಯ ಕೂಡ ಅನಿವಾರ್ಯವೆನಿಸುತ್ತಿದೆ. ಮುಂದಿನ ವರ್ಷದಿಂದಲೇ ಪದವೀಧರ ಶಿಕ್ಷಕರ ತರಬೇತಿ ಕಾಲೇಜನ್ನೂ ಕಾನೂನು ಕಾಲೇಜನ್ನೂ ಪ್ರಾರಂಭಿಸಲು ಏರ್ಪಾಡು ಮಾಡಿಕೊಳ್ಳಲಾಗಿದೆ.

೪

ಸ್ವಾಮೀಜಿಯವರ ಪ್ರಬಲವಾದ ಇಚ್ಛೆ ಮತ್ತೊಂದಿದೆ. ನಗರದ ಸಂದಿಗೊಂದಿಗಳಲ್ಲಿ ರೋಗರುಜಿನಗಳಿಂದ ವೈದ್ಯೋಪಚಾರವಿಲ್ಲದೆ ನರಳುತ್ತಿರುವ ರೋಗಿಗಳನ್ನೂ, ಸರ್ಕಾರ ನಡೆಸುತ್ತಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯ ರಿಕ್ತಸ್ಥಿತಿಯನ್ನೂ ಕಣ್ಣಾರೆ ಕಂಡ ಅವರು ಹೊಸದೊಂದು ವೈದ್ಯಕಾಲೇಜನ್ನು ಸ್ಥಾಪಿಸಲು ಹವಣಿಕೆ ಹಾಕಿಕೊಂಡಿದ್ದಾರೆ. ಮೈಸೂರಿನ ಜನಸಂಖ್ಯೆ ಹೆಚ್ಚಿದೆ. ಜನಸಂಖ್ಯೆಗನುಗುಣವಾಗಿ ಆಸ್ಪತ್ರೆಯ ಸೌಲಭ್ಯಗಳನ್ನು ಸರ್ಕಾರ ಹೆಚ್ಚಿಸಿಲ್ಲ. ಇರುವ ಆಸ್ಪತ್ರೆಯಲ್ಲಿ ಒಂದಿದ್ದರೆ ಮತ್ತೊಂದಿರುವುದಿಲ್ಲ. ಕೆಲವು ಸಾರಿ ಗ್ಲೂಕೋಸ್ ಇರುವುದಿಲ್ಲ. ಉಪಕರಣಗಳ ಕತೆ ವಿವರಿಸಬೇಕಾಗಿಲ್ಲ. ಈ ಕಾರಣದಿಂದಾಗಿ ಮತ್ತೊಂದು ಘನವಾದ ಆಸ್ಪತ್ರೆಯ ಆವಶ್ಯಕತೆಯಿದೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಮಹಾವಿದ್ಯಾಪೀಠ ಅಂಥದೊಂದು ಸರ್ವಸೌಲಭ್ಯಗಳುಳ್ಳ ಆಸ್ಪತ್ರೆಯನ್ನು ನಿರ್ಮಾಣ ಮಾಡುವುದಾದರೆ ಏಕೆ ಬೇಡವೆನ್ನಬೇಕು. ಈಗಿನ ಕಾಲದಲ್ಲಿ ಸಮರ್ಪಕವಾದ ಆಸ್ಪತ್ರೆಯ ವ್ಯವಸ್ಥೆಗೆ ಮೂರ್ನಾಲ್ಕು ಕೋಟಿ ರೂಪಾಯಿಗಳಾದರೂ ಬೇಕು. ಅಷ್ಟನ್ನು ಖರ್ಚುಮಾಡುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ.

ಸರ್ಕಾರದಲ್ಲಿಲ್ಲದ ಭಾರಿ ಮೊತ್ತದ ಹಣ ಮಠಕ್ಕೆಲ್ಲಿಂದ ಬರಬೇಕೆಂಬ ಪ್ರಶ್ನೆ ಮೂಡುವುದು ಸಹಜ. ವಸ್ತುಸ್ಥಿತಿ ತಿಳಿದವರಿಗೆ ಈ ಪ್ರಶ್ನೆ ಅಸಂಗತ. ಭಕ್ತರು ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ತಡೆಹಿಡಿಯಬಹುದು. ಆದರೆ ಮಠಕ್ಕೆ ಸಲ್ಲಿಸಬೇಕಾದ ಕಾಣಿಕೆಯನ್ನು ವಂಚಿಸಲಾರರು. ಸ್ವಾಮಿಗಳು ಬೇಕೆಂದರೆ ಕೊಡುವವರು ಮುಂದೆ

ಬಂದಾರು. ಎರಡನೆಯದಾಗಿ ಕ್ಯಾಪಿಟೇಷನ್ ಶುಲ್ಕ ಇದ್ದೇ ಇದೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮೊದಲುಗೊಂಡು ಅನೇಕ ದೊಡ್ಡ ಮನುಷ್ಯರು ಈ ಶುಲ್ಕವನ್ನು ವಿರೋಧಿಸುತ್ತಿದ್ದಾರೆ. ಅವರ ವಿರೋಧಕ್ಕೆ ಮುಖ್ಯವಾದ ಕಾರಣ, ಅರ್ಹ ವಿದ್ಯಾರ್ಥಿಗಳಿಗೆ ಸ್ಥಳ ದೊರೆಯಲಾರದೆಂಬುದು. ಪಿ.ಯು.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳೇ ಅರ್ಹತೆಯ ಮಾಪಕವೆಂದು ಹೇಳಲಾಗದು. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸಹ ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ಪಲ್ಟಿ ಹೊಡೆಯುವುದುಂಟು. ಎರಡನೆಯ ದರ್ಜೆಯ ವಿದ್ಯಾರ್ಥಿಗಳು ನಿರಾಯಾಸ ತೇರ್ಗಡೆಯಾದದ್ದು ಉಂಟು. ಇದಕ್ಕೆ ಅನೇಕ ಕಾರಣಗಳುಂಟು. ಅವುಗಳ ವಿವರಣೆ ಇಲ್ಲಿ ಅನವಶ್ಯ. ಅಂಕಗಳ ಸಂಪಾದನೆಗೆ ಪರಿಸರವೂ ಹಿತವಾದುದಿರಬೇಕು. ಅಷ್ಟೇ ಅಲ್ಲ, ಶೇಕಡ ೬೦ ಅಥವಾ ೭೦ ಅಂಕಗಳನ್ನು ಪಡೆದ ವಿದ್ಯಾರ್ಥಿ ೯೦ ಪಡೆದವನಿಗಿಂತ ಕೀಳೆಂದು ಪರಿಗಣಿಸುವುದರಿಂದ ಮಾನವತೆಗೆ ಅಪಚಾರವೆಸಗಿದಂತಾಗುತ್ತದೆ. 'ಸರ್ವಜ್ಞ'ರಂಥ ವಿದ್ಯಾರ್ಥಿಗಳು ಅನ್ಯಕ್ಷೇತ್ರಗಳಿಗೆ ಹೋದರೂ ಯಶಸ್ವಿಯಾಗುತ್ತಾರೆ ? ಉಳಿದವರೋ ? ಮೇಲಾಗಿ ಅಂಥವರೆಲ್ಲ ಒಂದೇ ಕಡೆಗೆ ಧಾವಿಸುವುದಾದರೆ ಬೇರೆ ಕ್ಷೇತ್ರಗಳು ಬರಡಾಗುವುದಿಲ್ಲವೆ ? ಅವರೆಲ್ಲ ಒಂದೇ ದಿಕ್ಕಿಗೆ ನುಗ್ಗಿ ನಿರುದ್ಯೋಗಿಗಳಾಗುವ ಬದಲು ಬೇರೆ ಮಾರ್ಗ ಹಿಡಿಯುವುದು ಮೇಲು.

ಶುಲ್ಕ ಕೊಡುವವರು ಶ್ರೀಮಂತರಷ್ಟೆ. ಶ್ರೀಮಂತ ದರಿದ್ರರೆಂಬ ವ್ಯತ್ಯಾಸ ಸಲ್ಲದು. ನಿಜ. ಆ ವ್ಯತ್ಯಾಸವಿರುವ ತನಕವಾದರೂ ನಾನಾ ಉಪಾಯಗಳಿಂದ ಶ್ರೀಮಂತರ ಹಣವನ್ನು ಕರಗಿಸಬೇಕಾದ್ದು ಸಮಾಜದ ಹಾಗೂ ಸರ್ಕಾರದ ಕರ್ತವ್ಯ. ಸರ್ಕಾರ ಹೇರುವ ಕರಭಾರದಿಂದ ಶ್ರೀಮಂತರ ಕೂದಲು ಸಹ ಅಲುಗಿಸುವಂತೆ ಕಾಣುವುದಿಲ್ಲ. ಕ್ಯಾಪಿಟೇಷನ್ ಶುಲ್ಕದ ಮೂಲಕವಾದರೂ ಅವರ ಹಣದಕೊಬ್ಬು ಅಲ್ಪಸ್ವಲ್ಪ ಕರಗುವಂತಾದರೆ ಸರ್ಕಾರ ಕೆರಳುವುದ್ಯಾದರೂ ಏಕೆ ? ಅವರ ಮಕ್ಕಳಿಗೆ ಸರ್ಕಾರ ಉದ್ಯೋಗ ಒದಗಿಸಬೇಕಾಗಿಲ್ಲ. ಅವರು ನಿರುದ್ಯೋಗಿಗಳಾದರೆ ಸರ್ಕಾರ ಏಕೆ ಚಿಂತಿಸಬೇಕು ? ಅವರಿಗೆ ಸ್ವಾವಲಂಬನ ಶಕ್ತಿ ಇರೋಣದರಿಂದ ಖಾಸಗಿ ವೈದ್ಯಾಲಯ ತೆರೆದಾದರೂ ಜೀವನ ಸಾಗಿಸುತ್ತಾರೆ.

ಬೇರೆ ರಾಜ್ಯಗಳ ಅಥವಾ ದೇಶಗಳ ವಿದ್ಯಾರ್ಥಿಗಳಿಗೆ ವೈದ್ಯಕಾಲೇಜುಗಳಲ್ಲಿ ಸ್ಥಳಾವಕಾಶಮಾಡಿಕೊಡಬಾರದೆನ್ನುವುದು ವಿಪರೀತನವಾಗುತ್ತದೆ. 'ಜೈ ಹಿಂದ್' ಭಾರತವೆಲ್ಲ ಒಂದು ಎಂದು ಹೇಳುವ ಜನ ಆ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ನಿಷೇಧ ಹೇರುವುದು ಸಂಕುಚಿತತೆಯ ಸಂಕೇತವಾಗುತ್ತದೆ; ರಾಷ್ಟ್ರದ ಹಿತಕ್ಕೆ ಮಾರಕವಾಗುತ್ತದೆ. ಹೊರದೇಶಗಳಿಂದ ಬರುವ ವಿದ್ಯಾರ್ಥಿಗಳ ಶುಲ್ಕ ವಿಶೇಷ ಪ್ರಮಾಣದಲ್ಲಿರಲಿ. ನಮ್ಮ ವಿಶ್ವವಿದ್ಯಾಲಯಗಳ ಪದವೀಧರರು ದೇಶವಿದೇಶಗಳಲ್ಲೆಲ್ಲ ಹರಡುವುದಾದರೆ ನಾಡಿಗೆ ಗೌರವ ಪ್ರಾಪ್ತವಾಗುವುದಿಲ್ಲವೆ ? ಹೊರಗಡೆಯವರ ಹಣದಿಂದ ನಮ್ಮ ಆಸ್ಪತ್ರೆಗಳನ್ನು ಬೆಳೆಸುವುದಾದರೆ ಅಂತ್ಯದಲ್ಲಿ ರಾಜ್ಯಕ್ಕೆ ಅಪಾರ ಲಾಭ ದೊರೆತಂತಾಗುತ್ತದೆ. ಮಣಿಪಾಲದ ವೈದ್ಯಕಾಲೇಜು ಬೆಳೆದದ್ದಕ್ಕೆ ಮತ್ತು ಅಂತರರಾಷ್ಟ್ರೀಯ ಕೀರ್ತಿ ಸಂಪಾದಿಸಿದ್ದಕ್ಕೆ ಹೊರಗಡೆಯ ವಿದ್ಯಾರ್ಥಿಗಳೂ ಬಹುಮಟ್ಟಿಗೆ ಕಾರಣರೆಂಬುದನ್ನು ಯಾರೂ ಮರೆಯಲಾಗದು. ಆ ಕಾಲೇಜು ಪೈಗಳ ಕುಟುಂಬದ ಆಸ್ತಿಯೇ? ದೇಶದ ಆಸ್ತಿಯಲ್ಲವೆ ? ಕ್ಯಾಪಿಟೇಷನ್ ಶುಲ್ಕ ಸರಿಯಾಗಿ ವಿನಿಯೋಗವಾಗುತ್ತಿದೆಯೆ ಎಂದು ಎಚ್ಚರಿಕೆ ವಹಿಸಬೇಕಾದ್ದು ಸರ್ಕಾರದ ಧರ್ಮ.

ದೊಡ್ಡದೊಂದು ಆಸ್ಪತ್ರೆ ಇರುವಾಗ, ಅಲ್ಲಿ ಬೋಧನೆಗೂ ಅವಕಾಶವಿರುವುದಾದರೆ ಪ್ರಾಧ್ಯಾಪಕರ ಜ್ಞಾನ ದಿನೇದಿನೇ ನವೋನವವಾಗಲನುಕೂಲವಾಗುತ್ತದೆ. ಇರುವ ಸೌಲಭ್ಯಗಳನ್ನು ವಿದ್ಯಾರ್ಥಿಗಳ ಪಾಠಪ್ರವಚನಗಳಿಗೂ ಬಳಸಿಕೊಂಡಂತಾಗುತ್ತದೆ. ಹಿಂದಿನ ಕಾಲದಲ್ಲಿ ದೇವಾಲಯವನ್ನು ಪೂಜೆ, ಕಲಾರಾಧನೆ, ವಿದ್ಯಾಪ್ರಸಾರ ಮೊದಲಾದ ಸಕಲ ಸಾಂಸ್ಕೃತಿಕ ಚಟುವಟಿಕೆಗಳಿಗೂ ಉಪಯೋಗಿಸಿಕೊಳ್ಳುತ್ತಿದ್ದುದುಂಟಷ್ಟೆ. ಅಂತೆಯೇ ಆಸ್ಪತ್ರೆಯನ್ನು ನಾನಾ ಲಾಭಗಳಿಗೆ ಬಳಸಿಕೊಳ್ಳುವುದು ಜಾಣ್ಮೆಯಾಗುತ್ತದೆ.

ಅಂದರೆ ಕಾಲೇಜುಗಳನ್ನು ಮಿತಿಯಿಲ್ಲದೆ ಬೆಳೆಸಬೇಕೆಂಬುದು ನನ್ನ ಇರಾದೆಯಲ್ಲ. ಸರ್ಕಾರ ವಿಪರೀತವಾಗಿ ಬೆಳೆಯದಂತೆ ನಿಯಂತ್ರಿಸಬೇಕು, ನಿಜ. ಆದರೆ ಅವನ್ನು ಯಾರು ಸಮರ್ಪಕವಾಗಿ ಬೆಳೆಸಬಲ್ಲರು. ಅವು ಎಲ್ಲಿ ಅವಶ್ಯಕವೆಂಬುದನ್ನು ಸರ್ಕಾರ ಅರಿಯಬೇಕಾಗುತ್ತದೆಂಬುದೇ ನನ್ನ ಅಭಿಪ್ರಾಯ.

ಈ ಎಲ್ಲ ದೃಷ್ಟಿಗಳಿಂದ ಸ್ವಾಮಿಯವರ ಬೇಡಿಕೆ ಅಸಾಧುವೆಂದು ತೋರುವುದಿಲ್ಲ. ಅವರು ಕರ್ತೃತ್ವ ಸಾಮರ್ಥ್ಯ ಉಳ್ಳ, ಕಾರ್ಯನಿಷ್ಠೆಯ ವ್ಯಕ್ತಿಗಳಾದ್ದರಿಂದ ಹಿಡಿದ ಕೆಲಸವನ್ನು ಅಚ್ಚುಕಟ್ಟಾಗಿ ಪರಿಣಾಮಕಾರಿಯಾಗಿ ಮಾಡಬಲ್ಲರು. ಇಂಥ ಸಮರ್ಥರ ಸಾಮರ್ಥ್ಯವನ್ನು ಸಮಾಜದ ಒಳಿತಿಗಾಗಿ ಬೆಳಸಿಕೊಳ್ಳಬೇಕಾದ್ದು ಅಧಿಕಾರದಲ್ಲಿರುವವರ ಹೊಣೆ.

೫

ಇಂಡಿಯಾದೇಶದ ಶಾಲಾಕಾಲೇಜುಗಳಲ್ಲಿ ಬೇತೇರ್ಗಡೆಯಾಗುವವರ ಸಂಖ್ಯೆ ಭೀಕರ ಪ್ರಮಾಣದಲ್ಲಿದೆ. ಶಿಕ್ಷಣತಜ್ಞರು ಹಾಗೂ ಸರ್ಕಾರ ಈ ಸಂಗತಿಯನ್ನು ಮನದಂದುಕೊಳ್ಳದಿರುವುದು ವಿಷಾದದ ವಿಚಾರವಾಗಿದೆ. ಈ ಬೇತೇರ್ಗಡೆಯ ಸಂಖ್ಯೆ ನಗರಗಳಿಗಿಂತ ಹಳ್ಳಿಗಳಲ್ಲಿ ಅಧಿಕವಾಗಿದೆ. ಇದರಿಂದಾಗಿ ಹಳ್ಳಿಗರು ಸ್ವಾತಂತ್ರ್ಯದ ಸೌಲಭ್ಯಗಳನ್ನು ಪಡೆಯುತ್ತಿಲ್ಲ; ಸರ್ಕಾರದ ಸೌಕರ್ಯಗಳನ್ನು ಬಳಸಿಕೊಳ್ಳುತ್ತಿಲ್ಲ; ವಿಜ್ಞಾನಯುಗದ ಲಾಭವನ್ನು ಪಕ್ಕಿಸಿಕೊಳ್ಳುತ್ತಿಲ್ಲ. ಹಳ್ಳಿಗಾಡಿನಲ್ಲಿ, ಅದರಲ್ಲಿಯೂ ದಾರಿದ್ರ್ಯ ಅಜ್ಞಾನಗಳು ತಾಂಡವವಾಡುತ್ತಿರುವ ಕುಗ್ರಾಮಗಳಲ್ಲಿ ಶಿಕ್ಷಣಕ್ಕೆ ತಕ್ಕ ಪರಿಸರವಿಲ್ಲವೆನ್ನುವುದು ಸರ್ವವೇದ್ಯ. ಹಳ್ಳಿಯ ಹಾಗೂ ನಗರದ ಪರಿಸರದ ನಡುವೆ ಭಾರಿ ಕಂದಕ ಇದೆ. ಈ ಪರಿಸರ ಕೇವಲ ಭೌತಿಕವಾದುದಲ್ಲ. ಮಾನಸಿಕ ಹಾಗೂ ಬೌದ್ಧಿಕವಾದುದು. ಇಂಥ ರಿಕ್ತವಾತಾವರಣದಲ್ಲಿ ಹುಟ್ಟಿದ ಮತ್ತು ಬೆಳೆದ ಮಗು ಸರ್ವಸೌಲಭ್ಯಗಳುಳ್ಳ ನಗರದ ಮಕ್ಕಳೊಡನೆ ಸ್ಪರ್ಧೆ ಹೂಡುವುದಾದರೂ ಎಂತು? ಇಬ್ಬರಿಗೂ ಒಂದೇ ವಿಧವಾದ ಪಠ್ಯಕ್ರಮ; ಒಂದೇ ರೀತಿಯ ಪರೀಕ್ಷೆ. ಇದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ. ಸಮಾನಾವಕಾಶ ಸೌಲಭ್ಯಗಳಿದ್ದಾಗ ಮಾತ್ರ ಸಮಾನ ಪರೀಕ್ಷೆಗಳಿಗೆ ಬೆಲೆ ಬರುತ್ತದೆ. ಪಾಶ್ಚಾತ್ಯ ಶಿಕ್ಷಣತತ್ವಜ್ಞರ ಮಾನಸಪುತ್ರರಾದ ನಮ್ಮವರಲ್ಲಿ ಭಾರತೀಯ ದೃಷ್ಟಿಯೂ ಇಲ್ಲ. ಸ್ವೋಪಜ್ಞತೆಯೂ ಇಲ್ಲ, ಸ್ವತಂತ್ರ ಆಲೋಚನಾ ಸಾಮರ್ಥ್ಯವೂ ಇಲ್ಲ, ಮಾನವೀಯತೆಯಂತೂ ಇಲ್ಲವೇ ಇಲ್ಲ. ಹಳ್ಳಿಗಾಡಿನಿಂದ ಬರುವ ರಾಜಕಾರಣಿಗಳಾದರೂ ಈ ಕಡೆಗೆ ಗಮನಹರಿಸಬೇಕಾದ್ದು ಧರ್ಮ.

ತಿನ್ನಲು ಹಿಟ್ಟಿಲ್ಲದ, ಉಡಲು ಬಟ್ಟೆಯಿಲ್ಲದ, ಓದಲು ಬೆಳಕಿಲ್ಲದ, ಮಲಗಲು ಆಸರೆಯಿಲ್ಲದ, ಪುಸ್ತಕ ಕೊಳ್ಳಲು ರೊಕ್ಕವಿಲ್ಲದ, ನಾಲ್ಕಾರು ಮೈಲಿ ದೂರದ ಶಾಲೆಗೆ ನಡೆದೇ ಹೋಗಬೇಕಾಗಿರುವ, ರಜೆಯೋ ಬಿಡುವೋ ದೊರಕಿತೆಂದರೆ ಕುರಿದನ ಕಾಯಬೇಕಾಗಿರುವ, ಹೊಲಮನೆ ಕೆಲಸವಿದ್ದಾಗ ಶಾಲೆಗೆ ಚಕ್ಕರ್ ಹೊಡೆಯಬೇಕಾಗಿರುವ ಅನಿವಾರ್ಯತೆಯುಳ್ಳ ಪ್ರಬಲ ಮನೋಧರ್ಮ ಮತ್ತು ನಿಶ್ಚಿತ ಧ್ಯೇಯಗಳಿಲ್ಲದ ವಿದ್ಯಾರ್ಥಿಗಳಿಂದ ನಿರೀಕ್ಷಿಸಬಹುದಾದ ಕಲಿಕೆಯ ಸ್ವರೂಪವಾದರೂ ಎಂಥದು? ಬೆಳಗಾದರೆ ಮೋರೆ ತೊಳೆಯಲಿಕ್ಕೆ ನೀರಿಲ್ಲ; ಕತ್ತಲೆಯಾದರೆ ಚಳಿಗಾಳಿಗಳಿಂದ ಮೈರಕ್ಷಿಸಿಕೊಳ್ಳಲು ಚಾವಣಿಯಿಲ್ಲ; ಅಂಥವರಿಗೆ ಕಲಿಯುವ ಚಟವಿಲ್ಲ. ನಗರದ ಮಕ್ಕಳೋ, ಹುಟ್ಟುತ್ತಿದ್ದಂತೆ ಕಲಿಯಲುಪಕ್ರಮಿಸುತ್ತಾರೆ.

ಸರ್ಕಾರವಾಗಲಿ, ಖಾಸಗಿ ಸಂಸ್ಥೆಗಳಾಗಲಿ, ಶಾಲಾಕಾಲೇಜುಗಳನ್ನು ತೆರೆದರೆ ಸಾಲದು. ಜತೆಜತೆಯಲ್ಲಿಯೇ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸಬೇಕು; ಯೋಗ್ಯ ಉಪಾಧ್ಯಾಯರನ್ನು ನೇಮಿಸಬೇಕು; ಸಕಲ ಸೌಕರ್ಯಗಳನ್ನು ಒದಗಿಸಬೇಕು. ಹೀಗೆ ಅನುಕೂಲ ಒದಗಿಸದಿದ್ದಲ್ಲಿ ಶಿಕ್ಷಣ ಪರಿಣಾಮಕಾರಿಯಾಗದು, ಖರ್ಚಿಗೆ ತಕ್ಕ ಫಲ ದೊರಕಲಾರದು. ಶ್ರೀ ಸ್ವಾಮೀಜಿಯವರು ಈ ದಿಶೆಯಲ್ಲಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿರುವುದು ಸಂತೋಷದ ಸಂಗತಿ. ಈಗಾಗಲೇ ಅವರು ಇಪ್ಪತ್ತಕ್ಕೂ ಮೇಲ್ಪಟ್ಟು ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದ್ದಾರೆ. ಅವುಗಳಲ್ಲಿ ಹನ್ನೆರಡು ಗ್ರಾಮಾಂತರ ಪ್ರದೇಶದಲ್ಲಿ ನೆಲೆಗೊಂಡಿದ್ದು, ಎಂಟು ಮಾತ್ರ ಮೈಸೂರಲ್ಲಿ ಸ್ಥಾಪನೆಗೊಂಡಿವೆ. ನಿಮ್ನ ವರ್ಗದ ವಿದ್ಯಾರ್ಥಿಗಳಿಗಾಗಿ ಎರಡನ್ನೂ, ಅಂಗವಿಕಲರಿಗಾಗಿ ಒಂದನ್ನೂ ನಡೆಸುತ್ತಿರುವುದು ಶ್ರೀ ಮಠದ ವೈಶಿಷ್ಟ್ಯವಾಗಿದೆ. ಇಷ್ಟಾದರೂ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕೆನ್ನುವ ಚಿಂತೆ ಅವರನ್ನು ಆಗಾಗ್ಗೆ ಕಾಡುತ್ತಿರುತ್ತವೆ.

ಸ್ವಾಮೀಜಿಯವರ ಕಾರ್ಯಸಾಧನೆ ಇಷ್ಟಕ್ಕೆ ಸೀಮಿತಗೊಂಡಿಲ್ಲ. ಪ್ರಧಾನ ಶೈಕ್ಷಣಿಕ ಯೋಜನೆಗಳಿಗೆ ಉಪಷ್ಟಂಭಕವಾಗಿ ಹಲವಾರು ಉಪಶೈಕ್ಷಣಿಕ ಅಥವಾ ಪೋಷಕ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಮೈಸೂರಲ್ಲಿ ನಾಲ್ಕು ಸಹಕಾರೀ ಸಂಸ್ಥೆಗಳನ್ನು ವ್ಯವಸ್ಥೆಗೊಳಿಸಿದ್ದಾರೆ; ಗ್ರಂಥಮಾಲೆಯನ್ನು ಪ್ರಾರಂಭಿಸಿದ್ದಾರೆ; ಮುದ್ರಣಾಲಯ ಸುವ್ಯವಸ್ಥೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಶರಣತತ್ತ್ವ ಪ್ರಚಾರ ಸಮಿತಿ ಮತ್ತು ಕಲಾಮಂಟಪಗಳು, ಜತೆಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಮಿತಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಗಾಗ್ಗೆ ಜರುಗಿಸುತ್ತಿವೆ. ಹಳೆಯ ವಿದ್ಯಾರ್ಥಿಗಳ ಸಂಘವೂ ಅಸ್ತಿತ್ವದಲ್ಲಿದೆ. ಮೇಲಾಗಿ ಆರೋಗ್ಯಕೇಂದ್ರವೊಂದು ಶಿಕ್ಷಕ ಶಿಕ್ಷಿತರ ಸೇವೆಗಾಗಿ ಮೀಸಲಾಗಿದೆ. ಈ ಚಟುವಟಿಕೆಗಳಲ್ಲಿ ಶಿಕ್ಷಕರನ್ನು, ಮುಖ್ಯವಾಗಿ ವಿದ್ಯಾರ್ಥಿವೃಂದವನ್ನು ತೊಡಗಿಸುವುದಾದರೆ, ಅವರಿಗೆ ವಾಸ್ತವ ಶಿಕ್ಷಣ ದೊರೆಯುವಲ್ಲಿ ಸಹಾಯವಾಗುತ್ತದೆ. ಕಾಲೇಜಿನ ನಾಲ್ಕು ಗೋಡೆಗಳ ನಡುವೆ ಸಿಗುವ ಶಿಕ್ಷಣದ ಬಹುಭಾಗ ಕೃತಕ; ಹೊರಗೆ ದೊರೆಯುವ ಶಿಕ್ಷಣ ನೈಜ.

ಸ್ವಾಮೀಜಿಯವರ ಶಿಷ್ಯಪರಂಪರೆ ದೊಡ್ಡದು. ಮಹಾವಿದ್ಯಾಪೀಠದಲ್ಲಿ ತಯಾರಾದ ಪದವೀಧರರು ಮತ್ತು ವಿವಿಧ ವಿಷಯ ಪರಿಣತರು ಜಗತ್ತಿನಲ್ಲೆಲ್ಲ ಸೇವೆ ಸಲ್ಲಿಸುತ್ತಿದ್ದಾರೆ, ಕೀರ್ತಿವಂತರಾಗುತ್ತಿದ್ದಾರೆ. ಒಂದು ಸಂಸ್ಥೆಯ ಯಶಸ್ಸು, ಅದರ ಜೀವಂತಿಕೆ ಹಾಗೂ ಅದರ ಓರಿಮೆ ಕಲ್ಲುಮಣ್ಣಿನ ಕಟ್ಟಡಗಳನ್ನವಲಂಬಿಸಿಲ್ಲ; ಅಲ್ಲಿಯ ವ್ಯಕ್ತಿಗಳ ಸಾಧನೆ ಸಿದ್ಧಿಗಳನ್ನವಲಂಬಿಸಿದೆ. ಅವರೇ ಅವುಗಳ ನಿಜವಾದ ಐಶ್ವರ್ಯ. ಅಂಥ ಐಶ್ವರ್ಯದ ಪುಣ್ಯ ಶ್ರೀಗಳವರ ಪಾಲಿಗಿದೆ. ಜತೆಗೆ ಅವರ ತಪಶ್ಯಕ್ತಿಯೂ ಮೇಳವಿಸಿದೆ. ಆದ್ದರಿಂದ ಈ ಸಂಸ್ಥೆ ವಿಶ್ವವಿದ್ಯಾಲಯಕ್ಕೆ ಸಮಸ್ಪರ್ಧಿಯಾಗಿ ಬೆಳೆಯುತ್ತದೆಂಬುದರಲ್ಲಿ ಸಂದೇಹವಿಲ್ಲ.

ಹಿಂದಿನ ಕಾಲದಲ್ಲಿ ಹತ್ತುಸಾವಿರ ವಿದ್ಯಾರ್ಥಿಗಳುಳ್ಳ ವಿದ್ಯಾಸಂಸ್ಥೆ ವಿಶ್ವವಿದ್ಯಾಲಯವೆಂಬ ಕೀರ್ತಿಗೆ ಭಾಜನವಾಗುತ್ತಿತ್ತು. ಅದರ ನೇತಾರನಿಗೆ ಕುಲಪತಿಯೆಂಬ ಬಿರುದಿರುತ್ತಿತ್ತು. ಸುತ್ತೂರು ಮಹಾವಿದ್ಯಾಪೀಠ ಅನಧಿಕೃತ ಮಿನಿವಿಶ್ವವಿದ್ಯಾನಿಲಯವಾಗಿದೆ. ಅದರ ಕಕ್ಷೆಯಲ್ಲಿ ಹಲವಾರು ವಿಷಯಗಳನ್ನು ಕಲಿಸುವ ಅನೇಕ ಕಾಲೇಜುಗಳಿವೆ. ವಿದ್ಯಾರ್ಥಿಗಳ ಸಂಖ್ಯೆ ಹತ್ತು ಸಾವಿರಕ್ಕೂ ಮಿಗಿಲಾಗಿದೆ. ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳವರು ಆ ಮಹಾಪೀಠದ ನಿಜವಾದ ಕುಲಪತಿ; ಯಾವುದೋ ಸಮಿತಿ ಆರಿಸಿದ ಕುಲಪತಿಯಲ್ಲ, ಶಿವನೇ ಆರಿಸಿದ, ಗುರುಪರಂಪರೆಯೊಂದು ಆಶೀರ್ವದಿಸಿದ ಮಹಾಕುಲಪತಿ ಇವರು. ಕರ್ಣಾಟಕದ ಶೈಕ್ಷಣಿಕ ಇತಿಹಾಸದಲ್ಲಿ ಈ ಮಹಾಪೀಠದ ಹಾಗೂ ಈ ಕುಲಪತಿಗಳ ಸಾಧನೆ ಸುವರ್ಣಾಕ್ಷರಗಳಿಂದ ರಚನೆಗೊಳ್ಳುವ ಮಹತ್ವ ಪಡೆದಿದೆಯೆಂದರೆ ಅತಿಶಯೋಕ್ತಿಯಾಗದು.

---

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂದೆನಿಸುವ ಲಿಂಗವು,
'ಅತ್ಯತಿಷ್ಠದ್ದಶಾಂಗುಲಂ' ಎಂದೆನಿಸುವ ಲಿಂಗವು,
'ಚಕಿತಮಭಿಧತ್ತೇ' ಎಂದೆನಿಸುವ ಲಿಂಗವು,
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು,
'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ' ಎಂದೆನಿಸುವ ಲಿಂಗವು,
'ಏಕಮೂರ್ತಿಸ್ತ್ರಿಧಾ ಭೇದಾಃ' ಎಂದೆನಿಸಿ ಶ್ರೀಗುರು ಲಿಂಗ ಜಂಗಮ ರೂಪಾಗಿ
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ ವರಾನನೇ' ಎಂದುದಾಗಿ
ತ್ರಿವಿಧ ಏಕೀಭವಿಸಿ ಲಿಂಗರೂಪಾಗಿ
ಎನ್ನ ಕರಸ್ಥಲಕ್ಕೆ ಬಂದು ಕರತಳಾಮಳಕದಂತೆ ತೋಱುವೆ.
ಆಹಾ ಎನ್ನ ಸತ್ಯವೇ! ಆಹಾ ಎನ್ನ ನಿತ್ಯವೆ!
ಆಹಾ ಎನ್ನ ಪುಣ್ಯವೇ! ಆಹಾ ಎನ್ನ ಭಾಗ್ಯವೇ!
ಶಿವ ಶಿವ! ಮಹಾದೇವ!! ನೀನೆ ಬಲ್ಲೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

— ಉರಿಲಿಂಗಪೆದ್ದಿ

# ಸುತ್ತೂರು ಶಾಸನಗಳ ಒಂದು ಅಧ್ಯಯನ

**ಡಾ. ಬಾ. ರಾ. ಗೋಪಾಲ್**

ಸುತ್ತೂರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ನಂಜನಗೂಡಿನಿಂದ ಪೂರ್ವಕ್ಕೆ ಸುಮಾರು ೧೫ ಕಿಲೋಮೀಟರ್‌ಗಳ ದೂರದಲ್ಲಿ ಕಪಿಲಾನದಿಯ ದಕ್ಷಿಣ ತೀರದಲ್ಲಿರುವ ಒಂದು ಗ್ರಾಮ–ಧಾರ್ಮಿಕ ಹಾಗೂ ವಿದ್ಯಾಕೇಂದ್ರ. ಸುತ್ತೂರಿನ ಶ್ರೀಮಠ ಇಂದಿಗೂ ಹಲವಾರು ವಿದ್ಯಾಸಂಸ್ಥೆಗಳನ್ನು ಬೇರೆ ಬೇರೆ ಕಡೆಗಳಲ್ಲಿ ನಡೆಸುತ್ತಾ ಬಂದಿದೆ. ಧರ್ಮಪ್ರಸಾರವಲ್ಲದೆ ಅನ್ನದಾನ ಮತ್ತು ವಿದ್ಯಾದಾನಗಳನ್ನು ಬೃಹತ್ಪ್ರಮಾಣದಲ್ಲಿ ಮಾಡುತ್ತಿದೆ. ಇಂತಹ ಮಠಕ್ಕೆ ದೀರ್ಘವಾದ ಇತಿಹಾಸವಿದೆ. ಇದು ಕೈಗೊಂಡಿರುವ ಕಾರ್ಯಕ್ಕೆ ಉನ್ನತವಾದ ಪರಂಪರೆಯಿದೆ.

ಹತ್ತು–ಹನ್ನೊಂದನೆಯ ಶತಮಾನಗಳ ವೇಳೆಗಾಗಲೇ ಇದು ಖ್ಯಾತಿವೆತ್ತಿತ್ತು. ಇದಕ್ಕೆ ಸೋತ್ತಿಯೂರ್, ಸತ್ತೂರೂರ್, ಶ್ರೋತ್ರಿಯ, ಶ್ರೋತ್ರಿಯೂರ್ ಎಂಬುವು ಮೊದಲಿದ್ದ ಹೆಸರುಗಳು. ತದನಂತರ ಇದು ಸುತ್ತೂರು ಆಯಿತು. ಕ್ರಿ.ಶ. ೧೫೧೪ನೆಯ ವರ್ಷದ ಶಾಸನ (ನೋಡಿ : ಶಾಸನ ಸಂಖ್ಯೆ ೨೦) ದಲ್ಲಿ ಇದನ್ನು ಸುತ್ತೂರು ಎಂದೂ ಇಲ್ಲಿನ ಶ್ರೀಮಠವನ್ನು ಸೂತ್ತೂರ ಸಿಂಹಾಸನವೆಂದೂ ಕರೆದಿದೆ.

ಕ್ರಿಸ್ತಶಕ ಹನ್ನೊಂದನೆಯ ಶತಮಾನದಲ್ಲಿ ಕಾವೇರೀ ನದಿಯ ದಕ್ಷಿಣದ ಬಹುಮಟ್ಟಿನ ಪ್ರದೇಶಗಳು ಚೋಳರ ವಶವಾಗಿದ್ದ ಕಾಲದಲ್ಲಿ ಆ ಅರಸರು ತಮ್ಮ ರಾಜ್ಯಕ್ಕೆ ಸೇರಿದ ಈ ಭಾಗಗಳಲ್ಲಿ ತಮ್ಮ ರಾಜ್ಯದ ಆಡಳಿತ ಪದ್ಧತಿಯನ್ನೇ ಬಳಕೆಗೆ ತಂದರು. ಅದರ ಪರಿಣಾಮವಾಗಿ ಇಲ್ಲಿನ ಪ್ರಾಂತಗಳಿಗೂ ಸಹ ತಮ್ಮದೇ ಆದ ನಾಮಧೇಯಗಳನ್ನಿಟ್ಟರು. ಸುತ್ತೂರು ಆಗ ಮುಡಿಗೊಂಡ ಚೋಳಮಂಡಲದ ಗಂಗೈಕೊಂಡಚೋಳವಳನಾಡಿನಲ್ಲಿ, ಇಡೈನಾಡು ಎಂಬ ಸಣ್ಣ ಆಡಳಿತ ವಿಭಾಗಕ್ಕೆ ಸೇರಿದ್ದ ಗ್ರಾಮವಾಗಿತ್ತು. ಇವುಗಳಲ್ಲಿ ಇಡೈನಾಡು ಎಂಬ ಹೆಸರು ಮಾತ್ರ ಕನ್ನಡದ ಎಡೆನಾಡಿನ ತಮಿಳು ರೂಪಾಂತರವಾಗಿತ್ತು. (ಶಾಸನ ಸಂಖ್ಯೆ ೩). ಕ್ರಿ.ಶ. ೧೧೬೯ನೆಯ ವರ್ಷದ ಶಾಸನ (ಸಂಖ್ಯೆ ೫) ಹೊಯ್ಸಳರ ಮೊದಲನೆಯ ನರಸಿಂಹನ ಕಾಲದ್ದು. ಶಾಸನ ಭಗ್ನವಾಗಿದ್ದು ವಿವರಗಳು ಹಾಳಾಗಿವೆ. ಆದರೆ ಇದರಲ್ಲಿ ಈ ಗ್ರಾಮ–ಸೊತ್ತಿಯೂರು–ಒಂದು ನದೀತೀರದ ಮೇಲಿದ್ದಂತೆ ಹೇಳಿದೆ. ನದಿಯ ಹೆಸರು ತಿಳಿಯದಾಗಿದೆ. ಆದರೆ ಕ್ರಿ.ಶ. ೧೫೧೪ನೆಯ ವರ್ಷದ ೩೦ನೆಯ ಶಾಸನದಲ್ಲಿ ಈ ಗ್ರಾಮ ಕಪಿಲಾಕೌಂಡಿನೀ ಸಂಗಮದ ತೆಂಕಣ ತಡಿಯಲ್ಲಿರುವುದಾಗಿ ಹೇಳಿರುವುದನ್ನು ಗಮನಿಸಿದರೆ ಇದು ಕಪಿಲಾ ನದಿಯ ದಕ್ಷಿಣಕ್ಕೆ ನದೀತೀರದಲ್ಲಿದ್ದ ಗ್ರಾಮವೆಂಬುದು ಸ್ಪಷ್ಟವಾಗುತ್ತದೆ. ಈ ಗ್ರಾಮವನ್ನು ೨೧ನೆಯ ಶಾಸನದಲ್ಲಿ (ಕ್ರಿ.ಶ. ೧೫೩೦) ಹೊಳೆಯ ಸುತ್ತೂರು ಎಂದು ಕರೆಯಲಾಗಿದ್ದು ಇದು ಮೂಗೂರಸೀಮೆಯ ತಾಯೂರು ಸ್ಥಳಕ್ಕೆ ಸೇರಿದ್ದ ಗ್ರಾಮವೆಂದು ಹೇಳಿದೆ. ಇದೇ ವರ್ಷದ (ಕ್ರಿ.ಶ. ೧೫೧೪) ಕಾಹಳ್ಳಿ ಶಾಸನದಲ್ಲಿ ಥಾ (ತಾ)ಯೂರಸ್ಥಳದ ಪ್ರಸ್ತಾಪವಿದೆ.[1] ಕಾಹಳ್ಳಿ (ಕಾವಹಳ್ಳಿ) ಆ ಸ್ಥಳಕ್ಕೆ ಸೇರಿದುದಾಗಿತ್ತು. ದೇವನೂರು ಗ್ರಾಮದ ಕ್ರಿ.ಶ. ೧೫೧೭ನೆಯ ವರ್ಷದ ದೇವನೂರು ಶಾಸನದಲ್ಲೂ ಈ ಸ್ಥಳದ ಪ್ರಸ್ತಾಪವಿದೆ.[2] ತಾಯೂರು ನಂಜನಗೂಡು ತಾಲ್ಲೂಕಿಗೆ ಸೇರಿದ ಅದೇ ಹೆಸರಿನ ಗ್ರಾಮ. ಅಲ್ಲಿನ ಕ್ರಿ.ಶ. ೧೫೮೭ನೆಯ ವರ್ಷದ ಶಾಸನವೊಂದರಲ್ಲಿ[3] ಆ ಗ್ರಾಮವು ಮೂಗೂರ ಸೀಮೆಯ ತಾಯೂರ ಸ್ಥಳವಲ್ಲಿದ್ದಂತೆಯೇ ಹೇಳಿದೆ. ಆದರೆ ಕ್ರಿ.ಶ. ೧೭೬೧ ಮತ್ತು ೧೭೬೨ರ ಗಟ್ಟವಾಡಿ ತಾಮ್ರ ಶಾಸನಗಳಲ್ಲಿ[4] ತಾಯೂರು ಸ್ಥಳವು ಮಹಿಶೂರನಗರ

---

[1] ಎಪಿಗ್ರಾಫಿಯ ಕರ್ನಾಟಿಕ ಸಂಪುಟ ೩ (ಸಂ : ಬಾ. ರಾ. ಗೋಪಾಲ್), ನಂಜನಗೂಡು ೨೪೮

[2] ಅದೇ, ನಂಜನಗೂಡು ೨೭೭

[3] ಅದೇ, ನಂಜನಗೂಡು ೨೦೮

[4] ಅದೇ, ನಂಜನಗೂಡು ೩೧೮ ಮತ್ತು ೩೧೭

ಹೋಬಳಿಯ ವಿಚಾರದ ಚಾವಡಿಯುವಳಿತಕ್ಕೆ ಸೇರಿದಂತೆ ಹೇಳಿದೆ. ಬಹುಶಃ ಸುತ್ತೂರು ಸಹ ಆಡಳಿತರೀತ್ಯ ೧೮ ನೆಯ ಶತಮಾನದಲ್ಲಿನ ಈ ಮಾರ್ಪಾಡುಗಳಿಗೆ ಒಳಗಾಗಿರಬಹುದು.

ಇಲ್ಲಿನ ಪ್ರಮುಖ ಆಕರ್ಷಣೆ ಸೋಮೇಶ್ವರ ದೇವಾಲಯ. ಇದು ಹೊಯ್ಸಳರ ಕಾಲದಲ್ಲಿ ಜೀರ್ಣೋದ್ಧಾರಗೊಂಡ ತ್ರಿಕೂಟಾಚಲ. ಮೂರು ಗುಡಿಗಳಿಗೆ ಸೇರಿದಂತಹ ನಡುವಣ ಕೈಸಾಲೆಯ ಮುಂದೆ ಇನ್ನೊಂದು ಹಜಾರ. ಈ ಹಜಾರ ಹದಿಮೂರನೆಯ ಶತಮಾನದಲ್ಲಿ ಕಟ್ಟಲ್ಪಟ್ಟದು. ಮೂಲ ಕಟ್ಟಡ ಗ್ರಾನೈಟ್ ಶಿಲೆಯದು. ವಿಗ್ರಹಗಳೂ ಅಲಂಕರಣ ಭಾಗಗಳೂ ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟವು. ಮಧ್ಯದ ಗುಡಿಯಲ್ಲಿರುವುದು ಚೋಳರ ಕಾಲದ ಲಿಂಗ. ದಕ್ಷಿಣದ ಗುಡಿಯಲ್ಲಿ ಹೊಯ್ಸಳ ಶೈಲಿಯ ಮುದ್ದಾದ ಹರಿಹರ (ಶಂಕರನಾರಾಯಣ)ನ ವಿಗ್ರಹವಿದೆ. ವಿಗ್ರಹದ ಬಲಭಾಗದಲ್ಲಿ ಹರನನ್ನೂ ಎಡಭಾಗದಲ್ಲಿ ವಿಷ್ಣುವನ್ನೂ ತೋರಿಸಿದೆ. ಉತ್ತರದ ಗುಡಿಯಲ್ಲಿ ಶಂಖಚಕ್ರಗಳನ್ನು ಮೇಲಿನ ಎಡ ಬಲಕೈಗಳಲ್ಲಿ ಹಿಡಿದು ಕೆಳ ಎಡದ ಕೈಯಲ್ಲಿ ಒಂದು ಫಲವನ್ನು ಹಿಡಿದ. ಕೆಳ ಬಲಗೈ ಅಭಯ ಮುದ್ರೆಯಲ್ಲಿ ಅಕ್ಷಮಾಲೆಯನ್ನು ಹಿಡಿದಿರುವ ಸುಮಾರು ೩½ ಅಡಿಗಳ ಎತ್ತರದ ದೇವತೆಯ ವಿಗ್ರಹವಿದೆ. ಇವರ ಪಾದದ ಕೆಳಗೆ ಎರಡು ಮುಂಗಸಿಗಳಿವೆ. ಇದನ್ನು ಚಾಮುಂಡಾದೇವತೆ ಎಂದು ಕೃಷ್ಣರವರು ಗುರುತಿಸಿದ್ದಾರೆ. ಗ್ರಾನೈಟ್ ಗೋಡೆಗಳಿರುವ. ಶಿಖರಕ್ಕೆ ಬಳಪದಕಲ್ಲನ್ನು ಬಳಸಲಾದ ಅಪರೂಪ ದೇವಾಲಯಗಳಲ್ಲಿ ಇದೂ ಒಂದು. ನವರಂಗದಲ್ಲಿರುವ ಕಂಬಗಳು ಗ್ರಾನೈಟ್ ಶಿಲೆಯವಾದರೂ ಅದರ ಕೆತ್ತನೆಯ ಕೆಲಸ ರಮ್ಯವಾಗಿದೆ. ಈಗ ಈ ದೇವಾಲಯದ ಶಿಖರ ಬಿದ್ದುಹೋಗಿದೆಯಾದರೂ ಸುತ್ತೂರು ಮಠದಲ್ಲಿರುವ ಚಿತ್ರದಲ್ಲಿ ಶಿಖರವನ್ನೂ ನೋಡಬಹುದಾಗಿದೆ. ಆರ್. ನರಸಿಂಹಾಚಾರ್ಯರು ೧೯೧೮ರಲ್ಲಿ ಈ ದೇವಾಲಯವನ್ನು ಕಂಡಾಗಲೂ ಶಿಖರವಿದ್ದಂತೆ ತೋರುತ್ತದೆ. ದೇವಾಲಯದ ಮುಂದಿರುವ ಸಣ್ಣ ಮಂಟಪದ ಹೊರಗೋಡೆಗಳಲ್ಲಿ ಎರಡು ಉಬ್ಬು ಚಿತ್ರಗಳಿವೆ. ಉದ್ದನೆಯ ನಿಲುವಂಗಿ ಹಾಗೂ ರುಮಾಲು (ಪಗ್ಡೀ) ಗಳನ್ನು ಧರಿಸಿದ. ಕೈಮುಗಿದು ನಿಂತಿರುವ ಇಬ್ಬರು ಭಕ್ತರ ವಿಗ್ರಹಗಳಿವೆ. ಆದರೆ ಅವರನ್ನು ಗುರುತಿಸುವುದು ಕಷ್ಟ.

ಸುತ್ತೂರಿನಲ್ಲಿ ಪ್ರಸ್ತುತ ೨೬ ಶಿಲಾಶಾಸನಗಳಿವೆ. ಅವುಗಳಲ್ಲಿ ಒಂದು (ಶಾಸನ ಸಂಖ್ಯೆ ೨೦) ಕಲ್ಲು ಮೂಲತಃ ಹೆಡಿಯಾಲ ಗ್ರಾಮದಲ್ಲಿತ್ತೆಂದು ತಿಳಿದಿದೆ. ನಂಜನಗೂಡಿನ ತೀರ್ಥಘಟ್ಟದ ಮಂಟಪದ ಮೇಲ್ಛಾವಣಿಯ ಅಂಕಣದಲ್ಲಿರುವ ಎರಡು ಕಲ್ಲುಗಳಲ್ಲೂ ಸುತ್ತೂರು ಶ್ರೀಮಠಕ್ಕೆ ಸಂಬಂಧಿಸಿದ ಪ್ರಸ್ತಾಪಗಳಿವೆ. ಈ ಕಲ್ಲುಗಳು ಮೂಲತಃ ಎಲ್ಲಿತ್ತು ಎಂದು ಹೇಳಲಾಗದಾದರೂ ಅವು ನಂಜನಗೂಡಿಗೆ ಸೇರಿರಬಹುದಾದ ಶಾಸನಕಲ್ಲುಗಳಾಗಿರಬಹುದು.

ಈ ಶಾಸನಗಳಲ್ಲಿ ಅತಿಪ್ರಾಚೀನವಾದವು ಸುಮಾರು ಕ್ರಿ.ಶ. ೧೦ನೆಯ ಶತಮಾನಕ್ಕೆ ಸೇರಿದವುಗಳು. ಮೊದಲನೆಯ ಶಾಸನಕಲ್ಲು ಬಹಳ ಒಡೆದು ಹೋಗಿದ್ದು ಒಂದು ಸಣ್ಣ ತುಂಡು ಮಾತ್ರ ಲಭ್ಯವಾಗಿದೆ. ಇದರ ಉದ್ದೇಶ ತಿಳಿಯದಾದರೂ ಯಾವುದೋ ಒಂದು ದತ್ತಿಗೆ ಇದು ಸಂಬಂಧಿಸಿದಂತಿದೆ. ಇದು ಸೋಮೇಶ್ವರ ದೇವಸ್ಥಾನದ ಉತ್ತರಕ್ಕಿರುವ ಕಲ್ಲು.

ಅದೇ ದೇವಸ್ಥಾನದ ಉತ್ತರ ಗೋಡೆಯ ಸಮೀಪದಲ್ಲಿರುವುದೂ ಒಂದು ತುಂಡು ಕಲ್ಲೇ. ಇದರಲ್ಲಿ ಬಹಳ ಭಾಗ ಹಾಳಾಗಿದ್ದರೂ ಕೊನೆಯ ಒಂದು ಭಾಗದಲ್ಲಿ ಶಾಸನಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಅಂತಿಮ ಭಾಗದ ಶಾಪಶ್ಲೋಕಗಳಲ್ಲೊಂದಾದ "ಸ್ವದತ್ತಂ ಪರದತ್ತಂ ವಾ" ಎಂಬುದಕ್ಕೆ ಕನ್ನಡದ ಪ್ರತಿಪದಾರ್ಥವನ್ನು ಕೊಡಲಾಗಿದೆ. ಇದು ಅಪರೂಪ ಸಂಗತಿ. ಲಭ್ಯವಿರುವ ಐದು ಶಾಸನಗಳಲ್ಲಿ ಭಾಷಾಂತರಕಾರ್ಯ ಯಥಾವತ್ತಾಗಿ ನಡೆದಿದೆ. ಕನ್ನಡದ ಭಾಷಾಂತರ "ತನ್ನಿತ್ತುದಕ್ಕೆ ಪೆಱರಿತ್ತುದಕ್ಕೆ ಅಱುವೊಭೂಮಿ ಅರವತ್ತು ಸಾಸಿರವರ್ಷ ಪೇಲ ಪ್ರೋಱುವಾಗಿ ಪುಟ್ಟುಗೆ" ಎಂಬ ಈ ಭಾಷಾಂತರದ ದ್ವಿತೀಯಾರ್ಧ ಸ್ಪಷ್ಟವಾಗಿದೆ. ಮೊದಲ ಅರ್ಧ Literal ಭಾಷಾಂತರವಾಗಿದ್ದರಿಂದ ಸ್ಪಷ್ಟತೆಯನ್ನು ಕಳೆದುಕೊಂಡಿದೆ.

ಸುತ್ತೂರಿನ ಶಿವರಾತ್ರೀಶ್ವರ ಮಠದ ಮುಂದಿರುವ ಶಾಸನಗಳಲ್ಲಿ ಒಂದು (ಸಂಖ್ಯೆ ೩) ಕನ್ನಡ ಲಿಪಿಯಲ್ಲಿದ್ದು ತಮಿಳು ಹಾಗೂ ಕನ್ನಡ ಭಾಷೆಗಳಲ್ಲಿದೆ. ಒಡೈಯಾರ್ ಚೋಱಗಂಗದೇವರ ಆಳಿಕೆಯ ನಾಲ್ಕನೆಯ ವರ್ಷದಲ್ಲಿ ಇದು ಹುಟ್ಟಿದೆ. ಈತ ಚೋಳವಂಶದ ಮೊದಲನೆಯ ರಾಜೇಂದ್ರಚೋಳ. ಶಾಸನದ ಕಾಲವನ್ನು ಈತನ ಆಳಿಕೆಯ ನಾಲ್ಕನೆಯ ವರ್ಷಕ್ಕೆ ಸಮನಾದ ಕ್ರಿ.ಶ. ೧೦೧೫–೧೬ ಎಂದು ನಿರ್ಧರಿಸಬಹುದು. ಶಾಸನದಲ್ಲಿ ಸೊತ್ತಿಯೂರ್ನ ತೂರೂರ್ (ಈಗಿನ ಸುತ್ತೂರು) ಗ್ರಾಮವನ್ನು ಬ್ರಹ್ಮದೇಯವೆಂದು ಕರೆದಿರುವ ಕಾರಣ ಅದೊಂದು ಅಗ್ರಹಾರವಾಗಿತ್ತೆಂದು ಊಹಿಸಬಹುದು. ಆ ಗ್ರಾಮದಲ್ಲಿ ಅರಸನ ಅಧಿಕಾರಿ (ವೀರಗಪ್ಪಡಿ) ಯಾಗಿದ್ದ ತೇವನಾಡು (ದೇವ

ನಾಡು ?) ವೇಲಾನ್ ಎಂಬಾತನಿಗೂ ಮುಞ್ಜಾಡಿ ಅರಿಯನ್‌ಜಿಮ್ಮನ್ ಎಂಬಾತನಿಗೂ ಅಲ್ಲಿನ (ಗ್ರಾಮ) ಸಭೆಯ ಮಹಾಜನರು ಈ ಪ್ರದೇಶದ ಲೆಕ್ಕದಂತೆ ಎರಡು ಖಂಡುಗ ಹತ್ತು ಬಳ್ಳ ಬಿತ್ತಬಹುದಾದ ಎರಡು ಮಾಗಾಣಿ ಭೂಮಿಯನ್ನು ಎರಡು ಕಟಂಜು (ತೂಕ) ಚಿನ್ನಕ್ಕೆ ಮಾರಿದರು. ಹೀಗೆ ಕೊಂಡ ಭೂಮಿಯನ್ನು ಆ ಈರ್ವರೂ ಸೋತ್ತಿಯೂರು ಗ್ರಾಮದ ಸ್ವವಿಣ್ಣರ್ ದೇವಾಲಯದಲ್ಲಿದ್ದ ದುರ್ಗಾದೇವತೆಗೆ ನೈವೇದ್ಯದ ವೆಚ್ಚಕ್ಕೆಂದು ದಾನಮಾಡಿದರು. ಭೂಮಿಯನ್ನು ಮಾರಿದ ಬೆಲೆಯ ಮೇಲೆ ಬಂದ ಬಡ್ಡಿಯ ಹಣವನ್ನು ಸಭೆಯ ಮಹಾಜನರು ಅದೇ ದೇವತೆಯ ಗುಡಿಯಲ್ಲಿ ನಂದಾದೀಪ ಉರಿಸಲು. ಆಹಾರ ನೈವೇದ್ಯಕ್ಕಾಗಿಯೂ ಬಿಟ್ಟರೆಂದೂ ಶಾಸನದಲ್ಲಿ ಹೇಳಿದೆ. ಬಹುಶಃ ಭೂಮಿಯನ್ನು ಮಾರಿದಾಗ ಬಂದ ಹಣವನ್ನು ಸಾಮಾನ್ಯವಾಗಿ ಅಂದಿನ ಪದ್ಧತಿಯಂತೆ ಮಹಾಜನರು ವ್ಯವಹಾರದಲ್ಲಿ ತೊಡಗಿಸಿರಬಹುದೆಂದು ತೋರುತ್ತದೆ. ಈ ಮಹಾಜನರಲ್ಲಿ ಕೆಲವರನ್ನು ಮಾರಯ್ಯ. ವೀರಯ್ಯ. ತೇ (ದೇ)ವಯ್ಯ. ಸೋಮಯ್ಯ. ನಾರಾಯಣ. ನರಸಿಂಹ. ಶ್ರೀಯೂರ ಚಾವುಣ್ಡಯ್ಯ ಎಂದು ಶಾಸನ ಹೆಸರಿಸಿದೆ. ಈ ದಾನವನ್ನು ಕದಂಬಳಿಗೆ ನಾಡಿನ ಕೆಱೆಯೂರು ಗ್ರಾಮದ ಒಡೆಯನಾದ ಬ್ರಾಹ್ಮಣ ಅಯ್ಯಮಯ್ಯ. ಚಾವುಣ್ಡಯ್ಯ ಆ ನಾಡಿನ ನಾನಾದೇಸಿಗಳು. ಅಯ್ಯಪೊಱಲಿನ (ಅಯ್ಯಾವೊಳೆಯ) ಬ್ರಹ್ಮಸೆಟ್ಟಿಗಳು. ಐನೂರ್ವ್ವರೂ ರಕ್ಷಿಸಬೇಕೆಂದೂ ಶಾಸನದಲ್ಲಿ ಕಟ್ಟುಮಾಡಿದೆ.

ಇಲ್ಲಿನ ಇನ್ನೊಂದು ಶಿಲಾಶಾಸನವೂ (ಸಂಖ್ಯೆ ೪) ಇದೇ ಚೋಳ ಅರಸನಿಗೆ ಸೇರಿದುದು. ಈತನನ್ನು ಪೂರ್ವದೇಶವನ್ನೂ. ಗಂಗೆಯನ್ನೂ ಕೊಂಡ ಪರಕೇಸರಿ ಎಂದು ವರ್ಣಿಸಿದೆ. ಶಾಸನದ ಕಾಲ ಕ್ರಿ.ಶ. ೯೫೫ನೆಯ ಅಂಗಿರಸ ಸಂವತ್ಸರದ ಕಾರ್ತ್ತಿಕಮಾಸದ ಪೂರ್ಣಿಮೆ. ಸೋಮವಾರ, ರೋಹಿಣಿ ನಕ್ಷತ್ರ. ತೇದಿಯ ಈ ವಿವರಗಳು ಕ್ರಿ.ಶ. ೧೦೩೨ನೆಯ ವರ್ಷದ ಅಕ್ಟೋಬರ್ ೨೮ಕ್ಕೆ ಸರಿಹೊಂದುತ್ತವೆ. ಆದರೆ ಅದು ಅರಸನ ಆಳಿಕೆ ಆರಂಭವಾದ ೨೧ನೆಯ ವರ್ಷವಾಗುತ್ತದೆಯೇ ಹೊರತು ೩೧ನೆಯ ವರ್ಷವಲ್ಲ. ಶ್ರೋತ್ರಿಯ (ಶ್ರೋತ್ರಿಯೂರು) ಗ್ರಾಮದ ಮಹಾಜನರು ಈಶಾನ ಈಶ್ವರಮುಡೈಯಾರ ದೇವಸ್ಥಾನಕ್ಕೂ ಮೂಲಸ್ಥಾನ ಮುಡೈಯಾರಿಗೂ (ಮೂಲಸ್ಥಾನ ದೇವರಿಗೂ) ಭೂಮಿ, ಹಣ, ಎಣ್ಣೆಯ ಗಾಣದಲ್ಲಿ ಅರೆದ ಎಣ್ಣೆ ಇತ್ಯಾದಿಗಳನ್ನು ದಾನ ಮಾಡಿದ ಉಲ್ಲೇಖ ಶಾಸನದಲ್ಲಿದೆ. ಶಾಸನದ ಭಾಷೆ ಕನ್ನಡವಾದರೂ ತಮಿಳಿನ ದಟ್ಟವಾದ ಪ್ರಭಾವವನ್ನು ಗಮನಿಸಬಹುದು. ರಾಜನು ಮಾಡಿದ ಆಜ್ಞೆ ಎಂಬುದಕ್ಕೆ 'ಅರುಳಿಚ್ಚೆಯ್ಯವದಾವದು' ಎಂಬ ಮಾತು. ಶಿಲಾಶಾಸನ ಕೆತ್ತಿಸಿಕೊಡುತ್ತಾನೆ ಎನ್ನುವುದಕ್ಕೆ 'ಕಲ್ವೆಟ್ಟಿ ಕೊಡುವುದಕ್ಕೆ' ಎಂದಿರುವುದು. ಅಳತೆಯ ಹೆಸರನ್ನು 'ತಿರುವಾಯಿಮೊಟಿ ಪಡಿ' ಎಂದು ಕರೆದಿರುವುದು. ನೈವೇದ್ಯಕ್ಕೆ ಎನ್ನಲು 'ತಿರುವಮುದು' ಎಂಬ ಪದದ ಬಳಕೆ. ಹೊನ್ನಿನ್ನು ಕೊಟ್ಟು ಮಣ್ಣನ್ನು (ಭೂಮಿಯನ್ನು) ಪಡೆದನೆನ್ನಲು ಸಾಮಾನ್ಯವಾಗಿ ತಮಿಳು ಶಾಸನಗಳಲ್ಲಿ ಬಳಸುವ 'ಪೊನ್ನರಕುಡುತ್ತು (ಇಲ್ಲಿ 'ಕೊಟ್ಟು' ಎಂದಿದೆ) ಮಣ್ಣರಕೊಂಡು' ಎಂಬ ಪದಪುಂಜ—ಇವು ತಮಿಳಿನ ಪ್ರಭಾವಕ್ಕೆ ಸೂಚಿಗಳು.

ಶಾಸನದಲ್ಲಿ ಹೆಸರಿಸಲಾದ ಎರಡು ದೇವರುಗಳಲ್ಲಿ ಮೂಲಸ್ಥಾನ ದೇವರ್ಗ್ಗೆ ದೇಗುಲವನ್ನು ಆ ಗ್ರಾಮದ ಮಾರಯ್ಯಸೆಟ್ಟಿಯ ಹೆಂಡತಿಯಾದ ಗುಂಡಬ್ಬೆ ಕಟ್ಟಿಸಿದಳೆಂದು ಶಾಸನದಲ್ಲಿ ಹೇಳಿದೆ. ಆ ದೇಗುಲಕ್ಕೆ ದಾನವಾಗಿ ನೀಡಿದ ಭೂಮಿಯನ್ನು ಆಕೆ ಹಣ ನೀಡಿ ಕೊಂಡಳು. ಅದೇ ಮಾರಯ್ಯಸೆಟ್ಟಿಯ ಮಗನಾದ ದೊರಯ್ಯಸೆಟ್ಟಿಯು ಸಹ ಬಹುಶಃ ಅಡವಾಗಿದ್ದ ಭೂಮಿಯನ್ನು ಬಿಡಿಸಿಕೊಂಡು ದಾನಮಾಡಿದನು. ಶಾಸನದ ಆರಂಭದಲ್ಲಿ ಈಶಾನ ಈಶ್ವರಮೊಡೆಯರ್ಗ್ಗಂ ಮೂಲಸ್ಥಾನ ಮೊಡೆಯರ್ಗ್ಗಂ—ಈ ಎರಡು ದೇವರುಗಳಿಗೂ – ತಿರುವಮುದಿಗೆ ಶ್ರೀಯೂರ ಚಾವುಣ್ಡಯ್ಯನ ಭೂಮಿಯಲ್ಲಿ ಹತ್ತು ಕೊಳಗದಷ್ಟು ಬೆದೆಗದ್ದೆಯನ್ನು ಕೊಟ್ಟುದಾಗಿ ಹೇಳಿದೆ. ಈ ಚಾವುಣ್ಡಯ್ಯ ಈ ಮೊದಲು ಚರ್ಚಿಸಿದ ಕ್ರಿ.ಶ. ೧೦೧೫–೧೬ನೆಯ ವರ್ಷದ ಶಾಸನದಲ್ಲಿ ಹೆಸರಿಸಲಾದ ಮಹಾಜನಗಳಲ್ಲೊಬ್ಬ. ದಾನದ ಉದ್ದೇಶಗಳಲ್ಲಿ ಈಶಾನ ಈಶ್ವರಮೊಡೆಯಾರ್‌ರ ಆಲಯದಲ್ಲಿ ತ್ರಿಕಾಲಗಳಲ್ಲಿಯೂ ಪಂಚ ಮಹಾಶಬ್ದಗಳನ್ನು ಬಾಜಿಸಬೇಕೆನ್ನುವುದೊಂದು. ಈ ಮಹಾಶಬ್ದಗಳನ್ನು ಶಾಸನದಲ್ಲಿ ತಿವಳಿ. ದಟ್ಟೆ. ಖಂಡಿಕೆ. ಜಯಗಂಟೆ ಮತ್ತು ಕಾಳೆ ಎಂದು ಸೂಚಿಸಿದೆ. ದಾನಿಗಳಲ್ಲಿ ದೇಗುಲದ ಮೂಡಣ ದೆಸೆಯ ಮಠದ ಪೂವಿನಸೆಟ್ಟಿಯ ಪ್ರಸ್ತಾಪವಿದೆ. ಈ ಮಠ ಯಾವುದೆಂಬುದು ತಿಳಿಯದು. ಆದರೆ ಆ ವೇಳೆಗಾಗಲೇ ಅಲ್ಲಿ ಈ ಮಠವಿತ್ತು. ಅದು ಇಂದಿನ ಶಿವರಾತ್ರೀಶ್ವರ ಮಠವೇ ಆಗಿದ್ದಲ್ಲಿ ಈ ಮಠಕ್ಕೆ ಸುಮಾರು ಸಾವಿರ ವರ್ಷಗಳಷ್ಟು ಪ್ರಾಚೀನ ಪರಂಪರೆ ಇದೆ ಎಂದಾಗುತ್ತದೆ. ಆದರೆ ಈಶಾನ ಈಶ್ವರಮೊಡೆಯಾರ್ ಎಂಬುದು ಮಠಾಧಿಪತಿಗಳ ಹೆಸರು ಎಂಬ ಶ್ರೀ ನಂಜುಂಡಾರಾಧ್ಯರ ಅಭಿಪ್ರಾಯ ಮಾತ್ರ ಒಪ್ಪತಕ್ಕದ್ದಲ್ಲ! 'ಕಪ್ಪಡಕ್ಕೆ' ಪತ್ತಿ. ಪತ್ತು ಕೊಳಗ ಭತ್ತ ಇತ್ಯಾದಿಗಳನ್ನು

ಬ್ರಹ್ಮಲಿಂಗಿಭಟಾರರಿಗೆ ನೀಡಿದುದಾಗಿ ಹೇಳಿರುವುದನ್ನು ಗಮನಿಸಿದರೆ ಬಹುಶಃ ಆತ ಮಠಾಧಿಪತಿಯಾಗಿದ್ದಿರಬಹುದೇನೋ! ಈ ಶಾಸನದಲ್ಲಿನ ಇನ್ನೂ ಒಂದು ಅಂಶ ಗಮನಾರ್ಹ. ಸೊತ್ತಿಯೂರವ್ವೆಗೂ ಸಹ ಭೂಮಿ ದಾನಮಾಡಿದುದಾಗಿ ಹೇಳಿದೆ. ಇದು ಗ್ರಾಮದೇವತೆ ಎಂದು ಖಚಿತವಾಗಿ ಹೇಳಬಹುದು.

ಗ್ರಾಮದ ಪೂರ್ವಕ್ಕೆ ಹೊರವಲಯದಲ್ಲಿ ಕಾಲುವೆಗೂ ಗದ್ದೆಗಳಿಗೂ ನಡುವೆ ಈಗ ಕುಸಿದುಹೋಗಿರುವ ಸುತ್ತೂರಮ್ಮನ ದೇವಾಲಯವಿದೆ. ಒಂದೊಂದೂ ಪ್ರತ್ಯೇಕವಾಗಿ ಸುಮಾರು ೨೧/೨ ಅಡಿ ಎತ್ತರವಿರುವ ಸಪ್ತಮಾತೃಕೆಗಳ ವಿಗ್ರಹಗಳು ಗರ್ಭಗುಡಿಯೊಳಗಿವೆ. ದೇವಾಲಯದ ನವರಂಗದಲ್ಲಿರುವ ಅಷ್ಟಮೂಲೆಯ ಕಂಬಗಳು ಬಹುಶಃ ಗಂಗರ ಕಾಲಕ್ಕೆ ಸೇರಿದವುಗಳು. ವಿಗ್ರಹಗಳೂ ಸಹ ಬಹುಶಃ ೮–೯ನೆಯ ಶತಮಾನದ್ದೇ ಆಗಿದ್ದಂತೆ ತೋರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿದಂತೆ ಇದಕ್ಕೆ ಸೊತ್ತಿಯೂರಮ್ಮನೆಂದು ಶಾಸನದಲ್ಲಿ ಉದ್ದೇಶಿಸಿ ಹೇಳಲಾಗಿದೆ ಎನ್ನಬಹುದು.

ಗ್ರಾಮದಲ್ಲಿರುವ ನಾರಾಯಣಸ್ವಾಮಿ ದೇವಸ್ಥಾನ ಪ್ರಾಚೀನವಾದ ಕಟ್ಟಡ. ಇದರೊಳಗಿರುವ ವಿಗ್ರಹ ವರದರಾಜರದೆಂದೂ, ಇದೂ ಸಹ ಗಂಗರಕಾಲಕ್ಕೆ ಸೇರಿದುದೆಂದೂ ಡಾ. ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ. ನಾಲ್ಕು ಅಡಿಗಳ ಎತ್ತರದ ಕಲ್ಲಿನಿಂದ ಹೊರಚಾಚಿದಂತಿರುವ ಈ ಉಬ್ಬುಶಿಲ್ಪದ ತಲೆಯ ಮೇಲೆ ಬೋರಲುಹಾಕಿದ ಲೋಟದಂತಹ, ಮೇಲೆ ಚಪ್ಪಟೆಯಾಗಿರುವ ಕಿರೀಟವಿದೆ. ಹೆಚ್ಚಿನ ಅಲಂಕರಣಗಳಿಲ್ಲದ ಸರಳವಾದ ವಿಗ್ರಹವಿದು. ಈ ದೇವಸ್ಥಾನದಲ್ಲಿರುವ ಶಾಸನದಲ್ಲಿ ಇದನ್ನು ನಾಗಕೇಶವ ಎಂದು ಕರೆಯಲಾಗಿದೆ. ಶಾಸನ ಸ್ವಲ್ಪಮಟ್ಟಿಗೆ ಭಗ್ನವಾಗಿ ಸವೆದಿರುವ ಕಾರಣ ಕೆಲವು ವಿವರಗಳು ಅಲಭ್ಯ. ಹೊಯ್ಸಳರ ಅರಸ ನರಸಿಂಹ (I)ನ ಕಾಲದಲ್ಲಿ ಆತನ ದಂಡನಾಯಕ, ಸೇನಾಧಿಪತಿ, ಮಹಾಪ್ರಧಾನ, ಸರ್ವಾಧಿಕಾರಿ ಎನಿಸಿದ ಲಕ್ಷಯ್ಯನು ನದೀತೀರದ ಸೊತ್ತಿಯೂರ ರಾಜಧಾನಿಯಲ್ಲಿ, ಕ್ರಿ.ಶ. ೧೧೬೯ರಲ್ಲಿ, ಈ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದು ಶಾಸನದಲ್ಲಿ ಹೇಳಿದೆ. ಬಹುಶಃ ಮೊದಲಿದ್ದ ದೇವಾಲಯವೊಂದನ್ನು ಜೀರ್ಣೋದ್ಧಾರಗೊಳಿಸಿ ಪುನಃ ಪ್ರತಿಷ್ಠೆ ಮಾಡಿರಬಹುದಾದ ಸಾಧ್ಯತೆ ಇದೆ. ದೇವರ ಪೂಜೆ, ನೈವೇದ್ಯ ಇತ್ಯಾದಿಗಳಿಗೆಂದು ಬೆಳ್ಗಲಿ ಎಂಬ ಗ್ರಾಮವನ್ನು ದಾನವಾಗಿ ನೀಡಲಾಯಿತೆಂದೂ ಶಾಸನ (ಸಂಖ್ಯೆ ೫)ದಲ್ಲಿ ಹೇಳಿದೆ. ಇದರಲ್ಲಿ ಅರಸನ ವಂಶಾವಳಿಯನ್ನು ಕೊಡಲಾಗಿದೆ. ದಾನವನ್ನು ಗ್ರಾಮದ ಮೂಲಿಗ ಮಹಾಜನರು ಸ್ವೀಕರಿಸಿದಂತಿದೆ. ಈಗಿರುವಂತೆ ಈ ದೇವಾಲಯ ಹೊಯ್ಸಳರ ಕಾಲದ ಕಟ್ಟಡವಾದರೂ ಸಾಮಾನ್ಯ, ಸರಳಶೈಲಿಯಲ್ಲಿದೆ. ಮೂಲೆಗಳಲ್ಲಿರುವ ಅರೆಗಂಬಗಳು, ಸಾಬೂನುಗಲ್ಲಿನ ದ್ವಾರ ಹಾಗೂ ಗೋಡೆ ಮತ್ತು ಸುಂದರವಾದ ಕಮಲಗಳು ಹೊಯ್ಸಳ ಶೈಲಿಯ ಪ್ರತೀಕಗಳಾಗಿವೆ. ಆದರೆ ನವರಂಗವನ್ನು ಬಹುಶಃ ೧೫–೧೬ನೆಯ ಶತಮಾನಗಳಲ್ಲಿ ಹೊಸದಾಗಿ ಜೀರ್ಣೋದ್ಧಾರಗೊಳಿಸಿದಂತೆ ತೋರುತ್ತದೆ.

ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆಯ ಸಮೀಪದಲ್ಲಿರುವ ವೀರಗಲ್ಲು (ಶಾಸನ ಸಂಖ್ಯೆ ೬) ಹೊಯ್ಸಳರ ಇಮ್ಮಡಿ ವೀರಬಲ್ಲಾಳನ ಕಾಲದ ಕ್ರಿ.ಶ. ೧೧೯೬–೯೭ನೆಯ ವರ್ಷದ ಶಾಸನ. ಪಿರಿಯನಾಡ ಒಡನಾಡಿಗೆ ಸೇರಿದ ಸೊತ್ತಿಯೂರು ಗ್ರಾಮವನ್ನು ಕುಮಾರ ಲಕ್ಷ್ಮೀದೇವ ದಂಡನಾಯಕನು ಮುತ್ತಿದಾಗ ಯಭರಸಾಲೆಯನ ತಮ್ಮನಾದ ಮಂಚೆಯಣನು ಹಲವರನ್ನು ಕೊಂದು ತಾನೂ ಮಡಿದ ವಿಷಯ ಶಾಸನದಲ್ಲಿ ಸೂಚಿತವಾಗಿದೆ. ವೀರಗಲ್ಲಿನ ಮೇಲ್ಭಾಗ ಒಡೆದುಹೋಗಿದ್ದು ವಿವರಗಳು ಅಲಭ್ಯವಾಗಿವೆ.

ಹಿಂದೆ ಈಶಾನಈಶ್ವರಮೊಡೆಯಾರ್ ಎಂದು ಕರೆಯಲಾಗಿದ್ದ ದೇವಾಲಯವೇ ಬಹುಶಃ ಈಗಿನ ಸೋಮೇಶ್ವರ ದೇವಾಲಯವಾಗಿರಬಹುದು. ಹಾಗಿದ್ದಲ್ಲಿ ಇದು ಪ್ರಾಚೀನ ದೇವಾಲಯವಾದಂತಾಗುತ್ತದೆ. ಆದರೂ ಇದಕ್ಕೆ ನಂತರದ ಕಾಲದಲ್ಲಿ ಹಲವಾರು ಭಾಗಗಳನ್ನು ಸೇರಿಸಿದಂತಿದೆ. ಈ ದೇವಾಲಯದ ಮೊದಲನೆಯ ಮಂಟಪದ ಎಂಟು ಕಂಬಗಳಲ್ಲಿ ಶಾಸನಗಳಿವೆ. (ಶಾಸನ ಸಂಖ್ಯೆ ೮ರಿಂದ ೧೫). ಒಂದನ್ನು ಹೊರತುಪಡಿಸಿ ಉಳಿದವುಗಳೆಲ್ಲವನ್ನು ಸೋಮನಾಥದೇವರ ಮಂಟಪಕ್ಕೆ ಬೇರೆಬೇರೆ ವ್ಯಕ್ತಿಗಳು ಶಕವರ್ಷ ೧೧೮೬ನೆಯ ವರ್ಷದ ರಕ್ತಾಕ್ಷಿಸಂವತ್ಸರದ ಆಷಾಢ ಶುದ್ಧ ಬಿದಿಗೆಯಂದು (ಎರಡರಲ್ಲಿ ತಿಥಿಯನ್ನು ಶುದ್ಧ ೧ (ಪಾಡ್ಯಮಿ) ಎಂದು ನಿರ್ದೇಶಿಸಿದೆ) ಮಾಡಿಸಿಕೊಟ್ಟರು. ಇವುಗಳಲ್ಲಿ ಒಂದೆರಡು ಶಾಸನಗಳು ಈಗ ಒಡೆದಿದ್ದು ಕೆಲವು ಹೆಸರುಗಳು ತಿಳಿಯುಬಾರವು. ಅದೇ ದಿನದಂದು ಆ ಮಂಟಪವನ್ನು ಕಟ್ಟಿಸಲಾಯಿತೆಂದೂ ೯ನೆಯ ಶಾಸನದಿಂದ ತಿಳಿದಿದೆ. ಈ ಶಾಸನದಲ್ಲಿ ರೂವಾರಿಗಳ ಪ್ರಸ್ತಾಪವಿದೆಯಾದರೂ ಅವರ ಹೆಸರುಗಳು ದೊರೆಯದಾಗಿವೆ. ಒಂದು ಕಂಬವನ್ನು ರಾಜಾಚಾರಿಯ ಮಗ "ಳುಳವಜಗೋಮ(?)" ನೆನಿಸಿದ ಕಳಾಚಾರಿ ಮಾಡಿಸಿದ (ಶಾಸನ ಸಂಖ್ಯೆ ೧೧). ಈ ಶಾಸನದಲ್ಲಿ ಇದನ್ನು ನೃತ್ಯಮಂಟಪವೆಂದು

ಕರೆದಿದೆ. ಈ ನೃತ್ಯಮಂಟಪದ ಇನ್ನೊಂದು ಕಂಬವನ್ನು ಮಾಡಿಸಿದಾತ ದಾಸಾಚಾರಿಯ ಮಗ ನಾರಣಾಚಾರಿ. ಕೌಶಿಕ ಗೋತ್ರದ ಬಸವಯ್ಯನ ಮಗ ಅಡಪದ ಬಪ್ಪೆಯ್ಯನು ಒಂದು ಕಂಬವನ್ನೂ ಕಾಥಪ್ಪನ ಮಗ ಭಕ್ತರಜಾಕಿಸೆಟ್ಟಿ ಮತ್ತೊಂದು ಕಂಬವನ್ನೂ ಮಾಡಿಸಿದರು. ಈ ಮಂಟಪಕ್ಕೆ ಸೇರಿದ ಇನ್ನೊಂದು ಕಂಬ ಈಗ ಬಿಲ್ವಪತ್ರೆ ತೋಟದ ಹಿಂಭಾಗದಲ್ಲಿದೆ (ಶಾಸನ ಸಂಖ್ಯೆ ೧೫). ಇದರಲ್ಲಿ ಕಂಬ ಮಾಡಿಸಿದ ಬಬ್ಬ ನಾಯಕ (ಮಲ್ಲನಾಯಕ)ನ ಪ್ರಸ್ತಾಪವಿದೆ. ಇವುಗಳಲ್ಲಿ ಒಂದು ಕಂಬವನ್ನು ನಾಗಣ್ಣನ ಅಳಿಯ ರಾಘವದೇವ ಮಾಡಿಸಿಕೊಟ್ಟನೆಂದು ಹೇಳಿದೆ. ಆದರೆ ಈ ಕಂಬದ ಮೇಲಿನ ಶಾಸನದ ಕಾಲ ಕ್ರಿ.ಶ. ೧೨೭೭ನೆಯ ಆಗಸ್ಟ್ ೭ ಆಗಿದೆ. ಇದು ಇತರ ಕಂಬಗಳನ್ನು ಮಾಡಿಸಿದ ಹದಿಮೂರು ವರ್ಷಗಳನಂತರ ಅಸ್ತಿತ್ವಕ್ಕೆ ಬಂದಿದೆ. ಈ ಕಂಬಗಳಲ್ಲಿ ಒಂದು ಈಗ ಬಿಲ್ವಪತ್ರೆಯ ತೋಪಿನ ಹಿಂಭಾಗದಲ್ಲಿದೆ ಎಂದು ಹೇಳಿದೆ. ಅದು ಮೊದಲು ಈ ಮಂಟಪಕ್ಕೆ ಸೇರಿದುದೇ ಆಗಿತ್ತು. ಬಹುಶಃ ಅನಂತರ ಭಗ್ನವಾದ ಕಾರಣ ಅದನ್ನು ತೆಗೆದು ಅದರ ಸ್ಥಳದಲ್ಲಿ ಹೊಸ ಕಂಬವೊಂದನ್ನು ೧೨೭೭ರಲ್ಲಿ ಸೇರಿಸಿರಬಹುದೇನೊ! ದೇವಸ್ಥಾನದ ಎರಡನೆಯ ಮುಖಮಂಟಪ ಅದೇ ಸುಮಾರಿಗೆ ಹೊಸದಾಗಿ ಸೇರಿಸಲ್ಪಟ್ಟಿದ್ದಿರಬೇಕು. ಇದರಲ್ಲಿ ಕಂಬವೊಂದರಲ್ಲಿರುವ ಶಾಸನ (ಸಂಖ್ಯೆ ೧೭)ದಲ್ಲಿ ಇದನ್ನು ಕಾಶ್ಯಪಗೋತ್ರದ ಗಂಗಗೊಂಡಮಾರಾಯನ ಮೊಮ್ಮಗ, ಜಗದೇವಮಾರಾಯನ ಮಗನಾದ ಬಿಟ್ಟಿಮಾರಾಯನು ನಿಲ್ಲಿಸಿದನೆಂದಿದೆ. ಈತ ಸೋತ್ರಿಯೂರಿನ ಊರೊಡೆಯನಾಗಿದ್ದ. ಶಾಸನದಲ್ಲಿ ಕಾಲದ ಪ್ರಸ್ತಾಪವಿಲ್ಲದಿದ್ದರೂ ಇದು ಸುಮಾರು ೧೪ನೆಯ ಶತಮಾನದ ಶಾಸನವೆಂದು ಲಿಪಿಯ ಆಧಾರದ ಮೇಲೆ ಹೇಳಬಹುದು.

ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಮಠದ ಸ್ವಾಮಿಗಳ ಪ್ರಸ್ತಾಪ ಶಾಸನಗಳಲ್ಲಿ ಮೊದಲ ಬಾರಿ ನಮಗೆ ಕಾಣಿಸಿಕೊಳ್ಳುವುದು ಅಲ್ಲಿನ ವೀರಸಿಂಹಾಸನಮಠದ ಶಿವರಾತ್ರಿಸ್ವಾಮಿಗಳ ಗದ್ದಿಗೆಯ ನಂದಿಯಪೀಠದಲ್ಲಿ (ಶಾಸನ ಸಂಖ್ಯೆ ೧೯). ೧೬ನೆಯ ಶತಮಾನದ ಈ ಶಾಸನದಲ್ಲಿ ಶಿವರಾತ್ರೆದೇವರ ನಿರೂಪದಿಂದ ಲಿಂಗಣ್ಣ ಒಡೆಯರು ಬಸವಪ್ರತಿಷ್ಠೆಯನ್ನು ದುಂದುಭಿಸಂವತ್ಸರದ ಮಾಘಶುದ್ಧ ದಶಮಿ ಶನಿವಾರದಂದು ಮಾಡಿದರೆಂದಿದೆ. ತೇದಿಯ ಈ ವಿವರಗಳು ಕ್ರಿ.ಶ. ೧೫೦೪ನೆಯ ಜನವರಿ ೭ನೆಯ ವರ್ಷಕ್ಕೆ ಸರಿಹೊಂದುತ್ತವೆ. ಶಾಸನದಲ್ಲಿ ಪ್ರಸ್ತಾಪಿಸಲ್ಪಟ್ಟ ಶಿವರಾತ್ರೆದೇವರು ಆ ಮಠದ ಅಧಿಪತಿಗಳೇ ಆಗಿರಬಹುದು.

ಈ ಶಿವರಾತ್ರೆದೇವರು ಇಮ್ಮಡಿ ಶಿವರಾತ್ರೀಶ್ವರಸ್ವಾಮಿಗಳೆಂದು (ಸು. ೧೫೫೦–೧೫೮೯) ನಂಜುಂಡಾರಾಧ್ಯರು ಗುರುತಿಸಿದ್ದಾರೆ.[1] ಆದರೆ ಶಾಸನೋಕ್ತ ಕಾಲದ ವಿವರಗಳು ಕ್ರಿ.ಶ. ೧೫೦೬ಕ್ಕೆ ಸರಿಹೊಂದುತ್ತವೆ. ಆದುದರಿಂದ ಶಿವರಾತ್ರೆದೇವ ಎಂಬುದು ಸಾಮಾನ್ಯವಾಗಿ ಆ ಮಠದ ಅಧಿಪತಿಗೆ ಅನ್ವಯಿಸುವ ಮಾತೆಂದು ಭಾವಿಸಿ ಆ ಮಠಾಧಿಪತಿಗಳು ಭಂಡಾರಿ ಬಸವಪ್ಪ ಒಡೆಯರೆಂದೂ ಗುರುತಿಸಬಹುದೇನೋ. ಅವರ ಮಠಾಧಿಪತ್ಯದ ಕಾಲ ಸು. ಕ್ರಿ.ಶ. ೧೪೯೦–೧೫೧೫.

ನಂಜನಗೂಡಿನ ತೀರ್ಥಘಟ್ಟದ ಮಂಟಪದ ಎರಡನೆಯ ಅಂಕಣದ ಮೇಲ್ಛಾವಣಿಯಲ್ಲಿರುವ ಎರಡು ಶಾಸನ ಕಲ್ಲುಗಳಲ್ಲಿ[2] ಸುತ್ತೂರು ಸಿಂಹಾಸನದ ಪಟ್ಟದ ಭಂಡಾರಿ ಬಸವಪ್ಪಒಡೆಯರ ಪ್ರಸ್ತಾಪವಿದೆ. ಈ ಎರಡು ಶಾಸನಗಳೂ ಸ್ವಲ್ಪಮಟ್ಟಿಗೆ ಭಗ್ನವಾಗಿವೆ. ಇವುಗಳ ತೇದಿ ಬಹುಶಃ ಒಂದೇ—ಶಕವರ್ಷ ೧೪೩೬ನೆಯ ಭಾವಸಂವತ್ಸರದ ಶ್ರಾವಣ ಶುದ್ಧ (೧ ?)—ಆಗಿದ್ದು ಆ ವಿವರಗಳು ಕ್ರಿ.ಶ. ೧೫೧೪ನೆಯ ವರ್ಷದ ಜುಲೈ ೨೩ಕ್ಕೆ ಸಮನಾಗುತ್ತವೆ. ಸುತ್ತೂರಿನ ಪೀಠಾಧಿಪತಿಗಳಾಗಿದ್ದ ಬಸವಪ್ಪಒಡೆಯರು ಕಪಿಲಾನದಿಯ ತೆಂಕಣತಡಿಯಲ್ಲಿ ನೂತನವಾಗಿ ಸಂಗಮೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅಲ್ಲಿ ವಾಸವಾಗಿದ್ದ ಸಿಂಗಿರಿ ಒಡೆಯರಿಗೂ ತಮಗೂ ತಮ್ಮ ಕಡೆ ವಾಸವಾಗಿದ್ದ ಹಿರಿಯರುಗಳಿಗೂ ನೈವೇದ್ಯ ಮೇಲು ವೆಚ್ಚಗಳಿಗೆಂದು ಭೂಮಿ ದಾನಮಾಡಿದ ವಿಷಯ ಇದರಲ್ಲಿದೆ. ಕೊತ್ತಾಗಾಲಸ್ಥಳದ ಸಿಂಡೆನಹಳ್ಳಿಗ್ರಾಮದ ಎಲ್ಲ ಸ್ವಾಮ್ಯವನ್ನೂ ಹಾಗೂ ಮುಳ್ಳೂರು ಸ್ಥಳದ ಚೀಲಹಳ್ಳಿಯಲ್ಲಿ ಸಂಗಮೇಶ್ವರ ದೇವಾಲಯದಲ್ಲಿ ವಾಸವಾಗಿದ್ದ ಸಿರಿಗಿರಿಒಡೆಯರಿಗೆ ಕೊಟ್ಟಿದ್ದ ಅರ್ಧ ಭಾಗವನ್ನೂ ಕಳೆದು ಉಳಿದರ್ಧಭಾಗದ ಸ್ವಾಮ್ಯವನ್ನು ಪಟ್ಟದ ಭಂಡಾರಿ ಬಸವಪ್ಪಒಡೆಯರು ಸಂಗಮೇಶ್ವರದೇವರಿಗೆ ದಾನವಾಗಿ ನೀಡಿದರೆಂದು ಮೊದಲ ಶಾಸನ ತಿಳಿಸುತ್ತದೆ. ಎರಡನೆಯ ಶಾಸನದಲ್ಲಿ ಮೂಡಣ ಕೋಟೆಯಸೀಮೆಯಲ್ಲಿ ತಮಗೆ ನೀಡಲಾಗಿದ್ದ ಬೊಪ್ಪನಹಳ್ಳಿಗ್ರಾಮ,

[1] ಶಿವರಾತ್ರಿ ಶಿವಾಚಾರ್ಯ, ಪು. ೧೪೬

[2] ಎ.ಕ., ಸಂಪುಟ ೩, ನಂಜನಗೂಡು ೩೯೫ ಮತ್ತು ೩೯೬

ಪೊಳಲವಾಡಿಯಲ್ಲಿ ಗದ್ದೆ ಹಾಗೂ ಇತರ ಭೂಮಿಗಳನ್ನು ಸಿರಿಗಿರಿಒಡೆಯರಿಗೂ ತಮ್ಮ ಹಿರಿಯರುಗಳಿಗೂ ನೈವೇದ್ಯ ಮೇಲುವೆಚ್ಚಗಳಿಗಾಗಿ ನೀಡಲಾಯಿತೆಂದು ಹೇಳಿದೆ.

ಈ ಭಂಡಾರಿ ಬಸವಪ್ಪ ಒಡೆಯರು ಪರ್ವತ ಒಡೆಯರ ಶಿಷ್ಯರೆಂದು ೨೦ನೆಯ ಶಾಸನದಲ್ಲಿ ಸ್ಪಷ್ಟವಾಗಿ ಹೇಳಿದೆ. ತಾವು ನಂಜನಗೂಡಿನಲ್ಲಿ ಪ್ರತಿಷ್ಠಾಪಿಸಿದ ಸಂಗಮೇಶ್ವರದೇವರ ಶ್ರೀಕಾರ್ಯಕ್ಕೆ ಅಲ್ಲಿ ವಾಸವಾಗಿದ್ದ ಸಿರಿಗಿರಿಒಡೆಯರು ಹಾಗೂ ಅವರೊಡನಿದ್ದ ಹಿರಿಯರುಗಳಿಗೂ "ನಯಿವೇದ್ಯ ಮೇಲುವೆಚಸಿತಪರಿಹಾರಗಳು ನಡಶಿವಕ್ಕೆ" ಯೆತ್ತುಗದ ಮುಳೂರ ಹೆಡೆಯಾಲಸ್ತಳದ ಚೀಲಹಳ್ಳಿಗ್ರಾಮವನ್ನು ದೇವರಿಗೂ ಸಿರಿಗಿರಿಒಡೆಯರಿಗೂ ಸಮಭಾಗವಾಗಿ ದಾನಮಾಡಿದುದಾಗಿ ಶಾಸನದಲ್ಲಿ ಹೇಳಲಾಗಿದೆ. ಇದಕ್ಕೆಂದು ಈ ಗ್ರಾಮವನ್ನು ಮುಳೂರ ಪ್ರಭುವಾದ ವಿರುಪಣ್ಣ ಒಡೆಯರ ಮಕ್ಕಳಾದ ಚಿಕ್ಕನಂಜಯ್ಯನಿಂದ ಕ್ರಯಕ್ಕೆ ಪಡೆಯಲಾಯಿತು. ಈ ಶಾಸನ, ಮೇಲಿನ ಶಾಸನ ಹುಟ್ಟಿದ ಮೂರು ತಿಂಗಳನಂತರ ಅಂದರೆ ಕ್ರಿ.ಶ. ೧೫೧೪ನೆಯ ವರ್ಷದ ಅಕ್ಟೋಬರ್ ೨೩ರಂದು ಅಸ್ತಿತ್ವಕ್ಕೆ ಬಂದಿತು. ಮೇಲೆ ಹೇಳಿದ ಶಾಸನದಲ್ಲಿ ಸಿರಿಗಿರಿಒಡೆಯರು ಅದೇ ಚೀಲಹಳ್ಳಿಗ್ರಾಮದಲ್ಲಿ ವಾಸವಾಗಿದ್ದರೆಂದು ಹೇಳಿದೆ. ಎಂದಮೇಲೆ ಆ ಗ್ರಾಮದ್ದೇ ಅರ್ಧಭಾಗವನ್ನು ಬಸವಪ್ಪ ಒಡೆಯರು ಸಿರಿಗಿರಿಒಡೆಯರಿಗೆ ದಾನಮಾಡಿದರೆಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಶಾಸನವಿರುವ ಕಲ್ಲು ಮೂಲತಃ ಹೆಡಿಯಾಲಗ್ರಾಮದಲ್ಲಿದ್ದು ನಂತರ ಸುತ್ತೂರಿನ ಮಠಕ್ಕೆ ಆ ಕಲ್ಲನ್ನು ತಂದಿಡಲಾಗಿದೆ.

ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ಕ್ರಿ.ಶ. ೧೫೧೭ನೆಯ ವರ್ಷದ ಏಪ್ರಿಲ್ ೨೧ನೆಯ ದಿನಾಂಕದ ಶಾಸನವೊಂದಿದೆ.[1] ಇದು ಸವೆದುಹೋಗಿದ್ದು ವಿವರಗಳು ಲಭ್ಯವಿಲ್ಲ. ಬಹುಶಃ ಈ ಶಾಸನವನ್ನಾಧರಿಸಿ ಸಾಳುವ ಇಮ್ಮಡಿ ನರಸಿಂಹನ ವಂಶೀಯನಾದ ಸಾಳುವ ಲಿಂಗರಾಜನು ದೇವನೂರಿನ ಮಾಂಡಲಿಕನಾಗಿ ಆಳುತ್ತಿದ್ದು ಶ್ರೀಮಠದ ಬಸವಪ್ಪಒಡೆಯರನ್ನು ಕ್ರಿ.ಶ. ೧೫೧೫ರಲ್ಲಿ ಬರಮಾಡಿಕೊಂಡು ಅವರಿಗೆ ಉಂಬಳಿಗಳನ್ನೂ ಹಾಕಿಕೊಟ್ಟನೆಂದು ನಂಜುಂಡಾರಾಧ್ಯರು ಬರೆದಿದ್ದಾರೆ.[2] ಆದರೆ ಶಾಸನದಲ್ಲಿ ನೀಡಿರುವ ತೇದಿ ಕ್ರಿ.ಶ. ೧೫೧೭ನೆಯ ವರ್ಷ. ಲಿಂಗರಾಜನ ಪ್ರಸ್ತಾಪವಿದ್ದರೂ ಆತ ಸಾಳುವ ವಂಶೀಯನೆನ್ನಲಾಗುವುದಿಲ್ಲ. ಆತ ಸುತ್ತೂರು ಸಿಂಹಾಸನಾಧಿಪತಿಯಾಗಿದ್ದಿರಬಹುದಾದರೂ ಮಠದ ಪರಂಪರೆಯಲ್ಲಿ ಬಸವಪ್ಪಒಡೆಯರ ಬಳಿಕ ಸು. ಕ್ರಿ.ಶ. ೧೫೧೫ರಿಂದ ೧೫೩೦ರ ವರೆಗೆ ಶ್ರೀ ನಂಜುಂಡದೇಶಿಕೇಂದ್ರರು ಸಿಂಹಾಸನಾರೂಢರಾಗಿದ್ದುದಾಗಿ ನಂಜುಂಡಾರಾಧ್ಯರು ಹೇಳಿರುವುದರಿಂದ ಲಿಂಗರಾಜರು ಮಠಾಧಿಪತಿಗಳಾಗಿದ್ದಿರಬಹುದಾದ ಸಾಧ್ಯತೆ ಇಲ್ಲವೆನ್ನಬೇಕಾಗುತ್ತದೆ. ಈ ಶಾಸನದಲ್ಲಿ ತಾಯೂರ ಸ್ಥಳ ಹಾಗೂ ಧರ್ಮ ಕೊಡಗೆಗಳ ಪ್ರಸ್ತಾಪವಿದೆ.

ನಂಜುಂಡದೇಶಿಕೇಂದ್ರರ ಕಾಲದಲ್ಲಿ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜಯ್ಯದೇವನ ಕಾರ್ಯಕರ್ತನಾದ ಭದ್ರಯ್ಯನು ಸೋಮೇಶ್ವರಾಲಯವನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಸಹ ನಂಜುಂಡಾರಾಧ್ಯರು ಹೇಳಿದ್ದಾರೆ.[3] ಆದರೆ ಶಾಸನಾಧಾರದ ಅರ್ಥವೇ ಬೇರೆ. ಭದ್ರಯ್ಯನಿಗೂ ಸುತ್ತೂರುಮಠದ ಹಿರಿಯರುಗಳಿಗೂ ನಡುವೆ ಏರ್ಪಟ್ಟ ಒಂದು ಒಡಂಬಡಿಕೆ ಈ ಶಾಸನ (ಸಂಖ್ಯೆ ೨೧) ದಲ್ಲಿದೆ. ಇದನ್ನು ಸುತ್ರಯಪಟ್ಟೆ ಸುತ್ರಯದ ಗುತ್ತಿಗೆ ಎಂದು ಕರೆದಿದೆ. ಇದು ಐದು ವರ್ಷಕ್ಕೊಮ್ಮೆ ನಿಗದಿಗೊಳಿಸಲಾದ ಗುತ್ತಿಗೆಯ ಹಣಕ್ಕೆ ಕೇವಲ ಒಂದೊಂದು ವರ್ಷಕ್ಕೆ ಮಾತ್ರ ಅನ್ವಯಿಸುವಂತಹ ಭೋಹಿಡುವಳಿ ಪದ್ಧತಿಗೆ ಬಳಸುವ ಮಾತು. ಇದರಂತೆ ಭದ್ರಯ್ಯನು ಮೂಗೂರಸೀಮೆಯ ತಾಯೂರಸ್ಥಳದ ಹೊಳೆಯಸುತ್ತೂರುಗ್ರಾಮದಲ್ಲಿ ಮೊದಲು ಸೋಮೇಶ್ವರ ದೇವರಿಗೆ ದಾನನೀಡಿದ್ದ ಭೂಮಿಯನ್ನು ಈಗ ಮಠಕ್ಕೆ ಗುತ್ತಿಗೆಗೆ ನೀಡಿ ಒಂದು ವರ್ಷಕ್ಕೆ ವಿಕೃತ ಸಂವತ್ಸರದ ಆಷಾಢ ಶು ೧ ಆರಭ್ಯವಾಗಿ ಖರಸಂವತ್ಸರದ ಜೇಷ್ಠ ಬ ೩೦ರವರೆಗೆ–೪೦ ಗಟ್ಟಿವರಹಗಳನ್ನು ಸೋಮೇಶ್ವರ ದೇವರ ಭಂಡಾರಕ್ಕೆ ಸಲ್ಲಿಸಬೇಕೆಂದು, ಈ ಶಾಸನದಲ್ಲಿ–ಶ್ರೋತ್ರಿಯದ ಕಲ್ಲ ಪಟ್ಟೆಯಲ್ಲಿ–ಒಡಂಬಡಿಕೆ ಮಾಡಲಾಗಿದೆ.

ಇಮ್ಮಡಿ ಶಿವರಾತ್ರೀಶ್ವರ (ಸು. ೧೫೫೦–೮೯)ರು ಸುತ್ತೂರು ಸಿಂಹಾಸನಾಧೀಶ್ವರರಾಗಿದ್ದಾಗ ಅಲ್ಲಿನ ಮಹತ್ತಿನ ಕೆರೆಗೆ ಭಕ್ತನೊಬ್ಬ ದಾನ ನೀಡಿದ ಉಲ್ಲೇಖ ೨೨ನೆಯ ಶಾಸನದಲ್ಲಿದೆ. ಶಾಸನದಲ್ಲಿ ಹೆಸರಿಸಲಾದ ಶಿವಪೂಜೆಯ ದೇವರು ಬಹುಶಃ ಇಮ್ಮಡಿ ಶಿವರಾತ್ರೀಶ್ವರರೇ ಆಗಿರಬಹುದು. ಶಾಸನದ ಕಾಲ ಕಲಿಯುಗವರ್ಷ

---

1 ಅದೇ, ನಂಜನಗೂಡು ೨೬೬

2 ಶಿವರಾತ್ರಿ ಶಿವಾಚಾರ್ಯ, ಪು. ೧೨೨

3 ಅದೇ, ಪು. ೧೨೮

೪೬೯೦ರ ವಿರೋಧಿಸಂವತ್ಸರದ ಜೇಷ್ಠಶುದ್ಧ ದಶಮಿ ಸೌಮ್ಯವಾರಕ್ಕೆ ಸಮನಾದ ಕ್ರಿ.ಶ. ೧೫೮೯ನೆಯ ಮೇ ೧೫. ದ್ರವ್ಯದಾನಮಾಡಿ ಅದರಿಂದ ವಾರ್ಷಿಕವಾಗಿ ಬರುವ ಬಡ್ಡಿಯ ಹಣವನ್ನು ಬಹುಶಃ ಕೆರೆಯ ಜೀರ್ಣೋದ್ಧಾರ ಇತ್ಯಾದಿಗಳಿಗೆ ಬಳಸಬೇಕೆಂದು ಏರ್ಪಾಡು ಮಾಡಿದಂತಿದೆಯಾದರೂ ಶಾಸನಕಲ್ಲಿನ ಕೆಳಭಾಗ ಬಹುಶಃ ಒಡೆದು ಹಾಳಾಗಿರುವುದರಿಂದ ಶಾಸನದ ಉದ್ದೇಶ ಸ್ಪಷ್ಟವಾಗಿಲ್ಲ.[1]

ಸುತ್ತೂರಿನಲ್ಲಿರುವ ೨೫ನೆಯ ಶಾಸನ ಶಿವರಾತ್ರಿದೇವರ ಶಿಷ್ಯರಾದ ಚನ್ನಬಸವರಾಜದೇವರ ಕಾಲದ್ದು. ಆಗ ವಿಜಯನಗರದಲ್ಲಿ ವೆಂಕಟಪತಿಮಹಾರಾಯರು ಆಳುತ್ತಿದ್ದು ಪದಿನಾಡು ಸೀಮೆಯನ್ನು ದೇವಪ್ಪಗೌಡರ ಮಗನಾದ ರಾಮರಾಜನಾಯಕನು ಆಳುತ್ತಿದ್ದನು. ತನ್ನ ಸೀಮೆಗೆ ಸೇರಿದ ಹೊಂಗನೂರ ಸ್ಥಳದಲ್ಲಿದ್ದ ಹಸುರಹಳ್ಳಿಗ್ರಾಮವನ್ನು ತನ್ನ ತಂದೆ ಹಾಗೂ ತಾಯಿ ಚನ್ನಾಜಿಯಮ್ಮನವರಿಗೆ ಪುಣ್ಯವಾಗಬೇಕೆಂದು ರಾಮರಾಜನಾಯಕನು ಚನ್ನಬಸವರಾಜ ದೇವರಿಗೆ ಸುತ್ತೂರ ಸಿಂಹಾಸನಕ್ಕೆಂದು ದಾನವಾಗಿ ನೀಡಿದನು. ಶಾಸನದ ಕಾಲ ಶಕವರ್ಷ ೧೫೧೫ನೆಯ ವಿಜಯ ಸಂವತ್ಸರ ಭಾದ್ರಪದ ಬಹುಳ ೧೦ ಸೋಮವಾರಕ್ಕೆ ಸಮನಾದ ಕ್ರಿ.ಶ. ೧೫೯೩ನೆಯ ವರ್ಷದ ಸೆಪ್ಟೆಂಬರ್ ೧೦. ಈ ಶಾಸನದ ಒಂದು ನಕಲನ್ನು ಚಾಮರಾಜನಗರ ತಾಲ್ಲೂಕಿನ ಮೈಲುಮಾಳ ಗ್ರಾಮದಲ್ಲಿ ದೇವಳ್ಳಿಯ ಹೊಲದ ಪಶ್ಚಿಮಕ್ಕಿರುವ ಕಲ್ಲಿನಲ್ಲಿಯೂ ಕೆತ್ತಲಾಗಿದೆ.[2] ಬಹುಶಃ ಈಗಿನ ಮೇಲುಮಾಳವೇ ಹೊಂಗನೂರು ಸ್ಥಳದ ಹಸುರಳ್ಳಿಯಾಗಿದ್ದಿರಬೇಕು. ಹೊಂಗನೂರು ಈಗ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ.

ಸುತ್ತೂರಿನ ಸೋಮೇಶ್ವರದೇವರ ಅಮೃತಪಡಿಗೆಂದು ವಶಿಷ್ಟಗೋತ್ರದ ಆಶ್ವಲಾಯನಸೂತ್ರದ ಉಮ್ಮತ್ತೂರಿನ ನರಸಪ್ಪಯ್ಯನವರ ಮಗ ರಾಮಪ್ಪನು ಕ್ರಯಕ್ಕೆ ಪಡೆದು ಭೂಮಿಯನ್ನು ದಾನಮಾಡಿದನೆಂದು ಇನ್ನೊಂದು ಶಾಸನ (ಸಂಖ್ಯೆ ೨೪)ದಲ್ಲಿದೆ. ಆದರೆ ಶಾಸನದಲ್ಲಿ ಕಾಲದ ಉಲ್ಲೇಖವಿರುವ ಭಾಗ ಒಡೆದುಹೋಗಿದೆ. ಇದು ೧೬ನೆಯ ಶತಮಾನಕ್ಕೆ ಸೇರಿದ ಶಾಸನ.

ಗ್ರಾಮದಲ್ಲಿರುವ ಮಂಟಪವೊಂದು ದೇಪಯ್ಯನ ಮಂಟಪವೆಂದೇ ಹೆಸರನ್ನು ಪಡೆದಿದೆ. ಇದರಲ್ಲಿನ ಕಂಬವೊಂದರಲ್ಲಿರುವ ಶಾಸನ (ಸಂಖ್ಯೆ ೨೫)ದಿಂದ ದೇಪಯ್ಯನೆಂಬಾತನು ಕ್ರಿ.ಶ. ೧೬೭೧ರ ಆಗಸ್ಟ್ ೫ರಂದು ಈ ಮಂಟಪವನ್ನು ಮಾಡಿಸಿದನೆಂದು ತಿಳಿದುಬಂದಿದೆ. ಈತ ಬಹುಶಃ ಸೋಮೇಶ್ವರ ದೇವಾಲಯದ ಸ್ಥಾನಿಕನಾಗಿದ್ದ ನಿಜಲಿಂಗಒಡೆಯರ ಮೊಮ್ಮಗ. ಗಂಗೊಡೆಯರ ಮಗ, ಚಂದಯ್ಯನ ತಮ್ಮ. ಮಂಟಪ ಕಟ್ಟಿಸಿದುದಲ್ಲದೆ ದೇವರಿಗೆ ಮೊಸರನ್ನವನ್ನು ನಿವೇದ್ಯಮಾಡಲು ಹಣವನ್ನು ಸಹ ದತ್ತಿಯಾಗಿ ಬಿಟ್ಟನು.

ಕೊನೆಯದಾಗಿ ಶ್ರೀಮಠದ ಸ್ವಾಮಿಗಳವರ ಬಳಿ ಇರುವ ತಾಮ್ರಶಾಸನವನ್ನು ಪ್ರಸ್ತಾಪಿಸಬೇಕು. ದೇವನಗರದ ಪೇಟೆಶೆಟ್ಟಿ, ಪಟ್ಟಣಸ್ವಾಮಿ, ಉಭಯ ನಾನಾದೇಶದ ಮಹಾನಾಡು ಮುಂತಾದ ವರ್ತಕರು ಕಾಳಂಗಂಡಿ ಮಠಕ್ಕೆ ಹಲವು ಸುಂಕಗಳಿಂದ ಬರುವ ಆದಾಯವನ್ನು ದಾನಮಾಡಿದರೆಂದು ಇದು ತಿಳಿಸುತ್ತದೆ. ಎಡದೊರೆ ಕೋಟೆಗೆ ಹೋಗುವ ಮಾರ್ಗದಲ್ಲಿ ಮೂಲೆಹೇರಿಗೆ ಒಂದು ಕಾಸು, ಜವಳಿ ಮತ್ತು ಹೊಗೆಸೊಪ್ಪಿನಹೇಗಳಿಗೆ ಎರಡೆರಡು ಕಾಸುಗಳು, ಎಲೆನಡೆಗೆ ಒಂದು ಕಂಟು (ಕಂತು), ಎಲೆ, ಅರಿಶಿನ, ಮೆಣಸು ಮುಂತಾದ 'ಕವಾಡಸರಕಿನ' ಹೇರಿಗೆ ಎರಡು ಕಾಸು—ಈ ದರಗಳಲ್ಲಿ ಸುಂಕವನ್ನು ಆ ಮಠಕ್ಕೆ ಕೊಡಬೇಕೆಂದು ಇದರಲ್ಲಿ ನಿಗದಿಮಾಡಲಾಗಿದೆ. ಈ ಮಠ ಎಲ್ಲಿದೆ ಎಂಬುದು ತಿಳಿಯದು. ದೇವನಗರವು ದೇವನೂರಾಗಿರಬಹುದು.

೧

## ಸೋಮೇಶ್ವರ ದೇವಸ್ಥಾನದ ಉತ್ತರಕ್ಕೆ ನಿಂತಿರುವ ತುಂಡುಕಲ್ಲು

೧ ದುಣ್ಣ ಯೊ (?)
೨ ರಾಮ್ಬದಿಯುರ
೩ ಣೆಜಿರಾಟ್ಟು
೪ ದಿಕ್ಕದಾಯಧ
೫ ಇದಾಕ್ಕ ಈ ದುಗ್ಗ

---

[1] ನಂಜುಂಡಾರಾಧ್ಯರು ನೀಡಿರುವ ಅರ್ಥಕ್ಕೆ ನೋಡಿ ಅದೇ ಪು. ೧೪೨

[2] ಎ.ಕ., ಸಂಪುಟ ೪ (ಸಂ : ಬಾ. ರಾ. ಗೋ), ಚಾಮರಾಜನಗರ ೨೧೬

೬ ಬರ ವಿಟ್ಟಕ್ಕೆ
೭ ನಱಿದಪಂ
೮ ರದ ದು ರೋ
೯ ...ಗ್ಗದ

## ೨
## ಅದೇ ಸ್ಥಳದಲ್ಲಿ ಇನ್ನೊಂದು ತುಂಡುಕಲ್ಲು

೧ ಸ್ವದತ್ತಂ ತನ್ನಿತ್ತುದಕ್ಕೆ ಪರದತ್ತಂ ವಾ ಪೆ
೨ ಱಿರಿತ್ತುದಕ್ಕೆ ಓ ಹರೇತು ಅಱಿವೊ ವಸುನ್ಧ
೩ ರಿ ಭೂಮಿ ಷಷ್ಟಿವರ್ಷಸಹಸ್ರಾಣಿ ಅ
೪ ರವತ್ತುಸಾಸಿರವರ್ಷ ವಿಷ್ಟಾಯಾಂ ಜಾಯ
೫ ತೆ ಕ್ರಿಮಿ ಪೇಲಪುಱುವಾಗಿ ಪುಟ್ಟುಗೆ

## ೩
## ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಕಲ್ಲು

**ಮುಂಭಾಗ**

೧ ಒಡೈಯಾರ್ ಶ್ರೀ ಚೋೞ ಗಂಗದೇವರ್ಕ್ಕು ಯಾಣ್ಡು ನಾಲಾವತು ಮುಡಿಗೊಣ್ಡಚೋೞಮಣ್ಡಲತ್ತುಗೊ . .
೨ ಣ್ಡಚೋೞವಳನಾಟ್ಟು ಇಡ್ಯೆನಾಟ್ಟು ಬ್ರಹ್ಮದೇಯ ಸೊತ್ತಿಯೂರ್ಸ್ಸತೂರರೂರ್
೩ ಉಡೈಯಾರ್ ಶ್ರೀ ರಾಜೇನ್ದ್ರಚೋೞದೇವರ್ಗುೞದೆ ವೀರಗಪ್ಪಡಿ ಯಾನ ತೇವನಾ
೪ ಡುವೇಲಾನುಂ ಮುಞ್ಜಾಡಿ ಆರಿಯುಂ [ಚಿ]ಮ್ಮ [ನುಕ್ಕು] ಸೋತ್ತಿಯೂರ [ಸ್ತ] ವಿಣ್ಣಕ್ಕುೞೈಯ
೫ ಱುನ್ತರುೞಿ ಇರುಕ್ಕುಂ ದುರ್ಗ್ಗೆಯಾಕ್ಕುಂ ತಿರುವಮುತುಕ್ಕು ವಿಪನ ಚೆಯ್ಯ ಇವ
೬ ರ್ಕ್ಕುೞುಕ್ಕು ನಾಂಗಳ್ಕೊಡುತ್ತ ನಿಲಮೂವತು ಇವ್ವೂರ್ಸ್ಸರ್ವ್ವದೇವ ಸೆರೆಕಿಕ್ಕು
೭ ಕಿೞಕ್ಕುಂಡಿಣೆಯ ಕಣ್ಡತ್ತುಕ್ಕು ಮೇರ್ಕ್ಕುಂ ವೆಲಕಲುಕ್ಕು ವಡಕ್ಕುಂ ಕಣ್ಡ .
೮ ಕ್ಕೆ ಕಾಲುಕ್ಕು ಕಿೞಕ್ಕು ಕೀೞಿಂಡಿಣೆಯ ಗಣ್ಡತ್ತುಕ್ಕು ತೆರ್ಕ್ಕು ನಡುವುಳ್ಳ
೯ ಟ್ಟ ನಿಲಂ ಇರಣ್ಡು ಮಾಕಾಣಿ ಇನ್ನೆಲ ಕಣ್ಡುಗಪ್ಪಡಿ ಇರು ಕಣ್ಡು
೧೦ ಗತ್ತು ಪತ್ತು ಬಳ್ಳ ಮಣ್ಣು ಇವ್ವಿರುವರ್ಕ್ಕು ನಾಂಗಳ್ವಿಟ್ಟುಕುಡುತ್ತು ಕೊ
೧೧ ಣ್ಡವಿಲೈಪ್ಪೊರುೞ ಪೊನ್ನಿರು ಕೞಂಜುಂ ಇಪ್ಪೊನ್ನಿರುಕೞಂಜುಕ್ಕುಂ ಇ
೧೨ ಮ್ಮಣ್ಣಿರುಗಣ್ಡುಗತ್ತು ಪತ್ತು ಬಳ್ಳ ಮಣ್ಣು ವಿಲೈಕೆಱುವಿಟ್ಟು ಪೊನ್ನುಱುಕೊ
೧೩ ಣ್ಡು ಇತುಕ್ಕು ವಿಲೈಪ್ರಮಾಣವಾಕ ಕಲ್ವೆಟ್ಟಿ ವಿಟ್ಟು ಕುಡುತ್ತೋಂ ತೇವನಾ
೧೪ ಡವೇಲಾನು ಆರಿಯ ಚಿಮ್ಮನುಕ್ಕು ಮಾರಯುಂ ವೀರಯನುಂ ತೇವಯುಂ ಸೋ
೧೫ ಮಯನ್ನುಂ ನಾರಾಯಣಂ ನರಸಿಂಗನುಂ ಶ್ರೀಯೂರ ಚಾವುಣ್ಡಯನುಂ ಉೞ್ಪಿಟ್ಟ
೧೬ ಸಭೆಯೋಂ ಇನ್ನಿಲತ್ತುಕ್ಕು ಇಱೈಯು ಎವ್ವೋಱುಂ ಉೞ್ಪಿಟ್ಟ ಇಱಯಾತಾ

**ಹಿಂಭಾಗ**

೧೭ . . . . . . . . . . .
೧೮ ಸಂ ವೊಂಣ್ಡು ಇಱೈ ಇನ್ನಿಲ . . . . . . ಲಂ ಇನ್ನಿಲ
೧೯ ತ್ತಿಲ ವರ್ಷತ್ತೊಣ್ಡು ವಿಟ್ಟೋಂ ಜ . . . ತ್ತುಗ್ಗೈಯಾರ್ಕ್ಕು ಪೋ
೨೦ ಣ್ರ (ವ)ರ್ಕ್ಕು . ಕ್ಕ . ಣ್ಣತ್ತಿರುವಮುದುಂ ತಿರುವಿೞಕ್ಕುಕ್ಕುಂ
೨೧ ನಿಪನ್ತಂ ಚೆಯುವುಣ್ಡ . ರಿನುಂ ನಿಲವುಂ ವಿ
೨೨ ಟ್ಟುಕುಡುತ್ತು ಕಲ್ಲುಂ ವೆಟ್ಟುವಿ [ಟ್ಟು] ಕಲ್ವೆ [ಟ್ಟುಪ್ಪ]ಡಿ ಕ
೨೩ ಲ್ನಾಟ್ಟೆ . . . . . ಇಪ್ಪೊತ್ತಿ . . . . . .
೨೪ . . . . . . . ರಕ್ಷಿ . . ತೆ ಅಱಿಪ್ಪೊಡಂ ಕೈ . . . .
೨೫ . . . . . . . . . . . ತಾನ್ಚೆಯ್ದ ಪಾಪತ್ತು . . . ,
೨೬ . . . . . . . . . . . ಯಿರ ಬ್ರಾಹ್ಮಣರ . . .

೨೭ . . . . . . . . . . . ಱಿದನಂ ಸನ್ತತಿ . . . .
೨೮ . . . . . . . . . . . ತಿರುವಮುತು ತಿರುವಿಳಕ್ಕು ಎಡಯುರ್
೨೯ . . . . ಮುಖ್ಯರು ಪೇಳನೆಯ ನರಕಕ್ಕಿಱಿವರ್ ಸಭೈಯಾರ್
೩೦ . . ಸರ್ಬ್ಬರಡಕಂ ಅಜ್ಜಭೆಯಾರೊಪ್ಪ ಅಣುಗಾಚಾರಿ ಇವೆನ್ನಕರಂ ಈ ಮ
೩೧ ರ್ಯ್ಯಾದೆಯಱಿವಂ ಕದಂಬಳಿಗೆನಾಡ ಕೆಱೆಯೂರೊಡೆಯ ಬ್ರಾಹ್ಮ
೩೨ ಣ ಆಯ್ಚಮಯ್ಯ ಚಾವುಣ್ಡಯ್ಯ ನಾಡ ನಾನಾದೇಸಿಯ ಅಯ್ಯಾವೊಲಿಲ
೩೩ ಹ್ಮಸೆಟ್ಟಿಗಳು ಇವ . . ಈ ಧರ್ಮ್ಮರಕ್ಷೆ ಅಯ್ಯೂರ್ನ್ವರ್

೪

## ಅದೇ ಸ್ಥಳದಲ್ಲಿ ಎರಡನೆಯ ಕಲ್ಲು

### ಮುಂಭಾಗ

೧ ಪೂರ್ವ್ವದೇಶಮುಂ ಗಂಗೆಯುಂ ಕೊಣ್ಡ ಕೊಪ್ಪರಕೇಸರಿವರ್ಮ್ಮರಾನ ಒಡೆಯಾರ್
೨ ಶ್ರೀ ರಾಜೇನ್ದ್ರಚೋೞದೇವ[ರ್ಕ್ಕ]ಯಾಣ್ಡು ೩೧ ಆವದು ಸ್ವಸ್ತಿ
೩ ಸಕವರುಷ ೯ [೫]೫ನೆಯ ಆಂಗಿರಸಂವತ್ಸರದ
೪ ಕಾರ್ತ್ತಿಕಮಾಸ[ದ ಪು]ಣ್ಣಮೆ ತಲೆದೆವಸಮಾಗೆ ಬಿದಿ
೫ ಗೆ ಸೋಮವಾರಂ ರೋಹಿಣಿನಕ್ಷತ್ರದಲ್ ಒಡೆಯಾರ್ ಶ್ರೀ ರಾಜೇನ್ದ್ರಚೋ
೬ ೞದೇವಗುರುಕ್ಕಳ್ ಅರುಳಿಚ್ಚೆಯ್ಯದದಾವದು ಕೆಱೆಗೆ ಬಿತ್ತುವ
೭ ಟ್ಟಮುಂ ದೇವರ್ಗ್ಗೆ ತಿರುವ[1]ಮುಡಿಱ್ಕ್ಕು ಬಿಟ್ಟ ಭೂಮಿಯುಮಂ ಕಲ್ವೆಟ್ಟಿಕೊಡುವುದಕ್ಕೆ ತಿರು
೮ ವಾಯಿಮೊೞಿ ಪಡಿಯಿನಾಲ್ ಒಡೆಯಾ[ರ್ಕ್ಕ ಮ್ಮ]ಧಾರಾವರ್ಷಕಕ್ಕುವಂ ॥ ಶ್ರೋತ್ರಿಯಗ್ರಾಮದ
೯ ಮಹಾಜನಮುಂ ಸ್ವಸ್ತಿ ಶ್ರೀಮತ್ ಪ್ರಸಸ್ತಿಸಹಿತಂ ಸಮೆಯಮುಮಿಟ್ಟು ಬಿಟ್ಟ ಧರ್ಮ್ಮಸ್ಥಿತಿ
೧೦ ಕ್ರಮಮೆನ್ತೆನ್ದಡೆ ಈಶಾನಈಶ್ವರಮೊಡೆ[ಯಾರ್]ದೇಗುಲದ ಮೂಡಣ ದೆಸೆಯ ಮಠದ ಪೂವಿನಸೆಟ್ಟಿ ಯಿವರುಮೆರಡು ದೇ
೧೧ ವರ್ ಈಶಾನಈಶ್ವರಮೊಡೆಯ[ರ್ಗ್ಗಂ]ಮೂಲಸ್ಥಾನಮುಡೆಯರ್ಗ್ಗಂ ತಿರುವಮುದಿಂಗೆ ಕೊಟ್ಟುದು
೧೨ ಶ್ರೀಯೂರ ಚಾವುಣ್ಡಯ್ಯನ ಭೂಮಿಯುಲು ಪತ್ತು ಕೊಳಗ ಬೆದೆ[ಗ]ಱ್ದೆಯುಂ
೧೩ ಗಾಣಕ್ಕೊನ್ದು ನನ್ದಾದೀವಿಗೆಯಾಗಲ್ ಈಶಾನಈಶ್ವರಮುಡೆಯಾರ್ಗ್ಗೆ ಕೊಟ್ಟುದು ಒಡೆಯ
೧೪ ರ ಕರ್ಮ್ಮಧಾರಾವರ್ಷಕಕ್ಕುವಂ ಈಶಾನಈಶ್ವರಮೊಡೆಯರ್ಗ್ಗೆ ಕೊಟ್ಟ ತಿವಳಿ ೧ ದಟ್ಟೆ ೩
೧೫ ಖಣ್ಡಿಕೆ ೩ ಪಲಂ ೬ ಜಯಗಣ್ಟೆ ೧ ಪಲ . . ಕಾಳೆ ೩ ಪಲ ೧೫ ಆಗಲೀ ಪಞ್ಚಮಹಾ
೧೬ ಶಬ್ದಮಂ ತ್ರಿಕಾಳಂ ಬಾಜಿಸುವುದಕ್ಕೆ ತ್ರಿಕಾಳಂ ದೇವತಾರ್ಚ್ಚನಂ ಗೆಯ್ವುದರ್ಕ್ಕಂ ದೇವ
೧೭ ರ್ಗ್ಗೆ ನನ್ದನವನಂ ಮಾಟ್ಪುದರ್ಕಂ ಮಹಾದೇವರ ದೇವಡುವಿನಲ್ ಪತ್ತರಲೊಂದು ಕೊರು[ಲ]
೧೮ ಊರಲೊಕ್ಕಲಲೊನ್ದು ಪೊಱೆಯುಂ ಪತ್ತು ಕೊಳಗ ಭತ್ತಮುಂ ಒನ್ದು ಕಂತೆಯು ಬಣ್ಣಿ
೧೯ ಗೆ ಮೂಗುಳವುಂ ಕಪ್ಪಡಕ್ಕೆ ಪಟ್ಟಿಯುಂ ಬ್ರಹ್ಮಲಿಂಗಿಭಟರ್ಗ್ಗೆ ಕೊಟ್ಟುದು ಶ್ರೋತ್ರಿ
೨೦ ಯೂರ ಮಾರಯ್ಯಸೆಟ್ಟಿಯ ಪೆಣ್ಡತಿ ಗುಣ್ಡಬ್ಬೆ ಮೂಲಸ್ಥಾನದೇವರ್ಗ್ಗೆ ದೇಗುಲಮಂ ಮಾ
೨೧ ಡಿಸಿ ದೇವರ್ಗ್ಗೆ ದೇವಡುವಿನ ಮೂಡಣಮೆಯ ತೋಱ ಪಟ್ಟಪಾಳಿಯು ಪೊನ್ನರಕೊಟ್ಟು ಮ
೨೨ ಣ್ಣರ ಕೊಣ್ಡು ಬಿಡಿಸಿದಳ್ ಶ್ರೋತ್ರಿಯೂರ ಮಾರಯ್ಯಸೆಟ್ಟಿಯ ಮಗಂ ದೊರೆಯ್ಯಸೆಟ್ಟಿ ಮೂ
೨೩ ಲಸ್ಥಾನದೇವರ್ಗ್ಗೆ ಗಱಿಕೆಗಾಲ ಕಕ್ಕುವಗಱ್ದೆಯ ಮೂಡಣ ದೆಸೆಯುಲ್ ಪತ್ತು ಕೊಳ
೨೪ ಗ ಬೆದೆ ಗಱ್ದೆಯ ಪೊನ್ನ ಕೊಟ್ಟು ಮಣ್ಣಱ ಕೊಣ್ಡು ಬಿಡಿಸಿದಂ ಸೊತ್ತಿಯೂರವ್ವೆಗೆ ದೇವ[ಗೆ]
೨೫ ಱ ಒಳಗಣ ಆಡು ಒನ್ದು ಗಱಿಕೆಗಾಲ ಬಡಗದೆಸೆಯ ಕಕ್ಕುವ ಬಾಯ್ಕಾಲೊನ್ದು ಪಡುವ
೨೬ ಣದೆಸೆ ಇರ್ಪ್ಪಣ್ಡುಗ ಬೆದೆ ನೀರ್ಮ್ಮಣ್ಣುಂ ಬಿಟ್ಟುದು ಕೆಱೆಗೆ ಬಿತ್ತುವಟ್ಟಮು ಪ್ರಾ[ಚ್ಚ]ಕ್ಕೆ

### ಹಿಂಭಾಗ

೨೭ ತ್ತುಕೃಚ್ಛಕರ್ಮ್ಮಕ್ಕೆ ಆ ಸ್ಸಮೂಹಕ್ಕೆ ಕೊಟ್ಟ ಒಡ
೨೮ ವೆಯುಂ ತಮ್ಮ್ಮಪ ದೇವಸ್ಥಾನ ಪೂಜೆಯುಮಂ ಸಭೆ
೨೯ ಯಾರ್ ಕೆಱೆಗೆ ಕೊಟ್ಟರ್ ಸ್ವಸ್ತಿ ಸಮಸ್ತಪ್ರಸ
೩೦ ಸ್ತಿಸಹಿತಂ ಶ್ರೀಮತ್ ನಾನಾದೇಸಗರುಮು

[1] ಈ ಅಕ್ಷರವನ್ನು ಪಂಕ್ತಿಯ ಕೆಳಗೆ ಬರೆದಿದೆ.

೩೧ ಳ್ಳಿಟ್ಟ ಸಮೆಯುಮುಮಿಬ್ದು ಶ್ರೋತ್ರಿಯೂರಲಿ ಕೂಡಿದ .
೩೨ ಪುದು ಧನಮುಂ ಪಸೆವುಟ್ಟಗೆಯುಂ ಆಜೀವೆಗಟ್ಟಿಯು
೩೩ ಮಂ ಕೆಱೆಗೆ ಗೊಟ್ಟರ್ . . ನರ . . ಗಣಕ್ಕೆ ನಿಚ್ಚಂ ಒಮ್ಮಾನ
೩೪ . ಣ್ಣೆಯುಲೊಕ್ಕಲ . . . . . . . . ನನ್ದಾದೀವಿಗೆಯಾಗಲಾ ಎ
೩೫ ನಿತು ಗಾಣಂ ನಟ್ಟಾ . . ಅ . ತಿ [ನನ್ದಾದೀ]ವಿಗೆಯುಂ ಶ್ರೋ
೩೬ ತ್ರಿಯೂರ ಸಭೆಯಾರ್ ಈಶಾನಈಶ್ವರಮುಡೆಯರ್ಗ್ಗೆ ಕೊ
೩೭ ಟ್ಟರ್ ಈ ಧರ್ಮ್ಮವನಾವನೋರ್ವ್ವ ಅನುಕೂಲನಾಗಿ ನಡೆಯಿ
೩೮ ಸದೆ ಕೆಡಿಸಿದಾತಂ ವಾರಣಾಸಿಯುಂ ಕವಿಲೆಯುಮ
೩೯ ನಱಿದಂ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುನ್ದರಿ ಷಷ್ಟಿ
೪೦ ವರ್ಷಸಹಶ್ರಾಣಿ ವಿಷ್ಟಾಯಾಂ ಜಾಯತೇ ಕೃಮಿ
೪೧ ನ ವಿಷಂ ವಿಷಮಿತ್ಯಾಹುರ್ದೇವಸ್ವಂ ವಿಷಮುಚ್ಯತೇ ವಿಷ
೪೨ ಮೇಕಾಕಿನಂ ಹನ್ತಿ ದೇವಸ್ವಂ ಪುತ್ರಪೌತ್ರಿಕಂ

೫

## ನಾರಾಯಣಸ್ವಾಮಿ ದೇವಸ್ಥಾನದ ಹಿಂಭಾಗ ದಕ್ಷಿಣಪಾರ್ಶ್ವದ ಗೋಡೆಯ ಮೇಲೆ

೧ ಶ್ರೀಮತ್ತ್ರೈಲೋಕ್ಯಪೂಜ್ಯಾಯ ಸರ್ವ್ವಕರ್ಮ್ಮಸು ಸಾಕ್ಷಿಣೇ ಫಳದಾಯ ನಮೋ ನಿತ್ಯಂ ಕೇಶವಾಯ
೨ ಶಿವಾಯ ಚ ॥ ತತೋ ದ್ವಾರವತಿ[ೀ]ನಾಥ ಹೊಯ್ಸಳಾದ್ವೀಪಿಲಾಂಚ್ಛನಂ । ಜಾತಾ ಶಶಪುರೇ
೩ ತೇಶಾಂ ವಿನೆಯಾದಿತ್ಯಭೂಪತಿ[ಃ] ॥ ಆ ವಿನೆಯಾದಿತ್ಯಂಗಂ ಪಾವನಚಾರಿತ್ರೆ ಕೆ
೪ ಳೆಯಬರಸಿಗಮಖಿಳೋರ್ವ್ವೀವರನುದೆಯಂಗೆಯ್ದಂ ಶೈವರಪದ್ಮಭೃಂಗನಾ
೫ ಯೆಱೆಯಂಗ[ಂ ॥ ಉ]ಭಯಕುಲಶುದ್ಧೆಯೆನಿಪಾ ಶುಭಲಕ್ಷಣೆ ಏಚಬರಸಿ ಯೆಱೆಗ
೬ [ನೃ]ಪಂ[ಗಂ]ಪ್ರ[ಭು]ಗಳ್ಮೂವರ್ಪ್ಪುಟ್ಟಿದರಭಿನುತ ಬಲ್ಲಾಳವಿಷ್ಣುವುದೆಯಾದಿತ್ಯರು ॥ ಅನ್ತಾ
೭ ಮೂವರೊಳ . . . . [ಗು]ಂ ಸೌರ್ಯ್ಯಧನಂಜಯನುಮೆನಿಸಿದ ವಿಷ್ಣುವರ್ದ್ಧ
೮ ನದೇವನ[ವಿ್ರ]ತಾ . . . [ಳ್ವಡೆ] ॥ ಮುದ್ರಿಸಲಾದಿರಾಜಚರಿತಂಗಳನಾತ್ಮಚರಿತ್ರಮಾ
೯ ವಗಂ ಮುದ್ರಿಸಲಾಜ್ಞೆ ಭೂತಳದೊಳುದ್ಧತರಪ್ಪರ ಗಂಡಗರ್ವ್ವಮಂ ಮುದ್ರಿಸೆ ತೋಳಬಾ
೧೦ ಳಬಳಮುಜ್ವಳಕೀರ್ತ್ತಿ ಜಗಂಗಳೆಲ್ಲಮಂ ಮುದ್ರಿಸೆ ಪೆಂಪು ಮುದ್ರೆ ತನಗಾಗಿರೆ ವಿಷ್ಣು ಸಮು
೧೧ ದ್ರನೊಪ್ಪುವಂ ॥ ಜಳನಿಧಿಯುಂ ಕೆಸರ್ಮ್ಮಸಗೆ ಕೂಡೆ ಕಲಂಕುವ ಬಾಡವಾಗ್ನಿಯುಂ ತಳದೊ
೧೨ ಳಗಿರ್ದ್ದಲಾನಿಪಾಳ . . . ಶೇಷನ ಕಂಠನಾಳಸಂ ವದನದೆ ನಿಂನ ನಂಜನು ಮುಳಿಂದು ಮುಳಿ
೧೩ ಪ್ಪ[ಡೆ]ಪೊಡ . . . . ನುಳಿದಡೆ ತೋಱುಗುಂ ವಿಜಯವರ್ದ್ಧನನಾ ಕಲಿಜಿಷ್ಣುವರ್ದ್ಧನ ॥ ಚೋಳನ ಜೂ
೧೪ ಬು ಮಾಳ[ವಂ] . . . . . . . . ಚೇರನನಿಟ್ಟ ತಿಂ . . . . . . . . ಮಾಕಾಳಿ ಮಾಳನಂ ತುಳಿವ ಗಂಧಗಜಂ ಖಚನು
೧೫ ಳ್ಳೆಯುಂ . . . . ಳನ ಬೆಂನ ಚಮ್ಮಟಿಗೆಯಿನಡೆ ತಂದನೆ ವಿ[ೀ]ರವಿಷ್ಣುಭೂಪಾಳಕನೆಂಬ ಸಂಭ್ರಮ
೧೬ . . . . . . . . . . . ಮಂಡಳಂಗಳೊಳು ॥ ಆತನ ತನಯನ ಪೆರ್ಮ್ಮೆಯೆಂತೆಂದಡೆ ॥ ಕುಲಜನೆ ಯಾ
೧೭ ದವಾನ್ವಯಸಿರೋಮಣಿ ಬೇಳ್ಪವರ್ಗೀವ ಕಾವ ಸಚ್ಚರಿತೆಯೆನಿಪ್ಪ ಲಕ್ಷ್ಮಿಯ ಮಗಂ ಕಡುಚೆಲ್ವನೆ ಲೋ
೧೮ ಕವೆಲ್ಲಮಂ ಸಲೆನಿಲೆ ಕಾವ ವಿಷ್ಣುವಿನ ಪುತ್ರಕನೆಂದಡೆ ಬಣ್ಣಿಸಲ್ಕೆ ಭೂವಳಯದೊಳಾ
೧೯ ರ್ಪ್ಪತಾ . . . . ಸಿಂಹನೃಪಾಳಕನಂ ನಿರಂತರಂ ॥ ತರಳವಿಳೋಚನಾಂಚಳ[ಕೆ]ಕೆಂಪಿನಿಸುಂ
೨೦ [೭]ಗಳಂತರಿನರಪಾಳಸಂಕು . . ಪನ್ದಲೆ ಕಯ್ಗೆ ತುರಂಗರಾಜಿ ಮುಂದುರಕೆ ಗಜಾಳಿ ಶಾಲೆ
೨೧ ಗೆ ಧನಂ . . . ವಿ ಗೃಹಾಂತರಕ್ಕೆ ತ . . ಕಡಿತಕ್ಕೆ ವುಂಡಿಗೆಗವೋಲೆಗವಾ ನರಸಿಂಗಭೂಪನ ॥
೨೨ ಅರಿಭೂಪಬ್ಬ್ಯಂದು ಮೆಯ್ದೋಱಿ[ದ]ಡಮಯಮದಿಂ ತೋಱಿನೇ ಕ್ರೂರದೈತ್ಯೇಶ್ವರವಕ್ಷಕ್ಷೇತ್ರನಿರ್ವ್ವಾರಣ
೨೩ ನಖನಿ[ಶಿತೋ]ಚ್ಚಳ ದೋರ್ದ್ದ[ರ್ಪ್ಪ]ಮಂ . . . . ಕೀರ್ಣ್ನಗೀರ್ಣ್ಣಾನನಮನೊಗೆದ ಕೂರ್ದ್ದಾಡೆಯಂ ಸಂ
೨೪ ಚಳ . . . . . . . ಘನರವಮು[ಮನಾ] ನಾರಸಿಂಹಕ್ಷಿತೀಶಂ ॥ ಸ್ವಸ್ತಿ ಶ್ರೀ
೨೫ ಮನ್ಮಹಾಮಣ್ಡಳೇಶ್ವರ ತ್ರಿಭುವನಮಲ್ಲ ತಳಕಾಡುಗಂಗವಾಡಿನೊಣಂಬವಾಡಿಬನವಸೆ
೨೬ ಹಾನುಂಗಲು . . . ಲ್ಗೊಂಡ ಭುಜಬಳವೀರಗಂಗ ಪ್ರತಾಪಹೊಯ್ಸಳ ನಾರಸಿಂಹದೇವನ ತತ್ಪಾದ
೨೭ ಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಸೇನಾಧಿಪತಿ ದಂಡನಾಯಕ ಲಕ್ಮಯ್ಯನುಂ ದಂಡನಾ
೨೮ ಯಕ ಆ . . . . ಯ್ಯ . . ಯೆಂತೆಂದಡೆ ॥ ಧುರದೊಳೆ ನಿಂನ ನಾಮಕಹಳಾರವ
೨೯ ಮುಗ್ರ . . . . . . . . . . . ದಮಂ ದಿವಿಜಚಾಪಮನಾ ದಿವಿಜೇಂದ್ರನೀಲಮಂ ವಿರಚಿಪುದಾ
೩೦ ವಗಂ ಹ . . . . . . . . . . . ಪೇಳ್ದರೆಯೊಳೆ ಚಿತ್ರವಾಯ್ತುಸೆವ ನಿಂನ ಪರಾಕ್ರಮಮೆಂತು ನೋ

೩೧ ಳ್ದೊಡಂ . . . . . . . . . . . ನಿನ್ನ ಭುಜಾಸಿವೇಶ್ಯೆ ಸಂಗರದೊಳರಾತಿನಾಯಕರನಾದರದಿಂ
೩೨ ದಮರ್ದ್ದ . . . . . . . . . . . ಯ್ಯು ಕೊರಳೆಂಬಿವನೋವದೆ ಸೀಳ್ದು ನಲ್ಮೆಯಿಂ ನೆರೆದು ಮಹಾ
೩೩ . . . . . . . . . . . ದಿಂ ಸಮರದೊಳಾಡುವೋಗರದ ಪಾದೆಯೆ ನೀಂ
೩೪ ತೊಲಗರ್ತ್ತಿ. . . . . . . . . . ಯದತಿಲೋಬನೆ ನೀಂ ತೊಲಗಂನ್ಯನಾರಿಗಶ್ರಮದೊಳೆ
೩೫ . . . . . . . . . . . ದು ಬಗ್ಗಿಪಂತಮರನ ನಾಮ ಕಾಹಳರವಂ ನೆ
೩೬ . . . . . . . . . . . ರುಂ ಮಹಾಮಾತ್ಯ ಪದವಿಯೊಳು ಜೀವಿಸುತ್ತವಿ
೩೭ ರೆ ಶ್ರೀಮ . . . . . . . . . . . ನೊಳು ಶ್ರ ನಾರಸಿಂಹದೇವರು ರಾಜ್ಯಂಗೆಯ್ಯುತ್ತವಿರೆ ದಂ
೩೮ ಡನಾಯಕ . . . . . . . . . . . ನದೀತೀರದ ಸೊತ್ತಿಯೂರ ರಾಜಧಾನಿಯಲು ಸಕವರ್ಷ
೩೯ ೧೧೯೧ನೆ . . . . . . . . . . ಖ ಸು ೧೩ ಸೋಮವಾರದಲು ಶ್ರ ನಾಗಕೇಶವದೇವರಂ ಸು
೪೦ . . . . . . . . . . . ಖಂಡಸ್ಫುಟಿತಜೀರ್ಣೋದ್ಧಾರಕಂ ಬೆಳ್ಗಲಿಯಂ ಶ್ರ ನಾರಸಿಂ
೪೧ . . . . . . . . . . . ಯನಾಡ ಸಮಸ್ತ ಪ್ರಭುಗಾವುಣ್ಡುಗಳ ಕ
೪೨ ಯ್ಯ . . . . . . . . . . ಡು ಮತ್ತಂ ಸೊತ್ತಿಯೂರ ಮೂಲಿಗ ಮಹಾಜನಂಗ
೪೩ . . . . . . . . . . . ವದ ಕೆಱೆಯ . . : . . . ಬಿನ ಮೊದಲಲೆರಡು ಸಲಗೆ ಗದ್ದೆಯಂ ಪೊಂದು ಬೇಲಿ ಬೆದ್ದಲೆ
೪೪ ಯಂ ಧಾರಾಪೂರ್ವ್ವಕಂ . . . . . . . . . . ಬಿಟ್ಟರು ಯಿ ಧರ್ಮ್ಮಮಂ ಪ್ರತಿಪಾಳಿಸುವ ಮಹಾಪು
೪೫ . . . . . . . . . . . ಯಿರ ಕವಿಲೆಯಂ ಕೋಡಂ ಕೊಳಗುಮಂ ಸುವರ್ಣ್ಣದೊ
೪೬ . . . . . . . . . . . ಕಟ್ಟಿಸಿ ಚತುರ್ವ್ವೇದಪಾರಗರಪ್ಪ . . . . ಗ್ಗೆ ಧಾರಾಪೂರ್ವ್ವಕಂ ಮಾಡಿ ಕೊಟ್ಟ ಮಹಾಫಲವಕ್ಕು ಯಿ
೪೭ . . . . . . . . . . . ತಕಂಗಾ ಪುಣ್ಯಕ್ಷೇತ್ರದಲಾ ಬ್ರಾಹ್ಮಣರುಮಂ
೪೮ . . . . . . . . . . . ಪಮನೆಯ್ದುಗುವದೆಂತೆನೆ ॥ ಸ್ವದತ್ತಾಂ ಪರದತ್ತಾಂ ವಾ ಯೋ
೪೯ ಹರೇತ ವಸುನ್ಧರಾಂ। ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ ॥ ನ ವಿಷಂ ವಿಷಮಿತ್ಯಾಹುಃ
೫೦ ದೇವಸ್ವಂ ವಿಷಮುಚ್ಯತೇ। ವಿಷಮೇಕಾಕಿನಂ ಹನ್ತಿ ದೇವಸ್ವಂ ಪುತ್ರಪೌತ್ರಕಂ ॥ ಸಾಮಾನ್ಯೋಯಂ ಧರ್ಮ್ಮ
೫೧ ಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥ ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇನ್ದ್ರಾನ್ ಭೂ
೫೨ ಯೋ ಭೂಯೋ ಯಾಚತೇ ರಾಮಚಂದ್ರಃ ॥ . . . . . . . : ಇದಂಮಾ . . ೦ ನಳಸುವ . . . . . . . . . . .

೬

## ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆ ಸಮೀಪದಲ್ಲಿ ನಿಂತಿರುವ ವೀರಗಲ್ಲು

೧ . . . . ನೂರ ನೆಲೆ
೨ ವೀಡಿನಲು ಪ್ರಿಥುವೀರಾಜ್ಯಂ ಗೆಯ್ಯುತ್ತಮಿರಲು ತತ್ಪಾದಪದ್ಮೋಪಜೀವಿ ಶ್ರೀಮತ್ಸುಮಾ
೩ ರ ಲಕ್ಷ್ಮೀದೇವದಂಡನಾಯಕರು ಮೂರು . . . ರ ಸಾಸಿಸಿದ ಕಾಳಗದೊ
೪ ಸಕ[ವ]ರಿಷ ೧೧೧೮ನೆಯ ರಾಕ್ಷಸಸಂವತ್ಸರದ ಓರಿಯ
೫ ನಾಡೆಡನಾಡ ಸೊತ್ತಿಯೂರ ಶತ್ರುಗಂಡಕ್ಕೆಳಿಸೆ ಯುಧಂಸಾ
೬ ಲೆಯನ ತಂಮ್ಮಂ ಮಂಚೆಯಣಂ ಪಲಬರಂ ಕೊಂದು . .

೭

## ನಾರಾಯಣಸ್ವಾಮಿ ದೇವಸ್ಥಾನದ ಹಿಂದೆ ದಕ್ಷಿಣ ಪಾರ್ಶ್ವದ ಗೋಡೆಯ ಮೇಲೆ

೧ ಸ್ವಸ್ತಿ ಶ್ರೀ ಶಕವ . . .
೨ ಆಯಿರತ್ತು ನ[೦] . . .
೩ ನಾರ್ಪದು ಶೆನಜ . . .
೪ . . . . . ಕಾರ್ತ್ತಿಕ ಮಾಸ . . .
೫ . . . . . . . . . . . ಸಥ

೮

## ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಒಂದನೆಯ ಕಂಬ

೧ ಸ್ವಸ್ತಿ ಶ್ರೀ ರಕ್ತಾಕ್ಷಿ
೨ ಸಂ। ಆಷಾಢ ಸು ೨

೩ ಸೋ। ಶ್ರೀ ಸೋಮನಾ
೪ ಥದೇವ . . . . . . . . . . .

## ೯
## ಅದೇ ಮಂಟಪದಲ್ಲಿ ಎರಡನೆಯ ಕಂಬ

೧ ಸ್ವಸ್ತಿ ಶ್ರೀಜಯಾ
೨ ಭ್ಯುದಯಶ್ಕ ಸ
೩ ಕವರ್ಷ ಸಾಸಿ
೪ ರದನೂಱಯೆಂ
೫ ಭತ್ತಾಱನೆಯ ರಕ್ತಾ
೬ ಕ್ಷಿಸಂ। ಆಷಾಢ ಸು ೨
೭ ಸೋ। ಸೋಮನಾಥದೇವರ ಮ
೮ ಂಟಪ ಕಟ್ಸಿ ಕ . . . . . . . . .
೯ ಯ ಮಗ ಚ . . . . . . ಚಾರಿ
೧೦ ಯ ಕಂ . . . . . . . . ಮಾರಿ
೧೧ ನಾಥ ॥

## ೧೦
## ಅದೇ ಸ್ಥಳದಲ್ಲಿ ಮೂರನೆಯ ಕಂಬ

೧ ಸ್ವಸ್ತಿ ಶ್ರೀಜಯಾಭ್ಯು
೨ ದಶ್ಕ ಸಕವರಿಷ ಸಾವಿರ
೩ ದನೂಱ ಎಂಭತ್ತಾಱ
೪ ನೆಯ ರಕ್ತಾಕ್ಷಿಸಂವತ್ಸ
೫ ರದ ಅಷಾಡ ಸು ೧
೬ ಸೋ ಶ್ರೀ ಸೋಮನಾ
೭ ಥದೇವರ ನೃತ್ಯ
೮ ಮಂಟಪಕ್ಕೆ ದಾಸಾಚಾ
೯ ರಿಯ ಮಗ ನಾ
೧೦ ರಣಾಚಾರಿ ಮಾಡ್ಸಿದ
೧೧ ಕಂಭ

## ೧೧
## ಅದೇ ಸ್ಥಳದಲ್ಲಿ ನಾಲ್ಕನೆಯ ಕಂಬ

೧ ಸ್ವಸ್ತಿ ಶ್ರೀಜಯಾ
೨ ಭ್ಯುದಶ್ಕ ಸಕವರಿಷ ೧
೩ ೧೮೬ನೆಯ ರಕ್ತಾ
೪ ಕ್ಷಿ ಸಂವತ್ಸರದ ಆಷಾಢ
೫ ಸು ೨ ಸೋಮವಾರದಂದು
೬ ಶ್ರೀ ಸೋಮನಾಥದೇವರ
೭ ನೃತ್ಯಮಂಟಪದ ರಾ
೮ ಜಾಚಾರಿ ಮಗ ಳುಳವ
೯ ಜಗೋಮ ಕಾಳಾಚಾರಿ
೧೦ ಮಾಡ್ಸಿದ ಕಂಭ ॥

೧೨
## ಅದೇ ಸ್ಥಳದಲ್ಲಿ ಐದನೆಯ ಕಂಬ

೧ ಸ್ವಸ್ತಿ ಶ್ರೀ ಜಯಾ
೨ ಭ್ಯುದಶ್ಕ ಸಕವರಿಷ
೩ ೧೧೮೬ನೆಯ ರಕ್ತಾ
೪ ಕ್ಷಿಸಂವತ್ಸರದ ಆಷಾ
೫ ಢ ಸು ೧ ಸೋ ಶ್ರೀ ಸೋಮನಾ
೬ ಥ ದೇವರ ಮಂಟಪಕೆ

೧೩
## ಅದೇ ಸ್ಥಳದಲ್ಲಿ ಆರನೆಯ ಕಂಬ

೧ ಸ್ವಸ್ತಿ ಶ್ರೀ ರಕ್ತಾಕ್ಷಿಸಂವ
೨ ತ್ಸರದ ಅಶ್ವಇಜ ಸು [೨]ಸೋ
೩ ಶ್ರೀ ಸೋಮನಾಥದೇವರ ಶ್ರೀ
೪ ಮಂಡಪಕೆ ಕವುಸಿಕ
೫ ಗೋತ್ರದ ಬಸವಯನ
೬ ಮಗ ಅಡವೆಯ ಬ
೭ ಪ್ಪೆಯನು ಮಾಡಿಸಿ
೮ ದ ಕಂಬ ಮಂಗ
೯ ಳಮಹಾ ಶ್ರೀ ಶ್ರೀ ಶ್ರೀ

೧೪
## ಅದೇ ಸ್ಥಳದಲ್ಲಿ ಏಳನೆಯ ಕಂಬ

೧ ಸ್ವಸ್ತಿ ಶ್ರೀ ರಕ್ತಾ
೨ ಕ್ಷಿಸಂವತ್ಸರದ ಆಷಾ
೩ ಢ ಸು ೨ ಸೋ ಶ್ರೀ ಸೋ
೪ ಮನಾಥದೇವರ ಮಂ
೫ ಟಪಕ್ಕೆ ಕಾಳಪ್ಪನ ಮ
೬ ಗ ಭಕ್ತರ ಜಾ
೭ ಕಿಸೆಟ್ಟಿ ಮಾಡ್ಸಿದ
೮ ಕಂಭ ॥

೧೫
## ಬಿಲ್ವಪತ್ರೆ ತೋಪಿನ ಹಿಂಭಾಗದಲ್ಲಿರುವ ಕಂಬ

೧ ಸ್ವಸ್ತಿ ಶ್ರೀಜಯಾ
೨ ಭ್ಯುದಶ್ಚ ಸಕವರಿಷ
೩ ೧೧೮೬ನೆ ವೊ ರಕ್ತಾ
೪ ಕ್ಷಿ ಸಂವತ್ಸರದ ಆಷಾ
೫ ಢ ಸು ೨ ಸೋ ಶ್ರೀ ಸೋಮನಾ
೬ ಥ ದೇವರ ಮಂಟಪಕ್ಕೆ ಮಲಿ
೭ ನಾಯ . . . . ತಳ
೮ ಲಕಲೆಯರ ಕಂಬ

೧೬

## ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಎಂಟನೆಯ ಕಂಬ

೧ ಸ್ವಸ್ತಿ ಶ್ರೀ ಯಿಸ್ವರಸಂವ
೨ ತ್ಸರದ ಭಾದ್ರಪದ ಸು
೩ ೭ನೆ ಶ್ರೀ ಸೋಮನಾಥ
೪ ದೇವರ ಶ್ರೀ ಮಂಟಪ
೫ ಕೆ ನಾಗಣ್ಣನ ಅಳಿಯಃ
೬ ರಾಘವದೇವ ಮಾಡಿ
೭ ಸಿಕೊಟ್ಟ ಕಂಭ ಮಂಗ
೮ ಳಮಹಾ ಶ್ರೀ ಶ್ರೀ ಶ್ರೀ

೧೭

## ಅದೇ ದೇವಸ್ಥಾನದ ಎರಡನೆಯ ಮುಖಮಂಟಪದ ಕಂಬ

೧ ಸ್ವಸ್ತಿ ಶ್ರೀ ಕಾಶ್ಯಪಗೋತ್ರದ ಸೊ
೨ ತ್ರಿಯೂರರೂರೊಡೆಯ
೩ ಗಂಗಗೌಂಡಮಾರಾಯ
೪ ರ ಮಃಗ ಜಗದೇವಮಾರಾ
೫ ಯ ಜಗದೇವಮಾರಾ
೬ ಯಃರ ಮಃಗ ಬಿಟ್ಟಿಮಾರಾ
೭ ಯ ನಿಲಿಸಿದ ಮೊದಲರ
೮ . ದ ಕಂಭ ಶ್ರೀ ಶ್ರೀ ಶ್ರೀ

೧೮

## ಅದೇ ದೇವಸ್ಥಾನದ ಉತ್ತರದ ಗೋಡೆ ಸಮೀಪದಲ್ಲಿ ನಿಂತಿರುವ ಎರಡನೆಯ ವೀರಗಲ್ಲು

### ಒಂದನೆಯ ಪಟ್ಟಿ

೧ . . . . . . . . . . .
೨ ಯುತ್ತಿರಲು ಶ್ರೀಮನ್ಮಹಾಪ್ರಧಾನ ಹಿರಿಯ
೩ ನಯಕ ಮಂಚಯ್ಯಂಗಳ ಬೆಸದಿಂ ಮಲಿಸೆಟ್ಟಿ

### ಎರಡನೆಯ ಪಟ್ಟಿ

೪ ಮಗನೆಕ್ಕಟಿಗ ಚಿಕಣ ಕಣೆಯಲ ಬವರದೊಳು ಮೂ
೫ ದಲಿಸಿ ಹುಃಕು ಹಲಬರಂ ತಿವಿದು ಸುರಲೋಕಪ್ರಾಪ್ತ

೧೯

## ವೀರಸಿಂಹಾಸನಮಠದ ಶಿವರಾತ್ರಿಸ್ವಾಮಿಗಳ ಗದ್ದಿಗೆಯ ನಂದಿಯ ಪೀಠದಲ್ಲಿ

೧ ದುಂದುಭಿಸಂವತಸ್ಸರದ ಮಾಖ ಶು ೧೦ ಸನಿವಾರದಲೂ ಸಜನಸುದ್ದ ಶಿವಾಚಾರಸಂಪಂ
೨ ನರಾದಂತ ಶಿವರಾತ್ರೆದೇವರ ನಿರೂಪದಿಂದ ಲಿಂಗಣಒಡೆಯ ಬಸವಪ್ರತಿಷ್ಟೆ ಮಾಡಿದ ಪುಣ್ಯದ ಸೇವೆ

೨೦

## ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಮೂರನೆಯ ಕಲ್ಲು

೧ ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನಶಕವರುಷ
೨ ೧೪೬೬ ಸಂದು ವರ್ತ್ತಮಾನ ಭಾವಸಂವತ್ಸರದ ಕಾರ್ತ್ತಿ
೩ ಕ ಶು ೫ ಲೂ ಸುತ್ತೂರ ಸಿಂಹಾಸನದ ಪರ್ವತಒಡೆಯರ

೪ ಸಿಶ್ಯರು ಭಂಡಾರಿ ಬಸವಪ್ಪ ಒಡೆಯರೂ ನಂಜಲುಗೂ
೫ ಡು ಕಪಿಲಾಕವುಂಡಿನೀಸಂಗಮದ ತೆಂಕಣತಡಿಯಲಿ
೬ ತಾವು ನೂತನಪ್ರತಿಷ್ಟೆಯಾಗಿ ಮಾಡಿದ ಸಂಗಮೇಶ್ವರ
೭ ದೇವರ ಶ್ರೀಕಾರ್ಯ್ಯಕ್ಕೊ ಅಲ್ಲಿ ವಾಸವಾಗಿಯಿಹ ಸಿರಿ
೮ ಗಿರಿದೇವ ಒಡೆಯರು ದೇವರಿಗೂ ಅವರ ಕೂಡಿ ಸಹ
೯ ವಾಸವಾಗಿ ಯಿಹ ಹಿರಿಯರುಗಳಿಗೂ ಅವರ ಚಯಿವೇ
೧೦ ದ್ಯ ಮೇಲುವೆಚ ಸಿತಪರಿಪಾರಗಳು ನಡಪಿದಕ್ಕೆ ಕೊಟ್ಟ ಗ್ರಾ
೧೧ ಮ ಯೆತ್ತುಗದ ಮುಳೂರ ಹೆದೆಯಾಲಸ್ತಳದಲ್ಲಿ
೧೨ ಆ ಮುಳೂರು ಪ್ರಭು ವಿರುಪಣಯೊಡಯರ ಮಕ್ಕಳು ನಂ
೧೩ ಜಿನಾತಬಂದಿಯಪ್ಪ ಚಿಕ್ಕನಂಜಯ್ಯನವರು ನಂಮ ಕಯ್ಯ
೧೪ ಲ್ಲಿ ಕ್ರಯುವನು ತೆಗೆದುಕೊಂಡು ಆ ಗ್ರಾಮದ ಚತುಸೀಮೆ
೧೫ ಗೆ ಲಿಂಗಮುದ್ರೆಯ ಕಲ್ಲನು ನಟ್ಟಿಕೊಟ್ಟು ನಮಗೆ ಸರ್ವ್ವಮಾ
೧೬ ನ್ಯವಾಗಿ ಕೊಡಗಿಯಾಗಿ ನಡದುಬಹ ಚಿಲ್ಲಹಳಿ
೧೭ ಯ ಗ್ರಾಮ ಒಂದನೂ ಅದಕೆ ಸಲುವ ಸರ್ವ್ವಸ್ವಾಮ್ಯ ಸಹವಾ
೧೮ ಗಿ ಆ ಸಂಗಮೇಶ್ವರದೇವರಿಗೂ ಅಲ್ಲಿ ವಾಸವಾಗಿ ಯಿಹ ಸಿರಿ
೧೯ ಗಿರಿದೇವ ಒಡೆಯರು ದೇವರಿಗೂ ಸಮಭಾಗಿಯಾಗಿ ಆ ಚಿ
೨೦ ಲ್ಲಹಳಿಯ ಗ್ರಾಮ ಒಂದನು ಸಮರ್ಪ್ಪಿಸಿದೆವು ಯೆಂದು ಬ
೨೧ ರಸಿದ ಧರ್ಮ್ಮಸಾಸನ ಯೀ ಗ್ರಾಮವನೂ ಆ ಮುಳೂರು ಪ್ರಬು
೨೨ ಗಳು ನಂಜಿನಾಥಬಂದಿಯಪ್ಪ ಚಿಕ್ಕನಂಜಯ್ಯನವರು
೨೩ ತಂಮಿಂ[1]ದ ಮತಾರಿಂದಲೂ ವುಪಹತಿ ಬಾರದಹಾಗೆ ತಾವು
೨೪ ಕೊಟ್ಟಂತಹ ದರ್ಮ್ಮವು ತಂಮ ವಂಸಪಾರಂಪಾರಿಯಾಗಿ
೨೫ ಆಚಂದ್ರಾರ್ಕ್ಕಸ್ಥಾಯಿಯಾಗಿ ಸರ್ವ್ವಮಾಂನ್ಯವಾಗಿ ನ
೨೬ ಡಸಿಬಹರು ಯಿದಕ್ಕೆ ತಪ್ಪಿದವರು ವಾರಣಾಸಿಯಲ್ಲಿ
೨೭ ಗೋವನೂ ಬ್ರಾಂಹ್ಮಣರನೂ ಕೊಂದ ಪಾಪಕ್ಕೆ ಹೋಹ
೨೮ ರೂ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾ
೨೯ ಂ ಷಷ್ಟಿವ್ವರುಷಸಹಸ್ರಾಣಿ ವಿಷ್ಟಾಯಾಂ ಜಾಯ
೩೦ ತೇ ಕ್ರಿಮಿಃ ॥

೨೧

## ಅದೇ ಸ್ಥಳದಲ್ಲಿ ನಾಲ್ಕನೆಯ ಕಲ್ಲು

೧ ಶ್ರೀ ಸೋಮೇಸ್ವರನೇ ಗತಿ ॥ ವಿರೋಧಿಸಂವತ್ಸರದ ಮಾಘ ಬ ೨ ಲೂ ಶ್ರೀ
೨ ಶ್ರೀ ಮಹಾದೇವದೇವೋತ್ತಮ ಸುತ್ತೂರ ಸೋಮೇಸ್ವರದೇವರ ನಿರೂಪದಿಂದ ಶ್ರೀಮನು
೩ ಮಹಾಮಂಡಳೇಶ್ವರ ರಾಮರಾಜತಿರುಮಲರಾಜೈಯ್ಯದೇವಮಹಾ
೪ ರಸುಗಳಯ್ಯನವರ ಕಾರ್ಯ್ಯಕೆ ಕರ್ತ್ತರಾದ ಭದ್ರಯ್ಯನವರು ಸುತ್ತೂರ ಮ
೫ ಟದ ಹಿರಿಯರುಗಳಿಗೆ ಕೊಟ್ಟ ಸುತ್ರಯದ ಪಟ್ಟೆಯ ಕ್ರಮವೆಂತೆಂ
೬ ದರೆ ಸುತ್ತೂರ ಸೋಮೇಸ್ವರದೇವರ ಅಂಗರಂಗಭೋಗಕ್ಕೆ ಸಲುವ ಮೂಗೂ
೭ ರಸೀಮೆಯ ತಾಯೂರಸ್ಥಳದ ಹೊಳೆಯಸುತ್ತೂರ ಗ್ರಮವೊಂದ
೮ ಱಲ್ಲಿ ಸೋಮೇಸ್ವರದೇವರಿಗೆ ಪೂರ್ವ್ವಮೊದಲಾಗಿ ಸಲುವ ಭೂಮಿಯ
೯ ನೂ ನಾಲು ಸಿಮೆಗೆ ಗುತ್ತಿಗೆಗೆ ಕೊಟ್ಟೆವಾಗಿ ಆ ಚತುಶೀಮೆವೊಳಗ
೧೦ ಣ ಗದೆ ಬೆದಲು ತೋಟ ತುಡಿಕೆ ಅಡು ಮಗ್ಗ ಮನೆವಣ ಸುವ
೧೧ ರ್ಣ್ನಾದಾಯ ಕಾಡಾರಂಭ ನೀರಾರಂಭ ಕಾಣಿಕೆ ಬೆಡಿಗೆ ಯೇನು
೧೨ ಂಟಾದ ಸರ್ವ್ವಸ್ವಾಮ್ಯವನು ಆಗುಮಾಡಿ ಅನುಭವಿಸಿಕೊಂ
೧೩ ಡು ನೀಉ ತೆಱುವ ಸ್ತ್ರಿಯದ ಗುತ್ತಿಗೆ ಪ್ರಾಕು ಪ್ರಮಾ
೧೪ ಣನು ವಿಕ್ರುತುಸಂವತ್ಸರದ ಆಷಾಡ ಶು ೧ ಅರಭ್ಯ

[1] ಅನುಸ್ವಾರವನ್ನು ಪಂಕ್ತಿಯ ಮೇಲೆ ಬರೆದಿದೆ.

೧೫ ವಾಗಿ ಖರಸಂವತ್ಸರದ ಜೇಷ್ಟ ಬ ೩೦ವರಗೆ ತಿಂಗಳು
೧೬ ೧೨ ಹಂ ಕ್ಕೆ ಆ ವರ್ಷ ೧ ಕ್ಕೆ ತೆಱುವ ಗುತ್ತಿಗೆ ಪ್ರ
೧೭ ಕು ಪ್ರಮಾಣು ಗಟಿ ಗ ೪೦ ಅಕ್ಷರದಲು ಗಟ್ಟಿ ನಾಲ್ವ
೧೮ ತ್ತು ವರಹಂನೂ ಸೋಮೇಸ್ವರದೇವರ ಭಂಡಾರಕ್ಕೆ ಮಾಸ ಪ
೧೯ . ದಿಯಾಗಿ ಸಲಿಸುವಿರಿ ಆಲಿ ಯಿದ್ದ ದೇವಸ್ತನವನು ಪೂ
೨೦ ರ್ವ್ವಮರ್ಯ್ಯಾದಲಿ ನಡಸಿ ಬಹರಿ ದಾನಮಾನ್ಯಾ ಪೂರ್ವ್ವ
೨೧ ಮರಿರ್ಯ್ಯದಿಯೆಂದು ಕೊಟ್ಟ ಶೋತ್ರಿಯರ ಕಲ್ಲಪಟ್ಟೆ
೨೨ ಶ್ರೀ ಗೋಪಾಲ

## ೨೨
## ಅದೇ ಸ್ಥಳದಲ್ಲಿ ಐದನೆಯ ಕಲ್ಲು

೧ ಶ್ರೀ ಸ್ವಸ್ತಿ ಶ್ರೀಜಯಾಭ್ಯುದ
೨ ಯ ಕಲಿಯುಗ ಶಾಲಿವಾಹನ
೩ ಶಕವರುಶ ೪೬೯೦ನೆಯ ವ
೪ ರ್ತನಕೆ ಸಲುವ ವಿರೋಧಿಸ
೫ ಂವತ್ಸರದ ಚೇಷ್ಟ ಶು ೧೧
೬ ಸೌಮ್ಯವಾಶರದಲು ಸುತ್ತೂರ ಸಿ
೭ ಂಹಾಶನದ ಮಹತ್ತಿನಕೆಱಿಗೆ
೮ ಸಂಜನಗೂಡ ೫೦ ಹೊಂನಗದ ಶಿವಪೂ
೯ ಜೆಯದೇವರ ಶಿಷ್ಯರು ಉ . . . . . .
೧೦ ವದೇವರ ಭಕ್ತ ಮಾಡಿವ ಪಿವರ ದಕೆ
೧೧ ಗ ೩೩ ಮೌಲ್ಯ ಗ ೨೦೦ಕ್ಕೆ ಗ ೧೦ಕ್ಕೆ . . ಬ
೧೨ ಡ್ಡಿಯು ವರುಶ ೧ಕ್ಕೆ ೬೯ ವರ
೧೩ . . . . ಭಂಡಾರದ . . . . . . . . .

## ೨೩
## ಅದೇ ಸ್ಥಳದಲ್ಲಿ ಆರನೆಯ ಕಲ್ಲು

೧ ಶುಭಮಸ್ತು ಶ್ರೀ ಸ್ವಸ್ತಿ ವಿಜೆಯಾಭ್ಯು
೨ ದೆಯ ಶಾಲಿವಾಹನ ಶಕವರುಷ ೧೫೧೫
೩ (೦೫) ಸಂದ ವರ್ತಮಾನವಾದ ವಿಜೆಯ
೪ ಸಂವತ್ಸರದ ಭಾದ್ರಪದ ಬ ೧೦ ಸೋ
೫ ಮವಾರದಲ್ಲು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವ
೬ ರ ಶ್ರೀ ವೀರಪ್ರತಾಪ ವೆಂಕಟಪತ್ತಿಮಹಾರಾಯರು ಪ್ರು
೭ ಥ್ವಿರಾಜ್ಯಂ ಗೆಯಿಉತ್ತಿರಲು ಹದಿನಾಡಶೀಮೆಯ ಪ್ರಭು ದೇವಪ್ಪ
೮ ಗ ಉಡರ ಮಖಳು ಯಿಮಡಿ ರಾಮರಾಜನಾಯಕರು । ಸಜ್ಜನಶುದ್ಧ ಸಿವಾಚಾರಸಂ
೯ ಪಂನರಾದ ದೆವಾಪ್ರಥ್ವಿಮಹಾಮಹತ್ತಿನೊಳಗಾದ ಸುತ್ತೂರ ಸಿಂಹಾಸನಕ್ಕೆ ಕರ್ತ
೧೦ ರಾದ ಸಿವರಾತ್ರೆಯದೇವರ ಸಿಷ್ಯರು ಚೆಂನಬಸವರಾಜದೇವರಿಗೆ ಕೊಟ್ಟ ಸಿಲಾಸಾ
೧೧ ಶನವ ಕ್ರಮವೆಂತ್ತೆಂದರೆ ನಂಮ ಹದಿನಾಡಶೀಮೆಯೊಳಗಣ ಹೊಂಗನೂರ ಸ್ತಳ
೧೨ ದ ಹರುರಹಳ್ಳಿ ಗ್ರಾಮ ೧ ನು ನಾಉ ನಂಮ ದೇವಪ್ಪಗಉಡನವರು । ನಂಮ ತಾಯಿ ಚೆಂ
೧೩ ನಾಜಿಯಂಮನವರಿಗೆ ಪುಂಣ್ಯವಾಗಬೇಕೆಂದು ಸಿವಾರ್ಪ್ಪಿತವಾಗಿ ಕೊಟ್ಟೆವಾಗಿ ಆ
೧೪ ಹಸುರಹಳ್ಳಿ ಗ್ರಾಮಕ್ಕೆ ಸಲುವ ಗದ್ದೆ ಬೆದ್ದಲು ತೋಟ ತುಡಿಕೆ ಆಡು ಮಗ್ಗ ಮನೆ
೧೫ ವಣ ಕಾಡಾರಂಭ । ನೀರಾರಂಭ । ನಿಧಿನಿಕ್ಷೇಪಜಲಪಾಶಾಣಅಕ್ಷಿಣಿಆಗಾ
೧೬ ಮಿಸಿಧಿಸಾಧ್ಯಂಗಳೆಂಬ ಅಷ್ಟಭೋಗತ್ತೇಜಸ್ವಾಂಮ್ಯಗಳನು ಆಗುಮಾಡಿ ಅನು
೧೭ ಭವಿಸಿಕೊಂಡು ನಿಂಮ ಸುತ್ತೂರ ಸಿಂಹಾಸನಕ್ಕೆ ಆಚಂದ್ರಾರ್ಕ್ಕಸ್ಥಾಯಿಗ

೧೮ ಳಾಗಿ ಅನುಭವಿಸಿಕೊಂಡು ಬಹೆರಿ ಯೆಂದು ಕೊಟ್ಟ ಸಿಲಾಶಾ
೧೯ ಸನ ॥ ಫಲಗ್ರಂಥಾ ॥ ದಾನಪಾಲನೆಯೋರ್ಮ್ಮಧ್ಯೆ । ದಾನಾಛ್ರೇಯೋ
೨೦ ನುಪಾಲನಂ । ದಾನಾತ್ಸ್ವರ್ಗ್ಗಮವಾಪ್ನೋತಿ । [ಪಾ]ಲನಾದ್ಯೆಸ್ವರಂ ಪದಂ ॥

೨೪

## ಅದೇ ಸ್ಥಳದಲ್ಲಿ ಏಳನೆಯ ಕಲ್ಲು

೧ . . . . . . . . . . . . ತಗಂ . .
೨ . . . . . . . . . . . . ೧೦ ಮಾಬ
೩ . . . . . . . . . . . . ಗೋತ್ರದ ಆಶ್ವಾಲಯನಸೂತ್ರದ . . . .
೪ ಯ್ಯನವರ ಮಕ್ಕಳು ರಾಮಪ್ಪಗಳು ತಥಾತಿ[ಥಿ] . . ಪುಣ್ಯಕಾಲದಲು ಕೃಷ್ಣರಾ . .
೫ ಹಾರಾಯರಿಗೆ ಧರ್ಮ್ಮವಾಗಬೇಕೆಂದು ಸಹಿರಣ್ಯೋದಕದಾನಧಾರಾಪೂರ್ವಕವಾಗಿ ಸ
೬ ಮರ್ಪ್ಪಿಸಿದೆವಾಗಿ . ಆಚಂದ್ರಾರ್ಕ್ಕಸ್ಥಾಯಿಯಾಗಿ ಆ ಸೋಮೇಶ್ವರದೇವರ ಅಮೃತಪಡಿಗೆ
೭ ಭಂಡಾರಕೆ ಸಲುವುದು ಯೆಂದು ವಶಿಷ್ಟಗೋತ್ರದ ಆಶ್ವಾಲಯನಸೂತ್ರದ ಪುಂಮತು
೮ ರ ನರಸಪ್ಪಯ್ಯನವರ ಮಕ್ಕಳು ರಾಮಪ್ಪಗಳು ಕೊಟ್ಟ ಕ್ರಯಭೂದಾನ ಧಂರ್ಮ್ಮದ
೯ ಶಿಲಾಶಾಸನ ॥ ದಾನಪಾಲನಯೋರ್ಮಧ್ಯೇ । ದಾನಾಚ್ಛ್ರೇಯೋನು ಪಾಲನಂ ದಾ
೧೦ ನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥ ಸ್ವದತ್ತಾ ದ್ವಿಗುಣಂ ಪುಣ್ಯಂ
೧೧ ಪರದತ್ತಾನುಪಾಲನಂ । ಪರದತ್ತಾಪಹಾರೇಣ ಸ್ವದತ್ತಂ ನಿಷ್ಪಲಂ ಭವೇತ್ ॥ ಸ್ವದತ್ತಂ
೧೨ ವಾ ಪರವತ್ತಂ ವಾ ಯೋ ಹರೇತ ವಸುಂಧರಂ ॥ ಷಷ್ಟಿವರುಷಸಹಸ್ರಾಣಿ
೧೩ ವಿಷ್ಟಾಯಾಂ ಜಾಯತೇ ಕ್ರಿಮಿ ॥ ಇ ಧಂರ್ಮವ ಅಳುಪಿದರೆ ಗಂಗೆಯ ತಡಿಯಲು ಕೋ
೧೪ ಟಿಕವಿಲೆಯಂ ಕೊಂದ ಪಾಪಕ್ಕೆ ಹೋಹರು
೧೫ ಆವನೊಬ್ಬನು ಈ ದರ್ಮ್ಮವ ಅಳುಪಿದವನ ಹೆಡತಿಯ

೨೫

## ದೇಪಯ್ಯನ ಮಂಟಪದಲ್ಲಿ ಪಶ್ಚಿಮದ ಎರಡನೆಯ ಕಂಬದಲ್ಲಿ

೧ ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಯುಗ
೨ ಪ್ರಮಾಣಲ ೪೨೨೦೦೦ಕ್ಕೆ ಸಂದ ಕಲಿವರು
೩ ಷ ೪೬೭೮ ಶಾಲಿವಾಹನ ಶಕವರು
೪ ಷ ೧೫೯೩ ಸಂದಾ ವಿರೋಧಿಕೃತು
೫ ಸಂವತ್ಸರದ ಶ್ರಾವಣ ಶು ೧೦ ಶುಕ್ರ
೬ ವಾರ ಶ್ರೀ ಸ್ವಾಮೇಶ್ವರಸ್ವಾಮಿಯವರ
೭ ನಿರೂಪದಿಂದಲು ಸ್ಥಾನಿಕ ನಿಜಲಿಂಗ
೮ ವಡೆಯರ ಮಗ ಗಂಗೊಡೆರು ಗಂಗೊ
೯ ಡೆಯರ ಮಗ ಚಂದಯ್ಯನ ತಮ್ಮ ದೇಪೈ
೧೦ ಯನು ಮಾಡಿಸಿದ ಮಂಟಪದ ಸೇವೆಗೆ ಮ
೧೧ ಉಲ್ಯ ಕಂ ಗ ೧೦ಕೆ ಬಡಿ ಗ ೧೯೦ ಗ ।ಮಸರಅ
೧೨ ನ್ನ ಸೇವ್ಗೆ ದೇವಸ್ಥಾನಕ್ಕೆ ಕೊಟ್ಟ ಮಉಲ್ಯಕೆ
೧೩ ಶುಭಮಸ್ತು ॥ ಸ್ವದತ್ತಾ ದ್ದಿವಗು
೧೪ ಣಂ ಪುಣ್ಯಂ ಪರದತ್ತಾನುಪಾಲಂ । ಪರದ
೧೫ ತ್ತಾಪಹಾರೇಣ ಸ್ವದತ್ತಂ ನಿಷ್ಪಲಂ ಭವೇತ್ ॥

೨೬

## ಮಠದ ಪಟ್ಟದ ಶಿವರಾತ್ರಿಸ್ವಾಮಿಗಳ ಬಳಿ ಇರುವ ತಾಮ್ರಶಾಸನ

ಮುಂಭಾಗ

೧ ಶ್ರೀ ರಾಮಾ
೨ ಸ್ವಸ್ತಿ ಶ್ರೀವಿಜಯಾಭ್ಯುದಯ । ಶಾಲಿ

೩ ವಾಹನಸಕವರ್ರುಷಂಗಳು ೧೬೯೩
೪ ನೆ ಖರಸಂವತ್ಸ[ರ]ದ ಶ್ರಾವಣ ಶು ೧೦
೫ ಲ್ಲು । ದೆವನಗರದ ಪೆಟೆಶೆಟ್ಟಿ ಪಟಣ
೬ ಶ್ಯಾಮಿ ಮುಂತಾದ ಉಭಯ್ಯ ನಾನಾ
೭ ದೇಶದ ಮಹಾನಾಡಿನವರ್ರು । ಕಾಳಂಗರಿಡಿ
೮ ಮಟಕ್ಕೆ ಬರೆಸಿಕೊಟ್ಟ ಧರ್ಮಶಾಶಾನ
೯ ದ ಕ್ರಮುವೆಂತೆಂದರ್ರೆ ಆದಾಗಿ । ಯಡದೊ
೧೦ ರ್ರೆ ಕೋಟೆ ಮಾರ್ಗದಲ್ಲಿ । ಮೂಲೆ ಹೇರ್ರಿಗೆ ಕಾಸು
೧೧ ೧ ಜವಳಿನಡೆಗೆ ಕಾಸು ೨ । ಹೊಗೆಸೊಂಪಿನ
೧೨ ನಡೆಗೆ ಕಾಸು ೨ ಯಲೆನಡೆಗೆ ಯೆಲೆಕಂತು ೧
೧೩ ತಲೆಹೊರೆಗೆ ಚಉಕ । ಅರ್ರಿಸಿಣ ಮೆ
೧೪ ಣ್ಸು ಮುಂತಾದ ಕವಾಡಸರಕಿನ ಹೆ
೧೫ ರ್ರಿಗೆಲ್ಲಾ ಕಾಸು ೨ ಡರ ಮೆರ್ರೈಯಲ್ಲು । ಕೊ
೧೬ ಟು ನಡಶಿಕೊಂಡು ಬರಲುಳವರ್ರು ಯಂ
೧೭ ದು ಭರ್ರೆಸಿಕೊಂಟ ದರ್ಮಶಾಶನ
೧೮ ಯಿ ದರ್ಮಕ್ಕೆ ಯಾರರುದರು ಯಿಂ
೧೯ ಲ್ಲಾಯಂದವರ್ರಿಗೆ ಕಾಸಿಯಲ್ಲಿ

**ಹಿಂಭಾಗ**

೨೦ ಗೋಹುತ್ಯ ಮಾಡಿದ ಪಾಪ ಮಾತ್ರ
೨೧ ಗಮನ ಮಾಡಿದ ಪಾಪ ಶಿಶುಪ
೨೨ ತ್ಯ ಗೋಹತ್ಯ ಮಾಡಿದ ಪಾಪಕ್ಕೆ
೨೩ ವಳಗಾಗುವರು ಯೆಂನುದಾಗಿ
೨೪ ನಾನಾದೇಸದವರು ಐವತಾರ್ರು
೨೫ ದೇಸದವರ್ರು ಬರಸಿಕೊಂಟ ದ
೨೬ ರ್ಮ ಶಾಸನವರ್ತನೆಪಂಟ್ಟೆ
೨೭ ಶ್ರೀ ಬಸವೆಸ್ವರಸ್ವಮಿ
೨೮ ಯುವರು ॥

---

ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ !
ಒಮ್ಮೆ ಶರಣೆಂದಡೆ ಪಾಪಕರ್ಮ ಓಡುವುವು
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳಿದವು.
ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ

ಬಸವಣ್ಣ

# ಸಾಹಿತ್ಯಲೋಕಕ್ಕೆ ಸುತ್ತೂರು ಮಠದ ಜಗದ್ಗುರುಗಳವರು ನೀಡಿದ ಕಾಣಿಕೆ

**ಎಸ್. ನಂಜುಂಡಯ್ಯ**

ಒಂದು ನಾಡಿನ ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ–ಇವುಗಳು ಬಾನಿನೆತ್ತರ ಬೆಳೆದು ಜಗದ ಬದುಕನ್ನು ಬೆಳಗಿ ಬಾಳಬೇಕಾದರೆ ಕಾಲಕಾಲಕ್ಕೆ ಅವುಗಳಿಗೆ ತುಷ್ಟಿ–ಪುಷ್ಟಿಗಳನ್ನೆರೆದು ಲಾಲನೆ–ಪಾಲನೆಗೈಯುವ ಆರೈಕೆಯ ತಾಣಗಳು ಬೇಕು. ತೋಳು ತೊಟ್ಟಿಲಾಗಿ, ನುಡಿಯು ಜೋಗುಳವಾಗಿ, ಮಡಿಲು ಆಡುಂಬೊಲವಾಗಿ, ಎದೆಯೊಲವು ಅಮರ್ದುಣಿಸಾಗಿ, ಉಣಕಲಿಸಿ, ಉಡಕಲಿಸಿ, ನುಡಿಯಕಲಿಸಿ, ನಡೆಯಕಲಿಸಿ, ಕೈಹಿಡಿದು ನಡೆಸುವ ಮಾತೃಹೃದಯದ ಮಹಿಮಾನ್ವಿತ ವ್ಯಕ್ತಿಗಳು ಪ್ರೇರಕ–ಪೋಷಕ ಶಕ್ತಿಗಳಾಗಿ ನಿಲ್ಲಬೇಕು. ನಾಡಿನ ಧರ್ಮ–ಸಾಹಿತ್ಯ–ಸಂಸ್ಕೃತಿಗಳಿಗೆ ಅನ್ಯರಿಂದ ಬಾಧೆ ತಟ್ಟಿದಾಗ, ಆಕ್ರಮಣದಿಂದ ತತ್ತರಿಸಿದಾಗ ಅದನ್ನು ಪ್ರತಿಭಟಿಸುವ, ಬೆಂಗಾವಲಾಗಿ ನಿಂತು ಹೋರಾಡಿ ಕಾಪಾಡುವ ಧೀಶಕ್ತಿ ಜಾಗ್ರತಗೊಂಡು ಮುನ್ನಡೆಸಬೇಕು. ಅಂತಹ ಯುಗಪ್ರವರ್ತಕ ಶಕ್ತಿಗಳು ಮೇಲಿಂದ ಮೇಲೆ ಈ ಧರೆಗಿಳಿದು ಬಂದು ಮನುಕುಲದ ಇತಿಹಾಸವನ್ನು ತೊಳಗಿ ಬೆಳಗಿದ ಪ್ರೋಜ್ವಲ ಪ್ರಸಂಗಗಳು ಚರಿತ್ರೆಯ ಪುಟಪುಟಗಳಲ್ಲಿಯೂ ಕಣ್ಣುಕೋರೈಸುವಂತಿವೆ. ಧರ್ಮಕ್ಕೆ ಗ್ಲಾನಿಯೊದಗಿದಾಗ, ಜನರು ಮ್ಲಾನರಾಗಿ ಕಂಗೆಟ್ಟು ಕುಳಿತಾಗ, ಸಾಹಿತ್ಯ ಸಂಸ್ಕೃತಿ ಕಲೆಗಳು ಸಹಾಯಕ್ಕಾಗಿ ಕಾತರಿಸಿದಾಗ, ಭೀಮರಕ್ಷೆಯಾಗಿ ನಿಂತು, ಅವುಗಳನ್ನು ಸಂರಕ್ಷಿಸಿದಂತಹ ನಾಡಗದ್ದುಗೆಯನ್ನೇರಿದ ರಾಜಮಹಾರಾಜರುಗಳೂ ಧರ್ಮಗದ್ದುಗೆಯನ್ನೇರಿದ ಗುರುಸಾರ್ವಭೌಮರೂ ನಾಡಿನ ಇತಿಹಾಸದಲ್ಲಿ ಹೆಜ್ಜೆಹೆಜ್ಜೆಗೂ ಮೇಲೆದ್ದು ಕಾಣುತ್ತಿದ್ದಾರೆ. ಇಂತಹ ಭವ್ಯಪರಂಪರೆಯನ್ನೊಳಗೊಂಡ ಕನ್ನಡನಾಡಿನಲ್ಲಿ ಅರಮನೆಯವರು ಹಾಗೂ ಗುರುಮನೆಯವರು ಬಹು ಹಿಂದಿನಿಂದಲೂ ಜನತೆಯ ಬದುಕನ್ನು ಬಂಗಾರವಾಗಿಸಲು ಬಹುವಾಗಿ ಶ್ರಮಿಸಿದ್ದಾರೆ. ಕರ್ನಾಟಕ ಸಾಹಿತ್ಯ-ಸಂಸ್ಕೃತಿ-ದರ್ಶನಗಳಿಗೆ ಅನರ್ಘ್ಯ ಕಾಣಿಕೆಗಳನ್ನಿತ್ತು ಅಪಾರ ಆದರಾಭಿಮಾನಗಳಿಂದ ಸೇವೆಗೈದು ಪೋಷಿಸಿದ, ಕರ್ನಾಟಕ ಸಂಸ್ಕೃತಿಯ ಲೋಕೋನ್ನತ ಹಿರಿಮೆಗೆ ತಮ್ಮೆಲ್ಲ ಸಾರಸತ್ವವನ್ನೆರೆದ ಈ ಅರಮನೆ–ಗುರುಮನೆಗಳು ಚಿರಸ್ಮರಣೀಯವಾಗಿವೆ. ಕಾಲಪ್ರವಾಹಕ್ಕೆ ಸಿಕ್ಕಿದ ರಾಜರ ಮನೆಗಳು ಕಣ್ಮರೆಯಾಗಿ ಇತಿಹಾಸದಲ್ಲಿ ಬಿದ್ದುಹೋಗಿದ್ದರೂ ಕಾಲದೇಶಗಳಿಗೂ ದಕ್ಕದ ನಾಡಿನ ಚಿರಂಜೀವಿ ಗುರುಪೀಠಗಳು ಮೊದಲಿಂದಲೂ ಸಂಸ್ಕೃತಿಯ ಸಂರಕ್ಷಕ ಕೇಂದ್ರಗಳಾಗಿ ಜನತೆಯ ಇಹ-ಪರಗಳಿಗೆ ದಿಗ್ದರ್ಶನ ನೀಡುತ್ತಾ ಎದ್ದುನಿಂತಿವೆ. ಅಂತೆಯೇ ಸನಾತನ ಧರ್ಮಸಂರಕ್ಷಣೆಯ ಭದ್ರಕೋಟೆಗಳೆನಿಸಿದ ಕನ್ನಡನಾಡಿನ ಧರ್ಮಪೀಠಗಳು ಮನುಕುಲದ ಮುಕ್ತಿಮಂದಿರಗಳಾಗಿ ಧರ್ಮಪ್ರಸಾರಕಾರ್ಯದಲ್ಲಿ ನಿಂತಾಗ ಅದರಿಂದ ಸಾಹಿತ್ಯ ಪ್ರಪಂಚಕ್ಕೂ ಮಹತ್ಸೇವೆ ಸಂದಾಯವಾದುದನ್ನು ಯಾರೂ ಮರೆಯುವಂತಿಲ್ಲ. ಅಷ್ಟೇ ಅಲ್ಲದೆ ಈ ಮಠಗಳು ತ್ಯಾಗದ ಸೋಗಿನ ಭೋಗಮಂದಿರಗಳಾಗದೆ, ತ್ರಿವಿಧ ದಾಸೋಹಕೇಂದ್ರಗಳಾಗಿ ಖ್ಯಾತಿವೆತ್ತುದಲ್ಲದೆ, ಸಾಹಿತ್ಯಾದಿ ಲಲಿತಕಲೆಗಳ ತವರುಮನೆಗಳಾಗಿಯೂ ಹೆಸರಾಂತಿವೆ. ಮುಖ್ಯವಾಗಿ ಅಗಾಧವಾದ ನಮ್ಮ ಪ್ರಾಚೀನ ಕಾವ್ಯಸಂಪತ್ತು ಕಾಲಪುರುಷನ ಕಾಲ್ತುಳಿತಕ್ಕೆ ಸಂಪೂರ್ಣ ಸಿಕ್ಕದೆ ಅಷ್ಟಿಷ್ಟಾದರೂ ಅಂದಿನಿಂದ ಉಳಿದು ಬಂದಿರುವುದು ಈ ಗುರುಮನೆಗಳವರ ಸದಾ ಎಚ್ಚರಿಕೆಯ ಕಾಪಿನಲ್ಲಿಯೇ ಎಂಬುದನ್ನು ನೆನೆದಾಗ ಎಂತಹವರಿಗಾದರೂ ಅಭಿಮಾನ ಎನಿಸದಿರದು !

'ನಿರಾಶ್ರಯಾ ನ ಶೋಭಂತೇ ಪಂಡಿತಾ ವನಿತಾ ಲತಾಃ'—ಎಂಬ ಪ್ರಾಚೀನೋಕ್ತಿಯು ಕಲಾವಿದರಿಗೆ, ಕಲೆಗಳ

ಬೆಳವಣಿಗೆಗೆ ಉದಾರಾಶ್ರಯದ ಅಗತ್ಯವಿದೆಯೆಂಬುದನ್ನು ಉದ್ಘೋಷಿಸುತ್ತಿದೆ. ಆಶ್ರಯ ದೊರೆಯದಿದ್ದಾಗ ಕಲೆಯು ಕುಂಠಿತಗೊಳ್ಳುತ್ತದೆ, ಕಲಾವಿದರು ಕೈಕಟ್ಟಿ ಕುಳಿತುಕೊಳ್ಳುತ್ತಾರೆ ಎಂದೇನೂ ಇದರ ಅರ್ಥವಲ್ಲ. ಯಾರ ಆಶ್ರಯವನ್ನೂ ಅಪೇಕ್ಷಿಸದೆ, ತಮ್ಮ ಸಹಜ ಸ್ವತಂತ್ರ ಪ್ರತಿಭಾಶಕ್ತಿಯನ್ನು ಯಾರಿಗೂ ಮಾರಿಕೊಳ್ಳದೆ ಕಲಾನಿರ್ಮಿತಿಗೈದ ಅದ್ಭುತ ನಿದರ್ಶನಗಳು ಬೇಕಾದಷ್ಟು ಇವೆ. ಆದರೆ ಕಲಾಕೌಶಲವನ್ನು ಗುರುತಿಸಿ ಪೂಜಿಸಿ ಗೌರವಿಸುವ, ಅದರ ವಿಕಾಸಕ್ಕೆ ತಕ್ಕ ವಾತಾವರಣವನ್ನು ನಿರ್ಮಿಸಿ ಪೋಷಕಾಂಶಗಳನ್ನು ಒದಗಿಸಿಕೊಡುವ ಸಂದರ್ಭಗಳು ಮೇಲಿಂದ ಮೇಲೆ ಒದಗಿಬಂದರೆ, ಕಲೆಗಳು ಮತ್ತಷ್ಟು ಚೆನ್ನಾಗಿ ಬೆಳೆಯುತ್ತವೆ ಎಂಬುದು ಮೇಲೆ ಹೇಳಿದ ಮಾತಿನ ಆಶಯವಾಗಿದೆ. ಹಾಗೆಯೇ ಕನ್ನಡನಾಡಿನ ಅನೇಕ ಗುರುಪೀಠಗಳು ಧರ್ಮರಕ್ಷಣೆ-ಧರ್ಮಪ್ರಸಾರಗಳ ಜೊತೆಗೆ ಸಾಹಿತ್ಯ-ಸಂಸ್ಕೃತಿಗಳ ಬೆಳವಣಿಗೆಗೂ ವಿಶೇಷ ಪೋಷಣೆ ನೀಡಿ ಮಾನವ ಕಲ್ಯಾಣವನ್ನೆಸಗುತ್ತಾ ಬಂದಿರುವುದು ಗುರುಪೀಠಗಳ ಚರಿತ್ರೆಯಿಂದ ವಿದಿತವಾಗುತ್ತದೆ. ಧರ್ಮೋದ್ಧಾರಕ್ಕಾಗಿ ಸಂಸ್ಥಾಪಿತವಾದ ಸುಮಾರು ಸಹಸ್ರ ಸಂವತ್ಸರಗಳಿಗೂ ಮಿಕ್ಕ ಪ್ರಾಚೀನತೆಯಿಂದ ಪರಿಪುಷ್ಟವಾದ ಮಹತ್ವಪೂರ್ಣ ಚರಿತ್ರೆಯನ್ನೊಳಗೊಂಡ ಸುತ್ತೂರು ಶ್ರೀ ವೀರಸಿಂಹಾಸನ ಜಗದ್ಗುರು ಮಹಾಪೀಠವು ಮಾನವಕೋಟಿಯ ಕಲ್ಯಾಣವನ್ನು ಸಾಧಿಸುತ್ತಾ ಬಂದಿದೆ. ಧರ್ಮದ ರಕ್ಷಣೆ-ಪೋಷಣೆಗಳ ಅಮೋಘ ಸೇವೆಯ ಜೊತೆಗೆ ಸಾಹಿತ್ಯ-ಸಂಸ್ಕೃತಿ-ಕಲೆಗಳ ಬೆಳವಣಿಗೆಗೂ ತನ್ನದೇ ಆದ ವಿಶಿಷ್ಟ ಕಾಣಿಕೆಗಳನ್ನು ಸಲ್ಲಿಸುತ್ತಾ ಗಣನೀಯ ಪಾತ್ರವನ್ನು ವಹಿಸಿದೆ. ಸುತ್ತೂರು ಶ್ರೀ ಜಗದ್ಗುರು ಮಹಾಪೀಠದಲ್ಲಿ ಶಿವಯೋಗಸಮ್ರಾಟರೂ ಮಹಾತಪೋಧನರೂ ಅಘಟಿತ ಘಟನಾಸಮರ್ಥರೂ ಘನವಿದ್ವಾಂಸರೂ ಆದ ಜಗದ್ಗುರು ಸಾರ್ವಭೌಮರು ವಿಜೃಂಭಿಸಿದುದರಿಂದ ಶ್ರೀಪೀಠವು ತನ್ನ ಸೇವಾಕ್ಷೇತ್ರವನ್ನು ಸಹಸ್ರಮುಖವಾಗಿ ವಿಸ್ತರಿಸಿಕೊಂಡು ಬೆಳೆಯುತ್ತಿದೆ. ಈ ಗುರುಪರಂಪರೆಯಲ್ಲಿ ಬಂದ ಗುರುಮಹಾರಾಜರುಗಳು ತಮ್ಮ ಶಿವಯೋಗ ತಪಃಶಕ್ತಿಯಿಂದ ಆಯಾ ಕಾಲದ ಜನತೆಯ ಮೇಲೆ ಅಸಾಧಾರಣ ಪ್ರಭಾವವನ್ನು ಬೀರಿ ಶಿವಪಥದತ್ತ ತಿರುಗಿಸಿದರು. ತಮ್ಮ ಆಧ್ಯಾತ್ಮಿಕ ತೇಜಸ್ಸಿನಿಂದ ಅಂದಿನ ರಾಜ ಮಹಾರಾಜ ಚಕ್ರವರ್ತಿಗಳನ್ನು ಸನ್ಮಾರ್ಗದೆಡೆಗೆ ಸೆಳೆದು ಅವರಿತ್ತ ನೆರವನ್ನು ಲೋಕಹಿತಕ್ಕೆ ಬಳಸಿಕೊಂಡರು. ಜನರ ನಡೆ ನುಡಿಗಳನ್ನು ನೇರ್ಪುಗೊಳಿಸಿ ಅವರ ಬದುಕನ್ನು ಹಸನುಗೈಯಲು, ಧರ್ಮ-ಸಂಸ್ಕೃತಿ-ಸಮಾಜಗಳನ್ನು ಶುಚಿಗೊಳಿಸಿ ಪರಿರಕ್ಷಿಸಲು ಧರ್ಮದ ರಕ್ಷಣಾಕೇಂದ್ರಗಳಾದ ಶಾಖಾಮಠಗಳನ್ನು ಅಲ್ಲಲ್ಲಿ ಸ್ಥಾಪಿಸಿ, ಅಪಾರ ಶಿಷ್ಯಸಂಪತ್ತಿಯನ್ನು ಪಡೆದು ಜ್ಞಾನಪಿಪಾಸುಗಳಿಗೆ ಅನುಭಾವದ ಅರವಟ್ಟಿಗೆಗಳನ್ನು ತೆರೆದರು. ಕಾವ್ಯ-ನಾಟಕ-ಶಾಸ್ತ್ರ-ಸಂಗೀತ-ನೃತ್ಯ-ಚಿತ್ರ-ಶಿಲ್ಪ-ಕೀರ್ತನ ಇತ್ಯಾದಿಗಳಲ್ಲಿ ಪ್ರಾವೀಣ್ಯತೆ ಪಡೆದವರಿಗೆ ಸದಾಕಾಲವೂ ಉದಾರಾಶ್ರಯವನ್ನಿತ್ತು, ಕನ್ನಡ ಸಾಹಿತ್ಯ-ಸಂಸ್ಕೃತಿ-ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಸ್ವಯಂ ಪ್ರತಿಭಾನ್ವಿತ ಶಿವಕವಿಗಳಾಗಿದ್ದ ಈ ಪೀಠಾಧೀಶ್ವರರು ಸಾರಸ್ವತ ಪ್ರಪಂಚಕ್ಕೆ ಸತ್ವಯುತವಾದ ಚಿರಂತನ ಕೃತಿರತ್ನಗಳನ್ನಿತ್ತು ಸಾಹಿತ್ಯಸೇವೆಗೈದು ಪೀಠದ ಪರಂಪರೆಯನ್ನು ಮತ್ತಷ್ಟು ಘನತೆಗೊಯ್ದರು. ಈ ವಿಚಾರವಾಗಿ ಮೈಸೂರು ಶಾಸನ ಇಲಾಖೆಯ ಡೈರೆಕ್ಟರವರಾದ ಶ್ರೀ ಆರ್. ನರಸಿಂಹಾಚಾರ್ಯರವರು ತಮ್ಮ ೧೯೧೮ನೆಯ ಇಸವಿಯ ವರದಿಯಲ್ಲಿ "ಹಿಂದೆ ಈ ಮಠದ ಸ್ವಾಮಿಗಳವರು ವಿದ್ವಾಂಸರಾಗಿಯೂ ಮತ್ತು ಕೆಲವು ಮುಖ್ಯ ಗ್ರಂಥಗಳಿಂದ ಇವರು ಕವಿಗಳಾಗಿಯೂ ಇದ್ದರೆಂದು ತಿಳಿದು ಬರುತ್ತದೆ" ಎಂಬುದಾಗಿ ಹೇಳಿರುವರು.

ಸುತ್ತೂರು ಗುರುಪೀಠಿಗೆಯಲ್ಲಿ ಬಾಳಿ ಬೆಳಗಿದ ಗುರುಮೂರ್ತಿಗಳೆಲ್ಲರೂ ಸಾಮಾನ್ಯವಾಗಿ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಘನಪಂಡಿತರಾಗಿದ್ದು, ಕಾವ್ಯ, ಶಾಸ್ತ್ರಗಳಲ್ಲಿ ಬಲ್ಲಿದರೆನಿಸಿದ್ದ ವಿಚಾರವು, ಪೀಠದ ಇತಿಹಾಸದಿಂದಲೂ ಉಪಲಬ್ಧ ಕೃತಿಗಳಿಂದಲೂ ವೇದ್ಯವಾಗುತ್ತದೆ. ಜನಜಾಗೃತಿಗೆ ಜ್ಞಾನದೀವಿಗೆಯನ್ನು ಹಚ್ಚಿದ ಈ ಮಹಾನುಭಾವರೆಲ್ಲರೂ ಅದಕ್ಕೆ ತಮ್ಮ ಅಮೋಘವಾದ ಆಧ್ಯಾತ್ಮಿಕ ಆಚಾರ ವಿಚಾರ ಅನುಭಾವಗಳನ್ನೆರೆದು ಜಾಜ್ವಲ್ಯಗೊಳಿಸಿ ಸನಾತನ ಜ್ಞಾನಭಂಡಾರಕ್ಕೆ ವಿನೂತನ ಸತ್ಕೃತಿಗಳನ್ನು ಸಮರ್ಪಿಸಿರುವರೆಂಬುದರಲ್ಲಿ ಸಂದೇಹವಿಲ್ಲ. ಗ್ರಂಥರಚನೆ, ಗ್ರಂಥಸಂಪಾದನೆ, ಗ್ರಂಥಪ್ರಕಟನೆಗಳ ಮೂಲಕ ಅವರು ಗೈದಿರಬಹುದಾದ ಸಾಹಿತ್ಯಕೃಷಿಯ ಪವಿತ್ರಕಾರ್ಯಕದ ಪರಿಚಯಕ್ಕೆ ಹೊರಟಾಗ ತೀವ್ರವಲ್ಲದಿದ್ದರೂ–ಸ್ವಲ್ಪಮಟ್ಟಿನ ನಿರಾಶೆಯೇ ನಮ್ಮನ್ನು ಮೊದಲು ಎದುರುಗೊಳ್ಳುತ್ತದೆ. ಏಕೆಂದರೆ ಅವರು ರಚಿಸಿರುವ ಕೃತಿಗಳ ಬಗೆಗೆ ಉಲ್ಲೇಖವು ಬೇರೆಡೆ ಲಭ್ಯವಾಗಿದ್ದರೂ, ದುರ್ದೈವದಿಂದ ಅವು ಇನ್ನೂ ಲಭ್ಯವಾಗಿಲ್ಲ. ಆ ಕೃತಿಗಳು ಎಂದಿಗೆ ತಮ್ಮ ಅಜ್ಞಾತವಾಸವನ್ನು ಮುಗಿಸಿ ಮತ್ತೆ ತಲೆದೋರುತ್ತವೋ ಎಂಬುದು ಕಾಲಸೊಬ್ಬನಿಗೇ ಗೊತ್ತು! ಆದರೂ ಈಗ ಉಪಲಬ್ಧವಿರುವ ಕೈಬೆರಳೆಣಿಕೆಯ ಕೆಲವು ಕೃತಿರತ್ನಗಳೇ ಸಾಕು–ಸುತ್ತೂರು ಗುರುಪರಂಪರೆಯ ಸಾಹಿತ್ಯಸೇವೆಗೆ ಮಣಿದೀಪಗಳಾಗಿ ಬೆಳಗುತ್ತಿವೆಯೆನ್ನಬಹುದು.

## ಗೀರ್ವಾಣ ಭಾಷೆಯಿಂ ಕೃತಿವೇಳ್ದ
## ರಾಜಗುರು ಈಶಾನೇಶರು-ಕ್ರಿ.ಶ. ೧೦೩೨

ಸಾಹಿತ್ಯಕ್ಕೆ ಸತ್ವಪೂರ್ಣ ಕೊಡುಗೆಗಳನ್ನು ನೀಡಿದ ಸುತ್ತೂರು ಜಗದ್ಗುರುಪೀಠಾಚಾರ್ಯರುಗಳಲ್ಲಿ ಮೊದಲು ಕಣ್ಣಿಗೆ ಬೀಳುವವರು ಕೆಲವರಾದರೂ. ಅವರಲ್ಲಿ ಅಮೂಲ್ಯವಾದ ಕಾಣಿಕೆಯನ್ನು ಕೊಟ್ಟು ಪ್ರಸಿದ್ಧರಾದವರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ತರುವಾಯ ಪೀಠಕ್ಕೆ ಬಂದ ಹದಿನೆಯ ಅಧಿಪತಿಗಳಾದ ಈಶಾನೇಶ್ವರ ಒಡೆಯರು. ಅತ್ಯಂತ ಪ್ರಭಾವಶಾಲಿಗಳಾಗಿ ವಿರಾಜಿಸಿದ ಇವರು ರಾಜೇಂದ್ರಚೋಳ I (ಕ್ರಿ.ಶ. ೧೦೧೨-೧೦೪೪) ಹಾಗೂ ರಾಜಾಧಿರಾಜಚೋಳ I (ಕ್ರಿ.ಶ. ೧೦೧೮-೧೦೫೪) ಭೂಪಾಲರುಗಳ ರಾಜಗುರುಗಳೆನಿಸಿದ್ದು ರಾಜ ಸಂಪೂಜಿತರಾಗಿದ್ದರು.

ಈಶನಾಜ್ಞೆಯನಾಂತು ನೆರೆ ಧರ
ಣೀಶ ರಾಜೇಂದ್ರಾಖ್ಯಚೋಳ ನ
ರೇಶನಂ ಸಲಹುತೆ ಶಿಲಾಮಠದೊಳಗೆ ನೆಲಸಿ[1]

ಅನೇಕ ವಿದ್ವನ್ಮಣಿಗಳಿಗೆ ತಮ್ಮ ಜ್ಞಾನಸತ್ರದಲ್ಲಿ ಆಶ್ರಯ ನೀಡಿ ಪ್ರಖ್ಯಾತರಾದರು. ಇವರು ಆ ಕಾಲದಲ್ಲಿ ಬಹುಜನಪ್ರಿಯರಾದ ಜಗದ್ಗುರುಗಳಾಗಿ ಎಲ್ಲರಿಂದಲೂ ಪರಮಪೂಜ್ಯತೆಯನ್ನು ಪಡೆದಿದ್ದರೆಂಬುದು ಶಾಸನಗಳಲ್ಲಿ ಉಕ್ತವಾಗಿದೆ. ಒಂದನೆಯ ರಾಜೇಂದ್ರಚೋಳನ ದಿಗ್ವಿಜಯಗಳನ್ನೂ, ಆತನ ಚಕ್ರಾಧಿಪತ್ಯದ ವಿಸ್ತಾರವನ್ನೂ, ಸಾರುವ ಶಿಲಾಶಾಸನಗಳು ಅಲ್ಲಲ್ಲಿ ದೊರೆಯುತ್ತಿದ್ದು[2] ಸುತ್ತೂರಿನಲ್ಲಿರುವ ಶಿಲಾಶಾಸನವು ಈಶಾನೇಶ್ವರ ಒಡೆಯರಿಗೂ ರಾಜೇಂದ್ರಚೋಳ ಚಕ್ರೇಶನಿಗೂ ಇದ್ದ ಗುರು-ಶಿಷ್ಯಬಾಂಧವ್ಯದ ಪರಾಕಾಷ್ಠತೆಯನ್ನು ಪ್ರಕಾಶಪಡಿಸುತ್ತದೆ.[3] ಅದರಲ್ಲಿ ಶಕವರುಷ ೯೫೪ನೆಯ ಅಂಗಿರಸ ಸಂವತ್ಸರ ಕಾರ್ತಿಕಮಾಸದ ಹುಣ್ಣಿಮೆಯಂದು (೨೩-೧೦-೧೦೩೨: ಶಾಸನ ಇಲಾಖೆಯವರ ಅಭಿಪ್ರಾಯ) ರಾಜೇಂದ್ರಚೋಳದೇವನೂ ಶ್ರೋತ್ರಿಯಗ್ರಾಮದ ಮಹಾಜನರೂ ರಾಜಗುರುಗಳಾದ ಈಶಾನೇಶ್ವರ ಒಡೆಯರಿಗೆ ದತ್ತಿಗಳನ್ನು ಬಿಟ್ಟಂತೆ ಉಲ್ಲೇಖವಿದೆ.[4] ಆದುದರಿಂದ ಸುತ್ತೂರು ಪೀಠಾಧೀಶ್ವರರಾದ ಈಶಾನೇಶ್ವರ ಒಡೆಯರು ಕ್ರಿ.ಶ. ೧೦೩೨ರ ಸುಮಾರಿನಲ್ಲಿದ್ದರೆಂಬುದು ಸುಸ್ಪಷ್ಟವಾಗಿದೆ.

ಉದ್ದಾಮ ಪಂಡಿತರಾಗಿದ್ದ ಈಶಾನ ಗುರುಗಳವರು ಶ್ರೇಷ್ಠ ಶಿವಕವಿಗಳಾಗಿದ್ದು ಸಂಸ್ಕೃತದಲ್ಲಿ ರೇವಣ ಸಿದ್ಧೇಂದ್ರದೇಶಿಕರ ಪರಮಲೀಲಾಕಥನವೆಂಬ ಪ್ರೌಢಗ್ರಂಥವನ್ನು ರಚಿಸಿರುವರು ಎಂದು ಬೊಮ್ಮರಸನ ರೇವಣ ಸಿದ್ಧೇಶ್ವರ ಪುರಾಣದಿಂದ ತಿಳಿದು ಬರುತ್ತದೆ. ಇದರಿಂದ ರೇವಣಸಿದ್ಧರ ಚರಿತ್ರೆಯನ್ನು ಸಂಸ್ಕೃತ ಸಾರಸ್ವತಲೋಕಕ್ಕೆ ಅರ್ಪಿಸಿದುದಲ್ಲದೆ, ಮುಂದೆ ಬಂದ ಹರಿಹರ-ಬೊಮ್ಮರಸ ಮೊದಲಾದ ಕವಿಗಳಿಗೂ ಕನ್ನಡದಲ್ಲಿ ಕೃತಿಗಳನ್ನು ರಚಿಸುವುದಕ್ಕೆ ಸ್ಫೂರ್ತಿಯನ್ನು ನೀಡಿ ಸಾಹಿತ್ಯವನ್ನು ಒದಗಿಸಿದ್ದಾರೆನ್ನಬಹುದು. ಅಲ್ಲದೆ ಕನ್ನಡದಲ್ಲಿಯೂ ಅನೇಕ ಉದ್ಗ್ರಂಥಗಳನ್ನು ಇವರು ರಚಿಸಿರಬಹುದೆಂದು ಊಹಿಸಲೂ ಬಹುದು.

---

1 ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ: ೧-೧೪

2 His inscriptions have been found at such widely distant places as Capecomorin in the South, at Mahendragiri on the East coast, at Sutturu near Nanjangud in the Mysore State, dated in his 31st year and Saka 954, Cyclic year Āngirasa (*EII.*, 208, No. 164); Nandagudi near Hadinaru, Mysore State, dated in Saka 943, Cyclic year Raudra (*EC.*, 204, No. 134) and at Polannāruwa in Ceylon. This shows the extent of his conquests and his dominion.

*Mysore Gazetteer*: Vol. II, Part II, Page 999–1000.

3 The respect he showed to his guru is reflected in the grant he ordered to be made to a temple founded in Īśānaśiva-Paṇḍita's honour and name Suttur in the Mysore District. An inscription of his 21st year (1032 AD) at that place (*EC.*, III, Nanjangud 164) records the gift of the five great musical instrument to the temple of Īśāna Īśvaran Udaiyār—undoubtedly named after his guru Is'āna Pandita—at Śrōtriya grāma (Vulgo Suttur) by the Mahājanas and merchants of the place according to the sacred order of the King. (*MAR.*, 1918, Para 85)

*Mysore Gazetteer*: Vol. II, Part II, Page 1035.

4 ಶಿವರಾತ್ರಿ ಶಿವಾಚಾರ್ಯ-ಅನುಬಂಧ: ಪುಟ ೨೩೦-೨೩೧.

## ಸಿದ್ಧನಂಜದೇಶಿಕೇಂದ್ರರು-ಕ್ರಿ.ಶ. ಸು. ೧೧೭೦-೧೨೪೦

ಕಲ್ಯಾಣದ ಕ್ರಾಂತಿಯ ತರುವಾಯ ಸುತ್ತೂರು ಕ್ಷೇತ್ರವು ಶ್ರೀ ಸಿದ್ಧನಂಜದೇಶಿಕೇಂದ್ರರ ನೇತೃತ್ವದಲ್ಲಿ ಎರಡನೆಯ ಅನುಭವಕೇಂದ್ರವೆನಿಸಿ ಶರಣವೃಂದಕ್ಕೆ ಜ್ಞಾನಾನ್ನದಾಸೋಹಗಳನ್ನು ನಡೆಸುತ್ತಾ, ಶರಣಧರ್ಮವನ್ನು ನಾಡಿನಲ್ಲೆಲ್ಲಾ ಹರಡಿತು. 'ಕ್ಷಿತಿಯೊಳೊಲ್ದು ನಿರಾಕುಳದಿ ಶಿವಮತವನುದ್ಧರಿಸುತೆ' ಪ್ರಸಿದ್ಧಿ ಪಡೆದ ಶ್ರೀ ಸಿದ್ಧನಂಜದೇಶಿಕೇಂದ್ರರು ಸುತ್ತೂರು ಕ್ಷೇತ್ರಾಧಿಪತಿಗಳಲ್ಲಿ ನಾಲ್ಕನೆಯವರು. ತಮ್ಮ ಅಸಾಧಾರಣ ವ್ಯಕ್ತಿತ್ವದಿಂದ ಅನೇಕ ಮಹಾನುಭಾವರನ್ನು ಅಂದು ತಮ್ಮೆಡೆಗೆ ಆಕರ್ಷಿಸಿದ ಪ್ರಸಿದ್ಧ ಗುರುಗಳು. ಅವರ ಘನ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಬಂದವರಲ್ಲಿ ಪ್ರಮುಖರೆನಿಸಿದ ಶ್ರೀ ಮಲೆಯ ಮಾದೇಶ್ವರರು ಸುತ್ತೂರು ಶ್ರೀಮಠದಲ್ಲಿ ಕೆಲವು ದಿನಗಳಿದ್ದು, ಕಾಯಕದ ಹಿರಿಮೆಯ ಅದ್ಭುತ ದರ್ಶನವನ್ನು ನೀಡಿ ಮುಂದೆ ಬಿಜಯ ಮಾಡಿದರೆಂದು 'ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ', 'ಶಿವರಾತ್ರಿ ಶಿವಾಚಾರ್ಯ' ಮೊದಲಾದ ಕೃತಿಗಳಿಂದ ತಿಳಿದುಬರುತ್ತದೆ.

ಶಿವಾನುಭವಶಾಸ್ತ್ರದಲ್ಲಿ ಬಲ್ಲಿದರೆನಿಸಿದ್ದ ಶ್ರೀ ಸಿದ್ಧನಂಜದೇಶಿಕೇಂದ್ರರು ತಮ್ಮ ಶಾಸ್ತ್ರವೈದುಷ್ಯಕ್ಕೆ ನಿಕಷವೆನಿಸುವಂತಹ ಪ್ರೌಢಕೃತಿ "ಪರಮ ಶಿವಾಧಿಕ್ಯ ಶಿಖಾಮಣಿ"ಯನ್ನು ರಚಿಸಿದ್ದಾರೆ. ಇದರಲ್ಲಿ ವೇದವೇದಾಂತಾಗಮ ಪುರಾಣೇತಿಹಾಸಾದಿಗಳ ವಿಪುಲ ಆಧಾರಗಳ ಮೇಲೆ ಶಿವಾಧಿಕ್ಯವನ್ನು ಪ್ರತಿಪಾದಿಸಿದ್ದಾರೆ. ಸಮಾಜದಲ್ಲಿ ಶಿವಧರ್ಮದ ಬಗ್ಗೆ ಉತ್ಕಟಾಭಿಮಾನವನ್ನುಕ್ಕಿಸಿ, ಶಿವಭಕ್ತಿಯನ್ನು ಚಿಮ್ಮಿಸುವ ಸತ್ಕೃತಿಯನ್ನು ಕೊಟ್ಟ ಹಿರಿಮೆ ಶ್ರೀ ಸಿದ್ಧನಂಜದೇಶಿಕೇಂದ್ರರಿಗೆ ಸಲ್ಲುತ್ತದೆಯೆನ್ನಬಹುದು. ಕರ್ಣಾಟಕ ಕವಿಚರಿತ್ರೆಕಾರರು ಕವಿಚರಿತ್ರೆಯ ಮೂರನೆಯ ಸಂಪುಟದ ಅನುಬಂಧದಲ್ಲಿ ಸಿದ್ಧನಂಜದೇಶಿಕೇಂದ್ರರ ಈ ಕೃತಿಯನ್ನು ಹೆಸರಿಸಿ 'ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿಯೂ ಉಕ್ತವಾಗದೆ ಇರುವ ಗ್ರಂಥಗಳನ್ನು ನಮಗೆ ತಿಳಿದ ಮಟ್ಟಿಗೆ ಈ ಅನುಬಂಧದಲ್ಲಿ ಕೊಟ್ಟಿದ್ದೇವೆ' ಎಂದಿರುವರು.

### ಕೃತಿಯಂ ಪೇಳಿಸಿದ
## ಕಪಿನೀ ನಂಜುಂಡದೇಶಿಕೇಂದ್ರರು-ಕ್ರಿ.ಶ. ಸು. ೧೨೪೦-೧೩೧೦

ಸುತ್ತೂರು ವೀರಸಿಂಹಾಸನದ ಜಗದ್ಗುರು ಪರಂಪರೆಯಲ್ಲಿ ಐದನೆಯವರಾದ ಶ್ರೀ ಕಪಿನೀ ನಂಜುಂಡದೇಶಿಕೇಂದ್ರರ ಹೆಸರು ಉಜ್ವಲವಾದುದು. ಅವರು ಕರ್ನಾಟಕ ಸಾಹಿತ್ಯ-ಸಂಸ್ಕೃತಿಗಳ ಪೋಷಕರಾಗಿ ಅನೇಕ ಕವಿಗಳಿಗೆ ಆಶ್ರಯ ನೀಡಿದ್ದರು. ಅದಕ್ಕೆ ಅವರ ಆಶ್ರಯದಲ್ಲಿ ರಚಿತವಾದ ಕೃತಿರತ್ನಗಳೇ ಸಾಕ್ಷಿಯಾಗಿವೆ. ಅವರ ಅಪೂರ್ವ ಸಾನ್ನಿಧ್ಯದಲ್ಲಿ ಹಲವು ಮಂದಿ ಕವಿ-ಅನುಭಾವಿಗಳು ತಮ್ಮ ದಿವ್ಯಾನುಭವಗಳನ್ನು ಕೃತಿಗಳಲ್ಲಿ ಪಡಿಮೂಡಿಸಿದರು. ಅವರು ಕೊಟ್ಟ ಸ್ಫೂರ್ತಿಯಿಂದ ಕನ್ನಡಕ್ಕೆ ದೊರಕಿದ ಒಂದು ಶ್ರೇಷ್ಠ ಕೃತಿಯೆಂದರೆ 'ಅಮುಗಿದೇವಯ್ಯಗಳ ಸಾಂಗತ್ಯ.'

'ಕಂತುಹರ ಸಮರೂಪನಂ ನಿಶ್ಚಿಂತನಂ ಗುಣವಂತನಂ ಸಲೆ ಚಿಂತಿತಾರ್ಥಪ್ರದನ ಕಪಿನೀ ನಂಜಗುರುವರ'ನ ಶಿಷ್ಯಪರಂಪರೆಗೆ ಸೇರಿದ ಶಿವಲಿಂಗಕವಿ 'ಅಮುಗಿದೇವಯ್ಯಗಳ ಸಾಂಗತ್ಯ'ದ ಕರ್ತೃ. ಈತನ ಪೂರ್ಣ ಹೆಸರು ಶಿವಲಿಂಗಾರಾಧ್ಯನೆಂದೂ ಕಾವ್ಯನಾಮ 'ಶಿವಾನಂದ' ಎಂದೂ, ಆ ಗ್ರಂಥದಿಂದಲೇ ತಿಳಿದು ಬರುತ್ತದೆ. 'ಅವ ಸಂತಾನ ಕಿಂದಲಿ ಕಾವ್ಯಸಂತಾನ ಪಿಡಿದೆಂದು'[1] ನಂಬಿದ ಶಿವಲಿಂಗ ಕವಿಯು.

ಸದಮಲಾನಂದ ಸದ್ಗುರು ನಂಜೇಶ್ವರ
ವದಗೆನ್ನ ಹೃದಯಜಿಹ್ವೆಯಲಿ[2]

ಎಂದು ತನ್ನ ಗುರುಗಳಾದ ಸುತ್ತೂರು ಸಿಂಹಾಸನಾಧೀಶ್ವರ ಕಪ್ಪಿನ ನಂಜುಂಡೇಶ್ವರರನ್ನು ಹೃದಯ ಜಿಹ್ವೆಗೆ ಆಹ್ವಾನಿಸಿ 'ಅವಿರಳಾತ್ಮಕ ಭಕ್ತಕೃತಿ'ಯನ್ನು ಹೇಳಲು ಹೊರಟಿದ್ದಾನೆ.

ಸುತ್ತೂರ ಸಿಂಹಾಸನಾಧೀಶ ಕಪ್ಪಿನ
ಮುಕ್ತಿದಾಯಕ ನಂಜೇಶ್ವರನ

---

1 ಅಮುಗಿದೇವಯ್ಯಗಳ ಸಾಂಗತ್ಯ (೧-೨೯) : ಸಂಪಾದಕರು—ಡಾ. ಎಚ್. ತಿಪ್ಪೇರುದ್ರಸ್ವಾಮಿ

2 ಅಮುಗಿದೇವಯ್ಯಗಳ ಸಾಂಗತ್ಯ (೧-೧೩)

ಹಸ್ತದಿ ಜನಿಸಿದ ಭೃತ್ಯ ಶಿವಾನಂದ
ವಿಸ್ತರಿಸಿದ ನಿಜಕಥೆಯ[1]

ಈ ಆಧಾರಗಳಿಂದ ಶ್ರೀ ಕಪ್ಪಿನ ನಂಜುಂಡದೇಶಿಕೇಂದ್ರರು ಕವಿಜನರಿಗೆ ಸ್ಫೂರ್ತಿಯ ಸೆಲೆಯಾಗಿ ಕಲ್ಯಾಣದ ಶಿವ ಶರಣನೂ ವಚನಕಾರನೂ ಇಷ್ಟಲಿಂಗದ ನಿಷ್ಠೆಯಲ್ಲಿ ನಿಸ್ಸೀಮನೂ ಆದ ಅಮುಗಿದೇವಯ್ಯಗಳ ವಿವರಣಾತ್ಮಕ ಲಿಂಗ ಜೀವನ ಒಂದು ಉತ್ತುಂಗ ಕೃತಿಯಾಗಿ ಸಾಂಗತ್ಯದಲ್ಲಿ ರಮ್ಯೋಜ್ವಲವಾಗಿ ಮೂಡಿಬಂದುದಕ್ಕೆ ಕಾರಣರಾದರು ಎಂಬುದನ್ನು ನೆನೆದಾಗ ಗುರುಗಳವರ ಸಾಹಿತ್ಯಸೇವೆ-ಪೋಷಣೆಗಳು ಚಿರಸ್ಮರಣೀಯವೆಂದು ಮತ್ತೆ ಹೇಳಬೇಕಾಗಿಲ್ಲ. ಘನವಿದ್ವಾಂಸರಾಗಿದ್ದ ಅವರು ಕೃತಿರಚನೆಗೈದಿರಲೂಬಹುದು. ಆದರೆ ಅವುಗಳಾವುವೂ ಇದುವರೆಗೆ ಉಪಲಬ್ಧವಿಲ್ಲ.

ಇಂದಿನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು 'ಅಮುಗಿದೇವಯ್ಯಗಳ ಸಾಂಗತ್ಯ'ವನ್ನು ಪ್ರಸಿದ್ಧ ವಿದ್ವಾಂಸರಾದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರಿಂದ ಸಂಪಾದಿಸಿ ತಮ್ಮ ಗ್ರಂಥ ಮಾಲೆಯಿಂದ ಪ್ರಕಟಪಡಿಸಿ ಬೆಳಕಿಗೆ ತಂದ ಮಹೋಪಕಾರವನ್ನು ಇದೇ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.

**ವಚನಕಾರ**

## ಘನಲಿಂಗದೇವರು-ಕ್ರಿ.ಶ. ಸು. ೧೫೩೦-೧೫೫೦

ಕನ್ನಡ ಸಾಹಿತ್ಯಕ್ಕೆ ಸುತ್ತೂರು ಜಗದ್ಗುರು ಪರಂಪರೆಯವರು ಸಲ್ಲಿಸಿದ ಸೇವೆಯಲ್ಲಿ ಮೊದಲನೆಯ ಸ್ಥಾನದಲ್ಲಿ ನಿಲ್ಲತಕ್ಕವರೆಂದರೆ ಘನಲಿಂಗಿಗಳು. ಸಾಹಿತ್ಯ ಚರಿತ್ರೆಯಲ್ಲಿ ಸುತ್ತೂರು ಮಠದ ಕೀರ್ತಿ ಸ್ಥಿರವಾಗಿ ನಿಲ್ಲುವಂತೆ ಸತ್ವಪೂರ್ಣ ಸಾಹಿತ್ಯವನ್ನು ಕೊಟ್ಟವರು 'ಪರಮಪಟ್ಟಸ್ಥಲಮಾರ್ಗದಲ್ಲಿ ನೆರೆದಿರುತ, ಸುರುಚಿರದ ಸುತ್ತೂರ ಸಿಂಹಾಸನದಿ ರಾಜಿಸಿದ' ಹನ್ನೊಂದನೆಯ ಜಗದ್ಗುರು ಶ್ರೀ ಘನಲಿಂಗದೇವರು. ಮಹಾಮಹಿಮರಾದ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗಯತಿಗಳ ಕಾರುಣ್ಯದ ಶಿಶುವಾಗಿ ಸಿದ್ಧಲಿಂಗಯುಗದ ಪ್ರಸಿದ್ಧ ವಚನಕಾರರಾಗಿ ವಚನಸಾಹಿತ್ಯ ಭಂಡಾರಕ್ಕೆ ಗಣನೀಯ ಕಾಣಿಕೆಯನ್ನಿತ್ತ ಘನಲಿಂಗಿಗಳು ಚಿರಸ್ಮರಣೀಯರಾಗಿದ್ದಾರೆ.

ಕನ್ನಡಸಾಹಿತ್ಯ ಜಗತ್ತಿನಲ್ಲಿ ಹದಿನೈದು-ಹದಿನಾರನೆಯ ಶತಮಾನಗಳು ವಚನಸಾಹಿತ್ಯದ ದೃಷ್ಟಿಯಿಂದ ತುಂಬ ಗಮನಾರ್ಹವಾದವುಗಳು. ಹನ್ನೆರಡನೆಯ ಶತಮಾನದಲ್ಲಿ ಪೂರ್ಣ ಪ್ರವಾಹವಾಗಿ ಬಹು ರಭಸದಿಂದ ಹರಿದುಬಂದ ವಚನವಾಙ್ಮಯವು ಕಲ್ಯಾಣದ ಕ್ರಾಂತಿಯ ತರುವಾಯ 'ಇದ್ದಕ್ಕಿದ್ದಂತೆ ಕಣ್ಮರೆಯಾದಂತಿದ್ದರೂ ಸಂಪೂರ್ಣ ಬತ್ತಿ ಹೋಗದೆ ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಗುಪ್ತಗಾಮಿನಿಯಾಗಿದ್ದು ಮತ್ತೆ ಈ ಯುಗದಲ್ಲಿ ಪುಟಿದೆದ್ದು ಹರಿದುದನ್ನು ಕಾಣಬಹುದು. ಈ ಶತಮಾನಗಳಲ್ಲಿ ವೀರಶೈವ ಧಾರ್ಮಿಕ, ಸಾಹಿತ್ಯಿಕ ಚಟುವಟಿಕೆಗಳು ಬಹಳ ವೇಗವಾಗಿ ನಡೆದುವು. ಹಳೆಯ ವಚನಗಳ ಸಂರಕ್ಷಣೆ, ಸಂಕಲನ, ಸಂಪಾದನೆಗಳೂ ಅವುಗಳಿಗೆ ಟೀಕೆ ಟಿಪ್ಪಣಿ ವ್ಯಾಖ್ಯಾನಗಳನ್ನು ಬರೆಯುವ ಹಾಗೂ ಧರ್ಮಪ್ರಚಾರ ಮಾಡುವ ಬೃಹತ್‌ಕಾರ್ಯಗಳೂ ಅಗಾಧವಾಗಿ ನಡೆದುವು. ಅಲ್ಲದೆ ಈ ಕಾರ್ಯಗಳ ಜೊತೆ ಜೊತೆಯಲ್ಲಿಯೇ ಸ್ವತಂತ್ರವಾಗಿ ವಚನಗಳನ್ನು ರಚಿಸಿ ವಚನಸಾಹಿತ್ಯದ ವಿಶಿಷ್ಟ ಪರಂಪರೆಯನ್ನು ಮುಂದುವರಿಸುವ ಸೃಜನಶೀಲ ಮಹತ್ಕಾರ್ಯಗಳೂ ನಡೆದುವು. ಈ ಕಾಲದ ಉತ್ತಮ ವಚನ ಕಾರರಲ್ಲಿ ತೋಂಟದ ಸಿದ್ಧಲಿಂಗೇಶ್ವರರನ್ನು ಬಿಟ್ಟರೆ ಎದ್ದುಕಾಣುವ ಎರಡನೆಯ ಹೆಸರೇ ಘನಲಿಂಗಿಗಳದು.

ಘನಲಿಂಗದೇವರು ತೋಂಟದ ಸಿದ್ಧಲಿಂಗರ ಅಚ್ಚುಮೆಚ್ಚಿನ ಶಿಷ್ಯರು. 'ಸುತ್ತೂರು ಸಿಂಹಾಸನ'ದ ತಮ್ಮ ಗುರುಪಂಪರೆಯನ್ನೂ, ತಮಗೆ ತೋಂಟದ ಸಿದ್ಧಲಿಂಗರು 'ಘನಲಿಂಗಿ'ಯೆಂಬ ಹೆಸರನ್ನು ಕೊಟ್ಟು ಅಕ್ಕರೆಯಿಂದ ರಕ್ಷಿಸಿದುದನ್ನೂ ತುಂಬು ಹೃದಯದಿಂದ ಹೇಳಿಕೊಂಡಿದ್ದಾರೆ :

ಎಲೆ ತಂಗಿ,
ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ
ನಿನ್ನ ಪೂರ್ವಾಪರವಾವುದಮ್ಮ ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು

[1] ಅಮುಗಿದೇವಯ್ಯಗಳ ಸಾಂಗತ್ಯ (೭--೧೧೦)

ಭಂಡಾರಿ ಬಸವಪ್ಪೊಡೆಯ ದೇವರು,
ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು
ಕೂಗಲೂರು ಸಂಜಯ್ಯದೇವರು,
ಆ ಸಂಜಯ್ಯದೇವರ ಕರಕಮಲದಲ್ಲಿ
ಉದಯವಾದ ಶರಣವೆಣ್ಣಯ್ಯ ನಾನು!
ಎನ್ನ ಗುರುವಿನಗುರು ಪರಮಗುರು ಪರಮಾರಾಧ್ಯ
ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿವರು
ಆ ತೋಂಟದಾರ್ಯನು ತನ್ನ ಕೃಪೆಯೆಂಬ
ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಸ್ವರೂಪತತ್ವಾರ್ಥವೆಂಬ
ಹಾಲುತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
'ಘನಲಿಂಗಿ'ಯೆಂಬ ನಾಮಕರಣವಂಕೊಟ್ಟು
ಪ್ರಾಯಸಮರ್ಥೆಯಂ ಮಾಡಿ
ಸತ್ಯ–ಸದಾಚಾರ–ಜ್ಞಾನ–ಕ್ರೀಗಳೆಂಬ ದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಆರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ.

ಘನಲಿಂಗಿಗಳು ತೋಂಟದ ಸಿದ್ಧಲಿಂಗರ ಶಿಷ್ಯಸಮೂಹದಲ್ಲಿ ಇದ್ದುದಾಗಿ ವಿರಕ್ತತೋಂಟದಾರ್ಯರು (ಕ್ರಿ.ಶ. ೧೫೬೦) ಬರೆದಿರುವ 'ಸಿದ್ಧೇಶ್ವರ ಪುರಾಣ'ದಿಂದಲೂ ತಿಳಿದುಬರುತ್ತದೆ. ತೋಂಟದ ಸಿದ್ಧಲಿಂಗರನ್ನು ತುಮಕೂರಿನಲ್ಲಿ ಪಲ್ಲಕ್ಕಿಯ ಮೇಲೆ ಮೆರೆಯಿಸುತ್ತಿದ್ದಾಗ ಅವರನ್ನೂ ಉತ್ಸವದಲ್ಲಿ ಭಾಗವಹಿಸಿದ್ದ ಅವರ ಶಿಷ್ಯರನ್ನೂ ಕಂಡ ಪುರಾಂಗನೆಯರ ವರ್ಣನೆಯಲ್ಲಿ ಉಕ್ತವಾಗಿರುವ ಮಠಾಧೀಶ್ವರರುಗಳಲ್ಲಿ ಘನಲಿಂಗದೇವರೂ ಒಬ್ಬರೆಂದು ಹೇಳಿದೆ.

ಉರೆ ಕೃಷ್ಣಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂಗೆಯ್ದು ಕರತಳದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಶ್ಚಳವಿರತನೀತನಾರೆ ? ।
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನಮಾರ್ಗದೊಳು ನಿಂದು ಗುಣ
ಕರಿಗೊಂಡ ಘನಲಿಂಗದೇವನೇ ಕಾಣೆ ಶುಕವಾಣಿ ಕಾಳಾಹಿವೇಣಿ ॥

(ಸಿದ್ಧೇಶ್ವರ ಪುರಾಣ, ೧೫–೪೬)

ಅವರ ವೇಷಭೂಷಣ ಸ್ವಭಾವದ ಸುಂದರ ವಿವರಗಳೊಂದಿಗೆ ಬಂದಿರುವ ಈ ವಿವರಣೆಯು ಘನತೆವೆತ್ತ ಘನಲಿಂಗಿಗಳ ಉತ್ತುಂಗ ವ್ಯಕ್ತಿತ್ವವನ್ನು ಬೆಳಗುವ ಹೆದ್ದೀವಿಗೆಯಾಗಿದೆ.

ಘನಲಿಂಗದೇವರ ವಚನಗಳ ಅಂಕಿತ 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.' ಇವರ ಅರವತ್ತು ಮೂರು ವಚನಗಳು ಅಂದಿನ ಯುಗದವರ ವಚನಗಳಂತೆ ಸುದೀರ್ಘವೂ ಸೈದ್ಧಾಂತಿಕವೂ ಆಗಿದ್ದು ಭಾವ ತೀವ್ರತೆ, ಸುಂದರ ನಿರೂಪಣೆ, ಸರಳ ಭಾಷಾಶೈಲಿಗಳಿಂದ ಉತ್ತಮ ರಚನೆಗಳಾಗಿವೆ. 'ಅವುಗಳಲ್ಲಿ ಸಾಧಕನ ಆರ್ತತೆಯಿದೆ, ನಿಷ್ಠೆಯಿದೆ, ಭಕ್ತಿಯಿದೆ.'[1]

1 ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ : ಪುಟ ೫೪೦

ಘನಲಿಂಗಿಗಳನ್ನು ವಚನಕಾರರಲ್ಲಿ ಉರಿಲಿಂಗದೇವ, ಗಜೇಶ ಮಸಣಯ್ಯಗಳಂತೆ 'ಶರಣಸತಿ-ಲಿಂಗಪತಿ' ಮಾರ್ಗಕ್ಕೆ ಸೇರಿಸಬಹುದು. ಈ ಭಾವ ಮಹಾದೇವಿ ಅಕ್ಕಗಳ ವಚನಗಳಲ್ಲಿ ಅದೆಷ್ಟು ಸಹಜ ಸುಂದರವಾಗಿ ಬಂದಿದೆಯೋ ಅಷ್ಟೇ ಚೆನ್ನಾಗಿ ಘನಲಿಂಗದೇವರ ವಚನಗಳಲ್ಲಿಯೂ ಬಂದಿರುವದನ್ನು ಕಾಣಬಹುದು. ಈ ಶರಣ ವೆಣ್ಣು ಒಲಿದಿರುವ ಪ್ರಿಯನಿಗೆ ಒಂದು ವಿಶೇಷಣವೂ ಇದೆ. ಅದೆಂದರೆ ಆ ಚೆನ್ನಮಲ್ಲಿಕಾರ್ಜುನನು 'ಘನಲಿಂಗಿಯ ಮೋಹದ'ವನು. ಅವನೊಡನೆ ಘಟಿಸಿದ ಈ ಪ್ರೇಮಸಂಬಂಧ ಹರೆಯದ ಹುಚ್ಚಿನಲ್ಲಿ ಸಂಭವಿಸಬಹುದಾದಂಥ ಆಕಸ್ಮಿಕ ಘಟನೆಯೇನೂ ಅಲ್ಲ. ಈ ಜೀವಕ್ಕೆ ತಾನು ಸತಿ-ತನ್ನ ಪತಿ ಆ ದೇವ ಎಂಬ ಜ್ಞಾನ ಅಂಕುರಿಸಿದ್ದು ತಾರುಣ್ಯದಲ್ಲಲ್ಲ, ಶೈಶವದಲ್ಲೂ ಅಲ್ಲ; ಅದಕ್ಕೂ ಹಿಂದೆ-ಜೀವವು ತಾಯಿಯ ಗರ್ಭದಲ್ಲಿ ಇದ್ದಾಗಲೆ!

ಈ ಜನ್ಮದಲ್ಲಿ—ಪಿಂಡೋತ್ಪತ್ತಿಯಲ್ಲಿಯೇ
ಶರಣಸತಿ ಲಿಂಗಪತಿಯೆಂಬ ಜ್ಞಾನ ತಲೆದೋರಿ
ಶರಣವೆಣ್ಣಾಗಿ ಹುಟ್ಟಿದೆನಯ್ಯ

ಜವ್ವನ ಕುಡಿವರಿದು 'ಗಂಡು ಹೆಣ್ಣಾಗಿ' ಈ ಶರಣವೆಣ್ಣು ಚೆನ್ನಮಲ್ಲಿಕಾರ್ಜುನನನ್ನು ಮದುವೆಯಾಯಿತು. ಆತನನ್ನು ಕೂಡುವ ಕಾತರ ಈ ಹೆಣ್ಣಿಗೆ ಹೇಳಲಸದಳ.

ಪುಷ್ಪಪರಿಮಳದಂತೆ, ನಾ-ನೀನುಭಯವಿಲ್ಲದಂತೆ
ಕೂಡೆನ್ನ ಪ್ರಾಣೇಶನೇ!
ಕೂಡದಿದ್ದರೆ ಗಲ್ಲವ ಪಿಡಿ,
ಪಿಡಿಯದಿದ್ದರೆ ಬೊಟ್ಟಾಡು,
ಬೊಟ್ಟಾಡದಿದ್ದರೆ ಆಲಿಂಗಿಸು
ಆಲಿಂಗಿಸದಿದ್ದರೆ ಕೈವಿಡಿ
ಕೈವಿಡಿಯದಿದ್ದರೆ ಮಾತಾಡು
ಮಾತಾಡದಿದ್ದರೆ ನೋಡು, ನೋಡದಿದ್ದರೆ ಬಾ
ಬಾರದಿದ್ದರೆ ಪ್ರಮಥಗಣಂಗಳೊಡನೆ ನನ್ನವಳೆಂದು ನುಡಿ
ನುಡಿಯದಿದ್ದರೆ, ನಿನ್ನ ಮನದಲ್ಲಿ ನನ್ನವಳೆಂದು ಭಾವಿಸು
ಭಾವಿಸದಿದ್ದರೆ ಪುಣ್ಯ ಕಣ್ದೆರೆಯದು

ಬಡಪಟ್ಟಿಗೆ ಒಲಿಯದ ಪ್ರಿಯನನ್ನು ಪರಿಪರಿಯಾಗಿ ಪ್ರಾರ್ಥಿಸಿ ಅಂಗಲಾಚುವ ಮುಗ್ಧ ಹೆಣ್ಣಿನ ದೈನ್ಯಚಿತ್ರ ಅಪೂರ್ವವಾಗಿದೆ. 'ಶರಣಸತಿ ಲಿಂಗಪತಿಯೆಂದು ಬಣ್ಣಿಸಿ ಒಪ್ಪವಿಟ್ಟು ನುಡಿದುಕೊಂಬ ಕುಟಿಲವೆಣ್ಣಲ್ಲವಯ್ಯ ನಾನು, ನಿನಗೆ-ಕೈಕಾಲಿಲ್ಲದ ಮೋಟಂಗೆ-ಮೆಚ್ಚಿ ಮರುಳಾದ ಪತಿವ್ರತೆ'; 'ಎನ್ನ ಪ್ರಾಣಷಟ್‌ಸ್ಥಲಕ್ಕೆ ಸಲೆಸಂದ ಅಕ್ಕಮಹಾದೇವಿಯವರು ಹೋದ ಬಟ್ಟೆಯಲ್ಲಿ ನಡೆಯುವುದಲ್ಲದೆ ಕಿರುಬಟ್ಟೆಯಲ್ಲಿ ನಡೆಯದು'; 'ಎನ್ನ ಗಂಡ ಆಳಲಿ ಆಳದೆ ಹೋಗಲಿ, ಪತಿಭಕ್ತಿಯ ಬಿಡೆ ಕಣಾ'-ಇಂತಹ ಮಾತುಗಳಲ್ಲಿ 'ಘನಲಿಂಗಿಯ ಮೋಹ'ದ ಚೆನ್ನಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳುವ ಹದಿಬದೆಯ ಹಲವಾರು ಅನುಭವಗಳು ಹೃದಯಂಗಮವಾಗಿ ಬಂದಿವೆ.

ಘನಲಿಂಗಿಗಳು ಬೂಟಾಟಿಕೆಯ ವಿರಕ್ತರ ಬಗ್ಗೆ ಬಹಳ ಕಟುವಾಗಿ ನುಡಿದಿದ್ದಾರೆ. ವಿರಕ್ತವರ್ಗವು ತನ್ನ ಆದರ್ಶವನ್ನು ತೊರೆದು 'ಕಾಯಕಕ್ಕಾರದೆ ಜೀವಗಳ್ಳರಾಗಿ ಮಂಡೆಯ ಬೋಳಿಸಿಕೊಂಡು ಕಂಡಕಂಡವರ ಮನೆಯಲ್ಲಿ ಉಂಡು' ಓಡಾಡುವುದನ್ನು ಕಂಡಾಗ ಅವರ ವಾಣಿ ಸಿಡಿಲಿನೇಟಾಗುತ್ತದೆ. ವಿರಕ್ತನು ಯಾರು? ಎಂಬ ಪ್ರಶ್ನೆಗೆ ಅವರು ಕೊಡುವ ಉತ್ತರ-'ಸುಚಿತ್ತ ಗುರುವನಪ್ಪಿ, ಸುಬುದ್ಧಿ ಲಿಂಗವನಪ್ಪಿ, ನಿರಹಂಕಾರ ಜಂಗಮವನಪ್ಪಿ, ಸುಮನ ಪ್ರಸಾದವನಪ್ಪಿ, ಸುಜ್ಞಾನ ಪಾದೋದಕವನಪ್ಪಿದ ಲಿಂಗಾಂಗಿ.' ಅಂತಲ್ಲದೆ 'ಹಗಲಾದರೆ ಹಸಿವು ತೃಷೆಗೆ ಹಂಬಲಿಸಿ ಬಾಯಿಬಿಟ್ಟು ಇರುಳಾದರೆ ವಿಷಯಾತುರನಾಗಿ ಕಳವಳಿಸಿ ಕನಸಕಂಡು ಮನವೆಂತಾಡಿದಂತಾಡುವರೆಲ್ಲಾ ನಿಜ ವಿರಕ್ತರಪ್ಪರೆ?': 'ಹಸಿವು ತೃಷೆ ವಿಷಯ ವ್ಯಾಪಾರಂಗಳಂ ಸುಟ್ಟುರುಹಿದ ತೋಂಟದ ಸಿದ್ಧಲಿಂಗ, ಅಲ್ಲಮಪ್ರಭು, ಅನಿಮಿಷ ದೇವರು ಇಂತಿವರು ವಿರಕ್ತರಲ್ಲದೆ, ಮತ್ತೆ ವಿರಕ್ತರೆಂಬ ನುಡಿ ನಿಮ್ಮ ಹಡಪದಲ್ಲಿರಲಿ'—ಎಂದು ಕಡ್ಡಿಮುರಿದು ಎರಡು ತುಂಡಾದಂತೆ ಖಂಡಿತ ನುಡಿಗಳನ್ನಾಡಿ ಎಚ್ಚರಿಸಿದ್ದಾರೆ.

ಮಾಯೆಯ ಅದಮ್ಯಶಕ್ತಿ, ಅಸಾಧ್ಯದಾಂಧಲೆಗಳನ್ನು ಕುರಿತು ಎಲ್ಲರೂ ಹೇಳಿದ್ದಾರೆ. ಆದರೆ ಘನಲಿಂಗ ದೇವರು ಹೇಳಿರುವುದರಲ್ಲಿ ತುಂಬಾ ಸೊಗಸಿದೆ. ಸಂಸಾರವನ್ನು ಬಿಟ್ಟವರಿಗೂ ಸಂಸಾರ ಬಿಡುವುದಿಲ್ಲ. ಅದರ ಹಾವಳಿಯಿಂದ ತಪ್ಪಿಸಿಕೊಂಡವರಿಲ್ಲ. ಬಹಳ ಕಷ್ಟ. ಇದೋ ನೋಡಿ,

ಕರಣಹಸುಗೆಯ ನೋಡುವಣ್ಣಗಳ
ಕಾಲ ಹಿಡಿದೆಳೆಯಿತು ಮಾಯೆ !
ಮಿಶ್ರಾರ್ಪಣಗಳ ನೋಡುವಣ್ಣಗಳ
ಮೀಸೆಯ ಹಿಡಿದುಯ್ಯಾಲೆಯನಾಡಿತು ಮಾಯೆ !
.................................
ಬರಿಯ ವೈರಾಗ್ಯವ ಮಾಡುವಣ್ಣಗಳ
ಸ್ತ್ರೀಯರ ಮುಡಿಯ ಸಿಂಗರಿಸುವಂತೆ ಮಾಡಿತು ಮಾಯೆ

ಹೀಗೆಯೇ ಮುಂದುವರಿಯುತ್ತಾ ಮಾಯೆಯ ಹಾವಳಿಯನ್ನು ಮನೋಹರವಾಗಿ ಉಗ್ಘಡಿಸುತ್ತದೆ ಈ ವಚನ.

ಘನಲಿಂಗಿಗಳ ಮಾತುಗಳಲ್ಲಿ ಆತ್ಮವಿಮರ್ಶೆ, ಭಕ್ತಿ, ಶ್ರದ್ಧೆ, ವಿನಯಾದಿಗಳು ವಿಶಿಷ್ಟವಾಗಿ ಎದ್ದುಕಾಣುತ್ತವೆ.

ಕಪಿ ಕಳ್ಳಕುಡಿದು, ಕಡಲದಾಂಟುವೆನೆಂದು
ಲಂಘಿಸಿ, ನಡುನೀರಿನಲ್ಲಿ ಬಿದ್ದು
ಮೀನುಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನಬಾಳು

ಪರಮಾತ್ಮನ ನೆನಹಿಲ್ಲದೆ ಪ್ರಪಂಚದಲ್ಲಿಯೇ ಮುಳುಗಿದ ಜೀವ ನೊಂದು ಬೆಂದು ಮೊರೆಯಿಡುವ ಆರ್ತಸ್ಥಿತಿಯನ್ನು ಈ ಮಾತುಗಳಲ್ಲಿ ತೋಡಿಕೊಂಡಿದ್ದಾರೆ.

ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ
ಹಂದಿಯ ತಂದು ಅಂದಣವನೇರಿಸಿದಂತೆ
ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ
ಗುರುವೆ ?

ಎಂದು ಪ್ರಾರಂಭವಾಗುವ ವಚನ ಅವರ ವಿನಯಶ್ರೀಯನ್ನು ಸಾರುತ್ತದೆ.

ನಾನು ಮುಂದನರಿಯದ ಅಂಧಕನಯ್ಯ
ನಿನ್ನ ಬಾಗಿಲ ಕಾವ ಗೊಲ್ಲನಯ್ಯ
ನಿನ್ನ ಕುದುರೆಯ ಸಾಕುವ ಗೋವನಯ್ಯ
ನಿನ್ನ ಚಮ್ಮಾವುಗೆಯ ಹೊತ್ತು ಬರುವ ಬೋವರಲೆಂಕನಯ್ಯ
ನಿನ್ನ ಪಡುಗವ ಹಿಡಿವ ಪಡುಡಿಂಡಿಯಯ್ಯ
ನೀನುಗುಳ್ದ ತಂಬುಲವ ಮೆಲುವ ನಿನ್ನನಾದಿಯ ಹಳೆಯನಯ್ಯ
ನಿನ್ನಂಗಳದಲ್ಲಿ ಬೊಗುಳುವ ಶ್ವಾನನಯ್ಯ
ಎನ್ನ ತಪ್ಪ ಕಾಯಯ್ಯ, ಶಿವಧೋ ಶಿವಧೋ

ಹಾಗೆಯೇ ಇನ್ನೊಂದು ವಚನದಲ್ಲಿ ನನಗೆ ಹೊನ್ನು, ಹೆಣ್ಣು, ಮಣ್ಣು ಯಾವುದೂ ಬೇಡ, ಯಾವ ಫಲ-ಪದವಿಗಳೂ ಬೇಡ, ಶಿವಶರಣರ ಮನೆಯ ಬಾಗಿಲ ಕಾಯುವ ಸೊಣಗನನ್ನಾಗಿ ಮಾಡು ಎಂದು ಕೇಳುವ ಚಿತ್ರ ಬರುತ್ತದೆ ;

ನಿಮ್ಮಾಣೆ ಎನಗೊಂದ ಕರುಣಿಸಯ್ಯ
ತಂದೆ ಡೋಹರಕಕ್ಕಯ್ಯ, ಮಾದಾರಚೆನ್ನಯ್ಯ, ಅಂಬಿಗರ
ಚೌಡಯ್ಯ ಇಂತಪ್ಪ ಶಿವಶರಣರ
ಮನೆಯ ಬಾಗಿಲ ಕಾವ ಶುನಕನ ಮಾಡಿ
ಎನ್ನ ನೀ ನಿಲಿಸಯ್ಯ

ವಚನಸಾಹಿತ್ಯ ಪರಂಪರೆಗೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸಿದ ಘನಲಿಂಗಿಗಳ ಬಗೆಗೆ ಶ್ರೀ ಸಿದ್ಧಯ್ಯ ಪುರಾಣಿಕರು ಹೀಗೆಂದು ಹೇಳಿದ್ದಾರೆ: 'ಪರಮಗುರು ತೋಂಟದ ಸಿದ್ಧಲಿಂಗೇಶ್ವರರ ಕರುಣದ ಕಂದನಾಗಿ ಬೆಳೆದು

ಶರಣಮಾರ್ಗದ ಮೈಲಿಗಲ್ಲಾಗಿ ಮೆರೆದ ಘನಲಿಂಗದೇವನು ವಚನ ವಾಙ್ಮಯದಲ್ಲಿಯೂ ಉಚ್ಚಸ್ಥಾನದಲ್ಲಿ ವಿರಾಜಿಸುತ್ತಿದ್ದಾನೆ.'[1] ಘನಲಿಂಗದೇವರ ವಚನಗಳನ್ನು ಸಂಸ್ಕರಿಸಿ ಸಂಪಾದಿಸಿ ಪ್ರಕಟಿಸಿರುವ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಗ್ರಂಥದ ಪೀಠಿಕಾಭಾಗದಲ್ಲಿ ಹೇಳಿರುವ ಮಾತುಗಳು ಒಟ್ಟಾರೆ ಘನಲಿಂಗಿಗಳ ವಚನಗಳನ್ನೆಲ್ಲ ತೂಗಿ ಬೆಲೆಕಟ್ಟಿವೆ ಎನ್ನಬಹುದು! 'ಅವರ ಹಲವು ವಚನಗಳು ಉತ್ತಮ ಭಾವಗೀತೆಗಳಾಗಿದ್ದು ಮಿಡಿದರೆ ಸಾಕು, ರಸವೊಸರುವ ರಸದಾಳಿ ಕಬ್ಬಿನ ಗಣೆಯಂತಿವೆ. ಅವುಗಳಲ್ಲಿ ವಿಡಂಬನೆಯಿದೆ, ಖಂಡನೆಯಿದೆ, ಧ್ಯಾನವಿದೆ, ಪ್ರಾರ್ಥನೆಯಿದೆ, ದಿವ್ಯದ ಹಂಬಲವಿದೆ; ಬೆಡಗೂ ಇದೆ. ಘನಲಿಂಗದೇವರ ಆವೇಶವೆಲ್ಲ ಪರೋಪದೇಶದಲ್ಲಿ ವೆಚ್ಚವಾಗದೆ ಆತ್ಮಪರೀಕ್ಷೆಯಲ್ಲೂ ಅಂತರಂಗ ವೀಕ್ಷಣೆಯಲ್ಲೂ ವಿನಿಯೋಗವಾಗಿದೆ. ಅವರ ವಚನಗಳಲ್ಲಿನ ಉಳಿದ ಪಾಲು ಸುಧಾರಕರನ್ನು ಸುಧಾರಿಸುವ ಸಲುವಾಗಿ ಮೀಸಲಾಗಿದೆ.'[2]

## ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳವರು–ಕ್ರಿ.ಶ. ಸು. ೧೫೫೦-೧೫೮೯

ದುರಿತನಿಚಯಧ್ವಾಂತ ಭಾಸ್ಕರ
ಪರಮಗತಿ ಕುವಲಯ ಸುಧಾಕರ
ಸುರುಚಿರಾಮಳತನು ವಿಶಾರದ ಭಕ್ತಮಂದಾರ
ಶರಣಲೋಕ ಪ್ರೇಮಿ...............[3]

ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳು ಘನಲಿಂಗಿಗಳ ತರುವಾಯ ಸುತ್ತೂರು ಪೀಠವನ್ನು ಅಲಂಕರಿಸಿದ ಹನ್ನೆರಡನೆಯ ಜಗದ್ಗುರುಗಳವರು. ಇವರು "ವೃಷಭೇಂದ್ರ ವಿಜಯಪುರಾಣ" ಎಂಬ ಪ್ರೌಢಗ್ರಂಥವೊಂದನ್ನು ಬರೆದಿರುವಂತೆ ತಿಳಿಯುತ್ತದೆ. ಇದು ಬೆಳಕಿಗೆ ಬಂದಿಲ್ಲ. 'ಕರ್ಣಾಟಕ ಕವಿಚರಿತೆಯ ಮೂರು ಸಂಪುಟಗಳಲ್ಲಿಯೂ ಉಕ್ತವಾಗದೆ ಇರುವ ಗ್ರಂಥಗಳನ್ನು ನಮಗೆ ತಿಳಿದಮಟ್ಟಿಗೆ ಈ ಅನುಬಂಧದಲ್ಲಿ ಕೊಟ್ಟಿದ್ದೇವೆ' ಎಂದು ಹೇಳಿ ಕವಿಚರಿತ್ರೆಕಾರರು ಇದನ್ನು ಉಲ್ಲೇಖಿಸಿದ್ದಾರೆ.[4]

## ಗುರು ಚನ್ನಬಸವ ಶಿವಾಚಾರ್ಯರು–ಕ್ರಿ.ಶ. ಸು. ೧೬೪೦-೧೭೧೩

ಸುತ್ತೂರು ಶ್ರೀ ವೀರಸಿಂಹಾಸನ ಜಗದ್ಗುರು ಪರಂಪರೆಯಲ್ಲಿ ಬಂದ ಹದಿನೈದನೆಯವರಾದ ಶ್ರೀಗುರು ಚನ್ನಬಸವ ಶಿವಾಚಾರ್ಯರು ಘನ ವಿದ್ವಾಂಸರಾಗಿದ್ದು ಅನೇಕ ಮಂದಿ ಕವಿ-ವಿದ್ವಾಂಸರಿಗೆ ಮನ್ನಣೆ ಆಶ್ರಯಗಳನ್ನು ನೀಡಿದ್ದರು. ಶ್ರೀಮಠದ ಪಂಡಿತ ಮಂಡಲಿಯಲ್ಲಿ ಪ್ರಮುಖರಾದವರು ಶ್ರೀಗಳವರ ಸಹಪಾಠಿಗಳೂ ಪ್ರಸಿದ್ಧ ಕವಿಗಳೂ ಆದ ಸೋಸಲೆ ರೇವಣಾಚಾರ್ಯ ಅಥವಾ ರೇವಣಾರಾಧ್ಯರು. ಇವರು ರಚಿಸಿದ ಚೋಳ-ರೇಣುಕ ಸಂವಾದಾತ್ಮಕವಾದ 'ಶಿವಾಧಿಕ್ಯ ಶಿಖಾಮಣಿ' ಸಂಸ್ಕೃತ ಗ್ರಂಥವನ್ನು ನೋಡಿ ಮೆಚ್ಚಿಕೊಂಡ ಗುರುಗಳವರು ಮಠದ ಶಿಷ್ಯ ಮುದಿಗೆರೆ ರಘುವಪ್ಪನಾಯಕನ ಪ್ರಾರ್ಥನೆಯಂತೆ ಅದಕ್ಕೆ ಕನ್ನಡದಲ್ಲಿ ಟೀಕೆಯನ್ನು ಬರೆಯಿಸಿದಂತೆ ತಿಳಿದುಬರುತ್ತದೆ. ಈ 'ಶಿವಾಧಿಕ್ಯ ಶಿಖಾಮಣಿ ಟೀಕೆಯನ್ನು ಕಳಲೆ ಕೆಂಪನಂಜಾರ್ಯ, ನಮಸ್ಕಾರಪುರೀ ಸಿದ್ಧನಂಜಾರ್ಯ, ಸುತ್ತೂರು ಸಿಂಹಾಸನದ ಗುರುನಂಜಾರ್ಯನ ಶಿಷ್ಯ ಚೆನ್ನಬಸವ—ಈ ಮೂವರುಗಳ ಇಷ್ಟಾನುಸಾರವಾಗಿ ಬರೆದಂತೆ' ರೇವಣಾರಾಧ್ಯರು ಹೇಳುತ್ತಾರೆ.[5]

ಗುರು ಚನ್ನಬಸವ ಶಿವಾಚಾರ್ಯರ ಸನ್ನಿಧಿಯಲ್ಲಿ ಸಮಾವೇಶಗೊಂಡಿದ್ದ ಪಂಡಿತಸಭೆಯಲ್ಲಿ ಕವಿಗಳಾದ ಸೋಸಲೆ ರೇವಣಾರಾಧ್ಯರು 'ಶಿವಾಧಿಕ್ಯ ಶಿಖಾಮಣಿ'ಯನ್ನು ಪಠಿಸಿದಾಗ 'ಮೊದಲಿಂದಲಿ ತುದಿಯ ಪರಿಯಂತರವು ಮೆಚ್ಚಿದ' ಗುರುಗಳವರು.

---

[1] ಶರಣಚರಿತಾಮೃತ: ಪುಟ ೬೪೨

[2] ಘನಲಿಂಗದೇವರ ವಚನಗಳು; ಪೀಠಿಕೆ, ಪುಟ ೭

[3] ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ; ೧೨-೫

[4] ಕರ್ಣಾಟಕ ಕವಿಚರಿತೆ: ಮೂರನೆಯ ಸಂಪುಟ: ಅನುಬಂಧ, ಪುಟ ೪೩೦

[5] ಕರ್ಣಾಟಕ ಕವಿಚರಿತೆ: ದ್ವಿತೀಯ ಸಂಪುಟ; ಪುಟ ೩೬೫

ಪರಮ ಕಾವ್ಯದಲಿಹ ರಹಸ್ಯವ
ನಿರದೆ ವಿವರಿಸುತರ್ಥವನು ನೀ
ಬರೆವುದೆಂದೆನಲು.. ............
ವರಕವಿಯು ತಾನೊಪ್ಪಿದನು ಗುರು
ವರನು ಸಮ್ಮಾನಿಸಿದನವನನು
ನೆರೆದ ಸಭೆಯಲಿ ಪಾರಿತೋಷಕ ವಸ್ತುಚಯದಿಂದ[1]

## 'ಶಿವಮಂತ್ರ ದ್ರಷ್ಟಾರ'

## ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು–೧೮೮೬–೧೯೩೮

ಬೃಹತ್ತರ ಇತಿಹಾಸದ ಹಿನ್ನೆಲೆಯುಳ್ಳ ಸುತ್ತೂರು ಶ್ರೀ ಬೃಹನ್ಮಠದ ಪೀಠಾಧಿಕಾರದ ಸೂತ್ರಗಳನ್ನು ಹಿಡಿದು ಅದರ ಲೌಕಿಕಪಾರಮಾರ್ಥಿಕ ಸಂಪತ್ತನ್ನು ಅತ್ಯಧಿಕವಾಗಿ ಬೆಳೆಸಿ ಮಹತ್ಕಾರ್ಯಗಳನ್ನೆಸಗಿದ ಮಹಾನುಭಾವರೆಂದರೆ ಪೀಠದ ಇಪ್ಪತ್ತೆರಡನೆಯ ಅಧಿಪತಿಗಳಾದ ಜಗದ್ಗುರು ಶಿವಯೋಗಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು. ಕಾರ್ಯದ ಮಠದ ಕಾರಣಿಕ ಪುರುಷರಾದ ಶ್ರೀ ಪ್ರಭುಸ್ವಾಮಿಗಳವರಲ್ಲಿ ವೇದ, ಶಾಸ್ತ್ರ, ಪುರಾಣ, ಜ್ಯೋತಿಷ ಮತ್ತು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಶೇಷ ಶಿಕ್ಷಣಪಡೆದ ಇವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಪಟ್ಟಾಧಿಕಾರವನ್ನು ವಹಿಸಿಕೊಂಡು ತಮ್ಮ ಕರ್ತವ್ಯದಕ್ಷತೆ—ಲಿಂಗಪೂಜಾ ತಪೋಘನತೆಯಿಂದ ಶ್ರೀಮಠವನ್ನು ಮುನ್ನಡೆಸಿ ಉತ್ತಮ ಸ್ಥಿತಿಗೆ ತಂದರು. ಸಾಹಿತ್ಯಪ್ರೇಮಿಗಳೂ ಆದ ಶ್ರೀಗಳವರು ಸಂಸ್ಕೃತ-ಕನ್ನಡ-ಉಭಯ ಭಾಷೆಗಳಲ್ಲಿಯೂ ಹೆಚ್ಚಿನ ಪಾಂಡಿತ್ಯವನ್ನು ಗಳಿಸಿದ್ದರು. ಕವಿಗಳಿಗೆ, ಕಲಾವಿದರಿಗೆ ವಿಶೇಷ ಪ್ರೋತ್ಸಾಹವನ್ನಿತ್ತು ಅವರುಗಳಿಂದ ಸಾರವತ್ತಾದ ಕೃತಿಗಳು ಕನ್ನಡಕ್ಕೆ ದೊರಕುವಂತೆ ಸ್ಫೂರ್ತಿಯನ್ನಿತ್ತರು. ಅಷ್ಟೇ ಅಲ್ಲದೆ, ತಾವೇ ಸ್ವತಃ ಕೃತಿಕಾರರಾಗಿ ಕನ್ನಡ ವಾಙ್ಮಯಕ್ಕೆ ವಿಶಿಷ್ಟ ಕೊಡುಗೆಗಳನ್ನೂ ಕೊಟ್ಟರು.

ಜಗದ್ಗುರು ಶ್ರೀಶಿವರಾತ್ರಿ ಮಹಾಸ್ವಾಮಿಗಳವರು ಶ್ರೀಪೀಠದ ಪರಂಪರೆಗೆ, ತನ್ಮೂಲಕ ಸಾಹಿತ್ಯಕ್ಷೇತ್ರಕ್ಕೆ ಸಲ್ಲಿಸಿದ ಸಂಸ್ಮರಣೀಯ ಸೇವೆಯೆಂದರೆ ಸುತ್ತೂರು ಶ್ರೀ ವೀರಸಿಂಹಾಸನದ ಸಮಗ್ರವಾದ ಪೂರ್ವೇತಿಹಾಸವು ಪ್ರಪ್ರಥಮ ಬಾರಿಗೆ ಸಮಾಜಕ್ಕೆ ದೊರಕುವಂತೆ ಮಾಡಿದುದು. ಪೀಠದಲ್ಲಿ ಬಂದ ಪ್ರಾಚೀನ ಶಿವಾಚಾರ್ಯರುಗಳು ತಮ್ಮ ಜೀವನ ಚರಿತ್ರೆಯನ್ನಾಗಲಿ ಶ್ರೀಮಠದ ಇತಿಹಾಸವನ್ನಾಗಲಿ ಬರೆದಿಡಲು ಹೋಗಲಿಲ್ಲ. ಅವರುಗಳಿಗೆ ಅದರ ಅಗತ್ಯವೂ ಇರಲಿಲ್ಲವೆಂದು ಕಾಣುತ್ತದೆ. ಆದರೆ ಇಂದಿನ ಯುಗದಲ್ಲಿ ಯಾವುದೇ ಸಂಸ್ಥೆಯಾಗಲಿ ಅದರ ಚರಿತ್ರೆಗೆ, ಇತಿಹಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತದೆ. ಇದನ್ನು ಅರಿತ ಶ್ರೀಗಳವರು ತಮ್ಮ ಮಠದ ಇತಿಹಾಸ ಶೋಧನೆಗೆ ಅವಿರತ ಪ್ರಯತ್ನ ನಡೆಸಿದರು. ಜೊತೆಗೆ ಹತ್ತಿರವಿದ್ದ ಕ್ಯಾತನಹಳ್ಳಿ ಸಾಹುಕಾರ್ ಶ್ರೀ ಸಿದ್ಧಲಿಂಗಯ್ಯನವರೇ ಮೊದಲಾದ ಹಿರಿಯ ಭಕ್ತರು, ಪ್ರಮುಖ ಶಿಷ್ಯರು ಅದಕ್ಕಾಗಿ ಒತ್ತಾಯಪಡಿಸುತ್ತಲೂ ಇದ್ದರು. ಇದರಿಂದಾಗಿ ಶ್ರೀಗಳವರು ಪೀಠದ ಇತಿಹಾಸಕ್ಕೆ ಸಂಬಂಧಿಸಿದ ಚಾರಿತ್ರಿಕ ಸಾಧನ ಸಾಮಗ್ರಿಗಳನ್ನೂ ಪುರಾತನ ಶಿಲಾಶಾಸನಗಳನ್ನೂ ಪೀಠದ ಹಳೆಯ ಕಾಗದ ಪತ್ರಗಳನ್ನೂ ಎಲ್ಲ ಕಡೆಯಿಂದಲೂ ಸಂಗ್ರಹಿಸಿ ಒದಗಿಸಿಕೊಟ್ಟರು. ಶ್ರೀಗಳವರ ಕೃಪಾಶ್ರಯದಲ್ಲಿಯೇ ಇದ್ದ ಘನಪಂಡಿತರೂ ಶ್ರೇಷ್ಠ ಕವಿಗಳೂ ಆದ ಕುಂತೂರಿನ ಶ್ರೀ ಸಿ. ಸಂಗಪ್ಪಶಾಸ್ತ್ರಿಗಳವರಿಂದ 'ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ' (೧೯೩೩) ಎಂಬ ಕಾವ್ಯ ಭಾಮಿನಿ ಷಟ್ಪದಿಯಲ್ಲಿ ಮೂಡಿಬಂದಿತು. ಕಾವ್ಯವನ್ನು ರಚಿಸಿದ ಬಗೆಗೆ ಕವಿಗಳಾದ ಸಂಗಪ್ಪಶಾಸ್ತ್ರಿಗಳು 'ಶ್ರೀಗಳವರು ಮಠದಿಂದ ದಯಪಾಲಿಸಿದ ಶಾಸನ, ಸನ್ನದುಗಳ ಆಧಾರಗಳಿಂದಲೂ ಈ ಪೀಠದ ಹಿಂದಿನ ಗುರುಗಳು ಬರೆದಿರತಕ್ಕ ಗ್ರಂಥಾಧಾರಗಳಿಂದಲೂ ಮತ್ತು ಅವರು ಆಯಾ ಸ್ಥಳಗಳಲ್ಲಿ ಮಹಿಮೆಗಳನ್ನು ತೋರಿಸಿ ಪ್ರಸಿದ್ಧವಾಗಿರುವ ಇತಿಹಾಸಗಳಿಂದಲೂ ಈ ಗ್ರಂಥವನ್ನು ಬರೆದಿರುತ್ತೇನೆ' ಎಂಬುದಾಗಿ 'ಕವಿ ನಿವೇದನ'ದಲ್ಲಿ ಹೇಳಿಕೊಂಡಿದ್ದಾರೆ. ಈ ಕೃತಿಯು ಮುಂದಿನ ಚರಿತ್ರಕಾರರಿಗೆ ಹೊಸದೊಂದು ಸ್ಫೂರ್ತಿಯನ್ನು ಕೊಟ್ಟಿತು. ಇದನ್ನೇ ಆಧರಿಸಿ ಇದುವರೆಗೆ ದೊರಕಿದ ಇನ್ನೂ ಹೆಚ್ಚಿನ ದಾಖಲೆಗಳನ್ನು ಸೇರಿಸಿ ಸುತ್ತೂರು ಶ್ರೀ ವೀರಸಿಂಹಾಸನದ ಚರಿತ್ರೆಯನ್ನು 'ಶಿವರಾತ್ರಿ ಶಿವಾಚಾರ್ಯ' ಎಂಬ ಗದ್ಯಕಾವ್ಯ (೧೯೬೧)ದಲ್ಲಿ ಸುಂದರವಾಗಿ ನೀಡಿದವರು ಆಸ್ಥಾನ ವಿದ್ವಾನ್ ಶಿವಾದ್ವೈತ ವಿದ್ಯಾಭೂಷಣ, ಸಾಹಿತ್ಯರತ್ನಂ ಶ್ರೀ

[1] ಶ್ರೀ ಸುತ್ತೂರು ಸಿಂಹಾಸನದ ಗುರು ಪರಂಪರೆ : ೧೫–೮

ಎಂ. ಜಿ. ನಂಜುಂಡಾರಾಧ್ಯರು. ಶ್ರೀಮಠದ ಪ್ರಾಚೀನ ಇತಿಹಾಸವನ್ನು ಪರಿಚಯ ಮಾಡಿಕೊಡುವಲ್ಲಿ ಮೇಲೆ ಹೇಳಿದ ಈ ಎರಡು ಕೃತಿಗಳು ಬಹು ಮುಖ್ಯವಾದುವು. ಘನವಿದ್ವಾಂಸರೂ ಕವಿಗಳೂ ಆದ ಈ ಈರ್ವರು ಮಾಹನೀಯರುಗಳಿಂದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸಂಸ್ಥಾನದ ಅನುಪಮ ಚರಿತ್ರೆಯನ್ನು ಬರೆಯಿಸಿ ಪ್ರಕಾಶಗೊಳಿಸಿ ಜನತೆಗೆ ಶ್ರೀಮಠದ ಭವ್ಯ ಇತಿಹಾಸವನ್ನೊದಗಿಸಿದ ಮಹತ್ಕೀರ್ತಿ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರದಾಗಿದೆ.

ಶಿವಾನುಭವ ಸಾಹಿತ್ಯಕ್ಕೆ, ಕನ್ನಡದ ತತ್ತ್ವಭಂಡಾರಕ್ಕೆ ಶ್ರೀಗಳವರು ನೀಡಿರುವ ಕೊಡುಗೆ ಅತ್ಯಮೋಘ ವಾದುದು. 'ಶಿವಮಂತ್ರ ಮಹಿಮೆ' ಎಂಬ ಮಹತ್ಕೃತಿಯನ್ನು ಕನ್ನಡದಲ್ಲಿ ರಚಿಸಿ ಮುಮುಕ್ಷುಗಳಿಗೆ ಮಾರ್ಗದರ್ಶನ ಮಾಡಿರುವುದು ತುಂಬಾ ಗಮನಾರ್ಹವಾದುದು. ಈ ಕೃತಿಯು ಮೂಡಿಬಂದುದಕ್ಕೆ ಪವಾಡಸದೃಶವಾದ ಒಂದು ಹಿನ್ನೆಲೆಯೂ ಇದೆ. ಅದೆಂದರೆ ಒಮ್ಮೆ ಶ್ರೀಗಳವರು ಅನಾರೋಗ್ಯದಿಂದ ಇದ್ದಾಗ, ಇನ್ನೇನು ಆಯುಃಪ್ರಮಾಣವೇ ಮುಗಿಯಿತೆಂದು ಹೇಳುತ್ತಿದ್ದ ಹೊತ್ತಿನಲ್ಲಿ ಈ ಸುದ್ದಿಯನ್ನು ತಿಳಿದು ಶ್ರೀಗಳವರನ್ನು ಕಾಣಲು ಸುತ್ತೂರಿಗೆ ದಯ ಮಾಡಿಸಿದ, ಮೈಸೂರು ಅರಮನೆಯ ಪಂಚಗವೀಮಠಾಧ್ಯಕ್ಷರೂ ಶಿವಯೋಗ ಸಮ್ರಾಟರೂ ಆದ ಪರಮಪೂಜ್ಯ ಶ್ರೀ. ನಿ. ಪ್ರ. ಸ್ವ. ಶ್ರೀ ಗೌರೀಶಂಕರ ಮಹಾಸ್ವಾಮಿಗಳವರು ಶ್ರೀಮಠದಲ್ಲಿ ಸೇರಿದ್ದ ಭಕ್ತಾದಿಗಳಿಗೆಲ್ಲ ಅಭಯ ವನ್ನಿತ್ತು ಶ್ರೀಗಳವರಿಗೆ ಪ್ರಣವ ಪಂಚಾಕ್ಷರೀ ಮಹಾಮಂತ್ರಲೇಖನ ತಪಸ್ಸನ್ನು ಕೈಕೊಳ್ಳಬೇಕೆಂದು ದಿವ್ಯಪ್ರೇರಣೆ ಯನ್ನಿತ್ತು ಮಂತ್ರಲೇಖನ ತಪಸ್ಸಿನಲ್ಲಿ ತೊಡಗಿಸಿದರು. ಅದರಂತೆ ಅಂದಿನಿಂದ ಮೊದಲುಗೊಂಡು ಶಿವನೊಡನೆ ಕೂಡುವ ಕೊನೆಯ ಕ್ಷಣದವರೆಗೂ ಅಖಂಡವಾಗಿ ಮಹಾಮಂತ್ರಲೇಖನ ತಪಸ್ಸನ್ನು ನಡೆಸಿ 'ಮಂತ್ರ ಮಹರ್ಷಿ' ಗಳೆನಿಸಿದರು. 'ಹಗಲಿರುಳು ಮಂತ್ರವನು ಬರೆಬರೆದು ಜೀವನವ ಬಗೆಗೊಳಿಸಿ ಮಂತ್ರಮಯರಾಗಿದ್ದು 'ಶಿವಮಂತ್ರ ಬರೆಯುತಲೆ ಬಯಲಾದ' ಮಹಿಮಾಪುರುಷರಾದರು. ಲೋಕಹಿತಾರ್ಥವಾಗಿ ಷಟ್ಕೋಟಿ ಮಹಾಮಂತ್ರಗಳನ್ನು ಬರೆದು ಪವಿತ್ರ ಕೃತಿಗಳಾದ ಆ ಮಹಾಮಂತ್ರ ಸಂಪುಟಗಳನ್ನು ಶ್ರೀಮಠದಲ್ಲಿ ಸಂಸ್ಥಾಪಿಸಿ ಅಪೂರ್ವವೂ ಅಕ್ಷಯವೂ ಆದ ಅಮೂಲ್ಯನಿಧಿಯೆನಿಸಿದ ಮಹಾಮಂತ್ರ ಸಂಪತ್ತನ್ನು ಲೋಕೋದ್ಧಾರಕ್ಕಾಗಿ ಧಾರೆಯೆರೆದು ಶ್ರೀಕ್ಷೇತ್ರದ ಮಹಿಮೆಯನ್ನು ದಿಗಂತ ವಿಶ್ರಾಂತಗೊಳಿಸಿದರು. ಇದರಿಂದ ಶ್ರೀಪೀಠದ ಆಧ್ಯಾತ್ಮಿಕ ಸಂಪತ್ತು ಅತ್ಯಧಿಕವಾಗಿ ಪ್ರಕಾಶಗೊಂಡಿತು. ಇಂದು ಶ್ರೀ ಸುತ್ತೂರು ಜಗದ್ಗುರು ಪೀಠದಿಂದ ಸಕಲ ಜೀವಾವಳಿಯ ಲೇಸು ಲೇಸಾಗಿ ಅಗಾಧ ಪ್ರಮಾಣದಲ್ಲಿ ನಡೆಯುತ್ತಿರುವುದು ಶ್ರೀಗಳವರ ಮಹಾಮಂತ್ರ ತಪಸ್ಸಿನ ಫಲದಿಂದಾಗಿಯೆಂದು ಹೇಳಬಹುದು.

ಶ್ರೀಗಳವರಿಂದ ರಚಿತವಾದ ಈ ಮಹಾಮಂತ್ರ ಸಂಪುಟಗಳನ್ನು ಸಂದರ್ಶಿಸಿದ ನಾಡಿನ ಮಹಾನುಭಾವರ-ನೇಕರು ಆಶ್ಚರ್ಯಚಕಿತರಾಗಿ, ಮಂತ್ರಮುಗ್ಧರಾಗಿ ತಮಗಾದ ಮಹದಾನಂದವನ್ನು ಹೃದಯತುಂಬಿ ಆಗಾಗ್ಗೆ ವ್ಯಕ್ತಪಡಿಸಿದ್ದಾರೆ. ಅಂತಹ ಅಸಂಖ್ಯಾತ ಅಭಿಮತಗಳಲ್ಲಿ ಉದಾಹರಣೆಗಾಗಿ ಒಂದನ್ನು ಉಲ್ಲೇಖಿಸಬಹುದಾಗಿದೆ, ಈ ಸಂದರ್ಭದಲ್ಲಿ. ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಶ್ರೀಗಳವರು ನಡೆಸುತ್ತಿದ್ದ ಮಹಾಮಂತ್ರಲೇಖನ ತಪಸ್ಸನ್ನು ಕಣ್ಣಾರೆ ಕಂಡು ಮನವಾರೆ ಮೆಚ್ಚಿ ಬರೆಯುತ್ತಾರೆ:

"ಈ ಸಂಸ್ಥೆಯನ್ನು ಶ್ರೀಗಳ ತಪಃಪ್ರಭಾವ, ಅನಾಸಕ್ತಿ ಇವು ನಡೆಸುತ್ತಿವೆ. ಶಿವಭಕ್ತಿ, ಲಕ್ಷ ಜನ ಮಾಡ ಲಾಗದ ಕಾರ್ಯ ಮಾಡುತ್ತದೆ. ಯಾವುದು ಸಾಮಾನ್ಯ ಜನರಿಗೆ ನಿರುಪಯುಕ್ತವಾಗಿ ತೋರುವುದೋ ಅದೇ ಲೋಕಕ್ಕೆ ಕಲ್ಯಾಣ ಮಾಡುತ್ತದೆ. ಹರಿಶ್ಚಂದ್ರ ರಾಜ್ಯವನ್ನು ವಿಶ್ವಾಮಿತ್ರನಿಗೆ ಕೊಟ್ಟುದು, ಸಾಮಾನ್ಯರಿಗೆ ಹೆಡ್ಡತನ ವಾಗಿ ತೋರುತ್ತದೆ. ಆದರೆ ಜಗತ್ತಿಗೆ ಕಲ್ಯಾಣವಾಗಿರುವುದು ಅದರಿಂದಲೇ. ಶ್ರೀಗಳವರು ಬರೆದಿರುವ ಎರಡು ಆಳು ಹೊರಬೇಕಾದ ಇಪ್ಪತ್ತೆರಡು ವಾಲ್ಯೂಮ್ ಶಿವಮಂತ್ರ, ಮಾಡಿದ್ದಕ್ಕೆಲ್ಲ ಪ್ರತಿಫಲಬೇಕೆನ್ನುವ ಆಧುನಿಕನಿಗೆ ಬರಿಯ ವ್ಯರ್ಥವಾಗಿ ತೋರಿದರೂ ತೋರಬಹುದು. ಆದರೆ ಈ ಜಗತ್ತು ಉಳಿದಿರುವುದು, ಈ ಜಗತ್ತಿನ ಕಲ್ಯಾಣ ವಾಗುತ್ತಿರುವುದು ಇದರಿಂದ. ಇದು ಅಣುಬಾಂಬಿಗಿಂತ ಹೆಚ್ಚು ಶಕ್ತಿ. ಆದರೆ ಅಣುಬಾಂಬು ನಾಶಮಾಡುತ್ತದೆ. ಶಿವನಾಮ ರಕ್ಷಣೆಕೊಡುತ್ತದೆ.

ಇಂತಹ ಸಂಸ್ಥೆಗಳನ್ನು ನೋಡುವುದರಿಂದ ಭಾರತದ ಹಿನ್ನೆಲೆ, ಋಷಿಗಳ ಧರ್ಮ, ಆಶ್ರಮ, ಸತ್ಯ ಇವು ಜ್ಞಾಪಕಕ್ಕೆ ಬಂದು ನಿಜವಾದ ಭಾರತ ಹೃದಯ ಇಲ್ಲಿರುವುದು ಕಾಣುತ್ತದೆ."[1]

[1] ಆಶೀರ್ವಾದ: ಪುಟ ೧೭೫.

## 'ಶಿವಮಂತ್ರ ಮಹಿಮೆ'

ಇದು ಕೈವಲ್ಯಾಪೇಕ್ಷಿಗಳಿಗೆ ಶಿವಯೋಗಿಗಳವರು ಕರುಣಿಸಿಕೊಟ್ಟಿರುವ ಒಂದು ಕೈದೀವಿಗೆ. ಶಿವಮಂತ್ರದ ವಿಚಾರದಲ್ಲಿ ಶಿವಾನುಭಾವಿಗಳಾದ ಅನೇಕ ಮಹನೀಯರ ಅನುಭವದ ಜ್ಞಾನಸಾರಾಮೃತವನ್ನು ಒಂದೆಡೆ ಸಂಗ್ರಹಿಸಿ ತುಂಬಿಕೊಟ್ಟಿರುವ ಒಂದು ಜೇಂಗೊಡ. ವೇದೋಪನಿಷತ್ತು ಶಾಸ್ತ್ರಾಗಮ ಪುರಾಣಾದಿಗಳಿಂದ ಹಿಡಿದು ಋಷಿ ಕವಿಗಳ ಕಾವ್ಯಾದಿಗ್ರಂಥಗಳಲ್ಲಿ ಬಂದಿರುವ ಶಿವಮಂತ್ರದ ಮಹಿಮೆಗಳನ್ನು ಅರ್ಥವಿವರಣೆಗಳೊಂದಿಗೆ ವಿವರಿಸಿರುವ ಮತ್ತು ತತ್ತ್ವಾಭಿಮಾನಿಗಳಿಗೆ ತುಂಬ ಮೆಚ್ಚು ಎನಿಸಿರುವ ಒಂದು ಅನರ್ಘ್ಯ ಕೃತಿ ಇದು. ಶಿವಮಂತ್ರ ಮಹಿಮೆಯು ಶ್ರೀಸಾಮಾನ್ಯರಿಗೂ ಸುಲಭಗ್ರಾಹ್ಯವಾಗುವಂತೆ ಸರಳಸುಂದರವಾಗಿ ಬರೆದಿರುವ ಅಪೂರ್ವ ಕೃತಿ ಇದು.

ಶ್ರೀಯಂ ಪಡೆವೊಡೆ ಶಾಶ್ವತ
ದಾಯುಷ್ಯದಪೇಕ್ಷೆ ತನಗೆ ಕೈಗೂಡುವೊಡಾ
ಮಾಯೆಗೊಳಗಾಗದಿರ್ಪೊಡೆ
ಜೀಯನೆ ಜಪವೋಂ ನಮಶ್ಶಿವಾಯೆಂಬ ಪದಂ

ಎಂದು ಮೊದಲಾಗುವ ಶಿವಾನುಭವಿ ಕೊಂಡಗುಳಿ ಕೇಶಿರಾಜನ ಷಡಕ್ಷರ ಮಂತ್ರಮಹಿಮೆಯನ್ನು ತಾತ್ಪರ್ಯಾದಿ ಗಳೊಡನೆ ವಿವರಿಸಿರುವುದರ ಜೊತೆಗೆ ಮಹಾಕವಿ ಹರಿಹರದೇವ ವಿರಚಿತ ಪಂಚಾಕ್ಷರ ರಗಳೆ, ನಮಃಶಿವಾಯ ರಗಳೆ ಗಳನ್ನೂ ಶಿವಕವಿ ಶಂಕರದೇವ ವಿರಚಿತ ಷಡಕ್ಷರ ರಗಳೆಯನ್ನೂ ಸೇರಿಸಿ ವಿವೇಕಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಗಣಭಾಷಿತ ರತ್ನಮಾಲೆ, ರಾಜಶೇಖರ ವಿಳಾಸ ಮೊದಲಾದ ಉದ್ಗ್ರಂಥಗಳಿಂದ ಆಧಾರಗಳನ್ನು ಸಂಗ್ರಹಿಸಿಕೊಟ್ಟು ಸ್ವಾನುಭವದ ಸಿಹಿಯನ್ನೆರೆದು 'ಅನುಭಾವದಡಿಗೆಯ ಮಾಡಿ' ನೀಡಿರುವ ಮಂಗಳ ಕೃತಿ ಇದು.

ಈ ಅಮೂಲ್ಯ ಕೃತಿರತ್ನವನ್ನು ಮೆಚ್ಚಿ ಡಾ. ಬಿ. ಶಿವಮೂರ್ತಿಶಾಸ್ತ್ರಿಗಳವರು ಬರೆದಿರುವ ಮಾತುಗಳು ಮನನೀಯವಾಗಿವೆ: 'ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯಬೇಕೆನ್ನುವವರೂ ಮೋಕ್ಷಾಕಾಂಕ್ಷಿಗಳೂ ಲೌಕಿಕಸಿದ್ಧಿಗಳನ್ನು ಬಯಸುವವರೂ, ಆಯುರಾರೋಗ್ಯಭಾಗ್ಯಗಳನ್ನು ಬಯಸುವವರೂ, ಭೂತ ಪಿಶಾಚಿಗಳ ಬಾಧೆಯಿಂದ ಪಾರಾಗ ಬಯಸುವವರೂ, ಈ ಮಹಾಮಂತ್ರವನ್ನು ಸ್ಮರಿಸುವುದು, ಜಪಿಸುವುದು ಲಾಭಪ್ರದವಾದುದು. ಈ ಅಮೋಘವಾದ ವಿಚಾರಗಳನ್ನೇ 'ಶಿವಮಂತ್ರ ಮಹಿಮೆ' ಎಂಬ ಗ್ರಂಥದಲ್ಲಿ ಶಾಸ್ತ್ರ ಮತ್ತು ಅನುಭವ ಸಮ್ಮತವಾಗಿ ಹೇಳಲಾಗಿದೆ.'[1]

ಶ್ರೀ ಶಿವಯೋಗಿಗಳವರ ಪ್ರಣವ ಪಂಚಾಕ್ಷರಿ ಮಹಾಮಂತ್ರಲೇಖನ ತಪಸ್ಸಿನ ದಿವ್ಯಪ್ರಭಾವಕ್ಕೆ ಆಕರ್ಷಿತ ರಾದ ಆದರ್ಶ ರಾಜರ್ಷಿಗಳೆನಿಸಿದ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ಶ್ರೀಮಠದ ಅಚ್ಚುಮೆಚ್ಚಿನ ಆತ್ಮೀಯ ಶಿಷ್ಯರಾಗಿ ತಮ್ಮ ಅನನ್ಯ ಗುರುಭಕ್ತಿಯನ್ನು ಶ್ರೀಮಠದ ಇತಿಹಾಸದಲ್ಲಿ ಶಾಶ್ವತಗೊಳಿಸಿ, ಶ್ರೀಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದುದು ಸರ್ವವಿದಿತವಾದುದು. ಅವರು ತಮ್ಮ ಗುರುವರ್ಯರಿಂದ ರಚಿತವಾದ 'ಶಿವಮಂತ್ರ ಮಹಿಮೆ' ಕೃತಿಗೆ ಸಂದೇಶವೊಂದನ್ನು ನೀಡುತ್ತಾ ತಮಗಾದ ಅಪಾರ ಸಂತೋಷವನ್ನು ಈ ರೀತಿ ವ್ಯಕ್ತಪಡಿಸಿರುವರು—'ಪೂಜ್ಯ ಶ್ರೀ ಜಗದ್ಗುರುಗಳವರಿಂದ ರಚಿತವಾದ ಹಲ ವಾರು ಮಂತ್ರ ಕೃತಿಗಳ ಸಂದರ್ಶನ ಮಾಡಿ ನಾವು ಆನಂದಪಟ್ಟಿದ್ದೇವೆ...ನೂರಾರು ಗ್ರಂಥಗಳಲ್ಲಿರುವ ಷಡಕ್ಷರ ಮಹಾಮಂತ್ರದ ವಿಷಯಗಳನ್ನು ಒಂದೆಡೆಗೆ ಸೇರಿಸಿ ಹಸನಾದ ಹೊಸ ಪೂಮಾಲೆಯನ್ನು ಮಾಡಿ ಕನ್ನಡ ಜನತೆಗೆ ನೀಡಿದ್ದಾರೆ.'

### ತ್ರಿವಿಧ ದಾಸೋಹಮೂರ್ತಿ

## ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಸುತ್ತೂರು ಶ್ರೀ ಜಗದ್ಗುರು ಪೀಠದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವಾಕ್ಷೇತ್ರಗಳನ್ನು ನಾಡಿನ ಉದ್ದಗಲಕ್ಕೂ ವಿಸ್ತರಿಸಿ, ಸಂಸ್ಥಾನ ಮಠದ ಧವಲಕೀರ್ತಿಯನ್ನು ವಿಶ್ವದಗಲಕ್ಕೂ ಹಬ್ಬಿಸಿ, ಪ್ರಪಂಚದ ಎಲ್ಲ ಮಾನವಕುಲದ ಕಲ್ಯಾಣಕ್ಕಾಗಿ ಅವಿಶ್ರಾಂತ ದುಡಿಮೆಯ ಪವಿತ್ರ ಕಾಯಕದಲ್ಲಿ ನಿರತರಾಗಿರುವ ಶ್ರೀಮನ್ಮಹಾ ರಾಜ ರಾಜಗುರುತಿಲಕ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಇಂದು

1 ಶಿವಮಂತ್ರ ಮಹಿಮೆ–ಪ್ರಸ್ತಾವನೆ: ಪುಟ ೧೧

ಸುತ್ತೂರು ವೀರಸಿಂಹಾಸನಾಧೀಶ್ವರರಾಗಿ, ವಿಶ್ವಮಾನ್ಯರಾಗಿ ವಿರಾಜಿಸುತ್ತಿರುವರು. ಜಗದ್ಗುರು ಶಿವಯೋಗಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರ ಕರಕಮಲಸಂಜಾತರಾಗಿ ಆದಿಜಗದ್ಗುರುಗಳವರ ಚಿದಂಶವೇ ಮೂರ್ತಿವೆತ್ತಂತೆ ಅವತರಿಸಿ ಬಂದಿರುವ ಮಹಾಯೋಗೀಶ್ವರರಾಗಿರುವರು. ಕೇವಲ ಹನ್ನೆರಡನೆಯ ವಯಸ್ಸಿನಲ್ಲಿಯೆ (೨೪-೨-೧೯೨೮) ಮಹಾಸಂಸ್ಥಾನದ ಆಶ್ರಮಾಧಿಕಾರವನ್ನು ಪಡೆದ ಪೂಜ್ಯರು, ಸಂಸ್ಕೃತ ವ್ಯಾಸಂಗಕ್ಕಾಗಿ ಮೈಸೂರಿಗೆ ಆಗಮಿಸಿದರು. ಆಗತಾನೇ ಮೈಸೂರು ನಗರದಲ್ಲಿ ಸ್ಥಾಪಿತವಾಗಿ ತಮ್ಮ ಪೀಠದ ವತಿಯಿಂದ ನಡೆಯುತ್ತಿದ್ದ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಸಂಗವನ್ನು ಮುಂದುವರಿಸಿ ೧೯೪೫ರಲ್ಲಿ ಸಾಹಿತ್ಯ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಆಧ್ಯಾತ್ಮಿಕ ಮತ್ತು ಲೌಕಿಕ ವಿದ್ಯೆಗಳಲ್ಲಿಯೂ ಸೂಕ್ತ ಶಿಕ್ಷಣವನ್ನು ಪಡೆದು ಆ ಬಳಿಕ ಸಮಾಜೋದ್ಧಾರ ಕಾರ್ಯಗಳಲ್ಲಿ ಧುಮುಕಿದರು. ತಾವು ಮೈಸೂರಿನಲ್ಲಿ ಓದುತ್ತಿದ್ದಾಗ ತಮ್ಮೊಡನೆ ಕಲಿಯುತ್ತಿದ್ದ ಸಮಾಜದ ಹಲವಾರು ಮಂದಿ ಮಕ್ಕಳು ಊಟ, ವಸತಿಗಳಿಗಾಗಿ ಪಡುತ್ತಿದ್ದ ಕಷ್ಟ ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು ಮನಕರಗಿದ ಪೂಜ್ಯ ಶ್ರೀಗಳವರು ತಮ್ಮ ವಿದ್ಯಾರ್ಜನೆಗಾಗಿ ಶ್ರೀಮಠದಿಂದ ಕಳುಹಿಸುತ್ತಿದ್ದ ದ್ರವ್ಯದಿಂದಲೇ ಹತ್ತಾರು ಮಂದಿ ವಿದ್ಯಾರ್ಥಿಗಳಿಗೂ ತಮ್ಮೊಡನೆ ಊಟೋಪಚಾರಗಳಿಗೆ ವ್ಯವಸ್ಥೆ ಮಾಡಿ ಅವರ ಮೇಲೆ ವಿಶೇಷವಾದ ಮಾತೃ ಹೃದಯದ ವಾತ್ಸಲ್ಯವನ್ನು ಬೀರಿದರು.

ಈ ಶಿಷ್ಯವಾತ್ಸಲ್ಯವೇ ಅಂಕುರಿಸಿ ಮುಂದೆ ಅಸಂಖ್ಯ ವಿದ್ಯಾಸಂಸ್ಥೆಗಳು ಶಾಖೋಪಶಾಖೆಗಳಾಗಿ ನಾಡಿನ ಎಲ್ಲ ಕಡೆಗೂ ಹರಡಿ, 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ'ವೆಂಬ ಪವಿತ್ರ ನಾಮಾಂಕಿತವನ್ನು ತಳೆದು ಹೆಮ್ಮರವಾಗಿ ಬೆಳೆದು, ಜ್ಞಾನಪಿಪಾಸುಗಳಾದ ನಾಡಿನ ವಿದ್ಯಾರ್ಥಿಸಂಕುಲಕ್ಕೆ ಕಲ್ಪವೃಕ್ಷವೆನಿಸಿ ಸುಮಧುರ ಸತ್ಫಲಗಳನ್ನು ನೀಡುತ್ತಾ ಜ್ಞಾನದಾಸೋಹ-ಅನ್ನದಾಸೋಹಗಳನ್ನು ನಡೆಸುತ್ತಿರುವುದು ಲೋಕವಿಖ್ಯಾತವಾಗಿದೆ. ಪೂಜ್ಯಪಾದರು ಅನೇಕ ಶಾಲಾಕಾಲೇಜುಗಳನ್ನೂ, ಉಚಿತ ಪ್ರಸಾದನಿಲಯಗಳನ್ನೂ ಹತ್ತಾರು ಕಡೆಗಳಲ್ಲಿ ಸ್ಥಾಪಿಸಿ, ಅನ್ನದಾನ-ಜ್ಞಾನಪ್ರಸಾರ ಕಾರ್ಯಗಳನ್ನು ಅತ್ಯದ್ಭುತವಾಗಿ ನಡೆಸುತ್ತಿರುವ 'ಪವಾಡ ಪುರುಷ'ರಾಗಿರುವುದಲ್ಲದೆ, ತಮ್ಮ ಆಧ್ಯಾತ್ಮಿಕ ತಪಃಪ್ರಭಾವದಿಂದ ಜನತೆಯಲ್ಲಿ ಧಾರ್ಮಿಕ ಅರಿವನ್ನು ಮೂಡಿಸಿ ಮುಕ್ತಿಪಥದಲ್ಲಿ ಮುನ್ನಡೆಸುವ ಮಹಿಮಾ ಮಹಾಂತರೂ ಆಗಿರುವರು. ಸಾಹಿತ್ಯಾದಿ ಕಲೆಗಳಲ್ಲಿ, ಸನಾತನ ಸಂಸ್ಕೃತಿಯಲ್ಲಿ ಮೊದಲಿಂದಲೂ ವಿಶೇಷ ಅಭಿರುಚಿ-ಆಸಕ್ತಿಯನ್ನು ತಾಳಿರುವ ಪೂಜ್ಯ ಶ್ರೀಗಳವರು ಕಲಾವಿದರಿಗೆ ಕೊಡುಗೈಯ ಸಹಾಯ ನೀಡಿ ಪ್ರೋತ್ಸಾಹ ಕೊಡುತ್ತಿರುವರು. ತಾವೂ ಕೂಡ ಶರಣರ ಕೆಲವು ಕೃತಿಗಳನ್ನು ಸಂಪಾದಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿರುವುದನ್ನು ಕನ್ನಡಿಗರು ಭಕ್ತಿಭಾವದಿಂದ ಸದಾ ನೆನೆಯುತ್ತಿರುವರು. ಪೂಜ್ಯ ಮಹಾಸನ್ನಿಧಿಯವರು ಸಾಹಿತ್ಯ, ಸಂಸ್ಕೃತಿಗಳಿಗೆ ಸಲ್ಲಿಸುತ್ತಿರುವ ಮಹತ್ಸೇವೆಯ ಪಂಚಮುಖದ ದಿವ್ಯದರ್ಶನವನ್ನು ಈ ರೀತಿ ವಿವರಿಸಬಹುದಾಗಿದೆ:

## ಶರಣತತ್ತ್ವ ಪ್ರಚಾರ—ಜನಮನದಲ್ಲಿ ಶಿವಭಕ್ತಿ ಸಂಚಾರ

ಸಮಾಜವು ಸರ್ವಾಂಗಸುಂದರವಾಗಬೇಕಾದರೆ ಜನತೆಯ ನೈತಿಕಮಟ್ಟವನ್ನು ಎತ್ತರಿಸುವುದು ಮೊಟ್ಟ ಮೊದಲನೆಯ ಉಪಾಯವೆಂದು ಶ್ರೀಗಳವರು ಮೊದಲನೆಯದಾಗಿ ಭಾವಿಸಿದರು. ಅದರ ಸಾಧನೆಗೆ ಶರಣತತ್ತ್ವ ಪ್ರಸಾರವೇ ಸರಿಯಾದ ಮಾರ್ಗ ಎಂದು ತಿಳಿದು 'ಶರಣತತ್ತ್ವ ಪ್ರಚಾರ ಸಮಿತಿ'ಯನ್ನು ಸ್ಥಾಪಿಸಿದರು. ಅದರ ಮೂಲಕ ಪ್ರಾರ್ಥನಾ ಸಭೆಗಳು, ಪುರಾಣ ಪ್ರವಚನಗಳು, ಶಿವಕಥಾ ಸಂಕೀರ್ತನಗಳು, ವಿಚಾರಗೋಷ್ಠಿಗಳು, ಶಿವಾನುಭವ ಸಮ್ಮೇಳನಗಳು, ಜಯಂತ್ಯುತ್ಸವ-ರಥೋತ್ಸವಗಳು ನಡೆಯುವಂತೆ ಏರ್ಪಡಿಸಿ ಶರಣ ಸಾಹಿತ್ಯ, ಸಂಸ್ಕೃತಿಗಳನ್ನು ಬಿತ್ತರಿಸುವ ಮಹಾದಾಸೋಹವನ್ನು ಕೈಕೊಂಡು ನಿರಂತರವಾಗಿ ನಡೆಸುತ್ತಿರುವರು. ಸಂಸ್ಥೆಯ ಮುಖಪತ್ರವಾದ 'ಪ್ರಸಾದ' ಪತ್ರಿಕೆಯ ಮುಖೇನ ಜನತೆಯಲ್ಲಿ ಧರ್ಮಾಭಿವೃದ್ಧಿಯಾಗುವಂತೆ ಸ್ತುತ್ಯಕಾರ್ಯವೆಸಗುತ್ತಿರುವರು. ಅಷ್ಟೇ ಅಲ್ಲದೆ ಪೂಜ್ಯಪಾದರು ದಯಮಾಡಿಸಿದ ಕಡೆಗಳಲ್ಲೆಲ್ಲಾ ಧಾರ್ಮಿಕ ಸಮಾರಂಭಗಳು ನಡೆದು, ಆಯಾಯಾ ಎಡೆಗಳಲ್ಲಿನ ಭಕ್ತ ಜನಸ್ತೋಮವನ್ನು ತಮ್ಮ ದಿವ್ಯವಾಣಿಯಿಂದ ಎಚ್ಚರಿಸಿ ಧನ್ಯರನ್ನಾಗಿಸಿದ ಮಹತ್ತ್ವದ ಸಂದರ್ಭಗಳು ಎಣಿಕೆಗೆ ಸಿಗದಷ್ಟು ಇವೆ. ಹಾಗೆಯೇ ಶ್ರೀಗಳವರು ನಾಡಿನ ಹಲವಾರು ವೇದಿಕೆಗಳಿಂದ ನೀಡಿದ ಭಾಷಣಗಳನ್ನೂ ಆಶೀರ್ವಚನಗಳನ್ನೂ ಒಂದೆಡೆ ಕೂಡಿಸಿ ಹೊರತರುವುದಾದರೆ ಹಲವು ಹೆಬ್ಬೊತ್ತಿಗೆಗಳೇ ಆಗಬಹುದು. ಅದರಿಂದ ಶರಣತತ್ತ್ವ ಭಂಡಾರಕ್ಕೆ ಅಮೂಲ್ಯ ಕಾಣಿಕೆಗಳು ಸಿಗುವಂತಾಗಬಹುದು.

## ಸಾಹಿತಿಗಳಿಗೆ ಸನ್ಮಾನ—ಪ್ರಶಸ್ತಿ ಪ್ರದಾನ

ಶ್ರೀಗಳವರ ಆಶ್ರಯ-ಸಹಾಯಗಳನ್ನು ಕೋರಿ ಬರುವ ಅಸಂಖ್ಯ ಕಲಾವಿದರುಗಳು ಬರಿಗೈಗಳಲ್ಲಿ ಯಾವೊತ್ತೂ ಹಿಂದಿರುಗಿದವರಲ್ಲ. ಪೂಜ್ಯರ ಸಾನ್ನಿಧ್ಯಕ್ಕೆ ಬಂದು ತಮ್ಮ ಕಲೆಗಾರಿಕೆಯನ್ನು ಪ್ರದರ್ಶಿಸಿ ಸಹಾಯವನ್ನು ಪಡೆಯುವವರೇ ಬಹಳ ಮಂದಿ. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪಾದಿ ಕಲೆಗಳಲ್ಲಿ ಪ್ರಸಿದ್ಧರಾದ ಕಲಾವಿದರು ಶ್ರೀಗಳವರಿಂದ ಸಹಾಯವನ್ನಪೇಕ್ಷಿಸಿ ಆಗಿಂದಾಗ್ಗೆ ಬರುವರು. ಅವರವರಲ್ಲಿನ ಕಲಾಪ್ರತಿಭೆಯನ್ನು ಮೆಚ್ಚಿ ಶ್ರೀಗಳವರು ತುಂಬು ಅಭಿಮಾನದಿಂದ ಹರಸಿ ಆಶೀರ್ವದಿಸುವರು. ಕುರುಡರು, ಮೂಗರುಗಳಲ್ಲಿಯೂ ಇರುವ ಕಲಾಪ್ರತಿಭೆಯನ್ನು ಮೆಚ್ಚಿ ಅವರು ವಾದ್ಯ-ಸಂಗೀತಾದಿಗಳಲ್ಲಿ ಶಿಕ್ಷಣ ಪಡೆಯಲು ಅವರಿಗೆ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಟ್ಟಿರುವರು. ಸಮಾಜದ ಗಣ್ಯ ಕವಿಗಳು. ಸಾಹಿತಿಗಳು, ವಿಮರ್ಶಕರುಗಳನ್ನು ಗುರುತಿಸಿ ಅಂಥವರನ್ನು ಶ್ರೀಮಠಕ್ಕೆ ಬರಮಾಡಿಕೊಂಡು ಗೌರವ ಪ್ರಶಸ್ತಿಗಳನ್ನಿತ್ತು ವಿಶೇಷವಾಗಿ ಸತ್ಕರಿಸುವ ಪೂಜ್ಯ ಶ್ರೀ ಜಗದ್ಗುರುಗಳವರು ಸಾಹಿತ್ಯದ ಹಿರಿಯ ಉಪಾಸಕರಲ್ಲೊಬ್ಬರಾಗಿರುವರು. ಕಲಾವಿದರಿಂದ ಉತ್ತಮ ಕಲಾಕೃತಿಗಳು ಹೊರಬರುವುದಕ್ಕೆ ಸದಾ ಪ್ರೋತ್ಸಾಹ ಕೊಡುವ ಶ್ರೀಗಳವರ ಕಲಾಭಿಮಾನ ಅಸಾಧಾರಣವಾದುದು.

## ಕಲಾಸಂಸ್ಥೆಯ ಉದಯ—ಎಲ್ಲೆಡೆ ವಿಜಯಾಭ್ಯುದಯ

ಶ್ರೀಮಠದ ಧಾರ್ಮಿಕ ಸಮಾರಂಭಗಳ ಸಾಂಸ್ಕೃತಿಕ ಕಾರ್ಯಕಲಾಪಗಳಲ್ಲಿ ವಿದ್ವನ್ಮಣಿಗಳ ವಿಚಾರಪೂರ್ಣ ಭಾಷಣಗಳು, ಕಲೋಪಾಸಕರ ಕಲಾಪ್ರತಿಭೆಯ ರಸಮಯ ಪ್ರದರ್ಶನಗಳು ರಸಿಕಲೋಕಕ್ಕೆ ರಸದೌತಣವೆಂದರೆ ತಪ್ಪಲ್ಲ. ಸಂಗೀತ, ನೃತ್ಯ, ನಾಟಕಾದಿಗಳಲ್ಲಿ ತಮ್ಮ ಕಲಾಪ್ರೌಢಿಮೆಯನ್ನು ಪ್ರದರ್ಶಿಸಲು ಕಲಾವಿದರಿಗೆ ಸೂಕ್ತ ಅವಕಾಶಗಳನ್ನು ಶ್ರೀಗಳವರು ಮೇಲಿಂದ ಮೇಲೆ ಒದಗಿಸಿಕೊಡುತ್ತಿರುವರು. ಶ್ರೀಮಠದಲ್ಲಿ ಶ್ರೀಗಳವರ ಕೃಪಾಶೀರ್ವಾದದಿಂದಲೇ ಸಂಸ್ಥಾಪಿತವಾಗಿರುವ 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾಸಂಸ್ಥೆ'ಯು ನಾಡಿನ ನಾನಾಭಾಗಗಳಲ್ಲಿ ಹಲವಾರು ಸಾಮಾಜಿಕ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿ ಅನೇಕ ಪ್ರಶಸ್ತಿಗಳನ್ನು ಸಂಪಾದಿಸಿ ಕಲಾಸೇವೆಯೆಸಗುತ್ತಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

## ಶರಣ ಕೃತಿ ಸಂಪಾದನೆ—ಶರಣತತ್ತ್ವ ವಿವರಣೆ

ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರಿಗೆ ಜಗತ್ತಿನ ಸಂತಶ್ರೇಷ್ಠರ ವಾಙ್ಮಯಾವಲೋಕನದಲ್ಲಿ ವಿಶೇಷವಾದ ಆಸಕ್ತಿ. ಬಿಡುವು ಸಿಕ್ಕಾಗಲೆಲ್ಲಾ ಅಂತಹದೊಂದು ಉದಾತ್ತ ಕೃತಿಯನ್ನು ಹಿಡಿದು ಓದುತ್ತಿರುತ್ತಾರೆ. ತಮ್ಮಲ್ಲಿಗೆ ಬರುವ ಪಂಡಿತರೊಡನೆ ಆ ಬಗೆಗೆ ವಿಚಾರವಿನಿಮಯ ನಡೆಸುತ್ತಾರೆ. ಗ್ರಂಥವ್ಯಾಸಂಗಕ್ಕೆ ಹೆಚ್ಚು ಸಮಯವನ್ನು ಕೊಡುವ ಶ್ರೀಗಳವರಿಂದ ಒಂದೆರಡು ಮಹತ್ತರ ಕೃತಿಗಳು ಅಚ್ಚುಕಟ್ಟಾಗಿ ಸಂಪಾದಿತವಾಗಿ ಅವರ ಗ್ರಂಥಮಾಲೆಯಿಂದಲೇ ಅಚ್ಚಾಗಿ ಕನ್ನಡ ಕಾವ್ಯ ಭಂಡಾರಕ್ಕೆ ಬಹು ಮೆಚ್ಚಾದ ಕಾಣಿಕೆಗಳಾಗಿ ದೊರೆತುದು ಕನ್ನಡ ಲೋಕದ ಮಹದ್ಭಾಗ್ಯ. ಅವುಗಳಲ್ಲಿ ಮೊದಲನೆಯ ಸಂಪಾದಿತ ಕೃತಿ ಪೂಜ್ಯ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರಿಂದ ವಿರಚಿತವಾದ 'ಅಕ್ಕಮಹಾದೇವಿ' ಚಂಪೂಕಾವ್ಯ.

ಮೈಸೂರು ಅರಮನೆಯ ಉದಾರಾಶ್ರಯದಿಂದ ಕಾಶೀಕ್ಷೇತ್ರದಲ್ಲಿ ಅಖಂಡ ಮೂವತ್ತೈದು ವರ್ಷಗಳ ಕಾಲ ವಾಙ್ಮಯ ತಪಸ್ಸನ್ನಾಚರಿಸಿ ಅನೇಕ ಭಾಷೆಗಳಲ್ಲಿ, ದರ್ಶನಶಾಸ್ತ್ರಗಳಲ್ಲಿ ಅದ್ವಿತೀಯವಾದ ಪಾಂಡಿತ್ಯವನ್ನು ಸಂಪಾದಿಸಿ, ಅಸದೃಶವಾದ ಪ್ರತಿಭಾಶಕ್ತಿಯಿಂದ ಹಲವು ಕೃತಿಗಳನ್ನು ರಚಿಸಿದ ಪರಮಪೂಜ್ಯ ಶ್ರೀ ನಿ. ಪ್ರ. ಸ್ವ. ಶ್ರೀ ಗೌರೀಶಂಕರ ಮಹಾಸ್ವಾಮಿಗಳವರು ಇಡೀ ಭಾರತದಲ್ಲೇ ಹೆಸರಾಂತ ಘನ ವಿದ್ವಾಂಸರು. ಅವರಿಗೂ ಸುತ್ತೂರು ಜಗದ್ಗುರುಗಳವರಿಗೂ ಮೊದಲಿನಿಂದಲೂ ಬಲವಾದ ಆತ್ಮೀಯತೆಯು ಬೆಳೆದಿತ್ತು. ಅವರು ಕಾಶಿಯಲ್ಲಿದ್ದಾಗಲೇ ಸುತ್ತೂರು ಶ್ರೀಗಳವರು ಅಲ್ಲಿಗೆ ಹೋಗಿ ಅವರ ಬಳಿ ಹೆಚ್ಚಿನ ವ್ಯಾಸಂಗ ಮಾಡಿ ಬಂದಿದ್ದರು ೧೯೪೭ರಲ್ಲಿ ಅವರು ಮೈಸೂರಿಗೆ ಹಿಂದಿರುಗಿದ ಬಳಿಕ ಅವರು ಲಿಂಗದೊಳಗೆ ಒಂದಾಗುವತನಕ (೧೯೫೨) ಸುತ್ತೂರು ಜಗದ್ಗುರುಗಳವರು ಸದಾ ಅವರೊಡನೆಯೇ ಇದ್ದರು. ಅವರ ಅಮೋಘವಾದ ಅಮೃತವಾಣಿ ಇಡೀ ನಾಡಿನ ಜನತೆಗೆ ಲಭಿಸುವಂತಹ ಪುಣ್ಯಾವಕಾಶಗಳು ಅಗಣಿತವಾಗಿ ಒದಗಿಬಂದುವು. ಅಸಾಧಾರಣವಾದ ಪಾಂಡಿತ್ಯ, ಪ್ರತಿಭೆಗಳಿಂದ ತುಂಬಿದ್ದ ಅವರಿಂದ ಹಲವಾರು ಮಹತ್ಕೃತಿಗಳನ್ನು ನಿರೀಕ್ಷಿಸಲಾಗಿತ್ತು. ಅಲ್ಲದೆ ತಾವು ರಚಿಸುತ್ತಿದ್ದ ಕೃತಿಗಳ ವಿಚಾರವಾಗಿ

ಅವರೇ ಒಮ್ಮೊಮ್ಮೆ ಪ್ರಸ್ತಾಪ ಮಾಡುತ್ತಿದ್ದರು. ಆದರೆ ಅವುಗಳು ಯಾವುವೂ ಸಿಗದೆ ಹೋಗಿವೆ. ಬಹುಶಃ ಅವರ ಗ್ರಂಥಭಂಡಾರ, ಕಾಗದಪತ್ರಗಳ ಸಮೇತ ಅವೆಲ್ಲವೂ ಅರಮನೆಯನ್ನು ಸೇರಿಕೊಂಡವೋ ಏನೋ ! ಆದರೆ ಈಗ ದೊರೆತಿರುವ ಅವರ ಕೃತಿ 'ಅಕ್ಕಮಹಾದೇವಿ' ಚಂಪೂಕಾವ್ಯವು ಪೂರ್ಣ ದೊರೆಯದೆ ಹೋಗಿದೆ. ಅದು ಮುಗಿಯುವ ಮುನ್ನವೇ ಅವರ ಮರ್ತ್ಯದ ಮಹಾಮಣಿಹ ಮುಗಿದುದು ಕನ್ನಡಿಗರ ದುರ್ದೈವವೆನ್ನಬೇಕು.

ಅಪೂರ್ಣವಾದ ಈ ಮಹಾಕೃತಿ—ಅಕ್ಕಮಹಾದೇವಿಯು ಕಲ್ಯಾಣಕ್ಕೆ ಆಗಮಿಸಿ ಕಿನ್ನರಯ್ಯನನ್ನು ಕಂಡು ಮಾತನಾಡಿ ಬಸವಣ್ಣನವರ ಮಹಾಮನೆಯ ಬಾಗಿಲಿಗೆ ಬಂದು ಅಣ್ಣನವರ ದರ್ಶನಕ್ಕೆಂದು ಕಾತರಿಸಿ ಕಾದು ನಿಂತಿರುವಲ್ಲಿಗೆ ನಿಂತುಹೋಗಿದೆ. ಬಹುಶಃ ಕಾವ್ಯವು ಅಷ್ಟಕ್ಕೇ ನಿಂತುಹೋಗಿರುವುದರಲ್ಲಿಯೂ ಏನೋ ಒಂದು ವಿಶೇಷ ಅರ್ಥವಿದೆಯೆಂದು ಕಾಣುತ್ತದೆ! ಅಕ್ಕನ ವಚನಗಳ ಆಧಾರದ ಮೇಲೆಯೇ ಅವಳ ಅಚ್ಚಬಾಳನ್ನು, ಅದ್ಭುತ ವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ ಅಪೂರ್ವವಾಗಿರುವ ಈ ಪ್ರೌಢ ಚಂಪೂಕಾವ್ಯ ಷಡಕ್ಷರದೇವನ ನಂತರದ ಮಾರ್ಗಕಾವ್ಯಗಳಲ್ಲಿ ಬಹುಮುಖ್ಯವಾಗಿ ಹೆಸರಿಸಬಹುದಾದ ಕೃತಿಯಾಗಿದೆ. ಕೈತಪ್ಪಿಹೋಗುತ್ತಿದ್ದ ಇಂತಹ ವಿಶಿಷ್ಟ ಕೃತಿಯನ್ನು ಪೂಜ್ಯ ಶ್ರೀಗಳವರು ಸಂಪಾದಿಸಿ ವಿಮರ್ಶಾತ್ಮಕವಾದ ಮುನ್ನುಡಿಯನ್ನಿತ್ತು ತಮ್ಮ ಗ್ರಂಥಮಾಲೆಯಿಂದಲೇ ಪ್ರಕಟಿಸಿ 'ಈ ಕಾವ್ಯವು ಸತ್ಯ ಶಿವ ಸುಂದರದತ್ತ ನಡೆವ ಸಾಧಕಪಥಿಕರ ಪಾಥೇಯವಾಗಲಿ, ವಿಷಯ ವಿಷಮ ಸಂಸಾರ ಸಾಗರದಲ್ಲಿ ನೆಲೆದಪ್ಪಿ ತಲ್ಲಣಿಸುವ ದಲಿತ ಚೇತನರಿಗಿದು ಉಪಾದೇಯವಾಗಲಿ' ಎಂದು ಹರಸಿ ಕನ್ನಡಿಗರೆಲ್ಲರ ಕೈಗಿತ್ತುದು ಒಂದು ದೊಡ್ಡ ಉಪಕಾರವೆಂದು ಹೇಳಬಹುದಾಗಿದೆ.

ಎರಡನೆಯದು—'ಘನಲಿಂಗದೇವರ ವಚನಗಳು'—ತಮ್ಮ ಪ್ರಾಚೀನ ಗುರುಪರಂಪರೆಯ ಆಚಾರ್ಯರುಗಳಲ್ಲಿ ಪ್ರಮುಖರಾದ ಘನಲಿಂಗ ಚಕ್ರವರ್ತಿಗಳ ವಚನಗಳು ಈವರೆವಿಗೆ ಮೂವರು ದೊಡ್ಡ ವಿದ್ವಾಂಸರುಗಳಿಂದ ಕಾಲಕಾಲಕ್ಕೆ ಪರಿಷ್ಕೃತಗೊಂಡು ಪ್ರಕಟಗೊಂಡಿದ್ದರೂ ಇತ್ತೀಚೆಗೆ ದೊರೆತ ಹೆಚ್ಚಿನ ಪ್ರತಿಗಳ ಸಹಾಯದಿಂದ ಮತ್ತಷ್ಟು ಪರಿಷ್ಕರಿಸಿ ಉತ್ತಮ ಹಾಗೂ ಸುಂದರ ಆವೃತ್ತಿಯನ್ನು ಹೊರತಂದುದು ಸಾಹಿತ್ಯೋಪಾಸಕರಿಗೆ ಮಹೋಪಕಾರವನ್ನೆಸಗಿದಂತಾಗಿದೆ.

ಈ ಎರಡು ಶ್ರೇಷ್ಠ ಕೃತಿಗಳನ್ನು ಪರಿಚಯಾತ್ಮಕ ವಿವರಣೆಗಳೊಂದಿಗೆ ಸಂಪಾದಿಸಿ ಕನ್ನಡ ಸಾರಸ್ವತಕ್ಕೆ ಶಾಶ್ವತ ಕೊಡುಗೆಗಳನ್ನು ನೀಡಿರುವುದಲ್ಲದೆ ಕೃತಿಪ್ರಕಾಶನದ ಮೂಲಕ ತಮ್ಮ ಗಾಢಭಕ್ತಿ, ಅಚಲ ವಿಶ್ವಾಸರೂಪದ ಗುರುಕಾಣಿಕೆಯನ್ನೂ ಸಲ್ಲಿಸಿರುವರೆಂದು ಹೇಳಬಹುದಾಗಿದೆ.

### ಶರಣ ಕೃತಿ ಪ್ರಕಟನೆ– ಶರಣ ಸಂಸ್ಕೃತಿ ಸಂವರ್ಧನೆ

ಕನ್ನಡದಲ್ಲಿ ಶರಣವಾಙ್ಮಯ ವಿಪುಲವಾಗಿದೆ, ವೈವಿಧ್ಯಪೂರ್ಣವಾಗಿದೆ. ಆದರಲ್ಲಿ ಬೆಳಕಿಗೆ ಬರದೆ ಕತ್ತಲೆಯಲ್ಲಿ ತಲೆಮರೆಸಿಕೊಂಡು ಕುಳಿತಿರುವುದು ಇನ್ನೂ ಬಹಳವಿದೆ. ಅದೆಲ್ಲವೂ ಬೆಳಕಿಗೆ ಬರಬೇಕು, ಭವಬಾಧೆಯಲ್ಲಿ ಸಿಲುಕಿ ಬಳಲುವ ಜಗದ ಜನ ಅವುಗಳನ್ನು ಓದಬೇಕು, ಓದಿ ಬದುಕಬೇಕು, ಬದುಕಿ ಬಾಳಿಗೊಂದು ಅರ್ಥವನ್ನು ಕಂಡುಕೊಳ್ಳಬೇಕು ಅನ್ನುವುದು ಜಗದ್ಗುರುಗಳವರ ಮಹದಾಸೆ. ಅದರ ಫಲವಾಗಿ ಶ್ರೀಮಠದ ಆಶ್ರಯದಲ್ಲಿ 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ'ಯು ಹಬ್ಬಿ ಇಂದು ಹಲವಾರು ಸುಂದರ ಗ್ರಂಥಕುಸುಮಗಳ ಸೌರಭವನ್ನು ಸೂಸಿ ನಿಂತಿದೆ. ಮೊದಲನೆಯದಾಗಿ ಬೆಳಕಿಗೆ ಬಂದು ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಹೊಸತೊಂದು ಬೆಳಕನ್ನು ಬೀರಿದ, ಹರಿದಾಸ ಸಂಪ್ರದಾಯಕ್ಕಿಂತಲೂ ಪ್ರಾಚೀನವಾದ ಶಿವಶರಣರ ಗೇಯಕೃತಿಗಳ ಬೃಹತ್ ಸಂಕಲನವಾದ ಡಾ. ಎಲ್. ಬಸವರಾಜು ಅವರಿಂದ ಸಂಪಾದಿತವಾದ 'ಶಿವದಾಸ ಗೀತಾಂಜಲಿ', ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಿಂದ ಸಂಪಾದಿತವಾದ 'ಅಮುಗಿದೇವಯ್ಯಗಳ ಸಾಂಗತ್ಯ' ಮೊದಲಾದ ಪ್ರಾಚೀನ ಕೃತಿಗಳೂ 'ಶೂನ್ಯತತ್ತ್ವವಿಕಾಸ ಮತ್ತು ಶೂನ್ಯಸಂಪಾದನೆ,' 'ಪ್ರಸಾದ' ಮುಂತಾದ ವಿಮರ್ಶಾಗ್ರಂಥಗಳೂ 'ಆದರ್ಶವಿವಾಹ', 'ಕಂಬಳಿ ನಾಗಿದೇವ', 'ಕಾಯಕ'–ಇವೇ ಮೊದಲಾದ ಶರಣರ ಜೀವನ ಸಂದೇಶವನ್ನಾಧರಿಸಿ ರಚಿತವಾದ ಪ್ರಸಿದ್ಧ ನಾಟಕಗಳೂ ಶರಣರ ಜೀವನಚರಿತ್ರೆಗಳೂ ಈ ಗ್ರಂಥಮಾಲೆಯಿಂದ ಪ್ರಕಾಶಿತವಾಗಿ ಪ್ರಾಚೀನ ಸಂಸ್ಕೃತಿಯ ಪರಿಮಳವನ್ನು ಬೀರುತ್ತಾ ಜನತೆಯ ಜ್ಞಾನದಾಹವನ್ನು ತಣಿಸುತ್ತಲಿವೆ.

ಉತ್ತಮ ಕೃತಿಗಳನ್ನು ಹೊರತರಬೇಕು, ಶಿವಸಾಹಿತ್ಯದ ತಣ್ಬೆಳಕು ಸುತ್ತೆಲ್ಲ ಹರಡಬೇಕು, ಜನಮನದ ಅಂಧಕಾರ ಅಳಿಯಬೇಕು, ಲಿಂಗದ ಬೆಳಗು ಹೊರಹೊಮ್ಮಬೇಕು ಎನ್ನುವ ದೃಷ್ಟಿಯಿಂದ ಶ್ರೀಮಠದಲ್ಲಿ ಒಂದು ದೊಡ್ಡ

ವಾದ ಗ್ರಂಥಭಂಡಾರ, ಅದಕ್ಕೆ ಹೊಂದಿಕೊಂಡಂತೆ ಒಂದು ಶರಣಸಾಹಿತ್ಯ ಸಂಶೋಧನಾಗಾರ, ಮುದ್ರಣಯಂತ್ರಾಗಾರಗಳನ್ನು ಸ್ಥಾಪಿಸಿ ಸಾಹಿತ್ಯಾಭ್ಯಾಸಿಗಳ, ಸಂಶೋಧಕರ ಅಧ್ಯಯನ-ಸಂಶೋಧನಗಳಿಗೆ, ಗ್ರಂಥಮುದ್ರಣ-ಪ್ರಕಾಶನಗಳಿಗೆ ಬೃಹತ್‌ಸಂಸ್ಥೆಯೊಂದನ್ನು ತೆರೆಯಬೇಕೆಂಬ ಮಹತ್‌ಸಂಕಲ್ಪವನ್ನು ಪೂಜ್ಯ ಜಗದ್ಗುರುಗಳವರು ಕೈಕೊಂಡಿರುತ್ತಾರೆ. ಈ ಸತ್ಯಸಂಕಲ್ಪಗಳೆಲ್ಲವೂ ನೆರವೇರುತ್ತಾ ಸುತ್ತೂರು ಶ್ರೀ ಜಗದ್ಗುರು ಮಹಾಸಂಸ್ಥಾನ ಪೀಠದಿಂದ ನಾಡು-ನುಡಿಗಳ ಸೇವೆ, ಪ್ರಾಚೀನ ಸಾಹಿತ್ಯ-ಸಂಸ್ಕೃತಿಗಳ ಸಂರಕ್ಷಣೆ, ಮಾನವಕೋಟಿಯ ಕಲ್ಯಾಣಕಾರ್ಯಗಳು ಅಗಾಧ ಪ್ರಮಾಣದಲ್ಲಿ ಸದಾಕಾಲ ನಡೆಯುವಂತೆಯೂ ಮಹಾನುಭಾವರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯದರ್ಶನಾಶೀರ್ವಾದಗಳು ಲೋಕಕ್ಕೆ ಬಹುಕಾಲ ಲಭಿಸುವಂತೆಯೂ ಕರುಣಿಸಿ ಅನುಗ್ರಹಿಸಲೆಂದು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರನ್ನು ನಿರಂತರ ಪ್ರಾರ್ಥಿಸುವ ಸದ್ಭಕ್ತ ಸಹೃದಯಲೋಕವು. ಶ್ರೀಗಳವರ ಶಿವಯೋಗ ತಪಃಪ್ರಭಾವಕ್ಕೆ ಶ್ರದ್ಧೆಯಿಂದ ಮಣಿದು. ಅನನ್ಯ ಭಕ್ತಿಪ್ರಣಾಮಗಳ ಅಭಿನಂದನೆಯ ಮಹಾಪೂರವನ್ನುಕ್ಕಿಸಿ ಗುರುಚರಣ ಸಂದರ್ಶನಕ್ಕೆಂದು ಆನಂದದ ಹೊಳೆಯಾಗಿ ಪ್ರವಹಿಸುತ್ತಿದೆ.

'ಶರಣತತ್ತ್ವಂ ಗೆಲ್ಗೆ'

---

ಶಮೆದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ
ಕಾರುಣ್ಯ ಶ್ರದ್ಧೆ ಸತ್ಯ ಸದ್ಭಕ್ತಿ ಶಿವಜ್ಞಾನ ಶಿವಾನಂದ
ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ
ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ
ಕೇವಲ ಮುಕ್ತಿಯಪ್ಪುದು ತಪ್ಪದಯ್ಯಾ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಸ್ವತಂತ್ರ ಸಿದ್ಧಲಿಂಗೇಶ್ವರ

# 'ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ'

**ಡಿ. ಎಂ. ಮಹದೇವಮೂರ್ತಿ**

## ದಿವ್ಯಚೇತನ

ಕನ್ನಡನಾಡಿನಲ್ಲಿ ನೂರಾರು ಮಠಗಳು ಉದಯವಾಗಿವೆ. ಅವುಗಳಲ್ಲಿ ಹಲವು ಮಠಗಳು ನಶಿಸಿಯೂ ಹೋಗಿವೆ. ಯಾವ ಮಠಗಳು ಉಚ್ಚ ಪರಂಪರೆಗಳನ್ನು ಉಳಿಸಿಕೊಂಡು. ಬೆಳೆಸಿಕೊಂಡು ಸಮಾಜ ಪರಿಷ್ಕರಣ ಕಾರ್ಯದಲ್ಲಿ ಹೆಜ್ಜೆ ಇಟ್ಟಿವೆಯೋ ಅಂತಹ ಕೆಲವೇ ಧರ್ಮಪೀಠಗಳು ಶತಶತಮಾನಗಳಿಂದಲೂ ಉಳಿದುಕೊಂಡು ಬಂದಿವೆ. ಆ ಭವ್ಯ ಪರಂಪರೆಗೆ ಸೇರಿದ ಶ್ರೀಪೀಠ. ಸುತ್ತೂರು ಜಗದ್ಗುರು ಪೀಠ. ಬಸವಪೂರ್ವಯುಗದಲ್ಲಿಯೇ ಕರ್ನಾಟಕದ ದಕ್ಷಿಣ ತುದಿಯಲ್ಲಿ ಕಪಿಲೆಯ ದಡದಲ್ಲಿ ವೀರಶೈವ ಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡುವ ಸ್ತುತ್ಯಕಾರ್ಯಕ್ಕೆ ಎಡೆ ಮಾಡಿದ ಭಗವತ್ಪಾದರಾದ ಶ್ರೀಶ್ರೀ ಆದಿಗುರು ಶಿವರಾತ್ರೀಶ್ವರರು ಈ ಜಗದ್ಗುರು ಪೀಠದ ಮೂಲಸಂಸ್ಥಾಪನಾಚಾರ್ಯರು.

ಪವಾಡಗಳು ಅವತಾರಿಪುರುಷರ ಸುತ್ತ ಸಹಜವೂ, ಅನಿವಾರ್ಯವೂ ಆಗಿ ಜರುಗುತ್ತವೆ ಎಂಬುದನ್ನು ವಿಚಾರವಾದಿಗಳು ಒಪ್ಪದೇ ಇದ್ದರೂ ಸಹ. ಪವಾಡಗಳು ದೊಂಬರಾಟವಲ್ಲ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅಂತೆಯೇ ಅಂದಿನ ಚೋಳರಾಜನ ಕುದುರೆ ಶ್ರೀ ಶಿವರಾತ್ರೀಶ್ವರರು ತಪಸ್ಸು ಮಾಡುತ್ತಿದ್ದ ಪ್ರದೇಶವನ್ನು ಪ್ರದಕ್ಷಿಣೆ ಮಾಡಿ ದಿವ್ಯಚೇತನವೊಂದನ್ನು ಜಗತ್ತಿಗೆ ಕಾಣುವಂತೆ ಮಾಡಿತು. ಜಡ-ಜಂಗಮವೆಲ್ಲವೂ ಚೈತನ್ಯಯುತವಾದುದು. ಆ ಚೈತನ್ಯದ ಆವಿರ್ಭಾವಕ್ಕೆ. ವಿಕಸನಕ್ಕೆ. ಸಮಷ್ಟಿಯ ತಪಸ್ಸು ಅವಶ್ಯ. ಶ್ರೀ ಶಿವರಾತ್ರೀಶ್ವರರ ತಪಸ್ಸಾದರೋ ವ್ಯಷ್ಟಿಯ ತಪವಲ್ಲ ಸಮಷ್ಟಿಯ ತಪಸ್ಸು. ಸಮಷ್ಟಿಯ ತಪದ ಪೂರ್ಣ ಫಲ ವ್ಯಕ್ತಿಯೊಬ್ಬರ ಮೂಲಕ ಪ್ರಕಟವಾಗಬಹುದು. ದಿವ್ಯಚೇತನವೊಂದು ಶಿವಯೋಗದಲ್ಲಿದ್ದಾಗ ಅದು ತನ್ನ ದಿವ್ಯಶಕ್ತಿಯಿಂದ ಸಚರಾಚರವನ್ನು ತನ್ನೆಡೆಗೆ ಎಳೆದೊಯ್ಯಬಲ್ಲದು. ಆ ಶಕ್ತಿಯ ಆಕರ್ಷಣವಲಯಕ್ಕೆ ಸಿಲುಕಿದ ಎಲ್ಲವೂ ಕಾಂತಚುಂಬಿತ ಕಬ್ಬುನದಂತೆ ಚೈತನ್ಯಯುತವಾಗುವುದು ಸೋಜಿಗವೇನಲ್ಲ. ಅಶ್ವವೊಂದಕ್ಕೆ ಆ ಚೇತನ ಗೋಚರವಾಗಬೇಕಾದರೆ ಭಗವದ್‌ಶಕ್ತಿಯ ಕೃಪೆಯಲ್ಲದೆ ಮತ್ತೇನು? "ನಡೆವುದೆಲ್ಲಮುಂ ನಡೆವುದೊಳ್ಪಿಗೆ: ಸರ್ವಶಕ್ತಿಯ ಜ್ಞಾನಮುಂ ಮತ್ತೆ ಕಲ್ಯಾಣಮುಂ ತಾನಪ್ಪ ಕೃಪೆತಾನೆ ಪಿಡಿದಿದೆ ಜಗದ್ರಥವನೆಳೆವ ಶಕ್ತ್ಯಶ್ವ ಕುಲ ವಾಘೆಯುಂ" (ರಾಮಾಯಣ ದರ್ಶನ ಮಹಾಸಂಪುಟ ೧. ಪುಟ ೭೬)

## ಶ್ರೀಪೀಠದ ಸಾಹಿತ್ಯಸೇವೆ

ಶ್ರೀ ಸುತ್ತೂರು ಪೀಠದವರ ಸಾಹಿತ್ಯಸೇವೆಯ ಒಂದು ಭಾಗವನ್ನು ಸಮಗ್ರವಾಗಿಯಲ್ಲದಿದ್ದರೂ ಸಂಕ್ಷಿಪ್ತವಾಗಿ ಪರಿಚಯಿಸುವುದು ಈ ಲೇಖನದ ಉದ್ದೇಶ. ಈ ಪೀಠದ ಜಗದ್ಗುರುಗಳಲ್ಲಿ. ಅನೇಕರು ಸಾಹಿತಿಗಳು. ವಚನಕಾರರು. ಸಂಪಾದನಾಕಾರರು. ಟೀಕಾಕಾರರು ಆಗಿದ್ದವರು. ಶ್ರೀ ಸಿದ್ಧನಂಜದೇಶಿಕರೆಂಬ ನಾಲ್ಕನೆಯ ಜಗದ್ಗುರುಗಳವರು ಅಸಾಧಾರಣ ಪ್ರತಿಭಾವಂತರು. "ಪರಮ ಶಿವಾಧಿಕ್ಯಚೂಡಾಮಣಿ" ಎಂಬ ಕೃತಿಯನ್ನು ರಚಿಸಿದ ಇವರ ಜ್ಞಾನ ಪ್ರಭಾವಲಯ ಶ್ರೀ ಮಲೆಯ ಮಹದೇಶ್ವರರನ್ನು ತಮ್ಮತ್ತ ಸೆಳೆಯಿತು. ಹನ್ನೊಂದನೆಯವರಾದ ಶ್ರೀ ಘನಲಿಂಗ ಶಿವಯೋಗಿಗಳು ಅನುಭಾವ ಸಾಹಿತ್ಯ ಸೃಷ್ಟಿಗೆ ಹೆಸರಾದವರು. ವಚನ ಸಾಹಿತ್ಯದಲ್ಲಿ ಇವರು ಗಂಡುರೂಪಿನ ಅಕ್ಕಮಹಾದೇವಿ. ಶ್ರೀ ಇಮ್ಮಡಿ ಶಿವರಾತ್ರಿಸ್ವಾಮಿಗಳು "ವೃಷಭೇಂದ್ರ ವಿಜಯ ಪುರಾಣ"ವೆಂಬ ಉದ್ಗ್ರಂಥ ನಿರ್ಮಾಪಕರಾಗಿದ್ದಾರೆ. ಹದಿನೈದನೆಯ ಶ್ರೀ ಚನ್ನಬಸವ ಶಿವಾಚಾರ್ಯರು ಟೀಕಾಕಾರರಾಗಿ "ಚೋಳ ರೇಣುಕ

ಸಂವಾದ" ಎಂಬ ಆಚಾರ್ಯಗ್ರಂಥವನ್ನು ವ್ಯಾಖ್ಯಾನಿಸಿದ್ದಾರೆ. ಈ ಪರಂಪರೆಯಲ್ಲಿ ಇಪ್ಪತ್ತೆರಡನೆಯವರಾದ ಮಂತ್ರಮಹರ್ಷಿಗಳೆಂದು ಸುವಿಖ್ಯಾತರಾದ ಜಗದ್ಗುರು ಶ್ರೀ ಶಿವರಾತ್ರಿಮಹಾಸ್ವಾಮಿಗಳವರು "ಶಿವಮಂತ್ರಮಹಿಮೆ" ಎಂಬ ಗ್ರಂಥವನ್ನು ರಚಿಸಿರುವುದು ಮಾತ್ರವಲ್ಲ, ಅವರ ಅನುಪಮವೂ ಅಪ್ರಮೇಯವೂ ಅತ್ಯಾನಂದಕಾರಿಯೂ ಆದ ಪ್ರಣವಮಹಾಮಂತ್ರಲಿಖಿತಯಜ್ಞದಿಂದ ಜಗತ್ತು ಪುನೀತವಾಗಿದೆ. ಇಂದಿನ ಜಗದ್ಗುರುಗಳವರಾದ ಶ್ರೀಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಶ್ರೀಪೀಠಕ್ಕೆ ಒಂದು ಹೊಸ ಆಯಾಮವನ್ನು ನಿರ್ಮಿಸಿದವರು. ಅವರು "ಘನಲಿಂಗಿ ದೇವರ ವಚನಗಳು" ಎಂಬ ವಚನ ಕೃತಿಯನ್ನು ಸಂಪಾದಿಸಿ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಶಾಸನ ಸಾಹಿತ್ಯದಲ್ಲಿಯೂ ಶ್ರೀಪೀಠದವರ ಉಲ್ಲೇಖ ವಿಪುಲವಾಗಿ ದೊರೆಯುವುದು. ಶ್ರೀಮಠದ ಆವರಣದಲ್ಲಿರುವ ಶಾಸನ ಸಂಗ್ರಹವನ್ನು ಅವಲೋಕಿಸಿದಾಗ ಇದು ತಿಳಿದೀತು. ಈ ಹಿನ್ನೆಲೆ ಶ್ರೀಪೀಠದವರ ಸಾಹಿತ್ಯಸೇವೆಯ ಹೆಜ್ಜೆಯ ಗುರುತುಗಳನ್ನು ತೋರಿಸೀತು ಎಂದು ಭಾವಿಸಿದ್ದೇನೆ.

## ಗ್ರಂಥಮಾಲೆಗೆ ಬುನಾದಿ

ಪ್ರಸ್ತುತ "ಜೆ.ಎಸ್.ಎಸ್. ಗ್ರಂಥಮಾಲೆ"ಗೆ ಬುನಾದಿ ಹಾಕಿದವರು ಮಂತ್ರಮಹರ್ಷಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು. ಈ ಗ್ರಂಥಮಾಲೆ ನಾನಾ ಸುಗಂಧಪುಷ್ಪಗಳಿಂದ ಕೂಡಿ ಪರಿಮಳವನ್ನು ಸೂಸಿದುದು ಅವರ ಕರಕಮಲ ಸಂಜಾತರಾದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ಹಿರಿಮೆಯಿಂದ.

ಮಂತ್ರಮಹರ್ಷಿಗಳಿಗೆ ಭವಿಷ್ಯತ್ತನ್ನು ಕಾಣುವ ದರ್ಶನಶಕ್ತಿ ಅತೀವವಾಗಿತ್ತು. ಮೈಸೂರು ಅವರ ಕಾರ್ಯಕ್ಷೇತ್ರವಾದದ್ದು ಈ ದೃಷ್ಟಿಯಿಂದಲೆ. ಸಮಾಜ ಸುಧಾರಣೆಗೆ "ಶಿಕ್ಷಣ" ಅತ್ಯವಶ್ಯ ಎಂಬುದನ್ನು ಅವರು ಮನಗಂಡಿದ್ದರು. ತತ್ಪರಿಣಾಮವಾಗಿ ವಿದ್ಯಾರ್ಥಿನಿಲಯಗಳು, ಸಂಸ್ಕೃತ ಪಾಠಶಾಲೆಗಳು, ಕಾಲಕ್ರಮದಲ್ಲಿ ಆಧುನಿಕ ಶಿಕ್ಷಣ ಮಂದಿರಗಳು ಶ್ರೀಗಳವರಿಂದ ಸ್ಥಾಪಿತವಾದುವು. ಆದರೂ ಶ್ರೀಗಳವರಿಗೆ ಸಮಾಜಕ್ಕೆ ಸಲ್ಲಿಸುವ ಇತರ ಸೇವೆಗಳಿಗಿಂತ ಸಾಹಿತ್ಯಕ್ಕೆ ಸಲ್ಲಿಸುವ ಸೇವೆ ಶಾಶ್ವತವಾಗುಳಿಯುತ್ತದೆ ಮತ್ತು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂಬುದು ಹೊಳೆದುದು ನಾಡವರ ಪುಣ್ಯ. ಬಸವಾದಿ ಪ್ರಮಥರ ಸೇವೆಯಾದರೂ ಇಂದು ದೊರಕುತ್ತಿರುವುದು ಅವರ ಸಾಹಿತ್ಯ ಸೇವೆಯಿಂದ ತಾನೆ ?

ಈ ಹಿನ್ನೆಲೆಯಲ್ಲಿ ಶ್ರೀಗಳವರು ತಮ್ಮ ಪೀಠಕ್ಕೆ ಸಂಬಂಧಿಸಿದಂತೆ ಪ್ರಾಚೀನಾರ್ವಾಚೀನ ಬರಹಗಳನ್ನು ಸಂಗ್ರಹಿಸುವತ್ತ ಗಮನನೀಡಿ ಅನೇಕ ಶಿಲಾಶಾಸನಗಳು, ತಾಮ್ರಶಾಸನಗಳು, ಕಡತಗಳು, ರಾಜಮಹಾರಾಜರು ಅವರಿಗೆ ಅರ್ಪಿಸಿದ ಗೌರವಾದರದ ಖಿಲ್ಲತ್ತುಗಳೇ ಮುಂತಾದ ಸಾಹಿತ್ಯಿಕರೂಪದ ಸಾಮಗ್ರಿಗಳನ್ನು ಸಂಗ್ರಹಿಸಿದರು. "ಶ್ರೀಗಳವರಿಗೆ ಮಠದ ಎಲ್ಲಾ ಕಾರ್ಯಗಳನ್ನೂ ಬರೆದಿಡುವ ಅಭ್ಯಾಸ ಬಂದಿದೆ. ಎಲ್ಲಾ ಕೃತಿಗಳನ್ನೂ ಆಮೂಲಾಗ್ರವಾಗಿ ಸ್ವಹಸ್ತಾಕ್ಷರದಿಂದ ಬರೆದಿಟ್ಟಿರುತ್ತಾರೆ....ಈ ರೀತಿ ಬರೆದಿರುವ ವಿವರಣೆ ಎಂಟು ಸಾವಿರ ಪುಟಗಳಷ್ಟಿರುತ್ತದೆ.... ಸ್ವಯಂ ಸಂಶೋಧಕರಂತೆ....ಪಂಡಿತರಾದ ಮಹನೀಯರಿಗೆ ಆಶ್ರಯವಿತ್ತು ಅವರೆಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿರುತ್ತಾರೆ...." (ನೋಡಿ "ಆಶೀರ್ವಾದ" ಪ್ರಸ್ತಾವನೆ ಪುಟ ೮) ಎಂಬ ಈ ಮಾತುಗಳು ಶ್ರೀಗಳವರಿಗಿದ್ದ ಸಾಹಿತ್ಯ ಪ್ರೇಮದ ಬಗ್ಗೆ ಸ್ಪಷ್ಟವಾದ ಬೆಳಕನ್ನು ಚೆಲ್ಲುತ್ತವೆ.

ಜೊತೆ ಜೊತೆಯಲ್ಲಿಯೇ ಶ್ರೀ ಸುತ್ತೂರು ಪೀಠ ಮೈಸೂರು ನಗರದಲ್ಲಿ ಶಿಕ್ಷಣ–ಸಾಹಿತ್ಯ–ಧರ್ಮಪ್ರಸಾರದಲ್ಲಿ ಒಂದು ಹೊಸ ಅಲೆಯನ್ನು ಎಬ್ಬಿಸಿತ್ತು. ಇದಕ್ಕೆಲ್ಲ ಉತ್ಸವಮೂರ್ತಿಗಳಂತಿದ್ದುಕೊಂಡು ತಮ್ಮ ಗುರುಗಳ ಆಶೆ-ಆಶೋತ್ತರಗಳಿಗೆ ಸುಭದ್ರವೂ, ಸುಂದರವೂ ಆದ ರೂಪವನ್ನು ನೀಡುತ್ತಾ ಬಂದ ಶ್ರೀ ಶಿವರಾತ್ರಿರಾಜೇಂದ್ರರು ತಮ್ಮ ದಿವ್ಯಮತಿಯಿಂದ ರಾಷ್ಟ್ರದ ಗಣ್ಯ ನಾಯಕರನ್ನು, ಸಮಾಜಸೇವಾತತ್ಪರರನ್ನು, ವಿದ್ವಾಂಸರನ್ನು, ಧರ್ಮಪೀಠಾಧೀಶರನ್ನು ಸಮಾಜದಲ್ಲಿನ ಅನೇಕ ರಂಗಗಳಲ್ಲಿ ಸೇವೆ ಸಲ್ಲಿಸಿದ ಕುಶಲಿಗಳನ್ನು ತಮ್ಮತ್ತ ಸೆಳೆದರು. ಡಿ. ಶ್ರೀ ರಾಜೇಂದ್ರ ಪ್ರಸಾದ್, ಡಾ. ಎಸ್. ರಾಧಾಕೃಷ್ಣನ್, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರೇ ಮೊದಲಾದ ಗಣ್ಯವ್ಯಕ್ತಿಗಳು ಶ್ರೀಪೀಠದ ಸೇವೆಯನ್ನು ಪ್ರಶಂಸಿಸಿದ್ದಾರೆ. ಸಂಸ್ಥೆ ಬೃಹತ್ತಾಗಿ, ಮಹತ್ತಾಗಿ ಬೆಳೆಯಿತು.

ಶ್ರೀಪೀಠದವರು ಧರ್ಮ ಮತ್ತು ಸಾಹಿತ್ಯ ಪ್ರಸಾರಕ್ಕೆ ಮೂರು ಯೋಜನೆಗಳನ್ನು ರೂಪಿಸಿಕೊಂಡರು. ಅವು : (೧) ಆದಿಗುರುಗಳ ಜಯಂತ್ಯುತ್ಸವ. (೨) 'ಪ್ರಸಾದ' ತ್ರೈಮಾಸಿಕ ಪ್ರಕಟಣೆ. (೩) ಜೆ. ಎಸ್. ಎಸ್. ಗ್ರಂಥಮಾಲೆಯ ಸ್ಥಾಪನೆ.

ಆದಿಗುರುಗಳ ಜಯಂತ್ಯುತ್ಸವವಂತೂ ಆಧುನಿಕ ಅನುಭವಮಂಟಪವಾಗಿ ಜ್ಞಾನವಾಹಿನಿಯ ತಲಕಾವೇರಿಯಾಗಿ ಮುನ್ನಡೆಯುತ್ತಿದೆ. 'ಪ್ರಸಾದ' ಎಂಬ ಮೂರು ತಿಂಗಳಿಗೊಮ್ಮೆ ಪ್ರಕಟವಾಗುವ ಸಂಚಿಕೆಯು ಅನೇಕ ಜ್ಞಾನ ಪಿಪಾಸುಗಳಿಗೆ ಗಂಗಾವಾಹಿನಿಯಾಗಿದೆ. ಮೂರನೆಯದಾದ ಜೆ.ಎಸ್.ಎಸ್. ಗ್ರಂಥಮಾಲೆ ಸಾಹಿತ್ಯದ ಮಾನಸಗಂಗೆಯಾಗಿ ಪರಿಣಮಿಸಿದೆ.

ಶ್ರೀಪೀಠದ ಪತಿಯಲ್ಲಿ ಹಿಂದಿನಿಂದಲೂ ನಡೆದುಬಂದ ಸಾಹಿತ್ಯ ಪ್ರಸಾರ ಕಾರ್ಯದ ಒಂದು ಮೂರ್ತಸ್ವರೂಪ ಈ "ಜೆ. ಎಸ್. ಎಸ್. ಗ್ರಂಥಮಾಲೆ." ಶ್ರೀಪೀಠದ ಗುರುವರ್ಗದವರ ಸಾಹಿತ್ಯ ಸೇವೆ ಘನೀಭೂತಗೊಂಡು ಈ ಹೆಸರಿನಲ್ಲಿ ಮಂತ್ರಮಹರ್ಷಿಗಳ ಅಮೃತಮಯ ಸ್ಪರ್ಶದಿಂದ "ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ" ಎಂಬ ಅಭಿಧಾನದಿಂದ ಸಂಸ್ಥಾಪಿತವಾಯಿತು. ಶ್ರೀಪೀಠದವರ ಸಾಹಿತ್ಯ ಸೇವೆ ವ್ಯವಸ್ಥಿತರೂಪದಲ್ಲಿ ಪ್ರಕಟವಾಗಲು ಈ ಮಾಲೆ ಹೆಚ್ಚು ಸಹಕಾರಿಯಾಯಿತು. ಶ್ರೀಪೀಠದವರು ಯಾವ ಕೆಲಸವನ್ನೂ ದುಡುಕಿ ಮಾಡಿದವರಲ್ಲ, ಉಚಿತವಾದುದನ್ನು ಎಷ್ಟು ಅಡೆತಡೆಗಳು ಬಂದರೂ ಬಿಟ್ಟವರಲ್ಲ. ಭವಿಷ್ಯದ ಬಗ್ಗೆ ಬಹಳಷ್ಟು ಚಿಂತನಶೀಲರಾದ ಶ್ರೀದ್ವಯರಿಂದ ಸಾಹಿತ್ಯ ಪ್ರಸಾರಕ್ಕೆ ಮೀಸಲಾದ ಗ್ರಂಥಮಾಲೆ ಈ ರೀತಿಯಲ್ಲಿ ಅಸ್ತಿತ್ವಕ್ಕೆ ಬಂತು. ಹೀಗೆ ಶ್ರೀಪೀಠದವರಿಂದ ಸಾಹಿತ್ಯ ಪ್ರಕಟಣೆ, ಸಂಗ್ರಹ, ಸಂಪಾದನೆಕಾರ್ಯ ಆರಂಭವಾಯಿತು.

## ಗ್ರಂಥಮಾಲೆಯ ಪ್ರಕಟಣೆಗಳು

ಜೆ. ಎಸ್. ಎಸ್. ಗ್ರಂಥಮಾಲೆಯಲ್ಲಿ ಸುಮಾರು ೨೬ ಗ್ರಂಥಗಳು ಈವರೆಗೆ ಪ್ರಕಟವಾಗಿವೆ. ಅವುಗಳ ವಿವರ ಇಂತಿದೆ:

೧ **ಶಿವಮಂತ್ರ ಮಹಿಮೆ:** ಜಗದ್ಗುರು ಶ್ರೀ ಶಿವರಾತ್ರಿಸ್ವಾಮಿಗಳು, ವೀರಸಿಂಹಾಸನ ಮಠ, ಸುತ್ತೂರು, ೧೯೫೮
೨ **ಅಕ್ಕಮಹಾದೇವಿ:** ಶ್ರೀ. ನಿ. ಪ್ರ. ಗೌರೀಶಂಕರಸ್ವಾಮಿಗಳು, ಅರಮನೆ ಪಂಚಗವಿಮಠ, ಮೈಸೂರು, ೧೯೫೯
೩ Education what it should be : ಎಂ. ಸಿದ್ಧಲಿಂಗಯ್ಯ, ೧೯೬೨
೪ **ಆಶೀರ್ವಾದ :** ಶ್ರೀ ಎಚ್. ಗಂಗಾಧರನ್, ೧೯೬೨
೫ **ಶಿವರಾತ್ರಿಶಿವಾಚಾರ್ಯ :** ಆಸ್ಥಾನ ವಿದ್ವಾನ್ ಎಂ. ಜಿ. ಸಂಜುಂಡಾರಾಧ್ಯ, ೧೯೬೨
೬ **ಆಶೀರ್ವಾದ :** ಕಲಿರಾಯ, ೧೯೬೩
೭ **ಕಾಯಕ :** ಕಲಿರಾಯ, ೧೯೬೩
೮ **ಕಂಬಳಿನಾಗಿದೇವ :** ಕಲಿರಾಯ, ೧೯೬೩
೯ **ಭೂಮೀಲ್ಲಿಕ್ಕಿತ್ತು ಸ್ವರ್ಗದಲ್ಲ್ಯಾನ್ಯಾಸು :** ಕಲಿರಾಯ, ೧೮೬೩
೧೦ **ಶಿವದಾಸಗೀತಾಂಜಲಿ :** ಸಂ. ಎಲ್. ಬಸವರಾಜು ಎಂ.ಎ., ೧೯೬೩
೧೧ **ಪ್ರಸಾದ :** ಸಂ. ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ೧೯೬೩
೧೨ **ಶೂನ್ಯತತ್ತ್ವ ವಿಕಾಸ ಮತ್ತು ಶೂನ್ಯಸಂಪಾದನೆ :** ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ೧೯೬೩
೧೩ **ಘನಲಿಂಗಿದೇವರ ವಚನಗಳು :** ಸಂ. ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳು, ೧೯೬೪
೧೪ **ಶಿವಲಿಂಗ ಕವಿಯ ಆಮುಗಿದೇವಯ್ಯಗಳ ಸಾಂಗತ್ಯ :** ಸಂ. ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ೧೯೬೫
೧೫ **ಮಂತ್ರಮಹರ್ಷಿ :** ಹೆಚ್. ಗಂಗಾಧರನ್ ಎಂ.ಎ; ಬಿ.ಎಲ್., ೧೯೬೭
೧೬ **ಸದ್ಗುರು ಸಂದೇಶ :** ಸಂ. ಹೆಚ್. ಗಂಗಾಧರನ್ ಎಂ.ಎ; ಬಿ.ಎಲ್.,೧೯೬೭
೧೭ **ಆದರ್ಶ ವಿವಾಹ :** ಸಿ. ಅಂಕಪ್ಪ, ಬಿ.ಎ., ೧೯೬೭
೧೮ **ಶಿವಯೋಗಿಗಳ ವಿಚಾರಲಹರಿ :** ಸುಧಾಕರ, ೧೯೬೮
೧೯ **ಜಗದ್ಗುರು ಶಿವರಾತ್ರೀಶ್ವರ ವಚನಗಳು :** ಸುಧಾಕರ, ೧೯೬೮
೨೦ **ಸುತ್ತೂರು ಶ್ರೀ ಜಗದ್ಗುರು ಪೀಠ—ಒಂದು ಪಕ್ಷಿನೋಟ :** ಎಸ್. ಸಂಜುಂಡಯ್ಯ, ೧೯೭೧
೨೧ **ಗಣಪತ್ಯುಪನಿಷತ್ತು :** ಸುಧಾಕರ,
೨೨ *Kingdom to Wisdom* : ಹೆಚ್. ಗಂಗಾಧರನ್,
೨೩ ಶರಣತತ್ತ್ವ ಪ್ರಕಾಶ : ಸಂ. ಹೆಚ್. ಗಂಗಾಧರನ್,
೨೪ **ಸುತ್ತೂರು ಭೌಗೋಳಿಕ ಸಾದೃಶ ಸಮೀಕ್ಷೆ :** ಎಂ. ಮಹದೇವಪ್ಪ, ಲೆಕ್ಚರರ್, ಜೆ. ಎಸ್. ಎಸ್. ಕಾಲೇಜು, ಭೂಗೋಳ ಶಾಸ್ತ್ರ ಶಾಖೆ, ಮೈಸೂರು, ೧೯೭೬
೩೫ **ಬಸವೇಶ್ವರಿನ್ ತಿರುವೊಳಿಗಳ್ :** (Tamil translation of Basaveshwhra Vachanas from the original Kannada) ಡಾ: ಎಂ. ವಿ. ಜಂಬುನಾಥನ್, ಬಿ.ಎಸ್ಸಿ ; ಎಂ.ಎ ; ಪಿ.ಹೆಚ್.ಡಿ., ೧೯೭೬
೨೬ ಸಂಕ್ಷಿಪ್ತ ಶಿವಪೂಜಾವಿಧಿ :

ಇತರೆ

೧ ದೇವರು : ಸ್ವಾಮಿಲಿಂಗಾನಂದರು, ಬಿ.ಎ. (ಆನರ್ಸ್), ೧೯೬೧
೨ ಶ್ರೀ ಪಾದಕ್ಕೆ ನಮೋನಮೋ ಮತ್ತು ಉಘೇ : ಕಲಿರಾಯ, ೧೯೬೭
೩ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶತಕ : ಸುಧಾಕರ, ೧೯೬೮

## ಮೇಲಿನ ಗ್ರಂಥಗಳ ಪಕ್ಷಿನೋಟ

### ಶಿವಮಂತ್ರ ಮಹಿಮೆ

'ಮಂತ್ರಮಹರ್ಷಿ'ಗಳೆಂದು ಪ್ರಖ್ಯಾತರಾದ ಪಟ್ಟದ ಶ್ರೀ ಶಿವರಾತ್ರಿಸ್ವಾಮಿಗಳ ಈ ಕೃತಿ ಅವರ ಮಹಾಮಂತ್ರ ಲಿಖಿತ ಯಜ್ಞಕ್ಕೆ ಪೂರಕವಾಗಿ ಹೊರಹೊಮ್ಮಿದ ಕೃತಿ ; ೧೪೦ ಪುಟಗಳ ಅಂದವಾದ ಮುದ್ರಣದ ಈ ಗ್ರಂಥದ ಬೆಲೆ ಒಂದು ರೂಪಾಯಿ ಎಂದಾಗ ಈಗಿನ ಮುದ್ರಣದ ಬೆಲೆಯು ಅರಿವಾಗುತ್ತದೆ. ದಿ. ಶ್ರೀ ಜಯಚಾಮರಾಜೇಂದ್ರ ಒಡೆಯರು ತಮ್ಮ ಸಂದೇಶದಲ್ಲಿ ತಿಳಿಸಿರುವ...."ಪೂಜ್ಯ ಜಗದ್ಗುರುಗಳವರು ಸಂಯಮ ನಿಷ್ಠೆಗಳಿಂದ ನಿರಂತರವಾಗಿ ಮಹಾಮಂತ್ರ ಲೇಖನ ಯಜ್ಞವನ್ನು ನಡೆಸುತ್ತಾಬಂದು ಲೋಕಹಿತಾರ್ಥವಾಗಿ ಮಹಾಮಂತ್ರದ ವಿಚಾರದಲ್ಲಿ ಅನುಭವಿಗಳಾದ ಮಹನೀಯರ ಅನುಭವದ ಅಮೃತವನ್ನು ಸಂಗ್ರಹಿಸಿ ಅವುಗಳ ಅರ್ಥವಿವರಣೆ ಇತ್ತು....ನವಚೇತನ ವನ್ನುಂಟುಮಾಡಿದ್ದಾರೆ...." (ಪುಟ ೨) ಎಂಬ ಮಾತೇ ಈ ಗ್ರಂಥದ ಮಹಿಮೆಯನ್ನು ತಿಳಿಸುತ್ತದೆ. ಈ ಕೃತಿಯಲ್ಲಿ ದಿ. ಬಿ. ಶಿವಮೂರ್ತಿ ಶಾಸ್ತ್ರಿಗಳು ಶ್ರೀಮಠದವರ ಸಾಹಿತ್ಯಸೇವೆಯನ್ನು ಸ್ಮರಿಸುತ್ತಾ ಗ್ರಂಥ ಲೇಖಕರ ಮಂತ್ರನಿಷ್ಠೆ ಯನ್ನು ಹೊಗಳಿದ್ದಾರೆ.

ಪ್ರಸ್ತುತ ಗ್ರಂಥವನ್ನು ಶ್ರೀಗಳವರು ಓದಿದವರಿಗೆ ವೇದ, ಆಗಮ, ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ, ಅನುಭವಸೂತ್ರ, ಶಿವಗೀತೆ, ವಿವೇಕಚಿಂತಾಮಣಿ, ವೀರಶೈವ ಮಹಾಪುರಾಣ, ರಾಜಶೇಖರವಿಳಾಸವೇ ಮುಂತಾದ ಮಹತ್‌ಕೃತಿಗಳಲ್ಲಿ ಮಹಾಮಂತ್ರ ಮಹಿಮೆಯ ಬಗ್ಗೆ ವ್ಯಕ್ತವಾಗಿರುವ ಅಭಿಪ್ರಾಯ, ಶ್ಲೋಕ, ಪದ್ಯಗಳನ್ನು ಯಥಾ ವತ್ತಾಗಿ ಸ್ವವಿಮರ್ಶನೆಯಿಂದ ವ್ಯಾಖ್ಯಾನಿಸಿದ್ದಾರೆ. ಅಲ್ಲದೆ ಹರಿಹರ, ಶಂಕರದೇವ ಮತ್ತು ಹರೀಶ್ವರರ ಕೃತಿಗಳಲ್ಲಿ ವ್ಯಕ್ತವಾಗಿರುವ ಶಿವಮಂತ್ರ ಮಹಿಮೆಯೂ ಇಲ್ಲಿ ಲಭ್ಯವಾಗಿ ಕರಿಯನ್ನು ಕನ್ನಡಿಯಲ್ಲಿ ಕಾಣಿಸಿದ್ದಾರೆ.

### ಅಕ್ಕಮಹಾದೇವಿ

ಇದು ಲಿಂ. ಗೌರೀಶಂಕರ ಮಹಾಸ್ವಾಮಿಗಳವರಿಂದ ರಚಿತವಾದ ಅಪೂರ್ಣ ಕೃತಿ. ಶ್ರೀಗಳವರು ಜ್ಞಾನದ ಖನಿ, ಅನುಭವದ ಮಡು. ಕಾಶಿಯಲ್ಲಿ ೩೦ ವರ್ಷಗಳ ಕಾಲ ಸತತವಾಗಿ ಜ್ಞಾನಾರ್ಜನೆಮಾಡಿದರು. ಭಾರತದ ಹಲವು ಭಾಷಾಪಂಡಿತರಾದ ಶ್ರೀಗಳವರು ಉಜ್ಜ್ವಲ ವಾಗ್ಮಿಗಳು. ಗಾಂಧೀಜಿಯಂತಹವರಿಗೆ ಸ್ಫೂರ್ತಿನೀಡಿದ ಮಹಾ ಮೇಧಾವಿಗಳು ಇವರು. "ಶಿವಾದ್ವೈತ ಪರವಾದ ಗೀತಾಭಾಷ್ಯ"ವನ್ನು ರಚಿಸಿದ್ದರಂತೆ. ಗೀತೆಯ ೩೦೦ ಶ್ಲೋಕ ಗಳಿಗೆ ಶರಣರ ವಚನಗಳನ್ನು ಸಮನ್ವಯ ಮಾಡಿದ್ದರು. ಈ ಸಾಮರ್ಥ್ಯ ಇತರರ ಅಪಕ್ವ ಪಾಂಡಿತ್ಯಕ್ಕೆ ಅಸಾಧ್ಯ ವಾದುದು. ಇವರ ಪ್ರಸ್ತುತ ಕೃತಿ ಅಕ್ಕಮಹಾದೇವಿಯನ್ನು ಆಧರಿಸಿ ಚಂಪೂವಿನಲ್ಲಿ ಬರೆದ ಕೃತಿ. ಅಪೂರ್ಣವಾಗಿರುವ ಈ ಕೃತಿ ಅವರ ಅಪಾರ ಪಾಂಡಿತ್ಯಕ್ಕೆ ನಿದರ್ಶನವಾಗಿದೆ.

ಶರಣರ ಜೀವನ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗುತ್ತಿದೆಯಲ್ಲ ! ಅದೇ ನಮಗೆ ಹೆಮ್ಮೆ !

### Education what it should be

ಇದು ಶ್ರೀ ಎಂ. ಸಿದ್ಧಲಿಂಗಯ್ಯನವರ ಚಿಕ್ಕದಾದ ಇಂಗ್ಲೀಷ್ ಕೃತಿ. ಭಾರತಕ್ಕೆ ಸ್ವಾತಂತ್ರ್ಯ ಬಂದ ತರುವಾಯ ವಲ್ಲಿ ಶಿಕ್ಷಣದ ಬಗ್ಗೆ ರಾಷ್ಟ್ರಮಟ್ಟದಲ್ಲಿ ವ್ಯಾಪಕವಾದ ಚಿಂತನೆ ಅಗತ್ಯವಾಗಿತ್ತು. ಆ ಚಿಂತನೆಯಲ್ಲಿ ಪಾಲುಗೊಂಡ ಕೆಲವೇ ಶಿಕ್ಷಣ ತಜ್ಞರಲ್ಲಿ ಸಿದ್ಧಲಿಂಗಯ್ಯನವರು ಒಬ್ಬರು. ಶಿಕ್ಷಣದ ಬಗ್ಗೆ ಬೃಹದ್ ಕೃತಿಗಳನ್ನು ಬರೆದ ಇವರು ಶಿಕ್ಷಣ ಸಂಸ್ಥೆಗಳ (ಕಾಲೇಜು) ಸ್ಥಾಪಕರೂ ಆಗಿದ್ದಾರೆ. ಪ್ರಸಕ್ತ ಕೃತಿಯಲ್ಲಿ ಶಿಕ್ಷಣ ಹೇಗಿರಬೇಕು ? ಎಂಬುದನ್ನು ವಿವೇಚಿ ಸುತ್ತಾ ವಿಶ್ವದಲ್ಲಿ ಪರಸ್ಪರ ಅರಿವನ್ನು ಮೂಡಿಸುವ ಶಿಕ್ಷಣಬೇಕು ಎನ್ನುತ್ತಾ ಇದಕ್ಕೆ ತರಗತಿಯಲ್ಲಿ ಬೋಧನಾವಿಧಾನ ಮತ್ತು ಪಠ್ಯಪುಸ್ತಕಗಳಲ್ಲಿ ತೀವ್ರತರವಾದ ಬದಲಾವಣೆಗಳು ಖಂಡಿತಾ ಅಪೇಕ್ಷಣೀಯ ಎಂದಿದ್ದಾರೆ. ಈ ಬಗ್ಗೆ.... shall we give top priority in the third five year plan ? (ಪುಟ ೧೨) ಎಂದಿದ್ದರೂ ಸಹ ತಹಲ್ ವರೆಗೂ ಆ top priority ಲಭ್ಯವಾಗಿಲ್ಲವಲ್ಲ ಎಂಬುದೇ ಕೊರತೆ.

**ಶಿವರಾತ್ರಿ ಶಿವಾಚಾರ್ಯ**

ಈ ಗ್ರಂಥದ ಪ್ರಸ್ತಾವನೆಯಲ್ಲಿ ಡಾ. ಶಿ. ಚೆ. ನಂದಿಮಠ ಅವರು...."ಈ ಗ್ರಂಥವನ್ನು ಬರೆದ ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ ಅವರು ವೀರಶೈವ ಸಾಹಿತ್ಯದಲ್ಲಿ ಬಹಳ ಪರಿಶ್ರಮಮಾಡಿದವರು. ಅವರಿಂದ ಉಪಯುಕ್ತವಾದ ಅನೇಕ ಗ್ರಂಥಗಳು ಹೊರಬಿದ್ದಿವೆ. ಅವರು ಸಂಸ್ಕೃತ ಭಾಷೆಯಲ್ಲಿ ಪಂಡಿತರಾಗಿದ್ದರೂ ಆಧುನಿಕ ವಿಮರ್ಶೆ ಮತ್ತು ಸಂಶೋಧನೆಯ ಕಡೆಗೆ ಒಲವು ಹೆಚ್ಚಾಗಿದೆ...." ಎಂಬ ಮಾತು ಕೃತಿಕಾರರ ಬಗ್ಗೆ ಬೆಳಕು ಚೆಲ್ಲುತ್ತದೆ. ಶ್ರೀ ಆರಾಧ್ಯರು ಪ್ರಸ್ತುತ ಗ್ರಂಥದಲ್ಲಿ ಸುತ್ತೂರು ಜಗದ್ಗುರು ಮಠದ ಬಗ್ಗೆ ಪಾಂಡಿತ್ಯಪೂರ್ಣವೂ, ಸಂಶೋಧನಾತ್ಮಕವೂ ಆದ ಮಾಹಿತಿಗಳನ್ನು ಒದಗಿಸಿದ್ದಾರೆ. ಆದಿ ಗುರುಗಳಿಂದ ಹಿಡಿದು ಪ್ರಸ್ತುತದವರೆಗೂ ಶ್ರೀಮಠದವರ ವಿಷಯವನ್ನು ಅವರು ನಡೆಸಿದರೆನ್ನಲಾದ ಅದ್ಭುತ ಘಟನೆಗಳೊಡನೆ, ಅವರ ಸಾಧನೆ-ಸಿದ್ಧಿಗಳೊಡನೆ ಬರೆದಿದ್ದಾರೆ. ಸುತ್ತೂರು ಮಠಕ್ಕೆ ಸಂಬಂಧಿಸಿದ ಲಭ್ಯ ಶಾಸನಗಳನ್ನು ಅಭ್ಯಸಿಸಿ ಕಾಲನಿರ್ಣಯಮಾಡಿದ್ದಾರೆ. ಸಾಹಿತ್ಯಲೋಕದಲ್ಲಿ ನಿರ್ಣಯಾತ್ಮಕ ವಿಷಯಗಳು ಎಂಬ ಬಗ್ಗೆಯೂ ಒಂದು ಬಟ್ಟಾರೆ ನಿರ್ಣಯ ಇರಲಾರದು. ಒಂದು ಸಾವಿರಕ್ಕೂ ಮೇಲ್ಪಟ್ಟ ಕಾಲದ ಅವಧಿಯಲ್ಲಿ ೨೩ ಮಂದಿಗೂ ಹೆಚ್ಚು ಮಂದಿ ಶ್ರೀ ಗುರುಪೀಠವನ್ನು ಅಲಂಕರಿಸಿರಬೇಕು ಎನ್ನಿಸುತ್ತದೆ. (?) ಕೃತಿಯಲ್ಲಿ ಅಲ್ಲಲ್ಲಿ ಗುರು-ಶಿಷ್ಯರ ಸಂವಾದರೂಪದಲ್ಲಿ 'ವೀರಶೈವ ಧರ್ಮ'ದ ಪ್ರಧಾನ ವಿಷಯಗಳ ಬಗ್ಗೆ ಚರ್ಚೆ ನಡೆದು ಆ ಪ್ರಶ್ನೋತ್ತರಗಳು ವೀರಶೈವ ತತ್ವವನ್ನೂ ಪರಿಚಯಿಸುತ್ತವೆ. ಗ್ರಂಥದ 'ಅನುಬಂಧ' ತುಂಬಾ ಉಪಕಾರಿಯಾಗಿದೆ. ಶಾಸನಗಳ ಪಾಠಗಳು, ರಾಜಪತ್ರಗಳು, ಶ್ರೀಪೀಠಕ್ಕೆ ಸಲ್ಲಿಸಿರುವ ಬಿರುದು-ಬಾವಲಿಗಳ ಅಂಕೆಸಂಖ್ಯೆಗಳು ಇಲ್ಲಿವೆ. ಶ್ರೀ ಆರಾಧ್ಯರ ಲಲಿತ ಸಾಹಿತ್ಯ ಇಲ್ಲಿ ಕಲ್ಪನೆಯ ಹಾದಿಯಲ್ಲಿ ಹೃದ್ಯವಾಗಿ ಪಲ್ಲವಿಸಿದೆ.

**ಆಶೀರ್ವಾದ**

ಇದು ಶ್ರೀ ಹೆಚ್. ಗಂಗಾಧರನ್ ಅವರ ಸಂಪಾದಿತ ಕೃತಿ. ಒಂದು ಅರ್ಥಪೂರ್ಣವಾದ ಮತ್ತು ಕ್ರಮಬದ್ಧವಾದ ರೀತಿಯಲ್ಲಿ ಆದಿಗುರುಗಳವರ ಜಯಂತ್ಯುತ್ಸವವನ್ನು ಆಚರಿಸಲು ಶ್ರೀ ಪೀಠದವರು ಆರಂಭಿಸಿದಾಗ, ಆ ಉತ್ಸವಗಳಲ್ಲಿ ನಡೆದ ಕಾರ್ಯಕ್ರಮಗಳ ಸಮಗ್ರ ವರದಿಯನ್ನು ನೀಡಿರುವುದು ಕಾಣಬರುತ್ತದೆಯಾದರೂ ಬೇರೆ ರೀತಿಯಲ್ಲಿ ಈ ಸಂಪಾದನೆ ಬಹಳಷ್ಟು ಉಪಕಾರಿಯಾಗಿದೆ. ಶ್ರೀಮಠದವರ ಬಗ್ಗೆ, ಶ್ರೀಮಠದವರ ಸಾಧನೆಯ ಬಗ್ಗೆ ಅನೇಕಾನೇಕ ಗಣ್ಯ ವ್ಯಕ್ತಿಗಳು ತಮ್ಮ ಅತೀವ ಸಂತೋಷವನ್ನು ವ್ಯಕ್ತಪಡಿಸಿದ ಸಂದೇಶಗಳ, ಬಿನ್ನವತ್ತಳೆಗಳ, ಮಾನಪತ್ರಗಳ. ಭಾಷಣಗಳ, ಸ್ತುತಿ-ಸ್ವಾಗತ ಪದ್ಯಮಾಲೆಗಳ ಯಥಾವತ್ತಾದ ಪ್ರಕಟಣೆಗಳಿವೆ. ಸರ್ ಮಿರ್ಜಾ ಇಸ್ಮಾಯಿಲ್ ಅವರ ಕಾಲದ ಭಾವಚಿತ್ರಸಹಿತವಾದ ಸಮಾರಂಭದ ವರದಿಯೂ ಇಲ್ಲಿದೆ. ರಾಜೇಂದ್ರಪ್ರಸಾದರವರು ಸಂಸ್ಥೆಯ ಬಗ್ಗೆ ಆಡಿದ ಪ್ರಶಂಸೆಯ ಉಲ್ಲೇಖವಿದೆ—ಮಂತ್ರಿಮಹೋದಯರು—ಅಧಿಕಾರಿಗಳು, ಹಿರಿಯ ಮಠಾಧಿಪತಿಗಳು—ರಾಜರು—ಪಾಳೆಯಗಾರರು ಸಮಾಜದ ಎಲ್ಲಾ ರಂಗದವರ ಅಭಿಪ್ರಾಯವನ್ನು ಬಹಳಷ್ಟು ಕಷ್ಟಪಟ್ಟು ಸಂಗ್ರಹಿಸಿ ಸಂಪಾದಿಸಿದ್ದಾರೆ. ಈ ಗ್ರಂಥದಲ್ಲಿ ಮೂರು ಭಾಗಗಳಿವೆ. ಎರಡನೆಯ ಭಾಗ "ಆಶೀರ್ವಾದ-ಅನುಭವ" ಎಂಬ ಶೀರ್ಷಿಕೆಯನ್ನು ಒಳಗೊಂಡಿದೆ. ಇಲ್ಲಿ ಯಾಜ್ಞವಲ್ಕ್ಯ ಗಾರ್ಗಿ ಇವರ ಸಂವಾದದಿಂದ ಹಿಡಿದು ಅನುಭವ ಮಂಟಪದ ವರೆಗಿನ ಅನೇಕ ತತ್ವಪರವಾದ ಅಂಶಗಳು ಬಹು ಬೋಧಪ್ರದವಾಗಿ ದೊರಕುತ್ತವೆ. ಸಂಕಲನ ಉತ್ತಮ ಸಂಪಾದನೆಯಾಗಿದೆ.

"ಆಶೀರ್ವಾದ", "ಕಾಯಕ", "ಕಂಬಳಿನಾಗಿದೇವ". "ಭೂಮೀಲ್ಬಿಕ್ಕ್ಮತ್ತು ಸ್ವರ್ಗದಲ್ಕ್ಯನ್ನಾಸು", "ಆದರ್ಶ ವಿವಾಹ"—

ಈ ಐದೂ 'ಕಲಿರಾಯ' ಎಂಬ ಅಂಕಿತದ ಶ್ರೀ ಸಿ. ಅಂಕಪ್ಪನವರು ಬರೆದ ನಾಟಕಗಳು. ಕಂಬಳಿನಾಗಿದೇವ ಮತ್ತು ಆದರ್ಶವಿವಾಹವು ಬಸವಯುಗದ ಶರಣರನ್ನು ಆಧರಿಸಿ ಬರೆದ ನಾಟಕಗಳು. ಕಾಯಕ ಮತ್ತು ಆಶೀರ್ವಾದ ಸುತ್ತೂರು ಪರಂಪರೆಯವರನ್ನು ಆಧರಿಸಿ ಬರೆದ ನಾಟಕಗಳು. ಭೂಮೀಲ್ಬಿಕ್ಕ್ಮತ್ತು ಸ್ವರ್ಗದಲ್ಕ್ಯನ್ನಾಸು ಎಂಬ ನಾಟಕ ಇಂದಿನ ಗ್ರಾಮಜೀವನದ ಸಹಜ ಅಭಿವ್ಯಕ್ತಿ. ಇಲ್ಲಿನ ಮಾದಣ್ಣನ ಪಾತ್ರ ಸೊಗಸಾಗಿದೆ. ಅಂಕಪ್ಪನವರಿಗೆ ಗ್ರಾಮ್ಯ ಭಾಷೆಯ ಮೇಲೆ ಹಿಡಿತವಿರುವುದು ಇಲ್ಲಿ ಕಾಣಬರುತ್ತದೆ. ಈ ಎಲ್ಲಾ ನಾಟಕಗಳ ಉತ್ತಮಿಕೆ ಓದಿಗಿಂತಲೂ ಆಡಿದ, ನೋಡಿದ ಪ್ರೇಕ್ಷಕರಿಗೆ ಹೆಚ್ಚು ಗೊತ್ತು. ಅನೇಕ ಕಡೆ ಇವರ ನಾಟಕಗಳು 'ಸೈ' ಎನಿಸಿಕೊಂಡಿವೆ.

**ಶಿವದಾಸ ಗೀತಾಂಜಲಿ**

ಡಾ. ಎಲ್. ಬಸವರಾಜು ಅವರ ಒಂದು ಉತ್ತಮ ಸಂಪಾದಿತ ಕೃತಿ. ಪ್ರಕಾಂಡ ಪಂಡಿತರ, ಖ್ಯಾತ ಸಾಹಿತಿಗಳ ಪ್ರಶಂಸೆಗೆ ಪಾತ್ರವಾದ ಸಂಶೋಧನಾತ್ಮಕ ಕೃತಿ ಇದು. ಈ ಕೃತಿಗೆ ಬರೆದಿರುವ ೧೪೩ ಪುಟಗಳ ಪೀಠಿಕೆ ಒಂದು ಡಾಕ್ಟರೇಟ್ ನಿಬಂಧ ಇದ್ದಂತೆ ಇದೆ. ವಿಜ್ಞಾಪನೆ ಇತ್ಯಾದಿಗಳಿಗೆ ೨೫ ಪುಟಗಳಿವೆ. ೨೨೮ ಪುಟಗಳಷ್ಟು ಪಠ್ಯ ಅಂದರೆ ಶಿವದಾಸರ ಗೀತೆಗಳು ಮತ್ತು ೨೨೩ ಪುಟಗಳಷ್ಟು ಪರಿಶಿಷ್ಟ, ಅನುಬಂಧ ಇದ್ದು ಒಟ್ಟು ೬೧೯ ಪುಟಗಳ ಬೃಹದ್ಗ್ರಂಥ. ಜ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ತಮ್ಮ ಆಶೀರ್ವಾದದಲ್ಲಿ "....ನಮ್ಮ ಸಂಸ್ಕೃತಿಗೆ ಅಮೃತತೀರ್ಥಸ್ವರೂಪರಾದ ಆ ಪ್ರಮಥರ ಗೇಯಕೃತಿಗಳು ಇಡೀ ಮಾನವಲೋಕದ ಸಾರಸ್ವತ ಸ್ವತ್ತೆಂದು ಅವನ್ನು ಪ್ರಕಟಿಸಲು ಪ್ರಯತ್ನಿಸಿದೆವು" ಎಂದಿದ್ದಾರೆ. ಇಂತಹ ಆಸ್ತಿ ಈ ಗೀತಾಂಜಲಿ. ಈ ಕೃತಿಯ ಬಗ್ಗೆ ಬೇಂದ್ರೆಯವರು "....ಡಾ. ಬಸವರಾಜು ಅವರು ಇದನ್ನು ಸಾಹಿತ್ಯಲೋಕಕ್ಕರ್ಪಿಸಿ ಹೊಸ ವಿಕ್ರಮವನ್ನು ಸ್ಥಾಪಿಸಿದ್ದಾರ" ಎಂದಿದ್ದಾರೆ. ತೀ. ನಂ. ಶ್ರೀಕಂಠಯ್ಯನವರು"...ಬಸವರಾಜು ಅವರ ಕಾರ್ಯಶ್ರದ್ಧೆಯೂ....ಹೆಚ್ಚಿನ ಅಭಿನಂದನೆಗೆ ಪಾತ್ರವಾಗಿದೆ" ಎಂದಿದ್ದಾರೆ.

"This book opens out a fresh field of enquiry in the history of Kannada literature...Opens a new field of further investigation...learned contribution of the editor.. Basavaraju deserves the warmest congratulations..." (ಪ್ರಾ. ಡಿ. ಎಲ್. ನರಸಿಂಹಾಚಾರ್ಯ, ಪುಟಗಳು vii, viii, ix)

ಹೀಗೆ ದೊಡ್ಡವರ ಈ ಮಾತುಗಳಿಂದ ಕೃತಿಯ ದೊಡ್ಡತನ, ಅದು ದಿಗ್ದರ್ಶಿಸಿರುವ ನೂತನ ಕ್ಷಿತಿಜ, ಶರಣರ ವಿಶ್ವವ್ಯಾಪಿದರ್ಶನಶಕ್ತಿ ಇತ್ಯಾದಿಗಳು ವ್ಯಕ್ತವಾಗುತ್ತವೆ.

ಈ ಕೃತಿಯ ಬಗ್ಗೆ ಈ ಲೇಖನದ ಸೀಮಾರೇಖೆಯಲ್ಲಿ ಏನೇನನ್ನೋ ಹೇಳಿ ತೃಪ್ತಿಯಾಗುವಂತಿಲ್ಲ. ಒಂದೆರಡು ಮಾತುಗಳನ್ನು ಸೊಲ್ಲಿಕ್ಕಿ ಸುಮ್ಮನಾಗಬೇಕು. ಅಷ್ಟೆ—ಬಸವರಾಜು ಅವರು ಉಪಯೋಗಿಸಿರುವ ಪದ "ಶಿವದಾಸ" ಎಂಬುದು "ಶಿವಶರಣ" ಎಂಬ ಪದಕ್ಕೆ ಪ್ರತಿಯಾಗಿ ಉಪಯೋಗಿಸಿರುವುದು ಹೇಳಿಮಾಡಿಸಿದಂತೆ ಅರ್ಥಪೂರ್ಣವಾದ ಪದ. ಈ ಪದವನ್ನು ಇವರಿಗಿಂತ ಹಿಂದೆ ಯಾರೇ ಬಳಸಿದ್ದರೂ ಈ ಕೃತಿಯಲ್ಲಿ ಅದಕ್ಕೆ ಒಂದು ಅರ್ಥ, ಒಂದು ರೂಪು ಬಂದಿದೆ.

ವೈವಿಧ್ಯಮಯವಾದ ಕನ್ನಡ ಛಂದೋರೂಪದ ಹಲವು ಪ್ರಕಾರಗಳು ಹರಿದಾಸರ ಕೀರ್ತನೆಗಳಲ್ಲಿ, ಹಾಡುಗಬ್ಬಗಳಲ್ಲಿ ದೊರಕಿದ್ದವು. ಶರಣರು ಈ ವಿಷಯದಲ್ಲಿ ಬಹಳಷ್ಟು ಕಾಣಿಕೆ ಸಲ್ಲಿಸಿದ್ದಾರೆ ಎಂಬುದೇ ತಿಳಿದಿರಲಿಲ್ಲ. ಅವರು ವಚನಕಾರರಾಗಿದ್ದರೇ ವಿನಹ ವಾಗ್ಗೇಯಕಾರರು ಆಗಿರಲಿಲ್ಲ. 'ಶಿವದಾಸ ಗೀತಾಂಜಲಿ'ಯು ದಾಸರಿಗೂ ಪೂರ್ವದಲ್ಲಿ ಮತ್ತು ೧೫ನೇ ಶತಮಾನಕ್ಕೂ ಹಿಂದೆ ಶಿವಶರಣರು ಹಾಡುಗಬ್ಬಗಳನ್ನು ರಚಿಸಿದ್ದರೆಂದು ತೋರಿಸಿ ಸಾಹಿತ್ಯಲೋಕದಲ್ಲಿ ಒಂದು ಹೊಸ ಕ್ಷಿತಿಜವನ್ನು ತೆರೆದು ತೋರಿಸಿದೆ.

"ವಚನ" ಎಂಬ ಪದಕ್ಕೆ ಇದುವರೆಗೂ ಸಾಮಾನ್ಯ ಅನಿಸಿಕೆಗೆ ಇದ್ದ ಅರ್ಥವನ್ನು ಶ್ರೀ ಬಸವರಾಜು ಅವರು ತಳ್ಳಿಹಾಕಿ ಅದಕ್ಕಿರುವ ವಿಶಾಲ ವ್ಯಾಪಿ ಅರ್ಥವನ್ನು ಚೆನ್ನಾಗಿ ಸಾಬೀತುಮಾಡಿದ್ದಾರೆ. "....ಶೂನ್ಯಸಂಪಾದನಾಕಾರರ ನಿರ್ದೇಶನ ವಾಕ್ಯದಿಂದ ಹಿಡಿದು ಶರಣರ ವಚನ, ಹಾಡು (= ಪದಗಳು) ಷಟ್ಪದಿ ಮುಂತಾದುವೆಲ್ಲವನ್ನೂ ಸೂಚಿಸುವ ವ್ಯಾಪಕವಾದ ಪಾರಿಭಾಷಿಕ...." (ಪೀಠಿಕೆ, ಪುಟ ೮೭) ಎಂದು ವಚನದ ವ್ಯಾಖ್ಯೆಯನ್ನು ವಿಸ್ತರಿಸಿದ್ದಾರೆ.

ಸಂಸ್ಕೃತಕ್ಕೆ ವೀರಶೈವರು ಎಷ್ಟರ ಮಟ್ಟಿಗೆ ಋಣಿಗಳು ಎಂಬುದನ್ನು ಡಾ. ಬಸವರಾಜು ಅವರು ಪ್ರಸ್ತಾಪಿಸುತ್ತಾ "....ಇಡೀ ಭರತಖಂಡದಲ್ಲೇ ಅನಾದಿಕಾಲದಿಂದಲೂ ಹೀಗೆ ಪ್ರಚಲಿತವೂ ಪೂಜ್ಯವೂ ಆದ ಸಂಸ್ಕೃತದೊಡನೆ ವೀರಶೈವಕ್ಕಿರುವ ಋಣಾನುಬಂಧವೇನೆಂಬುದರ ವಿವರವಾದ ವಿಚಾರ...."ವನ್ನು ಲಿಂಗ ಮೆಚ್ಚಿ ಅಹುದೆನ್ನುವಂತೆ ಪ್ರಖರವಾಗಿ, ಓತಪ್ರೋತವಾದ ನಿದರ್ಶನಗಳೊಂದಿಗೆ, ಆಧಾರಯುತವಾಗಿ ಉದ್ಧರಿಸಿರುವುದು ತಲೆದೂಗುವಂತೆ ಇದೆ.

ಶೈವ–ವೀರಶೈವದ ಪ್ರಸ್ತಾಪದಲ್ಲಿ "ವೀರಶೈವವು ಕಾಲದಿಂದ ಕಾಲಕ್ಕೆ ಪಾಶುಪತರೊಡನೆ ಮತ್ತು ಶೈವ ಸಿದ್ಧಾಂತಿಗಳೊಡನೆ ಬೆರೆತು ಬಾಳಿ ಕಲಿತು ಮುಂದುವರಿಯಿತು...." ಎಂದು ವಾದಕ್ಕೆ ಎರಡಿಲ್ಲದಂತೆ ಸಾಧಾರಯುತವಾಗಿ ನಿರ್ಣಯಿಸಿದ್ದಾರೆ.

"ಶಿವದಾಸ ಗೀತಾಂಜಲಿ"ಯಲ್ಲಿ ೨೭ ಶಿವದಾಸರ ಹಾಡುಗಳಿವೆ. ಈ ಹಾಡುಗಳು "ಕರ್ನಾಟ ವಿಷಯ ಜಾತಿ"ಯ ಛಂದಸ್ಸಿನ ಹಲವು ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಶಿವದಾಸರು (= ಶರಣರು) ಸಲ್ಲಿಸಿರುವ ಮಹತ್ತರ ಸೇವೆಯನ್ನು ಕನ್ನಡ ಜನತೆಗೆ ನೀಡಿ ಕೃತಕೃತ್ಯವಾಗಿವೆ. "ಶಿವಶರಣರು ಸಮಕಾಲೀನ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನೂ ಮುಟ್ಟಿದರು. ಅವರು ಮುಟ್ಟಿದ್ದೆಲ್ಲ ಚಿನ್ನವಾಯ್ತು" ಇಂತಹ ಕೃತಿಯನ್ನು—ಇದರ ಪೀಠಿಕಾ ಭಾಗವನ್ನು ಓದಬೇಕು, ಓದಿ ಧನ್ಯರಾಗಬೇಕು.

**ಪ್ರಸಾದ**

ಲಿಂ. ಜಗದ್ಗುರು ಪಟ್ಟದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರ ಪಟ್ಟಾಧಿಕಾರದ ವಜ್ರಮಹೋತ್ಸವದ ಸಂಸ್ಮರಣ ಸಂಚಿಕೆ ಈ "ಪ್ರಸಾದ". ಸಂಪಾದಕರು ಡಾ. ಹೆಚ್. ತಿಪ್ಪೇರುದ್ರಸ್ವಾಮಿಗಳು. ಇಲ್ಲಿ ವಿವಿಧ ಬರಹಗಾರರ ೩೪ ಲೇಖನಗಳು ಇವೆ. ಆಳಿದ ಮಹಾರಾಜರ ಸಂದೇಶದಲ್ಲಿ "....ವಿಚಾರಪೂರಿತವಾದ ಅಂತಹ ಲೇಖನಗಳು ಈ ಗ್ರಂಥದ ಬೆಲೆಯನ್ನು ಹೆಚ್ಚಿಸಿವೆ" ಎಂದು ವ್ಯಕ್ತಪಡಿಸಿದ್ದಾರೆ. ಆದರೂ ಇಲ್ಲಿ ಕೆಲವು ಲೇಖನಗಳನ್ನು ಬಿಟ್ಟರೆ ಉಳಿದವು ವಿಚಾರಪೂರಿತವೂ, ವಿಮರ್ಶಾತ್ಮಕವೂ ಆಗಿಲ್ಲವೆಂದರೆ ಕೃತಿಗೇನೂ ಕುಂದಿಲ್ಲವಷ್ಟೆ ? ಕೆಲವು ಚರ್ವಿತಚರ್ವಣವಾಗಿವೆ. ಆದಾಗ್ಯೂ ಇಲ್ಲಿನ ಲೇಖನಗಳಾದ "ವೀರಶೈವ ದರ್ಶನದ ಲಿಂಗ ಭೋಗೋಪಭೋಗ" ; "ಬಸವಣ್ಣನವರ ವಚನಗಳಲ್ಲಿ ಶ್ಲೇಷಾರ್ಥ" ; "ಬಸವಣ್ಣನವರ ಜನ್ಮಭೂಮಿ ಮತ್ತು ಜನ್ಮದಾತ"; "ಅನುಭಾವ ಮಾರ್ಗ" "ಅನುಭಾವಿ ರತ್ನಾಕರ". "ಪರಂಪರೆ ಮತ್ತು ರಾಘವಾಂಕ ಪ್ರತಿಭೆ" ಇತ್ಯಾದಿ ಕೆಲವು. ಸಂಶೋಧನಾತ್ಮಕ ವಿಮರ್ಶನಯುತವಾದ ಲೇಖನಗಳಾಗಿವೆ.

**ಶೂನ್ಯತತ್ವವಿಕಾಸ ಮತ್ತು ಶೂನ್ಯಸಂಪಾದನೆ**

ಸಾಹಿತ್ಯಲೋಕದಲ್ಲಿ ಅಭಿಪ್ರಾಯ ಭೇದ ಹೆಚ್ಚಿದಷ್ಟೂ ಕೃತಿಯ ವಿಷಯದ ಮಹತ್ವ ಹೆಚ್ಚುತ್ತದೆ. "ಶೂನ್ಯ ಸಂಪಾದನೆಯನ್ನು ಕುರಿತು" ಎಂಬ ಶ್ರೀ ಚಿದಾನಂದಮೂರ್ತಿಯವರ ಕೃತಿಗೆ ಸವಾಲಲ್ಲದಿದ್ದರೂ ಉತ್ತರ ರೂಪದ ಕೃತಿ ಇದು ಎನ್ನಬಹುದೇನೊ. ಈ ಬಗ್ಗೆ "ವಿವಾದಾಸ್ಪದಗಳ ವಿಚಾರಗಳು" ಎಂಬ ಅಧ್ಯಾಯದಲ್ಲಿ ಕೆಲವು ವಾದಗಳ ಮಂಡನೆ, ವಿಮರ್ಶೆ ಸೊಗಸಾಗಿ ಬಂದಿದೆ.

ಈ ಕೃತಿ 'ಶೂನ್ಯ' ಎಂಬುದರ ಬಗ್ಗೆ ಮನೋಜ್ಞವಾಗಿ ಚಿಂತನೆಮಾಡಿದೆ. ಶರಣರ ಶೂನ್ಯತತ್ವ, ಬೌದ್ಧರ ಶೂನ್ಯವಾದ ಇವುಗಳ ತುಲನೆ ಇದೆ. ಅಲ್ಲದೆ ನಾಲ್ಕೂ ಶೂನ್ಯಸಂಪಾದನೆಗಳ ಬಗ್ಗೆ ಪರಿವೀಕ್ಷಣೆ ಮಾಡಿದೆ. ಅಲ್ಲಮ ಪ್ರಭುವಿನ ಜ್ಞಾನ ಪ್ರಭಾವಲಯಕ್ಕೆ ಸಿಲುಕಿ ಉರಿಯುಂಡ ಕರ್ಪೂರದಂತಾದ ಮಹಿಮಾನ್ವಿತರ ಪ್ರಸಂಗಗಳು ಬಂದು ಅವು ಕೃತಿಗೆ ಕಳಸವಿಟ್ಟಿವೆ."ಮಾತೆಂಬುದು ಜ್ಯೋತಿರ್ಲಿಂಗ"ವೆಂಬ ಅಧ್ಯಾಯದಲ್ಲಿ "ಚೈತನ್ಯದ ಚಿರಂತನ ವೀಣಾಗಾನ" ವನ್ನು ನುಡಿಸಿದ್ದಾರೆ. ವೀರಶೈವ ಧರ್ಮದ ಅಭ್ಯಾಸಿಗಳಿಗೆ ಇದು ಪೂರಕವಾದ ಗ್ರಂಥವಾಗಿದೆ.

**ಘನಲಿಂಗ ಶಿವಯೋಗಿಗಳ ವಚನಗಳು**

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರರು ತಮ್ಮ ಪೂರ್ವಿಕರಂತೆಯೇ ಸಾಹಿತ್ಯ ಸೇವೆ ನಡೆಸಿದ್ದಾರೆ ಎಂದರೆ ಈ ಕಾಯಕ ನಡಸಲು ಅವರಿಗೆ ಬಿಡುವಿತ್ತೆ ಎನಿಸಿದರೂ, ಬಿಡುವಿನ ಏಕಾಂತದ ವೇಳೆ ಅವರು ಇದೇ ಕಾಯಕವನ್ನು ನಡೆಸಿದರು ಎಂದರೆ ಅವರ ಸಾಹಿತ್ಯಾಭಿರುಚಿ ಅರ್ಥವಾಗುತ್ತದೆ. ಪ್ರಸ್ತುತ ಗ್ರಂಥ ಅವರ ಪರಂಪರೆಯ ಶ್ರೀ ಘನಲಿಂಗಿದೇವರು ಉದ್ದಾಮ ವಚನಕಾರರಾಗಿ ರಚಿಸಿದ್ದ ವಚನಗಳ ಸಂಪಾದನೆಯಾಗಿದೆ. ಈ ಹಿಂದೆ ಈ ವಚನಗಳ ಸಂಪಾದನಕಾರ್ಯ ನಡೆದಿತ್ತು. ಪ್ರಸ್ತುತ ಶ್ರೀಗಳು ಉತ್ತಮ ಪರಿಷ್ಕರಣದೊಡನೆ ಅಂದವಾದ ರೀತಿಯಲ್ಲಿ ಅರ್ಥಪೂರ್ಣವಾದ ಹೇಳಿಕೆಗಳೊಡನೆ ವಚನಗಳನ್ನು ಸಂಪಾದಿಸಿದ್ದಾರಲ್ಲದೆ ಗ್ರಂಥದ ಮುದ್ರಣ ವಿನ್ಯಾಸ, ಬಹು ಸುಂದರವಾಗಿದೆ.

ಶ್ರೀ ಘನಲಿಂಗಿಗಳು "ಪಿಂಡೋತ್ಪತ್ತಿಯಲ್ಲಿಯೇ....ಶರಣವೆಣ್ಣಾಗಿ" ಹುಟ್ಟಿದವರು. ಅಕ್ಕನ ವೈರಾಗ್ಯ ಶ್ರೀಗಳವರಲ್ಲಿದ್ದು ಇವರು ಪುರುಷರೂಪಿನ ಅಕ್ಕನಂತೆ ಕಾಣುತ್ತಾರೆ. ಇವರ ವಚನಗಳ ಅಂಕಿತವೂ "ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ" ಆಗಿದ್ದು ಮಹಾದೇವಿಯಕ್ಕನಿಗೂ ಇವರಿಗೂ ಬಹಳ ಸಾಮ್ಯವಿದೆ. ಇವರ ವಚನಗಳ ಸಂಖ್ಯೆ ೬೩. ಅಂದರೆ ವೀರಶೈವರಲ್ಲಿ 'ತ್ರಿಷಷ್ಟಿ' ಎಂಬುದಕ್ಕೂ ತುಂಬಾ ಪಾವಿತ್ರ್ಯತೆ ಇದೆ. ಆ ದೃಷ್ಟಿ

ಯಲ್ಲಿ ೬೩ ವಚನಗಳಷ್ಟನ್ನೇ ರಚಿಸಿರಬೇಕು. ಅಥವಾ ಹೆಚ್ಚು ಬರೆದಿದ್ದಾರೆಯೆ ? ಎಂಬ ಬಗ್ಗೆ ಸಂಶೋಧನೆ ನಡೆಸಬೇಕು. ಏನೇ ಆಗಲಿ ಸಂಖ್ಯೆ ಮುಖ್ಯವಲ್ಲ ಸತ್ವ ಮುಖ್ಯ. ಆ ಸತ್ವ ಇಲ್ಲಿ ಪಡಿಮೂಡಿದೆ.

**ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ**

ಡಾ. ತಿಪ್ಪೇರುದ್ರಸ್ವಾಮಿಗಳ ಸಂಪಾದಿತ ಕೃತಿ. ಅಮುಗಿದೇವಯ್ಯನೆಂಬ ಹೆಸರಿನ ಶರಣರು ಮೂವರಿದ್ದಾರೆ ಎಂದು ಕೆಲವರ ಅಭಿಪ್ರಾಯ. ಇಲ್ಲಿ ಕನ್ನಡಿ ಕಾಯಕದ ಮತ್ತು ನೇಯ್ಗೆಯ ಕಾಯಕದ ಇಬ್ಬರು ಅಮುಗಿದೇವಯ್ಯಗಳಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಸೊನ್ನಲಿಗೆಯ ಸಿದ್ಧರಾಮಯ್ಯನನ್ನು ನೈಜಾಚರಣೆಯಲ್ಲಿ ನಡೆಯಲು ಅಣಿಮಾಡಿಸಿದ ನೇಯ್ಗೆಯ ಕಾಯಕದ ಅಮುಗಿದೇವಯ್ಯ ಪ್ರಸ್ತುತ ಕೃತಿಯ ಶರಣ. ಶಿವನ ಕೈಯಲ್ಲಿ ತನ್ನ ಗಂಟುಗಳನ್ನು ಹೊರಿಸಿಕೊಂಡು ಹೋದವನೀತ. ಇವನು ಐತಿಹಾಸಿಕ ವ್ಯಕ್ತಿಯೂ ಹೌದು. ಇವನನ್ನು ಆಧರಿಸಿ ಸು. ೧೬೨೨ (?) ರಲ್ಲಿ ಇದ್ದಿರಬಹುದಾದ ಶಿವಲಿಂಗ ಕವಿ ಸಾಂಗತ್ಯದಲ್ಲಿ ಕೃತಿ ರಚನೆಮಾಡಿದ್ದು ಮತ್ತು ಈತ ಸುತ್ತೂರು ಕಪ್ಪಿನ ಸಂಜೇಶ್ವರರ ಶಿಷ್ಯರಾಗಿದ್ದರೆಂಬುದು ಸಾಂಗತ್ಯದಲ್ಲಿ ತಿಳಿದು ಬರುತ್ತದೆ. ಈ ಕೃತಿ ಅಮುಗಿದೇವಯ್ಯಗಳ ಬಗ್ಗೆ ಆಧಾರಯುತವಾಗಿ ಸಂಪಾದಿಸಿದ ಪ್ರಥಮ ಕೃತಿ. ಸುತ್ತೂರು ಪರಂಪರೆಯವರ ಕರಕಮಲ ಸಂಜಾತನ ಈ ಕೃತಿ ಜೆ.ಎಸ್.ಎಸ್. ಗ್ರಂಥಮಾಲೆಯಲ್ಲಿ ಪ್ರಕಟವಾಗುತ್ತಿರುವುದು ಯೋಗಾಯೋಗವೇ ಸರಿ.

**ಮಂತ್ರಮಹರ್ಷಿ**

ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಬಯಲಿನಲ್ಲಿ ಬಯಲಾದ ಸುಸಂದರ್ಭದಲ್ಲಿ ಶ್ರೀ ಹೆಚ್. ಗಂಗಾಧರನ್ ಅವರಿಂದ ರಚಿತವಾದ ಕೃತಿ. ಶ್ರೀಗಳವರು ಲಿಂಗಾಂಗಿಗಳಾದ ಸಂದರ್ಭದಲ್ಲಿ ಅನೇಕ ಗಣ್ಯರು ವ್ಯಕ್ತಪಡಿಸಿದ ಭಕ್ತಿಪುರಸ್ಸರವಾದ ಮಾತುಗಳಿವೆ. ಶ್ರೀಗಳವರ ಒಂದು ಸಂಕ್ಷಿಪ್ತ ಜೀವನ ಚರಿತ್ರೆ. ಅವರ ಸಾಧನೆ-ಸಿದ್ಧಿ ಇಲ್ಲಿ ದೊರಕುತ್ತದೆ.

**ಸದ್ಗುರು ಸಂದೇಶ**

ಇದು ಪಟ್ಟದ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ನೀಡಿದ ಅನೇಕ ಸಂದೇಶಯುತವಾದ ಭಾಷಣಗಳಲ್ಲಿ ಕೆಲವು ಭಾಷಣಗಳ ಪ್ರಕಟಣೆಯಾಗಿದೆ. ೨೪-೩-೧೯೪೦ರಲ್ಲಿ ಕಬ್ಬಳ್ಳಿಯಲ್ಲಿ ನಡೆದ ವೀರಶೈವ ಮಹಾಸಭೆಯಲ್ಲಿ ನೀಡಿದ ಸಂದೇಶವಿದೆ (ಪುಟ ೬ರಿಂದ ೧೫). ಆ ಸಭೆಗೆ ಅಂದಿನ ದಿವಾನರಾಗಿದ್ದ ಶ್ರೀ ಮಿರ್ಜಾಸಾಹೇಬರು ಆಗಮಿಸಿದ್ದರಂತೆ. ಪುಟ ೧೬ರಿಂದ ೧೯ರಲ್ಲಿ ಮೈಸೂರು ನಗರದ ಪುರಭವನದಲ್ಲಿ ಅಂದಿನ ದಿವಾನ್ ಮಾಧವರಾಯರು ಉಪಸ್ಥಿತರಿದ್ದ ಸಭೆಯಲ್ಲಿ ನೀಡಿದ ಭಾಷಣವಿದೆ. ಹಾಗೆಯೇ ಧರ್ಮಸ್ಥಳದಲ್ಲಿ ೧೯೫೪ರಲ್ಲಿ ನೀಡಿದ ಧರ್ಮ ಸಂದೇಶವನ್ನು ದಿ. ಮಂಜಯ್ಯ ಹೆಗ್ಗಡೆಯವರು. ದಿ. ಸರ್ ಮಿರ್ಜಾಇಸ್ಮಾಯಿಲ್ ಅವರೂ ಆಲಿಸಿದ್ದಾರೆ. ೧೯೫೩ರಲ್ಲಿ ಬೆಟ್ಟದಪುರದ ಶ್ರೀಮಠದಲ್ಲಿ ಸೌಹಾರ್ದ ಸಂದೇಶವನ್ನು ಗುರುವರ್ಗಕ್ಕೆ ನೀಡಿದ ಭಾಷಣವಿದೆ. ಸುತ್ತೂರು ಪೀಠದಲ್ಲಿ ೧೯೫೬ರಲ್ಲಿ ಭಕ್ತಮಂಡಲಿಗೆ ನೀಡಿದ ವಿಶ್ವಧರ್ಮ ಸಂದೇಶವನ್ನು ಕಾಣಬಹುದು. ಗಿರಿಯಾಪುರದ ಶ್ರೀ ಕುಮಾರಾಶ್ರಯದಲ್ಲಿ ೧೯೫೬ರಲ್ಲಿ ಶಿವಯೋಗ ಸಂಸ್ಕೃತಿಯ ಬಗ್ಗೆ ನೀಡಿದ ಉಪನ್ಯಾಸಪೂರ್ವಕ ಆಶೀರ್ವಚನವಿದೆ. ೧೯೫೮ರಲ್ಲಿ ಬೆಂಗಳೂರಿನಲ್ಲಿ ಅನುಭವಮಂಟಪವನ್ನು ಮತ್ತು ಇಂದು ಅದರ ಅಗತ್ಯವನ್ನೂ ಒತ್ತಿ ಹೇಳಿದ ಭಾಷಣವಿದೆ. ೧೯೬೧ ರಲ್ಲಿ ವಿದ್ಯಾಪೀಠದಲ್ಲಿ ಅಣ್ಣನವರ ಬಗ್ಗೆ ಸಂದೇಶ ನೀಡಿದ ವಿವರಣೆ ಇದೆ. ೧೯೬೧ರಲ್ಲಿ ನವಕಲ್ಯಾಣಮಠದಲ್ಲಿ ಮಠಗಳು ಲೋಕ ಕಲ್ಯಾಣ ಕೇಂದ್ರಗಳು ಎಂಬ ಬಗ್ಗೆ ಭಾಷಣ ನೀಡಿದ್ದಾರೆ. ೧೯೬೧ರಲ್ಲಿ ಧಾರವಾಡದಲ್ಲಿ ಪ್ರಾರ್ಥನೆಯ ವಿಶಿಷ್ಟತೆಯನ್ನು ಕುರಿತು ಚಿಂತಿಸಿದ್ದಾರೆ. ಹೀಗೆ ಈ ಸಂಪಾದನಾ ಕೃತಿಯು ಶ್ರೀಗಳವರಿಗಿದ್ದ ಧರ್ಮಪರವಾದ ಮತ್ತು ಸಮಾಜದ ಪ್ರಗತಿಗೆ ಸಂಬಂಧಿಸಿದ ವ್ಯಾಪಕವಾದ ಮನೋಧರ್ಮವನ್ನು ಪ್ರಕಟಪಡಿಸುತ್ತದೆ.

**ಶಿವಯೋಗಿಗಳ ವಿಚಾರಲಹರಿ**

'ಸುಧಾಕರ' ಅವರ ಈ ಗ್ರಂಥದಲ್ಲಿ ಮೂವರು ಮಹನೀಯರ ಆತ್ಮನಿರೀಕ್ಷಣೆಯ ವಿವಿಧ ನೋಟವನ್ನು ಕಾಣಬಹುದು. "ನಿಜಗುಣರ ದರ್ಶನ" : "ಘನಲಿಂಗದೇವರ ವೈರಾಗ್ಯ ದರ್ಶನ" : "ಶ್ರೀ ಸಿದ್ಧಲಿಂಗ ಶಿವಯೋಗಿಗಳ ಶಿವತತ್ವ ದರ್ಶನ" ಇವೇ ಆ ಮೂರು ದರ್ಶನಪರವಾದ ಲೇಖನಗಳು. ನಿಜಗುಣರ ಶಿವಯೋಗ ಸಂಪನ್ನತೆ ಘನಲಿಂಗಿ

ಗಳ ವೈರಾಗ್ಯಪರತೆ; ಎಲ್ಲದರಲ್ಲಿಯೂ ಶಿವತತ್ವವನ್ನು ಕಂಡ ಸಿದ್ಧಲಿಂಗ ಶಿವಯೋಗಿಗಳ ದರ್ಶನ ಬಹು ಸುಂದರವಾಗಿ ವ್ಯಕ್ತವಾಗಿದೆ.

**ಜಗದ್ಗುರು ಶ್ರೀ ಶಿವರಾತ್ರೀಶ್ವರರ ವಚನಗಳು**

'ಸುಧಾಕರ' ಕಾವ್ಯನಾಮದ ಶ್ರೀ ಗಂಗಾಧರನ್ ಅವರು ವಚನ ರಚನೆಗೂ ಕೈಹಚ್ಚಿದ್ದಾರೆ. ಇವರ ವಚನಗಳ ಅಂಕಿತ "ಗುರುದೇವ ಶಿವರಾತ್ರೀಶ್ವರಾ" ಎಂಬುದು. ಈ ಅಂಕಿತದಲ್ಲಿ ೧೫೮ ವಚನಗಳಿವೆ. ಇತ್ತೀಚಿನ ವಚನ ರಚನೆಗೆಲ್ಲಾ ಬಸವಾದಿಗಳ ವಚನಗಳು ಪ್ರೇರಕವಾಗಿ ಅವರ ಮಾತುಗಳು ಅದಲುಬದಲಾಗಿ ವ್ಯಕ್ತವಾಗಿರುವುದನ್ನು ಹಲವು ಕಡೆ ಕಾಣುತ್ತೇವೆ. ಪ್ರಸ್ತುತ ವಚನಗಳು ಕಾಲ-ಪರಿಸರ-ಸ್ಥಿತಿ-ಗತಿಗಳಿಗೆ ತಕ್ಕಂತೆ ಬಂದಿವೆ. ಖಾದಿ, ಖಾಕಿ, ಕಾವಿಗಳಿಂದ ಹಿಡಿದು ಸಮಾಜವಾದ-ಭೋಗ-ಯೋಗವೆಲ್ಲವೂ ಕಾಣಿಸಿಕೊಂಡಿವೆ. ಆದರೂ ಸಮಾಜ. ಬದಲಾವಣೆಯನ್ನು ನಿರೀಕ್ಷಿಸುವಾಗ ಇಂತಹ ರಚನೆಗಳ ಗುರಿ. ಪರಿಣಾಮವಾದರೂ ಏನು ಎಂಬ ಪ್ರಶ್ನೆ ಏಳದೇ ಇರಲಾರದು. ಇತ್ತೀಚಿನ ಇಂತಹ ವಚನಗಳ ಅಳಿವು ಉಳಿವು ಅವುಗಳ ಅಂತಸ್ಸತ್ವವನ್ನು ಅವಲಂಬಿಸಿದೆ ಎಂದು ಹೇಳದೆ ವಿಧಿ ಇಲ್ಲ.

**ಸುತ್ತೂರು ಜಗದ್ಗುರು ಪೀಠ—ಒಂದು ಪಕ್ಷಿನೋಟ**

ಅತಿ ಪುಟ್ಟ ಕೃತಿಯಲ್ಲಿ ಶ್ರೀ ಸುತ್ತೂರು ಜಗದ್ಗುರು ಪೀಠದ ಇತಿಹಾಸ ಪರಂಪರೆ ಮತ್ತು ಅದರ ಇತ್ತೀಚಿನ ಸಾಧನೆ-ಸಿದ್ಧಿಗಳನ್ನು ಅವಲೋಕಿಸಿದ್ದಾರೆ ಲೇಖಕ ನಂಜುಂಡಯ್ಯನವರು. ಪಕ್ಷಿನೋಟ ಎಂಬ ಹೆಸರಿಗೆ ತಕ್ಕ ವಿವರಣೆ ಇದೆ.

**ಗಣಪತ್ಯುಪನಿಷತ್ತು**

'ಸುಧಾಕರ' ಅವರು ಗಣಪತ್ಯುಪನಿಷತ್ತನ್ನು ಸಂಪಾದಿಸಿದ್ದಾರೆ. ೮೯ ಉಪನಿಷತ್ತುಗಳಲ್ಲಿ ಇದು ಅತಿ ಚಿಕ್ಕದು. ಗಣಪತಿಯ ಬಗ್ಗೆ ೧೮ ಶ್ಲೋಕ ಮತ್ತು ಆರಂಭದಲ್ಲಿ ಒಂದು ಪ್ರಾರ್ಥನಾಶ್ಲೋಕವಿದೆ. ೧೮ ಪುಟಗಳ ಈ ಕಿರುಕೃತಿ ಶ್ಲೋಕಗಳಿಗೆ ಅರ್ಥವಿವರಣೆಯನ್ನೂ ನೀಡುತ್ತದೆ.

**ಸುತ್ತೂರು, ಭೌಗೋಳಿಕ ಸಾದೃಶ ಸಮೀಕ್ಷೆ**

ಶ್ರೀ ಎಂ. ಮಹದೇವಪ್ಪನವರು ಸುತ್ತೂರು ಗ್ರಾಮವನ್ನು ಒಂದು unit ಆಗಿ ಇಟ್ಟುಕೊಂಡು ನಡೆಸಿದ ಒಂದು ಪರಿವೀಕ್ಷಣೆ ಇಲ್ಲಿದೆ. ಭೌಗೋಳಿಕ ಅಂಶಗಳು-ಜನಸಂಖ್ಯೆ-ನೀರಾವರಿ-ಪಶುಪಾಲನೆ-ಕೃಷಿ-ಕೈಗಾರಿಕೆ-ಶಿಕ್ಷಣ-ಧರ್ಮ-ಪ್ರಾಚೀನತೆಗಳೆಲ್ಲದರ ಮೋಜಿಣಿ ಕಾರ್ಯ ವ್ಯವಸ್ಥಿತವಾಗಿ ಇಲ್ಲಿ ನಡೆದಿದೆ. ಪುಟ ೩೫ರಲ್ಲಿ "ರೇಷ್ಮೆಮೊಟ್ಟೆ ಸಾಕುವುದು" ಎಂದಿದೆ. ಇದು "ರೇಷ್ಮೆಹುಳು ಸಾಕುವುದು" ಎಂದಿರಬೇಕು.

**Kingdom to Wisdom**

ಇದು ಶ್ರೀ ಗಂಗಾಧರನ್ ಅವರ ಇಂಗ್ಲೀಷ್ ಕೃತಿ. ಸುತ್ತೂರು ಶ್ರೀಪೀಠದ ಇತಿಹಾಸ-ಸಾಧನೆಗಳನ್ನು ಇಂಗ್ಲೀಷಿನಲ್ಲಿ ಪರಿಚಯಿಸಿ ಕನ್ನಡ ಬಾರದವರಿಗೂ ಶ್ರೀಪೀಠದ ಘನತೆಯ ಅರಿವು ಆಗುವಂತೆ ಮಾಡಿದ್ದಾರೆ. ಭಾಷೆ ಸರಳವೂ ಸರಸವೂ ಆಗಿದೆ.

**ಶರಣತತ್ವ ಪ್ರಕಾಶ**

ಇದರ ಸಂಪಾದಕರು ಶ್ರೀ ಗಂಗಾಧರನ್ ಅವರು. ಗ್ರಂಥವನ್ನು ಅವಲೋಕಿಸಲಾಗಿಲ್ಲವಾಗಿ ವಿವರಣೆಗೆ ಕೈ ಹಾಕಿಲ್ಲ.

**ಬಸವೇಶ್ವರಿನ್ ತಿರುವೊಳಿಗಳ್**

ಡಾ. ಎಂ. ವಿ. ಜಂಬುನಾಥನ್ ಅವರು ಬಸವಣ್ಣನವರ ೧೦೮ ವಚನಗಳನ್ನು ತಮಿಳಿಗೆ ಅನುವಾದಿಸಿದ್ದಾರೆ. ಅಷ್ಟೋತ್ತರ ಶತ ಸಂಖ್ಯೆಗೆ ವೀರಶೈವರಲ್ಲಿ ಪಾವಿತ್ರ್ಯತೆ ಇದೆ. ಹಾಗೆ ೧೦೮ ವಚನಗಳನ್ನು ಆಯ್ಕೆ ಮಾಡಿಕೊಂಡು

ತಮಿಳು ಭಾಷೆಗೆ ಅನುವಾದಿಸಿದ ಈ ಸ್ತುತ್ಯಕಾರ್ಯದಲ್ಲಿ ಅನುವಾದದ ಸಾರ್ಥಕತೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ತಿಳಿಸಲು ಆ ಭಾಷೆಯ ಪರಿಚಯವಿಲ್ಲದೆ ಇರುವುದರಿಂದ ನನಗೆ ಸಾಧ್ಯವಾಗಿಲ್ಲ.

**ಸಂಕ್ಷಿಪ್ತ ಶಿವಪೂಜಾವಿಧಿ**

ಶಿವಪೂಜಾವಿಧಾನವನ್ನು ಸಕ್ರಮವಾಗಿ ತಿಳಿಸುವ ವಿಧಿ ಈ ಕಿರುಕೃತಿಯಲ್ಲಿದೆ.

**ಇತರೆ**

ಇತರೆ ಎಂದರೆ ಜೆ.ಎಸ್.ಎಸ್. ಗ್ರಂಥಮಾಲೆಯ ಸೋದರ ವರ್ಗದ ಮಾಲೆಯಿಂದ ಪ್ರಕಟವಾದ ಕೃತಿಗಳು. "ದೇವರು" ಎಂಬ ಶ್ರೀ ಸ್ವಾಮಿ ಲಿಂಗಾನಂದರ ಕೃತಿ : ಶ್ರೀ ಸಿ. ಅಂಕಪ್ಪನವರ "ಶ್ರೀ ಪಾದಕ್ಕೆ ನಮೋ ನಮೋ ಮತ್ತು ಉಘೇ" ಎಂಬ ನಾಟಕ : ಶ್ರೀ ಗಂಗಾಧರನ್ ಅವರ "ಶ್ರೀ ಶಿವರಾತ್ರೀಶ್ವರ ಶತಕ" ಎಂಬ ಈ ಮೂರೂ ಕೃತಿಗಳು ನೇರವಾಗಿ ಪ್ರಸ್ತುತ ಗ್ರಂಥಮಾಲೆಯಿಂದ ಪ್ರಕಟವಾಗಿಲ್ಲದಿದ್ದರೂ ಅವು ಈ ಮಾಲೆಗೆ ಸಂಪೂರ್ಣವಾಗಿ ಋಣಿಗಳಾಗಿವೆ ಎಂಬುದನ್ನು ತಿಳಿದುಕೊಂಡರೆ ಸಾಕು.

## ಪರಿಸಮಾಪ್ತಿ

ಹೀಗೆ ಶ್ರೀ ಸುತ್ತೂರು ಪರಂಪರೆಯವರ ಸಾಹಿತ್ಯಸೇವೆ ಸಹಸ್ರ ವರ್ಷಗಳಿಂದಲೂ ನಡೆದುಕೊಂಡು ಬಂದು ೧೯೫೦ರಿಂದ ಈಚೆಗೆ ಆ ಸೇವೆಗೊಂದು ವ್ಯವಸ್ಥಿತವಾದ ರೂಪು ಬಂತು. ಅದಕ್ಕೊಂದು ಬುನಾದಿಯನ್ನು ಹಾಕಿಕೊಟ್ಟಿತು "ಜೆ.ಎಸ್.ಎಸ್. ಗ್ರಂಥಮಾಲೆ ಅಥವಾ ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ".

---

ವೇದವನೋದಿ ಕೇಳಿ ವೇದದ ಮರ್ಮವನರಿದ ಫಲ ದಾಸೋಹವಯ್ಯಾ
ಶಾಸ್ತ್ರವನೋದಿ ಕೇಳಿ ಶಾಸ್ತ್ರದ ಮರ್ಮವನರಿದ ಫಲ ದಾಸೋಹವಯ್ಯಾ
ಪುರಾಣವನೋದಿ ಕೇಳಿ ಪುರಾಣದ ಮರ್ಮವನರಿದ ಫಲ ದಾಸೋಹವಯ್ಯಾ
ಆಗಮವನೋದಿ ಕೇಳಿ ಆಗಮದ ಮರ್ಮವನರಿದ ಫಲ ದಾಸೋಹವಯ್ಯಾ
ಪುರಾತನರ ಗೀತ ವಚನ ಪ್ರಸಂಗಾನುಭಾವದಲ್ಲಿ ದೃಷ್ಟಫಲ ದಾಸೋಹವಯ್ಯಾ
ವೇದಶಾಸ್ತ್ರ ಪುರಾಣ ಆಗಮ ಪುರಾತನರ ಗೀತದ ವಚನ ಪ್ರಸಂಗವನರಿದು
ದಾಸೋಹವಿಲ್ಲದಿದ್ದಡೆ ಆ ಓದು ಗಿಳಿ ಓದಿದಂತೆ
ಆ ಕೇಳುವೆ ಮರುಳ ಕೇಳುವೆಯಂತೆ
ಅವನೇತಕ್ಕೂ ಬಾರ್ತೆಯಲ್ಲಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಉರಿಲಿಂಗಪೆದ್ದಿ

# ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠದ ಪ್ರಸಾದನಿಲಯಗಳು

**ಸಿ. ಅಂಕಪ್ಪ**

ಮಠಮಾನ್ಯಗಳಿರುವುದು ಜ್ಞಾನಾನ್ನದಾಸೋಹಕ್ಕಾಗಿ. ಹಸಿದು ಬಂದವರಿಗೆ ಅಷ್ಟು ಪ್ರಸಾದವನ್ನು ನೀಡಿ, ಶರಣರ ನುಡಿಗಡಣದಿಂದ ಒಂದೆರಡು ಒಳ್ಳೆಯ ಮಾತನ್ನು ಹೇಳಿ ಕಳುಹಿಸುತ್ತಿದ್ದುದು ಹಳೆಯ ಕಾಲಕ್ಕೆ ಅಂದರೆ ಹೋಟೆಲ್. ಬಸ್ಸು, ಕಾರು—ಇವಾವುವೂ ಇಲ್ಲದಿದ್ದ ಕಾಲಕ್ಕಾಯಿತು. ಇಂದು ಕಾಲ ಬದಲಾಗಿದೆ. ಇಂದಿನ ಕಾಲಕ್ಕೆ ತಕ್ಕಂತೆ 'ದಾಸೋಹ' ಎಂಬ ಪದದ ಅರ್ಥವ್ಯಾಪ್ತಿಯನ್ನು ಲಂಬಿಸಬೇಕಾಗಿದೆ. ಬಡತನದಲ್ಲಿಯೇ ಹುಟ್ಟಿ, ಬಡವನಾಗಿಯೇ ಬಾಳಿ, ಮಣ್ಣಾಗಿ ಹೋಗುತ್ತಿರುವ ಅದೆಷ್ಟೋ ಚೇತನಗಳನ್ನು ಗುರುತಿಸಿ, ಅವರನ್ನು ತಮ್ಮಾಶ್ರಯದಲ್ಲಿಯೇ ಇಟ್ಟುಕೊಂಡು ಸಾಕಿ, ವಿದ್ಯಾವಂತರನ್ನಾಗಿಸಿ, ಅವರು ಇನ್ನೊಬ್ಬರ ಹಂಗಿಗೊಳಗಾಗದೆ ತಮ್ಮ ಕಾಲಮೇಲೆ ತಾವು ನಿಂತು ಬಾಳುವಂತೆ ಮಾಡುವುದೇ ನಿಜವಾದ 'ದಾಸೋಹ.' ಇದನ್ನರಿತು ಆಚರಿಸುತ್ತಿರುವ ಕಾರಣಿಕ ಪುರುಷ ಅವತರಿಸಿದುದು ಸುತ್ತೂರು ಕ್ಷೇತ್ರದಲ್ಲಿ ದಿನಾಂಕ ೨೯-೮-೧೯೧೬ರಂದು.

ಆದಿಗುರು ಶ್ರೀ ಶಿವರಾತ್ರೀಶ್ವರರ ಆಶೀರ್ವಾದದಿಂದ ಶ್ರೀಮತಿ ಶಂಕರಮ್ಮನವರ ಗರ್ಭಾಂಬುಧಿಯಲ್ಲಿ ಜನಿಸಿತು ಈ ಶಿಶು. ನ್ಯಾಯನಿಷ್ಠುರರೂ, ದಾನಧರ್ಮಗಳಿಗೆ ಹೆಸರಾದವರೂ, ಜ್ಞಾನಿಗಳೂ, ಮಠಕ್ಕೆ ನಿಷ್ಠೆಯಿಂದ ದುಡಿದವರೂ ಆದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಈ ಶಿಶುವಿನ ತಂದೆ. ಶಿಶು ಐದು ವರ್ಷದವನಿದ್ದಾಗಲೇ ದಂಪತಿಗಳು ಮಗುವನ್ನು ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳಿಗೊಪ್ಪಿಸಿ ಕೃತಾರ್ಥರಾದರು. ಆ ಶಿವಯೋಗಿಯ ಶಿಕ್ಷಣದಲ್ಲಿ ಈ ಶಿಶು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದಮೇಲೆ ಮುಂದೆ ಪಂಡಿತ ಬಸವರಾಜ ಶಾಸ್ತ್ರಿಗಳವರಲ್ಲಿ ಸಂಸ್ಕೃತಾಭ್ಯಾಸ ಮಾಡಿ ಉನ್ನತ ವ್ಯಾಸಂಗಕ್ಕಾಗಿ ಕಾಶಿಯಲ್ಲಿ ನೆಲಸಿದ್ದ ಪರಮಪೂಜ್ಯ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರಲ್ಲಿಗೆ ಹೋದರು.

ಆ ಮಹಾಜಂಗಮನ ಆಣತಿಯನ್ನು ಹೊತ್ತು ಮೈಸೂರಿನತ್ತ ಪಾದ ಬೆಳೆಸಿದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಮತ್ತೆ ಕ್ಯಾತನಹಳ್ಳಿ ಪಾಠಶಾಲೆಯಲ್ಲಿಯೇ ಉಳಿದು, ಅದರ ಮೇಲ್ವಿಚಾರಣೆಯನ್ನು ಇನ್ನೂ ಆಸಕ್ತಿಯಿಂದ ನೋಡುವುದರ ಜೊತೆಗೆ, ಅಲ್ಲಿದ್ದ ಬಡವಿದ್ಯಾರ್ಥಿಗಳ ಕರುಣಾಜನಕ ಕಥೆಯನ್ನು ಕೇಳಿ ಬೆರಗಾಗಿ ಹೋದರು.

ಈ ಬಡಜನರ ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕು, ಬರಿಯ ಸಂಸ್ಕೃತ ಕಲಿತರಷ್ಟೇ ಸಾಲದು, ಲೌಕಿಕ ವಿದ್ಯೆಯ ಅಗತ್ಯವೂ ಇದೆ. ಆದುದರಿಂದ ಬೇರೆ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೋಸುಗ ಒಂದು ವಿದ್ಯಾರ್ಥಿನಿಲಯವನ್ನು ತೆರೆದರೆ, ಊಟ ವಸತಿಯ ಸೌಲಭ್ಯ ದೊರೆತಾಗ ಮಕ್ಕಳನ್ನು ಓದಿಸಬೇಕೆಂಬ ಆಸೆ ಇದ್ದರೂ ಶಕ್ತಿಯಿಲ್ಲದೆ ಪರಿತಪಿಸುತ್ತಿರುವ ಬಡ ರೈತರು ಧೈರ್ಯದಿಂದ ಮುನ್ನಡೆಯಲವಕಾಶವಾಗುತ್ತದೆ. ಈ ನಿರ್ಧಾರಕ್ಕೆ ಬಂದೊಡನೆ ಹಿರಿಯ ಶ್ರೀಗಳವರನ್ನು ಕೇಳಿಯೇಬಿಟ್ಟರು. ಎಂದೂ ಯಾವುದಕ್ಕೂ ತಮ್ಮ ಬಳಿ ನೇರ ಬಂದು ಕೇಳದಿದ್ದ ತಮ್ಮ ಕರಕಮಲ ಸಂಜಾತರು ಅಂದು ಆ ರೀತಿ ಕೇಳಿದುದನ್ನು ನೋಡಿ ಹಿರಿಯ ಶ್ರೀಗಳವರಿಗೆ ಆಶ್ಚರ್ಯವಾಯಿತು.

ಹಿರಿಯ ಶ್ರೀಗಳಾದರೋ ಶಿಸ್ತಿಗೆ ಹೆಸರಾಂತವರು. ಯಾವ ಕೆಲಸವನ್ನೇ ಮಾಡಲಿ ಅದು ಶಾಶ್ವತವಾಗಿ ನಿಲ್ಲಬೇಕು, ಜೊತೆಗದು ಅಚ್ಚುಕಟ್ಟಾಗಿ ನಡೆಯಬೇಕು, ಇದು ಅವರ ವಾದ. ಈಗ ತೆರೆದಿರುವ ಸಂಸ್ಕೃತ ಪಾಠಶಾಲೆ ಮತ್ತು ಪ್ರಸಾದನಿಲಯಗಳು ಒಂದು ಸ್ಥಿತಿಗೆ ಬರಲಿ, ಆಮೇಲೆ ಬೇರೊಂದನ್ನು ತೆರೆಯುವ, ಈಗ ಬೇರೆ ಪ್ರಸಾದನಿಲಯ ತೆರೆಯುವುದು ಬೇಡ ಎಂದುಬಿಟ್ಟರು. ಹಿರಿಯ ಶ್ರೀಗಳು ಬೇಡ ಎಂದುದನ್ನು ಮಾಡುವಂತಿಲ್ಲ, ಸುಮ್ಮನಿರು

ವುದಕ್ಕೂ ಮನ ಒಪ್ಪುತ್ತಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಮೈಸೂರಿಗೆ ಹಿಂದಿರುಗಿದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರಿಗೆ ಸರಿಯಾಗಿ ನಿದ್ರೆಯೂ ಹತ್ತದಾಯಿತು. ಇದೇ ಸಮಯದಲ್ಲಿ ಜರುಗಿದ ಘಟನೆಯೊಂದರಿಂದಾಗಿ ಶ್ರೀಗಳವರು ತಲ್ಲಣಿಸಿ ಹೋದರು. ಕ್ಯಾತನಹಳ್ಳಿ ಪಾಠಶಾಲೆಯ ಎದುರಿಗಿರುವ ಅರಳಿಕಟ್ಟೆಯ ಮೇಲೆ ಅಲುಗಾಡದೆ ಬಿದ್ದಿದ್ದ ಹುಡುಗನೊಬ್ಬ ಬೆಳಗಿನ ಸಂಚಾರದಿಂದ ಹಿಂದಿರುಗಿದ ಶ್ರೀಗಳವರ ಕಣ್ಣಿಗೆ ಬಿದ್ದ. ಅವನನ್ನು ಬೇರೆಯ ಹುಡುಗರ ಸಹಾಯದಿಂದ ಒಳಗೆ ಕರೆತರಿಸಿದರು. ಮೈ ಕೆಂಡದಂತೆ ಕಾಯುತ್ತಿತ್ತು. ಆತನಿಗೆ ಗಂಜಿ ಮಾಡಿಸಿ ಕೊಟ್ಟರು. ಗಂಜಿ ಕುಡಿದು ಚೇತರಿಸಿಕೊಂಡ ಹುಡುಗ ತನ್ನ ಕಥೆ ಹೇಳಿದ. ಆತನೊಬ್ಬ ಪ್ರೌಢಶಾಲೆಯ ವಿದ್ಯಾರ್ಥಿ. ತಂದೆಯಿಲ್ಲ, ತಾಯಿ ಕೂಲಿಯಿಂದ ಜೀವನ. ಮೈಸೂರಿಗೆ ಬಂದು ಯಾರೋ ಪುಣ್ಯಾತ್ಮರ ಸಹಾಯದಿಂದ ಓದುತ್ತಿದ್ದ. ಅವರು ಮನೆಯ ಜಗತಿಯ ಮೇಲಿದ್ದ ಕೊಠಡಿಯನ್ನು ಆ ಹುಡುಗನಿಗೆ ಬಿಟ್ಟುಕೊಟ್ಟಿದ್ದರು. ಆತನೂ ಅವರ ಮನೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಾ ಅವರಿಗೆ ಅಚ್ಚುಮೆಚ್ಚಿನವನಾಗಿದ್ದ. ಆದರೆ ಆ ಪುಣ್ಯಾತ್ಮರಿಗೆ ಬೇರೆ ಊರಿಗೆ ವರ್ಗವಾದುದರಿಂದ ಅವರು ಮನೆ ಖಾಲಿಮಾಡಿ ಹೊರಟು ಹೋದರು. ಆತನಿಗೆ ನಿಲ್ಲಲು ನೆಲೆಯಿಲ್ಲವಾಯಿತು. ಆ ಭಯದಿಂದಲೋ ಏನೋ ಜ್ವರ ಬಂದಿತು. ಹಿಂದಿರುಗಿ ಹೋಗುವುದಕ್ಕೆ ಕಾಸಿಲ್ಲ. ರೈಲ್ವೆ ಟಿಕೆಟ್ಟಿನ ಹಣಕ್ಕಾಗಿ ಶ್ರೀಗಳವರ ಬಳಿ ಯಾಚಿಸಲು ಬಂದವನು, ಶ್ರೀಗಳಿಲ್ಲವೆಂಬುದನ್ನು ಕೇಳಿ, ತನ್ನ ಪುಸ್ತಕ ಮತ್ತು ಬಟ್ಟೆಯನ್ನು ತುಂಬಿದ್ದ ಚೀಲವನ್ನೇ ತಲೆದಿಂಬಾಗಿ ಹಾಕಿಕೊಂಡು ಅರಳಿಕಟ್ಟೆಯಮೇಲೆ ಒರಗಿದ್ದ. ಈ ಕಥೆ ಕೇಳಿದ ಶ್ರೀಗಳವರ ಹೃದಯ ಕರಗಿತು. ಬೇರೆ ಹುಡುಗರನ್ನು ಕಳುಹಿಸಿ ಔಷಧಿ ತರಿಸಿಕೊಟ್ಟು, ಆ ಹುಡುಗನಿಗೆ ಅಲ್ಲಿಯೇ ಉಳಿಯುವಂತೆ ಅಪ್ಪಣೆ ಮಾಡಿದರು. ಆದರೆ ಆ ಹುಡುಗ ತನ್ನ ತಾಯಿಯನ್ನು ನೋಡಬೇಕೆಂದು ಕಣ್ಣೀರಿಡಲು ಪ್ರಾರಂಭಿಸಿದುದರಿಂದ, ಹಣ ಕೊಟ್ಟು ಹುಡುಗರನ್ನು ಜೊತೆಮಾಡಿ ಅವನನ್ನು ರೈಲು ಹತ್ತಿಸಿ ಕಳಿಸಿ ಕೊಟ್ಟರು.

ಎಂದೂ ಶ್ರೀಗಳವರು ಹಿರಿಯ ಶ್ರೀಗಳವರ ಎದುರು ನಿಂತು ಮಾತನಾಡಿದವರಲ್ಲ, ಅವರ ಅಪ್ಪಣೆ ಮೀರಿದವರಲ್ಲ. ಆದರೆ ಇದೊಂದು ವಿಷಯದಲ್ಲಿ ಹಿರಿಯ ಶ್ರೀಗಳ ಕೋಪಕ್ಕೆ ಪಾತ್ರರಾದರೂ ಸರಿಯೆ ಪ್ರಸಾದನಿಲಯ ಪ್ರಾರಂಭಿಸಬೇಕೆಂದು ನಿಶ್ಚಯಿಸಿಯೇಬಿಟ್ಟರು. ಆದರೆ ಹಣ? ತಮ್ಮ ಕೊರಳಲ್ಲಿದ್ದ ಗೌರೀಶಂಕರಕ್ಕೆ ಹಾಕಿದ್ದ ಚಿನ್ನದ ಕವಚವನ್ನೇ ಬಿಚ್ಚಿಸಿ, ಮಾರಿಸಿ, ಅದರಿಂದ ಬಂದ ಹಣದಿಂದ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ೧೯-೯-೧೯೪೧ರಂದು ಅರಮನೆಯ ಹುಜೂರ್ ಸೆಕ್ರೆಟರಿಗಳಾಗಿದ್ದ ಶ್ರೀ ಕೆ. ಗುರುದತ್ ಬಿ. ಎ., ಅವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿಯೇಬಿಟ್ಟರು. ಮೊದಮೊದಲು ಮಡಕೆ ಕುಡಿಕೆಗಳಲ್ಲಿ ಅಡುಗೆ ಪ್ರಾರಂಭವಾಯಿತು. ಆಶ್ರಯಿಸಿದ ಕೇವಲ ಕೆಲವೇ ಬಡವಿದ್ಯಾರ್ಥಿಗಳನ್ನು ಈ ಪ್ರಸಾದನಿಲಯಕ್ಕೆ ಸೇರಿಸಿಕೊಂಡರು. ಅಂದು ಶ್ರೀಗಳವರ ಕೃಪೆಗೆ ಪಾತ್ರರಾಗಿ ಮೊದಲು ಪ್ರಸಾದನಿಲಯ ಸೇರಿದ ವಿದ್ಯಾರ್ಥಿಗಳೆಲ್ಲರೂ ತಮ್ಮ ವಿದ್ಯಾಭ್ಯಾಸ ಮುಗಿಸಿ, ಬಹಳ ಉಚ್ಚಾಸ್ರಯಸ್ಥಿತಿಗೇರಿ, ದೇಶದ ಸತ್ಪ್ರಜೆಗಳಾಗಿ ಬಾಳುತ್ತಿದ್ದಾರೆ. ಅಂತೆಯೇ ಅಂದಿನಿಂದ ಇಂದಿನ ತನಕ ಈ ಮೂವತ್ತೆಂಟು ವರುಷಗಳಲ್ಲಿ ಲಕ್ಷಾಂತರ ಮಂದಿ ಶ್ರೀಗಳವರ ಕೃಪೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ದೇಶದ ಹಾಗೂ ಪ್ರಪಂಚದ ನಾನಾ ಭಾಗಗಳಲ್ಲಿ ನೆಲೆಸಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆಂದು ಹೆಮ್ಮೆಯಿಂದ ಹೇಳಬಹುದು.

ಹೀಗೆ ಪ್ರಾರಂಭವಾದ ವಿದ್ಯಾರ್ಥಿನಿಲಯವನ್ನು ಎರಡು ವರುಷ ಬಹಳ ಕಷ್ಟದಿಂದಲೇ ನಡೆಸಿದರು. ತಮ್ಮ ಖರ್ಚಿಗೆಂದು ಹಿರಿಯ ಶ್ರೀಗಳವರು ಕಳುಹಿಸುತ್ತಿದ್ದ ಹಣ, ಭಕ್ತಾದಿಗಳು ಇವರ ದರುಶನಕ್ಕಾಗಿ ಬಂದಾಗ ಇವರು ಪ್ರಾರಂಭಿಸಿರುವ ಕಾರ್ಯವನ್ನು ನೋಡಿ ಮೆಚ್ಚಿ ಇತ್ತ ಕಾಣಿಕೆ, ಕಡೆಗಾವುದೇ ಹಣ ದೊರೆಯಲಿ ಅದೆಲ್ಲವನ್ನೂ ವಿದ್ಯಾರ್ಥಿನಿಲಯಕ್ಕೆಂದೇ ಬಳಸಿದರು. ವಿದ್ಯಾರ್ಥಿನಿಲಯ ಪ್ರಾರಂಭಿಸುವ ಮೊದಲು ಗಂಟೆಗಟ್ಟಲೆ ಶಿವಪೂಜೆಗೆ ಕುಳಿತು ಮನಬಂದಷ್ಟು ಧೂಪ ಹಾಕುತ್ತಿದ್ದ ಶ್ರೀಗಳು ಅದರಲ್ಲೂ ಮಿತವ್ಯಯ ಸಾಧಿಸಿ, ಅಷ್ಟೋ ಇಷ್ಟೋ ಮಿಕ್ಕುದನ್ನು ಪ್ರಸಾದನಿಲಯಕ್ಕೇ ಬಳಸಿ, ಬಡಮಕ್ಕಳ ಸೇವೆಯೆ ಶಿವಪೂಜೆ, ಅವರಿಗೆ ನೀಡುವ ಪ್ರಸಾದವೇ ಶಿವನಿಗರ್ಪಿಸುವ ಧೂಪ ಎಂಬುದನ್ನು ಬರಿದೆ ಸಾರಲಿಲ್ಲ, ನಡೆದು ತೋರಿದರು.

ಕಡೆಗೊಮ್ಮೆ ಹಿರಿಯ ಶ್ರೀಗಳವರು ಮೈಸೂರಿಗೆ ದಯಮಾಡಿಸಿದಾಗ ಕೆಲವು ವಿದ್ಯಾರ್ಥಿಗಳು ಅವರನ್ನು ಕಂಡು, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ನಾಮಾಂಕಿತವನ್ನು ತಮ್ಮ ವಿದ್ಯಾರ್ಥಿನಿಲಯಕ್ಕಿಡಲು ಅನುಮತಿ ಕೋರಿದರು. ಅಲ್ಲಿಯವರೆಗೆ ಏನು ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಭಕ್ತಾದಿಗಳ ಮೂಲಕ ಅರಿತಿದ್ದ

ಆ ಶಿವಯೋಗಿವರ್ಯರು ಆದಿಗುರುಗಳ ನಾಮಾಂಕಿತವನ್ನು ಪ್ರಸಾದನಿಲಯಕ್ಕಿಡಲು ಅನುಮತಿ ಇತ್ತುದಷ್ಟೇ ಅಲ್ಲ, ಇಂದು ವಾಣಿವಿಲಾಸ ರಸ್ತೆಯಲ್ಲಿ ಕೋರ್ಟಿನ ಬಳಿ ಇರುವ ಮೂರಂತಸ್ತಿನ ಭವ್ಯ ಕಟ್ಟಡವನ್ನು ಕೊಂಡು, ಪ್ರಸಾದ ನಿಲಯಕ್ಕೆಂದು ಬಿಟ್ಟು, ತಮ್ಮ ಕರಕಮಲ ಸಂಜಾತರು ಪ್ರಾರಂಭಿಸಿದ್ದ ಪುಣ್ಯಕಾರ್ಯಕ್ಕೆ ತಮ್ಮ ಆಶೀರ್ವಾದದ ಮುದ್ರೆಯೊತ್ತಿದರು. ಇದರಿಂದ ಬಡಜನರ ಏಳಿಗೆಗಾಗಿ ಎಷ್ಟು ಬೇಕಾದರೂ ದುಡಿಯಲು ಸಿದ್ಧರಾಗಿದ್ದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಉತ್ಸಾಹ ಉಕ್ಕೇರಿತು.

ಹಿರಿಯ ಶ್ರೀಗಳು ಶಿಸ್ತಿಗೆ ವಿಶೇಷ ಪ್ರಾಮುಖ್ಯತೆ ಕೊಡುತ್ತಿದ್ದರು. ಅವರು ಕಟ್ಟಡವನ್ನು ಕೊಂಡು ವಿದ್ಯಾರ್ಥಿನಿಲಯಕ್ಕೆಂದು ಬಿಟ್ಟಾಗ, ಕಿರಿಯ ಶ್ರೀಗಳವರಿಗೆ ಇಷ್ಟೇ ಹುಡುಗರಿರಬೇಕು, ಹೀಗೆಯೇ ನಡೆಯಬೇಕು ಎಂಬುದನ್ನೆಲ್ಲಾ ಹೇಳಿ ಹೋಗಿದ್ದರು. ಅದರಂತೆ ತಾವು ಹೇಳಿರುವಷ್ಟೇ ವಿದ್ಯಾರ್ಥಿಗಳಿದ್ದಾರೆಂದು ಬಗೆದು ಅವರಿಗಾಗುವಷ್ಟು ಆಹಾರ ಸಾಮಗ್ರಿಗಳನ್ನು ಕಳುಹಿಸುತ್ತಿದ್ದರು. ಆದರೆ ನಿಜಸ್ಥಿತಿ ಬೇರೆಯಾಗಿದ್ದಿತು. ಹಿರಿಯ ಶ್ರೀಗಳವರು ಹೇಳಿದುದಕ್ಕಿಂತ ಮೂರು ನಾಲ್ಕು ಪಟ್ಟು ಹೆಚ್ಚಿಗೆ ವಿದ್ಯಾರ್ಥಿಗಳು ಪ್ರಸಾದನಿಲಯದಲ್ಲಿದ್ದರು. ಆಂದಮೇಲೆ ಕಡಿಮೆ ಬಿದ್ದುದನ್ನೆಲ್ಲವನ್ನೂ ತುಂಬುವ ಜವಾಬ್ದಾರಿ ಕಿರಿಯ ಶ್ರೀಗಳ ಮೇಲೆ ಬಿದ್ದಿತು. ಆದಕ್ಕಾಗಿ ಅವರು ಪಟ್ಟ ಪಾಡು ಅಷ್ಟಿಷ್ಟಲ್ಲ. ಅಂಗಡಿಗಳಲ್ಲಿ ಸಾಲ ತರಿಸಿ, ತಮಗೆ ಹಣ ದೊರೆತೊಡನೆ ಸಾಲ ತೀರಿಸುತ್ತಿದ್ದರು. ವಿದ್ಯಾರ್ಥಿ ನಿಲಯವನ್ನು ಇಂದಿನ ಸ್ಥಿತಿಗೆ ತರಲು ಅವರು ಪಟ್ಟ ಪಾಡೇನು ಎಂಬುದನ್ನು ನೆನೆಸಿಕೊಂಡಾಗ ಎಂತಹವರಿಗೂ ಎದೆ ಜುಮ್ಮೆನ್ನುತ್ತದೆ.

ಅಂದು ಪಡಿತರದ ಕಾಲ. ಏನು ತರುವುದಕ್ಕೂ ತೊಂದರೆ. ಜೊತೆಗೆ ಪರರಾಳ್ಕೆ. ಇವೆಲ್ಲ ಇದ್ದರೂ ಹಬ್ಬ ಹರಿದಿನಗಳಲ್ಲಿ ನೋಡಬೇಕಿತ್ತು ಆ ಸಂಭ್ರಮ. ಶ್ರೀಗಳವರು ಪಂಕ್ತಿಯ ಮಧ್ಯೆ ಬಂದು ನಿಂತು, ಹತ್ತು ಲಾಡು ಅಥವ ಹೋಳಿಗೆಗಳಿಗಿಂತ ಹೆಚ್ಚಿಗೆ ತಿಂದರೆ ತಿನ್ನುವ ಪ್ರತಿ ಲಾಡು ಅಥವ ಹೋಳಿಗೆಗೆ ಒಂದೊಂದು ದೊನ್ನೆ ತುಪ್ಪ ಎಂದು ಹುರಿದುಂಬಿಸುತ್ತಿದ್ದ ರೀತಿ, ಅದೇ ಸಮಯದಲ್ಲಿ ನಿಮ್ಮ ಮುಂದಿರುವುದು ಪ್ರಸಾದ ಒಂದು ಚೂರನ್ನೂ ಚೆಲ್ಲಕೂಡದು ಎಂದು ಎಚ್ಚರಿಸುತ್ತಿದ್ದ ಜಾಣ್ಮೆಗಳಿಂದ ಅಣ್ಣ ಬಸವಣ್ಣನ ಮಹಾಮನೆಯೇ ಆಗಿಬಿಡುತ್ತಿತ್ತು ಪ್ರಸಾದನಿಲಯ. ಆ ಪಡಿತರದ ಕಾಲದಲ್ಲಿ ಧಾನ್ಯ ಸಂಗ್ರಹಿಸಿ ಅದನ್ನು ಸಾಗಿಸಲು ಇದ್ದ ಕಷ್ಟಗಳನ್ನು ನಗುನಗುತ್ತಲೇ ಅನುಭವಿಸುತ್ತಾ ಅನ್ನವಿತ್ತು ಬಡಮಕ್ಕಳನ್ನು ಸಲಹಿದುದಷ್ಟೇ ಅಲ್ಲ, ಅವರು ಉಂಡುತೇಗಿದುದನ್ನು ನೋಡಿ ಆನಂದಪರವಶರಾಗುತ್ತಿದ್ದರು.

ಜಗದ್ಗುರುಗಳಾದವರು ಯಾವುದೇ ಹಳ್ಳಿಗೆ ಹೋಗಬೇಕಾಗಲಿ, ಮೊದಲೇ ತಿಳಿಸಿ, ಊರ ಬಾಗಿಲಿನಿಂದಲೆ ಉದ್ದ ಪಲ್ಲಕ್ಕಿಯಲ್ಲೋ ಅಡ್ಡಪಲ್ಲಕ್ಕಿಯಲ್ಲೋ ಕುಳಿತು ಭಕ್ತರಿಂದ ಹೊರಿಸಿಕೊಂಡು ಹೋಗುವುದು ಸಂಪ್ರದಾಯ. ಬಡಮಕ್ಕಳ ಉದರ ತುಂಬಲು ಹೊರಟ ಈ ಮಾನವತಾವಾದಿ ಸಂಪ್ರದಾಯಗಳನ್ನೆಲ್ಲ ಕಿತ್ತೊಗೆದರು. ಸುಗ್ಗಿಯ ಕಾಲದಲ್ಲಿ ಊರಿಂದೂರಿಗೆ ಅಡ್ಡಾಡಿದರು. ರೈತ ಕೊಟ್ಟಷ್ಟನ್ನು ನಗುನಗುತ್ತಲೇ ಸ್ವೀಕರಿಸಿ ತಂದು ಬಡಮಕ್ಕಳನ್ನು ಪೋಷಿಸಿ ನಿಜವಾದ ಜಗದ್ಗುರುತ್ವ ಎಲ್ಲಿದೆ ಎಂಬುದನ್ನು ಜಗತ್ತಿಗೆ ತೋರಿದರು.

ಹೀಗೆ ಇವರು ಹಳ್ಳಿಗಳ ಕಡೆ ಹೊರಟಾಗ ಇನ್ನೊಂದು ಸಮಸ್ಯೆ ಇವರಿಗೆದುರಾಯಿತು. ಇವರು ಪ್ರಸಾದ ನಿಲಯವನ್ನು ತೆರೆವ ಮೊದಲು ಮೈಸೂರಿನ ತನಕ ತಮ್ಮ ಮಕ್ಕಳನ್ನು ಕಳುಹಿಸಿ ಓದಿಸುವುದು ಶ್ರೀಮಂತ ರೈತರಿಗೆ ಮಾತ್ರ ಸಾಧ್ಯವಾಗಿತ್ತು. ಇವರು ಪ್ರಸಾದನಿಲಯ ತೆರೆದು, ಅಶನ ವಸತಿಯ ಸೌಲಭ್ಯ ದೊರೆತಮೇಲೆ ಊರಿನಲ್ಲಿದ್ದ ಶಾಲೆಗಳಲ್ಲಿಷ್ಟೇ ತಮ್ಮ ಮಕ್ಕಳನ್ನು ಓದಿಸಿ ಅದು ಮುಗಿದ ಮೇಲೆ ಆ ಮಕ್ಕಳನ್ನು ವ್ಯವಸಾಯಕ್ಕೆ ನೇಮಿಸುತ್ತಿದ್ದ ಮಧ್ಯಮ ವರ್ಗದವರಿಗೆ ಮಕ್ಕಳನ್ನು ಮೈಸೂರಿನತನಕ ಕಳುಹಿಸುವುದು ಸಾಧ್ಯವಾಯಿತು. ಆದರೆ ಅದೆಷ್ಟೋ ಬಡ ರೈತರಿಗೆ ತಮ್ಮ ಮಕ್ಕಳನ್ನು ಓದಿಸಬೇಕೆಂಬ ಇಚ್ಛೆ ಇದ್ದರೂ ಮೈಸೂರಿನ ತನಕ ಅವರನ್ನು ಕಳುಹಿಸುವುದು ಕೈಗೆ ಎಟುಕದ ವಿಷಯವಾಗಿದ್ದಿತು. ಈ ಬಗ್ಗೆ ಶ್ರೀಗಳವರು ಬಹಳವಾಗಿ ಚಿಂತಿಸಿ ಕಡೆಗೆ ಸುತ್ತ ಹತ್ತಾರು ಹಳ್ಳಿಗಳಿಗೆ ಹತ್ತಿರವಾಗಿರುವಂತಹ ಊರುಗಳಲ್ಲಿ ಎಲ್ಲೆಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆಯೊ ಅಲ್ಲಲ್ಲೇ ಒಂದೊಂದು ಪ್ರಸಾದನಿಲಯವನ್ನು ಪ್ರಾರಂಭಿಸಬೇಕು, ಒಂದು ಪಕ್ಷ ಅಂತಹ ಕ್ಷೇತ್ರಗಳಲ್ಲಿ ಶಾಲೆಗಳಿಲ್ಲದಿದ್ದರೆ ತಾವೇ ಶಾಲೆ ಮತ್ತು ಪ್ರಸಾದನಿಲಯ ಎರಡನ್ನೂ ಪ್ರಾರಂಭಿಸಬೇಕು ಎಂಬ ನಿರ್ಧಾರಕ್ಕೆ ಬಂದರು.

ಈ ನಿರ್ಧಾರಕ್ಕೆ ಬಂದಮೇಲೆ, ಮೊದಲು ಶ್ರೀಗಳವರ ದೃಷ್ಟಿಗೆ ಬಿದ್ದುದು ತಿರುಮಕೂಡಲು ನರಸೀಪುರ. ಅಂದು ಅಲ್ಲಿ ಒಂದು ಮಾಧ್ಯಮಿಕ ಶಾಲೆ ಮಾತ್ರ ಇದ್ದಿತು. ಬಸ್ಸಿನ ಸೌಕರ್ಯ ಇಂದಿನಷ್ಟಿರಲಿಲ್ಲವಾದುದರಿಂದ

ಸುತ್ತಮುತ್ತಣ ಹಳ್ಳಿಯ ಮಕ್ಕಳು ನಡೆದೇ ಶಾಲೆಗೆ ಬರುತ್ತಿದ್ದರು. ದೂರದ ಹಳ್ಳಿಗಳವರು ಕೆಲವರು ತಮ್ಮ ಬಂಧುಗಳ ಮನೆಯಲ್ಲಿ ಮಕ್ಕಳನ್ನು ಬಿಟ್ಟು ಓದಿಸುತ್ತಿದ್ದರು. ಆ ಊರಿನಲ್ಲಿ ಬಂಧುಗಳಿಲ್ಲದವರಿಗೆ, ಬಂಧುಗಳಿದ್ದರೂ ತಮ್ಮ ಮಕ್ಕಳನ್ನು ಅವರ ಮನೆಯಲ್ಲಿ ಬಿಡಲಿಷ್ಟವಿಲ್ಲದವರಿಗೆ, ತಮ್ಮ ಮಕ್ಕಳನ್ನು ಓದಿಸುವುದು ಸಾಧ್ಯವಿರಲಿಲ್ಲ.

ಶ್ರೀಗಳವರು ಆ ತಾಲ್ಲೂಕಿನ ಮುಖಂಡರುಗಳಾದ ಕೊತ್ತೇಗಾಲದ ಪುಟ್ಟಮಲ್ಲದೇವರು, ಮರಿಸಿದ್ದಪ್ಪನವರು, ಕೆ. ಬಿ. ಮಲ್ಲಯ್ಯನವರು ಮುಂತಾದ ಮಹನೀಯರ ಮುಂದೆ ತಮ್ಮ ಅಭಿಪ್ರಾಯವನ್ನು ತಿಳಿಸಿದಾಗ, ಅವರೆಲ್ಲರೂ ಆನಂದದಿಂದ ಎಲ್ಲ ವಿಧದಲ್ಲಿಯೂ ಸಹಕರಿಸಲು ಮುಂದೆ ಬಂದರು. ೧೯೪೪ರಲ್ಲಿ ಮಾನ್ಯ ಗುಂಡಪ್ಪನವರ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಪ್ರಸಾದನಿಲಯವನ್ನು ಪ್ರಾರಂಭಿಸಿ, ಅಂದು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಸುತ್ತಮುತ್ತಣ ಬಡವಿದ್ಯಾರ್ಥಿಗಳಿಗೆ ಅಶನ ವಸತಿಸೌಕರ್ಯವನ್ನೇರ್ಪಡಿಸಿದರು. ಅದೇ ಶಾಲೆಯ ಉಪಾಧ್ಯಾಯರಾಗಿದ್ದ ಉಕ್ಕಲಗೆರೆಯ ಮಾನ್ಯ ಎಂ. ಎಸ್. ಶಿವಪ್ಪನವರು ವಿದ್ಯಾರ್ಥಿನಿಲಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸಂತೋಷದಿಂದ ಒಪ್ಪಿದರು. ಮುಂದಣ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಏರಿದುದರಿಂದ ಮಾನ್ಯ ಗುಂಡಪ್ಪನವರ ಮನೆ ಸಾಲದೆ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಇರುವ ಸರ್ಕಾರಿ ಛತ್ರದಲ್ಲಿ ಸ್ವಲ್ಪ ದಿವಸ ಪ್ರಸಾದ ವ್ಯವಸ್ಥೆಯನ್ನು ನಡೆಸಿ ಅನಂತರ ಮಾನ್ಯ ಪುಟ್ಟಣ್ಣನವರ ಛತ್ರಕ್ಕೆ ಬದಲಾಯಿಸಬೇಕಾಯಿತು. ಅದೇ ವರ್ಷ ಸರ್ಕಾರಿ ಕೊಡುಗೆಯೂ ಮಂಜೂರಾದುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಪ್ರಸಾದನಿಲಯಕ್ಕೆ ಸೇರಿಸಿಕೊಂಡ ಶ್ರೀಗಳು, ತಮ್ಮದೇ ಆದ ಒಂದು ಸ್ವಂತ ಕಟ್ಟಡವನ್ನು ಕೊಂಡುಕೊಳ್ಳಬೇಕೆಂದು ಚಿಂತಿಸಲಾರಂಭಿಸಿದರು.

ಅತ್ತ ತಿರುಮಕೂಡಲು ನರಸೀಪುರದಲ್ಲಿ ಪ್ರಸಾದನಿಲಯ ಪ್ರಾರಂಭವಾಗಿ ಒಂದು ಸ್ಥಿತಿಗೆ ಬರುತ್ತಿದ್ದಂತೆಯೆ ಮಾನ್ಯರುಗಳಾದ ಉಡೀಗಾಲದ ಸಾಹುಕಾರ್ ಗುರುಮಲ್ಲಪ್ಪನವರು, ಮರಳ್ಳಿ ಪಟೇಲ್ ಪುಟ್ಟಸ್ವಾಮಪ್ಪನವರು, ಕಮರವಾಡಿ ಪಟೇಲ್ ಚಿಕ್ಕಸಿದ್ದಪ್ಪನವರು, ಕಾಗಲವಾಡಿ ಪುಟ್ಟಣ್ಣನವರು ಮುಂತಾದ ಮುಖಂಡರ ಸಹಕಾರದಿಂದ ಚಾಮರಾಜನಗರದಲ್ಲಿ ಸೋಮವಾರಪೇಟೆ ವೀರಣ್ಣನವರ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ದಿನಾಂಕ ೮-೮-೧೯೪೫ರಲ್ಲಿ ಪ್ರಸಾದನಿಲಯವನ್ನು ಪ್ರಾರಂಭಿಸಿದರು. ಮೊದಲು ಪ್ರೌಢಶಾಲೆಯ ೩೬ ವಿದ್ಯಾರ್ಥಿಗಳಿಗೆ ಸ್ಥಳ ಕೊಡಲಾಯಿತು. ಶ್ರೀ ಎಂ. ಎನ್. ಗುರುಸಿದ್ದಪ್ಪನವರಿಗೆ ಇಲ್ಲಿನ ಪ್ರಸಾದನಿಲಯದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಒಪ್ಪಿಸಿದರು.

ಜಗದ್ಗುರುಗಳವರು ತಾಲ್ಲೂಕುಗಳಲ್ಲಿ ಪ್ರಸಾದನಿಲಯಗಳನ್ನು ಪ್ರಾರಂಭಿಸುತ್ತಿದ್ದಂತೆಯೆ ೧೯೪೬ರಲ್ಲಿ ಕಾಶಿಯಿಂದ ಮೈಸೂರಿಗೆ ಶ್ರೀ॥ ನಿ॥ ಪ್ರ॥ ಸ್ವ॥ ಗೌರೀಶಂಕರ ಮಹಾಸ್ವಾಮಿಗಳವರು ದಯಮಾಡಿಸಿ ಶ್ರೀಗಳವರಿಂದ ಸಮಾಜದ ಬಡಜನತೆಗೆ ಆಗುತ್ತಿರುವ ಉಪಕಾರವನ್ನು ಕಂಡು ಆನಂದತುಂದಿಲರಾದರು. ಆ ಮಹಾಜಂಗಮ ಕಾಶಿಯಿಂದ ದಯಮಾಡಿಸಿ ಬೆನ್ನುತಟ್ಟಿದ ಮೇಲೆ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ರೆಕ್ಕೆಗಳೇ ಬಂದಂತಾಯಿತು. ಆ ಮಹಾಜಂಗಮನನ್ನು ನೋಡಿಕೊಳ್ಳುವ ಕೆಲಸವೂ ಇವರದೇ ಆಯಿತು.

೧೯೪೭ರಲ್ಲಿ ಚಾಮರಾಜನಗರದ ಪ್ರಸಾದನಿಲಯದ ವಿದ್ಯಾರ್ಥಿಗಳ ಸಂಖ್ಯೆ ೧೬೪ಕ್ಕೇರಿತು. ಬಾಡಿಗೆಗೆ ತೆಗೆದುಕೊಂಡಿದ್ದ ಮನೆಗಳು ಸಾಲದಾದುವು. ಆಗ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದ ಗುರುಲಿಂಗ ಜಂಗಮ ಪ್ರೇಮಿ ಶ್ರೀ ಕೆ. ಸಿ. ಸುಬ್ಬಣ್ಣನವರು ಶ್ರೀಗಳವರ ನೆರವಿಗೆ ಬಂದು ಡಿಸ್ಟ್ರಿಕ್ಟ್ ಬೋರ್ಡ್ ಛತ್ರವನ್ನು ವಿದ್ಯಾರ್ಥಿನಿಲಯಕ್ಕಾಗಿ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟರು.

೧೯೪೭-೪೮ರಲ್ಲಿ ಟಿ. ನರಸೀಪುರದ ವಿದ್ಯಾರ್ಥಿಗಳ ಸಂಖ್ಯೆ ಐವತ್ತರಿಂದ ಅರವತ್ತಕ್ಕೇರಿತು. ಕೊತ್ತೇಗಾಲದ ಶ್ರೀ ಪುಟ್ಟಮಲ್ಲದೇವರ ಸತತ ಪ್ರಯತ್ನದ ಫಲವಾಗಿ ಆಗ ಪಬ್ಲಿಕ್ ಸರ್ವೀಸ್ ಕಮೀಷನರ್ ಆಗಿದ್ದ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರ ಮನೆಯನ್ನು ಖರೀದಿಸಿ ವಿದ್ಯಾರ್ಥಿನಿಲಯವನ್ನಲ್ಲಿಗೆ ವರ್ಗಾಯಿಸಿದರು. ಮನೆ ತುಂಬಾ ವಿಶಾಲವಾಗಿದ್ದುದರಿಂದ ಅಲ್ಲಿನ ಸಮಸ್ಯೆ ಬಗೆಹರಿದಂತಾಯಿತು.

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ, ನಮ್ಮ ರಾಷ್ಟ್ರ ಜಾತ್ಯತೀತ ರಾಷ್ಟ್ರವೆಂದು ಘೋಷಿಸುವ ಮುನ್ನವೇ ಶ್ರೀಗಳವರ ಪ್ರಸಾದನಿಲಯಗಳಲ್ಲಿ ಜಾತಿ ಕುಲಗಳ ಅಂತರವಿಲ್ಲದೆ ಎಲ್ಲ ಕೋಮಿನ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವಿದ್ದುದು ಶ್ರೀಗಳವರ ಸರ್ವಧರ್ಮ ಸಮತೆ ಹಾಗೂ ಔದಾರ್ಯಕ್ಕೆ ಸಾಕ್ಷಿಯಾಗಿದೆ.

ಬೇರೆ ತಾಲ್ಲೂಕುಗಳ ಜನರೂ ಶ್ರೀಗಳವರ ಬಳಿ ಬಂದು, ತಮ್ಮ ತಮ್ಮ ತಾಲ್ಲೂಕುಗಳಲ್ಲಿಯೂ ಪ್ರಸಾದ

ನಿಲಯಗಳನ್ನು ಪ್ರಾರಂಭಿಸುವಂತೆ ಶ್ರೀಗಳವರಲ್ಲಿ ನಿವೇದಿಸಿಕೊಂಡರು. ೧೯೫೧-೫೨ರಲ್ಲಿ ಸಾಕಷ್ಟು ಹೊಸ ವಿದ್ಯಾರ್ಥಿನಿಲಯಗಳು ಪ್ರಾರಂಭವಾದುವು.

ಬಿಡುಗಲು ಮೂಡಲು ಮಠದ ಶ್ರೀಗಳವರು, ಮಾನ್ಯರುಗಳಾದ ಮಳಲಿ ಶಿವಪ್ಪಾಜಿ, ಮಾದಾಪುರದ ಪುಟ್ಟ ಸ್ವಾಮಿ ಮೊದಲಾದವರ ಸಹಕಾರದಿಂದ ಸಂತೆಸರಗೂರಿನಲ್ಲೊಂದು ಪ್ರಸಾದನಿಲಯ ಪ್ರಾರಂಭವಾಯಿತು.

ಪ್ರೆಸ್ಸಿನ ಶ್ರೀ ಗುರುಶಾಂತದೇವರು. ಚಂದಗಾಲದ ಶ್ರೀ ಪುಟ್ಟಪ್ಪನವರು ಇನ್ನೂ ಅನೇಕ ಮಹನೀಯರ ಸಹಕಾರದಿಂದ ಹಳ್ಳಿ ಮೈಸೂರಿನಲ್ಲೊಂದು ಪ್ರಸಾದನಿಲಯ ತಲೆ ಎತ್ತಿತು.

ತೆರಕಣಾಂಬಿ ಮಠದ ಶ್ರೀಗಳವರು, ಬೊಮ್ಮನಹಳ್ಳಿ ಮಠದ ಶ್ರೀಗಳವರು ಮತ್ತು ಹುಂಡೀಪುರದ ಶ್ರೀ ಶಿವರುದ್ರಪ್ಪನವರು ಮೊದಲಾದವರ ಸಹಕಾರದಿಂದ ತೆರಕಣಾಂಬಿಯಲ್ಲೊಂದು ವಿದ್ಯಾರ್ಥಿನಿಲಯ ಪ್ರಾರಂಭ ವಾಯಿತು.

ದುಗಹಟ್ಟಿ ಶ್ರಿ ವೀರಭದ್ರಪ್ಪನವರು, ಹೊನ್ನೂರು ಶ್ರೀ ಗುರುಲಿಂಗಪ್ಪನವರೇ ಮುಂತಾದ ಮಹನೀಯರ ಸಹಕಾರದಿಂದ ಯಳಂದೂರಿನಲ್ಲೊಂದು ಪ್ರಸಾದನಿಲಯ ಸ್ಥಾಪಿಸಲ್ಪಟ್ಟಿತು.

ಶ್ರೀಗಳವರ ಅಪ್ಪಣೆಯಂತೆ ಕಬ್ಬಳ್ಳಿ ಜಮೀನ್ದಾರ್ ಶ್ರೀ ಸಿರಿಯಪ್ಪನವರು ನಂಜನಗೂಡಿನಲ್ಲಿ ಪ್ರಾರಂಭಿಸಿ ನಡೆಸುತ್ತಿದ್ದ ವಿದ್ಯಾರ್ಥಿನಿಲಯವನ್ನು ಶ್ರೀಗಳವರಿಗೊಪ್ಪಿಸಿ ಕೃತಾರ್ಥರಾದರು.

ಹುಲ್ಲಹಳ್ಳಿ ಜಮೀನ್ದಾರ್ ಶ್ರೀ ನಾಗಪ್ಪನವರ ಮತ್ತು ಧರ್ಮರತ್ನಾಕರ ಸಾಹುಕಾರ್ ನಂದಿಬಸಪ್ಪನವರ ಮಕ್ಕಳು ಶ್ರೀ ಚಂದ್ರಶೇಖರಪ್ಪನವರ ಸಹಕಾರದಿಂದ ಹುಲ್ಲಹಳ್ಳಿಯಲ್ಲೊಂದು ಪ್ರಸಾದನಿಲಯ ಪ್ರಾರಂಭವಾಯಿತು. ಇವುಗಳ ಜೊತೆಗೆ ಹರವೆಯಲ್ಲಿ ದಲಿತರಿಗಾಗಿ ಒಂದು ಪ್ರಸಾದನಿಲಯವನ್ನು ಪ್ರಾರಂಭಿಸಲಾಯಿತು. ಈ ಎಲ್ಲ ವಿದ್ಯಾರ್ಥಿನಿಲಯಗಳ ಪ್ರಾರಂಭದ ಕಾಲದಲ್ಲಿ ಮಾನ್ಯ ಎಂ. ಎಸ್. ಚನ್ನಮಲ್ಲಪ್ಪನವರು ಅವಿಶ್ರಾಂತವಾಗಿ ದುಡಿದು ಶ್ರೀಗಳವರ ಕೃಪಾಶೀರ್ವಾದಕ್ಕೆ ಪಾತ್ರರಾದರು. ಬನ್ನಿಮಂಟಪದ ಪ್ರಶಾಂತ ವಾತಾವರಣದಲ್ಲೊಂದು ಪ್ರಸಾದನಿಲಯ ಪ್ರಾರಂಭವಾಯಿತು. ಆ ವರ್ಷ ಇನ್ನೆಷ್ಟು ವಿದ್ಯಾರ್ಥಿನಿಲಯಗಳು ಪ್ರಾರಂಭವಾಗುತ್ತಿದ್ದುವೋ ಏನೋ, ಆದರೆ ೧೩-೮-೧೯೫೨ರಂದು ಶ್ರೀ॥ ನಿ॥ ಪ್ರ॥ ಸ್ವ॥ ಗೌರೀಶಂಕರ ಮಹಾಸ್ವಾಮಿಗಳವರು ತಮ್ಮ ಇಹ ಲೋಕ ವ್ಯಾಪಾರವನ್ನು ಮುಗಿಸಿ ಶಿವನತ್ತ ತೆರಳಿದರು. ಈ ಅಗಲಿಕೆಯಿಂದ ಚಿಂತಾಕ್ರಾಂತರಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮತ್ತೆ ಎಚ್ಚೆತ್ತು ಕಾರ್ಯೋನ್ಮುಖರಾಗಬೇಕಾದರೆ ಆ ಮಹಾಜಂಗಮನೇ ಕೈಲಾಸದಿಂದಿಳಿದು ಬಂದು ಇವರ ಕನಸಿನಲ್ಲಿ ಕಾಣಿಸಿಕೊಂಡು ಎಚ್ಚರಿಸಬೇಕಾಯಿತು.

೧೯೫೭ರಲ್ಲಿ ನಮ್ಮನ್ನಾಳಿದ ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು, ಶ್ರೀಗಳವರಿಂದ ಸಮಾಜಕ್ಕಾಗುತ್ತಿರುವ ಉಪಕಾರವನ್ನು ಮನಗಂಡು, ಇಂದು ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠವಿರುವ ಅಂದು ಗಜಶಾಲೆಯಾಗಿದ್ದ ವಿಸ್ತಾರವಾದ ನಿವೇಶನವನ್ನು ಶ್ರೀಗಳವರಿಗೆ ಕೇವಲ ಅಲ್ಪ ಮೌಲ್ಯಕ್ಕೆ ಕೊಟ್ಟರು. ಅಲ್ಲಿ ಶಾಲೆ ಕಾಲೇಜುಗಳ ಜೊತೆಗೆ ಒಂದು ಪ್ರಸಾದನಿಲಯವೂ ತಲೆ ಎತ್ತಿ ನಿತ್ಯವೂ ಒಂಬೈನೂರಕ್ಕೂ ಮೇಲ್ಪಟ್ಟು ಬಡಮಕ್ಕಳನ್ನು ಪೋಷಿಸುತ್ತಿದೆ. ಒಟ್ಟಿನಲ್ಲಿ ಮೈಸೂರು, ನಂಜನಗೂಡು, ಸುತ್ತೂರು ನರಸೀಪುರ, ಚಾಮರಾಜನಗರ, ತೆರಕಣಾಂಬಿ, ಹರವೆ, ಹೊಳೆನರಸೀಪುರ, ಕೃಷ್ಣರಾಜನಗರ, ಯಳಂದೂರು, ರಾಮಾ ಪುರ ಈ ಎಲ್ಲ ಕಡೆ ಅನೇಕ ಪ್ರಸಾದನಿಲಯಗಳು, ಐದು ಸಾವಿರಕ್ಕೂ ಮೇಲ್ಪಟ್ಟು ಬಡಮಕ್ಕಳಿಗೆ ಆಧಾರವಾಗಿ ನಿಂತಿವೆ.

ಒಂದೇ ಮಾತಿನಲ್ಲಿ ಹೇಳುವುದಾದರೆ,

ಎತ್ತೆತ್ತ ನೋಡಿದಡೆ ಅತ್ತತ್ತ ಶಿವರಾತ್ರಿ ರಾಜೇಂದ್ರನೆಂಬ ಬಳ್ಳಿ
ಎತ್ತಿ ನೋಡಿದಡೆ ವಿದ್ಯಾಸಂಸ್ಥೆ ಪ್ರಸಾದನಿಲಯಗಳೆಂಬ ಗೊಂಚಲು
ಒತ್ತಿ ಹಿಂಡಿದೊಡೆ ಜ್ಞಾನವೆಂಬ ರಸವಯ್ಯಾ
ಇಂದೆಮ್ಮನಾ ಗುರುದೇವ ಬೆಳೆಸಿದನಯ್ಯಾ ಉಳಿಸಿದನಯ್ಯಾ
ಅವನ ಶ್ರೀಪಾದಕ್ಕೆ ನಮೋ ನಮೋ ಎಂದು
ಬಾಗಿದ ತಲೆ ಮುಗಿದ ಕೈಯಾಗಿನಿಂತೆನಯ್ಯಾ

## ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ಪ್ರಸಾದನಿಲಯಗಳು

೧. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗುರುಕುಲ : ವಾಣೀವಿಲಾಸ ರಸ್ತೆ, ಮೈಸೂರು_೪, ೧೯೫೧
೨. ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ : ರಾಮಾನುಜ ರಸ್ತೆ, ಮೈಸೂರು-೪, ೧೯೬೦
೩. ಜಗದ್ಗುರು ಶ್ರೀ ಶಿವರಾತ್ರೀಶ್ವರ ಅಂಗವಿಕಲರ ವಿದ್ಯಾರ್ಥಿನಿಲಯ : ರಾಮಾನುಜ ರಸ್ತೆ, ಮೈಸೂರು-೪, ೧೯೬೧
೪. ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದನಿಲಯ : ರಾಮಾನುಜ ರಸ್ತೆ, ಮೈಸೂರು-೪, ೧೯೪೮
೫. ಜಗದ್ಗುರು ಶ್ರೀ ಶಿವರಾತ್ರೀಶ್ವರ ನಿಮ್ನವರ್ಗದ ವಿದ್ಯಾರ್ಥಿನಿಲಯ : ರಾಮಾನುಜ ರಸ್ತೆ, ಮೈಸೂರು-೪, ೧೯೬೩
೬. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ವಾಣೀವಿಲಾಸ ರಸ್ತೆ, ಮೈಸೂರು_೪, ೧೯೪೨
೭. ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಉಚಿತ ವಿದ್ಯಾರ್ಥಿನಿಲಯ : ವಾಣೀವಿಲಾಸ ರಸ್ತೆ, ಮೈಸೂರು-೪, ೧೯೩೨
೮. ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮಸಿ ಕಾಲೇಜ್ ವಿದ್ಯಾರ್ಥಿನಿಲಯ : ಲಕ್ಷ್ಮೀಪುರಂ, ಮೈಸೂರು-೪, ೧೯೭೪
೯. ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮಸಿ ಕಾಲೇಜ್ ವಿದ್ಯಾರ್ಥಿನಿಲಯ : ರಾಕ್‌ಲ್ಯಾಂಡ್ಸ್. ಊಟಿ, ೧೯೮೦
೧೦. ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಕ್ಕಳ ರೆಸಿಡೆನ್ಷಿಯಲ್ ಹಾಸ್ಟೆಲ್ : ಸರಸ್ವತೀಪುರಂ, ಮೈಸೂರು-೯
೧೧. ಜಗದ್ಗುರು ಶ್ರೀ ಶಿವರಾತ್ರೀಶ್ವರ ಉದ್ಯೋಗನಿರತ ಮಹಿಳೆಯರ ಹಾಸ್ಟೆಲ್ : ಸರಸ್ವತೀಪುರಂ, ಮೈಸೂರು-೯, ೧೯೭೮
೧೨. ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳೆಯರ ಕಾಲೇಜ್ ಹಾಸ್ಟೆಲ್ : ಸರಸ್ವತೀಪುರಂ, ಮೈಸೂರು-೯, ೧೯೬೦
೧೩. ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳಾ ಪ್ರಶಿಕ್ಷಣಾ ತರಬೇತಿ ಕಾಲೇಜು ಹಾಸ್ಟೆಲ್ : ಸರಸ್ವತೀಪುರಂ, ಮೈಸೂರು-೯, ೧೯೬೦
೧೪. ಜಗದ್ಗುರು ಶ್ರೀ ಶಿವರಾತ್ರೀಶ್ವರ ಪುರುಷರ ಪ್ರಶಿಕ್ಷಣಾ ತರಬೇತಿ ಕಾಲೇಜು ಹಾಸ್ಟೆಲ್ : ಚಾಮುಂಡಿ ಬೆಟ್ಟದ ತಪ್ಪಲಿನ ಪಾದದ ರಸ್ತೆ, ಮೈಸೂರು, ೧೯೬೦
೧೫. ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ವಿದ್ಯಾರ್ಥಿನಿಲಯ : ಮಾನಸಗಂಗೋತ್ರಿ, ಮೈಸೂರು, ೧೯೬೪
೧೬. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ಸುತ್ತೂರು, ನಂಜನಗೂಡು ತಾ. ೧೯೫೫
೧೭. ಜಗದ್ಗುರು ಶ್ರೀ ಶಿವರಾತ್ರೀಶ್ವರ ನಿಮ್ನವರ್ಗದ ವಿದ್ಯಾರ್ಥಿನಿಲಯ : ಸುತ್ತೂರು, ನಂಜನಗೂಡು ತಾ. ೧೯೬೩
೧೮. ಜಗದ್ಗುರು ಶ್ರೀ ಶಿವರಾತ್ರೀಶ್ವರ ನಿರ್ಗತಿಕ ಮಕ್ಕಳ ವಿದ್ಯಾರ್ಥಿನಿಲಯ : ಸುತ್ತೂರು, ನಂಜನಗೂಡು ತಾ. ೧೯೭೭
೧೯. ಜಗದ್ಗುರು ಶ್ರೀ ಶಿವರಾತ್ರೀಶ್ವರ ನಿರ್ಗತಿಕ ಮಕ್ಕಳ ವಿದ್ಯಾರ್ಥಿನಿಲಯ : ಹುಲ್ಲಹಳ್ಳಿ, ನಂಜನಗೂಡು ತಾ. ೧೯೬೦
೨೦. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ಚಾಮರಾಜನಗರ, ಮೈಸೂರು ಜಿಲ್ಲೆ, ೧೯೪೫
೨೧. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ತೆರಕಣಾಂಬಿ, ಗುಂಡ್ಲುಪೇಟೆ ತಾ. ೧೯೬೩
೨೨. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ಯಳಂದೂರು, ಮೈಸೂರು ಜಿಲ್ಲೆ, ೧೯೫೨
೨೩. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ರಾಮಾಪುರ, ಕೊಳ್ಳೇಗಾಲ ತಾ., ೧೯೬೨
೨೪. ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ : ರಾಮಾಪುರ, ಕೊಳ್ಳೇಗಾಲ ತಾ., ೧೯೬೨
೨೫. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ಬಂಡಹಳ್ಳಿ, ಕೊಳ್ಳೇಗಾಲ ತಾ., ೧೯೮೦
೨೬. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ : ಕೃಷ್ಣರಾಜನಗರ, ಮೈಸೂರು ಜಿಲ್ಲೆ, ೧೯೫೨
೨೭. ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳಾ ತಾಂತ್ರಿಕ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿಲಯ : ಮಾನಸಗಂಗೋತ್ರಿ, ಮೈಸೂರು, ೧೯೮೧
೨೮. ಜಗದ್ಗುರು ಶ್ರೀ ಶಿವರಾತ್ರೀಶ್ವರ ದೈಹಿಕ ಶಿಕ್ಷಣ ಕಾಲೇಜ್ ವಿದ್ಯಾರ್ಥಿನಿಲಯ : ಬೆಟ್ಟದ ತಪ್ಪಲಿನ ಪಾದದ ರಸ್ತೆ, ಮೈಸೂರು ೧೯೮೧

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ

ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿ

"ವಿದ್ಯಾವಿಹೀನಃ ಪಶುಃ" "ನ ಹಿ ಜ್ಞಾನೇನ ಸದೃಶಂ"—ಈ ಸೂಕ್ತಿಗಳು ವಿದ್ಯೆ ಮತ್ತು ಜ್ಞಾನದ ಮಹತ್ವವನ್ನು ಸುವ್ಯಕ್ತಗೊಳಿಸುತ್ತವೆ. ವಿದ್ಯೆಯಿಲ್ಲದವನು ಪಶು ಸಮಾನ. ಜ್ಞಾನಕ್ಕೆ ಸಮನಾದುದು ಬೇರೊಂದಿಲ್ಲ. ಆದರೆ ಅವುಗಳನ್ನು ಹೊಂದಲು ಅನುಕೂಲಕರವಾದ ವಾತಾವರಣ—ಪರಿಸರಗಳು ಅತ್ಯಗತ್ಯ. 'It is opportunity that makes a man to become great, you cannot neglect the intelligence of a common man" —ಎಂದು ದಿವಂಗತ ಶ್ರೀ ವಿ. ಕೆ. ಕೃಷ್ಣಮೆನನ್ ಹೇಳಿದ್ದಾರೆ. ತಕ್ಕ ಅವಕಾಶ. ಸೂಕ್ತ ಪರಿಸರಗಳು ಸಿಕ್ಕದೆ ಅನೇಕ ಜನರು—ಗ್ರಾಮವಾಸಿಗಳೇ ಇರಬಹುದು : ನಗರವಾಸಿಗಳೇ ಆಗಿರಬಹುದು—ನಿರಕ್ಷರಕುಕ್ಷಿಗಳಾಗಿದ್ದಾರೆ. ಹೀಗೆಂದ ಮಾತ್ರಕ್ಕೆ ಅವರ ಬುದ್ಧಿಮತ್ತೆಯನ್ನು ಅಲ್ಲಗಳೆದಂತಾಗುವುದಿಲ್ಲವಷ್ಟೆ. ಆಂಗ್ಲ ಕವಿ ಥಾಮಸ್ ಗ್ರೇ ಒಮ್ಮೆ ಹಳ್ಳಿಯ ಸ್ಮಶಾನಕ್ಕೆ ಹೋಗಿದ್ದಾಗ—ಅಲ್ಲಿನ ಅನೇಕ ಗೋರಿಗಳತ್ತ ಅವನ ಕಣ್ಣು ಹೊರಳಿತು. ಮನ ಮಿಡಿಯಿತು : ಈ ಗೋರಿಗಳ ಗರ್ಭದಲ್ಲಿ ಬೆಳಕು ಕಾಣದ ಏನೆಂಥ ಪ್ರತಿಭಾನ್ವಿತ ವ್ಯಕ್ತಿಗಳು ಚಿರನಿದ್ರೆಯಲ್ಲಿರುವರೋ ?—ಎಂದು ಮರುಗುವುದನ್ನು ಅವನ ಒಂದು ಪದ್ಯದಲ್ಲಿ ನಾವು ಮನಗಾಣಬಹುದು. ಈ ಮಾತುಗಳು ಏನನ್ನು ಬೆರಳುಮಾಡಿ ತೋರಿಸುತ್ತಿವೆ ಎಂದರೆ—ವ್ಯಕ್ತಿಯ ಪ್ರತಿಭೆಯು ಹೊರಹೊಮ್ಮಬೇಕಾದರೆ. ಅದು ಅರಳಿ ತನ್ನ ಸೌರಭವನ್ನು ಸುತ್ತಮುತ್ತ ಬೀರಬೇಕೆಂದರೆ—ತಕ್ಕ ಅವಕಾಶ. ಯೋಗ್ಯ ಪರಿಸರಗಳು ಅತ್ಯಗತ್ಯ.

೧೯೪೦ರ ಅವಧಿಯಲ್ಲಿ ಶಿಕ್ಷಣಾರ್ಥಿಗಳಾಗಿ ಮೈಸೂರಿಗೆ ಆಗಮಿಸಿದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು—ತಕ್ಕ ಶೈಕ್ಷಣಿಕ ಪರಿಸರ. ಸೌಲಭ್ಯ. ಅವಕಾಶಗಳಿಲ್ಲದೆ ಪರಿತಪಿಸುತ್ತಿದ್ದ ಪಡಿಪಾಟಲು ಪಡುತ್ತಿದ್ದ ಅಸಂಖ್ಯಾತ ವಿದ್ಯಾರ್ಥಿಗಳನ್ನು ಗಮನಿಸಿ—ಅವರ ಹೃದಯದಲ್ಲಿ ಅಡಗಿರುವ ಪ್ರತಿಭೆಯನ್ನು ಅರಳಿಸಲು ಸೂಕ್ತ ವಾತಾವರಣವನ್ನು ನಿರ್ಮಾಣ ಮಾಡಲು ಪಣತೊಟ್ಟು—ಮೊದಲ ಹೆಜ್ಜೆಯಾಗಿ 'ವಿದ್ಯಾರ್ಥಿ ಪ್ರಸಾದ ನಿಲಯ'ವೊಂದನ್ನು ಸ್ಥಾಪಿಸಿದರು. ಪ್ರಾರಂಭದ ವರುಷಗಳಲ್ಲಿ ವಿದ್ಯಾರ್ಥಿಗಳನ್ನು "ಹೂವಿನಲ್ಲಿಟ್ಟು ಸಾಕಿದ"ರೆಂದೇ ಹೇಳಬೇಕು. ಕಾಲಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆ ದ್ವಿಗುಣ. ತ್ರಿಗುಣವಾಯಿತು. ವಿದ್ಯಾರ್ಥಿ ಪ್ರಸಾದನಿಲಯಗಳೂ ಹೆಚ್ಚಿದುವು. ಆದರೆ ಬ್ರಿಟಿಷರ 'ಕೃಪಾಕಟಾಕ್ಷ'ದಿಂದಾಗಿ ಪಡಿತರ ಪದ್ಧತಿ ಜಾರಿಗೆ ಬಂತು. ಎರಡು ಹೊತ್ತೂ ವಿದ್ಯಾರ್ಥಿಗಳಿಗೆ ಕರುಣಿಸಬೇಕಾದ ಪ್ರಸಾದಕ್ಕಾಗಿ ಶ್ರೀಗಳವರು ಅಂದಿನ ದಿನಗಳಲ್ಲಿ ಪಟ್ಟ ಶ್ರಮ ಅಸದಳ. ಏನೇ ಆಗಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡದೆ. ಮುಂದು ಮುಂದಕ್ಕೆ ಸಾಗಿಯೇ ಸಾಗಿದರು....

೧೯೫೩ರ ವರೆವಿಗೂ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು. ಅವುಗಳನ್ನು ನಡೆಸಿಕೊಂಡು ಬರುವುದೇ ಶ್ರೀಗಳವರಿಗೆ ಅತ್ಯಂತ ಪ್ರಿಯವಾದ ಕಾಯಕವಾಗಿತ್ತು. ೧೯೫೪ರಿಂದೀಚೆಗೆ ಬದಲಾದ ಸಂದರ್ಭಗಳಿಗನುಗುಣವಾಗಿ ಜನರ ಒತ್ತಡ. ಒತ್ತಾಸೆ. ಒತ್ತಾಯಗಳಿಂದಾಗಿ—ಅಸಂಖ್ಯಾತ ವಿದ್ಯಾರ್ಥಿಗಳ ಅಗತ್ಯ ಅವಶ್ಯಕತೆಗಳನ್ನು ಪೂರೈಸಲು ಸ್ವತಃ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಬೇಕಾಯಿತು. ಪ್ರಸಾದನಿಲಯಗಳು. ವಿದ್ಯಾಸಂಸ್ಥೆಗಳು ಮತ್ತಿತರ ಅನೇಕ ಪೋಷಿತ ಸಂಸ್ಥೆಗಳು ಸಾರ್ಥಕ ಸೇವೆ ಸಲ್ಲಿಸುವಂತಾಗಲು "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ" ವೆಂಬ ವಟವೃಕ್ಷಕ್ಕೆ ಬೀಜ ನೆಟ್ಟರು ಶ್ರೀಗಳವರು. ಈ ವಟವೃಕ್ಷದ ಆಶ್ರಯದಲ್ಲಿ ಇಂದು ಬಾಲಕ ಬಾಲಕಿಯರಿಗೆ ಶಿಕ್ಷಣ ಮೂಡಿಸುವ ಸಂಸ್ಥೆ(creche)ಯಿಂದ. ತಾಂತ್ರಿಕ ಸಂಸ್ಥೆಯವರೆಗೆ ಅನೇಕ ಸಂಸ್ಥೆಗಳು ಮೈವೆತ್ತು ಸಹಸ್ರಾರು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ. ಅವರ ಅಭ್ಯುದಯಕ್ಕಾಗಿ. ತನ್ಮೂಲಕ ದೇಶದ ಏಳಿಗೆಗಾಗಿ ಅವಿರತವಾಗಿ ದುಡಿಯುತ್ತಿವೆ.

ಒಂದು ಇಂಜಿನಿಯರಿಂಗ್ ಕಾಲೇಜ್. ಮಹಿಳೆಯರ ಒಂದು ಪಾಲಿಟೆಕ್ನಿಕ್ ಕಾಲೇಜ್. ನಾಲ್ಕು ಪ್ರಥಮ ದರ್ಜೆ ಕಾಲೇಜುಗಳು. ಎರಡು ಫಾರ್ಮಸಿ ಕಾಲೇಜುಗಳು. ಒಂದು ದೈಹಿಕ ಶಿಕ್ಷಕರ ಕಾಲೇಜ್. ಎರಡು ಕೈಗಾರಿಕಾ ತರಬೇತಿ ಸಂಸ್ಥೆಗಳು, ಶಿಕ್ಷಕರ ಎರಡು ತರಬೇತಿ ಸಂಸ್ಥೆಗಳು, ಹದಿನೈದು ಪ್ರೌಢಶಾಲೆಗಳು, ಎರಡು ಹಿರಿಯ ಪ್ರಾಥಮಿಕ ಶಾಲೆಗಳು. ಎರಡು ಪ್ರಾಥಮಿಕ ಶಾಲೆಗಳು, ಐದು ಶಿಶುವಿಹಾರಗಳು, ಆರು ಸಂಸ್ಕೃತ ಪಾಠಶಾಲೆಗಳು, ಒಂದು ಆರೋಗ್ಯ ಕೇಂದ್ರ—ಈ ಎಲ್ಲ ಸಂಸ್ಥೆಗಳ ಸಂಕ್ಷಿಪ್ತ ಪರಿಚಯ ವನ್ನಿಲ್ಲಿ ಕೊಡಲಾಗಿದೆ.

## ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜ್

೧೯೬೩ರಲ್ಲಿ ಈ ಸಂಸ್ಥೆಯು ರೂಪತಾಳಿತು. ೬೨ ಎಕರೆ ಪ್ರದೇಶದಲ್ಲಿ ಹಬ್ಬಿಕೊಂಡಿರುವ ಈ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ರೀಜನಲ್ ಕಾಲೇಜ್ ಆಫ್ ಎಜುಕೇಷನ್‌ಗಳ ಪಕ್ಕದಲ್ಲಿದ್ದು ಒಳ್ಳೆಯ ಶೈಕ್ಷಣಿಕ ವಾತಾ ವರಣವನ್ನು ಹೊಂದಿದೆ. ೧೯೬೮ರಲ್ಲಿ ಈ ಸಂಸ್ಥೆಯಿಂದ ಪದವಿ ಪಡೆದ ಮೊದಲ ತಂಡ ಹೊರಬಂದಿತು. ಈ ಸಂಸ್ಥೆ ಆಗ ಸಿವಿಲ್, ಮೆಕ್ಯಾನಿಕಲ್. ಎಲೆಕ್ಟ್ರಿಕಲ್ ವಿಭಾಗದಲ್ಲಿ ಮಾತ್ರ ಶಿಕ್ಷಣ ನೀಡುತ್ತಿತ್ತು. ೧೯೭೯ರಿಂದ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಷನ್ ವಿಭಾಗವನ್ನು ಹೊಸದಾಗಿ ತೆರೆಯಿತು. ಈ ವಿಭಾಗದಲ್ಲಿರುವ ಉಪಕರಣಗಳು ಇಡೀ ಮೈಸೂರು ವಿಶ್ವವಿದ್ಯಾನಿಲಯಕ್ಕೇ ಪ್ರಥಮವಾಗಿವೆ. ೧೯೭೮ರಿಂದ 'ಇನ್‌ಸ್ಟ್ರುಮೆಂಟ್ ಟೆಕ್ನಾಲಜಿ' ಪ್ರಾರಂಭಿಸಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಿದೆ. ಇದು ಕೂಡ ಕರ್ನಾಟಕಕ್ಕೆ ಮೊದಲನೆಯದಾಗಿ ದಕ್ಷಿಣ ಭಾರತದಲ್ಲಿ ಎರಡನೆಯ ಸ್ಥಾನ ಪಡೆದಿದೆ. ೧೯೮೦ರಲ್ಲಿ ಮತ್ತೊಂದು ಹೊಸ ವಿಭಾಗ "ಇಂಡಸ್ಟ್ರಿಯಲ್ ಪ್ರೊಡಕ್ಷನ್ ಇಂಜಿನಿಯರಿಂಗ್" ತೆರೆದು ನೂತನ ಹಾದಿ ಮಾಡಿಕೊಟ್ಟಿದೆ. ಸ್ನಾತಕೋತ್ತರ ಕಂಪ್ಯೂಟರ್ ಡಿಪ್ಲೋಮಾವನ್ನು ಈ ವರ್ಷದಿಂದ ಪ್ರಾರಂಭಿಸ ಲಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಗಣಿತ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಸಂಶೋಧನೆ ನಡೆಸುವ ಕೇಂದ್ರವಿದಾಗಿದೆ. ಸಂಶೋಧನಾತ್ಮಕ ಬರಹಗಳಿಗೆ ಪಿಎಚ್.ಡಿ. ಪದವಿ ಕೂಡ ಲಭಿಸುವುದು. ಈ ಸಂಶೋಧನೆ ಯನ್ನು ಪ್ರೋತ್ಸಾಹಿಸಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಒಂದು ಲಕ್ಷ ರೂಪಾಯಿ ಗಳ ದತ್ತಿಯೊಂದನ್ನು ನೀಡಿದ್ದಾರೆ. ಈ ಸಂಸ್ಥೆಯು ಸ್ನಾತಕೋತ್ತರ ತರಗತಿಗಳನ್ನು ನಡೆಸುವ ಯೋಜನೆಯನ್ನು ಮುಂದಿರಿಸಿಕೊಂಡಿದೆ.

ಇವಲ್ಲದೆ ೧೯೭೫ರಿಂದ ಬಿ.ಇ. ಪದವಿ ಪಡೆಯಲಿಚ್ಛಿಸುವವರಿಗಾಗಿ ಅಂದರೆ ಡಿಪ್ಲೊಮಾ ಪಡೆದು ನೌಕರಿಯಲ್ಲಿರು ವವರಿಗೆ ಸಂಜೆಯ ತರಗತಿಗಳನ್ನು ನಡೆಸಲಾಗುತ್ತಿದೆ. ೧೯೭೯ರಲ್ಲಿ ತಾಂಜೇನಿಯದಿಂದ ಬಂದಿರುವ ಮೂವತ್ತು ವಿದ್ಯಾರ್ಥಿಗಳಿಗೆ ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಶಿಕ್ಷಣ ನೀಡಲು ವಿಶೇಷ ಕಾರ್ಯವನ್ನು ಕೇಂದ್ರಸರ್ಕಾರ ದವರು ಈ ಸಂಸ್ಥೆಗೆ ವಹಿಸಿದ್ದಾರೆ. ೧೯೮೦ರಿಂದ ವಿಶೇಷ ಜ್ಞಾನಪ್ರಸಾರಕ್ಕಾಗಿ ಬೇಸಿಗೆ ತರಗತಿಗಳನ್ನು ನಡೆಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ರಸಾಯನಿಕಶಾಸ್ತ್ರದ ಎಂ.ಎಸ್.ಸಿ. ಪದವಿಯ ಎರಡನೆ ಸೆಮಿಸ್ಟರ್ ವಿಭಾಗದಲ್ಲಿ ರುವ ಇಂಡಸ್ಟ್ರಿಯಲ್ ಕೆಮಿಸ್ಟ್ರಿಯ ಬೋಧನೆ ಬಗ್ಗೆ ಈ ಸಂಸ್ಥೆಯು ಸಹಾಯ ಹಸ್ತ ಚಾಚಿದೆ.

ಈಗಾಗಲೇ ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕವರ್ಗವನ್ನು ಈ ಕಾಲೇಜು ಹೊಂದಿದೆ. ಮೂರು ಜನ ಪಿಎಚ್.ಡಿ. ಪಡೆದವರಿದ್ದಾರೆ. ಹನ್ನೊಂದು ಜನರು ಪಿಎಚ್.ಡಿ. ಪಡೆವ ಹಂತದಲ್ಲಿದ್ದಾರೆ. ವಾಲಿಬಾಲ್ ಮುಂತಾದ ಆಟಗಳಿಗೆ ಕ್ರೀಡಾಂಗಣಕ್ಕೆ ಹಾಗೂ ಅಂಗಸಾಧನೆಗೆ ಉತ್ತಮ ವ್ಯವಸ್ಥೆ ಮಾಡಲಾಗಿದೆ. ಉತ್ತಮ ವಿದ್ಯಾರ್ಥಿನಿಲಯದ ವ್ಯವಸ್ಥೆ ಕೂಡ ಇಲ್ಲಿದೆ. "ಜೇಸಿಯಾನಾ" ಕಾರ್ಯಕ್ರಮವು ಅಂತರ ಕಾಲೇಜು ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನದ ಕಾರ್ಯಕ್ರಮವಾಗಿದ್ದು ವರ್ಷದಿಂದ ವರ್ಷಕ್ಕೆ ಹೆಚ್ಚು ಮನ್ನಣೆ ಪಡೆಯುತ್ತಿದೆ. ಪ್ರತಿ ವರ್ಷದ ನವೆಂಬರ್‌ನಲ್ಲಿ ಒಂದು ವಾರ ಈ ಕಾರ್ಯಕ್ರಮವು ನಡೆಯುತ್ತಿದ್ದು ಈ ವರ್ಷ ೮೦ ಕಾಲೇಜುಗಳ ೧೪೦೦ ವಿದ್ಯಾರ್ಥಿಗಳು ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿದ್ದರು. ಕಳೆದ ವರ್ಷದಿಂದ "ಅಥ್ಲೆಟಿಕ್" ಅಂಕಿತದಲ್ಲಿ ಅಂತರ ಇಂಜಿನಿಯರಿಂಗ್ ಕಾಲೇಜುಗಳ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ಏರ್ಪಡಿಸುತ್ತಿದೆ. ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ವಿಭಾಗಗಳು ಈ ಕಾಲೇಜಿನಲ್ಲಿ ಚೆನ್ನಾಗಿ ಕೆಲಸ ನಡೆಸುತ್ತಿವೆ.

ಹಳೆಯ ವಿದ್ಯಾರ್ಥಿಗಳ ಸಲುವಾಗಿ ತ್ರೈಮಾಸಿಕ ಬುಲೆಟಿನ್ ಒಂದನ್ನು ಹಾಗೂ ವರ್ಷಕ್ಕೊಮ್ಮೆ ತಾಂತ್ರಿಕ ಮ್ಯಾಗ್‌ಜೈನ್ ಒಂದನ್ನು ಈ ಸಂಸ್ಥೆಯಿಂದ ಪ್ರಕಟಿಸಲಾಗುತ್ತಿದೆ.

"ಕೀನಿಕ್ ಸಬ್ ಸೆಂಟರ್" ಈ ಸಂಸ್ಥೆಯಲ್ಲಿದ್ದು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ದುರಸ್ತಿಗೊಳಿಸಲಾಗುತ್ತಿದೆ. ಈ ಪ್ರಯೋಜನವನ್ನು ಅನೇಕ ಕೈಗಾರಿಕಾ ಕೇಂದ್ರಗಳು, ಸರ್ಕಾರಿ ವಲಯದವರು, ಕಾಲೇಜುಗಳವರು, ವಿಶ್ವವಿದ್ಯಾನಿಲಯದವರು ಪಡೆಯುತ್ತಿದ್ದಾರೆ.

"ಪ್ರಾಡಕ್ಟ್ ಡೆವಲಪ್‌ಮೆಂಟ್ ಸೆಲ್"ನಲ್ಲಿ ಕಾಲೇಜು ವತಿಯಿಂದ ಹಾಗೂ ಕರ್ನಾಟಕ ರಾಜ್ಯದ ವಿಜ್ಞಾನ ಮತ್ತು ತಾಂತ್ರಿಕ ಕೌನ್ಸಿಲ್‌ನವರ ಧನಸಹಾಯದಿಂದ ಉಪಯುಕ್ತ ಉಪಕರಣವನ್ನು ವಿದ್ಯಾರ್ಥಿಗಳು ತಯಾರಿಸಿ, ಅವು ಮಾರಾಟವಾಗುವ ವ್ಯವಸ್ಥೆ ಕೂಡ ಮಾಡಿದ್ದಾರೆ. ಅನೇಕ ಕೈಗಾರಿಕಾ ಕೇಂದ್ರಗಳವರು ಹಾಗೂ ಸಂಸ್ಥೆಗಳವರು ಡಿಸೈನ್, ಟೆಸ್ಟಿಂಗ್, ರಿಪೇರಿ ಮತ್ತಿತರ ಸೌಲಭ್ಯಕ್ಕಾಗಿ ಈ ಸಂಸ್ಥೆಯನ್ನು ವಿಚಾರಿಸುತ್ತಾರೆ.

ಕಾಲೇಜಿನ ಪುಸ್ತಕ ಸಂಗ್ರಹಾಲಯ ಕೂಡ ಅತ್ಯುತ್ತಮ ಮಟ್ಟದ್ದಾಗಿದ್ದು, ೧೧೪ ಪೀರಿಯಾಡಿಕಲ್ಸ್ ಮತ್ತು ಟೆಕ್ನಿಕಲ್ ಜರ್ನಲ್‌ಗಳನ್ನು ಪೂರೈಸುತ್ತಿದೆ. ಅತ್ಯಾಧುನಿಕವಾಗಿ ಇದನ್ನು ಸಜ್ಜುಗೊಳಿಸಲಾಗಿದೆ. ೩.೨ ಲಕ್ಷ ರೂಪಾಯಿ ಬೆಲೆಯ ಉಪಕರಣಗಳನ್ನು ಎಲ್ಲಾ ವಿಭಾಗಕ್ಕೂ ಒದಗಿಸಲಾಗಿದೆ. ಹೆಚ್‌ಸಿಎಲ್ ೧೮೦೦ ಕಂಪ್ಯೂಟರ್ ಇತ್ತೀಚೆಗೆ ಬಳಕೆಗೆ ಬಂದಿದೆ. ಸ್ಲೈಡ್ಸ್ ತಯಾರಿಕೆ, ಮತ್ತು ಅದನ್ನು ಬಳಸಿ ಬೋಧಿಸುವ ಪ್ರಯತ್ನವಂತೂ ಶ್ಲಾಘನೀಯ ಕಾರ್ಯವಾಗಿದೆ.

ವಿದ್ಯಾರ್ಥಿಗಳಿಗಾಗಿ ಹಾಗೂ ವಿದೇಶೀಯ ವಿದ್ಯಾರ್ಥಿಗಳ ಸಲುವಾಗಿ ಹಾಸ್ಟಲ್ ಕಟ್ಟಡಗಳನ್ನು ಕಟ್ಟಲು ಯೋಜಿಸಲಾಗಿದೆ. ಈಗ ಬಂದಿರುವ ತಾಂಜೇನಿಯದ ೩೦ ವಿದ್ಯಾರ್ಥಿಗಳಿಗಾಗಿ ಅಂತರರಾಷ್ಟ್ರೀಯ ವಿದ್ಯಾರ್ಥಿನಿಲಯದ ಕಟ್ಟಡವೂ ಈಗ ನಿರ್ಮಿತವಾಗಿದೆ. ರಸ್ತೆ, ಸೈಕಲ್‌ಸ್ಟ್ಯಾಂಡ್, ಆಡಿಟೋರಿಯಂ, ಆಡಳಿತವಿಭಾಗದ ಕಟ್ಟಡದ ಪೂರೈಕೆಗಳು ಇನ್ನೂ ಆಗಬೇಕಾಗಿದ್ದು ಸುಮಾರು ೩೫,೦೦೦ ಚ.ಅ. ಕೆಲಸವಿನ್ನೂ ಉಳಿದಿದೆ. ಇದಲ್ಲದೆ ಹೆಣ್ಣುಮಕ್ಕಳ ಅನುಕೂಲಕ್ಕಾಗಿಯೂ ಕಟ್ಟಡವೊಂದರ ನಿರ್ಮಾಣದ ಯೋಜನೆ ಇದೆ. ಈ ಸಂಸ್ಥೆಯ ಬೋಧಕವರ್ಗದವರು ಬೆಂಗಳೂರಿನಲ್ಲಿರುವ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಮತ್ತು ಮುಂಬೈನ ಮಹೇಂದ್ರ ಮತ್ತು ಮಹೇಂದ್ರದಲ್ಲಿ ವಿಶೇಷ ತರಪೇತಿ ಪಡೆದಿರುತ್ತಾರೆ. ಪ್ರತಿವರ್ಷ ಈ ಸಂಸ್ಥೆಯ ೧೨೦ ವಿದ್ಯಾರ್ಥಿಗಳನ್ನು ಅನೇಕ ಕೈಗಾರಿಕಾ ಕೇಂದ್ರಗಳಿಗೆ ವಿಶೇಷ ತರಪೇತಿಗಾಗಿ ಕಳುಹಿಸಿಕೊಡಲಾಗುತ್ತಿದೆ.

## ಜೆ. ಎಸ್. ಎಸ್. ಪಾಲಿಟೆಕ್ನಿಕ್ (ಮಹಿಳೆಯರಿಗಾಗಿ)

೧೯೮೦–೮೧ರಲ್ಲಿ ಹೆಣ್ಣುಮಕ್ಕಳಿಗಾಗಿ ತಾಂತ್ರಿಕ ಶಿಕ್ಷಣ ಶಾಲೆಯೊಂದನ್ನು ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಆವರಣದಲ್ಲಿ ಪ್ರಾರಂಭಿಸಲಾಯ್ತು. ಈ ಶಿಕ್ಷಣಕ್ಕಾಗಿ ೬೦ ವಿದ್ಯಾರ್ಥಿನಿಯರನ್ನು ಮಾತ್ರ ಆರಿಸಿಕೊಳ್ಳಲಾಯ್ತು. ಟೆಲಿಕಮ್ಯುನಿಕೇಷನ್ ಮತ್ತು ಕಮರ್ಷಿಯಲ್ ಪ್ರಾಕ್ಟಿಸ್ ವಿಭಾಗಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಪ್ರತಿ ವಿಭಾಗದಲ್ಲೂ ೩೦ ಜನ ವಿದ್ಯಾರ್ಥಿನಿಯರಿದ್ದಾರೆ. ಯೋಜಿತ ರೀತಿ ನಾಲ್ಕು ವಿಭಾಗಗಳಲ್ಲಿ ಶಿಕ್ಷಣ ನೀಡಲು ಉದ್ದೇಶಿಸಲಾಗಿದ್ದು ಸದ್ಯಕ್ಕೆ ಎರಡು ವಿಭಾಗಗಳನ್ನು ಮಾತ್ರ ತೆರೆಯಲಾಗಿದೆ. ಈ ಸಂಸ್ಥೆಯು ಆಡಳಿತ ವರ್ಗದ ಖರ್ಚಿನಲ್ಲೇ ನಡೆಯುತ್ತಿದ್ದು ತಾಂತ್ರಿಕಶಿಕ್ಷಣ ವಿಭಾಗದ ಸಮಿತಿಯ ಸಲಹೆಯಂತೆ ಮೊದಲ ಹಂತದಲ್ಲಿ ೧,೭೪,೮೫,೦೦೦ ರೂ. ಖರ್ಚಿನ ಪ್ರಗತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪ್ರಯೋಗಶಾಲೆ ಮತ್ತು ಬೋಧಕ ವರ್ಗದ ಸಹಾಯವನ್ನು ಈ ಸಂಸ್ಥೆಗೆ ತಾತ್ಕಾಲಿಕವಾಗಿ ಪಡೆಯಲಾಗಿದೆ. ನೂತನ ಬೆರಳಚ್ಚುಯಂತ್ರಗಳನ್ನು ಕೊಂಡು ಕಮರ್ಷಿಯಲ್ ಪ್ರಾಕ್ಟಿಸ್ ವಿಭಾಗಕ್ಕೆ ಅದನ್ನೊದಗಿಸುವ ಏರ್ಪಾಟುಮಾಡಲಾಗುತ್ತಿದೆ.

ಈ ಸಂಸ್ಥೆಗಾಗಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನವರನ್ನು ೩೫ ಎಕರೆ ಪ್ರದೇಶವನ್ನು ಮಂಜೂರು ಮಾಡಿಕೊಡಲು ಕೇಳಿಕೊಳ್ಳಲಾಗಿದೆ. ಹೆಣ್ಣುಮಕ್ಕಳಿಗಾಗಿ ಯೋಗ ತರಗತಿಗಳನ್ನು ನಡೆಸಲಾಗುತ್ತಿದೆ.

ಆರ್ಕಿಟೆಕ್ಚರಲ್ ಅಸಿಸ್ಟೆಂಟ್‌ಮನ್‌ಷಿಪ್, ಕಾಸ್ಟ್ಯೂಮ್ ಡಿಸೈನ್ ಮತ್ತು ಡ್ರೆಸ್‌ಮೇಕಿಂಗ್‌ನ ತರಗತಿಗಳನ್ನು ಮುಂದಿನ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

## ಜೆ.ಎಸ್.ಎಸ್. ಕಾಲೇಜು, ರಾಮಾನುಜ ರಸ್ತೆ, ಮೈಸೂರು

ಈ ಸಂಸ್ಥೆಯು ೧೯೬೪–೬೫ರಲ್ಲಿ ವಿಜ್ಞಾನ ವಿಭಾಗದೊಂದಿಗೆ ಕೇವಲ ೫೨ ವಿದ್ಯಾರ್ಥಿಗಳು ಹಾಗೂ ೮ ಮಂದಿ ಅಧ್ಯಾಪಕರಿಂದ ವಿದ್ಯಾಪೀಠದ ವಿದ್ಯಾರ್ಥಿನಿಲಯದಲ್ಲಿ ಆರಂಭಗೊಂಡಿತು. ಇಂದು ಈ ಸಂಸ್ಥೆಯು ೨೦೦೦ಕ್ಕೂ

ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದು ಕಲೆ, ವಾಣಿಜ್ಯ, ವಿಜ್ಞಾನ ಹಾಗೂ ವ್ಯವಹಾರ ನಿರ್ವಹಣಾ ವಿಭಾಗಗಳನ್ನು ಹೊಂದಿದೆ. ಇಲ್ಲಿ ೭೦ ಅಧ್ಯಾಪಕರು ೪೦ ಅಧ್ಯಾಪಕೇತರರೂ ಇರುತ್ತಾರೆ. ಇಂದು ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ ಹಾಗೂ ಕರ್ನಾಟಕ ಸರ್ಕಾರದಿಂದ ಸಹಾಯ ಧನ ಪಡೆದು ಸುಸಜ್ಜಿತ ಕಟ್ಟಡವನ್ನು ಪಡೆದಿರುವುದರ ಜೊತೆಗೆ ಸಂಸ್ಥೆಯೇ ಸ್ವಂತ ವೆಚ್ಚದಿಂದ ಸುಸಜ್ಜಿತವಾದ ಗ್ರಂಥಾಲಯ ಹಾಗೂ ವಾಚನಾಲಯಗಳನ್ನು ಒದಗಿಸಿಕೊಂಡಿದೆ. ಈ ಕಾಲೇಜಿನ ಆವರಣಕ್ಕೆ ಆಗಮಿಸುವುದೆಂದರೆ ಒಂದು ಸುಂದರ ಪ್ರಕೃತಿ ತಾಣಕ್ಕೆ ಬಂದಂತಾಗಿ ಕಾಲೇಜು ವಿದ್ಯಾರ್ಥಿಗಳ ಚಟುವಟಿಕೆಯಲ್ಲಿಯೂ ಒಂದು ರೀತಿಯ ಶಾಂತ ವಾತಾವರಣದ ಅನುಭವವಾಗುತ್ತದೆ. ಇಲ್ಲಿ ನಗರದ ಮಕ್ಕಳಿಗಿಂತ ಗ್ರಾಮಾಂತರ ಪ್ರದೇಶಗಳಿಂದ ಬಂದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರೆಲ್ಲರಿಗೂ ಅಶನ ವಸತಿ ಸೌಲಭ್ಯಗಳನ್ನು ಪೂಜ್ಯ ಜಗದ್ಗುರುಗಳವರು ಕಲ್ಪಿಸಿಕೊಟ್ಟಿರುತ್ತಾರೆ. ಇತರ ಕಾಲೇಜುಗಳಿಗೆ ಮಾದರಿಯಾಗಿ ಈ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ.

## ಜೆ.ಎಸ್.ಎಸ್. ಕಾಲೇಜು, ಚಾಮರಾಜನಗರ

೧೯೫೪ರಲ್ಲಿ ಚಾಮರಾಜನಗರದ "ಚಾಮರಾಜೇಶ್ವರ ಎಜುಕೇಷನ್ ಸೊಸೈಟಿ"ಯವರು ತಮ್ಮ ತಾಲ್ಲೂಕು ಕೇಂದ್ರದಲ್ಲೇ ಮಧ್ಯಮ ಮತ್ತು ಬಡವರ್ಗದ ವಿದ್ಯಾರ್ಥಿಗಳಿಗಾಗಿ ಪದವಿಪೂರ್ವ ತರಗತಿಗಳನ್ನು "ಇಂಟರ್ ಮೀಡಿಯಟ್ ಕಾಲೇಜು—ಚಾಮರಾಜನಗರ" ಎಂಬ ಹೆಸರಿನಲ್ಲಿ ಪ್ರಾರಂಭಿಸಿದ್ದರು. ೧೯೫೯ರ ವೇಳೆಗೆ ಈ ಸಂಸ್ಥೆಯ ಆರ್ಥಿಕ ಸ್ಥಿತಿ ಸರಿಯಾಗಿಲ್ಲದ ಕಾರಣ ೧೯೬೩ರಲ್ಲಿ ಈ ಸೊಸೈಟಿಯವರು ಈ ಸಂಸ್ಥೆಯನ್ನು ಜಗದ್ಗುರುಗಳವರ ಕೃಪಾಶೀರ್ವಾದಕ್ಕೆ ಬಿಟ್ಟುಕೊಟ್ಟರು. ಇದೇ ಚಾಮರಾಜನಗರದ ಜೆ.ಎಸ್.ಎಸ್. ಕಾಲೇಜಿಗೆ ಅಡಿಗಲ್ಲಾಯಿತು. ೧೯೬೭ರಲ್ಲಿ ತೆರೆದ ಪದವಿ ತರಗತಿಗಳಿಂದ ಇದು ಪ್ರಥಮ ದರ್ಜೆ ಕಾಲೇಜಾಯಿತು. ಪ್ರಾರಂಭದ ವರ್ಷಗಳಲ್ಲಿ ಕಲೆ ಮತ್ತು ವಿಜ್ಞಾನದ ವಿಭಾಗಗಳು ಮಾತ್ರ ಇದ್ದು ೧೯೭೪–೭೫ರಿಂದ ಈ ವಿಭಾಗಗಳ ಜೊತೆಗೆ ವಾಣಿಜ್ಯ ವಿಭಾಗದ ಪದವಿ ತರಗತಿಗಳನ್ನು ತೆರೆಯಲಾಗಿದೆ. ೧೯೭೮–೭೯ರಿಂದ ವೃತ್ತಿಶಿಕ್ಷಣ ವಿಷಯವೂ ಸೇರಿ ಈಗ ಈ ಕಾಲೇಜು ಸುವ್ಯವಸ್ಥಿತ ಪ್ರಥಮ ದರ್ಜೆ ಕಾಲೇಜು ಎನಿಸಿಕೊಂಡಿದೆ.

೮೨ ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಈ ಕಾಲೇಜಿನ ಈಗಿನ ವಿದ್ಯಾರ್ಥಿಗಳ ಸಂಖ್ಯೆ ೧೨೦೦ಕ್ಕೂ ಮೀರಿದೆ. ೬ + ೪ ಬೋಧಕರು ಮತ್ತು ೬ + ೨ ಬೋಧಕೇತರ ಸಿಬ್ಬಂದಿಯಿಂದ ಪ್ರಾರಂಭಗೊಂಡ ಈ ಕಾಲೇಜಿನಲ್ಲಿ ಈಗ ೫೨ + ೩ ಬೋಧಕರು ಮತ್ತು ೨೬ ಜನ ಬೋಧಕೇತರ ಸಿಬ್ಬಂದಿಯು ಇದೆ. ಈ ಕಾಲೇಜಿನಲ್ಲಿ ಉತ್ತಮ ಪರೀಕ್ಷಾ ಫಲಿತಾಂಶಗಳು ಬರುತ್ತಿದ್ದು ೧೯೭೯–೮೦ನೇ ಸಾಲಿನಲ್ಲಿ ವಿಜ್ಞಾನ ವಿಭಾಗದ ಶೇ. ೮೧ರ ಫಲಿತಾಂಶವು ಒಂದು ದಾಖಲೆಯಾಗಿದೆ.

"ರೇಷ್ಮೆ ಕೃಷಿ" ಎಂಬ ಹೊಸ ಬೋಧನಾ ವಿಷಯವನ್ನು ಪದವಿ ಮಟ್ಟದಲ್ಲಿ ತೆರೆಯಬೇಕೆಂಬುದು ಈ ಕಾಲೇಜಿನ ಯೋಜಿತ ಗುರಿಯಾಗಿದೆ. ಈ ವಿಷಯವು ಮುಂದಿನ ಸಾಲಿನಿಂದ ಪ್ರಾರಂಭಗೊಂಡು ರೇಷ್ಮೆ ಉದ್ಯಮಕ್ಕೆ ಹೊಸ ರೂಪ ನೀಡಬಲ್ಲ ಶಿಕ್ಷಣವಾಗಲಿದೆ. ೧೯೭೮–೭೯ರಿಂದ ವೃತ್ತಿ ಶಿಕ್ಷಣ ತರಗತಿಗಳು ಪ್ರಾರಂಭಗೊಂಡಿವೆ. ರೇಷ್ಮೆ ಕೃಷಿ, ಬ್ಯಾಂಕಿಂಗ್‌ಗಳು ಸದ್ಯದ ವೃತ್ತಿಗಳು. ಈ ಎರಡೂ ವಿಭಾಗದಲ್ಲೂ ತಲಾ ೨೫ ಮಂದಿಗಳಿದ್ದಾರೆ. ನಿರುದ್ಯೋಗ ನಿವಾರಣೆಗೆ ಈ ವೃತ್ತಿಪರ ಶಿಕ್ಷಣ ಸಹಕಾರಿಯಾಗಿದೆ. ೧೯೬೭–೭೧ರ ವರೆವಿಗೆ ೩,೬೯೦ ಗ್ರಂಥಗಳಿದ್ದ ಈ ಕಾಲೇಜಿನ ಗ್ರಂಥಾಲಯದಲ್ಲಿ ಈಗ ೧೨,೪೭೪ ಗ್ರಂಥಗಳು, ೫೦ ನಿಯತಕಾಲಿಕಗಳು, ೭ ದೈನಂದಿನ ಪತ್ರಿಕೆಗಳು ದೊರೆಯುತ್ತಿವೆ. ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ಯೂನಿಟ್‌ಗಳು ಉತ್ತಮ ಮಟ್ಟದಲ್ಲಿ ಕೆಲಸಮಾಡುತ್ತಿವೆ. ಈ ಕಾಲೇಜಿಗೆ ವಿಶಾಲ ಕ್ರೀಡಾಂಗಣವಿದೆ. ಅಖಿಲ ಭಾರತ ಮಟ್ಟದ ಡಾ. ಹಾರ್ಡೀಕರ್ ಅವರ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಕಾಲೇಜು ೧೯೬೩ರಲ್ಲಿ ಪರ್ಯಾಯ ಪಾರಿತೋಷಕ ಗಳಿಸಿದೆ.

ಚಾಮರಾಜನಗರ ತಾಲ್ಲೂಕು ಹಾಗೂ ಸುತ್ತಮುತ್ತಲ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯದ ಸೌಲಭ್ಯವಿದೆ. ಹೀಗೆ ಈ ಕಾಲೇಜು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ.

## ಜೆ. ಎಸ್. ಎಸ್. ಕಾಲೇಜು, ನಂಜನಗೂಡು

ನಂಜನಗೂಡು ಪುರಾಣ ಪ್ರಸಿದ್ಧವಾದ ಸ್ಥಳ. ಈ ಮಹಾಕ್ಷೇತ್ರದ ಶ್ರೀ ನಂಜುಂಡೇಶ್ವರಸ್ವಾಮಿ ದೇವಾಲಯದ ಪಶ್ಚಿಮಕ್ಕೆ ಅನತಿ ದೂರದಲ್ಲಿಯೇ ಮೈಸೂರರಸರ ಅರಮನೆಯಾಗಿದ್ದ ಭವ್ಯಮಹಲಿನಲ್ಲೇ ಜಗದ್ಗುರು ಶ್ರೀ

ಶಿವರಾತ್ರೀಶ್ವರ ಕಾಲೇಜು ೧೯೬೮–೬೯ರಿಂದ ನಡೆಯುತ್ತಿದೆ. ಆರಂಭದಲ್ಲಿ ಪ್ರಥಮ ವರ್ಷದ ಪಿ.ಯು.ಸಿ.ಯ ೧೭ ವಿದ್ಯಾರ್ಥಿಗಳು ಹಾಗೂ ಪದವಿ ತರಗತಿಯ ೧೦ ವಿದ್ಯಾರ್ಥಿಗಳ ಶಿಕ್ಷಣದೊಂದಿಗೆ ೭ ಜನ ಅಧ್ಯಾಪಕರು ಮತ್ತು ೩ ಜನ ಅಧ್ಯಾಪಕೇತರ ನೌಕರರೊಂದಿಗೆ ಈ ಕಾಲೇಜು ಪ್ರಾರಂಭಗೊಂಡಿತು. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪಿ.ಯು.ಸಿ.ಯ ೪೪೩ ವಿದ್ಯಾರ್ಥಿಗಳು ಮತ್ತು ಪದವಿ ತರಗತಿಯ ೩೭೯ ವಿದ್ಯಾರ್ಥಿಗಳು ಇದ್ದಾರೆ. ಅಧ್ಯಾಪಕರ ಸಂಖ್ಯೆ ೪೯ಕ್ಕೂ ಅಧ್ಯಾಪಕೇತರರ ಸಂಖ್ಯೆ ೨೧ಕ್ಕೂ ಏರಿದೆ. ಈ ಸಾಲಿನ ಆರಂಭದಲ್ಲಿ ಪಿ.ಯು.ಸಿ. ಹಾಗೂ ಪದವಿ ತರಗತಿಗಳಿಗೆ ಪ್ರವೇಶ ಬಯಸಿ ಹೆಚ್ಚು ಅರ್ಜಿಗಳು ಬಂದಿದ್ದವು. ಈ ರೀತಿಯ ಒತ್ತಡಕ್ಕೆ ಇಲ್ಲಿನ ಉತ್ತಮ ವಾತಾವರಣ, ಪಾಠಪ್ರವಚನಗಳು, ಒಳ್ಳೆಯ ಗ್ರಂಥಾಲಯ, ವಾಚನಾಲಯ, ಪ್ರಯೋಗಶಾಲೆಗಳೇ ಕಾರಣ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ದೈಹಿಕಶಿಕ್ಷಣ, ಎನ್.ಎಸ್.ಎಸ್; ಎನ್.ಸಿ.ಸಿ. ವಿಭಾಗಗಳಿದ್ದು ಈ ಕಾಲೇಜು ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸಿದೆ. "ವಿದ್ಯಾರ್ಥಿಕ್ಷೇಮ ವಿಭಾಗ"ವೊಂದನ್ನು ಪ್ರಾರಂಭಿಸಿ ವಿದ್ಯಾರ್ಥಿ-ಶಿಕ್ಷಕ ಸಂಬಂಧವನ್ನು ಆದರ್ಶಯುತವಾಗಿ ಮಾಡಲಾಗಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಇಲ್ಲಿನ ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳು ಸಹ ಇಲ್ಲಿ ನಡೆಯುತ್ತಿದ್ದು ವಿದ್ಯಾರ್ಥಿಗಳ ಪ್ರತಿಭೆಯ ಪ್ರಕಾಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೇಲಾಗಿ ಕಾಲೇಜಿನ ಫಲಿತಾಂಶ ಉತ್ತಮ ಮಟ್ಟದ್ದಾಗಿದೆ. ೧೯೭೯–೮೦ನೇ ಸಾಲಿನ ಬಿ.ಎ. (ಅಂತಿಮ) ಪರೀಕ್ಷೆಯಲ್ಲಿ ಈ ಕಾಲೇಜಿನ ವಿದ್ಯಾರ್ಥಿ ಭೂಗೋಳ ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿ 'ಚಿನ್ನದ ಪದಕ' ಪಡೆದಿರುವುದು ಹೆಮ್ಮೆಯ ವಿಷಯ.

## ಜೆ. ಎಸ್. ಎಸ್. ಮಹಿಳಾ ಕಾಲೇಜು, ಸರಸ್ವತೀಪುರಂ, ಮೈಸೂರು

ಮೈಸೂರು ನಗರದ ಸರಸ್ವತೀಪುರಂ ಬಡಾವಣೆಯಲ್ಲಿ ಹೆಣ್ಣುಮಕ್ಕಳಿಗಾಗಿ ೧೯೭೦-೭೧ರಲ್ಲಿ ಜೆ.ಎಸ್.ಎಸ್. ಮಹಿಳಾ ಕಾಲೇಜನ್ನು ಪ್ರಾರಂಭಿಸಲಾಯಿತು. ೩೫ ವಿದ್ಯಾರ್ಥಿನಿಯರಿಂದ ಪ್ರಾರಂಭಗೊಂಡ ಈ ಕಾಲೇಜಿನ ಈಗಿನ ವಿದ್ಯಾರ್ಥಿನಿಯರ ಸಂಖ್ಯೆ ೫೦೦ಕ್ಕೂ ಮೀರಿದೆ. ಪಿ.ಯು.ಸಿ. ಹಾಗೂ ಪದವಿ ತರಗತಿಗಳು ಇಲ್ಲಿ ನಡೆಯುತ್ತಿವೆ. ಪಿ.ಯು.ಸಿ.ಯಲ್ಲಿ ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲೂ, ಪದವಿ ತರಗತಿಗಳಿಗೆ ಕಲೆ ಮತ್ತು ವಾಣಿಜ್ಯ ವಿಭಾಗಗಳಲ್ಲೂ ಇಲ್ಲಿ ಶಿಕ್ಷಣ ನೀಡಲಾಗುತ್ತಿದೆ.

೪೦೦ ಗ್ರಂಥಗಳಿಂದ ಪ್ರಾರಂಭಗೊಂಡ ಇಲ್ಲಿನ ಗ್ರಂಥಾಲಯದಲ್ಲಿ ಇಂದು ೧೦,೦೦೦ಕ್ಕೂ ಮೀರಿದ ಸಂಖ್ಯೆಯ ಗ್ರಂಥಗಳಿವೆ. ಪಿ.ಯು.ಸಿ.ಯ ವಿಜ್ಞಾನ ವಿಭಾಗದಲ್ಲಿ ಸುಸಜ್ಜಿತ ಪ್ರಯೋಗಶಾಲೆಯನ್ನು ಏರ್ಪಡಿಸಲಾಗಿದೆ. ಈ ಕಾಲೇಜು ತನ್ನದೇ ಆದ ಎರಡು ಅಂತಸ್ತಿನ ಭವ್ಯವಾದ ಕಟ್ಟಡವನ್ನು ಹೊಂದಿದೆ. ಇಲ್ಲಿ ಹೊರಗಿನಿಂದ ಬರುವ ಹೆಣ್ಣುಮಕ್ಕಳಿಗಾಗಿ ಹಾಸ್ಟೆಲ್ ವ್ಯವಸ್ಥೆ ಮಾಡಲಾಗಿದೆ. ಈಗ ೮೦ ವಿದ್ಯಾರ್ಥಿನಿಯರು ಇದರ ಪ್ರಯೋಜನವನ್ನು ಪಡೆದಿದ್ದಾರೆ.

ಇಲ್ಲಿನ ಫಲಿತಾಂಶ ಉತ್ತಮಮಟ್ಟದ್ದಾಗಿದ್ದು, ವರ್ಷವರ್ಷಕ್ಕೆ ಇಲ್ಲಿನ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚುತ್ತಿದೆ.

## ಜೆ.ಎಸ್.ಎಸ್. ಫಾರ್ಮಸಿ ಕಾಲೇಜು, ರಾಮಾನುಜ ರಸ್ತೆ, ಮೈಸೂರು

ಮೈಸೂರು ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ಒಂದೂ ಫಾರ್ಮಸಿ ಕಾಲೇಜು ಇಲ್ಲದೆ. ಆ ವಿಷಯದಲ್ಲಿ ವಿದ್ಯೆ ಪಡೆಯಬಯಸುವ ವಿದ್ಯಾರ್ಥಿಗಳು ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದರಿಂದ ವಿದ್ಯಾರ್ಥಿಗಳಿಗಲ್ಲದೆ ಪೋಷಕರಿಗೂ ಕಷ್ಟವಾಗುತ್ತಿತ್ತು. ಇದನ್ನು ಮನಗಂಡು ಪೂಜ್ಯ ಜಗದ್ಗುರುಗಳವರು ಕೃಪೆಮಾಡಿ ಮೈಸೂರು ನಗರದಲ್ಲೇ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಆಶ್ರಯದಲ್ಲಿ ಅವರ ಹಲವು ಸಂಸ್ಥೆಗಳಲ್ಲಿ ಒಂದಾಗಿ ಜೆ.ಎಸ್.ಎಸ್. ಫಾರ್ಮಸಿ ಕಾಲೇಜನ್ನು ೧೯೭೩ರಲ್ಲಿ ಸ್ಥಾಪಿಸಿದರು. ಸ್ಥಾಪನೆಯ ವರ್ಷದಲ್ಲಿ ೩೦ ವಿದ್ಯಾರ್ಥಿಗಳ ಸಂಖ್ಯೆ ಇದ್ದ ಕಾಲೇಜು ಈಗ ಮೊದಲನೆಯ ಡಿಪ್ಲೊಮಾ ತರಗತಿಯಲ್ಲಿ ೮೦ ಜನ ವಿದ್ಯಾರ್ಥಿಗಳ ಸಂಖ್ಯೆಯನ್ನೂ, ಎರಡನೆಯ ಡಿಪ್ಲೊಮಾ ತರಗತಿಯಲ್ಲಿ ೧೨೦ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಹೊಂದಿದೆ. ಒಂಭತ್ತನೆಯ ವರ್ಷದಲ್ಲಿರುವ ಈ ಕಾಲೇಜು ಕರ್ನಾಟಕದಲ್ಲಿರುವ ಉತ್ತಮ ಫಾರ್ಮಸಿ ಕಾಲೇಜುಗಳಲ್ಲಿ ಒಂದಾಗಿದೆ. ಕಾಲೇಜಿನಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳಲ್ಲದೆ ನೆರೆ ರಾಜ್ಯಗಳಾದ ಕೇರಳ, ತಮಿಳುನಾಡು. ಆಂಧ್ರಪ್ರದೇಶದ ವಿದ್ಯಾರ್ಥಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಅಭ್ಯಸಿಸುತ್ತಿದ್ದಾರೆ. ಈವರೆಗೆ ೪೮೯ ವಿದ್ಯಾರ್ಥಿಗಳು ತಮ್ಮ ಡಿಪ್ಲೊಮಾವನ್ನು ಈ ಸಂಸ್ಥೆಯಿಂದ ಪಡೆದುಕೊಂಡಿದ್ದಾರೆ. ಈ ಡಿಪ್ಲೊಮಾ ಪಡೆದ ಪ್ರತಿಯೊಬ್ಬನಿಗೂ ಸರಕಾರದ ಅಥವಾ ಸ್ವಂತ ವೃತ್ತಿಯನ್ನು ಅವಲಂಬಿಸಲು ವಿಪುಲ ಅವಕಾಶಗಳಿವೆ. ಉತ್ತಮ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿರುವ ಈ ಸಂಸ್ಥೆಯು

ರಾಜ್ಯಮಟ್ಟದ ಪರೀಕ್ಷೆಗಳಲ್ಲಿ ಮೊದಲಿನಿಂದಲೂ ಒಳ್ಳೆಯ ಫಲಿತಾಂಶವನ್ನು ಪಡೆಯುತ್ತಿದೆ. ಈ ಸಂಸ್ಥೆಯ ವಿದ್ಯಾರ್ಥಿಗಳು ರಾಜ್ಯಮಟ್ಟದ ಪರೀಕ್ಷೆಯಲ್ಲಿ ೧೯೭೭ರಲ್ಲಿ ಮೊದಲನೆಯ ರ್‍ಯಾಂಕನ್ನೂ ಹಾಗೂ ೧೯೭೮ರಲ್ಲಿ ದ್ವಿತೀಯ ರ್‍ಯಾಂಕನ್ನೂ ಪಡೆದಿರುತ್ತಾರೆ. ೧೯೭೬ರಲ್ಲಿ ಶೇಕಡ ೧೦೦ರಷ್ಟು ಫಲಿತಾಂಶ ಪಡೆದ ಈ ಸಂಸ್ಥೆಯು ಅದನ್ನು ಕಾಯ್ದುಕೊಳ್ಳಲು ಸತತವಾಗಿ ಶ್ರಮಿಸುತ್ತಿದ್ದು. ಪ್ರತಿ ವರ್ಷದಲ್ಲಿಯೂ ಎರಡಕ್ಕಿಂತ ಹೆಚ್ಚು ರ್‍ಯಾಂಕುಗಳನ್ನು ಪಡೆಯುತ್ತಿದೆ. ಪ್ರತಿ ವರ್ಷವೂ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆಯುವ ಈ ಕಾಲೇಜಿನ ವಿದ್ಯಾರ್ಥಿಗೆ ಒಂದು ಚಿನ್ನದ ಪದಕವನ್ನು ಪೂಜ್ಯ ಜಗದ್ಗುರುಗಳ ಹೆಸರಿನಲ್ಲಿ ಬಹುಮಾನವಾಗಿ ನೀಡಲಾಗುತ್ತಿದೆ. ಇದಲ್ಲದೆ ಮೈಸೂರು ಜಿಲ್ಲಾ ಔಷಧ ಮಾರಾಟಗಾರರ ಸಂಘವು ನೀಡಿರುವ ಪರ್ಯಾಯ ಪಾರಿತೋಷಕವೂ ಈ ವಿದ್ಯಾರ್ಥಿಗೆ ಸಲ್ಲುತ್ತದೆ.

ಕಾಲೇಜಿಗೆ ಸೇರಿದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರ ಜೊತೆಗೆ. ಕರ್ನಾಟಕ ಸರ್ಕಾರದಲ್ಲಿ ಡಿಪ್ಲೊಮಾ ಅಭ್ಯಾಸ ಮಾಡದೆಯೆ ಆಸ್ಪತ್ರೆಗಳಲ್ಲಿ ಫಾರ್ಮಸಿಸ್ಟರಾಗಿ (ಅಂದರೆ ಹಿಂದಿನ ಕಾಂಪೌಂಡರ್ ಹುದ್ದೆ) ಸೇವೆ ಮಾಡುತ್ತಿದ್ದವರಿಗೋಸ್ಕರ ವಿಶೇಷ ತರಬೇತಿಯನ್ನು ೧೨೦ ಉದ್ಯೋಗಿಗಳಿಗೆ ಸರ್ಕಾರದ ಕೋರಿಕೆಯ ಮೇರೆಗೆ ಶಿಕ್ಷಣ ನೀಡಲಾಗುತ್ತಿದೆ. ಇದಲ್ಲದೆ ಫಾರ್ಮಸಿಸ್ಟ್ ಸರ್ಟಿಫಿಕೇಟ್ ಇಲ್ಲದೆ ಔಷಧಿ ಅಂಗಡಿಗಳನ್ನು ನಡೆಸುತ್ತಿದ್ದು, ನಂತರ ಸರ್ಟಿಫಿಕೇಟ್ ಪಡೆಯಲು ಇಚ್ಛಿಸಿದ ಸುಮಾರು ೬೦ ಮಂದಿಗೆ ವಿಶೇಷ ತರಬೇತಿಯನ್ನು ಬೆಂಗಳೂರು ಜಿಲ್ಲಾ ಔಷಧಿ ಅಂಗಡಿಗಳವರ ಸಂಘದ ಕೋರಿಕೆಯ ಮೇರೆಗೆ ನಡೆಸಲಾಯಿತು.

ಮುಂದಿನ ಶೈಕ್ಷಣಿಕ ವರ್ಷದಿಂದ ಡಿಗ್ರಿ ತರಗತಿಯನ್ನು ಈ ಕಾಲೇಜಿನಲ್ಲಿ ಪ್ರಾರಂಭಿಸುವ ಯೋಜನೆಯನ್ನು ಜೆ.ಎಸ್.ಎಸ್. ಮಹಾವಿದ್ಯಾಪೀಠವು ಹಮ್ಮಿಕೊಂಡಿದೆ. ಔಷಧಗಳ ಅಂಗಡಿ ತೆರೆಯುವವರಿಗೆ, ಆಸ್ಪತ್ರೆಗಳಿಗೆ, ಔಷಧ ತಯಾರಿಸುವ ಕಾರ್ಖಾನೆಗಳಿಗೆ ಬೇಕಾದ ತಾಂತ್ರಿಕ ಸಿಬ್ಬಂದಿಯನ್ನು ತರಪೇತು ಮಾಡುವ ಈ ಕಾಲೇಜು, ದೇಶಕ್ಕೆ ಜೆ.ಎಸ್.ಎಸ್. ಮಹಾವಿದ್ಯಾಪೀಠದ ಉತ್ತಮ ಕೊಡುಗೆಯಾಗಿದೆ.

ಕಾಲೇಜಿಗೆ ಸೇರಿದ ವಿದ್ಯಾರ್ಥಿನಿಲಯವು ಕಾಲೇಜಿಗೆ ಸಮೀಪವಾಗಿದ್ದು, ಪರ ಊರಿನಿಂದ ಬರುವ ಕಾಲೇಜಿನ ವಿದ್ಯಾರ್ಥಿಗಳಿಗೆ ಅಶನ ವಸತಿ ಸೌಕರ್ಯಗಳನ್ನು ಒದಗಿಸುತ್ತದೆ. ವಿದ್ಯಾರ್ಥಿನಿಲಯವು ತನ್ನದೇ ಆದ ಸ್ವಂತ ಕಟ್ಟಡವನ್ನು ಹೊಂದಿದೆ.

## ಜೆ.ಎಸ್.ಎಸ್. ಫಾರ್ಮಸಿ ಕಾಲೇಜು, ರಾಕ್‌ಲ್ಯಾಂಡ್ಸ್, ಉದಕಮಂಡಲ (ತಮಿಳುನಾಡು)

೧೯೮೦ರಲ್ಲಿ ಈ ಕಾಲೇಜು ಪ್ರಾರಂಭವಾಯಿತು. ಕಾಲೇಜಿಗೆ ತ್ವರಿತವಾಗಿ ಬೇಕಾದ ಕಟ್ಟಡವನ್ನು ಕಟ್ಟಿಸಿ, ಪ್ರಯೋಗಶಾಲೆ ಹಾಗೂ ಉಪಕರಣಗಳನ್ನು ಸಕಾಲಿಕವಾಗಿ ಒದಗಿಸಿ "ಡಿಪ್ಲೊಮಾ ಇನ್ ಫಾರ್ಮಸಿ" ಪಡೆಯಲಿಚ್ಛಿಸುವವರಿಗಾಗಿ ವ್ಯವಸ್ಥೆಗೊಳಿಸಲಾಗಿದೆ. ಪೂಜ್ಯ ಜಗದ್ಗುರುಗಳವರಿಂದ ೧೯೫೪ರಲ್ಲಿ ಸ್ಥಾಪಿಸಲ್ಪಟ್ಟ ವೀರಶೈವ ಆಶ್ರಮವೇ ಇದಕ್ಕೆ ಆಶ್ರಯವಾಗಿದೆ. ಇಲ್ಲಿ ಉತ್ತಮ ಶೈಕ್ಷಣಿಕ ವಾತಾವರಣವಿದೆ. ಪ್ರಕೃತಿಯ ಸೊಬಗು ಸುತ್ತಲೂ ಆವರಿಸಿದೆ. ಇಂತಹ ಪರಿಸರದಲ್ಲಿರುವ ಫಾರ್ಮಸಿ ಇನ್‌ಸ್ಟಿಟ್ಯೂಷನ್ ಇದು ಒಂದೇ. ಶಿಕ್ಷಣದ ಅವಧಿ ಮುಗಿದ ನಂತರ ಯಾವುದಾದರೂ ಆಸ್ಪತ್ರೆಯಲ್ಲಿ ಮೂರು ತಿಂಗಳ ಕಾಲ ರಿಜಿಸ್ಟರ್ಡ್ ಫಾರ್ಮಸಿಸ್ಟ್ ಬಳಿ ತರಬೇತಿ ಪಡೆಯಬೇಕು. ಅನಂತರ ಅವರಿಗೆ ಡಿಪ್ಲೊಮಾ ಲಭಿಸುವುದು. ಈ ಮೊದಲ ವರ್ಷದ ಡಿಪ್ಲೊಮಾಕ್ಕೆ ೪೦ ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ ೩೪ ವಿದ್ಯಾರ್ಥಿಗಳು ಮತ್ತು ೬ ವಿದ್ಯಾರ್ಥಿನಿಯರು ಇದ್ದಾರೆ. ಎರಡನೆ ವರ್ಷದ ಡಿಪ್ಲೊಮಾಕ್ಕೆ ೨೦ ವಿದ್ಯಾರ್ಥಿಗಳು (೧೮ + ೨) ಇದ್ದಾರೆ. ಇಲ್ಲಿನ ವ್ಯವಸ್ಥೆಯ ಬಗ್ಗೆ ತನಿಖಾಧಿಕಾರಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಪ್ರಗತಿಗಾಗಿ ಮಾರ್ಗದರ್ಶನ ನೀಡಿದ್ದಾರೆ.

ವಿದ್ಯಾರ್ಥಿಗಳಿಗೆ ನೆಲ್ಲಂಬೂರು ಮಹಾರಾಜರ ಅರಮನೆಯಲ್ಲಿ, ವಿದ್ಯಾರ್ಥಿನಿಯರಿಗೆ ಕಾಲೇಜು ಆವರಣದಲ್ಲೇ ನಿರ್ಮಿಸಿರುವ ಕಟ್ಟಡದಲ್ಲಿ ಹಾಸ್ಟೆಲ್ ಸೌಲಭ್ಯ ಒದಗಿಸಲಾಗಿದೆ. ಶಿಕ್ಷಕ ವರ್ಗದ ೯ ಜನರು, ಶಿಕ್ಷಕೇತರ ವರ್ಗದ ೭ ಜನರೂ ಇಲ್ಲಿ ಕೆಲಸ ಮಾಡುತ್ತಿದ್ದು ಅವರೆಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಇಲ್ಲಿಯ ಸೌಕರ್ಯವನ್ನುಪಯೋಗಿಸಿಕೊಂಡು ಪದವಿ ತರಗತಿಗಳನ್ನು ಪ್ರಾರಂಭಿಸುವ ಆಲೋಚನೆಯನ್ನು ಆಡಳಿತ ವರ್ಗವು ಹೊಂದಿದೆ.

## ಜೆ.ಎಸ್.ಎಸ್. ದೈಹಿಕ ಶಿಕ್ಷಕರ ಕಾಲೇಜು, ಮೈಸೂರು

ಪ್ರೌಢಶಾಲೆಗಳಲ್ಲಿ ಬಹು ಹಿಂದಿನಿಂದಲೂ ವ್ಯಾಯಾಮ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಆದರೆ

ಇತ್ತೀಚೆಗಷ್ಟೇ ಪ್ರಾಥಮಿಕ ಶಾಲೆಗಳಿಗೂ ವ್ಯಾಯಾಮ ಶಿಕ್ಷಕರನ್ನು ನೇಮಿಸಬೇಕೆಂಬ ನಿಯಮವನ್ನು ಸರ್ಕಾರವು ಜಾರಿಗೆ ತಂದಿತು. ಮಕ್ಕಳ ದೈಹಿಕ ಆರೋಗ್ಯ ಚೆನ್ನಾಗಿದ್ದಲ್ಲಿ ಅದು ಅವರ ಬುದ್ಧಿವರ್ಧನೆಗೆ ಹೆಚ್ಚು ಸಹಕಾರಿಯಾಗುವುದರಿಂದ ವ್ಯಾಯಾಮ ಶಿಕ್ಷಣ ಪ್ರಾಥಮಿಕ ಮಟ್ಟದಿಂದ ಅವಶ್ಯವೆಂದು ತಿಳಿದು ಜಾರಿಗೆ ತಂದದ್ದು ನಿಜಕ್ಕೂ ಔಚಿತ್ಯಪೂರ್ಣ.

ಹೀಗೆ ದೈಹಿಕ ಶಿಕ್ಷಕರಾಗಲು ಬೇಕಾದ ತರಬೇತಿಯನ್ನು ಪಡೆಯಲು ಮೈಸೂರಿನ ಆಸುಪಾಸಿನ ವಿದ್ಯಾರ್ಥಿಗಳಿಗೆ ಸಮೀಪದಲ್ಲಿ ಅವಕಾಶವಿರಲಿಲ್ಲ. ಇದನ್ನು ಅರಿತು ಶ್ರೀಗಳವರು ಮೈಸೂರಿನಲ್ಲಿ ಈ ಕಾಲೇಜನ್ನು ೧೯೬೮ರಲ್ಲಿ ಸ್ಥಾಪಿಸಲು ಅನುಮತಿ ನೀಡಿದರು.

ಈ ಸಂಸ್ಥೆಯು ಈಗ ಮೈಸೂರು ನಗರದ ಪ್ರಕೃತಿಯ ಸೊಬಗಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸ್ಥಾಪಿಸಲ್ಪಟ್ಟಿದೆ. ನಿಸರ್ಗರಮಣೀಯವಾದ ಈ ತಾಣದಲ್ಲಿ ಹಿಂದೆಯೇ ಇದ್ದ ಪುರುಷ ಶಿಕ್ಷಕರ ತರಪೇತಿ ಸಂಸ್ಥೆಯೊಡನೆ ಇದನ್ನೂ ನಡೆಸಲಾಗುತ್ತಿದೆ. ಈ ಕಾಲೇಜಿಗೆ ವಿಶಾಲವಾದ ಮೈದಾನ ಹಾಗೂ ಸುಂದರವಾದ ತೋಟವನ್ನು ಕಲ್ಪಿಸಿಕೊಡಲು ಸಹಸ್ರಾರು ರೂ.ಗಳನ್ನು ವೆಚ್ಚಮಾಡಲಾಗುತ್ತಿದೆ. ಕಾಲೇಜಿನಲ್ಲಿ ಈಗ ೬೫ ವಿದ್ಯಾರ್ಥಿಗಳಿದ್ದು, ಅವರಿಗೆ ಹಾಸ್ಟೆಲಿನ ವ್ಯವಸ್ಥೆಯನ್ನು ಮಾಡಲಾಗಿದೆ. ನುರಿತ ಅಧ್ಯಾಪಕರಿದ್ದಾರೆ. ಈ ತರಬೇತಿಕೇಂದ್ರವನ್ನು ಪದವಿಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಮಹದಾಶಯವಿದೆ.

## ಜೆ.ಎಸ್.ಎಸ್. ಕೈಗಾರಿಕಾ ತರಪೇತಿ ಸಂಸ್ಥೆಗಳು, ನಂಜನಗೂಡು ಮತ್ತು ಚಾಮರಾಜನಗರ

ಸಹಸ್ರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ನಿರುದ್ಯೋಗಿಗಳಾಗಿ ಸರ್ಕಾರದ ಉದ್ಯೋಗವನ್ನೇ ಅವಲಂಬಿಸಿ ಸ್ವಂತ ಕಾಲ ಮೇಲೆ ನಿಂತು ಜೀವನ ನಡೆಸುವತ್ತ ಗಮನಹರಿಸದಿರುವುದನ್ನು ಮನಗಂಡ ಜಗದ್ಗುರುಗಳವರು ಕೈಗಾರಿಕಾ ತರಪೇತಿ ಸಂಸ್ಥೆಗಳು ಅದಕ್ಕೆ ನಿವಾರಣೆಯನ್ನೊದಗಿಸುವವೆಂಬ ಆಶಯದಿಂದ ಎರಡು ಸ್ಥಳಗಳಲ್ಲಿ ಈ ಸಂಸ್ಥೆಗಳನ್ನು ೧೯೬೮ರಲ್ಲಿ ಸ್ಥಾಪಿಸಿದ್ದಾರೆ. ಇಲ್ಲಿ, ಕೈಗಾರಿಕೆಗಳಲ್ಲಿ ಪ್ರಾಮುಖ್ಯವಾದ ಕೈಕೆಲಸಗಳ ಬಗೆಗೆ ಪ್ರಾಯೋಗಿಕವಾಗಿ ತರಪೇತಿ ನೀಡಲಾಗುತ್ತದೆ. ನಂಜನಗೂಡಿನಲ್ಲಿ ಸ್ಥಾಪಿಸಿರುವ ಸಂಸ್ಥೆಯಲ್ಲಿ ಎಲೆಕ್ಟ್ರೀಷಿಯನ್, ಫಿಟ್ಟರ್ ಮತ್ತು ಡ್ರಾಫ್ಟ್ಸ್‌ಮನ್ ಕೋರ್ಸುಗಳನ್ನೂ; ಚಾಮರಾಜನಗರದಲ್ಲಿ ಎಲೆಕ್ಟ್ರೀಷಿಯನ್, ಫಿಟ್ಟರ್ ಹಾಗೂ ವೆಲ್ಡರ್ ಕೋರ್ಸ್‌ಗಳನ್ನೂ ಆರಂಭಿಸಲಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆ ಸೀಮಿತವಾಗಿದೆ. ಈ ಎರಡೂ ಸಂಸ್ಥೆಗಳನ್ನು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಆರಂಭಿಸಲಾಗಿದ್ದು. ಈ ಎರಡು ಸಂಸ್ಥೆಗಳಿಗೂ ಪ್ರತ್ಯೇಕವಾದ ಸ್ವಂತ ಕಟ್ಟಡಗಳನ್ನು ಒದಗಿಸಬೇಕೆಂಬುದು ಶ್ರೀಗಳವರ ಆಶಯವಾಗಿದೆ. ಸಂಸ್ಥೆಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಕೊಳ್ಳಲು ಸಹಸ್ರಾರು ರೂ.ಗಳನ್ನು ವೆಚ್ಚಮಾಡಲಾಗುತ್ತಿದೆ.

## ಜೆ.ಎಸ್.ಎಸ್. ಮೂಲ ಶಿಕ್ಷಣ ಕೇಂದ್ರ (ಪುರುಷ ವಿಭಾಗ), ಮೈಸೂರು

ಗಾಂಧೀಜಿಯವರ ಮೂಲ ಶಿಕ್ಷಣದ ಆಧಾರದ ಮೇಲೆ ಶಿಕ್ಷಕರಿಗೆ ತರಪೇತಿ ನೀಡುವ ಈ ಸಂಸ್ಥೆ ೧೯೫೫ರಲ್ಲಿ ಪ್ರಾರಂಭವಾಯ್ತು. ಇಂದು ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜ್ ಇರುವ ಸ್ಥಳದಲ್ಲೇ ಇದು ಪ್ರಾರಂಭಗೊಂಡು, ನಂತರ ಹಳೆಯ ಬನ್ನಿಮಂಟಪದಲ್ಲಿದ್ದು, ಇದೀಗ ಚಾಮುಂಡಿಬೆಟ್ಟದ ಮೆಟ್ಟಲು ರಸ್ತೆಯಲ್ಲಿರುವ ಕಟ್ಟಡದಲ್ಲಿ ನೆಲೆಸಿದೆ. ಮೂಲೋದ್ಯೋಗಗಳಾದ ನೂಲುವುದು-ನೇಯ್ಗೆ, ಮರಗೆಲಸ ಮತ್ತು ತೋಟಗಾರಿಕೆಯಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಸಾಂಪ್ರದಾಯಿಕ ಶಿಕ್ಷಣಕ್ಕೆ ಭಿನ್ನವಾದ ಈ ಶಿಕ್ಷಣವು ''ಜೀವನವೇ ಶಿಕ್ಷಣ–ಶಿಕ್ಷಣವೇ ಜೀವನ''ವೆಂಬುದನ್ನು ಎತ್ತಿ ಸಾರುತ್ತಿದೆ. ದೈನಂದಿನ ಕಾರ್ಯಕ್ರಮ, ಪ್ರಾರ್ಥನೆಯಿಂದ ಪ್ರಾರಂಭಗೊಂಡು, ಸ್ವಚ್ಛತಾ ಕಾರ್ಯಕ್ರಮ, ಸ್ವಸರ್ಕಾರಾಡಳಿತ, ಪಾಠಪ್ರವಚನಗಳು, ಗ್ರಾಮಸೇವೆ, ಸಂಜೆಯ ಪ್ರಾರ್ಥನೆ, ಸಾಂಸ್ಕೃತಿಕ ಕಾರ್ಯಕ್ರಮವೇ ಮೊದಲಾದ ವಿಶೇಷ, ನವೀನ ಕಾರ್ಯಕ್ರಮಗಳಿಂದ ನಡೆಯುತ್ತಿವೆ. ಪ್ರತಿ ಚಟುವಟಿಕೆಯೂ ಶೈಕ್ಷಣಿಕವಾದುದು. ಶಿಕ್ಷಣಾರ್ಥಿಗಳಿಗೆ ದೈಹಿಕ ಶಿಕ್ಷಣ, ಸಂಗೀತ, ಚಿತ್ರಕಲೆಯ ಪರಿಚಯವನ್ನೂ ಮಾಡಿಕೊಡಲಾಗುವುದು.

೧೯೭೦ರಲ್ಲಿ ಇಲ್ಲಿಗೆ ''ವಿಸ್ತರಣ ಸೇವಾ ಕೇಂದ್ರ'' ಲಭ್ಯವಾಯಿತು. ಶಿಕ್ಷಣದಲ್ಲಿ ಸಂಶೋಧನೆ, ತರಪೇತಿ ಮತ್ತು ವಿಸ್ತರಣೆಯೇ ಈ ಕೇಂದ್ರದ ಗುರಿ. ನೂತನ ಬೋಧನಾವಿಧಾನ ಪರಿಚಯಮಾಡಿಕೊಡುವುದು, ವಿಷಯ

ಸಾಮರ್ಥ್ಯವನ್ನು ಬೆಳೆಸುವುದು. ಹೊಸ ಹೊಸ ಪ್ರಯೋಗಗಳನ್ನು ಕೈಗೊಳ್ಳುವುದು ಈ ಕೇಂದ್ರದ ಉದ್ದೇಶ. ಪ್ರಾರಂಭದಿಂದಲೂ ಈ ಕೇಂದ್ರ ಸಾರ್ಥಕ ಸೇವೆ ನಡೆಸಿಕೊಂಡು ಬಂದಿದೆ.

೧೯೬೨ರಿಂದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿದ್ದು, ತರಬೇತಿ ಪಡೆಯದ ಶಿಕ್ಷಕರಿಗೆ ತರಪೇತಿ ನೀಡುವ ಉದ್ದೇಶದಿಂದ ''ಅಂಚೆ ಮತ್ತು ತೆರಪಿನ ಶಿಕ್ಷಣ''ವನ್ನಿಲ್ಲಿ ನಡೆಸಲಾಗುತ್ತಿದೆ. ಮೇ ಮತ್ತು ಅಕ್ಟೋಬರ್ ತಿಂಗಳು ರಜಾ ದಿನಗಳಾಗಿದ್ದು. ಆ ಸಮಯದಲ್ಲಿ ಆ ಶಿಕ್ಷಕರಿಗೆ ಸಂಪರ್ಕ ತರಗತಿಗಳನ್ನು ನಡೆಸಲಾಗುತ್ತಿದೆ. ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಯ ಶಿಕ್ಷಕರು ಈ ಕೇಂದ್ರದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

UNICEF ಆಶ್ರಯದಲ್ಲಿ ರಾಜ್ಯ ಸರ್ಕಾರ ವಿಜ್ಞಾನ ಬೋಧನೆಯ ಗುಣಮಟ್ಟ ಹೆಚ್ಚಿಸಲು ಏರ್ಪಡಿಸಿದ್ದ ಅನೇಕ ಕಾರ್ಯಕ್ರಮಗಳನ್ನು ಈ ಸಂಸ್ಥೆಯಲ್ಲು ಸಹ ವಿದ್ಯಾ ಇಲಾಖೆಯ ಪರವಾಗಿ ನಡೆಸಿಕೊಡಲಾಗಿದೆ.

ಈ ಸಂಸ್ಥೆಯ ಪ್ರಶಿಕ್ಷಕರು ರಾಜ್ಯ ಮತ್ತು ರಾಷ್ಟ್ರಮಟ್ಟದ ಸೆಮಿನಾರ್‌ನಲ್ಲಿ ಭಾಗವಹಿಸಿ ಪ್ರಶಸ್ತಿ ಗಳಿಸಿರುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಈ ಸಂಸ್ಥೆಯು ಮಹತ್ವದ ಪಾತ್ರ ವಹಿಸುತ್ತಿದೆ. ರಾಷ್ಟ್ರಾಧ್ಯಕ್ಷರಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಮತ್ತು ಅನೇಕ ಶಿಕ್ಷಣತಜ್ಞರು ಹಾಗೂ ಗಣ್ಯರನೇಕರು ಈ ಸಂಸ್ಥೆಗೆ ಭೇಟಿ ಇತ್ತು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆಯಿದೆ.

## ಜೆ.ಎಸ್.ಎಸ್. ಮೂಲ ಶಿಕ್ಷಣ ತರಪೇತಿ ಕೇಂದ್ರ (ಮಹಿಳಾ ವಿಭಾಗ), ಸರಸ್ವತೀಪುರಂ, ಮೈಸೂರು

೧೯೬೦ರಲ್ಲಿ ಈ ಸಂಸ್ಥೆ ರೂಪತಾಳಿತು. ಪುರುಷ ವಿಭಾಗದ ಕೇಂದ್ರ ಸ್ಥಾಪನೆಯ ಗುರಿಯೇ ಈ ಕೇಂದ್ರದ ಗುರಿಯಾಗಿದೆ. ಎರಡು ವರ್ಷದ ಈ ತರಪೇತಿಗಾಗಿ ಈ ಶಾಲೆನಲ್ಲಿ ೧೦೩ ಜನ ಪ್ರಶಿಕ್ಷಕಿಯರು ತರಪೇತಿ ಪಡೆಯುತ್ತಿದ್ದಾರೆ. ಮೂಲೋದ್ಯೋಗಕ್ಕೆ ಬದಲಾಗಿ ಇಲ್ಲಿ ಗೃಹವಿಜ್ಞಾನ. ಹೊಲಿಗೆಗಳನ್ನು ಕಲಿಸಲಾಗುವುದು. ಇಲ್ಲಿನ ಫಲಿತಾಂಶಗಳು ಜಿಲ್ಲೆಗೆ ಪ್ರಥಮವಾಗಿದೆ. ಈ ಕೇಂದ್ರಕ್ಕೆ ದೂರ ಪ್ರದೇಶಗಳಿಂದ ಅದರಲ್ಲೂ ಹಳ್ಳಿಗಳಿಂದ ಬರುವ ಹೆಣ್ಣುಮಕ್ಕಳೇ ಹೆಚ್ಚು.

ಈ ಕೇಂದ್ರದಲ್ಲಿ ಸರ್ವಧರ್ಮೀಯ ಪ್ರಾರ್ಥನೆ. ಪ್ರವಚನ, ಶಿಕ್ಷಣಾರ್ಥಿಗಳಲ್ಲಿ ಪ್ರಾಮಾಣಿಕತೆ ಮೂಡಿಸಲು ಪ್ರಾಮಾಣಿಕ ಅಂಗಡಿ ವ್ಯವಸ್ಥೆ. ವೇಳೆಯ ಸದ್ವಿನಿಯೋಗ. ಸ್ವಾಧ್ಯಾಯ ಮತ್ತು ಅದರ ದೃಢೀಕರಣ. ಪ್ರಶ್ನೆಪೆಟ್ಟಿಗೆ. ಅಂತರರಾಷ್ಟ್ರೀಯತ್ವ ಬೆಳೆಸಲು "ಜೈ ಜಗತ್" ಘೋಷಣೆ ಇತ್ಯಾದಿ ವಿಶೇಷ ಕಾರ್ಯಕ್ರಮಗಳಿವೆ.

ಇಲ್ಲಿ ಉತ್ತಮ ಗ್ರಂಥಾಲಯವಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳನ್ನು. ಜಯಂತಿಗಳನ್ನು. ಅನೇಕ ಸಾಂಸ್ಕೃತಿಕ ದಿನಾಚರಣೆಗಳನ್ನು ಶೈಕ್ಷಣಿಕವಾಗಿ ಆಚರಿಸುತ್ತಾರೆ. ಶಾಲಾ ಕ್ಯಾಲೆಂಡರ್ ಪ್ರಕಾರ ಯೋಜಿತ ಪ್ರವಾಸ. ಹೊರಸಂಚಾರ. ಗ್ರಾಮ ಸೇವಾ ಶಿಬಿರ. ಸಾಹಿತ್ಯಿಕ ಚಟುವಟಿಕೆ. ತಿಂಗಳಿಗೊಮ್ಮೆ ಶೈಕ್ಷಣಿಕ ಚಲನಚಿತ್ರ ಪ್ರದರ್ಶನಗಳು ನಡೆಯುವುವು.

ವೃತ್ತಿ ಬೆಳವಣಿಗೆಯ ದೃಷ್ಟಿಯಿಂದ ಅನೇಕ ಕಾರ್ಯಾಗಾರಗಳನ್ನು. ವಿಚಾರಗೋಷ್ಠಿಗಳನ್ನು ನಡೆಸಲಾಗಿದೆ. ಈ ಸಂಸ್ಥೆಯು UNICEF ವತಿಯಿಂದ ವಿಜ್ಞಾನ ಸಲಕರಣೆಗಳನ್ನು ಪಡೆದು ವಿಜ್ಞಾನ ಬೋಧನೆಯ ಉನ್ನತ ಪ್ರಶಿಕ್ಷಣ ಸಂಸ್ಥೆ ಎಂದು ಪರಿಗಣಿಸಲ್ಪಟ್ಟಿದೆ.

ಇಲ್ಲಿಯ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆ ಇದೆ.

## ಜೆ. ಎಸ್. ಎಸ್. ಪ್ರೌಢಶಾಲೆ, ಜಯನಗರ, ಬೆಂಗಳೂರು

ರಾಜ್ಯದ ರಾಜಧಾನಿ ಬೆಂಗಳೂರಿನ ಜಯನಗರ ಬಡಾವಣೆಯಲ್ಲಿ ೧೯೬೨ರಲ್ಲಿ ಈ ಶಾಲೆ ಪ್ರಾರಂಭಿಸಲ್ಪಟ್ಟಿತು. ಮೊದಲು ಖಾಸಗಿ ಗೃಹದಲ್ಲಿ ನಡೆಯುತ್ತಿದ್ದ ಈ ಶಾಲೆಯು ೧೯೬೬ರಲ್ಲಿ ಸುಸಜ್ಜಿತ ಸ್ವಂತ ಕಟ್ಟಡದಲ್ಲಿ ತನ್ನ ಕಾರ್ಯ ನಡೆಸುತ್ತಿದೆ.

ಈ ಶಾಲೆಗೆ ಹೊಂದಿಕೊಂಡಂತೆ ೧೯೬೪ರಿಂದ ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಇಂಗ್ಲಿಷ್ ಮಾಧ್ಯಮದ ಶಿಶುವಿಹಾರವನ್ನೂ ನಡೆಸಲಾಗುತ್ತಿದೆ. ೧೯೭೯ರ ಅಂತರರಾಷ್ಟ್ರೀಯ ಮಕ್ಕಳ ವರ್ಷದ ಕೊಡುಗೆಯಾಗಿ "ಶಿಶು ಸಂರಕ್ಷಣಾ ಕೇಂದ್ರ"ವನ್ನು ತೆರೆಯಲಾಗಿದೆ.

ಪ್ರೌಢಶಾಲೆಯ ೨೫೧ ಮಕ್ಕಳು. ಪ್ರಾಥಮಿಕ ಶಾಲೆಯ ೬೫ ಮಕ್ಕಳು. ಶಿಶುವಿಹಾರದ ೫೧ ಮಕ್ಕಳು. ಶಿಶು

ಸಂರಕ್ಷಣಾ ಕೇಂದ್ರದ ೮ ಮಕ್ಕಳು ಈ ಸಂಸ್ಥೆಯಲ್ಲಿ ಅಭ್ಯಸಿಸುತ್ತಿದ್ದಾರೆ. ಈ ಶಾಲೆಯಲ್ಲಿ ಒಟ್ಟು ೧೬ ಉಪಾಧ್ಯಾಯರಿದ್ದು, ಉಚಿತ ಹಿಂದಿ ಮತ್ತು ಸಂಸ್ಕೃತ ತರಗತಿಗಳನ್ನು ನಡೆಸಲಾಗುತ್ತಿದೆ. ಅಗತ್ಯ ಕೊಠಡಿಗಳು. ಪ್ರಯೋಗಶಾಲೆ. ಪುಸ್ತಕ ಭಂಡಾರ, ಕ್ರೀಡಾಂಗಣ, ದಕ್ಷ ಉಪಾಧ್ಯಾಯವರ್ಗಗಳಿದ್ದು ಈ ಶಾಲೆಯು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆ.

"ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಆಸಕ್ತಿ". "ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿ ಪೋಷಕ ಬೋಧಕ ಬಾಂಧವ್ಯ" —ಈ ವಿಷಯಗಳ ಬಗ್ಗೆ ಇಲ್ಲಿನ ಮುಖ್ಯೋಪಾಧ್ಯಾಯಿನಿ ಹಾಗೂ ಸಹ ಶಿಕ್ಷಕಿಯರು ಸಮೀಕ್ಷೆ ನಡೆಸಿದ ವರದಿಯು ಪ್ರಜಾಮತ ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಮಾಜಪಾಠದಲ್ಲಿ "ಬ್ರಿಡ್ಜ್‌ಕೋರ್ಸ್" ಇಂಗ್ಲಿಷ್ ಮತ್ತು ಸಮಾಜ ಪಾಠಗಳಲ್ಲಿ "ಪ್ರೋಗ್ರಾಂ – ಕಂ – ಗೈಡ್" ತಯಾರಿಸಿರುವುದು ಈ ಶಾಲೆಯು ಶೈಕ್ಷಣಿಕ ಆಸಕ್ತಿ ಹೊಂದಿರುವುದನ್ನು ತೋರಿಸುತ್ತದೆ. ಈ ಶಾಲೆಯ ಫಲಿತಾಂಶವು ವರ್ಷವರ್ಷಕ್ಕೆ ಸುಧಾರಿತವಾಗುತ್ತಿದೆ. ಪಠ್ಯೇತರ ಚಟುವಟಿಕೆಗಳಲ್ಲೂ ಈ ಶಾಲೆಯು ಸಾಧನೆ ಮೆಚ್ಚುಗೆ ಗಳಿಸಿದೆ. ಸ್ಕೂಲ್ ಬ್ಯಾಂಡ್‌ಸೆಟ್. ವಿದ್ಯಾರ್ಥಿ ಬ್ಯಾಂಕ್. ವಿಜ್ಞಾನ ಸಂಘಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿವೆ. ಕಾರ್ಯಾನುಭವ ಕಾರ್ಯಕ್ರಮವು ಪರಿಣಾಮಕಾರಿಯಾಗಿ ನಡೆಯುತ್ತಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ರಾಮಾನುಜ ರಸ್ತೆ, ಮೈಸೂರು

ಜೆ.ಎಸ್.ಎಸ್. ಮಹಾವಿದ್ಯಾಪೀಠದ ವತಿಯಿಂದ ಪ್ರಾರಂಭಿಸಲ್ಪಟ್ಟ ವಿದ್ಯಾಸಂಸ್ಥೆಗಳಲ್ಲಿ ಇದೇ ಮೊದಲನೆಯದು. ಈ ಶಾಲೆಯು ೧೯೫೪ರಲ್ಲಿ ಪ್ರಾರಂಭಗೊಂಡು ಹೈಯರ್ ಸೆಕೆಂಡರಿ ಶಾಲೆಯಾಗಿ ಪರಿವರ್ತಿತವಾಗಿ. ಮತ್ತೆ ಪ್ರೌಢಶಾಲೆಯಾಗಿಯೇ ಉಳಿದಿದೆ. ಶಿಕ್ಷಣಕ್ಷೇತ್ರದಲ್ಲುಂಟಾದ ಅನೇಕ ಬದಲಾವಣೆಗಳನ್ನು ಈ ಶಾಲೆಯು ಅಳವಡಿಸಿಕೊಂಡು ಬೆಳೆದುಬಂದಿದೆ. ಇದೀಗ ೧೦+೨+೩ ವಿಧಾನಕ್ಕೆ ಅಡಕವಾಗಿ ಬೆಳೆದುಬರುತ್ತಿದೆ.

೧೯೬೩–೬೪ರಿಂದ ಈ ಶಾಲೆಯ ಫಲಿತಾಂಶವು ಉತ್ತಮಮಟ್ಟದ್ದಾಗಿದ್ದು. ಆ ಮಟ್ಟವನ್ನುಳಿಸಿಕೊಳ್ಳಲು ಶ್ರಮವಹಿಸುತ್ತಿದೆ. ಶಾಲೆಯಲ್ಲಿ ಉತ್ತಮಮಟ್ಟದ ಬೋಧಕರಿದ್ದಾರೆ. ಪ್ರಯೋಗಶಾಲೆ. ಗ್ರಂಥಾಲಯಗಳ ಸೌಕರ್ಯವನ್ನು ಒದಗಿಸಲಾಗಿದೆ. ಆಟದ ಮೈದಾನದ ಕೊರತೆ ಇದ್ದರೂ. ನಗರ ಮಟ್ಟದ ಕ್ರೀಡಾಸ್ಪರ್ಧೆಯಲ್ಲಿ ಈ ಶಾಲೆ ಪಾಲ್ಗೊಳ್ಳುತ್ತಿದೆ.

ಮೈಸೂರಿನ ಸಿದ್ಧಾರ್ಥ ನಗರ ಬಡಾವಣೆಯಲ್ಲಿ ಈ ಶಾಲೆಯ ಶಾಖೆಯಾಗಿ ೮ ಮತ್ತು ೯ನೇ ತರಗತಿಗಳು ನಡೆಯುತ್ತಿವೆ. ಈ ಶಾಖೆಗೆ ಈಗಾಗಲೇ ಮೈಸೂರ್‍ನು ನಗರಾಭಿವೃದ್ಧಿ ಮಂಡಳಿಯಿಂದ ಶಾಲಾ ನಿವೇಶನವನ್ನು ಖರೀದಿಸಿಕೊಳ್ಳಲಾಗಿದ್ದು. ಶಾಲೆಯ ಕಟ್ಟಡ ನಿರ್ಮಾಣ ಕಾರ್ಯವೂ ಶೀಘ್ರದಲ್ಲೇ ಆರಂಭವಾಗಲಿದೆ.

## ಜೆ.ಎಸ್.ಎಸ್, ಪ್ರೌಢಶಾಲೆ, ಚಾಮರಾಜನಗರ

೧೯೫೮ರಲ್ಲಿ ಈ ಶಾಲೆ ಪ್ರಾರಂಭವಾಯಿತು. ಇಂದು ಈ ಶಾಲೆಯಲ್ಲಿ ೧೦೮೬ ವಿದ್ಯಾರ್ಥಿಗಳು ಮತ್ತು ೪೦ ಮಂದಿ ಸಿಬ್ಬಂದಿವರ್ಗದವರಿದ್ದಾರೆ. ಶಾಲೆಯ ಸಂಖ್ಯೆಯೇ ಅದರ ಯಶಸ್ಸನ್ನು ಸಾರುತ್ತಿದೆ. ಸಹ ಶಿಕ್ಷಣವನ್ನು ಹೊಂದಿರುವ ಈ ಶಾಲೆಯಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯ ಮೂರನೇ ಒಂದು ಭಾಗದಷ್ಟಿದೆ.

೧೯೭೭–೭೮ರಲ್ಲಿ ಈ ಶಾಲೆಯು ಶೇಕಡ ೮೨ ಫಲಿತಾಂಶ ಪಡೆದಿರುವುದು ದಾಖಲೆಯಾಗಿದೆ. ಪಠ್ಯೇತರ ಚಟುವಟಿಕೆಯಲ್ಲಿಯೂ ಸಹ ಈ ಶಾಲೆ ಪ್ರಗತಿ ಸಾಧಿಸಿದೆ. ಜಿಲ್ಲಾಮಟ್ಟದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಈ ಶಾಲೆಯ ವಿದ್ಯಾರ್ಥಿಗಳು ಬಹುಮಾನ ಗಳಿಸಿರುತ್ತಾರೆ. ೧೯೮೦–೮೧ನೇ ಸಾಲಿನಲ್ಲಿ ಸ್ಥಳೀಯ ರೋಟರಿ ಸಂಸ್ಥೆಯವರು ನಡೆಸಿದ ವಿವಿಧ ಸ್ಪರ್ಧೆಯಲ್ಲಿ ಈ ಶಾಲೆಗೆ ಪರ್ಯಾಯಪಾರಿತೋಷಕ ಬಂದಿದೆ.

೧೯೭೧–೭೨ರಲ್ಲಿ ಈ ಶಾಲೆಯ ವಿದ್ಯಾರ್ಥಿ ಎನ್. ಶ್ರೀಶಚಂದ್ರ ಗಳಿಸಿರುವ ೫೦೬ / ೭೦೦ ಅಂಕಗಳು ಒಂದು ದಾಖಲೆಯಾಗಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ಸರಸ್ವತೀಪುರಂ, ಮೈಸೂರು

ಮೈಸೂರಿನ ಸರಸ್ವತೀಪುರಂ ಬಡಾವಣೆಯಲ್ಲಿ ೧೯೬೨ರಲ್ಲಿ ಅಂದಿನ ನವಜ್ಯೋತಿ ಸ್ಟುಡಿಯೋವಿನಲ್ಲಿ ಈ ಶಾಲೆಯು ಪ್ರಾರಂಭಗೊಂಡು, ಇದೀಗ ೪೮೦ಕ್ಕೂ ಮಿಗಿಲಾದ ಸಂಖ್ಯೆಯಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಈ

ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ವಿದ್ಯಾರ್ಥಿಗಳು (೨೬೬). ವಿದ್ಯಾರ್ಥಿನಿಯರು (೨೧೪) ಪ್ರತ್ಯೇಕ ವಿಭಾಗಗಳಲ್ಲಿ ಅಭ್ಯಸಿಸುತ್ತಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಸೌಲಭ್ಯವಿಲ್ಲಿದೆ. ಇಲ್ಲಿ ೨೦ ಶಿಕ್ಷಕರೂ. ೭ ಮಂದಿ ಶಿಕ್ಷಕೇತರರೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಾಲಾ ಕೊಠಡಿಗಳು. ಪುಸ್ತಕಭಂಡಾರ. ವಾಚನಾಲಯ. ಪ್ರಯೋಗಶಾಲೆಯ ಸೌಲಭ್ಯಗಳಿಲ್ಲಿವೆ. ದೈಹಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಶಾಲೆಯ ವಾರ್ಷಿಕ ಸಂಚಿಕೆ "ನವಜ್ಯೋತಿ" ವಿದ್ಯಾರ್ಥಿಗಳ ಪ್ರತಿಭೆಯನ್ನು ಸಾರುತ್ತಿದೆ. ಶೈಕ್ಷಣಿಕ ಪ್ರವಾಸಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ನಾಡಹಬ್ಬ. ರಾಷ್ಟ್ರೀಯ ಹಬ್ಬಗಳನ್ನು ಆಚರಿಸಿ. ಮಕ್ಕಳಿಗೆ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯ ಮಾಡಿಕೊಡುತ್ತಿದ್ದಾರೆ.

ಈ ಶಾಲೆಯಲ್ಲಿ ಉತ್ತಮ ಫಲಿತಾಂಶ ಬರುತ್ತಿದ್ದು. ಇನ್ನೂ ಉತ್ತಮ ಮಟ್ಟ ಗಳಿಸಲು ಶ್ರಮಿಸುತ್ತಿದೆ.

## ಜೆ.ಎಸ್.ಎಸ್. ಹಿಂದಿ ಪ್ರೌಢಶಾಲೆ, ಮೈಸೂರು

೧೯೬೯ರಲ್ಲಿ ಈ ಶಾಲೆಯು ಪ್ರಾರಂಭವಾಯ್ತು. ಹಿಂದಿ ಮಾತನಾಡುವ ಜನರಿಗೆ ಇದರ ಉಪಯೋಗವಾಗಲೆಂದೇ ಈ ಸಂಸ್ಥೆ ಪ್ರಾರಂಭವಾದುದು. ೧೯೭೨ರಿಂದಲೇ ಈ ಶಾಲೆಗೆ ಉತ್ತಮ ಫಲಿತಾಂಶಗಳು ಬರುತ್ತಿತ್ತು. ೧೯೭೫ರಲ್ಲಿ ನೂರಕ್ಕೆ ನೂರು ಫಲಿತಾಂಶ ಬಂದಿರುವುದು ಈ ಸಂಸ್ಥೆಯ ಫಲಿತಾಂಶದಲ್ಲೊಂದು ದಾಖಲೆ. ಈ ಶಾಲೆಯ ಪ್ರಸಿದ್ಧ ಹೆಸರು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ಆಕರ್ಷಿಸಿತು. ೧೯೭೭ರಿಂದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ಈಗ ಒಟ್ಟು ೪ ಕನ್ನಡ ಮಾಧ್ಯಮದ ತರಗತಿಗಳು ಮತ್ತು ೩ ಹಿಂದಿ ಮಾಧ್ಯಮದ ತರಗತಿಗಳಿವೆ. ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೩೦೦.

ಪ್ರಯೋಗಶಾಲೆ. ಗ್ರಂಥಾಲಯ ಸೌಕರ್ಯಗಳನ್ನು ಒದಗಿಸಲಾಗಿದೆ. ಬೋಧಕ ವರ್ಗದಲ್ಲಿ ಹತ್ತು ಮಂದಿಯೂ, ಬೋಧಕೇತರ ವರ್ಗದಲ್ಲಿ ೭ ಮಂದಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಪಠ್ಯೇತರ ಚಟುವಟಿಕೆಯಲ್ಲೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಕ್ರೀಡಾಸ್ಪರ್ಧೆ. ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳಿಗೆ ಅವಕಾಶ ನೀಡಲಾಗಿದೆ. ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಲಾಗುತ್ತಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು

ನಂಜನಗೂಡಿನಿಂದ ಪಶ್ಚಿಮಕ್ಕೆ ೧೫ ಕಿ.ಮೀ. ದೂರದಲ್ಲಿರುವ ಚರಿತ್ರಾರ್ಹ ಸ್ಥಳಪುರಾಣ ಹೊಂದಿರುವ, ದೊಡ್ಡದಾದ ಗ್ರಾಮ ಹುಲ್ಲಹಳ್ಳಿ. ಸನಿಹದಲ್ಲೇ ಕಪಿಲಾ ನದಿ ಹರಿಯುತ್ತಿದೆ. ಪವಿತ್ರ ಸಂಗಮಕ್ಷೇತ್ರವು ಇಲ್ಲಿಗೆ ೬ ಕಿ.ಮೀ. ದೂರದಲ್ಲಿದೆ.

೧೯೬೦ರಲ್ಲಿ ೮ ಮಂದಿ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿಂದು ೧೫೦ ಮಂದಿ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಗ್ರಾಮೀಣ ವಾತಾವರಣದಲ್ಲಿರುವ ಈ ಶಾಲೆ ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ. ಸ್ವಂತ ಕಟ್ಟಡ ಹೊಂದಿದ್ದು. ಅವಶ್ಯಕವಾದ ಪ್ರಯೋಗಶಾಲೆ. ಗ್ರಂಥಾಲಯ. ಆಟದ ಮೈದಾನ ಇತ್ಯಾದಿಗಳ ಅನುಕೂಲವಿದ್ದು ಒಳ್ಳೆಯ ಶೈಕ್ಷಣಿಕ ವಾತಾವರಣವಿದೆ. ದಕ್ಷ ಶಿಕ್ಷಕರು. ಉತ್ತಮ ಪೋಷಕ-ಬೋಧಕ ಸಂಬಂಧವಿರುವ ಈ ಶಾಲೆಯು ವರ್ಷವರ್ಷಕ್ಕೆ ಪ್ರಗತಿಪಥದಲ್ಲಿದೆ. ಶೀಘ್ರದಲ್ಲಿಯೆ ನೂತನ ಕಟ್ಟಡವನ್ನು ಶಾಲೆ ಹೊಂದಲಿದೆ.

೧೯೭೯ರಲ್ಲಿ ಪಡೆದ ಶೇ. ೫೫ರ ಫಲಿತಾಂಶವು ಇಲ್ಲಿನ ದಾಖಲೆ. ಕೇವಲ ಬೆರಳೆಣಿಕೆಗೂ ಎಟುಕದವಿದ್ಯಾವಂತರಿಲ್ಲದ ಈ ಪ್ರದೇಶದಲ್ಲಿ ಈ ಶಾಲೆಯಿಂದ ಹೊರಬಂದ ವಿದ್ಯಾರ್ಥಿಗಳ ಪೈಕಿ ಕೆಲವರು ವಿದ್ಯಾಭ್ಯಾಸ ಮುಗಿಸಿ ವೈದ್ಯರಾಗಿ, ವಕೀಲರಾಗಿ. ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವುದು ಈ ಶಾಲೆಯನ್ನು ಸ್ಥಾಪಿಸಿದ ಸಾರ್ಥಕತೆಯನ್ನು ಎತ್ತಿ ಸಾರುತ್ತಿದೆ. ಶಾಲೆಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವಿದೆ.

ಇಲ್ಲಿ ಜೂನಿಯರ್ ಕಾಲೇಜ್ ಒಂದನ್ನು ಸ್ಥಾಪಿಸುವ ಯೋಜನೆ ಇದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ರಾಮಾಪುರ, ಕೊಳ್ಳೇಗಾಲ ತಾಲ್ಲೂಕು

ಕೊಳ್ಳೇಗಾಲದಿಂದ ಪುಣ್ಯಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುವ ಹಾದಿಯಲ್ಲಿರುವ ರಾಮಾಪುರ ಒಂದು ದೊಡ್ಡ ಗ್ರಾಮ. ೧೯೭೨ರಲ್ಲಿ ಇಲ್ಲಿ ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಕೇವಲ ೨೧

ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಇಂದಿನ ವಿದ್ಯಾರ್ಥಿಗಳ ಸಂಖ್ಯೆ ೨೦೦. ೧೯೭೫ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. ೯೮ ಫಲಿತಾಂಶ ಪಡೆದಿರುವುದೊಂದು ದಾಖಲೆ.

ಶೈಕ್ಷಣಿಕ ಪ್ರವಾಸಕ್ಕಾಗಿ ವಿದ್ಯಾರ್ಥಿಗಳನ್ನು ಕರೆದೊಯ್ಯಲಾಗುವುದು. ಶಾಲೆಗೆ ಸ್ವಂತ ಕಟ್ಟಡವಿದೆ. ಪ್ರಯೋಗಶಾಲೆ, ಗ್ರಂಥಾಲಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಇನ್ನೂ ಹತ್ತು ಕೊಠಡಿಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದ್ದು ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದೆ. ಇಲ್ಲಿಯೂ ಸಹ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಇದ್ದು ಈ ಸಂಸ್ಥೆಯ ಸ್ಥಾಪನೆಯಿಂದಾಗಿ ಅನೇಕರು ಉನ್ನತ ವ್ಯಾಸಂಗವನ್ನು ಮಾಡುವ ಅವಕಾಶ ದೊರೆತು ಇಂದು ಎಲ್ಲ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿಯ ಶಾಲೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಕಲ್ಪಿಸಲಾಗಿದೆ. ಇಲ್ಲಿಯೂ ಜೂನಿಯರ್ ಕಾಲೇಜೊಂದನ್ನು ಸ್ಥಾಪಿಸುವ ಯೋಜನೆಯಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ಸುತ್ತೂರು, ನಂಜನಗೂಡು ತಾಲ್ಲೂಕು

ನಂಜನಗೂಡು ತಾಲ್ಲೋಕಿನ ಸುತ್ತೂರು ಇತಿಹಾಸಪ್ರಸಿದ್ಧವಾದ ಸ್ಥಳ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ತಪವೆಸಗಿದ ಪುಣ್ಯಭೂಮಿ. ಕಪಿಲಾನದಿಯ ದಡದಲ್ಲಿರುವ ಈ ಸ್ಥಳವು ರಮ್ಯವಾಗಿದ್ದು. ಇಲ್ಲಿನ ಮಠಕ್ಕೆ ಸಹಸ್ರಾರು ಭಕ್ತಾದಿಗಳು ಭೇಟಿ ನೀಡಿ ಪುನೀತರಾಗುತ್ತಿದ್ದಾರೆ. ಇಲ್ಲಿನ ಸುತ್ತಮುತ್ತಲ ಗ್ರಾಮಗಳ ಮಕ್ಕಳಿಗಾಗಿ ೧೯೬೨ರಲ್ಲಿ ಪ್ರೌಢಶಾಲೆಯೊಂದನ್ನು ಪ್ರಾರಂಭಿಸಲಾಯಿತು. ಆಧ್ಯಾತ್ಮಿಕಕ್ಷೇತ್ರದಲ್ಲಿ, ಶೈಕ್ಷಣಿಕ ಕೇಂದ್ರವೊಂದು ಪ್ರಾರಂಭಗೊಂಡು ಇಹಪರ ಸಾಧನೆಗೆ ಮಾರ್ಗವಾಗಿದೆ.

ಕೇವಲ ೫೦ ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಈ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಇಂದು ೧೯೪ ಇದೆ. ೧೯೭೮ರಲ್ಲಿ ಶೇಕಡ ೯೨ ರಷ್ಟು ಫಲಿತಾಂಶ ಪಡೆದು ಈ ಶಾಲೆಯು ತಾಲ್ಲೋಕಿನಲ್ಲಿ ದಾಖಲೆ ಸ್ಥಾಪಿಸಿದೆ. ಉತ್ತಮ ಕಟ್ಟಡದ ಸೌಲಭ್ಯ. ಪ್ರಯೋಗಶಾಲೆ. ಗ್ರಂಥಾಲಯ, ಆಟದ ಮೈದಾನವು ಈ ಶಾಲೆಗೆ ಲಭ್ಯವಾಗಿದ್ದು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಿದೆ. ಈ ಶಾಲೆಯ ಪ್ರಗತಿಯನ್ನು ಗಮನಿಸಿ, ವಿದ್ಯಾ ಇಲಾಖೆಯವರು ಈ ಶಾಲೆಗೆ ಮನ್ನಣೆ ನೀಡಿದ್ದಾರೆ.

ಇಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಸಂಸ್ಕೃತ, ಹಿಂದಿ ತರಗತಿಗಳನ್ನು ನಡೆಸಿ ಈ ಭಾಷೆಗಳನ್ನು ಕಲಿಯುವ ಸೌಕರ್ಯ ಒದಗಿಸಿಕೊಡಲಾಗಿದೆ. ವರ್ಷಕ್ಕೊಮ್ಮೆ ನಡೆಯುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಾತ್ರಾಮಹೋತ್ಸವ ಸಂದರ್ಭದಲ್ಲಿ ಇಲ್ಲಿನ ವಿದ್ಯಾರ್ಥಿಗಳು ಪಾಲ್ಗೊಂಡು ಶೈಕ್ಷಣಿಕ. ಧಾರ್ಮಿಕ ಹಾಗೂ ಕಾರ್ಯಾನುಭವದ ಪ್ರಯೋಜನವನ್ನು ಪಡೆಯುವರು. ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆಯಿದೆ.

ಈ ಕ್ಷೇತ್ರದಲ್ಲಿ ಇನ್ನೂ ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಅಲ್ಲಿನ ಜನತೆಗೆ ಅನುಕೂಲ ಮಾಡಿಕೊಡುವ ಉದ್ದೇಶವನ್ನು ಜಗದ್ಗುರುಗಳವರು ಹೊಂದಿದ್ದಾರೆ. ಮೂಲಪೀಠದಲ್ಲಿರುವ ಶಿಕ್ಷಣ ಸಂಸ್ಥೆ ಮತ್ತು ಮುಂದೆ ಪ್ರಾರಂಭಗೊಳ್ಳಲಿರುವ ಸಂಸ್ಥೆಗಳು ಆದರ್ಶ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲಿರುವುದು ಜನತೆಯ ಸೌಭಾಗ್ಯವೇ ಸರಿ.

## ಜೆ.ಎಸ್.ಎಸ್. ಪ್ರೌಢಶಾಲೆ, ತೆರಕಣಾಂಬಿ

೧೯೬೨ರಲ್ಲಿ ಈ ಶಾಲೆ ಪ್ರಾರಂಭವಾಯಿತು. ಈ ಶಾಲೆಯಲ್ಲಿ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಇದ್ದಾರೆ. ಈ ಶಾಲೆಯಲ್ಲಿಂದು ೧೫೦ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ೧೯೬೨ರಲ್ಲಿ ಪಡೆದ ಶೇ. ೯೭ ಫಲಿತಾಂಶವು ಈ ಶಾಲೆಯ ಫಲಿತಾಂಶದಲ್ಲೊಂದು ದಾಖಲೆಯಾಗಿದೆ.

ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದ ಈ ಶಾಲೆಯು ಈಗ ಸ್ವಂತ ಕಟ್ಟಡ ಹೊಂದಿದೆ. ಜನರ ಸಹಕಾರ ಸಂಪೂರ್ಣ ದೊರೆಯುತ್ತಿದೆ. ಹಿಂದುಳಿದಿದ್ದ ಈ ಪ್ರದೇಶದಲ್ಲಿ ಹೆಚ್ಚು ವಿದ್ಯಾವಂತರನ್ನು ಕಾಣುತ್ತಿರುವುದು, ಈ ಶಾಲಾ ಸ್ಥಾಪನೆಯ ಸಾರ್ಥಕತೆಯನ್ನು ತೋರುತ್ತಿದೆ. ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವಿದೆ.

## ಶ್ರೀ ಮಹದೇಶ್ವರ ಬಾಲಕಿಯರ ಪ್ರೌಢಶಾಲೆ, ಕಾಮಗೆರೆ

ಕೊಳ್ಳೇಗಾಲದಿಂದ ಪುಣ್ಯಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುವ ಹಾದಿಯಲ್ಲಿರುವ ಕಾಮಗೆರೆಯಲ್ಲಿ ಪ್ರೌಢಶಾಲೆಯು ೧೯೭೧ರಲ್ಲಿ ಪ್ರಾರಂಭವಾಯಿತು. ೭ ಜನ ಶಿಕ್ಷಕರು, ೪ ಜನ ಶಿಕ್ಷಕೇತರರು ಈ ಶಾಲೆಯ ಕೆಲಸವನ್ನು

ನಿರ್ವಹಿಸುತ್ತಿದ್ದಾರೆ. ಒಟ್ಟು ಮಕ್ಕಳ ಸಂಖ್ಯೆ ೧೦೦ ಇದೆ. ಹೆಣ್ಣುಮಕ್ಕಳಿಗಾಗಿ ಮೀಸಲಾದ ಈ ಶಾಲೆಯು ಉತ್ತಮ ಶಿಕ್ಷಣವನ್ನು ನೀಡುತ್ತಿರುವುದಲ್ಲದೆ, ಉತ್ತಮ ಫಲಿತಾಂಶಕ್ಕೂ ಪ್ರಯತ್ನಿಸುತ್ತಿದೆ. ತಾಲ್ಲೂಕ್ ಕೇಂದ್ರದ ಹೊರಗಿರುವ ಏಕೈಕ ಮಹಿಳಾ ಪ್ರೌಢಶಾಲೆ ಇದಾಗಿದೆ.

ಇಲ್ಲಿಯವರೆಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದ ಈ ಶಾಲೆ ಶೀಘ್ರದಲ್ಲೇ ಸ್ವಂತ ಕಟ್ಟಡಕ್ಕೆ ಅಡಿಯಿಡಲಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ದೊಡ್ಡಕಾಡನೂರು

ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದ ಈ ಪ್ರದೇಶದಲ್ಲಿ ಪೂಜ್ಯ ಶ್ರೀಗಳವರು ಪ್ರೌಢಶಾಲೆಯೊಂದನ್ನು ಸ್ಥಾಪಿಸಿದುದು ಅಲ್ಲಿನ ಜನರ ಸೌಭಾಗ್ಯವೆಂದೇ ಹೇಳಬೇಕು. ೧೯೭೦ರಲ್ಲಿ ಪ್ರಾರಂಭವಾದ ಈ ಶಾಲೆಯಲ್ಲಿ ಫಲಿತಾಂಶವು ಅಷ್ಟು ತೃಪ್ತಿಕರವಾಗಿರಲಿಲ್ಲ. ಸತತ ಪ್ರಯತ್ನದಿಂದ ಫಲಿತಾಂಶ ಈಗ ಸುಧಾರಿಸುತ್ತಿದೆ.

ಸ್ವಂತ ಕಟ್ಟಡ ಹೊಂದಿರುವ ಈ ಶಾಲೆಯಲ್ಲಿ ಈಗ ೧೫೯ ವಿದ್ಯಾರ್ಥಿಗಳಿದ್ದಾರೆ. ೧೧ ಜನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಲ್ಲಿದ್ದಾರೆ.

## ಜೆ.ಎಸ್.ಎಸ್. ಪ್ರೌಢಶಾಲೆ, ಮುಡಿಗುಂಡ, ಕೊಳ್ಳೇಗಾಲ ತಾಲ್ಲೂಕ್

ಕೊಳ್ಳೇಗಾಲಕ್ಕೆ ಹೊಂದಿಕೊಂಡಂತಿರುವ ೫೦೦೦ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ೧೯೮೦ರಲ್ಲಿ ಪ್ರೌಢ ಶಾಲೆಯೊಂದನ್ನು ತೆರೆಯಲಾಯ್ತು. ೩೩ ವಿದ್ಯಾರ್ಥಿಗಳೊಡನೆ ಈ ಶಾಲೆ ಪ್ರಾರಂಭವಾಯ್ತು. ಈಗ ಬಾಡಿಗೆ ಮನೆಯಲ್ಲಿ ನಡೆಯುತ್ತಿರುವ ಶಾಲೆಗೆ ನೂತನ ಕಟ್ಟಡ ಒದಗಿಸಲು ಜನತೆ ಮುಂದಾಗಿದ್ದಾರೆ. ಈಗಾಗಲೇ ಅದಕ್ಕೆ ಬೇಕಾಗುವ ನಿವೇಶನವನ್ನು ಪಡೆದಿರುತ್ತಾರೆ. ಇಲ್ಲಿ ಇನ್ನೂ ಹೆಚ್ಚು ವಿದ್ಯಾಸಂಸ್ಥೆಗಳನ್ನು ಸಂಸ್ಥೆಯಿಂದ ಪಡೆಯ ಬೇಕೆಂಬುದು ಇಲ್ಲಿನ ಜನತೆಯ ಮಹದಾಶಯವಾಗಿದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ಬಂಡಳ್ಳಿ, ಕೊಳ್ಳೇಗಾಲ ತಾಲ್ಲೂಕ್

ಈ ತಾಲ್ಲೂಕಿನಲ್ಲಿ ಹೆಚ್ಚು ಜನಸಂಖ್ಯೆಯುಳ್ಳ, ಮುಖ್ಯರಸ್ತೆಯಿಂದ ದೂರವಿರುವ, ಹೆಚ್ಚು ಸೌಲಭ್ಯಗಳಿಲ್ಲದ ಶೈಕ್ಷಣಿಕವಾಗಿ ಹಿಂದುಳಿದ ಈ ಪ್ರದೇಶದಲ್ಲಿ ಪೂಜ್ಯ ಶ್ರೀಗಳವರು ಪ್ರೌಢಶಾಲೆಯೊಂದನ್ನು ತೆರೆದಿರುವುದು ಅಲ್ಲಿನ ಜನರ ಸೌಭಾಗ್ಯವೇ ಸರಿ.

೧೯೮೦ರಲ್ಲಿ ಇಲ್ಲಿ ಶಾಲೆ ಪ್ರಾರಂಭಗೊಂಡಿತು. ಶಾಲೆಗಾಗಿ ಮುಖ್ಯ ರಸ್ತೆಯಲ್ಲಿರುವ ೨–೧೬ ಎಕರೆ ಪ್ರದೇಶವನ್ನು ದಾನವಾಗಿ ಪಡೆಯಲಾಗಿದ್ದು, ಶಾಲಾ ಕಟ್ಟಡವನ್ನು ಕಟ್ಟಿಸಿಕೊಡಲು ಗ್ರಾಮದ ಪ್ರಮುಖರು ವಾಗ್ದಾನ ಮಾಡಿದ್ದು; ಕಾರ್ಯಪ್ರವೃತ್ತರಾಗಿದ್ದಾರೆ. ಮುಂದಿನ ವರ್ಷದ ಆದಿಭಾಗದಲ್ಲಿ ಈ ಕಟ್ಟಡ ಶಾಲೆಗೆ ದೊರಕಲಿರುವುದು ಮಕ್ಕಳ ಪುಣ್ಯ. ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವನ್ನು ಕೂಡ ಆರಂಭಿಸಲಾಗಿದೆ.

## ಜೆ.ಎಸ್.ಎಸ್. ಬಾಲಕಿಯರ ಪ್ರೌಢಶಾಲೆ, ಯಳಂದೂರು

ಯಳಂದೂರು ತಾಲ್ಲೂಕು ಕೇಂದ್ರವಾಗಿದ್ದು, ಅಲ್ಲಿ ಸರ್ಕಾರಿ ಪ್ರೌಢಶಾಲೆ ಇದೆಯಾದರೂ ಬಾಲಕಿಯರಿಗೆ ಪ್ರತ್ಯೇಕವಾಗಿ ಅಭ್ಯಾಸ ಮಾಡಲು ಅನುವಾಗುವಂತೆ ೧೯೮೧ರಲ್ಲಿ ಈ ಶಾಲೆಯನ್ನು ಆರಂಭಿಸಲಾಯಿತು. ಶಾಲೆಯಲ್ಲಿ ನುರಿತ ಅಧ್ಯಾಪಕರಿದ್ದಾರೆ. ಶಾಲೆಗೆ ಸುಮಾರು ೨ ಲಕ್ಷ ರೂ.ಗಳ ಕಟ್ಟಡವನ್ನು ಕೊಂಡುಕೊಡಲು ತಾಲ್ಲೋಕಿನ ಜನತೆ ಮುಂದಾಗಿದ್ದಾರೆ. ಇಲ್ಲಿ ಬಾಲಕಿಯರಿಗಾಗಿಯೇ ಪ್ರತ್ಯೇಕ ವಿದ್ಯಾರ್ಥಿನಿಲಯ, ಪ್ರಾಥಮಿಕ ಶಾಲೆಗಳನ್ನು ತೆರೆಯುವ ಯೋಜನೆ ಇದೆ.

## ಜೆ.ಎಸ್.ಎಸ್. ಪ್ರೌಢಶಾಲೆ, ಗೌಡಹಳ್ಳಿ

ಯಳಂದೂರು ತಾಲ್ಲೂಕಿಗೆ ಸೇರಿದ ಗೌಡಹಳ್ಳಿಯಲ್ಲಿ ೧೯೮೧ರಲ್ಲಿ ಈ ಸಂಸ್ಥೆಯು ಆರಂಭಿಸಲ್ಪಟ್ಟಿದೆ. ಈಗಾಗಲೇ ಸ್ವಂತ ನಿವೇಶನವನ್ನು ಹೊಂದಿದ್ದು, ಶೀಘ್ರದಲ್ಲೇ ಕಟ್ಟಡದ ಕಾರ್ಯ ಆರಂಭವಾಗಲಿದೆ.

## ಜೆ.ಎಸ್.ಎಸ್. ಪ್ರಾಕ್ಟಿಸಿಂಗ್ ಪ್ರೈಮರಿ ಶಾಲೆ, ಸರಸ್ವತೀಪುರಂ, ಮೈಸೂರು

೧೯೭೨–೭೩ರಲ್ಲಿ ಕೇವಲ ೬೮ ಮಕ್ಕಳನ್ನು ಹೊಂದಿ ಈ ಶಾಲೆ ಪ್ರಾರಂಭವಾಯ್ತು. ಈಗ ೯೦೦ಕ್ಕಿಂತ ಹೆಚ್ಚಿನ

ಸಂಖ್ಯೆಯನ್ನು ಹೊಂದಿದೆ ಈ ಶಾಲೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳಿವೆ. ೧೯೭೦ರಲ್ಲಿ ಮೊದಲ ಬಾರಿಗೆ ಈ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಏಳನೇ ತರಗತಿಯ ಪರೀಕ್ಷೆಯಲ್ಲಿ ಶೇ. ೯೦ರಷ್ಟು ಉತ್ತೀರ್ಣರಾಗಿದ್ದಾರೆ. ಈ ಶಾಲೆಯ ಮಕ್ಕಳಾದ ಮಧುರ, ಭಾಸ್ಕರ, ಪ್ರಸನ್ನ. ವಾಣಿ—ಇವರುಗಳು ರ್‍ಯಾಂಕುಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಇದೊಂದು ಮಾದರಿ ಶಾಲೆಯೇ ಸರಿ.

ವಿಜ್ಞಾನ ಸಂಘ, ಕಾರ್ಯಾನುಭವ ಸಂಘ, ಪಠ್ಯೇತರ ಚಟುವಟಿಕೆ, ಗರ್ಲ್‌ಗೈಡ್ ಇತ್ಯಾದಿ ವಿಭಾಗ ಚುರುಕು ಕೆಲಸ ನಿರ್ವಹಿಸುತ್ತಿವೆ. ನೀತಿಬೋಧನೆಗಾಗಿ ಪ್ರತ್ಯೇಕ ತರಗತಿಗಳನ್ನು ನಡೆಸುತ್ತಿದ್ದಾರೆ.

"ಪ್ರತಿಭಾ ದಿನ" ಪ್ರತಿ ಶನಿವಾರ ಮಕ್ಕಳಲ್ಲಿರುವ ಸುಪ್ತ ಚೇತನಕ್ಕೊಂದು ದಾರಿ ಮಾಡುವ ಕಾರ್ಯ. ಇದರ ಪರಿಣಾಮ ಭಾಗವಹಿಸಿದ ಕಡೆಯಲ್ಲೆಲ್ಲಾ ಬಹುಮಾನಗಳು. C.F.T.R.I., ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನ, ದಸರಾ ವಸ್ತುಪ್ರದರ್ಶನ—ಇಲ್ಲೆಲ್ಲಾ ಬಹುಮಾನಗಳು. ಈ ಶಾಲೆಗೆ ಸೇರದಂತೆ ಒಂದು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಒಂದು ಬಾಲವಾಡಿ ಇದೆ.

## ಜೆ.ಎಸ್.ಎಸ್. ಹಿರಿಯ ಪ್ರಾಥಮಿಕ ಶಾಲೆ, ರಾಮಾನುಜ ರಸ್ತೆ, ಮೈಸೂರು

೧೫೦ ಮಕ್ಕಳು ೩ ಜನ ಶಿಕ್ಷಕಿಯರಿರುವ ಈ ಶಾಲೆಯು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದ ಏಳನೇ ತರಗತಿಯ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನೂ, ಕೆಲವೊಮ್ಮೆ ರ್‍ಯಾಂಕ್ ವಿಜೇತರನ್ನೂ ಪಡೆದಿದೆ. ಚಿಕ್ಕದಾಗಿ, ಚೊಕ್ಕವಾಗಿ ಕೆಲಸ ನಿರ್ವಹಿಸುತ್ತಿರುವ ಈ ಶಾಲೆ ಜೆ. ಎಸ್. ಎಸ್. ಹೈಸ್ಕೂಲ್ ಆಶ್ರಯದಲ್ಲಿ ನಡೆಯುತ್ತಿದೆ.

ಮಕ್ಕಳಿಗೆ ಪಠ್ಯೇತರ ಚಟುವಟಿಕೆಯಲ್ಲೂ ಸಾಕಷ್ಟು ಉತ್ತೇಜನ ಕೊಡಲಾಗುತ್ತಿದೆ.

## ಜೆ.ಎಸ್.ಎಸ್. ಹಿರಿಯ ಪ್ರಾಥಮಿಕ ಶಾಲೆ, ರಾಮಾಪುರ

ಇದು ಅಲ್ಲಿಯ ಪ್ರೌಢಶಾಲೆಗೆ ಹೊಂದಿಕೊಂಡಂತೆ ಇದೆ. ೮ ಬೋಧಕವರ್ಗದವರಿದ್ದು ಒಂದರಿಂದ ಏಳರವರೆಗೆ ತರಗತಿಗಳು ನಡೆಯುತ್ತಿವೆ. ಸದ್ಯದಲ್ಲಿ ಶಾಲೆಯು ಎರಡು ಪ್ರತ್ಯೇಕ ಕಟ್ಟಡಗಳಲ್ಲಿ ನಡೆಯುತ್ತಿದ್ದು, ಶೀಘ್ರದಲ್ಲೇ ನೂತನ ಕಟ್ಟಡವನ್ನು ಪಡೆಯಲಿದೆ.

## ಜೆ.ಎಸ್.ಎಸ್. ಬಾಲಜಗತ್ (creche) ರಾಮಾನುಜ ರಸ್ತೆ, ಮೈಸೂರು

ಸರ್ಕಾರಿ ನೌಕರಿಯಲ್ಲಿ ದಂಪತಿಗಳು ತೊಡಗಿರುವ ಸಂದರ್ಭಗಳಲ್ಲಿ ಅವರ ಮಕ್ಕಳ ಪೋಷಣೆಯನ್ನು ನೋಡಿಕೊಳ್ಳುವವರಾರು ? ಮೈಸೂರು ನಗರದಲ್ಲಿ ಇಂತಹ ಸಮಸ್ಯೆ ಇರುವುದನ್ನು ಮನಗಂಡು ೧೯೭೭ರಲ್ಲಿ ಈ ಸಂಸ್ಥೆ ರೂಪುಗೊಂಡಿತು. ಅದರಲ್ಲೂ ಅತಿ ಎಳೆಯ ವಯಸ್ಸಿನ ಅಂದರೆ ೩ ತಿಂಗಳಿನಿಂದ ೫ ವರ್ಷದವರೆಗಿರುವ ಮಕ್ಕಳ ಪಾಲನೆಮಾಡುವ ಜವಾಬ್ದಾರಿಯನ್ನು ಈ ಶಿಶುಕಲ್ಯಾಣ ಕೇಂದ್ರ ವಹಿಸಿಕೊಂಡಿದೆ.

ಈ ಕೇಂದ್ರದಲ್ಲಿ ಮಕ್ಕಳ ಮನೋವಿಕಾಸವಾಗುವ ಆಟ-ಪಾಠಗಳನ್ನು, ಆರೋಗ್ಯ-ನೈರ್ಮಲ್ಯಗಳನ್ನು ಹೆಚ್ಚು ಗಮನಿಸಲಾಗುವುದು. ವಾರದಲ್ಲಿ ಎರಡು ಬಾರಿ ಭೇಟಿನೀಡುವ ವೈದ್ಯರು ಇಲ್ಲಿನ ಮಕ್ಕಳನ್ನು ಪರೀಕ್ಷಿಸಿ, ಅವರ ದೈಹಿಕ ಆರೋಗ್ಯ ರಕ್ಷಣೆಗೆ ಸಲಹೆ ನೀಡುವರು. ಅವಶ್ಯವಿದ್ದ ಮಕ್ಕಳಿಗೆ ಉಚಿತ ಔಷಧಿ ನೀಡಿ ಅವರ ಆರೋಗ್ಯವನ್ನು ರಕ್ಷಿಸಲಾಗುವುದು. ಬೆಳಿಗ್ಗೆ ೮ ಘಂಟೆಗೆ ಬರುವ ಈ ಮಕ್ಕಳ ಆಹಾರ, ನಿದ್ರೆ, ಆಟಗಳ ಕಡೆ ಲಕ್ಷ್ಯನೀಡಿ ಅವರ ಬೆಳವಣಿಗೆಗೆ ಈ ಕೇಂದ್ರ ಶ್ರಮಿಸುತ್ತಿದೆ.

ಆರಂಭದಲ್ಲಿ ೨೫ ಮಕ್ಕಳಿಂದ ಪ್ರಾರಂಭವಾದ ಈ ಕೇಂದ್ರದಲ್ಲಿ ಈಗ ೧೩೦ ಮಕ್ಕಳಿದ್ದಾರೆ. ಅವಶ್ಯಕತೆಗೆ ಅನುಗುಣವಾಗಿ ೧೯೭೯ರಲ್ಲಿ ಲೋಯರ್ ಕಿಂಡರ್‌ಗಾರ್ಟನನ್ನು, ೧೯೮೦ರಲ್ಲಿ ಅಪ್ಪರ್ ಕಿಂಡರ್ ಗಾರ್ಟನನ್ನು ಮತ್ತು ೧೯೮೧ರಲ್ಲಿ ಪ್ರಾಥಮಿಕ ಮೊದಲ ತರಗತಿಯನ್ನು ಈ ಕೇಂದ್ರಕ್ಕೆ ಅಳವಡಿಸಿಕೊಳ್ಳಲಾಗಿದೆ. ಈ ಶಾಲೆಯಲ್ಲಿ ಸುಶಿಕ್ಷಿತ ಉಪಾಧ್ಯಾಯಿನಿಯರಿದ್ದಾರೆ. ಸುಂದರ ಕೈತೋಟವಿದೆ. ಪೋಷಕರು ಶಾಲೆಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇಲ್ಲಿ ಇಂಗ್ಲಿಷ್ ಮಾಧ್ಯಮವಿದ್ದು, ಕೇಂದ್ರ ಸರ್ಕಾರದ ನೌಕರರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಮೈಸೂರಿನ ಆಕಾಶವಾಣಿ ಕೇಂದ್ರಕ್ಕೆ ಈ ಶಾಲೆಯ ಮಕ್ಕಳು ೧೯೮೧ರಲ್ಲಿ ವಿಶೇಷಕಾರ್ಯಕ್ರಮವೊಂದನ್ನೂ ನೀಡಿರುತ್ತಾರೆ.

## ಜೆ.ಎಸ್.ಎಸ್. ಬಾಲಜಗತ್ (creche) ಸರಸ್ವತೀಪುರಂ, ಮೈಸೂರು

ಈಗಾಗಲೇ ತಿಳಿಸಿರುವ ಉದ್ದೇಶಕ್ಕಾಗಿ ಮೈಸೂರು ನಗರದ ಸರಸ್ವತೀಪುರಂ ಬಡಾವಣೆಯಲ್ಲಿಯೂ ಶಿಶುಕಲ್ಯಾಣ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಬಡಾವಣೆಯಲ್ಲಿನ ಪೋಷಕರು ಇದರ ಪ್ರಯೋಜನವನ್ನು ಪಡೆಯುಕೊಳ್ಳುತ್ತಿದ್ದಾರೆ. ಇನ್ನೂ ಬೆಳವಣಿಗೆಯ ಹಂತದಲ್ಲಿರುವ ಈ ಕೇಂದ್ರವು ಪೋಷಕರ ಗಮನ ಸೆಳೆಯುವುದರಲ್ಲಿ ಆಶ್ಚರ್ಯವಿಲ್ಲ. ಉದ್ದೇಶಿತ ಗುರಿಗಾಗಿ ಇಲ್ಲೂ ಉತ್ಸಾಹದ ಕಾರ್ಯಕ್ರಮಗಳು ನಡೆಯುತ್ತಿವೆ.

## ಜೆ.ಎಸ್.ಎಸ್. ಬಾಲಜಗತ್, ಕಾಮಗೆರೆ, ಕೊಳ್ಳೇಗಾಲ ತಾಲ್ಲೂಕು

೧೯೮೧ರಲ್ಲಿ ಸ್ಥಾಪಿತವಾಗಿದೆ. ಮಕ್ಕಳ ಸಂಖ್ಯೆ ಸಾಕಷ್ಟಿದೆ. ಸದ್ಯಕ್ಕೆ ಪ್ರೌಢಶಾಲೆಯ ಕಟ್ಟಡದಲ್ಲಿ ನಡೆಯುತ್ತಿದ್ದು, ಮುಂದೆ ಬಾಲಕಿಯರಿಗಾಗಿ ನರ್ಸರಿಯಿಂದ ಪ್ರಾಥಮಿಕ ಶಾಲೆವರೆಗಿನ ಶಿಕ್ಷಣವನ್ನು ವ್ಯವಸ್ಥೆ ಮಾಡುವ ಯೋಜನೆ ಇದೆ. ಅನುಭವಿ ಅಧ್ಯಾಪಕರಿದ್ದು, ಗ್ರಾಮದ ಜನತೆಯ ಸಹಕಾರ ಪ್ರೋತ್ಸಾಹದಾಯಕವಾಗಿರುತ್ತದೆ.

## ಜೆ.ಎಸ್.ಎಸ್. ಬಾಲಜಗತ್, ಹುಲ್ಲಹಳ್ಳಿ

ಇದೂ ಕೂಡ ೧೯೮೧ರಲ್ಲಿ ಸ್ಥಾಪಿಸಲ್ಪಟ್ಟಿದೆ. ಮಕ್ಕಳ ಸಂಖ್ಯೆ ೬೦ಕ್ಕೂ ಜಾಸ್ತಿ ಇದ್ದು, ಅನುಭವಿ ಅಧ್ಯಾಪಕರಿಬ್ಬರು ಹಾಗೂ ಬೋಧಕೇತರರೊಬ್ಬರಿದ್ದು. ಸದ್ಯಕ್ಕೆ ಕಲ್ಯಾಣಮಂದಿರ ಒಂದರಲ್ಲಿ ನಡೆಯುತ್ತಿದ್ದು. ಪ್ರೌಢಶಾಲೆಗಾಗಿ ನಿರ್ಮಾಣಗೊಳ್ಳುತ್ತಿರುವ ನೂತನ ಕಟ್ಟಡ ಸಿದ್ಧವಾದೊಡನೆ ಸೂಕ್ತ ಸ್ಥಳಾವಕಾಶ ದೊರೆಯಲಿದೆ.

ಈ ಎರಡೂ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿತವಾಗಿದ್ದು ಮಕ್ಕಳ ವಿಕಾಸಕ್ಕೆ ಸಹಕಾರಿಯಾಗಿದೆ. ಜನತೆಯ ಪ್ರೋತ್ಸಾಹ ಉತ್ತೇಜನಕಾರಿಯಾಗಿರುತ್ತದೆ.

## ಸಂಸ್ಕೃತ ಪಾಠಶಾಲೆಗಳು

### ೧. ಕೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ

ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರು ಈ ಪಾಠಶಾಲೆಯ ಕಟ್ಟಡವನ್ನು ಧರ್ಮೋದ್ಧಾರ ಕೆಲಸಗಳಿಗಾಗಿ ಕಟ್ಟಿಸಿ, ಸಾರೋದ್ಧಾರವಾಗಿ ನಡೆಸಿಕೊಂಡು ಬರುವಂತೆ ಜಗದ್ಗುರುಗಳವರನ್ನು ಪ್ರಾರ್ಥಿಸಿಕೊಂಡು ಈ ಕಟ್ಟಡವನ್ನು ಅವರಿಗೆ ಒಪ್ಪಿಸಿದರು. ಈ ಕಟ್ಟಡವಿಂದು ಬಹುಮುಖ ಸೇವೆಗಳಿಗಾಗಿ ಮೀಸಲಾಗಿದೆ.

೧೯೬೭ರಲ್ಲಿ ೧೦೨ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯಲ್ಲಿ ಈ ಸಾಲಿನಲ್ಲಿ ೨೭೦ ವಿದ್ಯಾರ್ಥಿಗಳು ಸಂಸ್ಕೃತವನ್ನು ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಅಭ್ಯಸಿಸುತ್ತಿದ್ದಾರೆ. ಪ್ರಥಮ, ಕಾವ್ಯ, ಸಾಹಿತ್ಯವನ್ನು ಅಭ್ಯಸಿಸಿದ ವಿದ್ಯಾರ್ಥಿಗಳು ನಂತರ ವೇದ, ಜ್ಯೋತಿಷ್ಯ, ಯೋಗಾಸನ ಮತ್ತು ಪ್ರಯೋಗಗಳಲ್ಲಿ ಪರಿಣತಿ ಹೊಂದಲು ಅವಕಾಶವಿದೆ.

ಇಲ್ಲಿ ಮಾಧ್ಯಮಿಕಶಾಲೆ, ಪ್ರೌಢಶಾಲೆ ಹಾಗೂ ಕಾಲೇಜುಗಳ ಜೊತೆಗೆ ಸಂಸ್ಕೃತವನ್ನೂ ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಅಶನ-ವಸತಿ ಸೌಲಭ್ಯ ನೀಡಲಾಗುತ್ತದೆ. ಈ ಶಾಲೆಯಿಂದ ಹೊರಬಂದ ವಿದ್ಯಾರ್ಥಿಗಳು ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ.

### ೨. ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಚಾಮರಾಜನಗರ

೧೯೭೦ರಲ್ಲಿ ೫೦ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಸಂಸ್ಕೃತ ಪಾಠಶಾಲೆಯಲ್ಲಿ ಈಗಿರುವ ವಿದ್ಯಾರ್ಥಿಗಳ ಸಂಖ್ಯೆ ೧೫೦. ಇಲ್ಲಿ ಕಾವ್ಯದವರೆಗೆ ತರಗತಿಗಳು ನಡೆಯುತ್ತಿವೆ. ಸಂಸ್ಕೃತ ಕಲಿಯಲು ಉತ್ಸುಕರಾಗಿರುವ ಇಲ್ಲಿನ ವಿದ್ಯಾರ್ಥಿವೃಂದಕ್ಕೆ ತಕ್ಕ ಉತ್ತೇಜನ ನೀಡಿ ಈ ಶಾಲೆಯು ನಡೆಯುತ್ತಿದೆ.

### ೩. ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಸುತ್ತೂರು

ಕೇವಲ ೨೦ ವಿದ್ಯಾರ್ಥಿಗಳಿಂದ ೧೯೭೨ರಲ್ಲಿ ಪ್ರಾರಂಭಗೊಂಡ ಈ ಶಾಲೆಯಲ್ಲಿ ಇಂದು ೭೫ ಮಂದಿ ವಿದ್ಯಾರ್ಥಿ

ಗಳು ಸಂಸ್ಕೃತ ಅಭ್ಯಾಸ ಮಾಡುತ್ತಿದ್ದಾರೆ. ಶ್ರೀಮಠದ ಆವರಣದಲ್ಲೇ ಈ ಶಾಲೆಯು ನಡೆಯುತ್ತಿದೆ. ಕೇವಲ ಪ್ರಾಥಮ ತರಗತಿಗಳು ಮಾತ್ರ ನಡೆಯುತ್ತಿದ್ದು ಮುಂದಿನ ತರಗತಿಗಳನ್ನು ಪ್ರಾರಂಭಿಸುವ ಯೋಜನೆ ಇದೆ.

**೪. ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಸರಸ್ವತೀಪುರಂ, ಮೈಸೂರು**

೧೯೬೯ರಲ್ಲಿ ಪ್ರಾರಂಭವಾದ ಈ ಶಾಲೆಯಲ್ಲಿ ಆಗಿನ ಸಂಖ್ಯೆ ೫೦. ಈ ಸಾಲಿನ ಸಂಖ್ಯೆ ೯೧. ಕಾವ್ಯದವರೆಗೆ ತರಗತಿಗಳು ನಡೆಯುತ್ತಿವೆ. ಇಲ್ಲಿನ ವಾತಾವರಣವು ಸಂಸ್ಕೃತಾಭ್ಯಾಸಕ್ಕಾಗಿ ಉತ್ತೇಜನ ನೀಡುತ್ತಿದೆ. ಸಾಹಿತ್ಯ ತರಗತಿಗಳನ್ನು ನಡೆಸುವ ಆಲೋಚನೆ ಇದೆ.

**೫. ಜೆ.ಎಸ್.ಎಸ್. ಸಂಸ್ಕೃತ ಪಾಠಶಾಲೆ, ಕೆ. ಆರ್. ನಗರ**

೧೯೬೩ರಲ್ಲಿ ೩೦ ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಈ ಶಾಲೆಯಲ್ಲಿ ಈಗ ೧೨೦ ವಿದ್ಯಾರ್ಥಿಗಳಿದ್ದಾರೆ. ಸಂಸ್ಕೃತ ಕಲಿಯಲು ಆಸಕ್ತರಾದ ಈ ಪ್ರದೇಶದ ವಿದ್ಯಾರ್ಥಿಗಳಿಗೆ ಸಂಸ್ಕೃತ ಅಭ್ಯಾಸಕ್ಕೆ ಈ ಶಾಲೆಯಿಂದ ತುಂಬಾ ಉತ್ತೇಜನ ದೊರೆತಿದೆ. ಈಗ ಪ್ರಥಮ ತರಗತಿಗಳು ಮಾತ್ರ ನಡೆಯುತ್ತಿವೆ. ಕಾವ್ಯ ಮತ್ತು ಸಾಹಿತ್ಯ ತರಗತಿಗಳನ್ನು ಈ ಶಾಲೆಯಲ್ಲಿ ಪ್ರಾರಂಭಿಸುವ ಯೋಜನೆಯಿದೆ.

## ಜೆ.ಎಸ್.ಎಸ್. ಆರೋಗ್ಯ ಕೇಂದ್ರ, ಮೈಸೂರು

ಜೆ.ಎಸ್.ಎಸ್. ಮಹಾವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಶಾಲಾ-ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ೧೦,೦೦೦ಕ್ಕೂ ಮೀರಿದೆ. ಇವರ ಆರೋಗ್ಯದ ಬಗ್ಗೆ ಸೂಕ್ತ ಗಮನ ಕೊಡುವುದು ಅವಶ್ಯವೆಂದು ಮನಗಂಡ ಪರಮ ಪೂಜ್ಯ ಜಗದ್ಗುರುಗಳವರು ೧೯೬೩ರಲ್ಲಿ ಈ ಆರೋಗ್ಯ ಕೇಂದ್ರವನ್ನು ಆರಂಭಿಸಿದರು. ೧೯೬೩ರಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ ಅಂದಿನಿಂದ ಇಂದಿನವರೆಗೂ ಅವ್ಯಾಹತವಾಗಿ ತನ್ನ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದೆ.

ಕೇವಲ ಒಬ್ಬ ವೈದ್ಯರು ಮತ್ತು ಒಬ್ಬ ಸಹಾಯಕರೊಡನೆ ಪ್ರಾರಂಭಗೊಂಡ ಈ ಕೇಂದ್ರದಲ್ಲಿ ಈಗ ಇಬ್ಬರು ಪುರುಷ ವೈದ್ಯರು, ಒಬ್ಬರು ಮಹಿಳಾ ವೈದ್ಯರು, ಒಬ್ಬರು ಗುಮಾಸ್ತರು ಮತ್ತು ಇಬ್ಬರು ಸಹಾಯಕ ಸಿಬ್ಬಂದಿ ವರ್ಗದವರೂ ಇದ್ದಾರೆ. ಆರೋಗ್ಯ ಕೇಂದ್ರವು (೧) ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಚಿಕಿತ್ಸೆ ಮತ್ತು ಸಲಹೆ ನೀಡುವುದು. (೨) ಹೊರ ರೋಗಿಗಳ ಚಿಕಿತ್ಸೆ ಮತ್ತು ಸಲಹೆ ನೀಡುವುದು. (೩) ಶಾಲಾ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವೈದ್ಯಕೀಯ ಪರೀಕ್ಷೆ ಮತ್ತು ಅವರುಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು. (೪) ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕಾರ್ಯಕ್ರಮದಲ್ಲಿ ಇಲಾಖೆಯವರ ಸಹಕಾರದೊಡನೆ ಭಾಗ ವಹಿಸುವುದು. (೫) ಆರೋಗ್ಯ ಶಾಸ್ತ್ರ ಬೋಧನೆ ಮಾಡುವುದು. (೬) ಪ್ರಥಮ ಚಿಕಿತ್ಸಾ ತರಬೇತಿನೀಡುವುದು—ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ಪ್ರತಿದಿನ ಬೆಳಗ್ಗೆ ೧೦–೩೦ರಿಂದ ೧-೩೦ರ ವರೆಗೆ ಸಂಜೆ ೪-೩೦ರಿಂದ ೬-೩೦ರ ವರೆಗೆ ಈ ಕೇಂದ್ರದ ಕೆಲಸದ ವೇಳೆಯಾದರೂ ಈ ವೇಳೆಯ ಯಾವ ಪರಿಮಿತಿಯೂ ಇಲ್ಲದೆ ಬೆಳಗಿನಿಂದ ರಾತ್ರಿ ೯ರ ವರೆಗೆ ಅವ್ಯಾಹತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಕೇಂದ್ರ ಹಾಗೂ ರಾಜ್ಯದ ಆರೋಗ್ಯ ಸಚಿವರುಗಳು, ವಿದ್ಯಾಧಿಕಾರಿಗಳು, ಪೌಷ್ಟಿಕ ಆಹಾರ ಯೋಜನೆಯ ಅಧಿಕಾರಿಗಳು—ಮುಂತಾದ ಅನೇಕರು ಈ ಕೇಂದ್ರಕ್ಕೆ ಭೇಟಿ ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಈ ಆರೋಗ್ಯ ಕೇಂದ್ರದ ಉಪಯುಕ್ತತೆಯನ್ನು ಕಂಡು ಶ್ರೀಗಳವರು ಇಂತಹುದೇ ಒಂದು ಆರೋಗ್ಯ ಕೇಂದ್ರವನ್ನು ಊಟಿಯಲ್ಲಿ, ಆಶ್ರಮದ ಆವರಣದಲ್ಲಿ ತೆರೆಯಲು ಆಲೋಚಿಸಿರುತ್ತಾರೆ.

ಈ ಕೇಂದ್ರದಿಂದ ಜನತೆಗೆ ಆಗುತ್ತಿರುವ ಪ್ರಯೋಜನವನ್ನರಿತ ಶ್ರೀಗಳವರು ಬೃಹತ್ ಪ್ರಮಾಣದಲ್ಲಿ ಸುಮಾರು ೬೦೦ರಿಂದ ೮೦೦ ಹಾಸಿಗೆಗಳನ್ನುಳ್ಳ ದೊಡ್ಡ ಆಸ್ಪತ್ರೆಯೊಂದನ್ನು ಸ್ಥಾಪಿಸಲು ಆಲೋಚಿಸಿದ್ದು, ಅದಕ್ಕೆ ಬೇಕಾದ ಎಲ್ಲ ಕಾರ್ಯಗಳು ಶೀಘ್ರಗತಿಯಲ್ಲಿ ನಡೆಯುತ್ತಿವೆ.

"ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ"ವನ್ನು ವಟವೃಕ್ಷಕ್ಕೆ ಹೋಲಿಸಿದ್ದು ಸಾರ್ಥಕ ಎನ್ನಿಸುತ್ತದೆ. ವಟವೃಕ್ಷದ ಬೀಜ ಒಂದು ಹನಿ ಗಾತ್ರದಲ್ಲಿದ್ದರೂ ಹೆಚ್ಚೇ! ಅದರೊಳಗಿಂದ ಅಂಕುರಿಸಿ ಹೊಮ್ಮಿ ಎತ್ತರ

ಎತ್ತರ ಬೆಳೆದು, ಗಗನಾಂಗಣವನ್ನೆಲ್ಲ ಶಾಖೋಪಶಾಖೆಗಳಿಂದ ಹರಡಿ, ತನ್ನ ಉಪಬಿಳಲು ಬಿಳಲುಗಳಿಂದ ಭೂಭಾಗವನ್ನೆಲ್ಲಾ ವ್ಯಾಪಿಸಿ ತಣ್ಣೆಳಲನ್ನೀಯುತ್ತದೆ. ಪಾಂಥರ ದಣಿವನ್ನು ನಿವಾರಿಸುತ್ತದೆ. ಅನೇಕ ಜೀವರಾಶಿಗಳಿಗೆ ಆಶ್ರಯವೀಯುತ್ತದೆ. ಅಂತೆಯೇ ನಮ್ಮ ಮಹಾ ವಿದ್ಯಾಪೀಠ ಜ್ಞಾನಪಿಪಾಸುಗಳ ತೃಷೆ ನಿವಾರಿಸುತ್ತ, ಜ್ಞಾನಾಭಿವೃದ್ಧಿಗೈಯುತ್ತ, ವರ್ಷೇ ವರ್ಷೇ ಸಹಸ್ರಾರು ತರುಣ ತರುಣಿಯರನ್ನು ವಿದ್ಯಾವಂತರನ್ನಾಗಿ ರೂಪಿಸಿ, ನಾಡಿನ, ನುಡಿಯ ಏಳಿಗೆಗೆ ಅವರನ್ನೆಲ್ಲ ಕೊಡಮಾಡುತ್ತಿರುವುದು. ಹಾಗೆ ಕೊಡಮಾಡಿರುವವರು ಇಂದು ದೇಶವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ನಮ್ಮ ನಾಡಿನ ಪರಮ ಭಾಗ್ಯವೆಂದೇ ನನ್ನೆಣಿಕೆ. ಈ ಪುಣ್ಯಕಾರ್ಯದಲ್ಲಿ ಸಂಸ್ಥೆಯ ಅಭಿಮಾನಿಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠದ ನೌಕರವರ್ಗದವರು, ಸಂಸ್ಥೆಗಳ ಮುಖ್ಯಸ್ಥರುಗಳು, ಅಧ್ಯಾಪಕರು, ಅಧ್ಯಾಪಕೇತರರು—ಹೀಗೆ ಸರ್ವರೂ ಪೂಜ್ಯ ಜಗದ್ಗುರುಗಳವರ ಅಪೇಕ್ಷೆಗೆ ಅನುಗುಣವಾಗಿ ತ್ರಿಕರಣಪೂರ್ವಕವಾಗಿ ಸೇವೆಸಲ್ಲಿಸುತ್ತಿರುವುದು ನಿಜಕ್ಕೂ ಅಭಿನಂದನೀಯವಾದುದು. "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ" ಶರಧಿಯಂತೆ ಗಂಭೀರವಾಗಿ, ಗಗನದಂತೆ ವಿಶಾಲವಾಗಿ ಎಲ್ಲೆಡೆ ವ್ಯಾಪಿಸಲಿ ಹಾಗೂ ಅವಿರತವಾಗಿ, ಅವಿಶ್ರಾಂತವಾಗಿ ಜ್ಞಾನಜ್ಯೋತಿಯನ್ನು ಜನಮನದಲ್ಲಿ ಬೆಳಗಿಸುತ್ತ ರಾರಾಜಿಸಲಿ! ಎಂದು ಪ್ರಾರ್ಥಿಸೋಣ.

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು-೪

## ಶಿಕ್ಷಣ ಸಂಸ್ಥೆಗಳು

### ಕಾಲೇಜುಗಳು

೧ ಜೆ. ಎಸ್. ಎಸ್. ಕಲಾ, ವಿಜ್ಞಾನ, ವಾಣಿಜ್ಯ ಮತ್ತು ವ್ಯವಹಾರ ಆಡಳಿತದ ಕಾಲೇಜು, ರಾಮಾನುಜ ರಸ್ತೆ, ಮೈಸೂರು-೪
೨ ಜೆ. ಎಸ್. ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಚಾಮರಾಜನಗರ
೩ ಜೆ. ಎಸ್. ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ನಂಜನಗೂಡು
೪ ಜೆ. ಎಸ್. ಎಸ್. ಮಹಿಳೆಯರ ಕಾಲೇಜು, ಸರಸ್ವತೀಪುರಂ, ಮೈಸೂರು–೯
೫ ಜೆ. ಎಸ್. ಎಸ್. ಫಾರ್ಮಸಿ ಕಾಲೇಜು, ರಾಮಾನುಜ ರಸ್ತೆ, ಮೈಸೂರು-೪
೬ ಜೆ. ಎಸ್. ಎಸ್. ಫಾರ್ಮಸಿ ಕಾಲೇಜು, ರಾಕ್‌ಲ್ಯಾಂಡ್ಸ್, ಉದಕಮಂಡಲ
೭ ಜೆ. ಎಸ್. ಎಸ್. ದೈಹಿಕ ಶಿಕ್ಷಣ ಕಾಲೇಜು, ಚಾಮುಂಡಿಬೆಟ್ಟದ ಹಂತದ ದಾರಿ, ಮೈಸೂರು

### ತಾಂತ್ರಿಕ ಶಿಕ್ಷಣ ಸಂಸ್ಥೆಗಳು

೮ ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಕಾಲೇಜು, ಮೈಸೂರು
೯ ಕಂಪ್ಯೂಟರ್-ಪ್ರೋಗ್ರಾಂನಲ್ಲಿ ಸ್ನಾತಕೋತ್ತರ ಶಿಕ್ಷಣ (ಡಿಪ್ಲೊಮಾ), ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಕಾಲೇಜು, ಮೈಸೂರು
೧೦ ಗಣಿತ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಪಿಹೆಚ್.ಡಿ., ಗಳಿಸಲನುಕೂಲವಾಗುವ ಸಂಶೋಧನಾಕೇಂದ್ರ, ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಕಾಲೇಜು, ಮೈಸೂರು
೧೧ ಜೆ. ಎಸ್. ಎಸ್. ಮಹಿಳೆಯರ ಪಾಲಿಟೆಕ್ನಿಕ್, ಮೈಸೂರು
೧೨ ಜೆ. ಎಸ್. ಎಸ್. ಕೈಗಾರಿಕಾ ತರಬೇತಿ ಸಂಸ್ಥೆ, ನಂಜನಗೂಡು
೧೩ ಜೆ. ಎಸ್. ಎಸ್. ಕೈಗಾರಿಕಾ ತರಬೇತಿ ಸಂಸ್ಥೆ, ಚಾಮರಾಜನಗರ

### ಶಿಕ್ಷಕರ ಪ್ರಶಿಕ್ಷಣ ಸಂಸ್ಥೆಗಳು

೧೪ ಜೆ. ಎಸ್. ಎಸ್. ಪ್ರಶಿಕ್ಷಣ ಸಂಸ್ಥೆ (ಪುರುಷ ವಿಭಾಗ), ಚಾಮುಂಡಿಬೆಟ್ಟದ ತಪ್ಪಲು, ಮೈಸೂರು
೧೫ ಜೆ. ಎಸ್. ಎಸ್. ಪ್ರಶಿಕ್ಷಣ ಸಂಸ್ಥೆ (ಮಹಿಳಾ ವಿಭಾಗ), ಸರಸ್ವತೀಪುರಂ, ಮೈಸೂರು

### ಪ್ರೌಢಶಾಲೆಗಳು

೧೬ ಜೆ. ಎಸ್. ಎಸ್. ಪ್ರೌಢಶಾಲೆ, ಜಯನಗರ, ೮ನೇ ಬ್ಲಾಕ್, ಬೆಂಗಳೂರು ೪೦
೧೭ ಜೆ. ಎಸ್. ಎಸ್. ಪ್ರೌಢಶಾಲೆ, ರಾಮಾನುಜ ರಸ್ತೆ, ಮೈಸೂರು-೪

೧೮ ಜೆ. ಎಸ್. ಎಸ್. ಹಿಂದಿ ಪ್ರೌಢಶಾಲೆ, ವಾಣೀವಿಲಾಸ ರಸ್ತೆ, ಮೈಸೂರು–೪
೧೯ ಜೆ. ಎಸ್. ಎಸ್. ಬಾಲಕಿಯರ ಪ್ರೌಢಶಾಲೆ, ಸರಸ್ವತೀಪುರಂ, ಮೈಸೂರು–೯
೨೦ ಜೆ. ಎಸ್. ಎಸ್. ಪ್ರೌಢಶಾಲೆ, ಹುಲ್ಲಹಳ್ಳಿ, ನಂಜನಗೂಡು ತಾಲ್ಲೋಕ್
೨೧ ಜೆ. ಎಸ್. ಎಸ್. ಪ್ರೌಢಶಾಲೆ, ಸುತ್ತೂರು, ನಂಜನಗೂಡು ತಾಲ್ಲೋಕ್
೨೨ ಜೆ. ಎಸ್. ಎಸ್. ಪ್ರೌಢಶಾಲೆ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೋಕ್
೨೩ ಜೆ. ಎಸ್. ಎಸ್. ಪ್ರೌಢಶಾಲೆ, ಚಾಮರಾಜನಗರ
೨೪ ಜೆ. ಎಸ್. ಎಸ್. ಪ್ರೌಢಶಾಲೆ, ರಾಮಾಪುರ, ಕೊಳ್ಳೇಗಾಲ ತಾಲ್ಲೋಕ್
೨೫ ಜೆ. ಎಸ್. ಎಸ್. ಪ್ರೌಢಶಾಲೆ, ಬಂಡಳ್ಳಿ, ಕೊಳ್ಳೇಗಾಲ ತಾಲ್ಲೋಕ್
೨೬ ಜೆ. ಎಸ್. ಎಸ್. ಪ್ರೌಢಶಾಲೆ, ಮುಡಿಗುಂಡಂ, ಕೊಳ್ಳೇಗಾಲ ತಾಲ್ಲೋಕ್
೨೭ ಜೆ. ಎಸ್. ಎಸ್. ಪ್ರೌಢಶಾಲೆ, ದೊಡ್ಡಕಾಡನೂರು, ಹೊಳೆನರಸೀಪುರ ತಾಲ್ಲೋಕ್
೨೮ ಜೆ. ಎಸ್. ಎಸ್. ಪ್ರೌಢಶಾಲೆ, ಗೌಡಹಳ್ಳಿ, ಯಳಂದೂರು ತಾಲ್ಲೋಕ್
೨೯ ಜೆ. ಎಸ್. ಎಸ್. ಬಾಲಕಿಯರ ಪ್ರೌಢಶಾಲೆ, ಯಳಂದೂರು
೩೦ ಶ್ರೀ ಮಹದೇಶ್ವರ ಬಾಲಕಿಯರ ಪ್ರೌಢಶಾಲೆ, ಕಾಮಗೆರೆ, ಕೊಳ್ಳೇಗಾಲ ತಾಲ್ಲೋಕ್

## ಪ್ರಾಥಮಿಕ ಶಾಲೆಗಳು, ಶಿಶುವಿಹಾರಗಳು ಮತ್ತು ಬಾಲಜಗತ್

೩೧ ಜೆ. ಎಸ್. ಎಸ್. ಹಿರಿಯ ಪ್ರಾಥಮಿಕಶಾಲೆ, ರಾಮಾನುಜ ರಸ್ತೆ, ಮೈಸೂರು–೪
೩೨ ಜೆ. ಎಸ್. ಎಸ್. ಹಿರಿಯ ಪ್ರಾಥಮಿಕಶಾಲೆ, ರಾಮಾಪುರ, ಕೊಳ್ಳೇಗಾಲ ತಾಲ್ಲೋಕ್
೩೩ ಜೆ. ಎಸ್. ಎಸ್. ಪ್ರಾಕ್ಟೀಸಿಂಗ್ ಪ್ರೈಮರಿಶಾಲೆ, ಸರಸ್ವತೀಪುರಂ, ಮೈಸೂರು
೩೪ ಜೆ. ಎಸ್. ಎಸ್. ಬಾಲಜಗತ್ ಸರಸ್ವತೀಪುರಂ
೩೫ ಜೆ. ಎಸ್. ಎಸ್. ಬಾಲಜಗತ್ (ಶಿಶುವಿಹಾರ), ಸರಸ್ವತೀಪುರಂ, ಮೈಸೂರು
೩೬ ಜೆ. ಎಸ್. ಎಸ್. ಬಾಲಜಗತ್ (ಶಿಶುಕಲ್ಯಾಣಕೇಂದ್ರ) ರಾಮಾನುಜ ರಸ್ತೆ, ಮೈಸೂರು
೩೭ ಜೆ. ಎಸ್. ಎಸ್. ಓರಿಯಂಟಲ್ ಪ್ರಾಥಮಿಕಶಾಲೆ, ಜಯನಗರ, ಬೆಂಗಳೂರು–೪೧
೩೮ ಜೆ. ಎಸ್. ಎಸ್. ಶಿಶುವಿಹಾರ, ಜಯನಗರ, ಬೆಂಗಳೂರು–೪೧
೩೯ ಜೆ. ಎಸ್. ಎಸ್. ಬಾಲಜಗತ್ (ಶಿಶುವಿಹಾರ) ಕಾಮಗೆರೆ, ಕೊಳ್ಳೇಗಾಲ ತಾಲ್ಲೋಕ್
೪೦ ಜೆ. ಎಸ್. ಎಸ್. ಬಾಲಜಗತ್ (ಶಿಶುವಿಹಾರ) ಹುಲ್ಲಹಳ್ಳಿ, ನಂಜನಗೂಡು ತಾಲ್ಲೋಕ್
೪೧ ಜೆ. ಎಸ್. ಎಸ್. ಪ್ರಾಥಮಿಕಶಾಲೆ, ರಾಮಾನುಜ ರಸ್ತೆ, ಮೈಸೂರು–೪

## ಸಂಸ್ಕೃತ ಪಾಠಶಾಲೆಗಳು ಮತ್ತು ಹಿಂದಿ ವಿದ್ಯಾಲಯ

೪೨ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ವಾಣೀವಿಲಾಸ ರಸ್ತೆ, ಮೈಸೂರು–೪
೪೩ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ಸರಸ್ವತೀಪುರಂ, ಮೈಸೂರು
೪೪ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ಸುತ್ತೂರು, ನಂಜನಗೂಡು ತಾಲ್ಲೋಕ್
೪೫ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ಚಾಮರಾಜನಗರ
೪೬ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ಕೃಷ್ಣರಾಜನಗರ
೪೭ ಜೆ. ಎಸ್. ಎಸ್. ಸಂಸ್ಕೃತ ಪಾಠಶಾಲೆ, ಜಯನಗರ, ಬೆಂಗಳೂರು–೪೧
೪೮ ಜೆ. ಎಸ್. ಎಸ್. ಹಿಂದಿ ವಿದ್ಯಾಲಯ, ಜಯನಗರ, ಬೆಂಗಳೂರು–೪೧

## ಆರೋಗ್ಯ ಕೇಂದ್ರ

೪೯ ಜಗದ್ಗುರು ಶ್ರೀ ಶಿವರಾತ್ರೀಶ್ವರ ಆರೋಗ್ಯ ಕೇಂದ್ರ, ರಾಮಾನುಜ ರಸ್ತೆ, ಮೈಸೂರು–೪

---

'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'

'ಭಗವದ್ಗೀತಾ'

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠದ ಪೋಷಿತ ಸಂಸ್ಥೆಗಳು

ಡಿ. ಎಸ್. ದೇವರಾಜಮೂರ್ತಿ

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕೇವಲ ವ್ಯಕ್ತಿಯಲ್ಲ, ಒಂದು ಶಕ್ತಿ ಎಂಬುದನ್ನು ಅವರು ಸಾಧಿಸಿರುವ ಮಹತ್ಕಾರ್ಯಗಳು ಸಾರುತ್ತಿವೆ. ೧೯೪೦ರಿಂದ ೧೯೫೪ರವರೆವಿಗೆ ಅವರು ಅನ್ನದಾತರಾಗಿ ಸಹಸ್ರಾರು ವಿದ್ಯಾರ್ಥಿಗಳು ನಗರದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆಯಲು ಕಾರಣರಾದರು. ೧೯೫೪ರಿಂದ ಪ್ರಾರಂಭಿಸಿದ ವಿದ್ಯಾಸಂಸ್ಥೆಗಳು ಶಾಖೋಪಶಾಖೆಗಳಾಗಿ ಬೆಳೆದು ಸಹಸ್ರಾರು ವಿದ್ಯಾರ್ಥಿಗಳಿಗೆ ಅವರು ಜ್ಞಾನದಾತರೂ ಆಗಿದ್ದಾರೆ. ಈ ಕಾರ್ಯದಲ್ಲಿ ಮಗ್ನರಾಗಿರುವಂತೆಯೇ ವಿದ್ಯಾರ್ಥಿಗಳಲ್ಲಿ, ಭಕ್ತಾದಿಗಳಲ್ಲಿ ಧಾರ್ಮಿಕ ಪ್ರಜ್ಞೆ, ಸಾಂಸ್ಕೃತಿಕ, ಸಾಹಿತ್ಯಿಕ, ಕಲೆ ಮುಂತಾದ ಬೆಳವಣಿಗೆಯೂ ಅವಶ್ಯವೆಂಬುದನ್ನು ಮನಗಂಡು ಅನೇಕ ಸಂಸ್ಥೆಗಳ ಉದ್ಭವಕ್ಕೆ ಕಾರಣೀಭೂತರಾಗಿದ್ದಾರೆ.

ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ. (ಪ್ರತ್ಯೇಕ ಲೇಖನವಿದೆ) ಶ್ರೀ ಶಿವರಾತ್ರೀಶ್ವರ ಗುರುಕುಲ. ವೀರಶೈವಾಶ್ರಮ, ಜೆ. ಎಸ್. ಎಸ್. ಕಲಾಮಂಟಪ, ಜೆ. ಎಸ್. ಎಸ್. ಕನ್ಸ್ಯೂಮರ್ಸ್ ಸ್ಟೋರ್ಸ್, ಜೆ. ಎಸ್. ಎಸ್. ಬ್ಯಾಂಕಿಂಗ್ ಸೊಸೈಟಿ, ಜೆ. ಎಸ್. ಎಸ್. ಹೌಸ್‌ಬಿಲ್ಡಿಂಗ್ ಸೊಸೈಟಿ; ಜೆ. ಎಸ್. ಎಸ್. ಎಂಟರ್‌ಪ್ರೈಸ್, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ಜಯಂತಿ ಮಹೋತ್ಸವ ಸಮಿತಿ, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಸಮಿತಿ, ಶರಣತತ್ವ ಪ್ರಚಾರ ಸಮಿತಿ, ಹೀಗೆ ಹತ್ತಾರು ಪೋಷಿತ ಸಂಸ್ಥೆಗಳು ಬೆಳೆದು ಬಂದಿವೆ. ನೌಕರವರ್ಗದವರ ಸರ್ವಾಂಗೀಣ ಉನ್ನತಿಗಾಗಿ, ಭಕ್ತಾದಿಗಳ ಸರ್ವ ಪ್ರಗತಿಗಾಗಿ ಇಂತಹ ಸಂಸ್ಥೆಗಳು ಸಹಾಯಕವೆಂಬುದನ್ನು ಅವರು ಮನಗಂಡು ಇವುಗಳ ಬೆಳವಣಿಗೆಗೆ ಇಂಬುಕೊಟ್ಟಿದ್ದಾರೆ.

"ಪವಾಡ"ಗಳ ಹೆಸರು ಕೇಳಿದ್ದೇವೆ. ಪವಾಡಗಳು ಕೆಲವು ನಡೆದುವೆಂಬುದನ್ನು ಓದಿದ್ದೇವೆ. ನಲವತ್ತು ವರ್ಷಗಳಲ್ಲಿ ಜಗದ್ಗುರುಗಳವರು ಸಾಧಿಸಿರುವ ಸಾಧನೆಯು ಪವಾಡಸದೃಶವಾದುದೆಂದು ಕಣ್ಣಾರ ಕಂಡಿದ್ದೇವೆ. ಜ್ಞಾನಾನ್ನದಾಸೋಹಿಗಳಲ್ಲದೆ, ಧಾರ್ಮಿಕ, ಸಾಂಸ್ಕೃತಿಕ. ಸಾಹಿತ್ಯವೇ ಆದಿಯಾಗಿ ಸರ್ವವಿಧ ಬೆಳವಣಿಗೆಗೆ ಎಡೆ ಮಾಡಿಕೊಟ್ಟಿರುವ ಜಗದ್ಗುರುಗಳವರು ತ್ರಿವಿಧ ದಾಸೋಹಿಗಳು. ಅವರು ಹಾಡಿ, ಹರಸಿ ಬೆಳೆಸಿರುವ ಈ ಸಂಸ್ಥೆಗಳು ಹೆಮ್ಮರವಾಗಿ ಫಲನೀಡಿ, ಆದರಡಿ ಬರುವವರಿಗೆ ತಂಪನ್ನು ನೀಡಲೆಂದೇ ನಮ್ಮೆಲ್ಲರ ಬಯಕೆ. ಆ ಸಂಸ್ಥೆಗಳ ಕಿರುಪರಿಚಯವನ್ನಿಲ್ಲಿ ಮಾಡಿಕೊಡಲಾಗಿದೆ.

## ಜೆ. ಎಸ್. ಎಸ್. ಗುರುಕುಲ

ಜಗದ್ಗುರುಗಳವರು ತಮ್ಮ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದಾಗಲೇ, ಅವರು ಕೇವಲ ತಮ್ಮ ಒಬ್ಬರ ಶಿಕ್ಷಣಕ್ಕಾಗಿ ಬಂದವರಲ್ಲ, ತಮ್ಮೊಡನೆ ಬಳಗವನ್ನೇ ಕಟ್ಟಿಕೊಂಡು ಬಂದರು. ಕರ್ನಾಟಕದಲ್ಲಿ ಅನೇಕ ಮಠಗಳುಂಟು. ಪ್ರತಿ ಮಠದ ಅಧಿಪತಿಗಳು ಪ್ರಾಪ್ತ ಶಿಕ್ಷಣ ಪಡೆದು, ತಮ್ಮಂತೆಯೇ ಅವರೂ ಸಮಾಜಕ್ಕೆ ಸೇವೆ ಸಲ್ಲಿಸುವಂತಾಗಬೇಕೆಂಬುದೇ ಜಗದ್ಗುರುಗಳವರ ಉತ್ಕಟೇಚ್ಛೆಯಾಗಿತ್ತು. ಅದಕ್ಕಾಗಿ ಅವರಿಗೆ ವಿಶೇಷ ಪ್ರಸಾದನಿಲಯವೊಂದನ್ನು ಪ್ರಾರಂಭಿಸಿದರು. ಅವರಿಗೆ ವಿಶೇಷ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಮಠಾಧಿಪತಿಗಳಿಗೆ ಅವಶ್ಯವಾದ ಯೋಗ್ಯ ಶಿಕ್ಷಣಕ್ಕಾಗಿ ಅಣಿಗೊಳಿಸಿದರು. ಕರ್ನಾಟಕದ ಹೊರಭಾಗಗಳಿಂದಲೂ ಬಂದು ಶಿಕ್ಷಣ ಪಡೆದು ಹೋದವರಿದ್ದಾರೆ.

ಗುರುಕುಲದಲ್ಲಿ ಸೇರಿದವರಿಗೆ ವಿಶೇಷ ಶಿಕ್ಷಣದ ಜೊತೆಗೆ ಸಾಂಪ್ರದಾಯಿಕ ಶಿಕ್ಷಣಕ್ಕೂ ಅನುಕೂಲ ಮಾಡಿ

ಕೊಟ್ಟರು. ಈ ರೀತಿ ಶಿಕ್ಷಣ ಪಡೆದ ಅನೇಕರು ಸ್ನಾತಕೋತ್ತರ ಪದವಿಯನ್ನೂ ಗಳಿಸಿದ್ದಾರೆ.

ಜಗದ್ಗುರುಗಳವರ ಮೇಲ್ಪಂಕ್ತಿಯನ್ನನುಸರಿಸಿ, ಕೆಲವು ಮಠಾಧೀಶರು ತಾಲ್ಲೋಕ್ ಮಟ್ಟದಲ್ಲಿ ಪ್ರಸಾದ ನಿಲಯಗಳನ್ನು ತೆರೆದು ಆ ಪ್ರಾಂತ್ಯದ ಜನರ ಕಲ್ಯಾಣಕ್ಕೆ ದುಡಿಯುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇವರಿಂದ ಪ್ರಭಾವಿತರಾದ ಇನ್ನೂ ಅನೇಕರು ಸಮಾಜಕಲ್ಯಾಣಕ್ಕಾಗಿ ದುಡಿಯಲಿದ್ದಾರೆ. ಸ್ಪರ್ಶಮಣಿಯಂತೆ ಇರುವ ಜಗದ್ಗುರುಗಳವರು ಇನ್ನೂ ಎಷ್ಟೋ ಜನ ಮಠಾಧೀಶರನ್ನು ತಯಾರುಮಾಡಿ ನೂತನ ಸಮಾಜದ ರಚನೆಗೆ ಕಾರಣರಾಗಲಿದ್ದಾರೆ. ಇಲ್ಲಿ ಶಿಕ್ಷಣ ಪಡೆದವರೂ ಸಹ ಸಮಾಜದ ಋಣವನ್ನು ಮರೆಯಬಾರದೆಂಬುದೇ ಜಗದ್ಗುರುಗಳವರ ಆಕಾಂಕ್ಷೆಯಾಗಿದೆ.

## ಶರಣತತ್ವ ಪ್ರಚಾರ ಸಮಿತಿ

ಈ ಸಮಿತಿಯ ಕಾರ್ಯವು ಶರಣತತ್ವಗಳನ್ನು ಪ್ರಚಾರಗೊಳಿಸುವುದೇ ಆಗಿದೆ. ೧೯೫೪ರ ಮುಂಚೆಯೇ ಜಗದ್ಗುರುಗಳವರು ನಡೆಸುತ್ತಿದ್ದ ಪ್ರಸಾದನಿಲಯಗಳಲ್ಲಿ ಮಾಸಿಕ ಕಾರ್ಯಕ್ರಮಗಳ ಮುಖಾಂತರ ಈ ತತ್ವಪ್ರಚಾರದ ಕಾರ್ಯಗಳು ನೆರವೇರುತ್ತಿದ್ದವು. ೧೯೫೪ರ ನಂತರ ಈ ಕಾರ್ಯವು ಹೊಸರೂಪ ತಾಳಿತು. ಪ್ರತಿಮಾಸ ಶಿವರಾತ್ರಿಯಂದು ಶರಣರ ಬಗ್ಗೆ, ಶರಣತತ್ವದ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು, ಸಾಮೂಹಿಕ ಪ್ರಾರ್ಥನೆ, ಭಜನೆಗಳನ್ನು ಏರ್ಪಡಿಸುವುದು ಇತ್ಯಾದಿ ಕಾರ್ಯಕ್ರಮಗಳ ಮುಖಾಂತರ ಈ ಸಮಿತಿಯ ಚಟುವಟಿಕೆಗಳು ನಡೆಯುತ್ತಿವೆ. ಅನೇಕ ಭಕ್ತಾದಿಗಳು ಮುಂದೆ ಬಂದು ಒಂದೊಂದು ದಿನದ ಸೇವಾಕಾರ್ಯವನ್ನು ವಹಿಸಿಕೊಂಡು ಅಂದಿನ ಕಾರ್ಯಕ್ರಮದ ಖರ್ಚು-ವೆಚ್ಚಗಳನ್ನು ಭರಿಸುತ್ತಿದ್ದಾರೆ. ಸ್ಫೂರ್ತಿದಾಯಕವಾಗಿರುವ ಈ ಚಟುವಟಿಕೆಯಿಂದ ಜ್ಞಾನ, ಭಕ್ತಿಯ ಬೆಳವಣಿಗೆಯಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಈ ಸಮಿತಿಯ ಕಾರ್ಯವನ್ನು ಇನ್ನೂ ವಿಸ್ತಾರಗೊಳಿಸಿ, ಸಾರ್ವಜನಿಕರಿಗೂ ವಿಸ್ತರಿಸುವ ಆಲೋಚನೆ ಇದೆ. ಉನ್ನತಾದರ್ಶಗಳನ್ನು ಹೊಂದಿ, ಬಾಳಿ-ಬದುಕಿದ ಅನೇಕ ಶಿವಶರಣರ ತತ್ವಚಿಂತನೆಗಳು ಸಾರ್ವಜನಿಕ ಜೀವನದಲ್ಲಿ ಪರಿಣಾಮ ಉಂಟುಮಾಡಿ ಸಮಾಜ ಸುಧಾರಣೆಗೆ ಕಾರಣವಾಗುವುದೆಂಬ ಅಭಿಪ್ರಾಯಪಟ್ಟು, ಈ ಸಮಿತಿಯು ನೂತನ ವಿಧಾನಗಳನ್ನು ಬಳಕೆಗೆ ತರುವ ಆಲೋಚನೆಯು ಕಾರ್ಯರೂಪಕ್ಕೆ ಬರಲು ವಿಳಂಬವಾಗಲಾರದು.

ಶ್ರಾವಣಮಾಸದಲ್ಲಿ ಒಂದು ಮಾಸಪೂರ್ತಿ ಉಪನ್ಯಾಸ, ಶಿವಕಥೆ, ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳಿದ್ದು ಆ ಕಾರ್ಯಕ್ರಮದಲ್ಲಿ ಸಹಸ್ರಾರು ಭಕ್ತಾದಿಗಳು, ವಿದ್ಯಾರ್ಥಿವೃಂದದವರು ಭಾಗವಹಿಸಿ ತತ್ಪರಿಣಾಮವಾಗಿ ಪ್ರಭಾವಿತರಾಗುತ್ತಿದ್ದಾರೆ.

ಇದಲ್ಲದೆ ಹೊರಗಿನಿಂದ ಬರುವ ಉನ್ನತ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು. ದೊರೆಯುವ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ಅದರ ಫಲವನ್ನು ವಿದ್ಯಾರ್ಥಿಗಳು, ಭಕ್ತಾದಿಗಳು ಅನುಭವಿಸಲು ಅವಕಾಶ ಮಾಡಿಕೊಡಲಾಗುತ್ತಿದೆ.

## ಜೆ. ಎಸ್. ಎಸ್. ಕನ್ಸ್ಯೂಮರ್ಸ್ ಕೋ ಆಪರೇಟಿವ್ ಸ್ಟೋರ್ಸ್ (ಲಿ) ಮೈಸೂರು

ಈ ಮೊಹಲ್ಲಾದ ನಿವಾಸಿಗಳ ಅನುಕೂಲಕ್ಕಾಗಿ ತಾ॥ ೧೧-೩-೧೯೬೩ರಲ್ಲಿ ಈ ಒಂದು ಸ್ಟೋರ್ಸ್‌ನ್ನು ಪ್ರಾರಂಭಿಸಲಾಯಿತು. ಇಲ್ಲಿ A, B ಎಂಬ ಎರಡು ಷೇರುಗಳಿವೆ. ೧೦.ರೂ.ಗಳ ವೈಯಕ್ತಿಕ ಷೇರು A ವಿಭಾಗದ್ದು, B ಷೇರು ೧೦ ರೂ.ಗಳದ್ದು ಸರ್ಕಾರಿ ಷೇರು ಆಗಿರುತ್ತದೆ. ಒಂದು ಲಕ್ಷ ರೂಗಳು ಷೇರು ಬಂಡವಾಳವನ್ನು ಈ ಸಂಸ್ಥೆ ಹೊಂದಿರಬಹುದಾಗಿದೆ. ಪ್ರಸ್ತುತ ೫೬೫ ಷೇರುದಾರರಿದ್ದಾರೆ. ಷೇರು ಹಣ ೮೯೫೦ ರೂ.ಗಳು ವೈಯಕ್ತಿಕವಾಗಿದ್ದು, ಸರ್ಕಾರದ ವತಿಯಿಂದ ೮೯೦೦ ರೂ.ಗಳ ಷೇರು ಹಣವಿರುತ್ತೆ.

ಈ ಸಂಸ್ಥೆಯ ಸದಸ್ಯರಿಗೆ ಮತ್ತು ದಿನಬಳಕೆ ಗ್ರಾಹಕರಿಗೆ ನಿತ್ಯಬಳಕೆಯ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಸೀಮೆಎಣ್ಣೆ, ಸಕ್ಕರೆಗೆ ಅಭಾವವುಂಟಾದ ಕಾಲದಲ್ಲೂ ಗ್ರಾಹಕರಿಗೆ ದೊರೆಯಬೇಕಾದ ವಸ್ತುಗಳನ್ನು ಒದಗಿಸಿಕೊಡಲಾಗಿದೆ. ಈ ಸಂಸ್ಥೆಯ ಸೇವಾಕಾರ್ಯವನ್ನು ಗ್ರಾಹಕರು ಮೆಚ್ಚಿಕೊಂಡಿರುತ್ತಾರೆ.

ಈ ಸಂಸ್ಥೆಯ ಕಾರ್ಯದಲ್ಲಿ ಹೆಚ್ಚು ಒತ್ತಡ ಉಂಟಾದ ಕಾರಣ ಕಾರ್ಯವನ್ನು ಇನ್ನೂ ಉತ್ತಮಪಡಿಸುವ ಸಲುವಾಗಿ ಬಸವೇಶ್ವರ ರಸ್ತೆಯಲ್ಲಿ ಒಂದು ಶಾಖೆಯನ್ನು ಪ್ರಾರಂಭಿಸಲಾಯಿತು. ಈ ಶಾಖೆಯಲ್ಲಿನ ಬಳಕೆದಾರರ

ಸಂಖ್ಯೆ ೧೮೦೦ ಇರುತ್ತದೆ. ಈ ಎರಡೂ ಕಡೆ ಉತ್ತಮ ಸೇವೆಯನ್ನು ಈ ಸಂಸ್ಥೆ ಸಲ್ಲಿಸುತ್ತಾ ಬಂದಿದ್ದು, ತನ್ನ ಸೇವಾಕ್ಷೇತ್ರವನ್ನು ವಿಸ್ತಾರಗೊಳಿಸುವ ಯೋಜನೆ ಈ ಸಂಸ್ಥೆಯ ಮುಂದಿದೆ.

### ಜೆ. ಎಸ್. ಎಸ್. ಕನ್ಸ್ಯೂಮರ್ಸ್ ಕೋ ಆಪರೇಟಿವ್ ಸೊಸೈಟಿ (ಮಹಿಳೆಯರಿಗಾಗಿ), ಸರಸ್ವತೀಪುರಂ, ಮೈಸೂರು

ಈ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರಿಗಾಗಿ ೧೯೬೮ರಲ್ಲಿ ಸರಸ್ವತೀಪುರಂನಲ್ಲಿ ಜೆ. ಎಸ್. ಎಸ್. ಮಹಿಳೆಯರ ಕನ್ಸ್ಯೂಮರ್ಸ್ ಕೋ-ಆಪರೇಟಿವ್ ಸ್ಟೋರ್ಸ್‌ನ್ನು ಪ್ರಾರಂಭಿಸಲಾಯಿತು. ಇಲ್ಲಿ ೨೦೦ ಜನ ಸದಸ್ಯೆಯರಿರುತ್ತಾರೆ. ಸದಸ್ಯೆಯರಿಂದ ಬಂದ ತಲಾ ೧೦ ರೂ. ಷೇರಿನಂತೆ ೨೦೦೦ರೂ.ಗಳು ಷೇರು ಬಂಡವಾಳ ಮತ್ತು ಸರ್ಕಾರದ ವತಿಯಿಂದ ಬಂದಿರುವ ೪೦೦೦ ರೂ. ಸೇರಿ ಒಟ್ಟು ೬೦೦೦ ರೂಗಳು ಷೇರು ಬಂಡವಾಳವಿರುತ್ತದೆ.

ಇಲ್ಲಿ ೭ ಜನ ಡೈರೆಕ್ಟರ್‌ರವರು, ಒಬ್ಬರು ಗೌರವ ಕಾರ್ಯದರ್ಶಿ, ಒಬ್ಬರು ಅಧ್ಯಕ್ಷರು ಒಟ್ಟು ೯ ಜನರು ಆಡಳಿತ ಮಂಡಲಿಯಲ್ಲಿದ್ದಾರೆ. ಸೇಲ್ಸ್‌ಗರ್ಲ್ ಒಬ್ಬಳು ಪೂರ್ಣಾವಧಿಯ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾಳೆ. ಸರಸ್ವತೀಪುರಂನಲ್ಲಿ ಜೆ. ಎಸ್. ಎಸ್. ವಿದ್ಯಾಸಂಸ್ಥೆಗಳು ಅನೇಕವಿದ್ದು ಶಾಲಾಸಮಯದಲ್ಲೇ ಈ ಸೊಸೈಟಿಯು ಕಾರ್ಯ ನಿರ್ವಹಿಸುತ್ತಿದ್ದು, ಅಲ್ಲಿನ ಮಕ್ಕಳಿಗೆ ಹಾಗೂ ಶಿಕ್ಷಕ ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸುತ್ತಾ ಬಂದಿದೆ.

ಕಂಟ್ರೋಲ್ ಬಟ್ಟೆ. ಮಕ್ಕಳ ಸಮವಸ್ತ್ರ, ಅವರಿಗೆ ಉಪಯುಕ್ತ ಪುಸ್ತಕಗಳು, ಲೇಖನಿಗಳು ಇತ್ಯಾದಿಗಳನ್ನು ಮಾರಾಟ ಮಾಡಲಾಗುವುದು. ಶಿಕ್ಷಕರಿಗೆ ಕಂತಿನ ಮೂಲಕ ಬಟ್ಟೆಗಳನ್ನು ಒದಗಿಸಲಾಗುತ್ತಿದೆ. ನಷ್ಟವಿಲ್ಲದೆ ಹಾಗೂ ಹೆಚ್ಚು ಲಾಭವಿಲ್ಲದೆ ಈ ಸೊಸೈಟಿಯು ಸೇವೆ ಸಲ್ಲಿಸಿಕೊಂಡು ಬರುತ್ತಿದೆ.

### ಜೆ. ಎಸ್. ಎಸ್. ಕೋ-ಆಪರೇಟಿವ್ (ಬ್ಯಾಂಕಿಂಗ್) ಸೊಸೈಟಿ (ಲಿ.) ಮೈಸೂರು

ಈ ಸಂಸ್ಥೆಯು ಜೆ. ಎಸ್. ಎಸ್. ಮಹಾವಿದ್ಯಾಪೀಠದ ನೌಕರರಿಗೆ ಬ್ಯಾಂಕಿಂಗ್ ಸೌಲಭ್ಯ ಒದಗಿಸಿಕೊಡಲು ತಾ॥ ೨೯-೪-೧೯೫೫ರಲ್ಲಿ ಪ್ರಾರಂಭವಾಯಿತು. ವಿದ್ಯಾಪೀಠದ ಆಶ್ರಯದಲ್ಲೇ ನಡೆಸುತ್ತಿರುವ ಈ ಸಂಸ್ಥೆಯಲ್ಲಿಂದು ೪೦೦ ಜನರು ಸದಸ್ಯರಿದ್ದಾರೆ. A, B, C ಎಂಬ ಮೂರು ರೀತಿಯ ಸದಸ್ಯತ್ವವಿರುವ ಈ ಸಂಸ್ಥೆಯಲ್ಲಿ ೧೦ರೂ, ೫ರೂ ಮತ್ತು ೧೦೦ರೂಗಳ ಷೇರುದಾರರಿದ್ದಾರೆ. ಒಟ್ಟು ೬೦೦೦ರೂಗಳ ಷೇರು ಹಣವಿರುವ ಈ ಸಂಸ್ಥೆಯಿಂದ ಒಟ್ಟು ೫೦,೦೦೦ರೂ. ಗಳ ಸಾಲವನ್ನು ಒದಗಿಸಲಾಗಿದೆ. ೧೦೦ರೂ. ಗಳಿಂದ ೫೦೦ ರೂ.ಗಳವರೆಗೆ ವೈಯಕ್ತಿಕ ಸಾಲ ಒದಗಿಸಲಾಗುವುದು.

ಈ ಸೊಸೈಟಿಯ ಪ್ರಯೋಜನವನ್ನು ಇಲ್ಲಿನ ಸದಸ್ಯರು ಪಡೆದುಕೊಂಡಿದ್ದಾರೆ. ಈ ಸೊಸೈಟಿಯು ಇನ್ನೂ ಶ್ರೇಯೋಭಿವೃದ್ಧಿಗೆ ಬರಲಿದೆ.

### ಜೆ. ಎಸ್. ಎಸ್. ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ, ಮೈಸೂರು

ಜೆ. ಎಸ್. ಎಸ್. ಮಹಾವಿದ್ಯಾಪೀಠದ ನೌಕರ ವರ್ಗದವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವ ಉದ್ದೇಶದಿಂದ ಈ ಸಂಸ್ಥೆಯು ೧೯೭೫ರಲ್ಲಿ ಪ್ರಾರಂಭಗೊಂಡಿತು. ಈ ಸಂಸ್ಥೆಯಲ್ಲಿ ಈಗ ಒಟ್ಟು ೧೫೦ ಜನ ಸದಸ್ಯರಿದ್ದಾರೆ. ೯೦೦೦ ರೂ.ಗಳ ಷೇರು ಹಣವಿರುವ ಈ ಸಂಸ್ಥೆಯಿಂದ ಮನೆ ರಿಪೇರಿ, ಮನೆಯನ್ನು ವಿಸ್ತರಿಸುವ ಕಾರ್ಯಕ್ರಮಗಳಿಗಾಗಿ ಸುಲಭ ಕಂತಿನ, ಕಡಿಮೆ ಬಡ್ಡಿಯ ದರದಲ್ಲಿ ಸದ್ಯಕ್ಕೆ ಸಾಲ ಒದಗಿಸಲಾಗುತ್ತಿದೆ.

ಮನೆ ಕೊಂಡುಕೊಳ್ಳಲು, ಕಟ್ಟಿಸಲು, ಸೈಟು ಕೊಳ್ಳಲು ಪೂರ್ಣ ಪ್ರಮಾಣದಲ್ಲಿ ಸಾಲ ಒದಗಿಸಿಕೊಡಲು ಈ ಸಂಸ್ಥೆ ಉದ್ದೇಶಿಸಿದೆ. ಇನ್ನೂ ಬೆಳೆಯುತ್ತಿರುವ ಈ ಸಂಸ್ಥೆಗೆ ಉತ್ತೇಜನ ದೊರೆಯಬೇಕಾಗಿದ್ದು, ಬೆಳವಣಿಗೆಯ ಸ್ಥಿತಿಯಲ್ಲಿದೆ.

### ಜೆ. ಎಸ್. ಎಸ್. ಕಲಾಮಂಟಪ, ಮೈಸೂರು

ಇದೇ ಸಂಸ್ಥೆಯಲ್ಲಿ ಕೆಲಸಮಾಡುತ್ತಿರುವ ಕಲಾವಿದರುಗಳು ಬಹು ಸಂಖ್ಯೆಯಲ್ಲಿದ್ದಾರೆ. ಅವರಿಗೆ ಉತ್ತೇಜನ ನೀಡುವ ಸಲುವಾಗಿ "ಜೆ. ಎಸ್. ಎಸ್. ಕಲಾಮಂಟಪ"ವು ೧೯೪೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಕಲಾಮಂಟಪದವರ ಸಾಧನೆಯು ಗಣನೀಯವಾಗಿದೆ.

"ಆದರ್ಶವಿವಾಹ, ಕಂಬಳಿನಾಗಿದೇವ, ಶಿವರಾತ್ರೀಶ್ವರ ವಿಜಯ, ಕರುಳಿನ ಸೆಳೆತ, ಭೂಮಿಲಿಕ್ಮತ್ತು ಸ್ವರ್ಗದಲ್ಲಿ ಕ್ಯಾನ್ವಾಸ್, ಸತ್ಯಾಗ—ಈ ನಾಟಕಗಳು ಜೆ. ಎಸ್. ಎಸ್. ಕಲಾಮಂಟಪದವರೇ ಅಭಿನಯಿಸುವ ನಾಟಕಗಳಾಗಿವೆ. ಆದರ್ಶಗಳನ್ನು ಸಾರುವ ಈ ನಾಟಕಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಮೈಸೂರು ನಗರದಲ್ಲಿ ನಡೆದ ಲಲಿತಕಲಾ ಆಕಡೆಮಿ ಮಹೋತ್ಸವದಲ್ಲಿ ಪ್ರಥಮ ಬಹುಮಾನ ಮತ್ತು ಪಾರಿತೋಷಕಗಳನ್ನು ಅಂದಿನ ರಾಜ್ಯಪಾಲರಾದ ಶ್ರೀ ಧರ್ಮವೀರರವರು ಈ ಸಂಸ್ಥೆಗೆ ನೀಡಿರುವುದು ಒಂದು ಮಹತ್ವದ ಸಂಗತಿಯಾಗಿದೆ. ನಾಟಕ ಅಕೆಡೆಮಿಯಲ್ಲಿ ಎರಡನೇ ಬಹುಮಾನ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ, ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಅನೇಕ ಬಾರಿ ಉತ್ತಮ ನಾಟಕಗಳನ್ನು ಪ್ರದರ್ಶಿಸಿ ಬಹುಮಾನ ಗಳಿಸಿರುವುದು ಈ ಸಂಸ್ಥೆಯ ದಾಖಲೆಗಳಾಗಿವೆ. ಚಾಮರಾಜನಗರ, ಮಡಿಕೇರಿ, ಕುದೇರು, ಬಂಡಳ್ಳಿ, ದೊಡ್ಡಕಾಡನೂರು, ಹುಬ್ಬಳ್ಳಿ, ಸಿರಿಗೆರೆಗಳಲ್ಲಿ ಈ ತಂಡದವರು ನಾಟಕಗಳನ್ನಾಡಿ ಪ್ರಶಂಸೆ ಗಳಿಸಿದ್ದಾರೆ. ಬೆಂಗಳೂರಿನ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ನಾಟಕವಾಡಿ ಬೆಂಗಳೂರಿನ ಜನತೆಗೆ ಮನರಂಜನೆ ನೀಡಿದ್ದಾರೆ.

ಇದಲ್ಲದೆ ಅನೇಕ ಸಂಸ್ಥೆಗಳ ಅಭಿವೃದ್ಧಿಗಾಗಿ ಸಹಾಯಾರ್ಥ ಪ್ರದರ್ಶನಗಳನ್ನು ನಡೆಸಿಕೊಟ್ಟಿದ್ದಾರೆ. ಜೆ. ಎಸ್. ಎಸ್. ಪ್ರೌಢಶಾಲೆ ಬಂಡಳ್ಳಿ ಮತ್ತು ದೊಡ್ಡಕಾಡನೂರು ಇವು ಇದಕ್ಕೆ ಉದಾಹರಣೆಗಳಾಗಿವೆ.

ಸ್ವತಃ ನಾಟಕ ಕರ್ತೃಗಳಾಗಿ, ಅನೇಕ ನಾಟಕಗಳನ್ನು ಬರೆದಿರುವ ನಾಟಕ ಕಲಾರತ್ನ ಶ್ರೀ ಸಿ. ಅಂಕಪ್ಪನವರು ಈ ಕಲಾಮಂಟಪದ ಬೆನ್ನೆಲುಬಾಗಿದ್ದಾರೆ. ಕಲಾವಿದರಿಗೆ ಉತ್ಸಾಹ ತುಂಬಿ, ಅವರಲ್ಲಿರುವ ಪ್ರತಿಭೆಯನ್ನು ಅರಳಿಸಿ, ಜನ ಮೆಚ್ಚುವಂತೆ ಮಾಡಿದ್ದಾರೆ.

## ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಮಿತಿ

ಧರೆಯನ್ನು ಪಾವನಗೊಳಿಸಲು ಮಹಾತ್ಮರು ಉದಯಿಸುವರು. ಗಂಗರಸರ, ಮೈಸೂರು ರಾಜರುಗಳ ರಾಜಗುರುಗಳಾಗಿ ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಮೆರೆದು, ಅಜ್ಞಾನದಿಂದ ಜ್ಞಾನದ ಕಡೆಗೆ ಜನತೆಯನ್ನು ಕೊಂಡೊಯ್ದು ಮಹಾಮಹಿಮರಾಗಿದ್ದಾರೆ. ಅವರ ಸ್ಮರಣೆ, ಅವರು ತೋರಿದ ಪಥವನ್ನು ಅನುಸರಿಸುವುದು ಮುಕ್ತಿಮಾರ್ಗವೇ ಸರಿ. ಇವರು ಸಾರಿದ ತತ್ವ, ಇವರಿತ್ತ ಬೋಧನೆಗಳು ಮಾನವನನ್ನು ದೇವನನ್ನಾಗಿಸಲು ಸಾಧಕಗಳಾಗಿವೆ. ಈ ಮಹಾಮಹಿಮರನ್ನು ನೆನೆಯುವುದು ನಮ್ಮ ಕರ್ತವ್ಯ.

ಪ್ರತಿವರ್ಷ ಮಾರ್ಗಶಿರ ಮಾಸದಲ್ಲಿ ಬರುವ ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತಿ ಕಾರ್ಯಕ್ರಮವು ಸ್ಮರಣೀಯವಾಗಿದೆ. ವರ್ಷೇವರ್ಷೇ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪುಗೊಳಿಸಿ ಧಾರ್ಮಿಕ ಚಿಂತನೆಗೆ ಅವಕಾಶ ಮಾಡಿಕೊಡಲಾಗುವುದು. ಜೆ. ಎಸ್. ಎಸ್. ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳೆಲ್ಲ ಇದರಲ್ಲಿ ಭಾಗಿಗಳು. ಅಗಣಿತ ಜನಸ್ತೋಮವು ಈ ಸಾಪ್ತಾಹಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಧಾರ್ಮಿಕಚಿಂತನೆಗೊಳಗಾಗುತ್ತಿರುವುದು ಪ್ರತಿ ವರ್ಷದ ಚಿತ್ರ.

ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾದ ಡಾ. ಶ್ರೀ ರಾಜೇಂದ್ರ ಪ್ರಸಾದ್‌ರವರು ಇಂತಹ ಕಾರ್ಯಕ್ರಮದಲ್ಲಿ ಒಮ್ಮೆ ಭಾಗಿಗಳಾಗಿದ್ದರು. ಉಡುಪಿ, ಧರ್ಮಸ್ಥಳ, ಆದಿಚುಂಚನಗಿರಿ, ಶ್ರವಣಬೆಳಗೊಳ, ಸಿದ್ಧಗಂಗೆ, ಸಿರಿಗರೆ, ಹುಬ್ಬಳ್ಳಿಯ ಮೂರುಸಾವಿರ ಮಠ, ಚಿತ್ರದುರ್ಗದ ಶ್ರೀಮುರುಘರಾಜೇಂದ್ರ ಮಠ-ಇತ್ಯಾದಿ ಸ್ಥಳಗಳ ಮಠಾಧೀಶರು ಈ ಜಯಂತಿ ಉತ್ಸವದಲ್ಲಿ ಪಾಲ್ಗೊಂಡು ಭಕ್ತಾದಿಗಳ ಧಾರ್ಮಿಕ ಚಿಂತನೆಗೆ ಪುಷ್ಟಿಕೊಟ್ಟಿರುತ್ತಾರೆ. ಹಿಂದೂ, ಜೈನ, ಬೌದ್ಧ, ಮುಸಲ್ಮಾನ, ಕ್ರಿಶ್ಚಿಯನ್ ಧರ್ಮೀಯರು ಸಮಾನವೇದಿಕೆ ಪಡೆದು ಆಯಾ ಧರ್ಮಗಳ ಸಾರವನ್ನು ಜನರಿಗುಣಿಸಿದ್ದಾರೆ. ಮಹಿಳೆಯರಿಗೂ ಪ್ರಾಶಸ್ತ್ಯ ನೀಡಿ ಮಹಿಳಾ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ಜಾನಪದಕ್ಕೂ ವಿಶೇಷ ಗೌರವ ನೀಡಿ ಜಾನಪದ ಕಲಾವಿದರು ಈ ಸಂಭ್ರಮದಲ್ಲಿ ಭಾಗಿಗಳಾಗಿದ್ದಾರೆ. ಅನೇಕ ವಿದ್ವನ್ಮಣಿಗಳು ಈ ಸಂದರ್ಭದಲ್ಲಿ ಭಾಗಿಗಳಾಗಿ ಭಕ್ತಾದಿಗಳಿಗೆ ಜ್ಞಾನಧಾರೆಯನ್ನು ಎರೆದಿದ್ದಾರೆ.

ಉಪನ್ಯಾಸ, ಪ್ರಾರ್ಥನೆ, ಭಜನೆ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂಭ್ರಮದ ವಿವಿಧ ಚಟುವಟಿಕೆಗಳಾಗಿದ್ದು, ಜೆ. ಎಸ್. ಎಸ್. ವಿದ್ಯಾಸಂಸ್ಥೆಗಳ ನೌಕರ ವರ್ಗದವರಿಗೆ, ವಿದ್ಯಾರ್ಥಿ ವೃಂದಕ್ಕೆ ಈ ಜಯಂತಿ ಆಚರಣೆಯು ಹಬ್ಬದಾಚರಣೆಯಂತೆ ಪ್ರಭಾವ ಬೀರಿದೆ. ತಮ್ಮ ತಮ್ಮ ಪಾಲಿನ ಕರ್ತವ್ಯದಲ್ಲಿ ನಿಷ್ಠರಾಗಿ ಈ ಜಯಂತ್ಯುತ್ಸವದಲ್ಲಿ ಭಾಗಿಗಳಾಗುತ್ತಿರುವ ವಿದ್ಯಾಸಂಸ್ಥೆಗಳು, ಭಕ್ತಾದಿಗಳು ಉತ್ಸಾಹಶೀಲರಾಗಿರುವುದನ್ನು ಕಾಣುವುದು

ಅಪೂರ್ವ ದೃಶ್ಯವಾಗಿದೆ. ಇದೊಂದು ನಿರಂತರ ಕಾರ್ಯಕ್ರಮವಾಗಿದ್ದು, ವರ್ಷ-ವರ್ಷಕ್ಕೆ ವೈವಿಧ್ಯಮಯವಾಗಿ ಆಚರಿಸುತ್ತಿರುವುದೇ ಶ್ರೀ ಶಿವರಾತ್ರೀಶ್ವರರ ಪ್ರೇರಣೆಯಾಗಿರುತ್ತದೆ.

## ಜೆ. ಎಸ್. ಎಸ್. ಹಿರಿಯ ವಿದ್ಯಾರ್ಥಿ ಸಂಘ, ಮೈಸೂರು

ಸುಮಾರು ೧೯೪೦ರಿಂದ ೧೯೫೪ರ ವರೆವಿಗೆ ಪಟ್ಟಣಕ್ಕೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳ ಬವಣೆ ಅರಿತು, ಅವರಿಗಾಗಿ ಪ್ರಸಾದನಿಲಯಗಳನ್ನು ತೆರೆದು, ಅವರ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡುವ ಆಶಯವೇ ಜಗದ್ಗುರುಗಳವರ ಚಿತ್ತದಲ್ಲಿತ್ತು. ಹೆಚ್ಚು ಹೆಚ್ಚು ವಿದ್ಯಾರ್ಥಿಗಳೂ ಬರತೊಡಗಿದರು. ಒಂದಲ್ಲ, ನಾಲ್ಕಾರು ಕಡೆ ವಿದ್ಯಾರ್ಥಿನಿಲಯಗಳನ್ನು ನಡೆಸಿದರು. ವಾಣೀವಿಲಾಸ ರಸ್ತೆಯ ಮುಖ್ಯ ಕಟ್ಟಡ, ಬನ್ನಿಮಂಟಪ, ಲಕ್ಷ್ಮೀಪುರಂನ ಕೆಂಪು ಕಟ್ಟಡ, ಕ್ಯಾತನಹಳ್ಳಿ ಪಾಠಶಾಲೆ, ಆನೆಕರವಟ್ಟಿ ಎಲ್ಲಾ ವಿದ್ಯಾರ್ಥಿಗಳಿಂದ ತುಂಬಿತುಳುಕಿತು.

ವಿದ್ಯಾರ್ಥಿನಿಲಯಗಳೊಡನೆ, ವಿದ್ಯಾಸಂಸ್ಥೆಯನ್ನೂ ಪ್ರಾರಂಭಿಸಲು ಭಕ್ತಾದಿಗಳ ಒತ್ತಡ ಬಂದು ೧೯೫೪ರಿಂದ ಪ್ರಾರಂಭವಾದ ಪ್ರೌಢಶಾಲೆಯಿಂದ ಇಲ್ಲಿಯವರೆಗೆ ಬೆಳೆದಿರುವ ವಿದ್ಯಾಸಂಸ್ಥೆಗಳು ೪೦ರ ಗೆರೆ ದಾಟಿವೆ. ಪ್ರಸಾದ ನಿಲಯದ ವಿದ್ಯಾರ್ಥಿಯೇ ಆಗಲಿ, ವಿದ್ಯಾಸಂಸ್ಥೆಯ ವಿದ್ಯಾರ್ಥಿಯಾಗಲಿ ಅವನು ಈ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಲ್ಲೊಬ್ಬ. ಈ ಸಂಸ್ಥೆ ತನಗಿತ್ತ ಅವಕಾಶದಿಂದ ಅವನು ಯಾವ ಮಟ್ಟ ಮುಟ್ಟಲು ಸಾಧ್ಯವಾಗಿದೆಯೋ ಅದಕ್ಕವನು ಋಣಿ. ಇದನ್ನರಿತ ಹಿರಿಯ ವಿದ್ಯಾರ್ಥಿಗಳೊಮ್ಮೆ ಸೇರಿ "ಹಿರಿಯ ವಿದ್ಯಾರ್ಥಿಸಂಘ"ಕ್ಕೆ ಅನುವುಮಾಡಿದರು. ಇಂದು ದೇಶದ, ರಾಷ್ಟ್ರದ ನಾನಾ ಮೂಲೆಯಲ್ಲಿ ಈ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ವೈದ್ಯಕೀಯ, ಇಂಜಿನಿಯರಿಂಗ್ ಪದವಿ ಪಡೆದವರು ಅನ್ಯರಾಷ್ಟ್ರಗಳಲ್ಲಿಯೂ ಇದ್ದಾರೆ.

ಹಿರಿಯ ವಿದ್ಯಾರ್ಥಿಗಳ ಒಕ್ಕೂಟ, ಅವರು ಮೈಸೂರಿಗೆ ಬಂದಾಗ ಅವರಿಗಾಗಿ ಅಶನ-ವಸತಿ ಸೌಲಭ್ಯ ಕಲ್ಪಿಸಿಕೊಡುವ ಸಲುವಾಗಿ ಪ್ರತ್ಯೇಕ ಕಟ್ಟಡವನ್ನು ಹೊಂದುವ ಗುರಿ, ಸಾಹಿತಿಗಳು, ವಿಜ್ಞಾನಿಗಳೇ ಆದಿಯಾಗಿ ರೂಪುಗೊಂಡಿರುವ, ರೂಪುಗೊಳ್ಳಲಿರುವವರಿಗೆ ಪುರಸ್ಕಾರ, ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ-ಇತ್ಯಾದಿ ಹತ್ತಾರು ಉತ್ತಮ ಗುರಿ ಹೊಂದಿರುವ ಈ ಹಿರಿಯ ವಿದ್ಯಾರ್ಥಿಸಂಘದಲ್ಲಿಂದು ಸಹಸ್ರಾರು ಸದಸ್ಯರಿದ್ದಾರೆ. ಸಮಾಜ, ಸರ್ಕಾರಗಳು ಮಾಡಲಾರದ ಅತ್ಯುನ್ನತ ಸೇವೆಯನ್ನು ಜಗದ್ಗುರುಗಳವರು ಒಬ್ಬರು ಟೊಂಕಕಟ್ಟಿ ಮಾಡಿದ್ದಾರೆ. ಅವರ ಆದರ್ಶಗಳನ್ನು ಈ ಸಂಘವು ಮನವರಿಕೆ ಮಾಡಿಕೊಂಡು, ಸಮಾಜದ ಏಳಿಗೆಗೆ ದುಡಿಯಬೇಕೆಂದು ಮುಂದೆ ಬಂದಿದೆ. ಜಗದ್ಗುರುಗಳವರ ಆಶೀರ್ವಾದವೂ ಇದೆ.

ಈ ಸಂಘದ ಉನ್ನತಾದರ್ಶಗಳು ಮಣ್ಣುಪಾಲಾಗದೆ, ಕ್ರಾಂತಿಕಾರಿ ಬದಲಾವಣೆಗೆ ಸಹಕಾರಿಯಾಗಲೆಂದು ಹಿರಿಯ ವಿದ್ಯಾರ್ಥಿಗಳಲ್ಲಿ ಅನೇಕರು ಮುಂದೆ ಬಂದಿದ್ದಾರೆ. ಅವರ ಸಮರ್ಪಣಾ ಮನೋಭಾವ, ಅವರ ಹಿಂದೆಗೆಯದ ಪ್ರಯತ್ನಗಳಿಂದ ಈ ಆದರ್ಶಗಳು ಸಾಫಲ್ಯ ಪಡೆಯಲೆಂದು ಎಲ್ಲರ ಹಾರೈಕೆಯಾಗಿದೆ.

## ಜೆ. ಎಸ್. ಎಸ್. ವೀರಶೈವಾಶ್ರಮ, ಉದಕಮಂಡಲ

ನೀಲಗಿರಿಯು ಪ್ರಸಿದ್ಧ ರಮ್ಯಸ್ಥಳವಾಗಿದೆ. ಇಲ್ಲಿನ ಭಕ್ತಾದಿಗಳು ಜಗದ್ಗುರುಗಳವರನ್ನು ಬರಮಾಡಿಕೊಂಡು ನಾಲ್ಕುಸಾವಿರಕ್ಕೂ ಮೀರಿದ ವೀರಶೈವರ ಒಳಿತಿಗಾಗಿ "ವೀರಶೈವಾಶ್ರಮ"ವನ್ನು ಸ್ಥಾಪಿಸಬೇಕೆಂದು ಬೇಡಿದರು. "ರಾಕ್‌ಲ್ಯಾಂಡ್ಸ್"-ಊಟಿಯು ಈ ಆಶ್ರಮಕ್ಕೆ ತಾಣವಾಯಿತು. ವೀರಶೈವರ ಇತಿಹಾಸ, ಪರಂಪರೆ, ಸಂಸ್ಕೃತಿಯೇ ಮೊದಲಾದುವುಗಳ ಬಗ್ಗೆ ಅಲ್ಲಿನ ಜನತೆಗೆ ಪರಿಚಯಿಸಿ ಅವರ ನಾಗರಿಕ ಬೆಳವಣಿಗೆಗೆ ಕಾರಣರಾಗಬೇಕೆಂಬುದೇ ಅಲ್ಲಿನ ಜನರ ಪ್ರಾರ್ಥನೆ-ಇದೇ ಜಗದ್ಗುರುಗಳವರ ಸಂಕಲ್ಪವೂ ಕೂಡ ಆಗಿತ್ತು.

ಶಿಕ್ಷಣವೇ ಜೀವನ-ಜೀವನವೇ ಶಿಕ್ಷಣ. ಶಿಕ್ಷಣಕ್ಷೇತ್ರದ ಸುಧಾರಣೆಯು ಜೀವನದ ಸುಧಾರಣೆಯನ್ನು ತರುತ್ತದೆ. ಶಿಕ್ಷಣಸಂಸ್ಥೆಯನ್ನು ಪ್ರಾರಂಭಿಸುವುದರಿಂದ ಅಲ್ಲಿನ ಜನರ ಆಶೋತ್ತರಗಳನ್ನು ಈಡೇರಿಸುವ ಬಯಕೆಯನ್ನು ಜಗದ್ಗುರುಗಳವರು ಹೊಂದಿದ್ದಾರೆ. ಶಿಕ್ಷಣ ಸೇವೆ ವಿಶಾಲಗೊಂಡಂತೆ, ಆ ಮಕ್ಕಳು, ಅವರ ಪೋಷಕರು ಸಂಸ್ಥೆಯೊಡನೆ ಸಂಪರ್ಕ ಹೊಂದುವುದರ ಜೊತೆಗೆ ಮುಂದೆ ಆ ಸಂಸ್ಥೆಯ ವತಿಯಿಂದ ನಡೆಯುವ ಹತ್ತಾರು ಕಾರ್ಯಕ್ರಮಗಳು ಮಕ್ಕಳ ಬೆಳವಣಿಗೆಗೆ ಕಾರಣವಾಗುವುವು. ಪ್ರಾರಂಭದಲ್ಲಿ ರೂಪುಗೊಂಡಿರುವ ಸಂಸ್ಥೆಯೊಂದು ಹತ್ತಾರು ಸಂಸ್ಥೆಗಳ ಬೆಳವಣಿಗೆಗೆ ಅಂಕುರವಾಗಿದೆ.

ಯಾವ ಉದ್ದೇಶಕ್ಕಾಗಿ "ವೀರಶೈವಾಶ್ರಮ" ಸ್ಥಾಪಿತವಾಯಿತೋ, ಅದು ಶಿಕ್ಷಣದ ಬೆಳವಣಿಗೆಯಿಂದ ರೂಪು

ಗೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಇಂತಹ ಮಹಾವಟವೃಕ್ಷದ ಅಡಿಯಲ್ಲೊಂದು ಸಸಿ ಬೆಳೆದು ಹೆಮ್ಮರವಾಗುವುದರಲ್ಲಿ ಆಶ್ಚರ್ಯವಿಲ್ಲ.

## ಜೆ. ಎಸ್. ಎಸ್. ಎಂಟರ್‌ಪ್ರೈಸಸ್, ಮೈಸೂರು

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ವತಿಯಿಂದ ಅನೇಕ ಪ್ರಸಾದನಿಲಯಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಕಾಲೇಜುಗಳು ನಡೆಯುತ್ತಿದ್ದು ಈ ಸಂಸ್ಥೆಗಳಿಗೆ ಅಗತ್ಯ ವಸ್ತುಗಳನ್ನು ಸರಬರಾಜು ಮಾಡಲು ಈ ಸಂಸ್ಥೆಯನ್ನು ಪ್ರಾರಂಭಿಸಲಾಯ್ತು. ಹಾಸ್ಟೆಲ್‌ಗಳಿಗೆ ಬೇಕಾದ ದಾಸ್ತಾನುಗಳನ್ನೂ, ಶಿಕ್ಷಣ ಸಂಸ್ಥೆಗಳಿಗೆ ಬೇಕಾದ ಪೀಠೋಪಕರಣ, ಪ್ರಯೋಗಾಲಯಕ್ಕೆ ಸಂಬಂಧಿಸಿದ ಉಪಕರಣಗಳು, ಗ್ರಂಥಾಲಯಕ್ಕೆ ಪುಸ್ತಕಗಳು ಇತ್ಯಾದಿ ಅವಶ್ಯಕವಾದುವನ್ನು ಈ ಸಂಸ್ಥೆಯ ಮುಖಾಂತರ ಅಗತ್ಯವಿರುವ ಸಂಸ್ಥೆಗಳಿಗೆ ಪೂರೈಸಲಾಗುವುದು.

ಸೇವಾಸಂಸ್ಥೆಗಳಲ್ಲಿರುವವರಿಗೆ ಕಾಲವ್ಯಯವಾಗದಂತೆ ಈ ಸಂಸ್ಥೆ ನೋಡಿಕೊಳ್ಳುವುದು. ಕಾಲಕ್ಕೆ ಸರಿಯಾಗಿ ಅಗತ್ಯವಸ್ತುಗಳನ್ನು ಪೂರೈಸಲಾಗುವುದು. ಇದಲ್ಲದೆ ಕೆಲವರಿಗೆ ಇಲ್ಲಿ ಉದ್ಯೋಗ ನೀಡಿದಂತೆಯೂ ಆಗುವುದು. ಹೀಗೆ ಸದುದ್ದೇಶ ಹೊಂದಿ ಈ ಸಂಸ್ಥೆ ಉತ್ತಮ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಈ ಸಂಸ್ಥೆ ಗಳಿಸುವ ಲಾಭವನ್ನು ಸದುಪಯೋಗಪಡಿಸಿ, ರಚನಾತ್ಮಕ ಕಾರ್ಯಗಳಿಗೆ ಬಳಸಲಾಗುತ್ತಿದೆ.

ಎಲ್ಲಾ ಸಂಸ್ಥೆಗಳಿಗೆ ಅಗತ್ಯವಸ್ತುಗಳನ್ನು ಮುಂಗಡ ಪಟ್ಟಿಮಾಡಿಕೊಟ್ಟರೆ, ಮೂಲದಲ್ಲೇ ಅಂತಹ ವಸ್ತುಗಳನ್ನು ಖರೀದಿಸಿ, ಮಾರುಕಟ್ಟೆಯ ಬೆಲೆಗಿಂತಲೂ ಕಡಿಮೆಯ ದರದಲ್ಲಿ ಈ ಸಂಸ್ಥೆಗಳಿಗೆ ಒದಗಿಸಲಾಗುವುದು. ಉಳಿತಾಯ ಯೋಜನೆಯು ಈ ಸಂಸ್ಥೆಯ ಉದ್ದೇಶಗಳಲ್ಲೊಂದಾಗಿದೆ.

## ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಶರಣರ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ರಕ್ಷಣೆ, ಪ್ರಕಟಣೆ, ಸಂವರ್ಧನೆಯ ಉದ್ದೇಶವುಳ್ಳ ಅಖಿಲಭಾರತ ಮತ್ತು ಭಾರತೀಯ ಸಂಸ್ಕೃತಿಯನ್ನು ಅನುಸರಿಸುವ ಇತರ ಎಲ್ಲಾ ಪ್ರದೇಶಗಳನ್ನು ಒಳಗೊಂಡು ಕಾರ್ಯವ್ಯಾಪ್ತಿಹೊಂದಿರುವ ಈ ಒಂದು ಬೃಹತ್‌ಸಂಸ್ಥೆಗೆ ಬೀಜ ನೆಟ್ಟು, ಅದು ಹೆಮ್ಮರವಾಗಿ ಬೆಳೆದು ಬರಲೆಂದು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಹರಸಿದ್ದಾರೆ (೧) ಸಮ್ಮೇಳನ, ಸಾಹಿತ್ಯೋತ್ಸವ, ಶರಣರ ಜಯಂತಿ, ವರ್ಧಂತಿ ಮುಂತಾದ ಉತ್ಸವಗಳು. ಉಪನ್ಯಾಸ, ಸ್ಪರ್ಧೆ, ಕಲಾಪ್ರದರ್ಶನ ಮತ್ತು ಪುಸ್ತಕ ಪ್ರದರ್ಶನಗಳು. (೨) ಶರಣರ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿಗಳ ಸಂಗ್ರಹ, ಸಂಶೋಧನೆ, ಪ್ರಕಟಣೆ ಹಾಗೂ ಐತಿಹಾಸಿಕ ದಾಖಲಾತಿಗಳ ಸಂಗ್ರಹ ಮತ್ತು ಪ್ರಕಾಶನ. (೩) ಸಂಶೋಧನಾ ಇಲಾಖೆಯ ಏರ್ಪಾಟು, ಶರಣರ ಸಾಹಿತ್ಯ, ಕಲೆ, ಇತಿಹಾಸ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ವ್ಯವಸ್ಥೆ, ಸಂಶೋಧಕ ವಿದ್ಯಾರ್ಥಿಗಳಿಗೆ ಸೌಕರ್ಯ ಕಲ್ಪಿಸುವುದು. (೪) ಶರಣರ ಚರಿತ್ರೆ, ತತ್ತ್ವವಿಚಾರ, ಪಾರಿಭಾಷಿಕಕೋಶ, ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿ ವಿಷಯಗಳನ್ನು ಕುರಿತ ಗ್ರಂಥಪ್ರಕಟಣೆ. (೫) ಶರಣಸಾಹಿತ್ಯದಲ್ಲಿ ವಿಜ್ಞಾನ, ಧರ್ಮ, ದರ್ಶನ, ಮಾನವಿಕ ವಿಷಯಗಳನ್ನು ಕುರಿತ ಗ್ರಂಥಪ್ರಕಟಣೆ. (೬) ಶರಣಸಾಹಿತ್ಯ, ಶರಣಗೀತೆ, ಶರಣ ಕಥಾಸಂಕೀರ್ತನ, ಗಮಕ, ವಚನಗಾಯನ ಇತ್ಯಾದಿ ವಿಷಯಗಳಲ್ಲಿ ಪರೀಕ್ಷೆ ನಡೆಸುವುದು. (೭) ಶರಣಸಾಹಿತ್ಯಪರಿಷತ್ತಿನ ಘನೋದ್ದೇಶಗಳನ್ನು ಬಿತ್ತರಿಸುವ ಪತ್ರಿಕೆ ಪ್ರಕಟಣೆ. (೮) ಶರಣಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಸರ್ಕಾರಿ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯಗಳಲ್ಲಿ ಸಹಕಾರ ಮತ್ತು ಸಲಹೆ ನೀಡುವುದು ಇತ್ಯಾದಿ ಗುರಿ ಹೊಂದಿರುವ ಈ ಸಂಸ್ಥೆಯು ಬೃಹದಾಕಾರವಾದುದು.

ಈ ಸಂಸ್ಥೆಯು ಬೆಳೆದು ಬರಲು ಸಾಕಷ್ಟು ಆಲೋಚಿಸಲಾಗಿದೆ. ಈ ಸಂಸ್ಥೆಗೆ ಜಗದ್ಗುರುಗಳವರೇ ಗೌರವ ಅಧ್ಯಕ್ಷರಾಗಿದ್ದಾರೆ. ಈ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯಭಾರ ನಡೆಸಬೇಕೆಂಬುದು ಜಗದ್ಗುರುಗಳವರ ಆಶಯ. ಯಾವ ಉದ್ದೇಶಕ್ಕಾಗಿ ಇದು ಪ್ರಾರಂಭವಾಗಿದೆಯೋ ಆ ಉದ್ದೇಶವು ಸಫಲವಾದರೆ ಅವರು ತೃಪ್ತರು. ಈ ಸಂಸ್ಥೆಗೆ ತಾತ್ಕಾಲಿಕವಾಗಿ ಬೇಕಾದ ಎಲ್ಲಾ ಸವಲತ್ತುಗಳನ್ನು ಅವರು ಒದಗಿಸಿಕೊಡಲಿದ್ದಾರೆ. ಶರಣರ ನಡೆ. ನುಡಿಗಳು ಸಾರ್ವತ್ರಿಕ ಜೀವನದಲ್ಲಿ ಬೆಳೆದುಬರಲೆಂಬುದೇ ಅವರ ಅಪೇಕ್ಷೆಯಾಗಿದೆ.

**ಪೋಷಿತ ಸಂಸ್ಥೆಗಳು**

೧ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು
೨ ಶರಣತತ್ವ ಪ್ರಚಾರ ಸಮಿತಿ, ಮೈಸೂರು
೩ ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾಮಂಟಪ, ಮೈಸೂರು
೪ ಜಗದ್ಗುರು ಶ್ರೀ ಶಿವರಾತ್ರೀಶ್ವರ ಕನ್ಸ್ಯೂಮರ್ಸ್ ಸಹಕಾರ ಸಂಘ, ರಾಮಾನುಜ ರಸ್ತೆ, ಮೈಸೂರು-೪
೫ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಹಕಾರ (ಹಣಕಾಸಿನ) ಸಂಘ, ಮೈಸೂರು-೪
೬ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಂಘ, ರಾಮಾನುಜ ರಸ್ತೆ, ಮೈಸೂರು-೪
೭ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಮಿತಿ, ಮೈಸೂರು
೮ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ ಸಮಿತಿ, ಮೈಸೂರು
೯ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳಾ ಕನ್ಸ್ಯೂಮರ್ಸ್ ಸಹಕಾರ ಸಂಘ, ಸರಸ್ವತೀಪುರಂ, ಮೈಸೂರು
೧೦ ಜಗದ್ಗುರು ಶ್ರೀ ಶಿವರಾತ್ರೀಶ್ವರ ಕನ್ಸ್ಯೂಮರ್ಸ್ ಸಹಕಾರ ಸಂಘ, ಬಸವೇಶ್ವರ ರಸ್ತೆ, ಮೈಸೂರು
೧೧ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ನೌಕರರ ಗೃಹನಿರ್ಮಾಣ ಸಹಕಾರ ಸಂಘ, ರಾಮಾನುಜ ರಸ್ತೆ, ಮೈಸೂರು-೪
೧೨ ಜಗದ್ಗುರು ಶ್ರೀ ಶಿವರಾತ್ರೀಶ್ವರ ಎಂಟರ್‌ಪ್ರೈಸಸ್, ಚಾವಡಿ ರಸ್ತೆ, ಮೈಸೂರು-೪

---

ಕ್ರಿಯಾಮಥನವಿಲ್ಲದೆ ಕಾಣಬಂದುದೇ, ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ, ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ, ಕ್ಷೀರದೊಳಗಣ ಘೃತ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ, ಕಾಷ್ಠದೊಳಗಣ ಅಗ್ನಿ?
ಇದು ಕಾರಣ ನಮ್ಮ ಗುಹೇಶ್ವರ ಲಿಂಗವ
ತನ್ನೊಳರಿದೆನೆಂಬ ಮಹಾಂತಂಗಲ್ಲದೆ
ಸತ್‌ಕ್ರಿಯಾಚರಣೆಯೇ ಸಾಧನ ಕಾಣಿಭೋ!

ಅಲ್ಲಮಪ್ರಭು

# ಜಗದ್ಗುರುವರ್ಯರ ಬಗೆಗೆ ಅಭಿಪ್ರಾಯಗಳು

## ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು

ಚಿನ್ಮೂಲಾದ್ರಿ ಬೃಹನ್ಮಠ, ಚಿತ್ರದುರ್ಗ*

ಶಿವರಾತ್ರಿ ಎಂದರೆ ಎಚ್ಚರಗೊಂಡಿರುವುದು. ಅವರ ಹೆಸರೇ ಸೂಚಿಸುವಂತೆ ಸದಾ ಎಚ್ಚರವಾಗಿದ್ದವರು. ತನು, ಮನ, ಭಾವಗಳಲ್ಲಿ ಎಚ್ಚರವಾಗಿದ್ದವರು. ಅವರು ಎಚ್ಚರದಲ್ಲಿ ಎಚ್ಚರವಾಗಿದ್ದರು. ಎಲ್ಲರನ್ನು ಎಚ್ಚರಿಸಿದವರು. "ಅಹಂ ಎಂಬುದೇ ದೇಹ-ದಾಸೋಽಹಂ ಎಂಬುದೇ ನಿರ್ದೇಹ" ಎಂಬ ಚನ್ನಬಸವಣ್ಣನವರ ಮಾತಿನಂತೆ ಆದಿಗುರು ಶ್ರೀ ಶಿವರಾತ್ರೀಶ್ವರರು ಮಹಾದಾಸೋಹಿಗಳಾಗಿ ದಾಸೋಽಹಂಭಾವವನ್ನು ಆಚರಣೆಗೆ ತಂದವರು. ಇಂದಿನ ಜಗದ್ಗುರುಗಳು ನಡೆಸುತ್ತಿರುವ ಚಟುವಟಿಕೆಗಳೆಲ್ಲವೂ ಶ್ರೀ ಶಿವರಾತ್ರೀಶ್ವರರ ಪ್ರಕಾಶದಲ್ಲಿ ನಡೆಯುತ್ತಿವೆ. ಮಾನವತೆಗೆ ಮಾರ್ಗದರ್ಶನ ಮಾಡಲು ಬಂದ ಮಹನೀಯರಿವರು.

* * *

## ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು

ಮೂರುಸಾವಿರ ಮಠ, ಹುಬ್ಬಳ್ಳಿ

ಮರ್ತ್ಯಲೋಕವು ಕರ್ತಾರನ ಕಮ್ಮಟ. ಇಲ್ಲಿ ಮಹಾತ್ಮರು, ಶಿವಯೋಗಿಗಳವರು ಜನ್ಮವೆತ್ತಿ ದೇವಮಹಿಮೆಯನ್ನು ಸಾರಿ ಧರ್ಮ ಸ್ಥಿರವಾಗಿ ನೆಲೆಗೊಳ್ಳುವಂತೆ ಮಾಡಿದ್ದಾರೆ. ಅಂತಹ ಮಹಾಮಹಿಮರಲ್ಲಿ ಸುತ್ತೂರು ವೀರಸಿಂಹಾಸನ ಮಠದ ಆದಿಗುರು ಶಿವರಾತ್ರೀಶ್ವರರು ಒಬ್ಬರು.

ಈ ಮಠದ ಅಸ್ತಿತ್ವವು ಐತಿಹಾಸಿಕ ಹಿನ್ನೆಲೆ ಹಾಗೂ ಉಜ್ವಲ ಪರಂಪರೆಯನ್ನೊಳಗೊಂಡಿದೆ. ಲಿಂಗೈಕ್ಯ ಜಗದ್ಗುರು ಶಿವರಾತ್ರೀಶ್ವರ ಸ್ವಾಮಿಗಳವರು ಕರ್ತೃತ್ವಶಾಲಿಗಳಾಗಿದ್ದರು. ಸಮಾಜದ ಸಂಘಟನೆಗಾಗಿ ಶ್ರಮಿಸಿದವರು. ಸಪ್ತಕೋಟಿ ಮಹಾಮಂತ್ರಗಳಲ್ಲಿ ಶ್ರೇಷ್ಠವಾದ ಷಡಕ್ಷರ ಮಂತ್ರಮಹಿಮೆಯನ್ನು ಲೋಕಕ್ಕೆ ಸಾರಿದವರು. ಒಂದು ಕೋಟಿ ಎಪ್ಪತ್ತೈದು ಲಕ್ಷ ಮಂತ್ರ ಬರೆದ ಅವರ ನಿಷ್ಠೆ ಶ್ರದ್ಧೆ ಅಸದೃಶವಾದುದು. ಇದು ಮಠದ ಅಕ್ಷಯ ಸಂಪತ್ತು, ಅಮೂಲ್ಯನಿಧಿಯೆನಿಸಿದೆ. ಶೈಕ್ಷಣಿಕವಾಗಿ ಹಿಂದುಳಿದ ಕಾಲದಲ್ಲಿ ವಿದ್ಯಾಸಂಸ್ಥೆಗಳನ್ನು, ಸಂಸ್ಕೃತ, ವೈದಿಕ ಪಾಠಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಿ ಧರ್ಮ ಹಾಗೂ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣೀಭೂತರಾದರು. ಅವರ ಆಧ್ಯಾತ್ಮ ಶಕ್ತಿಯೇ ಮೂರ್ತಿವೆತ್ತಂತಿರುವರು ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು.

ಲಿಂಗೈಕ್ಯ ಶ್ರೀಗಳವರ ಆಧ್ಯಾತ್ಮಿಕ ಶಕ್ತಿ, ಇಂದಿನವರ ಲೌಕಿಕ ಶಕ್ತಿಯೊಂದಿಗೆ ಮೇಳವಿಸಿ ಇಂದಿನ ವೀರ ಸಿಂಹಾಸನ ಮಠದ ಕೀರ್ತಿಯ ಉಜ್ವಲತೆಗೆ ಕಾರಣವಾಗಿದೆ. ಸದುವಿನಯ ಸಹೃದಯತೆ ಮೈಗೂಡಿಕೊಂಡಿರುವ ಜಗದ್ಗುರುಗಳವರು ಜನಮನದ ಮೈಲಿಗೆಯನ್ನು ಕಳೆಯುವಲ್ಲಿ ಯಶಸ್ವೀಪಾತ್ರ ನಿರ್ವಹಿಸಿದ್ದಾರೆ. ಶ್ರೀಗಳವರು ಮಠಾಧೀಶರಾದ ನಂತರ ಮಠಗಳ ಜೀರ್ಣೋದ್ಧಾರ ಮಾಡಿರುವುದಷ್ಟೇ ಅಲ್ಲದೆ ಮೈಸೂರು ಹಾಗೂ ಸುತ್ತಮುತ್ತಲಿನ ಹಲವಾರು ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪನೆಗೆ ಕಾರಣರಾಗಿದ್ದಾರೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ನ ವಸತಿ ವಿದ್ಯೆಯನ್ನಿತ್ತು ಸಮಾಜ ಸೇವೆಗೆ ಸುಸಂಸ್ಕೃತ ಜನರನ್ನು ಕೊಡಮಾಡಿದ್ದಾರೆ. ಮೈಸೂರಿನ ದಿವಂಗತ ಮಹಾರಾಜರ

---

* ಆದಿ ಜಗದ್ಗುರುಗಳವರ ೧೦೨೧ನೇ ಜಯಂತ್ಯುತ್ಸವದಲ್ಲಿ ಮಾಡಿದ ಭಾಷಣದಿಂದ ಉದ್ಧೃತ.

ಗೌರವ ಮನ್ನಣೆಗೆ ಪಾತ್ರರಾಗಿ "ರಾಜಗುರುತಿಲಕ" ಪದವಿಯೊಂದಿಗೆ ಸನ್ಮಾನಿತರಾಗಿದ್ದಾರೆ. ಬಾಲ್ಯದಿಂದಲೂ ವಿದ್ಯಾ ಪಕ್ಷಪಾತಿಗಳಾದ ಶ್ರೀಗಳವರು ವಿದ್ಯಾಪೀಠ, ಗುರುಕುಲಗಳನ್ನು ಸ್ಥಾಪಿಸಿ ಲೌಕಿಕ-ಆಧ್ಯಾತ್ಮಿಕ ತರಪೇತಿಗೆ ಸಂಸ್ಥೆಗಳನ್ನು ಸಂಸ್ಥಾಪಿಸಿದ್ದಾರೆ.

ವಿಜ್ಞಾನದ ವಿಕ್ಷಿಪ್ತ ವಾತಾವರಣದಲ್ಲಿ ಧರ್ಮದ ಹಾಗೂ ಮಠಾಧೀಶರ ಜವಾಬ್ದಾರಿ ಹಿರಿದಾದುದಾಗಿದೆ. ಸಾಮಯಿಕ ಪ್ರಜ್ಞೆಯಿಂದ ಎಲ್ಲರೂ ಮುನ್ನಡೆಯಬೇಕಾಗಿದೆ. ಅರವತ್ತರ ಐಸಿರಿಯಲ್ಲಿದ್ದರೂ ಆರದ ಉತ್ಸಾಹ, ಕರ್ತವ್ಯಪ್ರಜ್ಞೆ ಶ್ರೀಗಳವರದಾಗಿದೆ. ಅವರ ಷಷ್ಟ್ಯಬ್ದ ಸಮಾರಂಭವು ವೈಭವದೊಂದಿಗೆ ಜರುಗುವುದು ಜನತೆಯ ಉಪಕಾರಸ್ಮರಣೆಯ ದ್ಯೋತಕ. ಅದರ ಸವಿನೆನಪಿಗಾಗಿ ಅಭಿನಂದನ ಗ್ರಂಥ ಹೊರತರುವುದು ಸೂಕ್ತವಾದುದು.

ಶ್ರೀಗಳವರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯ ಭಾಗ್ಯವನ್ನಿತ್ತು ಕರ್ತೃ ಶ್ರೀ ಜಗದ್ಗುರು ಗುರುಸಿದ್ದೇಶ್ವರರು ಅನುಗ್ರಹಿಸಲೆಂದು ಈ ಮೂಲಕ ಹಾರೈಸಲಾಗಿದೆ.

* * *

## ಸದ್ಧರ್ಮ ಸಿಂಹಾಸನಾಧೀಶ್ವರ ತರಳಬಾಳು ಜಗದ್ಗುರು ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು

ಬೃಹನ್ಮಠ, ತರಳಬಾಳು ಸಂಸ್ಥಾನ, ಸಿರಿಗೆರೆ

ಶ್ರೀ ಜಗದ್ಗುರುಗಳವರು ಮೂರ್ತಿವೆತ್ತ ಸೌಜನ್ಯವೋ ಮತ್ತು ಸೌಹಾರ್ದವೋ ಎಂಬಂತೆ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ. ಶ್ರೀ ಶ್ರೀಗಳವರು ತಮ್ಮಿಂದ ಮತ್ತೊಬ್ಬರಿಗೆ ನೋವನ್ನುಂಟುಮಾಡುವುದರ ಬಗ್ಗೆ ದಟ್ಟ ದರಿದ್ರರೆಂದಲ್ಲಿ ಸಂಶಯವಿಲ್ಲ. ಸರ್ವರ ಕಲ್ಯಾಣವನ್ನೇ ತಮ್ಮ ಧ್ಯೇಯವನ್ನಾಗಿಟ್ಟುಕೊಂಡು ತಮ್ಮ ಅರವತ್ತು ವರ್ಷಗಳನ್ನು ಕಳೆದಿದ್ದಾರೆ. ನಾವಂತೂ ಅವರಿಗೆ ಪರಮಾಪ್ತರು. ಅಂತೆಯೇ ಶ್ರೀ ಶ್ರೀಗಳವರೂ ಸಹ ನಮಗೂ ಪರಮಾಪ್ತರು. ನಮ್ಮೀರ್ವರ ಸೌಹಾರ್ದಸಂಬಂಧ, ಈ ಸನ್ನಿವೇಶ ಸದಾಕಾಲ ಮುಂದುವರಿಯಲಿ ಮತ್ತು ಶ್ರೀ ಜಗದ್ಗುರುಗಳವರು ಇನ್ನೂ ಅತ್ಯಧಿಕ ಆಯುರಾರೋಗ್ಯಸಂಪನ್ನರಾಗಿ ಸರ್ವರ ಕಲ್ಯಾಣಕ್ಕೆ ಶ್ರಮಿಸುವಂತೆ ಪರಮಾತ್ಮನು ಅನುಗ್ರಹಿಸಲಿ. ಇದು ನಮ್ಮ ಪರಮಾಶಯ. ಈ ಸಂದರ್ಭದಲ್ಲಿ ಶ್ರೀ ಜಗದ್ಗುರುಗಳವರಲ್ಲಿ ನಮ್ಮ ವಿಶ್ವಾಸಪೂರ್ವಕವಾದ ದೀರ್ಘದಂಡಪ್ರಣಾಮಗಳನ್ನು ಅರ್ಪಿಸುತ್ತೇವೆ.

* * *

## ಶ್ರೀ||ನಿ||ಪ್ರ||ಸ್ವ|| ಡಾ|| ಶಿವಕುಮಾರ ಮಹಾಸ್ವಾಮಿಗಳು

ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು ಜಿಲ್ಲೆ*

ಸುತ್ತೂರು ಶ್ರೀಮಠವು ಅನೇಕ ಮಂದಿ ಶಿವಯೋಗಿಗಳಿಗೆ, ಸಿದ್ಧಪುರುಷರಿಗೆ, ಜನ್ಮವನ್ನು ಕೊಟ್ಟಿರತಕ್ಕಂಥ ಒಂದು ಪುಣ್ಯಕ್ಷೇತ್ರವಾಗಿದೆ. ಆ ಶಕ್ತಿ ನಾಡಿಗೆಲ್ಲಾ ಪಸರಿಸಿ ಪುನೀತರನ್ನಾಗಿ ಮಾಡಿರತಕ್ಕಂಥ ಕ್ಷೇತ್ರ. ಆ ಪವಿತ್ರ ಕ್ಷೇತ್ರದಲ್ಲಿ ಅವತಾರ ಮಾಡಿದ ಶ್ರೀ ಶಿವರಾತ್ರೀಶ್ವರರು ಪುಣ್ಯಮೂರ್ತಿಗಳು. ಇವರ ಪ್ರಭಾವ ಜನತೆಯ ಮೇಲೆ ಆಗಿ, ಅವರ ಅಂತಃಕರಣ ಬೆಳಗಿ, ಹೃದಯ ಪರಿವರ್ತನೆಯಾಗಿ, ನಿಜವಾದ ಭಾರತತತ್ತ್ವದತ್ತ ಗಮನ ಹರಿಯ ಬೇಕಾಗಿದೆ.

ಸುತ್ತೂರು ಧರ್ಮಪೀಠವಾಗಿತ್ತು. ಈಗಿನ ಜಗದ್ಗುರುಗಳವರು ಅದನ್ನು ವಿದ್ಯಾಪೀಠವನ್ನಾಗಿ ಮಾಡಿದರು. ಇವರು ಅನೇಕ ವಿದ್ಯಾಸಂಸ್ಥೆಗಳನ್ನು ಕಟ್ಟಿ, ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿ, ಅನೇಕ ಮಂದಿ ಬಡ ಮಕ್ಕಳಿಗೆ ವಿದ್ಯಾದಾನ ಮಾಡತಕ್ಕಂಥ ಒಂದು ಪುಣ್ಯಮಯ ಕಾರ್ಯವನ್ನು ಕೈಗೊಂಡಿದ್ದಾರೆ. ತಮ್ಮ ಒಂದು ಪ್ರಭೆ ಯಿಂದ ಸಾವಿರಾರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಆ ವ್ಯಕ್ತಿಗಳು ವಿದ್ಯಾವಂತರಾಗಿ ತನ್ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೇರೆ ಬೇರೆ ಕ್ಷೇತ್ರದಲ್ಲಿ ಜೀವನವನ್ನು ನಡೆಸತಕ್ಕಂಥ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ. ನಿಜಕ್ಕೂ ಕೂಡ ಪುಣ್ಯಮಯವಾದ ಕಾರ್ಯವಿದಾಗಿದೆ.

---

* ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತ್ಯುತ್ಸವದ ಭಾಷಣದಿಂದ ಉದ್ಧೃತ

## ಸೂರ್ಯಸಿಂಹಾಸನಾಧೀಶ್ವರ ಡಾ. ಶ್ರೀ. ಜ.ಚ.ನಿ.

## ಕಳಾವಂತ ಕಲ್ಪತರು

ಸುತ್ತೂರು ವೀರಪೀಠದ ಜಗದ್ಗುರು
ಸುತ್ತಲಿನ ಸಾಮಾಜಿಕ ಕಳಾವಂತ ಕಲ್ಪತರು
ಚಿತ್ತರದ ಸಾಂಸ್ಕೃತಿಕ ಜೀವಂತ ಚಿಂತಾಮಣಿ
ಎತ್ತರದ ಶೈಕ್ಷಣಿಕ ಮಹಂತ ರಾಜಖಣಿ!

ಪೀಠಕ್ಕೆ ಸಾಸಿರಾರು ವರುಷಗಳ ಇತಿಹಾಸ
ವೀರಶೈವಕ್ಕೆ ಹೊಸತಿರುವು ತರುವ ಪ್ರಕಾಶ
ಸಾರ್ವಜನಿಕರ್ಗೆ ಶೈಕ್ಷಣಿಕ ಜೀವನ ವಿಕಾಸ
ಸಾಂಸ್ಕೃತಿಕ ಧಾರ್ಮಿಕ ಸತ್ಯ ಶಿವ ವಿಲಾಸ!

ಒಡಲೊಳೋದುಗರ ಹೊತ್ತು ಮುಡಿಯೆತ್ತಿ ನಿಂತ
ಇದೋ ಈ ಶಿಕ್ಷಣಾಲಯುಗಳೆಲ್ಲ
ಇಂದಿನ ಈ ಜಗದ್ಗುರು ಹೃದಯಶ್ರೀಮಂತಿಕೆಯ ಪ್ರತೀಕ;
ಇವುಗಳೊಳು ತುಂಬಿದ ವಾತಾವರಣ ಧಾರ್ಮಿಕ!

ಅಪೂರ್ವ ದೀಪ್ತಿ, ಅಗಾಧ ಶಕ್ತಿ;
ಅಪ್ರತಿಮ ಜೀವನ ಪ್ರಗತಿ.
ಅಸಾಮಾನ್ಯ ಸಾಧಾರಣ ಮಹಾವ್ಯಕ್ತಿ.
ಅವಲೋಕಿಸಲಂತರಂಗಕೆ ಸಂತೃಪ್ತಿ!

* * *

## ಪರಮಪೂಜ್ಯ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳು

ಶ್ರೀ ಅದಮಾರುಮಠ, ಉಡುಪಿ

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಪರಿಚಯ ನಮಗೆ ಆದುದು ೧೯೫೮ರಲ್ಲಿ. ಅಂದಿನಿಂದ ನಮ್ಮ ಪರಿಚಯವು ಸ್ನೇಹವಾಗಿ ಪರಿಣಮಿಸಿ, ನಮ್ಮನ್ನು ಮಾನಸಿಕವಾಗಿ ಬಹಳ ಹತ್ತಿರ ತಂದಿದೆ. ಶ್ರೀ ಸ್ವಾಮಿಗಳವರು ಶಿವರಾತ್ರೀಶ್ವರ ಸಂಸ್ಥಾನದ ಪೀಠದಲ್ಲಿ ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳ ಮೂಲಕ ಜನತೆಗೆ ಇದ್ದ ಗೌರವ ವನ್ನು ಹೆಚ್ಚಿಸಿದ್ದಾರೆ. ಜನತೆಯು ಈ ಪೀಠವನ್ನು ತಮ್ಮದಾಗಿ ಸ್ವೀಕರಿಸಿ, ಪೀಠವೂ ಜನತೆಯೂ ಸಹಬಾಳ್ವೆಯನ್ನು ನಡೆಸುವಂತೆ ಮಾಡಿದ್ದಾರೆ. ಇವರ ಸ್ನೇಹಮಯ ವ್ಯವಹಾರ, ಜನತೆಯ ಒಳಿತಿನ ಬಗ್ಗೆ ಇರುವ ಹೃದಯದಾಳ ದಿಂದ ಬರುವ ಕಳಕಳಿ—ಇವುಗಳು ಜನತೆಯನ್ನು ಇವರ ಬಳಿಗೆ ಸೆಳೆದುದು ಸ್ವಾಭಾವಿಕವೇ ಆಗಿದೆ. ಇವರ ಸಂಪರ್ಕಕ್ಕೆ ಬಂದಿರುವ ಹತ್ತಾರು ಸಾವಿರ ಮಂದಿ ಇವರು ನೂರು ವರ್ಷಗಳವರೆಗೆ ತಮ್ಮ ಸಾಮಾಜಿಕ ಹಾಗೂ ಆಧ್ಯಾತ್ಮಿಕ ನೇತೃಗಳಾಗಿರಲಿ ಎಂದು ಭಗವಂತನಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾರೆ. ಇವರ ಪ್ರೇಮಮಯ ಹೃದಯದ ಆಕರ್ಷಣೆಗೆ ಒಳಗಾದವರಲ್ಲಿ ನಾವೂ ಒಬ್ಬರು. ಇವರನ್ನು ಆರೋಗ್ಯವಂತರನ್ನಾಗಿ ಬಹುಕಾಲ ಇಟ್ಟಿರಲೆಂದು ಇವರ ಷಷ್ಟ್ಯಬ್ದಿಪೂರ್ತಿಯ ಸಂದರ್ಭದಲ್ಲಿ ನಮ್ಮ ಹಾರ್ದಿಕ ಪ್ರಾರ್ಥನೆಯನ್ನು ದೇವರಲ್ಲಿ ಸಲ್ಲಿಸುತ್ತೇವೆ.

* * *

## ಶ್ರೀ॥ ನಿ॥ ಪ್ರ॥ ಸ್ವ॥ ಮಹಾಂತ ಶಿವಯೋಗಿಗಳು

ಮುರುಘಾಮಠ, ಧಾರವಾಡ

ಶ್ರೀ ಸುತ್ತೂರು ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ದಿ ಮಹೋತ್ಸವ ಸಮಿತಿಯವರು ಶ್ರೀ ಜಗದ್ಗುರುಗಳ ಷಷ್ಟ್ಯಬ್ದಿ ಮಹೋತ್ಸವವನ್ನೂ, ಅದರಂಗವಾಗಿ ಅವರಿಗೆ

ಅಭಿನಂದನ ಸಂಪುಟವೊಂದನ್ನು ಅರ್ಪಿಸುವ ಮಹತ್ಕಾರ್ಯವನ್ನೂ ಇಟ್ಟುಕೊಂಡುದು ಸಮುಚಿತವೂ ಸಮಯೋಚಿತವೂ ಆಗಿದೆ. ನಮಗೂ ತುಂಬಾ ಸಂತೋಷ.

"ಜಂಗಮನ ಸುಳುಹು ವಸಂತಗಾಳಿಯಂತೆ" ಇರಬೇಕೆಂದು ಮಹಾನುಭಾವರ ದಿವ್ಯೋಪದೇಶ. ಬಿರುಗಾಳಿಯಿಂದ ಗಿಡಮರಗಳು ಮನೆಮಾರುಗಳು ಅಸ್ತವ್ಯಸ್ತವಾಗುವಂತೆ ಅವರ ಸುಳುಹಾಗಿರಬಾರದು; ಲಿಂಗವೇ ನಡೆದಾಡುವಂತೆ ಅವರ ಮಂಗಲಮಯ ಸುಳುಹು ತನುಮನಗಳಿಗೆ ತಂಪನ್ನೂ ಅಂತರಾತ್ಮನಿಗೆ ಶಾಂತಿಯನ್ನೂ ಉಂಟುಮಾಡುವಂತಿರಬೇಕೆಂದು ಪ್ರಭುವಿನ ಪ್ರಸಾದವಾಣಿ. ಈ ದಿವ್ಯವಾಣಿಗನುಸರಿಸಿ ಸುತ್ತೂರಿನ ವೀರಸಿಂಹಾಸನ ಮಠಾಧೀಶ್ವರರು ಅನೇಕ ಶತಮಾನಗಳಿಂದ ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಪ್ರಚಾರಮಾಡುತ್ತ ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರಾಗಿದ್ದಾರೆ. ಅವರ ಪರಂಪರೆ ಭವ್ಯವೂ ದಿವ್ಯವೂ ಆಗಿದೆ. ಜನಸಾಮಾನ್ಯರ, ರಾಜಮಹಾರಾಜರ ಭಕ್ತಿಗೌರವವನ್ನೂ ಅಮೂಲ್ಯ ಕಾಣಿಕೆಗಳನ್ನೂ ಪಡೆದು, ಸಕಲ ಜೀವಾವಳಿಗೆ ಹಿತವನ್ನೇ ಬಯಸುವವರಾಗಿದ್ದಾರೆ. ಅಂಥವರ ಉದಯ ಲೋಕಕಲ್ಯಾಣಕ್ಕಾಗಿ ಇದೆ.

"ಪರಮ ಶಿವಾಧಿಕ್ಯ ಚೂಡಾಮಣಿ", "ಘನಲಿಂಗ ಶಿವಯೋಗಿಗಳ ವಚನಗಳು", "ವೃಷಭೇಂದ್ರ ವಿಜಯ ಪುರಾಣ". "ಶಿವಾಧಿಕ್ಯ ಶಿಖಾಮಣಿ" ಮೊದಲಾದ ಗ್ರಂಥರತ್ನಗಳನ್ನು ರಚಿಸಿ ಕನ್ನಡ ಸಾಹಿತ್ಯ ಭಂಡಾರವನ್ನು ಬೆಳಸಿದ್ದಾರೆ. ಇವರ ಭವ್ಯ ಪರಂಪರೆಯನ್ನು ಹೊಂದಿರುವ ಇಪ್ಪತ್ತಮೂರನೆಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು "ಜಾಣನು ಲೌಕಿಕ ಪರಮಾರ್ಥವೆರಡನು ಕೂಡಿ ನಡೆಸುತಿಹನು" ಎಂಬ ನಿಜಗುಣ ಶಿವಯೋಗಿಗಳ ವಚನದಂತೆ ಪ್ರಸಾದನಿಲಯಗಳನ್ನೂ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣ ಶಾಲೆಗಳನ್ನೂ, ವಾಣಿಜ್ಯ, ಕಲೆ, ವಿಜ್ಞಾನ ಕಾಲೇಜುಗಳನ್ನೂ, ಸಂಘಸಂಸ್ಥೆಗಳನ್ನೂ, ಸಂಸ್ಕೃತ ಪಾಠಶಾಲೆ, ಶಿವಾನುಭವ ಸಂಸ್ಥೆಗಳನ್ನೂ ಸ್ಥಾಪಿಸಿ ಬಡಮಕ್ಕಳಿಗೆ ಕಾಮಧೇನು—ಕಲ್ಪವೃಕ್ಷವಾಗಿದ್ದಾರೆ. ಹೊರಜೀವನವಷ್ಟೆ ಅಲ್ಲ, ಒಳಜೀವನವೂ ಹಸನಾಗಿ, ಸತ್ವಶಾಲಿಯಾಗಿ ಬೆಳಗುವಂತೆ ಮಾಡಿದ್ದಾರೆ. ಇವರ ಉದಾರಾಶ್ರಯ ಹಾಗು ಪೋಷಣೆಯಲ್ಲಿದ್ದು ಅಭ್ಯಾಸಮಾಡಿದ ವಟುಗಳೂ ವಿದ್ಯಾರ್ಥಿಗಳೂ ಜೀವನದ ಎಲ್ಲ ರಂಗಗಳಲ್ಲಿದ್ದು ಸೇವೆಸಲ್ಲಿಸುತ್ತಿರುತ್ತಾರೆ. ಕೆಲವು ಮಹನೀಯರು ಉನ್ನತ ಸ್ಥಾನಗಳಲ್ಲಿದ್ದು ತಮ್ಮ ಹಾಗು ತಮಗೆ ಆಶ್ರಯ ನೀಡಿದ ಮಹಾಸಂಸ್ಥೆಗೆ ಕೀರ್ತಿ ಗೌರವಗಳನ್ನುಂಟುಮಾಡುವವರಾಗಿದ್ದಾರೆ. ಶ್ರೀ ಜಗದ್ಗುರುಗಳವರ ಈ ಲೋಕಸಂಗ್ರಹಕಾರ್ಯವು ಇನ್ನೂ ಹೆಚ್ಚಾಗಿ ಬೆಳೆದು ಜನತೆಯ ಸರ್ವಾಂಗೀಣ ಪ್ರಗತಿಯು ಸಾಗಲೆಂದು ಹಾರೈಸುತ್ತೇವೆ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಂದ ಇನ್ನೂ ಹೆಚ್ಚಾಗಿ ಮಾನವಕಲ್ಯಾಣ ಕಾರ್ಯಗಳು ಜರಗುವಂತೆ ಶ್ರೀ ಮಹಾಶಿವಯೋಗಿಗಳು ಕರುಣಿಸಲಿ.

* * *

## ಡಾ॥ ರಾಜೇಂದ್ರಪ್ರಸಾದ್

ಭಾರತದ ರಾಷ್ಟ್ರಪತಿಗಳು

ಸುತ್ತೂರು ಸ್ವಾಮೀಜಿಯವರ ದರ್ಶನದಿಂದ ನನಗೆ ಬಹಳ ಆನಂದವಾಗಿದೆ. ಈ ದಿನ ನನಗೆ ಆದಿ ಜಗದ್ಗುರುಗಳ ಆರಾಧನಾ ಸಮಾರಂಭದಲ್ಲಿ ಭಾಗಿಯಾಗುವ ಸುಯೋಗ ಒದಗಿದುದರಿಂದ ನನ್ನ ಸಂತೋಷ ಹೆಚ್ಚಾಯಿತು. ಇದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ. ಸ್ವಾಮೀಜಿಯವರು ತಮ್ಮ ಜೀವನವನ್ನು ಲೋಕಕಲ್ಯಾಣಕ್ಕಾಗಿ ಮುಡುಪಾಗಿಟ್ಟಿದ್ದಾರೆ. ವಿದ್ಯಾದಾನವನ್ನು ಹಾಗೂ ಪರೋಪಕಾರವನ್ನು ತಮ್ಮ ಬದುಕಿನ ಮುಖ್ಯ ಧ್ಯೇಯವನ್ನಾಗಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಮಾತ್ರವಲ್ಲದೆ ಅಶನ ವಸತಿಗಳ ವ್ಯವಸ್ಥೆಯನ್ನು ಒದಗಿಸಿದ್ದಾರೆ. ಅವರ ಈ ಮಹತ್ತರ ಸೇವೆ ದೇಶಕ್ಕೆ ಅಮೂಲ್ಯ ಕೊಡುಗೆ.

* * *

## ಡಾ॥ ಎಸ್. ರಾಧಾಕೃಷ್ಣನ್

ಭಾರತದ ಉಪರಾಷ್ಟ್ರಪತಿಗಳು

ಪ್ರೊ॥ ಯಾಮುನಾಚಾರ್ಯರ ಸಹಯೋಗದಿಂದ ಈ ವಿದ್ಯಾಸಂಸ್ಥೆಗೆ ಭೇಟಿ ನೀಡಿ ಆನಂದತುಂದಿಲನಾಗಿದ್ದೇನೆ. ಇಲ್ಲಿನ ವಾತಾವರಣ ಮತ್ತು ವ್ಯವಸ್ಥೆಗಳು ಬಹಳ ಸಮರ್ಪಕವಾಗಿವೆ. ಈ ಸಂಸ್ಥೆಯ ಕೆಲಸದ ವೇಳೆಯಲ್ಲಿ ಭೇಟಿ ನೀಡಿದ್ದರೆ ಅದೆಷ್ಟು ಚೆನ್ನಾಗಿರುತ್ತಿತ್ತು! ಅಂತಹ ಒಂದು ಸುಸಮಯಕ್ಕೆ ಕಾಯಬೇಕಾಗಿದೆ.

## ಡಾ. ಬಿ. ಡಿ. ಜತ್ತಿ

ಭಾರತದ ಉಪರಾಷ್ಟ್ರಪತಿಗಳು

ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ಧ ಮಹೋತ್ಸವವು ಸೂಕ್ತರೀತಿಯಲ್ಲಿ ಆಚರಿಸಲ್ಪಡುವುದೆಂಬ ಸಮಾಚಾರ ಹರ್ಷದಾಯಕವಾದದ್ದು.

ಸುತ್ತೂರಿನ ವೀರಸಿಂಹಾಸನದ ಮಠಾಧೀಶ್ವರರು, ಧರ್ಮಪ್ರಸಾರದ ಮೂಲಕವೂ, ಇತರ ವಿಧಗಳಲ್ಲೂ, ಅನೇಕ ಶತಮಾನಗಳಿಂದ ಸಲ್ಲಿಸಿರುವ ಪ್ರಜಾಸೇವೆ ಅಮೋಘವಾದದ್ದು. ಈ ಮಠದ ಇಪ್ಪತ್ತಮೂರನೆಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ವಿದ್ಯಾದಾನದಲ್ಲಿ ಉದ್ಯುಕ್ತರಾಗಿ, ಕಳೆದ ಮೂರು ದಶಕಗಳಿಂದಲೂ ಉಚಿತ ಪ್ರಸಾದನಿಲಯಗಳ ಹಾಗೂ ಎಲ್ಲಾ ಮಟ್ಟದ ವಿದ್ಯಾಸಂಸ್ಥೆಗಳ ನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುತ್ತಾ ಸಮಾಜದ ಕೃತಜ್ಞತೆಗೂ, ಭಕ್ತಿಗೂ ಪಾತ್ರರಾಗಿದ್ದಾರೆ.

ಪೂಜ್ಯ ಜಗದ್ಗುರುಗಳಿಗೆ ಭಗವಂತನು ಯಥೇಷ್ಟವಾದ ಆಯುರಾರೋಗ್ಯಗಳನ್ನು ಅನುಗ್ರಹಿಸಿ, ಅವರ ಸರ್ವತೋಮುಖವಾದ ನೆರವು ಮತ್ತು ಮಾರ್ಗದರ್ಶನ ನಮ್ಮೆಲ್ಲರಿಗೂ ಚಿರಕಾಲ ಲಭಿಸುವ ಹಾಗೆ ಮಾಡಲೆಂದು ಪ್ರಾರ್ಥಿಸುತ್ತೇನೆ.

* * *

## ಶ್ರೀ ಜಯಚಾಮರಾಜ ಒಡೆಯರ್

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರು

ನ ತ್ವಹಂ ಕಾಮಯೇ ರಾಜ್ಯಂ ನ ಸ್ವರ್ಗಂ, ನಾಪುನರ್ಭವಂ ।
ಕಾಮಯೇ ದುಃಖತಪ್ತಾನಾಂ ಪ್ರಾಣಿನಾಮಾರ್ತಿನಾಶನಂ ॥

ಅತಿ ಪ್ರಾಚೀನವಾದ ಸುತ್ತೂರು ವೀರಸಿಂಹಾಸನ ಮಠದ ಗುರುವರ್ಗವು ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಆದರ್ಶಸೇವೆಯನ್ನು ಕಳೆದ ಹತ್ತಾರು ಶತಮಾನಗಳಿಂದ ಸಲ್ಲಿಸುತ್ತಾ ಬಂದಿದೆ. ಆದಿಗುರು ಶ್ರೀ ಶಿವರಾತ್ರೀಶ್ವರರು, ಅವರ ಶಿಷ್ಯರಾದ ಈಶಾನೇಶ್ವರರು, ಘನಲಿಂಗಿಗಳೇ ಮುಂತಾದ ಆಚಾರ್ಯರು ಸಮಾಜೋದ್ಧಾರದ ಮಹತ್ಕಾರ್ಯಗಳನ್ನು ಸಾಧಿಸಿದ್ದಾರೆ.

ಅದೇ ವೀರಸಿಂಹಾಸನಮಠದ ಈಗಿನ ಅಧಿಪತಿಗಳು, ಮಹಾಮಂತ್ರಮೂರ್ತಿಗಳು ಆದ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರ ಕರಕಮಲಸಂಜಾತರಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕರ್ಮಯೋಗಿ ಸಿದ್ಧರಾಮನನ್ನು ನೆನಪಿಗೆ ತರುವ ಹಾಗೆ ಬೃಹತ್ತಾದ ಮಹಾ ಸಂಸ್ಥೆಯೊಂದನ್ನು ಕಟ್ಟಿ, ಊರ್ಜಿತಗೊಳಿಸಿ, ಮೈಸೂರು ಪ್ರಾಂತ್ಯದ ನಾನಾಕಡೆಗಳಲ್ಲಿ ಅದರ ಶಾಖೋಪಶಾಖೆಗಳು ಪ್ರಸರಿಸುವಂತೆ ದುಡಿಯುತ್ತಿರುವುದು ತುಂಬಾ ಶ್ಲಾಘನೀಯವಾದುದು. ಈ ಮಹಾ ಸಂಸ್ಥೆಯು ಈಗ ಲೋಕ ಕಲ್ಯಾಣದ ಸಾಧನಕೇಂದ್ರವಾಗಿ ವಿವಿಧ ಫಲಗಳನ್ನು ಕೊಡುವ ಕಲ್ಪವೃಕ್ಷವಾಗಿದೆ.

* * *

## ಶ್ರೀ ಜೆ. ಬಿ. ಮಲ್ಲಾರಾಧ್ಯ

ಅಧ್ಯಕ್ಷರು, ಅಖಿಲಭಾರತ ವೀರಶೈವ ಮಹಾಸಭೆ

ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ದ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಒಂದು ಅಭಿನಂದನಾ ಸಂಪುಟ ಸಮರ್ಪಣೆಯನ್ನು ಏರ್ಪಡಿಸಿರುವುದು ಸಮಯೋಚಿತವೂ, ಸಮರ್ಥನೀಯವೂ ಆಗಿದೆ.

ಶ್ರೀ ಶ್ರೀಗಳವರ ದರ್ಶನಾಶೀರ್ವಾದ ಪ್ರಪ್ರಥಮವಾಗಿ ನನಗೆ ದೊರೆತಿದ್ದು ಈಗ್ಗೆ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ. ಈ ಅವಧಿಯಲ್ಲಿ ಶ್ರೀಗಳವರಿಂದ ಮಾನವಕೋಟಿಗೆ ಲಭ್ಯವಾಗಿರುವ ಮಹದುಪಕಾರವನ್ನು ಯಾವ ಮಾನದಂಡದಿಂದಲೂ ನಿರ್ಧರಿಸುವುದು ಸುಲಭಸಾಧ್ಯವಲ್ಲ. ಶ್ರೀಮಠದ ದಿವ್ಯ ಪರಂಪರೆಗೆ ಅನುಗುಣವಾಗಿ

ಸುಜ್ಞಾನ ಸತ್ಕ್ರಿಯೆಗಳ ಸಮರಸ ಸಿದ್ಧಿಯ ಫಲವಾಗಿ ಶ್ರೀಗಳವರ ವ್ಯಕ್ತಿತ್ವ ಘನತರವಾಗಿ ಪ್ರಕಾಶಗೊಳ್ಳುತ್ತಿದೆ. ವಿಶಾಲಭಾರತದ ಮಠಾಧೀಶ್ವರರ ಸಮೂಹದಲ್ಲಿ ಶ್ರೀ ಜಗದ್ಗುರುಗಳವರ ಉದಾತ್ತಜೀವನ ಜಾಜ್ವಲ್ಯಮಾನವಾಗಿ ಕಂಗೊಳಿಸುತ್ತಿವೆ. ಜೀವಕಾರುಣ್ಯದಿಂದ ತುಂಬಿದ ದಿವ್ಯಾನುಭೂತಿಯನ್ನು ಗಮನಿಸಿದಾಗ ಶ್ರೀ ಪೀಠದ ಗೌರವ ಅತಿಶಯವಾಗಿ ಹೆಚ್ಚಿದೆ ಎಂದರೆ ಅತಿಶಯೋಕ್ತಿಯಲ್ಲ. ಜಗದ್ಗುರುಗಳವರ ಕೀರ್ತಿ ತಮಿಳುನಾಡು, ಆಂಧ್ರಪ್ರದೇಶ ಗಳಲ್ಲಿಯೂ ಪ್ರಸರಿಸಿದೆ ಎನ್ನುವುದು ಅನುಭವವೇದ್ಯ.

ಜ್ಞಾನದಾಸೋಹ, ಧರ್ಮಪ್ರಚಾರ, ಸಾಹಿತ್ಯಪ್ರೋತ್ಸಾಹ ಅನಂತವಾಗಿ, ಅವಿಚ್ಛಿನ್ನವಾಗಿ, ಶ್ರೀಗಳವರ ನೇತೃತ್ವದಲ್ಲಿ ಮುಂದುವರಿಯುತ್ತಿದೆ. ಸಾರ್ವಜನಿಕ ಸಭೆಗಳಲ್ಲಿ, ಪಂಡಿತರು, ವಿದ್ವಾಂಸರುಗಳ ವಿಚಾರಸಂಕಿರಣ ಗಳಲ್ಲಿ, ಅಧ್ಯಾತ್ಮಚಿಂತನೆಯ ಪ್ರಸಂಗಗಳಲ್ಲಿ ಶ್ರೀಗಳವರ ವಿದ್ವತ್‌ಪೂರ್ಣವಾದ ಭಾಷಣಗಳು ಅವರ ದಿವ್ಯಸ್ವಾನು ಭಾವದ ನಿದರ್ಶನಗಳು ಎಂದರೆ ತಪ್ಪಾಗಲಿಕ್ಕಿಲ್ಲ.ಜಗದ್ಗುರು ಶ್ರೀಶಿವರಾತ್ರಿರಾಜೇಂದ್ರಸ್ವಾಮಿಗಳು ತಮ್ಮ ಸತ್ಯಾಚರಣೆ, ಪರಿಶುದ್ಧ ಜೀವನಗಳಿಂದ ಧರ್ಮಪೀಠಗಳಿಗೆ ಗೌರವ ತಂದ ಮಹಾಮಹಿಮರು. ವೀರಶೈವಧರ್ಮದ ತತ್ವಗಳನ್ನು ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಪುಣ್ಯಜೀವಿಗಳು. ಶ್ರೀಗಳವರು ಪೀಠಾಧಿಕಾರವನ್ನು ವಹಿಸಿ, ಕರ್ನಾಟಕ ರಾಜ್ಯ ಧನ್ಯತೆಯನ್ನು ಪಡೆದಂತಾಗಿದೆ. ಅವರು ಅಸಾಧಾರಣ ವ್ಯಕ್ತಿತ್ವ, ಸತ್ಯಶುದ್ಧ ಹಿರಿತನದ ನಡೆನುಡಿಗಳಿಂದ ಇಡೀ ಕರ್ನಾಟಕ ರಾಜ್ಯದ ಪ್ರಜೆಗಳ ವಿಶ್ವಾಸ, ಆದರ, ಪ್ರೀತಿ, ಗೌರವಗಳಿಗೆ ಪಾತ್ರರಾಗಿದ್ದಾರೆ. ಲೋಕಪೂಜ್ಯವಾದ ಬಾಳಿನಿಂದ ಅವರಿಗೆ ಶಾಶ್ವತ ಕೀರ್ತಿ ಲಭಿಸಿದೆ.

ಭಕ್ತಾನುಗ್ರಹಾರ್ಥವಾಗಿ ಅಹರ್ನಿಶಿಯೂ ದುಡಿದು ಭವ್ಯವಾದ ವೀರಶೈವ ಸಂಸ್ಕೃತಿ ಹಾಗೂ ಭಾರತ ಸಂಸ್ಕೃತಿಗಳೆರಡನ್ನೂ ಸಮಾನ ರೀತಿಯಲ್ಲಿ ಏಕಕಾಲಕ್ಕೆ ಪುರಸ್ಕರಿಸಿ ಸಮನ್ವಯಗೊಳಿಸಿ ಯೋಗ್ಯರೀತಿಯಲ್ಲಿ ರೂಪಿಸು ತ್ತಿರುವ ಮಹಾಶಿಲ್ಪಿ ಎನ್ನಲಿಕ್ಕೆ ಸಾಕಷ್ಟು ಕಾರಣವಿದೆ.

ಶ್ರೀ ಶ್ರೀಗಳವರ ಅಸಾಧಾರಣ ಮೇಧಾಶಕ್ತಿ, ವ್ಯವಹಾರ ಕುಶಲತೆ, ಮಾನವ ಸ್ವಭಾವದ ಅರಿವು, ಯುಕ್ತಾ ಯುಕ್ತ ವಿವೇಚನೆ, ನಿಜಭಕ್ತರ ಇಂಗಿತವನ್ನು ಗ್ರಹಿಸುವ ದಿವ್ಯಜ್ಞಾನ, ಸಮಾಜದ ಮೇಲಿನ ನಿರತಿಶಯ ಅಭಿಮಾನ, ಇವುಗಳು ಅಲ್ಲದೆ ಕೈಗೊಂಡ ಕಾರ್ಯವನ್ನು ಶತಾಯಗತಾಯ ಯಶಸ್ವಿಯಾಗಿ ಸಾಧಿಸುವ ಸ್ಥಿರಸಂಕಲ್ಪ ವರ್ಣನಾ ತೀತ.

ಭಕ್ತವೃಂದದಲ್ಲಿ ವೀರಶೈವರೇ ಅಲ್ಲದೆ ಇತರ ವರ್ಗದ ಅಸಂಖ್ಯಾತ ಪುರುಷರು, ಸ್ತ್ರೀಯರು, ಶ್ರೀಮಠದ ಶಿಷ್ಯರಾಗಿ ಸೇವೆಸಲ್ಲಿಸುತ್ತಿರುವುದು ಶ್ರೀಗಳವರ ಪ್ರಭಾವವೆಂದೇ ಹೇಳಬೇಕು. ಇದು ಶ್ರೀಮಠದ ಒಂದು ವಿಶೇಷ ವೈಶಿಷ್ಟ್ಯ. ಜಗದ್ಗುರುಗಳವರು ಸಮಾಜದ ಅತುಲ ಸಂಪತ್ತು, ದೈವದತ್ತವಾಗಿ ದೊರೆತ ಅಪೂರ್ವ ಭಾಗ್ಯ. ಜಗನ್ನಿಯಾಮಕನಾದ ಪರಶಿವನು ಶ್ರೀಗಳವರ ಶತಮಾನೋತ್ಸವವನ್ನು ಆಚರಿಸುವ ಸುಯೋಗವನ್ನು ಜನತೆಗೆ ಅನುಗ್ರಹಿಸಲಿ ಎಂಬುದೇ ನನ್ನ ತೀವ್ರಾಭಿಲಾಷೆ.

ಅಭಿನಂದನ ಸಂಪುಟ ಘನತರವಾದ ಉದ್ದೇಶದಿಂದ ಕೂಡಿದೆ. ಅದು ಸಾರ್ಥಕ ರೂಪವನ್ನು ತಾಳಿ ಯಶಸ್ವಿ ಯಾಗುವುದರಲ್ಲಿ ಸಂದೇಹವಿಲ್ಲ ಎಂದು ನನ್ನ ಭಾವನೆ.

* * *

## ಶ್ರೀ ವೀರೇಂದ್ರ ಹೆಗ್ಗಡೆ

ಧರ್ಮಾಧಿಕಾರಿಗಳು, ಧರ್ಮಸ್ಥಳ

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ. ಸಲ್ಲಿಸುತ್ತಿದ್ದಾರೆ. ಶಿಕ್ಷಣ, ಧಾರ್ಮಿಕ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಇವರು ನಿಸ್ವಾರ್ಥ ಸೇವೆ ಸಲ್ಲಿಸಿ ಪಡೆದ ಶ್ರೇಯಸ್ಸು ನಿಜಕ್ಕೂ ಪ್ರಶಂಸನೀಯ ಹಾಗೂ ಅನುಕರಣೀಯವಾಗಿದೆ. ಇವರ ಉದಾರಾಶ್ರಯದಲ್ಲಿ ನಡೆಸಲ್ಪಡುವ ಉಚಿತ ಪ್ರಸಾದ ನಿಲಯಗಳು, ಶಾಲೆ-ಕಾಲೇಜುಗಳು ಹಾಗೂ ಗುರುಕುಲವು ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸುತ್ತಿರುವುದು ಅಭಿನಂದನೀಯ. ಈ ರೀತಿ ಸಮಾಜದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಜಗದ್ಗುರು ಮಹಾಸ್ವಾಮಿಗಳ ಷಷ್ಟ್ಯಬ್ದಿ ಮಹೋತ್ಸವವನ್ನು ವೈಭವದಿಂದ ಆಚರಿಸಿ ಅವರಿಗೆ ಅಭಿನಂದನಾ ಗ್ರಂಥವನ್ನು ಅರ್ಪಿಸಿ ಸನ್ಮಾನಿಸುವುದು ಸಮಾಜದ ಹಾಗೂ ಅವರ ಶ್ರೇಯೋಭಿಲಾಷಿಗಳ ಕರ್ತವ್ಯವಾಗಿದೆ.

ಶ್ರೀ ಕ್ಷೇತ್ರದ ಶ್ರೀ ಮಂಜುನಾಥಸ್ವಾಮಿ ಹಾಗೂ ಧರ್ಮದೇವತೆಗಳು ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳಿಗೆ ಉತ್ತಮ ಆಯುರಾರೋಗ್ಯ ಸಂಪತ್ತುಗಳನ್ನು ಕರುಣಿಸಲಿ.

ಷಷ್ಟ್ಯಬ್ದಿ ಮಹೋತ್ಸವವು ಸಾಂಗವಾಗಿ ನೆರವೇರಲೆಂದು ಹಾರೈಸುತ್ತೇನೆ.

* * *

## ಪೂಜ್ಯ ಶ್ರೀ ಶರಣ ಬಸವಪ್ಪ ಅಪ್ಪ

ಶ್ರೀ ಶರಣ ಬಸವೇಶ್ವರ ಸಂಸ್ಥಾನ, ಗುಲ್ಬರ್ಗ

ಭರತವರ್ಷ ತಪಸ್ವಿಗಳ ತಪೋಭೂಮಿ. ಕನ್ನಡನಾಡು ಶರಣಸಂತರ ಪುಣ್ಯಧಾಮ. ಆತ್ಮಶಾಂತಿ ಪಡೆಯುವಲ್ಲಿ ಮಹಾತ್ಮರ ತಪವು ಪ್ರಾರಂಭವಾದರೂ, ಮಾನವಶಾಂತಿಯನ್ನು ಸಾಧಿಸುವಲ್ಲಿ ತನ್ನ ಸಫಲತೆಯನ್ನು ಪಡೆಯುತ್ತದೆ. ಶರಣರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಸಕಲ ಜೀವಾತ್ಮರ ಲೇಸನೆಸಗುವುದೇ ಅವರ ಸಾಧನೆಯ ಸಂಕಲ್ಪವಾಗಿದೆ. ಅಂಥ ಶರಣರಲ್ಲಿ ಸದ್ಗುರು ಶ್ರೀ ಆದಿಶಿವರಾತ್ರೀಶ್ವರರೂ ಒಬ್ಬರು. ಪೂಜ್ಯರು ತಪಗೈದಂಥ ಸುತ್ತೂರು ಸುತ್ತಮುತ್ತಣ ನಾಡನ್ನು ಉದ್ಧರಿಸಿದ ಪುಣ್ಯಕ್ಷೇತ್ರವಾಗಿದೆ. ಈ ಪೀಠ ಪರಂಪರೆಯನ್ನು ಅಲಂಕರಿಸಿದವರಲ್ಲಿ ಹಲವು ಪೂಜ್ಯ ಪೀಠಾಧಿಕಾರಿಗಳವರು, ಶಿವಯೋಗದ ಮೂಲಕ. ಸಾಹಿತ್ಯಸೇವೆಯಿಂದ ಮಾತನ್ನು ಜ್ಯೋತಿರ್ಲಿಂಗವನ್ನಾಗಿ ಬೆಳಗಿಸುವ ಮೂಲಕ ಜಂಗಮ ಜಗತ್ತನ್ನು ಮೇಲೆತ್ತಿ ಹಿಡಿಯುವುದೇ ಇವರೆಲ್ಲರ ಗುರಿಯಾಗಿತ್ತು. ಇಂಥ ದಿವ್ಯ ಸದ್ಗುರು ಪರಂಪರೆಯಲ್ಲಿ ಬಂದವರು ಈಗಿನ ಪೀಠಾಧಿಕಾರಿಗಳಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಗುರುವಿನ ಅನುಗ್ರಹವೊಂದು ಪರುಷಮಣಿಯಿದ್ದಂತೆ. ಅದರ ಫಲವಾಗಿ. ಶ್ರೀಗಳ ಹಂಬಲ ಸಂಕಲ್ಪವಾಗಿ, ಆ ಸಂಕಲ್ಪವಿಂದು ಸಿದ್ಧಿಯಾಗಿ ಮೂರ್ತಸ್ವರೂಪ ತಾಳಿದ್ದು ಕಂಡುಬರುತ್ತದೆ. ಶ್ರೀಗಳ ಉದಾರ ಆಶ್ರಯದಲ್ಲಿ ಇಂದು ಹತ್ತಾರು ಕಡೆಗಳಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳು, ಉಚಿತ ಪ್ರಸಾದನಿಲಯಗಳು ದಾಸೋಹ ನಡೆಸುತ್ತಿವೆ. ಸಕಲ ಜೀವಾತ್ಮರ ಲೇಸ ಬಯಸುವಲ್ಲಿ ಜಾತಿಮತವೆಂಬುದುಂಟೆ? ಶಿವನ ಮಕ್ಕಳಲ್ಲಿ ಮೇಲಾರು ಕೀಳಾರು ?— ಎಂಬ ಏಕೋಭಾವ ಶ್ರೀಗಳವರದು. ಅದಕ್ಕಾಗಿ, ಪ್ರಸಾದನಿಲಯದಲ್ಲಿ ಎಲ್ಲ ಮತೀಯರಿಗೂ ಪ್ರಸಾದಲಾಭವುಂಟು. ಜಾತ್ಯತೀತದ ದೀಕ್ಷೆಯಿತ್ತು ದಾಸೋಹಕ್ಕೊಂದು ಜಾಗತಿಕ ಸ್ವರೂಪ ನೀಡಿದ ಶ್ರೀಗಳು ನಿಜವಾಗಿ ನೊಂದವರ ತಂದೆಯೆನಿಸಿದ್ದಾರೆ.

ಶ್ರೀಗಳ ಆಶೀರ್ವಾದದ ಫಲದಿಂದ ಬೆಳಗುತ್ತಿರುವ ಶಿಕ್ಷಣಕೇಂದ್ರಗಳು ಅವರ ಶಿಕ್ಷಣ ಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿವೆ. ಜನಾಂಗದ ಏಳಿಗೆಯ ಹೊಣೆ ಇಂದಿನ ಗುರುಸ್ವರೂಪರೆನಿಸಿದ ಸ್ವಾಮಿಗಳ ಮೇಲೆ ಇದೆ ಎಂಬುದನ್ನು ಅರಿತವರು ಶ್ರೀಗಳು. ಅದರಂತೆ ಈ ವಿಚಾರವನ್ನು ಆಚರಣೆಯಲ್ಲಿ ತಂದು ಒಂದು ಆದರ್ಶವಾದವನ್ನು ಹಾಕಿಕೊಟ್ಟಿದ್ದಾರೆ ನಮ್ಮಲ್ಲಿ ಶ್ರೀಗಳು. ಆತ್ಮೋದ್ಧಾರವೊಂದೆ ಸ್ವಾಮಿಗಳ ಮಣಿಹವಲ್ಲ. ಅದರೊಂದಿಗೆ ಸಮಾಜೋದ್ಧಾರ ಕಾಯಕವನ್ನು ದಾಸೋಹಂಭಾವದಿಂದ ಕೈಕೊಳ್ಳುವುದು ಗುರುಪೀಠವನ್ನಲಂಕರಿಸಿದ ಜಗದ್ಗುರುಗಳ ಮುಖ್ಯ ಮಣಿಹವೆಂಬುದನ್ನು ಅಡದೆ ಮಾಡಿ ತೋರಿಸಿದ್ದಾರೆ ಶ್ರೀಗಳವರು.

ಇಂಥ ದಾಸೋಹಸಂಪನ್ನರಾದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ದಿ ಮಹೋತ್ಸವ ಆಚರಿಸುವುದೂ, ಆ ಶುಭ ಸಂದರ್ಭದಲ್ಲಿ ಅಭಿನಂದನ ಗ್ರಂಥವನ್ನು ಶ್ರೀಗಳ ಕರಕಮಲಕ್ಕೆ ಸಮರ್ಪಿಸುವುದೂ ಬಹು ಸ್ತುತ್ಯವಾದ ಕಾರ್ಯ. ಇಂಥ ವಿಭೂತಿ ಶಕ್ತಿಗಳ ಸಾತ್ವಿಕ ಮೌಲ್ಯ ಬೆಳಕಿಗೆ ಬರುವುದು ಇಂಥ ಗ್ರಂಥ ಪ್ರಕಟಣೆಯ ಮೂಲಕ. ವರ್ಧಂತಿ ಮಹೋತ್ಸವವನ್ನು ಆಚರಿಸುವುದು, ಅಭಿನಂದನ ಸಂಪುಟ ಸಮರ್ಪಿಸುವುದು ಕೇವಲ ವ್ಯಕ್ತಿಗೌರವವಲ್ಲ, ಒಳಗಡಗಿಕೊಂಡು ಹೊರಗೆ ಸಕಲರ ಲೇಸನೆಸಗುತ್ತಿರುವ ಶಿವಯೋಗ ಶಕ್ತಿಗೆ ಸಲ್ಲುವ ಗೌರವವಿದು. ಇದೊಂದು ಉಪಕಾರಸ್ಮರಣೆಯ ರೀತಿ. ಶಿವಯೋಗ ಶಕ್ತಿಯಿಂದ ಋಣ ಹೊತ್ತ ಸಮಾಜವು ಇಂಥ ಉಪಕಾರಸ್ಮರಣೆಯಿಂದ ಕೃತಕೃತ್ಯವೆನಿಸುವುದುಂಟು. ದಾಸೋಹಮಣಿಹವನ್ನು ಅವ್ಯಾಹತವಾಗಿ ನಡೆಯಿಸಿಕೊಂಡು ಹೋಗುವದಕ್ಕಾಗಿ, ಮಾನವ ಕುಲಕೋಟಿಗೆ ಜ್ಞಾನಜ್ಯೋತಿಯನ್ನು ಬೀರುವದಕ್ಕಾಗಿ ಶ್ರೀಗಳವರಿಗೆ

ಶ್ರೀ ಶರಣಬಸವೇಶ್ವರರು ಆಯುರಾರೋಗ್ಯಭಾಗ್ಯಸಂಪದವನ್ನು ಅನುಗ್ರಹಿಸಲೆಂದು ಆ ದಯಾಘನನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

* * *

## ಸರ್ ಎ. ರಾಮಸ್ವಾಮಿ ಮೊದಲಿಯಾರ್

ದಿವಾನರು, ಮೈಸೂರು ಸಂಸ್ಥಾನ

ಶ್ರೀ ಸುತ್ತೂರು ಮಠವನ್ನು ನೋಡುವ ಮತ್ತು ಶ್ರೀ ಸ್ವಾಮಿಗಳವರನ್ನು ದರ್ಶಿಸುವ ಸೌಭಾಗ್ಯವು ನನಗೆ ಉಂಟಾ ಯಿತು. ಶ್ರೀಮಠದ ಮತ್ತು ಮಠದ ಕಾರ್ಯಕಲಾಪಗಳ ವಿಷಯವಾಗಿ ಶ್ರೀಮಠದ ಭಕ್ತರುಗಳಿಂದಲೇ ಅಲ್ಲದೆ ಅನೇಕ ಕಡೆಗಳಿಂದ ಬಹಳವಾಗಿ ಕೇಳಿದ್ದೆನು. ಜನರುಗಳು ಹೇಳುತ್ತಿರುವ ಈ ಮಠದ ಮಹತ್ಕಾರ್ಯಗಳಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲದಿರುವುದು ನನಗೆ ಕಾಣುತ್ತಿದೆ ಎಂಬುದನ್ನು ಮಾತ್ರ ನಾನು ಹೇಳಬೇಕಾಗಿದೆ. ಶ್ರೀಮಠವೂ, ದೇವಸ್ಥಾನವೂ ಮತ್ತು ಸುತ್ತಣ ಆವರಣವೂ ನೈತಿಕವಾಗಿಯೂ, ದೈಹಿಕವಾಗಿಯೂ ಸ್ಫೂರ್ತಿಯನ್ನೀಯುವುದಲ್ಲದೆ ವೃದ್ಧಿಯನ್ನೂ ಉಂಟುಮಾಡತಕ್ಕವಾಗಿವೆ. ತಮ್ಮ ವಿದ್ವತ್ತು, ಸರಳತೆ ಮತ್ತು ಸೇವಾಕಾಂಕ್ಷೆ ಇವುಗಳಿಂದ ಸರ್ವರ ಮೆಚ್ಚುಗೆ ಮತ್ತು ಗೌರವವನ್ನು ಪಡೆದು ಒಬ್ಬ ದೊಡ್ಡ ರಕ್ಷಕರೆನಿಸಿದ್ದಾರೆ ಶ್ರೀ ಸ್ವಾಮಿಗಳು. ಈ ಮಠದ ಶ್ರೀ ಸ್ವಾಮಿ ಗಳವರು ಎಲ್ಲಾ ಮಠಾಧಿಪತಿಗಳಿಗೂ ಮಾದರಿಯಾಗಿ ಪ್ರಕಾಶಿಸುತ್ತಿದ್ದಾರೆ. ಈ ಸಂಸ್ಥೆಯು ಅನೇಕ ವರ್ಷಗಳ ಕಾಲ ಆನಂದದಾಯಕವಾಗಿ ಸೇವೆಯನ್ನು ಸಲ್ಲಿಸಲೆಂದೂ ಮತ್ತು ಅಭಿವೃದ್ಧಿಯನ್ನೈದಲೆಂದೂ ನಾನು ಆಶಿಸುತ್ತೇನೆ.

* * *

## ಕೆ. ಸಿ. ಚೆಂಗಲರಾಯರೆಡ್ಡಿ

ಮೈಸೂರು ರಾಜ್ಯದ ಮುಖ್ಯಮಂತ್ರಿಗಳು

ಮುಖ್ಯವಾಗಿ ಈ ಸಂಸ್ಥೆಯು ಕೆಲವು ವಿದ್ಯಾರ್ಥಿನಿಲಯಗಳನ್ನು ನಡೆಸಿಕೊಂಡು ಬರುತ್ತಿರುವುದೂ ಮತ್ತು ವಿದ್ಯಾ ಭ್ಯಾಸದ ವಿಷಯದಲ್ಲಿ ಇವರು ವಹಿಸಿರುವ ಆಸಕ್ತಿಯೂ ನನ್ನನ್ನು ಕೃತಜ್ಞನನ್ನಾಗಿ ಮಾಡಿವೆ. ಈ ಮಠವು ವೃದ್ಧಿ ಯನ್ನು ಹೊಂದಲಿ ಮತ್ತು ಪಾರಮಾರ್ಥಿಕ ಮತ್ತು ಲೌಕಿಕ ಅಭಿವೃದ್ಧಿಗೆ ಹೆಚ್ಚಾದ ಸೇವೆಯನ್ನೀಯಲಿ.

* * *

## ಪ್ರೊಫೆಸರ್ ವಿ. ಎಲ್. ಡಿಸೌಜ

ಮತ್ತು ಅಧ್ಯಾಪಕವೃಂದ, ಮಹಾರಾಜರವರ ಕಾಲೇಜು

ಇಷ್ಟು ಮಹತ್ತರ ಕಾರ್ಯ ಸಾಧಿಸಲು ನಿಜವಾಗಿಯೂ ಇವರಲ್ಲಿರುವ ಒಂದು ಆತ್ಮಪ್ರಭೆಯೇ ಕಾರಣವಾಗಿರುತ್ತದೆ. ಇಂದು ನಾವು ಈ ಆಧ್ಯಾತ್ಮಿಕ ಕೇಂದ್ರಕ್ಕೆ ಭೇಟಿಕೊಟ್ಟು, ನಿಜವಾದ ಯಾತ್ರಿಕರಾಗಿ ತನ್ಮೂಲಕ ನಮ್ಮ ಆತ್ಮವನ್ನು ಪರಿಶುದ್ಧಮಾಡಿಕೊಂಡು ಹಿಂದಿರುಗುತ್ತಿದ್ದೇವೆ.

* * *

## ಡಿ. ಭೋಜರಾಜ ಸಿಂಹಜಿ

ಗೊಂಡಾಲದ ಮಹಾರಾಜರು

ಬೋಧನೆಗೂ ಮತ್ತು ಪ್ರಾರ್ಥನೆಗೂ ಅನುಕೂಲವಾಗಿ ಕಪಿಲಾನದಿಯ ದಡದಲ್ಲಿರುವ ಈ ಮಠವು ಎಲ್ಲಾ ವಿಷಯ ಗಳಲ್ಲಿಯೂ ನಿಜವಾಗಿ ಪವಿತ್ರ ಸ್ಥಳವಾಗಿದೆ. ಶ್ರೀ ಸ್ವಾಮಿಗಳವರ ದರ್ಶನಭಾಗ್ಯವು ನನಗೆ ಇಂದು ಲಭಿಸಿತು. ಅವರ ಜೀವನದ ಸರಳತೆ, ವಿದ್ವತ್ತು ಮತ್ತು ಉದಾರತೆ ಇವು ಮೆಚ್ಚತಕ್ಕವಾಗಿವೆ.

## ಜಿ. ಪರಮಶಿವಯ್ಯ

ಮುಖ್ಯ ನ್ಯಾಯಾಧೀಶರು

ಈ ಮಠಕ್ಕೆ ಸಂಬಂಧಪಟ್ಟಂತೆ ನೋಡಿದರೆ ನನ್ನ ಮನಮೆಚ್ಚುಗೆಯನ್ನಲ್ಲದೆ ಇನ್ನೇನನ್ನೂ ನಾನು ಹೊಂದಿಲ್ಲ. ಇಲ್ಲಿನ ಆಡಳಿತವು ಬಹಳ ಸೊಗಸಾಗಿದೆ. ಇಂಥ ಮಠಗಳ ಅಧಿಕಾರವನ್ನು ಪಡೆದಿರುವ ಎಲ್ಲರಿಗೂ ಜಗದ್ಗುರುಗಳು ಮಾದರಿಯಾಗಿದ್ದಾರೆ. ಶ್ರೀಮಠದ ಉತ್ಪತ್ತಿಯು ಯಾತ್ರಾರ್ಥಿಗಳ ಭೋಜನಕ್ಕಾಗಿ, ಬಡವರು ಮತ್ತು ಯೋಗ್ಯರಾದ ವಿದ್ಯಾರ್ಥಿಗಳಿಗೋಸ್ಕರವಾಗಿ ಹಾಸ್ಟಲ್‌ಗಳನ್ನು ನಡೆಸುವುದಕ್ಕೂ ವಿನಿಯೋಗಿಸಲ್ಪಡುತ್ತಿದೆ. ಈ ಮಠವು ನಡೆದುಕೊಂಡು ಬರುತ್ತಿರುವ ಮಾರ್ಗವೂ ಮತ್ತು ಈ ಮಠದ ಉತ್ಪತ್ತಿಯು ವಿನಿಯೋಗವಾಗುತ್ತಿರುವ ಅಮೂಲ್ಯ ಉದ್ದೇಶಗಳೂ ಇತರ ಮಠಗಳಿಗೆ ಮತ್ತು ಸಮಾಜದ ಮುಖಂಡರುಗಳಿಗೆ ಅನುಕರಣೀಯವಾಗಿವೆ.

* * *

## ಕೆ. ಹನುಮಂತಯ್ಯ

ಮೈಸೂರು ರಾಜ್ಯದ ಮುಖ್ಯಮಂತ್ರಿಗಳು

ಶ್ರೀ ಜಗದ್ಗುರುಗಳವರು ದೇಶದ ಪ್ರಗತಿಯ ಬಗ್ಗೆ ವಿದ್ಯಾ ಸುಧಾರಣೆಯ ತಪಸ್ಸನ್ನು ಕೈಗೊಂಡು ಮೈಸೂರು ದೇಶ ಮತ್ತು ನೀಲಗಿರಿ ಮುಂತಾದ ಪ್ರಾಂತ್ಯಗಳಲ್ಲಿ ಹತ್ತಾರು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ. ಜಾತಿ ಮತ ಭೇದ ಭಾವವಿಲ್ಲದೆ ಸುಮಾರು ೧೬೦೦ ಮಂದಿ ವಿದ್ಯಾರ್ಥಿಗಳಿಗೆ ಅಶನ ವಸತಿಗಳನ್ನೇರ್ಪಡಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿರುವುದು ತುಂಬಾ ಸ್ತುತ್ಯರ್ಹವಾದುದು.

* * *

## ಎಸ್. ನಿಜಲಿಂಗಪ್ಪ

ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿಗಳು

ಪುರಾತನ ಇತಿಹಾಸವನ್ನು ಹೊಂದಿ ಇಂದಿಗೂ ರಾಷ್ಟ್ರಕ್ಕೆ ಉಪಯುಕ್ತವಾದ ಸೇವೆ ಸಲ್ಲಿಸುತ್ತಿರುವ ಈ ಮಠದ ಸ್ವಾಮಿಗಳವರ ಸೇವೆಯು ಆದರ್ಶಪ್ರಾಯವಾಗಿದೆ. ಮೈಸೂರು ಜಿಲ್ಲೆಯ ನಾನಾ ಭಾಗಗಳಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರಸಾದನಿಲಯಗಳನ್ನು ಸ್ಥಾಪಿಸಿ ವಿದ್ಯಾಪ್ರಸಾರ ಕಾರ್ಯಗಳಲ್ಲಿ ಸ್ವಾಮಿಗಳು ತೊಡಗಿರುವುದು ತುಂಬಾ ಸ್ತುತ್ಯವಾಗಿದೆ. ಶ್ರೀಗಳವರ ಸೇವೆಯು ಈಗಾಗಲೇ ಮೈಸೂರು ಸಂಸ್ಥಾನದಲ್ಲೂ, ಸಂಸ್ಥಾನದ ಹೊರಗೂ ಪ್ರಖ್ಯಾತವಾಗಿದೆ. ಇಂತಹ ಸತ್ಕಾರ್ಯದಲ್ಲಿ ಮಗ್ನರಾಗಿ ಇಡೀ ದೇಶದ ಏಳಿಗೆಗೆ ಶ್ರಮಿಸುತ್ತಿರುವ ಶ್ರೀಗಳವರ ಸೇವಾ ಚಟುವಟಿಕೆಗಳು ಫಲಪ್ರದವಾಗಲೆಂದು ಹಾರೈಸುತ್ತೇನೆ.

# ವೀರಶೈವ ಸಾಹಿತ್ಯ ಸಮೀಕ್ಷೆ



ಪೂಜ್ಯ ಶ್ರೀಗಳವರೊಡನೆ, ಪೇಜಾವರ, ಪರಕಾಲ ಮಠಾಧೀಶ್ವರರು ಮತ್ತು ಸಚ್ಚಿದಾನಂದಾಶ್ರಮದ ಸ್ವಾಮಿಗಳವರು.



ಆದಿಗುರುಗಳ ಜಯಂತ್ಯುತ್ಸವದಲ್ಲಿ ಜಗದ್ಗುರು ಬಾಲಗಂಗಾಧರ ಮಹಾಸ್ವಾಮಿಗಳವರು.



ಜಗದ್ಗುರುಗಳವರೊಡನೆ ಶ್ರೀ ಜ.ಚ.ನಿ.ಯವರು.



ಪೂಜ್ಯ ಶ್ರೀಗಳವರೊಡನೆ ಶ್ರೀ ಬುದ್ಧರಖ್ಖಿತಥೇರಾ ಅವರು.



ಜಗದ್ಗುರುಗಳವರೊಡನೆ ದೆಹಲಿಯ ಆರ್ಚ್‌ಬಿಷಪ್ ಡಾ. ಫರ್ನಾಂಡೆಸ್ ಮತ್ತು ಮೈಸೂರಿನ ಬಿಷಪ್ ಡಾ. ಫರ್ನಾಂಡೆಸ್.



ಜಗದ್ಗುರುಗಳವರೊಡನೆ ತರಳಬಾಳು ಜಗದ್ಗುರು. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳವರು.



ಕರ್ತೃಗದ್ದುಗೆಯಲ್ಲಿ ಶ್ರೀ ಶ್ರೀ ಶಿವಬಾಲಯೋಗಿಗಳು ಮತ್ತು ಪೂಜ್ಯ ಜಗದ್ಗುರುಗಳವರು.



ಸ್ವಾಮಿಚಿನ್ಮಯಾನಂದರೊಡನೆ ಶ್ರೀಗಳವರು.



ಮೈಸೂರು ಜಿಲ್ಲೆಯ ಮಠಾಧಿಪತಿಗಳು ಶ್ರೀಗಳವರೊಡನೆ ಶ್ರೀ ಶೈಲಕ್ಕೆ ಪ್ರವಾಸ ಹೋಗಿದ್ದಾಗ.



ಶ್ರೀ ಶಿವರಾತ್ರೀಶ್ವರ ಗುರುಕುಲದ ಸಾಧಕರೊಡನೆ ಶ್ರೀಗಳವರು.



ಜಗದ್ಗುರುದ್ವಯರೊಡನೆ ಭಾರತದ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದ್ ಮತ್ತು ಶ್ರೀ ಜಯಚಾಮರಾಜ ಒಡೆಯರ್ ಅವರು.



ಶ್ರೀಮಠದಲ್ಲಿ ಜಗದ್ಗುರುದ್ವಯರೊಡನೆ ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರು.



ರಾಜ್ಯಪಾಲ ಶ್ರೀ ಮಂಗಳದಾಸ್ ಪಕ್ವಾಸ್, ಶ್ರೀ ಆರ್. ಆರ್. ದಿವಾಕರ್‌ರವರು – ಹಿರಿಯ ಜಗದ್ಗುರುಗಳವರೊಡನೆ.



ಆದಿಗುರುಗಳ ಜಯಂತ್ಯುತ್ಸವದಲ್ಲಿ ಪೂಜ್ಯ ಶ್ರೀಗಳವರು ಶ್ರೀ ಶರಣಬಸಪ್ಪ ಅಪ್ಪ ಅವರನ್ನು ಆಶೀರ್ವದಿಸುತ್ತಿರುವುದು.




ರಾಜ್ಯಪಾಲ ಶ್ರೀ ಧರ್ಮವೀರ ಅವರು – ಪೂಜ್ಯ ಶ್ರೀಗಳವರೊಡನೆ.



ಪೂಜ್ಯ ಜಗದ್ಗುರುಗಳಿಂದ ರಾಜ್ಯಪಾಲ ಶ್ರೀ ಗೋವಿಂದ ನಾರಾಯಣ್ ಅವರು ಆಶೀರ್ವಾದ ಪಡೆಯುತ್ತಿರುವುದು.



ಹಿರಿಯನಾಯಕರಾದ ಶ್ರೀ ನಿಜಲಿಂಗಪ್ಪ ಮತ್ತು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೊಡನೆ ಜಗದ್ಗುರುವರ್ಯರು.



ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರಿಂದ ಪೂಜ್ಯ ಶ್ರೀಗಳವರಿಗೆ ಭಕ್ತಿ ಸಮರ್ಪಣೆ.



ಸಂಭಾಷಣಾಮಗ್ನರಾದ ಜಗದ್ಗುರುಗಳು ಮತ್ತು ಉಪರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿಯವರು.



ಜಗದ್ಗುರುಗಳು ಮತ್ತು ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು – ವಿಚಾರವಿನಿಮಯದಲ್ಲಿ.




ಪರಮಪೂಜ್ಯ ಜಗದ್ಗುರುಗಳವರೊಡನೆ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರವರು.



ಪರಮ ಪೂಜ್ಯ ಜಗದ್ಗುರುಗಳವರನ್ನು ಮುಖ್ಯಮಂತ್ರಿ ಗುಂಡೂರಾಯರು ಸಂದರ್ಶಿಸಿದುದು.



ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು
– ಹಿರಿಯ ಜಗದ್ಗುರುಗಳವರೊಡನೆ.



ಹಿರಿಯ ಜಗದ್ಗುರುವರ್ಯರೊಡನೆ ತಿರುವಾಂಕೂರು ಸಂಸ್ಥಾನದ
ದಿವಾನ್, ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರು.



ಪೂಜ್ಯ ಶ್ರೀಗಳ ಸನ್ನಿಧಿಯಲ್ಲಿ ಶಾಸಕ ಶ್ರೀ ಎಂ. ಸಿ. ಬಸಪ್ಪನವರು.



ಶ್ರೀ ನಿಟ್ಟೂರು ಶ್ರೀನಿವಾಸರಾಯರು ಮತ್ತು ಸಚಿವ
ಶ್ರೀ ಎ. ಜಿ. ರಾಮಚಂದ್ರರಾಯರೊಡನೆ ಹಿರಿಯ ಜಗದ್ಗುರುಗಳವರು.



ಜಗದ್ಗುರುಗಳವರೊಡನೆ ಸಚಿವ ಸಿದ್ಧವೀರಪ್ಪನವರು.



ಭಾರತದ ಪ್ರಧಾನಿ ಇಂದಿರಾಗಾಂಧಿ ಅವರು ಶ್ರೀಮಠದಿಂದ ಅನುಗ್ರಹಿಸಿದ ಪುಷ್ಪಮಾಲಿಕೆಯನ್ನು ಸ್ವೀಕರಿಸಿದಾಗ



ಪೂಜ್ಯ ಶ್ರೀಗಳವರೊಡನೆ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಕೆ. ಶಿವರಾಮ ಕಾರಂತರು ಮತ್ತು ಪ್ರೊ. ದೇ.ಜ.ಗೌ. ಅವರು.



ಪೂಜ್ಯ ಶ್ರೀಗಳವರೊಡನೆ ಉಪರಾಷ್ಟ್ರಪತಿ ಶ್ರೀ ಜಿ. ಎಸ್. ಪಾಠಕ್ ಮತ್ತು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ ಅವರು.

# ವಚನ ಸಾಹಿತ್ಯ

ಜೀರಗೆ ಕಟ್ಟೆ ಬಸವಪ್ಪ

ವಚನ ಸಾಹಿತ್ಯವು ಸಾಹಿತ್ಯ ಪ್ರಪಂಚದಲ್ಲಿ ಒಂದು ವಿಶೇಷವಾದ ಸ್ಥಾನವನ್ನು ಪಡೆದಿದೆ. ವಚನ ಸಾಹಿತ್ಯವು ಗದ್ಯವೇ ಎಂದರೆ ಗದ್ಯವೂ ಅಲ್ಲ, ಪದ್ಯವೇ ಎಂದರೆ ಪದ್ಯವೂ ಅಲ್ಲ. ಅದು ಗದ್ಯದ ಸರಳತೆಯನ್ನೂ, ಪದ್ಯದ ಲಾಲಿತ್ಯವನ್ನೂ ಜೊತೆಗೂಡಿಸಿಕೊಂಡಿರುವ ಒಂದು ವಿಶಿಷ್ಟವಾದ ಕನ್ನಡ ನುಡಿಗಟ್ಟು. ಅದರ ರಚನೆ ಸೂತ್ರರೂಪವನ್ನು ತಾಳಿದೆ. ಪ್ರತಿ ವಚನವೂ ದರ್ಶನಶಾಸ್ತ್ರದ ತ್ರಿಪುಟಿಯಾದ ಈಶ್ವರ-ಜೀವ-ಜಗತ್ತುಗಳ ಸಂಬಂಧವಾದ ಯಾವುದೋ ಒಂದು ಮೂಲಭೂತ ವಿಷಯವನ್ನು ಕುರಿತು ತರ್ಕಬದ್ಧವಾಗಿ, ಅನುಭವಸಮ್ಮತವಾಗಿ, ಹಿತಮಿತ ಭಾಷೆಯಲ್ಲಿ, ಕಾವ್ಯಮಯವಾಗಿ ಚಿತ್ರಿಸುತ್ತದೆ. ಈ ಕಾರಣದಿಂದಲೇ ವಚನಗಳು ವೇದೋಪನಿಷತ್ತುಗಳ ಸರಿಸಮವಾದ ಸ್ಥಾನವನ್ನು ಪಡೆದಿವೆ. ವಚನ ಸಾಹಿತ್ಯವೆಂದರೆ ಪರಸ್ಪರ ಸಂಬಂಧವಿಲ್ಲದ ಬಿಡಿ ಬಿಡಿಯಾದ ವಿವಿಧ ವಿಷಯಗಳ ಸಂಕಲನವಲ್ಲ. ವಚನ ಸಾಹಿತ್ಯದಲ್ಲಿ ಏಕಧಾರೆಯಾಗಿ ಹರಿಯುವ ಒಂದು ನಿಗೂಢ ಜೀವನ ಸಿದ್ಧಾಂತವನ್ನು ನಾವು ಕಾಣುತ್ತೇವೆ.

ವಿಶ್ವದ ರಚನೆ ಮತ್ತು ಸ್ವರೂಪ, ಅದರ ಗೊತ್ತು ಮತ್ತು ಗುರಿ, ಅದರಲ್ಲಿ ಅಡಗಿರುವ ವೈವಿಧ್ಯಮಯವಾದ ವಸ್ತುಗಳ, ಶಕ್ತಿಗಳ ಮತ್ತು ಜೀವಿಗಳ ರೂಪರೇಷೆ, ಗುಣವಿಶೇಷ ಮತ್ತು ಕ್ರಿಯಾಚರಣೆ, ಹಾಗೂ ಅವುಗಳ ಪರಸ್ಪರ ಸಂಬಂಧ—ಇವುಗಳನ್ನು ವಿವಿಧ ಕೋನಗಳಿಂದ ದರ್ಶಿಸಿ, ವಿಮರ್ಶಿಸಿ, ವಿಶ್ಲೇಷಿಸಿ, ಈ ಸೃಷ್ಟಿಯ ಮಧ್ಯೆ ಮಾನವ ಜೀವಿಯ ಆಗುಹೋಗುಗಳನ್ನು ಚಿತ್ರಿಸಿ, ಒಂದು ಏಕಮೇವಾದ್ವಿತೀಯವಾದ ಸಾಮರಸ್ಯಸಿದ್ಧಾಂತವನ್ನು ವಚನ ಸಾಹಿತ್ಯವು ಅಮೋಘವಾಗಿ ಪ್ರತಿಪಾದಿಸುತ್ತದೆ. ಸೃಷ್ಟಿಲಯಗಳ ನಡುವಣ ಸ್ಥಿತಿಗೆ—ಅತ್ಯವಶ್ಯಕವಾಗಿ ಬೇಕಾದ ತನು ಮನ ಧನಗಳ ಸಂಪಾದನೆ ಮತ್ತು ಅವುಗಳ ವಿನಿಯೋಗ – ಇವುಗಳ ಭೂಮಿಕೆಯನ್ನು ವಚನ ಸಾಹಿತ್ಯವು ದಿವ್ಯವಾಗಿ ಚಿತ್ರಿಸುತ್ತದೆ. ಈ ದೆಸೆಯಿಂದ ವಚನ ಸಾಹಿತ್ಯವು ಒಂದು ಸಮಗ್ರ ದಾರ್ಶನಿಕ ಸಾಹಿತ್ಯವಾಗಿ ಪರಿಣಾಮಗೊಂಡಿದೆ. ಯಾವುದೇ ದರ್ಶನಶಾಸ್ತ್ರದ ಅನಿವಾರ್ಯ ಅಂಗಗಳೆನಿಸಿಕೊಂಡ ವಿಚಾರ ಸಿದ್ಧಾಂತ ("The Creed of philosophy"), ಆಚಾರ ಸಿದ್ಧಾಂತ ("The code of conduct") ಮತ್ತು ಅರ್ಚನ ಸಿದ್ಧಾಂತ ("The cult of worship")—ಇವುಗಳನ್ನು ವಚನ ಸಾಹಿತ್ಯವು ಹೊಂದಿದೆ. ವಚನ ಸಾಹಿತ್ಯದಲ್ಲಿ ಷಟ್ಸ್ಥಲವೇ ವಿಚಾರ ಸಿದ್ಧಾಂತ, ಪಂಚಾಚಾರವೇ ಆಚಾರ ಸಿದ್ಧಾಂತ, ಅಷ್ಟಾವರಣವೇ ಅರ್ಚನ ಸಿದ್ಧಾಂತ. ವಚನ ಸಾಹಿತ್ಯವು ಲೋಕದ ಸಮಗ್ರ ಮಾನವಕೋಟಿಯನ್ನು ಒಪ್ಪಮಾಡಿ ಅಪ್ಪಿಕೊಳ್ಳುವ ಮಹಾ ಪರಿವರ್ತನಶಕ್ತಿಯನ್ನು ಹೊಂದಿದೆ. ವಚನ ಸಾಹಿತ್ಯದ ಈ ಮಹಾಪರಿವರ್ತನಶಕ್ತಿ ಸಿದ್ಧಾಂತದಲ್ಲಿ ಉಚ್ಚ-ನೀಚಗಳೆಂಬ ವಿಭಿನ್ನತೆಗಳಾಗಲಿ, ಸ್ತ್ರೀ-ಪುರುಷರೆಂಬ ತರತಮಗಳಾಗಲಿ, ಬಡವ ಬಲ್ಲಿದರೆಂಬ ಏರುಪೇರುಗಳಾಗಲಿ ಕಂಡುಬರುವುದಿಲ್ಲ. ಅದಕ್ಕೆ ಬದಲು ವಚನ ಸಾಹಿತ್ಯವು ಈ ಅಸಮತೆಗಳ ವಿರುದ್ಧ ಹೋರಾಡಿ, ಸರ್ವಸಮಾನತೆಯ ಸ್ವಾತಂತ್ರ್ಯದ ಹೊನಲನ್ನು ಹರಿಸುವ ಸಾಮರ್ಥ್ಯವನ್ನು ಹೊಂದಿದೆ. ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವು ಸರ್ವರ ಸ್ವತ್ತಾಗಿದೆಯೆಂಬ, ಈ ಸಿದ್ಧಾಂತವನ್ನು ಯಾರು ಬೇಕಾದರೂ ಅನುಸರಿಸಿ ಉತ್ಕೃಷ್ಟ ವ್ಯಕ್ತಿಗಳಾಗಬಹುದೆಂಬ ಉದಾರ ಧೋರಣೆಯನ್ನು ವಚನ ಸಾಹಿತ್ಯವು ಸಂದೇಹಕ್ಕೆ ಆಸ್ಪದವಿಲ್ಲದಂತೆ ಮೇಲಿಂದ ಮೇಲೆ ಕೂಗಿ ಕೂಗಿ ಸಾರುತ್ತದೆ. ವಚನ ಸಾಹಿತ್ಯದಲ್ಲಿ ನಿರೂಪಿತವಾದ ಈ ಸರ್ವಜನಹಿತಸಿದ್ಧಾಂತಮಾರ್ಗವನ್ನು ಜಾತಿ, ಮತ, ಲಿಂಗ, ವರ್ಣಗಳ ಭೇದವಿಲ್ಲದೆ ಯಾರು ಬೇಕಾದರೂ ಅನುಸರಿಸಬಹುದಾಗಿದೆ.

## ವಚನ ಸಾಹಿತ್ಯದ ಗುರಿ

ವಚನ ಸಾಹಿತ್ಯವು ಶ್ರೇಷ್ಠ ಸಿದ್ಧಾಂತ ಕಾವ್ಯವಾಗಿ ಪರಿಣಮಿಸಿದ್ದರೂ, ಆ ಪರಿಣಾಮ ಸಿದ್ಧಾಂತ ಕಾವ್ಯ ಸೃಷ್ಟಿಯ ಗುರಿಯ ದೆಸೆಯಿಂದಲ್ಲ. ಆ ಗುರಿ ಅನಿವಾರ್ಯವಾಗಿ ಸಾಧಿತವಾಗಿದೆ. ಏಕೆಂದರೆ ವಚನಕಾರರು ಕಾವ್ಯ ವನ್ನು ನಿರ್ಮಾಣ ಮಾಡಬೇಕೆಂಬ ಗುರಿಯಿಂದ ವಚನಗಳನ್ನು ರಚಿಸಲಿಲ್ಲ. ಲೋಕದ ಜನರ ನಡೆನುಡಿಗಳನ್ನು ತಿದ್ದಿ, ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡಿ. ಲೋಕಕಲ್ಯಾಣವನ್ನು ಸಾಧಿಸಬೇಕೆಂಬ ಏಕೈಕ ಗುರಿಯಿಂದ ಅವರು ವಚನಗಳನ್ನು ರಚಿಸಿದರು. ವಚನಕಾರರು ಲೋಕದ ಸೇವಕರಾಗಿ. ಸೇವಾ ಕಂಕಣವನ್ನು ತೊಟ್ಟು, ಲೋಕ ವನ್ನು ಶುದ್ಧಗೊಳಿಸಲೋಸುಗ ವಚನ ಸಾಹಿತ್ಯವನ್ನು ನಿರ್ಮಾಣ ಮಾಡಿದರೇ ಹೊರತು, ಸ್ಥಾನ-ಮಾನಗಳನ್ನು ಗಳಿಸಬೇಕೆಂದಾಗಲಿ. ಅಧಿಕಾರ ಪದವಿಗಳನ್ನು ಪಡೆಯಬೇಕೆಂದಾಗಲಿ, ಬಿರುದು ಬಾವಲಿಗಳನ್ನು ಗಳಿಸಬೇಕೆಂದಾಗಲಿ ಅವರು ವಚನ ಸಾಹಿತ್ಯವನ್ನು ನಿರ್ಮಾಣ ಮಾಡಲಿಲ್ಲ. ಈ ಅಂಶವನ್ನು ವಚನ ಸಾಹಿತ್ಯವು ಸ್ಪಷ್ಟಪಡಿಸುತ್ತದೆ. "ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ. ರುದ್ರ ಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆ ನಯ್ಯಾ! ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೊಂದನೆ ಕರುಣಿಸಾ ಸೆರಗೊಡ್ಡಿ ಬೇಡುವೆ ಕೂಡಲ ಸಂಗಮ ದೇವಾ!" ಇದು ವಚನ ಸಾಹಿತ್ಯದ ದಿಟ್ಟ ನಿಲವು. ಜನತಾ ಸೇವೆಯೇ ವಚನ ಸಾಹಿತ್ಯದ ಪರಮ ಧ್ಯೇಯ. ಈ ಪರಮ ಧ್ಯೇಯವನ್ನು ಮುಂದಿಟ್ಟುಕೊಂಡು ವಚನ ಸಾಹಿತ್ಯವು ಲೋಕವನ್ನು ತಿದ್ದಿ ಶುದ್ಧೀಕರಣ ಮಾಡಲು ಆವಿರ್ಭವಿಸಿತು. "ವಚನ ಸಾಹಿತ್ಯ ಯಾರಿಗಾಗಿ?" ಎಂದು ಯಾರಾದರೂ ವಚನಕಾರರನ್ನು ಕೇಳಿದರೆ, "ಅದು ಪಾಪಿಗಳಿಗಾಗಿ. ಪಾಪಿ ಗಳನ್ನು ಪುಣ್ಯವಂತರನ್ನಾಗಿ ಮಾಡುವುದಕ್ಕಾಗಿ" ಎಂಬುದು ವಚನಕಾರರ ಎದೆಗಾರಿಕೆಯ ದಯಾಪೂರ್ಣ ಉತ್ತರ. "ಎಲವೊ. ಎಲವೋ! ಪಾಪಕರ್ಮವ ಮಾಡಿದವನೇ, ಎಲವೊ ಎಲವೊ! ಬ್ರಹ್ಮಹತ್ಯವ ಮಾಡಿದವನೇ. ಒಮ್ಮೆ "ಶರಣು" ಎನ್ನಲವೋ! ಒಮ್ಮೆ "ಶರಣು" ಎಂದರೆ ಪಾಪಕರ್ಮ ಬಿಟ್ಟು ಓಡುವುವು! ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೆ ಇದ್ದಾವು! ಒಮ್ಮೆ "ಶರಣು" ಎನ್ನು ಕೂಡಲಸಂಗಮದೇವಂಗೆ!" ಇಲ್ಲಿ ವಚನ ಸಾಹಿತ್ಯವು ಪ್ರಾಯಶ್ಚಿತ್ತಕ್ಕೆ ಬದಲು ಪಶ್ಚಾತ್ತಾಪವನ್ನು ಪಾಪ ಪರಿಹಾರಕ್ಕೆ ವಿಧಿಸಿದೆ. ಪ್ರಾಯಶ್ಚಿತ್ತದಲ್ಲಿ ಹೃದಯ ಪರಿವರ್ತನೆ ಆಗುವುದಿಲ್ಲ. ಪಶ್ಚಾತ್ತಾಪದಲ್ಲಿ ಹೃದಯ ಪರಿವರ್ತನೆ ಆಗುತ್ತದೆ. ಪ್ರಾಯಶ್ಚಿತ್ತ ಮಾಡಿಕೊಳ್ಳುವವನು ಪಾಪ ಪರಿಹಾರಕ್ಕೆ ಹೇಗಿದ್ದರೂ ಪ್ರಾಯಶ್ಚಿತ್ತವಿದೆ ಎಂದು ಪಾಪಕರ್ಮಗಳನ್ನು ಮುಂದುವರಿಸುತ್ತಾ ಹೋಗುತ್ತಾನೆ. ಪಶ್ಚಾತ್ತಾಪ ಪಡುವವನು ಇನ್ನು ಮುಂದೆ ನಾನು ಪಾಪಕರ್ಮಗಳನ್ನು ಮಾಡುವುದಿಲ್ಲವೆಂದು ಸಂಕಲ್ಪಿಸುತ್ತಾನೆ. ಈ ಕಾರಣದಿಂದ ವಚನ ಸಾಹಿತ್ಯವು ಪಾಪಿಗಳಿಗೆ ಪ್ರಾಯಶ್ಚಿತ್ತದ ದಂಡ ತೆತ್ತಿಗೆಗೆ ಬದಲು, ಪಶ್ಚಾತ್ತಾಪದ ಮಂಗಳಸ್ನಾನ ವನ್ನು ಮಾಡಿಸಿ. ಶಿವಾಚಾರದ ದೀಕ್ಷೆಯನ್ನು ಕೊಟ್ಟು, ಅವರು ಹೊಸ ಜನ್ಮವನ್ನು ಪಡೆಯುವಂತೆ ಮಾಡುವ ದಿವ್ಯ ಮಾರ್ಗವನ್ನು ಜಗತ್ತಿಗೆ ತೋರಿಸಿಕೊಟ್ಟಿರುತ್ತದೆ. "ಆದ್ಯರ ವಚನ ಪರುಷ ಕಂಡಯ್ಯಾ! ನಂಬಲೊಡನೆ ವಿಜಯ ನೋಡಯ್ಯಾ! ಅಧರಕ್ಕೆ ಕಹಿ! ಉದರಕ್ಕೆ ಸಿಹಿ! ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ!" ಪಾಪಿಗಳನ್ನು ಪುಣ್ಯವಂತರನ್ನಾಗಿ ಪರಿವರ್ತಿಸುವ ಪವಾಡಕ್ಕಿಂತ ಹೆಚ್ಚಿನ ಪವಾಡ ಮತ್ತೊಂದಿಲ್ಲವೆಂದು ವಚನ ಸಾಹಿತ್ಯವು ಪವಾಡದ ಸಹಜ ಸ್ವರೂಪವನ್ನು ನಿರ್ದೇಶಿಸಿ, ದರ್ಶನ ಸಾಹಿತ್ಯಲೋಕದಲ್ಲಿ ಉಚ್ಚಸ್ಥಾನವನ್ನು ಅಲಂಕರಿಸಿರುತ್ತದೆ.

## ವಚನ ಸಾಹಿತ್ಯದ ಸಾಧನೆ

ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ತತ್ವಗಳ ಅವಲೋಕನ ಮತ್ತು ಅನುಷ್ಠಾನಗಳಿಂದ ಲೋಕಕ್ಕೆ ಎರಡು ಬಗೆಯ ಉಪಕಾರಗಳು ಸಂದಿರುತ್ತವೆ. ಅವು ಯಾವುವೆಂದರೆ : ಮಾನವನ ನಡೆಯ ತಿದ್ದಿಕೆ ಒಂದು. ಅವನ ನುಡಿಯ ತಿದ್ದಿಕೆ ಎರಡು. ಉತ್ತಮವಾದ ನಡೆ ಮತ್ತು ಉತ್ತಮವಾದ ನುಡಿ—ಇವುಗಳ ಸಮ್ಮೇಳವೇ ಪೂರ್ಣ ಹಾಗೂ ಪುಣ್ಯಜೀವನ. ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕು. ಇದು ವಚನ ಸಾಹಿತ್ಯದ ಲೋಕಹಿತಸಾಧನೆಯ ದಿವ್ಯ ಮಾರ್ಗ.

## ನಡೆಯ ತಿದ್ದಿಕೆ

ಮೊದಲನೆಯದಾಗಿ ವಚನ ಸಾಹಿತ್ಯದಲ್ಲಿ ನಡೆಯ ತಿದ್ದಿಕೆ ಹೇಗೆ ಪ್ರತಿಪಾದಿತವಾಗಿದೆ ಎಂಬುದನ್ನು ನೋಡೋಣ. ವಚನ ಸಾಹಿತ್ಯವು ಮಾನವನ ನಡೆಯನ್ನು ತಿದ್ದಲು ಆರು ಹಂತಗಳಲ್ಲಿ ಪ್ರಯತ್ನಿಸಿದೆ. ಈ ಆರು ಹಂತ

ಗಳನ್ನು ವಚನ ಸಾಹಿತ್ಯದಲ್ಲಿ "ಷಟ್‌ಸ್ಥಲ" ಎಂದು ಕರೆಯಲಾಗಿದೆ. ಷಟ್‌ಸ್ಥಲವೆಂದರೆ ಆರು ಸ್ಥಲಗಳು ಅಥವಾ ಹಂತಗಳು ಅಥವಾ ಮೆಟ್ಟಿಲುಗಳು ಎಂದು ಅರ್ಥ. ಈ ಆರು ಸ್ಥಲಗಳ ಮೂಲಕ ಮಾನವ ತನ್ನ ನಡೆಯನ್ನು ಸುಧಾರಿಸಿಕೊಳ್ಳಬೇಕು.

**ಮೊದಲನೆಯ ಹಂತ**

ಮಾನವನ ನಡೆಯ ತಿದ್ದಿಕೆಯಲ್ಲಿ ಮೊದಲನೆಯ ಹಂತ ದಾರಿದ್ರ್ಯ ನಿರ್ಮೂಲನ. ಇದು ಜಗತ್ತಿನ ಮೊದಲನೆಯ ಸಮಸ್ಯೆ. ಇದನ್ನು ಸಮಸ್ಯೆಗಳ ಸಮಸ್ಯೆ ಎಂದರೂ ತಪ್ಪಿಲ್ಲ. ಇದರ ಪರಿಹಾರಕ್ಕಾಗಿ ವಚನ ಸಾಹಿತ್ಯವು "ಕಾಯಕ"ದ ನಡೆಯನ್ನು ಪ್ರತಿಪಾದಿಸುತ್ತದೆ. ಕಾಯಕ ಎಂದರೆ ಉದ್ಯೋಗ. ಈ ಹಂತದ ನಡೆಗೆ ವಚನ ಸಾಹಿತ್ಯವು ಪ್ರಥಮ ಸ್ಥಾನವನ್ನು ಕೊಟ್ಟಿದೆ. ಮಾನವ ದರಿದ್ರನಾಗಿರಬಾರದು. ಪರಾವಲಂಬಿಯಾಗಿರಬಾರದು. ಭಿಕ್ಷೆಯನ್ನು ಬೇಡಬಾರದು. ತನ್ನ ಕಾಲ ಮೇಲೆ ತಾನು ನಿಂತು. ಶ್ರಮಪಟ್ಟು. ಬೆವರನ್ನು ಸುರಿಸಿ. ಯಾವುದಾದರೂ ಒಂದು ಶುದ್ಧವಾದ. ಸಾತ್ವಿಕವಾದ ಮತ್ತು ಪ್ರಾಮಾಣಿಕವಾದ ಉದ್ಯೋಗವನ್ನು ಕೈಕೊಂಡು ಸಂಪಾದನೆಯನ್ನು ಮಾಡಬೇಕೆಂದು ವಚನ ಸಾಹಿತ್ಯವು ಘೋಷಿಸುತ್ತದೆ. ವಚನ ಸಾಹಿತ್ಯದ ಪರಿಭಾಷೆಯಲ್ಲಿ ಸತ್ಯ ಶುದ್ಧ ಸಾತ್ವಿಕ ಉದ್ಯೋಗಕ್ಕೆ "ಕಾಯಕ" ಎಂಬ ಹೆಸರಿದೆ. ದಾರಿದ್ರ್ಯ ನಿರ್ಮೂಲನಕ್ಕೆ ಕಾಯಕವೇ ಏಕೈಕ ಪರಿಹಾರವೆಂದು ವಚನ ಸಾಹಿತ್ಯವು ಕೂಗಿ ಹೇಳುತ್ತದೆ. ಕಾಯಕದ ಪ್ರತಿಪಾದನೆಯನ್ನು ವಚನ ಸಾಹಿತ್ಯವು ಷಟ್‌ಸ್ಥಲದ ಮೊದಲನೆಯ ಸ್ಥಲವಾದ ಭಕ್ತ ಸ್ಥಲದಲ್ಲಿ ವಿಸ್ತಾರವಾಗಿ ಮಾಡಿದೆ. ಕಾಯಕದ ಬಗೆಗೆ ವಚನ ಸಾಹಿತ್ಯವು ಹಲವಾರು ಮಹತ್ವದ ಸೂತ್ರಗಳನ್ನು ನಿರೂಪಿಸಿದೆ. "ದರಿದ್ರ ಸಿರಿವಂತನ ನೆನೆದೊಡೆ ಸಿರಿವಂತನಾಗಬಲ್ಲನೆ ?". "ಬೇಡಲಾಗದು ಭಕ್ತ!". "ಬೇಡುವ ಗುಣ ಅಮಳೇಶ್ವರ ಲಿಂಗಕ್ಕೆ ದೂರ!", "ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು ! ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು ! ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು !". "ಚಿತ್ತ ಶುದ್ಧನಾಗಿ ಕಾಯಕವ ಮಾಡುವ ಸದ್ಭಕ್ತನ ಮನೆಯಲ್ಲಿ ಎತ್ತ ನೋಡಿದೊಡೆ ಅತ್ತ ಲಕ್ಷ್ಮಿ ತಾನೇತಾನಾಗಿಪ್ಪಳು !". "ಕಾಯಕದಲ್ಲಿ ನಿರತನಾದಡೆ ಗುರು ದರ್ಶನವಾದಡೂ ಮರೆಯಬೇಕು ! ಲಿಂಗಪೂಜೆಯಾದರೂ ತ್ಯಜಿಸಬೇಕು ! ಜಂಗಮ ಮುಂದಿದ್ದರೂ ಹಂಗು ಹರಿಯಬೇಕು !". "ಕಾಯಕವೇ ಕೈಲಾಸ !"—ಇವೇ ಮೊದಲಾದ ಅನಂತಸೂತ್ರಗಳ ಮೂಲಕ ವಚನ ಸಾಹಿತ್ಯವು ಮಾನವನ ನಡೆಯ ತಿದ್ದಿಕೆಯ ಮೊದಲ ಹಂತವನ್ನು ಮನಮುಟ್ಟುವಂತೆ ಚಿತ್ರಿಸಿ. ಲೋಕದ ಸಂಪದ ಸೌಭಾಗ್ಯಗಳಿಗೆ ದಿವ್ಯವಾದ ಮಾರ್ಗದರ್ಶನವನ್ನು ಮಾಡಿರುತ್ತದೆ.

**ಎರಡನೆಯ ಹಂತ**

ಇನ್ನು ಮಾನವನ ನಡೆಯ ತಿದ್ದಿಕೆಯಲ್ಲಿ ಎರಡನೆಯ ಹಂತ ಅಜ್ಞಾನ ನಿವಾರಣ. ಜ್ಞಾನವು ಕ್ರಿಯೆಯ ಜೊತೆಗೆ ಸೇರಿಕೊಂಡು ಕ್ರಿಯೆಗೆ ಪರಿಪೋಷಕವಾದಾಗಲೇ ಮಾನವನ ಪ್ರಗತಿ ಸುಗಮವಾಗುತ್ತದೆ. ಪಾಪ-ಪುಣ್ಯಗಳ ಅರಿವು ಸ್ಪಷ್ಟವಾಗುತ್ತದೆ. ಮನೋಧೈರ್ಯ ಸ್ಥಾಪಿತವಾಗುತ್ತದೆ. ನಾನು ಕೀಳೆಂಬ ನೈಚ್ಯಭಾವ ಮಾಯವಾಗುತ್ತದೆ. ಆದುದರಿಂದ ಮಾನವ ಜ್ಞಾನವನ್ನು ಸಂಪಾದಿಸಬೇಕು. ಜ್ಞಾನಕ್ಕೆ ಆಧಾರವಾದ ಮನಸ್ಸು ಹರಿತಗೊಳ್ಳಬೇಕು. ಮನಸ್ಸಿನ ಹರಿತಕ್ಕೆ ಶರೀರ ಆರೋಗ್ಯಕರವಾಗಿರಬೇಕು. ಆರೋಗ್ಯಕರವಾದ ಶರೀರದಲ್ಲಿ ಆರೋಗ್ಯಕರವಾದ ಮನಸ್ಸು ಎಂಬ ವಸ್ತುಸ್ಥಿತಿಯನ್ನು ಮನಗಂಡು ವಚನ ಸಾಹಿತ್ಯವು ಶರೀರ ಮನಸ್ಸುಗಳ ಸಮತೋಲನ ಬೆಳವಣಿಗೆಗೆ ಹೆಚ್ಚಿನ ಗಮನವನ್ನು ಕೊಟ್ಟಿದೆ. ಈ ಬಗೆಗೆ ವಚನ ಸಾಹಿತ್ಯವು ಷಟ್‌ಸ್ಥಲದ ಎರಡನೆಯ ಸ್ಥಲವಾದ ಮಹೇಶ್ವರ ಸ್ಥಲದಲ್ಲಿ ದಿವ್ಯವಾದ ಸೂತ್ರಗಳನ್ನು ಒದಗಿಸಿದೆ. "ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು ! ನಿಂದಲ್ಲಿ ನಿಲ್ಲಲೀಯದು ! ಹೊಂದಿದಲ್ಲಿ ಹೊಂದಲೀಯದು !", "ಅಂದಣವನೇರಿದ ಸೊಣಗನಂತೆ ಕಂಡಡೆ ಬಿಡದು ಮುನ್ನಿನ ಸ್ವಭಾವವನು !", "ಸುಡು ಸುಡು ಮನವಿದು ವಿಷಯಕ್ಕೆ ಎಳಸುವುದು ! ಮೃಡಾ. ನಿಮ್ಮ ಅನುದಿನ ನೆನೆವಂತೆ ಮಾಡು !", "ಹಲವು ಕಡೆಗೆ ಹರಿದು ಹೋಹ ಮನವನು ನೆನಹಿನ ಹಸ್ತದಿಂದಲಿ ಹಿಡಿದು. ಇಷ್ಟಲಿಂಗದೊಳು ಬೆರೆಸಿ. ಲಿಂಗಯೋಗವನಾಚರಿಸಿ. ದೃಢತನುಮನಂಗಳ ಗಳಿಸಿ. ಕೃತನಿಶ್ಚಯದಿಂ ಅನಿಷ್ಟವ ಪರಿಹರಿಸಬಲ್ಲೊಡೆ ಅದೇ ಲಿಂಗಾಚಾರವು !", "ದೇಹವೇ ದೇಗುಲ, ಪ್ರಾಣವೇ ಲಿಂಗ", "ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜ ವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು! ವಿಚಾರವೆಂಬ ಹೂವಾಗಿತ್ತು! ಆಚಾರವೆಂಬ ಕಾಯಾಯಿತ್ತು! ನಿಷ್ಪತ್ತಿ

ಯೆಂಬ ಹಣ್ಣಾಯಿತ್ತು! ನಿಷ್ಪತ್ತಿಯೆಂಬ ಹಣ್ಣು. ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ!". "ಏನೆಂಬೆ ಏನೆಂಬೆ ಒಂದು ಎರಡಾದುದ! ಏನೆಂಬೆ ಏನೆಂಬೆ ಎರಡು ಒಂದಾದುದ!". "ಸಮಸ್ತ ಕತ್ತಲೆಯು ಮಸಕವ ಕಳೆದು. ಬೆಳಗು ಬೆಳಗಿಂಗೆ ಸಿಂಹಾಸನವಾಗಿ. ಬೆಳಗು ಬೆಳಗ ಕೂಡಿದ ಕೂಟವ ಕೂಡಲ ಸಂಗಯ್ಯ ತಾನೇ ಬಲ್ಲ!", "ಒಡಲೆಂಬ ಗುಡಿಯೊಳಗೆ ಒಡೆದು ಮೂಡಿದ ಲಿಂಗದ ಎಡೆಯ ನೋಡಲೆಂದು ಹೋದರೆ ನೋಡುವ ನೋಟವೆಲ್ಲ ಲಿಂಗವಾಯಿತ್ತು! ಈ ಬೆಡಗು ಬಿನ್ನಾಣದ ಲಿಂಗವ ತುಡುಕಿ ಹಿಡಿದು ಕೂಡಬಲ್ಲಾತ ಮೃಡ ನಲ್ಲದೆ ಮಾನವನಲ್ಲ!". "ಕಾಯ ಮುನ್ನವೋ? ಕಾಯದಲ್ಲಿಪ್ಪ ಮನ ಮುನ್ನವೋ? ಮನ ಮುನ್ನವೋ? ಮನ ದಲ್ಲಿಪ್ಪ ಚೈತನ್ಯ ಮುನ್ನವೋ? ಚೈತನ್ಯ ಮುನ್ನವೋ? ಚೈತನ್ಯದಲ್ಲಿಪ್ಪ ಮಾಯೆ ಮುನ್ನವೋ? ಇವಾವುವೂ ಮುನ್ನವಲ್ಲ ಮುನ್ನವಲ್ಲ! ಕಪಿಲಸಿದ್ಧ ಮಲ್ಲಿಕಾರ್ಜುನಾ ನಿನ್ನ ನಿರಾಳದ ನಿಜದ ನಿರ್ವಯಲಿನ ಶೂನ್ಯದ ಶೂನ್ಯವೇ ಮುನ್ನ ನೋಡಾ!". "ನೋಟವೇ ಕೂಟ. ಕೂಟವೇ ಪ್ರಾಣ. ಪ್ರಾಣವೇ ಏಕ. ಏಕವೇ ಸಮರಸ. ಸಮರಸವೇ ಲಿಂಗ. ಲಿಂಗವೇ ಪರಿಪೂರ್ಣ. ಪರಿಪೂರ್ಣವೇ ಪರಬ್ರಹ್ಮ. ಪರಬ್ರಹ್ಮವೇ ತಾನು—ಇಂತೀ ನಿಜವ ನಿಮ್ಮ ಶರಣರು ಬಲ್ಲರಲ್ಲದೆ ಕಣ್ಣುಗೆಟ್ಟ ಅಣ್ಣಗಳು ಎತ್ತ ಬಲ್ಲರು ಗುಹೇಶ್ವರಾ?" ಈ ರೀತಿಯಾದ ಅನಂತಸೂತ್ರ ವಾಕ್ಯಗಳ ಮೂಲಕ ವಚನ ಸಾಹಿತ್ಯವು ಪಿಂಡಾಂಡ-ಬ್ರಹ್ಮಾಂಡಗಳ. ಜೀವಾತ್ಮ-ಪರಮಾತ್ಮರುಗಳ. ಹುಟ್ಟು-ಸಾವುಗಳ. ಸತ್ಯ-ಮಿಥ್ಯಗಳ. ಪುಣ್ಯ-ಪಾಪಗಳ. ಸ್ವರ್ಗ-ನರಕಗಳ—ಹೀಗೆ ಅನಂತ ವಿಚಾರಗಳ ಬಗೆಗೆ ಜ್ಞಾನವನ್ನು ಒದಗಿಸಿ ಮಾನವನ ವಿಚಾರಪೂರ್ಣ ನಡೆಗೆ ಮಾರ್ಗದರ್ಶನ ಮಾಡಿರುತ್ತದೆ.

**ಮೂರನೆಯ ಹಂತ**

ಇನ್ನು ಮಾನವನ ನಡೆಯ ತಿದ್ದಿಕೆಯಲ್ಲಿ ಮೂರನೆಯ ಹಂತ ಸಂಪದ ಸಮ ವಿನಿಯೋಗ. ಇದು ಜಗತ್ತಿನ ಮಹಾ ಸಮಸ್ಯೆಗಳಲ್ಲಿ ಮೂರನೆಯದಾಗಿದೆ. ಉದ್ಯೋಗ ಮತ್ತು ಉತ್ಪಾದನೆಗಳು ಸಾಕಷ್ಟು ಇಲ್ಲದಿರುವುದು. ಉಳ್ಳವರು ಇಲ್ಲದವರ ಅಸಹಾಯಕತೆಯನ್ನು ದುರುಪಯೋಗಮಾಡಿಕೊಂಡು ಅವರ ದೈಹಿಕ ಹಾಗೂ ಮಾನಸಿಕ ದುಡಿಮೆಗೆ ತಕ್ಕ ಪ್ರತಿಫಲವನ್ನು ಕೊಡದಿರುವುದು. ಶ್ರೀಮಂತರು ತಮ್ಮ ಹಣವನ್ನು ಯಾವ ಉದ್ಯಮಗಳಿಗೂ ಉಪಯೋಗಿಸದೆ ಬಚ್ಚಿಡುವುದು. ಅತಿವೃಷ್ಟಿ–ಅನಾವೃಷ್ಟಿ–ಭೂಕಂಪ–ಪ್ರವಾಹ ಮೊದಲಾದ ಪ್ರಕೃತಿಯ ವಿಕೋಪ ಗಳು. ಯುದ್ಧಗಳು. ಕ್ರಾಂತಿಗಳು. ವ್ಯರ್ಥವಾದ ದುಂದುಗಾರಿಕೆಗಳು. ಉತ್ಪಾದಕವಲ್ಲದ ಸಾಲಸೋಲಗಳು—ಇವೇ ಮುಂತಾದವುಗಳು ಸಂಪತ್ತಿನ ಅಸಮ ಹಂಚಿಕೆಗೆ ಕಾರಣಗಳಾಗಿ. ಇವುಗಳ ದೆಸೆಯಿಂದ ಮಾನವನ ಬಾಳುವೆ ಕಷ್ಟ ಮಯವೂ. ದುಃಖಪೂರಿತವೂ ಆಗುವ ಪರಿಸ್ಥಿತಿಗಳನ್ನು ವಚನ ಸಾಹಿತ್ಯವು ಪರಿಗಣನೆಗೆ ತಂದುಕೊಂಡು. ಅವುಗಳ ಪರಿಹಾರಕ್ಕೆ ಸಂಪದ ಸಮವಿನಿಯೋಗ ಸಿದ್ಧಾಂತವನ್ನು ರೂಪಿಸಿರುತ್ತದೆ. ವಚನ ಸಾಹಿತ್ಯದ ಪರಿಭಾಷೆಯಲ್ಲಿ ಸಂಪದ ಸಮವಿನಿಯೋಗಕ್ಕೆ "ದಾಸೋಹ" ಎಂಬ ಹೆಸರಿದೆ. ವಚನ ಸಾಹಿತ್ಯವು ಷಟ್ಸ್ಥಲದ ಮೂರನೆಯ ಸ್ಥಲವಾದ ಪ್ರಸಾದಿ ಸ್ಥಲದಲ್ಲಿ ಸಂಪದ ಸಮವಿನಿಯೋಗವನ್ನು ಕುರಿತು ಅನೇಕ ಸೂತ್ರಗಳನ್ನು ರೂಪಿಸಿರುತ್ತದೆ. "ಸೋಹಂ ಎಂಬುದು ಅಂತರಂಗದ ಮದ! ಶಿವೋಹಂ ಎಂಬುದು ಬಹಿರಂಗದ ಮದ! ಈ ದ್ವಂದ್ವವ ಅಳಿದು ದಾಸೋಹಂ ಎಂದೆನಿಸಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ". "ಪರರ ತನ್ನಂತೆ ಭಾವಿಸಿ. ವಿಶ್ವಾಸದಿಂ ದಾಸೋಹವ ಮಾಡಲು ಇಹ ಸಿದ್ಧಿ. ಪರಸಿದ್ಧಿ. ಸರ್ವಸಿದ್ಧಿ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ". "ತನು ದಾಸೋಹಕ್ಕೆ ಉಬ್ಬುವಂತೆ ಮಾಡು! ಮನ ದಾಸೋಹಕ್ಕೆ ಒಗ್ಗುವಂತೆ ಮಾಡು! ಧನ ದಾಸೋಹಕ್ಕೆ ಹೆಚ್ಚುವಂತೆ ಮಾಡು!". "ಮಾತಿನ ಮಾಲೆಯ ಲಿಪ್ಪುದೇ ಭಕ್ತಿ? ತನು ಸವೆಯುದನಕ. ಮನ ಸವೆಯುದನಕ. ಧನ ಸವೆಯುದನಕ ಅಪ್ಪುದೇ ಭಕ್ತಿ?". "ಸಿರಿಯೆಂಬುದೊಂದು ಸಂತೆಯ ಮಂದಿ! ಇದ ನೆಚ್ಚಿ ಕೆಡಬೇಡ ಮಾನವ!". "ಧನವ ಇರಿಸದಿರಾ! ಇರಿಸಿದರೆ ಭವ ಬಪ್ಪುದು ತಪ್ಪದು!". ಸರ್ವ ಭೂತಾತ್ಮನೆಂಬ ಮಾತು ಮಾತಿನಲ್ಲಿ ಪೂರೈಸದು! ತನುಮನಧನಂಗಳ ಗುರುಲಿಂಗ ಜಂಗಮಕೆ ಸಮಸಲೇಬೇಕು!". "ಆಡಿದರೇನು? ಹಾಡಿದರೇನು? ಓದಿದರೇನು? ಆಡದೇ ನವಿಲು? ಹಾಡದೇ ತಂತಿ? ಓದದೇ ಗಿಳಿ? ತ್ರಿವಿಧ ದಾಸೋಹವಿಲ್ಲದವರ ಒಲ್ಲ ಕೂಡಲ ಸಂಗಮದೇವ!"—ಈ ರೀತಿಯಾದ ಅನಂತ ಸೂತ್ರ ವಾಕ್ಯಗಳ ಮೂಲಕ ವಚನ ಸಾಹಿತ್ಯವು ಸಂಪದ ಸಮ ವಿನಿಯೋಗದ ಸಿದ್ಧಾಂತವನ್ನು ಪ್ರತಿಪಾದಿಸಿ ಸರ್ವ ಮಾನವರ ಸುಖ ಜೀವನಕ್ಕೆ ಅವಶ್ಯಕವಾದ ನಡೆಯನ್ನು ಸಮರ್ಥಿಸುತ್ತದೆ.

### ನಾಲ್ಕನೆಯ ಹಂತ

ಇನ್ನು ಮಾನವನ ನಡೆಯ ತಿದ್ದಿಕೆಯಲ್ಲಿ ನಾಲ್ಕನೆಯ ಹಂತ ಜಾತ್ಯತೀತ ಸಮಾಜ ನಿರ್ಮಾಣ. ಇದು ಜಗತ್ತಿನ ನಾಲ್ಕನೆಯ ಮಹಾ ಸಮಸ್ಯೆಯಾಗಿದೆ. ಜಾತಿ ಮಾನವನನ್ನು ಬಹುಕಾಲದಿಂದ ಪೀಡಿಸುತ್ತ ಬಂದಿರುವ ಭಯಂಕರ ಹಳೆಯ ರೋಗ. ಗುಣಕ್ಕೆ ಪ್ರಾಧಾನ್ಯವನ್ನು ಕೊಡದೆ. ಹುಟ್ಟು. ಬಣ್ಣ. ಕಸಬು. ಭಾಷೆ. ಮತ. ಪಂಥ ಮುಂತಾದ ಬಾಹ್ಯ ಶುಷ್ಕ ಅಂಶಗಳಿಗೆ ಪ್ರಾಧಾನ್ಯವನ್ನು ಕೊಟ್ಟುದರಿಂದ ಮಾನವರಲ್ಲಿ ಉಚ್ಚ-ನೀಚ. ಶ್ರೇಷ್ಠ-ಕನಿಷ್ಟ. ಪವಿತ್ರ-ಅಪವಿತ್ರ ಎಂಬ ತರತಮಭಾವಗಳು ಉದ್ಭವಿಸಿ. ಮಾನವಕುಲ ಅಸಂಖ್ಯ ಗುಂಪುಗಳಾಗಿ ಒಡೆದುಹೋಗಿ. ಅದರ ಪ್ರಗತಿ ಕುಂಠಿತವಾಗಿ. ಮಾನವ ಅಧೋಗತಿಗೆ ಹೋಗುವುದನ್ನು ಇತಿಹಾಸದ ಅವಲೋಕನದಿಂದ ಮನಗಂಡು —ವಚನ ಸಾಹಿತ್ಯವು ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಅವಶ್ಯಕವಾದ ನಡೆಯನ್ನು ತಿದ್ದಲು ಷಟ್ಸ್ಥಲದ ನಾಲ್ಕನೆಯ ಸ್ಥಲವಾದ ಪ್ರಾಣಲಿಂಗಿ ಸ್ಥಲದಲ್ಲಿ ಅನೇಕವಾದ ಸೂತ್ರಗಳನ್ನು ಘೋಷಿಸಿದೆ. "ದೇವ ದೇವ ಬಿನ್ನಪವ ಅವಧಾರು ! ವಿಪ್ರ ಮೊದಲು ಶ್ವಪಚ ಕಡೆಯಾಗಿ ಭಕ್ತರಾದವರನ್ನೆಲ್ಲ ಒಂದೇ ಎಂಬೆ !". "ವ್ಯಾಸ ಬೇಡ. ವಸಿಷ್ಠ ಡೊಂಬ. ದೂರ್ವಾಸ ಮುಚ್ಚಿಗ. ಕೌಂಡಿನ್ಯ ನಾಯಿಂದ. ಅಗಸ್ತ್ಯ ಕುಂಬಾರ. ಕಶ್ಯಪ ಕಮ್ಮಾರ. ಮಾರ್ಕಂಡೇಯ ಮಾದಿಗ. ಕಪಿಲ ಹೊಲೆಯ—ಇಂತಪ್ಪ ಋಷಿ ಜನಂಗಳೆಲ್ಲ ಗುರುಕಾರುಣ್ಯಮಂ ಪಡೆದು. ವಿಭೂತಿ ರುದ್ರಾಕ್ಷಿಗಳಂ ಧರಿಸಿ. ಶಿವಲಿಂಗಾರ್ಚನೆಯಂ ಮಾಡಿ. ತೀರ್ಥಪ್ರಸಾದಗಳಂ ಕೊಂಡು. ನಡೆನುಡಿ ಸತ್ಯ ಶುದ್ಧವಾಗಿ. ಕುಲಶ್ರೇಷ್ಠರೆನಿಸಿ ಕೊಂಡರು !". "ಕಾಸಿ ಕಮ್ಮಾರನಾದ. ಬೀಸಿ ಮಡಿವಾಳನಾದ. ಹಾಸನಿಕ್ಕಿ ಸಾಲಿಗನಾದ. ವೇದವನೋದಿ ಬ್ರಾಹ್ಮಣ ನಾದ. ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ? ಇದು ಕಾರಣ ಲಿಂಗಸ್ಥಲವ ಅರಿದವನೇ ಕುಲಜನು !". "ಶೆಟ್ಟಿ ಯೆಂಬೆನೆ ಸಿರಿಯಾಳನ. ಮಡಿವಾಳನೆಂಬೆನೆ ಮಾಚಯ್ಯನ. ಡೋಹರನೆಂಬೆನೆ ಕಕ್ಕಯ್ಯನ. ಮಾದಾರನೆಂಬೆನೆ ಚನ್ನಯ್ಯನ. ಆನು ಹಾರುವನೆಂದೊಡೆ ಕೂಡಲ ಸಂಗಯ್ಯ ನಗುವನಯ್ಯ !". "ಕೊಲ್ಲುವವನೇ ಮಾದಿಗ. ಹೊಲಸ ತಿಂಬುವವನೇ ಹೊಲೆಯ ! ಕುಲವೇನೋ ಆವಂದಿರಕುಲವೇನೋ ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲಸಂಗನ ಶರಣರೇ ಕುಲಜರು !". "ವೇದ ನಡನಡುಗಿತ್ತು ! ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತು ! ತರ್ಕ ತರ್ಕಿಸಲರಿಯದೆ ಮೂಗು ವಟ್ಟಿದ್ದಿತು! ಆಗಮ ಗಮಿಸಲರಿಯದೆ ಅಗಲಿದ್ದಿತು ! ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲಿ ಉಂಡ ಕಾರಣ !" ಈ ರೀತಿಯಾದ ಅನೇಕ ಸೂತ್ರ ವಾಕ್ಯಗಳ ಮೂಲಕ ವಚನ ಸಾಹಿತ್ಯವು ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಅವಶ್ಯಕವಾದ ನಡೆಯ ತಿದ್ದಿಕೆಯನ್ನು ಪ್ರತಿಪಾದಿಸಿರುತ್ತದೆ.

### ಐದನೆಯ ಹಂತ

ಇನ್ನು ಮಾನವನ ನಡೆಯ ತಿದ್ದಿಕೆಯಲ್ಲಿ ಐದನೆಯ ಹಂತ ವ್ಯಕ್ತಿ ಸ್ವಾತಂತ್ರ್ಯ ಸ್ಥಾಪನ. ಇದು ಜಗತ್ತಿನ ಐದನೆಯ ಮಹಾ ಸಮಸ್ಯೆಯಾಗಿದೆ. ಮಾನವನ ಸಂಪದಗಳಲ್ಲಿ ಸ್ವಾತಂತ್ರ್ಯ ಸಂಪದ ಅತ್ಯಂತ ಹೆಚ್ಚಿನದು. ಸ್ವಾತಂತ್ರ್ಯ ಸಂಪದವಿಲ್ಲದಿದ್ದಲ್ಲಿ ರೂಪ. ಯೌವನ. ವಿದ್ಯೆ. ಐಶ್ವರ್ಯ. ಅಧಿಕಾರ ಮುಂತಾದ ಉಳಿದ ಸಂಪದಗಳು ವ್ಯರ್ಥವೆಂದೇ ಹೇಳಬೇಕು. ಸ್ವಾತಂತ್ರ್ಯವು ಮಾನವನ ಅತ್ಯಂತ ಆತ್ಮೀಯ ವಸ್ತುವಾಗಿದೆ. ಮಾನವನ ವ್ಯಕ್ತಿತ್ವ ಅವನ ಸ್ವಾತಂತ್ರ್ಯ ವನ್ನೇ ಅವಲಂಬಿಸಿದೆ. ವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನೂ ಮತ್ತು ಅದರ ಅವಶ್ಯಕತೆಯನ್ನೂ ವಚನ ಸಾಹಿತ್ಯವು ಮನಗಂಡು ಷಟ್ಸ್ಥಲದ ಐದನೆಯ ಸ್ಥಲವಾದ ಶರಣಸ್ಥಲದಲ್ಲಿ ಉತ್ಕೃಷ್ಟವಾದ ಮಾರ್ಗದರ್ಶನವನ್ನು ಮಾಡಿರುತ್ತದೆ. ವ್ಯಕ್ತಿ ಸ್ವಾತಂತ್ರ್ಯದ ವಿಚಾರ. ಆಚಾರ. ಅರ್ಜನ ಇತ್ಯಾದಿ ಮುಖಗಳನ್ನು ವಚನ ಸಾಹಿತ್ಯವು ವಿಸ್ತಾರವಾಗಿ ವಿಮರ್ಶಿ ಸಿರುತ್ತದೆ. "ಅಂದಿಂಗೆ ಎಳೆಯ ನೀನು. ಹಳೆಯ ನಾನು !". "ನ್ಯಾಯ ನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕ ವಿರೋಧಿ ! ಯಾರಿಗೂ ಅಂಜುವನಲ್ಲ!". "ಕರಿ ಘನ. ಅಂಕುಶ ಕಿರಿದೆನ್ನಬಹುದೇ ? ಬಾರದಯ್ಯಾ ! ಗಿರಿ ಘನ ವಜ್ರ ಕಿರಿದೆನ್ನ ಬಹುದೇ ? ಬಾರದಯ್ಯಾ ! ತಮಂಧ ಘನ. ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ ! ನಿನ್ನ ಮರಹು ಘನ. ಎನ್ನ ನೆನಹು ಕಿರಿದೆನ್ನಬಹುದೇ ? ಬಾರದಯ್ಯಾ !". "ನವಖಂಡ ಪೃಥ್ವಿಯೊಳಗೆ ಎರಡಾಳಿನ ಭಾಷೆಯಯ್ಯ ! ಕೊಲುವೆ ನೆಂಬ ಭಾಷೆ ದೇವನದು ! ಗೆಲುವೆನೆಂಬ ಭಾಷೆ ಭಕ್ತನದು ! ಸತ್ಯವೆಂಬ ಕೂರಲಗನೆ ಹಿಡಿದು ಗೆದ್ದರು ಭಕ್ತರು ಕೂಡಲ ಸಂಗಮದೇವನ". "ತನ್ನ ತಾ ಅರಿದವಂಗೆ ಅರಿವೇ ಗುರು !". "ಛಲ ಬೇಕು ಶರಣಂಗೆ ಪರ ಧನವ ಒಲ್ಲೆನೆಂಬ ! ಛಲ ಬೇಕು ಶರಣಂಗೆ ಪರಸತಿಯ ಒಲ್ಲೆನೆಂಬ ! ಛಲ ಬೇಕು ಶರಣಂಗೆ ಪರಹಿಂಸೆಯ ಒಲ್ಲೆನೆಂಬ ! ಛಲ ಬೇಕು ಶರಣಂಗೆ ಲಿಂಗ ಜಂಗಮ ಒಂದೆಂಬ! ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ! ಛಲವಿಲ್ಲದವರ ಮೆಚ್ಚ ಕೂಡಲ ಸಂಗಮ

ದೇವ !". ಕಾಯದ ಕಳವಳಕ್ಕಂಜಿ "ಕಾಯಯ್ಯಾ" ಎನ್ನೆನು ! ಜೀವದ ಜಂಜಡಕ್ಕಂಜಿ "ಈಯಯ್ಯಾ" ಎನ್ನೆನು ! ಸಿರಿ ಬರಲಿ ! ಉರಿ ಬರಲಿ ! ಬೇಕೆನ್ನೆನು ! ಬೇಡೆನ್ನೆನು !". "ನಾಳೆ ಬಪ್ಪುದು ನಮಗಿಂದೇ ಬರಲಿ ! ಇಂದು ಬಪ್ಪುದು ನಮಗೀಗಲೇ ಬರಲಿ ! ಇದಕಾರಂಜುವರು ! ಇದಕಾರಳುಕುವರು !" "ಆರು ಮುನಿದು ನಮ್ಮನೇನ ಮಾಡುವರು ? ಊರು ಮುನಿದು ನಮ್ಮನೆಂತು ಮಾಡುವುದು ? ನಮ್ಮ ಕುನ್ನಿಗೆ ಕೂಸ ಕೊಡಬೇಡ ! ನಮ್ಮ ಸೊಣಗಂಗೆ ತಳಿಗೆಯ ಲಿಕ್ಕಬೇಡ !". "ಜಗವ ಸುತ್ತಿಪ್ಪುದು ನಿನ್ನ ಮಾಯೆ ! ನಿನ್ನ ಸುತ್ತಿಪ್ಪುದು ಎನ್ನ ಮನ ! ಜಗಕೆ ಬಲ್ಲಿದ ನೀನು ! ನಿನಗೆ ಬಲ್ಲಿದ ನಾನು ! ಕರಿಯು ಕನ್ನಡಿಯೊಳಡಗಿದಂತೆ ನೀನು ಎನ್ನೊಳಡಗಿದೆ !". "ಇಹಲೋಕ ಪರಲೋಕ ತಾನಿದ್ದಲ್ಲಿ ! ಗಗನ ಮೇರು ಮಂದಿರ ತಾನಿದ್ದಲ್ಲಿ ! ಸಕಲ ಭುವನ ತಾನಿದ್ದಲ್ಲಿ ! ಉತ್ತರೋತ್ತರ ಚತುರ್ವಳಯ ತಾನಿದ್ದಲ್ಲಿ ! ಚಂದ್ರ ಸೂರ್ಯ ತಾರಾಮಂಡಲ ತಾನಿದ್ದಲ್ಲಿ ! ಅಂತರ ಮಹದಂತರ ತಾನಿದ್ದಲ್ಲಿ ! ಸರ್ವತಂತ್ರ ಸ್ವತಂತ್ರ ಗುಹೇಶ್ವರ ಲಿಂಗ ತಾನಿದ್ದಲ್ಲಿ !". "ನನಗೆ ನಾನೇ ಗುರುವಾದೆನಯ್ಯಾ ! ನನಗೆ ನಾನೇ ಲಿಂಗವಾದೆನಯ್ಯಾ ! ನನಗೆ ನಾನೇ ಜಂಗಮ ವಾದೆನಯ್ಯಾ ! ನನಗೆ ನಾನೇ ಪ್ರಸಾದಿಯಾದೆನಯ್ಯಾ ! ನನಗೆ ನಾನೇ ಭಕ್ತನಾದೆನಯ್ಯಾ ! ಇದು ಕಾರಣ ರೇಕಣ್ಣ ಪ್ರಿಯ ನಾಗಿನಾಥನಲ್ಲಿ ಆಗುಹೋಗೆಂಬುದ ನಾ ಅರಿಯೆನಯ್ಯಾ !". "ನರಜನ್ಮಕ್ಕೊಮ್ಮೆ ಬಂದ ಬಳಿಕ ಗುರುವಿನ ಕುರುಹ ಕಾಣಬೇಕು ! ಗುರುವಿನ ಕುರುಹ ಕಂಡ ಬಳಿಕ ಶಿಷ್ಯನಾಗಿ ಗುರುಕರ ಸಂಜಾತನಾಗಬೇಕು ! ಗುರುಕರ ಸಂಜಾತ ನಾದ ಬಳಿಕ ತತ್ವವ ಬಿತ್ತರಿಸಿ ತಾನೇ ಗುರುವಾಗಬೇಕು ! ತಾನೇ ಗುರುವಾದ ಬಳಿಕ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಐಕ್ಯವ ಗಳಿಸಿ ತಾನೇ ತಾನಾಗಬೇಕು !" ಇವೇ ಮೊದಲಾದ ಸೂತ್ರ ವಾಕ್ಯಗಳ ಮೂಲಕ ವಚನ ಸಾಹಿತ್ಯವು ವ್ಯಕ್ತಿ ಸ್ವಾತಂತ್ರ್ಯ ಸ್ಥಾಪನೆಗೆ ಆವಶ್ಯಕವಾದ ನಡೆಯ ತಿದ್ದಿಕೆಗೆ ಮಾರ್ಗದರ್ಶನ ಮಾಡಿರುತ್ತದೆ.

**ಆರನೆಯ ಹಂತ**

ಇನ್ನು ಮಾನವನ ನಡೆಯ ತಿದ್ದಿಕೆಯಲ್ಲಿ ಆರನೆಯ ಹಂತ ವಿಶ್ವಶಾಂತಿಪಾಲನ. ಇದು ಜಗತ್ತಿನ ಆರನೆಯ ಮಹಾ ಸಮಸ್ಯೆಯಾಗಿದೆ. ಇದರ ಪರಿಹಾರಕ್ಕೆ ಆವಶ್ಯಕವಾದ ನಡೆಯನ್ನು ನಿರ್ದೇಶಿಸಿ ವಚನ ಸಾಹಿತ್ಯವು ಷಟ್ಸ್ಥಲದ ಕೊನೆಯ ಸ್ಥಲವಾದ ಐಕ್ಯ ಸ್ಥಲದಲ್ಲಿ ಹಲವಾರು ಸೂತ್ರಗಳನ್ನು ಮಂಡಿಸಿರುತ್ತದೆ. ಇಂದು ಜಗತ್ತು ಬಹಳ ಬಹಳ ವಾಗಿ ಸಮೀಪಗೊಳ್ಳುತ್ತಿದೆ. ಜೆಟ್ ವಿಮಾನಗಳು. ಹೆಲಿಕಾಪ್ಟರುಗಳು, ಅಣುಶಕ್ತಿಯಿಂದ ಚಲಿಸುವ ರೈಲುಗಳು ಮತ್ತು ಹಡಗುಗಳು. ರೇಡಿಯೋ ಶ್ರವಣ ಹಾಗೂ ಟೆಲಿವಿಷನ್ ಚಿತ್ರ ಯಂತ್ರಗಳು. ರಾಡಾರ್‌ಗಳು, ಕೃತಕ ಉಪಗ್ರಹ ಗಳು—ಹೀಗೆ ದಿನದಿನಕ್ಕೂ ಹೊಸ ಹೊಸದಾಗಿ ನಿರ್ಮಿತವಾಗುತ್ತಿರುವ ಸಾರಿಗೆ ಸಂಪರ್ಕ ಸಾಧನಗಳ ದೆಸೆಯಿಂದ ನಮ್ಮ ಭೂಮಿಯ ಯಾವ ಸ್ಥಳವಾಗಲಿ ದೂರವೆನ್ನುವಂತಿಲ್ಲ. ನಮ್ಮ ಭೂಮಿಯ ಯಾವ ಭಾಗದ ಜನರನ್ನಾಗಲಿ ಪಕ್ಕದ ಮನೆಯವರೆಂದೇ ಪರಿಗಣಿಸಬೇಕಾದ ಕಾಲವಿದಾಗಿದೆ. ಇಷ್ಟೇ ಅಲ್ಲದೆ ಸ್ಪೇಸ್ ಕ್ರಾಫ್ಟ್ (ಅಂತರಿಕ್ಷ ಕ್ಷಿಪಣಿ)ಗಳ ನಿರ್ಮಾಣದಿಂದ ನಮ್ಮ ಸೌರವ್ಯೂಹದ ಗ್ರಹಗಳು ಸಹ ನಮಗೆ ಹತ್ತಿರವಾಗಲು ಪ್ರಾರಂಭಿಸಿವೆ. ಎಂದ ಮೇಲೆ ಎಂದಿ ಗಿಂತಲೂ ಇಂದು ಜಗತ್ತಿನ ಜನರು ಕೂಡಿ ಬಾಳುವುದು ಅನಿವಾರ್ಯವೂ ಅವಶ್ಯಕವೂ ಆಗಿದೆ. ಆ ದೇಶ ಈ ದೇಶ, ಆ ಜನಾಂಗ ಈ ಜನಾಂಗ—ಎನ್ನದೆ ಸರ್ವದೇಶಗಳ ಮತ್ತು ಸರ್ವಜನಾಂಗಗಳ ಹಿತವನ್ನು ಕೋರುವ ಕಾಲ ಇದಾಗಿದೆ. ಇಡಿಯ ಜಗತ್ತೇ ಒಂದು ಕುಟುಂಬವಾಗಿ. ಒಂದು ಸರ್ಕಾರವಾಗಿ ಬಾಳುವ ಕಾಲ ಇದಾಗಿದೆ. ಇದಕ್ಕಾಗಿ ಜಗತ್ತಿನ ಎಲ್ಲ ಪ್ರಜೆಗಳು, ಸರ್ಕಾರಗಳು, ಸಂಘಗಳು. ಸಂಸ್ಥೆಗಳು ತಮ್ಮ ಸಾಮರ್ಥ್ಯಗಳನ್ನು ಸಮಗ್ರ ಜಗತ್ತಿನ ಶಾಂತಿಗೆ ಮತ್ತು ಸುಖಕ್ಕೆ ವಿನಿಯೋಗಿಸಬೇಕಾದುದು ಅಗತ್ಯವಾಗಿದೆ. ಈ ಅಂಶವನ್ನು ವಚನ ಸಾಹಿತ್ಯವು ವಿಶಾಲ ಹಾಗೂ ದೂರದೃಷ್ಟಿ ಯಿಂದ ಅರಿತು, ಲೋಕಸೇವಾ ಧರ್ಮವನ್ನು ವಿಜೃಂಭಿಸಿದೆ. "ಲಿಂಗವ ನೋಡುವ ಅಣ್ಣಗಳೇ, ಜಂಗಮವ ನೋಡಿರೆ !" "ಸ್ಥಾವರ ಜಂಗಮ ಒಂದೇ ಎಂಬುದು ಕೂಡಲ ಸಂಗನ ವಚನ", "ಸ್ಥಾವರಕ್ಕೆ ಎರೆದರೆ ಜಂಗಮ ನೆನೆಯಿತ್ತು !", "ಎನಗಿಂತ ಕಿರಿಯರಿಲ್ಲ. ಭಕ್ತರಿಗಿಂತ ಹಿರಿಯರಿಲ್ಲ!". "ಕಾಗೆಯೊಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವನು ? ಕೋಳಿಯೊಂದು ಗುಟುಕ ಕಂಡರೆ ಕೂಗದೆ ತನ್ನ ಕುಲವೆಲ್ಲವನು ? ಭಕ್ತನಾಗಿ ಭಕ್ತ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಿಂತ ಕರಕಷ್ಟ !" "ಇವನಾರವ ? ಇವನಾರವ ? ಇವನಾರವ ? ಎಂದೆನಿಸದಿರಯ್ಯ ! ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ !"—ಇವೇ ಮೊದಲಾದ ಅನಂತ ಸೂತ್ರ ವಾಕ್ಯಗಳ ಮೂಲಕ ವಚನ ಸಾಹಿತ್ಯವು ಲೋಕ ಸೇವಾ ಧರ್ಮಕ್ಕೆ ಅವಶ್ಯಕವಾದ ವಿಶ್ವ ಪ್ರೇಮವನ್ನು ಸಮರಸ ಭಕ್ತಿ ಎಂಬ ಪರಿಭಾಷೆಯಲ್ಲಿ ಪ್ರತಿಪಾದಿಸಿ ವಿಶ್ವಶಾಂತಿ ಪಾಲನೆಗೆ ಬೇಕಾದ ನಡೆಯ ತಿದ್ದಿಕೆಗೆ ಎಡೆಮಾಡಿಕೊಟ್ಟಿದೆ.

## ನುಡಿಯ ತಿದ್ದಿಕೆ

ಇನ್ನು ಎರಡನೆಯದಾಗಿ ವಚನ ಸಾಹಿತ್ಯದಲ್ಲಿ ನುಡಿಯ ತಿದ್ದಿಕೆ ಹೇಗೆ ಪ್ರತಿಪಾದಿತವಾಗಿದೆ ಎಂಬುದನ್ನು ನೋಡೋಣ. ನುಡಿಗೂ ನಡೆಗೂ ನಿಕಟವಾದ ಸಂಬಂಧವಿದೆ. ಒಂದರ ಛಾಯೆ ಇನ್ನೊಂದು. ನುಡಿಯ ಪ್ರಭಾವ ನಡೆಯ ಮೇಲೂ. ನಡೆಯ ಪ್ರಭಾವ ನುಡಿಯ ಮೇಲೂ ಉಂಟಾಗುವುದಾಗಿದೆ. ಒಂದು ನಾಣ್ಯದ ಎರಡು ಮುಖಗಳಂತೆ ನುಡಿ ಮತ್ತು ನಡೆಗಳು ಒಬ್ಬ ವ್ಯಕ್ತಿಯ ಎರಡು ಮುಖಗಳಾಗಿವೆ. ನುಡಿ ಮತ್ತು ನಡೆಗಳ ಶುದ್ಧತೆಯಿಂದ ಪೂರ್ಣ ವ್ಯಕ್ತಿತ್ವ ವಿಕಾಸವಾಗುತ್ತದೆ. ನಡೆಯಂತೆ ನುಡಿಯು ಸಹ ಮಾನವನ ಉತ್ತಮ ಜೀವನದ ಮಾರ್ಗದರ್ಶನಕ್ಕೆ ಬೇಕಾದ ಇತಿಹಾಸ ರಚನೆ, ತತ್ತ್ವ ಪ್ರತಿಪಾದನೆ, ಧರ್ಮ ಬೋಧನೆ—ಇವುಗಳಿಗೆ ಅವಶ್ಯಕವಾಗಿದೆ. ಜನತೆಯನ್ನು ತಿದ್ದಿ, ಅವರನ್ನು ಉತ್ಕೃಷ್ಟರನ್ನಾಗಿ ಮಾಡಲು. ನಡೆಯ ಮಾರ್ಗದರ್ಶನದ ಜೊತೆಗೆ ನುಡಿಯ ಮಾರ್ಗದರ್ಶನವೂ ಅನಿವಾರ್ಯವಾಗಿದೆ. ಈ ಕಾರಣದಿಂದಲೇ ನಡೆಗೆ ಎಷ್ಟು ಬೆಲೆಯನ್ನು ಕೊಟ್ಟಿರುವರೋ ಅಷ್ಟೇ ಬೆಲೆಯನ್ನು ನುಡಿಗೂ ಕೊಟ್ಟು. ನಡೆಯಷ್ಟೇ ನುಡಿಯೂ ಶುದ್ಧವಾಗಬೇಕೆಂದು ಶರಣರು ಶ್ರಮಿಸಿದ್ದಾರೆ. ಈ ಅಂಶವನ್ನು ವಚನ ಸಾಹಿತ್ಯವು ಸ್ಪಷ್ಟಪಡಿಸುತ್ತದೆ. ಪರಿಶುದ್ಧವಾದ, ಪರಿಪಕ್ವವಾದ, ಪರಿಪೂರ್ಣವಾದ ನುಡಿಯನ್ನು ಕಲಿಯುವ ಪಾಠ ಕ್ರಮದಲ್ಲಿ ನೈಚ್ಯಭಾವದ ನಿವಾರಣೆ ಮೊದಲ ಹೆಜ್ಜೆ. "ನುಡಿಯಲು ನಾನು ಸಮರ್ಥನಲ್ಲ" ಎಂಬ ಶಂಕೆ ಉದ್ಭವಿಸಿದರೆ ನುಡಿಯನ್ನು ಕಲಿಯುವುದು ಹೇಗೆ? ನುಡಿಯನ್ನು ಕಲಿಯಬೇಕಾದರೆ ನುಡಿಯಲೇಬೇಕು. ಆದುದರಿಂದ ಪ್ರಾರಂಭದಲ್ಲಿ ಭಯ, ಶಂಕೆ, ಕಂಪಗಳನ್ನು ನಿಗ್ರಹಿಸಿ ಧೈರ್ಯದಿಂದ ನುಡಿಯಲು ಪ್ರಯತ್ನಿಸಬೇಕು. ಈ ಧೈರ್ಯವನ್ನು ವಚನ ಸಾಹಿತ್ಯವು ತಂದುಕೊಡುತ್ತದೆ. "ಆಡಿಕೊಂಡಾರೆಂದು ಅಂಜಲದೇಕೆ? ನಾಸ್ತಿಕರಾದೇವೆಂದು ನಾಚಲದೇಕೆ? ಏನನೂ ಅರಿಯೆವೆಂದು ಮೌನಗೊಂಡಿರಲೇಕೆ? ಕೂಡಲ ಸಂಗಮದೇವನ ಮುಂದೆ ದಂದಣ-ದತ್ತಣ ಎನ್ನಿ!" ಈ ಒಂದು ಮನೋಧೈರ್ಯ ಪ್ರಾರಂಭದಲ್ಲಿ ಬಂದಿತೆಂದರೆ ಮುಂದೆ ನುಡಿಯ ಬೆಳವಣಿಗೆ ಸುಲಭ. ಆದರೆ ಧೈರ್ಯ ಬಂದಿತೆಂದು ಕೊನೆಯವರೆಗೂ "ದಂದಣ-ದತ್ತಣ" ಎಂದುಕೊಳ್ಳುತ್ತ ಕುಳಿತರೆ ನುಡಿ ವಿಕಾಸವನ್ನು ಹೊಂದುವುದಿಲ್ಲ. ಅಧ್ಯಯನ, ಸಂಭಾಷಣ, ಶ್ರವಣ, ಪ್ರವಚನಗಳ ಮೂಲಕ ನುಡಿಯನ್ನು ಕ್ರಮಕ್ರಮವಾಗಿ ಹರಿತಗೊಳಿಸಿಕೊಳ್ಳಬೇಕು. ನುಡಿ ಹೇಗಿರಬೇಕೆಂಬ ಬಗ್ಗೆ ವಚನ ಸಾಹಿತ್ಯವು ಅನೇಕ ಸೂತ್ರಗಳನ್ನು ನಿರೂಪಿಸಿರುತ್ತದೆ. "ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು." ಎಂದರೆ ನುಡಿ ಶುದ್ಧವಾದ ಪದಗಳನ್ನು ಹೊಂದಿರಬೇಕು, ಪೂರ್ಣವಾದ ಅರ್ಥದಿಂದ ಕೂಡಿರಬೇಕು, ಮನಸ್ಸಿಗೆ ತಾಕುವಂತಿರಬೇಕು, ಉನ್ನತವಾದ ರಸಭಾವಗಳನ್ನು ಹೊಮ್ಮಿಸುವಂತಿರಬೇಕು. ಈ ರೀತಿಯಾಗಿ ಗದ್ಯ ಸಾಹಿತ್ಯವನ್ನು ಬೆಳೆಸಿಕೊಳ್ಳುವುದರ ಜೊತೆಗೆ ಮಾನವ ಪದ್ಯ ಸಾಹಿತ್ಯವನ್ನೂ ಬೆಳೆಸಿಕೊಳ್ಳಬೇಕು. ಜೀವನದ ಪೂರ್ಣ ವಿಕಾಸಕ್ಕೆ ಮಾತುಗಾರಿಕೆಯ ಜೊತೆಗೆ ಹಾಡುಗಾರಿಕೆಯೂ ಅವಶ್ಯಕ. ಮಾತು ಮನಸ್ಸಿಗೆ ಹಿಡಿಸಿದರೆ ಹಾಡು ಹೃದಯಕ್ಕೆ ಹಿಡಿಸುವುದಾಗಿದೆ. ಈ ಕಾರಣದಿಂದಲೆ ವಚನ ಸಾಹಿತ್ಯವು ಗದ್ಯವೂ ಆಗಿದೆ ಪದ್ಯವೂ ಆಗಿದೆ. ಶರಣರ ವಚನಗಳನ್ನು ಗದ್ಯದಂತೆ ಓದಲೂಬಹುದು ಪದ್ಯದಂತೆ ಹಾಡಲೂಬಹುದು. ಈ ದೆಸೆಯಿಂದ ವಚನಗಳಿಗೆ ಗೀತೆಗಳೆಂಬ ಹೆಸರೂ ಇದೆ. ಹಾಡುಗಾರಿಕೆಯ ಕಲಿಕೆಯ ಬಗೆಗೂ ವಚನ ಸಾಹಿತ್ಯವು ನಿರ್ದೇಶನ ನೀಡುತ್ತದೆ. ಗದ್ಯದ ಕಲಿಕೆಗೆ ಹೇಗೋ ಹಾಗೆ ಪದ್ಯದ ಕಲಿಕೆಗೂ ಪ್ರಾರಂಭದಲ್ಲಿ ನೈಚ್ಯಭಾವ ಅಡ್ಡಿ ಬರುತ್ತದೆ. ಅದನ್ನೂ ಸಹ ಗೆಲ್ಲಬೇಕು. "ತಾಳ ಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ, ದೇವಗಣ ಅಮೃತಗಣವನರಿಯೆ. ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ!" ಇಲ್ಲಿ ನೆನಪಿನಲ್ಲಿಟ್ಟುಕೊಳ್ಳುವಂತಹ ಮುಖ್ಯ ವಿಷಯವೆಂದರೆ ಒಲಿದಂತೆ ಹಾಡುವುದು. ಅಲಂಕಾರ ಛಂದೋನಿಯಮಗಳ ನಲಿವಿಗಿಂತಲೂ ರಸಭಾವ ಸ್ಫೂರ್ತಿಗಳ ಒಲಿಮೆ ಮುಖ್ಯ. ಈ ಒಲಿಮೆಯೇ ಹಾಡುಗಾರಿಕೆಯ ತಿರುಳು. ಈ ಹಾಡುಗಾರಿಕೆಯನ್ನೂ ಸಹ ಸಂಗೀತ ಶಾಸ್ತ್ರಾಭ್ಯಾಸದ ಬಲದಿಂದ ಹರಿತ ಮಾಡಿಕೊಳ್ಳಬೇಕು. "ಎನ್ನ ಕಾಯವ ದಂಡಿಗೆಯ ಮಾಡಯ್ಯ! ಎನ್ನ ಶಿರವ ಸೋರೆಯ ಮಾಡಯ್ಯ! ಎನ್ನ ನರವ ತಂತಿಯ ಮಾಡಯ್ಯ! ಎನ್ನ ಬೆರಳ ಕಡ್ಡಿಯ ಮಾಡಯ್ಯ! ಎನ್ನ ಉರದಲೊತ್ತಿ ಬತ್ತೀಸರಾಗವ ಹಾಡಯ್ಯ!"—ಈ ರೀತಿಯಾಗಿ ಗದ್ಯ ಪದ್ಯಾತ್ಮಕವಾಗಿ ನುಡಿಯು ಹರಿತಗೊಂಡಂತೆ ಅದು ಮಾನವನ ಪರಿಶುದ್ಧವಾದ ನಡೆಗೆ ದಾರಿ ತೋರಿಸಿ ಲೋಕ ಕಲ್ಯಾಣಕ್ಕೆ ಭೂಮಿಕೆಯಾಗಬೇಕು. ನುಡಿ ಮೃದುತ್ತ್ವದಿಂದ ಕೂಡಿರಬೇಕು. ಮೃದುತ್ವದಿಂದ ದೇವರ ಕೃಪೆ ಸಾಧ್ಯವಾಗುತ್ತದೆ. "ಮೃದು ವಚನವೇ ಸಕಲ ಜಪಂಗಳಯ್ಯಾ! ಮೃದು ವಚನವೇ ಸಕಲ ತಪಂಗಳಯ್ಯಾ! ಮೃದು

ವಚನವೇ ಕೂಡಲ ಸಂಗಯ್ಯನ ಒಲಿಮೆಯಯ್ಯಾ !" ಸೌಜನ್ಯದ ಮಾತುಗಳಿಂದ ನಾವೇನನ್ನೂ ಕಳೆದುಕೊಳ್ಳುವುದಿಲ್ಲ; ಅದಕ್ಕೆ ಬದಲು ಜನರ ಪ್ರೀತಿಯನ್ನು ಸಂಪಾದಿಸಿ ಅವರಿಂದ ಉಪಕೃತಿಗಳನ್ನು ಮಾಡಿಸಲು ಸಾಧ್ಯವಿದೆ. "ಹದುಳ ವಿದ್ದಿರೆಂದರೆ ಶಿರ ಹಾರಿಹೋಹುದೇ ? ಕುಳಿತುಕೊಳ್ಳಿರೆಂದರೆ ನೆಲ ಕುಳಿಹೋಹುದೇ ? ಒಡನೆ ನುಡಿದರೆ ಹೊಟ್ಟೆ ಒಡೆದುಹೋಹುದೇ ? ಕೊಡಲೇನು ಇಲ್ಲದಿರೆ ಗುಣವೊಂದು ಇಲ್ಲದೊಡೆ ಕೆಡಹಿ ಮೂಗ ಕೊಯ್ವದೆ ಮಾಬನೇ ಕೂಡಲ ಸಂಗಮದೇವನು ?" ಹೀಗೆ ವಚನ ಸಾಹಿತ್ಯವು ಅನಂತ ಸೂತ್ರ ವಾಕ್ಯಗಳ ಮೂಲಕ ಮಾನವನ ನುಡಿಯ ತಿದ್ದಿಕೆಯ ಬಗೆಗೆ ಅಮೋಘವಾಗಿ ಮಾರ್ಗದರ್ಶನ ಮಾಡಿರುತ್ತದೆ.

## ವಚನ ಸಾಹಿತ್ಯದ ಪರಿಣಾಮ ಮತ್ತು ಪ್ರಶಂಸೆ

ಈ ರೀತಿಯಾಗಿ ಮಾನವನ ನಡೆನುಡಿಗಳನ್ನು ತಿದ್ದಿ, ಅವನನ್ನು ಪುಣ್ಯವಂತನನ್ನಾಗಿ ಮಾಡಿ, ಲೋಕಕಲ್ಯಾಣ ವನ್ನು ಸಾಧಿಸುವ ಏಕೈಕ ಗುರಿಯಿಂದ ಆವಿರ್ಭವಿಸಿದ ವಚನ ಸಾಹಿತ್ಯವು—ಅನಿವಾರ್ಯವಾಗಿ ಮತ್ತು ಸಹಜವಾಗಿ ಶ್ರೇಷ್ಠ ದಾರ್ಶನಿಕ ಸಾಹಿತ್ಯವಾಗಿ ಪರಿಣಮಿಸಿ, ಸಾಹಿತ್ಯ ಪ್ರಪಂಚದಲ್ಲಿ ಒಂದು ಹಿರಿಯ ಸ್ಥಾನವನ್ನು ಗಳಿಸಿರುತ್ತದೆ. ವಚನ ಸಾಹಿತ್ಯದ ಈ ಹಿರಿಯ ಸ್ಥಾನವನ್ನು ಮನಗಂಡು ವಚನ ಸಾಹಿತ್ಯದ ಆದ್ಯಪ್ರವರ್ತಕರಾದ ಬಸವಣ್ಣನವರೇ ಆದಿಯಾದ ವಚನಕಾರರೇ ಅಚ್ಚರಿಯಿಂದ ವಚನ ಸಾಹಿತ್ಯವನ್ನು ಕುರಿತು ಪ್ರಶಂಸೆಯ ಮಾತುಗಳನ್ನು ಆಡಿದ್ದಾರೆ. "ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು—ಬೇರೆ ಬಾವಿಯ ತೋಡಿ ಉಪ್ಪನೀರುಂಬುವನ ವಿಧಿಯಂತೆ ಆಯಿತ್ತೆನ್ನ ಮತಿ ಕೂಡಲ ಸಂಗಮದೇವಾ!" ಎಂದು ಬಸವಣ್ಣ ನವರೂ, "ಕರಿಯನಿತ್ತಡೆ ಒಲ್ಲೆ ! ಸಿರಿಯನಿತ್ತಡೆ ಒಲ್ಲೆ ! ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ ! ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ–ಕಾಣಾ–ರಾಮನಾಥಾ" ಎಂದು ದೇವರ ದಾಸಿಮಯ್ಯನವರೂ, "ಶರಣರ ಪಾದ ಮಾಯೆಯ ಕೇಡು ! ಶರಣರ ಪಾದ ಲಿಂಗದ ನಾಡು ! ಶರಣರ ಪಾದ ಮೋಕ್ಷದ ಬೀಡು—ಕೇಳಾ ಕಾಳಿಲಿಂಗ ದೇವಾ !" ಎಂದು ಕಾಳಿಲಿಂಗಯ್ಯನವರೂ, "ಆದ್ಯರ ಅರವತ್ತು ವಚನಕ್ಕೆ ಬಸವಣ್ಣನ ಇಪ್ಪತ್ತು ವಚನ ! ಬಸವಣ್ಣನ ಇಪ್ಪತ್ತು ವಚನಕ್ಕೆ ಪ್ರಭುದೇವನ ಹತ್ತು ವಚನ ! ಪ್ರಭುದೇವನ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ ! ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಮಹಾದೇವಿಯಕ್ಕನ ಒಂದು ವಚನ ಕಾಣಾ !" ಎಂದು ಚನ್ನಬಸವಣ್ಣನವರೂ—ಹೀಗೆ ಅನೇಕ ಮಂದಿ ವಚನಕಾರರು ವಚನ ಸಾಹಿತ್ಯದ ಹಿರಿಮೆಗರಿಮೆಗಳನ್ನು ಕುರಿತು ಹೃತ್ಪೂರ್ವಕವಾದ ಪ್ರಶಂಸೆಗಳನ್ನು ವ್ಯಕ್ತಗೊಳಿಸಿದ್ದಾರೆ. ಮುಂದೆ ಈ ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಬೆಳವಣಿಗೆಯ ಮೇಲೆ ಮಹತ್ತರವಾದ ಪರಿಣಾಮವನ್ನು ಉಂಟುಮಾಡಿ, ಹರಿಹರ, ರಾಘವಾಂಕ, ಲಕ್ಷ್ಮೀಶ, ನಾರಣಪ್ಪ, ಆಂಡಯ್ಯ, ರತ್ನಾಕರವರ್ಣಿ—ಇವರೇ ಮೊದಲಾದ ಹಲವಾರು ಕವಿಪುಂಗವರ ಮೇಲೆ ತನ್ನ ಪ್ರಭಾವ ವನ್ನು ಬೀರಿರುತ್ತದೆ. ಅಲ್ಲದೆ ಕ್ರಿ.ಶ. ೧೫ನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ವಿಜೃಂಭಿಸಿದ ವಿಖ್ಯಾತ ಹರಿದಾಸ ಪಂಥದ .ಸಾಹಿತ್ಯ ಕೃತಿಗಳ ಮೇಲೂ ವಚನ ಸಾಹಿತ್ಯವು ಅಪಾರವಾದ ಪ್ರಭಾವವನ್ನು ಬೀರಿರುವುದು ಸುಳಾದಿ, ಉಗಾಭೋಗ, ದೇವರನಾಮ–ಇತ್ಯಾದಿ ದಾಸಸಾಹಿತ್ಯ ಕೃತಿಗಳಿಂದ ಕಂಡುಬರುತ್ತದೆ. ಇನ್ನು ನಮ್ಮ ಕ್ರಿ.ಶ. ೨೦ನೆಯ ಶತಮಾನದಲ್ಲೂ ಸಹ ವಚನ ಸಾಹಿತ್ಯವು ತನ್ನ ಪ್ರಭೆಯನ್ನು ಬೀರುತ್ತ ಆಧುನಿಕ ಮಹಾ ಪಂಡಿತರ ಮೆಚ್ಚಿಕೆಗೂ ಒಳಗಾಗಿರುವುದನ್ನು ನಾವು ಕಾಣುತ್ತೇವೆ. "ವಚನಗಳು ಗದ್ಯವಾದರೂ ಕಾವ್ಯಸರಣಿಯಲ್ಲಿರುವುದರಿಂದ ವಚನಕಾರರನ್ನು ಕವಿಗಳೆಂದೇ ಹೇಳಬಹುದು. ಬಸವ ಯುಗದಲ್ಲಿ ಹುಟ್ಟಿದ ವಚನಗಳ ಸಂಖ್ಯೆ ೧೬೦ ಕೋಟಿ ಎಂದು ಇತಿಹಾಸವಿದೆ. ಬಸವ ಕಾಲಕ್ಕೆ ಈಚೆಯೂ ಹಲವರು ವಚನಗಳನ್ನು ಬರೆದಿದ್ದಾರೆ. ಈ ವಚನಗಳು ಕನ್ನಡ ಸಾಹಿತ್ಯದಲ್ಲಿ ಪೂಜ್ಯ ಸ್ಥಾನವನ್ನು ಪಡೆಯಲು ಅರ್ಹವಾಗಿವೆ. ಇವು ಗೂಢವಾದ ವೇದಾಂತ ವಿಷಯಗಳನ್ನು ಸುಲಭವಾದ ಮಾತುಗಳಿಂದ ಬಿಗಿಯಾದ ಶೈಲಿಯಲ್ಲಿ ಮನಮುಟ್ಟುವಂತೆ ಬೋಧಿಸುತ್ತವೆ. ಇವನ್ನು ಕನ್ನಡ ಉಪನಿಷತ್ತುಗಳು ಎಂದು ಕರೆಯ ಬಹುದು" ಎಂದು ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರೂ, "ವಚನ ವಾಙ್ಮಯವು ಸರಳ ಗದ್ಯದಲ್ಲಿದ್ದರೂ ಕಾವ್ಯಮಯವಾಗಿರುವುದು. ಪ್ರಾಚೀನ ಭಾರತೀಯರ ಪ್ರಜ್ಞಾತಿಶಯದ ಕುರುಹೆಂದು ಗಣಿಸಲ್ಪಡುವ ಉಪನಿಷತ್ತುಗಳಿಗಿಂತ ಆವ ಭಾಗದಲ್ಲಿಯೂ ವಚನಗಳು ಕಡಿಮೆಯಲ್ಲವೆಂದು ಹೇಳಲು ಅಭಿಮಾನವೆನಿಸುತ್ತದೆ. ಇಂಥ ಅಪಾರವಾದ ಅಪರೂಪ ಸಾಹಿತ್ಯವನ್ನು ಕಲ್ಪಿಸಿ ಮಾತೃಭಾಷೆಗೆ ಭೂಷಣಪ್ರದರಾದ ವರು ಶರಣರು" ಎಂದು ಡಾ. ಎಸ್. ಸಿ. ನಂದಿಮಠ ಅವರೂ, "ಸಾಹಿತ್ಯ ದೃಷ್ಟಿಯಿಂದ ವಚನ ಗ್ರಂಥಗಳು ಕನ್ನಡ

ಸಾಹಿತ್ಯದ ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ಏಕೆಂದರೆ ಈ ರೂಪದ ಸಾಹಿತ್ಯವು ಕನ್ನಡ ಸಾಕುತಾಯಿಯಾದ ಸಂಸ್ಕೃತದಲ್ಲಾಗಲಿ ಅಕ್ಕತಂಗಿಯರಂತಿರುವ ತಮಿಳು ತೆಲುಗುಗಳಲ್ಲಾಗಲಿ ಅಥವಾ ಮತ್ತಾವ ಭಾರತೀಯ ದೇಶ ಭಾಷೆ ಗಳಲ್ಲಾಗಲಿ ಇದ್ದಂತೆ ತಿಳಿದುಬಂದಿಲ್ಲ" ಎಂದು ಪ್ರೊ. ಟಿ. ಎಸ್. ವೆಂಕಣ್ಣಯ್ಯನವರೂ, "ವಚನ ಶಾಸ್ತ್ರವೆಂದರೆ ಕನ್ನಡಿಗರ ಸಂಸ್ಕೃತಿಗೇ ದಿವ್ಯವಾದ ಅಮರ ಜ್ಯೋತಿಯನ್ನು ತಂದುಕೊಟ್ಟಿದೆ. ವಿಶ್ವ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶ್ವ ಸಂಸ್ಕೃತಿಯಲ್ಲಿ ಕನ್ನಡ ಸಂಸ್ಕೃತಿಗೆ ಸ್ಥಾನವಿದೆಯೇ ? ಎಂಬ ಪ್ರಶ್ನೆಗೆ ವಚನ ಶಾಸ್ತ್ರವು "ಇದೆ" ಎಂದು ಸ್ಪಷ್ಟ ವಾದ ಉತ್ತರವನ್ನು ಕೊಡುತ್ತದೆ" ಎಂದು ಪ್ರೊ. ಎಸ್. ಎಸ್. ಭೂಸನೂರಮಠ ಅವರೂ, "ಇಂಗ್ಲೀಷರೋ, ಫ್ರೆಂಚರೋ, ಜರ್ಮನರೋ, ಮರಾಠರೋ ಅಥವಾ ಬಂಗಾಳಿಗಳೋ ಯಾರಾದರು ಅನ್ಯ ಭಾಷೆಯವರು ಕನ್ನಡಿಗ ರಲ್ಲಿ ಬಂದು ನಿಮ್ಮ ಸಾಹಿತ್ಯದಲ್ಲಿ ಸಾರವತ್ತಾದ ವಿಶೇಷಾಂಶವೇನಿದೆ ? ಎಂದು ಕೇಳಿದರೆ, ನಾವು ಅವರ ಮುಂದಿರಿಸ ಬಹುದಾದ ಸಾಹಿತ್ಯದಲ್ಲಿ ವಚನ ಶಾಸ್ತ್ರವು ಒಂದು ಮುಖ್ಯ ಸ್ಥಾನವನ್ನು ಪಡೆಯುವದಾಗುತ್ತದೆ" ಎಂದು ಡಾ. ಡಿ. ವಿ. ಗುಂಡಪ್ಪನವರೂ, "ವಚನಕಾರರು ಸ್ವತಂತ್ರ ವಿಚಾರದವರಿದ್ದು, ವೇದಾಗಮೋಪನಿಷತ್ತುಗಳ ತತ್ತ್ವಗಳ ಮೇಲಿಂದ ತಮ್ಮದೊಂದು ಸಿದ್ಧಾಂತವನ್ನೇ ನಿರ್ಮಿಸಿದ್ದಾರೆ. ಇದಕ್ಕೆ ಷಟ್‍ಸ್ಥಲ ಸಿದ್ಧಾಂತವೆಂದು ಹೆಸರು. ಇವರು ಹಿಂದೂ ಧರ್ಮದ ಯಾವತ್ತು ವಿಷಯಗಳಲ್ಲಿಯ ಸಾರವನ್ನು ತೆಗೆದುಕೊಂಡು ಅದನ್ನು ಈ ತಮ್ಮ ಸಿದ್ಧಾಂತದಲ್ಲಿ ನೆಲೆಗೊಳಿಸಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಪ್ರವೃತ್ತಿ ನಿವೃತ್ತಿಗಳ ಸಮ್ಮೇಳನವೂ, ಭಕ್ತಿ ಜ್ಞಾನ ವೈರಾಗ್ಯಗಳ ಸಮಾ ವೇಶವೂ,ಯೋಗಾಭ್ಯಾಸ ನೈತಿಕ ತತ್ತ್ವಗಳ ಸಂಘಟನೆಯೂ ಉಂಟಾಗಿ ಒಂದು ಆಶ್ಚರ್ಯಕರ ಸಿದ್ಧಾಂತವಾಗಿರುವದು. ಅವರು ನಿರ್ಮಿಸಿದ ಈ ಕನ್ನಡ ವಾಙ್ಮಯಕ್ಕೆ ವಚನಶಾಸ್ತ್ರವೆಂಬ ಹೆಸರು ಉಂಟಾಗಿದೆ" ಎಂದು ರಾವ್ ಸಾಹೇಬ್ ಫ. ಗು. ಹಳಕಟ್ಟಿಯವರೂ, "ಕನ್ನಡದಲ್ಲಿ ವಚನ ಶಾಸ್ತ್ರದಂಥ ವಾಙ್ಮಯವಿದ್ದುದು ಕನ್ನಡಿಗರ ಭಾಗ್ಯವು ಮತ್ತು ಕನ್ನಡಿಗರಿಗೆ ಅದು ಭೂಷಣಾಸ್ಪದವೇ ಎಂದು ಹೇಳಬೇಕಾಗುವದು. ಇದು ಕನ್ನಡ ಭಾಷೆಯ ಗೌರವವನ್ನಷ್ಟೇ ಅಲ್ಲ ಕನ್ನಡಿಗರ ಗೌರವವನ್ನೂ ಸ್ಪಷ್ಟಗೊಳಿಸುವದು. ಇಂಥ ವಾಙ್ಮಯವನ್ನು ನಿರ್ಮಾಣಮಾಡುವಷ್ಟು ಶಕ್ತಿಯುಳ್ಳವರು ಕನ್ನಡನಾಡಿನಲ್ಲಿರುವರು ಮತ್ತು ಇಂಥ ಉಚ್ಚ ಹಾಗೂ ಕಠಿಣ ವಿಚಾರಗಳನ್ನು ಸಹಜವಾಗಿ ವ್ಯಕ್ತಮಾಡುವ ಸಾಮರ್ಥ್ಯವು ಕನ್ನಡ ನುಡಿಯಲ್ಲಿರುವದು—ಈ ಎರಡೂ ಮಾತುಗಳು ಈ ವಚನ ಶಾಸ್ತ್ರದಿಂದ ಸಿದ್ಧವಾಗುತ್ತಿವೆ" ಎಂದು ಡಾ. ಆರ್. ಆರ್. ದಿವಾಕರ ಅವರೂ, "ದೇವವಾಣಿ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿ ಯನ್ನು ದೇವವಾಣಿ ಮಟ್ಟಕ್ಕೇರಿಸಿದ ಪವಾಡ ವಚನಕಾರರದು" ಎಂದು ಪ್ರೊ. ಶಿ. ಶಿ. ಬಸವನಾಳ ಅವರೂ—ಹೀಗೆ ಅನೇಕ ಆಧುನಿಕ ಪಂಡಿತರು, ದಾರ್ಶನಿಕರು, ಭಾಷಾಶಾಸ್ತ್ರಜ್ಞರು ವಚನ ಸಾಹಿತ್ಯದ ಮಹತ್ತ್ವವನ್ನೂ ಉಪಕಾರವನ್ನೂ ಪ್ರಶಂಸಿಸಿದ್ದಾರೆ.

## ಉಪಸಂಹಾರ

ಈ ರೀತಿ ಅದ್ವಿತೀಯವಾಗಿ ಪರಿಣಾಮಗೊಂಡು, ತ್ರಿಕಾಲಾಬಾಧಿತ ಪ್ರಶಂಸೆಗೆ ಪಾತ್ರವಾಗಿ ಅಮೂಲ್ಯ ನಿಧಿ ಯಾಗಿರುವ ವಚನ ಸಾಹಿತ್ಯರಾಶಿ ಅಪಾರವಾಗಿದೆ ಎಂಬುದಕ್ಕೆ ಸಾಕಷ್ಟು ಆಧಾರಗಳಿದ್ದರೂ, ಇಲ್ಲಿಯವರೆಗೆ ಆ ರಾಶಿ ಯಲ್ಲಿ ಕೊಂಚ ಭಾಗ ಮಾತ್ರ ಬೆಳಕಿಗೆ ಬಂದಿದೆ. ಅಲ್ಲದೆ ಹಾಗೆ ಬೆಳಕಿಗೆ ಬಂದ ವಚನಗಳಲ್ಲಿ ಕೆಲವು ಅಂಕಿತಗಳ ವಚನ ಗಳ ಕರ್ತೃಗಳು ಯಾರೆಂಬುದು ತಿಳಿಯದಾಗಿದೆ. ಮತ್ತು ವಚನ ಪಾಠಗಳಲ್ಲಿ ಲಿಪಿಕಾರರ ಹಲವು ಅಶುದ್ಧ ಸ್ಖಾಲಿತ್ಯ ಗಳು ಉಳಿದುಕೊಂಡಿವೆ. ಈ ದಿಶೆಯಲ್ಲಿ ಹೆಚ್ಚಿನ ಸಂಶೋಧನೆಗಳು ಇನ್ನೂ ಆಗಬೇಕಾಗಿದೆ. ಒಟ್ಟಿನಲ್ಲಿ ವಚನ ಸಾಹಿತ್ಯವು ಸಾಹಿತ್ಯ ಪ್ರಪಂಚದಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುವುದು ಕನ್ನಡಿಗರಿಗೆ ಮಾತ್ರವಲ್ಲದೆ ಸಮಸ್ತ ಭಾರತೀಯರಿಗೂ ಹೆಮ್ಮೆಯ ವಿಚಾರವಾಗಿದೆ.

# ವಚನಕಾರರಲ್ಲಿ ನವೀನ ಲಕ್ಷಣೀಕರಣ

ಡಾ. ಸಿ. ಪಿ. ಕೃಷ್ಣಕುಮಾರ್

ಕರ್ಣಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಪರಂಪರೆಗೆ ಒಂದು ಹೊಸ ಗತಿಯನ್ನೂ ತಿರುವನ್ನೂ ಕೊಟ್ಟವರು ವೀರಶೈವ ವಚನಕಾರರು. ಅವರು ಎಬ್ಬಿಸಿದ ಕ್ರಾಂತಿ ಎಷ್ಟು ಅಪೂರ್ವವೂ ವ್ಯಾಪಕವೂ ಆದದ್ದು ಎಂಬುದನ್ನು ಅರಿಯದವರಿಲ್ಲ. ಆದರೆ ಆ ಕ್ರಾಂತಿಯ ಬಗೆಗೆ ಇರಬಹುದಾದ ತಪ್ಪು ತಿಳಿವಳಿಕೆಯನ್ನು ನಿವಾರಿಸಿಕೊಳ್ಳುವುದು ಕೂಡ ಅಗತ್ಯ. ವಚನಕಾರರ ಕ್ರಾಂತಿ ಶೂನ್ಯದಿಂದ ಹೊಮ್ಮಿದ ಪವಾಡವಲ್ಲ ಎಂಬುದನ್ನು ನೆನಪಿಡಬೇಕು. ಎಲ್ಲ ಸತ್‌ಕ್ರಾಂತಿಗಳಂತೆ ಅದು ಕೂಡ ಒಂದು ಸಮನ್ವಯದ ಅಮೋಘ ಫಲಿತಾಂಶವಾಗಿದೆ. ಇಹ-ಪರಗಳ ಸಮನ್ವಯ ವಚನಕಾರರ ವಿಚಾರವಾಹಿನಿಯಲ್ಲಿ ಎದ್ದುಕಾಣುವಂತೆಯೇ ಹಳತು–ಹೊಸತರ ಸಮನ್ವಯವೂ ಸುಗೋಚರವಾಗುತ್ತದೆ. ಈ ಸಾಮರಸ್ಯವನ್ನು ವಚನಕಾರರು ನಾನಾ ವಿಧವಾಗಿ ಸಾಧಿಸಿದ್ದಾರೆ: ಅಂತಹ ಒಂದು ಪ್ರಕಾರದ ಇಣುಕುನೋಟವಷ್ಟೆ ಇಲ್ಲಿ ಉದ್ದಿಷ್ಟವಾಗಿರತಕ್ಕದ್ದು.

ಹಳೆಯದೆಲ್ಲ ಕೆಟ್ಟದ್ದಲ್ಲ ಎಂಬುದು ಹಾಗಿರಲಿ, ಅದನ್ನೆಲ್ಲ ಮೂಲೋತ್ಪಾಟನಮಾಡುವುದು ಸಾಧ್ಯವಿಲ್ಲ, ಕೆಲವೊಮ್ಮೆ ಸಾಧುವೂ ಅಲ್ಲ ಎಂಬುದು ಮುಖ್ಯವಾದ ಮಾತು. ಸಾಹಿತ್ಯದ ವಿಷಯದಲ್ಲಿ ಇದು ಇನ್ನೂ ಹೆಚ್ಚಿನ ಒತ್ತು ಪಡೆದುಕೊಳ್ಳುತ್ತದೆ. ಸಮಷ್ಟಿಚಿತ್ತದಲ್ಲಿ ರೂಢಮೂಲವಾಗಿರುವ ನಂಬಿಕೆಗಳನ್ನು, ಕಲ್ಪನೆಗಳನ್ನು, ಕಥೆಗಳನ್ನು ಅಳಿಸುವುದು ದುಷ್ಕರ: ಅವುಗಳನ್ನು ಹೊಸ ಬಗೆಯಲ್ಲಿ ಬಳಸಿಕೊಳ್ಳುವುದೊಂದೆ ಅತ್ಯುತ್ತಮವಾದ ಮಾರ್ಗ. ಹಳೆಯದಕ್ಕೆ ವರ್ತಮಾನೋಚಿತವಾದ ಹೊಸ ಅರ್ಥವನ್ನು ಹಾಯಿಸುವುದು. ಅದರ ದೇಹವನ್ನಷ್ಟೆ ಉಳಿಸಿಕೊಂಡು ಅದರಲ್ಲಿ ನವಪ್ರಾಣ ಪ್ರತಿಷ್ಠಾಪನೆ ಮಾಡುವುದು, ತನ್ಮೂಲಕ ಹಳೆಯದು ನಿರಪಾಯಕಾರಿಯಾಗುವಂತೆ ಯೋಜಿಸುವುದು ಇದು ಸಾಹಿತಿ ಮಾಡಬೇಕಾದ ಕೆಲಸ. ಪುರಾಣವನ್ನು ಅವನು ಹೀಗೆ ಪುನರುಜ್ಜೀವಿಸುತ್ತಾನೆ. ನವೀನ ಸಂದೇಶಕ್ಕೆ ವಾಹಕವಾಗುವ ಪ್ರತಿಮೆಯನ್ನಾಗಿ ಮಾಡಿಕೊಳ್ಳುತ್ತಾನೆ.

ಸಾಹಿತ್ಯ ನಿರ್ಮಿತಿ ವಚನಕಾರರ ಉದ್ದೇಶವಾಗಿರಲಿಲ್ಲ: ಅವರ ಕಣ್ಣ ಮುಂದಿದ್ದ ಗುರಿ ಸಮಾಜ ಸುಧಾರಣೆ. ಆದರೆ ತಮಗರಿವಿಲ್ಲದಂತೆಯೆ ಅವರ ಪ್ರಯತ್ನ ಸಾಹಿತ್ಯದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಯಾವುದು ಜನಮನದಲ್ಲಿ ಕೇವಲ ಸಾಂಪ್ರದಾಯಿಕವಾದ ಅರ್ಥದಲ್ಲಿ ಪ್ರಚಲಿತವಾಗಿತ್ತೋ ಅದನ್ನು ವಚನಕಾರರು ಆ ಅರ್ಥದಿಂದ ಬಿಡಿಸಿ, ಬೇರೊಂದು ನೆಲೆಯಲ್ಲಿ ಅರ್ಥೈಸಿದರು. ಸಾಂಕೇತಿಕವೂ ನವೀನವೂ ಆದ ಈ ಅರ್ಥ ಹಿಂದಿನ ಅರ್ಥಕ್ಕಿಂತ ಸ್ವಸ್ಥವೂ ಅಂಗೀಕಾರಯೋಗ್ಯವೂ ಆಗಿರುವುದು ಸಾಧ್ಯ. ಅಂತೂ ಅನೇಕ ನೂತನ ಲಕ್ಷಣೀಕರಣಗಳು (definitions) ವಚನಕಾರರಲ್ಲಿ ಸಿಕ್ಕುತ್ತವೆ. ಕೆಲವು ಉದಾಹರಣೆಗಳನ್ನೀಗ ಗಮನಿಸಬಹುದು.

ಉದಯಾಸ್ತಮಾನಗಳು ದೈನಂದಿನ ಭೌತಿಕ ಘಟನೆಗಳಷ್ಟೆ. ಹೊರಗಿನ ಈ ನಿಸರ್ಗ ವ್ಯಾಪಾರಗಳನ್ನು ರೂಪಕಗಳನ್ನಾಗಿ, ಆಂತರಿಕ ವಿದ್ಯಮಾನಗಳನ್ನಾಗಿ ಮಾಡಿಕೊಂಡಿರುವುದುಂಟು ವಚನಕಾರರು. ಬಸವಣ್ಣನವರು ಹೇಳುತ್ತಾರೆ:

ಎನಗೆ ನಿನ್ನ ನೆನಹಾದಾಗಲೇ ಉದಯ<br>
ಎನಗೆ ನಿನ್ನ ಮರಹಾದಾಗಲೇ ಅಸ್ತಮಾನ

ಇಲ್ಲಿ ನಾವು ಕಾಣುವುದು ಮಾಮೂಲು ಬೆಳಗು ಬೈಗುಗಳನ್ನಲ್ಲ. ಬಸವವಚನಕ್ಕೇ ಪೂರಕವಾಗಿದೆ, "ಆಯಿತ್ತೆ ಉದಯಮಾನ, ಹೋಯಿತ್ತೇ ಅಸ್ತಮಾನ" ಎಂಬ ಅಲ್ಲಮಪ್ರಭುವಿನ ಉಕ್ತಿ. ಮುಂದಿನವು ಮತ್ತೂ ಮುಖ್ಯವಾದ ನಿದರ್ಶನಗಳು.

ಸ್ವರ್ಗ, ನರಕಗಳ ಅಸ್ತಿತ್ವವನ್ನು ಬಹು ಮಂದಿ ನಂಬುತ್ತಾರೆ. ಸ್ವರ್ಗ ಸುಖದ ಆವಾಸವೆಂದೂ, ನರಕ ದುಃಖದ

ಬೇಡೆಂದೂ ತಿಳಿಯುತ್ತಾರೆ. ಬಸವಣ್ಣನವರು ಈ ನಂಬಿಕೆಯನ್ನು ನಿರಾಕರಿಸದೇ, ಸ್ವರ್ಗ ಮರ್ತ್ಯ ನರಕಗಳಿಗೆ ತಮ್ಮದೇ ಆದ ವ್ಯಾಖ್ಯಾನ ನೀಡಿರುವುದು ಪ್ರಸಿದ್ಧವಾಗಿದೆ.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ
ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ

ಕಡೆಯ ಸಾಲು ತುಂಬ ಮುಖ್ಯವಾದುದು. ಸ್ವರ್ಗ, ನರಕಗಳು ಬೇರೆ ಎಲ್ಲೋ ದೂರದಲ್ಲಿಲ್ಲ; ಈ ನೆಲದ ಮೇಲೆಯೆ ಇವೆ. ನಮ್ಮ ಬದುಕಿನಲ್ಲಿ ಇವೆ. ಸದಾಚಾರವೇ ಸ್ವರ್ಗ. ಅದರಿಂದ ಅಂತಿಮವಾಗಿ ಸುಖ. ಅನಾಚಾರವೇ ನರಕ. ಅದರಿಂದ ಅಂತಿಮವಾಗಿ ದುಃಖ. ಸ್ವರ್ಗ, ನರಕಗಳ ಸಾಂಪ್ರದಾಯಿಕ ಕಲ್ಪನೆ ವಿಧಿಸುವ ಜೀವನ ವಿಧಾನವೇ ಬೇರೆ. ಯಜ್ಞಯಾಗಾದಿಗಳ ಆಚರಣೆ ಇತ್ಯಾದಿ. ಬಸವಣ್ಣನವರ ಸೂತ್ರ ತೀರ ಭಿನ್ನವಾದುದು. ಅದನ್ನು ಅವಲಂಬಿಸಿದರೆ ವ್ಯಕ್ತಿಗೆ ಮತ್ತು ಸಮಾಜಕ್ಕೆ ಕ್ಷೇಮ. "ಅಯ್ಯಾ ಎಂದಡೆ ಸ್ವರ್ಗ. ಎಲವೋ ಎಂದಡೆ ನರಕ" ಎಂದೂ ಬಸವಣ್ಣನವರು ಹೇಳಿರುವುದನ್ನು ಲಕ್ಷಿಸಬಹುದು. 'ಅಯ್ಯಾ' ಎಂಬ ಒಳ್ನುಡಿ ಸುಸಂಸ್ಕೃತವಾದ ಮಾಗಿದ ಮನಸ್ಸನ್ನು ಕನ್ನಡಿಸುತ್ತದೆ. ಅದೇ ಸ್ವರ್ಗ. 'ಎಲವೋ' ಎಂಬ ಒರಟು ನುಡಿಯ ಹಿಂದಿರತಕ್ಕದ್ದು ಅಪಕ್ವವಾದ ಮನಸ್ಸು, ಅದೇ ನರಕ.

ಅಸ್ಪೃಶ್ಯತೆಯ ನಿರಸನಕ್ಕಾಗಿ ವಚನಕಾರರು ಅಪಾರವಾಗಿ ದುಡಿದರು. ಹೊಲೆಯ, ಮಾದಿಗ ಎಂಬ ಹೆಸರುಗಳಿಗೆ ಅಂಟಿಕೊಂಡ ಕಳಂಕವನ್ನು ತೊಡೆಯಲು ಯತ್ನಿಸಿದರು. ಒಬ್ಬ ವ್ಯಕ್ತಿ 'ಹೊಲೆಯ' ಅಥವಾ 'ಮಾದಿಗ'ನಾಗುವುದು ತನ್ನ ಹುಟ್ಟಿನಿಂದಲ್ಲ. ನಡೆವಳಿಕೆಯಿಂದ ಎನ್ನುತ್ತಾರೆ ಬಸವಣ್ಣನವರು

ಕೊಲುವವನೇ ಮಾದಿಗ
ಹೊಲಸ ತಿಂಬವನೇ ಹೊಲೆಯ

ಈ ದೃಷ್ಟಿಯಿಂದ ನೋಡಿದಾಗ, ಉಚ್ಚ ಜಾತಿಯಲ್ಲಿ ಹುಟ್ಟಿದವನೂ 'ಹೊಲೆಯ' ಅಥವಾ 'ಮಾದಿಗ'ನಾಗಬಹುದು. ಏನೇ ಇರಲಿ, ಸಮಾಜದಲ್ಲಿ ಬೇರೂರಿರುವ ಹೊಲೆಯ, ಮಾದಿಗ ಮುಂತಾದ ಮಾತುಗಳನ್ನು ಬಹಿಷ್ಕರಿಸುವುದು ಸಾಧ್ಯವಿಲ್ಲ. ಎಂತಲೇ ಬಸವಣ್ಣನವರು ಅವಕ್ಕೆ ಹೊಸ ಅರ್ಥವನ್ನು ಹಚ್ಚಬೇಕಾಯಿತು. 'ಹುಸಿ ಎಂಬುದು ಹೊಲೆ' ಎಂಬ ಅಕ್ಕಮಹಾದೇವಿಯ ನುಡಿಯನ್ನು ಇಲ್ಲಿ ನೆನೆಯಬೇಕು. ('ಅತಿ ಹುಸಿವ ಯತಿ ಹೊಲೆಯ' ಎನ್ನುತ್ತಾನೆ ರಾಘವಾಂಕ).

ನಮ್ಮ ಸಮಾಜದಲ್ಲಿ ಮೂಢನಂಬಿಕೆಗಳು ಅಸಂಖ್ಯ. ಮಾರಿ, ಮಸಣಿ ಮುಂತಾದ ಕ್ಷುದ್ರದೈವಗಳಲ್ಲಿ ಜನತೆಗೆ ಬಹಳ ವಿಶ್ವಾಸ. ವಾಸ್ತವವಾಗಿ ಮಾರಿ, ಮಸಣಿಗಳಿಲ್ಲ. ಆದರೆ ಇನ್ನೊಂದರ್ಥದಲ್ಲಿ ಉಂಟು. ಬಸವಣ್ಣನವರು ಹೇಳುತ್ತಾರೆ

ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣಿರೋ
ಮಾರಿಯೆಂಬುದೇನು ? ಕಂಗಳು ತಪ್ಪಿ ನೋಡಿದರೆ ಮಾರಿ
ನಾಲಗೆ ತಪ್ಪಿ ನುಡಿದರೆ ಮಾರಿ
ನಮ್ಮ ಕೂಡಲಸಂಗಮದೇವರ ನೆನಹು ಮರೆದರೆ ಮಾರಿ

ಇಲ್ಲಿ ಜನರನ್ನು ಮೂಢನಂಬಿಕೆಗಳ ಹಿಡಿತದಿಂದ ಪಾರುಮಾಡಿ, ವೈಚಾರಿಕತೆಯುತ್ತ ನಡೆಸುವ, ಜೀವನ ಶುದ್ಧಿಗೆ ಪ್ರೇರಿಸುವ ಪ್ರಯತ್ನ ಕಾಣುತ್ತದೆ. ಸ್ಥೂಲಾರ್ಥದಲ್ಲಿ ಮಾರಿ, ಮಸಣಿಗಳಲ್ಲಿನ ನಂಬಿಕೆ ಹಿಂಸೆಗೆ ಕಾರಣವಾಗುತ್ತದೆ, ಅವನತಿಗೆ ಒಯ್ಯುತ್ತದೆ. ಆದರೆ ಬಸವಣ್ಣನವರು ಮಾರಿಗೆ ಆರೋಪಿಸಿರುವ ಸೂಕ್ಷ್ಮಾರ್ಥದ ಅನುಸಂಧಾನದಿಂದ ವ್ಯಕ್ತಿಯ ಉದ್ಧಾರ ಸಾಧ್ಯ.

ಹೀಗೆಯೇ ಮದ್ಯ, ಮಾಂಸಗಳಿಗೆ ಅಲ್ಲಮಪ್ರಭು ಹೊಸ ಅರ್ಥ ಕಲ್ಪಿಸುವ ಪರಿ ಕುತೂಹಲಕರವಾಗಿದೆ

ಮದ್ಯ ಮಾಂಸಾದಿಗಳ ಮುಟ್ಟೆವೆಂದೆಂಬಿರಿ, ನೀವು ಕೇಳಿರೇ
ಮದ್ಯವಲ್ಲವೇನು ಅಷ್ಟಮದಂಗಳು ?
ಮಾಂಸವಲ್ಲವೇನು ಸಂಸಾರಸಂಗ !

ಸ್ಥೂಲಾರ್ಥದ ಮದ್ಯ ಮಾಂಸಗಳನ್ನು ವರ್ಜಿಸಿಯೂ ಒಬ್ಬ ವ್ಯಕ್ತಿ ಪತಿತನಾಗುವುದು ಶಕ್ಯ. ಸೂಕ್ಷ್ಮವಾದ ಮದ್ಯ ಮಾಂಸಗಳನ್ನು—ಅಷ್ಟಮದ. ಸಂಸಾರ ಸಂಗಗಳನ್ನು—ಅವನು ತೊರೆಯುವುದು ಮುಖ್ಯ. ("ಮಾಂಸವಲ್ಲವೇನು ಸಂಸಾರ ಸಂಗ" ಎಂಬ ಮಾತು ವಾಚ್ಯಾರ್ಥದಲ್ಲೂ ಸಂಗತವಾಗುತ್ತದೆ).

'ಮಾಯೆ'ಗೆ ರೂಢಿಯಲ್ಲಿರುವ ಅರ್ಥವನ್ನು ಅಲ್ಲಮಪ್ರಭು ಬದಲಿಸಿರುವುದು ಗಮನಾರ್ಹ

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ...

ಹೊನ್ನು ಹೆಣ್ಣು ಮಣ್ಣುಗಳನ್ನು ತ್ಯಜಿಸಿಯೂ ಮಾನವ ಮೋಕ್ಷದೂರನಾಗಿರಬಹುದು. ಆಸೆ ಈ ಮೂರಕ್ಕೆ ಮಾತ್ರ ಸೀಮಿತವಲ್ಲ. ಅದು ಶತಮುಖವಾದದ್ದು: ಅದೇ ಮಾಯೆ. ಅದನ್ನು ಗೆಲ್ಲುವುದೇ ಗುರಿಯಾಗಬೇಕು. ಅಂತೂ 'ಮಾಯೆ'ಯಾಗಿರುವ ಸಂಪ್ರದಾಯಬದ್ಧ ವಸ್ತುನಿಷ್ಠ ಅರ್ಥ ಅಲ್ಲಮನಲ್ಲಿ ವ್ಯಕ್ತಿನಿಷ್ಠವಾಗಿ ಪರಿಣಮಿಸಿದೆ. ಅವರ ಪ್ರಕಾರ. ಮನೋನಿಗ್ರಹಕ್ಕೆ ಪ್ರಾಧಾನ್ಯ.

ಸಿದ್ಧರಾಮನ ಮಾಯಾವಿವರಣೆಯೂ ಇಲ್ಲಿ ಸ್ಮರಿಸಬೇಕಾದದ್ದು

ಯೋಗಿಗೆ ಕೋಪವೇ ಮಾಯೆ
ರೋಗಿಗೆ ಅಪಥ್ಯವೇ ಮಾಯೆ
ಅರಿದೆನೆಂಬವಂಗೆ ನಾನು ನೀನು ಎಂಬುದೇ ಮಾಯೆ

"ಯೋಗಿಗೆ ಕೋಪವೇ ಮಾಯೆ" ಎಂಬುದು ಮಾನಸಿಕ ಸ್ತರದಲ್ಲಿ. "ರೋಗಿಗೆ ಅಪಥ್ಯವೇ ಮಾಯೆ" ಎಂಬುದು ದೈಹಿಕ ಸ್ತರದಲ್ಲಿ. "ಅರಿದೆನೆಂಬವಂಗೆ ನಾನು ನೀನು ಎಂಬುದೇ ಮಾಯೆ" ಎಂಬುದು ಆಧ್ಯಾತ್ಮಿಕ ಸ್ತರದಲ್ಲಿ ಗ್ರಾಹ್ಯವಾಗುವ ಮಾತುಗಳು. ಸಿದ್ಧರಾಮ ಮಾಯೆಯನ್ನು ತುಂಬ ವ್ಯಾಪಕವಾಗಿ ಗ್ರಹಿಸಿದ್ದಾನೆ ಇಲ್ಲಿ.

'ಪ್ರಸಾದ'ದ ಅರ್ಥವನ್ನು ದೇವರದಾಸಿಮಯ್ಯ ಹೀಗೆ ಪರಿಷ್ಕರಿಸಿದ್ದಾನೆ

ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ
ಹತ್ತೆ ಕರೆದಿಕ್ಕುವುದು ಪ್ರಸಾದವಲ್ಲ
ತಕ್ಕೈಸಿ ನಿಮ್ಮುವನಪ್ಪಿಕೊಂಡೊಡೆ
ನಿಶ್ಚಯ ಪ್ರಸಾದ ಕಾಣಾ—

ಹೀಗೆ ಹಳೆಯದನ್ನು ಸಂಪೂರ್ಣವಾಗಿ ಅಲ್ಲಗಳೆಯದೇ. ಅದನ್ನು ಹೊಸ ಅರ್ಥ. ಮೌಲ್ಯಗಳಲ್ಲಿ ಹೊಳೆಯಿಸುವ ಮತ್ತು ಬೆಳೆಯಿಸುವ ಪ್ರತಿಭೆಯನ್ನು. ವ್ಯಾಖ್ಯಾನ ಕೌಶಲವನ್ನು ಮೆರೆದಿದ್ದಾರೆ ವಚನಕಾರರು. (ಹೀಗೆ ಮಾಡುವಾಗ ಶಬ್ದಗಳ ಮೂಲಾರ್ಥಕ್ಕೆ ಅವರು ಭಂಗ ತರುವುದಿಲ್ಲ. 'ಹೋಲಿಯ'. 'ಮಾರಿ' ಮುಂತಾದುವುಗಳ ಅಕ್ಷರಾರ್ಥ ಉಳಿದುಕೊಳ್ಳುತ್ತದೆ). ಇಲ್ಲೆಲ್ಲ ಮೂರ್ತವನ್ನು ಅಮೂರ್ತವಾಗಿಸುವ 'ತಂತ್ರ'ವೂ ಕಂಡುಬರುತ್ತದೆ. ಈ ಬಗ್ಗೆ ಸವಿವರವಾದ ಅಧ್ಯಯನಕ್ಕೆ ಅವಕಾಶವಿದೆ.

ಒಟ್ಟಿನಲ್ಲಿ. ವಚನಕಾರರ ಈ 'ಅರ್ಥಾಂತರನ್ಯಾಸ' ವ್ಯಕ್ತಿಯ ಮತ್ತು ಸಮಾಜದ ಪರಿಪೂರ್ಣತೆಗೆ, ಸರ್ವೋದಯಕ್ಕೆ ಅನುಕೂಲವಾದದ್ದು. ಅದೇ ವಚನಕಾರರ ವಿವಕ್ಷೆ.

# ವಚನಗಳಲ್ಲಿ ಸಾಹಿತ್ಯಗುಣ

**ಪ್ರೊ. ಎಸ್. ವಿ. ಪರಮೇಶ್ವರಭಟ್ಟ**

ನಮ್ಮ ಆಧುನಿಕ ವಿಮರ್ಶಕರು ಸಾಹಿತ್ಯಪ್ರಕಾರಗಳಲ್ಲಿ ದಿನಚರಿಗೂ ಒಂದು ವಿಶಿಷ್ಟವಾದ ಸ್ಥಾನವಿದೆ ಎಂದು ಹೇಳುತ್ತಾರೆ. ಪ್ರಪಂಚದ ದೊಡ್ಡ ದೊಡ್ಡ ಸಮಾಜ ಸುಧಾರಕರೂ. ರಾಜಕಾರಣಪಟುಗಳೂ. ತತ್ತ್ವವಿದರೂ. ವಿಜ್ಞಾನಿಗಳೂ. ಸಾಹಿತ್ಯಜ್ಞರೂ. ಸಾಹಿತ್ಯೇತರ ಕಲಾವಿದರೂ. ಶಿಕ್ಷಣತಜ್ಞರೂ ತಮ್ಮ ತಮ್ಮ ದಿನಚರಿಗಳನ್ನು ಬರೆದಿಡುವುದು ಈಗ ಪದ್ಧತಿಯಾಗಿದೆ. ಅವರವರಿಗೆ ಒದಗಿಬಂದ ನೋವು-ನಲಿವು. ಕಷ್ಟ-ಸುಖಗಳೂ. ಅವರವರ ಅಂದಂದಿನ ಆಲೋಚನೆಗಳೂ. ಅವರವರು ಆಗಾಗ ಮಾಡಿದ ಚಿಂತನ ಮಂಥನಗಳೂ. ವಿಚಾರ ವಿನಿಮಯಗಳೂ ಇಂತಹ ದಿನಚರಿಗಳಲ್ಲಿ ಪ್ರಕಟವಾಗಿರುತ್ತವೆ. ಇವು ಪ್ರಾಮಾಣಿಕವಾದ ಅನಿಸಿಕೆಗಳಾಗಿರುತ್ತವೆ. ಸ್ವಾನುಭವವೇದ್ಯವಾದ ಸಂಗತಿಗಳಾಗಿರುತ್ತವೆ. ಈ ದೃಷ್ಟಿಯಿಂದ ವಿಚಾರಮಾಡಿದಾಗ ಬಸವಾದಿ ಶಿವಶರಣರ. ಅಕ್ಕಮಹಾದೇವಿಯೇ ಮೊದಲಾದ ಶಿವಶರಣೆಯರ ವಚನಗಳು ಅತ್ಯುತ್ತಮವಾದ ದಿನಚರಿಗಳಾಗಿವೆ ಎಂದು ಹೇಳಬೇಕಾಗುತ್ತದೆ. ಈ ಶಿವಶರಣ. ಶರಣೆಯರು ತಮ್ಮ ಅಂತರಂಗದಲ್ಲಿ ಹೊಳೆದ ಭಾವನೆಗಳಿಗೆ ವಚನಗಳ ಮಾಧ್ಯಮದ ಮೂಲಕ ಪ್ರಕಟಣೆಯನ್ನು ದೊರಕಿಸಿಕೊಟ್ಟಿದ್ದಾರೆ. ಒಂದು ಹೊತ್ತಿನ, ಒಂದು ಬಾಹ್ಯ ಕ್ರಿಯೆಗೆ ತಮ್ಮ ಪ್ರತಿಕ್ರಿಯೆಯಾಗಿ ಅವರು ಇಂತಹ ವಚನಗಳನ್ನು ಅಂತರಂಗದ ಸ್ಫುರಣೆಗಳೆಂಬಂತೆ ಪ್ರಕಟಪಡಿಸಿದ್ದಾರೆ. ದಿನಚರಿಗಳನ್ನು ಓದುವುದರಲ್ಲಿ ನಾವು ಯಾವ ಸ್ವಾರಸ್ಯವನ್ನು ಪಡೆಯುತ್ತೇವೆಯೋ ಅದೇ ಸ್ವಾರಸ್ಯವನ್ನು ಈ ವಚನಗಳಿಂದಲೂ ಪಡೆಯಬಹುದಾಗಿದೆ. ದಿನಚರಿ ಉದ್ದುದ್ದ ಹೇಳಿಕೆಗಳ ಸಂಪುಟವಾಗಿರುವುದಿಲ್ಲ. ಅವು ಒಂದೊಂದೇ ಭಾವದ ಅಥವಾ ಆಲೋಚನೆಯ ಸುತ್ತ ಹರಡಿಕೊಂಡ ಕೆಲವು ವಾಕ್ಯಗಳ ಸಮುದಾಯವಾಗಿರುತ್ತವೆ. ವಚನಗಳೂ ಹಾಗೆಯೇ ಇರುತ್ತವೆ. ಈ ವಿಷಯವನ್ನು ಕುರಿತು ಹೆಚ್ಚು ವ್ಯಾಖ್ಯಾನಮಾಡದೆ ಇಲ್ಲಿಗೆ ಬಿಡುತ್ತೇನೆ.

ದಿನಚರಿಯಂತೆಯೇ ಈಗಿನ ದಿವಸಗಳಲ್ಲಿ ಪ್ರವಾಸಕಥನವೂ ಒಂದು ಆಕರ್ಷಣೀಯವಾದ ಸಾಹಿತ್ಯದ ಪ್ರಕಾರವಾಗಿ ಪರಿಣಮಿಸಿದೆ. ಒಂದು ರೀತಿಯಲ್ಲಿ ವಚನಗಳೂ ಪ್ರವಾಸ ಕಥನಗಳೇ ಆಗಿವೆ. ಈ ಪ್ರವಾಸಿಗಳೆಲ್ಲ ಶಿವಭಕ್ತರು. ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ವಿರೇರಿಕೆಯ ಪ್ರಗತಿಪಥದಲ್ಲಿ ಸಾಗಿ ತಾನೇ ಶಿವನಾಗುವ ಕೊನೆಯ ನಿಲ್ದಾಣದಲ್ಲಿ ವಿರಮಿಸುವ ಯಾತ್ರಿಕರು ಇವರು. ಎಡೆಯೆಡೆಯಲ್ಲಿ ತಾವು ಸಂಧಿಸಿದ ಶೈವಕ್ಷೇತ್ರಗಳ. ಶಿವಭಕ್ತರ ವರ್ಣನೆಗಳು ಈ ವಚನಗಳಲ್ಲಿವೆ. ಜೀವಾತ್ಮನೇ ದೊಡ್ಡ ಪಯಣಿಗ. ಆತನ ಪಯಣ ಪರಮಾತ್ಮನೆಡೆಗೆ ಎಂದು ತಾನೆ ಎಲ್ಲರೂ ಹೇಳುತ್ತಾರೆ. ಆ ಪ್ರಯಾಣದ ಪ್ರವಾಸಾನುಭವವನ್ನು ಶರಣರು ಹೇಗೆ ಹೇಳುತ್ತಾರೆ ಎಂಬ ಸುಳಿವು ಈ ವಚನಗಳಲ್ಲಿದೆ. ಹೀಗಾಗಿ ಈ ವಚನಗಳನ್ನು ಓದುವವರಿಗೆ ಪುಣ್ಯಜೀವಿಯೊಬ್ಬನ ಮಜಲು ಮಜಲುಗಳ ಪ್ರಯಾಣದ ಅನುಭವಗಳ ನಿರೂಪಣೆ ಇಲ್ಲಿ ದೊರಕುತ್ತದೆ. ವೀರವ್ರತಿಗಳ. ಧರ್ಮಾಂಗನೆಯರ ದಿವ್ಯಜೀವನದ ಅಮರಯಾತ್ರೆಯ ಪ್ರವೇಶಿಕೆಗಳಂತೆ ಈ ವಚನಸಂಕಲನಗಳು ಕಾಣಬರುತ್ತವೆ.

ಸಾಹಿತ್ಯದ ಪ್ರಕಾರಗಳಲ್ಲಿ ಆತ್ಮಕತೆಗಳಿಗೆ ಹೆಚ್ಚಿನ ಮಹತ್ವವುಂಟು. ಇಲ್ಲಿ ಆತ್ಮಕಥನಕಾರ ತನ್ನ ಕಣ್ಣನ್ನೇ ನಮಗೆ ಅನುಗ್ರಹಿಸಿ ಅವನ ಕಣ್ಣಿನ ಮೂಲಕವೇ ನಾವು ಅವನನ್ನು ನೋಡುವಂತೆ ಮಾಡಿರುತ್ತಾನೆ. ಆತ್ಮಸಾಹಿತ್ಯ ನಿರ್ಮಾಪಕರಾದ ಈ ವಚನಕಾರರು ತಮ್ಮ ಅನುಭಾವಕ್ಷೇತ್ರದ ಸೋಲು-ಗೆಲುವುಗಳ ಚಿತ್ರಗಳನ್ನು ಈ ವಚನಗಳಲ್ಲಿ ಕಾಣಿಸಿದ್ದಾರೆ. ಸ್ವತಃ ಕಂಡುಂಡ ಅನುಭಾವದ ವಿಶೇಷಗಳನ್ನು ಪ್ರಾಮಾಣಿಕವಾಗಿ ಈ ವಚನಕಾರರು ಇಲ್ಲಿ ನಿರೂಪಿಸಿದ್ದಾರೆ. ಇವುಗಳನ್ನು ಓದಿ ಈ ವಚನಗಳನ್ನು ಬರೆದ ಮಾನ್ಯರ ಜೀವನ ಚರಿತ್ರೆಗಳನ್ನೇ ಮತ್ತೆ ನಾವು ಬರೆಯಬಹುದು. ಹಾಗೆ ನೋಡಿದರೆ ವಚನಕಾರರ ಜೀವನಚರಿತ್ರೆಗಳಿಗೆ ಅವರ ವಚನಗಳೇ ಮೂಲ ಆಧಾರ. ಮುಖ್ಯ ಆಧಾರ. ಹರಿಹರ ರಾಘವಾಂಕರೂ ಸಹ ತಮ್ಮ ನೂತನ ಶಿವಶರಣರ ಚರಿತ್ರೆಗಳಿಗೆ ಅವರ ವಚನಗಳನ್ನೇ ಆಧಾರ

ವಾಗಿ ಬಳಸಿಕೊಂಡಿದ್ದಾರೆ. ಆಧುನಿಕರಾದ ನಾವೂ ಸಹ ಪೂಜ್ಯರಾದ ಈ ವ್ಯಕ್ತಿಗಳ ಪುಣ್ಯಚರಿತ್ರೆಯ ಪೀಯೂಷ ಪಾನಕ್ಕೆ ವಚನಗಳ ಕ್ಷೀರಸಾಗರಕ್ಕೇ ಹೋಗಬೇಕು.

ಸಾಹಿತ್ಯರಾಶಿಯಲ್ಲಿ ಸಂವಾದಗಳೂ, ದೃಷ್ಟಾಂತ ಕತೆಗಳೂ, ಉಪದೇಶಾಮೃತಗಳು ಮುಂತಾದುವುಗಳಿಗೂ ಎಡೆಯುಂಟು. ಸಾಕ್ರಟೀಸನ ಕಾಲದಿಂದ ಹಿಡಿದು ಶ್ರೀರಾಮಕೃಷ್ಣಪರಮಹಂಸರು, ಅರವಿಂದಮಹರ್ಷಿಗಳು, ಗಾಂಧೀಜಿ, ರಾಜಾಜಿ, ವಿನೋಬಾ ಮುಂತಾದವರ ಸಂವಾದ ಭಾಗಗಳೂ, ಉಪನ್ಯಾಸಮಾಲೆಗಳೂ ಲೋಕಪ್ರಸಿದ್ಧ ವಾಗಿವೆ. ಉಪನಿಷತ್ಕಾಲದ ಋಷಿವರೇಣ್ಯರ ಮಾತುಕತೆಗಳು ಆಧ್ಯಾತ್ಮ ಸಾಹಿತ್ಯದ ಅಪೂರ್ವ ನಿಧಿಗಳಾಗಿವೆ. ಈ ದೃಷ್ಟಿಯಲ್ಲಿ ವಿಚಾರಮಾಡಿದಾಗ ನಮ್ಮ ೧೨ನೆಯ ಶತಮಾನದ ಋಷಿವರೇಣ್ಯರೆಂದು ಪ್ರಖ್ಯಾತರಾಗಿರುವ ಈ ಕನ್ನಡ ವಚನಕಾರರು ಅದ್ಭುತವಾದ ಸಂವಾದ ಸಾಹಿತ್ಯವನ್ನು ಸೃಷ್ಟಿಮಾಡಿದ್ದಾರೆ ಎನ್ನಬೇಕು. ಶೂನ್ಯಸಂಪಾದನೆಯ ಸಂಕಲನ ಗ್ರಂಥವನ್ನು ಓದಿದರೆ ನನ್ನ ಮಾತಿನ ಅರ್ಥವಾಗುತ್ತದೆ. ಅಲ್ಲಮಪ್ರಭುದೇವರ ವಚನಗಳನ್ನು ಪ್ಲೇಟೋವಿನ ಸಂವಾದಗಳಿಗೆ ಹೋಲಿಸುವವರಿದ್ದಾರೆ. ವಚನಕಾರರು ತಮ್ಮ ಮನಸ್ಸನ್ನೇ ಸಂಬೋಧಿಸಿ ಎಷ್ಟೋ ವಚನಗಳನ್ನು ಹಾಡಿದ್ದಾರೆ. ಇವೆಲ್ಲ ಆತ್ಮಗತ ವಚನಗಳು. ಹಾಗೆಯೇ ಈ ವಚನಕಾರರು ಇನ್ನೊಬ್ಬರನ್ನು ಕುರಿತು ಉಪದೇಶ ಮಾಡಿದ್ದಾರೆ. ಇನ್ನೊಬ್ಬರನ್ನು ಕುರಿತು ಹೇಳಿದ ವಚನಗಳಲ್ಲಿ ಯಾವುದೋ ಪ್ರಶ್ನೆಗೆ ತಮ್ಮ ಉತ್ತರ, ಯಾರದೋ ಸವಾಲಿಗೆ ತಮ್ಮ ಜವಾಬು, ಇನ್ನಾರದೋ ಸಂದೇಹಕ್ಕೆ ತಮ್ಮ ಸಮಾಧಾನ, ಮತ್ತಾವುದೋ ಸಮಸ್ಯೆಗೆ ತಮ್ಮ ಪರಿಹಾರ ಎಂಬಂತೆ ಈ ವಚನಗಳು ಕಾಣಬರುತ್ತವೆ. ಇವರ ವಚನಗಳಲ್ಲಿ ಪ್ರಶ್ನೆಗಳಿಲ್ಲ, ಉತ್ತರಗಳುಂಟು. ಉತ್ತರ ದಿಂದ ಪ್ರಶ್ನೆಯನ್ನು ಊಹಿಸಿಕೊಳ್ಳಬೇಕು. ಈ ರೀತಿಯಲ್ಲಿ ಬಸವಾದಿಗಳ ವಚನಗಳು ನಮ್ಮನ್ನು ದಿಕ್ಕು ತಪ್ಪಿಸದೆ ಉತ್ತರಮುಖಿಯ ಕೆಲಸ ಮಾಡುತ್ತವೆ. ಉತ್ತರಮುಖಿಯಲ್ಲಿ ಉತ್ತರದಿಕ್ಕು ಮಾತ್ರ ಸೂಚಿತವಾಗುತ್ತದೆ. ಆದರೆ ಇವರ ವಚನಗಳಲ್ಲಿ ಪರಿಹಾರಸೂಚಕವಾದ ಉತ್ತರವೂ ದೊರೆಯುತ್ತದೆ. ಪೃಚ್ಛಕನಿಗೆ ಇದೇ ಉತ್ತರ.

ಭಾವಗೀತೆ ಎನ್ನುವುದು ಸಾಹಿತ್ಯದ ಸಂಪದ್ಭರಿತವಾದ ಒಂದು ಪ್ರಕಾರ. ಕವಿಯ ಮನಸ್ಸಿನ ಸುಖದುಃಖಗಳ ತೀವ್ರವಾದ ಚಿಂತನ ಇಂತಹ ಭಾವಗೀತೆಗಳಲ್ಲಿ ಕಾಣಬರುತ್ತದೆ. ಇಲ್ಲಿ ಕಾಣಬರುವುದು ವಿಶೇಷವಾಗಿ ಮನಸ್ಸಿನ ತುಯ್ತು. ಈ ತುಯ್ತು ತನ್ನ ತೀವ್ರಾವಸ್ಥೆಯಲ್ಲಿ ಇದ್ದ ಕಾರಣಕ್ಕಾಗಿಯೇ ಇದು ಗೀತಾತ್ಮಕವಾಗಿ ಹೊರಹೊಮ್ಮುತ್ತದೆ. ಒಂದು ಪ್ರಮುಖವಾದ ಭಾವ ಮತ್ತು ಅದರ ಗೀತಾತ್ಮಕವಾದ ಅಭಿವ್ಯಕ್ತಿ ಎಲ್ಲಿ ಕಾಣಬರುತ್ತದೆಯೋ ಅಲ್ಲಿ ಅಂತಹ ಕವಿತೆಗಳನ್ನು ನಾವು ಭಾವಗೀತೆಗಳು ಎನ್ನುತ್ತೇವೆ. ಸಂಕ್ಷಿಪ್ತತೆ ಭಾವಗೀತೆಯ ಇನ್ನೊಂದು ಲಕ್ಷಣ. ಹೀಗೆ ಪ್ರಧಾನ ವಾಗಿ ಸಂಕ್ಷಿಪ್ತತೆ, ತೀವ್ರತೆ, ಗೇಯತೆ ಇವು ಮೂರು ಭಾವಗೀತೆಯ ಲಕ್ಷಣಗಳು. ಈ ಲಕ್ಷಣಗಳು ವಚನಕಾರರ ವಚನ ಗಳಿಗೆ ಚೆನ್ನಾಗಿ ಹೊಂದುತ್ತವೆ. ಅವುಗಳನ್ನು ಗದ್ಯಭಾವಗೀತೆಗಳೆಂದು ಕರೆದಿದ್ದಾರೆ. ಅವು ತಮ್ಮ ಸಂಕ್ಷೇಪ ಸ್ವಾರಸ್ಯ ದಿಂದ, ತಮ್ಮ ತೀವ್ರವಾದ ಭಾವಸ್ಪಂದನದಿಂದ, ತಮ್ಮ ನಾದಮಾಧುರ್ಯ ಲಯವಿನ್ಯಾಸಗಳಿಂದ ಭಾವಗೀತೆಗಳಾಗಿ ಪರಿಣಮಿಸಿವೆ. ಭಕ್ತಿಯ ಭಾವ ರಸದ ಮಟ್ಟಕ್ಕೆ ಏರಿದ ಚಿತ್ರಣ ಬೇಕಾದರೆ ಬಸವಣ್ಣ ಮತ್ತು ಅಕ್ಕಮಹಾದೇವಿಯರ ವಚನಗಳನ್ನು ನೋಡಬೇಕು. ಬಸವಣ್ಣನವರ ಭಕ್ತಸ್ಥಲದ ವಚನಗಳಲ್ಲಿ ಅವರ ಶಿವಭಕ್ತಿ ಹೇಗೆ ರಸವಾಗಿ ಕೂಡಿ ಹರಿದಿದೆ ಎಂಬುದನ್ನು ನಾವು ಕಾಣುತ್ತೇವೆ. ಹಾಗೆಯೇ ಅಕ್ಕಮಹಾದೇವಿಯ ವಚನಗಳಲ್ಲಿ ಆ ದೇವಿಯ ಶಿವಸಾ ಪೇಕ್ಷತ್ವದ ತೃಷೆ ಎಷ್ಟು ಉತ್ಕಟವಾಗಿ ಆಕೆಯ ವಚನಗಳಲ್ಲಿ ಕಾಣಬರುತ್ತದೆ ಎಂಬುದನ್ನು ನಾವು ನೋಡಬೇಕು. ಸತಿಪತಿಭಾವದ ಭಕ್ತಿ ಅಲ್ಲಿ ಉತ್ತಮೋತ್ತಮವಾದ ರೀತಿಯಲ್ಲಿ ತನ್ನ ಅಭಿವ್ಯಕ್ತಿಯನ್ನು ಪಡೆದಿದೆ. ವಚನಗಳನ್ನು ಬಹಳ ಹಿಂದಿನಕಾಲದಲ್ಲಿಯೇ ಹಾಡುತ್ತಿದ್ದರೆಂಬುದಕ್ಕೆ ಈಗ ಸಾಕ್ಷ್ಯಗಳು ದೊರಕಿವೆ. ಈಗಿನ ದಿನಗಳಲ್ಲಿ ವಚನಗಳನ್ನು ಹಾಡುವ ಪ್ರತ್ಯೇಕ ಕಾರ್ಯಕ್ರಮವೇ ಇರುತ್ತದೆ. ಸಭೆ ಸಮಾರಂಭಗಳಲ್ಲಿ, ನಾಡಹಬ್ಬಗಳಲ್ಲಿ, ಸಂಗೀತದ ಕಾರ್ಯ ಕ್ರಮಗಳಲ್ಲಿ, ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ವಚನಗಾಯನದ ಸವಿ ಏನೆಂಬುದನ್ನು ಕನ್ನಡ ಜನತೆ ಕಂಡು ಕೊಂಡಿದೆ. ಸತಿ-ಪತಿ ಭಾವದ ವಿಪ್ರಲಂಭ ಶೃಂಗಾರದ ಉಲ್ಬಣಾವಸ್ಥೆಯಲ್ಲಿದ್ದ ಸಾಹಸೀ ಧರ್ಮಾಂಗನೆಯಾದ ಅಕ್ಕ ಮಹಾದೇವಿಯ 'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ, ನೀವು ಕಾಣಿರೇ' ಎಂದು ಆರಂಭವಾಗುವ ವಚನ ಹೃದ್ಯವಾಗಿದೆ, ರಸಸ್ಯಂದಿಯಾಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಲ್ಲಿ ಕಾಣುವ ನಾದಮಾಧುರ್ಯ, ಪದಗುಂಫನಗಳ ಬೆಡಗು ಸಹಜವಾಗಿ ಬಂದದ್ದು. ವಚನ ಸಾಹಿತ್ಯದಲ್ಲಿ ಇಂತಹ ವಚನಗಳು ಸಾವಿರಾರಿವೆ. ಪದ್ಯ ಕಾವ್ಯಗಳಲ್ಲಿ ಕಾಣಬರುವ ಭಾವಗೀತೆಗಳ ಸರ್ವಲಕ್ಷಣಗಳೂ ಇಂಥ ವಚನಗಳಲ್ಲಿ ಕಾಣಬರುತ್ತವೆ. ಹೀಗಾಗಿ ಈ ಸಾಹಿತ್ಯ ಭಾವಗೀತೆಯ ಒಂದು ವಿಶಿಷ್ಟ ಪ್ರಕಾರ ಎಂದೇ ಹೇಳಬೇಕು.

ಹೀಗೆ ಸಾಹಿತ್ಯದ ವಿಶಿಷ್ಟ ಪ್ರಕಾರಗಳಾದ ದಿನಚರಿ, ಪ್ರವಾಸಕಥನ, ಆತ್ಮಕಥೆ, ಸಂವಾದ, ಭಾವಗೀತೆ—ಇವುಗಳ ಸ್ವಾರಸ್ಯಾಂಶಗಳು ವಚನಗಳಲ್ಲಿಯೂ ಕಾಣಬರುತ್ತವೆಯಾಗಿ ಈ ವಚನಗಳು ಇವುಗಳೆಲ್ಲದರ ಸಂಮಿಶ್ರಣದ ಒಂದು ಸಾಹಿತ್ಯಸಂಕೀರ್ಣವಾಗಿ ಪರಿಣಮಿಸಿದೆ.

ಶಿವಶರಣರು ನುಡಿದಂತೆ ನಡೆದವರು, ನಡೆದಂತೆ ನುಡಿದವರು. ಇವರಲ್ಲಿ ನಡೆಗೂ ನುಡಿಗೂ ಅಂತರವಿರಲಿಲ್ಲ. ಹಾಗೇನಾದರೂ ಅಂತರ ತೋರಿದರೆ ತಮ್ಮ ತಲೆಯನ್ನೇ ದಂಡವಾಗಿ ತೆರುವುದಕ್ಕೂ ಇವರು ಸಿದ್ಧರಾಗಿದ್ದರು. ಇಂತಹ ಒಂದು ಋಜು ಪ್ರವೃತ್ತಿ ಸಾಹಿತಿಗಳಲ್ಲಿ ಇರಬೇಕಾದ ಗುಣಧರ್ಮ. ಅವರು ನಿರ್ಭೀತರಾಗಿ ಇರತಕ್ಕವರು. ನಿಯತಿಕೃತನಿಯಮರಹಿತರು. ಹ್ಲಾದೈಕಮಯರು. ಅನನ್ಯಪರತಂತ್ರರು. ವಚನಕಾರರಲ್ಲಿ ಇಂತಹ ಗುಣವಿಶೇಷಗಳಿರುವುದರಿಂದ ಅವರ ಮಾನಸಿಕ ಸೃಷ್ಟಿ ಸಾಹಿತ್ಯವಲ್ಲದೆ ಬೇರೆಯಾಗಿರಲು ಸಾಧ್ಯವೇ ಇರಲಿಲ್ಲ. ಸಾಹಿತ್ಯ ಎಲ್ಲ ವಿಧದ ಹಿತದ ತತ್ತ್ವಗಳನ್ನೂ ಒಳಗೊಂಡಿರತಕ್ಕದ್ದು ಎಂದು ಹೇಳುವುದುಂಟಷ್ಟೆ. ಹೀಗೆ ನೋಡಿದಾಗ ವಚನಗಳಲ್ಲಿ ಹಿತತತ್ತ್ವಗಳಿಗೆ ಅಭಾವವೆಲ್ಲಿದೆ ? ಅವು ತುಂಬಿ ತುಳುಕುತ್ತಿವೆ. ಸರ್ವಜನರ ಸರ್ವಹಿತವನ್ನೂ ಉದ್ದೇಶದಲ್ಲಿಟ್ಟುಕೊಂಡು ಎಲ್ಲರಿಗೂ ಮುಕ್ತಿದ್ವಾರವನ್ನು ತೆರೆದು ಕೈವಲ್ಯದತ್ತ ಎಲ್ಲರನ್ನೂ ನಡೆಸಿದ ಕಾರಣಪುರುಷರು ಈ ವಚನಕಾರರು, ಕಾರಣಕರ್ತೆಯರು ಈ ವಚನಕಾರ್ತಿಯರು. ಶೀಲ ಸಂಪಾದನೆಗೆ ವಿಶೇಷವಾದ ಪ್ರಾಮುಖ್ಯತೆಯನ್ನು ಕೊಟ್ಟವರು ಇವರು. ಶೂನ್ಯವನ್ನು ಸಂಪಾದಿಸುವ ಮೊದಲು ಶೀಲವನ್ನು ಸಂಪಾದಿಸಬೇಕು ಎಂದು ಹೇಳಿದ ಶೀಲವಂತರು ಇವರು. ಇವರು ತಮ್ಮ ವಚನಗಳಿಗೆ ಅಂಕಿತವನ್ನಿಟ್ಟು ಹೇಳಿಕೊಂಡಿರುವುದರ ರಹಸ್ಯವೇ ಇಲ್ಲಿದೆ. ಬಸವಣ್ಣನವರು ಕೂಡಲಸಂಗಮದೇವ ಎಂದು ಅಂಕಿತವನ್ನಿಟ್ಟುಕೊಂಡು ಹೇಳಿದರೆ, ತಾವು ಹೇಳಿದ ಮಾತುಗಳಿಗೆ ಬದ್ಧರಾಗಿರುತ್ತೇವೆ ಎಂದು ಕೂಡಲಸಂಗಮದೇವನಿಗೆ ವಚನಕೊಟ್ಟಂತೆ. ವಚನ ಎಂದರೆ ಭಾಷೆ, ವಾಗ್ದಾನ ಎಂಬ ಅರ್ಥವೂ ಉಂಟಷ್ಟೆ. ರಾಮನಾಥ, ಕೂಡಲಸಂಗಮದೇವ, ಗುಹೇಶ್ವರ, ಚನ್ನಮಲ್ಲಿಕಾರ್ಜುನ, ಕಪಿಲಸಿದ್ಧಮಲ್ಲಿಕಾರ್ಜುನ ಮುಂತಾದ ಬೇರೆ ಬೇರೆ ಹೆಸರಿನಿಂದ ಮೆರೆಯುವ ಈಶ್ವರ ತಮ್ಮ ವಚನಗಳಿಗೆ ಸಾಕ್ಷಿಯಾಗಿದ್ದಾನೆ. ತಾವು ಹೇಳುವ ಮಾತು ಅವನಿಗೆ ಸಮ್ಮತವಾಗಿದೆ ಎಂಬ ಅಭಿಪ್ರಾಯಗಳು ಈ ಅಂಕಿತವನ್ನಿಟ್ಟುಕೊಳ್ಳುವುದರಲ್ಲಿ ಸೂಚಿತವಾಗುತ್ತದೆ. ದೇವರು ಮೆಚ್ಚಿ ಅವನ ಅಂಕಿತದಲ್ಲಿ ಬರೆದ ಈ ಸಾಹಿತ್ಯ ನಿಜವಾಗಿಯೂ ಶಿವಸಾಹಿತ್ಯ. ಇಂತಹ ಧಾರ್ಮಿಕ ಸ್ವಾತಂತ್ರ್ಯ ಕನ್ನಡೇತರ ಭಾರತೀಯ ಭಾಷೆಗಳಲ್ಲೇ ಆಗಲಿ, ಭಾರತೇತರ ಭಾಷೆಗಳಲ್ಲೇ ಆಗಲಿ ಇಲ್ಲ. ಇಂತಹ ಧಾರ್ಮಿಕ ಸ್ವಾತಂತ್ರ್ಯ ಇಷ್ಟೊಂದು ಜನ ವಚನಕಾರರ ಕೃಷಿಯ ಫಲವಾಗಿ ಮೂಡಿಬಂದದ್ದಿಲ್ಲಿ ಎಂದು ಗಟ್ಟಿಯಾಗಿ ಹೇಳುತ್ತೇನೆ. ಈ ಹೇಳಿಕೆ ಟ ಠ ಡ ಢ ಣ ದಂತೆ ಸ್ಪಷ್ಟ.

'ವಚ್' ಎಂದರೆ ಹೇಳು ಎಂಬ ಧಾತುವಿನಿಂದ ವಚನ ಎಂಬ ನಾಮಪದ ಬಂದಿದೆ. ಈ ವಚನಗಳು ಕುಳಿತು ಬರೆದವಲ್ಲ. ಒಂದು ನಿಟ್ಟಿನಲ್ಲಿ ಬರೆದು ಮುಗಿಸಿದ್ದೂ ಅಲ್ಲ. ಇದ್ದಷ್ಟು ಕಾಲ ವಚನಕಾರರು ತಮತಮಗೆ ತೋಚಿದ ವಿಷಯಗಳನ್ನು ಕುರಿತು ತಮ್ಮ ತಮ್ಮ ಅನಿಸಿಕೆಗಳನ್ನು ಹಾಡಿದರು ಅಥವಾ ವಚಿಸಿದರು. ಹೀಗಾಗಿ ಇವು ಆಶುಸ್ಫುರಣಗಳು, ಹೃದಯದ ಅಕೃತಕ ಉದ್ಗಾರಗಳು, ಧರ್ಮಾವೇಶದ ಅಭಿವ್ಯಕ್ತಿಗಳು, ಶಿವಭಕ್ತಿಯ ಉತ್ಕಟಾವಸ್ಥೆಯ ಪ್ರಕಟಿತ ವಾಗ್ರೂಪಗಳು. ಅದಮ್ಯವಾದ ಶಿವಾನುಭವದ ಅಯತ್ನಪೂರ್ವಕವಾದ ವಿಸ್ಫೂರ್ಜನಗಳು. ಹೀಗಿರುವುದರಿಂದಲೇ ಇವು ನೈಜ ಸಾಹಿತ್ಯ ಸೃಷ್ಟಿಯನ್ನು ನೂರಕ್ಕೆ ನೂರರಷ್ಟು ಹೋಲುತ್ತವೆ.

ಸಾಹಿತ್ಯದ ಉದ್ದೇಶವೇನು ? ಪಾಪ ಪುಣ್ಯ ವಿವೇಚನೆ, ಪುರುಷಾರ್ಥ ಸಾಧನೆ, ಸದಸದ್‌ವಿವೇಕ ತಾನೆ! ಇವೆಲ್ಲ ವಚನಗಳಲ್ಲಿ ಹೇರಳವಾಗಿ ದೊರೆಯುತ್ತವೆ—

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನ ಒಲಿಸುವ ಪರಿ. ಇವು ಆಣಿಮುತ್ತಿನಂತಹ ಮಾತುಗಳು. ಇವು ವಿಶ್ವಪಥದ ದಾರಿದೀಪಗಳು, ಮನುಜಮತದ ಆಧಾರಸ್ತಂಭಗಳು ಇವುಗಳನ್ನು ಎಷ್ಟು ಸರಳವಾಗಿ, ಸ್ವಾರಸ್ಯವಾಗಿ, ಹೃದಯಕ್ಕೆ ಮುಟ್ಟುವಂತೆ ಬಸವಣ್ಣನವರು ಹೇಳಿದ್ದಾರೆ ಎಂಬುದನ್ನು ಪರಿಭಾವಿಸಬೇಕು.

ಕಾವ್ಯದ ಭಾಷೆ ಸಾಲಂಕೃತ ಭಾಷೆ ಎಂದು ಹೇಳುತ್ತಾರೆ. ಎಂದರೆ ಅದರ ಭಾಷೆ ಉಪಮೆ, ರೂಪಕ, ದೃಷ್ಟಾಂತಾದಿ ಅಲಂಕಾರಗಳಿಂದ ಕೂಡಿದಂತಹ ಭಾಷೆ ಎಂದರ್ಥ. ವಿಷಯದ ಅರ್ಥಸ್ಫುರಣೆ ಇಂತಹ ಅಲಂಕಾರಗಳಿಂದ ಸುಲಭಸಾಧ್ಯವಾಗುತ್ತದೆ ಮಾತ್ರವಲ್ಲ, ಇವು ಕಾವ್ಯಶೋಭಾಕರ ಧರ್ಮಗಳಾಗಿ ಪರಿಣಮಿಸುತ್ತವೆ. ವಚನಗಳಲ್ಲಿ

ಬರುವ ಅಲಂಕಾರಗಳು ನಿಜವಾದ ಅಲಂಕಾರಗಳು ನಿಜವಾದ ಅರ್ಥದಲ್ಲಿ. ಅಲಂಕಾರಗಳೇ ಕಾವ್ಯದ ಆತ್ಮ ಎಂದು ಹೇಳುವಷ್ಟರ ದೂರ ನಮ್ಮನ್ನು ಎಳೆದುಕೊಂಡು ಹೋಗುತ್ತವೆ. ಬಸವಣ್ಣನವರಲ್ಲಿ ಬರುವ ಪ್ರಾಣಿರೂಪಕಗಳೇ ಸಾಕು ಉದಾಹರಣೆಗೆ.

ಜನರ ಭಾಷೆಯಲ್ಲಿ ಜನರಿಗಾಗಿ ಹೇಳಿದ ಭಾಷೆ ವಚನದ ಭಾಷೆ. ಅವರು ದಿನನಿತ್ಯ ಬಳಸುವ ವಸ್ತುಗಳನ್ನು, ಆಲೋಚಿಸುವ ವಿಷಯಗಳನ್ನು ತೆಗೆದುಕೊಂಡು ಅವುಗಳನ್ನೇ ಅಲಂಕಾರ ಸಾಮಗ್ರಿಗಳನ್ನಾಗಿ ಮಾಡಿ ಒಂದು ದೃಷ್ಟಾಂತವನ್ನೋ, ಒಂದು ಹೋಲಿಕೆಯನ್ನೋ, ಒಂದು ರೂಪಕವನ್ನೋ ಹೆಣೆದುಕೊಂಡು ಹೋಗುವುದು ವಚನ ಕಾರರ ಜಾಣ್ಮೆ. ಈ ವಚನಕಾರರ ವಚನಗಳು ಕನ್ನಡಿಗರೆಲ್ಲರ ತುದಿನಾಲಗೆಯಲ್ಲಿವೆ. ಆ ಕಾರಣದಿಂದ ಸೂತ್ರಪ್ರಾಯ ವಾಗಿ ನಾಲ್ಕು ಮಾತು ಬರೆದಿದ್ದೇನೆಯೇ ಹೊರತು ಉದಾಹರಣೆಗಳನ್ನು ಕೊಡುವ ವ್ಯರ್ಥಾಶ್ರಮಕ್ಕೆ ಹೋಗಿಲ್ಲ.

ಸಾಹಿತ್ಯ ನಮ್ಮನ್ನು ಊರ್ಧ್ವಮುಖರನ್ನಾಗಿ ಮಾಡಬೇಕು. ಅಂತಹ ತಾರಕಶಕ್ತಿ ವಚನಗಳಲ್ಲಿದೆ. ಈ ಸಾಹಿತ್ಯದ ಲಾಕುಳ ಹಿಡಿದು ಲಕ್ಷ ಲಕ್ಷ ಜನ ಭವಕೂಪದಿಂದ ಮೇಲೆದ್ದು ಬಂದಿದ್ದಾರೆ. ಇದು ಸಾಹಿತ್ಯವಲ್ಲದಿದ್ದರೆ ಬೇರೆ ಯಾವುದು ಸಾಹಿತ್ಯ ? ಎಂದೇ ಕೇಳಬೇಕಾಗುತ್ತದೆ.

---

ಆಸೆಯೆಂಬ ಸ್ತ್ರೀಗೆ ಮನಸೋತವರೆಲ್ಲಾ ಕೆಟ್ಟ ಕೇಡನೇನೆಂಬೆನಯ್ಯಾ,  
ಯತಿಗಳಾಗಲಿ ವೇದಾಧ್ಯಾಯಿಗಳಾಗಲಿ ವ್ರತಿಗಳಾಗಲಿ  
ಸರ್ವವಿದ್ಯಾಕಲಾವಂತರಾಗಲಿ, ನರರೊಳಗಾಗಲಿ, ಸುರರೊಳಗಾಗಲಿ,  
ಇವರೆಲ್ಲರ ಧನವುಳ್ಳವರ ಬಾಗಿಲ ಕಾಯಿಸಿದಳು ನೋಡಾ  
ಇವಳಿಗಾರಾರು ಮರುಳಾಗದಿರರು ?  
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರಲ್ಲದವರ  
ಕಿವಿಯ ಹಿಡಿದು ಕುಣಿಸಿದಳು ನೋಡಾ !

ಸ್ವತಂತ್ರಸಿದ್ಧಲಿಂಗೇಶ್ವರರು

# ಬಸವಣ್ಣನವರ ವಚನಗಳ ಕಾವ್ಯಸಂಪನ್ನತೆ

**ಚೆನ್ನವೀರ ಕಣವಿ**

ಕಾಲ ಬದಲಾದಂತೆ ಹಳೆಯ ಮೌಲ್ಯಗಳಿಗೆ ತುಕ್ಕುಹಿಡಿದು ಇಲ್ಲವೆ ಅವುಗಳ ತಿರುಳಿಗಿಂತ ಸಿಪ್ಪೆಗೇ ಪ್ರಾಧಾನ್ಯ ಒದಗಿದಾಗ ವಿಚಾರಶೀಲನಾದ ವ್ಯಕ್ತಿ ಹೊಸ ಮೌಲ್ಯಗಳ ಹುಡುಕಾಟ ನಡೆಸಿ ತನ್ನ ಸಮಕಾಲೀನ ಜೀವನದೊಡನೆ ಹೋರಾಟವೆಸಗುತ್ತಾನೆ. ರೂಢಿಯಿಂದ ಬಲಗೊಂಡ ಪ್ರತಿಯೊಂದಕ್ಕೂ ಪ್ರತಿಕ್ರಿಯೆ ವ್ಯಕ್ತಪಡಿಸಿ ತನ್ನತನವನ್ನು ಕಂಡುಕೊಳ್ಳಲು ಹವಣಿಸುತ್ತಾನೆ. ಕನ್ನಡನಾಡಿನಲ್ಲಿ ಇಂಥ ಒಂದು ಹೋರಾಟ ೧೨ನೆಯ ಶತಮಾನದಲ್ಲಿ ಶಿವಶರಣರಿಂದ ನಡೆಯಿತು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಎಂತೋ ಅಂತೆಯೇ ಸಾಹಿತ್ಯಕ್ಷೇತ್ರದಲ್ಲಿಯೂ ಅವರ ಸಾಹಸ ಹೊಸ ದಿಕ್ಕನ್ನು ತೆರೆದು ಫಲಪ್ರದವಾಯಿತು. ಹೊಸ ಜೀವನಮಾರ್ಗಕ್ಕೆ ಪ್ರೇರಕರಾದ ಇವರ ಚಿಂತನ, ಅನುಭವ, ಅನಿಸಿಕೆಗಳು ಜನತೆಯ ಜೀವನದ ಹಾಸುಹೊಕ್ಕಾಗಿ ಹೊಸ ಭಾವಗಳಿಗೆ ತಕ್ಕ ಹೊಸ ಭಾಷೆಯನ್ನೇ ಇವರು ನಿರ್ಮಿಸಬೇಕಾಯಿತು. ಇದರ ಪರಿಣಾಮವಾಗಿ 'ವಚನ' ರೂಪುಗೊಂಡಿತು. ಬಸವಣ್ಣನವರಿಗಿಂತ ಕೆಲಕಾಲ ಮೊದಲೇ ಈ ದಿಶೆಯಲ್ಲಿ ಪ್ರಯತ್ನ ನಡೆದಿದ್ದುದರಿಂದ ಇವರು ಅದಕ್ಕೆ ಪುಷ್ಟಿಯನ್ನೊದಗಿಸಿ ತಮ್ಮ ಭಾವಾಭಿವ್ಯಕ್ತಿಗೆ ಪ್ರಬಲವಾದ ಮಾಧ್ಯಮವನ್ನಾಗಿ ಮಾಡಿಕೊಂಡರು. ಮಾರ್ಗದೊಡನೆ ದೇಸಿಯನ್ನು ಒಡಂಬಡಿಸಿ ತೋರಿದ ಪಂಪನ ತರುವಾಯ ಕನ್ನಡ ಭಾಷೆಯ ಸತ್ವವನ್ನೆಲ್ಲ ತೆರೆದು ತೋರಿ, ಅದರ ಕೃತಕತೆಯನ್ನೆಲ್ಲ ಹೋಗಲಾಡಿಸಿ ಜೀವಂತಿಕೆಯಿಂದ ಕಳಕಳಿಸುವಂತೆ ಮಾಡಿದವರು ಈ ವಚನಕಾರರು. ಅವರು ಕಂಡುಕೊಂಡ ಜೀವನದ ಮೌಲ್ಯಗಳ ನಿರೂಪಣೆಗೂ, ಮಾಡಿದ ಸಾಮಾಜಿಕ ವಿಮರ್ಶೆಗೂ, ಅನುಭಾವದ ಆಳದ ದರ್ಶನಕ್ಕೂ ವಚನ ಶೈಲಿ ಅವರಿಗರಿವಿಲ್ಲದಂತೆಯೇ ಸಹಜವಾಗಿ ಕಾವ್ಯಶಕ್ತಿಯನ್ನೂ ಪಡೆಯಿತು. ಕಾವ್ಯಸೃಷ್ಟಿ ಅವರ ಗುರಿಯಾಗಿರದಿದ್ದರೂ ಅವರ ಬದುಕಿನ ಬಗೆ, ಭಾವದ ಕಾವು, ಅನುಭಾವದ ಚಿತ್ರ ಭಾಷೆಯಲ್ಲಿ ಪುನರ್ನಿರ್ಮಾಣಗೊಂಡುದರಿಂದ ಅನೇಕ ವಚನಗಳು ಸ್ವಯಂ ಕಲಾಕೃತಿಯಾಗಿ ಪರಿಣಮಿಸಿದವು. ಇಲ್ಲಿಯ ಸಹಜವಾದ ಪ್ರಾಸಾನುಪ್ರಾಸ, ಭಾವ ಲಯ, ಪ್ರಸಾದ ಗುಣ, ರೂಪಕ ದೃಷ್ಟಾಂತಗಳು, ಆಧ್ಯಾತ್ಮಿಕ ಅನುಭವದ ಪ್ರತೀಕಾತ್ಮಕತೆ, ಕಾಯಕದ ಸಲಿಗೆಯ ಭಾಷೆ—ಇವು ನಮ್ಮ ಹೃದಯದಲ್ಲಿ ಕಾವ್ಯದ ಮುದ್ರೆಯನ್ನೊತ್ತಲು ಸಮರ್ಥವಾಗಿವೆ. ಕಾವ್ಯದ ಭಾಷೆಗೂ ಜನರಾಡುವ ಭಾಷೆಗೂ ಇದ್ದ ಅಂತರವನ್ನು ಹೋಗಲಾಡಿಸಿ ಆಡುನುಡಿಯನ್ನೇ ಹಣತೆಯಾಗಿ ಬೆಳಗಿ ಕನ್ನಡ ಸರಸ್ವತಿಗೆ ಲಕ್ಷದೀಪೋತ್ಸವಗೈದರು—ವಚನಕಾರರು. ಅವರ ಮಾತು 'ವಚನವೇದ'ವೆನಿಸಿತು ; ಅವರ ಆಚರಣೆ 'ವಚನಧರ್ಮ'ವಾಯಿತು. ಈ ಎಲ್ಲ ಶರಣರ ನಡುವೆ ಭಕ್ತಿ ಭಾಂಡಾರಿ ಬಸವಣ್ಣನವರ ವ್ಯಕ್ತಿತ್ವ ನಿಲುಗನ್ನಡಿಯಾಗಿ ನಿಂತಿತು.

ವಚನ ವಾಙ್ಮಯದಲ್ಲಿ ಬಸವಣ್ಣನವರ ವಚನಗಳಿಗೆ ಮೊದಲೆಡೆ ಮೀಸಲಾಗಿದ್ದರೂ, ಪ್ರಾಚೀನ ವಚನಕಾರನಾದ ದೇವರದಾಸಿಮಯ್ಯನಂಥವರ ವಚನಗಳ ಸ್ಫೂರ್ತಿಯನ್ನು ಅಂಗೀಕರಿಸಿಕೊಂಡೇ ಬಸವಣ್ಣನವರು ತಮ್ಮ ರೀತಿಯಲ್ಲಿ ಅದಕ್ಕೆ ರೂಪುಕೊಟ್ಟರು. 'ಆದ್ಯರ ವಚನ ಪರುಷ ಕಂಡಣ್ಣಾ' ಎಂದು ಮುಂತಾಗಿ ತಮ್ಮ ಹಿಂದಿನ ವಚನಸಾಹಿತ್ಯವನ್ನು ಅವರು ಭಕ್ತಿಪೂರ್ವಕ ನೆನೆದಿರುವರಲ್ಲದೆ ಅದರ ಸವಿಯನ್ನು ಹೀಗೆ ಸೂರೆಗೊಂಡಿದ್ದಾರೆ :

> ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
> ತವರಾಜದ ನೊರೆ ತೆರೆಯಂತೆ
> ಆದ್ಯರ ವಚನವಿರಲು
> ಬೇರೆ ಬಾವಿಯ ತೋಡಿ
> ಉಪ್ಪುನೀರುಂಬುವನ ವಿಧಿಯಂತೆ
> ಆಯಿತೆನ್ನ ಮತಿ-ಕೂಡಲಸಂಗಮದೇವಾ

ಆದ್ಯರ ವಚನದ ಹಾಲತೊರೆ ಹರಿಯುತ್ತಿದ್ದರೂ ಬಸವಣ್ಣನವರಿಗೆ ತಮ್ಮ ಹೃದಯದ ಬಾವಿಯನ್ನು ತೋಡಿ ಜೀವ ಜಲವನ್ನು ಪಡೆಯುವುದು ಅನಿವಾರ್ಯವಾಯಿತು. ಆದರೆ ಇಲ್ಲಿ ತಮ್ಮ ಮತಿಯ ಬಗ್ಗೆ ಹೇಳಿಕೊಂಡುದು ಅವರ ಸದ್ವಿನಯದ ಲಕ್ಷಣವೇ ಹೊರತು, ವಾಸ್ತವ ಸಂಗತಿಯಲ್ಲ. ಅವರ ಅಂತರಂಗದ ಬಾವಿಯಲ್ಲಿ ಉಕ್ಕಿದ ಸಿಹಿನೀರು ಜನತೆಯ ಬಾಳಿನ ಹೊಸ ತೋಟವನ್ನು ಹಸುರು ಮುರಿಯುವಂತೆ ಮಾಡಿತು. ಅವರ ದೆಸೆಯಿಂದ ಅಸಂಖ್ಯಾತ ಶಿವಶರಣರ ಭಕ್ತಿಗೆ ಬಣ್ಣವೇರಿತು, ಉಕ್ತಿಗೆ ಕಣ್ಣು ಮೂಡಿತು. ಅಂತರಂಗ ಶೋಧನೆ, ಆತ್ಮನಿರೀಕ್ಷಣೆ ಈ ಯುಗದ ಧರ್ಮವೇ ಆಯಿತು. ಯಾವ ಮಾತನ್ನಾದರೂ ಹೃದಯಾಂತರ್ಗತ–ಅನುಭವ ಸತ್ಯಕ್ಕೆ ಒರೆಹಚ್ಚದೆ ಅವರು ಮುಂದು ವರಿಯಲಿಲ್ಲ.

ಭಕ್ತಿಯ ಓಜೆ, ಕಿಂಕರ ವೃತ್ತಿ, ಬಿಂಕದ ಭಾಷೆ, ನಿರ್ಮಲ ರೂಪು, ನಚ್ಚಿನ ಕೂರ್ಮೆ, ಶೀತಳ ಶಾಂತಿ—ಇವೇ ಮೊದಲಾದವು ಬಸವಣ್ಣನವರ ವ್ಯಕ್ತಿತ್ವದ ಗುಣವಾಗಿರುವಂತೆ ಅವರ ವಚನಗಳ ಲಕ್ಷಣಗಳೂ ಆಗಿವೆ. ಭಕ್ತಿಯಿಂದ ಮೃದುಗೊಂಡ ಅವರ ಹೃದಯದಲ್ಲಿ, ಯಾವ ಮಾತೂ ಹದಗೊಳ್ಳದೆ ಹುಸಿ ಹೋಗುತ್ತಿರಲಿಲ್ಲ. ಭಕ್ತಿಯೆಂಬುದು 'ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು' ಎಂಬ ಪ್ರಾಮಾಣಿಕ ಅನುಭವ ಅವರದಾಗಿದ್ದುದ ರಿಂದ ಅವರ ನಡೆ-ನುಡಿ, ಆಚಾರ–ವಿಚಾರ, ಶ್ರುತಿ–ಸ್ವಭಾವಗಳಲ್ಲಿ ಸೂಕ್ಷ್ಮದೃಷ್ಟಿ, ಭಾವೋತ್ಕಟತೆ. ವಿಚಾರಪರತೆ ಮುಪ್ಪುರಿಗೊಂಡುದನ್ನು ಅವರ 'ಭಾವದ ಕಾಣ್ಕೆ'ಯಲ್ಲಿ ಕಾಣುತ್ತೇವೆ. 'ಅಕಟಕಟಾ ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕ ದೂರನ' ಎಂಬ ಆತ್ಮಭಾವದಿಂದ ಮೊದಲ್ಗೊಂಡು 'ಸಮಸ್ತ ಕತ್ತಲೆಯ ಕಳೆದಿಪ್ಪ ಇರವ ನೋಡಾ' ಎಂಬ, 'ಬೆಳಗಿಂಗೆ ಬೆಳಗು ಸಿಂಹಾಸನ'ವಾಗಿರುವ ಅನುಭಾವ ದರ್ಶನದವರೆಗೆ ಅವರು ತಮ್ಮ ಬದುಕಿನ ಕಾವ್ಯವನ್ನು ವಚನಗಳಲ್ಲಿ ಕಂಡರಿಸಿದ್ದಾರೆ. ಸಂಪದ್ಯುಕ್ತವಾದ ಉಪಮೆ–ದೃಷ್ಟಾಂತಗಳು, ರೂಪಕ–ಪ್ರತಿಮೆಗಳು, ಅನುಭಾವದ ಸಾಂಕೇತಿಕ–ನುಡಿಚಿತ್ರಗಳು. ಅನುಭವದ ಕಾವಿನಲ್ಲಿ ರೂಹುಗೊಂಡ ಸೂಕ್ತಿಗಳು. ನುಡಿಗಟ್ಟುಗಳು, ಕಿಡಿನುಡಿಗಳು, ಗಾದೆ ಮಾತುಗಳು, ಸೂಕ್ಷ್ಮವಾದ ಭಾವಲಯ—ಇವೆಲ್ಲವುಗಳಿಂದ ಬಸವಣ್ಣನವರ ವಚನಗಳ ಕಾವ್ಯ ಸಂಪನ್ನತೆ ಹೆಚ್ಚಿದೆ.

ಕಾವ್ಯಕರ್ಮವೆಲ್ಲ ವಿಶಾಲವಾದ ಅರ್ಥದಲ್ಲಿ ಉಪಮಾನಿಷ್ಠವಾದುದೇ. ಬಸವಣ್ಣನವರ ವಚನಗಳಲ್ಲಿ ಉಪಮೆ ಬರಿ ಹೋಲಿಕೆಯಲ್ಲ ; ಕಣ್ಣೆದುರು ಚಿತ್ರವನ್ನು ನಿರ್ಮಿಸುವ ಆಡಿದ ಮಾತಿನ ಭಾವವನ್ನು ಮನಕ್ಕೆ ಮುಟ್ಟಿಸುವ, ಅರ್ಥವನ್ನು ಔಚಿತ್ಯಪೂರ್ಣವಾಗಿ ಬಿಂಬಿಸುವ ಸಾರ್ಥಕ್ಯವನ್ನು ಅದು ಪಡೆದಿದೆ. ನಾವು ಆಡುವ ಮಾತು ಹೇಗಿರಬೇಕು ಎಂಬ ಆದರ್ಶ ನಿರೂಪಣೆಯ ಜೊತೆಗೆ ಒಳ್ಳೆಯ ಸಾಹಿತ್ಯದ ಲಕ್ಷಣವನ್ನೂ ಸೂಚಿಸುವ ಈ ವಚನವನ್ನು ನೋಡಿ :

> ನುಡಿದರೆ ಮುತ್ತಿನ ಹಾರದಂತಿರಬೇಕು
> ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
> ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
> ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
> ನುಡಿಯೊಳಗಾಗಿ ನಡೆಯದಿದ್ದರೆ
> ಕೂಡಲಸಂಗಮದೇವನೆಂತೊಲಿವನಯ್ಯಾ ?

ನುಡಿ ಸುಂದರವಾಗಿ, ದೀಪ್ತಿಮಂತವಾಗಿ, ಪಾರದರ್ಶಕವಾಗಿ, ಆತ್ಮಸಾಕ್ಷಿಯಾಗಿ ಒಡಮೂಡಬೇಕೆಂಬ ಭಾವವನ್ನು ಇಲ್ಲಿಯ ಮುತ್ತಿನಹಾರ, ಮಾಣಿಕ್ಯದ ದೀಪ್ತಿ, ಸ್ಫಟಿಕದ ಸಲಾಕೆಯ ಚಿಕ್ಕ ಚಿಕ್ಕ ಪ್ರತಿಮೆಗಳು ಅರ್ಥಗೌರವವನ್ನು ಹೆಚ್ಚಿಸುತ್ತ ಮೂಲಭಾವಕ್ಕೆ ದೀಪಸ್ತಂಭವಾಗಿ ನಿಂತಿವೆ. ಪರಮ ಸತ್ಯದ ಸಂಕೇತವಾದ ಲಿಂಗ ಮೆಚ್ಚುವಂತಿರುವ ನುಡಿ ಸಾರ್ಥಕವಾಗುವದು, ನಡೆಯಲ್ಲಿ ಅದನ್ನು ಬಿಂಬಿಸಿದಾಗ ಎಂಬ ಬಸವಣ್ಣನವರ ಬದುಕಿನ ಸೂತ್ರದಲ್ಲಿ ಈ ವಚನ ಕೊನೆಗೊಳ್ಳುತ್ತದೆ.

ಹೀಗೆ ಒಂದು ಭಾವವನ್ನು ಸಮಗ್ರವಾಗಿ ಉಪಮೆಗಳ ಮೂಲಕ ಮಾರ್ಮಿಕವಾಗಿ ಮೂಡಿಸಿದಂತೆ ಬಿಡಿಬಿಡಿ ಯಾಗಿಯೂ ಉಪಮೆ—ರೂಪಕಗಳು ಅವರ ವಚನಗಳಲ್ಲಿ ಕಿಡಿ ಕೆತ್ತಿರುವುದನ್ನು ಕಾಣುತ್ತೇವೆ. ತಮ್ಮ ಮನಸ್ಸನ್ನು ಅರೆದು, ಒರೆದು, ಹಿಂಜಿ, ಹಿಡಿದು ನೋಡಿಕೊಂಡು ಅದನ್ನು ಪ್ರಾಮಾಣಿಕವಾಗಿ ನಿರೂಪಿಸುವಾಗ ಅತ್ಯಂತ ಪರಿಣಾಮ ಕಾರಿಯಾಗಿ ಅವು ನಮ್ಮ ಹೃದಯವನ್ನು ಮುಟ್ಟುತ್ತವೆ : 'ಅಂದಣವನೇರಿದ ಸೊಣಗನಂತೆ' ತನ್ನ ಮುನ್ನಿನ ಸ್ವಭಾವ ವನ್ನು ಬಿಡದ ಮನಸ್ಸು, 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' ತಮ್ಮ ಇರುವಿಕೆಯ ಸ್ಥಿತಿ, 'ಹೊತ್ತಿಗೊಂದು ಪರಿಯಪ್ಪ

ಗೋಸುಂಬೆಯಂತೆ' ಅದರ ಬಣ್ಣ ಬದಲಿಸುವ ಚಿತ್ರ ; 'ಕಂಬಳಿಯಲ್ಲಿ ಕಣಕವ ನಾದಿದಂತೆ' ಗುಂಜುಗಟ್ಟಿದ ಅದರ ತೊಡಕು ಸಂಕೀರ್ಣತೆ ; 'ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ' ಸುಗ್ಗುವ ಕಾಯವಿಕಾರ. ಮನೋವಿಕಾರಗಳು ; 'ಓಡಲಾರದ ಮೃಗವು ಸೊಣಗಗೆ ಮಾಂಸವ ಕೊಡುವಂತೆ' ಸಹಜವಿಲ್ಲದ ಭಕ್ತಿ: 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯುವ' ಜೀವನದ ಕರುಣಾಜನಕ ಸ್ಥಿತಿ : 'ಸಮುದ್ರದೊಳಗಣ ಸಿಂಪಿನಂತೆ' ಬಾಯಬಿಡುವ, 'ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ' ಅಂಬೆ ಎಂದು ಕರೆಯುವ ಹೃದಯದ ಆರ್ತಭಾವ ; 'ಬೀಗಿ ಬೆಳೆದ ಗೊನೆವಾಳೆಯಂತೆ' ಬಾಗುವ ಸತ್ವಪೂರ್ಣವಾದ ವಿನಯದ ಸಮರ್ಪಣ ಭಾವ—ಹೀಗೆ ಬಸವಣ್ಣನವರ ಉಪಮಾಲೋಕ—ಒಂದು ಅದ್ಭುತವಾದ ಚಿತ್ರಸೃಷ್ಟಿ. ಅವುಗಳ ವಾಸ್ತವತೆಯನ್ನೂ ವೈವಿಧ್ಯವನ್ನೂ ವೇಧಕತೆಯನ್ನೂ ನೋಡಿದರೆ ಅವರ ಕವಿಹೃದಯದ ಕೆಚ್ಚು. ಕುದಿ. ಕರುಣೆಯ ಜೀವಂತಸ್ಪರ್ಶವನ್ನು ಪಡೆದಂತಾಗುತ್ತದೆ.

ವಚನಗಳಲ್ಲಿ ದೃಷ್ಟಾಂತಗಳು ಮತತತ್ವ ಪ್ರತಿಪಾದನೆಗೂ ಕಾವ್ಯಮಯ ನಿರೂಪಣೆಗೂ ಏಕರೀತಿಯಾಗಿ ಪುಷ್ಟಿಯನ್ನೊದಗಿಸಿರುವುದನ್ನು ನೋಡಬಹುದು. ನಿಸರ್ಗದಿಂದ, ಪುರಾಣಗಳಿಂದ, ಪಶು-ಪಕ್ಷಿಗಳ ಜೀವನದಿಂದ, ಸುತ್ತುಮುತ್ತಿನ ವಾಸ್ತವ ಜೀವನದಿಂದ—ಈ ದೃಷ್ಟಾಂತಗಳು ರೂಪುಗೊಂಡಿವೆ. 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಎಂಬಂತಹ ವಚನಗಳಲ್ಲಿ ಅವು ಒಡಪಿನ ಅಂದವನ್ನು ಪಡೆದಿದ್ದರೆ, 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ' ಎಂಬ ವಚನದಲ್ಲಿ ತರ್ಕಪೂರ್ಣವಾದ, ತೂಕಬದ್ಧವಾದ ವಿಚಾರಸರಣಿಯನ್ನು ನಿರೂಪಿಸುತ್ತವೆ. ನಿತ್ಯಜೀವನದ ಸಾಮಾನ್ಯ ಘಟನೆಗಳಲ್ಲಿಯೂ ಕಾವ್ಯಾಂಶವನ್ನು ಕಾಣುವ ಮತ್ತು ಅದಕ್ಕೆ ಮಾತಿನಲ್ಲಿ ಮೂರ್ತಸ್ವರೂಪವನ್ನು ಕೊಡುವ ಕಲೆಯನ್ನಿವರ ವಚನಗಳಲ್ಲಿ ಹೆಜ್ಜೆ ಹೆಜ್ಜೆಗೆ ಕಾಣುತ್ತೇವೆ :

ಕಾಗೆಯೊಂದಗುಳ ಕಂಡರೆ ಕರೆಯದೆ
ತನ್ನ ಬಳಗವನು ?
ಕೋಳಿಯೊಂದು ಕುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವೆಲ್ಲವ
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ!

ವಿಧಿರೂಪವಾಗಿರದೆ ಪ್ರಶ್ನಾರ್ಥಕವಾಗಿರುವ ಇಲ್ಲಿಯ ಮಾತು ವ್ಯತಿರೇಕ ದೃಷ್ಟಾಂತದ ಮೂಲಕ ವ್ಯಂಗ್ಯಾಂಶವನ್ನು ಸೂಚಿಸುತ್ತ ಭಾವವನ್ನು ಬಲಗೊಳಿಸುತ್ತದೆ. ಒಂದರಮೇಲೊಂದು ದೃಷ್ಟಾಂತವನ್ನಿಟ್ಟು ಭಾವವನ್ನು ಇನ್ನಷ್ಟು ಖಚಿತಗೊಳಿಸುತ್ತವೆ—'ಮಡಕೆಯ ಮಾಡುವರೆ ಮಣ್ಣೇ ಮೊದಲು' ಎಂಬಂತಹ ವಚನಗಳು. ಶರಣರ ಒಳಹೊರಗನ್ನು ಚಿತ್ರಿಸುವ 'ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ' ಎಂಬ ಮಾತಿನಲ್ಲಿ ದೃಷ್ಟಾಂತ ಪ್ರತಿಮಾರೂಪದಲ್ಲಿ ಭಾವವನ್ನು ಭಟ್ಟಿ ಇಳಿಸುತ್ತದೆ. ನಿಜದ ಹಿನ್ನೆಲೆಯನ್ನರಿಯದ ಆಚರಣೆ ಬರಿ ಬಳಲಿಕೆಯಾಗಿ ಪರಿಣಮಿಸುವದನ್ನೂ ಆತ್ಮದ ಅಲಿಪ್ತತೆಯನ್ನೂ ಸೂಚಿಸುವ ಈ ನಿದರ್ಶನ :

ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆ
ಕೊಳಗ ಬಳಲುವದೆ ?
ನಡೆಯುತ್ತ ನಡೆಯುತ್ತ ಬಳಲುವರಲ್ಲದೆ
ಬಟ್ಟೆ ಬಳಲುವದೆ ?
ಶ್ರಮವಮಾಡುತ್ತ ಮಾಡುತ್ತ ಬಳಲುವರಲ್ಲದೆ
ಕೋಲು ಬಳಲುವದೆ ?
ನಿಜವನರಿಯದ ಭಕ್ತ ಬಳಲುವನಲ್ಲದೆ
ಲಿಂಗ ಬಳಲುವದೆ ?

ಸಾಮಾನ್ಯವಾಗಿ ದೋಷವೆನಿಸಬಹುದಾದ ಪುನರುಕ್ತಿ ಇಲ್ಲಿ ಕ್ರಿಯೆಯ ಸಾತತ್ಯವನ್ನು ಸೂಚಿಸಿ ಗುಣವೆನಿಸಿದೆ. ಭಾವ-ಬುದ್ಧಿಯ ಈ ಸಂಗಮದಲ್ಲಿ ಕಾವ್ಯ ಸುಳುಹುದೋರುವದನ್ನು ಕಾಣುತ್ತೇವೆ.

ಭಾವ-ಭಾಷೆಯ ಅನ್ಯೋನ್ಯ ಹೊಂದಿಕೆ, ಸಾಮರಸ್ಯ ಬಸವಣ್ಣನವರ ವಚನಗಳ ವೈಶಿಷ್ಟ್ಯವಾಗಿದೆ. ಅಂತೆಯೇ ಅವರ ರೂಪಕನಿರ್ಮಾಣಶಕ್ತಿ ನಮ್ಮನ್ನು ಬೆರಗುಗೊಳಿಸುತ್ತದೆ. ಭಾವತೀವ್ರತೆಯನ್ನೊಳಗೊಂಡ ಪೂರ್ಣ ರೂಪಕಗಳು ವಚನಶಿಲ್ಪವನ್ನು ಬಂಧುರಗೊಳಿಸಿವೆ. ಅದಕ್ಕೆ ಮುಂದಿನ ವಚನ ಅತ್ಯುತ್ತಮ ಉದಾಹರಣೆ :

ವಿಷಯವೆಂಬ ಹಸುರನೆನ್ನ ಮುಂದೆ ತಂದು
ಪಸರಿಸಿದೆಯಯ್ಯಾ.
ಪಶುವೇನ ಬಲ್ಲುದು ? ಹಸುರೆಂದೆಳಸುವದು
ವಿಷಯರಹಿತನ ಮಾಡಿ ಭಕ್ತಿರಸವ
ದಣಿಯೆ ಮೇಯಿಸಿ
ಸುಬುದ್ಧಿಯೆಂಬುದಕವನೆರೆದು
ನೋಡಿ ಸಲಹಯ್ಯಾ ಕೂಡಲಸಂಗಮದೇವಾ.

ಜನಜೀವನಕ್ಕೆ ಪರಿಚಿತವಾದ ಸಂಗತಿಯನ್ನೆತ್ತಿಕೊಂಡು ಅದಕ್ಕೆ ಕಾವ್ಯರೂಪವನ್ನು ನೀಡಿ ಅನುಭವವನ್ನು ಎರಕ ಹೊಯ್ಯುವ ಬಸವಣ್ಣನವರ ರೀತಿಯಿದು. ವಿಷಯವೆಂಬ ಹಸುರು ಕಣ್ಣ ಮುಂದೆ ಹರಡಿದೆ, ಮುಗ್ಧವಾದ ಹಸು ಏನೂ ವಿಚಾರಮಾಡದೆ ಅದನ್ನು ಗಪಗಪ ತಿನ್ನುತ್ತದೆ. ಜೀವದ ಮುಗ್ಧತೆ. ಅಸಹಾಯಕತೆ, ವಾಸನಾಬಲ—ಇವುಗಳನ್ನು 'ಪಶುವೇನಬಲ್ಲುದು. ಹಸುರೆಂದೆಳಸುವದು' ಎಂಬ ಸಾಲು ಸಮರ್ಥವಾಗಿ ಹೊಮ್ಮಿಸುತ್ತದೆ. ಮುಂದಿನ ಸಾಲುಗಳಲ್ಲಿ 'ಹಸು' ಭಕ್ತಜೀವವಾಗಿ ಮಾರ್ಪಟ್ಟು ಭಕ್ತಿರಸವನ್ನೂ. ಸುಬುದ್ಧಿ ಎಂಬ ನೀರನ್ನೂ ಬಯಸಿ ಮೊರೆಯಿಡುತ್ತದೆ. ಇಡಿಯ ವಚನದ ತುಂಬ 'ಸ'ಕಾರದ ಪ್ರಾಸಾನುಪ್ರಾಸ ಸಂಪದ್ಯುಕ್ತವಾಗಿ ಭಾವವನ್ನು ಸೂಸಿಸೂಸಿ ಹೊರಹೊಮ್ಮಿಸುವ ರೀತಿ ಆಸ್ವಾದ್ಯಶವಾದುದು. ಮೊದಲ ಸಾಲಿನಲ್ಲಿಯ 'ಪಸರಿಸಿದೆಯಯ್ಯಾ' ಎಂಬ ಪದವಂತೂ ಹಸುವಿನ ಮುಂದೆ ಹುಲ್ಲನ್ನು ಕೊಡವಿ ಚೆಲ್ಲುವ ಕ್ರಿಯೆಯನ್ನು ಅಭಿನಯಿಸಿ ತೋರಿಸುತ್ತದೆ. ಮುಂದಿನ ಸಾಲುಗಳಲ್ಲಿಯ 'ಮಾಡಿ' 'ಮೇಯಿಸಿ' 'ಎರೆದು' 'ನೋಡಿ' ಎಂಬ ಪದಗಳಲ್ಲಿಯ ಸಲಿಗೆಯ ಬಿನ್ನಹ ಮೊದಲಿನ ಆರೋಪಭಾವದ ಪರಿವರ್ತನೆಯನ್ನು ಸುಂದರವಾಗಿ ಸೂಚಿಸುತ್ತದೆ. 'ನೋಡಿ ಸಲಹಯ್ಯಾ' ಎಂಬ ನುಡಿಗಟ್ಟಿನಲ್ಲಿಯ 'ಕಾಕು' ಇಡಿಯ ವಚನದ ಭಾವ ಅರ್ಥಭಾರದಿಂದ ಬಳುಕುವಂತೆ ಮಾಡುತ್ತದೆ. ಇಂಥ ವಚನಗಳಲ್ಲಿ ಬಸವಣ್ಣನವರ ಕಾವ್ಯಶಕ್ತಿಯ ಪರಿಪೂರ್ಣ ಸಿದ್ಧಿಯನ್ನು ಕಾಣುತ್ತೇವೆ.

ಆತ್ಮಶುದ್ಧಿಯ ಹಂಬಲ. ಚಿನ್ನವನ್ನು ಕರಗಿಸಿ ಚೊಕ್ಕಗೊಳಿಸಿ ಶರಣರ ಪಾದಕ್ಕೆ ತೊಡಿಗೆಯಾಗುವವರೆಗಿನ ಕ್ರಿಯೆಗಳಿಂದ 'ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ' ಎಂಬ ವಚನದ ರೂಪಕದಲ್ಲಿ ಸಮರ್ಥವಾಗಿ ಒಡಮೂಡಿದೆ. ಬಸವಣ್ಣನವರ ಸರ್ವಸಮರ್ಪಣಭಾವದ ತೀವ್ರತೆಯನ್ನು ಮುಂದಿನ ವಚನ ವೀಣೆಯ ರೂಪಕದಲ್ಲಿ ಶ್ರೀಮಂತವಾಗಿ ಹಿಡಿದಿಟ್ಟಿದೆ :

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯಾ
ಎನ್ನ ಬೆರಳ ಕಡ್ಡಿಯ ಮಾಡಯ್ಯಾ
ಬತ್ತೀಸ ರಾಗವ ಹಾಡಯ್ಯಾ
ಉರದಲೊತ್ತಿ ಬಾರಿಸು
ಕೂಡಲಸಂಗಮದೇವಾ.

ತಮ್ಮ ದೇಹವನ್ನು ಕೊಳಲು ಮಾಡಲು ಕೇಳಿಕೊಂಡ ಕವಿಗಳುಂಟು. ಬಸವಣ್ಣನವರು ತಮ್ಮನ್ನು ವೀಣೆಯನ್ನಾಗಿ ಸಮರ್ಪಿಸಿಕೊಳ್ಳುವ ಈ ರೂಪಕ ಔಚಿತ್ಯಪೂರ್ಣವಾದದ್ದು. ಇಲ್ಲಿಯ ಭಾವವೂ ರಕ್ತ ಮಾಂಸದಿಂದ ಕೂಡಿಕೊಂಡು ಜೀವಂತವಾಗಿ. ಸಾಲುಸಾಲಿಗೂ ಜೀವನಾದವನ್ನು ಮಿಡಿಯುತ್ತದೆ. ದೇಹದ ಒಂದೊಂದು ಅವಯವವೂ ವೀಣೆಯ ಬೇರೆ ಬೇರೆ ಭಾಗಗಳಿಗೆ ಸಮನ್ವಯಗೊಳ್ಳುವ ಈ ಸಮಸ್ತವಸ್ತುವಿಷಯರೂಪಕ ಹೆಚ್ಚಿನ ಸಾರ್ಥಕ್ಯವನ್ನು ಪಡೆದಿದೆ. 'ಉರದಲೊತ್ತಿ ಬಾರಿಸು' ಎನ್ನುವಲ್ಲಿಯ ಅವಧಾರಣೆ ಗಮನಾರ್ಹ : ಸಂಗಮದೇವ ಈ ವೀಣೆಯನ್ನು ಎದೆಗವಚಿ ತನ್ನದನ್ನಾಗಿ ಮಾಡಿಕೊಂಡು ಅದನ್ನು ಮಿಡಿಯುತ್ತ ಹಾಡಬೇಕೆಂಬ ಸಮರ್ಪಣಭಾವ ಇಲ್ಲಿಯ ಪ್ರತಿಯೊಂದು ವಿವರದಲ್ಲಿಯೂ ತುಂಬಿ ಸಜೀವವಾಗಿ ಅಭಿವ್ಯಕ್ತಿಪಡೆದಿದೆ.

ಹಲವು ಸಲ ಬಸವಣ್ಣನವರ ಭಾವ ನಿರೂಪಣೆಯ ನಿರಾಭರಣ ಸೌಂದರ್ಯವೇ ಕಾವ್ಯವಾಗುವ ಸೋಜಿಗವನ್ನು ನೋಡಬಹುದು. ಅವರ ಒಳದನಿ ಹೇಗೆ ಶುದ್ಧಕಾವ್ಯಧ್ವನಿಯನ್ನೇ ಹೊತ್ತುಕೊಂಡು ಹೊರಬರುತ್ತದೆ ನೋಡಿ :

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ
ನಮ್ಮ ನಲ್ಲ ಸುಳಿಯಲಿಲ್ಲ ;
        ಸುಳಿದು ಸಿಂಗಾರವ ಮಾಡಲಿಲ್ಲ,
ಕೂಡಲಸಂಗಮದೇವ
        ತನ್ನೊಳಗೆ ಬೈಚಿಟ್ಟನಾಗಿ

ವಿಭೂತಿಯನ್ನು ಪೂಸಿ, ರುದ್ರಾಕ್ಷಿಯನ್ನು ಕಟ್ಟಿ, ಶಿವನ ಒಲವಿಲ್ಲದಂತಾದಾಗಿನ ಸ್ಥಿತಿ 'ಅರಿಸಿನವನೆ ಮಿಂದು ಹೊಂದುಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ' ಎಂಬ ಪ್ರತಿಮೆಯಲ್ಲಿ ತಿರುಳ್ಗೊಂಡು ನಿಂತಿದೆ.

ಹೀಗೆ ಪ್ರತೀಕಗಳೂ ಪ್ರತಿಮೆಗಳೂ ಹದವರಿತು ಒದಗಿಬಂದು ವಚನಗಳ ಕಾವ್ಯಗುಣವನ್ನು ಹೆಚ್ಚಿಸಿವೆ :

ಹುತ್ತವ ಬಡಿದೊಡೆ
        ಹಾವು ಸಾಯಬಲ್ಲುದೇ ಅಯ್ಯಾ ?
ಅಘೋರ ತಪವ ಮಾಡಿದೊಡೇನು ?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು
ನಂಬುವನಯ್ಯಾ ಕೂಡಲಸಂಗಮದೇವಾ.

ಮನದಲ್ಲಿ ವಿಕಾರವನ್ನು ಹುದುಗಿಸಿ ಬರೀ ದೇಹದಂಡನೆ ಎಷ್ಟೊಂದು ವ್ಯರ್ಥ ಎಂಬ ಭಾವವನ್ನು ಹುತ್ತ–ಹಾವಿನ ಪ್ರತೀಕದಲ್ಲಿ ಸ್ಫುಟಗೊಳಿಸಲಾಗಿದೆ. ಅದೇ 'ಹುತ್ತ'ದ ಪ್ರತೀಕ ಅಘೋರ ತಪಸ್ಸಿಗೂ ಸಂಕೇತವಾಗಿ ನಿರೂಪಣೆಯ ಸಂಗ್ರಹಶಕ್ತಿಯನ್ನು ಚೆನ್ನಾಗಿ ವ್ಯಕ್ತಗೊಳಿಸಿದೆ. ಅವರ ಆತ್ಮವಿಮರ್ಶೆ, 'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?' ಎಂಬ ವಚನದ ಪ್ರತೀಕದಲ್ಲಿ ಸಂದೇಹಭಾವದಿಂದ ನಿಶ್ಚಿತಕ್ಕೆ ನಿಲುಕುವ ನಾಟಕೀಯತೆಯಿಂದ ಅತ್ಯಂತ ಯಶಸ್ವಿ ಚಿತ್ರಣವಾಗಿದೆ. ಜೀವಭಾವ ಶರಣಭಾವಕ್ಕಾಗಿ ಕಾತರಿಸುವ ಸ್ಥಿತಿಯನ್ನು 'ಗಿಳಿಯು ಪಂಜರವಿಕ್ಕಿ ಸೊಡರಿಂಗೆಣ್ಣೆಯ ನೆರೆದು ಬತ್ತಿಯನಿಕ್ಕಿ ಬರವ ಹಾರುತ್ತಿರು'ವ ಗೃಹಿಣಿಯ ಪ್ರತಿಮಾ ವಿಧಾನದಲ್ಲಿ ಸುಂದರವಾಗಿ ಕಂಡರಿಸಲಾಗಿದೆ. ಹೀಗೆ ಕಿರಿದರಲ್ಲಿ ಹಿರಿದಾದ ಅರ್ಥವನ್ನೂ, ಭಾವದೀಪ್ತಿಯನ್ನೂ ಬೆಳಗುವ ಹಲವಾರು ಪ್ರತಿಮೆಗಳು ವಚನಗಳಲ್ಲಿ ರೂಪುಗೊಂಡಿದ್ದು ಬಸವಣ್ಣನವರ ಕಾವ್ಯಸೃಷ್ಟಿಯ ಹಾಗೂ ಕಲಾಸೃಷ್ಟಿಯ ಮೇಲ್ಮೆಯನ್ನು ಎತ್ತಿ ತೋರಿಸುತ್ತಿವೆ.

ಬಸವಣ್ಣನವರು ತಮ್ಮ ಶಬ್ದಕುಂಚದ ಮಿತವಾದ ಗೆರೆಗಳಿಂದ, ಭಾವಸೂಕ್ಷ್ಮತೆಯ ಬಣ್ಣದಿಂದ ಎಂಥ ಉಜ್ವಲಚಿತ್ರವನ್ನು ಬರೆಯಬಲ್ಲರು ಎಂಬುದಕ್ಕೆ ಮುಂದಿನ ವಚನವೇ ಸಾಕು :

ನೆರೆ ಕೆನ್ನೆಗೆ, ತೆರೆ ಗಲ್ಲಕೆ
        ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ ಬೆನ್ನು ಬಾಗಿ,
        ಅನ್ಯರಿಗೆ ಹಂಗಾಗದ ಮುನ್ನ,
ಕಾಲ ಮೇಲೆ ಕೈಯನೂರಿ
        ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ,
        ಮೃತ್ಯು ಮುಟ್ಟದ ಮುನ್ನ-
ಪೂಜಿಸು ನಮ್ಮ ಕೂಡಲಸಂಗಮದೇವನ.

ಪ್ರತಿಯೊಂದು ವಿವರವನ್ನೂ ಸಜೀವಗೊಳಿಸಿ ಮುಪ್ಪಾವಸ್ಥೆಯ ಕರುಣಾಜನಕ ಚಿತ್ರ ಕಣ್ಣಮುಂದೆ ಕಟ್ಟುವಂತೆ ಮಾಡುವ ಶಕ್ತಿ ಇಲ್ಲಿಯ ಪದಗಳಲ್ಲಿದೆ. 'ಕಾಲ ಮೇಲೆ ಕೈಯನೂರಿ ಕೋಲ ಹಿಡಿ'ಯುವಂಥ ಸೂಕ್ಷ್ಮಗ್ರಾಹಿಯಾದ ಸ್ವಭಾವೋಕ್ತಿ ಅನ್ಯಾದೃಶವಾಗಿ ಮೂಡಿದೆ. ಮುಟ್ಟಿದರೆ ಸಾಕು ಈ ಜೀರ್ಣ ಶರೀರ ಕಡಿದುಕೊಂಡು ಬೀಳುತ್ತದೆ. ಅದಕ್ಕಾಗಿ 'ಮೃತ್ಯು ಮುಟ್ಟದ ಮುನ್ನ' ಎಂಬ ಸಾರ್ಥಕ ಪ್ರಯೋಗ. ಇಂಥ ಸ್ಥಿತಿ ಒದಗುವ ಮೊದಲೇ ದೇವನನ್ನು ಪೂಜಿಸು ಎಂಬ ಉಕ್ತಿಯನ್ನು ಈ ವಚನದ ಚಿತ್ರವೇ ಪ್ರತಿಯೊಂದು ಗೆರೆಯಲ್ಲಿ ಒಡನುಡಿಯುವಂತಿದೆ. ಬಸವಣ್ಣನವರ ಬಾಳಿನ ಸೂಕ್ಷ್ಮನಿರೀಕ್ಷಣೆ, ಹಾಗೂ ಅದು ಭಾವಕ್ಕೆ ತಕ್ಕ ಭಾಷೆಯಲ್ಲಿ ಅಭಿವ್ಯಕ್ತಿಗೊಳ್ಳುವ ರೀತಿ ಇಂಥ ಸಂದರ್ಭಗಳಲ್ಲಿ ಅತ್ಯಂತ ಮೇಲ್ಮಟ್ಟದ್ದಾಗಿ ಕಂಗೊಳಿಸುತ್ತದೆ.

ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಶ್ಲೇಷೆ ಸಹಜವೂ ಅರ್ಥಪುಷ್ಟಿಯನ್ನೊದಗಿಸುವಂಥದೂ ಆಗಿದೆ. 'ಕೂಡಲ ಸಂಗಮದೇವ ಬರಿಯುದಕದಲ್ಲಿ ನೆನೆವನೆ ?' ಎಂಬಲ್ಲಿ 'ನೆನೆ' ಪದದ ದ್ವಂದ್ವಾರ್ಥ ಬಂಡಿತುಂಬ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆರೆವರನ್ನು ವಿಡಂಬಿಸುವಲ್ಲಿ ಅರ್ಥಪುಷ್ಟಿಯನ್ನೊದಗಿಸಿದೆ. 'ಐದು ಮಾನವ ಕುಟ್ಟಿ ಒಂದು ಮಾನವ ಮಾಡು ಕಂಡಾ ಮದವಳಿಗೆ' ಎಂಬ ವಚನದಲ್ಲಿ 'ಐದು ಮಾನ' (೧. ಒಂದು ಅಳತೆ, ೨. ಏಕಾಗ್ರ ಚಿತ್ತ) 'ಮದವಳಿಗೆ' (೧. ಮದವಣಗಿತ್ತಿ, ೨. ಅಹಂಕಾರವಳಿಯಲಿ) ಈ ಪದಗಳ ಶ್ಲೇಷೆಯು ಹಿತವಾದ ಬಳಕೆ ಈ ವಚನದ ಅರ್ಥ ಸ್ವಾರಸ್ಯವನ್ನು ಸೂಚ್ಯವಾಗಿ ಇಮ್ಮಡಿಸಿದೆ. ಮುಂದಿನ ವಚನದಲ್ಲಿ ಅದೇ ಗುಣ ವ್ಯಂಗ್ಯಧೋರಣೆ ಯನ್ನನುಸರಿಸಿ ಹೇಗೆ ಪರಿಣಾಮಕಾರಿಯಾಗಿದೆ ನೋಡಿ :

**ತೊರೆಯ ಮೀವಣ್ಣಗಳಿರಾ**
**ತೊರೆಯ ಮೀವ ಸ್ವಾಮಿಗಳಿರಾ**
**ತೊರೆಯಿಂಭೋ, ತೊರೆಯಿಂಭೋ !**
**ಪರನಾರಿಯ ಸಂಗವ ತೊರೆಯಿಂಭೋ !**
**ಪರಧನದಾಮಿಷವ ತೊರೆಯಿಂಭೋ !**
**ಇವ ತೊರೆಯದೆ ಹೋಗಿ**
**ತೊರೆಯ ಮಿಂದರೆ**
**ಬರುದೊರೆ ಹೋಹುದು ಕೂಡಲಸಂಗಮದೇವಾ !**

'ತೊರೆ' ('ಬಿಡು' 'ನದಿ') ಪದವನ್ನು ನಾಮ ಮತ್ತು ಕ್ರಿಯಾರೂಪದಲ್ಲಿ ಬಳಸಿರುವುದಲ್ಲದೆ : 'ಅಣ್ಣಗಳಿರಾ' 'ಸ್ವಾಮಿ ಗಳಿರಾ' 'ತೊರೆಯಿಂಭೋ' ಎಂಬ ಸಂಬೋಧನೆಯ ರೀತಿ–ಇಡಿಯ ವಚನವನ್ನೇ ವ್ಯಂಗ್ಯದ ಧಾಟಿಯಲ್ಲಿ ನಡೆಸಿಕೊಂಡು ಹೋಗಿ ತೀಕ್ಷ್ಣವಾದ ಪರಿಣಾಮವನ್ನು ಬೀರುತ್ತದೆ.

ಸಲ್ಲದ ಆಚಾರ, ರೀತಿ ನಡಾವಳಿಗಳನ್ನೂ ಮೂಢಭಾವನೆಗಳನ್ನೂ ಖಂಡಿಸುವಾಗ ಬಸವಣ್ಣನವರ ಮಾತು ಇನ್ನಿಷ್ಟು ಹರಿತಗೊಳ್ಳುತ್ತದೆ. ಭಾಷೆಯಲ್ಲಿ ಸೂಕ್ಷ್ಮವಾದ ವಿಡಂಬನೆ ಮೈದಾಳುತ್ತದೆ. 'ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲಿದ್ದು ಮೂಗ ಹಿಡಿದು ಧ್ಯಾನವ ಮಾಡುವವರ'ನ್ನು ಕಣ್ಣೆದುರು ನಿಲ್ಲಿಸುತ್ತಾರೆ. 'ಅರಗು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ, ಅವಸರ ಬಂದರೆ ಮಾರುವ ದೈವ, ಅಂಜಿಕೆಯಾದರೆ ಹೂಳುವ ದೈವ'ಗಳನ್ನು ಬಯಲಿಗೆಳೆಯುತ್ತಾರೆ. 'ಆಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪ ಕೆಲವು ದೈವಂ ಗಳ'ನ್ನು ವಿಡಂಬಿಸುತ್ತಾರೆ. 'ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ'ಯಾಗಿ ವರ್ತಿಸುವವರನ್ನೂ, ಸತ್ಯದ ನಿಲ ವನರಿಯದೆ 'ಅಹಂಕಾರವೆಂಬ ಮದಗಜವೇರಿ ವಿಧಿಗೆ ಗುರಿಯಾಗಿ ಹೋದ'ವರನ್ನು ಕಂಡು ಕನಿಕರಿಸುತ್ತಾರೆ.

ಭಾವೋತ್ಕಟತೆಯಂತೆಯೇ ಅನುಭವದ ಆಳದಿಂದ ಮೂಡಿಬರುವ ಅವರ ಸೂಕ್ತಿಗಳು ವಚನಗಳಲ್ಲಿ ಬೆರಸಿ ಬೇರಿಲ್ಲದಂತೆ ರೂಪುಗೊಂಡಿವೆ.ಅವು ಸಂಕ್ಷಿಪ್ತವಾಗಿಯೂ ಸಾರವತ್ತಾಗಿಯೂ ಆಯಾ ಸಂದರ್ಭದ ಅರ್ಥವಂತಿಕೆಯನ್ನೂ ರಸವಂತಿಕೆಯನ್ನೂ ಹೆಚ್ಚಿಸುತ್ತವೆ. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ', 'ಗರಿ ತೋರೆ ಗಂಡರೆಂಬಿವರ ಕಾಣೆ ಸಿರಿ ಸೋಂಕಲು ಮುನಿಯಿಲ್ಲ ನೋಡಯ್ಯಾ', 'ಕಲಿಯ ಕೈಯ ಕೈದುವಿನಂತಿರ ಬೇಕು', 'ವೀರನಾದರೆ ವೈರಿಗಳು ಮೆಚ್ಚಬೇಕು', 'ನೆರಹಿ ಮಾಡುವದು ಡಂಬಿನ ಭಕ್ತಿ', 'ಮಾಲೆಗಾರನ ಕೇಳಿ ನನೆಯ ರಳುವದೆ ?'—ಇತ್ಯಾದಿ ನಾನಾ ಸಂದರ್ಭಗಳಲ್ಲಿ ಮೂಡಿದ ಇಂಥ ನೂರಾರು ನುಡಿಗಳಲ್ಲಿ ಭಾವ-ಅನುಭವ ಘನೀ ಭೂತವಾಗಿ ನಿಂತಿದೆ.

ಬಸವಣ್ಣನವರು ಜನವಾಣಿಯಿಂದ ಪಡೆದ ಕಾಣಿಕೆಗಳಲ್ಲಿ ಗಾದೆಮಾತಿನ ಪ್ರಯೋಗವೂ ಒಂದು ಮಹತ್ವದ ಅಂಶವಾಗಿದೆ. ಆಗ ಪ್ರಚಲಿತವಿದ್ದ ಗಾದೆಗಳನ್ನು ಅನುಸರಿಸಿ ಅರ್ಥಪೂರ್ಣವಾಗಿ ಬಳಸಿದ ಬಸವಣ್ಣನವರ ವಚನ ಶೈಲಿ ಕಳೆಗೊಂಡಿದೆ. 'ಒಡುವಾತ ಲಿಂಕಸಲ್ಲ, ಬೇಡುವಾತ ಭಕ್ತನಲ್ಲ', 'ಬೆರಣಿಯನಾಯಲಿಲ್ಲದೆ ಅಟ್ಟುಣ್ಣ ತೆರಹಿಲ್ಲ', 'ಹಗಹದಲ್ಲಿ ಬಿದ್ದವರ ಮೇಲೆ ಒರಳನೂಂಕುವರೆ ?', 'ನಡುವಿರುಳೊಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ', 'ಸಂತವಿದ್ದ ಮನೆಗೆ ಕೊಂತವ ತಂದಂತೆ' ಇತ್ಯಾದಿ ಹಲವಾರು ಉದಾಹರಣೆಗಳನ್ನು ಕೊಡಬಹುದು. ಒಂದೊಂದು ಕಡೆ ಇಡೀ ವಚನವೇ ಗಾದೆಗಳಿಂದ ಕೋದುಕೊಂಡು ದೃಷ್ಟಾಂತವನ್ನು ಸಂತುಷ್ಟಿಗೊಳಿಸಿರುವದುಂಟು :

ಚೇಳಿಂಗೆ ಬಸುರಾಯಿತ್ತೆ ಕಡೆ
ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ !

ರಣರಂಗದಲ್ಲಿ ಕಾದುವ ಓಲೆಕಾರಂಗೆ
ಓಸರಿಸಿತ್ತೆ ಕಡೆ !
ಮಾಡುವ ಭಕ್ತಂಗೆ ಮನಹೀನವಾದರೆ
ಅದೇ ಕಡೆ ಕೂಡಲಸಂಗಮದೇವಾ.

ಜನತೆಯ ಭಾಷೆಯಲ್ಲಿ ಅಡಗಿರುವ ಜೀವನಿಧಿಯನ್ನು ಕಂಡು ಎಲ್ಲ ಬಗೆಯ ಭಾವಾಭಿವ್ಯಕ್ತಿಗೂ ಅದನ್ನು ಬಾಗಿಸಿಕೊಂಡು ಅಂತರಂಗದ ಎಂಥ ಭಾರವನ್ನೂ ಹೊತ್ತು ಸಾಗಿಸುವಂತೆ ದುಡಿಸಿಕೊಂಡ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಅವರು ಬಳಸಿದ ಪಡೆನುಡಿ, ಹಿಡಿನುಡಿ, ಜೋಡುನುಡಿ, ಕಿಡಿನುಡಿಗಳಲ್ಲಿ ಆಡುನುಡಿಯ ಶಕ್ತಿಯನ್ನೂ ಸೌಂದರ್ಯವನ್ನೂ ಸೂರೆಗೊಳ್ಳಲಾಗಿದೆ. 'ಹಲುದೋರೆಕೊಯ್ಯು', 'ಗುಡಿತೋರಣ ಕಟ್ಟು', 'ಕಿವಿವಿಡಿದಾಡು', 'ಹಾಸಲುಂಟು ಹೊದೆಯಲುಂಟು', 'ಒಂದಡಕೆಗೆ ಕೊಳ್ಳು', 'ಕರಕಟಕಾಡು', 'ಟೇವಕ ಟೆಂಬಕವನಾಡಿಸು', 'ಅಂತರ ಬೆಂತರ', 'ಕೆಮ್ಮನೆ ಕೆಡು'. 'ಒಕ್ಕುದಕನಿಕ್ಕು', 'ಆಗು–ಚೇಗು', 'ಡಂಬು–ಗಳಹು', 'ದರದಾರ'. 'ಅಟ್ಟಾಳಿಕೆಯ ಮಾತು', 'ಹೊರಹಂಚಿ', 'ಒಳಬೊಳ್ಳತನ'. 'ಸಂಭೋಳಿ', 'ಹೆಣಮೂಳ'—ಒಂದೇ ಎರಡೇ. ಇಂಥ ಸಾವಿರಾರು ಪದಗಳು ನಾ ಮುಂದೆ ತಾ ಮುಂದೆ ಎಂದು ಬಸವಣ್ಣನವರ ವಚನಗಳಲ್ಲಿ ತಮ್ಮ ಶಕ್ತಿಯನ್ನೂ, ಸೊಗಸನ್ನೂ ಮೆರೆದಿವೆ. ಸಂಸ್ಕೃತಪದಗಳ ಸಮಾಸಗಳ ಬಳಕೆ ಇವರ ವಚನಗಳಲ್ಲಿ ತೀರ ವಿರಳ. 'ಶತಪತ್ರಕಮಲಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿರ್ಪ ನಮ್ಮ ಕೂಡಲಸಂಗಮದೇವಾ' ಇತ್ಯಾದಿ ನಾಲ್ಕಾರು ವಾಕ್ಯಗಳು ಕೂಡಲಸಂಗಮದೇವನ ಗುಣವಿಶೇಷಗಳ ವರ್ಣನೆಯ ಸಂದರ್ಭಗಳಲ್ಲಿ ಮಾತ್ರ ಬಳಕೆಗೊಂಡಿರುವದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಬಸವಣ್ಣನವರ ವಚನಗಳ ಶೈಲಿ ಅಚ್ಚಗನ್ನಡದ ಕೆಚ್ಚಿನಿಂದ ಬಿಗಿವೊಂದಿದೆ. ಭಾವಕ್ಕೆ ತಕ್ಕಂತೆ ಬಾಗಿ. ತೂಗಿ, ತೊನೆದು, ತಣಿದು, ತೃಪ್ತಿಗೊಂಡಿದೆ—ಇಲ್ಲಿಯ ರಚನಾವಿಲಾಸ.

ಈ ವಚನಗಳಲ್ಲಿ ಛಂದೋಲಯ ಕೆಲಮಟ್ಟಿಗೆ ಕಂಡುಬಂದರೂ ಉಸಿರಿಗೆ ತಕ್ಕಹಾಗೆ ಆಡುವ ಆಂತರಿಕವಾದ ಭಾವಲಯ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ. ವಾಕ್ಯಗಳು ಒಂದಕ್ಕೊಂದು ತೂಕ ಹಿಡಿಯುವಂತೆ ಒದಗುವ ಪ್ರಾಸಾನುಪ್ರಾಸ, ಪದಗಳ ಪುನರಾವರ್ತನೆ, ಸ್ವಾಭಾವಿಕವಾದ ಯತಿ ಇವುಗಳಿಂದ ಉಂಟಾಗುವ ಭಾವಾಭಿನಯ, ನಾಟಕೀಯತೆ ಗಮನಾರ್ಹವಾದುದು. ಕೆಲವು ಸಾಲುಗಳು ಗಣಗಳಿಗೆ ಒಳಪಟ್ಟು ಪದ್ಯದ ತುಣುಕಿನಂತೆ ಗೋಚರಿಸುತ್ತವೆ. ಅವುಗಳನ್ನು ನೋಡಿ :

ಉಣ್ಣದೆ ಉಡದೆ ಹೊಗೆಯ ಕೈಯಲಿ
ಸತ್ತ ಅಣ್ಣಗಳ ಕೇಡ ನೋಡಾ

* * *

ಕೊಳನ ತಡಿಯಲ್ಲೊಂದು
ಹೊಬಸು ಕುಳ್ಳಿರ್ದರೇನು

* * *

ಷಡುತ್ರಿಂಶತ್ ಪ್ರಭಾ ಪಟಲದ
ಪ್ರಭೆಯ ಬೆಳಗಿದೆ ನೋಡಿರೆ

ಬೇರೆಬೇರೆ ಲಯವಿನ್ಯಾಸದಲ್ಲಿ ಸಾಗಿ ವೈವಿಧ್ಯವನ್ನು ತಂದುಕೊಟ್ಟ ವಚನಗಳೂ ಉಂಟು. "ವಚನಗಳನ್ನು ಗದ್ಯ ಪದ್ಯಗಳ ಮಧ್ಯದ ಇನ್ನೊಂದು ಜಾತಿಯ ಬರಹವೆಂದು ಭಾವಿಸಬೇಕಾಗುತ್ತದೆ"ಂಬುದೇನೋ ನಿಜ. ಆದರೆ "ಅವುಗಳನ್ನು ಲಯಾನ್ವಿತ ಗದ್ಯವೆಂದೂ ಅನಿಶ್ಚಿತಲಯವಿರುವ ಪದ್ಯವೆಂದೂ" ಕರೆದುಬಿಟ್ಟರೆ ಪೂರ್ಣಸ್ವರೂಪವನ್ನು ನಿಶ್ಚಯಿಸಿದಂತಾಗುವದಿಲ್ಲ. ಈ ವಚನಪ್ರಕಾರಕ್ಕೆ ತನ್ನದೇ ಆದ ವಿಶಿಷ್ಟರೂಪವಿರುವುದರಿಂದ ಇವುಗಳ ರಚನಾವಿಧಾನ, ಭಾವ, ಆಲೋಚನೆಗಳಿಗೆ ತಕ್ಕ 'ಶಿಲ್ಪ'ವೊಂದನ್ನು (Structure) ನಿರ್ಮಿಸಿದೆ. ಇಂದಿನ ಕಾವ್ಯಕ್ಕೆ ಒಗ್ಗಿರುವ ಆಡುಮಾತಿನ ಲಯ (Speech rhythm) ವಚನಗಳಲ್ಲಿ ಪ್ರಧಾನವಾಗಿರುವದನ್ನು ಸಂಸ್ಕಾರಗೊಂಡ ಕಿವಿ ತಟ್ಟನೆ ಗ್ರಹಿಸಬಲ್ಲುದು.

ಭಾವದ ಗಾಳಿಗೆ ಗದ್ಯದ ಹಾಯಿಯನ್ನು ಬಿಚ್ಚಿ ಪದ್ಯದ ತೆರೆಗಳ ಮೇಲೆ ಅನುಭವದ ಮುತ್ತು ರತ್ನಗಳನ್ನು ಹೊತ್ತುಕೊಂಡು ಕನ್ನಡ ಸಾಹಿತ್ಯಸಾಗರದಲ್ಲಿ ಸಡಗರದಿಂದ ಸಾಗಿದ ಈ ಚಿಕ್ಕ ಚಿಕ್ಕ ಹಡಗುಗಳ ಬೆಡಗಿಗೆ, ಅಪ್ರತಿಮ ಲಿಂಗ ಕರಸ್ಥಳಕ್ಕೆ ಬಂದು ಚುಳುಕಾದಂತೆ ಶಿವಶರಣರ ವಿನೂತನವಾದ ವಚನಸಾಹಿತ್ಯದೃಷ್ಟಿ ಬಸವಣ್ಣನವರ ಕರಸ್ಥಳದಲ್ಲಿ ಸಹಜವಾಗಿ ಕಾವ್ಯ ಪ್ರತಿಮೆಯಾಗಿ ಕಂಗೊಳಿಸಿತು.

# ವಚನಕಾರರ ಆರ್ಥಿಕ ದೃಷ್ಟಿ

ಪ್ರೊ. ಬಿ. ಎ. ಪಾಟೀಲ್

ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧ ಮತ್ತು ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಕರ್ನಾಟಕವು ಸಮಗ್ರ ಕ್ರಾಂತಿಯನ್ನು ಕಂಡಿತು. ದೇವರದಾಸಿಮಯ್ಯ, ಬಸವಣ್ಣ ಮೊದಲಾದ ವೀರಶೈವ ಶರಣರು ಅಸ್ತವ್ಯಸ್ತಗೊಂಡಿದ್ದ ಅಂದಿನ ಸಮಾಜವನ್ನು ಪುನರ್ರಚಿಸಿದರು. ತಮ್ಮ ಕ್ರಾಂತಿಕಾರಕ ವಿಚಾರಗಳನ್ನು ಸರಳಗನ್ನಡ ದಲ್ಲಿ ವಚನಮಾಧ್ಯಮದ ಮೂಲಕ ನಾಡಿನ ಮೂಲೆಮೂಲೆಗೂ ತಲುಪುವಂತೆ ಮಾಡಿದರು. ಈ ವಚನಕಾರರು ಹೊಸದೊಂದು ಬದುಕನ್ನು ರೂಪಿಸುವಲ್ಲಿ ತಳೆದ ಆರ್ಥಿಕ ನಿಲುವುಗಳು ಇಂದಿನ ಅರ್ಥಶಾಸ್ತ್ರಜ್ಞರೂ ಮಾನ್ಯಮಾಡು ವಂತೆ ಇವೆ. ಪ್ರಸ್ತುತ ಲೇಖನದಲ್ಲಿ ವಚನಕಾರರ ಕೆಲವೊಂದು ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.

## ೧. ವಚನಕಾರರ ಆರ್ಥಿಕ ದೃಷ್ಟಿಯ ತಾತ್ವಿಕ ಹಿನ್ನೆಲೆ

೧. ಧರ್ಮವು ಮಾನವ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಧರ್ಮರಹಿತ ಬದುಕಿಲ್ಲ; ಇದ್ದರೂ ಅರ್ಥಹೀನ.

೨. ಶಿವ-ಜೀವ ಸಾಮರಸ್ಯವೇ ಬದುಕಿನ ಪರಮ ಗುರಿ. ಈ ಗುರಿ ಸಾಧನೆಯಲ್ಲಿ ನಮ್ಮೆಲ್ಲ ಚಟುವಟಿಕೆಗಳಲ್ಲಿ ತಾಕಲಾಟ ಉಂಟಾಗದೆ ಅವು ಅದಕ್ಕೆ ಪೂರಕ-ಪೋಷಕವಾಗಿರಬೇಕು.

೩. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಒಲವುಗಳ ಉತ್ತಮ ನಿರ್ಣಾಯಕ.

೪. ವ್ಯಷ್ಟಿವಿಕಾಸ ಮತ್ತು ಸಮಷ್ಟಿವಿಕಾಸ ಇವು ಒಂದಕ್ಕೊಂದು ಪೂರಕ-ಪೋಷಕ.

೫. ವ್ಯಕ್ತಿಯಿಂದ ಸಮಾಜ; ಸಮಾಜದಿಂದ ವ್ಯಕ್ತಿ. ಇವೆರಡರಲ್ಲಿ ಅವಿನಾಭಾವಸಂಬಂಧ ಉಂಟು.

೬. ನಮ್ಮ ಕೃತಿಗಳಂತೆ ಕೃತಿಫಲ.

## ೨. ಬಯಕೆಗಳ ಯುಕ್ತತೆ

ಮಾನವನನ್ನು 'ಇಷ್ಟಗಳ ಕಂತೆ' (bundle of wants) ಎಂದು ಕರೆಯುವುದುಂಟು. ಏಕೆಂದರೆ ಅವನ ಇಷ್ಟ ಗಳಿಗೆ ಮಿತಿಯೆಂಬುದಿಲ್ಲ. ಅವುಗಳನ್ನು ಸ್ಥೂಲವಾಗಿ ಅಗತ್ಯಗಳು ಮತ್ತು ಅಪೇಕ್ಷೆಗಳು ಎಂದು ವಿಂಗಡಿಸಲಾಗುತ್ತದೆ. ಅಗತ್ಯಗಳು—ಅನ್ನ, ಬಟ್ಟೆ, ವಸತಿ, ನಿದ್ರೆ, ಮೈಥುನ—ಕೆಲವು; ಅಪೇಕ್ಷೆಗಳು ಹಲವು. ಅಪೇಕ್ಷೆಗಳಿಗೆ ಮಿತಿ ಇಲ್ಲ. ಹುಟ್ಟಿನಿಂದ ಮೊದಲುಗೊಂಡು ಮರಣದವರೆಗೂ ಒಂದಿಲ್ಲೊಂದು ಇಷ್ಟ ಮಾನವನನ್ನು ಪೀಡಿಸುವುದನ್ನು ಅಂಬಿಗ ಚೌಡಯ್ಯನು[1]

ಬಡತನಗೆ ಉಂಬುವ ಚಿಂತೆ
ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ
ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಿವರೆ ಕೇಡಿನ ಚಿಂತೆ
ಕೆಡದಿರೆ ಮರಣದ ಚಿಂತೆ

1 ವಚನ ಸಾಹಿತ್ಯ ಸಂಗ್ರಹ: ಪು. ೪೩-೪೪. ವ. ೫೭

ಎಂದು ಸುಂದರವಾಗಿ ನಿರೂಪಿಸಿದ್ದಾನೆ. ಮೊದಲು ಅನ್ನ. ನಂತರ ಬಟ್ಟೆ ತದನಂತರ ವಸತಿ—ಹೀಗೆ ಒಂದರನಂತರ ಒಂದು ಇಷ್ಟ ಮಾನವನನ್ನು ಕಾಡಿಸುತ್ತಲೇ ಇದೆ.

ಅಗತ್ಯಗಳ ತೃಪ್ತಿ ನಮ್ಮ ಇರುವಿಕೆಗೆ ಅವಶ್ಯಕ. ಅವುಗಳನ್ನು ತೃಪ್ತಿಪಡಿಸದೇ ನಮ್ಮ ಬದುಕು ಮುಂದೆ ಸಾಗಲಾರದು. ಅಗತ್ಯಗಳ ನಂತರ ಅಪೇಕ್ಷೆಗಳು.

> ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಒಗರ
> ಇವ ಮಾಡಲೇಬೇಕು ;
> ಸುಳಿವ ಸುಳುಹುಳ್ಳನ್ನಕ್ಕ ಇವ ಮಾಡಲೇಬೇಕು[1]

ಎಂದು ಹೇಳುವಲ್ಲಿ ಅಲ್ಲಮಪ್ರಭುವು ವಿಚಾರಶೀಲ ಮನುಷ್ಯನು ಮೊದಲು ಅಗತ್ಯಗಳ ಪೂರೈಕೆಯ ಕಡೆಗೆ ಗಮನ ನೀಡಬೇಕು ಮೊದಲು ಅಗತ್ಯಗಳ ಪೂರೈಕೆಯ ಕಡೆಗೆ

ದೇಹಕ್ಕೆ ಅಗತ್ಯಗಳಿರುವಂತೆ ಆತ್ಮಕ್ಕೂ ಉಂಟು. "ಎಲ್ಲ ಎಲ್ಲವನರಿದು ಫಲವೇನಯ್ಯಾ. ತನ್ನ ತಾನರಿಯಬೇಕಲ್ಲದೆ ?"[2] ಎಂಬ ಅಕ್ಕಮಹಾದೇವಿಯ ಪ್ರಶ್ನೆಯಲ್ಲಿ, "ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ ; ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ"[3] ಎಂಬ ಅಲ್ಲಮಪ್ರಭುವಿನ ಅನುಭವ ನುಡಿಯಲ್ಲಿ ಆತ್ಮನ ಅಗತ್ಯ, ಹಂಬಲ ಪ್ರಕಟಗೊಂಡು ನಿಂತಿದೆ. ಈ ಸೃಷ್ಟಿಯೆಲ್ಲದರ ಕರ್ತೃ ಯಾರು ? ತಾನು ಯಾರು ? ಅವನಿಗೂ ಹಾಗೂ ತನಗೂ ಇರುವ ಸಂಬಂಧವೇನು ?—ಎಂಬುದನ್ನು ತಿಳಿಯುವುದೇ ಆತ್ಮಿಕ ಹಂಬಲ. ಈ ಹಂಬಲದ ತೃಪ್ತಿಯಿಂದ ನಿಜವಾದ ಸುಖ. ಶಾಂತಿ. ನಿಜವಾದ ಸುಖ ಶಾಂತಿಗಳು ಲಭಿಸಬೇಕಾದರೆ ನಮ್ಮ ಇಷ್ಟಗಳ ಅಥವಾ ಬಯಕೆಗಳ ಯುಕ್ತತೆ (Rationalisation) ಅನಿವಾರ್ಯ. ಆತ್ಮನ ಹಸಿವನ್ನು ಹಿಂಗಿಸುವಲ್ಲಿ ದೈಹಿಕ ಬಯಕೆಗಳ ಯುಕ್ತತೆಯ ಅನಿವಾರ್ಯತೆಯನ್ನು ಕುರಿತು ಏಲೇಶ್ವರದ ಕೇತಯ್ಯನು[4] :

> ಭಾಂಡ ಭಾಜನ ಉಪಕರಣ ವಸ್ತ್ರ ಮುಂತಾದ
> ಸಕಲ ದ್ರವ್ಯಂಗಳ ಮನದ ಕಟ್ಟಿಂಗೆ ತಟ್ಟುಮುಟ್ಟನರಿತು
> ಅಹುದಾದುದನೊಪ್ಪಿ, ಅಲ್ಲದುದ ಬಿಟ್ಟು
> ಇದಿರು ಮೆಚ್ಚುವಂತೆ, ಕಪಟ ಅನುಕರಣೆಗೆ ಒಳಗಾಗದೆ
> ಲಿಂಗ ಮೆಚ್ಚುವಂತೆ, ಶರಣರು ಒಪ್ಪುವಂತೆ
> ಮನಕ್ಕೆ ವ್ರತವ ಮಾಡಿ, ತನುವಿಗೆ ಕ್ರೀಯ ಮಾಡಬೇಕು.
> ಇಂದ್ರಿಯಗಳಿಗೆ ಕಟ್ಟನಿಕ್ಕಿ, ಆತ್ಮನ ಸಂದೇಹವ ಬಿಡಿಸಿ
> ಕ್ರೀಯ ಮಾಡಬೇಕು.

ಎಂದು ನುಡಿದಿದ್ದಾನೆ.

ನಾವು ನಮ್ಮ ಬಯಕೆಗಳ 'ವಿಷದ ಸುಳಿ'ಯಲ್ಲಿ ಸಿಲುಕದೆ ಬದುಕಿನ ಪರಮಗುರಿಯಾದ ಶಿವ-ಜೀವ ಸಾಮರಸ್ಯದ ಆನಂದಾನುಭವವನ್ನು ಪಡೆಯಬೇಕಾದರೆ ಬಯಕೆಗಳ ಯುಕ್ತತೆ ಅನಿವಾರ್ಯವೆಂದು ವಚನಕಾರರು ಅಭಿಪ್ರಾಯಪಟ್ಟಿದ್ದಾರೆ. ಗಾಂಧೀಜಿಯವರು ಸಹ ಇದೇ ಅಭಿಪ್ರಾಯವುಳ್ಳವರಾಗಿದ್ದರು. ಇತ್ತೀಚಿತ್ತಲಾಗಿ ಆಧುನಿಕ ವಿಚಾರವಂತರೂ ಮಾನವನ ಬದುಕಿನ ಶಾಂತಿಗೆ ಬಯಕೆಗಳ ಯುಕ್ತತೆ ಅನಿವಾರ್ಯವೆಂದು ಅಭಿಪ್ರಾಯಪಡುತ್ತಲಿದ್ದಾರೆ. ಸಮೃದ್ಧಿಯಿದ್ದರೂ ಶಾಂತಿಯಿಲ್ಲದ ಅಮೆರಿಕೆಯ ಜನರಿಗೆ ವಚನಕಾರರ ವಿಚಾರವೊಂದು ವರದಾನವಾಗಬಲ್ಲುದು ! ಮಾನವನ ಚಟುವಟಿಕೆಗಳೆಲ್ಲಕ್ಕೂ ಅವನ ಬಯಕೆಗಳೇ ಮೂಲಕಾರಣವಾಗಿರುವುದರಿಂದ. ಅವನ ಹಿತ ಅಹಿತವೆಲ್ಲವೂ ಬಯಕೆಗಳನ್ನವಲಂಬಿಸಿರುವುದರಿಂದ ಅವುಗಳ ಯುಕ್ತತೆ ಅನಿವಾರ್ಯವೆಂದು ಹೇಳದೆ ವಿಧಿಯಿಲ್ಲ.

## ೩. ಕಾಯಕ—ಬದುಕಿನ ಬುನಾದಿ

ಸಂಪತ್ತಿನ ಉತ್ಪಾದನೆಯಾಗದೆ ಮಾನವ ಬಯಕೆಗಳ ತೃಪ್ತಿ ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲೊಂದು ಕಾಯಕವನ್ನವಲಂಬಿಸಿ ರಾಷ್ಟ್ರದ ಸಂಪತ್ತಿನ ಉತ್ಪಾದನೆಯಲ್ಲಿ ಭಾಗಿಯಾಗಬೇಕು. ಅಂದಾಗಲೇ ಅವನು

---

[1] ಅಲ್ಲಮನ ವಚನ ಚಂದ್ರಿಕೆ: ವ. ೬೨
[2] ಮಹಾದೇವಿಯಕ್ಕನ ವಚನಗಳು: ಸಂ. ಆರ್. ಸಿ. ಹಿರೇಮಠ, ವ. ೩೨೮
[3] ಅಲ್ಲಮನ ವಚನ ಚಂದ್ರಿಕೆ: ಸಂ. ಎಲ್. ಬಸವರಾಜು, ವ. ೭೬೦
[4] ಸಕಲ ಪುರಾತನರ ವಚನಗಳು—೧. ಸಂ. ಆರ್. ಸಿ. ಹಿರೇಮಠ, ವ. ೧೫೯೭, ೧೬೪೪

ಅನ್ನವನ್ನು ಭೋಗಿಸಲು ಅರ್ಹನಾಗುತ್ತಾನೆ ಎಂಬುದು ವಚನಕಾರರ ನಿಚ್ಚಳ ಅಭಿಪ್ರಾಯ. 'ದುಡಿಯುವವನಿಗೇ ಅನ್ನ' ಎಂಬ ಸಮತಾವಾದಿಗಳ ಅಭಿಪ್ರಾಯವು ವಚನಕಾರರ ಅಭಿಪ್ರಾಯವನ್ನೇ ಹೋಲುತ್ತದೆ.

ನಾವು ನಮ್ಮ ದೈಹಿಕ. ಮಾನಸಿಕ. ಭಾವಿಕ ಬಲವುಗಳಿಗನುಗುಣವಾಗಿ ಉದ್ಯೋಗಗಳನ್ನು ಕೈಕೊಂಡು, ಶಿವಭಾವದಿಂದ ತನುಮನ ಬಳಲಿಸಿ, ಬಂದ ದ್ರವ್ಯದಲ್ಲಿ ಪರಹಿತಾಕಾಂಕ್ಷೆಯಿಂದ ಗುರುಲಿಂಗಜಂಗಮಕ್ಕೆ ಸವೆಸಿ ತತ್ಪ್ರಸಾದವನ್ನು ಸ್ವೀಕರಿಸಿ ಪ್ರಸನ್ನತೆಯಿಂದ ಇದ್ದಾಗ ನಮ್ಮ ಉದ್ಯೋಗಗಳೆಲ್ಲ ಕಾಯಕಗಳಾಗಿ ಪರಿಣಮಿಸುತ್ತವೆ. ಕಾಯಕವನ್ನು ಕುರಿತು ಮೋಳಿಗೆ ಮಾರಯ್ಯ[1], ಬಸವಣ್ಣ[2], ನುಲಿಯಚಂದಯ್ಯ[3], ಆಯ್ದಕ್ಕಿ ಮಾರಯ್ಯ[4] ಮತ್ತು ಚನ್ನಬಸವಣ್ಣ[5] ಇವರು ಆಡಿರುವ ಕೆಳಗಿನ ಮಾತುಗಳು ಕಾಯಕದ ಸ್ವರೂಪ ಮತ್ತು ಮಹತಿಯನ್ನು ತೋರಿಸುತ್ತವೆ:

ಅಸಿಯಾಗಲಿ ಮಸಿಯಾಗಲಿ ಕೃಷಿಯಾಗಲಿ
ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ
ಪಶುಪತಿಗೆಂದೇ ಪ್ರಮಾಣಿಸಿ...

—ಮೋಳಿಗೆ ಮಾರಯ್ಯ

...ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದರೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ
ಎನ್ನೊಡಲವಸರಕ್ಕೆ ಕುದಿದೆನಾದಡೆ ತಲೆದಂಡ!

—ಬಸವಣ್ಣ

ತನು ಕರಗಿ, ಮನ ಬಳಲಿ
ಬಂದ ಚರದ ಅನುವರಿತು
ಸಂದಿಲ್ಲದೆ ಸಂಶಯವಿಲ್ಲದೆ
ಜಂಗಮ ಲಿಂಗಕ್ಕೆ ದಾಸೋಹವ ಮಾಡುವುದೆ ಮಾಟ

—ನುಲಿಯಚಂದಯ್ಯ

ಹೂಗದ ಕಾಯಕವ ಮಾಡಿ ಹಣ ವಡ್ಡವ ತಾ ಎಂಬಲ್ಲಿ
ಸತ್ಯದ ಕಾಯಕವುಂಟೆ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮಳೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ

—ಆಯ್ದಕ್ಕಿಮಾರಯ್ಯ

ಕಾಯಕ್ಲೇಶದಿಂದ ತನುಮನ ಬಳಲಿಸಿ ಧನವ ಗಳಿಸಿ
ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ, ದಾಸೋಹವ ಮಾಡುವ
ಸದ್ಭಕ್ತನ ಪಾದವ ತೋರಯ್ಯಾ, ನಿಮ್ಮ ಧರ್ಮ!
.....................................
ಅಂತಪ್ಪ ಭಕ್ತನ ಕಾಯಕವೇ ಕೈಲಾಸ..."

—ಚನ್ನಬಸವಣ್ಣ

ತಾನು ಕೈಕೊಂಡ ಉದ್ಯೋಗ ಕೇವಲ ಸ್ವಾರ್ಥದಿಂದ ಅಂದರೆ ತನ್ನ ಮತ್ತು ತನ್ನ ಕುಟುಂಬದ ರಕ್ಷಣೆಗೆಂಬ ಸಂಕುಚಿತ ಮನೋಭಾವದಿಂದ ಪ್ರೇರಿತವಾಗಿದ್ದರೆ ಅದು ಆರ್ಥಿಕ ಚಟುವಟಿಕೆಯಾಗುತ್ತದೆ. ಅದಕ್ಕೆ ಪ್ರತಿಯಾಗಿ, ಕೈಕೊಂಡ ಉದ್ಯೋಗ ಪರಹಿತದಿಂದ ಅಂದರೆ ಸಮಾಜವಿಕಾಸ ಹಾಗು ಆತ್ಮವಿಕಾಸಕ್ಕೆ ಎಂಬ ವಿಶಾಲ ಮನೋಭಾವ

---

1 ಸಕಲ ಪುರಾತನರ ವಚನಗಳು ೧ : ಸಂ. ಆರ್. ಸಿ. ಹಿರೇಮಠ, ವ.

2 ಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ, ವ. ೭೦೯

3 ಸಕಲ ಪುರಾತನರ ವಚನಗಳು ೧ : ಸಂ. ಆರ್. ಸಿ. ಹಿರೇಮಠ, ವ. ೧೨೩೬

4 ಅದೇ. ವ. ೧೨೬೪

5 ಚನ್ನಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ, ವ. ೮೪

ದಿಂದ ಪ್ರೇರಿತವಾಗಿದ್ದರೆ—ಅದು ಕಾಯಕವಾಗುತ್ತದೆ. ಆಧ್ಯಾತ್ಮದ ಅಂತರ್ಯವಿರುವ. ಸಂಪತ್ತಿನ ಉತ್ಪಾದನೆಗೆ ಸಹಾಯಕವಾಗುವ ಯಾವುದೇ ದೈಹಿಕ-ಬೌದ್ಧಿಕ ಶ್ರಮವನ್ನು ನಾವು "ಕಾಯಕ"ವೆಂದು ಕರೆಯಬಹುದು. ಕಾಯಕವು ಒಂದು ಧಾರ್ಮಿಕ-ಆರ್ಥಿಕ ಚಟುವಟಿಕೆ. ವಚನಕಾರರ ಮೇಲಿನ ವಚನಭಾಗಗಳಲ್ಲಿ ಉಲ್ಲೇಖಗೊಂಡಿರುವ ಗುರು ಲಿಂಗ, ಜಂಗಮ ಈ ಪದಗಳು ವ್ಯಕ್ತಿಗಳನ್ನು ಮಾತ್ರ ಕುರಿತು ಹೇಳಿದುವಲ್ಲ. ಶಿವಚೈತನ್ಯವನ್ನೊಳಗೊಂಡ ಮಾನವಾದಿ ಪಶುಪಕ್ಷಿಗಳನ್ನು ಗಮನದಲ್ಲಿಟ್ಟುಕೊಂಡು ಬಳಸಿರುವ ಪದಗಳು.

ವಚನಕಾರರ ಅಭಿಪ್ರಾಯದಂತೆ ಕಾಯಕದಲ್ಲಿ ಮೇಲು-ಕೀಳು, ಮಡಿ-ಮೈಲಿಗೆ ಭಾವನೆಗಳನ್ನು ತಾಳಕೂಡದು. ಶಿವಭಾವದಿಂದ ಕೂಡಿದ ಉದ್ಯೋಗವೆಲ್ಲವೂ ಶುಭದಾಯಕವೆ. ಇಂಥ ಕಾಯಕ ಬದುಕಿನ ಬುನಾದಿಯೆಂದು ವಚನ ಕಾರರು ಪರಿಗಣಿಸಿದರು. ಅಷ್ಟೇ ಅಲ್ಲ ಆ ತತ್ವವನ್ನು ಅನುಷ್ಠಾನದಲ್ಲಿ ತಂದರು.

## ೪. ಸ್ವದತ್ತಕಾಯಕ—ನಿರುದ್ಯೋಗನಿವಾರಣೋಪಾಯ

ವ್ಯಕ್ತಿಯು ಕಾಯಕಕ್ಕೆ ಪರರನ್ನು ಅವಲಂಬಿಸಿಯೇ ಇರಬೇಕಾದುದಿಲ್ಲ. ಸ್ವಂತವಾಗಿಯೂ ಕಾಯಕವನ್ನು ಕಲ್ಪಿಸಿಕೊಳ್ಳುವವನಾಗಬೇಕು. ಸ್ವಕಾಯಕವನ್ನು ಕುರಿತು ವಚನಕಾರರು,

> **ಆವ ಸ್ವಕಾಯಕದಿಂದಾದಡೂ ಆಗಲಿ**
> **ಭಾವಶುದ್ಧವಾಗಿ ಮಾಡುವುದು ಜಂಗಮ ಪೂಜೆ**[1] —ಡಕ್ಕೆಯ ಬೊಮ್ಮಣ್ಣ

> **ವ್ರತಸ್ಥನಾಗಿ ಭವಿಗಳ ಕೆಳಗೆ**
> **ಬೊಕ್ಕಸ ಭಂಡಾರ ಅಸಿ ಕೃಷಿ ವಾಣಿಜ್ಯ ಮುಂತಾದ**
> **ಕಾಯಕವ ಬಿಟ್ಟು, ತನ್ನ ಸ್ವಕಾಯಕದಿಂದ**
> **ಬಂದು ಒದಗಿದ ದ್ರವ್ಯವ**[2] —ಏಲೇಶ್ವರದ ಕೇತಯ್ಯ

ಎಂದು ನುಡಿದಿದ್ದಾರೆ. 'ಭವಿಗಳ ಕೆಳಗೆ' ಎನ್ನುವಲ್ಲಿ 'ವಾಮಮಾರ್ಗದಿಂದ ಅರ್ಥಸಂಪಾದನೆ ಮಾಡುವವರಲ್ಲಿ' ಎಂದರ್ಥ. ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವಲ್ಲಿ ಅಸಮರ್ಥವಾದ ಇಂದಿನ ಸರಕಾರಗಳು ಜನರನ್ನು ಸ್ವದತ್ತ ವೃತ್ತಿಯನ್ನು ಹೊಂದಲು ಪ್ರಚೋದಿಸುತ್ತಿವೆ. ಧನಸಹಾಯದಿಂದ ಜನರನ್ನು ಸ್ವಾವಲಂಬಿಯಾಗುವಂತೆ ಮಾಡಲು ಸರಕಾರವು ಉತ್ತೇಜನವೀಯುವ ಇಂದಿನ ಯುಗದಲ್ಲಿ ವಚನಕಾರರ ಸ್ವದತ್ತಕಾಯಕ ವಿಚಾರ ತುಂಬಾ ಆಪ್ಯಾಯಮಾನ.

ವಚನಕಾರರು ಕೈಕೊಂಡ ಕಾಯಕಗಳನ್ನು ಸ್ಥೂಲವಾಗಿ—

೧) ಶಾರೀರಕ ಶ್ರಮದಿಂದ ಕೂಡಿದ ಕಾಯಕಗಳು :
ಉದಾ : ಮಡಿವಾಳಿಕೆ, ತಳವಾರಿಕೆ, ಕೊಟ್ಟಣಿಕೆ ಇತ್ಯಾದಿ.

೨) ಅಲ್ಪ ಬಂಡವಾಳದಿಂದ ಕೂಡಿದ ಕಾಯಕಗಳು :
ಉದಾ : ಕುಂಬಾರಿಕೆ, ನೂಲುವಿಕೆ, ನೇಯ್ಗೆ, ಸಮ್ಮಗಾರಿಕೆ ಇತ್ಯಾದಿ.

೩) ಅಲ್ಪಬಂಡವಾಳ ಮತ್ತು ಇತರರ ಶ್ರಮದಿಂದ ಕೂಡಿದ ಕಾಯಕಗಳು :
ಉದಾ : ಗಾಜಲಗಾರಿಕೆ, ಅಂಬಿಗತನ, ಒಕ್ಕಲತನ ಇತ್ಯಾದಿ.

೪) ಹೆಚ್ಚಿನ ಬಂಡವಾಳದಿಂದ ಕೂಡಿದ ಕಾಯಕಗಳು :
ಉದಾ : ಮುತ್ತು, ರತ್ನ, ಬಂಗಾರ ಇತ್ಯಾದಿಗಳ ವ್ಯಾಪಾರ.

ಎಂದು ವಿಂಗಡಿಸಬಹುದು. ವಚನಕಾರರ ಕಾಯಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಶ್ರಮಬಾಹುಳ್ಯದ ಉದ್ಯಮ ಗಳಿಗೆ ಹೆಚ್ಚಿನ ಲಕ್ಷ್ಯಕೊಟ್ಟಿರುವುದನ್ನು ಕಾಣಬಹುದು. ಗಾಜಲ ಬೊಮ್ಮಯ್ಯ ಮೊದಲಾದ ಶರಣರು ಕಚ್ಚಾವಸ್ತು ದೊರೆಯುವ ಸ್ಥಳಗಳಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸಿ ಅವುಗಳಲ್ಲಿ ಜನರಿಗೆ ಕೈಗಾರಿಕೆಯ ಶಿಕ್ಷಣವನ್ನು ಕೊಟ್ಟು ದೇಶದ ಸಂಪದಭ್ಯುದಯಕ್ಕೆಕಾರಣೀಭೂತರಾದರು. ಶ್ರಮಬಾಹುಳ್ಯದ ಉದ್ಯಮಗಳಾದ ಗುಡಿಕೈಗಾರಿಕೆಗಳಿಗೆ ಮಹತ್ತ್ವ ವನ್ನು ಕೊಟ್ಟ ವಚನಕಾರರ ವಿಚಾರ. ಜನಸಂಖ್ಯಾಧಿಕ್ಯದಿಂದ ನಿರುದ್ಯೋಗ ಸಮಸ್ಯೆಯನ್ನು ಎದುರಿಸುವ ಭಾರತ

[1] ಸಕಲ ಪುರಾತನರ ವಚನಗಳು ೧ : ಸಂ. ಆರ್. ಸಿ. ಹಿರೇಮಠ, ವ. ೮೪೫

[2] ಅದೇ. ವ. ೧೬೩೨

ದಂಥ ರಾಷ್ಟ್ರಗಳಿಗೆ ಸ್ವಾಗತಾರ್ಹ. ಗಾಂಧೀಜಿಯವರೂ ಕೂಡ. ವಚನಕಾರರಂತೆ ಗುಡಿಕೈಗಾರಿಕೆ ಹಾಗು ಹಳ್ಳಿಯ ಉದ್ಯಮಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಇಂದಿನ ಶತಮಾನದ ಶ್ಯೂಮೇಕರ್ ಎಂಬುವನು ತನ್ನ "ಚಿಕ್ಕದು ಸುಂದರ" (Small is Beautiful) ಎಂಬ ಗ್ರಂಥದಲ್ಲಿ ಮಂಡಿಸಿದ ಆರ್ಥಿಕ ವಿಚಾರಗಳು ವಚನಕಾರರ ವಿಚಾರಗಳನ್ನೇ ಪುಷ್ಟೀಕರಿಸುತ್ತಿವೆ.

## ೫. ಆರ್ಥಿಕ ಸಮಾನತೆ

ಆರ್ಥಿಕ ಸಮಾನತೆ ಎಂಬುದು ಸಮಾಜವಾದದ ಲಕ್ಷಣಗಳಲ್ಲೊಂದಾಗಿದೆ. ಆರ್ಥಿಕ ಸಮಾನತೆ ಎಂದರೆ ದೇಶದಲ್ಲಿ ಪ್ರತಿಯೊಬ್ಬರ ಆದಾಯವೂ ಸಮವಿದ್ದು ಒಂದೇ ವಿಧವಾದ ಜೀವನಮಟ್ಟ ಹೊಂದಿರುವುದು ಎಂದಲ್ಲ. ನೂರಕ್ಕೆ ನೂರರಷ್ಟು ಆರ್ಥಿಕ ಸಮಾನತೆ ಎಂಬುದು ಮಿಥ್ಯಾಕಲ್ಪನೆ. ದೇಶದಲ್ಲಿ ಅವರವರ ಯೋಗ್ಯತಾನುಸಾರ ದುಡಿಯಲು ಜನರಿಗೆ ಸಮಾನ ಅವಕಾಶಗಳಿದ್ದು. ಅವರ ಕನಿಷ್ಠ ಹಾಗು ಗರಿಷ್ಠ ಆದಾಯಗಳಲ್ಲಿ ಗಣನೀಯ ಅಂತರವಿರದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದ ಅಗತ್ಯಗಳನ್ನು ಪೂರೈಸುವ ಶಕ್ತಿಯನ್ನು ಹೊಂದಿದ್ದರೆ ಆಗ ದೇಶದಲ್ಲಿ ಆರ್ಥಿಕ ಸಮಾನತೆ ಎಂಬ ಪದಕ್ಕೆ ಬೆಲೆ ಬರುತ್ತದೆ. ನೇರವಾಗಿ ಈ ವಿಷಯ ಕುರಿತು ವಚನಕಾರರು ವಿವೇಚಿಸದಿದ್ದರೂ ಅವರ ವಚನಗಳನ್ನು ಕೂಲಂಕಷವಾಗಿ ಅಭ್ಯಾಸಮಾಡಿದವರಿಗೆ ಈ ವಿಷಯ ಕುರಿತು ಪರೋಕ್ಷವಾಗಿ ವಚನಕಾರರು ಪ್ರತಿಪಾದಿಸಿರುವುದು ಮನವರಿಕೆಯಾಗದಿರದು. ಆರ್ಥಿಕ ಸಮಾನತೆಯನ್ನು ಸಾಧಿಸಲೋಸುಗ ವಚನಕಾರರು ವ್ಯಕ್ತಪಡಿಸಿದ ವಿಚಾರಗಳನ್ನು ಕೆಳಗಿನಂತೆ ಕ್ರೋಢೀಕರಿಸಬಹುದು :

೧. ಪ್ರತಿಯೊಬ್ಬನಿಗೂ (ದುಡಿಯಲು ಸಮರ್ಥನಿರುವ) ಕಾಯಕದ ಅವಕಾಶ.
೨. ಅರ್ಥಸಂಪಾದನೆಯಲ್ಲಿ ವಾಮಮಾರ್ಗ ಸಲ್ಲದು.
೩. ಸಂಪತ್ತಿನ ನ್ಯಾಯಸಮ್ಮತ ವಿತರಣೆ.
೪. ಸಂಪತ್ತಿನ ವೈಯಕ್ತಿಕ ಸಂಗ್ರಹಣೆ ಸಲ್ಲದು.
೫. ದಾನ—ಉಳ್ಳವರು ಇಲ್ಲದವರಿಗೆ ಕೊಡುವುದು.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕಾಯಕದಿಂದಲೇ ಬದುಕಬೇಕೆಂಬುದು ವಚನಕಾರರ ವಿಚಾರ. ದುಡಿಯದವನಿಗೆ ಬದುಕಲು ಹಕ್ಕಿಲ್ಲ. ಕಾಯಕ ದೊರೆಯದಿದ್ದಲ್ಲಿ ಅದನ್ನು ಕಲ್ಪಿಸಿಕೊಳ್ಳಬೇಕು. ಇದರಿಂದ ಸ್ವಾವಲಂಬನೆ ಬೆಳೆಯುವುದಲ್ಲದೆ ಪರಾವಲಂಬನೆಯು ದೂರವಾಗುತ್ತದೆ. ಸ್ವಸಾಮರ್ಥ್ಯದಿಂದಲೇ ಬದುಕುತ್ತಿದ್ದೇನೆಂಬ ಸ್ವಾಭಿಮಾನವು ಬೆಳೆಯುತ್ತದೆ—ಕಾಯಕಶೀಲನಲ್ಲಿ.

ವ್ಯಕ್ತಿಯ ಕಾಯಕವು ಸತ್ಯವೂ ಶುದ್ಧವೂ ಆಗಿರಬೇಕು. ಹುಸಿ. ಮೋಸ. ಕಳವು. ವಂಚನೆ ಮುಂತಾದ ಯಾವ ವಾಮಮಾರ್ಗಕ್ಕೂ ಸ್ಥಾನವಿಲ್ಲ ಅರ್ಥಸಂಪಾದನೆಯಲ್ಲಿ. ನಮ್ಮ ಗಳಿಕೆ ಪ್ರಾಮಾಣಿಕವಾಗಿರಬೇಕು. ಇದನ್ನು ಕುರಿತು ವಚನಕಾರರು:

> ಕಾರೆಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ[1]
>
> —ನುಲಿಯ ಚಂದಯ್ಯ

> ಪಶುಪತಿಯ ಭಕ್ತನಾಗಿದ್ದು ಹುಸಿದು, ಸರ್ವರ ವಂಚಿಸಿ
> ಪಿಸುಣತನದಿಂದ ಕಾಡಿಬೇಡಿ ತಂದವನ ಮನೆಯನ್ನ
> ಕಿಸುಕುಳಕೆ ಸರಿ[2]
>
> —ಕೋಲಶಾಂತಯ್ಯ

> ತನು ಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ,
> ಗುರು ಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವಮಾಡಿ
> ಭಕ್ತನಾದೆನೆಂಬವನ ತೋರದಿರಯ್ಯಾ !
> ಅದೇಕೆಂದಡೆ :
> ಅವ ಪರಧನ ಚೋರಕ, ಅವ ಪಾಪಿ, ಕೋಪಿ, ಪರಿಭ್ರಷ್ಟ ![3]
>
> —ಚನ್ನಬಸವಣ್ಣ

---

1 ಸಕಲ ಪುರಾತನರ ವಚನಗಳು ೧ : ಸಂ. ಆರ್. ಸಿ. ಹಿರೇಮಠ, ವ. ೧೨೩೩

2 ಅದೇ. ವ. ೭೨

3 ಚನ್ನಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ, ವ. ೬೭

ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ
ಕೈಮುಟ್ಟಿ ಎತ್ತಿದೆನಾದಡೆ, ಅಯ್ಯಾ, ನಿಮ್ಮಾಣೆ[1]

—ಸತ್ಯಕ್ಕ

ಎಂದು ನುಡಿದಿದ್ದಾರೆ. ಹೀಗೆ ಋಜುಮಾರ್ಗದಿಂದ ಎಲ್ಲರೂ ಅರ್ಥಸಂಪಾದನೆ ಮಾಡಲು ಪ್ರಾರಂಭಿಸಿದರೆ ಆರ್ಥಿಕ ಸಮಾನತೆಯು ಕಡೆಗೆ ಎಷ್ಟೋ ದೂರ ಸಾಗಿದಂತಾಗುತ್ತದೆ.

ನಮ್ಮ ಸತ್‌ಕಾಯಕಗಳಿಂದ ಬಂದ ದ್ರವ್ಯದಲ್ಲಿ ಜಂಗಮ ದಾಸೋಹವನ್ನು ಕೈಕೊಂಡು ತತ್‌ಪ್ರಸಾದವನ್ನು ಸ್ವೀಕರಿಸಬೇಕೆಂಬುದು ವಚನಕಾರರ ವಿಚಾರ. ಗುರುಲಿಂಗಜಂಗಮರಿಗೆ ಅರ್ಪಿಸುವುದು ಎಂದರೆ ಧರ್ಮದ ಉಳಿವಿಗೆ ಹಾಗು ಸಮಾಜದ ಅಭಿವೃದ್ಧಿಗೆ ಅರ್ಪಿಸುವುದು ಎಂದರ್ಥ. ಜಂಗಮದಾಸೋಹದಲ್ಲಿ "ಎಲ್ಲರು ಎಲ್ಲರಿಗಾಗಿ" ಎನ್ನುವ ವಿಶಾಲ ಮನೋಭಾವವಡಗಿದೆ. ಜಂಗಮಸಂಸ್ಥೆಯ ಮಾಧ್ಯಮದಿಂದ ಸಮಾಜದಲ್ಲಿ ಸಂಪತ್ತಿನ ನ್ಯಾಯ ಸಮ್ಮತ ವಿತರಣೆಯಾಗುತ್ತದೆ.

ಸಂಪತ್ತಿನ ನ್ಯಾಯಸಮ್ಮತ ವಿತರಣೆಗೆ ಪೂರಕವೆಂಬಂತೆ ವಚನಕಾರರು ಸಂಪತ್ತಿನ ವೈಯಕ್ತಿಕ ಸಂಗ್ರಹಣೆ ಸಲ್ಲದೆಂದು ಹೇಳುತ್ತಾರೆ. ವೈಯಕ್ತಿಕ ದ್ರವ್ಯಸಂಗ್ರಹಣೆ ಕುರಿತು ವಚನಕಾರರು.

ಇಂದಿಂಗೆಂಬುದು ಲಿಂಗದೊಲವು ಶಿವಭಕ್ತಂಗೆ
ನಾಳಿಗೆಂಬುದು ಬದ್ಧ ಭವಿತನ[2]

—ಸಿದ್ಧರಾಮೇಶ್ವರ

ಅಂದಂದಿಗೆ ಬಾರದ ಧನವನಂದೆ ವೆಚ್ಚವ ಮಾಡಿ[3]

—ಅಲ್ಲಮಪ್ರಭು

ಇಂದಿಗೆ ನಾಳಿಗೆ ಎಂಬ ಸಂದೇಹವಮಂ ಬಿಟ್ಟು
ಮುಂದಣ ಕಾಯಕ ಅಂದಂದಿಗೆ ಉಂಟು ಎಂಬುದನರಿತು,
ಬಂದುದ ಕೂಡಿಕೊಂಡು, ಲಿಂಗಾರ್ಚನೆಯ ಮಾಡಿ ಸದಾನಂದದಲ್ಲಿಪ್ಪ[4]

—ಅಕ್ಕಮ್ಮ

ಎಂದು ನುಡಿದಿದ್ದಾರೆ. 'ವೈಯಕ್ತಿಕ ಸಂಪತ್ತಿನ ಸಂಗ್ರಹಣೆ ಹಾನಿಕಾರಕ : ಅದರ ಸಾಮೂಹಿಕ ಸಂಗ್ರಹಣೆ ಶುಭ ದಾಯಕ' ಎಂಬುದು ವಚನಕಾರರ ನಿಲವು.

ನಮ್ಮ ಅಗತ್ಯವನ್ನು ಮೀರಿದ ಧನವನ್ನು ಸಮಾಜದ ಅಭ್ಯುದಯಕ್ಕಾಗಿ. ಧರ್ಮದ ಉಳಿವಿಗೆ ಬೆಳವಿಗೆಗೆ ಕೊಡಬೇಕು. ಸಂಪತ್ತಿನ ಸಾಮೂಹಿಕ ಸಂಗ್ರಹಣೆಯಿಂದ ಸಮಾಜದ ಸರ್ವಾಂಗೀಣ ವಿಕಾಸ ಸಾಧ್ಯ. ಇಂದು ಸಮಾಜವಾದಿಗಳು. ಸಮತಾವಾದಿಗಳು ಏನನ್ನು ಹೇಳಲು ಬಯಸುತ್ತಿದ್ದಾರೆಯೋ ಅವನ್ನು ವಚನಕಾರರು ಬಹು ಬಹು ಹಿಂದೆಯೇ ಪ್ರತಿಪಾದಿಸಿದ್ದಾರೆ ಹಾಗು ಪರಿಪಾಲಿಸಿದರು.

ಆರ್ಥಿಕ ವಿಷಮತೆಯನ್ನು ಹೋಗಲಾಡಿಸಿ. ಆರ್ಥಿಕ ಸಮತೆಯನ್ನು ಸಮಾಜದಲ್ಲಿ ಸ್ಥಾಪಿಸಲು ಮಾಡುವ ಪ್ರಯತ್ನಗಳಲ್ಲಿ 'ದಾನ'ವೂ ಒಂದು. ಉಳ್ಳವರು ಇಲ್ಲದವರಿಗೆ ಕೊಡಬೇಕು. ಇದನ್ನು ಕುರಿತು ಬಸವಣ್ಣನು[5]

ಬೇಡುವವರ ನೋಡಿ ನೋಡಿ ಈಯಲಿಲ್ಲದ ಜೀವನವದೇಕೆ
ಬೇಡಿದವರಿಗಿಲ್ಲೆನ್ನದಿರು, ಕಂಡಾ

ಎಂದು ನುಡಿದಿದ್ದಾನೆ. ದಾನಕೊಡುವಲ್ಲಿ 'ಅಹಮಿಕೆ' ಇರಕೂಡದು. 'ಶಿವನ ಸೊಮ್ಮು ಶಿವನಿಗೆ ಸಲ್ಲಿತ್ತು' ಎನ್ನುವ ಕಿಂಕಿಲಭಾವ ತುಂಬಿರಬೇಕು. ದಾನ ಮಾಡುವಾಗಲೂ ಸತ್ಪಾತ್ರವರಿತು ಮಾಡಬೇಕೆನ್ನುತ್ತಾರೆ ವಚನಕಾರರು.

---

1 ಶಿವಶರಣೆಯರ ವಚನಗಳು ಸಮಗ್ರ ಸಂಪುಟ : ಸಂ. ಆರ್. ಸಿ. ಹಿರೇಮಠ, ಪು. ೩೫೬. ವ. ೧೩೭
2 ಸಿದ್ಧರಾಮೇಶ್ವರರ ವಚನಗಳು : ಸಂ. ಆರ್. ಸಿ. ಹಿರೇಮಠ, ವ. ೩೧೫
3 ಅಲ್ಲಮನ ವಚನ ಚಂದ್ರಿಕೆ : ಸಂ. ಎಲ್. ಬಸವರಾಜು, ವ. ೭೯೯
4 ಶಿವಶರಣೆಯರ ವಚನಗಳು ಸಮಗ್ರ ಸಂಪುಟ : ಸಂ. ಆರ್. ಸಿ. ಹಿರೇಮಠ, ಪು. ೪೭೮, ವ. ೪೧
5 ಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ, ವ. ೪೩೮, ೨೭೮

# ಶರಣಸಾಹಿತ್ಯ ಹಾಗೂ ದಾಸಸಾಹಿತ್ಯ

**ಪ್ರೊ. ಚಂದ್ರಶೇಖರ ಪಾಟೀಲ**

ಸಾಹಿತ್ಯಕ್ಕೂ ಜೀವನಕ್ಕೂ ಹತ್ತಿರದ ಸಂಬಂಧವಿರಬೇಕು : ಸಾಹಿತಿಯಾದವನಿಗೆ ಕಮಿಟ್‌ಮೆಂಟ್ ಎಂಬುದು ಇರದಿದ್ದರೆ ಅವನು ಬರೆದದ್ದಕ್ಕೆ ಹೆಚ್ಚಿನ ಅರ್ಥಪೂರ್ಣತೆ ಒದಗಲಾರದು :– ಮುಂತಾದ ಮಾತುಗಳು ಇತ್ತೀಚೆಗೆ ಹೆಚ್ಚೆಚ್ಚು ಕೇಳಿಬರುತ್ತಿವೆ. ಇಂಡಿಯಾ ದೇಶದ ಇತಿಹಾಸ ನೋಡಿದಾಗ ಬದುಕಿಗೂ ಸಾಹಿತ್ಯ-ಕಲೆಗಳಿಗೂ ಇದ್ದ ಸಂಬಂಧ ದೂರ ದೂರದ್ದೇ ಎಂಬುದು ಗೊತ್ತಾಗುತ್ತದೆ. ಈ ಮಾತಿಗೆ ಅಪವಾದವೆಂಬಂತೆ ಕರ್ನಾಟಕದಲ್ಲಿ ೧೨ನೆಯ ಶತಮಾನದ ಹಾಗೂ ಅನಂತರದ ಒಂದೆರಡು ಶತಮಾನಗಳ ಅವಧಿಯಲ್ಲಿ ಸಾಹಿತ್ಯಿಕ ಘಟನೆಗಳು ನಡೆದವು. ಶರಣಸಾಹಿತ್ಯ ಹಾಗೂ ದಾಸಸಾಹಿತ್ಯ ಈ ದೃಷ್ಟಿಯಿಂದ ಮಹತ್ವಪೂರ್ಣ.

ಇವೆರಡೂ ಭಕ್ತಿಪಂಥದ ಚಳುವಳಿಗಳೆಂದು ಹೇಳುತ್ತಾರೆ. ಆದರೆ ತಮ್ಮ ಯಾವುದೋ ಉದ್ದೇಶವನ್ನು ಈಡೇರಿಸಿಕೊಳ್ಳಲು ಹಲವು ಸಾಹಿತ್ಯವಿಮರ್ಶಕರು ಈ ಎರಡೂ ಪಂಥಗಳಲ್ಲಿ ಸಂಪೂರ್ಣ ಸಾಮ್ಯವನ್ನು ಕಾಣುತ್ತಾರೆ ; ಎರಡೂ ಒಂದೇ ಗಿಡದ ಎರಡು ಟೊಂಗೆಗಳಿದ್ದಂತೆ : ಎಂಬ ರೀತಿಯಲ್ಲಿ ವಾದಿಸುತ್ತಾರೆ. 'ದಾಸ' ಹಾಗೂ 'ಶರಣ' ಶಬ್ದಗಳ ನಡುವೆ ಶಾಬ್ದಿಕ ಬೀಗತನ ಮಾಡಲು ಪ್ರಯತ್ನಿಸುತ್ತಾರೆ.

ಆರೇಳು ಶತಮಾನಗಳ ಅಂತರದಲ್ಲಿ ನಿಂತು ಎರಡು ಪಂಥಗಳ ಮೌಲ್ಯನಿರ್ಣಯ ಮಾಡುವಾಗ ಹೀಗೆ ಸೋಗಿನ ಸಮಾನದೃಷ್ಟಿಯನ್ನು ತಾಳಿ 'ಅದೂ ಅಷ್ಟೆ; ಇದೂ ಅಷ್ಟೆ'; ಎಂಬ ಸಮನ್ವಯವನ್ನು ಸಾಧಿಸುವುದಕ್ಕಿಂತ, ಎರಡನ್ನೂ ವಸ್ತುನಿಷ್ಠವಾಗಿ ಪರಿಶೀಲಿಸಿ ನಿರ್ಣಯ ಕೊಡುವುದು ಇತಿಹಾಸಕಾರರಿಗೆ ಅವಶ್ಯವಿರುವಂತೆಯೇ ಸಾಹಿತ್ಯವಿಮರ್ಶಕರಿಗೂ ಅವಶ್ಯವಿದೆ.

ಸಮಕಾಲೀನ ಸಾಮಾಜಿಕ ಒತ್ತಡಗಳು. ಜೀವನವನ್ನು ಅನುಭವಿಸುವ ಹಾಗೂ ನೋಡುವ ಮನೋಧರ್ಮ, ವ್ಯಕ್ತಿ-ದೇವರು-ಧರ್ಮಗಳ ಬಗ್ಗೆ ತಾಳಿದ ದೃಷ್ಟಿಕೋನ. ಅಭಿವ್ಯಕ್ತಿಯ ರೀತಿ– ಈ ಎಲ್ಲ ನಿಟ್ಟಿನಿಂದಲೂ ಶರಣಸಾಹಿತ್ಯ ಹಾಗೂ ದಾಸಸಾಹಿತ್ಯಗಳ ನಡುವೆ ಅಗಾಧ ಅಂತರಗಳಿವೆ ; ಪರಸ್ಪರ ಎದುರುದಿಕ್ಕಿನಲ್ಲಿ ಹರಿಯುವ ಎರಡು ವಿಚಾರ ಪ್ರಣಾಲಿಗಳೇನೋ ಎನ್ನುವಷ್ಟು ವೈಷಮ್ಯ ಈ ಎರಡು ಪಂಥಗಳ ನಡುವೆ ಇದೆ.

ಹನ್ನೆರಡನೆಯ ಶತಮಾನದಲ್ಲಿ ಭಾರತೀಯ ಜನಜೀವನದಲ್ಲಿ ಸಂಭವಿಸಿದ ರಾಜಕೀಯ, ಧಾರ್ಮಿಕ. ಸಾಮಾಜಿಕ ಕೋಲಾಹಲದ ಘಟನೆಗಳನ್ನು ಪ್ರತ್ಯಕ್ಷ ಎದುರಿಸಿದಾಗ ಕರ್ನಾಟಕದಲ್ಲಿ ಬಸವೇಶ್ವರರ ಹಿರಿತನದಲ್ಲಿ ವೀರಶೈವಧರ್ಮ ಮೈದಾಳಿತು. ವೈದಿಕಧರ್ಮ ಹಾಗೂ ಇಸ್ಲಾಂಧರ್ಮ ಇವೆರಡೂ ಒಡ್ಡಿದ ಆಹ್ವಾನವನ್ನು ಸ್ವೀಕರಿಸಿ. ಸಮಾನತೆಯ ಅಡಿಪಾಯದ ಮೇಲೆ ಕಟ್ಟಲ್ಪಟ್ಟ ವೀರಶೈವಧರ್ಮದ ಪ್ರತ್ಯಕ್ಷ ಆಂದೋಲನದಲ್ಲಿ ಭಾಗವಹಿಸಿದವರು ಶಿವಶರಣರು. ಅವರ ಈ ಹೋರಾಟದ 'ಒಂದು' ಮುಖವಾಗಿ ಮೂಡಿದ್ದು ಅವರ ವಚನಗಳು. ವಚನಸಾಹಿತ್ಯದ ಹಿಂದಿರುವ ಈ ಐತಿಹಾಸಿಕ ಅನಿವಾರ್ಯತೆ ದಾಸಸಾಹಿತ್ಯಕ್ಕೆ ಇದೆ ಎಂದು ನನಗನ್ನಿಸುವುದಿಲ್ಲ. ಬೇರೆಬೇರೆ ದಾಸರ ವೈಯಕ್ತಿಕ ಜೀವನದಲ್ಲಿ ಆಧ್ಯಾತ್ಮಿಕಕಾರಣಗಳಿಂದಾಗಿ ಕ್ರಾಂತಿಗಳಾಗಿರಬಹುದು. ಇಂಥ 'ಕ್ರಾಂತಿ'ಗಳಿಂದಾಗಿ ಅವರು ವೈರಾಗ್ಯದ ಹಾದಿ ಹಿಡಿದು ಬದುಕಿಗೆ 'ಹೊರಗಿನವರಾಗಿ' ಉಳಿದರೇ ಹೊರತು. ಶಿವಶರಣರಂತೆ ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಉಳಿಯಲಿಲ್ಲ.

ಇದರ ಪರಿಣಾಮವನ್ನು ಅವರು ಜೀವನವನ್ನು ನೋಡುವ ದೃಷ್ಟಿಯಲ್ಲೂ ಕಾಣಬಹುದು. ಶರಣರಿಗೆ ಬದುಕೆಂಬುದು ತಮ್ಮ ವ್ಯಕ್ತಿತ್ವವನ್ನು ಮೀರಿನಿಂತ ಅಮೂರ್ತಕಲ್ಪನೆಯಾಗಿರಲಿಲ್ಲ. ಸಮಷ್ಟಿಬದುಕಿನ ಕೇಂದ್ರವೇ ತಾವಾಗಿದ್ದರು. ಅವರ ಸಾಮಾಜಿಕವಿಮರ್ಶೆ ಒಂದು ರೀತಿಯಿಂದ ಸ್ವ-ವಿಮರ್ಶೆಯೇ ಆಗಿದ್ದಿತು. ಸ್ವಾನುಭಾವದಿಂದ ಹುಟ್ಟಿದ ಅವರ ಸಾಹಿತ್ಯಕ್ಕಿರುವ ಈ ಎರಡು ಆಯಾಮಗಳು ದಾಸಸಾಹಿತ್ಯಕ್ಕೆ ಇಲ್ಲ. ಏಕೆಂದರೆ ದಾಸಸಾಹಿತ್ಯ

'ಅನುಭವ'ದಿಂದ ನೇರವಾಗಿ ಉದ್ಭವಿಸದೇ, ಕೇವಲ ಮೇಲುಮೇಲಿನ 'ನಿರೀಕ್ಷಣೆ'ಯಿಂದ ಹುಟ್ಟಿದಂಥವು. ಅವರು ಒಪ್ಪಿಕೊಂಡ ಜೀವನಕ್ರಮವೂ ಅದಕ್ಕೆ ಕಾರಣವಾಗಿರಬೇಕು. ಹೀಗಾಗಿ ದಾಸಸಾಹಿತ್ಯದಲ್ಲಿ ಕಂಡುಬರುವ ಸಾಮಾಜಿಕ ವಿಡಂಬನೆ ತೀರ ಮೇಲುಮೇಲಿನದು ; ಹಾಸ್ಯದೃಷ್ಟಿಯುಳ್ಳ ಯಾವನಾದರೂ ಮಾಡುವಂತಹದು. ಶರಣಸಾಹಿತ್ಯದಲ್ಲಿಯ ವಿಡಂಬನೆ ತನ್ನನ್ನು ಮೊದಲು ಮಾಡಿಕೊಂಡು ಬದುಕಿನ ಎಲ್ಲ ಸ್ತರಗಳನ್ನೂ ಕೂರಲಗಿನಂತೆ ಕೊರೆಯುವಂತಹುದು. ಈ ಮೂಲಭೂತವೈಷಮ್ಯವನ್ನು ನಾವು ಅರಿತುಕೊಳ್ಳಲೇಬೇಕು.

ದೇವರ ಬಗ್ಗೆ ಇದ್ದ ಮೂಲ ಕಲ್ಪನೆಯನ್ನೇ ಬದಲಿಸಿದ ಶಿವಶರಣರು ಗುಡಿಯಲ್ಲಿದ್ದ ಕಲ್ಲು ಲಿಂಗವನ್ನು ಕಿತ್ತೊಗೆದು ಭಕ್ತನ ಹೃದಯದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿದರು. ಸ್ವರ್ಗ-ನರಕಗಳ ಕಲ್ಪನೆಗೆ ಕೊಡಲಿ ಹಾಕಿದರು. ಶರಣ ಸತಿ, ಲಿಂಗ ಪತಿ ಎಂದು ಸಾರಿ ದೇವರು ಹಾಗೂ ಭವಿಗಳ ನಡುವೆ 'ಸಖ್ಯ'ವನ್ನು ಸ್ಥಾಪಿಸಿದರು. "ಶರಣ" ಎಂಬ ಶಬ್ದದಲ್ಲಿ "ದಾಸ" ಎಂಬ ಭಾವವಿಲ್ಲ. ಮನುಷ್ಯ-ಮನುಷ್ಯರ ನಡುವೆ ಸಾಧಿಸಿದಂತೆ ಮನುಷ್ಯ-ದೇವರ ನಡುವೆಯೂ "ಗೆಳೆತನ" ಸಾಧಿಸಿದ ಶಿವಶರಣರೆಲ್ಲಿ ? ನರ ಬೇರೆ, ನಾರಾಯಣ ಬೇರೆ; ನಿನ್ನದೆಂಬುದೆಲ್ಲವನ್ನೂ ತೊರೆದು ನಾರಾಯಣನಿಗೆ ದಾಸನಾಗು ; ಎಂದು ಬೋಧಿಸುವ ದಾಸರೆಲ್ಲಿ ? ಇಹವನ್ನು, ದೇಹವನ್ನು, ಸ್ವಂತಿಕೆಯನ್ನು ಇಟ್ಟುಕೊಂಡು ತನ್ನಲ್ಲಿಯೇ ದೇವರನ್ನು ಕಾಣುವುದು ಶರಣಪಂಥ ; ಕಣ್ಣಿಗೆ ಕಾಣದ ಅಮೂರ್ತ-ಆರಾಧ್ಯ-ದೈವದಲ್ಲಿ ಲೀನನಾಗಲು ಹೇಳುವುದು ದಾಸಪಂಥ.

ಇನ್ನು ತಾವು ಕಂಡದ್ದನ್ನು, ಅನುಭವಿಸಿದ್ದನ್ನು ಮಾತಿನ ಮೂಲಕ ವ್ಯಕ್ತಪಡಿಸುವ ರೀತಿಯಲ್ಲಿ ಸ್ವಲ್ಪ ಸಾಮ್ಯವನ್ನು ನಾವು ಕಾಣಬಹುದು. ದಾಸರು ಛಂದೋಬದ್ಧವಾದ ಲಯಬದ್ಧವಾದ, ಹಾಡುಗಳನ್ನು ರಚಿಸಿ ಸಂಗೀತದ ನೆರವಿನೊಂದಿಗೆ ಅವುಗಳನ್ನು ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾದರು. (ಒಮ್ಮೊಮ್ಮೆ ಸಂಗೀತದ ನಾದಮಯತೆಯ ಸಂಭ್ರಮದಲ್ಲಿ ಮೂಲದ ಅರ್ಥ ಮಾಯವಾಗುವುದೂ ಇದೆ!) ವಚನಕಾರರು ಮಾತ್ರ ನೇರವಾಗಿ ಆಡುಮಾತಿಗೇ ಧುಮುಕಿದರು. ಎದುರಿಗೆ ಕೂಡಿಸಿಕೊಂಡು ತಿಳಿಹೇಳುವವರಂತೆ ಕೈಗೆಟಕುವ ಉದಾಹರಣೆಗಳ ಮೂಲಕ ಹೇಳಬೇಕಾದುದನ್ನು ಹೇಳಿದರು. ಸಂಗೀತದ ಸಹಾಯವಿಲ್ಲದೆಯೇ, ನೆಲದ ಮರೆಯ ನಿದಾನದಂತಿರುವ ಭಾಷೆಯ ಅಂತರ್ಲಯವನ್ನು ಸೂಕ್ಷ್ಮವಾಗಿ ಬಳಸಿಕೊಂಡರು.

ಹೀಗೆ ಸಹಜವಾಗಿ, ಸರಳವಾಗಿ ಹೇಳಿದ ಮಾತುಗಳೂ ಶ್ರೇಷ್ಠಸಾಹಿತ್ಯವಾಗಿರುವುದಕ್ಕೆ ಕಾರಣ ; ವಚನಗಳಲ್ಲಿರುವ ಅನೇಕ ಅರ್ಥಗಳ ಹಾಗೂ ಧ್ವನಿಗಳ ಪದರುಗಳು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ದೇವರದಾಸಿಮಯ್ಯ ಮುಂತಾದ ಶರಣರ ವಚನಗಳ ಅಂತರಾರ್ಥಗಳನ್ನು ಕೆದಕುವ ಪ್ರಯತ್ನ ಇಂದಿಗೂ ಮುಗಿದಿಲ್ಲ. ಇಂಥ ಸಾರ್ವಕಾಲಿಕ-ಸಾಹಿತ್ಯಿಕ-ಗುಣಗಳ ವಚನಗಳ ಹಿರಿಮೆಯ ಮುಂದೆ ದಾಸರ ಪದಗಳು ಸ್ವಲ್ಪ ಸಪ್ಪೆಯಾಗಿ ಕಾಣುತ್ತವೆ. ಒಂದು ಪದವನ್ನು ಒಮ್ಮೆ ಅರ್ಥಮಾಡಿಕೊಂಡರೆ ಮುಗಿಯಿತು ; ಅದರ ಆಯುಷ್ಯವೇ ಮುಗಿದಂತೆ. ಒಮ್ಮೊಮ್ಮೆ ಶಬ್ದಗಳ ದ್ವಂದ್ವಗಳ ಮೂಲಕ (ಉದಾ : 'ರಾಗಿ' ಪದ) ಅರ್ಥವೈಶಾಲ್ಯ ತರಬಹುದಾದರೂ, ಈ ಶಬ್ದಗಳನ್ನು ಮೀರಿದ ಶ್ರೀಮಂತಿಕೆ ದಾಸರ ಪದಗಳಲ್ಲಿ ಕಾಣುವುದು ತೀರ ಕ್ವಚಿತ್ ಎಂದೇ ಹೇಳಬೇಕು. ಹೀಗೆ ಅನುಭವ ಹಾಗೂ ಅಭಿವ್ಯಕ್ತಿಕ್ರಮದಿಂದಾಗಿ ಅನಿವಾರ್ಯವಾದ ಏಕತಾನತೆ ದಾಸಸಾಹಿತ್ಯದಲ್ಲಿ ತಲೆಹಾಕಿರಬೇಕು.

ಬದುಕಿನ ಒಟ್ಟು ಹೋರಾಟದ ಅಂಗವಾಗಿ ಬೆಳೆದುಬಂದ ವಚನಸಾಹಿತ್ಯ ಏಕಕಾಲಕ್ಕೆ ವೈಯಕ್ತಿಕ ಹಾಗೂ ಸಾಮಾಜಿಕವಾಗಿರುವದರಿಂದ, ಮತ್ತು ಪಲಾಯನವಾದವನ್ನು ಬೋಧಿಸದೆ ಜೀವನ ನಿಷ್ಠೆಯನ್ನು (Commitment)? ಪ್ರೇರೇಪಿಸುವುದರಿಂದ ಅದು ಈವತ್ತಿಗೂ ನಮಗೆ ಅರ್ಥಪೂರ್ಣವಾಗಿ ತೋರುತ್ತದೆ. ಕಳೆದ ೧೦-೨೦ ವರುಷಗಳ ಸಾಹಿತ್ಯಸೃಷ್ಟಿ ಹಾಗೂ ಸಾಹಿತ್ಯವಿಮರ್ಶೆಯಲ್ಲಿ ವಚನಗಳ ಪ್ರಸ್ತಾಪ ಹಗಲೆಲ್ಲ ಬರುತ್ತಿದೆ. ಪ್ರೊ. ಬಸವನಾಳ, ಪ್ರೊ. ಮೆನೆಜಿಸ್, ಪ್ರೊ. ಎ. ಕೆ. ರಾಮಾನುಜನ್ ಮುಂತಾದವರಿಂದ ಅಂತರರಾಷ್ಟ್ರೀಯವಲಯದಲ್ಲೂ ವಚನಗಳಿಗೆ ಮಹತ್ವ ಬಂದಿದೆ.

ನವ್ಯಸಾಹಿತ್ಯದ ಅನೇಕಚೇತನಗಳ ಮೇಲೆ ವಚನಕಾರರ ಪ್ರಭಾವ ಗಾಢವಾಗಿದೆ. ದಾಸಸಾಹಿತ್ಯ ಇಂಥ ಸಾಧ್ಯತೆಗಳನ್ನು ಹೊಂದಿಲ್ಲವೇನೋ ಅನಿಸುತ್ತದೆ. ಮೂಲ ವ್ಯವಸ್ಥೆಯನ್ನೇ ಪ್ರಶ್ನಿಸಬಲ್ಲ ಕ್ರಾಂತಿಬೀಜ ವಚನಗಳಲ್ಲಿವೆ. ಆದರೆ ಇದ್ದ ವ್ಯವಸ್ಥೆಯನ್ನೇ ಅಪ್ಪಿಕೊಂಡು, ಅದರ ವೈಷಮ್ಯಗಳನ್ನು ಮೇಲುಮೇಲಿನಿಂದ ಟೀಕಿಸುವುದು ದಾಸಸಾಹಿತ್ಯದ ವೈಶಿಷ್ಟ್ಯವಾಗಿದೆ. ಇಂಥ ಮನೋಧರ್ಮವನ್ನೇ ಹೊಂದಿರುವ ಶ್ರೀರಂಗರ ಇತ್ತೀಚಿನ ಹಲವು ನಾಟಕಗಳು ಹಾಗೂ ಜಿ. ಬಿ. ಜೋಶಿಯವರ "ಸತ್ತವರ ನೆರಳು" ನಾಟಕಗಳಲ್ಲಿ ದಾಸರ ಪದಗಳ ಬಳಕೆಯಾಗಿರುವುದು ಅರ್ಥಪೂರ್ಣವಾಗಿದೆ.

# ವೀರಶೈವ ಪುರಾಣಗಳು*

ಡಾ. ಎಸ್. ವಿದ್ಯಾಶಂಕರ

‘ಪುರಾಣ’ ಎಂಬ ಶಬ್ದಕ್ಕೆ ನಿಘಂಟುಕಾರರು ಕೊಡುವ ಸರಳ ಅರ್ಥ ‘ಪ್ರಾಚೀನ’ವೆಂಬುದು. ಆದರೆ ವೈದಿಕ ಸಾಹಿತ್ಯದಲ್ಲಿ ಬರುವ ಪುರಾಣಶಬ್ದದ ವ್ಯಾಪ್ತಿಯೊಳಗೆ ಪ್ರಾಚೀನವಾದುವೆಲ್ಲಾ ಬರುವುದಿಲ್ಲ. ಅಲ್ಲಿ ‘ಪುರಾಣ’ ಶಬ್ದವು ಮೊತ್ತಮೊದಲು ಇತಿಹಾಸಪೂರ್ವದ ವಿಶ್ವೋತ್ಪತ್ತಿ ವೈಚಿತ್ರ್ಯದ ಕಾಲ್ಪನಿಕ ಕಥೆ (Legend) ಗಳಿಗೆ ಸಂಬಂಧಿಸಿತ್ತು. ಅನಂತರ, ಸಾಂಪ್ರದಾಯಿಕವಾಗಿ ಬಂದ ಪ್ರಾಚೀನಘಟನಾವಳಿಗಳು (Episodes). ಪಳಗತೆಗಳು (Ancient tales) ಮೊದಲಾದುವುಗಳಿಗೂ ಈ ಹೆಸರು ಕೊಡಲಾಯಿತು. [‘ಪರಿಭಾವಿಸೆ ಪೂರ್ವಾಪರವಿರೋಧವಿಲ್ಲದುದೆ ತಾಂ ಪುರಾಣಂ’ ಎಂಬ ನೇಮಿಚಂದ್ರನ ಪುರಾಣವ್ಯಾಖ್ಯೆ ಈ ಸಂದರ್ಭದಲ್ಲಿ ಅರ್ಥವತ್ತಾಗಿದೆ.] ಬಹುವಾಗಿ ಜಾನಪದಗೀತಗಳ ರೂಪದಲ್ಲಿದ್ದ ಅವನ್ನು ‘ಪ್ರಾಚೀನಗಾಥಾ’ ಎಂದು ಕರೆಯುತ್ತಿದ್ದರು. ಅವುಗಳ ಸಂಕಲನವು ‘ಪುರಾಣಗಾಥಾ’ ಆಯಿತು; ಮತ್ತು ಆ ಜಾತಿಯ ಕೃತಿಗಳೆಲ್ಲಾ ಮುಂದೆ ಪುರಾಣವೆಂಬ ಅನ್ವರ್ಥನಾಮದಿಂದಲೇ ರೂಢಿಯಲ್ಲಿ ಬಂದುವು ಎಂಬುದು ವಿದ್ವಾಂಸರನೇಕರ ಅಭಿಪ್ರಾಯ.

ಪ್ರಾರಂಭದಲ್ಲಿ ವೈದಿಕ-ಪುರಾಣ-ಕರ್ತೃಗಳು ಸರ್ಗ, ಪ್ರತಿಸರ್ಗ, ಮನ್ವಂತರ. ವಂಶ, ವಂಶಾನುಚರಿತ— ಎಂಬೀ ಪಂಚಲಕ್ಷಣಗಳನ್ನು ಪುರಾಣಗಳು ತಳೆದಿರಬೇಕೆಂಬ ನಿಲುವನ್ನು ಹೊಂದಿದ್ದರು. ಈ ಪಂಚಲಕ್ಷಣಗಳ ಚೌಕಟ್ಟಿನಲ್ಲಿ ಅವರು ಪುರಾಣರಚನೆ ಮಾಡಿದರು. ಆದರೆ ಬರುಬರುತ್ತಾ ಪುರಾಣವ್ಯಾಪ್ತಿ ವಿಶಾಲವಾಗಿ ಅಶ್ವಶಾಸ್ತ್ರ, ಗಜಶಾಸ್ತ್ರ, ಕಾಮಶಾಸ್ತ್ರ, ವೈದ್ಯಶಾಸ್ತ್ರ, ಖಗೋಳಶಾಸ್ತ್ರ ಇತ್ಯಾದಿ ಹಲವಾರು ವಿಷಯಗಳು ಪ್ರವೇಶಗೊಂಡು ‘ಭಾರತೀಯ ವಿಶ್ವಕೋಶ’ವಾಗಿ ಮಾರ್ಪಟ್ಟಿತು. ಪ್ರಾಪಂಚಿಕರಿಗೆ ಸರ್ವತೋಮುಖವಾದ ಪ್ರಯೋಜನ ಲಭ್ಯವಾಗಬೇಕೆಂಬುದೇ ಪುರಾಣಗಳ ಈ ಬಹುಮುಖವಾದ ಬೆಳವಣಿಗೆಯ ಮೂಲೋದ್ದೇಶವೆಂದರೆ ತಪ್ಪಾಗಲಾರದು. ಅವುಗಳ ಶ್ರವಣ, ಪಠಣ, ಮನನಾದಿಗಳಿಂದ ಹಿಂದುಗಳಲ್ಲಿ ಧರ್ಮಾಧರ್ಮವಿವೇಚನಾಶಕ್ತಿ ಬೆಳೆಯಿತು ; ದೈವಭಕ್ತಿ, ಸದಾಚಾರಗಳು ಬಲಗೊಂಡವು ; ದೈನಂದಿನಜೀವನಕ್ರಮದ ರೀತಿನೀತಿಗಳು ಸುಧಾರಿಸಿದುವು ; ಸರ್ವರೂ ತಮ್ಮ ತಮ್ಮ ಅಂತಸ್ತಿನಿಂದ ಮುಂದುವರೆದು, ಇಹದಲ್ಲಿ ಸುಖಸಂತೋಷಗಳನ್ನೂ ಪರದಲ್ಲಿ ಮೋಕ್ಷದ ನಿತ್ಯಾನಂದವನ್ನೂ ಪಡೆಯುವಂತಾಯಿತು. ವ್ಯಕ್ತಿಗಳ ಸಮೂಹವೇ ಸಮಾಜವಾದ್ದರಿಂದ ಹಿಂದೂಸಮಾಜವು ಪ್ರಗತಿಯ ಪಥವನ್ನು ಹಿಡಿಯಿತು. ಧರ್ಮವು ಸುದೃಢವಾಯಿತು.

ವೈದಿಕ ಪುರಾಣಗಳ ಈ ಪ್ರಭಾವವನ್ನು ಗಮನಿಸಿದ ಜೈನರು. ತಮ್ಮವರೂ ಧರ್ಮನಿಷ್ಠರಾಗಿ ಬಾಳಿಬದುಕಬೇಕಾದರೆ ಮತ್ತು ತಮ್ಮ ಧರ್ಮವು ಪರಧರ್ಮಗಳ ಪ್ರತಿಭಟನೆಯನ್ನು ಎದುರಿಸಿ ತಲೆಯೆತ್ತಿ ನಿಲ್ಲಬೇಕಾದರೆ, ಜನಸಾಮಾನ್ಯರ ಮೇಲೆ ಅತ್ಯದ್ಭುತಪರಿಣಾಮವನ್ನುಂಟುಮಾಡುವ ವೈದಿಕಪುರಾಣಗಳಂತೆ ತಮ್ಮಲ್ಲಿಯೂ ಪುರಾಣಸೃಷ್ಟಿಯಾಗಬೇಕೆಂದು ಭಾವಿಸಿದರು. ವೈದಿಕಪುರಾಣಗಳ ಬೃಹದ್ವ್ಯಾಪಕತೆಗೆ ಮನತೆರೆದ ಜೈನಾಚಾರ್ಯರು ಅವುಗಳಲ್ಲಿನ ಪಂಚಲಕ್ಷಣಗಳ (ಸರ್ಗ. ಪ್ರತಿಸರ್ಗ, ಮನ್ವಂತರ, ವಂಶ ಮತ್ತು ವಂಶಾನುಚರಿತ) ಛಾಯೆಯನ್ನೇ ಅನುಸರಿಸಿದರೂ ತಮ್ಮ ಧರ್ಮಸಂಪ್ರದಾಯಾನುಸಾರವಾಗಿ ಅವಕ್ಕೆ ನೂತನರೂಪುಗೊಟ್ಟರು. ಲೋಕಾಕಾರ-ಕಥನ, ದೇಶನಿವೇಶೋಪದೇಶ, ನಗರಸಂಪತ್ಪರಿವರ್ಣನ, ರಾಜ್ಯರಾಮಣೀಯಕಾಖ್ಯಾನ, ತೀರ್ಥಮಹಿಮಾ

*ಈ ಲೇಖನವು ನನ್ನ “ವೀರಶೈವ ಪುರಾಣಗಳು : ಒಂದು ಅಧ್ಯಯನ” ಎಂಬ ಮಹಾಪ್ರಬಂಧದ ಸಂಗ್ರಹರೂಪ. ಹೆಚ್ಚಿನ ವಿವರಗಳನ್ನು ಬಯಸುವ ಸಹೃದಯರು ಸದ್ಯದಲ್ಲೇ ಪ್ರಕಟವಾಗಲಿರುವ ನನ್ನ ಮಹಾಪ್ರಬಂಧವನ್ನು ಪರಾಂಬರಿಸಬೇಕಾಗಿ ವಿನಂತಿ.

ಸಮರ್ಥನ, ಚತುರ್ಗತಿಸ್ವರೂಪನಿರೂಪಣ, ತಪೋದಾನವಿಧಾನವರ್ಣನ, ತತ್ಫಲಪ್ರಾಪ್ತಿಪ್ರಕಟನ— ಈ ಅಷ್ಟಾಂಗಗಳು ; ಸುರಲೋಕಾವತಾರೋತ್ಸವ, ಜನ್ಮಾಭಿಷೇಕೋತ್ಸವ, ಪರಿನಿಷ್ಕ್ರಾಂತಿಮಹೋತ್ಸವ, ಕೈವಲ್ಯಬೋಧೋತ್ಸವ, ಪರಿನಿರ್ವಾಣಮಹೋತ್ಸವ — ಈ ಪಂಚಕಲ್ಯಾಣಗಳು ಇತ್ಯಾದಿಗಳನ್ನು ಅಂತರ್ಗತಗೊಳಿಸಿ ಜಿನಧರ್ಮವನ್ನು ನಂಬಿ ನಡೆದು, ಅದನ್ನು ಬೆಳಗುವುದರ ಮೂಲಕ ಶಿಷ್ಯಕೋಟಿಯನ್ನು ಉದ್ಧರಿಸಿದ ಮಹಾಪುರುಷರಾದ ತೀರ್ಥಂಕರರೇ ಮೊದಲಾದ ತ್ರಿಷಷ್ಟಿಶಲಾಕಾಪುರುಷರ ಜೀವನವಿಚಾರವೂ ಜಿನಧರ್ಮವೂ ಪ್ರಧಾನವಿಷಯಗಳಾದ ಪುರಾಣಗಳನ್ನು ರಚಿಸಿದರು.

ಈ ಜೈನಪುರಾಣಗಳ ಛಾಯಾನುವರ್ತಿಯಾದ 'ಶೇಕ್ಕಿಳಾರ್' ಮಹಾಕವಿಯು ಜಿನತತ್ವ ಹಾಗೂ ಆ ತತ್ವಾನುಯಾಯಿ ತ್ರಿಷಷ್ಟಿಶಲಾಕಾಪುರುಷರ ಬದಲಾಗಿ, ಸನಾತನ ಶೈವಧರ್ಮ ಮತ್ತು ಆ ಧರ್ಮವನ್ನು ಎತ್ತಿಹಿಡಿದು ವೈಯಕ್ತಿಕಗುಣವಿಶೇಷಗಳಿಂದ ಪರಮಪೂಜ್ಯರೆನ್ನಿಸಿಕೊಂಡ ೬೩ ಮಂದಿ ತಮಿಳುನಾಡಿನ ಪುರಾತನ ಶೈವಸಂತರ ಧಾರ್ಮಿಕಚರಿತ್ರೆಗಳನ್ನು ಪ್ರಧಾನವಾಗಿ ಉಳ್ಳ 'ತಿರುತ್ತೊಂಡರ್—ಪುರಾಣಮ್' ಎಂಬ 'ಪೆರಿಯಪುರಾಣ'ವನ್ನು ರಚಿಸಿದನು. ಇಲ್ಲಿ ಗಮನಿಸಬಹುದಾದ ಸಂಗತಿಯೆಂದರೆ ಜಿನಸೇನಾಚಾರ್ಯರ ಮತ್ತು ಗುಣಭದ್ರಾಚಾರ್ಯರ ಸಂಸ್ಕೃತ-ಮಹಾಪುರಾಣವೂ ಚಾವುಂಡರಾಯನು ಕನ್ನಡದಲ್ಲಿ ಬರೆದಿರುವ 'ತ್ರಿಷಷ್ಟಿಶಲಾಕಾಪುರಾಣ'ವೂ ೬೩ ಬಿಡಿ ಪುರಾಣಗಳ ಸಂಕಲನವಾಗಿವೆ. ಅಂತೆಯೇ ಶೇಕ್ಕಿಳಾರನ 'ಪೆರಿಯ ಪುರಾಣ'ವೂ ೬೩ ಮಂದಿ ಶೈವಸಂತರ ಬಿಡಿಪುರಾಣಗಳ ಸಂಕಲನವೇ ಆಗಿದೆ.

ಈ ಹಿನ್ನೆಲೆಯಲ್ಲಿ 'ಪುರಾಣ'ವೆಂದರೆ ತನ್ನದೇ ಆದ ಸಾಹಿತ್ಯಪ್ರಭೇದ ; ವೈದಿಕಪುರಾಣವೆಂದರೆ ವೇದೋಪನಿಷತ್ತುಗಳೇ ಮೊದಲಾದ ವೈದಿಕಸಾಹಿತ್ಯಪ್ರೋಕ್ತವಿಷಯಗಳಿಗೆ ಸಂಬಂಧಿಸಿದ ಪುರಾಣ ; ಜೈನಪುರಾಣವೆಂದರೆ ತೀರ್ಥಂಕರರೇ ಮೊದಲಾದ ಶಲಾಕಾಪುರುಷರೆಂಬ ಮಹಾಪುರುಷರ ಮತ್ತು ಅವರು ಬೆಳಗಿದ ಧರ್ಮದ ಸಂಬಂಧವಾದ ಪುರಾಣ ; ಪೆರಿಯಪುರಾಣವೆಂದರೆ ಸನಾತನಶೈವಧರ್ಮಾನುಯಾಯಿಗಳಾಗಿ ಬಾಳಿ ಅದನ್ನು ಬೆಳಗಿದ ಮಹನೀಯರಾದ ಶೈವಸಂತರ ಸಂಬಂಧವಾದ ಪುರಾಣ ;- ಎನ್ನುವಂತೆ, ವೀರಶೈವಪುರಾಣವೆಂದರೆ ವೀರಶೈವಧರ್ಮಾನುಯಾಯಿಗಳಾಗಿ ಬಾಳಿದ ಮಹಾಪುರುಷರ ಮತ್ತು ಅವರು ಬೆಳಗಿದ ವೀರಶೈವಧರ್ಮಸಂಬಂಧವಾದ ಪುರಾಣ, ಎಂಬ ನಿಲುವನ್ನು ತಾಳಬಹುದಾಗಿದೆ.

ವೀರಶೈವಪುರಾಣಗಳು ಹನ್ನೆರಡನೆಯ ಶತಮಾನದಿಂದ ಆರಂಭಗೊಂಡು ಇಂದಿನವರೆವಿಗೂ ಅವ್ಯಾಹತವಾಗಿ ಬೆಳೆದು ಬಂದಿರುವುದನ್ನು ಗಮನಿಸಿದಾಗ ಅವುಗಳ ಮಹತ್ವದ ಪರಿಚಯ ನಮಗಾಗುತ್ತದೆ. ವೀರಶೈವ ಪುರಾಣಗಳ ಜನಪ್ರಿಯತೆಗೆ ಕಾರಣ : ಅವು ಜನಸಾಮಾನ್ಯರಿಗೆ ಅರ್ಥವಾಗುವಂತೆ ತೀರ ಸರಳರೂಪದಲ್ಲಿರುವುದು. ಸರಳತೆಯ ಜೊತೆಗೆ ಗೇಯಾಂಶವೂ ಅದರ ಜನಪ್ರಿಯತೆಗೆ ಕಾರಣ. ವೀರಶೈವಕವಿಗಳು ಪುರಾಣಗಳಿಗೆ ವಸ್ತುವನ್ನು ಆರಿಸಿಕೊಳ್ಳುವುದರಲ್ಲೂ ಹೊಸತನವನ್ನು ಪ್ರಕಟಪಡಿಸಿದ್ದು, ಅವರು ಅಳಿದರೂ ಉಳಿದರೂ ದಾರಿ ತೋರುವ ಐತಿಹಾಸಿಕ ಪುರುಷರೂ ಆದರ್ಶಜೀವಿಗಳೂ ಆದ ಮಹಂತರ ಬದುಕನ್ನೂ ಅವರ ಚರಿತ್ರೆಗಳನ್ನೂ ಜನಸಾಮಾನ್ಯರಿಗೆ ತಿಳಿಯುವಂತೆ ಹೇಳಲು – ಪುರಾಣಗಳನ್ನು ಅದಕ್ಕೆ ಸೊಗಸಾದ ಮಾಧ್ಯಮವನ್ನಾಗಿ ಮಾಡಿದರು. ಮತಧರ್ಮತತ್ವಗಳನ್ನು, ಸಂದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಪ್ರಧಾನಉದ್ದೇಶವು ಪುರಾಣಗಳ ಸೃಜನೆಗೆ ಕಾರಣವಾಗಿರುವಂತೆ ತೋರಿಬರುತ್ತದೆ. ವೇದದಲ್ಲಿ ಸೂತ್ರರೂಪದಿಂದ ಹಾಗೂ ಪರೋಕ್ಷರೀತಿಯಿಂದ ವಿವರಿಸಿದ್ದನ್ನೇ ವಿಸ್ತಾರವಾಗಿ ಸರ್ವರೂ ಅರಿಯುವಂತೆ ಹೇಳುವುದು ವೈದಿಕಪುರಾಣರಚಕರ ಮುಖ್ಯೋದ್ದೇಶವಾಗಿರುವಂತೆ ವೀರಶೈವ ಪುರಾಣಗಳಲ್ಲೂ ಶಿವಶರಣರ ಸಚ್ಚರಿತ್ರಕಥನದಿಂದ ತತ್ವಜ್ಞಾನವನ್ನು ತಿಳಿಯಹೇಳುವ ಮಹದುದ್ದೇಶವನ್ನು ವೀರಶೈವ ಕವಿಗಳು ಹೊಂದಿದ್ದಂತೆ ಕಾಣುತ್ತದೆ. ದ್ಯಾಂಪುರದ ಚೆನ್ನಕವಿಗಳು ಹೇಳುವಂತೆ "ಮಹಿಮಾಶೀಲರ ಪವಿತ್ರಚರಿತ್ರಗಳನ್ನು ಓದುವುದರಿಂದಲೂ, ಕೇಳುವುದರಿಂದಲೂ ಪುಣ್ಯವು ಪ್ರಾಪ್ತವಾಗುವುದಲ್ಲದೆ ಅವರ ನಡತೆಗೂ ನಮ್ಮ ನಡತೆಗೂ ಒರೆಹಚ್ಚಿ ನೋಡಿ ಇದ್ದ ನ್ಯೂನಾತಿರೇಕಗಳನ್ನು ಸರಿಪಡಿಸಿಕೊಂಡು ಮನುಷ್ಯರು ಪರಮೇಶ್ವರನ ಪ್ರೀತಿಗೆ ಪಾತ್ರರಾಗಬೇಕೆಂಬುದೇ ಪುರಾಣದ ಮುಖ್ಯೋದ್ದೇಶವು."

ವೀರಶೈವ ಧರ್ಮದ ಪ್ರಚಾರಕಾರ್ಯದಲ್ಲಿ ಕರ್ನಾಟಕದಲ್ಲಿನ ಮಠಗಳು ವಿಶೇಷಪಾತ್ರ ವಹಿಸಿವೆ. ಬಸವಾದಿ ಪ್ರಮಥರ ಕಾಲದಲ್ಲಿ ಅಸಂಖ್ಯಾತಮಠ— ನಿತ್ಯನೇಮಿಮಠ, ಅಚ್ಚಪ್ರಸಾದಿಮಠ, ದಾಸೋಹಮಠ, ಶೀಲಸಂಪನ್ನರ ಮಠಗಳು ಇದ್ದುದಾಗಿ ತಿಳಿದುಬರುತ್ತದೆ, ಕಲ್ಯಾಣದಲ್ಲಿ ಕ್ರಾಂತಿಯಾಗಿ ಅವರ ಬೇಗೆಗೆ ಒಳಗಾದ ಶರಣರು ಚದುರಿ

ಹೋದ ಮೇಲೆ ವೀರಶೈವಧರ್ಮ ಹಾಗೂ ಸಾಹಿತ್ಯ ಕುಂಠಿತವಾಗಿತ್ತು. ವೀರಶೈವಧರ್ಮೋದ್ಧಾರಕ್ಕಾಗಿ ಕರ್ಣಾಟಕದ ಎಲ್ಲೆಡೆಗಳಲ್ಲಿ ಮಠಗಳು ಸ್ಥಾಪನೆಗೊಂಡು ತತ್ವಪ್ರಚಾರದ ಜೊತೆಗೆ ಸಮಾಜಸೇವಾಕಾರ್ಯಗಳನ್ನೂ ಅಷ್ಟೇ ಮುಖ್ಯವಾಗಿ ಮಾಡಿದವು. ಭೀಮಕವಿಯ ಕಾಲಕ್ಕೆ ಮಠಗಳು ಕರ್ಣಾಟಕದಾದ್ಯಂತ ಸ್ಥಾಪಿತವಾಗಿ ಗುರುಸಂತತಿಯೂ ಶಿಷ್ಯಸಂತತಿಯೂ ಕ್ರಮೇಣ ಹೆಚ್ಚುತ್ತ ಬಂದಿತು. ಆದರೆ ೧೩–೧೪ ಶತಮಾನಗಳಲ್ಲಿ ಪರಕೀಯರ ಧಾಳಿಗೆ ಕರ್ಣಾಟಕ ಒಳಗಾಗಿ ವೀರಶೈವಧರ್ಮ ಹಾಗೂ ಸಾಹಿತ್ಯಗಳ ಪ್ರಗತಿಗೆ ಮತ್ತೆ ಧಕ್ಕೆಯೊದಗಿತು. ವಿಜಯನಗರ ಸ್ಥಾಪನಾನಂತರ ಪ್ರೌಢದೇವರಾಯನ ಕಾಲದಲ್ಲಿ (ಕ್ರಿ.ಶ. ೧೪೧೯–೧೪೪೬) ಲಕ್ಕಣ್ಣದಂಡೇಶ ಮೊದಲಾದವರ ನೇತೃತ್ವದಲ್ಲಿ ವೀರಶೈವದ ಪುನರುಜ್ಜೀವನಕಾರ್ಯ ಭರದಿಂದ ಜರುಗಿತು. ಕರ್ಣಾಟಕದ ಮೂಲೆಮೂಲೆಗಳಲ್ಲೂ ಮಠಗಳು ಸ್ಥಾಪನೆಯಾಗಿ ಅಲ್ಲಿ ಪ್ರಚಾರಪ್ರಸಾರಕಾರ್ಯಗಳು ಸುವ್ಯವಸ್ಥಿತಗೊಂಡು ನಡೆಯಬೇಕೆಂದು ಯತಿಗಳನ್ನು ಬಹುಸಂಖ್ಯೆಯಲ್ಲಿ ಸಿದ್ಧಗೊಳಿಸುವ ಕಾರ್ಯದಲ್ಲಿ ಅವರು ನಿರತರಾದರು. ಇದರ ಫಲವಾಗಿ ಗುರು-ಜಂಗಮಮಠಗಳು ಸ್ಥಾಪನೆಗೊಂಡು ಸಮಾಜದ ಅಭಿವೃದ್ಧಿಕಾರ್ಯಗಳಲ್ಲಿ ಪ್ರಮುಖಪಾತ್ರ ವಹಿಸಿದುವು. ಭಕ್ತವರ್ಗ ಮಠದ ಕಾರ್ಯಗಳಿಗೆಂದು ಹೇರಳವಾಗಿ ಧನಸಹಾಯ ಮಾಡಿತು. ಮಠಾಧಿಕಾರಿಗಳು ಸಮಾಜದ ಸರ್ವಾಂಗೀಣ ಉನ್ನತಿಗೆ ತಮ್ಮ ಪಾಲಿನ ಸೇವೆಯನ್ನು ನಿರಪೇಕ್ಷಭಾವನೆಯಿಂದ ಮಾಡಿ, ವೀರಶೈವ ಸಮಾಜದಲ್ಲಿ ಬಹುಪೂಜ್ಯರಾಗಿ ಗಣನೀಯ ಸ್ಥಾನ-ಮಾನ ಪಡೆದರು. ಕೆಲವು ಮಠಾಧಿಕಾರಿಗಳು ತಾವು ಸಾಧಿಸಿದ ಸಿದ್ಧಿಯನ್ನು ಜನತೆಯ ಒಳಿತಿಗಾಗಿ, ಕಲ್ಯಾಣಕ್ಕಾಗಿ ವಿನಿಯೋಗಿಸಿ ಆ ಮೂಲಕ ಜನಾನುರಾಗಿಗಳಾದರು.

ಕರ್ಣಾಟಕದ ಪ್ರತಿಯೊಂದು ಮಠಕ್ಕೂ ತನ್ನದೇ ಆದ ಚರಿತ್ರೆಯಿದೆ. ವೀರಶೈವ ಪುರಾಣಗಳನ್ನು ಅವಲೋಕಿಸಿದರೆ ಅಲ್ಲಿ ಮಠಗಳ ಹಾಗೂ ಮಠಾಧಿಕಾರಿಗಳ ಚರಿತ್ರೆಯೂ ಪ್ರಧಾನವಾಗಿರುವುದು ಕಂಡುಬರುತ್ತದೆ. ಕರ್ಣಾಟಕದ ಪ್ರಮುಖ ಮಠಗಳ ಪೀಠಾಧಿಪತಿಗಳು ತಮ್ಮ ಪೀಠದ ಭವ್ಯಪರಂಪರೆಯನ್ನೂ ಇತಿಹಾಸವನ್ನೂ ಮತ್ತು ಆ ಪೀಠವನ್ನೇರಿದ ಮಹಾತ್ಮರ ಮಹಿಮೆಗಳನ್ನೂ ಪುರಾಣರೂಪದಲ್ಲಿ ಬರೆಯಿಸಿ ಇಡುವ ಕಾರ್ಯದತ್ತ ಗಮನಹರಿಸಿದರು. ಇದರ ಫಲವಾಗಿ ಹಲವಾರು ವೀರಶೈವಗ್ರಂಥಗಳು, ಪುರಾಣ-ಚರಿತೆ-ಲೀಲೆ-ವಿಜಯ-ವಿಲಾಸಗಳ ಹೆಸರಿನಲ್ಲಿ ಹೊರಬಂದುವು[1]. ಪ್ರತಿಯೊಂದು ಮಠದವರೂ ತಮ್ಮ ತಮ್ಮ ಪೀಠದ ಆದಿಕರ್ತೃವಿನ ಲೀಲಾವಿಲಾಸಗಳನ್ನೂ ಸಮಾಜೋದ್ಧಾರಕಾರ್ಯಗಳನ್ನೂ ಪುರಾಣಕವಿಗಳಿಂದ ಕಾವ್ಯರೂಪದಲ್ಲಿ ಬರೆಯಿಸಿದರು. ತಮ್ಮ ಪೀಠದ ಮೂಲ ಕರ್ತೃವಿನ ಚರಿತ್ರೆಯನ್ನೂ ಅವನು ಎಸಗಿದ ಮಹತ್ಕಾರ್ಯಗಳನ್ನೂ ಬರೆಯಿಸಿ ಭಕ್ತರ ಮನದಲ್ಲಿ ಭಕ್ತಿಯ ಬೀಜಾಂಕುರ ಮಾಡುವುದು, ತಮ್ಮ ಪೀಠ ಹಾಗೂ ಪೀಠದ ಪರಂಪರೆಯಲ್ಲಿ ಬಂದ ಉತ್ತರಾಧಿಕಾರಿಗಳು ಎಂತಹ ಮಹಿಮಾಪುರುಷರೆಂಬುದನ್ನು ತಿಳಿಯಪಡಿಸುವುದು— ಇವು ಈ ಬಗೆಯ ಪುರಾಣಗಳ ಮುಖ್ಯ ಗುರಿಗಳಾಗಿದ್ದವು.

ವೈದಿಕ ಪುರಾಣಗಳು ಸರ್ಗ, ಪ್ರತಿಸರ್ಗ, ಮನ್ವಂತರ, ವಂಶ, ವಂಶಾನುಚರಿತಗಳೆಂಬ ಪಂಚಲಕ್ಷಣಗಳನ್ನೂ, ಜೈನಪುರಾಣಗಳು ಲೋಕಾಕಾರಕಥನ, ದೇಶನಿವೇಶೋಪದೇಶ, ನಗರಸಂಪತ್ಪರಿವರ್ಣನ, ರಾಜ್ಯರಮಣೀಯಕಾಖ್ಯಾನ, ತೀರ್ಥಮಹಿಮಾಸಮರ್ಥನ, ಚತುರ್ಗತಿಸ್ವರೂಪನಿರೂಪಣ, ತಪೋದಾನವ್ಯಾವರ್ಣನ, ಫಲಪ್ರಾಪ್ತಿಪ್ರಕಟನಗಳೆಂಬ ಎಂಟು ಅವಯವಗಳನ್ನೂ ಹೊಂದಿರುವುವು. ಪ್ರಾರಂಭದಲ್ಲಿ ಹಾಕಿಕೊಂಡ ಲಕ್ಷಣಗಳ ಈ ಚೌಕಟ್ಟು ಕಾಲಾನುಕ್ರಮದಲ್ಲಿ ಹಿಗ್ಗಿದುದನ್ನೂ ನಾವು ಕಾಣುತ್ತೇವೆ. ಸಾಮಾನ್ಯರಿಗೆ ಬಹುಮುಖವಾದ ತಿಳುವಳಿಕೆ ನೀಡುವುದು, ಸಾಮಾನ್ಯರ ಬದುಕಿನ ಅರ್ಥವಲಯವನ್ನು ವಿಸ್ತರಿಸುವುದು, ಇಹ-ಪರಜೀವನ ಸಾರ್ಥಕ್ಯವಾಗಿಸಲು ಮಾರ್ಗದರ್ಶನ

---

1 ಉದಾಹರಣೆಗೆ—
ಸಿದ್ಧೇಶ್ವರಪುರಾಣ
ಮರದುಂಡೀಶ್ವರಪುರಾಣ
ವಿಜಯಮಹಾಂತೇಶ್ವರಪುರಾಣ
ಫಲಾಹಾರಶಿವಯೋಗೀಶ್ವರಪುರಾಣ
ಅಥಣಿ ಶಿವಯೋಗೀಶ್ವರಚಾರಿತ್ರ
ಶಿವಯೋಗೀಶ್ವರಚಾರಿತ್ರ
ಜಯದೇವಲೀಲೆ
ಶಿವರುದ್ರವಿಜಯ
ಮೃತ್ಯುಂಜಯಲೀಲಾವಿಲಾಸ

ನೀಡುವುದು ಪುರಾಣವ್ಯಾಪ್ತಿ ವಿಶಾಲವಾಗಲು ಸ್ಥೂಲ ಕಾರಣಗಳು. ವೈದಿಕ ಪುರಾಣಗಳಿಗಿಂತ ಜೈನಪುರಾಣಗಳು ಲಕ್ಷಣಗಳಿಗೆ ಹೆಚ್ಚಿನ ಗಮನ ನೀಡಿದಂತೆ ಕಂಡುಬರುತ್ತದೆ. "ಪ್ರಣುತಜಿನಚರಿತಮುಂ ಲಕ್ಷಣಮಿಲ್ಲದೆ ಕುಕವಿ ಕಬ್ಬದೊಳ್ ಕಟ್ಟೆ ಮಹಾಮಣಿಯುಂ ಕರ್ಬೊನ್ನೊಳೆ ಕೇವಣಿಸಿದ ತೆಱನಕ್ಕುಮಲ್ಲದಪ್ಪುದೆ ಶುಭದಂ" ಎಂದಿರುವ ಕವಿಯೊಬ್ಬನ[1] ಅಭಿಮತವನ್ನೇ ಗಮನಿಸಿದಾಗ ಜೈನಪುರಾಣಕಾರರು ಲಕ್ಷಣಕ್ಕೆ ಕೊಟ್ಟ ಪ್ರಾಶಸ್ತ್ಯ ನಮಗೆ ಅರಿವಾಗುತ್ತದೆ.

ವೀರಶೈವ ಪುರಾಣಗಳು ವೈದಿಕಜೈನಪುರಾಣಗಳಂತೆ ಪೂರ್ವನಿಶ್ಚಿತಪುರಾಣಲಕ್ಷಣಗಳನ್ನೂ ನಿರ್ದಿಷ್ಟ ಚೌಕಟ್ಟಿನಲ್ಲಿ ತನ್ನ ಮಿತಿಯನ್ನೂ ಬೆಳವಣಿಗೆಯ ಗತಿಯನ್ನೂ ಕಂಡುಕೊಳ್ಳಲಿಲ್ಲ. ವೀರಶೈವಕವಿಗಳಲ್ಲಿ ಮೊದಲಿಗೆ ಯಾರೂ ವೀರಶೈವಪುರಾಣಗಳ ಲಾಕ್ಷಣಿಕವಿವರ ನೀಡಲಿಲ್ಲ. ಕಾರಣ : ಬಹುಶಃ ಅವರಿಗೆ ಹಳತುಗೊಂಡ ಸಾಂಪ್ರದಾಯಿಕಲಕ್ಷಣಗಳಲ್ಲಿ ವಿಶ್ವಾಸವಿಲ್ಲದಿದ್ದಿರಬಹುದು. ಪ್ರಾರಂಭದಲ್ಲಿ ವೀರಶೈವಕವಿಗಳು ವಚನಯುಗ ಬೀರಿದ ಗಾಢ ಪ್ರಭಾವದಿಂದ ಪ್ರೇರಣೆಗೊಂಡು ತಮ್ಮ ಸಮಾಜವನ್ನು ಕವಿದಿದ್ದ ಅಜ್ಞಾನದ ಮಬ್ಬನ್ನು ಸರಿಸಲು ತಮ್ಮದೇ ಆದ ಸೊಡರಿಡಿದು ನಡೆದರು. ಜನರ ಬದುಕು ಹಸನಾಗಲು ಕವಿವಾಣಿ ಒಂದು ಸಾಧನವಾಯಿತು. ಕವಿವಾಣಿ ಆಗಸದ ದಂತಗೋಪುರದಿಂದ ಮೊಳಗಿ ಬರಲಿಲ್ಲ. ಹತಾಶಗೊಂಡು, ನಿರ್ಜೀವವಾಗಿದ್ದ ಬದುಕಿಗೆ ಹೊಸ ಜೀವವಾಹಿ ಸೆಲೆ ಯುಕ್ಕಿಸುವ ಅಂತರ್ವಾಣಿಯಾಗಿ ಹೊಮ್ಮಿ ಬಂದಿತು. ಸತ್ಯ, ಧರ್ಮ, ನೀತಿಗಳಿಂದ ಕೂಡಿದ್ದ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಶರಣರ ಬದುಕು-ಮಣಿಹ, ನಮ್ಮ ಕವಿಗಳಿಗೆ ಆದರ್ಶವಾಯಿತು. ಲೋಕವನ್ನು ತಿದ್ದಲು, ಋಜುತ್ವದ ಮಾರ್ಗ ತೋರಲು ಶರಣರ ಬಾಳಿಗಿಂತ ಮತ್ತೊಂದು ನಿದರ್ಶನ ಅವರ ಪಾಲಿಗೆ ಕಾಣಬರಲಿಲ್ಲ. ಹೀಗಾಗಿ ಹರಿಹರ-ರಾಘವಾಂಕರೇ ಮೊದಲಾದ ಪ್ರಾರಂಭದ ವೀರಶೈವಕವಿಗಳು ಬಸವಾದಿ ಶರಣರ ಬಾಳನ್ನೇ ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸಿ ಮೊತ್ತಮೊದಲಿಗೆ ಸಾಹಿತ್ಯದ ದಿಕ್ಕುದೆಸೆಯನ್ನೇ ಬದಲಿಸಿದರು. ಜೈನಕವಿಗಳ ಸಂಪ್ರದಾಯ ಕಾವ್ಯಗಳಲ್ಲಿ ಜಡ್ಡುಗಟ್ಟಿದ್ದುದಷ್ಟೇ ಅಲ್ಲ ; ಸಾಮಾನ್ಯನ ಬದುಕಿಗೆ ಅದರ ಯಾವ ಸ್ತರದಲ್ಲೂ ಸ್ಪಂದಿಸದೆ ಆ ವ್ಯವಸ್ಥಿತ ಕ್ರಮವೇ ಅರ್ಥಹೀನವೆನ್ನಿಸಿದಾಗ, ಆ ದಾರುಣ ಸೋಲಿನ ಸುಳುಹುಗಂಡ ವಚನಕಾರರು ತಮ್ಮ ಗತಿ ಬದಲಿಸಿ ಒಂದು ಕ್ರಾಂತಿಗೆ ಎಡೆಮಾಡಿದರು. ಆ ಕ್ರಾಂತಿಯ ವಿರಾಡ್ರೂಪವನ್ನು, ತತ್ಫಲವಾಗಿ ಮೂಡಿಬಂದ ಮುಂದಣ ವೀರಶೈವ ಕಾವ್ಯಗಳಲ್ಲಿ ನಾವು ಕಾಣುತ್ತೇವೆ.

ಪ್ರಾರಂಭದ ವೀರಶೈವ ಕವಿಗಳ ಗಮನವೆಲ್ಲ ಶರಣರ ಚಾರಿತ್ರನಿರೂಪಣೆಯತ್ತಲೇ ಪ್ರಧಾನವಾಗಿ ಹರಿದುದರಿಂದ ಅವರು ವೀರಶೈವ ಪುರಾಣಗಳ ನಿರ್ದಿಷ್ಟ ಲಕ್ಷಣಗಳ ಬಗೆಗೆ ವಿಚಾರಮಾಡುವ, ನಿರ್ಣಯಿಸುವ, ಒಂದು ಮಿತಿಯನ್ನು ಗೊತ್ತುಪಡಿಸುವ ಗೊಡವೆಗೆ ಹೋಗಲಿಲ್ಲ. ಕಲ್ಯಾಣದಿಂದ ಬಸವಾದಿಶರಣರು ನಿರ್ಗಮಿಸಿದ ಮೇಲೆ ವೀರಶೈವಧರ್ಮಕ್ಕೆ ದೊಡ್ಡ ಆಘಾತವಾಯಿತು. ಇದರ ಪರಿಣಾಮ : ಸಾಹಿತ್ಯ ಸಮಾಜಗಳ ಮೇಲೆ ತೀವ್ರವಾಗಿ ಆಯಿತು. ಅಳಿದುಳಿದ ಶಕ್ತಿಯನ್ನು ಒಗ್ಗೂಡಿಸಿ ಮೇಲೇಳಲು ಪ್ರಯತ್ನ ಮಾಡುತ್ತಿರುವಾಗಲೇ ದಕ್ಷಿಣದ ಮೇಲೆ ಮಹಮದೀಯರ ಧಾಳಿಯಾಯಿತು. ಕ್ರಿ.ಶ. ೧೩೩೬ರ ವೇಳೆಗೆ ಇಡೀ ದಕ್ಷಿಣ ಭಾರತ ಮಹಮದೀಯರ ವಶವಾಯಿತು. ಅವರ ಬಲವಾದ ಧಾಳಿಯಿಂದ ಕಂಗಾಲಾದ ವೀರಶೈವರು ಮಾನ ಹಾಗೂ ಜೀವರಕ್ಷಣೆಗಾಗಿ ಮನಬಂದತ್ತ ನಡೆದರು. ಮಹಮದೀಯರ ಪ್ರಾಬಲ್ಯ ತಗ್ಗಿಸಲು, ಧರ್ಮರಕ್ಷಣೆ ಮಾಡಲು ವಿಜಯನಗರಸಾಮ್ರಾಜ್ಯಸ್ಥಾಪನೆಯಾಗಿ ಅದರ ಅರಸರ ತ್ಯಾಗ-ಬಲಿದಾನ-ಸಾಹಸಗಳಿಂದ ಬತ್ತಿಹೋಗಿದ್ದ ಸುಖಶಾಂತಿ ಮರಳಿ ಕೊನರಿತು. ಆ ಅರಸರ ಉದಾರ ಆಶ್ರಯದಲ್ಲಿ, ಕಮರಿಹೋಗಿದ್ದ ವೀರಶೈವಧರ್ಮಕ್ಕೆ ಹೊಸ ಚೈತನ್ಯದ ಮಂತ್ರಸ್ಪರ್ಶವಾಯಿತು. ಲಕ್ಕಣ್ಣದಂಡೇಶ-ಜಕ್ಕಣಾರ್ಯರೇ ಮೊದಲಾದ ಮುಂದಾಳುಗಳ ನೇತೃತ್ವದಲ್ಲಿ ವೀರಶೈವಧರ್ಮ ಹಾಗೂ ಸಮಾಜ ಶಕ್ತಿಸಂಪನ್ನವಾಯಿತು.

ದಿಕ್ಕುತಪ್ಪಿದ ಶಿವಧರ್ಮೀಯರನ್ನು ಸುಗಮವಾದ ಹಾದಿಯಲ್ಲಿ ನಡೆಸಿದ ಶ್ರೇಯಸ್ಸು ಲಕ್ಕಣ್ಣದಂಡೇಶನ ಪಾಲಿನದು. ವೀರಶೈವಧರ್ಮ ಹಾಗೂ ಸಮಾಜ ತನ್ನ ಹಿಂದಣ ವೈಭವದ ಕನಸುಗಾಣುತ್ತ ಮುಗ್ಗರಿಸುತ್ತಿದ್ದಾಗ ಆ ಜಡ ಚೇತನಗಳಲ್ಲಿ ಉತ್ಸಾಹದ ಕಿಡಿಯೊತ್ತಿದ : ಮಹಾಸಾಮ್ರಾಜ್ಯದ ದಂಡನಾಯಕನೆಂಬ ಮಹಾಪ್ರಧಾನಿಯೆಂಬ ಹಮ್ಮು-ಬಿಮ್ಮು ಬಿಟ್ಟು ಹಿರಿ-ಕಿರಿಯರಿಗೆ ಮಾರ್ಗದರ್ಶಿಯಾದ ಲಕ್ಕಣ್ಣದಂಡೇಶ. ಅವನ ಕೃತಿಯ ಹೆಸರೇ ಸೂಚಿಸುವಂತೆ ಆತ ವೀರಶೈವರ ಪಾಲಿಗೆ 'ಚಿಂತಾಮಣಿ'ಯೊಂದನ್ನಿತ್ತನು. 'ಶಿವತತ್ವಚಿಂತಾಮಣಿ'ಯಲ್ಲಿ ನಿತ್ಯಾನಿತ್ಯವಸ್ತುವಿನ ವಿವರಣ, ಸಕಲನಿಷ್ಕಲದ ಪರಿ, ನಿಷ್ಕಲತತ್ವ ಸಕಲವಾದ ಭೇದ, ಭುವನಕೋಶ, ಶಿವಲೋಕದ ವರ್ಣನ, ಪರನ

1 ನೇಮಿಚಂದ್ರನ ನೇಮಿನಾಥಪುರಾಣ, ಆ. ೧. ಪ. ೩೦

ದಿವ್ಯಾಸ್ಥಾನ, ನಾರದನ ದರುಶನ, ಶಿವ-ನಂದಿಯರ ಸಂವಾದ, ಜಗದೋದ್ಧಾರಕ್ಕಾಗಿ ಬಸವಾವತಾರ, ಬಸವನ ಬಾಲ್ಯಲೀಲೆ, ಬಸವನ ಪವಾಡಗಳು, ಭೂಮಂಡಲದಲ್ಲಿ ಶಿವಧರ್ಮವನ್ನು ವಿಶೇಷವಾಗಿ ತೋರಿ ಮೆರೆದ ಗಣ ಪ್ರಶಂಸೆ, ಧರ್ಮಾಧರ್ಮ–ಪಿಂಡದುತ್ಪತ್ತಿ-ಸಂಸಾರ ನಿರಸನ, ಲಿಂಗಧಾರಣ, ಶಿವಪೂಜಾನಿಯಮ, ಪಾದೋದಕಪ್ರಸಾದಕ್ರಮ, ಶಿವಾಧಿಕ್ಯಮಾಹೇಶ್ವರಾಚರಣೆ, ಷಟ್ಸ್ಥಲ— ಈ ವಿಷಯಗಳು ಅಡಗಿಕೊಂಡಿದ್ದು ಮುಂದೆ ಇವೇ ಮಲ್ಲಣಾರ್ಯನ 'ವೀರಶೈವಾಮೃತ ಮಹಾಪುರಾಣ'ದ ಹದಿನೆಂಟು ಅಂಗಗಳಾದುವು. ಅವನತಿಯ ಹಾದಿ ಹಿಡಿಯುತ್ತಿದ್ದ ವೀರಶೈವರಿಗೊಂದು ಧಾರ್ಮಿಕ ಕೈಪಿಡಿ ತೀರ ಅವಶ್ಯವಾಗಿದ್ದಿತು. ಇದರ ಮುಂಗಾಣ್ಕೆಯ ಫಲ, 'ಶಿವತತ್ವಚಿಂತಾಮಣಿ'. ಲಕ್ಕಣ್ಣದಂಡೇಶ ವೈದಿಕಪುರಾಣಗಳಿಂದ ಮಾತ್ರವಲ್ಲ; ವೇದೋಪನಿಷತ್ತುಗಳಿಂದಲೂ ಸ್ಫೂರ್ತಿಪಡೆದು ವೀರಶೈವ ವಸ್ತುಕೋಶದ ರೂಪರೇಷೆಯನ್ನು ತನ್ನ 'ಶಿವತತ್ವಚಿಂತಾಮಣಿ'ಯಲ್ಲಿ ಸ್ಪಷ್ಟಪಡಿಸಿದನು. ಈತ ಸೃಷ್ಟಿಕ್ರಮ, ಶಿವಾಧಿಕ್ಯಸ್ಥಿರೀಕರಣ, ವೀರಶೈವಮತಾಧಿಕ್ಯಸ್ಥಾಪನೆ, ಗಣಸಹಸ್ರನಾಮ, ವೀರಶೈವತತ್ವನಿರೂಪಣೆ— ಈ ಮೊದಲಾದ ವಿಷಯಗಳನ್ನು ಹೊಸತಾಗಿ ಹೇಳಿರುವಂತೆ ಕಂಡುಬರುತ್ತದೆ. ಸಂಕೀರ್ಣ ವಿಷಯಗಳನ್ನು ಒಂದುಗೂಡಿಸುವುದು ಅವನ ಉದ್ದೇಶವಾಗಿದ್ದುದರಿಂದ 'ಶಿವತತ್ವಚಿಂತಾಮಣಿ'ಯು ೪೬ ಸಂಧಿ ೨೨೨೧ ಪದ್ಯಗಳನ್ನೊಳಗೊಂಡ ಬೃಹತ್ಕೃತಿಯಾಯಿತು.

ವಿಜಯನಗರದ ಹಿರಿಯಮಠದ ಗುರುವಾದ ವಿರೂಪಾಕ್ಷಪಂಡಿತನು (ಕ್ರಿ.ಶ. ೧೫೮೫) ತನ್ನ 'ಚೆನ್ನಬಸವಪುರಾಣ'ದಲ್ಲಿ ಆ ಪುರಾಣದ ಕಥಾಕುಳಿಕ (ಕಥಾಲಕ್ಷಣ)ವನ್ನು ಹೇಳಿರುವನು (೧. ೩೭–೩೯). ಈ ಕಥಾಲಕ್ಷಣವನ್ನು ಗಮನಿಸಿದಾಗ ಲಕ್ಕಣ್ಣದಂಡೇಶ ಹೇಳಿದ ಲಕ್ಷಣಗಳಿಗೂ ಇವಕ್ಕೂ ಹೆಚ್ಚಿನ ಸಾಮ್ಯವಿರುವುದು ಕಂಡುಬರುತ್ತದೆ. ಶಿವಾದ್ವೈತಸಿದ್ಧಾಂತನಿರೂಪಣೆಯ ಜೊತೆಗೆ ಪ್ರಧಾನವಾಗಿ ಬಸವೇಶಚರಿತ್ರೆ ಲಕ್ಕಣ್ಣದಂಡೇಶನ ಕಾವ್ಯೋದ್ದೇಶವಾಗಿದ್ದುದು ಕಂಡುಬಂದರೆ, ಶಿವಾದ್ವೈತಸಿದ್ಧಾಂತ ನಿರೂಪಣೆಯ ಜೊತೆಗೆ ಚೆನ್ನಬಸವೇಶನ ಚಾರಿತ್ರನಿರೂಪಣೆ ವಿರೂಪಾಕ್ಷಪಂಡಿತನ ಗುರಿಯಾಗಿದ್ದಂತೆ ಕಂಡುಬರುತ್ತದೆ. ಲಕ್ಕಣ್ಣದಂಡೇಶ ರಾಘವಾಂಕನಂತೆ ಕಾವ್ಯಕ್ಕೆ ಹದಿನೆಂಟು ಬಗೆಯ ವರ್ಣನೆಗಳು ಅನವಶ್ಯಕವೆಂದು ಬಗೆದು ಅವುಗಳ ಬಲವಾದ ಆಕರ್ಷಣೆಯನ್ನು ಮೀರಿ ನಿಂತನು. ವಿರೂಪಾಕ್ಷಪಂಡಿತನಿಗಾದರೋ ಸಂಪ್ರದಾಯದ ಬಗೆಗೆ ಅನನ್ಯನಿಷ್ಠೆ. "ವರಲಕ್ಷಣಂ, ಸುಛಂದಸ್ಸು, ನುತಶಬ್ದಂ, ಉರುತರ ರಸಾಲಂಕಾರ, ಅತಿಶಯಾರ್ಥ"[1]ಗಳಿಂದ ಈತ ಕಾವ್ಯವನ್ನು ರಚಿಸಿದನು. ಅಷ್ಟೇ ಅಲ್ಲ "ಋತು, ನಂದನ, ತರಣಿ, ಶಶಿ, ಶರಧಿ, ಪರಿಣಯ, ರತಿ, ನಗರಿ, ಗಿರಿ, ಸುತಂ, ವಾರಿ, ಮಧು, ವಿರಹ, ನುತ ದಂಡಯಾತ್ರೆ, ಯಾನ, ರಣ, ನೃಪರೇಳ್ಗೆ, ರಾಜಮಂತ್ರಗಳೆಂಬ ನುತಿವಡೆದ ಪದಿನೆಂಟು ವರ್ಣನೆಗಳಿಂದ ಸಮಾಶ್ರಿತ-ನವರಸಾದ್ಯಲಂಕಾರಗಳಿಂದ ವಿಬುಧತತಿ-ಬಣ್ಣಿಪಂತೆ"[2] ಕಾವ್ಯರಚನೆ ಮಾಡಿರುವನು. ಲಕ್ಕಣ್ಣದಂಡೇಶನು "ಜಗದೋದ್ಧಾರಕ್ಕೆ ಬಸವಾವತಾರ, ಬಸವನ ಬಾಲ್ಯ-ಲೀಲೆ, ಪವಾಡ"ಗಳನ್ನು ಹೇಳಿದಂತೆ ವಿರೂಪಾಕ್ಷಪಂಡಿತನೂ ಚೆನ್ನಬಸವನ ಉತ್ಪತ್ತಿ, ಆತನ ಸುಲೀಲೆ ಇವುಗಳನ್ನು ದೀರ್ಘವಾಗಿ ಹೇಳಿರುವನು. ಲಕ್ಕಣ್ಣದಂಡೇಶ "ಭೂಮಂಡಲದಲ್ಲಿ ಶಿವಧರ್ಮಮಾರ್ಗವನ್ನು ನೆಟ್ಟನೆ ತೋರಿ ಮೆರೆದ ಗಣಪ್ರಶಂಸೆ"ಯನ್ನು ಒಂದು ಲಕ್ಷಣವಾಗಿ ಹೇಳಿದರೆ ಇದನ್ನೇ ವಿರೂಪಾಕ್ಷಪಂಡಿತನು "ಹರನ ಶರಣಚರಿತೆ' ಎಂಬ ಲಕ್ಷಣವಾಗಿ ಹೇಳಿರುವನು. ಲಕ್ಕಣ್ಣದಂಡೇಶ ಹೇಳಿದ "ಧರ್ಮಾಧರ್ಮ, ಪಿಂಡದುತ್ಪತ್ತಿ, ಸಂಸಾರ ನಿರಸನ, ಲಿಂಗಧಾರಣೆ, ಶಿವಪೂಜಾನಿಯಮ, ಪಾದೋದಕಪ್ರಸಾದಕ್ರಮ: ಶಿವಾಧಿಕ್ಯಮಾಹೇಶ್ವರಾಚರಣೆ— ಈ ಪಂಚಲಕ್ಷಣಗಳನ್ನು 'ದೀಕ್ಷಾ ವಿಧಾನ'ವೆಂಬ ಒಂದೇ ಒಂದು ಲಕ್ಷಣದಲ್ಲಿ ವಿರೂಪಾಕ್ಷಪಂಡಿತನು ಹೇಳಿರುವನು. ಷಟ್‌ಸ್ಥಲದ ಲಕ್ಷಣವನ್ನು ಇವರೀರ್ವರೂ ಒಂದೇ ಹೆಸರಿನಲ್ಲಿ ಹೇಳಿರುವರು. ಹೀಗೆ ಲಕ್ಕಣ್ಣದಂಡೇಶ ಹಾಗೂ ವಿರೂಪಾಕ್ಷಪಂಡಿತರು ಹೇಳಿದ ಕೃತಿಗಳಲ್ಲಿ ಲಕ್ಷಣಗಳ ಸಾಮ್ಯ ವಿಶೇಷವಾಗಿರುವುದನ್ನು ನಾವು ನೋಡಬಹುದು. ಆದರೆ ವೈದಿಕ-ಪುರಾಣಸಂಪ್ರದಾಯನಿಷ್ಠನಾದ ವಿರೂಪಾಕ್ಷಪಂಡಿತನು ಲಕ್ಕಣ್ಣದಂಡೇಶನು ಹೇಳದ ಸೋಮ ಸೂರ್ಯಾನ್ವಯಗಳನ್ನೂ, ಸುಕಾಲಜ್ಞಾನ ಎಂಬ ಹೊಸ ವಿಷಯವನ್ನೂ ಹೇಳಿರುವನು.

ವೀರಶೈವಪುರಾಣಗಳಿಗೆ ಕೆಲವು ಪ್ರಮುಖವಾದ ಲಕ್ಷಣಗಳಿರುವುದು ಪುರಾಣನಾಮಾಂಕಿತವೀರಶೈವಕೃತಿಗಳ ಅಭ್ಯಾಸದಿಂದ ತಿಳಿಯಬರುತ್ತದೆ. ಅವುಗಳನ್ನು ಹೀಗೆ ವಿವರಿಸಬಹುದು—

---

1 ಚೆನ್ನ ಬ. ಪು. ಸಂ ೧, ಪ. ೩೪.

2 ಅದೇ ಸಂ ೧, ಪ. ೩೬.

(ಅ) ವೀರಶೈವಪುರಾಣಗಳ ಪ್ರಧಾನವ್ಯಕ್ತಿಗಳು ಗುರುವು ತ್ರಿವಿಧದೀಕ್ಷೆಯಿಂದ ಮಲತ್ರಯಗಳನ್ನು ನಾಶಗೊಳಿಸಿ ಪಶ್ಚಿಮಶಿಖಾಚಕ್ರದಲ್ಲಿ ಬೆಳಗುವ ಚಿತ್ಕಳೆಯನ್ನು ಮೈಗೂಡಿಸಿ ಅನುಗ್ರಹಿಸುವ ಇಷ್ಟಲಿಂಗವನ್ನು ಸದಾ ಶರೀರದ ಮೇಲೆ ಧರಿಸಿ ಆರಾಧಿಸುವವರಾಗಿರುತ್ತಾರೆ.

(ಆ) ಶಿವಾಗಮೋಕ್ತವೀರಶೈವಧರ್ಮವಾಗಲೀ, ಅದನ್ನು ವಿಶ್ವಧರ್ಮವನ್ನಾಗಿ ಮಾಡಲು ಹನ್ನೆರಡನೆಯ ಶತಮಾನದ ಬಸವಾದಿಶರಣರು ರೂಪಿಸಿದ ಸುಧಾರಿತ ವೀರಶೈವಧರ್ಮವಾಗಲೀ ಅವುಗಳಲ್ಲಿ ಪ್ರತಿಪಾದಿತವಾಗಿರುತ್ತದೆ.

(ಇ) ವೀರಶೈವಧರ್ಮಾನುಯಾಯಿಗಳಾದ ಮಹಾಪುರುಷರ ಚರಿತ್ರೆಗಳು ಪ್ರಧಾನವಾಗಿಯೂ, ಅವರು ತಮಗೆ ಆದರ್ಶರೆಂದು ಅಂಗೀಕರಿಸಿದ ಪುರಾತನಶೈವಸಂತರು ಹಾಗೂ ಪುರಾತನ ಮತ್ತು ನೂತನ ಶಿವಶರಣರು ಮೊದಲಾದವರ ಕಥೆಗಳು ಪ್ರಾಸಂಗಿಕವಾಗಿಯೂ ಅವುಗಳಲ್ಲಿ ಉಕ್ತವಾಗಿರುತ್ತವೆ.

(ಈ) ಈ ಪ್ರಧಾನಪುರುಷರು ಬಹುವಾಗಿ ಪರಶಿವ-ಶಿವೆಯ ಅಂಶ ಇಲ್ಲವೇ ಅವರ ಪರಿವಾರವಾಗಿದ್ದು ಕಾರಣಾಂತರಗಳಿಂದ ಭೂಲೋಕದಲ್ಲಿ ಅವತರಿಸಿದವರಾಗಿರುತ್ತಾರೆ. ಮತ್ತು ಈ ಲೋಕದ ಮಣಿಹ ಮುಗಿದೊಡನೆ ಒಂಟಿಯಾಗಿಯೋ ಸಾಮೂಹಿಕವಾಗಿಯೋ ಮತ್ತೆ ಕೈಲಾಸವನ್ನು ಸೇರುತ್ತಾರೆ.

(ಉ) ವೀರಶೈವ ಧರ್ಮವನ್ನು ಮೆಟ್ಟಿಕ್ಕತೊಡಗಿದ ಪರಸಮಯಿಗಳನ್ನು ಎದುರಿಸಿ, ಸ್ವಧರ್ಮವನ್ನು ರಕ್ಷಿಸಿ, ಬೆಳೆಸಿದ ರೀತಿಯು ಪವಾಡ ಕಥೆಗಳ ರೂಪದಲ್ಲಿ ಪ್ರಧಾನವಾಗಿ ಕಂಡುಬರುತ್ತದೆ.

(ಊ) ವೀರಶೈವವು ಶೈವಧರ್ಮದ ಪ್ರಭೇದವಾದುದರಿಂದ ಶೈವಪುರಾಣಗಳಲ್ಲಿ ಕಂಡುಬರುವ ಶಿವಪಾರಮ್ಯ-ಪ್ರತಿಪಾದನಾ ಕಥೆಗಳಲ್ಲಿ ಪ್ರಧಾನವಾದ ಸುಮಾರು ೨೫ ಕಥೆಗಳು ಲೀಲೆಗಳೆಂಬ ಹೆಸರಿನಿಂದ ಪ್ರಾಸಂಗಿಕವಾಗಿ ವರ್ಣಿತವಾಗಿರುತ್ತವೆ.

ಹೀಗೆ ಲಕ್ಷಣಗಳನ್ನು ಗುರುತಿಸಿದ ಮಾತ್ರಕ್ಕೆ ಇವು ಎಲ್ಲ ಪುರಾಣಗಳಲ್ಲೂ ಕಟ್ಟುನಿಟ್ಟಾಗಿ ಅಳವಡಿಸಲ್ಪಟ್ಟಿವೆ ಎಂದು ಅರ್ಥವಲ್ಲ. ಪುರಾಣರಚಕರ ರುಚಿಗನುಗುಣವಾಗಿ ಇವುಗಳ ಪ್ರಾಧಾನ್ಯ ಹೆಚ್ಚುಕಡಿಮೆ ಇರುವುದೂ, ಕೆಲವು ಅಂಶಗಳು ಭಾಗಶಃ ಬಂದಿರುವುದೂ ಉಂಟು. ಉದಾಹರಣೆಗೆ ತಮಿಳುನಾಡಿನ ಅರವತ್ತುಮೂವರು ಪುರಾತನರ ವಿಷಯಗಳೂ, ಪರಶಿವನ ಪಂಚವಿಂಶತಿಲೀಲೆಗಳೂ ಕೆಲವು ಪುರಾಣಗಳಲ್ಲಿ ಸೂಕ್ಷ್ಮವಾಗಿರುತ್ತವೆ: ಹಲವು ಪುರಾಣಗಳಲ್ಲಿ ಬರುವುದೇ ಇಲ್ಲ.

ಲಕ್ಕಣ್ಣದಂಡೇಶ ಹಾಗೂ ವಿರೂಪಾಕ್ಷಪಂಡಿತನ ಕಾಲದ ಪುರಾಣಲಕ್ಷಣಗಳನ್ನು ಗಮನಿಸಿದಾಗ ಅವುಗಳಲ್ಲಿ ಪ್ರಗತಿಶೀಲ ವಿಕಾಸಕ್ರಮವನ್ನು ನಾವು ಗುರುತಿಸುತ್ತೇವೆ. ಕಾಲಕಾಲಕ್ಕೆ ವೀರಶೈವಪುರಾಣಗಳ ಲಕ್ಷಣಗಳಲ್ಲಾದ ಹೆಚ್ಚುವರಿ ಅದರ ಪ್ರಗತಿಯ ದ್ಯೋತಕವಾಗಿದೆ ಎನ್ನಬಹುದು. ನಿತ್ಯಾನಿತ್ಯವಸ್ತುವಿವರಣ, ಸಕಲನಿಷ್ಕಲವಿಚಾರ, ನಿಷ್ಕಲತತ್ವ, ಸಕಲಭೇದ, ಭುವನಕೋಶ, ಗಣಪ್ರಶಂಸೆ, ಧರ್ಮಾಧರ್ಮ, ಪಿಂಡದುತ್ಪತ್ತಿ, ಸಂಸಾರನಿರಸನ, ಸೋಮಸೂರ್ಯಾನ್ವಯ, ಕಾಲಜ್ಞಾನ— ಈ ಎಲ್ಲ ವಿಷಯಗಳು ಪ್ರಾರಂಭದ ಪುರಾಣಗಳಿಗೆ ಹೊರತಾಗಿದ್ದವು. ವೈದಿಕ ಪುರಾಣಗಳ ಗುಣಲಕ್ಷಣಗಳನ್ನು ಗಮನಿಸಿದ ನಮ್ಮ ಕವಿಗಳು ಅವನ್ನು ತಮ್ಮ ಕೃತಿಗಳಲ್ಲೂ ತರುವ ಪ್ರಯತ್ನ ಮಾಡಿದರು. ಈ ಪ್ರಯತ್ನವನ್ನು ಲಕ್ಕಣ್ಣದಂಡೇಶ, ವಿರೂಪಾಕ್ಷಪಂಡಿತ ಹಾಗೂ ಗುಬ್ಬಿಯ ಮಲ್ಲಣಾರ್ಯರ ಕೃತಿಗಳಲ್ಲಿ ಕಾಣುತ್ತೇವೆ. ಲಕ್ಕಣ್ಣದಂಡೇಶನೇ ಮೊದಲಾದವರು ವಿಷಯಗಳನ್ನು ಪ್ರತಿಪಾದಿಸುವಾಗ ಉಪನಿಷತ್ತು, ಸ್ಮೃತಿ, ಪುರಾಣ, ಶಿವಾಗಮ, ವಾತುಲಾಗಮ, ತಂತ್ರ— ಇವೇ ಮೊದಲಾದ ಶಾಸ್ತ್ರಗ್ರಂಥಗಳ ಆಧಾರಕೊಟ್ಟು (ಶಿ. ತ. ಚಿಂ. ಸಂ ೧. ಪ. ೧೫) ತಮ್ಮ ವಾದವನ್ನು ಗಟ್ಟಿ ನೆಲದಮೇಲೆ ಮಂಡಿಸುವ ಪ್ರಯತ್ನ ಮಾಡಿರುವರು. ತಮ್ಮ ವಿಚಾರಗಳು ಶಾಸ್ತ್ರೋಕ್ತವೂ ನಂಬಿಕೆಗೆ ಅರ್ಹವಾದುವೂ ಆಗಿರುವುದೆಂಬುದನ್ನು ಮನಗಾಣಿಸಲು ಅವರು ಈ ಬಗೆಯ ಮಾರ್ಗ ಹಿಡಿದಿರುವರು. ಲಕ್ಕಣ್ಣದಂಡೇಶ ಹಾಗೂ ಗುಬ್ಬಿಯ ಮಲ್ಲಣಾರ್ಯರ ಕೃತಿಗಳು ನಿರ್ದಿಷ್ಟ ವ್ಯಕ್ತಿಯೊಬ್ಬನ ವಿಷಯನಿರೂಪಣೆಗೆ ಪ್ರಾಧಾನ್ಯಕೊಟ್ಟ ಗ್ರಂಥಗಳಲ್ಲ. ಅವುಗಳ ವಿಷಯವ್ಯಾಪ್ತಿ ವಿಶಾಲವಾದುದು. ಅವು ವೀರಶೈವಧರ್ಮಕ್ಕೆ ಕೈಪಿಡಿಗಳು. ಸಿದ್ಧನಂಜೇಶನು (ಸು. ೧೬೫೦) ತನ್ನ ಗುರುರಾಜಚಾರಿತ್ರದ ಪೀಠಿಕಾಸಂಧಿಯಲ್ಲಿ ೧. ಆಚಾರ್ಯರ ಉದ್ಭವ ೨. ಗುರುವಂಶ ವಿವರಣೆ ೩. ಶಿವನ ಪಂಚವಿಂಶತಿಲೀಲೆ ೪. ಹರಪೂಜೆ ೫. ಪಂಡಿತಾರಾಧ್ಯರು ಹೇಳಿದ ಗಣಸಹಸ್ರನಾಮ ೬. ಧರೆಯಲ್ಲಿ ಶಿವಕೃಪೆಯನ್ನುಪಡೆದ ನೂತನಶಿವಪುರಾತನರ ಕಥೆಗಳು— ಹೀಗೆ ಈ ರೀತಿಯಲ್ಲಿ ವಿಷಯಾನುಕ್ರಮಣಿಕೆಯನ್ನು ಕೊಟ್ಟಿರುವನು. ಇದರಿಂದ ಸಿದ್ಧನಂಜೇಶನು ವ್ಯಕ್ತಿಯೊಬ್ಬನ ಚಾರಿತ್ರ

ನಿರೂಪಣೆಗೆ ತನ್ನ ಕಾವ್ಯವನ್ನು ಮೀಸಲು ಮಾಡಿಲ್ಲವೆಂಬುದು ಸುಸ್ಪಷ್ಟ. ಲಕ್ಕಣ್ಣದಂಡೇಶ, ಗುಬ್ಬಿಯ ಮಲ್ಲಣಾರ್ಯರ ಕಾವ್ಯೋದ್ದೇಶ ಅವನನ್ನು ಬಹಳವಾಗಿ ಆಕರ್ಷಿಸಿದೆ. ಅವರು ಹೇಳಿದ ಲಕ್ಷಣಗಳನ್ನು ಸಂಪೂರ್ಣವಾಗಿ ಈತ ಹೇಳದಿದ್ದರೂ ಕೆಲವನ್ನಾದರೂ ಸಂಕ್ಷಿಪ್ತವಾಗಿ ಹೇಳುವಲ್ಲಿ ಕೃತಕೃತ್ಯನಾಗಿದ್ದಾನೆ. ತನ್ನ ಕೃತಿಯ ಮೂಲಕ ಶರಣಧರ್ಮದ ತತ್ವಗಳನ್ನು ಪರಿಣಾಮಕಾರಿಯಾಗಿ ತಿಳಿಸುವ ಉದ್ದೇಶ ಸಿದ್ಧನಂಜೇಶನಿಗಿದೆ. ಆ ಉದ್ದೇಶದ ನೆರವೇರಿಕೆಗಾಗಿ ಆತ ಜನಸಾಮಾನ್ಯರಿಗೆ ಅತಿಪ್ರಿಯವಾದ ಕಥೆಗಳ ಮೊರೆಹೊಕ್ಕಿದ್ದಾನೆ. ಅವನ ಕೃತಿಯ ಪರಿಶೀಲನೆಯಿಂದ ಅದೊಂದು 'ಶರಣಕಥಾರತ್ನಕೋಶ'. 'ಶಿವಕಥಾಸರಿತ್ಸಾಗರ'ವಾಗಿರುವುದು ಅತಿಶಯೋಕ್ತಿಯಲ್ಲವೆನ್ನಿಸುತ್ತದೆ. ಒಟ್ಟಿನಲ್ಲಿ ವೀರಶೈವಪುರಾಣಗಳ ಬಹುಮುಖ ಲಕ್ಷಣಗಳು ಅವುಗಳ ವಿಷಯವ್ಯಾಪ್ತಿಯ ನಿರ್ದೇಶನ ಮಾಡುವುದರ ಜೊತೆಗೆ. ಅವುಗಳು ಜನಪ್ರಿಯತೆ ಗಳಿಸಲು ಹಿಡಿದ ಪಥದರ್ಶನವನ್ನೂ ಮಾಡಿಸುತ್ತವೆ.

ಕರ್ನಾಟಕದಲ್ಲಿ ಶಿವಶರಣರು ಎಸಗಿದ ಸಾಮಾಜಿಕ ಹಾಗೂ ಧಾರ್ಮಿಕಕ್ರಾಂತಿ ಹಿಂದಿನ ಪರಂಪರಾಗತ ಮೌಲ್ಯಗಳ ಬದಲಾವಣೆಗೆ ಕಾರಣವಾಗಿ ಸಮಾಜದಲ್ಲಿ ಸುಖ-ಶಾಂತಿ-ನೆಮ್ಮದಿಗಳ ತಂಗಾಳಿ ಬೀಸಿದಾಗ ಜನತೆಯ ದೃಷ್ಟಿಯಲ್ಲಿ ಈ ಮಾರ್ಪಾಡಿಗೆ ಕಾರಣರಾದವರು ಸಾಮಾನ್ಯಮಾನವರಾಗಿ ಕಾಣದೆ ದೇವಮಾನವರಾಗಿ ಕಂಡುಬಂದರು. ಶರಣರ ಬದುಕು-ನಡೆ-ನುಡಿಗಳಲ್ಲಿನ ಪ್ರಾಮಾಣಿಕತೆ, ಸರಳತೆ. ನಿಷ್ಕಾಪಟ್ಯಗಳು ಜನಜೀವನವನ್ನು ಸೂರೆಗೊಂಡವು. ಜನರು ಇವರು ಪ್ರಾರಂಭಿಸಿದ ಸುಧಾರಿತಧರ್ಮಕ್ಕೆ ಮಾರುಹೋದರು. ಬಸವಾದಿಕಾರಣಿಕಪುರುಷರು ಮರ್ತ್ಯದಲ್ಲಿನ ತಮ್ಮ ಮಣಿಹವನ್ನು ಮುಗಿಸಿ ಹೋಗಿದ್ದರೂ ಅವರು ತಮ್ಮ ವಚನಗಳಲ್ಲಿ ಬಿಟ್ಟುಹೋಗಿದ್ದ ಅವರ ಬದುಕಿನ ಉದಾತ್ತವೂ ಅಮೂಲ್ಯವೂ ಆದ ತತ್ತ್ವಗಳನ್ನು ಅರಿತಿದ್ದ ಜನತೆ ಅವರ ಮಹಿಮೆಗಳನ್ನು ಮನದುಂಬಿ ಹೊಗಳುತ್ತಿತ್ತು : ಅವರನ್ನು ಹೃನ್ಮಂದಿರದಲ್ಲಿಟ್ಟು ಆರಾಧಿಸುತ್ತಿತ್ತು : ಅವರ ಜನ್ಮೋತ್ಸವಾದಿಗಳನ್ನು ಜಾತ್ರೆಗೂಡಿ ನಡೆಸುತ್ತಿದ್ದಿತು. ಅವರ ಬದುಕಿನ ಮಹತ್ವದ ಸಂಗತಿಗಳನ್ನು ಕೆಲವರು ಇದ್ದಕ್ಕಿದ್ದಂತೆಯೂ ಇನ್ನು ಕೆಲವರು ಭಾವಜೀವಿಗಳು ಆ ಶರಣರ ಬಗೆಗಿನ ಭಕ್ತಿಯ ಪ್ರತೀಕವಾಗಿ ಅವನ್ನು ಉತ್ಪ್ರೇಕ್ಷಿಸಿಯೂ ಕಥೆಗಳ ಮೂಲಕ ಪ್ರಚಾರ ಮಾಡುತ್ತಿದ್ದರು. ಇವೆಲ್ಲವನ್ನು ಕೇಳಿಯೂ ನೋಡಿಯೂ ತಿಳಿದಿದ್ದ ಮತ್ತು ಆ ಶರಣರ ವಚನಗಳನ್ನು ಅಭ್ಯಸಿಸಿದ್ದ ಹರಿಹರ ಇವೆಲ್ಲವುಗಳಿಂದಲೂ ಪ್ರಭಾವಿತನಾಗಿ ಅವರ ಬಗೆಗೆ ತನ್ನ ಎದೆಯೊಳಗಿಂದ ತುಂಬಿಬಂದ ಭಕ್ತಿಯಿಂದ ಕೃತಿರಚನೆ ಮಾಡಿದನು. ಜನರ ಮನಸ್ಸಿನ ಮೇಲೆ ನೇರವಾಗಿ ಪರಿಣಾಮವನ್ನುಂಟುಮಾಡಿ ಅವರ ಜೀವನವನ್ನು ತಿದ್ದಬಲ್ಲಂತಹ ಈ ನೂತನ ಪುಣ್ಯಶ್ಲೋಕರು ಮಾತ್ರವಲ್ಲ ಇವರಿಗೆ ಹಲವಾರು ಶತಮಾನಗಳ ಹಿಂದೆ ತಮಿಳುನಾಡಿನಲ್ಲಿ ಉಜ್ವಲವಾದ ಜೀವನವನ್ನು ನಡೆಸಿ, ಇವರಿಗೂ ಹಲಕೆಲವು ರೀತಿಗಳಲ್ಲಿ ಮಾರ್ಗದರ್ಶಕರಾಗಿದ್ದ ೬೩ ಮಂದಿ ಪುರಾತನಶೈವಸಂತರ ಚರಿತ್ರೆಗಳನ್ನೂ, ಹಿಂಡೋತ್ಪತ್ತಿ. ಪುಷ್ಪ. ಲಿಂಗಾರ್ಚನ. ಹಂಪೆಯರಸ ಇತ್ಯಾದಿ ವ್ಯಕ್ತಿನಿಷ್ಠ ರಗಳೆಗಳನ್ನೂ ಗುಣಸ್ತೋತ್ರ. ಜಯ. ನಮಃಶಿವಾಯ. ಪಂಚಾಕ್ಷರಿ. ಪಂಪಾಕ್ಷೇತ್ರ. ರುದ್ರಾಕ್ಷಿ. ವಿಭೂತಿ ಇತ್ಯಾದಿ ವಸ್ತುನಿಷ್ಠ ರಗಳೆಗಳನ್ನೂ ಕಾವ್ಯವಸ್ತುವಾಗಿ ಸ್ವೀಕರಿಸಿ ಸು. ೧೦೬ ರಗಳೆಗಳನ್ನು ಹರಿಹರ ಬರೆದಿರುವನು.

ಹರಿಹರನು ಕೈಗೊಂಡ ದಿಟ್ಟತನದ ಕಾರ್ಯಗಳಲ್ಲಿ ಮೊದಲನೆಯದು. ಅದುವರೆಗೆ ರೂಢಿಯಲ್ಲಿದ್ದ ಚಂಪೂಮಾರ್ಗವನ್ನು ಬಿಟ್ಟು ರಗಳೆ ಕಥನಕಾವ್ಯಕ್ಕೆ ಯೋಗ್ಯವೆಂದು ಭಾವಿಸಿ ಉಪಯೋಗಿಸಿದುದು. ಚಂಪೂಕಾವ್ಯಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಬಳಕೆಯಾಗುತ್ತಿದ್ದ ರಗಳೆಯ ಛಂದಸ್ಸಿಗೆ ಚೈತನ್ಯದುಂಬಿದವನು— ಪೂರ್ಣಕೃತಿಗೆ ರಗಳೆಯನ್ನೇ ಛಂದೋಮಾಧ್ಯಮವಾಗಿ ಬಳಸಿದವನು ಹರಿಹರ. ಅವನ ಎರಡನೆಯ ದಿಟ್ಟತನದ ಕಾರ್ಯವೆಂದರೆ ಹಿಂದಿನಿಂದ ಕಾವ್ಯಗಳಲ್ಲಿ ಸಂಪ್ರದಾಯವಾಗಿ ಬಂದಿದ್ದ ಅಷ್ಟಾದಶವರ್ಣನೆ ಹಾಗೂ ಅಲಂಕಾರಗಳ ತೊಡಕು ಬೇಡವೆಂದು ಅವುಗಳನ್ನು ಕಿತ್ತೊಗೆದುದು. ರಳ-ಕುಳ-ಕ್ಷಳಗಳ ಸಂಬಂಧದ ನಿಯಮವು ಅರ್ಥವಿಹೀನವಾದುದೆಂದು ಘಂಟಾಘೋಷವಾಗಿ ಹೇಳಿ ಆ ನಿಯಮವನ್ನು ಧೈರ್ಯದಿಂದ ಉಲ್ಲಂಘಿಸಿದುದನ್ನೂ ನಾವಿಲ್ಲಿ ನೆನೆಯಬಹುದು. ಹರಿಹರನ ಕಾಲಕ್ಕೆ ವೀರಶೈವಪುರಾಣಗಳ ನಿರ್ದಿಷ್ಟಲಕ್ಷಣಗಳು ಇನ್ನೂ ಮೂಡಿಯೇ ಇರಲಿಲ್ಲ. ವೈದಿಕ-ಜೈನ-ಶೈವಪುರಾಣಗಳ ಪರಿಚಯ ಅವನಿಗೆ ನಿಜಕ್ಕೂ ಸಾಕಷ್ಟಿದ್ದಿತು. ಆದರೂ ಅವನು 'ಪುರಾಣ'ವೆಂಬ ಹೆಸರಿನ ಬಳಕೆ ಮಾಡದಿರುವುದನ್ನು ನೋಡಿದರೆ ಪುರಾಣರಚನೆಯ ಉದ್ದೇಶವನ್ನೇ ಅವನು ಹೊಂದಿರಲಿಲ್ಲವೆಂದು ಭಾಸವಾಗುತ್ತದೆ. ಅವನ ಒಂದೊಂದು ರಗಳೆಯೂ ನಿರ್ದಿಷ್ಟ ವ್ಯಕ್ತಿಯ ಚರಿತ್ರೆಯನ್ನು ಹೇಳುತ್ತದಲ್ಲದೆ ವೀರಶೈವಪುರಾಣಗಳಲ್ಲಿ ಬರುವಂತೆ ನೂರಾರು ಕಥೆ. ಉಪಕಥೆಗಳನ್ನು ಹೇಳುವುದಿಲ್ಲ : ಧರ್ಮಪ್ರತಿಪಾದನೆ. ವಾದ-ವಿವಾದ ಇತ್ಯಾದಿ ವಿಷಯಗಳನ್ನು ತಿಳಿಸುವುದಿಲ್ಲ. ಅದ್ದರಿಂದ ಹರಿಹರನು ತನಗೆ ಹಿಂದೆ ಇದ್ದ ಶಿವಶರಣರ ಚರಿತ್ರೆಯನ್ನು ಬರೆಯುವುದರ ಮೂಲಕ ಕನ್ನಡಸಾಹಿತ್ಯದ

ಹೊಸ ಸಂಪ್ರದಾಯವೊಂದರ ಪ್ರಾರಂಭಿಗನೆನ್ನಬಹುದಲ್ಲದೆ, ಅವನು ವೀರಶೈವ ಪುರಾಣಗಳನ್ನು ಬರೆದನೆಂದು ಹೇಳಲಾಗದು. ಅವನ ಗಿರಿಜಾಕಲ್ಯಾಣವು ವಸ್ತುವಿನ ದೃಷ್ಟಿಯಿಂದ, ವಾಸ್ತವವಾಗಿ ಶಿವನ ಪಂಚವಿಂಶತಿಲೀಲೆಗಳಲ್ಲಿ ಒಂದಾಗಿದೆ; ಮಹಾಕಾವ್ಯದ ಲಕ್ಷಣಗಳ ಚೌಕಟ್ಟಿಗೆ ಬದ್ಧವಾಗಿದೆ. ಹೀಗಾಗಿ ಅದು ವೀರಶೈವ ಪುರಾಣವಲ್ಲ.

ರಾಘವಾಂಕನು ತನ್ನ ಸೋದರಮಾವನಾದ ಹರಿಹರನ ಸಂಪ್ರದಾಯವನ್ನೇ ಮುಂದುವರಿಸಿದನು. ಅವನು ಮೊದಲು ಹರಿಶ್ಚಂದ್ರಕಾವ್ಯವನ್ನು ರಚಿಸಿದರೂ ಗುರುವಿನ ಪ್ರಭಾವಕ್ಕೆ ಒಳಗಾದ ಮೇಲೆ ಆತನ ಕಾವ್ಯೋದ್ದೇಶವನ್ನು ತಾನೂ ಅಂಗೀಕರಿಸಿ, ಶಿವನಿಗೂ ಶಿವನ ಭಕ್ತರಿಗೂ ತನ್ನ ಮತಿಯನ್ನು ಮಾರಿಕೊಂಡು ಸಿದ್ಧರಾಮಚಾರಿತ್ರ, ಸೋಮನಾಥಚಾರಿತ್ರ, ಹರಿಹರಮಹತ್ವ (ಇವಕ್ಕೆ ಚರಿತ್ರೆ ಎಂದು ಹೆಸರಿಡದಿರಲು ಕಾರಣ ಇವರಲ್ಲಿ ಚಾರಿತ್ರಾಂಶಗಳಿಗಿಂತ ಮಹಿಮಾತಿಶಯಗಳ ವರ್ಣನೆಯ ಕಡೆಗೆ ಗಮನವಿತ್ತುದೇ ಆಗಿರಬೇಕು) ಎಂಬ ಶಿವಶರಣರ ಚರಿತ್ರೆಗಳನ್ನೂ ವೀರೇಶಚರಿತೆ, ಶರಭಚಾರಿತ್ರ ಎಂಬ ಶಿವಪಾರಮ್ಯಸೂಚಕವಾದ ಶಿವಲೀಲಾಚರಿತ್ರೆಗಳನ್ನೂ ರಚಿಸಿದನು ಮತ್ತು ತನ್ಮೂಲಕ ಚಾರಿತ್ರಕಾವ್ಯಗಳ ಆದ್ಯನಿರ್ಮಾತೃವೆನ್ನಿಸಿಕೊಂಡನು. ಆದರೆ ಅವನು ಹರಿಹರನಂತೆ ರಗಳೆಯನ್ನು ತನ್ನ ಕಾವ್ಯವಾಹಿನಿಯನ್ನಾಗಿ ಮಾಡಿಕೊಳ್ಳದೆ ಷಟ್ಪದಿಯನ್ನು ಬಳಸಿದನು. ಹರಿಹರ ತನ್ನ ಭಕ್ತಿಯ ಆವೇಶಕ್ಕೆ ಸರಿಹೊಂದುವ ರಗಳೆಯನ್ನು ಶರಣರ ಕಥಾಕಾವ್ಯಕ್ಕೆ ವಾಹಕವಾಗಿ ಬಳಸಿದರೆ ರಾಘವಾಂಕ ಶಿವನ ಭಕ್ತರ, ಶರಣರ ಸ್ಫಟಿಕಸದೃಶವಾದ ಋಜುಜೀವನವನ್ನು ಚಿತ್ರಿಸಲು ದೇಶೀಯ ಛಂದಸ್ಸಾದ ವಾರ್ಧಕಷಟ್ಪದಿಯನ್ನು ಸ್ವೀಕರಿಸಿದನು. ಹೀಗೆ ಹರಿಹರ-ರಾಘವಾಂಕರು ಹೊಸ ಪ್ರಯೋಗಗಳನ್ನು ಮಾಡಿ ದೇಶೀಯಛಂದಸ್ಸಿನಲ್ಲಿ ಕೃತಿಗಳು ಹೊರಬರಲು ಕಾರಣರಾದರು.

ಹರಿಹರ ಬಸವಪೂರ್ವ ಹಾಗೂ ಬಸವಸಮಕಾಲೀನ ಶರಣರ ಚರಿತ್ರೆಯನ್ನೂ ತಮಿಳುನಾಡಿನ ಅರುವತ್ತು ಮೂವರು ಪುರಾತನರ ಚರಿತ್ರೆಗಳನ್ನೂ ಬಿಡಿಬಿಡಿಯಾಗಿ ರಗಳೆಯಲ್ಲಿ ರಚಿಸಿದರೆ, ಆಂಧ್ರದೇಶದ ಪಾಲ್ಕುರಿಕೆ ಸೋಮನಾಥನು ಅವೆಲ್ಲವನ್ನೂ ಒಂದೇ ಒಂದು ಗ್ರಂಥದಲ್ಲಿ (ಬಸವಪುರಾಣ) ಒಟ್ಟುಗೂಡಿಸಿ ಜನಪ್ರಿಯವಾದ ದ್ವಿಪದಿ ಛಂದಸ್ಸಿನಲ್ಲಿ ರಚಿಸಿದನು. ಹರಿಹರ-ಸೋಮನಾಥರು ಹೆಚ್ಚುಕಡಿಮೆ ಒಂದೇಕಾಲದಲ್ಲಿ ಕೃತಿರಚನೆ ಮಾಡಿದರೂ, ಒಂದೇಬಗೆಯ ವಸ್ತುವನ್ನು ಆರಿಸಿಕೊಂಡರೂ ಇವರಿಬ್ಬರ ಕೃತಿಗಳಲ್ಲಿ ವ್ಯತ್ಯಾಸಗಳಿವೆ. ಇವರೀರ್ವರ ಪ್ರತಿಭೆಯೂ ಒಂದು ಮತ್ತೊಂದನ್ನು ಅನುಸರಿಸದೆ ಪ್ರತ್ಯೇಕಪ್ರತ್ಯೇಕಮಾರ್ಗಗಳಲ್ಲಿ ಹರಿದಿರುವುದು ಕಂಡುಬರುತ್ತದೆ.

ಭೀಮಕವಿ, ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು'ವನ್ನು ಕನ್ನಡಕ್ಕೆ ಪರಿವರ್ತಿಸಿರುವನು. ಇವನ ಬಸವಪುರಾಣವು 'ಪುರಾಣ'ವೆಂಬ ಹೆಸರನ್ನು ಹೊತ್ತ ಮೊದಲ ಕೃತಿ. ಇವನ ಕಾಲಕ್ಕೆ (ಕ್ರಿ.ಶ. ೧೩೬೦) ಹಿಂದೆ ಮಹಿಮಾಪುರುಷರ ಚರಿತ್ರೆಗಳು 'ಚಾರಿತ್ರ' ಕಾವ್ಯಗಳಾಗಿ ರಚಿಸಲ್ಪಟ್ಟು ಜನಪ್ರಿಯತೆಯನ್ನು ಗಳಿಸಿದ್ದುವು. ಉದಾಹರಣೆಗೆ ರಾಘವಾಂಕನ ಸಿದ್ಧರಾಮಚಾರಿತ್ರ, ಸೋಮನಾಥಚಾರಿತ್ರಗಳನ್ನು ನೋಡಬಹುದು. ಇವುಗಳಲ್ಲಿ ಕವಿಯು ಆ ಚಾರಿತ್ರಪುರುಷರ ಜೀವನಚರಿತ್ರೆಯನ್ನು ತನ್ನ ತಿಳಿವಿಗೆ ಸಿಲುಕಿದ ಮಟ್ಟಿಗೆ ಪ್ರಾಮಾಣಿಕವಾಗಿಯೂ, ಒಮ್ಮೊಮ್ಮೆ ನಾಯಕ ಅವತಾರಪುರುಷನೆಂಬ ಭಾವನೆಗೆ ಒಳಗಾಗಿ ಆತನ ಗುಣ–ಶೀಲಗಳು, ನಡೆಸಿದ ಕಾರ್ಯಗಳು ಇತ್ಯಾದಿಗಳಿಗೆ ಅತಿಶಯತೆಯ ಬಣ್ಣ ಬಳಿದೂ ಚಿತ್ರಿಸಿರುವನು. ಇಲ್ಲಿ ಸೂಚಿಸಿರುವ ಎರಡನೆಯ ಕಾರಣದಿಂದಾಗಿ ಅವನ್ನು ಮುಂದಣವರು (ಪ್ರತಿಮಾಡಿದವರಾಗಿರಬಹುದು ಇಲ್ಲವೆ ಪ್ರಕಟಿಸಿದವರಾಗಿರಬಹುದು) ಪುರಾಣಗಳೆಂದೇ ಕರೆಯತೊಡಗಿದರು ಎಂಬುದಕ್ಕೆ 'ಸಿದ್ಧರಾಮಚಾರಿತ್ರ'ದ ಕೊನೆಯಲ್ಲಿ ಮಾತ್ರ 'ಪುರಾಣ'ವೆಂಬ ಹೆಸರಿನ ಪ್ರಯೋಗವಿರುವುದೂ, ೧೯೧೧ರಲ್ಲಿ ಬೆಂಗಳೂರು ಒಕ್ಕಲಿಗರ ಸಂಘದ ಮುದ್ರಣಾಲಯದಲ್ಲಿ ಮುದ್ರಣಗೊಂಡು, ಬೆಳಗಾಂ ಜಿಲ್ಲೆ, ಅಥಣಿ ತಾಲ್ಲೂಕು ಯಲಿಹಡಗಲಿಗ್ರಾಮದ ವಸಂತದಾದಪಾಟೀಲ್ ಜೋತೆಪ್ಪಗೌಡರು ಶಿದ್ಧನಗೌಡರು ಇವರಿಂದ ಪ್ರಕಟವಾದ 'ಸೋಮನಾಥ ಚಾರಿತ್ರ'ವು 'ಆದಿಶೆಟ್ಟಿಪುರಾಣ'ವೆಂಬ ಶಿರೋನಾಮೆ ಹೊಂದಿರುವುದೂ ನಿದರ್ಶನಗಳಾಗಿವೆ. ಭೀಮಕವಿಯ 'ಬಸವಪುರಾಣ'ವು ಅವುಗಳಿಂದ ಭಿನ್ನವಾಗಿ ಪುರಾಣವೈಶಿಷ್ಟ್ಯರಚನಾವಿನ್ಯಾಸವನ್ನು ಹೊಂದಿದೆ.

ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ಬಾಳಿಬದುಕಿದ ವೀರಶೈವಮಹಾಪುರುಷರ ದಿವ್ಯಜೀವನವನ್ನು ಪುರಾಣವಸ್ತುವನ್ನಾಗಿ ಮಾಡಿಕೊಂಡು ವೀರಶೈವಪುರಾಣಸಂಪ್ರದಾಯದಲ್ಲಿ ಒಂದು ಹೊಸತನವನ್ನು ತೋರಿಸಿದ ಶ್ರೇಯಸ್ಸು ಪದ್ಮಣಾಂಕನದು. ಅವನು ಹೊಯ್ಸಳ ನರಸಿಂಹಬಲ್ಲಾಳನ ಮಹಾಮಂತ್ರಿಯಾಗಿದ್ದ ಪದ್ಮರಸನ ಜೀವನಚರಿತ್ರೆಯನ್ನು ತನ್ನ ಕೃತಿಯ ವಸ್ತುವನ್ನಾಗಿ ತೆಗೆದುಕೊಂಡು 'ಪದ್ಮರಾಜಪುರಾಣ'ವನ್ನು ರಚಿಸಿದನು. ಅವನು

ಅವರ ಪ್ರತಿಯೊಂದು ಸಂಧಿಯ ಕೊನೆಯಲ್ಲಿ 'ಈ ಶುದ್ಧ ಚರಿತಮುಂ' ಎಂದು ಹೇಳುವುದರ ಮೂಲಕ ತನ್ನ ಕೃತಿ ಪದ್ಮರಾಜರ ಉತ್ಪ್ರೇಕ್ಷಾರಹಿತವಾದ ಚರಿತೆಯಾಗಿದೆ ; ಎಂಬಂಶವನ್ನು ವಾಚಕರ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಮಾಡಲು ಯತ್ನಿಸಿರುವನು. ಅದರಲ್ಲಿ ಕೆರೆಯ ಪದ್ಮರಸನ ಶುದ್ಧಚರಿತೆಯ ಜೊತೆಗೆ ಅವರ ಸಮಕಾಲೀನರಾದ ಹರಿಹರ–ರಾಘವಾಂಕರ ಜೀವನ ಚರಿತ್ರೆಗೆ ಸಂಬಂಧಿಸಿದ ಅನೇಕ ಸಂಗತಿಗಳು ತಿಳಿದುಬರುತ್ತವೆ: ಮತ್ತು ವೀರಶೈವಪುರಾಣಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಷಟ್ಸ್ಥಲ, ಅಷ್ಟಾವರಣವಿವರಣೆಗಳು, ಶಿವಾಧಿಕ್ಯನಿರೂಪಣೆ— ಇವು ಇದರಲ್ಲಿ ದೀರ್ಘವಾಗಿ ಬಂದಿದ್ದು ಕೃತಿಗಿಟ್ಟ 'ಪುರಾಣ'ವೆಂಬ ಹೆಸರನ್ನು ಸಾರ್ಥಕಗೊಳಿಸಲಾಗಿದೆ.

ಚತುರ್ಮುಖ ಬೊಮ್ಮರಸನು ರೇವಣಸಿದ್ಧೇಶ್ವರರ 'ಚಾರಿತ್ರ'ವನ್ನು ಪುರಾಣರೂಪದಲ್ಲಿ ಹೇಳಿರುವನು. ಈತ ಈ ಪುರಾಣವನ್ನು ಅಪರೂಪಕ್ಕೆ ಅಲ್ಲಿ ಇಲ್ಲಿ 'ಚಾರಿತ್ರ' 'ಚರಿತ್ರ' ಎಂದು ಕರೆದಿದ್ದರೂ ಇದನ್ನು ನಾವು ಪುರಾಣವೆಂದೇ ಕರೆಯಬೇಕಾಗಿದೆ. ಏಕೆಂದರೆ ಇಲ್ಲಿ ಚಾರಿತ್ರಿಕಾಂಶಗಳಿಗಿಂತ ಪೌರಾಣಿಕಾಂಶವೇ ಹೆಚ್ಚು. ಕವಿಯೇ ಹೇಳಿರುವಂತೆ ಈ ಪುರಾಣವು "ಭುವನದಲ್ಲಿ ಅರಿಯದಂತೆ ಏಳ್ನೂರು ವರುಷವೂ ಸುಖದಿಂದ ಇದ್ದ ವೀರಶೈವೋಪದೇಶವನ್ನು ಸಕಲ ಸಜ್ಜನಸಂತತಿಗೆ ಕರುಣಿಸಿದ "ರೇವಣಸಿದ್ಧನ ಕಥೆ" (೧.೧೧) "ಹರನ ಸಮ್ಯಗ್‌ಜ್ಞಾನ ಕಲೆ ತಾನೆ ರೇವಣೇಶ್ವರನಾದುದಾತನ ವಿಚಿತ್ರಚರಿತ್ರದ ಕಥಾಂತರ"ವು ಈ 'ಮಹಾಕಾವ್ಯ'. (೧.೪೧)

ಸಿಂಗಿರಾಜನ 'ಅಮಲಬಸವಚಾರಿತ್ರ'ವು ಬಸವಣ್ಣನನ್ನು ಕುರಿತ ಚಾರಿತ್ರಿಕಗ್ರಂಥ. ಬಸವನ ಚರಿತ್ರೆಯನ್ನು ಆತನ ವಚನಗಳ ಹಿನ್ನೆಲೆಯಲ್ಲಿ ಹಾಗೂ ಪ್ರಚಲಿತವಾಗಿದ್ದ ಅವನ ಪವಾಡಗಳ ಹಿನ್ನೆಲೆಯಲ್ಲಿ ಹೇಳಿದ ಮೊದಲ ಕವಿ ಈತ. ಬಸವಣ್ಣನ ಚರಿತ್ರೆಯ ಜೊತೆಗೆ ಇನ್ನಿತರ ಶರಣರ ಕಥೆ ಬಂದರೂ ಅವು ಬಸವನ ವ್ಯಕ್ತಿತ್ವ ನಿರೂಪಣೆಗೆ ಪೋಷಕಾಂಗವಾಗಿ ಬಂದಿವೆ.

ಬಸವಯುಗದ ಕವಿಗಳಲ್ಲಿ ಬಹಳ ಮಂದಿ 'ಚಾರಿತ್ರ' ಕಾವ್ಯಗಳನ್ನು ಪುರಾಣರೂಪದಲ್ಲಿ ಹೇಳಿದರು. ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ಕಾವ್ಯಮುಖೇನ ನಿರೂಪಿಸಹೊರಟ ಚಾಮರಸ, ತನ್ನ ಕೃತಿಯನ್ನು 'ಚಾರಿತ್ರ'ವೆಂದಾಗಲಿ 'ಪುರಾಣ'ವೆಂದಾಗಲಿ ಕರೆಯದೆ 'ಲೀಲೆ' ಎಂದನು. ಸಾಮಾನ್ಯವಾಗಿ ಪುರಾಣಗಳಲ್ಲಿ ಪುರಾತನನೂತನಶರಣರ ನೂರಾರು ಉಪಕಥೆಗಳು ಬಂದು,ಮೂಲಕಥೆಯನ್ನು ಮರೆಸುವ,ಅಮಾನುಷವಾದ ಹತ್ತಾರು ಪವಾಡಗಳನ್ನು ತಂದು ನಾಯಕನನ್ನು ಅತಿಮಾನುಷನನ್ನಾಗಿ ಮಾಡುವ ಪುರಾಣಸಂಪ್ರದಾಯ ಚಾಮರಸನಿಗೆ ಬಹುವಾಗಿ ಹಿಡಿಸಲಿಲ್ಲ. ಪ್ರಭುವಿನ ವ್ಯಕ್ತಿತ್ವ ನಿರೂಪಣೆಗೆ ಒಂದು ನೂತನಮಾರ್ಗವನ್ನೇ ಆತ ಅನುಸರಿಸಿದನು. ಲಿಂಗರೂಪಿ ಪರಶಿವನೆ ಅಲ್ಲಮನಾಗಿ ಭುವಿಯಲ್ಲಿ ಅವತರಿಸಿ ತಾನು ಹಿಂದೆ ತಾಳಿದ ಇಪ್ಪತ್ತೈದು ಪ್ರಧಾನಲೀಲೆಗಳಂತೆ ಇಪ್ಪತ್ತೈದು ನೂತನಲೀಲೆಗಳನ್ನು ತೋರಿಸಿ ಮೆರೆದನೆಂಬ ಮನೋಭಾವನೆಯ ಚಾಮರಸ ತನ್ನ ಕೃತಿಯಾದ ಪ್ರಭುಲಿಂಗಲೀಲೆಯ ಇಪ್ಪತ್ತೈದು ಗತಿಗಳಲ್ಲಿ ಆ ಪ್ರಭುರೂಪಿ–ಲಿಂಗವು ತೋರಿದ ಲೀಲೆಗಳನ್ನು ಚಿತ್ರಿಸಿ ಅದಕ್ಕೆ 'ಪ್ರಭುಲಿಂಗಲೀಲೆ' ಎಂದು ಔಚಿತ್ಯಪೂರ್ಣವಾದ ಹೆಸರಿಟ್ಟನು. ಇಲ್ಲಿಯೇ ನಾವು ಚಾಮರಸನಿಗೂ ಅವನ ಹಿಂದಿನವರಿಗೂ ಇರುವ ಭಿನ್ನತೆಯನ್ನು ಕಾಣಬಹುದು.

ಪ್ರೌಢದೇವರಾಯನ ಕಾಲದಲ್ಲಿ (ಕ್ರಿ.ಶ. ೧೪೨೪–೧೪೪೬) ವೀರಶೈವಧರ್ಮ ಪುನರುಜ್ಜೀವನಗೊಂಡಿತು. ಕರ್ಣಾಟಕದಾದ್ಯಂತ ಮಠಗಳು ಸ್ಥಾಪನೆಯಾದುವು. ಯತಿಗಳಿಗೆ ಸರಿಯಾದ ಶಿಕ್ಷಣಕೊಟ್ಟು ಬಹುಸಂಖ್ಯೆಯಲ್ಲಿ ಸಜ್ಜುಗೊಳಿಸುವ ಕಾರ್ಯವೂ ಪ್ರಾರಂಭವಾಯಿತು. ಜಂಗಮಮಠಗಳ ಮೂಲಕ ವೀರಶೈವ ಧರ್ಮ ಹಾಗೂ ಅದರ ತತ್ತ್ವಗಳ ಪ್ರಸಾರಕಾರ್ಯ ಭರದಿಂದ ಸಾಗಿತು. ಮಠಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಜನಸಾಮಾನ್ಯರ ಮೇಲೆ ವಿಶೇಷ ಪ್ರಭಾವಬೀರಿದವು. ಮಠಪತಿಗಳು ಯತಿಶ್ರೇಷ್ಠರು ಮಾನವಕಲ್ಯಾಣವೇ ತಮ್ಮ ಮುಖ್ಯ ಗುರಿಯಾಗಿ ಹೊಂದಿ ಜನರನ್ನು ಸದ್ಧರ್ಮದ ಹಾದಿಯತ್ತ ಕೊಂಡೊಯ್ದರು. ಹಲವಾರು ಮಂದಿ ಪ್ರತಿಭಾನ್ವಿತಮಠಾಧಿಪತಿಗಳು ಶರಣರ ಜೀವನ ಚರಿತ್ರೆಯನ್ನು ಹೇಳುವುದರ ಜೊತೆಗೆ ಧರ್ಮಪ್ರಸಾರಕಾರ್ಯವನ್ನು ತಮ್ಮ ಪುರಾಣರಚನೆಯ ಧ್ಯೇಯವನ್ನಾಗಿ ಸ್ವೀಕರಿಸಿದರು. ಉದಾಹರಣೆಗೆ ಗುಬ್ಬಿಯ ಮಲ್ಲಣಾರ್ಯನ ಮಗ ಶಾಂತೇಶನು (ಸು. ೧೫೬೦) ಸಿದ್ಧೇಶವಿಜಯ ಅಥವಾ ಸಿದ್ಧೇಶ್ವರಪುರಾಣವನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿದನು. ವಿರಕ್ತ ತೋಂಟದಾರ್ಯನು (ಸು. ೧೫೬೦) ಸಿದ್ಧೇಶ್ವರಪುರಾಣ ಮತ್ತು ಪಾಲ್ಕುರಿಕೆ ಸೋಮೇಶ್ವರಪುರಾಣಗಳನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿದನು. ವಿದ್ಯಾನಗರದ ಹಿರಿಯಮಠದ ಸಿದ್ಧವೀರೇಶನ ಶಿಷ್ಯ ವಿರೂಪಾಕ್ಷಪಂಡಿತನು (ಕ್ರಿ.ಶ. ೧೫೮೪) ಚನ್ನಬಸವಪುರಾಣವನ್ನು ವಾರ್ಧಕಷಟ್ಪದಿಯಲ್ಲಿ ಬರೆದನು. ಸೂರಕೋಡದ ಹಿರಿಯಮಠಾಧ್ಯಕ್ಷರಾದ ಪಂ. ಚನ್ನಕವಿಗಳು (೧೯೫೨) ಶಿವರುದ್ರ–ವಿಜಯಪುರಾಣವನ್ನು ಬರೆದರು.

ಹದಿನಾರನೆಯ ಶತಮಾನದಿಂದೀಚೆಗೆ ಬಸವಸಮಕಾಲೀನಶರಣರ ಚರಿತ್ರೆ ಇಲ್ಲವೆ ಆಧುನಿಕಶಿವಶರಣರ ಚರಿತ್ರೆ ಪುರಾಣವೆಂಬ ಹೆಸರಿನಲ್ಲಿ ಇಲ್ಲವೇ ಚರಿತೆ, ಚರಿತ್ರ, ಲೀಲೆ, ವಿಲಾಸ, ವಿಜಯಗಳೆಂಬ ಶಿರೋನಾಮೆಯಲ್ಲಿ ಬಂದಂತೆ ಕಂಡುಬರುವುದು. ಹದಿನಾರನೆಯ ಶತಮಾನದ ಪೂರ್ವಾರ್ಧದವರೆವಿಗೂ ವಾರ್ಧಕ ಇಲ್ಲವೇ ಭಾಮಿನೀ ಷಟ್ಪದಿಯಲ್ಲಿ ವಿಶೇಷವಾಗಿ ಪುರಾಣ ಹಾಗೂ ಪುರಾಣಛಾಯಾಕೃತಿಗಳು (ಚರಿತೆ, ಚರಿತ್ರೆ. ಚರಿತ್ರ, ಚಾರಿತ್ರ, ಲೀಲೆ, ವಿಲಾಸ, ವಿಜಯಗಳು) ಬರುತ್ತಿದ್ದುವು. ಅಲ್ಲಿಂದ ಮುಂದೆ ತನ್ನ ನಿಯಮವನ್ನು ಸಡಿಲಗೊಳಿಸಿದಂತೆ ಕಂಡುಬರುತ್ತದೆ. ಜನಸಾಮಾನ್ಯರ ಮನೆ-ಮನಗಳನ್ನು ತಮ್ಮ ವಿಚಾರಧಾರೆಗಳು ತಮ್ಮ ಧರ್ಮದ ತತ್ವಗಳು. ತಮ್ಮ ಧರ್ಮದ ಮಹಿಮಾನ್ವಿತವ್ಯಕ್ತಿಗಳ ಚಾರಿತ್ರ್ಯಗಳು ಮುಟ್ಟಬೇಕೆಂಬ ಉದ್ದೇಶದಿಂದ ಪುರಾಣ, ಚಾರಿತ್ರ, ಚರಿತೆ, ವಿಜಯ, ವಿಲಾಸ, ಲೀಲೆ ಮೊದಲಾದ ಕೃತಿರೂಪಗಳು ಸರಳಗೊಳ್ಳತೊಡಗಿದವು. ಹಾಡುಗಬ್ಬವಾದ ಸಾಂಗತ್ಯದಲ್ಲಿ ಪುರಾಣ, ಚರಿತೆ, ಚಾರಿತ್ರ್ಯಗಳು ಬರತೊಡಗಿದುದನ್ನು ನೋಡಿದಾಗ ಪುರಾಣರಚಕರ ಅಭಿರುಚಿಯುಲ್ಲಾದ ಮಾರ್ಪಾಟನ್ನು ನಾವಿಲ್ಲಿ ಗುರುತಿಸುತ್ತೇವೆ. ಉದಾಹರಣೆಗೆ ಪರ್ವತದೇವನ (ಸು. ೧೫೭೮) ನನ್ನಯ್ಯಗಳ ಚಾರಿತ್ರ, ಗೌರವಾಂಕನ (ಸು. ೧೬೦೦)ಮೋಳಿಗೆಯ್ಯನ ಪುರಾಣ, ಚೆನ್ನಣ್ಣನ(ಸು. ೧೬೫೦) ವೀರೇಶ್ವರ ಚರಿತೆ, ಶಾಂತವೀರದೇಶಿಕನ (ಸು. ೧೬೫೦) ಶಿವಗಣಚಾರಿತ್ರ, ಬಸವಕವಿಯ (ಸು. ೧೭೦೦) ರೇಣುಕಾರ್ಯರ ಚರಿತೆ, (ಅ) ರೇವಣಸಾಂಗತ್ಯ, ಚೆಲುವನ (ಸು. ೧೭೨೫) ಮಡಿವಾಳಯ್ಯನ ಚರಿತೆ ಇತ್ಯಾದಿ. ಹದಿನಾರನೆಯ ಶತಮಾನದ ಉತ್ತರಾರ್ಧದಿಂದೀಚೆಗೆ ವೀರಶೈವ ಕವಿಗಳು ಛಂದೋರೂಪದಲ್ಲಿ ಹೊಸದರ ಬಳಕೆಯನ್ನು ತಂದರೂ ಹಿಂದಿನವರು ಬಳಸಿದ ಛಂದೋರೂಪಗಳು ಸವಕಲು ನಾಣ್ಯವಾಗಲಿಲ್ಲ. ಒಟ್ಟಾರೆ ಪುರಾಣ ಹಾಗೂ ಪುರಾಣಛಾಯಾಕೃತಿಗಳನ್ನು ಸಮೀಕ್ಷಿಸಿದಾಗ ಭಾಮಿನೀ ಹಾಗೂ ವಾರ್ಧಕಗಳು ತಾವು ಏರಿದ ಗದ್ದುಗೆಯಿಂದ ಕೆಳಗಿಳಿದುಬಂದಂತೆ ಕಂಡುಬರುವುದಿಲ್ಲ.

ಹನ್ನೆರಡನೆಯ ಶತಮಾನದ ವೇಳೆಗೆ ನೆಲೆ ಬತ್ತಿದ ಚಂಪುವಿಗೆ ಜೀವವಿತ್ತು ಮರಳಿ ನೆಲೆ ಚಿಮ್ಮಿಸಲು ವೀರಶೈವ ಕವಿಗಳೂ ಪ್ರಯತ್ನಮಾಡಿದಂತೆ ಕಂಡುಬರುತ್ತಿದೆ. ಸದಾಶಿವ ಕವಿ ಶಿವಯೋಗಿಯ (೧೫೫೪) ರಾಮನಾಥ ವಿಲಾಸ, ಮುರಿಗೆ ದೇಶಿಕೇಂದ್ರನ (ಸು. ೧೫೬೦) ರಾಜೇಂದ್ರ ವಿಜಯ, ಸಿದ್ಧಲಿಂಗ ಶಿವಯೋಗಿಯ (ಸು. ೧೬೦೦) ಭೈರವೇಶ್ವರ ಪುರಾಣ, ಕವಿ ಮಾದಣ್ಣನ ನನ್ನಯ್ಯಗಳ ಚಾರಿತ್ರ, ಷಡಕ್ಷರದೇವನ ಬಸವರಾಜವಿಜಯಂ — ಇತ್ಯಾದಿ ಗ್ರಂಥಗಳು ಚಂಪುವಿನಲ್ಲಿ ಬಂದಿದ್ದು, ಇದರಿಂದ ವೀರಶೈವ ಕವಿಗಳ ಪ್ರಯೋಗಪ್ರಿಯತೆಯೂ, ಹಳಗನ್ನಡದ ಮೇಲಿನ ಮಮತೆಯೂ, ಪಾಂಡಿತ್ಯದ ಬಗೆಗಿನ ಶ್ರದ್ಧಾಸಕ್ತಿಗಳೂ ತಿಳಿದುಬರುತ್ತವೆ.

ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಪುರಾಣರಚನೆಯನ್ನು ಸರಳಗೊಳಿಸುವ ಪ್ರಯತ್ನವನ್ನು ವೀರ ಶೈವಕವಿಗಳು ನಡೆಸಿದಂತೆ ಕಂಡುಬಂದರೂ ಅದು ಮತ್ತಷ್ಟು ಸರಳಗೊಂಡುದು. ಹದಿನೆಂಟನೆಯ ಶತಮಾನದ ಉತ್ತ ರಾರ್ಧದಲ್ಲಿ. ವೀರಶೈವ ಕವಿಗಳು ಶಿವಶರಣರ ಚಾರಿತ್ರನಿರೂಪಣೆಗೆ ಯಕ್ಷಗಾನವನ್ನು ಬಳಸಿ ಕನ್ನಡಸಾಹಿತ್ಯಚರಿತ್ರೆ ಯಲ್ಲಿ ನೂತನ ಮೈಲಿಗಲ್ಲೊಂದನ್ನು ಸ್ಥಾಪಿಸಿದರು. ಹದಿನೆಂಟನೆಯ ಶತಮಾನಕ್ಕೆ ಮೊದಲು ಯಕ್ಷಗಾನವನ್ನು ಛಂದೋ ಮಾಧ್ಯಮವಾಗಿ ಕಾವ್ಯದಲ್ಲಿ ಬಳಸಿದಂತೆ ಕಂಡುಬರುವುದಿಲ್ಲ. ವೀರಶೈವಕವಿಗಳು ಶರಣರ ಚರಿತ್ರೆ, ಲೀಲೆ, ವಿಲಾಸ ಗಳನ್ನು ಮನಮುಟ್ಟುವಂತೆ ಜನಸಾಮಾನ್ಯರಿಗೆ ತಿಳಿಸಲು ಗೇಯಪ್ರಧಾನವಾಗಿರುವ ಯಕ್ಷಗಾನದ ಬಳಕೆ ಮಾಡಿ ಮತ್ತೊಮ್ಮೆ ತಮ್ಮ ಪ್ರಯೋಗಶೀಲತೆಯನ್ನು ಪ್ರಕಟಪಡಿಸಿದರು. ಚನ್ನಪ್ಪಕವಿಯ (೧೭೫೦) ಶಿವಶರಣಲೀಲಾ ಮೃತ, ಮಹಾಂತದೇಶಿಕನ (೧೮೦೦) ಚೋರಬಸವ ಚರಿತೆ ಇತ್ಯಾದಿಗಳು ಹೆಸರಿಸಬಹುದಾದ ಜನಪ್ರಿಯ ಯಕ್ಷ ಗಾನ ಕೃತಿಗಳಾಗಿವೆ.

ಹದಿನೆಂಟನೆಯ ಶತಮಾನದಿಂದ ಇಂದಿನವರೆವಿಗೆ ವೀರಶೈವಪುರಾಣ ಹಾಗೂ ಪುರಾಣಛಾಯಾಕೃತಿಗಳು ಬಹು ಸಂಖ್ಯೆಯಲ್ಲಿ ಬಂದಿವೆ. ಬಹುಪಾಲು ಕೃತಿಗಳು ಉತ್ತರ ಕರ್ಣಾಟಕದ ಕವಿಗಳಿಂದಲೇ ರಚಿತವಾಗಿರುವುದು ಇಲ್ಲಿ ಗಮನೀಯ ಸಂಗತಿ. ಉತ್ತರ ಕರ್ಣಾಟಕದಲ್ಲಿ ಜನ್ಮವೆತ್ತಿ ಮಹಿಮಾಪುರುಷರೆನ್ನಿಸಿಕೊಂಡ ನೂತನಶರಣರ ಚಾರಿತ್ರ್ಯಗಳು ಪುರಾಣರೂಪದಲ್ಲಿ ಬಂದಿವೆ.* ಕೆಲವು ಪುರಾಣಗಳು ಮಠದ ಪೀಠದ ಭವ್ಯಪರಂಪರೆಯನ್ನು ಹೇಳಲು, ಆಯಾ

* ಕುಮಾರವಿಭುವಿನ (೧೮೭೧) ಕುಮಾರೇಶ್ವರಪುರಾಣ, ಸಿದ್ಧಲಿಂಗಕವಿಯ (೧೮೬೦) ಶಿವಯೋಗೀಶ್ವರಪುರಾಣ, ಬಸವಕವಿಯ (೧೮೬೦) ದುರದುಂಡೀಶ್ವರಪುರಾಣ, ಮಲ್ಲಿಕಾರ್ಜುನನ (೧೮೭೦) ಕಿರಿಟೇಶ್ವರಪುರಾಣ, ಗುರುಲಿಂಗಸಿದ್ಧ ಕವಿಯ (೧೯೧೧) ಶರಣಬಸವೇಶ್ವರ ಪುರಾಣ, ಶಿವಪುರದ ಸಿದ್ಧಲಿಂಗಕವಿಯ (೧೯೨೦) ಸಾವಳಗಿ ಶಿವಲಿಂಗೇಶ್ವರಪುರಾಣ, ದ್ಯಾಂಪುರದ ಚೆನ್ನಕವಿಗಳ (೧೯೨೫) ಅನ್ನದಾನೀಶ್ವರಪುರಾಣ, ಹುಚ್ಚೇಶ್ವರಪುರಾಣ, ಹಾನಗಲ್ಲ ಕುಮಾರೇಶ್ವರಪುರಾಣ,

ಪೀಠವನ್ನೇರಿದ ಶರಣರ ಚಾರಿತ್ರನಿರೂಪಣೆ ಮಾಡಲು ಮೀಸಲಾಗಿವೆ. ಉದಾಹರಣೆಗೆ ಮಲ್ಲಿಕಾರ್ಜುನ ಕವಿಯ (೧೮೩೦) ಕಿರೀಟೇಶ್ವರ ಪುರಾಣ. ಚೆನ್ನಕವಿಗಳ (೧೯೨೫) ಫಕೀರೇಶ್ವರ ಪುರಾಣ. ವೈ. ನಾಗೇಶಶಾಸ್ತ್ರಿಗಳ (೧೯೪೦) ತೋಂಟದ ಶ್ರೀಮದರ್ಧನಾರೀಶ್ವರ ಪುರಾಣ. ಫಲಾಹಾರ ಶಿವಯೋಗೀಶ್ವರ ಪುರಾಣ ಇತ್ಯಾದಿ. ನೂತನ ಮಹಂತರ ಮೇಲಿನ ಅಪಾರ ಭಕ್ತಿ, ಅವರು ನಡೆಸಿರಬಹುದಾದ ಮಹಿಮೆಗಳು—ಇವು ಒಂದು ರೀತಿಯಲ್ಲಿ ಪುರಾಣ ರಚನೆಗೆ ಕಾರಣವಾದರೆ, ಮತ್ತೊಂದು ರೀತಿಯಲ್ಲಿ ಮಠಾಧಿಕಾರಿಗಳು ತಮ್ಮ ಮಠದ ಇತಿಹಾಸವನ್ನು ಪುರಾಣರೂಪದಲ್ಲಿ ಶಾಶ್ವತಗೊಳಿಸುವ ಬಯಕೆಯು ಕಾರಣವಾಗಿ ಹಲವು ಪುರಾಣಗಳು ರೂಪುಗೊಂಡವು. ಈ ಬಗೆಯ ಪುರಾಣರಚಕರಲ್ಲಿ ಸಂಪ್ರದಾಯಪ್ರಿಯತೆ ಎದ್ದು ಕಾಣುವ ಗುಣವಾದರೂ ಅವರ ಕೃತಿಗಳಲ್ಲಿ ಹಿಂದಿನ ಕವಿಗಳ ಆಳವಾದ ಲೋಕಾನುಭವ, ಗಾಢಚಿಂತನೆ, ಜೀವನದರ್ಶನ, ಪಾಂಡಿತ್ಯ_ಪ್ರತಿಭೆಗಳು. ಈಡು–ಜೋಡು— ಇವುಗಳಾವುವೂ ವಿಶೇಷವಾಗಿ ಕಂಡು ಬರುವುದಿಲ್ಲ. ಜನಸಾಮಾನ್ಯರ ಮನದಲ್ಲಿ ಮಹಿಮಾಪುರುಷರ ಬದುಕು–ಕಾರ್ಯ–ಬೋಧೆಗಳನ್ನು ಮಾಡಿಸುವುದರಲ್ಲಿ, ಮಹಂತರು ಮಾಡಿದ ಅದ್ಭುತಗಳ (ಪವಾಡಗಳ) ಮೂಲಕ ಅವರ ಬಗೆಗೆ ಭಯಭಕ್ತಿಯನ್ನು ಉದ್ದೀಪಿಸುವಲ್ಲಿ, ವೀರಶೈವ ಧರ್ಮದ ತತ್ವಗಳನ್ನು ತಿಳಿಯಪಡಿಸುವುದರಲ್ಲಿ ಈ ಪುರಾಣರಚಕರು ತೃಪ್ತರಾದಂತಿದೆ.

ವೀರಶೈವಪುರಾಣ ಹಾಗೂ ಪುರಾಣಛಾಯಾಕೃತಿಗಳ ಕರ್ತೃಗಳೆಲ್ಲ ಹರಿಹರೋದಿತ ಮಾರ್ಗದಲ್ಲಿ ಶಿವ ಹಾಗೂ ಶಿವಶರಣರನ್ನು ಮಾತ್ರ ನುತಿಸುವ ಪ್ರತಿಜ್ಞೆ ತೊಟ್ಟು ನಡೆದಿರುವರು. ರಾಘವಾಂಕ ಶಿವಕವಿಗಳು ಕಾವ್ಯಕ್ಕೆ ಅಷ್ಟಾದಶ ವರ್ಣನೆಗಳ ನಿರ್ಬಂಧ ಬೇಡವೆಂದು ಸಾರಲು ಅದನ್ನನುಸರಿಸಿ ಬಹುಪಾಲು ಮಂದಿ ಕವಿಗಳು ಅದರ ಬಲವಾದ ಆಕರ್ಷಣೆಯಿಂದ ತಮ್ಮನ್ನು ಬಿಡಿಸಿಕೊಂಡಿರುವರು. ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಯಕ್ಷಗಾನ— ಹೀಗೆ ವೈವಿಧ್ಯಮಯವಾದ ಛಂದೋಬಳಕೆ ಮಾಡಿರುವರು. ವಾರ್ಧಕಕ್ಕೆ ರಾಘವಾಂಕ : ಭಾಮಿನಿಗೆ ಭೀಮಕವಿ, ಚಾಮರಸ : ರಗಳೆಗೆ ಹರಿಹರ : ಸಾಂಗತ್ಯಕ್ಕೆ ಗೌರವಾಂಕ ; ಚಂಪೂವಿಗೆ ಷಡಕ್ಷರಿ : ತ್ರಿಪದಿಗೆ ಶ್ರೀಮತಿ ಜಯದೇವಿ ತಾಯಿ ಲಿಗಾಡೆ ; ಯಕ್ಷಗಾನಕ್ಕೆ ಚನ್ನಪ್ಪ ಹಾಗೂ ಮಹಾಂತದೇಶಿಕ— ಹೀಗೆ ಇವರೆಲ್ಲರ ದೈವದತ್ತ ಪ್ರತಿಭೆಯ ಸಂಸ್ಪರ್ಶದಿಂದ ಛಂದಸ್ಸು ಹೊಸ ಜೀವ ಪಡೆಯಿತು : ಕವಿಗೆ ಇನಿದಾಯಿತು. ಹಾಡುವ ಕಂಠಕ್ಕೆ ಮಾಧುರ್ಯದ ಸೇಚನೆ ಮಾಡಿತು. ಚೆನ್ನಬಸವಾಂಕ, ಎಳಂದೂರ ಹರೀಶ್ವರ, ಸಿದ್ಧನಂಜೇಶ ಇತ್ಯಾದಿ ಪುರಾಣಕವಿಗಳು ತಮ್ಮ ಕೃತಿಗಳಲ್ಲಿ ಬಗೆಬಗೆಯ ಷಟ್ಪದಿಗಳ ಪ್ರಯೋಗ ನಡೆಸಿ ಎಲ್ಲ ಷಟ್ಪದಿಗಳ ಬಳಕೆಯ ಸಾಧ್ಯಾಸಾಧ್ಯತೆಗಳ ಬಗೆಗೆ ಬೆಳಕು ಚೆಲ್ಲಿರುವರು. 'ಶಿವತತ್ವಚಿಂತಾಮಣಿ' ವೀರಶೈವಧರ್ಮದ ತೆಕ್ಕೆಗೆ ಒಳಗಾದ ಕರ್ಣಾಟಕದ ಎಲ್ಲ ಹಿರಿ-ಕಿರಿಯ ಶರಣರ ಪರಿಚಯ ಮಾಡಿಕೊಡುವ ಹಿರಿಯಸಾಹಸ ಮಾಡಿದೆ. 'ವೀರಶೈವಾಮೃತಮಹಾಪುರಾಣ'ವು ವೀರಶೈವ ಧರ್ಮಕ್ಕೇ ಒಂದು ವಿಶ್ವಕೋಶದಂತಿದೆ. ವೀರಶೈವರಿಗೆ ಆ ಧರ್ಮದ ತತ್ವಗಳ ತಿಳುವಳಿಕೆ ನೀಡುವಲ್ಲಿ ವೀರಶೈವ ಪುರಾಣಗಳು ವಹಿಸಿರುವ ಪಾತ್ರವನ್ನು ಹೆಸರಿಸಲು ಶಬ್ದಗಳಿಗೆ ಶಕ್ತಿ ಸಾಲದು ! ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಯಕ್ಷಗಾನ ಈ ಛಂದೋ ಮಾಧ್ಯಮಗಳ ಮೂಲಕ ಪುರಾಣ ಹಾಗೂ ಪುರಾಣಛಾಯಾಕೃತಿಗಳು (ಚರಿತೆ, ಚಾರಿತ್ರ, ಲೀಲೆ. ವಿಲಾಸ, ವಿಜಯ) ಕನ್ನಡಸಾಹಿತ್ಯದಲ್ಲಿನ ಬೆಳವಣಿಗೆಯ ಪ್ರಕಾರಗಳನ್ನು ಬಿಟ್ಟು ಬಹುತೇಕ ಮಿಕ್ಕೆಲ್ಲ ಪ್ರಕಾರಗಳಲ್ಲಿ ತನ್ನೆಲ್ಲಾ ಸಾಧ್ಯತೆಗಳನ್ನು ಪ್ರಕಟಪಡಿಸಿರುವುದು ನಿಜಕ್ಕೂ ಆಶ್ಚರ್ಯಕರವಾಗಿದೆ. ಕನ್ನಡಕ್ಕೆ ವೀರಶೈವ ಪುರಾಣಗಳ ಹಾಗೂ ಪುರಾಣ ಛಾಯಾಕೃತಿಗಳ ಕೊಡುಗೆ ಮೇಲೆ ತಿಳಿಸಿರುವಂತೆ ಅಪೂರ್ವವಾಗಿದೆ.

---

ಶರಣವೀರೇಶ್ವರಪುರಾಣ, ಕಲ್ಲಿನಾಥಶಾಸ್ತ್ರಿಗಳ (೧೯೩೦) ಶರಣಬಸವೇಶ್ವರಪುರಾಣ, ವೈ. ನಾಗೇಶಶಾಸ್ತ್ರಿಗಳ (೧೯೪೦) ಫಲಾಹಾರ–ಶಿವಯೋಗೀಶ್ವರಪುರಾಣ, ಮರಿಯೋಗೀಶ್ವರಪುರಾಣ, ಗವಿಸಿದ್ಧೇಶ್ವರಪುರಾಣ, ತೋಂಟದ ಅರ್ಧನಾರೀಶ್ವರ ಪುರಾಣ, ಪಂಡಿತ ಸದಾಶಿವ ಹುಕ್ಕೇರಿ ಹಿಟ್ಟಣಗಿ ಮಠದ (೧೯೫೭) ಬಿದಿರಿ ಕುಮಾರೇಶ್ವರಪುರಾಣ, ಶ್ರೀಮತಿ ಜಯದೇವ ತಾಯಿ ಲಿಗಾಡೆಯವರ (೧೯೬೮) ಸಿದ್ಧರಾಮೇಶ್ವರಪುರಾಣ—ಇತ್ಯಾದಿ.

**ಪುರಾಣಛಾಯಾಕೃತಿಗಳು**

ಪಂಡಿತ ಚನ್ನಕವಿ ಹಿರಿಯಮಠದ (೧೯೩೦) ಶಿವರುದ್ರವಿಜಯಪುರಾಣ ; ಬಸವ ಕವಿಯ (೧೯೦೦) ಮಹಲಿಂಗ ಲೀಲೆ ; ವೈ. ನಾಗೇಶಶಾಸ್ತ್ರಿಗಳ (೧೯೪೦) ಮೃತ್ಯುಂಜಯಲೀಲಾವಿಲಾಸಂ ; ಮಾವನೂರು ಚನ್ನಬಸವನ (೧೮೪೦) ಶರಣ ಬಸವಚರಿತೆ ; ಟಿ. ಎಂ. ಚಂದ್ರಶೇಖರಶಾಸ್ತ್ರಿಯವರ (೧೯೨೧) ಅಥಣಿ ಶಿವಯೋಗೀಶ್ವರಚಾರಿತ್ರ ಇತ್ಯಾದಿ.

# ವೀರಶೈವ-ಚಂಪೂಕಾವ್ಯಗಳು ಮತ್ತು ಕವಿಗಳು

ಪಂಡಿತ ಚನ್ನಪ್ಪ ಎರೇಸೀಮೆ

ಸಾಹಿತ್ಯವೆಂಬುದು ಯಾವುದೇ ಇರಲಿ. ಅದು ಸಮಕಾಲೀನಜೀವನದ ಅಗತ್ಯಗಳನ್ನು ಪೂರೈಸುವ ಹಾಗೂ ಅದನ್ನು ಪ್ರತಿಬಿಂಬಿಸುವ ವಿಚಾರಗಳಿಂದ ಭೂಯಿಷ್ಠವಾಗಿರುತ್ತದೆ; ಮೇಲಾಗಿ ತತ್ಸಾಹಿತ್ಯನಿರ್ಮಾತೃವಿನ ಪಾಂಡಿತ್ಯ. ಪ್ರತಿಭೆ, ವಾಕ್‌ಶಕ್ತಿ. ಕಾವ್ಯಶಾಸ್ತ್ರಜ್ಞಾನಾದಿಗಳನ್ನೂ, ಸಂಸ್ಕೃತಿ. ಸಮಾಜಜೀವನದ ಮೌಲ್ಯಗಳನ್ನೂ ಧ್ವನಿತಗೊಳಿಸುತ್ತದೆ. ತತ್ಕಾಲೀನಜನಪದವಾಣಿಯೂ ಶಾಸ್ತ್ರೀಯತೆಯ ಕವಚ ಧರಿಸಿ ಶ್ರೇಷ್ಠಸಾಹಿತ್ಯವೆಂಬ ಕೀರ್ತಿಗೆ ಭಾಜನವಾಗುತ್ತದೆ. ಕವಿ ತನ್ನ ದೈವದತ್ತ ಅಜಾಂಡಶಬ್ದಪ್ರಯೋಗಕೌಶಲ್ಯದ ಸಾಮಗ್ರಿಗಳಿಂದ ಮಹಾಕಾವ್ಯಸೌಧವೊಂದನ್ನು ನಿರ್ಮಿಸಿ, ಅಲ್ಲಲ್ಲಿ ಅನೇಕ ಚಿತ್ರವಿಚಿತ್ರಕುಸುರಿಯ ಕೆತ್ತನೆಕೆಲಸ ಮಾಡಿ, ಅದರಲ್ಲಿ ಮೂಲವಿಗ್ರಹವೊಂದನ್ನು ಸ್ಥಾಪಿಸುತ್ತಾನೆ. ತನ್ನ ಆ ಮೂಲೋದ್ದೇಶದ ಘನತೆಯ ಆಧಿಕ್ಯಕ್ಕೇ ಹೊರಗೆಲ್ಲ ಅಲಂಕಾರ ಮಾಡಿ ಆಕರ್ಷಿಸುತ್ತಾನೆ. ಹಳೆಬೀಡಿನ ದೇವಾಲಯದ ಬಾಹ್ಯಾಲಂಕಾರವೆಲ್ಲ ಒಳಗೆ ಪ್ರತಿಷ್ಠಾಪಿಸಿದ ಮೂಲವಿಗ್ರಹದ ಬಗೆಗೆ ಲೋಕದ ಆಕರ್ಷಣೆ ಮಾಡಲು. ಇಂತಹ ಮಹಾಕಾವ್ಯದಿಂದ ಕವಿಯೂ ಧನ್ಯತೆ ಪಡೆಯುತ್ತಾನೆ. ಆಕಲ್ಪಾಂತಚಿರಸ್ಥಾಯಿಯಾಗಿ ಕಾವ್ಯವೂ ಲೋಕದ ಜನಜೀವನಕ್ಕೆ ನಿಚ್ಚಂ 'ಪೊಸತಾಗಿ' ರಸಾನುಭೂತಿಗೊಳಿಸುತ್ತದೆ. ಈ ಬಗೆಯ ಕಾವ್ಯನಿರ್ಮಾಣಕೌಶಲಸಾಮರ್ಥ್ಯ ಎಲ್ಲ ಕವಿಗಳಿಗೂ ಇರುತ್ತದೆಂದಲ್ಲ: ಅಥವಾ ಪದ್ಯ ರಚಿಸಿದವರೆಲ್ಲ 'ಕವಿ' ಶಬ್ದದ ಸಮಗ್ರಲಕ್ಷಣಕ್ಕೊಳಪಡುವರೆಂದೂ ಅಲ್ಲ. ಯಾವ ಕವಿಯ ವಾಕ್ಕು ವಶ್ಯವಾಕ್ಕೋ. ಯಾವಾತನು ಶಾಸ್ತ್ರವೆಂಬ ರೋಹಣಾಚಲವನ್ನೇರಿ ಅಲ್ಲಿನ ನವಕವಿತಾ ಚಿಂತಾಮಣಿಗಳನ್ನು ಪಡೆಯುವ ಭಾಗ್ಯಶಾಲಿಯೋ, ಯಾವನಿಗೆ ನವನವೋನ್ಮೇಷಶಾಲಿನೀ ಬುದ್ಧಿಯು ಹಿಡಿತದಲ್ಲುಂಟೋ. ಯಾವನು ಕಾವ್ಯಪ್ರಪಂಚದ ಮಲಕು-ಪಲಕುಗಳ ಕೂಲಂಕಷ-ಅಭ್ಯಾಸವನ್ನು ಸತತ ಮಾಡಿದವನೋ, ಯಾವಾತನು ವಿದ್ವಜ್ಜನಸೇವಾಜನ್ಯ-ಅನುರಾಗಪಾತ್ರನೋ—ಅಂತಹ ಪುಣ್ಯಶಾಲಿಗಳಿಗೆ ಮಾತ್ರ ಮಹಾಕಾವ್ಯನಿರ್ಮಾಣಚಾತುರೀಚತುರತೆ ಲಭಿಸುತ್ತದೆ. ಅಪಾರಶಬ್ದಸಂಪತ್ತಿನಿಂದ ಕೂಡಿದವನಾಗಿರಬಹುದು ; ಪ್ರತಿಭಾದಿ ಶಕ್ತಿಗಳಿಲ್ಲದಿದ್ದರೆ ಕಾವ್ಯ ಕೇವಲ ಬುಡುಬುಡಿಕೆ. ಪ್ರತಿಭಾಶಕ್ತಿಯಿದ್ದು ಭಾಷೆಯ ಹದಬೆದೆ ಮತ್ತು ಔಚಿತ್ಯವಿಶಿಷ್ಟ ಶಬ್ದಬಾಹುಳ್ಯಾದಿಗಳಿಲ್ಲದಿದ್ದರೆ ಕೂಸು ಕಂಡ ಕನಸಿನಂತೆ. ಆದ್ದರಿಂದಲೇ "ಶಕ್ತಿರ್ನಿಪುಣತಾ ಲೋಕಕಾವ್ಯ-ಶಾಸ್ತ್ರಾದ್ಯವೇಕ್ಷಣಾತ್ । ಕಾವ್ಯಜ್ಞಶಿಕ್ಷಯಾಭ್ಯಾಸಃ ಇತಿ ಹೇತುಸ್ತದುದ್ಭವೇ" ಎಂದು ಮಮ್ಮಟ. ಕಾವ್ಯ ಎಂಥವರಿಂದ ಹುಟ್ಟುವುದು ಎಂಬ ಬಗೆಗೆ ಲಕ್ಷಣ ಹೇಳಿದ್ದಾನೆ. ಇಷ್ಟೊಂದು ಶಕ್ತಿವಿಶೇಷಗಳಿಂದ ಕಾವ್ಯನಿರ್ಮಾಣಮಾಡಿದ ಕವಿಗಳು ಹಲವುಕಾಲ ಬದುಕುತ್ತಾರೆ. ಉಳಿದವರು ಬದುಕುವ ಆಸೆ ತೀರ ಕಡಿಮೆ. ಕರ್ನಾಟಕಭಾಷೆಯಲ್ಲಿ ಮಹಾಕವಿಪಟ್ಟವನ್ನೇರಿ ಕುಳಿತ ಕವಿಪ್ರಪಂಚಕ್ಕೆ ಕೊರತೆ ಇಲ್ಲ. ಅದರಲ್ಲೂ ವೀರಶೈವಚಂಪೂಕವಿಗಳು ತಮ್ಮವೇ ಆದ ಅನೇಕ ವೈಶಿಷ್ಟ್ಯಗಳಿಂದ ಚಂಪೂಕಾವ್ಯನಿರ್ಮಾಣ ಮಾಡಿ ಕನ್ನಡಸಾಹಿತ್ಯಸರಸ್ವತಿಗೆ ಅಪೂರ್ವ ಕಾಣಿಕೆ ಕೊಟ್ಟಿದ್ದಾರೆ : ಆಕಲ್ಪಾಂತ ಚಿರಸ್ಥಾಯಿಗೊಳಿಸಿದ್ದಾರೆ.

## ಕನ್ನಡ ಸಾಹಿತ್ಯದಲ್ಲಿ ಚಂಪೂಮಾರ್ಗ ಹುಟ್ಟಿಬಂದ ಬಗೆ

ಕನ್ನಡ ಸಾಹಿತ್ಯದಲ್ಲಿ ನಮಗೆ ಪ್ರಥಮತಃ ಸಿಕ್ಕುವ ಪಂಪರನ್ನಾದಿಗಳ ಪ್ರತಿಭಾಪಾಂಡಿತ್ಯಪೂರ್ಣಕೃತಿಗಳು ಅಂದಿನ ಪರಿಸರದಲ್ಲಿ ಇದ್ದಕ್ಕಿದ್ದಂತೆ ಹಾಗೆಯೇ ಈ ರೀತಿ ಮೈದೋರಿ ಹೊರಬಂದುವೆಂದು ತಿಳಿಯಬಾರದು. ಹಿಂದಿನ ಅನೇಕ ಶತಮಾನಗಳಲ್ಲಿ ಅನೇಕಬಗೆಯ ಜನಪದವಾಣಿಯ ಗೋಡುಮಣ್ಣಿನ ಮೇಲೆ ಈ ಕಾವ್ಯಗಳೆಂಬ ಸಸ್ಯಾಢ್ಯಸಂಪತ್ತು ಗೋಚರವಾಗಿದೆಯೆಂಬುದಕ್ಕೆ ಅನೇಕಾಧಾರಗಳು ನಮಗೆ ಉಪಲಬ್ಧವಾಗುತ್ತಿವೆ. ತೀರ ಪ್ರಾಚೀನಕನ್ನಡಸಾಹಿತ

ರೂಪಗಳ ಬಗೆಗೆ ಪ್ರಾಚೀನಶಿಲಾಶಾಸನಗಳು ಮತ್ತು ನೃಪತುಂಗನ ಕವಿರಾಜಮಾರ್ಗಗಳೇ ಮೊದಲಾದವು ನಮಗೆ ಅನೇಕ ಮಾಹಿತಿಗಳನ್ನೊದಗಿಸುತ್ತವೆ. ಅವು ಪ್ರಾಚೀನಕನ್ನಡಸಾಹಿತ್ಯಸರಸ್ವತಿಯು ಹಳೆಯ ಮನೆಗಳಾಗಿ ಅವಳ ಅಂದಿನ ಸೌಂದರ್ಯದ ಅವಶೇಷಗಳಂತೆ ಕಂಗೊಳಿಸುತ್ತವೆ. ಆ ಸಾಹಿತ್ಯದ ರೂಪಗಳಲ್ಲಿ ಮುಖ್ಯವಾಗಿ ಒನಕೆವಾಡು, ಬೆದಂಡೆ, ಚತ್ತಾಣಗಳೆಂಬ ಛಂದೋರೂಪಗಳು, ತ್ರಿಪದಿ, ಕಂದಗಳು. ಒನಕೆವಾಡೆಂಬುದು ಮುಖ್ಯವಾಗಿ ಕುಟ್ಟುವಾಗ ಒನಕೆಯ ಪೆಟ್ಟಿನ ತಾಲಕ್ಕೆ ಲಯಗೂಡಿಸಿ ಹೇಳುವ ಹಾಡೇ ಎಂಬುದಕ್ಕೆ ಬೇರೆ ಪ್ರಮಾಣಗಳನ್ನು ಹುಡುಕಿ ಹೇಳುವ ಅವಶ್ಯಕತೆಯೇ ಬೇಕಿಲ್ಲ. ಕನ್ನಡಿಗರ ಬಹುಪ್ರಾಚೀನ ಸಾಹಿತ್ಯಭೇದವು ಇದೇ. ಇನ್ನು ಕನ್ನಡಿಗರ ಜಾಯಮಾನಕ್ಕೆ ಒಗ್ಗಿದ ಬಹುಪ್ರೀತಿಯ ಛಂದಸ್ಸಿನ ಹಾಡೆಂದರೆ ತ್ರಿಪದಿ. ಒನಕೆವಾಡು ತ್ರಿಪದಿಗೆ ಮೂಲ. ಕಂದಗಳು ಮಾತ್ರಾಗಣ, ದ್ವಿತೀಯಾಕ್ಷರಪ್ರಾಸಾದಿಗಳಿಂದ ಶುದ್ಧಕನ್ನಡದ ವಿಷಮವೃತ್ತವೆಂದೇ ಹೇಳಬೇಕು. ಕಂದಪದ್ಯದ ಬಳಿಕ ಚಂಪೂ, ಸಾಂಗತ್ಯ, ಯಕ್ಷಗಾನ, ರಗಳೆಯ ಎಲ್ಲ ಪ್ರಕಾರದ ಛಂದೋನಿಯಮಗಳ ಕಾವ್ಯಗಳಲ್ಲೂ ಸರ್ವಮಾನ್ಯತೆಯಿಂದ ಎಲ್ಲ ಕವಿಗಳ ಪ್ರೀತಿಯ 'ಕಂದ'ವೇ ಆಗಿದೆ. ಕನ್ನಡ ಸಾಹಿತ್ಯದಲ್ಲಿ ಇದಕ್ಕೆ ಪ್ರಾಚೀನತೆಯ ಘನತೆ ಇದೆ. ವೃತ್ತಗಳ ಬಳಕೆ ಮಾತ್ರ ಸಂಪೂರ್ಣವಾಗಿ ಸಂಸ್ಕೃತದಿಂದ ಬಂದಿದೆ. ಸಂಸ್ಕೃತದಲ್ಲಿ ಉಕ್ತಾತ್ಯುಕ್ತಾದಿ ಇಪ್ಪತ್ತಾರು ಅಕ್ಷರಗಳ ಅನಂತ ವೃತ್ತಗಳ ದೊಡ್ಡದೊಂದು ಜಾಲವೇ ಇದೆ. ಅದರಲ್ಲಿ ಕನ್ನಡಕ್ಕೆ ಇಪ್ಪತ್ತು ಮೂವತ್ತು ವೃತ್ತಗಳು ಬಂದಿವೆ. ಇಷ್ಟರಲ್ಲೂ ಕನ್ನಡಕ್ಕೆ ಖ್ಯಾತವಾದವು ಚಂಪಕಮಾಲಾ, ಉತ್ಪಲಮಾಲಾ, ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ, ಮಹಾಸ್ರಗ್ಧರೆಗಳು. ಆದರೆ ಈ ವೃತ್ತಜಾತಿಯ ಬಳಕೆಯನ್ನು ಯಥಾವತ್ತಾಗಿ ಕನ್ನಡಿಗರು ಸಂಸ್ಕೃತಲಕ್ಷಣ ಬದ್ಧವಾಗಿ ಉಪಯೋಗಿಸಿದ್ದಾರೆಂದಲ್ಲ. ಉಸಿರ್ದಾಣವಾದ ಯತಿಯ ಉಲ್ಲಂಘನೆ, ದ್ವಿತೀಯಾಕ್ಷರಪ್ರಾಸಗಳಿಂದ ಲಕ್ಷಣಮಿಕ್ಕ ಕನ್ನಡಜಾಯಮಾನಕ್ಕೆ ಒಗ್ಗಿಸಿ, ಬಗ್ಗಿಸಿಕೊಂಡು ಪ್ರಯೋಗಮಾಡಿಕೊಂಡಿದ್ದಾರೆ.

ಚಂಪೂಕಾವ್ಯ ಅಥವಾ ಮಾರ್ಗಕಾವ್ಯನಿರ್ಮಿತಿಗೆ ಕನ್ನಡಿಗರು ಬಳಸಿಕೊಂಡಿರುವ ತಂತ್ರವೆಂದರೆ ಗದ್ಯಭಾಗ, ವೃತ್ತಗಳು (ಮುಖ್ಯವಾಗಿ ಆರು ಮಾತ್ರ) ಕಂದಗಳುಳ್ಳ ವಿಶಿಷ್ಟರೀತಿಯ ಬರೆಹ. ಆದರೆ ಮಧ್ಯದಲ್ಲಿ ಎಲ್ಲೆಲ್ಲೋ ಅಪವಾದರೂಪವಾಗಿ ಸ್ವಲ್ಪ ರಗಳೆ, ತ್ರಿಪದಿಗಳನ್ನೂ ಬಳಸಿರುವುದುಂಟು. ಇದು ಸಮಗ್ರಕಾವ್ಯದೃಷ್ಟಿಯಿಂದ ತೀರ ಅತ್ಯಲ್ಪ. ಆದರೆ ಕೆಲವು ಕಡೆ ಲಲಿತಪದವೃತ್ತಗಳೆಂಬ ಮೂವತ್ತಕ್ಷರಗಳ(ಪ್ರತಿಸಾಲಿನಲ್ಲೂ ಮೂವತ್ತು ಅಕ್ಷರಗಳುಳ್ಳ) ಛಂದೋಪ್ರಕಾರವನ್ನೂ ಬಳಕೆಯಲ್ಲಿ ತಂದಿದ್ದಾರೆ. ಇದು ಮೂಲಕನ್ನಡದ್ದೇ.[1]

'ಚಂಪೂ' ಎಂಬುದು ಸಂಸ್ಕೃತದಿಂದ ಕನ್ನಡಕ್ಕೆ ಬಂದಿದೆ ಎಂಬುದು ನಿರ್ವಿವಾದ. ಆದರೆ ಇದ್ದಕ್ಕಿದ್ದಂತೆ ಬಂದಿದೆ ಎಂಬುದು ತಪ್ಪು. ಅದು ಕನ್ನಡಕ್ಕೆ ಬಂದರೂ ಕನ್ನಡತನವನ್ನು ಮೈಗೂಡಿಸಿಕೊಂಡು ತನ್ನದೇ ಆದ ವೈಶಿಷ್ಟ್ಯದಿಂದ ಬೆಳೆದುಬಂದಿದೆ. ಸಂಸ್ಕೃತದಲ್ಲಿ ಚಂಪೂಲಕ್ಷಣವನ್ನು ದಂಡಿಯು ಪ್ರಥಮತಃ ನಮಗೆ ತಿಳಿದಮಟ್ಟಿಗೆ ಹೇಳಿದ್ದಾನೆ. ಗದ್ಯಪದ್ಯಮಯವಾಗಿರುವ ಕಾಚಿತ್ ಕಾವ್ಯಪ್ರಕಾರಗಳು ಚಂಪೂ[2] ಎಂದು ಅವನ ಅಭಿಪ್ರಾಯ. ಆದರೆ ಗದ್ಯಪದ್ಯ ಮಯವಾದದ್ದೆಲ್ಲ ಚಂಪೂ ಎಂದು ಇದರ ಅರ್ಥವಲ್ಲ. ಈ ವಾದವಿವಾದವೇನೇ ಇರಲಿ. ಕನ್ನಡ ಚಂಪೂಕಾವ್ಯಗಳ ಮುಖ್ಯ ಲಕ್ಷಣವೆಂದರೆ ಅಧಿಕ ಕಂದಪದ್ಯಗಳು : ಸಂಸ್ಕೃತ ಲಕ್ಷಣದ ಮುಖ್ಯವಾದ ಆರು ವೃತ್ತಗಳು : ಪ್ರಸಂಗಬಂದರೆ ಹರಿಣಪ್ಲುತ, ಪೃಥ್ವಿ, ಹರಿಣಿ, ಮಾಲಿನಿ, ಪುಷ್ಪಿತಾಗ್ರ, ಇಂದ್ರವಜ್ರ, ಶಿಖರಿಣಿಯೇ ಮೊದಲಾದ ಕೆಲವು ವೃತ್ತಗಳು: ಮಿತಿಮೀರಿತು ಅಲ್ಲಲ್ಲಿ ಎರಡುಮೂರಕ್ಷರಗಳ ಸಂಬಂಧಕಲ್ಪನಾದೃಷ್ಟಿಯ ಗದ್ಯದಿಂದ ಮೊದಲ್ಗೊಂಡು ನಾಲ್ಕೈದು ಪುಟಗಳಷ್ಟು ಗದ್ಯಭಾಗದಿಂದ ಕೂಡಿ ಶೃಂಗಾರಾದಿರಸ, ಕೈಶಿಕ್ಯಾದಿವೃತ್ತಿ, ವೈದರ್ಭ್ಯಾದಿರೀತಿ, ಉಪಮಾದ್ಯಲಂಕಾರ ವೈಶಿಷ್ಟ್ಯದಿಂದಲೂ "ವಾರಿಧಿಪರ್ವತಂ ಪುರಮಧೀಶ್ವರಾದಿ." ಅಷ್ಟಾದಶವರ್ಣನಾವೈಭವಗಳಿಂದ ಕೂಡಿ, ಪ್ರೌಢ ಶೈಲಿಯಲ್ಲಿ ರಚಿಸಿದ ಕಾವ್ಯಪ್ರಕಾರವೇ ಆಗಿದೆ. ಇದನ್ನು 'ಮಾರ್ಗಕಾವ್ಯ'ವೆಂದೂ ಕರೆಯುವುದುಂಟು.

---

1 ಲಲಿತಪದವೃತ್ತವು ಷಡಕ್ಷರದೇವನ ಬಸವರಾಜವಿಜಯದಲ್ಲಿ ವಿಶೇಷವಾಗಿ, ರಾಜಶೇಖರವಿಳಾಸದಲ್ಲಿ ಕ್ವಚಿತ್ತಾಗಿ ಪ್ರಯೋಗಗೊಂಡಿದೆ; ಅಂದರೆ ಕೇವಲ ನಾಲ್ಕು ಸಲ. ಕನ್ನಡದ ಇತರ ಕವಿಗಳೂ ಇದನ್ನು ಉಪಯೋಗಿಸಿದ್ದಾರೆ. ಆದರೆ ಷಡಕ್ಷರದೇವನಷ್ಟಲ್ಲ.

2 'ಮಿಶ್ರಾಣಿ ನಾಟಕಾದೀನಿ ತೇಷಾಮನ್ಯತ್ರ ವಿಸ್ತರಃ। ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೇ॥' ದಂಡಿಯ ಕಾವ್ಯಾದರ್ಶ (೧-೩೧) ಆದರೆ ಇಲ್ಲಿ 'ಕಾಚಿತ್' ಎಂಬುದರ ಅರ್ಥ ವಿಶದವಾಗುವುದಿಲ್ಲ. ವ್ಯಾಖ್ಯಾನಕಾರನು—'ಕಾಚಿದಿತಿ। ನ ತು ಸರ್ವಾ ತೇನ ಗದ್ಯಪದ್ಯಮಯ್ಯಾ ರಾಜಸ್ತುತೇರ್ಬಿರುದಸಂಜ್ಞಾ ಅನ್ಯೈರುಕ್ತಾ ಜ್ಞಾತವ್ಯಾ' ಎಂದು ವ್ಯಾಖ್ಯಾನ ಮಾಡಿದ್ದಾನೆ. 'ಕಾಚಿತ್' ಎಂಬುದರಿಂದ ಗದ್ಯಪದ್ಯಾತ್ಮಕವಾದುದೆಲ್ಲವೂ ಚಂಪೂ ಎಂದು ಅರ್ಥವಲ್ಲ. ಈ ಬಗೆಗೆ ವಿಶೇಷ ತಿಳುವಳಿಕೆಗಾಗಿ ಪ್ರೊ. ರಂ. ಶ್ರೀ. ಮುಗಳಿ ಅವರ 'ಪ್ರಾಚೀನ ಕನ್ನಡ ಸಾಹಿತ್ಯರೂಪಗಳು.' ಗ್ರಂಥ ನೋಡಬಹುದು.

ಇಂತಹ ಚಂಪೂರೀತಿಯ ಗ್ರಂಥಪರಂಪರೆ ಕನ್ನಡದಲ್ಲಿ ಸ್ಪಷ್ಟವಾಗಿ ನೃಪತುಂಗ (ಕ್ರಿ.ಶ. ೮೧೪) ನಿಂದ ಈಚೆಗೆ ಬಳಕೆಯಲ್ಲಿ ಬಂದಂತೆ ಕಂಡರೂ ಅದಕ್ಕೂ ಪ್ರಾಚೀನಕಾಲದಿಂದಲೂ ಅದು ಬಳಕೆಯಲ್ಲಿದ್ದಿತೆಂಬ ಬಗೆಗೆ ಕುರುಹು ಸಿಕ್ಕುತ್ತದೆ. ಇದರ ಲಕ್ಷಣವನ್ನು ಕವಿರಾಜಮಾರ್ಗವು ಲಕ್ಷ್ಯವಿಲ್ಲದಿದ್ದರೆ ಹೇಗೆ ಹೇಳುತ್ತಿತ್ತು ? "ಕನ್ನಡಕಾವ್ಯಗಳಲ್ಲಿ ಗದ್ಯಪದ್ಯಸಮ್ಮಿಶ್ರವಾದ ಒಂದು ಸಾಹಿತ್ಯರೂಪವಿದ್ದಿತೆಂದೂ, ಅದನ್ನು ಚಿರಂತನಾಚಾರ್ಯರು ಗದ್ಯಕಥಾಪ್ರಗೀತಿಯೆಂದು ಕರೆದರೆಂದೂ ಹೇಳಿದೆ."[1]

"ಈಗ ನಾವು ಯಾವುದನ್ನು ಚಂಪೂಕಾವ್ಯವೆಂದು ನಿರ್ದೇಶಿಸುತ್ತೇವೆಯೋ ಅದೇ ಈ ಗದ್ಯಕಥೆಯಾಗಿರಬಹುದು. ಸಂಸ್ಕೃತದಲ್ಲಿ ಕೂಡ ಚಂಪೂ ಎಂಬ ಮಾತು ದಂಡಿಗಿಂತ ಈಚೆಗೆ ಬಹಳ ಬಳಕೆಗೆ ಬಂದಿರಬೇಕು. ಈ ಗದ್ಯ ಕಥೆಯಲ್ಲಿ ಗದ್ಯದ ಕಥೆ ಹೆಚ್ಚಾಗಿದ್ದಿರಬಹುದು."[2]

ಈ ವಿಷಯದಲ್ಲಿ ವಿಶೇಷವಾದ ಚರ್ಚೆಯಿದ್ದರೂ ಈಗ ನಾವು ಕರೆಯುವ ವಿಶಿಷ್ಟ ರೀತಿಯ ಚಂಪೂಶೈಲಿಗೆ ಅಗ್ರಮಾನ್ಯ ಕವಿ ಪಂಪ. ತಾನು ಹೇಳುವ ವಿಕ್ರಮಾರ್ಜುನವಿಜಯ ಮಹಾಕಥೆಯ ಗಭೀರತೆ ಈ ಶೈಲಿಯಿಂದ ಚಿರನೂತನವೆನಿಸಿದೆ : ಕನ್ನಡದ ಬನಿಯನ್ನು ಬೀಗಿಸಿದೆ ; ದ್ವಾಪರವನ್ನು ಕಣ್ಣಲ್ಲಿ ಮಿಂಚಿಸಿದೆ. ಈ ವಿಶಿಷ್ಟ ಶೈಲಿಯಲ್ಲದೆ ಇನ್ನಾವುದೇ ಶೈಲಿಯನ್ನು ಅನುಸರಿಸಿದ್ದರೆ ಪಂಪನಿಗೆ ಈಗಿದ್ದ ಕೀರ್ತಿ ಇರುತ್ತಿತ್ತೋ ಇಲ್ಲವೋ ! ಜಿನಾಗಮವನ್ನು ಬೆಳಗಿದ ಆದಿಪುರಾಣದಲ್ಲೂ ಈ ಶೈಲಿ ಕೃತಕೃತ್ಯತೆ ಪಡೆದಿದೆ. ಅವು ಮುನ್ನಿನ ಕಾವ್ಯಂಗಳನ್ನೆಲ್ಲ ಮೆಟ್ಟಿದವು. ಆದ್ದರಿಂದಲೇ ಆರುನೂರು ವರ್ಷಗಳ ಹಿಂದಿದ್ದ ನಾಗರಾಜನೆಂಬ ಜೈನಕವಿ 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಉದ್ಘೋಷಿಸಿದ್ದಾನೆ. ಪಂಪ, ಜೈನರಿಂದ ಬೆಳೆದುಬಂದ ಮಾರ್ಗಕಾವ್ಯಶೈಲಿಯ ಆಚಾರ್ಯ ಪುರುಷ. ಇವನು ಕನ್ನಡ ಚಂಪೂಶೈಲಿಯ ಒಂದು ಯುಗವನ್ನೇ ನಿರ್ಮಾಣಮಾಡಿ ಜೈನರ ಲೌಕಿಕ ಮತ್ತು ಧಾರ್ಮಿಕ ಕಾವ್ಯನಿರ್ಮಿತಿಯ ಪರಂಪರೆಯನ್ನೇ ಹಾಕಿಕೊಟ್ಟವನು. ವಿಮರ್ಶೆಯ ತಕ್ಕಡಿಯಲ್ಲಿ ಹೊಸ ಬೆಲೆಕಟ್ಟುವ ಇಂದಿನ ಕಾಲದಲ್ಲೂ ಅವನ ಸ್ಥಾನಕ್ಕೆ ಕುಂದು ಬಂದಿಲ್ಲ. ಅಷ್ಟೊಂದು ಪ್ರಭಾವಶಾಲಿಯಾಗಿ ಪ್ರಪ್ರಥಮವಾಗಿ ಅವನು ಕಾಣಿಸಿಕೊಳ್ಳುವನು. ಪಂಪನಿಗೂ ಹಿಂದೆ ಕನ್ನಡ ಸಾಹಿತ್ಯದಲ್ಲಿ ಒಂದು ದೊಡ್ಡ ಪರಂಪರೆಯೇ ಬೆಳೆದುಬಂದಿದೆಯೆಂದು ಪಂಪನ ಮಾತಿನಿಂದಲೇ ತಿಳಿಯಲು ಶಕ್ಯವಿದೆ.[3]

ಅದರ ವಿವಿಧಪ್ರಕಾರಗಳ ಬಗೆಗೆ ನಮಗೆ ಹೆಚ್ಚಿನ ವಿವರಗಳು ಸಿಗುತ್ತಿಲ್ಲವಾಗಿ ಪ್ರಕೃತ ಪಂಪನಿಂದಲೇ ಚಂಪೂ ಪದ್ಧತಿಯ ವಿಶಿಷ್ಟಶೈಲಿಯ ಕಾವ್ಯಪರಂಪರೆ ಬೆಳೆದುಬಂದಿದೆಯೆಂದು ಭಾವಿಸಿ ಅದರ ಭೋರ್ಗರೆವ ವರ್ಷಾಕಾಲದ ನಿರ್ಝರದ ಇಳಿಮುಖಸಮಯದಲ್ಲಿ ವೀರಶೈವಚಂಪೂಪರಂಪರೆಯ ಆಚಾರ್ಯಪುರುಷರು ಹುಟ್ಟಿಕೊಂಡು ವೀರಶೈವ ಚಂಪೂಮಾರ್ಗಪರಂಪರೆಯನ್ನು ಹಲವು ವೈಶಿಷ್ಟ್ಯಗಳೊಡನೆ ಬೆಳೆಸಿಕೊಂಡು ಉಳಿಸಿಕೊಂಡು ಬಂದ ಬಗೆಗೆ ಸಮಾಲೋಚನೆ ಮಾಡುವುದೇ ಪ್ರಕೃತಲೇಖನೋದ್ದೇಶವಾಗಿದೆ.

## ವೀರಶೈವಚಂಪೂಮಾರ್ಗದ ಆಚಾರ್ಯಪುರುಷ

ಪಂಪನಕಾಲ (ಕ್ರಿ.ಶ. ೯೪೧) ದಿಂದ ಸುಮಾರು ಮೂರು ಶತಮಾನಗಳು. 'ಜಿನಸಮಯದೀಪಕ'ರಾದ ಅನೇಕ ಕವಿಗಳಿಂದ ಕನ್ನಡ ಕಾವ್ಯಪ್ರಪಂಚ ಹುಲುಸಾಗಿ ಬೆಳೆದುದನ್ನು ಕಾಣುತ್ತೇವೆ. ಅಂದಿನ ರಾಜಕೀಯಚರಿತ್ರೆಗೂ ಜೈನ ಕವಿಗಳಿಗೂ ನಿಕಟಸಂಪರ್ಕ, ಸಂಬಂಧ, ಸಾಹಚರ್ಯಗಳಿದ್ದವು. ತತ್ಕಾರಣವಾಗಿಯೇ ಜೈನರ ಮಠಗಳು, ವಿದ್ಯಾಸಂಸ್ಥೆಗಳು

---

[1] (ಪ್ರೊ. ರಂ. ಶ್ರೀ. ಮುಗಳಿ. ಪ್ರಾಚೀನ ಕನ್ನಡ ಸಾಹಿತ್ಯರೂಪಗಳು, ಪು. ೫, ಪ್ರ. ಮು. ೧೯೬೩)

[2] ಅದೇ ಕವಿರಾಜಮಾರ್ಗ (ಸಂ) ಎಂ. ವಿ. ಸೀತಾರಾಮಯ್ಯ, ಟಿ. ಪು. ೧೨೪ರ ನಿರ್ದೇಶನ.

[3] ಬೌದ್ಧರು ಕನ್ನಡದಲ್ಲಿ ಸಾಹಿತ್ಯನಿರ್ಮಾಣ ಮಾಡಿರಬಹುದೆಂಬ ವಿಮರ್ಶಕರ ಊಹೆಯೊಂದಿದೆ. ಆದರೆ ಅದರ ಯಾವ ರೂಪರೇಖೆಗಳ ಸುಳಿವೂ ಕಂಡುಬರುತ್ತಿಲ್ಲ. ಅದು ಕೇವಲ ಊಹೆಯಾಗಿಯೇ ಉಳಿದಿದೆ. ವಿಮರ್ಶಕರ ಈ ಊಹೆಗೆ ಕಾರಣ: ಕ್ರಿಸ್ತಪೂರ್ವದಿಂದಲೂ ಬೌದ್ಧರಿಗೂ ಕರ್ನಾಟಕಕ್ಕೂ ಇದ್ದ ನಿಕಟಸಂಪರ್ಕ, ಬೌದ್ಧರ ಕೆಲವು ಶಿಲಾಶಾಸನಗಳೇ ಮೊದಲಾದವುಗಳು. ಹೀಗೆ ನಿಕಟಸಂಪರ್ಕ ಪಡೆದ ಬೌದ್ಧಧರ್ಮ ಕರ್ನಾಟಕದಲ್ಲಿ ಬೆಳೆದುಬಾಳುವ ಸಮಯದಲ್ಲಿ ಅವರಿಂದ ಕಾವ್ಯನಿರ್ಮಾಣವಾಗಿರಬೇಕೆಂಬುದಕ್ಕೆ ಯಾವ ಒಂದು ದೃಷ್ಟಾಂತವೂ ಸಿಗದಿರುವುದು ಊಹೆಯನ್ನು ಸುಳ್ಳಾಗಿಸಿದೆ. ಅಲ್ಲದೆ ಪಂಪನಿಗಿಂತ ಹಿಂದೆ ಕಾವ್ಯಗಳು ಇದ್ದವು. ಅವುಗಳು ಪೂರ್ಣವಾಗಿ ಏಕಸೂತ್ರತೆಯನ್ನು ಪಡೆದ ಕಾವ್ಯಗಳಾಗಿ ಸಿಗುತ್ತಿಲ್ಲ. ಲಕ್ಷಣ ಗ್ರಂಥಗಳಲ್ಲಿ ಲಕ್ಷ್ಯಕ್ಕಾಗಿ ಸ್ವೀಕರಿಸಿದ ಪದ್ಯಗಳಿಂದ ಬೇರೆಬೇರೆ ಕವಿಗಳ ಹೇಳಿಕೆಯಿಂದ ಇದ್ದವೆಂದು ಮಾತ್ರ ಹೇಳಲಾಗುತ್ತಿದೆಯಲ್ಲದೆ ಗ್ರಂಥಾದಿಗಳನ್ನು ಕಣ್ಣಾರೆ ಕಂಡು ಅಲ್ಲ.

ಉತ್ತಮ ಸ್ಥಿತಿಯಲ್ಲಿದ್ದವು. ಆದುದರಿಂದಲೇ ವಿದ್ವತ್ಪರಂಪರೆ ದಷ್ಟಪುಷ್ಟವಾಗಿ ಬೆಳೆದುಬಂತು. ಬೆಳೆದುಬಂದ ಆ ವಿದ್ವತ್ಪರಂಪರೆ ಮೂರು ಶತಮಾನಗಳುದ್ದಕ್ಕೂ ವಿದ್ವತ್ಪೂರ್ಣಕನ್ನಡಕಾವ್ಯಪ್ರಪಂಚದ ಹುಚ್ಚುಹೊಳೆಯನ್ನೇ ಹರಿಸಿದುದನ್ನು ಅಲ್ಲಗಳೆಯಲಾಗುವುದಿಲ್ಲ. ಅಲ್ಲೊಂದು ಇಲ್ಲೊಂದು ಬೇರೆ ಮತಸಂಪ್ರದಾಯದ ಕವಿಗಳ ಕಾವ್ಯ ಹುಟ್ಟಿದರೂ ಅದು ಜೈನಪರಂಪರೆಯ ಮಾರ್ಗದಲ್ಲಿಯೇ. ಆ ಯುಗದ ಕಾವ್ಯಸರಸ್ವತಿಯು, ಭಾಷೆಯ ಬಿಗುವು, ಜಿಗುಟು. ನುಡಿಗಟ್ಟುಗಳ ನಿರ್ಮಾಣ ಸಂಸ್ಕೃತಭಾಷೆಯ ಬಂಧುರತೆ, ಅಷ್ಟಾದಶವರ್ಣನೆಗಳ ಹೊರೆ ದೀರ್ಘದೀರ್ಘತರ ಸಂಸ್ಕೃತಸಮಸ್ತಪದಪುಂಜ, ಅಲಂಕಾರಗಳ ಬೆಡಗು, ರೀತಿ, ವೃತ್ತಿ ಸಂಪನ್ನತೆಯಿಂದ ವಿಶಿಷ್ಟಳಾಗಿ ಮೇಣೆಯಲ್ಲಿ ಕುಳಿತು ಸುತ್ತಲೂ ತೆರೆಮುಚ್ಚಿಕೊಂಡು ಅನೇಕ ಜನಬೋಯಿಗಳ ಹೆಗಲಮೇಲೆ ಕುಳಿತು ರಾಜಸಭೆಗೆ, ವಿದ್ವತ್ಸಭೆಗೆ ತನ್ನ ದರ್ಶನವನ್ನೀಯುತ್ತಿದ್ದಳು. ಕನ್ನಡ ಶ್ರೀಮಂತವೇನೋ ಆಯಿತು. ಆದರೆ ಆ ಶ್ರೀಮಂತಿಕೆ ಜನಸಾಮಾನ್ಯನಿಗೆ ನಿಲುಕುವಂತಹುದಾಗಲಿಲ್ಲ. ೧೨ನೆಯ ಶತಮಾನದ ಹೊತ್ತಿಗೆ ಆ ಜೈನರೇ ತಮ್ಮ ಹಿರಿಯರು ನಡೆದುಬಂದ ಈ ದಾರಿ ಜನಸಾಮಾನ್ಯರಿಗೆ ನಿಲುಕಲು ಶಕ್ಯವಿಲ್ಲದ್ದೆಂದು ಕಂಡುಕೊಂಡು ಪ್ರತಿಭಟಿಸಲುಜ್ಜುಗಿಸಿದರು. ಸಂಸ್ಕೃತದ ಹೊರೆಯನ್ನಿಳಿಸಿ ಕನ್ನಡಸಾಹಿತ್ಯಸರಸ್ವತಿಯನ್ನು ನಿರಾಭರಣಸುಂದರಿಯನ್ನಾಗಿಸಬೇಕೆಂದು ಪ್ರಯತ್ನಪಟ್ಟರು. ಅದ್ದರಿಂದ ಪಂಪನಕಾಲದಿಂದ ಹರಿದುಬರುತ್ತಿದ್ದ ಚಂಪೂಶೈಲಿಯ ಬೆಟ್ಟದ ತೊರೆಯ ಅಬ್ಬರ ೧೨ನೆಯ ಶತಮಾನದ ಹೊತ್ತಿಗೆ ಇಳಿಮುಖವಾಯಿತು.

೧೨ನೆಯ ಶತಮಾನದಲ್ಲಿ ಅಂತರರಾಷ್ಟ್ರೀಯಮಹಾನಗರವೆನಿಸಿದ್ದ ಕಲ್ಯಾಣನಗರದಿಂದ ಹೊರಹೊರಟ ವೀರಶೈವಮಹಾಕ್ರಾಂತಿಯು ಜನತೆಯನ್ನೊಂದು ಹೊಸತಿರುವಿನತ್ತ ತಿರುಗಿಸಿತು. ಪ್ರಾಚೀನ-ಅಂಧಾನುಕರಣದ ಮೌಲ್ಯಗಳು ಮಾಯವಾಗಿ, ನೂತನಪ್ರಕಾಶರೂಪವಾದ ವಿಚಾರಪ್ರಚೋದನೆ ಮೊದಲಾಯಿತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ಆದ ಈ ಕ್ರಾಂತಿಯ ಸೋಂಕು ಸಾಹಿತ್ಯದ ಮೇಲೂ ವಿಶೇಷಪ್ರಭಾವ ಬೀರಿತು. ಮಹಾಮಹಾವಿದ್ವಾಂಸರು, ದಾರ್ಶನಿಕರು, ಧರ್ಮಪ್ರವರ್ತಕರು ತಮ್ಮ ಮನಸ್ಸಿನಲ್ಲುದ್ಭವಿಸಬಹುದಾದ ಸಮಸ್ತ ಸತ್ಯಗಳಿಗೆ ಅಚ್ಚಗನ್ನಡದ ಆಡುಮಾತನ್ನೇ ಮಾಧ್ಯಮ ಮಾಡಿ, ಸಂಸ್ಕೃತವನ್ನು ಬಹುಮಟ್ಟಿಗೆ ಬದಿಗೆ ಸರಿಸಿ, ಅವಶ್ಯವಿದ್ದಲ್ಲಿ ಮಾತ್ರ ಬಳಸಿ ವಚನರಚನೆ ಮಾಡತೊಡಗಿದರು. ಈ ಹೊಸ ಪ್ರಯೋಗ, ಅದರಲ್ಲಿನ ಬೆಳಕು ಎಲ್ಲರಿಗೂ ನೂತನಾಕರ್ಷಣೆಯೇ ಆಯಿತು. ಶಾಸ್ತ್ರಭಾಷೆ ಆಡುಭಾಷೆಯಲ್ಲಿ ಪಡಿಮೂಡಿ ಬಂತು. ದೇವರುಧರ್ಮಗಳ ಬಗೆಗೆ ಉಚ್ಚರಿಸುತ್ತಿದ್ದ ಗೂಢಾರ್ಥವಿಶಿಷ್ಟಮಾತುಗಳು ದಿನಬಳಕೆಯ ನುಡಿಗಿಳಿದಾಗ ಜನತೆ ಕಣ್ಣುತೆರೆಯಿತು. ೧೧ನೆಯ ಶತಮಾನದ ಮಧ್ಯಭಾಗದಲ್ಲಿ ಇಂಥ ಪ್ರಯೋಗವನ್ನು ಪ್ರಥಮತಃ ದೇವರದಾಸಿಮಯ್ಯನೇ ಮಾಡಿ ಶಾಸ್ತ್ರದ ತಿರುಳೆಲ್ಲವನ್ನೂ ಎಲ್ಲರಿಗೆ ಅರ್ಥವಾಗುವ ರೀತಿಯಲ್ಲಿ ಆಡುಮಾತಿನಲ್ಲಿ ಹೇಳಬಹುದೆಂಬ ತಿಳುವಳಿಕೆಯನ್ನುಂಟುಮಾಡಿದನು. ಇವನ ವಚನರಚನೆ, ಹಿಂದೆ ಇದ್ದ ತ್ರಿಪದಿಯೆಂಬ ಪ್ರಭಾತಸಂಧ್ಯಾಸಮಯದಲ್ಲಿ ನರುಗಂಪನ್ನು ಹೊತ್ತು ಅರಳಿನಿಂತ ಹೃದ್ಯವಾದ ಗದ್ಯಕುಸುಮಗಳು. ಇದೇ ಮಾರ್ಗವೇ ಮುಂದಿನ ವೀರಶೈವವಚನಕಾರರಾದ ಬಸವಾದಿಪ್ರಮಥರ ವಚನರಚನೆಗೆ ನಾಂದಿಯಾಯಿತು. ವಚನಗಳು ಶರಣರ ಅನುಭಾವದ ಕಮ್ಮಟದಲ್ಲಿ ರೂಪುಗೊಂಡು ಹೊರಬಂದ ಚಲಾವಣೆಯ ನಾಣ್ಯಗಳು; ಅಥವಾ ಅವರ ಅನುಭಾವದ ಮೂಸೆಯಲ್ಲಿ ಕರಗಿ ಕಾಳಿಕೆಗಳೆದು ಹೊರಬಂದ ಮಿಸುನಿಯ ಗಟ್ಟಿಗಳು. ಈ ಬಗೆಯ ಸಾಹಿತ್ಯಸೃಷ್ಟಿಯು ಮುಂದೆ ಕಾವ್ಯನಿರ್ಮಾಣಮಾಡಿದ ಎಲ್ಲ ಪ್ರಕಾರದ ಕವಿಗಳನ್ನೂ ಬಡಿದು ಎಬ್ಬಿಸಿ ನಿಲ್ಲಿಸದೆ ಇರಲಿಲ್ಲ.

ಬಸವಾದಿಪ್ರಮಥರ ಪ್ರಭಾವಕ್ಕೊಳಗಾಗಿ ವೀರಶೈವಪ್ರಪಂಚದಲ್ಲಿ ಎಲ್ಲಕ್ಕೂ ಮೊದಲು ಚಂಪೂಕಾವ್ಯನಿರ್ಮಿತಿಗೊಳಿಸಿದ ಅತ್ಯುನ್ನತಮಟ್ಟದ ಕವಿಯೇ ಹರಿಹರ. 'ಗಿರಿಜಾಕಲ್ಯಾಣ'ವೇ ವೀರಶೈವರ ಪ್ರಪ್ರಥಮಚಂಪೂಕಾವ್ಯ. ಆದರೆ ಹರಿಹರನ ಕೀರ್ತಿದೇಗುಲಕ್ಕೆ ಇಟ್ಟ ಸುವರ್ಣಕಲಶ ಗಿರಿಜಾಕಲ್ಯಾಣವಲ್ಲ. ಆದರೂ ಆ ಕಾಲದ ಜನತೆಯ ಅಭಿರುಚಿಗನುಗುಣವಾಗಿ ಅಗ್ರಮಾನ್ಯಕವಿಯೆನಿಸಿಕೊಳ್ಳುವ ಆಂತರಿಕಪ್ರಜ್ಞೆಯೊಂದು ಅವನನ್ನು ಬಡಿದೆಬ್ಬಿಸಿ, ಈ ಕಾವ್ಯವನ್ನು ಬರೆಯಲು ತೊಡಗಿಸಿತೆಂಬುದನ್ನು ವಿಮರ್ಶಕರೆಲ್ಲರೂ ಒಪ್ಪಬೇಕು. ಪಂಪಾದಿಗಳ ಕಾಲದಿಂದಲೂ ಹರಿದುಬಂದ ತುಂಬುಪ್ರವಾಹವೇ ತೀರ್ಥವೆಂದು ನಂಬಿ, ಅಲ್ಲಿ ಸ್ನಾನಮಾಡುತ್ತ ಬಂದ ಜನತೆಯ ಭಾವನೆಯ ವಿರುದ್ಧ ಹೋಗದೆ, ಹರಿಹರನೂ ತನ್ನ ತುಂಗಭದ್ರೆ, ಉತ್ತುಂಗಭದ್ರೆ, ಜನಮನಸ್ಸುಭದ್ರೆಯ ಪೂರ್ಣಪ್ರವಾಹವಿಶಿಷ್ಟವಾದ ಬಹುದೂರದಿಂದ ಹರಿದುಬಂದ ನದೀತೀರ್ಥದಲ್ಲಿ ಕನ್ನಡಿಗರಿಗೆ ಮಿಂದು ಮಡಿಯುಡಿಸಿ ತಟಪ್ರಾಂತದ ವಿರೂಪಾಕ್ಷನಿಗೆ ಕೈಮುಗಿದು ಬರುವಂತೆ ಮಾಡಿದನು. ಚಂಪೂಶೈಲಿಗೆ, ಕ್ರಮುಕ್ಕೆ, ಬಿಗುವು, ಬೆಡಗು, ಬಿನ್ನಾಣ, ಸೊಬಗು

ಸೊಗಸುಗಳಿಗೆ ಮಾರುಹೋಗುವ ಮನಸ್ಸಿಲ್ಲದಿದ್ದರೂ ಮನಸ್ಸುಮಾಡಿ ತನ್ನ ಸ್ವತಂತ್ರ ಬುದ್ಧಿಯ ಉಚ್ಛ್ರಾಯಲಿ ಭಾವದ ಜಾತ್ಯಶ್ವದ ಓಟಕ್ಕೆ ಕಡಿವಾಣಹಾಕಿ ಮನಬಂದಂತೆ ತಿರುಗಿಸಿ ಕುಣಿಸಿ. ಹಾರಿಸಿ. ನಾಗಾಲೋಟ ಓಡಿಸಿ. ಜನಮನದಲ್ಲಿ ಬಹುದಿನಗಳ ಶ್ರದ್ಧೆಗೆ ಕಾರಣೀಭೂತವಾದ ಪಂಪಾಧಿನಾಥ-ಪಂಪಾಂಬಿಕೆಯರ ಕಲ್ಯಾಣಮಹೋತ್ಸವ ಮಾಡಿ ಅವನ ಪಾದಕ್ಕೆ ನಾಲ್ಕಾರು ಪುಷ್ಪಗಳನ್ನು ಚೆಲ್ಲಿಯೇ ತನ್ನ ರಘಟಾಪ್ರಬಂಧರಚನೆಯ ಸ್ವಚ್ಛಂದಮಾರ್ಗದಲ್ಲಿ ನಡೆದು ಕನ್ನಡ ಸಾಹಿತ್ಯಪ್ರಪಂಚದ ತಿರುವಿಗೇ ನಾಂದಿಯನ್ನು ಹಾಡಿದ ಯುಗಪ್ರವರ್ತಕನಾಗಿ ಕಾಣಿಸಿಕೊಳ್ಳುತ್ತಾನೆ. ಸಂಪ್ರದಾಯಕ್ಕೆ ಕಟ್ಟುಬಿದ್ದು ಹರಿಹರ ಗಿರಿಜಾಕಲ್ಯಾಣ ಬರೆದರೂ, ಗಿರಿಜಾಕಲ್ಯಾಣ– ಚಂಪೂಕಾವ್ಯದ ಬಿಗುವನ್ನು ಕಡಿಮೆಗೊಳಿಸಿದ ಕ್ರಮಕ್ಕೊಂದು ಜೀವಂತ ನಿದರ್ಶನ: ಹೊಸಗನ್ನಡ ಭದ್ರಭವನಕ್ಕೆ ಬುನಾದಿಯನ್ನು ತೋಡಿದ ಹೃದ್ಯಗದ್ಯ ವಿಶಿಷ್ಟಪ್ರಯೋಗ. ಇಂದಿನ ವಿಮರ್ಶಕರು ಯಾವುದನ್ನು ಅನವಶ್ಯಕವರ್ಣನೆಯೆಂದು ಕರೆಯುವರೋ ಅಂತಹ ಅನವಶ್ಯಕವನ್ನು ಸಂಪ್ರದಾಯಕ್ಕೆ ಕಟ್ಟುಬಿದ್ದು ತುಂಬಿದ್ದರೂ ವಿಷಯ, ರಸ, ರೀತಿಗಳಿಗೆ ತನ್ನದೇ ಆದ ಹೊಸತಿರುವನ್ನು ತನ್ನ ಗಿರಿಜಾಕಲ್ಯಾಣದಲ್ಲಿ ಕೊಟ್ಟುದನ್ನು ಕಾಣುತ್ತೇವೆ. ಈತನ ಈ ಚಂಪೂಮಾರ್ಗ 'ಉದಿತೋದಿತಮಾರ್ಗ'ವೆಂದು ಹೆಸರು ಪಡೆದು ಮುಂದೆ ಬಂದ ವೀರಶೈವಚಂಪೂಪ್ರಬಂಧಕಾರರಿಗೆಲ್ಲ ರಾಜಮಾರ್ಗವಾಯಿತು. ಜೈನರಲ್ಲಿ ಪಂಪನಿಗೆ ಯಾವ ಗೌರವ ಸಲ್ಲುವುದೋ. ಆ ಗೌರವ ವೀರಶೈವರಲ್ಲಿ ಹರಿಹರಮಹಾಕವಿಗೆ ಸಂದಿತು. ಇವನ ಈ ಉದಿತೋದಿತಮಾರ್ಗ ಬೆಳೆದು ೧೭ನೆಯ ಶತಮಾನದ ಷಡಕ್ಷರದೇವನಲ್ಲಿ ಪರಮಾವಧಿಗೇರಿ ೨೦ನೆಯ ಶತಮಾನದಲ್ಲಿ ಆಗಿಹೋದ. ಹರಿಹರನ ಉದಿತೋದಿತಮಾರ್ಗಕ್ರಮಕ್ಕೆ ಮನಸೋತು 'ಅಕ್ಕಮಹಾದೇವಿ' ಚಂಪೂಚರಿತದ ಅರ್ಧಭಾಗವನ್ನು ಮಾತ್ರ ರಚಿಸಿ ಲಿಂಗೈಕ್ಯರಾದ ಮೈಸೂರು ಅರಮನೆ ಪಂಚಗವಿಮಠಾಧ್ಯಕ್ಷ ಗೌರೀಶಂಕರಸ್ವಾಮಿಗಳವರೆಗೂ ಅವಿಚ್ಛಿನ್ನವಾಗಿ ಹರಿದುಬಂದಿದೆ. ಹರಿಹರನಮಾರ್ಗದ ಬಗೆಗೆ ಘನತೆಗೌರವಗಳ ಬಗೆಗೆ ಬಹಳ ತಿಳಿಯದ ನಾವು ಹೇಳುವುದಿರಲಿ : ಮಹಾಕವೀಶ್ವರನೂ. ಅದ್ಭುತ ವಿದ್ವಾಂಸನೂ ಆದ ಷಡಕ್ಷರದೇವನ ಮನವುಕ್ಕಿ ಹರಿದುಬಂದ ಕಾವ್ಯವಾಣಿಯಲ್ಲಿಯೇ ಕೇಳಬೇಕು—ಹರೀಶ್ವರನ ಯೋಗ್ಯತೆಯನ್ನು.

> ಧರೆಯೊಳ್ ಮೆಚ್ಚಿಪುಟ್ಟಿಪುಟ್ಟುತ್ತುರುಳ್ವ ನರರ ಮೇಲುರ್ಬಿ ಕಬ್ಬಂಗಳಂ ಬಿ- ।
> ತ್ತರಿಸುತ್ತಂ ಸಪ್ರಯಾಸಂ ಕೆಲಕೆಲರಕಟ ಕಬ್ಬಿಗರ್ ಕೆಟ್ಟುಪೋದರ್ ।
> ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯಲಕ್ಷ್ಮೀ-।
> ವರನಾದಂ ಮತ್ತಮಂಗತ್ಯಧಿಕಶಿವಕವೀಂದ್ರಂಗದಾರ್ ಸಾಟಿಯಪ್ಪರ್ ॥ ರಾ. ಶೇ. ವಿ. ಅ. ೧–೧೯
> ಶಿವಸ್ಯ ತದ್ಭಕ್ತತತೇರ್ವಿಧಾಯ ಕೃತೀರನೇಕಾ ಸುಕವಿಪ್ರಣುತ್ಯಾಃ ।
> ಶಿವಸ್ಯ ಸಾಯುಜ್ಯಮಿಹ ಪ್ರಪನ್ನೋ ಹರೀಶ್ವರಸ್ತೇನ ಸಮಃ ಕವಿಃ ಕಃ ॥ ಕ. ಕ. ರ. ೧–೧೪

ಪಂಪಾದಿಗಳ ಕಾಲದಿಂದ ಹರಿದುಬಂದ ಸಂಪ್ರದಾಯವೇನು ? ತಮತಮಗೇ ಬೇಕಾದವರ ಬಗೆಗೆ ಪರಮಾತ್ಮ-ವರಪ್ರಸಾದಲಭ್ಯವಾದ ಕವಿತಾಶಕ್ತಿಯನ್ನು ಪ್ರಯೋಗಿಸಿ ಇಂದ್ರ-ಚಂದ್ರರೆಂದು ಹೊಗಳಿದ್ದು ಹರಿಹರನ ದೃಷ್ಟಿಯಲ್ಲಿ ನರರ ಮೇಲೆ ಉಬ್ಬಿ ಕಬ್ಬವನ್ನು ಹೇಳಬಾರದೆಂಬುದೇ ಅವನ ಒಂದು ಉದಿತಮಾರ್ಗ. ನರರೇನಿದ್ದರೂ. ತೃಣದ ಹಾವೆಗಳು, ಮಣ್ಣ ಬೊಂಬೆಗಳು, ಕಪ್ಪಡದ ಶರೀರಿಗಳು. ಅವರೇನನ್ನೀತ್ತಾರು? ಕೊಡುವುದಕ್ಕೆ ಅವರಲ್ಲಿರುವುದಾದರೂ ಏನು ? ಅಕ್ಷಯಸಂಪತ್ತನ್ನೂ, ಕೆಡದ ಕೀರ್ತಿಯನ್ನೂ ಕೊಡುವರೇನು ? ಅದನ್ನು ಕೊಡುವವನು ಶಿವನೊಬ್ಬನೇ ಅಲ್ಲವೆ ? ಅವನಿಗಾಗಿ ನಾಲಿಗೆಯನ್ನು ಮಾರಿಕೊಳ್ಳಬೇಕಲ್ಲದೆ, ಸದ್ಧರ್ಮಕ್ಕೆ ನಾಲಿಗೆಯನ್ನು ಮಾರಿಕೊಳ್ಳಬೇಕಲ್ಲದೆ ಅನ್ಯವಿಷಯಕ್ಕಲ್ಲ. ಹರಿಹರನು ಕೈವಲ್ಯಲಕ್ಷ್ಮೀಪತಿಯಾದದ್ದು ಈ ಮಾರ್ಗದಲ್ಲಿ ಕಾವ್ಯಗಳನ್ನು ಹೇಳಿ. ಇದೇ ಹರಿಹರನ ಉದಿತೋದಿತಮಾರ್ಗ. ಈ ಮಾರ್ಗದಲ್ಲಿ ಪ್ರಾಚೀನ-ಕಬ್ಬಿಗರು ಅಡಿಯಿಡಲಿಲ್ಲ. ಹರಿಹರ ಅಡಿಯಿಟ್ಟ. ಕನ್ನಡ ಸಾಹಿತ್ಯದಲ್ಲಿ ಇದೊಂದು ದೊಡ್ಡ ತಿರುವು. ಶಿವ ಮತ್ತು ಅವನ ಶರಣವ್ರಜ, ಹರೀಶ್ವರನ ಲೆಕ್ಕಣಿಕೆಯಿಂದ ಕಾವ್ಯಮುಖದಲ್ಲಿ ಪ್ರಕಾಶಗೊಂಡು ಮುಂದಿನ ವೀರಶೈವಕವಿಪ್ರಪಂಚಕ್ಕೊಂದು ರಾಜಮಾರ್ಗವನ್ನೇ ತೆರೆಯಿತು. ಆ ರಾಜಮಾರ್ಗದಲ್ಲಿ ಕ್ರಿ.ಶ. ೧೨೨೦ರಿಂದ ೧೯೫೭ರವರೆಗೆ ಅವಿಚ್ಛಿನ್ನವಾಗಿ ಅನೇಕ ವಸ್ತುಕವರ್ಣಕ-ಕವಿಪ್ರಪಂಚ ಹರಿದು ಬಂತು. ಕನ್ನಡ ಸಾಹಿತ್ಯಸರಸ್ವತಿ ವಿಪುಲಹುಲುಸಿನ ಸಿರಿಯ ಬೆಳೆಯಾಗಿ ಬೆಳೆದುಬಂತು.

## ಪ್ರಪ್ರಥಮ ವೀರಶೈವ ಚಂಪೂಕಾವ್ಯ : ಹರಿಹರನ ಗಿರಿಜಾಕಲ್ಯಾಣ

ಆಜನ್ಮದತ್ತವಾದ ಅತ್ಯದ್ಭುತಪ್ರತಿಭಾಸಂಪನ್ನಮಹಾಕವಿಯೊಬ್ಬನನ್ನು ಯಾವ ಪ್ರವೃತ್ತಿಯು ನಿರತಿಶಯಾನಂದದಲ್ಲಿ ಮುಳುಗಿಸಿಬಿಡುವುದೋ ಆ ಪ್ರವೃತ್ತಿಯು ಉಗ್ರವಾಗಿ ಹೋದಂತೆಲ್ಲ. ಅದೇ ಬಿಂದುವಿನಿಂದಲೇ ನಿಸ್ತ

ರಂಗಕಾಸಾರದಲ್ಲಿ ಬಿದ್ದ ಕಲ್ಲಿನಿಂದ ವೃತ್ತಾಕಾರವಾಗಿ ಕಲ್ಲೋಲಮಾಲೆಗಳೆದ್ದು ಕಾಸಾರದ ಕೊನೆಯವರೆಗೂ ಹಬ್ಬುವಂತೆ ಕವಿಯ ಪ್ರತಿಭಾದಿಸಾಮರ್ಥ್ಯದಿಂದ ಶಬ್ದಬ್ರಹ್ಮಾಂಡವೊಂದರ ಸೃಷ್ಟಿಯು ರೂಪುಗೊಳ್ಳುವುದು. ಹರಿಹರನ ಸಮಸ್ತಾಂತಃಕರಣವನ್ನು ತುಂಬಿನಿಂತ ಒಂದೇಒಂದು ಪ್ರವೃತ್ತಿಯೆಂದರೆ ಆರಾಧ್ಯಮೂರ್ತಿಯಾದ ಪಂಪಾವಿರೂಪಾಕ್ಷಮೂರ್ತಿಯ ಬಗೆಗಿರುವ ನಿರತಿಶಯಭಕ್ತಿಪ್ರೇಮ. ಹಂಪೆಯಲ್ಲಿ ಹುಟ್ಟಿಬೆಳೆದು ಬಾಲ್ಯದಿಂದಲೂ ತನ್ನಲ್ಲಿ ವಿರೂಪಾಕ್ಷನ ಬಗೆಗೆ ಬೆಳೆಸಿಕೊಂಡುಬಂದ ಭಕ್ತಿಪ್ರೇಮದ ಫಲವಾಗಿ ಅವನೇ ತಂದೆ, ತಾಯಿ, ಗುರು, ದೈವ, ರಾಜ, ಮಿತ್ರ—ಎಲ್ಲವೂ ಆಗಿದ್ದ. ಜಗತ್ತಿನಲ್ಲಿ ವ್ಯಕ್ತಿಯು ಸುತ್ತಮುತ್ತ ಇರುವ ಸಂಬಂಧಕ್ಕೆ ಇದಕ್ಕಿಂತ ಹೆಚ್ಚಿಗೆ ಬೇಕಾದುದೇನು ? ಈ ಮಹಾಸೌಂದರ್ಯಾನುಭೂತಿಯಿಂದ ಕೂಡಿದ ಹರಿಹರ ತನ್ನ ಸರ್ವಸ್ವವನ್ನೂ ವಿರೂಪಾಕ್ಷನಿಗೆ ಮಾರುಗೊಟ್ಟು, ತೊಳ್ತುಗೊಟ್ಟು. ಸೂರೆಗೊಟ್ಟು, ಮುಚ್ಚುಗೊಟ್ಟು, ಒಪ್ಪುಗೊಟ್ಟವನು.[1] ಆತನ ಕೃಪೆಯಿಂದ ಲಭ್ಯವಾದ ಪ್ರತಿಭೆ, ವಿದ್ವತ್ತು, ರೀತಿ ನೀತಿ, ಭಾವ ಬೆಡಗು ಬಿನ್ನಾಣಗಳಿಂದ ಕೂಡಿದ ಕವಿತಾಕಲ್ಪಲತೆಯನ್ನು ಅವನಿಗೆ ಹಬ್ಬಿಸಿ ಆ ಲತಾಮಂಟಪದ ತಣ್ಣೆಳಲಲ್ಲಿ ತನ್ನನ್ನೂ ತನ್ನ ಸಮಾನಭಾವದ ಭಕ್ತವೃಂದವನ್ನೂ ವಿಶ್ರಾಂತಗೊಳಿಸಿದನು. ಆ ಕವಿತಾಕಲ್ಪವಲ್ಲರಿಯೇ ಗಿರಿಜಾಕಲ್ಯಾಣ. ಕಮನೀಯವಾದ ಲೋಕೋತ್ತರಕೃತಿಯೆಂದು ಭೂತೇಶಭಕ್ತಜನತೆ ಭಾವಿಸಿತು. ಇಂಥ ಸೇವ್ಯವೂ, ಸೌಖ್ಯಪ್ರದವೂ, ನವರಸವಿಭವವೂ, ವಾಗ್ದೇವ್ಯಾವಾಸವೂ, ವಿವೇಕೋನ್ನತಜನರ ನಿಧಿಯೂ, ದಿವ್ಯಜ್ಞಾನೋಕ್ತಿಮಾರ್ಗವೂ ಆದ ಈ ಕಾವ್ಯವು[2] ಕಲ್ಪಾಂತಸ್ಥಾಯಿತ್ವವನ್ನು ಪಡೆಯದೆ ಇರುವುದೇ ?

ಗಿರಿಜಾಕಲ್ಯಾಣದ ಕಥೆ ಪ್ರಾಚೀನಭಾರತೀಯರ ಧಮನಿ ಧಮನಿಗಳಲ್ಲಿ ಹೆಪ್ಪುಗಟ್ಟಿದ ಪುಣ್ಯಕಥೆ. ಅದರ ಹೇಳಿಕೆ ಕೇಳಿಕೆಗಳೆರಡೂ ಪುಣ್ಯವನ್ನೆಳೆದು ತರುವುವೆಂಬ ಭಾವ ಭಾವುಕರಲ್ಲಿ ಇಂದಿಗೂ ಇಲ್ಲದಿಲ್ಲ. ಶಿವನಲ್ಲಿ ಶಕ್ತಿಯು ಉನ್ಮೇಷಗೊಂಡಿತೆಂಬ ತತ್ತ್ವಾನುಭೂತಿಯೊಂದನ್ನು ಪ್ರತಿಮಾರೂಪದಲ್ಲಿ ಕಲ್ಪಿಸಿಕೊಂಡು ಸುಂದರಗೊಳಿಸಿ ಅದನ್ನು ಜನಜೀವನ ನಿತ್ಯನಿತ್ಯದ ಕಥೆಯನ್ನಾಗಿಸಿ ಧಾರ್ಮಿಕ-ನೈತಿಕಾನುಸಂಧಾನಬೋಧಕವಾದ ಕಥೆ. ಶಿವ. ಸ್ಕಾಂದ-ಮಹಾಪುರಾಣವೇ ಮೊದಲಾದ ಅಷ್ಟಾದಶ-ಮಹಾಪುರಾಣಗಳ ಮಾಲಿಕೆಯಲ್ಲಿ ಮೂಡಿಬಂದ ಕಥೆ. ಶಿವನ ಪಂಚವಿಂಶತಿ ಲೀಲೆಗಳೆಂದು ಹೇಳುವಲ್ಲಿ ಗಿರಿಜಾಕಲ್ಯಾಣದ ಲೀಲೆಯೂ ಒಂದು. ಈ ಕಥೆಯನ್ನಾರಿಸಿಕೊಂಡು ತನ್ನ ಪ್ರಭು ವಿರೂಪಾಕ್ಷನ ಕಾರುಣ್ಯದ ಶಿಶುವಾಗಿ ಹಂಪೆಯ ಪುಣ್ಯಭೂಮಿಯಲ್ಲಿ ಜನಿಸಿ ಬೆಳೆದ ಹರಿಹರನು ಹಂಪೆಯ ಹೇಮಕೂಟವೆಂಬ ಕಿರುವೆಟ್ಟವನ್ನೇ ಮಹಾಪರ್ವತವನ್ನಾಗಿ ಕಲ್ಪಿಸಿಕೊಂಡು ಇಲ್ಲಿಯೇ ಶಿವನು ಸಮಾಧಿಸ್ಥನಾಗಿ ಕುಳಿತಿದ್ದನೆಂದೂ, ಮನ್ಮಥದಹನ-ಗಿರಿಜಾಕಲ್ಯಾಣಾದಿ-ಸ್ವರ್ಗಲೋಕದ ಕ್ರಿಯೆಗಳು. ಅಥವಾ ಹಿಮವತ್ಪರ್ವತದಲ್ಲಿ ನಡೆದುವೆಂದು ಪ್ರಾಕ್ತನರಿಂದ ಹೇಳಲ್ಪಟ್ಟ ಕ್ರಿಯೆಗಳು ಇಲ್ಲಿಯೇ ನಡೆದುವೆಂದು ಹೇಳಹೊರಟು ಹರಿಹರ ಪೂರ್ಣಯಶಸ್ಸನ್ನೂ ತೃಪ್ತಿಯನ್ನೂ ಪಡೆದಿದ್ದಾನೆ. ಪರಿಸರದ ಇನ್ನುಳಿದ ಕಿರುವೆಟ್ಟಗಳಿಗೆ ಮತಂಗ. ಮಾಲ್ಯವಂತ. ಋಷ್ಯಮೂಕ, ಕಿಷ್ಕಿಂಧೆಗಳೆಂದು ಹೆಸರಿಸಿ ಅಥವಾ ತನಗಿಂತ ಪೂರ್ವದವರು ಕರೆದುದನ್ನು ಪರಿಗ್ರಹಿಸಿ, ಈ ಪಂಚಪರ್ವತಗಳ ಮಧ್ಯದಲ್ಲಿ ಹರಿದುಬರುತ್ತಿರುವ ತರಳತರಂಗಪ್ರಯುತಳೂ, ಅನಂತ-ನವಫೇನ-ಜಲಚರಸಂತಾನೆಯೂ ಆದ ತುಂಗಭದ್ರೆ ಅಲ್ಲ ಅಲ್ಲ ಉತ್ತುಂಗಭದ್ರೆಯು ದೇವಗಂಗಾನದಿಗೆ ಸಮಾನಪುಣ್ಯಪ್ರದೆಯೆನಿಸುವ ಸೌಭಾಗ್ಯವನ್ನು ಕಾವ್ಯಮುಖದಿಂದ ಮಾಡಿ, ಉಬ್ಬೆದ್ದ ಚಂಪೂರೂಪದ ಉಚ್ಛೃಂಖಲಗದ್ಯಪದ್ಯಗಳ ವಿಸ್ತಾರವರ್ಣನೆ ಮಾಡುತ್ತ— ಈ ಹಂಪೆ. ಪಂಚಪರ್ವತ, ತುಂಗಭದ್ರೆ ಈ ಮೂರು ಸನ್ನಿವೇಶಗಳ ಕೇಂದ್ರಬಿಂದುವಿನಿಂದಲೇ 'ಗಿರಿಜಾಕಲ್ಯಾಣ'ವೆಂಬ ಶ್ರೇಷ್ಠತಮಚಂಪೂಕಾವ್ಯನಿರ್ಮಾಣ ಮಾಡಿ, ಕನ್ನಡಸಾಹಿತ್ಯಸೌಧಗಳ ಮಧ್ಯದಲ್ಲಿ ಅಮಿತಶ್ರೀಯುತವಿರೂಪಾಕ್ಷ ಶಿವಾಗಾರದ ಉತ್ತುಂಗಶೃಂಗಸುವರ್ಣಕಲಶವು ಮೇಲೆದ್ದು ಹೊಳೆಹೊಳೆದು ತೋರುವಂತೆ ಮಾಡಿದ್ದಾನೆ. ಇವನ ಈ ಕಾವ್ಯ ಕನ್ನಡಿಗರಿಗೆ ಕನ್ನಡಸಾಹಿತ್ಯಪ್ರಪಂಚಕ್ಕೆ ಅರ್ಥವತ್ತಾದ ಕಾಣಿಕೆ. ಹಳೆಯ ಮಹಾಕಥೆಗೆ ಕನ್ನಡತನವಿತ್ತು ಹೇಳಿದ ಕನ್ನಡಿಗರ ಕಥೆ. ಈ ದೃಷ್ಟಿಯಿಂದಲೇ ಈ ಕಥೆ ನಮ್ಮ ಮತ್ತು ಸೇವ್ಯ. ಇಷ್ಟೊಂದು ಭವ್ಯಾದರ್ಶಭರಿತಕಾವ್ಯವಾದ್ದರಿಂದ ಇದು ಕಲ್ಪಾಂತಚಿರಸ್ಥಾಯಿತ್ವ ಪಡೆಯದೇ ಇರುವುದೇ ? ಮಹಾಕವಿ ಮುಂದೆ ಕೆಲವೇ ದಿನಗಳಲ್ಲಿ ಈ ಪುಣ್ಯಭೂಮಿಯಲ್ಲಿ ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಭವಿಷ್ಯ ಕಂಡಿದ್ದನೋ ಏನೋ ! ಆ 'ವಿಜಯಕಲ್ಯಾಣ' ಅಥವಾ 'ವಿದ್ಯಾನಗರ'ವೆಂಬ ತೇಜಃಪೂರ್ಣಸಾಮ್ರಾಜ್ಯಸೂರ್ಯನ ಉದಯಕ್ಕೆ ಮಂಗಳಕರವಾದ ಮುನ್ಸೂಚನೆಯೊ ಎಂಬಂತೆ ಉಜ್ಜ್ವಲರಕ್ತಾರುಣಕಾಂತಿಯ ಹೊಂಬೆಳಗಿನ ಪ್ರಭಾವಲಯವನ್ನು ಗಿರಿಜಾಕಲ್ಯಾಣಮಹಾಕಾವ್ಯದ

1 ರಕ್ಷಾಶತಕ, ಪ. ೭೮–೮೦.

2 ಗಿ. ಕ. ೧–೧೬.

ಮೂಲಕ ತೋರಿಸಿದ್ದಾನೆ. ಇದೂ ಅಲ್ಲದೆ ಈ ಕಾವ್ಯನಿರ್ಮಾಣಕ್ಕೆ ಪಂಪಾಪುರದರಸ ವಿರೂಪಾಕ್ಷನ ಆಜ್ಞೆಯೇ ಆಗಿದೆಯಂತೆ.[1] ಭಕ್ತನ ಬಾಯಿಯಿಂದ ತನ್ನ ಜೀವನದ ಕಥೆಯನ್ನು ಆಲಿಸಬೇಕೆಂಬ ಲೀಲಾವಿನೋದದ ಬಯಕೆಯಾಗಿರಬೇಕು. ಅಥವಾ ತನ್ನ ಕಥೆ ಹೀಗೆಹೀಗೆಯೇ ಇರಬೇಕೆಂದು ಭಕ್ತನಿಗೆ ಸೂಚಿಸಿ ವಿರೂಪಾಕ್ಷನೇ ಬರೆಯಿಸಿಕೊಂಡಿರಬೇಕು.

ಪ್ರಾಚೀನ ಚಂಪೂಯುಗದ ಅಗ್ರಮಾನ್ಯಕವಿಯೆನಿಸಿದ ಪಂಪನು 'ಸರಸ್ವತೀಮಣಿಹಾರ'ನಾಗಿ ತನ್ನ ಅದ್ಭುತ ಕವಿತಾಶಕ್ತಿಯನ್ನು ಅರಿಕೇಸರಿಭೂಭುಜನನ್ನು ಚೆನ್ನಾಗಿ ಹೊಗಳಬೇಕೆಂಬ ಮಹದಾಸೆಯಿಂದ ಪ್ರಸಿದ್ಧ ಮಹಾಭಾರತದ ಅರ್ಜುನನ ಕಥೆಯೊಡನೆ ತಗುಳ್ಚಿ ಹೇಳಿ ಬಚ್ಚೆಸಾಸಿರದಲ್ಲಿರುವ ಧರ್ಮಪುರವೆಂಬ ಶಾಸನದ ಅಗ್ರಹಾರವನ್ನು ಪಡೆದನು. ಪಂಪನ ಕೃತಿಗಳು 'ಮುನ್ನಿನ ಕಬ್ಬಮನೆಲ್ಲ ಮಿಕ್ಕು ಮೆಟ್ಟಿದವು' ಎಂಬ ನೆಗಳ್ತೆಗೆ ಪಕ್ಕಾದರೂ ಆಗಿರಬಹುದು. ಆದರೆ ಮಹಾಕವಿಗೆ ದೈವದತ್ತಪ್ರತಿಭಾಸಂಪತ್ತು ಹುಟ್ಟಿಸಾಯುವ ಮನುಷ್ಯರ ಕೊಡುಗೆಗಳ ಕಟ್ಟಿಗೊಳಗಾಗಬೇಕೆ? ಎನ್ನುವುದು ಹರಿಹರನ ಪ್ರಶ್ನೆ. ಈ ಪ್ರಶ್ನೆಯನ್ನು ಧೈರ್ಯವಾಗಿ ಕವಿಪ್ರಪಂಚಕ್ಕೆ ಹಾಕಿ ಪಂಪಯುಗದ ಚಂಪೂಕಾವ್ಯನಿರ್ಮಾತೃಗಳ ಕಾವ್ಯೋದ್ದೇಶವನ್ನೇ ಅಲ್ಲಗಳೆದನು ;[2] ಎಂದು ಹೇಳಲು ಶಕ್ಯವಿದೆ. ಕೆಡದ ಕೀರ್ತಿ, ಅಕ್ಷಯ ಸಂಪತ್ತು, ಅನ್ಯೂನಪರಾಕ್ರಮಪ್ರದನಾದ ಪರಮಾತ್ಮನ ಮತ್ತು ಅವನ ಸದ್ಭಕ್ತರ ವಿಷಯದಲ್ಲಿ ಆ ಪ್ರತಿಭೆಯನ್ನು ಹರಿಸಬೇಕೆಂಬ ಮಹೋದ್ದೇಶವನ್ನು ಸಾರುವುದರ ಮೂಲಕ ನೂತನಯುಗಪ್ರವರ್ತಕನಾಗಿ, ಮುನ್ನಿನ ಕವಿಗಳ ಕಾವ್ಯಪರಂಪರೆಯ ಅಂತಸ್ಸತ್ವವನ್ನೇ ಅಲ್ಲಾಡಿಸುವಂತಹ ತನ್ನ ಕೆಚ್ಚನ್ನು ಪ್ರಕಟಿಸಿದನು. "ಮೃದುಮಧುರಪದವಿಲಾಸಾಸ್ಪದರಸವಿಸರಪ್ರಕಾಶಕರ್ನಾಟಕವಿತ್ವದೊಳೊರ್ವನೆ ಪೆಸರ್ವಡೆದಗ್ಗದ ಹರಿಹರನ ಉದಿತಮಾರ್ಗ[3]" ಮುಂದಿನವರಿಗ ರಾಜಮಾರ್ಗವಾಯಿತು. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಜೈನ ಕವಿಗಳು ಪಂಪನನ್ನು ಹಾಡಿದಂತೆ ವೀರಶೈವಕವಿಗಳು ಹರಿಹರನನ್ನು ಹಾಡಿ ಹೊಗಳಿದರು. ಅವನನ್ನು ಪುರಾಣ ಪುರುಷರ ಸಾಲಿಗೇರಿಸಿದರು, ಮಹಾಶಿವಯೋಗಿಯ ಸ್ಥಾನಕ್ಕೇರಿಸಿದರು, ಕೈವಲ್ಯಲಕ್ಷ್ಮೀವರನನ್ನಾಗಿಸಿದರು. ಈ ಪುಣ್ಯ ಯಾರಿಗುಂಟು ; ಯಾರಿಗಿಲ್ಲ.

ಹರಿಹರಮಹಾಕವಿಯ ಈ ರೀತಿಯ ಯುಗಪ್ರವರ್ತಕತ್ವಕ್ಕೆ ಪ್ರಭಾವ ಬೀರಿದುದು ಬಸವಾದಿಪ್ರಮಥರ ಧಾರ್ಮಿಕ ಸಾಮಾಜಿಕ ಮತ್ತು ಸಾಹಿತ್ಯಾದಿಮಾರ್ಗಗಳಲ್ಲಿ ವಿಶ್ವಮಾನವತ್ವದ ಮೂಲಸಮಸ್ಯೆಗಳ ಬಗೆಗೆ ಯೋಚಿಸಿ ಕೈಕೊಂಡ ೧೨ನೆಯ ಶತಮಾನದ ಐತಿಹಾಸಿಕಕ್ರಾಂತಿಯೇ ಆಗಿದೆ. ಈ ಮಹಾಕ್ರಾಂತಿಯು ಹಿಂದಿನ ಎಲ್ಲ ಸಂಪ್ರದಾಯಗಳ ಬಗೆಗೆ ಸಾಮಾನ್ಯನೂ ಯೋಚನೆ ಮಾಡುವಂಥ ಅವಕಾಶವನ್ನೊದಗಿಸಿತು. ಮುಂದೆ ಬರುವ ವೀರಶೈವಸಾಹಿತ್ಯವಷ್ಟೇ ಅಲ್ಲ, ವೀರಶೈವೇತರ ಸಾಹಿತ್ಯನಿರ್ಮಿತಿಗೂ ಕಡಿವಾಣ ಹಾಕಿತು. ಇಂಥ ಕಡಿವಾಣ ಹಾಕಲು ಕಾರಣನಾದ ಮಹಾಕವಿ ಹರಿಹರ. ಈ ಕ್ರಾಂತಿ ಕನ್ನಡನೆಲಕ್ಕಷ್ಟೇ ಸೀಮಿತವಾಗಲಿಲ್ಲ ; ನೆರೆಹೊರೆಯ ಭಾಷಾಸಾಹಿತ್ಯದ ಮೇಲೂ ಆಯಿತೆಂಬುದನ್ನು ಯೋಚಿಸಬೇಕು. ಆದ್ದರಿಂದ ನಾವು ಹರಿಹರನನ್ನೂ, ಅವನ ಸಾಹಿತ್ಯರಾಶಿಯನ್ನೂ ಒಂದು ಶಕ್ತಿಯೆಂದು ಬಗೆದರೆ ಸಾಕು. ೧೨ನೆಯ ಶತಮಾನದ ಕೊನೆ ಅಥವಾ ಹದಿಮೂರನೆಯ ಶತಮಾನದ ಆದಿಯಲ್ಲಿ ಜೀವಿಸಿದ್ದು ಆ ಶತಮಾನದ ಮೇಲೆಲ್ಲಾ ತನ್ನ ಪ್ರಭೆ ಹರಡಿದ್ದ ಒಬ್ಬನೇ ಒಬ್ಬ ಮಹಾಕವಿ ಹರಿಹರ ಎಂದರೆ ತಪ್ಪಲ್ಲ.

ಹರಿಹರನು ತನ್ನ ಗಿರಿಜಾಕಲ್ಯಾಣದ ಚಂಪೂಶೈಲಿಯ ಬಗೆಗೆ ತಾನೇ ಉದ್ಘೋಷಿಸಿಕೊಂಡಿರುವ–

ಕಾವ್ಯಂ ತಾನಿದು ನವರಸ
ಸೇವ್ಯಂ ಗಿರಿಜಾಧಿನಾಥನುರುತರಕರ್ಣ-
ಶ್ರಾವ್ಯಂ ವಸುಧಾತಳದೊಳ್
ನವ್ಯಂ ಭೂತೇಶಭಕ್ತಜನತಾಭಾವ್ಯಂ ॥ (ಗಿ. ಕ. ೧–೧೪)

---

[1] ಗಿ. ಕ. ೧೦_೧೧೪

[2] ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ ।
ತನತನಗಿಂದ್ರ ಚಂದ್ರ ರವಿಕರ್ಣದಧೀಚಿ ಬಲೀಂದ್ರರೆಂದುಮೇಣ್ ।
ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ ।
ನೆನೆಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ ॥ (ಪಂಪಾಶತಕ ೮೨)

[3] ರಾ. ಶೇ. ವಿ. ೧ನೆಯ ಆಶ್ವಾಸ

ಈ ಮಾತು ವಿಚಾರಯೋಗ್ಯವಾದುದು. ಹರಿಹರ ಸ್ವತಂತ್ರರಲ್ಲಿ ಸ್ವತಂತ್ರಕವಿ. ಪ್ರಾಚೀನಮಾರ್ಗಶೈಲಿಗೇಕೆ ಮಾರು ಹೋದನು ? ಎನ್ನುವುದು ಸ್ವಾಭಾವಿಕವೇ. ಆದರೂ ಆ ಕಠಿಣವಾದ ಚಂಪೂಮಾರ್ಗವನ್ನು ಕರ್ಣಶ್ರಾವ್ಯವಾಗುವಂತೆ ಹೇಗೆ ಚಿತ್ರರಿಸಿ ತೋರಿಸಬಹುದು ಎನ್ನುವುದಕ್ಕೂ ಈ ಕಾವ್ಯವೊಂದು ಪ್ರಯೋಗ. ಪುರಾಣಾಂತರ್ಗತವಾಗಿ ಹೇಗೆಹೇಗೋ ಇರುವ ಅಲ್ಲಿನ ಆ ಸನ್ನಿವೇಶವನ್ನು ಕನ್ನಡತನಕ್ಕೆ, ಕನ್ನಡನಾಡಿನ ದರ್ಶನಕ್ಕೆ, ಶಿವಾದ್ವೈತಸಿದ್ಧಾಂತದ ಪರಿಸರಕ್ಕೆ ಹೊಂದಿಕೊಳ್ಳಲು ಎಷ್ಟರಮಟ್ಟಿಗೆ, ಹೇಗೆ ಮಾರ್ಪಡಿಸಿಕೊಂಡು ಹೇಳಬಹುದೆಂಬುದರ ಒಂದು ಪ್ರಯೋಗವನ್ನೂ ಗಿರಿಜಾಕಲ್ಯಾಣದಲ್ಲಿ ನಾವು ಕಾಣುತ್ತೇವೆ. ಈ ವಸ್ತುವೇ ಭಾರತದ ದೊಡ್ಡ ದಾರ್ಶನಿಕ-ಮಹಾಕವಿಕಾಳಿದಾಸನ ಕುಮಾರಸಂಭವದಲ್ಲೂ ಬಂದಿದೆ. ಅದರಲ್ಲಿನ ಅನೇಕ, ಕಾಳಿದಾಸನ ಉದ್ದೇಶ-ಸಂವಿಧಾನಗಳು ಹರೀಶ್ವರನಿಗೆ ಹಿಡಿಸಿದಂತಿಲ್ಲ. ಅಥವಾ ಸಂಸ್ಕೃತದಲ್ಲಿದ್ದರೇನು ಬಂತು! ಕನ್ನಡಕ್ಕೆ ಈ ಕಥೆಯನ್ನು ಹರಿದೇವನು ಅದರ ಅರೆಕೊರೆಗಳನ್ನು ತಿದ್ದಿ ತೀಡಿ ತಂದು. ಭೂತೇಶಭಕ್ತಜನತೆಯು ಭಾವನೆಗೆ ಹಿಡಿಯುವಂತೆ, ಗಿರಿಜಾಧಿನಾಥನ ಕರ್ಣಕ್ಕೂ ಶ್ರಾವ್ಯವಾಗುವಂತೆ ಹೇಳಬೇಕು; ಲೋಕದ ಕವೀಶ್ವರರು ಮೆಚ್ಚಬೇಕು; ಭಕ್ತರು ಹರಸಬೇಕು; "ಸಜ್ಜನರು ಆನಂದದಿಂದ ಮಜ್ಜುಯ್ಯ! ಭಾಪು! ಅತ್ಯುನ್ನತಕೃತಿ ಭಲರೇ! ಚಿತ್ರಂ! ಆಹಾ! ಎಂದು ಉದ್ಗಾರ ತೆಗೆಯಬೇಕು"[1] ರಸಭಾವಗಳ ಉಕ್ಕಂದವಾಗಿ ಛಂದೋಲಂಕಾರಗಳ ಶಾಸ್ತ್ರೀಯತೆಗಳನ್ನು ಪುದುಗೊಳಿಸಿಕೊಂಡು ಗಿರಿಜೋದ್ವಾಹದಂಥ ತನ್ನ ಪರಮಾರಾಧ್ಯಮೂರ್ತಿಯ ವಿವಾಹದ ಕಥೆಯನ್ನು ಕೈಗೆತ್ತಿಕೊಂಡು ಮೈಯೆಲ್ಲ ಕಣ್ಣಾಗಿ. ಕಣ್ಣೆಲ್ಲ ನೋಟವಾಗಿ, ನೋಟವೆಲ್ಲ ಕೂಟವಾಗುವ ಹಾಗೆ ಹೇಳುವ ಪ್ರತಿಜ್ಞೆ ಮಾಡಿಯೇ ಕವಿ ಕಾವ್ಯವನ್ನು ನಿರ್ಮಿಸಿದಂತಿದೆ. ಭಕ್ತಿಯ ನಿರ್ಭರತೆ, ಭಾವಗಳ ಆವೇಶ, ವಶ್ಯವಾಕ್‌ಶಕ್ತಿಯ ಪ್ರಕಾಶವಿಲ್ಲಿ ಮೈವೆತ್ತುಬಂದಿದೆ. ಹರಿಹರ ಬಾಯಿಬಿಟ್ಟರೆ ಸಾಕು ರಸ, ಭಾವ, ರೀತಿ, ಛಂದೋಲಕ್ಷಣಗಳೇ ತಾ ಮುಂದು ನಾ ಮುಂದೆಂದು ಬಂದು ಹರಿಹರನಿಗೆ ಹೆಪರಿ ಕೂಡಿಕೊಂಡಂತೆ ಇವೆ. ಅಂತೆಯೇ ಈತನ ಈ ಕಾವ್ಯವನ್ನು ಮುಂದಿನ ವೀರಶೈವ ಕವಿಗಳೆಲ್ಲ ಹಾಡಿ ಹೊಗಳಿ ಈತನ ಪಾದಗಳ ಮೇಲೆ ನಾಲ್ಕಾರು ಹೂವುಗಳನ್ನು ಚೆಲ್ಲಿಯೇ ತಮ್ಮತಮ್ಮ ಕಂಠಪತ್ರವನ್ನೆತ್ತಿ ಓಲೆಯ ಮೇಲೆ ಕೊರೆದರು.

## ಗಿರಿಜಾಕಲ್ಯಾಣದ ವಸ್ತುವಿನ ವಿಚಾರ

ಹರಿಹರನು ತನ್ನ ಗಿರಿಜಾಕಲ್ಯಾಣಕ್ಕೆ ವಸ್ತುವನ್ನು ಶಿವಪುರಾಣ, ಸ್ಕಾಂದಪುರಾಣಾದಿಗಳಿಂದ ಪಡೆದನೆಂದು ಹಿಂದೆಯೇ ಹೇಳಿದೆ. ಕಾಳಿದಾಸನ ಕುಮಾರಸಂಭವಕ್ಕೂ ಇದೇ ವಸ್ತುವೇ. ಕಾಳಿದಾಸನು ಈಗಿರುವ ಕುಮಾರಸಂಭವದಲ್ಲಿ ಕೇವಲ ೮ ಸರ್ಗ ಮಾತ್ರ ಬರೆದನೆಂದೂ ಉಳಿದ ಒಂಬತ್ತು ಸರ್ಗಗಳು ಬೇರೆಯವರಿಂದ ಬರೆಯಲ್ಪಟ್ಟವೆಂದೂ ವಿದ್ವಾಂಸರ ಮತ. ಆದರೆ ಇನ್ನೂ ಕೆಲವರು ಕೇವಲ ಏಳು ಸರ್ಗಗಳು ಮಾತ್ರ ಕಾಳಿದಾಸನವೆಂದು ವಾದಿಸುತ್ತಾರೆ. ಎಂಟನೆಯ ಸರ್ಗದಲ್ಲಿ ಶಿವಪಾರ್ವತಿಯರ ಸಂಭೋಗಶೃಂಗಾರವಿದ್ದು 'ಜಗತಃ ಪಿತರೌ ವಂದೇ' ಎಂದು ಹೇಳಿದ ಕಾಳಿದಾಸ ಅವರ ಸಂಭೋಗಶೃಂಗಾರವರ್ಣನೆ ಮಾಡಿರಲಾರನೆಂದು ವಾದಿಸುತ್ತ ಏಳನೆಯ ಸರ್ಗದಲ್ಲಿ ಶಿವಪಾರ್ವತಿಯರ ವರ್ಣನೆ ಮಾಡಿ, ಮುಂದೆ 'ಕುಮಾರಸಂಭವ'ವು ಅವಶ್ಯಂಭಾವಿಯಾಗಿ ಉಂಟಾಗುವ ಕ್ರಿಯೆಯೆಂದು ಭಾವಿಸಿ ಅಲ್ಲಿಗೆ ಕಾವ್ಯ ಪರಿಸಮಾಪ್ತಿಗೊಳಿಸಿರುವನೆಂದು ವಾದಿಸುವರು. ಹರೀಶ್ವರನ ಕಾವ್ಯ ಪರಿಸಮಾಪ್ತಿಯಾಗುವುದು ಇಲ್ಲಿಗೇ. ಶಿವಪಾರ್ವತಿಯರ ಕಲ್ಯಾಣದನಂತರ ಹರಿಹರ ಕೇವಲ ಒಂದೇ ಒಂದು ವೃತ್ತದಲ್ಲಿ—

ಹರನುದ್ಯತ್‌ಗಿರಿಜಾಮನೋಹರಸುಖಾಂಭೋರಾಶಿಚಂಚತ್‌ಸುಧಾ-
ಕಿರಣಂ ತತ್ಸುಖದಿಂದಮಿರ್ದುದಯಿಸಿರ್ದಾ ಸ್ಕಂದನಿಂ ತಾರಕಾ-
ಸುರನಂ ತೀರ್ಚಿ ಸಮಸ್ತಲೋಕಜನತಾಸಂತುಷ್ಟಿಯಂ ಮಾಡಿ ಶಂ-
ಕರನೊಪ್ಪಿರ್ದನುದಾರಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ (ಗಿ. ಕ. ೧೦–೧೧೧)

ಹೀಗೆ ಹೇಳಿ ಕುಮಾರೋತ್ಪತ್ತಿ— ತಾರಕನ ವಧೆ— ಜನತಾತುಷ್ಟಿಯಾಯಿತೆಂದು ಕಾವ್ಯವನ್ನು ಮುಗಿಸಿಬಿಡುತ್ತಾನೆ.

ಹರೀಶ್ವರನ ಗಿರಿಜಾಕಲ್ಯಾಣಕ್ಕೆ ಆಕರ ಕಾಳಿದಾಸನ ಕುಮಾರಸಂಭವವೆಂದು ಹೇಳುವವರೂ ಇದ್ದಾರೆ. ಈ ಮಾತನ್ನು ಒಪ್ಪಲಿಕ್ಕಾಗುವುದಿಲ್ಲ. ಕಾಳಿದಾಸ ಹರಿಹರನಿಗೆ ಪೂಜ್ಯನಾಗಿರಬಹುದು ; ಕುಮಾರಸಂಭವವನ್ನು ನೋಡಿರಬಹುದು, ಆದರೆ ಅದನ್ನು ಅನುಸರಿಸಿಲ್ಲ. ಕಥಾಸಂವಿಧಾನದಲ್ಲಿ, ಉದ್ದೇಶದಲ್ಲಿ, ಘಟನಾವಳಿಗಳ ನಿರೂಪಣೆಯಲ್ಲಿ

1 ಗಿ.ಕ. ೧.೪೨

ಇಬ್ಬರದೂ ವಿಭಿನ್ನದೃಷ್ಟಿಯೇ ಆಗಿದೆ. ಕಾಳಿದಾಸನಿಗೆ ಯಾವುದು ಆಕರವೋ ಅದೇ ಹರೀಶ್ವರನ ಆಕರವಾಗಿದೆ. ಕಥೆ ಒಂದೇ ಆದುದರಿಂದ ಕೆಲವು ಕಡೆ ಸಾಮ್ಯಗಳು ಬರುವುದು ಸ್ವಾಭಾವಿಕ ತಾನೆ? ಕಾಳಿದಾಸನು ಚಿತ್ರಿಸಿರುವ ಶಿವನ ಪಾತ್ರವನ್ನು ಹರೀಶ್ವರ ಒಪ್ಪಿಲ್ಲ. ಹರೀಶ್ವರನು ಚಿತ್ರಿಸಿರುವ ಶಿವನ ಚಿತ್ರ ಅತ್ಯಂತ ಭವ್ಯ; ಪರಂಜ್ಯೋತಿಸ್ವರೂಪ; ನಿರುಪಾಧಿಕಜ್ಯೋತಿ. ಪಾರ್ವತಿಯ ಚಿತ್ರವೂ ಹಾಗೆಯೇ! ಅವಳು ಲೋಕಜಯಮಾತೆ: ಭುವನಚರಿತೆ: ತ್ರಿಭುವನ ದುಸಿರು. ಈ ಬಗೆಗೆ ಮುಂದೆ ತಿಳಿಸುತ್ತೇನೆ.

ಕಾಳಿದಾಸನು ಶಿವಪುರಾಣದೊಳಗಿನ ಕಥಾಭಾಗವನ್ನು ಸಂಕ್ಷೇಪಗೊಳಿಸಿ. ಸೂತ್ರಗಳೋಪಾದಿಯಲ್ಲಿ ಸುಂದರ ಉಪಮಾದ್ಯಲಂಕಾರಗಳನ್ನಳವಡಿಸಿ ತನ್ನ ಕುಮಾರಸಂಭವವನ್ನು ವಿವರಿಸಿದ್ದಾನೆ. ಹಾಗಿದ್ದರೂ ಕುಮಾರಸಂಭವದಲ್ಲಿ ಸಂಕ್ಷೇಪರೂಪ. ಕೆಲವು ಸಂದರ್ಭಗಳಲ್ಲಿ ಶಿವಪುರಾಣದೊಳಗಿನ ಪದಗಳನ್ನೂ ಪದಪುಂಜಗಳನ್ನೂ ನೇರವಾಗಿ ಎತ್ತಿ ಎತ್ತಿ ತನ್ನ ಕುಮಾರಸಂಭವದಲ್ಲಿ ಧಾರಾಳವಾಗಿ ಬಳಸಿಕೊಂಡಿದ್ದಾನೆ. ಉದಾಹರಣೆಗೆ ಈ ಕೆಳಗಿನ ಕೆಲವು ಸಂದರ್ಭಗಳನ್ನು ನೋಡಬಹುದು.

ಕುಮಾರಸಂಭವ

ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ  
ಹಿಮಾಲಯೋ ನಾಮ ನಗಾಧಿರಾಜಃ।  
ಪೂರ್ವಾಪರೌ ತೋಯನಿಧೀ ವಗಾಹ್ಯ  
ಸ್ಥಿತಃ ಪೃಥಿವ್ಯಾ ಇವ ಮಾನದಂಡಃ  
(ಸ. ೧. ಪ. ೧)

ಅನಂತರತ್ನಪ್ರಭವಸ್ಯ ಯಸ್ಯ.  
. . . . . . . . . . . . . . . . (೧-೩)

ಶಿವಮಹಾಪುರಾಣ (ಪಾರ್ವತೀಖಂಡ)

ಅಸ್ತ್ಯುತ್ತರಸ್ಯಾಂ ದಿಶಿ ವೈ ಗಿರೀಶೋ ಹಿಮವಾನ್ಮಹಾನ್।  
ಪರ್ವತೋ ಹಿ ಮುನಿಶ್ರೇಷ್ಠ ಮಹಾತೇಜಾಸ್ಸಮೃದ್ಧಿಭಾಕ್॥  
ದ್ವೈರೂಪಂ ತಸ್ಯ ವಿಖ್ಯಾತಂ ಜಂಗಮಸ್ಥಿರಭೇದತಃ।  
ಪೂರ್ವಾಪರೌ ತೋಯನಿಧೀ ಸುವಿಗಾಹ್ಯ ಸ್ಥಿತೋ ಹಿ ಯಃ।  
ನಾನಾರತ್ನಕರೋ ರಮ್ಯೋ ಮಾನದಂಡ ಇವ ಕ್ಷಿತೇಃ॥[1]

ಇಲ್ಲಿ ಪುರಾಣದೊಳಗಿನ ಮೂರು ಅನುಷ್ಟುಪ್‌ಶ್ಲೋಕಗಳು ಅಂದರೆ ೯೬ ಅಕ್ಷರಗಳ ಸಾರಸಂಗ್ರಹವು ಕಾಳಿದಾಸನ ಇಂದ್ರವಜ್ರದ ಐದು ಸಾಲುಗಳಲ್ಲಿ ಅಂದರೆ ೫೫ ಅಕ್ಷರಗಳಲ್ಲಿ ಅಡಕವಾಗಿಸಲ್ಪಟ್ಟಿವೆ. ಹೀಗೆ ಕಾವ್ಯದುದ್ದಕ್ಕೂ ಕಾಳಿದಾಸನ ಕುಮಾರಸಂಭವ ಶಿವಪುರಾಣದ ಶ್ಲೋಕಗಳ ಪದಪುಂಜಗಳ- ಪದಗಳ ಸಮೂಹದಿಂದ ತುಂಬಿರುವುದನ್ನು ನೋಡಬಹುದು. ಆದರೆ ಸಂಗ್ರಹಕಾರ್ಯದಲ್ಲಿ ರಮಣೀಯಾರ್ಥಪ್ರತಿಪಾದಕತ್ವದಲ್ಲಿ ಕಾಳಿದಾಸನದು ಸಿದ್ಧಹಸ್ತವೆನ್ನದೆ ಇರಲಾಗುವುದಿಲ್ಲ. ಹರಿಹರ ಮೂಲದ ಕಥೆಯನ್ನು ಸಮಗ್ರವಾಗಿ ತಿಳಿದು ಅದನ್ನು ಕನ್ನಡಿಗರ ಸಂಪ್ರದಾಯಕ್ಕೆ, ಕನ್ನಡಚಂಪೂಸಂಪ್ರದಾಯದ ಜಾಯಮಾನಕ್ಕೆ ಒಗ್ಗಿಸಿಕೊಂಡು. ಹಿಗ್ಗಿಸಿಕೊಂಡು. ಬಗ್ಗಿಸಿಕೊಂಡು ತನ್ನದೇ ಅದ ಕಲ್ಪನೆಯ ಸಾಮ್ರಾಜ್ಯ ಕಟ್ಟಿ. ಕನ್ನಡಿಗರ ಕಥೆಯನ್ನಾಗಿಯೇ ಮಾಡಿದ ಚಾತುರ್ಯಕ್ಕೆ ಎಲ್ಲರೂ ತಲೆದೂಗಬೇಕು. ಅಂತೆಯೇ ಪ್ರಥಮತಃ—

---

[1] ಈ ಬಗೆಗೆ ಇನ್ನೂ ಕೆಲವು ದೃಷ್ಟಾಂತಗಳನ್ನು ನೋಡಬಹುದಾಗಿದೆ:

ಕುಮಾರಸಂಭವ

ಕಾಲಕ್ರಮೇಣಾಥ ತಯೋಃ ಪ್ರವೃತ್ತೇ।  
ಸ್ವರೂಪಯೋಗ್ಯೇ ಸುರತಪ್ರಸಂಗೇ।  
ಮನೋರಮಂ ಯೌವನಮುದ್ವಹಂತ್ಯಾ।  
ಗರ್ಭೋಽಭವದ್ಭೂಧರರಾಜಪತ್ನ್ಯಾಃ॥  
(೧-೧೯)

ಅಸೂತ ಸಾ ನಾಗವಧೂಪಭೋಗ್ಯಂ  
ಮೈನಾಕಮಂಭೋನಿಧಿಬದ್ಧಸಖ್ಯಮ್।  
ಕ್ರುದ್ಧೋಽಪಿ ಪಕ್ಷಚ್ಛಿದಿ ವೃತ್ರಶತ್ರಾ-  
ವವೇದನಾಜ್ಞಂ ಕುಲಿಶಕ್ಷತಾನಾಂ॥ (೧-೨೦)

ಶಿವಮಹಾಪುರಾಣ (ಪಾರ್ವತೀಖಂಡ)

ಕಾಲಕ್ರಮೇಣಾಥ ತಯೋಃ ಪ್ರವೃತ್ತೇ ಸುರತೇ ಮುನೇ।  
ಗರ್ಭೋ ಬಭೂವ ಮೇನಾಯಾಃ ವವೃಧೇ ಪ್ರತ್ಯಹಂ ಚ ಸಃ॥  
ಅಸೂತ ಸಾ ನಾಗವಧೂಪಭೋಗ್ಯಂ ಸುತಮುತ್ತಮಮ್।  
ಸಮುದ್ರಬದ್ಧಸತ್ಸಖ್ಯಂ ಮೈನಾಕಾಭಿಧಮದ್ಭುತಮ್।  
ವೃತ್ರಶತ್ರಾವಪಿ ಕ್ರುದ್ಧೇಽವೇದನಾಜ್ಞಂ ಸಪಕ್ಷಕಮ್।  
ಪವಿಕ್ಷತಾನಾಂ ದೇವರ್ಷೇ! ಪಕ್ಷಚ್ಛಿದಿ ವರಾಂಗಕಮ್॥

—ಕುಮಾರಸಂಭವ: ಪರಿಶಿಷ್ಟ, ೧೩ನೇ ಮುದ್ರಣ ೧೯೪೬, ನಿರ್ಣಯಸಾಗರ ಪ್ರೆಸ್, ಬೊಂಬಾಯಿ; ನಾರಾಯಣರಾಮ ಆಚಾರ್ಯ ಸಂಪಾದಿತ ಪ್ರತಿ.

"ಧಾತ್ರೀಕಾಂತೆಯ ನಾಭಿಸರೋಜ ಸುರುಚಿರವರಮಧ್ಯಾಂತಸ್ಥಿತ ನುತ ಕರ್ಣಿಕೆಯಂತೆ ಮೇರುಪರ್ವತಂ. ಅದರ ಮೂಡಣದಿಸೆಯಲ್ಲಿ ಪಂಚಾಶತ್ಕೋಟಿವಿಸ್ತೃತವಾದ ಅವನಿಗೆ ನೀಲಮೇಖಲೆಯ ಹಾಗೆ ಉದಾತ್ತವಾದ ಗಭೀರ ಪಾರಾವಾರವಿದೆ"[1] ಎಂದು ತಿಳಿಸುತ್ತ ಮಾರ್ಗಕಾವ್ಯದ ಪ್ರಾಚೀನ ಕನ್ನಡ ಕವಿಗಳು ಹೇಳುವ—'ವಾರಿಧಿ, ಪರ್ವತ, ಪುರಂ, ಅಧೀಶ್ವರಾದಿ ೧೮ ವರ್ಣನೆಗಳಲ್ಲಿ ಮೊದಲೇ ಬರುವ ಸಮುದ್ರದ ಗಭೀರವರ್ಣನೆ ಮಾಡಿ ಅನಂತರ ಐದು ಸುಂದರವೃತ್ತಗಳಲ್ಲಿ ಪರ್ವತರಾಜನ ಸಮಗ್ರವೈಭವದ ವಿಸ್ತಾರವರ್ಣನೆಯನ್ನು ಘನೀಭೂತವಾಗುವಂತೆ ಮಾಡು ತ್ತಾನೆ :

> ಆ ವಿಸ್ತಾರಗಭೀರವಾರಿನಿಧಿಯಿಂ ಪಶ್ಚಿಮಾಂಭೋಧಿಗಂ
> ತೀವಿದೋರ್ಪುವುದಾತ್ತಗಹ್ವರಗುಹಾಸಂತಾನಪರ್ಯಂತ ಗೋ-
> ತ್ರಾವಾಸೋಜ್ವಳಗಂಡಶೈಲಶಿಖರಪ್ರೋದ್ಭೂತಭೂಜಾತ ಪ-
> ತ್ರಾವೇಶೋನ್ನತಭೀಮರೂಪಧರದೇವಾಗಮ್ಯಹೈಮಾಚಳಮ್ ॥ (ಅ ೧–೪೮)

ಈ ಪದ್ಯವನ್ನು ಕುಮಾರಸಂಭವದ 'ಅಸ್ತ್ಯುತ್ತರಸ್ಯಾಂ . . . .' ಎಂಬ ಪ್ರಥಮದ ವಸ್ತುನಿರ್ದೇಶಾತ್ಮಕ ಮಂಗಳ ಪದ್ಯಕ್ಕೆ ಹೋಲಿಸಿ ಗಿರಿಜಾಕಲ್ಯಾಣಕಾರನು ಕಾಳಿದಾಸನ ಪ್ರಭಾವಕ್ಕೊಳಗಾಗಿದ್ದಾನೆ ಎನ್ನುವರು.[2] ಈ ಮಾತನ್ನು ಒಪ್ಪಲಾಗುವುದಿಲ್ಲ. "ಆ ವಿಸ್ತಾರ . . . ." ಎಂದರೆ ಏತತ್ಪೂರ್ವದಲ್ಲಿ ತಾನು ವರ್ಣಿಸಿರುವ ಮೇರುವಿನ ಮೂಡಣದ ಪಂಚಾಶತ್ಕೋಟಿವಿಸ್ತೃತವಾದ ಭೂಮಿಯ ನೀಲವರ್ಣದ ಮೇಖಲೆ (ಒಡ್ಯಾಣ)ಯಂತಿರುವ ಸಮುದ್ರಕ್ಕೂ ಪಶ್ಚಿಮ ಸಮುದ್ರಕ್ಕೂ ಹಬ್ಬಿರುವ ಹೈಮಾಚಳದ ಗಾಂಭೀರ್ಯಕ್ಕೂ, 'ಅಸ್ತ್ಯುತ್ತರಸ್ಯಾಂ . . . .' ಎಂಬ ಪದ್ಯದಲ್ಲಿರುವ ಹಿಮ ವಂತನ ಗಾಂಭೀರ್ಯಕ್ಕೂ ವ್ಯತ್ಯಾಸವಿದೆ. ಇದೇನೇ ಇರಲಿ 'ಅಸ್ತ್ಯುತ್ತರಸ್ಯಾಂ ದಿಶಿ ದೈವ ಗಿರೀಶೋ . . . .' ಎಂಬ ಹಿಮ ವಂತನ ವರ್ಣನೆ ಮಹಾಶಿವಪುರಾಣದಲ್ಲೂ ಇದೆಯಲ್ಲಾ! ಹರೀಶ್ವರ ನೇರವಾಗಿ ಶಿವಪುರಾಣವನ್ನೇ ನೋಡಿ ಆ ಮಾತನ್ನು ಏಕೆ ಹೇಳಿರಬಾರದು? ಹರೀಶ್ವರನು ಕಾಳಿದಾಸನ ಪಾದಗಳಿಗೆ ಕಾವ್ಯಮುಖದಲ್ಲಿ ನಾಲ್ಕು ಹೂಗಳನ್ನು ಸಲ್ಲಿಸಿರಬಹುದು; ಅವನ ಕುಮಾರಸಂಭವವನ್ನು ಓದಿರಬಹುದು. ಆದರೆ ಗಿರಿಜಾಕಲ್ಯಾಣನಿರ್ಮಿತಿಯಲ್ಲಿ ಇವನು ಸ್ವತಂತ್ರನೇ ಸರಿ. ಹಿಮವಂತನ ಸಮಸ್ತವೈಭವಪೂರ್ಣನೋಟವನ್ನು ನೋಡಬೇಕಾದರೆ ಗಿರಿಜಾಕಲ್ಯಾಣದಲ್ಲಿಯೇ. ಕಾಳಿದಾಸನು ಕುಮಾರಸಂಭವದಲ್ಲಿ ೬೦ ಇಂದ್ರವಜ್ರ-ಉಪೇಂದ್ರವಜ್ರಗಳಲ್ಲಿ ಹೇಳಿರುವ ಹಿಮಾಲಯದ ವರ್ಣನೆ, ಪಾರ್ವತಿಯ ಜನನ, ಯೌವನ, ಶಿವನ ಶುಶ್ರೂಷೆಗಾಗಿ ಹಿಮಾಲಯಕ್ಕೆ ಹೋದುದು, ಅವನ ಪೂಜಾದಿವ್ಯವಹಾರ ನಿರತಳಾದುದು-ಇವನ್ನು ಹರೀಶ್ವರನು ಗಿರಿಜಾಕಲ್ಯಾಣದ ೫ ಅಧ್ಯಾಯಗಳಲ್ಲಿ ೧೬೨ ಪುಟಗಳಷ್ಟು ವಿಸ್ತಾರವಾಗಿ,ಗಂಭೀರ ವಾಗಿ, ಸುಂದರ ಕಂದವೃತ್ತಗಳಲ್ಲೂ, ಹೃದ್ಯವಾದ ಗದ್ಯದಲ್ಲೂ ನಿರೂಪಿಸಿದ್ದಾನೆ. ಇಲ್ಲಿ ಬಂದಿರುವ ಪಾರ್ವತಿಯ ವರ್ಣನೆ ಯಲ್ಲಿ ಕವಿಯು ತನ್ಮಯತೆಯನ್ನೇ ಹೊಂದಿದ್ದಾನೆ. ಈಶ್ವರನ ಊಹಾತೀತವಿರಾಡ್ದರ್ಶನಕ್ಕೆ, ಅವನ ಸಕಲನಿಷ್ಕಲ- ಸ್ವರೂಪದರ್ಶನಕ್ಕೆ ಭಕ್ತ್ಯಾವೇಶದ ಆಳದುದ್ದಕ್ಕೂ ಮುಳುಗಿ ವರ್ಣನೆ ಗಂಭೀರಗೊಳ್ಳುವಂತೆ ಮಾಡಲು ತನ್ನ ಪ್ರತಿಭೆಯನ್ನೆಲ್ಲ ಧಾರೆಯೆರೆದಿದ್ದಾನೆ. ಭಾಷೆಯ ಸಮಸ್ತ ಬೆಡಗುಬಿನ್ನಾಣಗಳನ್ನು ವ್ಯಯಿಸಿದ್ದಾನೆ. ಬಾಲ್ಯಾರಭ್ಯ ತಾನು ಹಂಪೆಯಲ್ಲಿ ವಿರೂಪಾಕ್ಷನ ಸೇವೆಗಾಗಿ ಆಚರಿಸಿದ ಭಕ್ತಿಯನ್ನೆಲ್ಲ ಸಮರ್ಪಿಸಿದ್ದಾನೆ. ಈ ವರ್ಣನೆ ಭಕ್ತರ ಭಾವುಕರ ಹೃದಯದಲ್ಲಿ ಘನೀಭೂತಗೊಳ್ಳುವಂತೆ ಮಾಡಿ, ಮುಂದೆ ಬೆಳೆಯಲಿರುವ ಕಥೆಯ ವಿಷಯದಲ್ಲಿ ಅಪಾರ ಶ್ರದ್ಧಾಸಕ್ತಿಯನ್ನುಂಟುಮಾಡುತ್ತದೆ. ಪಾರ್ವತಿಯು ಜಗದ್ಭರಿತಶಕ್ತಿಯಾದುದರಿಂದ ಮುಂದಿನ ತನ್ನ ಶಕ್ತಿವಿಶಿಷ್ಟಾ- ದ್ವೈತಸಿದ್ಧಾಂತದ ಹೊಳಹನ್ನು ಪ್ರಕಾಶಪಡಿಸಲು ಸೂಚನಾರೂಪದಲ್ಲಿ ಅಲ್ಲಲ್ಲಿ ವರ್ಣನೆಮಾಡುತ್ತಾನೆ. ಆದರೆ ಅವಳು ಮರ್ತ್ಯದಲ್ಲಿ ಹುಟ್ಟಿದಳೆಂಬುದನ್ನು ಸೂಚಿಸಲು ಸ್ವಲ್ಪ ಕೆಸರನ್ನು ಅವಳ ಪಾದಕ್ಕೆ ಹಚ್ಚಿ ರಜೋಗುಣವಿಲಸಿತಮುಖಿ ರಾಗಯುಕ್ತೆಯೆಂದು ಹೇಳುತ್ತ ಹೋಗುತ್ತಾನೆ. ಮುಂದೆ ಆ ಕೆಸರನ್ನು ಪಶ್ಚಾತ್ತಾಪಜಲದಿಂದ ತೊಳೆಯುವಂತೆ ಮಾಡಿ, ಮಲತ್ರಯರಹಿತಳನ್ನಾಗಿಸಿ ಶಿವಾಭಿನ್ನಳನ್ನಾಗಿ ಮಾಡುತ್ತಾನೆ. ಹಾಗೆ ಮಾಡಲು ಪೂರ್ವದ ಈ ವರ್ಣನೆಯಲ್ಲಿ ಸೂಚಿಸಿರುವ ಶಬ್ದಶಬ್ದದ ಕಡೆಗೂ ಲಕ್ಷ್ಯ ಅವಶ್ಯಕವಾಗಿದೆ. ಇಷ್ಟೊಂದು ಭವ್ಯವಾಗಿ ಭಕ್ತಿಯ ಸಮಗ್ರದರ್ಶನಮಾಡ ಬಲ್ಲ ಕನ್ನಡಚಂಪೂಕಾವ್ಯ ನನಗೆ ತಿಳಿದಮಟ್ಟಿಗೆ ಮತ್ತೊಂದು ಇಲ್ಲ. ಕಾಳಿದಾಸನಲ್ಲಂತೂ ಈ ರೀತಿಯ ಆವೇಶವನ್ನು

1 ಗಿ.ಕ. ೧–೪೪ ಮತ್ತು ೪೫

2 ಡಾ. ಸಂದೀಮಠ: ಗಿ.ಕ. ಪ್ರಸ್ತಾವನೆ, ಪು. ೪೫ (೧೯೬೮ರ ಮುದ್ರಣ)

ಕಾಣಲು ಶಕ್ಯವೇ ಇಲ್ಲ. ಕಾಳಿದಾಸನಲ್ಲಿ ನಾವು ಪ್ರಚ್ಛನ್ನತೆ ಕಾಣುತ್ತೇವೆ: ಸಂಕ್ಷೇಪರೂಪದ ಕಥೆಯ ಬೆಡಗುಬಿನ್ನಾಣ ನೋಡುತ್ತೇವೆ: ಹರಿಹರನಲ್ಲಿ ಎಲ್ಲವೂ ವಿರಾಡ್ದರ್ಶನ: ಭವ್ಯಕಲ್ಪನೆ: ವಿಸ್ತಾರಸ್ವರೂಪ. ಕಾಳಿದಾಸನದು ಉಪನಿಷದ್-ದೃಷ್ಟಿಯಾದರೆ ಹರಿಹರನದು ಶಕ್ತಿವಿಶಿಷ್ಟಾದ್ವೈತದೃಷ್ಟಿ. ಗಿರಿಜಾಕಲ್ಯಾಣದಲ್ಲಿ ಹರೀಶ್ವರನು ಕಾಳಿದಾಸನಿಗಿಂತ ಭಿನ್ನದೃಷ್ಟಿಯಲ್ಲಿ ತನ್ನ ಮೂಲೋದ್ದೇಶದ ಸಾರ್ಥಕ್ಯ ಮಾಡಿಕೊಂಡಿದ್ದಾನೆನ್ನಬಹುದು. ಹೆಜ್ಜೆಹೆಜ್ಜೆಗೆ ಶಿವಾನುಭವದ ಕುರುಹನ್ನು ಹೊಳಯಿಸಿದ್ದಾನೆ. ಒಂದು ಪ್ರಸಂಗವನ್ನು ಈ ಬಗೆಗೆ ವಿವರಿಸಿ ಹರೀಶ್ವರನ ನಂತರದ ಚಂಪೂಕವಿಗಳ ಬಗೆಗೆ ತಿರುಗೋಣ.

ಮನ್ಮಥದಹನಾನಂತರ ರತಿಗೆ ಅಭಯಕೊಟ್ಟು, ತಾನಿರುವಲ್ಲಿಗೇ ಶಿವನು ಬರುವಂತೆ ಮಾಡುವ ಭಕ್ತಿಶಕ್ತಿಯಿಂದ ತಪೋಮುಖಿಯಾದ ಪಾರ್ವತಿಯ ತಪಸ್ಸು ವೃದ್ಧಿಗೊಂಡಿತು. ಅದು ಈಶ್ವರನ ಅಂತಃಕರಣದಲ್ಲಿ ಹರಿಯಿತು. ಗಿರಿಸುತೆಯನ್ನು ಕಾಣಲು ವಟುವೇಷದಿಂದ ಬಂದ ಶಿವನ ಬಗೆಗೆ ಪಾರ್ವತಿಯ ಕಣ್ಣರಿಯದಿದ್ದರೂ ಕರುಳರಿಯಿತು. ಇಂದುವಿಗೆ ಮೇಘ ಕವಿದರೂ ಲೋಕಕ್ಕೆ ತಣ್ಪು ತಪ್ಪದ ತೆರದಿಂದ ಪಾರ್ವತಿಯ ಅಂತಃಕರಣಪ್ರವೃತ್ತಿಯಲ್ಲಿ ಅಪೂರ್ವಾನಂದವೀಚಿಗಳೆದ್ದು ಕಣ್ಣು ತೆರೆದವು. ಗಂಭೀರವಾದ ಸಂಭಾಷಣೆಗಳಾದುವು. ಇಲ್ಲಿ ಕವಿ ತಾನೇ ಶಿವನನ್ನು ಪ್ರತ್ಯಕ್ಷೀಕರಿಸಿಕೊಂಡವನಂತೆ ತನ್ಮಯಗೊಂಡು ಯೋಚಿಸಿ, ಸಂಭಾಷಣೆಗಳನ್ನು ರಚಿಸಿರುವುದು ಶಿವಾನುಭವದೃಷ್ಟಿಯಿಂದಲೇ. ಪಾರ್ವತಿಯ ಮಧುರದೃಷ್ಟಿ ತಾಗಿದಾಗಲೇ ಶಿವ ಕರಗಿಹೋಗುತ್ತಾನೆ. ತಪಸ್ಸಿನಿಂದ ಸುಟ್ಟುಹೋದ ರಜೋಗುಣಾದಿಗಳುಳ್ಳ ಪಾರ್ವತಿಯ ದೃಷ್ಟಿಯಾಗ ಪರಿಶುದ್ಧದೃಷ್ಟಿ; ಶಿವಲಿಂಗದೃಷ್ಟಿ; ಇಚ್ಛಾಶಕ್ತಿಯನ್ನು ಪ್ರಕಟಿಸುವ ದೃಷ್ಟಿ. ಅಷ್ಟೇ ಏಕೆ? ಸೃಷ್ಟಿಯನ್ನೇ ನುಂಗಿದ ದೃಷ್ಟಿ. ತಪಸ್ಸಿಗೆ ಪೂರ್ವದಲ್ಲಿ ಅವಳ ದೃಷ್ಟಿಯನ್ನೇ ಸೃಷ್ಟಿ ನುಂಗಿತ್ತು. ಆಗ ಶಿವ ಒಲಿಯಲಿಲ್ಲ. ಈಗಿನ ದೃಷ್ಟಿಗೆ ಶಿವ ಕರಗಲೇಬೇಕು : ಪುಸಿವೇಷ ಜಾರಲೇಬೇಕು. ಶಿವನ ದಶಭುಜಗಳು ಚಿಗುರಲು ತವಕಪಡುತ್ತಿದ್ದವು. ತೊಡೆಗಳ ಮಧ್ಯದಿಂದಲೇ ವೃಷಭನು ಪ್ರಕಟಗೊಳ್ಳಲು ಯತ್ನಿಸುತ್ತಿದ್ದನು. ಇವನ್ನೆಲ್ಲ ತಡೆಯುವುದೇ ಶಿವನಿಗೊಂದು ಹಿಂಸೆಯಾಯಿತು.[1]

ಈ ಭವ್ಯಕಲ್ಪನೆಯನ್ನಿನ್ನೆಲ್ಲಿ ತರೋಣ. ಕಾಳಿದಾಸನಲ್ಲೂ ಇಲ್ಲ ; ಪುರಾಣದಲ್ಲೂ ಇಲ್ಲ. ಕಾಳಿದಾಸನ ಸಂಭಾಷಣೆ ಸ್ವತಂತ್ರವಲ್ಲ, ಪೂರ್ಣವಾಗಿ ಪುರಾಣವನ್ನೇ ಅನುಸರಿಸಿದ್ದು. ಹರೀಶ್ವರನದು ಪೂರ್ಣವಾಗಿ ಸ್ವತಂತ್ರದ್ದು. ತನ್ನ ದರ್ಶನಕ್ಕೆ ಒಗ್ಗಿಸಿಕೊಂಡು ಬಗ್ಗಿಸಿಕೊಂಡು ಹೇಳಿದ್ದು. ವಟುವಿನಿಂದ ಪಾರ್ವತಿಗೆ ಶಿವನಿಂದೆ ಕಾಯ್ದಿತ್ತು. ಘೋರತಪದಲ್ಲಿ ಕುಪಿತಳಾಗಬಾರದು : ಆದರೆ ಪತಿನಿಂದೆಯನ್ನು ಸೈರಿಸಬಾರದಲ್ಲವೆ! ತಪಸ್ಸು ಕೆಟ್ಟರೆ ಇನ್ನೊಮ್ಮೆ ಮಾಡಬಹುದು. ಶಿವನನ್ನು. ಸಾಕ್ಷಾತ್ ಪತಿಯನ್ನು ನಿಂದಿಸುತ್ತಿರುವುದನ್ನು ಕೇಳಿದ ಪಾಪಪರಿಹಾರ ಮಾಡಿಕೊಳ್ಳುವುದು ಹೇಗೆ?[2] ಈ ಯೋಚನೆ ಮಾಡಿದ ಪಾರ್ವತಿ ನಿಂದಕನಾದ ವಟುವೇಷದ ಶಿವನನ್ನು ನಿಗ್ರಹಿಸಲು ಎದುರಿಗಿದ್ದ ಭಸ್ಮದ ಗಟ್ಟಿಯಿಂದಲೇ ಹೊಡೆದುಬಿಡುವಳು. ಅವಳು ಹೊಡೆದ ವಸ್ತು ಭಸ್ಮ. ಸಾಮಾನ್ಯ ಕವಿ ಕಲ್ಲುಮಣ್ಣು ಹೆಂಟೆ ಕೋಲೆನ್ನುತ್ತಿದ್ದನೋ ಏನೋ. ಮಹಾತ್ಮರ ಸಂಕಲ್ಪ ಕೋಪದಲ್ಲೂ ಪವಿತ್ರ. ಭಸ್ಮ ಶಿವಾನುಭಾವಿಗಳ ಅತ್ಯಮೂಲ್ಯ ಲಾಂಛನ. ಆಗಲೇ ಶಂಕರನ ಪುಸಿವೇಷದ ತೆರೆ ಸರಿಯಿತು. ಈ ವರ್ಣನೆ ಹರೀಶ್ವರನು ತಾನು ಸಾಕ್ಷಾತ್ ವಿರೂಪಾಕ್ಷಸುಪುತ್ರನೆಂದು ಹೇಳಿಕೊಂಡ ಹೇಳಿಕೆಯನ್ನು ಅರ್ಥಪೂರ್ಣಗೊಳಿಸಿದೆ. ವಿರೂಪಾಕ್ಷನಾಜ್ಞೆಯಿಂದ ತಾನೀ ಕಾವ್ಯ ಬರೆದೆನೆಂದು ಹೇಳಿಕೊಂಡ ಮಾತಿಗೆ ಸಾರ್ಥಕ್ಯವನ್ನಿಲ್ಲಿ ಕಾಣುತ್ತೇವೆ : ಕಾಣಲೇಬೇಕು. ಹಾಗೆ ಕಾಣದಿದ್ದರೆ ದೃಷ್ಟಿದೋಷ; ಅಥವಾ ಬುದ್ಧಿದೋಷ.

ಕಾಳಿದಾಸ ಮಹಾಕವಿ : ಜಗದ್ವಿಖ್ಯಾತ ಕವಿ : ದೊಡ್ಡ ದಾರ್ಶನಿಕ. ಹರೀಶ್ವರನಾದರೋ ಸಾಕ್ಷಾತ್ ಭಕ್ತಿಜೀವನ ನಡೆಸುತ್ತಾ ಭಕ್ತ್ಯಾವೇಶದಲ್ಲಿ ಕಾವ್ಯನಿರ್ಮಿತಿಗೊಳಿಸಿದ ಅತ್ಯದ್ಭುತ ಕವಿ. 'ಲೋಕಕ್ಕೆ ತಾಂ ಮರುಳ್ ತನಗೆ ಲೋಕಂ ಮರುಳ್' ಎಂಬಂತೆ ಅವನ ಚರ್ಯೆ. ಶಿವಾನುಭಾವದ ನಿಬ್ಬೆರಗಿನಲ್ಲಿ ಮುಳುಗಿದವ. ವಿರಕ್ತ. ವಿದ್ವಾಂಸರ ಪರಂಪರೆ

---

[1] ಗಿರಿಸುತೆಯ ಮಧುರದೃಷ್ಟಿಗಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ, ಕರಗಿನಿಲಲಾರದೆಳ್ದಾತುರಪುಳಕಮನಂತು ಹಿಂತು ಸಂತಮಿಡುತ್ತುಂ, ಗಿ.ಕ. ೯_೯೭.

ನೆಗೆವ ಜಡೆಮುಡಿಯನೊತ್ತುತ್ತೊಗೆವಭುಜಾವಳಿಯನಡಂಗಿಸುತ್ತೂರುಗಳಿಂ, ಮಿಗುವ ವೃಷೇಂದ್ರನ ನೌಂಕುತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತಂ, ಗಿ.ಕ. ೯_೯೮

[2] ಗಿ.ಕ. ೯.೧೧೫ರಿಂದ ೧೧೭ ನೋಡುವುದು

ಯಲ್ಲಿ, ಪ್ರತಿಭಾಶಾಲಿಗಳ ಪರಂಪರೆಯಲ್ಲಿ ಬಂದು. ಸಮಸ್ತ ಭಾರತವನ್ನು ತಿರುಗಿ ತತ್ಸಂಜನಿತ-ಅಪೂರ್ವಲೋಕಾನುಭವವುಳ್ಳವನು. ಅವನ ಗಿರಿಜಾಕಲ್ಯಾಣದಲ್ಲಿ ತನ್ನ ಸಮಸ್ತಶಕ್ತಿ, ಭಕ್ತಿಯನ್ನು ಅರ್ಪಿಸಿದವನು. ಕೇವಲ ಪುರಾಣದ ಕಥೆಯೊಂದನ್ನು ಎತ್ತಿಕೊಂಡು ಸಹೃದಯಹೃದಯೋಲ್ಲಾಸಗೊಳಿಸಲು ಹೊರಟವನಲ್ಲ. ಅನೇಕ ಉದ್ದೇಶಗಳನ್ನಿಟ್ಟುಕೊಂಡು. ಪಂಪಾವಿರೂಪಾಕ್ಷನಲ್ಲಿ ತಾನಿಟ್ಟ ಅನನ್ಯಸಾಧಾರಣಭಕ್ತಿಯನ್ನು ಪ್ರಕಟಗೊಳಿಸಹೊರಟು ಕೃತಕೃತ್ಯನಾದವನು. ಆದರೆ ಒಂದು ಮಾತನ್ನು ಒಪ್ಪಬೇಕು. ಮಾರ್ಗಕಾವ್ಯನಿರ್ಮಾತೃವು ಆ ಕಾಲದಲ್ಲಿ ಯಾವ ಕಟ್ಟುನಿಟ್ಟುಗಳಿಗೊಳಗಾಗಬೇಕೋ ಆ ಕಟ್ಟುನಿಟ್ಟುಗಳಿಗೆ ಒಳಗಾದುದಕ್ಕೆ ಯಾವುದೋ ಆಂತರಿಕಸ್ಪರ್ಧಾಮನೋಭಾವ ಅವನನ್ನು ಕಾಡಿರಬೇಕು. ಆ ಸ್ಪರ್ಧೆ ಅವನ ಸ್ವಚ್ಛಂದ ವೃತ್ತಿಗೆ ಸ್ವಲ್ಪ ತಡೆಯನ್ನುಂಟುಮಾಡಿದ್ದೀತು. ವಿಮರ್ಶಕ ಈ ವಿಷಯದಲ್ಲಿ ಆ ಕಾಲದ ಪ್ರಜ್ಞೆಯಲ್ಲಿ ಯೋಚಿಸಿ ವಿಮರ್ಶಿಸುವುದು ಆವಶ್ಯಕ.

## ಹರಿಹರನ ನಂತರದ ವೀರಶೈವಚಂಪೂಕಾವ್ಯನಿರ್ಮಾತೃಗಳು

ಹರಿಹರಮಹಾಕವಿಯನಂತರ ವೀರಶೈವಚಂಪೂಕಾವ್ಯಪ್ರೌಢಿಮೆಯಲ್ಲಿ ಸಿಕ್ಕುವ ಮಹಾಕವಿ ಸುರಂಗ (ಕ್ರಿ.ಶ. ೧೫೦೦)ನೇ ಆದರೂ, ಯಾವ ಕಥೆಯ ಹಂದರವೂ ಇಲ್ಲದೆ ಕಾವ್ಯವಲ್ಲರಿಯನ್ನು ಹಬ್ಬಿಸಿ ಚಿಕ್ಕ ಚಂಪೂಕಾವ್ಯದಲ್ಲಿ ದೊಡ್ಡ ಪ್ರೌಢಿಮೆಯನ್ನು ತೋರಿಸಿದ ಅಷ್ಟಭಾಷಾವಿಶಾರದ ಚಂದ್ರಕವಿ ಅಥವಾ ಚಂದ್ರಶೇಖರ ಕವಿಯ ಬಗೆಗೆ ಸ್ವಲ್ಪ ಇಣಿಕಿ ನೋಡದಿದ್ದರೆ ಅಪರಾಧವೇ ಆದೀತು.

## ಚಂದ್ರಕವಿ (ಚಂದ್ರಶೇಖರ ಕವಿ—ಕ್ರಿ.ಶ. ಸು. ೧೪೩೦)

ಕನ್ನಡಸಾಹಿತ್ಯದಲ್ಲಿ ಯಾವುದೊಂದು ಕಥೆಯನ್ನಧಿಕರಿಸದೆ ಕೇವಲ ಒಂದು ಸನ್ನಿವೇಶದ ವರ್ಣನೆಗಾಗಿಯೇ ಒಂದು ಕಾವ್ಯನಿರ್ಮಾಣಮಾಡಿದ ಏಕೈಕ ಕವಿ ಚಂದ್ರಕವಿ. ಇವನ ಇನ್ನೊಂದು ಹೆಸರು ಚಂದ್ರಶೇಖರ ಎಂದು. ವಿಜಯನಗರದ ಪ್ರೌಢದೇವರಾಯನ ಆಸ್ಥಾನದಲ್ಲಿದ್ದ ಈತನು 'ನೆಗಳ್ದಷ್ಟಭಾಷೆಗಳಾಗರ'[1]ನಾದವನಾಗಿದ್ದನೆಂದು ತಿಳಿದುಬರುವುದರಿಂದ ಬಹುಶಃ ಪ್ರೌಢದೇವರಾಯನ ಆಸ್ಥಾನದಲ್ಲಿ ದುಭಾಷಿಗಳ ಕಾರ್ಯಮಾಡಿಕೊಂಡು ಉನ್ನತಹುದ್ದೆಯಲ್ಲಿಯೇ ಇದ್ದನೆಂದು ತರ್ಕಿಸಲಾಗಿದೆ. ಈ ಕವಿಯು 'ಪಂಪಾಸ್ಥಾನವರ್ಣನಂ' ಮತ್ತು 'ಗುರುಮೂರ್ತಿಶಂಕರಶತಕ'ಗಳೆಂಬ ಎರಡು ಚಿಕ್ಕ ಕಾವ್ಯಗಳನ್ನು ಬರೆದಿದ್ದಾನೆ. ಪ್ರೌಢದೇವರಾಯನ ಕಾಲದಲ್ಲಿದ್ದ ಕವಿಯಾದ್ದರಿಂದ ಇವನ ಕಾಲ ಕ್ರಿ.ಶ. ೧೪೩೦.

ಪ್ರಕೃತ 'ಪಂಪಾಸ್ಥಾನವರ್ಣನೆ' ಎಂಬುದು ಚಂಪೂರೂಪವಾಗಿ ಬರೆಯಲ್ಪಟ್ಟ ಕೇವಲ ೯೬ ಪದ್ಯಗಳು, ಅಲ್ಲಲ್ಲಿ ಹೃದ್ಯವಾದ ಗದ್ಯದಿಂದ ಕೂಡಿದ ಚಿಕ್ಕ ಕಾವ್ಯ. ಪ್ರಥಮತಃ ಪಂಪಾವಿರೂಪಾಕ್ಷನನ್ನು :

> ಶ್ರೀಮತ್ಪರ್ವತಸಾರ್ವಭೌಮತನಯಾತಾರುಣ್ಯಕಲ್ಪದ್ರುಪು-
> ಷ್ಪಾಮೋದಪ್ರಿಯಭೃಂಗನೈಂದವಕಲಾಕೋಟೀರಹೀರೋ ಪಲಂ
> ಸಾಮಾಮ್ನಾಯಸುಗೀತಲೋಲುಪಕುರಂಗಂ ತುಂಗಭದ್ರಾತಟೀ
> ಧಾಮಂ ಪಾಲಿಸುತಿರ್ಕೆ ಪಂಪೆಯ ವಿರೂಪಾಕ್ಷಂ ಜಗಜ್ಜಾಲಮಂ ॥ (ಪಂ. ವರ್ಣನಂ-೧)

ಹೀಗೆ ವರ್ಣಿಸಿ. ಅನಂತರ ಗಣಪತಿ ಸರಸ್ವತಿಯರನ್ನು ಮಾತ್ರ ಸ್ತುತಿಸಿ ಯಾವ ಕವಿಯ ಹೆಸರನ್ನೂ ಎತ್ತದೆ ನೇರವಾಗಿ 'ವಿಶ್ವಂಭರೆಯಂ ತಳೆದ ದೇವನೃಪತಿ'ಯು ನಳ, ನಹುಷ, ದಶರಥ, ಹರಿಶ್ಚಂದ್ರ, ದುಂಧುಮಾರಾದಿಪುರಾಣಪುರುಷರ ಓರಗೆಯೆನಿಸಿ ರಾಜ್ಯಭಾರಮಾಡುವಾಗ ತನ್ನ 'ಗುರುರಾಯ'ನು ತನಗೆ ಪಂಪಾಸ್ಥಾನ ವರ್ಣನೆ ಮಾಡಬೇಕೆಂದು ಅಪ್ಪಣೆಯಿತ್ತ ಮೇರೆಗೆ ಈ ಕಾವ್ಯ ರಚಿಸಿದ್ದಾಗಿ ಹೇಳುತ್ತಾನೆ. ಆ ಗುರುರಾಯನಾರೆಂದು ಹೇಳಿಲ್ಲ. ಬಹುಶಃ ಆಚಾರ್ಯಪುರುಷನಾದ ಜಕ್ಕಣ್ಣನೇ ಇವನಿಗೆ ಈ ವಿಷಯವನ್ನು ಬರೆಯಲು ಸೂಚಿಸಿರಬೇಕೆಂದು ವಿದ್ವಾಂಸರ ಅಭಿಪ್ರಾಯ.[2] ಈ ಚಿಕ್ಕ ಕಾವ್ಯದ ಮೇಲೆ ಹರೀಶ್ವರನ ಪ್ರಭಾವ ಹೆಚ್ಚಾಗಿದೆ.

---

1 ಪಂಪಾಸ್ಥಾನವರ್ಣನಂ, ಪ. ೧೧

2 ಅದೇ ಪ್ರಸ್ತಾವನೆ ೪, ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಸಂಪಾದಿತ ೧೯೫೫ರ ಮುದ್ರಣ ಪ್ರತಿ.

ಪಂಪಾಕ್ಷೇತ್ರದಲ್ಲಿ ವಿಜಯನಗರರಾಜ್ಯ ಸ್ಥಾಪಿತವಾಗಿದ್ದರೂ ರಾಜ್ಯಕ್ಕೆ ಒಡೆಯ 'ಪಂಪಾವಿರೂಪಾಕ್ಷನೇ' ಎಂಬ ಭಾವನೆ ಆಗಿನ ಜನಕ್ಕಿತ್ತು. "ಅಂತಕನ ಸುಳಿವವರೊಳಿಲ್ಲ, ಕಲಿಕಾಲಹೊಗದು ; ಪ್ರಳಯಕ್ಕೆ ಹೊರಗು ; ಮಾರಿಮೃತ್ಯುಗಿತ್ಯುಗಳ ಬಲಿಗೆ ಒಳಗಾಗದ ಪುಣ್ಯದ ಬೀಡೆಂದೂ"[1] ಅಲ್ಲಿ ಕ್ಷೇತ್ರಾಧಿಪತಿಯಾದ ವಿರೂಪಾಕ್ಷನ ಆಜ್ಞೆಯೇ ಆಜ್ಞೆ ಎಂಬ ಭಾವನೆಯಿಂದಲೇ ವಿರೂಪಾಕ್ಷನಾಮಾಂಕಿತ ಮುದ್ರೆಯ ಮೇಲೆ ಅಂದಿನ ವಿಜಯನಗರದ ಅರಸರೂ ರಾಜ್ಯಭಾರ ಮಾಡುತ್ತಿದ್ದುದ್ದು ಸರ್ವಶ್ರುತವಷ್ಟೇ. ಆದುದರಿಂದ ಸಾಮ್ರಾಜ್ಯದ ಅಧಿಪತಿಯಾದ ವಿರೂಪಾಕ್ಷಸ್ವಾಮಿಯ ಆಸ್ಥಾನ ವೈಭವವೆಂದರೂ ಅಷ್ಟೆ. ಪ್ರೌಢದೇವರಾಯನ ಆಸ್ಥಾನವೈಭವವೆಂದರೂ ಅಷ್ಟೆ. ಹೀಗೆ ಹಂಪೆಯ ಕೈಪಿಡಿಯಂತೆ ಇರುವ ಈ ಕಾವ್ಯ ಅಂದಿನ ಪಂಪಾಕ್ಷೇತ್ರದ ಮತ್ತು ಅಲ್ಲಿನ ಚಕ್ರವರ್ತಿಯಾದ ಪ್ರೌಢದೇವರಾಯನ ಬಗೆಗೆ ಅನೇಕ ಮಾಹಿತಿಗಳನ್ನು ಒದಗಿಸಿಕೊಡುವ ಕೈಪಿಡಿಯಂತೆ ಇದೆ. ಗದ್ಯಪದ್ಯ ರಚನೆಯಲ್ಲಿ ಹರಿಹರನ ಕೈಚಳಕವನ್ನು ನಾವು ಕಾಣಲಾಗದಿದ್ದರೂ, ಸಾಮಾನ್ಯಚಂಪೂಕಾವ್ಯನಿರ್ಮಾತೃಗಳ ಶೈಲಿಯನ್ನು ಈ ಚಿಕ್ಕ ಕಾವ್ಯದಲ್ಲಿ ಕಾಣಬಹುದು.

## ಸುರಂಗಕವಿಯ ತ್ರಿಷಷ್ಟಿ ಪುರಾತನರ ಚರಿತ್ರೆ

ಹರೀಶ್ವರಮಹಾಕವಿಯನಂತರ ಷಡಕ್ಷರದೇವನಿಗೂ ಪೂರ್ವದಲ್ಲಿ ಅತ್ಯಂತ ಪ್ರತಿಭಾಶಾಲಿಯೆನಿಸಿದ ಕವಿ ಎಂದರೆ ಸುರಂಗ. ಬಸವಾದಿಪ್ರಮಥರು ತಮ್ಮ ವಚನಗಳಲ್ಲಿ ೬೩ ಜನ ತಮಿಳುನಾಡಿನ ಪುರಾತನರನ್ನು ಕೀರ್ತಿಸಿದರೆ, ಆ ಅರವತ್ತುಮೂವರನ್ನು ರಘಟಾಪ್ರಬಂಧದಲ್ಲಿ ಕನ್ನಡ ಕಾವ್ಯಪ್ರಪಂಚಕ್ಕೆ ಪ್ರಥಮತಃ ಇಳಿಸಿತಂದವನು ಹರಿಹರ ಮಹಾಕವಿ. ಆ ಅರವತ್ತುಮೂವರು ಶೈವಾಚಾರ್ಯರನ್ನು ಚಂಪೂಪ್ರಬಂಧರೂಪದ ಮಹಾಕಾವ್ಯದಲ್ಲಿ ಶಾಶ್ವತಗೊಳಿಸಿದವನು ಸುರಂಗಕವಿ.

೧೫ನೆಯ ಶತಮಾನವು ವೀರಶೈವಧರ್ಮಗ್ರಂಥಗಳ ಸಾಹಿತ್ಯಕೃತಿಗಳ ಸುವರ್ಣಯುಗ. ವಿಜಯನಗರದ ಪ್ರೌಢದೇವರಾಯನ ಆಳಿಕೆಯಲ್ಲಿ ಅಲ್ಲಿದ್ದ ನೂರೊಂದು ವಿರತರು ಜಕ್ಕಣ್ಣ, ಲಕ್ಕಣ್ಣದಂಡೇಶ, ಸಪ್ತಕಾವ್ಯದ ಗುರುಬಸವ ನಿಜಗುಣಾರ್ಯ, ಸಿಂಗಿರಾಜ, ಗುಬ್ಬಿಯ ಮಲ್ಲಣ್ಣನೇ ಮೊದಲಾದ ವೀರಶೈವ ಪ್ರಕಾಂಡಪಂಡಿತರ ವಿದ್ವದ್ವರರ ಹುಲುಸಾದ ಕಾವ್ಯಗಳ ಬೆಳೆ ಕನ್ನಡ ಉರ್ವರೆಯಲ್ಲಿ ಬೆಳೆಯಿತು. ಆ ಸಮಯದಲ್ಲಿಯೇ ಅತಿಪ್ರೌಢಪಾಂಡಿತ್ಯಪೂರ್ಣವಾದ ೬೩ ಜನ ಪುರಾತನರ ಕಥೆಗಳನ್ನೊಳಗೊಂಡ ಮಹಾಕಾವ್ಯ ಸುರಂಗಕವಿಯಿಂದ 'ತ್ರಿಷಷ್ಟಿಪುರಾತನರ ಚರಿತ್ರೆ' ಎಂಬ ಹೆಸರಿನಿಂದ ಹೊರಬಂದು ಆ ಶತಮಾನದ ಚಂಪೂಪ್ರಕಾರಗಳಲ್ಲೆಲ್ಲ ಅಗ್ರಮಾನ್ಯ ಕೃತಿ ಎನಿಸಿದೆ. ಯಾವ ದುರ್ದೈವದಿಂದಲೋ ಏನೋ ಅದರ ಬಗೆಗೆ ಪ್ರಚಾರ ಮಾತ್ರ ಏನೂ ಇಲ್ಲ.

ಕವಿಯ ಕಾಲ ಕ್ರಿ.ಶ. ೧೫೦೦. ಪುಲಿಗೆರೆಯ ಪುರಾಧಿಪಸೋಮನಾಥಭಕ್ತಿಯುಕ್ತನಾದ ಈ ಕವಿಯ ಮಾತಾಪಿತೃಗಳು ಸಂಗಮಹಿಪ ಮತ್ತು ಮಹದೇವಿಯರು. ಪುಲಿಗೆರೆಯ (ಈಗಿನ ಲಕ್ಷ್ಮೇಶ್ವರದ) ಸೋಮನಾಥನ ಅಂಕಿತದಲ್ಲಿ ಕಾವ್ಯವನ್ನು ಬರೆದ ಈ ಕವಿ ತನ್ನ ನಾಲಿಗೆಯನ್ನು ಉಳಿದ ವೀರಶೈವ ಕವಿಗಳ ಹಾಗೆಯೇ ಗಿರಿಶಂಗೆ ಮಾರಿಕೊಂಡಂತೆ ಹೇಳಿಕೊಂಡಿದ್ದಾನೆ. ಒಬ್ಬೊಬ್ಬ ಪುರಾತನ-ಭಕ್ತನ ಕಥೆಯನ್ನು ಒಂದೊಂದು ಅಧ್ಯಾಯದಲ್ಲಿ ಹೇಳಿ ಮುಗಿಸುತ್ತ ಒಟ್ಟು ೬೩ ಅಧ್ಯಾಯಗಳಲ್ಲಿ ತನ್ನ ಕಾವ್ಯವನ್ನು ಪರಿಸಮಾಪ್ತಿಗೊಳಿಸಿದ್ದಾನೆ. ಹರಿಹರ, ಬೊಮ್ಮರಸ ಮೊದಲಾದವರು ಇವನಿಗಿಂತ ಪೂರ್ವದಲ್ಲಿ ೬೩ ಪುರಾತನರ ಕಥೆಯನ್ನು ಹೇಳಿದ್ದರೂ ತನ್ನ ಗ್ರಂಥಗಳಿಗೆ ಅವುಗಳ ಆಧಾರವನ್ನು ಹೇಳದೆ ಕವಿಯು—

ಪದದೊದವಿರೆ ಲೈಂಗ್ಯಪುರಾ-
ಣದೊಳಿರ್ದಂತಭವನಿತ್ತ ವರಮತಿಯಿಂ ಭೂ-
ವಿದಿತಪುರಾತನಚರಿತೆಯ-
ನುದಿತೋತ್ಸವದಿಂ ಸುರಂಗ ವರದಂ ಪೇಳ್ದಂ (೧–೪೪)

—ಎಂದು ಹೇಳುತ್ತ ಲೈಂಗ್ಯಪುರಾಣದಲ್ಲಿದ್ದಂತೆ ತಾನು ಬರೆದುದಾಗಿ ಹೇಳಿಕೊಳ್ಳುತ್ತಾನೆ. ಆದರೆ ಹರಿಹರನ ಪುರಾತನರ ಚರಿತ್ರೆಗಳುಳ್ಳ ರಗಳೆಯ ಕಾವ್ಯಗಳನ್ನು ನೋಡಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ತನ್ನ ಕಾವ್ಯದಲ್ಲಿ

[1] ಹರಿಶ್ಚಂದ್ರಕಾವ್ಯ ಅಷ್ಟಮ ಸ್ಥಲ ೫೯–೬೦.

ಪರಾವಲಂಬನೆಯನ್ನು ತೋರಗೊಡದೆ ಭಾವಬಂಧುರತೆ ಲಲಿತಮೋಹಕಶೈಲಿಗಳಿಂದ ನಮ್ಮನ್ನು ಬೆರಗುಗೊಳಿಸುತ್ತಾನೆ. ಆತ್ಮಾಭಿಮಾನದಲ್ಲಿ ಸುರಂಗ, ಪಂಪರನ್ನರನ್ನು ನೆನಪಿಗೆ ತರುತ್ತಾನೆ.[1] ತನ್ನ ಕಾವ್ಯದ ಉತ್ಕೃಷ್ಟತೆಯ ಬಗೆಗೆ ಕವಿಯು ವಿಶೇಷವಾಗಿ ಶ್ಲಾಘಿಸಿಕೊಂಡಿರುವುದು ಉಳಿದ ಕನ್ನಡ ಕವಿಗಳಂತೆ ಅತಿಶಯಪಡಿಸಿದರೂ ಅವನ ಹೇಳಿಕೆ ಅತಿಶಯೋಕ್ತಿಯೇನಾಗಿಲ್ಲವೆಂದು ಆ ಕಾವ್ಯವನ್ನು ಓದಿದವರಿಗೆ ಅನ್ನಿಸದಿರದು.

ಅರುವತ್ತುಮೂವರು ಪುರಾತನರಾರೂ ವೀರಶೈವರಲ್ಲದಿದ್ದರೂ ವೀರಶೈವರಿಗೆ ಅವರು ಪೂಜ್ಯರು. ಬಸವಾದಿ ಪ್ರಮಥರ ಭಕ್ತಿ ಪುರಾತನರ ಭಕ್ತಿಗಿಂತ ಭಿನ್ನವಾದುದು. ಆದರೂ ಅವರನ್ನು ಏಕೆ ಆದರ್ಶವಾಗಿಟ್ಟುಕೊಂಡರೆಂಬುದು ಯೋಚಿಸುವ ಅಂಶವಾಗಿದೆ. ಶಿವನಿಷ್ಠವಾದ ಅವರ ಭಕ್ತಿಯ ಪರಾಕಾಷ್ಠದ ಸ್ಥೂಲಾದರ್ಶವನ್ನು ಮಾತ್ರ ವೀರಶೈವರು ಸ್ವೀಕರಿಸಿದ್ದಾರೆನ್ನಬಹುದು. ಶೆಕ್ಕಿಳಾರರ ಪೆರಿಯಪುರಾಣದಲ್ಲಿ ಪ್ರಥಮತಃ ಬಂದ ತಮಿಳುನಾಡಿನ ಈ ಅರುವತ್ತು ಮೂವರನ್ನು ವೀರಶೈವರಾದ ಹರಿಹರ, ಸುರಂಗ, ಲಕ್ಕಣ್ಣದಂಡೇಶ, ನಿಜಗುಣಶಿವಯೋಗಿ, ವಿರೂಪಾಕ್ಷಪಂಡಿತ, ಉಪಮನ್ಯು, ಭೀಮಕವಿ, ಷಡಕ್ಷರದೇವ, ಗುಬ್ಬಿ ಮಲ್ಲಣಾರ್ಯ, ಚಿಕ್ಕನಂಜೇಶ, ಅದೃಶ್ಯ, ವಿರಕ್ತತೋಂಟದಾರ್ಯ, ಶಾಂತಲಿಂಗದೇಶಿಕ, ಬಸವ ಕವಿ, ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥ ಇವರೇ ಮೊದಲಾದ ಪ್ರಕಾಂಡ ಪಂಡಿತರು, ಕವಿಗಳು, ಯತೀಶ್ವರರು ಒಂದಿಲ್ಲೊಂದುರೀತಿಯಿಂದ ತಮಿಳುನಾಡಿನ ಅರವತ್ತುಮೂವರನ್ನು ಸಂಕ್ಷೇಪವಾಗಿಯೋ ವಿಸ್ತೃತವಾಗಿಯೋ ಹೊಗಳಿದ್ದಾರೆ. ಹರಿಹರ, ಸುರಂಗ, ನಿಜಗುಣ ಶಿವಯೋಗಿ, ಲಕ್ಕಣ್ಣ ದಂಡೇಶ, ಉಪಮನ್ಯು ಮೊದಲಾದವರು ಪರಿವಿಡಿಕ್ರಮದಿಂದ ಎಲ್ಲರನ್ನೂ ಹೊಗಳಿದರೆ ಉಳಿದವರು ಕೆಲವರನ್ನು ಹೊಗಳಿದ್ದಾರೆ. ಅಂತೂ ತಮಿಳುನಾಡಿನ ಪುರಾತನರೆಲ್ಲ ವೀರಶೈವರಿಗೆ ಪೂಜ್ಯರೆಂದು ಹೇಳಬಹುದು. ಕೆಲವರು ತಾವು ಹೇಳುವ ಕಾವ್ಯಗಳಲ್ಲಿ ದೃಷ್ಟಾಂತರೂಪವಾಗಿ ಹೊಂದಿಕೆಯಾಗುವವರನ್ನು ಮಾತ್ರ ಸ್ವೀಕರಿಸಿದ್ದಾರೆ. ಹರಿಹರ ಮತ್ತು ಸುರಂಗ ಇವರಿಬ್ಬರು ವಿಸ್ತಾರವಾಗಿಯೇ ಅವರ ಚರಿತ್ರೆಯನ್ನು ಹೇಳಿದ್ದಾರೆ. ಕಥಾಸಂವಿಧಾನದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಹರಿಹರ-ಸುರಂಗರಿಗೇ ಇರಬಹುದು.[2] ಹರಿಹರ ರಗಳೆಯ ರೂಪದಲ್ಲಿ ಹೇಳಿದ್ದರೆ ಸುರಂಗಕವಿ ಪ್ರೌಢವಾದ ಚಂಪೂಶೈಲಿಯಲ್ಲಿ ಪುರಾತನರ ಚರಿತ್ರೆಯನ್ನು ಉಜ್ಜ್ವಲಗೊಳಿಸಿದ್ದಾನೆ. ಅಂತೆಯೇ ಸುರಂಗನು ಹರಿಹರನು ಸ್ವೀಕರಿಸಿದ ಮೂಲಕ್ಕಿಂತ ಭಿನ್ನವಾದ ಮೂಲದಿಂದ ವಸ್ತುವನ್ನು ಸ್ವೀಕರಿಸಿದ್ದಾನೆಂದು ಹಲಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಸುರಂಗಕವಿ ಪ್ರತಿ-ಆಶ್ವಾಸಾಂತ್ಯದಲ್ಲಿ ತನ್ನನ್ನು 'ಕರ್ನಾಟಕ ಕವಿಚಕ್ರವರ್ತಿವಿರಚಿತಮಪ್ಪ' ಎಂದು ಹೇಳಿಕೊಂಡಿದ್ದಾನೆ. ಕವಿಚಕ್ರವರ್ತಿ ಬಿರುದನ್ನು ಕೊಡಬೇಕಾದರೆ ಚಕ್ರವರ್ತಿಗಳು ಮಾತ್ರ. ಯಾವ ಚಕ್ರವರ್ತಿಗಳು ಕೊಟ್ಟಿರುವರೆಂಬುದು ಕಾವ್ಯದಿಂದ ಸ್ಪಷ್ಟಪಡುವುದಿಲ್ಲ. ಆದರೆ 'ಧರಣೀಶರ ಮೆಚ್ಚಿ' ಕಾವ್ಯ ಬರೆದಂತೆ ಹೇಳಿಕೊಂಡಿದ್ದಾನೆ. ಧರಣೀಶನಾರೋ ? ತಾನು ಚಕ್ರವರ್ತಿಯಾಗಿರದಿದ್ದರೂ ಕವಿಗಳಲ್ಲಿ ಚಕ್ರವರ್ತಿಸ್ವರೂಪನಾದವನು ಎಂಬರ್ಥದಲ್ಲಿ ಕೊಟ್ಟಿರಬಹುದು. ಆದರೆ ಬಿರುದು ಅಸಾರ್ಥಕ್ಯ ಪಡೆಯಲಿಲ್ಲವೆಂಬುದು ಕಾವ್ಯಾವಲೋಕನಮಾಡಿದವರಿಗೆ ಹೊಳೆಯದಿರದು. ತುಂಡುತುಂಡಾದ ೬೩ ಕಥೆಗಳನ್ನು ಹೇಳಹೊರಟಿದ್ದರೂ ಕವಿ ಚಾತುರ್ಯದಿಂದ ೧೮ ವರ್ಣನೆಗಳನ್ನು ತಂದಿರುವುದೊಂದು ತಂತ್ರದೃಷ್ಟಿಯಿಂದ ಕೌಶಲ್ಯಯುಕ್ತವಾಗಿದೆಯೆಂದು ಹೇಳಲೇಬೇಕು. ಏಕಸೂತ್ರತೆಯು ಒಂದೇ ಒಂದು ಕಥೆಯಾಗಿದ್ದ ಪಕ್ಷದಲ್ಲಿ ಷಡಕ್ಷರಿಯ ರಾಜಶೇಖರವಿಳಾಸದಂತೆ ಇನ್ನೂ ಹೆಚ್ಚಿನ ಪ್ರೌಢಿಮೆಯನ್ನು ಕವಿ ತೋರಿಸುತ್ತಿದ್ದನೊ ಏನೋ. ಆದರೂ ಸುರಂಗನ ಪ್ರೌಢಿಮೆ ಕಡಿಮೆಯದೇನೂ ಅಲ್ಲ. ಮುಂದಿನ ಷಡಕ್ಷರದೇವನು ಬಹುಶಃ ಸುರಂಗನನ್ನು ಅನುಸರಿಸಿದ್ದಾನೆನ್ನಲು ಅಡ್ಡಿಯೇನೂ ಇಲ್ಲ. ಅನೇಕ ಕಡೆಗಳಲ್ಲಿ ಸುರಂಗನು ಹರೀಶ್ವರನ ಗಿರಿಜಾಕಲ್ಯಾಣವನ್ನು ಅನುಸರಿಸಿದ್ದಾನೆ. ಒಟ್ಟಿನಲ್ಲಿ ಹರೀಶ್ವರನ ಗಿರಿಜಾಕಲ್ಯಾಣ, ಸುರಂಗನ ತ್ರಿಷಷ್ಟಿಪುರಾತನರ ಚರಿತ್ರೆ, ಷಡಕ್ಷರದೇವನ ರಾಜಶೇಖರವಿಳಾಸ, ವೃಷಭೇಂದ್ರವಿಜಯಗಳು ವೀರಶೈವಚಂಪೂಕಾವ್ಯಪ್ರಪಂಚದ ಮೇರುಕೃತಿಗಳೆಂದು ಕರೆಯಲು ಬಾಧಕವೇನೂ ಇಲ್ಲ. ಒಬ್ಬೊಬ್ಬರದೂ ಒಂದೊಂದು ವಿಶಿಷ್ಟಶೈಲಿ. ಷಡಕ್ಷರದೇವ ಹರೀಶ್ವರರಿಗಿರುವ ಜನಪ್ರಿಯತೆ ಸುರಂಗನಿಗೆ ಇಲ್ಲದಿರುವುದು ಕನ್ನಡಿಗರ ಔದಾಸೀನ್ಯದ ಕಾರಣವೋ ಏನೋ.

---

1 ಅ. ನ. ಕೃಷ್ಣರಾಯ: ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ೧೯೪೬, ಪು. ೩೭.

2 ಆರ್. ಸಿ. ಹಿರೇಮಠ ಅವರು ಸಂಪಾದಿಸಿದ 'ತ್ರಿಷಷ್ಟಿಪುರಾತನಚಾರಿತ್ರಂ' ಗ್ರಂಥದ ಮುನ್ನುಡಿಯಲ್ಲಿ ಸಾಮಾನ್ಯವಾಗಿ ಹರಿಹರ, ಸುರಂಗ, ಇನ್ನುಳಿದ ಪುರಾತನರ ಚರಿತ್ರೆಯನ್ನು ಹೇಳಿದ ಕವಿಗಳ ಕಥಾಸಂವಿಧಾನದಲ್ಲಿನ ಹೆಚ್ಚು ಕಡಿಮೆ ವಿವರಿಸಿದ್ದಾರೆ. ಹೆಚ್ಚಿಗೆ ತಿಳಿಯಬೇಕೆನ್ನುವವರು ಆ ಗ್ರಂಥವನ್ನು ನೋಡಬೇಕು. (೧೯೬೭ರ ಮುದ್ರಣ)

## ಸುರಂಗಕವಿಯ ಕಥನಕಲೆ

ಸುರಂಗಕವಿ ಕಾವ್ಯಕ್ಕೆತ್ತಿಕೊಂಡಿರುವ ವಸ್ತುವಿಶೇಷವು ಶೃಂಗಾರವೀರರಸಪ್ರತಿಪಾದನೆಯದಲ್ಲ. ಭಕ್ತಿಜೀವನ ನಡೆಸಿದ ಅನೇಕ ಮಹಾಪುರುಷರ ಜೀವನಾನುಭವಗಳನ್ನು ಚಿತ್ರಿಸುವಂತಹುದು. 'ತಪೋವನದೊಳೊಂದು ದಿವಸಂ ಅನೇಕ ಮುನಿಕದಂಬಂ ಬೆರಸು ಉಪಮನ್ಯು ಮುನೀಶ್ವರಂ ಪರಮಾನಂದದಿಂ ಕುಳ್ಳಿರ್ದಿರಲ್ಕಾಸಮಯದೊಳ್ ಮರು ತಾಧ್ವದೊಳ್ ಅತ್ಯೂರ್ಜಿತವರತೇಜಃಪುಂಜವೊಂದಂ ಉಪಮನ್ಯುಮುನೀಶ್ವರನಾಗಲ್ ಕಂಡು ಒಲವಿಂ ಕರಕಮಲಂ ಗಳನೆ ಮುಗಿದು ವಿನಮಿತನಾದಂ'[1] ಇದನ್ನು ಕಂಡು ಮುನಿಸಮೂಹದಲ್ಲಿದ್ದ ಕಣಾದನು ಅಕಾರಣವಾಗಿ ಉಪಮನ್ಯು ದೇವರು ನಮಸ್ಕರಿಸಲ್ಕಿದರ ವೃತ್ತಾಂತವನ್ನು ತಿಳಿಯಬೇಕೆಂದು ಕೇಳುವ ಕೇಳಿಕೆಯೇ ಕಥೆ ಪ್ರಾರಂಭವಾಗುವುದರ ನಾಂದಿ. ಪ್ರಥಮತಃ ಪ್ರಾರಂಭವಾಗುವ ಪುರಾತನ ಚರಿತ್ರೆಯೇ ಸೌಂದರನಂಬಿಯ ಕಥೆ. ಕಥೆ ಹೇಳಿದವನು ಉಪ-ಮನ್ಯು ಮುನಿ : ಕೇಳಿದವರು. ಕಣಾದಾದಿ ಉಳಿದ ಮುನಿಕದಂಬಕ. ಅರವತ್ತುಮೂರು ಆಶ್ವಾಸಗಳಲ್ಲಿ ೩೧೧೮ ಪದ್ಯಗಳು ಮತ್ತು ಹೃದ್ಯವಾದ ಅನೇಕ ಗದ್ಯಭಾಗಗಳುಳ್ಳ ವಿಸ್ತಾರವಾದ ಕಾವ್ಯದಲ್ಲಿ ತನಗಿರುವ ಅದ್ಭುತ ಪ್ರತಿಭಾಶಕ್ತಿಯನ್ನೂ, ಭಾಷಾಪ್ರೌಢಿಮೆಯನ್ನೂ ಉಪಮಾದ್ಯನೇಕಾಲಂಕಾರಭಾಷಾಚಮತ್ಕಾರವನ್ನೂ ತೋರಿಸಿದ್ದಾನೆ. ಸುರಂಗಕವಿಯ ಪ್ರತಿಭೆ ಮುಖ್ಯವಾಗಿ ಎದ್ದು ಕಾಣುವುದು ಅವನ ಕಥನಕಲೆಯಲ್ಲಿ. ನಾಟಕೀಯತೆಯ ಮಾರ್ಗವನ್ನು ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿರುವಂತೆ ಅನುಸರಿಸಿರುವುದೊಂದು ಇವನ ಪ್ರಮುಖ ತಂತ್ರಗಳಲ್ಲಿ ಒಂದಾಗಿದೆ. ಮೊದಲನೆಯ ನಂಬಿಯಣ್ಣನ ಕಥೆಯಲಿ ಶಿವನು ವೃದ್ಧಜಂಗಮವೇಷ ಧರಿಸಿ ವಿವಾಹಮಂಟಪದಲ್ಲಿ ಬಂದು ಮಾಡುವ ಗಲಭೆಯ ಸನ್ನಿವೇಶವು ಉತ್ತಮ ನಾಟಕೀಯವಾಗಿ ಇರುವುದನ್ನು ಕಾಣುತ್ತೇವೆ. ಈ ಕಥೆಯಲ್ಲಿ ಹರಿಹರನ ನಂಬಿಯಣ್ಣನ ರಗಳೆಯ ಭವ್ಯತೆಯನ್ನು ಕಾಣದಿದ್ದರೂ ಸುರಂಗನ ಶೈಲಿಯೇನೂ ಕಳಪೆಯದಲ್ಲವೆನಿಸುತ್ತದೆ. ಆದರೆ ಹರಿಹರನು ಕಥನಕಲೆಯ ಓಟಕ್ಕೆ ಆರಿಸಿಕೊಂಡ ಛಂದಸ್ಸು ಮತ್ತು ಗದ್ಯಭಾಗಗಳೂ ರಮ್ಯತೆಗೆ ಕಾರಣವಾಗಿರಬಹುದು. ರಗಳೆಗಳು ತಾಳಲಯಬದ್ಧವಾಗಿ ಹಾಡಲು ಬರುವಂಥವು. ಚಂಪೂಮಾರ್ಗ ಈ ತರದ ನಾದಮಾಧುರ್ಯಕ್ಕೆ ಸ್ವಲ್ಪ ದೂರ ಪೆಡಸು ಆಗೇ ಆಗುತ್ತದೆ. ಒಟ್ಟಿನಲ್ಲಿ ಸುರಂಗಕವಿ ವಾಸ್ತವಿಕ ಜೀವನಚಿತ್ರಣದಲ್ಲಿ ಸಿದ್ಧಹಸ್ತ. ಅವನ ಪಾಂಡಿತ್ಯ ಪ್ರತಿಭಾಪೂರ್ಣ. ಭಕ್ತಿಜೀವನ ನಿರೂಪಣೆಯ ಈ ಚಂಪೂಮಹಾಕಾವ್ಯಪ್ರಬಂಧವು ೧೬ನೆಯ ಶತಮಾನದ ಒಂದು ದೊಡ್ಡ ಕೊಡುಗೆ. ಸುರಂಗನ ನಂತರ ಷಡಕ್ಷರದೇವನವರೆಗೆ ಇಂಥ ಪ್ರತಿಭಾಪಾಂಡಿತ್ಯಪೂರ್ಣಕವಿ ಇನ್ನೊಬ್ಬ ಹುಟ್ಟಲಿಲ್ಲ.

## ವೀರಭದ್ರರಾಜನ 'ವೀರಭದ್ರವಿಜಯ ಚಂಪೂ' (೧೫೩೦)

ಹರೀಶ್ವರನ ವೀರಭದ್ರರಗಳೆಯ ಚಿಕ್ಕಕಾವ್ಯದ ನಂತರ ವೀರಭದ್ರನ ಬಗೆಗೆ ಹುಟ್ಟಿದ ಕಾವ್ಯವೇ ವೀರಭದ್ರ ರಾಜನ ವೀರಭದ್ರವಿಜಯವೆಂಬ ಚಂಪೂಕಾವ್ಯ. ಈತನು ಈ ಕಾವ್ಯವಲ್ಲದೆ ಪಾರ್ವತೀವಲ್ಲಭ ಶತಕ, ಉಮಾಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠಸೋಮೇಶ್ವರ ಶತಕ, ಕಂದಶತಕಗಳೆಂಬ ಐದು ಶತಕಗ್ರಂಥಗಳನ್ನು ಬರೆದಹಾಗೆ ತಾನು ಬರೆದ ಕಂದಶತಕದ ಕೊನೆಯ—

"ಶುಭಮಾವ ಪಾರ್ವತೀವ
ಲ್ಲಭಶತಕಮನಿಂದುಮಾಮಹೇಶ್ವರಶತಕಮ
ನುಭಯಕವಿ ವೀರಭದ್ರ
ಪ್ರಭುಪೇಳ್ದಂ ಪ್ರಾಣನಾಥಶತಕಮದೊಲವಿಂ
ವರಸೋಮೇಶ್ವರಶತಕಮ
ನಿರದಂಬಿಕೆಯರಸಯೆಂಬ ಕಂದಶತಕಮಂ
ಸ್ಮರರೂಪವಿರೂಪಾಕ್ಷನು
ದರಸಂಭವನೆನಿಪ ವೀರಭದ್ರಂ ಪೇಳ್ದಂ"[2]

ಈ ಪದ್ಯಗಳಿಂದ ತಿಳಿದು ಬರುವುದು. ವೀರಶೈವಮತೀಯನಾದ ಕವಿಯು ತನ್ನ ಈ ಕಾವ್ಯದಲ್ಲಿ ಶಿವನಿಗೆ ಸಕಲ ದೇವೋತ್ಕರ್ಷವನ್ನು ವೇದೋಕ್ತಿಗಳಿಂದ ಸ್ಥಾಪಿಸಿ ಬಣ್ಣಿಸಿರುವುದರಿಂದಲೂ ; ಭವಾನೀಧವನ ಪಾದಪೂಜಕರಾದ ಶಿವ

[1] ಆಶ್ವಾಸ ೧. ೬೩ನೆಯ ಪದ್ಯದ ಮುಂದಿನ ಗದ್ಯ, ಅದರ ಮುಂದಿನ ಕಂದಪದ್ಯ.

[2] ವೀ.ಭ.ವಿ. ಪೀಠಿಕೆ ೪, ಶ್ರೀನಿವಾಸಾಚಾರ್ ಮತ್ತು ಎಮ್. ಎಸ್. ಬಸವಲಿಂಗಯ್ಯ (ಸಂ.) ೧೯೩೮

ಭಕ್ತರು ಮತ್ತು ವೀರೇಶ, ನಂದಿ, ಭೃಂಗಿಗಳನ್ನು ಬಾಣ, ಹರೀಶ್ವರ, ಮಯೂರ, ಕಾಳಿದಾಸ, ಹಲಾಯುಧ, ಭೋಜ, ಮಲ್ಹಣ, ಕೇಶಿರಾಜ, ಉದ್ಭಟ ಮೊದಲಾದ ಶೈವಕವಿಗಳನ್ನೂ ವೀರಶೈವ ಕವಿಗಳನ್ನೂ ಉಳಿದ ವೀರಶೈವ ಕವಿಗಳ ಹಾಗೆಯೇ ಗ್ರಂಥಾರಂಭದಲ್ಲಿ ಸ್ತುತಿಸಿರುವುದರಿಂದ ಇವನು ವೀರಶೈವಕವಿಯೇ ಎನ್ನುವುದಕ್ಕೆ ಅನುಮಾನ ವೇನೂ ಇಲ್ಲ. ಶಿವನನ್ನು ವರ್ಣಿಸುವೆಡೆಗಳಲ್ಲೆಲ್ಲ 'ರತ್ನದಲ್ಲಿ ಪ್ರಕಾಶ, ಚಂದ್ರನಲ್ಲಿ ಬೆಳದಿಂಗಳು, ಸೂರ್ಯನಲ್ಲಿ ತೇಜಸ್ಸು, ಹೂವಿನಲ್ಲಿ ಮಕರಂದಗಳ ಹಾಗೆ ಶಿವನಲ್ಲಿ ಶಕ್ತಿಯು ಅವಿನಾಭಾವಸಂಬಂಧಕಾರಣಪೂರ್ವಕ ವರ್ಣಿಸುವುದು ಇವನ ಶಕ್ತಿವಿಶಿಷ್ಟಾದ್ವೈತಸಿದ್ಧಾಂತಾನುಯಾಯಿತ್ವವನ್ನು ಪ್ರಕಾಶಪಡಿಸುವುದು. ತನ್ನ ಬಗೆಗೆ ಕವಿ-ಶ್ರೀಕಂಠವಂಶವಾರಿಧಿ ರಾಕಾಬ್ಜನಾದ ಚಿಕ್ಕವಿರೂಪಾಕ್ಷನೆಂಬುವನ ಮಗ ಕಾಮನೃಪನೆಂಬುವನಿದ್ದನು. ಈ ಕಾಮನೃಪ ಮತ್ತು ಅವನ ಹೆಂಡತಿ ವೀರಾಂಬೆಯರಿಗೆ ರಾಜಹಂಸನೆನಿಸಿದ ವಿರೂಪಾಕ್ಷನೃಪನಿದ್ದನು—

ಶ್ರೀ ವಿರೂಪಾಕ್ಷದೇವನಿ
ನಾವೀರಂ ಪುಟ್ಟಿ ವಿಬುಧನುತನಾದಂದದೊ-
ಳಾ ವಿರೂಪಾಕ್ಷನೃಪನಿಂ
ದೀ ವೀರಂ ಜನಿಸಿ ವಿಬುಧನುತನಾಗಿರ್ಪಂ (ವೀ. ಭ. ವಿ. ೧–೩೮)

ಹಿಂದೆ ಶ್ರೀ ವಿರೂಪಾಕ್ಷನಿಂದ ವೀರಭದ್ರಸ್ವಾಮಿಯು ಹುಟ್ಟಿದಹಾಗೆ ತಾನು ವಿರೂಪಾಕ್ಷನೃಪನಿಂದ ಜನ್ಮತಾಳಿದ ವೀರಭದ್ರನೃಪನೆಂದು ಹೋಲಿಕೆಮಾಡಿಕೊಂಡಿದ್ದಾನೆ. ಆದರೆ ಈ ಗ್ರಂಥದಿಂದ ಇವನು ಯಾವ ನಾಡಿಗೆ ಅರಸನಾಗಿದ್ದ ನೆಂಬುದು ಮಾತ್ರ ಚಿದಂಬರರಹಸ್ಯವಾಗಿಯೇ ಉಳಿದಿದೆ. ಈ ವೀರಭದ್ರನ ತಂದೆಯಾದ ವಿರೂಪಾಕ್ಷನೃಪ (ವಿರುಪರಾಜ)ನು ತ್ರಿಭುವನತಿಲಕವನ್ನು ಬರೆದ ಕಾಲವನ್ನು[1] ಶಾಲಿವಾಹನಶಕ ೧೪೪೧ನೆಯ ಪ್ರಮಾದಿನಾಮ ಸಂವತ್ಸರವೆಂದಿದ್ದಾನೆ. ಈ ಕಾಲ ಕ್ರಿ.ಶ. ೧೫೧೯ಕ್ಕೆ ಸರಿಹೋಗುವುದರಿಂದ ಅವನಿಗಿಂತ ಈಚೆಗೆ ಅಂದರೆ ಕ್ರಿ.ಶ. ೧೫೩೦ರ ಸುಮಾರಿಗೆ ವೀರಭದ್ರನೃಪನು ಈ ವೀರಭದ್ರವಿಜಯಕಾವ್ಯವನ್ನು ರಚಿಸಿರಬಹುದು. ವಿರುಪರಾಜನು ತನ್ನ ತ್ರಿಭುವನತಿಲಕದಲ್ಲಿ ತನ್ನ ಪರಂಪರೆಯವರನ್ನು ಶೂರತ್ವೇನ ವರ್ಣಿಸಿಕೊಂಡಿದ್ದಾನೆ. ಅಲ್ಲಿ—

"ಏಳು ಬೀಡಿನ ಗೋಪ, ಚೋಳರಭೀಮ, ಚೋಳನಾರಾಯಣ, ಹನ್ನೊಂದು ಬೀಡಿನ ಮಾಂಡಳಿಕರ ಗಂಡ ಹೊನ್ನೊರೆಬಿರುದಾಂಕ, ಶ್ರೀಕಂಠವಂಶಾಬ್ಧಿಹಿಮಕರನಾದ ಚಿಕ್ಕವಿರೂಪಾಕ್ಷ; ಮಗ ಸಂಗರಭೀಮಹೊನ್ನೊರೆಕಾವ ಏಳುಬೀಡಿನ ಗೋಪವೆಸರನು ತಾಳ್ದ ಕಾಮ; ಇವನ ಹೆಂಡತಿ ವೀರಾಂಬೆ"[2]—ಇವರ ಮಗನೇ ನಾನಾ ಕಲೆಗಳಿಗೆ ಆರಾಮನೂ, ಚೋಳರಿಗೆ ಭೀಮಸ್ವರೂಪನೂ, ಭೋಗನನುಜ ವಿರುಪರಾಜ ಎಂದಿದ್ದಾನೆ. ಈ ವಿರುಪರಾಜನ ಮಗನೇ ನಮ್ಮ ವೀರಭದ್ರವಿಜಯ ಚಂಪೂಪ್ರಬಂಧದ ವೀರಭದ್ರ. ಮೇಲಿನ ತ್ರಿಭುವನತಿಲಕದ ಹೇಳಿಕೆಯಿಂದ ಇವರ ವಂಶವೇ ವೀರವಂಶವೆಂದು ತಿಳಿದುಬರುವುದು, ಆದಕಾರಣವೇ ವೀರರಸದ ವಸ್ತುವಾದ 'ವೀರಭದ್ರ ಚರಿತೆ'ಯು ಕವಿಯಿಂದ ಆರಿಸಿಕೊಂಡ ವಸ್ತುವಾಗಿದೆ ಎನ್ನಬಹುದು. ತನ್ನ ಕಾವ್ಯದ ಬಗೆಗೆ ಕವಿ ಎಲ್ಲ ಕನ್ನಡ ಕವಿಗಳಂತೆ ವಿಶೇಷ ವಾಗಿ ಶ್ಲಾಘಿಸಿಕೊಂಡಿದ್ದಾನೆ.

ಗುರುಪದವಿಭಕ್ತಿಯಿಂ ಬಂ
ಧುರಲಿಂಗತ್ರಯದೆ ಸತ್ಕೃತಿಯುತಾನ್ವಯದಿಂ
ವರರೀತಿಭಾವದಿಂ ಶಂ
ಕರಭಕ್ತರ ತೆರದಿ ನೆಸೆವುದೀ ಸತ್ಕಾವ್ಯಂ[3]

ಹೀಗೆ ಶ್ಲೇಷೆಯಿಂದ 'ಶಿವಭಕ್ತರ ಹಾಗೆ' ತನ್ನ ಕಾವ್ಯವೆಂದು ಚಮತ್ಕಾರವಾಗಿ ಹೇಳಿಕೊಂಡಿದ್ದಾನೆ. ಈ ಗ್ರಂಥ ಲಕ್ಷಣದ ಆಡುಂಬೊಲ ; ಸಕ್ಕದದ ಪಳ್ಳಿ ; ಗಾಡಿನೆಲಸಿದನಾಡು; ದೇಶೀಯದ ಬೀಡು ಎನಿಸಿ ದಿವ್ಯವಾದ ನವರಸ ಭರಿತವಾದ ಕಾವ್ಯವೆಂದು ಕರೆದುಕೊಂಡಿದ್ದಾನೆ. ಆದರೆ ಈ ಕಾವ್ಯದಲ್ಲಿ ಹರಿಹರ ಸುರಂಗಕವಿಗಳ ಪ್ರೌಢಿಮೆ, ವರ್ಣನಾ ವೈಖರಿ, ಪಾತ್ರಚಿತ್ರಣವನ್ನು ಕಾಣುವುದಿಲ್ಲವಾದರೂ ಕಾವ್ಯ ಅಷ್ಟೊಂದು ಕಡಿಮೆ ದರ್ಜೆಯದಲ್ಲವೆಂದು ಒಟ್ಟಾರೆ

1 ಕ. ಕ. ಚ. ಭಾ-೨. ದ್ವಿ.ಮು. ೧೯೭೩ ; ಪು. ೧೪೪
2 ಅದೇ. ವೀ. ವಿ. ೧-೩೧
3 ಅದೇ. ಪ. ೩೩

ಹೇಳಬಹುದು. ಶಿವ, ಲಿಂಗ, ವಾಯುಪುರಾಣಗಳಲ್ಲಿ ಬರುವ ಪ್ರಸಿದ್ಧವಾದ ವೀರಭದ್ರನು ದಕ್ಷಮುಖನಾಶಗೈದ ಕಥೆಯನ್ನು ಆರಿಸಿಕೊಂಡು ೧೨ ಅಧ್ಯಾಯಗಳಲ್ಲಿ ವಿವರಿಸಹೊರಟ ಕವಿ ಚಂಪೂಕಾರರ ಕ್ರಮದಂತೆ ೧೮ ವರ್ಣನೆಗಳ ಹೊರೆಯನ್ನು ಕಾವ್ಯದ ಮೇಲೆ ಹೊರಿಸಿಯೇ ಹೊರಿಸಿದ್ದಾನೆ. ಕಾಶಿಯ ವಿಶ್ವೇಶ್ವರನ ಅಂಕಿತದಲ್ಲಿ ಬರೆದ ಕಾವ್ಯವಾದುದರಿಂದ ಕಾಶಿಯ ವರ್ಣನೆಯಿಂದಲೇ ಕವಿ ಕಾವ್ಯವನ್ನು ಪ್ರಾರಂಭಿಸುತ್ತಾನೆ.[1] ಅವಶ್ಯಕ ವರ್ಣನೆಗಿಂತ ಅನವಶ್ಯ ವರ್ಣನೆಗೆ ಕವಿ ಹೆಚ್ಚು ಕಾಲವ್ಯಯ ಮಾಡಿದ್ದಾನೆ.

ಪ್ರಥಮದ ೪೫ ಪದ್ಯಗಳವರೆಗೆ ಇಷ್ಟದೇವತಾಪ್ರಾರ್ಥನೆ, ಪೂರ್ವಕವಿಸ್ತವನ, ವಂಶವರ್ಣನೆ ಗ್ರಂಥೋತ್ಕರ್ಷಾದಿಗಳನ್ನು ಚಿತ್ತರಿಸಿದ ಕವಿ, ಕಥೆಯನ್ನು—

ಇಂತಪ್ಪ ಮೇರುವಿನ ದಕ್ಷಿಣ ದಿಶಾಭಾಗದೊಳ್ಕಾಶೀದೇಶಮೆಸೆದಿರ್ಪುದದೆಂತೆಂದೊಡೆ-
ಸುಕೃತದ ಬೈಕೆ, ಸಾರತರಸತ್ಯದ ಜೋಕೆ, ಸದಾಶಿವಾಗಮ-
ಪ್ರಕರದ ಬೀಡು ನಾಲ್ಕೆನಿಸಿತೋರ್ಪಪದಂಗಳವಿರ್ಪನಾಡು ಭಾ-
ವಕರ ನಿವಾಸಮಂತದು ಸುಭಕ್ತಿಯ ಕೋಶಮುರುಪ್ರಕಾಶಮಾಂ
ಸುಕೃತಿ ಜನೋಪದೇಶಮೆನಿಸಿರ್ಪುದು ಕಾಶಿಯ ದೇಶಮಾವಗಂ ॥

ಎಂದು ಹೇಳುತ್ತ ಆರು ಆಶ್ವಾಸಗಳು ಪೂರ್ಣವಾಗುವವರೆಗೆ ತಾನೆತ್ತಿಕೊಂಡ ವೀರಭದ್ರನ ವಿಚಾರವೇ ಬರದಂತೆ ಋತುವರ್ಣನೆ, ಪುಷ್ಪಾಪಚಯ, ಜಲಕೇಳಿ, ಗ್ರೀಷ್ಮಋತು, ಕಿರಾತವರ್ಣನೆಯೇ ಮೊದಲಾದ ವರ್ಣನೆಗಳಿಂದ ಬೀಗಿಸಿ ಕಥೆಯ ವಿಷಯದಲ್ಲಿ ಮಮತೆಯುಳ್ಳವರ ಭಾವನೆಗೆ ದೊಡ್ಡ ತೆರೆಯೆಳೆದು ಗ್ರಂಥ ಪ್ರವೇಶಕ್ಕೇ ಮನಸ್ಸನ್ನುಂಟು ಮಾಡದಂತೆ ಮಾಡಿದ್ದಾನೆ. ವೀರರಸದ ವರ್ಣನೆಯಲ್ಲೂ ಕವಿ ಮಧ್ಯಮವರ್ಗದವನೆನ್ನಲಡ್ಡಿಯಿಲ್ಲ. ತನ್ನ ತಂದೆ ಬರೆದ ತ್ರಿಭುವನತಿಲಕಕ್ಕೂ ಈ ಗ್ರಂಥಕ್ಕೂ ವರ್ಣನೆಯಲ್ಲಿ ಬಹಳ ಮಟ್ಟಿಗೆ ಹೋಲಿಕೆಯಿದೆ. ಇಷ್ಟೇ ಅಲ್ಲ, ಅಲ್ಲಿನ ಪದ್ಯಗಳನ್ನು ಕವಿ ಎತ್ತಿಟ್ಟುಕೊಂಡಿದ್ದಾನೆ. ತಂದೆಯ ಆಸ್ತಿಯನ್ನು ಉಪಯೋಗಿಸುವಲ್ಲಿ ಮಗನಿಗೆ ಭಯವಾದರೂ ಏಕೆ?

ಒಟ್ಟಿನಲ್ಲಿ ವೀರಭದ್ರವಿಜಯವು ಶ್ರೇಷ್ಠಮಟ್ಟದ ಕಾವ್ಯವೆನ್ನುವ ಗೌರವ ಪಡೆಯಲರ್ಹವಲ್ಲದಿದ್ದರೂ ಕಳಪೆಯ ಕಾವ್ಯವೇನೂ ಅಲ್ಲವೆಂದು ಹೇಳಬಹುದು. ತನ್ನನ್ನು ಉಭಯಕವಿ. ಬುಧನುತ, ಸತ್ಕವೀಶ್ವರ ಇತ್ಯಾದಿಯಾಗಿ ವಿಶೇಷಿಸಿಕೊಂಡಿದ್ದಾನೆ. ಕವಿಗೆ ಕರ್ನಾಟಕ ಸಂಸ್ಕೃತಭಾಷೆಗಳೆರಡರಲ್ಲೂ ಪಾಂಡಿತ್ಯವಿರುವುದು ಕಾವ್ಯದಿಂದ ತಿಳಿದುಬರುವುದು.

## ಸದಾಶಿವಯೋಗಿವಿರಚಿತ ರಾಮನಾಥವಿಲಾಸ (ಕ್ರಿ.ಶ. ೧೫೫೪)

ವೀರಭದ್ರಕವಿಯನಂತರ ೧೬ ಉಲ್ಲಾಸಗಳಲ್ಲಿ ೪೩೦೦ ಗ್ರಂಥಸಂಖ್ಯೆಯ ಬೃಹತ್ ಚಂಪೂಕಾವ್ಯವಾದ ರಾಮನಾಥವಿಲಾಸವನ್ನು ಬರೆದ ವೀರಶೈವ ಕವಿಯೆಂದರೆ 'ಸದಾಶಿವಯೋಗಿ' ಎಂಬುವನು. ಈತನ ಮುತ್ತಜ್ಜ ಶೃಂಗಾರದ ಸೋಮಣಾರ್ಯನೆಂಬುವನು. ಅಜ್ಜ ಗಂಗಾಧರ; ತಂದೆಯೂ ಗುರುವೂ ಆದವನು ಸಾಮವೇದಿ ಎಂಬುವನು. ತನ್ನ ಕಥೆಗೆ ನಾಯಕನಾದ ರಾಮನಾಥನ ವಂಶದಲ್ಲಿ ಹುಟ್ಟಿದ ಪ್ರಭುದೇಶಿಕನೆಂಬುವನು ಸದಾಶಿವಯೋಗಿಯ ಸಮಕಾಲೀನನೂ ಗುರುಸ್ಥಾನದಲ್ಲಿರುವವನೂ ಆಗಿದ್ದ ಹಾಗೆ ಈ ಕೆಳಗಿನ ಮಾತುಗಳಿಂದ ವ್ಯಕ್ತವಾಗುವುದು. "ರಾಮಣಾರ್ಯ; ತದ್ವಂಶೋದ್ಭವ ಪರ್ವತಾಚಾರ್ಯ; ಆತನ ಮಗ ಮಲ್ಲಿಕಾರ್ಜುನಾಚಾರ್ಯ; ಅವನ ಮಗ ಲಿಂಗಣಾರ್ಯ; ಅವನ ಮಗ ಕ್ರಿಯಾದಿಚರ್ಯಾಕ್ರಮತ್ರಿಲಿಂಗಾರ್ಥಪ್ರಕಾಶಿಕೆ ಎಂಬುತ್ತಮಸಂಗ್ರಹದತಿವಿಸ್ತಾರಮಂ ತ್ರಿಚರಲಿಂಗಪೂಜಾಖ್ಯಮಯಮಂ, ಶಿವಯೋಗಕಲ್ಪತರುವಂ, ಯಥಾರ್ಥವಿಜ್ಞಾನವೆಂಬ ಸಂಗ್ರಹಮಂ, ಮೋಕ್ಷದರ್ಶನಮಂ, ತತ್ಸಂಗ್ರಹೋತ್ಕರವಂ, ಪಂಚವಿಧತ್ವದಿಂ ಶ್ರೀ ಸಾರಸಿದ್ಧಾಂತಮಂ ರಚಿಸಿದ ಆದಿಶಿವಾಗಮಾರ್ಥಸಂದೇಶಿಕನೆಂದು ಕೀರ್ತಿವಡೆದ ಪ್ರಭುದೇಶಿಕ."[2]

ತನಗೆ 'ನವಬಾಣ, ವಿಚಿತ್ರಕವಿದ್ವಕ್ಕವಿಕುಲಸಾರ್ವಭೌಮ'—ಇತ್ಯಾದಿ ಬಿರುದುಗಳಿದ್ದಂತೆ ಹೇಳಿಕೊಂಡ

---

[1] ಅದೇ. ಪ. ೪೬ರ ಮುಂದಿನ ಗದ್ಯ

[2] ಕ. ಕವಿಚರಿತೆ, ಭಾಗ ೨, ಪು. ೨೨೨-೨೨೩ (೧೯೭೩ರ ಮುದ್ರಣ)

ಸದಾಶಿವಯೋಗಿಯು ಗ್ರಂಥಾರಂಭದಲ್ಲಿ ರಾಮಣಾಚಾರ್ಯ, ಪಂಡಿತಾರಾಧ್ಯ, ಪ್ರಭುದೇಶಿಕ, ಸೋಮೇಶ್ವರ (ಪಾಲ್ಕುರಿಕೆ ಸೋಮನಾಥ ?) ಸಕಳದೇಬುಧಂ ಹರೀಶ, ಭೀಮ, ಹಲಾಯುಧ, ಕಾಳಿದಾಸ, ಕ್ಷೇಮೇಂದ್ರ, ರಾಘವ ಪಂಡಿತನೇ ಮೊದಲಾದ ಮಹಾಕವಿಗಳನ್ನು ಸ್ತುತಿಸಿದ್ದಾನೆ.

"ಹೊಯಿಸಳದೇಶದೊಳ್ ಮುದ್ರಾಪುರದೊಳ್ ಶ್ರೀರಾಮೇಶ್ವರಲಿಂಗಮೂರ್ತಿಯಿಂ ವೀರಶೈವದೀಕ್ಷೆಯಂ ಪಡೆದು ಅದಂ ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಆ ರಾಮೇಶ್ವರಲಿಂಗಮಂ ಸಾಕ್ಷಿಯಂ ನುಡಿಯಿಸಿ, ಮೆರೆದು ಭೂಲೋಕದೊಳ್ ವೀರಶೈವಮತಮೇ ವೇದಶಾಸ್ತ್ರಾಗಮ ಪುರಾಣಂಗಳೊಳ್ ಉತ್ತರಮೆಂಬುದಂ ಪ್ರಾಚುರ್ಯಂಗೆಯ್ದ ರಾಮನಾಥಾಚಾರ್ಯರ ಚರಿತ್ರವು ಹೇಳಲ್ಪಟ್ಟಿದೆ."[1] ಸ್ವಭಾವೋಕ್ತಿ ವರ್ಣನೆಯಲ್ಲಿ ಕವಿ ಬಹು ಚತುರತೆಯನ್ನು ವ್ಯಕ್ತಪಡಿಸಿದ್ದಾನೆ. ಉದಾಹರಣೆಗೆ ಕರಡಿಯ ಗುಣಸ್ವಭಾವಚರ್ಯೆಯ ಬಗೆಗೆ ಈ ಕೆಳಗಿನ ಪದ್ಯವನ್ನು ನೋಡಬಹುದು :

ತಲೆವಾಗುತ್ತಡಿಯಿಟ್ಟು ತೂಂಕಡಿಸುತುಂ ತೂಗುತ್ತೆ ತೇಗುತ್ತುಮಿ
ರ್ಕೆಲನಂ ನೋಡುತೆ ಜೇನ್ಗಳಿರ್ಪೆಡೆಗಳಂ ಕಾಣುತ್ತವಂ ಕೊಂಡು ಬಂ
ದೊಲವಿಂದಂ ಬೆಳವಣ್ಗಳೊಳ್ ಕಲಸುತಿಪ್ಪಾಪೂರ್ತಿಯಪ್ಪನ್ನೆಗಂ
ಮೆಲುತಾನಂದಿಸುತಿರ್ಪ ಪೆರ್ಗರಡಿವಿಂಡಿರ್ದತ್ತು ತನ್ನಿಚ್ಛೆಯಿಂ[2]

—ಇಲ್ಲಿ ಕರಡಿಯ ಸ್ವಭಾವ ಅದರ ಆಹಾರದ ವಿಚಾರದಲ್ಲಿ ಅನುಸರಿಸಿರುವ ರೀತಿನೀತಿಗಳು ಸರಳವಾದ ಮಾತುಗಳಲ್ಲಿ ವಿವರಿಸಲ್ಪಟ್ಟಿರುವುದು ಕವಿಯ ಉತ್ತಮ ಕವಿತಾಸಾಮರ್ಥ್ಯಕ್ಕೆ ಒಂದು ನಿದರ್ಶನವೆನ್ನಬಹುದು. ಉದ್ಯಾನವನದಲ್ಲಿದ್ದ ಸಂಪಿಗೆ ಹೂವುಗಳು ಬಂಗಾರವನ್ನು ನಿಂದೆಗೆಯ್ವ ಬಗೆಗೆ ಈ ಕೆಳಗಿನ ಪದ್ಯ ನೋಡಿ :

ರಸಹೀನಂ ಕಠಿಣಂ ಸುಗಂಧರಹಿತಂ ಸಂತಪ್ತರೂಪಂ ಪರೀ
ಕ್ಷಿಸಲೆಂತುಂ ಬಹುವರ್ಣಸಂಕರನಿಜವ್ಯಾಪಾರಿಯೆಂದುರ್ವಿಯೊಳ್
ರಸಯುಕ್ತಂ ಮೃದುಳಂ ಸುಗಂಧನಿಧಿತಾಪಾನ್ಯಂ ಸ್ವಕೀಯೈಕ ವ
ರ್ಣಸಮುದ್ಭಾಸಿತಚಂಪಕಂ ಪಳಿದುವಾಪೊನ್ನಂ ತದುದ್ಯಾನದೊಳ್[3]

—ಇದು ಕವಿಯ ಸರಳವಾದ ವರ್ಣನೆಯ ವೈಖರಿಯಾಗಿದೆ. ಸುರಂಗಕವಿಯ ತ್ರಿಷಷ್ಟಿಪುರಾತನರ ಚರಿತ್ರೆಯಂತೆ ಈ ಕಾವ್ಯವೂ ಕನ್ನಡ ಸಾಹಿತ್ಯಲೋಕದಲ್ಲಿ ಅಜ್ಞಾತವಾಗಿರುವುದೂ ಒಂದು ದೊಡ್ಡ ಕೊರತೆಯೇ ಆಗಿದೆ. ಪ್ರಚಾರದ ಪುಣ್ಯವು ಕವಿಗೂ ಬೇಕೇಬೇಕೆನ್ನಿಸುತ್ತದೆ. ಒಟ್ಟಿನಲ್ಲಿ ಈ ಕವಿಯೂ ದೊಡ್ಡವನು. ಪ್ರಸನ್ನಕವಿತಾಚಾತುರ್ಯಚತುರ ನೆನ್ನಲು ಯಾವ ಅನುಮಾನವೂ ಇಲ್ಲ.

## ಷಡಕ್ಷರದೇವನವರೆಗಿನ ಇನ್ನಿತರ ಚಂಪೂಕೃತಿಗಳ ಕರ್ತೃಗಳು

ಷಡಕ್ಷರದೇವ (೧೬೫೫)ನು ಹುಟ್ಟಿಬರುವವರೆಗೆ ಅಂಥ ಹೇಳಿಕೊಳ್ಳುವ ಚಂಪೂಕವಿಗಳು ಹುಟ್ಟಿಬರದಿದ್ದರೂ ಚಂಪೂರೂಪದಲ್ಲಿ ಚಾಪಲ್ಯವುಳ್ಳ ಕವಿಗಳಿಲ್ಲದಿಲ್ಲ. ಅವರಲ್ಲಿ ಮುಖ್ಯವಾಗಿ ರಾಜೇಂದ್ರವಿಜಯ (ಹಮ್ಮೀರಕಾವ್ಯ)ವನ್ನು ಬರೆದ ಮುರಿಗೆದೇಶಿಕೇಂದ್ರ (ಕ್ರಿ.ಶ. ೧೫೬೦), ಹಾಲಾಸ್ಯಪುರಾಣವನ್ನು ಬರೆದ ಇಮ್ಮಡಿಮುರಿಗೆಸ್ವಾಮಿ (ಕ್ರಿ.ಶ. ೧೫೯೦), ಭೈರವೇಶ್ವರರಾಣವನ್ನು ಬರೆದ ಸಿದ್ಧಲಿಂಗಶಿವಯೋಗಿ (ಕ್ರಿ.ಶ. ೧೬೦೦) ಮುಂತಾದವರ ಹೆಸರನ್ನು ಹೇಳಬಹುದು. ಇವರೆಲ್ಲರನಂತರ ಕನ್ನಡ ಸಾಹಿತ್ಯದ ಪುಣ್ಯವೇ ಮೈವೆತ್ತುಬಂದಂತೆ, ವಿದ್ವತ್ತು, ಪ್ರೌಢಿಮೆಗಳೇ ಜನ್ಮತಾಳಿದಂತೆ ಮಹಾಕಾವ್ಯಗಳನ್ನು ಬರೆದ ಚಂಪೂಕರ್ತೃವೆಂದರೆ ಷಡಕ್ಷರದೇವನೇ ಆಗಿದ್ದಾನೆ. ಅವನು ವೀರಶೈವ ಚಂಪೂಪ್ರಬಂಧಕಾರರಲ್ಲಿ ಸೀಮಾಪುರುಷನಾದ. ಆ ಮಹಾಕವಿಯ ಬಗೆಗೆ ಕೂಲಂಕಷವಾಗಿಯಲ್ಲದಿದ್ದರೂ ಸಮಗ್ರ ವಿಚಾರಗಳನ್ನು ಸಂಕ್ಷೇಪವಾಗಿಯಾದರೂ ತಿಳಿಯುವುದವಶ್ಯಕ.

---

1 ಅದೇ ಪು. ೨೨೩

2 ಅದೇ ಪು. ೨೨೪

3 ಅದೇ

## ಮಹಾಕವಿ ಷಡಕ್ಷರದೇವನ ಚಂಪೂಗ್ರಂಥಗಳು

ಪರಮಾತ್ಮದತ್ತವಾದ ಅಪ್ರತಿಹತಪ್ರತಿಭಾವರಪ್ರಸಾದಲಭ್ಯವಾದ ಕವೀಶ್ವರನೊಬ್ಬನನ್ನು ಯಾವ ಪ್ರವೃತ್ತಿಯು ನಿರತಿಶಯಾನಂದದಲ್ಲಿ ಮುಳುಗಿಸಿಬಿಡುವುದೋ ಆ ಪ್ರವೃತ್ತಿಯ ಬಗೆಗೆ ಮಾನಸಿಕವಾದ ಚಿಂತನಾ ಪರಂಪರೆಗಳು ಉಗ್ರವಾಗಿ ಹೋದಂತೆಲ್ಲ ಅದೇ ಕೇಂದ್ರಬಿಂದುವಿನಿಂದಲೇ ನಿಸ್ತರಂಗಸರೋವರದ ಕೆಳಭಾಗ ದಲ್ಲಿ ಕುಳಿತ ಕಪ್ಪೆಯೊಂದು ಉಗುಳಿದ ಗಾಳಿಯು ಗುಳ್ಳೆಯಾಗಿ ಮೇಲೆ ಬಂದು ಪಟ್ ಎಂದು ಒಡೆದು ; ಆ ಒಡೆದ ಕೇಂದ್ರಬಿಂದುವಿನಿಂದ ವೃತ್ತಾಕಾರವಾದ ಕಲ್ಲೋಲಮಾಲೆಗಳು ಅಲೆಯಲೆಯಾಗಿ ಕಾಸಾರದ ಕೊನೆಯವರೆಗೂ ಹಬ್ಬಿ ದಡಕ್ಕಪ್ಪಳಿಸಿ ವಿಶ್ರಾಂತಗೊಳ್ಳುವಹಾಗೆ ಮಾಡುತ್ತವೆ. ಷಡಕ್ಷರ ಮಹಾಕವಿಯು ರಾಜಶೇಖರವಿಳಾಸದ ಮೂಲಬಿಂದು 'ಪಂಚಾಕ್ಷರಿಮಂತ್ರಮಹಿಮೆ' ಅದರ ಮಹಿಮಾವಿಶೇಷದ ಮೂಲವಿಗ್ರಹವನ್ನು ವಿಚಿತ್ರಕುಸುರಿಯ ಭವ್ಯವಾದ ಶಬ್ದದೇಗುಲಕಟ್ಟಿ ಪ್ರತಿಷ್ಠೆಮಾಡಿದ್ದಾನೆ. ಅವನ ಈ ಕಾವ್ಯಸೌಧ ವಿಚಿತ್ರಕುಸುರಿಯದು. ಒಂದೊಂದು ಕಡೆಯಲ್ಲಿ ಒಂದೊಂದು ಚಿತ್ರ ; ಒಂದೊಂದು ದೃಶ್ಯ ; ಒಂದೊಂದು ಸನ್ನಿವೇಶ ನಿರ್ಮಾಣ—ಒಟ್ಟಾರೆ ಸಮಗ್ರದೇವಾಲಯದ ಮೂಲಗುರಿ ಪಂಚಾಕ್ಷರಿಮಂತ್ರಮಹಿಮಾವಿಶೇಷವನ್ನು ಲೋಕದ ಜನಮನ ಭಿತ್ತಿಯಲ್ಲಿ ಚಿತ್ರವಿಚಿತ್ರ ಬಣ್ಣಗಳನ್ನುಪ ಯೋಗಿಸಿ, ಅನೇಕ ಕುಂಚಗಳಿಂದ ಚಿತ್ರಿಸಿದ ಸುಂದರ ಚಿತ್ರ. ಸೌಧನಿರ್ಮಾಣಕಾರ್ಯದಲ್ಲಿ ಮಾತ್ರ ಉಪಯೋಗಿಸಿದ ಸಾಧನಾಸಲಕರಣೆಗಳು, ಶೃಂಗಾರರಸದ ಮಡುವಿನಲ್ಲಿ ಅದ್ದಿ ತೆಗೆದವುಗಳು. ಶೃಂಗಾರರಸದ ಸುರಿಮಳೆ ಸರಿಮಳೆ ಯನ್ನು ಸುರಿಸಿ ಅದರಿಂದ ನಿರ್ಮಾಣಗೊಂಡ ಹೆಮ್ಮಡುವಿನಲ್ಲಿ ಶಾಂತರಸದ ದೋಣಿಯನ್ನು ಸಾಗಿಸುವ ಅಂಬಿಗನಾಗಿ ರಸಾಸ್ವಾದನಪರಿಣತಮತಿಗಳನ್ನು ದಡಕ್ಕೆ ತಲುಪಿಸಿದಾಗ ಕವಿಯ ಅದ್ಭುತ ಚಾತುರ್ಯಕ್ಕೆ, ಪ್ರತಿಭೆಗೆ, ಉಭಯ ಭಾಷೆ ಗಳ ಮೇಲಿನ ಪ್ರಭುತ್ವಕ್ಕೆ ಶಿರಬಾಗುವಂತೆ ಮಾಡಿದ್ದಾನೆನ್ನಬಹುದು. ಕವಿಯೇ ಹೇಳುವಂತೆ ಸರಸವಾದ ಅಲಂಕೃತಿ ಜಾತಿ, ರೀತಿ, ಗಮಕ, ಸೊಂಪು, ಇಂಪು, ನುಣ್ಪು, ಒಳ್ಪು, ಭಾಸುರಭಾವಗಳಿಂದ ರಸಗಾನದಹಾಗೆ ಮನೋಹರವಾದ ಈ ಕಾವ್ಯಗಾನವನ್ನು ಎಂಥ ಖಲಸರ್ಪವಾದರೂ ಕೇಳಬೇಕೆನ್ನುವಾಗ ಸಹೃದಯರ ಬಗೆಗೆ ಹೇಳುವುದೇನಿದೆ ?[1]

ರಾಜಶೇಖರವಿಳಾಸ ವಿಸ್ತಾರವಾದ ಅಲಂಕಾರಪ್ರಪಂಚ ಪ್ರಕಾಶನದ ಭವ್ಯಪ್ರಕಾರ, ಪ್ರಸಾದಾದಿಗುಣಗಳ ತೊಲೆಕಂಬ ಚೋದುಗೆಗಳು, ಕೈಶಿಕ್ಯಾದಿವೃತ್ತಿಗಳ ಸಭಾಮಂದಿರ, ಮೃದುಪದವಿನ್ಯಾಸದ ಕುಸುರಿಯ ಕೆತ್ತನೆಗಳು, ಭಾವಾಭಿವ್ಯಕ್ತಿಯ ಒಳ್ಳೆಯ ಬಣ್ಣಬರೆಗಳು ಶೋಭೆಗಳು, ವೈದರ್ಭ್ಯಾದಿರೀತಿರೇಖೆಗಳ ವೈಶಾಲ್ಯಗಳು—ಇವುಗಳಿಂದ ಕೂಡಿದ ಕೇವಲ ಏಕಾಬ್ದದೊಳ್ ಮೂಡಿಬಂದ ಚೋಳಮಂಡಲದ ಕನ್ನಡ ಶಿಲ್ಪಿಗಳ ಭವ್ಯದೇವಾಲಯ. ಆಶ್ಚರ್ಯಕರ ವಾಸ್ತುಶಿಲ್ಪ ; ಹೊರಗಿನ ಶಿಲ್ಪಚಾತುರ್ಯಕ್ಕೆ ಕೈಮುಗಿದು, ಮೂಲವಿಗ್ರಹಕ್ಕೆ ಮೈಯಿಕ್ಕಬೇಕಾದುದು.

ಇದು ರಾಜಶೇಖರವಿಳಾಸದ ಮಾತಾಯಿತು. ಕವಿಯ ಇನ್ನೊಂದು ಭವ್ಯಕೃತಿ, ಮಹಾಕೃತಿ, ವೃಷಭೇಂದ್ರ ವಿಜಯ ಅಥವಾ ಬಸವರಾಜದೇವವಿಜಯ. ಈ ಕಾವ್ಯಸೌಧನಿರ್ಮಾಣಸಾಮಗ್ರಿಗಳೇ ಬೇರೆ. ಅಲ್ಲಿ ಶೃಂಗಾರ ವಸ್ತುಗಳ ಸುಳಿವಿಗೆ ಸ್ಥಾನವಿಲ್ಲ. ವಿಶ್ವದ ಪ್ರಪ್ರಥಮ ಸಮತಾವಾದಿ, ಯುಗಪ್ರವರ್ತಕ ಅದ್ಭುತಘಟನಾವಿಶೇಷ ಚಾತುರೀಚತುರ, ಧರ್ಮದ ತಳಹದಿಯ ಮೇಲೆ ರಾಜಕೀಯದ ಭವ್ಯಸೌಧ ನಿರ್ಮಾಣಗೊಳಿಸಬೇಕೆಂಬ ದೂರದರ್ಶಿ, ಆರ್ಥಿಕಪ್ರಪಂಚದ ಮೂಲಭೂತಧ್ಯೇಯೋದ್ದೇಶಗಳ ಸೂತ್ರಕಾರ, ಯೋಜನಾಬದ್ಧ ರಚನಾತ್ಮಕ ಕಾವ್ಯವನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಮಹಾಮಹಂತ ಬಸವಣ್ಣನ ಮಹಾಮೂರ್ತಿಯನ್ನು ತನ್ನ ಅಪ್ರತಿಹತ ಪಾಂಡಿತ್ಯ, ಪ್ರತಿಭೆ, ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಲಭ್ಯಬಹುಶ್ರುತತ್ವವನ್ನೆಲ್ಲ ವ್ಯಯಿಸಿ, ಹೃದಯಗತ ಶ್ರದ್ಧಾಭಕ್ತಿ ವಿಶ್ವಾಸಗಳನ್ನೆಲ್ಲ ಆ ಮಹಾಮಾನವತಾವಾದಿಯ ಚರಣಕ್ಕರ್ಪಿಸಿ ಕಟ್ಟಿದ ಮಹಾಕಾವ್ಯಸೌಧ. ಈ ಮಹಾಸೌಧದ ಮಧ್ಯದಲ್ಲಿ ಪ್ರತಿಷ್ಠಿಸಿರುವ ಮಹಾಮೂರ್ತಿ ಕಲ್ಯಾಣದ ಬಸವಣ್ಣ ; ಜಗಜ್ಯೋತಿ ಬಸವಣ್ಣ. ಈ ಮೂಲವಿಗ್ರಹದ ಮಹತ್ತು ಬೃಹತ್ತುಗಳ ಪ್ರಕಟನೆಗೆ, ಭಕ್ತಿಶಕ್ತಿಯ ಪ್ರಕಟನೆಗೆ, ಆದರ್ಶ ನಡೆನುಡಿಗಳ ಪ್ರಕಟನೆಗೆ, ವಿಶ್ವಮಾನವತಾ ವಾದಿತ್ವ ಪ್ರಕಟನೆಗೆ—ಶೈವಭಕ್ತಿ ಸಾಮ್ರಾಜ್ಯದಲ್ಲಿ ಮೆರೆದ ಸಮಗ್ರಭಾರತದಲ್ಲಿನ ಅನೇಕ ಶ್ರದ್ಧಾಭಕ್ತಿ ವಿಶ್ವಾಸಪೂರ್ಣ ನಡೆನುಡಿಗಳ ಪುರಾತನರ, ಶರಣರ ಕಲಾತ್ಮಕ ಪುತ್ಥಳಿಗಳನ್ನು ಕಡೆಕಡೆದು ನಿಲ್ಲಿಸಿ ನಿರ್ಮಿಸಿದ ಕರ್ನಾಟಕದ ವಾಸ್ತು ಶಿಲ್ಪದ ಮಹಾದೇವಾಲಯ.

ಇಲ್ಲಿ ಕವಿಯ ಮತಿನುತಿ ಕಿರಿದಾಗಿರಬಹುದು, ಕೃತಿಪತಿ ಕಿರಿಯನಲ್ಲ. ಆತನ ಬಲವೇ ಕೃತಿಯನ್ನು ಕ್ಷಿತಿಯಲ್ಲಿ

[1] ರಾ. ಶೇ. ೧೪-೧೬೬

ಅತಿಶಯಗೊಳಿಸುತ್ತದೆಂದು ಕವಿಯ ನಂಬುಗೆ. ಬಸವಣ್ಣನ ಅದ್ಭುತವ್ಯಕ್ತಿತ್ವ ಪ್ರಕಟನೆಗೆ ತನ್ನ ಬೆಳೆದುಬಂದ ಭಾಷಾ ಸಂಪತ್ತೂ ಕಿರಿದಾಗಿ ಕಂಡ ಕವಿಯ ಹೃದಯಮಂದಿರದಲ್ಲಿ ಬಸವಣ್ಣನೊತ್ತಿದ ಪ್ರಭಾವಮುದ್ರೆ ನಮ್ಮನ್ನು ಮೂಕ ವಿಸ್ಮಿತಗೊಳಿಸುತ್ತದೆ. ಈ ದೃಷ್ಟಿಯೇ ಕವಿಯ ಈ ಕಾವ್ಯನಿರ್ಮಿತಿಯಲ್ಲಿ ಕಾಣುವ ಪ್ರಧಾನ ಉದ್ದೇಶ. ಬಸವಣ್ಣನನ್ನು ಇಂಥ ಪ್ರೌಢಭಾಷೆಯಲ್ಲಿ, ವಿದ್ವದ್ಭಾಷೆಯಲ್ಲಿ, ಪಾಂಡಿತ್ಯಪೂರ್ಣಭಾಷೆಯಲ್ಲಿ, ಆಲಂಕಾರಿಕಭಾಷೆಯಲ್ಲಿ ನುತಿಸಿದ ಕಾವ್ಯ ಕನ್ನಡ ಸಾಹಿತ್ಯದಲ್ಲಿ ಇನ್ನೊಂದಿಲ್ಲ. ಈ ಅಂಶದ ಸತ್ಯಕ್ಕೆ ಪ್ರತಿ ಆಶ್ವಾಸಾಂತ್ಯದಲ್ಲಿ ಪಾರ್ವತಿಯ ಸ್ತೋತ್ರಕ್ಕೂ ಮೊದಲು ಬಸವಣ್ಣನ ಘನತೆಗೌರವಗಳಿಗೇ ಮೀಸಲಾಗಿರುವ ಲಲಿತಪದವೃತ್ತ ಛಂದೋಲಕ್ಷಣದಲ್ಲಿ ದೀರ್ಘ ದೀರ್ಘತರ ಸಮಾಸಭೂಯಿಷ್ಠ ಪದಪುಂಜಗಳಿಂದ ಮೇಘಮಂದ್ರಧ್ವನಿಯಲ್ಲಿ ಹಾಡಿದ ಪದ್ಯಗಳೇ ಸೂಕ್ತ ನಿದರ್ಶನಗಳು. ಬಸವಣ್ಣನ ಘನತೆಗೌರವಗಳಿಗೆ ಸರಿದೂಗಲು ಇನ್ನಾವ ಚಿಕ್ಕವೃತ್ತಗಳೂ ಕವಿಯ ಭಕ್ತಿಯ ಉತ್ಸಾಹದ ಆಧಿಕ್ಯಕ್ಕೆ ಹೊಂದಿಕೆ ಬೀಳಲಿಲ್ಲವೆಂದು ತೋರುತ್ತದೆ. ಮೂವತ್ತು ಅಕ್ಷರಗಳ ಸಮವೃತ್ತಗಳ ಹೆಸರಿಗೆ ತಕ್ಕಂತೆ ಲಲಿತವಾಗಿ ಹೇಳಿರುವ ಸುಮಾರು ಅರವತ್ತು ಪದ್ಯಗಳ ತೂಕವೇ ಒಂದು. ಉಳಿದ ಸುಮಾರು ಮೂರೂವರೆ ಸಾವಿರ ಪದ್ಯಗಳ ತೂಕವೇ ಒಂದು. ಈ ವೃತ್ತವನ್ನು ರಾಜಶೇಖರವಿಳಾಸದಲ್ಲಿ ಕೇವಲ ನಾಲ್ಕು ಸಲ ಮಾತ್ರ ಪ್ರಯೋಗಿಸಿದ್ದಾನೆ. ಬಸವಣ್ಣನವರ ಘನತೆಯಷ್ಟೇ ಘನತೆ ಸಾಹಿತ್ಯಕ್ಷೇತ್ರದಲ್ಲಿ ವೃಷಭೇಂದ್ರವಿಜಯಕ್ಕೆ ಸಲ್ಲಬೇಕು. ಸಮಗ್ರ ಕಾವ್ಯಸೌಧ ನಿರ್ಮಿತವಾಗಿರುವುದು ಶಾಂತರಸದ ನೆಲಗಟ್ಟಿನ ಮೇಲೆ.

ಕವಿಯ ಇನ್ನೊಂದು ಚಂಪೂಕಾವ್ಯವೇ ಶಬರಶಂಕರವಿಳಾಸ. ಇದೇನಿದ್ದರೂ ವೇದವ್ಯಾಸರ ಮಹಾಭಾರತದ ಗಣಿಯಲ್ಲಿ ಹುಡುಕಿ ತೆಗೆದ ಅನರ್ಘ್ಯರತ್ನ. ಅದನ್ನು ಶಿವಭಕ್ತಿಯ ಗಾಡಕ್ಕೆ ಹಚ್ಚಿ ಪ್ರಕಾಶಿಸುವಂತೆ ಮಾಡಿದ್ದಾನೆ. ಶಿವನು ಮಾಡಿದ ಪಂಚವಿಂಶತಿಲೀಲೆಗಳಲ್ಲಿ ಒಂದಾಗಿ, ಶೌರ್ಯ, ವೀರ್ಯಪ್ರತಾಪಾದಿಗಳು ಮಾನವನಿಗೆ ಎನಿತೇ ಇದ್ದರೂ ಅವೆಲ್ಲ ಶಿವಕಾರುಣ್ಯವಿಲ್ಲದೆ ಬೆಳಗಲಾರವು ಎಂಬುದೇ ಕವಿಯ ಆಶಯ. ತನ್ನ ಆ ಆಶಯಕ್ಕೆ ದೃಷ್ಟಾಂತ ಕೊಡಲು ಮಹಾಭಾರತೋಕ್ತ ವೀರರಸಭೂಯಿಷ್ಠವಾದ ಕಿರಾತಾರ್ಜುನಲೀಲಾಪ್ರಸಂಗವನ್ನು ಕೇವಲ ಐದು ಅಧ್ಯಾಯಗಳ ಖಂಡ ಕಾವ್ಯದಲ್ಲಿ ನಿರೂಪಿಸಿದ್ದಾನೆ. ರಾಜಶೇಖರವಿಳಾಸದಲ್ಲಿ ಶೃಂಗಾರಕ್ಕೂ, ವೃಷಭೇಂದ್ರವಿಜಯದಲ್ಲಿ ಶಾಂತರಸಕ್ಕೂ, ಶಬರಶಂಕರವಿಲಾಸದಲ್ಲಿ ವೀರಕ್ಕೂ ಪ್ರಥಮಸ್ಥಾನ ಲಭಿಸಿ ಉಳಿದ ರಸಗಳು ಎಡಯರಿತು, ಅಲ್ಲಲ್ಲಿ ಸೇರುವೆಗೊಂಡು ಕನ್ನಡ ಸಾಹಿತ್ಯಪ್ರಪಂಚದಲ್ಲಿ ಅತ್ಯುತ್ತಮ ಕೃತಿಗಳೆನಿಸಿ ಮಹಾಕವಿಯ ಅಪಾರ ಪಾಂಡಿತ್ಯಪ್ರತಿಭೆಗಳ ನಿಚ್ಚಳ ನಿದರ್ಶನಗಳೆನಿಸಿವೆ.

ಕನ್ನಡದ ಮೇಲ್ಕಂಡ ಈ ಮೂರು ಕೃತಿಗಳಲ್ಲದೆ ಷಡಕ್ಷರದೇವ ಕವಿಕರ್ಣರಸಾಯನವೆಂಬ ಸಂಸ್ಕೃತಗ್ರಂಥವನ್ನೂ ಅನೇಕ ಚಿಕ್ಕಪುಟ್ಟ ವೀರಶೈವ ಶಾಸ್ತ್ರಗ್ರಂಥಗಳನ್ನೂ ಬರೆದಿದ್ದಾನೆ. ಪ್ರಕೃತ ಅವುಗಳ ಸಮಾಲೋಚನೆ ನಮಗೆ ಮುಖ್ಯವಲ್ಲ. ಮುಖ್ಯವಾಗಿ ಮೇಲೆ ತಿಳಿಸಿದ ಮೂರು ಚಂಪೂಗ್ರಂಥಗಳ ಬಗೆಗೆ ಕಿಂಚಿತ್ ಪರಿಚಯ ಮಾಡಿಕೊಡುವುದೇ ಲೇಖನೋದ್ದೇಶವಾಗಿದೆ,

(೧) **ರಾಜಶೇಖರವಿಳಾಸ:** ೧೪ ಅಧ್ಯಾಯಗಳಲ್ಲಿ ಸಾವಿರದೇಟನೂರುಅರವತ್ತೊಂಬತ್ತು ವೃತ್ತ, ಕಂದ, ತ್ರಿಪದಿಗಳಿಂದಲೂ, ಒಂದೆರಡು ರಗಳೆಗಳ ತುಂಡುಗಳಿಂದಲೂ, ಸುಮಾರು ಐವತ್ತು ಅರುವತ್ತು ಪುಟಗಳಷ್ಟು ಹೃದ್ಯವಾದ ಗದ್ಯಭಾಗದಿಂದಲೂ ಕಿರುಗತೆಯೊಂದನ್ನು ವಿಸ್ತಾರವಾಗಿ ಬೆಳೆಸಿ ತನ್ನ ಅಮೋಘವಾದ ಪಾಂಡಿತ್ಯಪೂರ್ಣಕಾವ್ಯವನ್ನು ಶೃಂಗಾರವಿಶಿಷ್ಟವುಳ್ಳದ್ದನ್ನಾಗಿ ಮಾಡಲು ಕವಿಯ ಆಂತರಿಕಪ್ರಜ್ಞೆಯೊಂದು ಅಂದಿನ ಸನ್ನಿವೇಶದಲ್ಲಿ ಕೆರಳಿಸಿರಲಿಕ್ಕೆ ಸಾಕು. ಆರಿಸಿಕೊಂಡ ವಿಷಯವಾದರೋ ಪಂಚಾಕ್ಷರೀಮಂತ್ರಮಹಿಮೆ. ಆ ಮಂತ್ರಮಹಿಮೆಯನ್ನು ಬಿತ್ತರಿಸುವ ಮೂಲೋದ್ದೇಶದ ಚಪ್ಪರಕ್ಕೆ ಶೃಂಗಾರರಸದ ಬಳ್ಳಿಯನ್ನು ಹಬ್ಬಿಸಿ ಅದು ಪರಿಪುಷ್ಟವಾಗಿ ಬೆಳೆಯುವಂತೆ ಮಾಡಲು ಏನು ಕಾರಣವಿತ್ತು ಎಂಬುದೊಂದು ಮುಖ್ಯವಾದ ಪ್ರಶ್ನೆ. ಚಂಪೂಪ್ರಬಂಧಗಳ ಪ್ರಾಚುರ್ಯ ನಶಿಸಿಹೋದ ಸಮಯದಲ್ಲಿ ೧೮ ವರ್ಣನೆಗಳ ಭಾರವಾದ ಹೊರೆಯನ್ನು ಕಾವ್ಯದ ಮೇಲೆ ಹೊರಿಸಿ ರಾಜಶೇಖರವಿಳಾಸ ರಚಿಸಲು ಸ್ಪರ್ಧಾ ಮನೋಭಾವವೇ ಮುಖ್ಯ ಕಾರಣವೆಂಬುದನ್ನು ಮರೆಯಲಾಗದು.

ರಾಖಶೇಖರವಿಳಾಸ ಕವಿಯ ಪ್ರಥಮ ಕೃತಿ. ಎಳೆಯ ಹರೆಯದಲ್ಲಿಯೇ ಅಂದರೆ ೧೧ನೆಯ ವಯಸ್ಸಿನಲ್ಲಿಯೇ ಇವನಿಗೆ ಕವಿತಾತರುಣಿ ಒಲಿದುಬಂದವಳು. ಎಳಂದೂರಿನಲ್ಲಿ ಮಹಾವಿದ್ವಾಂಸರಿಂದ ಶಾಸ್ತ್ರವನ್ನು ರಾಜಕುಮಾರರ ಸಹಪಾಠಿಯಾಗಿ ಅಭ್ಯಾಸಮಾಡಿ ಶಿವಕೃಪೆಪಡೆದು ಹುಟ್ಟೂರಾದ ದನುಗೂರು ಮಠದ ಪಟ್ಟಾಧಿಕಾರಿಯಾಗಿ ಎಳಂದೂರಿನಲ್ಲಿಯೇ ಈ ರಾಜಶೇಖರ ಕೃತಿಯನ್ನು ರಚಿಸಿದನು. ವೀರಶೈವಮಠಾಧಿಪತಿಗಳ ಪರಂಪರೆಯ ಸ್ವಾಮಿಯಾದ್ದ

ರಿಂದ ಪೂರ್ವಾಶ್ರಮದ ತಂದೆತಾಯಿಗಳ ಹೆಸರನ್ನೆತ್ತದೆ "ಶಿವವಕ್ಷೋಭಸ್ಮರೇಣುಪ್ರಭವನೆನಿಸಿ ಅವನೀರಕ್ಷಣಾರ್ಥವಾಗಿ ಕೊಲ್ಲಪಾಕಿಯ ಸೋಮೇಶ್ವರಲಿಂಗದಿಂದ ಸಂಭವಿಸಿ ಜಂಗಮಾಕಾರದಿಂದ ಸುಳಿದು ಕುಂಭಜನೇ ಮೊದಲಾದ ಮುನಿಗಳಿಗೆ ಬೋಧಿಸುತ್ತ ಲಂಕೆಗೆ ಹೋಗಿ ವಿಭೀಷಣನಿಗೆ ಇಷ್ಟಾರ್ಥವನ್ನು ಕೊಟ್ಟ" ರೇವಣಪ್ರಭುವಿನ ವಂಶ ಪರಂಪರೆಯಲ್ಲಿ ಬಂದ ರುದ್ರಮುನೀಶ್ವರ; ಈ ರುದ್ರಮುನೀಶ್ವರನ ಪರಂಪರೆಯಲ್ಲಿ ಉದ್ದಾನಯತೀಶ್ವರ; ಈ ಯತೀಶ್ವರನ ಪರಂಪರೆಯಲ್ಲಿ ಅನ್ನದಾನೀಶ, ಈ ಅನ್ನದಾನೀಶ್ವರನ ಶಿಷ್ಯನೇ ರೇವಣಸಿದ್ಧದೇಶಿಕ; ರೇವಣಸಿದ್ಧ ದೇಶಿಕನ ಕರಕಮಲಸಂಜಾತನಾದ ಚಿಕ್ಕವೀರದೇಶಿಕನೇ ಷಡಕ್ಷರಿಯ ಗುರು. ಬಾಲೇಂದುಪುರ (ಎಳಂದೂರು)ದ ಅಮೃತಾಂಬೆಯು ಮೈಸೂರಿನ ದೊಡ್ಡದೇವರಾಜಒಡೆಯರ ಪತ್ನಿ; ಚಿಕ್ಕದೇವರಾಜಒಡೆಯರ ತಾಯಿ. ಷಡಕ್ಷರಿಯು ಈ ಅಮೃತಾಂಬೆಯ ತವರುಮನೆಯ ಗುರುವಾದ ಆರಾಧ್ಯಪುತ್ರ. ಬಾಲ್ಯದಲ್ಲಿ ಇವನಲ್ಲಿದ್ದ ಅದ್ಭುತ ಪ್ರತಿಭೆಯನ್ನು ಗುರುತಿಸಿ ವಾತ್ಸಲ್ಯದೃಷ್ಟಿಯಿಂದ ತನ್ನ ತವರುಮನೆಯ ಗುರುವನ್ನಾಗಿಸಿದಳು. ಈತನಿಂದ ರಾಜಶೇಖರವಿಳಾಸವನ್ನು ಹೇಳಿಸಿ ಆನಂದಗೊಂಡವಳು. ಮೈಸೂರಿನ ಖ್ಯಾತಿವೆತ್ತ ದೊರೆ ಚಿಕ್ಕದೇವರಾಜಒಡೆಯರೂ ಷಡಕ್ಷರದೇವನೂ ಸಹಾಧ್ಯಾಯಿಗಳೆನಿಸಿದವರು. ಚಿಕ್ಕಂದಿನಲ್ಲೇ ಎರಡು ರಾಜಮನೆತನಗಳ ಗುರುತ್ವಸಂಬಂಧವನ್ನು ಪಡೆದ ಷಡಕ್ಷರ ದೇವನ ಕೀರ್ತಿ ಅಂದಿನ ಜನಜೀವನದಲ್ಲಿ ಮನೆಮಾತಾಗಿತ್ತು. ಅವನ ರಾಜಶೇಖರವಿಳಾಸ ಅಂದಿನ ರಸಿಕ ಜನಾನಂದಗೊಳಿಸಿದ ಮಹಾಕಾವ್ಯವಾಗಿತ್ತು. ಅಂದಿನಿಂದ ಮೂರುಮೂರುವರೆ ಶತಕಗಳು ಹಳ್ಳಿಹಳ್ಳಿಗಳಲ್ಲೂ ಹಣತೆಯ ಸ್ನಿಗ್ಧಮಧುರ ಮಂದಪ್ರಕಾಶದಲ್ಲಿ ಅನೇಕ ಶ್ರೋತೃಗಳ ಮನಸ್ಸನ್ನು ಸೂರೆಗೊಳ್ಳುವ ಅಂತಸ್ಸತ್ವವನ್ನು ಹೊಂದಿದ್ದ ರಾಜಶೇಖರ ವಿಳಾಸ ಗ್ರಂಥವು ಆ ಕಾಲದ ವಿದ್ವಾಂಸರನ್ನು ಗುರುತಿಸುವುದಕ್ಕೊಂದು ಅಳತೆಗೋಲಾಗಿಯೇ ಇತ್ತು. ಒಬ್ಬ ವ್ಯಕ್ತಿ ಅಕ್ಕರಿಗನೆಂದು ಗೌರವಿಸಲು ಅವನಿಗೆ ರಾಜಶೇಖರವಿಳಾಸ, ಜೈಮಿನಿಭಾರತದ ಅಭ್ಯಾಸವೇ ಮಾನದಂಡ. 'ಈ ಮನುಷ್ಯ ದೊಡ್ಡ ವಿದ್ಯಾವಂತ; ಜೈಮಿನಿ, ರಾಜಶೇಖರ ಇವನಿಗೆ ಕರತಲಾಮಲಕ' ಎನ್ನುತ್ತಿದ್ದಿತು ಜನ. ಈ ಮಾತನ್ನು ವಿಚಾರಿಸಿದಾಗ ರಾಜಶೇಖರವಿಳಾಸ ಜನಜೀವನದಲ್ಲಿ ಎಷ್ಟರಮಟ್ಟಿಗೆ ಹೊಂದಿಕೊಂಡು ಹೋಗಿತ್ತೆಂಬುದರ ಸ್ಪಷ್ಟಕಲ್ಪನೆಯಾಗುವುದು. ಅಂತೆಯೇ ಅದರ ನಾದಮಾಧುರ್ಯಕ್ಕೆ, ವರ್ಣನಾವೈಖರಿಗೆ, ಜನಜೀವನದೊಡನೆ ಒಡವೆರೆದ ರೀತಿಗೆ ಮೆಚ್ಚಿದ ರಸಾಸ್ವಾದನಪರಿಣತಮತಿಗಳು :

> ಜಿಹ್ವಾಂತರ್ನಟದಂಬುಜಾಸನವಧೂಪಾದಪ್ರವಾಳಸ್ಫುರ
> ನ್ಮಂಜೀರದ್ವಯಮಂಜುನಾದವಿಭವ ಶ್ರೀಗರ್ವಸರ್ವಂಕಷಾಃ
> ಜೀಯಾಸುರ್ಭವತಷ್ಷಡಕ್ಷರಪಿಭೋಕುಂದಾರಮಂದಾವಳೀ
> ಮಂದಾರದ್ರುಮಮಂಜರೀಮಧುಝರೀಮಾಧುರ್ಯಧುರ್ಯಾಗಿರಃ

ಎಂದು ಹಾಡಿದ ಹಾಡು ಕವಿಗೆ ಜನತೆ ಕೊಟ್ಟ ಪ್ರಶಸ್ತಿಪತ್ರವಲ್ಲದೆ ಬೇರಲ್ಲ.

ಷಡಕ್ಷರದೇವನ ರಾಜಶೇಖರವಿಳಾಸದ ಮಾರ್ಗ ಹರಿಹರ ಮಹಾಕವಿಯ ಉದಿತೋದಿತಮಾರ್ಗ. ನರರ ಹೊಗಳಿಕೆಗೆ ನಾಲಗೆಯನ್ನು ಮಾರದೆ ಈಶ್ವರದತ್ತವಾದ ಪ್ರತಿಭೆಯನ್ನು ವಿದ್ವತ್ತನ್ನು ಈಶ್ವರನ ಮತ್ತು ಅವನ ಭಕ್ತರ ವರ್ಣನೆಗೆ ಮೀಸಲು ಮಾಡಿದ ಹರಿಹರನ ಮಾರ್ಗವೇ ಷಡಕ್ಷರಿಯು ಹೇಳುವ ಉದಿತೋದಿತಮಾರ್ಗ. ಆತನ ಮಾರ್ಗದಲ್ಲಿ ತಾನು ಹೋಗಿ "ಮಹಿತಮಹಿಮಾಸ್ಪದನಾದ ಶಿವ" ಮತ್ತು ಅವನ 'ಶರಣವ್ರಜ'ವನ್ನು ಮನ ಬಂದಂತೆ ನುತಿಸುತ್ತೇನೆ. ಉಳಿದ ಸುರನರರು ನನ್ನ ಕಾವ್ಯವಸ್ತುವಲ್ಲವೆಂದು ದಿಟ್ಟತನದಿಂದ, ಕೆಚ್ಚಿನಿಂದ ಮೂರೂ ಕಾವ್ಯಗಳನ್ನು ನಿರ್ಮಿಸಿದ ಷಡಕ್ಷರಿ ಕನ್ನಡಸಾಹಿತ್ಯದಲ್ಲೇ ಗಡಿಯ ಬಾಂದುಕಲ್ಲು. ಷಡಕ್ಷರದೇವನ ಮೇಲೆ ಪ್ರಭಾವ ಬೀರಿದ ಇನ್ನೊಬ್ಬ ಮಹಾಕವಿ ಸುರಂಗ. ಆದರೆ ಸುರಂಗನ ಹೆಸರನ್ನು ಕಾವ್ಯದಲ್ಲಿ ಎತ್ತದಿರುವುದು ಒಂದು ಕೊರತೆಯೋ ಅಥವಾ ಸುರಂಗನನ್ನು ಕವಿ ತಿಳಿದಿರಲಿಲ್ಲವೋ ಹೇಳುವುದಕ್ಕಾಗುವುದಿಲ್ಲ.

## ರಾಜಶೇಖರವಿಳಾಸದ ಕಥಾವಸ್ತು

ತಮಿಳಿನಲ್ಲಿ ಪಿಳ್ಳೆನಾಯನಾರರು ಬರೆದ ಸತ್ಯೇಂದ್ರಚೋಳನಕಥೆ ಪ್ರಥಮತಃ ಕನ್ನಡಕ್ಕೆ ಬಂದು ಕಾವ್ಯರೂಪ ಪಡೆದದ್ದು ಗುಬ್ಬಿಮಲ್ಲಣಾರ್ಯರ ಭಾವಚಿಂತಾರತ್ನದಲ್ಲಿ. ಆ ಕಥೆಯನ್ನು ಚಂಪೂಮಾರ್ಗದಲ್ಲಿ ಷಡಕ್ಷರಿ ಅಷ್ಟಾದಶವರ್ಣನೆಗಳ ಭಾರದಿಂದ ಬಳುಕುವಂತೆ ದೀರ್ಘವಾಗಿ ಹೇಳಿ ಚಂಪೂಮಾರ್ಗಕ್ಕೆ ೧೭ನೆಯ ಶತಮಾನದಲ್ಲಿ ಅಪೂರ್ವಶೋಭೆ

ಯನ್ನುಂಟುಮಾಡಿದನು. ಕಥೆಯನ್ನು ಕೇಳಬೇಕೆಂಬ ಕುತೂಹಲವುಳ್ಳವರು ರಾಜಶೇಖರವಿಳಾಸದಲ್ಲಿ ನಿರಾಶೆಗೊಳ್ಳುತ್ತಾರೆ. ಕಾರಣ ಮೊದಲಿನ ೧೨ ಅಧ್ಯಾಯಗಳಲ್ಲಿ ಕಥೆ ಬಹಳ ಪ್ರಚ್ಛನ್ನ. ತಾನು ಕಂಡುಂಡ ಪ್ರಕೃತಿವೀಕ್ಷಣದ ಸೂಕ್ಷ್ಮಭಾವಗಳನ್ನು ವ್ಯಕ್ತಪಡಿಸುವಲ್ಲಿ, ಅಲಂಕಾರದ ಭಾರದಲ್ಲಿ ಬಳುಕುವಂತೆ ಮಾಡುವಲ್ಲಿ, ವಿದ್ವತ್ಪೂರ್ಣಭಾಷಾಸಂಪತ್ಪ್ರಯೋಗದಲ್ಲಿ ತನ್ನೆಲ್ಲ ಶಕ್ತಿಯನ್ನು ವಿನಿಯೋಗಿಸಿದ್ದಾನೆ. ಇದೇನಿದ್ದರೂ ವಿದ್ವತ್ಪ್ರಪಂಚಕ್ಕೊಂದು ಸವಾಲಿನಂತೆ ಇರುವ ವರ್ಣನಾಭಾಗ. ೧೩-೧೪ನೆಯ ಅಧ್ಯಾಯಗಳಲ್ಲಿ ಮಾತ್ರ ಕಥೆಯನ್ನು ಕಣ್ಮುಟ್ಟುವಂತೆ ಹೇಳಿ ತನ್ನ ಉದ್ದಿಷ್ಟ ಗುರಿಯಾದ ಪಂಚಾಕ್ಷರೀಮಂತ್ರಮಹಿಮಾವಿಶೇಷವನ್ನು ವ್ಯಕ್ತಪಡಿಸಿದ ಪವಾಡದ ವರ್ಣನೆಯಾಗಿ ಮಂಗಳಾಂತದಲ್ಲಿ ಕಾವ್ಯ ಕೊನೆಗೊಂಡಿದೆ. ಈ ಲೇಖನದಲ್ಲಿ ಷಡಕ್ಷರಿಯ ಸಮಸ್ತವರ್ಣನಾಸಾಮರ್ಥ್ಯವನ್ನು ವ್ಯಕ್ತಪಡಿಸುವುದು ಸಾಧ್ಯವೂ ಇಲ್ಲ ಸಾಧುವೂ ಅಲ್ಲ. ಒಟ್ಟಿನಲ್ಲಿ ರಾಜಶೇಖರವಿಳಾಸವೊಂದು ವಿದ್ವತ್ಪೂರ್ಣ ಚಂಪೂಕೃತಿ. ಅದರಲ್ಲಿ 'ಆಶ್ಚರ್ಯಕರ ಪ್ರತಿಭೆ, ಆಳವಾದ ಹೃದಯವನ್ನು ಸ್ಪರ್ಶಿಸಿದ ವೈದುಷ್ಯದ ಇಲ್ಲವೆ ಚಮತ್ಕೃತಿಯ ರೂಪ ಹೆಚ್ಚು. ಅವನು ನಮ್ಮ ನಾಡಿನ ಅಸಾಮಾನ್ಯ ಪ್ರತಿಭಾಶಾಲಿಗಳಲ್ಲಿ ಒಬ್ಬನೆಂಬುದಂತೂ ನಿಶ್ಚಿತ.'

## ವೃಷಭೇಂದ್ರವಿಜಯ

ವೃಷಭೇಂದ್ರವಿಜಯವು ಗ್ರಂಥಬಾಹುಳ್ಯದಿಂದಲೂ ಅಂತಸ್ಸತ್ವದಿಂದಲೂ ಬಹು ಹಿರಿದಾದ ಚಂಪೂಕಾವ್ಯ. ಇದು ಕವಿ ಇಳಿವಯಸ್ಸಿನಲ್ಲಿ ಲೋಕಾನುಭವ, ಜೀವನಸಿದ್ಧಿ, ಭಕ್ತಿಜೀವನದ ಪರಿಪಕ್ವಸ್ಥಿತಿಯಲ್ಲಿ ಬರೆದ ಬಸವಣ್ಣನವರನ್ನು ಕುರಿತಾದ ಮೇರುಕೃತಿ. ಇದರಲ್ಲಿ ಕವಿ ಸಂಯಮದಿಂದ ವರ್ಣಿಸಿ, ಬಸವಣ್ಣನ ಘನತೆಗೌರವಗಳನ್ನು ಮುಗಿಲೆತ್ತರಕ್ಕೆ ಏರಿಸಿ ನಿಲ್ಲಿಸಿದ್ದಾನೆ. ಇದರಲ್ಲಿ ರಾಜಶೇಖರವಿಳಾಸದ ಅಬ್ಬರ, ಆರ್ಭಟಗಳು ಕಡಿಮೆ. ಶರತ್ಕಾಲದ ನದಿಯಂತೆ ತಿಳಿಯಾದ ಶುದ್ಧೋದಕದ ಪರ್ವತಪ್ರವಾಹವಿದು. ಅಲ್ಲಲ್ಲಿ ಅಬ್ಬರರಹಿತ ತಡಸಲುಗಳು. ಮಡುಗಳು, ಸಮಪಾತಳಿಯಲ್ಲಿನ ಪ್ರವಾಹಗಳು ಇವುಗಳಿಂದ ಕೂಡಿ ಹರಿದುಬರುವ ಪಾವನಗಂಗೆಯೇ ಸರಿ. ಒಟ್ಟು ೪೨ ಆಶ್ವಾಸಗಳಲ್ಲಿ ೩೪೫೫ ಕಂದವೃತ್ತಗಳಿಂದಲೂ, ಸಮಯೋಚಿತ ಗದ್ಯಭಾಗದಿಂದಲೂ ಕಾವ್ಯ ಬೆಳೆದುಬಂದಿದೆ. ಬಸವಣ್ಣನವರ ಚರಿತ್ರೆಯಲ್ಲಿ ಪವಾಡಗಳ ಸುರಿಮಳೆಯಿದೆ. ಜೊತೆಗೆ ಅವರ ಸುತ್ತಮುತ್ತಲಿನ ಶರಣರ ಮತ್ತು ತಮಿಳುನಾಡಿನ ೬೩ ಪುರಾತನರ ಕಥೆಗಳ ಒಂದು ಶಿವಶರಣ ಕಥಾಕೋಶವೇ ಆಗಿ ವೃಷಭೇಂದ್ರವಿಜಯ ಕಲ್ಪಾಂತ ಚಿರಸ್ಥಾಯಿತ್ವವನ್ನು ಪಡೆದ ಮಹಾಕೃತಿಯೇ ಎಂಬುದರಲ್ಲಿ ಸಂಶಯವಿಲ್ಲ. ಈ ಮಹಾ ಕಥೆಗೆ ಅನೇಕ ಆಕರಗಳಿಂದ ಷಡಕ್ಷರಿ ವಸ್ತುಗಳನ್ನು ಸ್ವೀಕರಿಸಿದ್ದಾನೆ. ಹರಿಹರನ ರಗಳೆಯ ಕಥೆಗಳು, ಭೀಮಕವಿಯ ಬಸವಪುರಾಣ, ಸುರಂಗ ಕವಿಯ ತ್ರಿಷಷ್ಟಿಪುರಾತನರಚರಿತ್ರೆ—ಇವೇ ಮೊದಲಾದುವು ಷಡಕ್ಷರದೇವನಿಗಿಂತ ಮೊದಲು ರೂಪುಗೊಂಡ ಕಾವ್ಯಗಳು. ಷಡಕ್ಷರಿಗೆ ಈ ಎಲ್ಲ ಕಾವ್ಯವಿದ್ಯಾಪ್ರಚಯಪರಿಚಯ ಆಗಿಯೇ ಆಗಿತ್ತು. ಅವುಗಳ ಅಭ್ಯಾಸಸಂಜನಿತಜ್ಞಾನರಾಶಿಯನ್ನು ಬೊಬ್ಬುಳಿಗೂಡಿ ವೃಷಭೇಂದ್ರವಿಜಯ ೧೭ನೆಯ ಶತಮಾನದಲ್ಲಿ ಮೂಡಿಬಂದು ವೀರಶೈವಚಂಪೂಗ್ರಂಥಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದೆಯೆಂದರೆ ತಪ್ಪಲ್ಲ. ಯಥಾಪ್ರಕಾರ ಈ ಕಾವ್ಯದಲ್ಲೂ ೧೮ ವರ್ಣನೆಗಳ ಮೋಹ ಕವಿಗೆ ಕಡಿಮೆಯಿಲ್ಲ. ಆದರೂ ರಾಜಶೇಖರವಿಳಾಸದಲ್ಲಿನ ಮೋಹವಿಲ್ಲವೆಂದು ಹೇಳಬಹುದು.

## ಶಬರಶಂಕರವಿಳಾಸ

ಮಹಾಭಾರತದಲ್ಲಿ ಬರುವ ಅರ್ಜುನನ ಪಾಶುಪತಾಸ್ತ್ರಸಂಪಾದನಾಭಾಗವೇ ಷಡಕ್ಷರಿಯ ಶಬರಶಂಕರವಿಳಾಸವಾಗಿ ೫ ಅಧ್ಯಾಯಗಳ ಸುಂದರ ಕೃತಿಯಾಗಿ ಹೊರಬಂದಿದೆ. ಆದರೆ ಷಡಕ್ಷರದೇವ ಇಲ್ಲಿ ಮಹಾಭಾರತಕಥಾಸಂವಿಧಾನವನ್ನು ಸ್ವಲ್ಪ ವ್ಯತ್ಯಸ್ತಗೊಳಿಸಿ ಶಿವಭಕ್ತಿಯ ಪರಾಕಾಷ್ಠಭಾವವನ್ನು ವ್ಯಕ್ತಪಡಿಸಲು ಬೇಕಾಗುವ ಪ್ರಮುಖಾಂಶಗಳ ಕಡೆಗೇ ಹೆಚ್ಚು ಲಕ್ಷ್ಯವಹಿಸಿದ್ದಾನೆ. ಶೌರ್ಯವೀರ್ಯಪ್ರತಾಪಾದಿಗಳು ಈಶ್ವರಕಾರುಣ್ಯದಿಂದ ಮಾತ್ರ ಮಾನವನಿಗೆ ಲಾಭದಾಯಕವಾಗಬಲ್ಲುವೆಂಬುದು ಕಥೆಯ ಗೂಢಾರ್ಥ. ಒಟ್ಟು ಗ್ರಂಥದಲ್ಲಿ ೪೬೭ ಕಂದವೃತ್ತಗಳು ಹೃದ್ಯವಾದ ಗದ್ಯಭಾಗದಿಂದ ಕೂಡಿ ಖಂಡಕಾವ್ಯವೆನಿಸಿದೆ. ಪಾತ್ರಪೋಷಣೆಯಲ್ಲಿ, ಸಂಭಾಷಣೆಯಲ್ಲಿ ಹಿತಮಿತವಾದ ವರ್ಣನೆಯಲ್ಲಿ ಶಬರಶಂಕರವಿಳಾಸ ಅಗ್ರಮಾನ್ಯವಾದ ಕಾವ್ಯವೆನಿಸಿದೆ. ಈ ಕಥೆಯು ಹಿಂದೆ ಅನೇಕ ಕವಿಗಳ ಕಾವ್ಯಗಳಲ್ಲಿ ಬಂದಿದೆ. ಆದರೆ ಷಡಕ್ಷರದೇವನ ಕೈಯಲ್ಲಿ ಅದರ ರಮ್ಯತೆ ಹೆಚ್ಚೆನಿಸಿದೆ. ಹರಿಹರನ ಗಿರಿಜಾಕಲ್ಯಾಣದ ಅನೇಕ ಸನ್ನಿವೇಶಗಳ ಛಾಯೆ ಈ ಕಾವ್ಯದಲ್ಲಿ ಮನೋಹರಗೊಂಡು ಬಂದಿದೆ. ಈ ಕಥೆಯನ್ನು ಕವಿ ತಾನೇ 'ಜೇಂಗೊಡದಂತೆ

ಝೇಂಕರಿಪ ತುಂಬಿಗಳಿಂಚರದಂತೆ ಪೆಂಪನಾಳ್ದ ಇಂಗಡಲಂತೆ ಪಣ್ತು ಎಸೆವ ಮಾಮರದಂತೆ, ಪಯೋಜದಂತೆ, ಬೆಳ್ದಿಂಗಳ ಸೊಂಪಿನಂತೆ, ಸುಸಿಲಾಸೆಯ ನಲ್ಲಳ ನೋಟದಂತೆ' ಚಿತ್ತಕ್ಕೆ ಮನೋಹರವನ್ನುಂಟುಮಾಡುವಂತಹು ದೆಂದು ಹೇಳಿರುವುದು ಸುಳ್ಳಲ್ಲ ಎಂಬುದು ಕಾವ್ಯವನ್ನೋದಿದವರಿಗೆ ಹೊಳೆಯುವ ಅಂಶವಾಗಿದೆ.

ಒಟ್ಟಿನಲ್ಲಿ ಷಡಕ್ಷರದೇವನೊಬ್ಬ ಕನ್ನಡಸಾಹಿತ್ಯಪ್ರಪಂಚದ ವಿದ್ವದ್ವರೇಣ್ಯ. ಮೂಲೆಗುಂಪಾಗುತ್ತಿದ್ದ ಚಂಪೂ ಮಾರ್ಗವನ್ನು ಪುನಃ ಅದರ ಘನತೆಗೌರವಗಳಿಗೆ ತಕ್ಕಹಾಗೆ ೧೭ನೆಯ ಶತಮಾನದಲ್ಲಿ ಮೇಲೆಬ್ಬಿಸಿ ನಿಲ್ಲಿಸಿದ ಕೀರ್ತಿಗೆ ಭಾಜನನಾದ ದೊಡ್ಡ ಮಟ್ಟದ ಕವೀಶ್ವರ. ಅವನ ಪ್ರತಿಭೆ, ಪಾಂಡಿತ್ಯ, ವರ್ಣನಾವೈಖರಿ. ಪಾತ್ರಗಳ ಗುಣಸ್ವಭಾವ ಗಳನ್ನು ಯಥಾವತ್ತಾಗಿ ಚಿತ್ರಿಸುವ ಶಕ್ತಿಸಾಮರ್ಥ್ಯ, ಶಾಸ್ತ್ರಜ್ಞಾನಬಾಹುಳ್ಯ, ಉಭಯಭಾಷಾಪ್ರಭುತ್ವ ಇವು ಜಲ ಲಿಪಿಯಾಗದೆ ಶಿಲಾಲಿಪಿಗಳಾಗಿ ಕನ್ನಡಸಾಹಿತ್ಯವಿರುವವರೆಗೆ ಇರುತ್ತವೆಂಬುದರಲ್ಲಿ ಅನುಮಾನವಿಲ್ಲ.

ಷಡಕ್ಷರದೇವನನಂತರ ನಮಗೆ ತೋರುವ ಚಂಪೂಕಾವ್ಯ ನಿರ್ಮಾತೃಗಳಲ್ಲಿ ಅಗ್ರೇಸರ ಬಸವಪ್ಪಶಾಸ್ತ್ರಿ. ೧೯ನೆಯ ಶತಮಾನದ ಉದ್ದಗಲಕ್ಕೂ ಕೇಳಿಬರುವ ಒಂದೇ ಒಂದು ಮಹಾಕವಿಯ ಹೆಸರು ಬಸವಪ್ಪಶಾಸ್ತ್ರಿ.

## ಬಸವಪ್ಪಶಾಸ್ತ್ರಿಗಳ ಚಂಪೂಕೃತಿಗಳು

ಬಸವಪ್ಪಶಾಸ್ತ್ರಿಗಳು 'ಕನ್ನಡ ಸಾಹಿತ್ಯಾಕಾಶದಲ್ಲಿ ಒಂದು ಧ್ರುವತಾರೆಯಂತೆ ಚಿರಸ್ಥಾಯಿಯಾಗಿ ನಿಲ್ಲು ವಂತಹವರು'. ಭಾರತೀಯರ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಗಾಳಿಯು ಬೀಸುವ ಸಮಯದಲ್ಲಿ ವೈಶಿಷ್ಟ್ಯಪೂರ್ಣ ವಾದ ಅನೇಕ ಸಾಹಿತ್ಯಕೃತಿ ನಿರ್ಮಾಣಮಾಡಿದ ಮಹಾಕವಿಗಳಲ್ಲಿ ಬಸವಪ್ಪಶಾಸ್ತ್ರಿಗಳು ಅಗ್ರಗಣ್ಯರು. ಬೆಂಗಳೂರು ಜಿಲ್ಲೆಗೆ ಸೇರಿದ ನಾರುಸಂದ್ರದ ರುದ್ರಾಕ್ಷಿ ಮಠದ ಅಧಿಪತಿಗಳಾದ ಮುರುಡುಬಸವಸ್ವಾಮಿಗಳು ಇವರ ತಾತಂದಿರು. ಇವರ ತಂದೆಯವರಾದ ಮಹದೇವಶಾಸ್ತ್ರಿಗಳು ಮೈಸೂರಿನ ಮುಮ್ಮಡಿಕೃಷ್ಣರಾಜಒಡೆಯರ ಪುರೋಹಿತರಾಗಿದ್ದರು. ಶಕ ೧೮೪೩ರಲ್ಲಿ ಜನ್ಮತಾಳಿದ ಬಸವಪ್ಪಶಾಸ್ತ್ರಿಗಳಿಗೆ ಬಾಲ್ಯದಲ್ಲಿಯೇ ಪಿತೃವಿಯೋಗವುಂಟಾಯಿತು. ಆದರೆ ಕೃಷ್ಣರಾಜ ಒಡೆಯರ ಅನುಗ್ರಹ ದೊರೆತು ಅಳಿಯ ಲಿಂಗರಾಜರ ಆಶ್ರಯಬಲದಿಂದ ಕನ್ನಡ ಸಂಸ್ಕೃತ ವಿದ್ಯಾವಿಶಾರದರಾಗಿ ಅನೇಕ ಗ್ರಂಥರಚನೆ ಮಾಡಿದರು. ಶ್ರೀ ಚಾಮರಾಜ ಒಡೆಯರಿಗೆ ವಿದ್ಯಾಗುರುಗಳೂ ಆಗಿ ಮೈಸೂರು ಅರಮನೆ ಯಲ್ಲಿ ವಿಶೇಷಸ್ಥಾನವನ್ನಲಂಕರಿಸಿದರು. ಇವರು ಚಂಪೂಕಾವ್ಯನಿರ್ಮಾಣದಲ್ಲಿ ಸಿದ್ಧಹಸ್ತರೆನಿಸಿದರು. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಬಸವಪ್ಪಶಾಸ್ತ್ರಿಗಳೊಂದು ಮೈಲಿಗಲ್ಲು. ಶಾಕುಂತಲ ಮೊದಲಾದ ಅನೇಕ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಅವನ್ನು ಅಭಿನಯಯೋಗ್ಯಗೊಳಿಸಿ ಕನ್ನಡ ರಂಗಭೂಮಿಗೆ ಕಳೆಗಟ್ಟಿಸಿದರು. ಇವರು ರಚಿಸಿದ ಕೃತಿಗಳು ಒಟ್ಟು ೨೮. ಅವುಗಳಲ್ಲಿ ಕನ್ನಡದವು ೧೭. ಈ ಹದಿನೇಳರಲ್ಲಿ ಮೂರು ಚಂಪೂಕೃತಿಗಳು. ದಮಯಂತೀ ಸ್ವಯಂವರಂ, ರೇಣುಕವಿಜಯಂ, ಕೃಷ್ಣರಾಜಾಭ್ಯುದಯಂ—ಇವೇ ಇವರ ಮೂರು ಚಂಪೂಕೃತಿಗಳು. ಇವು ಗ್ರಂಥರೂಪಪಡೆದು ಅಚ್ಚಾದ ಹಾಗೆ ಕಾಣುವುದಿಲ್ಲ. ರೇಣುಕವಿಜಯ ಚಂಪೂಕೃತಿಯೂ ಪೂರ್ಣಗೊಂಡಿಲ್ಲ. ಆಸ್ಥಾನ ವಿದ್ವಾನ್ ನಂಜುಂಡಾರಾಧ್ಯರು ಕನ್ನಡ ಸಾಹಿತ್ಯಪರಿಷತ್‌ಪತ್ರಿಕೆಯಲ್ಲಿ ಈ ಅಸಮಗ್ರ ಕೃತಿಯ ಕೆಲವು ಭಾಗವನ್ನು ಮಾತ್ರ ಪ್ರಕಟಿಸಿ ಕವಿಯ ಚಂಪೂಶೈಲಿಯನ್ನು ತಿಳಿಯಲು ಮಹೋಪಕಾರ ಮಾಡಿದ್ದಾರೆ. ಅದರ ಬಗೆಗೆ ಪ್ರಕೃತ ಸೂಕ್ಷ್ಮವಾಗಿ ಸಮಾಲೋಚನೆ ಮಾಡಬಹುದು.

## ರೇಣುಕವಿಜಯಚಂಪೂ

ಬಸವಪ್ಪಶಾಸ್ತ್ರಿಗಳು ಹರಿಹರಾದಿ ಪ್ರಾಚೀನವೀರಶೈವಕವಿಗಳನ್ನು ವಿಶೇಷವಾಗಿ ಸ್ತೋತ್ರಮಾಡಿದ್ದರೂ ಹರಿಹರ ಷಡಕ್ಷರಿಗಳ ಪ್ರತಿಜ್ಞೆಯನ್ನು ಅನುಸರಿಸಿದ್ದಾರೆಂದು ಹೇಳಲಾಗುವುದಿಲ್ಲ. ಮನುಜರಮೇಲೆ ಸಾವವರ ಮೇಲೆ ಕೃತಿರಚನೆ ಮಾಡದಿರುವುದು ಹರೀಶ್ವರನ ಪ್ರತಿಜ್ಞೆ. ಷಡಕ್ಷರಿ ಹರಿಹರನ ಈ ಉದಿತಮಾರ್ಗದಲ್ಲಿ ನಡೆದು ಶಿವನಂತ ದೀಯ ಶರಣವ್ರಜಮಂ ಮನಬಂದಂತೆ ನುತಿಸಿದವನು. ಬಸವಪ್ಪಶಾಸ್ತ್ರಿಗಳು ಆ ವೀರವ್ರತವನ್ನೇನೂ ಅನುಸರಿ ಸಿದಂತೆ ಕಾಣುವುದಿಲ್ಲ. ಅವರ ರೇಣುಕವಿಜಯ ಚಂಪೂಕೃತಿ ಮಾತ್ರ ಅತ್ಯಮೋಘವಾದ ಕೃತಿಯೆಂಬುದರಲ್ಲಿ ಸಂಶಯ ವಿಲ್ಲ. ಕೃತಿ ಪೂರ್ಣಗೊಳ್ಳುವುದಕ್ಕೆ ಮುನ್ನವೇ ಬಸವಪ್ಪಶಾಸ್ತ್ರಿಗಳು ತಮ್ಮ ೪೮ನೆಯ ವಯಸ್ಸಿನಲ್ಲಿ ವಿಧಿವಶರಾಗಿ, ಕನ್ನಡಸಾಹಿತ್ಯಸರಸ್ವತಿಗೆ ಅರ್ಪಿಸಲಿದ್ದ ೧೯ನೆಯ ಶತಮಾನದ ಚಂಪೂಕೃತಿಯ ಅಭಾವವುಂಟಾಯಿತು. ಕಾವ್ಯಾರಂಭ ದಲ್ಲಿ ಕವಿಯು

ಶ್ರೀಮದ್ಭೂಮಿಭೃದಾತ್ಮಜಾಪರಿವೃಢರ್ ಕಲ್ಯಾಣಭೂಪಾವನರ್
ಸೋಮಾಂಕರ್ ಪ್ರಭುಜಂಗಮಾಗ್ರಣಿಪದಾರೂಢರ್ ಸ್ವಯಂಭೂನುತರ್
ಸೀಮಾತೀತ ಮಹಃಪರಾಜಿತ ಮಹಾಗೋರಕ್ಷರಂಚದ್ಗಣೋ
ದ್ದಾಮಶ್ರೀಕರರೀಗೆ ರೇಣುಕಮಹೇಶರ್ ಮಾಮಕೇಷ್ಟಾರ್ಥಮಂ (ರೇ. ವಿ. ಪದ್ಯ ೧)

ಹೀಗೆ ಕಥಾನಾಯಕನಾದ ರೇಣುಕನನ್ನು ಸ್ತೋತ್ರಮಾಡಿ ಶಿವ, ಪಾರ್ವತಿ, ಗಣಪತಿ, ಷಣ್ಮುಖ, ವೀರಭದ್ರಾದಿಗಳನ್ನು ಬಸವ, ಚನ್ನಬಸವಾದಿ ಪ್ರಮಥರನ್ನು ಪಾಲ್ಕುರಿಕೆ ಸೋಮನಾಥ, ಹರಿಹರ, ರಾಘವಾಂಕ, ನಿಜಗುಣಶಿವಯೋಗಿ, ನೀಲಕಂಠಶಿವಾಚಾರ್ಯ, ಷಡಕ್ಷರದೇವಾದಿ ಕವೀಶ್ವರರನ್ನು ಹೊಗಳಿ ಕಾಳಿದಾಸನನ್ನು ವಿಶೇಷವಾಗಿ ಕೊಂಡಾಡಿದ್ದಾನೆ. ಬಸವಪ್ಪಶಾಸ್ತ್ರಿಗಳೂ ಇತರ ಕನ್ನಡ ಕವಿಗಳಂತೆ ತಮ್ಮ ಕಾವ್ಯದ ಬಗೆಗೆ, ಕಾವ್ಯ ಶಕ್ತಿಯ ಬಗೆಗೆ ವಿಶೇಷವಾಗಿಯೇ ಹೇಳಿಕೊಂಡಿದ್ದಾರೆ.

ಬಾಲರಸಾಲಪಲ್ಲವರಸಾಲಸ ಕೋಕಿಲಗಾನದಂತೆ ಗಂ
ಗಾಲಹರೀಪರಿಸ್ಫುರಿತಪದ್ಮವನೇ ವಿಹರನ್ಮರಾಲಸ
ಲ್ಲಾಲಿತಸುಸ್ವರಪ್ರಸರದಂತೆ ವಿರಿಂಚಿವಧೂವಿಪಂಚಿಕಾ
ತಾಲಕದಂತೆ ಮತ್ಕೃತಿ ರಸಜ್ಞಜನಶ್ರುತಿಗಿಂಪನಾಗಿಕುಂ

ಬಸವಪ್ಪಶಾಸ್ತ್ರಿಗಳ ಕಾವ್ಯವನ್ನೋದುವವರಿಗೆಲ್ಲ ಈ ಅನುಭವವಾಗುವುದರಲ್ಲಿ ಸಂಶಯವಿಲ್ಲ.

ರೇಣುಕಾಚಾರ್ಯರ ಉತ್ಪತ್ತಿಯ ವಿಷಯದಲ್ಲಿ ಶಾಸ್ತ್ರಿಗಳು ಪರಂಪರಾಗತರೀತಿಯನ್ನೇ ಅನುಸರಿಸಿದ್ದಾರೆ. ಕಾವ್ಯಾರಂಭದಲ್ಲಿ

ಕೃತಿರೇಣುಕೇಶವಿಜಯಂ
ಕೃತಿನಾಥಂ ರೇಣುಕೇಶನಾಲಿಪರಿಳೆಯೊಳ್
ಶಿತಿಕಂಠಶರಣರೆನೆ ತ
ತ್ಕೃತಿಕರ್ತೃವಿನೆನಿನಾವನನ್ಯಂ ಧನ್ಯಂ

ಹೀಗೆ ಹೇಳಿ ಯಥಾಪ್ರಕಾರ ೧೮ ವರ್ಣನೆಗಳ ಗೀಳಿಗೂ ಆಧುನಿಕ ಕವಿಯಾದರೂ ಮಾರುಹೋಗಿ ಸಮುದ್ರ, ಮೇರು, ಕೈಲಾಸ, ರಜತಗಿರಿ ಉದ್ಯಾನ, ಋಷ್ಯಾಶ್ರಮಾದಿ ವರ್ಣನೆಯಲ್ಲಿ ತೊಡಗಿ ತನ್ನ ಅತ್ಯದ್ಭುತ ಕವಿತಾ ಪಾಂಡಿತ್ಯವನ್ನು ತೋರಿಸುತ್ತಾರೆ.

ಹರೀಶ್ವರನ ವಿಚಾರದಲ್ಲಿ ಬಸವಪ್ಪಶಾಸ್ತ್ರಿಗಳ ಅಭಿಮತ ಷಡಕ್ಷರಿಯ ಅಭಿಪ್ರಾಯವನ್ನೇ ಅನುಮೋದಿಸಿದಂತಿದೆ.

ವೇದೋಕ್ತಿಯೆ ನಿಜೋಕ್ತಿ ಮ
ಹಾದೇವನ ಗುಣವನೊಲ್ದು ಕೀರ್ತಿಸಿ ಮುಕ್ತಿ
ಶ್ರೀದಯಿತರಾದ ಹರಿದೇ
ವಾದಿಗಳೇ ವರಕವಿಪ್ರಭಾಕರರಲ್ತೇ (ರೇ. ಚ. ೨೩)

ಅಸಮಗ್ರ ರೇಣುಕವಿಜಯ ಚಂಪೂಕೃತಿಯನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಬಸವಪ್ಪಶಾಸ್ತ್ರಿಗಳ ಮೇಲೆ ಷಡಕ್ಷರದೇವನ ಪ್ರಭಾವ ಅತಿಶಯವಾಗಿರುವುದು ಕಂಡುಬರುವುದು. ಆದರೆ ಬಸವಪ್ಪಶಾಸ್ತ್ರಿಗಳ ಶೈಲಿ ಬಸವಪ್ಪಶಾಸ್ತ್ರಿಗಳದೇ ಎಂಬುದನ್ನು ಮಾತ್ರ ಜ್ಞಾಪಕದಲ್ಲಿಡಬೇಕಾಗುವುದು. ಸಂಸ್ಕೃತ, ಕನ್ನಡ ಭಾಷೆಗಳ ಮೇಲೆ ಕವಿಗಿದ್ದ ಅಪಾರ ಜ್ಞಾನಾನುಭವಗಳು ಆತನ ಈ ಚಂಪೂಕಾವ್ಯದಿಂದ ಸುಸ್ಪಷ್ಟಗೊಳ್ಳುತ್ತವೆ. ವೀರಭದ್ರನ ವೀರಪ್ರತಾಪಗಳಿಗೆ ತಕ್ಕ ಬಿಗುವಿನಿಂದ ಕೂಡಿದ ಈ ಕೆಳಗಿನ ಪದ್ಯವನ್ನವಲೋಕಿಸಿ

ಸ್ಫೂರ್ಜದ್ಧೂರ್ಜಟಿಫಾಲಪಾವಕಶಿಖಾರಿಂಗತ್ಸ್ಫುಲಿಂಗೋದ್ಭವಂ
ಪರ್ಜನ್ಯಾಭರುಚಂ ತಟಿತ್ತ್ರಿಭಟೀಭೂತೋರುದಂಷ್ಟ್ರಾನನಂ
ಗರ್ಜದ್ದುರ್ಜಯದಕ್ಷಶಿಕ್ಷಣಚಣಂ ಸಂತರ್ಜಿತಾಮರ್ತ್ಯನ
ತರ್ಜಿಚ್ಛ್ರೀನಿಧಿ ವೀರಭದ್ರನೆಮಗಚ್ಛಿದ್ರಮಂ ಭದ್ರಮಂ,

ಇಲ್ಲಿ ವೀರಭದ್ರನ ವೀರಮೂರ್ತಿಯೇ ಕಣ್ಣಿಗೆ ಕಟ್ಟಿದಂತೆ ಸ್ಫುರಿಸುತ್ತದೆ. ಈ ಶೈಲಿ ಷಡಕ್ಷರಿಯದೆನ್ನಲು ಅನುಮಾನವಿಲ್ಲ. ಒಟ್ಟಿನಲ್ಲಿ ಬಸವಪ್ಪಶಾಸ್ತ್ರಿಗಳು ಷಡಕ್ಷರಿಯ ನಂತರ ೧೯ನೆಯ ಶತಮಾನದಲ್ಲಿ ಚಂಪೂಕಾವ್ಯನಿರ್ಮಾಣದಲ್ಲಿ ಒಂದು ದೊಡ್ಡ ಶಕ್ತಿ. ಅವರ ಉಳಿದೆರಡು ಚಂಪೂಕಾವ್ಯಗಳು ಬೆಳಕಿಗೆ ಬರುವುದಾದರೆ ಈ ಶತಮಾನದ ಚಂಪೂ ಪ್ರಪಂಚದ ಮೇಲೊಂದು ದೊಡ್ಡ ಬೆಳಕೇ ಚೆಲ್ಲಿದಂತಾದೀತು. ಚಂಪೂಕಾವ್ಯನಿರ್ಮಾಣದ ವಿಷಯದಲ್ಲಿ ವೀರಶೈವ ಕವಿಗಳು ೨೦ನೆಯ ಶತಮಾನದಲ್ಲೂ ತಮ್ಮ ಅಪಾರ ಮಮತೆಯನ್ನು ತೋರಿಸಿದ್ದಾರೆಂಬುದಕ್ಕೆ ಇನ್ನೊಂದು ದೊಡ್ಡ ನಿದರ್ಶನ, ಮೈಸೂರು ಅರಮನೆಯ ಪಂಚಗವೀಮಠಾಧ್ಯಕ್ಷರಾದ ಗೌರೀಶಂಕರಮಹಾಸ್ವಾಮಿಗಳು ರಚಿಸಿದ ಅಕ್ಕಮಹಾದೇವಿಚಂಪೂಚರಿತಕೃತಿ.

## ಗೌರೀಶಂಕರರ ಚಂಪೂಕೃತಿ—ಅಕ್ಕಮಾದೇವಿ

ಗೌರೀಶಂಕರಸ್ವಾಮಿಗಳವರು ರಚಿಸಿದ ಅಕ್ಕಮಾದೇವಿಚಂಪೂಚರಿತ ಪೂರ್ಣವಾಗಲಿಲ್ಲ. ಅಕ್ಕಮಹಾದೇವಿಯ ಜನನ ಮೊದಲ್ಗೊಂಡು ಕಲ್ಯಾಣಕ್ಕೆ ಬಸವಣ್ಣನನ್ನು ಕಾಣಲು ತೆರಳಿ ಕಿನ್ನರಿಬೊಮ್ಮಯ್ಯನೊಡನೆ ಸಂಭಾಷಿಸುವಲ್ಲಿಗೆ ಕಲ್ಯಾಣವನ್ನು ಹೊಕ್ಕು ಕಲ್ಯಾಣದ ಕಲ್ಪತರುವನ್ನು ಕಾಣದ ಮುನ್ನ—ಹಠಾತ್ತಾಗಿ ನಿಂತಿದೆ. ಅಷ್ಟು ಭಾಗ ಮಾತ್ರ ಪ್ರಕಟವಾಗಿದೆ. ಇಲ್ಲಿಯವರೆಗೆ ಕಾವ್ಯನಿರ್ಮಾಣವಾಗುವ ಹೊತ್ತಿಗೆ ಗೌರೀಶಂಕರಸ್ವಾಮಿಗಳೂ ಹಠಾತ್ತಾಗಿ ಲಿಂಗೈಕ್ಯರಾದರು.

ಈ ಚಂಪೂಚರಿತ ಆಕಾರದಲ್ಲಿ ಚಿಕ್ಕದಾದರೂ ಕಲಾಪರಿಣತಿಯಲ್ಲಿ ಉತ್ತುಂಗಶೃಂಗವನ್ನೇರಿ ನಿಂತ ಮೇರುಕೃತಿ. ಇಪ್ಪತ್ತನೆಯ ಶತಮಾನದ ಮಹಾಕವಿಪಟ್ಟ ಯಾರಿಗಾದರೂ ಲಭಿಸಬೇಕಾದರೆ ಅದು ಗೌರೀಶಂಕರರಿಗೇ. ಈ ಗ್ರಂಥದಲ್ಲಿ ವಚನಕಾರರ ದರ್ಶನಸಂಪತ್ತು, ಹರಿಹರನ ಭಕ್ತಿಯ ಆವೇಶ, ಷಡಕ್ಷರಿಯ ಶಬ್ದಸಂಪತ್ತು, ರಾಘವಾಂಕನ ಕಥೆಯ ಓಟ ಸಂಸ್ಕೃತದ ಮಹಾಕವಿ ಬಾಣಭಟ್ಟನ ಹೃದ್ಯವಾದ ಗದ್ಯದ ಪಡಿಯಚ್ಚುಗಳು ಅವತರಿಸಿ ಬಂದು ಸಂಗಮಗೊಂಡಿವೆ. ಮಹಾದೇವಿಯಕ್ಕನ ವಿಚಾರವಾಗಿ ಪ್ರಥಮತಃ ಕಾವ್ಯ ನಿರ್ಮಿಸಿದವನು ಹರಿಹರ. ಹರಿಹರನಿಗೆ ಮಹಾದೇವಿಯಕ್ಕನ ಸಮಗ್ರವಚನಗಳ ಪರಿಚಯವಿರಲಿಲ್ಲ. ಕರ್ಣಾಕರ್ಣಿಕೆಯಾಗಿ ತಿಳಿದ ಸಂಗತಿಗಳ ಆಧಾರದಿಂದ ಆ ಮಹಾಮಹಿಮಳ ಚರಿತ್ರೆ ನಿರೂಪಿಸಿದ್ದಾನೆಂದು ಹಲವಾರು ವಿಮರ್ಶಕರ ಮತ. ಅಲ್ಲಿ ವೀರಶೈವ—ಶೈವಗಳೆರಡರ ಸಂಗಮವೂ ಇದೆ. ಹರಿಹರನ ಅನಂತರದ ಚಾಮರಸಾದಿಗಳು ಅಕ್ಕನ ಚರಿತ್ರೆ ಹೇಳಿದರೂ ಸುಸ್ಪಷ್ಟ ಚಿತ್ರವಿಲ್ಲ. ಏಕೆಂದರೆ ಮಹಾದೇವಿಯಕ್ಕನ ಜೀವನಮೌಲ್ಯಗಳು ಅವಳ ವಚನಗಳಲ್ಲಿಯೇ ಮುಕ್ಕಾಲು ಭಾಗ ಅಡಕವಾಗಿವೆ. ಅವಳ ಸಮಗ್ರ ವಚನಗಳನ್ನು ಆಮೂಲಾಗ್ರ ಪರಿಶೋಧಿಸಿ, ಸಮಾಲೋಚನೆ ಮಾಡಿ ಆ ಚರಿತ್ರೆಯನ್ನು ಹೇಳಹೊರಟವರೆಂದರೆ ೨೦ನೆಯ ಶತಮಾನದ ಗೌರೀಶಂಕರಸ್ವಾಮಿಗಳೊಬ್ಬರೇ. ಪುರಾಣಧರ್ಮವನ್ನು ಮುಂದಿಟ್ಟುಕೊಂಡು ೧೮ ವರ್ಣನೆಗಳ ತೊಡಕನ್ನು ತೊಡೆದುಹಾಕಿ ಕೇವಲ ವಚನಗಳ ಆಧಾರದ ಮೇಲೆ 'ಅಕ್ಕಮಾದೇವಿ' ಚಂಪೂಚರಿತ ಮೈದಾಳಿ ಬಂದಿದೆ. ನೇರವಾಗಿ ಕಥೆಯನ್ನೇ ಹೇಳುವ ಒಂದೇ ಒಂದು ಚಂಪೂಕಾವ್ಯವಿದ್ದರೆ ಅದು ಗೌರೀಶಂಕರಸ್ವಾಮಿಗಳ ಅಕ್ಕಮಾದೇವಿಚಂಪೂಚರಿತ. ಈ ಕೆಳಗಿನ ಕೆಲವು ಸನ್ನಿವೇಶಗಳನ್ನು ಅವಲೋಕಿಸಿ:

ಮೆರವಣಿಗೆಯಿಂದ ನಗರ ಪ್ರವೇಶಮಾಡಿದ ಕೌಶಿಕನ ದೃಷ್ಟಿ ಉಪ್ಪರಿಗೆಯ ಮೇಲೆ ನಿಂತ ಮಹಾದೇವಿಯಕ್ಕನತ್ತ ಹರಿಯಿತು.

ಸಮನಿಸೆ ಕಂಪಮಂಗದೊಳುದಂಚಿಸೆ ಮೆಯ್ಯನಿರುಣ್ಮೆ ನೀಳ್ದ ಸುಯ್
ಬೆಮರೆ ಮೊಗಂ ಸಮುಚ್ಚಳಿಸೆ ರಾಗದಲಂಪು ಕಪೋಲಯುಗ್ಮದೊಳ್
ಸುಮಶರನಿಂ ಮನಂ ಬೆರಗುವಟ್ಟಿರೆ ನಟ್ಟಿತು ಕೌಶಿಕಾವನೀ
ರಮಣನ ದಿಟ್ಟಿ ಕಟ್ಟಿದಿರೊಳಾ ಲಲಿತಾಂಗಿಯ ವಕ್ತ್ರಪದ್ಮದೊಳ್

ಥಳ್ಳನೆ ಸೆಳೆಮಿಂಚು ಸೆಳೆದು ಮರೆಗೊಂಡಂತೆ ಮಹಾದೇವಿಯಕ್ಕ ಮರೆಯಾದಳು. ಧರೆಯರೆಯಂಗೆ ಕಣ್ಗೊಳ್ ಮರ್ಬುಪರ್ಬಿತು. ಇನ್ನೊಮ್ಮೆ ನೋಡಬೇಕೆಂದು ನೃಪತಿಯು ತೀವ್ರಾಭಿಲಾಷೆ ಹೊಂದಿದ್ದರೂ ಅಕ್ಕನಿರಲಿಲ್ಲ. ಕರುಮಾಡಿನತ್ತಣಿಂದ ಇಳಿದು ಮಾಯವಾಗಿಬಿಟ್ಟಳು. ವಿಮೋಹಮಹಾಬ್ಧಿಯಲ್ಲಿ ಮುಳುಗಿಹೋದ ಕೌಶಿಕ ಹಲವಾರು ಪ್ರಯತ್ನಗಳಿಂದ ಅರಮನೆಗೆ ಅಕ್ಕಮಾದೇವಿಯನ್ನು ಬರಮಾಡಿಕೊಂಡನು. ಇನ್ನು ಅವಳ ಮನವೊಲಿಸುವ ಕಾರ್ಯ ನಡೆಯಬೇಕು. ಈ ಸಂದರ್ಭದಲ್ಲಿ ಶ್ರೀಗಳವರು ಹೋದ ಮಾರ್ಗ ಕಲಾತ್ಮಕ; ತರ್ಕಬದ್ಧ. ಮಹಾದೇವಿಯಕ್ಕನ

ಪೂರ್ಣ ವೈರಾಗ್ಯಕ್ಕೂ ಶರಣಮಾರ್ಗಕ್ಕೂ ಯಾವ ಊನವೂ ಉಂಟಾಗಿಲ್ಲ, ಅವಳ ಪೂರ್ಣಚರಿತ್ರೆಯಲ್ಲಿ ವಚನಗಳನ್ನೇ ಹಿಂಡಿ ತೆಗೆದ ಇಕ್ಷುವಿನ ತನಿರಸದಂತಿದೆ. ದೀರ್ಘಲೇಖನಭಯದಿಂದ ದಿಙ್ಮಾತ್ರಪ್ರದರ್ಶನಾರ್ಥವಾಗಿ ಈ ವಿಷಯವನ್ನಿಲ್ಲಿ ಪ್ರಸ್ತಾಪಿಸಿದ್ದೇನೆ ಅಷ್ಟೆ. ಗ್ರಂಥವನ್ನೇ ಓದಿ ಸ್ವಾರಸ್ಯವನ್ನು ತಿಳಿಯಬೇಕು. ಒಟ್ಟಿನಲ್ಲಿ ಹರಿಹರಚಾಮರಸಾದಿಗಳು ಮಹಾದೇವಿಯಕ್ಕನನ್ನು ನೋಡಿದ ದೃಷ್ಟಿಗೂ ಶ್ರೀಗಳವರ ದೃಷ್ಟಿಗೂ ಮಹದಂತರ.

ಅಕ್ಕಮಹಾದೇವಿಯ ಪೂಜಾವೈಭವದ ಪ್ರಸಂಗವನ್ನು ಶ್ರೀಗಳವರ ಮಾತುಗಳಲ್ಲಿ ಕೇಳಬೇಕು

> ಅಂತು ಕಂತುಹರಾರ್ಚನಕುತೂಹಲಿತೆಯಾ ಲಲಿತೆ, ಪರಿಸರದ ಪಿಂಜರಿವರಿಯಾಣಂಗಳೊಳ್
> ಸಂಗಳಿಸಿದ ಪೊಸವೂಗಳ ಪರಿಮಳಂಗಳ ಪೆಂಪಂ, ಘನಸಾರ, ಕಾಶ್ಮೀರಜಕುಸುಮಸಾರಂಗಳಿಂ,
> ಮಗಮಗಿಪಮಲಯಜಗಂಧಂಗಳ ನೋಂಪಂ, ದಶಾಂಗಧೂಪಂಗಳ ಕಂಪಂ ನಿಜನಿಶ್ವಾಸಾಮೋ
> ದಲಂಪಿಂ ನೂರ್ಮಡಿಸುತೆ ಸಲ್ಲಲಿತಸಹಕಾರಪಲ್ಲವಸಂಫುಲ್ಲಕಲ್ಹಾರಕುಸುಮಮಾಲಾಲಂಕೃ
> ತೋದಗ್ರದ್ವಾರಮನಾ ಪೂಜಾಗಾರಮನಾನಂದದಿಂ ಪೊಕ್ಕು, ಪಕ್ಕದೊಳ್‌ಪಾದುಕೆಗಳಂ
> ಬಿಟ್ಟು, ಕಟ್ಟಿದಿರ ಭಿತ್ತಿಭಾಗಂಗಳೊಳ್, ತನ್ನಂಗದಿಂ ಚೆಂಬೊನ್ನ ಪುತ್ಥಳಿಗಳ ಚೆಲ್ವಂ ಬಿತ್ತರಿಸುತ್ತೆ
> ಪ್ರಸೂನಾಸ್ತೀರ್ಣಮಸಘ್ರ್ಯಸ್ವರ್ಣಪೀಠದೂರ್ಣಾಸನಮನಲಂಕರಿಸಿ ಪೂಜಾಪೂರ್ವಾಂಗ
> ಕೃತ್ಯಮನತ್ಯಾದರದಿಂ ಬಳೆಯಿಸಿ, ಮನದನ್ನನ ಚೆನ್ನಮಲ್ಲಿಕಾರ್ಜುನನ ನೇಹಂ ಮೇರೆಯಂ
> ಮೀರೆ, ತತ್ತರಿಪ ತನುಲತೆಯೊಳ್ ಬೆಮರೂರೆ, ಕಪೋಲಮೂಲಂಗಳೊಳ್ ಪೋರೆರೆಯೋರೆ,
> ಸಮಾರಬ್ಧಬಾಷ್ಪವೃಷ್ಟಿಗಳಿಂ ದೃಷ್ಟಿಗಳಿಂ ನಿಜೇಷ್ಟಲಿಂಗದೇವನಂ ನೋಡಿನೋಡಿ ಪರಮಪ್ರೇಮ
> ಪಾರಾವಾರದೊಳೋಲಾಡಿ, ತನ್ನಂಗದ ಕನಕಕರಂಡಕದ ಸಜ್ಜೆಯಿಂ ನಿಜಕರಕಮಲಕ್ಕೆ ಬಿಜಯಂಗೈ
> ಸುತ್ತೆ ಮಧುರಸ್ವರಮಿಂತು ಪಾಡಿದಳ್

ಇಂಥ ಸುಂದರ ಗದ್ಯಭಾಗವನ್ನು ಇನ್ನಾವ ಚಂಪೂಕಾರರಿಂದ ನಾವು ತರಲು ಸಾಧ್ಯ? ಇಲ್ಲಿ ಮುಂದೆ ಪಾಡುವುದು ಕೇವಲ ಅಕ್ಕನ ವಚನಗಳನ್ನೇ, ಸುಂದರವಾದ ಛಂದೋಬದ್ಧವೃತ್ತಗಳಲ್ಲಿ. ಉದಾಹರಣೆಗೆ ಕೆಳಗಿನ ವೃತ್ತವನ್ನು ನೋಡಿ

> ಸೆಜ್ಜೆಯಿನೇಯನುಪ್ಪವಡಿಸಿ ಪ್ರಭು ನೀನೊಸೆದೆನ್ನ ಹಸ್ತದೊಳ್
> ಪಜ್ಜಳಿಸುತ್ತ ತೋರೆ ತನುವುಂ ಮನವುಂ ಕಳೆಯೇಕೆ ನಿನ್ನೊಳೇ
> ಬಜ್ಜರಿಸಿರ್ಪ ಮಾಳ್ಕೆಯೊಳಮರ್ದಿರೆ ದೃಷ್ಟಿಸುಖಾಶ್ರುಸಂಭೃತಂ
> ಸಜ್ಜನ ಭಕ್ತಿಯಿಂ ನೆರೆವೆನೊತ್ತರಿಸಿ ಕೃಪೆಯಿಂ ಮದೀಶ್ವರಾ

ಈ ಉತ್ಪಲಮಾಲಾವೃತ್ತ ಅಕ್ಕನ ಒಂದು ವಚನವೇ ಆಗಿದೆ. ಅಕ್ಕನ 'ಅಯ್ಯಾ. ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ ....' ಎಂಬ ವಚನವನ್ನು ಶ್ರೀಗಳವರ ಲಲಿತರಗಳೆಯಲ್ಲಿ ನೋಡಿ

> ಎನ್ನೊಡೆಯ ಪೇಳಲೇಂ ಪಾತಾಳಮಿತ್ತಿತ್ತ,
> ನಿನ್ನ ಪಾವನಪಾದಪದ್ಮಂಗಳತ್ತತ್ತ,
> ಸದಯ ! ಸಾರಸಭವಾಂಡದ ಸೀಮೆಯಿತ್ತಿತ್ತ,
> ಮದನಮರ್ದನ ನಿನ್ನ ಮಣಿಮಕುಟವತ್ತತ್ತ,
> ದಿವಿಜಕುಲದೀಶಾನ ದಶದಿಸೆಗಳಿತ್ತಿತ್ತ,
> ಭುವನನಾಯಕ ನಿನ್ನ ಭುಜದಶಕಮತ್ತತ್ತ,
> ನಿನ್ನಿಚ್ಛೆಯಿಂ ಚೆನ್ನಮಲ್ಲಿಕಾರ್ಜುನ ಬಂದು
> ಸನ್ನಿದಂ ನೀನೆಗಡ ಮಚ್ಚುಲಕದೊಳಗಿಂದು ॥

ಶ್ರೀಗಳವರು ಅಕ್ಕನ ಪೂಜಾಸಮಯದಲ್ಲಿ ಆಯ್ಕೆಮಾಡಿ ವೃತ್ತಕಂದ ರಗಳೆಗಳನ್ನು ಬಳಸಿರುವುದರ ಸಾಮಂಜಸ್ಯವನ್ನು ಎಷ್ಟು ಹೊಗಳಿದರೂ ಸಾಲದು. ಬಸವಣ್ಣನನ್ನು ಕಾಣಬೇಕೆಂದು ಕಲ್ಯಾಣಕ್ಕೆ ಬಂದಾಗ. ಅಕ್ಕ ಕಲ್ಯಾಣವನ್ನು ಕುರಿತು

> ಇದು ಕೈಲಾಸಂ ಪೊರಗೊಳ
> ಗಿದು ಕಲ್ಯಾಣಂ ಸಮಂತು ತಿಳಿದಪರಿವನಾರ್
> ಹೃದಯೇಶ್ವರ ನಿನ್ನವರಿ
> ಲ್ಲದೇ ಸುಳಿದಪರಾಹ ಕಾಣ್ಸೆನಣ್ಣನನಿನ್ನೇಂ

ಎಂಬ ಉತ್ಸಾಹ ಉಕ್ಕಿ ಅನೇಕ ಬಗೆಯಿಂದ ಶರಣರನ್ನು ಹಾಡಿ ಹೊಗಳುತ್ತಾಳೆ. ಅಕ್ಕನೇನೋ ಅಣ್ಣನನ್ನು ಕಂಡಳು. ಆದರೆ ಗೌರೀಶಂಕರವಿರಚಿತದೊಳ್ ಅಕ್ಕಮಾದೇವಿಯೆಂಬ ಚಂಪೂಚರಿತದೊಳ್ ಅಣ್ಣನನ್ನು ಕಾಣುವ ಭಾಗ್ಯ ಓದುಗರಿಗೆ ಮಾತ್ರ ಆಗಲಿಲ್ಲ. ಹಠಾತ್ತಾಗಿ ಕಾವ್ಯ ಮುಗಿದು 'ಕಾಲಂಗೆ ಗುಣಮಣಮಿಲ್ಲಂ ಗಡಾ' ಎಂಬ ಉದ್ಗಾರವನ್ನು ನಮ್ಮ ಮುಖದಿಂದ ಹೊರಹೊರಡಿಸುತ್ತದೆ.

ಹೀಗೆ ೧೩ನೆಯ ಶತಮಾನದಿಂದ ೨೦ನೆಯ ಶತಮಾನದವರೆಗಿನ ವೀರಶೈವಚಂಪೂಮಾರ್ಗ ತನ್ನದೇ ಆದ ಅನೇಕ ವೈಶಿಷ್ಟ್ಯಗಳಿಂದ ಹರಿದು ಬಂದು ಕನ್ನಡಸಾಹಿತ್ಯಕ್ಕೆ ಅನರ್ಘ್ಯರತ್ನಕಾಣಿಕೆಯನ್ನು ಹೊನ್ನಹರಿವಾಣದಲ್ಲಿಟ್ಟು ಲಿಂಗದೇವನನ್ನರ್ಚಿಸಿದ ಕೈಗಳಿಂದ ಇತ್ತಿದೆ. ವೈವಿಧ್ಯವೈಶಿಷ್ಟ್ಯಗಳು ವೀರಶೈವಚಂಪೂಮಾರ್ಗದ ವಿಶೇಷ ಕೊಡುಗೆಗಳು.

---

..............................................

ಇನ್ನು-ಮುಕ್ತಿ ಪಥವ ತೋರುವ ವಿರತಿಯ ಬಗೆ ಯಾವುದೆಂದರೆ

ಷಟ್ಸ್ಥಲಕ್ಕೆ ಒಪ್ಪವಿಟ್ಟು ಎತ್ತಿದ್ಧ ಮಾರ್ಗವನಿಳುಹದೆ,

ಹಿಡಿದ ವ್ರತನೇಮಂಗಳಲ್ಲಿ ನೈಷ್ಠೆಯಾಗಿ

ಈಷಣತ್ರಯಂಗಳ ಘಾಸಿ ಮಾಡಿ

ಬಹಿರಂಗದ ಮದಂಗಳ ಬಾಯ ಸೀಳಿ

ಅಂತರಂಗದ ಮದಂಗಳ ಸಂತೋಷಮಂ ಕೆಡಿಸಿ

ಅಷ್ಟಮೂರ್ತಿ ಅಷ್ಟಮದಂಗಳ ನಷ್ಟವ ಮಾಡಿ

ಎಂಟೆರಡು ದಿಕ್ಕಿನಲ್ಲಿ ಹರಿವ ದಶವಾಯುಗಳ ಗಂಟಲ ಮುರಿದು

ಸುಗುಣ-ದುರ್ಗುಣಂಗಳ ನಗೆಗೊಳಗು ಮಾಡಿ

ನವನಾಳಂಗಳ ಮುಂಬಾಗಿಲಲ್ಲಿ ನವಲಿಂಗಂಗಳ ಸಿಂಗರಿಸಿ

ತನುಮನವ ಸೋಂಕಿದ ಸಾಕಾರನಿರಾಕಾರವೆಂಬ ಪದಾರ್ಥಂಗಳ

ವಂಚಿಸದೆ ಆಯಾಯಲಿಂಗಂಗಳಿಗೆ ತೃಪ್ತಿಯಂ ಮಾಡಿ

..............................................

ಇಂತಪ್ಪ ವಿರಕ್ತಿಯನಳವಡಿಸಿಕೊಳ್ಳದೆ,

ಮಾತಿಂಗೆ ಮಾತು ಕೊಟ್ಟು,

ಮತಿಮರುಳಾಗಿಪ್ಪವರಿಗಂಜಿ ನಾನು ಶರಣೆಂಬೆನಯ್ಯ

ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.

ಘನಲಿಂಗಶಿವಯೋಗಿ

# ವೀರಶೈವ ಚಂಪೂಕಾವ್ಯಗಳು-೨

**ಡಾ|| ಬಿ. ನಂ. ಚಂದ್ರಯ್ಯ**

ಆಯಾ ಕಾಲ ದೇಶ ಪರಿಸರಗಳ ಮಧ್ಯೆ ಬೆಳೆಯುವ ಕವಿ ತನ್ನ ಸುತ್ತಿನ ಮಣ್ಣಿನ ವಾಸನೆಯನ್ನು ಮೈಗೂಡಿಸಿಕೊಂಡು, ತನ್ನಲ್ಲುಂಟಾಗುವ ತೀವ್ರಭಾವಸಂವೇದನೆಗಳಿಗೆ ರೂಪುಕೊಟ್ಟು ನವನವೋನ್ಮೇಷಶಾಲಿಯಾದ ಪ್ರತಿಭೆಯ ಸಹಾಯದಿಂದ ತನ್ನ ಕಾಲದ ಸಮಷ್ಟಿಪ್ರಜ್ಞೆಯ ಸಂಕೇತವಾಗಿ ಮಹಾಕಾವ್ಯಗಳನ್ನು ರಚಿಸುತ್ತಾನೆ. ಕಾಲ ದೇಶ ಪರಿಸ್ಥಿತಿ ಹಾಗೂ ಕವಿಯ ಚಿತ್ತಸಂಸ್ಕಾರಗಳಿಗೆ ತಕ್ಕಂತೆ ಆತನ ಭಾವಸಂವೇದನೆಗಳು ಅಭಿವ್ಯಕ್ತಿಯನ್ನು ಪಡೆಯುತ್ತವೆ. ಕವಿಯಾದವನು ತನ್ನ ವಿಶಿಷ್ಟಪದರಚನಾಶೈಲಿಯಿಂದ ತನ್ನನ್ನು ವಿಶಿಷ್ಟವ್ಯಕ್ತಿಯನ್ನಾಗಿ ಪ್ರತಿಷ್ಠಾಪಿಸಿಕೊಳ್ಳುವ ದಿಸೆಯಲ್ಲಿ ತನ್ನದೇ ಆದ ಛಂದೋರೂಪಗಳನ್ನು ಬಳಸಿಕೊಳ್ಳುತ್ತಾನೆ.

ಕನ್ನಡ ಸಾಹಿತ್ಯದ ಆರಂಭಕಾಲ ಚಂಪೂಶೈಲಿಯಿಂದ ಶ್ರೀಮಂತವಾಗಿ ಪಂಪಯುಗವನ್ನು ಸುವರ್ಣಯುಗವನ್ನಾಗಿಸಿತು. ವೀರಕ್ಷೇತ್ರಯುಗದ ವೀರತೇಜಸ್ಸನ್ನು, ಅಧ್ಯಾತ್ಮಿಕಪ್ರಪಂಚದ ದಿವ್ಯತೇಜಸ್ಸನ್ನು ಪಸರಿಸುವುದರಲ್ಲಿ ಯಶಸ್ವಿಯಾಯಿತು. ತನ್ನ ಪ್ರೌಢಪದಬಂಧ, ಸಂಸ್ಕೃತಭೂಯಿಷ್ಠಬಂಧಬಂಧುರತೆಯಿಂದ ಕಂಗೊಳಿಸಿತು. ಬಹುಮಟ್ಟಿಗೆ ರಾಜಾಸ್ಥಾನದಲ್ಲಿ ರಚಿತವಾದ ಈ ಮಾರ್ಗಶೈಲಿ ಪಾಂಡಿತ್ಯಪ್ರದರ್ಶನದಲ್ಲಿ ಮೇಲಾಟ ನಡೆಸಿ ಪಂಡಿತರ ರಂಜನೆಯ ಶೈಲಿಯಾಯಿತು. ಕನ್ನಡದ ಮೂಲವನ್ನೇ ಪಡೆದುಕೊಂಡಿರುವ ಈ ಚಂಪೂರೀತಿ ಪ್ರಾಯಃ ಭಾರತೀಯ ಛಂದಶ್ಶಾಸ್ತ್ರಕ್ಕೆ ಅಮೂಲ್ಯ ಕೊಡುಗೆಯಾಗಿ ಕನ್ನಡ ಸಾಹಿತ್ಯವನ್ನು ಉನ್ನತಮಟ್ಟಕ್ಕೇರಿಸಿತು.

ಪ್ರಾರಂಭದಲ್ಲಿ ಜೈನಕವಿಗಳು ಈ ಛಂದೋರೀತಿಯನ್ನು ಸಮರ್ಥವಾಗಿ ಬಳಸಿ ಪಳಗಿಸಿ ಸಾಹಿತ್ಯವನ್ನು ಬೇರೆ ಬೇರೆ ಸ್ತರಗಳಲ್ಲಿ ಬೆಳಗಿಸಿದರು. ರಾಜಾಸ್ಥಾನವನ್ನು ತ್ಯಜಿಸಿ ಹೊರಬಂದು ವರ್ಣಕ ಕಾವ್ಯಗಳನ್ನು ವೀರಶೈವ ಕವಿಗಳು ರಚಿಸಿದರೂ ವಸ್ತುಕವಾದ ಚಂಪೂವನ್ನು ಸಂಪೂರ್ಣವಾಗಿ ಕೈಬಿಡಲಿಲ್ಲ. ಹರಿಹರನೇ ತನ್ನ ಗಿರಿಜಾಕಲ್ಯಾಣವನ್ನು ಪ್ರೌಢ ಚಂಪುವಿನಲ್ಲಿಯೇ ಬರೆದನು. ಇವನನ್ನು ಅನುಸರಿಸಿದ ಮುಂದಿನ ವೀರಶೈವ ಚಂಪೂಕವಿಗಳು ಇತರ ಕವಿಗಳಂತೆ ಸಾವ ಕೆಡುವ ಮನುಜರನ್ನು ಬಿಟ್ಟು ಶಾಶ್ವತವಾದ ಶಂಭುವಿನ ವಿವಿಧ ರೂಪಗಳನ್ನೇ ಕಥಾವಸ್ತುವನ್ನಾಗಿಟ್ಟುಕೊಂಡು ತಮ್ಮ ಚಂಪೂಕಾವ್ಯಗಳನ್ನು ರಚಿಸಿದರು. ಕನ್ನಡದಲ್ಲಿ ಬಳಕೆಯಾದ ಚಂಪೂಕಾವ್ಯಗಳಲ್ಲಿ ಸಂಸ್ಕೃತದ ಅಕ್ಷರ ವೃತ್ತಗಳು, ಪ್ರಾಕೃತದ ಮಾತ್ರಾವೃತ್ತಗಳು, ಕನ್ನಡದ ಅಂಶಗಣ ಛಂದಸ್ಸು ಪದ್ಯಜಾತಿಗಳು ಸಲುವಳಿಯಾದುವು. ಅಷ್ಟೇ ಅಲ್ಲ ಪ್ರಾಯಃ ಸಂಸ್ಕೃತದ ಅಥವಾ ಕನ್ನಡದ ಬೇರಾವ ಕವಿಯೂ ಬಳಸದಷ್ಟು ಕಂದ. ವೃತ್ತಜಾತಿಗಳನ್ನು ವೀರಶೈವ ಕವಿಗಳು ತಮ್ಮ ಚಂಪೂಕಾವ್ಯಗಳಲ್ಲಿ ಬಳಸಿದರು. ಉದಾ : ಇಮ್ಮಡಿ ಗುರುಸಿದ್ಧನು ರಚಿಸಿರುವ 'ಹಾಲಾಸ್ಯಲೀಲೆ'ಯಲ್ಲಿ ಬಾರದ ಛಂದಸ್ಸೇ ಇಲ್ಲ. ಸುಮಾರು ೧೮೦ಕ್ಕೂ ಮಿಕ್ಕು ಛಂದೋರೂಪಗಳನ್ನು ಬಳಸಿದ್ದಾನೆ. ಪಂಚಪಾದಗಳ ಅಧಿಕ ಛಂದಸ್ಸನ್ನು ಬಳಸಿದ್ದಾರೆ. ಇದು ವೀರಶೈವ ಚಂಪೂಕಾವ್ಯಗಳ ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ಜೈನಕವಿಗಳು ಲೌಕಿಕ-ಆಗಮಿಕಗಳೆಂದು ಚಂಪೂಕಾವ್ಯಗಳನ್ನು ಬರೆದರೆ. ವೀರಶೈವ ಕವಿಗಳು ಈಶ್ವರನ ಬೇರೆ ಬೇರೆ ಅಭಿಧಾನಗಳನ್ನು, ನಂದಿ, ಸುಂದರ, ಸಿದ್ಧಲಿಂಗ ಮುಂತಾದ ಹೆಸರುಗಳನ್ನು ಹೇಳಿ ಆತನ ಲೀಲೆಗಳನ್ನು, ಈಶಭಕ್ತಿಯನ್ನು ಕೊಂಡಾಡುವುದರ ಮೂಲಕ ಒಂದು ದೃಷ್ಟಿಯಿಂದ ಕೇವಲ ಆಗಮಿಕ ಕಾವ್ಯಗಳನ್ನೇ ರಚಿಸಿದರು.

ಇದೇ ರೀತಿಯ ಇನ್ನೊಂದು ಲೇಖನವಿರುವುದರಿಂದ ಈ ವಿಷಯವನ್ನು ವಿಸ್ತರಿಸದೆ, ಕೆಲವು ಚಂಪೂಕಾವ್ಯಗಳ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಿದ್ದೇನೆ.

## ಪ್ರಭುಗ (ಸು. ೧೫೨೦)

ಈತನು ಚೂಡನಾಸ್ಥಾನ, ವೈಭೋಗರಾಜಾಸ್ಥಾನ ಎಂಬ ಎರಡು ಚಂಪೂಗ್ರಂಥಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿ. ಇವನು ಗುಮ್ಮಳಾಪುರದ ಶಾಂತೇಶನ ದೌಹಿತ್ರ. ಚಿಕ್ಕಾರ್ಯನ ಮಗ. ವೈಭೋಗರಾಜಾಸ್ಥಾನದಲ್ಲಿ 'ಮೊಲೆಗೊಯ್ದ ಪವಿತ್ರನಾರಿಗಾ ಕಂತುಹರಾಜ್ಞೆಯಿಂ ಮೊಲೆಯನಿತ್ತ' ವಿರಕ್ತಶಿರೋಮಣಿ ಶಾಂತನ ಮಕ್ಕಳು ಚನ್ನಬಸವ ಗಣಪಾರ್ಯರನ್ನೂ, 'ಕವೀಶ್ವರ ಪ್ರಸರಮಾ ಎಂಬಂತೆ ಸತ್ಯೇಂದ್ರನಾ ಕೃತಿಯಂ ಪೇೞ್ದು ನಿರಂತರಂ ಶಿವಕಥಾಸಂದೋಹಸೌಖ್ಯಂಗಳಂ ಕ್ಷಿತಿಯೊಳ್ ಭೇದಿಸಿ ಎಸೆವ' ಮಲ್ಲಣಾರ್ಯನನ್ನೂ ಹೇಳಿ, "ಇಂತಪ್ಪ ರಸಿಕ ಕವೀಶ್ವರರ್ ಪ್ರಭುಕವೀಶ್ವರನೇ ಬಾರೆಂದು ಮನ್ನಿಸಿ ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಪ್ರಾವೀಣ್ಯವು ನಿನಗೆ ಉಂಟಾಗಿದೆ. ಹಿಂದೆ ಗುರುರಾಯನ ಆಜ್ಞೆಯಿಂದ ಚಂದ್ರಕವಿ ವಿರೂಪಾಕ್ಷಾಸ್ಥಾನವನ್ನು ರಚಿಸಿದಂತೆ ನೀನು ನಾನಾಲಂಕಾರಚಿತ್ರಭಾವರಸಗಳಿಂದ ವೈಭೋಗರಾಜಾಸ್ಥಾನವನ್ನು ರಚಿಸಬೇಕೆ"ಂದು ಹೇಳಲು ಈ ಗ್ರಂಥವನ್ನು ರಚಿಸಿದಂತೆ ಹೇಳುತ್ತಾನೆ.

ಕವಿಯು ಈ ಮೇಲಿನ ಹೇಳಿಕೆಯಿಂದ ಈತನು ಚಿಕ್ಕ ವಯಸ್ಸಿನಲ್ಲಿಯೇ ಕನ್ನಡ ಸಂಸ್ಕೃತ ಎರಡರಲ್ಲಿಯೂ ವಿದ್ವಾಂಸನಾಗಿದ್ದು ಸತ್ಯೇಂದ್ರಚೋಳನ ಕಥೆಯನ್ನು ಹೇಳುವ 'ಭಾವಚಿಂತಾರತ್ನ'ವನ್ನು ಬರೆದ ೧೫೧೩ರಲ್ಲಿದ್ದ ಗುಬ್ಬಿಯ ಮಲ್ಲಣಾರ್ಯನ ಕಾಲದಲ್ಲಿದ್ದವನೆಂದು ಗೊತ್ತಾಗುತ್ತದೆ. ಇದರಿಂದ ಈ ಕವಿಯು ೧೫೨೦ರ ಸುಮಾರಿನಲ್ಲಿ ಇದ್ದನೆಂದು ಕವಿಚರಿತಕಾರರು ಊಹಿಸುತ್ತಾರೆ.

ತನ್ನ ಕವಿತಾಚಾತುರ್ಯವನ್ನು ಕುರಿತು—

ರಸದ ಪೊಡರ್ಪು ಮೈಸಿರಿಯ ನೇರ್ಪುಜಿಕೆ ಮೈಮೆಯ ತೋರ್ಪು ಶಾಸ್ತ್ರದೊಂ
ದೆಸಕದ ಸೊಂಪು ಭಾವತತಿಯಿಂಪು ವಿರಾಜಿಪ ಪೆಂಪು ಕೀರ್ತಿಯ
ಪ್ರಸರದ ಗಾಡಿ ಜಾಣ್ಣುಡಿಯ ಮೋಡಿ ಕವಿತ್ವದ ರೂಢಿಯಾಗಳೊಂ
ದೆಸೆವುವು ಸತ್ಕವಿ ಪ್ರಭುಗನಲ್ಲೆನೆ ತದಜ್ಞರೆ ಪೇೞ್ದನಿಂತಿವಂ

—ಎಂದೂ ತಾನು ಸತ್ಕವಿಯೆಂದೂ ಹೇಳಿಕೊಂಡಿದ್ದಾನೆ.

**ಚೂಡನಾಸ್ಥಾನ:** ಇದು ಚೂಡೆಯಲಿಂಗ, ಶೌಂಡನಾಥ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನಾರೂಪವಾದ ಚಂಪೂಗ್ರಂಥ. ಇದರಲ್ಲಿ ೧೦೧ ಪದ್ಯಗಳಿವೆ. ಈ ಕಾವ್ಯದ ಉತ್ಕೃಷ್ಟತೆಯನ್ನು ಕುರಿತು—

ಪುರುಳ ತವರ್ಮನೆ ಸೊಗಸಿನ
ಕರು ಸಕ್ಕದ ಕನ್ನಡಂಗಳಿಕ್ಕಿನಿಗಡಲೊ
ಗ್ಗರ ತೊಂಡುನುಡಿಯ ತಾಣಂ
ಸರಸತಿಯರ ನೆಲೆಯಿದಾಯ್ತು ಚೆಲ್ವಿನ ಕಬ್ಬಂ

ಎಂದು ಹೇಳಿಕೊಂಡಿದ್ದಾನೆ. ಗ್ರಂಥದ ಪ್ರಾರಂಭದಲ್ಲಿ ಶೌಂಡೇಶ್ವರನನ್ನು ಸ್ತುತಿಸಿ, ಅನಂತರ ಪಾರ್ವತಿಯನ್ನೂ ಗಣಪತಿಯನ್ನೂ ಹೊಗಳಿದ್ದಾನೆ.

**ವೈಭೋಗರಾಜಾಸ್ಥಾನ:** ಇದು ವೈಭೋಗರಾಜ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನೆಯನ್ನು ಮಾಡುವ ಚಂಪೂಗ್ರಂಥ. ಇದರಲ್ಲಿಯೂ ೧೦೧ ಪದ್ಯಗಳಿವೆ. ಇದನ್ನು ಬರೆಯುವ ಕಾರಣವನ್ನು ಮೇಲೆ ಹೇಳಿದೆ. ಗ್ರಂಥಾರಂಭದಲ್ಲಿ ಕವಿ ವೈಭೋಗರಾಯನನ್ನು ಸ್ತುತಿಸಿ, ನಂತರ ಪಾರ್ವತಿ ಗಣಪತಿ ಇವರನ್ನು ಹೊಗಳಿದ್ದಾನೆ. ಇವೆರಡೂ ಗ್ರಂಥಗಳಲ್ಲಿ ನೂರೊಂದು ಪದ್ಯಗಳೇ ಇರುವುದನ್ನು ನೋಡಿದರೆ ಇವುಗಳನ್ನು ಚಂಪೂಶೈಲಿಯಲ್ಲಿ ಬರೆದಿರುವ ಶತಕಗಳೆಂದು ಕರೆಯಬಹುದೇನೊ. ಆದರೆ ಕವಿಯೇನೂ ಹಾಗೆಂದು ಕರೆದಿಲ್ಲ.

## ಸದಾಶಿವಯೋಗಿ (ಸು. ೧೫೫೪)

ಇವನು ರಾಮನಾಥವಿಲಾಸ ಎಂಬ ಚಂಪೂಕಾವ್ಯವನ್ನು ಬರೆದಿದ್ದಾನೆ. ಇವನ ಪ್ರಪಿತಾಮಹ ಶೃಂಗಾರದ ಸೋಮಣಾರ್ಯ. ಗಂಗಾಧರ ಪಿತಾಮಹ, ಸಾಮವೇದಿ ಗುರು ಈತನ ತಂದೆ. ಸಾಮವೇದಿಗುರುಹಸ್ತಾಂಭೋಜ ಸಂಭೂತನೆಂದು ಹೇಳಿಕೊಂಡಿರುವುದರಿಂದ ತಂದೆಯೇ ಈ ಕವಿಯ ಗುರುವೂ ಆಗಿದ್ದಂತೆ ಕಂಡುಬರುತ್ತದೆ. ಶಾಂತ

ನೃಪಾಖ್ಯ ಶೈವಕವಿರಾಜಸಭ್ಯೋನ್ನತನಾಗಿದ್ದಂತೆ ಹೇಳಿಕೊಂಡಿದ್ದಾನೆ; ಆದರೆ ಈ ಶಾಂತನೃಪನಾರೋ ತಿಳಿಯದು ಎಂದು ಕವಿಚರಿತೆಕಾರರು ಹೇಳುತ್ತಾರೆ. ಕಥಾನಾಯಕನಾದ ರಾಮನಾಥನ ಅಥವಾ ರಾಮಣಾರ್ಯನ ವಂಶೋದ್ಭವನಾದ ಪ್ರಭುದೇಶಿಕನು ಕವಿಯ ಸಮಕಾಲದವನಾಗಿದ್ದಂತೆ ತಿಳಿಯುತ್ತದೆ. ಆತನ ವಂಶಪರಂಪರೆಯನ್ನು ಹೀಗೆ ಹೇಳುತ್ತಾನೆ.

ರಾಮಣಾರ್ಯ; ತದ್ವಂಶೋದ್ಭವ ಪರ್ವತಾಚಾರ್ಯ ; ಅವನ ಮಗ ಮಲ್ಲಿಕಾರ್ಜುನಾಚಾರ್ಯ ; ಅವನ ಮಗ ಲಿಂಗಣಾರ್ಯ ; ಅವನ ಮಗ "ಕ್ರಿಯಾಚರ್ಯಾಕ್ರಮತ್ರಿಲಿಂಗಾರ್ಥಪ್ರಕಾಶಿಕೆಯೆಂಬುತ್ತಮಸಂಗ್ರಹದತಿವಿಸ್ತಾರಮಂ ತ್ರಿಚರಲ್ಲಿಂಗಪೂಜಾಖ್ಯಮಯುಮಂ ಶಿವಯೋಗಕಲ್ಪತರುವಂ ಯಥಾರ್ಥವಿಜ್ಞಾನಮೆಂಬ ಸಂಗ್ರಹಮಂ ಮೋಕ್ಷದರ್ಶನಮಂ ತತ್ಸಂಗ್ರಹೋತ್ಕರವಂ ಪಂಚವಿಧತ್ವದಿಂ ಶ್ರೀಸಾರಸಿದ್ಧಾಂತಮಂ"....ರಚಿಸಿದ ಆದಿಶಿವಾಗಮಾರ್ಥಸಂದೇಶಿಕನೆಂದು ಕೀರ್ತಿವಡೆದ ಪ್ರಭುದೇಶಿಕ.

ಈ ವರ್ಣನೆಯಿಂದ ಪ್ರಭುದೇಶಿಕನು ದೊಡ್ಡ ಪಂಡಿತನೂ, ಉದ್ಗ್ರಂಥ ಕರ್ತೃವೂ ಆಗಿದ್ದಂತೆ ತಿಳಿಯಬಹುದಾಗಿದೆ. ಇವನೂ ಕವಿಯ ಗುರುವಾಗಿದ್ದಂತೆ ಕಾಣುತ್ತದೆ. ತನ್ನ ಈ ಕಾವ್ಯವನ್ನು (ರಸಾದ್ರ್ಯಬ್ಧೀಂದು) ಶಕವರ್ಷ ೧೪೫೫ನೆಯ ಆನಂದ ಸಂವತ್ಸರದಲ್ಲಿ ಅಂದರೆ ೧೫೫೪ರಲ್ಲಿ ರಚಿಸಿದಂತೆ ಕವಿ ಹೇಳಿಕೊಂಡಿದ್ದಾನೆ.

ಇವನಿಗೆ ನವಬಾಣಕವಿ, ವಿಚಿತ್ರವಿದ್ವತ್ಕವಿಕುಲಸಾರ್ವಭೌಮ ಎಂಬ ಬಿರುದುಗಳಿದ್ದಂತೆ ಕಾಣುತ್ತದೆ. ಈತನು ತನ್ನ ಗ್ರಂಥದಲ್ಲಿ ಸೋಮೇಶ್ವರ, ಹರೀಶ, ಭೀಮ, ಹಲಾಯುಧ, ಕಾಳಿದಾಸ, ಕ್ಷೇಮೇಂದ್ರ, ಈಶಕವಿ, ರಾಘವ ಪಂಡಿತ ಮೊದಲಾದ ಮಹಾಕವಿಗಳನ್ನು ನೆನೆದು, ಇವರು ತನಗೊಲ್ದು ಒಳ್ವನೀವರ್ ಎಂದು ಹಂಬಲಿಸಿದ್ದಾನೆ.

**ರಾಮನಾಥವಿಲಾಸ** : ಇದಕ್ಕೆ ರಾಮನಾಥಗುರುಚರಿತೆ ಎಂದೂ ಹೆಸರುಂಟು. ೧೬ ಉಲ್ಲಾಸಗಳಿಂದ ಕೂಡಿದ ಚಂಪೂಕಾವ್ಯ. ಇದರಲ್ಲಿನ ಗ್ರಂಥಸಂಖ್ಯೆ ೪೩೦೦. ಅಲ್ಲಲ್ಲಿ ಷಟ್ಪದಿಗಳೂ ಇರುವುದು ಈ ಗ್ರಂಥದ ವೈಶಿಷ್ಟ್ಯ. ಇದರಲ್ಲಿ:

"ಹೊಯಿಸಳದೇಶದೊಳ್ ಮುದ್ರಾಪುರದೊಳ್ ಶ್ರೀರಾಮೇಶ್ವರಲಿಂಗಮೂರ್ತಿಯಿಂ ವೀರಶೈವದೀಕ್ಷೆಯಂ ಪಡೆದು ಅದಂ ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಆ ರಾಮೇಶ್ವರಲಿಂಗಮಂ ಸಾಕ್ಷಿಯಂ ನುಡಿಯಿಸಿ ಮೆರೆದು ಭೂಲೋಕದೊಳ್ ವೀರಶೈವಮತಮೆ ವೇದಾಗಮಶಾಸ್ತ್ರಪುರಾಣಂಗಳೊಳ್ ಉತ್ತಮಮೆಂಬುದಂ ಪ್ರಾಚಾರ್ಯಂಗೆಯ್ದ" ರಾಮನಾಥಾಚಾರ್ಯರ ಚರಿತ್ರೆಯು ಹೇಳಲ್ಪಟ್ಟಿದೆ.

ನವಭಾವಂ ನವರೀತಿಗಳ್ ಗುಣಗಣಂ ಗಾಂಭೀರ್ಯಸಾರಾರ್ಥಗೌ
ರವಮಾಧುರ್ಯಪದಪ್ರಯೋಗಫಣಿತಿವ್ಯಂಗ್ಯಂ ಕಲಾಪ್ರೌಢಿ ಮಾ
ರ್ದವತತ್ಸಂಧಿಸಮಾಸ ಚಿತ್ರ ರಚನಾಸೌಕರ್ಯ ಸಂದರ್ಭ ಸೌ
ಷ್ಠವಚಾತುರ್ಯಚಮತ್ಕೃತಿಪ್ರಥಿತಮೀ ಮತ್ಕಾವ್ಯಮುದ್ಯದ್ಯಶಂ ॥

ಗತಿಲೀಲಾವತಿಸುಪ್ರಯೋಗತರವೃತ್ತಿನ್ಯಾಸ್ಯೆ ಯುಕ್ತಾರ್ಥಸಂ
ಗತಿಸಂಪನ್ನಕುಮಾರಸಂಭವೆ ಲಸತ್ಸಂಗೀತರತ್ನಾಕರೆ-
ಸ್ತುತಿಚಿಂತಾಮಣಿವರ್ಧಮಾನಕಿರಣಾವಲ್ಯುಲ್ಲಸತ್ಕಂದಳೀ
ಶ್ರುತನಾನಾಕೃತಿ ಮತ್ಕೃತಿ ಪ್ರಥಿತಮಾಯ್ತೇವಣ್ಣಿಪೆಂ ಧಾತ್ರಿಯೊಳ್

ಇಂದುಜ್ಯೋತ್ಸ್ನಾರವಿಂದಸ್ಫಟಿಕಶುಚಿಯಶಸ್ಯಂದನಂ ವ್ಯಂಗ್ಯತುಂದಂ
ಛಂದಃಸ್ಪಂದಾತ್ಯಮಂದಪ್ರಕೃತಿಕೃತಿಮಹಾಮಂದಮಾಲಾಮರಂದಂ
ಒಂದುಂ ಕುಂದಿಲ್ಲದಂದಂದಳೆದ ಕೃತಿ ಮನೋನಂದನಂ ಸ್ವರ್ಥವೃಂದಂ
ಕಂದಂ ಮುದ್ವಲ್ಲಿಕಂದಂ ಮೆರೆದುವವನಿಯೊಳ್ ವಂದಿಕೇಕೀಂದ್ರಕಂದಂ

ಎಂದು ಮುಂತಾಗಿ ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಮೇಲಿನ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.

ಗ್ರಂಥಾರಂಭದಲ್ಲಿ ಕವಿ ರಾಮಣಾಚಾರ್ಯನನ್ನು ಸ್ತುತಿಸಿದ್ದಾನೆ. ಅನಂತರ ಪಂಡಿತಾರಾಧ್ಯರನ್ನು ಸ್ತುತಿಸಿ ರಾಮಣಾಚಾರ್ಯವಂಶೋದ್ಭವನಾದ ಪ್ರಭುದೇಶಿಕನನ್ನು ಹೊಗಳಿದ್ದಾನೆ. ರಾಮನಾಥಾಚಾರ್ಯನ ಕಾಲದಲ್ಲಿ ಕೀರ್ತಿಚಂದ್ರರಾಜ ಎಂಬ ದೊರೆ ಇದ್ದಂತೆ ತಿಳಿಯುತ್ತದೆ. ಪ್ರತಿ ಉಲ್ಲಾಸದ ಕೊನೆಯಲ್ಲಿ ಈ ಗದ್ಯವಿದೆ :

ಇದು ಶ್ರೀಮದಖಿಳಭುವನಭವನಾಂತರ್ಗತಾನಂತವಿಮಲತರವಿಚಿತ್ರವಿದ್ವತ್ಕವಿಕುಲಸಾರ್ವಭೌಮಸರ್ವಜ್ಞಸದಾಶಿವಯೋಗೀಶ್ವರವಿರಚಿತಮಾದ ರಾಮನಾಥವಿಲಾಸಮೆಂಬ ಮಹಾಪ್ರಬಂಧದೊಳ್.

## ಕವಿ ಮಾದಣ್ಣ (ಸು. ೧೬೫೦)

ಇವನು ನನ್ನಯ್ಯಗಳ ಚಾರಿತ್ರ ಎಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ವೀರಶೈವನಾದ ಈ ಕವಿ ಭಾರದ್ವಾಜ ಗೋತ್ರದವನು. ಇವನ ಗುರು ರಾಮನಾಥ, ತಂದೆ ಅಲ್ಲಪ, ತಾಯಿ ಮಲ್ಲಿಯಕ್ಕ : ಸ್ಥಳ ಪಾಮತಿರಪುರ. ಇವನು ಸುಮಾರು ೧೬೫೦ರಲ್ಲಿ ಇದ್ದಿರಬಹುದೆಂದು ಕವಿಚರಿತೆಕಾರರು ಹೇಳುತ್ತಾರೆ.

**ನನ್ನಯ್ಯಗಳ ಚಾರಿತ್ರ** : ಇದರಲ್ಲಿ ೫ ಸಂಧಿಗಳಿವೆ. ಬಸವಣ್ಣನ ಸಮಕಾಲೀನ ಶರಣರಲ್ಲೊಬ್ಬನಾದ ನನ್ನಯ್ಯನ ಚರಿತ್ರೆಯನ್ನು ಹೇಳಿದ್ದಾನೆ.

ಒಡ್ಡಿಯ ದೇಶದ ಕರ್ಣಿಕಾಪುರವಾಸಿಯಾದ ನನ್ನಯ್ಯನು ತನ್ನ ಗುರುವಾದ ಸುಜ್ಞಾನಿಯ ತಲೆ ಹೋಯಿತೆಂದು ಭ್ರಮಿಸಿ ತನ್ನ ತಲೆಯನ್ನು ಕತ್ತರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಇವನ ಗುರುಭಕ್ತಿಗೆ ಮೆಚ್ಚಿ ಶಿವನು ಇವನನ್ನು ಕೈಲಾಸಕ್ಕೆ ಕೊಂಡೊಯ್ಯುವ ಕಥೆಯನ್ನು ಹೇಳಿದ್ದಾನೆ.

ಗುರುಚರಣಭಕ್ತಿ ಸುಸ್ಥಿರ
ಸಿರಿಯಿದು ಗುರುಭಕ್ತಿವಸಥಿ ವರ್ಧನ ರಜನೀ
ಕರವಿದು ದುರ್ಗತಿತಮಭಾ
ಸ್ಕರನಿದು ನಿರಯಾದ್ರಿಕುಲಿಶಧರನೀ ಚರಿತಂ

ಎಂದು ಕಾವ್ಯದ ವಿಷಯವಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ

ಕೊಳನಂ ಹಂಸೆಯ ನೈದಿಲ
ನಳಿನವ ಶುಕಪಿಕಮಯೂರತತಿಯಿಂ ಪಂದಾ
ಶಿಲನಂ ನೆಲನಂ ವರ್ಣಿಪ
ಗಲಭೆಯ ಕೃತಿಯಲ್ಲಮೀಶಶರಣಚರಿತ್ರಂ

ಎಂದೂ ಇದು ಈಶಶರಣಚರಿತ್ರವಾದುದರಿಂದ ಪುಣ್ಯಾಸ್ಪದವೆಂದೂ ಹೇಳಿಕೊಂಡಿದ್ದಾನೆ. ಇಲ್ಲಿ ಕೇಶಿರಾಜನು ವಿರೋಧಿಸಿರುವ ಲ–ಳ ಪ್ರಾಸವನ್ನು ಬಳಸಿರುವುದು ಗಮನಾರ್ಹ.

ಈ ಕಾವ್ಯದ ಆರಂಭದಲ್ಲಿ ತನ್ನ ಗುರು ರಾಮನಾಥನ ಸ್ತೋತ್ರಮಾಡಿ, ಮುದ್ರಾಪುರದ ಪ್ರಸನ್ನರಾಮೇಶ್ವರ ಪಾರ್ವತಿ, ಗಣಪತಿ, ಸುಬ್ರಹ್ಮಣ್ಯ, ಸರಸ್ವತಿ ಮೊದಲಾದವರನ್ನು ನೆನೆದು ಅನಂತರ ಬಸವಣ್ಣ ಮೊದಲಾದ ಪುರಾತನ ರನ್ನೂ ಸ್ತುತಿಸಿದ್ದಾನೆ.

## ಶಾಂತವೀರದೇಶಿಕ (ಸು. ೧೬೫೦)

ಇವನು ಶಿವಲಿಂಗಚಾರಿತ್ರ, ಶಿವಗಣಚಾರಿತ್ರ, ಸೌಂದರೇಶ್ವರನ ಯಕ್ಷಗಾನ. ಶಿವಮಹತ್ವಸಾರಶಿಖಾಮಣಿ ಸಂಗ್ರಹಶತಕ, ಗಿರಿಜಾದೇವಿಯ ಸಂಕೀರ್ತನೆ ಮುಂತಾದ ಗ್ರಂಥಗಳನ್ನು ಬರೆದಿದ್ದಾನೆ. ಕೆಣಿಯನೂರು ಇವನ ಸ್ಥಳ. ವರಕವಿ ಗಜೇಂದ್ರಕಂಠೀರವ, ಶಿವಕವಿಭೃತ್ಯ ಎಂದು ಕವಿ ತನ್ನನ್ನು ಕುರಿತು ಹೇಳಿಕೊಂಡಿದ್ದಾನೆ. ಇವನ ತಂದೆ ಚೆನ್ನಾರ್ಯನಿಗೆ "ಸರಸಕವಿ ಕರ್ನಾಟಕಚಕ್ರೇಶ್ವರ" ಎಂದು ಹೇಳಿರುವುದರಿಂದ ಇವನೂ ಕವಿಯಾಗಿದ್ದಂತೆ ತೋರುತ್ತದೆ. ಇವನು ಬರೆದಿರುವ ಗ್ರಂಥವಾವುದೋ ತಿಳಿದುಬಂದಿಲ್ಲ. ಕವಿಯ ಸೌಂದರೇಶ್ವರನ ಯಕ್ಷಗಾನದ ಒಂದು ಓಲೆಯ ಪ್ರತಿಯ ಕೊನೆಯಲ್ಲಿ "ಇದನು ಶಾಂತವೀರದೇಶಿಕನು ನಿರ್ಮಿಸಿ ಕಾಳಾಯುಕ್ತ ಸಂವತ್ಸರದಲ್ಲಿ ಬಸವನ ಕೋಟೆಯ ಪರಮೇಶ್ವರಯ್ಯನಿಗೆ ಲೇಖಿಸಂಗೈದುದು" ಎಂದಿದೆ. ಈ ಕಾಳಾಯುಕ್ತ ವರ್ಷವು ೧೬೭೮ ಆಗಿರಬೇಕು. ಇವನು ವೀರಶೈವ ಕವಿ ; ತನ್ನ ಪರಂಪರೆಯನ್ನು ಹೀಗೆ ಹೇಳಿದ್ದಾನೆ—ಶಿವಲಿಂಗಾರ್ಯ. ಮಗ ವೀರೇಶಾರ್ಯ, ಮಗ ಚನ್ನ ವೀರೇಶ್ವರ, ಮಗ ಕವಿಶಾಂತವೀರದೇಶಿಕ. ಪೂರ್ವಕವಿಗಳಲ್ಲಿ ಗುಬ್ಬಿಯ ಮಲ್ಲಣಾರ್ಯನನ್ನು (೧೫೩೦) ಸ್ಮರಿಸಿರುವು ದರಿಂದ ಕವಿ ಅವನ ಕಾಲಕ್ಕೆ ಈಚೆಯವನೆಂಬುದು ವ್ಯಕ್ತವಾಗುತ್ತದೆ. ತನ್ನ ತಂದೆ ಚಾಮರಾಜೇಂದ್ರನ ಸಭೆಯಲ್ಲಿ ರಾಮದೀಕ್ಷಿತನನ್ನು ವಾದದಲ್ಲಿ ಜಯಿಸಿದಂತೆ

ಚಾಮರಾಜೇಂದ್ರನ ಸಭೆಯೊಳು ತರ್ಕಿಸುವ
ರಾಮದೀಕ್ಷಿತನ ಭಂಜಿಸಿದ
ಶ್ರೀಮದ್ವೀರಣಾರಾಧ್ಯತನುಜ ಗುಣ
ಧಾಮಂ ಚೆನ್ನಾರ್ಯ . . . .

ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಈ ದೊರೆ ೧೬೧೭–೧೬೩೭ರ ವರೆಗೆ ಆಳಿದ ಮೈಸೂರು ಚಾಮರಾಜನಾಗಿರಬೇಕು. ಆದುದರಿಂದ ಕವಿಯ ಕಾಲ ಸು. ಕ್ರಿ.ಶ. ೧೬೫೦ ಆಗಬಹುದು ಎಂದು ಕವಿಚರಿತೆಕಾರರು ಊಹಿಸುತ್ತಾರೆ. ಕವಿ "ಆನಂದಾಗಮವೇದಶಂಕರಪುರಾಣಾರ್ಥಜ್ಞಸತ್ಕೋವಿದಂ, ನಾನಾಕಾವ್ಯವಿಚಾರಪೂರಕಸಿತಾಕರ್ಣಾಟಚಕ್ರೇಶ್ವರಂ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ.

ರಾಘವ. ಹಂಪೆಯ ಶ್ರೀಹರಿದೇವ. ಶ್ರೀಗುರು ಗುಬ್ಬಿಯ ಮಲ್ಲಮಹೇಶ, ಮಲ್ಲಣ ಮುಖ್ಯ ಕವೀಂದ್ರರು ತನಗೆ ಮಂಗಳಮತಿಯನೀಯಲೆಂದು ಪ್ರಾರ್ಥಿಸಿ. ಮಲ್ಲಣಾರಾಧ್ಯ, ಕೆರೆಯ ಪದ್ಮರಸ, ಭಾವದಲ್ಲಣ ಸೋಮಾರ್ಯ ಮುಖ್ಯರಾದ ಫುಲ್ಲಶರಾರಿಯ ಸತ್ಕವಿಗಳ ಪಾದಪಲ್ಲವಕೆ ಎರಗುತ್ತಾನೆ.

ಶಿವಲಿಂಗಚಾರಿತ್ರ ಇವನು ಬರೆದಿರುವ ಚಂಪೂಗ್ರಂಥ. ಇದರಲ್ಲಿ ೫ ಆಶ್ವಾಸಗಳು, ೧೨೪ ಪದ್ಯಗಳೂ ಇವೆ. ಇದರಲ್ಲಿ ಪಂಡಿತಾರಾಧ್ಯವಂಶೋದ್ಭವನಾದ ಶಿವಲಿಂಗಾರ್ಯನ ಚರಿತ್ರೆಯನ್ನು ಹೇಳಿದ್ದಾನೆ.

ಇವನು ಕವಿಯ ಪ್ರಪಿತಾಮಹ : ಇವನ ಸ್ಥಳ ಪೆನುಗೊಂಡೆಯ ದೇಶದ ಅಪ್ಪೆಯಕೆರೆ. ಇವನ ಮಗ ವೀರಣಾರಾಧ್ಯನು ಪದಿನಾಡ ಶಿವಪೂಜೆಯ ನೃಪನಿಂದಲೂ ಬೆಂಗಳೂರು ಕೆಂಪೇಗೌಡನಿಂದಲೂ ಮರ್ಯಾದೆಯನ್ನು ಹೊಂದಿದನು. ಇವನ ಮಗ ಚನ್ನವೀರಾರ್ಯನು ಮೈಸೂರು ರಾಜಮಹೇಂದ್ರನಿಂದ ಪೂಜಿತನಾಗಿ ಹುಲ್ಲಹಳ್ಳಿಯ ಬಸವರಾಜನ ಮಗನಾದ ವೀರನಿಂದಲೂ. ಹುಣಸನಹಾಳು ನಂಜರಾಜನಿಂದಲೂ ಸನ್ಮಾನಿತನಾಗಿದ್ದನು : ಕೊಡನಾಲತ್ತೂರಲ್ಲಿ ಒಂದು ಮಠವನ್ನು ಕಟ್ಟಿಸಿದನು.

ಗ್ರಂಥ ಪ್ರಾರಂಭದಲ್ಲಿ ಕವಿ ಶಾಂತವೀರೇಶ್ವರನ ಸ್ತೋತ್ರಮಾಡಿ. ಅನಂತರ ಪಾರ್ವತಿ. ವೀರೇಶ. ಗಣೇಶ, ಷಣ್ಮುಖ. ನಂದಿ, ಭೃಂಗಿ, ಬಸವ, ಮಾಚಯ್ಯ, ಕಿನ್ನರ ಬೊಮ್ಮಯ್ಯ. ಚನ್ನಬಸವ ಮುಂತಾದವರನ್ನು ಸ್ತುತಿಸಿದ್ದಾನೆ. ಆಶ್ವಾಸಾಂತ್ಯದಲ್ಲಿ—ಇತಿಶ್ರೀ ಪಂಡಿತಾರಾಧ್ಯವಂಶೋದ್ಭೂತನಪ್ಪ ಶಿವಲಿಂಗಾಚಾರ್ಯ ಚಾರಿತ್ರದೊಳ್— ಎಂದಿದೆ.

## ಷಟ್‍ಸ್ಥಲವಲ್ಲಭ–ಚನ್ನವೀರ ಜಂಗಮದೇವ (ಸು. ಕ್ರಿ.ಶ. ೧೬೭೯–೧೭೦೦)

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಅಭೂತಪೂರ್ವ ಉತ್ಕ್ರಾಂತಿಯಾದ ಮೇಲೆ ಪುನಃ ಹದಿನೈದನೆಯ ಶತಮಾನದಲ್ಲಿ ಅಂಥದೇ ಕ್ರಾಂತಿಯನ್ನು ವೀರಶೈವಧರ್ಮ, ಸಾಹಿತ್ಯಕ್ಷೇತ್ರಗಳಲ್ಲಿ ಮಾಡಿದ ಮತ್ತೊಬ್ಬ ಮಹಾನುಭಾವ ತೋಂಟದ ಸಿದ್ಧಲಿಂಗ. ಅಲ್ಲಮನ ಅಪರಾವತಾರಿ ಎಂದು ಪ್ರಸಿದ್ಧನಾಗಿರುವ ಈ ಶಿವಯೋಗಿಯು ತನ್ನ ಅದ್ಭುತವಾದ ಜ್ಞಾನ, ಧರ್ಮಸಂಘಟನೆ. ಅಪ್ರತಿಮವಾದ ಶಿವಯೋಗಜ್ಞಾನದಿಂದಾಗಿ ಅಸಂಖ್ಯಾತ ಶಿಷ್ಯಕೋಟಿಯನ್ನು ಬಿಟ್ಟುಹೋದುದಲ್ಲದೆ, ಅಸಂಖ್ಯ ಕವಿಗಳ ಪ್ರತಿಭಾಸ್ಫೂರ್ತಿಯ ನೆಲೆಯಾಗಿ ಸೆಲೆಯಾಗಿ ಅಮರನಾಗಿದ್ದಾನೆ. ಈ ಮಹಾನುಭಾವಿ ಶಿವಯೋಗಿಯನ್ನು ಕುರಿತು ವರ್ಣಿಸದ ಮುಂದಿನ ವೀರಶೈವ ಕವಿಗಳೇ ವಿರಳ. ಆತನ ಮಹಿಮೆಯನ್ನು, ಚರಿತ್ರೆಯನ್ನು ಷಟ್ಪದಿ, ರಗಳೆ, ಸಾಂಗತ್ಯ, ಚಂಪೂ ಮುಂತಾದ ಕನ್ನಡದ ಪ್ರಸಿದ್ಧ ಛಂದಸ್ಸುಗಳಲ್ಲಿ ಹಾಡಿ ಹೊಗಳಿ ತಣಿಯದಿದ್ದಾರೆ. ಪದಬಂಧುರತೆ, ಮಾರ್ಗಶೈಲಿಯ ಬಿಗುವಿನಿಂದ ಕೂಡಿದ ಚಂಪುವಿನಲ್ಲಿ ಸಿದ್ಧಲಿಂಗನ ಅಂತರಂಗಸಿದ್ಧಿಯ ಭವ್ಯದರ್ಶನವನ್ನು ಮಾಡಿಸಿದ್ದಾನೆ, ತನ್ನ 'ಷಟ್‍ಸ್ಥಲವಲ್ಲಭ'ದಲ್ಲಿ ಕವಿ ಚನ್ನವೀರ ಜಂಗಮದೇವ. ಈತನು ಸು. ಕ್ರಿ.ಶ. ೧೬೭೯–೧೭೦೦ರ ಅವಧಿಯಲ್ಲಿ ತನ್ನ ಈ ಕಾವ್ಯವನ್ನು ಬರೆದಿರಬಹುದೆಂದು ಡಾ. ಎಲ್. ಬಸವರಾಜು ಹೇಳುತ್ತಾರೆ.[1]

ಕಾವ್ಯಾರಂಭದಲ್ಲಿ ಭೂತೇಶನನ್ನು ಆನಂದದಿಂದ ಸ್ತುತಿಸಿ, ಶಿವಾದ್ವೈತ ಭಕ್ತಿಯನ್ನು ಮಹೋತ್ಸವವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸಿದ ನಂತರ ಬಸವಣ್ಣ, ರೇವಣೇಶ. ಚಂದಯ್ಯ, ಅಲ್ಲಮ, ಮಿಂಡ ಸಂಗಯ್ಯ, ಮುಸುಟಿಯ ಚೌಡಯ್ಯ, ಉದ್ಭಟ, ಹಲಾಯುಧ, ಓಹಿಲ, ಸಿದ್ಧರಾಮ, ಬಿಸಿಗೆಲಸಯ್ಯ, ನಿರ್ವಿಷದ ಸಂಗಯ್ಯ, ನಾಗಯ್ಯ, ಸಿದ್ಧಬುದ್ಧಯ್ಯ ಮುಂತಾದ ಶಿವನ ಶರಣರು ಸುಕಾವ್ಯವಚೋವಿಲಾಸವನ್ನು ನೀಡಲೆಂದೂ ; ವರಗುರು ಮಾಯಿದೇವ, ವಿಭುಶಂಕರದೇವ, ತಟಾಕಪದ್ಮರಾಜ, ಘನಕೇಶಿರಾಜ, ಸನ್ನುತ ಪಾಲ್ಕುರಿಕೆ ಸೋಮನಾಥ, ಪ್ರಭು ಚಕ್ಕಣಯ್ಯ ಸಮಾಧಿಸೋಮರು ಸುಸಾರಸುಕಾವ್ಯದಿಂಪನ್ನು ಈಯಲೆಂದೂ ಕೇಳಿಕೊಳ್ಳುತ್ತಾನೆ.

---

1 ವಚನಕಾರ ಸಿದ್ಧಲಿಂಗ ಯತಿ : ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೨, ಪುಟ ೨೧. ಈ ನಿರ್ಣಯಕ್ಕೆ ಅಲ್ಲಿ ಆಧಾರಗಳನ್ನೇನೂ ಕೊಟ್ಟಿಲ್ಲ.

ಶಿವನ ಕುಲಂ ಸದಾಶಿವನ ಕೀರ್ತಿಬಲಂ ಶಿವನಾಯುಮುನ್ನತಂ
ಶಿವನ ಚಲಂ ಮಹಾಶಿವನ ಮೂರ್ತಿಸುಖಂ ಶಿವನೂರ್ಜಿತೋಜ್ವಲನಂ
ಶಿವನ ಮುಖಂ ಶಿವಾಧವನ ಪೂತಮತಂ ಶಿವಭಕ್ತರೆನ್ನ ಕಾ
ವ್ಯವನುರೆ ತಿರ್ದಿಪೊರ್ದಿ ನಲವಿಂ ಮಿಗೆ ಲಾಲಿಸಿ ತಾಳ್ವುದಕ್ಕರಿಂ ॥ ೧–೮ ॥

ಎಂದು ವಿನಯದಿಂದ ಬೇಡಿಕೊಳ್ಳುತ್ತಾನೆ. ಆಮೇಲೆ ತನ್ನ ಕಾವ್ಯವನ್ನು ಕುರಿತು . . . . ಕಂದಂಗಳ್ ಮೃದುವಾಕ್ಯದ ವೃಂದಂಗಳು ಮುಕುಂದೊಂದದ ಲಿಂಗಾಂಗದ ಒಂದಂಗಳ್ಪೊಗಯಿಸಿರ್ಪವೀ ಸತ್ಕೃತಿಯೊಳು. ವೃತ್ತಂಗಳು ಶಿವಲಿಂಗದ। ವೃತ್ತಂಗಳ್. ಪರಬೊಮ್ಮದ ಪೊತ್ತಂಗಳ್ ಶಿವ। ಭಕ್ತಿಯ ಚಿತ್ತಂಗಳ್ಸ। ದ್ವೃತ್ತಂಗಳ್ಪೊಗಯಿಸಿರ್ಪವೀ ಸತ್ಕೃತಿಯೊಳು" ಎಂದು ಚಂಪುವಿನ ಜೀವಾಳವೆನಿಸಿದ ಕಂದ-ವೃತ್ತಗಳ ಹಿರಿಮೆಯನ್ನು ತಿಳಿಸುತ್ತಾನೆ. ತನ್ನ ಕಾವ್ಯವು ಪೊಸತು, ನವರಸಮುಳ್ಳುದು, ಅನರ್ಘ್ಯವಸ್ತುವಿನಿಂದ ಕೂಡಿ ಜಸವತ್ಕಾವ್ಯವಾಗಿ ದೇವನೃಪಸಭೆಗಳಲ್ಲಿ ರಂಜಿಸಿ ಮೆರೆವುದು ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾನೆ. ಭಕ್ತ್ಯಾಚಾರಗಳುಳ್ಳದು, ಮುಕ್ತಿಪದಕಾದ ವಸ್ತು ಎಂದು ಭಕ್ತಿರಸವುಳ್ಳ ಈ ಕಾವ್ಯ ಶಿವನಿರುವತನಕ ಭಕ್ತಿಸಭಾಂತರದೊಳಿರ್ಕೆ ಎಂದೂ ಹೇಳಿಕೊಳ್ಳುತ್ತಾನೆ. ಪೊಸಭಾವ, ಸಮರೀತಿ, ಜಾತಿ, ಉಪಮಾನ, ಲಕ್ಷಣ, ಜಾಣು, ಸುವಾಕ್ಯ, ಸಮಾಸಕ್ರಮ, ದೇಶಿ, ಸಂಧಿಪದ, ಸತ್ಪ್ರಾಸ, ಮಿತ್ರಾರ್ಥಯುಕ್ತವಾಗಿರುವ ಈ ಕಾವ್ಯವನ್ನು ಅನ್ಯರನೆ ಕೆಳೆಗೊಂಡು ಕೊನೆವ ಚಾಂಡಾಲಕಬ್ಬಿಗರು ತೆಗಳಿದರೆ ಊನವೆ ? ಕರಿ, ಗಿರಿ, ಧರೆ, ಸಿರಿ, ಸರಸಿಜಗಳನ್ನು ವರ್ಣಿಸುವ ಕವಿತೆ ತಾನೇತರದು ? ನವರಸಭಾವಾರ್ಥದೊಳಂ ಭವಹರನಂ ಪೊಗಳಲೊಲ್ಲದನ್ಯರ ಪೊಗಳುವ ಕವಿಗಳನೆನ್ನೀ ಕಾವ್ಯದೊಳವರ ನೆನೆಯಲ್ಕೆ ಬಕ್ಕುಮೇ ಶಿವಕೃತಿಯೊಳು ಎಂದು ಹೇಳಿ, 'ಷಟ್‌ಸ್ಥಲವಲ್ಲಭ'ವೆಂಬುವ ಷಟ್ಸ್ಥಲಿಗಳ್ಗೆಚ್ಚೆಪೇಳ್ವೆ ಪಿರಿಯರ್ಸುಜನರ್ ಷಟ್ಸ್ಥಲಾಗಮವಂತರ್ ಷಟ್ಸ್ಥಲಿಗಳು ಕೇಳ್ವುದೀ ಪ್ರತಿಭೋನ್ನತಿಯಂ ಎಂದು ತನ್ನ ಕಾವ್ಯವಾದ 'ಷಟ್ಸ್ಥಲವಲ್ಲಭ'ದಲ್ಲಿ ಷಟ್ಸ್ಥಲಿಗಳಿಗೆ ಷಟ್ಸ್ಥಲವನ್ನು ಹೇಳುವೆನೆಂದು ಹೇಳಿಕೊಂಡಿದ್ದಾನೆ. ಷಟ್ಸ್ಥಲ ಸಿದ್ಧಾಂತಕ್ಕೆ ಒಂದು ನಿರ್ದಿಷ್ಟವಾದ ರೂಪು ಕೊಟ್ಟು, (ಹಿಂದೆ ಚನ್ನಬಸವಣ್ಣನು ಅದಕ್ಕೊಂದು ವ್ಯವಸ್ಥೆಮಾಡಿದ್ದ) ಒಂದು ಸಿದ್ಧಾಂತವನ್ನಾಗಿ ಮಾಡಿ ಊರೂರನ್ನು ಅಲೆದು ಬೋಧಿಸಿ ಪ್ರಚಾರ ಮಾಡಿದುದಲ್ಲದೆ ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ಪಟ್ಟಶಿಷ್ಯರಿಗೆ ಬೋಧಿಸಿದರು. ಆ ಬೋಧನೆಯ ಕ್ರಮದಲ್ಲಿಯೇ ಈ ಕಾವ್ಯವನ್ನು ಕವಿ ಬರೆದಿದ್ದಾನೆ."

ಮುಂದೆ ಹರದರು ಅಡಕೆ ಏರನ್ನು ತೆಗೆದುಕೊಂಡು ಮಧುರೆಗೆ ಹೊರಟಿದ್ದು, ಮಾರ್ಗಮಧ್ಯದಲ್ಲಿ ಬೀಡು ಬಿಟ್ಟಾಗ ಒಲೆ ಉರಿಸಲು ಕಲ್ಲಿನಲ್ಲಿ ಹಾಲು ಬಂದು, ಅದಕ್ಕೆ ಅಮೃತೇಶ್ವರಲಿಂಗವೆಂದು ಕರೆವದ್ದು, ಅಡಕೆ ಅಣಲೆ ಕಾಯಾಗಲು. ಅಳಿಲೇಶ್ವರ. ದಿವ್ಯಲಿಂಗೇಶ್ವರ ಎಂದು ಕರೆದದ್ದು, ಅಲ್ಲಿಯೇ ಒಂದು ಹಳ್ಳಿಯನ್ನು ಕಟ್ಟಿಸಿ ಅದಕ್ಕೆ 'ಹರದನಹಳ್ಳಿ' ಎಂದು ಹೆಸರಿಟ್ಟದ್ದು, ಅಲ್ಲಿ ಒಬ್ಬ ಜಂಗಮದೇವರನ್ನು ಕರೆತಂದು ಮಠವನ್ನು ಕಟ್ಟಿಸಿದ್ದನ್ನು ಹೇಳಿ ಗೋಸಲ ಚನ್ನಬಸವೇಶ್ವರರ ವಿಷಯವನ್ನು ಹೇಳುತ್ತಾನೆ :

ಶ್ರೀ ಗುರುಗೋಸಲೇಶ್ವರಕರಕಮಲಸಂಜಾತ, ಶಾಂತವೀರಾಗಮವಂತ, ಷಟ್ಸ್ಥಲಕಾರ್ಯಕಾರಣಂ, ಮಂಗಲ ಲಿಂಗಸಂಗಶುಭಗಂ, ಕರುಣಾಕರ, ಕಾಲಸಂಹರನೆನಿಸಿದ ಚನ್ನಬಸವೇಶ್ವರನು ಶಿವಾನುಭವಸುಖದಿಂದಿರುತ್ತಿದ್ದು ಒಂದು ದಿನ ಓರ್ವ ಶಿಷ್ಯನಂ ಮಹೇಶ್ವರನಂ ಪಡೆವೆನೆಂದು ಮನದಲ್ಲಿ, ಪರಮೇಶ್ವರಂ ಷಣ್ಮುಖನಂ ಪಡೆಯವೇಳ್ಕೆಂದು ನೆನೆವಂತೆ, ನೆನೆವುತಿರ್ದಂ. ಆ ಸಂದರ್ಭದಲ್ಲಿ ನಿರಹಂಕಾರ ಯತೀಶಂ ಮಾಳ್ಪ ತಪಕ್ಕಂ ಮೆಚ್ಚುತ ಕಾಮಾರಿ ತಾಂ ವಶದಿಂದಲ್ಲಮನಾಗಿ ಶಿಶುರೂಪದಿಂದ ಬಂದು

ಗುರುಚರಣಾಂಬುಜಕ್ಕೆ ತಲೆವಾಗುತ ರಕ್ಷಿಸುಮೆನ್ನನೆಬುತಂ
ಕರಕಮಲಂಗಳಂ ಮುಗಿದು ನಿಂದಿಹ ಬಾಲನ ನೋಡುತಾಗಳುಂ
ಹರುಷವ ತಾಳಿ ಚನ್ನಬಸವೇಶ್ವರನಾತನ ಭಕ್ತಿಯುಕ್ತಿಗಂ
ಕರುಣಿಪೆನೆಂದು ತಾಂ ನುಡಿದ ಸಂತಸದಿಂ ಯತಿಸಾರ್ವಭೌಮಂ ॥ ೨–೧೭ ॥

ಇಂತು ಪರಮೇಶ್ವರನಂ ಧ್ಯಾನಿಸುವ ಚನ್ನಬಸವೇಶ್ವರನ ಹೃತ್ಕಮಲಕರ್ಣಿಕಾವಾಸದಲ್ಲಿ ಪ್ರಜ್ವಲಿಸುತಿರ್ಪ ನಿರ್ಮಲ ವಸ್ತು ತಾನೆ ಬಹಿಷ್ಕರಿಸಿ ಶಿಶುರೂಪಿಂ ಶಿಷ್ಯನಪ್ಪೆಂದು ಚನ್ನಬಸವೇಶ್ವರನನೆ ಗುರುವಂ ಮಾಡಿ. ಆ ಗುರು-ಶಿಷ್ಯರೆಂಬುಭಯವು ತಾನೆಯಾಗಿ ಭೇದವಳಿದು, ಪೂಜ್ಯಪೂಜಕತ್ವವ ನಟಿಸವೇಳ್ಕೆಂದು ನಿರಾಭಾರವೀರಶೈವದೀಕ್ಷೆಯಂ ಕೊಡುವ ಶ್ರೀಗುರುವಿನ ಪದಕಮಲಕ್ಕೆರಗಿ ಕರಕಮಲಮುಕುಳಿತನಾಗಿರ್ಪ ಬಾಲಕನಂ ಶಿಷ್ಯನಂ ಮಾಳ್ಪೆನೆಂದು ಚನ್ನಬಸವೇಶ್ವರಂ

....ಮಂತ್ರವಿಧಾನದೊಡನೆ....ಶಿಷ್ಯನಂ ಸ್ವೀಕರಿಸಿ....ಸಮುಗದ್ದುಗೆಯೊಳ್ ಮೂರ್ತಿಗೊಳಿಸಿ, ಶುದ್ಧಸಿದ್ಧಪ್ರಸಾದವ ವಾನತ್ರಯವು ನೀನೆಯೆಂದು ಸೂಚಿಸುವಂತೆ ಸಿದ್ಧಲಿಂಗನೆಂಬ ಪೆಸರಿಂ ಕರೆದು....ಚೆನ್ನಬಸವೇಶ್ವರಂ ತನ್ನ ಹಸ್ತ ಸರಸಿಜಸಂಜಾತನಾದ ನಿರ್ಮಳ ಶಿಶುವಿಂಗೆ ಪರಮಶಾಂತಿಯೆಂಬುದಕದಿಂ ಮಜ್ಜನಕೆರೆದು, ಚಿದ್ಭಸಿತಮಂ ಪಣೆಗಿಟ್ಟು ಏಕೋಭಾವಮೆಂಬ ಏಕಮುಖರುದ್ರಾಕ್ಷಿಯಂ ಕೊರಲೊಳ್ಕಟ್ಟಿ ಶಿವತತ್ವವನರಿವರಿವಿನ ಲಿಂಗಮಂ ಕಟ್ಟಿ ಪರಮ ಜ್ಞಾನವೆಂಬ ಬಾಯಿವೆಣ್ಣೆಯನಿಕ್ಕಿ ದ್ವೈತಾದ್ವೈತಾಗಮಂಗಳೆಂಬ ಜನರ ದೃಷ್ಟಿ ನಡೆದಂತೆ ಶಿವಾದ್ವೈತವೆಂಬ ತಿಲಕವ ನಿಟ್ಟು ಸದ್ಭಕ್ತಿಯೆಂಬ ಮೊಲೆವಾಲಂ ಕೊಟ್ಟು ಮಹಾಜ್ಞಾನವೆಂಬ ತೊಟ್ಟಿಲೊಳ್ಮಲಗಿಸಿ ಚಿನ್ನಾದವೆಂಬ ಜೋಗು ಳಿಯಂ ಪಾಡಿ ಪರಬ್ರಹ್ಮದ ಶಿಶುವಂ ಸಲಹುವಂತೆ ಸಲಹುತಿರ್ದಂ . . . ಈ ಶಿಶುವಿಂಗೆ ನವವಿಧ ಭಕ್ತಿಗಳ್ ಬಲಿದು ನವವರ್ಷಂಗಳಿಗೆ ಮತ್ತಂ ವೇದಶಾಸ್ತ್ರಾಗಮೋಪನಿಷತ್ಪುರಾಣಂಗಳೆಲ್ಲಂ ಜಿಹ್ವಾಗ್ರದೊಳ್ ನೆಲೆಸಿರುತ್ತಂ ಸಿದ್ಧೇಶ್ವರಂ ಬಿರುತಿರಲು ಆತನ ಗುರುಭಕ್ತಿ ದಿನದಿಂದ ದಿನಕ್ಕೆ ಹುಣ್ಣಿಮೆಯ ಚಂದ್ರನಂತೆ ವರ್ಧಿಸಿತು. ಗುರುಭಕ್ತ್ಯೋದ್ದಾಮ ನಾದ ಸಿದ್ಧಲಿಂಗನು.

ಗುರು ನಿಂದ ನೆಳಲ ಮೆಟ್ಟಂ
ಗುರುಪಂಙ್ತಿಯೊಳಿರನು ಪೋಪ ಪಥದೊಳ್ಪೋಗಂ
ಗುರುವಿನೆದಿರೋರೆಯುಪ್ಪಂ
ಗುರುಭಕ್ತಿಯದೆಂತು ಸಿದ್ಧಲಿಂಗನೊಳಿಹುದೋ ॥ ೧–೨೭ ॥

ಎಂದು ಕವಿ ಸಿದ್ಧಲಿಂಗನ ಗುರುಭಕ್ತಿಯದೆಂತು ಎಂದು ತಾನೆ ಅಚ್ಚರಿಪಡುತ್ತಾನೆ. ಶಿವಯೋಗಿಯ ದೀಕ್ಷೆ. ಬಾಲ್ಯ, ಗುರುಭಕ್ತಿ ಗೋಚರಿಸುವುದಿನ್ನೆಂತು !

ಇಂತು ಗುರುವಿನಲ್ಲಿ ವಿಶ್ವಾಸವುಳ್ಳ ಸಿದ್ಧಲಿಂಗೇಶ್ವರ ಗುರುಪಾದಪೂಜೆಗೆ ಕುಸುಮಮಂ ತರವೇಳ್ಕೆಂದು :

ಕುಕ್ಕುಟನಾದಕಿಂದ ಮೊದಲೆದ್ದು ವಿಭೂತಿಯ ಭಾಳಲೇಖೆಯೊಳ್
ಜೋಕೆಯೊಳಿಟ್ಟುಕೊಂಡು ಗುರುಪಾದಕೆ ವಂದಿಸಿ ಲಿಂಗಪೂಜೆಯಂ
ಚಕ್ಕನೆ ಮಾಡಿ ತಾಂ ನಡೆಯೆ ಬೇಗದಿ ಪೂವಿನ ಸೆಜ್ಜೆಯನ್ನು ಆ
ಲೋಕಿಸುತ್ತಂತದಂ ಪಿಡಿದು ಪೋದನು ಹೂವಿನ ವಾಟಿಯೊತ್ತಿಗಂ ॥ ೧–೨೮ ॥

ಬೇಗದಿ ಪೋಗವೇಳ್ಕು ಗುರುಪೂಜೆಗೆ ಪೂಗಳುಮಿಲ್ಲವೆಂಬುತುಂ
ಆಗಲೆ ಕೋಳಿಕೂಗುತಿವೆ ಶಂಖನಾದವು ಪೊಣ್ಮುತಿರ್ದುದೀ
ಗೀಗಲು ತಾರಕಾಳಿಗಳ ಕಾಂತಿಯಕಾಂತಿಗಳಾಗಿಲಾಗಿನಿಂ
ಪೋಗುತಲಿಕ್ಕುಮೆಂದು ಗಗನಾಂಗಣಮಂ ನೆರೆನೋಡುತೆಯ್ದಿದಂ ॥ ೨೯ ॥

ಪೂಗಳತೋಂಟಕಾರು ಬಹರೋ ಬರಲಿಲ್ಲವೆಯೋ ಪ್ರಭಾತವಾ
ಯ್ತೋ ಗುರುಪಾದಪೂಜೆಯನು ಮಾಡುವ ವೇಳೆಗೆ ಪೋಗಲಾರೆನೋ
ಪೂಗಳರಳ್ದವೊ ಭ್ರಮರ ಮುತ್ತಿದವೊ ಪುಳು ತಿಂಬುತಿರ್ದವೋ
ಆಗಲೆ ಯೇಳದಾದೆನೆನುತುಂ ವರಪೂವಿನ ವಾಟಿಗೆಯ್ದಿದಂ ॥ ೩೦ ॥

ಸಿದ್ಧಲಿಂಗನು ಪ್ರವೇಶಿಸಿದ ಪುಷ್ಪವಾಟಿಯ ವರ್ಣನೆ :

ಶಿವನಲ್ಲದನ್ಯದೇವತಾಸಂಗಕ್ಕೆಳಸದ ಮನವೆಮ್ಮಲ್ಲಿದೆ ಹಾದರಿಯೆಂದನ್ಯಾಯದಿಂ ನುಡಿವರೆಮ್ಮನೆಂದು ದೈನ್ಯದಿಂ ಮಲೇಶಂಗೆ ಬಿನ್ನೈಸುವಂತರೆವಿರಿದು ದೆಸೆದೆಸೆಗೆ ಕಂಪಂ ಬೀರುವ ಕುಸುಮಂಗಳಿಂದೊಪ್ಪಂಬೆತ್ತ ಪಾದರಿ ವೃಕ್ಷಪಂಕ್ತಿ ಗಳಿಂದಂ. ಮತ್ತಂ ಕೃಷ್ಣದೇವಂ ಸುರಪನೊಳ್ಕಾದಿ ಬಲ್ಪಿಂದೆಮ್ಮ ಸೀರೆವಿಡಿದು ತಂದು ತನ್ನ ಪಟ್ಟದರಾಣಿ ರುಕು ಮಿಣಿಯ ಬಾಗು ಮುಂಗಡೆ ಕೀಳಲಲ್ಲಿ ಕಾದಿರಿಸಿಕೊಂಡಿದ್ದಂ ಕೆಲವು ದಿನದಮೇಲೆ ಮೃತವನೆಯ್ದಿದಂ ಆತನ ಬಾಗಿಲ ಕಾದ ದೋಷಂ ಪೋಗವೇಳ್ಕೆಂದೀಪುರದ ಪುಷ್ಪವಾಟಿಗಂ ಬಂದು ಪುಟ್ಟಿ ಕುಸುಮಂಗಳಾಗಿರ್ಪವುಂ ಯೆಮ್ಮಲ್ಲಿರ್ದ ದೋಷಂಗಳಂ ಪರಿಹರಿಸಲೋಸ್ಕರಂ ಯೆಮ್ಮಲ್ಲಿರ್ದಲರಂ ತಿರಿದು ಕರೆಗೊರಲಂಗೆ ಸಮರ್ಪಿಸಿರಯ್ಯಾ ಎಂದು ಬಿನ್ನಹಂ ಮಾಡುವಂತರಳ್ದಲರಿಂ ರಾಜಿಪ ಪಾರಿಜಾತದ್ರುಮರಾಜಿಗಳಿಂದಂ. ಯನ್ನಲರಂ ಹರಂಗರ್ಪಿಸಿದ ಭಕ್ತರ ಶತ್ರುಗಳ ಸಿರಿವುದಕ್ಕೆ ನಾಂ ಸುರಗಿಯೆಂಬೊಲರೆವಿರಿದ ಕುಸುಮಂಗಳಿಂ ಚೆಲ್ವುವೆತ್ತ ಸುರಗಿ ವೃಕ್ಷಯೂತಂಗಳಿಂದಂ. ಗಿರಿಕರ್ಣಿಕೆ ಯಾಗಿಯುಂ ಪುರಹರನನಾಲಿಂಗಿಸದೆ ಯನ್ನನಾಲಿಂಗಿಸಿ ಪ್ರಿಷ್ಟಿತೆಯಾಗಿರ್ದ ಪಳಿವಳಿದು ಸಹಜಗುಣಮೆಯೆಂದು ತನ್ನ ನಡರ್ದಲರಾಗಿರ್ಪ ಗಿರಿಕರ್ಣಿಕಾಲತೆಯಂ ಹಳಿದು ನುಡಿವಂತರೆವಿರಿದ ಕುಸುಮಂಗಳಿಂ ರಾಜಿಸುವ ಕುರವಕದ್ರುಮರಾಜಿ

ಗಳಿಂದಂ, ಮತ್ತಂ ಕಾಕ್ಷಾಮೃಗಂ ಶಿವಂಗೆ ತನ್ನಂಗಮಂ ಪುಷ್ಪವಾಗಿ ಸಮರ್ಪಿಸಲೆಂದು ಬಂದೀ ಕುಸುಮದೋಂಟದೊಳ್ಜನಿಸಿ ಮೊಲ್ಲೆಯೆಂಬ ಪೆಸರಿಂ ಲತೆಯಾಗಿ ಯೆನ್ನನಾಲಂಗಿಸಿ ಪುಷ್ಪಿತೆ ಶಿವಂಗೆ ಸಮನೆಂದು ದೈನ್ಯದಿಂ ಪಲ್ಗಿರಿಯುತಿರ್ಪ ಕಸ್ತೂರಿಮೊಲ್ಲೆಯ ಕುಸುಮಂಗಳಂ ಶಿವಂಗೆ ಸಮರ್ಪಿಸುವುದಕ್ಕೆ ಸಿದ್ಧಲಿಂಗದೇವಾ ಬನ್ನಿಯೆಂದು ಬಾಯಿವಿಟ್ಟು ಕರೆವಂತರೆವಿರಿದಲರಿಂದೊಪ್ಪಂಬೆತ್ತ ಕಾಂಚಿವಾಳದ್ರುಮ ಸಂಚಯದಿಂ. ಮತ್ತಂ ಕೊಳದೊಳ್ಜನಿಸಿಯಲ್ಲಿಯಿರುತಿರ್ಪ ತಾವರೆ ಎನ್ನ ಕಿರಿಯ ಮಗಂ ಜಲದಲಾದರುಂ ಸ್ಥಲದಲಾದರುಂ ಪುಟ್ಟಿಯಲ್ಲಿ ಯಿರುತಿರ್ಪ ಸ್ಥಲದಾವರೆ ಜಲದಾವರೆಗಿಂ ಹಿರಿಯ ಮಗಂ ಕಿಂಚಿತುನ್ನತವಾಗಿ ಬೆಳೆಯ ಸುವರ್ಣಚ್ಛಾಯಮಪ್ಪ ಕುಸುಮಂಗಳಿಂದಲಂಕೃತಮಾದ ಚಿನ್ನದಾವರೆಯಲರ್ನಿನ್ನ ಹಿರಿಯ ಮಗಂ ಯಿಾ ಮೂವರ್ಮಕ್ಕಳಲ್ಲದೆ ವಿಶೇಷವ....ವೃದ್ಧತ್ವಮೆನಗೆ ಪ್ರಾಯಂ ಪೋಗಿ ಮುಪ್ಪಾಗಿ ಮೈ ಸುಕ್ಕಿದ್ದು ತಲೆಪ್ಪೊಣಗಿ ಬಿಳಿದಾಗಿ ಪುಷ್ಪಿತತ್ವವರತು ಶಿರಬಾಗಿಯುಮೆನ್ನನಾಲಿಂಗಿಸಿ ಕೊಂಡು ಬಿಡದೆ ಕಾಡುತಿರ್ಪ ಯಿಾ ಅದ್ರುಗಂಜಿಯುಂ. ಕಡೆಗೆಳೆದು ಯೆನ್ನ ಸಂತಸದೊಳಿರಿಸಯ್ಯ ಎಂದು ದೈನ್ಯದಿಂದೆ ದೆಸೆದೆಸೆಗೆ ಬಾಯ್ವಿಡುವಂತಿರ್ದಲರ ಸಮುದಾಯಂಗಳಿಂದೊಪ್ಪುವ ಬೆಟ್ಟದಾವರೆಗಳ ಗೊಂದಣದಿಂದಲುಂ, ಮತ್ತಂ ಮರುಗಾದೇವಿಯೆಂಬಾಕೆ ಹರಂಗೆ ತನ್ನನರ್ಪಿಸಲೋಸ್ಕರಂ ಪುಷ್ಪವಾಟಿಯೊಳ್ಪುಟ್ಟಿ ಮರುಗವಾಗಿರ್ದಪಳೋ ಯೆಂಬಂತಿರ್ಪ ಕಸ್ತೂರಿ ಮರುಗ ಮೊದಲಾದ ನಾನಾ ತೆರದ ಮರುಗಂಗಳಿಂ. ಬ್ರಹ್ಮದೇವಂ ಪರಮೇಶ್ವರನಂ ಪೂಜಿಸಲೆಂದು ತನ್ನ ಜಡೆಗಳಂ ಪುಟ್ಟಿಸಿದನೋ ಯೆಂಬಂತೆ ಕಂಪಿಡಿದು ಸೊಗಸುವಡೆದಿರ್ದ ಬ್ರಹ್ಮಜಟ್ಟಿಗಳಿಂದಂ. ಮತ್ತಂ ಪಚ್ಚೆಯೆಂಬಾಯಕಂ ತನ್ನಂಗವಂಕೆಯುಂ ಹರಂಗರ್ಪಿಸಲೆಂದು ಪತ್ರೆಯಾಗಿ ಪುಟ್ಟಿರ್ದಪಳೊ ಯೆಂಬಂತೆ ಸುಗಂಧಂ ತೀ[ವೆಭಾ]ಸುರಮಾದ ಪಚ್ಚೆಯ ಪತ್ರೆಯ ಗಿಡುಗಳ ತಿಂತಿಣಿಯಿಂದಂ. ಮತ್ತಂ ವೀರಸಂಗವ್ವೆಯೆಂಬಾಯಕಂ ಶಿವಂಗೆ ಮಡಿವಾಳಮಂ ಸಮರ್ಪಿಸುವ ನೇಮದಿಂದಿರ್ದೊಂದು ದಿನಂ ದೊರಕದಿರೆ ತನ್ನ ಶಿರೋರುಹಮಂ ಕಿತ್ತು ಸಮರ್ಪಿಸಿ ತನ್ನ ನೇಮಂ ಮುಗಿದ ಬಳಿಕ್ಕೆ ಮಿಕ್ಕ ಶಿರೋರುಹಂಗಳಿಂ ಕುಸುಮವಾಟಿಯೊಳ್ಪುಟ್ಟೆಂದು ಕಳುಹಲ್ಬಂದು ತಾವಾಗಿ ಬೇರ್ಗಳಿಳಿದು ಸೊಗಸಿಂ ಪರಿಮಳವಡೆದು ರಾಜಿಸುವಂತಿರ್ದ ಮಡಿವಾಳಜಾಲಂ[ಗಳಿಂ]....ಬಾಯ ತಂತನ್ನಾಂಗವಂ ಶಿವಂಗೆ ಸಮರ್ಪಿಸುವುದಕ್ಕೆ ಯಿದು ಕುರುಹೆಂದು ತೋರ್ಪಂತೆ ಕೋಮಲದಲಮಾದ ಮಂಚಿಪತ್ರೆಗಳ ಸಂಚಯಂಗಳಿಂ, ಬಿಲ್ವಪತ್ರೆಯೊಂದರಿಯದರ್ಪಿಸಿದ ಶಬರಂಗೆ ಗಣೇಶಪದವಾಯಿತ್ತು ಅರಿದರ್ಪಿಸಿದಾತಂಗೆಂತಪ್ಪ ಪದವಹುದೆಂಬುದ ಭಕ್ತರ್ನೀವೆ ವಿಚಾರಿಸಿಕೊಳ್ಳಿಯೆಂಬಂತರೆವಿರಿದ ಪುಷ್ಪಂಗಳಿಂದಲುಂ, ಕೋಮಲದಲಂಗಳಿಂದೊಪ್ಪವೆತ್ತ ಬಿಲ್ವ[ಪತ್ರೆಯ] ರಾಜಿಗಳಿಂ. ಮತ್ತಂ ನೀಲೋತ್ಪಲಂ ಚೆಂಗಣಿಗಿಲು ಮುಂತಾದ ಪ್ರಸೂನಂಗಳಂ ತೊಳಸಿ ದೂರ್ವಾಂಕುರ ಮುಂತಾದ ಪತ್ರಂಗಳಂ ಸಹಸ್ರಂಗಳಿಂದರ್ಪಿಸವೇಳ್ಕು ಭಕ್ತರೆಂಬತರೆವಿರಿದ ಕುಸುಮಂಗಳಿಂದ ರಾಜಿಪ ದಾಸಣಂಗಳ ನಿವಹಂಗಳಿಂದ. ಮತ್ತಂ ಬ್ರಹ್ಮವಿಷ್ಣುಗಳ ವಾದದ ಕಡದಿಂ ತಪ್ಪಿ ನುಡಿದುದರಿಂ ನಿಮ್ಮ ಸಭಾಮಧ್ಯದೊಳೆನ್ನನಾರಲಿ ಸದಾ ಕಲ್ಯಾಣದ ಸಂಗನ ಬಸವನಾತಪ್ಪಂ....ವಂ ತಳಿದೆನ್ನಂಗವಂ ಪವಿತ್ರಂ ಮಾಡಿ ಹರಂಗರ್ಪಿಸಿ ರಕ್ಷಿಸಿದ ನೀನೆನ್ನಂ ಸಭಾಮಧ್ಯಕ್ಕೆ ಕರೆಸದ ಪರಿಯಾವುದೆಂದು ಪ್ರಸೂನಜಾತಿಗಳೊಡನೆ ಮಾತನಾಡುವಂತರೆವಿರಿದಲರಿಂ ಸಿಂಗರಂಬೆತ್ತ ಕೇತಕಿವೃಕ್ಷಂಗಳ್ಕುಸುಮವಾಟಿಯಂ ಬಳಸಿಯೊಪ್ಪುತ್ತಿದ್ದ ಪೂವಾಟಿಯಲಿ ॥ ೨೩ ॥ ಪುಷ್ಪ ಜಾತ್ರೆಯ ಸ್ಪರ್ಧೆಯನ್ನು ಈಕ್ಷಿಸಿದ ಸಿದ್ಧಲಿಂಗ.

ಅಳಿಗಾಳಿ ಪುಳುಗಳೆಲ್ಲಂ । ಚಳಿಮಳೆ ಬಿಸಿಲುಂ ಧೂಳುಗಳೊಂದಿದರಲ್ಗಳ
ನುಳಿದುತ್ಕಳಕಳಿಸುವೆಸ । ಳ್ಗಳಲರಿಪ ಗೊಂಚಲುಗಳಂ ತಿರಿದಂ ಮುದದಿಂ ॥ ೨೪ ॥

ಕರುಣಿ ಗುಣವಂತ ನಿರ್ಮಳ । ಪರಬ್ರಹ್ಮಜ್ಞಾನಿ ಸಿದ್ಧಲಿಂಗಯತೀಶಂ ॥
ಗುರುವಿನ ಜಡೆಯೆಡೆಗೆಂದುಂ । ಪರುಷದೊಳಿರವಂತಿ ಪೂಗಳಂ ತಾಂ ತಿರಿದಂ ॥ ೨೫ ॥

ಇಂತು ಪುಷ್ಪಗಳನ್ನು ತಿರಿದು ತಂದು ಗುರುವಿನಡಿಯಲ್ಲಿ ಮಾಲೆಗಳನ್ನು ಕಟ್ಟಿ ಗುರುಪೂಜೆಗೆ ಅಣಿಮಾಡುತ್ತ ಗುರುಸೇವೆಯಲ್ಲಿ ತೊಡಗಿರುತ್ತಿದ್ದನು : ಅಸಂಖ್ಯಾತ ಶರಣರಂತೆ ಅಷ್ಟವಿಧಪೂಜೆಯನ್ನು ಮಾಡುತ್ತಿದ್ದನು :

ಘನಗುರುಭಕ್ತಕಾಮಧುಗ! ಜಂಗಮಭಕ್ತಿಚಕೋರಚಂದ್ರಮಂ
ಘನತರಲಿಂಗಭಕ್ತಿಸರಸೀರುಹ ಸೂರ ಪಿನಾಕಪಾಣಿ ಭ
ಕ್ತನಿವಹ ಪಾಪ ಗೋದುಮಗರಟ್ಟಿ ಮನೋರಮ ಲಿಂಗಸಂಗ ಶಿ
ವನನಘ ಸಿದ್ಧಲಿಂಗ ವಿನಯಾನ್ವಿತನಿದ್ದನು ಭಕ್ತಿಭಾವದಿಂ ॥ ೨೫ ॥

ತೋಂಟದ ಸಿದ್ಧಲಿಂಗಶಿವಯೋಗಿಯನ್ನು ಕುರಿತು ಅನೇಕ ಗ್ರಂಥಗಳು ಬಂದಿವೆ. ಆದರೆ ಆ ಯಾವ ಗ್ರಂಥದಲ್ಲಿಯೂ ಬಾಲಕ ಸಿದ್ಧಲಿಂಗನ ಗುರುಪೂಜಾವಿಧಾನವನ್ನು ವರ್ಣಿಸಿಲ್ಲ. ಷಟ್ಸ್ಥಲ ವಲ್ಲಭನಾದ ಸಿದ್ಧಲಿಂಗಯತಿಯ ಈ ಗುರು ಪೂಜೆ ಆತನ ಮುಂದಿನ ಸಿದ್ಧಿಯ ಸಂಕೇತವಲ್ಲವೆ ? ಇಲ್ಲಿ ಮತ್ತೊಮ್ಮೆ ಹರಿಹರ ಹುಟ್ಟಿಬಂದಿದ್ದಾನೆ, ಬಸವಣ್ಣನಿಂದ ಸಂಗಮನಾಥನ ಪೂಜೆ ಮಾಡಿಸುತ್ತಿದ್ದಾನೆ ಎಂದು ಅನ್ನಿಸುವುದಿಲ್ಲವೆ ? ಈ ಕಾವ್ಯದಲ್ಲಿ ಈಗ ದೊರೆತಿರುವುದು ಕೇವಲ ಒಂಬತ್ತು ಆಶ್ವಾಸಗಳು ಮಾತ್ರ, ಉಳಿದ ಭಾಗ ಸಿಕ್ಕಿಲ್ಲ. ದೊರೆತಿರುವ ಭಾಗವು ಆತನ ಪವಾಡಗಳಿಗೆ ಹೆಚ್ಚು ಪ್ರಾಶಸ್ತ್ಯಕೊಡದೆ ಆತನ ಅಂತರಂಗದ ಆಧ್ಯಾತ್ಮಿಕ ಸಿದ್ಧಿಯ ಹಂತಹಂತವಾಗಿ ಮೇಲೇರುವ ವಿಧಾನವನ್ನು ಚಿತ್ರಿಸಿರುವುದಲ್ಲದೆ. ಆತನ ಪ್ರೌಢವಾದ ಷಟ್ಸ್ಥಲ ಸಿದ್ಧಾಂತದ ಪ್ರಚಾರಪ್ರಣಾಳಿಕೆಯನ್ನು ಸುಂದರವಾಗಿ ಪ್ರತಿಬಿಂಬಿಸುತ್ತದೆ. ಲೋಕಕಲ್ಯಾಣಾರ್ಥವಾಗಿ. ಷಟ್ಸ್ಥಲದ ಪ್ರಸಾರಕ್ಕಾಗಿ ಹುಟ್ಟಿರುವ ಈ ಕಾರಣಿಕಪುರುಷ ಈ ಸಣ್ಣ ಹಳ್ಳಿಯಲ್ಲಿ ಒಂದೇ ಸ್ಥಳದಲ್ಲಿ ಇದ್ದು ನಲುಗಬಾರದು, ನಶಿಸಬಾರದು ಎಂಬುದನ್ನು ಅರಿತ ಗುರುಗೋಸಲಚನ್ನಬಸವೇಶ್ವರನು,

ಶಾಂತನೆ ಬಾ ಗುಣಾನ್ವಿತನೆ ಬಾ ಗುರುಭಕ್ತನಿಧಾನ ಬಾ ಸದಾ
ಅಂತಕವೈರಿ ಬಾ ಕರುಣಿ ಬಾ ವರಚಿತ್ಸತಿಕಾಂತ ಬಾರೊ ಕಾ
ಮಾಂತಕ ಬಾರೊ ಯೆನ್ನ ಶಿವ ಬಾ ಗುರು ಬಾ ಚರಲಿಂಗ ಬಾರೊ ವೇ
ದಾಂತನೆ ಬಾರೊ ಯೆಂದು ಗುರು ಕರೆದು ಬಣ್ಣಿಸಿ ಸಿದ್ಧಲಿಂಗನಂ ॥ ೫೮ ॥

ಚರಸಂತಾನವೆ (ಬಾ) ಸುಧಾನಿಧಿಯೆ ಬಾದ್ವೈತೇ (ಭ) ಪಂಚಾಸ್ಯ ಬಾ
ಹರಭಕ್ತ್ಯಾಬ್ಧಿ ಸುಧಾಮಯೂಖನಿಧಿ ಬಾರೆನ್ನಾಯುಸಂಜೀವ ಬಾ
ಧರೆಯಂ ಪಾಲಿಪ ದೇವ ಬಾ ಸುಗುಣ ಬಾ ಸಿದ್ಧೇಶ ಬಾರೆಂಬುತಂ
ಕರೆದಂ ಶ್ರೀಗುರುಲಿಂಗಮೂರ್ತಿ ಹರ್ಷಾನಂದಾಶ್ರುವಿಂದುಕ್ಕುತಂ ॥ ೫೯ ॥

ಕರೆದ ಕೂಡಲೆ ತನ್ನ ಬಳ್ತಿಂಗೆ ಬಂದ ಸುತನನ್ನು ಕರುಣಾಸ್ಯದಿಂದ ನೋಡಿ. ಮಗನೆ. ಬಸವನು ಪೋದಂದೀಚೆಗೆ ಶಿವ ಸಮಯ ಹಾಳಾಗಿದೆ : ಭಕ್ತಿ ಮಾಸಿದೆ : ಈಶ್ವರ ಭಜನೆ ನಿಂತಿದೆ : ಆದುದರಿಂದ ಈ ಭೂಮಿಯಲ್ಲಿ ಶಿವಭಕ್ತಿಯನುದ್ಧರಿಸಲು ನೀನಲ್ಲದೆ ಬೇರೆ ಸಮರ್ಥರಿಲ್ಲ, ಪೋಗೆಂದು ನಯದಿಂದ ಹೇಳಿದನು.

ದೇಶಾಂತರ ಸೆವದಿಂದಂ । ದೇಶಂಗಳೊಳಿರ್ಪ ಜನರ ಕರ್ಮವ ಪರಿದಂ ॥
ಈಶಾನನ ಭಕ್ತಿಯನುಂ । ವಿಶ್ವಂಭರದೊಳ್ ಸ್ಥಾಪಿಪುದೆಂದಂ ಮುನಿಪಂ ॥ ೬೦ ॥

ಗುರುವಾಣಿಯನ್ನು ಕೇಳಿದ ಸಿದ್ಧಲಿಂಗೇಶ್ವರ ಷಟ್ಸ್ಥಲವನ್ನುಂಟುಮಾಡಲೆಂದು ಶಿವನಿಂ ಕಳುಹಿಸಿಕೊಂಬ ರೇಣುಕ ಗಣೇಶ್ವರನಂತೆ. ಬಸವಾದಿ ಪ್ರಮಥರಿಂ ಬೋಧಿಸಲೆಂದು ಹರನಿಂ ಕಳುಹಿಸಿಕೊಂಬ ಅಲ್ಲಮಪ್ರಭುವಿನಂತೆ. ಗೌತಮನ ಶಾಪಶಕ್ತಿ ವಿಷ್ಣುವಿಂ ಸೋಕಿ ಶಿವಭಕ್ತಿಯಂತಿರ್ದ ಮುನಿಗಳಂ ಬೋಧಿಸಲೆಂದು ಪರಮೇಶ್ವರನಿಂ ಕಳುಹಿಸಿಕೊಂಬ ನಂದೀಶ್ವರನಂತೆ, ಶ್ರೀಗುರುವಿಗಂ ನಮಸ್ಕಾರಂ ಮಾಡಿ ಕಳುಹಿಸಿಕೊಂಡು ದೇಶಾಂತರಕ್ಕೆ ಮನಂದಂದು ಸಮಸ್ತ ಜಂಗಮದೇವರ್ಸಹಂ ಶಿಷ್ಯರ್ಕಳಂ ಶಿವಸೋದರನೇಕರ್ಸಹಂ ಪೊರಮಟ್ಟಂ.

ಹೀಗೆ ಹೊರಟ ಸಿದ್ಧಲಿಂಗನು ದೇಶದಲ್ಲೆಲ್ಲ ಸಂಚರಿಸಿ ಪರಸಮಯಿಗಳನ್ನು ವಾದದಲ್ಲಿ ಗೆದ್ದು. ಶಿವಭಕ್ತಿಯನ್ನು ಸ್ಥಾಪಿಸಿ. ದೇಶೋದ್ಧಾರ ಮಾಡಿದನು. ದೇಶಸಂಚಾರಮಾಡುವಾಗ ಶಿಷ್ಯರನ್ನು ಬೇರೆ ಬೇರೆ ದಿಕ್ಕುಗಳಲ್ಲಿ ಕಳುಹಿಸಿ ತಾನು ಚರಪತಿತನವನ್ನು ಬಿಟ್ಟು ಕೆಲಕಾಲ ಅತಿಥಿ ವೇಷದಲ್ಲಿದ್ದು ಗುರುಲಿಂಗ ಜಂಗಮದ ಮಹಾತ್ಮೆಯನ್ನು ಬೋಧಿಸಿದನು. ಅನಂತರ ಮತ್ತೆ ದೇಶದಲ್ಲೆಡೆಗಳಲ್ಲಿ ಷಟ್ಸ್ಥಲಾಚರಣೆಯನ್ನು ಮಾಡುತ್ತಿರಿಯೆಂದು ಶಿಷ್ಯರನ್ನು ನೇಮಿಸಿ ಕಳುಹಿಸಿ ತಾನು ಉದಾಸೀನ ವೇಷವನ್ನು ಧರಿಸಿ ಜನತೆಗೆ ಮೋಕ್ಷವನ್ನೀವುತ್ತಿದ್ದನು.

ಸಂಚಾರಮಾಡುವಾಗ ರೋಹಿಣಿಪುರದ ಕುಂಬಳೇಶ್ವರ ದೇವಾಲಯದಲ್ಲಿ ೯ ದಿನಗಳ ಉಪವಾಸವನ್ನು ಆ ಊರಿನ ಗೌಡ–ಗೌಡತಿಯರ ಕನಸಿನಲ್ಲಿ ತಿಳಿಸಿ ತೀರಿಸಿಕೊಳ್ಳುವುದು. ಕೊಂಕಣಕ್ಕೆ ಬಂದು ಭೀಮನು ಪ್ರತಿಷ್ಠಿಸಿದ ಭೀಮೇಶಲಿಂಗದ ಮಸ್ತಕದಿಂದ ಬರುತ್ತಿದ್ದ ಜಲದಿಂದ ತನ್ನ ಲಿಂಗಕ್ಕೆ ಅಭಿಷೇಕ ಮಾಡುವುದನ್ನು ಕಂಡು ಆಗ್ರಹಗೊಂಡ ದ್ವಿಜರಿಗೆ ಬುದ್ಧಿ ಕಲಿಸುವುದು, ಉಳುಮೆಯ ಮಹಾಮನೆಯಲ್ಲಿರ್ಪ ಕಸ್ತೂರಿವರ್ಣದ ಭಸಿತವನ್ನು ನೋಡಿ ಒಂದು ದೇವಾಲಯದಲ್ಲಿರುವಾಗ ಕೃಷ್ಣಮಹಿಮೆಯನ್ನು ಹೊಗಳಿ ಶರಣನನ್ನು ಶತ್ರುವೆಂದು ವಾದಮಾಡಿ ಸೋತ ವೈಷ್ಣವನು ಬಿಟ್ಟ ಭೂತವನ್ನು ಐದು ವರ್ಷದ ಶಿಶುವಾಗಿ ಓಡಿಸುವುದು, ಕೀಳು ಕೊಂಕಣದಲ್ಲಿ ಸೂಚಿಕಾಯಕದ

ವೀರಣಯ್ಯ ಕೈಲಾಸಕ್ಕೆ ಹೋದ ತಾವಿಗೆ ಬಂದು ನೀಲಕಂಠೇಶ್ವರನಿಗೆ ದರ್ಶನವಿತ್ತು ಬಂದು ವೃಕ್ಷದಡಿಯಲ್ಲಿದ್ದಾಗ ಅಲ್ಲಿಯೇ ಇದ್ದ ಜೋಗಿಗಳಿಗೆ ಬುದ್ಧಿ ಕಲಿಸುವುದು. ಜಿನದೇಶದ ಕಾಕುಳದಲ್ಲಿ ಜೈನರನ್ನು ಸೋಲಿಸುವುದು. ಅಲ್ಲಿಂದ ಹೊರಟು ಉಲ್ಲಾಸದ ಗವಿಯಲ್ಲಿರುವಾಗ ಅಭವನು ಬಂದು ಪರಸ್ಪರ ಪ್ರಸಾದ ವಿನಿಯೋಗವಮಾಡಿಕೊಂಡು. 'ಮುಂದೆ ದೇಶಾಂತರವಿಲ್ಲ ಇನ್ನು ಒಂದೆಡೆಯಲ್ಲಿದ್ದುಕೊಂಡು ಉನ್ನತ ಷಟ್ಸ್ಥಲವನರಿ'ಪೆಂದು ಬಯಲಾಗುತ್ತಾನೆ. ಇದನ್ನು ಕೇಳಿದ ಸಿದ್ಧಲಿಂಗ ಅಲ್ಲಿಂದ ಹೊರಟು ಕಗ್ಗೆರೆಯ ಬಳಿಗೆ ಬರುತ್ತಾನೆ.

ಅಲ್ಲಿನ ಮನೋಹರೋದ್ಯಾನವನದಲ್ಲಿ ತಪಸ್ಸಿಗೆ ಕುಳಿತು ಲಬ್ಧವಾದ ಅಣಿಮಾದ್ಯಷ್ಟಸಿದ್ಧಿಗಳು ಯೋಗಸಿದ್ಧಿಗಳು ಶರಣಂಗೆ ಸಲ್ಲವು ಎಂದು ತೃಣೀಕರಿಸಿ ಸಿದ್ಧಲಿಂಗೇಶ್ವರನು 'ಶಿವಯೋಗ'ವನ್ನು ಸಾಧಿಸುತ್ತಿರುವ ಸಮಯದಲ್ಲಿ ಕಗ್ಗೆರೆಯನಿರಿಯಲೆಂದು ಶಬರರ್ಬಪ್ಪುದಂ ಶಿವಚಿತ್ತಂ ಅರಿದು ಅದಂ ಹತ್ತಿರಿರ್ದ ಗೌಡನೊಳುಂ ಭಕ್ತರೊಳಂ ಈ ಗ್ರಾಮದಲ್ಲಿರಬೇಡಿ ಯಿಗಾಗವೆ ಪೋಗಿ ಯೆಂದೆನೆ ಯಾಕ್ಷಣದಲ್ಲಿಯುವರ್ತಮ್ಮ ತಮ್ಮ ಸ್ತ್ರೀಯರಂ ಕರೆಕೊಂಡವಸ್ಯದಿಂ ಪೋದಾಗಲೆ ಶಬರಿರಿಯಲ್ಕಂಡು ಆ ಭಕ್ತರಾಶ್ಚರ್ಯಂ ಬಡುತ್ತಂ. ಕೇತಾರದಲ್ಲಿರ್ದ ರೇವಣಸಿದ್ಧೇಶಂ ಕಲ್ಯಾಣದಲಿರ್ದ ಮಾಯಿದೇವಿಯ ದುಃಖಮನರಿದೆನೆಂಬುದಂ ಸಿದ್ಧೇಶನಿಂ ಪ್ರತ್ಯಕ್ಷಮುಂ ಕಂಡೆವೆಂದು ಕೊಂಡಾಡುತಂ ಪೋಗಲಿತ್ತಲ್ ಆ ಸಿದ್ಧಲಿಂಗೇಶ್ವರನು ಭವಹರನಿಷ್ಟಲಿಂಗವನ್ನು ಜಾಸಿಸುತ್ತ, ಪರಮಜಿತೇಂದ್ರಿಯನಾಗಿ ಯೋಗಮಾರ್ಗದಿಂದ ಘನಮಾಯೆಯನ್ನು ಗೆದ್ದು, ಲಿಂಗಾಂಗದ ಸಂಬಂಧದಿಂದ ಲಿಂಗವು ತಾನಪ್ಪನೆಂಬ ಪದಮುಂಟು. ಅದರಿಂ ಲಿಂಗಧ್ಯಾನಬಲದಿಂದ ಲಿಂಗವು ನಾನಾದೆನೆಂದು ಧ್ಯಾನಿಸುತ್ತಿದ್ದನು. ಶಿವಜ್ಞಾನದಿಂದಷ್ಟಮದ ಮುಂತಾದ ದುರ್ಗುಣಂಗಳಂ ಸುಟ್ಟು ದೇಹಭಾವವಳಿದು ಚಿತ್ತವಂ ಸ್ವಸ್ಥವಂ ಮಾಡಿ ಶಿವನಖಂಡಿತತ್ವವನರಿದುಂ ಮತ್ತಂ ಮುನ್ನ ಶ್ರೀಗುರು ಪ್ರಣವಮಂತ್ರ [ಪ್ರದಾ]ನದಿಂ ಬ್ರಹ್ಮರಂಧ್ರನಾದಚೈತನ್ಯಕಲೆಯಂ ತೆಗೆದು ಕರಸ್ಥಲದೊಳಿರಿಸಿದ ಇಷ್ಟಲಿಂಗಮಂ ಸರ್ವಾಂಗದಲ್ಲಿ ಬೆಳಗಿ ತೋರಿದ ಪ್ರಣವಮಂತ್ರವೆ ಪ್ರಣಮನಾದ ಕಲಾಸ್ವರೂಪನೆಂದರಿದುಂ ಪ್ರಣವೋಽಹಂ ಪ್ರಣವೋಽಹಮೆಂಬ ಜಪದಿಂ ಪ್ರತ್ಯಕ್ಷವಾದ ಪ್ರಣಮನಾದ ಕಲಾಸ್ವರೂಪಮಂ ಭಾವಮನವೃಕ್ಕಿಂದ ಮೂಲಪ್ರಣವಂ ತಿಳಿದು ಧ್ಯಾನಿಸುತಿರ್ಪ ಸಿದ್ಧಲಿಂಗೇಶ್ವರನ ಜ್ಞಾನ ಸರ್ವಾಂಗದೊಳ್ ಬೆಳಗುತ್ತಂ ಮತ್ತಂ ಬ್ರಹ್ಮರಂಧ್ರದ ಸಹಸ್ರದಳ ಕಮಲದಲ್ಲಿಯ ಚಿಜ್ಜ್ಯೋತಿರ್ಲಕ್ಷ್ಯಕ್ಕೂ ನಿಖಿಳತತ್ತ್ವಂಗಳಿಗೆಯೂ ಮೇಲ್ಪೊವಕೆಯಾಗಿ ಬ್ರಹ್ಮರಂಧ್ರದ ಚಿತ್ಕಲೆ ಪರಬ್ರಹ್ಮಾದಿಗಳನೊಳಕೊಂಡು ಶಿವೋಹಂಯೆಂದುಂ ಅಲ್ಲಿಂದಂ ಮೇಲೆ ಪರವೊಂದಿಲ್ಲದುದಂ ಅರಿದು ಶಿವೋಹಂ ಭಾವ ಪರಿವು ತನ್ನ ಶಿವತತ್ವದಲ್ಲಿ ನಿಂದುಂ ಚಲಿಸದೆ ಶಿವಾನಂದ ಸುಖಮಂ ಸುಖಿಸುತ್ತ ಸಿದ್ಧಲಿಂಗೇಶ್ವರಂ ಧ್ಯಾನಯೋಗದೊಳಿರ್ದಂ.

ಇಷ್ಟಪ್ರಾಣಭಾವವೆಂಬ ಲಿಂಗತ್ರಯವಂ ಸ್ಥೂಲಸೂಕ್ಷ್ಮಕಾರಣವೆಂಬ ತನುತ್ರಯದಲ್ಲಿ ತಾಳ್ದು ಮತ್ತಂ ಆಚಾರದಿ ಮಹಾಲಿಂಗಾಂತವಾದಾರು ಲಿಂಗಮಂ ಭಕ್ತಾದ್ಯೈತಾಂತ್ಯವಾದಾರು ಲಿಂಗದಿಂ ತಾಳ್ದುವಿವಲ್ಲ ಮೂಲಕಾರಣವಾದ ಯಿಷ್ಟಲಿಂಗಧ್ಯಾನದ ಚಿತ್ರಕಲೆಯಂ ಪರಿಪೂರ್ಣದಿಂ ಧರಿಸಿರ್ಪ ಧಾರಣಯೋಗದೊಳಿರ್ದ

ಲಿಂಗವ ನುಂಗಿಕೊಂಡದೃಗುವಾ ದೃಗುಮಂ ನೆರೆ ನುಂಗಿಕೊಂಡುದು
ತ್ತುಂಗಮನಂ ಮನಸ್ಸುವನು ನುಂಗಿದುದಾಗಲೆ ಭಾವ ಭಾವಮಂ
ಮಂಗಲಮಾದ ಚಿತ್ಕಲೆಯ ನುಂಗಲು ಮತ್ತದ ನುಂಗೆ ವಸ್ತುವಂ
ಹಿಂಗದೆ ಸಿಕ್ಕಿಸಿದ್ಧಿಪರಕಾಷ್ಠಮದಾದ ಸಮಾಧಿಯೋಗದೊಳ್ ॥ ೪-೬೦ ॥

ನಿಂದು ಅಚಲಯೋಗಸಮಾಧಿ, ಸುಸಮಾಧಿಗಳಲ್ಲಿರ್ದ ಪ್ರಣವಸ್ವರೂಪ ತಾನಾಗಿ, ಬೇರುಂ ಬೇರುಗಳಿಲ್ಲದ। ನೀರಂ ತನ್ನನುವತಾನೆ ಜಾನಿಸಿ ಯುದರೊಳ್ಬೀರುತ ಸಮರಸದಿರವಂ। ಬೇರಾಗದೆಯಿದ್ದನಚಲನದ್ವಯರಥ್ವಂ॥ ೪-೬೩ ॥

ಈ ಸ್ಥಿತಿಯಲ್ಲಿ ಕಗ್ಗೆರೆಯ ವನಾಂತರದಲ್ಲಿ ಸಮಾಧಿಸ್ಥನಾದ ಸಿದ್ಧಲಿಂಗ ಶಿವಯೋಗಿಯ ಶರೀರದ ಸುತ್ತಲೂ ಪುತ್ತು ಕಟ್ಟಿ, ಮೊಲ, ಕಡಜ, ಹಾವು-ಮುಂಗಸಿ, ಹುಲಿ-ಹುಲ್ಲೆ, ಗಜ-ಕಂಠೀರವಗಳೆಲ್ಲ ಒಂದೆಡೆ ಸಮರಸಭಾವದಿಂದ ಇದ್ದವು.

ಇತ್ತ ಕಗ್ಗೆರೆಯ ಗೌಡ ತನ್ನ ಗ್ರಾಮವನ್ನು ಇರಿದ ಶಬರಾಧಿಪನಿಂ ಪ್ರಮಾಣವನ್ನು ಪಡೆದು ಮನೆಗಳನ್ನು ಕಟ್ಟಿಸಿ ಆರುತಿಂಗಳಾಯಿತು. ಇಲ್ಲಿ ಬಂದಿದ್ದು ನಮ್ಮೂರನಿರಿವುದನ್ನು ಸೂಚಿಸಿದ ಸಿದ್ಧಲಿಂಗೇಶ್ವರನೆಲ್ಲಿಗೆ ಪೋದನೋ ಎಂದು ಅವನಿದ್ದ ತಾವಿಗೆ ಬಂದು ಅವನಿರವ ಕಂಡು ಆಶ್ಚರ್ಯಪಟ್ಟು ವಂದಿಸಿ ಸಮೀಪಕ್ಕೆ ಬಂದು ಪುತ್ತನ್ನು ಕೀಳಲು ಪ್ರಯತ್ನಿಸಿದಾತಂಗೆ ತಡೆದು, ಮರಿಗಳು ಬಲಿವನ್ನಕ್ಕ ಆರೆಂಟು ದಿನ ಬಿಟ್ಟು. ನಂತರ ಅವು ಬಲಿತ ಮೇಲೆ

ಮುತ್ತವನೊಡೆದು ಭಕ್ತರು ಮುತ್ತಿದ ಜಡೆಯೊದರನೊವರಿ ಜಂದಂಗೈದರ್. ಅವನ ತಲೆಯಲ್ಲಿದ್ದ ಬಿಲವಂ ಕಂಡು ವಿಸ್ಮಿತರಾಗಿ ಕೊಂಡಾಡಿದರು. ಯತಿಪತಿಯನ್ನು ಕೊಲ್ಲಲು ಬಂದ ಶಬರರಿಗೆ ಸರ್ಪದ ದೆಸೆಯಿಂದ ಬುದ್ಧಿಗಲಿಸಿದರು.

ಅನಂತರ ಶಿವಲಿಂಗನಿಷ್ಠರು, ದುರಿತದೂರರು, ಜಂಗಮತಿಂಥಿಣಿ ಬಂದು ವಂದನಂಗೈದು ಶಿವತತ್ವಾನುಭಾವ ಗೋಷ್ಠಿಯಿಂದಿರ್ಪ ಸಮಯದಲ್ಲಿ ಯಡೆಯೂರು ಗ್ರಾಮದ ಮೃಡಭಕ್ತರು ಬಂದು ಬಿನ್ನಹಮಾಡಿ ಒಡನೆ ಕೊಂಡೊಯ್ದರು. ಆ ಗ್ರಾಮದಲ್ಲಿದ್ದ ಉಗ್ರಾಕ್ಷನ ಭಕ್ತ ಸಿದ್ಧರಾಮಯ್ಯನು ಶೀಘ್ರದಿ ಸಿದ್ಧೇಶ್ವರಂಗೆ ಉಗ್ರಾಂಬಕ ಪೂಜೆಗೆಂದು ಭಸಿತವನಿತ್ತನು. ಆತನ ಮನೆಗೆ ಹೋಗಿ ಮೃದುಗದ್ದುಗೆಯಲ್ಲಿ ಕುಳಿತು ಜಂಗಮದೊತ್ತೊತ್ತೆಯ ನೋಡಿ ಹರ್ಷಿತನಾಗಿ ಭಸ್ಮಸ್ನಾನ ಮಾಡದೆ ಜಲಸ್ನಾನವ ಮಾಡಿ ಕೆಡುವ ಜನರನ್ನು ನಿಂದಿಸಿ ಪರಮಜ್ಞಾನದ ಭೂತಿಯನ್ನು ಸೂಕ್ಷ್ಮಾಂಗದೊಳು ಧೂಳಿಸಿ ಕಾರಣಾಂಗಕ್ಕೆ ಭಾವಭಸಿತವನ್ನುದ್ಧೂಳಿಸಿ ಪೂಜೆಗೆ ಕುಳಿತ ಶಿವಯೋಗಿಯನ್ನು ಕಂಡ ಜಂಗಮತಿಂಥಿಣಿಯು ಸ್ಮರ ಜವ ತ್ರಿಪುರವಟ್ಟಿಹ। ಹರ ಕಣ್ಗಳನಿತಿಪ ತನ್ನ ಸ್ಮರಿಪರ ಕಾಡುವ॥ ಸ್ಮರ ತ್ರಿಪುರ ಜವರಸುಡಲೆಂ। ದೆರವಿಸಿಯೆ ತಂದ ಬಗೆಯೊ ಎಂದು ನುಡಿದರು. ಆ ಸಮಯದಲ್ಲಿ ಆತನು ಲಿಂಗಾಂಗ ಸಮರಸನಾಗಿ ಮಾಡಿದ ಲಿಂಗಪೂಜೆಯನ್ನು ಕವಿವಾಣಿಯಲ್ಲೇ ಕೇಳಬೇಕು :

ಲಿಂಗವ ನೋಡಿ ನೋಡಿ ಪ್ರಮಥೇಶ ಸುಖಾಮೃತವೀಂಟಿಯೀಂಟಿಯುಂ
ಲಿಂಗವ ಮುಟ್ಟಿ ಮುಟ್ಟಿ ಮೆಯಿರೋಮದ ಕಂಚುಕವೇಳುತೇಳ್ದುವುಂ
ಲಿಂಗವ ಹಾಡಿಹಾಡಿ ಗುಣವೃಂದವ ಲೀಯವ ಮಾಡಿ ಮಾಡಿಯುಂ
ಲಿಂಗ ಸುಖಾಬ್ಧಿಮಧ್ಯದಿ ಮುಳುಂಗಿ ಮುಳುಂಗುತಲಿರ್ದನಾಗಳುಂ ॥ ೪–೧೨೭ ॥

ಈತನ ನೇತ್ರಕಿಂದ್ರನ ಸಹಸ್ರವಿಲೋಚನ ಸಾಟಿಯಲ್ಲವುಂ
ಈತನ ಬಾಹುಗಂ ರವಿಯ ಸಾವಿರಬಾಹುವು ಸಾಮ್ಯವಲ್ಲವುಂ
ಈತನ ಜಿಹ್ವೆಗಂ ದ್ವಿರಸನೇಶನ ಜಿಹ್ವೆ ಸಮಾನವಲ್ಲವುಂ
ಈತನ ಲಿಂಗಪೂಜೆಯರಿದೆಂಬುತ ಜಂಗಮವಾಡಿತಾಗಳುಂ ॥ ೪–೧೨೮ ॥

ಆ ಸಮಯದಲ್ಲಿ ಸಿದ್ಧಲಿಂಗೇಶನು ಇಷ್ಟಲಿಂಗದ ಅಷ್ಟವಿಧಾರ್ಚನೆಯನ್ನು ಮಾಡಿ ಕಾರಣ ತನುವಿನ ಭಾವದಿಂ ಗ್ರಹಿಸಿದ ಭಾವದ ಪಂಚೇಂದ್ರಿಯಂಗಳು ಭಾವಲಿಂಗ ಪೂಜೆಯಲ್ಲಿಯೇ ಸಿಕ್ಕಿ ಆ ಭಾವ ನಿರ್ಭಾವವಾಗಿ ವೊಳಹೊರಗೆ ತೆರಹಿಲ್ಲದೆ ನಿವಾತ ಜ್ಯೋತಿಯಂತೆ ದೀಪವನೊಳಕೊಂಡ ಸ್ಫಟಿಕದ ಘಟದಂತೆ ಮತ್ತಂ ಲಿಂಗದಲ್ಲಿ ಮನವನಿಂಬಿಟ್ಟು ಸಿದ್ಧಲಿಂಗೇಶ್ವರಂ ತನುತ್ರಯದಲ್ಲಿ ಲಿಂಗತ್ರಯ ಪೂಜೆಯಂ ಜಾಗ್ರಸ್ವಪ್ನಸುಷುಪ್ತಿಯಿಂ ನಿಬ್ಬೆರಗುವಟ್ಟು ಭಕ್ತತತಿಯುಬ್ಬಿಸೆ ಚಿತ್ರಿತ ಪುತ್ರನಂತೆ ನಿಃಶಬ್ದದೊಳಿರುತ್ತಿರಲು ಎಲ್ಲರೂ ಆಶ್ಚರ್ಯಪಟ್ಟರು. ಮತ್ತಂ ಆಚಾರಲಿಂಗವೆ ದೇಹವಾಗಿ ಗುರುಲಿಂಗವೆ ಯಾತ್ಮನಾಗಿ ಶಿವಲಿಂಗವೇ ಪ್ರಾಣವಾಗಿ ಚರಲಿಂಗವೆ ಯಿಂದ್ರಿಯಂಗಳಾಗಿ ಪ್ರಸಾದಲಿಂಗವೆ ವಿಷಯಂಗಳಾಗಿ ಮಹಾ ಲಿಂಗವೆ ತೃಪ್ತಿಯಾಗಿ ಆ ತೃಪ್ತಿ ಘನಲಿಂಗದುಬ್ಬಸದಿಂ ಕಳವು ಸೊಕ್ಕೆಯುಸಿರ್ನಿಂದು ನುಡಿಯಡಗಿರ್ದಪನೊಯೆಂದು ಸಂದೇಹಬಡುತಿರ್ಪಲ್ಲಿ ಓರ್ವ ಚರಲಿಂಗಂ ಬಂದು ನುಡಿದಂ....

ಇಷ್ಟದಿ ನಟ್ಟ ದೃಷ್ಟಿಯದು ಶಾಂಭವಿಮುದ್ರೆ ಸುಜಾಗ್ರದಲ್ಲಿಯೇ
ದುಷ್ಟವು ನಷ್ಟವಾಗಿ ಘನಖೇಚರ ಮುದ್ರೆ ಸುಸ್ವಪ್ನದಲ್ಲಿಯೇ
ಇಷ್ಟದ ಕೂಟ ಜಾನದ ಸುಮುದ್ರೆ ಸುಷುಪ್ತಿಯದಲ್ಲಿ ಮೌನದಾ
ಬೇಟದಿ ಸಿಕ್ಕಿ ಸಿದ್ಧನಿಹನೆಂದನು ಜಂಗಮರಾಯನರ್ತಿಯಿಂ ॥ ೧೩೭ ॥

ಯೋಗಸಮಾಧಿಯಲ್ಲಿಹಗೆ ದುಃಖಸಮಾಧಿಯದೇಕೆ ಶೋಕ ಯೋ
ಗಾಂಗಿಗೆ ಶೋಕವೇಕೆ ಗುರುವಿರ್ಪನು ಲಿಂಗದಿ ಲೀಯವಾಗಿಯುಂ
ರಾಗವಿರಾಗವಿಲ್ಲದಗೆ ರಾಗವ ಮಾಡಲು ತಾನೆ ಯೆಚ್ಚುತ್ತುಂ
ಈಗವೆ ನಿಮ್ಮ ನೋಡುವನುಮೆಂದನು ಯೋಗವಿದಂ ವಿಚಾರದಿಂ ॥ ೧೩೮ ॥

ಆ ಮಾತನ್ನು ಕೇಳಿದ ಕೂಡಲೆ ಭಕ್ತರೀರ್ವರು ವೀಣೆಯನ್ನು ಹಿಡಿದು ನಾನಾ ಭಕ್ತಿಗೀತೆಗಳನ್ನು ಮೂರು ದಿನ ಪರ್ಯಂತ ಜೋಕೆಯಿಂ ಹಾಡಿ ಎಚ್ಚರಿಸಿದರು. ಅವನ ಭಕ್ತಿಯ ಅತಿಶಯತೆಯನ್ನು ಕೊಂಡಾಡಿದರು.

ಸಿದ್ಧಲಿಂಗೇಶ್ವರನು ಯಡೆಯೂರಿನಲ್ಲಿ ಪೂಜಾಮಗ್ನನಾಗಿ ಜಂಗಮಗೋಷ್ಠಿಯಲ್ಲಿರುತ್ತಿರಲು ಕಟ್ಟುಗ್ರವಾದ ಬೇಸಗೆ ಬಂದಿತು. ಇಲ್ಲಿ ಬರುವ ಕವಿಯ ಬೇಸಗೆಯ ವರ್ಣನೆ ಬೇಸಗೆಯ ಚಿತ್ರವನ್ನು ಕಣ್ಮುಂದೆ ನಿಲ್ಲಿಸುತ್ತದೆ:

ರವಣನುಮೆಂಬ ದೈತ್ಯನನು ಕೊಲ್ಲಲು ಕಾರಿದ ಸೂರ್ಯವೀಟಿಯೋ
ವಿವಿಧ ಕಪೀಂದ್ರನಂ ಕೊಲುವ ಸೂರ್ಯನ ಚಿತ್ತದ ರೌದ್ರಮುಷ್ಣಮೋ
ರವಿವರ ಮೆಚ್ಚಿ ಕರ್ಣನಿಗೆ ತೋರುವ ಕಾಯದ ಕಾಂತಿ ಮೊತ್ತಮೋ
ಕವಿದು ಸುಕೇಶಗಂ ಕಿರಣದೋರುವ ಭಾವಮೊಯೆಂಬೊಲಿರ್ದುದು ॥ ೫-೬ ॥

ಮನುಜರುಮುಷ್ಣತಾಪದೊಳು ಕಂದುತಲಿರ್ಕೆ ತಟಾಕ(ನೇ)ಕದಿಂ
ಘನತರಮುಷ್ಣನೀರೊಳಗೆ ಕೊಳ್ಳುದಿಗೊಂಬುತಲಿರ್ಕೆಮಿನ್ಗಳುಂ
ಅನಿಲನ ಸೋಂಕಿನಂತೆ ಧರೆ ಸೋಂಕಿದ ಪ್ರಾಣಿಯು ನೀಪುತಿರ್ಕೆಗಂ
ವನದಡಿಗೈದಲಗ್ನಿಯೆಡೆಗೈದಿದ ಭಾವವ ತೋರುತಿರ್ದುದುಂ ॥ ೫-೭ ॥

ಘನತರದುಷ್ಣಕಾಲದೊಳು ಭಕ್ತರು ಲಾಮಚಭಿತ್ತಿಯಿಂದ ಚಂ
ದನ ಘನಸಾ(ರ)ಣೆಯ ಕಸ್ತೂರಿವೇದಿಕೆ(ಯಿಂದ) ರಂಭನೂ
ತ್ನದಳದೌಘ ಮೇಲ್ವೊದಕೆಯಿಂದಲು ರಂಜಿಪ ಮಂಟಪಾಂತದೊಳ್
ಘನಮಹಿಮಾನ್ವಿತಾಂಗನನು ಪೂಜಿಸುತಿರ್ದರದೇನನೆಂದಪಂ ॥ ೫-೮ ॥

ಆಗ ನಿರಂಜನ ಲಿಂಗದೊಳು ನಿತ್ಯರಾದ ಚರಲಿಂಗಗಳೆಯಿದಿ ಸಿದ್ಧಲಿಂಗಂಗೆ ವಂದನಂಗೆಯ್ದು ಸಮೀಪದಲ್ಲಿ ಕುಳಿತು ಶಿವತತ್ವಾನುಭಾವಗೋಷ್ಠಿಯಿಂದಿರ್ಪ ಸಮಯದಲ್ಲಿ ಈಶಪೂಜೆಯನ್ನು ಸಲ್ಲಿಸಲು ನೀರಿಲ್ಲದುದರಿಂದ ತಟಾಕ ಹಳ್ಳ ತೊರೆಗಳೆಲ್ಲ ಬತ್ತಿದ್ದುದರಿಂದ ಸಿದ್ಧಲಿಂಗಂಗೆ ಬಿನ್ನವಿಸಲು ಅದನ್ನು ಕೇಳಿದ ಸಿದ್ಧಗುರು. ಈ ತೊರೆಯಲ್ಲಿಯೇ ನೀರು ಶೀತಳವಾಗಿ ಬೇಗ ಬರ್ಪುದು, ಅಂಜದಿರಿ ಎಂದು ಹೇಳುತ್ತಿರುವಷ್ಟರಲ್ಲಿಯೇ ನೀರು ಉಕ್ಕಿಬಂದು ಮುಂದೆ ಉಕ್ಕಂದದಿಂದ ಪ್ರವಾಹವಾಗಿ ಹರಿಯಿತು. ಅದನ್ನು ಕಂಡ ಭಕ್ತರು ಅಚ್ಚರಿಪಡುತ್ತ ಅದರಲ್ಲಿ ಸ್ನಾನಾದಿಗಳನ್ನು ತೀರಿಸಿಕೊಂಡು ಚರಲಿಂಗಕ್ಕೆ ಪೂಜೆಯನ್ನು ಮಾಡಿದರು. ಆಗ ಹೊಳಲುಗುಂದದ ಭಕ್ತರು ಬಂದು ಯಡೆಯೂರಿನಿಂದ ತಮ್ಮ ಗ್ರಾಮಕ್ಕೆ ಮಾಯಾವಿದೂರನನ್ನು ಬಿಜಯಮಾಡಿಸಿಕೊಂಡು ಹೋಗಿ ಸಿದ್ಧಲಿಂಗಗುರುವನ್ನು ನಾನಾ ವಿಧವಾಗಿ ಪೂಜಿಸಿದರು. ಅಲ್ಲಿ ದೇವಿಯ ಗೇಹದೊತ್ತಿನಲ್ಲಿ ಭಯಂಕರ ಕತ್ತಲೆಯಲ್ಲಿ ಒಬ್ಬನೇ ಕುಳಿತಿದ್ದಾಗ ಹೊಳಲುಗುಂದದ ಮಹಾದೇವಿ ಸರ್ವಾಲಂಕಾರಭೂಷಿತೆಯಾಗಿ ಬಂದು ತನ್ನ ಪರಿಚಯ ಮಾಡಿಕೊಟ್ಟು ತನ್ನಲ್ಲಿಗೆ ಬರಮಾಡಿಕೊಂಡು ಅತಿಶಯಭಕ್ತಿಯಿಂದ ಪೂಜಿಸಿದಳು. ಆಗ ಸಿದ್ಧಲಿಂಗೇಶ್ವರನು ದುರ್ಗಿಯಿಂದ ಪೂಜೆಗೊಂಡುದನ್ನು ಕೇಳಿ ಅಚ್ಚರಿಪಡುತ್ತಿರಲು ನಾಗಸಮುದ್ರದ ಭಕ್ತರು ಬಂದು ತಮ್ಮೂರಿಗೆ ಕರೆದೊಯ್ದರು. ಅಲ್ಲಿ ಅವರಿಂದ ಪೂಜೆಗೊಳುತ್ತಿರುವಾಗ ಕಾರ್ಗಾಲ ಕಾಲಿಟ್ಟು ಮಳೆ ಘೋರೆಂದು ಸುರಿಯುತ್ತಿರಲು ಎಲ್ಲರೂ ಕಲ್ಲಿನಾಥನ ಗುಡಿಗೆ ಬಂದಾಗ ಕದವಿಕ್ಕಿ ಬೀಗಮುದ್ರೆ ಮಾಡಿದ್ದುದ ಕಂಡು ಏನುಮಾಡುವುದೆಂದು ದಿಕ್ಕು ತೋಚದಾದಾಗ ತಾನಾಗಿಯೇ ಬಾಗಿಲು ತೆರೆಯಲು ಕಲ್ಲಿನಾಥನೇ ಬಂದು ಸಿದ್ಧಲಿಂಗನಿಗೆ ಬಾಗಿಲು ತೆರೆದನೆಂದು ಕೊಂಡಾಡತೊಡಗಿದರು. ಅಲ್ಲಿಂದ ಮಂಗಲಗ್ರಾಮಕ್ಕೆ ಬಂದು ಪೂಜೆಗೊಂಡು ನೆರೆಯೂರಿಗೆ ಹೋಗುವಾಗ ಅಡ್ಡವಾದ ಮಂಗಲದ ನದಿ ದಾರಿಕೊಟ್ಟಿತು. ಅಲ್ಲಿಂದ ಹುಲಿಯೂರಿಗೆ ಬಂದು ಅಲ್ಲಿ ಕಾಡುತ್ತಿದ್ದ ಮಹೇಶ್ವರಜ್ವರವನ್ನು ಹೋಗಲಾಡಿಸಿದನು. ಹುಲಿಯೂರಿಗೆ ಬರುವಾಗ ಬರುವ ಕಾಡಿನ ವರ್ಣನೆ, ಶಬರ-ಶಬರಿಯರ ವರ್ಣನೆ, ಕಿರಾತವೇಷಧಾರಿಯಾದ ಈಶ್ವರನ ಲೀಲೆಯಾಗಿ ಅಲ್ಲಿನ ಬೇಟೆಯ ವರ್ಣನೆಯೂ ಈಶ್ವರಾಪೇಕ್ಷಿಯಾಗಿ ಅವನ ವರ್ಣನೆಯಲ್ಲಿಯೇ ಮುಗಿಯುತ್ತದೆ. ಸಿದ್ಧಲಿಂಗನಿಗೆ ದರ್ಶನವನ್ನೀಯುತ್ತಾನೆ. ಇಲ್ಲಿ ಮೂಗುತಿಯ ಪವಾಡವನ್ನು ಮೆರೆದು ಯುದ್ಧದಲ್ಲಿ ಸತ್ತ ಪತಿಯನ್ನು ಕರುಣಿಸಿ ಪುತ್ರಸಂತಾನಭಾಗ್ಯವನ್ನು ನೀಡುತ್ತಾನೆ. ಭಕ್ತರ ಕೋರಿಕೆಯಂತೆ ಬಂಡಿಹಳ್ಳಿಗೆ ಬಂದು ಭಕ್ತಿಯನ್ನು ಸ್ವೀಕರಿಸಿ ಯಡೆಯೂರಿಗೆ ಬರುವಾಗ ದಾರಿಯಲ್ಲಿ ಜೋಗಿಗಳಿಂದ ಕೊಲ್ಲಲ್ಪಟ್ಟ ಸರ್ಪನಿಗೆ ಪ್ರಾಣದಾನ ಮಾಡಿ ಬೇರೆಡೆಗೆ ಕಳುಹಿಸುತ್ತಾನೆ. ಯಡೆಯೂರಿನಲ್ಲಿ ಬೆಂಕಿ ಬಿದ್ದ ಮನೆಯಲ್ಲಿ ಬೆಂದುಹೋದ ಚಿಕ್ಕನಮರಿಗಳನ್ನು ಬದುಕಿಸುತ್ತಾನೆ. ಹೆಬ್ಬೂರಿನ ಭಕ್ತರಿಚ್ಛೆಯಂತೆ ಅಲ್ಲಿಗೆ ಹೋಗುತ್ತಾನೆ. ಅಲ್ಲಿ ಭಕ್ತೆಯು ತಂದ ಬಾಳೆಹಣ್ಣುಗಳನ್ನು ಕಲ್ಲ ನಂದಿಗೆ ತಿನ್ನಿಸುತ್ತಾನೆ. ಕದ್ದ ಬದನೆಕಾಯಿ ಸುಡದಂತೆ ಮಾಡುತ್ತಾನೆ. ಮತ್ತೆ ಅವಳಿಗೆ ವರವನ್ನಿತ್ತು ಪುತ್ರಸಂತಾನವಾಗುವಂತೆ ಹರಸುತ್ತಾನೆ. ಮನೆಮನೆಯ ಬೀಗಗಳು ಮುರಿದು ಜಂಗಮರ ಊಟಕ್ಕೆ ಗಂಗಳಗಳು ತಾವಾಗಿ ಬರುವಂತೆ ಮಾಡು

ತ್ತಾನೆ. ಮಲ್ಲಿಸೆಟ್ಟಿಯು ಲಿಂಗಪೂಜೆಗೆ ಕುಳಿತು ಯತಿಯ ಪಾದತೀರ್ಥವನ್ನು ಉದಾಸೀನ ಮಾಡಿ ಚೆಲ್ಲಲು ಲಿಂಗ ಮಾಯವಾದಾಗ ಯತಿಗಳನ್ನು ಪ್ರಾರ್ಥಿಸಿ ಮತ್ತೆ ಪಡೆಯುತ್ತಾನೆ. ಸ್ನಾನ ಮಾಡಿಸಲು ಪ್ರಾರಂಭಿಸಿದಾಗ ಸಿದ್ಧಲಿಂಗ ಯತಿಯ ತಲೆಯಿಂದ ಅಮೃತ ಸೂಸಿ ಹರಿಯುತ್ತದೆ.

ತುಮಕೂರಿಗೆ ಬಂದು ಅಲ್ಲಿನ ದಕ್ಷಿಣಭಾಗದಲ್ಲಿ ಬಸವನ ಮನೆಯಲ್ಲಿ ಭಕ್ತಿಯನ್ನು ಕೈಕೊಳ್ಳುತ್ತಿದ್ದು ಭಕ್ತರ ಬಯಕೆ ಹಣ್ಣಾಗುವಂತೆ ಭಸಿತದ ಘುಟಿಕೆಗಳನ್ನು ಕೊಡುತ್ತಿರುತ್ತಾನೆ. ಆ ಸಮಯದಲ್ಲಿ ವೈಷ್ಣವನೊಬ್ಬನು ಬಂದು ಆ ಭಸಿತ ಘುಟಿಕೆಗಳು ವಿಷ್ಣು ಮತ್ತು ಲಿಂಗವಾದಡೆ ಕೃಷ್ಣನನ್ನು ತ್ಯಜಿಸುವೆನೆಂದು ಯತಿಯ ಕೈಗಿಡಲು ಎಲ್ಲರೂ ಅಚ್ಚರಿಪಡುವಂತೆ ಲಿಂಗಾಕಾರವಾಗಿ ತಟಿತ್ಕೋಟಿಪ್ರಭೆಯನ್ನೂ ಮೀರಿ ಬೆಳಗುತ್ತದೆ. ಮಲ್ಲಕ್ಕನೆಂಬ ಭಕ್ತೆಯ ಮಿಾಸಲ ಅರುಗೊಳಗ ಅಕ್ಕಿ ಮಾಯವಾಗಿ ಮತ್ತೆ ಪಡೆದದ್ದು, ನಾನೂರು ಜೆಲ್ಲ ಮಿಾಸಲಿರಿಸಿ ನೆಂಟರು ಬಂದಾಗ ಬಳಸಲು ಎಲ್ಲವೂ ಮಾಯವಾಗಿ ಮತ್ತೆ ಎರಡರಷ್ಟು ಹರಕೆ ತೆಗೆದದ್ದು, ಪ್ರಭುಸೆಟ್ಟಿಯು ಏಳನೂರು ಎಳನೀರ್ಗಳ ನೇಮಮಾಡಿ ಅಳುವ ಬಾಲಕನಿಗೆ ಕೊಡಲು ಮಾಯವಾಗಿ ಮತ್ತೆ ಮೂರರಷ್ಟು ತಂದದ್ದು, ಮತ್ತೊಬ್ಬಳು ಚರರಿಗೆ ಚೌಳುನೀರನೆಡೆ ಮಾಡಿ ತನಗೆ ಸೀನೀರತೀರ್ಥವನ್ನು ಪಡೆದು ಮಡಗಲು ಅದು ಮೂರುಸಾರಿ ಮಾಯವಾಗಲು ಕೊನೆಗೆ ತನ್ನ ತಪ್ಪನ್ನು ಒಪ್ಪಿ ಮತ್ತೆ ಪಡೆದದ್ದು, ಆ ಊರಿನ ಮುದ್ದಪ್ಪನ ವನಿತೆ ಮಾಹೇಶ್ವರರಿಗೆಲ್ಲ ಎರಡೆರಡು ಹೂಗಳನ್ನು ಕೊಟ್ಟು ತನ್ನ ಶಿವಾರ್ಚನೆಗೆ ಕಳಸಿಗೆ ತುಂಬ ಇಟ್ಟುಕೊಳ್ಳಲು ಅವೆಲ್ಲ ಬಯಲಾಗಿ ಎರಡೇ ಪುಷ್ಪಗಳುಳಿಯಲು ತಪ್ಪೊಪ್ಪಿ ಕೊಂಡದ್ದು, ಸಿದ್ಧಲಿಂಗೇಶ್ವರಂಗೆಂದು ಕುರಿತ ನೆಲ್ಲವರೆಕಾಯನ್ನು ತಾನು ಮೆಲುವೆನೆಂದು ಪಾಕಮಾಡಲು ಪಾಕ ವಾಗದ್ದು, ಮತ್ತೊಬ್ಬ ಹೊಲದವರೆಕಾಯಿ ತನಗೆಂದು ಪಾಕಮಾಡಲು ಪಾಕವಾಗದೆ ವಿಷವಾದದ್ದು ಮುಂತಾದ ಮಹಿಮೆಗಳನ್ನು ಮೆರೆಯುತ್ತ ಒಂದು ದಿನ ಸಂಜೆಯಾಯಿತು. ರಾತ್ರಿಯ ಅಂಧಕಾರ ಭಯಂಕರವಾಗಿತ್ತು. ಆಗ ಸಿದ್ಧ-ಲಿಂಗಯತಿ ಶಿವಪೂಜೆಯಲ್ಲಿ ನಿರತನಾಗಿದ್ದಾಗ ಬರುವ ಚಂದ್ರೋದಯದ ವರ್ಣನೆ ಶಿವಯೋಗಿಯ ಲಿಂಗಾರ್ಚನಾ ವೈಖರಿಯ ಸಾರ್ಥಕವರ್ಣನೆಯಾಗಿ ಮೂಡಿ ಬರುವುದರ ಮೂಲಕ ಕವಿಯ ಔಚಿತ್ಯಪ್ರಜ್ಞೆಯನ್ನು ತೋರಿಸುತ್ತದೆ. "ಯತಿಪತಿಗೆ ಪೂಮಳೆಗರೆವುದನತಿಶಯದಿಂ ನೋಡಬಂದನೆ"ಂಬಂತೆ ಚಂದ್ರ ಮೂಡಿಬಂದನಂತೆ.

ಪೂರ್ವದಿಶಾಂಗನಾಕರದ ರತ್ನದ ಕಂದುಕವೊ ವಿನೋದದಿಂ
ಶಾರ್ವರಿನಾರಿ ಕಂಧರದಿ ಕಟ್ಟಿದ ರತ್ನದ ದೊಡ್ಡ ತಾಲಿಯೋ
ಪಾರ್ವತಿ ನೋಡುತಿರ್ಪ ವರರತ್ನದ ದರ್ಪಣವೋ ಅಮರ್ತ್ಯರುಂ
ಉರ್ವಿಗೆ ತೋರ್ಪ ರತ್ನಘಟವೋ ಯೆನಲೊಪ್ಪಿತು ಚಂದ್ರಬಿಂಬವುಂ ॥ ೨೨೭ ॥

ಅಂಬರಭೂಮಿಯಲ್ಲಿ ಘನಶಂಕರಮೂರ್ತಿಯ ಕಾಂತಿ ತುಂಬಿತೋ
ಶಂಬರವೈರಿವೈರಿಯಹ ಸಿದ್ಧನ ಅಂಗದಭೂತಿಭೂತಿಕಾಂತಿಯೋ
ಅಂಬಿಕೆ ಕೊಟ್ಟ ಮೌಕ್ತಿಕದ ಮಂಡನ ಕಾಂತಿಯ ಮೊತ್ತ ತೀವಿತೋ
ಯೆಂಬೊಲು ಸಾಂದ್ರಚಂದ್ರಿಕೆ ವಿರಾಜಿಸಿತಾಗಲದೇನನೆಂದಪೆಂ ॥ ೨೨೮ ॥

ಆಗ ಊರಿನ ಹಲಗಿಸೆಟ್ಟಿಯು ಬಂದು ವಿಭೂತಿಯನ್ನು ಕೊಟ್ಟು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಮೆರವಣಿಗೆಯಲ್ಲಿ ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಜಂಗಮಸಮೂಹದ ಮಧ್ಯೆ ಎಸಗುವ ಷಟ್ಸ್ಥಲಾರ್ಚನೆ ಶಿವಯೋಗಿಗಳಿಗೆ ಯೋಗ್ಯವಾಗಿದೆ. ಅದರ ವರ್ಣನೆ ತುಂಬ ಸೊಗಸಾಗಿದೆ. ಇಲ್ಲಿ ಕೆರೆಯಲ್ಲಿ ತೇಲಿಹೋದ ಗೋಣಿಗ ಜಾತಿಯ ನಾರಿಯ ಕೊಡವನ್ನು ವೈಹಾಳಿಗೆ ಹೋಗುತ್ತಿದ್ದ ವೈಷ್ಣವರಾಜ ಸಿದ್ಧನಾಣೆಯಿಟ್ಟು ಹಿಂತಿರುಗಿಸುತ್ತಾನೆ. ತುಂಬಿದ ಆ ಕೊಡವನ್ನು ಯಾರಿಂದಲೂ ಎಷ್ಟು ಜನರಿಂದಲೂ ಎತ್ತಲಾಗದಾಗ ಮತ್ತೆ ಅದೇ ರಾಜ ಸಿದ್ಧನಾಣೆ ಯಿಟ್ಟು ಎತ್ತಲು ಹಗುರವಾಗಿ ಮೇಲೇಳುತ್ತದೆ. ತಾನು ಹಾಸ್ಯಕ್ಕೆಂದ ಮಾತು ಸತ್ಯವಾಗಲು ಯತಿಯ ಬಳಿಗೆ ಬಂದು ಕ್ಷಮೆ ಯಾಚಿಸುತ್ತಾನೆ. ಅದನ್ನು ಪೂಜಿಸಿ ಬದುಕೆಂದು ನಾರಿಗೆ ಹರಸುತ್ತಾನೆ. ಆ ಘಟವನ್ನು ಪೂಜಿಸಿದವರಿಗೆ ಇಷ್ಟಾರ್ಥಗಳು ಲಭಿಸುತ್ತಿದ್ದವು. ಆ ರಾತ್ರಿ ನಾನಾರೂಪಿನಲ್ಲಿದ್ದ ದೇವರಾಯಪತ್ತನದ ತಿಗುಳನಿಗೆ ತೂಬುಕಿತ್ತು ನೀರು ಕೊಡುತ್ತಾನೆ. ಅಲ್ಲಿಯೇ ಅನ್ನದಾನಿ ಘನಮಲ್ಲಯ್ಯನ ಮಂಟಪದಲ್ಲಿ ಶಿವಯೋಗಸಮಾಧಿಯಿಂದೆದ್ದು ೫೦೦ ಜಂಗಮರಿಗೆ ನಾನಾ ಭಕ್ಷ್ಯಗಳನ್ನಿತ್ತು ತೃಪ್ತಿಪಡಿಸುತ್ತಾನೆ. ಭಾಂಡಗಳನ್ನು ಅಕ್ಷಯಗೊಳಿಸಿ ತಡವಾಗಿ ಬಂದವರನ್ನೆಲ್ಲ ತೃಪ್ತಿಪಡಿಸುತ್ತಾನೆ. ಪುಸ್ತಕ ಬರವಣಿಗೆ ಪರ್ವ, ಭೋಜನಕ್ಕೆ ಕುಳಿತಿರುವಾಗ ಬಂದ ಮಳೆಯನ್ನು ತಡೆದು ಆ ಮೇಲೆ ಬರುವಂತೆ ಅಪ್ಪಣೆಮಾಡುವುದು, ಮಳೆಯ ಪರ್ವತಯ್ಯ—ಲಿಂಗಮ್ಮರು ಪೂಜೆಗೆ ಬಂದಾಗ ಮಗ ಸಾಯಲು

ಯತಿಗಳ ಭಸ್ಮಧಾರಣೆಯಿಂದ ಬದುಕುವುದು. ಶಿವಭಕ್ತ ಮಲ್ಲಪ್ಪ, ಮೈಲಾರಲಿಂಗ ಭಕ್ತೆಯಾದ ಹೆಂಡತಿ ಇವರ ಜಗಳ, ಎಮ್ಮೆ ಸಾಯುವುದು, ಸಿದ್ಧನ ಭಸಿತದಿಂದ ಮತ್ತೆ ಬದುಕುವುದು, ಹೆಂಡತಿ ಶಿವಭಕ್ತಳಾಗುವುದು, ಬುರುಡು ಕುಂಟೆಯ ಸುಗಬ್ಬಿನಾಯಕನ ಮಗ ಬಂದು ಯತಿಗಳಿಗೆ ವಂದಿಸಿ ಸತ್ತ ಕುದುರೆಯ ಪ್ರಾಣ ಪಡೆಯುವುದು. ಭಿಕ್ಷಾವತಿರಾಯ ನವರತ್ನದ ಕಿರೀಟವನ್ನು ಭಕ್ತಿಯಿಂದ ಯತಿಗರ್ಪಿಸಿದಾಗ ವಿಟುಜಂಗಮ ಕೇಳಿದಾಕ್ಷಣ ಕೊಡುವುದು, ದ್ರಾವಿಡದೇಶದಿಂದ ಬರುತ್ತಿದ್ದ ದಶಪಂಚಚರಂಗಳಲ್ಲೊಬ್ಬನಿಗೆ ಸರ್ಪಕಚ್ಚಿ ಸಾಯಲು ಬದುಕಿಸುವುದು, ಕುಂತಳದ ಚರನಿಗೆ ಕಣ್ಣುಗಳನ್ನು ಕೊಡುವುದು. ಹಲುಕೂರೊಳಗೆ ಹಲ್ಲಚಿಕ್ಕನು ನಿಂದಿಸಲು ಅವನ ಮನೆ ಉರಿಯುವುದು. ಪೂಜೆಗೆ ನೀರಿಲ್ಲದಿದ್ದಾಗ ಮಲ್ಲಯ್ಯ ನೀರು ಕಳುಹಿಸಿದ್ದು. ಕೇತಸಮುದ್ರದ ತಟಾಕದ ಬಳಿಯ ಹೊಲವನ್ನು ವೃಷಭ ಮೇಯುವಾಗ ಯತಿಯಾಣೆಯಿಡಲು ಅದು ಏರಿಯ ಮೇಲೆ ಅಲುಗದೆ ನಿಂತುದು. ಯತಿ ಅದನ್ನು ಬಿಡುಗಡೆ ಮಾಡಿದುದು ಮುಂತಾದ ಪವಾಡಗಳನ್ನು ಮೆರೆಯುತ್ತ ಜ್ಞಾನಮೇರುವಾಗಿ ಮಹಾಮಹಿಮನಾಗಿ ಶಿವಯೋಗಿ ಒಪ್ಪುತ್ತಾನೆ.

ಆರು. ಏಳನೆಯ ಆಶ್ವಾಸಗಳಲ್ಲಿ ಸಂಪೂರ್ಣವಾಗಿ ಸಿದ್ಧಲಿಂಗಶಿವಯೋಗಿಯ ಅನುಭಾವಗೋಷ್ಠಿ ಷಟ್ಸ್ಥಲ ಜ್ಞಾನದಾಚಾರಗಳ ವರ್ಣನೆ ಬಂದಿದೆ. ಸಿಂಹವಿಷ್ಟರವಲ್ಲಿ ಮಂಡಿಸಿದ್ದ ಸಿದ್ಧಲಿಂಗ ಲಿಂಗಮಹತ್ವ. ಭಕ್ತ, ಮಹೇಶ. ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರುಗಳ ಮಹತ್ವಗಳನ್ನು ನಿರ್ವಂಚನೆಯಿಂದ ಬೋಧಿಸುತ್ತ ಮುಕ್ತಿಯಾಗರದಂತೆ ಸಿದ್ದಗುರುವಿದ್ದ. ಆಗ ಶಿಷ್ಯನೊಬ್ಬನು ಈಶಭಕ್ತಿಗಳ ಮರ್ಮವನ್ನು ತಿಳುಹೆನಲು ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವಗಳ ವಿವರಣೆ ; ವಿಭೂತಿ, ರುದ್ರಾಕ್ಷಿಗಳ ಮಹಿಮೆಯ ವರ್ಣನೆ ಮಾಡುತ್ತ ಅಷ್ಟಾವರಣ, ಪಂಚಾಕ್ಷರಿಗಳ ಮಹಿಮೆಯ ಮೂಲಕ ಭಕ್ತಿಸ್ಥಲದ ವಿವರವನ್ನು ಬೋಧಿಸುತ್ತಾನೆ. ಅನಂತರ ಕ್ರಮವಾಗಿ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯದ ಸ್ಥಿತಿಯನ್ನು ವಿವರಿಸುತ್ತಾನೆ. ಕೊನೆಗೆ ಒಂಬತ್ತನೆಯ ಸಂಧಿಯಲ್ಲಿ—

> ಷಡ್ವಿ(ಧ)ದಂಗಮೂರ್ತಿ ಷಡುಲಿಂಗವಿಧಾನ್ವಿತಮೂರ್ತಿ ಶೀಲಸಂ
> ಷಡ್ವಿಧಮೂರ್ತಿ ಷಡ್ವ್ರತಸುಮೂರ್ತಿ ಷಡಕ್ಷರಮಂತ್ರಮೂರ್ತಿ ಸಾ
> ಷಡ್ವಿಧಬ್ರಹ್ಮಮೂರ್ತಿ ಷಡುಚಕ್ರದಳಾಂತವಿಮೂರ್ತಿಗೊಂಡಿಹಾ
> ಷಡ್ವಿಧದಿವ್ಯಕಾಂತಿಗಳ ಮೀರಿದ ಸದ್ಗುರುಮೂರ್ತಿ ಸಿದ್ಧನೊಳ್ ॥ ೯–೨ ॥

—ಎಂದು ವೀರಶೈವದ ಮುಂದಿನ ಸ್ವರೂಪವನ್ನು, ಷಟ್ಸ್ಥಲಾಚಾರದ ರಹಸ್ಯವನ್ನು ವಿವರಿಸುತ್ತಾನೆ. ಈ ವಿವರಣೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಷಟ್ಸ್ಥಲವಲ್ಲಭನಾದ ತೋಂಟದ ಸಿದ್ಧಲಿಂಗ ಶಿವಯೋಗಿಯ ಅನುಕ್ರಮವಾದ ಆಧ್ಯಾತ್ಮಿಕ ವಿಕಾಸ ಸಿದ್ಧಲಿಂಗನನ್ನು ಶಿವಯೋಗಿ ಪದದಲ್ಲಿ ನಿಲ್ಲಿಸಿ, ಅದರ ಫಲವಾದ ಷಟ್ಸ್ಥಲ ಬೋಧೆಯಲ್ಲಿ ಪರಿಣಮಿಸಿರುವುದನ್ನೂ. ಕವಿಯ ಉದ್ದೇಶ ಫಲಿಸಿರುವುದನ್ನೂ ಯಾರಾದರೂ ಕಾಣಬಹುದು.

## ಹಾಲಾಸ್ಯಲೀಲೆ_ಇಮ್ಮಡಿ ಮುರಿಗಾ ಗುರುಸಿದ್ಧ (೧೭೨೦)

ಹಾಲಾಸ್ಯಲೀಲೆ ಅಥವಾ ಹಾಲಾಸ್ಯಪುರಾಣವನ್ನು ಬರೆದ ಕವಿ ಇಮ್ಮಡಿ ಮುರಿಗಾ ಗುರುಸಿದ್ಧ. ಈತನು ಕನ್ನಡ-ಸಂಸ್ಕೃತ ಎರಡೂ ಭಾಷೆಗಳಲ್ಲಿ ವಿಶೇಷಪಾಂಡಿತ್ಯವನ್ನು ಪಡೆದಿದ್ದನು. ಇವನು ಚಿತ್ರದುರ್ಗದ ಚಿನ್ಮೂಲಾದ್ರಿಯ ಪರಂಪರೆಯಲ್ಲಿ ಒಂಬತ್ತನೆಯ ಪಟ್ಟಾಧಿಕಾರಿಯಾಗಿ ಷಟ್ಸ್ಥಲವನ್ನು ಉದ್ಧರಿಸಿದ ಮಹಾಶಿವಯೋಗಿ. ಕನ್ನಡದಲ್ಲಿ ಹಾಲಾಸ್ಯಲೀಲೆ ಮತ್ತು ಸಂಸ್ಕೃತದಲ್ಲಿ ಪ್ರಭುಲೀಲೆಗಳನ್ನು ಬರೆದಿರುವುದರಿಂದ ಈತನಿಗೆ ಲೀಲೆಯ ಇಮ್ಮಡಿ ಗುರುಸಿದ್ಧ, ಲೀಲೆಯ ಮುರಿಗೇ ಗುರುಸಿದ್ಧ, ಲೀಲೆಯ ಮುರಿಗೇಸ್ವಾಮಿ ಎಂಬ ಹೆಸರುಗಳು ಪ್ರಸಿದ್ಧವಾಗಿವೆ

ಇಮ್ಮಡಿ ಗುರುಸಿದ್ಧನು ತನ್ನ ಈ ಎರಡೂ ಗ್ರಂಥಗಳಲ್ಲಿ ತನ್ನ ಇತಿವೃತ್ತವನ್ನು ಹೇಳಿಕೊಂಡಿದ್ದಾನೆ.

> ಚಂಪಕ ॥ ಪ್ರಣವಧನುಃಪುರಸ್ಥ ಚಿತಿಶಕ್ತಿಸುಪೀಠಮಠಾಧಿರಾಜ ಸಂ
> ಪ್ರಣುತಭವಾಪಹಾರಿ ಗುರುರಾಡ್ವರಸೇವಿತ ಸೋಮಶೇಖರ
> ಪ್ರಣುತಸುನಾಮದೇಶಿಕಪದಾಂಬುಜಮೆನ್ನಯ ಹೃತ್ಸರೋಗ್ರದೊಳ್
> ಭಣಿತೆಯಿನಿದ್ದು ನಿಂದೊಡಿರದಾಂ ಗುರುರೂಪಮನಾಳ್ದೆನುರ್ವಿಯೊಳ್ ॥ ೪–೧೭–೧೪೯ ॥

ತರಳ ॥ ಮಿಸುಪ ಕೇವಲ ಕುಂಭಪಲ್ಲಿಯೆನಿಪ್ಪ ತಾಣದೊಳಾವಗಂ
ಸಸಿನೆ ಸೋಹಮೆನಿಪ್ಪ ಮಂತ್ರಹಸಂಗಳಂ ಸಲೆ ಲೋಪಿಸಲ್
ಬೆಸುಗೆಯಾದುಜಿತಯೋಮಯೋರ್ಜಿತ ಸತ್ಕಲಾನ್ವಿತ ಶಬ್ದಮು
ಣ್ಯಸದೃಶಾಭಿಧದೇವ ಚಿದ್ಘಸವೇಶನಿಂ ಬುಧನಾದೆ ನಾಂ ॥ ೪-೧೭-೧೫೦ ॥

ಚಂಪಕ ॥ ಪರಮುಚಿದದ್ವಯಾತ್ಮಕಗುರುದ್ವಯಮಂತದು ತುನೆಯಾಗಿ ನಿ
ಷ್ಠುರತರಭೇದತಾಮಸನಿವಾರಣಸೂರ್ಯನಮಾಯನು ತತ್ಕೃಪಾ
ಕರನೆನಿಸುತ್ತೆ ಲೋಕತತಿಯೊಳ್ ನೆರೆಪೂಜ್ಯಪದಾಬ್ಜನಾದ ಸ
ನ್ಮುರಿಗೆಯ ಶಾಂತವೀರ ವರದೇಶಿಕನಿಂ ಪರರೂಪವೊಂದಿದೆಂ ॥ ೪-೧೭-೧೫೧ ॥

—ಹಾಲಾಸ್ಯಪುರಾಣ

ಇದೇ ಅರ್ಥವನ್ನು ಕೊಡುವ ಶ್ಲೋಕಗಳು 'ಪ್ರಭುಲೀಲೆ'ಯಲ್ಲಿ ಈ ರೀತಿ ಇವೆ :

ಓಂಕಾರಂ ಧನುರಾದಾಯ ಕರೇ ಜಗ್ರಾಹ ಶಂಕರಃ
ತತ್ಕಥಾಂತರತಸ್ತತ್ರ ಪೂರ್ಭಾತೀತಿ ಧನುಃಪುರೀ ॥ ೧-೨೯ ॥

ತತ್ರ ಸಿಂಹಾಸನಂ ರೇಜೇ ಚಿಚ್ಛಕ್ತೇಃ ಪೀಠಸಂಜ್ಞಕಂ
ತಸ್ಮಿನ್ ನಿರಂಜನೋಂಕಾರರೂಪೋಽರೋಚತ್ ಗುರುಶ್ಶಿವಃ ॥ ೧-೩೦ ॥

ಉನ್ನತಂ ದಾನಮುದ್ಧಾನಂ ತದ್ವಾನ್ ಪ್ರಾದಿಸಮಾಸತಃ
ಕ್ಷಿತೌ ವರ್ಣ್ಯಾಗ್ರಣೀರ್ನಾಮ್ನೋದ್ಧಾನಮೂರ್ತಿರಿತೀರ್ಯತೇ ॥ ೧-೩೧ ॥

ತಸ್ಯ ವಂಶಃ ಕರೇ ಜಾತಃ ಸೋಮಶೇಖರಸದ್ಗುರೋಃ
ಸೋಹಂ ಶಿಕ್ಷಾಂ ಗಮಿಶಾ ಚಾ [ಸ್ಮಾತ್] ಶ್ರೀಮದ್ಘಸವಲಿಂಗತಃ ॥ ೧-೩೪ ॥

ತಯಾ ಮುರೀಗಯಾ ಚಿತ್ಯಾ ವೀರಾಖ್ಯೇಂದ್ರಿಯಸಂತತಿಃ
ಶಾಂತಾ ಯೇನ ಪರಿವ್ರಾಜಾಮಾಸೀತ್ತನ್ನಾಮಕೋ ಗುರುಃ ॥ ೧-೩೭ ॥

ತಸ್ಮಾಲ್ಲಬ್ಧಮಹಾಜ್ಞಾನಾತ್ ಪ್ರಾಪ್ತತನ್ನಾಮರೂಪಕಃ
ಭವಾಮಿ ಗುರುಸಿದ್ಧಾಖ್ಯೋ ಯೋಗೀ ಷಟ್ಸ್ಥಲಮಾರ್ಗವಿತ್ ॥ ೧-೩೮ ॥

—ಪ್ರಭುಲೀಲಾ

ದನುಗೂರಿನಲ್ಲಿ ಚಿಚ್ಛಕ್ತಿಸಿಂಹಾಸನಾಧೀಶ್ವರರಾದ ನಿರಂಜನಪ್ರಣವಸ್ವರೂಪಿ ಉದ್ಧಾನಯೋಗೀಶ್ವರರು, ದಕ್ಷಿಣಾಮೂರ್ತಿಯು ಋಷಿಗಳಿಗೆ ತತ್-ತ್ವಂ-ಅಸಿ ಎಂಬ ಪದತ್ರಯದ ಅರ್ಥವನ್ನು ಬೋಧಿಸಿದಂತೆ, ಜನಕ್ಕೆ ವೀರಶೈವೋಪದೇಶವನ್ನು ಮಾಡಿದರು. ಆ ಪರಂಪರೆಯಲ್ಲಿ ಬಂದ ಸೋಮಶೇಖರಶಿವಯೋಗಿಯಿಂದ ಗುರುಸಿದ್ಧನು ಚಿಕ್ಕವನಾಗಿದ್ದಾಗ ದೀಕ್ಷೆಯನ್ನು ಪಡೆದನು. ಎರಡನೆಯದಾಗಿ ಕುಂಭಪಲ್ಲಿಯ ಚಿದ್ಘಸವೇಶನಿಂದ ವಿದ್ಯಾಭ್ಯಾಸಮಾಡಿ ವಿದ್ಯಾವಂತನಾದನು. ಮೂರನೆಯದಾಗಿ ಚಿತ್ರದುರ್ಗದ ಬೃಹನ್ಮಠದ ಕರ್ತೃ ಮುರಿಗಾ ಶಾಂತವೀರನ ಕೃಪೆಯಿಂದ ಜಗದ್ಗುರುವಾಗಿ ಬೃಹನ್ಮಠದ ಶೂನ್ಯಸಿಂಹಾಸನವನ್ನೇರಿ ಷಟ್ಸ್ಥಲಪಟ್ಟಾಧಿಕಾರಿಯಾದನು.

ಈತನು ತನ್ನ ಶಿಷ್ಯರಾದ ಹರೀಶ, ಚನ್ನವೀರ, ಕರಿಬಸವ ಮತ್ತು ಚನ್ನಬಸವದೇವರ ಕೋರಿಕೆಯಂತೆ ಸೋದೆಯ ಸದಾಶಿವರಾಯನು ವರ್ಣಕದಲ್ಲಿ ಹೇಳಿದುದನ್ನು ತಾನು ವಸ್ತುಕದಲ್ಲಿ ಬರೆದುದಾಗಿ ೧-೨-೧೧ ಮತ್ತು ೪-೧೭-೧೨೫, ೧೨೬ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ. ತನ್ನ ಈ ಕಾವ್ಯವು ಶಾಲಿವಾಹನಶಕ ೧೬೪೨ನೆಯ ಶಾರ್ವರೀ ಸಂವತ್ಸರದ ಜ್ಯೇಷ್ಠಮಾಸ ಶುದ್ಧ ತದಿಗೆ ಆದಿತ್ಯವಾರ ಸಿಂಹಲಗ್ನ ಪುಷ್ಯನಕ್ಷತ್ರ ಧ್ರುವಯೋಗ ಗರಜಾಕರಣ ಉದಯದ ೧೪ ಗಳಿಗೆ ಅಂದರೆ ಕ್ರಿ.ಶ. ೩೧-೫-೧೭೨೦ಕ್ಕೆ ಸರಿಯಾಗಿ ಮುಗಿಯಿತು ಎಂದು ೪-೧೭-೧೬೩, ೧೬೪ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.

ತನ್ನ ಕೃತಿಯ ಪ್ರಾರಂಭದಲ್ಲಿ ಮೀನಾಕ್ಷ್ಯಧೀಶ ಸುಂದರೇಂದ್ರ, ಪಾರ್ವತಿ, ಗಣೇಶ, ಷಣ್ಮುಖ, ವೀರಭದ್ರರನ್ನು ಸ್ತೋತ್ರಮಾಡಿ ನಂದಿ, ಭೃಂಗಿ, ವೃಷ, ಮಹಾಗುರು ರೇಣುಕ, ದಾರುಕ, ಸುಂದರ, ಕಲಿಕಂಬಕ, ಗಣನಾಥ, ಸಿರಿ

ಯಾಳ, ಚಂದಯ್ಯ, ಬಸವೇಶ, ಮಡಿವಳ್ಳ ಮಾಚಯ್ಯ, ನಾಗಣಾನಂದರು ತನ್ನ ಕೃತಿಗೆ ಮಂಜುಳವಾಣಿಯನ್ನು ಕೃಪೆಮಾಡ ಬೇಕೆಂದು ಬೇಡುತ್ತಾನೆ. ಅನಂತರ ಹಂಪೆಯ ಹರಿಹರದೇವ, ಅಲಂಪಿನ ರಾಘವ, ಅನಿಂದ್ಯಪಾಲ್ಕುರಿಕೆಯ ಸೋಮ, ಪರಮಪಂಡಿತಯ್ಯರು ರಸಭಾವ ಮುಖ್ಯವನ್ನು ನೀಡಲೆಂದು ಪ್ರಾರ್ಥಿಸಿದ್ದಾನೆ. ಗುರುತೋಂಟದಾರ್ಯ, ಸುಸ್ಥಿರ ಕೊಟ್ಟೂರೇಶ, ಭುಜಂಗೇಶ್ವರ, ಕರತಳದ ನಾಗಿದೇವರನ್ನು ಸ್ತುತಿಸಿದ್ದಾನೆ. ದೀಕ್ಷೆ ಮತ್ತು ಅಕ್ಷಯ ಶಿಕ್ಷೆಯನಿತ್ತ ಗುರು ಗಳಿಗೆ ನಮಿಸಿ ತನ್ನ ಕಾವ್ಯವನ್ನು ಹೇಳಲು ತೊಡಗುತ್ತಾನೆ. "ಈ ಹಾಲಾಸ್ಯಪುರಾಣದಲ್ಲಿ ಸುಂದರನೇ ಅಧಿಪತಿ. ಪರ ಭಕ್ತಕವಿಗಳು ಇದರಲ್ಲಿ ತಪ್ಪಿದ್ದರೆ ತಿದ್ದುಗೆ. ವ್ಯಾಕರಣಸಮ್ಮತಿಯಿಂದೆ ಲೋಕದೊಳರಿದೆನಿಪ ತೆರದೆ ಪೇಳ್ದ ಈ ಕೃತಿಯಂ ಅಭವನ ಭಕ್ತರ್ ಜೋಕೆಯಿಂ ಸ್ವೀಕರಿಸಿದೊಡೆ ಎನಗಸಂತಸುಖಂ" ಎಂದು ಹೇಳಿಕೊಳ್ಳುತ್ತಾನೆ.

ಕೈಲಾಸದಲ್ಲಿ ಶಿವ ಧ್ಯಾನದಲ್ಲಿರುವಾಗ ಶತಾನಂದಮುಖ್ಯಮುನಿಸಮೂಹವು ಬಂದು ಸುಕ್ಷೇತ್ರಮಹಿಮೆಯನ್ನು ತಿಳಿಸಬೇಕೆಂದು ಕೇಳಲು, ಅಗಸ್ತ್ಯಮುನಿಯು ಆನಂದವನದಲ್ಲಿ ಋಷಿಸಮೂಹಕ್ಕೆ ಹೇಳಿದುದನ್ನೇ ನಾನು ನಿಮಗೆ ಹೇಳು ತ್ತೇನೆಂದು ಸ್ಕಂಧಪುರಾಣದಲ್ಲಿ ಬರುವ ಹಾಲಾಸ್ಯಮಹಿಮೆಯನ್ನು ಹೇಳಲು ತೊಡಗುತ್ತಾನೆ.

ಶಿವನು ಪಾರ್ವತಿಗೆ ಹಾಲಾಸ್ಯಮಹಿಮೆಯನ್ನು ತಿಳಿಸುವಾಗ ತಾಯಿ ಪಾರ್ವತಿಯ ತೊಡೆಯ ಮೇಲಿದ್ದ ಷಣ್ಮುಖ ಅದನ್ನು ಕೇಳಿ ನನಗೆ ಅದನ್ನು ಹೇಳಿದನು ಎಂದು ಅಗಸ್ತ್ಯನು ಋಷಿಸಮೂಹಕ್ಕೆ ತಿಳಿಸಿದನು. ಆಗ ಮುನಿ ಗಳು ಕಾಶಿ ಮೊದಲಾದ ತೀರ್ಥಕ್ಷೇತ್ರಗಳಿಗೆ ಈ ಕ್ಷೇತ್ರ ಹೇಗೆ ಸಮಾನ ಎಂದು ಪ್ರಶ್ನಿಸಲಾಗಿ ಅಗಸ್ತ್ಯನು ಈ ರೀತಿ ಹೇಳಿ ದನು : ಕಾಶಿಯಲ್ಲಿ ದೇಹಾಂತಮುಕ್ತಿಯಾದರೆ ಇಲ್ಲಿ ಜೀವನ್ಮುಕ್ತಿ ದೊರೆಯುತ್ತದೆ. ಇದು ಶಿವನ ಲೀಲಾವಿಹಾರ ಕ್ಷೇತ್ರ. ವೃತ್ರಹತ್ಯಾ ಪಾಪವನ್ನು ಇಂದ್ರನು ಕಳೆದುಕೊಂಡದ್ದು ಇಲ್ಲೇ. ತಾಯಿಯನ್ನು ಕೂಡಿ, ತಂದೆಯನ್ನು ಕೊಂದ ಬ್ರಾಹ್ಮಣನು ಎಲ್ಲಿಯೂ ಪರಿಹಾರವಾಗದ ಆ ಪಾಪವನ್ನು ನೀಗಿಕೊಂಡದ್ದು ಇಲ್ಲಿಯೇ. ಇಂಥ ಮಹಿಮಾನ್ವಿತವಾದ ಹಾಲಾಸ್ಯಕ್ಷೇತ್ರದಲ್ಲಿರುವ ಪುದಮುಖರಿರಲಿ. ಕ್ರಿಮಿಗಳು ಕೂಡ ಮೋಕ್ಷವನ್ನು ಪಡೆಯುತ್ತವೆ. ಈ ಕ್ಷೇತ್ರಕ್ಕೆ ಕದಂಬ ವಿಪಿನ, ಕನ್ಯಕಾನಗರಿ, ವಿದ್ಯಾನಗರಿ, ಮಧುರಾಪುರಿ, ಭೂಲೋಕ ಶಿವಲೋಕ, ಜೀವನ್ಮುಕ್ತಿಪುರ, ಚತುಷ್ಕೂಟಪುರ, ದ್ವಾದಶಾಂತ್ಯ ಶಿವಾಸ್ಪದ ಮೊದಲಾದ ದಿವ್ಯನಾಮಗಳಿವೆ ಎಂದು ಹೇಳಿ ಹೇಮಪದ್ಮಿನೀತೀರ್ಥ, ಹಾಲಾಸ್ಯಕ್ಷೇತ್ರ ಮಹಿಮೆ, ಹಾಲಾಸ್ಯಾಧಿಪ ಮೀನಾಕ್ಷೀ ಸುಂದರೇಶ್ವರನ ೬೪ ಲೀಲೆಗಳನ್ನು ಹೇಳಲು ತೊಡಗುತ್ತಾನೆ.

ಈ ಗ್ರಂಥವನ್ನು ನಾಲ್ಕು ಕಾಂಡಗಳನ್ನಾಗಿ ವಿಭಾಗಿಸಿದ್ದಾನೆ. ಇವುಗಳಲ್ಲಿ ಮೊದಲನೆಯ ಮತ್ತು ನಾಲ್ಕನೆಯ ಕಾಂಡಗಳಲ್ಲಿ ೧೭–೧೭ ಆಶ್ವಾಸಗಳೂ, ಎರಡು ಮೂರನೆಯ ಕಾಂಡಗಳಲ್ಲಿ ೧೬–೧೬ ಆಶ್ವಾಸಗಳೂ ಇವೆ. ಒಂದೊಂದು ಕಾಂಡದಲ್ಲಿ ೧೬–೧೬ರಂತೆ ಸುಂದರೇಶ್ವರ ೬೪ ಲೀಲೆಗಳನ್ನು ವರ್ಣಿಸುತ್ತಾನೆ. ಇದರಲ್ಲಿ ಒಟ್ಟು ೩೭೧೦ ಪದ್ಯಗಳಿವೆ.

**ಪ್ರಥಮಕಾಂಡ-ಕೃತಯುಗದ ೧೬ ಲೀಲೆಗಳು :** ೧) ಇಂದ್ರಾನುಗ್ರಹಲೀಲೆ, ೨) ಐರಾವತಶಾಪವಿಮೋಚನ ಲೀಲೆ, ೩) ಕದಂಬವನಪುರನಿರ್ಮಾಣಲೀಲೆ, ೪) ತಟಾತಕಾಜನನಲೀಲೆ, ೫) ತಟಾತಕಾಕಲ್ಯಾಣಲೀಲೆ, ೬) ಪತಂಜಲಿದೃಷ್ಟನರ್ತನಲೀಲೆ, ೭) ಕುಂಡೋದರಾನ್ನಭಕ್ಷಣಲೀಲೆ, ೮) ಕುಂಡಕುಕ್ಷಿದರ್ಶಿತಾನ್ನರ್ತನಾದಿಲೀಲೆ, ೯) ಸಪ್ತಸಾಗರಾನಯನಲೀಲೆ, ೧೦) ಮಲಯಧ್ವಜದರ್ಶನಲೀಲೆ, ೧೧) ಕುಮಾರೋತ್ಪತ್ತಿಲೀಲೆ, ೧೨) ಉಗ್ರ ಪಾಂಡ್ಯವಲಯಾದ್ಯಾಯುಧತ್ರಯದಾನಲೀಲೆ, ೧೩) ಶಕ್ತಿಸಾಗರತಾಡನಲೀಲೆ, ೧೪) ಇಂದ್ರಮೌಳಿಭೇದನಲೀಲೆ, ೧೫) ಮೇರುಕಾಂಚನಾಪಹರಣಲೀಲೆ, ೧೬) ವೇದಾರ್ಥಬೋಧನಲೀಲೆ.

**ದ್ವಿತೀಯಕಾಂಡ-ತ್ರೇತಾಯುಗದ ೧೬ ಲೀಲೆಗಳು :** ೧) ರಾಜಕಿರೀಟಮಣಿಪ್ರದಾನಲೀಲೆ, ೨) ಮೇಘಸಾಗರ ಪಾನಲೀಲೆ, ೩) ಮೇಘೈಕೋನವಿಂಶತ್ಯತಿವೃಷ್ಟಿನಿವಾರಣಲೀಲೆ, ೪) ಸಿದ್ಧಚರಿತಲೀಲೆ, ೫) ಶಿಲಾಗಜೇಕ್ಷುಪ್ರದಾನ ಲೀಲೆ, ೬) ನಗ್ನಹಸ್ತಿಹನನಲೀಲೆ, ೭) ದ್ವಿಜಕನ್ಯಾರ್ತಿಹರಣಲೀಲೆ, ೮) ವ್ಯತ್ಯಸ್ತ ನೃತ್ತಲೀಲೆ, ೯) ದ್ವಿಜವನಿತಾ ವಧನಿರೂಪಣಲೀಲೆ, ೧೦) ಪಿತೃಘ್ನದೋಷನಿವಾರಣಲೀಲೆ, ೧೧) ಅಂಕವಿಜಯಲೀಲೆ, ೧೨) ನಗ್ನಸರ್ಪಹನನ ಲೀಲೆ, ೧೩) ನಗ್ನಧೇನುಪತನಲೀಲೆ, ೧೪) ಸೇನಾದರ್ಶನಲೀಲೆ, ೧೫) ಹೇಮನಿಧಿಪ್ರದಾನ ಲೀಲೆ, ೧೬) ವಲಯವಿಕ್ರಯಲೀಲೆ.

**ತೃತೀಯಕಾಂಡ-ದ್ವಾಪರಯುಗದ ೧೬ ಲೀಲೆಗಳು :** ೧) ಅಷ್ಟಸಿದ್ಧ್ಯುಪದೇಶಲೀಲೆ, ೨) ಕಾಂತಾರಚ್ಛೇದಿ ಚೋಳಾರ್ಥಂ ದ್ವಾರಭೇದನಲೀಲೆ, ೩) ಪಾಂಡ್ಯಸೇನಾಪಾನೀಯಪ್ರದಾನಲೀಲೆ, ೪) ರಸವಾದ ಪ್ರದರ್ಶನಲೀಲೆ, ೫) ಚೋಳಸೇನಾಪ್ರಪಾತನಲೀಲೆ, ೬) ಶೂದ್ರಾಕ್ಷತಮೂತಪ್ರದಾನಲೀಲೆ, ೭) ವೈಶ್ಯಮಾತುಳಭಾವನಾಲೀಲೆ,

೮) ವರಗುಣಪಾಂಡ್ಯ ಬ್ರಹ್ಮಹತ್ಯಾ ವಿನಾಶನಲೀಲೆ, ೯) ಕಾಷ್ಠಭಾರಧಾರಣಲೀಲೆ, ೧೦) ಪತ್ರಿಕಾಲೇಖನಲೀಲೆ, ೧೧) ಭದ್ರಫಲಕಪ್ರದಾನಲೀಲೆ. ೧೨) ಭದ್ರಸ್ತ್ರೀ ಜಯಪ್ರದಲೀಲೆ. ೧೩) ವರಾಹಶಿಶುಸ್ತನ್ಯಪ್ರದಾನಲೀಲೆ, ೧೪) ಕ್ರೋಡಶಿಶುಸಚಿವತ್ವಪ್ರದಾನಲೀಲೆ. ೧೫) ಭಾರದ್ವಾಜಮೃತ್ಯುಂಜಯೋಪದೇಶಲೀಲೆ, ೧೬) ಕೋಯೆಷ್ಟಿ ಮುಕ್ತಿಪ್ರದಾನಲೀಲೆ.

**ಚತುರ್ಥಕಾಂಡ-ಕಲಿಯುಗದ ೧೬ ಲೀಲೆಗಳು :** ೧) ಪುರಸೀಮಾಪ್ರದರ್ಶನಲೀಲೆ. ೨) ಚೋಳಸೇನಾ ಪ್ರಭಂಜನಲೀಲೆ, ೩) ಸಂಘಫಲಕಪ್ರದಾನಲೀಲೆ. ೪) ದ್ವಿಜಾರ್ಯಪ್ರದಾನಲೀಲೆ. ೫) ನತ್ಕೀರರಕ್ಷಣಲೀಲೆ, ೬) ನತ್ಕೀರಸೂತ್ರೋಪದೇಶಲೀಲೆ. ೭) ಪ್ರಬಂಧತಾರತಮ್ಯನಿರ್ಣಯಲೀಲೆ. ೮) ಉತ್ತರಹಾಲಾಸ್ಯಪ್ರಾದುರ್ಭಾವ ಲೀಲೆ. ೯) ಕೈವರ್ತಕನ್ನಿಕಾಕಲ್ಯಾಣಲೀಲೆ. ೧೦) ವಾತಪುರೀಶ್ವರಜ್ಞಾನದೀಕ್ಷಾಕಾರಣಲೀಲೆ, ೧೧) ತುರಂಗವಿಕ್ರಯ ಲೀಲೆ. ೧೨) ನದ್ಯಾಕರ್ಷಣಲೀಲೆ, ೧೩) ಪಿಷ್ಟಮೃದ್ಧರಣಲೀಲೆ. ೧೪) ಪಾಂಡ್ಯಜ್ವರಶಮನಲೀಲೆ. ೧೫) ನಗ್ನ ಶೂಲಾರೋಹಣಲೀಲೆ. ೧೬) ಶಂಭುಕೂಪಶಮೀವೃಕ್ಷಾನಯನಲೀಲೆ. ಸುಂದರೇಶ್ವರನ ಈ ೬೪ ಲೀಲೆಗಳನ್ನು ಅಗಸ್ತ್ಯನು ತನ್ನ ಧರ್ಮಪತ್ನಿ ಲೋಪಾಮುದ್ರೆಯೊಡನೆ ವಸಿಷ್ಠಾದಿ ಮಹರ್ಷಿಗಳಿಗೆ ವಿವರಿಸಿದನು. ಅನಂತರ ಶಾಂಭವೀಚಕ್ರದ ಮಹಿಮೆಯನ್ನು ಹೇಳಿ ಕವಿ ಸ್ವವಿಷಯಗಳನ್ನು ಹೇಳಿಕೊಳ್ಳುತ್ತಾನೆ.

ಈ ಗ್ರಂಥವನ್ನು ಅಭ್ಯಾಸ ಮಾಡಿದವರಿಗೆ ಮಧುರೆ-ಮೀನಾಕ್ಷಿ, ಪಾಂಡ್ಯರಾಜವಂಶಾವಳಿ, ತಮಿಳಿನ ಸಂಘ ಸಾಹಿತ್ಯ ಇವುಗಳ ಪರಿಚಯವಾಗುವುದರಲ್ಲಿ ಸಂಶಯವಿಲ್ಲ. ವೀರಶೈವ ಚಂಪೂಕಾವ್ಯಗಳ ದೃಷ್ಟಿಯಿಂದ ನೋಡಿದಾಗ ಹರಿಹರ. ಷಡಕ್ಷರಿಯರನ್ನು ಬಿಟ್ಟರೆ ಮೂರನೆಯ ಸ್ಥಾನದಲ್ಲಿ ನಿಲ್ಲುವ ಕವಿಯೇ ಇಮ್ಮಡಿಗುರುಸಿದ್ಧ ಎಂಬುದರಲ್ಲಿ ಸಂಶಯವಿಲ್ಲ. ಷಡಕ್ಷರಿಯಾದ ಮೇಲೆ ಬರುವ ಈ ಕವಿಯ ಮೇಲೆ ಷಡಕ್ಷರಿಯ ಗಾಢವಾದ ಪ್ರಭಾವವಿರುವುದನ್ನು ಮರೆಯುವಂತಿಲ್ಲ. ಹೀಗಾಗಿ ಉಭಯಭಾಷಾವಿಶಾರದನಾದ ಇಮ್ಮಡಿಗುರುಸಿದ್ಧ ೬೪ ಲೀಲೆಗಳನ್ನು ವರ್ಣಿಸು ವಾಗ ಎದುರಾಗುವ ಸಂಕೀರ್ಣ ಕತೆಯನ್ನು ಬಳಸಿಕೊಂಡು ಮಹೋನ್ನತವಾದ ಕಾವ್ಯವನ್ನು ರಚಿಸಿರುವುದು ಈತನ ಉಜ್ವಲ ಪ್ರತಿಭೆಗೆ ಸಾಕ್ಷಿಯಾಗಿದೆ.

ಈ ಗ್ರಂಥದ ಮತ್ತೊಂದು ವೈಶಿಷ್ಟ್ಯವೆಂದರೆ ಕವಿ ೬೪ ವಿಭಿನ್ನಲೀಲೆಗಳನ್ನು ವರ್ಣಿಸಲು ಬಳಸಿಕೊಂಡಿರುವ ವಿಭಿನ್ನಛಂದೋವೈವಿಧ್ಯ. ಇದುವರೆಗೂ ಕನ್ನಡ-ಸಂಸ್ಕೃತ ಕವಿಗಳಾರೂ ಬಳಸದಷ್ಟು ಛಂದಸ್ಸನ್ನು ಬಳಸಿ ಒಂದು ಮೈಲಿಗಲ್ಲನ್ನು ಸ್ಥಾಪಿಸಿದ್ದಾನೆ. ಈತನು ತನ್ನ ಗ್ರಂಥರಚನೆಯಲ್ಲಿ ವಿಭಿನ್ನಸನ್ನಿವೇಶದ ಅಭಿವ್ಯಕ್ತಿಗಾಗಿ ಕಂದ, ವೃತ್ತ, ರಗಳೆ, ತ್ರಿಪದಿ, ತ್ರಿವಡೆ : ಗದ್ಯ. ವಚನ. ಚೂರ್ಣಿಕೆ ಹೀಗೆ ಅಕ್ಷರ, ಮಾತ್ರಾ, ಅಂಶಗಣ ಛಂದಸ್ಸುಗಳನ್ನು ೧೭೫ಕ್ಕೂ ಮಿಕ್ಕು ಬಳಸಿದ್ದಾನೆ.

ಅಂಭಿನಿ, ಅಕ್ಕರಿಕೆ. ಅಚಲಜಿಹ್ವಾವಿತಾನ. ಅಚ್ಯು(ಚ್ಯು)ತಕ. ಅನಂತ, ಅನವದ್ಯ (ಅನಿಲ), ಅಭ್ರಕ. ಅಮಳ, ವಿತಾನ, ಅರವಿಂದ, ಅರ್ಕಮರೀಚಿ : ಇಂದುವದನಾ (ವನಮಯೂರ). ಇಂದ್ರವಜ್ರ : ಉತ್ಪಲಮಾಲೆ. ಉತ್ಸಾಹ, ಉತ್ಸಾಹರಗಳೆ, ಉತ್ಸುಕ, ಉದಯ. ಉದಾತ್ತ. ಉಪಮ. ಉಪೇಂದ್ರವಜ್ರ; ಕಂದ. ಕನಕಾಬ್ಜಿನಿ. ಕಲ್ಯಾಣ. ಕವಿರಾಜವಿರಾಜಿತ. ಕಾಂಚನಮಾಲೆ. ಕಾಂತ. ಕುಮುದ. ಕುಸುಮಶರನಿರತಿಶಯ. ಕುಸುಮಾಂಘ್ರಿಪ. ಕೋಮಳ. ಕ್ರೌಂಚಪದ ; ಖಚರಪ್ಲುತ (ಪರಪ್ಲುತ) : ಗಂಧಶಾಲಿನಿ : ಚಂದ್ರಕಾಂತ, ಚಂದ್ರಿಕಾ(ಕೆ). ಚಂದ್ರಿಕೆ, ಚಂಪಕಮಾಲೆ. ಚತುರ್ದಳೆ, ಚತುರ್ದಳಿ. ಚಾಮರ, ಚಿತ್ರಪದ. ಚೂರ್ಣಿಕೆ. ಚೂತಕುಜ, ಛಂದೋವೃತ್ತ : ಜಗದ್ವಿಭೂತಿ. ಜನಹಿತ. ಜನೋದಯ. ಜಳೋದ್ಧತಗತ ; ತರಳ. ತಿಲಕ, ತುರಂಗ. (ತುರಂಗಮ. ತರಂಗ). ತೋಟಕ. ತನುಮಧ್ಯ, ತ್ರಿಪದಿ, ತ್ರಿಪದೋನ್ನತಿ. ತ್ರಿವ(ವಿ)ಡೆ ; ದಿವಿಜಕಲ್ಪಲತಾ(ತೆ). ದೇವರಮ್ಯ. ದ್ರುತಪದ. ದ್ರುತವಿಲಂಬಿತ. (ಧೃತಪೂರ್ವವಿಲಂಬಿತ) : ಧವಳಾರ ತ್ರಿಪದಿ : ನರ್ಕುಟಕ. ನಗರರಂಜಿತ (ವನಮಂಜರಿ). ನವನಳಿನ. ನವಮಂಜರಿ. ನಾಕಿನಿ. ನಿಮಾತಿಶಯ. ನಿರುಪಮ, ನುತ(ವಿನುತ) : ಪಣವಕ. ಪದ್ಮಮುಖಿ. ಪುಟ, ಪುನರ್ಮಂದಾನಿಲ. ಪುಷ್ಪಿತಾಗ್ರ. ಪೃಥ್ವಿ, ಪ್ರಭಾತ, ಪ್ರಮಾಣಿಕ. ಪ್ರವರಾಕ್ಷರ, ಪ್ರಹರಣತಿಲಕ, ಪ್ರೇಮ, ಪ್ರೋದ್ದಾಮ : ಬಿರುದಾವಳಿ ಗದ್ಯ : ಭದ್ರಕ (ಹಲಾಮುಖಿ, ಶ್ರೀವಿಲಾಸಿನಿ, ಶ್ರುತಾನಂತ), ಭದ್ರಕ, ಭುಜಂಗಪ್ರಯಾತ, ಭುಜಂಗ ವಿಜೃಂಭಿತ, ಭುಜಗಶಿಶು. ಭ್ರಮರವಿಲಸಿತ : ಮಂಗಳ, ಮಂಜುಭಾಷಿತ. ಮಂದಾಕ್ರಾಂತ, ಮಂದಾನಿಲ, ಮಂದಾನಿಲ ರಗಳೆ. ಮಣಿಗಣನಿಕರ. ಮಣಿರಂಗ, ಮಣಿವಿಭೂಷಿತ (ಮಣಿವಿಭೂಷಣ. ಮಣಿಭೂಷಣ) ಮತ್ತ (ಪುನರ್ಮಂದಾನಿಲ). ಮತ್ತಕೋಕಿಲ. ಮತ್ತಕ್ರೀಡಾ(ಡೆ). ಮತ್ತೇಭವಿಕ್ರೀಡಿತ, ಮಯೂರ, ಮಲ್ಲಿಕಾಮಾಲೆ, ಮಹಾಸ್ರಗ್ಧರೆ, ಮಾಣವಕ,

ಮಾನಿನಿ, ಮಾಲಿನಿ, ಮೃಗನೇತ್ರ, ಮೇಘವಿಸ್ಫೂರ್ಜಿತ, ಮೋದಕ: ರಥೋದ್ಧತ, ರವಿಭ್ರಮ, ರುಚಿರ, ಲಯಗ್ರಾಹಿ(ತ), ಲಲಿತ(ಲಲಿತಗತಿ), (ಲಯಗ್ರಾಹಿತ), ಲಲಿತಗತಿ, ಲಲಿತಪದ, ಲಲಿತರಗಳೆ, ಲಲಿತಹರಣ: ವಂಶವೃತ್ತ(ವಂಶಸ್ಥ), ವಕುಳ, ವಕುಳ ಕುಟ್ಮಳ, ವನಜ, ವನಮಂಜರಿ(ನವಮಂಜರಿ), ವನಲತೆ, ವಸಂತ ತಿಲಕ, ವಿಚಿತ್ರಪದ, ವಿಚಿತ್ರಲಲಿತ(ಪದ), ವಿಜಯಾನಂದ, ವಿದಳಿತವನರುಹಲಲಿತ, ವಿದ್ಯುನ್ಮಾಲೆ, ವಿಭ್ರಮ, ವೈತಾಳಿ, ವೈವಸ್ವದ; ಶಶಿಕಾಂತ, ಶಾರ್ದೂಲವಿಕ್ರೀಡಿತ, ಶಾಲಿನಿ, ಶಾಲಿನಿ(?)ವಿತಾನ, ಶಿಖರಿಣಿ, ಶ್ಲೋಕ; ಸರಳ, ಸಿಂಧುನಂದನ, ಸುರಂಗಕೇಸರ(ರಿ), ಸುರತರು (ಸರ್ವಲಘು ನಿರೋಷ್ಠ್ಯ), ಸುಲಲಿತ, ಸೈನಿಕ, ಸೌಂದರ, ಸ್ರಗ್ಧರೆ, ಸ್ರಗ್ವಿಣಿ, ಸ್ವಾಗತ(ಮಂಗಳ); ಹಂಸಗತಿ, ಹಂಸಪದ, ಹಂಸಮತ್ತ (ಹಂಸಿ), ಹರಿಣಿ, ಹರಿಣಪ್ಲುತ(ಲಲಿತಹರಿಣ), ಹಲಾಮುಖಿ—ಇವು ಈತನು ಬಳಸಿರುವ ಛಂದಸ್ಸುಗಳು.

ವೀರಶೈವ ಚಂಪೂಕಾವ್ಯಗಳನ್ನು ನಿಕಟವಾಗಿ ಪರಿಶೀಲಿಸಿದಾಗ ಎಲ್ಲ ದೃಷ್ಟಿಯಿಂದಲೂ ಪ್ರಥಮಸ್ಥಾನವನ್ನು ಪಡೆದು ಕ್ರಾಂತಿಕಾರ ಮಹಾಕವಿ ಎಂದು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹೆಸರಾಗಿರುವ ಹರಿಹರನಾದ ಮೇಲೆ ಎರಡನೆಯ ಸ್ಥಾನವನ್ನು ಪಡೆಯುವ ಷಡಕ್ಷರಿಯನ್ನು ಬಿಟ್ಟರೆ–ಮೂರನೆಯ ಸ್ಥಾನವನ್ನು ಪಡೆಯುವ ಚಂಪೂಶೈಲಿಯ ಮಹಾ ಕವಿಯೆನಿಸಿಕೊಳ್ಳುವವನೆಂದರೆ ಇಮ್ಮಡಿ ಮುರುಗ ಗುರುಸಿದ್ಧನೇ ಎಂಬುದರಲ್ಲಿ ಸಂಶಯವಿಲ್ಲ. ಒಂದು ಕಡೆ ಧರ್ಮ ಸಂಸ್ಥಾಪನೆಯನ್ನು ನಿರ್ವಹಿಸುವ ಬೃಹನ್ಮಠವೊಂದರ ಮಹಾಸ್ವಾಮಿಯಾಗಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಗುರುಸಿದ್ಧನು ಉತ್ತಮ ಗ್ರಂಥಗಳನ್ನೂ, ಪ್ರೌಢಚಂಪೂಕಾವ್ಯವನ್ನೂ ಬರೆದು ಕನ್ನಡ ಸಾಹಿತ್ಯ ಚರಿತ್ರೆ ಯಲ್ಲಿ ಗಣನೀಯವಾದ ಸ್ಥಾನವನ್ನು ಪಡೆದಿರುವುದು ಆತನ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ. ಇದೊಂದೇ ಗ್ರಂಥವನ್ನಲ್ಲದೆ, ಕನ್ನಡದ ಬೇರೆ ಬೇರೆ ಛಂದಸ್ಸುಗಳಲ್ಲಿ ಅನೇಕ ಕಾವ್ಯಗಳನ್ನು ಬರೆದು ಸಾಹಿತ್ಯ ಚರಿತ್ರೆಯಲ್ಲಿ ಪ್ರಧಾನಸ್ಥಾನವನ್ನೇ ಪಡೆದುಕೊಳ್ಳುವುದರ ಮೂಲಕ ಧರ್ಮ, ಸಂಸ್ಕೃತಿ, ಸಾಹಿತ್ಯಗಳಿಗೆ ತನ್ನ ಅಮೂಲ್ಯ ಕಾಣಿಕೆ ಯನ್ನು ಕೊಟ್ಟು ಚಿರಸ್ಥಾಯಿಯಾದ ಕೀರ್ತಿಗೆ ಭಾಜನನಾಗಿದ್ದಾನೆ.

**ರಸಿಕಮನೋರಂಜನವಿಲಾಸಕಾವ್ಯ: ಕುಂಡಲಗಿರಿ**

ಈ ಕಾವ್ಯವನ್ನು ಬರೆದ ಕವಿ, ಅಮಾತ್ಯರ ವಂಶದಲ್ಲಿ ಹುಟ್ಟಿ ಶ್ರೇಷ್ಠ ಅಮಾತ್ಯನೆನಿಸಿದ ಕುಂಡಲಗಿರಿ. ಕೊಂಡಲ ಗಿರಿಯೆಂದೂ ಹಸ್ತಪ್ರತಿಯಲ್ಲಿ ಬರೆಯಲಾಗಿದೆ. ಇದು ಹನ್ನೊಂದು ಆಶ್ವಾಸಗಳಿಂದ ಕೂಡಿದ ಚಂಪೂಕಾವ್ಯ. ಕವಿ ತನ್ನ ಕಾವ್ಯದ ಕೊನೆಯಲ್ಲಿ ತನ್ನ ವಂಶವನ್ನು ಕುರಿತು ಈ ರೀತಿ ಹೇಳಿಕೊಂಡಿದ್ದಾನೆ.

ವರದಿಗ್ಗಾವಿಪುರಪ್ರಭುಪ್ರಥಿತಧರ್ಮಾಮಾತ್ಯಪೌತ್ರಂ ಮಹೇ
ಶ್ವರಪೂಜಾಪರತಿಮ್ಮಮನ್ತ್ರಿತನುಜಂ ಗೌರಾಂಬಿಕಾಭರ್ತೃಜಾ
ಯರಸಂ ಶಿಷ್ಟವಸಿಷ್ಠಗೋತ್ರಕಲಿತಂ ತಾಂ ಗೌತಮೀಕಾಂತನಂ
ವಿರುಪಣ್ಣಾವರಜಾತಕೊಂಡಗಿರಿಯಂ ಪೆತ್ತಂ ಮಹಾಪ್ರೌಢನಂ ॥ ೧೧–೧೫೩ ॥

ವಿಲಸತ್ಸದ್ಗುಣಶಾಲಿ ಕೊಂಡಲಗಿರಿ ಪ್ರಖ್ಯಾತನಾನುಂ ಮಹಾ
ಬಲದ್ಪೂರಿ ತುರುಷ್ಕಕಾನ್ತ ಸಮರ ಕೃಷ್ಣಾಶ್ವದಂತಾವಲಾ
ವಲಿಭೂಮಿ ಪ್ರಭೃತಪ್ಪದಾನ ವಿದಿ ಭೂಪಾಲೀಕೃತರ್ಥ ವಜ್ರೋ
ಜ್ವಲ ನಂ(ಹಂ)ಡೆ ಮುಲುಕೇಂದು ಮಾನ್ಯಸಚಿವಂ ಪಂಪಾಧಿಪಂಗಿಷ್ಟಮ
ಪ್ಪೊಲೆ ಪೇಳ್ವಂ ಕವಿಸೇವ್ಯಮಂ ಸಕಲವಿದ್ವಚ್ಛ್ರಾವ್ಯಮಂ ಕಾವ್ಯಮಂ ॥ ೧೧–೧೫೪ ॥

ದಿಗ್ಗಾವಿಪುರಪ್ರಭುವಿನಲ್ಲಿ ಮಂತ್ರಿಯಾಗಿದ್ದ ಧರ್ಮಾಮಾತ್ಯನ ಪೌತ್ರ, ಶಿವಪೂಜಾಪರನಾದ ತಿಮ್ಮ ಮಂತ್ರಿಯ ತನುಜ, ಜಾಯಾಮಾತ್ಯನು ಗೌತಮೀಕಾಂತನಾದ ಮಹಾಪ್ರೌಢನೆನಿಸಿದ ಕೊಂಡಗಿರಿಯನ್ನು ತನ್ನ ಪತ್ನಿ ಗೌರಾಂಬಿಕೆ ಯಿಂದ ಪಡೆದನೆಂದೂ, ಪಂಪಾವಿರೂಪಾಕ್ಷನಿಗೆ ಇಷ್ಟವಾಗುವಂತೆ ಸಕಲಕವಿಸೇವ್ಯವೂ, ವಿದ್ವನ್ಮಣಿಗಳಿಂದ ಶ್ರಾವ್ಯವೂ ಆದ ಈ ಕಾವ್ಯವನ್ನು ಬರೆದನೆಂದೂ ಮೇಲಿನ ಪದ್ಯಗಳಿಂದ ತಿಳಿದುಬರುತ್ತದೆ.

ಈತನು ತನ್ನ ಕಾವ್ಯಾರಂಭದಲ್ಲಿ ಹಂಪೆಯ ವಿರೂಪಾಕ್ಷ, ಪಾರ್ವತಿ, ವಿನಾಯಕ, ನಂದಿ, ಸರಸ್ವತಿಯರನ್ನು ಪ್ರಾರ್ಥಿಸಿ, ಹರಿಹರನನ್ನು ಮಾತ್ರ ಸ್ಮರಿಸಿದ್ದಾನೆ. ಅನಂತರ ಸುಲಲಿತವಾದ ಕಾವ್ಯ ನಾಲಗೆಗೆ ದ್ರಾಕ್ಷಾಫಲದಂತೆ

ಮೃದುವಾಗಿರಬೇಕು, ಸುಲಭಗ್ರಾಹ್ಯವಾಗಿರಬೇಕು, ಹಾಗಿದ್ದರೆ ಅದು ಸುಕೃತಿ, ಸತ್ಕೃತಿ ಎಂದು ಹೇಳಿ ತನ್ನ ಕಾವ್ಯದ ಹಿರಿಮೆಯನ್ನು ಈ ಪದ್ಯದಲ್ಲಿ ಹೀಗೆ ಹೇಳಿಕೊಂಡಿದ್ದಾನೆ:

ರಸಮಿದು ಪಂಡಿತಾರ್ಥಮಿದು ಭಾವಮಿದೂಹ್ಯಪದಾರ್ಥಮಿಂತಿದಾ
ಯಸಮಿದು ಲಕ್ಷಣಾರ್ಥಮಿದಲಂಕೃತಿಸಾರಮಿದಾದಿಸತ್ಕವೀಂ
ದ್ರಸಮುಸಿದ್ಧಮಿಂತಿದೆನುತುಂ ತಿಳಿದಾದರದಿಂದಮಾಲಿಪಾ
ರಸಿಕರ ದಿಟ್ಟಿಗೆ ಕೃತಿ ಬೀಳ್ಪೊಡೆ ಹಾ ಕೃತಕೃತ್ಯನಾಗೆನೇ ॥ ೧–೧೯ ॥

ಅನಂತರ ತಾನು ಕಾವ್ಯವನ್ನು ಬರೆಯಲು ಕಾರಣವನ್ನು ಈ ರೀತಿ ಹೇಳಿಕೊಂಡಿದ್ದಾನೆ:

ಆ ಕಾಶೀಕಾಂಡದೊಳಂ । ಪ್ರಾಕಟ್ಯದಿನೆಸೆವುತಿರ್ಪ ಶೈಲೇಶ್ವರ ಶೋ ॥
ಭಾಕರ ರತ್ನೇಶ್ವರರ ಮ । ಹಾ ಕಥೆಯಂ ಕನ್ನಡದೊಳೆ ಸೊಗಸಾಗುವವೊಲ್ ॥ ೧–೨೦ ॥

ಚಿತ್ತರಿಸಯ್ಯ ನೂತನವಚಶ್ಚತುರಪ್ರಿಯಸರ್ವಭೂಮಿಪಾ
ಲೋತ್ತಮಮಾನ್ಯಕೊಂಡಲಗಿರಿಪ್ರಕಟಾಭಿಧಮಂತ್ರಿಯೆಂದು ಸ
ದ್ವೃತ್ತರಭಿಜ್ಞರೀಶಕರ್ಬಹುಮಾನಮನಿತ್ತು ಪೇಳೆ ಮ
ಚ್ಚಿತ್ತದೊಳಮ್ಮ ಸನ್ನೆಲಸೆ ಪೇಳ್ವೆನೀ ಸುಕರಪ್ರಬಂಧಮಂ ॥ ೧–೨೨ ॥

ಕಾಶೀಕಾಂಡದಲ್ಲಿ ಪ್ರಸಿದ್ಧವಾಗಿರುವ ಶೈಳೇಶ್ವರ ರತ್ನೇಶ್ವರರ ಕಥೆಯನ್ನು ಸೊಗಸಾಗುವಂತೆ ಕನ್ನಡದಲ್ಲಿ ಹೇಳಲು ನೂತನವಚಶ್ಚತುರನಾದ ನೀನೇ ಸಮರ್ಥ ಎಂದು ವಿದ್ವಾಂಸರು, ಈಶನ ಭಕ್ತರು ಬಹುಮಾನವನ್ನು ಕೊಟ್ಟು ಹೇಳಲು ನನ್ನ ಮನಸ್ಸಿನಲ್ಲಿ ಅವರ ಮಾತು ನಾಟಿ ಈ ಸುಕರಪ್ರಬಂಧವನ್ನು ಹೇಳಿದೆನೆಂದು ಹೇಳುತ್ತಾನೆ. ಮುಂದುವರಿದು:

ರಸಿಕಮನೋರಂಜನಮೀ । ರಸಿಕೃತಿಯಧಿನಾಥನೆ ವಿರೂಪಾಕ್ಷಂ ಸಂ ॥
ತಸದಿಂ ಪೋಷಿಸಿ ಬೆಳಸುವ । ರಸಮಾಕ್ಷನ ಭಕ್ತರೆಂದೊಡಾರೋದರಿದಂ ॥ ೧–೨೩ ॥

ರಸಿಕಮನೋರಂಜನಮೆಂ । ಬಸದೃಶಕೃತಿಯುಕ್ತಿರಸಿಕರಂ ಮೋಹಿಸುಗುಂ ॥
ವಸಮಾದ ಪೆಣ್ಣಸನ್ನೆಯ । ರಸಗೇಯರಸವು ಭುಜಂಗರಂ ಮೋಹಿಸುವೊಲ್ ॥ ೨–೨೪ ॥

ತನ್ನ ಕಾವ್ಯವು ರಸಿಕಮನೋರಂಜನೆಯನ್ನುಂಟುಮಾಡುವುದರಿಂದ ಇದರ ಹೆಸರು ರಸಿಕಮನೋರಂಜನವೆಂದೂ, ವಿರೂಪಾಕ್ಷನೇ ಈ ಕಾವ್ಯಕ್ಕೆ ಅಧಿನಾಯಕನೆಂದೂ, ಈ ಕಾವ್ಯವು ವಶಳಾದ ಕನ್ನೆಯ ಸನ್ನೆಯು ಭುಜಂಗರನ್ನು ಮೋಹಿಸುವಂತೆ ಮೋಹಿಸುವುದೆಂದೂ, ಇದನ್ನು ಬರೆದವನು ನೂತನವಚಶ್ಚತುರಪ್ರಿಯಸರ್ವಭೂಮಿಪಾಲೋತ್ತಮ ಮಾನ್ಯನಾದ ಕೊಂಡಲಗಿರಿಪ್ರಕಟಾಭಿಧಮಂತ್ರಿಯೆಂದೂ ಹೇಳಿಕೊಂಡಿದ್ದಾನೆ. ಅನಂತರ ತನ್ನ ಕಾವ್ಯದಲ್ಲಿ ಬರುವ ಕಂದ ವೃತ್ತ, ಪದ್ಯಗಳನ್ನು ಕುರಿತು ಈ ರೀತಿ ಹೇಳುತ್ತಾನೆ:

ಪದ್ಯಂಗಳ್ ಸಲ್ಲಕ್ಷಣ । ಪದ್ಯಂಗಳ್ಸುಕವಿನಿಕರವಿಮಲಮನೀಷಾ ॥
ವೇದ್ಯಂಗಳ್ ಶಂಕರಸ್ಯೈ । ವೇದ್ಯಂಗಳ್ಮೆರೆವುತಿರ್ಪುವೀ ನುತಕೃತಿಯೊಳ್ ॥ ೧–೨೫ ॥

ವೃತ್ತಂಗಳ್ ಸದಲಂಕೃತಿ । ವೆತ್ತಂಗಳ್ ವಿಮಲಮತಿಯ ಪೀಯೂಷರಸಾ ॥
ಯತ್ತಂಗಳ್ ಚಿತ್ರಾರ್ಥಚಯಾ । ಯತ್ತಂಗಳ್ಸೊಗಸುತಿರ್ಕುಮೀ ನುತಕೃತಿಯೊಳ್ ॥ ೧–೨೬ ॥

ಕಂದಗಳ್ವಾಗ್ವನಿತೆಯ . . . . ರಿಮರಿಸ ನಿಸ್ಯಂದಿಮ ಚೌ ।
ಸ್ಕಂದಗಳ್ಕೃತಿ ಲತಿಕಾ । ಕಂದಂಗಳ್ಶಾಮೆಯೆನಿಸಿ ಸವಿವೆರೆದಿರ್ಕುಂ ॥ ೧–೨೭ ॥

ಇಂತೆಂದಖಿಳ ಸುಕವಿನಿಕರ ವೊಲವಿನಿಂ ರಾಗರಸಾಬ್ಧಿಯೊಳ್ಮುಂಕಾಡಿಯುಂ, ರಸಾವೇಶದಿಂ ತಲೆಯನೊಡೆದಾಡಿಯುಂ, ಬಾಷ್ಪಜಲಮನೆರೆದು ಪುಳಕಸಸ್ಯಾಳಿಯಂ ನಳನಳಿಸಿ ಬೆಳೆದಂತೆ ನಿಶ್ಚಲಚಿತ್ತರಾಗಿ ಕೇಳ್ವಂತೆಯುಂ, ಸಂಕಲ್ಪಮತಿಜಂಪತಿ

ಸಂಯೋಗದಿನೊಗೆದು ನವರಸಾಮೃತಮಂ ಸೇವಿಸಿ ನೂತನದಿಂ ಬೆಳೆದು ಸವಿಪಾತಿನ ವಿಕ್ಷೇಪದಿಂ ನಡೆದು ಸಮೃದ್ಧಿ ಪಡೆದು ಸುಪ್ರಸಾದಮುಖಿ ವೃತ್ತಸ್ತನೆ. ಲಘುಮಧ್ಯೆ. ಗುರುನಿತಂಬೆ. ಸುವರ್ಣರೂಪೆ. ರಮ್ಯಾಲಂಕಾರೆ. ಸುಖಾಸ್ಪಿತೆ. ಶುಭಲಕ್ಷಣಲಕ್ಷಿತೆಯುಂ ಕಾಮಾರ್ಥದಾಯಕಿಯುಮಾಗಿ ಕೃತಿಮನೋಹರೆ ಕೋವಿದರರ್ದೆಯನಿರ್ಕೆಳಿಗೊಳ್ವಿನಂ ರಂಗುರಕ್ತಿಯಿಂ ಇಂಪು ಸೊಂಪು ಸುಣ್ಪು ಗುಣ್ಪು ಚಿತ್ರ ಚಮತ್ಕಾರಮಂಬಿಪ (ರೊಳ್ಪೆಳೆದು)ರೊಳ್ವಿಣದು ಸಾಣೆಗಂಡ ರತ್ನಂಗಳಂ ಸರಂಗೊಳಿಸುವಂತೆ ಕೃತಿಮಾಲಿಕೆಯುಂ ಮಾಡಿದ ಕಥಾಪ್ರಾರಂಭಮೆಂತೆಂದೊಡೆ—ಎಂದು ಹೇಳಿಕೊಂಡು ತನ್ನ ಈ ಕಾವ್ಯದ ಸೊಗಸೇನು ಎಂಬುಧನ್ನು ಸೂಚಿಸಿದ್ದಾನೆ.

ಅನಂತರ ಪರ್ವತ. ಸಮುದ್ರ, ಪಟ್ಟಣ ಮುಂತಾದ ಅಷ್ಟಾದಶವರ್ಣನೆಗಳನ್ನು ಮಾಡುತ್ತಾನೆ. ಈತನ ಈ ವರ್ಣನೆಗಳ ಮಧ್ಯ ಕಥೆ ಎಲ್ಲೆಲ್ಲಿಯೋ ದಾರಿ ತಪ್ಪಿ. ದಾರಿ ಹುಡುಕಿಕೊಂಡು ನುಸುಳಿಕೊಂಡು ಮುಂದೆ ಸಾಗುತ್ತದೆ. ಇದರಲ್ಲಿ ಗಿರಿರಾಜ-ಮೇನಾದೇವಿಯರ ಕಥೆಯನ್ನು ಅತ್ಯಂತ ರಂಜನೀಯವಾಗಿ ಹೇಳಿದ್ದಾನೆ. ಇಲ್ಲಿ ಕಥೆಗಿಂತ ವರ್ಣನೆಯೇ ಬೇಸರ ತರುವಷ್ಟರಮಟ್ಟಿಗೆ ಬಂದಿದೆ. ಕೊನೆಯಲ್ಲಿ.

ನುತಬುಧಸಂಗ್ರಥಿತವಂ । ಚಿತಗುಣಯುತವಾಗಿ ಶಿವೆಯ ಮಂಗಳಸೂತ್ರ ॥
ಪತಿಮಾನಮೆನಿಸುತೀ ಸ । ತ್ಕೃತಿಯಾಚಂದ್ರಾರ್ಕಮಿರ್ಪುದೆನಲತಿಶಯಮೆ ॥ ೧೧-೭೫೦ ॥

ಪ್ರಿಯದಿಂದೆ ಶಿವಕಾವ್ಯಮಂ ಬರೆದು ಕೇಳ್ದಗೋದಿದರ್ಗಾವಗಂ
ಜಯಸಲ್ಮಕ್ಕ ತನೂಗರೀಪರಿಣಿಯಂ ಸಾರ್ಗ್ಗಂ ಮಹಾವೈಭವಂ
ನಿಯುತಂ ಪಾದ್ಗುಗುಮಚ್ಚಕರ್ತೆಸಮನಿಕ್ಕುಂ ಪೌತ್ರಿಷಸಂತಾನ ಸಂ
ಚಯಮೀಡೇರುವುದೆಮ್ಮ ಹಂಪೆಯ ವಿರೂಪಾಕ್ಷಪ್ರಸನ್ನತ್ವದಿಂ ॥ ೧೧-೭೫೨ ॥

....ಪಾರ್ವತಿಯ ಮಂಗಳಸೂತ್ರದಂತೆ ಆಚಂದ್ರಾರ್ಕವಾಗಿ ನನ್ನ ಈ ಕಾವ್ಯ ಶಾಶ್ವತವಾಗಿರುವುದರಲ್ಲಿ ಆಶ್ಚರ್ಯವೇನು ಎಂದು ಹೇಳಿ, ಈ ಕಾವ್ಯವನ್ನು ಓದಿದವರಿಗೆ, ಕೇಳಿದವರಿಗೆ, ಬರೆದವರಿಗೆ ಅವರ ಇಷ್ಟಾರ್ಥಗಳು ಕೈಗೂಡುವುದರಲ್ಲಿ ಆಶ್ಚರ್ಯವೇನು ಎಂದೂ ಹೇಳಿಕೊಂಡು ಹಂಪೆಯ ವಿರೂಪಾಕ್ಷನು ಎಲ್ಲರ ಇಷ್ಟಾರ್ಥಗಳನ್ನು ಈಡೇರಿಸುವನೆಂದು ಹೇಳಿಕೊಂಡಿರುವುದರಿಂದ ಆತನ ಭಕ್ತನಾದ ಈ ಕವಿ ಆ ಸುತ್ತುಮುತ್ತಿನವನೆಂದು ತಿಳಿಯುತ್ತದೆ.

ಈ ಹಸ್ತಪ್ರತಿಯ ಕೊನೆಯಲ್ಲಿ—"ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪಶಾಲಿವಾಹನಶಕಾಬ್ದಾಃ ಸಾವಿರದೇಳ್ನೂರ ಎಪ್ಪತ್ತೆಂಟನೆಯ ನಳನಾಮಸಂವತ್ಸರ ಜೇಷ್ಠ ಶುದ್ಧ ತ್ರಯೋದಶಿ ಇಂದುವಾಸರೇ ಶುಭನಕ್ಷತ್ರೇ ಶುಭಯೋಗೇ ಶುಭತಿಥೌ ಶುಭಲಗ್ನದಲ್ಲಿ ಬರೆದಂಥಾವರು....ಕ॥ ಸಿರಿಗೇರಿ ಮಠದ ವೃಷಭೇಂದ್ರಾಖ್ಯರ ವರಪತ್ನಿ ನೀಲಮ್ಮನವರ ಗರ್ಭಾಬ್ಧಿ ಚಂದ್ರಮನಾದ ರಾಚಪ್ಪನವರ ಅರ್ಧಾಂಗಿನಿಯಳಿಂದ ಬಸಮ್ಮನವರ ಒಡಲಾಬ್ಧಿ ಚಂದ್ರೋದಯನಾದಂಥ ಬಸಪ್ಪನವರು ಸ್ವಹಸ್ತದಿಂದ ಬರಕೊಂಡ ಪುಸ್ತಕಂ ಸಂಪೂರ್ಣಂ . . . ." ಎಂದಿರುವುದರಿಂದಲೂ. ಈ ಕಾವ್ಯದ ಭಾಷೆಯ ಸ್ವರೂಪದಿಂದಲೂ ಕವಿ ೧೭ನೇ ಶತಮಾನದ ಕೊನೆಯಲ್ಲಿ ಈ ಕಾವ್ಯವನ್ನು ರಚಿಸಿರಬಹುದೆಂದು ಊಹಿಸಬಹುದು. ಆದರೆ ಕವಿ ತನ್ನ ಕಾಲವನ್ನೆಲ್ಲೂ ಹೇಳಿಕೊಂಡಿಲ್ಲ.

ಈ ಕಾವ್ಯದ ಪ್ರತಿ ಸಂಧಿಯ ಕೊನೆಯಲ್ಲಿ ಈ ಕೆಳಗಿನ ಗದ್ಯವನ್ನು ಕಾಣಬಹುದು—

"ಇದು ಪ್ರಣುತಸುರಾಸುರಪಟಲನಿಟಿಲತಟಘಟೀತಕ ಕಸ್ತೂರಿಕಾಸಾರಷಟ್ಪದವಿರಾಜಿತ ಪಂಪಾವಿರೂಪಾಕ್ಷ ಶ್ರೀಪಾದಪದ್ಮಪರಾಗತಿಲಕವಿಭ್ರಾಜಿತಫಾಲಫಲಕಜಾಯಾಮಾತ್ಯಾಗೌರಾಂಬಿಕಾಗರ್ಭಪಾರಾವಾರಸುಧಾಕರ ಮಂತ್ರಿಮಾಣಿಕ್ಯಮಕುಟಾಲಂಕಾರಕೊಂಡಲಗಿರಿವಿರಚಿತರಸಿಕಮನೋರಂಜನಮಹಾಪ್ರಬಂಧದೊಳ್ . . . . ಆಶ್ವಾಸಂ ಸಮಾಪ್ತಮ್".[1]

ಈ ಕಾವ್ಯ ಹಳಗನ್ನಡ-ಹೊಸಗನ್ನಡ ಭಾಷೆಯ ಮಿಶ್ರಶೈಲಿಯಾಗಿರುವುದರಿಂದ ಹಿಂದಿನ ಮಾರ್ಗಕಾರರ ಶೈಲಿಯ ಬಂಧವನ್ನು ಕಳೆದುಕೊಂಡಿದೆ. ಹಳಗನ್ನಡ ಭಾಷಾನಿಯಮಗಳು ಶಿಥಿಲಗೊಂಡಿರುವುದನ್ನು ಉದ್ದಕ್ಕೂ ಕಾಣಬಹುದು. ಐದು ಪಾದಗಳಿರುವ ಅಧಿಕಪಾದಛಂದಸ್ಸಿನ ವೃತ್ತವನ್ನು ಇಲ್ಲಿ ಕಾಣಬಹುದು.

---

[1] ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕೆ. ಎ. ೩೦೧ ಕಾಗದದ ಹಸ್ತಪ್ರತಿಯ ಸಹಾಯದಿಂದ ಈ ಲೇಖನವನ್ನು ಸಿದ್ಧಗೊಳಿಸಲಾಗಿದೆ. ಇದು ಅದರಲ್ಲಿಯೇ ಹೇಳಿರುವಂತೆ ಆದೋನಿ ಜಗದ್ಗುರು ಪ್ರೆಸ್ಸಿನ ನು. ರಾ. ರಾಚಯ್ಯ ಮಠಪತಿಯವರಿಂದ ಕ್ಯೂರೇಟರವರು ತಂದ ಪುಸ್ತಕದ ಮೇಲೆ ಕಾಪಿಯಾಗಿದೆ.

## ಭಿಕ್ಷುಕಮಹೇಶವಿಲಾಸ_ಕುಮಾರವಿಭು (೧೮೨೧)

ಭಿಕ್ಷುಕಮಹೇಶವಿಲಾಸವನ್ನು ಬರೆದ ಕವಿ ಕುಮಾರವಿಭು. ಈತನು ಇದಲ್ಲದೆ ಕುಮಾರೇಶ್ವರಪುರಾಣ ಮುಂತಾದ ಇನ್ನೂ ಅನೇಕ ಗ್ರಂಥಗಳನ್ನು ಬರೆದಿರುವುದಾಗಿ ಹೇಳುತ್ತಾರೆ. ಆದರೆ ಅವಾವೂ ದೊರೆತಿಲ್ಲ.

ಈತನು ಧಾರವಾಡ ಜಿಲ್ಲೆಗೆ ಸೇರಿದ ಹಾನಗಲ್ಲು ವಿರಕ್ತಮಠದ ಸ್ವಾಮಿಯಾಗಿದ್ದನು: ಭಿಕ್ಷುಕಮಹೇಶ ವಿಲಾಸವನ್ನು ಶಕ ೧೭೪೩ನೆಯ ಚಿತ್ರಭಾನುವಿನಲ್ಲಿ ಅಂದರೆ ಕ್ರಿ.ಶ. ೧೮೨೧ರಲ್ಲಿ ಬರೆದಂತೆ ಹೇಳುತ್ತಾನೆ. ತನ್ನ ಹಿಂದಿನ ಕವಿಗಳಲ್ಲಿ ಸಿದ್ಧಲಿಂಗ. ಷಡಕ್ಷರದೇವ ಇವರನ್ನು ಸ್ತುತಿಸಿದ್ದಾನೆ. ಈತನು ಷಡಕ್ಷರಿಯನ್ನು ಅನುಕರಿಸಿರುವುದನ್ನು ಕಾವ್ಯದಲ್ಲಿ ಉದ್ದಕ್ಕೂ ಕಾಣಬಹುದಾಗಿದೆ.

'ಭಿಕ್ಷುಕಮಹೇಶವಿಲಾಸ' ಮೂರು ಪ್ರಕರಣಗಳಲ್ಲಿ ರಚಿತವಾಗಿರುವ ಚಂಪೂಗ್ರಂಥ. ಶಿವನು ದ್ವಾರಾವತಿಗೆ ಹೋಗಿ ಭಿಕ್ಷಾಟನೆ ಮಾಡಿದ ಕಥೆಯನ್ನು ಈ ಗ್ರಂಥದಲ್ಲಿ ಹೇಳಿದೆ. ಹಿಂದೆ (ಲಿಂಗಣಾರ್ಯ) ಗುರುಲಿಂಗವಿಭು ವರ್ಣಕರೀತಿಯಲ್ಲಿ ಬರೆದಿದ್ದ ಭಿಕ್ಷಾಟನ ಚರಿತ್ರೆಯನ್ನು ತಾನು ಗುರುಸಿದ್ಧದೇಶಿಕನ ಅಪ್ಪಣೆಯ ಮೇರೆಗೆ ವಸ್ತುಕ ರೀತಿಯಲ್ಲಿ ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ತನ್ನ ಗ್ರಂಥದ ಉತ್ಕೃಷ್ಟತೆಯನ್ನು ಈ ಕೆಳಗಿನ ಪದ್ಯದಲ್ಲಿ ಹೇಳಿ ಕೊಂಡಿದ್ದಾನೆ.

ಸುರಗಿರಿಯಂತೆ ಸದ್ವಿಬುಧಸೇವಿತಮಂಬುಜದಂತೆ ಶ್ರೀಗುಣಂ
ಸರಸಿಜಮಿತ್ರನಂತೆ ಘನಮಾರ್ಗ ಸುಶೋಭಿ ಸಮುದ್ರದಂತೆವೊಲ್
ಸರಸಮುದಾರ ಭಾಮಿನಿಯರೋಳಿಯವೊಲ್ ಮಿಗೆ ಭಾವ ಜಾತಿ ಬಂ
ಧುರಮೆನಿಕುಂ ಕುಮಾರವಿಭು ನಿರ್ಮಿತಮಿಾಕೃತಿ ಸರ್ವಲೋಕದೊಳ್

ಗ್ರಂಥ ಪ್ರಾರಂಭದಲ್ಲಿ ಶಿವಸ್ತುತಿಯನ್ನು ಮಾಡಿದ ಬಳಿಕ ಪಾರ್ವತಿ. ಗಣೇಶ, ಷಣ್ಮುಖ, ವೀರಭದ್ರ. ಬಸವ, ಚನ್ನಬಸವರನ್ನು ಸ್ತುತಿಸಿದ್ದಾನೆ. ಹದಿನಾರುಸಹಸ್ರ ಗೋಪಿಕಾಸ್ತ್ರೀಯರೊಡನೆ ಏಕಸಮನಾಗಿ ಕ್ರೀಡಿಸುತ್ತಿದ್ದ ಕೃಷ್ಣನ ವಿಲಾಸವನ್ನು ನೋಡಲು ಭಿಕ್ಷಾವೃತ್ತಿಯನ್ನು ಕೈಕೊಂಡು ಹೊರಟ ಶಿವನಿಗೆ ಭಿಕ್ಷೆಯನ್ನು ನೀಡುವ ವೇಶ್ಯೆಯರು, ಗೋಪಿಕಾಸ್ತ್ರೀಯರು ಮುಂತಾದವರ ಶೃಂಗಾರವರ್ಣನೆಯ ಮೂಲಕ ಶೃಂಗಾರರಸವನ್ನು ಕವಿ ಹರಿಸಿದ್ದಾನೆ. ಹೀಗಾಗಿ ಇದೊಂದು ಶೃಂಗಾರಕಾವ್ಯವಾಗಿದೆ. ಆದರೆ ಗುರುಲಿಂಗವಿಭುವಿನಲ್ಲಿ ಬರುವಷ್ಟು ಸುಂದರವಾದ ಶೃಂಗಾರ ವರ್ಣನೆಗಳು ಇಲ್ಲಿಲ್ಲವೆಂದೇ ಹೇಳಬೇಕು. ಆದರೂ ಆತನ ಪ್ರಭಾವವನ್ನು ಕಾವ್ಯದಲ್ಲಿ ಕಾಣಬಹುದು.

ಸಿದ್ಧಲಿಂಗದೇವವಿರಚಿತ 'ರೇಣುಕವಿಜಯ' ಎಂಬ ಚಂಪೂಕಾವ್ಯವಿದೆ. ಎಂಟು ಆಶ್ವಾಸಗಳಲ್ಲಿ ರಚಿತವಾಗಿರುವ ಈ ಕಾವ್ಯದಲ್ಲಿ ರೇಣುಕರ ಮಹಾತ್ಮೆಯನ್ನು ಹೇಳಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಯಲ್ಲಿ ಕೆ. ೭೨೪ ನಂಬರಿನ ತಾಳೆಯೋಲೆ ಪ್ರತಿ ಇದೆ.

ಗರಣಿಸಂಗಪ್ಪನು ಬರೆದಿರುವ 'ಕುಮಾರವಿಜಯ' ಎಂಬ ಅಸಮಗ್ರ ಹಸ್ತಪ್ರತಿಯೊಂದಿದೆ. 'ಜಂಗಮ ಚರಿತ್ರೆ' ಮುಂತಾದ ಅಚ್ಚಾಗದ ಇನ್ನೂ ಅನೇಕ ವೀರಶೈವ ಚಂಪೂಗ್ರಂಥಗಳಿವೆ. ದೊರೆಯದೆ ತಲೆಮರೆಸಿಕೊಂಡಿರುವ ಗ್ರಂಥ ಗಳೂ ಉಂಟು. ಈ ದಿಕ್ಕಿನಲ್ಲಿ ಸಂಶೋಧನೆ ನಡೆಯಬೇಕಾಗಿದೆ. ಲೇಖನ ಈಗಾಗಲೇ ವಿಸ್ತಾರವಾಗಿದೆ. ಇನ್ನೂ ವಿಸ್ತಾರವಾದೀತೆಂಬ ಅರಿವಿನಿಂದ ಇದನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ.

---

ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲಹೊಯ್ದು ಕಿಡಿಯ ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರ ಸಂಗವ ಮಾಡಿದರೆ
ಕರ್ಪುರದ ಗಿರಿಯನುರಿಕೊಂಬಂತೆ !

—ಅಕ್ಕಮಹಾದೇವಿ

# ಕನ್ನಡ ಶತಕ ಸಾಹಿತ್ಯ

ಡಾ. ಎಂ. ಎಸ್. ಸುಂಕಾಪುರ

ಸಂಸ್ಕೃತಭಾಷೆ ಕನ್ನಡಕ್ಕೆ ನೀಡಿದ ಅನೇಕ ಸಾಹಿತ್ಯಿಕ ಪ್ರಕಾರಗಳಲ್ಲಿ ಶತಕಸಾಹಿತ್ಯವು ಒಂದಾಗಿದೆ. ಭರ್ತೃಹರಿ. ಮಯೂರ. ಅಮರುಕ ಮುಂತಾದ ಸಂಸ್ಕೃತಕವಿಗಳು ಉತ್ತಮ ಶತಕಗಳನ್ನು ರಚಿಸಿ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ಅವರ ಕಾವ್ಯಮಾರ್ಗವನ್ನೇ ಅನುಸರಿಸಿ ಕನ್ನಡ ಕವಿಗಳು ಸಂಸ್ಕೃತ ಶತಕಗಳ ಸಾರವನ್ನು ಹೀರಿ. ಅದನ್ನೂ ಮೀರಿ ವೈವಿಧ್ಯಪೂರ್ಣ ಶತಕಗಳನ್ನು ನಿರ್ಮಿಸಿದ್ದಾರೆ. ಭಕ್ತಿ. ಜ್ಞಾನ. ವೈರಾಗ್ಯ. ನೀತಿ-ತತ್ವಗಳನ್ನು ಹಿರಿದಾಗಿ ಕಿರಿದರಲ್ಲಿ ಚಿತ್ರಿಸಲು ಶತಕಸಾಹಿತ್ಯವು ಬಹು ಅನುಕೂಲವಾಗಿರಬೇಕು. ಆದುದರಿಂದಲೇ ಸರ್ವಮತೀಯ ಕನ್ನಡ ಕವಿಗಳು ಶತಕದಲ್ಲಿ ಸಾಹಿತ್ಯರಚನೆ ಮಾಡಲು ಮುಂದೆ ಬಂದುದು ಕಂಡುಬರುತ್ತದೆ. ಸಂಸ್ಕೃತ ಕವಿಗಳು ಶತಕದಲ್ಲಿ ಬರಿ ಸಮವೃತ್ತಗಳನ್ನು ಬಳಸಿದ್ದರೆ. ಕನ್ನಡ ಕವಿಗಳು ವೃತ್ತ. ಕಂದ. ಷಟ್ಪದಿ. ಸಾಂಗತ್ಯ. ಚೌಪದಿ ಮುಂತಾದ ಛಂದೋಬಂಧಗಳನ್ನು ಬಳಸಿಕೊಂಡು ಶತಕದ ಮೂಲರೂಪವನ್ನೇ ಬದಲಿಸಿದುದು ಕಂಡುಬರುತ್ತದೆ. ವಿಷಯನಿರೂಪಣೆಯಲ್ಲಿಯೂ ಅದೇ ಬಗೆಯ ಹೊಸತನ ಕಂಡುಬರುತ್ತದೆ. ಹೀಗಾಗಿ ಕನ್ನಡ ಶತಕಗಳು ಸಂಸ್ಕೃತದ ಪಡಿಯಚ್ಚಾಗದೆ ಬೆಳೆದುಬಂದಿವೆ. ಒಟ್ಟಿನಲ್ಲಿ. ಕನ್ನಡ ಶತಕಸಾಹಿತ್ಯವು ಹೆಚ್ಚು ಹುಲುಸಾಗಿ ವೈವಿಧ್ಯಪೂರ್ಣವಾಗಿ ಬೆಳೆದು ನಿಂತಿರುವುದು ಗಮನಾರ್ಹವಾಗಿದೆ.

ಪ್ರತಿಯೊಂದು ಶತಕದಲ್ಲಿ ಸಾಮಾನ್ಯವಾಗಿ ನೂರು ಪದ್ಯಗಳಿರುವುದು ರೂಢಿಯಾಗಿದೆ. ಅದ್ದರಿಂದ ಶತಕ ಪ್ರಕಾರಕ್ಕೆ 'ಶತಕ'ವೆಂದು ಹೆಸರು ಬಂದಿರಬೇಕೆನಿಸುತ್ತದೆ. ಪ್ರತಿಶತಕದಲ್ಲಿ ನೂರು ಪದ್ಯಗಳಿರುವುದೇನೋ ಸರಿ. ಆದರೆ ಅದಕ್ಕೊಂದು ಕಾರಣ ಇರಬೇಕಲ್ಲವೆ ? ಒಂದು ಹೇಳಿಕೆ ಹೀಗಿದೆ : ಭರ್ತೃಹರಿ ಮಹಾರಾಜನಾಗಿದ್ದಂತೆ ಕವಿಯೂ ಆಗಿದ್ದನು. ಆತನಿಗೆ ನೂರು ಜನ ಹೆಂಡಂದಿರು. ಶೃಂಗಾರವೈರಾಗ್ಯಗಳನ್ನು ನೀತಿಯುತವಾಗಿ ಬೋಧಿಸುವುದು ಅವನಿಗೆ ಸರಿಯಾಗಿ ಕಾಣಿಸಿತಂತೆ. ತ್ಯಾಗಭೋಗಗಳ ಸಮನ್ವಯದಲ್ಲಿಯೇ ಸುಂದರವಾದ ಜೀವನ ಮೂಡಿಬರುವುದು. ಅದ್ದರಿಂದಲೇ ಕವಿರಾಜ ಭರ್ತೃಹರಿ ಭೋಗರೂಪವಾದ ಶೃಂಗಾರವನ್ನೂ. ತ್ಯಾಗರೂಪವಾದ ವೈರಾಗ್ಯವನ್ನೂ ಬೋಧಿಸ ಹೊರಟ. ನೀತಿಗೆ ಅವರಲ್ಲಿ ಸ್ಥಾನವಿರುವಂತೆ ನೋಡಿಕೊಂಡ. ಒಂದರಲ್ಲಿ ಇನ್ನೊಂದು ವಿಷಯ ಬೆರೆತರೂ ಒಂದೊಂದು ಶತಕದಲ್ಲಿ ಒಂದೊಂದು ವಿಷಯ ಪ್ರಧಾನವಾಗಿರುವಂತೆ ಶತಕತ್ರಯವನ್ನು ನಿರ್ಮಿಸಿದ. ತಾನು ಹೇಳುವ ವಿಷಯ ತನ್ನ ನೂರು ಜನ ಮಡದಿಯರಿಗೆ ಮುಟ್ಟಬೇಕೆಂಬುದು ಕವಿಯ ಆಶಯ. ಮೇಲಾಗಿ ಒಂದೊಂದು ಪದ್ಯ ಇಷ್ಟ ದೇವತಾಸ್ತುತಿಗೆ ಮೀಸಲು. ಹೀಗಾಗಿ ಪ್ರತಿಯೊಂದು ಕೃತಿಯಲ್ಲಿ ನೂರೊಂದು ಪದ್ಯಗಳಾಗಿ ಕೃತಿಗೆ 'ಶತಕ'ವೆಂಬ ಅಭಿಧಾನ ಬಂತೆಂದು ಹೇಳಬಹುದಾಗಿದೆ.

ಶತಕದ ಪ್ರತಿಯೊಂದು ಪದ್ಯದ ಅಂತ್ಯದಲ್ಲಿ ಅಂಕಿತವೊಂದನ್ನು ಸೇರಿಸುವುದು ನಡೆದುಬಂದ ರೂಢಿ. ಶತಕಕಾರರು ತಮ್ಮ ಇಷ್ಟದೇವತೆಯ ನಾಮವನ್ನೋ ಇಲ್ಲವೆ ಯಾವುದೋ ಮಾರ್ಮಿಕ ಸಂಬೋಧನೆಯನ್ನೋ ಆ ಅಂಕಿತದಲ್ಲಿ ಪಿರಕಹೊಯ್ಯುತ್ತ ಬಂದಿದ್ದಾರೆ. ಹರಹರಾ ಶ್ರೀಚನ್ನಸೋಮೇಶ್ವರಾ. ರಕ್ಷಿಪ್ಪುದೆನ್ನಂ ಪಂಪಾವಿರೂಪಾಕ್ಷಂ. ಚೂಡಾರತ್ನಾ ಮುಂತಾದ ಅಂಕಿತಗಳನ್ನು ಪರಿಶೀಲಿಸಿದರೆ ಅದರ ಮರ್ಮ ಸ್ಪಷ್ಟವಾಗುವುದು. ಶತಕದಲ್ಲಿ ಭಕ್ತಿನೀತಿಗಳು ತುಂಬತೊಡಗಿದಂತೆ ಅವುಗಳನ್ನು ನಿತ್ಯಪಾರಾಯಣಕ್ಕೆ ಬಳಸಿಕೊಳ್ಳಲು ಭಕ್ತರು ಪ್ರಾರಂಭಿಸಿರಬೇಕು. ಮತ್ತು ಶತಕವು ಗಾತ್ರದಲ್ಲಿ ಕಿರಿದಾಗಿ. ಸತ್ವದಲ್ಲಿ ಹಿರಿದಾಗಿ. ತಾತ್ವಿಕ ವಿಷಯವನ್ನು ಸ್ವಾರಸ್ಯಮಯವಾಗಿ ತಿಳಿಸುವ ಒಂದು ಉತ್ತಮ ಸಾಧನವೂ ಎನಿಸಿರಬೇಕು. ಆದುದರಿಂದ ಕನ್ನಡದಲ್ಲಿ ಶತಕವನ್ನು ಹೇಳುವವರೂ ಕೇಳುವವರೂ ಹೆಚ್ಚಾದುದು ಕಂಡುಬರುತ್ತದೆ. ಜನತೆಯ ತುದಿನಾಲಗೆಯ ಮೇಲೆ ಇಂತಹ ಶತಕಪದ್ಯಗಳೂ ಪದ್ಯಾಂಶಗಳೂ

ಗಾದೆಯ ಮಾತುಗಳಂತೆ ನಿತ್ಯಸತ್ಯನುಡಿಗಳಾಗಿ ಜೀವನದಲ್ಲಿ ಬೆರೆತುಕೊಂಡಿರುವುದು ಗಮನಾರ್ಹವಾಗಿದೆ. ಆದ್ದರಿಂದಲೇ ಕನ್ನಡ ಶತಕವು ಪಂಡಿತಪಾಮರರೆಲ್ಲರಿಗೂ ಅಚ್ಚುಮೆಚ್ಚಿನ ಸಾಹಿತ್ಯವಾಗಿ ಬೆಳೆದಿದೆ.

ಕನ್ನಡ ಕವಿಗಳು ಶತಕರಚನೆಯಲ್ಲಿ ಮಹಾಕ್ರಾಂತಿ ಮಾಡಿದ್ದಾರೆ. ನೂರಿದ್ದ ವೃತ್ತಗಳ ಸಂಖ್ಯೆ ಕನ್ನಡ ಶತಕಕಾರರ ಕೈಯಲ್ಲಿ ೧೨೫ರ ವರೆಗೂ ಏರಿದುದನ್ನು ಅರಿಯುತ್ತೇವೆ. ವೃತ್ತಗಳ ಸ್ಥಳದಲ್ಲಿ ಕಂದ ಚಕ್ಕಂದವಾಡುವುದನ್ನು ಕಾಣುತ್ತೇವೆ. ಷಟ್ಪದಿಯ ನಾನಾರೂಪಗಳಲ್ಲಿ ಮೂಡಿಬಂದ ಶತಕಗಳಂತೂ ಸಾಕಷ್ಟಿವೆ. ಸಾಂಗತ್ಯಕ್ಕೂ ಅಲ್ಲಿ ಸ್ಥಾನ ದೊರೆಯದೆ ಹೋಗಿಲ್ಲ. ಹೀಗಾಗಿ ಶತಕದ ಹೊರಮೈ ಹೊಸರೂಪದಲ್ಲಿ ಶೋಭಿಸುವಂತಾಗಿದೆ. ಶತಕದ ವಸ್ತುವಿನಲ್ಲಿಯೂ ಸಾಕಷ್ಟು ಮಾರ್ಪಾಟು ಆಗಿದೆ. ಮೊತ್ತಮೊದಲು ಶೃಂಗಾರ, ವೈರಾಗ್ಯ, ನೀತಿ ಮುಂತಾದ ವಿಷಯವನ್ನು ಬೋಧಿಸುತ್ತಿದ್ದ ಶತಕವು ಕನ್ನಡದಲ್ಲಿ ಮುನ್ನಡೆದಾಗ ತತ್ತ್ವವನ್ನೂ ಮಹಿಮರ ಮಹಿಮೆಯನ್ನೂ ಹೇಳಹೊರಟುದು ಸ್ಪಷ್ಟವಾಗಿ ಕಂಡುಬರುತ್ತದೆ. ಶತಕವು ಸಂಸ್ಕೃತದಿಂದ ಎರವಲಾಗಿ ಬಂದಿದ್ದರೂ ಕನ್ನಡ ಜಾಯಮಾನಕ್ಕೆ ಹೊಂದಿಕೊಂಡು ಹೊಸಹೊಸದಾಗಿ ನಿಂತಿರುವುದು ಗಮನಾರ್ಹವೇ ಸರಿ.

ಈಗ ತಿಳಿದಮಟ್ಟಿಗೆ, ನಾಗವರ್ಮಾಚಾರ್ಯನು (ಕ್ರಿ.ಶ. ೧೦೪೦) ಬರೆದ 'ಚಂದ್ರಚೂಡಾಮಣಿಶತಕ'ವೇ ಕನ್ನಡ ಸಾಹಿತ್ಯದಲ್ಲಿ ಹುಟ್ಟಿಬಂದ ಶತಕಗಳಲ್ಲಿ ಮೊದಲನೆಯದಾಗಿದೆ. ಈತನು ಅದ್ವೈತ ಸಂಪ್ರದಾಯದವನೆಂದು ತಿಳಿದುಬರುತ್ತದೆ. ಧಾರ್ಮಿಕ, ತಾತ್ತ್ವಿಕ ವಿಷಯಗಳು ಇದರಲ್ಲಿ ಬಂದಿರುವುದರಿಂದ ಈ ಕೃತಿಗೆ 'ಜ್ಞಾನಸಾರ'ವೆಂದೂ ಹೆಸರಿದೆ. ಈ ಕೃತಿಯು ಮತ್ತೇಭವೃತ್ತದಲ್ಲಿ ರಚಿತವಾಗಿದ್ದು 'ಶ್ರೀ ಚಂದ್ರಚೂಡಾಮಣಿ' ಎಂದು ಅಂಕಿತ ಪಡೆದಿದೆ. ನಾಗವರ್ಮಾಚಾರ್ಯನಿಗೆ 'ಗುಣಗಳ್ಕ' ಎನ್ನುವ ಬಿರುದು ಇದ್ದಂತೆ ಕಾಣುತ್ತದೆ. ವೈರಾಗ್ಯವಿಷಯವನ್ನು ಗಂಭೀರವಾಗಿ ಸುಲಲಿತವಾಗಿ ಬೋಧಿಸುವ ಈ ಕೃತಿ ವೈಶಿಷ್ಟ್ಯಪೂರ್ಣವಾದುದೆಂದೇ ಹೇಳಬೇಕು.

೧೨ನೆಯ ಶತಮಾನದಲ್ಲಿ ಬಸವಾದಿ ಪ್ರಮಥರು ಕನ್ನಡದಲ್ಲಿ ಮಾಡಿದ ಕ್ರಾಂತಿ ಪ್ರಭಾವಪೂರ್ಣವಾದುದು. ಸಂಪ್ರದಾಯವನ್ನು ಸಡಲಿಸಿ ಸಾಮಾನ್ಯರಿಗೂ ತಿಳಿಯುವ ರೀತಿಯಲ್ಲಿ ಸಾಹಿತ್ಯರಚನೆ ಮಾಡಿದ ಶ್ರೇಯಸ್ಸು ವೀರಶೈವ ಶರಣರಿಗೆ ಸಲ್ಲುವುದು. ವಚನ, ಹಾಡು, ಶತಕ, ಅಷ್ಟಕ ಮುಂತಾದ ಪ್ರಭೇದಗಳನ್ನು ಬಳಸಿಕೊಂಡು ಬಸವಾದಿಪ್ರಮಥರು ನೂತನ ಸಾಹಿತ್ಯಸೃಷ್ಟಿಗೆ ಕೈಹಾಕಿದರು. ಸಿದ್ಧರಾಮ, ಮಹಾದೇವಿಯಕ್ಕ ಮೊದಲಾದ ಶರಣಶರಣೆಯರು ಯೋಗಿನಾಥ, ಕಡುಜಾಣ ಮುಂತಾದ ಅಂಕಿತಗಳನ್ನಿಟ್ಟು ತ್ರಿವಿಧಿಗಳನ್ನು ರಚಿಸಿದ್ದರೂ ಶತಕಸಾಹಿತ್ಯದ ಛಾಯೆ ಅಲ್ಲಿ ಸಂಪೂರ್ಣವಾಗಿ ಮೂಡಿದುದನ್ನು ಅರಿಯುತ್ತೇವೆ. ಬಸವಣ್ಣನ ಹಿರಿಯ ಸಮಕಾಲೀನನಾದ ಕೊಂಡಗೂಳಿ ಕೇಶಿರಾಜನು (ಕ್ರಿ.ಶ. ೧೧೦೭) 'ಮಂತ್ರಮಹತ್ವದ ಕಂದ' ಹಾಗೂ 'ಲಿಂಗಮಹತ್ವದ ಕಂದ'ಗಳನ್ನು ಹೇಳುವಲ್ಲಿ ಶುದ್ಧ ಶತಕಸಾಹಿತ್ಯವನ್ನು ನಿರ್ಮಿಸಿದ್ದಾನೆ. ಮಂತ್ರಮಹಿಮೆ, ಲಿಂಗಮಹಿಮೆಯನ್ನು ಬೋಧಿಸುವ ಈತನ ಕೃತಿಗಳು ಶರಣ ಮರುಳದೇವನ (ಕ್ರಿ.ಶ. ೧೧೬೦) ಮೇಲೆ ತುಂಬಾ ಪ್ರಭಾವ ಬೀರಿರಬೇಕು-ಎನಿಸುತ್ತದೆ. ಆತನು ಪ್ರಭುದೇವರ ಕಂದವನ್ನು ೧೩೫ ಕಂದಗಳಲ್ಲಿ ಬರೆದಿರುವುದನ್ನು ಗಮನಿಸಬೇಕು. 'ಪರಮಪ್ರಭುವೇ' ಎಂಬುದು ಈ ಶತಕದ ಅಂಕಿತವಾಗಿದೆ.

ಬಸವಾದಿ ಪ್ರಮಥರಲ್ಲಿ ಮುಖ್ಯರೆನಿಸಿದ ೭೭೦ ಅಮರಗಣಂಗಳು ಕಲ್ಯಾಣಕ್ರಾಂತಿಗೆ ಎಲ್ಲಂದದಿಂದಲೂ ಸಹಾಯಮಾಡಿದರೆನ್ನಬಹುದು. ಅವರಲ್ಲಿ ಮನುಮುನಿ ಗುಮ್ಮಟದೇವನು (ಕ್ರಿ.ಶ. ೧೧೬೦) ಮಾಡಿದ ಸಾಹಿತ್ಯಸೇವೆ ಗಮನಾರ್ಹವಾಗಿದೆ. ಈತನು "ಗುಮ್ಮಟನಾಥನೊಡೆಯ ಅಗಮ್ಯೇಶ್ವರಲಿಂಗ" ಎಂಬ ಅಂಕಿತದಲ್ಲಿ ವಚನಗಳನ್ನು ಬರೆದುದಲ್ಲದೆ ಗುಮ್ಮಟಶತಕವನ್ನು ರಚಿಸಿ ಕೀರ್ತಿಶೇಷನಾಗಿದ್ದಾನೆ. ಗುಮ್ಮಟಶತಕದ ಅಂಕಿತವು ದ್ವಿವಿಧವಾಗಿದೆ. ಶತಕದ ಪೂರ್ವಾರ್ಧಪದ್ಯಗಳು "ಅರ್ಧೇಂದು ಮೌಳೀ" ಎಂದೂ ಉತ್ತರಾರ್ಧಪದ್ಯಗಳು "ಅತ್ಯಂತಶುದ್ಧಾ" ಎಂದೂ ಕೊನೆಗೊಂಡಿವೆ. ಶತಕದ ಅಂಕಿತವನ್ನೇ ಕೃತಿಗೆ ಶಿರೋನಾಮೆಯನ್ನಾಗಿ ಇಡುವುದು ರೂಢಿಯಾಗಿದೆ. ದ್ವಿವಿಧ ಅಂಕಿತಗಳು ಒಂದೇ ಶತಕದಲ್ಲಿ ಬಂದರೆ ಕೃತಿಯನ್ನು ಹೆಸರಿಸುವುದು ತೊಂದರೆದಾಯಕವೇ ಸರಿ. ಆದ್ದರಿಂದ ಗುಮ್ಮಟಯ್ಯಗಳ ಶತಕವನ್ನು 'ಗುಮ್ಮಟಶತಕ'ವೆಂದು ಕರೆದರೋ ಏನೋ! ಕವಿಯ ಹೆಸರನ್ನೇ ಪರಾಮರ್ಶಿಸಿದರೆ ಅವನು ಮೊದಲು ಜೈನನಿದ್ದು ಅನಂತರ ವೀರಶೈವನಾಗಿರಬೇಕೆಂಬುದು ಸ್ಪಷ್ಟವಾಗಿ ತಿಳಿದುಬಂದಿದೆ.

'ಗುಮ್ಮಟಶತಕ'ವು ವೈರಾಗ್ಯಭಕ್ತಿಮುಕ್ತಿಗಳನ್ನು ಬಹು ಮನೋಹರವಾಗಿ ಬೋಧಿಸುವ ಕೃತಿಯಾಗಿದೆ. ಹೇಸಿಕೆಯ ಸಂಸಾರವನ್ನು ತೊರೆದು ಅರಿಷಡ್ವರ್ಗವನ್ನು ಗೆದ್ದು, ಶುದ್ಧಭಕ್ತಿಯನ್ನಿಟ್ಟುಕೊಂಡು ಶಿವಯೋಗದಲ್ಲಿ ನಿರತನಾದವನೇ ಮುಕ್ತನು; ಯೋಗಾನಂದವೇ ಪರಮಾನಂದ, ಲಿಂಗಾಂಗಸಾಮರಸ್ಯವೇ ಜೀವನ್ಮುಕ್ತಿ. ಕವಿ

ಪ್ರಸಂಗಾನುಸಾರವಾಗಿ. ಸುಂದರಸಾದೃಶ್ಯಗಳನ್ನು ಕೊಟ್ಟು ವಿಷಯನಿರೂಪಣೆ ಮಾಡಿರುವುದರಿಂದ ಗುಮ್ಮಟನ ಶತಕವು ಮನೋಹರವಾಗಿದೆ. ಸಮವೃತ್ತಕ್ಕೆ ಬೇಕಾದ ಭಾಷೆ ಕವಿಯದಾಗಿದೆ. ಹೀಗಾಗಿ ಅವನ ಶೈಲಿಯು ಬಂಧುರವಾಗಿ ಮೆರೆದಿದೆ ಎಂದು ಹೇಳಬಹುದು. ಶೃಂಗಾರವನ್ನು ಬೋಧಿಸುವ ಶತಕಗಳು ಕನ್ನಡದಲ್ಲಿ ಬಹಳ ಕಡಿಮೆ. ಕವಿಕಾಮನು (ಕ್ರಿ.ಶ. ೧೨೦೦) ಸ್ತನಶತಕವನ್ನು ಶೃಂಗಾರಕ್ಕೆ ತಿಲಕವಿಟ್ಟಂತೆ ರಚಿಸಿದನೆಂದು ತಿಳಿದುಬಂದಿದ್ದರೂ ಅವನ ಕೃತಿ ಮಾತ್ರ ಇನ್ನೂ ದೊರೆತಿಲ್ಲ.

ಕನ್ನಡಸಾಹಿತ್ಯದಲ್ಲಿ ಹಂಪೆಯ ಹರೀಶ್ವರನ (ಕ್ರಿ.ಶ. ೧೨೫೦) ಸ್ಥಾನ ಹಿರಿದಾದುದು. ಅವನೊಬ್ಬ ಕ್ರಾಂತಿಕಾರಕವಿ. ಸಂಪ್ರದಾಯವನ್ನು ಪ್ರತಿಭಟಿಸಿ ಹೊಸಮಾರ್ಗವನ್ನು ಹಾಕುವಲ್ಲಿ ಅವನು ತೋರಿದ ಧೈರ್ಯ ಅಗಾಧವಾಗಿದೆ. ಅವನು ರಚಿಸಿದ ಪಂಪಾಶತಕ. ರಕ್ಷಾಶತಕಗಳು ಮುಂದೆ ಬಂದ ಶತಕಕಾರರ ಮೇಲೆ ತುಂಬಾ ಪ್ರಭಾವ ಬೀರಿವೆ. ಹರೀಶ್ವರನ ಈ ಶತಕಗಳಲ್ಲಿ ಬಂದಿರುವ ವೀರವಿರಕ್ತಿ ಮತ್ತು ಶುದ್ಧಭಕ್ತಿಗಳು ವೀರಶೈವ ಶತಕಕಾರರಿಗಂತೂ ಸ್ಫೂರ್ತಿಯ ಸೆಲೆಯಾಗಿ ಹರಿದುಬಂದವು. ಹರಿಹರದೇವನ ಮಾರ್ಗವನ್ನೇ ಹಿಡಿದ ೧೫ನೆಯ ಶತಮಾನದ ವೀರಶೈವ ಕವಿಗಳು ಉತ್ತಮ ರೀತಿಯ ಶತಕಗಳನ್ನು ರಚಿಸಿ ಖ್ಯಾತಿಪಡೆದಿದ್ದಾರೆ. ಪಂಪಾಶತಕ, ರಕ್ಷಾಶತಕಗಳು ಸಂಸ್ಕೃತವೃತ್ತಗಳಲ್ಲಿ ರಚಿಸಲ್ಪಟ್ಟಿವೆ. ಇವೆರಡರಲ್ಲಿಯೂ ಕವಿಯ ಆತ್ಮಕಥನವೇ ಬಹುರಮ್ಯವಾಗಿ ಬಂದಂತಾಗಿದೆ. ಹಂಪೆಯ ಹರೀಶ್ವರನು ಪಂಪಾವಿರೂಪಾಕ್ಷನಲ್ಲಿಟ್ಟುಕೊಂಡ ಭಕ್ತಿ ಭಾವಾವೇಶವಾಗಿ. ವೀರನಿಷ್ಠೆಯಾಗಿ. ಸಮರ್ಪಣೆಯಾಗಿ ಬಂದಿರುವುದು ವೈಶಿಷ್ಟ್ಯಪೂರ್ಣವೆನಿಸಿದೆ. ಸಂಸಾರಕ್ಕೆ ಬೇಸತ್ತ ಅವನ ಮನಸ್ಸು ಗಟ್ಟಿಗೊಂಡು ನಿಷ್ಠೆಯಾಗಿ ನಿಂತುದನ್ನು ಇಲ್ಲಿ ಅರಿಯಬಹುದು. ಭಾವಾವೇಶಕ್ಕೆ ಅನುಗುಣವಾದ ಭಾಷೆ ಹರಿಹರನಲ್ಲಿ ಇದ್ದುದರಿಂದ ಶತಕಗಳ ಶೈಲಿ ನಿರರ್ಗಳವಾಗಿ ಘುಮ್ಮೆಂದು ಹರಿಯುವುದು. ಸಾಹಿತ್ಯದೃಷ್ಟಿಯಿಂದ ಇವೆರಡೂ ಶತಕಗಳು ಮಹತ್ವಪೂರ್ಣ ಕೃತಿಗಳೆಂದು ಹೇಳಬಹುದಾಗಿದೆ. ಇಂದಿನ ಭಾವಗೀತೆಗಳ ಗುಣ ಅವುಗಳಲ್ಲಿ ತೋರುತ್ತವೆ. ಇದಕ್ಕೆಲ್ಲ ಕವಿಯ ಬಹುಮುಖ ವ್ಯಕ್ತಿತ್ವವೇ ಕಾರಣವೆನ್ನಬಹುದು.

ಸೋಮೇಶ್ವರ ಶತಕವು ಕನ್ನಡ ಸಾಹಿತ್ಯದಲ್ಲಿ ಬಹುಜನರ ಮೆಚ್ಚುಗೆಯನ್ನು ಪಡೆದ ಕೃತಿಯಾಗಿದೆ. ಇದನ್ನು ಓದದ ಕನ್ನಡಿಗರೇ ಇಲ್ಲೆನ್ನಬಹುದು. ಈ ಶತಕಕ್ಕೆ ಸೋಮಾರಾಧ್ಯಶತಕವೆಂದೂ ಹೆಸರಿದೆ. ಇದನ್ನು ಬರೆದಾತ ಕವಿ ಸೋಮಾರಾಧ್ಯ. ಪುಲಿಗೆರೆಯ ಸೋಮನಾಥನೇ ಕವಿಯ ಇಷ್ಟದೇವತೆ. ಆದ್ದರಿಂದ ಸೋಮಾರಾಧ್ಯನು ತನ್ನ ಶತಕಕ್ಕೆ 'ಶ್ರೀ ಚೆನ್ನಸೋಮೇಶ್ವರಾ' ಎಂದು ಅಂಕಿತವಿಟ್ಟಿದ್ದಾನೆ. ಇಷ್ಟೇ ಅಲ್ಲದೆ ಶತಕದ ಆದಿಯಲ್ಲಿ ಪುಲಿಗೆರೆಯ ಸೋಮೇಶನನ್ನು ಮನದುಂಬಿ ಸ್ತುತಿಸಿರುವನು. "ಪುಲಿಗಿರಿನಗರೀಶಶಿಸಾಂಕ ಮಹೇಶಾ" ಎಂದು ಸೋಮನಾಥನನ್ನು ಭಕ್ತಿಯಿಂದ ಕರೆದಿರುವುದು ಗಮನಾರ್ಹವಾಗಿದೆ. ಈ ಕೃತಿಯಲ್ಲಿ ೧೦೨ ಮತ್ತೇಭವಿಕ್ರೀಡಿತ ವೃತ್ತಗಳುಂಟು. ಕೊನೆಯ ಪದ್ಯಮಾತ್ರ ಸ್ರಗ್ಧರೆಯಾಗಿದೆ. ಇದೊಂದು ನೀತಿಬೋಧಕ ಶತಕ. "ನೀತಿಯೆ ಸಾಧನಂ ಸಕಲಲೋಕಕ್ಕಾಗಬೇಕೆಂದು ಪೇಳ್ದಂ ಸೋಮಂ" ಎಂದು ಕವಿಯೇ ಹೇಳಿಕೊಂಡಿದ್ದಾನೆ. ಸಾಮಾನ್ಯನೀತಿ ಸರ್ವರ ಮನವನ್ನೂ ಸೂರೆಗೊಳ್ಳುವುದು. ಸುಭಾಷಿತಗಳೂ ಅನುಭವವಾಣಿಗಳೂ ಸೋಮಾರಾಧ್ಯನ ಶೈಲಿಯಲ್ಲಿ ಅಡಕವಾಗಿರುವುದರಿಂದ ಈ ಶತಕವು ಸರ್ವರ ಮನವನ್ನೂ ಸೂರೆಗೊಳ್ಳುವಂತಾಗಿದೆ. ಮೆಚ್ಚುಗೆಯ ಭರದಲ್ಲಿ ಜನತೆ ಮನಬಂದಂತೆ ಹಾಡಿಕೊಂಡಿರಬೇಕು : ಲಿಪಿಕಾರರು ತಮಗೆ ತಿಳಿದಂತೆ ಹೊಳೆದಂತೆ ಪ್ರತಿಮಾಡಿಕೊಂಡಿರಬೇಕು. ಹೀಗಾಗಿ ಶತಕದ ಭಾಷೆಯಲ್ಲಿ ಪಾಠಾಂತರಗಳೂ ತಪ್ಪುಗಳೂ ಹೆಚ್ಚಾಗಿರಬೇಕು ಎನಿಸುತ್ತದೆ. ವ್ಯಾಕರಣನಿಯಮಬಾಹಿರವಾದ ಪ್ರಯೋಗಗಳೂ ಅಲ್ಲಲ್ಲಿ ನುಸುಳಿಬಂದಿವೆ. ಏನೇ ಆಗಿದ್ದರೂ ಈ ಶತಕವು ಜನತೆಯ ಆದರವನ್ನು ಕಾಯ್ದುಕೊಂಡು ಬಂದಿದೆ. ಅದಕ್ಕೆ ಮೂಲ ಕಾರಣ ಅಲ್ಲಿರುವ ಸಾಮಾನ್ಯ ನೀತಿ. ಕವಿಯ ಶೈಲಿಯನ್ನು ಗಮನಿಸಿದರೆ ಆತನು ೧೫ನೆಯ ಶತಮಾನದ ಅಂತ್ಯದಲ್ಲಿ ಬಾಳಿರಬೇಕೆನಿಸುವುದು.

೧೨ನೆಯ ಶತಮಾನದಲ್ಲಿ ಬಸವಾದಿ ಪ್ರಮುಖರು ವೀರಶೈವದ ಏಳ್ಗೆಗಾಗಿ ಹೋರಾಡಿದಂತೆ ೧೫ನೆಯ ಶತಮಾನದಲ್ಲಿ ನೂರೊಂದು ವಿರಕ್ತರು ವೀರಶೈವ ಧರ್ಮ, ಸಾಹಿತ್ಯ ಸಂಸ್ಕೃತಿ—ಇವುಗಳ ಪುನರುತ್ಥಾನಕ್ಕಾಗಿ ಹೆಣಗಿದುದು ಸರ್ವಶ್ರುತವಾಗಿದೆ. ಈ ವಿರಕ್ತರಲ್ಲಿ ಮಗ್ಗೆಯ ಮಾಯಿದೇವನು ಹೆಚ್ಚು ಪ್ರಭಾವಶಾಲಿ ವ್ಯಕ್ತಿಯೆನಿಸಿದ್ದಾನೆ. ಈತನು ಉಭಯಭಾಷಾವಿಶಾರದನಾಗಿದ್ದು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಅನೇಕ ವೀರಶೈವ ಸಿದ್ಧಾಂತದ ಗ್ರಂಥಗಳನ್ನು ರಚಿಸಿರುವನು. ಕನ್ನಡದಲ್ಲಿ ಶತಕತ್ರಯವನ್ನು ಬರೆದು ಶತಕಸಾಹಿತ್ಯಕ್ಕೆ ಉಪಕಾರ ಮಾಡಿದ್ದಾನೆ. ಶಿವಾಧವಶತಕ, ಶಿವಾವಲ್ಲಭಶತಕ, ಐಪುರೀಶ್ವರಶತಕಗಳು ಒಟ್ಟುಗೂಡಿ 'ಶತಕತ್ರಯ'ವೆಂದು

ಖ್ಯಾತಿಗಳಿಸಿವೆ. ಮಲಪ್ರಭಾನದಿಯ ದಂಡೆಯ ಮೇಲಿರುವ ಇತಿಹಾಸಪ್ರಸಿದ್ಧವಾದ ಐಹೊಳೆ (ಐಪುರ) ಇವನ ಕಾರ್ಯಕ್ಷೇತ್ರ. ಅಲ್ಲಿಯೇ ಸಮೀಪದಲ್ಲಿರುವ ಮಗ್ಗೆ ಎನ್ನುವ ಊರು ಕವಿಯ ಜನ್ಮಸ್ಥಳವಾಗಿರಬೇಕು. ಆದ್ದರಿಂದಲೇ ಈತನನ್ನು ಮಗ್ಗೆಯ ಮಾಯಿದೇವನೆಂದು ಕರೆಯಲಾಗಿದೆ, ಐಪುರದ ಸೋಮನಾಥನನ್ನು ಈತನು ಭಕ್ತಿಯಿಂದ ಸ್ತುತಿಸಿದ್ದಾನೆ. ವಿಜಯನಗರದ ಪ್ರೌಢದೇವರಾಯನು ಈ ಕವಿಯ ಪ್ರತಿಭೆಗೂ ಪಾಂಡಿತ್ಯಕ್ಕೂ ಮನಸೋತು ಗೌರವ ಸಲ್ಲಿಸಿದ್ದನೆಂದು ತಿಳಿದುಬಂದಿದೆ. ಈತನು ಬಾಳಿದ ಕಾಲ ಸು. ಕ್ರಿ.ಶ. ೧೪೩೦. ಮಗ್ಗೆಯ ಮಾಯಿದೇವನಿಗೆ ಜನತೆಯಲ್ಲಿ ಸಾಕಷ್ಟು ಗೌರವವಿರಬೇಕು. ಆದ್ದರಿಂದ ಅವನನ್ನು ಪ್ರಭು, ವಿಭು ಎಂದು ಸಂಬೋಧಿಸಿದವರು ಅನೇಕ ರಾಗಿದ್ದಾರೆ. ಶತಕತ್ರಯವು ಉಚ್ಚಮಟ್ಟದ ಕೃತಿಯಾಗಿದೆ. ಶಿವಾಧವಶತಕದಲ್ಲಿ ಜ್ಞಾನ, ಶಿವಾವಲ್ಲಭಶತಕದಲ್ಲಿ ಭಕ್ತಿ, ಐಪುರೀಶ್ವರಶತಕದಲ್ಲಿ ವೈರಾಗ್ಯ ಪ್ರಬಲವಾಗಿ ಬರುವಂತೆ ಕವಿ ವಿಷಯನಿರೂಪಣೆ ಮಾಡಿದ್ದಾನೆ. ಭರ್ತೃಹರಿಯ ಶತಕತ್ರಯದಲ್ಲಿ ಶೃಂಗಾರ-ವೈರಾಗ್ಯ-ನೀತಿಗೆ ಪ್ರಾಧಾನ್ಯವಿದ್ದರೆ ಮಾಯಿದೇವನ ಶತಕತ್ರಯದಲ್ಲಿ ಜ್ಞಾನ-ಭಕ್ತಿ-ವೈರಾಗ್ಯಕ್ಕೆ ಅಗ್ರಸ್ಥಾನ ದೊರಕಿದೆ. ಮಾಯಿದೇವನು ವೀರಶೈವ ಸಿದ್ಧಾಂತದ ಹಿನ್ನೆಲೆಯಲ್ಲಿಯೇ ವಿಷಯ ನಿರೂಪಣೆ ಮಾಡಿದ್ದಾನೆ. ನೂರೊಂದು ವೃತ್ತಗಳಲ್ಲಿ ಶತಕತ್ರಯದ ಪ್ರತಿಯೊಂದು ಕೃತಿ ಮೂಡಿಬಂದಿರುವುದು ಗಮನಾರ್ಹವಾಗಿದೆ. ಸಂಸ್ಕೃತಭೂಯಿಷ್ಠಶೈಲಿ ಕವಿಗೆ ಹಸ್ತಗತವಾಗಿರುವುದರಿಂದ ಬಂಧ ಬಿಗುವಿನದಾಗಿ, ಮನೋಹರವಾಗಿ ನಿಂತಿದೆ. ಅಲ್ಲಲ್ಲಿ ಸುಂದರ ಸಾದೃಶ್ಯಗಳನ್ನು ಕವಿ ವಿಷಯನಿರೂಪಣೆಗಾಗಿ ಕೊಟ್ಟಿರುವುದೂ ಸಮಂಜಸ ವೆನಿಸಿದೆ. ಈ ಶತಕಗಳಲ್ಲಿ ಮಾಯಿದೇವನ ಪ್ರತಿಭೆ ಪಾಂಡಿತ್ಯಗಳು ಸ್ಪರ್ಧೆಗಿಳಿದು ಕಾರ್ಯಮಾಡುವುದರಿಂದ ಶತಕ ತ್ರಯವು ಕನ್ನಡಶತಕಸಾಹಿತ್ಯಪ್ರಪಂಚದಲ್ಲಿಯೇ ಅಗ್ರಸ್ಥಾನ ದೊರಕಿಸಿಕೊಂಡಿದೆಯೆನ್ನಬಹುದು.

ಮಗ್ಗೆಯ ಮಾಯಿದೇವನ ಸಮಕಾಲೀನರಲ್ಲಿ ಕೆಲವರು ಶತಕಗಳನ್ನು ಬರೆದಿದ್ದಾರೆ. ಅವು ಮಾಯಿದೇವನ ಕೃತಿಗಳನ್ನು ಮೀರಿಸುವುದು ಸಾಧ್ಯವಿಲ್ಲದಾಗಿದೆ. ಆದರೆ ಅವನ ಪ್ರಭಾವವು ಇತರರ ಮೇಲೆ ಆದುದು ಮಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಗುರುಬಸವನು (ಕ್ರಿ.ಶ. ೧೪೩೦) ಮಹಾವೈರಾಗ್ಯಶಾಲಿಯಾಗಿ ಸಕಲಶಾಸ್ತ್ರಪಾರಂಗತ ನಾಗಿ ಕನ್ನಡದಲ್ಲಿ ಸಪ್ತಕಾವ್ಯಗಳನ್ನು ಬರೆದನು. ಅದಕ್ಕಾಗಿ ಅತನು ಸಪ್ತಕಾವ್ಯದ ಗುರುಬಸವನೆಂದು ಹೆಸರುವಾಸಿ ಯಾದನು. ವೇದಾಂತವಿಷಯವನ್ನು ಬಹುಸುಲಭವಾಗಿ ಇವನಂತೆ ಬೋಧಿಸುವವರೇ ತೀರ ವಿರಳ. ಇವನು ರಚಿಸಿದ ವೃಷಭಗೀತೆ, ಅವಧೂತಗೀತೆಗಳು ಷಟ್ಪದಿ, ಚೌಪದಿಯಲ್ಲಿ ಮೂಡಿಬಂದ ಶತಕಗಳಾಗಿವೆ. ಶತಕದ ನಿಯಮಗಳನ್ನು ಇಲ್ಲಿ ಪಾಲಿಸಿದ್ದರೂ ಛಂದೋಬಂಧವು ಅಚ್ಚಗನ್ನಡವಾಗಿರುವುದು ಗಮನಾರ್ಹ. ಮಗ್ಗೆಯ ಮಾಯಿದೇವರ ಶತಕ ಮಾರ್ಗದಲ್ಲಿಯೆ ಶತಕರಚನೆ ಮಾಡಿದ ಇನ್ನೊಬ್ಬ ಕವಿ ಎಂದರೆ ಚಂದ್ರಕವಿ (ಕ್ರಿ.ಶ. ೧೪೩೦). ಈತನು ಗುರುಮೂರ್ತಿ ಶಂಕರಶತಕವನ್ನು ವೃತ್ತದಲ್ಲಿ ಬರೆದಿದ್ದಾನೆ. ಪ್ರತಿಯೊಂದು ಪದ್ಯವೂ 'ಗುರುಮೂರ್ತಿ ಶಂಕರಾ' ಎಂದು ಕೊನೆ ಗೊಳ್ಳುವುದು. ಕವಿ ಈ ಕೃತಿಯನ್ನು ಭಕ್ತಿಗೆ, ವಿರಕ್ತಿಗೆ, ಮುಕ್ತಿಗೆ ಬೀಜವಾಗಿ ಹೇಳಿದ್ದಾನೆ. ಸಾಮಾನ್ಯ ನೀತಿಗೂ ಇಲ್ಲಿ ಸ್ಥಾನ ದೊರೆಯದೆ ಹೋಗಿಲ್ಲ.

ನೂರೊಂದು ವಿರಕ್ತರು ವೀರಶೈವವನ್ನು ಉದ್ಧರಿಸಿದ ಅಲ್ಪಾವಧಿಯಲ್ಲಿಯೇ ಪುನಃ ಧರ್ಮದಲ್ಲಿ ಶೈಥಿಲ್ಯ ತೋರಿರಬೇಕು. ಅದಕ್ಕೆಂದೇ ೭೦೧ ವಿರಕ್ತರು ಗುಂಪುಕಟ್ಟಿಕೊಂಡು ದುಡಿದುದು ಕಂಡುಬರುತ್ತದೆ. ಇವರಿಗೆ ತೋಂಟದ ಸಿದ್ಧಲಿಂಗಶಿವಯೋಗಿಗಳೇ ಮುಖಂಡರು. ಇವರ ಕಾಲದಲ್ಲಿ ಶತಕಸಾಹಿತ್ಯವು ಹುಲುಸಾಗಿ ಬೆಳೆಯಿತೆನ್ನ ಬೇಕು. ತೋಂಟದಾರ್ಯರ ಪರಂಪರೆಯಲ್ಲಿ ಬೆಳೆದುಬಂದ ಮುರಿಗೆಯ ಶಾಂತವೀರದೇಶಿಕರು (ಕ್ರಿ.ಶ. ೧೫೩೦) ಶಿವಯೋಗನಿರೂಪಣೆಗಾಗಿ ಪ್ರಭುಲಿಂಗಕಂದವನ್ನು ಬರೆದಿದ್ದಾರೆ. ಅದೇ ಪರಂಪರೆಯ ಸಿರಿನಾಮಧೇಯನು (ಕ್ರಿ.ಶ. ೧೫೫೦) ವೀರಮಾಹೇಶ್ವರನೆನಿಸಿಕೊಂಡು ಮಲ್ಲೇಶ್ವರಶತಕವನ್ನು ೧೦೧ ವೃತ್ತಗಳಲ್ಲಿ ರಚಿಸಿದನು. ಅಷ್ಟಾ ವರಣಗಳ ಮಹತ್ವವನ್ನು ಕವಿ ಈ ಶತಕದಲ್ಲಿ ಮನೋಹರವಾಗಿ ವರ್ಣಿಸಿದ್ದಾನೆ. ರಾಜವಂಶಕ್ಕೆ ಸೇರಿದ ವೀರಭದ್ರ ರಾಜನು (ಕ್ರಿ.ಶ. ೧೫೩೦) ಶತಕಪಂಚಕವನ್ನು ಬರೆದು ಶತಕಸಾಹಿತ್ಯಕ್ಕೆ ಮಹದುಪಕಾರಮಾಡಿದನು. ಈತನ ಪಂಚ ಶತಕಗಳು ಶಿವಸ್ತುತಿರೂಪವಾಗಿಯೂ ವೀರಶೈವತತ್ವಪ್ರತಿಪಾದಕವಾಗಿಯೂ ನೀತಿವೈರಾಗ್ಯಭಕ್ತಿಯುತವಾಗಿಯೂ ಇವೆ. ಪಾರ್ವತೀವಲ್ಲಭಶತಕ, ಉಮಾಮಹೇಶ್ವರಶತಕ, ಪ್ರಾಣನಾಥಶತಕ, ಶ್ರೀಕಂಠಸೋಮೇಶ್ವರಶತಕಗಳು ಪ್ರತಿ ನೂರೊಂದು ವೃತ್ತಗಳಲ್ಲಿ ರಚಿತವಾಗಿದ್ದರೆ ಐದನೆಯದಾದ 'ಅಂಬಿಕೆಯರಸ ಶತಕ'ವು ಮಾತ್ರ ಕಂದಗಳಲ್ಲಿ ರಚಿತ ವಾಗಿದೆ. ವೀರಭದ್ರರಾಜನ ಶತಕಗಳು ತತ್ವದಲ್ಲಿಯೂ ಸತ್ವದಲ್ಲಿಯೂ ಹಿರಿಯವೆನಿಸಿಕೊಂಡಿವೆ: ಬಿಗುವಿನ ಬಂಧ ದಲ್ಲಿ ಒಡಮೂಡಿವೆ. ಶತಕಸಾಹಿತ್ಯ ಈ ಕಾಲದಲ್ಲಿ ಉನ್ನತ ಸ್ಥಾನ ಗಳಿಸಿ ಬೆಳೆದಿದೆ.

ಇದೇ ಸಮಯದಲ್ಲಿ ದಾಸಸಾಹಿತ್ಯವು ಪಲ್ಲವಿಸಿ ಹಬ್ಬತೊಡಗಿತ್ತು. ಕನಕದಾಸರು ಇತರ ಸಾಹಿತ್ಯನಿರ್ಮಿತಿ ಮಾಡುವುದರ ಜೊತೆಗೆ 'ಹರಿಭಕ್ತಿಸಾರ'ವನ್ನು ಭಾಮಿನಿಯ ೧೧೦ ಪದ್ಯಗಳಲ್ಲಿ ಹೇಳಿ ದಾಸಸಾಹಿತ್ಯದಲ್ಲಿ ಶತಕಕ್ಕೂ ಸ್ಥಾನವಿದೆಯೆಂದು ಹೇಳುವಂತೆ ಕೃತಿರಚನೆ ಮಾಡಿದರು. ಹರಿಸ್ತುತಿಯೇ ಕಾವ್ಯದ ವಸ್ತುವಾಗಿದೆ. ಕವಿಯ ಎದೆ ತುಂಬಿದ ಭಕ್ತಿಯು ತೊರೆ ಶತಕವಾಗಿ ಪ್ರವಹಿಸಿ ಹರಿದಿದೆ: ಹರಿಭಕ್ತರ ಪಾರಾಯಣಕ್ಕೆ ಯೋಗ್ಯವೆನಿಸಿದೆ. ಈ ಕಾಲದ ವೀರಶೈವ ಕವಿಗಳು ಅಸಂಖ್ಯಾತ ಶತಕಗಳನ್ನು ನಿರ್ಮಿಸಿದ್ದು ತೋರಿಬರುತ್ತದೆ. ಚನ್ನಮಲ್ಲಿಕಾರ್ಜುನ (ಕ್ರಿ.ಶ. ೧೫೬೦) ಶಿವಮಹಿಮಾಶತಕವನ್ನು ೧೧೩ ವೃತ್ತಗಳಲ್ಲಿ ರಚಿಸಿದನು. ಅದ್ಯಂತ್ಯದಲ್ಲಿ ಒಂದೊಂದು ಕಂದವನ್ನೂ ಇಟ್ಟು 'ಶ್ರೀ ಚೆನ್ನಮಲ್ಲೇಶ್ವರಾ' ಎನ್ನುವ ಅಂಕಿತದಲ್ಲಿ ಹಾಡಿದನು. ವೇದಾಂತಸಾರವನ್ನೂ ಶಿವಪಾರಮ್ಯವನ್ನೂ ಎತ್ತಿ ಹೇಳುವುದೇ ಈ ಶತಕದ ಗುರಿಯಾಗಿದೆ. ಮತ್ತು ತೋಂಟದ ಸಿದ್ಧಲಿಂಗ ಸಂಪ್ರದಾಯದ ಶಾಂತಮಲ್ಲಕವಿ (ಕ್ರಿ.ಶ. ೧೬೩೦) ವಿರಕ್ತಶತಕವನ್ನು ಭೋಗಷಟ್ಪದಿಯಲ್ಲಿ ರಚಿಸಿರುವುದು ಗಮನಾರ್ಹವಾಗಿದೆ. ವೀರ ವಿರಕ್ತಿಯನ್ನು ಬೋಧಿಸುವ ಈ ಶತಕವು 'ಪ್ರಭುವಿರಕ್ತನು' ಎಂದು ಮುಗಿಯುತ್ತಲೇ ಮನದ ಮೇಲೆ ಪರಿಣಾಮ ಉಂಟು ಮಾಡುತ್ತದೆ.

ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯಗಿರಿಯ ಅನೇಕ ಶಿಖರಗಳನ್ನು ಕಾಣುತ್ತೇವೆ. ರತ್ನಾಕರವರ್ಣಿ (ಕ್ರಿ.ಶ. ೧೫೬೦)ಯದೇ ಒಂದು ಉನ್ನತ ಶಿಖರ. ಆತನ ಭರತೇಶ ವೈಭವವು ಸಾಹಿತ್ಯದ ವೈಭವ ವೆನಿಸುವಂತೆ ನಿರ್ಮಿತಿಗೊಂಡು ಮೆರೆಯಿತು. ಆತನೇ ಬರೆದಿರಬೇಕೆಂದು ಹೇಳುವ ರತ್ನಾಕರಾಧೀಶ್ವರಶತಕ. ಅಪರಾಜಿ ತೇಶ್ವರಶತಕ. ತ್ರಿಲೋಕಶತಕಗಳು ಉನ್ನತ ಕೃತಿಗಳೆನಿಸಿಕೊಂಡವು. ಪಶ್ಚಿಮ ಕರಾವಳಿಯಲ್ಲಿರುವ ಮೂಡುಬಿದಿರೆ ಕವಿಯು ಹುಟ್ಟಿ ಬೆಳೆದ ಊರು. ಅಲ್ಲಿಯೇ ಇದ್ದುಕೊಂಡು ಶಾಸ್ತ್ರಾಭ್ಯಾಸವನ್ನು ಚಾರುಕೀರ್ತಿಗಳ ಅಡಿದಾವರೆಯಲ್ಲಿ ಕುಳಿತು ಮಾಡಿದನೆಂದು ಹೇಳಲಾಗಿದೆ. ಅವನ ಶತಕಗಳಲ್ಲಿ ಶೃಂಗಾರ. ಭಕ್ತಿ. ಜ್ಞಾನ. ವೈರಾಗ್ಯ. ನೀತಿ ಮುಂತಾದ ವಿಷಯಗಳನ್ನು ಕಾಣುತ್ತೇವೆ. ಮೊದಲಿನ ಎರಡು ಶತಕಗಳು ವೃತ್ತದಲ್ಲಿವೆ. ತ್ರಿಲೋಕಶತಕವು ಕಂದದಲ್ಲಿ ನಿರ್ಮಿತ ವಾಗಿದೆ. ಇದರಲ್ಲಿ ಜೈನಮತತತ್ವವು ವರ್ಣಿತವಾಗಿದ್ದು ಸೃಷ್ಟಿಶಾಸ್ತ್ರವನ್ನು ಶಾಸ್ತ್ರೀಯವಾಗಿ ವರ್ಣಿಸಲಾಗಿದೆ. ಅಪರಾಜಿತೇಶ್ವರಶತಕವು ವೈರಾಗ್ಯನೀತಿಗಳನ್ನು ಹೇಳುವುದಲ್ಲದೆ ಆತ್ಮವಿಚಾರವನ್ನು ಪರಾಮರ್ಶಿಸುತ್ತದೆ. ರತ್ನಾಕರನ ಶತಕಗಳು ಒಟ್ಟಿನಲ್ಲಿ, ಕವಿಯ ಆತ್ಮಾನುಭವದ ಆಣಿಮುತ್ತಾಗಿ ಮೂಡಿಬಂದುದು ಸಂತೋಷದಾಯಕ ವಿಷಯವೇ ಸರಿ.

ಹದಿನೇಳನೆಯ ಶತಮಾನದಲ್ಲಿ ಹಲಕೆಲವು ಶತಕಗಳು ಕನ್ನಡದಲ್ಲಿ ರಚಿತವಾಗಿವೆ. ಶಂಕರದೇವರು (ಕ್ರಿ.ಶ. ೧೬೨೦) 'ಶಂಕರಶತಕ'ವನ್ನು ವೃತ್ತದಲ್ಲಿಯೂ. 'ಶಂಕರದೇವರ ಕಂದ'ವನ್ನು ಕಂದದಲ್ಲಿಯೂ ರಚಿಸಿ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿದರು. ಈತನನ್ನೇ ಹಿಂಬಾಲಿಸಿ ಶಾಂತವೃಷಭೇಶನು (ಕ್ರಿ.ಶ. ೧೭೦೦) ಅನುಭವಶತಕ ವನ್ನೂ, ಸಿದ್ಧಪ್ಪಕವಿ ಸಿದ್ಧನೀತಿಯನ್ನೂ ಕಂದದಲ್ಲಿ ಬರೆದು ವೀರಶೈವತತ್ವವನ್ನು ನಿರೂಪಿಸಿದ್ದಾರೆ. ಈ ಕಾಲದಲ್ಲಿ ರಚಿತವಾದ ಶತಕಗಳಲ್ಲಿ ಮುಕ್ಕಾಲುಪಾಲು ಮತತತ್ವನಿರೂಪಣೆಗೆ ಮೀಸಲಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ಚಿಕದೇವರಾಜನ ಕಾಲದ ಕನ್ನಡ ಸಾಹಿತ್ಯ ಸತ್ವದೃಷ್ಟಿಯಿಂದ ಸಾಮಾನ್ಯವಾದುದೆಂದು ತಿಳಿದವರು ಹೇಳಿದ್ದಾರೆ. ತಿರುಮಲಾರ್ಯನ (ಕ್ರಿ.ಶ. ೧೭೦೦) ಚಿಕದೇವರಾಜಶತಕವು ವೃತ್ತದಲ್ಲಿದ್ದು ತತ್ವನೀತಿಗಳನ್ನು ಬೋಧಿಸುವ ಕೃತಿ ಯಾಗಿದೆ. ಅಳಸಿಂಗಾರ್ಯನು (ಕ್ರಿ.ಶ. ೧೭೦೦) ಬರೆದ 'ಚೆಲ್ವನಾರಾಯಣಶತಕ'ವು ಎಲ್ಲಂದದಿಂದಲೂ ಸಾಮಾನ್ಯ ವೆಂದೇ ಹೇಳಬೇಕು. ಈ ಕಾಲದ ದೊಡ್ಡ ಶತಕಕಾರನೆಂದರೆ ತಿರುವೇಂಗಡಾಚಾರ್ಯಶತಕಪಂಚಕವನ್ನು ರಚಿಸಿದ ಕವಿಕೇಶವ (ಕ್ರಿ.ಶ. ೧೭೫೦). ಅವನ ಐದೂ ಶತಕಗಳಲ್ಲಿ ವಿಶಿಷ್ಟಾದ್ವೈತತತ್ವವು ಮನೋಹರವಾಗಿ ನಿರೂಪಿತ ವಾದುದನ್ನು ಕಾಣಬಹುದು. ಚಿದಾನಂದ ಅವಧೂತರು (ಕ್ರಿ.ಶ. ೧೭೫೦) ಅವಧೂತಪಂಥವನ್ನು ಸ್ಥಾಪಿಸಲು ಬಗಳಾಂಬಾಸ್ತೋತ್ರವನ್ನು ಶತಕರೂಪದಲ್ಲಿ ಹಾಡಿ ಹರಿಸಿದ್ದಾರೆ. ಚೆನ್ನಪ್ಪರಾಜನ (ಕ್ರಿ.ಶ. ೧೭೫೦) 'ವೆಂಕಟೇಶ್ವರ ಶತಕ'ವು ಭಾಮಿನಿಯಲ್ಲಿ ರಚಿತವಾಗಿದ್ದು ಮಧುರ ಶೈಲಿಯಲ್ಲಿ ಹರಿದಿದೆ. ನಿರಂಜನಾರ್ಯನ (ಕ್ರಿ.ಶ. ೧೭೫೦) ನಂಜುಂಡಶತಕವು ನೀತಿಯನ್ನು ಬೋಧಿಸುವಲ್ಲಿ ಬಲ್ಲಿದ ಕೃತಿಯೆನಿಸಿದೆ. ಈ ಕಾಲದ ಕೃತಿಶತಕಗಳು ಹೆಚ್ಚಾಗಿ ಷಟ್ಪದಿ ಯಲ್ಲಿ ನಿರ್ಮಿತವಾಗಿರುವುದು ಒಂದು ವಿಶೇಷವೆನ್ನಬಹುದು.

ಕಾಡಸಿದ್ಧೇಶ್ವರನ (ಕ್ರಿ.ಶ. ೧೭೨೫) ಇಷ್ಟಲಿಂಗಶತಕ, ಅಳಿಯ ಲಿಂಗರಾಜನ (ಕ್ರಿ.ಶ. ೧೮೫೦) ಮಹಾಲಿಂಗ ಶತಕ ಮತ್ತು ವೀರಭದ್ರಶತಕಗಳು ವೃತ್ತದಲ್ಲಿ ರಚಿತವಾದರೆ ಶಿವರಾಮನ (ಕ್ರಿ.ಶ. ೧೭೬೫) ಶಿವಭಕ್ತಿಸಾರ. ನಿಜಲಿಂಗಾ

ರಾಘ್ಯನ (ಕ್ರಿ.ಶ. ೧೮೦೦) ನಿಜಲಿಂಗಶತಕ ಮೊದಲಾದವು ಷಟ್ಪದಿಯಲ್ಲಿ ಮೂಡಿಬಂದಿವೆ. ೧೯ನೆಯ ಶತಮಾನದಲ್ಲಿ ಕಂದದಲ್ಲಿ ಶತಕಗಳನ್ನು ಬರೆದವರ ಸಂಖ್ಯೆ ಹೆಚ್ಚಾಗಿದೆ. ನೀತಿಯನ್ನು ಬೋಧಿಸುವುದೇ ಅವರ ಗುರಿಯಾದಂತಿದೆ. ಯೋಗಾನಂದ ಕವಿಯ (ಕ್ರಿ.ಶ. ೧೭೫೦) ವಿರೂಪಾಕ್ಷಶತಕ ಹಾಗೂ ಬಸವಶತಕ, ಕಪ್ಪಿನಿದೇವನ (ಕ್ರಿ.ಶ. ೧೮೦೦) ನಂಜುಂಡಶತಕ, ಕರಿಬಸವಶಾಸ್ತ್ರಿಗಳ ನೀತಿಶತಕಗಳು ಉತ್ತಮ ನೀತಿಯನ್ನು ಜನತೆಯಲ್ಲಿ ಹರಡಲು ಸಹಾಯ ಮಾಡಿದವು. ಶಾಲ್ಯದ ಕೃಷ್ಣರಾಜರ (ಕ್ರಿ.ಶ. ೧೭೪೮) ಪ್ರಾಣೇಶ್ವರಶತಕ, ಸದಾಶಿವಶತಕಗಳು ವೃತ್ತದಲ್ಲಿ ಹುಟ್ಟಿ ಸಂಸ್ಕೃತದ ಶತಕಮಾರ್ಗವನ್ನು ಎತ್ತಿಹಿಡಿದವೆನ್ನಬಹುದು. ಚಂದ್ರಸಾಗರವರ್ಣಿಯ (ಕ್ರಿ.ಶ. ೧೮೪೦) ಜಿನಭಕ್ತಿಸಾರ, ರಾಮಬ್ರಹ್ಮಾನಂದಯೋಗಿಯ (ಕ್ರಿ.ಶ. ೧೮೪೦) ಭಕ್ತಿಸುಧಾಸಾರ ಭಾಮಿನಿಯಲ್ಲಿ ರಚಿತವಾಗಿವೆ. ಮುಮ್ಮಡಿ ಕೃಷ್ಣರಾಜರು (ಕ್ರಿ.ಶ. ೧೮೩೦) ನಂಜುಂಡಶತಕವನ್ನು ಕನ್ನಡದಲ್ಲಿ ಕಂದದ ಧಾಟಿಯಲ್ಲಿ ಹೇಳಿದುದು ವೈಶಿಷ್ಟ್ಯಪೂರ್ಣವೆನ್ನಬೇಕು. ಅವರೇ ಹೇಳಿದ ಪಾರ್ವತೀಭಕ್ತಿಸಾರವು ಭಕ್ತಿಯನ್ನು ಬಿತ್ತರಿಸುವ ಉತ್ತಮ ಶತಕವಾಗಿದೆ. 'ಅಭಿನವ ಕಾಳಿದಾಸ' ಎಂದು ಹೆಸರಾದ ಬಸವಪ್ಪಶಾಸ್ತ್ರಿಗಳು ಭರ್ತೃಹರಿಯ ಶತಕಗಳನ್ನು ಕನ್ನಡಿಸಿದ್ದಲ್ಲದೆ ಆರ್ಯಾಶತಕ, ಶಂಕರಶತಕ, ನೀತಿಸಾರ ಶತಕಗಳನ್ನು ಸ್ವತಂತ್ರವಾಗಿ ರಚಿಸಿದುದು ಸುವರ್ಣದ ಕಳಸವನ್ನು ಶತಕಮಂದಿರಕ್ಕೆ ಇಟ್ಟಂತಾಯಿತೆನ್ನಬೇಕು. ಇನ್ನೂ ಅನೇಕ ಶತಕಕೃತಿಗಳು ಕಾಲಗರ್ಭದಲ್ಲಿಯೇ ಅಡಗಿ ಕುಳಿತುದು ತೋರಿಬರುತ್ತದೆ. ಎಲ್ಲ ಕೃತಿಗಳನ್ನು ಕಲೆಹಾಕಿ ಪರಿಶುದ್ಧವಾಗಿ ಪ್ರಕಟಿಸಿದರೆ ಕನ್ನಡಸಾಹಿತ್ಯಕ್ಕೆ ಹೆಚ್ಚಿನ ಕಳೆ ಬರಬಲ್ಲುದಾಗಿದೆ.

---

ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದ ನಾಂಬುದೇ?
ಕಡೆಗೀಲು ಬಂಡಿಗಾಧಾರ,
ಕಡುದರ್ಪನೇರಿದ ಬತಲೆಂಬ ಬಂಡಿಗೆ
ಮೃಡ ಶರಣರ ನುಡಿಗಡಣವೆ
ಕಡೆಗೀಲು ಕಾಣಾ ರಾಮನಾಥ
—ದೇವರದಾಸಿಮಯ್ಯ

* * *

ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ,
ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,
ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ,
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ,
ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ ಕಾಣಿರೋ.
—ಆದಯ್ಯ

# ರಗಳೆ ಸಾಹಿತ್ಯಕ್ಕೆ ವೀರಶೈವ ಕವಿಗಳ ಕೊಡುಗೆ-೧

**ಡಾ. ಕೆ. ಜಿ. ನಾರಾಯಣಪ್ರಸಾದ್**

ಕಿರಿದಾಗಿ ಹೊರಟು, ಅಲ್ಲಲ್ಲಿ ಇತರ ಹಳ್ಳಗಳ ನೀರನ್ನು ಕೂಡಿಸಿಕೊಂಡು ಮುಂದುವರಿದು, ಅನೇಕ ಉಪನದಿಗಳ ಸಂಗಮದಿಂದಾಗಿ ತುಂಬಿ ಹರಿದು ಸಾಗರವಲ್ಲಿ ಸೇರುವ ನದಿಯೊಂದನ್ನು ಹೋಲುತ್ತದೆ, ಕನ್ನಡದ ರಗಳೆ ಸಾಹಿತ್ಯದ ಇತಿಹಾಸ. ಆರಂಭದಲ್ಲಿ ರಗಳೆಯು ಬಹಳ ಸಣ್ಣ ಪ್ರಮಾಣದಲ್ಲಿ ಮಾತ್ರ ಬಳಕೆಯಾಗುತ್ತಿತ್ತು. ಬರುಬರುತ್ತ ಹಲವು ಕವಿಗಳ ಪರಿಶ್ರಮದ ಫಲವಾಗಿ ವಿಶೇಷ ಬಳಕೆಯೂ ಪ್ರಾಧಾನ್ಯವೂ ಅದಕ್ಕೆ ಪ್ರಾಪ್ತವಾಯಿತು. ಆಧುನಿಕಯುಗದಲ್ಲಂತೂ ಅದಕ್ಕೆ ಹೊಸ ತಿರುವೇ ದೊರೆಯಿತು.

ಇಂತಹ ರಗಳೆ ಸಾಹಿತ್ಯದ ವಾಹಿನಿಗೆ ವೀರಶೈವಕವಿಗಳ ಕೊಡುಗೆಯೇನು ಎಂಬುದನ್ನು ತಿಳಿಯಬೇಕಾಗಿದ್ದಲ್ಲಿ ಮೊದಲಿಗೆ ರಗಳೆಯ ಇತಿಹಾಸವನ್ನು ಸಂಗ್ರಹವಾಗಿಯಾದರೂ ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಅದನ್ನು ಮೂರು ಘಟ್ಟಗಳಾಗಿ ವಿಂಗಡಿಸಿ ವಿವರಿಸಬಹುದು. ಮೊದಲನೆಯ ಘಟ್ಟವು ಆರಂಭಕಾಲದಿಂದ ಹರಿಹರನ ವರೆಗೆ ಹರಡಿದ್ದರೆ, ಎರಡನೆಯ ಘಟ್ಟವು ಹರಿಹರನಿಂದ ಆಧುನಿಕಕಾಲದವರೆಗೂ, ಮೂರನೆಯದು ಅಲ್ಲಿಂದ ಮುಂದಕ್ಕೆ ಇಂದಿನವರೆಗೂ ಹರಡಿವೆ. ಮೊದಲ ಘಟ್ಟದಲ್ಲಿ ರಗಳೆ ಒಂದು ಅಪ್ರಧಾನ ಬಂಧವಾಗಿದ್ದುಕೊಂಡು ಚಂಪೂಕಾವ್ಯಗಳ ನಡುವೆ ಅಲ್ಲೊಮ್ಮೆ ಇಲ್ಲೊಮ್ಮೆ ಮಾತ್ರ ಕಾಣಿಸಿಕೊಳ್ಳುತ್ತಿತ್ತು. ಎರಡನೆಯ ಘಟ್ಟದಲ್ಲಿ ಅದಕ್ಕೆ ಪ್ರಧಾನಬಂಧದ ಪಟ್ಟ ದೊರೆಯಿತು. ಮೂರನೆಯ ಘಟ್ಟದಲ್ಲಿ ಅದು ಸರಳರಗಳೆ ಮಹಾಛಂದಸ್ಸುಗಳಾಗಿ ರೂಪಪರಿವರ್ತನೆಯನ್ನೇ ಪಡೆಯಿತು.

ಈ ಘಟ್ಟಗಳ ರಗಳೆ ಸಾಹಿತ್ಯದ ವಿಶ್ಲೇಷಣೆಯಲ್ಲಿ ಪ್ರಕೃತದಲ್ಲಿ ಹೆಚ್ಚು ಒತ್ತುಕೊಡಬೇಕಾಗಿರುವುದು ಎರಡನೆಯ ಘಟ್ಟಕ್ಕೆ ಮಾತ್ರ. ಏಕೆಂದರೆ, ವೀರಶೈವಕವಿಗಳು ಪ್ರಧಾನವಾಗಿ ರಗಳೆಯನ್ನು ಬಳಸಲು ತೊಡಗಿದ್ದೂ ಅವರ ಬಾಹುಳ್ಯವಿರುವುದೂ ಅದರಲ್ಲಿಯೇ. ಮೂರನೆಯದರಲ್ಲಿ ಸಾಕಷ್ಟು ಜನ ವೀರಶೈವಕವಿಗಳು ಇರುವರಾದರೂ, ಜಾತ್ಯಾಧಾರವನ್ನವಲಂಬಿಸಿ ಕವಿಗಳನ್ನು ವರ್ಗೀಕರಿಸುವುದು ಆಧುನಿಕಕಾಲದಲ್ಲಿ ಕಷ್ಟಸಾಧ್ಯವಾದುದರಿಂದ, ಆ ಘಟ್ಟಕ್ಕೆ ಹೆಚ್ಚು ಒತ್ತುಕೊಡುವುದು ಸಾಧ್ಯವಿಲ್ಲವಾಗಿದೆ. ಇದು ಈ ಪ್ರಬಂಧದ ಇತಿಮಿತಿಗಳಲ್ಲಿ ಪ್ರಮುಖವಾದುದು. ಇನ್ನು ಈ ಮೂರು ಘಟ್ಟಗಳ ರಗಳೆ ಸಾಹಿತ್ಯದ ಬಗ್ಗೆ ಸಂಗ್ರಹವಾಗಿ ನೋಡಬಹುದು.

**ಮೊದಲನೆಯ ಘಟ್ಟ :** 'ಕವಿರಾಜಮಾರ್ಗ'ದಲ್ಲಿ ರಗಳೆಯು ಯಾವ ಪ್ರಕಾರವೂ ಪ್ರಯೋಗವಾಗಿಲ್ಲ. "ಪ್ರಾಚೀನ ಶಾಸನಗಳಲ್ಲೂ ಪ್ರಾಯಃ ಇಲ್ಲವೆಂದೇ ತೋರುತ್ತದೆ. ಅಷ್ಟು ಹಿಂದೆ ರಗಳೆಯ ಪರಿಚಯ ಕನ್ನಡಕ್ಕೆ ಇನ್ನೂ ಆಗಿರಲಿಲ್ಲ" ಎಂಬುದಾಗಿ ಟಿ. ವಿ. ವೆಂಕಟಾಚಲಶಾಸ್ತ್ರಿಯವರು ಹೇಳಿದ್ದಾರೆ.[1] ಆದ್ದರಿಂದ ಸದ್ಯದ ತಿಳಿವಳಿಕೆಯ ಪ್ರಕಾರ, ಕನ್ನಡದ ರಗಳೆಯ ಇತಿಹಾಸದ ಮೊದಲ ಘಟ್ಟವು ಪಂಪನಿಂದ (ಕ್ರಿ.ಶ. ೯೪೧) ಆರಂಭವಾಗುತ್ತದೆಯೆನ್ನಬಹುದು. ಅವನ 'ಆದಿಪುರಾಣ'ದಲ್ಲಿ ಎರಡು ಕಡೆಯೂ, 'ವಿಕ್ರಮಾರ್ಜುನವಿಜಯ'ದಲ್ಲಿ ಮೂರು ಕಡೆಯೂ ರಗಳೆಗಳು ಪ್ರಯೋಗವಾಗಿವೆ. ಅಂತೆಯೇ ಪೊನ್ನನ (ಕ್ರಿ.ಶ. ೯೫೦) 'ಶಾಂತಿಪುರಾಣ'ದಲ್ಲಿ ಒಂದು ಕಡೆಯಲ್ಲಿಯೂ ರನ್ನನ (ಕ್ರಿ.ಶ. ೯೯೦) 'ಅಜಿತತೀರ್ಥಂಕರಪುರಾಣತಿಲಕ'ದಲ್ಲಿ ಮೂರು ಕಡೆಯಲ್ಲಿಯೂ ಅವುಗಳ ಪ್ರಯೋಗವನ್ನು ಕಾಣುತ್ತೇವೆ. ಅನಂತರದಲ್ಲಿ, ನಾಗವರ್ಮನ (ಕ್ರಿ.ಶ. ೯೯೦) 'ಕರ್ಣಾಟಕ ಕಾದಂಬರಿ'ಯಲ್ಲಿ ಮೂರು ಕಡೆ, ದುರ್ಗಸಿಂಹನ (ಕ್ರಿ.ಶ. ೧೦೩೧) 'ಪಂಚತಂತ್ರ'ದಲ್ಲಿ ಒಂದು ಕಡೆ. ಇಮ್ಮಡಿ ನಾಗವರ್ಮನ (ಕ್ರಿ.ಶ. ೧೦೪೨) 'ವರ್ಧಮಾನಪುರಾಣ'ದಲ್ಲಿ ಆರು ಕಡೆ, ಶಾಂತಿನಾಥನ (ಕ್ರಿ.ಶ. ೧೦೬೮) 'ಸುಕುಮಾರಚರಿತ'ದಲ್ಲಿ ನಾಲ್ಕು ಕಡೆ. ನಯಸೇನನ

[1] **'ಕನ್ನಡ ಛಂದಃಸ್ವರೂಪ'**, ಮೈಸೂರು, ೧೯೭೮, ಪು. ೩೧೬.

(ಕ್ರಿ.ಶ. ೧೧೧೨) 'ಧರ್ಮಾಮೃತ'ದಲ್ಲಿ ಎರಡು ಕಡೆ. ನೇಮಿಚಂದ್ರನ (ಕ್ರಿ.ಶ. ಸು. ೧೧೭೦) 'ಲೀಲಾವತೀ ಪ್ರಬಂಧ'ದಲ್ಲಿ ಎರಡು ಕಡೆ, ರುದ್ರಭಟ್ಟನ (ಕ್ರಿ.ಶ. ಸು. ೧೧೮೫) 'ಜಗನ್ನಾಥವಿಜಯ'ದಲ್ಲಿ ಎರಡು ಕಡೆ, ಅಗ್ಗಳನ (ಕ್ರಿ.ಶ. ೧೧೮೯) 'ಚಂದ್ರಪ್ರಭಪುರಾಣ'ದಲ್ಲಿ ಎರಡು ಕಡೆ, ಆಚಣ್ಣನ (ಕ್ರಿ.ಶ. ೧೧೯೫) 'ವರ್ಧಮಾನಪುರಾಣ'ದಲ್ಲಿ ಒಂದು ಕಡೆ, ಬಂಧುವರ್ಮನ (ಸು. ಕ್ರಿ.ಶ. ೧೨೦೦) 'ಜೀವಸಂಬೋಧನ'ದಲ್ಲಿ ಹನ್ನೆರಡು ಕಡೆ, 'ಹರಿವಂಶಾಭ್ಯುದಯ'ದಲ್ಲಿ ಒಂಬತ್ತು ಕಡೆ—ಅವುಗಳ ಬಳಕೆಯನ್ನು ಕಾಣುತ್ತೇವೆ. ಇದು ರಗಳೆಯ ಇತಿಹಾಸದ ಮೊದಲ ಘಟ್ಟದ ಪಕ್ಷಿನೋಟ. ಇದನ್ನು ಗಮನಿಸಿದಾಗ ಕಂಡುಬರುವ ಪ್ರಮುಖ ಅಂಶಗಳೆಂದರೆ ಇವು: ಈ ಅವಧಿಯಲ್ಲಿ ಹೆಚ್ಚಿನವರು ಜೈನ ಕವಿಗಳು; ಬ್ರಾಹ್ಮಣಕವಿಗಳು ಬಹಳ ವಿರಳ; ವೀರಶೈವ ಕವಿಗಳಂತೂ ಕಂಡುಬರುವುದೇ ಇಲ್ಲ. ರಗಳೆಯನ್ನು ವೃತ್ತ ಕಂದಾದಿಗಳ ನಡುವೆ ವೈವಿಧ್ಯಕ್ಕಾಗಿ ಮಾತ್ರ ವಿರಳವಾಗಿ ಬಳಸಲಾಗಿದೆ; ಇಡೀ ಕೃತಿಯೊಂದಕ್ಕೆ ಅದನ್ನೇ ಮಾಧ್ಯಮವಾಗಿ ಬಳಸಿರುವುದಕ್ಕೆ ಉದಾಹರಣೆ ಸಿಕ್ಕುವುದಿಲ್ಲ. ಪುರವರ್ಣನೆ, ಉದ್ಯಾನವರ್ಣನೆ, ವಸಂತವರ್ಣನೆ, ಪೂಜಾವರ್ಣನೆ, ಸ್ತ್ರೀಯರ ರೂಪಲಾವಣ್ಯಗಳ ವರ್ಣನೆ, ಮೋಹವರ್ಣನೆ, ಶುಭಸ್ವಪ್ನಗಳ ವರ್ಣನೆ, ಕುಮಾರೋದಯ ವರ್ಣನೆ, ವಿವಾಹಮಂಟಪದ ವರ್ಣನೆ, ಯುದ್ಧವರ್ಣನೆ, ವಿಡಂಬನೆ, ಸ್ತುತಿ—ಇಂತಹ ಯಾವುದಾದರೊಂದನ್ನು ತರುವ ಸಂದರ್ಭಗಳಲ್ಲಿ ಮಾತ್ರ ರಗಳೆಗಳನ್ನು ತರಲಾಗಿದೆ. ಒಟ್ಟಾರೆ ರಗಳೆಯು ವಿರಳ ಬಳಕೆಯ ಬಂಧಗಳಲ್ಲೊಂದಾಗಿ ಬಳಕೆಯಾಗಿರುವುದು ಈ ಘಟ್ಟದಲ್ಲಿ ಕಂಡುಬರುವ ಪ್ರಧಾನ ಅಂಶ.

**ಎರಡನೆಯ ಘಟ್ಟ :** ಹಿಂದೆಯೇ ತಿಳಿಸಿದಂತೆ ರಗಳೆಯ ಇತಿಹಾಸದಲ್ಲಿ ಈ ಘಟ್ಟ ಬಹಳ ಮಹತ್ತ್ವದ್ದಾಗಿದ್ದು ಹರಿಹರನಿಂದ (ಕ್ರಿ.ಶ. ಸು. ೧೨೦೦) ಪ್ರಾರಂಭವಾಗುತ್ತದೆ. ಇದರಲ್ಲಿ ಎರಡು ಪ್ರಮುಖ ಪ್ರವಾಹಗಳನ್ನು ಗುರುತಿಸಬಹುದು. ಮೊದಲನೆಯದು ಹರಿಹರನಿಂದ ಪ್ರಾರಂಭವಾದ ಹೊಸ ಪ್ರವಾಹ; ಎರಡನೆಯದು ಹಿಂದಿನ ಘಟ್ಟದಿಂದ ಹರಿದುಬಂದುದರ ಮುಂದುವರಿಕೆ. ಮೊದಲ ಪ್ರವಾಹದಲ್ಲಿ ರಗಳೆಯು ಇಡೀ ಕೃತಿಗೆ ಮಾಧ್ಯಮವಾಗಿ ಬಳಕೆಯಾಗಿದೆ. ಈ ವಿಧಾನದಲ್ಲಿ ಹರಿಹರ ಹಲವಾರು ರಗಳೆಗಳನ್ನು ರಚಿಸಿದ್ದಾನೆ. ಅವುಗಳ ಒಟ್ಟು ಸಂಖ್ಯೆಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಆತ "ಸು. ೧೧೧ ರಗಳೆಗಳನ್ನು ರಚಿಸಿರುವ ಹಾಗೆ ಪ್ರತೀತಿ. ಕೆಲವರು ೬೧ ಮಾತ್ರ ಆತನವು ಎನ್ನುತ್ತಾರೆ."[1] ಇಷ್ಟಾದರೂ ಅವನು ರಚಿಸಿದಷ್ಟು ಸಂಖ್ಯೆಯಲ್ಲಿ ಬೇರೆ ಯಾವ ಕವಿಯೂ ರಗಳೆಕೃತಿಗಳನ್ನು ರಚಿಸಲಿಲ್ಲವೆಂಬುದು ಗಮನಾರ್ಹ. ನಂಬಿಯಣ್ಣನ ರಗಳೆ, ಬಸವರಾಜದೇವರ ರಗಳೆ, ಶಿವಮಹಿಮಾರಗಳೆ, ಪಂಪಾಕ್ಷೇತ್ರದ ರಗಳೆ, ಸಂಸಾರವ್ಯಾಮೋಹನಿರಸನರಗಳೆ, ಪುಷ್ಪರಗಳೆ ಮುಂತಾದವು ಅವನ ರಗಳೆ ಕೃತಿಗಳು. ಅವನ ನಂತರ ಕೆರೆಯ ಪದ್ಮರಸನು (ಸು. ೧೨೦೦) 'ದೀಕ್ಷಾಬೋಧೆ'ಯನ್ನೂ, ತ್ರಿಭುವನತಾತನು (ಸು. ೧೨೦೦) 'ಅಮ್ಮವ್ವೆಯ ರಗಳೆ', 'ಗುರು ರಗಳೆ', 'ಪಗಲ್ಚೋರನ ರಗಳೆ', 'ಜೋಳಿಯಕ್ಕನ ರಗಳೆ' ಇವನ್ನೂ ರಗಳೆ ಛಂದಸ್ಸಿನಲ್ಲಿ ರಚಿಸಿದ್ದಾರೆ. ಅಂತೆಯೇ ಸು. ೧೩೦೦ರ ಪಾಲ್ಕುರಿಕೆ ಸೋಮನಾಥನು 'ಗಂಗೋತ್ಪತ್ತಿರಗಳೆ', 'ಚೆನ್ನಬಸವಸ್ತೋತ್ರದ ರಗಳೆ', 'ಶರಣಬಸವರಗಳೆ'—ಇವನ್ನು ರಚಿಸಿದ್ದಾನೆ. ಸು. ೧೩೫೦ರಲ್ಲಿ 'ಸದಾಶಿವಲಿಂಗ' ಎಂಬ ಅಂಕಿತದ ಕವಿಯು 'ಸಾನಂದ ಗಣೇಶ್ವರನ ರಗಳೆ'ಯನ್ನು ರಚಿಸಿದ್ದಾನೆ. ಸು. ೧೪೦೦ರ ಭೀಮಕವಿಯು 'ಭೀಮಕವೀಶ್ವರ ರಗಳೆ'ಯನ್ನುರಚಿಸಿದ್ದಾನೆ. ಸು. ೧೪೮೦ರ ಸ್ವತಂತ್ರಸಿದ್ಧಲಿಂಗೇಶ್ವರನು 'ಜಂಗಮರಗಳೆ'ಯನ್ನು ರಚಿಸಿದ್ದಾನೆ. ಸು. ೧೫೦೦ರ ನಿಜಗುಣ ಶಿವಯೋಗಿಯ 'ಪರಮಾರ್ಥಗೀತೆ'ಯೂ ಒಂದು ರಗಳೆಯ ಕೃತಿಯಾಗಿದೆ. ಜೊತೆಗೆ ಇದರಲ್ಲಿ ಸಾಕಷ್ಟು ಕಂದಗಳೂ ಬಳಕೆಯಾಗಿವೆ. ಅನಂತರ ೧೫೧೩ರ ಗುಬ್ಬಿಯ ಮಲ್ಲಣಾರ್ಯನು 'ಪುರಾತನರಗಳೆ' ಎಂಬ ಗ್ರಂಥವನ್ನೂ ಬರೆದಿರುವುದಾಗಿ ಪ್ರತೀತಿಯಿದೆ; ಆದರೆ ಅದು ನಮಗೆ ದೊರೆತಿಲ್ಲ—ಎಂಬುದಾಗಿ ಕವಿಚರಿತೆಕಾರರು ಹೇಳಿದ್ದಾರೆ.[2] ಸು. ೧೬೦೦ರಲ್ಲಿ ವಿರೂಪಾಕ್ಷನು 'ಲಿಂಗಾರ್ಚನರಗಳೆ' ಎಂಬುದನ್ನು ಬರೆದಿದ್ದಾನೆ. 'ಗುರುಪುರದ ಮಲ್ಲಿನಾಥ' ಅಂಕಿತದಲ್ಲಿರುವ 'ಅಸಂಖ್ಯಾತರಗಳೆ'ಯನ್ನು ಕವಿಚರಿತೆಕಾರರು ಸು. ೧೬೦೦ರ ಅವಧಿಗೇ ಸೇರಿಸುತ್ತಾರೆ. ಸು. ೧೬೨೦ರಲ್ಲಿ ಬರುವ ಶಂಕರದೇವ ಒಬ್ಬ ಪ್ರಮುಖ ರಗಳೆ ಕವಿ. ಚೇರಮನ ರಗಳೆ, ಕಲಿಗಣನಾಥನ ರಗಳೆ, ಸಕಳೇಶಮಾದಿರಾಜಯ್ಯನ ರಗಳೆ, ಅಯ್ದಕ್ಕಿಮಾರಯ್ಯನ ರಗಳೆ,ಮೈದುನರಾಮಯ್ಯನ ರಗಳೆ, ಬಹುರೂಪಿ ಚೌಡಯ್ಯನ ರಗಳೆ, ಏಲೇಶಕೇತಯ್ಯನ ರಗಳೆ, ಅಮುಗಿದೇವಯ್ಯನ ರಗಳೆ, ಬಿಬ್ಬಿಬಾಚಯ್ಯನ ರಗಳೆ, ಮೇದರಕೇತಯ್ಯನ ರಗಳೆ, ಧೂಪದ ಮಂಚಣ್ಣನ ರಗಳೆ,

---

1 ಟಿ. ವಿ. ವೆಂಕಟಾಚಲಶಾಸ್ತ್ರೀ: ಸಾಹಿತ್ಯರೂಪಗಳು-ರಗಳೆ, **'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ'**, ನಾಲ್ಕನೆಯ ಸಂಪುಟ, ಮೊದಲ ಭಾಗ, ಮೈಸೂರು, ೧೯೭೭, ಪು. ೩೩೯

2 **'ಕರ್ಣಾಟಕ ಕವಿಚರಿತೆ'**, ದ್ವಿತೀಯ ಸಂಪುಟ, ೧೯೭೩ರ ಆವೃತ್ತಿ, ಪು. ೧೩೮.

ಗುರುಭಕ್ತನ ರಗಳೆ, ಮೋಜಿನಮೇಮಯ್ಯನ ರಗಳೆ. ಮಹದೇವ ರಾಣಿಯರ ರಗಳೆ, ಕಮಳವ್ವೆಯ ರಗಳೆ. ವೀರಶೈವಾರಾಧ್ಯಮಹಾತ್ಮೆಯ ರಗಳೆ, ಷಡಕ್ಷರಿಯ ರಗಳೆ, ಭಕ್ತಿಬಿನ್ನಹದ ರಗಳೆ. ಜಂಗಮದಾಸೋಹ ರಗಳೆ. ಮನೋವಿಕಾರದ ರಗಳೆ, ಪುನರ್ದೀಕ್ಷೆಯ ರಗಳೆ, ವೀರಶೈವ ರಗಳೆ ಮತ್ತು ಪ್ರಸಾದ ಮಹಾತ್ಮೆ ರಗಳೆ—ಎಂಬುದಾಗಿ ಆತ ಇಪ್ಪತ್ತಮೂರು ರಗಳೆ ಕೃತಿಗಳನ್ನು ರಚಿಸಿದ್ದಾನೆ. ಸು. ೧೬೫೦ರ ಶಾಂತವೀರದೇಶಿಕನು 'ಬಸವಪವಾಡ ರಗಳೆ'ಯನ್ನು ರಚಿಸಿದ್ದಾನೆ. ಸು. ೧೬೫೦ರದೆಂದು ಹೇಳಲಾಗುವ 'ಭೋಜನ ರಗಳೆ' ಮತ್ತು ಸು. ೧೭೦೦ರದ್ದೆಂದು ಹೇಳಲಾಗುವ 'ವಿನಾಯಕಸ್ತೋತ್ರ ರಗಳೆ' ಇವುಗಳ ಕರ್ತೃಗಳು ಯಾರೋ ತಿಳಿಯುವುದಿಲ್ಲ. ಸು. ೧೮೩೦ರ ಬಸವಲಿಂಗನೆಂಬವನು 'ಶರಣುಬಸವ ರಗಳೆ'ಯೆಂಬುದನ್ನು ಬರೆದಿರುವುದಾಗಿ ಕವಿಚರಿತೆಕಾರರು ಹೇಳಿದ್ದಾರೆ.[1]

ಇನ್ನು ಎರಡನೆಯ ಪ್ರವಾಹ; ಹಿಂದಿನ ಘಟ್ಟದ್ದರ ಮುಂದುವರಿಕೆ. ಈ ಘಟ್ಟದಲ್ಲಿ ಇದರ ಮೊದಲಿಗ ರಾಘವಾಂಕನೆನ್ನಬಹುದು. ತನ್ನ ಗುರುವಾದ ಹರಿಹರನ ಮಾರ್ಗಕ್ಕಿಂತ ಭಿನ್ನವಾದ ಮಾರ್ಗದಲ್ಲಿ ನಡೆದ ಆತ ತನ್ನ 'ಹರಿಶ್ಚಂದ್ರಕಾವ್ಯ'ದಲ್ಲಿ ಒಂದು ಶೋಕಸನ್ನಿವೇಶದಲ್ಲಿ ಮಾತ್ರ ರಗಳೆಗೆ ಸ್ಥಾನ ಕೊಟ್ಟ. ಆಂಡಯ್ಯನ 'ಕಬ್ಬಿಗರಕಾವ'. ಜನ್ನನ 'ಅನಂತನಾಥಪುರಾಣ', ದೇವಕವಿಯ 'ಕುಸುಮಾವಳಿ', ಗುಣವರ್ಮನ 'ಪುಷ್ಪದಂತಪುರಾಣ'. ಮಧುರನ 'ಧರ್ಮನಾಥಪುರಾಣ' ಇವುಗಳಲ್ಲಿ ಕ್ರಮವಾಗಿ ಒಂದು, ಎರಡು. ಮೂರು. ನಾಲ್ಕು ಮತ್ತು ಒಂದು ಕಡೆಯಲ್ಲಿ ರಗಳೆಗಳು ಬಳಕೆಯಾಗಿವೆ. ವೀರಶೈವ ಚಂಪೂಕವಿಗಳಲ್ಲಿ ಕೆಲವರು ಕೂಡ ಇದೇ ರೀತಿ ಮಾಡಿದ್ದಾರೆ. ವೀರಭದ್ರಕವಿಯು ತನ್ನ 'ವೀರಭದ್ರವಿಜಯ'ದಲ್ಲಿ ಒಂದು ಕಡೆಯೂ, ಮುರಿಗೆ ದೇಶಿಕೇಂದ್ರನು ತನ್ನ 'ರಾಜೇಂದ್ರವಿಜಯ'ದಲ್ಲಿ ಮೂರು ಕಡೆಯೂ ರಗಳೆಗಳನ್ನು ಬಳಸಿರುವುದನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಇದು ಈ ಘಟ್ಟದ ಇತಿಹಾಸದ ಹಂದರ. ಇದನ್ನು ಗಮನಿಸಿದಾಗ ಕಂಡುಬರುವ ಪ್ರಮುಖ ಅಂಶಗಳನ್ನು ಹೀಗೆ ನಿರೂಪಿಸಬಹುದು: ಈ ಘಟ್ಟದಲ್ಲಿ ಹೆಚ್ಚಿನ ಕವಿಗಳು ವೀರಶೈವರೇ ಆಗಿದ್ದಾರೆ. ಅವರಲ್ಲಿ ಹೆಚ್ಚಿನವರು ರಗಳೆಯನ್ನು ಪ್ರಧಾನ ಬಂಧವಾಗಿ ಬಳಸಿದ್ದಾರೆ. ರಗಳೆಯು ಪ್ರಧಾನಬಂಧದ ಪಟ್ಟವನ್ನು ಈ ಅವಧಿಯಲ್ಲಿ ಪಡೆಯಿತು. ಚಂಪೂ ಸಂಪ್ರದಾಯದ ಕವಿಗಳ ಕೈಯಲ್ಲಿ ಮಾತ್ರ ಅದು ಒಂದು. ಎರಡು ಹೆಚ್ಚೆಂದರೆ ನಾಲ್ಕು ಈ ಪ್ರಮಾಣದಲ್ಲಿ ಬಳಕೆಯಾಯಿತು.

**ಮೂರನೆಯ ಘಟ್ಟ**: ಹೊಸ ಕವಿಗಳಲ್ಲಿ ಶ್ರೀನಿವಾಸ, ಪೇಜಾವರ ಸದಾಶಿವರಾಯ. ಕುವೆಂಪು. ಬೇಂದ್ರೆ. ಪುತಿನ, ವಿನಾಯಕ. ರಸಿಕರಂಗ ಮುಂತಾದ ಹಲವು ಕವಿಗಳು ಉತ್ಸಾಹ. ಮಂದಾನಿಲ. ಲಲಿತ ಈ ಮೂರು ಪ್ರಕಾರದ ರಗಳೆಗಳನ್ನೂ ಬಳಸಿದ್ದಾರೆ. ರಗಳೆಯಲ್ಲಿ ಅದೂ ಲಲಿತರಗಳೆಯಲ್ಲಿ ಈ ಯುಗದಲ್ಲಾದ ಪ್ರಮುಖ ಬದಲಾವಣೆಯೆಂದರೆ ಪ್ರಾಸತ್ಯಾಗ ಮತ್ತು ಸರಳರಗಳೆಯ ಆವಿರ್ಭಾವ. ಮಾಸ್ತಿ, ಕುವೆಂಪು. ವಿನಾಯಕ ಮುಂತಾದವರು ಸರಳ ರಗಳೆಯ ಪ್ರಮುಖ ಕವಿಗಳಾಗಿದ್ದಾರೆ. ಕುವೆಂಪು ಅವರು ಅದನ್ನು ಬಹಳವಾಗಿ ಪರಿಷ್ಕರಿಸಿ ಮಹಾಛಂದಸ್ಸನ್ನಾಗಿಸಿದ್ದು ತಿಳಿದ ವಿಚಾರ. ಇದು ಈ ಘಟ್ಟದ ಇತಿಹಾಸದ ಹಂದರ. ಇದನ್ನು ಗಮನಿಸಿದಾಗ ತಿಳಿದುಬರುವ ಅಂಶಗಳು ಇವು: ಈ ಘಟ್ಟದಲ್ಲಿ ವೀರಶೈವೇತರ ಕವಿಗಳೇ ಹೆಚ್ಚಾಗಿ ರಗಳೆಯ ರಚನೆಗೆ ಕೈಹಾಕಿದ್ದಾರೆ. ರಗಳೆಯು ಈ ಘಟ್ಟದಲ್ಲಿ ವಿಶಾಲವ್ಯಾಪ್ತಿಯನ್ನೂ ಹೊಸರೂಪಗಳನ್ನೂ ಪಡೆದುಕೊಂಡಿತು. ಕಾವ್ಯಗಳಲ್ಲಿಯಂತೆಯೇ ನಾಟಕಗಳಲ್ಲಿ ಕೂಡ ಬಳಕೆಯಾಯಿತು.

* * *

ಈ ಹಿನ್ನೆಲೆಯಲ್ಲಿ ರಗಳೆಯ ಸಾಹಿತ್ಯಕ್ಕೆ ವೀರಶೈವ ಕವಿಗಳ ಕೊಡುಗೆಯೇನು ಎಂಬುದರ ಬಗ್ಗೆ ಇನ್ನು ವಿಚಾರ ಮಾಡಬಹುದು.

(೧) ಅವರ ಪ್ರಮುಖ ಕೊಡುಗೆ ಎಂದರೆ ರಗಳೆಗೆ ಪ್ರಧಾನಬಂಧದ ಪಟ್ಟವನ್ನು ದೊರಕಿಸಿಕೊಟ್ಟುದು. ಈ ಕೆಲಸವನ್ನು ಮೊದಲಿಗೆ ಮಾಡಿದವನು ಹರಿಹರನೆಂಬುದನ್ನು ಈ ಹಿಂದೆಯೇ ನೋಡಿದ್ದೇವೆ. ಅವನು ಹಾಕಿಕೊಟ್ಟ ಮಾರ್ಗದಲ್ಲಿ ಕೆರೆಯ ಪದ್ಮರಸ. ತ್ರಿಭುವನತಾತ, ಪಾಲ್ಕುರಿಕೆ ಸೋಮನಾಥ, ಸದಾಶಿವಲಿಂಗಾಂಕಿತದ ಕವಿ. ಭೀಮಕವಿ. ಸ್ವತಂತ್ರ ಸಿದ್ಧಲಿಂಗೇಶ್ವರ, ಗುಬ್ಬಿಯ ಮಲ್ಲಣಾರ್ಯ, ವಿರೂಪಾಕ್ಷ, ಶಂಕರದೇವ ಮುಂತಾದವರು ಮುನ್ನಡೆದಿದ್ದಾರೆ. ಇಷ್ಟಾದರೂ ಅವರಲ್ಲಿ ಯಾರೂ ಹರಿಹರನ ಮಟ್ಟಕ್ಕೆ ಏರಲಿಲ್ಲವೆಂಬುದು ಬೇರೆಯ ಮಾತು. ಆದರೆ ಆ ಸಂಪ್ರದಾಯವನ್ನು ಮುಂದುವರಿಸಿ. ಆ ಮಟ್ಟವನ್ನು ಮುಟ್ಟುವುದಕ್ಕೆ ಅವರು ತಮ್ಮ ಕೈಲಾದಮಟ್ಟಿಗೂ ಶ್ರಮಿಸಿದ್ದಾರೆಂಬುದು

[1] ಅದೇ, ತೃತೀಯ ಸಂಪುಟ, ೧೯೭೩ರ ಆವೃತ್ತಿ, ಪು. ೧೮೩.

ಗಮನಾರ್ಹ. ಅಂತೆಯೇ ಈ ಮಾರ್ಗ ಅವರಿಗಷ್ಟೇ ಸೀಮಿತವಾಯಿತೆಂಬುದು ಕೂಡ ಪ್ರಮುಖ ವಿಚಾರ. ವೀರಶೈವೇತರ ಕವಿಗಳು ಈ ಕೆಲಸಕ್ಕೆ ಕೈಹಾಕಿದಂತೆ ಕಾಣಿಸುವುದಿಲ್ಲ. ಆಧುನಿಕಯುಗ ಮಾತ್ರ ಇದಕ್ಕೆ ಅಪವಾದವಾಗಿದೆ.

(೨) ಎರಡನೆಯದು. ಅಧಿಕ ಸಂಖ್ಯೆಯಲ್ಲಿ ಕೃತಿಗಳನ್ನು ರಚಿಸಿದ್ದು. ಈ ಸಂಬಂಧದಲ್ಲಿ ಕೂಡ ಹರಿಹರನೇ ಮೊದಲ ಸ್ಥಾನದಲ್ಲಿ ನಿಲ್ಲುತ್ತಾನೆ. ಅವನು ರಚಿಸಿದಷ್ಟು ಕೃತಿಗಳನ್ನು ಬೇರೆ ಯಾರೂ ರಚಿಸಿಲ್ಲ. ಅವನ ಹತ್ತಿರಕ್ಕೆ ಬರುವವನೆಂದರೆ ಶಂಕರದೇವ ಮಾತ್ರ. ಆತ ಇಪ್ಪತ್ತಮೂರು ಕೃತಿಗಳನ್ನು ರಚಿಸಿರುವುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ಉಳಿದಂತೆ ತ್ರಿಭುವನತಾತ. ಪಾಲ್ಕುರಿಕೆ ಸೋಮನಾಥ ಇಂಥವರು ಮೂರು ಇಲ್ಲವೇ ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಉಳಿದವರು ಒಂದೊಂದು ಕೃತಿಯನ್ನು ರಚಿಸಿರುವುದೇ ಹೆಚ್ಚು. ಆದರೆ, ಎಲ್ಲರೂ ಕೊಟ್ಟ ಕೃತಿಗಳ ಒಟ್ಟು ಸಂಖ್ಯೆ ಮಾತ್ರ ಗಣನೀಯವಾದುದು.

(೩) ಮೂರನೆಯದೆಂದರೆ. ವಸ್ತುವೈವಿಧ್ಯವನ್ನು ದೊರಕಿಸಿಕೊಟ್ಟುದು. ಹಿಂದೆಯೇ ಗಮನಿಸಿದಂತೆ. ಆವರೆಗೆ. ಸ್ತ್ರೀಸೌಂದರ್ಯವರ್ಣನೆ. ಪುರವರ್ಣನೆ. ಕುಮಾರೋದಯವರ್ಣನೆ ಮುಂತಾದ ವರ್ಣನೆಗಳು ಇಲ್ಲವೇ ಸ್ತುತಿಗಳು ಇಷ್ಟಕ್ಕೆ ಮಾತ್ರವೇ ಸೀಮಿತವಾಗಿದ್ದ ರಗಳೆಯನ್ನು ಆ ವಲಯದಿಂದ ಹೊರತೆಗೆದು ಇಡೀ ಕೃತಿಗೇ ಪ್ರಧಾನ ಬಂಧವಾಗಿ ಬಳಸುವುದರ ಮೂಲಕ ಅದರಲ್ಲಿ ವಸ್ತುವೈವಿಧ್ಯಕ್ಕೆ ದಾರಿಮಾಡಿಕೊಟ್ಟವರು ವೀರಶೈವ ಕವಿಗಳು: ಅವರಲ್ಲೂ ಹರಿಹರ ಆದ್ಯನೂ ಆಚಾರ್ಯನೂ ಆಗಿದ್ದಾನೆ. ತಿರುನೀಲಕಂಠ. ಇಹಃಪಗೆಯಾಂಡ, ಇಳೆಯಾಂಡ ಗುಡಿಮಾರ. ಚೇದಿರಾಜ. ಮುಸಿಡಿಮಿಂಡದೇವ. ಕಣ್ಣಪ್ಪ. ಕಾರಿಕಾಲಮ್ಮೆ. ನಂಬಿಯಣ್ಣ ಮುಂತಾದ ಪುರಾತನರನ್ನು ಕುರಿತು ಆತ ಒಂದೊಂದು ರಗಳೆಯ ಕೃತಿಗಳನ್ನು ರಚಿಸಿದ್ದಾನೆ: ಅಂತೆಯೇ ಪ್ರಭುದೇವರು. ಬಸವರಾಜದೇವರು. ಮಹಾದೇವಿ ಅಕ್ಕ. ಆದಯ್ಯ ಮುಂತಾದವರನ್ನು ಕುರಿತು ಕೂಡ. ಇವೆಲ್ಲ ಶರಣರ ಜೀವನಚಿತ್ರಗಳಾದರೆ ವಿಭೂತಿರಗಳೆ, ರುದ್ರಾಕ್ಷಿರಗಳೆ. ಮುಂತಾದುವು ಧಾರ್ಮಿಕ ತತ್ತ್ವಗಳನ್ನು ನಿರೂಪಿಸುವಂತಹವಾಗಿವೆ. ಹೀಗೆಯೇ ಇತರರದ್ದು ಕೂಡ. ತ್ರಿಭುವನತಾತನ 'ಅಮ್ಮವ್ವೆಯ ರಗಳೆ'. 'ಜೋಳಿಯಕ್ಕನ ರಗಳೆ'. ಶಂಕರದೇವನ 'ಚೇರಮನ ರಗಳೆ'. 'ಕಲಿಗಣನಾಥನ ರಗಳೆ'. ಮುಂತಾದುವು ಜೀವನಚಿತ್ರಗಳಾಗಿದ್ದರೆ. ಕೆರೆಯ ಪದ್ಮರಸನ 'ದೀಕ್ಷಾಬೋಧೆ' ಸ್ವತಂತ್ರ ಸಿದ್ಧಲಿಂಗೇಶ್ವರನ 'ಜಂಗಮ ರಗಳೆ'. ಶಂಕರದೇವನ 'ಜಂಗಮದಾಸೋಹ ರಗಳೆ'. 'ಪ್ರಸಾದಮಹಾತ್ಮೆ ರಗಳೆ' ಮುಂತಾದವು ವೀರಶೈವಧರ್ಮದ ಮೂಲತತ್ತ್ವಗಳನ್ನು ವಿವರಿಸುವಂತಹವಾಗಿವೆ.

ವಿವಿಧ ರೀತಿಯ ವಸ್ತುಗಳಿಗೆ ವೀರಶೈವ ಕವಿಗಳು ರಗಳೆಗಳನ್ನು ಹೇಗೆ ಒಗ್ಗಿಸಿದರು ಬಳಸಿದರು ಎಂಬುದಕ್ಕೆ ಈ ಉದಾಹರಣೆಗಳನ್ನು ನೋಡಬಹುದು:

(೧) ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೆತ್ತಲ್
ಜಡೆಗಳ್ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ಜಡೆಯೊಳ್ ಶಶಿಕಳೆಯಲ್ಲಾಡುತ್ತಿರೆ
ಕದುಬೆಳ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಢಂಢಂ ಢಣಿಲೆನೆ
ತಿಸುಳದಿ ಹರಿಯುವ ತಾರಂ ತಿರ್ರನೆ

(ಹರಿಹರ: ಕುಂಬರ ಗುಂಡಯ್ಯನ ರಗಳೆ)

ಶಿವನ ನಾಟ್ಯವಿಧಾನವನ್ನು ಹರಿಹರ ಇಲ್ಲಿ ಮನೋಜ್ಞವಾಗಿ ವರ್ಣಿಸಿದ್ದಾನೆ. ಲಯಗತಿಯು ಭಾವವನ್ನು ಎಷ್ಟರ ಮಟ್ಟಿಗೆ ಪೋಷಿಸುತ್ತದೆಯೆಂಬುದು ಇದನ್ನು ಓದಿ ಆಸ್ವಾದಿಸಿದಾಗ ಮನದಟ್ಟಾಗುತ್ತದೆ.

(೨) ತರತರದೊಳೆಸೆವಗ್ರಹಾರ ಸುಗ್ರಾಮದಿಂ
ಪರಿವ ನದಿ ಪಾವನತಪೋವನಸ್ತೋಮದಿಂ
ತುಱುಗಿದಱವಟಿಗೆ ಯಾರವೆಯನ್ನ ಛತ್ರದಿಂ
ಮೆಱೆವ ಶಿವನಿಳಯ ಶಿವಪುರ ಶಿವಕ್ಷೇತ್ರದಿಂ
ನಗರಿನಗರಿಯನ್ನೈದೆ ಬಳಸಿದುಪವನಗಳಿಂ
ಮಿಗೆತರಂಬಡೆದು ನಳನಳಿಪ ಬೆಳೆಗೆಯ್ಗಳಿಂ

ಅಲ್ಲಲ್ಲಿ ಪಥಿಕರ ಪರಿಶ್ರಮಂಗಳ ಕಳೆವ
ಮಲ್ಲಿಕಾಲತೆ ಮಲಯಜಂ ಸೊಬಗಿನಿಂ ಸುಳಿವ
ತಂಬೆಲರು ತಾವರೆಗೊಳಂ ತಳಿತ ಮಾಮರಂ
ಜಂಬು ದಾಳಿಂಬ ರಂಭಾವನ ನಿರಂತರಂ
ಪರಿವ ಕಾಲುವೆಗಳಿಂ ಸುಧಿಯ ರಸಗಳಿಂ ?
ಕರೆವ ಕೋಗಿಲೆಗಳಿಂ ಮೊರೆವ ಮಧುಕರಗಳಿಂ
ಎಸೆವ ಮಲೆನಾಡ ಮಹಿಮೆಯ ಪೊಗಳಲೆನ್ನಳವೆ
ಅಸಮಾಕ್ಷನಜೀವನುಳಿದವರಿಗದು ಗೋಚರವೆ

ಇದು ಶಂಕರದೇವನು ತನ್ನ ಚೇರಮನ ರಗಳೆಯಲ್ಲಿ ಮಲೆನಾಡನ್ನು ವರ್ಣಿಸಿರುವ ರೀತಿ.

(೩) ಬಳಲಿದಿರಿ ತಂದೆ ಬೆಂಡಾದಿರಲ್ಲಾ ಧರ್ಮಿ
ಮಳೆಗಾಳಿ ಛಳಿ ಬಿಸಿಲು ಸೋಂಕಿದವಲಾ ಧರ್ಮಿ
ಪನ್ನೀರು ಮಿಶ್ರಿಸಿದ ಗಂಧವಿದೆ ಚಿತ್ತೈಸಿ
ಪೊನ್ನ ಬಟ್ಟಲೊಳು ಕರ್ಪೂರವಿದೆ ಚಿತ್ತೈಸಿ
ಘುಮಘುಮಿಪ ಸಾದು ಕಸ್ತೂರಿಯಿದೆ ಚಿತ್ತೈಸಿ
ಅಗಿಲು ಕರ್ದಮ ಪುಷ್ಪಂಗಳಿವೆ ಚಿತ್ತೈಸಿ
ಉತ್ತಮದ ದೇವಾಂಗವಸ್ತ್ರವಿದೆ ಚಿತ್ತೈಸಿ
ಪತ್ತೆಗಟ್ಟುತ ಮೌಕ್ತಿಕಾಭರಣವಿವ ಧರಿಸಿ
ಕರ್ಣಕುಂಡಲ ಬಾಹುಪೂರಪಿವೆಯವಧರಿಸಿ
ಚಿನ್ನನ ಸರಂ ಕಡೆಯ ಪೆಂಡೆಯವನವಧರಿಸಿ

ಇದು. 'ಸಾನಂದಗಣೇಶ್ವರನ ರಗಳೆ'ಯಲ್ಲಿ, ಯಮದೂತರು ಧರ್ಮಿಗಳಿಗೆ ಉಪಚಾರಮಾಡುವ ರೀತಿಯ ವರ್ಣನೆ.

(೪) ನೋಡಂ ನುಡಿಯಂ ತೆಱೆಯಂ ಕಣ್ಣಂ
ಊಡಿದರುಣ್ಣಂ ಮೊಲೆಯಂ ಚಿಣ್ಣಂ
ಏಗುವೆನೇಗುವೆನೆನಗುಳ್ಳಪ್ಪ
ರೋಗವಿದೆಲ್ಲಿದು ನಿನಗಿದ್ದು ಬೊಪ್ಪ
ದೀಪನವಾಗದ ಕಾರಣವೇನ್ನೆ
ವ್ಯಾಪಿಸುವಗ್ನಿಯ ತಾತನು ನೀನ್ನೆ
ಬೆರಲ ಮಿಡಿದುಕೊಳುತುಂ ಬಾಯ್ಬಿಡುತುಂ
ಕರೆವಳು ಬಲ್ಲವರಿಗೆ ದನಿಗೊಡುತುಂ
ಈಶ್ವರನೀ ಪರಿ ಮಾಡಿದ ಮಾಟ
ಲೇಸಾಗಿಯೆ ಮನ ಕೂಡಿದ ಕೂಟ
ಶಿವನ ನೆನೆದು ಭಸಿತವ ತಾನಿಡುತುಂ
ಜವಗಂ ಬಲ್ಲಿದನಾಗೆಂದೆನುತುಂ . . . .

ಇದು ತ್ರಿಭುವನತಾತನ 'ಅಮ್ಮವ್ವೆಯ ರಗಳೆ'ಯ ಒಂದು ಭಾಗ. ಶಿಶುರೂಪಿಯಾದ ಶಿವನು ರೋಗದಿಂದ ನರಳು ವಾಗ ಅಮ್ಮವ್ವೆ ಪಟ್ಟ ಪರಿತಾಪದ ವರ್ಣನೆ ಈ ಭಾಗದಲ್ಲಿ ಬಂದಿದೆ.

(೫) ಅಂಗದೊಳು ಲಿಂಗಧಾರಣವಾಗಬೇಕೆಂಬ
ಅಂಗೈಸಬಾರದೆಂಬುದ ಕೇಳಿಯುಂ ನಂಬ
ಅಂಗಮುಂ ಲಿಂಗಮುಂ ಸಂಗಸಮವಾದಂಗೆ
ಹಿಂಗದಿರಬೇಕು ಪ್ರಾಣದೊಳು ಕಳೆಯಾತಂಗೆ
ಶಯನ ಮಜ್ಜನ ಮಱವೆಯವಧಾನದೆಡೆಯಲ್ಲಿ
ಭಯತಸ್ಕರಾದಿ ರುಜೆ ಗ್ರಹಪ್ರಾಣವಳಿವಲ್ಲಿ
ಹಿಂಗಲಾಗದು ಲಿಂಗಮಂ ನಿಮಿಷಮಾತ್ರದಿಂ
ಹಿಂಗಿದಡೆ ಮಹಪಾತಕಂಗಳು ವಿಯೋಗದಿಂ

ತತ್ತ್ವಬೋಧನೆಯ ಈ ಭಾಗ ಕೆರೆಯ ಪದ್ಮರಸನ 'ದೀಕ್ಷಾಬೋಧೆ'ಯದು.

ಹೀಗೆ ಎಲ್ಲ ರೀತಿಯ ವಸ್ತುಗಳಿಗೂ ರಗಳೆಯನ್ನು ಬಳಸಬಹುದೆಂಬುದನ್ನು ವೀರಶೈವ ಕವಿಗಳು ತೋರಿಸಿ ಕೊಟ್ಟಿದ್ದಾರೆ. ಈ ಸೌಲಭ್ಯವಿರುವುದರಿಂದಲೇ ಅವರು ಆ ಬಂಧವನ್ನು ಕಥನಕವನಗಳಿಗೆ ಮಾಧ್ಯಮವಾಗಿ ಬಳಸಲು ಸಾಧ್ಯವಾದುದು.

(೪) ಇನ್ನು ನಾಲ್ಕನೆಯದು. ರಗಳೆಬಂಧವನ್ನು ಬಳಸಿಕೊಂಡು ಹೊಸರೂಪದ ಕೃತಿಗಳನ್ನು ರಚಿಸಿದ್ದು. ಹರಿಹರನ ಕೃತಿಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಎರಡು ಪ್ರಕಾರದವುಗಳನ್ನು ಕಾಣುತ್ತೇವೆ. ಇಡೀ ಕೃತಿಯು ಒಂದೇ ಸ್ಥಲದಲ್ಲಿ ಮುಗಿಯುವುದು ಮೊದಲ ಪ್ರಕಾರ. ಅವನ 'ತಿರುನೀಲಕಂಠರ ರಗಳೆ', 'ಕಣ್ಣಪ್ಪನ ರಗಳೆ', 'ಕಾರಿಕಾಲಮ್ಮೆಯ ರಗಳೆ' ಮುಂತಾದುವು ಇದಕ್ಕೆ ಉದಾಹರಣೆಗಳಾಗಿವೆ. ಇಂತಹವುಗಳಲ್ಲಿ, ಆದಿ ಮತ್ತು ಅಂತ್ಯಭಾಗಗಳಲ್ಲಿ ಒಂದೊಂದು ಕಂದ ಬರುತ್ತದೆ. ವಿರಳವಾಗಿ, ಕಂದಕ್ಕೆ ಬದಲಾಗಿ ವೃತ್ತ ಬರುವುದೂ ಉಂಟು. ಅವನ 'ಶಿವಮಹಿಮಾ ರಗಳೆ' ಇದಕ್ಕೆ ಉದಾಹರಣೆಯಾಗಿದೆ. ಅದರಲ್ಲಿ ಆದಿಭಾಗದಲ್ಲಿ ಎರಡು ವೃತ್ತಗಳೂ ಅಂತ್ಯದಲ್ಲಿ ಒಂದು ಕಂದವೂ ಬಂದಿರುವುದನ್ನು ಕಾಣಬಹುದು.

ಇಡೀ ಕೃತಿಯನ್ನು ಹಲವು ಸ್ಥಲಗಳಾಗಿ ವಿಂಗಡಿಸಿ, ಒಂದು ಸ್ಥಲವನ್ನು ರಗಳೆಯಲ್ಲೂ ಅದರ ಮುಂದಿನ ಸ್ಥಲವನ್ನು ಗದ್ಯದಲ್ಲೂ ರಚಿಸುವುದು ಎರಡನೆಯ ಪ್ರಕಾರ ಹರಿಹರನ 'ಮಲುಹಣನ ರಗಳೆ', 'ಓಹಿಲಯ್ಯನ ರಗಳೆ', 'ರೇವಣಸಿದ್ಧೇಶ್ವರನ ರಗಳೆ', 'ನಂಬಿಯಣ್ಣನ ರಗಳೆ' ಮುಂತಾದುವು ಇದಕ್ಕೆ ಉದಾಹರಣೆಗಳಾಗಿವೆ. ಇಂತಹವುಗಳಲ್ಲಿ ಸ್ಥಲದ ಆದಿಯಲ್ಲಿ ಮಾತ್ರ ಕಂದವಾಗಲೀ ವೃತ್ತವಾಗಲೀ ಬರುತ್ತದೆ : ಕೊನೆಯ ಸ್ಥಲವನ್ನು ಬಿಟ್ಟರೆ ಉಳಿದ ಯಾವುದರಲ್ಲೂ ಅಂತ್ಯದಲ್ಲಿ ಕಂದ ಇಲ್ಲವೇ ವೃತ್ತ ಬರುವುದಿಲ್ಲ. ಇದು ಗದ್ಯಸ್ಥಲಗಳಿಗೂ ಅನ್ವಯಿಸುತ್ತದೆ.

ಅನಂತರದ ಕವಿಗಳಲ್ಲಿ ಹೆಚ್ಚಿನವರು ಮೊದಲ ಪ್ರಕಾರದ ರಚನೆಯನ್ನೇ ಮಾಡಿದ್ದಾರೆ. ಶಂಕರದೇವ ಮಾತ್ರ ಎರಡನೆಯ ಪ್ರಕಾರದ್ದಕ್ಕೂ ಕೈಹಾಕಿದ್ದಾನೆ. ಅವನ 'ಮೋಳಿಗ ಮಾರಯ್ಯನ ರಗಳೆ', 'ಮಹಾದೇವರಾಣಿಯರ ರಗಳೆ', 'ಆಯ್ದಕ್ಕಿ ಮಾರಯ್ಯನ ರಗಳೆ'—ಇವು ಇದಕ್ಕೆ ನಿದರ್ಶನಗಳಾಗಿವೆ.

ಕೆರೆಯ ಪದ್ಮರಸನು ಮತ್ತೊಂದು ಪ್ರಕಾರದ ರಗಳೆಕೃತಿಯನ್ನು ನಿರ್ಮಿಸಿದ್ದಾನೆ. ಅವನ 'ದೀಕ್ಷಾಬೋಧೆ'ಯು ಮೂರು ಸ್ಥಲಗಳ ಒಂದು ಸುದೀರ್ಘಕೃತಿಯಾಗಿದೆ. ಅದರಲ್ಲಿ ಆತ ರಗಳೆಯನ್ನು ಪ್ರಧಾನಬಂಧವಾಗಿ ಬಳಸಿದ್ದರೂ ನಡುನಡುವೆ ಸಾಕ್ಷಿಯೆಂದು ಹೇಳಿ ಸಂಸ್ಕೃತಶ್ಲೋಕಗಳನ್ನು ತರುತ್ತಾನೆ. ಸ್ಥಲಗಳ ಆದಿಭಾಗದಲ್ಲಿ ಒಂದಕ್ಕಿಂತ ಹೆಚ್ಚು ವೃತ್ತ-ಕಂದಗಳನ್ನೂ, ಅಂತ್ಯದಲ್ಲಿ ಒಂದು ಅಥವಾ ಎರಡು (ಕೊನೆಯದರಲ್ಲಿ ಮಾತ್ರ ಎರಡು) ಕಂದಗಳನ್ನೂ ತರುತ್ತಾನೆ. ತೃತೀಯಸ್ಥಲದಲ್ಲಿ ಮಾತ್ರ ಸ್ಥಲಮಧ್ಯದಲ್ಲೂ ಅಲ್ಲಲ್ಲಿ ವೃತ್ತ-ಕಂದಗಳನ್ನು ತಂದಿದ್ದಾನೆ. ಅಂತೆಯೇ ಮೊದಲ ಮತ್ತು ಮೂರನೆಯ ಸ್ಥಲಗಳಲ್ಲಿ ಲಲಿತರಗಳೆಯನ್ನೂ, ದ್ವಿತೀಯಸ್ಥಲದಲ್ಲಿ ಮಂದಾನಿಲರಗಳೆಯನ್ನೂ ಬಳಸಿದ್ದಾನೆ. ಒಂದೇ ಕೃತಿಯಲ್ಲಿ ಹೀಗೆ ಎರಡು ರೀತಿಯ ರಗಳೆಗಳನ್ನು ಬಳಸುವ ಈ ವಿಧಾನ ಹೊಸದು ; ಹರಿಹರನಲ್ಲಿಲ್ಲದಂತಹುದು. ಅಂತೆಯೇ ಒಂದು ಸ್ಥಲವನ್ನು ರಗಳೆಯಲ್ಲಿ ತಂದರೆ ಮುಂದಿನ ಸ್ಥಲವನ್ನು ಗದ್ಯದಲ್ಲಿ ತರುವ ಹರಿಹರನ ಸಂಪ್ರದಾಯವನ್ನು ಕೂಡ ಆತ ಮೀರಿದ್ದಾನೆ. ಹೀಗಾಗಿ 'ದೀಕ್ಷಾಬೋಧೆ'ಯನ್ನು ಒಂದು ರೀತಿಯಲ್ಲಿ ಗದ್ಯರಹಿತವಾದ, ಆದರೆ ರಗಳೆ ಪ್ರಧಾನವಾದ ಹೊಸರೀತಿಯ ಚಂಪೂಕೃತಿಯೆನ್ನಬಹುದು.

(೫) ಇನ್ನು, ಐದನೆಯ ಕೊಡುಗೆಯೆಂದರೆ ಆರಂಭಕಾಲದ ರಗಳೆಗಳಲ್ಲಿದ್ದ ಜಗಣ ಪ್ರಾಬಲ್ಯವನ್ನು ತಪ್ಪಿಸಿದ್ದು, ಲಯಾನುವರ್ತಿಯಾದ ಪದರಚನೆ-ಸಂಯೋಜನೆಗಳಿಗೆ ದಾರಿಹಾಕಿಕೊಟ್ಟುದು ಮತ್ತು ಹೊಸ ಭಾಷೆಯನ್ನು (ನಡುಗನ್ನಡ ಭಾಷೆಯನ್ನು) ಬಳಸಿದ್ದು. ಜಗಣಪ್ರಾಬಲ್ಯಕ್ಕೆ ಈ ಉದಾಹರಣೆಗಳನ್ನು ನೋಡಬಹುದು :

(೧) ಚಂಚನ್ಮೃಣಿಗಣ ಪರಿಖಚಿ. **ತಭೂಮಿ.**
ಸಂದಿರ್ದಾಧರೀಕೃತ ಭೋ. **ಗಭೂಮಿ.**

(ಶಾಂತಿನಾಥ : ಸುಕುಮಾರಚರಿತೆ, ೧೦–೬೬)

(೨) ಜಯ ದಿವಿಜಮಹಿತ ಜಯದೋಷರಹಿತ
ಜಯ ವಿ. **ಶ್ವಮೂರ್ತಿ.** ಜಯವಿದಿ. **ತಕೀರ್ತಿ.**

(ನಯಸೇನ : ಧರ್ಮಾಮೃತ, ೧೪–೧೩೫)

ರಗಳೆಯು ಮೇಲಿದ್ದ ಷಟ್ಪದಿಕೆಯ ಲಕ್ಷಣದ ಹಿಡಿತವೇ ಈ ರೀತಿಯ ಜಗಣಪ್ರಾಬಲ್ಯಕ್ಕೆ ಪ್ರಮುಖ ಕಾರಣವೆನಿಸುತ್ತದೆ. ಅಲ್ಲೊಮ್ಮೆ ಇಲ್ಲೊಮ್ಮೆ ಬಂದಾಗ ಮಾತ್ರ ಜಗಣ ಸಹ್ಯವಾಗಬಲ್ಲುದು. ಅದರ ಅತಿಯಾದ ಪ್ರಯೋಗವು ಕನ್ನಡಕ್ಕೆ ಒಗ್ಗುವುದಿಲ್ಲ. ಆದ್ದರಿಂದ ವೀರಶೈವ ಕವಿಗಳು ಮಾಡಿದ ಈ ಕೆಲಸ ರಗಳೆಗೆ ಹೊಸತನವನ್ನು ತಂದುಕೊಟ್ಟಿತು. ಇದೇ ರೀತಿ ಲಯಾನುಗುಣವಾದ ಪದರಚನೆ-ಸಂಯೋಜನೆ ಕೂಡ. ಕೆಲವೊಮ್ಮೆ ಒಂದೊಂದು ಗಣಕ್ಕೆ ಒಂದೊಂದು ಪದದಂತೆ ಶಬ್ದಗಳನ್ನು ಜೋಡಿಸುತ್ತಾ ಹೋಗುವುದನ್ನು ಕೂಡ ಅವರಲ್ಲಿ ಕಾಣುತ್ತೇವೆ. ಮಾದರಿಗೆ ರಾಘವಾಂಕನ 'ಚೇರಮನ ರಗಳೆ'ಯ ಈ ಭಾಗವನ್ನು ನೋಡಬಹುದು :

ಕೊಂಡಾಡಿ. ಕುಣಿದಾಡಿ. ನಡೆ ನೋಡಿ. ನಲಿದಾಡಿ.
ಮುಂಡಾಡಿ. ಮುದ್ದಾಡಿ. ಹಾಡಿ ಸುಖಿ. ಮಂ ಸೂಡಿ.
ಪುಳಕಿಸುತೆ. ಪುಟವೇಱಿ. ಪೊಗಳುತಂ. ಪೊರೆಯೇಱಿ.
ನಲಿವುತಂ. ನಯವೇಱಿ. ಮಣಿವುತಂ. ಮದವೇಱಿ.
ಬೆಚ್ಚುತಂ. ಬೆಮರುತಂ. ಹೆಚ್ಚುತಂ. ಒಗ್ಗುತಂ.
ನಚ್ಚುತಂ. ನಲಿವುತಂ. ಮಚ್ಚುತಂ. ಮಣಿವುತಂ.

ಪೂರ್ವರಚನೆಗಳಲ್ಲಿ ಲಯಗತಿ ಒಮ್ಮೊಮ್ಮೆ ಹೇಗೆ ತೊಡಕುತ್ತಿತ್ತು, ಶಬ್ದ-ಲಯ ಸಾಮರಸ್ಯ ಹೇಗೆ ತಗ್ಗುತ್ತಿತ್ತು ಎಂಬುದಕ್ಕೆ ನಾಗವರ್ಮನ 'ಕರ್ಣಾಟಕ ಕಾದಂಬರಿ'ಯ ಈ ಭಾಗವನ್ನು (ಪೂ. ಭಾ. ಪ. ೪೮೨) ನೋಡಬಹುದು :

ಇನಿತಂ. ಪಾರೆ. ಸ್ನಂ ತ್ವರಿ. ತಗತಿಕೆ.
ಪಿಡಿ ಮೇ. ಲುದನೀ. ಗಳ್ ಲಲಿ. ತಲತಿಕೆ.

ಇದೇ ರೀತಿ ಭಾಷೆ ಕೂಡ. ಹಳಗನ್ನಡ ಭಾಷೆಯು ಬಿಗಿ, ವೃತ್ತ ಕಂದಗಳಂತಹ ವರ್ಣ ಇಲ್ಲವೇ ವರ್ಣಮಾತ್ರಾ ಬಂಧಗಳಿಗೆ ಮಾತ್ರ ಉಚಿತವಾದುದು. ಅವಕ್ಕೆ ನಡುಗನ್ನಡವಾಗಲಿ ಹೊಸಗನ್ನಡವಾಗಲಿ ಹೇಗೆ ಅಷ್ಟು ಚೆನ್ನಾಗಿ ಹೊಂದುವುದಿಲ್ಲವೋ ಹಾಗೆಯೇ ರಗಳೆಗಳಿಗೆ ಹಳಗನ್ನಡ ಭಾಷೆ ಕೂಡ. ಪುಟಪುಟನೆ ಪುಟಿದು ಸಾಗುವ ಈ ಬಂಧಕ್ಕೆ ಲಲಿತವಾದ ನಡುಗನ್ನಡವೇ ಉಚಿತವಾದುದೆಂಬುದನ್ನು ಹರಿಹರಾದಿ ವೀರಶೈವ ಕವಿಗಳು ಕಂಡುಕೊಂಡರು, ಆ ದಿಶೆಯಲ್ಲಿ ತಮ್ಮ ಕೃತಿಗಳಲ್ಲಿ ಮುಂದುವರಿದರು.

ಹೀಗೆ ವೀರಶೈವ ಕವಿಗಳು ರಗಳೆ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದರು. ಎಲ್ಲದಕ್ಕಿಂತ ಮಹತ್ತ್ವದ ಅಂಶವೆಂದರೆ ಅವರು ಈ ಮೂಲಕ ವೀರಶೈವ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದು ಮತ್ತು ಶಿವಶರಣರ ಜೀವನಚಿತ್ರಗಳನ್ನು ನೀಡಿದ್ದು. ಛಂದಸ್ಸಿನ ಇತಿಹಾಸದ ದೃಷ್ಟಿಯಿಂದಲಂತೂ ಅವರು ಮಾಡಿದ ಕೆಲಸ ಗಣನೀಯವಾದುದು. ರಗಳೆಯನ್ನು ದೀರ್ಘಕೃತಿಗಳ ರಚನೆಗೆ ತಕ್ಕ ಮಾಧ್ಯಮವಾಗಿ ಅವರು ಸಿದ್ಧಪಡಿಸಿದ್ದರಿಂದಾಗಿಯೇ ಇಂದಿನ ರಗಳೆ ಸಾಹಿತ್ಯಕ್ಕೆ ಒಳ್ಳೆಯ ಹಿನ್ನೆಲೆ ದೊರೆತಂತಾದುದು.

---

ರೋಗಿಗೆ ಹಾಲು ಸಿಹಿಯಪ್ಪುದೆ ?
ಗೂಗೆಗೆ ರವಿ ಲೇಸಪ್ಪುದೆ ?
ಚೋರಂಗೆ ಬೆಳಗು ಗುಣವಪ್ಪುದೆ ?
ಭವಸಾಗರದ ಸಮುಯದಲ್ಲಿದ್ದವರು
ನಿರ್ಭಾವದ ಭಾವವನೆತ್ತ ಬಲ್ಲರು ?
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ !

—ಘಟ್ಟಿವಾಳಯ್ಯನವರು

# 'ರಗಳೆ' ಸಾಹಿತ್ಯಕ್ಕೆ ವೀರಶೈವ ಕವಿಗಳ ಕಾಣಿಕೆ-೨

ಕೆ. ಪಿ. ಶಿವಲಿಂಗಯ್ಯ

### ಪೀಠಿಕೆ

ರಗಳೆ, ಕನ್ನಡದ ಜಾಯಮಾನಕ್ಕೆ ಅಂದರೆ ದ್ರಾವಿಡಭಾಷಾಸಮುದಾಯಕ್ಕೆ ಹೊಂದಿಕೊಳ್ಳುವ ಛಂದೋರೂಪ. ಇದರ ಮೂಲ ಸಂಸ್ಕೃತದಲ್ಲಿ ಇದ್ದಂತೆ ಕಾಣುವುದಿಲ್ಲ. ('ರಘಟಾ' ಸಂಸ್ಕೃತ ರೂಪವೇ, ಅದರಿಂದ 'ರಗಳೆ' ಎಂಬುದು ಆಗಿದೆ) ಪ್ರಾಕೃತದ ಮಾತ್ರಾ ಛಂದಸ್ಸಿನ ನಡೆ ಇದರದು : 'ಪಜ್ಝಟಿಕೆ' ಎಂಬ ಒಂದು ಪ್ರಭೇದವು ಕನ್ನಡದ ಮಂದಾನಿಲ ರಗಳೆಗೆ ಸಂಬಂಧವುಳ್ಳದ್ದು. ಪಂಪ-ಪೊನ್ನ-ರನ್ನರ ಕಾವ್ಯಗಳಲ್ಲಿ ಲಲಿತ, ಮಂದಾನಿಲ, ಉತ್ಸಾಹರಗಳೆಗಳು ಅಲ್ಲಲ್ಲಿ ಬಳಕೆಯಾಗಿವೆ. ಆದರೆ ಆ ಕವಿಗಳು ಅವುಗಳ ನಿರ್ಮಾಪಕರೇನಲ್ಲ. ನಾಗವರ್ಮನ ಛಂದೋಂಬುಧಿಯಲ್ಲಿ, ಜಯಕೀರ್ತಿಯ ಛಂದೋನುಶಾಸನದಲ್ಲಿ ರಗಳೆಯ ಲಕ್ಷಣಗಳನ್ನು ವಿವರಿಸಲಾಗಿದೆ. ಹರಿಹರನ ರಗಳೆಗಳಲ್ಲಿ ರಗಳೆಯು ಒಂದು ಸಾಹಿತ್ಯ ರೂಪವಾಗಿ ತಲೆಯೆತ್ತಿತು—ಎಂಬ ಡಾ. ರಂ. ಶ್ರೀ. ಮುಗಳಿಯವರ ಮಾತು ಒಪ್ಪತಕ್ಕದ್ದಾಗಿದೆ.

### 'ರಗಳೆ' ಎಂದರೇನು ?

ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆಯೆನಿಸುವುದು. ಇದರಲ್ಲಿ ಪ್ರಾಸವು ಇತರ ವೃತ್ತಗಳಲ್ಲಿರುವಂತೆ ನಿಯತವಾದ ಸ್ಥಾನದಲ್ಲಿರುವುದಿಲ್ಲ. ಒಂದೇ ಪಾದದಲ್ಲಿಯಾಗಲಿ, ಅನೇಕ ಪಾದಗಳಲ್ಲಿಯಾಗಲಿ, ಪಾದದ ಆದಿ-ಮಧ್ಯಗಳಲ್ಲಿಯಾಗಲಿ, ಮಧ್ಯಾಂತಗಳಲ್ಲಿಯಾಗಲಿ, ಆದ್ಯಂತಗಳಲ್ಲಿಯಾಗಲಿ ಪ್ರಾಸವು ಬರುವುದು.

'ರಗಳೆ' ಛಂದಸ್ಸಿನಲ್ಲಿ ಉತ್ಸಾಹ, ಮಂದಾನಿಲ, ಲಲಿತ—ಎಂದು ಮೂರು ಪ್ರಸಿದ್ಧವಾದ ವಿಧಗಳುಂಟು.

#### ಉತ್ಸಾಹರಗಳೆ

ಪಾದವೊಂದಕ್ಕೆ ೩ ಮಾತ್ರೆಯ ೪ ಗಣಗಳಾಗಲಿ, ೩ ಗಣಗಳೂ ಒಂದು ಗುರುವೂ ಆಗಲಿ ಇರಲು ಅದು ಉತ್ಸಾಹರಗಳೆಯೆನಿಸುವುದು. ನಾಗವರ್ಮನು (ಎರಡು ಸಾಲುಗಳನ್ನು ಒಂದಾಗಿ ಭಾವಿಸಿ) ಪಾದವೊಂದಕ್ಕೆ ೨೪ ಮಾತ್ರೆಗಳಿರಬೇಕೆನ್ನುವನು.

#### ಮಂದಾನಿಲರಗಳೆ

ಪಾದವೊಂದಕ್ಕೆ ೪ ಮಾತ್ರಾಗಣವು ೪ ಆಗಲಿ, ೩ ಮಾತ್ರೆಯ ಗಣದ ಮುಂದೆ ೫ ಮಾತ್ರೆಯ ಗಣವು ಬರುವಂತೆ ೨-೨ ಗಣಗಳಾಗಲಿ ಬರಲು ಮಂದಾನಿಲರಗಳೆಯೆನಿಸುವುದು. ಇದಕ್ಕೆ ಮಟ್ಟರಗಳೆ ಎಂಬ ಹೆಸರೂ ಉಂಟು.

#### ಲಲಿತರಗಳೆ

ಪಾದವೊಂದಕ್ಕೆ ೫ ಮಾತ್ರೆಯ ೪ ಗಣಗಳಿರಲು (ಒಟ್ಟು ೧ ಸಾಲಿಗೆ ೨೦ ಮಾತ್ರೆ) ಲಲಿತರಗಳೆಯೆನಿಸುವುದು : ಇದನ್ನೇ ಈಗಿನವರು ಮಹಾಛಂದಸ್ಸು ಎಂದು ಕರೆಯುತ್ತಾರೆ.

### 'ರಗಳೆ' ಕಾವ್ಯದ ನಿರ್ಮಾಪಕ

'ರಗಳೆ' ಎಂದರೆ 'ಹರಿಹರ'. 'ಹರಿಹರ' ಎಂದರೆ ರಗಳೆ ಎನ್ನುವಷ್ಟರಮಟ್ಟಿಗೆ ಕನ್ನಡಸಾಹಿತ್ಯಪ್ರಪಂಚದಲ್ಲಿ ಒಂದು ಅಪೂರ್ವವಾದ ನುಡಿ ಮೂಡಿಬಂದಿದೆ. ಆತನನ್ನು 'ರಗಳೆಯ ಕವಿ' ಎಂದು ರಗಳೆ ಮಾಡಿದವರೂ ಉಂಟಂತೆ ಆ ಕಾಲದಲ್ಲಿ! ಅದಕ್ಕಾಗಿ ತನ್ನ ಸತ್ವಪರೀಕ್ಷಣಕ್ಕೆಂದೇ 'ಗಿರಿಜಾಕಲ್ಯಾಣ' (ಚಂಪೂ) ಪ್ರಬಂಧವನ್ನು ರಚನೆ ಮಾಡಿದ್ದೆಂಬ ಮಾತೂ ಉಂಟು. ಏನೇ ಇರಲಿ, ತನಗಿಂತ ಮುಂಚೆ 'ರಗಳೆ'ಯ ಛಂದಸ್ಸಿನಲ್ಲಿ ಹಲಕೆಲವು ತುಣುಕುಗಳು

ಅಲ್ಲಲ್ಲಿ ಕಂಡುಬಂದರೂ. ಒಂದು ಪೂರ್ಣಕೃತಿಯನ್ನು 'ರಗಳೆ'ಯಲ್ಲಿಯೇ ಬರೆದವನು ಹರಿಹರ—ಎಂಬುದಂತೂ ನಿಜ.

ಹರಿಹರನ ರಗಳೆಗಳ ವಿಷಯದಲ್ಲಿ ವಿದ್ವಾಂಸರೊಬ್ಬರು[1] ಹೀಗೆ ಅಭಿವ್ಯಕ್ತಗೊಳಿಸಿರುತ್ತಾರೆ: "....ಎಷ್ಟೇ ಪ್ರಶಂಸೆ ಮಾತುಗಳನ್ನು ಹೇಳಿದರೂ ರಗಳೆಗಳ ಲಾವಣ್ಯವನ್ನು ಪೂರ್ತಿ ಹೇಳಿದಂತಾಗುವುದಿಲ್ಲ. ಮಾತುಗಳಿಗೆ ಮೀರಿದ, ಅನುಭವೈಕವೇದ್ಯವಾದ. ಚಿತ್ತಸಂಸ್ಕಾರಗೋಚರವಾದ. ಒಂದು ಅನಂತತೆ ಈ ರಗಳೆಗಳಲ್ಲಿ ಇರುವುದು ಅವುಗಳ ಅತಿಶಯತೆಗೆ ಕಾರಣ. ವಾಚಕರೂ ವಿಮರ್ಶಕರೂ ತಂತಮ್ಮ ಶಕ್ತಿಗನುಗುಣವಾಗಿ ಈ ಅನಂತತೆಯಲ್ಲಿ ಪಾಲುಗೊಳ್ಳಬಹುದು. (ಹರಿಹರನ) ಎಲ್ಲಾ ರಗಳೆಗಳಲ್ಲಿಯೂ ಬರುವ ವಿರೂಪಾಕ್ಷ (ಶಿವ)ನ ಲೀಲೆಗಳನ್ನು ಧ್ಯಾನಗಮ್ಯ ಮಾಡಿಕೊಂಡಾಗ ಅಚಿಂತ್ಯಾದ್ಭುತವಿಸ್ಮಯಾನಂದಗಳಲ್ಲಿ ನಮ್ಮಾತ್ಮ ಕರಗಿಹೋಗುತ್ತದೆ ; ಚಿತ್ತವು ವ್ಯೋಮವಿಹಾರಿಯಾಗುತ್ತದೆ: ಮನಸ್ಸು ಪ್ರಫುಲ್ಲವಾಗಿ ಹೊಸ ಕಂಪನ್ನು ಸೂಸುತ್ತದೆ. ಎಂಥ ವಿಮರ್ಶೆಯಾಗಲಿ ಮೂಲಕಾವ್ಯದ ರಸಸ್ರೋತವನ್ನು ಅಳೆದು ಮುಗಿಸಲಾರದು, ಅದರ ಸ್ಥಾನಕ್ಕೆ ವಿಮರ್ಶೆ ಬರಲಾರದು. ಆ ನಿಟ್ಟಿನಲ್ಲಿ ಅದು ನಮ್ಮನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಬಲ್ಲುದು ; ಆಮೇಲೆ ನಮ್ಮನ್ನು ಅಲ್ಲಿಯೇ ಬಿಟ್ಟು ತಾನು ಹಿಂಜರಿಯುತ್ತದೆ, ಇನ್ನುಮುಂದೆ ನೀನುಂಟು—ನಿನ್ನ ಸಂಸ್ಕಾರವುಂಟು ಎಂದು ಹೇಳಿ. ಆದ್ದರಿಂದ ವಿಮರ್ಶೆಯನ್ನಷ್ಟೇ ಓದಿ ತೃಪ್ತಿಪಡದೆ ರಗಳೆಗಳನ್ನು ಒಂದು ಸಲವಲ್ಲ ಹತ್ತು ಸಲವಾದರೂ ಓದಬೇಕಾದ ಮುಖ್ಯ ಕರ್ತವ್ಯವುಂಟು...."

ಪ್ರಸಿದ್ಧ ವಿದ್ವಾಂಸರೊಬ್ಬರು ಹೇಳಿದ ಮಾತೆಂದು ನಾವು ಗೋಣುಹಾಕಬೇಕಾಗಿಲ್ಲ. ಆದರೆ ಅವರ ಈ ಅಭಿಪ್ರಾಯವು ಹರಿಹರಕೃತ ರಗಳೆಗಳ ಬಗೆಗೆ ಅತ್ಯಂತ ನಿಷ್ಕೃಷ್ಟ ಹಾಗೂ ಸ್ಪಷ್ಟವಾದುದಾಗಿದೆ—ಎಂಬುದು ಗಮನಾರ್ಹ.

ಹರಿಹರನ ಕಾಲಾನಂತರ ನಾಲ್ಕೈದು ಶತಮಾನಗಳಾದ ಮೇಲೆ ಮಿರುಮಿರುಗಿದ ಕವಿತಾರೆ—ಮಹಾಕವಿ ಷಡಕ್ಷರದೇವನು "ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯಲಕ್ಷ್ಮೀವರನಾದಂ ಮತ್ತಮಂಗತ್ಯಧಿಕ ಶಿವಕವೀಂದ್ರುಂಗದಾರ್ ಸಾಟಿಯಪ್ಪರ್"[2] ಎಂದು ಪ್ರಶಂಸಿಸಿದ್ದಾನೆ.

## ಜೀವನ-ಚಿತ್ರಣ

ಹರಿಹರದೇವನು ಸು. ೧೧೫೦ರಲ್ಲಿ ಜನ್ಮವೆತ್ತಿದನು. ಜನ್ಮಸ್ಥಳ ಪುರಾಣೇತಿಹಾಸಪ್ರಸಿದ್ಧವಾದ ಪರಮ ಪವಿತ್ರ ಪಂಪಾಕ್ಷೇತ್ರ. ಮಹಾದೇವ ಶರ್ವಾಣಿಯರೆಂಬ ಶಿವಭಕ್ತ ಶಿರೋಮಣಿಗಳೇ ಈತನ ತಂದೆತಾಯಿಗಳು. ಗುರುವಾದರೋ "ಶೈವಸಾರೋದಯ". "ಅನಂತವೇದಾರ್ಥಸಾಧಕ" ಮುಂತಾದ ಪ್ರಶಸ್ತಿವಿಜೇತ ಹಂಪೆಯ ಮಾಯಿದೇವರು.

ಪಂಪಾಕ್ಷೇತ್ರದ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮಾಡಿ ಶೈವಶಾಸ್ತ್ರ. ಶೈವಕಾವ್ಯಗಳಲ್ಲಿ ಪಾರಂಗತನಾದನು. ದ್ವಾರಸಮುದ್ರದ ಬಲ್ಲಾಳರಾಯನ ಆಸ್ಥಾನದಲ್ಲಿ (೧೧೭೩–೧೨೨೦) ಕೆಲವು ಕಾಲ ಕರಣಿಕ (clerk) ಹುದ್ದೆಯಲ್ಲಿದ್ದನು.

ಅಲ್ಲಿ ಉದ್ಯೋಗದಲ್ಲಿದ್ದಾಗಲೇ ಪವಾಡವೊಂದು ಜರುಗಿದ್ದು :

ಪಂಪಾಪತಿ ವಿರೂಪಾಕ್ಷಸ್ವಾಮಿ ಗರ್ಭಗುಡಿಯ ಮೇಲ್ಕಟ್ಟಿನ ವಸ್ತ್ರಕ್ಕೆ (ತೆರೆಬಟ್ಟೆ) ಉರಿ ತಗುಲಿದ್ದು, ಆ ಉರಿಯನ್ನು ಹರಿಹರನು ಹೊಯ್ಸಳೇಶ್ವರನಿಗೆ ಲೆಕ್ಕ ಒಪ್ಪಿಸುತ್ತಿದ್ದ ಸಂದರ್ಭದಲ್ಲಿ. ದಿವ್ಯದೃಷ್ಟಿಯಿಂದ ಕಂಡು ಅಲ್ಲಿಂದಲೇ 'ಕರಮರ್ದನಂಗೈದು' ಆರಿಸಿದನು. ನಿಜವಾದ ಭಕ್ತಿಯುಳ್ಳವರಿಗೆ ಯಾವುದು ತಾನೆ ಸಾಧ್ಯವಾಗದು ?—ಈ ಪ್ರಸಂಗವು ಪದ್ಮರಾಜಪುರಾಣ, ಚೇರಮಕಾವ್ಯ. ಚೆನ್ನಬಸವಪುರಾಣ. ಭೈರವೇಶ್ವರಕಾವ್ಯಕಥಾಸೂತ್ರರತ್ನಾಕರ, ರಾಘವಾಂಕಚಾರಿತ್ರ[3]ಗಳಲ್ಲಿ ಉಕ್ತವಾಗಿದೆ.

---

1 ಡಿ. ಎಲ್. ನರಸಿಂಹಾಚಾರ್ : ಮುನ್ನುಡಿ, ಶರಣಚರಿತಮಾನಸಂ, ಪು. ೮

2 ರಾಜಶೇಖರವಿಲಾಸಂ : ಸಂ. ೧, ಪು. ೧೯

3 ಅ) ಪದ್ಮರಾಜಪುರಾಣ : ಸಂ. ೫, ಪ. ೧೧–೧೩

ಆ) ಚೇರಮ ಕಾವ್ಯ : ಸಂ. ೧, ಪ. ೧೪

ಇ) ಚೆನ್ನಬಸವಪುರಾಣ : ಸಂ. ೬೨, ಪ. ೫೩, ೫೪

ಈ) ಭೈರವೇಶ್ವರ ಕಾವ್ಯ ಕಥಾಸೂತ್ರ ರತ್ನಾಕರ : ಪು. ೫೪, ೫೫

ಉ) ರಾಘವಾಂಕಚಾರಿತ್ರ : ಸಂ. ೧೪, ಪ. ೫೮, ೫೯

## ಹರಿಹರಕೃತ ರಗಳೆಗಳೆಷ್ಟು?

ಹರಿಹರನು ರಚಿಸಿದ ರಗಳೆಗಳ ಸಂಖ್ಯೆ ಖಚಿತವಾಗಿ ತಿಳಿದಿಲ್ಲ. ಈ ದಿಸೆಯಲ್ಲಿ ವಿದ್ವಾಂಸರು ಸಂಶೋಧನೆ ನಡೆಸುತ್ತಿರುವುದು. ಆ ಬಗೆಗೆ ಬೇರೆಬೇರೆ ಪ್ರಬಂಧಗಳನ್ನು ರಚಿಸುತ್ತಿರುವುದು ಸಮಾಧಾನಕರ ವಿಷಯ. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಚಿತ್ರದುರ್ಗದ ತಾಳೆಯೋಲೆಯ ಪ್ರತಿಯಲ್ಲಿ 'ಶ್ರೀ ಹಂಪೆಯ ಹರೀಶ್ವರ ಪೇಳಿದ ನೂಱೆಪ್ಪತ್ತು ರಗಳೆಯ ಪುಸ್ತಕಕ್ಕೆ ಶುಭಮಸ್ತು' ಎಂದು ಬರೆದಿರುವುದು.[1] ಡಾ. ಹಿರೇಮಲ್ಲೂರ ಕೆ. ಈಶ್ವರನ್ ಅವರು 'ಹರಿಹರನ ಕೃತಿಗಳು. ಸಂಖ್ಯಾನಿರ್ಣಯ' ಎಂಬ ಮಹಾಪ್ರಬಂಧದಲ್ಲಿ ಅಭಿಪ್ರಾಯಪಟ್ಟಿರುವಂತೆ ಹರಿಹರ ಕೃತ ರಗಳೆಗಳ ಸಂಖ್ಯೆ ೧೧೬.[2]

'ಹರಿಹರ'ನಿಗೇ ತಮ್ಮ ಜೀವನದ ಬಹುಭಾಗವನ್ನು ವಿನಿಯೋಗಿಸಿರುವ ಶ್ರೀಮಾನ್ ಎಚ್. ದೇವೀರಪ್ಪ ಅವರ ನಿರ್ಣಯದಂತೆ ಪುರಾತನರನ್ನು ಕುರಿತವು ೨೪, ಬಸವರಾಜದೇವರು ಮತ್ತಿತರ ರಗಳೆಗಳು ೩೭—ಒಟ್ಟು ೬೧.[3]

"ಹರಿಹರ ಭಕ್ತಿಪ್ರಚಾರದ ಮಹೋದ್ದೇಶದಿಂದ ಬುದ್ಧಿಪೂರ್ವಕ ಜನಸಾಮಾನ್ಯರಿಗೆ ಸುಬೋಧವಾದ ಭಾಷೆಯನ್ನೇ ಬಳಸಿ ಎಲ್ಲರೂ ಓದಿ, ಓದಿಸಿ ಕೇಳಿ ಆನಂದಪಡಬಹುದಾದ ರೀತಿಯಲ್ಲಿ ಕಾವ್ಯರಚನೆ ಮಾಡಿ 'ರಗಳೆಯ ಮಹಾಕವಿ'ಯಾಗಿದ್ದಾನೆ. ಕಥನಕೌಶಲ, ಹಿತಮಿತವಾದ ವರ್ಣನೆ, ಸಹಜಕವಿತೆ, ಸರಳಭಾಷೆ, ಅಪಾರವಾದ ಶಬ್ದ ಸಂಪತ್ತು, ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲಿಯೂ ಪಾಂಡಿತ್ಯ, ಪ್ರಭುತ್ವ—ಯಾವ ಅಳತೆಗೋಲಿನಿಂದ ಅಳೆದು ನೋಡಿದರೂ ಹರಿಹರ ನಿಸ್ಸಂಶಯವಾಗಿ ಕನ್ನಡದ ಮಹಾಕವಿ."[4] ಹರಿಹರನ ಬಗೆಗೆ ಒಂದು ಸಮಗ್ರ ವಿವೇಚನೆಯ ಲೇಖಕರ ಈ ಅಭಿಪ್ರಾಯ ಅತ್ಯಂತ ಸಮಂಜಸವಾಗಿದೆ.

## ಕೆರೆಯ ಪದ್ಮರಸ

ಕೆರೆಯ ಪದ್ಮರಸನು ಹರಿಹರನು ಯಾವ ಬಲ್ಲಾಳರಾಯನ ಬಳಿಯಲ್ಲಿ ಕರಣಿಕನಾಗಿದ್ದನೋ, ಅದೇ ಹೊಯ್ಸಳೇಶ್ವರನಲ್ಲಿ ಮಂತ್ರಿಯಾಗಿದ್ದನೆಂದೂ ಬೇಲೂರು ಕೆರೆಯನ್ನು ಕಟ್ಟಿಸುವಲ್ಲಿ ಪವಾಡವೊಂದನ್ನು ಮೆರೆಯಲಾಗಿ 'ಕೆರೆಯ ಪದ್ಮರಸ'ನೆಂದು ಹೆಸರಾಯಿತೆಂದೂ ತಿಳಿದುಬರುತ್ತದೆ.[5] ಈತನು ಜೀವಿಸಿದ್ದ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿರುವುದಾದರೂ, ಕ್ರಿ.ಶ. ೧೧೬೫–೧೨೦೦ ಎನ್ನುವುದು ಸಮಂಜಸವಾಗಿರುವಂತೆ ತೋರುತ್ತದೆ.[6] ಈತನು ಬಸವಣ್ಣನವರ (ಹಿರಿಯ) ಸಮಕಾಲೀನನಾದ ಸಕಲೇಶ ಮಾದರಸನ ಮೊಮ್ಮಗ.

ಕೆರೆಯ ಪದ್ಮರಸನು ಕನ್ನಡದಲ್ಲಿ ದೀಕ್ಷಾಬೋಧೆಯೆಂಬ ಕೃತಿಯನ್ನೂ, ಸಂಸ್ಕೃತದಲ್ಲಿ ಸಾನಂದಚರಿತ್ರೆಯೆಂಬ ಕೃತಿಯನ್ನೂ ರಚಿಸಿದ್ದಾನೆ. ತ್ರಿಭುವನತಾತನು ಪದ್ಮರಸನಿಗೆ ವಾದದಲ್ಲಿ ಸೋತ ಆಂಧ್ರದೇಶದ ವೈಷ್ಣವವಿಪ್ರನ್ಮಣಿ. ಆತನಿಗೆ ದೀಕ್ಷೆಯನ್ನು ನೀಡಿದ ಸಂದರ್ಭದಲ್ಲಿ ಬೋಧಿಸಿದ್ದನ್ನು 'ದೀಕ್ಷಾಬೋಧೆ'ಯಲ್ಲಿ ಕವಿ ಪದ್ಮರಸನು ನಿರೂಪಿಸಿದ್ದಾನೆ. ದೀಕ್ಷಾಬೋಧೆಯು ರಗಳೆಯ ಛಂದಸ್ಸಿನಲ್ಲಿದೆ. ಇದರಲ್ಲಿ ಒಟ್ಟು ಮೂರು ಸ್ಥಲಗಳಿವೆ. ಒಂದು ಮತ್ತು ಮೂರು ಲಲಿತ-ರಗಳೆಯಲ್ಲಿಯೂ, ಎರಡನೆಯ ಸ್ಥಲವು ಮಂದಾನಿಲರಗಳೆಯಲ್ಲಿಯೂ ಇವೆ. ಸ್ಥಲಗಳ ಆದಿ-ಅಂತ್ಯಗಳಲ್ಲಿ ಕಂದ-ವೃತ್ತಗಳಿವೆ.

## ತ್ರಿಭುವನತಾತ

ಇವನು ಕೆರೆಯ ಪದ್ಮರಸನೊಡನೆ ವಾದ ಮಾಡಿ ಸೋತ ಮೇಲೆ ಅವನ ಶಿಷ್ಯನಾದವನು. ಆದ್ದರಿಂದ ಇವನ ಕಾಲ ಸು. ೧೧೬೫–೧೨೦೦. ಈತನ ಅಂಕಿತ 'ಗುರು ವಿಶ್ವೇಶ' ಎಂಬುದು. ಇದೇ ಅಂಕಿತದಲ್ಲಿ (ಅ) ಗುರು ರಗಳೆ

---

1 ಎಚ್. ದೇವೀರಪ್ಪ : ಶರಣಚರಿತಮಾನಸಂ, ಪೀಠಿಕೆ, ಪು. V

2 ಅದೇ, ಪು. VI

3 ಅದೇ, ಪು. XXX–XXXI.

4 ಕೆ. ವೆಂಕಟರಾಮಪ್ಪ : ಹರಿಹರ–ಒಂದು ಸಮಗ್ರ ವಿವೇಚನೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ; ಬೆಂ.ವಿ.ವಿ. ಸಂ. ೩, ೧೯೭೬, ಪು. ೩೫೩

5 ಎಚ್. ದೇವೀರಪ್ಪ : ಶರಣಚರಿತಮಾನಸಂ, ಪೀಠಿಕೆ, ಪು. IV.

6 ಎಸ್. ವಿ. ವಿಮಲ : ಇತರ ರಗಳೆಯ ಕವಿಗಳು, ಸ.ಕ.ಸಾ.ಚ., ಸಂ. ೩, ಪು. ೩೫೬

(ಆ) ಮಹಾದೇವ ರಗಳೆ (ಇ) ಅಮ್ಮವ್ವೆಯ ರಗಳೆ (ಈ) ಪಗಲ್ಪೋರನ ರಗಳೆ (ಉ) ಜೋಳಿಯಕ್ಕನ ರಗಳೆ ಮತ್ತು (ಊ) ಜೇಡರದಾಸಿಮಯ್ಯನ ರಗಳೆ—ರಚಿತವಾಗಿವೆ.

ಇಲ್ಲಿನ ಒಂದು ವಿಶೇಷ ಸಂಗತಿಯೆಂದರೆ—ಮಂದಾನಿಲರಗಳೆಯಲ್ಲಿ ರಚಿತವಾಗಿರುವ 'ಅಮ್ಮವ್ವೆಯ ಕಥೆ' ಕೆಲವು ಹೊಸ ಸನ್ನಿವೇಶಗಳನ್ನು ಕೂಡಿಕೊಂಡು, ಲಲಿತರಗಳೆಯಲ್ಲಿ 'ಹಂಪೆಯ ವಿರೂಪಾಕ್ಷ' ಎಂಬ (ಹರಿಹರನ) ಅಂಕಿತದಲ್ಲಿ ರಚಿತವಾಗಿರುವುದು. 'ಹರಿಹರನ ರಗಳೆಗಳ ಲಕ್ಷಣಗಳು ಬಹುಮಟ್ಟಿಗೆ ಇಲ್ಲಿಯೂ ಕಂಡುಬರುತ್ತವೆ. ಆದರೆ ಶೈಲಿಯಲ್ಲಿ ಹರಿಹರನ ಕಾವ್ಯ, ಕಾಂತಿ, ಕಮನೀಯತೆಗಳಿಲ್ಲ'—ಎನ್ನುತ್ತಾರೆ ಲೇಖಕಿಯರಾದ ಕು॥ ಎನ್. ವಿ. ವಿಮಲ ಅವರು.[1]

## ಸದಾಶಿವಲಿಂಗ

'ಸದಾಶಿವ' ಅಂಕಿತವಿರುವ ಕವಿಯ ಕಾಲ ಸು. ೧೩೫೦. ಈತನು ಬರೆದಿರುವ ಸಾನಂದಗಣೇಶ್ವರ ರಗಳೆಯು ಲಲಿತರಗಳೆಯಲ್ಲಿದೆ. ಇವರಲ್ಲಿ ಒಟ್ಟು ಐದು ಸ್ಥಲಗಳಿವೆ. ೩ ಸ್ಥಲಗಳು ರಗಳೆಯಲ್ಲಿಯೂ, ೨ ಸ್ಥಲಗಳು ಗದ್ಯದಲ್ಲಿಯೂ ಇವೆ.

'ಪೂರ್ಣವಿತ್ತ' ಋಷಿಯ ಮಗನಾದ ಸಾನಂದಮುನಿಯು 'ಪಂಚಾಕ್ಷರಿ'ಯ ಮಹಿಮೆಯಿಂದ ನಾರಕಿಗಳನ್ನುದ್ಧರಿಸಿದುದೇ ಈ ರಗಳೆಯ ಕಥೆ. ಇದನ್ನು ಮೊದಲು ಕೆರೆಯ ಪದ್ಮರಸನು ಸಂಸ್ಕೃತದಲ್ಲಿ ರಚಿಸಿದನು. ಅನಂತರ ಅವನ ಮಗ ಕುಮಾರಪದ್ಮರಸನು ಇದನ್ನು ಕನ್ನಡಿಸಿದನು. ಆಮೇಲೆ 'ಸದಾಶಿವ' ಅಂಕಿತದ ಕವಿ ರಗಳೆಯನ್ನು ಬರೆದಂತೆ ತೋರುತ್ತದೆ.

## ಪಾಲ್ಕುರಿಕೆ ಸೋಮನಾಥ

ಪ್ರಸಿದ್ಧ ವೀರಶೈವ ಕವಿಯಾದ ಈತನ ಕಾಲ ಸು. ೧೨೦೫. 'ತೆಲುಗು ಬಸವಪುರಾಣ' ಬರೆದು ಪ್ರಖ್ಯಾತನಾಗಿರುವ ಈತನು (ಅ) ಸದ್ಗುರು ರಗಳೆ (ಆ) ಚನ್ನಬಸವೇಶರಗಳೆ (ಇ) ಬಸವರಗಳೆ ಮತ್ತು (ಈ) ಗಂಗೋತ್ಪತ್ತಿ ರಗಳೆ—ಇವನ್ನು ರಚಿಸಿದ್ದಾನೆ.

ಇವುಗಳಲ್ಲಿ ಗಂಗೋತ್ಪತ್ತಿರಗಳೆ ಲಲಿತರಗಳೆಯಲ್ಲಿ ರಚಿತವಾಗಿದೆ : ಆದರೆ ರಚನೆ ಅನಿಯಮಿತವೂ ಅಸ್ತವ್ಯಸ್ತವೂ ಆಗಿರುವಂತೆ ತೋರುತ್ತದೆ. ಇದರಲ್ಲಿ ಮೂರು ಸ್ಥಲಗಳಿವೆ. ಪ್ರತಿ ಸ್ಥಲದ ಆರಂಭದಲ್ಲಿ ಹಾಗೂ ಮೂರನೆಯ ಸ್ಥಲದ ಅಂತ್ಯದಲ್ಲಿ ಕಂದಪದ್ಯಗಳಿವೆ.

## ಗುಬ್ಬಿಯ ಮಲ್ಲಣಾರ್ಯ

ಅಮರಗೊಂಡ ಎಂಬ ಹೆಸರಿನಿಂದ ಬಹಳ ಹಿಂದೆಯೇ ಪ್ರಖ್ಯಾತವಾಗಿದ್ದ 'ಶರಣರ ಬೀಡು' ಎಂದೆನಿಸಿದ್ದ ಈಗಿನ ಗುಬ್ಬಿ, ಮಲ್ಲಣಾರ್ಯರ ಜನ್ಮಸ್ಥಳ. ಗಣಭಾಷ್ಯರತ್ನಮಾಲೆಯನ್ನೂ, ವಾತುಲತಂತ್ರಕ್ಕೆ ಟಿಪ್ಪಣಿಯನ್ನೂ ರಚಿಸಿದ ಗುಬ್ಬಿಯ ಮಲ್ಲಣ್ಣ ಇವರ ತಾತ, ಗುರು ಹಲಗೆಯಾರ್ಯರು. ಕಾಲ ಸು. ೧೪೯೦–೧೫೬೫. ಭಾವಚಿಂತಾರತ್ನ, ವೀರಶೈವಾಮೃತಪುರಾಣ ಇವು ಮಲ್ಲಣಾರ್ಯರ ಕೃತಿಗಳು. 'ಪುರಾತನರಗಳೆ'ಯನ್ನು ಬರೆದಿದ್ದಾರೆಂದು ಪ್ರತೀತಿಯಿದೆಯೆಂದೂ, ಅದು ತಮಗೆ ದೊರೆತಿಲ್ಲವೆಂದೂ ಕವಿಚರಿತೆಕಾರರು ಹೇಳುತ್ತಾರೆ.[2] ಇದೇ ಅಭಿಪ್ರಾಯವನ್ನೇ ಪ್ರೊ. ಸಿ. ಮಹಾದೇವಪ್ಪನವರೂ ಹೇಳಿದ್ದಾರೆ.[3]

## ಶಂಕರದೇವ

'ಈತನು ಸು. ೧೬೩೦ರಲ್ಲಿ ಇದ್ದಿರಬಹುದೆಂದು ತೋರುತ್ತದೆ' ಎಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ.[4] ಬಿ. ಶಿವಮೂರ್ತಿಶಾಸ್ತ್ರಿಗಳು ಈ ಕಾಲವನ್ನು ಒಪ್ಪಿಕೊಂಡಿದ್ದಾರೆ.[5] ಆದರೆ ಸಿ. ಮಹಾದೇವಪ್ಪನವರು

---

1 ಅದೇ, ಪು. ೩೬೦

2 ಆರ್. ನರಸಿಂಹಾಚಾರ್ : ಕರ್ಣಾಟಕ ಕವಿಚರಿತ್ರೆ, ಸಂ. ೨, ಪು. ೧೩೯

3 ಸಿ. ಮಹಾದೇವಪ್ಪ (ಸಂ) : ಭಾವಚಿಂತಾರತ್ನ, ಪೀಠಿಕೆ, ಪು. XVI.

4 ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ, ಸಂ. ೩, ಪರಿಶೋಧಿತ ಮುದ್ರಣ, ೧೯೭೩, ಪು. ೩೧೬–೩೧೭

5 ಬಿ. ಶಿವಮೂರ್ತಿಶಾಸ್ತ್ರಿ (ಸಂ) : ಕನ್ನಡ ಶತಕ ಸಾಹಿತ್ಯ ೧೯೫೫, ಪೀಠಿಕೆ, ಪು. iii.

ಈತನ ಕಾಲ ಸು. ಕ್ರಿ.ಶ. ೧೪೩೦ ಎಂದು ಅಭಿಪ್ರಾಯಪಟ್ಟಿದ್ದಾರೆ.[1] ಎ. ಶ್ರೀಪಾದ ಅವರು ಶಂಕರದೇವರ ಕಾಲವನ್ನು ಕ್ರಿ.ಶ. ೧೪೩೦ ಅಥವ ೧೪೦೦ ಎಂದು ಇಟ್ಟುಕೊಳ್ಳಬಹುದು—ಎಂದು ತಮ್ಮ ಲೇಖನದಲ್ಲಿ ಉಪಸಂಹರಿಸಿರುತ್ತಾರೆ.[2]

ಶಂಕರದೇವನು ಷಡಕ್ಷರರಗಳೆ, ಭಕ್ತಿಬಿನ್ನಹರಗಳೆ, ವೀರಶೈವರಗಳೆ—ಮುಂತಾದ ೨೩ ರಗಳೆಗಳನ್ನು ಇನ್ನಿತರ ಕೃತಿಗಳ ಜೊತೆಗೆ ರಚಿಸಿದ್ದಾನೆ.

## ಸ್ವತಂತ್ರ ಸಿದ್ಧಲಿಂಗೇಶ್ವರ

ಕ್ರಿ.ಶ. ೧೪೮೦ರಲ್ಲಿದ್ದ ಸ್ವತಂತ್ರಸಿದ್ಧಲಿಂಗೇಶ್ವರನು ಸ್ವತಂತ್ರವಚನಕಾರನಾಗಿದ್ದುದು ಮಾತ್ರವಲ್ಲದೆ, 'ಜಂಗಮರಗಳೆ'ಯೆಂಬ ಕೃತಿಯನ್ನೂ ರಚಿಸಿದ್ದಾನೆ.

ಸಿದ್ಧಲಿಂಗೇಶ್ವರ ಮುದ್ರಿಕೆಯುಳ್ಳಿರುವ ಈ ರಗಳೆಯಲ್ಲಿ ಜಂಗಮತತ್ತ್ವವಿವೇಚನೆಯನ್ನು ಸೈದ್ಧಾಂತಿಕವಾಗಿ ಮಾಡಲಾಗಿದೆ. ಇವರಲ್ಲಿ ಲಲಿತರಗಳೆಯ ೧೦೮ ಚರಣಗಳಿದ್ದು, ಪ್ರತಿ ಚರಣವೂ 'ಜಂಗಮಂ' ಎಂದು ಮುಗಿಯುತ್ತದೆ:

ಆದಿಮಧ್ಯಾಂತ ವರ್ಜಿತವೆನಿಪ ಜಂಗಮಂ
ನಿತ್ಯನಿರ್ಮಲನಿರೂಪನಿಶ್ಚಿಂತ ಜಂಗಮಂ[3]

—ಹೀಗೆ ವೀರಶೈವ ಅಷ್ಟಾವರಣಗಳಲ್ಲಿ ಹಿರಿಯದಾದ ಜಂಗಮಸ್ಥಲವು ಶ್ರೇಷ್ಠವಾದುದು—ಇದೇ ಮೊದಲಾದ ವೀರಶೈವಸಿದ್ಧಾಂತಕ್ಕೆ ಸಂಬಂಧಿಸಿದಂತೆ ಕವಿತ್ವ ರಗಳೆಯ ರೂಪದಲ್ಲಿ ಸಾಗಿದೆ ಇಲ್ಲಿ.

## ನಿಜಗುಣ ಶಿವಯೋಗಿ

ವೀರಶೈವವೇದಾಂತ ಕವಿಚಕ್ರವರ್ತಿನಿಜಗುಣ—ಎಂದು ವಿದ್ವಾಂಸರೊಬ್ಬರು ಈತನನ್ನು ಹೆಸರಿಸಿರುವುದು ಯಥಾರ್ಥವಾಗಿಯೇ ಇದೆ. ಈತನ ಕಾಲದ ಬಗೆಗೂ ನಿರ್ದಿಷ್ಟವಾಗಿ ಹೇಳಲು ಬರುವಂತಿಲ್ಲ: ಆದರೂ ಸದ್ಯಕ್ಕೆ ಕ್ರಿ.ಶ. ಸು. ೧೫೦೦ ಎಂದೇ ಬಹುಜನರ ಅಭಿಪ್ರಾಯವಾಗಿರುತ್ತದೆ.

ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿ ಬಳಿಯಿರುವ ಶಂಭುಲಿಂಗೇಶ್ವರ ಬೆಟ್ಟದಲ್ಲಿ ತಪಸ್ಸು ಮಾಡಿ ಸಿದ್ಧನಾದ ಈತನು ಆ ಪ್ರಾಂತದ ರಾಜನಾಗಿದ್ದನೆಂದು ಐತಿಹ್ಯವುಂಟು. ಸಕಲಶಾಸ್ತ್ರಪಾರಂಗತನೂ ಯೋಗವಿದ್ಯೆಯಲ್ಲಿ ಬಲ್ಲಿದನೂ ಆದ ಈತನು ಶಿವಯೋಗಿಯಾಗಿ ರೂಪುಗೊಂಡು ಶಿವಾದ್ವೈತಸಿದ್ಧಾಂತವನ್ನನುಲಕ್ಷಿಸಿ ಷಟ್-ಶಾಸ್ತ್ರಗಳನ್ನು ರಚಿಸಿದ್ದು ಭುವನಭಾಗ್ಯವೆಂದೇ ಹೇಳಬೇಕು.

ಹೀಗೆ ವಿವಿಧರೂಪ ಶಿವ-ಸಾಹಿತ್ಯರಚನೆ ಮಾಡಿದ್ದಲ್ಲದೆ, ನಿಜಗುಣರು ಪರಮಾರ್ಥಗೀತೆಯನ್ನು ರಗಳೆಯಲ್ಲಿ ಬರೆದು ಕನ್ನಡ ಸಾಹಿತ್ಯಕ್ಕೆ ಹಾಗೂ ಛಂದಸ್ಸಿಗೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ.

ಪರಮಾರ್ಥಗೀತೆಯಲ್ಲಿ ಒಟ್ಟು ೧೪೯೬ ಚರಣಗಳಿವೆ. 'ಶ್ರುತಿಪುರಾಣೇತಿಹಾಸಸ್ಮೃತಿಯರ್ಥವ ನಿಂತು ಕನ್ನಡಿಸಿದಂ' ಎಂದು ಸಾರಿದ್ದಾರೆ. ಹನ್ನೊಂದು ಗತಿಗಳಾಗಿ ವಿಂಗಡಿಸಲಾಗಿದೆ. ವಿಷಯಸಂಗ್ರಹಕಲೆಗೆ ನಿಜಗುಣರದು ಎತ್ತಿದ ಕೈ—ಎನ್ನುವುದು ಈ ಗ್ರಂಥದಿಂದಲೂ ವ್ಯಕ್ತಪಡುತ್ತದೆ.

## ವಿರಕ್ತತೋಂಟದಾರ್ಯ

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯಪೀಳಿಗೆಯಲ್ಲಿ ಪ್ರಕಾಶನಗೊಂಡ ಮತ್ತೊಬ್ಬ ಮಹಾಪಂಡಿತ ವಿರಕ್ತತೋಂಟದಾರ್ಯ. ಈತನ ಕಾಲ ಕ್ರಿ.ಶ. ೧೫೬೦.

ಈತನು ಪಾಲ್ಕುರಿಕೆ ಸೋಮೇಶ್ವರಪುರಾಣ, ತೋಂಟದ ಸಿದ್ಧೇಶ್ವರಪುರಾಣ, ಮಗ್ಗೆಯ ಮಾಯಿದೇವರ ವಿಶೇಷಾರ್ಥಪ್ರಕಾಶಿಕೆ, ಗುರುಬಸವನ ಮನೋವಿಜಯದ ಟೀಕೆ, ಕರ್ನಾಟಕ ಶಬ್ದಮಂಜರಿಗಳಲ್ಲದೆ ಒಂದು ರಗಳೆ

---

1 ಸಿ. ಮಹಾದೇವಪ್ಪ (ಸಂ): ಶಂಕರದೇವರ ಕಂದ, ೧೯೫೯, ಪೀಠಿಕೆ xxi.

2 ಎ. ಶ್ರೀಪಾದ: ಈ ಕಾಲದ ಇತರ ತ್ರಿಪದಿ, ರಗಳೆ ಮತ್ತು ಶತಕ ಕವಿಗಳು-I. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೪, ಭಾಗ ೩, ೧೯೭೮ (ಬೆಂ.ವಿ.ವಿ.), ಪು. ೭೪೯

3 ಎಚ್. ಪಿ. ಮಲ್ಲೇದೇವರು (ಸಂ): ಜಂಗಮರಗಳೆ

ಯನ್ನೂ ಬರೆದಿದ್ದಾನೆ. ನಿರಂಜನಲಿಂಗ ರಗಳೆ ಅಥವಾ ತೋಂಟದಾರ್ಯ ರಗಳೆ ಎಂಬ ಹೆಸರನ್ನು ಆ ರಗಳೆಗೆ ಕೊಟ್ಟಿರುತ್ತಾನೆ.

## ವಿರೂಪಾಕ್ಷ

ಕ್ರಿ.ಶ. ೧೬೦೦ರಲ್ಲಿದ್ದ ಈತನು 'ಲಿಂಗಾರ್ಚನಾರಗಳೆ'ಯನ್ನು ಬರೆದಿದ್ದಾನೆ. ಇದು ಸ್ತೋತ್ರರೂಪವಾಗಿದೆ. ಲಿಂಗ-ಷಟ್ಸ್ಥಲದ ಭೇದಗಳನ್ನೂ, ಅವುಗಳನ್ನು ಸಮರಸ ಮಾಡಿಕೊಳ್ಳುವ ವಿಧಾನವನ್ನೂ ಈ ಕೃತಿಯಲ್ಲಿ ಹೇಳಲಾಗಿದೆ.

ಈ ರಗಳೆಗಳಲ್ಲದೆ, ಇನ್ನೂ ಹಲಕೆಲವು ರಗಳೆಗಳು ಅಲ್ಲಲ್ಲಿ ಕಂಡುಬರುತ್ತಿರುವುದು ಈ ಸಾಹಿತ್ಯಪ್ರಕಾರದ ವಿಪುಲತೆಯನ್ನು ಸೂಚಿಸುವುದಾಗಿದೆ. ಹಿರೇಮಲ್ಲೂರ ಈಶ್ವರನ್ ಅವರ ಸಂಶೋಧನ ಪ್ರಬಂಧದಲ್ಲಿ ಈ ಕೆಳಕಂಡ ಸಂಖ್ಯೆಯ ರಗಳೆಗಳು ನಿರ್ದೇಶಿತವಾಗಿವೆ :[1]

(ಅ) ಪ್ರಸನ್ನಶಂಕರಲಿಂಗ ಅಂಕಿತದ ರಗಳೆಗಳು—ಸಂಖ್ಯೆ ೨೯, ಕಾಲ ಕ್ರಿ.ಶ. ಸು. ೧೬೦೦.

(ಆ) ಶಾಂತ ಮಹಾಘನಲಿಂಗ ಅಂಕಿತದ ರಗಳೆಗಳು—ಸಂಖ್ಯೆ ೧. ಕಾಲ ಕ್ರಿ.ಶ. ಸು. ೧೬೦೦.

(ಇ) ಗುರು ಗೋಗೇಶ್ವರ ಅಂಕಿತದ ರಗಳೆ—ಸಂಖ್ಯೆ ೧. ಕಾಲ ಕ್ರಿ.ಶ. ಸು. ೧೬೦೦.

(ಈ) ಪಂಚಾಕ್ಷರಿರಗಳೆ—(ಸುಕವಿದೇವಸ್ತುತಿ ಭೀಮಕವಿ ವಿರಚಿತ)—ಸಂಖ್ಯೆ ೧, ಕಾಲ ಕ್ರಿ.ಶ. ಸು. ೧೬೬೯.

(ಉ) ಗುರುಪುರದ ಮಲ್ಲಿಕಾರ್ಜುನ ಅಂಕಿತದ ರಗಳೆ—ಸಂಖ್ಯೆ ೧, ಕಾಲ ತಿಳಿಯದು.

## ಉಪಸಂಹಾರ

ರಗಳೆಯು ಕನ್ನಡದ ಚಂಪೂಕಾವ್ಯಗಳಲ್ಲಿ ಅಲ್ಲಲ್ಲಿ ಪ್ರಯೋಗವಾಗಿರುವುದು (ರಾಘವಾಂಕನ ಕೃತಿ. ಷಡಕ್ಷರದೇವನ ರಾಜಶೇಖರವಿಳಾಸ—ಇತ್ಯಾದಿ) ಉದ್ದಕ್ಕೂ ಕಂಡುಬರುತ್ತದೆ. ಆದರೆ ಹರಿಹರನ ಸಿದ್ಧಿ ಬೇರಾರಿಗೂ ಪ್ರಾಪ್ತಿಯಾಗಲಿಲ್ಲ. ಇಷ್ಟಾದರೂ ವೀರಶೈವ ಕವಿಗಳು 'ರಗಳೆ'ಸಾಹಿತ್ಯಕ್ಕೆ ತಂತಮ್ಮ ಕಾಣಿಕೆಯನ್ನು ಸಾಕಷ್ಟು ಸಲ್ಲಿಸಿರುವುದು ಸಮಾಧಾನ ತರುವಂತಹುದಾಗಿದೆ. ಆದರೆ ಇದನ್ನು (ಈ ಶತಮಾನದವರೆಗೂ) ವೀರಶೈವೇತರರು ಯಾರೂ ಉಪಯೋಗಿಸಿಕೊಳ್ಳದೇಹೋದುದು ಆಶ್ಚರ್ಯವನ್ನುಂಟುಮಾಡುತ್ತದೆ.

ಆಧುನಿಕ ಭಾವಗೀತೆಗಳಲ್ಲಿ 'ರಗಳೆ'ಯ ಲಯ ವಿಜೃಂಭಿಸಿರುವುದು ಸರ್ವತ್ರ ಗೋಚರಿಸುತ್ತಿದೆ. ಅನೇಕ ವೀರಶೈವ ಕವಿಗಳು ಈಚೆಗೂ 'ರಗಳೆ' ಛಂದಸ್ಸಿನಲ್ಲಿ ಕಾವ್ಯಗಳನ್ನು ರಚಿಸಿರುವುದು ಸ್ವಾಗತಾರ್ಹ. ಡಾ. ಶ್ರೀ ಜಚನಿ. ಓ. ಎಸ್. ಲಿಂಗಣ್ಣಯ್ಯ. ಎಂ. ಜಿ. ಸಂಜುಂಡಾರಾಧ್ಯ. ಸಿದ್ಧಯ್ಯಪುರಾಣಿಕ. ಬಸವೇಶ್ವರ ತುಪ್ಪದ—ಮುಂತಾದವರು ಈ 'ರಗಳೆ' ಪ್ರಕಾರದಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ಡಾ. ಶ್ರೀ ಜಚನಿ ಸನ್ನಿಧಿಯವರ 'ಮಣಿಮುಕುರಂ', 'ಸದಾಶಿವರುದ್ರಂ', 'ಚಂದ್ರಪ್ರಭಾ'—ಕಾವ್ಯಗಳನ್ನೂ. ಬಸವೇಶ್ವರ ತುಪ್ಪದ ಅವರ 'ಶ್ರೀ ಬಸವವರ್ಣನಂ' ಮಹಾಕಾವ್ಯವನ್ನೂ ಉತ್ತಮ ನಿದರ್ಶನಗಳನ್ನಾಗಿ ಹೆಸರಿಸಬಹುದಾಗಿದೆ. ಈಚೆಗೆ 'ಮಹಾಛಂದಸ್ಸು' ಎಂದೇ 'ರಗಳೆ' ಹೆಸರು ಪಡೆದಿರುವುದೊಂದು ವಿಶೇಷವೆನ್ನಬಹುದು.

ಅದಾವ ಘಳಿಗೆಯಲ್ಲಿ ಶಿವಕವಿ ಹರೀಶ್ವರನು 'ರಗಳೆ'ಗಳನ್ನು ರಚಿಸಲುಜ್ಜುಗಿಸಿದನೋ. ಆ ಅಮೃತಘಳಿಗೆಯ ಬಳಿವಿಡಿದು ದಾಂಗುಡಿಯಿಟ್ಟು ಬೆಳೆದಿದೆ ರಘಟಾ–ವೃಕ್ಷಸಂಪತ್ತು! ವೀರಶೈವಕವಿಗಳ ಕಾಣಿಕೆಯು 'ರಗಳೆ'ಸಾಹಿತ್ಯಕ್ಕೆ ಈ ರೀತಿಯಲ್ಲಿ ಸಂದಿದೆ : ಈಗಲೂ ಸಲ್ಲುತ್ತಿದೆ : ಮುಂದೆಯೂ ಸಲ್ಲುವ ನಿರೀಕ್ಷೆ ಮಾಡಬಹುದಾಗಿದೆ.

---

ಪ್ರಾಜ್ಞಸ್ತು ಜಲ್ಪತಾಂ ಪುಂಸಾಂ ಶ್ರುತ್ವಾ ವಾಚಃ ಶುಭಾಶುಭಾಃ ।
ಗುಣವದ್ವಾಕ್ಯಮಾದತ್ತೇ ಹಂಸಃ ಕ್ಷೀರಮಿವಾಂಭಸಃ ॥

---

[1] ವಿ. ಶಿವಾನಂದ : ಈ ಕಾಲದ ಇತರ ತ್ರಿಪದಿ, ರಗಳೆ ಮತ್ತು ಶತಕಕವಿಗಳು—೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ. ಸಂ. ೪, ಭಾಗ ೨, ೧೯೬೮, (ಬೆಂ.ವಿ.ವಿ.) ಪು. ೭೬೦

# ಷಟ್ಪದಿ ಸಾಹಿತ್ಯಕ್ಕೆ ವೀರಶೈವ ಕವಿಗಳ ಕೊಡುಗೆ

ಎಂ. ವೀರಭದ್ರಯ್ಯ

ಕನ್ನಡ ಸಾಹಿತ್ಯ ಅತ್ಯಂತ ಪ್ರಾಚೀನವೂ ವೈವಿಧ್ಯಪೂರ್ಣವೂ ಆದುದು. ಕಾಲದಿಂದ ಕಾಲಕ್ಕೆ ಹೊಸತನವನ್ನು ಗರ್ಭೀಕರಿಸಿಕೊಳ್ಳುವುದರ ಮೂಲಕ ಅದು ಜೀವಂತವೂ ಶ್ರೀಮಂತವೂ ಆಗಿ ಬೆಳೆದು ಬಂದಿರುವುದನ್ನು ಸಾಹಿತ್ಯಾಭ್ಯಾಸಿಗಳು ಗುರುತಿಸಬಹುದಾಗಿದೆ. ಪಂಪ, ಪೊನ್ನ, ರನ್ನ ಮೊದಲಾದ ಹಿರಿಯ ಕವಿಗಳಿಂದ ರಚಿತವಾದ ಪ್ರೌಢ ಸಾಹಿತ್ಯ, ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದ ಹೆಚ್ಚು ಬೆಲೆಯುಳ್ಳದ್ದೂ ಗಮನಾರ್ಹವಾದುದೂ ಎಂಬುದನ್ನು ನಾವು ಮರೆಯುವಂತಿಲ್ಲ. ಆದರೆ ಪಂಡಿತವರ್ಗವನ್ನು ಮೆಚ್ಚಿಸಿದ ಈ ಸಾಹಿತ್ಯ ಜನಸಾಮಾನ್ಯರಿಂದ ಬಹುದೂರ ಉಳಿಯಿತು.

ಸಾಹಿತ್ಯವನ್ನು ನಿರ್ಮಿಸಬೇಕೆಂಬ ದೃಷ್ಟಿಯಿಂದ ಹೊರಡದೇ ಇದ್ದರೂ, ಜನತೆಯ ಬದುಕು ಹಸನಾಗಬೇಕೆಂಬ ನಿರಂತರ ತುಡಿತದಿಂದಾಗಿ ತಮ್ಮ ಅನಿಸಿಕೆ ಅನುಭವಗಳಿಗೆ ಆಡುಮಾತಿನಲ್ಲಿಯೇ ಅಭಿವ್ಯಕ್ತಿಯನ್ನು ನೀಡಿದ ಬಸವಾದಿ ವಚನಕಾರರಿಂದ ಸಾಹಿತ್ಯಕ್ರಾಂತಿಯೂ ಆಯಿತು. ವಚನಕಾರರ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯ ಪ್ರಭಾವಕ್ಕೊಳಗಾಗಿ ನೂತನ ಮಾರ್ಗವನ್ನು ನಿರ್ಮಿಸಿಕೊಂಡ ವೀರಶೈವ ಕವಿಗಳಲ್ಲಿ ಬಹು ಪ್ರಮುಖರೆಂದರೆ ಹರಿಹರ–ರಾಘವಾಂಕರು. ವಚನಕಾರರಂತೆಯೇ ಇವರೂ ಕೂಡ ಸ್ವತಂತ್ರಮನೋಧರ್ಮದವರು. ಆದ್ದರಿಂದಲೇ ಸಂಪ್ರದಾಯಕ್ಕೆ ಶರಣಾಗದೆ ಹೊಸ ಜಾಡಿನಲ್ಲಿ ನಡೆದು ಎರಡು ಅಚ್ಚಕನ್ನಡಛಂದೋರೂಪಗಳಿಗೆ ಜೀವದಾನ ಮಾಡಿದರು. ಚಂಪೂಕಾವ್ಯಗಳಲ್ಲಿ ತುಣುಕುತುಣುಕಾಗಿ ಕಾಣಿಸಿಕೊಳ್ಳುತ್ತಿದ್ದ ರಗಳೆಯ ಛಂದಸ್ಸು ಕಾವ್ಯಮಾಧ್ಯಮವಾದದ್ದು ಮಹಾಕವಿ ಹರಿಹರನಿಂದಾದರೆ, ಅವನ ಸೋದರಳಿಯನೂ ಶಿಷ್ಯನೂ ಆದ ರಾಘವಾಂಕನಿಂದ ಷಟ್ಪದಿಗೆ ಜೀವಕಳೆ ಬಂದಿತು. "ಚಂಪೂಕಾವ್ಯಗಳಲ್ಲಿ ಗದಾಯುದ್ಧ ಮತ್ತು ಸುಕುಮಾರಚರಿತೆಗಳನ್ನು ಬಿಟ್ಟರೆ ಬೇರೆಡೆ ಷಟ್ಪದಿಯ ಬಳಕೆ ಕಾಣುತ್ತಿಲ್ಲ. ಅಪರೂಪವಾಗಿ ೧೬ನೆಯ ಶತಕದಲ್ಲಿ ರಚಿತವಾದ ಸದಾಶಿವಯೋಗಿಯ 'ರಾಮನಾಥ ವಿಲಾಸ' ಎಂಬ ಚಂಪೂಕೃತಿಯಲ್ಲಿ ಅಲ್ಲಲ್ಲಿ ಷಟ್ಪದಿಗಳಿವೆಯೆಂದು ಕವಿಚರಿತೆಯಲ್ಲಿ ಹೇಳಿದೆ. ಷಟ್ಪದಿ ಒಂದು ಸಾಹಿತ್ಯ ರೂಪವಾಗಿ ಇಡೀ ಕೃತಿಯ ವಾಹಕವಾದದ್ದು ನಮಗೆ ತಿಳಿದಿರುವ ಮಟ್ಟಿಗೆ ರಾಘವಾಂಕನ ಕೃತಿಗಳಲ್ಲಿಯೇ ಮೊದಲು ಎಂದು ಹೇಳಬಹುದು"[1] ಎಂಬ ಮಾತು ಇಲ್ಲಿ ಹೆಚ್ಚು ಗಮನಾರ್ಹವಾದುದು. ರಾಘವಾಂಕನು ಷಟ್ಪದಿಯಲ್ಲಿ ಪ್ರಯೋಗ ನಡೆಸುತ್ತಿದ್ದಿರಬೇಕೆಂಬುದನ್ನು ಅವನ ಕೃತಿಗಳಲ್ಲಿಯೇ ಮನಗಾಣಬಹುದಾಗಿದೆ. ಮಾತ್ರಾಸಂಖ್ಯೆಯಲ್ಲಿ ವಾರ್ಧಕಷಟ್ಪದಿಯನ್ನೇ ಹೋಲುವಂತಿದ್ದರೂ ಐದು ಮಾತ್ರೆಗೆ ಬದಲಾಗಿ ನಾಲ್ಕು ಮಾತ್ರೆಯ ಗಣಗಳಿಂದಲೂ, ೧, ೨, ೪, ೫ನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಐದು ಗಣಗಳೂ ೩, ೬ನೆಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಎಂಟು ಗಣಗಳೂ ಇರುವ ಉದ್ದಂಡಷಟ್ಪದಿಯಲ್ಲಿ ವೀರೇಶಚರಿತೆಯನ್ನು ರಚಿಸಿರುವುದನ್ನು ನೋಡಿದರೆ ರಾಘವಾಂಕನ ಪ್ರಯೋಗಶೀಲವಾದ ಮನೋಧರ್ಮ ಅರಿವಾಗುತ್ತದೆ. ಈ ದೃಷ್ಟಿಯಿಂದ ಹೇಳುವುದಾದರೆ ರಾಘವಾಂಕನು ಷಟ್ಪದಿಯ ನಿರ್ಮಾಪಕನಲ್ಲದಿದ್ದರೂ ಆ ಸಂಪ್ರದಾಯದ ಮೂಲಪುರುಷನೆನ್ನುವಲ್ಲಿ ಅಡ್ಡಿಯಿಲ್ಲ. ಮುಂದಿನ ಅನೇಕ ವೀರಶೈವಕವಿಗಳೂ ಕೂಡ ಈ ಸಂಪ್ರದಾಯವನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಹರಿಹರನ ವಿಶಿಷ್ಟವಾದ ಮನೋಧರ್ಮವನ್ನು ಮೆಚ್ಚಿಕೊಂಡ ವೀರಶೈವ ಕವಿಗಳು ರಗಳೆಯ ಛಂದಸ್ಸಿಗೆ ಕೈಹಾಕುವಂತಿರಲಿಲ್ಲ. ಏಕೆಂದರೆ ಬೇರೊಬ್ಬರು ಕೈಹಾಕಲಾರದಷ್ಟರಮಟ್ಟಿಗೆ ರಗಳೆಯ ಸತ್ವವನ್ನೆಲ್ಲಾ ಅವನು ಸೂರೆ ಮಾಡಿದ್ದ. ರಗಳೆಗೆ ಕೈಹಾಕಿ ಸಾಧಿಸುವುದೇನೂ ಉಳಿದಿಲ್ಲ ಎಂಬ ಅರಿವು ರಾಘವಾಂಕನಿಗೆ ಇದ್ದುದರಿಂದಲೇ ತನ್ನದೇ

---

1 ರಂ. ಶ್ರೀ. ಮುಗಳಿ, ಪ್ರಾಚೀನ ಕನ್ನಡಸಾಹಿತ್ಯರೂಪಗಳು, ಪು. ೧೮೫

ಆದ ಮಾರ್ಗವನ್ನು ನಿರ್ಮಿಸಿಕೊಳ್ಳಬೇಕಾಯಿತು ಎಂಬಮೇಲೆ ಬೇರೆಯವರು ರಗಳೆಗೆ ಕೈಹಾಕುವ ಕೆಚ್ಚನ್ನು ಪ್ರದರ್ಶಿಸಲು ಮುಂದೆ ಬರುವುದಾದರೂ ಹೇಗೆ? ಅಂತೆಯೇ ಮುಂದಿನ ವೀರಶೈವಕವಿಗಳು ಕಾವ್ಯಮಾರ್ಗದಲ್ಲಿ ಹರಿಹರನ ಮನೋಧರ್ಮವನ್ನೂ ರಾಘವಾಂಕನ ಛಂದೋಮಾರ್ಗವನ್ನೂ ಸಮರ್ಥರೀತಿಯಲ್ಲಿ ಬಳಸಿಕೊಳ್ಳುವುದರ ಮೂಲಕ ಷಟ್ಪದಿಸಂಪ್ರದಾಯಕ್ಕೆ ಒಂದು ವಿಶಿಷ್ಟಪರಂಪರೆಯನ್ನು ಸೃಷ್ಟಿಸಿದರು.

ಈ ಹೊಸ ಪರಂಪರೆಯ ಮೂಲಪುರುಷನಾಗಿ ನಿಂತು ಷಟ್ಪದಿಯನ್ನು ಕಥನಕಾವ್ಯಕ್ಕೆ ಸಮರ್ಥಮಾಧ್ಯಮವನ್ನಾಗಿ ಮಾಡಿದ ರಾಘವಾಂಕನ ಕೃತಿಗಳ ವೈಶಿಷ್ಟ್ಯವನ್ನು ಇಲ್ಲಿ ಮನಗಾಣಬಹುದಾಗಿದೆ. ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಸೋಮನಾಥಚರಿತೆ—ಇವುಗಳನ್ನು ವಾರ್ಧಕಷಟ್ಪದಿಯಲ್ಲೂ. ವೀರೇಶಚರಿತೆಯನ್ನು ಉದ್ದಂಡಷಟ್ಪದಿಯಲ್ಲೂ ರಚಿಸಿದ್ದಾನೆ. ರಾಘವಾಂಕನ ಇನ್ನೆರಡು ಕೃತಿಗಳಾದ ಶರಭಚಾರಿತ್ರ ಮತ್ತು ಹರಿಹರ ಮಹತ್ವ ಉಪಲಬ್ಧವಾಗಿಲ್ಲ.

ರಾಘವಾಂಕನ ಹರಿಶ್ಚಂದ್ರಕಾವ್ಯ ಪಂಡಿತಪಾಮರರು ಮೆಚ್ಚಿ ತಲೆದೂಗಬಹುದಾದ ಕೃತಿ. ಕಥಾವಸ್ತು ಹಳೆಯದಾದರೂ ರಾಘವಾಂಕನ ನಿನೂತನದೃಷ್ಟಿಗೂ, ಸಾಮಾಜಿಕಪ್ರಜ್ಞೆಗೂ ಈ ಕೃತಿ ಸಾಕ್ಷ್ಯ ನುಡಿಯುತ್ತದೆ. ಕಥೆಯ ಕಟ್ಟಡದಲ್ಲಿ "ಹರನೇಬುದೇ ಸತ್ಯ. ಸತ್ಯವೆಂಬುದೆ ಹರನು" ಎಂಬ ಸಾರ್ವಕಾಲಿಕಸತ್ಯವನ್ನು ಕಾವ್ಯಮಯವಾಗಿ. ಪರಿಣಾಮಕಾರಿಯಾಗಿ ಚಿತ್ರಿಸುವಲ್ಲಿ ಕವಿಯ ಮಹಾನ್‌ಪ್ರತಿಭೆಯ ಸ್ವರೂಪವನ್ನು ಅರಿಯಬಹುದಾಗಿದೆ. ಈ ಕಾವ್ಯ ಪ್ರಾರಂಭವಾಗುವುದು ದೇವೇಂದ್ರನ ಆಸ್ಥಾನದ ದೃಶ್ಯದಿಂದ. ದೇವೇಂದ್ರನು "ಮನವಚನಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ" ಎಂದು ವಸಿಷ್ಠನನ್ನು ಕೇಳುತ್ತಾನೆ. ವಸಿಷ್ಠನು ಹರಿಶ್ಚಂದ್ರನೆಂದು ಹೇಳಿದ ಕೂಡಲೆ ವಿಶ್ವಾಮಿತ್ರನ ಕೋಪ ಭುಗಿಲೆನ್ನುತ್ತದೆ. ಅವನ ಈ ನಿಷ್ಕಾರಣಕೋಪಕ್ಕೆ ಕಾರಣವೆಂದರೆ—

ತೀವಿದೊಡ್ಡೋಲಗದ ನಡುವೆ ತನ್ನ ಮೊದಲೊ
ಳೋವಿ ನುಡಿಸದ ಕೋಪವೊಂದಾ ವಸಿಷ್ಠಮುನಿ
ಯಾವುದಂ ಪೇಳ್ದಡದನಲ್ಲೆಂಬ ಭಾಷೆಯೆರಡವಿಳ ಜೀವಾವಳಿಯುಲಿ
ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ
ಭಾವ ಮುಪ್ಪುರಿಗೊಂಡು . . . . ದು.

ಇಬ್ಬರಿಗೂ ವಾಗ್ಯುದ್ಧ ಪ್ರಾರಂಭವಾಗುತ್ತದೆ. ಏನೂ ಅರಿಯದ ಹರಿಶ್ಚಂದ್ರನ ಸ್ಥಿತಿ 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಎಂಬಂತಾಗುತ್ತದೆ. ಎದುರಾದ ವಿಪತ್ಪರಂಪರೆಗಳನ್ನು ಎದುರಿಸಿ ನಿಲ್ಲುವಲ್ಲಿ ಹರಿಶ್ಚಂದ್ರ ಅನುಭವಿಸಿದ ಕ್ಲೇಶಗಳು ಅಷ್ಟಿಷ್ಟಲ್ಲ. ಸತ್ಯಪಥದಲ್ಲಿ ಹೊರಟ ಹರಿಶ್ಚಂದ್ರನನ್ನು—

ಬಿಸಿಲಾಗಿ, ಬಿರುಗಾಳಿಯಾಗಿ ಕಲುನೆಲನಾಗಿ
ವಿಷಮಾಗ್ನಿಯಾಗಿ ನಾನಾಕ್ರೂರಮೃಗವಾಗಿ
ಮಸಗಿ ಘೋರಾರಣ್ಯವಾಗಿ ಗರ್ಜಿಸಿ ಕವಿವ ಭೂತಭೇತಾಳರಾಗಿ
ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂ
ಧಿಸಿ ಹೋಗಿ ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ
ಮುಸಿಗೆ ಹುಂಕೊಳಿಸುವೆಂ ಭೂಭುಜನನೆನ್ನಿಂದ ಬಲ್ಲಿದರದಾರೆಂದನು.

ಹೀಗೆ ಕಾಡುವ ಕೈಯಾಗಿ ಕಾಣಿಸಿಕೊಂಡ ವಿಶ್ವಾಮಿತ್ರ, ಕಾಪಾಡುವ ಕೈಯಾಗಿಯೂ ಕಾಣಿಸಿಕೊಳ್ಳುತ್ತಾನೆ. 'ಸಾಲದ ವಸೂಲಿಗೆ ನಕ್ಷತ್ರಿಕನನ್ನು ಛೂಬಿಟ್ಟು ವಿಶ್ವಾಮಿತ್ರನೇ ಸಾಲ ತೀರಿಸಲು ಅವಶ್ಯಕವಾದ ಹೊನ್ನನ್ನೂ ಕೊಟ್ಟು ಹರಿಶ್ಚಂದ್ರನನ್ನೂ ಕೊಂಡುಕೊಂಡು ಅವನು ವಚನಭ್ರಷ್ಟನಾಗದಂತೆ ನೋಡಿಕೊಳ್ಳುವ ಭಾರವನ್ನು ವಹಿಸುತ್ತಾನೆ' ಎಂಬ ಕುವೆಂಪು ಅವರ ಮಾತನ್ನು ಇಲ್ಲಿ ಗಮನಿಸಬಹುದು. ಇಷ್ಟಾದರೂ ಹರಿಶ್ಚಂದ್ರನಿಗೆ ಸತ್ಯದ ಸಾಕ್ಷಾತ್ಕಾರವಾಗುವುದು ಅವನು ಎಲ್ಲ ಪ್ರಲೋಭನೆಗಳಿಂದ ಮುಕ್ತನಾದಾಗ ಎಂಬುದು ಹೆಚ್ಚು ಗಮನಾರ್ಹವಾದ ಅಂಶ. ಸತ್ಯದ ಮುಂದೆ ಸಾಮ್ರಾಜ್ಯವಾಗಲೀ, ಪತ್ನೀಪುತ್ರರಾಗಲೀ ಹಿರಿದಾಗಿ ಕಾಣಲಿಲ್ಲ ಹರಿಶ್ಚಂದ್ರನಿಗೆ. ಆದರೆ ಮೊದಲಿನಿಂದಲೂ ಅವನನ್ನು ಬಿಡದೆ ಅಂಟಿಕೊಂಡು ಬಂದದ್ದು ಕುಲಮದ. ತಮ್ಮನ್ನು ಪತ್ನಿಯರನ್ನಾಗಿ ಸ್ವೀಕರಿಸಬೇಕೆಂದು ಕೇಳಿದ ಹೊಲತಿಯರನ್ನು ಕುರಿತು—

ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯ
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕೊಡುವ ಭೂಪರಿಲ್ಲಿಂದುತನಕ
ಹೊಲತಿಯರು ಬಂದಾವು ಸತಿಯರಾದಪ್ಪೆವೆಂ
ಬುಲಿಹವೆಂಬುದು ಬಂದ ಕಾಲಗುಣವೋ ನಿಂದ
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನವನೀಶನು.

ನಿರ್ಗುಣಯುಕ್ತನಾಗಲು ತನ್ನನ್ನು ತಾನು ಮಾರಿಕೊಳ್ಳುವ ಸಂದರ್ಭದಲ್ಲೂ ಈ ಕುಲಮದ ಹರಿಶ್ಚಂದ್ರನನ್ನು ಕಾಡದೆ ಬಿಡಲಿಲ್ಲ. ಕೊಳ್ಳಲು ಬಂದ ವೀರಬಾಹುಕನ ಬಗ್ಗೆ ಕೋಪಗೊಂಡು—

ನಡುಗದಂಜದೆ ಹೆದಱದೋಸರಿಸದಕಟಕಟ
ಕಡೆಯ ಹೊಲೆಯಂ ಮೇರೆದಪ್ಪಿ ಬಂದೆನ್ನ ತ
ನ್ನೊಡೆಯಂಗೆ ದಾಸನಾಗೀಗಳೆಂದೆಂಬುದಿದು ಕಾಲಗುಣವೋ ಎನ್ನನು
ಎಡೆಗೊಂಡ ಕರ್ಮಫಲವೋ ಕಡೆಗೆ ಮೆಣಸು ಹುಳಿ
ತಡೆ ಜೋಳದಿಂ ಕುಂದೆ ನೋಡು ನೋಡೆಂದು ಘುಡು
ಘುಡಿಸಿ ಕೋಪಾಟೋಪದಿಂ ಜಱೆದು ಝಂಕಿಸಿದನವನಿಪನನಾಮಿಕನನು.

"ಉತ್ತಮದ್ವಿಜರು ಕೊಂಬುದೆಂದು ಮುನ್ನಾಡಿತುಂಟೇ ಹೇಳು ಭೂಪಾಲ ನಿನ್ನ ನುಡಿ ನಿನಗೆ ಹಗೆಯಾಯ್ತು" ಈಗ ಹೇಳು ಯಾರು ಹೊಲೆಯರೆಂಬುದನ್ನು ಎಂಬ ವೀರಬಾಹುಕನ ಮಾತಿಗೆ ಉತ್ತರಿಸಲಾರದೆ ತತ್ತರಿಸುತ್ತಾನೆ ಹರಿಶ್ಚಂದ್ರ. ತನ್ನ ಮಾತಿನಲ್ಲಿಯೇ ತಾನು ಬಂಧಿತನಾಗಿರುವುದು ಅರಿವಾಗುತ್ತದೆ. ಕುಲ ಹೆಚ್ಚೋ ಸತ್ಯ ಹೆಚ್ಚೋ ಎಂಬ ಮಾನಸಿಕ ಹೊಯ್ದಾಟ ಪ್ರಾರಂಭವಾಗುತ್ತದೆ. ಕೊನೆಗೆ "ರವಿಕುಲಕೆ ಕುಂದಿಂದು ಬಂದಡಂ ಬರಲಿ" ಸತ್ಯಭ್ರಷ್ಟನಾಗಲಾರೆ ಎಂಬ ದೃಢನಿರ್ಧಾರ ಬಲಗೊಳ್ಳುತ್ತದೆ. ವೀರಬಾಹುಕನಲ್ಲಿ ಕ್ಷಮೆ ಕೇಳಿ ಸುಡುಗಾಡು ಕಾಯುವ ಹೊಣೆಗಾರಿಕೆಯನ್ನು ಹೊತ್ತು ರುದ್ರಭೂಮಿಗೆ ತೆರಳುತ್ತಾನೆ. ತನ್ನ ಸತಿಯ ತಲೆಯನ್ನು ತನ್ನ ಕೈಯಿಂದಲೇ ಕತ್ತರಿಸಲು ಹಿಂಜರಿಯದ ಹರಿಶ್ಚಂದ್ರನನ್ನು ಮತ್ತೊಮ್ಮೆ ಪರೀಕ್ಷಿಸಿ ನೋಡುವ ಸಲುವಾಗಿ ವಿಶ್ವಾಮಿತ್ರನು "ಹೊಡೆಯಬೇಡೆನ್ನ ನಂದನೆಯರಂ ಮದುವೆಯಾದಡೆ ಸತ್ತ ಮಗನನೆತ್ತುವೆನಿವಳ ತಲೆಗಾವೆನು ವಿನಯದಿಂ ಕೊಂಡ ಧನಮಂ ಕೊಟ್ಟು ನಿನ್ನ ಬಂಧನ ಮೋಕ್ಷಮಂ ಮಾಡಿ ರಾಜ್ಯಮಂ ಪೊಗಿಸಿ ಮುನ್ನಿನ ಪರಿಯಲಿರಿಸುವೆಂ" ಎಂದಾಗ ಹರಿಶ್ಚಂದ್ರನು ಕೊಡುವ ಉತ್ತರ—"ಇದೇಂ ಮುನಿ ನಿಮ್ಮ ಹಿರಿಯತನಕೀ ಮಾತು ಯೋಗ್ಯವೇ ಕೇಳೆನ್ನ ಸಿರಿ ಪೋದೊಡೇನು ರಾಜ್ಯಂ ಪೋದೊಡೇನು ನಾನಾರ ಸಾರಿರ್ದಡೇನು ವರಪುತ್ರನಸುವಳಿದು ಪೋದಡೇಂ ನಾನೆನ್ನ ತರುಣಿಯಂ ಕೊಂದಡೇಂ ಕುಂದೆ ಸತ್ಯವನ್ನು ಬಿಟ್ಟಿರನೆನಿಸಿದೊಡೆ ಸಾಕು." ಈ ಹಿರಿಯ ಆದರ್ಶದ ಸಾಧನೆಗಾಗಿ ನಡೆದ ಹೋರಾಟದ ಕಥೆಯೇ ಹರಿಶ್ಚಂದ್ರಕಾವ್ಯ. ಇಲ್ಲಿನ ಪಾತ್ರಚಿತ್ರಣ, ನಾಟಕೀಯತೆ, ಸನ್ನಿವೇಶಕಲ್ಪನೆ, ಕಥನಕೌಶಲಗಳು ಸಹೃದಯರನ್ನು ಒಮ್ಮೆಗೇ ಆಕರ್ಷಿಸಿಬಿಡುತ್ತವೆ.

ಹರಿಶ್ಚಂದ್ರಕಾವ್ಯದಲ್ಲಿ ಬರುವ ನಾಟಕೀಯತೆ ಮನಂಬುಗುವಂತಿದೆ. ದೇವೇಂದ್ರನ ಆಸ್ಥಾನದಲ್ಲಿ ವಸಿಷ್ಠನಿಗೂ ವಿಶ್ವಾಮಿತ್ರನಿಗೂ ನಡೆದ ವಾಗ್ಯುದ್ಧ, ತಮ್ಮ ನೃತ್ಯಗಾಯನದಿಂದ ರಮಿಸಲು ಬಂದ ಹೊಲತಿಯರಿಗೂ ಹರಿಶ್ಚಂದ್ರನಿಗೂ ನಡೆದ ಸಂಭಾಷಣೆ ರಾಘವಾಂಕನ ಅದ್ಭುತನಾಟ್ಯಪ್ರತಿಭೆಗೆ ಸಾಕ್ಷ್ಯ ನುಡಿಯುತ್ತವೆ. ಅವರ 'ರಾಗರಸಲಹರಿಯಿಂದ' ಸಂತುಷ್ಟನಾದ ಹರಿಶ್ಚಂದ್ರ ಆಭರಣಗಳನ್ನು ಕೊಡುತ್ತಾನೆ. ಆದರೆ ಅವರು ಒಪ್ಪದೆ ವಾದಕ್ಕಿಳಿಯುತ್ತಾರೆ—

ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು ಸಾವ ಹೊತ್ತು।
ಪೊಡವಿಯೊಡೆತನ ದೊರಕಿ ಫಲವೇನು ಕಡುಪಿಸಿಲು
ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೊಲಿದು ಮಣಿ
ದೊಡಿಗೆಗಳನಿತ್ತು ಫಲವೇನು ಭೂಪಾಲ ಹೇಳೆನುತ ಮತ್ತಿಂತೆಂದರು ॥

ಕಡಲೊಳಾಳ್ವಂಗೆ ತೆಪ್ಪವನು ದಾರಿದ್ರಂಗೆ
ಕಡವರವನತಿರೋಗಿಗಮೃತಮಂ ಕೊಟ್ಟಡವ
ರಡಿಗಡಿಗದಾವ ಹರುಷವನೆಯ್ದುತಿಪ್ಪರವರಂ ಪೋಲ್ವರೀ ಪೂತ್ತಿನ ।
ಸುಡುಸುಡನೆ ಸುಡುವ ಬಿಜುಬಿಸಿಲ ಸೆಕೆಯುಸುರ ಬಿಸಿ
ಪೊಡೆದುಮುರಿಹತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾ
ವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯುನಿತ್ತು ಸಲಹು ಭೂಭುಜಯೆಂದರು ॥

ಸತ್ತಿಗೆಯ ಮಹತ್ವವನ್ನು ಅವರಿಗೆ ತಿಳಿಸಿ, ಸರ್ವಸ್ವವೂ ಅದೇ ಆಗಿರುವಾಗ ಅದನ್ನು ಕೊಡಬಹುದೆ ? ಎನ್ನುತ್ತಾನೆ ಹರಿಶ್ಚಂದ್ರ. "ಜನನಿಯುಂ ಜನಕನಂ ಸಲ್ಲಳಂ ಮನವಾರೆ ನಂಬಿ ನಟ್ಟಿರ್ದ ಪರಿವಾರಮಂ" ಕೇಳಿದರೆ ಕೊಡಬೇಡ, ಕೊಡೆಯನೀಯನೆ ಲೋಭವೇಕರಸ ? ಎಂದು ಮರುಪ್ರಶ್ನೆ ಹಾಕುತ್ತಾರೆ. ಹರಿಶ್ಚಂದ್ರನೆನ್ನುತ್ತಾನೆ—ಇದಲ್ಲದೆ ನನಗೆ ಮಾತಾಪಿತರಿಲ್ಲ. ಏಕೆಂದರೆ "ಲೋಗರಿಗೆ ಕೊಡಬಾರದಾಗಿ ಸತಿ. ವಂಶಗತವಾಗಿ ಬಂದುದಱಿಂದ ತಂದೆ ಪಟ್ಟವ ಕಟ್ಟು ವಾಗಲರ್ಚಿಸಿಕೊಂಬುದಾಗಿ ದೈವಂ, ನೆಳಲ ತಂಪನೊಸೆದೀವುದಾಗಿ. ಸಾಗಿಸುವ ತಾಯ್ ಧುರದೊಳರಿಗಳಂ ನಡುಗಿಸು ವುದಾಗಿ ಚತುರಂಗಬಲವೆನಿಸಿತೀ ಛತ್ರವೆಂಬಾಗಳಿದನಱಿದಱಿದು ಬೇಡುವರನತಿಮರುಳರೆನ್ನರೇ ಮೂಜಗದೊಳು." ಏನಾದರೂ ಸತ್ತಿಗೆಯನ್ನು ಕೊಡಲಾರೆ ಎಂಬ ಪಟ್ಟು ರಾಜನದಾದರೆ, ಅದನ್ನು ಬಿಟ್ಟು ಅದಕ್ಕೂ ಮಿಗಿಲಾದದ್ದನ್ನು ಪಡೆಯುವ ಅಪೇಕ್ಷೆಯನ್ನು ಮುಂದಿಡುತ್ತಾರೆ—

ಇಳೆಯೊಳಗೆ ಹಸರುಳ್ಳ ದಾನಿಯೆಂಬುದನು ಕೇ
ಳ್ದೆಳಸಿ ಕಟ್ಟಾಸೆವಟ್ಟೆಯ್ತಂದು ಬೇಡಿ ಸ
ಪ್ಫಳವಾಗದಂತೆ ನಾವತಿಮಱುಗದಂತಳಲದಂತೆ ಬಿಸುಸುಯ್ಯದಂತೆ ।
ತಿಳಿದು ನೀನೆಮಗೆ ವಲ್ಲಭನಾಗಿ ಚಿತ್ತದು
ಮ್ಮಳಿಕೆಯಂ ಕಳೆ ಹರಿಶ್ಚಂದ್ರ ಭೂನಾಥ ಎಂ
ದಳವಳಿದು ಬಾಯ್ಬಿಟ್ಟು ಕೈಮುಗಿದು ನುಡಿದರೊಲವಿಂದನಾಮಿಕಸತಿಯರು ॥

ಮಿತಿಮೀರಿದ ಅನಾಮಿಕಸತಿಯರ ಅಪೇಕ್ಷೆಯನ್ನು ಕೇಳಿ ಕೋಪಗೊಂಡ ಹರಿಶ್ಚಂದ್ರ ತನ್ನ ಕುಲದ ಹೆಚ್ಚಳಿಕೆಯನ್ನು ಮುಂದಿಟ್ಟು "ಹೊಲತಿಯರು ಬಂದಾವು ಸತಿಯರಾದಪ್ಪೆವೆಂಬುಲಿಹವೆಂಬುದು ಬಂದ ಕಾಲ ಗುಣವೋ ನಿಂದ ನೆಲದ ಗುಣವೋ !" ಎನ್ನುತ್ತಾನೆ. ಆಗ ಹೊಲತಿಯರು ಕೊಡುವ ಉತ್ತರ ಯಾರೇ ಆದರೂ ತತ್ತರಿಸುವಂತಹದ್ದು :

ಪಾವನಕ್ಷೀರಮಂ ಕೊಡುವ ಕೆಚ್ಚಲ ಮಾಂಸ
ವಾವಲೇಸಿನಿದುಳ್ಳ ಮಧುವನೊಸೆದೀವ ನೊಳ
ವಾವ ಲೇಸಧಿಕ ಕಸ್ತೂರಿಯಂ ಕೊಡುವ ಮೃಗನಾಭಿ ತಾನಾವ ಲೇಸು ।
ದೇವರಿಗೆ ಸಲ್ಲವೇ ಉತ್ತಮ ಗುಣಂಗಳಿ
ರ್ದಾವ ಕುಂದಂ ಕಳೆಯಲಾಱವವನೀಶ ಕೇಳ್
ಭಾವಿಸುವಡಿಂದೆಮ್ಮ ರೂಪು ಜವ್ವನವಿರಲು ಕುಲದ ಮಾತೇಕೆಂದರು ॥

ಉತ್ತರಿಸಲಾರದ ಈ ಪ್ರಶ್ನೆಗೂ ಹರಿಶ್ಚಂದ್ರನಿಂದ ಉತ್ತರಿಸಿಸಿದ್ದಾನೆ ಕವಿ ರಾಘವಾಂಕ. "ಅಕ್ಕಕ್ಕ ಬಚ್ಚಲುದಕಂ ತಿಳಿದಡಾರ ಮಿಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳಡಾವನೂಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ । ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ ಸೊಕ್ಕು ರೂಪಿನ ಗಾಡಿ ಜಾಣತನ ದೊಪ್ಪವೇತಕ್ಕೆಯೋಗ್ಯಂ ರಮಿಸಿದವರುಂಟೆ ಶಿವಶಿವೀ ಮಾತು ತಾ ಹೊಲೆಯೆಂದನು." ಮಾತಿಗೆ ಸೋಲದ ಅನಾಮಿಕ ಸತಿಯರು ನುಡಿಯುತ್ತಾರೆ—

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವ ತಂಗಾಳಿಯಿಂ ।
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತು
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ ಎಂದರು ॥

ಮೊದಲಿನಿಂದಲೂ ನಮ್ಮ ಸಮಾಜವನ್ನು ಕಾಡುತ್ತಿದ್ದ ಜಾತಿಯ ಸಮಸ್ಯೆಗೆ ರಾಘವಾಂಕನು ವಚನಕಾರರಾದ ಮೇಲೆ ಕಾವ್ಯಮುಖೇನ ಉತ್ತರಿಸಿರುವುದನ್ನು ಇಲ್ಲಿ ಮನಗಾಣಬಹುದಾಗಿದೆ. ಹೀಗೆ ಕವಿಯ "ಪೆರರೊಡವೆಯಂ ಕೊಂಡು ಕೃತಿಯ ಪೇಟಿದ ಭಾಷೆ"ಯಿಂದಾಗಿ. 'ಅತಿ ಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯನುನ್ನತಯತಿವರನು', 'ಮುನಿಗೆ ಹೊಲೆಯಾವುದತಿಕೋಪ ಬದ್ಧದ್ವೇಷವನಿಮಿತ್ತವೈರ' ಎಂಬ ಸಾಮಾಜಿಕಪ್ರಜ್ಞೆಯಿಂದಾಗಿ ಧಾರ್ಮಿಕತೆಯ ಸಂಕುಚಿತದೃಷ್ಟಿಯಿಂದ ಮೇಲೆದ್ದು ಬಂದು ವಿಶ್ವತತ್ತ್ವಪ್ರತಿಪಾದನೆಯಿಂದಾಗಿ ಹರಿಶ್ಚಂದ್ರಕಾವ್ಯವು "ಕನ್ನಡಕ್ಕೆ ಹಾಗೂ ಭಾರತೀಯವಾಙ್ಮಯಕ್ಕೆ ಅವನ ವಿರಳವಾದ ಕೊಡುಗೆ. ತನ್ನುಳಿದ ಕೃತಿಗಳಲ್ಲಿ ರಾಘವಾಂಕನು ಅಂಶರೂಪವಾಗಿ ಪ್ರಕಟಿಸಿದ ಮಹಾಕವಿತ್ವವನ್ನು ಈ ಮಹಾ ಕೃತಿಯಲ್ಲಿ ಬಹುಮಟ್ಟಿಗೆ ಸಮಗ್ರವಾಗಿ ತೋರ್ಪಡಿಸಿದ್ದಾನೆ"[1] ಎಂಬುದನ್ನು ಗಮನಿಸಿದರೆ ಷಟ್ಪದಿಕಾವ್ಯಪ್ರಕಾರಕ್ಕೆ ರಾಘವಾಂಕನ ಕೊಡುಗೆ ಅಪಾರವಾದುದು ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಕವಿಯ ಸಿದ್ಧರಾಮಚಾರಿತ್ರವು ವಚನಕಾರ ಸೊನ್ನಲಿಗೆಯ ಸಿದ್ಧರಾಮನ ಜೀವನಚರಿತೆಯನ್ನು ಕುರಿತದ್ದು. "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು" ಎಂಬ ಕರ್ಮಯೋಗಿ ಸಿದ್ಧರಾಮನ ವ್ಯಕ್ತಿತ್ವವನ್ನು ಕವಿ ಇಲ್ಲಿ ಮನಂಬುಗುವಂತೆ ಚಿತ್ರಿಸಿದ್ದಾನೆ. ತನ್ನ ಕಥಾನಾಯಕನ ಬಗ್ಗೆ ಎಷ್ಟು ಗೌರವದಿಂದ ನಡೆದುಕೊಂಡಿದ್ದಾನೆಯೋ ಅಷ್ಟೇ ಗೌರವವನ್ನು ಅಲ್ಲಮನ ಪಾತ್ರದ ಬಗ್ಗೆ ವ್ಯಕ್ತಪಡಿಸಿದ್ದಾನೆ ಕವಿ ರಾಘವಾಂಕ. ಅಲ್ಲಮ ಮತ್ತು ಸಿದ್ಧರಾಮರ ನಡುವೆ ನಡೆಯುವ ಮಾತುಕತೆಗಳಲ್ಲಿ ಇದನ್ನು ಮನಗಾಣಬಹುದು. "ಮಗು ಸಿದ್ಧರಾಮನನ್ನು ಕಳೆದುಕೊಂಡು ಹಲುಬುತ್ತಿರುವ ತಾಯಿಯ ಕರುಣ, ತಾಯಿಯಂತಿದ್ದ ಮಲ್ಲಿನಾಥನನ್ನು ಅರಸುತ್ತಲಿದ್ದ ಸಿದ್ಧರಾಮನ ಭಕ್ತಿ" ಇವೆರಡೂ ರಸದ ಮೇಲೆ ರಸವಾಗಿ ಹರಿದುಬಂದು "ಕಥಾರಸದ ಲಹರಿಯನ್ನು ತೋರಿ ತನ್ಮಯಗೊಳಿಸುತ್ತವೆ."[2]

ಅಲ್ಲದೆ "ರಾಘವಾಂಕನ ಕಥನಕಲೆ ಪಳಗುತ್ತಾ ಸಾಗಿದೆ ಎಂಬುದಕ್ಕೆ ಈ ಕಾವ್ಯ ಸಾಕ್ಷಿಯಾಗಿದೆ. ಷಟ್ಪದಿಯನ್ನೂ ಕನ್ನಡ ನುಡಿಯನ್ನೂ ಅವನು ಮಿದಿದು ಹದಗೊಳಿಸಿದ್ದಾನೆ" ಎಂಬ ಮುಗಳಿಯವರ ಮಾತು ಮನನೀಯವಾದುದು.

ಸೌರಾಷ್ಟ್ರದ ಶರಣನಾದ ಆದಯ್ಯನ ಜೀವನವೃತ್ತಾಂತವೇ 'ಸೋಮನಾಥಚರಿತೆ'ಯ ಕಥಾವಸ್ತು. ಜೈನನಾದ ಪಾರಿಶೆಟ್ಟಿಯ ಮಗಳಾದ ಪದ್ಮಾವತಿಯನ್ನು ಇವನು ವಿವಾಹವಾಗುತ್ತಾನೆ. ಈತನದು ಉಗ್ರಶೈವಭಕ್ತಿ. ಸೌರಾಷ್ಟ್ರದ ಸೋಮನಾಥನನ್ನು ಪುಲಿಗೆರೆಗೆ ತಂದು ಪ್ರತಿಷ್ಠೆಮಾಡಿ ತನ್ನ ಪವಾಡಗಳಿಂದ ಜೈನರನ್ನು ಶಿವಭಕ್ತರನ್ನಾಗಿ ಮಾಡುತ್ತಾನೆ. ಸಾಂಪ್ರದಾಯಿಕವರ್ಣನೆಗಳಿಂದ ಕೂಡಿದ ಈ ಕೃತಿಯ ನಾಯಕನ ವ್ಯಕ್ತಿತ್ವಚಿತ್ರಣದಲ್ಲಿ ರಾಘವಾಂಕನ ಮತೀಯದೃಷ್ಟಿ ತಲೆಹಾಕಿದೆ ಎಂಬುದನ್ನು ನೋಡಬಹುದು. ಆದಯ್ಯನಲ್ಲಿ "ಸಿದ್ಧರಾಮನ ಸ್ವಾರ್ಥತ್ಯಾಗ, ಪರೋಪಕಾರಬುದ್ಧಿ, ಪಾರಲೌಕಿಕವಿಚಾರ, ನಿತ್ಯಾನಿತ್ಯವಿವೇಕ ಮುಂತಾದ ಮಹಾಪುರುಷಗುಣಗಳು ಕಂಡು ಬರುವುದಿಲ್ಲ"[3] ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ರಾಘವಾಂಕನಾದ ಮೇಲೆ ಅನೇಕದೃಷ್ಟಿಯಿಂದ ಗಮನಾರ್ಹನಾದ ಕವಿಯೆಂದರೆ ಬಸವಪುರಾಣವನ್ನು ಬರೆದ ಭೀಮಕವಿ. ಪಾಲ್ಕುರಿಕೆ ಸೋಮನಾಥನ ತಲುಗು ಬಸವಪುರಾಣವೇ ಕನ್ನಡ ಬಸವಪುರಾಣಕ್ಕೆ ಆಧಾರಗ್ರಂಥ. ೪ ಆಶ್ವಾಸಗಳಿಂದಲೂ, ೬೧ ಸಂಧಿಗಳಿಂದಲೂ ಕೂಡಿದ ಈ ಕೃತಿಯನ್ನು ಕವಿ ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾನೆ. ಪಾಲ್ಕುರಿಕೆ ಸೋಮೇಶನು ಕನಸಿನಲ್ಲಿ ಬಂದು "ನಾನು ನಿನ್ನಾತ್ಮದೊಳಗಿದ್ದು ಬಸವ ಕಥೆಯನ್ನು ವಿರಚಿಸುವೆನು ಬರೆದುಕೊಳ್" ಎಂದು ಹೇಳಲು ತಾನು ಕೃತಿ ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಬಸವಪುರಾಣದ ವಸ್ತು ಹೆಸರೇ ಹೇಳುವಂತೆ ಧಾರ್ಮಿಕಪುರುಷ, ಭಕ್ತಿಭಂಡಾರಿ, ಸಮಾಜೋದ್ಧಾರಕ ಬಸವಣ್ಣನವರ ಜೀವನವನ್ನು ಕುರಿತದ್ದು. ಹರಿಹರನಂತೆಯೇ ಇವನೂ ಭಕ್ತಕವಿಯಾದ್ದರಿಂದ ಈ ಪುರಾಣವು ಭಕ್ತಿಯ ರಸಗಂಗೆಯಾಗಿದೆ. ಬಸವಣ್ಣನವರಿಗೂ ಶಿವನಿಗೂ ಅಭೇದಭಾವವನ್ನು ಕವಿ ಕಲ್ಪಿಸಿದ್ದಾನೆ. ಅಂತೆಯೇ ಕವಿವಾಣಿ ಹೀಗೆ ನುಡಿಯುತ್ತದೆ :

> ಪುರಹರಂ ನಿರವಯದೊಳಿರೆ ಬಸ
> ವರಸನವಯವದಿಂದೆ ಚಲಿಸುವ
> ಪುರಹರಂ ಸಾಕಾರದಿಂದಿರೆ ಬಸವರಸನಿಂತು ।

1 ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಪು. ೧೭೨

2 ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಪು. ೧೭೦

3 ಎ. ಆರ್. ಕೃಷ್ಣಶಾಸ್ತ್ರಿ : ಹರಿಶ್ಚಂದ್ರಕಾವ್ಯಸಂಗ್ರಹ, ಪೀಠಿಕೆ, ಪು. XXIII

ಶರಣನಾಗಿರವಿಲ್ಲದಿಪ್ಪನು
ಶರಣನಾಗಿ ಪುರಾರಿ ಚಲಿಸಲು
ಪರಮಭಕ್ತಿಯೊಳಾವಗಂ ಬಸವನರ್ಚಿಸುವಂ ॥

ಕವಿಯು ದೃಷ್ಟಿ ಪುರಾಣದೃಷ್ಟಿಯಾದ್ದರಿಂದ ಪವಾಡಗಳನ್ನು ಶರಣರ ಕತೆಗಳಲ್ಲಿ ತಂದಿದ್ದಾನೆ. ಇಲ್ಲಿಯೇ ನಾವು ಈ ಪುರಾಣದ ವೈಶಾಲ್ಯವನ್ನು ಗುರುತಿಸಬೇಕಾಗುತ್ತದೆ. ದೇಶೀನಿಷ್ಠವಾದ ಭಾಮಿನೀಷಟ್ಪದಿಯಲ್ಲಿ ಮೂಡಿ ಬಂದಿರುವ ಅನೇಕ ಚಿತ್ರಗಳು ಕವಿಯ ಶೈಲಿಗೂ ಕಥನಕಲೆಯ ವೈಶಿಷ್ಟ್ಯಕ್ಕೂ ಉದಾಹರಣೆಯಾಗಿ ನಿಲ್ಲುತ್ತವೆ. ಕೋಳೂರು ಕೊಡಗೂಸಿನ ಮುಗ್ಧತನದ ಚಿತ್ರಣ ಕವಿಯ ತಿಳಿಯಾದ ಭಾಷೆಯಲ್ಲಿ ಮನಂಬುಗುವಂತೆ ಮೂಡಿಬಂದ ಬಗೆಯಿದು:

ಬೇಕು ಬೇಡೆಂದುಸುರಲೊಲ್ಲೆಯ
ದೇಕೆ ಪಾಲಂ ಕುಡಿಯೆ, ಕರೆಯಲು
ಮೂಕನೇ ಮಾರ್ನುಡಿಯೆ ನೀಂ ದಿಟವಾಗಿ ಹಸಿಯದೊಡೆ ।
ಓಕರಿಸದೊಕ್ಕುಡಿತೆಗೊಂಡೊಡೆ
ಸಾಕು ಮಿಕ್ಕಿನ ಹಾಲನಿರಿಸು ಪಿ
ನಾಕಿ ತಪೆನೇ ಉಂಬೊಡಟ್ಟೋಗರವನೊಂದಿನಿತು ॥

ಕಾವ್ಯದೃಷ್ಟಿಯಿಂದ ಬಸವಪುರಾಣವು ಹರಿಹರನ 'ಬಸವರಾಜದೇವರ ರಗಳೆ'ಗೆ ಸರಿಯಾಗದಿದ್ದರೂ ಜನಸಾಮಾನ್ಯರ ದೃಷ್ಟಿಯಲ್ಲಿ ರಗಳೆಗಿಂತ ಇದು ಹೆಚ್ಚು ಮಾನ್ಯತೆಯನ್ನು ಪಡೆದಿದೆ. ಈ ಕೃತಿಯ ಮತ್ತೊಂದು ವೈಶಿಷ್ಟ್ಯವೆಂದರೆ "ಭಾಮಿನೀಷಟ್ಪದಿಯಲ್ಲಿ ಸಮಗ್ರವಾಗಿ ಬರೆದ ಗ್ರಂಥ"ವಾಗಿರುವುದು. ಈ ದೃಷ್ಟಿಯಿಂದ ನೋಡಿದರೆ ಮೂರನೇ ಯುಗದ ಭಾಮಿನೀಷಟ್ಪದಿಕಾರರಿಗೆ ಪೂರ್ವಭಾವಿಯಾಗಿ ಬಂದ ಅವನು ಭಾಮಿನಿಯ ಸಹಜಲಾಲಿತ್ಯಕ್ಕೆ ಮಾರ್ಗ ದರ್ಶಿಯಾಗಿದ್ದಾನೆ"[1] ಎಂಬುದು.

ಸರಿಸುಮಾರು ಭೀಮಕವಿಯ ಕಾಲದಲ್ಲೇ ವಾರ್ಧಕಷಟ್ಪದಿಯಲ್ಲಿ ರಚಿತವಾದ ಕೃತಿಯೆಂದರೆ ಕುಮಾರ ಚನ್ನ ಬಸವಾಂಕನ "ಪುರಾತನರ ಚರಿತೆ." ೯ ಸಂಧಿಗಳಿಂದಲೂ ೩೫೦ ಪದ್ಯಗಳಿಂದಲೂ ಕೂಡಿದ ಈ "ಪುರಾತನರ ಚರಿತೆ" ಯಲ್ಲಿ ಶರಣರ ಕಥೆ ಬರುತ್ತದೆ. ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿಗಳ ಕೃತಿಗಳಲ್ಲಿ ಮೂಡಿಬಂದಿರುವ ಶರಣರ ಜೀವನಚಿತ್ರಣವನ್ನೇ ಇವನೂ ಕೂಡ ತನ್ನ ಕೃತಿಯಲ್ಲಿ ಕೊಡಲು ಪ್ರಯತ್ನಿಸಿದ್ದಾನೆ. ಭಕ್ತಿಪ್ರಪಂಚ ದಲ್ಲಿಯೇ ಸಂಚರಿಸುವ ಶರಣರ ಬದುಕಿನಲ್ಲಿ ಹೆಚ್ಚು ಆಕರ್ಷಕವಾದುದೆಂದರೆ ಅವರ ಕಾಯಕನಿಷ್ಠೆ. ಕಾಯಕದ ಮೂಲಕವೇ ವ್ಯಕ್ತಿತ್ವದ ಸಿದ್ಧಿಯನ್ನು ಕಂಡುಕೊಂಡ ಶರಣರ ಚಿತ್ರಣ ವೈವಿಧ್ಯದಿಂದ ಕೂಡಿದೆ. ಇದೇ ಈ ಕೃತಿಯ ಒಂದು ವೈಶಿಷ್ಟ್ಯವೆಂದು ಹೇಳಬಹುದು. ಪುರಾತನಚರಿತೆಯ ಮತ್ತೊಂದು ವೈಶಿಷ್ಟ್ಯವೆಂದರೆ ಕವಿಯ ಸರಳವೂ, ನೇರವೂ ಆದ ಶೈಲಿ. ವಿಸ್ತರಿಸಿ ಹೇಳುವ ಇಲ್ಲವೆ ಸಂಗ್ರಹಿಸಿ ಹೇಳುವ ಕಲೆಗಾರಿಕೆಯೂ ಇವನಲ್ಲಿ ವಿಶೇಷ ವಾಗಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಕೆಳಗಿನ ಪದ್ಯವನ್ನು ನೋಡಬಹುದು.

ಶಿವನ ಕೇಳುವೆಗೆ ದಂಡಿಗೆವಿಡಿದು ಪಾಡಿ ತಾಂ
ಶಿವಲೋಕವನೆಯ್ದಿ ಬೊಂತಾದೇವಿಯೊಪ್ಪಿದಳು
ಶಿವನ ಕೇಳುವೆ ಗುಂಪಾಂಗವ ಮಾಡಿ ವೀರ ಶಿವದೇವಿ ಗಂಗೀಶನೊಲಿದು ।
ಶಿವಲಿಂಗದೋಲಗಕೆ ಕಟ್ಟಿಗೆಯ ಪಿಡಿದಿರ್ದು
ಶಿವಲೋಕವೆಯ್ದಿದಳ್ ಸೇವಕದ ಗೌರವ್ವೆ
ಶಿವಲಿಂಗಕೊಲಿದು ಚೆಂಗಿಣಿ ಗಿಲಿಂಡೆಯು ಕಟ್ಟೀ ಹೂವಿನಲ್ಲಮನೆಸಗುಂ ॥

"ಕವಿಯು ಬಳಸಿರುವ ಛಂದಸ್ಸು ವಿಷಯಕ್ಕೆ ಒಪ್ಪುವ ವಾರ್ಧಕಷಟ್ಪದಿ. ವಾರ್ಧಕಷಟ್ಪದಿಯ ಹರವು ಮತ್ತು ನಿಧಾನಗತಿ ವಿಶಿಷ್ಟವಾದುದು. ಇಲ್ಲಿಯ ಒಂದೊಂದು ಷಟ್ಪದಿಯೂ ಪ್ರತ್ಯೇಕ ಘಟಕಗಳಂತೆ ಕಂಡುಬಂದು ಓದುಗರ ಮನಸ್ಸಿನಲ್ಲಿ ಒಂದೊಂದು ಸನ್ನಿವೇಶವನ್ನು ಕಲ್ಪಿಸುತ್ತವೆ" ಎಂಬ ಮಾತನ್ನು ಸ್ಮರಿಸಬಹುದಾಗಿದೆ.[2]

---

[1] ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೨೦೪

[2] ವೈ. ಸಿ. ಭಾನುಮತಿ, ಪುರಾತನ ಚರಿತೆ, ಪು. XIVIII

ಕೆರೆಯ ಪದ್ಮರಸನ ಜೀವನವನ್ನು ವಸ್ತುವನ್ನಾಗಿಟ್ಟುಕೊಂಡು ವಾರ್ಧಕಷಟ್ಪದಿಯಲ್ಲಿ ಪದ್ಮರಾಜಪುರಾಣವನ್ನು ಬರೆದ ಪದ್ಮಣಾಂಕನನ್ನು ಇಲ್ಲಿ ಸ್ಮರಿಸಬಹುದು. ಪದ್ಮಣಾಂಕನನ್ನು ಕವಿಯನ್ನಾಗಿ ನೋಡುವುದಕ್ಕಿಂತ, ಚರಿತ್ರಕಾರನನ್ನಾಗಿ ನೋಡುವುದು ಹೆಚ್ಚು ಸೂಕ್ತವೆನಿಸುತ್ತದೆ. ಪದ್ಮರಸನ ಚರಿತೆಯನ್ನು ಹೇಳಲು ಹೊರಟ ಈ ಕೃತಿಯಲ್ಲಿ ಹರಿಹರನ ಚರಿತೆಯೂ ಬಂದಿರುವುದು ಗಮನಾರ್ಹವಾದ ಸಂಗತಿ. ಭೀಮಕವಿಯಂತೆಯೇ ಪ್ರೌಢಕಾವ್ಯವನ್ನು ಬರೆಯಬೇಕೆಂಬ ಉದ್ದೇಶದಿಂದ ಹೊರಟವನು ಈತ. ಬೆಡಗು, ಅಲಂಕಾರ, ಮೃದೂಕ್ತಿ, ಪ್ರೌಢಿಮೆಯಿಂದ ಕೂಡಿದ ತನ್ನ ಕೃತಿಯುವತಿಯು ಕೋವಿದರನ್ನು ಸೋಲಿಸದೆ ಬಿಡಳು ಎಂಬ ಆತ್ಮವಿಶ್ವಾಸವಿದ್ದರೂ, 'ಪಾಂಡಿತ್ಯಚಮತ್ಕೃತಿ' ಗಳಿದ್ದರೂ ಕಾವ್ಯದೃಷ್ಟಿಯಿಂದ ಬಸವಪುರಾಣದ ಜತೆಯಲ್ಲಿ ನಿಲ್ಲಲಾರದೆಂದೇ ಹೇಳಬೇಕು. ಆದರೆ ಪದ್ಮಣಾಂಕನಲ್ಲಿ "ಕಥನಕವಿಯ ಶಕ್ತಿಯಿದೆ, ಅಚ್ಚಗನ್ನಡದ ಅರಿವಿದೆ"[1] ಎಂಬುದು ತೃಪ್ತಿ ತರುವ ವಿಷಯ.

ಷಟ್ಪದಿಯಲ್ಲಿ ಬರೆದ ವೀರಶೈವ ಕವಿಗಳಲ್ಲಿ ಲಕ್ಕಣದಂಡೇಶನ ಕಾವ್ಯ (೧೪೨೮) ವಿಶಿಷ್ಟವಾದುದು. ಪ್ರೌಢದೇವರಾಯನ ಆಸ್ಥಾನದಲ್ಲಿ ಪ್ರಧಾನಿಯಾಗಿ, ದಂಡನಾಯಕನಾಗಿ ಸೇವೆ ಸಲ್ಲಿಸುವುದರ ಜೊತೆಗೆ ಮಹಾನುಭಾವನೂ, ಕವಿಯೂ, ಧರ್ಮಸಂಸ್ಕೃತಿಗಳ ಪೋಷಕನೂ ಆಗಿ ಈತನು ಕಂಗೊಳಿಸಿದವನು. ವಾರ್ಧಕಷಟ್ಪದಿಯಲ್ಲಿ ಬರೆದ ಇವನ "ಶಿವತತ್ವಚಿಂತಾಮಣಿ" ಒಂದು ಅಪೂರ್ವ ಗ್ರಂಥ. ಇದರಲ್ಲಿ ೫೫ ಸಂಧಿಗಳೂ ಒಟ್ಟು ೨೨೨೧ ಪದ್ಯಗಳೂ ಇವೆ. ಈ ಕೃತಿಯನ್ನು ಕೇವಲ ಕಾವ್ಯದೃಷ್ಟಿಯಿಂದಲೇ ನೋಡುವುದು ಉಚಿತವಾಗಲಾರದು. ಶಿವಾನುಭವಿಗಳ ಚರಿತ್ರೆ, ವೀರಶೈವತತ್ವ, ಶಿವನ ಪಂಚವಿಂಶತಿಲೀಲೆ-ಇವು ಮುಪ್ಪುರಿಗೊಂಡು ಈ ಕೃತಿ ವೀರಶೈವಧರ್ಮದ ಕೈಗನ್ನಡಿಯೂ ಆಗಿದೆ. ಕವಿಯ ಧಾರ್ಮಿಕಶ್ರದ್ಧೆಯ ಜೊತೆಗೆ ಶರಣರ ಹಿರಿಮೆ, ಶಿವಭಕ್ತಿ, ಕಾಯಕ ತತ್ವ, ಪವಾಡಗಳ ಮಹಿಮೆಯನ್ನು ಜನತೆಗೆ ಬೋಧಿಸುವುದರ ಮೂಲಕ ವೀರಶೈವ ಧರ್ಮ ಸಂಸ್ಕೃತಿಗಳನ್ನು ಪ್ರಚುರಪಡಿಸುವ ಮಹೋದ್ದೇಶವನ್ನು ಇಲ್ಲಿ ನಾವು ಗುರುತಿಸಬಹುದಾಗಿದೆ.

'ಶಿವತತ್ವಚಿಂತಾಮಣಿ'ಯ ೩೦, ೩೧, ೩೨, ೩೩ ಸಂಧಿಗಳಲ್ಲಿ ಬಸವಣ್ಣನವರ ಚರಿತ್ರೆ ಬರುತ್ತದೆ. ಹರಿಹರನ ಚಿತ್ರಣಕ್ಕಿಂತ ಇದು ಬೇರೆಯಾಗಿದೆ. ಕವಿ ಬಸವೇಶ್ವರರ ಪವಾಡಗಳಿಗೆ ಹೆಚ್ಚು ಮಹತ್ವ ಕೊಟ್ಟಂತೆ ಕಾಣುತ್ತದೆ. ಇದಕ್ಕಾಗಿ ಒಂದು ಸಂಧಿಯನ್ನೇ ಮೀಸಲಿರಿಸಿದ್ದಾನೆ. ಉದಾಹರಣೆಗೆ ಒಂದೆರಡನ್ನು ನೋಡಬಹುದು.

ಲಿಂಗ ಲಾಂಛನವಿಡಿದು ಬಂದರಾರಾದೊಡಂ
ಲಿಂಗವೆಂದೇ ಕಂಡು ನಂಬಿ ಬೇಡಿದ ಪದಾ
ರ್ಥಂಗಳಂ ಕೊಟ್ಟು ಮನ್ನಿಪನೆಂಬ ವಾರ್ತೆಯಂ ಕೇಳುತಂ ಪಗರಣಿಗರು
ಕಂಗೊಳಿಪ ಸರ್ವಾಂಗ ಭಸಿತ ಪಾತ್ರಾಕಫಲ
ಲಿಂಗಕುರವಣೆಯ ಜಡೆಗಳ ಧರಿಸಿ ಬರಲು ನಿಜ
ಲಿಂಗ ಜಂಗಮವೆನಿಸಿ ಮೆಱೆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು
ಉನ್ನತ ಶಿವಜ್ಞಾನಿ ಬಸವಯ್ಯನಂ ಕಂಡು
ಕನ್ನದ ಬ್ರಹ್ಮಯ್ಯ ಶರಣಾರ್ಥಿಯೆಂದೆನುತ
ಸನ್ನಿಗನೆಯಿಂದೆಮ್ಮ ಕಾಯ ಕಕ್ಕರ ಮನೆಯ ಚಿನ್ನ ಭಂಡಾರದೆಡೆಗೆ
ಕನ್ನವಂ ಸವೆಯ ಬೇಕೆನೆ ಬಟ್ಟೆಯಂ ತೋಱೆ
ಕನ್ನವಂ ಸವೆಸಿ ಕೆಡವಿದ ಮಣ್ಣರಾಶಿಯಂ
ಪೊನ್ನರಾಶಿಯ ಮಾಡಿ ಮೆಱೆದ ಬಸವೇಶ್ವರನ ಚರಣಾಂಬುಜಕ್ಕೆ ಶರಣು.

ಪ್ರತಿಯೊಂದು ಪದ್ಯವೂ "ಚರಣಾಂಬುಜಕ್ಕೆ ಶರಣು" ಎಂದು ಕೊನೆಗೊಳ್ಳುವುದನ್ನು ನೋಡಿದರೆ ಕವಿಯ ಅಪಾರವಾದ ವಿನಯಸಂಪತ್ತು ಗೋಚರಿಸುತ್ತದೆ. ಈತನು ಕೊಟ್ಟಿರುವ ನೂತನ ಗಣಂಗಳ ಪಟ್ಟಿ ಅಚ್ಚರಿಯನ್ನುಂಟುಮಾಡುವಂತಿದೆ. ಸುಮಾರು ೨೫೦ಕ್ಕಿಂತ ಹೆಚ್ಚು ವಾರ್ಧಕಗಳಲ್ಲಿ ಕನ್ನಡನಾಡಿನ, ಆಂಧ್ರದ, ತಮಿಳಿನ, ಕೇರಳದ, ಗುಜರಾತಿನ ಶರಣರ ಪಟ್ಟಿಯೊಂದನ್ನು ಕೊಟ್ಟಿದ್ದಾನೆ. ಶರಣರ ಕಾಯಕ ಮತ್ತು ಭಕ್ತಿಸ್ವರೂಪ ತಿಳಿಯಾದ ಭಾಷೆಯಲ್ಲಿ ಮೂಡಿಬಂದಿರುವ ಬಗೆ ಮೆಚ್ಚುವಂತಿದೆ. ಗಹನವಾದ ತಾತ್ವಿಕ ವಿಷಯಗಳನ್ನು ಕನ್ನಡದಲ್ಲಿ ಪರಿಣಾಮಕಾರಿಯಾಗಿ ಹೇಳಬಹುದೆಂಬುದನ್ನು ತೋರಿಸಿಕೊಟ್ಟ ವಚನಕಾರರ ಮಾರ್ಗ ಇವನದೂ ಕೂಡ. ಬಳಕೆಯಲ್ಲಿದ್ದ

---

1 ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೨೦೫

ನಾಣ್ನುಡಿಗಳನ್ನು ಅರ್ಥವತ್ತಾಗಿ ಬಳಸಿಕೊಂಡಿದ್ದಾನೆ. "ಮರುಳನೋರ್ವಂ ತನ್ನ ತಾಯ್ ಬಂಜೆಯೆಂದಂತೆ", 'ಬಡವಂಗೆ ಹಣ ದೊರಕಿದಂತೆ', 'ಚಿತ್ರಪಟದ ಸ್ತ್ರೀವಿಲಾಸಗಳಂತೆ'. 'ಹುರಿದ ಬೀಜಂ ಬೆಳೆಯುವಂದದಿ' ಮುಂತಾದವು ಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಲೋಕೋಕ್ತಿಯಾಗಲಿ, ನಿದರ್ಶನಗಳಾಗಲಿ, ಅಲಂಕಾರಗಳಾಗಲಿ, ಕೃತಿಯ ಸೌಂದರ್ಯ ವರ್ಧನೆಗೆ ಸಹಾಯಕವಾಗಿರುವುದನ್ನು ಮನಗಾಣಬಹುದು.

ಐತಿಹಾಸಿಕ ದೃಷ್ಟಿಯಿಂದಲೂ ಲಕ್ಕಣ್ಣದಂಡೇಶನ 'ಶಿವತತ್ವಚಿಂತಾಮಣಿ'ಗೆ ಹೆಚ್ಚು ಮಹತ್ವವಿದೆ. ಬಸವ ಪೂರ್ವಯುಗದ ಜೇಡರದಾಸಿಮಯ್ಯ; ಶಂಕರದಾಸಿಮಯ್ಯ ಹಾಗೂ ಬಸವ, ಸಿದ್ಧರಾಮ, ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ಮಾದಾರ ಚೆನ್ನಯ್ಯ, ದಸರಯ್ಯ, ಕಿನ್ನರಿಬೊಮ್ಮಯ್ಯ, ಅಜಗಣ್ಣ, ನುಲಿಯಚಂದಯ್ಯ, ಕೋಳೂರ ಕೊಡಗೂಸು ಮೊದಲಾದವರ ಜೀವನ ಚರಿತ್ರೆ ಇರುವುದರಿಂದ ಹೆಚ್ಚು ಉಪಯುಕ್ತವಾಗಿದೆ. ಒಟ್ಟಿನಿಂದ "ಈತನು ತನಗಿಂತಲೂ ಮೊದಲು ಯಾವ ಕನ್ನಡ ವೀರಶೈವ ಕವಿಯೂ ಚಿತ್ರಿಸದ ಮತ್ತು ಕನ್ನಡ ಪ್ರಪಂಚಕ್ಕೆ ನೂತನ ವಿಷಯಗಳಾದ ಭುವನಕೋಶ, ನೂತನ ಗಣಂಗಳ ಚರಿತ್ರೆ, ಶಿವಾದ್ವೈತಸಿದ್ಧಾಂತ ಇವೆಲ್ಲವನ್ನೂ ಹೇಳಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾನೆ. ಆದುದರಿಂದಲೇ ಈ ಕೃತಿಗೆ ಇಷ್ಟು ಮಹತ್ವ ದೊರೆತಿರುವುದು ಸಹಜ ವಾಗಿದೆ."[1]

ವೈರಾಗ್ಯದ ಮಹಾಮೇರುವಾದ ಅಲ್ಲಮನ ಜೀವನವನ್ನು ಕಥಾವಸ್ತುವನ್ನಾಗುಳ್ಳ ಚಾಮರಸನ (೧೪೩೦) ಪ್ರಭುಲಿಂಗಲೀಲೆ ಕನ್ನಡದ ಅತ್ಯಂತ ಉತ್ತಮ ಕಾವ್ಯಗಳ ಸಾಲಿನಲ್ಲಿ ನಿಲ್ಲುವಂತಹದ್ದು. ಭಾಮಿನೀಷಟ್ಪದಿಯ ಈ ಕೃತಿಯಲ್ಲಿ ೨೫ ಗತಿಗಳೂ ೧೧೧೧ ಪದ್ಯಗಳೂ ಇವೆ.

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ತಾ
ನನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನವರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡು ಸೊಂಪಿನ ಪೆಂಪಿನ ಹಂಪೆಯಾಳ್ದನಂ.

"ಈಶ್ವರನೇ ದೇವರು. ಶರಣರೇ ಅವನ ಪ್ರಿಯಭಕ್ತರು. ಈಶ್ವರನನ್ನು ಮತ್ತು ಅವನ ಶರಣರನ್ನಲ್ಲದೆ ಅನ್ಯರನ್ನು ಸ್ತುತಿಸಬಾರದು. ವಾಗೀಶ್ವರಿಯ ಪ್ರಸಾದವನ್ನು ಆ ಮಹೋನ್ನತ ಗುರಿಗೇ ವಿನಿಯೋಗಿಸಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎನ್ನುವ ತತ್ವವೇ ವೀರಶೈವ ಸಾಹಿತ್ಯದ ಕೈದೀವಿಗೆ."[2] ಹರಿಹರನ ಈ ಕಾವ್ಯೋದ್ದೇಶವೇ ಚಾಮರಸನಲ್ಲೂ ಪ್ರತಿಧ್ವನಿಗೊಂಡಿದೆ—

ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವರ ನೀಮೆಯ ಹೊಲಬು ತಾನಲ್ಲ
ಹೊತ್ತು ಹೋಗದ ಪುಂಡರಾಲಿಪ
ಮತ್ತಮತಿಗಳ ಗೋಷ್ಠಿಯಲ್ಲಿದು
ಸತ್ಯಶರಣರು ಕೇಳ್ವುದೀ ಪ್ರಭುಲಿಂಗಲೀಲೆಯನು.

ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದ ಚಾಮರಸನು ಅಲ್ಲಮನ ಅಲೌಕಿಕ ಜೀವನವನ್ನು ಚಿತ್ರಿಸುವಲ್ಲಿ ಯಶಸ್ವಿ ಯಾಗಿದ್ದಾನೆ. ಇತರ ಕವಿಗಳಂತೆ ಕಾವ್ಯದಲ್ಲಿ ಪೂರಕವಲ್ಲದ ಕಥೆಗಳನ್ನಾಗಲಿ, ಅನಾವಶ್ಯಕ ವರ್ಣನೆಗಳನ್ನಾಗಲಿ, ಪಾಂಡಿತ್ಯವನ್ನಾಗಲಿ ಮೆರೆಯಬೇಕೆಂಬ ವ್ಯಾಮೋಹ ಇವನಿಗಿಲ್ಲ. 'ಸಿದ್ಧಕುಲ ಸಾರ್ವಭೌಮ'ನಾದ ಅಲ್ಲಮ "ಬಸವ, ಸಿದ್ಧರಾಮ, ಮುಕ್ತಾಯಕ್ಕ, ಗೋರಕ್ಷ ಮೊದಲಾದವರ ಮಾಯಾ ತೆರೆಗಳನ್ನು ಹರಿದು ಅವರನ್ನು ಆಧ್ಯಾತ್ಮ ಪಿಪಾಸು ಗಳನ್ನಾಗಿ ಮಾಡಿದ 'ಪರುಷ' ಕಲೆಯ ವೃತ್ತಾಂತ"ವನ್ನು ಹೇಳುವಲ್ಲಿ ಅವನ ಗುರಿ ಕೇಂದ್ರೀಕೃತವಾಗಿರುವುದನ್ನು ನಾವು ಮನಗಾಣುತ್ತೇವೆ.

ಚಾಮರಸನ ವರ್ಣನಾಚಾತುರ್ಯ, ಸೌಂದರ್ಯಪ್ರಜ್ಞೆ ಅಪೂರ್ವವಾದುದು. ವರ್ಣನೆಗಾಗಿ ವರ್ಣನೆಯನ್ನು

[1] ಶಿವತತ್ವ ಚಿಂತಾಮಣಿ, ಉಪೋದ್ಘಾತ, ಎಸ್. ಬಸಪ್ಪ ಪು. ೭೮, ೯೦.
[2] ಅ.ನ.ಕೃ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪು. ೨

ತರದೆ, ವರ್ಣನೆಯ ಮೂಲಕವೇ ಆಯಾ ಪಾತ್ರದ ವೈಶಿಷ್ಟ್ಯವನ್ನೆಲ್ಲ ಒಂದೇ ಒಂದು ಪದ್ಯದಲ್ಲಿ ಕಡೆದು ನಿಲ್ಲಿಸುವ ಮಹಾ ಶಿಲ್ಪಿ ಅವನು. ಸುಜ್ಞಾನಿ ನಿರಹಂಕಾರರ ಬಸಿರಲ್ಲಿ ಜನ್ಮತಳೆದ ಬಾಲಕನಾದ ಅಲ್ಲಮನ ಅಪೂರ್ವ ಸೌಂದರ್ಯವನ್ನು ವರ್ಣಿಸಿರುವ ರೀತಿ ಇದು—

ಬಿಸಿಲ ಬೇಟಿಟ್ಟಿಳೆಗಿಳಿದು ಶೋ
ಭಿಸುವ ಸೂರ‍್ಯನೋ ಹಿಮವನತಿಗಳೆ
ದೆಸೆವ ಚಂದ್ರನೊ ನೆಟ್ಟನಾಶ್ರಿತ ಭಕ್ತ ಗುಣವಳಿದು
ಮಿಸುಪ ವಹ್ನಿಯೊ ಪೇಳೆನಲು ರಂ
ಜಿಸುವ ತೇಜೋಮಯದ ಬಾಲಕ
ನೆಸೆದನಾ ಸುಜ್ಞಾನಿ ನಿರಹಂಕಾರರಿದಿರಿನಲಿ.

ಮಮಕಾರ ಮೋಹಿನಿಯರಿಗೆ ಮಗಳಾಗಿ ಮಾಯೆ ಹುಟ್ಟಿದಾಗ "ಬೆತ್ತ ಬಿದಿರಿಡಿದಿರ್ದ ತರುಲತೆ, ಹುತ್ತ ಬೆಳೆದ ಸಮಾಧಿವಂತರು ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲಗೆಡಲು ಎತ್ತಲಿಂದೀ ಮಾಯೆ ಹುಟ್ಟಿತೆನುತ್ತ" ಚಿಂತಾಕ್ರಾಂತರಾದರಂತೆ. ಕೇವಲ ಮಾಯೆಯ ಜನನವೇ ಮುನಿಗಳ, ಸಿದ್ಧರ, ಜ್ಞಾನಿಗಳ ಚಿತ್ತಚಂಚಲಕ್ಕೆ ಕಾರಣವಾಯಿತು ಎಂದ ಮೇಲೆ ಉಳಿದವರ ಪಾಡೇನು ? ಆದರೆ ಅಲ್ಲಮನು ಇವಳನ್ನು ಗೆದ್ದ ಬಗೆಯನ್ನು ಚಿತ್ರಿಸುತ್ತ ಅವನ ಅನುಪಮವಾದ ವ್ಯಕ್ತಿತ್ವದ ದರ್ಶನ ಮಾಡಿಸುತ್ತಾನೆ. ಎಷ್ಟೋ ವಿಧವಾಗಿ ಹೇಳಿದರೂ ಕೇಳದೆ ತನ್ನನ್ನು ಬೆಂಬತ್ತಿ ಬಂದ ಮಾಯೆಯನ್ನು ಕುರಿತು—

ಕಾಮವೆತ್ತಲು ಪರಮ ತತ್ವದ
ಸೀಮೆಯೆತ್ತಲು ತಿಮಿರವೆತ್ತಲು
ತಾಮರಸಸಖನೆತ್ತ ಮೇಣಜಿವೆತ್ತ ಮಜಿವೆತ್ತ
ಭ್ರಾಮಕದ ನುಡಿ ಸಾಕು ನೀನೆ
ತ್ತಾ ಮಹಾ ಘನವೆತ್ತ ಮರುಳೇ
ಕ್ಷೇಮದಲಿ ನೀ ಬಂದ ಬಟ್ಟೆಯಲಬಳೆ ಹೋಗೆಂದ.

ಇದು ಅಲ್ಲಮನು ಏರಿ ನಿಂತ ನಿಲುವು. 'ಅಲ್ಲಮನು ನಿರ್ಲೇಪನಾದರೂ ನಿಷ್ಕರುಣಿಯಲ್ಲ....ಇದನ್ನು ಮುಕ್ತಾಯಕ್ಕನ ದುಃಖನಿವಾರಣೆಯಲ್ಲಿ ಚಾಮರಸನು ಬಹಳ ಚೆನ್ನಾಗಿ ಚಿತ್ರಿಸಿದ್ದಾನೆ"[1] ಅವಳ ಸಂಶಯಗಳಿಗೆಲ್ಲ ಉತ್ತರವನ್ನು ಕೊಡುತ್ತ ಮಗು ತಾಯಿಯ ಹಾಲನ್ನು ಬಯಸುವಂತೆ. ಇಂದ್ರಿಯಗಳು ವಿಷಯಾದಿಗಳ ಕಡೆ ಹರಿಯುವುದು ಸಹಜ. ತಾಯಿಯಾದವಳು "ಎಱೆವಾಲನೆಱೆವುತ ಮೆಲ್ಲಮೆಲ್ಲನೆ ಅಶನವುಣಕಲಿಸಿ. ಬಾಲಕರ ಪಟು" ಮಾಡುವಂತೆ, ಗುರುವಾದವನು ಇಂದ್ರಿಯಗಳ ಚಾಪಲ್ಯವನ್ನು ಬಿಡಿಸಿ ಭಕ್ತಿಮಾರ್ಗವನ್ನು ಬೋಧಿಸುತ್ತಾನೆ. ಈ ಭಕ್ತಿಮಾರ್ಗಕ್ಕೆ ಇಷ್ಟಲಿಂಗ ಅವಶ್ಯಕವೆನಿಸುತ್ತದೆ. ಈ ಮಾರ್ಗದಲ್ಲಿಯೇ ನಡೆದು ಅನಂತರ "ನಿರಾಳದಲ್ಲಿ ನಿಲಲಱಿವುದು" ಎನ್ನುತ್ತಾನೆ. ಆಗ ಅಲ್ಲಮನ ಅರಿವಿನ ಬೆಳಗಲ್ಲಿ ಮಿಂದು 'ಅಚಳಿತ ಸುಖದೊಳೋಲಾಡು'ತ್ತಾಳೆ ಮುಕ್ತಾಯಿ.

ಹೀಗೆ ಕವಿ ತನ್ನ ಕಥಾನಾಯಕನ ಮಹೋನ್ನತವಾದ ವ್ಯಕ್ತಿತ್ವದ ಪ್ರಕಾಶನಕ್ಕೆ ಬೇಕಾದ ಸನ್ನಿವೇಶಗಳನ್ನು ತಂದು ಸಹೃದಯರ ಅಂತರಂಗವನ್ನು ಸೂರೆಮಾಡಿದ್ದಾನೆ. "ಒಂದು ದೃಷ್ಟಿಯಿಂದ ಪಾರ್ವತಿಯ ತಾಮಸಕಳೆಯಾಗಿ ಬಂದ ಮಾಯೆ, ಅವಳಿಗೆ ತಿಳಿವನ್ನು ಕೊಟ್ಟ ವಿಮಳೆ, ಸಾತ್ವಿಕಕಳೆಯಾಗಿ ಬಂದ ಅಕ್ಕಮಹಾದೇವಿ, ಸುಜ್ಞಾನಿ ಮತ್ತು ನಿರಹಂಕಾರರ ಮಗನಾಗಿ ಹುಟ್ಟಿ ಬಂದ ಅಲ್ಲಮ ಮುಂತಾದವರ ಕಥಾರಚನೆಯಲ್ಲಿ ಆಧ್ಯಾತ್ಮಿಕವಾದ ಸಾಂಕೇತಿಕ ಧ್ವನಿಯು ಏಕತೆ ಕಾಣುತ್ತದೆ."[2]

ಪ್ರಭುಲಿಂಗಲೀಲೆ ಕನ್ನಡದ ಗಮನಾರ್ಹ ಕೃತಿಗಳಲ್ಲೊಂದಾಗಿರುವುದಲ್ಲದೆ ತಮಿಳು, ತೆಲುಗು, ಸಂಸ್ಕೃತ, ಮರಾಠಿ ಭಾಷೆಗಳ ಮೇಲೂ ತನ್ನ ಪ್ರಭಾವವನ್ನು ಬೀರಿರುವುದು ಹೆಮ್ಮೆಪಡುವಂತಹ ಸಂಗತಿ. ತಿರುವಣ್ಣಾಮಲೆಯ ಶಿವಪ್ರಕಾಶಸ್ವಾಮಿಗಳು ಇದನ್ನು ತಮಿಳಿಗೂ, ಪಿಡುಪರ್ತಿ ಸೋಮನಾಥ, ಪಿಡುಪರ್ತಿ ಬಸವಕವಿಗಳು ತೆಲುಗಿಗೂ, ಹಂಪೆಯ ವಿರೂಪಾಕ್ಷಪಂಡಿತ ಸಂಸ್ಕೃತಕ್ಕೂ, ಬ್ರಹ್ಮದಾಸನು ಮರಾಠಿಗೂ ಅನುವಾದ ಮಾಡಿದ್ದಾರೆ.

1 ಪ್ರಭುಲಿಂಗಲೀಲೆಯ ಸಂಗ್ರಹ, ಪೀಠಿಕೆ, ಪು. xiv, ಸಂ. ಎಂ. ಆರ್. ಶ್ರೀನಿವಾಸಮೂರ್ತಿ

2 ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೨೧೨

'ಶಿವಯೋಗಾಂಗ ಭೂಷಣ', 'ಸದ್ಗುರು ರಹಸ್ಯ', 'ಕಲ್ಯಾಣೇಶ್ವರ', 'ಸ್ವರೂಪಾಮೃತ', 'ವೃಷಭಗೀತೆ', 'ಅವಧೂತ ಗೀತೆ', 'ಮನೋವಿಜಯ', ಎಂಬ ಏಳು ಕಾವ್ಯಗಳನ್ನು ಬರೆದ ಗುರುಬಸವನು (೧೪೩೦) ಪರಿವರ್ಧಿನಿ, ಭಾಮಿನಿ, ಭೋಗ ಹಾಗೂ ಕುಸುಮಷಟ್ಪದಿಗಳನ್ನು ಬಳಸಿದ್ದಾನೆ. ಚೆನ್ನಬಸವಪುರಾಣದಲ್ಲಿ ಇವನು ಮಾಡಿದ ಪವಾಡಗಳ ವರ್ಣನೆ ಬರುತ್ತದೆ. ಮನೋನಿಗ್ರಹವಿಲ್ಲದೆ ಅಧ್ಯಾತ್ಮ ಸಾಧ್ಯವಾಗುವುದಿಲ್ಲ ಎಂಬುದೇ 'ಮನೋವಿಜಯ'ದ ವಸ್ತು. ಗಹನವಾದ ತಾತ್ವಿಕ ವಿಷಯಗಳನ್ನು ಹೇಳುವ ಗ್ರಂಥಗಳಲ್ಲಿ ಶುದ್ಧ ಸಾಹಿತ್ಯವನ್ನು ಕಾಣುವುದು ಕಷ್ಟ ಎಂಬ ಅಭಿಪ್ರಾಯಕ್ಕೆ ಕವಿಯ ಉತ್ತರ ಸೊಗಸಾಗಿದೆ—

ರಸಭಾವಾಲಂಕಾರ
ದೆಸಕವಿಲ್ಲೆಂದು ಭಾ
ವಿಸಬೇಡ ಭಾವುಕರ್ ಭಾವಿಸುವೊಡೆ ।
ರಸವೆ ಚಿದ್ರಸ ಭಾವ
ದೆಸೆ ಪೂರ್ಣ ನಿಜಭಾವ
ವೆಸೆವಲಂಕಾರವಾನಂದದಿರವು

"ವಿಷಯವಿಮರ್ಶನದೃಷ್ಟಿಯಿಂದಲ್ಲದೆ ಭಾಷಾದೃಷ್ಟಿಯಿಂದಲೂ ಮನೋವಿಜಯ ಉತ್ತಮ ಗ್ರಂಥ. ಅನವಶ್ಯಕವಾಗಿ ಸಂಸ್ಕೃತ ತುಂಬದೆ ಕನ್ನಡದ ನುಡಿಹಿಡಿಗಳನ್ನೇ ಅಳವಡಿಸಿಕೊಂಡು, ಹೊಸ ಶಬ್ದಗಳನ್ನು ಸೃಷ್ಟಿಸಿಕೊಂಡು, ಹಳೆಯ ಶಬ್ದಗಳಿಗೆ ಅರ್ಥವಿಸ್ತಾರವನ್ನು ಕಲ್ಪಿಸಿ ವಸ್ತುವಿಗನುಗುಣವಾದ ಶೈಲಿಯನ್ನು ಕವಿ ಅಳವಡಿಸಿಕೊಂಡಿದ್ದಾನೆ."[1]

"ರಾಘವಾಂಕನ ತರುವಾಯ ೧೩ನೆಯ ಶತಕದಿಂದ ೧೯ರ ಪ್ರಾರಂಭದವರೆಗೆ ರಚಿತವಾದುವೆಂದು ತಿಳಿದಿರುವ ಷಟ್ಪದಿಕಾವ್ಯಗಳನ್ನು ಪಟ್ಟಿ ಮಾಡಿದರೆ ಅವು ೧೩೦ರ ವರೆಗೆ ಆಗುತ್ತವೆ."[2] ಇವರಲ್ಲಿ ಸಿಂಹಪಾಲು ವೀರಶೈವ ಕವಿಗಳದು. ಇವರು ರಚಿಸಿದ ಷಟ್ಪದಿ ಕೃತಿಗಳನ್ನು ಪರಿಶೀಲಿಸಿದರೆ ಹರಿಹರನ 'ಶರಣಕಥಾಪುರಾಣ'ಪರಂಪರೆಯ ಪ್ರಭಾವ ಎದ್ದು ಕಾಣುತ್ತದೆ. ಹರಿಹರನು ಪೆರಿಯ ಪುರಾಣದಿಂದ ಕಥಾವಸ್ತುವನ್ನು ಎತ್ತಿಕೊಂಡುದು ಮಾತ್ರವಲ್ಲದೆ, ಸಮಕಾಲೀನ ಶರಣರ ಜೀವನವನ್ನೂ 'ಪುರಾಣದ ಪರಂಪರೆಗೆ ಅಳವಡಿಸಿ'ಕೊಂಡದ್ದು ಮೆಚ್ಚುವಂತಹ ವಿಷಯ. "ಹರಿಹರನ ನೂತನ ಕಾವ್ಯಧರ್ಮ ರಾಘವಾಂಕನಿಂದ ನಿರ್ಮಿತವಾದ ರೀತಿ ಪರಂಪರೆಯಲ್ಲಿ ಪ್ರವಹಿಸಿ"[3]ದ್ದನ್ನು ವೀರಶೈವ ಕವಿಗಳ ಷಟ್ಪದಿ ಕೃತಿಗಳಲ್ಲಿ ಮನಗಾಣಬಹುದಾಗಿದೆ. ಕಾವ್ಯಕ್ಕಿಂತಲೂ ಪುರಾಣಗಳನ್ನೇ ಹೆಚ್ಚಾಗಿ ವೀರಶೈವ ಕವಿಗಳು ಬರೆದಿರುವುದನ್ನು ಇಲ್ಲಿ ಗಮನಿಸಬಹುದು.

ಗುಬ್ಬಿ ಮಲ್ಲಣಾರ್ಯನ 'ಭಾವಚಿಂತಾರತ್ನ', 'ವೀರಶೈವಾಮೃತ ಪುರಾಣ', ಚೆನ್ನಬಸವಾಂಕನ 'ಮಹಾದೇವಿಯಕ್ಕನ ಪುರಾಣ', ಬಸವಲಿಂಗನ 'ಶಿವಾಧಿಕ್ಯಪುರಾಣ', ಬೊಮ್ಮರಸನ 'ರೇವಣಸಿದ್ಧೇಶ್ವರ ಪುರಾಣ', ಈ ಪುರಾಣಗಳಲ್ಲಿ ವೀರಶೈವ ಧರ್ಮಸಿದ್ಧಾಂತಗಳ ಜೊತೆಗೆ ಚರಿತ್ರೆಯೂ ಸಾಕಷ್ಟು ಕಂಡುಬರುತ್ತದೆ. ಜನತೆಯ ಆತ್ಮೋದ್ಧಾರವನ್ನೇ ದೃಷ್ಟಿಯಲ್ಲಿಟ್ಟುಕೊಂಡಿದ್ದ ವೀರಶೈವ ಕವಿಗಳಿಗೆ ಧರ್ಮ, ತತ್ವ, ಜ್ಞಾನಪ್ರಸಾರಗಳಿಗೆ ಸೂಕ್ತವೆನಿಸಿದ ಪುರಾಣಗಳ ರಚನೆ ಅನಿವಾರ್ಯವಾದಂತೆ ಕಾಣಿಸುತ್ತದೆ. ಆದುದರಿಂದ ಧರ್ಮ, ಕಾವ್ಯಧರ್ಮಗಳನ್ನು ಬೇರೆಬೇರೆಯಾಗಿ ನೋಡದೆ, ಅವೆರಡರ ಸಂಮಿಳನದ ಒಂದು ವಿಶಿಷ್ಟ ಪ್ರಯತ್ನದ ಫಲಗಳೇ ವೀರಶೈವ ಪುರಾಣಗಳೆಂದರೆ ತಪ್ಪಾಗಲಾರದು.

ಐತಿಹಾಸಿಕ ವಸ್ತುವಿಗೆ ಪುರಾಣ ಪರಂಪರೆಯಲ್ಲಿ ಅಭಿವ್ಯಕ್ತಿಯನ್ನು ನೀಡಿದ ವೀರಶೈವ ಕವಿಗಳು ಚರಿತ್ರೆ, ಚಾರಿತ್ರ ಎಂಬ ಹೆಸರಿನಲ್ಲಿಯೂ ಗ್ರಂಥ ರಚನೆ ಮಾಡಿರುವುದು ಎಲ್ಲರಿಗೂ ತಿಳಿದ ವಿಷಯ. ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ', 'ಗುರುರಾಜ ಚಾರಿತ್ರ', ಕುಮಾರ ಪದ್ಮರಸನ 'ಸಾನಂದ ಚರಿತ್ರೆ', ನೀಲಕಂಠಾಚಾರ್ಯನ 'ಆರಾಧ್ಯ ಚರಿತ್ರೆ', ಸಿಂಗಿರಾಜನ 'ಮಲಬಸವ ಚಾರಿತ್ರ್ಯ' ಮೊದಲಾದುವನ್ನು ಇಲ್ಲಿ ಹೆಸರಿಸಬಹುದು. ಇಲ್ಲಿ 'ಚರಿತ್ರೆ', 'ಚಾರಿತ್ರ', 'ಪುರಾಣ', 'ಲೀಲೆ' ಎಂಬುವುಗಳಿಗೆ ಸ್ಪಷ್ಟವಾಗಿ ವಿವರಣೆ ಕೊಡುವುದು ಕಷ್ಟವಾದರೂ "ಶಿವಶರಣನ

---

[1] ಅ.ನ.ಕೃ. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪು. ೨೮
[2] ರಂ. ಶ್ರೀ. ಮುಗಳಿ: ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು, ಪು. ೧೯೬
[3] ಡಾ. ಜಿ. ಎಸ್. ಶಿವರುದ್ರಪ್ಪ ಪರಿಶೀಲನ, ಪು. ೪೯

ಚರಿತ್ರೆಯಾಗಿರುವುದು ಚಾರಿತ್ರ. ನಿರ್ದಿಷ್ಟ ಶಿವಶರಣರ ಸಾಂಪ್ರದಾಯಿಕ ಪದ್ಧತಿಯ ಕಥೆ ಪುರಾಣ. ಶಿವನ ಪಂಚವಿಂಶತಿಲೀಲೆಗಳ ವಿಷಯವಾಗಿ ಬರೆದದ್ದು ಲೀಲೆ."[1] ಎಂದಿಟ್ಟುಕೊಂಡರೆ ಈ ಸಂಪ್ರದಾಯದ ವೈಶಿಷ್ಟ್ಯವೇನೆಂಬುದು ತಿಳಿದುಬರುತ್ತದೆ.

ಷಟ್ಪದಿಕಾವ್ಯಪ್ರಕಾರಕ್ಕೆ ವೀರಶೈವ ಕವಿಗಳ ಕೊಡುಗೆ ಏನು ? ಎಂಬ ಪ್ರಶ್ನೆಗೆ 'ವಸ್ತು' 'ರೀತಿ'ಯ ಜೊತೆಗೆ ವಿಶಿಷ್ಟವಾದ ಈ ಪುರಾಣ ಪದ್ಧತಿಯೂ ಒಂದು ಎಂದರೆ ತಪ್ಪಾಗಲಾರದು. ಅಲ್ಲದೆ. ಶರಣರ ಜೀವನವನ್ನು ಕಥಾವಸ್ತುವನ್ನಾಗಿ ತೆಗೆದುಕೊಂಡು ಅರಿವಿನ ಬೆಳಕಿನಲ್ಲಿ ಅವರು ಕಂಡ ಜೀವನ ಮೌಲ್ಯಗಳನ್ನು ವೀರಶೈವ ಕವಿಗಳು ಎತ್ತಿಹಿಡಿದದ್ದು ನಮ್ಮ ಮೆಚ್ಚುಗೆಗೆ ಪಾತ್ರವಾಗುತ್ತದೆ. 'ಅತಿ ಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯ ಉನ್ನತ ಯತಿವರನು. 'ಹರನೆಂಬುದೇ ಸತ್ಯ. ಸತ್ಯವೆಂಬುದೇ ಹರನು. 'ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ. 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು. 'ಅನುಗೊಂಬನಿತು ಕಾಯಕ ನಡೆಯುತಿರಬೇಕು" ಎಂಬಿವೇ ಮೊದಲಾದ ತತ್ತ್ವವಿಶೇಷಗಳು ವೀರಶೈವಧರ್ಮದ ಚೌಕಟ್ಟಿನಲ್ಲಿ ಮೂಡಿ ಬಂದಿದ್ದರೂ ಜಗತ್ತಿನ ಎಲ್ಲ ಧರ್ಮಗಳ ಸಾರವೂ ಇದೇ ಆಗಿರುವುದನ್ನು ನಾವು ಮರೆಯುವಂತಿಲ್ಲ. ಲೋಕಜೀವನದಲ್ಲಿಯೇ ಸಂಪೂರ್ಣವಾಗಿ ಮೈಮರೆತು "ಕುಱಿಗಳೋಪಾದಿಯಲಿ ಕಬ್ಬಿನ ಹೊರಗಣೆಲೆಯನೆ ಮೇದಕಟ ಮೆಲುಕಿಱಿವುತಲ್ಪ ಸುಖಕ್ಕೆ ಸೋಲದೆ ಕಬ್ಬಿನೊಳಗಣ ರಸವ ನೆಱೆಸವಿವ ಗಜದಂತೆ ಭಕ್ತಿಯ ತೆರನ ತಿಳಿದಾಚರಿಸಬೇಕು" ಎಂಬ ಮಾತಿನಲ್ಲಿ ವೀರಶೈವ ಕವಿಗಳು ಮನಗಾಣಿಸಿದ ಜೀವನ ದರ್ಶನವನ್ನೂ. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನೂ ತಿಳಿಯಬಹುದಾಗಿದೆ. ಹೀಗೆ ವೀರಶೈವತತ್ತ್ವಸಿದ್ಧಾಂತಗಳು. ಶರಣರ ಕಾಯಕನಿಷ್ಠೆ. ಕಾಯಕದ ನೆಲೆಗಟ್ಟಿನಲ್ಲಿಯೇ ನಿಂತು ಅವರು ಎಸಗಿದ ಸಾಧನೆ. ಕಂಡ ದರ್ಶನ. ಬೀರಿದ ಬೆಳಕು—ಇವುಗಳನ್ನೊಳಗೊಂಡ ವೀರಶೈವ ಕವಿಗಳ ಷಟ್ಪದಿ ಕೃತಿಗಳು ಎಲ್ಲರ ಆದರಣೆಗೆ ಪಾತ್ರವಾಗುತ್ತವೆ.

---

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಅವು ಜಗಕಿಕ್ಕಿದ ವಿಧಿ,
ನಿನ್ನೊಡವೆಯೆಂಬುದು ಗುರುಲಿಂಗ ಜಂಗಮಕ್ಕೆ ದಾಸೋಹ ಮಾಡುವ ಜ್ಞಾನರತ್ನ
ಅಂತಪ್ಪ ದಿವ್ಯರತ್ನವ ಕೆಡಗೊಡದೆ ಆ ರತ್ನವ ನೀನಲಂಕರಿಸಿದೆಯಾದೊಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು
ಸಿರಿವಂತರಾರು ಇಲ್ಲ ಕಾಣಾ ಎಲೆ ಮನವೆ.

— ಅಲ್ಲಮಪ್ರಭು

* * *

ನಡೆಯೊಳಗೆ ನುಡಿ ತುಂಬಿ
ನುಡಿಯೊಳಗೆ ನಡೆ ತುಂಬಿ
ನಡೆನುಡಿ ಎರಡನು ಪರಿಪೂರ್ಣ ತುಂಬಿ
ಲಿಂಗವ ಕೂಡಬಲ್ಲಾತನೆ
ಶರಣ ನೋಡಾ ಅಖಂಡೇಶ್ವರ.

—ಷಣ್ಮುಖ ಶಿವಯೋಗಿ

---

1 ಡಾ. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ, ಪು. ೩೧೭

# ಸಾಂಗತ್ಯಕ್ಕೆ ವೀರಶೈವ ಕವಿಗಳ ಕೊಡುಗೆ

ಡಾ. ವೀರಣ್ಣ ರಾಜೂರ

೧

ಕನ್ನಡ ಸಾಹಿತ್ಯ ಹಲವು ಮತದ ಪ್ರತಿಭೆಗಳ ಸಂಗಮ. ಜೈನ, ವೀರಶೈವ, ಬ್ರಾಹ್ಮಣ—ಇವು ಈ ಸಾಹಿತ್ಯದ ಉಗಮ, ವಿಕಾಸ, ವೈವಿಧ್ಯ ಹಾಗೂ ವೈಭವಗಳಿಗೆ ಕಾರಣವಾದ ಪ್ರಮುಖ ಮತಗಳು. ಈ ಒಂದೊಂದು ಮತದ ಕವಿಗಳ ಸಾಹಿತ್ಯಸೃಷ್ಟಿಯೂ ವಿನೂತನ ಹಾಗೂ ವಿಶಿಷ್ಟ ಕೊಡುಗೆ. ಅಪೂರ್ವ ಹಾಗೂ ಅರ್ಥಪೂರ್ಣ.

ಜೈನರು ಕನ್ನಡ ಸಾಹಿತ್ಯದ ಆದಿಪುರುಷರು. ಚಂಪೂ ಅವರ ಅಚ್ಚುಮೆಚ್ಚಿನ ಸಾಹಿತ್ಯರೂಪ. ಅದರಲ್ಲಿ ಅವರು ಪಡೆದ ಪ್ರಭುತ್ವ, ಗಳಿಸಿದ ಕೀರ್ತಿ ಹಿರಿದು. 'ಚಂಪೂಸಾಹಿತ್ಯವೆಂದರೆ ಜೈನಸಾಹಿತ್ಯ' ಎನ್ನುವಷ್ಟರಮಟ್ಟಿಗೆ ಅದರಲ್ಲಿ ಅವರ ಸಮರ್ಥಸೃಷ್ಟಿ. ಅವರ ಕಾಲ ಹಳಗನ್ನಡದ ಸುವರ್ಣಯುಗ. ಪ್ರಾರಂಭದಿಂದ ಸುಮಾರು ೧೧ನೆಯ ಶತಮಾನದ ಅಂತ್ಯದವರೆಗೆ ಅವ್ಯಾಹತವಾಗಿ ಅವರ ಸಾಹಿತ್ಯರಚನೆ ನಡೆದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಜೈನಯುಗ' ಸ್ಥಾಪಿತವಾಯಿತು.

ಜೈನರ ತರುವಾಯ ಕನ್ನಡಸಾಹಿತ್ಯಕ್ಷೇತ್ರದಲ್ಲಿ ಕೃಷಿಗೆ ಕೈಹಾಕಿದವರು 'ಅಚ್ಚಗನ್ನಡ ಬೇಸಾಯಗಾರ'ರಾದ ವೀರಶೈವರು. ವೀರಶೈವಸಾಹಿತ್ಯದ ಪ್ರಾರಂಭಿಗರು ವಚನಕಾರರು. ಅವರು ಸಾಹಿತ್ಯರಂಗದಲ್ಲಿ ಗೈದ ಮಿಂಚಿನ ಕ್ರಾಂತಿ, ಮಾಡಿದ ಅದ್ಭುತ ಬದಲಾವಣೆ, ಸಾಧಿಸಿದ ಅದ್ವಿತೀಯ ಸಿದ್ಧಿ, ನೀಡಿದ ಅಮೂಲ್ಯ ಕಾಣಿಕೆಗೆ ಹೆಗಲೆಣೆ ಮತ್ತೊಂದಿಲ್ಲ. ಅವರ ಪ್ರಗತಿಶೀಲಮತಿಯ ಪ್ರಾಯೋಗಿಕ ಪ್ರಜ್ಞಾಪೂರ್ಣವಿಚಾರಧಾರೆಗನುಗುಣವಾಗಿ ಸಾಹಿತ್ಯದ ವಸ್ತು, ಭಾಷೆ ಮತ್ತು ರೂಪಗಳಲ್ಲಿ ನವ್ಯತೆ ನಲಿದಾಡಿತು. ಸರ್ವರ ಕಣ್ಣಮುಂದಿದ್ದ ಸಾಮಾನ್ಯ ವಸ್ತುಗಳು ಸಾಹಿತ್ಯಗದ್ದುಗೆ ಏರಿದವು. ಭಾಷೆ ಸಾಮಾನ್ಯ ಜನತೆಯ ಹೃದಯಕ್ಕೆ ಹತ್ತಿರವಾಯಿತು. 'ವಚನ' ಎಂಬ ಅಚ್ಚ ಹೊಸರೂಪ ಹುಟ್ಟಿಕೊಂಡಿತು. ಇದರ ಜೊತೆಗೆ ಅವರ ಪರುಷ ಹಸ್ತಸ್ಪರ್ಶದಿಂದ ಹಿಂದಿದ್ದ ಹಲವು ದೇಶೀಪ್ರಕಾರಗಳು ಪರಕಳಚಿ ಮರುಹುಟ್ಟು ಪಡೆದವು. ಇನ್ನೂ ಕೆಲವು ಹೊಸ ರೂಪಗಳು ಹೊಸದಾಗಿ ರೂಪುಗೊಂಡವು. ಇವುಗಳ ಮೂಲಕ 'ಸಕಲ ಜೀವಾತ್ಮರಿಗೆ ಲೇಸ ಬಯಸುವುದ'ನ್ನೇ ತನ್ನ ಪರಮಗುರಿಯನ್ನಾಗಿಟ್ಟುಕೊಂಡು 'ಜನ ಬದುಕಬೇಕೆಂ'ದು ಸಾಹಿತ್ಯ ಸೃಷ್ಟಿಗೊಂಡಿತು. ಅದರಿಂದ 'ಸಾಹಿತ್ಯ ಎಲ್ಲರಿಗಾಗಿ' ಎಂಬ ಸರ್ವಸಮಾನತೆಯ ಸುಗಂಧ ಸೂಸಿತು. ಇಂಥ ಮಾನವೀಯ ಮೌಲ್ಯಗಳನ್ನೊಳಗೊಂಡ ಸಾಹಿತ್ಯ ನಿರ್ಮಿಸಿದ ಅನುಭಾವಿ ವಚನಕಾರರ ನಡೆ-ನುಡಿ, ಆಚಾರ-ವಿಚಾರ, ಜೀವನ ಸಿದ್ಧಾಂತ, ಆದರ್ಶ ಬದುಕು-ಬರಹ, ಉನ್ನತ ತತ್ವಗಳನ್ನು ಕಣ್ಣುಮುಂದಿರಿಸಿಕೊಂಡು ಆಮೇಲೆ ಅನೇಕ ವೀರಶೈವ ಕವಿಗಳು ಕೃತಿರಚನೆ ಮಾಡಿ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ತಮ್ಮದೇ ಆದ ಒಂದು ವಿಶಿಷ್ಟಸ್ಥಾನವನ್ನು ಗಳಿಸಿಕೊಂಡರು.

ಸಮಗ್ರ ಕನ್ನಡಸಾಹಿತ್ಯಚರಿತ್ರೆಯಲ್ಲಿ ಮೊತ್ತ ಹಾಗೂ ಸತ್ವಗಳ ದೃಷ್ಟಿಯಿಂದ ವೀರಶೈವ ಕೃತಿಗಳದೇ ಮೇಲುಗೈ, ವೀರಶೈವ ಕವಿಗಳದೇ ಸಿಂಹಪಾಲು. ಅದಕ್ಕಾಗಿಯೇ 'ಕನ್ನಡಸಾಹಿತ್ಯವೆಂದರೆ ವೀರಶೈವಸಾಹಿತ್ಯ' ಎಂದು ವಿದ್ವಾಂಸರೊಬ್ಬರು ಸಾರ್ಥಕ ಅಭಿಪ್ರಾಯ ವ್ಯಕ್ತಪಡಿಸಿರುವುದು.

ವೀರಶೈವ ಕವಿಗಳ ಸಾಹಿತ್ಯಸೃಷ್ಟಿ ವೈವಿಧ್ಯಮಯ. ಅವರಿಂದ ಜನ್ಮತಳೆದ ಸಾಹಿತ್ಯರೂಪಗಳು ಹಲವಾರು. ವಚನ ಅವರ ಸ್ವತಂತ್ರಸೃಷ್ಟಿಯಾದರೆ, ರಗಳೆ, ಷಟ್ಪದಿ, ತ್ರಿಪದಿ ಅವರಿಂದ ಸಮರ್ಥ ಕಾವ್ಯಮಾಧ್ಯಮಗಳಾಗಿ ಮೆರೆದ ರೂಪಗಳು. ಶತಕ, ಅಷ್ಟಕ, ದಂಡಕ, ತಾರಾವಳಿ, ಹಾಡುಗಬ್ಬ ಇತ್ಯಾದಿ ಅವರಿಂದ ಹೆಚ್ಚು ಪ್ರಚಾರ ಪಡೆದ ಪ್ರಕಾರಗಳು. ಅದರಂತೆ ಅಚ್ಚದೇಶೀರೂಪದ ಸಾಂಗತ್ಯವೂ ಕನ್ನಡಕ್ಕೆ ಅವರು ಕೊಟ್ಟ ಹೊಸ ಕೊಡುಗೆ.

## ೨

ಸಾಂಗತ್ಯ ಅಂಶಗಣಘಟಿತ ಛಂದೋಬಂಧ. ಇದರಲ್ಲಿ ಮೂರು ಪ್ರಕಾರಗಳುಂಟು. ಒಂದು ಶುದ್ಧಸಾಂಗತ್ಯ, ಎರಡು ಸೋನೆಸಾಂಗತ್ಯ, ಮೂರು ಷಟ್ಪದಸಾಂಗತ್ಯ. ನಾಲ್ಕು ಪಾದ, ಒಟ್ಟು ೧೪ ಗಣಗಳು, ಒಂದು ಮೂರನೆಯ ಪಾದಗಳಲ್ಲಿ ನಾಲ್ಕು ನಾಲ್ಕು ವಿಷ್ಣುಗಣ, ಎರಡು ನಾಲ್ಕನೆಯ ಪಾದಗಳಲ್ಲಿ ಎರಡೆರಡು ವಿಷ್ಣು ಕೊನೆಗೊಂದು ಬ್ರಹ್ಮ ಗಣ. ಬ್ರಹ್ಮದ ಸ್ಥಾನದಲ್ಲಿ ವಿಷ್ಣು, ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ಬರಬಹುದು. ಇದು ಶುದ್ಧಸಾಂಗತ್ಯದ ಲಕ್ಷಣ. ಸೋನೆಸಾಂಗತ್ಯದಲ್ಲಿ ಎಲ್ಲ ಹದಿನಾಲ್ಕು ಗಣಗಳೂ ವಿಷ್ಣುವಾಗಿರುತ್ತವೆ. ಷಟ್ಪದಸಾಂಗತ್ಯದಲ್ಲಿ ಶುದ್ಧಸಾಂಗತ್ಯದಂತೇ ಗಣಯೋಜನೆ. ಆದರೆ ಇಲ್ಲಿ ಪಾದಗಳು ನಾಲ್ಕರ ಬದಲು ಆರು. ಒಂದು ಮೂರನೆಯ ಪಾದಗಳನ್ನು ಎರಡೆರಡು ಗಣಕ್ಕೆ ಒಡೆದು ಷಟ್ಪದಿಯಂತೆ ಮಾಡಲಾಗಿರುತ್ತದೆ. ಆದಿಪ್ರಾಸ ನಿತ್ಯ. ಉದಾ :

ಶುದ್ಧಸಾಂಗತ್ಯ

ಲಿಂಗಸಹಿತ ನಡೆ ಲಿಂಗಸಹಿತ ನುಡಿ ವಿ.ವಿ.ವಿ.ವಿ.
| | | |
ಲಿಂಗಸಹಿತ ಮಾಳ್ಪುದೆಲ್ಲ ವಿ.ವಿ.ಬ್ರ
| | |
ಲಿಂಗಸಹಿತ ಸಕಲೇಂದ್ರಿಯ ವರ್ತನೆ ವಿ.ವಿ.ವಿ.ವಿ.
| | | |
ಸಂಗದೊಳಿರ್ಪವಂತವಗೆ[1] ವಿ.ವಿ.ಬ್ರ.
| | |

ಸೋನೆಸಾಂಗತ್ಯ

ಪಡವರ ನುಡಿ ಹಿರಿಯರ ಮಾತು ಗುರುವಾಕ್ಯ ವಿ.ವಿ.ವಿ.ವಿ.
| | | |
ಮೃಡನ ಮಾತೊಳು ಗೆಳೆಯರ ಸೊಲ್ಲು ವಿ.ವಿ.ವಿ.
| | |
ಒಡೆಯನ ವಚನ ಗಂಡನ ಮಾತು ಜೀವನ ವಿ.ವಿ.ವಿ.ವಿ.
| | | |
ದೊಡನೊಕ್ಕಲೆಂದಜ³ ನೀನೆಂದ[2] ವಿ.ವಿ.ವಿ.
| | |

### ಷಟ್ಪದಸಾಂಗತ್ಯ

ಹರನಿಗೆ । ತುತಿಸುವೆ ವಿ : ವಿ.
ಕರಿಮುಖ । ತುತಿಸುವೆ ವಿ : ವಿ.
ಸರಸತಿಯುಳ ತುತಿಸುವೆನು । ವಿ : ವಿ : ಬ್ರ.
| |
ಗುರುವಿನ । ತುತಿಸುವೆ ವಿ : ವಿ.
ಶರಣರ । ತುತಿಸುವೆ ವಿ : ವಿ.
ಹರಕವಿಗಳ ತುತಿಸುವೆನು ।[3] ವಿ : ವಿ : ಬ್ರ.
| |

## ೩

ಸಾಂಗತ್ಯದ ಮೊದಲ ಸುಳುಹು ಸಿಕ್ಕುವುದು ಬಸವಣ್ಣನವರ ಕಾಲಜ್ಞಾನವಚನಗಳಲ್ಲಿ. ಮುಂದೆ ಅದನ್ನು ಸಮಗ್ರಕಾವ್ಯಕ್ಕೆ ವಾಹಕವನ್ನಾಗಿ ಮಾಡಿಕೊಂಡು ಸಾಂಗತ್ಯಕಾವ್ಯದ ಉದ್ಘಾಟನೆ ಮಾಡಿದವನು ೧೫ನೆಯ ಶತಮಾನದ ವೀರಶೈವಕವಿ ದೇಪರಾಜ. ಸೋನೆಸಾಂಗತ್ಯದಲ್ಲಿ ರಚನೆಗೊಂಡ ಅವನ 'ಸೊಬಗಿನಸೋನೆ' ಸಾಂಗತ್ಯದ ಮೊಟ್ಟ ಮೊದಲ ಕಾವ್ಯ. ಹೀಗೆ ವೀರಶೈವಕವಿಯಿಂದ ಪ್ರಾರಂಭವಾದ ಈ ಸಾಹಿತ್ಯರೂಪ ನಂತರ ಇತರ ಮತದ ಕವಿಗಳನ್ನೂ ಆಕರ್ಷಿಸಿತು. ಇದರ ನಯ-ನಾಜೂಕು, ಬಾಗು-ಬಳುಕು, ಸರಳತೆ-ಸ್ವಚ್ಛಂದತೆ ಸರ್ವರ ಮನಸ್ಸನ್ನೂ ಸೂರೆಗೊಂಡಿತು. ೧೫ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಎಡೆಬಿಡದೆ ಕೃತಿರಚನೆ ನಡೆಯಿತು. ಅದರ ಫಲವಾಗಿ ಸುಮಾರು ೩೧೫ ಸಾಂಗತ್ಯಕಾವ್ಯಗಳು ಹುಟ್ಟಿಕೊಂಡವು. ಅವುಗಳಲ್ಲಿ ವೀರಶೈವರ ಕೃತಿಗಳೇ ಅಧಿಕ. ಅವರು ಸು. ೧೩೭ ಕೃತಿಗಳನ್ನು ರಚಿಸಿ ಸಾಂಗತ್ಯಪ್ರಕಾರದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ್ದಾರೆ.

---

1 ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ : ಸಂ. ಡಾ. ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠ, ಸಂಧಿ ೪, ಪದ್ಯ ೨೫

2 ಸೊಬಗಿನಸೋನೆ : ಸಂ. ಬಿ. ಎಸ್. ಸಣ್ಣಯ್ಯ. ಸಂಧಿ ೧೦, ಪದ್ಯ ೫೪

3 ಶಂಕರಲಿಂಗಯ್ಯನ ಚಾರಿತ್ರ : ಸಂಧಿ ೧, ಪದ್ಯ ೧೦. (ಕನ್ನಡ ಅಧ್ಯಯನಪೀಠದ ತಾ.ಪ್ರ. ೩೫೪೩)

ವೀರಶೈವಸಾಂಗತ್ಯಕೃತಿಗಳು ವಸ್ತುವೈವಿಧ್ಯದಿಂದ ಕಂಗೊಳಿಸುತ್ತವೆ. ಹರಿಹರನ ಉದಿತಮಾರ್ಗದಲ್ಲಿ ನಡೆದ ಸಾಂಗತ್ಯಕವಿಗಳೂ ಹರನನ್ನು, ಹರಶರಣರನ್ನು ಕೀರ್ತಿಸಲು, ಅವರ ದಿವ್ಯಚರಿತ್ರೆಯನ್ನು ಬಣ್ಣಿಸಲು ತಮ್ಮ ನಾಲಗೆಯನ್ನು ಮೀಸಲಾಗಿರಿಸಿದ್ದಾರೆ: ಉಜ್ವಲ ಪ್ರತಿಭಾಶಕ್ತಿಯನ್ನು ವ್ಯಯಿಸಿದ್ದಾರೆ. ಈಗ ಉಪಲಬ್ಧವಾದ ಕೃತಿಗಳ ವಸ್ತುವನ್ನು ಗಮನಿಸಿ ಒಟ್ಟು ವೀರಶೈವಸಾಂಗತ್ಯಕೃತಿಗಳನ್ನು ಎಂಟು ವಿಧವಾಗಿ ವಿಂಗಡಿಸಿ ವಿವೇಚಿಸಬಹುದು :

೧. ಶಿವಲೀಲೆಗಳು
೨. ಪಂಚಾಚಾರ್ಯರ ಚರಿತ್ರೆಗಳು
೩. ಅರವತ್ಮೂರು ಪುರಾತನರ ಚರಿತ್ರೆಗಳು
೪. ಬಸವಾದಿ ಶರಣರ ಚರಿತ್ರೆಗಳು
೫. ಶಿವಭಕ್ತರ ಚರಿತ್ರೆಗಳು
೬. ವಿರಕ್ತರ ಚರಿತ್ರೆಗಳು
೭. ತತ್ವಪ್ರಧಾನ ಕಾವ್ಯಗಳು
೮. ಇತಿಹಾಸರೂಪದ ಕಾವ್ಯಗಳು

## ೧. ಶಿವಲೀಲೆಗಳು

ಪುರಾಣಪ್ರಸಿದ್ಧವಾದ ಶಿವನ ಪಂಚವಿಂಶತಿಲೀಲೆಗಳಿಗೆ ವೀರಶೈವಕಾವ್ಯಗಳಲ್ಲಿ ಅಗ್ರಸ್ಥಾನ. ಕೆಲವು ಕವಿಗಳು ಎಲ್ಲ ಲೀಲೆಗಳನ್ನೂ ಒಂದೇ ಕೃತಿಯಲ್ಲಿ ವರ್ಣಿಸಿದ್ದರೆ, ಇನ್ನೂ ಕೆಲವರು ಒಂದೊಂದು ಲೀಲೆಗಾಗಿಯೇ ಒಂದೊಂದು ಕೃತಿಯನ್ನು ಮೀಸಲಾಗಿರಿಸಿದ್ದಾರೆ. ಮತ್ತೆ ಕೆಲವರು ಶರಣರ ಚರಿತ್ರೆಗಳಲ್ಲಿ. ತತ್ವಪ್ರಧಾನಕಾವ್ಯಗಳಲ್ಲಿ ಇವುಗಳನ್ನು ಅಳವಡಿಸಿಕೊಂಡಿದ್ದಾರೆ.

ಕನ್ನಡದಲ್ಲಿ ಮೊಟ್ಟಮೊದಲು ಶಿವಲೀಲೆಗಳನ್ನು ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸಿದ ಕವಿಯೆಂದರೆ ಹರಿಹರ. ಅವನು ತನ್ನ ಗಿರಿಜಾಕಲ್ಯಾಣ ಮತ್ತು ವೀರಭದ್ರರಗಳೆಗಳಲ್ಲಿ ಒಂದೊಂದು ಲೀಲೆಗಳನ್ನು ಬಣ್ಣಿಸಿದ್ದಾನೆ. ಒಂದನ್ನು ಚಂಪೂರೂಪದಲ್ಲಿ. ಮತ್ತೊಂದನ್ನು ರಗಳೆರೂಪದಲ್ಲಿ ರಚಿಸಿ ಶಿವಲೀಲಾಪರಕಾವ್ಯಗಳಿಗೆ ನಾಂದಿಯನ್ನು ಹಾಡಿದ. ಮುಂದೆ ಅವನ ಮಾರ್ಗವಿಡಿದು ಅನೇಕ ಕವಿಗಳು ಷಟ್ಪದಿ, ಸಾಂಗತ್ಯ ಮೊದಲಾದ ಪ್ರಕಾರಗಳಲ್ಲಿ ಕೃತಿ ರಚಿಸಿದರು.

ಸಾಂಗತ್ಯರೂಪದಲ್ಲಿ ಸು. ೧೦ ಕೃತಿಗಳು ಶಿವಲೀಲೆಗಳನ್ನು ಹೇಳುತ್ತವೆ. ಹೆಚ್ಚಾಗಿ ಒಂದೊಂದು ಲೀಲೆಯೇ ಒಂದೊಂದು ಕೃತಿಗೆ ವಸ್ತುವಾಗಿದೆ. ಅವುಗಳಲ್ಲಿ ಲಿಂಗಕವಿಯ ತ್ರಿಪುರದಹನ ಸಾಂಗತ್ಯ (೧೬ ಶ.), ಶಾಂತವೀರನ ವೀರಭದ್ರಲೀಲಾರತ್ನ (೧೬೦೦), ಸಾಸಲಯ್ಯನ (೧೬೫೪) ಇಂದುಶೇಖರಲೀಲೆ. ಚೆನ್ನಣ್ಣನ (೧೬೫೦) ವೀರೇಶಚರಿತೆ, ಸೋಮನ (೧೭೦೦) ವೀರಭದ್ರಸಾಂಗತ್ಯ. ಶಾಂತಾಚಾರ್ಯನ (೧೭೦೦) ನಂಜುಂಡೇಶಚರಿತೆ, ರಾಚಯ್ಯನ (೧೭ ಶ.) ಗಿರಿಜಾಕಲ್ಯಾಣ. ಅಜ್ಞಾತಕವಿಯ ಪಾರ್ವತೀಕಲ್ಯಾಣ (೧೮ ಶ.). ಅಳಿಯ ಲಿಂಗರಾಜನ (೧೯ ಶ.) ಗಿರಿಜಾಕಲ್ಯಾಣ, ಅಜ್ಞಾತಕವಿಯ (೧೭ ಶ.) ಶಿವಕುಮಾರಸಾಂಗತ್ಯ ಮುಖ್ಯವಾದುವು.

'ತ್ರಿಪುರದಹನಸಾಂಗತ್ಯ'[1] ಒಂದು ಮಧ್ಯಮಗಾತ್ರದ ಉತ್ತಮ ಕಾವ್ಯ. ಸಾಳ್ವ ಅರಸರ ಮಂತ್ರಿ ತಿಮ್ಮಣ್ಣನ ಮಗ 'ಲಿಂಗ' ಇದರ ಕರ್ತೃ. ಅವನು ತನ್ನನ್ನು ಕನ್ನಡದೇಶದೊಳೊಪ್ಪುವ ಕವಿಗಳಿಗುನ್ನತ ಗುಣಮಣಿ. ಹರಕವಿಗಳ ಪದಕಮಲಭ್ರಮರ, ಕವಿಮನ ಕಮಲಾದಿತ್ಯ. ಸವಿನುಡಿಸಂಪನ್ನ, ಕನ್ನಡಜಾಣ ಎಂದು ಕರೆದುಕೊಂಡಿದ್ದಾನೆ. ಇವನ ಇನ್ನೊಂದು ಕೃತಿ, ಚೋಳರಾಜಸಾಂಗತ್ಯ.

ತ್ರಿಪುರದಹನಸಾಂಗತ್ಯದಲ್ಲಿ ೫ ಸಂಧಿ ೧೦೦೬ ಸಾಂಗತ್ಯಗಳಿವೆ. ಪ್ರಥಮ ಸಂಧಿಯ ಪ್ರಾರಂಭದಲ್ಲಿ ೨ ಕಂದ, ಪ್ರತಿ ಸಂಧಿಯ ಪ್ರಾರಂಭದಲ್ಲಿ ಒಂದೊಂದು. ಎರಡನೆಯ ಸಂಧಿಯ ಪ್ರಾರಂಭದಲ್ಲಿ ಎರಡು, ಒಟ್ಟು ಆರು ವೃತ್ತಗಳಿವೆ. ಅವುಗಳಲ್ಲಿ ಆಯಾಸಂಧಿಯ ಸಾರಸಂಗ್ರಹವಿದೆ. ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ತ್ರಿಪುರದಹನ ಲೀಲೆಯ ಕಥೆ ಇದರ ವಸ್ತು. ಅದನ್ನು 'ದೇವರದೇವ ಗಜಾಸುರಮರ್ದನ ಭಾವಜ ನಿರ್ಧೂಮಧಾಮ ಪಾವಕಾಕ್ಷದಿ ತ್ರಿಪುರವ ಸುಟ್ಟ ಕಥೆ' 'ಕಪ್ಪುಗೊರಳ ಸರ್ಪಧರನೊಂದು ಬಾಣದಿ ಮುಪ್ಪುರಗಳ ಸುಟ್ಟ ಕಥೆ' ಎಂಬ ಮಾತುಗಳಲ್ಲಿ ಕವಿ ವ್ಯಕ್ತಪಡಿಸಿದ್ದಾನೆ. ಈ ಕಥೆಯ ಮಹತಿಯನ್ನು 'ಸರಡ ಗಂಟಿಕ್ಕಿ ನಾನಾ ಕಥೆಗಳ ತಂದು ವಿರಚಿಪ ಭಕ್ತಿಯಂತಲ್ಲ ಪರೀಕ್ಷಿಸೆ ವೇದಸಿದ್ಧಾಂತದ ಕಥೆಯಿದು' 'ಅಂತಿಂತು ಪೇಳುವ ಸಂದೇಹ ಕವಿಗಳ ತೊಂತಬೊಂತೆಯ ಕಥೆಯಲ್ಲ' ಎಂದು ಹೇಳುತ್ತಾನೆ. ಕೃತಿಯ ಕಮನೀಯತೆಯನ್ನು ಕುರಿತು 'ಎಳೆಯಳ ಪೊಸಜವ್ವನದೊಡ್ಡಣೆಯಂತೆ. ಶಿಶಿಜೊನ್ನದ ಕಳೆಯಂತೆ, ಚಿಲಿಪಾಲು ಸಕ್ಕರೆಯಂತೆ, ಶಿಶುಗಳ ಮೃದುನುಡಿಯಂತೆ. ಕುಸುಮಾಸ್ತ್ರನ ಬಿಲ್ಲುಲಿಯಂ

[1] ಕವಿಚರಿತೆಯಲ್ಲಿ ಅನುಕ್ತ. ಅಪ್ರಕಟಿತ. ಕನ್ನಡ ಅಧ್ಯಯನ ಪೀಠದ ತಾ.ಪ್ರ. ೧೪೦೨

ಎಂಬಂತೆ' ಎಂದು ಮುಂತಾಗಿ ಹೇಳಿಕೊಂಡಿದ್ದಾನೆ. ಕಾವ್ಯ ಸಾಂಪ್ರದಾಯಿಕವಾಗಿ ಮೇರುಪರ್ವತ. ಸಮುದ್ರವರ್ಣನೆಗಳೊಂದಿಗೆ ಪ್ರಾರಂಭವಾಗುತ್ತದೆ. ಮುಂದೆ ತಾರಕಾಸುರನ ಪುರದ ವರ್ಣನೆ. ಅವನ ಮಕ್ಕಳ ಮುಪ್ಪುರಗಳ ವರ್ಣನೆ. ಅವರಿಂದ ದೇವತೆಗಳಿಗೆ ಆಗುವ ತೊಂದರೆ. ದೇವತೆಗಳೆಲ್ಲ ಸೇರಿ ದೇವೇಂದ್ರನಲ್ಲಿ ಮೊರೆಯಿಡುವುದು. ದೇವೇಂದ್ರ ಅವರನ್ನು ಕೂಡಿಕೊಂಡು ಶಿವನಲ್ಲಿ ಹೋಗಿ ತಮ್ಮ ದುಃಖವನ್ನು ಹೇಳಿಕೊಳ್ಳುವುದು. ಶಿವ ತನ್ನ ಉರಿಗಣ್ಣಿನಿಂದ ತ್ರಿಪುರಗಳನುರುಹಿ ದೇವತೆಗಳ ಕಷ್ಟ ಪರಿಹರಿಸುವುದು ಇವೇ ಮೊದಲಾದ ಘಟನೆಗಳು ಸ್ವೈಜವಾಗಿ ನಿರೂಪಿತವಾಗಿವೆ. ಕಥೆ ಹಳೆಯದಾದರೂ ಹೇಳುವ ರೀತಿ ಹೊಸತಾಗಿದೆ. ತ್ರಿಪುರ ವರ್ಣನೆ. ಬೇಟೆಯ ವರ್ಣನೆ. ಶಿವನು ಮುಪ್ಪುರಗಳನ್ನು ಸುಟ್ಟ ವರ್ಣನೆಗಳಲ್ಲಿ ಕವಿಯ ಸ್ವಂತಿಕೆ ಎದ್ದು ಕಾಣುತ್ತದೆ. ಶೈಲಿ ಸರಳ. ವೀರಭಾವಗಳನ್ನು ಪ್ರಕಟಿಸುವಲ್ಲಿ ಅದು ಭಾವಕ್ಕೆ ತಕ್ಕಂತೆ ಬಿರುಸಾಗುತ್ತದೆ. ಆದರೆ ಸುಕುಮಾರತೆಗೇ ಹೆಚ್ಚಿನ ಗೆಲುವು. ಒಟ್ಟಿನಲ್ಲಿ ನೇರ ನಿರೂಪಣೆ. ಹಿತಮಿತ ವರ್ಣನೆ. ಸರಳಶೈಲಿಗಳಿಂದ ಇದೊಂದು ಉತ್ತಮ ಕಾವ್ಯವಾಗಿದೆ.

'ವೀರಭದ್ರಲೀಲಾರತ್ನ'[1] ಮತ್ತೊಂದು ಉತ್ತಮ ಕಾವ್ಯ. ತ್ರಿಪುರದಹನಸಾಂಗತ್ಯಕ್ಕಿಂತಲೂ ಗಾತ್ರ ಪಾತ್ರಗಳಲ್ಲಿ ಸ್ವಲ್ಪ ಹಿರಿದಾದ ಕೃತಿ. ಇದರ ಕರ್ತೃ ಶಾಂತವೀರ. ಈತ ಕುಣಿಗಲ ಮಠಾಧೀಶ ಬಸವಲಿಂಗಸ್ವಾಮಿಯ ಕರಜಾತನಾದ ಪುರಾಣದ ಚೆನ್ನಬಸವೇಶನ ಕರಸಂಜಾತನಾಗಿ ಸೂಜಿಯ ಸಿದ್ಧಲಿಂಗನ ಕೃಪೆಯಿಂದ ಜನಿಸಿದಾತ. ತನ್ನನ್ನು 'ಶಿವಪುರಾಣದ ಶಾಂತವೀರ', 'ಪರಕವಿಕುಲಕೆ ಪರಭೃತ್ಯ', 'ಶಿವಶರಣರ ಸುತ' ಎಂದು ಕರೆದುಕೊಂಡಿದ್ದಾನೆ. ಕಾವ್ಯ ೯ ಸಂಧಿ ೧೬೭೦ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ಸಾಂಗತ್ಯದ ಜೊತೆಗೆ ಪ್ರತಿ ಸಂಧಿಯ ಆದಿಯಲ್ಲಿ ಎರಡೆರಡು ಕಂದ. ಮೂರುಮೂರು ಉದ್ದಂಡಷಟ್ಪದಿಯಂತೆ ಒಟ್ಟು ೧೮ ಕಂದ ೨೭ ಷಟ್ಪದಿಗಳು ಸಮಾವೇಶಗೊಂಡಿವೆ. ಕಂದಗಳಲ್ಲಿ ಆಯಾ ಸಂಧಿಯ ಸಾರಸಂಗ್ರಹವಿದ್ದರೆ ಷಟ್ಪದಿಗಳಲ್ಲಿ ಇಷ್ಟದೈವ ಚೆನ್ನಮಲ್ಲೇಶನ ಸ್ತುತಿಯಿದೆ.

ಮಿಟ್ಟನೊಂದು ಮಾತಿಗೆ ಸಟೆಯೊಂದು ಕೋಟಿಯ । ನಟಿಸಿದ ಕವಿಜಾಣ್ಮೆಯಲ್ಲ
ಪಟುತರ ವೀರಭದ್ರೇಶನ ಕೃತಿಯ ಸಂ । ಘಟಿಸಿ ಕೇಳ್ವರಿಗೆ ಸಿದ್ಧಘುಟಿಕೆ ॥ ೧-೨೦ ॥

ಎಂದು ತನ್ನ ಕವಿತ್ವದ ರೀತಿಯನ್ನು ಹೇಳಿ, ಕಾವ್ಯದ ಸೊಗಸನ್ನು 'ಸಸುಬಿರಿವಂಬುಜ ಮಲ್ಲಿಗೆ ಜಾಜಿಯೊಳೊಸರುವ ಹೊಸ ಪರಿಮಳದಂತೆ. ಕೊಬ್ಬಿದ ಮಧುರಸಗೋಲಂತೆ. ಸುರಧೇನು ಉಬ್ಬಿ ಕರೆವ ಸುಧೆಯಂತೆ' ಎಂದು ಬಣ್ಣಿಸಿ. ಕೃತಿಯನ್ನು ಕುರಿತು 'ಸತ್ಯದ ಸದನ. ಸದಾಚಾರದ ಬೋಧೆ. ನಿತ್ಯ ಪುಣ್ಯದ ಪುಂಜ. ಅತ್ಯಂತ ವೀರಶೈವರ ಬೆಳಸು. ಇದು ವೀರಶೈವದರಸುತನದುನ್ನತಿ. ಇದು ಶಿವಾಚಾರದ ನೀತಿ. ಪರಮಹಿಮೆಯ ಕಲೆ. ಪರವಾದಿಗಳ ಬಲೆ. ನಿರುತ ಮುಕ್ತಿಯ ಕಂಠಮಾಲೆ' ಎಂದು ಮುಂತಾಗಿ ವಿಶೇಷಿಸಿದ್ದಾನೆ.

ದಕ್ಷಾಧ್ವರಲೀಲೆಯಲ್ಲಿ ಬರುವ ವೀರೇಶನ ಕಥೆ ಈ ಕೃತಿಯ ವಸ್ತು. 'ಭೂತೇಶನಣುಗ ಶ್ರೀ ವೀರಭದ್ರೇಶ್ವರನ ದೇತಕೆ ಕುರಿದಲೆಯ ದಕ್ಷಗಿತ್ತ' ಎಂದು ಸೂತ ಕೇಳಲು ದಧೀಚಿ ಕಥೆಯನ್ನು ವಿಸ್ತರಿಸಿ ಅವನಿಗೆ ಹೇಳಿದನಂತೆ. ಅವನ ಕಥಾರೀತಿಯನ್ನು ಅರಿತು ಕವಿ ತಾನು ಕಾವ್ಯ ವಿರಚಿಸಿದನಂತೆ. ಕಥೆ ಶಿವನ ಒಡ್ಡೋಲಗದ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಮುಂದೆ ಶಿವದಾಕ್ಷಾಯಿಣಿಯರ ಮದುವೆ. ದಕ್ಷನ ಯಜ್ಞಸಮಾರಂಭ. ದಾಕ್ಷಾಯಿಣಿ ಆ ಯಜ್ಞಕುಂಡದಲ್ಲಿ ಹಾರಿ ಪ್ರಾಣಬಿಡುವುದು. ಶಿವನ ಹಣೆಗಣ್ಣಿನಿಂದ ವೀರಭದ್ರೋತ್ಪತ್ತಿಯಾಗಿ ದಕ್ಷನ ಸೈನ್ಯವನ್ನೆಲ್ಲ ನಾಶಮಾಡಿ. ಅವನ ಯಜ್ಞವನ್ನು ಕೆಡಿಸಿ ದಕ್ಷನ ಸಿರಹರಿದು ಕುರಿದಲೆ ಇಟ್ಟು ಶಿವನಲ್ಲಿಗೆ ತಂದು ಒಪ್ಪಿಸುವುದು. ಶಿವ ದಕ್ಷನಿಗೆ ಕ್ಷಮೆ ತೋರಿ ಮುನ್ನಿನಂತೆ ಮಾಡುವುದು. ದಾಕ್ಷಾಯಿಣಿ ಗಿರಿರಾಜನಿಗೆ ಮಗಳಾಗಿ ಹುಟ್ಟುವುದು. ಕೊನೆಗೆ ಮತ್ತೆ ಶಿವಗಿರಿಜೆಯರ ವಿವಾಹವಾಗುವುದು—ಹೀಗೆ ಕಥೆ ಹರಿದುಬಂದಿದೆ. ಇದನ್ನು ಕವಿ ವರ್ಣನಾಮಯವಾಗಿ ಹೇಳಿಕೊಂಡು ಹೋಗಿದ್ದಾನೆ. ಹೇಳುವ ರೀತಿ ಪ್ರೌಢವಾಗಿದೆ. ಶೈಲಿ ಗಡುಚಾಗಿದೆ. ವೀರರೌದ್ರರಸಗಳಿಗೆ ಇಲ್ಲಿ ಅಧಿಕ ಸ್ಥಾನ ಸಂದಿದೆ. ಕವಿಯ ಉಭಯಭಾಷಾಪಾಂಡಿತ್ಯ, ಪೂರ್ವಪ್ರೌಢಪರಂಪರೆಯತ್ತ ಇರುವ ಒಲವು ಅವನ ಕಾವ್ಯಶೈಲಿಯಲ್ಲಿ ವ್ಯಕ್ತವಾಗಿದೆ. ವೀರಭದ್ರನ ಶೌರ್ಯಾತಿಶಯಗಳ ವರ್ಣನೆ. ಶಿವನ ಹಣೆಗಣ್ಣಿನಿಂದ ಹೊರಟ ಅಗ್ನಿಯ ವರ್ಣನೆ ರುದ್ರಭಯಂಕರವಾಗಿದೆ. ಇಲ್ಲೆಲ್ಲ ಹರಿಹರನ ಕಾಮದಹನ ವರ್ಣನೆಯ ಪ್ರಭಾವ ಎದ್ದು ಕಾಣುತ್ತದೆ. ಆದರೂ ಕವಿಯ ಸ್ವಪ್ರತಿಭೆ ಬಹಳಷ್ಟು ಸಂದರ್ಭದಲ್ಲಿ ತನ್ನತನದಿಂದ ಮೆರೆದಿದೆ.

---

1 ಕವಿಚರಿತೆಯಲ್ಲಿ ಅನುಕ್ತ, ಅಪ್ರಕಟಿತ. ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೪೫/೧.

ಸೋಮನ ವೀರಭದ್ರಸಾಂಗತ್ಯ ಮತ್ತು ಚೆನ್ನಣ್ಣನ ವೀರೇಶಚರಿತೆಗಳು ಇದೇ ಕಥೆಯನ್ನು ಒಳಗೊಂಡಿದ್ದರೂ ವೀರಭದ್ರಲೀಲಾರತ್ನದಷ್ಟು ಸತ್ವಪೂರ್ಣವಾಗಿಲ್ಲ. ರಾಚಯ್ಯ. ಅಳಿಯಲಿಂಗರಾಜರ ಗಿರಿಜಾಕಲ್ಯಾಣ, ಅಜ್ಞಾತ ಕವಿಯ ಪಾರ್ವತೀಕಲ್ಯಾಣ—ಹರಿಹರನ ಗಿರಿಜಾಕಲ್ಯಾಣದ ಕಥೆಯನ್ನು ಆಧರಿಸಿ ಬರೆದ ಸಾಮಾನ್ಯ ಕೃತಿಗಳು.

ಶಿವಕುಮಾರ ಸಾಂಗತ್ಯ[1] ೫ ಸಂಧಿ ೫೨೦ ಪದ್ಯಗಳಲ್ಲಿ ರಚನೆಗೊಂಡ ಚಿಕ್ಕ ಕಾವ್ಯ. ಶಿವನ ಕುಮಾರ ಷಣ್ಮುಖನ ಕಥೆ ಇವರ ವಸ್ತು. ಕವಿಯ ನಿರೂಪಣೆ ನೇರ ಹಾಗೂ ಸರಳವಾಗಿದೆ. ಚಿಕ್ಕದಾದರೂ ಇದೊಂದು ಚೊಕ್ಕ ಕೃತಿ.

## ೨. ಪಂಚಾಚಾರ್ಯರ ಚರಿತ್ರೆಗಳು

ವೀರಶೈವರಿಗೆ ಪೂಜ್ಯರೆನಿಸಿದ ರೇಣುಕಾಚಾರ್ಯ. ಏಕೋರಾಮಾರಾಧ್ಯ, ಪಂಡಿತಾರಾಧ್ಯ. ಮರುಳಾರಾಧ್ಯ ಮತ್ತು ವಿಶ್ವಾರಾಧ್ಯರೆಂಬ ಪಂಚಾಚಾರ್ಯರನ್ನು ಕುರಿತು ಕನ್ನಡದಲ್ಲಿ ಅನೇಕ ಕೃತಿಗಳು ರಚನೆಗೊಂಡಿವೆ—ಅವುಗಳು ಉಳಿದ ಪ್ರಕಾರಗಳಿಗಿಂತ ಸಾಂಗತ್ಯದಲ್ಲಿಯೇ ಹೆಚ್ಚು. ಸದ್ಯ ಈ ಪ್ರಕಾರದಲ್ಲಿ ಆರು ಕೃತಿಗಳು ಉಪಲಬ್ಧವಾಗಿವೆ. ಆರರಲ್ಲಿ ಐದು ಮರುಳಸಿದ್ಧರಿಗೆ ಸಂಬಂಧಿಸಿದರೆ, ಒಂದು ಮಾತ್ರ ರೇಣುಕರನ್ನು ಕುರಿತುದು. ಆಚಾರ್ಯರ ಜೀವನ ಚರಿತೆ. ಗೈದ ಕಾರ್ಯ. ಎಸಗಿದ ಪವಾಡ. ತೋರಿದ ಮಹಾತ್ಮ್ಯಗಳೇ ಈ ಕಾವ್ಯಗಳ ವಸ್ತು.

ನಾಗಭೂಷಣನ (೧೬೫೦) ಮರುಳಸಿದ್ಧೇಶ್ವರ ಸಾಂಗತ್ಯ ಕನ್ನಡದಲ್ಲಿ ಮರುಳಸಿದ್ಧರ ಚರಿತ್ರೆಯನ್ನು ಅಳವಡಿಸಿ ಕೊಂಡು ರಚಿತವಾದ ದ್ವಿತೀಯ ಕೃತಿ. ಮೊದಲನೆಯದು ದೇವಕವಿ (೧೫೮೨) ವಾರ್ಧಕಷಟ್ಪದಿಯಲ್ಲಿ ರಚಿಸಿದ ಮರುಳಸಿದ್ಧಕಾವ್ಯ. ಸ್ವಲ್ಪ ಹೆಚ್ಚುಕಡಿಮೆ ಎರಡರ ವಸ್ತುವೂ ಒಂದೇ. ಮರುಳಸಿದ್ಧ ಕೈಲಾಸದಿಂದ ಭೂಮಿಗಿಳಿದು ವೀರಶೈವಧರ್ಮದ ಉದ್ಧಾರಗೈದು ಹೋದ ವಿಷಯವನ್ನು ನೇರವಾಗಿ ಸರಳ ಶೈಲಿಯಲ್ಲಿ ಹೇಳಿ ಮುಗಿಸಲಾಗಿದೆ. ಕಾವ್ಯ ೫ ಸಂಧಿ ೭೫೮ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ಇವರ ತರುವಾಯ ಈಚೆಗೆ ೧೯ನೆಯ ಶತಮಾನದಲ್ಲಿ ಆನೆ ಗೊಂಡಿನ ರೇವಣಸಿದ್ಧನಿಂದ (೧೮೪೧) ಮರುಳಸಿದ್ಧದೇವರ ಚರಿತೆ. ವೀರಭದ್ರಯ್ಯ ಮತ್ತು ಗುರುಸಿದ್ಧಸ್ವಾಮಿ ಅವರಿಂದ ಮರುಳಸಿದ್ಧಸಾಂಗತ್ಯ, ಶ್ರೀಶೈಲನಿಂದ ಮರುಳಸಿದ್ಧೇಶನ ಪವಾಡ ಎಂಬ ನಾಲ್ಕು ಕೃತಿಗಳು ಹೊರಬಂದಿವೆ. ಎಲ್ಲವೂ ಮರುಳಸಿದ್ಧರ ಮಹಿಮಾತಿಶಯಗಳನ್ನು. ಪವಾಡಗಳನ್ನು ಬಣ್ಣಿಸುತ್ತವೆ. ಆದರೆ ಇವುಗಳಲ್ಲಿ ಕಾವ್ಯದ ದೃಷ್ಟಿಯಿಂದ ಹೇಳಬೇಕಾದ ವಿಶೇಷವೇನೂ ಇಲ್ಲ.

ರೇವಣಸಾಂಗತ್ಯ ರೇವಣಸಿದ್ಧೇಶ್ವರರ ಚರಿತ್ರೆಯನ್ನು ಹೇಳುವ ಪವಾಡಾತ್ಮಕ ಕೃತಿ. ಇದರ ಕರ್ತೃ ಚೆನ್ನಬಸವ (ಸು. ೧೭೦೦). ಶಿವನ ಸನ್ನಿಧಿಯಲ್ಲಿದ್ದ ರೇಣುಕ ದಾರುಕನನ್ನು ದಾಟಿದ ಕಾರಣದಿಂದ ಶಾಪಕ್ಕೊಳಗಾಗಿ ಕೊಲ್ಲಿ ಪಾಕದ ಸೋಮೇಶ್ವರಲಿಂಗದಲ್ಲಿ ಉದ್ಭವಿಸುತ್ತಾನೆ. ಅಗಸ್ತ್ಯ ಮೊದಲಾದ ಮುನಿಗಳಿಗೆ ಶಿವಯೋಗನಿತ್ಯತ್ವವನ್ನು ಕರುಣಿಸಿ. ರಾಮೇಶ್ವರ. ಕಂಚಿ. ಕಲ್ಯಾಣ. ಮಂಗಳವಾಡ, ಲಂಕೆ. ಸೊನ್ನಲಾಪುರ. ಶ್ರೀಶೈಲ ಮುಂತಾದ ಕಡೆ ಸಂಚರಿಸಿ ವೀರಶೈವಧರ್ಮವನ್ನು ಉದ್ಧರಿಸಿ ಮತ್ತೆ ಕೈಲಾಸಕ್ಕೆ ತೆರಳುತ್ತಾನೆ. ಇದು ಸ್ಥೂಲಕಥೆ. ಇದನ್ನು ೧೫ ಸಂಧಿ. ೧೬೭೬ ಪದ್ಯಗಳಲ್ಲಿ ದೀರ್ಘವಾಗಿ ವರ್ಣಿಸಲಾಗಿದೆ. ಇವನಿಗಿಂತ ಪೂರ್ವದಲ್ಲಿ ಹರಿಹರ. ಚತುರ್ಮುಖ ಬೊಮ್ಮರಸ. ಮಲ್ಲಣ್ಣ ಕವಿಗಳು ರಗಳೆ ಷಟ್ಪದಿರೂಪದಲ್ಲಿ ಇದೇ ವಸ್ತುವನ್ನು ಆಯ್ದುಕೊಂಡು ಕಾವ್ಯ ರಚಿಸಿದ್ದಾರೆ. ಅವರ ಮಾರ್ಗದಲ್ಲಿಯೇ ಈ ಕವಿಯೂ ನಡೆದು ತನ್ನ ಕಾವ್ಯ ಸರ್ವವೇದ್ಯವಾಗುವಂತೆ ಸರಳಶೈಲಿಯಲ್ಲಿ ಬರೆದಿದ್ದಾನೆ.

## ೩. ಅರವತ್ಮೂರು ಪುರಾತನರ ಚರಿತ್ರೆಗಳು

ತಮಿಳುನಾಡಿನಲ್ಲಿ 'ನಾಯನಾರ್' ಎಂದು ಹೆಸರಾದ ಅರವತ್ಮೂರು ಪುರಾತನ ಶಿವಭಕ್ತಶ್ರೇಷ್ಠರ ಸತ್ವಪೂರ್ಣ ಚರಿತ್ರೆಗಳು ಹರಿಹರನ ರಗಳೆಗಳ ಮುಖಾಂತರ ಕನ್ನಡಸಾಹಿತ್ಯಪ್ರಪಂಚವನ್ನು ಪ್ರವೇಶಿಸಿದವು. ಆಮೇಲೆ ಅನೇಕ ವೀರಶೈವಕವಿಗಳಿಂದ ಚಂಪೂ. ಷಟ್ಪದಿ. ತ್ರಿಪದಿ ಮುಂತಾದ ಪ್ರಕಾರಗಳಲ್ಲಿ ಪ್ರಸಿದ್ಧಿಯನ್ನು ಪಡೆದವು. ಸಾಂಗತ್ಯ ರೂಪ ಇದಕ್ಕೆ ಹೊರತಾಗಿಲ್ಲ. ಸು. ೧೧ ಕೃತಿಗಳು ಇದರಲ್ಲಿ ಹುಟ್ಟಿಕೊಂಡಿವೆ. ಇವುಗಳಲ್ಲಿ ಕೆಲವು ಎಲ್ಲ ಪುರಾತನರ ಚರಿತ್ರೆಗಳನ್ನು ಒಟ್ಟಿಗೇ ಹೇಳಿದರೆ. ಇನ್ನೂ ಕೆಲವು ಬಿಡಿಬಿಡಿ ಭಕ್ತರ ಕಥೆಗಳನ್ನು ಬೇರೆಯಾಗಿ ಚಿತ್ರಿಸುತ್ತವೆ.

ಶಿವಯೋಗಿ ಸೋಮೇಶನ (೧೭೫೦) ಅರವತ್ಮೂರು ಪುರಾತನರ ಚರಿತ್ರೆ. ಕಿತ್ತನಕೆರೆ ವೀರನ ಎಲ್ಲ ಪುರಾತನರ ಪುರಾಣ, ಭದ್ರಸುತವೀರನ (೧೮ ಶ.) ಪುರಾತನರ ಪುರಾಣ. ಅಜ್ಞಾತಕವಿಯ ಪುರಾತನರ ಸಾಂಗತ್ಯ (೧೭೫೮) ಇವು

[1] ಕವಿಚರಿತೆಯಲ್ಲಿ ಅನುಕ್ತ, ಅಪ್ರಕಟಿತ. ಕನ್ನಡ ಅಧ್ಯಯನಪೀಠದ ತಾ.ಪ್ರ. ೩೫೩೦.

ಎಲ್ಲ ೬೩ ಪುರಾತನರ ಕಥೆಗಳನ್ನು ಸಂಕ್ಷಿಪ್ತವಾಗಿ ಒಟ್ಟಿಗೇ ವರ್ಣಿಸುವ ಕೃತಿಗಳು. ಮಲ್ಲಯ್ಯನ (೧೬ ಶ.) ಕಲಿಗಣನಾಥ ಸಾಂಗತ್ಯ. ಲಿಂಗನ (೧೫೫೦) ಚೋಳರಾಜ ಸಾಂಗತ್ಯ. ವಿರುಪೇಂದ್ರನ (೧೫೯೯) ತ್ರಿಭುವನತಿಲಕ. ಅಂಬುಲಿಗೆ ಚೆನ್ನಮಲ್ಲೇಶನ (೧೬೭೦) ದೀಪದ ಕಲಿಯರಕಾವ್ಯ. ಮಹಾದೇವನ (೧೫೫೦) ಸಿರಿಯಾಳಸೆಟ್ಟಿಯ ಸಾಂಗತ್ಯ, ಅಜ್ಞಾತಕವಿಯ ಕಲಿಕಾಮಯ್ಯನ ಸಾಂಗತ್ಯ (೧೬ ಶ.). ರಾಜಯ್ಯನ (೧೬ ಶ.) ನಂಬಿಯಣ್ಣನ ಪುರಾಣ–ಒಬ್ಬೊಬ್ಬ ಭಕ್ತನ ಕಥೆಯನ್ನು ಬೇರೆ ಬೇರೆಯಾಗಿ ನಿರೂಪಿಸುವ ಕಾವ್ಯಗಳು.

ಶಿವಯೋಗಿ ಸೋಮೇಶನ ಅರವತ್ಮೂರು ಪುರಾತನರ ಚರಿತ್ರೆ[1] ೭ ಸಂಧಿ, ೧೫೬೭ ಪದ್ಯಗಳಲ್ಲಿ ಹಬ್ಬಿದ್ದು. ಪುರಾತನರ ವಿಮಲಚರಿತ್ರೆಯನ್ನು ವಿವರಿಸುತ್ತದೆ. ಕವಿ ತನ್ನನ್ನು 'ಶಿವಕವಿಗಳ ಶಿಶು. ಶಿವಶರಣರ ಭೃತ್ಯ. ಶಿವ ಪೂಜಕರ ಸೇವಕ' ಎಂದು ಕರೆದುಕೊಂಡು ಭಕ್ತಿಭಾವದಿಂದ ಶರಣರ ಇಷ್ಟಾನುಸಾರವಾಗಿ ಈ ಕೃತಿಯನ್ನು ಬರೆದಿರುವುದಾಗಿ ತಿಳಿಸುತ್ತಾನೆ. ಅಲ್ಲದೆ ಅಷ್ಟಾದಶವರ್ಣನೆ. ಗೂಢಾರ್ಥ. ಶಬ್ದಾಡಂಬರಗಳು ಹಾಡುಗಬ್ಬದೊಳೇಕೆಂದು ಅವುಗಳ ವ್ಯಾಮೋಹಕ್ಕೊಳಗಾಗದೆ. "ಮೋಕ್ಷವನೀವ ಶರಣರ ಸಂಗತಿಗದೇ ಲಕ್ಷಣವೆಂದು. ಹರಶರಣರ ಮಹತ್ವವನ್ನಿವಿಸ್ತಾರ ಬರೆವುದು ಲೇಸೆಂದು. ನಾಡೆ ಕನ್ನಡ ದೇಶೀಯ ಭಾಷೆಗಳಿಂದ ಪಾಡಿದೆನೀ ಶಿವಕೃತಿಯ" ಎಂದು ತನ್ನ ಕಾವ್ಯಧೋರಣೆಯನ್ನು ಸ್ಪಷ್ಟಪಡಿಸಿ, ಅದರಂತೆ ನೇರವಾಗಿ ಸುಲಲಿತ ಅಚ್ಚಗನ್ನಡದಲ್ಲಿ ಭಕ್ತರ ಕಥೆಗಳನ್ನು ಭಕ್ತಿರಸಪೂರ್ಣವಾಗಿ ಹೇಳಿಕೊಂಡು ಹೋಗಿದ್ದಾನೆ.

ಉಳಿದ ಮೂರು ಕೃತಿಗಳು ಇದಕ್ಕಿಂತ ಚಿಕ್ಕವು. ಇವುಗಳಲ್ಲಿ ಪುರಾತನರ ಭಕ್ತಿಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹಾಗೂ ಸರಳವಾಗಿ ಹೇಳಲಾಗಿದೆ. ಸತ್ವದ ದೃಷ್ಟಿಯಿಂದ ಶಿವಯೋಗಿ ಸೋಮೇಶನ ಕೃತಿಗೇ ಹೆಚ್ಚಿನ ಮಹತ್ವ.

ಒಬ್ಬೊಬ್ಬ ಭಕ್ತನ ಕಥೆಯನ್ನು ಹೇಳುವ ಕೃತಿಗಳಲ್ಲಿ–ಕಲಿಗಣನಾಥಸಾಂಗತ್ಯ. ಚೋಳರಾಜಸಾಂಗತ್ಯ. ತ್ರಿಭುವನತಿಲಕ, ದೀಪದ ಕಲಿಯರಕಾವ್ಯ ಉತ್ತಮವಾದುವು.

ಕಲಿಗಣನಾಥ ಸಾಂಗತ್ಯ[2] ೭ ಸಂಧಿ, ೭೨೫ ಪದ್ಯಗಳಲ್ಲಿ ನಿರೂಪಿತವಾದ ಕೃತಿ. ಇದನ್ನು ಕವಿ ಮಲ್ಲಯ್ಯ 'ಶಿವಕವಿಗಳು. ಶಿವಶಾಸ್ತ್ರ ವಿದ್ವಾಂಸರು. ಶಿವನೊಲಿಸಿ ಮೆರೆದವರನ್ನು ಅವಧಾನದಿಂದ ಬಲಗೊಂಡು ಹಲವು ಚಿತ್ತಗಳಿಲ್ಲದೆ ಏಕಚಿತ್ತದಿಂದ ಗುರು ಕೊಟ್ಟ ಮತಿಯಿಂದ ಒಲಿದು ನಲಿದು' ವರ್ಣಿಸಿದ್ದಾನೆ. ಚೋಳಮಂಡಲದ ತಿರುನಾಳೂರಲ್ಲಿ ರಾಜ್ಯವಾಳುತ್ತ. ತನ್ನ ರಾಜ್ಯದಲ್ಲಲ್ಲದೆ ಸುತ್ತುಮುತ್ತಲ ರಾಜ್ಯಗಳಲ್ಲಿಯೂ ಸಂಚರಿಸಿ ಭವಿಗಳನ್ನು ಭಕ್ತರನ್ನಾಗಿ ಮಾಡಿ. ಬಡಬ್ರಾಹ್ಮಣವೇಷಧಾರಿ ಶಿವಲಿಂಗವನ್ನು ಧರಿಸಲು ನಿರಾಕರಿಸಿದುದಕ್ಕೆ ಅವನ ರುಂಡವನ್ನು ಕಡಿದು, ಕೊನೆಗೆ ಅವನು ಶಿವನೆಂದು ತಿಳಿಯಲು ತನ್ನ ರುಂಡವನ್ನು ಕತ್ತರಿಸಿಕೊಂಡು ಶಿವಕೃಪೆಗೆ ಪಾತ್ರನಾಗಿ ಕೈಲಾಸಕ್ಕೆ ತೆರಳಿದ ನಿಷ್ಠಾಭಕ್ತಿಯ ಕಲಿ ಕಲಿಗಣನಾಥನ ಕಥೆ ಇದರ ವಸ್ತು. ಇದನ್ನು ಕವಿ ವರ್ಣನೆಗಳ ಮೂಲಕ ಏಳು ಸಂಧಿಗಳ ವರೆಗೆ ವಿಸ್ತರಿಸಿದ್ದಾನೆ. ಮುಖ್ಯ ಕಥೆ ಒಂದು ಸಂಧಿಯಲ್ಲಿ ಮುಗಿದುಹೋಗುತ್ತದೆ. ಬರಿ ಕಥೆ ಹೇಳಿದರೆ ತನ್ನ ಕೃತಿಯ ಗಾತ್ರ ಕಡಿಮೆಯಾಗುತ್ತದೆ ಎಂದು ಭಾವಿಸಿದ ಕವಿ. ವರ್ಣನೆ ಹಾಗೂ ಇತರ ಶಿವಭಕ್ತರ ಮಹಿಮೆಗಳನ್ನು ಸಾಂದರ್ಭಿಕವಾಗಿ ಜೋಡಿಸಿ ಹಿಗ್ಗಿಸಿ ತೃಪ್ತಿಪಟ್ಟಿದ್ದಾನೆ.

ಲಿಂಗಕವಿಯ ಚೋಳರಾಜ ಸಾಂಗತ್ಯ[3] ೩ ಸಂಧಿ, ೫೬೧ ಪದ್ಯಗಳಿರುವ ಚಿಕ್ಕ ಕೃತಿ. ಪಗಲ್ಚೋಳನ ಕಥೆ ಇದರ ವಸ್ತು. ಇದನ್ನು ಕವಿ ಈ ಪದ್ಯದಲ್ಲಿ ಸ್ಪಷ್ಟಪಡಿಸಿದ್ದಾನೆ:

> ಜಡೆವಲೆಯನು ಕಂಡು ಮುಡಿವಲೆಯನು ಕೊಟ್ಟ
> ಕಡುಗಲಿ ಚೋಳಚಕ್ರೇಶಾ
> ಮೃಡಪದವಿಯ ನೆರೆ ಪಡೆದನ ಕೃತಿಯನು
> ಪ್ರೌಢವಿಯರರಿಯೆ ಬಣ್ಣಿಸುವೆನು ॥ ೧–೧೧ ॥

ಇದು ಶಿವಕಥೆಯಾದುದರಿಂದ ಕೇಳುಗರ ಕಿವಿಗೆ ಬೇಸರದೋರದು ಎಂದು ಹೇಳಿ. ಕೃತಿಶೈಲಿಯನ್ನು ಕುರಿತು 'ಸವಿನುಡಿಗಳ ಸೊಂಪು. ನವರಸಗಳ ಗುಂಪು. ಶಿವಕವಿಗಳ ಮನದಿಂಪು. ಭುವನ ಜನರ ತಂಪು. ಕೇಳ್ವರ ಕಿವಿಗಿಂಪು' 'ತಂಗಾಳಿಯ

---

[1] ಕನ್ನಡ ಅಧ್ಯಯನಪೀಠದ ತಾ.ಪ್ರ. ೭೦೪

[2] ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೯೧

[3] ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೬೭

ತಂಪಿನವೊಲು, ಮೋಹನಸಿಂಗಾರವಣ್ಣಿಸಂದದಿ' ಎಂದು ವರ್ಣಿಸುತ್ತಾನೆ. ಅವನ ಈ ಹೇಳಿಕೆ ಬರಿ ಹೇಳಿಕೆಯಾಗಿರದೆ ಈ ಕಾವ್ಯದಲ್ಲಿನ ಸವಿನುಡಿಗಳ ಸೊಂಪು ಕೇಳ್ವ ಜನರ ಕಿವಿಗೆ ಇಂಪನ್ನೊದಗಿಸುತ್ತದೆ.

ಅರಸು ಕವಿ ವಿರುಪೇಂದ್ರನ ತ್ರಿಭುವನತಿಲಕ ಇನ್ನೊಬ್ಬ ಪುರಾತನಶಿವಭಕ್ತ ಚೇರಮಾಂಕನ ಚರಿತ್ರೆಯನ್ನು ಹೇಳುವ ವರ್ಣನಾಪ್ರಧಾನ ಕಾವ್ಯ. ೨೭ ಸಂಧಿ ೧೫೭೫ ಸಾಂಗತ್ಯ ಮೇಲೊಂದು ಕಂದ ಹಾಗೂ ಒಂದು ವೃತ್ತಗಳಲ್ಲಿ ವಿಸ್ತಾರಗೊಂಡಿದೆ. ಮೊದಲ ಸಂಧಿಯು ಪ್ರಾರಂಭಕ್ಕಷ್ಟೇ ಎರಡು ಸಾಲಿನ ಅರ್ಧಸಾಂಗತ್ಯ ಪಲ್ಲವಿಯಾಗಿ ಬಂದಿವೆ, ಕೃತಿಗೆ ಆಕರವನ್ನು ಕವಿ ಹೀಗೆ ಹೇಳಿದ್ದಾನೆ:

ಪಂಚೇಂದ್ರಿಯವ ಮನ ಪೊಕ್ಕಂತೆ ಚಿತ್ಕಲೆ । ಪಂಚಾರವವೇದಿಸಿದಂತೆ
ಪಂಚಸುಸ್ಥಾನದೊಳೈಕ್ಯವೈದಿದ ಹರೀ । ಶಂ ಚೇರಮಾಂಕನ ಕಥೆವೇಳ್ದ ॥ ೧–೫೦ ॥
ಆ ಚೇರಮಾಂಕನೃಪನ ಕಥೆಯ ಪೊಸ ಬಗೆಯಿಂದೆ । ಸೂಚಿಪೆ ಸಕಲಕಲಾರ್ಥವ
ಯಾಚಿಪರ್ಗೀವಂತೆ ನುಡಿಸಿರಿಯುಳ್ಳಾಗ । ಲೇ ಚೌಪದದಿ ಚೌಪದನೀವ ॥ ೧–೫೨ ॥

ಇದಕ್ಕೆ 'ತ್ರಿಭುವನತಿಲಕ' ಎಂದು ಕರೆದುದಕ್ಕೆ ಕಾರಣವನ್ನು ಹೀಗೆ ಕೊಡುತ್ತಾನೆ:

ತ್ರಿಭುವನಂ ಬಾಣೋಚ್ಚಿಷ್ಟಮೆಂಬೀ ನುಡಿ । ಶುಭ ಶಿವಕವಿ ಬಾಣ ಶೇಷವ ।
ಅಭಯದೆ ಧರಿಸಿ ನಾನೊರೆವೆ ಕೇಳೀ ಕೃತಿ । ತ್ರಿಭುವನತಿಲಕವೆನಿಸುವಂತೆ । ॥ ೧–೪೮ ॥
ಲಲಿತ ಭುಜಂಗ ಶಿರೋಮಣಿ ವಿಬುಧ ಸಂ । ಕುಳ ಸೇವ್ಯ ಸಲೆಧರಣಿ ಚೈತ್ರ ।
ತಳೆದ ಭೂಷಣವಾಗೆ ಮತ್ಕೃತಿ ತ್ರಿಭುವನ । ತಿಲಕವೆಸರನಾಂತುದೆಲೆ ಕಾಂತೆ ॥ ೧–೪೯ ॥

ಕಥೆಯನ್ನು ಕವಿ ತನ್ನ ಸತಿಗೆ ಹೇಳಿದ್ದಾನೆ. ಪ್ರತಿ ಸಂಧಿಯ ಆದಿಯಲ್ಲಿ ಬರುವ ಸತಿ ಪತಿಗಳ ಸರಸಸಂಭಾಷಣೆ ಮನೋಹರವಾಗಿದ್ದು ಆತ್ಮೀಯವಾತಾವರಣವನ್ನುಂಟುಮಾಡುತ್ತದೆ. ಸತಿ ನಿನ್ನ ಕೃತಿ ಅತಿ ಸುಂದರವಾಗಿದೆ ಎಂದು ಹೊಗಳಲು ಪತಿ ಉಬ್ಬಿ ಸ್ಫೂರ್ತಿ ತುಂಬಿ ಅವಳನ್ನು ವರ್ಣಿಸುತ್ತ ಕಥೆಯನ್ನು ಹೇಳುತ್ತ ಸಾಗುತ್ತಾನೆ:

**ಸತಿ :** ಕನ್ನಡಜಾಣ ಕಲಾಶೇಖರರಾಜ । ರನ್ನ ಮಾನವಮೀನಕೇತನ ।
ನಿನ್ನಯ ಕಬ್ಬ ಕೇಳ್ವರ ಕಿವಿಗಳ ಹಬ್ಬ । ಹೊಸ್ನೂರ ವಿರುಪ ಮುಂಗತೆವೇಳ ॥ ೯–೨ ॥
**ಪತಿ :** ಚೆಲುವಿನ ಚೆನ್ನ ಪುತ್ಥಳಿಯೆ ಮೂಲೋಕದ । ಲಲನಾ ಸೀಮಂತರತ್ನವೆ
ಕಲೆಗಳ ಕಲ್ಪಲತೆಯೆ ಮನದನ್ನಳೆ । ಒಲಿದಾಲಿಸು ಮೆಲ್ಲತೆಯನು ॥ ೯–೩ ॥

ಕಾವ್ಯದ ವಿಷಯವಾಗಿ 'ಈ ಕಬ್ಬ ರಸಿಕಜನದ ಕಿವಿಗಳ ಹಬ್ಬ. ಈ ಕಾವ್ಯ ಮಲ್ಲಿಕಾರ್ಜುನಸೇವ್ಯ. ಈ ಕಥೆ ಇಹಪರ ವಡರ್ವ ಸೌಖ್ಯದ ಲತೆ, ಈ ಕೃತಿ ವಿಪ್ರುಳಚಮತ್ಕೃತಿ' ಎಂದೂ 'ವರ ಕರ್ತೃ ಕರ್ಮ ಕ್ರಿಯಾಂತಲಿಂಗ ವಿಭಕ್ತಿ ಗುರು ಪದಬಂಧ ನೀತಿ ವಿಭೂತಿ ಸರಸಪ್ರಸಾದ ಪುಣ್ಯಪ್ರದದಿಂದೆ ಶಂಕರ ಭಕ್ತರಂತಿರ್ಪುದೀ ಕಾವ್ಯ' ಎಂದೂ 'ಶೃಂಗಾರ ದುರ್ಬುಗ, ವೀರದಗುಬ್ಬುಗ, ಶಾಂತಿಯುತ್ತುಂಗತೆ ತರುಣರಸದ ಪೆಂಪು' ಎಂದೂ ಹೊಗಳಿ, ಅದರಂತೆ ನವರಸಭರಿತವಾಗಿ ವರ್ಣನಾಮಯವಾಗಿ ಮಧುರವಾದ ಶೈಲಿಯಲ್ಲಿ ನಿರೂಪಿಸಲು ಪ್ರಯತ್ನಿಸಿ ಅಧಿಕಯಶಸ್ಸನ್ನು ಪಡೆದಿದ್ದಾನೆ. ಚೇರಮನ ಕಥೆ ಇಲ್ಲಿ ಸೂತ್ರದಂತಿದ್ದು, ಕವಿಯ ಕಾಲದ ಪರಿಸರ, ಅವನ ವೈಯಕ್ತಿಕ ಜೀವನದ ಶೃಂಗಾರಸನ್ನಿವೇಶಗಳ ರಸ ಚಿತ್ರಣವೇ ಹೆಚ್ಚಾಗಿ ಮೂಡಿದೆ. ಒಂದು ದೃಷ್ಟಿಯಿಂದ ಇದು ಕವಿಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ವರ್ಣನೆಗಳಲ್ಲಿ ಸಾಂಪ್ರದಾಯಿಕತೆ ಇದ್ದರೂ ಸ್ವಂತಿಕೆಗೂ ಕೊರತೆಯಿಲ್ಲ. ರಸಿಕನಾದ ಕವಿ ಶೃಂಗಾರಚಿತ್ರಗಳನ್ನು ಬಿಡಿಸುವಲ್ಲಿ ಕೋಮಲಭಾವಗಳನ್ನು ಪ್ರಕಟಿಸುವಲ್ಲಿ ತನ್ನ ಪ್ರತಿಭಾಪ್ರಭೆಯನ್ನು ಸಮರ್ಥವಾಗಿ ಪ್ರದರ್ಶಿಸಿದ್ದಾನೆ. ಇದು ಸೋನೆ ಸಾಂಗತ್ಯದಲ್ಲಿ ರಚಿತವಾದ ಕೃತಿ. ಇದಕ್ಕೆ ಕವಿ 'ಚೌಪದಿ' ಎಂದು ಕರೆದಿರುವುದು ಗಮನಾರ್ಹ.

ದೀಪದಕಲಿಯರ ಕಾವ್ಯ 'ಗುರು ಕೊಟ್ಟ ಮತಿಯಿಂದ' ಅಂಬುಲಿಗೆ ಚನ್ನಮಲ್ಲೇಶ ವಿರಚಿಸಿದ ಕಥಾಪ್ರಧಾನ ಕೃತಿ. ಇದಕ್ಕೆ 'ಸಂಗೀತ ಸತ್ಕೃತಿ' ಎಂದೂ ಕರೆಯಲಾಗಿದೆ. ಹರಿಹರನ ರಗಳೆಯ ಮುಖಾಂತರ ಕನ್ನಡಸಾಹಿತ್ಯಪ್ರಪಂಚವನ್ನು ಪ್ರವೇಶಿಸಿದ ದೀಪದಕಲಿಯರನೆಂಬ ಪುರಾತನ ಭಕ್ತನ ಕಥೆ, ಮುಂದೆ ವೀರಶೈವ ಪುರಾಣಗಳಲ್ಲಿ ಉಪಕಥೆಯಾಗಿ ನಡೆದಾಡಿ ಚೆನ್ನಮಲ್ಲೇಶನ ಕೈಯಲ್ಲಿ ಸ್ವತಂತ್ರಕಾವ್ಯಕ್ಕೆ ವಸ್ತುವಾಗಿ ನಿಂತಿದೆ. ಚಿಕ್ಕದಾದ ಈ ಕಥಾವಸ್ತುವನ್ನು ಕವಿ ಉಪಕಥೆಗಳನ್ನು ಜೋಡಿಸಿ ೯ ಸಂಧಿ ೧೦೪೭ ಪದ್ಯಗಳವರೆಗೆ ಹಿಗ್ಗಿಸಿದ್ದಾನೆ.

ಕಲಿಯುರ ಒಬ್ಬ ನಿಷ್ಠಾವಂತ ಶಿವಭಕ್ತ. ದೇವರಿಗೆ ದೀಪವನ್ನು ಬೆಳಗಿಸಿ ಪೂಜಿಸುವುದು ಅವನ ನಿತ್ಯದ ವ್ರತ. ಒಂದು ದಿವಸ ದೀಪ ಬೆಳಗಿಸುವಾಗ ಎಣ್ಣೆ ತೀರಲು ವ್ರತಭಂಗವಾಗಬಾರದೆಂದು ತನ್ನ ಜಡೆಗೆ ಬೆಂಕಿ ಹತ್ತಿಸಿ ದೇವಾಲಯ ಪ್ರದಕ್ಷಿಣೆ ಹಾಕುತ್ತಾನೆ. ಅವನ ನಿಷ್ಠೆಗೆ ಮೆಚ್ಚಿ ಶಿವ ಸದ್ಗತಿ ಒದಗಿಸುತ್ತಾನೆ. ಇದು ಮೂಲಕಥೆ. ಇದಕ್ಕೆ ೨೫ ಉಪಕಥೆಗಳನ್ನು ಹೊಂದಿಸಲಾಗಿದೆ. ಆ ಕಥೆಗಳು ಕಲಿಯುರನಂತೆ ಭಕ್ತಿನಿಷ್ಠೆಗಳಿಂದ ಶಿವನನ್ನೊಲಿಸಿಕೊಂಡ ಪ್ರಮಥರವು. ಉಪಕಥೆಗಳ ಹೆಚ್ಚಳದಿಂದ ಮೂಲಕಥೆ ಎಲ್ಲಿಯೋ ಮರೆಯಾದಂತೆನಿಸುತ್ತದೆ. ಕವಿ ತನ್ನ ಕಥಾನಾಯಕನ ಭಕ್ತಿಪ್ರಥೆಯನ್ನು ಎತ್ತಿತೋರಿಸುವುದರ ಸಲುವಾಗಿ ಅವನಂತೆಯೇ ಶಿವಭಕ್ತಶ್ರೇಷ್ಠರೆನಿಸಿದವರ ಕಥೆಗಳನ್ನು ಇಲ್ಲಿ ಅಳವಡಿಸಿಕೊಂಡಂತಿದೆ. ಅಲ್ಲದೆ ತನ್ನ ಕಾವ್ಯ ಕಥಾಪ್ರಧಾನವಾದುದಾಗಬೇಕೆಂಬ ಉದ್ದೇಶವೂ ಇರಬೇಕು. ಕಥಾನಿರೂಪಣೆಯತ್ತಲೇ ಕವಿಯ ಗಮನ ಹೆಚ್ಚಾಗಿರುವುದರಿಂದ ವರ್ಣನೆಗಳಿಗೆ ಅಷ್ಟಾಗಿ ಇಲ್ಲಿ ಮಹತ್ವ ಸಂದಿಲ್ಲ. ಕಥನ ರೀತಿ ಚೆನ್ನಾಗಿದೆ. ಶೈಲಿ ಲಲಿತವಾಗಿದೆ. 'ಸಂಗೀತ ಪೇಳ್ದ ಪ್ರಸಂಗದೊಳಗೆ ಬೆಳುದಿಂಗಳ ಬೆಳಗ ಪೋಲ್ವಡಿಯು ಅಂಗನೆಯರಿಗೆ ಸರ್ವಾಂಗಾಭರಣದೊಳು ಮಂಗಲಸೂತ್ರ ಈ ಕಾವ್ಯ' 'ಸಕ್ಕರೆ ಘೃತಕ್ಷೀರ ಬೆರಸಿ ಸವಿದಂತೆ' ಎಂದು ಕವಿ ಕಾವ್ಯದ ಉತ್ಕೃಷ್ಟತೆಯನ್ನು ಉತ್ಪ್ರೇಕ್ಷಿಸಿದ್ದಾನೆ. ಇದರ ಇನ್ನೊಂದು ವೈಶಿಷ್ಟ್ಯ 'ಷಟ್ಪದಸಾಂಗತ್ಯ'ದಲ್ಲಿ ರಚನೆಗೊಂಡುದು. 'ಶರಕುಸುಮಷಟ್ಪದಿಗಳ ಬೆರಸಿ ಕಾವ್ಯವನುಸುರಿದೆ' ಎಂಬ ಕವಿಯ ಮಾತನ್ನು ಇಲ್ಲಿ ಗಮನಿಸಬೇಕು.

ಮಹಾದೇವನ ಸಿರಿಯಾಳಸೆಟ್ಟಿಯ ಸಾಂಗತ್ಯ ಜಂಗಮನಿಗೆ ಮಗನನ್ನೇ ಕಡಿದು ಅಡುಗೆ ಮಾಡಿ ಉಣಬಡಿಸಿದ ಸಿರಿಯಾಳನ ಜಂಗಮದಾಸೋಹದ ಕಥೆಯನ್ನು ೨ ಸಂಧಿ ೩೫೪ ಪದ್ಯಗಳಲ್ಲಿ ವರ್ಣಿಸಿದರೆ, ರಾಚಯ್ಯನ ನಂಬಿಯಣ್ಣನ ಪುರಾಣ ಶಿವನನ್ನೇ ಕುಂಟಿಣಿಯನ್ನಾಗಿ ಮಾಡಿಕೊಂಡ ನಂಬಿಯಣ್ಣನ ಕಥೆಯನ್ನು ೩ ಸಂಧಿ ೧೫೦ ಪದ್ಯಗಳಲ್ಲಿ ಹೇಳುತ್ತದೆ. ಒಂದರಲ್ಲಿ ಭಕ್ತಿಗೆ ಮತ್ತೊಂದರಲ್ಲಿ ಶೃಂಗಾರ ಭಕ್ತಿಗಳಿಗೆ ಮಹತ್ವ ಸಂದಿದೆ. ಎರಡೂ ನೀರಸನಿರೂಪಣೆಯ ಚಿಕ್ಕ ಕಾವ್ಯಗಳು.

## ೪. ಬಸವಾದಿ ಶರಣರ ಚರಿತ್ರೆಗಳು

ಹನ್ನೆರಡನೆಯ ಶತಮಾನದಲ್ಲಿ ಉದಿಸಿ ಸಾಹಿತ್ಯ. ಸಮಾಜ. ಧರ್ಮ, ರಾಜಕೀಯ—ಎಲ್ಲ ಕ್ಷೇತ್ರಗಳಲ್ಲಿ ಅದ್ವಿತೀಯ ಕ್ರಾಂತಿಯನ್ನೆಸಗಿ. ಅಪಾರ ವಚನಸಾಹಿತ್ಯವನ್ನು ಸೃಷ್ಟಿಸಿ ಚಾರಿತ್ರಿಕ ವ್ಯಕ್ತಿಗಳಾಗಿ, ಶ್ರೇಷ್ಠ ಸಾಹಿತಿ, ಶಿವಾನುಭಾವಿ, ಆಧ್ಯಾತ್ಮವಾದಿಗಳೆನಿಸಿ ಮೆರೆದ ಶರಣರ ಸತ್ಯಶುದ್ಧ ಚರಿತ್ರ, ಚಾರಿತ್ರ್ಯಗಳನ್ನು ತದನಂತರದ ವೀರಶೈವ ಕವಿಗಳು ತಮ್ಮ ಕಾವ್ಯಗಳಿಗೆ ವಸ್ತುವನ್ನಾಗಿ ಸ್ವೀಕರಿಸಿದರು. 'ಶಿವನಂ ತದೀಯ ಶರಣವ್ರಜಮಂ' ಕೊಂಡಾಡಲು ತಮ್ಮ ನಾಲಗೆಯನ್ನು ಮಾರಿಕೊಂಡ ಅವರಿಗೆ ಶಿವಭಕ್ತಿಪರಾಯಣರಾಗಿ, ನುಡಿನಿಷ್ಠರಾಗಿ, ನಡೆಶ್ರೇಷ್ಠರಾಗಿ. ಶಿವತತ್ವ ಸಾಧಕ-ಬೋಧಕರಾಗಿ ಶಿವತತ್ವವನ್ನೇ ಜೀವಿಸಿ ಬಾಳಿ ಬದುಕಿ ಜೀವನ ಪಾವನಗೊಳಿಸಿಕೊಂಡು ಸುತ್ತಲ ಪರಿಸರವನ್ನೂ ಪಾವನಗೊಳಿಸಿ ಪರಮಾತ್ಮಸ್ವರೂಪರೆನಿಸಿದ ಶರಣರ ಪವಿತ್ರ ಜೀವನಚರಿತ್ರೆಯನ್ನು ಬರೆಯುವದೆಂದರೆ ಎಲ್ಲಿಲ್ಲದ ಉತ್ಸಾಹ, ಆನಂದ. ಅದು ತಮ್ಮ ಭಾಗ್ಯವೆಂದೇ ಅವರು ಭಾವಿಸಿದ್ದರು. ಅದಕ್ಕಾಗಿ ವೀರಶೈವ ಕಾವ್ಯರಾಶಿಯಲ್ಲಿ ಶರಣರ ಚರಿತ್ರೆಗಳನ್ನೊಳಗೊಂಡ ಕೃತಿಗಳ ಸಂಖ್ಯೆಯೇ ಅಧಿಕವಾಗಿರುವುದು ಕಂಡುಬರುತ್ತದೆ. ಈ ರಾಶಿಯಲ್ಲಿ ಉಳಿದ ಪ್ರಕಾರಗಳಂತೆ ಸಾಂಗತ್ಯದ ಪಾಲೂ ಇದೆ.

ಸಾಂಗತ್ಯದಲ್ಲಿ ಸು. ೨೩ ಕೃತಿಗಳು ಬಸವಾದಿ ಶರಣರ ಚರಿತ್ರೆಗಳನ್ನು ಅಳವಡಿಸಿಕೊಂಡಿವೆ. ಒಬ್ಬೊಬ್ಬ ಶರಣನನ್ನು ಕುರಿತು ಒಂದರಿಂದ ಎಂಟರ ವರೆಗೆ ಕಾವ್ಯಗಳು ರಚನೆಗೊಂಡಿವೆ. ಅವುಗಳಲ್ಲಿ ಶರಣಸಮೂಹದ ಸೂತ್ರಧಾರನೆನಿಸಿದ ಬಸವಣ್ಣನವರಿಗೆ ಸಂಬಂಧಿಸಿದುವೇ ಹೆಚ್ಚು.

ಗುರು ಚೆನ್ನಬಸವ ಶಿಷ್ಯನ (೧೬೫೦) ಬಸವಪವಾಡ. ಗುರುಸಿದ್ಧೇಶ ಶಿಷ್ಯನ (೧೮ ಶ.) ಬಸವ ಸಂಪಾದನೆ, ಗರಣಿಬಸವಲಿಂಗನ (೧೭೦೦) ಬಸವೇಶ್ವರನ ಕಾವ್ಯ. ಶಿವಕವಿ ಕಾಡನ (೧೭೦೦) ಬಸವಶಿಖಾಮಣಿ, ಪಂಚಯ್ಯನ (೧೬೫೦) ಭಕ್ತಿರಸಸೋನೆ. ಅಜ್ಞಾತಕವಿಯ(೧೭೦೦) ಬಸವಸಾಂಗತ್ಯ. ಚೆನ್ನವೀರದೇವನ ಶರಣುಶರಣಾರ್ಥಿ, ವಿಠ್ಠಲನ (೧೭೦೪) ಬಸವಪವಾಡಪುರಾಣ ಇವು ಎಂಟು ಬಸವಣ್ಣನವರನ್ನು ಕುರಿತ ಕಾವ್ಯಗಳು. ರಾಚಯ್ಯನ (೧೭ ಶ.) ಪ್ರಭುಲಿಂಗಲೀಲೆಯ ಸಾಂಗತ್ಯ, ಪರ್ವತೇಶನ (೧೬೦೦) ಪ್ರಭುವಿನ ಸಾಂಗತ್ಯ, ಅಜ್ಞಾತಕವಿಗಳ ಪ್ರಭುದೇವ ಸಾಂಗತ್ಯ ಮತ್ತು ಪ್ರಭುಲೀಲೆ ಈ ನಾಲ್ಕು ಪ್ರಭುದೇವರನ್ನು ಆಧರಿಸಿದುವು. ಶಿವಲಿಂಗಾರ್ಯನ (೧೬೦೦) ಅಮುಗಿದೇವ ಸಾಂಗತ್ಯ, ಚೆನ್ನಯ್ಯನ (ಸು. ೧೬೫೦) ಕೆಂಭಾವಿ ಭೋಗಣ್ಣನ ಸಾಂಗತ್ಯ, ಚೆಲುವನ (೧೭೨೫) ಮಡಿವಾಳಯ್ಯನ

ಚರಿತ್ರೆ, ರಾಚಯ್ಯನ (೧೭ ಶ.) ಮಹಾದೇವಿಯಕ್ಕನ ಸಾಂಗತ್ಯ, ಗೌರವಾಂಕನ (೧೬೨೫) ಮೋಳಿಗಯ್ಯನ ಪುರಾಣ, ಅಜ್ಞಾತಕವಿಯ ಸಿದ್ಧರಾಮನ ಸಾಂಗತ್ಯ (೧೭೫೦), ಮಲ್ಲಿಕಾರ್ಜುನನ ಸಿದ್ಧರಾಮನ ಕಥೆ, ಅಜ್ಞಾತಕವಿಯ ಸೊನ್ನಲಾಪುರದ ಸಿದ್ಧರಾಮಚರಿತೆ ದೇವಾಂಗದಾಸಿಮಯ್ಯನ ಪುರಾಣ (೧೬ ಶ.) ಇವು ಇನ್ನುಳಿದ ಕೆಲವು ಶರಣರಿಗೆ ಸಂಬಂಧಿಸಿದುವು.

ಬಸವಣ್ಣನವರನ್ನು ಕುರಿತ ಎಂಟು ಕೃತಿಗಳಲ್ಲಿ ಏಳು ವೀರಶೈವಕವಿಗಳಿಂದ ರಚನೆಗೊಂಡಿದ್ದರೆ ಒಂದು ಬ್ರಾಹ್ಮಣ ಕವಿಯಿಂದ ಬರೆಯಲ್ಪಟ್ಟಿದೆ. ಎಲ್ಲ ಕೃತಿಗಳೂ ಬಸವಣ್ಣನವರ ಅಸಾಧಾರಣವ್ಯಕ್ತಿತ್ವ, ಕಾರ್ಯದಕ್ಷತೆ, ಕ್ರಿಯಾಶೀಲತೆ ಹಾಗೂ ಭಕ್ತಿಚರಿತ್ರೆಯನ್ನು ಪವಾಡಾತ್ಮಕವಾಗಿ ಬಣ್ಣಿಸುತ್ತವೆ. ಹೆಚ್ಚಾಗಿ ಎಲ್ಲ ಕವಿಗಳಿಗೂ ಭೀಮಕವಿಯ ಬಸವಪುರಾಣದ ಕಥೆ ಆಕರವಾಗಿದೆ. ಬಸವಸಂಪಾದನೆ, ಬಸವೇಶ್ವರನ ಕಾವ್ಯ, ಭಕ್ತಿರಸಸೋನೆ ಇವು ಗಾತ್ರ ಪಾತ್ರಗಳಲ್ಲಿ ಹಿರಿಯುವು, ಉಳಿದುವೆಲ್ಲ ಕಿರಿಯುವು.

'ಬಸವಸಂಪಾದನೆ'[1] ಈಗ ದೊರೆತ ಬಸವಸಾಂಗತ್ಯಗಳಲ್ಲಿಯೇ ಅತಿ ದೊಡ್ಡದು. ೪೯ ಸಂಧಿ ೪೬೧೩ ಪದ್ಯಗಳಲ್ಲಿ ಬಸವಚರಿತ್ರೆ ವಿಸ್ತಾರವಾಗಿ ವರ್ಣಿತವಾಗಿದೆ. ಕಥೆಯನ್ನು ಕವಿ ತನ್ನ ಸತಿಗೆ ಹೇಳಿದ್ದಾನೆ :

ಇಂತಪ್ಪ ಸಕಲಸೊಬಗಿನಿಂದ ಬಸವಣ್ಣ ತನ್ನ
ಕಾಂತೆಯ ಕೂಡ ಪೇಳಿದ ಕಥೆಯ ।
ದಂತಿಗಮನೆ ಗುರುಕೃಪೆಯಿಂದಾನೊರೆದೆನು
ಸಂತಸದಿಂದ ನೀನಾಲಿಸಾ ॥ ೪೯-೧೨೩ ॥

ಅಸಿಯಳೆ ಕೇಳೊಪ್ಪವಿಟ್ಟ ರತ್ನದವೊಲು
ಬಸವಸಂಪಾದನೆಯಿದನೊಲ್ದು ।
ಉಸುರುವೆ ಓದುವರಿಗೆ ಕೇಳುವರಿಗೆ ಸಂ
ತಸವೆಚ್ಚುವೊಲು ಭಾವುಕರಿಗೆ ॥ ೧-೧೭ ॥

ಈ ಕೃತಿ ಪವಾಡ ಹಾಗೂ ಉಪಕಥೆಗಳಿಂದ ತುಂಬಿದೆ. ವರ್ಣನೆಗಳು ರೋಚಕವಾಗಿವೆ. 'ಸೋನೆಸಾಂಗತ್ಯ'ದಲ್ಲಿ ರಚನೆಗೊಂಡ ಇದರ ಶೈಲಿ ಸ್ವಲ್ಪಮಟ್ಟಿಗೆ ಬಿರುಸಾಗಿದೆ. ಒಟ್ಟಿನಲ್ಲಿ ಬಸವಣ್ಣನವರ ಬಗೆಗೆ ಇತರ ಕಾವ್ಯಗಳಿಗಿಂತ ಅಧಿಕಾಂಶಗಳನ್ನು ಒಳಗೊಂಡ ಒಂದು ವಿಶಿಷ್ಟ ಕೃತಿಯಿದು.

ಗರಣಿ ಬಸವಲಿಂಗನ 'ಬಸವೇಶ್ವರನ ಕಾವ್ಯ' ೧೯ ಸಂಧಿ ೩೧೧೦೮ ಪದ್ಯಗಳಲ್ಲಿ ಹಬ್ಬಿಕೊಂಡ ಬಸವಚರಿತ್ರೆಯನ್ನು ಹೇಳುವ ಇನ್ನೊಂದು ಬೃಹತ್ಕಾವ್ಯ. ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಿಂದ ರಚಿತವಾದ 'ಬಸವಪುರಾಣಮು' ಕೃತಿಯ ಆಧಾರದಿಂದ ಕನ್ನಡ ಭಾಮಿನೀಷಟ್ಪದಿಯಲ್ಲಿ ರೂಪುಗೊಂಡ ಭೀಮಕವಿಯ 'ಬಸವಪುರಾಣ'ವನ್ನು ಅನುಕರಿಸಿ ಇದನ್ನು ಬರೆದಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ಕೃತಿ ವಸ್ತುವಿನ ವಿಷಯವಾಗಿ "ಕೃತಿ ಬಸವೇಶನುನ್ನತ ಚಾರಿತ್ರಮೀ ಕೃತಿಗೆ ಕರ್ತನು ಬಸವೇಶಸಿತನೀಲಕಂಠರೀ ಕೃತಿಯಲಾಲಿಪರೀ ಕೃತಿಯ ಬಸವಲಿಂಗನುಸಿರ್ದ" ಎಂದೂ 'ಇದು ವೀರಶೈವಚಿನ್ನಿಧಿ ಬಸವೇಶನ ಪದಪದ್ಮಭೃಂಗ ಸದ್ವಿಮಳಹೃದಯ ಬಸವಲಿಂಗ ಮುದದೆ ಪೇಳ್ದ ಕಾವ್ಯ' ಎಂದೂ ಹೇಳಿದ್ದಾನೆ. ಭೀಮಕವಿಯ ಬಸವಪುರಾಣದಲ್ಲಿಯಂತೆ ಇಲ್ಲಿಯೂ ಪವಾಡ ಹಾಗೂ ಶರಣರ ಉಪಕಥೆಗಳು ಅಳವಟ್ಟಿವೆ. ಅವುಗಳನ್ನು ಬಸವಲಿಂಗ ತನ್ನ ಪ್ರತಿಭಾನುಸಾರ ಹೇಳಿಕೊಂಡು ಸಾಗಿದ್ದಾನೆ. ವೀರಶೈವ ಪುರಾಣದ ಲಕ್ಷಣಗಳು ಈ ಕಾವ್ಯದಲ್ಲಿ ಎದ್ದುಕಾಣುತ್ತವೆ. ವರ್ಣನೆಗಳು ಸಾಂಪ್ರದಾಯಿಕ. ಶೈಲಿ ಮಧುರವಾಗಿದೆ.

'ಭಕ್ತಿರಸಸೋನೆ'[2] ಬಸವಣ್ಣನವರ ಭಕ್ತಿಚರಿತ್ರೆಯನ್ನು ವರ್ಣಿಸುವ ವಿಶಿಷ್ಟ ಕೃತಿ. 'ಸಿತಕಂಠ ತನ್ನ ವರಸತಿ ಪಾರ್ವತಿಗೆ ಒರೆದ ಭಕ್ತಿರಸಸೋನೆಯನು ಅವನಿಯಲಿ ಎನ್ನಯ ಪುತ್ರ ಪಂಚ! ವಿಸ್ತರಿಸೆ'ಂದು ತಂದೆತಾಯಿಗಳು ಪ್ರೇರಣೆ ಕೊಡಲು ತಾನು ಭಕ್ತಿಭಾವದಿಂದ ಬರೆದುದಾಗಿ ಕವಿ ಪಂಚಯ್ಯ ತಿಳಿಸುತ್ತಾನೆ. ಕಾವ್ಯ ೨೫ ಸಂಧಿ ೨೪೮೯ ಪದ್ಯಗಳಲ್ಲಿ ವಿಸ್ತಾರಗೊಂಡಿದೆ. ಕವಿ ತಾನು 'ಗಣನೇಮ ಛಂದಾಲಂಕಾರ ಪ್ರಸ್ತಾನದ ಎಣಿಕೆಯಕ್ಷರವ ಅರಿಯೆ ಗಣಿತ ಬಲ್ಲ ಜಾಣರು ತಪ್ಪುಗಳ ತಿದ್ದಿ ತ್ರಿಣಯನ ಕೃತಿಯ ನಡೆಸಬೇಕೆ'ಂದೂ 'ನಡೆವವನೆಡಹೂವ ನುಡಿವವ ತೊದಳುವ

[1] ಕವಿಚರಿತೆಯಲ್ಲಿ ಅನುಕ್ತ, ಅಪ್ರಕಟಿತ. ಕನ್ನಡ ಅಧ್ಯಯನಪೀಠದ ತಾ.ಪ್ರ. ೧೩೪೪

[2] ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೨೦

ನಡೆನುಡಿಯುಧವುರಿಗುಂಟೆ ನುಡಿಯೊಳು ತಪ್ಪುಳ್ಳರಡಿಪ್ರಾಸುಗಳ ತಿದ್ದಿ ನಡಸುವದೀಶನ ಕೃತಿಯು'ನೆಂದೂ ವಿನಯದಿಂದ ಕೇಳಿಕೊಂಡು :

ತಳಿಗೆಯು ಹಾಕಿ ತಲೆಯು ಹೊಯ್ಸಿ ಹೆಣ್ಣನು । ಸೆಳೆದೊಲಿಸುವ ಸೋನೆಯಲ್ಲ ।
ಕಳವಿಟ್ಟು ಗಂಡನ ಕೊಲಿಸಿ ಮಿಂಡಗೆ ಬಾಳ್ವ । ಕುಲಟೆಯರ ಕಥೆಯಲ್ಲ ॥ ೧–೬ ॥

ಭಕ್ತಿರಸವು ಮುಕ್ತಿರಸ, ಯುಕ್ತಿರಸ ತೀವಿ । ವ್ಯಕ್ತವಾಗಿಹ ಕಾವ್ಯವನು ।
ಮುಕ್ತರಾಹರೆ ನಿಪುಣತ್ವರು ಬರದೋದಿ । ವ್ಯರ್ಥರಿಗಿದು ಸಾಧ್ಯವಲ್ಲ ॥ ೧–೭ ॥

ಎಂದು ತನ್ನ ಕಾವ್ಯಧೋರಣೆಯುನ್ನು ಸ್ಪಷ್ಟಪಡಿಸಿದ್ದಾನೆ. ಅಲ್ಲದೆ ಕೃತಿಯಲ್ಲಿ ಅಳವಟ್ಟ "ಭಕ್ತಿರಸದ ಸುಲಕ್ಷಣ ಮೌಕ್ತಿಕಮಣಿಗಳನೊಮವಿ ಯುಕ್ತಿಯಿಂದಲಿ ಸರಗೈದೊಲು" ಎಂದು ವಿಶೇಷಿಸಿದ್ದಾನೆ.

ಕಥೆಯುನ್ನು ಶಿವ ಪಾರ್ವತಿಗೆ ಹೇಳುತ್ತಾನೆ. ಅವಳು ಕೇಳಿ ಆನಂದಿಸಿ ಮೆಚ್ಚುಗೆಯುನ್ನು ಸೂಚಿಸುತ್ತಾಳೆ. ಪ್ರತಿ ಸಂಧಿಯ ಪ್ರಾರಂಭದಲ್ಲಿ ಬರುವ ಅವರ ಸಂಭಾಷಣೆಯಲ್ಲಿ ಕವಿ ತನ್ನ ಕೃತಿಯ ಉತ್ತಮಿಕೆಯುನ್ನು ಎತ್ತಿತೋರಿದ್ದಾನೆ :

ಶಿವ : ಚೆಲುವೆ ಈ ಕೃತಿರಸ ಸುಲಿದ ಬಾಳೆಯಹಣ್ಣು । ಚಿನಿಪಾಲು ಘೃತವು ಸಕ್ಕರೆಯು ।
ಸಲೆಸವಿಯಲು ನಾಲಗೆಗೆ ಹಬ್ಬ ಕರ್ಣಕೆ । ಒಲುಮೆಯಾಭರಣವಾಗಿಹುದು ॥ ೩–೨ ॥

ಪಾರ್ವತಿ : ಎಲ್ಲ ಪಾಪದ ಎದೆ ಝುಲ್ಲೆನಿಸಿತು ಚೊಕ್ಕ । ಬೆಲ್ಲವ ಸವಿದವೊಲಾಯ್ತು ।
ಸೊಲ್ಲುಸೊಲ್ಲಿಗೆ ರೋಮವೆಲ್ಲಯೆದ್ದವು ಎನ್ನ । ವಲ್ಲಭ ನೀ ಪೇಳ್ದ ಕೃತಿಗೆ ॥ ೨–೧೫ ॥

ಈ ಕೃತಿಯಲ್ಲಿ ಬಸವಣ್ಣನವರ ಚರಿತ್ರೆಯ ಜೊತೆಗೆ ಅನೇಕ ಶರಣರ ಕಥೆಗಳೂ, ಪೌರಾಣಿಕ ಕಥೆಗಳೂ ಹೆಣೆದುಕೊಂಡಿವೆ. ಅವೆಲ್ಲ ಮುಖ್ಯ ಕಥೆಗೆ ಪೋಷಕವಾಗಿವೆ. ಈ ಕೃತಿಯುನ್ನು ಎರಡು ಹಂತಗಳಲ್ಲಿ ಅವಲೋಕಿಸಬಹುದು. ಪ್ರಾರಂಭದಿಂದ ಒಂಭತ್ತನೆಯ ಸಂಧಿಯವರೆಗೆ ಒಂದು ಭಾಗ; ಹತ್ತರಿಂದ ಇಪ್ಪತ್ತೈದನೆಯ ಸಂಧಿಯವರೆಗೆ ಮತ್ತೊಂದು ಭಾಗ. ಮೊದಲನೆಯ ಭಾಗದಲ್ಲಿ ಬಸವಣ್ಣ ಶಿವನ ವಾಹನ ವೃಷಭನಾಗಿ ಕೈಲಾಸದಲ್ಲಿ ತೋರಿದ ಸಾಹಸಗಳ ವರ್ಣನೆ ಬಂದರೆ, ಎರಡನೆಯ ಭಾಗದಲ್ಲಿ ವೃಷಭ ಬಸವನಾಗಿ ಭೂಲೋಕದಲ್ಲಿ ಅವತರಿಸಿ ಮಾಡಿದ ಮಹತ್ಕಾರ್ಯಗಳ ವರ್ಣನೆ ಬರುತ್ತದೆ. ಹೀಗೆ ಕವಿ ಇಲ್ಲಿ ಬಸವಣ್ಣನವರ ಪೂರ್ವಜೀವನವೃತ್ತಾಂತ ಹಾಗೂ ಭೂಲೋಕದಲ್ಲಿನ ಉತ್ತರಜೀವನಚರಿತ್ರೆಗಳೆರಡನ್ನೂ ವಿವರಿಸಿ ತನ್ನ ಕಾವ್ಯವನ್ನು ವೈಶಿಷ್ಟ್ಯಪೂರ್ಣಗೊಳಿಸಿದ್ದಾನೆ.

ವೃಷಭ ಕೈಲಾಸದಲ್ಲಿ ಶಿವನ ಸನ್ನಿಧಿಯಲ್ಲಿದ್ದು ಗೈದ ಕಾರ್ಯಗಳಲ್ಲಿ, ತನಗೆ ಬಿರುನುಡಿಯನ್ನಾಡಿದ ದೇವೇಂದ್ರನ ಗರ್ವಭಂಗ ಮಾಡಿದುದು, ಶಿವನಿಗೆ ಅವಮಾನಗೊಳಿಸಿದ ದಕ್ಷನ ಶಿರವನ್ನು ವೀರಭದ್ರನಾಗಿ ಹರಿದುದು, ತಾರಕಾಸುರನನ್ನು ವಧಿಸಿದುದು, ತ್ರಿಪುರದಹನ ಸಮಯದಲ್ಲಿ ಶಿವನಿಗೆ ಸಹಾಯಕನಾದುದು, ಗಿರಿಜಾಕಲ್ಯಾಣ ಪ್ರಸಂಗದಲ್ಲಿ ಪ್ರಮುಖಪಾತ್ರ ವಹಿಸಿದುದು, ಅಸುರರನ್ನೆಲ್ಲಾ ಸೋಲಿಸಿದುದು, ಹನುಮಂತ ಹಾಗೂ ಭೀಮರ ಅವತಾರ ತಾಳಿ ಅನೇಕ ಸಾಹಸಗಳನ್ನು ಮೆರೆದುದು—ಇವೇ ಮೊದಲಾದುವು ಮುಖ್ಯವಾದುವು. ಅಲ್ಲಿಂದ ಕಥೆ ಭೂಲೋಕಕ್ಕೆ ಇಳಿಯುತ್ತದೆ. ಮುಂದಿನ ಕಥೆಯೆಲ್ಲ ಸಾಂಪ್ರದಾಯಿಕವಾಗಿದೆ. ಇದು ಹೆಚ್ಚಾಗಿ ಸಿಂಗಿರಾಜಪುರಾಣದ ಕಥೆಯುನ್ನು ಹೋಲುತ್ತದೆ. ಆದರೆ ನಿರೂಪಣಾತಂತ್ರ, ವರ್ಣನೆ, ಶೈಲಿಗಳಲ್ಲಿ ಕವಿ ತನ್ನತನವನ್ನು ತೋರಿದ್ದಾನೆ. 'ಷಟ್ಪದ ಸಾಂಗತ್ಯ'ದಲ್ಲಿ ರಚನೆಗೊಂಡಿರುವುದರಿಂದ ಸಾಂಗತ್ಯದ ನಡೆ ನಯನಾಜೂಕಿನಿಂದ ಕೂಡಿದೆ. ವರ್ಣನೆಗಳು ತುಂಬಾ ಸೊಗಸಾಗಿವೆ. ಭಾಷೆ ದೇಶೀ ಬೆಡಗಿನಿಂದ ಹೊಡಕರಿಸುತ್ತದೆ.

ಒಟ್ಟಿನಲ್ಲಿ ಶೈಲಿಯ ಸೊಗಸು, ದೇಶೀ ಪದಗಳ ಬೆಡಗು, ಖಂಡಪ್ರಾಸದ ಕುಣಿತ, ನಿರೂಪಣೆಯ ನೀಟುಗಾರಿಕೆಯಿಂದ ಇದೊಂದು ಉತ್ತಮ ಕಾವ್ಯವಾಗಿ ಪರಿಣಮಿಸಿದೆ. ಕವಿ ಹೇಳಿದ "ಸವಿವ ನಾಲಿಗೆ ನಚ್ಚು ಕಿವಿಗಿನಿರಸದಚ್ಚು ತವೆ ನೋಳ್ಪ ನೇತ್ರಕೆ ಮುಚ್ಚು ಯುವತಿ ಭಾವಿಪರಿಗೆಸೆವ ಮತಿ ಅತಿಪೆರ್ಚು ಭವರೋಗಗಳಿಗೆದೆಗಿಚ್ಚು" ಎಂಬ ಮಾತುಗಳು ಅತಿಶಯೋಕ್ತಿಗಳೆನಿಸದೆ ಸತ್ಯವಾಕ್ಯಗಳಾಗಿ ನಿಲ್ಲುತ್ತವೆ.

'ಬಸವ ಪವಾಡ' ಹೆಸರೇ ಸೂಚಿಸುವಂತೆ ಬಸವಣ್ಣನವರ ಪವಾಡಗಳನ್ನು ಹೇಳಲೆಂದೇ ರಚಿತವಾದ ಕಾವ್ಯ. ಸುಮಾರು ೬೪ ಪವಾಡಗಳನ್ನು ೫ ಸಂಧಿ ೭೭೧ ಪದ್ಯಗಳಲ್ಲಿ ವರ್ಣಿಸಲಾಗಿದೆ. ಕೇವಲ ಏಳೆಂಟು ಪವಾಡಗಳು ಮಾತ್ರ ವಿಸ್ತಾರವಾಗಿದ್ದು ಉಳಿದುವೆಲ್ಲ ಒಂದೋ ಎರಡೋ ಪದ್ಯಗಳಲ್ಲಿ ಸಂಕ್ಷಿಪ್ತವಾಗಿ ಮುಗಿದಿವೆ. ವರ್ಣನೆಗಳನ್ನು ಬದಿಗಿರಿಸಿ

ನೇರವಾಗಿ ಪವಾಡಗಳನ್ನು ಮಾತ್ರ ವಿವರಿಸುತ್ತ ಹೊರಟ ಈ ಕಾವ್ಯದಲ್ಲಿ ಕಾವ್ಯಾಂಶ ಹುಡುಕುವುದು ಸಮಂಜಸವಲ್ಲ. ಆದರೂ ಅವಕಾಶ ದೊರೆತಲ್ಲೆಲ್ಲ ಕವಿ ತನ್ನ ಪ್ರತಿಭಾಕಿಡಿಗಳನ್ನು ಹಾರಿಸದೆ ಬಿಟ್ಟಿಲ್ಲ. ಪವಾಡಗಳು ಅಸಹಜವೆನಿಸಿದರೂ ಕೊಡುವ ಚಿತ್ರಣ ಮಾತ್ರ ಚಿತ್ತಾಕರ್ಷಕವಾಗಿದೆ. ಆಡುನುಡಿಗಳ ಸಹಜಸುಂದರ ಬಳಕೆಯಿಂದ ಶೈಲಿ ಸಾಮಾನ್ಯನಿಗೆ ಹತ್ತಿರವಾಗಿ ನಿಂತಿದೆ. 'ಕಾವ್ಯದ ದೃಷ್ಟಿಯಿಂದ ಅತ್ಯುತ್ತಮವಲ್ಲದಿದ್ದರೂ ತಾನು ಬಳಸಿಕೊಂಡಿರುವ ವಸ್ತುವಿನ ದೃಷ್ಟಿಯಿಂದ ಇದಕ್ಕೆ ಒಂದು ಸ್ಥಾನವಿದೆ'[1] ಎಂಬ ಸಂಪಾದಕರ ಮಾತು ಸತ್ಯವಾಗಿದೆ.

'ಬಸವಶಿಖಾಮಣಿ'[2], 'ಮೃಡನಲ್ಲದನ್ಯದೈವವ ಹೊಗಳದ ವ್ರತವಿಡಿದ' ಶಿವಕವಿ ಕಾಡನ ಏಕಮೇವ ಕೃತಿ. ಇದರ ಉದ್ದೇಶವೂ ಬಸವಣ್ಣನವರು ಮೆರೆದ ಪವಾಡಗಳನ್ನು ವಿವರಿಸುವುದೇ ಆಗಿದೆ. ಅದು 'ಅಸಮಾಕ್ಷನ ಶರಣ ರಾಲಿಪುದು ಮರ್ತ್ಯದೊಳು ಬಸವಣ್ಣ ಬಂದು ಉದ್ಭವಿಸಿ ವಸುಧೆಯೊಳಗೆ ಮೆರೆದ ಪವಾಡವ ಮುಂದೆ ಉಸುರುವೆನೀ ಕೃತಿಯೊಳಗೆ' ಎಂಬ ಕವಿಯ ಮಾತಿನಲ್ಲಿ ವ್ಯಕ್ತವಾಗಿದೆ. ತನ್ನ ಕಾವ್ಯವನ್ನು ಕುರಿತು 'ಕುಂದಣ ಚಿನ್ನದ ಹಾರದ ರತ್ನವ ತಂದು ತೆತ್ತಿಸಿದಂದದಲಿ ಒಂದೊಂದು ನುಡಿಯ ಚೆಲುವವೋಲ್ಮಾಡಿದೆ' 'ಕಟ್ಟಾಣಿ ಮುತ್ತಿನ ಸರವ ಪೋಣಿಸಿದಂತೆ ಇಟ್ಟೆನು ಪದವ ಸೇರುವೆಯಲಿ' ಎಂದು ಹೇಳಿಕೊಂಡಿದ್ದರೂ ಅಷ್ಟೊಂದು ಬಂಧುರವಾಗಿಲ್ಲ. ೭ ಸಂಧಿ ೧೯೪೮ ಪದ್ಯಗಳಲ್ಲಿ ಅನೇಕ ಪವಾಡಗಳನ್ನು ವರ್ಣಿಸಿದ್ದಾನೆ. ಕಾವ್ಯವನ್ನು ಅಷ್ಟಾದಶವರ್ಣನೆಗಳ ಚೌಕಟ್ಟಿನಲ್ಲಿ ಹೇಳಲು ಪ್ರಯತ್ನಿಸಿದ್ದಾನೆ. ಆದರೆ ವರ್ಣನೆಗಳಲ್ಲಿ ಹೊಸತನ ಕಡಿಮೆ. ಸರಳ ಶೈಲಿಯಿಂದಾಗಿ ಕಾವ್ಯ ಸರಾಗವಾಗಿ ಓದಿಸಿಕೊಂಡು ಮಾತ್ರ ಹೋಗುತ್ತದೆ.

'ಬಸವಸಾಂಗತ್ಯ'[3] ಬಸವಣ್ಣನವರ ಚರಿತ್ರೆಯನ್ನು ಹೇಳುವ ಮತ್ತೊಂದು ಚಿಕ್ಕ ಕಾವ್ಯ. ಇದರಲ್ಲಿ ೭ ಸಂಧಿ ೭೩೭ ಪದ್ಯಗಳಿವೆ. ಈ ಕೃತಿಯ ವೈಶಿಷ್ಟ್ಯವೆಂದರೆ ಆರು ಸಂಧಿಯಲ್ಲಿ ಬಸವಣ್ಣನವರ ಹುಟ್ಟಿನಿಂದ ನೀಲಾಂಬಿಕೆಯ ಮದುವೆಯ ವರೆಗಿನ ಕಥೆಯನ್ನು ಹೇಳಿ, ಮುಂದಿನ ಒಂದು ಸಂಧಿಯಲ್ಲಿ ಮಾತ್ರ ಅವನು ಮೆರೆದ ಪವಾಡಗಳನ್ನು ಸಂಕ್ಷಿಪ್ತವಾಗಿ ವರ್ಣಿಸುತ್ತದೆ. ಅನುಚಿತ ವರ್ಣನೆಗಳಿಗಾಗಲೀ, ಉಪಕತೆಗಳಿಗಾಗಲೀ ಇಲ್ಲಿ ಎಡೆದೊರೆತಿಲ್ಲ. ಸಾಂಗತ್ಯದ ರಚನೆಯಲ್ಲಿ ಕವಿ ಸಿದ್ಧಿ ಪಡೆದಿದ್ದಾನೆ.

'ಬಸವಪವಾಡಪುರಾಣ'[4] ವೀರಶೈವೇತರಕವಿಯಿಂದ ರಚಿತವಾದ ಕೃತಿ. 'ಭೂಸುರ ಬಸುರಲಿ ಬಂದರೇನಾಯಿತು ಶಶಿಧರಕವಿಗಳ ಶಿಶು ನಾನು' ಎಂದು ಹೇಳಿ ಭಕ್ತಿಭಾವದಿಂದ ಬಸವಣ್ಣನವರ ಪವಾಡಗಳನ್ನು ವರ್ಣಿಸಿದ ಬ್ರಾಹ್ಮಣ ಕವಿ ವಿಠ್ಠಲ ಇದರ ಕರ್ತೃ. ಕೃತಿ ೫ ಸಂಧಿ ೫೯೧ ಪದ್ಯಗಳಲ್ಲಿ ಸಂಗ್ರಹಗೊಂಡಿದೆ. ತನಗಿಂತ ಪೂರ್ವದಲ್ಲಿ ರಚಿತವಾದ ಬಸವಚರಿತೆಗಳನ್ನೆಲ್ಲ ಅಭ್ಯಸಿಸಿ ಕವಿ ಇಲ್ಲಿ ಸಂಕ್ಷಿಪ್ತವಾಗಿ ಕೇವಲ ಪವಾಡಗಳನ್ನು ಮಾತ್ರ ಹೇಳಲು ಪ್ರಯತ್ನಿಸಿದ್ದಾನೆ. ಉಳಿದ ಕಾವ್ಯಗಳಂತೆ ಬಸವಣ್ಣನವರ ಚರಿತ್ರೆ ಇಲ್ಲಿ ಜನನ, ಬಾಲ್ಯ, ಮದುವೆ, ಮಂತ್ರಿಪದ ಇತ್ಯಾದಿಯಾಗಿ ಕ್ರಮವರಿತು ಸಾಗುವುದಿಲ್ಲ. ಒಮ್ಮೆಲೆ ಪವಾಡಗಳಿಂದಲೇ ಪ್ರಾರಂಭವಾಗುತ್ತದೆ. ಅದಕ್ಕೆ ಹೊಂದಿಕೊಂಡು ಅನೇಕ ಶರಣರ ಕಥೆಗಳ ಉಲ್ಲೇಖವೂ ಇಲ್ಲಿ ಬರುತ್ತದೆ. ಕಥಾನಿರೂಪಣೆಯಲ್ಲಾಗಲೀ, ಶೈಲಿ ತಂತ್ರ ವರ್ಣನೆಗಳಲ್ಲಾಗಲೀ ನಾವೀನ್ಯವಿಲ್ಲ. 'ಹಲವು ಕೃತಿಯೆ ಪಾಲು, ಶಿವಕೃತಿಯಿದು ಕೆನೆ', 'ಭುವನದ ಶಿವಕವಿಗಳು ಸವಿನೊರೆವಾಲು ಕವಿವಿಠ್ಠ ಕೆನೆ' ಎಂಬ ಕವಿಯ ಮಾತುಗಳು ಈ ಕೃತಿಗೆ ಈ ಕವಿಗೆ ಒಪ್ಪುವುದಿಲ್ಲ. ಅನ್ಯಮತೀಯನೊಬ್ಬ ಬಸವಚರಿತೆ ಬರೆದಿರುವನೆಂಬ ದೃಷ್ಟಿಯಿಂದ ಮಾತ್ರ ಈ ಕೃತಿಗೆ ಮಹತ್ವವಿದೆ.

ಪ್ರಭುದೇವರನ್ನು ಕಾವ್ಯನಾಯಕನನ್ನಾಗಿ ಆರಿಸಿಕೊಂಡ ನಾಲ್ಕು ಕೃತಿಗಳಲ್ಲಿ ರಾಚಯ್ಯನ ಪ್ರಭುಲಿಂಗಲೀಲೆಯ ಸಾಂಗತ್ಯ ಎಲ್ಲಕ್ಕಿಂತಲೂ ದೊಡ್ಡ ಕಾವ್ಯ. ೯ ಸಂಧಿ ೧೦೭೭ ಪದ್ಯಗಳಲ್ಲಿ ಪ್ರಭುವಿನ ಲೀಲಾಮಯ ಚರಿತ್ರೆ ವರ್ಣಿತವಾಗಿದೆ. ಚಾಮರಸನ ಪ್ರಭುಲಿಂಗಲೀಲೆಗೆ ಕವಿ ಹೆಚ್ಚಾಗಿ ಋಣಿಯಾಗಿದ್ದಾನೆ. ಇದರ ೩ರಿಂದ ೯ನೆಯ ಸಂಧಿಯವರೆಗಿನ ಭಾಗದಲ್ಲಿ ಬಸವಣ್ಣನವರ ಚರಿತ್ರೆ ಅಡಕವಾಗಿರುವುದೊಂದು ವಿಶೇಷ. ಕವಿಯ ಶೈಲಿ ಲಲಿತವಾಗಿದೆ. ಸಾಂಗತ್ಯದಲ್ಲಿ ೮ ಕೃತಿಗಳನ್ನು ರಚಿಸಿ ಪಳಗಿದ ಲೇಖನಿಯಿಂದ ಇದು ಮೂಡಿಬಂದಿರುವುದರಿಂದ ನಯಗಾರಿಕೆ ಎದ್ದು ಕಾಣುತ್ತದೆ.

ಪರ್ವತೇಶನ 'ಪ್ರಭುವಿನ ಸಾಂಗತ್ಯ' ಇನ್ನೊಂದು ಗಮನಾರ್ಹ ಕೃತಿ. ಇದಕ್ಕೂ ಚಾಮರಸನ ಪ್ರಭುಲಿಂಗ

---

1 ಬಸವಪವಾಡ: ಸಂ. ಬಿ. ನಂ. ಚಂದ್ರಯ್ಯ: ಕವಿಕಾವ್ಯವಿಮರ್ಶೆ, ಪು. ೪೧

2 ಕನ್ನಡ ಅಧ್ಯಯನಪೀಠದ, ತಾ.ಪ್ರ. ೬೪೯

3 ಕನ್ನಡ ಅಧ್ಯಯನಪೀಠದ, ತಾ.ಪ್ರ. ೪೬೮

4 ಅದೇ, ತಾ.ಪ್ರ.

ಲೀಲೆಯೇ ಆಕರ. ಆದರೆ ಸಂಪೂರ್ಣ ಕೃತಿಯಲ್ಲ. ಕೇವಲ ಮಾಯಾಕೋಲಾಹಲಪ್ರಸಂಗ ಮಾತ್ರ. ಕೈಲಾಸವರ್ಣನೆ, ಶಿವಪಾರ್ವತಿಯರ ಸಂವಾದ, ಶಿವ ಅಲ್ಲಮನನ್ನು, ಪಾರ್ವತಿ ತನ್ನ ತಾಮಸಕಳೆಯಾದ ಮಾಯೆಯನ್ನು ಭೂಮಿಗೆ ಕಳಿಸುವುದು, ಮಾಯೆಯ ಮಧುಕೇಶ್ವರನ ಪೂಜೆ. ಅಲ್ಲಿ ಅಲ್ಲಮನ ಮದ್ದಳೆ ನುಡಿತ, ಮದ್ದಳೆನಾದಕ್ಕೆ ಮಾಯೆ ಮರುಳಾಗಿ ಅವನನ್ನು ಒಲಿಸಿಕೊಳ್ಳಲು ಪ್ರಯತ್ನಿಸುವುದು, ಅವನು ದೊರಕದೆ ವಿಫಲಳಾಗಿ ಮತ್ತೆ ಕೈಲಾಸಕ್ಕೆ ತೆರಳುವುದು ಇಷ್ಟೇ ಇದರ ಕಥೆ. ಇದನ್ನು ೫ ಸಂಧಿ ೯೪೫ ಪದ್ಯಗಳಲ್ಲಿ ಹೇಳಿ ಮುಗಿಸಿದ್ದಾನೆ. ಪ್ರಭುವಿನ ಮುಂದಿನ ಸಾಧಕ ಜೀವನದ ಕಥೆ ಇಲ್ಲಿ ಬರುವುದಿಲ್ಲ. ತನ್ನ ಕಾವ್ಯ ಜನಪ್ರಿಯವಾಗಬೇಕೆಂಬ ಉದ್ದೇಶದಿಂದ ಕವಿ ಇಲ್ಲಿ ಕೇವಲ ರಸಪೂರ್ಣವಾದ ಮಾಯಾಕೋಲಾಹಲ ಪ್ರಸಂಗವನ್ನು ಮಾತ್ರ ಆಯ್ದುಕೊಂಡು ವರ್ಣನೆಗಳ ಮೂಲಕ ಒಂದು ಸ್ವತಂತ್ರಕಾವ್ಯವನ್ನಾಗಿ ಮಾಡಿದ್ದಾನೆ. ಮೂಲದಲ್ಲಿಲ್ಲದ ವಸಂತವರ್ಣನೆ, ಮಮಕಾರ ಭೂಪಾಲನ ವಸಂತೋತ್ಸವ ಸಂಭ್ರಮದ ಸನ್ನಿವೇಶವೊಂದನ್ನು ಹೆಚ್ಚಿಗೆ ಸೇರಿಸಿ ಕಾವ್ಯವನ್ನು ಹಿಗ್ಗಿಸಿದ್ದಾನೆ. ಕವಿ ಮಹಾರಸಿಕ. ಶೃಂಗಾರರಸ ಪೂರ್ಣ ವರ್ಣನೆ ಮಾಡುವಲ್ಲಿ ತನ್ನ ಕಾವ್ಯಶಕ್ತಿಯನ್ನೆಲ್ಲ ವ್ಯಯಿಸಿದ್ದಾನೆ. ಅನೇಕ ದೃಷ್ಟಿಯಿಂದ ಪರ್ವತೇಶ ಪೂರ್ವ ಕವಿಗಳಿಗೆ ಋಣಿಯಾಗಿದ್ದರೂ ಮಾಯೆಯ ವರ್ಣನೆ, ವಿರಹವೇದನೆಯ ವರ್ಣನೆ, ವಸಂತೋತ್ಸವ ವರ್ಣನೆ, ಪ್ರಭುವಿನ ಪರಂಜ್ಯೋತಿಸ್ವರೂಪದ ವ್ಯಕ್ತಿತ್ವ ಚಿತ್ರಣ—ಇವುಗಳನ್ನು ಮಾಡುವಲ್ಲಿ ತನ್ನ ಸ್ವಂತಿಕೆಯನ್ನು ಮೆರೆದಿದ್ದಾನೆ.

'ಹರಕೊಟ್ಟ ಮತಿಯಲ್ಲಿ ನರರ ಕೊಂಡಾಡುವ ಕುರಿಗಳಾದ ಕವಿಗಳನು ಭರದಿಂದ ಡಾವಣಿಗಟ್ಟಿ ಈ ಕೃತಿಯೆಂಬ ಕರವಾಳಿನಿಂದ ಛೇದಿಸುವೆ' 'ಅವ ಕವಿ ಇವ ಕವಿ ಭವಕವಿಗಳು ಶಿವಕವಿಗೆಣೆಯಹರೆ ಕುವರಭಕ್ತರ ಶಿಶು ಶಿವಲಿಂಗ ಪೇಳ್ದನು ಅವಿರಳಾತ್ಮಕಭಕ್ತಕೃತಿಯ' ಎಂದು ನುಡಿದ ಕಟ್ಟಾ ಶಿವಭಕ್ತ ಶಿವಲಿಂಗಾರ್ಯ 'ಅಮುಗಿದೇವಯ್ಯಗಳ ಸಾಂಗತ್ಯ'ವನ್ನು 'ಬರೆಬರೆಯೆಂದು ತನ್ನ ಕರಸ್ಥಲದೀಶನು ಪೊರೆದೊರೆದೊಂದೊಂದನುಸುರೆ' ಬರೆದಿದ್ದಾನೆ. ಕಾವ್ಯ ೭ ಸಂಧಿ ೮೪೨ ಸಾಂಗತ್ಯಗಳಲ್ಲಿ ವರ್ಣಿತವಾಗಿದೆ. ಸಂಧಿಯ ಆರಂಭದಲ್ಲಿ ಕೆಲವು ಕಂದಗಳೂ ಬಂದಿವೆ. ನೇಯ್ಗೆಯ ಕಾಯಕ ಕೈಕೊಂಡು ಗುರುಲಿಂಗಜಂಗಮಸೇವೆಯಲ್ಲಿ ನಿರತರಾಗಿ ಸದ್ಗತಿ ಸಂಪಾದಿಸಿದ ಅಮುಗಿದೇವಯ್ಯನ ಚರಿತ್ರೆ ಈ ಕೃತಿಯ ವಸ್ತು. ಪ್ರಾರಂಭದಿಂದ ಮೂರು ಸಂಧಿಯವರೆಗೆ ಸಿದ್ಧರಾಮನ ಚರಿತ್ರೆ ಬರುತ್ತದೆ. ನಾಲ್ಕನೆಯ ಸಂಧಿಯಿಂದ ಅಮುಗಿದೇವಯ್ಯನ ಕಥೆ ಪ್ರಾರಂಭವಾಗುತ್ತದೆ. ಸೊನ್ನಲಾಪುರದಲ್ಲಿ ಅಮುಗಿದೇವಯ್ಯ ನೆಯ್ಗೆಯ ಕಾಯಕದಲ್ಲಿ ತೊಡಗಿರುವುದು, ಸಿದ್ಧರಾಮಯ್ಯ ಅವರಿಗೆ ಧಾನ್ಯ ಕುಟ್ಟಲು ಕೊಡುವುದು, ನರಸೇವೆ ಹರಭಕ್ತರಿಗೆ ಸಲ್ಲದೆಂದು ಅಮುಗಿದೇವಯ್ಯ ಅದನ್ನು ತಿರಸ್ಕರಿಸುವುದು, ಸಿದ್ಧರಾಮ ಕುಪಿತನಾಗಿ ಅವರನ್ನು ಊರು ಬಿಡುವಂತೆ ಆಜ್ಞೆಮಾಡುವುದು, ಸಾಮಾನುಗಳನ್ನೆಲ್ಲ ಅವರು ಮೂರು ಗಂಟು ಮಾಡಿ ಎರಡನ್ನು ಸತಿಪತಿ ತಾವು ಹೊತ್ತುಕೊಂಡು ಹೋಗಿ ಉಳಿದ ಒಂದನ್ನು ಶಿವನಿಂದ ತರಿಸಿಕೊಳ್ಳುವುದು, ಶಿವನೇ ಅಮುಗಿದೇವಯ್ಯನ ರೂಪದಲ್ಲಿ ಸೊನ್ನಲಿಗೆಯಲ್ಲಿ ವಾಸಿಸುವುದು, ಸಿದ್ಧರಾಮ ಕೊನೆಗೆ ಅಮುಗಿದೇವಯ್ಯನ ಭಕ್ತಿಗೆ ಮೆಚ್ಚಿ ತನ್ನ ಅಪರಾಧಕ್ಕೆ ಪ್ರಾಯಶ್ಚಿತ್ತವೆಂದು ಅವನಲ್ಲಿ ಶರಣಾಗತನಾಗುವುದು—ಇವೇ ಮೊದಲಾದ ಘಟನೆಗಳನ್ನು ಕವಿ ಅಚ್ಚುಕಟ್ಟಾಗಿ, ರಸಪೂರ್ಣವಾಗಿ ನಿರೂಪಿಸಿದ್ದಾನೆ. ಕೃತಿ ನಾಯಕನ ಭಕ್ತಿಪಾರಮ್ಯವನ್ನು ಮಹಿಮಾತಿಶಯಗಳನ್ನು ಮೆರೆಯಲು ಅನೇಕ ಪವಾಡಗಳನ್ನು ಅವನಿಗೆ ಆರೋಪಿಸಿದ್ದಾನೆ. ಕಾವ್ಯದುದ್ದಕ್ಕೂ ಕವಿಯ ಲೋಕಾನುಭವ, ಕಾವ್ಯಾನುಭವ ಎದ್ದುಕಾಣುತ್ತದೆ. ನಿರೂಪಣಾರೀತಿ, ವರ್ಣನಾವಿಧಾನ, ಶೈಲಿ ಎಲ್ಲವೂ ಉಚಿತವಾಗಿವೆ. ಆದಕ್ಕಾಗಿ ಅವನು ತನ್ನ ಕಾವ್ಯದ ಸೊಲ್ಲಿಗೆ 'ಕಲ್ಲೊಸರದೆ, ಕಡಿದೊಣಗಿ ಬಿದ್ದಿಹ ಮರ ಪುಲ್ಲೈಸದೆ, ಕೊಯಿಕೊಯಿದು ಪುಲ್ಲೆಲ್ಲ ಚಿಗುರದೆ' ಎಂದು ಕೇಳಿದ ಪ್ರಶ್ನೆಗಳಿಗೆ ಕಲ್ಲೊಸರುತ್ತದೆ, ಒಣಮರ ಪುಲ್ಲೈಸುತ್ತದೆ, ಹುಲ್ಲು ಚಿಗುರುತ್ತದೆ ಎಂದು ಉತ್ತರ ಕೊಡಬೇಕಾಗುತ್ತದೆ.

ಚೆನ್ನಯ್ಯನ 'ಕೆಂಭಾವಿ ಭೋಗಣ್ಣನ ಸಾಂಗತ್ಯ' ಒಂದು ಚಿಕ್ಕ ಕಾವ್ಯ. ೫ ಸಂಧಿ ೨೯೬ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ಇದಕ್ಕೆ ಆಕರ ಹರಿಹರನ ಕೆಂಭಾವಿ ಭೋಗಣ್ಣನ ರಗಳೆ. ವಿಪ್ರಕುಲದಲ್ಲಿ ಜನಿಸಿ, ಶಿವಭಕ್ತನಾಗಿ 'ಗುರುಲಿಂಗಜಂಗಮದೊಳಗೇಕಚಿತ್ತವಿರಿಸಿ', ಶಿವ ಒಡ್ಡಿದ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿ ಅವನ ಕೃಪೆಗೆ ಪಾತ್ರನಾಗಿ ಗಣಪದವಿಗೇರಿದ ಭೋಗಣ್ಣನ ಭಕ್ತಿಚರಿತ್ರೆಯನ್ನು ಕವಿ ತನ್ನ ಶಕ್ತ್ಯನುಸಾರ ವಿವರಿಸಿದ್ದಾನೆ. ಭೋಗಣ್ಣನ ಶರಣಜೀವನ ನಿಷ್ಠೆ ನೈಜವಾಗಿ ಮೂಡಿಬಂದಿದೆ. ಶೈಲಿ ಸರಳವಾಗಿರುವುದರಿಂದ ಇದು ಜನಸಾಮಾನ್ಯರ ಹೃದಯಕ್ಕೆ ಹತ್ತಿರವಾಗಿದೆ.

ಶಾಂತನಿರಂಜನನ 'ಅಬ್ಬಲೂರ ಚರಿತೆ' ೧೨ನೆಯ ಶತಮಾನದ ಬಸವಾದಿ ಶಿವಶರಣರ ಸಮಕಾಲೀನನಾಗಿ,

ವಚನ ರಚನೆಮಾಡಿ, ಚಾರಿತ್ರಿಕವ್ಯಕ್ತಿಯೆನಿಸಿಕೊಂಡ ಏಕಾಂತ ರಾಮಯ್ಯನ ವೀರಭಕ್ತಿಯ ಚರಿತ್ರೆಯನ್ನು ಹೇಳುವ ಒಂದು ಚಾರಿತ್ರಿಕ ಕಾವ್ಯ. ಶಾಸನ, ಕಾವ್ಯಗಳಲ್ಲಿ ಪ್ರಸಿದ್ಧವಾದ ವಸ್ತುವನ್ನು ಕವಿ ಇಲ್ಲಿ ಸಾಂಗತ್ಯರೂಪದಲ್ಲಿ ಹೇಳಿದ್ದಾನೆ. ಜೈನರ ಪ್ರಾಬಲ್ಯದಿಂದ ಶಿವಮತಕ್ಕೆ ಚ್ಯುತಿ ಬಂದಿರಲು ಶಿವನಾಜ್ಞೆಯ ಮೇರೆಗೆ ರಾಮಯ್ಯ ಅಬ್ಬಲೂರಲ್ಲಿ ಉದಿಸಿ ಶ್ರವಣರ ಸೊಕ್ಕಡಗಿಸಿ. ಜಿನಪ್ರತಿಮೆಗಳನ್ನು ಒಡೆದು ಶಿವಪ್ರತಿಮೆಗಳನ್ನು ಪ್ರತಿಷ್ಠಾಪನೆ ಮಾಡಿ, ವೀರಶೈವ ಧರ್ಮರಕ್ಷಣೆಗಾಗಿ ತನ್ನ ಶಿರಸ್ಸನ್ನೇ ಕಡಿದುಕೊಂಡು ಮತ್ತೆ ಶಿವಕೃಪೆಯಿಂದ ಪಡೆದು ಮುಕ್ತನಾದುದು ಇದರ ಕಥೆ. ಈ ಚಿಕ್ಕ ವಸ್ತುವನ್ನು ಕವಿ ಸಂದರ್ಭೋಚಿತ ವರ್ಣನೆಗಳ ಮೂಲಕ ವಿಸ್ತರಿಸಿದ್ದಾನೆ. ಕಥಾನಾಯಕನ ಸಮಯನಿಷ್ಠೆ, ಧೈರ್ಯ ಸಾಹಸಗಳನ್ನು ರೋಮಾಂಚಕಾರಿಯಾಗಿ ಚಿತ್ರಿಸಿದ್ದಾನೆ. ಭಕ್ತಿ ಹಾಗೂ ವೀರರಸಪ್ರತಿಪಾದನೆ ರಮ್ಯವಾಗಿದೆ. ಲೋಕೋಕ್ತಿ ಹಾಗೂ ನಾಣ್ಣುಡಿಗಳ ಬಳಕೆಯಿಂದ ಭಾಷೆಗೆ ಹೆಚ್ಚಿನ ಕಸುವು ಬಂದಿದೆ. ಕಾವ್ಯದ ದೃಷ್ಟಿಯಿಂದ ಇದಕ್ಕೆ ಅಷ್ಟೊಂದು ಬೆಲೆ ಇರದಿದ್ದರೂ ಅನೇಕ ವಾಸ್ತವಚರಿತ್ರಾಂಶಗಳನ್ನು ಒಳಗೊಂಡಿರುವುದರಿಂದ ಇದಕ್ಕೊಂದು ಐತಿಹಾಸಿಕ ಮಹತ್ವವಿದೆ.

ಮಡಿವಾಳ ಮಾಚಯ್ಯನನ್ನು ಕುರಿತು ರಚನೆಯಾದ ಎರಡು ಕೃತಿಗಳಲ್ಲಿ ಮಹಾದೇವನ 'ಮಡಿವಾಳಯ್ಯನ ಸಾಂಗತ್ಯ'[1] ಉತ್ತಮವಾಗಿದೆ. ಇದರಲ್ಲಿ ೩ ಸಂಧಿ ೪೦೦ ಸಾಂಗತ್ಯ ೩ ಕಂದಗಳಿವೆ. 'ತರ್ಕಿಸಿ ಬಿಜ್ಜಳ ಮಡಿವಾಳಯ್ಯನ ಮೇಲೆ ಸೊಕ್ಕಿದಾನೆಯ ಬಿಡಲೊಡನೆ ಕುಕ್ಕುರಿಸಲು ತಿರಿದೊದದು ಸೀಳಿಯೆ ಪ್ರಾಣರಕ್ಕಸ ಮಾಚಯ್ಯನ ಸಾಂಗತ್ಯ' ಎಂಬ ಪದ್ಯದಲ್ಲಿ ಕವಿ ಇದರ ಸಾರವನ್ನು ಹಿಡಿದಿಟ್ಟಿದ್ದಾನೆ. ಕಥೆ ವೀರಶೈವಪುರಾಣಪರಂಪರೆಯಂತೆ ಕೈಲಾಸದಿಂದ ಪ್ರಾರಂಭವಾಗಿ ಭೂಲೋಕದಲ್ಲಿ ನಡೆದಾಡಿ ಮತ್ತೆ ಕೈಲಾಸದಲ್ಲಿ ಪರ್ಯವಸಾನವಾಗುತ್ತದೆ. ಪ್ರಮಥರ ಶಾಪದಿಂದ ಮಾಧಾಂತನೆಂಬ ಗಣೇಶ್ವರ ಭೂಲೋಕದಲ್ಲಿ ಹಿಪ್ಪಲಿಗೆಯ ಸೋಮ ಮತ್ತು ಸುಜ್ಞಾನದೇವಿಯರ ಉದರದಲ್ಲಿ ಜನಿಸುತ್ತಾನೆ. ಕಲ್ಯಾಣಕ್ಕೆ ಬಂದು ಶರಣರ ಬಟ್ಟೆ ಮಡಿಮಾಡುವ ಕಾಯಕದಲ್ಲಿ ತೊಡಗುತ್ತಾನೆ. ಒಮ್ಮೆ ಅವನು ತೊಳೆದ ಬಟ್ಟೆಯನ್ನು ಬಿಜ್ಜಳ ಕಂಡು ತನ್ನ ಬಟ್ಟೆಯನ್ನು ಕಳಿಸುತ್ತಾನೆ. ಭಕ್ತರಲ್ಲದ ಭವಿಗಳ ಬಟ್ಟೆ ತೊಳೆಯುವುದಿಲ್ಲವೆಂದು ಹೇಳಲು ಅವನ ಮೇಲೆ ಮದಿಸಿದ ಆನೆಯನ್ನು ಬಿಡುತ್ತಾರೆ. ಆದರೊಡನೆ ಹೋರಾಡಿ ಮಡಿವಾಳಯ್ಯ ತನ್ನ ಭಕ್ತಿಶಕ್ತಿಗಳನ್ನು ಮೆರೆಯುತ್ತಾನೆ. ಬಿಜ್ಜಳ ಪಶ್ಚಾತ್ತಾಪದಿಂದ ಶರಣಾಗುತ್ತಾನೆ. ಇದು ಸಂಕ್ಷಿಪ್ತ ಕಥೆ. ಇದರ ಮಧ್ಯೆ ಕವಿ ಹಿತಮಿತ ವರ್ಣನೆಗಳನ್ನು ಜೋಡಿಸಿದ್ದಾನೆ. ಪ್ರಸಂಗಾನುಸಾರ ಬಸವಣ್ಣನ ಮುಖಾಂತರ ಶರಣರ ಮಹಿಮೆಗಳನ್ನು ಹೇಳಿಸಿದ್ದಾನೆ.

ಚೆಲುವಿನ 'ಮಡಿವಳಯ್ಯನ ಚರಿತ್ರೆ' ಎಲ್ಲ ದೃಷ್ಟಿಯಿಂದಲೂ ಮಹಾದೇವನ ಕೃತಿಗಿಂತ ಚಿಕ್ಕದು. ೨ ಸಂಧಿ ೧೩೦ ಪದ್ಯಗಳಲ್ಲಿ ಮಡಿವಾಳಯ್ಯನ ವೀರಜೀವನಕ್ಕೆ ಸಂಬಂಧಿಸಿದ ಕಥೆಯನ್ನು ಮಾತ್ರ ಹೇಳಿ ಮುಗಿಸಲಾಗಿದೆ. ಮಹಾದೇವನ ಕೃತಿಯಲ್ಲಿ ಮಡಿವಾಳಯ್ಯ ಭೂಲೋಕಕ್ಕೆ ಬಂದಕಾರಣ, ಅವನ ತಂದೆ ತಾಯಿ, ಬಸವಣ್ಣನ ದಾಸೋಹದಲ್ಲಾದ ಕುಂದನ್ನು ತಿದ್ದಿದುದು, ಬಿಜ್ಜಳನ ಸೈನ್ಯವನ್ನೆಲ್ಲ ನಾಶಪಡಿಸಿದುದು, ಕೊನೆಗೆ ಬಸವಣ್ಣನ ಹೇಳಿಕೆಯ ಮೇರೆಗೆ ಮತ್ತೆ ಸರ್ವರನ್ನೂ ಬದುಕಿಸಿ ಕೈಲಾಸಕ್ಕೆ ತೆರಳಿದುದು—ಇವೇ ಮೊದಲಾದ ಘಟನೆಗಳು ಹೆಚ್ಚಿಗೆ ಬಂದಿವೆ. ಈ ದೃಷ್ಟಿಯಿಂದ ಇದು ಮಡಿವಾಳಯ್ಯನ ಸಮಗ್ರ ಚರಿತ್ರೆಯನ್ನು ಹೇಳುವ ಏಕಮೇವ ಕೃತಿಯಾಗಿದೆ.

ರಾಚಯ್ಯನ 'ಮಹಾದೇವಿಯಕ್ಕನ ಸಾಂಗತ್ಯ' ಈ ಮೊದಲು ರಚನೆಗೊಂಡ ಅಕ್ಕನ ಚರಿತ್ರೆಗಳಿಗಿಂತ ಕೆಲವು ವಿಶೇಷ ಅಂಶಗಳನ್ನು ಒಳಗೊಂಡ ವಿಶಿಷ್ಟ ಕೃತಿ. ಇದರಲ್ಲಿ ಮುಖ್ಯವಾಗಿ ಮೂರು ಅಂಶಗಳು ಉಳಿದ ಕಾವ್ಯಗಳಲ್ಲಿ ಬರುವ ಅಕ್ಕನ ಚರಿತ್ರೆಗಿಂತ ಭಿನ್ನವಾಗಿವೆ. ಒಂದು ಅಕ್ಕನ ಮದುವೆಯ ಪ್ರಸಂಗ. ಹರಿಹರನ ರಗಳೆ ಹಾಗೂ ಇತರ ಕಾವ್ಯಗಳಲ್ಲಿ ಅಕ್ಕ ಕೆಲವು ಶರತ್ತಿನ ಮೇಲೆ ಕೌಶಿಕನನ್ನು ಮದುವೆಯಾಗಿ, ಅವನು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳಲು ಅವನನ್ನು ತೊರೆದು ದಿಗಂಬರೆಯಾಗಿ ಚೆನ್ನಮಲ್ಲಿಕಾರ್ಜುನನನ್ನರಸಿ ನಡೆಯುತ್ತಾಳೆಂದು ಹೇಳಿದೆ. ಇದು ಈ ಕವಿಗೆ ಸರಿಕಾಣದೆ ಅದಕ್ಕೆ ಬೇರೊಂದು ಸ್ವಾರಸ್ಯಕರವಾದ ತಿರುವುಕೊಟ್ಟು ಅವಳು ಮದುವೆಗೆ ಒಪ್ಪಲೇ ಇಲ್ಲ. ಬಲಾತ್ಕಾರದಿಂದ ಅವನು ಸೀರೆ ಹಿಡಿಯಲು ಅದನ್ನು ಕಳಚಿ ದಿಗಂಬರೆಯಾಗಲು.' ಹುಚ್ಚಿಯಾದ ಇವಳ ಸಂಗ ಬೇಡವೆಂದು ಕೌಶಿಕ ಅವಳನ್ನು ಬಿಟ್ಟುಹೋಗುವಂತೆ ಮಾಡಿದ್ದಾನೆ. ಎರಡನೆಯದು ಆಕೆ ದಿಗಂಬರೆಯಾಗಿ ಅಡವಿ

[1] ಕವಿಚರಿತೆಯಲ್ಲಿ ಅನುಕ್ತ. ಅಪ್ರಕಟಿತ. ಕನ್ನಡ ಅಧ್ಯಯನಪೀಠದ ತಾ.ಪ್ರ. ೧೨೪೫/೨

ಯಲ್ಲಿ ಹೊರಟಾಗ ಶಿವ ಜಂಗಮವೇಷದಲ್ಲಿ ಬಂದು ಪರೀಕ್ಷಿಸುವ ಪ್ರಸಂಗ. ಇದು ಈ ಕವಿಯ ನೂತನ ಕಲ್ಪನೆ. ಮೂರನೆಯದು ಅಲ್ಲಮ ಹಾಗೂ ಅಕ್ಕನ ಸಂವಾದ ಸಂದರ್ಭ. ಉಳಿದ ಕಾವ್ಯಗಳಲ್ಲಿ ಅಕ್ಕನನ್ನು ಪ್ರಭು ಪರೀಕ್ಷೆಗೆ ಗುರಿಮಾಡಲು ಆಕೆ ವಾದದಲ್ಲಿ ಜಯಗಳಿಸಿದ ಪ್ರಸಂಗ, ಅನುಭವಮಂಟಪದಲ್ಲಿ ಶರಣರ ಮಧ್ಯೆ ನಡೆಯುತ್ತದೆ. ಆದರೆ ಈ ಕಾವ್ಯದಲ್ಲಿ ಅದು ಕದಳಿಬನದಲ್ಲಿ ನಡೆಯುತ್ತದೆ. ಅಕ್ಕ ಮತ್ತು ಪ್ರಭು ಕದಳಿಯ ಬನದಲ್ಲಿ ಕೂಡುತ್ತಾರೆ. ಅಲ್ಲಿ ಇಬ್ಬರ ಮಧ್ಯೆ ಸಂವಾದ ನಡೆಯುತ್ತದೆ. ಅದರಲ್ಲಿ ಅಕ್ಕನಿಗೆ ಜಯ ಸಿಕ್ಕುತ್ತದೆ. ಕೊನೆಗೆ ಪ್ರಭುವೇ ಅವಳಿಗೆ ಚೆನ್ನಮಲ್ಲಿಕಾರ್ಜುನನಲ್ಲಿ ಒಂದಾಗುವಂತೆ ಕರುಣಿಸುತ್ತಾನೆ. ಇದೂ ಈ ಕವಿಯ ಹೊಸ ಮಾರ್ಪಾಡು. ಹೀಗೆ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡು ಅಕ್ಕನ ಚರಿತ್ರೆಗೆ ಕಲಂಕಬಾರದಂತೆ ಎಚ್ಚರ ವಹಿಸಿದ್ದಾನೆ. ಅಕ್ಕ ಕಾಳಿಂಗ ಮಂತ್ರಿ, ಕೌಶಿಕ, ಜಂಗಮ ಮತ್ತು ಪ್ರಭುದೇವರ ಮಧ್ಯೆ ನಡೆಯುವ ಸಂಭಾಷಣೆಗಳು ತುಂಬ ಸೊಗಸಾಗಿವೆ. ಕವಿಯು ಕಾವ್ಯ ಹೇಳುವ ರೀತಿ ಸರಳಸುಂದರವಾಗಿದೆ.

ಗೌರವಾಂಕನ 'ಮೋಳಿಗಯ್ಯನ ಪುರಾಣ' ವೀರಶೈವಪುರಾಣ ಲಕ್ಷಣಗಳನ್ನೆಲ್ಲ ಅಳವಡಿಸಿಕೊಂಡು ರಚಿತವಾದ ಧಾರ್ಮಿಕಕಾವ್ಯ. ಇದರಲ್ಲಿ ೫ ಸಂಧಿ, ೯೮೭ ಸಾಂಗತ್ಯ, ೩ ವೃತ್ತ, ೫ ಕಂದ, ೨೦ ಸಂಸ್ಕೃತಸಾಕ್ಷ್ಯವಚನ—ಎಲ್ಲ ಸೇರಿ ಒಟ್ಟು ೧೦೧೫ ಪದ್ಯಗಳಿವೆ. ಕಾಶ್ಮೀರದೇಶದರಸು ಮಹಾದೇವ ವೈರಾಗ್ಯತಾಳಿ ಸಂಸಾರ ತ್ಯಜಿಸಿ ಮಗನಿಗೆ ಪಟ್ಟಗಟ್ಟಿ ಸತಿಮಹಾದೇವಿಯೊಡನೆ ಕಲ್ಯಾಣಕ್ಕೆ ಬಂದು ಬಸವಾದಿ ಶರಣರೊಡನೆ ಬೆರೆತು ಕಟ್ಟಿಗೆ ಮಾರುವ ಕಾಯಕ ಕೈಕೊಂಡು ಮೋಳಿಗೆ ಮಾರಯ್ಯನೆಂಬ ಹೆಸರು ಪಡೆದು ಕಾಯಕದಿಂದ ಕೈಲಾಸ ಕಂಡ ಕಥೆ ಇದರ ವಸ್ತು. ಈ ಕಥೆಯ ಜೊತೆಗೆ ಅನೇಕ ಶಿವಶರಣರ ಕಥೆ ಹಾಗೂ ಪೌರಾಣಿಕ ಕಥೆಗಳು ಉಪಕಥೆಗಳಾಗಿ ಸೇರಿಕೊಂಡಿವೆ. ಅಲ್ಲದೆ ದೀಕ್ಷಾವಿಧಿ, ಅಷ್ಟಾವರಣ, ಷಟ್‌ಸ್ಥಲ ತತ್ವಗಳ ನಿರೂಪಣೆಯೂ ಬಂದಿದೆ. ಶಿವ ಹಾಗೂ ಶಿವಭಕ್ತರ ಪಾರಮ್ಯವನ್ನು ಪುರಾಣಾಗಮಗಳಿಂದ ಎತ್ತಿ ತಂದ ಸಾಕ್ಷ್ಯಗಳ ಮುಖಾಂತರ ಮೆರೆಯಲಾಗಿದೆ. ಮೋಳಿಗಯ್ಯನ ಚರಿತ್ರೆ ಇಲ್ಲಿ ಸೂತ್ರದಂತಿದೆ. ಅದರ ಜೊತೆಗೆ ವೀರಶೈವ ಧರ್ಮತತ್ವಗಳು, ಶರಣರ ಚರಿತ್ರೆಗಳು, ಪೌರಾಣಿಕ ಆಖ್ಯಾನಗಳು ಕೂಡಿಕೊಂಡು ಇದೊಂದು ಶರಣಚರಿತ್ರಕಥಾಕೋಶವಾಗಿದೆ. ವರ್ಣನೆಗಳು ಕಡಿಮೆ. ಭಕ್ತಿರಸಕ್ಕೆ ಇಲ್ಲಿ ಅಗ್ರಸ್ಥಾನ ಸಂದಿದೆ. ಒಟ್ಟಿನಲ್ಲಿ ಶರಣ ಸಂಗತಿ, ಸರ್ವಶರಣರ ಸಂಕೀರ್ತನೆ ಮತ್ತು ಧರ್ಮತತ್ವಪ್ರತಿಪಾದನೆ ಇವುಗಳ ಮುಪ್ಪುರಿಯಿಂದಾಗಿ ವೀರಶೈವ ಪುರಾಣಕಾವ್ಯಗಳಲ್ಲಿ ಇದಕ್ಕೊಂದು ವಿಶಿಷ್ಟಸ್ಥಾನ ಮೀಸಲಾಗಿದೆ. ಸಿದ್ಧರಾಮನನ್ನು ಕುರಿತು ಬರೆದ ನಾಲ್ಕು ಕೃತಿಗಳಲ್ಲಿ ಮೂರು ರಾಘವಾಂಕನ ಸಿದ್ಧರಾಮಚರಿತೆಯ ಕಥಾಸರಣಿಯನ್ನು ಅನುಸರಿಸಿದ್ದರೆ 'ಸೊನ್ನಲಾಪುರದ ಸಿದ್ಧರಾಮನ ಚರಿತ್ರೆ' ಒಂದು ಮಾತ್ರ ಕೆಲವಂಶಗಳಲ್ಲಿ ಅದರಿಂದ ಭಿನ್ನವಾಗಿದೆ. ಅದರ ವಸ್ತುವನ್ನು ಕವಿ 'ಸಿದ್ಧಮಂಕ ಸರವರದೊಳು ತಪವಿದ್ದು ಸಿದ್ಧಿಯ ಪಡೆದ ಕಥನವ ಆದ್ಯರ ವಚನ ಶಾಸನವನೀಕ್ಷಿಸಿಯುಲ್ಲಿರ್ದುದ ಪೇಳ್ವೆ' ಎಂದು ಹೇಳಿದ್ದಾನೆ. ರೇವಣಸಿದ್ಧರ ಶಿಷ್ಯ ಮರುಳಮಂಕಯ್ಯನೆಂಬುವನು ಸೊನ್ನಲಾಪುರದ ಹೊರವಲಯದ ಸರೋವರದ ದಡದಲ್ಲಿ ತಪಸ್ಸಿಗೆ ಕುಳಿತು ಸಿದ್ಧರಾಮಯ್ಯನನ್ನು ತಾನಿದ್ದಲ್ಲಿಗೆ ಬರಮಾಡಿಕೊಂಡು ಆಶೀರ್ವಾದ ಪಡೆಯುತ್ತಾನೆ. ಇದು ಕೃತಿಯ ಕೇಂದ್ರಬಿಂದು. ಇದಕ್ಕೆ ಪೂರಕವಾಗಿ ಸಿದ್ಧರಾಮನ ಜನನದಿಂದ ಕಲ್ಯಾಣಕ್ಕೆ ತೆರಳುವವರೆಗಿನ ಕಥೆ ಸಂಕ್ಷಿಪ್ತವಾಗಿ ಬಂದಿದೆ. ಇನ್ನುಳಿದ ಕಾವ್ಯದ ಬಹುಭಾಗವೆಲ್ಲ ಮಂಕಯ್ಯನ ಚರಿತ್ರೆ, ತಪಸ್ಸು ಹಾಗೂ ಹಾಲುಮತದ ಪೂರ್ವ ಚರಿತ್ರೆಗಳ ವಿವರಣೆಗೆ ವ್ಯಯವಾಗಿದೆ.

ರಾಘವಾಂಕನ ಹೆಸರಿನಲ್ಲಿ ದೊರೆವ ಅಜ್ಞಾತ ಕವಿಯ 'ದೇವಾಂಗ ದಾಸಿಮಯ್ಯನ ಪುರಾಣ' ಪೌರಾಣಿಕವಸ್ತುವನ್ನೊಳಗೊಂಡು ೭ ಸಂಧಿ ೧೭೭೭ ಪದ್ಯಗಳಲ್ಲಿ ಹಬ್ಬಿಕೊಂಡ ಮಧ್ಯಮ ತರಗತಿಯ ಕಾವ್ಯ. ಬ್ರಹ್ಮಾಂಡ ಹಾಗೂ ಸ್ಕಾಂದ ಪುರಾಣಾಂತರ್ಗತ ದೇವಾಂಗಋಷಿಯ ಕಥೆ ಮತ್ತು ಅವನ ನಾಲ್ಕನೆಯ ಅವತಾರವೆನಿಸಿದ ದಾಸಿಮಯ್ಯನ ಚರಿತ್ರೆ ಇದರಲ್ಲಿ ವರ್ಣಿತವಾಗಿವೆ. ದೇವಾಂಗಋಷಿಯ ಕಥೆ ದೇವಲೋಕದಲ್ಲಿ ನಡೆದರೆ, ದಾಸಿಮಯ್ಯನ ಕಥೆ ಭೂಲೋಕದಲ್ಲಿ ನಡೆಯುತ್ತದೆ. ಈ ದೃಷ್ಟಿಯಿಂದ ಕಾವ್ಯದಲ್ಲಿ ಎರಡು ಭಾಗಗಳು ಒಡೆದು ಕಾಣುತ್ತವೆ. ಮೊದಲ ಭಾಗ ಅನೇಕ ಕಥಾನಕ, ಅದ್ಭುತ ಅಸಾಧಾರಣ ಘಟನೆಗಳನ್ನೊಳಗೊಂಡಿದೆ. ಅದು ಕೇವಲ ಮುಗಿಲಮೇಲೆ ನಡೆಯುವ ಕಥೆಯಾದುದರಿಂದ ಅಲ್ಲಿ ಸಹಜತೆಗೆ ಅವಕಾಶವಿಲ್ಲ. ಎರಡನೆಯ ಭಾಗದ ಕಥೆಯಲ್ಲಿ ಸ್ವಲ್ಪಮಟ್ಟಿಗೆ ವಾಸ್ತವತೆ ಕಂಡು ಬರುತ್ತದೆ. ಅಲ್ಲಿಯೂ ಕವಿ ದಾಸಿಮಯ್ಯನ ಕಥೆಯ ಮಧ್ಯೆ ಅನೇಕ ಪವಾಡಗಳನ್ನು ಸೇರಿಸಿ ತನ್ನ ಕಾವ್ಯವನ್ನು ಪುರಾಣವಾಗಿಸಿದ್ದಾನೆ. ಶೈಲಿ ಸರಳವಾಗಿದ್ದರೂ ನಿರೂಪಣೆ ನೇರವಾಗಿರದೆ ಸುತ್ತುಬಳಸುದಾರಿಯನ್ನು ಹಿಡಿದಿದೆ. ವರ್ಣನೆಗಳು ಹೇರಳವಾಗಿದ್ದರೂ ಹೊಸತನ ಕಡಿಮೆ.

## ೫. ಶಿವಭಕ್ತರ ಚರಿತ್ರೆಗಳು

ಬಸವಾದಿಶರಣರ ಚರಿತ್ರೆಗಳಂತೆ ಶಿವಭಕ್ತರ ಕಥೆಗಳಿಗೂ ವೀರಶೈವಪುರಾಣಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ. ತಮ್ಮ ಸತ್ಯಶುದ್ಧ ನಡೆ-ನುಡಿ, ಆಚಾರ, ಕಾಯಕ, ವ್ರತ, ಛಲ, ಭಕ್ತಿ, ನಿಷ್ಠೆ, ಆತ್ಮಬಲಗಳಿಂದ ಶಿವನೊಡ್ಡಿದ ಪರೀಕ್ಷೆಯನ್ನು ಎದುರಿಸಿ ಅವನನ್ನೇ ಸೋಲಿಸಿ ಅವನ ಕೃಪೆಗೆ ಪಾತ್ರರಾಗಿ ಗಣಪದವಿಗೇರಿದ ಅಚ್ಚ ಶಿವಭಕ್ತರ ಸಂಖ್ಯೆ ಹಿರಿದು. ಅವರಲ್ಲಿ ಕೆಲವರದು ವೀರಭಕ್ತಿಯಾದರೆ, ಮತ್ತೆ ಕೆಲವರದು ಮುಗ್ಧ ಭಕ್ತಿ, ಇನ್ನೂ ಕೆಲವರದು ಮಧುರ ಭಕ್ತಿ. ಆದರೆ ಎಲ್ಲರ ಭಕ್ತಿಯ ಗುರಿ ಮಾತ್ರ ಒಂದೇ : ಮೋಕ್ಷಪ್ರಾಪ್ತಿ. ಇಂಥ ಶಿವಭಕ್ತರ ಕಥೆಗಳನ್ನು ಹೆಚ್ಚಾಗಿ ಎಲ್ಲ ವೀರಶೈವ ಪುರಾಣಗಳೂ ಅಳವಡಿಸಿಕೊಂಡಿವೆ. ಕೆಲವು ಕವಿಗಳು ಒಬ್ಬೊಬ್ಬ ಭಕ್ತನ ಕಥೆಯನ್ನು ನೇರವಾಗಿ ಹೇಳಿ ತೃಪ್ತಿಪಟ್ಟರೆ; ಇನ್ನೂ ಕೆಲವರು ಒಬ್ಬ ಭಕ್ತನ ಕಥೆಯ ಜೊತೆಗೆ ಇತರ ಹಲವಾರು ಭಕ್ತರ ಕಥೆಗಳನ್ನೂ ಉಪಕಥೆಯ ರೂಪದಲ್ಲಿ ಸಂಕ್ಷಿಪ್ತವಾಗಿ ಹೆಣೆದು ತಮ್ಮ ಕೃತಿಗಳನ್ನು ಶರಣಚರಿತ್ರಕೋಶಗಳನ್ನಾಗಿಸಿದ್ದಾರೆ.

ಸಾಂಗತ್ಯದಲ್ಲಿ ಸುಮಾರು ೩೦ ಕೃತಿಗಳು ಶಿವಭಕ್ತರ ಮಹಾತ್ಮೆಗಳನ್ನು ಬಣ್ಣಿಸುತ್ತವೆ. ಪರ್ವತದೇವನ (೧೫೭೮) ನನ್ನಯ್ಯನ ಚಾರಿತ್ರ, ಮೇದಿನಿರಾಯನ (೧೬ ಶ.) ನನ್ನಯ್ಯನ ಸಾಂಗತ್ಯ, ಉದ್ದಂಡನ (೧೭೦೦) ಸುಜ್ಞಾನದೇವಚಾರಿತ್ರ, ಓದುವಗಿರಿಯ (೧೬ ಶ.), ವಿರಕ್ತದೇವ (೧೮೦೬), ಮಲ್ಲೇಶರ (೧೮ ಶ.) ಸಾನಂದ ಗಣೇಶ್ವರ ಸಾಂಗತ್ಯ, ಸಿದ್ಧಮಲ್ಲೇಶ (೧೬೩೦) ಮತ್ತು ಅಜ್ಞಾತಕವಿಯ ವೀರಸಂಗಯ್ಯನ ಸಾಂಗತ್ಯ, ಕಾಶಿನಾಥನ (೧೭೦೦) ಗುಂಡಬ್ರಹ್ಮಯ್ಯನ ಚರಿತೆ, ಅಜ್ಞಾತಕವಿಯ ಗುಂಡಬ್ರಹ್ಮಯ್ಯನ ಸಾಂಗತ್ಯ, ಶಾಂತನ (೧೬೦೦) ಸತ್ಯೇಂದ್ರ ಚೋಳರಾಯನ ಸಾಂಗತ್ಯ, ಕಸ್ತೂರಿಸಿದ್ಧನ (೧೭ ಶ.) ಗುರುಭಕ್ತನ ಕಥೆ, ಬಸವನ (೧೫೫೦) ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ, ಅಂಬುಲಿಗೆ ಚೆನ್ನಮಲ್ಲೇಶನ ಶಿಬಿಚಕ್ರವರ್ತಿ ಸಾಂಗತ್ಯ, ಅಜ್ಞಾತಕವಿಯ ಶಿಬಿರಾಯನ ಪ್ರಸಂಗ, ಶಾಂತ ವೀರದೇಶಿಕನ (೧೬೫೦) ಶಿವಗಣಚಾರಿತ್ರ, ಮಲ್ಲಿಕಾರ್ಜುನನ (೧೪೮೫) ಶ್ವೇತನ ಸಾಂಗತ್ಯ, ರುದ್ರನ (೧೮ ಶ.) ಹೇಮರೆಡ್ಡಿಮಲ್ಲಮ್ಮನ ಸಾಂಗತ್ಯ, ಮಹಾದೇವನ (೧೬೫೦) ಹೇರೂರ ಹೆಣ್ಣಿನ ಸಾಂಗತ್ಯ, ಸಿದ್ಧಲಿಂಗೇಶನ (೧೬೦೦) ಸುಜ್ಞಾನ ಬೋಧೆ, ಕಿಕ್ಕೇರಿಯಾರಾಧ್ಯ ನಂಜುಂಡನ (೧೫೫೦) ಭೈರವೇಶ್ವರ ಕಾವ್ಯ, ರಾಚಯ್ಯನ (೧೭ ಶ.) ಪಿಟ್ಟವ್ವೆಯ ಚರಿತ್ರೆ, ಸಿದ್ಧಲಿಂಗೇಶನ (೧೬೦೦) ಚಿತ್ತಾರಾಧ್ಯಚರಿತ್ರೆ, ನಾಗಣ್ಣನ (೧೯ ಶ.) ಜಗನ್ನಾಥೆಯ ಕಥೆ, ಬ್ಯಾಳಿಕಲ್ಯಾಣಪ್ಪನ (೧೯೩೭) ಹರಳಯ್ಯನ ಸಾಂಗತ್ಯ, ಅಜ್ಞಾತಕವಿಗಳ ಇಕ್ಕದಮಾರಯ್ಯನ ಸಾಂಗತ್ಯ, ಗಣಸಾಂಗತ್ಯ, ಮೇದರ ಕೇತಯ್ಯನ ಸಾಂಗತ್ಯ, ಸಾನಂದಚರಿತ್ರೆ, ಶಾಂತಿಗಣೇಶ್ವರ ಸಾಂಗತ್ಯ ಮತ್ತು ಶಂಕರಲಿಂಗಯ್ಯನ ಚಾರಿತ್ರ— ಇವೇ ಆ ಕೃತಿಗಳು.

ನನ್ನಯ್ಯನನ್ನು ಕುರಿತು ರಚನೆಗೊಂಡ ಮೂರು ಕೃತಿಗಳಲ್ಲಿ ಪರ್ವತದೇವನದು ಮೊದಲನೆಯದು ಹಾಗೂ ಉತ್ತಮವಾದುದು. ಇದರಲ್ಲಿ ೨೦ ಸಂಧಿ ೨೦೦೦ ಪದ್ಯಗಳಿವೆ. ನನ್ನಯ್ಯನ ಕಥೆಯ ಜೊತೆಗೆ ನೂರು ಉಪಕಥೆಗಳೂ ಇಲ್ಲಿ ಸಮಾವೇಶಗೊಂಡಿವೆ. ಹಾದಿಹೋಕರನ್ನು ಸುಲಿದು ತಿನ್ನುತ್ತಿದ್ದ ಮಾತಂಗತಮ್ಮನೆಂಬ ಬೇಡ, ಸುಜ್ಞಾನಿದೇವರಿಂದ ಪರಿವರ್ತನಹೊಂದಿ ನನ್ನಯ್ಯನಾಗಿ ಅವರ ಶಿಷ್ಯತ್ವ ವಹಿಸಿ ಗುರುಸಮೇತ ಕಲ್ಯಾಣಕ್ಕೆ ಹೊರಟಿರುತ್ತಾನೆ. ಮಧ್ಯ ಹಾದಿಯಲ್ಲಿ ಒಂದು ಗಿಡದ ಬುಡದಲ್ಲಿ ಗುರುವನ್ನು ಕೂರಿಸಿ ಆಹಾರ ತರಲು ಹೋಗುತ್ತಾನೆ. ಇತ್ತ ರಾಜಭಟರು ಕಳ್ಳನೆಂದು ಭಾವಿಸಿ ಸುಜ್ಞಾನಿದೇವರ ರುಂಡವನ್ನು ಕತ್ತರಿಸಿಕೊಂಡು ಹೋಗಿ ಊರ ಮುಂದಿನ ಒಂದು ಗಿಡಕ್ಕೆ ಕಟ್ಟುತ್ತಾರೆ. ನನ್ನಯ್ಯ ಮರಳಿ ಬಂದು ಗುರುವಿನ ರುಂಡವಿಲ್ಲದುದನ್ನು ಕಂಡು ತನ್ನ ರುಂಡವನ್ನು ಕಡಿದು ಗುರುವಿನ ಮುಂಡಕ್ಕೆ ಸೇರಿಸಲು ಸಿದ್ಧನಾದಾಗ ಶಿವ ಪ್ರತ್ಯಕ್ಷನಾಗಿ ಮಣ್ಣಿನ ರುಂಡವಿಡಲು ತಿಳಿಸುತ್ತಾನೆ. ಅದರಂತೆ ಮಾಡಿ ಗುರುವನ್ನು ಬದುಕಿಸಿಕೊಂಡು ನಡೆದಿರಲು ಊರ ಮುಂದಿನ ಗಿಡದಲ್ಲಿ ಗುರುವಿನ ರುಂಡ ನೇತಾಡುವುದನ್ನು ಕಂಡು ತನ್ನ ರುಂಡವನ್ನು ಕಡಿದು ಅದಕ್ಕೆ ಮುಂಡವನ್ನು ಜೋಡಿಸಲು ಉದ್ಯುಕ್ತನಾಗುತ್ತಾನೆ. ಮತ್ತೆ ಶಿವ ಪ್ರತ್ಯಕ್ಷನಾಗಿ ಮಣ್ಣಿನ ಮುಂಡ ಮಾಡಿ ಸೇರಿಸುತ್ತಾನೆ. ಹಾಗೆ ಮಾಡಿ ಇಬ್ಬರು ಗುರುಗಳನ್ನು ಪಡೆದುಕೊಂಡು ನನ್ನಯ್ಯ ಬಸವಣ್ಣನವರಲ್ಲಿಗೆ ಹೋಗಿ ದರ್ಶನ ಪಡೆದು ಅವರ ಗೌರವಕ್ಕೆ ಪಾತ್ರನಾಗುತ್ತಾನೆ. ಶಿವ ನನ್ನಯ್ಯನ ಗುರುಭಕ್ತಿನಿಷ್ಠೆಗೆ ಮೆಚ್ಚಿ ಗುರುದ್ವಯರ ಸಮೇತ ಅವನನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಇಷ್ಟು ಕಥೆ. ಇದನ್ನು ಕವಿ ವರ್ಣನೆ ಹಾಗೂ ಉಪಕಥೆಗಳನ್ನು ಜೋಡಿಸಿ ವಿಸ್ತರಿಸಿದ್ದಾನೆ. ಉಪಕಥೆಗಳ ಆಧಿಕ್ಯದಿಂದ ಮೂಲಕಥೆ ಎಲ್ಲೋ ಮಾಯವಾದಂತೆನಿಸುತ್ತದೆ. 'ಕದಳಿಯ ಫಲದೊಳು ಮಧುಘೃತಸಕ್ಕರೆಸುಧೆಗೂಡಿ ಸೇವಿಸುವಂದದಿ' ತನ್ನ ಕಾವ್ಯ ಸೊಗಸಾಗಿದೆ ಎಂದು ಕವಿ ಹೆಮ್ಮೆಯಿಂದ ಹೇಳಿಕೊಂಡಿದ್ದರೂ ಸಾಂಗತ್ಯದ ನಡೆ ಸರಾಗವಾಗಿಲ್ಲ. ಶೈಲಿ ಸ್ವಲ್ಪಮಟ್ಟಿಗೆ ಗಡುಸೆನಿಸುತ್ತದೆ.

'ಇದು ಭಕ್ತಿಯಾಗರ, ಕೈಲಾಸ ಸೋಪಾನ, ಇದು ಪುಣ್ಯಜ್ಞಾನದುದಯ, ಇದು ಮುಕ್ತಿಯ ಫಲ' ಎಂಬ ಮಾತುಗಳಲ್ಲಿ ಕೊಂಚ ಸತ್ಯಾಂಶವಿದೆ. ಭಕ್ತಿರಸ ಕಾವ್ಯದ ತುಂಬ ಪ್ರವಹಿಸಿದೆ. ಅದರಿಂದಾಗಿ ಭಾವುಕ ಭಕ್ತರು ಹಾಗೂ ಶರಣಕಥಾ ಪ್ರಿಯರುಗಳಿಗೆ ಇದು ಹೆಚ್ಚು ಮೆಚ್ಚುಗೆಯಾಗುತ್ತದೆ.

ಮೇದಿನಿರಾಯನ 'ನನ್ನಯ್ಯನ ಸಾಂಗತ್ಯ'[1] ಪರ್ವತದೇವನ ಕೃತಿಗಿಂತ ಚಿಕ್ಕದು. ಕಥೆ ೧೨ ಸಂಧಿ ೧೨೨೨ ಪದ್ಯಗಳಲ್ಲಿ ಸಂಗ್ರಹಗೊಂಡಿದೆ. ಇಲ್ಲಿ ಉಪಕಥೆಗಳ ಸಂಖ್ಯೆ ಕಡಿಮೆ. ಕವಿ ಔಚಿತ್ಯವರಿತು ಕಥಾನಾಯಕನ ಚರಿತ್ರೆಗೆ ಪೋಷಕವಾಗುವಷ್ಟನ್ನು ಮಾತ್ರ ಆರಿಸಿ ಸೇರಿಸಿಕೊಂಡಿದ್ದಾನೆ. ವರ್ಣನೆಗಳೂ ಅತಿಯೆನಿಸದೆ ಹಿತಮಿತವಾಗಿ ಬಂದಿವೆ. ಒಟ್ಟಿನಲ್ಲಿ ನಿರೂಪಣೆ, ಕಥಾತಂತ್ರ, ಶೈಲಿ ಎಲ್ಲ ದೃಷ್ಟಿಯಿಂದಲೂ ಆದಕ್ಕಿಂತ ಹೆಚ್ಚಿನ ಸೊಗಸುಗಾರಿಕೆ ಇದರಲ್ಲಿ ಎದ್ದು ಕಾಣುತ್ತದೆ.

ಉದ್ದಂಡನ 'ಸುಜ್ಞಾನಿದೇವಚಾರಿತ್ರ' ನನ್ನಯ್ಯನ ಕಥೆಯನ್ನೊಳಗೊಂಡ ಮೂರನೆಯ ಕೃತಿ. ಆದರೆ ಇದರ ಕಥಾನಾಯಕ ನನ್ನಯ್ಯನಲ್ಲ; ಅವನ ಗುರು ಸುಜ್ಞಾನಿದೇವ. ಕಥೆ ಮಾತ್ರ ಒಂದೇ. ಇದು ೭ ಸಂಧಿ ೧೧೭೮ ಪದ್ಯಗಳಲ್ಲಿ ವಿಸ್ತೃತಗೊಂಡಿದೆ. ಕವಿ ಅನವಶ್ಯಕ ವರ್ಣನೆಗಳತ್ತ ಮನಸ್ಸು ಹರಿಸದೆ 'ಗಿಡುವನು ಮಡುವನು ಪೊರಡಿ ಕಾನನವನು ಬಣ್ಣಿಸಿ ಬಳಲದಲಿ ದೃಢಭಕ್ತರ ಪದವ ನೆನೆದು' ನೇರ ಹಾಗೂ ಸರಳವಾಗಿ ಇದನ್ನು ಹೇಳಿಕೊಂಡು ಹೋಗಿದ್ದಾನೆ.

ಸಾನಂದಗಣೇಶ್ವರನನ್ನು ಸಾಂಗತ್ಯದಲ್ಲಿ ನಾಲ್ಕು ಜನ ಕವಿಗಳು ತಮ್ಮ ಕಥಾನಾಯಕನನ್ನಾಗಿ ಆರಿಸಿಕೊಂಡಿದ್ದಾರೆ. ಅವರಲ್ಲಿ ಓದುವಗಿರಿಯ ಮೊದಲಿಗ. ನರಕದಲ್ಲಿ ನರಳುತ್ತಿದ್ದ ಜನರನ್ನು ಪಂಚಾಕ್ಷರಿಮಂತ್ರದ ಮಹಿಮೆಯಿಂದ ಪೂರ್ಣಪವಿತ್ರಋಷಿಯ ಮಗನಾದ ಸಾನಂದನು ಉದ್ಧರಿಸಿ ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಈ ಕಥೆಯನ್ನು ಕವಿ ೬ ಸಂಧಿ ೪೮೩ ಪದ್ಯಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾನೆ. ನರಕದ ವರ್ಣನೆ ಅದ್ಭುತವಾಗಿದೆ. ಶೈಲಿ ಸರಳ, ಸಾಧಾರಣ.

ವಿರಕ್ತದೇವನ 'ಸಾನಂದಗಣೇಶ್ವರ ಸಾಂಗತ್ಯ' ಓದುವಗಿರಿಯನ ಕೃತಿಗಿಂತ ದೊಡ್ಡದು. ೧೧ ಸಂಧಿ ೧೨೨೩ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ಕಥೆಯಲ್ಲಿ ಯಾವ ವ್ಯತ್ಯಾಸವಿಲ್ಲ. ವರ್ಣನೆಗಳು ಮಾತ್ರ ಅವನಿಗಿಂತ ಅಧಿಕ. ಆದರೆ ಹೊಸತನ ಕಡಿಮೆ.

ಸಿದ್ಧಮಲ್ಲೇಶನ 'ವೀರಸಂಗಯ್ಯನ ಸಾಂಗತ್ಯ' ೫ ಸಂಧಿ ೫೦೫ ಪದ್ಯಗಳುಳ್ಳ ಚಿಕ್ಕ ಕಾವ್ಯ. ಇದರ ಕಥಾವಸ್ತುವನ್ನು ಕವಿ ಕೆಳಗಿನ ಕಂದಪದ್ಯಗಳಲ್ಲಿ ಹಿಡಿದಿಟ್ಟಿದ್ದಾನೆ:

> ಹರಭಕುತಿಯನೆಸಗುವನಂ
> ಧರಣಿಯನಾಳುತಲೊಬ್ಬ ವೈಷ್ಣವ ಭಾಸ್ಕರನು ।
> ಶರಣನ ಸತಿ ಚಂದ್ರಿನಿಗಂ
> ವಿರಹದಿ ಬೆಂಬಿದ್ದ ವೀರಸಂಗಯ್ಯನ ಯುದ್ಧದಿ ॥
>
> ಮರುಳತನದಿ ಭಾಸ್ಕರನುಂ
> ವರವೀರಸಂಗಯ್ಯನೊಳು ಯುದ್ಧವಾಡಲು ।
> ಹರರೂಪಿಲಿ ಬಂದಿರಿಯಲು
> ಶರಣನ ನಿಷ್ಠೆಗೆ ನಿರಂತರ ಪುರಹರನೊಲಿದಂ ॥

ಇದನ್ನು ಕವಿ ಸುಂದರವಾಗಿ ನಿರೂಪಿಸಲು ಪ್ರಯತ್ನಿಸಿದ್ದಾನೆ. ಆದರೆ ಚಂದ್ರಿನಿ ಮತ್ತು ಭಾಸ್ಕರರ ಮಧ್ಯೆ ನಡೆಯುವ ಸಂಭಾಷಣೆಯಲ್ಲಿ ಹರಿಹರರ ದೂಷಣೆ ಪೋಷಣೆಗಳನ್ನು ಅತಿಯಾಗಿ ತಂದು ಕಾವ್ಯವನ್ನು ಮತೀಯವಾಗಿಸಿದ್ದಾನೆ. ಆ ಭಾಗವನ್ನು ಬಿಟ್ಟಿದ್ದರೆ ಕಥೆಗೆ ಕುಂದೇನೂ ಆಗುತ್ತಿರಲಿಲ್ಲ. ಕಾವ್ಯದ ಉಳಿದ ಭಾಗವೆಲ್ಲ ಸರಳಸುಂದರವಾಗಿದೆ. ವೀರಸಂಗಯ್ಯ ಹಾಗೂ ಭಾಸ್ಕರರ ಸೈನ್ಯದ ಮಧ್ಯೆ ನಡೆಯುವ ಯುದ್ಧದ ವರ್ಣನೆ ರಮ್ಯವಾಗಿದೆ. ಕೃತಿ 'ಷಟ್ಪದ ಸಾಂಗತ್ಯ'ದಲ್ಲಿ ರಚನೆಗೊಂಡು ಖಂಡಪ್ರಾಸದಿಂದ ಕೂಡಿ ಸಾಂಗತ್ಯದ ನಡೆಗೆ ಹೆಚ್ಚಿನ ಬೆಡಗನ್ನುಂಟುಮಾಡಿದೆ.

ಶಾಂತನ 'ಸತ್ಯೇಂದ್ರಚೋಳರಾಯನ ಸಾಂಗತ್ಯ' ಪಂಚಾಕ್ಷರಿಮಂತ್ರಮಹಿಮೆಯನ್ನು ಮೆರೆಯುವ ಒಂದು ಮಹತ್ವದ ಕೃತಿ. ೭ ಸಂಧಿ ೧೧೧೧ ಸಾಂಗತ್ಯಗಳ ಜೊತೆಗೆ ೮ ಜೋಗುಳ ಪದ ೫ ವಚನಗಳೂ ಇದರಲ್ಲಿವೆ. ಚೋಳ

[1] ಕನ್ನಡ ಅಧ್ಯಯನಪೀಠದ ತಾ.ಪ್ರ. ೧೧೩೧

ನೆಂಬ ಅರಸು. ಮಹಾದೇವಿ ಅವನ ಸತಿ. ಮಂತ್ರಿ ಸಂಪಾಯಿ. ಅವನ ಮಗ ಮಿತವಚನ. ಅರಸುಕುಮಾರ ಮಂತ್ರಾ ಲಕ್ಷ. ಇವರಿಬ್ಬರೂ ಕೂಡಿ ರಥವೇರಿ ಒಮ್ಮೆ ವಿಹಾರಕ್ಕೆಂದು ಹೋಗುತ್ತಾರೆ. ಮರಳಿ ಬರುವಾಗ ಅರಸುಕುಮಾರನ ರಥದ ಗಾಲಿಗೆ ಒಬ್ಬ ಬಡ ಹೆಣ್ಣುಮಗಳ ಮಗ ಸಿಕ್ಕು ಮಡಿಯುತ್ತಾನೆ. ಆಕೆ ಅರಸನಿಗೆ ದೂರುಕೊಡುತ್ತಾಳೆ. ಸತ್ಯಕ್ಕೆ ಹೆಸರಾದ ಅರಸು ಅವಳ ಮಗನಿಗಾದ ಸ್ಥಿತಿ ತನ್ನ ಮಗನಿಗೂ ಆಗಲೆಂದು ರಥಗಾಲಿಗೆ ಸಿಕ್ಕಿಸಿ ಸಾಯಿಸಲು ಆಜ್ಞೆ ಕೊಡುತ್ತಾನೆ. ಹಾಗೆ ಮಾಡಲು ಮುಂಡದಿಂದ ಬೇರಾದ ಅರಸುಕುಮಾರನ ರುಂಡ ಪಂಚಾಕ್ಷರಿಮಂತ್ರವನ್ನು ಉಚ್ಚರಿಸ ತೊಡಗುತ್ತದೆ. ಅದನ್ನು ಕಂಡು ಅರಸ, ಅರಸಿ, ಮಂತ್ರಿ, ಮಂತ್ರಿಕುಮಾರ ಎಲ್ಲರೂ ರುಂಡವನ್ನು ಹಾರಿಸಿಕೊಳ್ಳಲು ಶಿವ ಮೆಚ್ಚಿ ಎಲ್ಲರಿಗೂ ಮುಕ್ತಿಯನ್ನು ಒದಗಿಸುತ್ತಾನೆ. ಇದು ಈ ಕೃತಿಯ ಕಥೆ. ತಮಿಳಿನಿಂದ ಕನ್ನಡಕ್ಕೆ ಬಂದು ಚಂಪೂ ಷಟ್ಪದಿರೂಪದಲ್ಲಿ ಪ್ರಸಿದ್ಧಿ ಪಡೆದು ಶಾಂತಕವಿಯಿಂದ ಸಾಂಗತ್ಯರೂಪದಲ್ಲಿ ರಚಿತವಾಗಿದೆ. ಸಾಂಗತ್ಯದ ನಡೆ ಸರಳ ಹಾಗೂ ಸರಾಗವಾಗಿದೆ. ವರ್ಣನೆಗಳಲ್ಲಿ ಸಾಂಪ್ರದಾಯಿಕತೆ ಇದ್ದರೂ ನವುರುಗಾರಿಕೆ. ಮಾಧುರ್ಯ ತುಂಬಿದೆ. ನಿರೂಪಣೆ ಸೊಗಸಾಗಿದೆ. ಭಕ್ತಿ, ಕರುಣ. ಶೃಂಗಾರ ರಸಗಳು ಚೆನ್ನಾಗಿ ಪ್ರತಿಪಾದಿತವಾಗಿವೆ. ಈ ಎಲ್ಲ ಕಾರಣಗಳಿಂದ ಕವಿ ತನ್ನ ಕೃತಿಯ ಬಗೆಗೆ ಹೇಳುವ 'ಲಾಲಿಸುವರ ಕಿವಿ ದಣಿಯದು, ಓದುವ ನಾಲಗೆ ದಣಿಯದು. ಹೃದಯ ಆಲಯ ದೊಳು ಶುಕಪಾಲಿರೆವದು' ಎಂಬ ಮಾತು ಸತ್ಯವೆನಿಸುತ್ತದೆ.

ಬಸವ ಅಥವಾ ಚೆನ್ನಬಸವನ 'ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ'ದಲ್ಲಿ ೮೨೫ ಸಾಂಗತ್ಯಗಳಿದ್ದು ಅವು ೪ ಸಂಧಿ ಯಲ್ಲಿ ಹಂಚಿಕೊಂಡಿವೆ. ಇದರ ಕಥಾವಸ್ತು ಕೆಳಗಿನ ಪದ್ಯಗಳಲ್ಲಿ ಸಂಗ್ರಹವಾಗಿದೆ :

> ಈ ಕೃತಿ ಚೋರಚಿಕ್ಕಯ್ಯನು ಬಸವನ । ತಾ ಕೊಲ್ವೆನೆಂದೈತರಲು
> ವ್ಯಾಕುಲ ವಿರಚಿತನಾಗಿ ಮುಕ್ತಿಯ ಪಡ । ದಾ ಕಥೆಯನು ವರ್ಣಿಸುವೆನು ॥ ೧-೨೦ ॥
>
> ಪೃಥ್ವಿಗುತ್ತರದಲ್ಲಿ ಚೋರಚಿಕ್ಕಯ್ಯನು । ಶಿತಿಕಂಠನ ಭಕ್ತನಾಗಿ
> ಸತಿಯ ಕಣ್ಣೋಟಕ್ಕೆ ಸಿಕ್ಕದೆ ಸಿರವಿತ್ತ । ಕಥೆಯ ಕೇಳುವುದು ಸಜ್ಜನರು ॥ ೧-೪ ॥

ಇದನ್ನು ಕವಿ ಕೆಲವು ಸೊಗಸಾದ ವರ್ಣನೆಗಳ ಮೂಲಕ ಹೇಳಿಕೊಂಡು ಸಾಗಿದ್ದಾನೆ. ಪ್ರಾರಂಭದ ಸಂಧಿಯಲ್ಲಿ ಚಿಕ್ಕಯ್ಯನ ಚೋರತನ, ಬಸವಣ್ಣನವರನ್ನು ಕೊಲ್ಲಹೋಗುವುದು, ಅವರ ನೋಟ ಹಾಗೂ ನುಡಿವರುಷದಿಂದ ಪರಿವರ್ತನೆ ಹೊಂದಿದ ವಿಷಯವನ್ನು ಹೇಳಿದರೆ, ಮುಂದಿನ ಮೂರು ಸಂಧಿಗಳಲ್ಲಿ ಚಿಕ್ಕಯ್ಯನ ಮಾರರೂಪದ ವರ್ಣನೆ, ಅವನನ್ನು ಕಂಡ ಸ್ತ್ರೀಯರ ವಿರಹ ವರ್ಣನೆಯನ್ನು ವಿಸ್ತಾರವಾಗಿ ಮಾಡಿದ್ದಾನೆ. ತಳವಾರ ರಾಮಯ್ಯನ ಸತಿ ಮಹಾದೇವಿ ಚಿಕ್ಕಯ್ಯನನ್ನು ಕಂಡು ರೂಪಾತಿಶಯಕ್ಕೆ ಮರುಳಾಗಿ ಮಾರನ ಬಾಧೆಯಲ್ಲಿ ಬಳಲುವ ಚಿತ್ರ ಸಹಜ ವಾಗಿದ್ದು ಕುಮಾರರಾಮನನ್ನು ಕಂಡು ರತ್ನಾಜಿ ಪಡುವ ವಿರಹತಾಪದ ಚಿತ್ರವನ್ನು ನೆನಪಿಗೆ ತರುತ್ತದೆ. ಕಾಡು, ಕಲ್ಯಾಣಪಟ್ಟಣ,ಬಸವಣ್ಣನ ಮನೆಯಲ್ಲಿ ನಡೆದ ಲಿಂಗಾರ್ಚನೆ ಜಂಗಮದಾಸೋಹಗಳ ವರ್ಣನೆ ಹಿತಮಿತವಾಗಿ ಬಂದಿವೆ. 'ವಿನಿವ ಕೋವಿದರು ಲಾಲಿಸಿ ಕೃತಿಯೊಳು ಭಕ್ತಿರಸ ಬೇಟವೆರಡು ಸಂಧಿಸುವೆ' ಎಂದು ಹೇಳಿರುವಂತೆ ಇಲ್ಲಿ ಭಕ್ತಿ-ಬೇಟಗಳೆರಡರ ಸಮ್ಮಿಲನವಾಗಿದೆ. ಭಕ್ತಿ ಶೃಂಗಾರಗಳೆರಡು ಮುಖ್ಯರಸಗಳಾಗಿ ಸಮಸಮವಾಗಿ ಪ್ರವಹಿಸಿವೆ. ಹೆಣ್ಣಿನ ಮೋಹಜಾಲಕ್ಕೆ ಸಿಲುಕಿ ನಾಶವಾಗದೆ ಆತ್ಮಯಜ್ಞದ ಬಲಿದಾನಕ್ಕೀಡಾದ ಚಿಕ್ಕಯ್ಯ, ಇಷ್ಟಲಿಂಗ ನಿಷ್ಠಾವಂತ ಭಕ್ತ ತಳವಾರ ರಾಮಯ್ಯ, ಮಾರನ ಸೆರೆಗೆ ಸಿಲುಕಿ ಅನರ್ಥಕ್ಕೀಡಾದ ಮಹಾದೇವಿ—ಈ ಪಾತ್ರಗಳು ಓದುಗರ ಮನದಲ್ಲಿ ನೆಲೆ ನಿಲ್ಲುತ್ತವೆ. 'ಬಲ್ಲರಿಗೀ ಕೃತಿ ಬೆಲ್ಲದ ಮೂಲೆಯೊಳೆಲ್ಲವ ನೋಡಲು ಮಧುರಸವು' 'ಸತ್ಯರು ಸಕಲ ಸಜ್ಜನರ ಶ್ರೋತ್ರಕ್ಕೆ ತನಿರಸ' ಎಂಬ ಕವಿಯ ಮಾತುಗಳಂತೆ ಶೈಲಿ ಮಧುರವಾಗಿದೆ.

ಶಾಂತವೀರದೇಶಿಕನ 'ಶಿವಗಣಚಾರಿತ್ರ' ೪೨ ಸಂಧಿ ೨೭೪೦ ಪದ್ಯಗಳುಳ್ಳ ಬೃಹತ್ ಕಾವ್ಯ. ಅಸಂಖ್ಯಾತ ಶಿವ ಗಣಗಳ ಚರಿತ್ರೆ ಇದರಲ್ಲಿ ವರ್ಣಿತವಾಗಿದೆ. ಕವಿ ಪಂಡಿತ ಹಾಗೂ ಪ್ರತಿಭಾನ್ವಿತನಾಗಿ ತನ್ನ ಕಾವ್ಯವನ್ನು ಗಂಭೀರ ವಾಗಿ ನಡೆಸಿಕೊಂಡು ಹೋಗಿದ್ದಾನೆ. ವಿಷಯಸಂಗ್ರಹ ಸಾಮರ್ಥ್ಯನಿರೂಪಣಾಕ್ರಮ ಮೆಚ್ಚುವಂತಿದೆ. ಶೈಲಿಯಲ್ಲಿ ಪ್ರೌಢತೆ ಎದ್ದುಕಾಣುತ್ತದೆ. 'ಕನ್ನಡಿಯಂತೆ ಕಲ್ಪದ್ರುಮದಂತೆ ಬಾವನ್ನದ ಪರಿಮಳದಂತೆ ಚೆನ್ನಾದುದೀಕಾವ್ಯವೆಂದು ರಸಿಕರಭಿವರ್ಣಿಸುವರು ತಮತಮಗೆ' ಎಂಬ ಕವಿಯ ಅಗ್ಗಳಿಕೆ ಆತ್ಮಪ್ರತ್ಯಯವೇನಲ್ಲ.

ಮಲ್ಲಿಕಾರ್ಜುನನ 'ಶ್ವೇತನ ಸಾಂಗತ್ಯ' ಶೃಂಗಾರ-ಭಕ್ತಿರಸಗಳನ್ನು ಮೈಗೂಡಿಸಿಕೊಂಡು ರಚಿತವಾದ ಒಂದು ಚಿಕ್ಕ ಕಾವ್ಯ. ಪೂರ್ವದಲ್ಲಿ ಅತಿಕಾಮಿಯಾಗಿ ಸದಾ ಗಣಿಕೆಯರ ಮಧ್ಯೆ ಕಾಮಕೇಳಿಯಲ್ಲಿ ಕಾಲ ಕಳೆಯುತ್ತಿದ್ದ ಶ್ವೇತ

ರಾಜ ಒಬ್ಬ ವೇಶ್ಯೆಯಿಂದ ತನ್ನ ಮನದ ಕಾಳಿಕೆಯನ್ನು ಕಳೆದುಕೊಂಡು ಶಿವಭಕ್ತನಾಗುತ್ತಾನೆ. ಅವನ ಹಿಂದಿನ ಪಾಪ ಕಾರ್ಯಗಳನ್ನು ಗಮನಿಸಿ ಯಮದೂತರು ಬಂದು ಎಳೆದೊಯ್ಯುತ್ತಿರುವಾಗ ಶಿವನು ಪ್ರೇತಪತಿಯ ಸೊಕ್ಕನ್ನು ಮುರಿದು ಶ್ವೇತನನ್ನು ಕಾಪಾಡಿ ತನ್ನ ಲೋಕಕ್ಕೆ ಕರೆದೊಯ್ಯುತ್ತಾನೆ. ಇಷ್ಟು ಕಥೆಯನ್ನು ಕವಿ ಕೆಲವು ವರ್ಣನೆಗಳ ಮೂಲಕ ಮೂರು ಸಂಧಿಗಳವರೆಗೆ ಬೆಳೆಸಿದ್ದಾನೆ. ಕಾವ್ಯಶೈಲಿ ಸರಳವಾಗಿದೆ. ವರ್ಣನೆಗಳಲ್ಲಿ ಕೆಲವು ಶೃಂಗಾರ ಚಿತ್ರಗಳು ರಂಜಕವಾಗಿವೆ.

ಜೈನಾಪುರದ ರುದ್ರನ 'ಹೇಮರೆಡ್ಡಿ ಮಲ್ಲಮ್ಮನ ಸಾಂಗತ್ಯ'[1] ೧ ಸಂಧಿ ೬೧೪ ಪದ್ಯಗಳುಳ್ಳ ಮತ್ತೊಂದು ಪುಟ್ಟ ಕಾವ್ಯ. ಹೇಮರೆಡ್ಡಿಯ ಸೊಸೆ ಮಲ್ಲಮ್ಮನ ಭಕ್ತಿಯ ಕಥೆ ಇದರ ವಸ್ತು. ಇದನ್ನು ಕವಿ ದೇಶೀಶೈಲಿಯಲ್ಲಿ ಸುಂದರವಾಗಿ ಹೆಣೆದಿದ್ದಾನೆ. 'ಕದ್ದು ತೆಗತಂದು ಮುದ್ದಿಮಾಡಿ ಸಲಿಸಿ ಬಿದ್ದು ಹೋದವರ ಕಥೆಯಲ್ಲ' ಎಂದು ತನ್ನ ಕಥಾವಸ್ತುವಿನ ಅಸಾಮಾನ್ಯತೆಯನ್ನು ತಿಳಿಸಿ, 'ರುದ್ರನ ನುಡಿಯನು ಅದ್ರವೆಂದೆನಬೇಡಿ ಚಿದ್ರೂಪ ಶಿವನು ನುಡಿಸಿದನು' ಎಂದು ತನ್ನ ಕಾವ್ಯಶಕ್ತಿಯನ್ನು ವರ್ಣಿಸಿ, 'ಸದ್ದುಮಾಡದೆ ಕೇಳಿ ಬುದ್ಧಿವುಳ್ಳವರೆಲ್ಲ ನಿದ್ದಿಗಣ್ಣೆಂದು ಅನಬೇಡಿ. ಮಿದ್ದು ಮಾಡಿದ ರೊಟ್ಟಿ ಗಾರಿಗೆ ತುಪ್ಪವ ಮೆದ್ದಂತೆ ಕರ್ಣಕಮೃತವು' ಎಂದು ಕಾವ್ಯದ ಸೊಗಸನ್ನು ಕುರಿತು ಹೇಳಿಕೊಂಡಿದ್ದಾನೆ. ಹೇರಳವಾದ ಆಡುನುಡಿಯ ಬಳಕೆ ಹಾಗೂ ಖಂಡಪ್ರಾಸಯೋಜನೆಯಿಂದಾಗಿ ಕಾವ್ಯಕ್ಕೆ ಹೊಸ ಕಸುವು ಬಂದಿದೆ.

ಮಹಾದೇವನ 'ಹೇರೂರ ಹೆಣ್ಣಿನ ಸಾಂಗತ್ಯ' ಇನ್ನೊಬ್ಬ ಶಿವಭಕ್ತೆಯ ಚರಿತ್ರೆಯನ್ನು ಹೇಳುವ ಕಾವ್ಯ. ಇದರ ವಸ್ತು ಕೆಳಗಿನ ಪದ್ಯದಲ್ಲಿ ಅಳವಟ್ಟಿದೆ:

ಹೇರೂರ ಹೆಣ್ಣು ಜೈನನ ಕಂಡು ಮನಹೇಸಿ । ಮಾರಮರ್ದನನೊಳೆಗೈದಿ ।
ನಾರಿ ಗಂಡಾಗಿ ಧಾರಿಣಿಯೊಳು ಮೆರೆದ ವಿ ।ಚಾರವನೊಲಿದು ಬಣ್ಣಿಸುವೆ ॥

ಇದನ್ನು ಕವಿ 'ಗುರು ತಾಯಿ ತಂದೆ ಗೋತ್ರವ ಕೊಂದ ಕಥೆಯಲ್ಲ, ನರರ ಹೊಗಳುವ ಮತವಲ್ಲ, ಪರಧನ ಪರಸತಿಗೆಳಸಿದ ನುಡಿಯಲ್ಲ, ಹರನ ಸಂಗತಿಯ ಕೇಳುವುದು' ಎಂದು ಸರಳಸುಂದರವಾಗಿ ೨ ಸಂಧಿ ೪೫೬ ಪದ್ಯಗಳಲ್ಲಿ ಹೇಳಿ ಮುಗಿಸಿದ್ದಾನೆ. ಹೇರೂರ ಹೆಣ್ಣಿನ ಬಾಲಲೀಲೆ, ಶಿವಪೂಜಾನಿಷ್ಠೆ, ತನ್ನನ್ನು ಭವಿಗೆ ಸತಿಯನ್ನಾಗಿ ಮಾಡಿಕೊಟ್ಟಾಗ ಶಿವನಲ್ಲಿ ಅವಳಿಟ್ಟ ಮೊರೆ, ಶಿವ ಅವಳ ಮೊರೆ ಕೇಳಿ ಗಂಡುರೂಪ ಕೊಟ್ಟ ಬಗೆ, ಗಂಡಾಗಿಯೇ ಅವಳು ಕೊನೆಯವರೆಗೆ ಶಿವನನ್ನು ಪೂಜಿಸಿ ಅವನಲ್ಲಿ ಬೆರೆತ ರೀತಿ—ಮುಂತಾದ ಸನ್ನಿವೇಶಗಳನ್ನು ತನ್ನ ಪ್ರತಿಭಾನುಸಾರ ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ಮದುವೆಯ ಸಂಭ್ರಮ, ಊಟೋಪಚಾರ, ಹೆಣ್ಣು ಗಂಡನ ಮನೆಗೆ ಹೊರಟಾಗ ಅವಳ ಜೊತೆ ಕಳಿಸಿದ ವಸ್ತುಗಳ ವಿವರ ವಾಸ್ತವಿಕವಾಗಿ ಮೂಡಿಬಂದಿವೆ. ಇಲ್ಲೆಲ್ಲ ಕವಿಯ ಲೋಕಾನುಭವ, ಸೂಕ್ಷ್ಮದೃಷ್ಟಿ ಎದ್ದು ಕಾಣುತ್ತದೆ.

ಕಿಕ್ಕೇರಿಯಾರಾಧ್ಯ ನಂಜುಂಡನ 'ಸಾಸಲ ಭೈರವೇಶ್ವರ ಕಾವ್ಯ' ೫ ಸಂಧಿ ೧೨೨೭ ಸಾಂಗತ್ಯಗಳಲ್ಲಿ ನಿರೂಪಿತವಾದ ಕೃತಿ. 'ಸಾಸಲಪುರದ ಸೋಮೇಶನುನ್ನತ ಭೈರವೇಶನಿಗೊಲಿದು ಕೈಲಾಸವಾಸಕೊಯ್ದ ಕಥೆ' ಇದರ ವಸ್ತು. ಭೈರವೇಶ್ವರನ ಭಕ್ತಿಕಥೆಯ ಜೊತೆಗೆ ಅಸಂಖ್ಯಾತ ಶಿವಶರಣರ ಚರಿತ್ರೆಗಳು ಸಂಕ್ಷಿಪ್ತವಾಗಿ ಹೆಣೆದುಕೊಂಡು ಇದೊಂದು 'ಶರಣಕಥಾಕೋಶ'ವಾಗಿದೆ. ಕವಿ ತನ್ನ ಕಾವ್ಯ 'ಭಕ್ತಿಯ ತಾಣ ಸನ್ಮುಕ್ತಿಯ ಸದನ ವಿರಕ್ತಿಯ ಸೀಮೆ ಮೋಹನದ ಸೂಕ್ತಿಯ ಸಿರಿ ಸರಸೋಕ್ತಿಯ ನೆಲೆ' 'ಚದುರರಮೆಚ್ಚು ಮೇಣ್ ಬುಧರಚ್ಚು ಸತ್ಕಲಾವಿದರ ವಿಲಾಸದ ಪೆರ್ಚು ಮುದದೊಳೋದುವರ ಭಾವದ ಕಿಚ್ಚು ನಂಜಪೇಳಿದ ಕಾವ್ಯವಘಾರಣ್ಯ ಕಿಚ್ಚು' ಎಂದು ಹೇಳಿಕೊಂಡಿದ್ದಾನೆ. ಈ ಹೇಳಿಕೆ ಬಹುಮಟ್ಟಿಗೆ ಸತ್ಯವೆನಿಸುತ್ತದೆ.

ಕವಿ ತನ್ನ ಕಾವ್ಯವನ್ನು ಭಕ್ತಿಭಾವ ತುಂಬಿ ಹೇಳಿದ್ದಾನೆ. ವೀರಶೈವಪುರಾಣಪರಂಪರೆಯನ್ನು ಚಾಚೂತಪ್ಪದೆ ಅನುಸರಿಸಲು ಪ್ರಯತ್ನಿಸಿ ಹೆಚ್ಚಿನ ಯಶಸ್ಸನ್ನು ಸಾಧಿಸಿದ್ದಾನೆ. ಭೈರವೇಶ್ವರನ ಚರಿತ್ರೆ ಅಸಾಮಾನ್ಯ ಹಾಗೂ ಆದರ್ಶವಾಗಲು ಅನೇಕ ಶಿವಶರಣರ ಕಥೆಗಳನ್ನು ಜೋಡಿಸಿರುವುದು, ಹಲವಾರು ಪವಾಡಗಳನ್ನು ಅವನಿಗೆ ಆರೋಪಿಸಿರುವುದು ಕಂಡುಬರುತ್ತದೆ. ಕಥೆಯ ಮೂಲಕ ಪರ್ಯಾಯವಾಗಿ ವೀರಶೈವತತ್ತ್ವಪ್ರತಿಪಾದನೆಯೂ ನಡೆದಿದೆ. ಕಾವ್ಯನಿರೂಪಣೆ ಸೊಗಸಾಗಿದೆ. ಶೈಲಿ ಸರಳ ಹಾಗೂ ನಿರರ್ಗಳವಾಗಿದೆ. ವರ್ಣನೆಗಳು ನವೀನವಾಗಿವೆ. ಖಂಡಪ್ರಾಸ

---

[1] ಕನ್ನಡ ಅಧ್ಯಯನಪೀಠದ ತಾ.ಪ್ರ. ೧೩೪೬

ಪರಿಪಾಲನೆಯಿಂದ ಸಾಂಗತ್ಯದ ನಡೆಗೆ ಬೇರೊಂದು ಬೆಡಗು ಉಂಟಾಗಿದೆ. ಒಟ್ಟಿನಲ್ಲಿ ವಸ್ತು. ಶೈಲಿ. ಛಂದಸ್ಸು. ನಿರೂಪಣೆ ಎಲ್ಲ ವಿಧದಿಂದಲೂ ಇದೊಂದು ವಿಶಿಷ್ಟ ಕೃತಿಯೆನಿಸಿದೆ.

ಅಜ್ಞಾತಕವಿಯ 'ಮೇದರಕೇತಯ್ಯನ ಸಾಂಗತ್ಯ'[1] ೧ ಸಂಧಿ ೩೪೬ ಪದ್ಯಗಳಲ್ಲಿ ಪಲ್ಲವಿಸಿ ನಿಂತ ಚಿಕ್ಕ ಚೊಕ್ಕ ಕಾವ್ಯ. ಬಸವಸಮಕಾಲೀನ ಶರಣಶ್ರೇಷ್ಠ ಮೇದರ ಕೇತಯ್ಯನ ಚರಿತ್ರೆ ಇದರ ವಸ್ತು. ಆ ಕಥೆ ಈ ಪದ್ಯದಲ್ಲಿ ಸಂಗ್ರಹಗೊಂಡಿದೆ :

ಪೊಡವಿಯರಿಯೆ ಮೇದರಕೇತಿ ತಂದೆಯ । ಅಡಿವಿಡಿದಸುಗೂಡಿ ಬಸವ ।
ಮಡಿವಾಳ ಮೃಡಗೆ ಪಂಗುರವಿಕ್ಕಿ ಪ್ರಾಣವ । ಪಡಮುದೀ ಶರಣ ಸಾಂಗತ್ಯ ॥ ೧–೬ ॥

ಇದನ್ನು ವೀರಶೈವತತ್ವಜ್ಞಾನಿ ಹಾಗೂ ಅನುಭಾವಿಯಾದ ಕವಿ ಸುಂದರವಾಗಿ ನಿರೂಪಿಸಿದ್ದಾನೆ. ಶರಣರ ಗುಣಗಾನ ಮಾಡುವಲ್ಲಿ ಅವರ ಶ್ರೇಷ್ಠತೆಯನ್ನು ಹೇಳುವಲ್ಲಿ ಅವನ ಲೇಖನಿ ಶಿವಸ್ವರೂಪವನ್ನು ತಾಳಿದೆ. ಬಸವಣ್ಣನವರ ಗುಣಾಧಿಕ್ಯ ಹಾಗೂ ಪವಾಡಗಳನ್ನು ವರ್ಣಿಸುವುದೆಂದರೆ ಅವನಿಗೆ ಎಲ್ಲಿಲ್ಲದ ಆನಂದ. ಅದಕ್ಕಾಗಿ ನಾರದನ ಮುಖಾಂತರ ಬಸವಣ್ಣನವರು ಮೆರೆದ ಪವಾಡಗಳನ್ನೆಲ್ಲ ಹೇಳಿಸಿ ತೃಪ್ತಿಪಟ್ಟಿದ್ದಾನೆ. ಈ ಕಾವ್ಯದ ಹೆಸರು ಮೇದರಕೇತಯ್ಯನ ಸಾಂಗತ್ಯವೆಂದಿದ್ದರೂ ಕಾವ್ಯದ ತುಂಬೆಲ್ಲ ಬಸವ ಸೌಗಂಧ ಹರಡಿದೆ. ಕೇತಯ್ಯನ ಕಥೆ ಮೂಲ ಎಳೆಯಂತೆ ಬಂದಿದ್ದರೆ ಬಸವಣ್ಣ. ಮಡಿವಾಳ ವ್ಯಕ್ತಿತ್ವವಿಶೇಷಗಳು ಬಹುಭಾಗವನ್ನು ಆಕ್ರಮಿಸಿವೆ. ಕಾವ್ಯದ ಶೈಲಿ ಪ್ರಾಸಾದಿಕವಾಗಿದೆ. ಕೆಲವು ದೃಷ್ಟಾಂತಗಳು. ವರ್ಣನೆಗಳು ಹೊಸತೆನಿಸುತ್ತವೆ. ಭಕ್ತಿರಸ ಕಾವ್ಯದ ತುಂಬ ಹರಿದಿದೆ.

ನಾಗಣ್ಣನ 'ಜಗನ್ನಾಥೆಯ ಕಥೆ'[2] ಶಿವಭಕ್ತೆಯೊಬ್ಬಳ ಚರಿತ್ರೆಯನ್ನೊಳಗೊಂಡ ಸಾಧಾರಣ ಕಾವ್ಯ. ೩ ಸಂಧಿ ೧೭೨ ಪದ್ಯಗಳಲ್ಲಿ ಕವಿ ಇದನ್ನು ಹೇಳಿ ಮುಗಿಸಿದ್ದಾನೆ. ಜಗನ್ನಾಥೆ ಒಬ್ಬ ಪತಿವ್ರತಾಶಿರೋಮಣಿ. ಆಕೆ ಗುಪ್ತವಾಗಿ ೧೨ ವರ್ಷಗಳ ಕಾಲ ಅತ್ತೆ ತನಗಿತ್ತ ಅಂಬಲಿಯನ್ನು ಕೇದಾರನಾಥನಿಗೆ ಅರ್ಪಿಸಿ ಅವನ ಕೃಪೆಗೆ ಪಾತ್ರಳಾಗಿ, ಜೀವನದಲ್ಲಿ ಎಷ್ಟೇ ಕಷ್ಟಬಂದರೂ ಸಹಿಸಿ, ಕೊನೆಗೆ ಶಿವನನ್ನು ಮಾತನಾಡಿಸಿ ತನ್ನ ಗುಪ್ತಭಕ್ತಿಯನ್ನು ಪ್ರಕಟಪಡಿಸಿ. ಕಷ್ಟಕೊಟ್ಟ ಅತ್ತೆ, ಕರುಣೆತೋರಿದ ಪಟ್ಟಣಶೆಟ್ಟಿ, ಕೈಹಿಡಿದ ಪತಿಸಮೇತ ಕೈಲಾಸಕ್ಕೆ ಹೋಗುತ್ತಾಳೆ. ಈ ಕಥೆ ಯಾವ ವರ್ಣನೆಗಳನ್ನೂ ಮೈಗೂಡಿಸಿಕೊಳ್ಳದೆ ನೇರವಾಗಿ ನಿರೂಪಿತವಾಗಿದೆ. ಕಥೆ ಹೇಳುವಷ್ಟೆ ಈ ಕವಿಯ ಉದ್ದೇಶವಾಗಿರುವುದರಿಂದ ಉಳಿದ ಅಂಶಗಳ ಬಗೆಗೆ ಅವನು ವಿಚಾರಿಸಿದಂತಿಲ್ಲ. ಅದಕ್ಕಾಗಿ ಕಾವ್ಯ ಸಾಮಾನ್ಯವಾಗಿದೆ.

## ೬. ವಿರಕ್ತರ ಚರಿತ್ರೆಗಳು

ವಿಜಯನಗರದ ವೀರಶೈವ ದೊರೆ ಪ್ರೌಢದೇವರಾಯನ ಕಾಲಕ್ಕೆ ಆಗಿಹೋದ ನೂರೊಂದು ವಿರಕ್ತರು. ತದನಂತರ ಉದಿಸಿದ ಏಳುನೂರೊಂದು ವಿರಕ್ತರು ಆಧ್ಯಾತ್ಮ—ಅನುಭಾವಪ್ರಪಂಚದಲ್ಲಿ ಏರಿದ ಎತ್ತರ. ಸಾಹಿತ್ಯಕ್ಷೇತ್ರದಲ್ಲಿ ಗೈದ ಕಾರ್ಯ ವಿಶಿಷ್ಟವಾದುವು. ಅವರಲ್ಲಿ ಕೆಲವರು ಬಸವಾದಿಶರಣರು ರಚಿಸಿದ ವಚನಗಳನ್ನು ಒಂದೆಡೆ ಕೂಡಿಸಿ ಸ್ಥಲಸಂಯೋಜನೆ. ಸಂಪಾದನೆ. ಟೀಕೆ, ಟಿಪ್ಪಣಿ ಬರೆಯುವ ಕಾರ್ಯದಲ್ಲಿ ತೊಡಗಿದರೆ. ಮತ್ತೆ ಕೆಲವರು ಸ್ವತಂತ್ರ ಕೃತಿಗಳನ್ನು ರಚಿಸಿದರು. ಇನ್ನೂ ಕೆಲವರು ವಚನರಚನೆ ಮಾಡಿ ೧೨ನೆಯ ಶತಮಾನದ ಶರಣರ ವಿಶಿಷ್ಟ ಸಾಹಿತ್ಯ ಪ್ರಕಾರವನ್ನು ಮುಂದುವರೆಸಿಕೊಂಡು ಸಾಗಿದರು. ಇವರು ನಡೆಸಿದ ಉನ್ನತಮಟ್ಟದ ಆಧ್ಯಾತ್ಮಜೀವನ ಹಾಗೂ ಕಾರ್ಯಗಳು ಅನೇಕ ಕವಿಗಳನ್ನು ಆಕರ್ಷಿಸಿ ಕೃತಿ ರಚನೆಗೆ ಪ್ರೇರಣೆ ನೀಡಿದವು. ಹಾಗೆ ರಚನೆಗೊಂಡ ವಿವಿಧ ಪ್ರಕಾರದ ಹಲವು ಕಾವ್ಯಗಳಲ್ಲಿ ಸಾಂಗತ್ಯರೂಪದ ನಾಲ್ಕು ಕೃತಿಗಳೂ ಸಮಾವೇಶಗೊಳ್ಳುತ್ತವೆ.

ಸಾಂಗತ್ಯದಲ್ಲಿ ವಿರಕ್ತರನ್ನು ಕುರಿತು ಸದ್ಯ ದೊರೆತ ನಾಲ್ಕು ಕೃತಿಗಳಲ್ಲಿ ಒಂದು ನೂರೊಂದು ವಿರಕ್ತರಲ್ಲಿ ಒಬ್ಬನಾದ ಕರಸ್ಥಲದ ನಾಗಿದೇವನಿಗೆ ಸಂಬಂಧಿಸಿದರೆ, ಉಳಿದ ಮೂವರಲ್ಲಿ ಎರಡು ಏಳನೂರೊಂದು ವಿರಕ್ತರಲ್ಲಿ ಪ್ರಮುಖರಾದ ತೋಂಟದ ಸಿದ್ಧಲಿಂಗಯತಿಗಳಿಗೂ ಒಂದು ಸೊಪ್ಪೆಬಸವೇಶ್ವರನಿಗೂ ಸಂಬಂಧಿಸಿವೆ.

ರುದ್ರನ (೧೬೫೦) 'ಕರಸ್ಥಲ ನಾಗಲಿಂಗನಚರಿತ್ರೆ' ನೂರೊಂದು ವಿರಕ್ತರಲ್ಲಿ ಪ್ರಥಮನಾಗಿ ತ್ರಿವಿಧಿ. ಚೌಪದ, ತಾರಾವಳಿ, ವಚನ, ಕಾಲಜ್ಞಾನ, ಸ್ವರವಚನಗಳನ್ನು ಬರೆದು, ಗುಮ್ಮಳಾಪುರದ ಶಾಸನದಲ್ಲಿ ಉಕ್ತವಾದ ಕರಸ್ಥಲ

[1] ದಾವಣಗೆರೆ ಪ್ರತಿ.

[2] ಕನ್ನಡ ಅಧ್ಯಯನಪೀಠದ ತಾ.ಪ್ರ ೧೩೪೧

ನಾಗಿದೇವನ ಚರಿತ್ರೆಯನ್ನು ವರ್ಣಿಸುವ ಮಧ್ಯಮ ಗಾತ್ರದ ಕಾವ್ಯ. ಇದರಲ್ಲಿ ೧೧ ಸಂಧಿ ೯೫೨ ಪದ್ಯಗಳಿವೆ. ಸಾಂಗತ್ಯದ ಜೊತೆಗೆ ಕಂದ. ವೃತ್ತ. ಸೌತ್ರ್ಯದ ವಚನಗಳೂ ಕೂಡಿಕೊಂಡಿವೆ.

ಬೊಮ್ಮೂರು ಎಂಬ ಪಟ್ಟಣದಲ್ಲಿ ದಾಸೀಶನೆಂಬ ಅರಸು ಆಳುತ್ತಿದ್ದ. ಅವನ ಸತಿ ಚಂದ್ರಿನಿ. ಆ ಪಟ್ಟಣದಲ್ಲಿ ನಾಗಯ್ಯನೆಂಬ ಅಕ್ಕಸಾಲಿಗ ನಾಗಕನ್ಯೆಯೊಡನೆ ಸಂಸಾರ ಮಾಡುತ್ತ ತನ್ನ ವೃತ್ತಿಯಲ್ಲಿ ತೊಡಗಿದ್ದ. ಒಮ್ಮೆ ಅರಸು ಅವನನ್ನು ಕರೆದು ತನ್ನ ರಾಣಿಗೆ ಹಾರಮಾಡಿಕೊಡೆಂದು ಅಪ್ಪಣೆಯಿತ್ತ. ಅದರಂತೆ ನಾಗಯ್ಯ ಹಾರ ಮಾಡಿಕೊಡಲು ಹೋದಾಗ ರಾಣಿ ಚಂದ್ರಿನಿ ಅವನ ರೂಪಾತಿಶಯಗಳನ್ನು ಕಂಡು ಮೋಹಿತಳಾಗುತ್ತಾಳೆ. ಒಂದು ದಿನ ಅರಸನಿಲ್ಲದ ಸಮಯ ನೋಡಿ ತನ್ನ ಸಖಿಯ ಮುಖಾಂತರ ಉಪಾಯದಿಂದ ಅವನನ್ನು ಅರಮನೆಗೆ ಕರೆಸುತ್ತಾಳೆ. ಏನೂ ಅರಿಯದೆ ಬಂದ ನಾಗಯ್ಯನನ್ನು ಸರಸಕ್ಕೆಳೆಯಲು ಪ್ರಯತ್ನಿಸುತ್ತಾಳೆ. ಅವಳ ಕುವಿಚಾರ ಅರಿತ ನಾಗಯ್ಯ ಉಪದೇಶ ಮಾಡಿ ಮನಃಪರಿವರ್ತನಗೊಳಿಸಿ ಸುಮಾರ್ಗದಲ್ಲಿ ನಡೆಯ ಹಚ್ಚುತ್ತಾನೆ. ತಾನು ಕರಸ್ಥಲದಲ್ಲಿ ಲಿಂಗ ಧರಿಸಿ ಜಂಗಮವೇಷದಿಂದ ಅರಮನೆಯಿಂದ ಹೊರಬಿದ್ದು ಸತಿಸುತರನ್ನು ತ್ಯಜಿಸಿ ವಿರಕ್ತನಾಗಿ ಲೋಕಸಂಚಾರಮಾಡುತ್ತ ಅನೇಕ ಪವಾಡಗಳನ್ನು ಮೆರೆದು ತನ್ನ ಗುರು ಶಾಂತವೀರಯ್ಯನ ಸಮೇತ ಕೈಲಾಸಕ್ಕೆ ಹೋಗುತ್ತಾನೆ.

ಇದು ಕೃತಿಯ ಸಾರ. ಚೆನ್ನಬಸವ ಪುರಾಣದಲ್ಲಿ ಬರುವ ಕಥೆಗೂ ಇದಕ್ಕೂ ವ್ಯತ್ಯಾಸವಿದೆ. ಅಲ್ಲಿ ನಾಗಯ್ಯ ವ್ಯಭಿಚಾರಕ್ಕಾಗಿ ತಾನೇ ಒಬ್ಬ ಸ್ತ್ರೀಯ ಮನೆಯನ್ನು ಹೊಗುತ್ತಾನೆ. ಅದನ್ನು ಕಂಡು ಜನ [ಗಲಭೆಯೆಬ್ಬಿಸಲು ಸಂಸಾರ ತೊರೆದು ವಿರಕ್ತನಾಗಿ ಲಿಂಗದ ಪೀಠವನ್ನು ಕಿತ್ತೆಸೆದು ಬರಿಲಿಂಗವನ್ನು ಕರಸ್ಥಲದಲ್ಲಿ ಧರಿಸಿ ಹುಚ್ಚನಂತೆ ಅಲೆಯುತ್ತ ಸಾಗುತ್ತಾನೆ. ಈ ಪ್ರಮುಖ ಘಟನೆಯನ್ನು ಕವಿ ರುದ್ರ ಜಾಣ್ಮೆಯಿಂದ ಬದಲಿಸಿ. ಹಾದರದ ಪ್ರಸಂಗವನ್ನು ಹಾರದ ಪ್ರಸಂಗವನ್ನಾಗಿ ಪರಿವರ್ತಿಸಿ ಕಥಾನಾಯಕನ ಪಾತ್ರಕ್ಕೆ ತಗುಲಬಹುದಾದ ಕಲಂಕವನ್ನು ದೂರಮಾಡಿದ್ದಾನೆ. ಕವಿ ಸಂಪ್ರದಾಯಶರಣ. ಎಲ್ಲರಂತೆ ತನ್ನ ಕಾವ್ಯವು ಎಲ್ಲವನ್ನೂ ಒಳಗೊಳ್ಳಬೇಕೆಂದು ಅಷ್ಟಾದಶವರ್ಣನೆಗಳನ್ನು ತರಲು ಪ್ರಯತ್ನಿಸಿದ್ದಾನೆ. ಅವುಗಳಲ್ಲಿ ಹಳತು ಹೊಸತುಗಳ ಸಮ್ಮಿಲನ ಕಂಡುಬರುತ್ತದೆ. ವೇದಾಂತ, ಯೋಗವನ್ನು ಕುರಿತು ನಾಗಲಿಂಗಯ್ಯ ಮತ್ತು ಅವನ ಗುರು ಶಾಂತವೀರಯ್ಯರ ಮಧ್ಯೆ ನಡೆಯುವ ಸಂಭಾಷಣೆ ಮಾರ್ಮಿಕವಾಗಿದೆ. ಲೌಕಿಕ, ಆಧ್ಯಾತ್ಮಿಕ ವಿಷಯಗಳ ಜೊತೆಗೆ ನೀತಿಬೋಧೆಯೂ ಬೆರೆತಿದೆ. 'ಷಟ್ಪದ ಸಾಂಗತ್ಯ'ದಲ್ಲಿ ರಚನೆಗೊಂಡ ಈ ಕಾವ್ಯದ ಶೈಲಿ ಅಷ್ಟೊಂದು ಸರಳವಾಗಿಲ್ಲ.

ತೋಂಟದ ಸಿದ್ಧಲಿಂಗರನ್ನು ಕಥಾನಾಯಕನನ್ನಾಗಿ ಸ್ವೀಕರಿಸಿದ ಎರಡು ಕಾವ್ಯಗಳಲ್ಲಿ ಒಂದು ವೀರಶೈವಕವಿಯಿಂದ ರಚನೆಯಾಗಿದ್ದರೆ. ಮತ್ತೊಂದು ಬ್ರಾಹ್ಮಣ ಕವಿಯಿಂದ ನಿರೂಪಿತವಾಗಿದೆ.

ಸುಮ್ಮಿ ಮಲ್ಲಕವಿಯ (೧೬೦೦) 'ತೋಂಟದ ಸಿದ್ಧೇಶ್ವರ ಸಾಂಗತ್ಯ'[1] ೫ ಸಂಧಿ ೬೩೮ ಪದ್ಯಗಳುಳ್ಳ ಕಿರಿಯ ಗಾತ್ರದ ಕಾವ್ಯ. ಹೆಸರೇ ಸೂಚಿಸುವಂತೆ ತೋಂಟದ ಸಿದ್ಧಲಿಂಗೇಶ್ವರರ ಚರಿತ್ರೆ ಇದರ ವಸ್ತು. ಸಿದ್ಧೇಶ್ವರ ಸ್ವಪ್ನದಲ್ಲಿ ಕಾಣಿಸಿಕೊಂಡು ಕೃತಿ ರಚಿಸೆಂದು ಪ್ರೇರೇಪಿಸಲು ತಾನು ಬರೆದುದಾಗಿ ಕವಿ ಹೇಳಿಕೊಂಡಿದ್ದಾನೆ. ಸಿದ್ಧೇಶ್ವರರು ಮೆರೆದ ಹಲವಾರು ಪವಾಡಗಳು ಇದರಲ್ಲಿ ವರ್ಣಿತವಾಗಿವೆ. ಅತಿ ವರ್ಣನೆಗೆ ತನ್ನ ಕಾವ್ಯಶಕ್ತಿಯನ್ನು ಖರ್ಚು ಮಾಡದೆ ಕವಿ ಉಚಿತಕ್ಕೆ ತಕ್ಕಷ್ಟನ್ನು ಹೇಳಿ ಕಾವ್ಯವನ್ನು ಉತ್ತಮವಾಗಿಸಿದ್ದಾನೆ. ಮೊದಲಿನ ನಾಲ್ಕು ಸಂಧಿಗಳಲ್ಲಿ ಸಿದ್ಧೇಶ್ವರನ ಪವಾಡಮಯ ಚರಿತ್ರೆ ಸುಂದರವಾಗಿ ಬಂದಿದೆ. ಕೊನೆಯ ಸಂಧಿಯಲ್ಲಿ ಲಿಂಗದೊಳಗಾದ ಸಿದ್ಧೇಶ್ವರನ ದೇಹವನ್ನು ವಿಮಾನದಲ್ಲಿರಿಸಿ ಎಡೆಯೂರಿನಲ್ಲಿ ಮೆರವಣಿಗೆ ಮಾಡಿದ ವೈಭವದ ವರ್ಣನೆ. ಆ ಸಮಾರಂಭಕ್ಕೆ ವಿವಿಧ ಸ್ಥಳಗಳಿಂದ ಆಗಮಿಸಿದ ವ್ಯಕ್ತಿಗಳ ವಿವರಣೆ ಸಹಜವಾಗಿ ಮೂಡಿಬಂದಿದೆ. ಇಂಥ ಇನ್ನೂ ಕೆಲವು ವಿಶಿಷ್ಟ ಸನ್ನಿವೇಶ. ಸರಳ ಶೈಲಿ ಹಾಗೂ ನೇರ ನಿರೂಪಣೆಯಿಂದ ಇದೊಂದು ಗಮನಾರ್ಹ ಕೃತಿಯಾಗಿದೆ.

'ಸಿದ್ಧಲಿಂಗೇಶ್ವರ ಸಾಂಗತ್ಯ' ಬ್ರಾಹ್ಮಣಕವಿ ಹೇರಂಬ (೧೭೯೯)ನಿಂದ ರಚಿತವಾದ. ಮಲ್ಲಕವಿಯ ಕೃತಿಗಿಂತ ಹಿರಿದಾದ ಕಾವ್ಯ. ೨೫ ಸಂಧಿ ೧೪೯೯ ಪದ್ಯಗಳಲ್ಲಿ ಸಿದ್ಧಲಿಂಗೇಶ್ವರರ ಕಥೆಯನ್ನು ಅನೇಕ ಪವಾಡಗಳ ಮೂಲಕ ತಿಳಿಸುತ್ತದೆ. ಕಥಾವಸ್ತುವನ್ನು ಕವಿ ಕೆಳಗಿನ ಪದ್ಯದಲ್ಲಿ ಹಿಡಿದಿಟ್ಟಿದ್ದಾನೆ:

ಹರದನಹಳ್ಳಿಯ ಹರದಗೆ ಶಿಶುವಾಗಿ । ಸುರಗಿರಿಯಿಂದಿಳೆಗೈದಿ
ಗುರುಸೇವೆಯನು ಮಾಡಿ ಚರಿಸಿದನೆಡೆಯೂರ । ಪುರವಾಸಿಯ ಕಥೆಯೊರೆವೆ ॥ ೧-೩೫ ॥

---

1 ಬೆಂಗಳೂರು, ವಿ.ವಿ. ಪ್ರತಿ.

ಈ ಕೃತಿಯ ವಿಶೇಷವೆಂದರೆ ಸಿದ್ಧಲಿಂಗರ ಹುಟ್ಟೂರು. ತಂದೆತಾಯಿಗಳ ಹೆಸರನ್ನು ಹೇಳಿರುವುದು. ಸಿದ್ಧಲಿಂಗರ ತಂದೆ ಮಲ್ಲಿಕಾರ್ಜುನ. ತಾಯಿ ಜ್ಞಾನಾಂಬೆ. ಊರು ಹರದನಹಳ್ಳಿ. ಈ ವಿಷಯ ಸಿದ್ಧಲಿಂಗರನ್ನು ಕುರಿತ ಮತ್ತಾವ ಕೃತಿಗಳಲ್ಲಿಯೂ ಉಕ್ತವಾಗಿಲ್ಲ. ಕವಿ ಹೆಚ್ಚಾಗಿ ದಂತಕಥೆಯನ್ನು ಆಧರಿಸಿ ಪವಾಡಾತ್ಮಕವಾಗಿ ಸಿದ್ಧಲಿಂಗರ ಚರಿತ್ರೆಯನ್ನು ಹೆಣೆಯಲು ಪ್ರಯತ್ನಿಸಿದ್ದಾನೆ. ಆದ್ದರಿಂದ ಕೆಲವು ಅವಾಸ್ತವಸಂಗತಿಗಳೂ ಇಣಿಕಿಹಾಕಿವೆ. ಶೈಲಿ ಸರಳ. ಅನ್ಯಮತದ ಕವಿಯೊಬ್ಬ ವೀರಶೈವ ಶಿವಯೋಗಿಯ ಚರಿತ್ರೆಯನ್ನು ಬರೆದುದು ಇಲ್ಲಿ ಗಮನಾರ್ಹ ಸಂಗತಿಯಾಗಿದೆ.

ಕೊಟನೂರ ಮಲ್ಲಕವಿಯ (೧೭ ಶ.) 'ಸೊಪ್ಪೆಬಸವ ಸಾಂಗತ್ಯ'[1] ೭ ಸಂಧಿ ೯೪೪ ಪದ್ಯಗಳಲ್ಲಿ ವಿಸ್ತಾರಗೊಂಡ ಕಾವ್ಯ. ತೋಂಟದ ಸಿದ್ಧಲಿಂಗರಿಗಿಂತ ಸ್ವಲ್ಪಕಾಲ ಪೂರ್ವದಲ್ಲಿ ವೀರಶೈವ ಧರ್ಮ. ಶರಣ ಸಂಸ್ಕೃತಿಗಳನ್ನು ಉದ್ಧರಿಸಿದ ಮಹಿಮಾನ್ವಿತ ವ್ಯಕ್ತಿ ಸೊಪ್ಪೆಬಸವ ಅಥವಾ ಸೊಪ್ಪೆಯ ಸಿದ್ಧಬಸವನ ದಿವ್ಯಚರಿತ್ರೆ ಇದರ ವಸ್ತು. ಶಿವತತ್ವ ಚಿಂತಾಮಣಿಯಲ್ಲಿ ಲಕ್ಕಣ್ಣದಂಡೇಶ ಸಂಕ್ಷಿಪ್ತವಾಗಿ ಹೇಳಿದ ಈ ಚರಿತ್ರೆಯನ್ನು ಮಲ್ಲಕವಿ ಸ್ವತಂತ್ರ ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸಿ ವಿಸ್ತರಿಸಿದ್ದಾನೆ.

ಕಂಚಿಪುರದರಸು ಶಂಕರರಾಜ ಮತ್ತು ಭಾನುಮತಿಯರಿಗೆ ಶಿವನು ಮಗುವಾಗಿ ಜನಿಸಿ, ವೀರವಿರಕ್ತನಾಗಿ ಅನೇಕ ಪವಾಡಗಳನ್ನು ಮೆರೆದು. ದೇಶಸಂಚಾರ. ಧರ್ಮೋದ್ಧಾರ ಮಾಡುತ್ತ ವೀರಶೈವ ಧರ್ಮ. ಸಮಾಜ. ಸಂಸ್ಕೃತಿಗಳನ್ನು ಕಾಪಾಡಿ ಮಾನವ ಧರ್ಮವನ್ನು ಉದ್ಧಾರ ಮಾಡಿ ಮತ್ತೆ ಕೈಲಾಸಕ್ಕೆ ತೆರಳುತ್ತಾನೆ. ಇಷ್ಟು ಕಥೆಯನ್ನು ವೀರಶೈವತತ್ವಪರಿಣತನಾದ ಕವಿ ತನ್ಮಯನಾಗಿ ಭಯ-ಭಕ್ತಿಯಿಂದ ಹೇಳಿದ್ದಾನೆ. ಚಾರಿತ್ರಿಕ ಕಥಾನಾಯಕನಿಗೆ ಅನೇಕ ಪವಾಡಗಳನ್ನು ಆರೋಪಿಸಿ ಅಸಾಮಾನ್ಯ ಪುರಾಣವ್ಯಕ್ತಿಯನ್ನಾಗಿಸಿದ್ದಾನೆ. ಜೊತೆಗೆ ಅಷ್ಟಾದಶವರ್ಣನೆಗಳಲ್ಲಿ ಕೆಲವನ್ನು ತಂದು ತನ್ನ ವರ್ಣನಾಚಾತುರ್ಯವನ್ನು ಮೆರೆಸಲು ಪ್ರಯತ್ನಿಸಿದ್ದಾನೆ. ಆದರೆ ಹೊಸತನ ಕಡಿಮೆ. ಶೈಲಿ ಅಲಂಕಾರಮಯವಾಗಿದೆ. ಉಪಮೆ ದೃಷ್ಟಾಂತಗಳ ಬಳಕೆ ಹೆಚ್ಚಾಗಿದೆ. ಭಕ್ತಿರಸಕ್ಕೆ ಪ್ರಾಧಾನ್ಯ ದೊರೆತಿದೆ. ಖಂಡಪ್ರಾಸ ನಿಯತವಾಗಿದೆ. ನಿರೂಪಣೆ ನೇರ. ತತ್ವ. ನೀತಿ—ನೆಲೆನಿಂತಿವೆ. ಕಾವ್ಯದ ತುಂಬ ವೀರಶೈವ ತತ್ವಗಂಧ ಸೂಸಿದೆ.

## ೭. ತತ್ವಪ್ರಧಾನ ಕಾವ್ಯಗಳು

ಕನ್ನಡದಲ್ಲಿ ಕೃತಿರಚನೆ ಪ್ರಾರಂಭವಾದುದು ಮತತತ್ವಗಳ ಪ್ರಸಾರ ಹಾಗೂ ಪ್ರಚಾರಕ್ಕಾಗಿ. ಪ್ರಾರಂಭದ ಕವಿಗಳಾದ ಜೈನಮತೀಯರು ತೀರ್ಥಂಕರರ ಪುರಾಣಗಳ ಮೂಲಕ ಜೈನಧರ್ಮತತ್ವಗಳ ಪ್ರಚಾರ ಮಾಡಿದರೆ. ವೀರಶೈವ ಕವಿಗಳು ಶಿವಪುರಾಣ. ಶಿವಶರಣರ ಚರಿತ್ರೆಗಳ ಮೂಲಕ ತಮ್ಮ ಮತತತ್ವಪ್ರಚಾರಕಾರ್ಯ ಕೈಗೊಂಡರು. ಆಮೇಲೆ ಬ್ರಾಹ್ಮಣರು ವಿಷ್ಣುಪುರಾಣಗಳ ಮುಖಾಂತರ ಆ ಕಾರ್ಯ ಮಾಡಿದರು. ಈ ಪುರಾಣಗಳಲ್ಲಿ ಕೆಲವು ಕವಿಗಳು ಧರ್ಮ, ಕಾವ್ಯಧರ್ಮಗಳೆರಡನ್ನೂ ಸಮಸಮವಾಗಿ ತಂದಿದ್ದರೆ. ಮತ್ತೆ ಕೆಲವರು ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು ಕಾವ್ಯಧರ್ಮವನ್ನು ಗೌಣವಾಗಿಸಿದ್ದಾರೆ. ಇನ್ನೂ ಕೆಲವು ಕವಿಗಳು ಧರ್ಮತತ್ವಪ್ರತಿಪಾದನೆಯನ್ನೇ ಮೂಲೋದ್ದೇಶವಾಗಿಟ್ಟುಕೊಂಡು ಶುದ್ಧ ತಾತ್ವಿಕಕಾವ್ಯಗಳನ್ನು ರಚಿಸಿದ್ದಾರೆ. ಸದ್ಯ ವೀರಶೈವಸಾಂಗತ್ಯ ಕವಿಗಳು ಬರೆದ ಇಂಥ ಹತ್ತು ಕೃತಿಗಳು ದೊರೆಯುತ್ತವೆ.

ಶಾಂತಮಲ್ಲನ (೧೬೫೦) ಅನುಭವಮುದ್ರೆ. ಮುರುಳಸಿದ್ಧೇಶನ (೧೬೫೦) ಗುರುಲಿಂಗಜಂಗಮಚಾರಿತ್ರ. ನಿಜಗುಣ ಶಿವಯೋಗಿಯ (೧೫೦೦) ಪರಮಾನುಭವಬೋಧೆ. ಅಜ್ಞಾತಕವಿಯ ಜಂಗಮಚಾರಿತ್ರ (೧೬ ಶ.). ವೀರಣಾರ್ಯನ (೧೬೫೦) ಪ್ರಸಾದಚಾರಿತ್ರ. ಮಲ್ಲನ (೧೬೫೦) ಪ್ರಸಾದಸಾಂಗತ್ಯ. ಜಡೆಯ ಸಿದ್ಧಲಿಂಗೇಶನ (೧೮ ಶ.) ಪ್ರಸಾದ ಚಿಂತಾಮಣಿ, ಬಸವನ (೧೮೮೭) ಗುರುಬೋಧಾಮೃತ. ಘನಮಠದಾರ್ಯನ (೧೯ ಶ.) ವಿಭೂತಿಸಾಂಗತ್ಯ ಮತ್ತು ಚೆನ್ನಬಸವಶಾಸ್ತ್ರಿಯ (೧೯ ಶ.) ಹಾಲುಮತದ ಪುರಾಣ.

ಶಾಂತಮಲ್ಲನ 'ಅನುಭವಮುದ್ರೆ' ಒಂದು ಉತ್ತಮ ತತ್ವಪ್ರಧಾನ ಕಾವ್ಯ. ಇದರಲ್ಲಿ ೩೨ ಸ್ಥಲ. ೧೫೯೧ ಸಾಂಗತ್ಯಗಳಿವೆ. ೨೭ನೆಯ ಸ್ಥಲ 'ವಿರಕ್ತಶತಕ' ೧೦೬ ಭೋಗಷಟ್ಪದಿಗಳಿಂದ ಕೂಡಿದೆ. ಉಳಿದ ಸ್ಥಲಗಳ ನಾಮ ನಿರ್ದೇಶ ಹೀಗಿದೆ: ಸಂಸಾರ ಹೇಯಸ್ಥಲ. ಆತ್ಮವಿಚಾರನಿರೂಪಣಂ. ಆತ್ಮದೋಷನಿರೂಪಣಂ. ನಿಜಸುಖಾಚ್ಛಾದನಸ್ಥಲ, ನಿಜಸುಖಪ್ರಕಾಶಸ್ಥಲ. ಶಿವಪ್ರಕಾಶತ್ವನಿರೂಪಣಂ. ನೀತಿಲಕ್ಷಣನಿರೂಪಣಂ. ಭಕ್ತಿಸ್ಥಲನಿರೂಪಣಂ. ಭಕ್ತ

[1] ಡಾ. ವಿ. ಶಿವಾನಂದರ ಪ್ರತಿ.

ಲಕ್ಷಣಂ. ಭಕ್ತನ ತಾಮಸನಿರೂಪಣಂ, ಚರಲಿಂಗವಿಶ್ವಾಸನಿರೂಪಣಂ, ಜ್ಞಾನಲಕ್ಷಣ, ತ್ರಿವಿಧಾರ್ಪಣಭೇದನಿರೂಪಣಂ, ತತ್ತ್ವಭೇದ ಪಂಚೀಕರಣನಿರೂಪಣಂ ಪರಮನಿರ್ವಾಣಸ್ಥಲನಿರೂಪಣಂ. ಆರೂಢಸ್ಥಲ, ಏಕಲಿಂಗನಿಷ್ಠಾಭಾವಸ್ಥಲ, ಅಂತರ್ಯಾಗಸ್ಥಲ, ಜ್ಞಾನಗುರುಸ್ಥಲ, ಯೋಗಮುದ್ರಾಲಕ್ಷಣಸ್ಥಲ, ಶಾಂತಿಬೋಧೆಯ ಸ್ಥಲ, ಶಾಂಭವಯೋಗ, ಶಿವಯೋಗಿತಾಮಸನಿರಸನ, ಶಾಂಭವಮುದ್ರಾಸ್ಥಲ, ಪ್ರಭುದೇವರ ಗುಣಚಾರಿತ್ರ, ಪ್ರಭುದೇವರ ಸ್ತೋತ್ರ, ಅನುಭವಮುದ್ರಾಮಹತ್ವಂ. ಪತಿವ್ರತಾಲಕ್ಷಣಸ್ಥಲ, ಹಿತೋಪದೇಶ ಹಾಗೂ ಚಿತ್ಕಳಾವಿಯೋಗ.

ಈ ಸ್ಥಲಗಳಲ್ಲಿ ವೀರಶೈವತತ್ತ್ವ, ಸಿದ್ಧಾಂತ, ನೀತಿ—ಎಲ್ಲ ನಿರೂಪಿತವಾಗಿವೆ. ಇದನ್ನು ಪ್ರಭುದೇವರು ಮೊದಲು ತಮ್ಮ ಶಿಷ್ಯ ಪ್ರಭುವಿಗೆ ಹೇಳಿದಂತೆಯೂ ಅದನ್ನೇ ಅವರ ಮಾರ್ಗವಿಡಿದು ತಾನು ಸರಳ ಸಾಂಗತ್ಯದಲ್ಲಿ ಹೇಳಿದಂತೆಯೂ ಕವಿ ತಿಳಿಸುತ್ತಾನೆ. ವೀರಶೈವದ ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣ, ಶಿವಯೋಗ ಇತ್ಯಾದಿ ತತ್ತ್ವ ಸಿದ್ಧಾಂತಗಳು ಇಲ್ಲಿ ಸೊಗಸಾಗಿ ವರ್ಣಿತವಾಗಿವೆ. ಕವಿ ಅನುಭಾವಿ, ತತ್ತ್ವಜ್ಞಾನಿಯಾಗಿ ಸುಲಭವೇದ್ಯವಲ್ಲದ ತತ್ತ್ವ ವಿಚಾರವನ್ನು ಕಾವ್ಯಮಯವಾಗಿ, ಕಲಾತ್ಮಕವಾಗಿ ಹೇಳಿ ಸಾಮಾನ್ಯರಿಗೂ ತಿಳಿಯುವಂತೆ ಮಾಡಿದ್ದಾನೆ. ಕಾವ್ಯದ ತುಂಬ ಅನುಭವದ ಕಿಡಿಗಳು, ಜ್ಞಾನಾಮೃತ ಬಿಂದುಗಳು, ನೀತಿಯ ನುಡಿಗಳು ರಾಶಿಗೊಂಡಿವೆ. 'ಸೋನೆಸಾಂಗತ್ಯ'ದಲ್ಲಿ ರಚನೆಗೊಂಡ ಇದರ ಶೈಲಿ ಬಂಧುರವಾಗಿದೆ.

ನಿಜಗುಣ ಶಿವಯೋಗಿಗಳ 'ಪರಮಾನುಭವ ಬೋಧೆ' ಮತ್ತೊಂದು ಉತ್ತಮ ತತ್ತ್ವಪ್ರಧಾನ ಕಾವ್ಯ. ೬ ಸಂಧಿ ೯೮೫ ಪದ್ಯ ೧೨೨ ಸೂತ್ರಗಳು ಇದರಲ್ಲಿವೆ. ಕಾವ್ಯದ ವಸ್ತುವನ್ನು ಕುರಿತು ಕವಿ 'ಅಕಲಂಕವಾದ ಅದ್ವೈತ ತತ್ತ್ವವನು ಪ್ರಕಟಿಸುವೆನು ಬೋಧಗತಿಯಿಂದ' ಎಂದು ಹೇಳಿದ್ದಾನೆ. ಅಲ್ಲದೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ 'ಯಾಜ್ಞವಲ್ಕ್ಯ ಮೈತ್ರೇಯಿಯವರ ಸಂವಾದವನೆ ಕನ್ನಡವಾಗಿ ಪೇಳ್ವೆ' ಎಂದು ತಿಳಿಸಿದ್ದಾನೆ. ಕಾವ್ಯ ಸಂವಾದರೂಪವಾಗಿದೆ. ವಿಷಯವಿಭಜನೆಯು ಪ್ರವರ್ತಕಕರ್ಮ, ನಿವರ್ತಕಕರ್ಮ, ಭ್ರಾಂತಿನಿರಾಕರಣ, ನಿರ್ಗುಣಯೋಗ, ಸಗುಣಯೋಗ, ಗುರುಶಿಷ್ಯಾದಿ ಲಕ್ಷಣ ಎಂಬ ಆರು ಪ್ರಕರಣಗಳಲ್ಲಿ ಆಗಿದೆ. "ಇದು ವೇದವೇದಾಂತದೊಳು ಗೋಪ್ಯವಾದರ್ಥವಿದು ಪುರಾಣಾಗಮಸ್ಮೃತಿಸಾರ ಇದು ಪರಮಾರ್ಥದ ತಿರುಳು ತತ್ತ್ವರಹಸ್ಯವಿದು ಪ್ರಾಕೃತವೆ ಎಲ್ಲರರಿಯಲ್ಕೆ" ಎಂಬ ಕವಿಯ ಹೇಳಿಕೆಯಂತೆ ಇದು ಎಲ್ಲರಿಗೂ ತಿಳಿಯಲು ಅಸಾಧ್ಯವಾದುದು. ಆದರೂ ಅದನ್ನು ಮನಗಂಡ ಅವನು ಆದಷ್ಟು ಸರಳವಾಗಿ ಹೇಳಲು ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ. ಸಂಭಾಷಣಾತಂತ್ರ, ಸುಲಭವೇದ್ಯ ದೃಷ್ಟಾಂತಗಳನ್ನು ಬಳಸಿ ಕಾವ್ಯ ಹೆಚ್ಚು ಆತ್ಮೀಯವಾಗುವಂತೆ ಮಾಡಿದ್ದಾನೆ. 'ಬ್ರಹ್ಮಸತ್ಯ ಜಗನ್ಮಿಥ್ಯ' ಎಂಬ ತತ್ತ್ವನಿರೂಪಣೆಯಲ್ಲಿ ನಡೆದ ತರ್ಕಸರಣಿ, ವಿಚಾರದುನ್ನತಿ ಮೆಚ್ಚುವಂತಿದೆ. ಪೂಜಾವಿಧಾನವನ್ನು ಬಣ್ಣಿಸುವ ರೀತಿ ಮೋಹಕವಾಗಿದೆ. ಅದು ಬಾಹ್ಯದಲ್ಲಿ ನಡೆವ ಬಹಿರಂಗಪೂಜೆಯಲ್ಲ, ಅಂತರಂಗದಲ್ಲಿ ನಡೆವ ದಿವ್ಯಪೂಜೆ. ಅದನ್ನು ಕವಿಹೃದಯ ಹೃದಯಂಗಮವಾಗಿ ಬಣ್ಣಿಸಿದೆ.

ಇದರ ಛಂದಸ್ಸು 'ಸೋನೆಸಾಂಗತ್ಯ'. ಅದರಿಂದಾಗಿ ಲಯ ಅಲ್ಲಲ್ಲಿ ಕುಂಟುತ್ತದೆ. ಶೈಲಿ ಸರಳ. ನಿರೂಪಣೆ ನೇರ. 'ಭಾಷೆ ಸುಲಭ, ಭಾವ ಮಾತ್ರ ಗಹನ.'

ಅಜ್ಞಾತಕವಿಯ 'ಜಂಗಮ ಚಾರಿತ್ರ'[1] ಜಂಗಮತತ್ತ್ವದ ಮಹತಿಯನ್ನು ಸಾರುವ ಧಾರ್ಮಿಕ ಕಾವ್ಯ. ಈಗ ದೊರೆತ ಕೃತಿ ಅಪೂರ್ಣವಾಗಿದೆ. ಕೊನೆಯ ಸಂಧಿಯು ೮೫ ಪದ್ಯಗಳಿಗೇ ನಿಂತಿದೆ. ಸಾಂಗತ್ಯದ ಜೊತೆಗೆ ಮಧ್ಯೆ ಸಂಸ್ಕೃತ ಶ್ಲೋಕ, ಗದ್ಯ ಬೆರೆತಿವೆ. ಪ್ರತಿ ಸಂಧಿಯ ಪ್ರಾರಂಭದಲ್ಲಿ 'ಜಂಗಮಲಿಂಗಪ್ರಭುವೆ' ಎಂಬ ಅಂಕಿತದ ಎರಡು ಅಥವಾ ಮೂರು ವಚನಗಳಿವೆ. ಜಂಗಮದ ಆಧಿಕ್ಯವನ್ನು ಎತ್ತಿತೋರಿಸುವುದು ಕವಿಯ ಮುಖ್ಯ ಉದ್ದೇಶ. ಅದನ್ನು ಅವನು ಕೆಲವು ದೃಷ್ಟಾಂತರೂಪದ ಕಥೆಗಳ ಮೂಲಕ ಹೇಳಿ ಈಡೇರಿಸಿಕೊಂಡಿದ್ದಾನೆ. ಶಿವನೇ ಇಲ್ಲಿ ಜಂಗಮರೂಪ ತಾಳಿ ಲೀಲೆ ಮೆರೆಯುತ್ತಾನೆ. ಲೀಲೆ ನಡೆಯಲು ಕಾರಣರಾದ ಜಾಂಬೇಶ್ವರ, ತಾರಕಾಸುರ, ಅಂಧಕಾಸುರ, ಗಿರಿರಾಜ, ದಕ್ಷ ಮುಂತಾದವರ ಕಥೆಗಳು ಇಲ್ಲಿ ಎಡೆ ಪಡೆದಿವೆ. ಪ್ರಾಸಾನುಪ್ರಾಸದಿಂದ ಶೈಲಿ ರಂಜಕವಾಗಿದೆ. ಹೇಳುವ ರೀತಿ ಸರಳವಾಗಿದೆ. ಅಲ್ಲಲ್ಲಿ ವರ್ಣನೆಗಳು ಬಂದಿದ್ದರೂ ಹೊಸತಾಗಿಲ್ಲ. ಜಂಗಮದ ಶ್ರೇಷ್ಠತೆಯನ್ನು ಹೇಳುವುದೇ ಇಲ್ಲಿಯ ಮುಖ್ಯ ಗುರಿ ಆಗಿರುವುದರಿಂದ ಕಾವ್ಯಗುಣ ಕಡಿಮೆ. ವೀರಶೈವಧರ್ಮೀಯರಿಗೆ ಇಲ್ಲಿ ಬರುವ ತತ್ತ್ವಾಂಶಗಳು ಹಿತವೆನಿಸಿದರೆ, ವೀರಶೈವೇತರರಿಗೆ ದೃಷ್ಟಾಂತರೂಪದಲ್ಲಿ ಬರುವ ಉಪಕಥೆಗಳು ಮನಸೆಳೆಯುತ್ತವೆ.

ಮರುಳಸಿದ್ಧೇಶನ 'ಗುರುಲಿಂಗಜಂಗಮಚಾರಿತ್ರ' ಗುರು,ಲಿಂಗ,ಜಂಗಮ—ಮೂರೂ ತತ್ತ್ವಗಳನ್ನು ನಿರೂಪಿಸಿದರೆ,

---

1 ಕವಿಚರಿತೆಯಲ್ಲಿ ಅನುಕ್ತ, ಅಪ್ರಕಟಿತ. ಕನ್ನಡ ಅಧ್ಯಯನಪೀಠದ ತಾ.ಪ್ರ. ೨೦೫೩

ವೀರಣಾರ್ಯನ ಪ್ರಸಾದಚಾರಿತ್ರ. ಮಲ್ಲನ ಪ್ರಸಾದಸಾಂಗತ್ಯ, ಜಡೆಯ ಸಿದ್ಧಲಿಂಗೇಶನ ಪ್ರಸಾದಚಿಂತಾಮಣಿ ಪ್ರಸಾದದ ಮಹತಿಯನ್ನು ಮೆರೆಯುತ್ತವೆ. ಘನಮಠದಾರ್ಯನ ವಿಭೂತಿಸಾಂಗತ್ಯ ವಿಭೂತಿಯ ಶ್ರೇಷ್ಠತೆಯನ್ನು ತಿಳಿಸುತ್ತದೆ. ಬಸವನ ಗುರುಬೋಧಾಮೃತ ಗುರುಬೋಧೆಯ ವೈಶಿಷ್ಟ್ಯವನ್ನು ಹೇಳುತ್ತದೆ. ಚನ್ನಬಸವಶಾಸ್ತ್ರಿಗಳ ಹಾಲುಮತದ ಪುರಾಣ ಹಾಲುಮತದ ಹುಟ್ಟು, ಬೆಳವಣಿಗೆ ಅದರ ಧರ್ಮತತ್ವಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ ವರ್ಣಿಸುತ್ತದೆ.

## ೮. ಇತಿಹಾಸರೂಪದ ಕಾವ್ಯಗಳು

ಕನ್ನಡದಲ್ಲಿ ಐತಿಹಾಸಿಕ ಕಾವ್ಯಗಳ ಸಂಖ್ಯೆ ಕಡಿಮೆ. ಉಳಿದ ಪ್ರಕಾರಗಳಲ್ಲಿ ಅಷ್ಟಾಗಿ ಕಾಣಸಿಗದ ಈ ಚಾರಿತ್ರಿಕ ಕಾವ್ಯಗಳನ್ನು ರಚಿಸಿ, ಕನ್ನಡಸಾಹಿತ್ಯದಲ್ಲಿದ್ದ ಅದರ ಕೊರತೆಯನ್ನು ತುಂಬಿದ ಕೀರ್ತಿ ಸಾಂಗತ್ಯಕವಿಗಳಿಗೆ ಸಲ್ಲುತ್ತದೆ. ಅದರಲ್ಲಿಯೂ ವೀರಶೈವ ಕವಿಗಳಿಂದ ಇಂಥ ಕೃತಿಗಳು ಹೆಚ್ಚಾಗಿ ರಚನೆಗೊಂಡಿವೆ. ಕಥಾನಾಯಕನ ಶೌರ್ಯಾತಿಶಯಗಳ ವರ್ಣನೆ, ಜೊತೆಗೆ ತತ್ಕಾಲೀನ ರಾಜಕೀಯ ಸಾಮಾಜಿಕ ಸ್ಥಿತಿಗತಿ, ಜನಜೀವನ ಚಿತ್ರಣವನ್ನು ಒಳಗೊಂಡ ಈ ಕಾವ್ಯಗಳು ಕನ್ನಡನಾಡಿನ ಇತಿಹಾಸವನ್ನು, ಕನ್ನಡಿಗರ ಕ್ಷಾತ್ರತೇಜವನ್ನು ಮೆರೆಯುವ ಉನ್ನತ ಸ್ಮಾರಕಗಳಾಗಿ ನಿಂತಿವೆ. ಅದರೊಡನೆ ಕಾವ್ಯಕಲೆಯನ್ನೂ ಅಳವಡಿಸಿಕೊಂಡು ಉತ್ತಮ ಕೃತಿಗಳಾಗಿ ಕಂಗೊಳಿಸುತ್ತಿವೆ. ವಸ್ತುವಿಗೆ ಉಚಿತವಾದ ವೀರಾದ್ಭುತ ರಸಗಳು ಪ್ರತಿಪಾದನೆಗೊಂಡು ಸಾಂಗತ್ಯ ವೀರರಸ ಪ್ರಕಟಿಸಲು ಅಷ್ಟೊಂದು ಯೋಗ್ಯವಾದ ವಾಹಕವಲ್ಲ ಎಂಬ ಮಾತನ್ನು ಸುಳ್ಳಾಗಿಸಿವೆ.

ವೀರಶೈವ ಸಾಂಗತ್ಯಕವಿಗಳಿಂದ ಸುಮಾರು ಎಂಟು ಐತಿಹಾಸಿಕ ಕಾವ್ಯಗಳು ಹುಟ್ಟಿಕೊಂಡಿವೆ: ನಂಜುಂಡನ (೧೫೨೫) ಕುಮಾರರಾಮನ ಸಾಂಗತ್ಯ, ಮಲ್ಲಿಕಾರ್ಜುನನ (೧೫೯೩) ತೋಂಟದರಾಯನ ಸಾಂಗತ್ಯ, ಕೆಂಚಶೆಟ್ಟಿಸುತ ರಾಮನ (೧೭ ಶ.) ಸಿರುಮನಚರಿತೆ, ವೀರಜನಪತಿಯ (೧೭೫೦) ವಿಕ್ರಮವಿಲಾಸ, ಸಿದ್ಧನ (೧೭೦೦) ಸಿರುಮನ ಸಾಂಗತ್ಯ, ಮಲ್ಲನ (೧೭೦೦) ಸಿರುಮನಚರಿತೆ, ಸೂರೊಂದನ (೧೭೪೦) ಸೌಂದರಕಾವ್ಯ, ಮಹಾಲಿಂಗಸ್ವಾಮಿಯ (೧೮ ಶ.) ಬಾಲಕುಮಾರರಾಮನ ಸಾಂಗತ್ಯ.

ನಂಜುಂಡನ 'ಕುಮಾರರಾಮನ ಸಾಂಗತ್ಯ' ವೀರಶೈವಸಾಂಗತ್ಯಗಳಲ್ಲಿ ಮೇರುಕೃತಿ ; ಐತಿಹಾಸಿಕವಸ್ತುವನ್ನೊಳಗೊಂಡು ಸಾಂಗತ್ಯದಲ್ಲಿ ರಚಿತವಾದ ಪ್ರಥಮ ಬೃಹತ್ಕಾವ್ಯ. ಇದರಲ್ಲಿ ೧೧ ಆಶ್ವಾಸ, ೪೭ ಸಂಧಿ, ಸು. ೭೦೦೦ ಪದ್ಯಗಳಿವೆ. ಪ್ರತಿ ಆಶ್ವಾಸಾಂತ್ಯದಲ್ಲಿ ಷಟ್ಪದಿಗಳು, ಅಲ್ಲಲ್ಲಿ ಗದ್ಯವೃತ್ತಗಳೂ ಸಮಾವೇಶಗೊಂಡಿವೆ.

ಕಮ್ಮಟದುರ್ಗದ ದೊರೆ ಕಂಪಿಲರಾಯನ ಸತ್ಪುತ್ರ ಕುಮಾರರಾಮನ ಸಚ್ಚಾರಿತ್ರ್ಯ, ವೀರತ್ವ, ಶುಚಿತ್ವ, ಪರದಾರ ಸೋದರತ್ವ ಹಾಗೂ ಪರಾಕ್ರಮಗಳನ್ನು ಎತ್ತಿ ತೋರಿಸುವ ಉತ್ತಮ ವಿಷಯವೇ ಇದರ ವಸ್ತು. ಜನಪದಸಾಹಿತ್ಯದಲ್ಲಿ ಜನಪ್ರಿಯವಾಗಿದ್ದ ಈ ಕಥಾವಸ್ತುವನ್ನು ನಂಜುಂಡ ಕಾವ್ಯಕ್ಕೆ ತಂದು ಮತ್ತಷ್ಟು ಜನಪ್ರಿಯಗೊಳಿಸಿದ್ದಾನೆ. ಕೆಳಗಿನ ನಾಲ್ಕು ಪದ್ಯಗಳು ಇಡೀ ಕಾವ್ಯದ ವಿಷಯವನ್ನು ಹಿಡಿದಿಟ್ಟುಕೊಂಡಿವೆ :

ಕಂದುಕ ಬೀಳಲರಮನೆಗದನಿರದತ್ತಿ। ತಂದಪೆನೆಂದು ಕಂಪಿಲನ
ನಂದನನೆಯ್ದಲವನ ರೂಪಿಗೆ ಸೋತು । ಬಂದು ಪಿಡಿದಳು ರತ್ನಾಜಿ ॥

ಪಿಡಿಯೆ ಬಿಡಿಸಿಕೊಂಡು ಬರಲವನವಳೆಂದು । ಕಡುನೊಂದು ಕೈಯ ಬಳೆಗಳ
ಒಡೆದು ತೋಳ್ತೊಡೆಗಳೆಡೆಗಳ ಕೆಡಿಸಿಕೊಂಡು । ಬಿಡದೆ ತೋರಿದಳು ಕಂಪಿಲಗೆ ॥

ನೆಲೆಯನರಿಯದವ ಕೊಲಿಸು ರಾಮನನೆಂದು । ಬಲಿದು ಮಂತ್ರಿಗೆ ಪೇಳಲವನು
ನೆಲಮಾಳಿಗೆಯೊಳಿಟ್ಟವನ ಕೊಲಿಸಿದೆನೆಂದು । ನೆಲೆ ಮಾಡಲಾ ಸುದ್ದಿಯನು ॥

ಕೇಳಿ ತುರುಕರ ದಾಳಿ ಬರಲವನನು ಮಂತ್ರಿ । ಲೀಲೆಯಿಂ ತಂದಾ ಬಲವ
ಕೋಲಾಹಲವ ಮಾಡಿಸಿದನೆಂಬುದು ಕಥಾ । ಮೂಲವಿದನು ನಾಸೊಲಿದು ॥

ಇದರಿಂದ ಮಲತಾಯಿ ರತ್ನಾಜಿ ರಾಮನನ್ನು ಮೋಹಿಸಿದ, ರಾಮ ಅವಳ ಮೋಹಪಾಶಕ್ಕೆ ಸಿಲುಕದೆ ತನ್ನ ಶುಚಿತ್ವವನ್ನು ಕಾಪಾಡಿಕೊಂಡು ಕೀರ್ತಿಶಾಲಿಯಾದ ವಿಷಯವೇ ಕಾವ್ಯದ ಕೇಂದ್ರಬಿಂದುವಾಗಿ ಉಳಿದ ಘಟನೆಗಳೆಲ್ಲ ಅದಕ್ಕೆ ಪೋಷಕವಾಗಿ ಬಂದಿವೆ ಎಂಬುದು ವ್ಯಕ್ತವಾಗುತ್ತದೆ. ಇಲ್ಲಿ ಕವಿಗೆ ತನ್ನ ಕಥಾನಾಯಕನ ವೀರತೆ ಹಾಗೂ ಶುಚಿತೆ

ಗಳನ್ನು ಚಿತ್ರಿತೋರಿಸುವುದೇ ಮುಖ್ಯ ಉದ್ದೇಶವಾಗಿದೆ. ಉದ್ದೇಶಕ್ಕೆ ತಕ್ಕಂತೆ ಸಂದರ್ಭ ಸನ್ನಿವೇಶ ಘಟನೆ ಪಾತ್ರಗಳನ್ನು ಹೊಂದಿಸಿಕೊಂಡು ಸುಂದರವಾಗಿ ಚಿತ್ರಿಸಿ ಓದುಗರ ಹೃದಯವನ್ನು ಸೂರೆಗೊಂಡಿದ್ದಾನೆ.

ಈ ಕಾವ್ಯದಲ್ಲಿ ಎರಡು ಭಾಗಗಳು ಒಡೆದು ಕಾಣುತ್ತವೆ. ಅವುಗಳನ್ನು ಕುಮಾರರಾಮನ ಜೀವನದ ಪೂರ್ವಾರ್ಧ ಮತ್ತು ಉತ್ತರಾರ್ಧವೆಂದು ಹೆಸರಿಸಿ ಪರಿಶೀಲಿಸಬಹುದು. ಮೊದಲ ಭಾಗದಲ್ಲಿ ರಾಮನ ಜನನ, ಬಾಲ್ಯ, ವಿದ್ಯೆ, ವೀರತೆಗಳು ಪ್ರಕಟವಾಗಿದ್ದರೆ. ಎರಡನೆಯ ಭಾಗದಲ್ಲಿ ಅವನ ಶುಚಿತೆ, ಪರದಾರ ಸೋದರತೆಗಳು ವರ್ಣಿತವಾಗಿವೆ.

ಕಾವ್ಯದ ಅರ್ಧಭಾಗವನ್ನು ಕವಿ ರಾಮನ ಪರಾಕ್ರಮ ಶೌರ್ಯಾತಿಶಯಗಳ ವರ್ಣನೆಗಾಗಿ ವ್ಯಯಿಸಿದ್ದಾನೆ. ಅವನ ಅಸಹಾಯ ಧೈರ್ಯ, ಸಾಹಸ, ಏಕಾಂಗವೀರತೆ, ವೈರಿ ದಮನಶಕ್ತಿಗಳನ್ನು–ಹುಳಿಹೇರುಗೌಡ, ಪ್ರತಾಪರುದ್ರ, ಕರಿಪತಿ ಕಪಿಲೇಶ್ವರ ಮತ್ತು ನೇಮಿಖಾನರೊಡನೆ ಹೋರಾಡಿ ಯಶಗಳಿಸಿದ ವರ್ಣನೆಗಳ ಮೂಲಕ ವ್ಯಕ್ತಪಡಿಸಿದ್ದಾನೆ. ಅವನ ವೀರಜೀವನ ಇಲ್ಲಿ ಸೂರ್ಯತೇಜದಂತೆ ಬೆಳಗಿದೆ. ಎರಡನೆಯ ಭಾಗದಲ್ಲಿ ಅವನ ಶುಚಿತ್ವಪರೀಕ್ಷೆ ನಡೆಯುತ್ತದೆ. ಪರಪೆಣ್ಣ ಕಣ್ಣೆತ್ತಿ ಸಹ ನೋಡೆನೆಂಬ ಪ್ರತಿಜ್ಞಾರೂಢನಾದ ಪರದಾರಸಹೋದರನಿಗೆ ಮಲತಾಯಿ ರತ್ನಾಜಿಯಿಂದ ಮೋಹಪಾಶ. ರಾಮ ಆ ಪಾಶದಲ್ಲಿ ಸಿಲುಕದೆ ಪಾರಾಗಿ ತನ್ನ ಶುಚಿತ್ವವನ್ನು ಮೆರೆಯುತ್ತಾನೆ. ಈ ಭಾಗದಲ್ಲಿ ಕವಿ ತನ್ನ ಪ್ರತಿಭಾಶಕ್ತಿಯನ್ನೆಲ್ಲ ಸೂರೆಗೈದಿದ್ದಾನೆ. ಶೃಂಗಾರರಸ ಇಲ್ಲಿ ಮಡುಗಟ್ಟಿ ನಿಂತಿದೆ. ಕವಿಯ ಕಲಾತ್ಮಕತೆ ಇಲ್ಲಿ ಎದ್ದು ಕಾಣುತ್ತದೆ. ರತ್ನಾಜಿಯ ಸೌಂದರ್ಯಸಂಪತ್ತು, ವಿರಹವೇದನೆ, ರಾಮನ ಧೈರ್ಯ ಶೌರ್ಯಗುಣಗಳನ್ನು ಉಜ್ವಲವಾಗಿ ಬಣ್ಣಿಸಿದ್ದಾನೆ.

ಒಟ್ಟಿನಲ್ಲಿ ವಿಸ್ತಾರವಾದ ವರ್ಣನೆ, ಸಮುಚಿತವಾದ ಸನ್ನಿವೇಶಗಳ ಹೆಣಿಕೆ, ಔಚಿತ್ಯಪೂರ್ಣವಾದ ಪಾತ್ರಚಿತ್ರಣ, ಹೊಂದಿಕೆಯಾದ ಅಲಂಕಾರ, ರಸಗಳಿಂದ ಇದೊಂದು ಪ್ರಥಮದರ್ಜೆಯ ಉತ್ತಮ ಕಾವ್ಯವೆನಿಸಿದೆ.

ಮಲ್ಲಿಕಾರ್ಜುನನ 'ತೋಂಟದರಾಯನ ಸಾಂಗತ್ಯ' ಮತ್ತೊಂದು ಉತ್ತಮ ಐತಿಹಾಸಿಕ ಸಾಂಗತ್ಯಕಾವ್ಯ. ಬಿಜ್ಜಾವರದ ದೊರೆ ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಸತ್ಪುತ್ರ ತೋಟೇಂದ್ರನ ಗುರುಲಿಂಗಜಂಗಮಭಕ್ತಿಯುಕ್ತ ಹಾಗೂ ವೀರ, ಪರಾಕ್ರಮಗಳಿಂದ ಕೂಡಿದ ಸಚ್ಚಾರಿತ್ರಬಣ್ಣನೆ ಈ ಕೃತಿಯ ವಸ್ತು. ಅದನ್ನು ಕವಿ ೧೭ ಸಂಧಿ ೧೫೭೦ ಪದ್ಯಗಳಲ್ಲಿ ವಿಸ್ತರಿಸಿದ್ದಾನೆ. ಕೃತಿಕಾವ್ಯಪ್ರಮುಖಪದ್ಧತಿ, ಕರ್ಣಾಟದೇಶ ವರ್ಣನೆ, ಬಿಜ್ಜಾವರ ವರ್ಣನೆ, ಅರಸ, ಅರಸಿ, ಅರಸುಕುಮಾರನ ವರ್ಣನೆ, ಅರಸುಕುಮಾರನ ಸತಿಯ ವರ್ಣನೆ, ಬೇಟೆಯ ವರ್ಣನೆ, ವಸಂತಕ್ರೀಡೆಯ ವರ್ಣನೆ, ರಾತ್ರಿವಿಹಾರ, ವೇಶ್ಯಾವಾಟಿ ವರ್ಣನೆ, ಶಿವಪೂಜಾ ವರ್ಣನೆ, ಜಂಗಮಸೇವೆಯ ವರ್ಣನೆ, ಕದನಾಪೇಕ್ಷೆಯ ವರ್ಣನೆ, ದಾಳಿಯ ವರ್ಣನೆ, ಜಗಳದ ವರ್ಣನೆ, ಅರಸುಕುಮಾರನ ಪರಾಕ್ರಮ ಹಾಗೂ ಮರಣದ ವರ್ಣನೆ ಮತ್ತು ಕೈಲಾಸಯಾತ್ರೆಯ ವರ್ಣನೆ—ಈ ಪರಿವಿಡಿಯಲ್ಲಿ ನಡೆದುಬಂದಿದೆ. ಕವಿ ತನ್ನ ಆಶ್ರಯದಾತನ ಉಜ್ವಲಚರಿತ್ರೆಯನ್ನು, ಭಕ್ತಿಪಾರಮ್ಯ, ಪರಾಕ್ರಮಗಳನ್ನು ಉತ್ಸಾಹ ತುಂಬಿ ಸಮರ್ಪಕವಾಗಿ ಚಿತ್ರಿಸಿ ತನ್ನ ಗೌರವಾದರಗಳನ್ನು ಸಲ್ಲಿಸಿದ್ದಾನೆ. ಕಥಾನಾಯಕನಾದ ತೋಟೇಂದ್ರನ ವ್ಯಕ್ತಿತ್ವ ಚಿತ್ರವನ್ನು, ದಿನಚರಿಯನ್ನು, ಕಾರ್ಯಸಾಹಸಗಳನ್ನು—ಒಂದೊಂದನ್ನೂ ಅತಿಸೂಕ್ಷ್ಮವಾಗಿ ಅವಲೋಕಿಸಿ ಕಾವ್ಯಶಿಲ್ಪದಲ್ಲಿ ಸುಂದರವಾಗಿ ಕಟೆದು ನಿಲ್ಲಿಸಿದ್ದಾನೆ. ಕಾವ್ಯನಿರೂಪಣೆ ಎಲ್ಲೂ ನೀರಸವಾಗಿಲ್ಲ. ಪ್ರಾರಂಭದಿಂದ ಅಂತ್ಯದವರೆಗೆ ತಾನು ಹಾಕಿಕೊಂಡ ಚೌಕಟ್ಟಿನಲ್ಲಿ ಸ್ವಲ್ಪ ಹೆಚ್ಚಾಗದಂತೆ, ಸ್ವಲ್ಪವೂ ಕಡಿಮೆಯಾಗದಂತೆ ಎಚ್ಚರವಹಿಸಿ ಕಥೆಯನ್ನು ಎರಕಹೊಯ್ದು ತನ್ನ ಕಾವ್ಯವನ್ನು ಸತ್ಕಾವ್ಯವಾಗಿಸಿದ್ದಾನೆ. ಕಾವ್ಯದ ಯಾವುದೇ ಭಾಗವನ್ನು ಅವಲೋಕಿಸಿದರೂ ಅಲ್ಲಲ್ಲಿ ಕವಿತ್ವಶಕ್ತಿ, ಪ್ರತಿಭಾಪ್ರಕಾಶ ಒಡೆದು ಕಾಣುತ್ತದೆ. ಒಂದು ಪ್ರಕೃತಿಯ ವರ್ಣನೆಯನ್ನೇ ಮಾಡಲಿ, ಒಂದು ಸ್ತ್ರೀವರ್ಣನೆಯನ್ನೇ ಮಾಡಲಿ, ಒಂದು ಯುದ್ಧ ವರ್ಣನೆಯನ್ನೇ ಮಾಡಲಿ ಎಲ್ಲೆಲ್ಲಿಯೂ ತನ್ನ ಜಾಣ್ಮೆಯನ್ನು, ಹೊಸತನವನ್ನು, ಸೊಗಸುಗಾರಿಕೆಯನ್ನು ತೋರಿಸದೆ ಬಿಟ್ಟಿಲ್ಲ. ಕವಿ ಲೋಕಾನುಭವ ಕಾವ್ಯಾನುಭವಗಳನ್ನು ಮೈಗೂಡಿಸಿಕೊಂಡು, ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವವನ್ನು ಸಾಧಿಸಿ, ಕಾವ್ಯಕಲೆಯನ್ನು ಕರಗತ ಮಾಡಿಕೊಂಡು ಔಚಿತ್ಯವರಿತು ಈ ಕೃತಿಯನ್ನು ರಚಿಸಿರುವುದರಿಂದ ಇದೊಂದು ಕೃತಿರತ್ನವಾಗಿ ಪರಿಣಮಿಸಿದೆ. ಸೊಗಸಾದ ನಿರೂಪಣೆ, ಸುಂದರವಾದ ವರ್ಣನೆ, ಉಚಿತಪದಗಳ ಜೋಡಣೆ, ಪ್ರಜ್ಞಾಪೂರ್ಣ ಸನ್ನಿವೇಶಗಳ ಹೆಣಿಕೆ, ಸಮರ್ಪಕವಾದ ಪಾತ್ರಚಿತ್ರಣ, ರಮ್ಯವಾದ ರಸಪ್ರತಿಪಾದನೆ, ಮನೋಹರ ಶೈಲಿ—ಇವೆಲ್ಲ ಈ ಕಾವ್ಯದಲ್ಲಿ ಒಟ್ಟುಗೂಡಿವೆ. ಇದರಿಂದ ಈ ಕಾವ್ಯವು ಸಾಂಗತ್ಯದ ಮಹಾಕಾವ್ಯಗಳೆನಿಸಿದ 'ಭರತೇಶವೈಭವ' 'ಕುಮಾರರಾಮನ ಸಾಂಗತ್ಯ'ಗಳ ಸಮೀಪಕ್ಕೆ ಹೋಗಿ ನಿಲ್ಲುವ ಅರ್ಹತೆಯನ್ನು ಗಳಿಸಿದ ಉತ್ತಮ ಕಾವ್ಯವೆನಿಸಿದೆ.

ಕೆಂಚಶೆಟ್ಟಿಯ ಸುತ ರಾಮನ 'ಸಿರುಮನಚರಿತೆ' ೧೩ ಸಂಧಿ ೧೦೬೫ ಪದಗಳಲ್ಲಿ ಹಬ್ಬಿಕೊಂಡ ಐತಿಹಾಸಿಕ ಕಾವ್ಯ. 'ಸಿರುಮ' ಎಂಬ ಗೊಲ್ಲ ನೃಪನ ಹಾಗೂ ಅವನ ಐವರು ಮಕ್ಕಳ ಸಾಹಸ. ವೀರತ್ವ ಸ್ವಾತಂತ್ರ್ಯಪ್ರಿಯತೆಯ ನೈಜ ಚರಿತ್ರೆಯ ನಿರೂಪಣೆ ಇದರ ವಸ್ತು. ಈ ವಸ್ತುವನ್ನು ಕವಿ ತನ್ನ ಶಕ್ತ್ಯನುಸಾರವಾಗಿ ಹೇಳುತ್ತ ಸಾಗಿದ್ದಾನೆ. ಕಾವ್ಯಸತ್ವದ ದೃಷ್ಟಿಯಿಂದ ಅಷ್ಟೊಂದು ಉತ್ಕೃಷ್ಟವೆನಿಸದಿದ್ದರೂ ಇತಿಹಾಸದ ದೃಷ್ಟಿಯಿಂದ ಇದಕ್ಕೊಂದು ಮಹತ್ವದ ಸ್ಥಾನವಿದೆ.

ಗೊಲ್ಲ ಸಿರುಮನ ಕಥೆಯನ್ನೇ ಕೇಂದ್ರವಾಗಿಟ್ಟುಕೊಂಡು ಮಲ್ಲ ಮತ್ತು ಸಿದ್ಧ ಎಂಬ ಮತ್ತಿಬ್ಬರು ಕವಿಗಳೂ ಕಾವ್ಯಗಳನ್ನು ರಚಿಸಿದ್ದಾರೆ. ಮಲ್ಲನ ಕಾವ್ಯ ೬ ಸಂಧಿ ೧೦೫೩ ಪದಗಳಲ್ಲಿ ಹಬ್ಬಿಕೊಂಡಿದ್ದರೆ ಸಿದ್ಧನ ಕಾವ್ಯ ೫ ಸಂಧಿ ೬೨೩ ಪದ್ಯಗಳಲ್ಲಿ ಸಂಕ್ಷಿಪ್ತಗೊಂಡಿದೆ. ಕೆಂಚಶೆಟ್ಟಿಯ ಸುತ ರಾಮನಂತೆ ಇವರೂ ಸಿರುಮ ಹಾಗೂ ಅವನ ಮಕ್ಕಳ ಶೌರ್ಯಾತಿಶಯಗಳನ್ನು ತಮ್ಮ ತಮ್ಮ ಪ್ರತಿಭಾಶಕ್ತಿಯ ಅಳವಿಗೆ ತಕ್ಕಂತೆ ಬಣ್ಣಿಸಿದ್ದಾರೆ. ಕಾವ್ಯಕಲೆಯ ದೃಷ್ಟಿಯಿಂದ ಎರಡೂ ಸಾಮಾನ್ಯ ಕೃತಿಗಳೆಂದು ಹೇಳಬೇಕಾಗುತ್ತದೆ.

ನೂರೊಂದನ 'ಸೌಂದರಕಾವ್ಯ' ಶ್ರೀರಂಗಪಟ್ಟಣದ ಇಮ್ಮಡಿ ಕೃಷ್ಣರಾಜ ಹಾಗೂ ಅವನ ದಳಪತಿಗಳಾದ ದೇವರಾಜ ಮತ್ತು ನಂಜರಾಜರ ವೈಭವ. ಪರಾಕ್ರಮಾದಿಗಳನ್ನು ವರ್ಣಿಸುವ ೧೩ ಸಂಧಿ. ೧೯೯೫ ಪದ್ಯಗಳಲ್ಲಿ ವಿಸ್ತೃತಗೊಂಡ ಇತಿಹಾಸ ಮಿಶ್ರಕಾವ್ಯ. ಕೃಷ್ಣರಾಜನ ಆಸ್ಥಾನ ವರ್ಣನೆ. ಅವನ ಆಸ್ಥಾನಕ್ಕೆ ಆಗಮಿಸಿದ ಪ್ರಭುಗಳ ವಿವರಣೆ. ಕಳಲೆ ದೇವರಾಜನು ಮಾಗಡಿಯನ್ನು ವಶಪಡಿಸಿಕೊಂಡು ಅಲ್ಲಿಯ ಅರಸನನ್ನು ಸೆರೆಹಿಡಿದ ಸಂಗತಿ, ಕಳಲೆ ನಂಜರಾಜನು ಸೈನ್ಯಸಮೇತ ಸಾಗಿ ಚೆನ್ನಪಟ್ಟಣದ ಸಮೀಪದಲ್ಲಿ ತುರುಕರೊಡನೆ ಯುದ್ಧಮಾಡಿ ಬಾರಮಲ್ಲ ಮುಂತಾದವರನ್ನು ಕೊಂದು ವಿಜಯಿಯಾದ ವಿಷಯವನ್ನು ವಿವರಿಸಿ ಕೊನೆಗೆ ನಂಜರಾಜನನ್ನು ವಿಶೇಷವಾಗಿ ಸ್ತುತಿಸಿ ನವರಾತ್ರಿಯ ಉತ್ಸವ ವರ್ಣನೆಯೊಂದಿಗೆ ಕಾವ್ಯಕ್ಕೆ ಮಂಗಳ ಹಾಡುತ್ತಾನೆ. ಇಲ್ಲಿ ಕವಿಗೆ ತನ್ನ ಪ್ರಭುವಿನ ವೀರ ಜೀವನವನ್ನು ವರ್ಣಿಸುವುದೇ ಮುಖ್ಯ ಉದ್ದೇಶವಾಗಿರುವುದರಿಂದ ಅದನ್ನು ತಕ್ಕಮಟ್ಟಿಗೆ ಮಾಡಿ ತೃಪ್ತಿಪಟ್ಟಿದ್ದಾನೆ. ಯುದ್ಧ ಮತ್ತು ಉತ್ಸವ ವರ್ಣನೆಗಳಲ್ಲಿ ವೀರ, ಶೃಂಗಾರ ರಸಗಳು ಸ್ವಲ್ಪಮಟ್ಟಿಗೆ ಚೆನ್ನಾಗಿ ಪ್ರತಿಪಾದನೆಗೊಂಡಿವೆ. ಆದರೂ ಕಾವ್ಯ ಸಾಮಾನ್ಯವಾಗಿದೆ.

ವೀರಜನಪತಿಯ 'ವಿಕ್ರಮವಿಲಾಸ' ೨೩ ಸಂಧಿ. ೧೬೨೧ ಪದ್ಯಗಳಲ್ಲಿ ಹಬ್ಬಿಕೊಂಡಿದೆ. ನೀಲಕಂಠನ ಸದ್ಭಕ್ತನಾದ ಉಜ್ಜಯಿನಿಯ ದೊರೆ ಚಂದ್ರಗುಪ್ತನ ಕುಮಾರ ವಿಕ್ರಮಾದಿತ್ಯನ ಕಥೆ ಇದರ ವಸ್ತು. ವಿಕ್ರಮಾದಿತ್ಯನ ವಿಲಾಸಜೀವನ. ಸುಖೋಪಭೋಗ. ವೀರತನಗಳನ್ನು ಸಹಜವಾಗಿ ವರ್ಣಿಸಿದ್ದಾನೆ. ಕಾವ್ಯನಿರೂಪಣೆ ಸಾಂಪ್ರದಾಯಿಕವಾಗಿದೆ. ಪ್ರಕೃತಿ ವರ್ಣನೆಯಲ್ಲಿ ಕೆಲವು ನೂತನ ಕಲ್ಪನಾಚಿತ್ರಗಳು ಕಂಗೊಳಿಸುತ್ತವೆ. ಕಾವ್ಯದ ಶೈಲಿ ಸರಳವಾಗಿದೆ. ಇದೊಂದು ಮಧ್ಯಮಕಾವ್ಯವಾಗಿದೆ.

ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ' ಕುಮಾರರಾಮನ ಚರಿತ್ರೆಯನ್ನು ಹೇಳುವ ಮತ್ತೊಂದು ಕೃತಿ. ಇದರಲ್ಲಿ ಕುಮಾರರಾಮನ ಚರಿತ್ರೆಯನ್ನು ಜನಪದರು ಕಂಡ ರೀತಿಯಲ್ಲಿ ವರ್ಣಿಸಲಾಗಿದೆ. ಮೂಲಕಥೆಯ ಜೊತೆಗೆ ಕವಿ ತ್ರಿಶಂಕು. ರೇಣುಕೆ, ಇಂದ್ರಕುಮಾರಿ. ಸೂರ್ಯಾಂಗ ಮುನಿ. ಜಯಸೇನ. ವರರುಚಿ. ಡೊಂಬರ ಚೆನ್ನಿ. ಮಚ್ಚೇಂದ್ರ ಮುಂತಾದ ಉಪಕಥೆಗಳನ್ನು ಸೇರಿಸಿ ಕೃತಿಯನ್ನು ೧೯ ಸಂಧಿ ೩೨೮೬ ಪದ್ಯಗಳವರೆಗೆ ವಿಸ್ತರಿಸಿದ್ದಾನೆ. ಕಥಾಪ್ರಿಯ ಹಾಗೂ ವರ್ಣನಾಪ್ರಿಯನಾದ ಕವಿ ರಾಮಾಯಣ ಮಹಾಭಾರತಗಳಂತೆ ತನ್ನ ಕೃತಿಯೂ ಜನಪ್ರಿಯವಾಗಲೆಂಬ ಉದ್ದೇಶದಿಂದ ಪೌರಾಣಿಕ, ಜಾನಪದ ಕಥೆಗಳನ್ನೆಲ್ಲ ತನ್ನ ಕೃತಿಯಲ್ಲಿ ಸೇರಿಸಿಕೊಂಡಿದ್ದಾನೆ. ನಂಜುಂಡ ಕಥಾನಾಯಕನನ್ನು ಗಂಗರಂತೆ ಆದರ್ಶವ್ಯಕ್ತಿಯನ್ನಾಗಿ ಚಿತ್ರಿಸಿದ್ದಾನೆ. ಕಾವ್ಯ ಸರಳ. ಜಾನಪದ ಶೈಲಿ, ಉಪಕಥೆಗಳ ಸೊಗಸಿನಿಂದಾಗಿ ಸರ್ವಮಾನ್ಯವಾಗಿದೆ: ರಂಜಕವಾಗಿದೆ. ಹೇರಳವಾದ ಗ್ರಾಮ್ಯಪದಗಳ ಬಳಕೆಯಿಂದ ಕಾವ್ಯಕ್ಕೆ ಕಸುವು ಬಂದಿದೆ.

ಇದರಂತೆ ವೀರಶೈವಸಾಂಗತ್ಯಕವಿಗಳಿಂದ 'ಮನ್ಮಥ ಮುಕುರ' ಮೊದಲಾದ ಕಥಾಪ್ರಧಾನಕಾವ್ಯಗಳೂ ರಚನೆಗೊಂಡಿವೆ.

ಒಟ್ಟಿನಲ್ಲಿ ವೈವಿಧ್ಯಮಯ ವಸ್ತು, ನೇರ ನಿರೂಪಣೆ, ಸ್ವತಂತ್ರ ಕಲ್ಪನಾವಿಲಾಸ. ನೂತನ ವರ್ಣನೆ ಹಾಗೂ ವಿಶಿಷ್ಟಭಾಷಾಶೈಲಿಯಿಂದ ವೀರಶೈವಸಾಂಗತ್ಯಕವಿಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

# ಜನಪದಸಾಹಿತ್ಯದಲ್ಲಿ ವೀರಶೈವದ ಒಲವುಗಳು

**ಡಾ. ದೇವೇಂದ್ರಕುಮಾರ ಸಿ. ಹಕಾರಿ**

ಅನಾದಿಕಾಲದಿಂದ ತಲೆಮಾರಿನಿಂದ ತಲೆಮಾರಿಗೆ ಅಲೆಮಾರಿಯಾಗಿ ವಾಕ್‌ಪರಂಪರೆಯ ಮೂಲಕ ಸಾಗಿಬಂದ ಜಾನಪದಭಂಡಾರದ ಮಹತ್ತರ ಸರಕು ಜನಪದಸಾಹಿತ್ಯ. ಆದಿಮ ಜನಪದಗುಂಪುಗಳ ವಿವಿಧಮುಖದ ಜೀವನ ಕ್ರಿಯೆಗಳ ಉಪಜವಾಗಿ ಹುಟ್ಟಿದ ಜನಪದಸಾಹಿತ್ಯ ಜನಪದರ ಭಾವನಾತ್ಮಕ ಅಭಿವ್ಯಕ್ತಿರೂಪವಾಗಿದ್ದು. ಜನಾಂಗ ಸಂಸ್ಕೃತಿಯ ಪ್ರಬಲ ಸಂವಹನಮಾಧ್ಯಮವಾಗಿದೆ. ಆದುದರಿಂದ ಅದರಲ್ಲಿ ಜನಪದ ನಂಬಿಕೆ, ಅರ್ಚನೆ, ಆರಾಧನೆ, ರೂಢಿ ಸಂಪ್ರದಾಯಗಳು, ಪರಂಪರೆ ಶ್ರದ್ಧೆಗಳು ಅನೂಚಾನವಾಗಿ ಸಮೂದಾಗಿರುತ್ತವೆ. ಜನಪದಸಮುದಾಯಗಳನ್ನು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ನಡೆಸಿಕೊಂಡು ಬಂದ ಅನೇಕ ಶಕ್ತಿಗಳಲ್ಲಿ ಧರ್ಮ ಎನ್ನುವುದು ಒಂದು ಪ್ರಮುಖ ಒತ್ತಾಸೆ. ಈ ದೃಷ್ಟಿಯಿಂದ ಜನಪದಸಾಹಿತ್ಯ ವಿಶೇಷ ಆಸಕ್ತಿಗೆ, ಅಧ್ಯಯನಕ್ಕೆ ಪ್ರೇರಕವಾಗಿದೆ.

ಆದಿಮಾನವನ ಸರ್ವಮುಖ ಚಟುವಟಿಕೆಗಳಿಂದ ಅವನ ನಾಗರಿಕತೆ, ಬೌದ್ಧಿಕಸಂಸ್ಕೃತಿಗಳು ರೂಪು ಗೊಂಡರೆ, ಅವನ ಬದುಕಿನ ನಂಬುಗೆ, ಆರಾಧನೆ, ಭಯಭಕ್ತಿ, ದೈವ ದೇವರು, ಕುಣಿತ ಹಾಡು ಕಥೆ ಚಿತ್ರ ಸುಗ್ಗಿ ಸಂಭ್ರಮಗಳಿಂದ ಅವನ ಆಂತರಿಕ ಸಂಸ್ಕೃತಿಸ್ವರೂಪ ರೂಪುಗೊಳ್ಳುತ್ತದೆ. ಇವು ಅವನ ಭಾವನಾತ್ಮಕ ಅಭಿವ್ಯಕ್ತಿಗೆ ಪ್ರೇರಕ : ಚಿರಂತನಮೌಲ್ಯಗಳ ಆವಿಷ್ಕಾರಕ್ಕೆ ಆಧಾರ. ಒಂದು ಸಂಸ್ಕೃತಿಯ ಭೌತಿಕಸ್ತರ ; ಇನ್ನೊಂದು ಸಂಸ್ಕೃತಿಯ ಆಧ್ಯಾತ್ಮಿಕಸ್ತರ. ಧರ್ಮ ಎನ್ನುವುದು ಜನಪದ ಬದುಕಿನಲ್ಲಿ ತೊಡಗಿಕೊಂಡ ಅನಾದಿಕಾಲದಿಂದಲೇ ಜನಪದರ ಜೀವನ ವಾಹಿನಿಯಲ್ಲಿ ಆಧ್ಯಾತ್ಮಿಕಸ್ತರ ಒಡನೊಡನೆ ಬೆರೆತುಬಂದಿದೆ. ಜನಪದ ಶಿಷ್ಟಪದಕ್ಕೆ ತಿರುಗುತ್ತ ಬಂದರೂ ಒಂದು ನಿಟ್ಟಿನಲ್ಲಿ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಕಾಪಾಡಿಕೊಳ್ಳುತ್ತ ಬೆಳೆಸಿಕೊಂಡು ಬಂದಿರುವುದು ಜನಪದ ಸಾಹಿತ್ಯದ ಹಿರಿಮೆ.

ಪ್ರಾಚೀನ ಮಾನವನಿಗೆ ನಾಗರಿಕತೆಯ ಬೆಳಗಿನ ಕಾಲದಲ್ಲಿ ಸಮಸ್ತಸೃಷ್ಟಿ ಜೀವಂತವಾಗಿತ್ತು. ತನ್ನ ಸುತ್ತ ಮುತ್ತಣ ಪ್ರತಿಯೊಂದು ವಸ್ತುವೂ ಆತನ ದೃಷ್ಟಿಯಲ್ಲಿ ಒಂದೊಂದು ವ್ಯಕ್ತಿತ್ವರೂಪಧಾರಣೆ ಮಾಡಿತ್ತು. ನಿಸರ್ಗದ ಅದ್ಭುತ, ಭಯೋತ್ಪಾದಕ, ಆಶ್ಚರ್ಯಜನಕ ವಸ್ತುಗಳ ಮೂಲವನ್ನು ಅರ್ಥೈಸುವ, ತಿಳಿದುಕೊಳ್ಳುವ ಹಂತದಲ್ಲಿಯೇ ಅಗಣಿತ ರಹಸ್ಯಶಕ್ತಿಗಳು ಆತನ ಕಲ್ಪನಾಶಕ್ತಿ, ಅನುಭವಶಕ್ತಿಗಳ ಪರಿಧಿಯನ್ನು ಮೀರಿನಿಂತ ರಹಸ್ಯ ಆತನನ್ನು ನಿಗೂಢ ಶಕ್ತಿಯ ಆರಾಧನೆಗೆ ತೊಡಗಿಸಿದವು. ಸೂರ್ಯ ಮೂಡಿದಾಗ ಉಜ್ವಲಪ್ರಕಾಶ, ಮುಳುಗಿದಾಗ ಭೂಮಂಡಲದಲ್ಲಿ ಗಾಢಕತ್ತಲೆ, ಆಗ ಸೂರ್ಯ ಒಬ್ಬ ದೇವ. ಹೀಗೆ ದಕ್ಷಿಣಭಾರತದ ಕೆಲವು ಜನಪದಗಳು ಬದುಕಿನ ಅನಂತಕಾಲದ ಒಂದು ಅಜ್ಞಾತಬಿಂದುವಿನಲ್ಲಿ ಅದ್ವಿತೀಯ ಅದ್ಭುತ ಅಪರಿಮಿತ ಶಕ್ತಿಗೆ 'ಶಿವ' ಎಂದು ಹೆಸರಿಸಿ ಆರಾಧಿಸಿದ ಕಾಲ ದಿಂದಲೇ ಶಿವೋಪಾಸನೆ ಜನಪದಧರ್ಮದಲ್ಲಿ ಹುಟ್ಟಿಕೊಂಡಿತು. ಶಿವನ ಆರಾಧಕರು ಪ್ರಪಂಚದ ತುಂಬೆಲ್ಲ ವ್ಯಾಪಿಸಲು, ಅನಾದಿಕಾಲದ ಜನಪದ ಅಲೆಮಾರಿಗುಂಪುಗಳು ಆರ್ಥಿಕ ಮುಂತಾದ ಕಾರಣಗಳಿಂದ ವಿವಿಧ ಭೂಪಾತಳಿಗಳಲ್ಲಿ ಚದುರಿ ವಲಸೆ ಹೋಗಿ ನೆಲೆನಿಂದುದೇ ಮೂಲಕಾರಣ. ಹನ್ನೆರಡನೆಯ ಶತಮಾನದವರೆಗೆ ಕೇವಲ ಒಂದು ಪರಂಪರೆಯ ಮಟ್ಟದಲ್ಲಿ, ರೂಢಿ ಆಚರಣೆಗಳ ಮಟ್ಟದಲ್ಲಿ ಜನಪದವೃಂದಗಳನ್ನು ಶಿಷ್ಟಪದ ವರ್ಗಗಳನ್ನು ನಿಯಂತ್ರಿಸಿಕೊಂಡು ಬಂದ ಶಿವೋಪಾಸನೆಯೇ ಪ್ರಧಾನವಾದ ಶೈವಧರ್ಮ, ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನ ಸಮಗ್ರ ಜನ ಜೀವನದ ಜಡ್ಡುಗಟ್ಟಿದ ಪರಂಪರೆಗಳನ್ನು, ನಂಬಿಕೆಗಳನ್ನು, ಮೌಢ್ಯಗಳನ್ನು ಹಿಡಿದು ಅಲ್ಲಾಡಿಸಿತು. ವರ್ಣವ್ಯವಸ್ಥೆಯ ಶೋಷಿತ ಚೌಕಟ್ಟುಗಳನ್ನು ಕಿತ್ತೆಸೆದು "ಸಕಲಜೀವಾತ್ಮರಿಗೆ ಲೇಸ ಬಯಸುವ" ಒಂದು ಹೊಸ ದೃಷ್ಟಿ, ಜೀವನದ ವ್ಯಾಪಕಧೋರಣೆ ಇಡೀ ಜನಾಂಗದಲ್ಲಿ ಒಂದು ನೂತನಜಾಗೃತಿಯನ್ನು ಉಂಟುಮಾಡಿತು. ರಗಳೆ ಷಟ್ಪದಿಗಳ

ರೂಪದಲ್ಲಿ ಹಿಡಿದ ವೀರಶೈವದ ಒಲವುಗಳು ಬಸವಾದಿಪ್ರಮುಖರ ವಚನಗಳಲ್ಲಿ, ನಿಜಗುಣ ಮುಂತಾದವರ ಹಾಡುಗಬ್ಬಗಳಲ್ಲಿ, ಅಕ್ಕಮಹಾದೇವಿ. ಸಿದ್ಧರಾಮ ಮುಂತಾದವರ ತ್ರಿಪದಿ ಚೌಪದಿಗಳಲ್ಲಿ ಒಂದು ನಿಶ್ಚಿತ ನಿಲುವನ್ನು ಪ್ರತಿಪಾದಿಸಿದುವು. ವರ್ಣಾಶ್ರಮವ್ಯವಸ್ಥೆಯನ್ನು ಧಿಕ್ಕರಿಸಿ 'ಕಾಯಕವೇ ಕೈಲಾಸ'ವೆಂದು ಸಾರಿ ಮಾನವಗೌರವವನ್ನು ಹೆಚ್ಚಿಸಿ, "ಆಚಾರವೇ ಸ್ವರ್ಗ, ಅನಾಚಾರವೇ ನರಕ; ಶಿವಭಕ್ತನ ಮನೆಯ ಅಂಗಳವೇ ವಾರಣಾಸಿ" ಎಂದು ನೆರೆನಂಬಿದ ಅದರಂತೆ ಬಾಳಿದ ಶಿವಶರಣರ ಸಮಗ್ರಕ್ರಾಂತಿ ಜನಾಂಗದ ಸಮಸ್ತರಿಗೆ ಸರ್ವಗ್ರಾಹಿಯಾಯಿತು. ಇದರ ಪರಿಣಾಮವಾಗಿ ಜನರ ನುಡಿ, ಜನಪದ ಭಾಷೆ ಶಿಷ್ಟಪದ ಸಾಹಿತ್ಯಕ್ಕೆ, ಶಿವಶರಣರ ವಚನಕ್ಕೆ ಪ್ರೇರಕವಾಯಿತು. ಒಂದು ನಿಟ್ಟಿನಲ್ಲಿ ಈ ಹಿನ್ನೆಲೆಯ ಶಿಷ್ಟಪದಸಾಹಿತ್ಯ ರಚನೆಗೊಂಡರೆ, ಇನ್ನೊಂದು ನಿಟ್ಟಿನಲ್ಲಿ ವೀರಶೈವರ ಒಲವುಗಳು, ತಾತ್ವಿಕ ನಿಲವುಗಳು, ಶಿವಶರಣರ ಬದುಕು ಜನಪದಸಾಹಿತ್ಯಪರಂಪರೆಯಲ್ಲಿ ಬೆಳೆದುಕೊಂಡು ಬಂದವು.

ಕಾಪಸೇರೇವಪ್ಪ, ಚೆನ್ನಮಲ್ಲಪ್ಪಹಲಸಂಗಿ, ಡಾ. ಗದ್ದಿಗೀಮಠ, ಕ.ರಾ.ಕೃ. ಮತಿಘಟ್ಟ ಕೃಷ್ಣಮೂರ್ತಿ, ಡಾ. ಜೀ.ಶಂ.ಪ. ಮುಂತಾದವರು ಸಂಗ್ರಹಿಸಿ ಪ್ರಕಟಿಸುವವರೆಗೆ ಕೇವಲ ವಾಕ್‌ಪರಂಪರೆಯಲ್ಲಿದ್ದ ಈ ಮಾದರಿಯ ಜನಪದಸಾಹಿತ್ಯ ಇಂದು ಇವರೆಲ್ಲರ ಆಸಕ್ತಿಯ ಫಲವಾಗಿ ಕೆಲಮಟ್ಟಿಗಾದರೂ ಅಧ್ಯಯನಕ್ಕೆ ಲಭ್ಯವಾಗಿದೆ, ವಿಶ್ಲೇಷಣೆಗೆ ಆಕರವಾಗಿದೆ. ಹೀಗೆಂದಮಾತ್ರಕ್ಕೆ ವೀರಶೈವಧರ್ಮದ ಎಲ್ಲ ತತ್ತ್ವಸಿದ್ಧಾಂತಗಳು. ದರ್ಶನ ಮುಂತಾದುವು ಇದುವರೆಗೆ ಸಂಗೃಹೀತವಾಗಿ ಪ್ರಕಟಗೊಂಡಿರುವ, ಅಥವಾ ಇನ್ನೂ ವಾಕ್‌ಪರಂಪರೆಯಲ್ಲಿಯೇ ಉಳಿದಿರುವ ಜನಪದ ಸಾಹಿತ್ಯದಲ್ಲಿ ನೇರವಾಗಿ ಸೂತ್ರಬದ್ಧವಾಗಿ ದೊರೆಯುತ್ತವೆ ಎಂದಲ್ಲ: ಅಥವಾ ಹಾಗೆ ಭಾವಿಸುವುದು ಸಾಧುವೂ ಅಲ್ಲ.

ವೀರಶೈವದ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ ಮುಂತಾದುವನ್ನು ಕುರಿತು ಮತ್ತು ಶಿವಶರಣರ ಜೀವನದ ಸಂಗತಿಗಳನ್ನು ಕುರಿತು ಜನಪದದ ಕೆಲವು ತ್ರಿಪದಿ ಕಥನಗೀತೆಗಳಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಅಂಶಗಳು ವಿವಕ್ಷಿತವಾಗಿರುವುದು ಕಂಡುಬರುತ್ತದೆ.

ಜನಪದಸಾಹಿತ್ಯದ ಸ್ವರೂಪವನ್ನು ಕುರಿತು ಹೇಳುವಾಗ ಇದು ಸಾಮೂಹಿಕಸೃಷ್ಟಿ ಎನ್ನುವ ಅಭಿಪ್ರಾಯವನ್ನು ಸಾಮಾನ್ಯವಾಗಿ ಸ್ವೀಕರಿಸಲಾಗುತ್ತದೆ. ಒಂದು ಜನಪದವೃಂದ ತನ್ನ ಸಹಚರಿಯಾದ ಮತ್ತೊಂದು ಜನಪದ ಸಮುದಾಯದ ಮೇಲೆ ತನ್ನ ಪ್ರಭಾವ ಬೀರುವುದು ಸಹಜವಾದ ಪ್ರಕ್ರಿಯೆ. ಶಿವನನ್ನು ಆರಾಧಿಸುವ ಒಂದು ಗುಂಪು ತನ್ನ ಹಾಡುಗಳಲ್ಲಿ ಶಿವನನ್ನು ಸ್ತುತಿಸಿದರೆ ಇತರ ಗುಂಪುಗಳೂ ಅಪ್ರಜ್ಞಾಪೂರ್ವಕವಾಗಿ ಶಿವಸ್ತುತಿಯಲ್ಲಿ ತೊಡಗುತ್ತವೆ. ಆಗ ಅಂಥ ಎಲ್ಲ ಗುಂಪುಗಳೂ ಶಿವೋಪಾಸಕಸಮುದಾಯಗಳಾಗುತ್ತವೆಯೇ ಹೊರತು ಅವರೆಲ್ಲ ಶೈವರು—ಅಥವಾ ವೀರಶೈವರು ಎಂದು ಜಾತಿ ಮತದ ಸೀಮೆಗಳನ್ನು ನಿರ್ಮಿಸಿಕೊಳ್ಳುವುದಿಲ್ಲ. ಅವರ ದೃಷ್ಟಿಯಲ್ಲಿ ದೇವತಾಸ್ತುತಿಯೇ ಪ್ರಧಾನ ಗುರಿ. ಅನೇಕ ಕುಲಗುಂಪುಗಳು ತಮ್ಮ ತಮ್ಮ ಸೀಮಿತ ಕಕ್ಷೆಯಲ್ಲಿ ಆರಾಧನೆಯ ಒಂದು ಕ್ರಮವನ್ನು ಏರ್ಪಡಿಸಿಕೊಂಡಿರುತ್ತಾರೆ. ದುರ್ಗಿ, ಕಾಳಿ. ದ್ಯಾಮವ್ವ, ಕರಿಯವ್ವ, ಹನುಮಂತ ಹೀಗೆ ಬೇರೆ ಬೇರೆ ಶಕ್ತಿದೇವ–ದೇವತೆಗಳ ಆರಾಧನೆ ಮಾಡುವ ಈ ಗುಂಪುಗಳ ಅರ್ಚನಾವಿಧಾನದಲ್ಲಿ ಶಿವೋಪಾಸಕ ಗುಂಪುಗಳೂ ಬೆರೆಯುತ್ತವೆ. ಆಗ ಇಡೀ ಜನಪದಗುಂಪುಗಳ ದೃಷ್ಟಿಯಲ್ಲಿ ಒಂದು ವಿಧವಾದ ದೈವೀಸಾಮರಸ್ಯ, ಧಾರ್ಮಿಕ ಹೊಂದಾಣಿಕೆ ಸಹಜವಾಗಿ ಒಡಮೂಡುವ ಸಾಮೂಹಿಕ ಸ್ವೀಕೃತಿಯಾಗಿರುತ್ತದೆ. ಆದುದರಿಂದ ಜನಪದ ಸಾಹಿತ್ಯದಲ್ಲಿ ವೀರಶೈವದ ಒಲವುಗಳನ್ನು ಗುರುತಿಸುವುದು ಸಾಧ್ಯವಾದೀತೇ ಹೊರತು ವೀರಶೈವಧರ್ಮದ ಪರಿಭಾಷೆಯ ದಾರ್ಶನಿಕ ನಿರ್ದಿಷ್ಟತೆಯನ್ನು ಕಂಡುಹಿಡಿಯುವುದು ಜಟಿಲವಾದ ಕಾರ್ಯವಾಗಬಹುದು. ಈ ಕೆಲವು ಮಾತುಗಳನ್ನು ಗಮನದಲ್ಲಿರಿಸಿಕೊಂಡು ಜನಪದಸಾಹಿತ್ಯದಲ್ಲಿ ವೀರಶೈವದ ಒಲವುಗಳು ವ್ಯಕ್ತವಾದ ಬಗೆಯನ್ನು ವಿವರಿಸಬಹುದು.

ಆದಿಮ ಜನಪದ ಗುಂಪುಗಳ ಕೌಟುಂಬಿಕ ಜೀವನದ ಚಟುವಟಿಕೆಗಳಲ್ಲಿ. ಬೀಸುವುದು ಒಂದು ಮುಖ್ಯ ಕ್ರಿಯೆ. ಬೀಸುಕಲ್ಲನ್ನು 'ಗೌರಿ' ಎಂದು ನಂಬಿದ ಜನಪದರು 'ಶಿವನೇ' ತಮ್ಮನ್ನು ಎಲ್ಲ ಕಷ್ಟಗಳಿಂದ ಪಾರು ಮಾಡುತ್ತಾನೆ. ಆತನೇ ತಮ್ಮನ್ನು ಕಾಪಾಡುತ್ತಾನೆ ಎಂದು ನಂಬಿದವರು.

ತನ್ನ ಪಾಲಿಗೆ ಜೀವನ ಒಂದು ಅರಣ್ಯವಾದಾಗ–ತನ್ನ ಪಾಲಿಗೆ ಯಾರ ಆಸರೆಯೂ ಇಲ್ಲದಾದಾಗ ಈ ಅರಣ್ಯರೂಪದ ಸಂಸಾರವನ್ನು ಗೆಲ್ಲುವ ಪ್ರತಿಜ್ಞೆ ಕೈಕೊಳ್ಳುವ ಗರತಿ ತನ್ನ ಆರಾಧ್ಯದೈವದ ಮೇಲೆ ಆಣೆಯಿಡುತ್ತಾಳೆ ;

ಅರ್ರ್‍ಯಾಣದಡಿವ್ಯಾಗ ಯಾರಾಣೆ ಕೊಡಲಿಲ್ಲ
ಸೂರ್ಯ ನಿನ್ನಾಣೆ **ಶಿವನಾಣೆ** ಕೊಟ್ಟೇನ
ಅರ್ರ್‍ಯಾಣ ಗೆದ್ದ ಬರುವೇನ

ಅರಣ್ಯದ ಈ ಪದಪ್ರಯೋಗ. ಅರಣ್ಯದಲ್ಲಿರುವ ಕ್ರೂರ ಹಿಂಸ್ರಪಶು ವಿಷಜಂತುಗಳ ಪ್ರತಿಮೆಯನ್ನು ತಾಳಿ ವಾಸ್ತವ ಜೀವನದಲ್ಲಿರುವ ದುಷ್ಟ, ನೀಚ, ಕ್ಷುದ್ರ ಕ್ಷುಲ್ಲಕ ಕ್ರೂರಜನರ ಪ್ರತೀಕವಾಗುತ್ತದೆ. ಇಂಥ 'ಅರ್ರ್‍ಯಾಣ'ವನ್ನು ಗೆಲ್ಲಲು 'ಶಿವ'ನ ಆಣೆಯಿಟ್ಟು ಧೈರ್ಯನಿಷ್ಠೆಗಳನ್ನು ತಾಳುವ ಈ ಪರಿ ಜನಪದ ಶಿವನಿಷ್ಠೆಗೆ ಸಂಕೇತವಾಗಿದೆ. ಆದರೆ ಆಣೆ ಕೈಕೊಂಡ ಕೂಡಲೇ ಎಲ್ಲ ಕಷ್ಟಗಳೂ ಪರಿಹಾರವಾಗುವುದಿಲ್ಲ. 'ಶಿವನಿಷ್ಠೆ' ಗಟ್ಟಿಗೊಳ್ಳಬೇಕು. ಅಚಲಶ್ರದ್ಧೆಯಿಂದ ಶಿವನನ್ನು ಅರ್ಚಿಸಿ, ಆರಾಧಿಸಿ ಸಾಧಿಸಿಕೊಳ್ಳಬೇಕು. ಆದ್ದರಿಂದ :

ಮಾದೇವ ನಿನಹೊರ್ತು ನಾನ್ಯಾರ ನಂಬಿಲ್ಲ
ನಾ ಮಾಡುವೆನೆಂಬ ಅಳವಿಲ್ಲ ಮಲ್ಲಯ್ಯ
ನೀ ನಡಸೊ ನನ್ನ ಸರುವೆಲ್ಲ

ಎಂದು ತನ್ನ ಜೀವನವನ್ನು ಶಿವನಿಗೆ ಸಮರ್ಪಿಸುತ್ತಾನೆ. ಈ ಶಿವಸಮರ್ಪಣಭಾವದಲ್ಲಿ ವೀರಶೈವ ಭಕ್ತಸ್ಥಲದ ಸೂಕ್ಷ್ಮಾನುಭಾವ ಸ್ಪಂದಿಸುತ್ತದೆ. ಜೀವನದುದ್ದಕ್ಕೂ ಬೆಳೆದು ನಿಲ್ಲುವ ಈ 'ಏಕನಿಷ್ಠೆ' ವೀರಶೈವದ ಮಹೇಶ್ವರ ಸ್ಥಲದ ಲಕ್ಷಣ. ಶಿವನನ್ನೇ ನೆರೆನಂಬಿದ, ಆತನನ್ನೇ ಓಲಯಿಸಿದ ಈ ಚಿತ್ತಸ್ಥಿತಿ ಜನಪದರನ್ನು ಎಲ್ಲ ಕಷ್ಟಸಂಕಟ ಗಳಿಂದ ಪಾರುಮಾಡುತ್ತದೆ.

ಶಿವಶಿವ ಎಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ ಎಲೆ ಮನವ
ಶಿವನೆಂಬ ಸಬುದ ಬಿಡಬ್ಯಾಡ

ಇಲ್ಲಿ 'ಸಿಡಿಲು' 'ಕಲ್ಲು' ಬದುಕಿನಲ್ಲಿ ಅನಿರೀಕ್ಷಿತವಾಗಿ ಬಂದೆರಗುವ ಸಂಕಟ ವಿಪತ್ತುಗಳಿಗೆ ಪ್ರತೀಕಪದಗಳು. 'ಶಿವನೆಂಬ ಸಬುದ' ಬಿಡದಿರುವುದು ಜೀವನನಿಷ್ಠೆಯ ವ್ಯಾಪಕಶ್ರದ್ಧೆಯನ್ನು ಪ್ರತಿಷ್ಠಾಪಿಸುವ ಕುರುಹು.

ವೀರಶೈವದ ಅಷ್ಟಾವರಣಗಳು ಧರ್ಮದ ನಿತ್ಯಾಚರಣೆಗೆ ಸಂಬಂಧಿಸಿದ ಪರಿಕರಗಳು. ಅದರಲ್ಲಿ "ಶ್ರೀ ಗುರುಪ್ರ ಸ್ಮರಣೆಗೈವರ್ಗೆ ಚಿಂತಾಮಣಿಯು" ಎಂದು ಹೇಳಲಾಗುತ್ತದೆ. ಗುರುವಿನ ಮಹಿಮೆಯನ್ನು ಕುರಿತ ಅನುಭಾವ ಜನಪದರಲ್ಲಿ ವ್ಯಕ್ತವಾಗುವ ಬಗೆ ತುಂಬ ಹೃದಯಸ್ಪರ್ಶಿ :

ಸಿದ್ಧಿಗಣ್ಣಲಿ ಕಂಡ ಸುದ್ದಗುರುವಿನ ಪಾದ
ಎದ್ದು ನೋಡಿದರೆ ನಿರಬಯಲ ಗುರುರಾಯ
ರುದ್ದರನ ಮಹಿಮೆ ತಿಳಿಯಾವ

ಎಚ್ಚರವನ್ನು ಒಳಗೊಂಡ ಮಂಪರು ಮುತ್ತಿಕೊಂಡ ಒಂದು ಚಿತ್ತಸ್ಥಿತಿಯಲ್ಲಿ ಗುರುವಿನ ಧ್ಯಾನ : ಆ ಧ್ಯಾನವೇ ಚಿಂತನೆ ಯಾಗಿ ಪರಿವರ್ತನಗೊಳ್ಳುತ್ತದೆ. ಆಗ ಗುರುವಿನ ಅಮೂರ್ತರೂಪ ಮೂರ್ತವಾಗುವುದು ಕೇವಲ ಪಾದ ಚಿಹ್ನೆಗಳ ಮೂಲಕ. ಶ್ರೀಗುರುವಿನ ಪಾದದರ್ಶನವಾಯಿತಲ್ಲ ! ಗುರುವಿನ ಮುಖದರ್ಶನ ? ಆಗಲೇ ಎಚ್ಚರ—ಶ್ರೀಗುರುವಿನ ರೂಪ 'ನಿರಬಯಲು.' ಅವನು ಅಗಣಿತಮಹಿಮಾಶೀಲ ರುದ್ರಸ್ವರೂಪಿ. ಅವನ ಮಹಿಮೆ ಅವನ ಅನುಭಾವ ವಾಸ್ತವದ ಜಡಪಾತಳಿಯಲ್ಲಿ ಎಟಕುವಂಥದಲ್ಲ : ಅದೊಂದು ನಿರಾಳ ಚೈತನ್ಯ : ಅದಕ್ಕೊಂದು ಸೀಮಿತ ಆಕಾರವೇ ? ಆಗ ಕೇವಲ ಗುರುಸ್ಮೃತಿ, ಗುರುಮಹಿಮೆಯೇ ಉಸಿರು-ಅರಿವು :

ಎದ್ದು ಗುರುವೆಂದೇ ಏಳುತ್ತು ಗುರುವೆಂದೆ
ನಿದ್ದೆಗಣ್ಣಾಲ್ಲೆ ಗುರು ಅಂದೇ। ಗುರುಗಳಿ ಮಾ
ನಾಲುಮಂಟಪಕೆ ಗುರು ಅಂದೇ।

ಗುರುವಿನ ಧ್ಯಾನದಲ್ಲಿದ್ದುಕೊಂಡೇ ಜೀವನಕ್ರಿಯೆಗಳನ್ನು ಪೂರೈಸುವ ಜನಪದರಿಗೆ. ಗುರು. ಸರ್ವಶಕ್ತ. ಸರ್ವಕರ್ತ. ಆತ ಜನ್ಮಕೊಟ್ಟ ತಂದೆತಾಯಿಗಳಿಗಿಂತ ಅಧಿಕ.

ತಾಯಿತಂದೆರ ಪಾದ ಮೇಲೆ ಗುರುವಿನ ಪಾದ........

ಅಷ್ಟಾವರಣದಲ್ಲಿ ಎರಡನೆಯದಾದ 'ಲಿಂಗ'ವನ್ನು ಕುರಿತಾದ ಜನಪದರ ಅನುಭವ ಅಮಾಯಕವಾಗಿದೆ. ಗುರು. ಲಿಂಗ-ದೀಕ್ಷೆ ಕೊಡುತ್ತಾನೆ. ಅದು ಅಂತರಂಗದ ಅರಿವು: ಸ್ವಸ್ವರೂಪದ ಜ್ಞಾನದ ಸಂಕೇತವಾಗಿ ಚಿಜ್ಜ್ಯೋತಿಯನ್ನು ಲಿಂಗವೆಂದು ಪರಿಭಾವಿಸಿ ಅಂಗದ ಮೇಲೆ ಧರಿಸುವುದು. ಅಂಗಲಿಂಗಸಂಬಂಧ ಕಲ್ಪಿಸುವುದು. ಲಿಂಗದಲ್ಲಿಯೇ ಸಮಸ್ತ ವಿಶ್ವ ಹುದುಗಿದೆ—ಲಿಂಗವೇ ಪತಿ ತಾನು ಸತಿ—ಎಂದು ಆರಾಧಿಸಿ ಸಾಧಿಸುವುದು ಇತ್ಯಾದಿ ಶಾಸ್ತ್ರದ—ಸಿದ್ಧಾಂತದ ದೃಷ್ಟಿ.

ಜನಪದಕಾವ್ಯದಲ್ಲಿ ಅವರು ಕಂಡ. ಅನುಭವಿಸಿದ ಲಿಂಗಸ್ವರೂಪ, ಅನುಭಾವಪ್ರಧಾನವಾದದ್ದು :

ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ । ಲಿಂಗಯ್ಯ
ನೋಡಟೆಗಿ ನಿದ್ದಿ ಬಯಲಾಗಿ ।

ಜನಪದರಿಗೆ ಹೂವಿನ ಚೆಲುವಿನಲ್ಲಿ ಲಿಂಗಯ್ಯ ಹುದುಗಿರುವಂತೆ ತೋರುತ್ತಾನೆ. ಅಮೂರ್ತವಾದ ವಸ್ತುವೊಂದರ ಮೂರ್ತೀಕರಣ ತುಂಬ ಮನೋಜ್ಞ. ಲಿಂಗಯ್ಯ ಮೊಗ್ಗೆಯಲ್ಲಿ ಕಣ್ಣು ತೆರೆದ ಅನುಭವ. ಅವನನ್ನು ನೋಡುತ್ತಿರುವಂತೆ ನಿದ್ದೆ ಬಯಲಾಗಿ ತಾನೂ ಕಣ್ಣು ತೆರೆದ ಅನುಭವ. ಹೃದಯ ಮತ್ತು ಹೂವುಗಳ ಕ್ರಿಯಾಸಾದೃಶ್ಯ ಇವು ಅನುಭಾವಕ್ಕೆ ವಿಸ್ಮಯದ ಮೆರಗು ತುಂಬುತ್ತವೆ. ಅನುಭವ ಸಾಂಪ್ರದಾಯಿಕವಾದಷ್ಟೂ ಅರ್ಚನೆಯ ರೀತಿ ಆರಾಧನಾಭಾವ 'ಭಕ್ತ' ಮತ್ತು 'ಲಿಂಗ' ಪರಸ್ಪರರನ್ನು ಸಮ್ಮುಖಗೊಳಿಸುತ್ತದೆ. ಕೃಷ್ಣೆ ಮತ್ತು ಮಲಪ್ರಭಾ ನದಿಗಳ ಸಂಗಮವಾದ ಕೂಡಲಸಂಗಮದ ಪ್ರವಾಹವನ್ನು ವೀಕ್ಷಿಸಿದ ಒಂದು ವಿಲಕ್ಷಣಕ್ಷಣದಲ್ಲಿ ಲಿಂಗಚೈತನ್ಯವನ್ನು ದೃಷ್ಟಿಗ್ರಾಹ್ಯವನ್ನಾಗಿಸಿದ ಒಂದು ತ್ರಿಪದಿ ಲಿಂಗಯ್ಯನಲ್ಲಿ ಮಾನವೀಕರಣಸ್ವರವನ್ನು ನೆಯ್ಯುತ್ತದೆ :

ಕೂಡಲಸಂಗಯ್ಯ ಹೊಳೆಯಾಗ ಹ್ಯಾಂಗಿದ್ದ
ಹಳ್ಳೊತ್ತಿ ಸಣ್ಣ ಮಳಲೊತ್ತಿ ಗಂಗೀಯ
ನೀರೊತ್ತಿ ಲಿಂಗ ನೆನೆದಾನ ।'

ನೀರು ಕೂಡ ಲಿಂಗಯ್ಯನಿಗೆ ಒತ್ತಿ ಆತನಿಗೆ ನೋವಾದೀತಲ್ಲ ಎನ್ನುವ ಅನುಭಾವಬಿಂದುವಿನಲ್ಲಿ ಭಕ್ತಿತೆರೆ ಮಸಗುತ್ತದೆ.

ಲಿಂಗಯ್ಯ ಅಂಗೈಯಲ್ಲಿ ಚುಳುಕಾಗಿದ್ದಾನೆ. ಆತನದು. ಹುದುಗದ ಪಾವಡ.[1] ಆತ ನಿಸ್ಸೀಮ. ಅಂಥ ಲಿಂಗಯ್ಯನನ್ನು 'ಹುದುಗದ ಪಾವಡ'ದಲ್ಲಿಟ್ಟು ಹುದುಗಿಸಬೇಕು. ಆ ಪಾವಡ ಅಥವಾ ಲಿಂಗವಸ್ತ್ರವನ್ನು ಎಲ್ಲಿ ಶುದ್ಧೀಕರಿಸುವುದು ? ಒಗೆಯಲು ಸ್ಫಟಿಕದಂಥ ಕಲ್ಲಿಲ್ಲ. ಎಲ್ಲವೂ ಜಡಶಿಲೆ. ಈ ಜಡಶಿಲೆ ಲಿಂಗದ ಅರಿವಿಲ್ಲದ ಕಾಯ. ಇನ್ನು ಈ ಜಡಕಾಯದಲ್ಲಿ ಲಿಂಗಯ್ಯನನ್ನು ಹುದುಗಿಸುವುದು ಹೇಗೆ ? ಲಿಂಗವಸ್ತ್ರ—ಲಿಂಗದ ನೆಲೆ—ಅದು ಪರಿಶುದ್ಧ ಭಕ್ತಿಜಲದಿಂದ ಮಾತ್ರ ಶುದ್ಧೀಕರಿಸುವಂಥದು. ಅಂಥ ಕಲ್ಲೂ ಇಲ್ಲ : ಅಂಥ ಜಲವೂ ಇಲ್ಲ. ಆದುದರಿಂದ ಲಿಂಗಯ್ಯ ವಸ್ತ್ರವನ್ನು ಎಲ್ಲಿ ಒಗೆಯುವುದು—ಶುದ್ಧೀಕರಿಸುವುದು ?

ಎಲ್ಲೆಲ್ಲಿ ನೋಡಿದರ ಫಳ್ಳಾನ ಕಲ್ಲಿಲ್ಲ
ಜಳ್ಳಾನೆ ಹರಿವ ಜಲವಿಲ್ಲ ಲಿಂಗಯ್ಯ
ವಸ್ತ್ರ ನಾನೆಲ್ಲಿ ಒಗೆಯಲಿ ।

**ಜಂಗಮ** ಎನ್ನುವುದು ಭಕ್ತನ ಚಿತ್‌ಕಳೆ. ಆತ ಭಕ್ತರ ಕಲ್ಯಾಣಕ್ಕಾಗಿ ಮನೆಮನೆಗೆ ಹೋಗಿ ಮನಮನದ ಶುದ್ಧೀಕರಿಸಿ ಜೀವನದ ಗುರಿಯನ್ನು ತಿಳಿಯಪಡಿಸುವ "ಸುಳಿವ ಲಿಂಗ." ಅಂಥ ಜಂಗಮ ಜನಪದರಿಗೆ ತಂದೆ. ತಾನು ಬಡವಿ ನಿಜ.

---

[1] ಕರಡಿಗೆಯಲ್ಲಿ ಲಿಂಗನನ್ನು ಇಡುವಾಗ ಹೊದಿಸುವ ಬಟ್ಟೆಗೆ 'ಹುದುಗದ ಪಾವಡ' ಎಂದು ಕರೆಯಲಾಗುತ್ತದೆ. ಪಾವಡ ಎಂದರೆ ವಸ್ತ್ರ. ಲಿಂಗ ವಸ್ತ್ರಕ್ಕೆ ಹುದುಗದ ಪಾವಡ ಎಂದೂ ಅದೇ ಪಾವಡದಲ್ಲಿ ಲಿಂಗವನ್ನು ಹುದುಗಿಸಿ ಇಡುವುದರಿಂದ ಇದು ಹುದುಗದ ಪಾವಡವಾಗಿರಬೇಕು.

ಆದರೆ 'ಲೇಸ'ನ್ನು ಕಲ್ಯಾಣವನ್ನು ಬದುಕಿನ ಗುರಿಯಾಗಿ ಇಟ್ಟುಕೊಂಡವಳು. ಆದುದರಿಂದ ಲೇಸನ್ನು ಸಾಧಿಸುವಲ್ಲಿ —ಬದುಕನ್ನು ನಿರ್ವಹಿಸುವಲ್ಲಿ ಜಂಗಮನ ದಯೆ ಬೇಕು. ತಾನು ಆ ಜಂಗಮನ ಮಗಳು.

ಭಂತ್ನಾಳ ಶರಣಯ್ಯ ನಾನಿನ್ನ ಮಗಳಯ್ಯ
ಲೇಸಗಿತ್ತೆಯ್ಯ ಬಡವೆಯ್ಯ। ನನ ಮ್ಯಾಲ
ಸಾಕ್ಷಿಕಾಳಟ್ಟು ದಯವಿರಲಿ

**ಪಾದೋದಕ :** ಚರಲಿಂಗರೂಪನಾದ ಜಂಗಮದ ಚರಣಾಂಗುಟದಿಂದ ಬರುವುದು ಸುಜ್ಞಾನತೀರ್ಥ. ಅದು ಸತ್ಯೋದಕ. ಪಾದತೀರ್ಥವನ್ನು ಸ್ವೀಕರಿಸಿ ಸದ್‌ವರ್ತನೆಯಲ್ಲಿ ಆಚರಿಸಿದಾಗ ಜನ್ಮ ಸಾರ್ಥಕ. ಪುನೀತ. ಲಿಂಗಾಂಗ ಪರಮಪ್ರಕಾಶದ ಕುರುಹು.

ಪಾದತೀರ್ಥವ ಸಲಿಸಿ ಪಾವನಾಯಿತ ಜನ್ಮ
ರೋಮರೋಮೆಲ್ಲ ರವಿಚಿನ್ನ ಗುರು ನಿಮ್ಮ
ಪಾದದಲಿ ಕಂಡೆ ಪದಿಗೋಳ

**ಪ್ರಸಾದ :** ಒಕ್ಕಲುತನವೇ ಪ್ರಧಾನವೃತ್ತಿ—ಮೂಲ ಕಾಯಕವಾದ ಜನಪದರಿಗೆ ನಿಸರ್ಗದಿಂದ ತಮಗೆ ಒದಗುವ ಪ್ರತಿಯೊಂದು ಫಸಲೂ ಭೂಮಿತಾಯಿಯ ಕರುಣೆ. ತಾವು ಒಕ್ಕುವುದು, ಉಣ್ಣುವುದು ಬನದಮ್ಮನ ಪುಣ್ಯ. ಬಿತ್ತಿದ ಹೊಲ ದಿನಕೊಂದು ಚೆಂದದಂತೆ ಬೆಳೆಯುವುದು ಆ ಬನದಮ್ಮನ ಕೃಪೆಯಿಂದ. ಮುತ್ತಿನ ಉಡಿಯಕ್ಕಿ ತುಂಬಿದ ಮುತ್ತೈದೆಯಾದ ಬನದಮ್ಮ ಒಮ್ಮೆ ಹೀಗೆ ಹಾಯ್ದು ಹೋದರೆ ಹೊಲವೆಲ್ಲ ಹುಲುಸು. ಸುಗ್ಗಿಯೆಲ್ಲ ಸಡಗರ.

ಬಿತ್ತೀದ ಹೊಲದಾಗ ಒತ್ತಿಹಾಯಕಿ ಯಾರ
ಮುತ್ತಿನುಡಿಯಕ್ಕಿ ಬನದಮ್ಮ ಹಾಯ್ದರ
ಬಿಚ್ಚಿ ಬಿದ್ದಾವ ಬಿಳಿ ಜೋಳ

ಜನಪದರ ಪಾಲಿಗೆ ಅವರ ಬದುಕಿನ ಕ್ರಿಯೆ ಚಟುವಟಿಕೆಗಳೇ ಪೂಜೆ. ಕೃಷಿಕಾಯಕ ಮಾಡುತ್ತ ಮಾಡುತ್ತ ಅವರಿಗೆ ಭಸ್ಮ. ರುದ್ರಾಕ್ಷಿಗಳ ಧಾರಣ: ಮಂತ್ರಗೀತಗಳ ಸ್ತುತಿ. ಶಿಷ್ಟಪದ ಸಮಾಜದ ಕಟ್ಟುನಿಟ್ಟಾದ ಕ್ರಿಯಾಚರಣೆ ಸಂಪ್ರದಾಯ ರೂಢಿಗಳ ಚೌಕಟ್ಟು ಅವರ ಬದುಕಿನ ಸ್ವರೂಪಕ್ಕೆ ನಿಲುಕದ ಮಾತು. ಶರಣಸ್ಮರಣೆಯೇ ಅವರಿಗೆ ಸರ್ವಾಲಂಕಾರ : ಸರ್ವಸ್ತುತಿ.

ಶರಣರ ನೆನೆದರ ಸರಗೀಯ ಇಟ್ಟಂಗ
ಹವಳಮಲ್ಲೀಗಿ ಮುಡದಂಗ। ಕಲ್ಯಾಣ
ಶರಣರ ನೆನೆಯೋ ನನ ಮನವೆ।

ಅಷ್ಟಾವರಣದ ಶಿಷ್ಟಸಂಪ್ರದಾಯದ ಶಾಸ್ತ್ರಸಮಯಾಚಾರಗಳನ್ನು ಜನಪದರು ಸ್ಥೂಲರೂಪದಲ್ಲಾದರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುವುದು ಚಮತ್ಕಾರವಾಗಿ ತೋರಿದರೂ ಅದು ಕೇವಲ ಕ್ರಿಯಾಚರಣೆಯ ಮೂಢ ಪರಂಪರೆ ಅಂಧಾನುಕರಣೆಯ ಪ್ರತಿಕೃತಿಯಾಗದೆ ಅವರ ಬದುಕಿನ ಸಹಜರೀತಿಯಾಗಿ ಬೆಳೆದು ಬಂದಿರುವುದು ಗಮನಾರ್ಹವಾಗಿದೆ.

ಇನ್ನು, ವೀರಶೈವದರ್ಶನದ ಷಟ್‌ಸ್ಥಲಗಳ ಶಾಸ್ತ್ರೀಯ ಮೀಮಾಂಸೆಯಿಂದ ಜನಪದರು ದೂರವೇ. ಆದರೆ ಈ ಷಟ್‌ಸ್ಥಲದರ್ಶನ ಭಕ್ತದಿಂದ ಮೊದಲುಗೊಂಡು 'ಐಕ್ಯ'ದ ವರೆಗಿನ ಚಿತ್ತವಿಕಾಸದ ಅನುಭಾವದ ದಿವ್ಯಸ್ಥಿತಿ, ಘನ ಮನದ ನಿರುಂಬಳ ದಿಟ್ಟಿಗಳು ಜನಪದ ತ್ರಿಪದಿಗಳಲ್ಲಿ ಅಭಿವ್ಯಕ್ತಗೊಂಡಿರುವುದು ಜನಪದಸಾಹಿತ್ಯ ಹೇಗೆ ಅನುಭಾವಕ್ಕೆ ಆಧ್ಯಾತ್ಮಕ್ಕೆ ಮೂಲದ್ರವ್ಯವಾಯಿತು ಎನ್ನುವುದರ ಸಂಕೇತವಾಗಿದೆ.

ವೀರಶೈವದರ್ಶನದ ತಿರುಳು ಅನುಭಾವ. ಅನುಭಾವಪಥದ ಮೊದಲ ಹೆಜ್ಜೆ ಭಕ್ತಿ. ಭಕ್ತಿ ಹಂತಹಂತವಾಗಿ ವ್ಯಕ್ತಿಯ ಜೀವನದಲ್ಲಿ ವಿಕಾಸಗೊಂಡು ಚಿತ್ತದಲ್ಲಿ ಲಿಂಗಾಂಗಸಾಮರಸ್ಯದ ಚೈತನ್ಯ ಸಂಗಮಿಸಿ ಮಾತು ಮೀರಿ

ಮೌನದಿಂದತ್ತತ್ತ ಜ್ಯೋತಿರ್ಲಿಂಗವೇ ತಾನು ; ಅದೇ ಸ್ವಸ್ವರೂಪ ಎನ್ನುವ ನಿರುಂಬಳ ನಿಲುವು ನೆಲೆಗೊಂಡಾಗ ಆ ಚಿತ್ತಸ್ಥಿತಿ ಜನಪದದಲ್ಲಿ ಅಷ್ಟೇ ವಿಸ್ಮಯಕಾರಿಯಾಗಿ ವ್ಯಕ್ತವಾಗಿದೆ.

**ಭಕ್ತಿ-ಅನುಭಾವ:** ಜೀವನದ ಎಲ್ಲ ಬಂಧನಗಳೂ ಎಲ್ಲ ಸಂಬಂಧಗಳೂ ಒದಗಿಸಿದ ಅನುಭವಗಳು ಪ್ರೇಮ ಸಮರ್ಪಣಗಳಲ್ಲಿ ಉದಾತ್ತಗೊಂಡು ಭಕ್ತಿಭಾವಕ್ಕೆ ಪುಟ ಕೊಡುತ್ತವೆ. ಹೂವಿನಲ್ಲಿ ಹುದುಗಿದ ಶಕ್ತಿ, ಮೊಗ್ಗುಗಳಲ್ಲಿ ಕಣ್ಣರೆದ ಚೇತನ ಪ್ರಜ್ಞಾಪಾತಳಿಯಲ್ಲಿ ಆವಿಷ್ಕಾರಗೊಳ್ಳುತ್ತದೆ. ಅದರ ಆರಾಧನೆಗೆ ಕಾಲನಿರ್ಬಂಧವಿಲ್ಲ. 'ಹೊತ್ತು' ಮೂಡಿದರೇನು ? ಹೊತ್ತು ಮುಳುಗಿದರೇನು ?

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ ಗುಡಿಗಿ ಬರುತೀನೋ ಮಾದಯ್ಯ
ಮುತ್ತೀನ ಬಾಗೀಲ ತೆರದೀರೋ[1]

ಮಾದಯ್ಯ ಕಾಲಾತೀತ ಚೈತನ್ಯ. ಹಗಲುರಾತ್ರಿಗಳ ಸೀಮೆಯನ್ನು ಮೀರಿದ ಆತ ಚಿತ್ತದಲ್ಲಿ ಸುಪ್ರಕಾಶ, ಸ್ವಯಂಪ್ರಕಾಶ.

ಆ ಅತೀತ ಚೈತನ್ಯದ ಗುಡಿ ಹೊರಗಿನ ಪ್ರತೀಕವಾದರೆ, ಹೃದಯಾಂತರಾಳದಲ್ಲಿ ಅನುಭಾವ ಹೊಮ್ಮಿ ಅಂತರಂಗದ ಬಾಗಿಲು ತೆರೆದು ಅಖಂಡ ಜ್ಯೋತಿ ಸ್ವಪ್ರಕಾಶವಾಗಿದೆ. ಸ್ವಪ್ರಕಾಶದ ವಿನ್ಯಾಸ ಮುತ್ತಿನ ಬಾಗಿಲ ಪ್ರತಿಮೆ, ಮುತ್ತಿನ ಬೆಳಕು, ಭಕ್ತಿಯ ಪ್ರಶಾಂತತೆ, ಆಹ್ಲಾದಗುಣಗಳನ್ನು ಸಾಂಕೇತಿಕವಾಗಿ ನಿರುಗೆಗೊಳಿಸುತ್ತದೆ. ಇಂಥ ಅನುಭಾವ ಹೃದಯದಲ್ಲಿ ಸ್ಪಂದಿಸಿದಾಗ ರೋಮಾಂಚಿತಳಾದ ಗರತಿ ಹಾಗೇ ಎದ್ದು ಬಯಲಿಗೆ ಬಂದಿರಬೇಕು. ಅಂತರಂಗದ ತುಂಬ ಬೆಳಕು ಅರಳಿಸಿದವನನ್ನು ಹುಡುಕುವ ತವಕ ; ಒಳಗೂ ಹೊರಗೂ ಅವನ ಕುರುಹು.

ಮಂಜೀನ ಮನಿ ಮಾಡಿ। ಮರಳ ಗ್ವಾಡೀ ಹಾಕಿ
ತಿಂಗಳ ಬೆಳಕ ಕದ ಮಾಡಿ। ಹೋದವನ
ಕಂಡಿಲ್ಲ ಹೆಜ್ಜೆ ಮರುಳಾಗೆ

'ಮಂಜಿನ ಮನಿ' ಎಂದು ಪರಿಭಾವಿಸುವಲ್ಲಿ ಮಿಸುಗಿದ ಈ ಚಿತ್ರ ಗೋಡೆ ಕದಗಳನ್ನು ನುಗಿಸಿಕೊಂಡು ಕದ ತೆರೆದು ಹೋದವನ ಹೆಜ್ಜೆಗಳ ಹುಡುಕಾಟದಲ್ಲಿ ಮಿಡುಕಿ, ಒಂದು ಚಲತ್ ಪ್ರತಿಮೆಯಾಗಿ ಭಕ್ತೆಯ ಸೂಕ್ಷ್ಮಾನುಭವಕ್ಕೆ ಸಂವೇದಿಯಾಗಿದೆ.

ಮಂಜು ಮುಸುಕಿ ನೆಲ-ಮುಗಿಲುಗಳನ್ನು ಒಂದು ಮಾಡಿದ ದೃಶ್ಯ—ಇಡೀ ಸೃಷ್ಟಿ ಒಮ್ಮೆ ಮಂಜಿನ ಮನೆಯಾಗಿ ಕಾಣುತ್ತದೆ. ಮನಸ್ಸೆಲ್ಲ ಮರುಳು ಸುತ್ತಲೂ ಇದ್ದ ಮರಳು. ಅದೂ ಈ ದೃಶ್ಯದಲ್ಲಿ ಹೆಣೆದುಕೊಂಡು ನುಣ್ಣನೆಯ ಉಸುಕಿನ ಗೋಡೆಯಾಗಿದೆ. ಮರಳ ಗೋಡೆ, ಮಂಜಿನ ಮನೆ–ದಟ್ಟವಾದ ತೆರೆ, ತೆರೆತೆರೆ–ತೆರೆದು ಥಾಳಥಾಗಿ ಮಿಸುಕುವ ಮಂಜು, ಬೆಳದಿಂಗಳಂತೆ ದಟ್ಟಯಿಸಿ ಅಷ್ಟಕ್ಕೆ—ಎಲ್ಲೋ ಒಂದು ಕಡೆ–ರವಿಕಿರಣಗಳು ತೂರಿದ್ದರಿಂದ ಇರಬಹುದು–ಕದದ ರೂಪತಾಳುತ್ತದೆ. ತೆರೆದ ಕದದಂತೆ ಭಾಸವಾಗುತ್ತದೆ. ಅರೇ ಈ ಬಾಗಿಲಿಂದ ಅವನೇನಾದರೂ ಹೊರಟುಹೋದನೆ ! ಈಗ ಮಂಜು ಕರಗುತ್ತದೆ, ಮರಳು ಧವಳವಾಗುತ್ತದೆ. ಅಲ್ಲಿ ಎಲ್ಲಾದರೂ 'ಹೆಜ್ಜೆ' ಮೂಡಿದ್ದಾವೆಯೋ ಎಂದು ಭಕ್ತಿಪರವಶಳಾಗಿ ಹುಡುಕಾಡುತ್ತಾಳೆ.

ಜನಪದಸಾಹಿತ್ಯದಲ್ಲಿ ಇಂದ್ರಿಯಾತೀತ ಅನುಭವಗಳನ್ನು ಸೆರೆಹಿಡಿದಿಡುವ ಕುರುಹುಗಳೂ ಇವೆ. ಅದರಿಂದಾಗಿ ನಮಗೆ ಕೆಲವು ಸಲ ಅದ್ಭುತವಾದ ಅತೀಂದ್ರಿಯ ಪ್ರತಿಮೆಗಳು ತ್ರಿಪದಿಯಲ್ಲಿ ವಿರಳವಾದರೂ ಕಂಡುಬರುವುದುಂಟು.

ಜನಪದರ ಪಾಲಿಗೆ ಅನೇಕ ಸಲ ಈ ಬದುಕು ಅರಣ್ಯ 'ಆರ್ಯಾಣ'ವಾಗಿ ತೋರಿದೆ.[2] ಹುಲಿ, ಚಿರತೆ, ಹಾವು ಚೇಳು ಮುಂತಾದ ಹಿಂಸ್ರಪಶುಗಳಿಂದ ಕೂಡಿ ಅವಳನ್ನು ಕಾಡಿದ, ಕಚ್ಚಿದ ಕಾಡು ಅವರ ಪಾಲಿಗೆ ಅಗ್ನಿಕುಂಡ. ಆದರೆ ತಮ್ಮ ಅನುಪಮ ಸಾಹಸ, ಹೋರಾಟ, ಛಲ, ಮಮತೆ, ವಾತ್ಸಲ್ಯಗಳಿಂದ, ತ್ಯಾಗಗುಣಗಳಿಂದ ಈ ಅರಣ್ಯದಲ್ಲಿಯೂ ಪ್ರೀತಿಯ ನೆಳಕು-ಬೆಳಕು ಪಡೆದಿದ್ದಾರೆ. ಒಮ್ಮೊಮ್ಮೆ ತಮ್ಮನ್ನು ಮೀರಿ ನುಗ್ಗಿಬಂದ ಬೆಂಕಿಯಲ್ಲಿ ಗುಗ್ಗುಳ

[1] ನವೋದಯಕಾವ್ಯ ಜಾನಪದದಿಂದ ಪಡೆದ ಪ್ರೇರಣೆ ಮೌಲಿಕವಾದದು. ಅಂಬಿಕಾತನಯದತ್ತರ ಪ್ರಸಿದ್ಧಿ ಪಡೆದ 'ಬೆಳಗು' ಕವಿತೆಯ 'ಮೂಡಲಮನೆಯಾ ಮುತ್ತಿನ ನೀರಿನ ಎರಕಾವ ಹೊಯ್ದಾ' ಪಾದಗಳನ್ನೂ ಇಲ್ಲಿ ವಿವೇಚಿಸಬಹುದು.

[2] ಜೀವನವನ್ನು 'ಆರ್ಯಾಣ' ಎಂದು ಪರಿಭಾವಿಸುವ ಅನೇಕ ತ್ರಿಪದಿಗಳಿವೆ.

ವಾಗಿ ತಮ್ಮನ್ನು ತಾವು ಸುಟ್ಟುಕೊಂಡಿದ್ದಾರೆ. ಬದುಕಿನ ಹೋಮದಲ್ಲಿ ಧೂಪದ ಹೊಗೆಯಾಗಿ–ಒಳಹೊರಗೆ ಪರಿಮಳದ ಪರಿಸರ ನಿರ್ಮಿಸಿದ್ದಾರೆ. ಇಡೀ ಜೀವನದಲ್ಲಿರುವ–ಚೈತನ್ಯಶಕ್ತಿಯ ಅನುಭಾವ ಪಡೆದ ಜೀವನವನ್ನು ಉಜ್ಜ್ವಲಗೊಳಿಸಿದ ಸಫಲತೆಯೇ—ಅವರ ಬದುಕಿನ ಗುರಿಯಾಗಿದೆ. ಅದೇ ಆ ಅತೀತ ಚೈತನ್ಯದ ಪೂಜೆಯೂ ಆಗಿದೆ. ಬಿಡಿಯಿಂದ ಮೊದಲಾದ ಜನಪದರು ತಾವು ಬೆಳೆಯುತ್ತ, ಹಿಗ್ಗುತ್ತ, ಬೃಹತ್ತಾಗಿ–ಮಹತ್ತಾಗಿದ್ದಾರೆ. ಆದುದರಿಂದ ಅವರ ಪಾಲಿಗೆ ಇಡೀ ಕುಟುಂಬವನ್ನು ಮತ್ತು ಸುತ್ತಮುತ್ತಣ ಪ್ರಪಂಚವನ್ನು ತನ್ನ ಅನಂತ ಪ್ರೇಮದ ಮಡಿಲಲ್ಲಿ ಪರಿಪಾಲಿಸಿದ ಈ ಪ್ರಪಂಚ ಶಕ್ತಿ-ದೇವ, ಕಾಲಾತೀತವಾಗಿ ರೂಪುಗೊಂಡಿದೆ. ಜನಪದ ವೃಂದದ ವಿರಳ ವ್ಯಕ್ತಿಯೊಬ್ಬನ ವಿಶಿಷ್ಟ ಅನುಭಾವದ ನಿಲುವಿನಲ್ಲಿ ಅಂತರಂಗದ ದೈವೀಪ್ರೇಮದ, ನಾದದ, ದಿವ್ಯಕಂಪನಗಳು ವಿಶ್ವಸಮಸ್ತದಲ್ಲಿ ಅನುರಣಿಸಿವೆ. ಆಗ ಜನಪದರ ಭವ್ಯಹಸ್ತ ಆಕಾಶದ ತಲೆಯ ಮೇಲೆ ಆಕಾಶದ ಗಂಟೆಯನ್ನೇ ಹಿಡಿದು ಢಣ್‌ಢಣ್ ಎಂದು ಕ್ಷಿತಿಜ ಕ್ಷಿತಿಜಗಳಲ್ಲಿ ಆಕಾಶಕಾಯದಲ್ಲಿ ಮೊಳಗಿಸುತ್ತದೆ.

ಆಕಾಶದಡವ್ಯಾಗ ಧೂಪದಾ ಹೊಗೆಯೆದ್ದು-
ಆಗಾಗ ಮಲ್ಲಯನ ಆಯ್ತು ಶಿವಪೂಜೆ
ಆಕಾಶದ ಗಂಟೆ ಗಳಿಲೆಂದೋ[1]

ಆಕಾಶವನ್ನು ಗಂಟೆಯೆಂದು ಪರಿಭಾವಿಸುವ ಪರಿಕಲ್ಪನೆಯಿಂದಲೇ ಇಲ್ಲಿಯ ಅನುಭಾವದ ಸಾಂದ್ರವ್ಯಾಪಕತೆ ಮೂರ್ತಿಮತ್ತಾಗಿ ಗೋಚರಿಸುತ್ತದೆ. ಅದರ ದಿವ್ಯ ರುದ್ರ 'ಘಳಿಲ್ ಘಳಿಲ್' ನಾದ ಅಂತರಂಗ ಬಹಿರಂಗಗಳನ್ನು ಮೀರಿ ಅನುರಣಿಸುತ್ತದೆ. ಆಕಾಶದ ಗಂಟೆಯ ಪರಿಕಲ್ಪನೆ ಅತೀಂದ್ರಿಯ ಅನುಭಾವದ ಅದ್ಭುತ ಪ್ರತಿಮೆಯಾಗಿ ಅದರ ನಾದ ಕಂಪನಗಳ ಜೊತೆ ವಿಸ್ತಾರಗೊಳ್ಳುತ್ತ ಹೋಗುತ್ತದೆ. ಶಿಲ್ಪದಲ್ಲಿ ಚೈತನ್ಯ ತುಂಬುವ, ಕ್ರಿಯೆಯಲ್ಲಿ ವಿಸ್ತೃತಗೊಳ್ಳುವ ಈ ಪ್ರತಿಮೆಯ ಸಂಯೋಜಿತಸ್ತರಗಳು, ಆಕಾಶದ ಅಡಿವೆ: ವಿಸ್ತಾರವಾದ ಬದುಕು—ಅಷ್ಟು ವಿಸ್ತಾರವಿದ್ದರೂ ಎಷ್ಟೋ ಸಲ ಕ್ರೌರ್ಯದಿಂದ ತುಂಬಿ ಕಾಡಿನಂತಾಗುವುದು. ಇಲ್ಲಿಯ ರೂಪಕ ಸಹಜಾನುಭವದ ಸಾಕ್ಷಿ. ಹೀಗೆ ತುಂಬಿದ ಈ ಕಾಡು ಅಗ್ನಿಕುಂಡ ಪ್ರೀತಿ, ಭಕ್ತಿ, ತ್ಯಾಗಗಳ ಉನ್ನತ ವಸ್ತುದ್ರವ್ಯಗಳು ಧೂಪದಂತೆ ಈ ಅಗ್ನಿಗೆ ಅರ್ಪಿತವಾಗಿ, ಹೃದಯ ಭಕ್ತಿಯ ನೆಲೆಯಾಗುತ್ತವೆ. ಭಕ್ತಿಯ ಆಳದಿಂದ ಹೊರಟ ಪ್ರಾರ್ಥನೆ ಆರ್ತತೆ, ಸ್ತುತಿ, ನಾದದ ಅಲೆಗಳು ಸರ್ವತ್ರ ನಿನದಿಸುತ್ತವೆ. ನಿತ್ಯ ಮಲ್ಲಯ್ಯನ ಪೂಜೆ ಆಗಾಗ.

ನೆಲದ ವಾಸ್ತವತೆಯ ನೆಲಗಟ್ಟಿನಿಂದ ಮೊದಲುಗೊಂಡ ಈ ಪ್ರತಿಮೆ—ಆಕಾಶವನ್ನೂ ತಬ್ಬಿಕೊಂಡು ಭಕ್ತಿಯ ಮೂಲಕ ಅತೀತವನ್ನು ಸ್ಪರ್ಶಿಸುತ್ತದೆ. ಧೂಪದ ಹೊಗೆ, ಗಂಟೆಯ ನಾದ ಒಂದೊಂದರ ವಾಹಕಗಳಾಗಿ ಅತೀತವನ್ನು ಹಸಿಹಸಿಯಾಗಿ ಲೇಪಿಸುವ ದಿವ್ಯಾನುಭವ, ಜಾನಪದ ಕಾವ್ಯಕ್ಷಿತಿಜದಲ್ಲಿ ವಿರಳವಾಗಿದ್ದು ಅನುಭಾವ ಸಾಹಿತ್ಯದ ಅಪೂರ್ವ ಕೊಡುಗೆಯಾಗಿ ಗೋಚರಿಸುತ್ತದೆ.

## ಗ್ರಂಥಋಣ


೧. ಗರತಿಯ ಹಾಡು : ಸಂ. ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದವರು
ನಾಲ್ಕನೆಯ ಮುದ್ರಣ 1971.
೨. ಕಾವ್ಯಾನುಸಂಧಾನ : ಚೆನ್ನವೀರಕಣವಿ, ತ. ವೆಂ. ಸ್ಮಾರಕಗ್ರಂಥಮಾಲೆ 1971.
೩. ಜಾನಪದ ಪ್ರತಿಭೆ : ಸಿ. ಪಿ. ಕೆ.


---

ವಾಂಛಾ ಸಜ್ಜನಸಂಗಮೇ ಪರಗುಣೇ ಪ್ರೀತಿಃ ಗುರೌ ನಮ್ರತಾ
ವಿದ್ಯಾಯಾಂ ವ್ಯಸನಂ ಸ್ವಯೋಷಿತಿ ರತಿಃ ಲೋಕಾಪವಾದಾದ್ಭಯಮ್ ।
ಭಕ್ತಿಃ ಶೂಲಿನಿ ಶಕ್ತಿರಾತ್ಮದಮನೇ ಸಂಸರ್ಗಮುಕ್ತಿಃ ಖಲೇ
ಷ್ವೇತೇ ಯೇಷು ವಸಂತಿ ನಿರ್ಮಲಗುಣಾಸ್ತೇಭ್ಯೋ ನರೇಭ್ಯೋ ನಮಃ ॥

—ಸುಭಾಷಿತ

---

[1] ಆಕಾಶ, ಚಿತ್ತ—ನಾದ—ಇವುಗಳಿಗಿರುವ ದಾರ್ಶನಿಕ ಸೈದ್ಧಾಂತಿಕ ಹಿರಿಮೆಯನ್ನು ಸ್ಮರಣೆಗೆ ತಂದುಕೊಳ್ಳಬಹುದು.

# ವೀರಶೈವಸಾಹಿತ್ಯ ಮತ್ತು ವಿಜಯನಗರದ ಅರಸರು

ಡಾ. ಕೆ. ಆರ್. ಬಸವರಾಜ

ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಹೊಯ್ಸಳ ರಾಜಮನೆತನವು ಅವನತಿಗೀಡಾಯಿತು. ಆದರೆ ಕರ್ನಾಟಕದಲ್ಲಿ ಕಲಿತನಕ್ಕೆಕೊರತೆಯಿರಲಿಲ್ಲ. ಹಕ್ಕಿ ಬುಕ್ಕರೆಂಬ ಸಂಗಮ ಸೋದರರು ಮುನಿಪುಂಗವ ವಿದ್ಯಾರಣ್ಯರ ಆಶೀರ್ವಾದ ಬಲದಿಂದ ವಿಜಯನಗರ ಸಾಮ್ರಾಜ್ಯವನ್ನು ಕ್ರಿ.ಶ. ೧೩೩೬ರಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯವು ಕರ್ನಾಟಕದಲ್ಲಿ ೧೬ನೆಯ ಶತಮಾನದ ಮಧ್ಯಭಾಗದವರೆಗೂ ಬೆಳಗಿತು. ವಿಜಯನಗರದ ಅರಸರಲ್ಲಿ ಬುಕ್ಕರಾಯ, ಇಮ್ಮಡಿ ದೇವರಾಯ, ಕೃಷ್ಣದೇವರಾಯ, ರಾಮರಾಯ ಮೊದಲಾದವರು ಜಗದ್ವಿಖ್ಯಾತ ಸಾಮ್ರಾಟರಾಗಿದ್ದರು. ವಿಜಯನಗರದರಸರ ಕಾಲದಲ್ಲಿ ಕರ್ನಾಟಕಸಂಸ್ಕೃತಿಯು ಅಭೂತಪೂರ್ವ ವೈಭವಶಿಖರಕ್ಕೇರಿತು.

ಧರ್ಮ, ಸಂಸ್ಕೃತಿಯ ಪುನರುದ್ಧಾರಕ್ಕೆ ಸತತ ಶ್ರಮಿಸಿದ ವಿಜಯನಗರದ ಸಾಮ್ರಾಟರು ಜಾತಿ, ಮತ ಪಂಥಗಳ ಭೇದವನ್ನು ತೊರೆದು ಎಲ್ಲ ಮತಧರ್ಮಗಳ ಕವಿಗಳಿಗೆ ಆಶ್ರಯ ನೀಡಿದರು. ವಿಜಯನಗರ ಸಾಮ್ರಾಜ್ಯದಲ್ಲಿ ವೀರಶೈವವಾಙ್ಮಯ, ಬ್ರಾಹ್ಮಣಸಾಹಿತ್ಯ ಮತ್ತು ಜೈನಸಾಹಿತ್ಯ ಅಭಿವೃದ್ಧಿ ಹೊಂದಿದವು. ಶೈವಪುರಾಣಗಳಿಂದ ಉದ್ಧೃತವಾದ ಕತೆಗಳು, ವೀರಶೈವ ಪುರಾತನರು ಮುಕ್ತಿಯನ್ನು ಹೊಂದಿದ ಬಗೆ, ಬಸವೇಶ್ವರ ಮತ್ತಿತರರ ಜೀವನ ಚರಿತ್ರೆಗಳು ವೀರಶೈವಕವಿಗಳ ಕೃತಿವಸ್ತುಗಳಾಗಿದ್ದವು. ವಿಜಯನಗರ ಅರಸರ ಆಶ್ರಯದಲ್ಲಿ ವೀರಶೈವಸಾಹಿತ್ಯ ಬೆಳೆದ ಬಗೆಯ ಸೂಕ್ಷ್ಮ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಕ್ರಿ.ಶ. ಸುಮಾರು ೧೩೫೦ರಲ್ಲಿ ಮಲ್ಲಿಕಾರ್ಜುನಪಂಡಿತಾರಾಧ್ಯನ ವಂಶೋದ್ಭವನಾದ ಗುರುದೇವನೆಂಬ ಕವಿಯು 'ಮಹಿಮ್ನಸ್ತೋತ್ರ', 'ಮಲ್ಹಣಸ್ತೋತ್ರ', 'ಮಲೆಯರಾಜಸ್ತೋತ್ರ', 'ಅನಾಮಯಸ್ತೋತ್ರ', 'ಹಲಾಯುಧ ಸ್ತೋತ್ರ' ಮತ್ತು 'ಭೃಂಗಿಸ್ತವ'ವೆಂಬ ಕೃತಿಗಳಿಗೆ ಕನ್ನಡ ವ್ಯಾಖ್ಯಾನವನ್ನು ಬರೆದು ಕನ್ನಡಿಗರಿಗೆ ಆ ಕೃತಿಗಳನ್ನು ಉತ್ತಮವಾಗಿ ಪರಿಚಯ ಮಾಡಿಕೊಟ್ಟಿರುವನು. ಇವನು 'ವೀರಶೈವಾಚಾರಪ್ರದೀಪಿಕೆ' ಎಂಬ ಕೃತಿಯನ್ನು ಸಂಸ್ಕೃತ ದಲ್ಲಿ ರಚಿಸಿರುವನು.

ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಶಿವದೇವಕವಿಯ ಪುತ್ರನಾದ ಭೀಮಕವಿಯು ಸಾರಸ್ವತ ಲೋಕದಲ್ಲಿ ಗಣ್ಯಸ್ಥಾನವನ್ನು ಪಡೆದನು. ಇವನು 'ಬಸವಪುರಾಣ', 'ಭೀಮಕವೀಶ್ವರರಗಳೆ' ಮತ್ತು 'ಭೃಂಗಿದಂಡಕ' ವೆಂಬ ಮೂರು ಕೃತಿಗಳನ್ನು ರಚಿಸಿರುವನು. 'ಬಸವಪುರಾಣ'ವನ್ನು ಭಾಮಿನೀಷಟ್ಪದಿಯಲ್ಲಿ ಬರೆಯಲಾಗಿದೆ. ಇದರಲ್ಲಿ ಬಸವೇಶ್ವರರ ಚರಿತ್ರೆ ಮತ್ತು ಅವರು ಮಾಡಿದ ಪವಾಡಗಳನ್ನು ಕವಿಯು ಬಣ್ಣಿಸಿರುವನು. ಅಲ್ಲದೆ ಕೆಲವೆಡೆಗಳಲ್ಲಿ ಶಿವಭಕ್ತರ ಕಥೆಗಳನ್ನು ಚಿತ್ರಿಸಿರುವನು. ಪಾಲ್ಕುರಿಕೆ ಸೋಮೇಶ್ವರನು ತೆಲುಗು ಭಾಷೆಯಲ್ಲಿ ರಚಿಸಿದ 'ಬಸವಪುರಾಣ' ವನ್ನು ತಾನು ಕನ್ನಡಿಸಿ ಹೇಳಿರುವುದಾಗಿ ಭೀಮಕವಿಯು ತಿಳಿಸುತ್ತಾನೆ. ಈ ಕೃತಿಯು ಷಟ್ಪದಿಯಲ್ಲಿ ರಚಿತವಾಗಿ ದ್ದರೂ ಪ್ರೌಢಕಾವ್ಯದ ಅಲಂಕಾರಪ್ರಿಯತೆ ಅಧಿಕವಾಗಿದೆ. "ಈ ಬಗೆಯಲ್ಲಿ 'ದೇಸಿಗಬ್ಬ'ದಲ್ಲಿಯೂ ಮಾರ್ಗಲಕ್ಷಣ ವನ್ನು ಇರಿಸುವ ಸಂಪ್ರದಾಯವೊಂದು ಮುಂದೆ ಬೆಳೆದಿದೆ. ಅದಕ್ಕೆ ಮೊದಲಿಗರಲ್ಲಿ ಭೀಮನು ಒಬ್ಬನಾಗಿದ್ದಾನೆ." ಇವನು ಭಾಮಿನಿಯ ಸಹಜಲಾಲಿತ್ಯಕ್ಕೆ ಮಾರ್ಗದರ್ಶಿಯಾಗಿದ್ದಾನೆ.

ಕ್ರಿ.ಶ. ೧೩೭೭ರಿಂದ ೧೪೦೪ರ ವರೆಗೆ ಆಳಿದ ಇಮ್ಮಡಿ ಹರಿಹರನ ಕಾಲದಲ್ಲಿ ಪದ್ಮಣಾಂಕನೆಂಬ ವೀರಶೈವ ಕವಿಯು 'ಪದ್ಮರಾಜಪುರಾಣ'ವೆಂಬ ಗ್ರಂಥವನ್ನು ಕ್ರಿ.ಶ. ಸುಮಾರು ೧೩೮೫ರಲ್ಲಿ ರಚಿಸಿದನು. ಈ ಕೃತಿಯು ಕೆರೆಯ ಪದ್ಮರಸನ ಚರಿತ್ರೆಯನ್ನು ವಿವರಿಸುತ್ತದೆ. ಕವಿಯು ಕೆರೆಯ ಪದ್ಮರಸನ ವಂಶಜನು. 'ವೀರಮಾಹೇಶ್ವರಾಚಾರಸಂಗ್ರಹಶಾಸ್ತ್ರ'ಕಾರ ನೆನಿಸಿದ ನೀಲಕಂಠನಾಗನಾಥಾಚಾರ್ಯ, 'ಬಸವಪುರಾಣ'ದ ಖ್ಯಾತ ಪಾಲ್ಕುರಿಕೆ ಸೋಮೇಶ್ವರ, ಲಕ್ಷ್ಮೀಧರಾರಾಧ್ಯ, 'ಶಿವ

ಜ್ಞಾನದೀಪಿಕೆ'ಯ ಕರ್ತೃ ಮಲ್ಲಿಕಾರ್ಜುನಾಚಾರ್ಯ, ಶಿವಲೆಂಕಮಂಚಣ್ಣ, ಮಲ್ಲಿಕಾರ್ಜುನಪಂಡಿತಾರಾಧ್ಯ, ಶ್ರೀಪತಿ ಪಂಡಿತ ಮೊದಲಾದ ವೀರಶೈವಮತಾಗ್ರಗಣ್ಯರನ್ನು ಕವಿಯು ತನ್ನ ಕಾವ್ಯದಲ್ಲಿ ಸ್ತುತಿಸಿದ್ದಾನೆ. ಮೊದಲನೆಯ ದೇವರಾಯನ ಕಾಲವಾದ ಕ್ರಿ.ಶ. ೧೪೧೩ರಲ್ಲಿ ಮಲ್ಲಣ್ಣನೆಂಬ ಕವಿಯು 'ರೇವಣಸಿದ್ಧೇಶ್ವರಕಾವ್ಯ'ವೆಂಬ ಗ್ರಂಥ ವನ್ನು ಭಾಮಿನೀಷಟ್ಪದಿಯಲ್ಲಿ ರಚಿಸಿದನು. ವೀರಶೈವಧರ್ಮ ಪಂಚಾಚಾರ್ಯರಲ್ಲೊಬ್ಬರಾದ ರೇವಣಸಿದ್ಧರ ಚರಿತ್ರೆಯು ಈ ಕೃತಿಯ ವಸ್ತುವಾಗಿದೆ. ಕವಿಯು ಪೂರ್ವಗ್ರಂಥಗಳನ್ನು ನೋಡಿ ಈ ಕಾವ್ಯವನ್ನು ರಚಿಸಿದಂತೆ ತಿಳಿದು ಬರುತ್ತದೆ.

ಕ್ರಿ.ಶ. ೧೪೨೪ರಿಂದ ೧೪೪೬ರ ವರೆಗೆ ಆಳಿದ ಇಮ್ಮಡಿ ದೇವರಾಯನ ಕಾಲವು ಸಾಹಿತ್ಯನಿರ್ಮಾಣದ ಕಾಲ ವಾಗಿದ್ದಿತು. ವಿದ್ವಾಂಸರಿಗೆ, ಕವಿಗಳಿಗೆ, ತತ್ವಮೀಮಾಂಸಕರಿಗೆ ಮತ್ತು ದಾರ್ಶನಿಕರಿಗೆ ವಿಜಯನಗರ ಸಾಮ್ರಾಟನ ಆಸ್ಥಾನವು ಮುಕ್ತದ್ವಾರವಾಗಿತ್ತು. ಆಸ್ಥಾನದಲ್ಲಿ ವಾಕ್ಯಾರ್ಥಸಂದರ್ಭಗಳಲ್ಲಿ ಸ್ವತಃ ಚಕ್ರವರ್ತಿಯೇ ಮಧ್ಯಸ್ಥನಾಗಿ ವಾದಗಳಲ್ಲಿ ಅವರವರ ಪರಿಪೂರ್ಣತೆಯನ್ನು ನಿರ್ಣಯಿಸುತ್ತಿದ್ದನು. ಇಮ್ಮಡಿ ದೇವರಾಯನೇ ಸ್ವತಃ ಉದ್ದಾಮ ಕವಿ. ಅವನು 'ಮಹಾನಾಟಕಸುಧಾನಿಧಿ'ಯನ್ನು ಮತ್ತು ಬಾದರಾಯಣನ 'ಬ್ರಹ್ಮಸೂತ್ರ'ಗಳ ಮೇಲೆ ಒಂದು ವೃತ್ತಿ ಯನ್ನು ಸಂಸ್ಕೃತದಲ್ಲಿ ರಚಿಸಿದ ಕವಿಪುಂಗವ. ಹೀಗೆ ಇಮ್ಮಡಿ ದೇವರಾಯನು ಸ್ವತಃ ಸಾಹಿತ್ಯ ವಿದ್ಯಾಪಾರಂಗತನಾಗಿ ವಿದ್ವಜ್ಜನರಿಗೆ ಯಥೇಚ್ಛ ಪುರಸ್ಕಾರಗಳನ್ನು ನೀಡುತ್ತಿದ್ದುದರಿಂದ ಅವನ ಆಸ್ಥಾನಕ್ಕೆ ನಾನಾ ಕಡೆಗಳಿಂದ ವಿದ್ವತ್ಕವಿ ಗಳು ಬರುತ್ತಿದ್ದರು. ಈ ಚಕ್ರವರ್ತಿಯ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಮೊದಲಾದ ದೇಶಭಾಷೆಗಳು ಅಭಿವೃದ್ಧಿಗೆ ಬಂದವು. ಕನ್ನಡ ಭಾಷೆಗೆ ವಿಶೇಷ ಪ್ರೋತ್ಸಾಹ ಲಭಿಸಿತು. ವಿಜಯನಗರ ಸಾಮ್ರಾಜ್ಯದ ಮಹಾ ಪ್ರಧಾನನಾದ ಲಕ್ಕಣ್ಣದಂಡೇಶನು 'ಶಿವತತ್ವಚಿಂತಾಮಣಿ' ಎಂಬ ಗ್ರಂಥವನ್ನು ರಚಿಸಿದನು. ತಾನು ಇಮ್ಮಡಿ ದೇವರಾಯನ ಆಪ್ತಮಿತ್ರನಾಗಿದ್ದನೆಂದೂ ಮತ್ತು ಅವನ ರಾಜ್ಯಾಭ್ಯುದಯಕ್ಕೆ ಕಾರಣೀಭೂತನಾಗಿದ್ದೆನೆಂದೂ ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. 'ಶಿವತತ್ವಚಿಂತಾಮಣಿ' ಕಾವ್ಯವು ವಾರ್ಧಿಕಷಟ್ಪದಿಯಲ್ಲಿ ಬರೆಯಲಾಗಿದೆ. ಇದರಲ್ಲಿ ನಿತ್ಯಾನಿತ್ಯವಸ್ತುವಿವರಣ, ಸಕಲನಿಷ್ಕಲವಿಚಾರ, ಶಿವನ ಲೀಲೆಗಳು, ಬಸವಚರಿತ, ಗಣಪ್ರಶಂಸೆ, ಪಂಚಾಕ್ಷರೀಭಸಿತ ರುದ್ರಾಕ್ಷಿಗಳ ಮಹಾತ್ಮ್ಯ, ಲಿಂಗಧಾರಣ, ಶಿವಪೂಜಾವಿಧಿ, ಪಾದೋದಕಪ್ರಸಾದ ಮಹಿಮೆ, ಮಾಹೇಶ್ವರಾಚರಣೆ, ಷಟ್ಸ್ಥಲ ಮುಂತಾದ ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಇಮ್ಮಡಿ ದೇವರಾಯನ ದಂಡನಾಯಕನಾಗಿದ್ದ ಜಕ್ಕಣಾರ್ಯನು 'ನೂರೊಂದು ಸ್ಥಲ' ಎಂಬ ಗ್ರಂಥವನ್ನು ರಚಿಸಿದನು. ಇವನ ಕಾಲವು ಸುಮಾರು ಕ್ರಿ.ಶ. ೧೪೩೦ ಇದ್ದಿರಬೇಕು.

ಚಾಮರಸನು ಕುಮಾರವ್ಯಾಸನ ಸಮಕಾಲೀನ. ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತ ರಲ್ಲಿ ಚಾಮರಸನೂ ಒಬ್ಬನಾಗಿದ್ದನು. ಇವನು 'ಪ್ರಭುಲಿಂಗಲೀಲೆ' ಮತ್ತು 'ಪ್ರಭುದೇವರ ರಗಳೆ' ಎಂಬೆರಡು ಕೃತಿ ಗಳನ್ನು ರಚಿಸಿದನು. ಎರಡೂ ಕೃತಿಗಳ ವಿಷಯವೊಂದೇ ಆಗಿದ್ದರೂ ನಿರೂಪಣಕ್ರಮಗಳು ಮಾತ್ರ ಬೇರೆಯಾಗಿವೆ. 'ಅಲ್ಲಮಪ್ರಭುವಿನ ವ್ಯಕ್ತಿತ್ವಚಿತ್ರಣದಲ್ಲಿಯೇ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ, ಎಲ್ಲ ಸನ್ನಿವೇಶಗಳನ್ನು ಮೂಲ ಉದ್ದೇಶಕ್ಕೆ ಅನುಗೊಳಿಸಿಕೊಂಡು ಇತರ ಪ್ರಲೋಭನಗಳ ಮಾಯೆಗೆ ಬಲಿಬೀಳದೆ ಚರಿತ್ರೆಯನ್ನು ಸಮರ್ಪಕವಾಗಿ ಬರೆದಿರುವುದರಲ್ಲಿಯೇ ಚಾಮರಸನ ಹಿರಿಮೆಯಿದೆ.' ಕನ್ನಡ ಘನ ಕವಿಗಳಾದ ಚಾಮರಸ ಮತ್ತು ಕುಮಾರವ್ಯಾಸ ರೀರ್ವರೂ ಇಮ್ಮಡಿ ದೇವರಾಯನ ಆಸ್ಥಾನದಲ್ಲಿದ್ದವರು. ಈ ಕವಿಶ್ರೇಷ್ಠರ ಕೃತಿಗಳನ್ನು ಪರೀಕ್ಷೆಯ ಒರೆಗಲ್ಲಿನಲ್ಲಿ ನೋಡಿ ಚಾಮರಸನೇ ಶ್ರೇಷ್ಠಕವಿಯೆಂದು ಚಕ್ರವರ್ತಿಯು ತೀರ್ಮಾನಿಸಿದನಂತೆ.

ಇದೇ ಕಾಲದ ಕಲ್ಲುಮಠದ ಪ್ರಭುದೇವನೆಂಬ ಕವಿಯು 'ಲಿಂಗಲೀಲಾವಿಲಾಸಚಾರಿತ್ರ' ಮತ್ತು 'ಪ್ರಭುದೇವರ ಮಂತ್ರಗೋಪ್ಯದ ಟೀಕೆ' ಎಂಬ ಗ್ರಂಥಗಳನ್ನು ರಚಿಸಿದನು. ಮೊದಲನೆಯ ಕೃತಿಯು ಷಟ್ಸ್ಥಲ ವಿವರಣಾತ್ಮಕ ಗ್ರಂಥವಾಗಿದೆ. ಎರಡನೆಯ ಗ್ರಂಥವು ಶಿವಜ್ಞಾನದರ್ಪಣವಾಗಿದೆ. ಇದೇ ಕಾಲದಲ್ಲಿ ತ್ರಿಪುರಾರಿಯ ಮಗನಾದ ಶ್ರೀ ಗಿರೀಂದ್ರನೆಂಬುವನು ಜಕ್ಕಣಾರ್ಯನ 'ನೂರೊಂದು ಸ್ಥಲ'ಕ್ಕೆ ಟೀಕೆಯನ್ನು ಬರೆದಿದ್ದಾನೆ. ಕರಲಸ್ಥನಾಗಿದೇವ ನೆಂಬುವನು ಅದೇ ಕಾಲದ ಮತ್ತೊಬ್ಬ ಕವಿ. ಇವನು ಕರಸ್ಥಲದ ವೀರಣ್ಣೊಡೆಯನ ಶಿಷ್ಯ. ಇವನು 'ಕರಸ್ಥಲದ ನಾಗಿದೇವತ್ರಿವಿಧಿ' ಎಂಬ ಗ್ರಂಥವನ್ನು ಮತ್ತು ವಚನಗಳನ್ನು ರಚಿಸಿರುವನು. 'ಕರಸ್ಥಲನಾಗಿದೇವತ್ರಿವಿಧಿ'ಯನ್ನು ತ್ರಿಪದಿಯಲ್ಲಿ ಬರೆಯಲಾಗಿದೆ. ಇವು ಗೂಢಾರ್ಥವುಳ್ಳ ಪದ್ಯಗಳು. ವೀರಶೈವ ಸಿದ್ಧಾಂತವನ್ನು ಬೋಧಿಸುತ್ತವೆ. ಈ ಕವಿಯ ವಚನಗಳು ವಾರ್ಧಿಕಷಟ್ಪದಿಯಲ್ಲಿವೆ. ಇವುಗಳ ಸಂಖ್ಯೆ ಒಂಭತ್ತು. ಇವುಗಳಲ್ಲಿ ಪಾರ್ವತಿಯ ಪ್ರಾರ್ಥನಾನು

ಸಾರ ಶಿವನು ಷಟ್‌ಸ್ಥಲಮಾರ್ಗವನ್ನು ದೇವಿಗೆ ಬೋಧಿಸುತ್ತಾನೆ. ಇದೇ ಕಾಲದಲ್ಲಿ ಗುಡ್ಡವ್ವೆ ಎಂಬುವಳು ಹಲವು ವಚನಗಳನ್ನು ರಚಿಸಿದಳು.

ಪ್ರಾಯಶಃ ಇವರೆಲ್ಲರ ಸಮಕಾಲೀನನಾದ ಮಗ್ಗೆಯ ಮಾಯಿದೇವನು 'ಶತಕತ್ರಯ'. 'ಮಗ್ಗೆಯ ಮಾಯಿದೇವ ವಚನ', 'ಅನುಭವಸೂತ್ರ', 'ಪ್ರಭುನೀತಿ', 'ಏಕೋತ್ತರ ಶತಸ್ಥಲಷಟ್ಪದಿ', 'ಷಟ್‌ಸ್ಥಲ ಗದ್ಯ' ಎಂಬ ಕೃತಿಗಳನ್ನು ರಚಿಸಿದನು. 'ಶತಕತ್ರಯ' ಗ್ರಂಥವು 'ಶಿವಾಧವಶತಕ', 'ಶಿವಾವಲ್ಲಭಶತಕ', 'ಐಪುರೀಶ್ವರಶತಕ' ಎಂಬ ಮೂರು ಶತಕಗಳನ್ನೊಳಗೊಂಡಿದೆ. ಇವು ವೀರಶೈವಸಿದ್ಧಾಂತಕ್ಕನುಸಾರವಾಗಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಬೋಧಿಸುತ್ತವೆ. ಇತರ ವೀರಶೈವ ಗ್ರಂಥಗಳಲ್ಲಿ ಈ ಕವಿಯು ಪ್ರಭು ವಿಭು ಎಂದು ವಿಶೇಷವಾಗಿ ವರ್ಣಿತನಾಗಿರುವುದರಿಂದ ಇವನು ಉನ್ನತ ಪದವಿಯಲ್ಲಿದ್ದಿರಬೇಕೆಂದು ತಿಳಿಯಬಹುದು. ಗುರುಬಸವನು ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿದ್ದ ಮಗದೊಬ್ಬ ಶ್ರೇಷ್ಠ ಕವಿ. ಇವನು 'ಶಿವಯೋಗಾಂಗಭೂಷಣ', 'ಸದ್ಗುರು ರಹಸ್ಯ', 'ಕಲ್ಯಾಣೇಶ್ವರ', 'ಸ್ವರೂಪಾಮೃತ', 'ವೃಷಭಗೀತೆ', 'ಅವಧೂತಗೀತೆ', 'ಮನೋವಿಜಯ ಕಾವ್ಯ'ವೆಂಬ ಗ್ರಂಥಗಳನ್ನು ರಚಿಸಿದನು. ಇವನ ಈ ಏಳು ಗ್ರಂಥಗಳು ಸಪ್ತಕಾವ್ಯಗಳೆಂದು ಪ್ರಸಿದ್ಧವಾಗಿವೆ. ಇವೆಲ್ಲವೂ ವೀರಶೈವವೇದಾಂತಪ್ರತಿಪಾದಕವಾಗಿಯೂ ಮತ್ತು ಗುರುಶಿಷ್ಯಸಂವಾದರೂಪವಾಗಿಯೂ ಇವೆ. 'ಶಿವಯೋಗಾಂಗಭೂಷಣ'ವು ಪರಿವರ್ಧಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ ಯೋಗಾಭ್ಯಾಸಾದಿ ವಿಷಯಗಳನ್ನು ಚರ್ಚಿಸಲಾಗಿದೆ. 'ಸದ್ಗುರು ರಹಸ್ಯ'ವೆಂಬ ಗ್ರಂಥವು ಭಾಮಿನೀಷಟ್ಪದಿಯಲ್ಲಿದೆ. ಇದು ಮಾನವನನುಸರಿಸಬೇಕಾದ ಶೀಲವನ್ನು ಕುರಿತುದಾಗಿದೆ. 'ಕಲ್ಯಾಣೇಶ್ವರ'ವು ಪರಿವರ್ಧಿನೀಷಟ್ಪದಿಯಲ್ಲಿದೆ. ಈ ಕೃತಿಯಲ್ಲಿ ಬಸವೇಶ್ವರರ ಸಹಚರಿಯಾದ ನಂದಿನಿ ತನ್ನ ಕಿಂಕರನಾದ ವಿಚಿತ್ರಕನೆಂಬ ಗಣೇಶ್ವರನು ಸುಜ್ಞಾನಚರಿತ್ರಕನಾಗಲು ಮಾಡಿದ ಜ್ಞಾನಬೋಧೆಯನ್ನು ದೇಶಿಕನು ಶಿಷ್ಯನಿಗೆ ನಿರೂಪಿಸಿದಂತೆ ಹೇಳಿದೆ. 'ಸ್ವರೂಪಾಮೃತ'ವು ಭಾಮಿನೀಷಟ್ಪದಿಯಲ್ಲಿರುವ ವೀರಶೈವಸಿದ್ಧಾಂತ ಗ್ರಂಥವಾಗಿದೆ. 'ವೃಷಭಗೀತೆ'ಯು ಭೋಗಷಟ್ಪದಿಯಲ್ಲಿ ರಚಿತವಾಗಿದೆ. ಈ ಗ್ರಂಥವು ಬಸವಸ್ತುತಿರೂಪವಾಗಿಯೂ ಮತ್ತು ವೀರಶೈವವೇದಾಂತ ಪ್ರತಿಪಾದಕವಾಗಿಯೂ ಇದೆ. 'ಅವಧೂತಗೀತೆ'ಯು ವಿರಕ್ತಿಬೋಧಕವಾದ ಹಾಡಿನ ರೂಪದಲ್ಲಿದೆ. ಇದರಲ್ಲಿ ಅವಧೂತಲಕ್ಷಣವನ್ನು ಹೇಳಲಾಗಿದೆ. 'ಮನೋವಿಜಯಕಾವ್ಯ'ವನ್ನು ಕುಸುಮಷಟ್ಪದಿಯಲ್ಲಿ ಬರೆಯಲಾಗಿದೆ. ಇದು ಸುವಿವೇಕನೆಂಬ ಜ್ಞಾನಿಯು ಗುರುವಿನ ಸಹಾಯದಿಂದ ಜ್ಞಾನವನ್ನು ಪಡೆದ ಬಗೆಯನ್ನು ನಿರೂಪಿಸುತ್ತದೆ.

ವಿಜಯನಗರದ ಚಕ್ರವರ್ತಿ ಇಮ್ಮಡಿ ದೇವರಾಯನ ಮಹಾಪ್ರಧಾನ ಗುರುರಾಯನ ಅಪೇಕ್ಷೆಯಂತೆ ಚಂದ್ರಕವಿಯು 'ವಿರೂಪಾಕ್ಷಾಸ್ಥಾನ' ಮತ್ತು 'ಗುರುಮೂರ್ತಿಶಂಕರಶತಕ' ಎಂಬೆರಡು ಕೃತಿಗಳನ್ನು ರಚಿಸಿದನು. ಮೊದಲನೆಯದು ಹಂಪೆಯ ವಿರೂಪಾಕ್ಷನ ಆಸ್ಥಾನವನ್ನು ವರ್ಣಿಸುವ ಚಂಪೂಕಾವ್ಯ. ಎರಡನೆಯ ಗ್ರಂಥವು ಭಕ್ತಿ, ವಿರಕ್ತಿ ಮತ್ತು ಮುಕ್ತಿ ವಿಷಯಗಳ ಮೂಲರೂಪಗಳ ಮೇಲೆ ಬೆಳಕನ್ನು ಚೆಲ್ಲುವಂತಹುದಾಗಿದೆ. ಕ್ರಿ.ಶ. ಸುಮಾರು ೧೪೫೦ರಲ್ಲಿದ್ದ ಬೊಮ್ಮರಸನೆಂಬ ವೀರಶೈವ ಕವಿಯು ರಚಿಸಿರುವ 'ಸೌಂದರಪುರಾಣ'ವು ಅರವತ್ತುಮೂರು ಶಿವಭಕ್ತರಲ್ಲೊಬ್ಬನಾದ ಸೌಂದರೇಶ ಅಥವಾ ನಂಬಿಯಣ್ಣನೆಂಬ ಶಿವಭಕ್ತನ ಚರಿತ್ರೆಯನ್ನು ವರ್ಣಿಸುತ್ತದೆ. ಇದು ವಾರ್ಧಕಷಟ್ಪದಿಯಲ್ಲಿ ರಚಿತವಾಗಿದ್ದು ಹತ್ತೊಂಭತ್ತು ಸಂಧಿಗಳಿಂದ ಕೂಡಿದೆ. "ಹರಿಹರೇಶ್ವರ, ಸೋಮನಾಥ ಮೊದಲಾದ ಕವಿವರರು ವಿಸ್ತರಿಸಿದೀ ಪುಣ್ಯಚರಿತೆಯನು ವರ್ಣಕದೊಳಾನು ಪೇಳ್ದಪೆವೆಂ" ಎಂದು ಕವಿಯು ತನ್ನ ಕಥಾವಸ್ತುವಿನ ಬಗೆಗೆ ಹೇಳುತ್ತಾನೆ.

ವಿಜಯನಗರದರಸನಾದ ವಿರೂಪಾಕ್ಷನ (ಕ್ರಿ.ಶ. ೧೪೬೫–೮೫) ಆಸ್ಥಾನದಲ್ಲಿದ್ದ ತೋಂಟದ ಸಿದ್ಧೇಶ್ವರರು ವೀರಶೈವರಲ್ಲಿ ಪ್ರಸಿದ್ಧರಾದ ಗುರುವರ್ಯರು. ಇವರಿಗೆ ತೋಂಟದ ಸಿದ್ಧಲಿಂಗಯತಿ ಎಂಬ ಹೆಸರೂ ಇದ್ದಿತು. ಇವರು ಹರದನಹಳ್ಳಿಯ ಗೋಸಲ ಚನ್ನಬಸವೇಶ್ವರರ ಶಿಷ್ಯರಾಗಿದ್ದರು. ಕಗ್ಗೆರೆಯ ಸಮೀಪದಲ್ಲಿರುವ ನಾಗಿಣೀ ನದಿಯ ತೀರದ ತೋಂಟದೊಳಗೆ ಬಹಳ ಕಾಲ ಶಿವಯೋಗದಲ್ಲಿ ಆಸಕ್ತರಾಗಿದ್ದುದರಿಂದ ಇವರಿಗೆ "ತೋಂಟದ" ಎಂಬ ವಿಶೇಷಣವು ರೂಢಿಗೆ ಬಂದಿತು. ಇವರನ್ನು ಕುರಿತು ಹಲವು ಗ್ರಂಥಗಳು ರಚಿಸಲ್ಪಟ್ಟಿವೆ. ತೋಂಟದ ಸಿದ್ಧಲಿಂಗೇಶ್ವರರು 'ಷಟ್‌ಸ್ಥಲಜ್ಞಾನಸಾರಾಮೃತ' ಗ್ರಂಥವನ್ನು ರಚಿಸಿರುವರು. ಇದರಲ್ಲಿ ಷಟ್‌ಸ್ಥಲದ ವಿಚಾರವನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ. ಕ್ರಿ.ಶ. ಸುಮಾರು ೧೪೭೫ರಲ್ಲಿ ಗುಬ್ಬಿಯ ಮಲ್ಲಣ್ಣನು 'ಗಣಭಾಷೆ ರತ್ನಮಾಲೆ' ಮತ್ತು 'ವಾತುಲ ತಂತ್ರಟೀಕೆ' ಎಂಬ ಗ್ರಂಥಗಳನ್ನು ರಚಿಸಿದನು. ಕವಿಯು ತನ್ನ ಮೊದಲನೆಯ ಗ್ರಂಥದಲ್ಲಿ ೪೪ ಅಂಗಸ್ಥಲಗಳನ್ನು ಮತ್ತು ೫೭ ಲಿಂಗಸ್ಥಲಗಳನ್ನೊಳಗೊಂಡ ೧೦೧ ಸ್ಥಲಗಳಲ್ಲಿ ವೀರಶೈವರು ಆಚರಿಸಬೇಕಾದ ಆಚರಣೆಗಳನ್ನು

ಅನುಭವಾದಿ ಸಪ್ಪಕ್ತ್ರಮುಖಿಮೂಂತವಾದ ೧೦೧ ಸ್ಥಲಗಳೆಂದು ಸಂಗ್ರಹಿಸಿ ವೇದಾಗಮಪುರಾಣೇತಿಹಾಸಾದಿ ಗ್ರಂಥಗಳಿಂದ ಪ್ರಮಾಣಗಳನ್ನು ಪುರಾತನರ ಕನ್ನಡ ವಚನಗಳನ್ನು ಉದಾಹರಿಸಿ ವಿವರಿಸಿದ್ದಾನೆ. ಇದು ವೀರಶೈವತತ್ತ್ವಜ್ಞಾನದ ವಿವರಣೆಯ ಗ್ರಂಥವಾಗಿದೆ. ಎರಡನೆಯ ಗ್ರಂಥವಾದ 'ವಾತುಲತಂತ್ರಟೀಕೆ'ಯು 'ವಾತುಲತಂತ್ರ'ವೆಂಬ ಶೈವಾಗಮಕ್ಕೆ ಬರೆದ ಕನ್ನಡ ಟೀಕೆ.

ಕ್ರಿ.ಶ. ಸುಮಾರು ೧೪೮೦ರಲ್ಲಿ ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಕವಿಯು 'ಸ್ವತಂತ್ರಸಿದ್ಧಲಿಂಗೇಶ್ವರ ವಚನ', 'ಮುಕ್ತ್ಯಂಗನೆಯ ಕಂಠಮಾಲೆ' ಮತ್ತು 'ಜಂಗಮರಗಳೆ' ಎಂಬ ಗ್ರಂಥಗಳನ್ನು ರಚಿಸಿದನು. 'ಸ್ವತಂತ್ರಸಿದ್ಧಲಿಂಗೇಶ್ವರ ವಚನ'ವೆಂಬ ಗ್ರಂಥವು ವೀರಶೈವಸಿದ್ಧಾಂತವನ್ನು ಬೋಧಿಸುತ್ತದೆ. 'ಮುಕ್ತ್ಯಂಗನೆಯ ಕಂಠಮಾಲೆ'ಯು ಒಂದು ವಚನ ಗ್ರಂಥ. ಇದಕ್ಕೆ ಗ್ರಂಥಕರ್ತೃವೇ ವ್ಯಾಖ್ಯಾನವನ್ನು ಬರೆದಿದ್ದಾನೆ. ಜಂಗಮ ರಗಳೆಯು ೧೦೮ ನುಡಿಗಳಿಂದ ಕೂಡಿದೆ.

ಗುಮ್ಮಳಾಪುರದ ಸಿದ್ಧಲಿಂಗೇಶ್ವರನೆಂಬ ಮತ್ತೊಬ್ಬ ವೀರಶೈವ ಕವಿಯು 'ಷಟ್‌ಸ್ಥಲದ ಲಿಂಗಾಂಗಸಂಬಂಧದ ನಿರ್ವಚನ'ವೆಂಬ ಗ್ರಂಥವನ್ನು ಕ್ರಿ.ಶ. ಸುಮಾರು ೧೪೮೦ರಲ್ಲಿ ರಚಿಸಿರುವನು. ಇದು ವೀರಶೈವಸಿದ್ಧಾಂತವನ್ನು ಬೋಧಿಸುವ ಗ್ರಂಥವಾಗಿದೆ. ಬಸವೇಶ್ವರ ಮುಂತಾದ ಪುರಾತನರ ಸ್ತುತಿಯು ಅಲ್ಲಲ್ಲಿ ಕಾಣಬರುತ್ತದೆ. ಬೋಳ ಬಸವನು ಇವನಿಗೆ ವಿದ್ಯಾಗುರುವಾಗಿದ್ದಂತೆ ತೋರುತ್ತದೆ. ಸುಮಾರು ಇದೇ ಕಾಲದಲ್ಲಿ ತೋಂಟದ ಸಿದ್ಧೇಶ್ವರನ ಶಿಷ್ಯನಾಗಿರಬಹುದಾದ ಸಾನಂದ ಶಿವಯೋಗಿಯು 'ವೀರಮಾಹೇಶ್ವರಾಚಾರಸಾರೋದ್ಧಾರ'ಕ್ಕೆ ಟೀಕೆಯನ್ನು ಬರೆದಿದ್ದಾನೆ. ಕ್ರಿ.ಶ. ಸುಮಾರು ೧೪೮೫ರಲ್ಲಿ ಮಲ್ಲಿಕಾರ್ಜುನ ಕವಿಯು 'ಶ್ವೇತನ ಸಾಂಗತ್ಯ'ವೆಂಬ ಗ್ರಂಥವನ್ನು ರಚಿಸಿದನು. ಇದರಲ್ಲಿ ಶ್ವೇತನಿಗಾಗಿ "ಪ್ರೇತಪತಿಯ ಸೊಕ್ಕನು ಮುರಿದ ಭೂತನಾಥನ ಲೀಲೆ"ಯನ್ನು ವಿವರಿಸಲಾಗಿದೆ. ಗ್ರಂಥದಾದಿಯಲ್ಲಿ ಶಿವ ಮತ್ತು ಬಸವೇಶ್ವರರ ಸ್ತುತಿ ಮಾಡಲ್ಪಟ್ಟಿದೆ.

ಕ್ರಿ.ಶ. ೧೪೮೨ರಿಂದ ೧೫೧೪ರ ವರೆಗೆ ಉಮ್ಮತ್ತೂರಿನ ಅಧಿಪತಿಯಾದ ಮಹಾಮಂಡಲೇಶ್ವರ ಇಮ್ಮಡಿರಾಯ ಒಡೆಯನ ಕುಮಾರನಾದ ವೀರನಂಜರಾಯನಿಂದ ಪೂಜಿತನಾದ ನೀಲಕಂಠಾಚಾರ್ಯನು ಕ್ರಿ.ಶ. ೧೪೮೫ರಲ್ಲಿ ಆರಾಧ್ಯ ಚಾರಿತ್ರವೆಂಬ ಕಾವ್ಯವನ್ನು ವಾರ್ಧಕಷಟ್ಪದಿಯಲ್ಲಿ ಬರೆದಿದ್ದಾನೆ. ಇವನ ತಂದೆಯು "ಶಿವೋಕ್ತತಂತ್ರೈಕಕರ್ತಾರ"ನಾದ ವಿಶ್ವನಾಥದೇಶಿಕ. ಇವನ ಗುರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರವೀಣನಾಗಿ ಶಿವಾಗಮಗಳನ್ನು ಭಕ್ತರಿಗೆ ಬೋಧಿಸಿದ ಗಂಗಾಧರಾಚಾರ್ಯ. 'ಆರಾಧ್ಯಚಾರಿತ್ರ' ಗ್ರಂಥಾವತಾರದಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ನಂದಿ. ಭೃಂಗಿ, ವೀರಭದ್ರ, ಅಲ್ಲಮ, ಬಸವ, ಚನ್ನಬಸವ, ಪಂಡಿತಾರಾಧ್ಯ, ದಕ್ಷಿಣಾಮೂರ್ತಿ, ವಿಶ್ವನಾಥಾರ್ಯ, ಸ್ವಗುರು ಗಂಗಾಧರಾಚಾರ್ಯ ಇವರುಗಳನ್ನು ಸ್ತುತಿಸಿದ್ದಾನೆ. ಇದರಲ್ಲಿ ಮಲ್ಲಿಕಾರ್ಜುನಪಂಡಿತಾರಾಧ್ಯರ ಚರಿತ್ರೆಯನ್ನು ನಿರೂಪಿಸಲಾಗಿದೆ. ಕ್ರಿ.ಶ. ಸುಮಾರು ೧೬೦೦ರಲ್ಲಿ ಚತುರ್ಮುಖ ಮಾಯಣನ ಮಗನಾದ ಬೊಮ್ಮರಸನೆಂಬ ವೀರಶೈವ ಕವಿಯು 'ರೇವಣಸಿದ್ಧೇಶ್ವರಪುರಾಣ'ವನ್ನು ರಚಿಸಿರುವನು. 'ಸೌಂದರಪುರಾಣ'ವನ್ನು ರಚಿಸಿದ ಬೊಮ್ಮರಸನು ಬೇರೆಯವನು. 'ಸರಸಗೀರ್ವಾಣಭಾಷಾಯುಕ್ತಕರ್ಣಾಟವರವಚಶ್ರೀಲಸಿತವದನತಾಮರಸ, ಶೈವಾಗಮಜ್ಞ, ವರ್ಣಕಕವೀಂದ್ರಚತುರಾಸ್ಯ, ಕವಿ ಸಭಾಮಾಣಿಕ್ಯದೀಪ' ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. 'ರೇವಣಸಿದ್ಧೇಶ್ವರಪುರಾಣ'ವು ರೇವಣಸಿದ್ಧನ ಚರಿತ್ರೆಯನ್ನು ವಾರ್ಧಿಕಷಟ್ಪದಿಯಲ್ಲಿ ರಚಿಸಿರುವ ಕಾವ್ಯವಾಗಿದೆ. ರೇವಣಸಿದ್ಧನ ಚರಿತವನ್ನು ಈಶಾನ್ಯಗುರು ಸಂಸ್ಕೃತದಲ್ಲಿಯೂ ಹರೀಶ್ವರನು ರಗಳೆಯ ರೂಪವಾಗಿ ಕನ್ನಡದಲ್ಲಿಯೂ ಬರೆದಿದ್ದಾರೆ. ಈ ಉಭಯ ಮತವನ್ನರಿತು ತಾನು ಈ ಕಾವ್ಯ ರಚಿಸಿದಂತೆ ಕವಿ ಹೇಳುತ್ತಾನೆ. ಗ್ರಂಥಾವತಾರದಲ್ಲಿ ಶಾಂತಮಲ್ಲಿಕಾರ್ಜುನಸ್ತುತಿ ಇದೆ. ಬಳಿಕ ಕವಿ ಪಾರ್ವತಿ, ರೇವಣಸಿದ್ಧೇಶ, ಮರುಳಸಿದ್ಧೇಶ, ಏಕೋರಾಮ, ಮಲ್ಲಿಕಾರ್ಜುನಪಂಡಿತಾರಾಧ್ಯ, ನಂದಿ, ಭೃಂಗಿ, ವೀರಭದ್ರ, ತಿರುಜ್ಞಾನಸಂಬಂಧಿನಾಮವನ್ನು ಪಡೆದ ಷಣ್ಮುಖ, ವಾಗೀಶ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಈಶ್ವರನ ಜ್ಞಾನಕಲೆ, ಲಾವಣ್ಯಕಲೆ, ವೀರಕಲೆ, ಆನಂದಕಲೆ, ಧರ್ಮಕಲೆಗಳು ರೇಣುಕ (ರೇವಣ), ಸೌಂದರೇಶ, ವೀರಭದ್ರ, ಷಣ್ಮುಖ, ವೃಷಭೇಂದ್ರರೂಪಗಳನ್ನು ತಳೆದವು. ಇವುಗಳಲ್ಲಿ ಮುಖ್ಯವಾದ ಜ್ಞಾನಕಲೆಯ ಲೀಲಾಕಥನವನ್ನು ಚಿತ್ರಿಸುವುದಾಗಿ ಕವಿ ಹೇಳುತ್ತಾನೆ.

ಇದೇ ಕಾಲದಲ್ಲಿದ್ದ ಆನಂದಬಸವಲಿಂಗಶಿವಯೋಗಿಯೆಂಬ ಮತ್ತೊಬ್ಬ ವೀರಶೈವ ಕವಿಯು 'ಮಾಚಿದೇವ ಮನೋವಿಲಾಸ'ವೆಂಬ ಗ್ರಂಥವನ್ನು ಬರೆದಿದ್ದಾನೆ. ಇದು ಗದ್ಯರೂಪವಾಗಿದೆ. ಇದರಲ್ಲಿ ಮಡಿವಾಳಮಾಚಿದೇವನ ಮನೋಭಾವವನ್ನನುಸರಿಸಿ ವೀರಶೈವಸಿದ್ಧಾಂತವು ನಿರೂಪಿತವಾಗಿದೆ. ಕವಿಯು ಅನೇಕ ಸಂಸ್ಕೃತಶ್ಲೋಕಗಳನ್ನು ಉದಾಹರಿಸಿ ಅವುಗಳಿಗೆ ಟೀಕೆಯನ್ನು ಬರೆದಿದ್ದಾನೆ. ಗ್ರಂಥದಾದಿಯಲ್ಲಿ ಬಸವಸ್ತುತಿಯಿದೆ. ಬಳಿಕ ಕವಿ ಶಿವ, ವೀರ

ಭದ್ರಾವತಾರನಾದ ಮಾಚಿದೇವ. ತೋಂಟದ ಸಿದ್ಧಲಿಂಗ. ಬೋಳಬಸವ ಮೊದಲಾದವರನ್ನು ಸ್ತುತಿಸಿದ್ದಾನೆ. ಕ್ರಿ.ಶ. ಸುಮಾರು ೧೫೦೦ರಲ್ಲಿ ವಿರತಮಹಲಿಂಗದೇವನೆಂಬ ಮತ್ತೊಬ್ಬ ಕವಿಯು 'ಗುರುಬೋಧಾಮೃತ'ವೆಂಬ ಕೃತಿಯನ್ನು ರಚಿಸಿದ್ದಾನೆ. ಇದು ತ್ರಿಪದಿಯಲ್ಲಿ ಬರೆಯಲ್ಪಟ್ಟಿದೆ. ಕೆಲವು ಕಂದವೃತ್ತ ವಚನಗಳೂ ಇವೆ. ಈ ಗ್ರಂಥವು ವೈರಾಗ್ಯ ವನ್ನು ಗುರುಶಿಷ್ಯರ ಸಂವಾದರೂಪದಲ್ಲಿ ಬೋಧಿಸುತ್ತದೆ. ಪ್ರಾರಂಭದಲ್ಲಿ ಶಿವಸ್ತುತಿಯಿದೆ. ಈ ಕಾಲದವನೇ ಆದ ಸಿಂಗಿರಾಜನು 'ಮಲಬಸವರಾಜಚಾರಿತ್ರ'ವನ್ನು ಬರೆದಿದ್ದಾನೆ. ಇವನ ಹೆಸರು ಶೃಂಗಿರಾಜ ಎಂದೂ ದೊರೆಯುತ್ತದೆ. ಈ ಕಾವ್ಯವು ಬಹುಮಟ್ಟಿಗೆ ವಾರ್ಧಕಷಟ್ಪದಿಯಲ್ಲಿ ರಚಿತವಾಗಿದ್ದರೂ ಅಲ್ಲಲ್ಲಿ ಇತರ ಷಟ್ಪದಿಗಳೂ ಇವೆ. ಇದಕ್ಕೆ 'ಸಿಂಗಿರಾಜಪುರಾಣ' ಎಂಬ ಹೆಸರು ಕೂಡಾ ಇದೆ. ಈ ಕೃತಿಯಲ್ಲಿ ಬಸವೇಶ್ವರರ ೮೮ ಪವಾಡಗಳು ವರ್ಣಿತವಾಗಿವೆ. ಗ್ರಂಥಾವತಾರದಲ್ಲಿ ಕಾಶೀ ವಿಶ್ವನಾಥ. ವೀರೇಶ ಇವರುಗಳ ಸ್ತುತಿ ಇದೆ.

ಹದಿನಾರನೆಯ ಶತಮಾನದಾದಿಯಲ್ಲಿ ವಿಜಯನಗರದ ಸಿಂಹಾಸನಕ್ಕೆ ಕೃಷ್ಣದೇವರಾಯನು ಬಂದಂದಿನಿಂದ ಆ ಸಾಮ್ರಾಜ್ಯದ ಕೀರ್ತಿಯು ಉನ್ನತ ಶಿಖರಕ್ಕೇರಿತು ಮತ್ತು ಅವನಾಳ್ವಿಕೆಯ ಕಾಲವು ವೈಶಿಷ್ಟ್ಯಪೂರ್ಣವಾಗಿದ್ದಿತು. ಅದೇ ರೀತಿಯಲ್ಲಿ ಆ ಶತಮಾನದ ಕವಿಗಳಲ್ಲಿ ನಿಜಗುಣಶಿವಯೋಗಿಯ ಸ್ಥಾನವು ವೈಶಿಷ್ಟ್ಯಪೂರ್ಣವಾದುದಾಗಿದೆ. ಇವರ ಕಾಲವು ಕ್ರಿ.ಶ. ಸುಮಾರು ೧೫೦೦ ಇದ್ದಿರಬೇಕೆಂದು ಊಹಿಸಲಾಗಿದೆ. ಕನ್ನಡ ಸಾಹಿತ್ಯವು ಪಾಮರ ರಂಜಕವಾಗಿ ಬೆಳೆಯಲು ಕಾರಣೀಭೂತರಾದವರಲ್ಲಿ ನಿಜಗುಣಶಿವಯೋಗಿಗಳೂ ಒಬ್ಬರು. ಈ ಕಾಲದಲ್ಲಿ ಗಹನವಾದ ತಾತ್ವಿಕ ವಿಷಯಗಳನ್ನು ತಿಳಿಗನ್ನಡ ಗದ್ಯಪದ್ಯಗಳಲ್ಲಿ ಗೀತರೂಪವಾಗಿ ಹೇಳುವ ವಿಧಾನವು ಬೆಳೆಯುತ್ತ ಬಂದಿತು. ಶಂಭು ಲಿಂಗನ ಬೆಟ್ಟದ ಸುತ್ತುಮುತ್ತಿನ ನಾಡಿಗೆ ಇವರು ಅರಸರಾಗಿದ್ದರೆಂದೂ, ನಂತರ ವಿರಕ್ತರಾಗಿ ಆ ಬೆಟ್ಟದಲ್ಲಿ ದೀರ್ಘಕಾಲ ಶಿವಯೋಗತತ್ಪರರಾಗಿದ್ದರೆಂದೂ ಪ್ರತೀತಿ. ನಿಜಗುಣಶಿವಯೋಗಿಗಳು ವೀರಶೈವಧರ್ಮಕ್ಕೆ ಆಧಾರ ಪ್ರಾಯವಾದ ಷಟ್‌ಸ್ಥಲ ಸಿದ್ಧಾಂತವನ್ನೂ ಅದ್ವೈತವನ್ನೂ ಸಮನ್ವಯಗೊಳಿಸಿದ ವಿಶಾಲದೃಷ್ಟಿಯ ಧರ್ಮ ನಿಷ್ಠರು. ಇವರು 'ಕೈವಲ್ಯಪದ್ಧತಿ'. 'ಪರಮಾನುಭವಬೋಧೆ'. 'ಪರಮಾರ್ಥಗೀತೆ'. 'ಅನುಭವಸಾರ', 'ಅರವತ್ತು ಮೂವರ ತ್ರಿಪದಿ', 'ವಿವೇಕಚಿಂತಾಮಣಿ' ಮತ್ತು 'ಪರಮಾರ್ಥಪ್ರಕಾಶಿಕೆ' ಎಂಬ ಸಪ್ತ ಗ್ರಂಥಗಳನ್ನು ರಚಿಸಿದ ಯೋಗಿಗಳಾಗಿದ್ದರು. ಕೈವಲ್ಯಪದ್ಧತಿಯು ಹಾಡುಗಳ ರೂಪದಲ್ಲಿದೆ. "ಆಬಾಲಯವ್ವನವೃದ್ಧರಿಗಾಯಾಸವಿನಿತಿಲ್ಲ ದಂತೆ ಸಮ್ಯಕ್‌ಜ್ಞಾನಿಗಳೊಡಂಬಡುವಂತೆ ಸಕಲ ವೇದವೇದಾಂತಾಗಮ ಸ್ಮೃತಿಪುರಾಣೇತಿಹಾಸ ಸೂತ್ರಾದಿ ಶಾಸ್ತ್ರ ಸಮ್ಮತದಿಂದ ಪುರಾತನ ಗೀತಾನುಗುಣ್ಯವೆನಿಸಿ ಮೃದುಮಧುರಲಕ್ಷಣಯುಕ್ತವಾಗಿ" ತಾನು ರಚಿಸಿರುವುದಾಗಿ ಈ ಕವಿಪುಂಗವರು ಹೇಳುತ್ತಾರೆ. ಈ ಕೃತಿಯಲ್ಲಿರುವ ಬೋಧನೆ ಸ್ಫೂರ್ತಿದಾಯಕವಾಗಿದೆ. ಗುರುಭಕ್ತಿಯು ತುಂಬಿ ತುಳುಕುತ್ತದೆ. ಗುರುವನ್ನುದ್ದೇಶಿಸಿ ರಚಿಸಿದ ಈ ಹಾಡುಗಳು ಭಾವಪೂರ್ಣವಾಗಿ ಹೃದ್ಯವಾಗಿವೆ. ಒಂದೊಂದು ಹಾಡಿನಲ್ಲೂ ಶಂಭುಲಿಂಗನ ಅಂಕಿತವಿದೆ. 'ಪರಮಾನುಭವಬೋಧೆ'ಯಲ್ಲಿ "ಅದ್ವೈತ ತತ್ವವನು ಪ್ರಕಟಿಸುವೆನು ಬೋಧಗತಿಯಿಂದ" ಎಂದು ಯೋಗಿಗಳು ಹೇಳುತ್ತಾರೆ. ಈ ಗ್ರಂಥವು ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯರ ಮಧ್ಯೆ ನಡೆದ ಸಂವಾದ ರೂಪದಲ್ಲಿದೆ. ಗ್ರಂಥದಾರಂಭದಲ್ಲಿ ಶಂಭುಲಿಂಗ ಸ್ತುತಿಯಿದೆ. ಬಳಿಕ ಕವಿ ಪಾರ್ವತಿ. ಗಣಪತಿ. ಗಣಗಳು. ನಿರಾಭಾರಿಗುರು. ಶುಕ, ವಾಮದೇವ ಇವರುಗಳನ್ನು ಸ್ಮರಿಸಿದ್ದಾರೆ. 'ಅರವತ್ತುಮೂವರ ತ್ರಿಪದಿ'ಯು ಅರವತ್ತುಮೂರು ಶಿವಭಕ್ತರ ಸ್ತುತಿಯಿಂದ ಕೂಡಿದುದಾಗಿದೆ. ಇದನ್ನು 'ಪುರಾತನತ್ರಿವಿಧಿ' ಎಂದೂ ಕರೆಯ ಲಾಗಿದೆ. ಆರಂಭದಲ್ಲಿ ಶಂಭುಲಿಂಗ. ಪಾರ್ವತಿ ಮತ್ತು ಶಿವಗಣಗಳ ಸ್ತುತಿಯಿದೆ. 'ಅನುಭವಸಾರ'ವನ್ನು ತ್ರಿಪದಿಯಲ್ಲಿ ಬರೆಯಲಾಗಿದೆ. ಆತ್ಮಸ್ವರೂಪವನ್ನು ಮತ್ತು ಅದ್ವೈತತತ್ವವನ್ನು ಸೂಕ್ಷ್ಮ ದೃಷ್ಟಾಂತಗಳಿಂದ ಸುಲಭಗ್ರಾಹ್ಯವಾಗು ವಂತೆ ಬೋಧಿಸುವುದೇ ಈ ಕೃತಿಯ ಉದ್ದೇಶವಾಗಿದೆ. "ಸಕಲವೇದಾಂತಸಾರವನೆ ತಿಳಿವಂತೆ ಸಾಧಕರಿಗೆ ಬರೆವೆನು" ಎಂದು ಯೋಗಿಗಳು ಹೇಳುತ್ತಾರೆ. ಈ ಗ್ರಂಥವು ಗುರುಶಿಷ್ಯಸಂವಾದರೂಪವಾಗಿದೆ. ಆರಂಭದಲ್ಲಿ ಶಂಭುಲಿಂಗನ ಸ್ತುತಿಯಿದೆ. ಬಳಿಕ ಪಾರ್ವತಿ. ಗಣಪತಿ, ಷಣ್ಮುಖ, ವೀರಭದ್ರ, ನಂದೀಶ್ವರ ಮತ್ತು ಶಿವಗಣಗಳ ಸ್ತುತಿಪದ್ಯಗಳಿವೆ. ನಿಜಗುಣಶಿವಯೋಗಿಗಳ 'ವಿವೇಕಚಿಂತಾಮಣಿ'ಯು ಗದ್ಯಗ್ರಂಥವಾಗಿದೆ. ಇದರಲ್ಲಿ ೭೬೫ ವಿಷಯಗಳು ನಿರೂಪಿತ ವಾಗಿವೆ. ತಾತ್ವಿಕ, ಭೌಗೋಳಿಕ, ಶಾಸ್ತ್ರೀಯ ಮತ್ತು ಸಾಹಿತ್ಯಿಕ ವಿಷಯಗಳು ತಿಳಿಗನ್ನಡದಲ್ಲಿ ನಿರೂಪಿತವಾಗಿವೆ. ಇದು ಸರ್ವಧರ್ಮಾನ್ವಯ ಗ್ರಂಥವಾಗಿದೆ. "ಮತಾತೀತವಾದ ಜ್ಞಾನಕೋಶವೆಂಬ ಸ್ವರೂಪದಲ್ಲಿ. ಇದು ಕನ್ನಡ ವಾಙ್ಮಯದಲ್ಲಿ ಅದ್ವಿತೀಯವಾದ ಗದ್ಯಗ್ರಂಥ." ನಿಜವಾಗಿಯೂ ಈ ಗ್ರಂಥವು ನಿಜಗುಣಶಿವಯೋಗಿಗಳ ಹೆಬ್ಬೊ ತ್ತಿಗೆ: ಕನ್ನಡ ನುಡಿಗೆ ಅವರು ನೀಡಿದ ಜ್ಞಾನಭಾಂಡಾರ. ಯೋಗಿಗಳ ಮತ್ತೊಂದು ಗ್ರಂಥವಾದ 'ಪರಮಾರ್ಥ

ಪ್ರಕಾಶಿಕೆ'ಯು ಚನ್ನಸದಾಶಿವಯೋಗಿಯ 'ಶಿವಯೋಗದೀಪಿಕಾ'ವೆಂಬ ಗ್ರಂಥಕ್ಕೆ ರಚಿಸಿದ ಕನ್ನಡ ವ್ಯಾಖ್ಯಾನ. ಸಂಸ್ಕೃತಜ್ಞಾನವಿಲ್ಲದ ಮೋಕ್ಷಾಪೇಕ್ಷಿಗಳಿಗೆ ಸುಲಭವಾಗಿ ತಿಳಿಯುವಂತೆ ಈ ವ್ಯಾಖ್ಯಾನವನ್ನು ಬರೆದುದಾಗಿ ಕವಿವರ್ಯರು ಹೇಳುತ್ತಾರೆ.

ಸುಮಾರು ಇದೇ ಕಾಲದಲ್ಲಿ ತ್ರಿಲೋಚನಾಚಾರ್ಯನ ಮಗನಾದ ನಂಜನಾಥಾಚಾರ್ಯನೆಂಬ ಕವಿಯು 'ವೈಷ್ಣವವಾದಖಂಡನ'ವೆಂಬ ಗ್ರಂಥವನ್ನು ರಚಿಸಿದನು. ಇದು ಗದ್ಯರೂಪವಲ್ಲಿದೆ. ವಿಷ್ಣುವಿನ ಮಹತ್ವವನ್ನು ಖಂಡಿಸುವುದಕ್ಕಾಗಿ ಬರೆದ ಗ್ರಂಥವಾದುದರಿಂದ ಇದಕ್ಕೆ ವೈಷ್ಣವವಾದಖಂಡನವೆಂದು ಹೆಸರಿಟ್ಟುದಾಗಿ ಕವಿಯು ಹೇಳುತ್ತಾನೆ. ನಂಜನಾಥಾಚಾರ್ಯನ ಸಮಕಾಲೀನನಾದ ಸುರಂಗಕವಿಯು 'ತ್ರಿಷಷ್ಟಿಪುರಾತನರ ಚರಿತ್ರೆ'ಯನ್ನು ಚಂಪೂರೂಪವಾಗಿ ಬರೆದಿರುವನು. ಈ ಗ್ರಂಥವಲ್ಲಿ ಅರವತ್ತುಮೂರು ಶಿವಭಕ್ತರ ಚರಿತ್ರೆಯನ್ನು ನಿರೂಪಿಸಲಾಗಿದೆ. ಗ್ರಂಥಾವತಾರವಲ್ಲಿ ಸೋಮನಾಥ ಸ್ತುತಿಯಿದೆ. ಬಳಿಕ ಬಸವೇಶ್ವರ, ಚನ್ನಬಸವೇಶ್ವರ, ಪ್ರಭುದೇವರ, ಗಣೇಶ, ಸರಸ್ವತಿ ಇವರುಗಳನ್ನು ಕ್ರಮವಾಗಿ ಕವಿಯು ಸ್ತುತಿಸಿದ್ದಾನೆ. ಸುಮಾರು ಕ್ರಿ.ಶ. ೧೫೦೦ರಲ್ಲಿ ಚನ್ನಬಸವನೆಂಬ ಕವಿಯೊಬ್ಬನು ಚನ್ನಬಸವೇಶ್ವರಪದಮಂತ್ರಗೋಪ್ಯಕ್ಕೆ ವಿವರಣವನ್ನು ಬರೆದಂತೆ ತೋರುತ್ತದೆ. ಇದೇ ಕಾಲದಲ್ಲಿ ನೀಲಕಂಠಾರಾಧ್ಯನೆಂಬ ವೀರಶೈವಕವಿಯು 'ಪರವಾದಿಗಜಾಂಕುಶತಾರಾವಳಿ' ಎಂಬ ಗದ್ಯಗ್ರಂಥವನ್ನು ರಚಿಸಿದನು. ಈ ಕೃತಿಯನ್ನು "ಸಕಲವೇದಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ ಜೈನಚಾರ್ವಾಕಮಾಯಾವಾದಿವೈಷ್ಣವರೆಂಬ ಮದಗಜಕ್ಕೆ ಅಂಕುಶ"ವಾಗಿ ರಚಿಸಿದಂತೆ ಕವಿಯು ಹೇಳುತ್ತಾನೆ. ಕಲ್ಯಾಣದಸ್ವಾಮಿಯೆಂಬ ಇನ್ನೋರ್ವ ಕವಿಯು 'ಕಾರಣಾಗಮದ ವಾರ್ಧಕ' ಎಂಬ ಗ್ರಂಥವನ್ನು ಬರೆದನು. ಇದು ವಾರ್ಧಕಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ ಶೈವಾಗಮಗಳಲ್ಲೊಂದಾದ ಕಾರಣಾಗಮದ ವಿಷಯಗಳನ್ನು ಸಂಗ್ರಹವಾಗಿ ಹೇಳಿದೆ.

ಇದೇ ಕಾಲದಲ್ಲಿ ಸ್ತ್ರೀ ವಚನಕಾರರು ಬೆಳಕಿಗೆ ಬಂದರು. ಎಡೆಮಟದ ನಾಗಿದೇವನ ಹೆಂಡತಿ ಮಸಣಮ್ಮನು ವಚನಗಳನ್ನು ರಚಿಸಿದಳು. ಇವಳ ಅಂಕಿತ 'ನಿಜಗುಣಶಿವಯೋಗೀಶ್ವರಲಿಂಗ'. ರೇವಣಸಿದ್ಧಯ್ಯನ ಹೆಂಡತಿ ರೇಕಮ್ಮನು ಹಲವು ವಚನಗಳನ್ನು ಬರೆದಳು. 'ಶ್ರೀ ಗುರುಸಿದ್ಧೇಶ್ವರ'ವೆಂಬುದು ಇವಳ ವಚನಾಂಕಿತವಾಗಿದ್ದಿತು. ಇದೇ ಕಾಲದಲ್ಲಿ ಕಾಲುಕಣ್ಣಿಯ ಕಾಯಮ್ಮನೆಂಬುವಳು, ವರದಸಂಗಣ್ಣ, ಕೇದಾರಗುರು, ನಿವೃತ್ತಿಸಂಗಯ್ಯ, ಸತ್ತಿಗೆ ಕಾಯಕದ ಮಾರಿತಂದೆ, ಕಾಳಿಲಿಂಗ ಮತ್ತು ಕುಂಭದಮಾರಯ್ಯ ಮೊದಲಾದವರು ಹಲವು ವಚನಗಳನ್ನು ರಚಿಸಿದರು.

ಕ್ರಿ.ಶ. ೧೫೧೩ರಲ್ಲಿ ಗುಬ್ಬಿಯ ಮಲ್ಲಣಾರ್ಯನೆಂಬ ವೀರಶೈವಕವಿಯು 'ಭಾವಚಿಂತಾರತ್ನ', 'ವೀರಶೈವಾಮೃತ ಪುರಾಣ'ವೆಂಬ ಕೃತಿಗಳನ್ನು ರಚಿಸಿದನು. ಮಲ್ಲಣಾರ್ಯನು 'ಪುರಾತನರಗಳೆ' ಎಂಬ ಗ್ರಂಥವನ್ನು ಬರೆದಿರುವುದಾಗಿ ಪ್ರತೀತಿಯಿದೆ. ಆದರೆ ಈ ಗ್ರಂಥವು ಇದುವರೆಗೂ ಉಪಲಬ್ಧವಾದಂತೆ ತೋರುತ್ತಿಲ್ಲ. ಇವನ ಸ್ಥಳ ಗುಬ್ಬಿ. ಮಲ್ಲಣಾರ್ಯನನ್ನು "ಕರ್ಣಾಟಸಂಸ್ಕೃತೋಭಯಕವಿತ್ವಂಗಳಂ ಪೂರ್ಣಲಕ್ಷಣಚಮತ್ಕಾರದಿಂದಂ ಮಾಳ್ಪ ನಿರ್ಣಯಕೆ ನೀನೆಯುಗ್ಗಳವಲಾ ಬಸವಪೌರಾಣಾರ್ಥವಂ ಪೇಳ್ವೆಡೆ ಅರ್ಣವಪ್ರಾಂತದ ಭೂಮಿಯೊಳು ಪೆಸರಾಗಿರ್ದೆ"ಯೆಂದು ಇತರ ಕವಿಗಳು ಸ್ತುತಿಸಿದರೆಂದು ಕವಿಯು ಹೇಳುತ್ತಾನೆ. ಆದುದರಿಂದ ಇವನು ಉಭಯಭಾಷಾಕವಿಯೆಂದೂ ಮತ್ತು ಬಸವಪುರಾಣದ ಅರ್ಥವನ್ನು ಹೇಳುವುದರಲ್ಲಿ ಪ್ರಸಿದ್ಧನೆಂದೂ ವಿದಿತವಾಗುತ್ತದೆ. ಈ ಕವಿಗೆ ಬಸವಪುರಾಣದ ಮಲ್ಲಣಾರ್ಯನೆಂಬ ಹೆಸರೂ ಇದ್ದಿತು. ಇವನ ಸಮಕಾಲೀನನಾದ ಚೇರಮ ಕವಿಯು (ಕ್ರಿ.ಶ. ೧೫೨೬) ತನ್ನ ಚೇರಮ ಕಾವ್ಯದಲ್ಲಿ "ವೇದಾಂತಸಿದ್ಧಾಂತಲಕ್ಷಣವೈದ್ಯಭರತಸಾಮುದ್ರಿಕಜ್ಯೋತಿಷಾಲಂಕಾರಸರಸಗೀತಂ ವಾದ್ಯಶಕುನ ಸದ್ವ್ಯಾಕರಣಸೂಪರತಿಶಾಸ್ತ್ರ"ಗಳಲ್ಲಿ ಪರಿಣತನೆಂದು ಮಲ್ಲಣಾರ್ಯನನ್ನು ಶ್ಲಾಘಿಸಿರುವುದರಿಂದ ಈ ಕವಿಯು ನಾನಾಶಾಸ್ತ್ರ ಪಾರಂಗತನೆಂದು ಸ್ಪಷ್ಟವಾಗುತ್ತದೆ. ಮಲ್ಲಣಾರ್ಯನನ್ನು ಸಿದ್ಧನಂಜೇಶ (೧೬೫೦), ಷಡಕ್ಷರದೇವ (೧೬೫೫) ಮೊದಲಾದ ಹಲವು ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ನೆನೆದಿದ್ದಾರೆ.

ಮಲ್ಲಣಾರ್ಯನು 'ಭಾವಚಿಂತಾರತ್ನ'ವೆಂಬ ಗ್ರಂಥವನ್ನು (ಕ್ರಿ.ಶ. ೧೫೧೩) ರಚಿಸಿದನು. ಈ ಕೃತಿಯು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಈ ಗ್ರಂಥವನ್ನು 'ಸತ್ಯೇಂದ್ರಚೋಳ ಕಥೆ' ಎಂದು ಕರೆಯಲಾಗಿದೆ. "ಕೃತಿಯ ಪಲ್ಲವ ತೊಡಗಿ ಪೂರ್ಣವಪ್ಪನ್ನವಿತಾ ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದನಿಲ್ಲ, ಕೃತಿಗದು ನಿಮಿತ್ತದಿ ಭಾವಚಿಂತಾರತ್ನಂ ಎಂಬ ಪೆಸರ್" ಎಂದು ಕವಿಯು ತನ್ನ ಕೃತಿಯ ಹೆಸರಿನ ಔಚಿತ್ಯವನ್ನು ವಿವರಿಸಿದ್ದಾನೆ. "ತಿರುಜ್ಞಾನ ಸಂಬಂಧೀಶನು ಜಿನಮತವಿದಾರಣಂಗೈದು ತಿರುಪಾಟು ಪದಿನಾರುಸಾವಿರದ ನೊರೆಯುತ ಕುಲಚ್ಚದೆಯಗೆ ಪ್ರಣವ

ಪಂಚಾಕ್ಷರಿಯ ಮಹಿಮೆಯುಂ ತಿಳುಪೆ ಸತ್ಯೇಂದ್ರಚೋಳಭೂಪನ ಕಥೆಯುಂ ದ್ರಾವಿಡದೊಳೊರೆದುದಂ" ತಾನು ಕನ್ನಡ ಭಾಷೆಯಲ್ಲಿ ಬರೆದಂತೆ ಕವಿ ಹೇಳುತ್ತಾನೆ. ಈ ಗ್ರಂಥವು ಪಂಚಾಕ್ಷರೀಮಂತ್ರದ ಮಹತ್ವದ ಬೋಧೆಯೆಂದು ಗ್ರಂಥಕರ್ತನು ಹೇಳುತ್ತಾನೆ. ಗ್ರಂಥಾವತಾರದಲ್ಲಿ ಭೋಗಮಲ್ಲೇಶನ ಸ್ತುತಿಯಿದೆ. ಬಳಿಕ ಕವಿ ಅಮರಗುಂಡದ ಶರ್ವ, ಸಿದ್ಧಮಲ್ಲಿಕಾರ್ಜುನಗುರು, ಭೃಂಗಿ, ನಂದಿ, ವೀರಭದ್ರ, ಅಲ್ಲಮ, ಬಸವ, ಚನ್ನಬಸವ, ಶಿವಲೆಂಕ ಮಂಚಣ್ಣ, ಶ್ರೀಪತೀಶ್ವರ ಮಲ್ಲಿಕಾರ್ಜುನ ಪಂಡಿತರೆಂಬ ಪಂಡಿತತ್ರಯ, ಸಿದ್ಧರಾಮ, ಗುಳೂರು ಶಾಂತದೇವ, ಗುಮ್ಮಳಾಪುರದ ಶಾಂತೇಶ ಶಿವಪೂಜೆಯಾರ್ಯ, ಚಿಕ್ಕಬಸವಾಂಕ ಇವರುಗಳನ್ನು ಪರಿಪಿಡಿಯಿಂದ ಸ್ತುತಿಸಿದ್ದಾನೆ.

ಕವಿ ಮಲ್ಲಣಾರ್ಯನು ತನ್ನ ಎರಡನೆಯ ಗ್ರಂಥವಾದ 'ವೀರಶೈವಾಮೃತ ಪುರಾಣ'ವನ್ನು ಕ್ರಿ.ಶ. ೧೫೩೦ರಲ್ಲಿ ರಚಿಸಿದನು. ಈ ಕೃತಿಯು ವಾರ್ಧಕಷಟ್ಪದಿಯಲ್ಲಿದೆ. ಇದರಲ್ಲಿ ವೀರಶೈವ ಸಿದ್ಧಾಂತವು ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿದೆ. 'ವೇದ, ಆಗಮ, ಪುರಾಣೇತಿಹಾಸಗಳಿಂದ ವಾಕ್ಯ'ಗಳಂ ಸಾಕ್ಷಿಯೆಂದು ಅನುವಾದ ಮಾಡಲ್ಪಟ್ಟಿವೆ. ಶಿವನ ಇಪ್ಪತ್ತೈದು ಲೀಲೆಗಳು, ಪುರಾತನ ಮತ್ತು ನೂತನ ಶರಣ ಕಥೆಗಳು ಮುಂತಾದ ಅನೇಕ ವಿಷಯಗಳು ಈ ಗ್ರಂಥದಲ್ಲಿ ನಿರೂಪಿತವಾಗಿವೆ. ಶೀಲವಂತಾರ್ಯನ ಕರಜಾತನಾದ ಹಲಗೆಯಾರ್ಯನು ತನ್ನ ಶಿಷ್ಯ ಕೆಂಚವೀರನಿಗೆ ಬೋಧಿಸಿದ ಉಪದೇಶವನ್ನು ಪದ್ಯರೂಪವಾಗಿ ರಚಿಸು ಎಂದು ಹೇಳಲು ಅವನ ಆಜ್ಞಾನುಸಾರವಾಗಿ ತಾನು ಈ ಕೃತಿಯನ್ನು ರಚಿಸಿರುವುದಾಗಿ ಮಲ್ಲಣಾರ್ಯನು ಹೇಳುತ್ತಾನೆ. ಹಿಂದೆ ತಾನು ಸತ್ಯೇಂದ್ರಚೋಳನ ಕಥೆಯನ್ನು ನಿರೂಪಿಸಿದಂತೆಯೂ ಮತ್ತು ಪ್ರಕೃತಗ್ರಂಥದಲ್ಲಿ ಲಕ್ಕಣ್ಣದಂಡೇಶನ 'ಶಿವತತ್ವಚಿಂತಾಮಣಿ'ಯಿಂದ ನೂತನ ಶರಣರ ಕಥೆಗಳನ್ನು ಸಂಗ್ರಹಿಸಿರುವುದಾಗಿ ಕವಿಯು ಹೇಳುತ್ತಾನೆ. 'ಶಿವತತ್ವಚಿಂತಾಮಣಿ'ಯು ಸಿದ್ಧಾಂತಪ್ರಧಾನ ಗ್ರಂಥ. 'ವೀರಶೈವಾಮೃತಪುರಾಣ'ವು ಚರಿತ್ರಪ್ರಧಾನ ಗ್ರಂಥ. 'ವೀರಶೈವಾಮೃತಪುರಾಣ'ವು "ಬಹು ವಿಷಯ ಗರ್ಭಿತವಾದ ವೀರಶೈವಕೋಶ"ವೆಂದೂ ಮತ್ತು "ಇದರಲ್ಲಿಯ ಕವಿತಾಶಕ್ತಿ, ಪದ್ಯರಚನಾಶಕ್ತಿ, ಭಾಷಾಶೈಲಿಗಳು ಸತ್ಕವಿಗೆ ಶೋಭಿಸುವಷ್ಟು ಚೆನ್ನಾಗಿವೆಯೆಂದೂ ಹೇಳಬಹುದು."

ಸುಮಾರು ಇದೇ ಕಾಲದವನಾದ ವಿರುಪರಾಜನೆಂಬ ಕವಿಯು ಕ್ರಿ.ಶ.೧೫೧೯ರಲ್ಲಿ 'ತ್ರಿಭುವನತಿಲಕ'ವೆಂಬ ಗ್ರಂಥವನ್ನು ರಚಿಸಿದನು. ಈ ಕಾವ್ಯದಲ್ಲಿ ಅರವತ್ತುಮೂರು ಪುರಾತನರೊಳಗೊಬ್ಬನಾದ ಚೇರಮಾಂಕನೃಪನ ಕಥೆಯನ್ನು ಚಿತ್ರಿಸಲಾಗಿದೆ. ಗ್ರಂಥದಾದಿಯಲ್ಲಿ ಮಲ್ಲಿಕಾರ್ಜುನ ಸ್ತುತಿಯಿದೆ. ನಂತರ ಕವಿ ಪಾರ್ವತಿ, ನಂದಿ, ಷಣ್ಮುಖ, ಬಸವ, ಮಡಿವಾಳ, ಚನ್ನಬಸವೇಶ್ವರ, ಗಣೇಶ, ಸರಸ್ವತಿ ಇವರುಗಳನ್ನು ಸ್ತುತಿಸಿದ್ದಾನೆ. ಕ್ರಿ.ಶ. ಸುಮಾರು ೧೫೨೦ರಲ್ಲಿ ಪ್ರಭುಗನೆಂಬ ಕವಿಯು 'ಚೂಡನಾಸ್ಥಾನ', 'ವೈಭೋಗ', 'ರಾಜಾಸ್ಥಾನ'ವೆಂಬ ಗ್ರಂಥಗಳನ್ನು ರಚಿಸಿದನು. ಮೊದಲನೆಯ ಕೃತಿಯು ಚೂಜೆಯಲಿಂಗ, ಶೌಂಡನಾಥ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನದ ವರ್ಣನಾರೂಪವಾದ ಚಂಪೂ ಗ್ರಂಥ. ಪ್ರಾರಂಭದಲ್ಲಿ ಕವಿಯು ಶೌಂಡೇಶ್ವರನನ್ನು ಸ್ತುತಿಸಿ ಬಳಿಕ ಪಾರ್ವತಿಯನ್ನು ಮತ್ತು ಗಣಪತಿಯನ್ನು ಪ್ರಾರ್ಥಿಸಿದ್ದಾನೆ. ಎರಡನೆಯ ಗ್ರಂಥವು ವೈಭೋಗರಾಜ ಎಂದು ಕರೆಯಲ್ಪಡುವ ಈಶ್ವರನ ಆಸ್ಥಾನವರ್ಣನಾರೂಪವಾದ ಚಂಪೂ ಕಾವ್ಯ. ಕ್ರಿ.ಶ. ಸುಮಾರು ೧೫೨೫ರಲ್ಲಿ ಓಡುವಗಿರಿಯ ಎಂಬ ಕವಿಯು 'ಸಾನಂದಗಣೇಶ ಸಾಂಗತ್ಯ' ಮತ್ತು 'ಹರಿಶ್ಚಂದ್ರಸಾಂಗತ್ಯವೆಂಬ' ಗ್ರಂಥಗಳನ್ನು ರಚಿಸಿದನು. "ನಿರಯಾಧಿಪತಿಯ ಪಟ್ಟಣವ ಕೋಳ್ಕೊಂಡು ಕೈಲಾಸಕ್ಕೆ ಕೊಂಡೊಯ್ದ ಯತಿಸಾನಂದಚರಿತೆ"ಯು ಮೊದಲನೆಯ ಕಾವ್ಯದ ಕಥಾವಸ್ತುವೆಂದು ಕವಿಯು ಹೇಳಿದ್ದಾನೆ. ಎರಡನೆಯ ಕಾವ್ಯದಲ್ಲಿ ಹರಿಶ್ಚಂದ್ರನ ಕಥೆಯನ್ನು ನಿರೂಪಿಸಲಾಗಿದೆ.

ಚೇರಮಾಂಕನು ಕ್ರಿ.ಶ. ೧೫೨೬ರಲ್ಲಿ 'ಚೇರಮಕಾವ್ಯ'ವನ್ನು ರಚಿಸಿದನು. ಗುಬ್ಬಿಯ ಮಲ್ಲಣಾರ್ಯನು ಈ ಕವಿಯ ಗುರು. ಈ ಗ್ರಂಥವು ವಾರ್ಧಕಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಕ್ರಿ.ಶ. ೧೫೩೦ರಲ್ಲಿದ್ದ ಮುರಿಗೆಯ ಶಾಂತವೀರ ಕವಿಯು 'ಪ್ರಭುಲಿಂಗದ ಕಂದ', 'ವೈರಾಗ್ಯಷಟ್ಪದಿ', 'ಏಕೋನವಿಂಶತಿಪ್ರಬಂಧ'ವೆಂಬ ಗ್ರಂಥಗಳನ್ನು ಬರೆದಿದ್ದಾನೆ. 'ಪ್ರಭುಲಿಂಗಕಂದ'ದಲ್ಲಿ ೫೩ ಕಂದಗಳಿವೆ. ಇವು ಪ್ರಾಯಿಕವಾಗಿ "ರಾಜಲಿಂಗ ಪ್ರಭುವೇ" ಎಂದು ಮುಗಿಯುತ್ತವೆ. ಈ ಗ್ರಂಥದಲ್ಲಿ ಯೋಗಶಾಸ್ತ್ರಕ್ರಮದಿಂದ ಶಿವಪೂಜೆ ನಿರೂಪಿತವಾಗಿದೆ. ಈ ಗ್ರಂಥಕ್ಕೆ ಕ್ರಿ.ಶ. ೧೬೫೦ರಲ್ಲಿ ಪರ್ವತಶಿವಯೋಗಿಯು ವ್ಯಾಖ್ಯಾನವನ್ನು ಬರೆದಿದ್ದಾನೆ. 'ವೈರಾಗ್ಯಷಟ್ಪದಿ'ಯಲ್ಲಿ ನೀತಿ ವೇದಾಂತ ಬೋಧಕವಾದ ೧೦೧ ವಾರ್ಧಕಷಟ್ಪದಿಗಳಿವೆ. 'ಏಕೋನವಿಂಶತಿ ಪ್ರಬಂಧ'ದಲ್ಲಿ ೧೯ ಪದ್ಯಗಳಿರುವುದರಿಂದ ಈ ಹೆಸರು ಬಂದಂತೆ ತೋರುತ್ತದೆ. ಇದು ವೇದಾಂತಬೋಧಕವಾದ ಗ್ರಂಥ. ಸಂಪಾದನೆಯ ಚನ್ನಂಜಿದೇವನು ಕ್ರಿ.ಶ. ಸುಮಾರು ೧೫೩೦ರಲ್ಲಿ ವಚನಗಳ ಸಂಕಲನಗಳನ್ನು ಗ್ರಂಥರೂಪದಲ್ಲಿ ತಂದನು. ಇವನಿಂದ ಸಂಕಲಿತವಾದ ಗ್ರಂಥ

ಗಳಲ್ಲಿ ಆಚರಣೆಯ ಸಂಬಂಧದ ವಚನವು ೨೬೧ ವಚನಗಳನ್ನೂ, ಬಸವಸ್ತೋತ್ರದ ವಚನವು ೧೨೩ ವಚನಗಳನ್ನೂ ಮತ್ತು ಮಿಶ್ರಸ್ತೋತ್ರದ ವಚನವು ೧೦೮ ವಚನಗಳನ್ನೊಳಗೊಂಡಿವೆ. ಈ ವಚನಗಳೆಲ್ಲಾ ಇತರ ಗ್ರಂಥಗಳಿಂದ ಆರಿಸಿ ಜೋಡಿಸಿದವುಗಳು.

'ತ್ರಿಭುವನತಿಲಕ'ವೆಂಬ ಗ್ರಂಥವನ್ನು ರಚಿಸಿದ ವಿರುಪರಾಜನ ಮಗನಾದ ವೀರಭದ್ರರಾಜನು 'ವೀರಭದ್ರ ವಿಜಯ', 'ಪಾರ್ವತೀವಲ್ಲಭಶತಕ', 'ಉಮಾಮಹೇಶ್ವರಶತಕ', 'ಪ್ರಾಣನಾಥಶತಕ', 'ಶ್ರೀಕಂಠ ಸೋಮೇಶ್ವರ ಶತಕ' ಮತ್ತು 'ಕಂದಶತಕ' ಎಂಬ ಐದು ಶತಕಗಳನ್ನು ರಚಿಸಿದನು. ಇವನ ಕಾಲವು ಸುಮಾರು ಕ್ರಿ.ಶ. ೧೫೩೦. 'ವೀರಭದ್ರವಿಜಯ'ವು ಚಂಪೂ ಕಾವ್ಯ. ಇದರಲ್ಲಿ ವೀರೇಶನ ಚರಿತ್ರೆಯನ್ನು ವರ್ಣಿಸಲಾಗಿದೆ. ಗ್ರಂಥಾವ ತಾರದಲ್ಲಿ ವಿಶ್ವನಾಥಸ್ತುತಿ ಇದೆ. ನಂತರ ಕವಿಯು ಪಾರ್ವತಿ, ವೀರಭದ್ರ, ನಂದಿ, ಭೃಂಗಿ. ಗಣೇಶ, ಷಣ್ಮುಖ, ಸರಸ್ವತಿ ಇವರುಗಳನ್ನು ಕ್ರಮವಾಗಿ ಸ್ತುತಿಸಿದ್ದಾನೆ. ಇವನ ಬಂಧವು ಲಲಿತವಾಗಿಯೂ ಮತ್ತು ಹೃದಯಂಗಮವಾಗಿಯೂ ಇದೆ. ವೀರಭದ್ರರಾಜನ ೫ ಶತಕಗಳು ಶಿವಸ್ತುತಿರೂಪವಾಗಿಯೂ, ವೀರಶೈವಸಿದ್ಧಾಂತಬೋಧಕವಾಗಿಯೂ ಮತ್ತು ನೀತಿವೈರಾಗ್ಯಪ್ರತಿಪಾದಕವಾಗಿಯೂ ಇವೆ. ಸುಮಾರು ಇದೇ ಕಾಲದಲ್ಲಿದ್ದ ತೋಂಟಭೂಪಾಲನ ಮಗನಾದ ಇಮ್ಮಡಿ ತೋಂಟದಯ್ಯನು 'ವಜ್ರಬಾಹು ಚರಿತೆಯೆಂಬ' ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ 'ತೋಂಟದಯ್ಯನ ಕಾವ್ಯ' ಎಂಬ ಹೆಸರೂ ಇರುವಂತೆ ತೋರುತ್ತದೆ. ಇದನ್ನು ವಾರ್ಧಕಷಟ್ಪದಿಯಲ್ಲಿ ಬರೆಯ ಲಾಗಿದೆ. ಸಮಗ್ರ ಗ್ರಂಥ ಇನ್ನೂ ದೊರೆತಿಲ್ಲ. ಈ ಕೃತಿಯು "ವೀರಶೈವಸಂಸ್ಥಾಪನಾಚಾರ್ಯನೆನಿಸಿದ ಚಂದ್ರಸೇನಸುತ ವಜ್ರಬಾಹುವಿನ ಸದಮಲಾನಂದ ಸಚ್ಚಾರಿತ್ರಂ" ಎಂದು ಕವಿಯು ಹೇಳುತ್ತಾನೆ.

ನಾಗಭೂಷಣಾಚಾರ್ಯನ ಮಗನಾದ ಚನ್ನಬಸವಾಂಕನು ಸುಮಾರು ಕ್ರಿ.ಶ. ೧೫೫೦ರಲ್ಲಿ 'ಮಹಾದೇವಿಯಕ್ಕನ ಪುರಾಣ'ವನ್ನು ರಚಿಸಿದನು. ಮಹಾದೇವಿಯಕ್ಕನ ಚರಿತವನ್ನು ಹರೀಶ್ವರನು ರಗಳೆಯ ರೂಪದಲ್ಲಿ ಬರೆದಿರುವ ನಂದೂ ಅದನ್ನು ಷಟ್ಪದಿರೂಪದಲ್ಲಿ ಬರೆಯಬೇಕೆಂದು ಗುರುಬಸವನು ಹೇಳಿದುದರಿಂದ ತಾನು ಈ ಕೃತಿಯನ್ನು ರಚಿಸಿರುವುದಾಗಿ ಕವಿ ಈ ಕಾವ್ಯದ ರಚನೆಗೆ ಬಂದ ಗುರುಪ್ರೇರಣೆಯನ್ನು ವ್ಯಕ್ತಪಡಿಸುತ್ತಾನೆ. ಶಿವಶರಣೆ ಮಹಾ ದೇವಿಯಕ್ಕನ ಚರಿತ್ರೆಯು ಈ ಕಾವ್ಯದ ವಸ್ತು.

ಸುಮಾರು ಕ್ರಿ.ಶ. ೧೫೫೦ರಲ್ಲಿ ಸಿರಿಗಿರಿಯ ಸಿಂಹಾಸನಾಧಿಪತಿಯಾದ ಕುಮಾರ ಚನ್ನಬಸವನು 'ಬಸವ ಪುರಾಣದ ಪುರಾತನರ ಚರಿತೆ'ಯೆಂಬ ಗ್ರಂಥವನ್ನು ಬರೆದನು. ರುದ್ರಮುನಿಯ ಮಗನಾದ ಮುಕ್ತಿಮುನಿಯು ಸಿರಿಗಿರಿಯ ಸಿಂಹಾಸನಾಧಿಪತಿಯಾಗಿದ್ದನು. ಮಲೆ ರಾಜ್ಯವಲ್ಲಿ ಜೈನರು ವೀರೇಶನನ್ನು ಕಿತ್ತು ಬಿಸಾಡಿದರೆಂದು ಕೇಳಿ ಆ ಪರವಾದಿಗಳನ್ನು ಸಂಹರಿಸಲು ತನ್ನ ಶಿಷ್ಯನಾದ ದಿಗಂಬರ ಮುಕ್ತಿಮುನಿಯನ್ನು ಕಳುಹಿಸಲು ಅವನು ವೀರೇಶ್ವರ ದೇವರನ್ನು ಪುನಃ ಪ್ರತಿಷ್ಠೆಮಾಡಿ ಬಾಳೆಹಳ್ಳಿಯ ಸಿಂಹಾಸನಾಧಿಪತಿಯಾಗಿದ್ದನು. ಅವನು ಕಾಲವಾದ ಮೇಲೆ ಕುಮಾರ ಚನ್ನಬಸವೇಶ್ವರನು ಪಟ್ಟಕ್ಕೆ ಬಂದು ಶರಣಸಂಕುಲವನ್ನು ಪಾಲಿಸುತ್ತಿದ್ದನೆಂದು ಕ್ರಿ.ಶ. ೧೫೮೪ರಲ್ಲಿ ರಚಿತವಾದ ಚನ್ನಬಸವಪುರಾಣದಿಂದ ತಿಳಿದುಬರುತ್ತದೆ. 'ಬಸವಪುರಾಣ'ದಲ್ಲಿ (ಕ್ರಿ.ಶ. ೧೩೬೯) ಸಂಗೃಹೀತ ವಾಗಿರುವ ಪುರಾತನರ ಚರಿತ್ರವು ಈ ಕಾವ್ಯದಲ್ಲಿ ಉಪಕಥೆಗಳೊಡನೆ ವಿಸ್ತಾರವಾಗಿ ನಿರೂಪಿತವಾಗಿದೆ. ಈ ಕವಿಯ ಸಮಕಾಲೀನನಾದ ಲಿಂಗನು 'ಚೋಳರಾಜಸಾಂಗತ್ಯ'ವೆಂಬ ಗ್ರಂಥವನ್ನು ಬರೆದನು. ಇವನು ತಿಮ್ಮಣ್ಣ ಮಂತ್ರಿಯ ಮಗ. "ಕಡುಗಲಿ ಚೋಳ ನೃಪಾಲ। ಮೃಡಪದವಿಯ ನೆರೆ ಪಡೆದ ಕಥೆಯನು। ಪೊಡವಿಯರಿಯಲುಸಿರುವೆನು" ಎಂದು ಕವಿಯು ಕಾವ್ಯದ ವಸ್ತುವಿನ ಬಗೆಗೆ ಹೇಳುತ್ತಾನೆ.

ಕ್ರಿ.ಶ. ಸುಮಾರು ೧೫೫೦ರಲ್ಲಿ ಸಿರಿನಾಮಧೇಯನೆಂಬ ಕವಿಯು 'ಮಲ್ಲೇಶ್ವರಶತಕ'ವನ್ನು ರಚಿಸಿದನು. ಇದರಲ್ಲಿ ನೂರಾಹನ್ನೊಂದು ವೃತ್ತಗಳಿವೆ. ಈ ಗ್ರಂಥವು ಈಶ್ವರಸ್ತುತಿರೂಪವಾಗಿಯೂ ವೀರಶೈವಸಿದ್ಧಾಂತ ಬೋಧಕವಾಗಿಯೂ ಇದೆ. ಇದರಲ್ಲಿ ಗುರು, ಲಿಂಗ, ಜಂಗಮ, ಪಾದೋದಕ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ, ಪ್ರಸಾದ ಇವುಗಳ ಮಹಿಮೆ ವರ್ಣಿತವಾಗಿರುವುದರಿಂದ ಇದಕ್ಕೆ ಅಷ್ಟಾವರಣಸ್ತವ ಎಂಬ ಹೆಸರು ಕೂಡಾ ಇರುವಂತೆ ತೋರಿಬರುತ್ತದೆ. ಇದೇ ಕಾಲದಲ್ಲಿದ್ದ ಉಜ್ಜನೀಶನು 'ವೀರಶೈವಸಿದ್ಧಾಂತಶಿಖಾಮಣಿ'ಗೂ ಮಗ್ಗೆಯಮಾಯಿ ದೇವನ 'ವಿಶೇಷಾರ್ಥಪ್ರಕಾಶಿಕೆ'ಗೂ ಕನ್ನಡದಲ್ಲಿ ಟೀಕೆಯನ್ನು ಬರೆದಿರುವನು. ಇವನ ಸಮಕಾಲೀನನಾದ ಶ್ರೀಧರಾಂಕನೆಂಬುವನು ನೀಲಕಂಠನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರಸಂಗ್ರಹ'ಕ್ಕೆ ಕನ್ನಡದಲ್ಲಿ ವ್ಯಾಖ್ಯಾನ ವನ್ನು ಬರೆದಿರುವನು. ಕ್ರಿ.ಶ. ಸುಮಾರು ೧೫೫೦ರಲ್ಲಿ ಪೌರಾಣಾರ್ಯನ ಮಗನಾದ ಬಸವಾಂಕನು 'ಉದ್ಭಟದೇವ

ಚರಿತೆ'ಯನ್ನು ರಚಿಸಿದನು. ಘೂರ್ಜರದೇವನ ಅಥವಾ ಉದ್ಭಟದೇವನ ಕಥೆಯು ಈ ಗ್ರಂಥದ ವಸ್ತು. ಇದೇ ಕಥೆಯನ್ನು ವಸ್ತುವಾಗಿಟ್ಟುಕೊಂಡು ಮೂರು ಶತಮಾನಗಳ ಹಿಂದೆ (ಕ್ರಿ.ಶ. ೧೨೨೨) ಸೋಮರಾಜನು 'ಉದ್ಭಟ ಕಾವ್ಯ'ವನ್ನು ರಚಿಸಿದ್ದನೆಂಬ ಅಂಶವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಗುರುಲಿಂಗವಿಭುವೆಂಬ ಮತ್ತೊಬ್ಬ ಪ್ರಸಿದ್ಧ ಕವಿಯು 'ಭಿಕ್ಷಾಟನಚರಿತೆ' ಎಂಬ ಗ್ರಂಥವನ್ನು ರಚಿಸಿದನು. "ಕವಿರಾಯ" ಎಂದೂ "ಆಶುಮಧುರಂ ಚಿತ್ರ ವಿಸ್ತಾರ ವೆಂಬೆಂಬ ನಾಲ್ಕು ಬಗೆಯ ವಿರಚಿಸಬಲ್ಲ ವಸ್ತುಕಕವೀಂದ್ರರ ವರ್ಣಕಕವೀಶ್ವರರ ಕರ್ಣಾಭರಣ" ಎಂದು ಕವಿಯು ತನ್ನ ಬಗೆಗೆ ಹೇಳಿಕೊಂಡಿರುವನು. ಈ ಗ್ರಂಥವು ವಾರ್ಧಕಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಶಿವನು ದ್ವಾರಾವತಿಗೆ ಹೋಗಿ ಭಿಕ್ಷಾಟನವನ್ನು ಮಾಡಿ ಭಿಕ್ಷಾಪಾತ್ರೆಯಾದ ಅಜಕಪಾಲವನ್ನು ತುಂಬುವಂತೆ ಕೃಷ್ಣನಿಗೆ ಹೇಳಲು, ಆತನು ಅದನ್ನು ತನ್ನ ತಲೆಯ ನೆತ್ತರಿನಿಂದ ತುಂಬಲಾರದೆ ಭಾರತ ಯುದ್ಧವನ್ನುಂಟುಮಾಡಿ ಅಲ್ಲಿಯ ರಕ್ತಪ್ರವಾಹದಿಂದ ತುಂಬಿದನೆಂಬುದೇ ಈ ಕಾವ್ಯದ ಕಥಾಸಾರ. ಗ್ರಂಥಾವತಾರದಲ್ಲಿ ಕವಿ ನಂದಿಗಿರೀಶನನ್ನು ಸ್ತುತಿಸಿ ಬಳಿಕ ಬಸವೇಶ್ವರ. ಚನ್ನಬಸವೇಶ್ವರ, ಅಲ್ಲಮಪ್ರಭು. ರೇವಣಾರ್ಯ, ಮಡಿವಾಳ ಮಾಚಿದೇವ, ಸಿದ್ಧರಾಮ, ವಾದಿರಾಜ ಇವರುಗಳನ್ನು ಸ್ಮರಿಸಿದ್ದಾನೆ. ಈ ಗ್ರಂಥಕ್ಕೆ ಒಂದು ಕನ್ನಡ ವ್ಯಾಖ್ಯಾನವಿದೆ. ಇದೇ ಕಾಲದಲ್ಲಿ ಕಿಕ್ಕೇರಿಯಾರಾಧ್ಯ ನಂಜುಂಡನು 'ಭೈರವೇಶ್ವರಕಾವ್ಯ'ವನ್ನು ಬರೆದಿದ್ದಾನೆ. ಇವನ ಸ್ಥಳ ಕಿಕ್ಕೇರಿ. ಈ ಗ್ರಂಥವನ್ನು ಕವಿಯು ಸಾಂಗತ್ಯದಲ್ಲಿ ಬರೆದಿರುವನು. ಇದರಲ್ಲಿ "ಸಾಸಲಪುರದ ಸೋಮೇಶನುನ್ನತ ಭೈರವೇಶನಿಗೊಲಿದು ಕೈಲಾಸವಾಸಕೊಯ್ದ ಕಥೆ" ಹೇಳಿದೆ. ಈ ಕೃತಿಗೆ ವಿವರಣರೂಪವಾಗಿ ಶಾಂತಲಿಂಗದೇಶಿಕನು ಕ್ರಿ.ಶ. ೧೬೭೨ರಲ್ಲಿ 'ಭೈರವೇಶ್ವರಕಾವ್ಯಕಥಾಸೂತ್ರರತ್ನಾಕರ' ಎಂಬ ಗ್ರಂಥವನ್ನು ರಚಿಸಿದನು. ಸುಮಾರು ಇದೇ ಕಾಲದಲ್ಲಿದ್ದ ಬಸವನೆಂಬ ಮತ್ತೊಬ್ಬ ಕವಿಯು 'ಚಿಕ್ಕಯ್ಯನ ಸಾಂಗತ್ಯ'ವೆಂಬ ಗ್ರಂಥವನ್ನು ರಚಿಸಿದನು. ಇವನಿಗೆ ಚನ್ನಬಸವನೆಂಬ ಹೆಸರೂ ಇದ್ದಂತೆ ತಿಳಿಯುತ್ತದೆ. ಇವನ ಗುರು ಕುಪ್ಪಸಗಂತೆಯ ಗಂಗಾಧರಪ್ರಭು. ಈ ಗ್ರಂಥಕ್ಕೆ 'ಭಕ್ತಿಮೋಹನಸಾರ' ಎಂಬ ಹೆಸರಿದ್ದಿತು. "ಈ ಕೃತಿ ಚೋರಚಿಕ್ಕಯ್ಯನು ಬಸವನ। ತಾ ಕೊಲ್ವೆನೆಂದೈತಂದು। ವ್ಯಾಕುಲರಹಿತನಾಗಿಯೆ ಮುಕುತಿಯ ಪಡೆ। ದಾ ಕಥೆಯನು ಬಣ್ಣಿಪುದು।" ಎಂದು ಕವಿಯು ತನ್ನ ಕೃತಿಯ ಬಗೆಗೆ ಹೇಳಿರುವನು.

ಕ್ರಿ. ಶ. ೧೫೫೪ರಲ್ಲಿ ಸದಾಶಿವಯೋಗಿಯು 'ರಾಮನಾಥವಿಲಾಸ'ವೆಂಬ ಗ್ರಂಥವನ್ನು ಬರೆದನು. ಇದಕ್ಕೆ 'ರಾಮನಾಥಗುರುಚರಿತೆ' ಎಂಬ ಹೆಸರೂ ಇದೆ. ಇದು ಚಂಪೂರೂಪವಾಗಿದೆ. "ಹೊಯಿಸಳ ದೇಶದೊಳ್ ಮುದ್ರಾಪುರದೊಳ್ ಶ್ರೀ ರಾಮೇಶ್ವರಲಿಂಗಮೂರ್ತಿಯಿಂ ವೀರಶೈವದೀಕ್ಷೆಯಂ ಪಡೆದು ಅದು ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಆ ರಾಮೇಶ್ವರಲಿಂಗಮಂ ಸಾಕ್ಷಿಯಂ ನುಡಿಯಿಸಿ ಮೆರೆದು ಭೂಲೋಕದೊಳ್ ವೀರಶೈವಮತಮಂ ವೇದಾಗಮಶಾಸ್ತ್ರಪುರಾಣಂಗಳೊಳ್ ಉತ್ತರಮೆಂಬುದಂ ಪ್ರಾಚುರ್ಯಂಗೆಯ್ದ ರಾಮನಾಥಾಚಾರ್ಯ"ರ ಚರಿತ್ರವು ಹೇಳಲ್ಪಟ್ಟಿದೆ. ಕ್ರಿ.ಶ. ಸುಮಾರು ೧೫೬೦ರಲ್ಲಿ ವಿರಕ್ತತೋಂಟದಾರ್ಯನು 'ಸಿದ್ಧೇಶ್ವರ ಪುರಾಣ', 'ಪಾಲ್ಕುರಿಕೆ ಸೋಮೇಶ್ವರ ಪುರಾಣ', 'ಕರ್ಣಾಟಕ ಶಬ್ದಮಂಜರಿ', 'ಮನೋವಿಜಯತಾತ್ಪರ್ಯ' ಮತ್ತು 'ಮಗ್ಗೆಯಮಾಯಿದೇವಶತಕತ್ರಯ ಟೀಕೆ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ತಾನು ಬಿಜ್ಜಾವರ ಪುರಾಧೀಶ ತೋಂಟದ ಸಿದ್ಧಲಿಂಗ ಭೂಪಾಲಕನಿಂದ ಪೂಜಿತನಾದವನೆಂದು ಮತ್ತು ಕಾವೇರಿ ಹೇಮಾವತಿಗಳ ಮಧ್ಯದೇಶದೊಳಗಿರುವ ನಂದಿಯ ಪುರದ ಸಿಂಹಾಸನಾಧಿಪ ಚನ್ನನಂಜೇಶನ ಕರಜಾತನೆಂದು ಕವಿಯು ತನ್ನ ಬಗೆಗೆ ತಿಳಿಸುತ್ತಾನೆ. 'ಸಿದ್ಧೇಶ್ವರ ಪುರಾಣ'ವು ವಾರ್ಧಕಷಟ್ಪದಿಯಲ್ಲಿದೆ. ನಿರಂಜನಗಣೇಶ್ವರನ ಅಪರಾವತಾರವಾದ ತೋಂಟದ ಸಿದ್ಧಲಿಂಗಯತಿಯ ಚರಿತೆಯು ಈ ಗ್ರಂಥದ ವಸ್ತು. 'ಪಾಲ್ಕುರಿಕೆ ಸೋಮೇಶ್ವರ ಪುರಾಣ'ವು ಮೊದಲಿನ ಗ್ರಂಥದಂತೆ ವಾರ್ಧಕಷಟ್ಪದಿಯಲ್ಲಿದೆ. ಭೃಂಗಿಯ ಅಪರಾವತಾರವಾದ 'ಪಾಲ್ಕುರಿಕೆ ಸೋಮೇಶ್ವರನ ಚರಿತ್ರೆ'ಯು ಈ ಕೃತಿಯಲ್ಲಿ ನಿರೂಪಿತವಾಗಿದೆ. 'ಮನೋವಿಜಯತಾತ್ಪರ್ಯ'ವು ಗುರುಬಸವನ (ಸು. ೧೪೩೦) 'ಮನೋವಿಜಯಕಾವ್ಯ'ದ ವ್ಯಾಖ್ಯಾನ ಗ್ರಂಥವಾಗಿದೆ. ಇದಕ್ಕೆ 'ಚಂದ್ರಿಕೆ' ಎಂದು ಹೆಸರು. ಕೊನೆಯದಾದ 'ಮಗ್ಗೆಯಮಾಯಿದೇವಶತಕತ್ರಯ' ಟೀಕೆಯು ಮಗ್ಗೆಯಮಾಯಿದೇವನಿಂದ ರಚಿತವಾದ 'ಐಪುರೀಶ್ವರಶತಕ', 'ಶಿವಾಧವಶತಕ', 'ಶಿವಾವಲ್ಲಭಶತಕ' ಎಂಬ ಮೂರು ಶತಕಗಳ ವ್ಯಾಖ್ಯಾನ ಗ್ರಂಥ. ಇದೇ ಕಾಲದಲ್ಲಿದ್ದ ಮುಪ್ಪಿನ ದೇಶಿಕೇಂದ್ರನೆಂಬ ಕವಿಯು 'ರಾಜೇಂದ್ರವಿಜಯ'ವೆಂಬ ಗ್ರಂಥವನ್ನು ರಚಿಸಿದನು. ಇದರಲ್ಲಿ ಮಲಪ್ರಹಾರಿಯ ತೀರದಲ್ಲಿರುವ ಹಮ್ಮಿರಪುರ ಅಥವಾ ಪಟ್ಟಶಿಲಾಪುರ (ಪಟ್ಟದಕಲ್ಲು)ವೆಂಬ ನಗರಕ್ಕೆ ಅಧಿಪತಿಯಾದ ತ್ರೈಲೋಕ್ಯಚೂಡಾಮಣಿಯ ಪುತ್ರ ಶಿವಶರಣ ರಾಜೇಂದ್ರಹಮ್ಮಿರನ ಚರಿತ್ರವು ನಿರೂಪಿತವಾಗಿದೆ. ಕ್ರಿ.ಶ. ಸುಮಾರು ೧೫೬೦ರಲ್ಲಿ ಮಹಾಂತ

ಸ್ವಾಮಿ ಎಂಬ ಕವಿಯು ಮುರಿಗೆಯ ಶಾಂತವೀರನ (ಕ್ರಿ.ಶ. ೧೫೬೦) ಸ್ತುತಿರೂಪವಾದ ಒಂದು ಷಟ್ಪದಿ ಗ್ರಂಥವನ್ನು ಬರೆದಿದ್ದಾನೆ.

ಕ್ರಿ.ಶ. ಸುಮಾರು ೧೫೬೦ರಲ್ಲಿ ಚನ್ನಮಲ್ಲಿಕಾರ್ಜುನನೆಂಬ ಕವಿಯು 'ಶಿವಮಹಿಮಾಶತಕ' ಮತ್ತು 'ಗುರುಸ್ತೋತ್ರದ ಟೀಕೆ' ಎಂಬ ಕೃತಿಗಳನ್ನು ರಚಿಸಿದನು. ಮೊದಲನೆಯ ಗ್ರಂಥವು ಶಿವಪಾರಮ್ಯವನ್ನು ಪ್ರತಿಪಾದಿಸುವ ಕೃತಿ. ಇದಕ್ಕೆ 'ಚನ್ನಮಲ್ಲೇಶ್ವರಶತಕ'ವೆಂಬ ಹೆಸರೂ ಇದೆ. ಮೂಲ ಗ್ರಂಥವಾದ ಗುರುಸ್ತೋತ್ರವು ಶೀಲವಂತಯ್ಯನಿಂದ (ಸುಮಾರು ೧೧೬೦) ರಚಿತವಾದುದು. ಇದಕ್ಕೆ 'ಆತ್ಮಲಿಂಗಪ್ರಣವಸಂಯೋಗಸ್ಥಲದ ತ್ರಿವಿಧಿ' ಎಂಬ ಹೆಸರೂ ಇದೆ. ಈ ಟೀಕೆಯನ್ನು "ಗುರುಶಾಂತಲಿಂಗನಡಿದಾವರೆಯ ಶಿರಸಾವಹಿಸಿಯುಸಿರ್ದೆಂ" ಎಂದು ಕವಿ ಹೇಳುತ್ತಾನೆ. 'ಪಾತುಲತಂತ್ರಟೀಕೆ' ಮತ್ತು 'ಗಣಭಾಷ್ಯ ರತ್ನಮಾಲೆ' ಎಂಬ ಗ್ರಂಥಗಳನ್ನು ಬರೆದ ಗುಬ್ಬಿಯ ಮಲ್ಲಣನ (ಕ್ರಿ.ಶ. ೧೪೭೫) ಪೌತ್ರನಾದ 'ಬಸವಪುರಾಣ'ದ ಮಲ್ಲಣಾರ್ಯನ (ಕ್ರಿ.ಶ. ೧೫೧೩) ಮಗನಾದ ಶಾಂತೇಶನು (ಕ್ರಿ.ಶ. ೧೫೬೧) 'ತೋಂಟದ ಸಿದ್ಧೇಶ್ವರಪುರಾಣ'ವನ್ನು ರಚಿಸಿದನು. ಈ ಕೃತಿಯು ಭಾಮಿನೀಷಟ್ಪದಿಯಲ್ಲಿದೆ. ಇದರಲ್ಲಿ ತೋಂಟದ ಸಿದ್ಧಲಿಂಗಯತಿಯ ಚರಿತ್ರೆಯು ನಿರೂಪಿತವಾಗಿದೆ. ಈ ಯತಿ ಹರದನಹಳ್ಳಿಯ ಗೋಸಲ ಚನ್ನಬಸವೇಶ್ವರನ ಶಿಷ್ಯನು. ಶಿವಗಂಗೆಗೆ ಒಂದು ಕಗ್ಗೆರೆಯ ಸಮೀಪದಲ್ಲಿರುವ ನಾಗಿಣೀ ನದಿಯ ತೀರದಲ್ಲಿ ತೋಂಟದೊಳಗೆ ಶಿವಯೋಗದಲ್ಲಿದ್ದನು. ಶಿಷ್ಯನಾದ ಚಂದ್ರಶೇಖರನಿಗೆ ಭುವನಕೋಶ, ಧರ್ಮಾಧರ್ಮ ವಿಚಾರ, ಶಿವನ ಪಂಚವಿಂಶತಿಲೀಲೆಗಳು, ಷಟ್‌ಸ್ಥಲಕ್ರಮ ಮುಂತಾದ ವಿಷಯಗಳನ್ನು ಬೋಧಿಸಿದನು. ಚಂದ್ರಶೇಖರನು ತಾನು ಕೇಳಿದ ಬೋಧೆಯನ್ನು ಸಾಂಗವಾಗಿ ಕಾವ್ಯದಲ್ಲಿ ಹೇಳಬೇಕೆಂದು ಬೆಸೆಸಲು ತಾನು ಅವರ ಮೇರೆಗೆ ಬರೆದುದಾಗಿ ಕವಿಯು ಹೇಳುತ್ತಾನೆ.

ಸುಮಾರು ಕ್ರಿ.ಶ. ೧೫೬೫ರಲ್ಲಿ ಎಳೆಮುಲೆಯ ಗುರುಶಾಂತದೇವನು 'ಶರಣಸ್ತೋತ್ರದ ವಚನ', ಲಿಂಗವಿಕಳಾವಸ್ಥೆಯ ವಚನ', 'ಷಟ್‌ಸ್ಥಲಸ್ತೋತ್ರದ ವಚನ', 'ಅಷ್ಟಾವರಣಸ್ತೋತ್ರದ ವಚನ' ಇವುಗಳನ್ನು ಸಂಕಲನಗೊಳಿಸಿದುದಾಗಿ ತಿಳಿಯುತ್ತದೆ. ಕ್ರಿ.ಶ. ೧೫೬೮ರಲ್ಲಿ ಪರ್ವತದೇವನು 'ನನ್ನಯ್ಯಗಳ ಚಾರಿತ್ರ'ವನ್ನು ರಚಿಸಿದನು. ಈ ಕೃತಿಯು ಸಾಂಗತ್ಯದಲ್ಲಿದೆ. ಇದರಲ್ಲಿ ಬಸವೇಶ್ವರನ ಸಮಕಾಲೀನನಾದ ನನ್ನಯ್ಯನೆಂಬ ಶಿವಭಕ್ತನ ಚರಿತ್ರೆಯನ್ನು ಚಿತ್ರಿಸಲಾಗಿದೆ. ಈ ಗ್ರಂಥವು ಭಕ್ತಿಯಾಗರ, ಕೈಲಾಸಸೋಪಾನ, ಪುಣ್ಯಜ್ಞಾನದುದಯ, ಮುಕ್ತಿಯ ಪದ ಎಂದು ಕವಿ ಹೇಳುತ್ತಾನೆ. ಕ್ರಿ.ಶ. ಸುಮಾರು ೧೫೮೦ರಲ್ಲಿ ಅದೃಶ್ಯ ಕವಿಯು 'ಪ್ರೌಢರಾಯನ ಕಾವ್ಯ'ವನ್ನು ಬರೆದಿದ್ದಾನೆ. ಈ ಕೃತಿಯು ವಾರ್ಧಕಷಟ್ಪದಿಯಲ್ಲಿದೆ. ವಿಜಯನಗರದ ಪ್ರೌಢರಾಯನಿಗೆ (೧೪೧೯-೧೪೪೬) ಅವನ ಮಂತ್ರಿ ಜಕ್ಕಣಾಚಾರ್ಯನು ಹೇಳಿದ ಶಿವಶರಣರ ಕಥೆಯ ಸಾರವನ್ನು ತಾನು ಈ ಗ್ರಂಥರೂಪದಲ್ಲಿ ಬರೆದಿರುವುದಾಗಿ ಕವಿಯು ತಿಳಿಸುತ್ತಾನೆ.

ವಿಜಯನಗರಸಾಮ್ರಾಜ್ಯದ ವೈಭವವು ಅಸ್ತಂಗತವಾಗುತ್ತಿದ್ದ ಕಾಲಕ್ಕೆ ವಿರೂಪಾಕ್ಷಪಂಡಿತನು. ಕ್ರಿ.ಶ. ಸುಮಾರು ೧೫೮೪ರಲ್ಲಿ 'ಚನ್ನಬಸವಪುರಾಣ'ವೆಂಬ ಬೃಹತ್ಕಾವ್ಯವನ್ನು ರಚಿಸಿದನು. "ಸಕಲಾಗಮಪುರಾಣಕೋವಿದಂ, ಸರಸಕರ್ಣಾಟಾದಿಭಾಷಾವಿಶಾರದಂ, ಪರಕವಿಪ್ರಕರಮಾನಸರಾಜಹಂಸಂ. ಅಸುಹೃತ್ಕವಿಪ್ರತತಿವಾರ್ಧಿವಡಬಂ, ಪರಕವಿಯ ನಾಲಗೆ ಕಿವಿ ಮನಂಗಳಂ ಸೆಳೆವವಂ" ಎಂದು ಕವಿ ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ. ಈ ಗ್ರಂಥದಲ್ಲಿ ಬಸವೇಶ್ವರನ ಸೋದರಿಯ ಮಗನಾದ ಚನ್ನಬಸವನ ಚರಿತೆಯು ವರ್ಣಿತವಾಗಿದೆ. ಅಲ್ಲದೆ ಶಿವಲೀಲಾ ಕಥೆಗಳು, ಹಲವು ಶರಣರ ದಿವ್ಯಚರಿತೆ, ವೀರಶೈವಸಿದ್ಧಾಂತ ಸಂಪ್ರದಾಯಗಳು ಇತ್ಯಾದಿ ನಾನಾ ವಿಷಯಗಳಿಂದ ಕೂಡಿದ ಈ ಗ್ರಂಥವು ವೀರಶೈವ ಧರ್ಮದ ಕೈಪಿಡಿಯಾಗಿದೆ.

೧೫೮೭ರಲ್ಲಿ ಹುಚ್ಚಣ್ಣನೆಂಬುವನು 'ಗಣಭಾಷ್ಯ ರತ್ನಮಾಲೆ' ಎಂಬ ಗ್ರಂಥದ ಪ್ರತಿಯನ್ನು ಬರೆದನು. ಕ್ರಿ.ಶ. ಸುಮಾರು ೧೬೫೦ರಲ್ಲಿ ಇಮ್ಮಡಿ ಮುರಿಗೆಯಸ್ವಾಮಿಯು ಹಲವು ಪದ್ಯಗಳನ್ನು ರಚಿಸಿದನು. ಇವನಿಗೆ ಗುರುಸಿದ್ಧನೆಂಬ ಹೆಸರೂ ಇದ್ದಿತು. ಇವನು 'ಹಾಲಾಸ್ಯಪುರಾಣ'ವೆಂಬ ಚಂಪೂಗ್ರಂಥವನ್ನು ಮತ್ತು 'ದೇವೀಸ್ತೋತ್ರ'ವೆಂಬ ಕೃತಿಯನ್ನು ರಚಿಸಿರುವನು. ಕ್ರಿ.ಶ. ೧೬೫೩ರಲ್ಲಿ ಬಿಜ್ಜವರ ಪುರಾಧೀಶ್ವರ ಇಮ್ಮಡಿ ಚಿಕ್ಕಭೂಪಾಲನ ಆಶ್ರಯದಲ್ಲಿ ಮಲ್ಲಿಕಾರ್ಜುನನೆಂಬ ಕವಿಯು ಶಂಕರಕವಿಕೃತ 'ಬಸವಪುರಾಣ' ಮತ್ತು ಗುರುರಾಜಕೃತ 'ಪಂಡಿತಾರಾಧ್ಯಚಾರಿತ್ರ' ಎಂಬೆರಡು ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ.

ಕ್ರಿ.ಶ. ಸುಮಾರು ೧೭೦೦ರಲ್ಲಿ ಉತ್ತರದೇಶದ ಬಸವಲಿಂಗದೇವನೆಂಬ ಕವಿಯು 'ಬಸವೇಶ್ವರಪುರಾಣದ ಕಥಾಸಾಗರ', 'ಭೈರವೇಶ್ವರ ಕಾವ್ಯದ ಕಥಾಸಾಗರ' ಉಚಿತ ಕಥೆಗಳು ಎಂಬ ಕೃತಿಗಳನ್ನು ರಚಿಸಿರುವನು. ಮೊದಲನೆಯ ಗ್ರಂಥದಲ್ಲಿ ೪೬೪ ಕಥೆಗಳಿವೆ. ಎರಡನೆಯದರಲ್ಲಿ ೩೧೬ ಕಥೆಗಳಿವೆ. ಕೊನೆಯದರಲ್ಲಿ ೭೪ ಕಥೆಗಳಿವೆ. ಇದೇ ಕಾಲ

ವಲ್ಲಿದ್ದ ಸಿದ್ಧಲಿಂಗಶಿವಯೋಗಿಯು 'ಭೈರವೇಶ್ವರಪುರಾಣ'ವನ್ನು ಬರೆದಿದ್ದಾನೆ. ಹಿಂದೆ ಸಂಜಯ್ಯನು ವರ್ಣಕವಾಗಿ ಹೇಳಿದ್ದ ಈ ಕಥೆಯನ್ನು ತಾನು ವಸ್ತುಕವಾಗಿ ರಚಿಸಿದಂತೆ ಕವಿಯು ಹೇಳುತ್ತಾನೆ. ಇವನು ಹೇಳುವ ಸಂಜಯನು. 'ಭೈರವೇಶ್ವರಕಾವ್ಯ'ವನ್ನು ಸುಮಾರು ೧೫೫೦ರಲ್ಲಿ ಸಾಂಗತ್ಯದಲ್ಲಿ ಬರೆದಿರುವ ಕಿಕ್ಕೇರಿಯಾರಾಧ್ಯ ನಂಜುಂಡನಾಗಿರ ಬೇಕೆಂದು ಊಹಿಸಲಾಗಿದೆ. ಇದಕ್ಕೆ 'ರಾಜೇಂದ್ರವಿಜಯಪುರಾಣ' ಎಂಬ ನಾಮಾಂತರವೂ ಇದೆ. ಈ ಕೃತಿಯಲ್ಲಿ ಶಿವಭಕ್ತನಾದ ಭೈರವರಾಜನ ಕಥೆಯು ಚಿತ್ರಿತವಾಗಿದೆ. ಈ ಕವಿಯ ಸಮಕಾಲೀನನಾದ ಸಂಪಾದನೆಯ ಸಿದ್ಧ ವೀರಣಾಚಾರ್ಯನೆಂಬುವನು 'ಆಚರಣೆಯ ಸಂಬಂಧದ ವಚನ'. 'ಲಿಂಗಸ್ತೋತ್ರದ ವಚನ'. 'ಮಿಶ್ರಸ್ತೋತ್ರ'. 'ಸರ್ವಜ್ಞಮೂರ್ತಿಯ ತ್ರಿವಿಧಿ', 'ಪಾದಸ್ತೋತ್ರ'ವೆಂಬ ಸಂಕಲನಗ್ರಂಥಗಳನ್ನು ಬೆಳಕಿಗೆ ತಂದನು. ಈ ವಚನಗಳು ಇತರ ಗ್ರಂಥಗಳಿಂದ ಆರಿಸಿ ಜೋಡಿಸಿದವುಗಳಾಗಿವೆ. ಇದೇ ಕಾಲದಲ್ಲಿದ್ದ ಮತ್ತೊಬ್ಬ ಕವಿ ಸಂಗನಬಸವೇಶ್ವರ ನೆಂಬುವನು 'ರಥೋದ್ಧರಣೆವಾಕ್ಯ'ವನ್ನು ಬರೆದಿದ್ದಾನೆ. ಇದು ವೇದಾಂತ ಬೋಧಕವಾಗಿದೆ. ದೇಹವನ್ನು ರಥಕ್ಕೆ ಹೋಲಿಸಿದಂತೆ ತೋರುತ್ತದೆ. ಅಣ್ಣಾಜಿಯೆಂಬ ಮಗನೊಬ್ಬ ಕವಿಯಿದ್ದನು. ಇವನು 'ಸೌಂದರವಿಳಾಸ'ವೆಂಬ ಕೃತಿ ಯನ್ನು ರಚಿಸಿದ್ದಾನೆ. ಇದನ್ನು ವಾರ್ಧಕಷಟ್ಪದಿಯಲ್ಲಿ ಬರೆಯಲಾಗಿದೆ. ಅರವತ್ತುಮೂರು ಪುರಾತನರೊಳಗೊಬ್ಬ ನಾದ ಸೌಂದರೇಶ ಅಥವ ನಂಬಿಯಣ್ಣ ಎಂಬ ಶಿವಭಕ್ತನ ಚರಿತ್ರೆಯು ಈ ಗ್ರಂಥದಲ್ಲಿ ವರ್ಣಿತವಾಗಿದೆ.

ಕ್ರಿ.ಶ. ಸುಮಾರು ೧೬೦೦ರಲ್ಲಿ ಬಸವೇಶನೆಂಬ ಕವಿಯು 'ಏಕೋತ್ತರಶತಸ್ಥಲ'ವೆಂಬ ಗ್ರಂಥವನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದನು. ಈ ಏಕೋತ್ತರ ಶತಸ್ಥಲವನ್ನು ಮೊದಲು ಶಿವನು ಪಾರ್ವತಿಗೂ. ಬಸವೇಶ್ವರನು ಚನ್ನಬಸವೇಶ್ವರಾದಿಗಳಿಗೂ ಹೇಳಿದಂತೆಯೂ ಅದನ್ನೇ ಕವಿ ಸದ್ಭಕ್ತಜನಕರಿವಂತೆ ನಿರೂಪಿಸಿರುವುದಾಗಿ ಹೇಳುತ್ತಾನೆ. ಮಲ್ಲಿಕಾರ್ಜುನನೆಂಬ ಕವಿಯು 'ಸಹಸ್ರಗಣನಾಮ'ವನ್ನು ಬರೆದಿದ್ದಾನೆ. ಹಿಂದೆ ಪಾಲ್ಕುರಿಕೆ ಸೋಮನಾಥನು ರಚಿಸಿದ 'ಸಹಸ್ರಗಣನಾಮ'ವನ್ನು ತಾನು ವಿಸ್ತರಿಸಿದುದಾಗಿ ಕವಿ ಹೇಳುತ್ತಾನೆ. ಇದೇ ಕಾಲದಲ್ಲಿ ವಿರೂಪಾಕ್ಷನೆಂಬುವನು 'ಲಿಂಗಾರ್ಚನ ರಗಳೆ' ಎಂಬ ಕೃತಿಯನ್ನು ರಚಿಸಿದನು. ಬಸವೇಶನೆಂಬ ಮತ್ತೊಬ್ಬ ಕವಿಯು 'ಸುಜ್ಞಾನಚಿಂತಾಮಣಿ' ಎಂಬ ಗ್ರಂಥವನ್ನು ರಚಿಸಿದನು. ಇವನ ಪಿತಾಮಹ ಹೊಟ್ಟೆಯ ಈಶ್ವರಯ್ಯ. ತಂದೆ ಗಿರಿನಾಥ. ಇವನ ಗ್ರಂಥವು ಭಾಮಿನೀಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೇದಾಂತವು ಬೋಧಿಸಲ್ಪಟ್ಟಿದೆ. "ಶಿವನ ಸಂಬೋಧೆಯನು ಪೇಳುವೆನು" ಎಂದು ಕವಿಯು ಹೇಳುತ್ತಾನೆ. ಗ್ರಂಥಾವತಾರದಲ್ಲಿ ಹಂಪೆಯ ವಿರೂಪಾಕ್ಷನ ಸ್ತುತಿಯಿದೆ. ಕಂಬಾಳ ಶಾಂತಮಲ್ಲೇಶನು 'ಗಣವಚನರತ್ನಾವಳಿ' ಎಂಬ ವಚನಗ್ರಂಥವನ್ನು ರಚಿಸಿದನು. ಇದೊಂದು ಪುರಾತನರ ವಚನಗಳ ಸಂಗ್ರಹ.

ಕ್ರಿ.ಶ. ೧೬೦೬ರಲ್ಲಿ ಹರೀಶ್ವರನು 'ಪ್ರಭುದೇವರ ಪುರಾಣ'ವೆಂಬ ಷಟ್ಪದೀಕಾವ್ಯವನ್ನು ರಚಿಸಿದನು. ಇವನು ತೋಂಟದಾಚಾರ್ಯನ ಮಗನು. ಇವನಿಗೆ ಹರಿದೇವ ಎಂಬ ಹೆಸರೂ ಇದ್ದಿತು. ಈ ಕವಿಯು ಯಾವ ರಾಜಾಶ್ರಯ ದಲ್ಲಿದ್ದನೆಂಬುದು ತಿಳಿಯದು. ಪ್ರಭುದೇವನ ಜೀವನವೃತ್ತಾಂತವು ಈ ಕೃತಿಯ ವಸ್ತು. ಈ ಪುರಾಣವನ್ನು ಗುರು ಸಿದ್ಧವೀರನ ಆಜ್ಞಾನುಸಾರವಾಗಿ ರಚಿಸಿದುದಾಗಿ ಕವಿಯು ಹೇಳುತ್ತಾನೆ. ಕ್ರಿ.ಶ. ೧೬೧೧ರಲ್ಲಿ ಬಸವಲಿಂಗನೆಂಬ ಕವಿಯು 'ಶಿವಾಧಿಕ್ಯಪುರಾಣ'ವನ್ನು ರಚಿಸಿದನು. ಶಾಂತದೇಶಿಗರ ಕರುಣದಿಂದ ತಾನು ಈ ಕಾವ್ಯ ರಚಿಸಿದುದಾಗಿ ಕವಿಯು ಹೇಳುತ್ತಾನೆ. ಇದಕ್ಕೆ 'ಬಳ್ಳಿಗಾವಿ ಮಹಾತ್ಮ್ಯ' ಮತ್ತು 'ಸಮಯಾಚಾರಮತದ ಪುರಾಣ'ವೆಂಬ ಹೆಸರು ಗಳೂ ಇವೆ. ಕ್ರಿ.ಶ. ೧೬೨೦ರಲ್ಲಿ ಶಂಕರದೇವನೆಂಬ ಕವಿಯು 'ಶಂಕರ ಶತಕ' ಮತ್ತು 'ಶಂಕರದೇವರ ಕಂದ' ಎಂಬ ಕೃತಿ ಗಳನ್ನು ರಚಿಸಿದನು. ಮೊದಲನೆಯ ಗ್ರಂಥವು ವೀರಶೈವ ವೇದಾಂತವನ್ನು ಬೋಧಿಸುತ್ತದೆ. ಎರಡನೆಯ ಕೃತಿಯು ಭಕ್ತಿರಸಪ್ರಧಾನವಾಗಿದೆ. ಇವೆರಡು ಗ್ರಂಥಗಳಲ್ಲದೆ ಈ ಕವಿಯು 'ಷಡಕ್ಷರ ರಗಳೆ'. 'ಭಕ್ತಿ ಬಿನ್ನಹದ ರಗಳೆ', 'ವೀರ ಶೈವ ರಗಳೆ', 'ಮೈದುನ ರಾಮನ ರಗಳೆ' ಎಂಬ ರಗಳೆ ಕೃತಿಗಳನ್ನು ರಚಿಸಿದ್ದಾನೆ. ಈ ರಗಳೆಗಳಲ್ಲಿ ಅನುಕ್ರಮವಾಗಿ ೭೧. ೧೩೮ ಮತ್ತು ೧೫೧ ನುಡಿಗಳಿವೆ.

ಕ್ರಿ.ಶ. ಸುಮಾರು ೧೬೨೩ರಲ್ಲಿ ಸೋಸಲೆ ರೇವಣಾಚಾರ್ಯನೆಂಬ ಕವಿಯು ಚಿಕ್ಕನಾಯಕಪುರದರಸ ಮುದಿ ನಾಯಕನ ಆಶ್ರಯದಲ್ಲಿ 'ಮಹಿಮ್ನಸ್ತವ ಟೀಕೆ' ಮುಂತಾದ ಟೀಕಾಗ್ರಂಥಗಳನ್ನು ರಚಿಸಿದನು. ಅರಸನ ಸಂತೋಷಾರ್ಥ ವಾಗಿ ಸೋಮನಾಯಕ ಯೋಗಿಯು 'ಮಹಿಮ್ನಸ್ತವ ಟೀಕೆ'ಯನ್ನು ತನ್ನಿಂದ ಬರೆಯಿಸಿದನೆಂದು ಕವಿಯು ಹೇಳು ತ್ತಾನೆ. ಇದಕ್ಕೆ 'ಮಹಿಮ್ನಃ ಪ್ರದೀಪಿಕಾ' ಎಂಬ ಹೆಸರೂ ಇದೆ. 'ವೀರಶೈವಸಿದ್ಧಾಂತಶಿಖಾಮಣಿ ಟೀಕೆ' ಎಂಬುದು ಈ ಕವಿ ರಚಿಸಿದ ಮತ್ತೊಂದು ಗ್ರಂಥ. ಇದಕ್ಕೆ 'ಸಿದ್ಧಾರ್ಥ ಸಂಬೋಧಿನಿ'ಯೆಂಬ ಹೆಸರೂ ಇದೆ. ಈ ಕವಿಯು

‘ಶಿವಾಧಿಕ್ಯಶಿಖಾಮಣಿ’, ‘ಸದ್ಗುರು ರಗಳೆ’ಯೆಂಬ ಗ್ರಂಥಗಳಿಗೂ ಕನ್ನಡ ವ್ಯಾಖ್ಯಾನ ರಚಿಸಿದ್ದಾನೆ. ಅಲ್ಲದೆ ‘ಶಾರೀರ ಪ್ರಕಾಶಿಕೆ’, ‘ಅಂತಃಕರಣ ಪ್ರಕಾಶಿಕೆ’, ‘ಸ್ವಸ್ವರೂಪ ಪ್ರಕಾಶಿಕೆ’, ‘ಪರಮಾತ್ಮ ಪ್ರಕಾಶಿಕೆ’, ‘ನಿಜದೀಪ್ತಿ ಪ್ರಕಾಶಿಕೆ’ ಎಂಬ ಸ್ವತಂತ್ರ ಗ್ರಂಥಗಳನ್ನೂ ಸೋಸಲೆ ರೇವಣಾಚಾರ್ಯನು ಬರೆದಿದ್ದಾನೆ. ಈ ಗ್ರಂಥಗಳು ವೀರಶೈವ ವೇದಾಂತವನ್ನು ಪ್ರತಿಪಾದಿಸುತ್ತವೆ. ಈ ಐದು ಪ್ರಕಾಶಿಕೆಗಳು ಒಂದೇ ಗ್ರಂಥದ ಐದು ಭಾಗಗಳಾಗಿರಬಹುದೆಂದು ಆರ್. ನರಸಿಂಹಾಚಾರ್ಯರ ವಿಚಾರ. ಈ ಕವಿಯ ಸಮಕಾಲೀನನಾದ ಸಿದ್ಧನಂಜಯತಿಯೆಂಬ ಕವಿಯು ರೇಣುಕಾರ್ಯ ರಚಿತ ‘ಶಿವಾಧಿಕ್ಯಶಿಖಾಮಣಿ’ಗೆ ಕನ್ನಡ ಟೀಕೆಯನ್ನು ಬರೆದಿದ್ದಾನೆ.

ಹೀಗೆ ವಿಜಯನಗರದರಸರ ಕಾಲದಲ್ಲಿ ವೀರಶೈವಸಾಹಿತ್ಯವು ಬೆಳೆದುಬಂದಿತು.

---

ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪುದಲ್ಲದೆ
ಮರ್ತ್ಯದ ಪಶುವಿನಲ್ಲಿ ಉಂಟೇ ಅಯ್ಯಾ ?
ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು
ಆ ಶರಣರ ಜಿಹ್ವೆಯ ಕೊನೆಯ ಮೊನೆಯ ಮೇಲೆ
ವಚನವೆಂಬ ಪರಮಾಮೃತವ ಕರೆದು
ಕೆಲಬಲದ ಗಣಂಗಳಿಗೆ ಸವಿಯ ತೋರಿ
ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನಲ್ಲದೆ
ದ್ವೈತಾದ್ವೈತಿಗಳೆಂಬವರಲ್ಲಿ ಉಂಟೇ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

—ಘನಲಿಂಗ ಶಿವಯೋಗಿ

* * *

ನ ಹೀದೃಶಂ ಸಂವನನಂ
ತ್ರಿಷು ಲೋಕೇಷು ವಿದ್ಯತೇ ।
ದಯಾ ಮೈತ್ರೀ ಚ ಭೂತೇಷು
ದಾನಂ ಚ ಮಧುರಾ ಚ ವಾಕ್ ।

# ವೀರಶೈವ ಮತ್ತು ಮೈಸೂರು ಅರಸರು

ಓ. ಎನ್. ಲಿಂಗಣ್ಣಯ್ಯ

ಕರ್ನಾಟಕದಲ್ಲಿ ಆಳಿದ ರಾಜಮನೆತನಗಳಲ್ಲಿ ಮೈಸೂರು ಯದುವಂಶದ ಅರಸರೂ ಸುಪ್ರಸಿದ್ಧರಾಗಿದ್ದಾರೆ. ಯದುರಾಯ ಅಥವಾ ವಿಜಯರಾಯ ಮೈಸೂರು ರಾಜವಂಶದ ಮೂಲಪುರುಷ. ಈತನ ತಮ್ಮ ಕೃಷ್ಣರಾಯ. ಈ ಇಬ್ಬರು ರಾಜಸಹೋದರರೂ ದಾಯಾದಿಗಳ ಕಾಟದಿಂದ ಸ್ವದೇಶವನ್ನು ಬಿಟ್ಟು ಉತ್ತರ ಮಥುರಾಪ್ರಾಂತದಿಂದ ದಕ್ಷಿಣದೇಶದತ್ತ ಬಂದರು. ಅವರು ಕಾವೇರೀನದಿಯ ದಕ್ಷಿಣದಿಕ್ಕಿನಲ್ಲಿರುವ ಚಾಮುಂಡೀಗಿರಿಯಲ್ಲಿ ನೆಲೆಸಿರುವ ಚಾಮುಂಡೀದೇವಿಯನ್ನು ದರ್ಶನ ಮಾಡಿ ಆ ರಾತ್ರಿ ಅಲ್ಲಿಯೇ ಮಲಗಿದರು. ಅವರು ಪ್ರಾತಃಕಾಲ ಅಲ್ಲಿಂದ ಹೊರಟು ಕಪಿಲಾತೀರದಲ್ಲಿರುವ ಶ್ರೀ ನಂಜುಂಡೇಶ್ವರಸ್ವಾಮಿಯನ್ನು ಭಕ್ತಿಯಿಂದ ಆರಾಧಿಸಿ ಆ ರಾತ್ರಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯ ಸನ್ನಿಧಿಯಲ್ಲಿ ಮಲಗಿದರು. ಆ ರಾತ್ರಿ ಯದುರಾಯನ ಸ್ವಪ್ನದಲ್ಲಿ ಚಾಮುಂಡೇಶ್ವರಿಯು ಕಾಣಿಸಿಕೊಂಡು ಓರ್ವ ಜಂಗಮೋತ್ತಮನ ಆಶೀರ್ವಾದದಿಂದ ಅವನಿಗೆ ರಾಜ್ಯಲಾಭವಾಗುವುದೆಂದು ತಿಳಿಸಿದಳು. ಮರುದಿನ ಆ ರಾಜಪುತ್ರರು ಕಪಿಲಾನದಿಯಲ್ಲಿ ಮಿಂದು. ಶ್ರೀ ನಂಜುಂಡೇಶ್ವರಸ್ವಾಮಿಯ ದರ್ಶನವನ್ನು ಪಡೆದು ನದಿಯ ತೀರದಲ್ಲಿ ಪ್ರಕೃತಿಸೌಂದರ್ಯವನ್ನು ನೋಡುತ್ತ ಅತ್ತಿತ್ತ ಅಡ್ಡಾಡುತ್ತಿರಲು. ಅಲ್ಲಿ ಓರ್ವ ಜಂಗಮೋತ್ತಮನ ದರ್ಶನವಾಯಿತು. ಆ ಸಹೋದರರು ಆ ಜಂಗಮಮೂರ್ತಿಯನ್ನು ಕಂಡು ನಮಸ್ಕರಿಸಿ, ತಮ್ಮ ಪರಿಚಯವನ್ನು ನಿವೇದಿಸಿಕೊಂಡರು. ಆ ಕಾಲದಲ್ಲಿ ಕಪಿಲಾತೀರದ ಹದಿನಾಡು ರಾಜ್ಯದ ದೊರೆ ಚಾಮರಾಜನು ಕಾಲವಾಗಿ. ಹದಿನಾಡಿನ ರಾಣಿ ದೇವಾಜಮ್ಮಣ್ಣಿ ದುಃಖತಪ್ತಳಾಗಿದ್ದಳು. ಆಕೆಗೆ ಒಬ್ಬಳೇ ಮಗಳಿದ್ದಳು. ಕಾರುಗಹಳ್ಳಿಯ ಮಾರನಾಯಕನೆಂಬುವನು ಆ ರಾಜಪುತ್ರಿಯನ್ನು ಮದುವೆಯಾಗಿ ತಾನೇ ಹದಿನಾಡು ದೊರೆಯಾಗಲು ಹವಣಿಸಿ, ದೇವಾಜಮ್ಮಣ್ಣಿಯನ್ನು ಪೀಡಿಸಿ. ಕಾಡಿಸಿ ಸಂಧಾನ ಮಾಡುತ್ತಿದ್ದನು. ಆ ಜಂಗಮದೇವನು ಈ ವಿಚಾರವನ್ನೆಲ್ಲ ಯದುರಾಯನಿಗೆ ತಿಳಿಸಿ. ಅವರನ್ನು ಆ ರಾತ್ರಿ ತಮ್ಮ ಮಠದಲ್ಲಿರಿಸಿಕೊಂಡಿದ್ದು. ಅವರಿಗೆ ಸೂಕ್ತ ಸಲಹೆಗಳನ್ನಿತ್ತು. ದೇವಾಜಮ್ಮಣ್ಣಿಗೆ ಈ ವಿಷಯಗಳನ್ನೆಲ್ಲ ತಿಳಿಸಿ. ಹದಿನಾಡಿನ ದೊರೆಯ ಮಗಳನ್ನು ಯದುರಾಯನಿಗೆ ಕೊಟ್ಟು ಮದುವೆ ಮಾಡಿಸಿ, ರಾಜ್ಯಾಭಿಷೇಕ ಮಾಡಲು ಏರ್ಪಾಡು ಮಾಡಿದನು. ಈ ವಿಚಾರವನ್ನು ಅರಿತು ಮಾರನಾಯಕನು ಹದಿನಾಡಿನ ಮೇಲೆ ದಂಡೆತ್ತಿ ಬಂದನು. ಆಗ ಜಂಗಮನ ಪ್ರೋತ್ಸಾಹದಂತೆ ಯದುರಾಯ ಮತ್ತು ಕೃಷ್ಣರಾಯ ಇಬ್ಬರೂ ಅರಮನೆಯ ಸೇನೆಯೊಂದಿಗೆ ಮಾರನಾಯಕನನ್ನು ಯುದ್ಧದಲ್ಲಿ ಸಂಹರಿಸಿ. ಹದಿನಾಡಿನ ರಾಜಕುಮಾರಿಯನ್ನು ಯದುರಾಯನು ವರಿಸಿ ಹದಿನಾಡಿಗೆ ಒದಗಿದ್ದ ಕಂಟಕವನ್ನು ನಿವಾರಿಸಿದನು. ಕೃಷ್ಣರಾಯನಿಗೆ ಕಾರುಗಹಳ್ಳಿಯ ನಾಡನ್ನು ವಹಿಸಿ. ಯದುರಾಯನು ಹದಿನಾಡು ದೊರೆಯಾದನು. ಆಗ ಮೈಸೂರು ಹದಿನಾಡಿಗೆ ಸೇರಿತ್ತು. ಯದುರಾಯನಿಗೆ ಮೈಸೂರಿನಲ್ಲಿಯೇ ಪಟ್ಟಾಭಿಷೇಕವಾಯಿತು. ತನಗೆ ಚಾಮುಂಡೀದೇವಿಯ ಕೃಪೆಯಿಂದ ಸಹಾಯ ಮಾಡಿ ಆಶೀರ್ವದಿಸಿದ ಜಂಗಮದೇವನನ್ನು ರಾಜಗೌರವದಿಂದ ಸತ್ಕರಿಸಿ ಮೈಸೂರು ದೊರೆಗಳು ಜಂಗಮ ಒಡೆಯರ ನೆನಪಿರುವಂತೆ ತಮ್ಮ ಹೆಸರಿಗೆ "ಒಡೆಯರು" ಎಂಬ ಹೆಸರನ್ನು ಸೇರಿಸಿಕೊಂಡು. ಮೈಸೂರು ರಾಜಧ್ವಜಕ್ಕೆ ಕಾವಿಯ ವಸ್ತ್ರವನ್ನು ಕಟ್ಟಿ ರಾಜ್ಯಾಂಕಿತವನ್ನು ಮೆರೆಯಿಸುವಂತೆ ಬಿನ್ನವಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಯದುರಾಯನಿಗೆ ಕ್ರಿ.ಶ. ೧೩೯೯ರಲ್ಲಿ ರಾಜ್ಯಾಭಿಷೇಕವಾಯಿತು. ಆ ಕಾಲದಲ್ಲಿ ಹದಿನಾಡಿನ ದೊರೆಗಳಿಗೆ ಸುತ್ತೂರು ಮಠದ ಸ್ವಾಮಿಗಳು ರಾಜಗುರುಗಳಾಗಿದ್ದರೆಂದು ಐತಿಹ್ಯವುಂಟು. ಕಪಿಲಾನದಿಯ ಎಡ ದಡದಲ್ಲಿ ಹದಿನಾಡು ಗ್ರಾಮವಿದೆ. ಆ ನದಿಯ ಬಲಭಾಗದಲ್ಲಿ ಅನತಿದೂರದಲ್ಲಿ ಸುತ್ತೂರು ಶ್ರೀಮಠವಿದೆ. ಸುತ್ತೂರು ರೇಣುಕಾಚಾರ್ಯ ಪರಂಪರೆಯ ಗುರುಮಠ ಕ್ರಿ.ಶ. ೯ನೆಯ ಶತಮಾನದಿಂದಲೂ ಪ್ರಸಿದ್ಧವಾಗಿದೆ ಎಂದು ಇತಿಹಾಸ ದೃಢಪಡಿಸುತ್ತದೆ.

ಸಾಮಾನ್ಯಜಂಗಮನಿಂದ ಇಂಥ ರಾಜ್ಯಸ್ಥಾಪನೆಯ ಕಾರ್ಯ ನಡೆಯಲು ಸಾಧ್ಯವಿಲ್ಲ. ಅದುವರೆಗಾಗಲೇ ಸುತ್ತೂರು ಮಠಾಧೀಶ್ವರರು ಅತ್ಯಂತ ಪ್ರಭಾವಶಾಲಿಗಳಾಗಿ ಅನೇಕ ರಾಜಮನೆತನಗಳಿಗೆ ಗುರುಗಳಾಗಿದ್ದರು. ಚೋಳರಾಜರು ಸುತ್ತೂರು ಮಠಕ್ಕೆ ಅನೇಕ ವೃತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. ಹಿಂದೆ ಸುತ್ತೂರು, ಕಾಳಾಮುಖರ ಕೇಂದ್ರವಾಗಿತ್ತೆಂದು ಚರಿತ್ರೆಯಿಂದ ಗೊತ್ತಾಗುತ್ತದೆ. ಹದಿನಾಡು ದೊರೆಗಳಿಗೆ ರಾಜಗುರುವಾಗಿದ್ದ ಆಗಿನ ಸುತ್ತೂರು ಪೀಠದ ಜಂಗಮ ಒಡೆಯರು ಹದಿನಾಡು ರಾಜ್ಯದ ದುಃಸ್ಥಿತಿಯನ್ನು ತಮ್ಮ ಕ್ರಿಯಾಶಕ್ತಿಯಿಂದ ಪರಿಹರಿಸಿ ಯದುರಾಜನಿಗೆ ನೆರವಿತ್ತು ಆಶೀರ್ವದಿಸಿ ಮೈಸೂರು ರಾಜ್ಯಸ್ಥಾಪನೆಗೆ ಕಾರಣರಾದರೆಂಬುದರಲ್ಲಿ ಸಂಶಯವಿಲ್ಲ. ಮೈಸೂರು ಯದುವಂಶದ ಮೂಲಪುರುಷನೆನಿಸಿದ ಯದುರಾಯ ವೈಷ್ಣವಮತವನ್ನು ಪರಿತ್ಯಜಿಸಿ, ವೀರಶೈವಧರ್ಮವನ್ನು ಅವಲಂಬಿಸಿದನು. ಅಂದಿನಿಂದ ಮೈಸೂರು ಅರಸರು ಲಿಂಗವಂತರಾದರು. ಅಂದಿನ ಮೈಸೂರುನಾಡಿನಲ್ಲಿ ಚಾಮರಾಜನಗರ ತಾಲ್ಲೋಕಿನ ಹರದನಹಳ್ಳಿಯ ಜಂಗಮ ಮಠ, ನಂಜನಗೂಡು ತಾಲ್ಲೋಕಿನ ತೃಣಪುರ (ಹುಲ್ಲಹಳ್ಳಿ) ಶ್ರೀ ಶಾಂತಮಲ್ಲಿಕಾರ್ಜುನ ಮಠ, ಯಳಂದೂರು ಪ್ರಭುದೇವರ ಮಠ, ಧನಗೂರು ಮಠ—ಇವೇ ಮೊದಲಾದ ವೀರಶೈವಮಠಗಳು ಸಮಾಜ ಧರ್ಮವನ್ನು ಪರಿಪೋಷಿಸುತ್ತಿದ್ದುವು. ಈ ನಾಡಿನಲ್ಲಿ ಸುಮಾರು ಒಂದುಸಾವಿರದ ಎಂಟು ಮಠಗಳಿದ್ದುವೆಂದು ಕೆಲವು ಪ್ರಾಚೀನಮಠಗಳಲ್ಲಿರುವ ದಾಖಲೆಗಳಿಂದ ತಿಳಿದುಬರುತ್ತದೆ. ನೂರರಲ್ಲಿ ಎಂಬತ್ತರಷ್ಟು ವೀರಶೈವರು ಸಾಗುವಳಿ ಜಮೀನಿನ ಒಡೆಯರಾಗಿದ್ದರು ಮತ್ತು ಗ್ರಾಮಾಧಿಕಾರಿಗಳಾಗಿದ್ದರು. ಮೈಸೂರು ರಾಜಮನೆತನದ ಬಂಧುವರ್ಗದವರು ಲಿಂಗವಂತ ಧರ್ಮಾನುಯಾಯಿಗಳಾಗಿದ್ದರು. ಕನ್ನಡನಾಡಿನಲ್ಲಿ ವೀರಶೈವಧರ್ಮ ಅತ್ಯಂತ ಪ್ರಮುಖ ಮತಧರ್ಮವಾಗಿದ್ದುದರಿಂದ, ಆ ಧರ್ಮದ ಪ್ರಭಾವ ಮೊದಲಿನಿಂದಲೂ ಮೈಸೂರು ನಾಡಿನ ಮೇಲೆ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಭೀಮಕವಿ ಬಸವಪುರಾಣವನ್ನು ಬರೆದು ಯದುರಾಯನ ಪಟ್ಟಾಭಿಷೇಕದ ವೇಳೆಗೆ ಸುಮಾರು ೩೦ ವರ್ಷವಾಗಿತ್ತು. ಆ ಪುರಾಣದ ಪ್ರಭಾವ ಮೈಸೂರು ನಾಡಿನ ವೀರಶೈವಮಠಗಳಲ್ಲಿ ಧಾರ್ಮಿಕ ಮನೋಭಾವವನ್ನು ನೆಲೆಗೊಳಿಸಿತ್ತು. ಮೈಸೂರು ರಾಜ್ಯಸ್ಥಾಪನೆಯಾದ ಮರುವರ್ಷದಲ್ಲಿಯೇ (ಕ್ರಿ.ಶ. ೧೪೦೦) ನೀಲಕಂಠಶಿವಾಚಾರ್ಯರು ಬ್ರಹ್ಮಸೂತ್ರವ್ಯಾಖ್ಯಾನರೂಪವಾದ 'ಕ್ರಿಯಾಸಾರ'ವೆಂಬ ಸಂಸ್ಕೃತ ಗ್ರಂಥವನ್ನು ಬರೆದು ವೀರಶೈವಧರ್ಮದ ಅಂತಸ್ಸತ್ವವನ್ನು ಪ್ರತಿಪಾದಿಸಿದರು. ಯದುರಾಯನ ಆಳ್ವಿಕೆಯ ಅವಧಿಯಲ್ಲಿಯೇ ಮಲ್ಲಣ್ಣಕವಿ 'ರೇವಣಸಿದ್ಧೇಶ್ವರಕಾವ್ಯ'ವನ್ನು ಬರೆದನು. ಈಗಿನ ರಾಮನಗರದ ಬಳಿಯಿರುವ ರೇವಣಸಿದ್ಧೇಶ್ವರನ ಬೆಟ್ಟ ಅದುವರೆಗಾಗಲೇ ವೀರಶೈವರ ಧರ್ಮಕ್ಷೇತ್ರವಾಗಿತ್ತು. ಯದುರಾಯನು ಮೈಸೂರು ಪ್ರಭುವಾಗುವುದಕ್ಕಿಂತ ಸುಮಾರು ಒಂದು ಶತಮಾನದ ಹಿಂದೆಯೇ ಶಿವಗಂಗೆಯ ಮೇಲಣ ಗವಿಯ ಗುರುಪೀಠ ಮತ್ತು ಸಿದ್ಧಗಂಗೆಯ ಜಂಗಮಕ್ಷೇತ್ರ ವೀರಶೈವಧರ್ಮಪ್ರಚಾರಕೇಂದ್ರಗಳಾಗಿದ್ದುವು. ಮೈಸೂರುನಾಡು ಉತ್ತರದಿಂದ ಬಂದ ಶರಣಧರ್ಮದ ಮತ್ತು ದಕ್ಷಿಣದ ಕಡೆಯಿಂದ ಬಂದ ಶೈವಧರ್ಮದ ಸಂಗಮಕ್ಷೇತ್ರವಾಗಿತ್ತು. ಅನೇಕ ಶಿವಶರಣರೂ, ಶಿವಯೋಗಿಗಳೂ, ವೀರಶೈವ ಆಚಾರ್ಯರೂ, ಪಂಡಿತರೂ, ತತ್ತ್ವಜ್ಞಾನಿಗಳೂ ಮೈಸೂರು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಶಿವಪೂಜಾನುಷ್ಠಾನಗಳಿಂದ ನಾಡನ್ನು ಪವಿತ್ರಗೊಳಿಸುತ್ತಿದ್ದರು. ಹದಿನೈದನೆಯ ಶತಮಾನದಲ್ಲಿ ಪ್ರೌಢದೇವರಾಯ (ಕ್ರಿ.ಶ. ೧೪೧೯–೧೪೪೬) ವಿಜಯನಗರದಲ್ಲಿ ಆಳುತ್ತಿದ್ದಾಗ ವೀರಶೈವಧರ್ಮ ಅತ್ಯಂತ ಉಚ್ಛ್ರಾಯಸ್ಥಿತಿಯಲ್ಲಿ ಬೆಳೆಯಿತು. ಜಕ್ಕಣಾರ್ಯ, ಲಕ್ಕಣ್ಣದಂಡೇಶ, ಚಾಮರಸ, ಕಲ್ಲುಮಠದ ಪ್ರಭುದೇವರು ಮತ್ತು ನೂರೊಂದು ವಿರಕ್ತರು ಅನೇಕ ತತ್ತ್ವಗ್ರಂಥಗಳನ್ನೂ ಕಾವ್ಯಗಳನ್ನೂ ರಚಿಸಿ ವೀರಶೈವ ಸಾಮ್ರಾಜ್ಯವನ್ನು ಬೆಳಗಿದರು. ಈ ಧರ್ಮಪ್ರಭೆ, ನೆರೆಯ ಮೈಸೂರು ನಾಡಿಗೂ ವಿಜಯನಗರ ಸಾಮ್ರಾಜ್ಯಕ್ಕೂ ವೀರಶೈವಧರ್ಮ ಸಂಬಂಧವನ್ನು ಕಲ್ಪಿಸಿತು. ಮೈಸೂರು ಒಡೆಯರೂ ವಿಜಯನಗರದ ಸಮ್ರಾಟರಂತೆಯೇ ಸಕಲ ಧರ್ಮ ಸಾಹಿತ್ಯ, ಸಂಸ್ಕೃತಿಗಳಿಗೂ ಆಶ್ರಯ ನೀಡಿದರು. ಮೈಸೂರು ಪಟ್ಟಭದ್ರರಲ್ಲಿ ಹತ್ತನೆಯ ದೊರೆ ಚಾಮರಾಜನೆಂಬುವನು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯ ದೇವಾಲಯದ ಹೊರಪ್ರಾಕಾರದಲ್ಲಿರುವ ಕಲ್ಲುಬಸವಣ್ಣನ ಪ್ರತಿಮೆಯನ್ನು ಸುಂದರವಾಗಿ ಶಿಲ್ಪಿಗಳಿಂದ ಕೆತ್ತಿಸಿ (ಕ್ರಿ.ಶ. ೧೬೩೩) ಪ್ರತಿಷ್ಠೆ ಮಾಡಿಸಿದನು. ಆ ಬಸವನ ಪೀಠದಲ್ಲಿ ಶಾಸನವನ್ನು ಬರೆಯಿಸಿದನು. ಆ ಬಸವಣ್ಣನ ಪೂಜೆಮಾಡಲು ಲಿಂಗಾಯತ ಅರ್ಚಕರನ್ನು ನೇಮಕಮಾಡಿದನು. ಈ ಚಾಮರಾಜನಿಗೆ ಬಾಲ್ಯದಲ್ಲಿ ಸ್ತನ್ಯವನ್ನು ಕೊಟ್ಟು ಬೆಳೆಸಿದವಳು ಮತ್ತು ದೊರೆಗೆ ಆರೋಗಣೆಯನ್ನು ಮಾಡಿಸುತ್ತಿದ್ದವಳು ನಂಜಮ್ಮನೆಂಬ ಲಿಂಗಾಯತ ಮಹಿಳೆ ಎಂಬುದನ್ನು ಗಮನಿಸಿದರೆ, ಲಿಂಗಾಯತ ಅಮ್ಮಂದಿರೇ ಅರಮನೆಯಲ್ಲಿ ಎಲ್ಲಾ ಕಾಲದಲ್ಲಿಯೂ ರಾಜಪುತ್ರರಿಗೆ ಮೊಲೆಯೂಡಿಸಿ, ಅವರು ದೊಡ್ಡವ

ರಾದ ಮೇಲೆ ಆರೋಗಣೆ ಮಾಡಿಸುತ್ತಿದ್ದರೆಂಬುದು ನಿಜವಾದ ಸಂಗತಿ.

ಹದಿಮೂರನೆಯ ದೊರೆ ದೊಡ್ಡದೇವರಾಜ ಒಡೆಯ (ಕ್ರಿ.ಶ. ೧೬೫೯–೧೬೭೩) ತನ್ನ ಹಿಂದಿನವರಂತೆಯೇ ಲಿಂಗವಂತಧರ್ಮನಿಷ್ಠನಾಗಿದ್ದನು. ಇವನು ದೇವರಾಜ ಅಗ್ರಹಾರವನ್ನು (ಮೈಸೂರು ನಗರದಲ್ಲಿ ಈಗಿರುವ ಹಳೆಯ ಅಗ್ರಹಾರ) ಕಟ್ಟಿಸಿ, ಅದರಲ್ಲಿ ಗಚ್ಚಿನಮಠವನ್ನು ಕಟ್ಟಿಸಿ ಜಂಗಮರಿಗೆ ದಾನಮಾಡಿದನು. ಅದು ಈಗಿನ ಚಾವಡಿ ಬೀದಿಯ ಬಲದ ಕೊನೆಯಲ್ಲಿ ಪಶ್ಚಿಮದ ಕಡೆಯಿತ್ತು. ಈಗ ಆ ಮಠ ಅಲ್ಲಿಲ್ಲ. ಈ ದೊರೆ ಎಡೆಯೂರು ಸಿದ್ಧಲಿಂಗ ಯತಿಯ ಗದ್ದುಗೆಯ ಪೂಜೆಗೆ ದತ್ತಿಯನ್ನು ಬಿಟ್ಟುಕೊಟ್ಟನು. ಈತನು ಚಾಮುಂಡೀಬೆಟ್ಟದ ಮಧ್ಯಭಾಗದಲ್ಲಿ ದೊಡ್ಡ ಬಸವವಿಗ್ರಹವನ್ನು ಕಲ್ಲಿನಲ್ಲಿ ಕೆತ್ತಿಸಿ, ಆ ಬಸವನ ಪೂಜೆಗೆ ಲಿಂಗವಂತ ಅರ್ಚಕರನ್ನು ನೇಮಿಸಿದನು. ಕಾರ್ತಿಕ ಮಾಸದಲ್ಲಿ ಕಡೆಯ ಸೋಮವಾರ ಆ ಬಸವನಿಗೆ ವಿಶೇಷ ಪೂಜೆಯೂ ಜಂಗಮಾರಾಧನೆಯೂ ನಡೆಯುವಂತೆ ಅರಮನೆಯಿಂದ ಏರ್ಪಾಟು ಮಾಡಿಸಿದನು. ಹದಿನೈದನೆಯ ಶತಮಾನದಲ್ಲಿ ಎಡೆಯೂರು ಸಿದ್ಧಲಿಂಗೇಶ್ವರರು ವೀರಶೈವಧರ್ಮವನ್ನು ಉದ್ಧಾರ ಮಾಡಿದರು. ಇವರ ಶಿಷ್ಯಪರಂಪರೆಯಲ್ಲಿ ಬೋಳಬಸವಾರ್ಯ. ಗುಮ್ಮಳಾಪುರದ ಸಿದ್ಧಲಿಂಗ, ಎಡತೊರೆಯ ಗುರುಸಿದ್ಧವೀರಣಾರ್ಯ, ಘನಲಿಂಗದೇವ, ಸಪ್ಪೆಯಾರ್ಯ, ಗೂಳೂರು ಸಿದ್ಧವೀರ ಮೊದಲಾದವರು ವೀರಶೈವಧರ್ಮವನ್ನು ವಿಶೇಷ ಪ್ರಚಾರ ಮಾಡಿದರು. 'ಶೂನ್ಯಸಂಪಾದನೆ'ಯಂಥ ವೀರಶೈವತತ್ತ್ವ ಶಾಸ್ತ್ರಗ್ರಂಥವೂ, 'ಷಟ್ಸ್ಥಲಜ್ಞಾನಸಾರಾಮೃತ'ದಂಥ ವಚನಗ್ರಂಥವೂ ಅಲ್ಲದೆ ಗುಬ್ಬಿಯ ಮಲ್ಲಣಾರ್ಯನ 'ಗಣಭಾಷ್ಯರತ್ನ ಮಾಲೆ', ಚತುರ್ಮುಖ ಬೊಮ್ಮರಸನ 'ರೇವಣಸಿದ್ಧೇಶ್ವರ ಪುರಾಣ', ಸಿಂಗಿರಾಜನ 'ಸಿಂಗಿರಾಜಪುರಾಣ', ನಿಜಗುಣ ಶಿವಯೋಗಿಯ 'ವಿವೇಕಚಿಂತಾಮಣಿ'–ಮೊದಲಾದ ಕಾವ್ಯಗಳ ರಚನೆಯಾಗಿ ವೀರಶೈವಧರ್ಮ ಸರ್ವತೋಮುಖವಾಗಿ ಬೆಳೆದಿತ್ತು. ಮೈಸೂರು ದೊರೆಗಳು ವೀರಶೈವ ಮಠ ಮಹತ್ತುಗಳನ್ನು ಗೌರವಿಸುತ್ತಿದ್ದರು. ವಿರಕ್ತಮಠಗಳೂ ನಾಡಿನಲ್ಲಿ ಅಲ್ಲಲ್ಲಿ ಸ್ಥಾಪನೆಯಾದವು.

ಮೈಸೂರು ಪ್ರಭುಶ್ರೇಣಿಯಲ್ಲಿ ಚಿಕ್ಕದೇವರಾಜ ಹದಿನಾಲ್ಕನೆಯವನು. ಇವನು ಸುಮಾರು ೩೧ ವರ್ಷಕಾಲ ರಾಜ್ಯವಾಳಿದನು. ಇವನ ಪ್ರಧಾನಮಂತ್ರಿ ಜೈನ ವಿಶಾಲಾಕ್ಷಪಂಡಿತ. ಇವರಿಬ್ಬರೂ ಬಾಲ್ಯಸ್ನೇಹಿತರು. ಈ ದೊರೆಯ ಮಂತ್ರಿಮಂಡಲದಲ್ಲಿ ತಿರುಮಲಯ್ಯಂಗಾರಿ, ಚಿಕ್ಕುಪಾಧ್ಯಾಯ ಮತ್ತು ಷಡಕ್ಷರಯ್ಯ ಎಂಬುವರು ಇತರರು ಪ್ರಮುಖ ರಾಗಿದ್ದರು. ಅರಮನೆಯಲ್ಲಿ ಲಿಂಗಾಯತಧರ್ಮ ರಾಜಧರ್ಮವಾಗಿತ್ತು. ವೀರಶೈವದ ಪ್ರಾಬಲ್ಯವನ್ನು ಮುರಿಯಲು ವಿಶಾಲಾಕ್ಷಪಂಡಿತ ಮೊದಲಾದವರು ಸನ್ನಾಹ ಮಾಡುತ್ತಿದ್ದರು. ಯಳಂದೂರು ಷಡಕ್ಷರಕವಿ ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧ ಕವಿಯೂ ರಾಜಗುರುವೂ ಆಗಿದ್ದನು. ಅವನು ಯಳಂದೂರು ಲಿಂಗವಂತ ಅರಸರ ಮನೆಯ ಗುರು ವಾಗಿದ್ದನು. ಅವನು 'ರಾಜಶೇಖರವಿಲಾಸ', 'ಬಸವರಾಜವಿಜಯ' ಮತ್ತು 'ಶಬರಶಂಕರವಿಲಾಸ' ಎಂಬ ಉದ್ದಾಮ ಕನ್ನಡ ಕಾವ್ಯಗಳನ್ನು ರಚಿಸಿ ಪ್ರಸಿದ್ಧನಾಗಿದ್ದಾನೆ. ಆಗಿನ ಕಾಲದಲ್ಲಿ ಅವನ ಕಾವ್ಯಗಳನ್ನು ಎಲ್ಲ ವೀರಶೈವಮಠ ಗಳಲ್ಲಿಯೂ ಮನೆಗಳಲ್ಲಿಯೂ ಪೂಜಿಸುತ್ತಿದ್ದರು ಮತ್ತು ಪ್ರವಚನ ಮಾಡುತ್ತಿದ್ದರು. ಚಿಕ್ಕದೇವರಾಜನ ಪಟ್ಟ ಮಹಿಷಿ ದೇವರಾಜಮ್ಮಣ್ಣಿ ಯಳಂದೂರು ಲಿಂಗರಾಜಯ್ಯನ ಪುತ್ರಿ. ಷಡಕ್ಷರಕವಿ–ಚಿಕ್ಕದೇವರಾಜನ ಹಿರಿಯ ಸಮಕಾಲೀನನಾಗಿದ್ದನು. ವಿಶಾಲಾಕ್ಷಪಂಡಿತನು ಯಳಂದೂರಿನ ಬೊಮ್ಮರಸಪಂಡಿತನ ಮಗನು. ಒಮ್ಮೆ 'ಲೀಲಾವತೀ ಪ್ರಬಂಧ'ವೆಂಬ ಜೈನಗ್ರಂಥವನ್ನು ಆನೆಯ ಮೇಲಿಟ್ಟು ಯಳಂದೂರಿನಲ್ಲಿ ಜೈನರು ಮೆರವಣಿಗೆ ಮಾಡಿದ ಸಂದರ್ಭ ದಲ್ಲಿ ಷಡಕ್ಷರಕವಿಯ ಮಠದ ಮುಂದೆ ಆ ಮೆರವಣಿಗೆ ಬಂದಾಗ, ಅವನು ಆ ಉತ್ಸವವನ್ನು ತನ್ನ ಶಿಷ್ಯರಿಂದ ತಡೆಯಿಸಿ ಆ ಗ್ರಂಥಕ್ಕಿಂತಲೂ ಮಿಗಿಲಾದ ತನ್ನ ಗ್ರಂಥವೊಂದನ್ನು ಒಂದು ವರ್ಷದೊಳಗಾಗಿ ರಚಿಸಿ ಪಂಡಿತರ ಸಭೆಗೆ ಒಪ್ಪಿಸುವುದಾಗಿ ಹೇಳಿದನು. ಆ ಮೇಲೆ ರಾಜಶೇಖರವಿಲಾಸವನ್ನು ಬರೆದು ಪಂಡಿತರ ಗೌರವಕ್ಕೆ ಪಾತ್ರನಾದನೆಂಬ ಐತಿಹ್ಯವುಂಟು. ಇದರಿಂದ ವಿಶಾಲಾಕ್ಷಪಂಡಿತನಿಗೆ ಮನಸ್ಸಿನಲ್ಲಿ ದ್ವೇಷಭಾವ ನಿಂತಿತು. ಮುಂದೆ ಅವನು ಚಿಕ್ಕದೇವ ರಾಜನ ಪ್ರಧಾನಮಂತ್ರಿಯಾದನು. ಅವನು ರಾಜ್ಯದಲ್ಲಿ ಅರಸನ ಅನುಮತಿಯಂತೆ ಕೆಲವು ಸುಧಾರಣೆಗಳನ್ನು ತಂದು ಭೂಕಂದಾಯವನ್ನೂ ಕೆಲವು ತೆರಿಗೆಗಳನ್ನೂ ಹೆಚ್ಚಿಸಿ ಇನ್ನೂ ಹಲವು ಹೊಸ ತೆರಿಗೆಗಳನ್ನು ವಿಧಿಸಿದನು. ಇದರಿಂದ ರೈತರಿಗೂ ಜನಸಾಮಾನ್ಯರಿಗೂ ವಿಶೇಷ ತೊಂದರೆಯಾಯಿತು. ಜನರು ಕಂದಾಯಗಳನ್ನು ಕೊಡುವುದಿಲ್ಲವೆಂದು ಅಲ್ಲಲ್ಲಿ ದಂಗೆಯೆದ್ದರು. ಈ ಸಂದರ್ಭದಲ್ಲಿ ಷಡಕ್ಷರದೇವನು ಪ್ರಜಾಭಿಪ್ರಾಯವನ್ನು ಮನ್ನಿಸಿ ಪ್ರಜಾಹಿತವನ್ನು ಸಾಧಿಸಬೇಕೆಂದು ರಾಜನಿಗೆ ಸಲಹೆ ಮಾಡಿದನು. ಈ ಅತೃಪ್ತ ರೈತರೆಲ್ಲಾ ನಾಡಿನ ಜಂಗಮಮಠಗಳ ಶಿಷ್ಯರೆಂದೂ, ಆ ಜಂಗಮರ ಚಿತಾವಣೆಯಿಂದ ಜನರು ದಂಗೆಯೆದ್ದಿರುವರೆಂದೂ ವಿಶಾಲಾಕ್ಷಪಂಡಿತನು ನಂಬಿದನು. ಈ ದಂಗೆಯನ್ನು

ಅಡಗಿಸಲು ಅವನು ರಾಜನಿಗೆ ಸಲಹೆ ಮಾಡಿದ ಮೇರೆಗೆ. ನಂಜನಗೂಡಿನಲ್ಲಿ ಒಂದು ದಿನ ಜಂಗಮದಾಸೋಹವನ್ನು ಏರ್ಪಡಿಸಿ, ನಾಡಿನ ಎಲ್ಲ ಜಂಗಮರನ್ನೂ ಆ ರಾಜಭೋಜನಕ್ಕೆ ಆಹ್ವಾನಿಸಿದರು. ಅಂದು ೪೦೦ ಜನ ಜಂಗಮರು ನಂಜನಗೂಡಿನಲ್ಲಿ ಸೇರಿದರು. ಈ ಪಿತೂರಿಯಲ್ಲಿ ೪೦೦ ಜನ ಜಂಗಮರನ್ನು ರಹಸ್ಯವಾಗಿ ಕಟುಕರಿಂದ ಒಂದೇ ದಿನದಲ್ಲಿ ಕೊಲೆ ಮಾಡಿಸಿದರು. ಅಲ್ಲದೆ, ನಾಡಿನಲ್ಲಿ ಸುಮಾರು ೭೦೦ ಜಂಗಮ ಮಠಗಳನ್ನು ಹಾಳುಗೆಡಪಿಸಿದರು. ಆಗ ಹರದನಹಳ್ಳಿಯ ಪ್ರಾಚೀನ ವೀರಶೈವಮಠವೂ ನೆಲಸಮವಾಯಿತು. ಇದು ಅತ್ಯಂತ ಭೀಕರ ದುರಂತವೆಂಬುದನ್ನು ಚರಿತ್ರೆ ತಿಳಿಸುತ್ತದೆ. ಇದಾದ ಕೆಲವು ದಿನಗಳಲ್ಲಿಯೇ ಶ್ರೀರಂಗಪಟ್ಟಣದ ರಾಜಬೀದಿಯಲ್ಲಿ ರಾತ್ರಿ ಮೊದಲನೆಯ ಜಾವದಲ್ಲಿ ಅರಮನೆಯಿಂದ ಪಂಜಿನ ಬೆಳಕಿನಲ್ಲಿ ತನ್ನ ಮನೆಗೆ ಹೋಗುತ್ತಿದ್ದ ಮಂತ್ರಿ ವಿಶಾಲಾಕ್ಷಪಂಡಿತನ ಮೇಲೆರಗಿ ದ್ವೇಷಿಗಳು ಅವನನ್ನು ಕೊಲೆ ಮಾಡಿದರು. ಅನಂತರ ತಿರುಮಲಯ್ಯಂಗಾರಿ ಮೈಸೂರು ನಾಡಿನ ಮುಖ್ಯಮಂತ್ರಿಯಾದನು. ಅವನ ಪ್ರೋತ್ಸಾಹದಿಂದ ಚಿಕ್ಕದೇವರಾಜ ಒಡೆಯನು ವೀರಶೈವ ಮತವನ್ನು ಪರಿತ್ಯಜಿಸಿ. ಶ್ರೀವೈಷ್ಣವ ಮತವನ್ನು ಅವಲಂಬಿಸಿದನು. ಅರಮನೆಯಲ್ಲಿ ಶ್ರೀವೈಷ್ಣವಸಂಪ್ರದಾಯ ಪ್ರಾರಂಭವಾಯಿತು. ಆದರೆ ಪಟ್ಟಮಹಿಷಿಯಳಂದೂರು ದೇವಾಜಮ್ಮಣ್ಣಿಯೂ ಆಕೆಯ ಪರಮಾಪ್ತ ಕೆಳದಿಯಾಗಿದ್ದ "ಹದಿಬದೆಯ ಧರ್ಮ"ವನ್ನು ರಚಿಸಿದ ಸಂಚಿಯ ಹೊನ್ನಮ್ಮನೂ ಲಿಂಗವಂತಧರ್ಮವನ್ನು ಕೊನೆಯವರೆಗೂ ಅವಲಂಬಿಸಿದ್ದರು. ಶ್ರೀವೈಷ್ಣವಾಚಾರ್ಯರಿಂದ ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂತ್ರೋಪಾಸನೆ ಮತ್ತು ನಾರಾಯಣ ಪೂಜೆ— ಎಂಬ ಪಂಚ ಸಂಸ್ಕಾರಗಳನ್ನು ಹೊಂದಿ ವೈಷ್ಣವದೀಕ್ಷೆಯನ್ನು ಅಂಗೀಕರಿಸಿದವರೇ ರಾಜಬಂಧುಗಳಾಗಿರತಕ್ಕುದೆಂದೂ ಅರಮನೆಯ ಕಟ್ಟಳೆಯಾಯಿತು. ಇದರಿಂದ ಅದುವರೆಗೂ ಲಿಂಗಧಾರಣವನ್ನು ಅವಲಂಬಿಸಿ, ಪುನಃ ಎರಡು ವರ್ಷಗಳ ಒಳಗಾಗಿಯೇ ಹೊಸ ಮತವನ್ನು ಬಿಟ್ಟು ಪುನಃ ತಮ್ಮ ಹಿಂದಿನ ಸಂಪ್ರದಾಯಗಳನ್ನೇ ಅವಲಂಬಿಸಿದರು.

ಮೈಸೂರು ರಾಜಮನೆತನದ ಇಪ್ಪತ್ತೊಂದನೆಯ ದೊರೆ ಖಾಸಾ ಚಾಮರಾಜಒಡೆಯ. ಈತನಿಗೆ ಬಹಳ ಕಾಲ ಪುತ್ರಸಂತಾನವಿರಲಿಲ್ಲ. ಆಗ ಅವನ ಪಿತಾಮಹಿ ಲಕ್ಷ್ಮಮ್ಮಣ್ಣಿಯವರು ನಂಜನಗೂಡು ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ರಾಜದಂಪತಿಗಳಿಂದ ಕೋಟಿ ಪಂಚಾಕ್ಷರೀಜಪಯಜ್ಞವನ್ನು ಮಾಡಿಸಿದರು. ಆ ಸಮಾರಂಭದಲ್ಲಿ ಒಂದು ದಿನ ತೇಜಸ್ವಿಯಾದ ಜಂಗಮಪುರುಷೋತ್ತಮರೋರ್ವರು ಆ ಯಜ್ಞಮಂಟಪಕ್ಕೆ ದಯಮಾಡಿಸಿ, ರಾಜದಂಪತಿಗಳನ್ನು ಆಶೀರ್ವದಿಸಿ ಅವರಿಗೆ ಪುತ್ರಸಂತಾನವನ್ನು ಅನುಗ್ರಹಿಸಿ ಅಲ್ಲಿಂದ ತೆರಳಿದರು. ಅವರನ್ನು ಸತ್ಕರಿಸಿ ಗೌರವಿಸಬೇಕೆಂದು ಅಲ್ಲಿ ಇಲ್ಲಿ ನೋಡುತ್ತಿದ್ದಂತೆಯೇ ಆ ಜಂಗಮ ಕಣ್ಮರೆಯಾಗಿದ್ದರು. ಶ್ರೀಕಂಠೇಶ್ವರನೇ ಜಂಗಮ ರೂಪಿನಿಂದ ಬಂದಿದ್ದನೆಂದು ಜನರು ಆಶ್ಚರ್ಯಾನಂದಭರಿತರಾದರು. ಕಾಲಕ್ರಮದಲ್ಲಿ ಆ ರಾಜದಂಪತಿಗಳಿಗೆ ಪುತ್ರೋತ್ಸವವಾಯಿತು. ಆ ಮಗುವಿಗೆ ನಂಜರಾಜಒಡೆಯನೆಂದು ನಾಮಕರಣವಾಯಿತು. ಅವನೇ ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯನೆಂದು ಪ್ರಸಿದ್ಧನಾದನು. (ಕ್ರಿ.ಶ. ೧೭೯೯–೧೮೬೮) ಈತನ ಆಳ್ವಿಕೆಯಲ್ಲಿ ವೀರಶೈವ ಮತ ಪುನಃ ಚೇತರಿಸಿಕೊಂಡಿತೆಂದು ಹೇಳಬಹುದು. ಬಾಲಲೀಲಾಮಹಾಂತಶಿವಯೋಗಿಗಳು ಮೈಸೂರಿಗೆ ಬಂದು, ಮಹಾರಾಜನನ್ನು ಅನುಗ್ರಹಿಸಿದರು. ದೇವನೂರು ಗುರುಮಲ್ಲೇಶ್ವರರೆಂಬ ಶಿವಶರಣರೂ ಈ ದೊರೆಯನ್ನು ಅನುಗ್ರಹಿಸಿ ಪೂಜೆಗೊಂಡರು. ಜಂಗಮಮಠಗಳಿಗೆ ದತ್ತಿಗಳನ್ನು ಇವನು ಬಿಟ್ಟುಕೊಟ್ಟು ಪ್ರೋತ್ಸಾಹಿಸಿದನು. ಅರಮನೆಯಲ್ಲಿ ಜಂಗಮಪೂಜೆ ನಡೆಯುತ್ತಿತ್ತು. ಅರಮನೆಯ ಬಿಡದಿಯಲ್ಲಿ ವಿಶೇಷ ಸಮಾರಂಭಗಳಲ್ಲಿ ದಾಸೋಹ ನಡೆದು, ಜಂಗಮರಿಗೆ ಭೂರಿದಕ್ಷಿಣೆ ಲಭಿಸುತ್ತಿತ್ತು. ಈತನು ಅನೇಕ ಶಿವಕ್ಷೇತ್ರಗಳನ್ನು ಸಂದರ್ಶಿಸಿ ಪೂಜಾಕಾರ್ಯಗಳನ್ನು ನೆರವೇರಿಸಿ ದಾನಧರ್ಮಗಳನ್ನು ಮಾಡುತ್ತಿದ್ದನು. ಚಾಮರಾಜನಗರದಲ್ಲಿ ಅವನ ತಂದೆ ತಾಯಿಯರ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿಸಿ ಶಿವಲಿಂಗಪ್ರತಿಷ್ಠೆ ಮಾಡಿಸಿದನು. ಅಮಚವಾಡಿಯ ವೀರಭದ್ರಸ್ವಾಮಿಗೆ ಬೆಳ್ಳಿಯ ಕವಚವನ್ನು ಮಾಡಿಸಿಕೊಟ್ಟನು. ಇವನ ಅಳಿಯ ಲಿಂಗರಾಜನಿಗೆ ಈ ದೊರೆ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕೊಟ್ಟು ಮದುವೆ ಮಾಡಿದನು. ಆ ಅಳಿಯನ ಮನೆಯ ಗುರು ರೇಣುಕಾಚಾರ್ಯಗುರುಪರಂಪರೆಯ ಚನ್ನವೀರಾರಾಧ್ಯದೇಶಿಕನು. ಈತನಿಗೆ ಮೈಸೂರಿನಲ್ಲಿ ಮಠವೊಂದನ್ನು ಕಟ್ಟಿಸಿಕೊಟ್ಟು ಆತನ ಪೂಜೆಗೆ ಸಹಾಯವಾಗುವಂತೆ ಧನ ಧಾನ್ಯ ಭೂಮಿಗಳನ್ನು ಕೊಟ್ಟಿದ್ದಾನೆ. ಇದೇ ಈಗಿರುವ ತಳೂರುಮಠ. ಈ ತಳೂರುಮಠದ ಗುರು ಚನ್ನವೀರದೇಶಿಕನ ಸಹೋದರನೇ ಆಗ ಸುತ್ತೂರು ಮಠದ ಸ್ವಾಮಿಯಾಗಿದ್ದನೆಂದು ಮಠದ ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈ ಅಳಿಯ ಲಿಂಗರಾಜನ ಮನೆಯ ದೇವರು ವೀರಭದ್ರಸ್ವಾಮಿ. ಇವನು ವೀರಶೈವದೀಕ್ಷೆಯನ್ನು ಪಡೆದು ಅತ್ಯಂತ ನಿಷ್ಠೆಯಿಂದ ವೀರಶೈವಧರ್ಮವನ್ನು ಅವಲಂಬಿಸಿದ್ದನು. ಈತನ ಇಬ್ಬರು ಹೆಂಡತಿಯರು ದೊಡ್ಡಪುಟ್ಟತಾಯಮ್ಮಣ್ಣಿ

ಮತ್ತು ಚಿಕ್ಕಪುಟ್ಟತಾಯಮ್ಮಣ್ಣಿ. ಇವರಿಬ್ಬರೂ ವೀರಶೈವದೀಕ್ಷೆಯನ್ನು ಪಡೆದು ಶಿವಭಕ್ತಿಸಂಪನ್ನೆಯರಾಗಿದ್ದರು. ಮುಮ್ಮಡಿ ಕೃಷ್ಣರಾಜಒಡೆಯನು ಪ್ರತಿದಿನವೂ ಅರಮನೆಯಲ್ಲಿ ಇಷ್ಟಲಿಂಗಪೂಜೆಯನ್ನು ನೆರವೇರಿಸಿ, ಮಧ್ಯಾಹ್ನದ ವೇಳೆಗೆ ನಂಜನಗೂಡಿನಿಂದ ಸಾರೋಟಿನಲ್ಲಿ ಬರುತ್ತಿದ್ದ ಶ್ರೀಕಂಠೇಶ್ವರಸ್ವಾಮಿಯ ಪ್ರಸಾದವನ್ನು ಸ್ವೀಕರಿಸಿ ಆರೋಗಣೆಯನ್ನು ನಡೆಸುತ್ತಿದ್ದನು.

ಮೈಸೂರು ಅರಸರು ಶಿವಭಕ್ತಿಸಂಪನ್ನರು ಮತ್ತು ಶಿವಧರ್ಮನಿಷ್ಠರು. ಯಾರು ಬೇಕಾದರೂ ಶಿವದೀಕ್ಷೆಯನ್ನು ಹೊಂದಿ ಲಿಂಗವಂತರಾಗಬಹುದೆಂಬ ಉದಾತ್ತತತ್ವವನ್ನು ಮೈಸೂರು ಅರಸರು ಪ್ರೋತ್ಸಾಹಿಸುತ್ತಲೇ ಬಂದಿರುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರೂ ಈ ರಾಜವಂಶದ ಕಡೆಯ ದೊರೆ ಜಯಚಾಮರಾಜ ಒಡೆಯರೂ ಶಿವಭಕ್ತಿಸಂಪನ್ನರಾಗಿದ್ದರು. ಆಳಿದ ಮಹಾಸ್ವಾಮಿಯವರಾದ ಶ್ರೀ ಜಯಚಾಮರಾಜ ಒಡೆಯರು ತಮ್ಮ ಮನೆತನದ ಮೂಲ ಪುರುಷರಾದ ಯದುರಾಯರನ್ನು ಆಶೀರ್ವದಿಸಿ ರಾಜ್ಯಸ್ಥಾಪನೆಗೆ ನೆರವಾದ ಸುತ್ತೂರು ಪೀಠಾಧೀಶ್ವರ ಗುರುಪರಂಪರೆಯಲ್ಲಿ ಈಗ ಸುತ್ತೂರು ವೀರಸಿಂಹಾಸನಾಧೀಶ್ವರರಾಗಿರುವ ಪೂಜ್ಯ ಶ್ರೀ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರಿಗೆ "ರಾಜಗುರುತಿಲಕ" ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದುದು ಈ ಪ್ರಾಚೀನ ರಾಜಗುರುಸಂಬಂಧವನ್ನು ಸೂಚಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

---

ತಪವೆತ್ತ, ಹೆರರ ಕೇಡಿಂಗೆ ಬಗೆವುದೆತ್ತ ?
ಜಪವೆತ್ತ, ಶರಣರ ಮೇಲೆ ಅನೃತವ ನುಡಿವುದೆತ್ತ ?
ಪಂಚಾಚಾರವೆತ್ತ, ಪಾತಕಕ್ಕೆ ಮನ ಬಗೆವುದೆತ್ತ ?
ಇಂತೀ ಹೊಜಬಳಕೆಯ ಲೋಕರಂಜನೆಯಲ್ಲಿರ್ಪವರಿಗೆ ನಾನಂಜುವೆ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ, ನೀನಂಜಿ ದೂರವಹೋಡುವೆ

ಸ್ವತಂತ್ರ ಸಿದ್ಧಲಿಂಗೇಶ್ವರ

* * *

ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ
ಹಿಡಿದಹೆನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ।
ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ
ಕಾಣದುದ ಕಾಣಬಹುದು ಗುಹೇಶ್ವರ.

ಅಲ್ಲಮಪ್ರಭು

# ವೀರಶೈವ ಸಾಹಿತ್ಯಕ್ಕೆ ಕೆಳದಿ ಅರಸರ ಕೊಡುಗೆ

**ಡಾ. ಸಾ. ಶಿ. ಮರುಳಯ್ಯ**

ರಾಜರ ಆಶ್ರಯದಲ್ಲಿ ಕವಿಗಳ ವಾಣಿಯು ಉದಯಿಸುತ್ತಿತ್ತು. ಅವರ ರಂಗಶಾಲೆಗಳಲ್ಲಿಯೇ ಕವಿಗಳ ನಾಟ್ಯಕಲೆಯು ಪ್ರದರ್ಶಿತವಾಗುತ್ತಿತ್ತು. ರಾಜರುಗಳ ಆಸ್ಥಾನವು ವಾಸ್ತವವಾಗಿ ಕಲೆ, ಕೌಶಲ ಮತ್ತು ಸಂಸ್ಕೃತಿಗಳ ಪ್ರಧಾನ ಕೇಂದ್ರವಾಗಿದ್ದಿತು. ಆದುದರಿಂದ ಕವಿಗಳ ನೈಸರ್ಗಿಕವಾದ ಪ್ರತಿಭೆಯು ಜಾಗೃತಿ ಹೊಂದಲೂ ಅಲ್ಲಿ ಅನುಕೂಲವಾದ ವಾತಾವರಣವಿದ್ದಿತು. ಸರಸ್ವತಿ ಮತ್ತು ಲಕ್ಷ್ಮಿಯರಿಗೆ ಆಶ್ರಯಭೂತರಾಗಿದ್ದ ರಾಜರುಗಳು ಮಹಾಕಾವ್ಯಗಳ ನಾಯಕರೂ ಆಗುತ್ತಿದ್ದರು.[1] ಕೆಳದಿಯನ್ನಾಳಿದವರು ಮಹಾಕಾವ್ಯಕ್ಕೆ ನಾಯಕರಾಗದಿದ್ದರೂ ಉತ್ತಮ ಇತಿಹಾಸ ಗ್ರಂಥಕ್ಕೆ ವಸ್ತುವಾಗಿದ್ದಾರೆ. ಕಿರಿಯ ಬಸವಪ್ಪನಾಯಕನಂಥವರು ಉತ್ತಮ ಕಲಾಪೂರ್ಣ ನಾಟಕದ ನಾಯಕರೂ ಆಗಿದ್ದಾರೆ. ಆಚಾರ್ಯ ಬಲದೇವ ಉಪಾಧ್ಯಾಯರು ಹೇಳಿದಂತೆ ಅನೇಕ ಭಾರತೀಯ ರಾಜಾಸ್ಥಾನಗಳಂತೆ ಕೆಳದಿಯ ಆಸ್ಥಾನವೂ ಸಿರಿಸರಸ್ವತಿಯರ ಪವಿತ್ರ ಸಂಗಮಕ್ಷೇತ್ರವಾಗಿದೆ.

ಕೆಳದಿಯನ್ನಾಳಿದವರು ಸುಮಾರು ಇಪ್ಪತ್ತು ಮಂದಿ. ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಕಲಾವಿದರನ್ನು ಪೋಷಿಸಿ, ಕಲೆಯನ್ನು ಪ್ರೋತ್ಸಾಹಿಸಿ, ತನ್ಮೂಲಕ ನಮ್ಮ ವಿಶಿಷ್ಟ ಸಂಸ್ಕೃತಿಯ ವೃಕ್ಷಕ್ಕೆ ನೀರೆರೆದ ಪುಣ್ಯಕಾರ್ಯದಲ್ಲಿ ಭಾಗಿಗಳಾಗಿದ್ದಾರೆ. ಆದರೆ ಸಾಹಿತ್ಯಕಲೆಗೆ ಸಹಾಯಕರಾದವರು ಕೆಲವರು ಮಾತ್ರ. ಕೆಳದಿಯನ್ನಾಳಿದವರಲ್ಲಿ ಏಳು ಜನ ಪ್ರಭುಗಳು ಸುಮಾರು ೨೭ ಮಂದಿ ಕವಿಗಳನ್ನು ಪೋಷಿಸಿ, ಸುಮಾರು ೭೫ ಕೃತಿಗಳು ಬೆಳಕು ಕಾಣುವಂತೆ ಮಾಡಿದ್ದಾರೆ. ಆದರೆ ನಮ್ಮ ಕಣ್ಣಿಗೆ ಕಾಣದ, ಕಿವಿಗೆ ಬೀಳದ ಅದೆಷ್ಟು ಕವಿಗಳ ಕೃತಿಗಳು ಇನ್ನೂ ಅಜ್ಞಾತವಾಸ ಮಾಡುತ್ತಿವೆಯೋ ತಿಳಿಯದು. ಇರಲಿ, ಕಂಡು ಕೇಳಿದ ಕೃತಿಗಳು ಹೀಗಿವೆ:[2]

ಇದು ಕೆಳದಿಯ ಆಸ್ಥಾನ ಸೂರೆಗೊಂಡ ಸಾಹಿತ್ಯಸುಗ್ಗಿ. ಸಂಖ್ಯಾದೃಷ್ಟಿಯಿಂದಲ್ಲದೆ ಸತ್ವದೃಷ್ಟಿಯಿಂದಲೂ ಇದು ದೊಡ್ಡದೇ. ಆ ಸತ್ವ ವಿಶೇಷವಾಗಿ ಆಧ್ಯಾತ್ಮಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ. ಅದರಲ್ಲೂ ವೀರಶೈವಸಿದ್ಧಾಂತ ಹಾಗೂ ಶಿವಾದ್ವೈತದರ್ಶನ, ಅದರ ವೈಶಿಷ್ಟ್ಯವೆನಿಸಿದೆ. ಪೌರಾಣಿಕ ಘಟನೆಗಳನ್ನು ವಸ್ತುವಾಗುಳ್ಳ ಕೃತಿಗಳೆಲ್ಲವೂ ಶಿವಪಾರಮ್ಯವನ್ನು ಚಿತ್ರಿಸಿದರೆ, ಉಳಿದ ಗ್ರಂಥಗಳು ಕೆಲವು ವೀರಶೈವಸಿದ್ಧಾಂತದ ಕೈಪಿಡಿಗಳಾಗಿವೆ. ಭಾಷ್ಯಗಳೂ ಕೂಡ ಶಿವಸಮಯಕ್ಕೇ ಸೀಮಿತವಾಗಿವೆ. ಒಟ್ಟಿನಲ್ಲಿ, ಪ್ರಭು ಪ್ರಜೆಗಳ ಮನೋಧರ್ಮ ಆ ಯುಗದ ಸಾಹಿತ್ಯದಲ್ಲಿ ಚಿತ್ರರಗೊಳ್ಳುವುದರಿಂದ ಕೆಳದಿಯ ಆಸ್ಥಾನ ಶಿವೋಪಾಸನೆಗೆ ವಿಶೇಷ ಮನ್ನಣೆ ಕೊಟ್ಟಿರುವಂತಿದೆ. ಅದರಿಂದಾಗಿ ವೀರಶೈವಸಾಹಿತ್ಯಕ್ಕೆ ಕೆಳದಿ ತನ್ನ ವಿಶೇಷ ಕಾಣಿಕೆಯನ್ನು ಸಲ್ಲಿಸಿದಂತಾಗಿದೆ. ಇದರ ಮೇಲೆ ಒಂದು ಹಕ್ಕಿನೋಟ ಹರಿಸೋಣ:

೧. ದೊರೆತ ಆಧಾರಗಳಿಂದ ಕೆಳದಿಯ ದೊಡ್ಡಸಂಕಣ್ಣನಾಯಕ (ಕ್ರಿ.ಶ. ೧೫೪೬–೧೫೫೮) ಮೊಟ್ಟಮೊದಲನೆಯ ಕವಿಪೋಷಕನೆಂದು ಹೇಳಬಹುದು. ಮಠಾಧಿಪತಿಯೂ, ಕೆಳದಿ ಅರಮನೆಯ ರಾಜಗುರುವೂ ಆದ ಚೆನ್ನವೀರಮಾಹೇಶ್ವರನು ಅವನ ಆಸ್ಥಾನವನ್ನು ಬೆಳಗಿಸಿದ ಕವಿ, ಕೆಳದಿ ಆಸ್ಥಾನದ ಆದಿಕವಿ ಹಾಗೂ ಕೆಳದಿ ಕಂಡ ಪ್ರಥಮ ಕನ್ನಡ ವೈಯಾಕರಣಿ. ಇವನ ವ್ಯಾಕರಣ ಕೃತಿಗಳು ಅಂತಿರಲಿ, ಉಪಲಬ್ಧವಿಲ್ಲದ ಕಾಶೀಕಾಂಡ ಮತ್ತು ವೀರಮಾಹೇಶ್ವರ ತಂತ್ರಟೀಕು ಇವುಗಳೂ ಅಂತಿರಲಿ, ಆದರೆ ಪುರುಷಸೂಕ್ತಟೀಕು ಕೇವಲ ಇಪ್ಪತ್ತು ಪುಟಗಳಷ್ಟು ಪರಿಮಿತಿಯುಳ್ಳ ಪುಟ್ಟ ಗ್ರಂಥವಾದರೂ ಮಹತ್ವಪೂರ್ಣವಾದದ್ದು. ಚೆನ್ನವೀರಮಾಹೇಶ್ವರನು 'ಪುರುಷ' ಎಂಬ ಪದಕ್ಕೆ 'ನಿರಂಜನ ಜಂಗಮವು' ಎಂದು ಅರ್ಥೈಸಿದ್ದಾನೆ. ಅಂತೆಯೇ, "ಓಂ ಶಾಂತಿಶ್ಶಾಂತಿಃ ಸರ್ವಶಾಂತಿರಸ್ತು"—ಎಂಬುದಕ್ಕೆ:

---

1 ಬಲದೇವ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯಕಾ ಇತಿಹಾಸ್, ಪು. ೧೧೧

2 ನೋಡಿ: ಪುಟ ೩೪೭-೩೪೮

# ಕೆಳದಿಯ ಸಾಹಿತ್ಯಸಂಪತ್ತು–ಕನ್ನಡ

| ಕ್ರಮ ಸಂಖ್ಯೆ ರಾಜ | ಕಾಲ | ಕವಿ | ಕೃತಿ | ಸ್ವರೂಪ |
|---|---|---|---|---|
| ೧. ದೊಡ್ಡ ಸಂಕಣ್ಣನಾಯಕ | ಕ್ರಿ.ಶ. ೧೫೪೬–೧೫೫೯ | ಅ) ಚೆನ್ನವೀರಮಾಹೇಶ್ವರ | ೧. ಕಾಶೀಕಾಂಡ | ? |
| | | | ೨. ನಮಕ–ಚಮಕ | ಟೀಕು |
| | | | ೩. ಸಟೀಕಾಪುರುಷಸೂಕ್ತಮ್ | ಟೀಕು |
| | | | ೪. ವೀರಮಾಹೇಶ್ವರ ತಂತ್ರ | ಟೀಕು |
| | | | ೫. ಸಾರಸ್ವತವ್ಯಾಕರಣ (ಶಬ್ದ ಮಣಿ) | ವ್ಯಾಕರಣ |
| | | | ೬. ಕಾಶಕೃತ್ಸ್ನಧಾತುಶಬ್ದ ಕಲಾಪ ಪಾಠ ಅಥವಾ 'ಸಂಸ್ಕೃತಪ್ರಕಾಶಿಕೆ' ಎಂಬ ಕನ್ನಡ ಟೀಕು | ವ್ಯಾಕರಣ |
| ೨. ಹಿರಿಯ ವೆಂಕಟಪ್ಪನಾಯಕ | ಕ್ರಿ.ಶ. ೧೫೮೩–೧೬೩೦ | ಅ) ತಿರುಮಲಭಟ್ಟ | ೧. ಕರ್ಣಾಟಕ ಶಿವಗೀತೆ | ವಾರ್ಧಕಕಾವ್ಯ |
| ೩. ಶಿವಪ್ಪನಾಯಕ | ಕ್ರಿ.ಶ. ೧೬೪೬–೧೬೬೧ | ಅ) ಚನ್ನಮೂರ್ತಿ ಬಸವಲಿಂಗದೇವರು | ೧. ವೀರಮಾಹೇಶ್ವರಾಚಾರಸುಧಾವಾರ್ಧಿ ಟೀಕು | ಭಾಷ್ಯ |
| ೪. ಹಿರಿಯ ಬಸವಪ್ಪನಾಯಕ | ಕ್ರಿ.ಶ. ೧೬೯೮–೧೭೧೫ | ಅ) ಸ್ವಯಂಕವಿ | ೧. ಸೂಕ್ತಿಸುಧಾಕರ (ಕನ್ನಡ + ಸಂಸ್ಕೃತ) | ? |
| | | ಆ) ಶರಜಾನಾಗಪ್ಪಯ್ಯ | ೧. ಶುಕಸಪ್ತತಿ | ಭಾಮಿನಿ |
| | | ಇ) ಅಪ್ಪಯ್ಯ (ಕೃಷ್ಣ) | ೧. ಹಾಡುಗಳು | ಹಾಡು |
| | | ಈ) ಗಂಗಾದೇವಿ | ೧. ಕೆಳದಿರಾಜಾಭ್ಯುದಯಮ್ | ಗದ್ಯ ಮತ್ತು ಭಾಮಿನಿ |
| ೫. ಕಿರಿಯ ಸೋಮಶೇಖರನಾಯಕ | ಕ್ರಿ.ಶ. ೧೭೧೫–೧೭೪೦ | ಅ) ನಿರ್ವಾಣಮಂತ್ರಿ | ೧. ಶಿವಪೂಜಾವಿಧಾನ | ? |
| ೬. ಕಿರಿಯ ಬಸವಪ್ಪನಾಯಕ | ಕ್ರಿ.ಶ. ೧೭೪೦–೧೭೫೫ | ಅ) ಸಂಗನಬಸವಪ್ಪ | ೧. ವೀರಶೈವಸುಧಾನಿಧಿ ಟೀಕು | ಭಾಷ್ಯ |
| | | ಆ) ಕವಿಲಿಂಗಣ್ಣ | ೧. ಕೆಳದಿನೃಪವಿಜಯಂ | ಚಂಪು |
| | | | ೨. ಶಿವಪೂಜಾದರ್ಪಣಂ | ಚಂಪು |
| | | | ೩. ದಕ್ಷಾಧ್ವರವಿಜಯಂ | ಚಂಪು |
| | | | ೪. ಪಾರ್ವತೀಪರಿಣಯಂ | ಚಂಪು |
| | | | ೫. ಶಿವಕಲ್ಯಾಣಂ | ಯಕ್ಷಗಾನ |
| | | ಇ) ವೆಂಕಕವಿ | ೧. ಗಣಸಹಸ್ರನಾಮ | ವೃತ್ತ |
| | | | ೨. ಪಾರ್ವತೀವಲ್ಲಭಶತಕ | ವೃತ್ತ |
| | | | ೩. ಸರಹರಿವಿಜಯ | ಭಾಮಿನೀ |
| | | | ೪. ಕೆಳದಿರಾಮೇಶ್ವರನನ್ನು ಕುರಿತ ಹಾಡುಗಳು | ಹಾಡು |

# ಕೆಳದಿಯ ಸಾಹಿತ್ಯಸಂಪತ್ತು-ಸಂಸ್ಕೃತ

| | | | | |
|---|---|---|---|---|
| ೧. ಹಿರಿಯ ವೆಂಕಟಪ್ಪನಾಯಕ | ಕ್ರಿ.ಶ. ೧೫೮೩–೧೬೩೦ | ಅ) ಸ್ವಯಂಕವಿ | ೧. ಶಿವಗೀತಾವ್ಯಾಖ್ಯಾ | ಭಾಷ್ಯ |
| | | | ೨. ವೀರಮಾಹೇಶ್ವರಾಚಾರಸುಧಾವಾರ್ಧಿಃ | ಧರ್ಮಗ್ರಂಥ |
| | | | ೩. ತತ್ತ್ವಾಧಿಕಾರನಿರ್ಣಯಃ | ? |
| | | ಆ) ತಿರುಮಲಭಟ್ಟ | ೧. ಶಿವಾಷ್ಟಪದಿ | ? |
| | | | ೨. ಗೀತಗೌರೀಪತಿಂ | ? |
| | | ಇ) ಭಟ್ಟೋಜಿದೀಕ್ಷಿತ | ೧. ತತ್ತ್ವಕೌಸ್ತುಭಃ | ಸಿದ್ಧಾಂತ |
| | | | ೨. ಸಿದ್ಧಾಂತ ಕೌಮುದೀ | ವ್ಯಾಕರಣ |
| | | | ೩. ಪ್ರೌಢಮನೋರಮಾ (ವ್ಯಾಕರಣ) | ವ್ಯಾಖ್ಯಾನ |
| | | | ೪. ತಂತ್ರಾಧಿಕಾರನಿರ್ಣಯಂ | ಆಗಮಿಕವಿಚಾರ |
| | | | ೫. ಶಬ್ದಕೌಸ್ತುಭಃ | ವ್ಯಾಕರಣ ವ್ಯಾಖ್ಯಾನ |
| | | | ೬. ವೇದಭಾಷ್ಯಸಾರಃ | ಭಾಷ್ಯ |
| | | | ೭. ಜ್ಞಾತಿವಿವೇಕಃ | ಧರ್ಮಗ್ರಂಥ |
| | | ಈ) ರಂಗನಾಥದೀಕ್ಷಿತ | ೧. ತಂತ್ರಸಾರವ್ಯಾಖ್ಯಾನಂ | ವ್ಯಾಖ್ಯಾನ |
| | | ಉ) ರಂಗೋಜಿಭಟ್ಟ | ೧. ಶಿವೋಲ್ಲಾಸಃ | ಕಾಳಹಸ್ತೀಶನ ಸ್ತೋತ್ರ |
| | | ಊ) ಅಶ್ವಪಂಡಿತ | ೧. ಮಾನಸಪ್ರಿಯಂ | ಅಶ್ವಶಾಸ್ತ್ರ |
| ೨. ವೀರಭದ್ರನಾಯಕ | ಕ್ರಿ.ಶ. ೧೬೩೦–೧೬೪೬ | ಅ) ಕೊಂಡಭಟ್ಟ | ೧. ತರ್ಕಪ್ರದೀಪಃ | ತರ್ಕಶಾಸ್ತ್ರ |
| | | | ೨. ವೈಯಾಕರಣ ಭೂಷಣಂ | ವ್ಯಾಕರಣ |
| ೩. ಹಿರಿಯ ಬಸವಪ್ಪನಾಯಕ | ಕ್ರಿ.ಶ. ೧೬೯೮–೧೭೧೫ | ಅ) ಸ್ವಯಂ ಕವಿ | ೧. ಶಿವತತ್ತ್ವರತ್ನಾಕರಃ | ವಿಶ್ವಕೋಶ |
| | | | ೨. ಸುಭಾಷಿತಸುರದ್ರುಮಃ | ನೀತಿಗ್ರಂಥ |
| ೪. ಕಿರಿಯ ಸೋಮಶೇಖರನಾಯಕ | ಕ್ರಿ.ಶ. ೧೭೧೫–೧೭೪೦ | ಅ) ನಿರ್ವಾಣಮಂತ್ರಿ | ೧. ಕ್ರಿಯಾಸಾರವ್ಯಾಖ್ಯಾ | ಭಾಷ್ಯ |
| | | | ೨. ಶ್ರೀ ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿಯ ಸ್ವಲ್ಪ ಭಾಗದ ತರ್ಜುಮೆ–ಸಂಸ್ಕೃತಕ್ಕೆ | ವಿಶ್ವಕೋಶ |
| ೫. ಕಿರಿಯ ಬಸವಪ್ಪನಾಯಕ | ಕ್ರಿ.ಶ. ೧೭೪೦–೧೭೫೫ | ಅ) ಸ್ವಯಂ ಕವಿ | ೧. ಶೈವಸಂಜೀವಿನೀ (ಪಂಚಶ್ಲೋಕೀವ್ಯಾಖ್ಯಾ) | ಭಾಷ್ಯ |
| | | ಆ) ಮೌನಪ್ಪ ಪಂಡಿತ | ೧. ವೀರಶೈವಾಚಾರಕೌಸ್ತುಭಃ | ಧರ್ಮಗ್ರಂಥ |
| | | ಇ) ಷಡಕ್ಷರಮಂತ್ರಿ | ೧. ವೀರಶೈವಧರ್ಮಶಿರೋಮಣಿಃ | ವ್ಯಾಖ್ಯಾನ |
| | | ಈ) ಮರಿತೋಂಟದಾರ್ಯ | ೧. ವೀರಶೈವಾನಂದಚಂದ್ರಿಕಾ | ಧರ್ಮಗ್ರಂಥ |
| | | | ೨. ತತ್ತ್ವಪ್ರದೀಪಿಕಾ ಅಥವಾ ಸಿದ್ಧಾಂತ ಶಿಖಾಮಣಿ ವ್ಯಾಖ್ಯಾ | ಭಾಷ್ಯ |
| | | ಉ) ಸಂಗಮೇಶ್ವರಯತಿ | ೧. ಸಂಗಮೇಶ್ವರ ವಿಲಾಸ ಭಾಷ್ಯಂ (ಶಿವಸಹಸ್ರನಾಮವ್ಯಾಖ್ಯಾ) | ಭಾಷ್ಯ |
| | | ಊ) ಚೊಕ್ಕನಾಥ | ೧. ಸೇವಂತಿಕಾಪರಿಣಯಂ | ನಾಟಕ |
| | | ಋ) ವಾದಿರಾಜ ವಿದ್ಯಾತೀರ್ಥ | ? | ? |
| | | ೠ) ವೇದವಿದ್ಯಾತೀರ್ಥ | ? | ? |

ಓಂ ಶಾಂತಿಃ ನಿರಂಜನ ಜಂಗಮದ ಕಾರುಣ್ಯವುಂ, ಅಸ್ತು : ಆಗಲಿ ; ಶಾಂತಿಃ ಸಾಕಾರ ಜಂಗಮದ ಕಾರುಣ್ಯವುಂ. ಅಸ್ತು : ಆಗಲಿ ; ಸರ್ವಶಾಂತಿಃ ಸದಾಶಿವನ ಸದ್ಯೋಜಾತವಾಮದೇವಾಘೋರತತ್ಪುರುಷಮುಖಂಗಳಭೂತಿ. ಭಸಿತ ಭಸ್ಮ ಕ್ಷಾರಂಗಳ ಹಕ್ಕಳೆಗಳಿಂ ಪುಟ್ಟಿದ ಘಂಟಾಕರ್ಣ, ಗಜಕರ್ಣ, ದಾರುಕ, ರೇಣುಕರ ಗೋತ್ರಂಗಳ ಋಗ್ಯಜುರಥರ್ವಸಾಮಶಾಖಾಧ್ಯಯನರ ವೀರಶೈವತಂತ್ರ, ವೀರಮಾಹೇಶ್ವರತಂತ್ರ, ಪರಮರಹಸ್ಯತಂತ್ರ, ಶಿವರಹಸ್ಯತಂತ್ರ ಸೂತ್ರಂಗಳ ಏಕೋರಾಮ, ಪಂಡಿತ, ಮರುಳಸಿದ್ಧ, ರೇವಣಸಿದ್ಧ, ಪ್ರವರಂಗಳ ವಿರಕ್ತಾರಾಧ್ಯಾತಿಥಿಘನಲಿಂಗರ ಕಾರುಣ್ಯವುಂ ; ಅಸ್ತು: ಆಗಲಿ : ಎಂಬುದಾಗಿ ವ್ಯಾಖ್ಯಾನಿಸಿದ್ದಾನೆ.

ಈ 'ನಿರಂಜನಜಂಗಮಭಾಷ್ಯ'ವಲ್ಲದೆ, ಚನ್ನವೀರನು ಯಜುರ್ವೇದದ ನಾಲ್ಕನೆಯ ಕಾಂಡದ, ಐದನೆಯ ಪ್ರಪಾಠಕದಲ್ಲಿ ಬರುವ ಶ್ರೀರುದ್ರದಲ್ಲಿ ಇತರ ದೇವತಾಪ್ರಸ್ತಾಪವಿಲ್ಲದೆ, ಅಖಂಡವಾಗಿ ಶಿವನನ್ನೇ ಜಗತ್ಕಾರಣನನ್ನಾಗಿಯೂ, ಸಕಲಭೂತಾಂತರ್ಯಾಮಿಯನ್ನಾಗಿಯೂ ಹೊಗಳಿ ಶಿವನು ಅಣುರೇಣುತೃಣಕಾಷ್ಠಗಳಲ್ಲೆಲ್ಲಾ ಪರಿಪೂರ್ಣನಾಗಿದ್ದಾನೆಂದು ಹೇಳುವ ನಮಕ-ಚಮಕಕ್ಕೆ ಕನ್ನಡ ಟೀಕು ರಚಿಸಿದ್ದಾನೆ. ಶಿವಾರ್ಚಕರಿಗೆ ಪ್ರಾಣಸ್ವರೂಪವಾದ ಈ ರುದ್ರೋಪನಿಷತ್ ಔಪಾಸಕಹೃದಯಕ್ಕೆ ಅಮೃತಸೇಚನೆಯಂತಿದೆ.

೨. ಸುಮಾರು ಅರ್ಧ ಶತಕದವರೆಗೆ ಅವಿಚ್ಛಿನ್ನವಾಗಿ ಅತ್ಯುನ್ನತ ರೀತಿಯಲ್ಲಿ ರಾಜ್ಯಭಾರಮಾಡಿದ ಸ್ವತಂತ್ರ ಕೆಳದಿಯ ಪ್ರಥಮ ಪ್ರಭು ಹಿರಿಯ ವೆಂಕಟಪ್ಪನಾಯಕ (ಕ್ರಿ.ಶ. ೧೫೮೨–೧೬೩೦) ಆಸ್ಥಾನಕವಿ ತಿರುಮಲಭಟ್ಟ. ಇವನ ಕೃತಿಗಳು ಮೂರು. ಗೀತಗೌರೀವರ, ಶಿವಾಷ್ಟಪದಿ ಮತ್ತು ಕರ್ಣಾಟಕ ಶಿವಗೀತೆ. ಶಿವಗೀತೆಯೊಂದನ್ನು ಬಿಟ್ಟರೆ ಉಳಿದ ಎರಡೂ ಕೃತಿಗಳು ಸಿಕ್ಕಿಲ್ಲ. ಇರಲಿ, ಶಿವಗೀತೆ ಪದ್ಮಪುರಾಣದ ಒಂದು ಭಾಗ. ಭಗವದ್ಗೀತೆಯಂತೆ ಇದೂ ಒಂದು ಮೋಕ್ಷಸಾಧಕವಾದ ಕೃತಿ. ಸೀತಾಪಹರಣದ ನಂತರ ಶ್ರೀರಾಮಲಕ್ಷ್ಮಣರು ಸಂತಾಪದಿಂದ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಅಗಸ್ತ್ಯಋಷಿಗಳು ಬಂದು ಶ್ರೀರಾಮನಿಗೆ ಉಪದೇಶಿಸಿದ ಶಿವದೀಕ್ಷಾವಿಧಿಯೂ, ಪರಶಿವನು ಪ್ರತ್ಯಕ್ಷನಾಗಿ ರಾಮನಿಗೆ ಪಾಶುಪತಾಸ್ತ್ರವನ್ನಿತ್ತ ಕಥೆಯೂ, ಪರಮೇಶ್ವರ ವಿರಾಟ್‌ಸ್ವರೂಪ, ಜಗದ್ರಕ್ಷಣವ್ಯಾಪಾರ ಕ್ರಮ, ದೇಹೋತ್ಪತ್ತಿ, ಜೀವೋತ್ಪತ್ತಿಕ್ರಮ, ಶಿವೋಪಾಸನ ವಿಧಾನ, ಮೋಕ್ಷಾಧಿಕಾರಲಕ್ಷಣ ಮೊದಲಾದ ಶಿವ ಯೋಗದ ಲಕ್ಷಣಗಳೆಲ್ಲವೂ ಇದರಲ್ಲಿ ಅಡಗಿವೆ. ಇಂತಹ ಅಧ್ಯಾತ್ಮಭೂಯಿಷ್ಠವೂ, ನೀತಿಬೋಧಕವೂ, ಧರ್ಮ ಸ್ವರೂಪವೂ, ಇಹ-ಪರಸಾಧಕವೂ, ಪರಮೇಶ್ವರಪ್ರೋಕ್ತವೂ ಆಗಿ ಮೆರೆಯುತ್ತಿರುವ ಶಿವಗೀತೆ ನಿಜಕ್ಕೂ ಸಾರಸ್ವತ ಕ್ಷೇತ್ರಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ. ಇದು ೧೬ ಸಂಧಿಗಳಿಂದ ಕೂಡಿದ ೨೭೭ ವಾರ್ಧಕಷಟ್ಪದಿಗಳನ್ನುಳ್ಳ ಗ್ರಂಥವಾಗಿದೆ.

ಹಿರಿಯ ವೆಂಕಟಪ್ಪನು ಸ್ವಯಂ ಕವಿ. ಶಿವಗೀತಾವ್ಯಾಖ್ಯಾ ಎಂಬ ಭಾಷ್ಯ ರಚಿಸಿದ್ದಾನೆ. ತಿರುಮಲಭಟ್ಟನಲ್ಲದೆ, ಭಟ್ಟೋಜಿದೀಕ್ಷಿತ, ರಂಗನಾಥದೀಕ್ಷಿತ, ರಂಗೋಜಿಭಟ್ಟ, ಅಶ್ವಪಂಡಿತ ಮೊದಲಾದ ಕವಿಪುಂಗವರಿಗೆ ಆಶ್ರಯ ಕೊಟ್ಟಿದ್ದಾನೆ. ಕೃತಿರಚನೆಗೆ ಕಾರಣನಾಗಿದ್ದಾನೆ.

೩. ಕೆಳದಿಯ ಶಿಸ್ತುಗಾರ ಶಿವಪ್ಪನಾಯಕನ (ಕ್ರಿ.ಶ. ೧೬೪೫–೧೬೬೦) ಪ್ರಾರ್ಥನೆಯ ಮೇರೆಗೆ ಹಿರಿಯ ವೆಂಕಟಪ್ಪನಾಯಕನಿಂದ ವಿರಚಿತವಾದ "ವೀರಮಾಹೇಶ್ವರಾಚಾರಸುಧಾವಾರ್ಧಿಃ" ಎಂಬ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕು ಬರೆದವರು ಷಟ್‌ಸ್ಥಲಾಚಾರಚಕ್ರವರ್ತಿ ಚರಮೂರ್ತಿ ಬಸವಲಿಂಗದೇವರು. ಸುಧಾವಾರ್ಧಿಯು ಶಿವಮಹತ್ವ, ಗುರುಮಹತ್ವ, ಲಿಂಗಮಹತ್ವ ಮೊದಲಾದ ೧೩ ಸ್ಥಲಗಳಿಂದ ಕೂಡಿದೆ. ಶಿವಧರ್ಮವನ್ನೂ, ವೀರಮಾಹೇಶ್ವರನನ್ನೂ ಗೌರವಾದರಗಳಿಂದ ಕಾಣಬೇಕೆಂಬ ವಿಷಯವು ಸುವಿಸ್ತರಗೊಂಡಿದೆ.

೪. ಕ್ರಿ.ಶ. ೧೬೩೦–೧೬೪೫ರ ವರೆಗೆ ಆಳಿದ ವೀರಭದ್ರನಾಯಕನೂ ಕೊಂಡಭಟ್ಟನಿಗೆ ಆಶ್ರಯವಿತ್ತು ತರ್ಕ, ವ್ಯಾಕರಣಗ್ರಂಥರಚನೆ ಮಾಡಿಸಿದ್ದಾನೆ.

೫. ಕ್ರಿ.ಶ. ೧೬೯೮ರಿಂದ ೧೭೧೪ರ ವರೆಗೆ ಕೆಳದಿಯಲ್ಲಿ ಬಹು ಅದ್ದೂರಿಯಿಂದ ಆಡಳಿತ ನಡೆಸಿದ ಪುಣ್ಯಪ್ರಭು ಹಿರಿಯ ಬಸವರಾಜೇಂದ್ರನು ಸ್ವಯಂ ಕವಿಯೂ, ಕವಿಗಳ ಕಲ್ಪವೃಕ್ಷವೂ ಆಗಿದ್ದಾನೆ. ಈತನು ಸಂಸ್ಕೃತ ಮತ್ತು ಕನ್ನಡ ಎರಡು ಭಾಷೆಗಳಲ್ಲೂ ಕೃತಿರಚನೆ ಮಾಡಿದಂತಿದೆ. ಸಂಸ್ಕೃತದಲ್ಲಿ "ಶಿವತತ್ತ್ವರತ್ನಾಕರ"ವೆಂಬ ಬೃಹತ್ ವಿಶ್ವಕೋಶವನ್ನೂ, "ಸುಭಾಷಿತಸುರದ್ರುಮ"ವೆಂಬ ಸಾರಸ್ವತಲೋಕದ ಸರ್ವಕಾಮಿತಗಳನ್ನೂ ಪೂರೈಸಬಲ್ಲ ಪುಣ್ಯಕೃತಿಯನ್ನೂ, ಕನ್ನಡ ಮತ್ತು ಸಂಸ್ಕೃತಮಿಶ್ರಿತವಾದ "ಸೂಕ್ತಿಸುಧಾಕರ" ಎಂಬ ಗ್ರಂಥವನ್ನೂ ಕೊಟ್ಟಿದ್ದಾನೆ. ಆದರೆ

ಸೂಕ್ತಿಸುಧಾಕರ ಉಪಲಬ್ಧವಿಲ್ಲ. "ಭಾರತೀನರ್ತನಸ್ಥಲ"ನೆಂದು ವಿಖ್ಯಾತನಾದ ಬಸವಪ್ರಭುವಿನ ಪಾಂಡಿತ್ಯ ಪ್ರತಿಭೆಗಳು ಕನ್ನಡಿಗರ ಪಾಲಿಗೆ ಇಲ್ಲವಾಗಿವೆ.

ಇದೇ ಬಸವಪ್ರಭುವಿನ ಆಸ್ಥಾನದಲ್ಲಿ ಹಲವು ಕವಿ, ಕವಯಿತ್ರಿಯರು ಬೆಳಕು ಕಂಡಿದ್ದಾರೆ. ಅವರಲ್ಲಿ—

೬. ಕೆಳದಿಯ ಕಿರಿಯ ಸೋಮಶೇಖರನಾಯಕನ (ಕ್ರಿ.ಶ. ೧೭೧೪–೧೭೪೦) ಮಹಾಮಂತ್ರಿ ನಿರ್ವಾಣಾರ್ಯ. ಈತನು ಕ್ರಿಯಾಸಾರವ್ಯಾಖ್ಯಾ ಎಂಬ ಭಾಷ್ಯ ರಚಿಸಿದ್ದಾನೆ ಸಂಸ್ಕೃತದಲ್ಲಿ. ಅಂತೆಯೇ ನಿಜಗುಣಶಿವಯೋಗಿಗಳ ವಿವೇಕ ಚಿಂತಾಮಣಿಯ ಸ್ವಲ್ಪ ಭಾಗವನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದ್ದಾನೆ. ಕನ್ನಡಕ್ಕೆ 'ಶಿವಪೂಜಾವಿಧಾನ' ಎಂಬ ಗದ್ಯ ಕೃತಿಯನ್ನೂ ಕೊಟ್ಟಿದ್ದಾನೆ. ಇದರಲ್ಲಿ ವೀರಶೈವಮತಾನುಸಾರವಾಗಿ ಶಿವಪೂಜಾಕ್ರಮವು ವಿವರಿಸಲ್ಪಟ್ಟಿದೆ.

೭. ಪ್ರಕಾಂಡಪಂಡಿತನೂ, ಪ್ರಸಿದ್ಧ ಪ್ರಭುವೂ ಆದ ಕಿರಿಯ ಬಸವಪ್ಪನಾಯಕನ ಕಾಲವನ್ನು ಕೆಳದಿ ಆಸ್ಥಾನ ಸಾಹಿತ್ಯದ ಸುವರ್ಣಯುಗ ಎಂದು ಕರೆಯಬಹುದು. ವೈವಿಧ್ಯಪೂರ್ಣವಾದ ಹಲವು ಕಾವ್ಯಗಳು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿವೆ. ಸ್ವಯಂ ಕಲಾವಿದನಾದ ಈತನು ಸಂಸ್ಕೃತದಲ್ಲಿ "ವೀರಶೈವಸಂಜೀವಿನೀ" ಅಥವಾ "ಪಂಚಶ್ಲೋಕೀವ್ಯಾಖ್ಯಾ" ಎಂಬ ವ್ಯಾಖ್ಯಾನಗ್ರಂಥವನ್ನು ರಚಿಸಿದ್ದಾನೆ. ಇವನ ಆಸ್ಥಾನದ ಮಹಾಮಂತ್ರಿ ಷಡಕ್ಷರಿಯು "ವೀರಶೈವಧರ್ಮಶಿರೋಮಣಿ"ಯನ್ನು, ಮರಿತೋಂಟದಾರ್ಯನು 'ವೀರಶೈವಾನಂದಚಂದ್ರಿಕಾ' 'ತತ್ವಪ್ರದೀಪಿಕಾ' ಎಂಬ 'ವೀರಶೈವಸಿದ್ಧಾಂತಶಿಖಾಮಣಿವ್ಯಾಖ್ಯಾ' ಮುಂತಾದ ಧಾರ್ಮಿಕ ಕೃತಿಗಳನ್ನೂ, ಚೊಕ್ಕನಾಥನೆಂಬುವನು 'ಸೇವಂತಿಕಾ ಪರಿಣಯ'ವೆಂಬ ನಾಟಕವನ್ನೂ ಸಂಸ್ಕೃತದಲ್ಲಿ ರಚಿಸಿದ್ದಾರೆ. ಮಹಾಮಾತೆ ಚೆನ್ನಮ್ಮಾಜಿಯ ಕಾಲದಿಂದಲೂ ಬದುಕು ಮಾಡಿಕೊಂಡು ಬಂದು ಕಿರಿಯ ಬಸವರಾಜನ ಆಸ್ಥಾನದಲ್ಲಿ 'ವೀರಶೈವಾಚಾರಕೌಸ್ತುಭ'ವೆಂಬ ಸಂಸ್ಕೃತ ಗ್ರಂಥವನ್ನು ಪೂರ್ಣಗೊಳಿಸಿದ ಮಂತ್ರಿವರ್ಯ ಪೌನಪ್ಪ ಇದೇ ಕಾಲದವನೆಂದು ಗಣಿಸಲಾಗಿದೆ. ಶಿವಸಹಸ್ರನಾಮವ್ಯಾಖ್ಯಾ ಅಥವಾ ಸಂಗಮೇಶ್ವರ ವಿಲಾಸಭಾಷ್ಯ ಎಂಬ ವ್ಯಾಖ್ಯಾನಗ್ರಂಥವನ್ನು ರಚಿಸಿದ ಸಂಗಮೇಶ್ವರ ಯತಿಯೂ, ಪ್ರಸಿದ್ಧ ಸಂಸ್ಕೃತ ವಿದ್ವಾಂಸರೆನಿಸಿದ ಶ್ರೀವಾದಿರಾಜ ವಿದ್ಯಾತೀರ್ಥ ಮತ್ತು ವೇದವಿದ್ಯಾತೀರ್ಥರೆಂಬ ಮಾಧ್ವವಿದ್ವಾಂಸರೂ ಇದೇ ಬಸವರಾಜನ ಆಸ್ಥಾನದ ವಿದ್ವನ್ಮಣಿಗಳಾಗಿದ್ದಾರೆ. ಇದೇ ರೀತಿ ಕನ್ನಡದಲ್ಲೂ ಹಲವು ಪ್ರಸಿದ್ಧ ಕಾವ್ಯಗಳು ಸೃಷ್ಟಿಯಾಗಿವೆ. ಕೆಳದಿಯ ಹೆಮ್ಮೆಯ ಕವಿ ಲಿಂಗಣ್ಣನು, 'ಕೆಳದಿನೃಪವಿಜಯ'ವೆಂಬ ಐತಿಹಾಸಿಕ ಚಂಪೂಕಾವ್ಯವನ್ನೂ, ಶಿವಕಲ್ಯಾಣವೆಂಬ ಬೃಹತ್ ಪ್ರಮಾಣದ ಯಕ್ಷಗಾನವನ್ನೂ, ದಕ್ಷಾಧ್ವರವಿಜಯ, ಪಾರ್ವತೀಪರಿಣಯವೆಂಬ ಚಂಪೂಪುರಾಣಕಾವ್ಯಗಳನ್ನೂ, ಶಿವಪೂಜಾದರ್ಪಣವನ್ನೂ ಕಾಣಿಕೆಯಾಗಿ ನೀಡಿದ್ದಾನೆ. ಅವನ ಮಗ ವೆಂಕನೂ ಸಹ ಪಾರ್ವತೀವಲ್ಲಭಶತಕ, ಗಣಸಹಸ್ರನಾಮ, ನರಹರಿವಿಜಯ, ಕೆಳದಿರಾಮೇಶ್ವರನನ್ನು ಕುರಿತ ಹತ್ತಾರು ಹಾಡುಗಳು ಇವೇ ಮೊದಲಾದ ಕೃತಿಗಳನ್ನು ಕೊಟ್ಟಿದ್ದಾನೆ. ಪೌನಪ್ಪನ ಮೊಮ್ಮಗನೂ, ನಿರ್ವಾಣಾರ್ಯನ ಮಗನೂ ಆದ ಸಂಗನಬಸವಪ್ಪನು ಹಿರಿಯವೆಂಕಟಪ್ಪನಾಯಕನ ವೀರಶೈವಸುಧಾನಿಧಿಗೆ ಕನ್ನಡ ಟೀಕು ಬರೆದಿದ್ದಾನೆ.

ಹೀಗೆ ಕೆಳದಿಯನ್ನಾಳಿದವರು ಸಂಸ್ಕೃತ ಮತ್ತು ಕನ್ನಡ ಭಾಷಾಕೃತಿಗಳನ್ನು ಬೆಳಗಿಸಿ ನಮ್ಮ ಧರ್ಮವನ್ನು ರಕ್ಷಿಸಿದ್ದಾರೆ: ಸಂಸ್ಕೃತಿಯನ್ನು ಪೋಷಿಸಿದ್ದಾರೆ. ಅವರು ಹುಟ್ಟಿನಿಂದ ವೀರಶೈವರು. ಭಾವನೆಯಲ್ಲಿ ಭಾರತೀಯರು. ವಿಶ್ವಸಾಮರಸ್ಯದ ಕಡೆಗೆ ಅವರ ಒಲವಿರುವುದು ಕಂಡುಬರುತ್ತದೆ ಕೇಳಿ :

"The movement of Vīraśaivism in Keladi was broad-based democratic in spirit and catholic in out-look. It did not spend its energies in narrow bigotry and blind fenaticism. It was an enlightened and invigorating religious upheaval making the people selfless and enthusiastic in upholding the cause of Vīraśaivamaṭhas and lifting their thoughts and actions to a higher plane."[1]

[1] Dr. K. N. Chitnis, 'Vīraśaiva Maṭhas in the Keladi Kingdom', The journal of Karnataka University, Dharwar, *Social Sciences*, Vol. III, 1967

# ಶಿವ-ಶರಣ ಸಂಗೀತ

ಪ್ರೊ. ರಾ. ಸತ್ಯನಾರಾಯಣ

## ಪೀಠಿಕೆ

ಈ ಅಭ್ಯಾಸದ ಮಿತಿಗಳನ್ನು ಹೀಗೆ ಸೂಚಿಸಬಹುದು: ಇದು ಸಂಕ್ಷೇಪವೂ ಸೂಚಕಮಾತ್ರವೂ ಆದ ಲೇಖನ. ಇಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ಸಾಮಗ್ರಿಯನ್ನು ವಿಸ್ತಾರವೂ ವೈಜ್ಞಾನಿಕವೂ ಆಗಿ ವಿವೇಚಿಸಲು ಅವಕಾಶ ವಿದೆ. ನಮ್ಮ ಸಂಗೀತಸಾಹಿತ್ಯಗಳ ಚರಿತ್ರೆಯನ್ನೂ ನಮ್ಮ ದೇಶದ ಸಾಂಸ್ಕೃತಿಕಚರಿತ್ರೆಯನ್ನೂ ಸಮಗ್ರವಾಗಿ, ಅವ್ಯಾಹತವಾಗಿ ಬರೆಯಬೇಕಾದರೆ ಇಂತಹ ಅಭ್ಯಾಸವು ಆವಶ್ಯಕವೂ ಹೌದು. ಶಿವಭಕ್ತರಾಗಿರುವ ವೀರಶೈವಕವಿಗಳೂ ಶಿವಶರಣರೆ ಎಂಬ ವಿಶಾಲಾರ್ಥ, ವೀರಶೈವಮತಪ್ರಕ್ರಿಯೆಯನ್ನು ಅವಲಂಬಿಸಿದ ಶಿವಯೋಗಿ ಸಂತರು ಶಿವಶರಣರು ಎಂಬ ಪರಿಮಿತಾರ್ಥ–ಹೀಗೆ ಎರಡು ಅರ್ಥಗಳನ್ನು ಇಟ್ಟುಕೊಂಡು ಶಿವನನ್ನೂ ಶಿವಯೋಗವನ್ನೂ ಕುರಿತು ಬಸವಾದಿಪ್ರಮಥ ಶಿವಶರಣರೂ, ಶಿವನನ್ನೂ ಇಂತಹ ಶಿವಶರಣರನ್ನೂ ಕುರಿತು ವೀರಶೈವ ಕವಿಗಳೂ ರಚಿಸಿರುವ ಶಿವ-ಶರಣ ಸಾಹಿತ್ಯದಲ್ಲಿ ಸಂಗೀತದ ಸ್ಥಾನವೇನು ಎಂಬುದನ್ನು ಈ ಲೇಖನದಲ್ಲಿ ಸ್ಥೂಲವಾಗಿ ಅಭ್ಯಾಸ ಮಾಡಲೆಳಸಿದೆ. ಕನ್ನಡದಲ್ಲಿರುವ ಇಂತಹ ಸಾಹಿತ್ಯದಲ್ಲಿ ಸ್ವಲ್ಪ ಭಾಗವು ಮಾತ್ರ ಇದರ ಸೀಮೆ. ಶಾಸನಸಾಹಿತ್ಯ ಮೊದಲಾದ ಚಾರಿತ್ರಕ ಸಾಮಗ್ರಿ, ತೆಲುಗು, ತಮಿಳು, ಮರಾಠೀ ಮತ್ತು ಸಂಸ್ಕೃತಗಳಲ್ಲಿ ಇವುಗಳಿಗೆ ಪರಸ್ಪರವಾಗಿ ದೊರೆಯುವ ಸಾಹಿತ್ಯ–ಇವುಗಳನ್ನೂ ಇಟ್ಟುಕೊಂಡು ಮಾಡುವ–ಮಾಡಬೇಕಾದ-ಅಭ್ಯಾಸವು ಫಲವತ್ತಾದುದು, ಮುಖ್ಯವಾದುದು. ಮತಶ್ರದ್ಧೆಗಿಂತಲೂ ಇಲ್ಲಿ ಹೆಚ್ಚು ಬೇಕಾಗಿರುವುದು ಸತ್ಯಶ್ರದ್ಧೆ, ಯಥಾವನ್ನಿರೂಪಣದ ಸಮೀಚೀನದೃಷ್ಟಿ.

ಈ ಅಭ್ಯಾಸವನ್ನು ಎರಡು ಹಂತಗಳಲ್ಲಿ ಮಾಡಬಹುದು: ಸಂಗೀತವನ್ನು ಕುರಿತು ವೀರಶೈವ ಕವಿಗಳೂ ಸಂತರೂ ಮಾಡಿರುವ ಉಲ್ಲೇಖಗಳು ಮತ್ತು ಸಂತರು ರಚಿಸಿರುವ ಗೇಯಪ್ರಕಾರಗಳು. ಉಲ್ಲೇಖಗಳು ಹನ್ನೆರಡನೆಯ ಶತಮಾನದಿಂದ ಮೊದಲುಗೊಂಡು ಕಡೆಯಪಕ್ಷ ಹದಿನೆಂಟನೆಯ ಶತಮಾನದವರೆಗೆ ದೊರೆಯುತ್ತವೆ. ಇವು ವಿಪುಲವೂ ಪ್ರೌಢವೂ ಆಗಿದ್ದು ಅವರಿಗೆ ಸಂಗೀತದ ಪ್ರಯೋಗ ಮತ್ತು ಶಾಸ್ತ್ರಗಳಲ್ಲಿ ಇದ್ದ ಗಾಢವಾದ ಪರಿಚಯ ಮತ್ತು ಪ್ರೇಮಗಳನ್ನು ಸೂಚಿಸುತ್ತವೆ. ಸಂಗೀತದ ರಚನೆಗಳೂ ಈ ಅವಧಿಯಲ್ಲಿಯೇ ದೊರೆಯುತ್ತವೆ: ಶಾಸ್ತ್ರೀಯ ಸಂಗೀತರಚನೆಗಳೆಂದು ಇಂದು ಪರಿಭಾವಿಸಲಾಗುತ್ತಿರುವವುಗಳ ಮಾನದಿಂದ ಇವುಗಳಲ್ಲಿ ಸ್ವತಂತ್ರಸೃಷ್ಟಿ ಸ್ಫೂರ್ತಿಗಳು ಅಲ್ಪವೆಂದೆ ಹೇಳಬೇಕು. ಆದರೆ ಅವು ಆಯಾ ಪ್ರಕಾರವನ್ನು ಸಂಗೀತ ಪ್ರಯೋಗದಲ್ಲಿ ಸ್ಥಿರಗೊಳಿಸಿ ಊರ್ಜಿತಪಡಿಸಲು ಸಹಾಯಕವಾದವೆಂಬುದರಲ್ಲಿ ಸಂದೇಹವಿಲ್ಲ. ವಚನಗಳನ್ನು ಬಿಟ್ಟರೆ ಉಳಿದವುಗಳಲ್ಲಿ ಸಾಮಾನ್ಯ ಮೌಲ್ಯಗಳಿಗಿಂತ ಮತಪ್ರಕ್ರಿಯೆ, ಸಾಧನೆ, ಆಚಾರಸಂಹಿತೆ ಮುಂತಾದವುಗಳ ಪ್ರತಿಪಾದನೆಯೇ ಹೆಚ್ಚು.

ಶಿವ–ಶರಣ ಸಾಹಿತ್ಯವು ನಿರ್ಮಾಣವಾದ ಈ ಆರು–ಏಳು ಶತಮಾನಗಳು ಸಂಗೀತಚರಿತ್ರೆಯ ದೃಷ್ಟಿಯಿಂದ ಸುದೀರ್ಘವೂ ಸ್ವಾರಸ್ಯಕರವೂ ಆಗಿವೆ. ಏಕೆಂದರೆ ಭಾರತೀಯ ಸಂಗೀತವು ಪ್ರಾಚೀನಾವಸ್ಥೆಯಿಂದ ಪೊರೆ ಕಳೆದು ಮಧ್ಯಕಾಲೀನ ಅವಸ್ಥೆಗೆ ಸಂಕ್ರಾಂತವಾದುದರ ಕೊನೆಯ ಭಾಗವು ಈ ಅವಧಿಯ ಪೂರ್ವಾರ್ಧ: ಕರ್ಣಾಟಕ ಸಂಗೀತವು ಸ್ವಸ್ವರೂಪದಲ್ಲಿ ಜನ್ಮತಾಳಿದ ಕಾಲವು ಈ ಅವಧಿಯ ಮಧ್ಯಾಂತ; ಆಧುನಿಕ ಕರ್ಣಾಟಸಂಗೀತವು ರೂಪುಗೊಂಡುದರ ಪ್ರಾರಂಭಾವಸ್ಥೆಯು ಈ ಅವಧಿಯ ಅಂತ್ಯಭಾಗ. ಈ ವಿವಿಧಾವಸ್ಥೆಗಳನ್ನು ಕನ್ನಡ ಸಾಹಿತ್ಯ ಸಮಷ್ಟಿಯು ಸಮಕಾಲೀನ ಉಲ್ಲೇಖಗಳಿಂದ ಚೆನ್ನಾಗಿಯೂ ಸಂಪೂರ್ಣವಾಗಿಯೂ ಪ್ರತಿಬಿಂಬಿಸುತ್ತದೆ: ಶಿವ–ಶರಣಸಾಹಿತ್ಯಕ್ಕೆ ಇದರಲ್ಲಿ ಗಮನಾರ್ಹವಾದ ಪಾಲಿದೆ. ಇಡೀ ಭಾರತದಲ್ಲಿ ಹಿಂದೂಸ್ಥಾನೀ ಸಂಗೀತ ಮತ್ತು

ಕರ್ಣಾಟಕ ಸಂಗೀತಗಳು ಸರಿಸಮನಾದ ಪೋಷಣೆ, ಪ್ರೋತ್ಸಾಹ ಮತ್ತು ಪ್ರಯೋಗಗಳನ್ನು ಪಡೆದು ಉತ್ಕರ್ಷಿಸಿದ್ದು ಕರ್ಣಾಟಕವೊಂದರಲ್ಲಿಯೆ. ಇದರ ಹಿನ್ನೆಲೆಯಲ್ಲಿ ಹಿಂದೂಸ್ಥಾನೀ ಸಂಗೀತವನ್ನು ಪೃಥಕ್ಕರಿಸಿ ವಿಶಿಷ್ಟಗೊಳಿಸಿದ ಕೆಲವು ಪ್ರಮೇಯಗಳು ಅದರ ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ಕನ್ನಡದ ಶಿವ–ಶರಣ ಸಾಹಿತ್ಯದಲ್ಲಿ ಕಂಡು ಬರುತ್ತವೆ ಎಂಬುದೂ ಸ್ವಾರಸ್ಯಕರವಾಗಿದೆ.

ಕ್ರಿ.ಶ. ಹನ್ನೆರಡರಿಂದ ಹದಿನಾಲ್ಕನೆಯ ಶತಮಾನದವರೆಗಿನ ಅವಧಿಯು ದಕ್ಷಿಣಭಾರತದಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಬಂಡಾಯದ ಯುಗ. ಸಾಂಸ್ಕೃತಿಕ ಮೌಲ್ಯಗಳು ಪರಂಪರೆ, ಸಂಪ್ರದಾಯ, ಕಟ್ಟಲೆಗಳ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಅನಮ್ಯವಾಗಿಬಿಟ್ಟು, ನವೋನ್ಮೇಷಶಾಲಿತೆಯನ್ನೂ ಪುನಃಸೃಷ್ಟಿಚೇತನವನ್ನೂ ಕಳೆದು ಕೊಂಡು ಜಡವಾಗಿ, ಹೊರೆಯಾಗುತ್ತಿದ್ದುದನ್ನು ಪ್ರತಿಭಟಿಸಿ, ಹಳೆಯದರಲ್ಲಿದ್ದ ಒಳ್ಳೆಯದನ್ನು, ಸತ್ತ್ವವನ್ನು ಸೇರಿಸಿಕೊಂಡು, ಸಮಕಾಲೀನ ಪ್ರಯೋಗ ಪ್ರವೃತ್ತಿಗಳನ್ನು ಒಳಗೊಳ್ಳುವಂತೆ ವಿಸ್ತರಿಸಿ, ಮುಂದಿನದರ ಗುರಿ ಯನ್ನಿಟ್ಟುಕೊಂಡು ಹೊಸತನ್ನು ಈ ಯುಗವು ನಿರ್ಮಿಸಿತು. ಇದನ್ನು ಸಾಧಿಸಿದ ಚಳವಳಿಗಳಲ್ಲಿ ವೀರಶೈವಧರ್ಮವೂ ಒಂದು. ಅದು ಹುಟ್ಟಿ. ಬೆಳೆದು. ಬಲಿತುದು ಒಂದು ಪ್ರತಿಕ್ರಿಯೆಯ ರೂಪದಲ್ಲಿ. ಇದು ಅವರ ಸಂಗೀತಸಿದ್ಧಿಗಳ ಪ್ರವೃತ್ತಿಯಲ್ಲೂ ಪ್ರತಿಫಲಿತವಾಗಿದೆ.

## ಶರಣ ಸಂಗೀತ: ಬತ್ತೀಸರಾಗ

ಬಸವೇಶ್ವರರೇ ಮೊದಲಾದ ಸಂತರು ಸಂಗೀತವನ್ನು ಬೋಧನಸಾಧಕವಾಗಿ, ಅನುಭಾವದ ಅಭಿವ್ಯಕ್ತಿಗಾಗಿ ಬಳಸಿಕೊಂಡು ಒಂದು ಹೊಸ ಪ್ರವೃತ್ತಿಯನ್ನು ಸಂಗೀತದಲ್ಲಿ ಉದ್ಘಾಟಿಸಿದರು. ಅವರಿಗೆ ಸಂಗೀತದ ಸೌಂದರ್ಯ ತತ್ತ್ವಕ್ಕಿಂತ ಅದರ ರಸಾತ್ಮಕವಾಹಕತ್ವವು ಈ ದಿಸೆಯಲ್ಲಿ ಪ್ರಯೋಜಕವಾಯಿತು. ಜನಸಾಮಾನ್ಯದಲ್ಲಿ–ಶಿಷ್ಟವಾದ ಸಾಂಪ್ರದಾಯಿಕ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಎಟುಕಲಾರದ್ದೆಂದು ಸಾಮಾನ್ಯವಾಗಿ ಪರಿ ಗಣಿಸಲಾಗಿದ್ದ ಸಾಮಾಜಿಕ ಸ್ತರಗಳಲ್ಲಿ ಅವರು ತಮ್ಮ ಸಂದೇಶವನ್ನು ಹರಡಲು ತಕ್ಕುದಾದ ಮಾಧ್ಯಮವನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯವಾಯಿತು. ಹೀಗಾಗಿ ಅವರು ಬಳಸಿದ ಭಾಷೆ, ಸಾಹಿತ್ಯಪ್ರಕಾರ ಮತ್ತು ಸಂಗೀತಗಳು ಸಹಜವಾಗಿಯೆ ದೇಶಿಯಾದವು. ಅವರು ಬಳಸಿದ ಸಂಗೀತವು ಮಾತು ಪ್ರಧಾನವಾಗಿ ಧಾತು ಗೌಣ ವಾದುದು ಹೀಗೆ; ಕೆಲವರು ಹಾಡಿ ನುಡಿಸಿ ಹಲವರು ಗೇಯರಸಸನ್ನಿವಿಷ್ಟವಾದ ಅಮೂರ್ತಸೌಂದರ್ಯವನ್ನು ಸವಿ ಯುವುದಕ್ಕೆಂದಲ್ಲದೆ. ಶಿಷ್ಟರೆನಿಸಿದ ಪಾಮರಜನರೂ ಆಡಿಕೊಳ್ಳಬಹುದಾದ ಮಾತುಗಳನ್ನು ಅವರು ಸಂಗೀತಪ್ರಕಾರ ವಾಗಿ ಎಬ್ಬಿಸಿ ನಿಲ್ಲಿಸಿದರು. ಆದುದರಿಂದ 'ಆನು ಒಲಿದಂತೆ ಪಾಡುವೆ' ಎಂಬ ಸ್ವೈರವೃತ್ತಿ, ಕಾಮಚಾರ ನಮ್ಮ ಸಂಗೀತದಲ್ಲಿ ಬೆಳೆಯಲು ಅನುಕೂಲಿಸಿತು. ಭಾರತೀಯ ಸಂಸ್ಕೃತಿಯಲ್ಲಿ ಸಂಗೀತವನ್ನು ಅದರ ಸಾಂಸ್ಕೃತಿಕ ಮೌಲ್ಯ ಗಳಿಗಾಗಿ ಮಾತ್ರ ಆಶ್ರಯಿಸದೆ ಆಧ್ಯಾತ್ಮಸಾಧನೆಗೆಂದು, ಆಧ್ಯಾತ್ಮಚಿಂತನೆ–ಬೋಧನೆಗಳ ಪ್ರಸಾರಕ್ಕೆಂದು ಬಳಸಿರುವ ನಿದರ್ಶನಗಳು ಮತ್ತೆ ಮತ್ತೆ ದೊರೆಯುತ್ತವೆ. ದೇಶ್ಯಭಾಷೆಯೊಂದರಲ್ಲಿ ದೇಶೀಸಂಗೀತವನ್ನು ಜನಪದಸ್ತೋಮವೇ ಈ ಉದ್ದೇಶಕ್ಕಾಗಿ ಬಳಸುವಂತೆ ಮಾಡಿದ ಪ್ರಯತ್ನ–ಪ್ರಯೋಗಗಳಲ್ಲಿ ಶಿವಶರಣರದೇ ಮೊದಲನೆಯದೆಂದು ಹೇಳಬಹುದು.

ಭಾರತೀಯ ಸಂಗೀತವು ಬಹು ಪುರಾತನಕಾಲದಿಂದಲೂ ಮಾರ್ಗ, ದೇಶೀ ಎಂದು ಇಬ್ಬಗೆಯಾಗಿತ್ತು. ಬ್ರಹ್ಮನೇ ಮೊದಲಾದ ದೇವತೆಗಳು ಹುಡುಕಿ ನಿರ್ಮಿಸಿಕೊಟ್ಟು, ಭರತನೇ ಮೊದಲಾದ ಮುನಿಗಳು ಶಂಭುವಿನ ಮುಂದೆ ಪ್ರಯೋಗಿಸಿದ, ನಿಯತಲಕ್ಷಣವುಳ್ಳ, ಅಭ್ಯುದಯಪ್ರದವಾದ ಸಂಗೀತಕ್ಕೆ ಮಾರ್ಗಸಂಗೀತವೆಂದೂ ವಿವಿಧ ದೇಶಗಳಲ್ಲಿ ಜನರ ರುಚಿಗೆ ತಕ್ಕಂತೆ ಅವರ ಹೃದಯವನ್ನು ರಂಜಿಸುವ ಗೀತವಾದನನರ್ತನಗಳಿಗೆ ದೇಶಿಯೆಂದೂ ಶಾಸ್ತ್ರೀಯ ಪರಿಭಾಷೆ. ಬಹುಹಿಂದಿನ ಕಾಲದಿಂದಲೂ ಧಾರ್ಮಿಕ ಪರಿಸರದಲ್ಲಿ ನೆಲೆಸಿದ್ದು, ನಿಯತಲಕ್ಷಣವುಳ್ಳ ಎಂದರೆ ಎಳ್ಳಷ್ಟೂ ವ್ಯತ್ಯಾಸವನ್ನು ಸಹಿಸದಿದ್ದ, ಗೇಯ ವಸ್ತುಕೋಶಕ್ಕೆ ಮಾರ್ಗಸಂಗೀತವೆಂಬ ಹೆಸರಿತ್ತು. ಜಾತಿಯೆಂಬ ಪ್ರಾಚೀನ ಗೇಯಪ್ರಕಾರಗಳಲ್ಲಿ ರಚಿತವಾಗಿರುತ್ತಿದ್ದ ಗೀತಗಳು ; ಕಪಾಲ, ಕಂಬಲಗಳೆಂಬ ಶಿವಸ್ತುತಿವಿಷಯಕಗಳಾದ ಹಾಡು ಗಳು: ಮದ್ರಕ, ಪ್ರಕರೀ, ಋಕ್, ಗಾಥಾ, ಓವೇಣುಕ ಇತ್ಯಾದಿ ತಾಳಪ್ರಧಾನ ಗೀತಗಳು–ಇವುಗಳ ಸಮುಚ್ಚಯ ವನ್ನು ಮಾರ್ಗಸಂಗೀತವೆಂದು ಸಂಗೀತಶಾಸ್ತ್ರಜ್ಞರು ವ್ಯವಹರಿಸಿದ್ದಾರೆ. ಇವೆಲ್ಲ ಆಧ್ಯಾತ್ಮವಿಷಯಕಗಳು, ಧಾರ್ಮಿಕ ಅಥವಾ ಮತೀಯ ಪರಿಸರದಲ್ಲಿ ಮೂಡಿಬಂದವುಗಳು. ಇದಕ್ಕೆ ಪ್ರತಿಯಾಗಿ ಆಯಾ ದೇಶಕಾಲಗಳಲ್ಲಿ ವಾಗ್ಗೇಯ

ಕಾರರು ರಚಿಸಿ ಗಾಯಕವಾದಕರು ಲೋಕರುಚಿಗೆ ತಕ್ಕಂತೆ ಹಾಡಿನುಡಿಸುತ್ತಿದ್ದುದು ದೇಶೀಸಂಗೀತ.

ಭಾರತೀಯ ಸಂಗೀತವನ್ನು ವೈದಿಕ ಮತ್ತು ಲೌಕಿಕ ಎಂದು ವಿಂಗಡಿಸುವುದೂ ಉಂಟು. ಸಾಮವೇದದ ಊಹ. ಊಹ್ಯಗಾನಗಳೂ ಗ್ರಾಮೇಗೇಯಗಾನ ಮತ್ತು ಅರಣ್ಯೇಗೇಯಗಾನಗಳೂ. ಯಜ್ಞಾದಿ ಶ್ರೌತಕರ್ಮಗಳಲ್ಲಿ ಪ್ರಯುಕ್ತವಾಗುತ್ತಿದ್ದ ಗಾಯನವಾದನಗಳೂ ವೈದಿಕ ಸಂಗೀತ. ಲೋಕರು ಮನರಂಜನೆಗೆಂದು ಪ್ರಯೋಗಿಸುವುದು ಲೌಕಿಕ ಸಂಗೀತ. ಇದಲ್ಲದೆ ಪ್ರಾಚೀನರು ಗಾಂಧರ್ವ ಮತ್ತು ಗಾನವೆಂದು ಗೀತವನ್ನು ವರ್ಗೀಕರಿಸುತ್ತಿದ್ದುದೂ ಉಂಟು. ಗೀತವೆಂದರೆ ರಂಜಕವಾದ ಸ್ವರಸಂದರ್ಭ. ಅದರಲ್ಲಿ ಗಾಂಧರ್ವವು ಅನಾದಿಸಂಪ್ರದಾಯವುಳ್ಳದ್ದು; ಎಂದರೆ ವೇದದಂತೆ ಅಪೌರುಷೇಯವಾದುದು; ಗಂಧರ್ವರಿಂದ (ಮಾತ್ರ) ಪ್ರಯುಕ್ತವಾಗುವಂತಹದು. ಎಂದರೆ ಮನಬಂದಂತೆ–ಅನು ಬಲಿದಂತೆ–ಹಾಡುವಂತಹದಲ್ಲ. ನಿಯತವಾದ ಗ್ರಹಾಂಶಮೂರ್ಛನಾದಿನಿಯಮಗಳಿಂದ ಬದ್ಧವಾದುದು: ಐಹಿಕಸುಖವನ್ನೂ ಧರ್ಮಾರ್ಥಕಾಮಮೂಲವಾದ ಸ್ವರ್ಗವನ್ನೂ ಅಪವರ್ಗವಾದ ಮೋಕ್ಷವನ್ನೂ ಉಂಟುಮಾಡುವಂತಹದು. ಶುದ್ಧ. ಭಿನ್ನ, ಗೌಡ. ವೇಸರ ಮತ್ತು ಸಾಧಾರಣೀ ಎಂಬ ವರ್ಗಗಳಲ್ಲಿ ಅಡಕವಾದ ಗ್ರಾಮರಾಗಗಳು ಮತ್ತು ಗೀತಿಗಳು ಶುದ್ಧ ಮತ್ತು ವಿಕೃತವೆಂಬ ಇಬ್ಬಗೆಯ ಜಾತಿಗಳಲ್ಲಿ ಅಂತರ್ಗತವಾದ ಗಾನಪ್ರಪಂಚ, ಮಾಗಧಿ. ಪೃಥುಲಾ ಮತ್ತು ಸಂಭಾವಿತಾ ಎಂಬ ರೀತಿಯ ಹಾಡುಗಳು. ಭಾಷಾ. ವಿಭಾಷಾ ಮತ್ತು ಅಂತರಭಾಷಾ ಎಂಬ ವರ್ಗಗಳಲ್ಲಿ ಸೇರಿರುವ ರಾಗಗಳಲ್ಲಿ ಹಾಡುವಂತಹ ಸಾಮಗ್ರಿ–ಇವುಗಳನ್ನು ಶಾಸ್ತ್ರಕಾರರು ಗಾಂಧರ್ವವೆಂದು ಎಣಿಸಿಕೊಂಡಿದ್ದಾರೆ. ಗಾನವೆಂದರೆ ಪೌರುಷೇಯವಾಗಿದ್ದು ವಾಗ್ಗೇಯಕಾರರಿಂದ ದೇಶೀರಾಗತಾಳಗಳಲ್ಲಿ ರಚಿತವಾದ ಗೀತಕೋಶ. ಸೂಡ, ಆಲಿಕ್ರಮ ಮತ್ತು ವಿಪ್ರಕೀರ್ಣ ಎಂಬ ವಿಭಾಗಗಳಲ್ಲಿ ಶಾಸ್ತ್ರವು ವರ್ಣಿಸಿರುವ ಎಪ್ಪತ್ತೈದು ಪ್ರಬಂಧಗಳ ಹಾಗೂ ಅವುಗಳ ಸಾವಿರಾರು ಪ್ರಭೇದಗಳ ಸಮುಚ್ಚಯ.

ಇಂತಹ ಅನವು ನಿರ್ಬಂಧಗಳಿಂದ ಸಂಗೀತವನ್ನು ಮುಕ್ತಗೊಳಿಸಿ ಹೆಂಗಸರು. ವೇದಾಧಿಕಾರವಿಲ್ಲದವರು. ಅನಕ್ಷರಸ್ಥರಾದ ಕಾಯಕದವರು ಮುಂತಾದ ಎಲ್ಲರಿಗೂ ಶ್ರುತಿರಹಸ್ಯಗಳನ್ನು ಸುಲಭವಾಗಿ ತಿಳಿಯಾಗಿ ತಿಳಿಯಪಡಿಸಲೆಂದು ಎಲ್ಲರಿಗೂ ಎಟುಕುವ ಸಂಗೀತವೊಂದನ್ನು ನಿರ್ಮಿಸಿ ಬಳಸಿದ್ದು ಶಿವಶರಣರ ಹಾಗೂ ಹರಿದಾಸರ ಸಾಧನೆಗಳಲ್ಲಿ ಮುಖ್ಯವಾದುದು. ವೇದಪ್ರಾಮಾಣ್ಯ, ವೇದಾಧಿಕಾರಗಳು ಸಿದ್ಧಾಂತಸಾಧನೆಗಳು ಮುಖ್ಯವಲ್ಲವೆಂದು ಶ್ರೀ-ಸಾಮಾನ್ಯನ ಹೃದಯದಲ್ಲಿ ಭರವಸೆಯನ್ನು ತುಂಬಲು ಹೊರಟ ವೀರಶೈವಮತಧುರೀಣರು ಪ್ರತಿಕ್ರಿಯೆಯ ಅತಿರೇಕವನ್ನು ಕೆಲವು ಬಾರಿ ಮುಟ್ಟಿದ್ದೂ ಉಂಟು; ಬಹುಶಃ ಇದು ಸ್ವಾಭಾವಿಕವೂ ಹೌದು. ಇದು ಅವರು ಬಳಸಿಕೊಂಡ ಸಂಗೀತದಲ್ಲಿ ಕಂಡುಬರುತ್ತದೆ. ಅತಿಯಾದ ಕಟ್ಟುಪಾಡಿನಷ್ಟೆ ಅತಿಯಾದ ಸ್ವಾತಂತ್ರ್ಯವೂ ವಿರುದ್ಧವಾದ ಪ್ರತಿಕ್ರಿಯೆಗೆ ಹೇತುವಾಗುತ್ತದೆ. ಇದರಿಂದಾಗಿ ಶಿವ–ಶರಣಸಂಗೀತದ ಪ್ರಯೋಗಕ್ಕೆ ನಿರ್ದಿಷ್ಟವಾದ ಮೂರ್ತಸ್ವರೂಪವು ಬರಲಿಲ್ಲ. ಏಕೆಂದರೆ, ಮೂರ್ತಸ್ವರೂಪವು ಉಂಟಾಗಬೇಕಾದರೆ ಪ್ರಯತ್ನದಲ್ಲಿ ಸಂಘಟನೆ. ವ್ಯವಸ್ಥೆ, ನಿರ್ದಿಷ್ಟವಾದ ಗುರಿ–ಇವುಗಳು ಇರಬೇಕು. ರಾಗ, ತಾಳ, ರಚನೆಗಳು ನಿರ್ದಿಷ್ಟವೂ ನಿಯತವೂ ಅಲ್ಲದ ವಚನಗಳ ನಿರ್ಮಾಣದಲ್ಲಿಯೆ ತಮ್ಮ ಪ್ರಯತ್ನವನ್ನೆಲ್ಲ ಮೊದಮೊದಲಿನ ಶಿವಶರಣರು ಕೇಂದ್ರೀಕರಿಸಿದ್ದೂ ಇದಕ್ಕೆ ಕಾರಣವಾಯಿತು. ಸಂಗೀತಕ್ಕೆ ಈ ಯುಗದಲ್ಲಿ ದೊರೆತ ರೂಪವು ಶಿವಶರಣರು ಉದ್ದೇಶಿಸಿ ಸಂಘಟಿಸಿ ವ್ಯವಸ್ಥೆಗೊಳಿಸಿ ಕೊಟ್ಟುದಲ್ಲ; ಅದು ಶಿಷ್ಟ ಅಥವಾ ಶಾಸ್ತ್ರೀಯ, ಜನಸಮುಚ್ಚಯದ ಮತೀಯ ವಿಭಾಗಗಳ ಸಾಮುದಾಯಕ ಸಂಗೀತಪ್ರವೃತ್ತಿಗಳು ಎಂಬ ಎರಡು ಸ್ತರಗಳಲ್ಲಿ ಬೆಳೆಯಿತು. ಶಿಷ್ಟಸಂಗೀತದೊಡನೆ ಪ್ರತಿಕ್ರಿಯೆ ನಡೆಸಿ ವಿನಿಮಯ ಮಾಡಿಕೊಳ್ಳುವಷ್ಟು ನಿರ್ದಿಷ್ಟತೆಯನ್ನು ಶಿವಶರಣಸಂಗೀತವು ಆಗ ಇನ್ನೂ ಪಡೆದಿರಲಿಲ್ಲ. ಹೀಗಾಗಿ ಬೇರೆಬೇರೆ ಧಾರ್ಮಿಕ ಪರಿಸರಗಳಲ್ಲಿ ಬೆಳೆದು ಬಲಿತಿದ್ದ. ಜನಪದ ಸ್ತರದಲ್ಲಿ ಪ್ರಚಲಿತವಾಗಿದ್ದ ಹಾಡುಗಳನ್ನು ಈ ಕಾಲದಲ್ಲಿ ರಚಿತವಾದ ಸಂಗೀತಶಾಸ್ತ್ರಗ್ರಂಥಗಳು ವರ್ಣಿಸುತ್ತವೆ: ವೀರಶೈವಮತದಲ್ಲಿ ಆಗ ಪ್ರಸಿದ್ಧವಾಗಿ ವಿಸ್ತಾರವಾಗಿ ಹರಡಿದ್ದ ವಚನ. ಮಂತ್ರಗೋಪ್ಯ, ಕಾಲಜ್ಞಾನಗಳು ನಿರ್ದಿಷ್ಟಸಾಹಿತ್ಯಪ್ರಕಾರಗಳಾಗಿದ್ದರೂ ಸಂಗೀತದಲ್ಲಿ ನಿರ್ದಿಷ್ಟಾಕೃತಿಯನ್ನು ತಳೆಯದೆ ಇದ್ದುದರಿಂದ ಅವುಗಳನ್ನು ಉಲ್ಲೇಖಿಸುವುದಿಲ್ಲ. ಈ ಮತ್ತು ಇಂತಹ ರಚನೆಗಳ ಪ್ರಯೋಗಬಾಹುಳ್ಯ. ಲೋಕರೂಢಿಗಳಿಂದಾಗಿ ಒಂದು ಸಂಪ್ರದಾಯವು ಕಾಲಕ್ರಮದಲ್ಲಿ ರೂಪುಗೊಂಡಿತು.

ಇಂತಹ ಒಂದು ಸಂಪ್ರದಾಯವನ್ನು ಇಲ್ಲಿ ಉಲ್ಲೇಖಿಸಬಹುದು. ಇದನ್ನು ಬತ್ತೀಸರಾಗಪರಂಪರೆ ಎಂದು ಕರೆಯಬಹುದು. ಬತ್ತೀಸರಾಗಗಳ ಪ್ರಸ್ತಾಪವು ಬಸವೇಶ್ವರರ ಒಂದು ವಚನದಲ್ಲಿಯೆ ದೊರೆಯುತ್ತದೆ: 'ಎನ್ನ ಕಾಯುವ ದಂಡಿಗೆಯ ಮಾಡಯ್ಯ. ಎನ್ನ ಸಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ. ಎನ್ನ

ಬೆರಳ ಕಡ್ಡಿಯ ಮಾಡಯ್ಯ, ಬತ್ತೀಸರಾಗವ ಹಾಡಯ್ಯ, ಉರದಲೊತ್ತಿ ಬಾರಿಸು' ಮನುಷ್ಯದೇಹವನ್ನು ವೀಣೆಗೆ ಹೋಲಿಸುವ ರೂಪಕವು ಇಲ್ಲಿ ಹೊಸದಲ್ಲ: ವೇದೋಪನಿಷತ್ತುಗಳಲ್ಲಿಯೆ ಅದು ಕಂಡುಬರುತ್ತದೆ. ಆದರೆ ಬತ್ತೀಸ ರಾಗಗಳ ಉಲ್ಲೇಖವು ಹನ್ನೆರಡನೆಯ ಶತಮಾನಕ್ಕಿಂತ ಹಿಂದೆ ಇದ್ದುದು ಕಂಡುಬರುವುದಿಲ್ಲ. ಬಸವಸಮಕಾಲೀನ ನಾದ ಮೋಳಿಗೆಯ ಮಾರಯ್ಯನ ಒಂದು ವಚನದಲ್ಲಿ 'ವೇಣುಮುರಳಿಗಳಲ್ಲಿ ಮೂವತ್ತೆರಡು ರಾಗಮಿಶ್ರಂಗಳ ಅರವತ್ತುನಾಲ್ಕರಲ್ಲಿ ಕೂಡಿ ನುಡಿವುದು'. ನಿರ್ದಿಷ್ಟವಾದ ಸಂಖ್ಯೆಗಳಿಗೆ ಸಾಂಕೇತಿಕ ಮೌಲ್ಯವೂ ಅದರಿಂದ ಪೂಜ್ಯತೆಯೂ ಉಂಟಾಗುವುದು ಜಗತ್ತಿನ ವಿವಿಧ ಮತಾಚಾರಗಳಲ್ಲಿ ಹೊಸದಲ್ಲ. ದಕ್ಷಿಣ ಭಾರತದಲ್ಲಿ ಹೀಗೆ ಪೂಜ್ಯವಾದ ಸಂಖ್ಯೆಗಳಲ್ಲಿ ಮೂರು. ಆರು, ಏಳು, ಹದಿನಾಲ್ಕು, ಮೂವತ್ತೆರಡು, ಅರವತ್ತಮೂರು, ಎಪ್ಪತ್ತೇಳು ಮುಂತಾದವುಗಳನ್ನು ಉದಾಹರಿಸಬಹುದು. ಹೀಗೆ ಮೂವತ್ತೆರಡು ರಾಗಗಳ ಒಂದು ಸಮುಚ್ಚಯವನ್ನು ಬತ್ತೀಸ ರಾಗಗಳು ಎಂದು ವ್ಯವಹರಿಸಿ ಅದನ್ನು ಧಾರ್ಮಿಕ ಪರಿಸರದಲ್ಲಿ ವ್ಯವಹರಿಸಿರುವುದು ಕನ್ನಡದಲ್ಲಿ ವಿಶೇಷವಾಗಿಯೂ ತೆಲುಗಿನಲ್ಲಿ ಸ್ವಲ್ಪವಾಗಿಯೂ ಕಂಡುಬರುತ್ತದೆ. ಈ ರಾಗಗಳಲ್ಲಿ ಕೆಲವು ಹೆಸರಿನಲ್ಲಿಯೂ ಕೆಲವು ಲಕ್ಷಣದಲ್ಲಿಯೂ ಆಗಾಗ ವ್ಯತ್ಯಾಸವಾದುದುಂಟು. ಆದರೂ ಇವು ತಮ್ಮ ಸಮುಚ್ಚಯಸ್ವರೂಪವನ್ನು ಸುಮಾರು ಆರುನೂರು ವರ್ಷಗಳ ಕಾಲ ಉಳಿಸಿಕೊಂಡು ಬಂದುದು ಒಂದು ಸ್ವಾರಸ್ಯ. ಇದು ಪುಷ್ಟಿಗೊಳ್ಳುವುದಕ್ಕೆ ಶಿವಶರಣರು ಬಹುವಾಗಿ ನೆರವಾಗಿದ್ದಾರೆ: ಬಸವ, ಮೋಳಿಗೆಯ ಮಾರಯ್ಯ, ಪಾಲ್ಕುರಿಕೆ ಸೋಮನಾಥ, ಭೀಮಕವಿ. ಸಿಂಗಿರಾಜ, ನಿಜಗುಣ ಶಿವಯೋಗಿ, ಸಿದ್ಧನಂಜೇಶ ಮೊದಲಾದ ಶಿವಯೋಗಿಗಳೂ ಕವಿಗಳೂ ಬತ್ತೀಸರಾಗಗಳನ್ನು ಹೇಳಿದ್ದಾರೆ. ಆದರೆ ಇದು ಇನ್ನೂ ಹೆಚ್ಚು ವಿಶಾಲಪ್ರಯೋಗದಲ್ಲಿ ರೂಢಿಸಿದ್ದ ಸಂಗೀತ ಕಲ್ಪನೆ; ಏಕೆಂದರೆ ಬಾಹುಬಲಿಯಂತಹ ಜೈನಕವಿಯೂ ಗೋವಿಂದವೈದ್ಯನಂತಹ ಬ್ರಾಹ್ಮಣಕವಿಯೂ ಬತ್ತೀಸರಾಗಗಳನ್ನು ಹೇಳಿದ್ದಾರೆ. ಶಾರ್ಙ್ಗದೇವನೆ ಮೊದಲಾದ ಲಾಕ್ಷಣಿಕರು ಬತ್ತೀಸ ಎಂಬ ಅಥವಾ ತತ್ಸಮವಾದ ಶಬ್ದವನ್ನು ಬಳಸದೇ ಇದ್ದರೂ ಮೂವತ್ತೆರಡು ರಾಗಗಳ ಸಮುಚ್ಚಯವನ್ನು ಸಮಕಾಲೀನ ಲಕ್ಷ್ಯದಿಂದ ಉದ್ಧರಿಸಿ ವರ್ಣಿಸುತ್ತಾರೆ: ಅಥವಾ ಬತ್ತೀಸರಾಗಗಳೆಂದು ಸಮಕಾಲೀನ ಕಾವ್ಯಗಳಲ್ಲಿ ಹೆಸರು ಪಡೆದವುಗಳನ್ನು ಲಕ್ಷಿಸುತ್ತಾರೆ. ಆದರೆ ಇವುಗಳ ಹೆಸರುಗಳು ಪೂರ್ತಿಯಾಗಿ ಅಥವಾ ಅಧಿಕಾರದಲ್ಲಿ ದೊರೆಯುವುದು ಪುರಂದರದಾಸಕೃತವಾದ ಎರಡು ದೇವರನಾಮಗಳಲ್ಲಿ.

ಬತ್ತೀಸವೆಂಬುದು ರಾಗಗಳಿಗೆ ಮಾತ್ರ ಸೀಮಿತವಾದ ಶಬ್ದವಲ್ಲ. ಶಿವಶರಣರಿಗಿಂತ ಸ್ವಲ್ಪ ಹಿಂದಿನಿಂದಲೂ ಜೈನಕವಿಗಳು ಬತ್ತೀಸ ಆಯುಧಗಳು, ಮೂವತ್ತೆರಡು ದಿವ್ಯ ನರ್ತಕರು, ದಿವ್ಯನಾಟ್ಯಾಂಗವಾದ ಮೂವತ್ತೆರಡು ಅಂಗಹಾರಗಳು ಎಂಬ ಅರ್ಥಗಳಲ್ಲಿ ಸ್ವಮತಪ್ರಕ್ರಿಯೆಯ ಪರಿಸರದಲ್ಲಿ ಪ್ರಯೋಗಿಸಿದ್ದಾರೆ. ಬತ್ತೀಸ ಎಂಬ ಶಬ್ದವೆ ಕನ್ನಡ ಮೂಲದ್ದಲ್ಲವಷ್ಟೆ. ಪ್ರಾಕೃತಭಾಷೆಯೊಂದರಿಂದ (ಉದಾ : ಮರಾಠೀ) ಕನ್ನಡಕ್ಕೆ ಬಂದಿರಬಹುದಾದ ಶಬ್ದವು ಉತ್ತರಕರ್ಣಾಟಕದಿಂದ ಪ್ರವೇಶಿಸಿ ಕರ್ಣಾಟಕದ ಇತರ ಭಾಗಗಳಲ್ಲಿ ಹರಡಿರಬಹುದೆಂಬುದು ಸಂಭಾವ್ಯವಾಗಿದೆ. ಆದರೂ ಈ ಬಗೆಯ ಪರಂಪರಾನುಗತ ಬಳಕೆಯು ಈ ಶಬ್ದಕ್ಕೆ ಕನ್ನಡದೇಶದಲ್ಲಿ ಇರುವಷ್ಟು ಬೇರೆಡೆ ಇಲ್ಲದಿರುವುದು ಗಮನಾರ್ಹವಾಗಿದೆ. ಇದು ಹೇಗೇ ಇರಲಿ, ಶಿವಶರಣರು ಕರ್ಣಾಟಕದಲ್ಲಿ ಉದ್ಘಾಟಿಸಿರಬಹುದಾದ ಬತ್ತೀಸರಾಗ ಪರಂಪರೆಯನ್ನು ಸಾಮಾನ್ಯಗೊಳಿಸಿ ಇತರರೂ ಮುಂದುವರಿಸಿದರು ಎಂದು ಇಟ್ಟುಕೊಳ್ಳಬಹುದು.

## ೧. ಶರಣಸಂಗೀತ: ಕಥಾನಕ

ಶಿವ–ಶರಣ ಸಾಹಿತ್ಯದಲ್ಲಿ ಸಂಗೀತಸಂಬಂಧಿಯಾದ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ಗಾನ ವಾದನ ನರ್ತನಗಳ ಕಾಯಕದಿಂದಲೋ ಸೇವೆಯಿಂದಲೋ ಶಿವನನ್ನು ಒಲಿಸಿಕೊಂಡ ಶರಣ–ಶರಣೆಯರ ಕಥೆಗಳು ಹಲವಿವೆ. ಅವರಲ್ಲಿ ಕೆಲವರು ಚಾರಿತ್ರಕ ವ್ಯಕ್ತಿಗಳು, ಕೆಲವರು ಪುರಾಣಪ್ರಸಿದ್ಧಮಾತ್ರರು. ಮುಂದೆ ಹೇಳಿರುವ ಆಕರಗಳಿಂದ ಈ ಕಥೆಗಳನ್ನು ಸಮಷ್ಟಿಯಲ್ಲಿ, ಬಹು ಸಂಕ್ಷಿಪ್ತವಾಗಿ ಇಲ್ಲಿ ಸಂಗ್ರಹಿಸಬಹುದು. (ಆಕರಕರ್ತೃವಿನ ಹೆಸರನ್ನು ಕಂಸಗಳಲ್ಲಿ ಕೊಟ್ಟಿದೆ):

ಅಮರಗಣಾಧೀಶ್ವರರ ಚರಿತ್ರೆಗಳು, ಬಸವೇಶ್ವರ ಷಟ್‌ಸ್ಥಲವಚನಕಥಾಸಾರ, ಅರವತ್ತುಮೂವರು ಪುರಾತನರು ಮತ್ತು ಶಿವಶರಣರ ಚರಿತ್ರೆಗಳು (ಹಳಕಟ್ಟಿ, ಫ. ಗು.) ಅಂಪೋತಿರಗಳೆ, ಆನಯಿನಾರು ಭಕ್ತರ ರಗಳೆ, ಉದ್ಭಟದೇವರ ರಗಳೆ. ಕಡೆಪೂರಕಾರಿರಗಳೆ, ಚೇರಮರಗಳೆ. ಪ್ರಭುದೇವರ ರಗಳೆ, ಬಸವರಾಜದೇವರ ರಗಳೆ, ಮುರುಘರ ರಗಳೆ ಮತ್ತು ಸೌಂದರಪುರಾಣ (ಹರಿಹರದೇವ), ಉದ್ಭಟಕಾವ್ಯ (ಬಸವಾಂಕ). ಕಥಾಸಾಗರ (ಉತ್ತರ

ದೇಶವ ಬಸವಲಿಂಗದೇವ), ಕನ್ನಡ ಕವಿಚರಿತೆ (ನರಸಿಂಹಾಚಾರ್, ಆರ್.), ಕೊಟ್ಟೂರು ಬಸವೇಶ ಪುರಾಣ (?). ಗುರುಭಕ್ತಾಂಡಾರ್ಯಚರಿತ್ರೆ (ಪೆಮ್ಮಿ), ಗುರುರಾಜಚಾರಿತ್ರ (ಸಿದ್ಧನಂಜೇಶ), ಚತುರಾರ್ಯಪುರಾಣ (ಪರ್ವತೇಶ), ಚನ್ನಬಸವ ಪುರಾಣ (ವಿರೂಪಾಕ್ಷಪಂಡಿತ), ಚೇರಮಕಾವ್ಯ (ಚೇರಮಾಂಕ), ಜೋರಬಸವ ಚರಿತ್ರೆ (ಶಂಕರ ಕವಿ), ತ್ರಿಷಷ್ಟಿ ಪುರಾತನವಿಲಾಸ (?), ಪದ್ಮರಾಜಪುರಾಣ (ಪದ್ಮಣಾಂಕ), ಪ್ರಭುಲಿಂಗಲೀಲೆ (ಚಾಮರಸ). ಪ್ರಭುದೇವರ ಪುರಾಣ (ಯಳಂದೂರು ಹರೀಶ್ವರ), ಪ್ರೌಢರಾಯನ ಕಾವ್ಯ (ಅದೃಶ್ಯಕವಿ), ಬಸವಪುರಾಣ (ಭೀಮಕವಿ), ಭಕ್ತಿರಸದ ಸೋನೆ (ಪಂಚಯ್ಯ), ಭುವನಕೋಶ (?) ಭೈರವೇಶ್ವರ ಕಥಾರತ್ನಾಕರ (ಶಾಂತಲಿಂಗದೇಶಿಕ). ಮಹಲಿಂಗಲೀಲೆ (ಬಸವ ಕವಿ), ವೀರಶೈವಾಮೃತ ಮಹಾಪುರಾಣ (ಗುಬ್ಬಿಯ ಮಲ್ಲಣಾರ್ಯ), ಶರಣಚರಿತಾಮೃತ (ಸಿದ್ಧಯ್ಯ ಪುರಾಣಿಕ). ಶರಣಲೀಲಾಮೃತ (ಚನ್ನಪ್ಪಕವಿ), ಶಿವತತ್ತ್ವಚಿಂತಾಮಣಿ (ಲಕ್ಕಣ್ಣದಂಡೇಶ), ಶಿವಭಕ್ತಿವಿಲಾಸದರ್ಪಣ (ಕಳಲೆ ನಂಜರಾಜ), ಸಾನಂದಪುರಾಣ (ಕುಮಾರ ಪದ್ಮರಸ). ಸಿದ್ಧೇಶ್ವರ ಪುರಾಣ (ಮರಿತೋಂಟದಾರ್ಯ). ಸೋಮೇಶ್ವರ ಪುರಾಣ (ಪಾಲ್ಕುರಿಕೆ ಸೋಮನಾಥ) ಮತ್ತು ಹರಿಹರ ಕಾವ್ಯ (ಮುರಿಗೆ ದೇಶಿಕೇಂದ್ರ).

## (ಅ) ವಾದನನಿಪುಣ ಶರಣರು

ಅಲ್ಲಮಪ್ರಭುವು ಮದ್ದಳೆಯನ್ನು ನುಡಿಸುವುದರಲ್ಲಿ ನಿಪುಣ. ಅವನು ಅದನ್ನು ಶಿವಪೂಜೆಯ ಸಮಯದಲ್ಲಿ ಮಾಡುತ್ತಿದ್ದನು. ಅವನು ಒಮ್ಮೆ ಬಳ್ಳಿಗಾವೆಯ ಗೊಗ್ಗೇಶ್ವರಾಲಯದಲ್ಲಿ ಹೀಗೆ ಸಂಗೀತಸೇವೆ ಸಲ್ಲಿಸುತ್ತಿರಲು ಅವನಲ್ಲಿ ಅನುರಕ್ತಳಾಗಿ ಅವನ ಮನಸ್ಸನ್ನು ಶಿವನಿಂದ ತಪ್ಪಿಸಲು ಬನವಾಸಿಯ ರಾಜನ ಮಗಳಾದ ಮಾಯೆಯು (ಧನದತ್ತನ ಮಗಳಾದ ಕಾಮಲತೆ ?) ಪರಿಪರಿಯಾಗಿ ಪ್ರಯತ್ನಿಸಿ ವಿಫಲಳಾದಳು. ತಕ್ಷಕಪುತ್ರರಾದ ಅಶ್ವತರ ಮತ್ತು ಕಂಬಲರು ತಪಸ್ಸು. ಸ್ತುತಿಗಳಿಂದ ಶಿವನನ್ನು ಮೆಚ್ಚಿಸಿ ಅವನ ಕರ್ಣಕುಂಡಲಗಳಾದರು (ಇದೇ ಹೆಸರಿನ ಇಬ್ಬರು ಲಕ್ಷಣ ಪ್ರಾಮಾಣಿಕರನ್ನು ಶಾರ್ಙ್ಗದೇವನು ಪೂರ್ವಾಚಾರ್ಯರೆಂದು ಅವರ 'ಮತಪಯೋನಿಧಿ'ಗಾಗಿ ಆಶ್ರಯಿಸಿ ಸ್ಮರಿಸಿದ್ದಾನೆ. ಮಾರ್ಕಂಡೇಯ ಪುರಾಣದಲ್ಲಿ ಈ ಸರ್ಪಸೋದರರು ಸರಸ್ವತಿಯನ್ನು ತಪಸ್ಸಿನಿಂದ ಮೆಚ್ಚಿಸಿ ಗಾನವಿದ್ಯೆಯನ್ನು ವರವಾಗಿ ಪಡೆದರೆಂದಿದೆ). ಚೋಳದೇಶೀಯ ಮಂಗಳಪುರದ ಆನೈನಾರ್ (ನಾಯನಾರ್, ಚೆಂಕ ನಾಯನಾರ್, ಗೋನಾಥ, ಕೊಳಲ ನಾಯನಾರ್) ಎಂಬ ಪುರಾತನನು ಗೋಪಾಲಕನ ಕಾಯಕದಲ್ಲಿ ನಿತ್ಯವೂ ಶಿವ ಪಂಚಾಕ್ಷರಿಯನ್ನು ಕೊಳಲಲ್ಲಿ ನುಡಿಸಿ ಶಿವನನ್ನು ಪ್ರತ್ಯಕ್ಷಿಸಿಕೊಂಡು ಗಣಪದವಿಗೇರಿದನು..

ಕಲ್ಯಾಣದ ಕಂಕಯ್ಯನಿಗೆ ಕಂಕರೀವಾದನವೆ ಕಾಯಕ. ಅವನ ವಾದನಕ್ಕೆ ಶಿವನು ಮನಸೋತು ಜಂಗಮವೇಷದಿಂದ ಮೂರುದಿವಸ ಕುಣಿದು ಸೋತನು. ಕಂಕಯ್ಯನು ಶಿವನ ವರವನ್ನು ನಿರಾಕರಿಸಿ ಮೂರುದಿನಗಳು ನುಡಿಸಿದುದಕ್ಕೆ ಕಾಯಕದ ಹಣವನ್ನು ವಸೂಲುಮಾಡಿಕೊಂಡು, ಕೈಲಾಸಕ್ಕೆ ಹೋಗಲೊಲ್ಲದೆ ಇಷ್ಟಲಿಂಗದಲ್ಲಿಯೆ ಲಯವಾದನು. ಊಡೂರಿನ ಬ್ರಹ್ಮಯ್ಯನು ಕಿನ್ನರಿವಾದನವಿಶೇಷಜ್ಞ. ಅವನು ಕಲ್ಯಾಣದ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕಿನ್ನರಿ ಸೇವೆ ಸಲ್ಲಿಸಿ ಜೀವಿಕೆಯನ್ನು ಸಂಪಾದಿಸುತ್ತಿದ್ದನು. ಬಿಜ್ಜಳನ ಕೊಲೆಯ ಪ್ರತಿಕ್ರಿಯೆಯಲ್ಲಿ ಶಿವಶರಣರು ಹೂಡಿದ ಯುದ್ಧದಲ್ಲಿ ಇವನು ದೇಹವಳಿದನು. ಇವನ ಸಮಾಧಿಯು ಮಹಾಮನೆಯಲ್ಲಿದೆ. ಕುಂಬಾರ ಗುಂಡಯ್ಯನು ಬಲಿಕೆಯೆಂಬ ಊರಿನವನು. ಅವನು ಮಡಕೆಯನ್ನೆ ಘಟವಾದ್ಯದಂತೆ ನುಡಿಸಿ ಕುಣಿದು ಶಿವಪೂಜೆಮಾಡುತ್ತಿದ್ದನು. ಹೀಗೆ ಮಾಡುವಾಗ ಒಮ್ಮೆ ಪಂಚಾಕ್ಷರಿಯೆ ಮರೆತುಹೋಗಲು ಅವನು ಶಿರ ತರಿದುಕೊಳ್ಳಲು ತೊಡಗಿದಾಗ ಶಿವನು ಪ್ರತ್ಯಕ್ಷನಾದನು. ಅವನ ವಾದನದಿಂದ ಸ್ಫೂರ್ತಿಗೊಂಡು ಶಿವನೂ ಶಿವಗಣಗಳೂ ಅಖಂಡಬ್ರಹ್ಮಾಂಡವೂ ನರ್ತಿಸಿದವು. ಗಂಗಾದೇವಿಯು ಪ್ರತಿನಿತ್ಯವೂ ಶಿವಗಣಗಳಿಗೆ ರುದ್ರವೀಣೆಯನ್ನು ನುಡಿಸಿ ಶಿವನನ್ನು ಒಲಿಸಿದಳು. ಗೌತಮ ಮುನಿಯ ಆಶ್ರಮದ ಉಪವನದಲ್ಲಿ ಶಿವಪೂಜೆ ನಡೆಯುತ್ತಿರುವಾಗ ನಾರದನು ವೀಣೆಯನ್ನು ನುಡಿಸಿ ಕಂಬಲಾಶ್ವತರರು ಗಾನ ಮಾಡಿದರು. ಆಗ ಹನುಮಂತನೂ ಹಾಡಿದ್ದನ್ನು ಶಿವನು ಮೆಚ್ಚಿ ನಂದಿವಾಹನನಾಗಿ ಸದಾಕಾಲವೂ ಸಂಗೀತವನ್ನು ತನಗೆ ಕೇಳಿಸುತ್ತಿರಬೇಕೆಂದು ಕೋರಿದ. ಆದರೆ ಹನುಮಂತನು ಶಿವನ ಹೆಗಲನ್ನೇ ಏರಿ ಹಾಡಿದ. ಜ್ಞಾನಸಂಬಂಧರೆಂದು ಹೆಸರುವಾಸಿಯಾದ ಹರದತ್ತನಿಗೆ ಪಾರ್ವತೀಪರಮೇಶ್ವರರ ಅನುಗ್ರಹದಿಂದ ಬಂಗಾರದ ತಾಳಗಳು ದೊರೆತು ಅವುಗಳನ್ನು ನುಡಿಸುವುದರಲ್ಲಿ ಅವನು ಪರಿಣತನಾದನು. ಒಬ್ಬ ರಾಕ್ಷಸನು ತಪಸ್ಸು ಮಾಡಿ ಶಿವನಿಂದ ಢಕ್ಕೆಯನ್ನು ಪಡೆದು ಢಕ್ಕಾಸುರನಾಗಿ ದೇವತೆಗಳನ್ನೆಲ್ಲ ಕಾಡುತ್ತಿರಲು ಶಿವನು ಅವನನ್ನು ಕೊಂದು ಢಕ್ಕೆಯನ್ನು ನುಡಿಸಲಾಗಿ ಲೋಕವೆ ಕಿವುಡಾಯಿತು. ಅಲ್ಲಮನ ಪ್ರಾರ್ಥನೆಯನ್ನು ಮನ್ನಿಸಿ ಶಿವನು ಢಕ್ಕಾವಾದನವನ್ನೂ ತನ್ನ ಲಾಸ್ಯ(!)ವನ್ನೂ

ನಿಲ್ಲಿಸಿದನು. (ಸಂಗೀತಶಾಸ್ತ್ರಗ್ರಂಥಗಳಲ್ಲಿ ಮುರಜ ಮತ್ತು ಡೋಲುವಾದ್ಯಗಳು ಹುಟ್ಟಿದ ಬಗೆಗೆ ಇಂತಹದೆ ಕಥೆಗಳಿವೆ.) ಬಸವಸಮಕಾಲೀನನಾದ ಬೊಮ್ಮಯ್ಯನೂ ವಚನಕಾರನೆ. ಅವನು ಅಂತರಂಗದಲ್ಲಿ ಶಿವಭಕ್ತನಾಗಿದ್ದು ಬಹಿರಂಗದಲ್ಲಿ ಮಾರಿಯನ್ನು ಕುಣಿಸಿ ಢಕ್ಕೆಯನ್ನು ನುಡಿಸುತ್ತಿದ್ದುದರಿಂದ ಅವನಿಗೆ ಢಕ್ಕೆಯ ಮಾರಯ್ಯನೆಂಬ ಹೆಸರು ಬಂದಿತು.

ಕೊಳಲು ನಾಯನಾರ್‌ನಂತೆ ಚೋಳದೇಶದ ತಿರುಪಗಲ್‌ಪುರದಲ್ಲಿದ್ದ ನಮಃಶಿವಾಯ ಮುರುಘದೇವನೂ ಕೊಳಲಿನಲ್ಲಿಯೆ ಪಂಚಾಕ್ಷರಿಯನ್ನು ನುಡಿಸುತ್ತ ಶಿವಪ್ರೀತಿಗೊಳಗಾದನು. ನಾರದನು ಶಿವನಿಗೆ ಬಗೆಬಗೆಯ ತಂತಿ ವಾದ್ಯಗಳನ್ನು ನುಡಿಸಿ ಅವನನ್ನು ಒಲಿಸಿದನು. ಬಾಚಲೆಯು ದಿನನಿತ್ಯವೂ ಮದ್ದಳೆ ನುಡಿಸಿ ಶಿವನನ್ನು ಮೆಚ್ಚಿಸಿದಳು. ಜಾಲದೇವಿಯೂ ಅಷ್ಟೆ. ಪಾರ್ವತೀಪರಮೇಶ್ವರರು ಪುಷ್ಪಕದಲ್ಲಿ ಆಕಾಶಯಾನ ಮಾಡುತ್ತಿರುವಾಗ ಮರಿಹಾಕಿದ ಕಪಿಯೊಂದರ ಮಾಂಸವು ಮರಕ್ಕೆ ಸಿಕ್ಕಿ ಒಣಗಿ ಝೇಂಕರಿಸಿತು. ಈ ಸುನಾದದಿಂದ ಅವರಿಗೆ ಸಂತೋಷವಾಯಿತು. ರಾವಣನು ಇದನ್ನು ಕಂಡು ತನ್ನ ತಲೆ ಮತ್ತು ಕೈಗಳನ್ನು ಕತ್ತರಿಸಿಕೊಂಡು ಮುಂಡಕ್ಕೆ ನರವನ್ನು ಬಿಗಿದು ವೀಣೆ ಮಾಡಿ ನುಡಿಸಿದನು. ಇದೇ ರಾವಣಹಸ್ತವೆಂಬ ವೀಣೆ. ಇನ್ನೊಮ್ಮೆ ತನ್ನ ತಾಯಿಯ ಶಿವಪೂಜೆಗೆಂದು ಶಿವಸಹಿತವಾಗಿ ಕೈಲಾಸವನ್ನೇ ಕಿತ್ತು ತರಲು ಉದ್ಯುಕ್ತನಾಗಿಸಿದನು. ಶಿವನ ಕಾಲ ಹೆಬ್ಬೆಟ್ಟಿನ ಒತ್ತಡದಿಂದ ಅವನ ಬೆರಳುಗಳು ಕೈಲಾಸಪರ್ವತದ ಅಡಿಯಲ್ಲಿ ಸಿಕ್ಕಿಕೊಂಡವು. ಆಗ ರಾವಣನು ನರಗಳಿಂದಲೆ ವೀಣೆಯನ್ನು ಕಟ್ಟಿ ನುಡಿಸಿ ಶಿವಾನುಗ್ರಹಕ್ಕೆ ಪಾತ್ರನಾದನು.

## (ಆ) ಗಾಯಕ ಶರಣರು

ಗುರ್ಜರರಾಜ ಉದ್ಭಟದೇವನು ಉತ್ತಮ ಗಾಯಕ. ಅವನು ಒಂದೊಂದು ಪದವನ್ನು ಹಾಡುತ್ತಲೂ ನೂರು ಯೋಜನಗಳನ್ನು ಸಾಗುತ್ತ ಹೀಗೆ ನೂರು ಪದಗಳನ್ನು ಹಾಡಿ ಕೈಲಾಸವನ್ನು ಸೇರಿದನು. ಭೋಜರಾಜನ ಸಮ್ಮುಖದಲ್ಲಿ ಪ್ರತಿದಿನವೂ ಬೊಮ್ಮವ್ವೆಯು ಗಾಯನ ಮಾಡುತ್ತಿದ್ದಳು. ಅವಳಿಗೆ ಉದ್ಭಟನು ಶಿವಜ್ಞಾನವನ್ನು ಬೋಧಿಸಿದನು. ಕೇರಳದ ಕುಡುವಾಲೂರಿಗೆ ಚೇರಮರಾಯನು ರಾಜ. ಅವನು ವಿರಕ್ತಿಯಿಂದ ಕಾಡಿಗೆ ಹೋಗಲೆಳಸಿದನು. ಅವನ ಗೆಳೆಯ ಚೋಳರಾಜನ ಪ್ರಾರ್ಥನೆಯಂತೆ ಪರಶಿವನು ಚೇರಮನನ್ನು ಕರೆಸಿಕೊಂಡು ನಾಟ್ಯದಿಂದ ರಂಜಿಸಿ ರಾಜಧಾನಿಯಲ್ಲೇ ಉಳಿದುಕೊಳ್ಳುವಂತೆ ಒಲಿಸಿದನು. ಚೇರಮನು ದಿನನಿತ್ಯವೂ ಶಿವನ ಸಂಗೀತಾರಾಧನೆಯಲ್ಲಿ ತೊಡಗಿದ್ದಾಗ ಶಿವನ ಹೆಜ್ಜೆಯ ಗೆಜ್ಜೆಯ ನುಡಿ ಕೇಳಿಸುತ್ತಿತ್ತು. ಜೈನಿಷನೆಂಬ ಶಿವಭಕ್ತನು ನೃತ್ಯಗೀತಗಳಿಂದ ಶಿವನನ್ನು ಮೆಚ್ಚಿಸಿ ಭಕ್ತಿವೈರಾಗ್ಯಗಳನ್ನು ಪಡೆದುಕೊಂಡನು. ತಿರುವಂಜಕಳದ ನೀಲಕಂಠಪಾಣಾರ್ ಶಿವಭಕ್ತ, ಗಾಯನವಿಚಕ್ಷಣ. ಅವನು ಜ್ಞಾನಸಂಬಂಧರ ಶಿಷ್ಯ. ಚೇರಮರಾಯನನ್ನು ಸಂಗೀತದಿಂದ ಮೆಚ್ಚಿಸಿ ಅವನಿಂದ ರತ್ನಪೀಠದ ಪುರಸ್ಕಾರವನ್ನು ಪಡೆದನು. ಗಾನದಿಂದ ಶಿವನನ್ನು ಓಲೈಸಿ ಶಿವಗಣನಾದನು.

ಭದ್ರನೆಂಬೊಬ್ಬ ಭಕ್ತನು ಗಾಯನ ಕಾಯಕದಿಂದ ಕೇರಳದ ಕೊಳುಕಟ್ಟೆಯೆಂಬ ಊರಿನಲ್ಲಿ ಬಾಳಿಕೊಂಡಿದ್ದನು. ಅವನು ಕಡು ಬಡವ. ಆ ಊರಿನ ವಿಧವಾಪುತ್ರನೊಬ್ಬನು ಭದ್ರನ ಸಂಗೀತಕ್ಕೆ ಮನಸೋತು ಅವನ ಶಿಷ್ಯನಾಗಿ ಗಾಯಕಶ್ರೇಷ್ಠನಾಗಿರುತ್ತಿದ್ದನು. ಅದೇ ಊರಿನಲ್ಲಿ ಗಂಧರ್ವಭಾರತಿಯೆಂಬ ಮಹಾಗಾಯಕನಿದ್ದನು. ಅವನು ತನ್ನ ಮಗನಿಗೆ ಸಂಗೀತಪಾಠವನ್ನು ಹೇಳುವಂತೆ ಭದ್ರನಿಗೆ ಎಷ್ಟೋ ಧನಲೋಭವನ್ನೊಡ್ಡಿದರೂ ಭದ್ರನು ಜಗ್ಗಲಿಲ್ಲ. ಬಡತನಕ್ಕೆ ಬೇಸತ್ತ ಅವನ ಹೆಂಡತಿಯು ಅವನನ್ನು ಪೀಡಿಸಲು, ಅವನು ಶಿವನಲ್ಲಿ ಇದನ್ನು ಹೇಳಿಕೊಂಡನು. ಶಿವನು ಒಂದು ಪತ್ರವನ್ನು ಬರೆದುಕೊಟ್ಟು ಚೇರಮರಾಜನಲ್ಲಿಗೆ ಕಳುಹಿಸಿದನು. ಚೇರಮನು ತನ್ನ ಭಂಡಾರದಲ್ಲಿ ಬೇಕಾದುದನ್ನೆಲ್ಲ ತೆಗೆದುಕೊಳ್ಳುವಂತೆ ಕೋರಿದರೂ ಭದ್ರನು ವಿಭೂತಿಗಟ್ಟಿಗಳನ್ನು ಮಾತ್ರ ಮನೆಗೆ ತಂದು ಮುಟ್ಟಿದಾಗ ಅದು ಚಿನ್ನದ ಗಟ್ಟಿಯಾಯಿತು. ರತ್ನಘೋಷನೆಂಬ ಸಿದ್ಧನು ಪ್ರಸಿದ್ಧ ಗಾಯಕ. ಒಂದು ದೇಶದ ರಾಜನು ನೀರಿಲ್ಲವೆಂದು ಕೆರೆ ಕಟ್ಟಿಸಿ ಮಳೆಯಿಲ್ಲದೆ ಅದು ತುಂಬದಿರಲು ಶೋಕಿಸುತ್ತಿದ್ದನು. ರತ್ನಘೋಷನು ಕೆರೆಯಂಗಳದಲ್ಲಿ ನಿಂತು ಮೇಘರಂಜನಿ ರಾಗವನ್ನು ಹಾಡಿದನು : ಮಳೆಯಿಂದ ಕೆರೆಗೆ ಕೋಡಿ ಬಿತ್ತು. ಆದರೆ ರತ್ನಘೋಷನು ಅದರ ಕೆಸರಿನಲ್ಲಿ ಸಿಕ್ಕಿ ಸತ್ತುಹೋದನು. (ಕರ್ಣಾಟಕ ಸಂಗೀತದಲ್ಲಿ ಮೇಘರಂಜನಿ ಮತ್ತು ಅಮೃತವರ್ಷಿಣಿ ರಾಗಗಳನ್ನೂ ಹಿಂದೂಸ್ಥಾನೀ ಸಂಗೀತದಲ್ಲಿ ಮೇಘಮಲ್ಹಾರ್ ರಾಗವನ್ನೂ ಹಾಡಿದರೆ ಮಳೆ ಬರುತ್ತದೆಂಬ ಐತಿಹ್ಯವಿದೆ.) ಪರಶಿವನ ಹೆಗಲೇರಿ ಸಂಗೀತದಲ್ಲಿ ಮೇಘಮಲ್ಹಾರ್ ರಾಗವನ್ನೂ ಹಾಡಿದರೆ ಮಳೆ ಬರುತ್ತದೆಂಬ ಐತಿಹ್ಯವಿದೆ.) ಪರಶಿವನ ಹೆಗಲೇರಿ

ತೃಪ್ತಿಪಡೆದಿದ್ದೇನೆ, ಇನ್ನೂ ಬೇರೆ ಪೂಜೆಯ ಅಗತ್ಯವಿಲ್ಲ ಎಂದು ಶಿವನು ಹೇಳಿದರೂ ಕೇಳಲಿಲ್ಲ. ಆಗ ಅವನ ಇಷ್ಟಲಿಂಗವು ಮಾಯವಾಯಿತು. ಇದನ್ನು ಹನುಮಂತನು ವೀರಭದ್ರನಲ್ಲಿ ಹೇಳಿಕೊಳ್ಳಲು ವೀರಭದ್ರನ ನೊಸಲ ನೇತ್ರದಿಂದ ಜಗತ್ತು ಸುಟ್ಟುಹೋಗಲು ಮೊದಲಾಯಿತು. ಆಗ ಶಿವನು ಹನುಮಂತನಿಗೆ ಇಷ್ಟಲಿಂಗವನ್ನು ಮರಳಿ ಕೊಟ್ಟನು. ಹನುಮಂತನು ಅದನ್ನು ಸಮುದ್ರಮಧ್ಯದಲ್ಲಿಟ್ಟು ಪೂಜಿಸಿ ಹಾಡಿದನು. ಮತ್ತೊಮ್ಮೆ ಅವನು ಸಂಗೀತ ಸ್ಪರ್ಧೆಯೊಂದರಲ್ಲಿ ಶೀರ್ಪುಗಾರನಾಗಿ ಮೆರೆದನು. ಹಾಹಾ. ಹೂಹೂ ಎಂಬ ಗಂಧರ್ವರಿಗೂ ತಂದನ. ತಾನ ಗಂಧರ್ವರಿಗೂ ಯಾರು ಹೆಚ್ಚೆಂಬ ವಿವಾದವು ಬಂದಾಗಲು ಹನುಮಂತನು ಇಬ್ಬರೂ ಸಮಾನರೆಂದು ತೀರ್ಮಾನಿಸಿದನು. ಚಂದ್ರಗುಪ್ತ ಮತ್ತು ಸೌದಾಮಿನಿಯರ ಮಗಳು ರಂಭೆಯು ಗಾನವಿಶಾರದೆ. ಅವಳ ಸಂಗೀತವನ್ನು ಮೆಚ್ಚಿಕೊಂಡ ಮಹಾಕೇಶನೆಂಬ ಮುನಿಯು ಇಳಿದು ಬರಲು ಅವಳು ಅವನ ರೋಮರಾಶಿಯನ್ನು ಪರಿಹಾಸಗೈದಳು. ಆತನ ಶಾಪದಿಂದ ಅವಳು ಕಪಿಯಾಗಿ ಸೋಮವಾರದ ವ್ರತವನ್ನಾಚರಿಸಿ ಶಾಪವಿಮುಕ್ತೆಯಾದಳು.

ಬಿಜಾಪುರಜಿಲ್ಲೆಯಲ್ಲಿ ಇಂಡಿ ಎಂಬೊಂದು ಊರಿದೆ. ಅಲ್ಲಿ ಶಾಂತಯ್ಯನೆಂಬ ಶರಣನಿದ್ದನು. ಅವನದು ಓದಿಸುವ ಕಾಯಕ. ದಿನನಿತ್ಯವೂ ಶಿವನನ್ನು ಕೀರ್ತಿಸಿ ಪೂಜೆಗಳಿಂದ ಆರಾಧಿಸಿ ಮೈಮರೆಯುತ್ತಿದ್ದನು. ಒಮ್ಮೆ ಅವನು ಶಿವಕೀರ್ತನೆಯಲ್ಲೇ ಸುದೀರ್ಘವಾಗಿ ಮಗ್ನನಾಗಿ ಹಾಡುತ್ತಲೆ ಬಿದ್ದು ಮೈಮರೆತನು .ಆಗ ಶಿವನು ಸುಪ್ರೀತನಾಗಿ 'ಕೀರ್ತನೆ ಸಾಕು. ಪೂರ್ತಿಯಾಗಿದೆ' ಎಂದು ಸಂತೈಸಿದ ಮೇಲೆ ಶಾಂತಯ್ಯನು ಎದ್ದು ದಾಸೋಹ ಮಾಡಿ ಉಂಡನು. ಕಂತೆಯ ಹರಿದೇವನು ಶಿವಲಿಂಗಪೂಜೆಗೆಂದು ನಿತ್ಯವೂ ಕೇಳಿಕೆಯನ್ನು ಕೇಳಿಸುತ್ತಿದ್ದನು : ಆಮೇಲೆ ಭಕ್ತರ ಮನೆಯಲ್ಲಿ ಕೇಳಿಸಿ. ಈ ಕಾಯಕದಿಂದ ಜೀವಿಸಿದ್ದನು. ಕನಕಾವತಿಯ ರಾಜನಾದ ಆದಿತ್ಯನು ತನಗೂ ಕೇಳಿಸು ಎಂದು ಬಲಾತ್ಕರಿಸಿದ್ದರಿಂದ ಕಿವುಡನಾದನು. ಅವನು ಹರಿಹರಲಿಂಗವನ್ನು ಪ್ರಾರ್ಥಿಸಲು. ಹರಿದೇವನು ಲಿಂಗಕೇಳಿಕೆಯನಂತರ ಹನ್ನೆರಡು ಪಡಿ ಹೊನ್ನು ಕೊಟ್ಟು ಕೇಳಿದರೆ ಕಿವುಡು ಹೋಗುವುದೆಂದು ಲಿಂಗವು ನುಡಿಯಿತು. ಆದಿತ್ಯನು ಹಾಗೆಯೆ ಮಾಡಿ ಕಿವಿಯನ್ನು ಪಡೆದುಕೊಂಡನು. ಶಿವಭಕ್ತಳಾದ ಪಾರ್ವತಿಯು ಧವಳವನ್ನು ಹಾಡುವುದರಲ್ಲಿ ತಜ್ಞಳು. ಅವಳು ಶಿವಭಕ್ತರ ಮನೆಗಳಲ್ಲಿ ಧವಳವನ್ನು ಹಾಡುವ ಕಾಯಕದಿಂದ ಜೀವಿಕೆಯನ್ನು ಗಳಿಸಿ. ಅದರಿಂದ ಶರಣರ ಸೇವೆ ಮಾಡಿ ಶಿವಪ್ರೀತಿಗೆ ಪಾತ್ರಳಾದಳು. ಸೌಂದರನಂಬಿಯು ತಿರುವಾಲೂರಿನ ನಾಯನಾರ್ ಮತ್ತು ಯಸ್ಯಜ್ಞಾನಿಯರ ಮಗ. ಚೇರಮರಾಯನು ಅವನ ಮನೆಯಲ್ಲಿ ಊಟ ಮಾಡುವಾಗ ಮಾಡಿದ ಬಯಕೆಯನ್ನು ಮನ್ನಿಸಿ ನಂಬಿಯು ಹಾಡಿ ಶಿವನನ್ನು ಕರೆಸಿ ಕುಣಿಸಿದನು. ಬಸವಸಮಕಾಲೀನನಾದ ಮೈದುನರಾಮಯ್ಯನೆಂಬ ವಚನಕಾರನು ಶಿವಗೀತೆಗಳನ್ನು ರಚಿಸಿದ್ದಾನೆ. ಗಾರಲುದಿಣ್ಣೆಯ ಶಿವಭಕ್ತ ಲಕ್ಕನು ಗಾಯನದ ಕಾಯಕದಿಂದ ಶಿವಗಣವಾದನು.

## (ಇ) ರಾಗತಜ್ಞ ಶರಣರು

ಅಲ್ಲಯ್ಯನೆಂಬ ಶರಣನು ಲಿಂಗದ ಮುಂದೆ ರಾಗವನ್ನು ಕೇಳಿಸುವ ಕಾಯಕವನ್ನಿಟ್ಟುಕೊಂಡಿದ್ದನು. ಭಕ್ತರು ಅದನ್ನು ಮೆಚ್ಚಿ ನೀಡುತ್ತಿದ್ದ ಹಣದಿಂದ ಅವನು ಜಂಗಮಸೇವೆ ಮಾಡುತ್ತಿದ್ದನು. ಇದನ್ನು ಮೆಚ್ಚಿದ ಶಿವನು ಅವನನ್ನು ಕೈಲಾಸಕ್ಕೆ ಕರೆದೊಯ್ದನು. ಅೀಪೋತಿ (ಅಸ್ಸೂತಯ್ಯ) ಎಂಬ ಭಕ್ತನು ಚೋಳದೇಶದ ತಿರುವಣ್ಣೂರಿನಲ್ಲಿದ್ದನು. ಅವನು ರಾಗಗಳನ್ನು ಹಾಡುವುದರಲ್ಲಿ ಪರಿಣತ. ಒಮ್ಮೆ ಶಿವನು ಅವನ ರಾಗವನ್ನು ಕೇಳಬೇಕೆಂದು ಬಯಸಿ ಓಲೆಯನ್ನು ಬರೆಸಿದನು. ಅೀಪೋತಿಯು ಅದನ್ನು ತಿರಸ್ಕರಿಸಿದನು. ಆದರೆ ತನ್ನ ಗುರುವಾದ ವಾಗೀಶಯ್ಯನು ಓಲೆಯನ್ನು ಕಳುಹಿಸಲು ಕೈಲಾಸಕ್ಕೆ ಹೋಗಿ ರಾಗವನ್ನು ಕೇಳಿಸಿ ಗುರುಭಕ್ತಿಯನ್ನು ಮೆರೆದನು. ಚೌಡಯ್ಯನು ಹೈದರಾಬಾದಿನ ರೇಕಳಿಕೆ ಎಂಬ ಗ್ರಾಮದವನು. ಬಸವಸಮಕಾಲೀನ ವಚನಕಾರ. ಅವನು ಭರತವಿದ್ಯಾಪ್ರವೀಣ. ಬಹುರೂಪೀ ಕಾಯಕದವನು ಎಂದರೆ ಬೇರೆ ಬೇರೆ ವೇಷಗಳನ್ನು ಧರಿಸುವುದರಲ್ಲಿ ನಿಪುಣ. ಅವನೊಡನೆ ಸ್ಪರ್ಧೆಯಲ್ಲಿ ಸೋತವರು ಅವನ ಭೃತ್ಯರಾಗುವ ಅಥವಾ ಕತ್ತೆಗಳನ್ನು ಕಾಯುವ ಪಣವಿತ್ತು. ಅಜಿತ ಮತ್ತು ಯಕ್ಷನಾಥ ಎಂಬ ಇಬ್ಬರು ನಾಟ್ಯವಿದರು ಅವನಲ್ಲಿ ಸೋತುಹೋದರು. ಅವನು ರಾಮಕ್ರಿಯಾರಾಗವನ್ನು ಎಣೆಯಿಲ್ಲದಂತೆ ಹಾಡುತ್ತಿದ್ದನು. ನಾಡಿನಲ್ಲಿರುವ ಶಿವಶರಣರಿಗೆಲ್ಲ ದಾಸೋಹ ಮಾಡಬೇಕೆಂದು ರಾಮದೇವನೆಂಬ ರಾಜನಲ್ಲಿ ಅದನ್ನು ೧೨೦೦೦ ವರಹಗಳಿಗೆ ಒತ್ತೆಯಿಟ್ಟರೂ ರಾಮಾಯಣ ಭಾರತಗಳ ಕಥೆಗಳನ್ನಾಡಿ ತೋರಿಸಿದರೂ ಅವನಿಗೆ ಸಾಕಷ್ಟು ಹಣ ಸೇರಲಿಲ್ಲ. ಶಿವನು ನಾಗಿನಾಥನೆಂಬ ಜಂಗಮನ ರೂಪದಲ್ಲಿ ಬಂದು ಶಿವಶರಣರ ಕಥೆಗಳನ್ನು ಆಡೆಂದು ಪ್ರೇರಿಸಲು ಅವನು ಹಾಗೆಯೆ ಮಾಡಿ ತನ್ನ ಸಾಲವನ್ನೆಲ್ಲ ತೀರಿಸಿದನು. ಋಣಮುಕ್ತನಾದ ಮೇಲೆ ಮಾತ್ರ ಶಿವನ

ಮುಂದೆ ರಾಮಕ್ರಿಯಾ ರಾಗವನ್ನು ಹಾಡಿದನು. ಆಗ ಶಿವನು ತನ್ನ ರೂಪದೋರಿದನು. (ತಮಗೆ ಅತ್ಯಂತ ಪ್ರಿಯ ವೆನಿಸಿದ ರಾಗವನ್ನು ಸಂಗೀತವಿದ್ವಾಂಸರು ಒತ್ತೆಯಿಟ್ಟ ನಿದರ್ಶನಗಳು ಅರ್ವಾಚೀನಕಾಲದಲ್ಲಿಯೂ ಇವೆ. ತೋಡಿ ಯನ್ನು ಒತ್ತೆಯಿಟ್ಟ ಸೀತಾರಾಮಯ್ಯ. ಬೇಗಡೆಯನ್ನು ಒತ್ತೆಯಿಟ್ಟ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್, ಭೈರವಿ ಯನ್ನು ಒತ್ತೆಯಿಟ್ಟ ಕೆಂಪೇಗೌಡ. ಶಂಕರಾಭರಣವನ್ನು ಒತ್ತೆಯಿಟ್ಟ ನರಸಯ್ಯ ಮುಂತಾದವರು ಹದಿನೆಂಟು-ಹತ್ತೊಂಬತ್ತನೆಯ ಶತಮಾನಗಳ ಉದಾಹರಣೆಗಳು.)

ದೇವಲಾದ್ಯನೆಂಬ ಶಿವಭಕ್ತನು ಶಿವನಿಗೆ ಪ್ರತಿದಿನವೂ ಮೂರು ವೇಳೆ ರಾಗವನ್ನು ಕೇಳಿಸಿ ಶಿವಗಣವಾದನು. ದೇವಶರ್ಮನೆಂಬುವನು ಕಪಾಲಕ್ಷೇತ್ರದ ಭೈರವನನ್ನು ತಪಸ್ಸಿನಿಂದ ಒಲಿಸಿಕೊಂಡು ಡಮರುವನ್ನು ಪಡೆದು ಅದರ ನೆರ ವಿನಿಂದ ವಾನಶೌಂಡನೆನಿಸಿಕೊಂಡನು. ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಶಿವಭಕ್ತ ಸಂಕಣ್ಣನಲ್ಲಿ ಕಟ್ಟಿಗೆ ಮಾರುವ ಕಾಯಕವಿಟ್ಟುಕೊಂಡಿದ್ದರೂ ರಾಗಗಾಯನದಲ್ಲಿ ಶ್ರೇಷ್ಠನಾಗಿದ್ದನು. ಒಮ್ಮೆ ಮಳೆಗೆ ಸಿಕ್ಕಿ ಅಡವಿಯಲ್ಲಿ ಶಿವಗಾನರತ ನಾಗಿದ್ದಾಗ ಶಿವನೇ ಕೇಳಿ ಮೆಚ್ಚಿ ತನ್ನ ಗುಡಿಯಲ್ಲಿ ಹಾಡುವಂತೆ ಒಂದು ವರಹದ ದಿನಪಡಿಯನ್ನು ಗೊತ್ತುಮಾಡಿ ದನು. ವಿಕ್ರಮಾದಿತ್ಯರಾಜನಿಗೆ ಇವನ ಕೀರ್ತಿಯು ಮುಟ್ಟಿ ಅವನೂ ೧೨ ವರಹಗಳ ದಿನಪಡಿಯ ಮೇಲೆ ಆಸ್ಥಾನ ವಿದ್ವಾಂಸನನ್ನಾಗಿ ನೇಮಿಸಿಕೊಂಡನು. ಇದರಿಂದ ಉಳಿದ ಆಸ್ಥಾನ ಸಂಗೀತ ವಿದ್ವಾಂಸರಿಗೆ ಹೊಟ್ಟೆಯುರಿದು ಇವನ್ನು ತಪ್ಪಿಸಲೆಳಸಿದರು. ಇದಕ್ಕೆ ಪ್ರತಿಯಾಗಿ ರಾಜನು ಸಂಕಣ್ಣನಿಗೆ ರಾಗರಸಾಂಕ ಎಂಬ ಪ್ರಶಸ್ತಿಯನ್ನೇ ನೀಡಿ ಗೌರವಿಸಿ ದನು. ಗೌಳದೇಶದ ಸಂಗೀತ ವಿದ್ವಾಂಸನೊಬ್ಬನು ರಾಗರಸಾಂಕನನ್ನು ಸೋಲಿಸಲು ಬಂದಾಗ ಶಿವನೆ ಕಟ್ಟಿಗೆ ಮಾರುವವನ ರೂಪದಲ್ಲಿ ಅವನಿಗೆ ಎದುರಾಗಿ. ತನ್ನ ಸಾಟಿಯಿಲ್ಲದ ಸಂಗೀತ ಸಾಮರ್ಥ್ಯದಿಂದ ಮೂಕನನ್ನಾಗಿಸಿ ತಾನು ರಾಗರಸಾಂಕನ ಶಿಷ್ಯನೆಂದು ಹೇಳಿಕೊಂಡನು. ಇದರಿಂದ ಹೌಹಾರಿದ ಗೌಳದೇಶದ ಸಂಗೀತ ವಿದ್ವಾಂಸನು ಪಲಾಯನಸೂಕ್ತವನ್ನು ಜಪಿಸಿದನು.

ಮಧುರೆಯಲ್ಲಿ ಶಂಕಣ್ಣನೆಂಬ ಮಹಾಸಂಗೀತ ವಿದ್ವಾಂಸನೊಬ್ಬನಿದ್ದನು. ಪಾಂಡ್ಯರಾಜನ ಆಸ್ಥಾನ ವಿದ್ವಾಂಸ ರೊಡನೆ ಅವನು ಒಮ್ಮೆ ಸ್ಪರ್ಧೆಗೆ ನಿಲ್ಲಬೇಕಾಯಿತು. ಆಗ ಶಿವನೆ ಬಂದು ಸಂಗೀತದಲ್ಲಿ ಅವರನ್ನೆಲ್ಲ ಸೋಲಿಸಿ ತಾನು ಶಂಕಣ್ಣನ ಶಿಷ್ಯನೆಂದು ಸಾರಿದ: ಸ್ಪರ್ಧೆಗೆ ನಿಂತಿದ್ದ ವಿದ್ವಾಂಸರೆಲ್ಲ ಹೇಳಹೆಸರಿಲ್ಲದಂತೆ ಓಟಕಿತ್ತರು. ಶಂಕಣ್ಣನಿಗೆ ಚಂಗಾಲೂರಿನ ವಾತವರಾಳಿ ಎಂಬ ಒಬ್ಬ ಶಿಷ್ಯನಿದ್ದನು. (ವರಾಳಿ ಎಂಬುದು ಒಂದು ರಾಗದ ಹೆಸರು ; ವಾತವರಾಳಿ ಎಂಬುದು ಬಿರುದಿರಬಹುದು. ಸುಮಾರು ನೂರೈವತ್ತು ವರ್ಷಗಳ ಹಿಂದೆ ತಂಜಾವೂರಿನಲ್ಲಿದ್ದ ಕೃಷ್ಣಯ್ಯ ಎಂಬ ಸಂಗೀತ ವಿದ್ವಾಂಸನಿಗೆ ಚಲ್ಲಗಾಲಿ. ಎಂದರೆ ತಂಗಾಳಿ ಎಂಬ ಬಿರುದಿದ್ದುದನ್ನು ಸ್ಮರಿಸಬಹುದು.) ಅವನೂ ಮಧುರೆಗೆ ಬಂದು ಪಾಂಡ್ಯರಾಜನನ್ನು ಮೆಚ್ಚಿಸಿ ಪಡಿಯನ್ನು ಪಡೆದನು. ಒಮ್ಮೆ ಶಿವನೆ ಬಂದು ಚಿದಂಬರಕ್ಕೆ ಬಾರೆಂದನು. ವಾತವರಾಳಿಯು ತನ್ನ ಗುರುವಿಲ್ಲದೆ ಬರೆನೆಂದು ಪಟ್ಟುಹಿಡಿದನು. ಅವನ ಗುರುಭಕ್ತಿಗೆ ಮೆಚ್ಚಿ ಶಿವನು ಶಂಕಣ್ಣನನ್ನೂ ವಾತವರಾಳಿಯನ್ನೂ ತನ್ನೊಡನೆ ಕೈಲಾಸಕ್ಕೆ ಕರೆದೊಯ್ದನು. ಶಂಕರಯ್ಯ ಎಂಬೊಬ್ಬ ಸಂಗೀತ ವಿದ್ವಾಂಸನು ಶಿವಭಕ್ತ ನಾಗಿದ್ದನು. ಈಳ (ಜೋಳ ?) ದೇಶದಿಂದ ಒಬ್ಬ ಸಂಗೀತ ವಿದ್ವಾಂಸನು ಬಂದು ಅವನನ್ನು ಸೋಲಿಸಲೆಳಸಿದಾಗ ಶಿವನು ಶಂಕರಯ್ಯನಿಗೆ ಹೊಸ ಹೊಸ ರಾಗಗಳನ್ನು ಕಲ್ಪಿಸುವ ಆಶುರಚನಾ ಸಾಮರ್ಥ್ಯವನ್ನು ಅನುಗ್ರಹಿಸಿ ಗೆಲ್ಲಿಸಿದನು. ಸಿದ್ಧದೇವಿಯೆಂಬ ಶರಣೆ ಸಂಗೀತನಾಟ್ಯಗಳೆರಡರಲ್ಲೂ ಉಭಯಕಲಾಕೋವಿದಳಾಗಿದ್ದಳು. ಅವಳು ಶಿವಲಿಂಗದ ಮುಂದೆ ಪ್ರತಿದಿನವೂ ತಾಳಸಹಿತವಾದ ರಾಗಾಲಾಪನೆಯನ್ನು ಕೇಳಿಸಿ ಕೃತಕೃತ್ಯಳಾದಳು. (ತಾಳಸಹಿತವಾದ ಅಕ್ಷರರಹಿತವಾದ ರಾಗಾಲಪ್ತಿಯನ್ನು ಸಂಗೀತಶಾಸ್ತ್ರವು 'ಪ್ರಾಂಜಲಾಲಪ್ತಿಯೆಂಬ' ಹೆಸರಿನಿಂದ ವರ್ಣಿಸುತ್ತದೆ.)

### (ಈ) ನರ್ತಕ ಶರಣರು

ಚೋಳದೇಶದ ಕರಿಯೂರಿನ ರಾಜ ಪಗಲ್‌ಚೋಳನು ಒಂದು ಶಿವದೇವಾಲಯವನ್ನು ಕಟ್ಟಿಸಲು ತೊಡಗಿದನು. ಊರ್ಧ್ವಶಿಲೆಯಾಂಡನೆಂಬ ಶಿವಯೋಗಿಯು ಸಂಚಾರದಲ್ಲಿ ಅಲ್ಲಿಗೆ ಬಂದು ತನ್ನ ದೇಹದಲ್ಲಿಯೇ ದೇವಾಲಯವನ್ನು ಇನ್ನೂ ಮುಂಚೆ ಕಟ್ಟಿ ಮುಗಿಸುವೆನೆಂದು ಸಂಕಲ್ಪಿಸಿ, ಹಾಗೆಯೆ ಮಾಡಿ ಆನಂದದಿಂದ ನರ್ತಿಸಿದನು. ದೇಹದೇವಾಲಯ ವನ್ನು ಕಾಣಬಯಸಿದ ಪಗಲ್‌ಚೋಳನಿಗೆ ಶಿಲೆಯಾಂಡನು ತನ್ನ ಎದೆ ಸೀಳಿಕೊಂಡು ಅಲ್ಲಿ ಶಿವಲಿಂಗವನ್ನು ತೋರಿಸಿ ದನು. ಶಿವನು ಮೆಚ್ಚಿ ಕೈವಲ್ಯವನ್ನಿತ್ತನು. ಶಿವಪೂಜೆಯಲ್ಲಿ ಕುಣಿಯುತ್ತಿದ್ದ ಕುಂಬಾರ ಗುಂಡಯ್ಯನ ಕಥೆಯನ್ನು ಮೇಲೆ ಸೂಚಿಸಿದೆ. ಮಿಥಿಲೆಯ ಪೆರುಮಳಲಿ ಎಂಬಲ್ಲಿ ಕುರುಂಬ ಎಂಬ ರಾಜನಿದ್ದನು. ಅವನು ವಿರಕ್ತನಾಗಿ ನಂಬಿಯಣ್ಣ

ನೊಡಗೂಡಿ ಒಂಬತ್ತು ವರ್ಷಗಳ ಕಾಲ ತೀರ್ಥಯಾತ್ರೆಯಲ್ಲಿದ್ದು ಶಿವನಿಗೆ ನರ್ತನಸೇವೆಯನ್ನು ಸಲ್ಲಿಸುತ್ತಿದ್ದನು. ಅವನೂ ನಂಬಿಯಣ್ಣನೂ ಚೇರಮರಾಯನೂ ಒಟ್ಟುಗೂಡಿ ಕೈಲಾಸಕ್ಕೆ ಹೋದರು.

ಬಸವಸಮಕಾಲೀನ ವಚನಕಾರ ಮುದ್ದಣ್ಣನಿಗೆ ಘಟ್ಟಿವಾಳಯ್ಯನೆಂಬ ಬಿರುದಿತ್ತು. ಏಕೆಂದರೆ ಅವನು ನರ್ತನ ಕಾಯಕದಲ್ಲಿ ಬಹಳ ಕಷ್ಟಕರವಾದ ಶಿವಾನುಭವತತ್ತ್ವಗಳನ್ನು ಅಭಿನಯಿಸುವುದರಲ್ಲಿ ಘಟ್ಟಿಗನಾಗಿದ್ದನು. ಬ್ರಹ್ಮಯ್ಯ ನೆಂಬ ಭಕ್ತನಿಗೆ ಶಿವಭಕ್ತರ ಮನೆಗಳಲ್ಲಿ ಮರದ ಗೊಂಬೆಗಳನ್ನು ಸೂತ್ರಗಳಿಂದ ಆಡಿಸಿ ಕುಣಿಸುವುದೆ ಕಾಯಕ. ಇದರಿಂದಲೆ ಅವನು ಜಂಗಮದಾಸೋಹ ಮಾಡಿ ಶಿವನಿಗೆ ಇಷ್ಟನಾದನು. ಹೀಗೆ ಮರದ ಯಕ್ಷಿ (ಜಕ್ಕಿ)ಯರನ್ನು ಕುಣಿಸುತ್ತಿದ್ದುದ ರಿಂದ ಅವನಿಗೆ ಜಕ್ಕಿಯರ ಬ್ರಹ್ಮಯ್ಯನೆಂದೆ ಹೆಸರಾಯಿತು. ನೃತ್ಯಗೀತಗಳಿಂದ ಶಿವಪ್ರೀತಿಯನ್ನು ಪಡೆದ ಜೈನಿಷನನ್ನು ಹಿಂದೆಯೆ ಪ್ರಸ್ತಾಪಿಸಿದೆ. ನೀಲಕಿಯೆಂಬ ವಾರಸ್ತ್ರೀ, ಲಿಂಗದ ಮುಂದೆ ನರ್ತನಸೇವೆಯನ್ನು ಸಲ್ಲಿಸುತ್ತಿದ್ದಳು. ಶಿಲಾದ ಮುನಿಪುತ್ರನಾದ ಪರ್ವತಮುನಿಯು ಇದನ್ನು ನೋಡಿ ಅವಳನ್ನು ಮೋಹಿಸಿ, ಪಡೆಯಲಾಗದೆ ವಿರಹದಿಂದ ದೇಹ ವಳಿದನು. ಆಮೇಲೆ ಚಂದ್ರಾಪೀಡನೆಂಬ ಹೆಸರಿನಲ್ಲಿ ಹುಟ್ಟಿ ಹಿಮಾಲಯದಲ್ಲಿ ವಿಶ್ವನಾಥಲಿಂಗದ ದರ್ಶನದಿಂದ ಶಾಪ ವಿಮೋಚನೆ ಪಡೆದು ಎಂದಿನಂತಾದನು. ಭರತವಿದ್ಯಾಜ್ಯೇಷ್ಠನಾಗಿದ್ದ ಬಹುರೂಪಿ ಚೌಡಯ್ಯನು ಕೊಟ್ಟುರಿಗೆಯಲ್ಲಿ ನರ್ತನಕಾಯಕವನ್ನು ಮಾಡಿಕೊಂಡಿದ್ದುದನ್ನು ಈ ಹಿಂದೆಯೆ ಸೂಚಿಸಿದೆ. ನಿಂಬಿ ಎಂಬ ಪಣ್ಯಾಂಗನಾ ನರ್ತಕಿ ಬಸವ ಸಮಕಾಲೀನಳು. ಬಿಜ್ಜಳನು ಕರೆದು ನರ್ತಿಸೆಂದರೂ ಅವಳು ಭವಿಯ ಸೇವೆಯನ್ನು ಒಲ್ಲೆನೆಂದಳು. ಏಕೆಂದರೆ ಮುಂಡ ನಾಗಯ್ಯನಿಂದ ಅವಳು ನಿಂಬೆಹಣ್ಣಿನ ರೂಪದಲ್ಲಿ ಲಿಂಗವನ್ನು ಪಡೆದು ಶಿವದೀಕ್ಷೆಯನ್ನು ವಹಿಸಿದ್ದಳು. ಕೊಂಡೆಯ ಮಂಚಣ್ಣನು ಅದು ಲಿಂಗವಲ್ಲ, ಬರಿಯ ನಿಂಬೆಹಣ್ಣು ಎಂದು ಹಳಿಯಲು ಬಸವಣ್ಣನು ಅದನ್ನು ಲಿಂಗವೆಂದೆ ತೋರಿಸಿ ಕೊಟ್ಟನು. ಅಂತೆಯೆ, ಬಿಜ್ಜಳನ ಮುಂದೆ ಚಂದ್ರಮತಿಯೆಂಬ ರಾಜವೇಶ್ಯೆ ನರ್ತಿಸುತ್ತಿದ್ದಳು. ರಾಜನು ವಿಟಜಂಗಮ ನೊಬ್ಬನಿಗೆ ನಿಂಬೆಯ ಹಣ್ಣನ್ನು ಕೊಟ್ಟಿದ್ದನು. ಅದನ್ನು ಅವನು ಚಂದ್ರಮತಿಯ ಪೀನಸ್ತನಕ್ಕೆ ಎಸೆಯಲು ಅದು ಲಿಂಗವಾಯಿತು.

ಬಿಜಾಪುರದ ಮುದ್ದೆಬೀಹಾಳಿನ ಬಳಿ ಬಾಹೂರಿನಲ್ಲಿ ಬ್ರಹ್ಮಯ್ಯನೆಂಬ ಶಿವಭಕ್ತನು ತೋಟದ ಕಾಯಕ ಮಾಡಿ ಕೊಂಡಿದ್ದನು. ಅವನು ಚಾಳುಕ್ಯ ದೊರೆ ಪೆರ್ಮಾಡಿಯ ಕಾಲದವನು : ಬಸವಸಮಕಾಲೀನನಾದ ವಚನಕಾರ. ಒಮ್ಮೆ ಕಲ್ಯಾಣದ ತ್ರಿಪುರಾಂತಕೇಶ್ವರ ದೇವಾಲಯಕ್ಕೆ ಹೋಗಿದ್ದಾಗ ಅಲ್ಲಿ ವೇಶ್ಯೆಯೊಬ್ಬಳ ನರ್ತನಸೇವೆಯು ನಡೆಯು ತ್ತಿತ್ತು. ಬ್ರಹ್ಮಯ್ಯನ ಮಹಿಮೆಯನ್ನು ತಿಳಿದಿದ್ದ ಭಕ್ತರು ಆತನು ದೇವಾಲಯಕ್ಕೆ ಬಂದು ಹೋಗುವವರೆಗೂ ನರ್ತನ ವನ್ನು ನಿಲ್ಲಿಸಿರಬೇಕೆಂದು ಕೋರಿದರು. ಒಬ್ಬ ಜೈನನು ಬ್ರಹ್ಮಯ್ಯನನ್ನು ಹೀಯಾಳಿಸಿದಾಗ ಬ್ರಹ್ಮಯ್ಯನು ಒಂದು ಪವಾಡವನ್ನು ತೋರಿಸಿದನು. ಭೃಂಗಿಯೆಂಬ ಕೈಲಾಸದ ಶಿವಗಣಕ್ಕೆ ದೇಹವನ್ನು ಕಲ್ಪಿಸಿದ್ದು ಪಾರ್ವತಿ. ಆದರೂ ಅವನು ಶಿವನಿಗೆ ಮಾತ್ರ ನಮಿಸಿದ. ಕೋಪಿಸಿದ ಪಾರ್ವತಿಯು ಅವನ ದೇಹವನ್ನು ಲಯಿಸಿ, ಅವನನ್ನು ಹಾರಿಸಿ ಕೊಂಡು ಹೋಗೆಂದು ವಾಯುವಿಗೆ ಅಪ್ಪಣೆ ಮಾಡಿದಳು. ಆದರೆ ಭೃಂಗಿಯು ಶಿವನನ್ನು ಸ್ತುತಿಸಿ ಮೂರನೆಯ ಪಾದ ವೊಂದನ್ನು ಪಡೆದು, ಕೈಲಾಸದಲ್ಲಿಯೆ ನಿಂತು ನಾಟ್ಯಸೇವೆಯಿಂದ ಶಿವನನ್ನು ತೃಪ್ತಿಪಡಿಸಿದನು. ನಾಂದೀಗ್ರಾಮದ ಮಹಾನಂದೆ ಎಂಬ ಶಿವಭಕ್ತೆಯು ಮರ್ಕಟಕುಕ್ಕುಟಗಳಿಗೂ ರುದ್ರಾಕ್ಷಧಾರಣ ಮಾಡಿಸಿ ಅವುಗಳಿಂದ ಶಿವಪೂಜೆಯಲ್ಲಿ ನರ್ತನಸೇವೆಯನ್ನು ಮಾಡಿಸುತ್ತಿದ್ದಳು. ದ್ರಾಕ್ಷಾರಾಮದಲ್ಲಿ ವೀರಚೋಳಾದೇವಿಯೆಂಬ ನರ್ತಕಿಯು ಭೀಮೇಶ್ವರ ಲಿಂಗಕ್ಕೆ ನಿತ್ಯವೂ ನರ್ತನಸೇವೆಯನ್ನು ಸಲ್ಲಿಸುತ್ತಿದ್ದಳು. ಅವಳು ಋತುಮತಿಯಾಗಿ ಬಸಗೆಯಲ್ಲಿರುವಾಗ ತಾನು ಭುಂಜಿ ಸುತ್ತಿದ್ದ ಹೆಸರುಹುಗ್ಗಿಯನ್ನೆ ಶಿವನ ಆರೋಗಣೆಗೆಂದು ಕಳುಹಿಸಿದಳು. ಶಿವನಿಗೆ ಇದು ಬಲು ರುಚಿಯಾಗಿ ಬಾಯಿ ಚಪ್ಪರಿಸಿ ತಿಂದನು. ದೊರೆಗೆ ತಿಳಿದು ಚೋಳಾದೇವಿಯನ್ನು ನೋಡಲು ಬಂದನು. ಆದರೆ ಅವಳು ತನ್ನ ಏಕಾಂತವು ಬಯಲಾಯಿತೆಂದು ಶಿವನಲ್ಲಿ ಬಯಲಾದಳು. ವೀರಬಾಹುವೆಂಬ ಗಣೇಶ್ವರನು ತನ್ನ ಶಿವಭಕ್ತಿಯಿಂದ ಯಮನನ್ನೆ ಹೆದರಿ ಸುತ್ತಿದ್ದನು. ಅವನು ತಿರುವಾಲೂರಿನ ರಾಜನಾಗಿ ದಿವ್ಯಸ್ತ್ರೀಯನ್ನು ವರಿಸಿದನು. ಸಪ್ತವೀರ್ಯನೆಂಬುವನ ಆಸೆಯನ್ನು ತೀರಿಸಲೆಳಸಿ ದ್ವೀಪಾಂತರದ ಗಿಳಿಯನ್ನು ಯಮನಿಂದ ತರಿಸಿ ಸ್ವರ್ಗದ ಗಣಿಕೆಯರ ನರ್ತನವನ್ನು ತೋರಿಸಿದನು.

### (ಉ) ಶರಣರಿಗಾಗಿ ಶಿವ ಕುಣಿದ

ಕಕ್ಕಯ್ಯನು ಕಂಕರಿಯನ್ನು ನುಡಿಸಿದನೆಂದರೆ ಲೋಕವೆ ಮೋಹಗೊಳ್ಳುವುದು. ಅದನ್ನು ಮೆಚ್ಚಿಕೊಂಡ ಶಿವನು ಜಂಗಮವೇಷದಿಂದ ಬಂದು ಅದರ ತಾಳಕ್ಕೆ ತಕ್ಕಂತೆ ಕುಣಿಯಲಾರಂಭಿಸಿದನು. ಮೂರು ದಿನಗಳ ಈ ಸ್ಪರ್ಧೆ ನಡೆಯಿತು.

ಆದರೆ ಯಾರೊಬ್ಬರೂ ಬಳಲುವ ಅಥವಾ ಸೋಲುವ ಸೂಚನೆಯೆ ಕಂಡುಬರಲಿಲ್ಲ. ಕಡೆಗೆ ಶಿವನೆ ಸೋತಂತೆ ನಟಿಸಿ, ಕುಣಿಯದೆ ನಿಂತನು. ಆದರೆ ಕಕ್ಕಯ್ಯನು ಅವನನ್ನು ಬಿಡದೆ ಕುಣಿಯೆಂದು ಹಿಡಿದೆಳೆದನು. ಶಿವನು ಮೆಚ್ಚಿ ನಿಜರೂಪ ತೋರಿ ವರವನ್ನು ಕೊಡುವೆನೆಂದನು. ಕಕ್ಕಯ್ಯನಾದರೂ ವರವನ್ನೊಲ್ಲದೆ ಮೂರು ದಿನ ಕಕ್ಕರಿಯನ್ನು ನುಡಿಸಿದುದರ ಕಾಯಕದ ಹಣವನ್ನು ಕೊಡೆಂದು ಜಗ್ಗಿಸಿ, ಪಡೆದನು. ಶಿವನು ಕೈಲಾಸಕ್ಕೆ ಬಾರೆಂದರೂ ಒಲ್ಲದೆ ಭಕ್ತರ ಮಧ್ಯದಲ್ಲಿಯೆ ಇದ್ದುಕೊಂಡು ಇಷ್ಟಲಿಂಗದಲ್ಲಿ ಕರಗಿಹೋದನು. ಕರಿಕಾಲಪುರದ ಮಾಣಿಕ್ಯಶೆಟ್ಟಿಗೆ ಕರಿಕಾಲಮ್ಮ (ಪುನೀತವತಿ)ಯೆಂಬ ಸತಿಯಿದ್ದಳು. ಅವಳು ಶಿವಭಕ್ತೆ. ಗಂಡನು ತಂದುಕೊಟ್ಟ ಅಕಾಲದ ಮಾವಿನಹಣ್ಣನ್ನು ಜಂಗಮರಿಗೆ ಕೊಟ್ಟುಬಿಟ್ಟಳು. ಮಾಣಿಕ್ಯಶೆಟ್ಟಿಯು ಅದನ್ನು ಕೊಡೆಂದಾಗ ಶಿವನೆ ಅದನ್ನು ಅವಳಿಗೆ ತಂದುಕೊಟ್ಟನು. ಮಾಣಿಕ್ಯಶೆಟ್ಟಿಯು ಅದನ್ನು ಅರಿಯದೆ ಅವಳನ್ನು ಮಂತ್ರಗಾತಿಯೆಂದು ಜರಿದು ಮನೆಯಿಂದ ಹೊರದೂಡಿದನು. ಅವಳು ಅಡವಿಗೆ ಹೋಗಿ ಶಿವನ ನಾಟ್ಯವಿಗ್ರಹವನ್ನು ಕಂಡು ಅವನಂದ ತಾಂಡವವನ್ನು ಕುಣಿಸಿ, ತಲೆಯಿಂದ ನಡೆದು ಕೈಲಾಸವನ್ನು ಸೇರಿಕೊಂಡಳು.

ಮಹೋದಯ ಪಟ್ಟಣದ ಚೇರಭೂಪತಿಗೆ ಶಿವಪ್ರಸಾದರೂಪದ ಒಬ್ಬ ಮಗನು ಶಿವಲಿಂಗದಿಂದ ಹೊರಬಂದನು. ಅವನಿಗೂ ಚೇರಭೂಪತಿಯೆಂದೆ ಹೆಸರು. ಅವನು ಶಿವನನ್ನೊಲಿಸಿಕೊಂಡು ಪ್ರತಿದಿನವೂ ಶಿವನ ನೃತ್ಯವನ್ನು ನೋಡಿ ಸುಖಿಸುತ್ತಿದ್ದನು. ಅವನಿಗೆ ಎಲ್ಲ ಪ್ರಾಣಿಗಳ ಭಾಷೆಯೂ ತಿಳಿಯುತ್ತಿತ್ತು. ಇವನು ಸೌಂದರನಂಬಿಯ ಸಮಕಾಲೀನ, ಸ್ನೇಹಿತ. ನಂಬಿಯು ಮನೆಯಲ್ಲಿ ಒಮ್ಮೆ ಊಟ ಮಾಡುತ್ತಿದ್ದಾಗ ಶಿವತಾಂಡವವನ್ನು ನೋಡಬೇಕೆಂದು ಬಯಸಿದಾಗ ನಂಬಿಯು ತಿರುಪ್ಪಾಡುಗಳನ್ನು ಹಾಡಿ, ಶಿವನನ್ನು ಕರೆದು ಕುಣಿಯಿಸಿದನು. ಕಂಚಿಯಲ್ಲಿ ನಮಿತ್ತಂಡಿಯೆಂಬ ಶಿವ ಭಕ್ತನಿದ್ದನು. ಅವನು ಏನೂ ತಿಳಿಯದ ಹಸುಗೂಸಿನಂತಹವನು. ಒಮ್ಮೆ ಏಕಾಮ್ರೇಶ್ವರನ ಗುಡಿಗೆ ಹೋಗಿ ನಾಟ್ಯ ಭಂಗಿಯಲ್ಲಿದ್ದ ಶಿವನನ್ನು ನೋಡಿದನು : ಅದು ನಾಟ್ಯವೆಂದು ತಿಳಿಯದೆ ವಾತರೋಗದಿಂದ ಶಿವನಿಗೆ ಕೈಕಾಲುಗಳು ಹಿಡಿದುಕೊಂಡಿವೆಯೆಂದು ಭ್ರಮಿಸಿದನು. ಅಲ್ಲಿದ್ದ ಪೂಜಾರಿಯು ಅದನ್ನು ಗುಣಪಡಿಸುವೆನೆಂದು ಶಿವನಿಗೆ ಶೈತ್ಯೋಪಚಾರ ವನ್ನು ನಟಿಸಿ ನಮಿತ್ತಂಡಿಯ ಸರ್ವಸ್ವವನ್ನೂ ಕಿತ್ತುಕೊಂಡು ಕಪಟವೆಸಗಿದನು. ಆದರೆ ಶಿವನ ಭಂಗಿ ನೇರಾಗಲಿಲ್ಲ. ನಮಿತ್ತಂಡಿಯು ವ್ಯಥೆಯಿಂದ ಪ್ರಾಣವನ್ನೆ ನೀಡಲು ತೊಡಗಿದನು. ಶಿವನೊಲಿದು ಕಾಣಿಸಿಕೊಂಡು ಅದು ನಾಟ್ಯಭಂಗಿ ಯೆಂದು ತಿಳಿಸಿ ನೃತ್ಯ ಮಾಡಿ ಅವನ ಸಂಶಯವನ್ನು ನೀಗಿ ಕೈಲಾಸಕ್ಕೆ ಕರೆದುಕೊಂಡು ಹೋದನು. ವ್ಯಾಘ್ರಪಾದನೆಂಬ ಶೈವಮುನಿಯು ಶಿವತಾಂಡವವನ್ನು ನೋಡಬಯಸಿ ಘೋರವಾದ ತಪವನ್ನೆಸಗಿದನು. ಶಿವನು ಮೈದೋರಿ ಕುಣಿದು ಅವನ ಬಯಕೆಯನ್ನು ತೀರಿಸಿ ತನ್ನ ಗಣವನ್ನಾಗಿ ಮಾಡಿಕೊಂಡನು.

## ೨. ಶರಣಸಂಗೀತ : ಕಾವ್ಯೋಲ್ಲೇಖ

ಶಿವಲೀಲಾವಿಲಾಸ, ಶರಣಚರಿತಾಮೃತಗಳನ್ನು ಚಿತ್ರಿಸಹೊರಟಿರುವ ಕನ್ನಡ ಕಾವ್ಯರಾಶಿಯು ತುಂಬ ದೊಡ್ಡದೇ. ಅದರ ಸಂಗೀತವಿಷಯಕವಾದ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ಅವು ಪ್ರಾಸಂಗಿಕವಾದರೂ ಈ ಕಾರಣದಿಂದಲೆ ಮುಖ್ಯ. ಏಕೆಂದರೆ ಕಾವ್ಯಸಹಜವಾದ ಉತ್ಪ್ರೇಕ್ಷೆಯನ್ನು ಕಳೆದರೆ ಅವು ಸಮಸಾಮಯಿಕಸಂಗೀತ ಪ್ರಯೋಗವನ್ನು ನೈಜವಾಗಿ ಚಿತ್ರಿಸುತ್ತವೆ ; ನಮ್ಮ ಸಂಗೀತದ ಇತಿಹಾಸರಚನೆಯಲ್ಲಿ ಉಪಯುಕ್ತ ಪ್ರಾಥಮಿಕ ಆಧಾರ ಗಳನ್ನು ಒದಗಿಸುತ್ತವೆ. ಈ ದಿಸೆಯಲ್ಲಿ ವ್ಯವಸ್ಥಿತವಾದ ಅಭ್ಯಾಸವನ್ನು ಇನ್ನೂ ಕೈಗೊಳ್ಳಬೇಕಾಗಿದೆ. ಇಲ್ಲಿ ಕೆಲವು ಮುಖ್ಯ ವೀರಶೈವಕಾವ್ಯಗಳಲ್ಲಿರುವ ಸಂಗೀತೋಲ್ಲೇಖಗಳನ್ನು ಮಾತ್ರ ಸ್ಥಾಲೀಪುಲಾಕನ್ಯಾಯದಿಂದ ಸಂಕ್ಷೇಪವಾಗಿ ಸೂಚಿಸಲಾಗುವುದು. ಅವುಗಳ ವಿವರಪೂರ್ಣ ವಿವೇಚನೆಯು ಈ ಲೇಖನದ ವ್ಯಾಪ್ತಿಯನ್ನು ಮೀರಿದ್ದು.

ಹರಿಹರನು ರೇವಣಸಿದ್ಧೇಶ್ವರದೇವರ ರಗಳೆಯಲ್ಲಿ ನಿಸ್ಸಾಳ, ಬಿರುದಿನ ಕಹಳೆ, ಕಿರಿಕಿಟ್ಟಿ, ಮೃದಂಗಗಳನ್ನೂ ಶಂಕರದಾಸಿಮಯ್ಯನ ರಗಳೆಯಲ್ಲಿ ಭೇರಿ, ದುಂದುಭಿ, ಡಮರುಗ, ಶಂಖ, ಕಹಳೆಗಳನ್ನೂ ಪ್ರಭುದೇವರ ರಗಳೆಯಲ್ಲಿ ಮೃದಂಗವನ್ನೂ ಶಂಕರದಾಸಿಮಯ್ಯನ ರಗಳೆಯಲ್ಲಿ ಸುವ್ವಿಹಾಡಿನ ಒಂದು ಮಾದರಿಯನ್ನೂ ಕೊಟ್ಟಿದ್ದಾನೆ : ಗಿರಿಜಾಕಲ್ಯಾಣದಲ್ಲಿ ಈ ವಾದ್ಯಗಳ ಜೊತೆಗೆ ಡಿಂಡಿಮ, ಕರಡೆ, ವೀಣೆ, ಪಟಹ, ತಂಬಟೆ, ಚಂಬಕ, ವೀರಪ್ಪಂದ, ಡೌಡೆ, ಢಕ್ಕೆ, ಜವಳಿಗಾಳೆ, ತಿತ್ತಿರಿ, ಕಿನ್ನರಿ, ಬೊಂಬುಳಿ, ಕೊಂಬು, ಕಂಸಾಳೆ, ಗಿರಿಗಿಟ್ಟಿ, ತಾಳ ಗಳನ್ನು ಹೆಸರಿಸಿದ್ದಾನೆ : ಪಂಚಮಹಾಶಬ್ದವನ್ನು ಉಲ್ಲೇಖಿಸಿದ್ದಾನೆ. ವೀಣೆಯ ಅಂಗಗಳ ಉಪಮೆ, ಬಂಗಾಳ ಮತ್ತು ಶ್ರೀ ಎಂಬ ರಾಗಗಳ ಹೆಸರುಗಳು—ಇವೂ ಅವನಲ್ಲಿ ದೊರೆಯುತ್ತವೆ. ರಾಘವಾಂಕನು ಹರಿಶ್ಚಂದ್ರಕಾವ್ಯದಲ್ಲಿ ಮೇಲ್ಕಂಡ ವಾದ್ಯಗಳಲ್ಲಿ ಹಲವನ್ನೂ ಮೌರಿ ಡೋಲುಗಳನ್ನೂ ಪಂಚಮಹಾಶಬ್ದ, ಪಂಚಮಹಾವಾದ್ಯ

ಗಳನ್ನೂ ಹೇಳುವುದಲ್ಲದೆ ರಾಗದಲ್ಲಿ ರಸಪ್ರತೀತಿಪ್ರಯೋಜಕವಾದ ಅಂಗಗಳನ್ನು ಗತಿ, ಗಮಕ, ಗಹಗಹಿಕೆ, ತಿರುಪು, ಚಾಳಿಯ, ಕೊಂಕು, ಜತಿ, ಜೋಕೆ, ಮಾರ್ಗವಣೆ, ವಹಣಿ, ತರಹರಿಕೆ, ಠಾಯ, ಕಂಪಿತ, ಹೊಮ್ಮು, ಬಾಗು, ಡೊಕ್ಕರ, ವಿವರ, ಕಾಳಾಸ, ಕಮ್ಮವಣೆ, ಲವಲಂಗಿತ, ತಾರಮಧ್ಯಮಂದ್ರ (ಸ್ಥಾಯಿ)ಗಳು, ಶುದ್ಧ, ಸಾಲಗ, ಸಂಕೀರ್ಣ ವೆಂಬ ರಾಗವರ್ಗಗಳು—ಇವನ್ನೆಲ್ಲ ಹೆಸರಿಸುತ್ತಾನೆ. ಈ ಪಾರಿಭಾಷಿಕ ಶಬ್ದಕೋಶವು ಇತರ ಕನ್ನಡ ಕವಿಗಳಲ್ಲಿಯೂ ಕಂಡುಬರುತ್ತದೆ ; ಆದರೆ ಶಾಸ್ತ್ರಗ್ರಂಥಗಳಲ್ಲಿ ಹಲವು ದೊರೆಯುವುದಿಲ್ಲ. ಆದುದರಿಂದ ಕನ್ನಡಿಗರು ತಮ್ಮದೇ ಆದ ಸಂಗೀತಪರಿಭಾಷಾಕೋಶವೊಂದನ್ನು ಸ್ವಸಮಯದಲ್ಲಿ ಸುಮಾರು ಎಂಟುನೂರು ವರ್ಷಗಳಷ್ಟು ಹಿಂದೆಯೆ ನಿರ್ಮಿಸಿ ಕೊಂಡಿದ್ದರೆಂದು ಸಿದ್ಧವಾಗುತ್ತದೆ. ಸಿದ್ಧರಾಮಚಾರಿತ್ರದಲ್ಲಿ ಅವನು ಗೆಜ್ಜೆ, ಪದಡಕ್ಕೆ, ಝಲ್ಲರಿ, ಮುರಜವಾದ್ಯ ಗಳನ್ನೂ ಶುದ್ಧಭೈರವಿಯೆಂಬ ರಾಗವನ್ನೂ ಧವಳವೆಂಬ ಹಾಡನ್ನೂ ಹೇಳುತ್ತಾನೆ ; ಆದಿಸೆಟ್ಟಿಪುರಾಣದಲ್ಲಿ ಈ ವಾದ್ಯ ಗಳಲ್ಲಿ ಕೆಲವನ್ನೂ ಸಂಗೀತಾಚಾರ್ಯರಾದ ನಾರದ ತುಂಬುರುಗಳು ರಾಗಸಮೂಹವನ್ನು ಆಲಾಪಿಸಿದರೆಂದೂ, ದುಂದುಭಿ, ಧಾರೆಕಾಳೆಗಳೆಂಬ ವಾದ್ಯಗಳನ್ನೂ ಸೂಚಿಸುತ್ತಾನೆ.

ಸೋಮರಾಜನು ಉದ್ಭಟಕಾವ್ಯದಲ್ಲಿ ತನಗೆ ಗಾಂಧರ್ವಭರತಶಾಸ್ತ್ರಗಳಲ್ಲಿರುವ ಗಾಢ ಪರಿಚಯವನ್ನು ತೋರಿಸಿಕೊಂಡಿದ್ದಾನೆ. ಉದ್ಭಟರಾಜನು ಗೋದಾವರೀ ತೀರಕ್ಕೆ ಬಂದಾಗ ಗಾನವಿಶಾರದ ವನಿತೆಯರು ಹಾಡಿದ್ದನ್ನು ವರ್ಣಿಸುವ ಪ್ರಸಂಗದಲ್ಲಿ ದಂಡಿಗೆಯನ್ನು ನುಡಿಸುತ್ತ ಅವರು ಮಂದ್ರಮಧ್ಯತಾರಸ್ಥಾಯಿಗಳಲ್ಲಿ ಷಡ್ಜಾದಿ ಸಪ್ತಸ್ವರ ಗಳನ್ನು ಚೆನ್ನಾಗಿ ಅರಿತು ಗೌಡ, ವರಾಟಿ, ವಸಂತಾದಿ ರಾಗಗಳನ್ನು ಬಾಯ್ದೆರೆದು ಪಾಡಿದರು ; ಪಂಚಮಶ್ರುತಿಯು ತಪ್ಪದೆ ರಾಗಪ್ರಪಂಚವನ್ನು ತಿಳಿದು ಗೀತೆಗಳನ್ನು ನಾಟಿ ಗೌಳ ವರಾಳಿ ಪ್ರಮುಖ ರಾಗಗಳಲ್ಲಿ ಗೀತೆಗಳನ್ನು ಹಾಡಿದರು; ಆರಭಿ, ಮೇಘರಂಜಿ, ಶಶಿಮಂಜರಿ, ಗುರ್ಜರಿ ಮುಂತಾದ 'ರಾಗತತಿಯಂನೆಱೆ ಪಾಡಿದರ್' ಎನ್ನು ತ್ತಾನೆ. ಇದರ ಸಂಗೀತಶಾಸ್ತ್ರೀಯ ಸ್ವಾರಸ್ಯವನ್ನು ಬೇರೆಡೆ ವಿವೇಚಿಸಿದ್ದೇನೆ. ಅಂತೆಯೆ ಶ್ರುತಿ, ಗ್ರಾಮ, ತಾನ, ಜತಿ, ತಾಳ, ಮುಗಿತಾಯ, ಬಜಾವಣೆ, ಶುದ್ಧ–ಸಾಳಗ–ಸಂಕೀರ್ಣ ರಾಗಗಳು ಮುಂತಾದ ಪರಿಭಾಷೆಯನ್ನು ಪ್ರಯೋಗಿಸಿ ದ್ದಾನೆ ; ವಲ್ಲಕಿ, ವಿಪಂಚಿ, ದಂಡಿಗೆ, ಜಂತ್ರ, ಸ್ವರಮಂಡಲ, ಕಿನ್ನರಿ, ಮೃದಂಗ, ಭೇರಿ ಮುಂತಾದ ವಾದ್ಯಗಳನ್ನು ಉಲ್ಲೇಖಿಸಿದ್ದಾನೆ.

ಪಾಲ್ಕುರಿಕೆ ಸೋಮನಾಥನು ಪಂಡಿತಾರಾಧ್ಯಚರಿತ್ರ ಮತ್ತು ಬಸವಪುರಾಣಗಳೆಂಬ ತೆಲುಗು ಕಾವ್ಯಗಳನ್ನು ರಚಿಸಿದ್ದಾನೆ ; ಅವನು ಕನ್ನಡಿಗನೇ. ಅವನು ಸಂಗೀತಶಾಸ್ತ್ರದಲ್ಲಿ ಪಡೆದಿರುವ ಜ್ಞಾನವು ಅಗಾಧ, ಅನ್ಯಕವಿಗಳಲ್ಲಿ ಕಾಣದೊರೆಯದಂತಹದು. ಸಂಗೀತ ಪರಿಭಾಷೆಯಲ್ಲಿ ಅವನು ನಿಜಕ್ಕೂ ವಿಶ್ವಕೋಶವೆ ಸರಿ. ಅವನು ಪಂಡಿತಾರಾಧ್ಯ ಚರಿತ್ರದಲ್ಲಿ ಹೇಳಿರುವ ಸಂಗೀತವಿಷಯಗಳನ್ನು ಕೇವಲ ಶೀರ್ಷಿಕೆಗಳಲ್ಲಿ ಇಲ್ಲಿ ಪಟ್ಟಿಮಾಡಬಹುದು : ೪೦ ಬಗೆಯ ವೀಣೆಗಳು, ಗೀತಾನುಗವೆ ಮೊದಲಾದ ತಂತ್ರಗಳು, ದಂಡಿಯೆ ಮೊದಲಾದ ೧೭ ವಾದನ ವಿಧಾನಗಳು, ಸಮವೆ ಮುಂತಾದ ೪೦ ಹಸ್ತವ್ಯಾಪಾರಗಳು, ಬಂಧಗಳು, ರಿಗೋಣಿ ಇತ್ಯಾದಿ ವಾದ್ಯಪ್ರಬಂಧಗಳು, ಚಚ್ಚಪುಟಾದಿ ಅಷ್ಟೋತ್ತರಶತಮಾರ್ಗ–ದೇಶೀ, ತಾಳಗಳು, ಭಂಗ, ಅಭಂಗ, ಶುದ್ಧ ಎಂಬ ತಾಳವರ್ಗಗಳು, ಹದಿನೆಂಟು ಬಗೆಯ ವಂಶ (ಕೊಳಲು)ಗಳು, ಆಲಾಪ, ಬೆಡಂಗು ಮುಂತಾದ ಇಪ್ಪತ್ತೆರಡು ವಾದನಗತಿಗಳು, ಸರಿಗಮಾದಿ ಸಪ್ತಸ್ವರಗಳಲ್ಲಿ ಆರೋಹಿಯೆ ಮೊದಲಾದ ಏಳು ಆಲಾಪನಗಳು, ಸಪ್ತಸ್ವರಗಳಿಗೆ ಜನ್ಮಕಾಲ, ತಿಥಿ, ನಕ್ಷತ್ರಾದಿಗಳು, ಅವುಗಳಲ್ಲಿ ಅಂತರ್ಗತವಾಗಿರುವ ಇಪ್ಪತ್ತೆರಡು ಶ್ರುತಿಗಳು, ದೀರ್ಘಲಾಲಿತ್ಯ ಇತ್ಯಾದಿ ಇಪ್ಪತ್ತೆರಡು ಶ್ರುತಿಗಮಕಗಳು, ಕಂಪಿತಾದಿ ಏಳು ಸ್ವರಗಮಕಗಳು, ಇವುಗಳ ದೆಸೆಯಿಂದ ಹುಟ್ಟುವ ರಾಗಪ್ರಭೇದಗಳು, ಅಷ್ಟಾದಶ ಜಾತಿಗಳನ್ನೂ ಒಳಗೊಂಡಂತೆ ಶ್ರೀರಾಗದಿಂದ ಮೊದಲಾಗುವ ನೂರೆಂಟು ರಾಗಗಳು, ಅವುಗಳ ರಾಗಾಂಗ, ಭಾಷಾಂಗ, ಕ್ರಿಯಾಂಗ, ಉಪಾಂಗ ಪ್ರಭೇದಗಳು, ಸ್ತ್ರೀಪುನ್ನಪುಂಸಕರಾಗಗಳು, ಷಾಡವ, ಔಡುವಾದಿ ವಿಭೇದಗಳು, ನಾರಾಟಾದಿ ಶಾರೀರಗುಣಚತುಷ್ಟಯ, ಮಾಹೇಶ್ವರಾದಿ (? ಪಾಂಚಾಲಿ ಇತ್ಯಾದಿ) ವಾಚಕಗಳು, ಜಯ, ಹಾಯಿ, ಗೂಢಾಯಿ ಮೊದಲಾದ ಹನ್ನೆರಡು ಅನುವಾಚಕಗಳು, ಜಯಪಂಚಕ, ದೇಹಾವಳಿ, ಮದಾವಳಿ, ಕಂಠಾವಳಿಗಳು, ತಾಳ, ಸರ್ವಗತಿ, ಭಂಗಸ್ಥಾನ, ಗಮಲಾಯಿ, ನಾಭಿಗತಿ, ಉದರಗತಿ ಮತ್ತು ಕಂಠಗತಿ ಮುಂತಾದ ಹನ್ನೆರಡು ತಿರುವುಗಳು, ನಾಭಿಯೆ ಮುಂತಾದ ಸ್ಥಾನಪಂಚಕದಿಂದ ಹುಟ್ಟುವ ಹನ್ನೊಂದು ವಹಣಿಗಳು, ನೇವಣೆ, ಗಹಗಹಿಕೆ ಮುಂತಾದ ಠಾಯಗಳು, ಹದಿನೇಳು ಸಾಳಗಗತಿಗಳು, ನಾದಾವತಿಯೆ ಮುಂತಾದ ಚತುರ್ವಿಧ ಏಳೆಗಳು, ನಿಬದ್ಧಾನಿಬದ್ಧ ಪ್ರಬಂಧಗಳು, ಗೌಡಿ, ವೈದರ್ಭಿ ಇತ್ಯಾದಿ ರೀತಿಗಳು, ತ್ರಿಸ್ಥಾನಗಳು, ತತ್ತ್ವಘಾದಿಗಳು, ದೇಶೀಮಾರ್ಗದ್ವೈವಿಧ್ಯ ಮತ್ತು (ರಾಗತಾಳಗಳ) ದಶಪ್ರಾಣ

ಗಳು. ಈ ಕಾವ್ಯವು ಇಂತಹದೆ ಅಮೂಲ್ಯ ನಾಟ್ಯವಿಷಯಕ ಸಂಗತಿಗಳನ್ನೂ ಒಳಗೊಂಡಿದೆ. ಪಾಲ್ಕುರಿಕಿ ಸೋಮನಾಥನು ಬಸವಪುರಾಣದಲ್ಲಿ ಸಕಲೇಶ್ವರಮಾದಿರಾಜಯ್ಯನ ಕಥೆಯನ್ನು ಬಣ್ಣಿಸುವ ಪ್ರಸಂಗದಲ್ಲಿ ಅಮೂಲ್ಯವಾದ ಇನ್ನಷ್ಟು ವಿಷಯಗಳನ್ನು ತಿಳಿಸುತ್ತಾನೆ. ಅವುಗಳಲ್ಲಿ ಬತ್ತೀಸರಾಗಗಳು, ರಾವಣಹಸ್ತವೆ ಮೊದಲಾದ ಹನ್ನೊಂದು ವೀಣೆಗಳು, ಮುಖಚಾಳಿಯು, ನವತಾಣ ಇತ್ಯಾದಿ ವಾದನತಂತ್ರಗಳು, ಸಪ್ತಸ್ವರಗಳು, ದ್ವಾವಿಂಶತಿಶ್ರುತಿಗಳು, ನಾರಾಟ ಖಾಹುಲಾದಿ ಧ್ವನಿಭೇದಗಳು, ಸಪ್ತಗಮಕಗಳು, ತ್ರಿಸ್ಥಾನಗಳು, ಲಯತ್ರಯ, ದೇಶೀಮಾರ್ಗಭೇದಗಳು, ಶುದ್ಧ-ಸಾಳಗ-ರಾಗಭೇದಗಳು, ಪೆಳ್ಳಾಪೆಳ್ಳಿ, ಜಾಯಿ, ಅನುಜಾಯಿ ಮುಂತಾದ ಠಾಯಗಳು, ಗ್ರಹತ್ರಿತಯ, ದೇಶಾಕ್ಷಿಪ್ರಮುಖ ಬತ್ತೀಸಸ್ತ್ರೀಪುರುಷರಾಗಗಳು—ಇವುಗಳನ್ನು ಇಲ್ಲಿ ಸೂಚಿಸಬಹುದು.

ಪದ್ಮಣಾಂಕನ ಪದ್ಮರಾಜಪುರಾಣವೂ ಇಂತಹದೆ ಒಂದು ಅಮೂಲ್ಯಭಂಡಾರ. ಅವನು ಉಲ್ಲೇಖಿಸುವ ವಾದ್ಯಗಳು ಹೀಗಿವೆ: ವಿಪಂಚಿ, ವಲ್ಲಕಿ, ಚಿತ್ರೆ, ಜ್ಯೇಷ್ಠೆ, ಘೋಷವತಿ, ವಿಜಯ, ನಕುಲೋಷ್ಠೀ, ಕೂರ್ಮಿ, ತುಂಬುರಿ, ಕುಬ್ಜಿಕಾ, ಹಸ್ತಿಕಾ, ಶತತಂತ್ರೀ, ಕಿನ್ನರಿ, ಪರಿವಾದಿನಿ, ಸಾರಂಗಿ, ತ್ರಿಸರಿ, ಆಲಾಪಿನೀ ಮತ್ತು ರಾವಣಹಸ್ತ, ಚಕ್ಕುಲೀ ಎಂಬ ವೀಣೆಗಳು, ಪಟಹ, ಹುಡುಕ್ಕಾ, ಕುಡುಕ್ಕ, ಡಕ್ಕುಲಿ, ಮಂಡಿಡಕ್ಕಾ, ಸೆಲ್ಲುಕಾ, ಕುಡುವಾ, ರುಂಜಾ, ತ್ರಿವಳಿ, ಢವಸ, ನಿಸ್ಸಾಣ, ಡಮರು, ಭೇರೀ ಮತ್ತು ತಂಬಕೀ ಎಂಬ ಚರ್ಮಾನದ್ಧ ವಾದ್ಯಗಳು, ತಾಳ, ಜಯಘಂಟೆ, ಪಟ್ಟಾ, ಶುಕ್ತಿ, ಕುಡುಕ್ಕಾ, ಕಮ್ರಾ ಮೊದಲಾದ ಘನವಾದ್ಯಗಳು, ವಶೌರಿ, ಶೃಂಗ, ವಂಶ, ಕಹಳೆ, ಶಂಖ, ಪಾವ ಮುಂತಾದ ಸುಷಿರವಾದ್ಯಗಳು. ಪದ್ಮಣಾಂಕನು ತಲಸಂಚ ಮುಂತಾದ ವಾದನತಂತ್ರಗಳನ್ನೂ ಕೋಣ, ನಾಲಿಗೆ ಇತ್ಯಾದಿಗಳಿಂದ ನುಡಿಸುವ ಕ್ರಮಗಳು, ಎಂಬತ್ತೆಂಟು ಪಾಟಾಕ್ಷರಗಳು, ಅವುಗಳ ಶುದ್ಧ-ಕೂಟ-ಖಂಡಗಳೆಂಬ ಭೇದಗಳು, ಕುದಾವುಜವೆ ಮೊದಲಾದ ಲಘುವಾದ್ಯಗಳಿಗೆ ಅನುಗುಣವಾದ ಮೂವತ್ತೆರಡು ಮತ್ಯತಾಳಪ್ರಭೇದಗಳು, ಮೇಳಾಪಕವೆ ಮೊದಲಾದ ಮೃದಂಗವಾದನ ರೀತಿಗಳು, ತಾಳವಾದ್ಯದಲ್ಲಿ ನುಡಿಸುವ ರೀತಿಗಳು, ಸೂಡಾದಿಕ್ರಮದ ತಾಳಗಳು, ಸ್ಥಾಯಿ ಇತ್ಯಾದಿ ವರ್ಣಾಲಂಕಾರಗಳು, ತ್ರಿಸ್ಥಾನಗಳು, ಸ್ತ್ರೀಪುರುಷ ರಾಗಗಳು, ಠಾಯೆ, ಗಮಕಗಳು, ಗಾಯನದೋಷಗಳು ಇತ್ಯಾದಿಗಳನ್ನೂ ಹೇಳಿದ್ದಾನೆ; ಶಬ್ದ (ನಾದ) ಬ್ರಹ್ಮದ ಕಲ್ಪನೆಯನ್ನು ಸೂಚಿಸಿದ್ದಾನೆ; ಇಂಪು, ಸೊಂಪು, ಬಣಿತೆ, ಬೆಡಂಗು, ಜೋಕೆ, ಗತಿ, ಚಾಲನ, ಗಮಕ, ಒಯ್ಯಾರ, ಕಳೆ, ರಂಗು, ನೇವಣೆ, ಬಜಾವಣೆ, ರೀತಿ ಮುಂತಾದ ಸಂಗೀತಪ್ರಸ್ತುತಿಯ ಪರಿಭಾಷೆಯನ್ನು ಹೆಸರಿಸಿದ್ದಾನೆ. ಶ್ರೀ ಶಾರ್ಙ್ಗದೇವನ ಸಂಗೀತರತ್ನಾಕರದ ಗಾಢಪರಿಚಯವನ್ನು ಇಂಗಿತಗೊಳಿಸಿಕೊಂಡಿದ್ದಾನೆ.

ಭೀಮಕವಿಯು ಬಸವಪುರಾಣದಲ್ಲಿ ಉಲ್ಲೇಖಿಸಿರುವ ವಿಷಯಗಳನ್ನು ಹೀಗೆ ಸಂಗ್ರಹಿಸಬಹುದು: ಷಡ್ಜಾದಿ ಸಪ್ತಸ್ವರಗಳು, ಇಪ್ಪತ್ತೆರಡು ಶ್ರುತಿಗಳು, ಮಂದ್ರಾದಿ ಸ್ಥಾನತ್ರಯ, ನಾರಾಟಾದಿ ಶಾರೀರ ಗುಣಗಳು, ಆಳತಿ (ಆಲಪ್ತಿ), ಕೇಳಿಕೆ, ದ್ರುತಾದಿಲಯತ್ರಯ, ತುಂಬುರುನಾರದರೆಂಬ ದೇವಗಾಯಕರು, ಗಂಧರ್ವನಾರದ ಸಮ್ಮತಿಯುಳ್ಳ ದೇವತೂರ್ಯ, ತಾಳದ ಗ್ರಹತ್ರಿತಯ, ಶುದ್ಧ-ಸಾಳಗ ಹಾಗೂ ಮಾರ್ಗ-ದೇಶೀ ವಿಭಾಗಗಳು, ರಾಗಗಳಲ್ಲಿ ಭಾಷಾಂಗ-ಕ್ರಿಯಾಂಗಗಳೆಂಬ ವಿಧಗಳು, ಅವುಗಳ ಅಭಿವ್ಯಕ್ತಿಯಲ್ಲಿ ಭಾವ-ರಸಗಳು, ಲಕ್ಷ್ಯಲಕ್ಷಣ ಮೇಳನ, ಸ್ತ್ರೀಪುರುಷರಾಗಗಳು, ಬತ್ತೀಸರಾಗಗಳು ಹಾಗೂ ಅವುಗಳ—ಮಲಹರಿ, ಲಲಿತೆ, ಧನ್ನಾಸಿ, ಮಂಗಳಕೌಸಿ, ದೇಶಾಕ್ಷಿ, ಕುರಂಜಿ, ಗುಜ್ಜರೀ, ದೇಶಿ, ವೇಳಾವಳಿ, ಚಿತ್ರವೇಳಾವಳಿ, ತೋಂಡಿ, ಕಂಭಾವತಿ, ಮಧುಮಾಧವಿ, ಕಾಂಭೋಜಿ, ಮಾಳವಶ್ರೀ, ಮೇಘರಂಜಿ, ವರಾಳಿ, ಸಿಂಧುವರಾಳಿ, ನಾಗವರಾಳಿ, ದೇವಕ್ರಿಯೆ, ಸಾಳಗನಾಟಿ, ಭೂಪಾಳಿ, ಗೌಳ ಪಂಚಕ, ಬಹುಳೀ, ಬಂಗಾಳ, ಗುಂಡಕ್ರಿಯೆ, ಓಳಿ (ಗೌಳಿ ?), ಫಲಮಂಜರಿ, ರಾಮಕ್ರಿಯ, ದೇವಗುಪ್ತಿ, ಭೈರವಿ ದ್ವಯ, ವಸಂತಿ ಎಂಬ ಹೆಸರುಗಳು, ಅವತಾಣ, ನವತಾಣ, ಸಂಧಾನ, ಪೊಟ್ಟವಣೆ, ಸಾರಣ, ಲಳಿ, ಪೆಳ್ಳಾಪೆಳ್ಳಿ, ಜಾಯಿ, ಅನುಜಾಯಿ, ಒಯ್ಯಾರ, ಉಚಿತ, ಪಂಜಳ, ಖಚರ, ವಿಷಯಕ್ರಮ, ವಿಮೋಕ್ಷ, ಭಜವಣೆ, ನಿಜವಣೆ, ಠವಣೆ, ಹಾಯಿ, ಠಿಕ್ಕಾಯಿ, ಚೊಕ್ಕಾಯಿ, ಸುಠಾಯಿ, ಮಿಠಾಯಿ, ಆಯತದ ಹಳುವಾಯಿ, ಹಳುವಾಯಿ, ಠವಣೆ, ವಳಿ, ಲುಳಿ, ಮುಂಚಿ, ಲಲಿತಗಾಢ, ಪ್ರೊಚ್ಚಗಾಢ, ದೇಶಕಾಕು, ಕರುಣಾಕಾಕು, ರಾಗ, ರಂಗ, ರಕ್ತಿ, ವೈಧರಿ, ಕರ್ತರಿ, ಗುಂಡಾಗುಂಡಿ, ಮೋಡಾಮೋಡಿ, ಭ್ರಮರಲೀಲೆ, ಕುರುಟೆ, ಸರಸೋಪಾಯ ಮತ್ತು ಸದುಪಾಯವೆಂಬ ಠಾಯಗಳು, ಸಪ್ತಗಮಕಗಳು ಇತ್ಯಾದಿ.

ಭೀಮಕವಿಯು ವಾದ್ಯಗಳಲ್ಲಿ ತತವಿತತಾದಿ ಚಾತುರ್ವಿಧ್ಯ, (ಗೀತವಾದನನರ್ತನಗಳೆಂಬ) ತೂರ್ಯತ್ರಯ, ಪಂಚ ಮಹಾವಾದ್ಯ, ಆದಿ, ರಾವಣ, ವಾರಣಹಸ್ತ, ಗೌರಿ, ಕಿನ್ನರಿ, ಕಚ್ಛಪ, ಕೈಲಾಸ, ತುಂಬುರ, ಪದ್ಮಜ, ಸ್ವಯಂ

ಭೂ, ಸಾರಂಗ, ಪಿನಾಕ ಎಂಬ ತಂತಿವಾದ್ಯಗಳು, ಕೊಳಲು (ವಾಸ, ವೇಣು), ಸೊನ್ನಲಿಗೆಯೆಂಬ ಭೂರಿವಾದ್ಯ, ಕಹಳೆ, ತಿತ್ತಿ, ಸಂಖ, ಶ್ರುತಿ, ಮೌರಿ, ದುಗ್ಗಾಳೆ ಎಂಬ ಗಾಳಿವಾದ್ಯಗಳು, ತಂಬಟೆ, ನಿಃಸಾಣ, ಗಿರುಗಟೆ, ಭೇರಿ, ಸಮ್ಮೇಳ, ಮದ್ದಳೆ, ದುರುಪದಗಳೆಂಬ ಚರ್ಮವಾದ್ಯಗಳು, ತಾಳ, ಕಂಸಾಳೆ, ಜಯಘಂಟೆ, ಘಂಟೆ ಮೊದಲಾದ ಘನ ವಾದ್ಯಗಳು—ಇವುಗಳನ್ನು ಹೆಸರಿಸುತ್ತಾನೆ. ಅಂತೆಯೆ ಮದ್ದಳೆಯ ಎಡಮುಖಕ್ಕೆ ಹಚ್ಚುವ ಬೋಹಣವನ್ನೂ, ಆಯಾ ರಾಗಕ್ಕೆ ಅನುಗುಣವಾದ ಸ್ವರಮೇಳಗಳನ್ನು ದಂಡಿಯಲ್ಲಿ ರಚಿಸಿಕೊಳ್ಳುವ ಏಕರಾಗಮೇಲವೀಣಾ ಎಂಬ ಶಾಸ್ತ್ರೀಯ ತಂತ್ರವನ್ನೂ ಉಲ್ಲೇಖಿಸುತ್ತಾನೆ.

ಚಂದ್ರಶೇಖರಕವಿಯು ಪಂಪಾಸ್ಥಾನವರ್ಣನಂ ಕಾವ್ಯದಲ್ಲಿ ಸಂಗೀತವನ್ನು ಕುರಿತು ಹೇಳಿರುವ ಅತ್ಯಂತ ವಿಸ್ತೃತ ವಾದ ಪರಿಭಾಷೆಯನ್ನು ಇಲ್ಲಿ ಸಂಗ್ರಹಿಸುವುದು ಅಸಾಧ್ಯ. ಗಾಯನ, ವೀಣಾವಾದನ, ತಾಳವಾದನ, ವೇಣುವಾದನ, ಮದ್ದಳೆವಾದನ, ಆವುಜವಾದನ, ಕಹಳಾವಾದನಗಳಿಗೆ ಸಂಬಂಧಿಸಿದಂತೆ ಶಾಸ್ತ್ರಗ್ರಂಥಗಳಲ್ಲಿ ಸಹ ದೊರೆಯದ, ಅನನ್ಯ ಕಾವ್ಯೋಪಲಬ್ಧವಾದ, ಅಮೂಲ್ಯವಾದ ವಿಷಯಗಳನ್ನು ಅವನು ಹೇಳುತ್ತಾನೆ. ಇದೊಂದು ಕಾವ್ಯದ ಸಂಗೀತಶಾಸ್ತ್ರ ವಿವೇಚನೆಯೆ ಪ್ರತ್ಯೇಕ ಪುಸ್ತಿಕೆಯೊಂದರ ವಸ್ತುವಾಗಬಲ್ಲದು. ಈ ಕಾವ್ಯದ ೭೩ರಿಂದ ೮೫ರ ವರೆಗಿನ ಗ್ರಂಥಭಾಗ ಗಳನ್ನು ಆಸಕ್ತ ಅಭ್ಯಾಸಿಗಳು ಓದಿಕೊಳ್ಳಬೇಕು.

ಸಿಂಗಿರಾಜನು ಸಿಂಗಿರಾಜಪುರಾಣ (ಅಮಲಬಸವಚಾರಿತ್ರ)ದಲ್ಲಿ ಸಂಗೀತವಿಷಯಕವಾದ ಪರಿಭಾಷೆಯನ್ನು ಹೀಗೆ ಹೇಳಿದ್ದಾನೆ: ಸಪ್ತಸ್ವರಗಳು, ೨೨ ಶ್ರುತಿಗಳು, ಸ್ಥಾನತ್ರಯ, ಷಾಡವಾದಿ ಶ್ರುತಿಸಂಪೂರ್ಣರಾಗಗಳು, ಮಾರ್ಗ ದೇಶೀ ವಿಭಾಗಗಳು, ನಿಬದ್ಧಾನಿಬದ್ಧ ಪ್ರಬಂಧಗಳು, ಶುದ್ಧಮಿಶ್ರಸಂಕೀರ್ಣರಾಗಗಳು, ಮಾಳವ, ಶ್ರೀ, ತೋಡಿ, ಧನ್ಯಾಸಿ, ನಾಟಿ, ಬಂಗಾಳ, ಭೈರವಿ, ಸಿಂಧು, ದೇಶೀ, ದೇಶಾಳಿ, ಹಿಂದೋಳ, ನಾರಣಿ, ಗೌಳ, ಸೌರಾಷ್ಟ್ರ, ಗುರ್ಜರಿ, ವಸಂತ, ಸಾವೇರಿ, ಛಾಯಾಗೌಳ, ಮಲಹರಿ, ಲಲಿತೆ, ಬೌಳಿ, ಗುರ್ಜರಿ (?), ಲಲಿತೆ (?), ರೀತಿಗೌಳ, ಮಂಗಳಕೌಶಿ, ಮೇಘರಂಜನಿ, ಭೂಪಾಳಿ ಮೊದಲಾದ ಬತ್ತೀಸರಾಗಗಳು, ಮಂಗಳದ ಹಾಡು, ಗುಂಡಕ್ರಿಯೆರಾಗದಲ್ಲಿ ಗುಂಡಕ್ರಿಯೆ, ಒಂದು ಪಲ್ಲವಿಯೂ ಏಳು ನುಡಿಗಳೂ ಇರುವ ಒಂದು ಬಸವಗೀತೆ, ವಸಂತರಾಗದಲ್ಲಿ ಜೋಗುಳದ ಹಾಡು, ಶ್ರುತಿ ಬಾಹ್ಯವೇ ಮೊದಲಾಗಿ ಹೆಸರಿಸಿರುವ ಹತ್ತು ಗಾಯನದೋಷಗಳು, ಗತಿ, ಗಮಕ, ವಳಿ, ವಹಣಿ, ಸರಳಿ, ಸುಳಿಮಾರ್ಗ, ಕಂಪಿತ, ಇಂಪು, ಸೊಂಪು, ಲಯ, ಸುತಿ, ಮೂರ್ಛನೆ, ಲಂಘಿತ, ಠಾಯ, ಠವಣೆ, ರಂಗ, ರಸಾಳವೆಂಬ ಗೀತಪ್ರಾಣಗಳು, ಹಾಗೂ ದತ್ತಿಲ, ಮತಂಗ, ಕೋಹಲರೆಂಬ ಸಂಗೀತಾಚಾರ್ಯರುಭರತರು—ಇವನ್ನೆಲ್ಲ ಈ ಕಾವ್ಯದಲ್ಲಿ ಕಾಣಬಹುದು. ತಾಳಕ್ಕೆ ಸಂಬಂಧಿಸಿದ ಚತುರಶ್ರತ್ರಿಶ್ರಖಂಡಮಿಶ್ರಗಳೆಂಬ ಜಾತಿಗಳು, ದ್ರುತ, ಲಘು, ಗುರು ಮತ್ತು ಪ್ಲುತಗಳೆಂಬ ಅಂಗಗಳು, ಕಾಲ ಮಾರ್ಗ ಕ್ರಿಯಾದಿ ದಶಪ್ರಾಣಗಳು, ಪ್ರಸ್ತಾರಜಾತಿ, ಉಪಜಾತಿ ಇತ್ಯಾದಿಗಳು, ನೂರೊಂದು ತಾಳಗಳು ಇವೆಲ್ಲ ಇಲ್ಲಿವೆ.

ಅಂತೆಯೆ ಗೀತವಾದಿತ್ರನರ್ತನಗಳೆಂಬ ತೂರ್ಯತ್ರಯ, ತತವಿತತಘನಸುಷಿರಗಳೆಂಬ ವಾದ್ಯಚತುರ್ವಿಧ, ತುಂಬುರು, ಗಜ, ಕೈಲಾಸ, ಅಂಬರ, ಸಾರಂಗ, ಪೆರ್ಬೀಣೆ, ಕಿನ್ನರಿ, ರುದ್ರ, ಕಚ್ಛಪ, ಅರ್ಧನಾರಿ, ಮೊಲ್ಲೆಯ, ದ್ರುಹಿಣ, ಪಿನಾಕ, ರಾವಣಹಸ್ತ, ಮಹತಿ ಎಂಬ ವೀಣೆಗಳು, ಆಯಾ ರಾಗಕ್ಕೆ ತಕ್ಕ ಸ್ವರಮೇಳಗಳನ್ನು ಅಳವಡಿಸಿ ಕೊಳ್ಳಬಹುದಾದ ವೀಣಾದಂಡಿಗೆಗಳು, ಎಲ್ಲ ರಾಗಗಳನ್ನೂ ಒಂದರಲ್ಲಿಯೆ ನುಡಿಸಬಹುದಾದ ಸರ್ವ (ರಾಗ)ಮೇಳ, ಕೋಂಬು, ಕಹಳೆ, ಹೆಗ್ಗಾಳೆ, ವಾಸ (ಕೊಳಲು) ನಾಗಸರ, ಚೆನ್ನ, ಶಂಖ, ಮೌರಿ ಇತ್ಯಾದಿ ಗಾಳಿವಾದ್ಯಗಳು, ಭೇರಿ, ಪೆರ್ಬೇರಿ, ನಿಃಸಾಣ, ಮಂಗಳತೂರ್ಯ, ಡಂಗುರ, ರಾಯಗಿಡಿಬಿಡಿ, ವೀರಣ, ಕರಡೆ, ಪೆರ್ಗರಡೆ, ಬೊಂಬುಳಿ, ಮೃದಂಗ, ಮದ್ದಳೆ, ಮುರಜ, ಡೌಡೆ, ಬೊಂಬುಳಿ, ಚಂಬಕ, ಒಸಗೆವಜ್ಜೆ, ಜಗಳೆ, ತಮ್ಮಟೆ, ವೀರವಲಗೆ, ಪಟಹ, ಪಟ್ಟಾವಜ, ಚಂದ್ರಮಂಡಲ ಮುಂತಾದ ಚರ್ಮವಾದ್ಯಗಳು, ತಾಳ, ಕಂಸಾಳೆಗಳೆಂಬ ಘನವಾದ್ಯಗಳು, ಇವೆಲ್ಲ ವಾದ್ಯ ಗಳ ಸಮ್ಮೇಳವಾದ ಸಂಪ್ರದಾಯ, ವಿವಿಧ ವಾದ್ಯಪ್ರಬಂಧಗಳು—ಈ ಪರಿಭಾಷೆಯನ್ನೂ ಸಿಂಗಿರಾಜನು ಉಲ್ಲೇಖಿಸಿ ದ್ದಾನೆ.

ಕ್ರಿ.ಶ. ೧೫೩೦ರ ಸುಮಾರಿನಲ್ಲಿ ಕಬ್ಬಿಗರ ಕೈಪಿಡಿಯನ್ನು ರಚಿಸಿದ ಲಿಂಗಮಂತ್ರಿಯು ತನ್ನನ್ನು ಸರಸಸಂಗೀತ ನಿಪುಣಂ, ಬಹುಲಿಪಿಜ್ಞ ಭೂಸುರವರ ವಿರೂಪಾಕ್ಷಸುತ ಲಿಂಗಮಂತ್ರಿಪಂ ಎಂದು ವರ್ಣಿಸಿಕೊಂಡಿದ್ದಾನೆ.

ಗೌರವಾಂಕನು ಮೋಳಿಗೆಯ್ಯನ ಪುರಾಣದಲ್ಲಿ ಪಂಚ(ಮಹಾ)ವಾದ್ಯಗಳನ್ನೂ, ಕರಡೆ, ಕಂಸಾಳೆ, ಡಿಂಡಿಮ, ಹಜ್ಜೆ, ಭೇರಿ, ಮೃದಂಗ, ದುಂದುಭಿ, ತಾಳ, ವೀಣೆ, ಕಿನ್ನರಿ, ಕೊಳಲು, ಶಂಖ, ನಾಗಸರ ಮೊದಲಾದ ವಾದ್ಯಗಳನ್ನೂ,

ಮಾಳವಿ. ಲಲಿತೆ, ವಸಂತ. ಭೈರವಿ. ಚಂಡಿ, ವೇಳಾವಳಿ ಎಂಬ ರಾಗಗಳನ್ನೂ ಜಯ, ರತಿ, ಸಮ, ದ್ರುತ, ಲಲಿತ, ವಸಂತ, ವಿಜಯ. ಸನ್ನಿಮಾಪ. ಚಚ್ಚರಿ ಮುಂತಾದ ನೂರೆಂಟು ತಾಳಗಳನ್ನೂ ಉಲ್ಲೇಖಿಸಿದ್ದಾನೆ.

ನಿಜಗುಣಶಿವಯೋಗಿಯು ವಿವೇಕಚಿಂತಾಮಣಿಯಲ್ಲಿ ಹೇಳಿರುವ ಸಂಗೀತ ಪರಿಭಾಷೆಯ ಬಹುಭಾಗವನ್ನು ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯಚರಿತ್ರ ಮತ್ತು ಬಸವಪುರಾಣಗಳಿಂದ ಎರವಲು ಪಡೆದುಕೊಂಡಿದ್ದಾನೆ; ಉಳಿದುದನ್ನು ಅಜ್ಞಾತ ಆಕರಗಳಿಂದ ಸಂಗ್ರಹಿಸಿದ್ದಾನೆ. ಸ್ವರೋತ್ಪತ್ತಿಕ್ರಮ, ದಶವಿಧನಾದಗಳು, ಸ್ವರಗಳ ಕಾಲ ಧ್ವನಿ ನಕ್ಷತ್ರಾದಿ ಉಪಾಧಿಗಳು, ಸ್ವರದಿಂದ ಶ್ರುತಿಗಳ ಉತ್ಪತ್ತಿ, ಶ್ರುತಿಗಮಕಗಳು, ದೇಶೀಗಮಕಗಳು, ರಾಗೋತ್ಪತ್ತಿ, ಗ್ರಾಮ-ಜಾತಿಗಳು. ಷಟ್‌ತ್ರಿಂಶತ್ ತತ್ವಗಳನ್ನು ಸಂಕೇತಿಸುವ ಮೂವತ್ತಾರು ರಾಗಗಳು, ರಾಗಾಂಗ, ಉಪಾಂಗ, ಭಾಷಾಂಗ, ಕ್ರಿಯಾಂಗಗಳೆಂಬ ಪ್ರಭೇದಗಳಲ್ಲಿ ನೂರೈವತ್ತೇಳು ರಾಗಗಳು, ಅಧುನಾಪ್ರಸಿದ್ಧವಾಗಿದ್ದ ಮೂವತ್ತಾರು ರಾಗಗಳು. ಸ್ತ್ರೀಪುನ್ನಪುಂಸಕರಾಗಗಳು, ರಾಗದ ಅಂಕುರಸ್ಥಾಯಿಯೆ ಮೊದಲಾದ ಸಪ್ತಾವಸ್ಥೆಗಳು, ಮಿಶ್ರರಾಗಗಳು, ಶಾರೀರಭೇದಗಳು, ರವವಿಕಲ್ಪಗಳು, ಚತುರ್ವಿಧದಂಡ ರೀತಿಗಳು, ರೀತಿತ್ರಯ, ಸ್ವರದೂಷಣಗಳು, ವಾದ್ಯಭೇದಗಳು, ಪಂಚಮಹಾವಾದ್ಯಗಳು, ಮೂವತ್ತಮೂರು ತಂತಿವಾದ್ಯಗಳು, ಅವುಗಳಲ್ಲಿ ನಾದಕಟ್ಟುಗಳು, ಹದಿನೆಂಟು ತೆರದ ವಾಸ (ಕೊಳಲು)ಗಳು. ಅದರ ವಾದನದಲ್ಲಿ ನಲವತ್ತಾರು ಭೇದಗಳು, ಚತುರ್ವಿಧ ಮೃದಂಗ, ಆವಜಭೇದಗಳು, ತಾಳ ಪ್ರಕ್ರಿಯೆ, ಧ್ರುವಾದಿ ಸುಳಾದಿತಾಳಗಳು, ಚಚ್ಚತ್ಪುಟಾದಿ ನೂರೆಂಟು ತಾಳಗಳು, ಭಂಗವಿಭಂಗಾದಿ ಆರು ತಾಳ ವರ್ಗಗಳು ಮುಂತಾದ ಶೀರ್ಷಿಕೆಗಳಲ್ಲಿ ಒಂದು ಸಂಗೀತ ಪರಿಭಾಷೆಯ ವಿಶ್ವಕೋಶವನ್ನೆ ಅಡಕಗೊಳಿಸಿದ್ದಾನೆ. ಅದನ್ನು ಅಲ್ಲಿಯೆ ಓದಿಕೊಳ್ಳಬೇಕು.

ಸಿದ್ಧನಂಜೇಶನು ಗುರುರಾಜಚಾರಿತ್ರದಲ್ಲಿ ಮತ್ತು ರಾಘವಾಂಕಚರಿತೆಯಲ್ಲಿ ಹೇಳಿರುವ ಸಂಗೀತಸಂಬಂಧಿಯಾದ ವಿಷಯಗಳನ್ನು ಸಮಷ್ಟಿಯಲ್ಲಿ ಹೀಗೆ ಸಂಕ್ಷೇಪಿಸಬಹುದು: ತೂರ್ಯತ್ರಯ, ಸಪ್ತಸ್ವರ, ಸ್ಥಾನತ್ರಯ, ಗಮಕ, ಮಂಗಳ ಮತ್ತು ಬಸವಪದವೆಂಬ ಹಾಡುಗಳು, ಧವಳ ಪ್ರಬಂಧ, ರಾಘವಾಂಕವಿರಚಿತ ಗುರುಸ್ತೋತ್ರದ ಚೌಪದಿ, ಸೋಬಾನೆ, ಸುವ್ವಿ, ಒನಕೆವಾಡು, ಶುದ್ಧ–ಸಾಳಗ–ಸಂಕೀರ್ಣರಾಗವರ್ಗಗಳು, ಲಲಿತ, ದೇಶಾಕ್ಷಿ ಎಂಬ ರಾಗಗಳು, ಬತ್ತೀಸರಾಗಗಳು, ಗಾಂಧಾರ ಪ್ರಮುಖ (+ ಷಡ್ಜಗ್ರಾಮ, ಮಧ್ಯಮಗ್ರಾಮ) ಗ್ರಾಮಗಳು, ನೂರೊಂದು ತಾಳಗಳು, ಸರಸ್ವತಿ, ನಾರದ, ಕಂಬಲಾಶ್ವತರರು, ಹನುಮಂತರೆಂಬ ಪೂರ್ವಸಂಗೀತಾಚಾರ್ಯರು, ತತವಿತತಾದಿ ವಾದ್ಯಚತುಷ್ಟಯವಿಧಗಳು, ಪಂಚಮಹಾವಾದ್ಯಗಳು, ವೀಣೆ, ದಂಡಿಗೆ, ಕಿನ್ನರಿ, ರಾವಣಹಸ್ತ ಮುಂತಾದ ತತವಾದ್ಯಗಳು, ಕಿನ್ನರಿವೀಣೆಯ ಪೀಠ, ಬಿರಡೆ, ದಂಡ, ಸಾರಿಕೆ, ಸೊರೆ, ತಂತಿ ಎಂಬ ಷಡಂಗಗಳು, ಕಹಳೆ, ಬಿರುದಿನ ಕಹಳೆ, ಶಂಖ, ಕೊಂಬು, ಕೊಳಲು, ಮುಖವೀಣೆ, ಚೆಂಗು, ಉಪಾಂಗ, ತಿತ್ತಿಗಳೆಂಬ ಗಾಳಿವಾದ್ಯಗಳು; ಡಮರು, ಪಟಹ, ಮದ್ದಳೆ, ಮುರಜ, ತಂಬಟೆ, ಭೇರಿ, ನಿಸ್ಸಾಣ, ವೀರಣ, ಆವುಜ, ಕರಡೆ, ಹುಡುಕು (ಹುಡುಕ್ಕಾ), ಡೋಲು, ಢಕ್ಕೆ, ಡಂಗುರ, ಡೊಳ್ಳು, ಚಂಬಕ, ಡೌಡೆ, ದುಂದುಭಿ ಮತ್ತು ತುಡುಮುಗಳೆಂಬ ಅವನದ್ಧ ವಾದ್ಯಗಳು; ತಾಳ, ಪೊಂದಾಳ, ಕೈತಾಳ, ಜಯಘಂಟೆ, ಘಂಟೆ, ಗಿರುಗಟೆ ಮುಂತಾದ ಘನವಾದ್ಯಗಳು.

ಷಡಕ್ಷರಿ ಕವಿಯು ಶಬರಶಂಕರವಿಲಾಸ, ರಾಜಶೇಖರವಿಲಾಸ ಮತ್ತು ವೃಷಭೇಂದ್ರವಿಜಯಗಳಲ್ಲಿ ಸಂಗೀತವನ್ನು ಕುರಿತು ಈ ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ: (ಸಪ್ತಸ್ವರಗಳು), ಸ್ಥಾನತ್ರಯ, ಗಮಕ, ಠಾಯ, ದೇಶಿ, ಮೂರ್ಛನೆ, ತಾನಮಾನ, ಮಂಗಳಗೀತೆ, ಪ್ರಬಂಧ, ಜೋಗುಳ, ಸಂಗೀತಸದನ, ಗೀತಶಾಲೆ; ಶುದ್ಧ-ಮಿಶ್ರ–ಸಂಕೀರ್ಣ ರಾಗಗಳು; ಮಾಳವ, ಶ್ರೀ, ಸಾಳಗ, ನಾಟಿ, ಶಂಕರಾಭರಣ, ಬಂಗಾಳ, ಗುರ್ಜರಿ, ತೋಡಿ, ವರಾಳಿ, ಕಲ್ಯಾಣಿ, ದೇಶಿ, ಕನ್ನಡ, ವರಾಳಿ, ಮಧುಮಾಧವಿ, ಲಲಿತ, ಗೌಳ, ವೇಳಾವಳಿ, ಕುರಂಜಿ, ಫಲಮಂಜರಿ, ಬಹುಳಿ, ನಾದರಾಮಕ್ರಿಯೆ, ಆಹಿರಿ, ಭೈರವಿ, ಮಲಹರಿ, ವಸಂತ, ಕುಂತಳ (ವರಾಳಿ) ಎಂಬ ರಾಗಗಳು; ರಂಗ, ರಕ್ತಿ, ಮೂರ್ಛನೆ, ತೇನತೇನ, ತಾನ, ಕತ್ತರ, ಬಿತ್ತರ, ಕಾಕುಳಿ (ಕಾಕು ?), ದೇಶಿ, ಲಯ, ಲಲಿತಗಾಢ, ಮಿಠಾಯಿ, ಲಂಘಿತ, ಜಾಯಿ, ಅನುಜಾಯಿ, ಪಂಜಳ, ಬಜಾವಣೆ, ಪದ, ಭ್ರಮರಲೀಲೆ, ನೇವುರ, ಜಾವಳ, ಕ್ರಮನಿಬಂಧ, ಉಚಿತ, ಬೆಡಂಗು ಮುಂತಾದ ಠಾಯಗಳು; ರಾಗಾಲಂಕರಣ ತಂತ್ರಗಳು ಇತ್ಯಾದಿ.

ಮುಪ್ಪಿನ ಷಡಕ್ಷರಿಯು ಮೇಲ್ಕಂಡ ಕಾವ್ಯಗಳಲ್ಲಿ ಹೆಸರಿಸುವ ವಾದ್ಯಗಳು ಹೀಗಿವೆ: ವಾದ್ಯಚಾತುರ್ವಿಧ್ಯ, ವಲ್ಲಕಿ, ಕಿನ್ನರಿ, ರಾವಣ. ರುದ್ರ, ಕೂರ್ಮ, ಕೈಲಾಸ, ಆಕಾಶ, ಗೌರಿ, ಸ್ವಾಯಂಭುವ, ಸ್ವರಮಂಡಲ. ಬೃಹನ್ನತಿ ಎಂಬ ವೀಣೆಗಳು: ಆಯಾ ರಾಗದ ಸ್ವರಸಂಪತ್ತಿಗೆ ಅನುಗುಣವಾಗಿ ಮೇಳವನ್ನು ಕಟ್ಟಿರುವ ವೀಣೆಗಳು; ವಾಸ, ಶಂಖ,

ತೂರ್ಯ, ಕಹಳೆ, ಬಿರುದಿನ ಕಹಳೆ, ಉಪಾಂಗ, ವೇಣು ಎಂಬ ಸುಷಿರವಾದ್ಯಗಳು ; ಮೃದಂಗ, ಮುರಜ, ಮದ್ದಲೆ, ಭೇರಿ, ಸಮರಪ್ರಸ್ಥಾನಭೇರಿ, ಸನ್ನಾಹಭೇರಿ, ಪಟಹ, ಪಳಹ, ನಿಸ್ಸಾಳ, ಆವಜ, ವೀರಮದ್ದಳೆ, ತಂಬಟೆ, ಬೊಂಬುಳಿ, ಚಂಬಕವಜಿ, ಢಕ್ಕಾ, ದುಂದುಭಿ, ಡಿಂಡಿಮ ಮುಂತಾದ ಅವನದ್ಧ ವಾದ್ಯಗಳು ; ಘಂಟೆ, ಕಿಂಕಿಣಿ (ಗೆಜ್ಜೆ), ತಾಳ ಇತ್ಯಾದಿ ಘನವಾದ್ಯಗಳು.

ಮೇಲ್ಕಂಡ ಕಾವ್ಯಗಳಲ್ಲಿ ತುಂಬುರು, ನಾರದ, ಅಶ್ವತರ ಮತ್ತು ಕಮಲ ಎಂಬ ಪೂರ್ವಪ್ರಸಿದ್ಧ ಸಂಗೀತಾ ಚಾರ್ಯರ ಹೆಸರುಗಳೂ ಬರುತ್ತವೆ. ಇವರು ಸಂಗೀತಶಾಸ್ತ್ರಸನ್ನುತರೇ.

## ೩. ಶರಣಸಂಗೀತ : ಕೃತಿಗಳು

ಇನ್ನು, ಶಿವಶರಣರು ಹಾಡಲೆಂದು ರಚಿಸಿರುವ ಸಾಹಿತ್ಯಪ್ರಕಾರಗಳನ್ನು ಸ್ಥೂಲವಾಗಿ ವಿವೇಚಿಸಬಹುದು. ಪ್ರಕೃತ ಉದ್ದೇಶಕ್ಕೆ ಬಸವಾದಿ ಪ್ರಮಥರು ರಚಿಸಿರುವ ಪ್ರಕಾರಗಳು, ನಿಜಗುಣ ಪ್ರಭೃತಿ ಶಿವಯೋಗಿಗಳು ರಚಿಸಿರುವ ಪ್ರಕಾರಗಳು ಎಂದು ಅವುಗಳನ್ನು ವಿಂಗಡಿಸಿಕೊಳ್ಳಬಹುದು. ಮೊದಲನೆಯ ವರ್ಗದಲ್ಲಿ ವಚನಗಳು, ಕಾಲಜ್ಞಾನ, ಮಂತ್ರಗೋಪ್ಯ, ದೀಕ್ಷಾವಿಧಿ ಇತ್ಯಾದಿಗಳು ಅಡಕವಾಗಿವೆ. ಎರಡನೆಯದರಲ್ಲಿ ಕರ್ಣಾಟಕ ಸಂಗೀತದಲ್ಲಿ ಇಂದು ಕೃತಿ ಎಂದು ಕರೆಯಲಾಗುತ್ತಿರುವ ಹಾಡಿನ ಪೂರ್ವರೂಪ, ಷಟ್ಪದಿಗಳು ಮುಂತಾದವು ಸೇರುತ್ತವೆ. ಇವೆರಡ ರಲ್ಲಿಯೂ ವಾಗರ್ಥವೆ ಪ್ರಧಾನವಾದುದರಿಂದ ಸಂಗೀತವು ಗೌಣ. ಅದರಲ್ಲಿಯೂ ಮೊದಲನೆಯ ವರ್ಗದಲ್ಲಿ ಹಾಡು ಎಂದು ಕರೆಯಬಹುದಾದ ರಚನೆ, ವಿನ್ಯಾಸ, ಬಂಧುಗಳು ಇಲ್ಲವಾದುದರಿಂದ ಅವುಗಳಲ್ಲಿ ಸಂಗೀತವು ಸ್ವೈರವೃತ್ತಿ ಯದು, ನಮ್ಮಸ್ವರೂಪದ್ದು, 'ಆನು ಒಲಿದಂತೆ ಪಾಡುವೆ' ಎನ್ನುವ ರೀತಿಯದು. ಕಾಲಜ್ಞಾನ, ಮಂತ್ರಗೋಪ್ಯ ಮುಂತಾದ ರಚನೆಗಳು ವಾಗರ್ಥದಿಂದ ಮಾತ್ರ, ಎಂದರೆ ಅವುಗಳಲ್ಲಿ ಅಡಕವಾಗಿರುವ ಉದ್ದೇಶ, ಬೋಧನೆ, ಉದ್ದಿಷ್ಟ ಬೋಧ್ಯರು ಮುಂತಾದವುಗಳಿಂದ ಮಾತ್ರ ವಿವಿಕ್ತವಾಗುತ್ತವೆ. ಗೇಯತೆಯ ದೃಷ್ಟಿಯಿಂದ ಅವುಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಇದ್ದರೆ ಅದು ಕಲ್ಪಿತ, ಕೃತಕ. ಕರ್ಣಾಟಕ ಸಂಗೀತದಲ್ಲಿ ಕೃತಿ, ದೇವರನಾಮ, ಪದ, ಜಾವಳಿ ಎಂದು ಪ್ರಸಿದ್ಧವಾಗಿರುವ ಗೇಯಪ್ರಕಾರಗಳು ಪೃಥಕ್ಕರಣವನ್ನು ಪಡೆದುಕೊಂಡಿರುವುದೂ ಅವುಗಳ 'ಮಾತು'ವಿನ ಅರ್ಥ, ರಸ, ಭಾವಗಳಿಂದಲೆ ಎಂಬುದು ನಿಜವಾದರೂ ಅವುಗಳನ್ನು ಪ್ರಸ್ತುತಪಡಿಸುವ ಗೇಯತಂತ್ರಗಳು, ಪ್ರಯೋಗವಿಧಾನ ಗಳು ಅವುಗಳನ್ನು ಸ್ಪಷ್ಟವಾಗಿ ವಿವಿಕ್ತಗೊಳಿಸಿವೆ. ಇವನ್ನು ಪ್ರತ್ಯೇಕ ರಚನಾರೀತಿಗಳೆಂದು ಸಂಗೀತವಿದ್ವಾಂಸರು ಸಾರ್ವತ್ರಿಕವಾಗಿ ಸ್ವೀಕರಿಸಿ ಪ್ರಯೋಗಿಸುವಷ್ಟರಮಟ್ಟಿಗೆ ಗೇಯತಂತ್ರವಿಧಾನಗಳು ಕ್ರಿಯಾಶೀಲವಾಗಿವೆ. ಆದುದ ರಿಂದ ಒಂದು ಸಾಹಿತ್ಯಪ್ರಕಾರವು ಬೇರೆ ಬೇರೆ ಹಾಡುಗಳಾಗಿ ಒಡೆದು ನಿಲ್ಲಬೇಕಾದರೆ ಸಾಹಿತ್ಯಭಾವಪ್ರಭೇದವೊಂದೆ ಸಾಕಾಗುವುದಿಲ್ಲ ಎಂದು ಸಿದ್ಧವಾಗುತ್ತದೆ.

### (ಅ) ವಚನ

ವಚನವಾಙ್ಮಯವು ವಿಸ್ತಾರವಾದುದು ; ಅದರಲ್ಲಿ ಮತಪ್ರಕ್ರಿಯೆ, ಪ್ರಮೇಯ, ಸಿದ್ಧಾಂತಗಳಿರುವಂತೆಯೆ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕವೌಲ್ಯಗಳೂ ಇವೆ. ವಚನದ ಗೇಯತೆಯನ್ನು ಕುರಿತು ಅನ್ಯತ್ರ ಸವಿಸ್ತರವಾಗಿ ವಿವೇಚಿಸಿದ್ದೇನೆ. ಹರಿದಾಸರು ರಚಿಸಿರುವ ಉಗಾಭೋಗಗಳಿಗೂ ಶಿವಶರಣರು ರಚಿಸಿರುವ ವಚನಗಳಿಗೂ ಇರುವ ಸಂಬಂಧವನ್ನು ಇಲ್ಲಿ ಸ್ವಲ್ಪವಾದರೂ ಸೂಚಿಸಬೇಕು ; ಏಕೆಂದರೆ ವಚನ-ಉಗಾಭೋಗಗಳಲ್ಲಿ ಜನ್ಯಜನಕಸಂಬಂಧ ವನ್ನು ಕೆಲವರು ಕಲ್ಪಿಸಿ ಸದೃಶಾರ್ಥವುಳ್ಳ ಎರಡನ್ನೂ ಉದಾಹರಿಸುತ್ತಾರೆ ; ಹರಿದಾಸರು ವಚನಗಳಿಂದ ಸ್ಫೂರ್ತಿ ಯನ್ನು ಪಡೆದು ಉಗಾಭೋಗಗಳನ್ನು ರಚಿಸಿದರೆನ್ನುತ್ತಾರೆ. ಕಡೆಯ ಪಕ್ಷ ಸಾವಿರದೈನೂರು ವರ್ಷಗಳಿಂದಲೂ ನಮ್ಮ ಸಂಗೀತದಲ್ಲಿ ಸಾಲಗಸೂಡಗಳೆಂಬ ಪ್ರಬಂಧಗಳಿದ್ದವು ; ಇವು ಹದಿನಾರು ಹದಿನೇಳನೆಯ ಶತಮಾನಗಳವರೆಗೂ ಇಡೀ ಭಾರತದಲ್ಲಿ, ವಿಶೇಷವಾಗಿ ಕರ್ಣಾಟಕದಲ್ಲಿ ಪ್ರಚಲಿತವಾಗಿದ್ದವು. ಇವುಗಳಲ್ಲಿ ಏಕತಾಲೀ ಎಂಬ ಒಂದು ಗೇಯ ಪ್ರಬಂಧವಿತ್ತು. ಇದರ ಮೊದಲಿನಲ್ಲಿ, ಮಧ್ಯದಲ್ಲಿ ಅಥವಾ ಕೊನೆಯಲ್ಲಿ ತಾಳವಿಲ್ಲದೆ ರಾಗಾಲಾಪನಸಹಿತವಾಗಿ ಇಂದಿನ ಕಾವ್ಯವಾಚನದಂತೆ ಹಾಡಬೇಕಾದ ಸಾಹಿತ್ಯಭಾಗವಿರುತ್ತಿತ್ತು. ಇದಕ್ಕೆ ಪ್ರಯೋಗವೆಂದು ಹೆಸರು. ಕರ್ಣಾಟಕದ ಹರಿದಾಸರು ಇದನ್ನು ಪ್ರತ್ಯೇಕವಾದ ಗೇಯರೀತಿಯನ್ನಾಗಿಯೆ ಹೇಗೆ ಮಾರ್ಪಡಿಸಿದರೆಂಬುದನ್ನು ಬೇರೆಡೆ ವಿವರಿಸಿ ದ್ದೇನೆ. ಇದನ್ನೆ ಅವರು ಉಗಾಭೋಗವೆಂದು ಹೆಸರಿಟ್ಟು ಪ್ರಯೋಗಿಸಿದರು. ಇದಕ್ಕೆ ಅವರಿಗೆ ವಚನಗಳ ಸ್ಫೂರ್ತಿಯು ಇದ್ದರೆ, ಅದು ಅಲ್ಪ, ಪ್ರಾಸಂಗಿಕ ಮತ್ತು ಪ್ರತಿಕ್ರಿಯೆಯ ರೂಪದ್ದು.

ವಚನ ಮತ್ತು ಉಗಾಭೋಗಗಳಲ್ಲಿ ಹೋಲಿಕೆಯಿದೆ ; ಇವೆರಡೂ ಅನಿಬದ್ಧಪ್ರಬಂಧಗಳು, ಏಕರಾಗನಿವೇಶಿತಗಳು, ಹ್ರಸ್ವ; ಸಾಮಾನ್ಯವಾಗಿ ಒಂದೇ ಸಾಹಿತ್ಯಭಾವವನ್ನು ಪ್ರತಿಪಾದಿಸುತ್ತವೆ. ಎರಡರಲ್ಲಿಯೂ ಲೋಕಾನುಭವದ ಆತ್ಮೀಯತೆ, ಅಲೌಕಿಕ ಅನುಭಾವದ ಗಾಢತೆ ಇವೆರಡೂ ಇರುತ್ತವೆ ; ಆಯಾ ಕಾಲದೇಶಗಳಿಗೆ ಸಹಜವಾಗಿರುವ ಸರಳವಾದ, ತಿಳಿಯಾದ ಆಡುಮಾತಿದೆ ; ಎರಡರಲ್ಲಿಯು ಭಾಷೆಯು ಹಳತು-ಹೊಸದರ ಸಂಧಿಸ್ಥಿತಿಯದಾಗಿದ್ದು ಪ್ರಯೋಗಶೀಲವಾಗಿದೆ ; ಎರಡರಲ್ಲಿಯು ನಾಣ್ನುಡಿ, ಜಾಣ್ನುಡಿ, ಲೋಕದೃಷ್ಟಾಂತಗಳ ಹೊನಲು, ಹೊಳಪು ಇವೆ ; ಸಮಸಾಮಯಿಕ ಸಮಾಜದ ಯಥಾವನ್ನಿರೂಪಣವಿದೆ ; ಸಮಾಜದ ಟೀಕೆ, ಆತ್ಮಪರೀಕ್ಷಣ, ಆಧ್ಯಾತ್ಮಿಕಮೌಲ್ಯಗಳ ಅನ್ವೇಷಣ, ಮಾನವಜೀವಿತದ ಉದ್ದೇಶ, ಮಾರ್ಗ, ಸಾಧನೆಗಳ ವಿವೇಚನೆಯಿದೆ ; ಇವುಗಳನ್ನು ಆಯಾ ಧಾರ್ಮಿಕ ಪರಂಪರೆಯಲ್ಲಿ, ಮತಾಚಾರದ ಚೌಕಟ್ಟಿನಲ್ಲಿ ಮೈಗೂಡಿಸಿಕೊಳ್ಳುವ ರೀತಿ ಮುಂತಾದವುಗಳು ಅವುಗಳ ವಸ್ತು. ಎರಡರಲ್ಲಿಯೂ ರಚಯಿತನ ಆತ್ಮಸಮರ್ಪಣಭಾವವು ಎದ್ದು ಕಾಣುತ್ತದೆ. ಎರಡರಲ್ಲಿಯೂ ನಿರ್ದಿಷ್ಟರೂಪದ ದರ್ಶನ, ಸಿದ್ಧಾಂತ ಮತ್ತು ಶೀಲಸಂಹಿತೆಗಳು ಕಂಡುಬರುತ್ತವೆ. ಎರಡರಲ್ಲಿಯೂ ಸ್ವಾನುಭವ, ಸುಧಾರಣಾದೃಷ್ಟಿ, ಅನುಕಂಪ, ಕವಿಹೃದಯಗಳು ಮೂಡಿಬಂದಿವೆ. ಬ್ರಾಹ್ಮಣಧರ್ಮದಿಂದ ಸಿಡಿದು, ಸಟೆದು, ದೂರ ನಿಂತ ವೀರಶೈವಧರ್ಮದ ವಚನಗಳಲ್ಲಿ ಬ್ರಾಹ್ಮಣಧರ್ಮದ ಆಚಾರವಿಚಾರಗಳ ಪ್ರತಿಭಟನೆ, ಖಂಡನೆ, ದೂಷಣೆ ಮತ್ತು ಬಡಾಯಿಗಳು ಮುಖ್ಯಸ್ಥಾನವಾಗಿವೆ. ಇದಕ್ಕೆ ಪ್ರತಿಯಾದ ಅಥವಾ ಪರಸ್ಪರವಾದ, ಪ್ರತಿಸ್ಪರ್ಧಿಯಾದ ಬೇರೆ ಆಚಾರಪದ್ಧತಿಗಳನ್ನು ಎಬ್ಬಿಸಿ ನಿಲ್ಲಿಸುವ ಪ್ರಯತ್ನವು ನಡೆದಿದೆ. ಉಗಾಭೋಗಗಳಲ್ಲಿಯೂ ವಚನಗಳಲ್ಲಿರುವಷ್ಟೆ ಉತ್ಕಟವಾದ ಸ್ವಧರ್ಮಸಮರ್ಥನೆಯಿದೆ ; ಪರಂಪರಾನುಗತವಾದ ಆಚಾರ-ವಿಚಾರಗಳ ಪಾಲನೆ ಮತ್ತು ಪೋಷಣೆಗಳು ಇವೆ. ವಚನಸಾಹಿತ್ಯವು ಬ್ರಾಹ್ಮಣಧರ್ಮಕ್ಕೆ ಪ್ರತಿಕ್ರಿಯೆಯಾದರೆ ಉಗಾಭೋಗಗಳನ್ನು ವಚನಸಾಹಿತ್ಯಕ್ಕೆ ಪ್ರತಿಕ್ರಿಯೆಯೆನ್ನಬಹುದು.

ವಚನಕ್ಕೂ ಉಗಾಭೋಗಕ್ಕೂ ಉತ್ಪತ್ತಿ, ಉದ್ದೇಶ ಮತ್ತು ರಚನೆಗಳಲ್ಲಿ ಸಾದೃಶ್ಯವಿದೆ. ಎರಡೂ ಮತೀಯ ಸಂದರ್ಭಗಳಲ್ಲಿ ನಿರ್ದಿಷ್ಟವಾದ ತತ್ತ್ವ, ಪ್ರಕ್ರಿಯೆ ಮುಂತಾದವುಗಳನ್ನು ಜನಸಾಮಾನ್ಯದಲ್ಲಿ ಮನಸ್ಸಿಗೆ ನಾಟುವಂತೆ ಬೋಧಿಸಲು ಆಚಾರಸಂಹಿತೆಯ, ಶೀಲಸಂಹಿತೆಯ ರೂಪದಲ್ಲಿ ಹುಟ್ಟಿಕೊಂಡವು. ಎರಡೂ ದೇಶ್ಯಪರಿಸರದಲ್ಲಿ, ಜನಪದಸ್ತರದ ಉದ್ಧಾರಕ್ಕೆಂದು ಆಯಾ ಮತೀಯ ನಾಯಕರು ದೇಶ್ಯಭಾಷೆಯಲ್ಲಿ ಸಮಯಸ್ಫೂರ್ತಿಯಿಂದ, ಆಶುರಚನೆಯಿಂದ ಹೇಳಿದ ಮಾತುಗಳು. ಆದರೂ ಎರಡೂ ತಮ್ಮ ಹೆಸರಿಗಾಗಿ ಸಂಸ್ಕೃತವನ್ನೆ ಆಶ್ರಯಿಸಿದ್ದು ಒಂದು ಚೋದ್ಯವೆ ಸರಿ! ಎರಡೂ ಸಾಮಾನ್ಯಾರ್ಥಕಗಳಾದ ಶಬ್ದಗಳಿಂದಲೆ ಈ ಹೆಸರುಗಳನ್ನು ಪಡೆದುಕೊಂಡಿದ್ದರೂ, ಈ ಶಬ್ದಗಳು ಕಾಲಕ್ರಮದಲ್ಲಿ ವಿಶೇಷಾರ್ಥವನ್ನು ಗಳಿಸಿಕೊಂಡು ಊರ್ಜಿತವಾದವು. ವಚನವೆಂದರೆ ನುಡಿ, ಮಾತು ಎಂದು ಅರ್ಥವಷ್ಟೆ ; ಆದರೆ ಇವೆರಡೂ ಸಂಗೀತಶಾಸ್ತ್ರ ಪರಿಭಾಷೆಯ ಪರಿಸರದಲ್ಲಿ ರೂಪಾಂತರಗೊಂಡು (ವಚನವೆಂಬ) ಒಂದೆ ಶಬ್ದದಿಂದ ಹೊರಟು ಕವಲೊಡೆದವು. ನುಡಿಯೆಂದರೆ (ಕೃತಿ, ದೇವರನಾಮ, ಪದ, ಜಾವಳಿ ಮೊದಲಾದವುಗಳಲ್ಲಿ) ಚರಣವೆಂದೂ, ಮಾತು ಎಂದರೆ ಹಾಡಿನಲ್ಲಿರುವ ಮಾತುಗಳ ಅಂಶ ಎಂದೂ ವಿಶೇಷ ಸಂಜ್ಞೆಯನ್ನು ಪಡೆದುಕೊಂಡವು. ಆದರೆ ಈ ಶಬ್ದಗಳ ಬೆಳವಣಿಗೆಗೂ ಶಿವಶರಣರು ರಚಿಸಿದ ವಚನವೆಂಬ ಸಾಹಿತ್ಯಪ್ರಕಾರಕ್ಕೂ ಏನೂ ಸಂಬಂಧವು ಕಂಡುಬರುವುದಿಲ್ಲ. ಏಕೆಂದರೆ ವಚನವೆಂಬುದು ನುಡಿಗಳಿಲ್ಲದ ಏಕಾಂಡ, ಅಖಂಡ ಪ್ರಬಂಧ; ಎಂದರೆ, (ಉಗಾಭೋಗವು ತನ್ನ ಪೂರ್ವರೂಪದಲ್ಲಿ ಇದ್ದಹಾಗೆ) ಇನ್ನೊಂದು ಪ್ರಬಂಧದ ಅಂಗವಾಗಿ, ಅವಯವವಾಗಿ ಇರದೆ, ತಾನೆ ಸ್ವಯಂಪೂರ್ಣವಾದ, ಸ್ವತಂತ್ರವಾದ ಪ್ರಬಂಧವಾಗಿರುತ್ತದೆ. ಮಾತು ಎಂಬ ಶಬ್ದವಾದರೋ ಹಾಡಿನಲ್ಲಿರುವ ಮಾತುಗಳನ್ನು ಸೂಚಿಸುವ ಪಾರಿಭಾಷಿಕ ಶಬ್ದವಾಗಿ ವಚನಗಳು ಹುಟ್ಟಿಕೊಳ್ಳುವುದಕ್ಕಿಂತ ಬಹು ಹಿಂದಿನಿಂದಲೂ ಸಂಗೀತಶಾಸ್ತ್ರದಲ್ಲಿ ರೂಢಿಸಿದೆ.

ಉಗಾಭೋಗ ಮತ್ತು ವಚನಗಳಲ್ಲಿ ಕೆಲವು ವೈದೃಶ್ಯಗಳೂ ಇವೆ. ವಚನದಲ್ಲಿರುವಂತೆ ಗಾನಕ್ರಮದ ಕಾಮಚಾರವು ಉಗಾಭೋಗದಲ್ಲಿಲ್ಲ ; ಉಗಾಭೋಗದಲ್ಲಿ 'ಮಾತು'ವನ್ನು ಪಙ್ಕ್ತಿಗಳಾಗಿ ವಿಂಗಡಿಸುವ ಸಹಜ ಯತಿಯಿದೆ, ಪ್ರಾಸವಿದೆ. ಛಂದೋವಿನ್ಯಾಸದ ಪ್ರವೃತ್ತಿಯಿದೆ ; ರಚನೆಯಲ್ಲಿ ಬಿಗಿಯಿದೆ, ಓಘವಿದೆ, ಐಕ್ಯತೆಯಿದೆ ; ಧ್ರುವಪದದ ಪುನರುಕ್ತಿಯ ಲಕ್ಷಣವು-ಅಪರೂಪವೆನಿಸಿದರೂ—ಇದೆ ; ಗಮಕರೀತಿಯ ವಾಚನಕ್ಕೆ ಸುಲಭವಾಗುವ ಗೇಯಯೋಗ್ಯತೆಯಿದೆ ; ಪ್ರಯೋಗಬಾಹುಳ್ಯಕ್ಕೆ ಆಸ್ಪದವನ್ನು ಉಂಟುಮಾಡುತ್ತದೆ; ಒಂದೇ ರಾಗದ ಖಂಡಿಕೆಗಳು ಭಾವನಿರಂತರೆಯ ತರ್ಕದಿಂದ ಬದ್ಧವಾಗಿ ರಚನೆಗೆ ಅವ್ಯಾಹತಿ. ಐಕ್ಯತೆ ಮತ್ತು ನಿರಂತರತೆಗಳನ್ನು ತಂದುಕೊಡುತ್ತವೆ. 'ಮಾತು'ವಿನ ಖಂಡಗಳನ್ನು ರಾಗಭಾವವೈವಿಧ್ಯದಿಂದ ನೆರವುದಕ್ಕೆ ಅವಕಾಶವಿರುತ್ತದೆ; ದೇವರನಾಮಕ್ಕೆ ಏಕಾರ್ಥನಿವೇಶನವಿರುವಂತಹ ಒಂದು

ಉಗಾಭೋಗವನ್ನು ದೇವರನಾಮಕ್ಕೆ ಅನಿಬದ್ಧಪೀಠಿಕೆಯಾಗಿ ಹಾಡುವುದೆ ಹೆಚ್ಚು.

ಬಸವಣ್ಣನಿಗಿಂತಲೂ ಸ್ವಲ್ಪ ಹಿಂದಿನ ಕಾಲದಿಂದಲೂ ವಚನಗಳು ರಚಿತವಾಗಿವೆ. ಅಲ್ಲಮ, ಮಹಾದೇವಿ, ಬಸವಣ್ಣ, ನಿಜಗುಣದೇವ, ಏಕಾಂತದ ರಾಮಯ್ಯ, ಏಕೋರಾಮಿತಂದೆ, ಕಿನ್ನರಿಬ್ರಹ್ಮಯ್ಯ, ಘಟ್ಟಿವಾಳಯ್ಯ, ಜೇಡರ ದಾಸಿಮಯ್ಯ, ಡೋಹರಕಕ್ಕಯ್ಯ, ತುರುಗಾಹಿ ರಾಮಣ್ಣ, ಪಂಡಿತಾರಾಧ್ಯ, ಚೆನ್ನಬಸವ, ಬಹುರೂಪಿ ಚೌಡಯ್ಯ, ಮಡಿವಾಳಮಾಚಯ್ಯ, ಮೋಳಿಗೆ ಮಾರಯ್ಯ, ಶಂಕರದಾಸಿಮಯ್ಯ, ಸಿದ್ಧರಾಮ ಇತ್ಯಾದಿಯಾಗಿ ನೂರಕ್ಕಿಂತ ಹೆಚ್ಚಿನ ವಚನಕಾರರ ವಿಪುಲ ವಚನಗಳು ಇಂದು ದೊರೆಯುತ್ತವೆ. ಆದರೆ ಅವುಗಳಿಗೆ ಸಂಗೀತ ಪ್ರಯೋಗವು ತುಂಬಾ ವಿರಳವೆ ಆಗಿದೆಯೆಂದು ಒಪ್ಪಿಕೊಳ್ಳಬೇಕು. ಅದು ಹುಟ್ಟಿದಾಗ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಸಹ ನಿರ್ದಿಷ್ಟ ಗೇಯ ಪ್ರಬಂಧದ ಸ್ಥಾನಮಾನಗಳನ್ನು ಶಾಸ್ತ್ರೀಯ ಸಂಗೀತದಲ್ಲಿ ಪಡೆದಿರಲಿಲ್ಲ, ಈಗಲೂ ಪಡೆದಿಲ್ಲ. ವಚನಗಳನ್ನು ಪಙ್ಕ್ತಿಗಳನ್ನಾಗಿ ಒಡೆದು, ಹಿಗ್ಗಿಸಿ-ಕುಗ್ಗಿಸಿ ತಾಳಾವರ್ತಗಳಿಗೆ ಹೊಂದಿಸಿ ಹಾಡಿನ ರೂಪದಲ್ಲಿ ಪ್ರಯೋಗಿಸುವ ಪ್ರಯತ್ನವು —ತುಂಬಾ ವಿರಳವಾಗಿ—ಇಂದು ಕಂಡುಬರುತ್ತಿದೆ ; ರಾಗತಾಳಗಳಿಗೆ ಅನ್ವಯಿಸಿ ಗೀತಕ್ಕೆ ಪರಿವರ್ತಿಸುವ ಪ್ರಯತ್ನವೂ ನಡೆದಿದೆ. ಆದರೆ ಒಟ್ಟಿನಲ್ಲಿ ಇದು ಯಶಸ್ವಿಯಾಗಿಲ್ಲವೆಂದೇ ಹೇಳಬೇಕಾಗಿದೆ ; ಅದನ್ನು ಸಂಗೀತ ವಿದ್ವಾಂಸರು ಅಂದೂ ಒಪ್ಪಿಕೊಂಡು ಹಾಡಲಿಲ್ಲ ; ಕಾವ್ಯೋಲ್ಲೇಖಗಳಲ್ಲಿ ಸಹ ಬಸವಗೀತ, ಜೋಗುಳ ಮುಂತಾದವನ್ನು ಹಾಡಿನಂತೆ ಪ್ರಯೋಗಿಸಿರುವುದಾಗಿ ಹೇಳಿದೆಯೆ ಹೊರತು, ವಚನವನ್ನು ಹಾಡಿನಂತೆ ಅನನ್ಯವಾದ ಚೌಕಟ್ಟುಳ್ಳ ಗೇಯ ಪ್ರಬಂಧವೆಂಬಂತೆ ಶಿವಶರಣರೂ ಸಹ ಹಾಡಿದರೆಂದು ಹೇಳಿಲ್ಲ. ಇಂದಿಗೂ ಸಂಗೀತ ವಿದ್ವಾಂಸರು ಅದನ್ನು ಹಾಡಾಗಿ ಹಾಡಲು ಮನಸ್ಸು ಮಾಡುವುದಿಲ್ಲ ; ಅದು ಒಂದು ಗೇಯಪ್ರಬಂಧವೆಂದು ಪರಿಗಣಿಸುವುದಿಲ್ಲ. ಗೇಯಪ್ರಬಂಧಕ್ಕೆ ಇರಬೇಕಾದ ಲಕ್ಷಣಗಳು ಅದರಲ್ಲಿ ದುರ್ಬಲವಾಗಿರುವುದೆ ಇದಕ್ಕೆ ಮುಖ್ಯ ಕಾರಣ.

### (ಆ) ಕೃತಿ

ಮೇಲೆ ಹೇಳಿರುವ ಎರಡನೆಯ ವರ್ಗದ ರಚನೆಗಳಲ್ಲಿ ಷಟ್ಪದಿ, ತ್ರಿಪದಿಗಳೂ ಪದಗಳೂ ಸೇರುತ್ತವೆ. ವಚನಗಳನ್ನೂ ಪಙ್ಕ್ತಿಗಳಾಗಿ ಒಡೆದುಕೊಂಡು ಷಟ್ಪದಿಗಳನ್ನಾಗಿ ಮಾಡಿ ಹಾಡುಗಳೆಂದು ಹೇಳಿ ರಾಗತಾಳಗಳನ್ನು ಅನ್ವಯಿಸುವ, ಇಂತಹ ಅನ್ವಯವು ಪ್ರಾಚೀನವೆಂದು ಹೇಳುವ ಯತ್ನವೂ ಅಲ್ಪಸ್ವಲ್ಪ ನಡೆದಿದೆ. ಷಟ್ಪದಿ, ತ್ರಿಪದಿಗಳನ್ನು ರಾಗವಾಗಿ ಹಾಡುವುದು ಅನುಚಿತವೂ ಅಲ್ಲ, ಸಂಪ್ರದಾಯವಿರುದ್ಧವೂ ಅಲ್ಲ. ಹಾಗೆ ಹಾಡುವುದೂ ಷಟ್ಪದಿ ಕಾವ್ಯಗಳಲ್ಲಿ ಪ್ರತಿಯೊಂದು ಸಂಧಿಗೂ ಬೇರೆ ಬೇರೆ ರಾಗಗಳನ್ನು ಅನ್ವಯಿಸುವ ಪದ್ಧತಿಯೂ ಕನ್ನಡ ಕಾವ್ಯದ ಒಂದು ಹಳೆಯ ಪದ್ಧತಿಯೆ. ಇಂತಹ ರಾಗಾನ್ವಯವುಳ್ಳ ಹಸ್ತಪ್ರತಿಗಳು ಅವಿರಳವಾಗಿ ದೊರೆಯುತ್ತವೆ. ಅಂತೆಯೆ ತ್ರಿಪದಿ, ಸಾಂಗತ್ಯಗಳನ್ನೂ ರಾಗಸಹಿತವಾಗಿ ಹಾಡುವ ರೂಢಿಯಿದೆಯಷ್ಟೆ; ಇದನ್ನು ಸಾಕ್ಷರಾಲಪ್ತಿಯೆನ್ನುವುದಕ್ಕಿಂತ ಮಟ್ಟು, ಧಾಟಿ ಎಂದು ಕರೆಯುವುದೆ ಸರಿಯಾದುದು. ದ್ವಿಪದಿ, ತ್ರಿಪದಿ, ಚತುಷ್ಪದಿ (ಚೌಪದಿ), ಷಟ್ಪದಿ, ಆರ್ಯಾ, ಕಂದ, ದೋಧಕ ಮುಂತಾದ ಛಂದಃಪ್ರಕಾರಗಳನ್ನು ಗೇಯಪ್ರಕಾರಗಳೆಂದು ಎಣಿಸಿಕೊಂಡು ಸಂಗೀತರತ್ನಾಕರಾದಿಶಾಸ್ತ್ರಗ್ರಂಥಗಳಲ್ಲಿ ಹೇಳಿದೆ ; ಜನಸಾಮಾನ್ಯರು ಅಥವಾ ಕವಿಗಳು ಇವುಗಳನ್ನು ಹಾಡುತ್ತಿದ್ದ ರೀತಿಯನ್ನು ಉಳಿಸಿ ಬರೆದಿಡುವುದು ಈ ಗ್ರಂಥಗಳ ಉದ್ದೇಶವಾಗಿತ್ತೆ ಹೊರತು ಈ ಅಥವಾ ಇಂತಹ ಪ್ರಬಂಧಗಳು 'ಶಾಸ್ತ್ರೀಯ' ಸಂಗೀತದ ಸಾಮಗ್ರಿಯೆಂದು ತಿಳಿಸುವುದಲ್ಲ. ಧಾರ್ಮಿಕ, ಜಾನಪದ ಮುಂತಾದ ಸಂದರ್ಭಗಳಲ್ಲಿ ಬಳಸಲಾಗುತ್ತಿದ್ದ ಮಟ್ಟು, ಹಾಡು, ತಾಳ, ಸಂಗೀತವಾದ್ಯ, ನೃತ್ಯ ಮುಂತಾದವುಗಳನ್ನೂ ಸಂಗೀತಶಾಸ್ತ್ರಗ್ರಂಥಗಳಲ್ಲಿ ವರ್ಣನಾಸಂಪೂರ್ಣತೆಯ ದೃಷ್ಟಿಯಿಂದಲೂ ಇವುಗಳೆಲ್ಲ ಸಂಗೀತದ ಅಂಗಗಳೆ ಎಂಬುದನ್ನು ಬೋಧಿಸುವುದಕ್ಕಾಗಿಯೂ ಸೇರಿಸಲಾಗುತ್ತಿತ್ತು.

ಇಂತಹ ಹಾಡುಗಳನ್ನು ಹಾಡುಗಬ್ಬಗಳೆಂದು ಕೆಲವು ಉತ್ಸಾಹೀ ವಿದ್ವಾಂಸರು ಹೇಳಿದ್ದುಂಟು. ಹಾಡುಗಬ್ಬ, ಬಾಜನೆಗಬ್ಬ ಎಂಬ ಶಬ್ದಗಳು ಕನ್ನಡನಾಡಿನಲ್ಲಿ ನಿರ್ದಿಷ್ಟರಚನೆಯುಳ್ಳ ಗೇಯಕಾವ್ಯಪ್ರಕಾರಗಳಿಗೆ ಅನ್ವಯವಾಗುತ್ತಿದ್ದವು. ನಾಗವರ್ಮನು ಇವುಗಳನ್ನು ವಿವರಿಸಿದ್ದಾನೆ. ತ್ರಿಪದಿ, ಷಟ್ಪದಿ ಮುಂತಾದವುಗಳು, ಪದಗಳು ಈ ದೃಷ್ಟಿಯಿಂದ ಹಾಡುಗಬ್ಬಗಳಲ್ಲ. ಹಾಡಬಹುದಾದ ಕಾವ್ಯವೆಲ್ಲ ಹಾಡುಗಬ್ಬವಾಗಲಾರದು ; ವಿದ್ವಜ್ಜನರ ಅಜಾಗರೂಕ, ಶಿಥಿಲ ಶಬ್ದಪ್ರಯೋಗಗಳು ಭ್ರಾಂತಿಯನ್ನು ಮೂಡಿಸುವುದು ದುರದೃಷ್ಟಕರ.

ಒಟ್ಟಿನಲ್ಲಿ, ಇಂದು ಶಾಸ್ತ್ರೀಯವೆನ್ನಲಾಗುತ್ತಿರುವ ಕರ್ಣಾಟಕ ಸಂಗೀತದ ಪರಿಧಿಯಲ್ಲಿ ತ್ರಿಪದಿ, ಷಟ್ಪದಿ ಮುಂತಾದ ಪ್ರಕಾರಗಳನ್ನು ಸೇರಿಸಿಕೊಂಡಿಲ್ಲ. ಹಾಗೆ ನೋಡಿದರೆ ಅನನ್ಯವಾದ ಛಂದೋಬಂಧವುಳ್ಳ ಯಾವುದೇ

ಸಾಹಿತ್ಯಪ್ರಕಾರವನ್ನೂ—ಬಹುಶಃ ಶ್ಲೋಕವೊಂದನ್ನು ಬಿಟ್ಟು—ಹಾಗೆ ಸ್ವೀಕರಿಸಿಲ್ಲ. ಇಂತಹ ಅನಪ್ಯ ಛಂದಸ್ಸು ತಾಳಾನ್ವಯಕ್ಕೂ ಗೇಯತಾ ವಿಸ್ತರಣೆಗೂ ಪ್ರತಿಕೂಲವಾಗಿರುವುದನ್ನು ಬೇರೆಡೆಯಲ್ಲಿ ಸಾಕಷ್ಟು ವಿವರಿಸಿದ್ದೇನೆ. ಹೀಗಾಗಿ ಹರಿದಾಸರ ಉದಯರಾಗ ಮುಂತಾದ ಷಟ್ಪದಿಗಳೂ ಗದ್ಯವೇ ಮೊದಲಾದ ರಚನೆಗಳೂ ಈ ಪರಿಧಿಯ ಹೊರಗೇ ನಿಲ್ಲುತ್ತವೆ.

ಇನ್ನು ಉಳಿದಿರುವುದು ಪದಗಳು. ಇವುಗಳು ದೊರೆಯುವುದು ನಿಜಗುಣಶಿವಯೋಗಿಯ ಕಾಲದಿಂದ ಮಾತ್ರ. ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಈ ಬಗೆಯ ರಚನೆಗಳಿಗೆ ಪದಗಳು ಎಂಬ ಹೆಸರು ಬಂದಿರುವ ಹಾಗೆ ಕಾಣುತ್ತದೆ; ಹರಿದಾಸರು ತಮ್ಮ ಈ ಬಗೆಯ ರಚನೆಗಳು ಕೃತಿ, ಕೀರ್ತನೆ ಎಂದು ಮುಂತಾಗಿ ಕರೆದಿದ್ದರೂ ಅವು ರೂಢಿಯಲ್ಲಿ ದಾಸರಪದಗಳು ಎಂಬ ವ್ಯವಹಾರವನ್ನೆ ಪಡೆದು ನಿಂತವು. ದೇವರನಾಮ ಎಂಬ ಹೆಸರು ಈ ಗೇಯ ರಚನಾರೀತಿಗೆ ಅನ್ವರ್ಥವಲ್ಲ; ಅದು ನಾಮಾವಳಿ ಎಂಬ ಅವರ ಇನ್ನೊಂದು ಬಗೆಯ ರಚನೆಗೆ ಸಲ್ಲಬೇಕು. ಆದರೂ, 'ಯೋಗಾದ್ ರೂಢಿರ್ಬಲೀಯಸೀ' ಪದಗಳನ್ನು ರಚಿಸಿರುವ ಶಿವಯೋಗಿಗಳೆಂದರೆ ನಿಜಗುಣ, ಸರ್ಪಭೂಷಣ, ಬಾಲಲೀಲಾಮಹಾಂತ ಮತ್ತು ಶಿಶುನಾಳ ಷರೀಫ. ಇವರಲ್ಲಿ ಶಿಶುನಾಳ ಷರೀಫ ಸಾಹೇಬನು ಶೈವನೇನಲ್ಲ; ಅದ್ವೈತಸಿದ್ಧಿಯನ್ನು ಪಡೆದಿದ್ದ ಗೋವಿಂದಯೋಗಿಯ ಅನುಗ್ರಹದಿಂದ ಗುಡಗೇರಿಗ್ರಾಮದಲ್ಲಿ ಅವನು ಅದ್ವೈತಭಾವವನ್ನು ಪಡೆದು ಅದರ ಅನುಭಾವದಲ್ಲಿ ಕೃತಿಗಳನ್ನು ರಚಿಸಿದ್ದಾನೆ. ಇವುಗಳೆಲ್ಲ ವೀರಶೈವಮತಪ್ರತಿಪಾದಕಗಳಲ್ಲ; ಅದನ್ನೂ ಇತರ ಮತಪ್ರಕ್ರಿಯೆಗಳನ್ನೂ ಹೇಳುವ ಕೃತಿಗಳನ್ನು ಅವನು ಹೇಳಿದ್ದಾನೆ.

### ೩ (ಅ) ನಿಜಗುಣಶಿವಯೋಗಿ

ನಿಜಗುಣಶಿವಯೋಗಿಯು ಕನ್ನಡದಲ್ಲಿ ಅರುವತ್ತುಮೂವರು ಪುರಾತನರ ಸ್ತೋತ್ರ, ಕೈವಲ್ಯಪದ್ಧತಿ, ಪರಮಾನುಭವಬೋಧೆ, ಪರಮಾರ್ಥಗೀತೆ ಮತ್ತು ಅನುಭವಸಾರಗಳನ್ನು ಪದ್ಯರೂಪದಲ್ಲಿಯೂ ಪರಮಾರ್ಥಪ್ರಕಾಶಿಕೆ ಮತ್ತು ವಿವೇಕಚಿಂತಾಮಣಿಗಳನ್ನು ಗದ್ಯರೂಪದಲ್ಲಿಯೂ ರಚಿಸಿದ್ದಾನೆ. ಅವನು ರಚಿಸಿದನೆನ್ನಲಾಗುವ ದರ್ಶನಸಾರ ಮತ್ತು ಆತ್ಮತರ್ಕಚಿಂತಾಮಣಿ ಎಂಬ ಸಂಸ್ಕೃತಗ್ರಂಥಗಳು ದೊರೆತಿಲ್ಲ.ಪದ್ಯಗ್ರಂಥಗಳಲ್ಲಿ ಅನುಭವಸಾರವು ತ್ರಿಪದಿಗಳಿಂದಾದುದು, ಅರವತ್ತುಮೂವರು ಪುರಾತನರ ಸ್ತೋತ್ರವೂ ಅಷ್ಟೆ. ಪರಮಾನುಭವಬೋಧೆಯು ೬ ಸಂಧಿ, ೧೨೨ ಸೂತ್ರ ಮತ್ತು ೯೮೫ ಪದಗಳಲ್ಲಿ ರಚಿತವಾಗಿದೆ. ಇಲ್ಲಿ ಒಟ್ಟು ವಿಷಯವನ್ನು ೧೨೨ ಅಧಿಕರಣಗಳನ್ನಾಗಿ ವಿಂಗಡಿಸಿಕೊಂಡು ಅವುಗಳನ್ನು ಸೂತ್ರಗಳೆಂದು ಕರೆದಿದೆ; ಇದಲ್ಲದೆ ಪ್ರತಿಯೊಂದು ಪದಕ್ಕೂ ಅದಕ್ಕೆ ಪ್ರವೇಶವನ್ನೊದಗಿಸುವ ಅಥವಾ ಸಾರಾಂಶಗೊಳಿಸುವ ಒಂದು ಸೂತ್ರವು ದ್ವಿಪದಿ ಬಂಧದಲ್ಲಿ ದೊರೆಯುತ್ತದೆ; ಪದ ಎಂದರೆ ಇಲ್ಲಿ ಇಡಿಯ ಹಾಡಲ್ಲ, ಅದರಲ್ಲಿನ ನುಡಿ. ಹೀಗೆ ೧೨೨ ಸೂತ್ರಗಳಿಗೆ ೧೨೨ ಹಾಡುಗಳಿವೆ. ಇವುಗಳಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಎಂಬ ವಿಭಾಗಗಳಿಲ್ಲ; ವಿವಿಧ ಸಂಖ್ಯೆಯ ಪದ್ಯಗಳು ಮಾತ್ರ ಇವೆ; ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ನಾಲ್ಕು ನಾಲ್ಕು ಪಾದಗಳಿವೆ; ನಾಲ್ಕು ಪಾದಗಳ ಪ್ರತಿಯೊಂದು ಘಟಕಕ್ಕೂ ತನ್ನದೇ ಆದ ದ್ವಿತೀಯಾಕ್ಷರಪ್ರಾಸವಿದೆ; ಆದುದರಿಂದ ಅವು ಬೇರೆಬೇರೆಯ ನುಡಿಗಳು ಎಂದೇ ತಿಳಿಯಬೇಕು. ಸೂತ್ರವಾಗಲಿ, ಬೇರೆ ಯಾವುದೆ ಭಾಗವಾಗಲಿ ಈ ಹಾಡುಗಳಲ್ಲಿ ಪುನರುಕ್ತಿಗೊಳ್ಳುವುದಿಲ್ಲ. ಪ್ರತಿಯೊಂದು ಪದದಲ್ಲಿಯೂ ಅಂಶಗಣ ಅಥವಾ ಮಾತ್ರಾಗಣಗಳ ಛಂದೋನಿರ್ಬಂಧವಿಲ್ಲ; ಅಲ್ಲದೆ ಅವುಗಳ ಪಾದದೈರ್ಘ್ಯಗಳೂ ಸಮಾನವಾಗಿಲ್ಲ—ಎಂದರೆ ಬೇರೆಬೇರೆ ಪಾದಗಳಲ್ಲಿ ಅಕ್ಷರಸಂಖ್ಯೆಯು ಬೇರೆಬೇರೆಯೆ (ಸಾಮಾನ್ಯವಾಗಿ ಹತ್ತರಿಂದ ಹದಿನೈದರವರೆಗೆ) ಇರುತ್ತದೆ. ಇಡೀ ಗ್ರಂಥದ ಪ್ರಾರಂಭದಲ್ಲಿ ನಾದನಾಮಕ್ರಿಯೆ ರಾಗವನ್ನು ನಿರ್ದೇಶಿಸಿದೆ; ಬೇರೆಬೇರೆ ಸಂಧಿಗಳಿಗಾಗಲಿ ಬೇರೆಬೇರೆ ಹಾಡುಗಳಿಗಾಗಲಿ, ಬೇರೆಬೇರೆ ರಾಗಗಳನ್ನು ಸೂಚಿಸಿರುವುದು ಯಾವ ಹಸ್ತಪ್ರತಿ ಪರಂಪರೆಯಲ್ಲಿಯೂ ಕಂಡುಬರುವುದಿಲ್ಲ. ಅಂತೆಯೆ ಇಡೀ ಗ್ರಂಥದಲ್ಲಿ ತಾಳನಿರ್ದೇಶವು ಎಲ್ಲಿಯೂ ಇಲ್ಲ. ಆದುದರಿಂದ ಈ ಹಾಡುಗಳನ್ನು ನಾದನಾಮಕ್ರಿಯೆ (ಅಥವಾ ಯಾವುದಾದರೊಂದು ಬೇರೆ) ರಾಗದಲ್ಲಿ ಆಯಾ ನುಡಿಯಲ್ಲಿರುವ ಅಕ್ಷರಬಂಧಕ್ಕೆ ಅನುಗುಣವಾಗಿರುವ ಲಯದಲ್ಲಿ 'ಓದು'ವುದು ಇದರ ಗಾಯನಕ್ರಮವಾಗಿತ್ತು ಎಂದು ಊಹಿಸಬೇಕಾಗುತ್ತದೆ.

ಪರಮಾರ್ಥಗೀತೆಯು ೧೧ ಗತಿ, ೧೨೧ ನಿರೂಪಣೆ ಹಾಗೂ ೧೪೬೯ ಚರಣಗಳಲ್ಲಿ ರಚಿತವಾದ ಪದ್ಯಕಾವ್ಯ. ಇದರ ಪ್ರಾರಂಭದಲ್ಲಿ ಒಂಬತ್ತೂ ಅಂತ್ಯದಲ್ಲಿ ಮೂರೂ ಕಂದಗಳಿವೆ. ಪ್ರತಿಯೊಂದು ಗತಿಯ ಆದ್ಯಂತಗಳಲ್ಲಿಯೂ ಒಂದೊಂದು ಕಂದವಿದೆ. ಒಂದೊಂದು ನಿರೂಪಣೆಯನ್ನೂ ಒಂದೊಂದು ಪ್ರತ್ಯೇಕವಾದ ಹಾಡು ಎಂದು ಭಾವಿಸಿ

ಕೊಳ್ಳಬಹುದು: ಅದರಲ್ಲಿ ಎರಡೆರಡು ಪಾದಗಳ ಆರು ಘಟಕಗಳಿರುತ್ತವೆ. ಒಂದೊಂದು ಘಟಕದಲ್ಲಿಯೂ ದ್ವಿತೀಯಾಕ್ಷರ ಪ್ರಾಸವಿದೆ: ಘಟಕವನ್ನಿಲ್ಲಿ ಚರಣವೆಂದು ಕರೆದಿದೆ: ಒಂದೊಂದು ಗತಿಯಲ್ಲಿಯೂ ಹನ್ನೆರಡು ನಿರೂಪಣಗಳಿವೆ: ಇವರ ನಂತರ ಎರಡು ಘಟಕಗಳ ಉಪಾಂತ್ಯ ಸಮಾಪ್ತಿಯೂ ನಂತರದ ಕಂದದಿಂದ ಪರಿಸಮಾಪ್ತಿಯೂ ಇವೆ. ಪ್ರತಿಯೊಂದು ಗತಿಯಲ್ಲಿರುವ ೧೧ ನಿರೂಪಣಗಳ ಸಮಷ್ಟಿಯನ್ನು ಗೀತೆ ಎಂದು ಕರೆದಿದೆ. ಆದರ ಇಲ್ಲಿ 'ಗೀತೆ' ಎಂಬುದಕ್ಕೆ ಹಾಡು ಎಂಬ ಅರ್ಥವಿದ್ದಂತೆ ತೋರುವುದಿಲ್ಲ. ಭಗವದ್ಗೀತೆ ಎಂಬುದಕ್ಕೆ ಪರಸ್ಪರವಾಗಿ ಪರಮಾರ್ಥಗೀತೆ ಎಂಬ ಹೆಸರನ್ನಿಟ್ಟು ಗ್ರಂಥದ ಒಂದೊಂದು ಗತಿಗೂ ಗೀತೆ ಎಂಬ ಶೀರ್ಷಿಕೆಯನ್ನು ನಿಜಗುಣಶಿವಯೋಗಿಯು ಕೊಟ್ಟಿರುವುದು ಹೆಚ್ಚು ಸಂಭಾವ್ಯವಾಗಿದೆ. ಇಡೀ ಗ್ರಂಥಕ್ಕಾಗಲಿ, ಒಂದೊಂದು ಗತಿಗಾಗಲಿ, ಬೇರೆಬೇರೆ ನಿರೂಪಣಕ್ಕಾಗಲಿ ರಾಗದ ಅಥವಾ ತಾಳದ ನಿರ್ದೇಶವಿಲ್ಲ. ಪ್ರತಿಯೊಂದು ಘಟಕದಲ್ಲಿರುವ ಪಾದಗಳ ದೈರ್ಘ್ಯವು ಸಮಾನವಾಗಿಲ್ಲ; ಅವುಗಳಲ್ಲಿ ಛಂದೋಮಾದರಿಗಳು ಕಂಡುಬರುವುದಿಲ್ಲವಾಗಿ ಹಾಡುಗಳೆಂದೆ ನಿರ್ಧರಿಸಬೇಕಾಗಿದೆ. ಇವನ್ನೂ ಪರಮಾನುಭವಬೋಧೆಯಂತೆಯೆ ಹಾಡಿಕೊಳ್ಳುತ್ತಿದ್ದಿರಬೇಕು.

ಶಿವಶರಣಸಂಗೀತದ ಐತಿಹಾಸಿಕದೃಷ್ಟಿಯಿಂದ 'ಕೈವಲ್ಯಪದ್ಧತಿ'ಯು ಮಹತ್ತ್ವಪೂರ್ಣವಾಗಿದೆ. ಇದನ್ನು ನಿಜಗುಣನು ೫ ಸ್ಥಲಗಳಲ್ಲಿ ೧೭೫ ಹಾಡುಗಳಲ್ಲಿ (೨೮, ೨೨, ೨೬, ೪೯, ೫೦) ರಚಿಸಿದ್ದಾನೆ. ಇವುಗಳನ್ನು ಅವನು ಸ್ವರವಚನಗಳೆಂದು ಕರೆದಿರುವುದು ಗಮನಾರ್ಹವಾಗಿದೆ. ತನ್ನ ಇತರ ಹಾಡುಗಳಿಗಿಂತ ಇವನ್ನು ಭಿನ್ನನಾಮದಿಂದ ವ್ಯವಹರಿಸಿರುವುದು ಉಚಿತವಾಗಿದೆ. ಕೃತಿ, ಕೀರ್ತನೆ, ದಾಸರಪದ ಎಂದು ಮುಂತಾಗಿ ವ್ಯವಹೃತವಾಗಿರುವ ಹಾಡುಗಳಿಗೆ ಇವು ಪರಸ್ಪರವಾಗಿವೆ; ಪದ ಎಂದರೆ ಇವನ ಪರಿಭಾಷೆಯಲ್ಲಿ ಪದ್ಯ, ನುಡಿ; ವಚನವೆಂದರೆ ಬಸವಾದಿ ಶಿವಶರಣರು ರಚಿಸಿರುವ ವಚನವಲ್ಲ, ನಿಬದ್ಧಪ್ರಬಂಧ; ಸ್ವರವಚನವೆಂದರೆ ಪಲ್ಲವಿ ಮತ್ತು ಅನೇಕ ನುಡಿಗಳಿರುವ, ನಿರ್ದಿಷ್ಟರಾಗವುಳ್ಳ ಹಾಡು. ತಾಳಗಳನ್ನು ಅವನು ಯಾವ ಹಾಡಿಗೂ ಸೂಚಿಸಿಲ್ಲವಾದರೂ ತಾಳನ್ಯಾಸವು ಇಲ್ಲಿ ಸಂಭಾವ್ಯವೂ ಆಗಿದೆ, ರೂಢಿಯಲ್ಲಿಯೂ ಇದೆ; ತಾಳ್ಳಪಾಕಂ ಅನ್ನಮಾಚಾರ್ಯನ ಹಾಗೂ ಅವನ ವಂಶದವರ ಮತ್ತು ನಿಜಗುಣಾದಿ ಶಿವಶರಣರ ಹಾಡುಗಳಿಗೂ ಹರಿದಾಸರು ರಚಿಸಿರುವ ಹಾಡುಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ಹರಿದಾಸರು ತಮ್ಮ ಪ್ರತಿಯೊಂದು ಹಾಡಿಗೂ ತಾಳವನ್ನು ಸ್ಪಷ್ಟವಾಗಿ ನಿರ್ದೇಶಿಸಿರುವುದು, ಇತರರು ನಿರ್ದೇಶಿಸದೆ ಬಿಟ್ಟಿದ್ದು. ಹೀಗಾಗಿ ಹರಿದಾಸರ ರಚನೆಗಳ ಬಂಧದಲ್ಲಿ ಬಿಗಿಯೂ ಗೇಯತೆಯಲ್ಲಿ ನಿಷ್ಕೃಷ್ಟತೆಯೂ ಉಂಟಾದವು; ಎಂದೇ ಅವು ಹೆಚ್ಚು ಪ್ರಸಾರವನ್ನು ಪಡೆದವು.

ಕೈವಲ್ಯಪದ್ಧತಿಯು ಶಿವಶರಣರ ಇತರ ಸದ್ಯಶರಚನೆಗಳಿಗೆ ಮಾದರಿಯಾಯಿತು; ಇವರ ವಸ್ತು, ಎಂಗಡನೆ ಮತ್ತು ರಚನೆಗಳನ್ನು ಅನುಸರಿಸಿ ಸರ್ಪಭೂಷಣಶಿವಯೋಗಿ 'ಕೈವಲ್ಯಕಲ್ಪವಲ್ಲರಿ'ಯನ್ನು ರಚಿಸಿದ್ದಾನೆ; ಇವರ ಸ್ಫೂರ್ತಿಯಿಂದ ಬಾಲಲೀಲಾಮಹಾಂತಶಿವಯೋಗಿ 'ಕೈವಲ್ಯದರ್ಪಣ'ವನ್ನು ಬರೆದಿದ್ದಾನೆ. ಕನ್ನಡದಲ್ಲಿಯೂ ಕರ್ಣಾಟಕ ಸಂಗೀತದಲ್ಲಿಯೂ ನರಹರಿತೀರ್ಥನು ಈ ಬಗೆಯ ಗೇಯಪ್ರಬಂಧವನ್ನು ಹದಿನಾಲ್ಕನೆಯ ಶತಮಾನದಲ್ಲಿ ಉದ್ಘಾಟಿಸಿ, ಹದಿನೈದನೆಯ ಶತಮಾನದಲ್ಲಿ ಶ್ರೀಪಾದರಾಜ, ಹದಿನಾರನೆಯ ಶತಮಾನದಲ್ಲಿ ವ್ಯಾಸರಾಜ, ವಾದಿರಾಜ, ಪುರಂದರದಾಸ, ಕನಕದಾಸ, ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಮಹೀಪತಿರಾಯ, ಗುರುಪುರಂದರದಾಸ, ಅಭಿನವಪುರಂದರವಿಠಲ, ತಂದೆಪುರಂದರವಿಠಲ ಇತ್ಯಾದಿ, ಹದಿನೆಂಟನೆಯ ಶತಮಾನದಲ್ಲಿ ಪ್ರಸನ್ನವೆಂಕಟದಾಸ, ವಿಜಯದಾಸ, ಜಗನ್ನಾಥದಾಸ ಮುಂತಾದ ನೂರಾರು ಹರಿದಾಸರು ಅದನ್ನು ಹೆಚ್ಚಿಸಿ, ಹರಡಿ ನಿಲ್ಲಿಸಿದರು. ಇವರ ಲಕ್ಷಣವನ್ನು ತಾಳ್ಳಪಾಕಂ ಅನ್ನಮಾಚಾರ್ಯನು ಹೇಳಿ ಇದೇ ಬಗೆಯ ಪ್ರಬಂಧವನ್ನು ತೆಲುಗಿನಲ್ಲಿ ಅವನೂ ಅವನ ಮನೆತನದವರೂ ವಿಪುಲವಾಗಿ ರಚಿಸಿದರು. ಹರಿದಾಸರು ನಿರ್ಮಿಸಿ ನಿಲ್ಲಿಸಿದ ಈ ಹಾಡಿನ ಮಾದರಿಯು ನಿಜಗುಣಶಿವಯೋಗಿಗೆ ಮಾತೃಕೆಯೂ ಸ್ಫೂರ್ತಿಯೂ ಆಯಿತೆನ್ನುವುದರಲ್ಲಿ ಸಂದೇಹವಿಲ್ಲ.

ಕೈವಲ್ಯಪದ್ಧತಿಯಲ್ಲಿರುವ ಹಾಡುಗಳು ನಿಶ್ಚಿತವಾದ ಎರಕವನ್ನುಳ್ಳವು: ಹರಿದಾಸರ ಮತ್ತು ತ್ಯಾಗರಾಜಾದಿಗಳ ಸದ್ಯಶರಚನೆಗಳಲ್ಲಿ ಪಾದದೈರ್ಘ್ಯ (ಅಕ್ಷರ ಸಂಖ್ಯೆ), ಪಾದಸಂಖ್ಯೆ, ಪಾದವಿಂಗಡನೆ, ಚರಣಸಂಖ್ಯೆ, ಅನುಪಲ್ಲವಿಯ ಪ್ರಯುಕ್ತಿ, ಪಲ್ಲವಿ: (ಇದ್ದರೆ) ಅನುಪಲ್ಲವಿ: ಚರಣಗಳಲ್ಲಿರುವ ಪಾದಸಂಖ್ಯೆಗಳ ಅನುಪಾತ, ಅನುಪಲ್ಲವಿಯಿಲ್ಲದೆ ಆದರೆ ಅನುಪಲ್ಲವಿಯನ್ನಾಗಿ ಒಡೆದುಕೊಂಡು ಹಾಡಲು ಅನುಕೂಲಿಸುವ ಸೌಲಭ್ಯವುಳ್ಳ ಪಲ್ಲವಿ, ಪ್ರಾಸಸ್ಥಾನವೈವಿಧ್ಯ ಮುಂತಾದ ಪ್ರಯೋಗಶೀಲತೆ, ಪ್ರಯೋಗವೈವಿಧ್ಯಗಳು ಕಂಡುಬರುತ್ತವೆ. ನಿಜಗುಣ, ಸರ್ಪಭೂಷಣ, ಬಾಲಲೀಲಾ

ಮಹಾಂತ ಶಿವಯೋಗಿ ಮತ್ತು ಶಿಶುನಾಳ ಷರೀಫರ ಹಾಡುಗಳಲ್ಲಿ ಇವು ಅಲ್ಲಲ್ಲಿ ಕಂಡುಬರುತ್ತವೆ. ಹರಿದಾಸರ ಹಾಡುಗಳಲ್ಲಿರುವ ಈ ಪ್ರಯೋಗಗಳನ್ನು ಕುರಿತು ಅನ್ಯತ್ರ ಸಾಕಷ್ಟು ವಿಸ್ತಾರವಾಗಿ ವಿಶ್ಲೇಷಿಸಿದ್ದೇನೆ.

ಕೈವಲ್ಯಪದ್ಧತಿಯಲ್ಲಿರುವ ಎಲ್ಲ (೧೭೪) ಹಾಡುಗಳಲ್ಲಿಯೂ ಪಲ್ಲವಿ ಮತ್ತು ನುಡಿ ಎಂಬ ವಿಭಾಗಗಳಿವೆ. ಪಲ್ಲವಿಯಲ್ಲಿ ಎರಡು, ಮೂರು ಅಥವಾ ನಾಲ್ಕು ಪಙ್ಕ್ತಿಗಳಿರಬಹುದು ; ಈ ಪಙ್ಕ್ತಿಗಳು ಅತಿಹ್ರಸ್ವದಿಂದ ಅತಿದೀರ್ಘವೆನಿಸುವಷ್ಟು ಅಕ್ಷರ ಸಂಖ್ಯೆಯನ್ನು ಪಡೆದಿರಬಹುದು; ಪಲ್ಲವಿಯಲ್ಲಿರುವುದರ ಎರಡರಷ್ಟು ಪಙ್ಕ್ತಿಗಳು ಚರಣದಲ್ಲಿರಬೇಕೆಂಬುದು ನಿಯಮ. ಹರಿದಾಸರ ಮತ್ತಿತರ ವಾಗ್ಗೇಯಕಾರರ ರಚನೆಗಳಲ್ಲಿ ಇದು ಸಾಮಾನ್ಯವಾದ ಆದರೆ ಕಡ್ಡಾಯವಲ್ಲದ ನಿಯಮ. ಪಲ್ಲವಿಯ ಮೊದಲನೆಯ ಪಙ್ಕ್ತಿಯೊಡನೆ ಏಕವಾಕ್ಯತೆಯುಂಟಾಗುವಂತೆ ಚರಣದ ಅಂತ್ಯ ಪಙ್ಕ್ತಿಯನ್ನು ರಚಿಸುವುದು ಈ ಬಗೆಯ ಗೇಯಪ್ರಬಂಧದ ನಿಯಮ ; ಇದನ್ನು ಹದಿನೈದನೆಯ ಶತಮಾನದಲ್ಲಿ ಅನ್ನಮಾಚಾರ್ಯನೇ ಹೇಳಿದ್ದಾನೆ. ಇದು ಇಲ್ಲಿ ಸಾಮಾನ್ಯ ನಿಯಮ ; ಹರಿದಾಸರೂ ಬಹುತೇಕ ಇದನ್ನು ಪಾಲಿಸಿದ್ದಾರೆ, ಅಪರೂಪವಾಗಿ ಉಲ್ಲಂಘಿಸಿಯೂ ಇದ್ದಾರೆ. ಪಲ್ಲವಿಯಲ್ಲಿ ಮೂರು ಅಥವಾ ನಾಲ್ಕು ಪಙ್ಕ್ತಿಗಳಿದ್ದರೆ, ಅವುಗಳಲ್ಲಿ ಮೂರನೆಯದು ಒಮ್ಮೊಮ್ಮೆ ಅತಿಹ್ರಸ್ವವಾಗಿರುವುದು ನಿಜಗುಣನ ಕೆಲವು ಹಾಡುಗಳಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಪಲ್ಲವಿಯ ಪ್ರಥಮ ಪಙ್ಕ್ತಿಯ ಬದಲು ಈ ಅತಿಹ್ರಸ್ವಪಙ್ಕ್ತಿಯೆ ಪ್ರತಿಯೊಂದು ಚರಣದ ನಂತರವೂ ಪುನರಾವರ್ತನೆಯನ್ನು ಪಡೆದಿರುತ್ತದೆ. ದೀರ್ಘ + ಅತಿಹ್ರಸ್ವ + ದೀರ್ಘ + ಅತಿಹ್ರಸ್ವ ಎಂಬ ಬಂಧವುಳ್ಳ ಪಲ್ಲವಿಯಲ್ಲಿ ಎರಡನೆಯ ಮತ್ತು ನಾಲ್ಕನೆಯ ಪಙ್ಕ್ತಿಗಳು ಒಂದೇ 'ಮಾತು'ವನ್ನು ಒಳಗೊಂಡಿರುವ ಒಂದೆರಡು ನಿದರ್ಶನಗಳು ಕೈವಲ್ಯಪದ್ಧತಿಯಲ್ಲಿವೆ. ಇಂತಹ ಹಾಡುಗಳಲ್ಲಿ ಪಲ್ಲವಿಯನ್ನೆ ಎರಡು ಘಟಕಗಳನ್ನಾಗಿ ಒಡದುಕೊಂಡು ಅವುಗಳ ಅಂತ್ಯದಲ್ಲಿ ಪುನರಾವರ್ತಿತ 'ಮಾತು'ವನ್ನು ಜೋಡಿಸಿದೆಯೆಂದು ಭಾವಿಸಿಕೊಳ್ಳಬಹುದು. ಈ 'ಮಾತು'ವನ್ನು ಚರಣದಲ್ಲಿರುವ ನಾಲ್ಕು ಪಙ್ಕ್ತಿಗಳ ಪ್ರತಿಯೊಂದರ ನಂತರವೂ ಎತ್ತಿಕೊಂಡು ಹಾಡಬೇಕು. ಹರಿದಾಸರ ರಚನೆಗಳಲ್ಲಿಯೂ ಇಂತಹ ವಿರಳ ನಿದರ್ಶನಗಳಿವೆ.

ಇದಲ್ಲದೆ ಬೇರೆ ಕೆಲವು ಮಾದರಿಗಳೂ ಕೈವಲ್ಯಪದ್ಧತಿಯಲ್ಲಿ ದೊರೆಯುತ್ತವೆ. ಉದಾಹರಣೆಗೆ ಪಲ್ಲವಿಯಲ್ಲಿ ದೀರ್ಘತಮವಾದ ಎರಡು ಪಙ್ಕ್ತಿಗಳು, ಚರಣದಲ್ಲಿ ದೀರ್ಘವಾದ ನಾಲ್ಕು ಪಙ್ಕ್ತಿಗಳು ; ಪಲ್ಲವಿಯಲ್ಲಿ ದೀರ್ಘ, ಹ್ರಸ್ವ, ದೀರ್ಘ-ಚರಣದಲ್ಲಿ ದೀರ್ಘ, ಹ್ರಸ್ವ, ದೀರ್ಘ ಎಂಬ ರಚನೆಯ ಎರಡು ಘಟಕಗಳು ; ಪಲ್ಲವಿಯ ಪಙ್ಕ್ತಿಗಳಲ್ಲಿ ಹ್ರಸ್ವತಮ, ದೀರ್ಘ, ಹ್ರಸ್ವತಮ, ದೀರ್ಘ, ಹ್ರಸ್ವತಮ, ದೀರ್ಘ ಮತ್ತು ಹ್ರಸ್ವತಮ ಎಂಬ ರಚನೆ ; ಚರಣದಲ್ಲಿ ಹ್ರಸ್ವತಮ, ಐದು ದೀರ್ಘ, ಹ್ರಸ್ವತಮ, ದೀರ್ಘ, ಹ್ರಸ್ವತಮ ಎಂಬ ಪಙ್ಕ್ತಿ ರಚನ ; ಪಲ್ಲವಿಯಲ್ಲಿ ಎರಡು ದೀರ್ಘ ಪಙ್ಕ್ತಿಗಳು, ಚರಣದಲ್ಲಿ ಮೂರು ದೀರ್ಘ, ಒಂದು ಹ್ರಸ್ವತಮ, ದೀರ್ಘ, ಹ್ರಸ್ವತಮ, ದೀರ್ಘ, ಹ್ರಸ್ವ, ಹ್ರಸ್ವತಮ ಮತ್ತು ದೀರ್ಘ ಎಂಬ ಪಙ್ಕ್ತಿನಿರ್ಮಾಣ; ಪಲ್ಲವಿಯಲ್ಲಿ ನಾಲ್ಕು ಪಙ್ಕ್ತಿಗಳು, ಚರಣದಲ್ಲಿ ನಾಲ್ಕುನಾಲ್ಕು ಪಙ್ಕ್ತಿಗಳ ಎರಡು ಘಟಕಗಳು ; ಪಲ್ಲವಿಯಲ್ಲಿ ಹೆಚ್ಚುಕಡಿಮೆ ಸಮಾನವಾದ ನಾಲ್ಕು ಪಙ್ಕ್ತಿಗಳು, ಚರಣದಲ್ಲಿ ಸಮಾನವಾದ (ಆದರೆ ಪಲ್ಲವಿಗಿಂತ ಬೇರೆಯಾದ)ದೈರ್ಘ್ಯವುಳ್ಳ ಆರು ಪಙ್ಕ್ತಿಗಳು, ಇತ್ಯಾದಿ. ಸಮಾನದೈರ್ಘ್ಯವು ಪಲ್ಲವಿಯಲ್ಲಾಗಲಿ ಚರಣದಲ್ಲಾಗಲಿ ನಿಯಮವಲ್ಲ ; ಪಲ್ಲವಿ ಮತ್ತು ಚರಣದ ಪಙ್ಕ್ತಿಗಳು ಸಮಾನ ದೀರ್ಘವಾಗಿರಬೇಕೆಂಬುದೂ ನಿಯಮವಿಲ್ಲ ; ಎಲ್ಲ ಚರಣಗಳಲ್ಲಿಯೂ ಪಙ್ಕ್ತಿಯು ಒಂದೇ ಅಥವಾ ಹೆಚ್ಚುಕಡಿಮೆ ಒಂದೇ ಪ್ರಮಾಣದ್ದಾಗಿರುತ್ತದೆಂದೂ ನಿಯಮವಿಲ್ಲ.

ನಿಜಗುಣಶಿವಯೋಗಿಯ 'ಕಾಯವಿಡಿದಾತ್ಮರಾಶಿಗೆ ಪರತರಮುಕ್ತಿಗೆ' ಎಂಬ ಒಂದು ಹಾಡು (ಶಿವಕಾರುಣ್ಯಸ್ಥಲ, ೪) ಅಭ್ಯಾಸಾರ್ಹವಾಗಿದೆ. ಇದರ ಪಲ್ಲವಿಯಲ್ಲಿ ಎರಡು ಪಙ್ಕ್ತಿಗಳಿವೆ ; ಚರಣದಲ್ಲಿ ಕ್ರಮವಾಗಿ ನಾಲ್ಕು ಮತ್ತು ಐದು ಪಙ್ಕ್ತಿಗಳ ಎರಡು ಘಟಕಗಳಿವೆ. ಮೊದಲನೆಯದರ ಪಙ್ಕ್ತಿಗಳು ದೀರ್ಘತರ, ದೀರ್ಘ, ಹ್ರಸ್ವ, ಹ್ರಸ್ವತರ ಅಥವಾ ಹ್ರಸ್ವತಮ ಎಂಬ ಕಾಮಚಾರದ ರಚನೆಯಲ್ಲಿ ಬರುತ್ತವೆ. ಎರಡು ಘಟಕಗಳ ನಡುವೆ ಒಂದು ಸಂಸ್ಕೃತ ಶ್ಲೋಕವಿದೆ ; ಇದು ಮುಗಿದನಂತರ ಎರಡನೆಯ ಘಟಕದ ಮೊದಲನೆಯ ಮೂರು ಪಙ್ಕ್ತಿಗಳು 'ಎನಲಾಗಿ । ಯಿಂತೆನಲಾಗಿ । ಶ್ರುತಿಯೆನಲಾಗಿ ।' ಎಂಬ ನಿಯತಮಾತುವನ್ನು ಹೊಂದಿವೆ. ಇದರ ನಂತರ ಹೆಚ್ಚುಕಡಿಮೆ ಸಮಾನ ದೀರ್ಘವಾದ ಎರಡು ಪಙ್ಕ್ತಿಗಳಿವೆ. ಪ್ರತಿಯೊಂದು ಚರಣವೂ, ಎಂದರೆ ಎರಡನೆಯ ಘಟಕವೂ, '—ಎಂದೆನಲಾಗಿ' ಎಂಬ ನಿಯತಮಾತುವಿನಿಂದಲೆ ಮುಗಿಯುತ್ತದೆ. ಇಂತಹ ಐದು ಚರಣಗಳಿವೆ. ಇದರಲ್ಲಿ ಎರಡು ಘಟಕಗಳನ್ನು ತಾಳಸಹಿತವಾಗಿಯೂ ಮಧ್ಯದ ಶ್ಲೋಕವನ್ನು ತಾಳರಹಿತವಾಗಿಯೂ ಹಾಡಬೇಕೆಂಬುದು ಸ್ಪಷ್ಟವಾಗಿದೆ.

ಇದು ಪ್ರಾಚೀನ ಸಂಗೀತದ ಸಾಲಗಸೂಡಪ್ರಬಂಧಗಳಲ್ಲಿ ಏಕತಾಲೀ ಎಂಬುದರ ಚಂದ್ರಿಕಾ ಎಂಬ ಪ್ರಭೇದವನ್ನೂ ರಾಸಕ ಎಂಬುದರ ವಿನೋದ ಎಂಬ ಪ್ರಭೇದವನ್ನೂ ಹೋಲುತ್ತದೆ. ಹಾಡಿನ ಪಲ್ಲವಿಗಿಂತ ಮುಂಚೆಯೆ ಇರುತ್ತಿದ್ದ ಪ್ರಯೋಗವೆಂಬ ಸಾಕ್ಷರಾಲಪ್ತಿಯನ್ನು ಗೀತದೇಹದಿಂದ ಬೇರ್ಪಡಿಸಿ ಹರಿದಾಸರು ಉಗಾಭೋಗವೆಂಬ ಬೇರೆಯ ಪ್ರಬಂಧರೀತಿಯನ್ನೇ ಸೃಷ್ಟಿಸಿದರು ಎಂಬುದನ್ನು ಬೇರೆಡೆ ಹೇಳಿದ್ದೇನೆ. ಗೀತದೇಹದ ನಡುವೆ ಪ್ರಯೋಗವಿರುವ ಪ್ರಬಂಧರೀತಿಗೆ ನಿಜಗುಣನ ಈ ಹಾಡು ಅತ್ಯುತ್ತಮ ನಿದರ್ಶನ, ಅನನ್ಯೋಪಲಬ್ಧ. ಇಂತಹ ತಾಳರಹಿತ ಆಲಪ್ತಿಗೂ ಎರಡನೆಯ ಘಟಕದ ತಾಳನಿಬದ್ಧ ಆಲಪ್ತಿಗೂ ಮಧ್ಯದಲ್ಲಿ–'ಎನಲಾಗಿ। ಇಂತೆನಲಾಗಿ । ಶ್ರುತಿಯೆನಲಾಗಿ ।' ಎಂಬ ಮೂರು ಸೋಪಾನಗಳಲ್ಲಿ ತಾಳವನ್ನು ಪುನಃ ಪ್ರವೇಶಗೊಳಿಸುವುದು ಸುಂದರವಾದ ಗೇಯತಂತ್ರ. ನಿಜಗುಣನು ಮೇಲ್ಕಂಡ ರಾಸ, ಏಕತಾಲೀ ಎಂಬ ಸಾಲಗಸೂಡ ಪ್ರಬಂಧಗಳ ಪ್ರಭೇದಗಳಿಗಿಂತ ಜಾನಪದಸಂಗೀತ ಮಾದರಿಗಳಿಂದ ಇಂತಹ ರಚನಾಕೌಶಲಕ್ಕೆ ಸ್ಫೂರ್ತಿಪಡೆದಿರುವುದು ಹೆಚ್ಚು ಸಂಭಾವ್ಯವಾಗಿದೆ.

ಕೈವಲ್ಯಪದ್ಧತಿಯ ೧೭೪ ಹಾಡುಗಳಲ್ಲಿ ಎರಡು ಪಙ್ಕ್ತಿಗಳ ಪಲ್ಲವಿಯೂ ಎರಡೆರಡು ಪಙ್ಕ್ತಿಗಳನ್ನುಳ್ಳ ಎರಡು ಘಟಕಗಳ ಚರಣವೂ ಇರುವಂತಹವೆ ಹೆಚ್ಚು. ಹರಿದಾಸರ ರಚನೆಗಳಲ್ಲಿಯೂ ಹೀಗೆಯೆ ಇದೆ. ಒಂದೆ ಪಙ್ಕ್ತಿಯ ಪಲ್ಲವಿ, ಎರಡು ಪಙ್ಕ್ತಿಗಳ ಚರಣ; ಎರಡು ಪಙ್ಕ್ತಿಗಳ ಪಲ್ಲವಿ, ಎರಡು ಪಙ್ಕ್ತಿಗಳ ಚರಣ: ಮೂರು ಪಙ್ಕ್ತಿಗಳ ಪಲ್ಲವಿ, ಮೂರು ಪಙ್ಕ್ತಿಗಳ ಚರಣ—ಹೀಗೆ ಬಂಧವುಳ್ಳ ರಚನೆಗಳೂ ಕೈವಲ್ಯಪದ್ಧತಿಯಲ್ಲಿ ಅಪರೂಪವಾಗಿ ದೊರೆಯುತ್ತವೆ. ಪಲ್ಲವಿಯ ಎರಡು ದೀರ್ಘ ಪಙ್ಕ್ತಿಗಳ ನಡುವೆ ಒಂದು ಹ್ರಸ್ವತಮವಾದ ಮಾತು. ಇಂತಹದೆ ಎರಡು ಘಟಕಗಳಿಂದಾದ ಚರಣ; ಪಲ್ಲವಿಯಲ್ಲಿರುವ ಮೊದಲ ಪಙ್ಕ್ತಿಯನ್ನು ಬಿಟ್ಟು ಮಧ್ಯದ ಅಥವಾ ಕೊನೆಯ ಪಙ್ಕ್ತಿಯಲ್ಲಿರುವ ಹ್ರಸ್ವ ಅಥವಾ ಹ್ರಸ್ವತಮ ಮಾತುಖಂಡವನ್ನು ಪ್ರತಿಯೊಂದು ಚರಣದ ನಂತರವೂ ಎತ್ತಿಕೊಂಡು ಹಾಡುವ ಮಾದರಿಗಳೂ ಇಲ್ಲಿ ಕಂಡುಬರುತ್ತವೆ. ಶಿವಕಾರುಣ್ಯ ಮತ್ತು ನೀತಿಕ್ರಿಯಾಚರ್ಯ ಸ್ಥಲಗಳಲ್ಲಿ ಸುವ್ವಾಲಿವರ್ನ ಎಂಬ ಶೀರ್ಷಿಕೆಯನ್ನುಳ್ಳ ಎರಡು ಹಾಡುಗಳಿವೆ. ಮೊದಲನೆಯದರಲ್ಲಿ ಹ್ರಸ್ವ + ಹ್ರಸ್ವತಮ + ಹ್ರಸ್ವ + ಹ್ರಸ್ವ ಎಂಬ ರಚನೆಯುಳ್ಳ ಪಲ್ಲವಿಯೂ ನಾಲ್ಕು ಪಙ್ಕ್ತಿಗಳ ಚರಣವೂ ಇದ್ದರೆ ಎರಡನೆಯದರಲ್ಲಿ ಮೂರು ಹ್ರಸ್ವಪಙ್ಕ್ತಿಗಳನ್ನುಳ್ಳ ಪಲ್ಲವಿಯೂ ನಾಲ್ಕು ಹ್ರಸ್ವಪಙ್ಕ್ತಿಗಳನ್ನುಳ್ಳ ಚರಣವೂ ಇವೆ. ಹೀಗೆ ಇವುಗಳ ರಚನೆಯು ಪರಸ್ಪರವಾಗಿ ಭಿನ್ನವಾಗಿದೆ: ಆದುದರಿಂದ ಸುವ್ವಾಲಿ ವರ್ನ ಎಂಬ ಶೀರ್ಷಿಕೆಯನ್ನು ಸುವ್ವಾಲಿಯೆಂಬ ಜಾನಪದಗೀತದ ಧಾಟಿಯಲ್ಲಿ ಹಾಡಿಕೊಳ್ಳಬೇಕಾದ ವರ್ಣ ಎಂದರೆ ಗಾನಕ್ರಿಯೆ ಎಂದು ಅರ್ಥೈಸುವುದು ಸಮಂಜಸವಾಗುತ್ತದೆ. ಸಂಗೀತಶಾಸ್ತ್ರದಲ್ಲಿ ವರ್ಣವೆಂದರೆ ಗಾನಕ್ರಿಯೆ ಎಂಬ ಪಾರಿಭಾಷಿಕ ಅರ್ಥವೆ ಇದೆ. ಈ ಶೀರ್ಷಿಕೆಯನ್ನು ವಾಗ್ಗೇಯಕಾರನೆ ಕೊಟ್ಟನೋ, ಲೋಕರೂಢಿಯಿಂದ ಬಂದುದನ್ನು ಸಂಪಾದಕರು ಉಲ್ಲೇಖಿಸಿದರೋ, ಅಥವಾ ಅದು ಅವರ ಸ್ವಕಪೋಲಕಲ್ಪಿತವೋ ಎಂಬುದು ತಿಳಿಯದಾಗಿದೆ. 'ಕೈವಲ್ಯಕಲ್ಪವಲ್ಲರಿ'ಯಲ್ಲಿ ರಾಗನಿರ್ದೇಶನವಿರಬೇಕಾದೆಡೆಯಲ್ಲಿ ಸುವ್ವಾಲಿ ಎಂದಿರುವ ಎರಡು ರಚನೆಗಳಿವೆ (ಯೋಗಪ್ರತಿಪಾದನಸ್ಥಲ ೨೬, ಜ್ಞಾನಪ್ರತಿಪಾದನಸ್ಥಲ ೧೭). ಇವೆರಡರಲ್ಲಿಯೂ ನಾಲ್ಕು ಹ್ರಸ್ವ ಪಙ್ಕ್ತಿಗಳಿರುವ ಪಲ್ಲವಿ, ನಾಲ್ಕು ಹ್ರಸ್ವಪಙ್ಕ್ತಿಗಳು ಇರುವ ಚರಣ ಎಂಬ ಸಮಾನರಚನೆಯೇ ಇದ್ದು ನಿಜಗುಣನು ಶಿವಕಾರುಣ್ಯಸ್ಥಲದಲ್ಲಿ ರಚಿಸಿರುವ ಬಂಧವನ್ನು ಹೋಲುತ್ತವೆ. ಶಿವಶರಣರು ನಿರ್ಮಿಸಿರುವ ಹಾಡುಗಳಲ್ಲಿ ಸುವ್ವಾಲಿಗೆ ದೊರೆಯುವ ನಿದರ್ಶನಗಳು ಇವಿಷ್ಟೆ ಎಂದು ತೋರುತ್ತದೆ. ಸುವ್ವಾಲಿಯು ಕುಟ್ಟುವ ಹಾಡಷ್ಟೆ. ಇದನ್ನು ಅನ್ವರ್ಥವಾಗಿ ಒನಕೆವಾಡು ಎಂದು ಕರೆಯುವುದೂ ಉಂಟು. ಹರಿದಾಸರದೂ ಕೆಲವು ಸುವ್ವಾಲಿಗಳು ದೊರೆಯುತ್ತವೆ; ಅವುಗಳಲ್ಲಿಯೂ ಮೇಲ್ಕಂಡ ಬಂಧವೆ ಹೆಚ್ಚುಕಡಿಮೆ ಇದೆ. ಆದರೆ ಜಾನಪದ ಸಂಗೀತದಲ್ಲಿ ಸುವ್ವಿಯ ಹಾಡು, ಸುವ್ವಾಲಿ, ಒನಕೆವಾಡು ಎಂಬ ಹೆಸರುಗಳಲ್ಲಿ ರೂಢಿಸಿರುವ ಹಾಡುಗಳ ಮಾತುಬಂಧವು ಶಿವಶರಣರ ಮತ್ತು ಹರಿದಾಸರುಗಳ ಸುವ್ವಾಲಿಗಳಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಜಾನಪದ ಸುವ್ವಾಲಿಗಳಲ್ಲಿ ಹಾಡನ್ನು ಪಲ್ಲವಿ ಮತ್ತು ಚರಣಗಳಾಗಿ ಒಡೆಯದೆ ಸುವ್ವಿ, ಸುವ್ವಿಯೆನ್ನಿರೆ, ಸುಯ್ಯೋ, ಸುವ್ವಿಸುವ್ವಾಲಿ ಇತ್ಯಾದಿ ಶಬ್ದಗಳಲ್ಲಿ ಒಂದನ್ನು ಪ್ರತಿಯೊಂದು ಚರಣದ ನಂತರ ಹಾಡಲಾಗುತ್ತದೆ; ಹಾಡು ದ್ವಿಪದಿಗಳ ಅಥವಾ ಏಕಪದಿಗಳ ರೂಪದಲ್ಲಿರುವುದೆ ಹೆಚ್ಚು. ಶಿವಶರಣರ ಹಾಗೂ ಹರಿದಾಸರ ಸುವ್ವಾಲಿಗಳಲ್ಲಿ ಪಲ್ಲವಿ ಮತ್ತು ಚರಣ ಎಂಬ ವಿಂಗಡನೆಯು ಸ್ಪಷ್ಟವಾಗಿ ಕಂಡುಬರುತ್ತದೆ. ಮಹಿಪತಿರಾಯನ ಸುವ್ವಾಲಿಗಳಲ್ಲಿ ಸುವ್ವಿ ಎಂಬ ಶಬ್ದದ ಪುನರುಚ್ಚಾರವಿದ್ದರೂ ಉಳಿದ ಬಂಧವು ಜಾನಪದಗೀತದಂತಿಲ್ಲ. ನಿಜಗುಣ ಹಾಗೂ ಸರ್ಪಭೂಷಣರ 'ಸುವ್ವಾಲಿ ವರ್ನ'ಗಳಲ್ಲಿ ಸುವ್ವಿ ಶಬ್ದದ ಪ್ರಯೋಗವೂ ಇಲ್ಲ. ಆದುದರಿಂದಲೂ. ರಾಗನಿರ್ದೇಶನದ ಸ್ಥಾನ

ದಲ್ಲಿ ಸುವ್ವಾಲಿವರ್ಣ ಎಂಬ ಉಲ್ಲೇಖವಿರುವುದರಿಂದಲೂ ಸುವ್ವಾಲಿಯ ಧಾಟಿಯು (ಧಾತುವು) ಮಾತ್ರ ಇಲ್ಲಿ ವಿವಕ್ಷಿತವಾಗಿದೆಯೆಂದು ಇಟ್ಟುಕೊಳ್ಳಬೇಕಾಗುತ್ತದೆ.

ನಿಜಗುಣನು ಶಿವಕಾರುಣ್ಯಸ್ಥಲದಲ್ಲಿ (೨೫) ರಚಿಸಿರುವ 'ನೀನೊಲಿಯದ ನಿಮಿಷವೆ' ಎಂಬ ಒಂದು ಹಾಡನ್ನು ಚೌಪದಿವರ್ಣ ಎಂದು ರಾಗನಿರ್ದೇಶನಸ್ಥಾನದಲ್ಲಿ ಉಲ್ಲೇಖಿಸಲಾಗಿದೆ. ಇದರ ಮಾತುಬಂಧದಲ್ಲಿ ವಿಶೇಷವೇನೂ ಇಲ್ಲ—ಎರಡು ಪಙ್ಕ್ತಿಗಳ ಪಲ್ಲವಿ. ನಾಲ್ಕು ನಾಲ್ಕು ಪಙ್ಕ್ತಿಗಳಿರುವ ಮೂರು ಚರಣಗಳು ಇದರಲ್ಲಿವೆ. ಸರ್ಪಭೂಷಣನ 'ಗುರುಬೋಧೆಯಿಂದತಿಶಯವಾದುದುಂಟೆ' (ಯೋಗಪ್ರತಿಪಾದನ ಸ್ಥಲ ೧). 'ಶರವಿಡಿದ ಸರ್ವಪುರುಷರುಗಳು' (ಜ್ಞಾನಪ್ರತಿಪಾದನ ಸ್ಥಲ ೨) ಎಂಬ ಎರಡು ಹಾಡುಗಳನ್ನೂ ಚೌಪದಿಯೆಂದೆ ಕರೆದಿದೆ. ಇವುಗಳಲ್ಲಿಯೂ ಎರಡು ಪಙ್ಕ್ತಿಗಳ ಪಲ್ಲವಿ ಹಾಗೂ ನಾಲ್ಕು ಪಙ್ಕ್ತಿಗಳ ಚರಣ ಎಂಬ ವಿಭಾಗಗಳಿವೆ. ಮೊದಲನೆಯದರಲ್ಲಿ ಐದೂ ಎರಡನೆಯದರಲ್ಲಿ ಮೂರೂ ಚರಣಗಳಿವೆ. ಈ ಮೂರೂ ಚೌಪದಿಗಳ ಚರಣಗಳಲ್ಲಿ ಎರಡನೆಯ ಮತ್ತು ನಾಲ್ಕನೆಯ ಪಙ್ಕ್ತಿಗಳು. ಉಳಿದವಕ್ಕೆ ಸಾಪೇಕ್ಷವಾಗಿ. ಕಡಿಮೆ ದೈರ್ಘ್ಯವನ್ನು ಹೊಂದಿವೆ. ಸರ್ಪಭೂಷಣನ 'ಗುರುಬೋಧೆಯಿಂದ' ಎಂಬ ಚೌಪದಿಗೆ ಮಾತ್ರ 'ರಾಗ : ನಾಟಿ-ಚೌಪದಿ' ಎಂಬ ಶೀರ್ಷಿಕೆಯಿದೆ : ಉಳಿದವುಗಳಲ್ಲಿ ರಾಗನಿರ್ದೇಶವಿಲ್ಲದೆ ಅದರೆಡೆಯಲ್ಲಿ ಚೌಪದಿ ಎಂದಷ್ಟೆ ಇದೆ. ವರ್ಣ ಎಂಬ ಮಾತಿಲ್ಲ. (ಸರ್ಪಭೂಷಣನ ಸುವ್ವಾಲೆಗಳಿಗೂ ವರ್ಣ ಎಂಬ ಉಪಪದದ ಸಂಯೋಜನೆಯಿಲ್ಲ : ಈ ಶಬ್ದದ ಅರ್ಥಸಂದರ್ಭವನ್ನು ಅರಿಯದೆ ಸಂಪಾದಕರು ಅದನ್ನು ಬಿಟ್ಟುಬಿಟ್ಟಿದ್ದಾರೆಂದು ಊಹಿಸಬೇಕಾಗುತ್ತದೆ : ಆದುದರಿಂದ ಈ ಸಂಪಾದಕೀಯ ಲೋಪವನ್ನು ಇಲ್ಲಿ ಗಮನಿಬೇಕಾಗಿಲ್ಲ) ನಾಟಿರಾಗದಲ್ಲಿ ಚೌಪದಿಗಳನ್ನು ಹಾಡುತ್ತಿದ್ದರೋ. ಇದೊಂದನ್ನು ಮಾತ್ರ ನಾಟಿರಾಗದಲ್ಲಿ ಹಾಡಲಾಗುತ್ತಿತ್ತೋ. ಅಥವಾ ಆಕರ-ಹಸ್ತಪ್ರತಿಯ ವೈಚಿತ್ರ್ಯದಿಂದ ನಾಟಿರಾಗದ ನಿರ್ದೇಶವು ಇಲ್ಲಿದೆಯೋ ಎಂಬುದನ್ನು ಹೇಳುವಂತಿಲ್ಲ. ಇಲ್ಲಿಯೂ ವರ್ಣ ಎಂಬುದನ್ನು ಹಾಡುವ ಧಾಟಿ ಎಂದೆ ಅರ್ಥೈಸುವುದು ಸರಿಯೆಂದು ತೋರುತ್ತದೆ. ಬಾಲಲೀಲಾ ಮಹಾಂತನ 'ಕಾಡು ಕಾಡೆಲೆ ಮಾಯೆ' ಎಂಬ ಹಾಡಿಗೆ ರಾಗನಿರ್ದೇಶನಸ್ಥಾನದಲ್ಲಿರುವ 'ಶ್ರೀಪಾರಿಜಾತವರ್ಣ' ಎಂಬುದನ್ನೂ 'ಶ್ರೀಪಾರಿಜಾತ' ಎಂದು ಪೂರ್ವಪ್ರಸಿದ್ಧವಾಗಿರುವ ಹಾಡಿನ ಧಾಟಿಯಲ್ಲಿ ಹಾಡಿಕೊಳ್ಳಬೇಕು ಎಂದೆ ಇಟ್ಟುಕೊಳ್ಳುವುದು ಉಚಿತವಾಗಿದೆ.

ಕೈವಲ್ಯಪದ್ಧತಿಯ ಹಾಡುಗಳಲ್ಲಿ ಚರಣಗಳು ಮೂರು ಅಥವಾ ಐದು ಇರುವುದೆ ನಿಯಮ. ಅದರ ಶಿವಯೋಗಸ್ಥಲದಲ್ಲಿರುವ 'ಭಾವಲಿಂಗವನೆ ಬಿಡದೆ' ಎಂಬ ಒಂಬತ್ತು ನುಡಿಗಳ. 'ಅವ ಮತದವ' ಎಂಬ ಏಳು ನುಡಿಗಳ ಹಾಗೂ ಜ್ಞಾನಯೋಗಪ್ರತಿಪಾದನಸ್ಥಲದಲ್ಲಿರುವ 'ಜೀವನಿಗವಸ್ಥೆಗಳೇಳವನು ಪರಿಕಿಸಿ' ಎಂಬ ಏಳು ನುಡಿಗಳ, 'ಸುಖಿಪೆ ನಿಜಸುಖಿಪ' ಎಂಬ ಒಂಬತ್ತು ನುಡಿಗಳ ಹಾಡುಗಳು ಮಾತ್ರ ಈ ನಿಯಮಕ್ಕೆ ಅಪವಾದರೂಪದಲ್ಲಿವೆ. ಸಮಸಂಖ್ಯೆಯ ಚರಣಗಳಿರುವ ಹಾಡುಗಳು ಇಡೀ ಗ್ರಂಥದಲ್ಲಿಲ್ಲ.

ಕೈವಲ್ಯಪದ್ಧತಿಯಲ್ಲಿ ಹಾಡುಗಳಿಗೆ ನಿರ್ದೇಶಿಸಲಾಗಿರುವ ರಾಗಗಳನ್ನು ಹೀಗೆ ಪಟ್ಟಿಮಾಡಬಹುದು : (ಕಂಸಗಳಲ್ಲಿರುವ ಸಂಖ್ಯೆಯು ಆಯಾ ರಾಗದಲ್ಲಿರುವ ಹಾಡುಗಳ ಸಂಖ್ಯೆಯನ್ನು ಸೂಚಿಸುತ್ತದೆ. ಆಹರಿ (೫), ಕಲ್ಯಾಣಿ (೧). ಕಾಂಭೋಜಿ (೧೧). ಕುರಂಜಿ (೧), ಕುಂತ(ಲ)ವರಾಳಿ (೧), ಚೌಪದಿ ವರ್ಣ (೧), ತೆನುಗುಕಾಂಭೋಜಿ (೯), ತೋಡಿ (೩). ದೇಶೀ (೧೨). ಧನ್ಯಾಸಿ (೭), ನಾಟಿ (೨). ನಾದರಾಮಕ್ರಿಯೆ (೨೪), ಪಹಡಿ (೮). ಪಾರಶಿ (ಫಾರಶಿ. ಫಾರಸಿ. ಫಾರ್ಸಿ) (೪), ಬೌಳಿ (ಭವುಳಿ, ಭೌಳಿ). (೫), ಭೂಪಾಳಿ (೨), ಭೈರವಿ (೭), ಮಧುಮಾಧವಿ (೬). ಮಧ್ಯಮಾವತಿ (೧). ಮಾಳವ (೩), ಲಲಿತೆ (೪), ವಡ್ಡಿಧನ್ಯಾಸಿ (೪), ವಸಂತ (೧), ಶಂಕರಾಭರಣ (೧೧), ಶ್ರೀ (೫), ಸಾರಂಗ (೧). ಸಾವಂತ (ಸಾಮಂತ) (೨), ಸಾವೇರಿ (೧). ಸಾಳಂಗ (೪). ಸಾಳಂಗನಾಟಿ (೧). ಸುವ್ವಾಲಿವರ್ಣ (೨). ಸೌರಾಷ್ಟ್ರ (೨೨) ಮತ್ತು ಹಿಂದೋಳವಸಂತ (೧).

ಈ ಹೆಸರುಗಳಲ್ಲಿ ಕೆಲವು ಪಾಠಾಂತರಗಳನ್ನು ಸೂಚಿಸಬಹುದು. ನಾದರಾಮಕ್ರಿಯೆಗೆ ನಾದನಾಮಕ್ರಿಯೆ ಎಂಬ ಇಂದಿನ ಲೋಕರೂಢಿಯ ಹೆಸರೂ ನಾಥರಾಮಕ್ರೀ ಎಂಬ ಶಾಸ್ತ್ರಗ್ರಂಥೋಕ್ತನಾಮವೂ ಇವೆ. ಧನ್ಯಾಸಿಗೆ ಧನ್ಯಾಸೀ. ಧನಾಸೀ. ಧನಾಶ್ರೀ ಮುಂತಾದ ನಾಮಾಂತರಗಳು ಸಂಗೀತಶಾಸ್ತ್ರದಲ್ಲಿವೆ. ಕುಂತವರಾಳಿಯ ಸರಿಯಾದ ಹೆಸರು ಕುಂತಲವರಾಲೀ (-ವರಾಟೀ) : ಪಹಡಿಯನ್ನು ಹಿಂದೂಸ್ಥಾನೀ ಸಂಗೀತದಲ್ಲಿ ಪಹಾಡೀ ಎಂದೂ ಕರ್ಣಾಟಕ ಸಂಗೀತದಲ್ಲಿ ಪಾಡಿ ಎಂದೂ ಕರೆಯಲಾಗುತ್ತದೆ. ಫಾರಸೀ (ಫಾರಶೀ ಇತ್ಯಾದಿ)ಯನ್ನು ಫರ್ಜ್ ಎಂಬ ಹೆಸರಿನಿಂದ ವ್ಯವಹರಿಸಲಾಗುತ್ತಿದೆ ; ಇದು ಪರ್ಶಿಯಾ ದೇಶದ ಸಂಗೀತದ ಪ್ರಭಾವದಿಂದ ಭಾರತೀಯ ಸಂಗೀತಕ್ಕೆ ಬಂದುದು ;

ಎಂದೇ ಈ ಹೆಸರಿದೆ. ವಡ್ಡಿಧನ್ಯಾಸಿಯು ಸರ್ಪಭೂಷಣನ ಹಾಡಿನಲ್ಲಿ ಒಡ್ಡಿಧನ್ಯಾಸಿಯಾಗಿದೆ. ಸಾವಂತದ ಸರಿಯಾದ ಹೆಸರು ಸಾಮಂತ. ನಾಟಿಗೆ ನಾಟ, ನಟ್ಟಾ ಎಂಬುದು ಪ್ರಾಚೀನಶಾಸ್ತ್ರೀಯನಾಮ.

ಈ ರಾಗಗಳಲ್ಲಿ ಬಹುಪಾಲು ಮೇಲೆ ವಿವೇಚಿಸಿರುವ ಬತ್ತೀಸರಾಗಗಳಲ್ಲಿ ಅಂತರ್ಗತವಾಗಿವೆಯೆಂಬುದು ಗಮನಾರ್ಹವಾಗಿದೆ. ಈ ರಾಗಗಳನ್ನೆಲ್ಲ ನಿಜಗುಣನೆ ತನ್ನ ಹಾಡುಗಳಿಗೆ ಅನ್ವಯಿಸಿ ಧಾತುವನ್ನು ರಚಿಸಿದನೆ. ಕೆಲವನ್ನಾದರೂ ನಂತರದ ಹಾಡುಗಾರರು ಅನ್ವಯಿಸಿದರೆ ಎಂಬುದು ಅಭ್ಯಾಸಾರ್ಹವಾಗಿದೆ. ಮೇಲೆ ಪಟ್ಟಿ ಮಾಡಿರುವ ಮೂವತ್ತುಮೂರು ರಾಗಗಳಲ್ಲಿ ಸುಲ್ತಾಲಿವರ್ಣ ಮತ್ತು ಚೌಪದಿವರ್ಣಗಳನ್ನು ಇಂದು ನಿಶ್ಚಯಿಸಬಹುದಾದ ಲಕ್ಷಣವಿಲ್ಲದ ಅಥವಾ ನಿಕರವಾದ ವ್ಯಕ್ತಿತ್ವವಿಲ್ಲದ ರಾಗಗಳೆಂದೋ ಧಾಟಿಗಳೆಂದೋ ಬಿಟ್ಟುಬಿಟ್ಟರೆ, ಉಳಿದವುಗಳಲ್ಲಿ ತೆನುಗು ಕಾಂಭೋದಿ, ಫಾರಸಿ, ವಡ್ಡಿಧನ್ಯಾಸಿಗಳನ್ನುಳಿದ ಇತರ ರಾಗಗಳನ್ನು ವಿವೇಕಚಿಂತಾಮಣಿಯಲ್ಲಿ ಹೇಳಿಯೆ ಇದೆ. ಮಧುಮಾಧವಿಯು ಮಧ್ಯಮಾವತಿಯೆಂಬ ಹೆಸರಿನಲ್ಲಿ ಪರಿಣಮಿಸಿತೆನ್ನಲು ಕಾರಣಗಳಿದ್ದರೂ ಇವೆರಡು ಹೆಸರುಗಳೂ ಕೈವಲ್ಯಪದ್ಧತಿ ಮತ್ತು ವಿವೇಕಚಿಂತಾಮಣಿಗಳೆರಡರಲ್ಲೂ ಕಂಡುಬರುವುದು ಚಿತ್ರವಾಗಿದೆ. ಹಿಂದೋಳವಸಂತರಾಗಕ್ಕೆ ಮಿಶ್ರವೆಂದು ವಿವೇಕಚಿಂತಾಮಣಿಯಲ್ಲಿ ಹೇಳಿರುವುದರಿಂದ ಹಿಂದೋಳವಸಂತವೆಂಬ ಹೆಸರನ್ನು ಅಲ್ಲಿ ವಿವಕ್ಷಿಸಿದೆಯೆಂದು ಬೇಕಾದರೆ ಇಟ್ಟುಕೊಳ್ಳಬಹುದು. ಇವೆಲ್ಲ ರಾಗಗಳ ಲಕ್ಷಣಗಳು ಇದೇ ಕಾಲದಲ್ಲಿ ರಾಮಾಮಾತ್ಯನು ರಚಿಸಿರುವ 'ಸ್ವರಮೇಲಕಲಾನಿಧಿ'ಯಲ್ಲಿಯೂ ಪೋಲೂರಿಗೋವಿಂದಕವಿಯು ರಚಿಸಿರುವ ರಾಗತಾಳಚಿಂತಾಮಣಿಯಲ್ಲಿಯೂ ಪುಂಡರೀಕವಿಠಲನು ರಚಿಸಿರುವ 'ರಾಗಚಂದ್ರೋದಯ', 'ರಾಗಮಾಲಾ', 'ರಾಗಮಂಜರೀ' ಮತ್ತು 'ನರ್ತನನಿರ್ಣಯ'ಗಳಲ್ಲಿಯೂ ದೊರೆಯುತ್ತವೆ. ಆದುದರಿಂದ ಅವುಗಳ ಸ್ವರೂಪವನ್ನು ಸುಲಭವಾಗಿ ಪುನಾರಚಿಸಿಕೊಳ್ಳಬಹುದು. ಈ ರಾಗಗಳ ಸಮಗ್ರ ಇತಿಹಾಸವನ್ನು ವೀಣಾಲಕ್ಷಣವಿಮರ್ಶೆ ಮತ್ತು ಕರ್ಣಾಟಕಸಂಗೀತವಾಹಿನಿ ಎಂಬ ನನ್ನ ಎರಡು ಗ್ರಂಥಗಳಲ್ಲಿ ವಿವೇಚಿಸಿರುವುದರಿಂದ ಇಲ್ಲಿ ಪುನರುಕ್ತಿಯ ಆವಶ್ಯಕತೆಯಿಲ್ಲ. ವಡ್ಡಿಧನ್ಯಾಸಿ ಅಥವಾ ಒಡ್ಡಿಧನ್ಯಾಸಿಯ ಲಕ್ಷಣವು ದೊರೆಯುವುದಿಲ್ಲ. ದಕ್ಷಿಣ ಭಾರತದ ಶಾಸ್ತ್ರೀಯ ಅಥವಾ ಜಾನಪದ ಸಂಗೀತದ ರಚನೆಗಳಲ್ಲಿ ಈ ರಾಗದ ಹೆಸರು ಬೇರೆಡೆಯೆಲ್ಲಿಯೂ ದೊರೆಯದಿರುವುದರಿಂದ ಇದು ಕರ್ಣಾಟಕದಲ್ಲಿ ಮಾತ್ರ, ಅದೂ ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಹದಿನಾರರಿಂದ ಹದಿನೆಂಟನೆಯ ಶತಮಾನಗಳವರೆಗೆ ರೂಢಿಯಲ್ಲಿದ್ದ ಒಂದು 'ತುಂಡು' (ಧಾಟಿ ಅಥವಾ ಮಟ್ಟಿನಂತಹ) ರಾಗವಾಗಿತ್ತೆಂದು ಅನುಮಾನಿಸಬಹುದು. ತೆನುಗುಕಾಂಭೋಜಿಗೆ ತೆಲುಗುಕಾಂಭೋಜಿಯೆಂದೂ ಹೆಸರು. ಇವರ ಹೆಸರು ಸಂಗೀತಶಾಸ್ತ್ರಗಳಲ್ಲಿ ಕಂಡುಬರದಿದ್ದರೂ ಅದನ್ನು ತೆಲುಗು (ಆಂಧ್ರ)ದೇಶದ ಚೆಂಚು ಎಂಬ ಆದಿವಾಸಿಗಳಲ್ಲಿ ಪ್ರಚಲಿತವಾಗಿರುವ ಚೆಂಚುಕಾಂಭೋಜಿ ಎಂಬ, ಇಪ್ಪತ್ತೆಂಟನೆಯ ಹರಿಕಾಂಭೋಜಿಮೇಳದಲ್ಲಿ ಜನ್ಯವಾಗಿ ಸ್ವೀಕರಿಸಿ ತ್ಯಾಗರಾಜನು ಕೃತಿರಚನೆ ಮಾಡಿರುವ ರಾಗಕ್ಕೆ ಸಮೀಕರಿಸಿಕೊಳ್ಳುವುದು ಸಮಂಜಸವೆನ್ನಿಸುತ್ತದೆ.

ನಿಜಗುಣಶಿವಯೋಗಿಯ ಕೆಲವು ಹಾಡುಗಳಲ್ಲಿ ಸಂಗೀತವಿಷಯಗಳ ಉಲ್ಲೇಖವಿದೆ. ಅವುಗಳನ್ನಿಲ್ಲಿ ಉದ್ಧರಿಸಬಹುದು : ಮಾಳವರಾಗದ 'ಯೋಗಿ ನಿಜಾನಂದದೊಳು ನುಡಿಸುವ ವೀಣೆ' ಎಂಬ ಹಾಡು ಹೀಗಿದೆ (ಕೈವಲ್ಯಪದ್ಧತಿ. ಯೋಗಪ್ರತಿಪಾದನಸ್ಥಲ. ೧೧) :

ಯೋಗಿ ನಿಜಾನಂದದೊಳು ನುಡಿಸುವ ವೀಣೆ ।
ರಾಗರಸದ ತರಂಗಿಣಿ ನೋಡು ರಮಣಿ ॥ ಪ ॥

ತನುವೆಂಬ ಹೊಳಬುಗೆರಡು ದಿಟ್ಟಿಯೆಂಬ ಕಾಯು ।
ನನುವರಿದಲುಗದಂತಿರೆ ಕೀಲಿಸಿ ।
ಸನುಮತವಾದ ಷೋಡಶಾಧಾರವೆಂಬ ರಮ್ಯ ।
ಮೆನಿಸುವ ಮೆಟ್ಟುಗಳ ನೆಲೆಯನಾರೈದು ನೋಡಿ ॥ ೧ ॥

ಶಿಳಿದೇಳು ಮುಖ್ಯನಾಡಿಯೆಂಬ ತಂತಿಗಳನು ೨ ।
ಪರ್ಣಲಮತಿ ಮನವನುವಿಂದ್ರಿಯಂಗಳ ॥
ಕುಲವೆಂಬ ತಿರುಪಗಂಭದೊಳು ಬಂಧಿಸಿ ಮೂಲ ।
ದೊಳಗಣ ಶಾರೆಯೆಂಬ ಕಳೆಯ ಶ್ರುತಿಯನೆತ್ತಿ ॥ ॥ ೨ ॥

ವರಶಂಕರಾಭರಣವನು ಮೇಳೈಸಿ ಯೋಗ ।
ಕರಣವೆಂಬಂಗುಲಿಯನಿಟ್ಟು ಬಾಜಿಸಿ ॥
ವರನಾದವೆಂಬ ಗೀತವನು ಗುರುಶಂಭುಲಿಂಗ ।
ವರಿದೆಂದು ಮೆಚ್ಚಿ ಮುಕ್ತಿಪದವೀಯೆ ಕೇಳಿಸುವ ॥ ೨ ॥

ಇಲ್ಲಿ ಪೊಳಹು = ವೀಣೆಯ ಶರೀರ. ಕಾಯಿ = ಸೋರೆಕಾಯಿ, ಷೋಡಶಾಧಾರವೆಂಬ ಮೆಟ್ಟುಗಳು = ವೀಣೆಯಲ್ಲಿ (ಅಂದು) ಇರುತ್ತಿದ್ದ ಹದಿನಾರು ಮೆಟ್ಟುಗಳು, ಏಳು ತಂತಿಗಳು = ದಂಡಿಯಮೇಲಿರುತ್ತಿದ್ದ ನಾಲ್ಕು ತಂತಿಗಳು ಮತ್ತು ಪಕ್ಕದಲ್ಲಿರುತ್ತಿದ್ದ ಮೂರು 'ಟೇಪಿ' ಎಂಬ ತಂತಿಗಳು. ಕುಲ = ಮೇರುವಿನ ಹಿಂದೆ ಇರುವ ದಂಡಿಯ ಭಾಗದಲ್ಲಿ ಬಿರಡೆಗಳನ್ನು ಕೀಲಿಸಲು ಮಾಡಿರುವ ರಂಧ್ರ (ಇಲ್ಲಿ ಮೂಲಾಧಾರಚಕ್ರವೆಂಬ ಶ್ಲೇಷೆಯಿದೆ). ತಿರುಪುಗಂಭ=ಬಿರಡೆ, ಕಲೆ = ಜೀವಾಳ. ಶಂಕರಾಭರಣ = ಈ ಹೆಸರಿನ ರಾಗ (ಕುಂಡಲಿನೀಶಕ್ತಿಯನ್ನು ಕುರಿತ ಶ್ಲೇಷೆ ಇಲ್ಲಿದೆ), ಅಂಗುಲಿ = ತಂತಿಯನ್ನು ಮಿಡಿಯಲು ತೋರು (ಮತ್ತು ಮಧ್ಯದ) ಬೆರಳಲ್ಲಿ ತೊಟ್ಟ ತಂತಿಯ 'ನಖಿ' ಎಂಬ ಅರ್ಥಗಳನ್ನಿಟ್ಟು ಕೊಂಡರೆ ಈ ಹಾಡಿನ ಭಾವವು ಸ್ಪಷ್ಟವಾಗುತ್ತದೆ.

'ಕೋಗಿಲೆ ದನಿದೋರು' ಎಂಬ ಹಾಡಿನಲ್ಲಿ (ಅದೇ ಸ್ಥಲ, ೧೦), ಯೋಗಿಯು ಬಿಂದುವನ್ನು ಸಾಧಿಸುವ ಸಮಯದಲ್ಲಿ ಅವನಲ್ಲಿ ಸ್ಫುರಿಸುವ ದಶವಿಧನಾದಗಳನ್ನು ಅದರ ಎರಡನೆಯ ನುಡಿಯಲ್ಲಿ ಹೀಗೆ ಹೇಳಿದೆ:

ಶರಧಿಯ ಮೊರಹಿನಂತೆ ಘನಘೋಷದಂತೆ ನಿ ।
ರ್ಝರರವದಂತೆ ದುಂದುಭಿಸ್ವನದಂತೆ । ಕೋಗಿಲೆ ॥
ವರನಾದದಂತೆ ಘಂಟಾನಿನದದಂತೆ ಬಂ ।
ಧುರದ ಶಂಖಧ್ವಾನಮತೆ । ಕೋಗಿಲೆ ॥

ಮುರಜೆಯಸ್ವನದಂತೆ ವಾಸದ ಧ್ವನಿಯಂತೆ ।
ಮೊರೆವಳಿಯ ಝೇಂಕಾರದಂತೆ । ಕೋಗಿಲೆ ॥
ನೆರೆದ ಕಿಂಕಿಣಿಯ ಮೇಲುಲಿಯಂತೆ ವೀಣೆಯಿಂ ।
ಚರದಂತೆ ಪೊಸಪರಿಗಳಿಂದ । ಕೋಗಿಲೆ ॥

ಈ ದಶನಾದಗಳನ್ನು ಪರಮಾನುಭವಬೋಧೆಯ 'ಪವಣತೆಮಿಗೆ ವೇದಶಿರವನು' ಎಂಬ ಹಾಡಿನ ಎಂಟನೆಯ ಮತ್ತು ಒಂಬತ್ತನೆಯ ಚರಣಗಳಲ್ಲಿ (ನಿಯಮಾಂಗಪಂಚಕನಿರೂಪಣೆ. ಸೂತ್ರ ೬. ಪದ ೪೭) ಹೆಸರಿಸಿದೆ:

ವೇದವನಾಹತ ನಾದಾದಿಯದರಿಂದೆ ।
ನಾದದ ಬಹುವಿಧಾಭ್ಯಾಸವ ॥
ಆದರದಿಂದೆ ರಚಿಸುತಿರಲದು ತಾನೆ ।
ವೇದಸ್ವಾಧ್ಯಾಯವೆನಿಸುತಿರ್ಕು ॥ ೮ ॥

ಶರಧಿ ನಿರ್ಜರ ಭೇರಿ ಮೇಘದ ಬಹುರವ ।
ಮುರಜ ಕಹಳೆ ಶಂಖ ಘಂಟಾದಿ ॥
ವರನಾದ ವಾಸ ಕಿಂಕಿಣಿ ವೀಣೆ ಭ್ರಮರಾದಿ ।
ಸ್ವರವನಾಲಿಪುದೆ ಸ್ವಾಧ್ಯಾಯವು ॥ ೯ ॥

ಜೀವನ ಅನುಭಾವವು ಬುದ್ಧೀಂದ್ರಿಯಾದಿ ವಿಷಯಗಳಲ್ಲಿ ಹೇಗೆ ವ್ಯಾಪಿಸಿರುತ್ತದೆಂಬುದನ್ನು ನಿಜಗುಣನು 'ಆವ ಪುಣ್ಯದ ಫಲವಿದೆಂದು' ಎಂಬ ಹಾಡಿನಲ್ಲಿ (ಕೈವಲ್ಯಪದ್ಧತಿ. ಜ್ಞಾನಪ್ರತಿಪಾದನಸ್ಥಲ. ೧೮) ಈ ಉಪಮೆಯಿಂದ ಹೇಳಿದ್ದಾನೆ:

ಅರಸು ನರ್ತಕಿ ತಾಳಧಾರಿ ಸೂರಿಗಳನಾ ।
ದರಿಸಿ ಬೆಳಗುವ ರಂಗದೆಡೆಯ ಸೊಡರಂತೆ ॥

ನೆರೆದಹವು ಬುದ್ಧೀಂದ್ರಿಯಾದಿ ವಿಷಯಂಗಳಾ ।
ಚರಣಸಾಕ್ಷಿಕ ಚಿತ್ತು ತಾನೆಂಬ ಸುಖವ ॥

## ೩ (ಅ) ಮುಪ್ಪಿನಷಡಕ್ಷರಿ

ಮುಪ್ಪಿನಷಡಕ್ಷರಿಯು ನಿಜಗುಣನ ಸಮಕಾಲೀನ ಶಿವಯೋಗಿ. ಅವನ ರಚನೆಗಳು 'ಸುಬೋಧಸಾರ' ಎಂಬ ಸಂಗ್ರಹದಲ್ಲಿ ಪ್ರಕಟವಾಗಿವೆ. ಇದರಲ್ಲಿರುವ ಒಟ್ಟು ಎಪ್ಪತ್ತಾರು ರಚನೆಗಳಲ್ಲಿ ಈಗ ಪರಿಶೀಲಿಸಲಾಗುತ್ತಿರುವ ಗೇಯ ಪ್ರಬಂಧ ಜಾತಿಗೆ ಸೇರಬಹುದಾದವು ಹನ್ನೊಂದು ಮಾತ್ರ : ಎರಡು ಕಂದಗಳ ಮಾಲಿಕೆಗಳನ್ನು ಬಿಟ್ಟರೆ ಉಳಿದ ಅರವತ್ತಮೂರು. ಷಟ್ಪದೀಪ್ರಭೇದಗಳೆ ಆಗಿವೆ. ಇವು ಪ್ರಕೃತವಿವೇಚನೆಯ ವ್ಯಾಪ್ತಿಯನ್ನು ಮೀರಿವೆ.

ನಿಜಗುಣಶಿವಯೋಗಿಯ ಸಮಕಾಲೀನನೆಂಬ ಕಾರಣದಿಂದ ಮುಪ್ಪಿನಷಡಕ್ಷರಿಯ ರಚನೆಗಳು ಸಂಗೀತದೃಷ್ಟಿಯಲ್ಲಿ ಸ್ವಾರಸ್ಯಪೂರ್ಣ ಅಭ್ಯಾಸಕ್ಕೆ ಸಾಮಗ್ರಿಯನ್ನೊದಗಿಸಬಲ್ಲವು. ಆದರೆ ಸುಬೋಧಸಾರದ ಸಂಪಾದನೆಯು ಈ ನಿಟ್ಟಿನಲ್ಲಿ ನಿರಾಶಾದಾಯಕವಾಗಿದೆ ; ವಿಶ್ವಸನೀಯವಲ್ಲದಾಗಿದೆ. ಅದರಲ್ಲಿರುವ ರಾಗತಾಳಾನ್ವಯಗಳು ವಿಶ್ವಾಸಾನರ್ಹ ಹಸ್ತಪ್ರತಿ ಸಾಮಗ್ರಿಯನ್ನು ಅವಲಂಬಿಸಿರುವುದು ಸ್ಪಷ್ಟವಾಗಿದೆ. ಏಕೆಂದರೆ ರಾಗಾನ್ವಯವು ಷಟ್ಪದಿಗಳಿಗೆ ಐಚ್ಛಿಕ : ಸಂಗ್ರಹದಲ್ಲಿರುವ ಎಂಟು ಭಾಮಿನೀಷಟ್ಪದಿಗಳಿಗೆ ರಾಗಾನ್ವಯವನ್ನು ಮಾಡಿಯೂ ಇಲ್ಲ. ಎರಡು ಕಂದಮಾಲಿಕೆಗಳಿಗೂ ಅಷ್ಟೆ. ಇವುಗಳೂ ಸೇರಿದಂತೆ ಹದಿನೇಳು ರಚನೆಗಳಿಗೆ ಸುಬೋಧಸಾರದಲ್ಲಿ ರಾಗತಾಳಗಳ ಅನ್ವಯವಿಲ್ಲ. ಷಟ್ಪದಿಗಳಿಗೆ ತಾಳಾನ್ವಯವು ಅನುಪಪನ್ನವೂ ಅಸಂಬದ್ಧವೂ ಹೌದು. ಆದರೂ ಮೇಲೆ ಹೇಳಿದ ಅಪವಾದಗಳನ್ನು ಬಿಟ್ಟು ಉಳಿದವಕ್ಕೆಲ್ಲ ತಾಳಗಳನ್ನು ನಿರ್ದೇಶಿಸಿದೆ. ಅವಕ್ಕೆಲ್ಲ ಝಂಪೆ ಅಥವಾ ರೂಪಕತಾಳಗಳನ್ನು ನಿಯೋಜಿಸಲೆಳಸಿರುವುದು ಸಮರ್ಥನೀಯವ ಅಲ್ಲ. ಅಷ್ಟೆ ಅಲ್ಲದೆ ಹರಿದಾಸರ ಪದಗಳನ್ನೂ ಕೈವಲ್ಯಪದ್ಧತಿಯ 'ಸ್ವರವಚನ'ಗಳನ್ನೂ ಸಂಪೂರ್ಣವಾಗಿ ಹೋಲುವ ಹನ್ನೊಂದು ರಚನೆಗಳಿಗೆ ತಾಳನಿರ್ದೇಶವು ಅಗತ್ಯ : ಕೈವಲ್ಯಪದ್ಧತಿಯ ಹಾಗೆಯೆ ಇಲ್ಲಿಯೂ ತಾಳನಿರ್ದೇಶವು ಆಕರಸಾಮಗ್ರಿಯಲ್ಲಿ ಇಲ್ಲದಿರಬಹುದು ; ಷಟ್ಪದಿಗಳಿಗೇ ತಾಳನಿಯೋಜನವನ್ನು ಮಾಡ ಲೆಳಸಿದ ಸಂಪಾದಕರು—ತಜ್ಞರ ನೆರವಿನೊಡನೆ—ಈ ಹಾಡುಗಳಿಗಾದರೂ ಮಾಡಬಹುದಾಗಿತ್ತು: ಹಾಗೆ ಮಾಡಿದುದನ್ನು ಸೂಚಿಸಬಹುದಾಗಿತ್ತು. ಇವುಗಳಲ್ಲಿ ಒಂದಕ್ಕೆ ಮಾತ್ರ ಅಟತಾಳದ ನಿರ್ದೇಶವಿದೆ ; ಇದು ಮಾತುವಿನ ಬಂಧಕ್ಕೆ ಸಹಜವಾಗಿ ಹೊಂದಿಕೊಳ್ಳುವುದೂ ಇಲ್ಲ.

ಅಂಶ - ಅಥವಾ ಮಾತ್ರಾ ಛಂದಸ್ಸುಗಳಿರುವ ರಚನೆಗಳಲ್ಲಿ ತಾಳಸಮನ್ವಯವು ಏಕೆ ಮತ್ತು ಹೇಗೆ ಆಗಲಾರದೆಂಬುದನ್ನೂ ಇಂತಹ ಛಂದೋಬಂಧಗಳಲ್ಲಿ ಗೇಯಾರ್ಥಪ್ರಧಾನವಾದ ವರ್ಣವು, ಎಂದರೆ ಗಾನಕ್ರಿಯೆಯು ಹೇಗೆ ಅನಿರ್ಬಂಧಿತವಾಗಿ ನಡೆಯಲಾರದೆ ಇವೆರಡೂ ಪರಸ್ಪರ ಪ್ರತಿಬಂಧಕಗಳಾಗಿರುತ್ತವೆಂಬುದನ್ನೂ ಬೇರೆಡೆಯಲ್ಲಿ ವಿವೇಚಿಸಿದ್ದೇನೆ. ಇದು ಈ ಷಟ್ಪದಿಗಳಿಗೂ ಅನ್ವಯಿಸುತ್ತದೆ. ಅಲ್ಲದೆ ಯಾವುದಾದರೊಂದು ಷಟ್ಪದಿಕಾವ್ಯದ ಪ್ರತಿಯೊಂದು ಸರ್ಗ ಅಥವಾ ಖಂಡದ ಮೊದಲಿನಲ್ಲಿರುವ ಅರ್ಧಷಟ್ಪದಿಯ ಮೂರು ಪಙ್ಕ್ತಿಗಳನ್ನು 'ಸೂಚನೆ' ಎಂದು ಹಸ್ತಪ್ರತಿ ಆಕರಗಳಲ್ಲಿ ನಿರ್ದೇಶಿಸುವ ರೂಢಿಯಿದೆಯಷ್ಟೆ. ಇದು ಆಯಾ ಸರ್ಗ ಅಥವಾ ಖಂಡಕ್ಕೆ ಸಾರಾಂಶವನ್ನೋ ಪ್ರವೇಶವನ್ನೋ ಒದಗಿಸುತ್ತದೆ. ಆದರೆ ಅರ್ವಾಚೀನ ವೀರಶೈವಷಟ್ಪದಿಕಾವ್ಯಗಳಲ್ಲಿ ಇಂತಹ ಪ್ರಾರಂಭಿಕ ಅರ್ಧ ಷಟ್ಪದಿಯನ್ನು 'ಪಲ್ಲವಿ' ಎಂದು ಕರೆಯುವುದೋ ಅಥವಾ ಹೀಗೆ ಕರೆಯುವ ಸಂಪಾದಕೀಯ ರೂಢಿಯೋ ಇದ್ದಂತಿದೆ. ಕರ್ಣಾಟಕ ಸಂಗೀತದ ಕೃತಿಗಳಲ್ಲಿ ಪ್ರಾರಂಭದ ಖಂಡವನ್ನು 'ಪಲ್ಲವಿ' ಎಂದು ಕರೆಯುವುದರಿಂದ ಈ ಷಟ್ಪದಿಗಳನ್ನೂ ಕೃತಿಗಳೆಂದೆ ಭಾವಿಸಿಕೊಳ್ಳಲೆಳಸುವ ಪ್ರವೃತ್ತಿಯು ಈ ರೂಢಿಗೆ ಕಾರಣವಿರಬಹುದು. ಆದರೆ ಈ ಹೆಸರು ಇಲ್ಲಿ ಸಲ್ಲುವುದಿಲ್ಲ. ಏಕೆಂದರೆ ಅದು ವಿಶೇಷಾರ್ಥವುಳ್ಳ ಪಾರಿಭಾಷಿಕಶಬ್ದ. ಪ್ರತಿಯೊಂದು ನುಡಿಯಲ್ಲಿಯೂ ಏಕವಾಕ್ಯತೆಯನ್ನು ಹೊಂದಿದ್ದು ನುಡಿಯ ನಂತರ ಪುನರಾವೃತ್ತಿಗೊಳ್ಳುವ ಕೃತಿಯ ಉದ್ಗ್ರಾಹಖಂಡಕ್ಕೆ ಪಲ್ಲವಿಯೆಂದು ಹೆಸರು. ಷಟ್ಪದಿಕಾವ್ಯಗಳಲ್ಲಿ ಪ್ರಾರಂಭದಲ್ಲಿರುವ ಅರ್ಧಷಟ್ಪದಿಗೆ ಈ ಅರ್ಥ ಮತ್ತು ಕ್ರಿಯೆಗಳೆರಡೂ ಇಲ್ಲದಿರುವುದರಿಂದ ಪಲ್ಲವಿಯೆಂಬ ಹೆಸರು ಸಲ್ಲುವುದಿಲ್ಲ.

ಮೇಲೆ ಹೇಳಿದ ಹನ್ನೊಂದು ಹಾಡುಗಳಲ್ಲಿ ನಿಯತ ರಚನೆಯು ಏಕರೂಪವಿದೆ : ಎರಡು ಪಙ್ಕ್ತಿಗಳ ಪಲ್ಲವಿ, ನಾಲ್ಕು ಪಙ್ಕ್ತಿಗಳ ನುಡಿ, ದ್ವಿತೀಯಾಕ್ಷರ ಪ್ರಾಸ, ಮೂರು ಅಥವಾ ಐದು ನುಡಿಗಳು ; ಅನುಪಲ್ಲವಿಯಿಲ್ಲ ; ಅನುಪಲ್ಲವಿಯನ್ನಾಗಿ ಒಡೆದುಕೊಳ್ಳಬಹುದಾದಷ್ಟು ಅತಿದೈರ್ಘ್ಯವಿರುವ ಪಲ್ಲವಿಪಙ್ಕ್ತಿಗಳೂ ಇಲ್ಲ ; ಎಂದರೆ ಪಲ್ಲವಿಯ ಪಙ್

ದೈರ್ಘ್ಯವು ನುಡಿಯದಕ್ಕೆ ಅನುಗುಣವಾಗಿದೆ. ಪಲ್ಲವಿಯಲ್ಲಿ ಹಾಗೂ ನುಡಿಗಳಲ್ಲಿರುವ ಪಙ್ಕ್ತಿಗಳು ತಮ್ಮೊಳಗೂ ಪರಸ್ಪರವಾಗಿಯೂ ಸಮಾನ ದೈರ್ಘ್ಯವನ್ನು ಪಡೆದಿರುವುದೆ ಹೆಚ್ಚು; ಅವುಗಳೆರಡರಲ್ಲಿಯೂ ದೀರ್ಘ–ಹ್ರಸ್ವ ಎಂಬ ವಿನ್ಯಾಸವಿರುವ ಒಂದು ನಿದರ್ಶನವೂ ಇದೆ : 'ಸೆರಗನೊಡ್ಡಿ ಬೇಡಿಕೊಂಬೆನು' ಎಂಬ ಹಾಡಿನಲ್ಲಿ ಪಲ್ಲವಿಯ ಎರಡು ಪಙ್ಕ್ತಿಗಳಲ್ಲಿ ಪ್ರತಿಯೊಂದರ ನಂತರವೂ. ಮೊದಲನೆಯದನ್ನುಳಿದ ಇತರ ನಾಲ್ಕು ನುಡಿಗಳ ನಾಲ್ಕು ಪಙ್ಕ್ತಿಗಳಲ್ಲಿ ಮೊದಲನೆಯದರ ಹಾಗೂ ಮೂರನೆಯದರ ಕೊನೆಯಲ್ಲಿಯೂ 'ಶಿವಾಶಿವಾ' ಎಂಬ ನಿಯತ ಮಾತುಖಂಡದ ಪುನರುಕ್ತಿಯಿದೆ : ಇಲ್ಲಿ ಬಹುಶಃ ಧಾತುಖಂಡದ ಪುನರುಕ್ತಿಯೂ ಇರಬಹುದು ; ಮೊದಲನೆಯ ನುಡಿಯ ಪ್ರಥಮ ಹಾಗೂ ತೃತೀಯ ಪಙ್ಕ್ತಿಗಳ ಅಂತ್ಯದಲ್ಲಿ 'ಗುರುಸ್ವಾಮಿ' ಎಂಬ ಮಾತುಖಂಡದ (ಮತ್ತು ಬಹುಶಃ ಧಾತುಖಂಡದ) ಪುನರುಕ್ತಿಯಿದೆ. ಈ ಹಾಡಿಗೆ ಮಾತ್ರ ಅಟ (ಅಟ್ಟ) ತಾಳದ ನಿರ್ದೇಶವಿದೆ ; ಉಳಿದವುಗಳಿಗೆ ತಾಳಸೂಚನೆಯಿಲ್ಲ. 'ಹೇವವನಿಕ್ಕಲಾರೆ' ಎಂಬ ಹಾಡಿನಲ್ಲಿ ಮಾತ್ರ ಪಲ್ಲವಿಯಲ್ಲಿ ಎರಡು ಪಙ್ಕ್ತಿಗಳ ಬದಲು ಸಾಪೇಕ್ಷವಾಗಿ ದೀರ್ಘತರ–ದೀರ್ಘ–ಹ್ರಸ್ವ ಎಂಬ ಪ್ರಮಾಣಗಳಿರುವ ಮೂರು ಪಙ್ಕ್ತಿಗಳಿವೆ.

ಈ ಹನ್ನೊಂದು ಹಾಡುಗಳಿಗೆ ದೇಶಿ (೪). ಧನ್ಯಾಸಿ (೨), ಮಲಹರಿ (೧), ಪಂತುವರಾಳಿ (೧), ನಾದರಾಮಕ್ರಿಯೆ (೧). ಲಹರಿ (ಆಹರಿ ? ಮಲಹರಿ ?) (೧) ಮತ್ತು ಧನ್ಯಾಸಿತೋಡಿ (ಧನ್ಯಾಸಿ/ತೋಡಿ ?) ಎಂಬ ರಾಗಗಳನ್ನು ಸೂಚಿಸಲಾಗಿದೆ. ಇವರಲ್ಲಿ ಕಾಲವ್ಯಯಧಿಕರಣ್ಯದ—ಎಂದರೆ ವಾಗ್ಗೇಯಕಾರನ ಕಾಲದಲ್ಲಿ ಇರಲಿಲ್ಲವೆನ್ನಬಹುದಾದ—ದೋಷವೇನೂ ಇಲ್ಲ. ಕೃತಿ (ಅಥವಾ ಸ್ವರವಚನ)ಯಲ್ಲದ ಇತರ ರಚನೆಗಳಿಗೆ ಸುಬೋಧಸಾರದಲ್ಲಿ ರಾಗಗಳನ್ನು ಹೀಗೆ ಅಳವಡಿಸಿದೆ : ಆನಂದಭೈರವಿ (೧), ಆಹರಿ (೧), ಕನ್ನಡ (೧). ಕಲ್ಯಾಣಿ (೧). ಕಾನಡಾ (೧). ಕಾಂಬೋದಿ (೧). ಕೇದಾರಗೌಳ (೧). ಗುಂಡಕ್ರಿಯೆ (೧). ಘೂರ್ಜರೀ (೧). ಜಂಗಲ್ (ಜಂಗ್ಲಾ) (೧). ಜಂಜೋಟಿ (೧). ದೇಶಾಕ್ಷಿ (೧). ದ್ವಿಜಾವಂತಿ (೧). ಧನ್ಯಾಸಿ (೨). ನಾಟಿ (೧). ಪೂರ್ವಿ (೩). ಬಾಗೇಶ್ರೀ (೧). ಭೈರವಿ (೨). ಮಂಗಳಕಾರಿ (! ಮಂಗಳಕೌಶಿ) (೧). ಮಧುಮಾಧವಿ (೧). ಮಧ್ಯಮಾವತಿ (೩). ಮಲಹರಿ (೩). ಮಾಲಕಂಸ (೧). ಮಾಳವಗೌಳ (೨). ಮುಖಾರಿ (೨). ಲಲಿತೆ (೧). ವಸಂತ (೩). ಸಾರಂಗ (೧). ಸಾವೇರಿ (೧). ಸಾಳಂಗ (೧), ಸುರಟಿ (೩) ಮತ್ತು ಹಿಂದೋಳವಸಂತ (೧). ಇವುಗಳ ಪೈಕಿ ಕಾನಡ, ಜಂಗ್ಲಾ, ಜಂಜೋಟಿ, ಬಾಗೇಶ್ರೀಗಳು ಹಿಂದೂಸ್ಥಾನೀ ಸಂಗೀತದಿಂದ ಕರ್ಣಾಟಕ ಸಂಗೀತಕ್ಕೆ ಬಂದು ಸೇರಿಕೊಂಡ ದೇಶ್ಯರಾಗಗಳು ; ಮಾಲಕಂಸ (ಮಾಲ್‌ಕೌನ್ಸ್) ಇನ್ನೂ ಹಿಂದೂಸ್ಥಾನೀ ಸಂಗೀತದ ರಾಗವಾಗಿಯೆ ನಾಮರೂಪಗಳಲ್ಲಿ ಉಳಿದುಕೊಂಡಿದೆ; ನಮ್ಮಲ್ಲಿ ಬಾಗೇಶ್ರೀ ಅಪರೂಪವಾಗಿ ಲಘುಸಂಗೀತದ ಪರಿಸರದಲ್ಲಿ ಬಳಕೆಯಾಗುತ್ತಿದೆ. ಕಾನಡಾ, ಜಂಗ್ಲಾ ಮತ್ತು ಜಂಜೋಟಿಗಳು ನಮ್ಮ ಸಂಗೀತವನ್ನು ಷಡಕ್ಷರಿಗಿಂತ ಸುಮಾರು ಇನ್ನೂರು ವರ್ಷಗಳಷ್ಟು ನಂತರದಲ್ಲಿ ಪ್ರವೇಶಿಸಿದವು. ಆದುದರಿಂದ ಈ ಐದು ರಾಗಗಳನ್ನು ವಾಗ್ಗೇಯಕಾರನು ತನ್ನ ರಚನೆಗಳಿಗೆ ಅನ್ವಯಿಸಿರುವುದು ಅಸಾಧ್ಯ ; ಹೀಗಾಗಿ ಈ ರಾಗಗಳನ್ನು ಒಳಗೊಂಡ ಆಕರಗಳು ಅರ್ವಾಚೀನವೆಂದು ನಿರ್ಣಯಿಸಬೇಕಾಗುತ್ತದೆ.

ಮುಪ್ಪಿನಷಡಕ್ಷರಿಯ 'ಹೆಮ್ಮಗಳು ನಾನಿಮ್ಮ' ಎಂಬ ಒಂದು ಷಟ್ಪದಿಯಲ್ಲಿ ಸುವ್ವಿಯ ಛಾಯೆಯಿದೆ : 'ಕುಟ್ಟುತ್ತ ಬೀಸುತ್ತ ನಮ್ಮ ಒಡಹುಟ್ಟಿದ ಪುರಾತನರ ಹಾಡುತಿಹೆನು' ಎಂಬ ಅದರ ಮಾತು ಒನಕೆಪಾಡಿನ ಪ್ರಯುಕ್ತಿಯನ್ನೂ, 'ಸುವ್ವಿ ಚೆನ್ನಿಗ್ಗನಿಗೆ....ಸುವ್ವಿ ನಮ್ಮಯ್ಯ ಚೆನ್ನಯ್ಯನಡಿಗೆ' ಎಂಬ ಮಾತು ಸುವ್ವಿಯ ಪ್ರತಿಧ್ವನಿಯನ್ನೂ ಒಳಗೊಂಡಿದೆ. ಆದರೆ ಇಲ್ಲಿ ರಚನೆ ಕುಸುಮಷಟ್ಪದಿಯದು.

ಮುಪ್ಪಿನಷಡಕ್ಷರಿಯು ತನ್ನೆರಡು ಹಾಡುಗಳಲ್ಲಿ ಮಾಡಿರುವ ಸಂಗೀತೋಲ್ಲೇಖಗಳನ್ನು ಉದ್ಧರಿಸಿ ಅವನ ಕೃತಿಗಳ ವಿವೇಚನೆಯನ್ನು ಮುಗಿಸಬಹುದು. ಅವನ 'ಭಜತಿಯುರರೆ ವಿಷ್ಣುಪಾಯು' ಎಂಬ ಷಟ್ಪದಿಯಲ್ಲಿ ಮೊದಲನೆಯ ಪದ್ಯವು ಹೀಗಿದೆ :

ಧಿಮಿಕು ಧಿಂಧಿ ದಿಮಿಕು ಧಿಮಿ
ಧಿಮಿಕು ನಂದಿಕಾಯರುಗಳ
ಝಮಕ ಚಮಕ ಮೃದಂಗ ಭಜತಿ ನಾಟ್ಯಲೀಲನಂ
ಅಮಲವೀಣೆ ಸುಸ್ವರದಲಿ
ಗಮಪಧನಿಸರಿಸರಿ ಸರಿಸ
ಗಮಪ ಭಜತಿ ತುಂಬುರಾಧಿನಾಟ್ಯಲೀಲನಂ

'ಆರು ಕಾಣರು ಪುಣ್ಯಕ್ಷೇತ್ರವನು' ಎಂಬ ಹಾಡಿನಲ್ಲಿ ಎರಡನೆಯ ಚರಣವು ಹೀಗಿದೆ:

ಶಂಖಕಿನ್ನರಿನಾಗಸರವೀಣೆ–ಅಲ್ಲಿ
ಝೇಂಕರಿಸುವ ಘಂಟೆ ಜಾಗಟೆ
ಕಿಂಕಿಣಿಭೇರಿ ದುಂದುಭಿ–ಅಲ್ಲಿ
ಓಂಕಾರನಾದವಾಗುತ್ತಿದೆ

**೩ (ಇ) ಸರ್ಪಭೂಷಣಶಿವಯೋಗಿ**

ನಿಜಗುಣ ಮತ್ತು ಮುಪ್ಪಿನಷಡಕ್ಷರಿಗಳನ್ನು ಬಿಟ್ಟರೆ ಕೃತಿಯನ್ನು ಹೋಲುವ ರಚನೆಗಳನ್ನು ಶಿವಶರಣರಲ್ಲಿ ಕಾಣಬೇಕಾದರೆ ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿಯೆ. ಶಾಲ್ಯದ ಕೃಷ್ಣಪ್ರಭುವು ಹದಿನೆಂಟು–ಹತ್ತೊಂಬತ್ತನೆಯ ಶತಮಾನಗಳಲ್ಲಿ ರಚಿಸಿದ 'ವಚನ'ಗಳು. ಹತ್ತೊಂಬತ್ತನೆಯ ಶತಮಾನದಲ್ಲಿ ಸರ್ಪಭೂಷಣ ಶಿವಯೋಗಿ. ಬಾಲಲೀಲಾ ಮಹಾಂತಶಿವಯೋಗಿ. ಮೈಲಾರದ ಬಸವಪ್ಪ. ಘನಮಠದಾರ್ಯ. ನೊಣವಿನಕೆರೆಯ ಕರಿಬಸವಸ್ವಾಮಿ. ಮತುಕೂರು ನಂಜುಂಡಸ್ವಾಮಿ, ಶಿಶುನಾಳದ ಷರೀಫಸಾಹೇಬ ಮುಂತಾದವರ ರಚನೆಗಳನ್ನು ಇಲ್ಲಿ ಸ್ಮರಿಸಬಹುದಾದರೂ ಈ ನೆಲೆಯಲ್ಲಿ ಪ್ರಭಾವಶಾಲಿಗಳಾಗಿ ಉಳಿದಿರುವುದು ಸರ್ಪಭೂಷಣ. ಬಾಲಲೀಲಾಮಹಾಂತ, ಶಿಶುನಾಳಷರೀಫರುಗಳೆ. ಆದುದರಿಂದ ಇವರ ಹಾಡುಗಳನ್ನು ಇಲ್ಲಿ ಪರಿಶೀಲಿಸಿದರೆ ಸಾಕು.

ಸರ್ಪಭೂಷಣ (ಸಪ್ಪಣ್ಣ)ನ ಕೈವಲ್ಯಕಲ್ಪವಲ್ಲರಿಯು ನಿಜಗುಣನ ಕೈವಲ್ಯಪದ್ಧತಿಯ ಮಾದರಿಯಲ್ಲಿ ರಚಿತವಾದ ಹಾಡಿನ ಗ್ರಂಥವೆಂಬುದನ್ನು ಈಗಾಗಲೆ ಸೂಚಿಸಿದೆ. ಹೀಗೆ ಅದರ ಶಿವಕಾರುಣ್ಯಸ್ಥಲ (೨೬), ಜೀವಸಂಬೋಧನಸ್ಥಲ (೨೧), ನೀತಿಕ್ರಿಯಾಚರ್ಯ ಪ್ರತಿಪಾದನಸ್ಥಲ (೨೫), ಯೋಗಪ್ರತಿಪಾದನಸ್ಥಲ (೨೯) ಮತ್ತು ಜ್ಞಾನಪ್ರತಿಪಾದನಸ್ಥಲ (೭೬)ಗಳಲ್ಲಿ ಒಟ್ಟು ೧೭೭ ಹಾಡುಗಳಿವೆ. ಇವುಗಳಲ್ಲಿ ಹದಿನಾಲ್ಕು ಷಟ್ಪದಿಗಳೂ, ಒಂದು ಚೌಪದಿಯೂ ಒಂದು ಯಾಲಪದವೂ, ಎರಡು ಸುವ್ವಾಲೆಗಳೂ ಸೇರಿವೆ. ಆದುದರಿಂದ ಕೃತಿಯ ಮಾದರಿಯಲ್ಲಿ ರಚಿತವಾದ ೧೫೯ ಹಾಡುಗಳು ಉಳಿಯುತ್ತವೆ. ಷಟ್ಪದಿ, ಚೌಪದಿ ಮತ್ತು ಸುವ್ವಾಲೆಗಳನ್ನು ಕುರಿತು ಇದೇ ಲೇಖನದಲ್ಲಿ ಮೇಲೆ ಪ್ರಸ್ತಾಪಿಸಲಾಗಿದೆ; ಯಾಲಪದವನ್ನು ಕುರಿತು 'ಏಳೆ–ಒಂದು ಸಂಗೀತಶಾಸ್ತ್ರೀಯ ವಿವೇಚನೆ' ಎಂಬ (ಅಚ್ಚಿಗೆ ಸಿದ್ಧವಾಗಿರುವ) ಗ್ರಂಥವೊಂದರಲ್ಲಿ ಸಾಕಷ್ಟು ವಿಸ್ತಾರವಾಗಿ ವಿವೇಚಿಸಿದ್ದೇನೆ.

ಈ ೧೫೯ ಹಾಡುಗಳಲ್ಲಿ ಸರ್ಪಭೂಷಣನು ನಿಜಗುಣನಿಗಿಂತ ಹೆಚ್ಚು ಪ್ರಯೋಗಶೀಲನಾಗಿದ್ದಾನೆ. ಅವುಗಳಲ್ಲಿಯೂ ಪಲ್ಲವಿ ಮತ್ತು ನುಡಿಗಳು ಎಂಬ ವಿಭಾಗವೆ ಇದೆ; ನುಡಿಗಳನ್ನು ಪದಗಳೆಂದು ಕರೆದಿದೆ; ಇಡೀ ಹಾಡನ್ನು ಸ್ವರವಚನವೆಂದು ವ್ಯವಹರಿಸಿರುವಂತೆ ಕಾಣುತ್ತದೆ. ಎಲ್ಲ ಚರಣಗಳಲ್ಲೂ ನಿಯತವಾದ ಒಂದೆ ರಚನೆಯಿದೆ. ಪಲ್ಲವಿ ಮತ್ತು ಚರಣಗಳಲ್ಲಿ ಪಙ್ಕ್ತಿಗಳ ಅನುಪಾತವು ಸಾಮಾನ್ಯವಾಗಿ ೧:೨ ಎಂದೆ ಇರುತ್ತದೆ: ಇವುಗಳಲ್ಲಿ ದ್ವಿತೀಯಾಕ್ಷರ ಪ್ರಾಸವೆ ಹೆಚ್ಚು. ಹೀಗೆ ಎರಡು ಪಙ್ಕ್ತಿಗಳ ಪಲ್ಲವಿ, ನಾಲ್ಕು ಪಙ್ಕ್ತಿಗಳ ಚರಣ ಎಂಬ ರಚನೆಯೆ ಅತ್ಯಧಿಕವಾಗಿದೆ: ಮೂರು ಪಙ್ಕ್ತಿಗಳ ಪಲ್ಲವಿ, ಮೂರು ಮೂರು ಪಙ್ಕ್ತಿಗಳುಳ್ಳ ಎರಡು ಘಟಕಗಳಿಂದಾದ ಚರಣ, ನಾಲ್ಕು ಪಙ್ಕ್ತಿಗಳ ಪಲ್ಲವಿ, ನಾಲ್ಕು ಪಙ್ಕ್ತಿಗಳ ಚರಣ ಎಂಬ ಮಾದರಿಯೂ ಮೂರು ದೀರ್ಘಪಙ್ಕ್ತಿಗಳ ನಂತರ ಹ್ರಸ್ವಪಙ್ಕ್ತಿಯಿರುವ ಪಲ್ಲವಿ, ಇದೇ ಮಾದರಿಯಿರುವ ಚರಣ ಎಂಬ ಮಾದರಿಯೂ, ನಾಲ್ಕು ಪಙ್ಕ್ತಿಗಳ ಪಲ್ಲವಿ, ಎಂಟು ಪಙ್ಕ್ತಿಗಳ ಚರಣ ಎಂಬ ಮಾದರಿಯೂ ಅದರಲ್ಲಿಹ್ರಸ್ವ-ದೀರ್ಘ ಎಂಬಪಙ್ಕ್ತಿಗಳ ಎರಡು ಘಟಕಗಳ ಪಲ್ಲವಿ, ಇಂತಹ ನಾಲ್ಕು ಘಟಕಗಳಿರುವ ಚರಣ ಎಂಬ ಒಳಭೇದವೂ ದೊರೆಯುತ್ತವೆ. ನಾಲ್ಕು ಪಙ್ಕ್ತಿಗಳ ಪಲ್ಲವಿಯಲ್ಲಿ ಹ್ರಸ್ವ, ಹ್ರಸ್ವತಮ, ದೀರ್ಘ, ದೀರ್ಘ ಎಂಬ ಸಾಪೇಕ್ಷಬಂಧವೂ ಆರು ಪಙ್ಕ್ತಿಗಳ ಚರಣದಲ್ಲಿ ಹ್ರಸ್ವ, ಹ್ರಸ್ವತಮ, ಹ್ರಸ್ವ, ಹ್ರಸ್ವ, ದೀರ್ಘ, ಹ್ರಸ್ವ ಎಂಬ ರಚನೆಯೂ ಇರುವುದುಂಟು. ೨ : ೪ ಮತ್ತು ೪ : ೮ ಎಂಬ ಪಙ್ಕ್ತಿಸಂಖ್ಯಾ ಅನುಪಾತವಿರುವ ಪಲ್ಲವಿ-ಚರಣಗಳಿರುವೆಡೆಯಲ್ಲಿ ಅವುಗಳ ಪ್ರತಿಯೊಂದು ಪಙ್ಕ್ತಿಯ ಕೊನೆಯಲ್ಲಿಯೋ (ಇದ್ದರೆ) ಘಟಕಗಳ ನಂತರವೋ ನಿಯತವಾದ ಮಾತು (ಮತ್ತು ಧಾತು) ಖಂಡವೊಂದು ಪುನರಾವೃತ್ತಿಯಾಗುವ ಕೆಲವು ಮಾದರಿಗಳೂ ಇಲ್ಲಿವೆ. ಕೆಲವು ಹಾಡುಗಳ ಪಲ್ಲವಿಯಲ್ಲಿ ದೀರ್ಘತಮ, ದೀರ್ಘ, ಹ್ರಸ್ವ ಎಂಬ ಸಾಪೇಕ್ಷಪ್ರಮಾಣವೂ ಚರಣದಲ್ಲಿ ಹ್ರಸ್ವ, ನಾಲ್ಕು ದೀರ್ಘಗಳು, ಹ್ರಸ್ವ ಎಂಬ ರಚನೆಯೂ ಇವೆ.

ಆದರೆ ಸರ್ಪಭೂಷಣನ ಹಾಡುಗಳಲ್ಲಿ ನವ್ಯಪ್ರಯೋಗಶೀಲತೆಯು ಕಂಡುಬರುವುದು ಹೀಗೆ: ಅವನ ಅನೇಕ ಹಾಡುಗಳಲ್ಲಿ ಪಙ್ಕ್ತಿಗಳನ್ನು ಪ್ರಾಸಾನುಗುಣವಾಗಿಯೂ ಯತಿಗೆ ಅನುಸಾರವಾಗಿಯೂ ಬೇರೆ ಬೇರೆ ರೀತಿಗಳಲ್ಲಿ ವಿಂಗಡಿಸಿಕೊಳ್ಳಬಹುದು. ಇದು ಹರಿದಾಸರ ಹಾಡುಗಳಲ್ಲಿ ಈ ವೇಳೆಗಾಗಲೆ ಚೆನ್ನಾಗಿ ರೂಢಿಸಿದ್ದ ರಚನಾತಂತ್ರ

ವಾದರೂ ಶಿವಶರಣರ ಹಾಡುಗಳಲ್ಲಿ ಈ ಪ್ರವೃತ್ತಿಯು ನಿಜಗುಣನಲ್ಲಿ ಅಲ್ಪವಾಗಿಯೂ ಸರ್ಪಭೂಷಣನಲ್ಲಿ ಅಧಿಕವಾಗಿಯೂ ಕಂಡುಬರುತ್ತದೆ. ನಂತರದ ಬಾಲಲೀಲಾಮಹಾಂತನ ಕೆಲವು ಹಾಡುಗಳಲ್ಲಿಯೂ ಈ ತಂತ್ರವನ್ನು ಬಳಸಿದೆ. ಹೀಗೆ ಪ್ರಾಸಾನುಗುಣವಾಗಿ ಮಾಡಿದ ಪಙ್ಕ್ತಿವಿಂಗಡನೆಯು ಯತ್ಯನುಸಾರವಾಗಿ ಪುನಾರಚಿಸಿಕೊಂಡಾಗ ಪಙ್ಕ್ತಿಗಳ ಸಂಖ್ಯೆಯೂ ದೈರ್ಘ್ಯವೂ ವಿಭಿನ್ನವಾಗುವುದು ಸಹಜವಷ್ಟೆ. ಇದರಿಂದಾಗಿ ಧಾತುವನ್ನೂ, ಎಂದರೆ ಗೇಯಪಙ್ಕ್ತಿ ಮತ್ತು ತಾಳಾವರ್ತಗಳನ್ನೂ ಪುನಾರಚಿಸಿಕೊಂಡು ಹಾಡುವುದು ಅನಿವಾರ್ಯವಾಗುತ್ತದೆ. (ತ್ಯಾಗರಾಜಾದಿ ವಾಗ್ಗೇಯಕಾರರ ರಚನೆಗಳಲ್ಲಿ ಈ ಸಂದಿಗ್ಧಾನ್ವಯ ಪ್ರವೃತ್ತಿಯು ಕಂಡುಬರುವುದಿಲ್ಲ.) ಹೀಗೆ ಪ್ರಾಸಾನುಸಾರವಾಗಿ ಮಾಡಿದ ೨ : ೪ ಎಂಬ ಪಙ್ಕ್ತಿಸಂಖ್ಯಾ ಅನುಪಾತವು ೨ : ೩ ಎಂದೂ, ೪ : ೪ ಎಂಬುದು ೨ : ೨ ಅಥವಾ ೩ : ೪ ಎಂದೂ, ೪ : ೮ ಎಂಬುದು ೨ : ೮ ಎಂದೂ ಆಗುವುದುಂಟು.

ಕೈವಲ್ಯಕಲ್ಪವಲ್ಲರಿಯ ಹಾಡುಗಳಲ್ಲಿಯೂ ಚರಣಗಳು ಬೆಸಸಂಖ್ಯೆಯವು ಎಂಬುದೆ ನಿಯಮ ; ಇದಕ್ಕೆ ಅಪವಾದವಿಲ್ಲ. ಮೂರು ಅಥವಾ ಐದು ನುಡಿಗಳಿರುವ ಹಾಡುಗಳೆ ಅತ್ಯಧಿಕ. ಇಡೀ ಗ್ರಂಥದಲ್ಲಿ ಏಳು ನುಡಿಗಳಿರುವ ನಾಲ್ಕೇ ಹಾಡುಗಳೂ ಒಂಬತ್ತು ನುಡಿಗಳಿರುವ ಏಕೈಕ ನಿದರ್ಶನವೂ ದೊರೆಯುತ್ತವೆ. ಈ ಎಲ್ಲ ಹಾಡುಗಳಲ್ಲಿಯೂ ಸ್ವಾರಸ್ಯದ ಸಂಗತಿಯೆಂದರೆ ಅನುಪಲ್ಲವಿಯಿಲ್ಲದಿರುವುದು. ನಿಜಗುಣನ ಕಾಲಕ್ಕೆ ಕೃತಿಯಲ್ಲಿ ಅನುಪಲ್ಲವಿಯ ಸ್ಥಾನವು ಸಂದಿಗ್ಧವಾಗಿತ್ತು, ಅಸ್ಥಿರವಾಗಿತ್ತು ಎಂದು ಇಟ್ಟುಕೊಂಡು ಅವನ ಕೃತಿಗಳಲ್ಲಿ ಅದಿಲ್ಲದಿರುವುದನ್ನು ವಿವರಿಸಬಹುದು ಅಥವಾ ಸಮರ್ಥಿಸಬಹುದು. ಆದರೆ ಸರ್ಪಭೂಷಣನ ಕಾಲವು ಕ್ರಿ.ಶ. ೧೭೯೫ರಿಂದ ೧೮೩೯ರವರೆಗೆ. ಈ ವೇಳೆಗೆ ಹರಿದಾಸರ ಪದಗಳಲ್ಲಿಯೂ ತ್ಯಾಗರಾಜಪೂರ್ವ ಅಥವಾ ತ್ಯಾಗರಾಜಾನಂತರದ ವಾಗ್ಗೇಯಕಾರರ ಕೃತಿಗಳಲ್ಲಿಯೂ ಅನುಪಲ್ಲವಿಯು ಕೃತಿಯ ಸುಸ್ಪಷ್ಟ ಅಂಗವಾಗಿತ್ತು. ಆದರೂ ತಿರುಮಲಾರ್ಯನ ಗೀತಗೋಪಾಲ ಮತ್ತು ಚಿಕದೇವರಾಯಸಪ್ತಪದಿಗಳಲ್ಲಿಯೂ ಶಿವಶರಣರ ಹಾಡುಗಳಲ್ಲಿಯೂ ಅನುಪಲ್ಲವಿಯ ಬಳಕೆಯಿಲ್ಲದಿರುವುದು ಗಮನಾರ್ಹವಾಗಿದೆ. ಬಾಲಲೀಲಾಮಹಾಂತನು ತನ್ನ ಎರಡೇ ಎರಡು ಹಾಡುಗಳಲ್ಲಿ ಅನುಪಲ್ಲವಿಯನ್ನು ಪ್ರಯೋಗಿಸಿದ್ದಾನೆ: ಶಿಶುನಾಳ ಷರೀಫನು ಅನುಪಲ್ಲವಿಯನ್ನು ಧಾರಾಳವಾಗಿಯೆ ಬಳಸಿದ್ದಾನೆ. ಇದನ್ನು ಮುಂದೆ ಪ್ರಸ್ತಾಪಿಸಲಾಗುವುದು.

ಇತರ ವಾಗ್ಗೇಯಕಾರ ಶಿವಶರಣರಂತೆ ಸರ್ಪಭೂಷಣನೂ ತನ್ನ ಯಾವ ಹಾಡಿಗೂ ತಾಳನಿರ್ದೇಶನವನ್ನು ಮಾಡಿಲ್ಲ. ಆದರೆ ಹರಿದಾಸರು ಲಕ್ಷ್ಯದಲ್ಲಿ ಸ್ಥಾಪಿಸಿ ನಿಲ್ಲಿಸಿದ್ದ ಸುಳಾದಿತಾಳಗಳನ್ನೆ ಅವನೂ ಬಳಸಿದ್ದನೆಂದು ಊಹಿಸುವುದರಲ್ಲಿ ತಪ್ಪೇನಿಲ್ಲ. ಅವನ ಕೃತಿಗಳಿಗೆ ರಾಗಗಳನ್ನು ಸೂಚಿಸಿದೆ. ಈ ರಾಗಾನ್ವಯವನ್ನು ಅವನೆ ಮಾಡಿರಬಹುದು. ನಂತರದ ಹಾಡುಗಾರರು ಅದನ್ನು ಅಷ್ಟಿಷ್ಟು ಮಾರ್ಪಡಿಸಿದ್ದರೂ ಇರಬಹುದು. ಹರಿದಾಸರಿಗೂ ಶಿವಶರಣರಿಗೂ ಈ ಮಾತು ಸಮನಾಗಿಯೆ ಅನ್ವಯಿಸುತ್ತದೆ. ಆಯಾ ಹಾಡುಗಳ ಪ್ರಾಚೀನತಮವಾದ ಆಕರಗಳಿಂದಲೂ ಸಮಸಾಮಯಿಕ ಸಂಗೀತಶಾಸ್ತ್ರಗ್ರಂಥಗಳ ಅಭ್ಯಾಸದಿಂದಲೂ ಬಿಡಿಸಬೇಕಾದ ಪ್ರಶ್ನೆಯಿದು.

ಕೈವಲ್ಯಕಲ್ಪವಲ್ಲರಿಯ ಹಾಡುಗಳಿಗೆ ಅಳವಟ್ಟಿರುವ ೪೫ ರಾಗಗಳನ್ನು ಹೀಗೆ ಪಟ್ಟಿಮಾಡಬಹುದು : ಅವುಗಳಲ್ಲಿ ಕೈವಲ್ಯಪದ್ಧತಿಯ ಕೃತಿಗಳಲ್ಲಿಯೂ ಬಳಕೆಯಾಗಿರುವ ಇಪ್ಪತ್ತೆಂಟು ರಾಗಗಳನ್ನು* ಎಂದು ಸೂಚಿಸಿದೆ (ಆಯಾ ರಾಗದಲ್ಲಿರುವ ಕೃತಿಗಳ ಸಂಖ್ಯೆಯನ್ನು ಕಂಸಗಳಲ್ಲಿ ಕೊಟ್ಟಿದೆ.) : ಅಸಾವೇರಿ (೧), ಆರಭಿ (೧), ಎ(ಯ)ರಕಲಕಾಂಬೋಧಿ (೯),* ಒಡ್ಡಿಧನ್ಯಾಸಿ (೩),* ಕಲ್ಯಾಣಿ (೧೦),* ಕಾಂಬೋಧಿ (೭),* ಕುರಂಜಿ (೭),* ಕೇದಾರಗೌಳ (೪), ಘಂಟಾ (೨), ಜೋಗಿ ಅಸಾವೇರಿ (೧), ತೋಡಿ (೩),* ತೆಲಗು ಕಾಂಬೋಧಿ (೨),* ದೇಶಾಕ್ಷಿ (೧), ಧನ್ಯಾಸಿ (೪)*, ದೇಶಿ (೪),* ನಾಟಿ (೫),* ನಾದರಾಮ (–ನಾಮ) ಕ್ರಿಯೆ (೩)*, ನೀಲಾಂಬರಿ (೨), ಪಂತುವರಾಳಿ (೬), ಪುನ್ನಾಗತೋಡಿ (೧), ಪುನ್ನಾಗವರಾಳಿ (೧), ಫಾರಸಿ (ಪಾರಸಿ) (೫)*, ಬಹುಳಿ (೩),* ಬಿಲಹರಿ (೨), ಬೇಗಡೆ (೨), ಭೂಪಾಳಿ (೨),* ಭೈರವಿ (೭),* ಮಧುಮಾಧವಿ (೨),* ಮಧ್ಯಮಾವತಿ (೪),* ಮಾರವಿ (೫), ಮಾಳವ (೩),* ಮಾಳವಗೌಳ (೧), ಮುಖಾರಿ (೫), ಮೋಹನಕಲ್ಯಾಣಿ (೨), ರೇಗುಪ್ತಿ (೫), ಲಲಿತೆ (೪)*, ಶುದ್ಧಸಾವೇರಿ (೨), ಶಂಕರಾಭರಣ (೯)*, ಶ್ರೀ (೩)*, ಸಾಳಂಗ (೬)*, ಸಾವೇರಿ (೧), ಸುರುಟಿ (೪), ಸೌರಾಷ್ಟ್ರ (೫)* ಮತ್ತು ಹಿಂದೋಳವಸಂತ(೫).*

ಈ ಅನ್ವಯದಲ್ಲಿ ಹದಿನಾಲ್ಕು ಷಟ್ಪದಿಕಾವ್ಯಗಳು ಸೇರಿವೆ. ಅವುಗಳಿಗೆ ಧನ್ಯಾಸಿ, ಒಡ್ಡಿಧನ್ಯಾಸಿ, ಲಲಿತೆ, ಹಿಂದೋಳವಸಂತ, ಘಂಟಾ, ಬಿಲಹರಿಗಳನ್ನು ಅಳವಡಿಸಿದೆ. ಮೂರು ಷಟ್ಪದಿಗಳಿಗೂ ಒಂದು ಕೃತಿಗೂ ರಾಗವನ್ನು ಕೊಟ್ಟಿಲ್ಲ. ಮೇಲಿನ ಪಟ್ಟಿಯಲ್ಲಿ ಜೋಗಿ ಅಸಾವೇರಿಯು ಹಿಂದೂಸ್ಥಾನೀ ಸಂಗೀತ ಮೂಲದ್ದು; ಜೋಗಿಯಾ ಅಸಾವೇರಿ ಎಂಬ ಹೆಸರಿನದು ; ಜೋಗಿಯಾ ಮತ್ತು ಅಸಾವೇರಿ ಎಂಬ ಎರಡು ಪ್ರಾತಃಕಾಲರಾಗಗಳ ಮಿಶ್ರ

ದಿಂದಾದುದು; ಭೈರವಿಥಾಟಿಗೆ ಸೇರಿದ ಔಡುವಸಂಪೂರ್ಣರಾಗ. ಬೆಂಗಳೂರಿನ ಸರ್ಪಭೂಷಣನಿಗೆ ಇದೊಂದೇ ಒಂದು ಹಿಂದೂಸ್ಥಾನೀರಾಗದ ಪರಿಚಯವಿತ್ತೆಂಬುದೂ ಕೇವಲ ಕರ್ಣಾಟಕ ಸಂಗೀತರಾಗಗಳನ್ನೇ (ಬಹುಶಃ ಭೂಪಾಳಿ ಯೊಂದನ್ನು ಬಿಟ್ಟು) ಬಳಸಿದ ಅವನು ಇದನ್ನು ಉಪಯೋಗಿಸಿರುವುದು ಏಕೆಂಬುದೂ ಪ್ರಶ್ನಾರ್ಹವಾಗಿದೆ. ಉಳಿದ ಅಸಾವೇರಿ, ಆರಭಿ, ಕೇದಾರಗೌಳ, ಘಂಟಾ, ದೇಶಾಕ್ಷಿ, ನೀಲಾಂಬರಿ, ಪಂತುವರಾಳಿ, ಪುನ್ನಾಗತೋಡಿ, ಪುನ್ನಾಗವರಾಳಿ, ಮಾರವಿ, ಮುಖಾರಿ, ಮೋಹನಕಲ್ಯಾಣಿ, ರೇಗುಪ್ತಿ, ಶುದ್ಧಸಾವೇರಿ ಮತ್ತು ಸುರಟಿಗಳಲ್ಲಿ ಸರ್ಪಭೂಷಣನ ಕಾಲದಲ್ಲಿ ಚೆನ್ನಾಗಿ ಪ್ರಚಲಿತವಾಗಿದ್ದ ರಾಗಗಳು, ನಿರ್ದಿಷ್ಟಲಕ್ಷಣವುಳ್ಳವುಗಳು. ಇವುಗಳಲ್ಲಿ ಹಲವು ರಾಗಗಳ ಲಕ್ಷಣಗಳನ್ನು ಅನ್ಯತ್ರ ವಿವೇಚಿಸಿದ್ದೇನೆ. ಗ್ರಂಥವಿಸ್ತರಭೀತಿಯಿಂದ ಉಳಿದವುಗಳ ವಿವೇಚನೆಯನ್ನು ಬಿಡಬೇಕಾಗಿದೆ.

ಸರ್ಪಭೂಷಣನು ಯೋಗಪ್ರತಿಪಾದನಸ್ಥಲ (೬)ದಲ್ಲಿ ಮಾಡಿರುವ ಒಂದು ಸಂಗೀತೋಲ್ಲೇಖವನ್ನಿಲ್ಲಿ ಉದ್ಧರಿಸಬಹುದು: 'ತಿಳಿದನಿತನೆನ್ನೊಳುಸಿರೆಲೆ ನೀರೆ' ಎಂಬ ಹಾಡಿನ ಎರಡನೆಯ ಚರಣದಲ್ಲಿ ಈ ಪ್ರಶ್ನೆಯಿದೆ: 'ಭ್ರಮರಕಿಂಕಿಣಿವೀಣೆಯುಲುಹದೆಲ್ಲಿಂದಿಸುವುದು ?'

### ೩ (ಈ) ಬಾಲಲೀಲಾಮಹಾಂತಶಿವಯೋಗಿ

ಬಾಲಲೀಲಾಮಹಾಂತಲಿಂಗಶಿವಯೋಗಿಯ 'ಕೈವಲ್ಯದರ್ಪಣ'ವು ಕೈವಲ್ಯಪದ್ಧತಿಗಾಗಲಿ, ಕೈವಲ್ಯಕಲ್ಪವಲ್ಲರಿ ಗಾಗಲಿ ದರ್ಪಣವಲ್ಲ; ಅದನ್ನೊಂದು ಸ್ವತಂತ್ರ ಕೃತಿಯೆಂದೇ ಹೇಳಬಹುದು: ಅದರ ಹೆಸರನ್ನು ಸಾಮಾನ್ಯಾರ್ಥವಲ್ಲಿಯೆ ಗ್ರಹಿಸಬೇಕು. ಈ ಎರಡು ಗ್ರಂಥಗಳಲ್ಲಿರುವಂತೆ ತತ್ತ್ವವಿವೇಚನೆ, ಮತಪ್ರಕ್ರಿಯೆ, ಶಾಸ್ತ್ರಪ್ರಮೇಯಗಳು ಅದರಲ್ಲಿ ಕಂಡುಬರುವುದಿಲ್ಲ; ಅವುಗಳಲ್ಲಿರುವಂತೆ ಸ್ಥಲವಿಂಗಡನೆಯಿಲ್ಲ. ಅನುಭವ-ಅನುಭಾವಗಳ ಸರಳಾಭಿವ್ಯಕ್ತಿಯು ಹಾಡು ಗಳಲ್ಲಿ ಮೂಡಿದೆ: ಕಾವ್ಯಾಂಶವು ಕಡಿಮೆಯಾಗಿ ಬೋಧನೆ. ಸ್ವಾಭಿವ್ಯಕ್ತಿಪ್ರವೃತ್ತಿಗಳೆ ಈ ಹಾಡುಗಳ ಮುಖ್ಯೋದ್ದೇಶ ವಾಗಿವೆ.

ಕೈವಲ್ಯದರ್ಪಣದಲ್ಲಿ ೧೪೧ ರಚನೆಗಳಿವೆ. ಅವುಗಳಲ್ಲಿ ಸುಮಾರು ಅರ್ಧದಷ್ಟು (೭೫) ಮಾತ್ರ ಕೃತಿಯ ಮಾದರಿಯಲ್ಲಿವೆ. ಉಳಿದವುಗಳಲ್ಲಿ ಸಂದೇಹಾಸ್ಪದವಾದ ಒಂದನ್ನು ಸೇರಿಸಿಕೊಂಡಂತೆ ೩೨ ಷಟ್ಪದಿಗಳು. ೬ ಪ್ರಬಂಧ ಗಳು, ೬ ಜ್ಞಾನಹೋಳಿಪದಗಳು, ಎರಡು ಜೋಗುಳಗಳು, ಎರಡು ಲಾಲಿಗಳು, ಎರಡು ತ್ರಿವಿಧಿಗಳು, ಮೂರು ವಾಚ್ಯಮಾಲಿಕೆಗಳು, ಒಂದೊಂದು 'ವೃತ್ತಶ್ಲೋಕ', ನಿರಾಲಂಬವಚನ ಮತ್ತು ಪರಾಕು ಇವೆ. ಇವಲ್ಲದ ರಚನೆ ಗಳನ್ನು ಪದಗಳು ಮತ್ತು 'ಕೃತಿ'ಗಳು ಎಂದು ವಿಂಗಡಿಸಬಹುದು. ಪದಗಳು ಹದಿನಾಲ್ಕು ಇವೆ. ಇವು ನಾಲ್ಕು ನಾಲ್ಕು ಪಙ್ಕ್ತಿಗಳ ಚರಣಗಳನ್ನು ವಿವಿಧ ಸಂಖ್ಯೆಗಳಲ್ಲಿ ಪಡೆದಿವೆ. ಕೆಲವಕ್ಕೆ 'ಪಲ್ಲವಿ' ಇದೆ. ಉಳಿದವಕ್ಕೆ ಇಲ್ಲ. ಪ್ರತಿಯೊಂದು ನುಡಿಯು ನಂತರವೂ ಏಕವಾಕ್ಯತೆಯಿದ್ದು ಪುನರಾವೃತ್ತಿಹೊಂದುವ ಮಾತುಧಾತುಖಂಡವಿರ ದಿರುವ ರಚನೆಗಳನ್ನು ಪದಗಳೆಂದು ವೀರಶೈವ ವಾಗ್ಗೇಯಕಾರರು ಕರೆದಿರುವಂತಿದೆ. ಈ 'ಪದ'ಗಳನ್ನು ದಾಸರ ಪದ ಗಳಿಂದ ಭಿನ್ನವಾಗಿ ತಿಳಿದುಕೊಳ್ಳಬೇಕು. ಹಾಡಿನಲ್ಲಿರುವ ಒಂದೊಂದು ನುಡಿಗೂ ಪದವೆಂಬ ಹೆಸರು ಇರುವುದನ್ನು ಕೈವಲ್ಯಪದ್ಧತಿ ಮತ್ತು ಕೈವಲ್ಯಕಲ್ಪವಲ್ಲರಿಗಳಿಂದ ಅನುಮಾನಿಸಬಹುದು. ಇಂತಹ ಪದಗಳ ಮಾಲಿಕೆಯನ್ನು ಕೈವಲ್ಯ ದರ್ಪಣದಲ್ಲಿ ಪದಗಳೆಂದೆ ವ್ಯವಹರಿಸಿದೆ. ಬಿಡಿಯ ನುಡಿಗಳನ್ನು ಪದ್ಯವೆಂದು ವ್ಯವಹರಿಸಿದೆ. ಇಂತಹ ಒಂದು ಬಿಡಿ ಪದ್ಯವೂ ಇಲ್ಲಿ ದೊರೆಯುತ್ತದೆ. ಇದಲ್ಲದೆ ಸ್ವರವಚನ ಎಂಬ ಹೆಸರೂ ಕೈವಲ್ಯದರ್ಪಣದ ಎರಡು ಹಾಡುಗಳಿಗೆ ಅಳವಟ್ಟಿದೆ. ಒಂದಕ್ಕೆ ರಾಗನಿರ್ದೇಶವಿದೆ. ಇನ್ನೊಂದಕ್ಕೆ ಇಲ್ಲ. ನಿಜಗುಣ ಮತ್ತು ಸರ್ಪಭೂಷಣರುಗಳಲ್ಲಿ ಈ ಹೆಸರನ್ನು ದಾಸರ 'ಪದ' ಅಥವಾ ತ್ಯಾಗರಾಜಾದಿಗಳ 'ಕೃತಿ'ಗೆ ಪರ್ಯಾಯವಾದ ಅಥವಾ ಸಮಾನವಾದ ಶಬ್ದವೆಂದು ತಿಳಿಯಲು ಅವಕಾಶವಿದೆ. ಬಾಲಲೀಲಾಮಹಾಂತಲಿಂಗನಲ್ಲಾದರೆ ಈ ಸಮೀಕರಣವನ್ನು ಅಬಾಧಿತವಾಗಿ ಮಾಡು ವಂತಿಲ್ಲ: ಒಂದೆ ರಚನೆಯುಳ್ಳ ಹಾಡುಗಳನ್ನು ಪದ, ಪದಸ್ವರವಚನ ಎಂದು ಬೇರೆಬೇರೆಯಾಗಿ ಕರೆದಿರುವುದು ಕೈವಲ್ಯದರ್ಪಣದಲ್ಲಿ ಕಂಡುಬರುತ್ತದೆ.

ಕೈವಲ್ಯದರ್ಪಣದ ಹಾಡುಗಳಲ್ಲಿ ನಿಜಗುಣ ಮತ್ತು ಸರ್ಪಭೂಷಣರ ಹಾಡುಗಳಲ್ಲಿರುವುದಕ್ಕಿಂತ ಹೆಚ್ಚಿನ ಪ್ರಯೋಗಶೀಲತೆ ಮತ್ತು ಪ್ರಯೋಗವೈವಿಧ್ಯಗಳನ್ನು ಕಾಣಬಹುದು. ಅಲ್ಲಿ ಹಾಡುಗಳನ್ನು ಪಲ್ಲವಿ ಮತ್ತು (ಅನೇಕ) ಚರಣ ಎಂದೇ ವಿಭಾಗಿಸಿದ್ದರೂ 'ಕರಕೊಂಡು ಹೋಗೋ ಎನ್ನ' ಮತ್ತು 'ಬೇಡುವೆ ವರವ ನಿಮ್ಮೊಂದಕೊಡೋ' ಎಂಬ ಎರಡು ಹಾಡುಗಳಲ್ಲಿ ಅನುಪಲ್ಲವಿಯ ಬಳಕೆಯಿದೆ. ಇವೆರಡರ ರಚನೆಯೂ ಹೆಚ್ಚುಕಡಿಮೆ ಒಂದೆ ಆಗಿದೆ:

ಎರಡು ಪಙ್ಕ್ತಿಗಳ ಪಲ್ಲವಿ, ಎರಡು ಪಙ್ಕ್ತಿಗಳ ಅನುಪಲ್ಲವಿ, ಮತ್ತು ಮೂರು ಪಙ್ಕ್ತಿಗಳ ಚರಣಗಳು. ಮೊದಲನೆಯದರ ಚರಣದಲ್ಲಿ ಆರು ಪಙ್ಕ್ತಿಗಳಿದ್ದರೆ ಎರಡನೆಯದರಲ್ಲಿ ನಾಲ್ಕೆ ಇವೆ. ಮೊದಲನೆಯದರಲ್ಲಿ ಪಲ್ಲವಿ, ಅನುಪಲ್ಲವಿ ಚರಣಗಳು ಎರಡೆರಡು ಪಙ್ಕ್ತಿಗಳ ಘಟಕದಿಂದಾಗಿದ್ದು. ಪ್ರತಿಯೊಂದು ಘಟಕದ ಪಙ್ಕ್ತಿಯನ್ನೂ ಹ್ರಸ್ವ. ಹ್ರಸ್ವತರ ಎಂಬ ದ್ವಿತೀಯಾಕ್ಷರದಲ್ಲಿ ಒಳಪ್ರಾಸವಿರುವ ಎರಡು ಖಂಡಗಳನ್ನಾಗಿ ವಿಭಾಗಿಸಿಕೊಂಡಿದೆ. ಪಲ್ಲವಿ ಮತ್ತು ಮತ್ತು ಚರಣಗಳ ಘಟಕಗಳಲ್ಲಿ ದ್ವಿತೀಯ ಪಙ್ಕ್ತಿಯು ಹ್ರಸ್ವವೂ ಅನುಪಲ್ಲವಿಮತ್ತುಚರಣಗಳಲ್ಲಿಅಂತ್ಯಪಙ್ಕ್ತಿಯು (ಸಾಪೇಕ್ಷವಾಗಿ) ದೀರ್ಘವೂ ಆಗಿವೆ. 'ಬೇಡುವೆ ವರವ' ಎಂಬ ಎರಡನೆಯ ಹಾಡಿನಲ್ಲಿ ಇದೇ ರಚನೆಯಿದೆ. ಆದರೆ ಚರಣಗಳಲ್ಲಿ ಮೂರು ಘಟಕಗಳ ಬದಲು ಎರಡೆರಡು ಮಾತ್ರ ಇವೆ. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕೃತಿರಚನೆ ಮಾಡಿದರೂ ಸರ್ಪಭೂಷಣನ ಹಾಡುಗಳಲ್ಲಿ ಅನುಪಲ್ಲವಿಯು ಇಲ್ಲದೆಯೆ ಇರುವುದೂ ಬಾಲಲೀಲಾ ಮಹಾಂತಲಿಂಗನ ಎರಡರಲ್ಲಿ ಮಾತ್ರ ಅನುಪಲ್ಲವಿಯಿರುವುದೂ ಬಾಲಲೀಲಾಮಹಾಂತಲಿಂಗನಂತೆಯೆ ಉತ್ತರ ಕರ್ಣಾಟಕದಲ್ಲಿಯೆ, ಹತ್ತೊಂಬತ್ತನೆಯ ಶತಮಾನದಲ್ಲಿಯೆ ಇದ್ದ ಶಿಶುನಾಳ ಷರೀಫನ ಹಾಡುಗಳಲ್ಲಿ ಅನುಪಲ್ಲವಿಯು ವಿಪುಲವಾಗಿ ಬಳಕೆಯಾಗಿರುವುದೂ ಏಕೆಂಬುದು ಚಿಂತ್ಯವಾಗಿದೆ.

ಬಾಲಲೀಲಾಮಹಾಂತಲಿಂಗನ ಹಾಡುಗಳಲ್ಲಿ ಹೆಚ್ಚು ಪ್ರಯೋಗಶೀಲತೆಯಿದೆ ಎಂಬುದನ್ನು ಈಗಾಗಲೆ ಸೂಚಿಸಿದೆ. ಹೀಗೆ, ಪಲ್ಲವಿ ಮತ್ತು ಚರಣಗಳಲ್ಲಿರುವ ಪಙ್ಕ್ತಿಗಳ ಅನುಪಾತವು ಇಲ್ಲಿ ೧ : ೨. ೧ : ೪. ೨ : ೨. ೨ : ೪. ೨ : ೬. ೩ : ೨. ೩ : ೩. ೩ : ೪. ೩ : ೬. ೪ : ೪. ೪ : ೬. ೪ : ೮. ೬ : ೪ ಎಂದು ವಿವಿಧವಾಗಿದೆ. ೩ : ೨ ಎಂಬ ಏಕೈಕ ನಿದರ್ಶನದಲ್ಲಿ ಪಲ್ಲವಿಯ ಮೂರನೆಯ ಪಙ್ಕ್ತಿಯು ಮೊದಲನೆಯ ಪಙ್ಕ್ತಿಯ ಪುನರುಚ್ಚಾರವೆ ಆಗಿದೆ; ಆದುದರಿಂದ ಅದನ್ನು ೨ : ೨ ಎಂಬ ವರ್ಗಕ್ಕೇ ಸೇರಿಸಬಹುದು. ಪಙ್ಕ್ತಿಯನ್ನು ಸಮಾನ ಪ್ರಾಸವಿರುವ, ಒಳ ಪ್ರಾಸವಿರುವ ಅಥವಾ ಇಲ್ಲದಿರುವ ಎರಡು ವಿಷಮಖಂಡಗಳನ್ನಾಗಿ ಒಡೆಯುವ ಪ್ರವೃತ್ತಿಯು ಈ ವಾಗ್ಗೇಯ ಕಾರನಲ್ಲಿ ಬಲಿತಿದೆ; ಪ್ರಾಸ ಮತ್ತು ಯತಿಗಳ ದೃಷ್ಟಿಯಿಂದ ಬೇರೆ ಬೇರೆಯಾಗಿಯೆ ಒಡೆದುಕೊಳ್ಳಬಹುದಾದ ಪಙ್ಕ್ತಿರಚನೆಯೂ ಅಲ್ಲಲ್ಲಿ ಕಂಡುಬರುತ್ತದೆ.

ಒಂದಕ್ಕಿಂತ ಹೆಚ್ಚು ಚರಣಗಳು ಎಂಬುದೆ ಇಲ್ಲಿಯೂ ನಿಯಮ; ಮೂರು ಅಥವಾ ಐದು ಚರಣಗಳ ಹಾಡುಗಳೆ ಅತ್ಯಧಿಕ ಸಂಖ್ಯೆಯಲ್ಲಿವೆ. ಒಂಬತ್ತು, ಹನ್ನೊಂದು, ಹದಿಮೂರು, ಹದಿನೇಳು ಮತ್ತು ಇಪ್ಪತ್ತೇಳು ನುಡಿಗಳಿರುವ ಹಾಡುಗಳೂ ಇಲ್ಲದಿಲ್ಲ. ಬೆಸಸಂಖ್ಯೆಯ ಚರಣಗಳೆ ನಿಯಮವಾದರೂ ನಾಲ್ಕು ಚರಣಗಳಿರುವ ಏಕೈಕ ನಿದರ್ಶನವೂ ದೊರೆಯುತ್ತದೆ. ಒಂದೆ ಚರಣದಲ್ಲಿ ಪಙ್ಕ್ತಿಗಳು ನಿಯತವಾದ ಮಾದರಿಯನ್ನು ಅನುಸರಿಸುವುದೆ ಹೆಚ್ಚು : ಅವೆಲ್ಲ ಸಮಾನವಾಗಿ ದೀರ್ಘವಾಗಿರಬಹುದು : ೧–೩ ದೀರ್ಘವೂ ೨–೪ ಹ್ರಸ್ವವೂ ಆಗಿರಬಹುದು; ೧, ೩, ೪ ದೀರ್ಘವಾಗಿದ್ದು ಎರಡನೆಯದು ಹ್ರಸ್ವವಾಗಿರಬಹುದು : ಪಙ್ಕ್ತಿಯ ಅಂತರ್ವಿಭಾಗವು ಮೊದಲನೆಯ ಮತ್ತು ಅಥವಾ ಮೂರನೆಯ ಪಙ್ಕ್ತಿಯಲ್ಲಿರುವುದೆ ಹೆಚ್ಚು. ಒಂದೆ ಹಾಡಿನ ಎಲ್ಲ ಚರಣಗಳಲ್ಲಿಯೂ ಪಙ್ಕ್ತಿ ಸಂಖ್ಯೆಯು ನಿಯತವಾಗಿ ಒಂದೆ ಆಗಿರುತ್ತದೆ; ಪ್ರಬಂಧವೆಂದು ಕರೆಯಲಾಗಿರುವ ನಿದರ್ಶನಗಳನ್ನು ಬಿಟ್ಟರೆ ಇದು ಕಡ್ಡಾಯವಾದ ನಿಯಮ. ಒಂದೇ ಚರಣದಲ್ಲಿರುವ ಪಙ್ಕ್ತಿಗಳಲ್ಲಿ ಬಂಧದ ನೈಯತ್ಯವು ತಪ್ಪಿ ಅಂತ್ಯ ಮತ್ತು ಉಪಾಂತ್ಯ ಪಙ್ಕ್ತಿಗಳು ದೀರ್ಘತಮವಾಗಿರುವುದರ ನಿದರ್ಶನಗಳೂ ಇವೆ. ಒಂದೆ ಹಾಡಿನ ಪಲ್ಲವಿ. (ಅನುಪಲ್ಲವಿ) ಮತ್ತು ಚರಣಗಳಲ್ಲಿರುವ ಎಲ್ಲ ಪಙ್ಕ್ತಿಗಳ ಉದ್ದವೂ ಸಾಮಾನ್ಯವಾಗಿ, ಹೆಚ್ಚುಕಡಿಮೆ ಸಮಾನವಾಗಿರುತ್ತದೆ. ಆದರೆ ಪಲ್ಲವಿಯದೋ ಚರಣದ್ದೋ ಪಙ್ಕ್ತಿಗಳು ಹ್ರಸ್ವತಮ ಅಥವಾ ದೀರ್ಘತಮವಾಗಿರುವ ಅಪವಾದಗಳೂ ಸಾಕಷ್ಟು ದೊರೆಯುತ್ತವೆ.

ಹಾಡಿನ (ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳೆಂಬ) ಪ್ರತಿಯೊಂದು ಖಂಡದಲ್ಲಿಯೂ ದ್ವಿತೀಯಾಕ್ಷರ ಪ್ರಾಸವೆ ನಿಯಮ : ಪಙ್ಕ್ತಿವಿಭಜನೆಗೆ ಇದೇ ಮುಖ್ಯವಾದ ಆಧಾರ. ಪ್ರಾಸವೆ ಇಲ್ಲದ ಗೀತಖಂಡವಿರುವ ಏಕೈಕ ನಿದರ್ಶನವೂ ಇಲ್ಲಿದೆ. ದ್ವಿತೀಯಾಕ್ಷರಪ್ರಾಸದಂತೆಯೆ ಅಂತ್ಯಾಕ್ಷರಪ್ರಾಸವಿರುವ ಕೆಲವು ನಿದರ್ಶನಗಳೇನೋ ಇವೆ ; ಆದರೆ ಇದು ಪ್ರಯತ್ನಪೂರ್ವಕವಾಗಿಯಲ್ಲದೆ ಸಹಜವಾಗಿ—ಬಹುಶಃ ಅನಿವಾರ್ಯವಾಗಿ—ಮೂಡಿದ ಅಂತ್ಯಪ್ರಾಸ. ಪಲ್ಲವಿ. (ಅನು ಪಲ್ಲವಿ)ಮತ್ತುಚರಣಗಳಲ್ಲಿ ಮಾತುವು ಎರಡೆರಡು ಪಙ್ಕ್ತಿಗಳ ಘಟಕವಾಗಿ–ಸಹಜವಾಗಿಯೆ ವಿಭಾಗವಾಗುತ್ತದೆ: ಆದರೆ ಒಂದೊಂದು ಗೀತಖಂಡಕ್ಕೂ–ಎಂದರೆ ಪಲ್ಲವಿ. ಅನುಪಲ್ಲವಿ ಮತ್ತುಬೇರೆಬೇರೆ ಚರಣಗಳಿಗೂ–ಪ್ರಾಸವು ಬೇರೆಬೇರೆಯೆ ಇರುತ್ತದೆ. ಈಗಾಗಲೆ ಸೂಚಿಸಿರುವಂತೆ ಪಙ್ಕ್ತಿವಿಭಜನೆಯಿಂದಾದ ಎರಡು ಅಂತಃಖಂಡಗಳಲ್ಲಿ ಪರಸ್ಪರವಾಗಿ

ದ್ವಿತೀಯಾಕ್ಷರ ಪ್ರಾಸವಿರಬಹುದು ; ಎರಡನೆಯ ಖಂಡಗಳಲ್ಲಿಯೆ ಪರಸ್ಪರವಾದ ದ್ವಿತೀಯಾಕ್ಷರ ಪ್ರಾಸವಿರಬಹುದು : ಯಾವುದೆ ಪ್ರಾಸವು ಇರದೆ ಹೋಗಬಹುದು. ಇಂತಹ ಹ್ರಸ್ವಖಂಡಗಳನ್ನು ಯತಿ ಮತ್ತು ಪ್ರಾಸಗಳ ಸೌಕರ್ಯಕ್ಕಾಗಿ ಏರ್ಪಡಿಸಿಕೊಂಡಿರುವುದೆ ಹೆಚ್ಚು. ಸರ್ಪಭೂಷಣನಲ್ಲಿರುವಂತೆಯೆ ಇಲ್ಲಿಯೂ ಕೆಲವು ಹಾಡುಗಳಲ್ಲಿ ಪ್ರತಿಯೊಂದು ಪಙ್ಕ್ತಿಯ ನಂತರವೂ ಪಲ್ಲವಿಯ ಪ್ರಥಮ ಪಙ್ಕ್ತಿಯನ್ನಲ್ಲದೆ ಪಲ್ಲವಿಯ ಅಂತ್ಯಖಂಡವನ್ನೋ ಬೇರೆ ನಿಯತ ವಾದ ಮಾತುಖಂಡವನ್ನೋ ಪುನರಾವರ್ತನೆ ಮಾಡುವುದುಂಟು. ಇಂತಹ ಪುನರಾವರ್ತನೆಯು ಚರಣದ ಪ್ರತಿಯೊಂದು ಘಟಕದ ಅಂತ್ಯದಲ್ಲಿ ನಡೆಯಬಹುದು.

ಕೃತಿಯಲ್ಲದ ಇತರ ರಚನೆಗಳಲ್ಲಿ ಪದಗಳನ್ನು ಕುರಿತು ಈಗಾಗಲೆ ಪ್ರಸ್ತಾಪಿಸಿದೆ ; ಪಲ್ಲವಿಯಿರುವ ಮತ್ತು ಇಲ್ಲದಿರುವ ಎರಡು ವಿಧಗಳನ್ನೂ ಪದಗಳೆಂದೆ ಕೈವಲ್ಯದರ್ಪಣದ ಸಂಪಾದಕರು ತೋರಿಸಿರುವುದು ವರ್ಗೀಕರಣವನ್ನು ಸಂದಿಗ್ಧವನ್ನಾಗಿ ಮಾಡಿದೆ : ಪಲ್ಲವಿಯೆಂದು ತೋರಿಸಿರುವುದನ್ನು ಮೊದಲನೆಯ ನುಡಿಯೆಂದೋ. ಪಲ್ಲವಿಯಿಲ್ಲದವು ಗಳ ಮೊದಲನೆಯ ನುಡಿಯನ್ನು ಪಲ್ಲವಿಯೆಂದೋ ಇಟ್ಟುಕೊಂಡರೆ ರಚನೆಯ ಸ್ವರೂಪವೆ ವ್ಯತ್ಯಾಸವಾಗುತ್ತದೆ. ಅಲ್ಲದೆ ಈಗಾಗಲೆ ಸೂಚಿಸಿರುವಂತೆ, ಗೀತದ ಆರಂಭಖಂಡ ಎಂಬ ಅರ್ಥದಲ್ಲಿ ಮಾತ್ರ, ಏಕವಾಕ್ಯತಾ ಪುನರಾವೃತ್ತಿಯ ಪ್ರಸಕ್ತಿಯಿಲ್ಲದೆ. ಪಲ್ಲವಿ ಎಂಬ ಪದದ ಪ್ರಯೋಗವು ಇಲ್ಲಿ ಇದ್ದರೆ ಹಾಗೂ ರಚನೆಯ ಸ್ವರೂಪವು ವ್ಯತ್ಯಾಸ ವಾಗುತ್ತದೆ. ಈ ಹಾಡುಗಳ ಸಂಪಾದನೆಯಲ್ಲಿ ಪ್ರಾತಿನಿಧಿಕ ಆಕರ ಸಾಮಗ್ರಿಯ ಕೊರತೆಯೂ, ಸಂಪಾದನ ವಿಜ್ಞಾನದ ಅಭಾವವೂ ಕಂಡುಬರುತ್ತದೆ. ಅಲ್ಲದೆ ಈ ಸಂಗ್ರಹದಲ್ಲಿರುವ ರಚನೆಗಳಿಗೆ ಪ್ರಯೋಗಬಾಹುಳ್ಯವೂ ಇಲ್ಲದಿರುವುದ ರಿಂದ ಅವುಗಳ ಗೇಯಸ್ವರೂಪವನ್ನು ನಿರ್ಣಯಿಸುವುದು ಕಷ್ಟವಾಗಿದೆ. 'ಪದ' ಎಂಬ ಬೇರೆ ಶೀರ್ಷಿಕೆಯನ್ನು ಕೊಡದೆ ಮೊದಲನೆಯ ನುಡಿಯನ್ನು 'ಪಲ್ಲವಿ' ಎಂದು ತೋರಿಸಿದರೆ ರಚನಾಸಾದೃಶ್ಯದಿಂದಾಗಿ ಇವುಗಳನ್ನು ಕೃತಿಗಳೆಂದೆ ಸ್ವೀಕರಿಸಲು ಯಾವ ಅಡ್ಡಿಯೂ ಇರದು. ಸಂಗ್ರಹದ ಮೊದಲನೆಯ 'ಪಾಲಿಸೈ ಪರಮಶ್ರೀಗುರುನಾಥ 'ಎಂಬ ಹಾಡಿಗೆ ಸ್ವರವಚನ–ಪದ–ರಾಗ : ಶ್ರೀರಾಗ ಎಂಬ ಶೀರ್ಷಿಕೆಯಿರುವುದು ವರ್ಗೀಕರಣದ ತೊಡಕನ್ನು ಇಮ್ಮಡಿಗೊಳಿಸಿದೆ.

ಪ್ರಬಂಧವೆಂಬ ಶೀರ್ಷಿಕೆಯಿರುವ ಆರು ರಚನೆಗಳು ಕೈವಲ್ಯದರ್ಪಣದಲ್ಲಿವೆ. ಈ ಹೆಸರು ಭೈರವಿ ರಾಗದ ಅನ್ವಯ ಮತ್ತು ಸಂಸ್ಕೃತ ಭಾಷೆ—ಇವಿಷ್ಟೆ ಇವುಗಳಲ್ಲಿರುವ ಸಾಧಾರಣಾಂಶಗಳು. ಇವುಗಳಲ್ಲಿ ಕೆಲವಕ್ಕೆ ಪಲ್ಲವಿಯಿದೆ. ಕೆಲವಕ್ಕೆ ಇಲ್ಲ. ಪಲ್ಲವಿಯಿರುವ ಒಂದರ ನುಡಿಯಂತೂ ಸ್ಪಷ್ಟವಾದ ಷಟ್ಪದಿಯೆ ಆಗಿದೆ.ವಿಸ್ತಾರ. ಪಙ್ಕ್ತಿರಚನೆ. ರಚನಾ ತಂತ್ರ—ಎಲ್ಲದರಲ್ಲಿಯೂ ಇವು ಬೇರೆಬೇರೆಯೆ. ಒಂದರಲ್ಲಿ ಪ್ರತಿಯೊಂದು ಪಙ್ಕ್ತಿಯ (ಮತ್ತು ಪಙ್ಕ್ತಿಖಂಡದ) ಮೊದಲಿನಲ್ಲಿಯೂ ಬಸವೇಶಂ ಎಂಬ ನಿಯತಮಾತುವಿನ ಪುನರುಕ್ತಿಯಿದ್ದರೆ ಉಳಿದವುಗಳಲ್ಲಿ ಇಂತಹ ಪುನರುಕ್ತಿ ಯಿಲ್ಲ. ಇನ್ನೊಂದರಲ್ಲಿ (ಶ್ಯಾಮ ಕಲ್ಯಾಣಿರಾಗದ 'ಸ್ವಾಮಿನ್ ಶ್ರೀ ಪಶ್ಚಿಮವಳದೇಕ' ಎಂಬ ರಚನೆ; ಇದನ್ನು ಪ್ರಬಂಧ ವೆಂದು ನಮೂದಿಸದಿದ್ದರೂ ಹಾಗೆಯೆ ವರ್ಗೀಕರಿಸಬೇಕು) 'ಕೃತಕೃತ ಝಣಕೃತ ಝಂ ಝೇಂಕೃತ ಸ್ವಾಮಿನ್' ಎಂಬ ಪುನರುಕ್ತಿಯು ಪಲ್ಲವಿಯ ಮತ್ತು 'ನುಡಿ'ಯ ಅಂತ್ಯದಲ್ಲಿದೆ. ಸಂಗೀತಶಾಸ್ತ್ರದಲ್ಲಿ ಪ್ರಬಂಧವೆಂಬ ಶಬ್ದಕ್ಕೆ ವಿಶೇಷಾರ್ಥವಿದೆ : ಅದು ಇಲ್ಲಿ ಅನ್ವಿತವಲ್ಲ. ತಮಿಳರ ಸ್ತೋತ್ರಗೀತಗಳಲ್ಲಿ ಪ್ರಬಂಧವೆಂಬ ಒಂದು ಪ್ರಕಾರವಿದೆ. ಇವನ್ನು ದಿವ್ಯಪ್ರಬಂಧವೆಂದೂ ನಾಲಾಯಿರಪ್ರಬಂಧವೆಂದೂ ಹೇಳುತ್ತಾರೆ. ಇವುಗಳಿಗೂ ಕೈವಲ್ಯದರ್ಪಣದ ಪ್ರಬಂಧಗಳಿಗೂ ಯಾವ ರಚನಾಸಾದೃಶ್ಯವೂ ಇಲ್ಲ. ಸಂಸ್ಕೃತದಲ್ಲಿ ಗೀತಗೋವಿಂದದಂತಹ. ಕನ್ನಡದಲ್ಲಿ ಗೀತಗೋಪಾಲದಂತಹ ಗೇಯನಾಟಕಗಳಿಗೆ ಪ್ರಬಂಧಗಳೆಂಬ ಹೆಸರನ್ನು ಆಯಾ ವಾಗ್ಗೇಯಕಾರರೆ ಕೊಟ್ಟಿದ್ದಾರೆ. ಅಂತಹ ಅರ್ಥಸಂದರ್ಭವು ಇಲ್ಲಿ ಅನ್ವಿತವಲ್ಲ. ಒಟ್ಟಿನಲ್ಲಿ ಇವುಗಳನ್ನು ಈ ಹೆಸರಿನಿಂದ ಕರೆದಿರುವುದು ಏಕೆಂಬುದು ರಹಸ್ಯವಾಗಿಯೆ ಉಳಿದಿದೆ. ಇಂತಹ 'ಪ್ರಬಂಧ'ಗಳು ಶಿವಶರಣರನ್ನೂ ಒಳಗೊಂಡಂತೆ ಬೇರೆ ವಾಗ್ಗೇಯಕಾರರು ಯಾರಲ್ಲಿಯೂ ದೊರೆಯದಿರುವುದ ರಿಂದ ಈ ನಾಮಕರಣದ ಸಾರ್ಥಕತೆಯು ಪ್ರಶ್ನೆಯಾಗಿಯೆ ಉಳಿದುಕೊಂಡಿದೆ.

ಬಾಲಲೀಲಾಮಹಾಂತಲಿಂಗನ ಆರು 'ಜ್ಞಾನಹೋಳಿಪದ'ಗಳು ದೊರೆಯುತ್ತವೆ. ಇವುಗಳಿಗೆ ರಾಗ ಗಳನ್ನು ಹೇಳಿಲ್ಲ. ಈ ಪೈಕಿ ಮೂರರಲ್ಲಿ ಇವು ದುಂದುಮೆಪದಗಳಾಗಿದ್ದವೆಂಬ, ಎಂದರೆ ದುಂದುಮೆ (ದುಂದುಂ ಎಂದು ಶಬ್ದವನ್ನು ಕೊಡುವ ಚರ್ಮವಾದ್ಯ)ಯನ್ನು ನುಡಿಸಿಕೊಂಡು ಹೇಳುವ ಜಾನಪದಗೀತಪ್ರಕಾರಗಳಾಗಿದ್ದವೆಂಬ ಸೂಚನೆಯಿದೆ. ಇವೆಲ್ಲದರಲ್ಲಿಯೂ ಪಲ್ಲವಿಯ ಮಾತು ಒಂದೆ ಆಗಿದೆ : ೨:೪ ಎಂಬ ಪಙ್ಕ್ತಿಸಂಖ್ಯಾವಿನ್ಯಾಸ ವಿರುವ ಕೃತಿಯ ಮಾದರಿಯೆ ಇದೆ. ಈ ಪೈಕಿ ಒಂಬತ್ತು ಚರಣಗಳಲ್ಲಿ ಏಳರ ಪ್ರತಿಯೊಂದು ಪಙ್ಕ್ತಿಯೂ 'ಶಿವಯೋಗಿ ಶಿವಯೋಗ' ಎಂಬ ನಿಯತ ಮಾತುಖಂಡದಿಂದ ಪ್ರಾರಂಭವಾಗುತ್ತವೆ. ಉಳಿದವುಗಳು ಷಟ್ಪದಿಗಳು.

ವಾಗರ್ಥದೃಷ್ಟಿಯಿಂದ ಇವುಗಳಿಗೆ ಒಂದೆ ಹೆಸರು ಸಲ್ಲಬಹುದೋ ಏನೋ ! ರಚನೆಯ ದೃಷ್ಟಿಯಿಂದ ಒಂದೇ ಹೆಸರು ಅಸಾಧುವಾಗುತ್ತದೆ. ಹೋಳಿಹಬ್ಬದಂದು ದುಂದುಮೆಯನ್ನು ನುಡಿಸಿಕೊಂಡು ಹಾಡಲೆಂದು ರಚಿಸಿದ್ದ. ಶಿವಜ್ಞಾನ ಬೋಧನೆಯ ಉದ್ದೇಶದಿಂದ ರಚಿಸಿದ ಇವುಗಳನ್ನು ಜ್ಞಾನಹೋಳಿ ಪದಗಳೆಂದು ಕರೆದಿರಬಹುದು.

ಕೈವಲ್ಯದರ್ಪಣದಲ್ಲಿ ಏಳು ತೂಗುವ ಹಾಡುಗಳಿವೆ. ಅವುಗಳಲ್ಲಿ ಎರಡನ್ನು ಜೋಗುಳ ಪದಗಳೆಂದು ಕರೆದಿದೆ. ಒಂದರಲ್ಲಿ ೧:೪ ಎಂಬ ಪಙ್ಕ್ತಿಸಂಖ್ಯಾ ಅನುಪಾತವೂ ಪಲ್ಲವಿ ಹಾಗೂ ಮೊದಲೆರಡು ಚರಣಗಳ ಮೊದಲ ಮೂರು ಪಙ್ಕ್ತಿಗಳಲ್ಲಿಯೂ ನುಡಿಯ ಕೊನೆಯಲ್ಲಿಯೂ ಜೋಜೋ ಎಂಬ ಪುನರುಕ್ತಿಯೂ ಇವೆ. ಇನ್ನೊಂದರಲ್ಲಿ ಇಂತಹ ಪ್ರಾರಂಭಿಕ ಪುನರುಕ್ತಿಯಿಲ್ಲದಿದ್ದರೂ ೧:೨ ಎಂಬ ಪಙ್ಕ್ತಿಸಂಖ್ಯಾ ಅನುಪಾತವಿರುವ ಪಲ್ಲವಿ ಮತ್ತು ಚರಣಗಳ ಕೊನೆಯಲ್ಲಿ 'ಸಖಿಯರು' ಎಂಬ ನಿಯತ ಮಾತುಖಂಡದ ಆವೃತ್ತಿಯಿದೆ. ಉಳಿದ ಹಾಡುಗಳಲ್ಲಿ ಯಾವ ಆವೃತ್ತಿಯೂ ಇಲ್ಲ : ಆದರೆ ಅವು ಸ್ಪಷ್ಟವಾಗಿ ತೂಗುವ ಹಾಡುಗಳು. 'ಮಗನ ತೂಗಿರೋ' ಎಂಬಲ್ಲಿ ಒಳಪ್ರಾಸವಿಲ್ಲದೆ ಒಡೆದ ಎರಡು ಪಙ್ಕ್ತಿಗಳ ಪಲ್ಲವಿಯೂ ಇದ್ದು ಒಡೆದಿರುವ ಎರಡೆರಡು ಪಙ್ಕ್ತಿಗಳ ನಾಲ್ಕು ಚರಣಗಳೂ ಇವೆ. 'ಕಂದನ ತೂಗಿ ಬಂಧನವ ನೀಗುವೆ ಬನ್ನಿರೆ' ಎಂಬಲ್ಲಿ ಏಕ ಪಙ್ಕ್ತಿಯ ಪಲ್ಲವಿ, ಎರಡು ಪಙ್ಕ್ತಿಗಳಲ್ಲಿ ಮೊದಲನೆಯದನ್ನು ಸಮಾನಪ್ರಾಸವಿರುವಂತೆ ಒಡೆದಿರುವ ಮೂರು ಚರಣಗಳೂ, ಸಮಾನ ದೈರ್ಘ್ಯವಿದ್ದು ಅಂತರ್ವಿಭಾಗವಿಲ್ಲದಿರುವ ಎಂಟು ಚರಣಗಳೂ ಇವೆ. 'ತೂಗುವ ಬನ್ನಿರೆ' ಎಂಬಲ್ಲಿ ದೀರ್ಘತಮವಾದ ಏಕೈಕಪಙ್ಕ್ತಿಯ ಪಲ್ಲವಿಯೂ ದೀರ್ಘ-ಹ್ರಸ್ವ ಎಂಬ ನಾಲ್ಕು ಪಙ್ಕ್ತಿಗಳ ಐದು ಚರಣಗಳೂ ಅವುಗಳ ಹ್ರಸ್ವ ಪಙ್ಕ್ತಿಯುಮಳಗಳಲ್ಲಿ ಅಂತ್ಯಪ್ರಾಸವೂ ಇವೆ. ಇದನ್ನು ಸ್ವರವಚನವೆಂದು ಕರೆದಿದೆ. ಇನ್ನೆರಡು ಲಾಲಿ ಪದಗಳು. ಲಾಲಿ ಎಂದು ಮೊದಲಾಗುವ ಪಲ್ಲವಿಯಲ್ಲಿ ಎರಡು ಪಙ್ಕ್ತಿಗಳಿವೆ, ನಾಲ್ಕು ಪಙ್ಕ್ತಿಗಳ ಚರಣಗಳಿವೆ. ಈ ಪೈಕಿ ಒಂದರಲ್ಲಿ ಮೂರು ಚರಣಗಳೂ ಇನ್ನೊಂದರಲ್ಲಿ ದೀರ್ಘತಮವಾದ ೨,೩,೪ನೆಯ ಪಙ್ಕ್ತಿಗಳಿರುವ ನಾಲ್ಕನೆಯ ಚರಣವೂ ಇವೆ.

'ಮಾಯಾಗುಣಧ್ವಂಸಿ' ಎಂದು ಪ್ರಾರಂಭವಾಗುವ ನಾಲ್ಕು ನುಡಿಗಳ, ಪಲ್ಲವಿಯಿಲ್ಲದಿರುವ ಒಂದು ಸಂಸ್ಕೃತ ರಚನೆಯನ್ನು ವೃತ್ತಶ್ಲೋಕ ಎಂದು ಕೈವಲ್ಯದರ್ಪಣವು ಹೆಸರಿಸಿದೆ: ಇದು ಅದೆ ಗ್ರಂಥದಲ್ಲಿರುವ ಪಲ್ಲವಿರಹಿತ 'ಪದ'ಗಳನ್ನು ರಚನೆಯಲ್ಲಿ ಸಂಪೂರ್ಣವಾಗಿ ಹೋಲುತ್ತದೆ. ಸಂಸ್ಕೃತಭಾಷೆಯಲ್ಲಿರುವುದರಿಂದ ಇದನ್ನು ಹೀಗೆ ಕರೆದಿರಬಹುದು. ಈ ಗ್ರಂಥದಲ್ಲಿರುವ ಮಂಗಳಾರತಿಪದಗಳು ಕೃತಿಗಳನ್ನೆ ಹೋಲುತ್ತವೆ ; ಕೆಲವಕ್ಕೆ ರಾಗದ ಸೂಚನೆಯಿದೆ ; ಹಲವಕ್ಕೆ ಇಲ್ಲ. ಇವು ಸುಸ್ಪಷ್ಟವಾಗಿ ಆರತಿಯ ಹಾಡುಗಳು.

'ಶ್ರೀಮನ್ಮಹಾದೇವದೇವ' ಎಂದು ಮೊದಲಾಗುವ ಒಂದು 'ವಾಚ್ಯಮಾಲಿಕೆ'ಯು ಗದ್ಯದಲ್ಲಿದ್ದು ರಚನೆಯಲ್ಲಿ ಚೂರ್ಣಿಕೆಯನ್ನು ಹೋಲುತ್ತದೆ. 'ಲೌಕಿಕಾಚಾರಂಗಳಂ ಮೀರಿ' ಎಂದು ಪ್ರಾರಂಭವಾಗುವ ಒಂದು 'ನಿರಾಲಂಬದ ವಚನ'ವು ಶಿವನು ಲೋಕರ ಉದ್ಧಾರಕ್ಕೆಂದು ಶಿವೆಗೆ ಬೋಧಿಸಿದ ಗದ್ಯಖಂಡ. ಮೊದಲನೆಯದರಲ್ಲಿ ಪರಂಪರಾನುಗತವಾದ ಚೂರ್ಣಿಕೆಯ ಧಾಟಿಯಿರಬಹುದು : ಎರಡನೆಯದರಲ್ಲ ಗೇಯತೆಯು ಅತ್ಯಲ್ಪ. ಹೀಗೆಯೆ 'ಬಸವ ತ್ರಯಾತ್ಮಕ ತ್ರೈಸಮಯ' ಎಂದು ಪ್ರಾರಂಭವಾಗುವ ಪರಾಕುಗಳು ಎಂಬ ರಚನೆಯಲ್ಲಿ ಇಪ್ಪತ್ತೈದು ಖಂಡಗಳಿವೆ. ಇದರಲ್ಲಿಯೂ ಗೇಯತೆಯು ಅಲ್ಪವೆ. ಇದಲ್ಲದೆ 'ಶ್ರೀರಂಗಪಟ್ಟಣದ' ಎಂದು ಮೊದಲಾಗುವ ಒಂದು ವಾಚ್ಯಮಾಲಿಕಾಖಂಡವೂ 'ಶ್ರೀ ಜಗದ್ಗುರು' ಎಂದು ಗದ್ಯದಿಂದ ಪ್ರಾರಂಭವಾಗಿ ಒಂದು ಕಂದದಲ್ಲಿ ಮುಗಿಯುವ ವಾಚ್ಯಮಾಲಿಕೆಯೂ. 'ತನ್ನ ನಿಜವ ತಾನರಿಯದ' ಎಂಬ ಇನ್ನೊಂದು ವಾಚ್ಯಮಾಲಿಕೆಯೂ ದೊರೆಯುತ್ತವೆ. ಇವೆಲ್ಲ ಹಾಡುಗಳಲ್ಲ. ಚಾರಿತ್ರಕವಾಸನೆಯಿರುವ ಗದ್ಯಖಂಡಗಳು. ಈ ಸಂಗ್ರಹದಲ್ಲಿರುವ ಎರಡು ತ್ರಿವಿದಿಗಳೂ ಪಾರಂಪರಿಕ ಜಾನಪದ ಧಾಟಿಯಲ್ಲಿ ಹಾಡಿಕೊಳ್ಳುವಂತಹವುಗಳು.

ಕೈವಲ್ಯದರ್ಪಣದ ರಚನೆಗಳಿಗೆ ಕೇವಲ ಹತ್ತೊಂಬತ್ತು ರಾಗಗಳನ್ನು ಅಳವಡಿಸಿದೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು : ಕಲ್ಯಾಣಿ (೩). ಕಾಂಬೋದಿ (೨). ಜಂಗಲ್ (ಜಂಗ್ಲಾ ?) (೨). ದೇಶಿ (೭), ದ್ವಿಜಾವಂತಿ (೨). ಧನ್ಯಾಸಿ (೪). ನೀಲಾಂಬರಿ (೧). ಪೂರ್ವಿ (೧), ಬ್ಯಾಗಡೆ (೧), ಭೈರವಿ (೧೯). ಮೋಹನಕಲ್ಯಾಣಿ (೧). ಯರಕಲ ಕಾಂಭೋಜಿ (೪). ರೇಗುಪ್ತಿ (೧೨). ಶಂಕರಾಭರಣ (೧). ಶಾಹನಾ (೧). ಶ್ಯಾಮಕಲ್ಯಾಣಿ (೧). ಸಾರಂಗ (೪). ಸಾವೇರಿ (೫) ಮತ್ತು ಸುರಟಿ (೩). ಇವುಗಳಲ್ಲಿ ಜಂಗ್ಲಾ. ದ್ವಿಜಾವಂತಿ, ಶಾಹನಾ ಮತ್ತೆ ಶ್ಯಾಮಕಲ್ಯಾಣಿಗಳು ಹಿಂದೂಸ್ಥಾನೀ ಸಂಗೀತದಿಂದ ಹತ್ತೊಂಬತ್ತನೆಯ ಶತಮಾನದಲ್ಲಿ ಕರ್ಣಾಟಕ ಸಂಗೀತವನ್ನು ಪ್ರವೇಶಿಸಿದ ದೇಶ್ಯರಾಗಗಳು. ಬಾಲಲೀಲಾಮಹಾಂತಲಿಂಗನು ಇದ್ದುದೂ ಕೃತಿರಚನೆ ಮಾಡಿದ್ದೂ ಉತ್ತರ ಕರ್ಣಾಟಕದಲ್ಲಿ. ಅಲ್ಲಿ ಹಿಂದೂ

ಸ್ಥಾನೀ ಸಂಗೀತವೂ ಪ್ರಚಲಿತವಾಗಿದ್ದುದರಿಂದ ಈ ರಾಗಗಳ ಬಳಕೆಯು ಅಸಹಜವೇನಲ್ಲ. ಮೇಲ್ಕಂಡ ರಾಗಗಳೆಲ್ಲದರ ವಿಕಾಸವನ್ನು ಸವಿಸ್ತಾರವಾಗಿ ಬೇರೆಡೆಯಲ್ಲಿ ಮಾಡಿರುವುದರಿಂದ ಅವುಗಳ ಲಕ್ಷಣಗಳನ್ನು ಇಲ್ಲಿ ಪುನಃ ಹೇಳ ಬೇಕಾದುದಿಲ್ಲ.

ಕೇವಲ ನೂರೈವತ್ತುವರ್ಷಗಳಷ್ಟು ಹಿಂದೆ ಈ ಹಾಡುಗಳು ರಚಿತವಾಗಿದ್ದರೂ ಅವುಗಳಿಗೆ ತಾಳನಿರ್ದೇಶವನ್ನು ಮಾಡದಿರುವುದು ಆಶ್ಚರಿಯೆ ಸರಿ. ಮೇಲೆ ಪರಿಶೀಲಿಸಿರುವ ಎಲ್ಲಾ ಶಿವಶರಣರ ಹಾಡುಗಳಿಗೆ ನಿರ್ದಿಷ್ಟವಾದ ತಾಳಗಳನ್ನು ಅಳವಡಿಸದೆಯೆ ನಿರ್ದಿಷ್ಟ ಛಂದೋಬಂಧವಿರುವ ಲಯಗಳನ್ನು ಇಟ್ಟುಕೊಂಡು (ಉದಾ : ಕಂಚಿನತಾಳ, ಚಿಟಿಕೆ ಇತ್ಯಾದಿಗಳ ನೆರವಿನಿಂದ) ಇವುಗಳನ್ನು ಹಾಡುತ್ತಿದ್ದಿರಬಹುದೆ ಎಂಬ ಊಹೆಯು ಅಸಂಭಾವ್ಯವೇನಲ್ಲ; ಒಂದು ವೇಳೆ ನಿರ್ದಿಷ್ಟವಾದ ತಾಳಗಳನ್ನು ಅಳವಡಿಸಿದ್ದರೆ ಅವು ಸುಳಾದಿ ತಾಳಗಳೆ—ವಿಶೇಷವಾಗಿ ಅವುಗಳ ಛಾಪು ರೂಪಗಳೆ ಎಂಬುದು ನಿರ್ವಿವಾದ. ರಚನೆಯ ದೃಷ್ಟಿಯಿಂದ ಈ ವಾಗ್ಗೇಯಕಾರನು ಪ್ರತಿಭಾಶಾಲಿಯಲ್ಲ, ಪ್ರಯೋಗಶೀಲ ; ರಾಗ, ಲಯಗಳ ದೃಷ್ಟಿಯಿಂದ ಅಷ್ಟೊಂದು ಪ್ರಯೋಗಶೀಲನೂ ಅಲ್ಲ.

### ೩ (ಉ) ಶಿಶುನಾಳ ಷರೀಫ

ಈಗಾಗಲೆ ಸೂಚಿಸಿರುವಂತೆ ಶಿಶುನಾಳ ಷರೀಫನು ಶಿವಶರಣನೇನಲ್ಲ : ಗೋವಿಂದ ಯತಿಯೆಂಬ ಅದ್ವೈತಾಚಾರ್ಯನಿಂದ ಬ್ರಹ್ಮಜ್ಞಾನದ ಸಿದ್ಧಿಪಡೆದ ಮುಸಲಮಾನ : ಅವನ ಹಾಡುಗಳು ಎಲ್ಲ ಧರ್ಮಗಳ ಅನುಯಾಯಿಗಳನ್ನೂ—ಮುಸ್ಲಿಮರನ್ನೂ ಒಳಗೊಂಡಂತೆ—ಸದಾಚಾರ ಸನ್ಮಾರ್ಗಗಳಲ್ಲಿ ನಡೆಯುವಂತೆ ಪ್ರೇರಿಸಲು ರಚಿತವಾಗಿವೆ : ಹೀಗೆ. ಹರಿ, ಹರ, ಮಾರುತಿ, ಶಕ್ತಿಪರವಾದ ಬಗೆಬಗೆಯ ಸ್ತುತಿಗಳೂ ಸಮಾಜಸುಧಾರಣಾಪ್ರಯತ್ನವೂ ಅವನ ಹಾಡುಗಳಲ್ಲಿ ಕಂಡುಬರುತ್ತವೆ : ವೀರಶೈವಧರ್ಮದ ತತ್ತ್ವ, ಪ್ರಮೇಯ, ಪ್ರಕ್ರಿಯೆ ಮುಂತಾದವುಗಳನ್ನು ಅವು ಒಳಗೊಂಡಿಲ್ಲ. ಅವನು ಹುಟ್ಟಿ, ಬೆಳೆದುದು ಉತ್ತರಕರ್ಣಾಟಕದಲ್ಲಿ ; ಅಲ್ಲಿ ವೀರಶೈವಮತಾನುಯಾಯಿಗಳು ಬಹುಸಂಖ್ಯೆಯಲ್ಲಿರುವುದರಿಂದ ಅವರನ್ನೂ ತನ್ನ ಬೋಧೆಯ ಪರಿಧಿಯಲ್ಲಿ ಒಳಗೊಳ್ಳಲು ಅವರಿಗೆ ಅನ್ವಯಿಸುವ ಕೆಲವು ಹಾಡುಗಳನ್ನೂ ರಚಿಸಿದ್ದಾನೆ, ಅಷ್ಟೆ. ಆದುದರಿಂದ ಅವನ ಹಾಡುಗಳ ವಿವೇಚನೆಯು ಈ ಲೇಖನದ ವ್ಯಾಪ್ತಿಗೆ ಸೇರುವುದಿಲ್ಲ ; ಅವು ಪ್ರತ್ಯೇಕವಾದ ಪರಿಶೀಲನೆಗೆ ಅರ್ಹವಾಗಿವೆ.

ಗ್ರಂಥ ಸಂಪೂರ್ತಿಯ ದೃಷ್ಟಿಯಿಂದ ಅವನ ರಚನೆಗಳ ವಿಷಯದಲ್ಲಿ ಕೆಲವು ಸಂಗತಿಗಳನ್ನು ಸ್ಥೂಲವಾಗಿ ಇಲ್ಲಿ ಹೇಳಬಹುದು. ಅವನು ವಿಪುಲ ವಾಗ್ಗೇಯಕಾರ ; ಉಪಲಬ್ಧವಾದ ಸುಮಾರು ೫೩೨ ರಚನೆಗಳಲ್ಲಿ ೪೮೯ 'ಪದ'ಗಳೂ, ೩ ಲಾವಣಿಗಳೂ, ೨೨ ರಿವಾಯತ್‌ಗಳೂ, ೧೪ ರಿವಾಯತ್ ತತ್ತ್ವಪದಗಳೂ, ಕೆಲವು ಹೋಳಿಪದಗಳೂ, ಮಂಗಳಾರತಿ ಪದಗಳೂ, ಸ್ತೋತ್ರಗಳೂ, ದಂಡಕಗಳೂ, ಕಾಲಜ್ಞಾನಗಳೂ ಸೇರಿವೆ. ರಿವಾಯತ್‌ಗಳನ್ನೂ ದಕ್ಷಿಣಾದಿ ರಾಗತಾಳಗಳಲ್ಲಿ ಹೇಳಿರುವುದು ಒಂದು ಸ್ವಾರಸ್ಯ. ಕೆಲವು ದೀರ್ಘರಚನೆಗಳಲ್ಲಿ ಕವ್ವಾಲಿಗಳ ಛಾಯೆಯಿದೆ; ಆಸ್ಥಾಯಿ-ಅಂತರಾಗಳ ಆಭಾಸವಿದೆ ; ಆದರೆ ರಚನೆಗಳೆಲ್ಲವೂ ದಕ್ಷಿಣಾದಿಯವೇ : ಹಲವು ಪದಗಳಲ್ಲಿ ಅನುಪಲ್ಲವಿಯಿದೆ ; ತಾಳಗಳೆಲ್ಲ ಸುಳಾದಿತಾಳಗಳು ; ಬಿಲಂದಿ ಎಂಬ ಒಂದು ತಾಳದ ಹೆಸರು ಪುನಃಪುನಃ ಕಂಡುಬರುತ್ತದೆ ; ಇದರ ಅರ್ಥವು ಆಗುವಂತಿಲ್ಲ ; ಹಿಂದೂಸ್ಥಾನೀತಾಳವೊಂದರ ಅಪಭ್ರಂಶನಾಮವೋ, ವಿಳಂಬಿತ ಎನ್ನುವುದರ ತದ್ಭವವೋ ಇದ್ದರೂ ಇರಬಹುದು. ತಾಳಗಳಲ್ಲಿ ಆದಿ, ರೂಪಕ, ಝಂಪೆ, ಏಕ ಮತ್ತು ಅಟ್ಟತಾಳಗಳು ಮಾತ್ರ (ಬಹುಶಃ ಅವುಗಳ ಛಾಪುರೂಪದಲ್ಲಿ) ಪ್ರಯುಕ್ತವಾಗಿವೆ ; ಧ್ರುವ, ಮಠ್ಯ, ರಗಣಮಠ್ಯ, ಅರೆಝಂಪೆಗಳ ಬಳಕೆಯಿಲ್ಲ. ಷರೀಫಸಾಹೇಬನ ರಚನೆಗಳಲ್ಲಿ ಅಳವಟ್ಟಿರುವ ರಾಗಗಳನ್ನು ಹೀಗೆ ಪಟ್ಟಿ ಮಾಡಬಹುದು: ಅಸಾವೇರಿ, ಆನಂದಭೈರವಿ, ಆರಭಿ, ಕನ್ನಡ, ಕಲಿಂಗಡ, ಕಲ್ಯಾಣಿ, ಕಾಂಬೋಧಿ, ಕೇದಾರಗೌಳ, ಖಮಾಚ್, ಗೌಳ, ಜಂಜೂಟಿ, ತೆಲುಗು ಕಾಂಬೋದಿ, ತೋಡಿ, ದರ್ಬಾರ್, ದೇಶಿ, ಧನ್ಯಾಸಿ, ನಾಟಿ, ಪುನ್ನಾಗತೋಡಿ, ಪೂರ್ವಿ, ಬಿಲಹರಿ, ಬಿಹಾಗ್, ಬೇಗಡೆ, ಭೈರವಿ, ಮಧ್ಯಮಾವತಿ, ಮುಖಾರಿ, ಯದುಕುಲ ಕಾಂಬೋದಿ, ರೇಗುಪ್ತಿ, ಶಂಕರಾಭರಣ, ಶ್ರೀ, ಸಾರಂಗ, ಸಾವೇರಿ ಮತ್ತು ಹಂಸಧ್ವನಿ. ಇವುಗಳಲ್ಲಿ ಕಲಿಂಗಡವು ಶುದ್ಧವಾಗಿ ಹಿಂದೂಸ್ಥಾನೀರಾಗ ; ಖಮಾಚ್, ದರ್ಬಾರ್, ಬಿಹಾಗ್, ಸಾರಂಗಗಳು ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಹಿಂದೂಸ್ಥಾನೀ ಸಂಗೀತದಿಂದ ಕರ್ಣಾಟಕ ಸಂಗೀತವನ್ನು ಪ್ರವೇಶಿಸಿದ ದೇಶ್ಯರಾಗಗಳು. ಹಂಸಧ್ವನಿರಾಗವು ಹದಿನೆಂಟನೆಯ ಶತಮಾನದಲ್ಲಿ ಕರ್ಣಾಟಕ ಸಂಗೀತದಲ್ಲಿ ಉದ್ಭವಿಸಿದ ರಾಗ. ಮೇಲ್ಕಂಡ ರಾಗಗಳಲ್ಲಿ ಬಹುಭಾಗವನ್ನು ಬೇರೆಡೆ ಲಕ್ಷಿಸಲಾಗಿದೆ ; ಅವುಗಳ ವರ್ಣನೆ ಈ ಲೇಖನದ ವ್ಯಾಪ್ತಿಗೆ ಮೀರಿದ್ದು.

# "ಕಾವ್ಯಮೀಮಾಂಸಾಶಾಸ್ತ್ರಕ್ಕೆ ಶೈವಸಾಹಿತಿಗಳ ಕೊಡುಗೆ"

ಡಾ. ಕೆ. ಕೃಷ್ಣಮೂರ್ತಿ

ಕಾವ್ಯಮೀಮಾಂಸಾಶಾಸ್ತ್ರಕ್ಕೆ ಜನಕನೆಂಬ ಕೀರ್ತಿ ಭರತಮುನಿಗೆ ಸಲ್ಲುತ್ತದೆ. ಏಕೆಂದರೆ ಭಾರತೀಯಸಾಹಿತ್ಯತತ್ತ್ವಗಳಲ್ಲೆಲ್ಲ ಅತ್ಯಂತ ಪ್ರಖ್ಯಾತವಾದ ರಸಸಿದ್ಧಾಂತದ ಮೂಲಸೂತ್ರ ಹಾಗೂ ವಿವರಣೆಗಳನ್ನು ನಾವು ಅವನ ನಾಟ್ಯಶಾಸ್ತ್ರದಲ್ಲಿ ಮೊಟ್ಟಮೊದಲಿಗೆ ನೋಡುತ್ತೇವೆ. ಆದರೆ ಭರತನಿಗಿಂತ ಮೊದಲೇ ರಸಪ್ರಕ್ರಿಯೆ ಶೈವಸಾಹಿತಿಗಳಿಂದ ಆವಿಷ್ಕೃತವಾಗಿದ್ದಂತೆ ತೋರುತ್ತದೆ. ಭರತನೇ ರಸವನ್ನು ಕುರಿತ ಕೆಲವು ಕಾರಿಕೆಗಳನ್ನು ಹಿಂದಿನವರವೆಂದು ಉಲ್ಲೇಖಿಸಿದ್ದಾನೆ. ಈ ಹಿಂದಿನವರು ಯಾರೆಂಬ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದಿಲ್ಲ. ಅಲ್ಲಲ್ಲಿ ಒಂದೆರಡು ಸೂಚನೆಗಳು ಮಾತ್ರ ದೊರೆಯುತ್ತವೆ. ರಾಜಶೇಖರನ 'ಕಾವ್ಯಮೀಮಾಂಸೆ'ಯ ಆರಂಭದಲ್ಲಿಯೇ ಈ ಶಾಸ್ತ್ರ ಹೇಗೆ ಹುಟ್ಟಿತೆಂಬ ಬಗ್ಗೆ ಅಮೂಲ್ಯವಾದ ಈ ವಾಕ್ಯಗಳಿವೆ :

> **ಅಥಾತಃ** ಕಾವ್ಯಂ ಮೀಮಾಂಸಿಷ್ಯಾಮಹೇ ಯಥೋಪದಿದೇಶ
> **ಶ್ರೀಕಂಠಃ** ಪರಮೇಷ್ಠೀ ವೈಕುಂಠಾದಿಭ್ಯಃ ಚತುಃಷಷ್ಟಯೇ
> **ಶಿಷ್ಯೇಭ್ಯಃ**...."

ಭಾರತದ ಪ್ರಾಚೀನ ಪರಂಪರೆಯಂತೆ ಬ್ರಹ್ಮ ವಿಷ್ಣು ಮುಂತಾದ ೬೪ ಶಿಷ್ಯರಿಗೆ ಮೊದಲು ಕಾವ್ಯಮೀಮಾಂಸಾಶಾಸ್ತ್ರೋಪದೇಶ ಮಾಡಿದವನು ಸಾಕ್ಷಾತ್ ಪರಶಿವನೇ. ಮುಂದೆ ಮುಂದೆ ಗುರುಶಿಷ್ಯಪರಂಪರೆ ಬೆಳೆದು ಶಾಸ್ತ್ರವು 'ಕವಿರಹಸ್ಯ', 'ಔಕ್ತಿಕ', 'ರೀತಿನಿರ್ಣಯ', 'ಆನುಪ್ರಾಸಿಕ' ಇತ್ಯಾದಿ ೧೭ ಅಂಗಗಳಾಗಿ ವಿಂಗಡಿಸಲ್ಪಟ್ಟು ಒಂದೊಂದು ಒಬ್ಬೊಬ್ಬರಿಂದ ಪರಿಷ್ಕರಿಸಲ್ಪಟ್ಟಿತೆಂದು ಇಲ್ಲಿ ಹೇಳಲಾಗಿದೆ. ಹೀಗೆ ಪರಿಷ್ಕೃತವಾದ ಅಂಗಗಳಲ್ಲಿ ರೂಪಕದ ನಿರೂಪಣೆಯಲ್ಲಿ ಭರತನಿಗೆ ಅಗ್ರಪಾತ್ರವಿರುವಂತೆ, ರಸತತ್ತ್ವದ ಪ್ರತಿಪಾದನೆಯಲ್ಲಿ ನಂದಿಕೇಶ್ವರನ ಪಾತ್ರ ಹಿರಿದಾದುದು.

> ರೂಪಕನಿರೂಪಣೀಯಂ ಭರತಃ, ರಸಾಧಿಕಾರಿಕಂ ನಂದಿಕೇಶ್ವರಃ ।
> (ಕಾವ್ಯಮೀಮಾಂಸಾ)

ವಾಯುಪುರಾಣದ ಆಧಾರವನ್ನು ಉಲ್ಲೇಖಿಸಿ ರಾಜಶೇಖರನೇ ವಾಙ್ಮಯವನ್ನು 'ಸ್ವಾಯಂಭುವ', 'ಐಶ್ವರ', 'ಆರ್ಷ', 'ಆರ್ಷೀಕ', 'ಆರ್ಷಿಪುತ್ರಕ' ಎಂದು ವಿಭಾಗಿಸುತ್ತಾನೆ. ಇನ್ನೊಂದು ವಿಭಾಗಕ್ರಮವನ್ನು ಹೇಳುತ್ತ, ದೇವತೆಗಳ ದೇವಯೋನಿಗಳಾದ ಗಂಧರ್ವಕಿನ್ನರಾದಿಗಳ ಮತ್ತು ಮನುಷ್ಯರ ಮಾತೆಲ್ಲಕ್ಕೂ ಮೂಲವಾದ ಭಾಷೆಯನ್ನೇ ಎಂದರೆ ಸಂಸ್ಕೃತ, ಪ್ರಾಕೃತ, ಅಪಭ್ರಂಶ, ದೇಶಭಾಷಾದಿ ವಿಕೃತಿಗಳಿಗೆಲ್ಲ ಪ್ರಕೃತಿಯಾದ ಮೂಲಭಾಷೆ 'ಪಾರಮೇಶ್ವರ' ಎಂದು ರಾಜಶೇಖರನು ಸ್ಪಷ್ಟಪಡಿಸಿದ್ದಾನೆ :

> ಬ್ರಹ್ಮವಿಷ್ಣುರುದ್ರಗುಹಬೃಹಸ್ಪತಿಭಾರ್ಗವಾದಿಶಿಷ್ಯೇಷು
> ಚತುಃಷಷ್ಟೌ ಉಪದಿಷ್ಟಂ ವಚಃ ಪಾರಮೇಶ್ವರಂ ।
> ಕ್ರಮೇಣ ಚ ಸಂಚರತ್‌ದೇವೈಃ ದೇವಯೋನಿಭಿಶ್ಚ
> ಸುಧಾಮತ್ಯುಪಜೀವ್ಯಮಾನಂ ದಿವ್ಯಮಿತ್ಯುಪದಿಶ್ಯತೇ ।
> (ಕಾ. ಮೀ. ಪು. ೨೭)

ಈಗ ರಸಾಧಿಕಾರಿಕವನ್ನು ಬರೆದ ನಂದಿಕೇಶ್ವರನು ಯಾರು ? ವಾತ್ಸ್ಯಾಯನನ ಕಾಮಸೂತ್ರದಲ್ಲಿ ಇವನ ಉಲ್ಲೇಖ ಬಂದಿದೆ. ಒಂದು ಸಹಸ್ರ ಅಧ್ಯಾಯಗಳಿಂದ ಕೂಡಿದ ಕಾಮಶಾಸ್ತ್ರವನ್ನು ಬರೆದನೆಂದು ಹೇಳಲಾಗಿದೆ ಮಲ್ಲದೆ ಔದ್ದಾಲಕಿ, ಶ್ವೇತಕೇತು, ಬಾಭ್ರವ್ಯ, ಪಾಂಚಾಲ, ವಾತ್ಸ್ಯಾಯನ ಮುಂತಾದವರೆಲ್ಲ ನಂದಿಕೇಶ್ವರನ ಅ

ಬೃಹತ್ ಗ್ರಂಥದಿಂದಲೇ ತಮ್ಮ ವಿಷಯಗಳನ್ನು ಸಂಗ್ರಹಿಸಿದರೆಂದು ತಿಳಿಸಲಾಗಿದೆ. ಇವನು ಮಹಾದೇವನ ಅನುಚರನಾದ ನಂದಿಯೇ ಎಂದು ಕೂಡಾ ಸ್ಪಷ್ಟಪಡಿಸಲಾಗಿದೆ.

ಮಹಾದೇವಾನುಚರಶ್ಚ ನಂದೀ ಸಹಸ್ರೇಣಾಧ್ಯಾಯಾನಾಂ ಪೃಥಕ್
ಕಾಮಸೂತ್ರಂ ಪ್ರೋವಾಚ
(ವಾತ್ಸ್ಯಾಯನ ಕಾ.ಸೂ. ೧.೧.೮)

ಈ ಸೂತ್ರದ ವ್ಯಾಖ್ಯಾನಕಾರರು ಈ ಬಗ್ಗೆ ಇನ್ನೊಂದು ಮಾತನ್ನು ಸೇರಿಸಿದ್ದಾರೆ :

ದಿವ್ಯಂ ವರ್ಷಸಹಸ್ರಂ ಉಮಯಾ ಸಹ ಸುರತಸುಖಂ
ಅನುಭವತಿ ಮಹಾದೇವೇ ವಾಸಗೃಹದ್ವಾರಗತೋ ನಂದೀ
ಕಾಮಸೂತ್ರಂ ಪ್ರೋವಾಚ

ಈ ಪೌರಾಣಿಕಕಲ್ಪನೆ ಎಷ್ಟು ಪ್ರಾಚೀನವೆಂದರೆ, ಅದು ಕಾಲಿದಾಸನಿಗೂ ಪರಿಚಿತವಿದ್ದಿತು. ಕುಮಾರಸಂಭವದಲ್ಲಿ ಮನ್ಮಥಚೈತ್ರಯಾತ್ರಾವರ್ಣನೆಯ ಪ್ರಸಂಗದಲ್ಲಿ ವಸಂತಾಗಮನವನ್ನು ಮನಸಾರೆ ಬಣ್ಣಿಸುವ ಕಾಲಿದಾಸ ನಂದಿಯ ಒಂದು ಕೈಸನ್ನೆಯಿಂದ ಕಾಮಪರವಶವಾಗಿದ್ದ ಪ್ರಕೃತಿಯೆಲ್ಲ ಹೇಗೆ ಚಿತ್ರದಲ್ಲಿ ಬರೆದಿಟ್ಟಂತೆ ಸ್ತಬ್ಧವಾಯಿತೆಂಬುದನ್ನು ಹೀಗೆ ವರ್ಣಿಸಿದ್ದಾನೆ :

ನಿಷ್ಕಂಪವೃಕ್ಷಂ ನಿಭೃತದ್ವಿರೇಫಂ
ಮೂಕಾಂಡಜಂ ಶಾಂತಮೃಗಪ್ರಚಾರಂ ।
ತಚ್ಛಾಸನಾತ್ ಕಾನನಮೇವ ಸರ್ವಂ
ಚಿತ್ರಾರ್ಪಿತಾರಂಭಮಿವಾವತಸ್ಥೇ ॥
(ಕು.ಸಂ. III. ೪೨)

ರಸಗಳಲ್ಲೆಲ್ಲ ಶೃಂಗಾರವನ್ನು 'ರಸರಾಜ'ವೆನ್ನುವ ವಾಡಿಕೆಯಿದೆ. ಇದರ ಆದ್ಯಪ್ರವರ್ತಕ ನಂದಿಕೇಶ್ವರನೇ ಇರಬೇಕೆಂದು ಹೀಗೆ ಊಹಿಸಲು ಬರುವಂತಿದೆ. ಆನಂದವರ್ಧನನೂ ಕೂಡ,

ಶೃಂಗಾರ ಏವ ಮಧುರಃ ಪರಃ ಪ್ರಹ್ಲಾದನೋ ರಸಃ

ಎಂದು ಸೂತ್ರಿಸಿರುವದು ಈ ಸಂದರ್ಭದಲ್ಲಿ ಗಮನಾರ್ಹ. ನವರಸಗಳಲ್ಲಿ ಶೃಂಗಾರಕ್ಕೆ ಪರಮಪಟ್ಟವನ್ನು ಕಟ್ಟುವ ಪರಂಪರೆಗೆ ನಂದಿಕೇಶ್ವರನ ಪ್ರಭಾವವೂ ಹಿಂದಿರಬೇಕೆನಿಸುತ್ತದೆ. ಭಾವಪ್ರಕಾಶನಕಾರನಾದ ಶಾರದಾತನಯನೂ ಕೂಡ ತನ್ನ ರಸವಿವೇಚನೆಯಲ್ಲಿ ಪ್ರಾಚೀನಪರಂಪರೆಯನ್ನು ಉಲ್ಲೇಖಿಸುವಾಗ ನಂದಿಕೇಶ್ವರನಂತೆ ವಾಸುಕಿಯನ್ನು ನಿರ್ದೇಶಿಸಿರುವುದು ಇನ್ನೊಂದು ಪ್ರಮಾಣ. ಒಟ್ಟಿನಮೇಲೆ ಸಂಗೀತ, ನಾಟ್ಯ, ಕಾವ್ಯಮೀಮಾಂಸೆ ಇತ್ಯಾದಿ ಕಲೆಗಳ ಪರಂಪರೆಯೆಲ್ಲ ಶೈವಪ್ರಭಾವಲಯದಲ್ಲಿ ಸಂಚರಿಸುತ್ತದೆ.

ಶಾರದಾತನಯನು ಭಾವಪ್ರಕಾಶನದಲ್ಲಿ ನಂದಿಕೇಶ್ವರನೇ ನಾಟ್ಯಶಾಸ್ತ್ರದ ಮೊದಲ ಗುರುವೆಂದು ಸ್ಪಷ್ಟವಾಗಿಯೂ ವಿವರವಾಗಿಯೂ ತಿಳಿಸಿದ್ದಾನೆ. ನಂದಿಯಿಂದಲೇ ಬ್ರಹ್ಮನಿಗೆ, ಬ್ರಹ್ಮನಿಂದ ಮುಂದಿನ ಭರತಾದಿಗಳಿಗೆ ಈ ಶಾಸ್ತ್ರದ ಅಧ್ಯಾಪನಪರಂಪರೆ ಸಾಗುತ್ತದೆ.

ಕಲ್ಪಸ್ಯಾಂತೇ ಕದಾಚಿತ್ತು ದಗ್ಧ್ವಾ ಲೋಕಾನ್ ಮಹೇಶ್ವರಃ ।
ಸ್ವೇ ಮಹಿಮ್ನಿ ಸ್ಥಿತಃ ಸೋಽಯಂ ನೃತ್ಯನ್ನಾನಂದಮಂಥರಂ ॥
ಮನಸ್ಯೈವಾಸೃಜದ್ವಿಷ್ಣುಂ ಬ್ರಹ್ಮಾಣಂ ಚ ಮಹೇಶ್ವರಃ ।
ವಾಮತೋ ವೈಷ್ಣವೀ ಶಕ್ತಿಃ ಸ್ಥಿತಾ ಮಾಯಾಮಯೀ ವಿಭೋಃ ॥
ಅಂಬಿಕಾರೂಪಮಾಸ್ಥಾಯ ಸ್ಥಿತಾ ಸಾ ಸರ್ವಮಂಗಲಾ ।
ನಿಯೋಗಾದ್ದೇವದೇವಸ್ಯ ಬ್ರಹ್ಮಾ ಲೋಕಾನಥಾಸೃಜತ್ ॥
ಸೃಷ್ಟ್ವಾ ಚ ದೇವದೇವಸ್ಯ ಪುರಾವೃತ್ತಮಥಾಸ್ಮರತ್ ।
ದಿವ್ಯಂ ಚರಿತ್ರಮೈಶಂ ಮೇ ಕಥಮಧ್ಯಕ್ಷತಾಮಿಯಾತ್ ॥
.............................................
ಇತಿ ಚಿಂತಾಪರೇ ತಸ್ಮಿನ್ ಅಭ್ಯಗಾನ್ನಂದಿಕೇಶ್ವರಃ ।

ಸ ನಾಟ್ಯವೇದಮಧ್ಯಾಪ್ಯ ಸಪ್ರಯೋಗಂ ಚತುರ್ಮುಖಂ ॥
ಉವಾಚ ವಾಕ್ಯಂ ಬ್ರಹ್ಮಾಣಂ ನಂದೀ ತಚ್ಚಿಂತಿತಾರ್ಥವಿತ್ ।
ನಾಟ್ಯವೇದೋಪದಿಷ್ಟಾನಿ ರೂಪಕಾಣಿ ಚ ಯಾನಿ ತು ॥
ವಿಧಾಯ ತೇಷಾಮೇಕಂ ತು ರೂಪಕಂ ಲಕ್ಷಣಾನ್ವಿತಂ ।
ಭರತೇಷು ಪ್ರಯೋಜ್ಯಂ ತತ್ ತ್ವಯಾ ಸಮ್ಯಕ್‌ವಿಧಾನತಃ ॥
ತಸ್ಮಿನ್ ಪ್ರಯುಕ್ತೇ ಭರತೈಃ ಭಾವಾಭಿನಯಕೋವಿದೈಃ ।
ಪ್ರಾಕ್ತನಾನಿ ಚ ಕರ್ಮಾಣಿ ಪ್ರತ್ಯಕ್ಷಾಣಿ ಭವಂತಿ ತೇ ॥
ಏವಂ ಬ್ರುವನ್ನಂತರಧಾತ್ ನಂದೀ ಸ ಭಗವಾನ್ ಪ್ರಭುಃ ।

(ಭಾವಪ್ರಕಾಶನ, ಬರೋಡಾವೃತ್ತಿ, ಪುಟ ೫೬)

ಶಿವಲೀಲಾವೈಭವವನ್ನು ಕಣ್ಣಿಂದ ಸವಿಯಬೇಕೆಂಬ ಬ್ರಹ್ಮನ ಬಯಕೆ ಈಡೇರಲು ಭಾವಕೋವಿದರಿಂದ ಅಭಿನಯಿಸಲ್ಪಡುವ ನಾಟಕರಚನೆ ಬೇಕಾಯ್ತು. ಹೀಗೆ ರಚಿತವಾದ ನಾಟಕವೇ 'ತ್ರಿಪುರದಹನ'ವೆಂದು ನಾಟ್ಯಶಾಸ್ತ್ರದಲ್ಲಿಯೇ ಬರೆದಿದೆ. (IV-10) ಭಾವಪ್ರಕಾಶನದಲ್ಲಿ ಈ ನಾಟಕಪ್ರಯೋಗ ಶಿವನ ಸಮ್ಮುಖದಲ್ಲಿಯೇ ಆಯಿತೆಂದು ಹೇಳಲಾಗಿದೆ.

ನಾಟ್ಯಂ ಸಂದರ್ಶಯಾಮೋಽದ್ಯ ತ್ರಿನೇತ್ರಾಯ ಮಹಾತ್ಮನೇ ॥ (IV. ೫)

ಇದೇ ನಂದಿಕೇಶ್ವರನು 'ಅಭಿನಯದರ್ಪಣ'ವೆಂಬ ಗ್ರಂಥದ ಕರ್ತೃವೂ ಆಗಿರುವುದು ಇಲ್ಲಿ ಉಲ್ಲೇಖನೀಯ. ಹೀಗೆ ಸಂಸ್ಕೃತನಾಟಕದ ಉಗಮ ಶೈವಧರ್ಮದೊಂದಿಗೆ ಅನುಸ್ಯೂತವಾಗಿರುವುದರಿಂದಲೇ ಮಹಾಕವಿಗಳ ಸಂಪ್ರದಾಯದಲ್ಲಿ ಶಿವಭಕ್ತಿಗೆ ಕಾವ್ಯಾರಂಭದಲ್ಲಿ ಸಾಮಾನ್ಯವಾಗಿ ಪ್ರಥಮಸ್ಥಾನ ಸಿಕ್ಕುತ್ತದೆ. ಕಾಳಿದಾಸನ ಎಲ್ಲ ನಾಟಕಗಳ ಹಾಗೂ ಕಾವ್ಯಗಳ ಮಂಗಳಾಚರಣೆ ಶಿವಸ್ತುತಿರೂಪವನ್ನೇ ತಾಳಿದೆ. ಬಾಣನ ಮಂಗಳಾಚರಣೆಯೂ ಅಷ್ಟೇ. (ನಮಸ್ತುಂಗಶಿರಶ್ಚುಂಬಿ....ಜಯಂತಿ ಬಾಣಾಸುರಮೌಲಿಲಾಲಿತಾಃ—ಇತ್ಯಾದಿ) ಇದರಂತೆ ಪುಷ್ಪದಂತ (ಶಿವಮಹಿಮ್ನಃ ಸ್ತೋತ್ರ), ಮಲ್ಹಣ ಮುಂತಾದ ಶಿವಕವಿಗಳ ಭಕ್ತಿಸ್ತೋತ್ರ ಪರಂಪರೆಯೇ ನಿರರ್ಗಳವಾಗಿ ಮುಂದುವರೆಯುತ್ತದೆ.

ವಾಗ್ದೇವಿಯು ಸರಸ್ವತಿಯೆಂದು ಸಾಮಾನ್ಯವಾಗಿ ಹೇಳುವ ರೂಢಿಯಿದ್ದರೂ, ನವರಸಗಳ, ಚತುರ್ವಿಧಾಭಿನಯಗಳ, ತಾಂಡವಾದಿ ನಾಟ್ಯಗಳ ಲೀಲಾವಿಹಾರಿಯಾದ ನಟರಾಜನೆಂದರೆ ಶಿವನೇ ಎಂಬುದು ಸರ್ವಸಂಪ್ರದಾಯಗಳಿಗೂ ಸಮ್ಮತವಾದ ವಿಷಯ. ಆದ್ದರಿಂದಲೇ ಶಂಕರಾಚಾರ್ಯರ 'ಸೌಂದರ್ಯಲಹರೀ' ಸ್ತೋತ್ರದಲ್ಲಿ :

ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ
ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್ ।
ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ,
ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ॥ (ಶ್ಲೋಕ ೪೧)

ಶಿವನ ಆನಂದಭೈರವಸ್ವರೂಪವನ್ನು 'ನವರಸಮಹಾತಾಂಡವ ನಟ' ಎಂದು ಬಣ್ಣಿಸಲಾಗಿದೆ. ಲಲಿತಾತ್ರಿಶತಿಯಲ್ಲಿ "ಈಶತಾಂಡವಸಾಕ್ಷಿಣೀ" ಎಂಬ ನಾಮಕ್ಕೆ ಶಂಕರಾಚಾರ್ಯರು ಭಾಷ್ಯ ಬರೆಯುತ್ತ ಹೀಗೆಂದಿದ್ದಾರೆ.

"ಈಶತಾಂಡವಸ್ಯ ಪರಮೇಶ್ವರ-ನಾಟ್ಯಾಭಿವ್ಯಂಜಿತ-ಚತುಃಷಷ್ಟಿಕಲೋಪದೇಶಸ್ಯ ಸಾಕ್ಷಿಣೀ ; ತದುಕ್ತಂ-
ನರ್ತನಾದ್ಧಿ ಪರೇಶಸ್ಯ ಚತುಷಷ್ಟಿಕಲಾಜನಿಃ ।

(ವಾಣಿವಿಲಾಸ ಪ್ರೆಸ್ ಆವೃತ್ತಿ, ೧೯೨೪, ಪುಟ ೩೭)

ಇತಿ ಪ್ರದೋಷಸ್ತೋತ್ರೇ ಈಶತಾಂಡವನರ್ತನವರ್ಣನಮತಿಸ್ಫುಟಮಿತಿ ನೇಹ ಲಿಖ್ಯತೇ ॥" ಸಿಂಹಭೂಪಾಲನ 'ಸಂಗೀತ ರತ್ನಾಕರ'ದ ಮಂಗಳಶ್ಲೋಕ ಶಿವನ ಅಭಿನಯ ರಸಿಕತೆಯನ್ನು ಹೀಗೆ ಕೊಂಡಾಡಿದೆ :

ಆಂಗಿಕಂ ಭುವನಂ ಯಸ್ಯ ವಾಚಿಕಂ ಸರ್ವವಾಙ್ಮಯಮ್ ।
ಆಹಾರ್ಯಂ ಚಂದ್ರತಾರಾದಿ ತಂ ನುಮಃ ಸಾತ್ತ್ವಿಕಂ ಶಿವಮ್ ॥

ಅಭಿನವಗುಪ್ತನಿಗಿಂತ ಪೂರ್ವದ ನಾಟ್ಯಶಾಸ್ತ್ರವ್ಯಾಖ್ಯಾಕಾರನಾದ ಭಟ್ಟನಾಯಕನು ಶಿವನನ್ನು 'ತ್ರೈಲೋಕ್ಯ ನಿರ್ಮಾಣಕವಿ' ಎಂದು ವರ್ಣಿಸುವ ಕೆಳಗಿನ ಶ್ಲೋಕದಿಂದ ತನ್ನ ಗ್ರಂಥಾರಂಭ ಮಾಡಿದನೆಂದು ಅಭಿನವಗುಪ್ತ ತಿಳಿಸಿದ್ದಾನೆ :

ನಮಸ್ತ್ರೈಲೋಕ್ಯನಿರ್ಮಾಣಕವಯೇ ಶಂಭವೇ ಯತಃ ।
ಪ್ರತಿಕ್ಷಣಂ ಜಗನ್ನಾಟ್ಯಪ್ರಯೋಗರಸಿಕೋ ಜನಃ ॥

ರಸತತ್ತ್ವದ ಆವಿರ್ಭಾವ ಶೈವಹಿನ್ನೆಲೆಯಲ್ಲಿ ಆದಂತೆ ಅದರ ಪರಮ ಪರಿಷ್ಕಾರವೂ ಮಹಾಮಾಹೇಶ್ವರಾಚಾರ್ಯ ರೆಂದು ಕಾಶ್ಮೀರ ಶೈವಪರಂಪರೆಯಲ್ಲಿ ಪ್ರಸಿದ್ಧಿ ಪಡೆದ ಅಭಿನವಗುಪ್ತಾಚಾರ್ಯರಿಂದಲೇ ಆಯಿತು. ಕಾವ್ಯತತ್ತ್ವವೂ ಆತ್ಮತತ್ತ್ವವೂ ಅಭಿನವಗುಪ್ತರ ದಿವ್ಯದರ್ಶನದಲ್ಲಿ ಅಭಿನ್ನರೂಪವನ್ನು ತಳೆದು, ಸ್ವಯಂಪ್ರಕಾಶ ರಸತತ್ತ್ವವಾಗಿ ಮಾರ್ಪಡುತ್ತದೆ. ಭಟ್ಟನಾಯಕನಂತೆ ಆತನೂ ತನ್ನ 'ಅಭಿನವಭಾರತಿ'ಯನ್ನು, ಶಿವನನ್ನು ಕವಿಸ್ಥಾನದಲ್ಲಿರಿಸಿಯೇ ಸ್ತೋತ್ರಮಾಡಿ ಆರಂಭಿಸುತ್ತಾನೆ :

ಯಸ್ತನ್ಮಯಾನ್ ಹೃದಯಸಂವದನಕ್ರಮೇಣ
ದ್ರಾಕ್ ಚಿತ್ರಶಕ್ತಿಗುಣಭೂಮಿವಿಭಾಗಭಾಗೀ ।
ಹರ್ಷೋಲ್ಲಸತ್‌ಪರವಿಕಾರಜುಷಃ ಕರೋತಿ
ವಂದೇತಮಾಂ ತಮಹಮಿಂದುಕಲಾವತಂಸಮ್ ॥

ಇಲ್ಲಿ ಪರಶಿವನ ಅಚಿಂತ್ಯಶಕ್ತಿಗುಣವನ್ನು ಕವಿಯ ಪ್ರತಿಭಾವಿಲಾಸಕ್ಕೆ ಸಮನ್ವಯಗೊಳಿಸಲಾಗಿದೆ. ತನ್ಮಯೀ ಭವನ, ಹೃದಯಸಂವಾದ ಇತ್ಯಾದಿ ಕ್ರಮಗಳಿಂದ ಪರಾನಂದವನ್ನು ಸಹೃದಯರು ಸವಿಯುವಂತಾಗುವುದು ಅವ ನಿಂದಲೇ ಎಂದು ಸಾರಿ ಹೇಳಲಾಗಿದೆ. ಆಧ್ಯಾತ್ಮಿಕ ದೃಷ್ಟಿಯನ್ನು ಕಾವ್ಯನಿರ್ಮಾಣ ಹಾಗೂ ಕಾವ್ಯಾನುಭವಗಳೆರ ಡಕ್ಕೂ ಸಂದಿಲ್ಲದಂತೆ ಬೆಸೆಯುವ ಈ ಪ್ರವೃತ್ತಿಯೇ ಭಾರತೀಯ ಸಾಹಿತ್ಯಮೀಮಾಂಸೆಯ ಕಡೆಯ ಮಾತಾಗಿದೆ ಮತ್ತು ಶೈವಪರಂಪರೆಯ ದ್ಯೋತಕವಾಗಿದೆ.

ನಾಟ್ಯಶಾಸ್ತ್ರದಲ್ಲಿ ೩೬ ಅಧ್ಯಾಯಗಳನ್ನು ಬರೆದು, ೩೬ ಲಕ್ಷಣಗಳನ್ನು ಹೇಳಿ, ೮ ಅಥವಾ ೯ ರಸಗಳನ್ನೂ ೪೯ ಭಾವಗಳನ್ನೂ ಭರತನು ಹೇಳಿರುವಲ್ಲಿ ಸಂಖ್ಯೆಗಳ ಔಚಿತ್ಯವನ್ನು ಶೈವಾಚಾರ್ಯ ಅಭಿನವಗುಪ್ತನು ೩೬ ಶೈವತತ್ತ್ವ ಗಳ ಪ್ರತೀಕವಾಗಿ ಕಂಡಿದ್ದಾನೆ. ಗುಣಗಳು ಹತ್ತು. ದೋಷಗಳೂ ಹತ್ತೇ. ಈ ಸಂಖ್ಯೆ ಬದಲಾಗದೆ ಕಾವ್ಯಮೀ ಮಾಂಸೆಯ ಪರಂಪರೆಯಾಗುತ್ತದೆ. ಇರುವ ದಿಕ್ಕುಗಳು ಹತ್ತು. ವಸ್ತು ಕಣ್ಣಿಗೆ ಬೀಳಬಹುದಾದ ಪರಿಗಳು ಹತ್ತು. ಆದರೆ ಇರುವ ಸಂಖ್ಯೆಗಳು ಒಂಭತ್ತೇ (ಹತ್ತು ಎಂಬಲ್ಲಿ ೧ ಹಾಗೂ ೦ ಇರುವುದನ್ನೂ ಬಿಡಿಸಿ ಹೇಳಬೇಕಾಗಿಲ್ಲ.) ಬ್ರಹ್ಮಾಂಡದಂತೆ ಪಿಂಡಾಂಡದಲ್ಲಿಯೂ ಸ್ಥಾಯಿಭಾವಗಳು (ಶಮವನ್ನು ಹಿಡಿದು) ಒಂಭತ್ತೇ ಆಗಬಹುದು. ಶಮ ವನ್ನೂ ಸಾಕ್ಷಿಯಾಗಿ ಹಿಡಿದರೆ ರಸಗಳು ಎಂಟೇ ಆಗುವವು.

'ಪದಿನಾರಲ್ಲವಲಂಕ್ರಿಯಾರಚನೆ, ಮುವ್ವತ್ತಾರು ನೇರ್ಪಟ್ಟವು' ಎಂದು ರನ್ನನು ಹೇಳುವ ವಾಕ್‌ಸುಂದರಿಯ ಅಲಂಕಾರಗಳ ಸಂಖ್ಯೆ ಸಾಮಾನ್ಯವಾಗಿ ವರ್ಗಸಂಖ್ಯೆಯಾಗಿದ್ದಾಗಲೇ, ಚತುರಸ್ರವೆನಿಸುತ್ತದೆ. ಈ ಲೆಕ್ಕದಿಂದ ೩ × ೩ = ೯, ೪ × ೪ = ೧೬ (ಚಂದ್ರಕಲೆಗಳು), ೬ × ೬ = ೩೬ (ಅಲಂಕಾರಗಳು ಮತ್ತು ಲಕ್ಷಣಗಳು), ೭ × ೭ = ೪೯ (ಭಾವಗಳು). ೮ × ೮ = ೬೪ (ಕಲೆಗಳು) ಪ್ರತಿಭೆಯೆಂಬುದು ಈ ವಿಶಿಷ್ಟಾರ್ಥದಲ್ಲಿ ನವನವೋಲ್ಲೇಖವೇ ಸರಿ (ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾ ಭಟ್ಟತೌತ) ಸಂಖ್ಯಾಜಗತ್ತಿನಲ್ಲಿ ಯಾವುದೇ ಸಂಖ್ಯೆಯ ಅಂಕಿಗಳನ್ನು ಕೂಡಿಸಿ ಆ ಮೊತ್ತವನ್ನು ಆ ಸಂಖ್ಯೆಯಲ್ಲಿ ಶೇಷ ೯ರಿಂದ ನಿಶ್ಶೇಷವಾಗಿ ಭಾಗಿಸಲ್ಪಡುವ ಸೋಜಿಗವನ್ನು ಕಾಣಬಹುದು. (೧೧—೨ = ೯, ೩೧೬ — ೧೦ = ೩೦೬, ೬೨೩೬ — ೧೭ = ೬೨೧೯) ಹೀಗೆಯೇ ಮಾನಸಿಕ ಚಿತ್ತ ವೃತ್ತಿಗಳ ಜಗತ್ತಿನಲ್ಲಿಯೂ ಸ್ಥಾಯಿಯಾಗಿ ಉಳಿಯುವುದು ಒಂಬತ್ತೇ ಎಂದರೆ ಆಶ್ಚರ್ಯವಿಲ್ಲ.

ಈಗ ಕಾವ್ಯಶಾಸ್ತ್ರದಲ್ಲಿ ಪರಮಶ್ರೇಷ್ಠಕೃತಿಯೆಂದು ಮಾನ್ಯವಾಗಿರುವ 'ಧ್ವನ್ಯಾಲೋಕ'ದ ವ್ಯಾಖ್ಯಾನವಾದ 'ಲೋಚನ'ದಲ್ಲಿ ಪ್ರಥಮೋದ್ಯೋತದ ಕೊನೆಯ ಪದ್ಯವನ್ನು ಗಮನಿಸಬಹುದು :

ಯದುನ್ಮೀಲನಶಕ್ತೈವ ವಿಶ್ವಮುನ್ಮೀಲಿತಂ ಕ್ಷಣಾತ್ ।
ಸ್ವಾತ್ಮಾಯತನವಿಶ್ರಾಂತಾಂ ತಾಂ ವಂದೇ ಪ್ರತಿಭಾಂ ಶಿವಾಮ್ ॥

ಇಲ್ಲಿ ಪ್ರತಿಭೆಯೆಂದರೆ ಆಧ್ಯಾತ್ಮಿಕವಾಗಿ 'ವಿಗಲಿತ-ವಿವಿಧ-ವಿಷಯೋಪರಾಗ-ಕಲಿತ-ಕಾಲುಷ್ಯ-ಸತತಾವಿರ್ಭವದತಿ ವಿಮಲ-ವಿತತಪ್ರಕಾಶ' ಕಾವ್ಯದೃಷ್ಟಿಯಿಂದ ಅದೇ 'ರಸಾವೇಶ-ವೈಶದ್ಯ-ನಿರವದ್ಯ-ಸುಂದರ-ಸುಭಗ ಕವಿ ಸಹೃದಯಗತ-ವರ್ಣನೀಯ-ವಸ್ತುನಿಷ್ಠ-ವಿಶಿಷ್ಟಪುಣ್ಯಪರಿಪಾಕಲಭ್ಯ-ಪ್ರಜ್ಞಾವಿಶೇಷ. ಈ ವ್ಯಾಖ್ಯಾನಗಳು ಸ್ವಕಪೋಲ ಕಲ್ಪಿತವಲ್ಲ. 'ಲೋಚನಕೌಮುದೀಕಾರ'ನಾದ ಉತ್ತುಂಗೋದಯನ ಪ್ರಾಚೀನವ್ಯಾಖ್ಯೆಯಿದು. ಹಾಗೆಯೇ ಲೋಚನದ ಮಂಗಳಶ್ಲೋಕದಲ್ಲಿಯೂ ಇದೇ ಪ್ರತಿಭಾತತ್ತ್ವವನ್ನೇ 'ಕವಿಸಹೃದಯಾಖ್ಯಸರಸ್ವತೀತತ್ತ್ವ' ಎನ್ನಲಾಗಿದೆ. ಲೋಕದಲ್ಲಿ ಇಲ್ಲದ ಅಪೂರ್ವವಸ್ತುವನ್ನು, ಅನ್ಯಕಾರಣ ಸಹಾಯವಿಲ್ಲದೆ ನಿರ್ಮಿಸುವದು-ಕಲ್ಲಿನಂತೆ ನೀರಸವಾದ ಜಗತ್ತನ್ನೇ ನೀರಸದಿಂದ ಸಸಾರವಾಗಿ ಮಾರ್ಪಡಿಸುವದು-ಮತ್ತು ಪಾತಂಜಲಯೋಗಶಾಸ್ತ್ರದಲ್ಲಿ ಹೇಳಿದಂತೆ ಪ್ರಖ್ಯೆ, ಉಪಾಖ್ಯೆ ಎಂಬೆರಡು ಕ್ರಮಗಳಿಂದ ರಮಣೀಯತೆಯನ್ನು ಸೃಷ್ಟಿಸುವುದು—ಇದೇ ಪ್ರತಿಭಾಶಕ್ತಿಯ ಮಾರ್ಮಿಕಲಕ್ಷಣ. ಇದಕ್ಕೂ ಹೆಚ್ಚಿನ ನಿಷ್ಕೃಷ್ಟಶಾಸ್ತ್ರೀಯ ವಿವರಣೆ ಸಂಸ್ಕೃತಕಾವ್ಯಮೀಮಾಂಸೆಯ ಮತ್ತಾವ ಗ್ರಂಥದಲ್ಲಿಯೂ ಕಾಣಸಿಗದು.

ಅಪೂರ್ವಂ ಯದ್ವಸ್ತು ಪ್ರಥಯತಿ ವಿನಾ ಕಾರಣಕಲಾಂ
ಜಗದ್ಗ್ರಾವಪ್ರಖ್ಯಂ ನಿಜರಸಭರಾತ್ಸಾರಯತಿ ಚ ।
ಕ್ರಮಾತ್ ಪ್ರಖ್ಯೋಪಾಖ್ಯಾಪ್ರಸರಸುಭಗಂ ಭಾಸಯತಿ ತತ್
ಸರಸ್ವತ್ಯಾಸ್ತತ್ತ್ವಂ ಕವಿಸಹೃದಯಾಖ್ಯಂ ವಿಜಯತೇ ॥

ಪಾತಂಜಲಯೋಗಸೂತ್ರದ ಆರಂಭದಲ್ಲಿಯೇ ಬರುವ

'ಯೋಗಶ್ಚಿತ್ತವೃತ್ತಿನಿರೋಧಃ' ಎಂಬ ಸೂತ್ರಕ್ಕೆ ವ್ಯಾಸಭಾಷ್ಯದಲ್ಲಿ 'ಪ್ರಖ್ಯಾ' ಶಬ್ದದ ವ್ಯಾಖ್ಯಾನವಿದು :

ಚಿತ್ತಂ ಹಿ ಪ್ರಖ್ಯಾ, ಪ್ರವೃತ್ತಿಃ ಸ್ಥಿತಿಶೀಲತ್ವಾತ್ ತ್ರಿಗುಣಮ್ ।
ಪ್ರಖ್ಯಾರೂಪಂ ಹಿ ಚಿತ್ತಸತ್ತ್ವಂ ರಜಸ್ತಮೋಭ್ಯಾಂ ಸಂಸೃಷ್ಟ
ಐಶ್ವರ್ಯವಿಷಯಪ್ರಿಯಂ ಭವತಿ । ತದೇವ ತಮಸಾವಿದ್ಧಂ
ಅಧರ್ಮ-ಅಜ್ಞಾನ-ಅವೈರಾಗ್ಯ-ಅನೈಶ್ವರ್ಯೋಪಗಂ ಭವತಿ ।
ತದೇವ ಪ್ರಕ್ಷೀಣಮೋಹಾವರಣಂ ಸರ್ವತಃ ಪ್ರದ್ಯೋತಮಾನಂ
ಅನುವಿದ್ಧಂ ರಜೋಮಾತ್ರಯಾ ಧರ್ಮಜ್ಞಾನ-ವೈರಾಗ್ಯ-
ಐಶ್ವರ್ಯೋಪಗಂ ಭವತಿ । ತದೇವ ರಜೋಲೇಶಮಲಾಪೇತಂ
ಸ್ವರೂಪಪ್ರತಿಷ್ಠಂ ಸತ್ತ್ವಂ ಪುರುಷಾನ್ಯತಾಖ್ಯಾತಿಮಾತ್ರಂ
'ಧರ್ಮಮೇಘ'ಧ್ಯಾನೋಪಗಂ ಭವತಿ । ತತ್ಪರಂ ಪ್ರಸಂಖ್ಯಾನಂ
ಇತ್ಯಾಚಕ್ಷತೇ ಧ್ಯಾಯಿನಃ ॥

ಹೀಗೆ ಪ್ರಖ್ಯೆಯೆಂದರೆ ಸತ್ತ್ವಗುಣಪ್ರಧಾನವಾದ ಚಿತ್ತವೃತ್ತಿ ಧರ್ಮಜ್ಞಾನ, ವೈರಾಗ್ಯ ಐಶ್ವರ್ಯಾದಿಗಳನ್ನೆಲ್ಲ ಅನುಗ್ರಹಿಸಬಲ್ಲ ಸಾಮರ್ಥ್ಯವುಳ್ಳದ್ದು. ನಿರ್ಮಲವಾದಾಗ, 'ಧರ್ಮಮೇಘ' ಎಂಬ ಸಮಾಧಿಯವರೆಗೆ ಕೊಂಡೊಯ್ಯಬಲ್ಲುದು. ಇದರ ಅಭಾವವೇ ಅಖ್ಯಾತಿ ಅಥವಾ ಅವಿವೇಕ. ಕಾಶ್ಮೀರದ 'ಪ್ರತ್ಯಭಿಜ್ಞಾನದರ್ಶನ'ದಲ್ಲಿ ಪ್ರಕಾಶ, ವಿಮರ್ಶ ಎಂಬೆರಡು ಶಿವಶಕ್ತಿಯ ಎರಡು ಮುಖಗಳಾಗಿದ್ದು, ಇದೇ ಪ್ರತಿಭಾ ಪ್ರಖ್ಯಾ ಮತ್ತು ರಸೋಲ್ಲಾಸ ರೂಪವಾಗಿ ಕಾವ್ಯದಲ್ಲಿ ಕಂಗೊಳಿಸುತ್ತದೆ.

ಆ ದರ್ಶನದಲ್ಲಿ ಆಧ್ಯಾತ್ಮರಹಸ್ಯವನ್ನು ಶಿವಸೂತ್ರಗಳ ರೂಪದಲ್ಲಿ ಅಳವಡಿಸುವಾಗ ನಾಟಕದ ರೂಪಗಳನ್ನೇ ಅನಿವಾರ್ಯವಾಗಿ ಬಳಸುವುದು ಒಂದು ಗಹನಾರ್ಹಸಂಗತಿಯಾಗಿದೆ. ವಸುಗುಪ್ತನ 'ಶಿವಸೂತ್ರ'ಗಳಲ್ಲಿ

ನರ್ತಕ ಆತ್ಮಾ (III ೯)
ರಂಗಃ ಅಂತರಾತ್ಮಾ (III ೧೦)
ಪ್ರೇಕ್ಷಕಾಣಿ ಇಂದ್ರಿಯಾಣಿ (III ೧೧)
ಧೀವಶಾತ್ ಸತ್ತ್ವಸಿದ್ಧಿಃ (III ೧೨)

ಎಂಬ ನಾಲ್ಕು ಮೂಲಭೂತವಾದ ಸೂತ್ರಗಳಿವೆ. ಕ್ಷೇಮರಾಜನು ಬರೆದ 'ವಿಮರ್ಶಿನೀ' ಎಂಬ ವ್ಯಾಖ್ಯಾನದಲ್ಲಿ ಮೊದಲಿನ ಸೂತ್ರವನ್ನು ವಿವರಿಸಲು ಬೀಜದಿಂದ ಫಲದವರೆಗೆ ಸಂಧಿ ಸಂಘಟಿತವಾದ ನಾಟಕಕರ್ತೃ ಶಿವನೆನ್ನುವ ಭಟ್ಟನಾರಾಯಣನ ಶ್ಲೋಕವನ್ನು ಉದಾಹರಿಸಲಾಗಿದೆ.

ವಿಸೃಷ್ಟಾಶೇಷಸದ್ಬೀಜಗರ್ಭಂ ತ್ರೈಲೋಕ್ಯನಾಟಕಮ್ ।
ಪ್ರಸ್ತಾವ್ಯಂ ಹರ! ಸಂಹರ್ತುಂ ತ್ವತ್ತಃ ಕೋsನ್ಯಃ ಕವಿಃ ಕ್ಷಮಃ ॥

ಹಾಗೆಯೇ 'ಪ್ರೇಕ್ಷಕಾಣಿ ಇಂದ್ರಿಯಾಣಿ' ಎಂಬ ಸೂತ್ರದ ವ್ಯಾಖ್ಯಾನ ಮಾಡುವಾಗ ಯೋಗಿಗಳ ಅನುಭವಕ್ಕೂ' ರಸಿಕರ ಅನುಭವಕ್ಕೂ ಅಭೇದವನ್ನು ಕಲ್ಪಿಸಿ ಹೀಗೆ ಬರೆಯಲಾಗಿದೆ :

ಯೋಗಿನಃ ಚಕ್ಷುರಾದೀನಿ ಇಂದ್ರಿಯಾಣಿ ಹಿ ಸಂಸಾರ-
ನಾಟ್ಯಪ್ರಕಟನಪ್ರಮೋದ ನಿರ್ಭರಂ ಸ್ವಸ್ವರೂಪಂ
ಅಂತರ್ಮುಖತಯಾ ಸಾಕ್ಷಾತ್ ಕುರ್ವಂತಿ ತತ್ ಪ್ರಯೋಗ
ಪ್ರರೂಢ್ಯಾ ವಿಗಲಿತವಿಭಾಗಂ ಚಮತ್ಕಾರರಸಪೂರ್ಣತಾಂ
ಆಪಾದಯಂತಿ ।

ಭಾರತೀಯ ಸೌಂದರ್ಯಶಾಸ್ತ್ರ ಮತ್ತು ಅಭಿನವಗುಪ್ತರ ಅಧ್ಯಯನಗಳಲ್ಲಿ ಅಧಿಕಾರವಾಣಿಯಿಂದ ಉದ್ದಾಮಗ್ರಂಥ ಗಳನ್ನು ಬರೆದು ದೇಶವಿದೇಶಗಳಲ್ಲಿ ದಿಗ್ಗಜಪಂಡಿತರೆಂದು ಮಾನ್ಯರಾಗಿರುವ ಡಾ॥ ಕಾಂತಿಚಂದ್ರಪಾಂಡೆ ಅವರು ಈಚಿನ ತಮ್ಮ ಒಂದು ಉಪನ್ಯಾಸಮಾಲೆಯಲ್ಲಿ (ಪ್ರಕಟಿತ ವಾರಣಾಸೇಯ ಸಂಸ್ಕೃತ ವಿಶ್ವವಿದ್ಯಾಲಯ ೧೯೬೩. ಶೈವದರ್ಶನ ಬಿಂದು ಪುಟ ೮೯, ೯೦) "ಜಗನ್ನಾಥಪಂಡಿತರಾಜ"ನಂಥವನೇ ಅಭಿನವಗುಪ್ತರ ರಸಸಿದ್ಧಾಂತವನ್ನು ವಿವರಿಸುವಲ್ಲಿ ಹೇಗೆ ಭ್ರಾಂತನಾಗಿದ್ದನೆಂಬುದನ್ನು ಸ್ಪಷ್ಟಾಕ್ಷರಗಳಲ್ಲಿ ಬರೆದಿದ್ದಾರೆ. ಪಂಡಿತರಾಜನ ಪ್ರಕಾರ "ಅಭಿನವಗುಪ್ತ ಮಮ್ಮಟಾದಿಗಳು ಹೇಳುವ ರಸ ಭಗ್ನಾವರಣ-ಚಿದ್ವಿಶಿಷ್ಟವಾದ ರತ್ಯಾದಿ ಸ್ಥಾಯಿಭಾವವೇ." ಡಾ॥ ಪಾಂಡೆಯವರು ಹೀಗೆ ನುಡಿಯುತ್ತಾರೆ—"ಅಭಿನವಗುಪ್ತರ ಮತದಲ್ಲಿ ಇದು ಅಸಂಭವ. ಏಕೆಂದರೆ ಅವರು ನಿರ್ವಿಶೇಷಾದ್ವೈತವೆಂದು ನಾಮಾಂತರವಿರುವ ಸ್ವಾತಂತ್ರ್ಯವಾದಿ. ನಿರ್ವಿಶೇಷಾದ್ವೈತದ ಪ್ರಕಾರ ಆತ್ಮತತ್ತ್ವಕ್ಕೆ ಬಾಹ್ಯವಾದ ಇಲ್ಲವೆ ಗ್ರಾಹ್ಯ ವಾದ ಯಾವುದೇ ತತ್ತ್ವಾಂತರಕ್ಕೂ ಸಮಕಕ್ಷ್ಯೆಯ ಸ್ಥಾನವಿಲ್ಲ. ಇಲ್ಲದಿದ್ದರೂ ಕೇವಲ ಪ್ರತಿಭಾಸವನ್ನಾಶ್ರಯಿಸಿ, ಗುಣ-ಪ್ರಧಾನ, ಧರ್ಮ-ಧರ್ಮಿ, ವಿಶೇಷಣ–ವಿಶೇಷ್ಯ, ಮುಂತಾದ ಸಂಬಂಧಗಳನ್ನು ಆರೋಪಿಸುವ ವ್ಯವಹಾರ ನಡೆಯುತ್ತದೆ. ಇಂಥ ವಿಶೇಷಣವಿಶೇಷ್ಯಭಾವದ ಮೂಲಕ ಸಾಗುವ ವ್ಯವಹಾರವು ಆತ್ಮನಲ್ಲಿ ಉಪಪನ್ನವಾಗದು. ಅದು ಯಾವುದರ ಧರ್ಮವೂ ಅಲ್ಲ. ಅದಕ್ಕೆ ಧರ್ಮವೂ ಇಲ್ಲ."

ರಸದ ಆನಂದರೂಪತ್ವವು ಅಭಿನವಗುಪ್ತರ ಸಿದ್ಧಾಂತದಲ್ಲಿ ಸಹೃದಯನ ಸಾಧಾರಣೀಕೃತ ಸ್ಥಾಯೀ ಅನುಭವ ದೆಶೆಯಲ್ಲಿ ಸಾಧ್ಯವಿಲ್ಲ. ಆದರೆ ಅದರಾಚಿನ ಅನುಭವದಲ್ಲಿ ಮಾತ್ರ ಸಾಧ್ಯ. ಅಭಿನವಗುಪ್ತರು 'ರಸ' ಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸಿದ್ದಾರೆ. ೧ 'ರಸ್ಯತೇ—ಆಸ್ವಾದ್ಯತೇ ಇತಿ ರಸಃ' ಅಂದರೆ ಸಾಧಾರಣೀಭೂತದೆಶೆಯಲ್ಲಿ ಸಹೃದಯನಿಂದ ಪಾನಕರಸನ್ಯಾಯರೀತ್ಯಾ ಪರಸ್ಪರ ಸಮ್ಮಿಶ್ರಗೊಂಡ ಸ್ಥಾಯಿ ಮುಂತಾದವುಗಳ ಆಸ್ವಾದ್ಯತ್ವವೇ ರಸ. ಈ ಅರ್ಥದಲ್ಲಿ ಮಾತ್ರ ರಸಕ್ಕೆ ವಿಷಯತ್ವವುಂಟು. ೨ 'ರಸನಂ ರಸಃ' ಹೀಗೆ ವಿಗ್ರಹ ಮಾಡಿದಾಗ ರಸವು ವಿಷಯುವಲ್ಲವೇ ಅಲ್ಲ. ಅದು ಕೇವಲ ಕ್ರಿಯೆ. ಆದ್ದರಿಂದ ರಸನಾ, ಚರ್ವಣಾ, ನಿರ್ವೃತಿ, ಪ್ರಮಾತೃವಿಶ್ರಾಂತಿ, ಚಮತ್ಕೃತಿ—ಇವೆಲ್ಲ ಅದಕ್ಕೆ ಪರ್ಯಾಯ ಪದಗಳು. ರಸದ ಆನಂದರೂಪವು ವಿಭಾವಾದಿಗಳ ಸಾಮರಸ್ಯದಿಂದ ಬರುವ ರಸ್ಯಮಾನತಾದಶೆಯಲ್ಲಿ ಅಲ್ಲ, ಆದರೆ ತದುತ್ತೀರ್ಣವಾದ ಸ್ವಾತ್ಮಮಾತ್ರಪರಾಮರ್ಶದಶೆಯಲ್ಲಿ—ಅವನೇ ಹೇಳುವಂತೆ "ಲೋಕದಲ್ಲಿ ಸಕಲ ವಿಘ್ನಗಳಿಂದ ವಿನಿರ್ಮುಕ್ತವಾದ ಸಂವೃತ್ತಿಯೇ ಚಮತ್ಕಾರ, ರಸನಾ, ಆಸ್ವಾದನ, ಭೋಗ, ಸಮಾಪತ್ತಿ, ಲಯ, ವಿಶ್ರಾಂತಿ ಮುಂತಾದ ಶಬ್ದಗಳಿಂದ ಹೇಳಲ್ಪಡುತ್ತದೆ." ಆದ್ದರಿಂದ ಅಭಿನವಗುಪ್ತರ ನಿರ್ವಿಷಯ ವಾದ ರಸಾನಂದ ಸಿದ್ಧಾಂತಕ್ಕೂ, ರಸಕ್ಕೆ ವಿಷಯತ್ವವನ್ನು ಒಪ್ಪುವ ಇತರ ಆಲಂಕಾರಿಕರ ಸಿದ್ಧಾಂತಕ್ಕೂ ಸ್ಪಷ್ಟವಾದ ಭೇದವಿದೆ. ಒಂದನ್ನು ಇನ್ನೊಂದೆಂದು ಭ್ರಮಿಸಬಾರದು. ಈ ಅನಂತ ವಿಸ್ತಾರದ ಆನಂದಮೀಮಾಂಸೆ ಕಾವ್ಯ ಮೀಮಾಂಸಾಶಾಸ್ತ್ರಕ್ಕೆ ಶೈವರಾದ ಅಭಿನವಗುಪ್ತರ ಮಹತ್ವದ ಕೊಡುಗೆಯಾಗಿದೆ. ಸೂತ ಸಂಹಿತೆಯಲ್ಲಿ ಸ್ಪಷ್ಟವಾಗಿ ರಸವೆಂದರೆ ಹರನೇ ಎಂದು ಹೇಳಿರುವುದು ಗಮನಾರ್ಹ.

ತಸ್ಮಾತ್ ಸರ್ವಾತ್ಮನಾ ಚಿತ್ತೇ ಭಾಸಮಾನೇ ರಸೋ ಹರಃ ।
ಆನಂದಯತಿ ದುಃಖಾಢ್ಯಂ ಜೀವಾತ್ಮಾನಂ ಕೃಪಾಬಲಾತ್ ॥
(ಸೂತಸಂಹಿತಾ, ಯಜ್ಞವೈಭವಖಂಡ, ಬ್ರಹ್ಮಗೀತಾ, III. ೪೯)

ಈ ವಾದಕ್ಕೆ ಸಮರ್ಥನೆಯನ್ನೀಯುವ ಪ್ರಮಾಣವಚನಗಳನ್ನು ಕೂಡ ಡಾ॥ ಪಾಂಡೆಯವರು ಎತ್ತಿ ತೋರಿಸಿದ್ದಾರೆ:

ತ್ರೈಲೋಕ್ಯೇಽಪ್ಯತ್ರ ಯೋ ಯಾವಾನಾನಂದಃ ಕಶ್ಚಿದೀಕ್ಷ್ಯತೇ ।
ಸ ಬಿಂದುರ್ಯಸ್ಯ ತಂ ವಂದೇ ದೇವಮಾನಂದಸಾಗರಮ್ ॥ ಇತಿ

ಇದಕ್ಕೆ 'ಈಶ್ವರಪ್ರತ್ಯಭಿಜ್ಞಾವಿಮರ್ಶಿನೀ' ಎಂಬ ವ್ಯಾಖ್ಯಾನದಲ್ಲಿ ಅಭಿನವಗುಪ್ತರು ಕೊಡುವ ವಿವರಣೆಯಿದು—

ಮಧುರಾದಿರಸಗಳ ಆಸ್ವಾದಕಾಲದಲ್ಲಿ ವಿಷಯಸ್ಪರ್ಶದ ವ್ಯವಧಾನವಿರುತ್ತದೆ. ಆದರೆ ಕಾವ್ಯನಾಟಕಗಳ ಆಸ್ವಾದಕಾಲದಲ್ಲಿ ಆ ವ್ಯವಧಾನವಿರುವುದಿಲ್ಲ. ಆ ವ್ಯವಧಾನದ ಸಂಸ್ಕಾರದ ಅನುವೇಧ ಮಾತ್ರ ಉಳಿದಿರುತ್ತದೆ. ಅದನ್ನು ಮೀರಬಲ್ಲ ಸಹೃದಯರಿಗೆ ಮಾತ್ರ ಪರಮಾನಂದ ದೊರೆಯುತ್ತದೆ. ಮಧುರಾದಿ ರಸಾಸ್ವಾದೇತು ವಿಷಯ ಸ್ಪರ್ಶವ್ಯವಧಾನಮ್। ತತೋಽಪಿ ಕಾವ್ಯನಾಟಕಾದೌ ತತ್‌ವ್ಯವಧಾನಶೂನ್ಯತಾ, ತದ್ವ್ಯವಧಾನಸಂಸ್ಕಾರಾನುವೇಧಸ್ತು ವರ್ತತ ಏವ । ತತ್ರಾಪಿ ತು ತಥೋದಿತ ವ್ಯವಧಾನಾಂಶ ತಿರಸ್ಕ್ರಿಯಯಾ ಸಾವಧಾನಹೃದಯಾ ಲಭಂತ ಏವ ಪರಮಾನಂದಮ್ । (ಈ. ಪ್ರ. ವಿ. ವಿ. ಭಾಗ ೨, ಪು. ೧೭೮-೧೭೯)

ಹೀಗೆ ಪರಸಂವೇದನೆಯು ಏಕಘನಆಸ್ವಾದಪೂರ್ಣಆನಂದರೂಪತ್ವವೇ ಸರ್ವರಸಗಳಿಗೂ ಸಿದ್ಧವಾಗುತ್ತದೆ. ಅಲ್ಲಿ ದುಃಖಲೇಶಕ್ಕೂ ಆಸ್ಪದವಿಲ್ಲ. "ಅಸ್ಮನ್ಮತೇ ತು ಸಂವೇದನಮೇವ ಏಕಘನಂ ಆಸ್ವಾದ್ಯತೇ । ತತ್ರ ಕಾ ದುಃಖಾ ಶಂಕಾ ?" ಅಭಿನವಭಾರತೀ ಭಾಗ ೧, ಪು. ೨೧೬"

ಹೀಗಿರುವುದರಿಂದಲೇ ಶೈವಾಗಮಶಾಸ್ತ್ರದಲ್ಲಿ ನಿಷ್ಣಾತರಾದ ಮತ್ತು 'ಮಹಾರ್ಥಮಂಜರೀ'ಕಾರರಾದ ಮಹೇಶ್ವರಾನಂದರು ಧ್ವನ್ಯಾಲೋಕ ಮತ್ತು ಲೋಚನಗಳನ್ನು ವೇದಾಂತಗ್ರಂಥದಲ್ಲಿಯೂ ಬಾಯಿತುಂಬ ಹೊಗಳಿದ್ದಾರೆ :

ಸಾಹಿತ್ಯಾಬ್ಧೌ ಕರ್ಣಧಾರೋಽಹಮಾಸಂ
ಕಾವ್ಯಾಲೋಕಂ ಲೋಚನಂ ಚಾನುಶೀಲ್ಯ॥

ಹೀಗೆಯೇ ಕಾವ್ಯಮೀಮಾಂಸೆಗೆಲ್ಲ ಮೂಲಭೂತವಾಗಿರುವ ವಾಗರ್ಥವಿಚಾರದಲ್ಲಿಯೂ ಶೈವಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. "ವಾಗರ್ಥಾವಿವ ಸಂಪೃಕ್ತೌ" ಎಂಬ ಕಾಲಿದಾಸನ ಮಂಗಲಾಚರಣೆಯಲ್ಲಿ ಅಡಗಿರುವ ತತ್ತ್ವವನ್ನು ಮಲ್ಲಿನಾಥರು ವಿವರಿಸುವಾಗ :

ಶಬ್ದಜಾತಮಶೇಷಂ ತು ಧತ್ತೇ ಶರ್ವಸ್ಯವಲ್ಲಭಾ ।
ಅರ್ಥರೂಪಂ ಯದಖಿಲಂ ಧತ್ತೇ ಮುಗ್ಧೇಂದುಶೇಖರಃ ॥

ಎಂಬ ವಾಯುಪುರಾಣದ ವಚನವನ್ನು ಉಲ್ಲೇಖಿಸಿದ್ದಾರೆ. ಈ ಮಾತಿನ ಪ್ರಾಚೀನತೆ, ಸಾರ್ಥಕ್ಯ ಸಂಶೋಧಿಸುತ್ತ ಹೊರಟರೆ 'ನಂದಿಕೇಶ್ವರಕಾರಿಕೆ'ಯ ಉಪಮನ್ಯುವೃತ್ತಿಯ ವರೆಗೆ ಹೋಗಬೇಕಾಗುತ್ತದೆ.

ವೃತ್ತಿವೃತ್ತಿಮತೋರರ್ಥಭೇದಲೇಶೋ ನ ವಿದ್ಯತೇ ।
ಚಂದ್ರಚಂದ್ರಿಕಯೋರ್ಯದ್ವತ್ ಯಥಾ ವಾಗರ್ಥಯೋರಿವ ॥

ಎಂಬ ಕಾರಿಕೆಯ ಮೇಲಿನ ವೃತ್ತಿಯನ್ನು ವಿವರಿಸುತ್ತ ಡಾ॥ ಪಾಂಡೆಯವರು

ವಿಷಯತಯಾ ಅವಭಾಸಮಾನಾನಾಮಪಿ ವಿಷಯ್ಯೇಕರೂಪ-
ತ್ವಮಿವ ಕವೇಃ ಸ್ವತಂತ್ರೋಲ್ಲೇಖಾನಾಂ ಪ್ರತಿಭೋದ್ಭೂತತ್ವಾತ್
ವೈವಿಧ್ಯೇನ ಭಾಸಮಾನಾನಾಂ ಕವಿಶಕ್ತ್ಯೇಕರೂಪತ್ವಮಿವ ॥
(ಶೈವದರ್ಶನಬಿಂದುಃ, ಪುಟ ೬೯)

ಎಂದಿದ್ದಾರೆ.

ಈ ಕಾರಣದಿಂದಲೇ 'ಈಶಾನಶಿವಗುರುದೇವಪದ್ಧತಿ'ಯಂಥ ತಂತ್ರಶಾಸ್ತ್ರಕೃತಿಯನ್ನು ಬರೆಯ ಹೊರಟ ಈಶಾನಶಿವಗುರುದೇವನು ತನ್ನ ಗ್ರಂಥವು ಛಂದಸ್ಸು, ಅಲಂಕಾರವರ್ಣಕಾದಿಗಳಿಂದ ಭರಿತವಾಗಿ ಸುಂದರಿಯಂತೆ ಶೋಭಿಸುವುದೆಂದು ನುಡಿಯುತ್ತಾನೆ.

ವಿವಿಧಚ್ಛಂದಸಂ ನಾನಾವೃತ್ತಾಲಂಕಾರವರ್ಣಕಾಮ್ ।
ಸೇವ್ಯಾಂ ಕಾಮಿಜನಸ್ಯೇಷ್ಟಾಂ ಲಲಿತಾಂ ಪ್ರಮದಾಮಿವ ॥
(ಈ. ಶಿ. ಗು. ಪ. I–೬)

ಹಾಗೆಯೇ ಮುಂದೆ ಶಬ್ದತತ್ತ್ವದಿಂದ ಸರ್ವಸೃಷ್ಟಿಯನ್ನು ವಿವರಿಸಲು ಹೊರಟು 'ರತ್ನತ್ರಯ'ವೆಂಬ ಗ್ರಂಥವನ್ನು ಉದಾಹರಿಸಿದ್ದಾನೆ.

ಸತು ಶಬ್ದಶ್ಚತುರ್ಧಾ ವಾಗ್ವೈಖರ್ಯಾದಿವಿಭೇದತಃ ।
ಜಾಯತೇ ಬಿಂದುಸಂಕ್ಷೋಭಾತ್ ಅನಂತಸ್ಯಾರ್ಥಸಿದ್ಧಯೇ ॥
ಶಕ್ತಿರ್ನಾದೋ ಮಹಾಮಾಯಾ ವ್ಯೋಮೇತಿ ಚ ಚತುರ್ವಿಧಮ್ ॥ (I-೩೨)

ಕವಿಸೃಷ್ಟಿಗೂ, ಶಿವಸೃಷ್ಟಿಗೂ ಸಾಮರಸ್ಯವನ್ನು ಎತ್ತಿ ತೋರಿಸುವ ಶೈವಸಂಪ್ರದಾಯವನ್ನು ಇಲ್ಲಿಯೂ ಕಾಣಬಹುದಾಗಿದೆ.

ಶೈವೇತರ ಬ್ರಹ್ಮಸೂತ್ರಭಾಷ್ಯಗಳಲ್ಲೆಲ್ಲೂ ಕಾವ್ಯಮೀಮಾಂಸೆಯ ಪ್ರಸ್ತಾಪ ಬರುವುದಿಲ್ಲ. ಆದರೆ ಶ್ರೀಕಂಠ ಭಾಷ್ಯದಲ್ಲಿ ಮಾತ್ರ ಒಂದು ಉಲ್ಲೇಖವನ್ನು ಕಾಣುತ್ತೇವೆ—"ವೃದ್ಧವ್ಯವಹಾರದಿಂದ ಮಾತ್ರ ವ್ಯುತ್ಪತ್ತಿ ಶಕ್ಯ" ಎಂಬ ವಿಚಾರ ಮಾಡುತ್ತ "ಹಾಗೇನೂ ನಿಯಮವಿಲ್ಲ. ಇತರ ಉಪಾಯಗಳಿಂದಲೂ ವ್ಯುತ್ಪತ್ತಿ ಶಕ್ಯ" ಎಂದು ತೋರಿಸಲು ಕಾವ್ಯನಾಟಕಗಳ ದೃಷ್ಟಾಂತ ಕೊಟ್ಟಿದ್ದಾರೆ.

ಕಾವ್ಯನಾಟಕಾನಭಿಜ್ಞಾಃ ಪುರುಷಾಸ್ತದಭಿಜ್ಞಪುರುಷಸಮೀಪ
ಮೇತ್ಯ ಪದವಿಚ್ಛೇದಂ ಕೃತ್ವಾ ಅಸ್ಯ ಶಬ್ದಸ್ಯ ಅಯಮರ್ಥ ಇತಿ
ಸರ್ವಶಬ್ದಾನಾಂ ಅರ್ಥಂ ಅವಗಚ್ಛಂತಿ ।

(ಶ್ರೀಕಂಠಭಾಷ್ಯ ಭಾಗ ೧, ಬಾಂಬೆ ೧೯೦೮, ಪುಟ ೧೭೬)

ಇದರ ವ್ಯಾಖ್ಯಾನವಾದ 'ಶಿವಾರ್ಕಮಣಿದೀಪಿಕೆ'ಯಲ್ಲಿ ಅಪ್ಪಯ್ಯದೀಕ್ಷಿತರು—ಅಭಿಜ್ಞರ ಮೂಲಕ ತಿಳಿಯದ ಪದ ಗಳ ಅರ್ಥಗಳನ್ನು ತಿಳಿದುಕೊಂಡ ಬಳಿಕ ಶಿಷ್ಯರು ತಾವೇ ವಾಕ್ಯಾರ್ಥವನ್ನು ಅರಿಯುವರೆಂದು ವಿವರಿಸಿದ್ದಾರೆ (ಸ್ವಯಮೇವ ವಾಕ್ಯಾರ್ಥಮವಗಚ್ಛಂತಿ ಇತ್ಯಾದಿ).

ಕಾವ್ಯಪ್ರಕಾಶಾದಿ ಲಕ್ಷಣಗ್ರಂಥಗಳಲ್ಲಿ ಕಾವ್ಯಪ್ರಯೋಜನವನ್ನು ಹೇಳುವಾಗ ಕೀರ್ತಿ ಮುಂತಾದವುಗಳ ಜೊತೆಗೆ "ಶಿವೇತರಕ್ಷತಯೇ" ಎಂದರೆ ಅಮಂಗಳನಿವಾರಣೆ ಎಂಬ ಪ್ರಯೋಜನವನ್ನು ಸೇರಿಸಿ ಹೇಳಿರುವುದನ್ನು ನೋಡುತ್ತೇವೆ. ಆದರೆ ವಸ್ತುತಃ ಸಂಸ್ಕೃತ ಕಾವ್ಯಗಳ ಇತಿಹಾಸವನ್ನು ಅವಲೋಕಿಸಿದರೆ ಹೆಚ್ಚಾಗಿ ರಾಜಪ್ರಶಸ್ತಿಗಳಿಗೆ, ಸ್ತ್ರೀವರ್ಣನೆಗಳಿಗೆ ಮೀಸಲಾದ ರಚನೆಗಳೇ ತುಂಬಿರುವುದು ಗೋಚರಿಸುತ್ತದೆ. ಕವಿಗಳ ಐಹಿಕ ಅರ್ಥಾದಿಸಾಧನೆಗೆ ಇವುಗಳಿಂದ ಅನುಕೂಲವಾಗಿರಬಹುದು.

ಸರ್ವೈಃ ಕೈಶ್ಚನ ದೂಷಿತಾಃ ಕವಿತೃಭಿಃ ಪ್ರಸ್ತ್ರೀರ್ಯ ಪೃಥ್ವೀಭೃತಾ-
ಮಾಸ್ಥಾನಾಪಣಸೀಮ್ನಿ ವಿಕ್ರಯತಿರಸ್ಕಾರಾದನರ್ಘಾ ಗಿರಃ

ಎಂಬ ಶ್ರೀಕಂಠಚರಿತೆಯಲ್ಲಿ ಬರುವ ಸೂಕ್ತಿಯನ್ನಿಲ್ಲಿ ನೆನೆಯಬಹುದು.

ಆದರೆ ಅದರಿಂದ 'ಶಿವೇತರಕ್ಷತಿ' ಆಯಿತೆಂದು ಯಾರೂ ಹೇಳಲಾರರು. ಆಸ್ಥಾನಕವಿಗಳ ಈ ದುಷ್ಪ್ರವೃತ್ತಿ ಯನ್ನು ತಡೆಗಟ್ಟಿ 'ನರಸ್ತುತಿಗಿಂತ ಶಿವಸ್ತುತಿಯೇ ಪರಮಪುರುಷಾರ್ಥಸಾಧಕ' ಎಂಬ ನೂತನ ವಿಚಾರಧಾರೆ ಶೈವಸಾಹಿತಿಗಳಲ್ಲಿ ಒಡೆದು ಕಾಣುತ್ತದೆ. ತುಲಸೀರಾಮಾಯಣವನ್ನು ಬರೆಯುತ್ತ ಪೀಠಿಕೆಯಲ್ಲಿ ಆ ಸಂತಕವಿ ಮೂಲ ಅಥವಾ ಭಾಷಾಂತರದಲ್ಲಿ ಅನೇಕ ಪ್ರಾಚೀನ ವಚನಗಳನ್ನು ಬಳಸಿದ್ದಾನೆ. ಮನುಷ್ಯನ ಪಾಪನಾಶಕ್ಕೆ ಭಗವಂತನನ್ನು ಶ್ಲಾಘಿಸುವುದೇ ಏಕೈಕ ಉಪಾಯ. ಅವುಗಳಲ್ಲಿ ಒಂದೆರಡು ವಚನಗಳಿವು.

ಸರ್ವಕಾವ್ಯಗುಣೈರ್ಹೀನೇ ಕಾವ್ಯೇಽಪಿ ಭಗವದ್ಯಶಃ ।
ವರ್ಣ್ಯತೇ ಚೇತ್ ಪ್ರಶಂಸಂತಿ ಗುಣಗ್ರಾಹ್ಯಾ ವಿಪಶ್ಚಿತಃ ॥
ತದ್ ವಾಗ್ವಿಸರ್ಗೋ ಜನತಾಘವಿಪ್ಲವೋ
ಯಸ್ಮಿನ್ ಪ್ರತಿಶ್ಲೋಕಂ ಅಬದ್ಧವತ್ಯಪಿ ।
ನಾಮಾನ್ಯನಂತಸ್ಯ ಯಶೋಽಂಕಿತಾನಿಯತ್
ಶೃಣ್ವಂತಿ ಗಾಯಂತಿ ಗೃಣಂತಿ ಸಾಧವಃ ॥

ಈ ಹೊಸ ಶೈವ ಪ್ರಭಾವದಿಂದ ಕನ್ನಡದ ಭಕ್ತಿಸಾಹಿತ್ಯದಲ್ಲಿ ಒಂದು ಮಹಾಪೂರವೇ ಬಂದುದನ್ನು ನೋಡುತ್ತೇವೆ. ಇದನ್ನೇ ಸಂಸ್ಕೃತದಲ್ಲಿ ಪುನರುಜ್ಜೀವಿಸಿದ ಕೀರ್ತಿ ಉಭಯಕವಿತಾವಿಶಾರದನಾದ ಶ್ರೀ ಷಡಕ್ಷರದೇವನದು. 'ಕವಿ ಕರ್ಣರಸಾಯನ'ದಲ್ಲಿ ಅವನು ಈ ಮಾತನ್ನು ಹರೀಶ್ವರನನ್ನು ಹೊಗಳುವಾಗ ನುಡಿಯುವುದಷ್ಟೇ ಅಲ್ಲ, ಅದೇ ತನ್ನ ಮುಖ್ಯ ಗುರಿಯೆಂದೂ ನಿರ್ದೇಶಿಸುತ್ತಾನೆ:

ಶಿವಸ್ಯ ತದ್ಭಕ್ತತತೇರ್ವಿಧಾಯ ಕೃತೀರನೇಕಾಃ ಸುಕವಿಪ್ರಣುತ್ಯಾಃ ।
ಶಿವಸ್ಯ ಸಾಯುಜ್ಯಮಿಹ ಪ್ರಪನ್ನೋ ಹರೀಶ್ವರಸ್ತೇನ ಸಮಃ ಕವಿಃ ಕಃ ॥ (I ೪)
ಕಲಾವತಃ ಸನ್ನಿಧಿರೇವ ಹೇತುಃ ಪ್ರಬಂಧವಾರ್ಧೇಃ ಪರಿವರ್ಧನಸ್ಯ ।
ಕವೇಸ್ತು ಮಂದಸ್ಯ ಬುಧಸ್ಯ ನಾಸೌ ಸುಧಾರಸಶ್ರೀಜನನಸ್ಥಲಸ್ಯ ॥ (I ೬)
ವಾಗ್ವೃತ್ತಿರಲ್ಪಾಪಿ ಮಹೇಶ್ವರಾಂಘ್ರಿಸಮರ್ಪಿತಾ ಶ್ಲಾಘ್ಯತಮೇವ ಮೂರ್ಧ್ನಾ ।
ಬುಧೈಃ ಕವೇರರ್ಕತರುಪ್ರಸೂನಮಾಲೇವ ಶಂಭೋಶ್ಚರಣೇ ಪ್ರಣೀತಾ ॥ (I ೫೧)
ತದ್ದೈಹಿಕಾಮುಷ್ಮಿಕಸೌಖ್ಯಹೇತೋಃ ಪರಂ ಕವೀಂ ದ್ರೈಃ ಕೃತಿಭಿಃ ಕೃತಾರ್ಥ್ಯೈಃ ।
ಶಿವಃಪ್ರಣುತ್ಯೋ ಭುವನೈಕನಾಥಃ ತದಂಘ್ರಿಭಕ್ತಶ್ಚ ಗುಣಾಭಿಯುಕ್ತಃ ॥ (I–೫೨)

ಈ ಪರಂಪರೆಯನ್ನು ಅನುಸರಿಸುವುದರಿಂದಲೇ ವೀರಶೈವಗ್ರಂಥಕಾರರಾದ ನಿಜಗುಣಶಿವಯೋಗಿ ಮತ್ತು ಕೆಳದಿ ಬಸವಪ್ಪನಾಯಕ ಕ್ರಮವಾಗಿ ತಮ್ಮ 'ವಿವೇಕಚಿಂತಾಮಣಿ' ಮತ್ತು 'ಶಿವತತ್ತ್ವರತ್ನಾಕರ' ಎಂಬ ಗ್ರಂಥಗಳಲ್ಲಿ ತಾತ್ತ್ವಿಕ ವಿಷಯಗಳನ್ನು ಮಾತ್ರ ವಿವರಿಸದೇ ಸಕಲಲೌಕಿಕವಿಷಯಗಳನ್ನೂ ಲೋಕೋಪಕಾರಕ್ಕೆಂದು ಸಂಗ್ರಹಿಸಿದ್ದಾರೆ. ವಿವೇಕಚಿಂತಾಮಣಿಯ ನಾಲ್ಕನೆಯ ಪರಿಚ್ಛೇದದಲ್ಲಿ ಉಕ್ತಾ, ಅತ್ಯುಕ್ತಾ ಇತ್ಯಾದಿ ೨೬ ಛಂದಸ್ಸುಗಳ ಸಮಾಸೋಕ್ತಿಯೇ ಮುಂತಾದ ೬೫ ಅಲಂಕಾರಗಳ, ೧೮ ವರ್ಣನಾಂಗಗಳ, ಮೂರು ರೀತಿಗಳ, ಕಾವ್ಯಭೇದಗಳ, ನವರಸಗಳ, ವಿಭಾವಾನುಭಾವಸಂಚಾರಿಭಾವಗಳ, ನಾಯಕನಾಯಿಕಾವಿಭೇದಗಳ ಸಂಕ್ಷಿಪ್ತ ನಿರ್ದೇಶನ ದೊರೆಯುತ್ತದೆ. ಹಾಗೆಯೇ ಶಿವತತ್ತ್ವರತ್ನಾಕರದ ಸಪ್ತಮಕಲ್ಲೋಲ—ತೃತೀಯ ತರಂಗದಲ್ಲಿ ವರ್ಣಶುದ್ಧಿ, ಕಾವ್ಯವೃತ್ತಿ, ರಸ-ಭಾವಗಳು—ನಾಯಕಾದಿಭೇದಗಳು, ಅಲಂಕಾರಗಳು, ಗುಣದೋಷಗಳು—ರೂಪಕ-ಉಪರೂಪಕಾದಿಗಳು, ಚಾಟುಪ್ರಬಂಧಗಳು-ಮುಂತಾದವುಗಳ ವಿಸ್ತಾರವಾದ ವಿವರಣೆ ಸಿಕ್ಕುತ್ತದೆ. ಅನ್ಯತ್ರ ಕಾಣಸಿಗದ ಕೆಲವೊಂದು ಹೊಸ ವಿಚಾರಗಳನ್ನು ಇಲ್ಲಿ ನೋಡಬಹುದು.

೧. **ಸಪ್ತಕವಿವಿಭಾಗ**—

ಕವಿತ್ವಕರಣಸ್ತೋಮಸಂಪನ್ನಃ ಕವಿರುಚ್ಯತೇ ।
ಕಾಯಿಕೋ ವಾಚಿಕಶ್ಚಾರ್ಥಶಿಲ್ಪಿಕೋ ಮಾರ್ದವಾನುಗಃ ॥ (VII, ೩.೫೩)
ವಿವೇಕೀ ಭೂಷಣಾರ್ಥೀ ಚ ಕವಯಃ ಸಪ್ತ ಕೀರ್ತಿತಾಃ ॥ (VII, ೩.೫೪)
ಆವಾಪೋದ್ವಾಪಕೃದ್ಯಾವನ್ಮನನೋ ರುಚಿರಾತ್ಮನಃ । (VII, ೩.೫೪)
ವಾಚಿಕೋ ವಾಚಕಃ ಶುದ್ಧವಾಗಾಡಂಬರಕಾರಕಃ ।
ಅರ್ಥೇಽಭಿಧೇಯಚಿತ್ರಾರ್ಥೀ ಶಿಲ್ಪಿಕೋ ದ್ವಯಚಿತ್ರಕೃತ್ ॥ (VII, ೩.೫೫)
ಶಬ್ದಾರ್ಥಮಾರ್ದವಾಪೇಕ್ಷೀ ಕವಿಃ ಸ್ಯಾನ್ಮಾರ್ದವಾನುಗಃ ।
ಶ್ರೇಷ್ಠಾ (ಶ್ಲೇಷಾ)ರ್ಥಗುಣದೋಷಜ್ಞೋ ಮಹಾಕವಿಮತಾನುಗಃ ॥ (VII, ೩.೫೬)
ಶಾಸ್ತ್ರಾಲಂಕಾರಸಂಸ್ಕಾರೀ ವಿವೇಕೀ ಕವಿರುಚ್ಯತೇ ।
ಅಲಂಕಾರ್ಯೈಕನಿಷ್ಠಸ್ತು ಭೂಷಣಾರ್ಥೀ ಬುಧೈರ್ಮತಃ (VII, ೩.೫೭)

೨. **ಅರೀತಿ**—

ರಸಾನನುಗುಣಾ ರೀತಿರ್ಯತ್ರಾರೀತಿಸ್ತದುಚ್ಯತೇ (VII, ೧೦೬)

ಹೀಗೆ ಶೈವಸಾಹಿತಿಗಳಿಂದ ಶಬ್ದಾರ್ಥತತ್ತ್ವದ ವಿವೇಚನೆ, ರಸಸಿದ್ಧಾಂತದ ಮಾರ್ಮಿಕ ಪರಿಷ್ಕರಣ, ಭಕ್ತಿಕಾವ್ಯದ ನೂತನ ವಿಚಾರಧಾರೆ, ರಸಾಲಂಕಾರಗಳ ಸೌಂದರ್ಯಶೋಧನೆ, ಕವಿಗೆ ಕವಿಕರ್ಮಕ್ಕೆ ಶಿವಾನಂದಸಮಾನವಾದ ಪ್ರಾಧಾನ್ಯಕೊಡುವ ಪದ್ಧತಿ, ಶಿವನನ್ನೇ ಪರಮಕವಿಯೆಂದೂ ನಟರಾಜನೆಂದೂ ಧ್ಯಾನಿಸುವ ಪರಂಪರೆ, ಶಾಸ್ತ್ರಗ್ರಂಥಗಳಲ್ಲೂ ಕಾವ್ಯವಿವೇಚನೆ—ಇವೆಲ್ಲ ಕಾವ್ಯಮೀಮಾಂಸಾಶಾಸ್ತ್ರಕ್ಕೆ ಸಂದ ಮೂಲಭೂತ ಕೊಡುಗೆಗಳಾಗಿವೆ.

ಕವಿಗೆ ಗಾನವು ಲೇಸು, ಕವಿಗೆ ನವರಸ ಲೇಸು,
ಶಿವಪಥವನರುಹುವ ಗುರು ಲೇಸು

ಎಂಬ ಸರ್ವಜ್ಞಕವಿ ವಚನ ಇದನ್ನೇ ಬಿಚ್ಚಿ ತೋರಿಸುತ್ತದೆ.

ಜಯಂತಿ ಸ್ಥಾಯಿಸಂಚಾರಿಭಾವಾಭಿನಯಭಾವುಕಾಃ ।
ನೀಲಲೋಹಿತಶೈಲೂಷಭ್ರೂಲತಾಲಾಸ್ಯವಿಭ್ರಮಾಃ ॥

(ಕರ್ನಾಟಕದಲ್ಲಿ ದೊರೆತ ಶಿಲಾಶಾಸನದ ಶ್ಲೋಕ)

# ತಮಿಳು ಭಾಷೆಯಲ್ಲಿ ಶೈವಶತಕಸಾಹಿತ್ಯ

ಡಾ. ಕೃಷ್ಣಭಟ್, ಅರ್ತಿಕಜೆ

## ತಮಿಳಿನಲ್ಲಿ ಶೈವಸಾಹಿತ್ಯ

ದಕ್ಷಿಣ ದ್ರಾವಿಡ ಭಾಷೆಯ ಸಾಹಿತ್ಯಗಳಲ್ಲಿ ತಮಿಳು ಸಾಹಿತ್ಯಕ್ಕೆ ಹೆಚ್ಚಿನ ಪ್ರಾಚೀನತೆಯಿದೆಯೆಂದು ನಂಬಲಾಗಿದೆ. ತಮಿಳಿನಲ್ಲಿಯೂ ವಿವಿಧ ಧರ್ಮ ಹಾಗೂ ಮತಗಳಿಗೆ ಸಂಬಂಧಿಸಿದ ಸಾಹಿತ್ಯರಚನೆಯಾಗಿದೆ.ಶೈವಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯವೂ ತಮಿಳಿನಲ್ಲಿ ಸಾಕಷ್ಟು ರಚಿತವಾಗಿದೆ. ಸುಮಾರು ಆರನೆಯ ಶತಮಾನದ ಕೊನೆಯಲ್ಲಿ ತಮಿಳುನಾಡಿನಲ್ಲಿ ಶೈವ. ವೈಷ್ಣವ ಭಕ್ತರು ಪ್ರತಿಷ್ಠಿತರಾಗಿ ಭಕ್ತಿಪಂಥವನ್ನು ಸ್ಥಾಪಿಸಿ ಜೈನ. ಬೌದ್ಧಧರ್ಮಗಳ ಪ್ರಭಾವವನ್ನು ಕಡಿಮೆ ಮಾಡಿದರು. ಈ ಕಾಲದಲ್ಲಿ ಬಂದ ಶೈವಭಕ್ತರನ್ನು 'ನಾಯನಾರ್' ಎಂದೂ ಅವರು ರಚಿಸಿದ ಶೈವಭಕ್ತಿಗೀತೆಗಳನ್ನು 'ತೇವಾರ'ಗಳೆಂದೂ ಹೇಳುತ್ತಾರೆ. ತೇವಾರಗಳು ಶ್ರೇಷ್ಠಮಟ್ಟದ ಭಕ್ತಿಗೀತೆಗಳು. ಇದನ್ನು ರಚಿಸಿದ ಶೈವಭಕ್ತರು ಭಕ್ತಿಸಾಧನದಿಂದ ಶಿವನನ್ನು ಸಾಕ್ಷಾತ್ಕಾರಮಾಡಿಕೊಂಡು ಶೈವಧರ್ಮ ತತ್ತ್ವಗಳನ್ನು ಪ್ರಚಾರ ಮಾಡುವುದಕ್ಕಾಗಿ ದೇಶದ ಎಲ್ಲೆಡೆ ಸಂಚಾರ ಮಾಡಿದರು. ಅದರಿಂದಾಗಿ ಹಿಂದೂಧರ್ಮದ ಭಕ್ತಿಪಂಥವು ದಕ್ಷಿಣಭಾರತದಲ್ಲೆಲ್ಲಾ ವ್ಯಾಪಿಸುವುದಕ್ಕೆ ಕಾರಣವಾಯಿತೆಂದು ತಿಳಿಯಲಾಗಿದೆ. ಈ ಶಿವಭಕ್ತರ ಪ್ರಭಾವದಿಂದಾಗಿ ಬೇರೆ ಧರ್ಮವನ್ನನುಸರಿಸುತ್ತಿದ್ದ ಕೆಲವು ರಾಜರೂ ಶೈವರಾಗಿ ಪರಿವರ್ತನೆಗೊಂಡರು. ಜೈನಮತಾನುಸಾರಿಯಾಗಿದ್ದ ಪಲ್ಲವ ಮಹೇಂದ್ರನು ಶೈವಭಕ್ತರಾದ ಅಪ್ಪರ್ ಅವರ ಪ್ರೇರಣೆಯಿಂದ ಶೈವನಾಗಿ ತನ್ನ ರಾಜ್ಯದಲ್ಲಿ ಶಿವಾಲಯಗಳನ್ನು ಕಟ್ಟಿಸಿದನೆಂದು ಪ್ರತೀತಿಯಿದೆ.

ಶೈವಭಕ್ತರಾಗಿರುವ ನಾಯನಾರುಗಳ ರಚನೆಗಳಾಗಿರುವ ಭಕ್ತಿಗೀತೆಗಳಿಂದ ಕೂಡಿದ ಗ್ರಂಥಗಳು ಶೈವಧರ್ಮ ಸಿದ್ಧಾಂತದ ಸ್ತೋತ್ರಗಳೆಂದು ಆದರಿಸಲ್ಪಡುತ್ತಿವೆ. ಶೈವನಾಯನಾರ್‌ಗಳು ಸರಳಭಕ್ತರು. ಅವರು ದಾರ್ಶನಿಕರಲ್ಲ. ಶಿವನು ಭಕ್ತಿಗೆ ಒಲಿಯುವಂತೆ ತರ್ಕಕ್ಕೆ ಒಲಿಯುವುದಿಲ್ಲವೆಂದು ನಂಬಿದ ಅವರು ಪರಮಾತ್ಮನನ್ನು ಶಿವರೂಪದಲ್ಲಿ ಕಾಣುತ್ತಾರೆ; ಪೂಜಿಸುತ್ತಾರೆ. ನಂಬಿ ಆಂಡಾಳ್‌ನಂಬಿ ಎಂಬವರು ಈ ತಮಿಳು ಶೈವಭಕ್ತರ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಈ ಎಲ್ಲಾ ಗೀತೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ಹನ್ನೊಂದು 'ತಿರುಮುರೈ'ಗಳನ್ನಾಗಿ ವಿಭಾಗಿಸಿದ್ದಾರೆ. ಮೊದಲನೆಯ ಏಳಕ್ಕೆ 'ತೇವಾರಂ' ಎಂದು ಹೆಸರು. ಇದರಲ್ಲಿ ಪ್ರಸಿದ್ಧ ತಮಿಳು ಶಿವಭಕ್ತರಾದ ಸಂಬಂಧರ್, ಅಪ್ಪರ್, ಸುಂದರರ್ ಇವರ ಗೀತೆಗಳಿವೆ. ಎಂಟನೆಯದು ಮಾಣಿಕ್ಕವಾಚಕರು ರಚಿಸಿದ 'ತಿರುವಾಚಕಂ.' ಒಂಬತ್ತನೆಯದು 'ತಿರುಇಶೈಪ್ಪಾ.' ಹತ್ತನೆಯದು ತಿರುಮೂಲಾರರ ಕೃತಿಗಳು. ಹನ್ನೊಂದನೆಯದು ತಿರುಮುಲರೈ. ಇವುಗಳಲ್ಲಿ ನಕ್ಕೀರರಿಂದ ನಂಬಿ ಆಂಡಾಳ್ ನಂಬಿಯವರೆಗಿನ ಎಲ್ಲ ಶೈವಭಕ್ತರ ಗೀತೆಗಳೂ ಸಂಗೃಹೀತವಾಗಿವೆ.

ತಿರುಮುರೈಯನ್ನು ರಚಿಸಿದ ತಿರುಮೂಲರನ್ನು ದಾಕ್ಷಿಣಾತ್ಯ ಶೈವಸಿದ್ಧಾಂತದ ಪ್ರಸ್ಥಾನಕಾರರೆಂದು ಹೇಳುತ್ತಾರೆ. ಇವರ 'ತಿರುಮಂತ್ರ'ವು ಶೈವಸಿದ್ಧಾಂತಗ್ರಂಥವಾಗಿದ್ದು ಅದರಲ್ಲಿ 'ಪತಿ–ಪಶು–ಪಾಶ' ಸಿದ್ಧಾಂತದ ನಿರೂಪಣೆಯಿದೆ. ಈ ಕೃತಿಯಲ್ಲಿ ಮೂರುಸಾವಿರ ಮಂತ್ರಗಳಿವೆ. ಸುಮಾರು ಏಳನೆಯ ಶತಮಾನದಲ್ಲಿ ಅಪ್ಪರ್, ಸಂಬಂಧರ್ ಮತ್ತು ಸುಂದರರ್ ಎಂಬವರು ಹುಟ್ಟಿ ತಮಿಳುನಾಡಿನಲ್ಲಿ ಶೈವಭಕ್ತಿಯನ್ನು ಪ್ರಸಾರ ಮಾಡಿ ಜನರನ್ನು ಎಚ್ಚರಿಸಿದವರು. ಎಂಟನೆಯ ಶತಮಾನದಲ್ಲಿದ್ದರೆನ್ನಲಾದ ಮಾಣಿಕ್ಕವಾಚಕರು ಪರಶಿವನನ್ನು ಕುರಿತು ರಚಿಸಿರುವ ಭಕ್ತಿಗೀತೆಗಳೇ 'ತಿರುವಾಚಕಂ.' ಅವರೇ ರಚಿಸಿದ 'ತಿರುಕ್ಕೋವೈಯಾರ್'ನಲ್ಲಿ ಅವರು ಶಿವನನ್ನು ನಾಯಕನೆಂದೂ ತನ್ನನ್ನು ನಾಯಕಿಯೆಂದೂ ಭಾವಿಸಿಕೊಂಡು ರಚಿಸಿದ ನಾಲ್ಕುನೂರು ಪ್ರೇಮಗೀತೆಗಳಿವೆ. ತಿರುವಾಚಕಂನಲ್ಲಿರುವ ಆರುನೂರ ಐವತ್ತು ಗೀತೆಗಳೂ ಅತ್ಯಂತ ಶ್ರೇಷ್ಠ ಭಕ್ತಿಗೀತೆಗಳೆಂದು ಹೆಸರು ಪಡೆದಿವೆ. ಪಾಂಡ್ಯರಾಜನ ಮಂತ್ರಿಯಾಗಿದ್ದ ಮಾಣಿಕ್ಕ

ವಾಚಕರು ಶಿವಭಕ್ತಿಯಲ್ಲಿ ತಲ್ಲೀನರಾಗಿ ಹೃದಯತುಂಬಿ ಹಾಡಿದ ಗೀತೆಗಳನ್ನು ಈಗಲೂ ತಮಿಳುನಾಡಿನ ಶೈವರು ಶಿವನ ಆರಾಧನೆಯ ಸಮಯದಲ್ಲಿ ಹಾಡುತ್ತಾರೆ. 'ತಿರುವಾಚಕಂ'ಅನ್ನು ದ್ರಾವಿಡ ಉಪನಿಷತ್ತೆಂದು ಹೇಳುತ್ತಾರೆ. ಅಜ್ಞಾನಾವಸ್ಥೆಯಲ್ಲಿರುವ ಜೀವನು ದಿವ್ಯಜ್ಞಾನಾವಸ್ಥೆಗೆ ಏರುವ ಪಥದಲ್ಲಿ ಬರುವ ಎಲ್ಲ ಹಂತಗಳೂ ಇದರಲ್ಲಿ ನಿರೂಪಿತವಾಗಿವೆ. ತಿರುವಾಚಕಂ ತಮಿಳು ಶೈವರ ಸಾರಭೂತವಾದ ಶರಣಾಗತಿ ತತ್ವವನ್ನು ಸರಳವಾಗಿ ವರ್ಣಿಸುತ್ತದೆ. ಸುಂದರಮೂರ್ತಿ ಎಂಬವರು 'ತಿರುತ್ತೊಂಡತ್ತೊಗೈ' ಎಂಬ ಗೀತೆಯಲ್ಲಿ ಪ್ರಾಚೀನ ಶಿವಭಕ್ತರನ್ನೆಲ್ಲ ಸ್ತುತಿಸಿದ್ದಾರೆ.

ಕ್ರಿ.ಶ. ೧೨. ೧೩, ೧೪ನೆಯ ಶತಮಾನಗಳಲ್ಲಿ ಉಯ್ಯವಂದದೇವನಾಯನಾರ್ ಮೊದಲಾದವರಿಂದ ರಚಿತವಾದ ಹದಿನಾಲ್ಕು ಗ್ರಂಥಗಳು ಶೈವಧರ್ಮದ ಶಾಸ್ತ್ರಗ್ರಂಥಗಳೆನ್ನಿಸಿಕೊಂಡಿವೆ. ಮೆಯ್‌ಕಂಡಾರ್ ರಚಿಸಿದ 'ಶಿವಜ್ಞಾನ ಬೋಧಂ' ಎಂಬುದು 'ಪತಿ–ಪಶು–ಪಾಶ' ಎಂಬ ವಿಷಯಗಳ ಸತ್ಯವನ್ನು ಪ್ರಕಾಶಪಡಿಸಿ ಶೈವಸಿದ್ಧಾಂತದ ಮೂಲಾಧಾರಗ್ರಂಥವಾಗಿ ಮಾನ್ಯತೆ ಪಡೆದಿದೆ. ಅರುಣಂದಿ ಶಿವಾಚಾರ್ಯರು ರಚಿಸಿದ 'ಶಿವಜ್ಞಾನ ಶಿತ್ತಿಯಾರ್' 'ಇರುಬಾ ಇರುಬತ್ತು' ಎಂಬ ಕೃತಿಗಳು ಶೈವರಿಂದ ಮನ್ನಣೆ ಪಡೆದಿವೆ. ಉಮಾಪತಿ ಶಿವಾಚಾರ್ಯರ್ ಅವರ ಶಿವಪ್ರಕಾಶಂ. ಶೇಕ್ಕಿಳಾರ್ ಪುರಾಣಗಳೂ ಮನವಾಚಕಂ ಕಂಡಂದಾರ್ ಅವರ ಉಣ್ಮೈ ವಿಳಕ್ಕಂ ಮೊದಲಾದುವುಗಳೂ ಶೈವಶಾಸ್ತ್ರ ಗ್ರಂಥಗಳಾಗಿವೆ.

## ಶೈವಮಠಗಳ ಸಾಹಿತ್ಯಸೇವೆ

ತಮಿಳುನಾಡಿನಲ್ಲಿ ಶೈವಧರ್ಮವನ್ನು ಕಾಪಾಡುವುದಕ್ಕಾಗಿಯೂ ಪ್ರಚಾರಮಾಡುವುದಕ್ಕಾಗಿಯೂ ಸ್ಥಾಪಿತವಾದ ಶೈವಮಠಗಳು ಧರ್ಮಸಂಬಂಧವಾದ ಸೇವೆಯನ್ನು ಸಲ್ಲಿಸುವುದರೊಂದಿಗೆ ತಮಿಳು ಸಾಹಿತ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿಯೂ ಶ್ರಮಿಸಿದುವು. ಆ ಮಠಗಳು ಪುರಾತನ ಗ್ರಂಥಗಳನ್ನು ರಕ್ಷಿಸುವ ಮತ್ತು ಹೊಸ ಗ್ರಂಥಗಳನ್ನು ರಚಿಸುವ ಕಾರ್ಯಗಳಿಗೆ ಪ್ರೋತ್ಸಾಹವನ್ನು ನೀಡಿದುವು. ಹಲವು ಕವಿಗಳು ಮಠಗಳನ್ನಾಶ್ರಯಿಸಿ ಸಾಹಿತ್ಯ ಸೇವೆ ಮಾಡಿದರು. ಕವಿಗಳಿಗೆ ಹಾಗೂ ಪಂಡಿತರಿಗೆ ಆಶ್ರಯವನ್ನೂ ಪ್ರೋತ್ಸಾಹವನ್ನೂ ನೀಡಿದ ಕೆಲವು ಮಠಾಧಿಪತಿಗಳೂ ಕೆಲವು ಮತಗ್ರಂಥಗಳನ್ನು ರಚಿಸಿದರು. ತಮಿಳು ಸಾಹಿತ್ಯ ಚರಿತ್ರೆಗೆ ಶೈವಮಠಗಳು ನೀಡಿದ ಕಾಣಿಕೆ ಅಪೂರ್ವವಾದುದು. ಪ್ರಾಚೀನ ಗ್ರಂಥಗಳ ವ್ಯಾಸಂಗಕ್ಕೂ ಅವುಗಳಿಗೆ ವ್ಯಾಖ್ಯಾನ, ಟೀಕೆ, ಟಿಪ್ಪಣಿಗಳನ್ನು ಬರೆಯುವುದಕ್ಕೂ ಆ ಮಠಗಳು ಪ್ರೇರಣೆಯನ್ನಿತ್ತು ಸಹಾಯಮಾಡಿದುವು. ತಿರುವಾವಡುದುರೈ, ಧರ್ಮಪುರಂ, ತಿರುವಣ್ಣಾಮಲೈ, ತುರೈಮಂಗಲಂ ಮೊದಲಾದೆಡೆಗಳಲ್ಲಿರುವ ವೀರಶೈವ ಮಠಗಳು ಈ ಕಾರ್ಯದಲ್ಲಿ ಪ್ರಸಿದ್ಧವಾಗಿವೆ.

ಹದಿನಾಲ್ಕನೆಯ ಶತಮಾನದಲ್ಲಿ ಸ್ಥಾಪಿತವಾದ ತಿರುವಾವಡುದುರೈ ಮಠದಲ್ಲಿಯೂ ಧರ್ಮಪುರಮಠದಲ್ಲಿಯೂ ಬಾಳಿದ ಕವಿಗಳು ರಚಿಸಿದ ಕೆಲವು ಗ್ರಂಥಗಳು ಸಾಹಿತ್ಯಗುಣದಿಂದ ಕೂಡಿವೆ. ಧರ್ಮಪುರದ ಮಠಾಧಿಪತಿಗಳಾದ ಕುಮಾರ ಗುರುಪರರ್ ಎಂಬವರು ಅನೇಕ ಗ್ರಂಥಗಳನ್ನು ರಚಿಸಿ ಸಾಹಿತ್ಯಲೋಕಕ್ಕೆ ಅಸಾಧಾರಣ ಸೇವೆ ಸಲ್ಲಿಸಿ ಪ್ರಸಿದ್ಧರಾಗಿದ್ದಾರೆ. ಇವರ ಕಾಲ ಹದಿನೇಳನೆಯ ಶತಮಾನ. ಇದೇ ಕಾಲದಲ್ಲಿ ತುರೈಮಂಗಲಂ ಮಠದ ಪೀಠಾಧಿಪತಿಗಳಾದ ಶಿವಪ್ರಕಾಶರ್ ಎಂಬವರು ರಚಿಸಿದ ಇಪ್ಪತ್ತನಾಲ್ಕು ಗ್ರಂಥಗಳಲ್ಲಿ 'ನಾಲ್ವರ್ ನಾನ್ಮಣಿಮಾಲೈ' ಮತ್ತು ಅನುವಾದಿಸಿದ 'ಪ್ರಭುಲಿಂಗಲೀಲೆ' ಎಂಬವು ಪ್ರಸಿದ್ಧವಾಗಿವೆ. ವೀರಶೈವಮತವನ್ನು ಪ್ರಶಂಸಿಸಿ ಬರೆಯಲಾದ ಪ್ರಭುಲಿಂಗಲೀಲೆ ಕಾವ್ಯವು ಬಹು ಜನಪ್ರಿಯವಾಗಿದೆ. ನಾಲ್ವರ್ ನಾನ್ಮಣಿಮಾಲೈಯು ನಾಲ್ವರು ಶೈವನಾಯನಾರ್‌ಗಳ ಸ್ತೋತ್ರರೂಪವಾಗಿದೆ.

ಹದಿನೆಂಟನೆಯ ಶತಮಾನದಲ್ಲಿದ್ದ ಮಹಾಕವಿ ಶಿವಜ್ಞಾನ ಮುನಿಗಳು ತಿರುವಾವಡುದುರೈ ಮಠಕ್ಕೆ ಸೇರಿದವರು. ಅನೇಕ ಕೃತಿಗಳನ್ನು ರಚಿಸಿದ ಇವರು ಶೈವಧರ್ಮದ ಆಧಾರ ಗ್ರಂಥವಾದ 'ಶಿವಜ್ಞಾನ' ಬೋಧಕ್ಕೆ 'ಮಾಪಾಡಿಯಂ' ಎಂಬ ವ್ಯಾಖ್ಯಾನವನ್ನು ಬರೆದರು. ಇವರ ಶಿಷ್ಯರಾದ ಕಚ್ಚಿಯಪ್ಪ ಮುನಿಗಳು ಜನರು ಬೇರೆ ಮತದ ಗ್ರಂಥಗಳನ್ನು ಮೆಚ್ಚಿ ಆದರಿಸುವುದನ್ನು ಬಿಟ್ಟು ಶೈವಮತದ ಗ್ರಂಥದಲ್ಲಿ ಆಸಕ್ತಿ ವಹಿಸಬೇಕೆಂಬ ಉದ್ದೇಶದಿಂದ 'ತಿರುತ್ತಣಿ' ಎಂಬ ಕ್ಷೇತ್ರವನ್ನು ಪ್ರಶಂಸೆಮಾಡಿ ಷಣ್ಮುಖದೇವನ ಮಹಿಮೆಯನ್ನು ತಿಳಿಸುವ 'ತಣಿಗೈ ಪುರಾಣಂ' ಎಂಬ ಕೃತಿಯನ್ನು ಬರೆದರು. ಹದಿನೆಂಟನೆಯ ಶತಮಾನದಲ್ಲಿ ಬಾಳಿದ ಶಾಂತಲಿಂಗಸ್ವಾಮಿಗಳೂ ವೀರಶೈವ ಮಠಕ್ಕೆ ಸೇರಿದವರು. ಇವರೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇದೇ ರೀತಿ ಚಿದಂಬರಸ್ವಾಮಿಗಳು, ತತ್ತುವ

ರಾಯರ್ ಮೊದಲಾದವರು ಶೈವಧರ್ಮಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಬರೆದಿರುವರು. ತಾಂಡವರಾಯರೆಂಬವರು ಅದ್ವೈತ ಸಿದ್ಧಾಂತವನ್ನು ತಿಳಿಸುವ "ಕೈವಲ್ಯನವನೀತಂ" ಎಂಬ ಗ್ರಂಥವನ್ನು ರಚಿಸಿದರು. ತಾಯುಮಾನವರೆಂಬವರು ಶೈವಸಿದ್ಧಾಂತ ಮತ್ತು ಅದ್ವೈತಸಿದ್ಧಾಂತಗಳಲ್ಲಿ ಒಂದು ರೀತಿಯ ಸಾಮರಸ್ಯವನ್ನು ಕಂಡಿರುವರು. ಈ ರೀತಿ ತಮಿಳುನಾಡಿನ ಶೈವಮಠಗಳು ತಮಿಳುಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿವೆ.

## ತಮಿಳಿನಲ್ಲಿ ಶತಕಸಾಹಿತ್ಯ

ಕನ್ನಡ, ತೆಲುಗು, ಮಲೆಯಾಳ, ಸಂಸ್ಕೃತ, ಹಿಂದಿ ಮೊದಲಾದ ಭಾಷೆಗಳಲ್ಲಿ ರಚಿತವಾಗಿರುವಂತೆ ತಮಿಳಿನಲ್ಲಿಯೂ ಶತಕಗಳ ರಚನೆಯಾಗಿದೆ. ತಮಿಳಿನಲ್ಲಿ ಹನ್ನೊಂದನೆಯ ಶತಮಾನದಲ್ಲಿಯೇ ಶತಕಸಾಹಿತ್ಯದ ರಚನೆಯಾಯಿತೆಂಬ ಅಭಿಪ್ರಾಯವಿದ್ದರೂ ಕೆಲವು ವಿದ್ವಾಂಸರು ತಮಿಳಿನಲ್ಲಿ ಶತಕಸಾಹಿತ್ಯವು ಆರಂಭವಾದುದು ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಎಂಬುದನ್ನು ಕೆಲವು ಆಧಾರಗಳ ಮೂಲಕ ತಿಳಿಸಿದ್ದಾರೆ. ಪದ್ಯಗಳ ಸಂಖ್ಯೆಯ ಆಧಾರದಲ್ಲಿ ಕೃತಿಗಳಿಗೆ ಹೆಸರಿಡುವ ಸಂಪ್ರದಾಯವು ತಮಿಳುಸಾಹಿತ್ಯದಲ್ಲಿ ಮೊದಲಿಂದಲೂ ಬಳಕೆಯಲ್ಲಿದ್ದರೂ 'ಶತಕ'ವೆಂಬ ಹೆಸರು ಮೊದಲು ಬಳಕೆಯಾಗಿರುವುದು ಎಂಟನೆಯ ಶತಮಾನದ ಮಾಣಿಕ್ಕವಾಚಕರ 'ತಿರುವಾಚಕಂ'ನಲ್ಲಿ. ಅದರಲ್ಲಿ ನೂರು ಪದ್ಯಗಳಿರುವ 'ತಿರುಚ್ಚತಕಂ' ಎಂಬ ಒಂದು ಭಾಗವಿದೆ. ನೂರು ಪದ್ಯಗಳಿದ್ದು ಶಿವಭಕ್ತಿಯಿಂದ ಕೂಡಿದ ತಿರುಚ್ಚತಕದಲ್ಲಿ ಶತಕಸಾಹಿತ್ಯದ ಲಕ್ಷಣಗಳಿದ್ದರೂ ಅದು ಪ್ರತ್ಯೇಕ ಕೃತಿಯಾಗಿರದೆ ತಿರುವಾಚಕಂನ ಒಂದು ಭಾಗವಾಗಿರುವುದರಿಂದ ತಮಿಳು ವಿದ್ವಾಂಸರು ಅದನ್ನು ಶತಕವೆಂಬುದಾಗಿ ಸ್ವೀಕರಿಸಿಲ್ಲ. ತಮಿಳಿನಲ್ಲಿ ಶತಕಗಳು ಹೆಚ್ಚಾಗಿ ರಚಿತವಾದುದು ೧೭, ೧೮ ಹಾಗೂ ೧೯ನೆಯ ಶತಮಾನಗಳಲ್ಲಿ. ತಮಿಳಿನ ಶತಕಗಳನ್ನು ಮುಖ್ಯವಾಗಿ ಚಾರಿತ್ರಿಕ ಶತಕಗಳು, ಭಕ್ತಿ ಅಥವಾ ಸ್ತೋತ್ರಶತಕಗಳು ಮತ್ತು ನೀತಿಶತಕಗಳೆಂದು ವಿಭಾಗಿಸಬಹುದಾಗಿದೆ. ಸ್ತೋತ್ರಶತಕಗಳಲ್ಲಿ ಶಿವಸಂಬಂಧವಾದ ಮತ್ತು ವಿಷ್ಣುಸಂಬಂಧವಾದ ಶತಕಗಳೇ ಅಧಿಕವಾಗಿವೆ.

## ತಮಿಳಿನಲ್ಲಿ ಶೈವಶತಕಗಳು

ಮೂಲತಃ ಶೈವಧರ್ಮ ಹಾಗೂ ತತ್ತ್ವಗಳನ್ನು ಅಥವಾ ಶೈವದರ್ಶನವನ್ನು ವಿಶದವಾಗಿ ತಿಳಿಸುವ ಶೈವಶತಕಗಳು ತಮಿಳಿನಲ್ಲಿರುವುದು ಕಡಿಮೆ. ತಮಿಳಿನಲ್ಲಿರುವ ಶಿವಸಂಬಂಧವಾದ ಶತಕಗಳಲ್ಲಿ ಶಕ್ತಿ, ಷಣ್ಮುಖ ಹಾಗೂ ಗಣಪತಿಯರನ್ನು ಕುರಿತ ಶತಕಗಳನ್ನೂ ಸೇರಿಸಲಾಗಿದೆ. ಆದರೆ ಇವು ನೇರವಾಗಿ ಶಿವನಿಗೇ ಸಂಬಂಧಿಸಿದವುಗಳಲ್ಲ. ಅಪ್ಪೆಯಾಂಬಿಕೈಶತಕಂ, ಅವಿನಾಶಿಕ್ಕರುಣಾಂಬಿಕೈಶತಕಂ, ಶಿವಕಾಮಿಯಮ್ಮೈಶತಕಂ, ತಿಲ್ಲೈಶಿವಕಾಮಸುಂದರಿ ಶತಕಂ, ಭುವನೇಶ್ವರೀಶತಕಂ, ಮೀನಾಕ್ಷಿಯಮ್ಮೈಶತಕಂ ಮೊದಲಾದ ಶತಕಗಳು ಶಿವಸತಿಯಾದ ಶಕ್ತಿಯನ್ನು ಕುರಿತವುಗಳು. ಕಂದಪುರಾಣಶತಕಂ, ಕುಮರೇಶಶತಕಂ, ತಿರುಪ್ಪೋರೂರುಶತಕಂ, ತಿರುಪ್ಪೋರೂರು ಪ್ರಣವಾಚಲ ಶತಕಂ, ಪಳನಿಯಾಂಡವರ್‌ಶತಕಂ, ಸಿಂಗಾರವೇಲರ್ ಶತಕಂ, ಮೆಯ್‌ಕಂಡ ವೇಲಾಯುಧ ಶತಕಂ, ವಡಿವೇಲರ್ ಶತಕಂ, ವೇಲಾಯುಧಶತಕಂ ಮೊದಲಾದುವು ಷಣ್ಮುಖಸಂಬಂಧವಾದ ಶತಕಗಳು. ತಿರುಚ್ಚೆಂದಿಲ್ ಚೆಂದಿಲ್ ವಿನಾಯಕ ಶತಕಂ, ತಿಲ್ಲೈಕರ್ಪಗವಿನಾಯಕರ್ ಶತಕಂ ಮೊದಲಾದುವು ಗಣಪತಿಯ ಸಂಬಂಧವಾದವುಗಳು. ಈ ಶತಕಗಳಲ್ಲಿಯೂ ಕೆಲವೆಡೆ ಶಿವನ ಮಹಿಮೆಯು ವರ್ಣಿತವಾಗಿದ್ದರೂ ಇವುಗಳು ನೇರವಾಗಿ ಶಿವನನ್ನು ಸ್ತೋತ್ರ ಮಾಡುವ ಅಥವಾ ಶೈವಧರ್ಮದ ತತ್ತ್ವಗಳನ್ನು ವಿವರಿಸುವ ಶೈವಶತಕಗಳಲ್ಲಿ ಶಿವನ ಹೆಸರನ್ನು ಪದ್ಯಗಳಲ್ಲಿ ಮಕುಟವಾಗಿ ಪಡೆದ ನೇರವಾಗಿ ಶಿವನನ್ನು ಕುರಿತ ಭಕ್ತಿಶತಕಗಳೂ, ನೀತಿಶತಕಗಳೂ ತಮಿಳಿನಲ್ಲಿ ಕೆಲವಿವೆ. ಅವುಗಳಲ್ಲಿ ಅಣ್ಣಾಮಲೈಯೂರ್‌ಶತಕಂ, ಅರುಣಾಚಲಶತಕಂ, ಅರಪ್ಪಳೀಸುರಶತಕಂ, ಕೈಲಾಸನಾಥರ್‌ಶತಕಂ, ಕೈಲಾಸನಾಥ ಶತಕಂ, ಶಂಕರಶತಕಂ, ಶಿವಶಂಕರಶತಕಂ, ಜೆಯಂಗೊಂಡಾರ್‌ಶತಕಂ, ತಂಡಲೈಯಾರ್‌ಶತಕಂ, ತಿಲ್ಲೈನಟರಾಜರ್ ಶತಕಂ, ನಟರಾಜಶತಕಂ, ಶ್ರೀ ಶಿವಗುರುಶತಕಂ ಮೊದಲಾದುವು ಮುಖ್ಯವಾಗಿವೆ. ಶಿವಭಕ್ತರನ್ನೂ ಶಿವಶರಣರನ್ನೂ ಕುರಿತ ತಿರುತ್ತೊಂಡರ್‌ಶತಕಂ, ಕರುಪ್ಪಣ್ಣಸ್ವಾಮಿಶತಕಂ ಮೊದಲಾದುವು ಪ್ರಧಾನವಾಗಿವೆ. ಮುಖ್ಯವಾದ ಈ ಶತಕಗಳಲ್ಲಿ ಕೆಲವಕ್ಕೆ ಮಾತ್ರ ವಿವರಗಳನ್ನು ಇಲ್ಲಿ ಕೊಡಲಾಗಿದೆ.

### ಶ್ರೀ ಶಿವಗುರುಶತಕಂ

ಇದು ಕ್ರಿ.ಶ. ೧೯೩೦ರಲ್ಲಿ ಪ್ರಕಟವಾಯಿತು. ಇದನ್ನು ಬರೆದವರು ಸ್ವಾಮಿ ಶಿವಾನಂದಸರಸ್ವತಿ ಎಂಬವರು. ಇದರಲ್ಲಿ ೧೦೦ ವೃತ್ತಗಳಿವೆ. ಈ ಶತಕದ ಪದ್ಯಗಳಲ್ಲಿ ಮಕುಟವು ನಿಯತವಾಗಿಲ್ಲ. ಕವಿಯು ಇಲ್ಲಿ ತನ್ನನ್ನು ಶಿವನಿಗೆ

ಅರ್ಪಿಸಿ ತನಗೆ ಸಕಲ ಇಷ್ಟಾರ್ಥವನ್ನು ಕರುಣಿಸಬೇಕೆಂದು ಆರ್ತಭಕ್ತಿಯಿಂದ ಪ್ರಾರ್ಥಿಸಿದ್ದಾನೆ. ಉದಾಹರಣೆಗೆ ಒಂದು ಪದ್ಯವನ್ನು ನೋಡಬಹುದು:

ವೇಂಡುವದುನ್‌ರನ್‌ತಿರುವಡಿಯನ್ರಿ
ಎಂಡು ಎನ್ ಉಲಗಮುಂ ಪಿರಿಂಚನ್
ಕಾಂಡಗುಪುರಮುಂ ಕರ್ಪಗನೀಳಲ್
ಕವಿನ್ ಪೆರ ವಿಳಂಗು ವಿಣ್ಣುಲಗುಂ
ವೇಂಡಿಲನ್ ಅಡಿಯಾರ್ ವೇಂಡಿಯದಳಿಕ್ಕುಂ
ವಿಮಲನೇ ಕರುಣೈಯಂ ಕಡಲೇ
ತುಂಡರು ಜ್ಞಾನಸುಡರ್ ಕೊಳುಂದೇನಲ್
ತುರಿಯಮುಂ ಕಡಂದ ಸದ್ಗುರುವೇ

ಇಲ್ಲಿ ಕವಿಯು "ಕೇಳಿದವರಿಗೆ ಕೇಳಿದ್ದನ್ನೆಲ್ಲಾ ಕೊಡುವ ವಿಮಲನೇ, ಕರುಣಾಸಾಗರನೇ ಜ್ಞಾನಸೂರ್ಯನೇ, ಸರ್ವ ವ್ಯಾಪಕನೇ ನನಗೆ ಬೇಕಾಗಿರುವುದು ನಿನ್ನ ಪಾದಾರವಿಂದವೇ ಹೊರತು ವಿಷ್ಣುಲೋಕವಾಗಲೀ, ಕರ್ಪಗ ವೃಕ್ಷವಾಗಲೀ, ಸ್ವರ್ಗಲೋಕವಾಗಲೀ ಅಲ್ಲ" ಎಂದು ಶಿವನಲ್ಲಿ ಕೇಳಿಕೊಂಡಿದ್ದಾನೆ.

## ನಟರಾಜಶತಕಂ

ಈ ಶತಕವು ೧೯೪೭ರಲ್ಲಿ ಪ್ರಕಟವಾಗಿದೆ. ಇದನ್ನು ಬರೆದವರು ಶ್ರೀಮತ್ ಚಿದಂಬರನಾಥಮುನಿವರ್ ಎಂಬವರು. ಇದರಲ್ಲಿ ೧೦೩ ವೃತ್ತಗಳಿವೆ. ಪ್ರತಿಪದ್ಯದ ಕೊನೆಯಲ್ಲಿ "ಶಿವ ಚಿದಂಬರವಾಸ ಶಿವಕಾಮಿ ಉಮೈನೇಶ ಜಗದೀಶ ನಟರಾಜನೇ" ಎಂಬ ಮಕುಟವಿದೆ. ಶೈವಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳ ವಿವರಣೆ ಈ ಶತಕದಲ್ಲಿದೆ. ಚಿದಂಬರಂ ಕ್ಷೇತ್ರದ ಮಹತ್ವ, ಅಲ್ಲಿರುವ ಮೂರುಸಾವಿರ ಶಿವಭಕ್ತರ ಸ್ತೋತ್ರ ಹಾಗೂ ಶಿವಲಿಂಗ ಪೂಜೆ ಮಾಡಿದವರನ್ನು ಕುರಿತ ವಿವರಗಳು ಇಲ್ಲಿವೆ. ಪ್ರತಿದಿನವೂ ಕಡಿಮೆ ಪಕ್ಷ ಒಂದುಸಲವಾದರೂ ಶಿವನ ಪೂಜೆ ಮಾಡಬೇಕೆಂಬುದನ್ನು ತಿಳಿಸಿ ಶಿವಪೂಜೆಯ ಮಹತ್ವವನ್ನು ಇಲ್ಲಿ ಹೇಳಲಾಗಿದೆ.

ಮುಪ್ಪೊಳುದು ಅನುದಿನಂ ಶಿವಪೂಜೆ ಸೆಯ್ಯವೇಂಡುಂ
ಮುನಿವರ್ ಸುರರ್‌ಮರೆಯವರ್ಕುಂ
ಮೊಳಿಯಿಲ್ ಇಹ್‌ದನ್ರಿ ಇರು ಪೊಳುದಿಲ್ ಒರುಪೊಳುದೇನುಂ
ಮುಯನ್ರದೈ ಪುರಿಗ

(ಮೂರು ಪೊತ್ತು ಶಿವಪೂಜೆ ಮಾಡಬೇಕು. ಅದು ಸಾಧ್ಯವಿಲ್ಲದವರು ಎರಡು ಪೊತ್ತುಗಳಲ್ಲಿ ಒಂದು ಪೊತ್ತಾದರೂ ಶಿವಪೂಜೆ ಮಾಡಬೇಕು.)

ಲಿಂಗಗಳಲ್ಲಿ ಸ್ವಯಂಭುಲಿಂಗ, ದೈವಿಕಲಿಂಗ, ರಾಕ್ಷಸಲಿಂಗ, ಮಾನುಷಲಿಂಗ, ಆದಿಡಲಿಂಗ, ಕಾಣಬಲಿಂಗ, ಆರ್ಕಲಿಂಗ ಎಂದು ಏಳು ಲಿಂಗಗಳಿವೆಯೆಂದೂ ಇವಲ್ಲದೆ ಲೋಹಲಿಂಗ, ರಾಜಲಿಂಗ, ರತ್ನಲಿಂಗ, ರಜತಲಿಂಗ ಇತ್ಯಾದಿ ಕೆಲವು ಲಿಂಗಗಳಿವೆಯೆಂದೂ ಹೇಳಲಾಗಿದೆ. ಈ ಶತಕದಲ್ಲಿ ಶಿವಪೂಜೆಗೆ ಸಂಬಂಧಿಸಿದ ಅನೇಕ ವಿಚಾರಗಳಿವೆ. ಶಿವನನ್ನು ಅರ್ಚಿಸುವ ಕಾಲ, ಅರ್ಚಿಸಲು ಉಪಯೋಗಿಸಬೇಕಾದ ಹೂ, ಅರ್ಚನೆಯ ಪುಷ್ಪಗಳ ವಿಶೇಷತೆ, ಅಭಿಷೇಕ ಹಾಗೂ ಅದರ ಲಕ್ಷಣ, ಪಂಚಗವ್ಯ, ಪಂಚಾಮೃತಗಳನ್ನು ತಯಾರಿಸುವ ವಿಧಾನ, ಧೂಪ, ದೀಪಾರಾಧನೆಗಳ ವಿಧಗಳು, ಮಂತ್ರಗಳ ಫಲ, ಪೂಜಾಸಮಯದಲ್ಲಿ ನುಡಿಸಬೇಕಾದ ವಾದ್ಯಗಳು, ದೇವರದರ್ಶನ ಮಾಡಬಾರದ ಹೊತ್ತುಗಳು, ನಮಸ್ಕಾರವಿಧಿ, ಪ್ರದಕ್ಷಿಣೆಯ ವಿಧಿ, ವಿಭೂತಿಯನ್ನು ತಯಾರಿಸುವ ಹಾಗೂ ಧರಿಸುವ ವಿಧಾನ, ರುದ್ರಾಕ್ಷಿಯ ಲಕ್ಷಣ, ಶಿವವ್ರತಗಳ ವಿವರ, ಪಾಶುಪತರು—ಭಾಗವತರನ್ನು ಕುರಿತ ವಿವರ, ಚರ್ಯಾ, ಕ್ರಿಯಾ, ಜ್ಞಾನಯೋಗ ವ್ರತಗಳೆಂದರೇನು, ಶಿವಾಪರಾಧಗಳು, ಅವುಗಳ ವಿಮೋಚನೆ, ಆಚಾರ್ಯ ಲಕ್ಷಣ ಇತ್ಯಾದಿ ಅನೇಕ ಶಿವಪೂಜೆಯ ವಿಧಿಗಳನ್ನೂ ಶೈವಧರ್ಮದ ವಿಚಾರಗಳನ್ನೂ ಕವಿ ತಿಳಿಸುತ್ತಾನೆ. ಇದೊಂದು ಮುಖ್ಯವಾದ ಶೈವಶತಕ.

## ಶಿವಶಂಕರಶತಕಂ

ಇದು ಕ್ರಿ.ಶ. ೧೯೦೬ರಲ್ಲಿ ಪ್ರಕಟವಾಗಿದೆ. ಇದನ್ನು ಬರೆದವರು ವೀರಾಸ್ವಾಮಿ ಉಪಾಧ್ಯಾಯರ್. ಇದರಲ್ಲಿ ೧೦೧ ವೃತ್ತಗಳಿವೆ. ದೇವರನ್ನು ಸ್ತುತಿಸುವುದರೊಂದಿಗೆ ತನ್ನ ಮೇಲೆ ಕರುಣೆ ತೋರಿಸಿ ಕಾಪಾಡಬೇಕೆಂದು ಕವಿ ದೇವರಲ್ಲಿ ಪ್ರಾರ್ಥಿಸುತ್ತಾನೆ. 'ಶಿವಶಂಕರಾ ಶಿವಶಂಕರಾ' ಎಂಬ ಮಕುಟದೊಂದಿಗೆ ಈ ಶತಕದ ಪದ್ಯಗಳು ಕೊನೆಗೊಳ್ಳುತ್ತವೆ. ಶಿವನ ಮಹಿಮೆ ಹಾಗೂ ಶಿವನ ಲೀಲೆಗಳು ಈ ಶತಕದಲ್ಲಿ ವರ್ಣಿತವಾಗಿವೆ.

ಮೆಯ್ಯಾಗ ನಿನ್ನರುಳ್ ವೇಂಡಿನವರ್ ಮೇವಾದ ಭಾಗ್ಯಂ ಇಲ್ಲೆಯಾಲ್
ಪ್ರಯ್ಯಾಗ ವಾಂಚಯಿನಾಲ್ ಉನ್ನೈ ಪೋಟ್ರುಂತಿರಂ ಪೊಯ್ಯಲ್ಲವೇ
ಅಯ್ಯಾ ಇನಿ ಅಡಿಯೇರ್ಕ್‌ನಿನ್ ಅರುಳ್ ಕಿಟ್ಟುವಾರ್ ಉಳದಾಗ ನೀ
ಚೆಯ್ಯಾವಿಡಿಲ್ ಎವ್ವಾರ್ ಉಯ್‌ವೇನ್ ಶಿವಶಂಕರಾ ಶಿವಶಂಕರಾ

ಎಂಬ ಪದ್ಯದಲ್ಲಿ ಕವಿಯು "ನಿನ್ನ ಕರುಣೆಯಿದ್ದಲ್ಲಿ ದೊರಕದ ಭಾಗ್ಯವೇ ಇಲ್ಲ. ಸುಳ್ಳಾಗಿಯಾದರೂ ನಿನಗೆ ಕೈಮುಗಿದವರಿಗೆ ತಪ್ಪದೆ ಎಲ್ಲಾ ಭಾಗ್ಯಗಳೂ ದೊರೆಯುತ್ತವೆ. ನಿನ್ನ ಕರುಣೆಯಿಲ್ಲದೆ ನಾನು ಹೇಗೆ ಬಾಳಲಿ?" ಎಂದು ಹೇಳುತ್ತಾನೆ. ಸಮುದ್ರಮಥನದ ಸಂದರ್ಭದಲ್ಲಿ ಬಂದ ಘೋರ ವಿಷವನ್ನು ಕುಡಿದು ಶಿವನು ಲೋಕವನ್ನು ರಕ್ಷಿಸಿದ ವಿಚಾರ ಕೆಳಗಿನ ಪದ್ಯದಲ್ಲಿ ವರ್ಣಿತವಾಗಿದೆ.

ನಾಣಾಗ ವಾಸುಕಿ ಮಂದರ ನನ್‌ಮತ್ತಾಯ್ರುತ್ತಿರುಮಾಲುಡನ್
ಕೋಣಾಮಲ್ ವಾನವರ್ ದಾನವರ್ ಕೂಡಿಕ್ಕಡಲ್ ಕಡೈಯನ್‌ರವರ್
ವಾಣಾಳೈ ಮಾಯ್‌ತ್ತಿಡವಂದವವ್ವನ್ ವನ್ನಂಜೈಯುಂಡುಯಿವೈತ್ತಿಡುಂ
ಚೇಣಾರ್ ಪಿರೈಯಣಿ ವೇಣಿಯಾ ಶಿವಶಂಕರಾ ಶಿವಶಂಕರಾ

(ವಾಸುಕಿಯನ್ನು ಹಗ್ಗವಾಗಿಯೂ ಮಂದರಾದ್ರಿಯನ್ನು ಕಡೆಗೋಲನ್ನಾಗಿಯೂ ಮಾಡಿ ದೇವದಾನವರು ಕೂಡಿ ಸಮುದ್ರಮಥನ ಮಾಡಿದರು. ಆಗ ಭೀಕರವಾದ ವಿಷವು ಉದ್ಭವಿಸಿತು. ಎಲ್ಲವನ್ನೂ ನಾಶಮಾಡಬಲ್ಲಂಥ ಆ ವಿಷವನ್ನು ಕುಡಿದು ಶಿವನು ಲೋಕವನ್ನು ರಕ್ಷಿಸಿದನು.) ಅನೇಕ ಭಕ್ತರನ್ನು ಕಾಪಾಡಿ ತನ್ನ ಲೀಲೆಯನ್ನು ಮೆರೆದ ಶಿವನನ್ನು ಕುರಿತಾದ ಹಲವು ಪುರಾಣ ಕಥೆಗಳ ವಿವರ ಈ ಶತಕದಲ್ಲಿದೆ.

## ಅರುಣಾಚಲಶತಕಂ

ಇದನ್ನು ಬರೆದವರು ಕಾಂಚೀಪುರಂ ಸಭಾಪತಿ ಮುದಲಿಯಾರ್ ಎಂಬವರು. ಇವರ ಕಾಲ ೧೯ನೆಯ ಶತಮಾನದ ಉತ್ತರಾರ್ಧ. ತಿರುವಣ್ಣಾಮಲೈಯ ಶಿವನ ಸ್ತೋತ್ರರೂಪವಾದ ಈ ಶತಕದ ಪದ್ಯಗಳಲ್ಲಿ 'ಅರುಣಾಚಲಾ ಅರುಣಾಚಲಾ' ಎಂಬ ಮಕುಟವಿದೆ. ಶಿವನಲೀಲೆ ಹಾಗೂ ಮಹಿಮೆಯನ್ನು ವರ್ಣಿಸುವ ಈ ಶತಕದ ಕರ್ತೃ ಶಿವನ ಪರಮಭಕ್ತನೆಂಬುದು ತಿಳಿಯುತ್ತದೆ. ಈ ಶತಕದಲ್ಲಿ ೧೦೧ ಪದ್ಯಗಳಿವೆ. ಕವಿಯು :

ಮಾಯೋ ನೈಯುಂ ತೊಳುಗಿನ್‌ರಿಲನ್ ಮಲರೋನ್ನೈಯುಂ ತೊಳುಗಿನ್‌ರಿಲನ್
ನಾಯೇನ್ ನಿನ್ನೈಯೇ ಪೋಟ್ರುವೇನ್

ಎಂಬ ಪದ್ಯದಲ್ಲಿ 'ನಾನು ವಿಷ್ಣುವನ್ನಾಗಲೀ ಬ್ರಹ್ಮನನ್ನಾಗಲೀ ಪೂಜಿಸಲಾರೆ ಸದಾ ನಿನ್ನನ್ನೇ ಸ್ತುತಿಸುತ್ತೇನೆ' ಎಂದು ಹೇಳುತ್ತಾನೆ. ತಿರುವಣ್ಣಾಮಲೈಯ ಪ್ರಧಾನ ಉತ್ಸವವಾದ 'ಕಾರ್ತಿಕದೀಪ'ದ ವಿವರ ಈ ಶತಕದಲ್ಲಿದೆ. ತಮಿಳುನಾಡಿನ ಉಳಿದ ಯಾವುದೇ ದೇವಸ್ಥಾನದಲ್ಲಿ ಈ ಉತ್ಸವ ತಿರುವಣ್ಣಾಮಲೈಯಲ್ಲಿ ನಡೆಯುವಷ್ಟು ವಿಜೃಂಭಣೆಯಿಂದ ನಡೆಯುವುದಿಲ್ಲ. ಈ ದೇವಸ್ಥಾನದಂತೆಯೇ ತಿರುವಣ್ಣಾಮಲೈ ಬೆಟ್ಟವೂ ತುಂಬಾ ಪವಿತ್ರ. ಜನರು ಆ ಬೆಟ್ಟವನ್ನು ಶಿವನೆಂದೇ ಭಾವಿಸಿ ಪೂಜಿಸುತ್ತಾರೆ. ಶಿವಧ್ಯಾನ ಮಾಡುವುದರಿಂದ ಜನ್ಮಜನ್ಮಗಳ ಕಷ್ಟ ನಿವಾರಣೆಯಾಗುತ್ತದೆಂಬುದನ್ನು ಕವಿಯು ಕೆಳಗಿನ ಪದ್ಯದಲ್ಲಿ ಸೂಚಿಸಿದ್ದಾನೆ :

ಪುಲ್ಲಾಗಿಯೇ ಪೂಡಾಗಿಯೇ ಪುಳುವಾಗಿಯೇ
ಕಲ್ಲಾಗಿಯೇ ನುನ್ನಿನ್ನಗರ್ಕಣ್‌ಮೇವಿಲೇ ನಿನಿಯೆಬನೆ

ಪೊಲ್ಲಾಪ್ಪಿರಪ್ಪೊಳಿಂದುಯ್ ಕುವೇನ್ ಪುಲ್ಲೈ ನಾಯಿನೇನಿಮುಯಂತರುಂ
ಅಲ್ಲಾರ್ಕುಳಕ್ಕೊರು ಪಾಗನೇ ಅರುಣಾಚಲಾ ಅರುಣಾಚಲಾ

(ಹುಲ್ಲಾಗಿ. ಕಡ್ಡಿಯಾಗಿ. ಹಾಳವಾಗಿ. ಮರವಾಗಿ, ಕಲ್ಲಾಗಿ ಹೀಗೆ ಏನೆಲ್ಲಾ ಆಗಿ ಹುಟ್ಟಿ ನಾನು ಕಷ್ಟಪಡುತ್ತಿದ್ದೇನೆ. ನಿನ್ನನ್ನು ಧ್ಯಾನಿಸಿದಾಗ ನನ್ನ ಜನ್ಮಗಳ ಕಷ್ಟಗಳೆಲ್ಲವೂ ದೂರವಾಗುತ್ತವೆ.)

**ಅಣ್ಣಾಮಲ್ಲೈಯಾರ್ ಶತಕಂ**

ಇದನ್ನು ಬರೆದವರು ತಿರುಬೆಟ್ಟಂಬಲನಾವಲರ್. ಇವರ ಕಾಲ ೧೯ನೆಯ ಶತಮಾನದ ಉತ್ತರಾರ್ಧ. ತಿರುವಣ್ಣಾಮಲ್ಲೈ ದೇವಸ್ಥಾನದ 'ಅಣ್ಣಾಮಲ್ಲೈಯಾರ್' ದೇವರ ಸ್ತೋತ್ರರೂಪವಾಗಿದೆ. ಇದಕ್ಕೆ ವಸಂತರಾಯ ಶತಕವೆಂಬ ಹೆಸರೂ ಇದೆ. ಸಿಂಗಪುರಿ ವಸಂತರಾಯರ್ ಎಂಬವರು ತಿರುಬೆಟ್ರಂಬಲನಾವಲರ್‌ಗೆ ಆಶ್ರಯ ಕೊಟ್ಟಿದ್ದುದರಿಂದ ಈ ಶತಕಕ್ಕೆ ಆ ಹೆಸರು ಬಂತು. 'ಅಣ್ಣಾಮಲ್ಲೈದೇವನೇ' ಎಂಬ ಮಕುಟವಿರುವ ಈ ಶತಕದ ಎಲ್ಲಾ ಪದ್ಯಗಳಲ್ಲಿಯೂ 'ವಸಂತರಾಯ' ಎಂಬ ಹೆಸರೂ ಬರುತ್ತದೆ. ಕೃತಿಕರ್ತರು ಶೈವಮತಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ತಿರುವಣ್ಣಾಮಲ್ಲೈಯ ಸಮೀಪದ ತಿರುಕ್ಕೋವಿಲೂರ್ ತಿರುಪ್ಪದಿಯ ಹಿರಿಮೆಯನ್ನೂ ತಿರುಪ್ಪದಿಗೆ ಸೇರಿದ ತಿರುಮುನ್ನೈಪ್ಪಾಡಿಯ ಇತಿಹಾಸವನ್ನೂ ಆ ನಾಡಿನ ಪ್ರಮುಖರಾದ ಮೆಯ್‌ಪ್ಪೊರುಳ್ ನಾಯನಾರ್ ನರಸಿಂಗಮುನ್ನೈಯರ್. ಕುಲಶೇಖರ ನಾಯನಾರ್ ಮೊದಲಾದ ನಾಯನಾರರ ಚರಿತ್ರೆಯನ್ನೂ ಈ ಶತಕದಲ್ಲಿ ತಿಳಿಸಲಾಗಿದೆ. ಶೈವಭಕ್ತರಾದ ಸಂಬಂಧರ್. ಅಪ್ಪರ್. ಸುಂದರರ್ ಮೊದಲಾದ ಮೂವರು ಹಾಡಿದ ತೇವಾರ ಗಳೆಷ್ಟಿವೆಯೆಂಬ ವಿವರವನ್ನೂ ತಿಳಿಸಲಾಗಿದೆ. ವಿಭೂತಿಯನ್ನು ತಯಾರಿಸುವ ಹಾಗೂ ಧರಿಸುವ ವಿಧಾನಗಳು. ಶಿವಪೂಜೆಗೆ ಉಪಯೋಗಿಸಬೇಕಾದ ಹೂಗಳ ವಿವರ. ರುದ್ರಾಕ್ಷಿಧಾರಣೆಯ ವಿಧಾನ ಮೊದಲಾದ ವಿಧಿಗಳ ವಿಚಾರ ಈ ಶತಕದಲ್ಲಿದೆ. ಇವಲ್ಲದೆ ಅಶ್ವಲಕ್ಷಣ. ಹೆಣ್ಣು-ಗಂಡುಗಳ ಲಕ್ಷಣ ಹಾಗೂ ಜನರಿಗೆ ಅಗತ್ಯವಾದ ಸಾಮಾನ್ಯ ನೀತಿ ಗಳನ್ನೂ ಹೇಳಲಾಗಿದೆ.

**ಕೈಲಾಸನಾಥರ್ ಶತಕಂ**

ಇದರಲ್ಲಿ ೧೦೦ ಪದ್ಯಗಳಿವೆ. ಇದನ್ನು ಬರೆದವರು ಚಿದಂಬರವಾಣರ್. ಅವರ ಕಾಲ ಕ್ರಿ.ಶ. ೧೭೫೩. ಇದು ಸೇಲಂ ಜಿಲ್ಲೆಯ ರಾಯಪುರಂ 'ಕೈಲಾಸನಾಥರ್' ದೇವರ ಸ್ತೋತ್ರರೂಪವಾಗಿದೆ. ಪ್ರತಿಪದ್ಯವೂ ಗಂಗೈಪುನ್ನೈ ಯಿಶನೇ ಮಂಗೈ ಮಗಿಳ್‌ನೇಶನೇ ಕಯಿಲೈಯಂಗಿರಿವಾಸನೇ" ಎಂಬ ಮಕುಟದಿಂದ ಅಂತ್ಯವಾಗುತ್ತದೆ. ದೈವಸ್ತುತಿ ಯೊಂದಿಗೆ ಈ ಶತಕದಲ್ಲಿ ನೀತಿಯನ್ನೂ ಹೇಳಲಾಗಿದೆ. ಇದನ್ನು ಬರೆದ ಕವಿಯ ಮತ ವೀರಶೈವ. ಕವಿಯ ತಂದೆಯ ಹೆಸರು ವಿಶ್ವಲಿಂಗನ್ ಎಂದು. ಒಂದು ಪದ್ಯದಲ್ಲಿ ಕವಿಯೇ ತನ್ನ ಬಗ್ಗೆ "ಜಾತಿಯಿಲ್ ವೀರಶೈವನ್" ಎಂದು ಹೇಳಿ ಕೊಂಡಿದ್ದಾನೆ: ಈ ಶತಕವು ನೀತಿಯೊಂದಿಗೆ ಅಶ್ವಶಾಸ್ತ್ರ ಸಾಮುದ್ರಿಕಲಕ್ಷಣ. ಸ್ತ್ರೀಲಕ್ಷಣ, ಶಕುನಗಳು, ನಕ್ಷತ್ರಗಳ ವಿವರ, ೯೬ ತತ್ತ್ವಗಳು, ೩೨ ರಾಗಗಳು, ೧೮ ಪುರಾಣಗಳು ಮೊದಲಾದ ಅನೇಕ ವಿಷಯಗಳ ಬಗ್ಗೆಯೂ ತಿಳಿಸುತ್ತದೆ.

**ಅರಪ್ಪಳೀಸುರಶತಕಂ**

ಇದರ ಕರ್ತೃ ಅಂಬಲವಾಣಕ್ಕವಿರಾಯರ್ ಎಂಬವರು. ಸೇಲಂನ ಸಮೀಪದ ಅರಪ್ಪಳ್ಳಿ ಅಥವಾ ಚತುರಗಿರಿ ಎಂಬ ಊರಿನಲ್ಲಿರುವ ಅರಪ್ಪಳೀಶ್ವರ ದೇವರ ಸ್ತುತಿರೂಪವಾಗಿದೆ. ಇದರ ಕಾಲ ೧೮ನೆಯ ಶತಮಾನ. ಈ ಶತಕದ ಪ್ರತಿಯೊಂದು ಪದ್ಯವೂ 'ಚತುರಗಿರಿವಳರ್ ಅರಪ್ಪಳೀಸುರದೇವನೇ' ಎಂಬ ಮಕುಟವನ್ನು ಹೊಂದಿದೆ. ಇದೊಂದು ಉತ್ತಮ ನೀತಿಶತಕ. ಜನರು ಜೀವನದಲ್ಲಿ ಪಾಲಿಸಬೇಕಾದ ಅನೇಕ ನೀತಿಗಳ ವಿವರ ಇದರಲ್ಲಿದೆ.

**ಜೆಯಂಗೊಂಡಾರ್ ಶತಕಂ**

ಇದನ್ನು ಬರೆದವರು ಮುತ್ತಪ್ಪ ಚೆಟ್ಟಿಯಾರ್. ಇವರ ಕಾಲ ಹದಿನೆಂಟನೆಯ ಶತಮಾನ. ಈ ಶತಕದ ಪ್ರತಿಯೊಂದು ಪದ್ಯದ ಕೊನೆಯಲ್ಲಿಯೂ ಒಂದೊಂದು ಗಾದೆಯಿದ್ದು ಮೂರನೆಯ ಚರಣದಲ್ಲಿ 'ಜೆಯಂಗೊಂಡಾರೇ' ಎಂಬ

ಮಕುಟವು ಬರುತ್ತದೆ. ಮಧುರೈ ಜಿಲ್ಲೆಯ ನೇಮನಗರದ ಜೆಯಂಗೊಂಡ ಚೋಳೀಶ್ವರನ ಸ್ತುತಿರೂಪವಾದ ಈ ಶತಕವು ಪುರಾಣ ಹಾಗೂ ಐತಿಹಾಸಿಕ ಕಥಾಂಶಗಳಿಂದ ಕೂಡಿದ ನೀತಿಶತಕವಾಗಿದೆ. ಇಳೈಯಾನ್‌ಗುಡಿಮಾರ ನಾಯನಾರ್, ತಿರುಜ್ಞಾನಸಂಬಂಧರ್ ಮೊದಲಾದ ತಮಿಳು ಶೈವಭಕ್ತರ ಕಥೆಗಳು, ಶಿವಭಕ್ತ ಮಾರ್ಕಂಡೇಯ ಮೊದಲಾದವರ ಕಥೆಗಳು ಈ ಶತಕದಲ್ಲಿವೆ.

**ತಿರುತ್ತೊಂಡರ್ ಶತಕಂ**

ಇದರಲ್ಲಿ ೧೦೩ ವೃತ್ತಗಳಿವೆ. ಇದರ ಕರ್ತೃ ಮಲ್ಲೈಕ್ಕೊಳುಂದು ನಾವಲರ್. ಈ ಕೃತಿಯು ೧೯೧೪ರಲ್ಲಿ ಪ್ರಕಟವಾಗಿದೆ. ಇದರ ಕೆಲವು ಪದ್ಯಗಳಲ್ಲಿ 'ವಂದಡಿಮೈಕೊಂಡ ಶಯಿಲೈ ವಾಸನೇ ರಾಜಲಿಂಗ ಕೇಶನೇ ಶಿವದ್ಮ ನಗರ್ ಮಾಣಿಕ್ಕ ಮಲ್ಲೈನಾಥನೇ' ಎಂಬ ಅಂಕಿತವಿದೆ. ಈ ಶತಕದಲ್ಲಿ ತಿರುಜ್ಞಾನಸಂಬಂಧರ್ ಮೊದಲಾದ ಅನೇಕ ತಮಿಳು ಶೈವಭಕ್ತ ನಾಯನಾರ್‌ಗಳ ಕಥೆಗಳಿವೆ. ನಾಯನಾರ್‌ಗಳನ್ನು ಪೂಜಿಸುವ ವಿಧಾನವನ್ನೂ ಇದರಲ್ಲಿ ತಿಳಿಸಲಾಗಿದೆ. ಇದು ಮುಖ್ಯವಾಗಿ ಶಿವಶರಣರ ಮಹಿಮೆಯನ್ನು ತಿಳಿಸುವ ಶತಕವಾಗಿದೆ.

'ಉಮಾಯೇಸುರ ಶತಕಂ' ಎಂಬ ಕೃತಿಯು ಉಪಲಬ್ಧವಾಗಿಲ್ಲ. ಇದರ ಕರ್ತೃ ಯಾರೆಂಬುದಾಗಿಯೂ ತಿಳಿದಿಲ್ಲ. 'ಪಲಶಾಸ್ತ್ರತ್ತಿರಟ್ಟು' ಎಂಬ ಪುಸ್ತಕದಲ್ಲಿ ಇದರ ಉಲ್ಲೇಖವಿದೆ.

ಈ ರೀತಿ ತಮಿಳಿನ ಕೆಲವು ಶೈವಶತಕಗಳಲ್ಲಿ ಭಕ್ತಿ ಹಾಗೂ ಶೈವಧರ್ಮದ ವಿಚಾರಗಳು ನಿರೂಪಿತವಾಗಿವೆ. ಆದರೆ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿರುವಷ್ಟು ಹೆಚ್ಚು ಸಂಖ್ಯೆಯಲ್ಲಿ ಶೈವಶತಕಗಳು ತಮಿಳಿನಲ್ಲಿ ಇಲ್ಲ.

## ಗ್ರಂಥಋಣ

೧. ಡಾ. ಸ. ವಿ. ಜಯರಾಮನ್ : 'ಶತಕ ಇಲಕ್ಕಿಯಂ' ೧೯೭೪
೨. ಇಳಂಗೀರನ್ : 'ಶತಕಂಗಳಿನ್ ಸಿರಪ್ಪು' ೧೯೬೨
೩. ಮು. ವರದರಾಜನ್ : ಅನು : ಎಲ್ ಗುಂಡಪ್ಪ : 'ತಮಿಳು ಸಾಹಿತ್ಯ ಚರಿತ್ರೆ' ೧೯೮೦
೪. ಎನ್. ಅನಂತರಂಗಾಚಾರ್ : 'ಸಾಹಿತ್ಯ ಭಾರತೀ' ೧೯೭೦
೫. 'ತಮಿಳ್ ಇಲಕ್ಕಿಯಕ್ಕೊಳ್‌ಗೈ', ಭಾಗ ೧, ೨

ವಿದ್ಯೆಯ ಬಹಳ ಕಲಿತಡೇನು, ಭಕ್ತಿಯಲ್ಲಿ ಶುದ್ಧಿಯಿಲ್ಲದಾತನು ?
ಬುದ್ಧಿಯಲ್ಲಿ ವಿಶೇಷವೆನಿಸಿದಡೇನು, ಭಕ್ತಿಯಲ್ಲಿ ಬಡಮನದವನು ?
ಅರ್ಥದಲ್ಲಿ ಅಧಿಕನಾದೊಡೇನು, ಕರ್ತೃಶಿವನ ನೆನೆಯದವನು ?
ಮದು ಗುಣಿಕೆಯ ತಿಂದ ಮದೋನ್ಮತ್ತರ
ಎನ್ನತ್ತ ತೋರದಿರಯ್ಯಾ ಅಖಂಡೇಶ್ವರ

ಷಣ್ಮುಖ ಶಿವಯೋಗಿ

# ವೀರಶೈವಸಾಹಿತ್ಯದಲ್ಲಿ ಜೀವನದರ್ಶನ

ಪ್ರೊ. ಸ. ಸ. ಮಾಳವಾಡ

ಮಾನವನ ಜೀವನದ ಗುರಿಯೇನು ? ಈ ಬಗೆಗೆ ಸಾಮಾನ್ಯವಾಗಿ ಮೂರು ಬಗೆಯ ದೃಷ್ಟಿಕೋನ ಕಂಡುಬರುತ್ತಿದೆ: ೧. ಅಳಿದುಹೋಗುವ ದೇಹ ಮತ್ತೆ ಬರಲಾರದು. ಆದುದರಿಂದ ಇರುವಷ್ಟು ಕಾಲ ಹೇಗಾದರೂ ಮಾಡಿ ಭೋಗವಿಲಾಸದಲ್ಲಿ ತೊಡಗಬೇಕು. ಸಾಲಮಾಡಿಯಾದರೂ ತುಪ್ಪ ಕುಡಿಯಬೇಕು. ಇದು ಚಾರ್ವಾಕ ನಿಲುಮೆ. ೨. ಬಾಳೆಂಬುದು ಗೋಳು ; ಅದನ್ನು ತೊರೆಯಬೇಕು. ಇದು ಸಂನ್ಯಾಸಿಯ ನಿಲುಮೆ. ೩. ವ್ರತಾಚಾರಗಳಲ್ಲಿ, ಪರೋಪಕಾರದ ಕಾರ್ಯಗಳಲ್ಲಿ ತೊಡಗಿ ಪುಣ್ಯಗಳಿಸಬೇಕು. ಆ ಮೂಲಕ ಸ್ವರ್ಗಪ್ರಾಪ್ತಿ; ಪಾಪದಿಂದ ನರಕ. ಇದು ಸ್ಥೂಲವಾದ ಧಾರ್ಮಿಕ ನಿಲುಮೆ.

ತುಪ್ಪ ಹೆಚ್ಚು ಕುಡಿದರೆ ಅಜೀರ್ಣ, ಅನಾರೋಗ್ಯ. ಸಾಲವನು ಕೊಂಬಾಗ ಹಾಲು ಹಣ್ಣುಂಡಂತೆನಿಸಬಹುದು. ಸಾಲ ದೊರೆಯದಿರಬಹುದು. ದೊರೆತರೆ ಸಾಲಿಗನು ಬಂದು ಎಳೆಯುವಾಗ ಕಿಬ್ಬದಿಯ ಕೀಲು ಮುರಿದಂತೆ ಆಗುವುದುಂಟು. ಆದುದರಿಂದ ಮೊದಲನೆಯ ನಿಲುಮೆ ಅವಿವೇಕದ್ದಾಗುವುದು. ಬಾಳನ್ನು ತೊರೆಯುವ ಎರಡನೆಯ ನಿಲುಮೆ ಪರಮಾತ್ಮನ ಸಂಕಲ್ಪದ ಬಗೆಗೆ ಅಶ್ರದ್ಧೆಯಾಗುವುದು. ಸ್ವರ್ಗ-ನರಕಗಳ ಕಲ್ಪನೆಯು ಮರಣೋತ್ತರದ ವಿಚಾರವಾಯಿತು. ಸತ್ತಮೇಲೆ ಪಡೆಯುವ ಸ್ವರ್ಗಕ್ಕಿಂತ ಇಹದ ಬಾಳಿನಲ್ಲಿ ಆನಂದ ಪಡೆಯುವ ಪಥವು ಅರ್ಥಪೂರ್ಣವಾಗುವುದು. ಹೀಗೆ ಮೇಲ್ಕಂಡ ಮೂರು ಬಗೆಯ ನಿಲುಮೆಗಳು ಸಮರ್ಪಕವೆನಿಸುವುದಿಲ್ಲ.

ಇಹದ ಬಾಳಿನಲ್ಲಿ ಇದ್ದುಕೊಂಡು ಪರಮ ಅರ್ಥವನ್ನು. ಆನಂದವನ್ನು ಅರಿಸುವ ಪಥವು ವೀರಶೈವದ್ದಾಗಿದೆ. ಅದನ್ನು ಶಿವಾನುಭವಿಯ ಮಾರ್ಗವೆಂದು ಕರೆಯಲಾಗುತ್ತಿದೆ. ಶಿವಾನುಭವಿಯು ಸಂಸಾರವನ್ನು ತೊರೆಯುವುದಿಲ್ಲ. ಅಲ್ಲಿದ್ದುಕೊಂಡು ಅಖಂಡ ಅನಂತದತ್ತ ಆತನು ಸಾಗುತ್ತಾನೆ. ಈ ನಿಲುಮೆ ವೀರಶೈವಸಾಹಿತ್ಯದಲ್ಲಿ ಪಡಿಮೂಡಿ ಬಂದಿದೆ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು—ಇದು ಬಸವಸೂತ್ರ : ಮಾನವಜೀವನವನ್ನು ಕುರಿತ ವೀರಶೈವರ ಸೂತ್ರ. ಇಹದ ಬಾಳನ್ನು ಹಸನುಗೊಳಿಸುವುದು ಆ ಮೂಲಕ ಪರದ ಅಖಂಡಾನಂದವನ್ನು ಪಡೆಯುವ ದಿಸೆಯಲ್ಲಿ ಸಾಗುವುದು. ಇದು ವೀರಶೈವ ಧರ್ಮದ, ಬಾಳಿನ, ಸಾಹಿತ್ಯದ ದರ್ಶನ. ವೀರಶೈವರ ಜೀವನ–ಧರ್ಮ–ಸಾಹಿತ್ಯಗಳ ಗುರಿ ಏಕಪ್ರಕಾರದ್ದಾಗಿರುವುದು ವೀರಶೈವದ ವೈಶಿಷ್ಟ್ಯವಾಗಿದೆ.

ಗಿರಿಜೆ ಹರನನ್ನು ವರಿಸುವ ಕಥಾವಸ್ತುವನ್ನು ನಿರೂಪಿಸುವಲ್ಲಿ ಮಹಾಕವಿ ಹರಿಹರದೇವನು ವೀರಶೈವದೃಷ್ಟಿಯನ್ನು ತೋರಿದ್ದಾನೆ. ಹರನನ್ನು ಒಲಿಸಿ ಆತನನ್ನು ಗಿರಿಜೆ ಮದುವೆ ಮಾಡಿಕೊಳ್ಳುವುದು ಗಿರಿಜೆಯ ಕಲ್ಯಾಣವೂ ಅಹುದು. ಅದು ಲೋಕಕಲ್ಯಾಣಕ್ಕೂ ಕಾರಣವಾಯಿತು. ಶಿವನ ಸರ್ವೋತ್ತಮತ್ವವನ್ನು ಸ್ಥಾಪಿಸುವ ಹರಿಹರ ಈ ಕಾವ್ಯದಲ್ಲಿ ಶಿವಭಕ್ತಿಯ ಮಹಾಪೂರವನ್ನು ಹರಿಸಿದ್ದಾನೆ. ಶಿವಶಿವೆಯರನ್ನು ಕುರಿತ ಆತನ ಸ್ತೋತ್ರಗಳಲ್ಲಿ ಭಕ್ತಿಯ ಉತ್ಕಟತೆಯು ಮೂಡಿಬಂದಿದೆ.

ಗಿರಿಜೆ ಶಿವನನ್ನು ಒಲಿಸಬೇಕೆಂದಾಗ ಕಾಮನ ನೆರವು ಅವಳಿಗೆ ಉಪಯುಕ್ತವೆನಿಸಲಿಲ್ಲ. ಆಕೆ ತಪಸ್ಸಿನಿಂದ ಪರಿಶುದ್ಧಳಾದಾಗ ಮಾತ್ರ ಅವಳ ಉದ್ದೇಶ ಈಡೇರಿತು. ಕಾಮದ ದೃಷ್ಟಿ ಅಳಿದು ಭಕ್ತಿ ಮೂಡಿಬಂದಾಗ ಮಾತ್ರ ಹರ ಗಿರಿಜೆಗೆ ಒಲಿದ. ಗಿರಿಜೆಯ ರೂಪ, ಯೌವನ ವಿಲಾಸಗಳು ಶಿವನನ್ನು ಒಲಿಸಲು ಅಸಮರ್ಥವಾದವು. ಅವಳ ನಿಷ್ಠೆ-ಭಕ್ತಿಗಳು ಶಿವನನ್ನು ಆಕರ್ಷಿಸಲು ಸಮರ್ಥವಾದವು. ಅಹಂಕಾರದ ಮದಗಜವೇರಿದ ಗಿರಿಜೆಗೆ ನಿರಾಶೆ ಕಾಯ್ದಿತ್ತು. ಭಕ್ತಿಯ ಶಾಂತ ವೃಷಭವನ್ನೇರಿದ ಗಿರಿಜೆ ಶಿವನನ್ನು ಒಲಿಸಲು ಸಮರ್ಥಳಾದಳು. ಹರಗಿರಿಜೆಯರು ನಿತ್ಯದಂಪತಿಗಳ್,

ನೂತನ ದಂಪತಿಗಳ್ ಎಂಬ ಹರಿಹರದೇವನ ಕಲ್ಪನೆಯು ಸಾಂಕೇತಿಕವಾಗಿದೆ. ಅದು ಪ್ರತಿಯೊಂದು ದಾಂಪತ್ಯದ ಆದರ್ಶವೂ ಆಗಿದೆ.

ಗಿರಿಜೆಯ ವಿವಾಹವನ್ನು ಮನದುಂಬಿ ಬಣ್ಣಿಸಿದ ಹರಿಹರದೇವ ಮಹಾದೇವಿಯಕ್ಕನ ಬಾಳನ್ನು ಇನ್ನೊಂದು ಬಗೆಯಾಗಿ ಚಿತ್ರಿಸಿದ್ದಾನೆ. ಸಾವ, ಕೆಡುವ ಗಂಡನನ್ನು ಕಡೆಗಣಿಸಿ ಪರಮಾತ್ಮನೇ ತನ್ನ ಪತಿಯೆಂದು ಭಾವಿಸಿದ ಅಕ್ಕಮಹಾದೇವಿಯ ನಿಲುವು ಹರಿಹರದೇವನಿಗೆ ಅರ್ಥಪೂರ್ಣವಾಗಿ ಕಂಡಿತು. ಸರಸದಾಂಪತ್ಯ ಕಲ್ಯಾಣಕಾರಕ, ವಿರಸ ದಾಂಪತ್ಯ ವಿಪತ್ಕಾರಿ. ಆ ಬಗೆಯ ದಾಂಪತ್ಯವನ್ನು ಅಕ್ಕಮಹಾದೇವಿ ಒಪ್ಪಿಕೊಳ್ಳಲಿಲ್ಲ. "ಶರಣಸತಿ, ಲಿಂಗಪತಿ" ಎಂಬ ವೀರಶೈವರ ನಿಲುವು ಅಕ್ಕಮಹಾದೇವಿಯ ಬಾಳಿನಲ್ಲಿದೆ. ಅಂತೆಯೇ ಹರಿಹರದೇವ ಅದನ್ನು ಅರ್ಥಪೂರ್ಣ ವಾಗಿ ಚಿತ್ರಿಸಿದ್ದಾನೆ. ಆಕೆಯ ಆಧ್ಯಾತ್ಮಿಕ ಶೃಂಗಾರವನ್ನು ಬಣ್ಣಿಸಿದ್ದಾನೆ.

ಬಾಳನ್ನು ಕುರಿತ ವೀರಶೈವದೃಷ್ಟಿಯು ಏಕದೇಶೀಯವಲ್ಲವೆಂಬುದು ಹರಿಹರನ ಕೃತಿಗಳಿಂದ ಸ್ಪಷ್ಟವಾಗುತ್ತಿದೆ. ಹರಿಹರ ನಿರ್ಮಿಸಿದ ಭಕ್ತಪ್ರಪಂಚದಲ್ಲಿ ಹಲವಾರು ಮನೋಭಾವದ, ವೃತ್ತಿಯ, ಆಚರಣೆಯ ವ್ಯಕ್ತಿಗಳನ್ನು ನಾವು ಕಾಣುತ್ತೇವೆ. ಆದರೆ ಅವರೆಲ್ಲರ ಬಾಳಿನ ಗುರಿ ಒಂದೇ. ಅವರೆಲ್ಲರೂ ಇಹದ ಬಾಳನ್ನು ಪರಮಾತ್ಮನೊಂದಿಗೆ ಹೊಂದಿ ಕೊಳ್ಳುವ ಸಾಧನವನ್ನಾಗಿ ಮಾಡಿಕೊಂಡವರಾಗಿದ್ದಾರೆ. ಇಹದ ಬಾಳು ವ್ಯರ್ಥವಲ್ಲ ಆದರೆ ಐಹಿಕಭೋಗವೇ ಜೀವನದ ಪರಮಗುರಿಯಲ್ಲ.

ವ್ಯಕ್ತಿಗತ ಭೋಗವನ್ನು ತೊರೆದು ಲೋಕಹಿತದ ಕಾರ್ಯದಲ್ಲಿ ತೊಡಗುವುದು ಒಳ್ಳೆಯದೇ. ಆದರೆ ಹಾಗೆ ಮಾಡುವಾಗ ಅಹಂಕಾರಕ್ಕೆ ಪಕ್ಕಾಗುವ, ಇಲ್ಲವೆ ಪರಮಗುರಿಯನ್ನು ಮರೆಯುವ ಸಂದರ್ಭಗಳು ತಲೆದೋರುತ್ತವೆ. ಚಾಮರಸ ಕವಿಯು ಪ್ರಭುಲಿಂಗಲೀಲೆಯಲ್ಲಿ ಸಿದ್ಧರಾಮನ ಪಾತ್ರವನ್ನು ಚಿತ್ರಿಸುವಾಗ ಇಂತಹ ಸಂದರ್ಭವನ್ನು ಪರಿಣಾಮಕಾರಿಯಾಗಿ ಮೂಡಿಸಿದ್ದಾನೆ. ಸಿದ್ಧರಾಮ ವೈಯಕ್ತಿಕ ಸಂಸಾರವನ್ನು ತೊರೆದಿದ್ದ. ಲೋಕಹಿತ ಕಾರ್ಯದಲ್ಲಿ ನಿರತನಾಗಿದ್ದ, ಸಾರ್ವಜನಿಕ ಚಟುವಟಿಕೆಗಳ ಕೋಲಾಹಲದಲ್ಲಿದ್ದ ಸಿದ್ಧರಾಮನ ಬಗೆಗೆ ಪ್ರಭುಲಿಂಗಲೀಲೆಯಲ್ಲಿ ಬಂದ ಮಾತುಗಳು ಹೀಗಿವೆ:

. . . . . . . . . . . . . . . . . . . . . . .
. . . . . . . . . . ಸತಿಸುತ ಕೂಟಭ್ರಮವೆಂದು
ಬಾಳಿಕೆಯನತಿಗಳೆದು ಮರಳಿಯು
ಬೋಳುಮಂಡೆಯ ಕೀರ್ತಿಗೋಸುಗ
ಕೋಳುಹೋದನೆ ರಾಮನೆನುತಲ್ಲಮನು ಬೆರಗಾದ

ಸ್ವಂತ ಕುಟುಂಬದ ಬಂಧನವು ಬೇಡವೆಂದು ಸೊನ್ನಲಿಗೆಯ ಸಿದ್ಧರಾಮ 'ಬಾಳಿಕೆಯನತಿಗಳೆದ.' ಅದು ಒಂದು ದೃಷ್ಟಿಯಿಂದ ಸರಿ. ಆದರೆ 'ಬೋಳುಮಂಡೆಯ ಕೀರ್ತಿಗೋಸುಗ ಕೋಳು ಹೋದ' ಬಗೆಯನ್ನು ಪ್ರಭುದೇವ ಖಂಡಿ ಸಿದ. ಅಂತೆಯೆ ಹೇಳಿದ:

ಚಿಕ್ಕ ಸಂಸಾರವನು ಸಡಲಿಸಿ
ಹೊಕ್ಕನಲ್ಲಾ ಹಿರಿಯ ಸಂಸಾ
ರಕ್ಕಕ್ಕಟ ವಿಖ್ಯಾತಿ ಪೂಜಾಲಾಭದಿಚ್ಛೆಯಲಿ
ಸಿಕ್ಕಿಬಿದ್ದನು ಸಿದ್ಧರಾಮನು
. . . . . . . . . . . . . . . . . . . . .

ಚಿಕ್ಕ ಸಂಸಾರದ ಬಂಧನ ಬೇಡವೆನ್ನುವವರು ವಿಖ್ಯಾತಿಪೂಜಾಲಾಭದಿಚ್ಛೆಯಲಿ ದೊಡ್ಡ ಬಂಧನಕ್ಕೆ ಒಳಗಾಗಬಾರದು. ಇಂತಹ ಕನಿಕರದ ಸ್ಥಿತಿಯನ್ನು ನಾವು ಇಂದಿನ ಸಮಾಜದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಸಂನ್ಯಾಸಿಗಳೆಂದು ಹೇಳಿ ಕೊಳ್ಳುತ್ತಿರುವ ಕೆಲವರು 'ವಿಖ್ಯಾತಿ,ಪೂಜಾಲಾಭದಿಚ್ಛೆ'ಗಾಗಿ ಪರಿತಪಿಸುವುದು ಸಂಸಾರಿಗಳಾದವರಿಗೂ ಜಿಗುಪ್ಸೆಯನ್ನು ಮಾಡುವಂತಿರುತ್ತದೆ. ಸ್ವಂತ ಕುಟುಂಬದ ಬಂಧನವನ್ನು ತೊರೆಯುವುದಾದರೆ ಅಕ್ಕಮಹಾದೇವಿಯಂತೆ ವೀರವಿರಕ್ತಿ ಯನ್ನು ಸಾಧಿಸಬೇಕು, ಇಲ್ಲವೆ ಬಸವಣ್ಣನಂತೆ ಸಂಸಾರಿಯಾಗಿ ನೆಮ್ಮದಿಯ ಬಾಳು ಬಾಳಬೇಕು. ಸಂಸಾರಿಯಾಗಿಯೂ ಬಸವಣ್ಣ ತೋರಿದ ನಿಸ್ಪೃಹತೆ ಎತ್ತ? ಸಂನ್ಯಾಸಿಗಳೆಂದು ಹೇಳಿಕೊಳ್ಳುವ ಕೆಲವರ ಜಂಜಡವೆತ್ತ? ಅಕ್ಕಮಹಾ

ದೇವಿಯ ವೀರವಿರಕ್ತಿಯನ್ನು, ಸಂಸಾರಿ ಬಸವಣ್ಣನ ಗೃಹಸೌಖ್ಯವನ್ನು, ಆತನ ನಿಸ್ಪೃಹತೆಯನ್ನು ವೀರಶೈವಸಾಹಿತ್ಯ ಸುಂದರವಾಗಿ ಚಿತ್ರಿಸಿದೆ. ಅಕ್ಕಮಹಾದೇವಿಯ ವಿರಕ್ತಿ, ಬಸವಣ್ಣನ ಸಂಸಾರ ಇವೆರಡು ಲಿಂಗಾಂಗಸಾಮರಸ್ಯಸಾಧನೆಗೆ ಪೋಷಕವಾಗಿದ್ದವು. ಅಂತಹ ಸಾಧನೆ ವೀರಶೈವದರ್ಶನದ ತಿರುಳು, ಸಂನ್ಯಾಸವೋ, ಸಂಸಾರವೋ ಎಂಬ ಶುಷ್ಕ ಚರ್ಚೆಯಲ್ಲಿ ಹುರುಳಿಲ್ಲ. ಶಿವಾನುಭವಮಂಟಪದಲ್ಲಿ ವಿಚಾರವಿನಿಮಯ ನಡೆಯುತ್ತಿತ್ತು. ಆದರೆ ಅಂತಹ ವಿಚಾರ ವಿನಿಮಯವು ರಚನಾತ್ಮಕವಾಗಿರುತ್ತಿತ್ತು. ಅದು ವಾದದ ಕಸರತ್ತು ಆಗಿರಲಿಲ್ಲ. ತಂತಮ್ಮ ಮನೋಧರ್ಮಕ್ಕೆ ಅನುಗುಣವಾದ ಅನುಭವವನ್ನು ಇತರರಿಗೆ ನಿವೇದಿಸಿ ಬಾಳಿನ ಪರಮಗುರಿಯಾದ ಲಿಂಗಾಂಗಸಾಮರಸ್ಯಕ್ಕೆ ಪೋಷಕವಾಗುವ ಹಾದಿಯನ್ನು ಶರಣರು ಕಂಡುಕೊಳ್ಳುತ್ತಿದ್ದರು. ಯಾವುದೇ ಏಕದೇಶೀಯವಾದ ನಿಲುಮೆಯನ್ನು ಬೇರೊಬ್ಬರ ಮೇಲೆ ಹೇರುತ್ತಿರಲಿಲ್ಲ. ಒಬ್ಬೊಬ್ಬರು ಸಾಗಿದ ಹಾದಿ ಒಂದೊಂದು ಬಗೆಯಾಗಿದ್ದರೂ ಚರಮಗುರಿ ಏಕಪ್ರಕಾರವಾಗಿತ್ತು. 'ಶೂನ್ಯಸಂಪಾದನೆ' ಕೃತಿಯಲ್ಲಿ ಇದನ್ನು ನಾವು ಕಾಣುತ್ತೇವೆ. ವೀರಶೈವರ ಜೀವನದ ಸಾಹಿತ್ಯದ ದರ್ಶನ ಈ ಕೃತಿಯಲ್ಲಿ ಸ್ಫುಟವಾಗಿ ಬಂದಿದೆ. ಶಿವಶರಣರ ವಚನಗಳಿಗೂ ಈ ಮಾತು ಅನ್ವಯಿಸುತ್ತದೆ. ಒಬ್ಬೊಬ್ಬ ಶರಣನ ವಚನಗಳಲ್ಲಿಯೂ ನಾವು ಇದನ್ನು ಕಾಣುತ್ತೇವೆ. ಒಬ್ಬೊಬ್ಬರ ಮನೋಧರ್ಮ ಬೇರೆಯಾಗಿರಬಹುದು. ಅವರು ಸಾಗಿದ ಮಾರ್ಗದಲ್ಲಿ ಯಾತ್ರಿಕವಾದ ಏಕರೂಪತೆ ಕಂಡುಬರಲಿಕ್ಕಿಲ್ಲ. ಆದರೆ ಒಟ್ಟಿನಲ್ಲಿ ವೀರಶೈವ ಜೀವನದರ್ಶನದ ಬಗೆಗೆ ಅಲ್ಲಿ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಒಬ್ಬೊಬ್ಬರು ಪಡೆದ ಸಿದ್ಧಿಯ ಹಂತ ಮಾತ್ರ ಬೇರೆಬೇರೆಯಾಗಿರಬಹುದು.

ಹೆಣ್ಣು-ಹೊನ್ನು ಮಾಯೆಯೆಂದು ಶರಣರು ಭಾವಿಸಲಿಲ್ಲ 'ಮನದ ಮುಂದಣ ಆಶೆ'ಯೇ ಬಂಧನಕ್ಕೆ ಕಾರಣವೆಂಬುದು ಅವರ ನಿಲುಮೆಯಾಗಿದೆ "ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವದು" "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ. ಉಭಯ ದೃಷ್ಟಿಯಿಂದ ದೃಷ್ಟವಕಾಂಬಂತೆ ದಂಪತಿ ಏಕೋಭಾವವಾಗಿ ನಿಂದಲ್ಲಿ ಗುಹೇಶ್ವರಲಿಂಗಕ್ಕೆ ಅರ್ಪಿತವಾಗುವುದು." ಸತಿಪತಿಯರು ಎರಡು ಕಣ್ಣುಗಳಿದ್ದಂತೆ. ಆದರೆ ಕಣ್ಣು ಎರಡಾದರೂ ನೋಟ ಒಂದೇ. ಏಕೋಭಾವವಾಗಿರುವ ದಾಂಪತ್ಯ ಲಿಂಗಕ್ಕೆ ಅರ್ಪಿತವೆನಿಸುವುದು. ಹೀಗೆ ದಾಂಪತ್ಯಕ್ಕೆ ಗೌರವ ಸಂದಿದೆ ಶರಣರಿಂದ. "ಇಂದ್ರಿಯ ನಿಗ್ರಹ ಮಾಡಿದರೆ ಹೊಂದುವವು ದೋಷಂಗಳು, ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು" ಎಂಬ ಎಚ್ಚರಿಕೆಯ ಮಾತು ವೀರಶೈವ ಸಾಹಿತ್ಯದಲ್ಲಿ ಬಂದಿದೆ. ಈ ಉಕ್ತಿಯು ಆಧುನಿಕ ಮನಃಶಾಸ್ತ್ರದ ಸಿದ್ಧಾಂತಕ್ಕೆ ಅನುಗುಣವಾಗಿದೆ. ಪರಸತಿಯನೊಲ್ಲೆನೆಂಬ ಛಲವೂ ಶರಣರದಾಗಿದೆ.

ಶರಣರ ಬಾಳಿನಲ್ಲಿ ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ. ಪ್ರತಿಯೊಬ್ಬರೂ ಕಾಯಕ ಕೈಕೊಳ್ಳಲೇಬೇಕು. ಆ ಮೂಲಕ ಧನವ ಗಳಿಸಬೇಕು. ಆದರೆ ಹಾಗೆ ಗಳಿಸುವುದು ತನ್ನ ಮತ್ತು ತನ್ನವರಿಗಾಗಿ ಮಾತ್ರವಲ್ಲ. ಸತ್ಯಶುದ್ಧ ಕಾಯಕದಿಂದ ಪಡೆದ ಹಣ ಶರಣರಿಗಾಗಿ, ಶಿವನಿಗಾಗಿ ವಿನಿಯೋಗವಾಗಬೇಕು. 'ನೇಮದ ಕೂಲಿ ಅಂದಿನ ನಿತ್ಯನೇಮದಲ್ಲಿ ಸಂದಿರಬೇಕು."

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ ಎನ್ನ ಒಡಲಿಂಗೆ
ಎನ್ನ ಒಡವೆಗೆ ಎನ್ನ ಮಡದಿಮಕ್ಕಳಿಗೆಂದು ಕುದಿಯಬಾರದು
ಶಿವನ ನಿಲವಿಂಗೆ ಕುದಿಯಬೇಕು

"ನೇಮದ ಕೂಲಿಯು ಬಿಟ್ಟು ಹೇಮದಾಸೆಗೆ ಕಾಮಿಸಬಾರದು" ಕಾಯಕದಿಂದ ಗಳಿಸಿದ ಹಣವನ್ನು ಸಂಗ್ರಹಿಸಿ ಇಡಬಾರದು.

"ಧನವನಿರಿಸದಿರಾ ; ಇರಿಸಿದರೆ ಭವ ಬಪ್ಪುದು ತಪ್ಪದು" ದೇವಸ್ಥಾನದ ಒಳಗೆ ಹೋದವರು ಹೊರಗಿನ ಕೆರಹಿನ ಧ್ಯಾನದಲ್ಲಿ ದೇವರ ಧ್ಯಾನವನ್ನು ಮರೆಯುತ್ತಾರೆ. ಅಂತೆಯೇ ಧನ ಸಂಗ್ರಹಿಸಿ ಇಡುವವರು ಆ ಧನದ ಧ್ಯಾನದಲ್ಲಿ ಶಿವನ ಧ್ಯಾನವನ್ನೇ ಮರೆಯುತ್ತಾರೆ. ಕಾಡುಬೆಳುದಿಂಗಳು ಸ್ಥಿರವಲ್ಲ. ಕೇಡಿಲ್ಲದ ಪದ ದೊರೆಯಬೇಕಾದರೆ ಶಿವನ ಧ್ಯಾನದಲ್ಲಿಯೇ ತೊಡಗಬೇಕು. ಆದರೆ ಶಿವನ ಧ್ಯಾನದಲ್ಲಿ ತೊಡಗಿ ಕಾಯಕವನ್ನು ಮರೆಯುವಂತಿಲ್ಲ. ಕಾಯಕವೇ ಕೈಲಾಸ.

ಗುರುವಾದರೂ ಕಾಯಕದಿಂದಲೇ ಮುಕ್ತಿ
ಜಂಗಮವಾದರೂ ಕಾಯಕದಿಂದಲೇ ವೇಷದ ಪಾಶ ಹರಿಯುವುದು

ಕಾರ್ಯದಲ್ಲಿ ನಿರತನಾದಾಗ ಗುರುದರ್ಶನ, ಲಿಂಗಪೂಜೆಗಳನ್ನು ಮರೆತರೂ ತಪ್ಪಲ್ಲ. ಕ್ರಿಯೆ ಜ್ಞಾನಗಳ ಸಮನ್ವಯ ವನ್ನು ಶರಣರು ತಮ್ಮ ಬಾಳಿನಲ್ಲಿ ಸಾಧಿಸಿದರು. ತಮ್ಮ ಸಾಹಿತ್ಯದಲ್ಲಿ ನಿರೂಪಿಸಿದರು.

ಅಂತರಂಗದಲ್ಲಿ ಅರಿವಾದೊಡೇನಯ್ಯಾ ಬಹಿರಂಗದಲ್ಲಿ ಕ್ರಿಯೆ ಇಲ್ಲದನ್ನಕ್ಕ ?

ಅಂತರಂಗದಲ್ಲಿ ಅರಿಯಬೇಕು ಹಾಗೆ ಅರಿತದ್ದನ್ನು ಹೊರಗೆ ಆಚರಣೆಯಲ್ಲಿ ತರಬೇಕು.

ಕ್ರಿಯೆಯೇ ಜ್ಞಾನ, ಜ್ಞಾನವೇ ಕ್ರಿಯೆ. ಜ್ಞಾನವೆಂದರೆ ತಿಳಿಯುವುದು. ಕ್ರಿಯೆಯೆಂದರೆ ತಿಳಿದಂತೆ ಮಾಡು ವುದು. ಪರಸ್ತ್ರೀಯ ಭೋಗಿಸಬಾರದೆಂಬುದೇ ಜ್ಞಾನ. ಅದರಂತೆ ಆಚರಿಸುವುದೇ ಕ್ರಿಯೆ. ಅರಿತು ಆಚರಿಸದಿದ್ದರೆ ಅದೇ ಅಜ್ಞಾನ.

ಅರಿವು ಆಚರಣೆಗಳಲ್ಲಿ ಹೊಂದಿಕೆಯಿಲ್ಲದಿರುವುದೇ ಇಂದಿನ ಬಾಳಿನ ವಿಫಲತೆಯಾಗಿದೆ. ಆಚರಣೆಯಲ್ಲಿ ಬರದ ಅರಿವು ಎಷ್ಟು ಬೆಳೆದರೆ ಏನು ತಾನೇ ಫಲ ?

ಕುರುಡ ಕಾಣ ಪಥವ, ಹೆಳವ ನಡೆಯಲರಿಯ
ಒಂದಿಲ್ಲದಿದ್ದರೆ ಒಂದಾಗದು
ಜ್ಞಾನವಿಲ್ಲದ ಕ್ರಿಯೆ ಜಡನು, ಕ್ರಿಯೆ ಇಲ್ಲದ ಜ್ಞಾನ ಭ್ರಾಂತು

ಕ್ರಿಯೆಯಿಲ್ಲದ ಇಂದಿನ ಮಾತುಗಾರಿಕೆ ಘೋಷಣೆಗಳು ಬರಿಯ ಭ್ರಾಂತಿಯಾಗಿವೆ. ಅರಿಯದೆ ಮಾಡುವ ಕ್ರಿಯೆ ವ್ಯರ್ಥ ವೆನಿಸಿದೆ. ಕ್ರಿಯೆ ಜ್ಞಾನಗಳ ಸಮನ್ವಯವಿಲ್ಲದ ಧರ್ಮ, ತತ್ತ್ವಗಳು ಎಂದಿಗೂ ಸಫಲತೆ ಪಡೆಯಲಿಲ್ಲ.

ಕ್ರಿಯೆಯೇ ಅಧಿಕವೆಂಬ ಗೊಡ್ಡುಸಿದ್ಧಾಂತಿಗಳ ಮಾತು ಸೊಗಸದಯ್ಯಾ ಎನಗೆ
ಜ್ಞಾನವೇ ಅಧಿಕವೆಂಬ ದಡ್ಡವೇದಾಂತಿಗಳ ಮಾತು ಸೊಗಸದಯ್ಯಾ ಎನಗೆ
ಅದೇನು ಕಾರಣವೆಂದೊಡೆ ಆವುದಾನೊಂದು ಪಕ್ಷಿ
ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ.
ಅಂತರಂಗದಲ್ಲಿ ಸಮ್ಯಗ್‌ಜ್ಞಾನ, ಬಹಿರಂಗದಲ್ಲಿ
ಶಿವಸತ್‌ಕ್ರಿಯಾ ಸನ್ನಿಹಿತವಿಲ್ಲದೆ ಪರವಸ್ತುವ ಕೂಡಬಾರದಾಗಿ

ಜ್ಞಾನಕ್ರಿಯೆಗಳು ಪಕ್ಕಿಯ ಎರಡು ರೆಕ್ಕೆಗಳಿದ್ದಂತೆ. ಎರಡೂ ರೆಕ್ಕೆಗಳಿಂದ ಮಾತ್ರ ಹಕ್ಕಿ ಗಗನಕ್ಕೆ ಹಾರಬಲ್ಲುದು. ಮುಮುಕ್ಷು ಪರವಸ್ತುವ ಕೂಡಬಲ್ಲ. ಹೀಗೆ ಶರಣರು ಕ್ರಿಯೆಯ ಅವಶ್ಯಕತೆಯನ್ನು ತಮ್ಮ ಸಾಹಿತ್ಯದಲ್ಲಿ ನಿರೂಪಿಸಿ ದ್ದಾರೆ.

ಮಾಡುವುದು ಅವಶ್ಯಕವಾಗಿದೆ. ಆದರೆ ಹಾಗೆ ಮಾಡುವುದು ಹೊರಗಿನ ಪ್ರದರ್ಶನಕ್ಕಾಗಿಯಲ್ಲ. ಮಾಡಿದೆ ನೆಂಬುದು ಮನದಲ್ಲಿಯೂ ಕೂಡ ಹೊಳೆಯಬಾರದೆನ್ನುವ ಸೂಕ್ಷ್ಮ ಎಚ್ಚರಿಕೆ ಶಿವಶರಣರದಾಗಿದೆ.

ಭಾವದೊಳಗೆ ಶಿವನಿದ್ದಾನೆಂಬ ಶ್ರದ್ಧೆ ಶಿವಶರಣರದು. ಆದರೆ ಹಾಗೆ ಇರುವ ಶಿವನು ಮಥನದಿಂದಲ್ಲದೆ ಕಾಣಿಸಿಕೊಳ್ಳುವುದಿಲ್ಲವೆಂಬುದನ್ನು ಅವರು ವಿವರಿಸಿದ್ದಾರೆ. ಕಬ್ಬಿನೊಳಗೆ ಬೆಲ್ಲವಿದೆ, ನಿಜ. ಆದರೆ ಅದು ತಾನಾಗಿಯೇ ಕಾಣಿಸಿಕೊಳ್ಳುವುದಿಲ್ಲವೆಂಬುದೂ ನಿಜ. ಕಬ್ಬಿನಲ್ಲಿ ಬೆಲ್ಲವಿದೆಯೆಂಬ ಅರಿವು ಮೊದಲು ನಮ್ಮಲ್ಲಿ ಮೂಡಬೇಕು. ನಂತರ ಕಬ್ಬಿನಿಂದ ಬೆಲ್ಲವನ್ನು ಪಡೆಯುವ ಕ್ರಿಯೆಯನ್ನು ನಾವು ಕೈಕೊಳ್ಳಬೇಕು. ಹೀಗೆ ಅರಿವು ಆಚರಣೆಗಳ ಅನ್ಯೋನ್ಯ ಸಂಬಂಧವನ್ನು ಶರಣರು ನಿರೂಪಿಸಿದ್ದಾರೆ.

ಸಂಸಾರ ತೊರೆದು ಕ್ರಿಯಾಶೂನ್ಯರಾಗುವವರು ಜೀವನವನ್ನು ಅಪವ್ಯಯಗೊಳಿಸುತ್ತಾರೆ. ಕ್ರಿಯೆಯು ಐಹಿಕ ವಾದ ಕಾಯಕವೂ ಅಹುದು. ಅದು ಶಿವಾನುಭವದ ಸಾಧನವೂ ಆಗಿದೆ.

ನಿಜಪ್ರಾಣದೊಳಗೆ ಸುಜ್ಞಾನಲಿಂಗವಿದೆ. ಅದನ್ನು ಕರಸ್ಥಲಕ್ಕೆ ತಂದುಕೊಳ್ಳಬೇಕು. ಸರ್ವಾಂಗದಲ್ಲಿ ಪ್ರತಿಷ್ಠಿಸಿ ಕೊಳ್ಳಬೇಕು. ಆ ಮೂಲಕ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿಕೊಳ್ಳಬೇಕು. ಈ ದಿಸೆಯಲ್ಲಿ ವೀರಶೈವನು ತನ್ನ ಜೀವನವನ್ನು ವಿನಿಯೋಗಿಸಬೇಕು.

ಆರಂಭದಲ್ಲಿ ತಾನು ಮಾಡುವ ಭಕ್ತನೆಂದು ವೀರಶೈವನು ಭಾವಿಸುತ್ತಾನೆ. ಆದರೆ ಕೊನೆಗೆ 'ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನೂ ನೀನೇ' ಎಂಬ ಐಕ್ಯಸ್ಥಿತಿಗೆ ಏರುತ್ತಾನೆ. 'ಅರಿಗಾರೂ ಇಲ್ಲ. ಕೆಟ್ಟವಂಗೆ ಕೆಳೆ ಇಲ್ಲ'

ಎಂಬುದು ವ್ಯಾವಹಾರಿಕ ಸತ್ಯ. 'ಜಗದ ನಂಟ ನೀನೇ ಅಯ್ಯ ಕೂಡಲಸಂಗಮದೇವಾ.' (ಶಿವ) ಎಂಬುದು ಪಾರಮಾರ್ಥಿಕ ಸತ್ಯ. ಶರಣರು ಇವೆರಡೂ ಅಂಶಗಳನ್ನು ನಿರೂಪಿಸಿದ್ದಾರೆ. ಇಹ-ಪರಗಳ ಸಮನ್ವಯವನ್ನು ಅವರು ಸಾಧಿಸಿದ್ದಾರೆ. 'ವ್ಯಾವಹಾರಿಕನ ಜ್ಞಾನ ದ್ರವ್ಯಾರ್ಜನೆಯಲ್ಲಿ ಹೋಯಿತ್ತು. ಅರುಹು ಆಚಾರಯುತವಾದುದೇ ಇಷ್ಟ' ಎಂದು ಸ್ಪಷ್ಟಪಡಿಸಿದ್ದಾರೆ.

ಇಹದ ಬಾಳು ಹಸನಾಗಿರಬೇಕು, ಸುಂದರವಾಗಿರಬೇಕು. ಹಾಗೆ ಬಾಳುವವರು ಮಾತ್ರ ಪರದ ಬಾಳಿಗೆ ಅರ್ಹರಾಗುತ್ತಾರೆಂಬುದು ಶರಣರ ದೃಷ್ಟಿಯಾಗಿದೆ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವರು ಅಲ್ಲಿಯೂ
ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ

ಇಂತಹ ದೃಷ್ಟಿಯಿಂದಾಗಿ ಶರಣರು ಇಹಪರಗಳನ್ನು ಸಮರ್ಪಕವಾಗಿ ಸಮನ್ವಯಗೊಳಿಸುವ ಸಫಲತೆ ಪಡೆದರು.

ಇಹದ ಬಾಳನ್ನು ಹಸನುಗೊಳಿಸುವ ಬಗೆ ಯಾವುದು ? ಲೋಕದ ಡೊಂಕ ತಿದ್ದಲು ಹೊರಡುವ ಅಹಂಕಾರವಲ್ಲ, ಪ್ರದರ್ಶನಪ್ರಿಯತೆಯಲ್ಲ, ಇಲ್ಲವೆ ತನ್ನ ಉದರಂಭರಣಕ್ಕಾಗಿ ಕೈಕೊಳ್ಳುವ ಸಾರ್ವಜನಿಕ ಕಾರ್ಯವೂ ಅಲ್ಲ.

ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ

ಎಂಬ ಸ್ಪಷ್ಟವಾದ ಸಂದೇಶ ಶರಣರದಾಗಿದೆ.

ಮೊದಲು ತಾನು ಒಳಗೂ ಹೊರಗೂ ಹಸನಾಗಿರಬೇಕು. ತನ್ನ ದೇಹವೇ ದೇವಾಲಯವಾಗಬೇಕು. ಪರಿಶುದ್ಧ ದೇವಾಲಯದಲ್ಲಿ–ದೇಹದಲ್ಲಿ–ಪರಮಾತ್ಮ ಕಂಡುಬರುತ್ತಾನೆ :

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲ ತುಂಬಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ, ಕೂಡಲಸಂಗಮದೇವ

ಸುಂದರ ಸಾಹಿತ್ಯವಾಗಿ ಮೊರಹೊಮ್ಮಿರುವ ಈ ದರ್ಶನವು ತಿಳಿಹೇಳುವ ಬಿಡಿನುಡಿಗಳಲ್ಲಿಯೂ ಮೂಡಿಬಂದಿದೆ :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ :
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ:
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಇದನ್ನು ಅಡಕವಾಗಿ ಹೇಳುವಾಗ.

'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬ ಉಕ್ತಿ ಬಂದಿದೆ. ಅನಾಚಾರದ ಬಾಳಿನ ನರಕವನ್ನು ತೊರೆದು ಆಚಾರದ ಸ್ವರ್ಗವನ್ನು ಜೀವನದಲ್ಲಿ ಕಂಡುಕೊಳ್ಳುವುದು ಶರಣರ ದರ್ಶನವಾಗಿದೆ. ಆಚಾರಸಹಿತ ಭಕ್ತ; ಅನಾಚಾರ ಸಹಿತ ನರ. ಮನಸ್ಸಿನ ಕಲ್ಮಷವಳಿದುದೇ ಮಹಾಸ್ನಾನ.

ಮಾನವಜೀವನದಲ್ಲಿ ಬರುವ ದುಃಖಕ್ಕೆ ಆಶೆ, ಅಹಂಕಾರಗಳು ಮಹತ್ವದ ಕಾರಣಗಳೆಂಬುದನ್ನು ಶರಣರು ವಚನಗಳಲ್ಲಿ ನಿರೂಪಿಸಿದ್ದಾರೆ. 'ಅದು ಬೇಕು, ಇದು ಬೇಕು ಎಂಬ ಎದೆಗುದಿಹತನ'ವನ್ನು ಬಿಟ್ಟು ಸಮಾಧಾನಿಯಾಗಿರಬೇಕೆಂಬುದು ಅವರ ನಿಲುವೆಯಾಗಿದೆ. ತನಗೆ ಬೇಡವೆಂಬ ವೈರಾಗ್ಯದ ದೃಷ್ಟಿಗೂ ಅವರು ಅಂಟಿಕೊಳ್ಳಲಿಲ್ಲ.

ಬೇಕೆನಲಾಗದು ಶರಣಂಗೆ, ಬೇಡೆನಲಾಗದು ಶರಣಂಗೆ
ಬಂದ ಸುಖವನತಿಗಳೆಯಲಾಗದು ಶರಣಂಗೆ

ಬೇಕೆಂಬುದು ಕಾಯದ ಗುಣ, ಬೇಡವೆಂಬುದು ವೈರಾಗ್ಯ
ಈ ಉಭಯವನತಿಗಳೆದು ಭೋಗಿಸಬಲ್ಲವನೆ ಶರಣ :

ಮನದ ಮುಂದಣ ಆಶೆಯು ಮಾನವನನ್ನು ಬಂಧನಕ್ಕೊಳಗುಮಾಡುವುದು : ಎದೆಗುದಿಹತನದಿಂದ ದುಃಖಕ್ಕೆಡೆ ಮಾಡುವುದು. ಆತ್ಮಗೌರವಕ್ಕೆ ಬಾಧಕವೆನಿಸುವುದು :

ಆಶೆಯುಳ್ಳಾತನೊಬ್ಬರಾಧೀನದಲ್ಲಿಪ್ಪನು
ಆಶೆಯ ಮನದ ಕೊನೆಯನರಿದಾತ-
ಕೈಲಾಸದಲ್ಲಿಪ್ಪನೆಂದಾತ ನಮ್ಮ ಅಂಬಿಗರ ಚೌಡಯ್ಯ
. . . . . . . . . . . . . . . . . . . . . . . . .
ಆಶೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು
ಹೇಸಿಕೆಯಾಯಿತ್ತು ಗುಹೇಶ್ವರಾ
. . . . . . . . . . . . . . . . . . . . . . . .
ವೇಷವ ಹೊತ್ತ ಹಿರಿಯರು ಈಶ್ವರ ಧ್ಯಾನದಲ್ಲಿರಬೇಕು
ವೇಷವ ತೋರಿ ಗ್ರಾಸಕ್ಕಾಗಿ ಆಶೆಮಾಡಿ,
ಮೋಹದ ಮನೆಯ ಕಾಯ್ದು. ಗ್ರಾಸವ ಪಡೆದು
ಉದರವ ಹೊರೆವ ವೇಷವು
ಪೇಶಿಯಿಂದಲೂ ಕರಕಷ್ಟ ರಾಮನಾಥಾ

ಅಂತೆಯೆ ಶರಣರು ಉದರಂಭರಣಕ್ಕಾಗಿ ಕಾಯಕದ ಆವಶ್ಯಕತೆಯನ್ನು ಸಾರಿಹೇಳಿದರು. ಸೋಮಾರಿಗಳಾಗಿದ್ದು ಕೊಂಡು ಗ್ರಾಸವ ಪಡೆಯುವುದನ್ನು ನಿಷೇಧಿಸಿದರು. ಇಂದು ಹಾಗೆ ಮಾಡುವ ವೀರಶೈವರು ಶರಣಧರ್ಮಕ್ಕೆ ದ್ರೋಹ ಬಗೆದಂತೆಯೇ ಸರಿ.

ಬಯಸಿ ಬಂದುದು ಅಂಗಭೋಗ, ಬಯಸದೇ ಬಂದುದು ಲಿಂಗಭೋಗ.
ಅಂಗಭೋಗ ಅನರ್ಪಿತ. ಲಿಂಗಭೋಗ ಪ್ರಸಾದ

ಜೀವನದಲ್ಲಿ ಬರುವುದೆಲ್ಲವನ್ನೂ ಪ್ರಸಾದವಾಗಿ ಸ್ವೀಕರಿಸುವ ನರನು ಶರಣನಾಗಿ ಆನಂದವನ್ನು ಅನುಭವಿಸುತ್ತಾನೆ. ಎದೆಗುದಿಹತನವುಳ್ಳ ನರನು ದುಃಖಭಾಜನನಾಗುತ್ತಾನೆ. ನರಶರಣರಲ್ಲಿಯ ತಾರತಮ್ಯವನ್ನು ವೀರಶೈವಸಾಹಿತ್ಯ ದನ್ವಯ ಹೀಗೆ ವಿವರಿಸಬಹುದು :

ತನ್ನ ದೇಹವ ಜಡವೆಂದು ಭಾವಿಸಿ ಪ್ರಳಯಕ್ಕೊಳಗುಮಾಡುವವ ನರ
ತನ್ನ ದೇಹವ ಪ್ರಣವವ ಮಾಡುವವ ಶರಣ

ನರರ ಜೀವನವು ಅಹಂಕಾರವೆಂಬ ಮದಗಜವನೇರಿಕೊಂಡು ವಿಧಿಗೆ ಗುರಿಯಾಗಿ ಕೆಟ್ಟುಹೋಗುತ್ತಿದೆ. ಶರಣರ ಜೀವನವು ದಾಸೋಹಂಭಾವದಿಂದ ಶಿವೋಹಂದತ್ತ ಶಿವಾನುಭವದತ್ತ ಸಾಗುತ್ತಿದೆ.

ಆನೆಯನೇಱಿಕೊಂಡು ಹೋದಿರೆ ನೀವು
ಕುದುರೆಯನೇಱಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ ಅಣ್ಣಾ.
ಸತ್ಯದ ನಿಲವನಱಿಯದೆ ಹೋದಿರಲ್ಲಾ
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ.

ಮಾನವಜೀವನವಿರುವುದು ಸತ್ಯದ ನಿಲವನ್ನು ಅರಿಯುವುದಕ್ಕಾಗಿ. ಸದ್ಗುಣವೆಂಬ ಫಲವ ಬಿತ್ತಿ ಬೆಳೆಯುವುದಕ್ಕಾಗಿ.

ಸಿರಿವಂತಿಕೆಯ ಪ್ರದರ್ಶನಕ್ಕಾಗಿ ದೇವಾಲಯ ಕಟ್ಟಿಸುವುದೂ ಪ್ರಯೋಜನಕಾರಿಯಲ್ಲ. ದೇವಾಲಯವ ಕಟ್ಟಿ ದೇವತ್ವಪಡೆದೆನೆಂಬವರ ಭಾಷೆ ಹೊಲ್ಲ.

ಉಳ್ಳವರು ಶಿವಾಲಯವ ಮಾಡಿದರು
ನಾನೇನ ಮಾಡುವೆನಯ್ಯಾ ಬಡವನು
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನಕಲಶವಯ್ಯಾ
ಕೂಡಲಸಂಗಮದೇವ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಸ್ಥಾವರಶಿವಾಲಯ ಒಂದಿಲ್ಲೊಂದು ದಿನ ಅಳಿಯುವುದು. ಆದರೆ ಜಂಗಮಕ್ಕೆ ಅಂದರೆ ಶಿವೋಹಂ ಭಾವದ ಸರ್ವವ್ಯಾಪಿಯಾದ ಚೈತನ್ಯಕ್ಕೆ ಅಳಿವು ಇರಲಾರದು. ಸಂಪತ್ತು ಉಳ್ಳವರು ಶಿವಾಲಯ ಕಟ್ಟಿಸಬಹುದು. ಆದರೆ ಭಕ್ತಿಸಂಪತ್ತಿನಿಂದ ಕೂಡಿದವರಿಗೆ ದೇಹವೇ ದೇವಾಲಯ. ಪ್ರಾಣಲಿಂಗವೇ ದೇವರು.

ಮಾನವಜೀವನದಲ್ಲಿ ಅರೆ-ಕೊರೆಗಳಿವೆ; ಕಷ್ಟಕಾರ್ಪಣ್ಯಗಳು ಬಂದೇ ಬರುತ್ತವೆ. ಅವುಗಳನ್ನು ಧೀರತನದಿಂದ ಎದುರಿಸುವ ನಿಲುವು ಶರಣರ ವಚನಗಳಲ್ಲಿದೆ:

ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು
ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು
ಉರಿ ಬರಲಿ, ಸಿರಿ ಬರಲಿ ಬೇಕುಬೇಡೆನ್ನೆನು
ಆನು ನಿಮ್ಮ ಹಾರೆನು ಮಾನವರ ಬೇಡೆನು

ಐಹಿಕ-ಬಾಳಿನ ಆವಶ್ಯಕತೆಗಳನ್ನು ಪೂರೈಸಬೇಕೆಂದು ದೇವರನ್ನೂ ಬೇಡಲಾರೆನೆನ್ನುವ ನಿಲುಮೆ ಬಸವಣ್ಣನವರದಾಗಿದೆ. ಮಾನವರನ್ನು ಬೇಡುವುದಂತೂ ವೀರಶೈವ ಸಂಸ್ಕೃತಿಗೇ ವಿರೋಧವಾದುದು. 'ಕಾಯಯ್ಯಾ' 'ಈಯಯ್ಯಾ' ಎಂಬ ದೈನ್ಯವು ಆತ್ಮಗೌರವಕ್ಕೆ ಬಾಧಕವಾದುದು. ಆತ್ಮಗೌರವದಿಂದ ಬಾಳುವ ನಿಲುಮೆಯನ್ನು ಹರಿಹರದೇವನು ತನ್ನ ಶತಕಸಾಹಿತ್ಯದಲ್ಲಿ ಸ್ಪಷ್ಟಪಡಿಸಿದ್ದಾನೆ. ಆತ್ಮಗೌರವಕ್ಕೆ ಹಾನಿಯೊದಗುವಂತೆ ದೈನ್ಯದಿಂದ ಬಾಳುವವರು ವೀರಶೈವದ ತಿರುಳನ್ನೇ ಅರಿತಿಲ್ಲವೆಂದು ಹೇಳಬೇಕಾಗುತ್ತದೆ.

ಅಂಜಿದರಾಗದು ಅಳುಕಿದರಾಗದು
ವಜ್ರಪಂಜರದೊಳಗಿದ್ದರಾಗದು ತಪ್ಪದೆಲವೋ ಲಲಾಟಲಿಖಿತ
ಕಕ್ಕುಲತೆ ಬಿಟ್ಟರೆ ಆಗದು ಬಪ್ಪುದು ತಪ್ಪದು
ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೇ ಬರಲಿ
ಇದಕಾರಂಜುವರು ಇದಕಾರಳಕುವರು ?

ಇಂತಹ ಧೀರನಿಲುಮೆ ಬಸವಣ್ಣನದು. ಈ ಬಗೆಯ ಧೀರತನವಿಲ್ಲದವರು ನಿಜವಾದ ವೀರಶೈವರಾಗಲಾರರು. ಬಂದುದನು ಶಿವಪ್ರಸಾದವೆಂದು ಸ್ವೀಕರಿಸಿ ಮಾನವರ ಹಂಗಿಲ್ಲದಂತೆ ಬಾಳುವುದೇ ವೀರಶೈವದ ನಿಲುಮೆ.

ನಿಶ್ಚಿಂತವಾದವಂಗೆ ಮತ್ತಾರ ಹಂಗುಂಟು ?
. . . . . . . . . . . . . . . . . . . .
ತಾನು ತಾನಾದವಂಗೆ ಮಾನವರ ಹಂಗುಂಟೇ ?
ಭಾವ ಬಯಲಾದವಂಗೆ ಬಯಕೆ ಎಂಬುದುಂಟೇ ?
ಗೊತ್ತ ಕಂಡವಂಗೆ ಅತ್ತಿತ್ತ ಅರಸಲುಂಟೇ ?
ಇಂತು ನಿಶ್ಚಿಂತವಾಗಿ, ನಿಜವ ನಂಬಿದ ಶರಣರ
ಎನಗೊಮ್ಮೆ ತೋರಿಸಯ್ಯ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

ಹೀಗೆ ನಿಶ್ಚಿತವಾದ ಜೀವನ ಶರಣರದು.

ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು
. . . . . . . . . . . . . . . . . . . . . . . .

ಸ್ಥಾನಮಾನವೆಂಬ ಲಕ್ಷ . . . . . . . ಇಂದ್ರಿಯಂಗಳ ಇಚ್ಛೆ
. . . . . . . . . . . . . . . . . . . . . . . . . . . . . . . . . .
ಅಷ್ಟಮದಂಗಳ ಘಟ್ಟಿ, ಷಡೂರ್ಮಿಗಳ ವಿಕಾರ-
ಇಂತಪ್ಪ ಸಕಲಪ್ರಪಂಚನೊಳು ಸಿಲುಕದ
ಅಕಳಂಕರಪ್ಪ . . . . ಸಮತೆಸಮಾಧಾನಸಹಜಾನಂದ
ಯೋಗದೊಳಿಪ್ಪ ಮಹಾಶರಣರ ತೋರಿ ಬದುಕಿಸು ಎನ್ನ
ಸೌರಾಷ್ಟ್ರಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ

ನಿಸ್ಪೃಹತೆಯಿಂದ ಕೂಡಿದ ನಿಶ್ಚಿಂತ ಜೀವನ, ಸಮತೆ, ಸಮಾಧಾನ, ಸಹಜಾನಂದಯೋಗದೊಳು ಬಾಳುವುದು ಇದು ಶರಣರ ಜೀವನದರ್ಶನ :

ಆರೇನೆಂದರೂ ಓರಂತಿರ್ಪುದೇ ಸಮತೆ
ಬೆಟ್ಟದಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯಾ,
ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ,
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ,
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

ಬಾಳಿನಲ್ಲಿ ಬರುವ ಸ್ತುತಿಯಿಂದ ಹಿಗ್ಗಬಾರದು, ನಿಂದೆಯಿಂದ ಕುಗ್ಗಬಾರದು. ಲೋಕದಲ್ಲಿ ಹುಟ್ಟಿದ ಬಳಿಕ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು, ಸಮಾಧಾನವು ಸಹಜಾನಂದಯೋಗದತ್ತ ಸಾಗಬೇಕು.

ಕೋಪತಾಳುವ ಸನ್ನಿವೇಶಗಳು ಬಾಳಿನಲ್ಲಿ ಬರುತ್ತಿರುವುದೂ ನಿಜ. ಆದರೆ ಕೋಪತಾಳುವುದು ಹಿತಕಾರಿಯಲ್ಲ. ಇತರರು ನಮಗೆ ಮುನಿದಾಗಲೂ ನಾವು ಮುನಿಯಬಾರದು.

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯ ?
ತನಗಾದ ಆಗೇನು ? ಅವರಿಗಾದ ಚೇಗೇನು ?
ತನುವಿನ ಕೋಪ ತನ್ನ ಹಿರಿಯತನದ ಕೇಡು ?
ಮನದ ಕೋಪ ತನ್ನಱಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು, ಕೂಡಲಸಂಗಮದೇವಾ

ಕೋಪವೆಂಬುದು ಕಿಚ್ಚು ಇದ್ದಂತೆ. ಆ ಕಿಚ್ಚು ಕೋಪತಾಳಿದವರನ್ನೇ ಮೊದಲು ಸುಡುವುದು. ಕೋಪತಾಳುವುದು ನಮ್ಮ ಹಿರಿಯತನದ ಅರಿವಿನ ಕೇಡೂ ಅಹುದು.

ಭಕ್ತನು ಶಾಂತನಾಗಿರಬೇಕು
ತನ್ನ ಕುರಿತು ಬಂದ ಠಾವಿನಲಿ ಸತ್ಯನಾಗಿರಬೇಕು
ಭೂತಹಿತವಚನವ ನುಡಿಯಬೇಕು
. . . . . . . . . . . . . . . . . . .
ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು
. . . . . . . . . . . . . . . . . . . . . . .
ಸಕಲ ಇಂದ್ರಿಯಗಳೂ ತನ್ನ ವಶಗತವಾಗಿರಬೇಕು

ಸಕಲ ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ಶಾಂತಿಸಮಾಧಾನಗಳಿಂದ ಬಾಳುವ ಭಕ್ತನಿಗೆ ಯಾವ ಪದವಿಗಳೂ ಬೇಕೆನಿಸುವುದಿಲ್ಲ.

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ,
ಮತ್ತಾವ ಪದವಿಯನೊಲ್ಲೆನಯ್ಯಾ ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರ ಪಾದವನಱಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ
ಸದ್ಭಕ್ತರ ಸಂಪರ್ಕವೇ ಮಹಾಪದವಿಯೆಂದು ಶರಣ ಭಾವಿಸುತ್ತಾನೆ.

ಸ್ಥಾನಮಾನಪದವಿಗಳಿಗಾಗಿ ಹಾತೊರೆಯುವವರಿಗೆ ಶಾಂತಿಸಮಾಧಾನಗಳಿರುವುದಿಲ್ಲವೆಂಬುದೂ ಅನುಭವದ ಸಂಗತಿಯಾಗಿದೆ. ಒಳಗೆ ಶಾಂತಿಸಮಾಧಾನಗಳಿಲ್ಲದವರೇ ಹೊರಗಿನ ಸ್ಥಾನಮಾನಪದವಿಗಳಿಗಾಗಿ ಹಂಬಲಿಸುವುದುಂಟು. ಸಹಜಾನಂದದ ಶರಣನಿಗೆ ಅವು ಬೇಕಿಲ್ಲ. ಶರಣ ಹಂಬಲಿಸುವುದು ಶಿವಾನುಭಾವಕ್ಕಾಗಿ.

ಅರಿವು ಆಚಾರದಲ್ಲಿ ಪರಿಣಮಿಸಿ ಅದು ಅನುಭಾವದ ಗುರಿಯತ್ತ ಸಾಗುವ ಪಥವು ವೀರಶೈವರದಾಗಿದೆ. "ವೀರಶೈವಾಚಾರಸಂಪನ್ನರೆನಿಸುವ ಪರಮಸದ್ಭಕ್ತರಿಗೆ ಅನುಭಾವವೇ ಅರಿವಿನ ಗೊತ್ತು."

ಅಜ್ಞಾನಿ ಅರಿಯಲಾರ. ಅಲ್ಪಜ್ಞಾನಿ ಪ್ರಕೃತಿ ಸ್ವಭಾವಿ, ಮಧ್ಯಮಜ್ಞಾನಿ ವೇಷಧಾರಿ. ಈ ಬಗೆಯ ಹಂತಗಳಲ್ಲಿರುವ ಜನರನ್ನು ಮಾನವರ ಬಾಳಿನಲ್ಲಿ ನಾವು ಸಾಮಾನ್ಯವಾಗಿ ಕಾಣುತ್ತೇವೆ. ಈ ಹಂತಗಳ ಮೇಲಿರುವವ ಅತೀತಜ್ಞಾನಿ, ಆರೂಢ. ಈ ಹಂತಕ್ಕೇರಿ ಬಾಳಿನಲ್ಲಿ ಬೆರೆಯುವುದು ವೀರಶೈವದರ್ಶನವಾಗಿದೆ.

ಭಾವದ ಭ್ರಮೆಗೆ, ತರ್ಕದ ಗೆಲ್ಲಸೋಲಕ್ಕೆ ಸಿಕ್ಕು ಗೊಡದಿರ್ಪುದೇ ಅರಿವು. ಅದು ಅನ್ಯಭಾವವ ನೆನೆಯದೆ ತನ್ನೊಳಗೆ ತಾನು ಎಚ್ಚರವಾಗಿಪ್ಪ ನಿಲವು. ಒಳಗೆ ಎಚ್ಚರವಾಗಿ ಹೊರಗಿನ ಬಾಳಿನಲ್ಲಿ ಭಾಗಿಯಾಗಬೇಕೆಂಬುದು ವೀರಶೈವರ ಜೀವನದರ್ಶನ. ಈ ದರ್ಶನಕ್ಕನುಗುಣವಾಗಿ ಬಾಳಿದರು ಶರಣರು. ಅಂತಹ ಬಾಳಿನ ಅನುಭವದ ಅಭಿವ್ಯಕ್ತಿಯಾಗಿದೆ ಅವರ ಸಾಹಿತ್ಯ. ಆ ಸಾಹಿತ್ಯದ ಕೆಲವೊಂದು ಉಕ್ತಿಗಳನ್ನು ನಾವೀಗ ಗಮನಿಸಬೇಕು.

ಮನವು ಘನದಲ್ಲಿ ವೇದ್ಯವಾದ ಬಳಿಕ
ಪುಣ್ಯವಿಲ್ಲ, ಪಾಪವಿಲ್ಲ, ಸುಖವಿಲ್ಲ, ದುಃಖವಿಲ್ಲ
ಕಾಲವಿಲ್ಲ, ಕರ್ಮವಿಲ್ಲ, ಜನನವಿಲ್ಲ, ಮರಣವಿಲ್ಲ

ಇಂತಹ ನಿಲವಿನಲ್ಲಿರುವ ಶರಣ ಘನಮಹಿಮ. ಆತನು ನಿಜವರಿದ ನಿಶ್ಚಿಂತ. ಮರಣವ ಗೆಲಿದ ಮಹಂತ. ಪರವನೊಳಕೊಂಡ ಪರಿಣಾಮಿ, ಬಯಲ ಒದಗಿದ ಭರಿತ.

ಆತ ಇರ್ದು ಬದ್ಧನಲ್ಲ. ಸುಳಿದು ಸೂತಕಿಯಲ್ಲ.
ಆವ ಸಂಗವೂ ಇಲ್ಲದ ನಿಜೈಕ್ಯನು.
ಬೇಕು ಬೇಡೆನ್ನದೆ ಅಳಿದು ಉಳಿದು
ಕರ್ಪೂರದ ಗಿರಿಯನ್ನು ಉರಿ ತಾಗಿದಂತೆ
ಕೂಡಲಚೆನ್ನಸಂಗಯ್ಯನಲ್ಲಿ ನಿಜೈಕ್ಯನು

ಅಂಗಲಿಂಗದಲ್ಲಿ ತರಹರವಾಗಿ
ಮನ ಜ್ಞಾನದಲ್ಲಿ ತರಹರವಾಗಿ
ಭಾವ ನಿರ್ಭಾವದಲ್ಲಿ ತರಹರವಾಗಿ
ಸಮತೆ ಶಾಂತಿಯಲ್ಲಿ ತರಹರವಾಗಿ
. . . . . . . . . . . . . . . .

ಅಚ್ಚ ಶರಣನಾಗಿ ಬಾಳುತ್ತಾನೆ

ವೇದ ಶಾಸ್ತ್ರ ಆಗಮ ಪುರಾಣವ್ಯಾಕರಣ ಇತಿಹಾಸಂಗಳ
ಓದಿ ಕೇಳಿ ಹೇಳುವಾತ ಜಾಣನೇ ? ಅಲ್ಲಲ್ಲ
ಜಾತಿಗೊಂದು ಮಾತ ಕಲಿತು ನೀತಿ ಹೇಳುವಾತ ಜಾಣನೇ ? ಅಲ್ಲಲ್ಲ

ಮತ್ತಾರು ಜಾಣರೆಂದರೆ
ಮತ್ತಮತಿಯೆಂಬ ಕತ್ತಲೆಯ ಕಳೆದು
ತಥ್ಯ ಮಿಥ್ಯ ರಾಗದ್ವೇಷವನ್ನಳಿದು
ನಿತ್ಯಲಿಂಗದಲ್ಲಿ ಚಿತ್ತವಡಗಿರ್ಪ
ಚಿನ್ಮಯ ಶರಣನೇ ಜಾಣನಯ್ಯಾ ಅಖಂಡೇಶ್ವರಾ

ಆತ್ಮನ ನಿಜವನರಿದು, ಪರಮಾತ್ಮಲಿಂಗ
ತಾನೆಂದರಿದ ಶರಣಂಗೆ ಎಂತಿರ್ದಂತೆ ಪೂಜೆ ನೋಡಾ
ಶರಣ ಭೋಗಿಸಿದುದೆಲ್ಲಾ ಶಿವಾರ್ಪಿತ
ರುಚಿಸಿದುದೆಲ್ಲಾ ಪ್ರಸಾದ
ಶರಣನರಿದುದೆಲ್ಲಾ ಪರಬ್ರಹ್ಮ
ಮರೆದುದೆಲ್ಲಾ ಪರಮಸುಖ
ನುಡಿದುದೆಲ್ಲಾ ಶಿವತತ್ವ
ಶರಣತಾನೆ ಕೂಡಲಚೆನ್ನಸಂಗಮದೇವ

ಅಹಂಕಾರವನೆ ಮರೆದು, ದೇಹಗುಣಂಗಳನೆ ಜರೆದು,
ಇಹಪರವೂ ತಾನೆಂದರಿದ ಕಾರಣ, ಸೋಹಂಭಾವ ಸ್ವಸ್ಥಿರವಾಯಿತ್ತು.
ಸಹಜದುದಯದ ನಿಲವಿಂಗೆ
ಮಹಾಘನಲಿಂಗದ ಬೆಳಗು ಸ್ವಾಯತವಾದ ಕಾರಣ
ಗುಹೇಶ್ವರಾ ನಿಮ್ಮ ಶರಣನುಪಮಾತೀತನು

. . . . . . . . . . . . . . . . . . . . . .

ಘನಮಹಾಲಿಂಗಕ್ಕೆ ಮನವೆ ಪೀಠವಾಗಿ
ತನುವೆ ಶಿವಾಲಯವಾಗಿ, ಧ್ಯಾನವೇ ತೃಪ್ತಿಯಾಗಿ
ಅಂಬುಧಿಯೊಳಗೆ ಮುಳುಗಿದ ಪೂರ್ಣಕುಂಭದಂತೆ
ನಿಮ್ಮ ಅವಿರಳ ದಿವ್ಯಮಹಾಬೆಳಗಿನೊಳು ಮುಳುಗಿ,
ನಾನು ನೀನೆಂಬುಭಯದ ಕುರುಹ ಮರೆದು
ಏನೇನೂ ಅರಿಯದಿರ್ದೆನಯ್ಯ ಅಖಂಡೇಶ್ವರಾ

ಭಕ್ತಿಗೆ ಭಂಡಾರವಾಗಿಪ್ಪ ಸಂಗನಬಸವಣ್ಣ
ಎನಗೆ ಹಾಗತೂಕ ಭಕ್ತಿಯ ಕೊಡಯ್ಯಾ
ಪ್ರಸಾದವೇ ಚಿತ್ಪಿಂಡಸ್ವರೂಪವಾಗಿಪ್ಪ ಚೆನ್ನಬಸವಣ್ಣ
ಎನಗೆ ಹಾಗತೂಕ ಜ್ಞಾನವ ಕೊಡಯ್ಯಾ
ಮಾಯಾಕೋಲಾಹಲನಪ್ಪ ಅಲ್ಲಮಪ್ರಭುವೆ
ಎನಗೆ ಹಾಗತೂಕ ವೈರಾಗ್ಯವ ಕೊಡಯ್ಯಾ

ಬೆಟ್ಟದ ಗುಂಡ ತಂದು ಇಷ್ಟಲಿಂಗದಲ್ಲಿ
    ಐಕ್ಯವ ಮಾಡಿದ ಗಟ್ಟಿವಾಳಲಿಂಗವೆ
ಎನಗೆ ಹಾಗತೂಕ ಲಿಂಗವ ಕೊಡಯ್ಯಾ
ಇವು ನಾಲ್ಕು ಹಾಗ ಕೂಡಿದಲ್ಲಿಯೇ ಮನ
    ಲಿಂಗದಲ್ಲಿ ಅಂದಣವಪ್ಪುದು

ಸಮಸ್ತ ಕತ್ತಲೆಯ ಮುಸಕ ಕಳೆದಿಪ್ಪ ಇರವ ನೋಡಾ
ಬೆಳಗಿಂಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೇ ಬಲ್ಲ

ಒಟ್ಟಿನಲ್ಲಿ "ಅನಾಯಾಸದಿಂದ ಮನೆಯ ಮಾಡಿ, ನಿರಾಯಾಸದಿಂದ ಪರಮಸುಖಿ"ಯಾಗುವುದು ಶರಣರ ಜೀವನ ದರ್ಶನವಾಗಿದೆ.

---

ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ ನಿಮ್ಮನೆಡಹಿಯೂ ಕಾಣರು ರಾಮನಾಥಾ

ದೇವರದಾಸಿಮಯ್ಯ

# ಶರಣರ ದೀಪ್ತಿ



ಹಿರಿಯ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರಿಗೆ ಭಕ್ತನಿಧಿ ಶ್ರೀ ಜಯಚಾಮರಾಜ ಒಡೆಯರವರ ನಮನ.



ಹಿರಿಯ ಜಗದ್ಗುರುಗಳವರು ಮೈಸೂರು ಮಹಾರಾಜ ಶ್ರೀ ಜಯಚಾಮರಾಜ ಒಡೆಯರನ್ನು ಆಶೀರ್ವದಿಸುತ್ತಿರುವುದು.



ಮಂತ್ರಮಹರ್ಷಿಗಳಾದ ಹಿರಿಯ ಜಗದ್ಗುರುಗಳವರು ಬರೆದ ಮಹಾಮಂತ್ರಗ್ರಂಥವನ್ನು ಶ್ರೀ ಜಯಚಾಮರಾಜ ಒಡೆಯರವರು ಭಕ್ತಿಭಾವದಿಂದ ವೀಕ್ಷಿಸುತ್ತಿರುವುದು.



ಶ್ರೀ ಜಯಚಾಮರಾಜ ಒಡೆಯರ್‌ರವರು – ಹಿರಿಯ ಮತ್ತು ಕಿರಿಯ ಜಗದ್ಗುರುಗಳವರೊಡನೆ.



ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಜಗದ್ಗುರುಗಳವರೊಡನೆ.



ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮಾಲೀಕ ಶ್ರೀ ಕೆ. ಎನ್. ಗುರುಸ್ವಾಮಿಯವರಿಗೆ ಬಿರುದು ನೀಡಿ – ಆಶೀರ್ವದಿಸುತ್ತಿರುವುದು.



ಮೈಸೂರು ಜಿಲ್ಲಾ ವೀರಶೈವಮಠಾಧೀಶರ ಗೋಷ್ಠಿಯಲ್ಲಿ ಜಗದ್ಗುರುಗಳವರು.



ಶ್ರೀ ಗುರುವಣ್ಣದೇವರ ಮಠದ ನಿರಾಭಾರಿ ಪಟ್ಟಾಭಿಷೇಕ ಮಹೋತ್ಸವದಲ್ಲಿ ಜಗದ್ಗುರುಗಳವರು.



ಕಬ್ಬಹಳ್ಳಿಯಲ್ಲಿ ಜರುಗಿದ ವೀರಶೈವ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು, ಅಧಿವೇಶನವನ್ನು ಉದ್ಘಾಟಿಸಿದ ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್ ಅವರೊಡನೆ.



ಮುಡುಕುತೊರೆಯಲ್ಲಿ ಜರುಗಿದ ವೀರಶೈವ ಅಧಿವೇಶನದಲ್ಲಿ ಹಿರಿಯ ಜಗದ್ಗುರುಗಳವರೊಡನೆ
ಶ್ರೀ ಕೆ. ವಿ. ಅನಂತರಾಮನ್ ಮತ್ತು ಶ್ರೀ ಬಿ. ಎಸ್. ಪುಟ್ಟಸ್ವಾಮಿ ಅವರು.



ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಶ್ರೀಗಳವರು ಸಂದರ್ಶನವಿತ್ತಾಗ ಪ್ರಾಧ್ಯಾಪಕ ಮತ್ತು ಅಧಿಕಾರಿವೃಂದದೊಡನೆ.




ಜೆ. ಎಸ್. ಎಸ್. ಮೂಲ ಶಿಕ್ಷಣ ಕೇಂದ್ರದ ಪ್ರಾರಂಭೋತ್ಸವ. (1959) ಶ್ರೀ ಜೆ. ಬಿ. ಮಲ್ಲಾರಾಧ್ಯರು, ಶಿಕ್ಷಣ ಸಚಿವ ಶ್ರೀ ಅಣ್ಣಾರಾವ್ ಗಣಮುಖಿಯವರು, ಪ್ರಾಂಶುಪಾಲ ಶ್ರೀ ಕೆ. ಎಸ್. ಆಚಾರ್ಲು ಹಾಗೂ ಇತರರೊಂದಿಗೆ ಜಗದ್ಗುರುದ್ವಯರು.



ಪೂಜ್ಯ ಜಗದ್ಗುರುಗಳವರೊಡನೆ ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳು, ಡಾ. ಮೋದಿ, ಮತ್ತು ವಿದೇಶೀಯ ಭಕ್ತೆ.



ಪೂಜ್ಯ ಜಗದ್ಗುರುವರ್ಯರಿಂದ ಆಶೀರ್ವಾದ, ವರನಟ ಡಾ. ರಾಜಕುಮಾರ್ ಹಾಗೂ ಕುಟುಂಬವರ್ಗದವರಿಗೆ




ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ರಸಾಯನಶಾಸ್ತ್ರ ವಿಭಾಗದಲ್ಲಿ ಶ್ರೀಗಳವರು.



ತಾಂತ್ರಿಕಶಿಕ್ಷಣಸೌಲಭ್ಯ ಕುರಿತು ಚರ್ಚಿಸಬಂದ ತಾಂಜೇನಿಯಾ ನಿಯೋಗದವರು – ಜಗದ್ಗುರುಗಳೊಂದಿಗೆ.



ಇತರ ರಾಷ್ಟ್ರಗಳಲ್ಲಿನ ದೈಹಿಕಶಿಕ್ಷಣ – ಸಮಾಜಸೇವೆಗಳ ಬಗ್ಗೆ ಅಧ್ಯಯನ ನಿರತ ಡೆನ್ಮಾರ್ಕ್ ದಂಪತಿಗಳು – ಪೂಜ್ಯ ಶ್ರೀಗಳವರೊಡನೆ.



ಪೂಜ್ಯ ಶ್ರೀಗಳ ವರ್ಧಂತಿ ಸಂದರ್ಭದಲ್ಲಿ ಶ್ರೀಗಳವರೊಡನೆ ಪತ್ರಿಕಾಪ್ರತಿನಿಧಿಗಳು.



ಬಾನುಲಿಯಲ್ಲಿ ಸಂದೇಶ ನೀಡುತ್ತಿರುವ ಪೂಜ್ಯ ಶ್ರೀಗಳು




ಜಗದ್ಗುರುಗಳವರೊಡನೆ ಭಾರತದ ಹಂಗಾಮಿ ಪ್ರಧಾನಿ ಶ್ರೀ ಗುಲ್ಜಾರಿಲಾಲ್ ನಂದಾ ಅವರು.



ಜಗದ್ಗುರುಗಳವರ ಸನ್ನಿಧಿಯಲ್ಲಿ ಭಾಷಣ ಮಾಡುತ್ತಿರುವ ಡಾ. ಬಿ. ಶಿವಮೂರ್ತಿ ಶಾಸ್ತ್ರಿಗಳು.



ಲಿಂಗೈಕ್ಯರಾದ ಹಿರಿಯ ಜಗದ್ಗುರುವರ್ಯರ ಉತ್ಸವದಲ್ಲಿ ಶೋಕತಪ್ತ ಶ್ರೀಗಳವರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾ, ವಿಜ್ಞಾನ, ವಾಣಿಜ್ಯ, ವ್ಯವಹಾರ ನಿರ್ವಹಣಾ ಕಾಲೇಜು, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು, ಚಾಮರಾಜನಗರ.

# ವೈರಾಗ್ಯನಿಧಿ ಅಲ್ಲಮಪ್ರಭು

ನಿಂಗಣ್ಣ ಸಣ್ಣಕ್ಕಿ

ವಿಶ್ವದಲ್ಲಿ ಮಹಾವಿಭೂತಿಗಳ ಶ್ರೇಷ್ಠಶ್ರೇಣಿಯಲ್ಲಿ ಸಿಲ್ಲಬಲ್ಲವರಾದವರಲ್ಲಿ ಶೈವಸಿದ್ಧಾಂತದ ವಿಶಾಲತ್ವವನ್ನು ಹರಪಿ. ವಿಶ್ವಮಾನ್ಯವಾದ ತತ್ವಗಳ ಪ್ರಯೋಗಕರ್ತರಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರಾದ ಅಲ್ಲಮಪ್ರಭುದೇವರು ಮತ್ತು ಶ್ರೀ ಬಸವಣ್ಣನವರು ಮೊದಲಿಗರಾಗಿದ್ದಾರೆ.

ಶೈವಸಿದ್ಧಾಂತವನ್ನು ವೀರಶೈವರೂಪದಲ್ಲಿ ವೀರಶೈವಧರ್ಮವೆಂದು ವಿವರಿಸಿದರು. ವೀರಶೈವಧರ್ಮದ ಬೆಳವಣಿಗೆಯು ಶಿವಶರಣರಿಂದಲೇ ರೂಪುಗೊಂಡು ಪ್ರಮುಖ ಧರ್ಮಗಳಲ್ಲಿ ಒಂದೆಂದು ಪರಿಗಣಿತವಾಯಿತು. ಈ ಧರ್ಮ ಬೆಳೆದು ಬರಲು ಅನೇಕ ಘಟ್ಟಗಳನ್ನು ಪಂಡಿತರು ಗೊತ್ತುಹಚ್ಚಿದ್ದಾರೆ. ವಿಶ್ವಧರ್ಮಕ್ಕೆ ವಿಶ್ವಸಾಹಿತ್ಯಕ್ಕೆ ಕಾಣಿಕೆ ಕೊಡಬಲ್ಲ ಧರ್ಮ ಹಾಗೂ ಸಾಹಿತ್ಯ ವಚನಸಾಹಿತ್ಯವಾಗಿದೆ. ಈ ಎಲ್ಲ ಕಾಣಿಕೆಗಳಿಗೆ ಕಾರಣಕರ್ತರಾದವರಲ್ಲಿ ಮೊದಲ ಘಟ್ಟದ ಮಹಾಮೇಧಾವಿಗಳಲ್ಲಿ ವಿಭೂತಿಪುರುಷರಲ್ಲಿ ಅಲ್ಲಮಪ್ರಭುದೇವರು ಮತ್ತು ಬಸವಣ್ಣನವರು ಅದ್ಭುತ ಪವಾಡಗಳನ್ನೂ. ಅದ್ಭುತ ಸಾಹಿತ್ಯವನ್ನೂ ಸಾಧಿಸಿದ ಮಹಾಪುರುಷರೂ. ವಿಶ್ವಮಾನ್ಯರೂ ಆಗಿದ್ದಾರೆ. 'ಜಗತ್ತಿನ ಮೇಲೆ ಕಾಲಕಾಲಕ್ಕೆ ಮುಸುಕುವ ಗಾಢಾಂಧಕಾರವನ್ನು ಪರಿಹರಿಸಲು. ಕಾಲಕಾಲಕ್ಕೆ ಸಂಗ್ರಹವಾಗುವ ಕೊಳೆಯನ್ನು ತೊಳೆಯಲು ಅವತರಿಸುವ ಮಹಾತ್ಮರಲ್ಲಿ ಅಲ್ಲಮಪ್ರಭುವೂ ಒಬ್ಬನಾಗಿದ್ದಾನೆ.[1]

ಅಲ್ಲಮಪ್ರಭುವು ಸರ್ವಧರ್ಮಗಳ ಸಮನ್ವಯ ತತ್ವಗಳನ್ನು ಹೊಂದಿದವನಾಗಿದ್ದನು. ತನ್ನ ಅನುಭಾವ ಕುಲುಮೆಯಿಂದ ವಚನಗಳನ್ನು ಅಭಿವ್ಯಕ್ತಗೊಳಿಸಿದನು. 'ಅಲ್ಲಮಪ್ರಭುದೇವರ ವಚನಗಳು' ಅಲ್ಲಮಪ್ರಭುವಿನ ಸರ್ವಮುಖದ ಸತ್ಯತೆಗಳನ್ನು ವಿವರಿಸುತ್ತವೆ. ಮತ್ತು ಅಲ್ಲಮಪ್ರಭುವಿನ ವ್ಯಕ್ತಿತ್ವನಿಧಿಯ ನಿಶಾನೆಗಳಾಗಿವೆ.

ವಿಶ್ವದಲ್ಲಿ ಶ್ರೀರಾಮ. ಶ್ರೀಕೃಷ್ಣ, ಶ್ರೀಯೇಸು. ಶ್ರೀಮೊಹಮ್ಮದ. ಶ್ರೀಬುದ್ಧ. ಶ್ರೀಮಹಾವೀರ, ಶ್ರೀರಾಮಕೃಷ್ಣ. ಶ್ರೀವಿವೇಕಾನಂದ. ಮಹಾತ್ಮಗಾಂಧೀಜಿಯವರ ವ್ಯಕ್ತಿತ್ವಗಳು ಅಲ್ಲಮಪ್ರಭುವಿನ ಅಂಶಗಳಾಗಿ ತೋರುತ್ತವೆ. ಅಲ್ಲಮಪ್ರಭು ಈಶ್ವರಸಂಭೂತನಾದುದರಿಂದ ಹರಿಹರ. ಚಾಮರಸ ಕವಿಗಳು ಅವನ ಮೇಲೆ ಕಾವ್ಯಗಳನ್ನು ಬರೆದರು. ಆಧುನಿಕ ಭಾರತದಲ್ಲಿ ವಿಶ್ವಮಾನ್ಯ ಪಡೆದ ಮಹಾತ್ಮಾಗಾಂಧೀಜಿಯವರು ಸಾರಿದ ಅಂಶಗಳನ್ನು ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭು ಶೂನ್ಯಸಿಂಹಾಸನದಿಂದ ಅನುಭವಮಂಟಪದ ಶರಣರಿಗೆ ಶರಣೆಯರಿಗೆ ಸಾರಿ ಸಾರಿ ಹೇಳಿದನಲ್ಲದೆ, ಆತ್ಮ ಒಂದೆಂಬ ಬಗೆಯನ್ನೂ, ಆತ್ಮದ ನಿರಾಕಾರವನ್ನೂ, ಬೆಳಕನ್ನೂ ಬೀರಿದನು. ಅವನ ಬಲದಿಂದಲೇ ಶ್ರೀ ಬಸವೇಶ್ವರರು ಮಾನವಕುಲದ ಒಗ್ಗಟ್ಟಿಗೆ ಕಾರಣಕರ್ತರಾದರು. 'ಸಿದ್ಧರಾಮನ ಕರ್ಮಮಾರ್ಗವನ್ನೊಪ್ಪಿಕೊಂಡ ಪ್ರಭುವೆ, ಮಹಾದೇವಿಯ ಜ್ಞಾನಮಾರ್ಗವನ್ನೂ ಒಪ್ಪಿಕೊಳ್ಳುತ್ತಾನೆ. ಅಸ್ಪೃಶ್ಯತೆಯ ಕಳಂಕವನ್ನು ಪಡೆದು ಸಮಾಜಬಾಹಿರವಾದ ಆ ದಲಿತವರ್ಗವನ್ನು 'ವೀರಶೈವಧರ್ಮ'ಕ್ಕೆ ಸೇರಿಸಲು ಬಸವಣ್ಣನವರು ಪ್ರಯತ್ನಿಸಿದ್ದಾರೆ. ಪ್ರಭುದೇವ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋದ. ಆತ್ಮನ ಏಕತ್ವವನ್ನು ಸಾರಿದ ಹಿರಿಮೆ ಪ್ರಭುದೇವನದು.'[2]

ವೈರಾಗ್ಯವೆಂದರೆ ಅದೇನೂ ಸಣ್ಣ ವಿಷಯವಲ್ಲ. ಕಾಮನನ್ನು ಗೆದ್ದವ ಕಾವಿಯನ್ನು ಧರಿಸುವ ಗುರುತು ಹಿಂದು ಧರ್ಮದಲ್ಲಿ ಸಾಧುತ್ವದ ಚಿಹ್ನೆಯಾಗಿದೆ. ಆದರೆ ವೈರವನ್ನು ಗೆದೆಯಲಾಗುತ್ತದೆಯೇ ? ಅರಿಷಡ್ವರ್ಗಗಳನ್ನು ಗೆದ್ದೂ, ವೈರವನ್ನು ಗೆದೆಯುವುದು ವಿರಾಗಿಯ ಶೂನ್ಯಪ್ರಜ್ಞೆಯ ಲಕ್ಷಣವಾಗಿದೆ. ಅಲ್ಲಮ ತನ್ನ ಹುಟ್ಟಿನಲ್ಲಿಯೇ

---

[1] ಅ.ನ.ಕೃ. : 'ಅಲ್ಲಮಪ್ರಭು', ಪುಟ ೩

[2] ಅ.ನ.ಕೃ.: 'ಅಲ್ಲಮಪ್ರಭು', ಪುಟ ೧೫–೧೬

ಈ ಲಕ್ಷಣಗಳನ್ನು ಧರಿಸಿ ಬಂದವನಾಗಿದ್ದನು. ಯೋಗಸಾಧನದಿಂದ ಆಗಬೇಕಾದುದೆಂದಲ್ಲ; ಹುಟ್ಟಿನಿಂದಲೇ ಪ್ರಭು ವೈರಾಗ್ಯದ ಪ್ರಭುತ್ವವನ್ನು ಪಡೆದುಕೊಂಡವನಾಗಿದ್ದನು. ಅವನು ಸಂಚರಿಸುತ್ತಿರುವಾಗ ಆ ವೈರವ್ಯ ಇನ್ನಿತರರಿಗೆ ನಿಧಿಯಾಗಿ ಕಂಡಿತು. ಅವನ ವಚನಗಳಲ್ಲಿ ಆ ನಿಧಿಯ ಬೆಲೆಯು ಕಟ್ಟಿದಷ್ಟೂ ಕಡಿಮೆಯಾಗುತ್ತದೆ. ಅವನ ವೈರಾಗ್ಯನಿಧಿತ್ವವನ್ನು ಅರ್ಥಮಾಡಿದಷ್ಟು ಕಡಿಮೆಯೇ ಇದೆ.

ಮಾಯೆಯನ್ನು ಗೆದ್ದ ಅಲ್ಲಮನು ಶರಣರ ಮುಖ್ಯನಾಗಬೇಕೆಂಬ ಹಂಬಲವುಳ್ಳವನಾಗಿದ್ದಿಲ್ಲ: ಶರಣರೇ ಅವನನ್ನು ಭಕ್ತಿಯಿಂದ ಸುತ್ತುಹಾಕಿ ಅನುಭವಮಂಟಪದ ಪ್ರಭುವನ್ನಾಗಿರಿಸಿದರು. ಅಲ್ಲಮಪ್ರಭುವಿಗೆ ಹುಟ್ಟಿನಲ್ಲಿಯೇ ಮನಸ್ಸಿನಾಳದಲ್ಲಿ ತೀವ್ರ ವೈರಾಗ್ಯ ಹೊಂದಿಕೊಂಡಿತು. ಅವನ ಪಾಲಿಗೆ ಸಂಸಾರ ನರಕರೂಪದ್ದಾಗಿದ್ದಿತು. ಹೀಗೆ ಕೆಲವರ ಹೇಳಿಕೆ. ಅವನು ಸಸಾರಶಕ್ತಿ. ಸಂಸಾರ ಮೀರಿದವ. ಇವನಿಗೆ ಭಗವಂತನೇ ಸತ್ಯಸ್ಯಸತ್ಯವಸ್ತು. ಉಳಿದದ್ದೆಲ್ಲ ಮಿಥ್ಯವಾದುದು. ಅವಸ್ತುವಾದುದು. ಮಾಯೆ ಮೀರಿದ ವೈರಾಗಿಗೆ ಯಾವದು ಎಂಥಹದು ಎಂಬ ಪ್ರಶ್ನೆಯಿಲ್ಲ. ಪ್ರಭು ಸಂಸಾರಸುಖದಲ್ಲಿ ಪ್ರೀತಿಯನ್ನು ಪಡೆಯಬೇಕೆಂದೂ ಅಪೇಕ್ಷಿಸಿದವನಲ್ಲ. ಅವನ ಸಂನ್ಯಾಸ ವೃತ್ತಿ ಹುಟ್ಟಿನಿಂದ ಬಂದುದನ್ನು ವಚನಕಾರರ ಮೇಲೆ ಬೀರಿದ ಪ್ರಭಾವದಿಂದ ವ್ಯಕ್ತವಾಗುತ್ತದೆ. ಇಡೀ ಶಿವಶರಣರ ವಚನಗಳಲ್ಲಿ ವಚನಕಾರರ ವೈರಾಗ್ಯಶಿಲ್ಪಿ ಅಲ್ಲಮಪ್ರಭುವಾಗಿದ್ದಾನೆ, ವೈರಾಗ್ಯನಿಧಿಯಾಗಿದ್ದಾನೆ.

ವೈರಾಗ್ಯವುಳ್ಳವನಿಗೆ ಯಾವ ಅಂಜಿಕೆಯೂ ಇಲ್ಲ. ಜನಮನವನ್ನೂ, ಜನಮಾನವನ್ನೂ ತಿದ್ದಿ ನಿಲ್ಲುವ ಶಕ್ತನವನು. ಸಮಾಜದಲ್ಲಿಯ ಆ ನೇಮ ಈ ನೇಮಗಳನ್ನು ಕಂಡುಹಿಡಿಯುವ ಜನಗಳ ಕುರಿತು ಪ್ರಭು ಹಾಸ್ಯಗೈದಿದ್ದಾನೆ.

ಹಾಲು ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ
ಅಗ್ಘಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ
ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ
ಇವು ಷಟ್ಸ್ಥಲಕ್ಕೆ ಹೊರಗು ; ಭಕ್ತಿ ನಿಷ್ಠೆಯಿಲ್ಲದವರ
ಕಂಡಡೆ ಮೆಚ್ಚ ಗುಹೇಶ್ವರಾ

ಈ ನಿಯಮಗಳು ಮನಸ್ಸಿನ ಸಂಸ್ಕಾರಗಳ ಪೂರ್ವಾಪೂರ್ವದ ಗುಣಗಳೆಂಬುದನ್ನು ತಾತ್ವಿಕವಾಗಿ ನಿರ್ಣಯಿಸಬಹುದು. ಆಧುನಿಕ ಕಾಲದಲ್ಲೂ ವೈಜ್ಞಾನಿಕವಾಗಿ ತಾತ್ವಿಕವಾದ ವಿವರಣೆಗಳನ್ನು ಅಣು ವಿಭಾಗಿಸಿದಂತೆ ವಿಭಾಗಿಸಿದಾಗ. ಮಾನವ ಹುಟ್ಟಿನ ಸ್ವಭಾವದ ರಕ್ತಗತಗುಣ ಸ್ಪಷ್ಟವಾಗುವುದು. ಅಲ್ಲಮಪ್ರಭುವಿಗೆ ವೈರಾಗ್ಯದ ಶಕ್ತಿಯಿಂದ ಪರಿಪೂರ್ಣಜ್ಞಾನದಿಂದ ತೀವ್ರವೇ ತಿಳಿಯುತ್ತಿತ್ತು. ಮಾಯೆಯನ್ನು ಗೆದ್ದ ಪ್ರಭು. ಸಿದ್ಧರಾಮನನ್ನೂ ಗೆಲ್ಲುತ್ತಾನೆ. ಅವತಾರಿಯೆಂದೆನಿಸಿದ ಶ್ರೀಸಿದ್ಧರಾಮ ಪ್ರಭುವಿಗೆ ಶರಣಾಗತನಾಗುತ್ತಾನೆ. ಪ್ರಭುವಿಗೆ ಶ್ರೀಸಿದ್ಧರಾಮನು ಶರಣಾಗತನಾಗುವುದು ಬೇಕಾಗಿರಲಿಲ್ಲ. ಆದರೆ ನಿಜದ ಹಿಂದಿನ ನಿಜ, ತಿಳಿಸಬೇಕಾಗಿತ್ತು ಅಲ್ಲಮಪ್ರಭುವಿಗೆ.

ಗೋರಕ್ಷಕನಾಥನು ಅಲ್ಲಮಪ್ರಭುವಿಗೆ ಬೀಸಿದ ಕತ್ತಿ ದೇಹದ ಅಸ್ತಿತ್ವವಿಲ್ಲದ ಶೂನ್ಯದಲ್ಲಿ ಸಂಚರಿಸುತ್ತದೆ. 'ದೇಹವನ್ನು ಛಿದ್ರಗೊಳಿಸಿ ಅದು ನಾಲ್ಕುದಿನ ಹೆಚ್ಚಾಗಿ ಜೀವಧರಿಸುವಂತೆ ಮಾಡುವುದು ಜಾಣತನವಲ್ಲ. ಪಾರ್ಥಿವ ದೇಹವನ್ನು ವಜ್ರದೇಹವನ್ನು ಮಾಡುವುದರ ಬದಲು ಅದನ್ನು ನಿರ್ದೇಹವನ್ನಾಗಿಸಿ ಮಾಯಾಮಲಗಳನ್ನು ಗೆಲ್ಲಬೇಕು' ಎಂದು ಪ್ರಭು ಅಲ್ಲಮನು ಮಾಡಿದ ಉಪದೇಶದಿಂದ ಗೋರಕ್ಷಕನಾಥನಿಗೆ ಸಂಪೂರ್ಣ ಅರಿವು ಉಂಟಾಗಿ ಜ್ಞಾನಕ್ಕಾಗಿ ತಡಪಡಿಸುವನು. ಬಳಿಕ ಗೋರಕ್ಷಕನಾಥನು ಪ್ರಭುವಿನ ಶಿಷ್ಯತ್ವ ವಹಿಸುವನು. ಇದು ವೈರಾಗ್ಯದ ಶಕ್ತಿ. ಈ ಶಕ್ತಿಯ ನಿಜವನ್ನರಿತು ವಜ್ರಕಾಯನಾದ ಗೋರಕ್ಷಕನಾಥನು ಗುರುವಿನಿಂದ ಜ್ಞಾನಜ್ಯೋತಿಗಾಗಿ ಹಂಬಲಿಸಿದನು. ಆದುದರಿಂದ :

ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು

ಎಂದು ಹೇಳಿದ ಚೆನ್ನಬಸವಣ್ಣನವರ ಮಾತು ಇಲ್ಲಿ ನಡೆದು ಹೋಗುತ್ತದೆ. ಇಂದಿನ ವೈಜ್ಞಾನಿಕಯುಗದಲ್ಲಿಯೂ ಇಂತಹ ಘಟನೆಗಳು ಕಾಣಬರುತ್ತಿವೆ. ಶ್ರೀರಾಮಕೃಷ್ಣಪರಮಹಂಸರ ದರ್ಶನದಿಂದ ನರೇಂದ್ರನು ಸಂಸಾರದ

ಜಂಜಡದಿಂದ ದೂರವಾಗಿ ಪರಮಹಂಸರ ಜ್ಯೋತಿತಾರೆ ಶ್ರೀವಿವೇಕಾನಂದನಾದುದು ಆಧ್ಯಾತ್ಮಯುಗದಲ್ಲಿಯ ವಿಶ್ವಮಾನ್ಯ ಘಟನೆಯೆಂಬುದನ್ನು ಸರ್ವರೂ ಒಪ್ಪುವಂತಹ ಸಾಕ್ಷಿಯೇ ಸರಿ.

ಪ್ರಭು ತನ್ನೆದುರಿಗೆ ಬಂದಿರುವವರನ್ನೆಲ್ಲ ತಿದ್ದುವ ಕಾರ್ಯ ಮಾಡಿದನು. ಹಾಗೆ ಮಾನವಕುಲಕ್ಕೆ ತಿಳಿಯಬೇಕೆಂದು ವೈರಾಗ್ಯನಿಧಿಯ ಮನೋಭೂಮಿಕೆಯಿಂದ ವಚನಗಳನ್ನು ರಚಿಸಿಟ್ಟನು. ಇನ್ನೊಂದು ಕಡೆಗೆ ಬಸವೇಶ್ವರ ಸಿದ್ಧರಾಮಾದಿ ಶರಣರ ಲಕ್ಷ್ಯವನ್ನು ಸೆಳೆದು ಅನುಭಾವ ತುಂಬಿದ ವೈರಾಗ್ಯದ ಅಭಿವ್ಯಕ್ತಿಯನ್ನು ನಿರೂಪಿಸಿದ್ದಾನೆ.

ಕಾಯದಲಾದ ಮೂರ್ತಿಯಲ್ಲ
ಜೀವದಲಾದ ಮೂರ್ತಿಯಲ್ಲ
ಪ್ರಾಣದಲಾದ ಮೂರ್ತಿಯಲ್ಲ
ಪುಣ್ಯದಲಾದ ಮೂರ್ತಿಯಲ್ಲ
ಮೂರ್ತಿಯಲಾದ ಮೂರ್ತಿಯಲ್ಲ
ಯುಗದಲಾದ ಮೂರ್ತಿಯಲ್ಲ
ಜಗದಲಾದ ಮೂರ್ತಿಯಲ್ಲ
ಶಿವನಲಾದ ಮೂರ್ತಿಯಲ್ಲ
ಶಕ್ತಿಯಲಾದ ಮೂರ್ತಿಯಲ್ಲ
ಇದೆಂಥ ಮೂರ್ತಿ ಎಂದು ಉಪಮಿಸುವೆ ?
ಕಾಣಬಾರದ ಕಾಯ ನೋಡಬಾರದ ತೇಜ ಉಪಮಿಸಬಾರದ ನಿಲವು
ಕಾರಣವಿಡಿದು ಕಣ್ಗೆ ಗೋಚರನಾದ
ಸುಳಿವನೇನೆಂದು ಹೇಳುವೆ ಗುಹೇಶ್ವರ

ಗುಹೇಶ್ವರನ ನಿಜರೂಪದ ಚಿನ್ಮಯಪನ್ನೇ ಈ ವಚನದಲ್ಲಿ ಪ್ರಭು ಹರವಿದ್ದಾನೆ.

ಈ ಎಲ್ಲ ಪ್ರಭಾವಗಳ ಆಳಕ್ಕಿಳಿದು ಚಾಮರಸನು ಪ್ರಭುವಿನ ಬಗೆಗೆ ಬರೆದಿದ್ದಾನೆ. ಪ್ರಭು ಗೋರಕ್ಷಕನಾಥನಿಗೆ ತಿಳಿಸುವ ಪರಿ ಇದು.

ಕಾಯ ಬಲಿದರೆ ಮಾಯೆ ಬಲಿವುದು ।
ಕಾಯ ಬಲಿದರೆ ಛಾಯೆ ಬಲಿವುದು ।
ಕಾಯ ಮಾಯಾ ಛಾಯೆ ಬಲಿದರೆ ಸಿದ್ಧತನವಲ್ಲ ॥
ಕಾಯ ಮಾಯಾ ಛಾಯದಾಗಿನ ।
ದಾಯವನು ಕಳೆದುಳಿದನಾದಡೆ ।
ರಾಯನಾತನು ಸಿದ್ಧರಲಿ ಗೋರಕ್ಷಕ ಕೇಳೆಂದ ॥[1]

ದಾಯವನ್ನು ಕಳೆಯಲು ಗೋರಕ್ಷಕನಾಥನು ಪ್ರಯೋಗಕರ್ತನಾದನು. ವಜ್ರದೇಹಿಗೆ ಪ್ರಭುವಿನ ದರ್ಶನ ಸಂದರ್ಶನವಾಯಿತು. ವೈರಾಗ್ಯದ ಬಲದ ಒಲವಿದು.

ಆಧುನಿಕ ಜಗತ್ತಿನವರಿಗೆ ಹೊಂದುವಂತೆ ಪ್ರಭು ಮಾಯೆಯ ಭೂಮಿಕೆಯನ್ನು ವಿವರಿಸಿದ್ದಾನೆ. ಹಾಗೂ ಮನದ ಮುಂದಣ ಆಶೆ ಹೇಳಿದ್ದಾನೆ. ಈ ಮನದ ಮುಂದಣ ಆಶೆಯಲ್ಲಿಯೇ ಜನ ತೊಳಲಾಡಿ ಹಾಳಾಗುತ್ತಿರುವ ರೀತಿಯನ್ನು ಎಲ್ಲರೂ ಒಪ್ಪುತ್ತಿದ್ದಾರೆ.

ಹೊನ್ನು ಮಾಯೆ ಎಂಬರು,
ಹೆಣ್ಣು ಮಾಯೆ ಎಂಬರು,
ಮಣ್ಣು ಮಾಯೆ ಎಂಬರು,
ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯಲ್ಲ,
ಮನದ ಮುಂದಣಾಸೆಯೇ ಮಾಯೆ ಕಾಣಾ ಗುಹೇಶ್ವರಾ

[1] ಚಾಮರಸ: 'ಪ್ರಭುಲಿಂಗಲೀಲೆ', ಪುಟ ೨೩೪, ೩೭

ಇನ್ನೊಂದು ವಚನದಲ್ಲಿ ಮಾಯೆಗೆ ದಾಸನಾದ ಮಾನವನ ದುಃಖವನ್ನು ಅಲ್ಲಮಪ್ರಭು ಹೀಗೆ ವರ್ಣಿಸಿದ್ದಾನೆ :

ಸಂಸಾರವೆಂಬ ಹೆಣ ಬಿದ್ದಿರೆ.
ತಿನಬಂದ ನಾಯ ಜಗಳವ ನೋಡಿರೆ.
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ.
ಗುಹೇಶ್ವರನೆಂಬ ಲಿಂಗ ಅಲ್ಲಿಲ್ಲ ಕಾಣಿರೇ

ಮಾಯೆಯನ್ನು ಗೆಲ್ಲುವುದೇ ನಿಜವಾದ ವೈರಾಗ್ಯವೆಂಬುದನ್ನು ಎಲ್ಲರೂ ಬಲ್ಲರು. ಆದರೆ ಅದನ್ನು ಜನತೆ ಮಾಡಲಾಗುವುದಿಲ್ಲ. ಮಾಡಲು ಹಚ್ಚುವ ವಿಚಾರಗಳನ್ನು ಮಾತ್ರ ಪ್ರಭು ತಿಳಿಸಿದ್ದಾನೆ.

ಮಾಯಾ ಮಲಿನ ಮನದಿಂದ ಅಗಲದೆ
ಕಾಯದ ದಂದುಗ ಕಳೆಯಿಂದಗಲದೆ
ಅರಿವು ಬರಿದೆ ಬಪ್ಪುದೆ ?
ನಿಜವು ಬರಿದೆ ಸಾಧ್ಯವಪ್ಪುದೆ ಮರುಳೆ ?
ಗುಹೇಶ್ವರಲಿಂಗವನರಿಯಬಲ್ಲಡೆ ನಿನ್ನ ನೀ ತಿಳಿದು ನೋಡಾ

ಈ ಪರಿಯಾಗಿ ಅರಿವನ್ನು ಮೂಡಿಸುವ ಪ್ರಭು ಅಭಿವ್ಯಕ್ತಿಯ ನಿಧಿಯಾಗಿ ಅನುಭವದ ವಿವರವನ್ನು ತಿಳಿಸುವನು.

ಅನುಭಾವದಿಂದ ಹುಟ್ಟಿತ್ತು ಲಿಂಗ
ಅನುಭಾವದಿಂದ ಹುಟ್ಟಿತ್ತು ಜಂಗಮ
ಅನುಭಾವದಿಂದ ಹುಟ್ಟಿತ್ತು ಪ್ರಸಾದ
ಅನುಭಾವದನುವಿನಲ್ಲಿ ಗುಹೇಶ್ವರಾ. ನಿಮ್ಮ ಶರಣ ಅನುಪಮ ಸುಖಿ

ಪ್ರಭು ತನ್ನ ಬಯಲು ವ್ಯಕ್ತಿತ್ವದಿಂದ ವೈರಾಗ್ಯಸಹಿತ ಮೀರಿ ನಿಲ್ಲುತ್ತಾನೆ. ಆದರೆ ವಚನಕಾರರು ಪ್ರಭುವನ್ನು ವೈರಾಗ್ಯದ ವ್ಯಕ್ತಿತ್ವಕ್ಕೆ ನಿಲ್ಲಿಸಿ. ಅವನನ್ನು ತಿಳಿಯಲು ಅಳೆಯಲು ಪ್ರಯತ್ನಿಸಿದ್ದಾರೆ. ವೈರಾಗ್ಯದ ಅರಿವನ್ನು ನಾವು ಆಗೀಗ ನೋಡುತ್ತೇವೆ. ಕೇಳುತ್ತೇವೆ. ಈಗ ಶ್ರೀರಾಮಕೃಷ್ಣ ಪರಮಹಂಸರ ಮಾತಿನಲ್ಲಿ ಕೇಳಿ :

ಮಾಸ್ಟರ್ : "ನರೇಂದ್ರನಿಗೂ ಎಲ್ಲಾ ಬಂದೊದಗುತ್ತವೆ ? ಇನ್ನೂ ಆ ಸಮಯವೆಲ್ಲ ಕಳೆದುಹೋಗಿ ಬಿಟ್ಟಿಲ್ಲವಲ್ಲ !"

ಶ್ರೀರಾಮಕೃಷ್ಣರು : "ತೀವ್ರ ವೈರಾಗ್ಯ ಉಂಟಾಯಿತು ಅಂದರೆ ಮನುಷ್ಯ ಏನು ಎತ್ತ ಅಂತ ಲೆಕ್ಕಾಚಾರ ಹಾಕುವದಿಲ್ಲ. ಆತ ಹೇಳಿಕೊಳ್ಳುವದಿಲ್ಲ. 'ಮನೆಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಬಳಿಕ ಸಾಧನೆಯಲ್ಲಿ ತೊಡಗುವೆನು' ಅಂತ. ತೀವ್ರ ವೈರಾಗ್ಯ ಉಂಟಾಯಿತು ಅಂದರೆ ಈ ವಿಧದ ಭಾವನೆಗಳು ಬರುವುದೇ ಇಲ್ಲ. (ನಗುತ್ತ) ತನ್ನ ಉಪನ್ಯಾಸದ ಸಮಯದಲ್ಲಿ ಒಬ್ಬ ಗೋಸ್ವಾಮಿ ಹೇಳಿದ : 'ಕೈಯಲ್ಲಿ ಒಂದು ಹತ್ತುಸಾವಿರ ರೂಪಾಯಿ ಇತ್ತು ಅಂದರೆ. ಅದರಿಂದ ಬರುವ ಬಡ್ಡಿಯಿಂದಲೇ ಊಟ ಉಪಚಾರಗಳೆಲ್ಲಾ ನಡೆದುಹೋಗಿ ಬಿಡುತ್ತವೆ. ಆಗ ನಿಶ್ಚಿಂತೆಯಿಂದ ಭಗವಂತನನ್ನು ಕರೆಯಬಹುದು.'[1]

ಶ್ರೀರಾಮಕೃಷ್ಣರ ಮಾತಿನಲ್ಲಿ ನಾವು ಅಲ್ಲಮಪ್ರಭುವನ್ನು ಒಪ್ಪಬೇಕಾಗಿ ಬರುತ್ತದೆ. ತೀವ್ರ ವೈರಾಗ್ಯ ಬಂದು ಭಗವಂತನಾಗಿರುವ ನಿಧಿ ಅಲ್ಲಮಪ್ರಭು. ಗೋಸ್ವಾಮಿಯಂತೆ ಭಗವಂತನನ್ನು ಹೇಗೆ ಪಡೆಯಲಿಕ್ಕಾದೀತು ? ಅದು ಭಗವಂತನಿಗೆ ಕಾಂಚನ ಇಷ್ಟವೇ ? ಇಲ್ಲ. ನಮ್ಮಲ್ಲಿ ಕೆಲವು ಸಾಧಕರು ಸಂಸಾರದಲ್ಲಿ ಲಕ್ಷ್ಮಿಯಿಂದ ಸುಖಿಯಾಗಲು ಹೋಗಿ. ವ್ಯವಹಾರದ ಜಾಲದಲ್ಲಿ ಬೀಳುವುದನ್ನು ಕಂಡೇ ಕಾಣುತ್ತೇವೆ. ತಡವಾದರೂ ವೈರಾಗ್ಯ ಬಂದು ವಿವೇಕಾನಂದರು ಶ್ರೀ ವಿವೇಕಾನಂದರಾದರು. ಪ್ರಭುದೇವರು 'ಶ್ರೀ' ಪ್ರಭುದೇವರಾಗುವುದೇ ಇಲ್ಲ. ಯಾಕಂದರೆ ಶ್ರೀಯನ್ನು ಹಚ್ಚಿಕೊಳ್ಳದೇ ಪ್ರಭುತ್ವದಲ್ಲಿ 'ಶ್ರೀ'ಯನ್ನು ಹೊಂದಿರುತ್ತಾನೆ. ಹಿಂದಿನದನ್ನೂ ಮೀರಿರುತ್ತಾನೆ. ಮುಂದಿನದನ್ನೂ ಸರ್ವವನ್ನೂ.

ಹಾಗೇ ಪ್ರಭುವಿನ ವ್ಯಕ್ತಿತ್ವದರ್ಶನದಲ್ಲಿ. ಅವನ ಮಾತಿನಲ್ಲಿ ಕ್ಷಣಕ್ಷಣಕ್ಕೂ ಸ್ವತಂತ್ರ ಅಭಿವ್ಯಕ್ತಿ ಮನೋಧರ್ಮ ವಿಶ್ವವ್ಯಾಪಕ ಜ್ಞಾನ ವ್ಯಕ್ತವಾಗುತ್ತದೆ. ಆತ ಯಾವ ಮೂಢ ನಂಬಿಕೆಯನ್ನೂ ನಂಬಿದವನಲ್ಲ. ಹಿಂದಿನ ಹೇಳಿಕೆಯ ಶ್ರದ್ಧೆಗಳನ್ನು ಒಡೆದು ನೋಡುವವನಾಗಿದ್ದಾನೆ. ಅವನ ವಚನಗಳಲ್ಲಿ ಹೀಗೆ ಹೇಳಿಕೆ ಇದೆ—

[1] ಶ್ರೀರಾಮಕೃಷ್ಣ ವಚನವೇದ (ಉತ್ತರಾರ್ಧ) 'ಮ' ಪುಟ ೩೮೬

ವೇದ ವೇಧಿಸಲರಿಯದೆ ಕೆಟ್ಟವು
ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು.
ಪುರಾಣ ಪೂರೈಸಲರಿಯದೆ ಕೆಟ್ಟವು.
ಹಿರಿಯರು ತಮ್ಮ ತಾವರಿಯದೆ ಕೆಟ್ಟರು.
ತಮ್ಮ ಬುದ್ಧಿ ತಮ್ಮನ್ನೇ ತಿಂದಿತ್ತು
ನಿಮ್ಮನ್ನೆತ್ತ ಬಲ್ಲರು ಗುಹೇಶ್ವರಾ

ಹೀಗೆ ನುಡಿದ ಪ್ರಭು ವೇದ, ಶಾಸ್ತ್ರ. ಪುರಾಣ. ತರ್ಕ. ಭಕ್ತಿ ಮುಂತಾದವುಗಳನ್ನು ಅರಿತು ಅವುಗಳನ್ನು ಸಮೀಕ್ಷಿಸಿದ್ದಾನೆ, ವಿಮರ್ಶಿಸಿದ್ದಾನೆ. ಪರಾಮರ್ಶಿಸಿದ್ದಾನೆ.

ವೇದವೆಂಬುದು ಓದಿನ ಮಾತು.
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹರಟೆ
ಭಕ್ತಿ ಎಂಬುದು ಉಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು

ಹೀಗೆ ತಿಳಿಸುವ ಅಲ್ಲಮನ ಆಕಾರವು ದೇಹಮಾನದಿಂದಿದ್ದರೂ 'ಅಲ್ಲಮ ದೇಹಿಯಾದರೂ ನಿರ್ದೇಹಿ: ಮೂರ್ತಿಯಾದರೂ ಶೂನ್ಯಮೂರ್ತಿ. ಈ ಶೂನ್ಯಮೂರ್ತಿ ಏರುವುದಕ್ಕೆ ಅರ್ಹವಾದ ಸಿಂಹಾಸನವನ್ನು ಬಸವೇಶ್ವರರು ನಿರ್ಮಿಸಿದ ಶೂನ್ಯಸಿಂಹಾಸನ ಎಂದು ಕರೆದಿರುವ ಈ ಮಾತು ಬಹಳ ಅರ್ಥಗರ್ಭಿತವಾದುದು. ಶೂನ್ಯವೇ ಮೂರ್ತಿಗೊಂಡ ಸಿಂಹಾಸನ. ಶೂನ್ಯವೆಂದರೆ ಸಾಮಾನ್ಯವಾದ ನಿಷೇಧಾರ್ಥವಲ್ಲ. ಎಲ್ಲವನ್ನು ಒಳಗೊಂಡ ಶೂನ್ಯ. ಎಲ್ಲವನ್ನೂ ಸೇರಿಸಿಕೊಂಡು. ಎಲ್ಲಕ್ಕೂ ಅತೀತವಾಗಿ ತಾನೇತಾನಾದ ನಿರಾಲಂಬ ಶೂನ್ಯ. ಈ ಅರ್ಥದಲ್ಲಿ ಅಲ್ಲಮಪ್ರಭು ಶೂನ್ಯಮೂರ್ತಿ. ಮಡಿವಾಳ ಮಾಚಯ್ಯ ಅಲ್ಲಮನನ್ನು ಕುರಿತು,[1]

ಲಿಂಗ ಬೆಳಗಿನ ಪರಮಸುಖಿಯನೇನೆಂಬೆನಯ್ಯಾ;
ಕಂಗಳ ಕಳೆಯ ಸಂಗವನರಿದ ಅಂಗವಿರಹಿತನೇನೆಂದು ಉಪಮಿಸುವೆನು !
ನೋಟದಲ್ಲಿ ಅನಿಮಿಷ, ಕೂಟದಲ್ಲಿ ನಿಸ್ಸಂಗಿ, ಎಡೆಯಾಟದಲ್ಲಿ ನಿರ್ಗಮನ.
ನಿಂದಲ್ಲಿ ನಿರಾಳ, ಸುರಾಳದಲ್ಲಿ ಪರಿಪೂರ್ಣ
ಘನಕ್ಕೆ ಘನಮಹಿಮ ಕಲಿದೇವರದೇವಾ
ನಿಮ್ಮ ಶರಣ ಪ್ರಭುದೇವರ ಪಾದಕ್ಕೆ ನಮೋ ನಮೋ

ಶರಣರು ಪ್ರಭುವನ್ನು ಎಷ್ಟು ತಿಳಿದರೂ ವರ್ಣಿಸಿದರೂ ಅಳತೆ ಮೂಡಿಲ್ಲ: ತಿಳಿದಿಲ್ಲ: ವರ್ಣಿಸಿಲ್ಲ. ಯಾಕೆಂದರೆ ಪ್ರಭು ಅವಿರತವಾಗಿ ಪರಿಪೂರ್ಣತೆಯ ಅನುಭಾವದ ಅನ್ವೇಷಣೆಯಲ್ಲಿಯೇ ಇದ್ದವನಾಗಿದ್ದನು. ಅಲ್ಲಮಪ್ರಭು ಮನಸ್ಸಿನ ವೈರಾಗ್ಯ. ವೈರಾಗ್ಯದ ಹೋರಾಟ. ವೈರಾಗ್ಯದ ಶಕ್ತಿ. ವೈರಾಗ್ಯದ ಅನುಭಾವ. ವೈರಾಗ್ಯದ ದರ್ಶನ, ವೈರಾಗ್ಯದ ಮಾರ್ಗ, ವೈರಾಗ್ಯದ ಜ್ಞಾನ. ವೈರಾಗ್ಯದ ಸಾಧನೆ ಇತ್ಯಾದಿಗಳನ್ನು ವಚನಗಳಲ್ಲಿ ವಿವರಿಸಿ, ವಿವರಿಸಿ ಇಟ್ಟನು. ವಿಶ್ವದ ಸಿರಿತನದ ಜೊತೆ ಬೆಳೆಯುವ 'ಸಿರಿ' ಎಂದರೆ ಜ್ಞಾನ. ಈ ಜ್ಞಾನದ ಮಹತ್ವ ತಿಳಿದು ನುಡಿದ ಕೆಳಗಿನ ವಚನದಲ್ಲಿ ಪ್ರಭುವಿನ ಇನ್ನೊಂದು ದರ್ಶನವನ್ನು ಕಾಣುತ್ತೇವೆ.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ ;
ಅದು ಜಗಕ್ಕಿಕ್ಕಿದ ವಿಧಿ
ನಿನ್ನೊಡವೆ ಎಂಬುದು ಜ್ಞಾನರತ್ನ ;
ಅಂತಪ್ಪ ದಿವ್ಯರತ್ನವ ಕೆಡಗುಡದೆ,
ಆ ರತ್ನವ ನೀನಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರಲಿಂಗದಲ್ಲಿ ನಿನ್ನಿಂದ ಬಿಟ್ಟು
ಸಿರಿವಂತರಿಲ್ಲ ಕಾಣ ಎಲೆ ಮನವೇ

[1] ಡಾ|| ಎಚ್. ತಿಪ್ಪೇರುದ್ರಸ್ವಾಮಿ: 'ಶರಣರ ಅನುಭಾವ ಸಾಹಿತ್ಯ', ಪುಟ ೮೮

ಇಲ್ಲಿ ಅತಿಮಾನಸಪ್ರಜ್ಞೆಯನ್ನು ನಾವು ಕಾಣದೇ ಇರಲಾರೆವು. ಶ್ರೀ ಅರವಿಂದರು ನಡೆಸಿದ 'ದಿವ್ಯಜೀವನ'ವನ್ನೂ ನಾವು ಅಲ್ಲಮಪ್ರಭುವಿನಲ್ಲಿ ಕಾಣುತ್ತೇವೆ.

ಹಾಗೇ—

ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ
ಉಪಚಾರದ ಲಿಂಗ ಉಪಚಾರದ ಜಂಗಮ
ಉಪಚಾರದ ಪ್ರಸಾದವಕೊಂಡು ಗುರುವಿಂಗೆ
ಭವದ ಲೆಂಕನಾಗಿ ಅಂಧಕನ ಕೈ ಅಂಧಕ ಹಿಡಿದಂತೆ
ಇವರಿಬ್ಬರೂ ಹೊಲಬುಗೆಟ್ಟರೂ ಕಾಣಾ ಗುಹೇಶ್ವರಾ[1]

ತಾರತಮ್ಯದ ಮನೋಭಾವವನ್ನು ಜ್ಞಾನದ ಪರಿಮಿತವನ್ನು ಪ್ರಭು ಸ್ಪಷ್ಟಪಡಿಸಿದ್ದಾನೆ. ಹಾಗೇ ಪೂರ್ಣ ವೈರಾಗ್ಯದ ಜ್ಞಾನ ಬೀರಲು ಬಯಲಿನ ತತ್ವವನ್ನು ಅಖಂಡೇಶ್ವರ ವಿವರಿಸಿದ್ದಾನೆ. ಈ ವಚನ ಪ್ರಭುವಿನ ಬಯಲು ಸಿದ್ಧಿತ್ವ ಕುರಿತೇ ಇದೆ.

ಆದಿ ಇಲ್ಲದ ಬಯಲು, ಅನಾದಿ ಇಲ್ಲದ ಬಯಲು
ಶೂನ್ಯವಿಲ್ಲದ ಬಯಲು, ನಿಶ್ಶೂನ್ಯವಿಲ್ಲದ ಬಯಲು
ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು
ಅಖಂಡೇಶ್ವರನೆಂಬ ಬಯಲಲ್ಲಿಯ ಬಯಲು
ಮಹಾಘನ ಬಚ್ಚಬರಿಯ ಬಯಲೊಳಗೆ
ಎಚ್ಚರವಡಗಿ ನಾನೆತ್ತಹೋದೆನೆಂದರಿಯೆ[2]

ಬಯಲನ್ನು ನಿಶ್ಶೂನ್ಯಕ್ಕೆ ಹೋಲಿಸಿ ಹೇಳುವ ರೂಪವನ್ನು ನಾವು ಭಾವರೂಪಕವೆಂದು ನಂಬಲು ಶಕ್ಯವಿದೆ ಮತ್ತು ಸತ್ಯವಿದೆ.

ಬಯಲು ಬಯಲನೆ ಬಿತ್ತಿ ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತಯ್ಯ
ಬಯಲು ಜೀವ ಬಯಲು ಭಾವನೆ
ಬಯಲು ಬಯಲಾಗಿ ಬಯಲಾಯಿತಯ್ಯ
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗೋಹೇಶ್ವರಾ[3]

ಹಾಗೇ—

ಅರಿದೆನೆಂಬುದು ತಾ ಬಯಲು
ಅರಿಯೆನೆಂಬುದು ತಾ ಬಯಲು
ಮರೆದೆನೆಂಬುದು ತಾ ಬಯಲು
ಅರುಹಿನ ಕುರುಹಿನ ಮರಹಿನೊಳಗೆ
ಗೋಹೇಶ್ವರನೆಂಬುದು ತಾ ಬಯಲು[4]

ಈ ಸಂಗತಿಯನ್ನು ಈಶಾವಾಸ್ಯ ಉಪನಿಷತ್ತಿನಲ್ಲಿ ನೋಡಿರಿ :

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ[5]

---

1 ಸಂ॥ ಎಲ್. ಬಸವರಾಜು : 'ಅಲ್ಲಮನ ವಚನ ಚಂದ್ರಿಕೆ', ಪುಟ ೭೫

2 ಡಾ॥ ಫ. ಗು. ಹಳಕಟ್ಟಿ : 'ವಚನಶಾಸ್ತ್ರಸಾರ', ಭಾಗ ೧, ಪುಟ ೫೭೧, ವ. ೮

3 ಸಂ॥ ಪ್ರೊ. ಸಂ. ಶಿ. ಭೂಸನೂರಮಠ : 'ವಚನ ಸಾಹಿತ್ಯ ಸಂಗ್ರಹ', ಪುಟ ೫೨೧, ವ. ೧೧೧

4 ಸಂ॥ ಪ್ರೊ. ಸಂ. ಶಿ. ಭೂಸನೂರಮಠ : 'ಶೂನ್ಯಸಂಪಾದನೆ', ಪುಟ ೬೬, ವ. ೧೨೮

5 ಈಶಾವಾಸ್ಯ ಉಪನಿಷತ್ತಿನ ಪ್ರಾರಂಭದಲ್ಲಿ ಬರುವ ಶಾಂತಿ ಪಾಠ.

ನಾವೀಗ ಬಯಲು ಬಯಲನ್ನೇ ಕೂಡಿಸಿದರೆ ಬರುವುದು ಬಯಲು
ಬಯಲಿನಲ್ಲಿ ಬಯಲನ್ನೇ ಕಳೆದರೆ ; ಬರುವುದು ಬಯಲು
ಬಯಲನ್ನು ಬಯಲಿನಿಂದ ಗುಣಿಸಿದರೆ ; ಬರುವುದು ಬಯಲು
ಬಯಲನ್ನು ಬಯಲಿನಿಂದ ಭಾಗಿಸಿದರೆ ; ಬರುವುದು ಬಯಲು

ಆದುದರಿಂದ ಶೂನ್ಯವಾಗಿರುವ ಜ್ಞಾನ. ಬಯಲು ಪ್ರಕಾಶದ ಜ್ಞಾನವಾಗಿಯೇ ವೈರಾಗ್ಯನಿಧಿ ಅಲ್ಲಮನಿಗೆ ಹೊಳೆದ ಬ್ರಹ್ಮಾಂಡವನ್ನು ಮೀರಿದ ವಿಶಾಲತ್ವವಾಗಿದೆ.

ಪೃಥ್ವಿಯ ಮೇಲಿದ್ದರೆ. ಹಗಲು ಎಂಬುದು ಜಾಗ್ರತ ಅವಧಿಯಾಗುವುದು. ರಾತ್ರಿ ಸ್ವಪ್ನಾವಧಿಯಾಗುವುದು. ಇವೆರಡೂ ಅವಸ್ಥೆಗಳನ್ನು ಮೀರಿದ ಅವಸ್ಥೆಯೂ ಉಂಟು. ಇದೇ ಸುಷುಪ್ತಿ. ಹಗಲು ರಾತ್ರಿಗಳು ಆಗದೇ ಇರುವಂತಹ ಬಯಲು ನಿರ್ಬಯಲು. ಇದು ಮನಸ್ಸಿನ ತುರೀಯಾವಸ್ಥೆ. ಅಲ್ಲಮಪ್ರಭು ಹಗಲು ರಾತ್ರಿಯ ಅವಸ್ಥೆಯನ್ನು ಮೀರಿ ಸದಾ ಜಾಗ್ರತಾವಸ್ಥೆಯಲ್ಲಿ ಮನಸ್ಸಿಟ್ಟ ಪ್ರಭು.

ಅಲ್ಲಮಪ್ರಭುವಿನ ವೈರಾಗ್ಯದ ಮನಮಂದಿರವನ್ನು ವಿಚಾರಿಸುತ್ತ ಹೋದಂತೆ ಅವನ 'ಸಂಸಾರ ನಿರಸನ ಸ್ಥಲದ ವಚನಗಳಿಂದ' ಜೀವನ ನಿರ್ಣಯಗಳನ್ನು. ಸಂಪೂರ್ಣ ಆಧ್ಯಾತ್ಮ ಸಾಧನೆಯನ್ನು ನಾವು ಕಂಡು ವೈರಾಗ್ಯ ಚಕ್ರವರ್ತಿ ಎಂಬ ನಿರ್ಣಯಕ್ಕೆ ಬರಲು ಮನಸ್ಸು ಮಾಡುತ್ತೇವೆ.

ಅವನ ಇರುವಿಕೆಯನ್ನು ಭಗವತ್‌ಶಕ್ತಿಯ ಜೊತೆ ಸಮರಸವಾಗಿ, ಸಮನಾಗಿ ಕಾಣಬಹುದಾಗಿದೆ. ಕನ್ನಡದಲ್ಲಿ ಇಂತಹ ಭಗವಂತನ ದರ್ಶನವನ್ನು ಹನ್ನೆರಡನೆಯ ಶತಮಾನದ ಸಮಕಾಲೀನರು ಕಂಡರು. ಇನ್ನೂ ಸದಾ ಕಾಣುವ ಕಾಲ. ಭಾಗ್ಯ ಕನ್ನಡಿಗರದೂ, ಭಾರತೀಯರದೂ. ವಿಶ್ವದ ಜನತೆಯದೂ ಆಗಿದೆ.

ನೈವ ವಾಚಾ ನ ಮನಸಾ
ಪ್ರಾಪ್ತುಂ ಶಕ್ಯೋ ನ ಚಕ್ಷುಷಾ
ಅಸ್ತೀತಿ ಬ್ರುವತೋಽನ್ಯತ್ರ
ಕಥಂ ತದುಪಲಭ್ಯತೇ[1]

"ಮಾತಿನಿಂದ. ಮನಸ್ಸಿನಿಂದ. ಕಣ್ಣುಗಳಿಂದ ಅರಿಯಲು ಶಕ್ಯವಿಲ್ಲ. ಅವನು ಇದ್ದಾನೆ ಎಂದು ಹೇಳುವುದಕ್ಕಿಂತಲೂ ಮತ್ಯಾವರೀತಿಯಲ್ಲಿ ಅವನನ್ನು ಅರಿಯಬಹುದು ?"

ಭಗವಂತನ ಬಗೆಗೆ ಹೇಳಿದುದನ್ನು ಒಪ್ಪುವಂತೆ, ಜ್ಞಾನದಿಂದ ಕಾಣುವಂತೆ. ಪ್ರಭುದೇವರನ್ನು ವೈರಾಗ್ಯ ನಿಧಿಯ ಪ್ರಭು ಎಂಬುದನ್ನೂ ಜ್ಞಾನದಿಂದಲೂ, ಆತನ ವಚನಗಳಿಂದಲೂ, ಶಿವಶರಣರ ಶರಣೆಯರ ವಚನಗಳಿಂದಲೂ ಕಾಣಲು ಶಕ್ಯವಿದೆ.

ವೈರಾಗ್ಯವನ್ನು ವಿಜ್ಞಾನದಿಂದಲೂ ಅಭ್ಯಸಿಸಲು ಶಕ್ಯವಿದೆ. ಶರೀರದ ಗುಣಗಳನ್ನು ಅಭ್ಯಸಿಸಲು ಯೋಗ ಜ್ಞಾನ ಹಾಗೂ ಯೋಗವಿಜ್ಞಾನ ವಿವರಿಸಲು ಪ್ರಮಾಣಗಳಿವೆ. ಯಾವ ಬದಿಯಿಂದ ಅರಿದರೂ ವೈರಾಗ್ಯನಿಧಿ ಅಲ್ಲಮಪ್ರಭು, ಪ್ರಭು ಶಕ್ತಿಯನ್ನು ಹರವುತ್ತಾನೆ.

---

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವನಾ ಕೆಂಡ ನುಂಗಿದಂತೆ
ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ
ಆತನ ಸರ್ವಾಂಗವೆಲ್ಲ ಲಿಂಗ ಕಾಣಾ ರಾಮನಾಥಾ

ದೇವರದಾಸಿಮಯ್ಯ

[1] ಕಠೋಪನಿಷತ್.

# ಅಲ್ಲಮನ ಬೆಡಗಿನ ವಚನಗಳು

ಹ. ನಂ. ವಿಜಯಕುಮಾರ್

ನಮ್ಮಲ್ಲಿ ಬೇಜವಾಬ್ದಾರಿಯಿಂದ ಲೇಖನ ಬರೆಯುವವರೇ ಹೆಚ್ಚು. ಕೆಲವರು ಬರೆಯುವ ತುರಾತುರಿಯಿಂದಾಗಿ ತಮ್ಮ ಅಜ್ಞಾನವನ್ನು ಜಾಣತನದಿಂದ ಮುಚ್ಚಿಕೊಳ್ಳುತ್ತಾರೆ. ಹೀಗಾಗುವುದರಿಂದ ಸಾಹಿತ್ಯದ ಪರಿವಲಯದಲ್ಲಿ ಅನೇಕ ಅನಾಹುತಗಳಾಗುತ್ತವೆ. (೧) ಸತ್ವವಿಲ್ಲದ ಲೇಖನಗಳನ್ನು ತಂದು ಒಟ್ಟುವುದರಿಂದ ಜೂಸಾ ಸಾಹಿತ್ಯ ಅನ್ನುವುದಕ್ಕೆ ಕಾರಣವಾಗುತ್ತದೆ. (೨) ದಿನೇ ದಿನೇ ಬಿಳಿಕಾಗದ. ಮುದ್ರಣ ಇತ್ಯಾದಿಗಳ ದುಬಾರಿ ಬೆಲೆ, ಕೊರತೆ ಉಂಟಾಗುವುದಕ್ಕೆ ಮೂಲವಾಗುತ್ತದೆ. (೩) ಇದೆಲ್ಲಕ್ಕೂ ಹೆಚ್ಚಾಗಿ ಓದುವ ಎಳೆಯರಿಗೆ ಪೇಲವ ಮಾದರಿ ಹಾಕಿಕೊಟ್ಟು ದಡ್ಡರನ್ನಾಗಿ ಮಾಡುತ್ತಾರೆ. ಲೇಖನ ಬರೆಯುವ ಮುಂಚೆ ತಮ್ಮಲ್ಲಿಯೇ ಖಚಿತತೆಯ ದಾರಿದ್ರ್ಯದಿಂದಾಗಿ ಹೇಳಲು ಸರಕು ಇರುವುದಿಲ್ಲ. ಹೀಗಾಗಿ ಅಕ್ಷರಮಾಲೆ ಕಟ್ಟಿ ಸುತ್ತುಬಳಸಿ. ಏನೋ ಹೇಳಿದೆವೆಂದು ಕೊರಳಿಗೆ ಹಾಕಿಬಿಡುತ್ತಾರೆ. ಎಂದ ಮಾತ್ರಕ್ಕೆ ಪ್ರಾಮಾಣಿಕವಾಗಿ ಅರ್ಥಮಾಡಿಕೊಂಡದ್ದನ್ನು ಹೇಳತೊಡಗುವ ಪ್ರಯತ್ನಗಳನ್ನು ನಿಲ್ಲಿಸಬೇಕೆಂದು ಅರ್ಥವಲ್ಲ. ನನ್ನ ಈ ಲೇಖನ ಕೂಡ ಇಂತಹ ಒಂದು ಪ್ರಯತ್ನವೆ. ಇವತ್ತಿನ ಲೇಖಕ ಬರೆಯುವಲ್ಲಿ ತುಂಬ ಎಚ್ಚರದಿಂದಿದ್ದಾನೆ. ಸಾಹಿತಿಗೆ ಸಾಮಾಜಿಕ ಹೊಣೆ ಇದೆ ಎಂಬ ಪ್ರಜ್ಞೆ ಬೆಳೆದಿದೆ. ಹೀಗಾಗಿ ತಾನು ಹೇಳಬೇಕೆಂಬುದನ್ನು ಆದಷ್ಟು ಸ್ಪಷ್ಟವಾಗಿ ಕಲಾತ್ಮಕವಾಗಿ ಹೇಳುವ ತುರ್ತಿನಲ್ಲಿ ಇವತ್ತಿನ ಲೇಖಕನಿದ್ದಾನೆ.

ವಚನಗಳ ಬಗ್ಗೆ, ಬೆಡಗಿನ ವಚನಗಳ ಬಗ್ಗೆ ಬಂಡಿಗಟ್ಟಲೆ ರಚನೆಗಳು ರಾಶಿಯಾಗಿ ಬಿದ್ದಿವೆ. ಗಟ್ಟಿಯಾದ ಲೇಖನ. ಪುಸ್ತಕಗಳನ್ನು ಯಾರುತಾನೆ ಹೆಕ್ಕಿ ತೆಗೆಯಬೇಕು ? ಬೆಡಗಿನ ವಚನಗಳನ್ನು ವ್ಯಾಖ್ಯಾನಮಾಡಿ ವಿವರಿಸುವ ನಮ್ಮ ಸಾಹಿತಿಗಳು ವಚನಗಳನ್ನು ಉದ್ಧರಿಸುವುದರಲ್ಲಿ, ಉಡಾಫೆ ಮಾತು ತೋರುವುದರಲ್ಲಿ ನಿರತರಾಗುತ್ತ ವ್ಯಾಖ್ಯಾನ ಮಾಡಿದೆವೆಂದು ಭ್ರಮಿಸುತ್ತಾರೆ. ಹೇಳಿದವನಿಗೂ ಏನೂ ಗೊತ್ತಿರುವುದಿಲ್ಲ. ಕೇಳಿದವ(ಓದುವ)ನಿಗೂ ಏನೂ ಹೊಸ ಅಂಶ ತಿಳಿಯುವುದಿಲ್ಲ. ವಚನಗಳನ್ನು ಉದ್ಧರಿಸುವ ಉಸಾಬರಿಯಲ್ಲಿಯೇ ಇರುವ ಈ ಸಾಹಿತಿಗಳು. ಇತರರೂ ಕೂಡ ವಚನಗಳನ್ನು ಪುಸ್ತಕದಲ್ಲಿ ಓದಿಕೊಳ್ಳುತ್ತಾರೆ ಎಂಬುವನ್ನು ಏಕೆ ಮರೆಯುತ್ತಾರೆ ? ತಾನು ಲೇಖನ ಬರೆಯುವುದು ತಾನು ತಿಳಿದುಕೊಂಡಿರುವುದನ್ನು ಸ್ಪಷ್ಟಪಡಿಸುವುದಕ್ಕೆ. ಈ ಉದ್ದೇಶವನ್ನು ಮರೆತು ಮಾತಿನ ದುಂದುಗಾರಿಕೆಯಲ್ಲಿಯೇ ನಿರತರಾಗುವ ಬೇಜವಾಬ್ದಾರಿತನವನ್ನು ಇನ್ನಾದರೂ ನಿಲ್ಲಿಸಬೇಕು. ಇಷ್ಟೆಲ್ಲ ಮಾತಿನ ಹಿನ್ನೆಲೆಯಲ್ಲಿ ನಾನು ಅರ್ಥಮಾಡಿಕೊಂಡಿರುವುದನ್ನು ಮುಂದಿಡುತ್ತ ಗೊತ್ತಿಲ್ಲದ್ದನ್ನು ಗೊತ್ತಿಲ್ಲವೆಂದು ಒಪ್ಪಿಕೊಳ್ಳುತ್ತೇನೆ.

ಬೆಡಗಿನ ವಚನಗಳು ತಮ್ಮ ರೂಪಧಾರಣೆ ಮತ್ತು ವಿಶಿಷ್ಟ ಬಂಧದಿಂದಾಗಿ ತಮ್ಮ ಒಗರನ್ನು ಕಾಯ್ದುಕೊಂಡಿವೆ. ಜೊತೆಗೆ ನಮ್ಮಲ್ಲಿ ಹುದುಗಿಸಿಕೊಂಡಿರುವ ಅರ್ಥಪರಿವಲಯವನ್ನು ಸುಲಭವಾಗಿ ಓದುಗನಿಗೆ ಬಿಟ್ಟುಕೊಡುವುದಿಲ್ಲ. ನಮ್ಮಲ್ಲಿ ಅನೇಕರು ಅಲ್ಲಮನ ವಚನಗಳನ್ನು ಅದರಲ್ಲಿಯೂ ಬೆಡಗಿನ ವಚನಗಳನ್ನು ಕ್ಲಿಷ್ಟವಾಗಿವೆ ಎಂದೋ. ಹಲಸಿನ ತೊಳೆಯಂತೆ ಸುಲಭವಾಗಿ ಬಿಡಿಸಲು ಬರುವುದಿಲ್ಲವೆಂದೋ. ಕಡಲೆಯಂತೆ ತಿನ್ನಲು ಬರುವುದಿಲ್ಲವೆಂದೋ ಮಾತುಗಳನ್ನು ಓಡಾಡಿಸುತ್ತಾರೆ. ಅಲ್ಲಮನ ಬೆಡಗಿನ ವಚನಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮಹಲಿಂಗ. ಕಲ್ಲುಮಠದ ಪ್ರಭುದೇವ. ಸಿದ್ಧಬಸವರಾಜದೇವರ ವ್ಯಾಖ್ಯಾನಗಳ ನೆರವಿಲ್ಲದೆ ಸಾಧ್ಯವಿಲ್ಲವೆಂದೂ ತಮ್ಮ ಮಿತಿಯನ್ನು ಎಲ್ಲರಿಗೂ ಆರೋಪಿಸುತ್ತಾರೆ. ೧೨ನೆಯ ಶತಮಾನದಲ್ಲಿ ಸೃಷ್ಟಿಯಾದ ಅಲ್ಲಮನ ವಚನಗಳಿಗೆ ೧೬–೧೭ನೇ ಶತಮಾನದಲ್ಲಿ ಸೃಷ್ಟಿಯಾದ ವ್ಯಾಖ್ಯಾನಗಳಿಂದ ಅರ್ಥ ಕಂಡುಕೊಳ್ಳಬೇಕೆ ? ಬೆಡಗಿನ ವಚನ, ಮತ್ತಿತರ ವಚನಗಳಿಗೆ ಈ ಮೂವರಾದರೂ ವ್ಯಾಖ್ಯಾನ ಬರೆದಿದ್ದಾರೆ. ಅವರ ಆ ಪ್ರಯತ್ನದ ಬಗ್ಗೆ ನನಗೆ ಮೆಚ್ಚುಗೆ ಗೌರವ ಇವೆ. ಆದರೆ ಈ ವ್ಯಾಖ್ಯಾನಗಳು ಮೂಲತಃ ಯಾವ ತಿಳಿವಳಿಕೆಯಿಂದ ಬಂದವು, ಎಷ್ಟರಮಟ್ಟಿಗೆ ನೆರವು ನೀಡುತ್ತವೆ ಎಂಬುದನ್ನು

ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ಇಂತಹ ವ್ಯಾಖ್ಯಾನಗಳು ತಮ್ಮ ಜೊಳ್ಳುತನದಿಂದಾಗಿ ಮೂಲವಚನದ ಸತ್ವದ ಮುಂದೆ ತೀರ ಸಪ್ಪೆಯಾಗಿ ಕಾಣುತ್ತವೆ. ಕೆಲವು ಸಲ ಮತ್ತಷ್ಟು ಕ್ಲೀಷೆ. ಕ್ಲಿಷ್ಟತೆಗಳಿಗೆ ಎಡೆ ಕೊಡುತ್ತವೆ. ವಚನಗಳನ್ನು ಓದಿದಾಗ ಹೊರಡುವ ಅರ್ಥಪರಿವಲಯಗಳು ವ್ಯಾಖ್ಯಾನದ ಮಿತಿಯಲ್ಲಿ ಇಲ್ಲವಾಗುತ್ತವೆ. ಬೆಡಗಿನ ವಚನಗಳನ್ನು ಅರ್ಥಮಾಡಿಕೊಳ್ಳಲು ಈ ಪೂರ್ವರ ವ್ಯಾಖ್ಯಾನ ಅತ್ಯಗತ್ಯವೆಂಬ ತುರ್ತೇನೂ ಇಲ್ಲ. ಬೆಡಗಿನ ವಚನಗಳು ಸೃಷ್ಟಿಯಾದದ್ದು ೧೨ನೇ ಶತಮಾನದ ಅಧ್ಯಾತ್ಮ ತುರ್ತಾದ ಚಿಂತನಶೀಲ ಮನಸ್ಸುಗಳ ಕೃಷಿಯಲ್ಲಿ. ಬದುಕು ಮುಖ್ಯ ಇಲ್ಲಿ ಸಲ್ಲಬೇಕು. ಬದುಕಿನ ಅರ್ಥಪೂರ್ಣತೆಯನ್ನು ಇಲ್ಲಿ ಕಂಡುಕೊಳ್ಳಬೇಕು. ಅದಕ್ಕೆ ತಮ್ಮದೇ ಆದ ಅನುಭಾವದಾರಿಯಲ್ಲಿ ನಡೆದು ತಮ್ಮ ಕೆಲವು ಆಲೋಚನೆಗಳಿಗೆ ಬೆಡಗಿನ ವಚನಗಳಲ್ಲಿ ರೂಪಧಾರಣೆ ಮಾಡಿದರು. ಶರಣರ ಧೋರಣೆ, ಆಚರಣೆಗಳನ್ನು ಬಲ್ಲ ಅಧ್ಯಾತ್ಮದ ಬಗ್ಗೆ ತಿಳಿವಳಿಕೆ ಇರುವ ಬದುಕಿನ ಬಗ್ಗೆ ಕಾಳಜಿ ಇರುವ ಮನಸ್ಸು ಬೆಡಗಿನ ವಚನಗಳನ್ನು ಮಾವಿನಹಣ್ಣಿನಂತೆ ಸವಿಯಬಲ್ಲುದು. ಅವುಗಳ ಸೊಗಸು ಅಂತಸ್ಸತ್ವವನ್ನು ಅರಿಯಬಲ್ಲದು. ಈ ದಿಶೆಯಲ್ಲಿ ಚೆನ್ನಬಸವಣ್ಣನವರ ಕರಣಹಸಿಗೆ. ಪದಮಂತ್ರಗೋಪ್ಯ. ಮಿಶ್ರಾರ್ಪಣ ರಚನೆಗಳು ಬೆಡಗಿನ ವಚನಗಳನ್ನು ತಿಳಿದುಕೊಳ್ಳಲು ನೆರವು ನೀಡುತ್ತವೆ. ಬಸವಣ್ಣ, ಅಕ್ಕಮಹಾದೇವಿ ಕಲಾತ್ಮಕವಾಗಿ ಹೇಳಿದ್ದನ್ನೇ ಅಲ್ಲಮ ಮತ್ತೊಂದು ರೀತಿಯಲ್ಲಿ ಬೆಡಗಿನ ವಚನಗಳಲ್ಲಿ ಹೇಳುತ್ತಾನೆ. ಅಕ್ಕಮಹಾದೇವಿ ಬಸವಣ್ಣರಲ್ಲಿರುವಂತೆ ಅಲ್ಲಮಪ್ರಭುವಿನಲ್ಲಿ ಕೂಡ ಸರಳ ಸುಂದರ ವಚನಗಳೂ ಇವೆ. ಮುಖ್ಯವಾಗಿ ಅಲ್ಲಮ ಜಂಗಮನಾಗಿ ವಿವಿಧ ಪ್ರದೇಶ, ಜನಾಂಗ, ನಾಗರಿಕತೆ, ಜನರ ನಡವಳಿಗಳನ್ನು ಬಲ್ಲವನಾದ್ದರಿಂದ ಅವನ ಮನಸ್ಸು ಬೆಡಗಿನ ವಚನಗಳನ್ನು ಸೃಷ್ಟಿಸಲು ಸಾಧ್ಯವಾಯಿತು. ಗುಹೇಶ್ವರನ ವಿರಹದಲ್ಲಿ ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದ ಅಲ್ಲಮ ಗುಹೇಶ್ವರನ ಉರಿಯಲ್ಲಿ ಕರ್ಪೂರವಾಗಿ ಬಯಲಾಗಿದ್ದ. ಹೀಗಾಗಿ ಅವನಿಂದ ವಚನ. ಬೆಡಗಿನ ವಚನಗಳ ಸೃಷ್ಟಿ ಅನಿವಾರ್ಯವಿತ್ತು. ಕೆಲ ಶರಣರು ಬೆಡಗಿನ ಹೊರ ರೂಪಗಳಿಗೆ ಮೆಚ್ಚಿಗೆಯಾಗಿ ತಾವು ಕೂಡ ಹೊರ ರೂಪವನ್ನು ಅನುಲಕ್ಷಿಸಿ ಬರೆದರು. ಹೀಗಾಗಿ ಇವರವು ಹೊರರೂಪದ ಅನುಕರಣೆಗಳಾದವೆ ವಿನಾ ಸತ್ವವಿದ್ದ ರಚನೆಗಳಾಗಲಿಲ್ಲ. ಬಸವಣ್ಣನಲ್ಲಿ ಐದಾರು, ಅಕ್ಕನಲ್ಲಿ ಏಳೆಂಟು ಸುಂದರವಾದ ಬೆಡಗಿನ ರಚನೆಗಳು ಲಭ್ಯವಾಗುತ್ತವೆ. ಒಟ್ಟಾರೆ ಹೇಳುವುದಾದರೆ ಬೆಡಗಿನ ವಚನಗಳು ಸೃಷ್ಟಿಯಾದದ್ದು ಅನಿವಾರ್ಯ ಸಂದರ್ಭದಲ್ಲಿ.

ಇಷ್ಟೆಲ್ಲ ಹಿನ್ನೆಲೆಯಲ್ಲಿ ಬೆಡಗಿನ ವಚನಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ವಚನಗಳು ಹೊರ ನೋಟಕ್ಕೆ ವಿರೋಧಾಭಾಸದಿಂದ ಕೂಡಿರುತ್ತವೆ. ಹೇಳಬೇಕಾದುದನ್ನು ಅನುಕ್ತವಾಗಿಟ್ಟು ಮತ್ತೊಂದು ವಿಪರೀತಾರ್ಥವನ್ನು ಹೊರಗೆ ಚೆಲ್ಲಿರುತ್ತವೆ. ಈ ಬೆಡಗಿನ ವಚನಗಳಿಗೆ ಒಂದು ರೀತಿಯ ಲೆಕ್ಕಾಚಾರದಿಂದ ರೂಪಧಾರಣೆ ಪಡೆದ ಒಳಹುಗಳೆನ್ನಬಹುದು. ಪರಳೆಣ್ಣೆ ಹಚ್ಚಿಕೊಂಡು ಬಿಡಿಸಿಡುವ ಹಲಸಿನತೊಳೆಯಂತೆ ಬಿಡಿಸಿದರೆ ಅರ್ಥಬಿಟ್ಟುಕೊಂಡು ಅಸಹಾಯವಾಗಿ ನಿಲ್ಲುವ ಒಗಟಿನಂತೆಯೂ ಹೌದು. ಅರ್ಥಪರಂಪರೆಯನ್ನು ಸೂಸುತ್ತ ವಿವಿಧ ತಿಳಿವಳಿಕೆಗೆ ಕಾರಣವಾಗುವ ಕಾವ್ಯದಂತೆಯೂ ಹೌದು. ಕಾವ್ಯ ಅಂದಾಗ ಲಂಕೇಶ, ಕಂಬಾರ, ಬೇಂದ್ರೆ, ಅಡಿಗ ಇವರ ಕೆಲವು ರಚನೆಗಳು ಕಣ್ಮುಂದೆ ಬರುತ್ತವೆ. ಇವರು ಕೂಡ ಭಾಷೆ ದುಡಿಸಿಕೊಳ್ಳುವ ನೆಲೆಯಲ್ಲಿ ಕಲಾತ್ಮಕವಾಗಿ ಹೇಳುತ್ತ ಅರ್ಥದ ಪದರು ಪದರುಗಳನ್ನು ಚೆಲ್ಲಪರಿದವರೆ ? ಅಲ್ಲಮನಲ್ಲಿ ಇವರೆಲ್ಲರನ್ನೂ ಮೀರಿಸುವ ಸತ್ವ. ಭಾಷೆಯನ್ನು ದುಡಿಸಿಕೊಂಡದ್ದಕ್ಕೆ ಪುರಾವೆ ಬೇಕಾದಷ್ಟಿದೆ.

ಬೆಡಗಿನ ವಚನಗಳ ಬಗ್ಗೆ ಅವುಗಳ ರೂಪಧಾರಣೆಯ ಬಗ್ಗೆ ಅವುಗಳ ಅಂತರಾರ್ಥದ ಬಗ್ಗೆ ನಮ್ಮ ಅನೇಕ ವಿದ್ವಾಂಸರು ತಲೆ ಬಿಸಿಮಾಡಿಕೊಂಡಿದ್ದಾರೆ. ಬೆಡಗಿನ ವಚನಗಳ ಮೂಲ ಒಗಟಿನಂತಾಗಿ ಬಿಡಿಸಲು ಆಗಿಲ್ಲ. ಬೆಡಗು ಪದಕ್ಕೆ ಸೌಂದರ್ಯವೆಂಬ ಅರ್ಥವೂ ಉಂಟು. ವಚನಕಾರರಲ್ಲಿ (ಬಸವಣ್ಣ ಮತ್ತಿತರರಲ್ಲಿ) 'ಇಕ್ಕಿದೆ ಮುಂಡಿಗೆಯ ಕಟ್ಟಿದೆ ನೊರೆಯ' ಎಂಬಲ್ಲಿ ಮುಂಡಿಗೆ ಕೂಡ ಸವಾಲು, ಒಗಟು ಎಂಬರ್ಥದಲ್ಲಿ ಪ್ರಯೋಗವಿದೆ. ಬೆಡಗಿನ ವಚನಗಳು ತಮ್ಮ ವಿಶಿಷ್ಟಬಂಧದಿಂದಾಗಿ ಸುಂದರವಾಗಿವೆ. ಸರ್ವಜ್ಞ ಕೂಡ ಇಂತಹ (ಒಗಟಿನ ವಚನಗಳೆನ್ನಬಹುದು ಅಥವಾ ಬೆಡಗಿನ ವಚನಗಳೆಂದೂ ಅನ್ನಬಹುದು : ಭಿನ್ನತೆಯಂತೂ ಇದೆ) ವಚನಗಳನ್ನು ಬರೆದಿದ್ದಾನೆ. ಪ್ರಸಿದ್ಧವಾಗಿರುವ ಈ ಉದಾಹರಣೆ ಕೊಡುತ್ತೇನೆ :

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ ಶಿರಕ್ಕೆ ಬೆಳಕಾಗಿ
ಬಲ್ಲವರು ಹೇಳಿ ಪರಮಾರ್ಥ

ಇಂತಹ ರಚನೆಗೆ ಜನಪದದ ಮಧ್ಯೆ ಬೆಳೆದ ಈತನಿಗೆ ಒಗಟುಗಳೇ ಮೂಲ ಪ್ರೇರಣೆಯಾಗಿವೆ. ಜಗತ್ತು-ಲೋಕ ಬಲ್ಲ ಈತ ಮಾತಿನ ಕಲಾತ್ಮಕತೆಯಲ್ಲಿ ಇಂತಹ ವಚನಗಳನ್ನು ಹೆಣೆದಿದ್ದಾನೆ. ಈ ದಿಸೆಯಲ್ಲಿ ಅಲ್ಲಮನ ಬೆಡಗಿನ ವಚನಗಳನ್ನು ನೋಡಬೇಕು. ಅಲ್ಲಮನ ವಚನಗಳು ಕೂಡ ಜಾನಪದದಿಂದ ಪ್ರೇರಣೆ ಪಡೆದವುಗಳೆ. ಅವುಗಳಲ್ಲಿಯಂತೆ ಚಾಲಾಕಿನ ತರ್ಕದಿಂದ ರಚಿತವಾದವುಗಳೆ. ಸಂತೋಷ, ಆನಂದದಿಂದ ಕಟ್ಟಿ ನಲಿದಂತಹ ಜಾನಪದರಚನೆ ಅಲ್ಲಮನನ್ನು ಆ ದಿಸೆಯಲ್ಲಿ ತೊಡಗಿಸಿದೆ. ಜಂಗಮನಾದ ಈತ ಅನೇಕ ರೀತಿಯ ಮಾತಿನ ಪ್ರಯೋಗಗಳನ್ನು ಕೇಳಿದ್ದಾನೆ, ವ್ಯವಹರಿಸಿ ನುಡಿದಿದ್ದಾನೆ. ಅದರಿಂದಲೇ ಸರಳವಾಗಿ ಸುಲಭವಲ್ಲಿ ಬೆಡಗಿನ ವಚನಗಳನ್ನು ಹೇಳಿಬಿಡುತ್ತಾನೆ. ಸಾಮಾನ್ಯವಾಗಿ ಒಗಟಿನಲ್ಲಿ ಒಂದನ್ನು ಮಾತ್ರ ನೇರವಾಗಿ ಉದ್ದೇಶಿಸಿ ವಿವಿಧ ಮಗ್ಗುಲುಗಳಲ್ಲಿ ನೋಡಿರುವ ಕಲಾತ್ಮಕತೆ ಕಾಣುತ್ತದೆ. ಒಂದೊಂದು ಮಗ್ಗುಲಿನ ವರ್ಣನೆ ಕೂಡ ಆ ಒಂದೇ ವಸ್ತುವಿನ ಸ್ವರೂಪವನ್ನು ಕುರಿತದ್ದಾಗಿರುತ್ತದೆ. ಇದಕ್ಕೆ ಮೇಲಿನ ಸರ್ವಜ್ಞನ ವಚನವೇ ಉದಾಹರಣೆಯಾಗಿದೆ. ಇನ್ನೂ ಕೆಲವು ಒಗಟುಗಳಲ್ಲಿ ಒಂದೇ ವಸ್ತುವಿನ ವಿವಿಧ ಸಂಬಂಧ (ಅಂಗ)ಗಳನ್ನು ಹೇಳುವ ನಿರ್ದೇಶನವನ್ನು ಕಾಣಬಹುದು. ನಾನು ಬಾಲ್ಯದಲ್ಲಿ ಕೇಳಿದ ಎರಡು ಉದಾಹರಣೆಗಳನ್ನು ಕೊಟ್ಟು ನನ್ನ ಮಾತುಗಳನ್ನು ಮುಂದುವರಿಸುತ್ತೇನೆ. ಅರ್ಥಾತ್ ಬೆಡಗಿನ ವಚನಗಳು ಒಗಟಿನಿಂದ ನೇರ ಪ್ರೇರಣೆ ಪಡೆದವು ಎಂಬುದನ್ನು ವಿವರಿಸುತ್ತೇನೆ :

ಅಪ್ಪಮುಳ್ಮುಳ್ಳು ಅವ್ವ ತಲೆಗೆದರಿ
ಮಗ ನುಣುಪು ಮಗಳು ಕರ್ಮ್‌ಗಡಲೆ
ತಿಳಿದವರು ಹೇಳಿ

ಅಪ್ಪ ಅವ್ವ ಮಗ ಮಗಳು ಇವುಗಳನ್ನು ಒಂದೇ ವಸ್ತುವಿನ ವಿವಿಧ ಅಂಗಗಳಿಗೆ ಹೋಲಿಸುತ್ತ ಅವುಗಳ ವಿಶಿಷ್ಟತೆಯನ್ನು ಗುರುತಿಸಿಬಿಡುತ್ತಾರೆ. ಹೆಚ್ಚಾಗಿ ಬೆಳೆಯುವ, ತಿನ್ನುವ, ವ್ಯವಹರಿಸುವ ಜನಪದದವರು ಈ ಒಗಟನ್ನು (ಕಟ್ಟಿದ್ದಾರೆ)ಕೇಳಿದರೆ ಸಾಕು ತಟಕ್ಕನೆ ಉತ್ತರ (ಹಲಸಿನಹಣ್ಣು, ಹಲಸಿನಸಿಪ್ಪೆ, ಹಲಸಿನತೊಳೆ, ಹಲಸಿನ ಬೀಜ) ಹೇಳಿಬಿಡುತ್ತಾರೆ. ಇದನ್ನು ತಿನ್ನದ ಅಥವಾ ನೋಡಿಯೇ ಇರದ ಜನರುಗಳಿಗೆ ಈ ಒಗಟನ್ನು ಕೇಳಿದರೆ ಹೇಗೆತಾನೆ ಉತ್ತರ ಹೇಳಿಯಾರು. ಹಾಗೆಯೇ ಅಧ್ಯಾತ್ಮದ ಅನುಭಾವದ ಧೋರಣೆಯ ಒಗಟುಗಳನ್ನು ಕಟ್ಟಿ ಮುಂದಿಟ್ಟಾಗ ಬಿಡಿಸಲು ನಮಗೆ ಬರುವುದಿಲ್ಲ. ಅರ್ಥಾತ್ ಅದರ ಪರಿಜ್ಞಾನವಿಲ್ಲದ್ದರಿಂದಾಗಿ ಅವು ಸುಲಭವಾಗಿ ಬಿಡಿಸಲು ಬರುವುದಿಲ್ಲ. ಒಗಟುಗಳಲ್ಲಿ ಗದ್ಯಾತ್ಮಕ ಪದ್ಯಾತ್ಮಕ ಅಭಿವ್ಯಕ್ತಿ ಎರಡೂ ಇರುತ್ತದೆ. ಕಾವ್ಯದಂತೆ ಇದ್ದು ಪರಿಭಾವನೆಗೆ ಅರ್ಹವಾದವುಗಳಾಗಿರುತ್ತವೆ. ಅವರು ಕಟ್ಟುವ ಕಲಾಪ್ರೌಢಿಮೆಯಿಂದ ಸೊಗಸುತ್ತವೆ. ಇಂತಹುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ :

ತೊಟ್ಟುಂಟು ಮುಳ್ಳಿಲ್ಲ ಸುತ್ತಲೆಲೆಯಿಲ್ಲ
ಒತ್ತಿದರೆ ಮೆದುವುಂಟು ಹಣ್ಣುತಾನಲ್ಲ
ಕಚ್ಚಿದರೆ ಹಾಲುಂಟು ಕೆಚ್ಚಲುತಾನಲ್ಲ
ಸೃಷ್ಟಿಯೊಳ್ ಈ ಬೆಡಗ ಶಿವತಾನೆ ಬಲ್ಲ

ಈ ಒಗಟು ಕೂಡ ಉದ್ದೇಶಿತವಾದುದೊಂದನ್ನು ಕುರಿತದ್ದಾಗಿದೆ. ಹೇಳಬೇಕಾದ್ದನ್ನು ಕಲಾತ್ಮಕವಾಗಿ ಮರೆಸುತ್ತ ವಿವರಿಸುತ್ತ ಉತ್ತರ ಬೇಡುತ್ತದೆ. ಉತ್ತರ, ವಿವರಣೆ ಕೊಡುತ್ತ ಇದಲ್ಲ ಇದಲ್ಲ ಎಂದು ಪ್ರತಿ ಸಾಲಿನಲ್ಲಿಯೂ ಮುಂದುವರಿಯುತ್ತ ಕುತೂಹಲ ಉಂಟುಮಾಡಿ ಸೃಷ್ಟಿಯೊಳ್ ಈ ಬೆಡಗ ಶಿವತಾನೆ ಬಲ್ಲ ಎನ್ನುತ್ತದೆ. ಅನಂಗ ಜಂಗಮಲತಾಲಲಿತಾಂಗಿಯರಿಂದಮಲ್ತೆ ಸಂಸಾರಂ ಎಂಬ ಮನಸ್ಸು ನೆಲದ ಬದುಕಿನ ಸುಖದಲ್ಲಿ ಸಂಲಗ್ನಗೊಂಡು ಇಂತಹ ಬೆಡಗಿನ ಒಗಟುಗಳನ್ನು ಕಟ್ಟುತ್ತದೆ. ಉತ್ತರ (ತಾಯಿಯ ಮೊಲೆ) ಹೊಳೆದಾಗ ಕಟ್ಟಿರುವ ಬೆಡಗನ್ನು ಮತ್ತೊಮ್ಮೆ ಪರಿಭಾವಿಸುತ್ತ ಮುಗುಳುನಗುತ್ತೇವೆ. ಸೃಷ್ಟಿಯೊಳ್ ಈ ಬೆಡಗ ಶಿವ ತಾನೆ ಬಲ್ಲ ಎಂಬಲ್ಲಿ 'ಬೆಡಗು' ಪದಪ್ರಯೋಗವನ್ನು ಗಮನಿಸಬಹುದು. ಹಾಗೆಯೇ ಅಲ್ಲಮನ ವಚನಗಳನ್ನು ಕೂಡ ಬೆಡಗಿನ ವಚನಗಳು ಎನ್ನುವುದು ಈ ಅರ್ಥದ ಪರಿಧಿಯಲ್ಲಿಯೇ. ಮಾತಿನ ಚಾಲಾಕು ಬಲ್ಲ ಚತುರಮತಿ ಇಂತಹ ಬೆಡಗಿನ ಒಗಟನ್ನು ಕಟ್ಟಬಲ್ಲ, ವಚನಗಳನ್ನೂ ಕಟ್ಟಬಲ್ಲ.

ಈ ಹಿನ್ನೆಲೆಯಲ್ಲಿ ಬೆಡಗಿನ ವಚನಗಳಿಗೆ ನೇರವಾಗಿ ಸಮೀಪಿಸಬಹುದು. ಬೆಡಗಿನ ವಚನಗಳಿಗೆ ಒಗಟುಗಳೇ ನೇರ ಪ್ರೇರಣೆ, ಪ್ರಭಾವ ಎಂಬುದನ್ನು ಮುಂದಿನ ವಿವರಣೆಯಲ್ಲಿ ಸ್ಪಷ್ಟಪಡಿಸಿಕೊಳ್ಳಬಹುದು :

ಹುಟ್ಟುಬಂಜೆಯ ಮಗನೊಬ್ಬ
ಈನದೆಮ್ಮೆಯ ಗಿಣ್ಣ ಬೇಡಿದನು
ಕೊಂಬಿಲ್ಲದ ಮರವನೇರಿ
ಹೊಟ್ಟೆತುಂಬ ಹಣ್ಣ ಮೆಲಿದನು
ಗುಹೇಶ್ವರ ಗುಹೇಶ್ವರ
ಇಳ್ಳಿಇಳ್ಳಿ ಎಂದರೆ ಅಳುತ್ತೆ ಇದಾನೆ

ಈ ಬೆಡಗಿನ ವಚನ ಉಪಮೆಯೂ ಹೌದು ರೂಪಕವೂ ಹೌದು ಚಿತ್ರಾತ್ಮಕಪ್ರತಿಮೆಯೂ ಹೌದು. ಕಟ್ಟೆಯ ನೀರನ್ನು ಹೊರಗೆ ಹಾಯಿಸಿದಾಗ ಬರಿದಾಗಿ ಉಳಿದು ಒಣಒಣ ಎನ್ನುವ ಕಟ್ಟೆಯಂತಲ್ಲ ಈ ವಚನ. ಸಾಮಾನ್ಯವಾಗಿ ಬೆಡಗಿನ ವಚನಗಳು ತೋಡಿದಷ್ಟು ಬೊಗಸೆಬೊಗಸೆಯಾಗಿ ಬರುವ ಚಿಲುಮೆಯಂತೆ ಅರ್ಥಪರಂಪರೆಯನ್ನು ಹೊರಚೆಲ್ಲುತ್ತವೆ.

ಸಂಸಾರ ಸುಖವೇ ಸರ್ವಸ್ವವೆಂದು ಅದೊಂದರಲ್ಲಿಯೇ ತೇಲಿ ವಿಹರಿಸಿ ವಿಲಾಸ ವಿಭ್ರಮದಲ್ಲಿ ಮತ್ತನಾದ ವ್ಯಕ್ತಿಯ ಮನೋಭಾವವನ್ನು ಕಲಾತ್ಮಕವಾಗಿ ಈ ಬೆಡಗಿನ ವಚನ ಹೇಳುತ್ತದೆ. ನನ್ನದೇ ಆದ ಈ ಶುಷ್ಕ ವಿವರಣೆ ಅರ್ಥಮಾಡಿಕೊಳ್ಳಲು ನೆರವು ಕೊಡಬಹುದು—ಜೀವ ಆತ್ಮ ಭಿನ್ನರು. ಇದು ಶರಣರು ಸೂಚಿಸುವಂತಹದೆ. ಆತ್ಮ ಮತ್ತೊಂದಕ್ಕೆ ಮರಿಹಾಕುವುದಿಲ್ಲ. ಆದರಿಂದ ಇದು ಬಂಜೆ. ಇದರ ಮಗ ಜೀವ. ಈತ ಬೇಡುವುದು ಈನ-ದೆಮ್ಮೆಯ ಗಿಣ್ಣು. ತನ್ನಲ್ಲಿಯೇ ವಾಸನಾರೂಪವಾಗಿರುವ ವಿಷಯವಾಸನೆಯ ಪ್ರೇರಣೆಯಿಂದ ವಿಷಯಸುಖವನ್ನು ಮಾತ್ರ ಬೇಡುತ್ತಾನೆ. ಅದನ್ನು ಪಡೆಯಲು ಎಲೆರೆಂಬೆಯಿಲ್ಲದ ಮರ ಹತ್ತಿ ಹಣ್ಣು ಪಡೆಯುತ್ತಾನೆ. ವಿಷಯಸುಖದ ಹಣ್ಣನ್ನು ಮೆಲ್ಲುತ್ತಾ ಅಲ್ಲಿಯೇ ಕೂತುಬಿಡುತ್ತಾನೆ. ಇಷ್ಟು ತಿಂದರೂ ಕಟ್ಟರೆಯಾಗದೆ ಚಿರಕಾಲ ಅದೇ ಬೇಕೆನ್ನುತ್ತಾನೆ. ಇದಕ್ಕೆ ತಡೆಯೊಡ್ಡುವ ಮಾತು. ಕ್ರಿಯೆ ಬಂದರೆ ಸಾಕು ಅಳು ಪ್ರಾರಂಭಮಾಡಿಬಿಡುತ್ತಾನೆ. ಇಳಿಇಳಿ ಎಂದರೆ ಅಳುತ್ತೆ ಇದಾನೆ ಎಂಬಲ್ಲಿ ವಾಚ್ಯಾರ್ಥ, ಲಕ್ಷ್ಯಾರ್ಥ, ಧ್ವನ್ಯರ್ಥ ಮೂರೂ ಇವೆ. ವಾಚ್ಯಾರ್ಥ ಹೊರಗೆ ವಿರೋಧಾಭಾಸದಂತೆ ಕಾಣುವ ಹುಟ್ಟು ಬಂಜೆಗೆ ಮಗನಿರುವ ವಿಪರೀತಾರ್ಥ. ಲಕ್ಷ್ಯಾರ್ಥ—ಉದ್ದೇಶಿತವಾದದ್ದನ್ನು ಸಂಸಾರ ಸುಖವೇ ಸರ್ವಸ್ವವೆಂದು ಭ್ರಮಿಸಿದ್ದವನನ್ನು ನಿರ್ದೇಶಿಸುವಂತದ್ದು. ವ್ಯಂಗ್ಯಾರ್ಥ-ಇಡೀ ವಚನದ ಒಟ್ಟು ಧೋರಣೆಯಿಂದ ಸ್ಫುರಿಸುವ ಮರ್ತ್ಯರ ಸುಖಲೋಲುಪತೆಯನ್ನು ಗೇಲಿ ಎಬ್ಬಿಸುವಂಥದು. ಈ ವಚನ ಉಪಮೆ ಎಂದೆ. ಹೋಲಿಕೆಯ ಉಪಮಾನವಿದೆ. ಉಪಮೇಯ ಓದಿದಾಗ ಹೊಳೆಯುತ್ತದೆ. ರೂಪಕ ಎಂದು ಹೇಳಿದೆ–ಇಡೀ ವಚನವೇ ಒಂದನ್ನು ಮತ್ತೊಂದಕ್ಕೆ ಒಡ್ಡುವ ಅಭೇದವಾಗಿಡುವ ಪ್ರಯೋಗವಿದೆ. ಚಿತ್ರಾತ್ಮಕ ಪ್ರತಿಮೆ ಎಂದೆ—ವಚನದಲ್ಲಿ ಚಿತ್ರ ಕಣ್ಣಿಗೆ ಕಟ್ಟುವಂತೆ ಅಚ್ಚುಕಟ್ಟಾಗಿ ಬಂದು ನಿಲ್ಲುತ್ತದೆ. ಧ್ವನಿಸುವ ಮಟ್ಟದಲ್ಲಿ ಮರ್ತ್ಯದ ಭೋಗಲಾಲಸೆಗೆ ಒಡ್ಡಿದ ಪ್ರತಿಮೆಯಾಗಿರುವುದರಿಂದ ಹಾಗೆಂದು ಹೇಳಿದೆ. ಸಾಮಾನ್ಯವಾಗಿ ಬೆಡಗಿನ ವಚನಗಳಲ್ಲಿ ಈ ಮೂರೂ ಗುಣವಿರುತ್ತದೆ :

ಹಳೆಗಾಲದೊಬ್ಬ ಪುರುಷಂಗೆ ಎಳೆಯ ಕನ್ನಿಕೆ
ಯ ಮದುವೆಯ ಮಾಡಲು ಕೆಳದಿ
ಮುಯ್ವರು ನಿಬ್ಬಣ ಬಂದರು
ಹಸೆಯ ಮೇಲೆ ಮದುವಣಿಗ
ನ ತಂದು ನಿಲಿಸಲೊಡನೆ ಶಶಿವದನೆ ಬಂದು ಕೈವಿಡಿದಳು
ಮೇಲುದಾಯದಲೊಬ್ಬ ಕಣ್ಣುಸನ್ನೆಯ ಮಾಡುತ್ತಿರಲು
ಕೂಡೆ ಬಂದ ನಿಬ್ಬಣಗಿತ್ತಿಯರೆಲ್ಲಾ ಹೆಂಡಿರಾದರು
ದೂರವಿಲ್ಲದ ಗಮನಕ್ಕೆ ದಾರಿಪಯಣ ಹಲವು
ಆಯಿತ್ತು. ಸಾರಾಯ ನಿರ್ಣಯವನೇನೆಂಬೆ

ಮೊದಲು ವ್ಯಾಖ್ಯಾನಕಾರರ ನೆರವು ಅನಗತ್ಯವೆಂದೆ. ವ್ಯಾಖ್ಯಾನಕಾರರು ತಮಗೆ ತಿಳಿದಂತೆ ಪ್ರಾಮಾಣಿಕವಾಗಿ ಬರೆದಿದ್ದಾರೆ. ಆದರೆ ಈ ವ್ಯಾಖ್ಯಾನ ಸಮರ್ಪಕವಲ್ಲ ಎಂದು ನನ್ನ ತಿಳಿವಳಿಕೆ. ಬೆಡಗಿನ ವಚನಗಳ ಭಾವಾನುವಾದದಲ್ಲಿ

ಈ ವಚನಕ್ಕೆ ಹೀಗೆ ವ್ಯಾಖ್ಯಾನವಿದೆ (ಪುಟ ೩೯೩ : ವಚನ ೮೬ ಅಲ್ಲಮನ ವಚನ ಚಂದ್ರಿಕೆ. ಸಂ: ಎಲ್. ಬಸವರಾಜು). ತಾನು ಅನಾದಿಸಂಸಿದ್ಧ ಪರಶಿವನೆಂದರಿತ ಶರಣನ ಸದ್ವಿವೇಕದ ಭಾಗೆಯಿಂದ ಸದ್ವಾಸನಾಸ್ವರೂಪಿಯಾದ ಚಿತ್‌ಶಕ್ತಿಯುದಯವಾಗಲು ಆ ಚಿತ್‌ಶಕ್ತಿ ಪ್ರಥಮ ವಿವೇಕ ಭಾಗೆಯಿಂದ ಬಾಲ್ಯ ವಿವೇಕಿನಿ ಎನಿಸಿಕೊಂಡಳು. ಚಿತ್‌ಶಕ್ತಿಗೂ ಆ ಶರಣನಿಗೂ ಜ್ಞಾನ ವಿಷಯಸಂಗ ಬಂದೇ ಎಂದರಿತು ಸತಿಪತಿಭಾವವು ಸಂಬಂಧಿಸುವಲ್ಲಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ ಎಂಬೈವರು ಸಖೀಭಾವದಿಂದ ತತ್ಸಂಬಂಧಕ್ಕೆ ಅನುಗುಣೆಗಳಾದರು ಸದಾಚಾರಸತ್ಕ್ರಿಯೆಯೆಂಬುದೇ ಆಧಾರಸ್ಥಲವಾಗಿರುವುದರಿಂದ ಅದೇ ಹಸೆ. ಆ ಸತ್ಕ್ರಿಯಾ ಸಂಪತ್ತೆಂಬ ನೆಲಗಟ್ಟಿನ ಮೇಲೆ ಆ ಶರಣನು ಸ್ವಸ್ಥವಾಗಿ ನಿಂತಾಗ ಆ ಶಕ್ತಿ ಅವನ ಕೈವಿಡಿದಳು. ಆ ಚಿತ್ತಿನ ಸಂಗದಿಂದ (ಚಿತ್‌ಶಕ್ತಿ) ಸಹಜ ಕ್ರಿಯಾಸಂಪನ್ನನಾದ ಶರಣನಿಗೆ ಉತ್ತರ ಕಕ್ಷವಾದ ಪರಾಶಕ್ತಿ ಮುಂದುದೋರಿದಂತೆಲ್ಲ ಆತನು ಭಕ್ತಿಯಲ್ಲಿ ಅತ್ಯಂತ ಅರ್ಥವಿಶೇಷಸಂಪನ್ನನಾಗುವನು. ಆ ಅರ್ಥಕ್ಕೆ ಪಂಚಶಕ್ತಿಯರೆಲ್ಲರೂ ಸದ್ಭಕ್ತಿ ವಿವೇಕದಲ್ಲಿ ಸಂಗಿಗಳಾಗುವರು. ಇಂತಹ ಶಿವತತ್ವವನ್ನು ಕಾಣುವೆನೆಂಬ ಶರಣನಿಗೆ ಆ ವಸ್ತು ಸಮೀಪಸ್ಥವಾಗಿರುವುದು. ಇದನ್ನರಿಯುವುದಕ್ಕೆ ಸತ್ಪಥ ಅನೇಕವಾಗಿರುವುದು." ಇಷ್ಟೊಂದು ಮಾತುಗಳಲ್ಲಿ ಹೇಳಿದರೂ ಕೂಡ ಅರ್ಥಸ್ಪಷ್ಟವಾಗುವುದೇ ಇಲ್ಲ. ಅಲ್ಲದೆ ವಚನ ಓದಿದಾಗ ಆಗುವ ಹೊಳಹು ವ್ಯಾಖ್ಯಾನ ಓದಿದಾಗ ಇಲ್ಲವಾಗುತ್ತದೆ. ಮಾತು ದೀರ್ಘವಾದಷ್ಟು ಸೋಲುತ್ತ ಹೋಗುತ್ತದೆ.

ಹಳೆಗಾಲದ ಪುರುಷ ಆತ್ಮ. ಎಳೆಯ ಕನ್ನಿಕೆ ಜೀವ. ಆತ್ಮಜೀವ ದೇಹದಲ್ಲಿ ಕೂಡಿದ್ದೇ ಮದುವೆ. ಕೆಳದಿಯರೈವರು ನಿಬ್ಬಣಬಂದದ್ದು ಪಂಚವಿಂಶತಿತತ್ವಗಳ ಪ್ರತಿಷ್ಠಾಪನೆ ಅರ್ಥಾತ್ ಅವು ಚೈತನ್ಯಯುಕ್ತವಾದದ್ದು. ಹಸೆಯ ಮೇಲೆ ಮದುವಣಿಗನ ತಂದು ನಿಲಿಸಲೊಡನೆ ಶಶಿವದನೆ ಬಂದು ಕೈವಿಡಿದಳು. ಪಂಚವಿಂಶತಿ ತತ್ವಗಳಲ್ಲಿ ಆತ್ಮ ಬಂದೊಡನೆ ಜೀವ ಉಂಟಾಯಿತು. ಜೀವ ಆತ್ಮದ ಅವಲಂಬನೆ ಪಡೆಯಿತು. ಮೇಲುದಾಯದಲೊಬ್ಬ ಕಣ್ಣಸನ್ನೆಯ ಮಾಡುತ್ತಿರಲು ಜ್ಞಾನಕ್ರಿಯಾರೂಪ ತಾಳಲು ಕೂಡೆ ಬಂದ ನಿಬ್ಬಣಗಿತ್ತಿಯರೆಲ್ಲಾ ಹೆಂಡಿರಾದರು. ಜ್ಞಾನಾನುವರ್ತಿಯಾದವು. ದೂರವಿಲ್ಲದ ಗಮನಕ್ಕೆ ದಾರಿ ಪಯಣ ಹಲವಾಯಿತ್ತು. ಬದುಕಿನಲ್ಲಿ ತೊಡಗುವ ಹಾದಿ ಆತ್ಮನಿಗೆ ಅನೇಕ ಆದವು. ಅರ್ಥಾತ್ ಅನೇಕ ಇವೆ. ಸಾರಾಯ ನಿರ್ಣಯವನೇನೆಂಬೆ. ಬದುಕಿನ ಪರಮಗಂತವ್ಯವನ್ನೂ ಏನೆಂದು ಹೇಳಲಿ. ನಿರ್ದಿಷ್ಟವಾಗಿ ಇದೇ ಎಂದು ಹೇಗೆ ಹೇಳಲಿ ? ನಿಸ್ಸಾರವಾದ ಈ ಗದ್ಯಾತ್ಮಕ ವಿವರಣೆ ನನ್ನದೇ ಆದರೂ ನನಗೆ ಮುಜುಗರ ತರುವಂತಾದ್ದು. ಇಂತಹ ವ್ಯಾಖ್ಯಾನ ವಚನಗಳಿಗೆ ಮಿತಿಹಾಕುತ್ತದೆ ಎಂಬುದನ್ನು ಬಿಟ್ಟರೆ ಅರ್ಥ ಮಾಡಿಕೊಂಡ ರೀತಿಯನ್ನು ವಿವರಿಸುತ್ತದೆ:

ಭಾವಗೆಟ್ಟನು ಭವಗೆಟ್ಟನು
ಒಡಹುಟ್ಟಿದರೈವರು ಕೈಬಿಟ್ಟನು
ಭಂಡನು ಲಜ್ಜೆಭಂಡನು
ಕಂಡರೆ ನುಡಿಸದಿರಾ ಮಾಯಾದೇವಿ
ಅರಿವೆಯನುಟ್ಟನು ನೆರೆ ಮರುಳಾದನು
ಹುಟ್ಟಮುಂದನು ಮಡಕೆಯನೊಡೆದನು
ಆದಿಪುರಾತನು ಅಚಲಲಿಂಗೈಕ್ಯನು
ಗುಹೇಶ್ವರಲ್ಲಯ್ಯಂಗೆ ಮೂಗಿಲ್ಲ ತಂಗಿ

ಇದಕ್ಕಂತೂ ವ್ಯಾಖ್ಯಾನಕಾರರು ಬಂದಷ್ಟು ಬರೆದಿದ್ದಾರೆ. ಅದನ್ನು ಇಲ್ಲಿ ಅವತರಿಸುವ ಗೋಜಿಗೆ ಹೋಗದೆ ವಚನ ನನಗೆ ಅನ್ನಿಸಿದ್ದನ್ನು ಹೇಳಿಬಿಡುವೆನು. ಈ ವಚನ ನೇರವಾಗಿ ಅಲ್ಲಮನಿಗೆಯೇ ಸಂಬಂಧಿಸಿದ್ದು. ಅವನ ಮಾನಸಿಕ ಬೆಳವಣಿಗೆಯ ಹಂತವನ್ನು ಹೇಳುತ್ತದೆ. ಇಡೀ ವಚನ ಕುಟುಂಬದ ಪರಿಧಿಯಿಂದ ದೂರಾಗುತ್ತ ಬಯಲಾದ ಸ್ಥಿತಿಯನ್ನು ಹೇಳುತ್ತದೆ. ಮೊದಲರ್ಥದ ವಚನ ಇಹದ ಬಳಕೆಯ ನಿರಸನವನ್ನು ಇನ್ನರ್ಥ ಪರಮಾರ್ಥದ ಬೆಳವಣಿಗೆಯ ಬಯಲಾಗುವ ದೊಡ್ಡ ಸೊನ್ನೆಯ (ಶೂನ್ಯ) ಹಂತವನ್ನು ಹೇಳುತ್ತದೆ. ಮಾಯಾಪ್ರಪಂಚ ಬಿಟ್ಟಿದ್ದರಿಂದ ಇಹದ ಬಳಕೆ ಅಳಿಯಿತ್ತು. ಅದರಿಂದಾಗಿ ಬೆಳಗನುಟ್ಟುಬಯಲಾದ. ಕಾಯದ ಮಡಕೆ ಸುಟ್ಟದ್ದಾಗಿ ಹೊಡೆಯಿತ್ತು. ಮರುಹುಟ್ಟು ಇಲ್ಲವಾಯಿತು. ಜೀವನ ಸಾರ್ಥಕ್ಯಪಡೆದುಕೊಂಡಿತು. ಅರ್ಥಾತ್ ಲಿಂಗಾಂಗಸಮರಸದಲ್ಲಿ ಲೀನನಾದ ಸ್ವಯಂಭುಲಿಂಗವಾದ (ಈ ಪರಿಭಾಷೆ ಅಮೂರ್ತವಾಗಿ ಶಬ್ದಾಡಂಬರವಾಗುವುದರಿಂದ ಹೆಚ್ಚು ಬಳಸಲುಹೋಗಿಲ್ಲ).

ಹೇಳಬೇಕಾದ್ದನ್ನು ಅಚ್ಚು ಕಟ್ಟಾಗಿ ಹೇಳಿ ಅಲ್ಲಮ ಯಶಸ್ವಿಯಾಗುತ್ತಾನೆ. ಅದಷ್ಟು ಸಾರಗುಂದದಂತೆ ಅಲ್ಲಮ ಹೇಳಿದ್ದನ್ನು ನನ್ನ ಮಾತುಗಳಲ್ಲಿ ಹೇಳಲು ಕಷ್ಟವಾಗುತ್ತದೆ :

ಹುಟ್ಟಿದ ಕೂಸಿಗೆ ಪಟ್ಟವ ಕಟ್ಟಿ<br>
ವಿಭೂತಿಯ ಪೂಸಿ ಲಿಂಗವತೋರಿ<br>
ಜೋ ಜೋ ಎಂದು ಜೋಗುಳ<br>
ಪಾಡಿದಳು ಮಾಯಾದೇವಿಯಕ್ಕ<br>
ಜೋ ಜೋ ಎಂಬ ಸರಹರಿದು<br>
ತೊಟ್ಟಿಲು ಬಿದ್ದಿತ್ತು ಕೂಸು ಸತ್ತಿತ್ತು<br>
ಗುಹೇಶ್ವರನುರಳಿದನು

ಇದು ಕೂಡ ಅಲ್ಲಮನ ಬದುಕಿಗೆ ನೇರ ಸಂಬಂಧಿಸಿದ್ದೆ. ಈ ಹಿನ್ನೆಲೆಯಲ್ಲಿ ಇತರರಿಗೂ ಕೂಡ ಈ ವಚನ ಅನ್ವಯಿಸಬಹುದು. ಮಾಗಿದ ಮಾವಿನಹಣ್ಣಿನಂತೆ ಸ್ವಲ್ಪ ಅದುಮಿದರೆ ಸಾಕು ರಸ ಒಸರುತ್ತದೆ. ಈ ವಚನವನ್ನು ಎರಡು ಸ್ತರದಲ್ಲಿ ಅರ್ಥಯಿಸಬಹುದು : (೧) ವ್ಯಕ್ತಿಯಲ್ಲಿ ಭಕ್ತಿ ಪುಟಿದು ಇಷ್ಟಲಿಂಗಪೂಜಕನಾದ. ಲಿಂಗಪೂಜೆ (ಅಷ್ಟವಿಧಾರ್ಚನೆ) ಲಿಂಗಸ್ತೋತ್ರ ಲಿಂಗಧ್ಯಾನದಲ್ಲಿ ಮಗ್ನನಾದ. ಆ ಪಥದಲ್ಲಿ ಚಲಿಸಿದ ಅನುಭಾವಿ ಪೂಜೆಯ ಬಳಕೆ ನಿಸ್ಸತ್ವವನ್ನು ಮನಗಂಡು ಕುರುಹುವಿಡಿದು ಕುರುಹುಗೆಟ್ಟ. ಪೂಜೆ ಮಾಡುವ ಭಕ್ತನೆಂಬ ಭಾವವೂ ಇಲ್ಲ. ನನ್ನಿಂದ ಕರ್ತ ಪೂಜಿಸಿಕೊಳ್ಳುತ್ತಾನೆಂಬ ಭಾವವೂ ಇಲ್ಲ, ಗುಹೇಶ್ವರನ ಶರಣ ಗುಹೇಶ್ವರನೇ ಆದ. (೨) ಹುಟ್ಟುಗುಣಗಳೊಂದಿಗೆ ಬಂದ ವ್ಯಕ್ತಿ ಲೋಕದ ಬಳಕೆಯಲ್ಲಿ ರತಿಸುಖಕ್ಕೆ ಸೋತು ಮಗ್ನನಾದ. ರತಿಸುಖ ಕಟ್ಟರೆಯಾಗಿ ಮೋಹ ನಿರಸನಗೊಂಡು ಅಧ್ಯಾತ್ಮಪಥಕ್ಕೆ ಬಂದ. ರತಿಸುಖ, ಬಯಕೆ ಸತ್ತು ಶರಣನಾದ. ಅರ್ಥಾತ್ ಹೀಗೆ ಉಳಿದ ಅನುಭಾವಿಯಾದ ಗುಹೇಶ್ವರನ ಭಕ್ತನಾದ. ಬಹಿರಂಗದ ಬಳಕೆ ಇತ್ತಲೆ ಅಳಿದು ಗುಹೇಶ್ವರನ ಶರಣ ಅತ್ತಲೆ ಉಳಿದ :

ಆಡುತಾಡುತ ಬಂದ ಕೋಡಗ<br>
ಜಪವ ಮಾಡುವ ತಪಸಿಯ ನುಂಗಿತ್ತಲ್ಲಾ<br>
ಬೇಡ ಬೇಡೆಂದಿತ್ತು<br>
ಮುಂದಣ ಕೇರಿಯ ಮೊಲ<br>
ನೊಂದು. ಮುಂದಲ ಮೊಲನ ಹಿಂದಣ ಕೋಡಗವ<br>
ಕಂಬಳಿ ನುಂಗಿತ್ತು ಗುಹೇಶ್ವರ

ನಡೆಯುವ ಮಾನಸಿಕವ್ಯಾಪಾರವನ್ನೆಲ್ಲ ಕಟ್ಟಿ ಕಣ್ಮುಂದೆ ನಿಲ್ಲಿಸುತ್ತದೆ. ಪೂಜಾಸಂಭ್ರಮದಲ್ಲಿ ನಿರತನಾದವನ ಅಚಲ ಭಕ್ತಿಯಲ್ಲಿ ಶ್ರದ್ಧೆಯಿದ್ದವನ ಸ್ವಯಂಭುಸ್ಥಿತಿಯನ್ನು ಹೇಳುತ್ತದೆ. ಮೇಲುನೋಟಕ್ಕೆ ಜಪಮಾಡುವಲ್ಲಿ ಚಾಂಚಲ್ಯಚಿತ್ತನಾಗಿ ಸೋಲುವಂತಹ ಚಿತ್ರವನ್ನು ಕೊಡುತ್ತದೆ. ಈ ಚಿತ್ರ ಅಂತಹ ಕಳ್ಳವೈರಾಗಿಗಳಿಗೆ ಗೇಲಿಯಾದರೆ ಒಳಗೆ ಹುದುಗಿದ ಅರ್ಥ ಅಲ್ಲಮ ಅಕ್ಕ ಬಸವಣ್ಣನವರಂತಹ ಪೂಜೆಯ ಸ್ಥಿರಸ್ಥಿತಿಯನ್ನು ಹೇಳುತ್ತದೆ. ಪೂಜೆಯಲ್ಲಿ ನಿರತನಾದ ಶರಣ ಮತ್ತೆ ದೇವ-ಭಕ್ತ, ನಾನು-ನೀನು ಎಂಬ ಭೇದ ಅಳಿದು ಅಭೇದ ನೆಲೆಯಲ್ಲಿ ಉಳಿಯುತ್ತಾನೆ. ಅರ್ಥಾತ್ ಸಮಾಧಿಸ್ಥನಾಗುತ್ತಾನೆ.

ನನ್ನ ತಿಳಿವಿಗೆ ನಿಲುಕಿದ ವಿಚಾರಗಳನ್ನು ಹಿಡಿದಿಟ್ಟಿದ್ದೇನೆ. ಬೇರೆ ನೆಲೆಯ ಧೋರಣೆಯವರು ನನಗಿಂತ ಹೆಚ್ಚು ಸಮರ್ಪಕವಾಗಿ ವಚನವನ್ನು ಅರ್ಥಯಿಸುವ ಸಾಧ್ಯತೆ ಇದೆ. ಇಷ್ಟಂತೂ ನಿಜ. ಆರು ವರ್ಷಗಳ ಹಿಂದೆ ಅಲ್ಲಮನ ಬಗ್ಗೆ ಬರೆಯ ಹೊರಟಿದ್ದೆ. ಆದರೆ ಈಗ ಮಾತ್ರ ಒಂದು ಪುಟ್ಟ ಲೇಖನ ರೂಪಧಾರಣೆ ಪಡೆದಿದೆ.[1]

[1] ಇಲ್ಲಿಯ ವಚನ ಸಂಖ್ಯೆಗಳು ಡಾ. ಎಲ್. ಬಸವರಾಜು ಸಂಪಾದಿಸಿರುವ 'ಅಲ್ಲಮನ ವಚನ ಚಂದ್ರಿಕೆ'ಯ ವಚನ ಸಂಖ್ಯೆ ಹೇಳುತ್ತದೆ.

# ವಚನಕಾರ ಮಾದರಚನ್ನಯ್ಯ

ಡಾ. ಶಾಂತರಸ

೧

"ಇದುವರೆಗೆ ವಚನಗಂಗೋತ್ರಿಯನ್ನು ಶೋಧಿಸಲಾಗಿಲ್ಲ; ಮೊದಲ ವಚನಕಾರ ಯಾರೆಂಬುದನ್ನು ಹೇಳುವುದು ಸಾಧ್ಯವಾಗಿಲ್ಲ"—ಈ ಮಾತುಗಳು ಕೇಳಿಬರುತ್ತಿವೆ.

ವಚನಗಂಗೋತ್ರಿಯ ಬಗ್ಗೆ ಈವರೆಗೂ ಏನೂ ಹೇಳಲು ಸಾಧ್ಯವಾಗಿಲ್ಲ; ಇದು ನಿಜ. "ವಚನ ಎಂದು ಹುಟ್ಟಿತು? ಇದರ ಜನಕರು ಯಾರು? ಇದರ ಮೂಲ ಏನು? ಹೇಗೆ ಬೆಳೆಯಿತು?" ಈ ಮಾತುಗಳಿಗೆ ಉತ್ತರ ಇನ್ನೂ ಹುಡುಕಬೇಕಾಗಿದೆ. ಆದರೆ ಈಗ ದೊರಕಿರುವ ಆಧಾರಗಳಿಂದ ಮೊದಲ ವಚನಕಾರ ಮಾದಾರಚನ್ನಯ್ಯ ಎಂಬುದು ಸಿದ್ಧವಾಗುತ್ತದೆ.

ಬಹುದಿನಗಳವರೆಗೆ ಬಸವಯುಗದಲ್ಲಿಯೇ ವಚನರಚನೆ ಪ್ರಾರಂಭವಾಯಿತೆಂಬ ನಂಬುಗೆಯಿತ್ತು. ಜೇಡರ ದಾಸಿಮಯ್ಯನ ಶಾಸನಗಳು ದೊರಕಿದ ಮೇಲೆ ಬಸವಪೂರ್ವಯುಗದಲ್ಲಿ—ಜೇಡರದಾಸಿಮಯ್ಯನ ಕಾಲದಲ್ಲಿ ವಚನ ರಚನೆ ಮೊದಲಾಯಿತೆಂದು ತಿಳಿವಳಿಕೆಯುಂಟಾಯಿತು. ಈವರೆಗೆ ಬಹುಮಟ್ಟಿಗೆ ಇದೇ ನಂಬುಗೆ ನೆಲೆ ನಿಂತಿದೆ. ಆದರೆ ಜೇಡರದಾಸಿಮಯ್ಯನಿಗಿಂತಲೂ ಹಿಂದೆ ವಚನರಚನೆ ಇತ್ತು ಎಂಬುದನ್ನು ಇಂದು ದೊರಕಿದ ಆಧಾರಗಳು ಸಿದ್ಧ ಪಡಿಸುತ್ತವೆ.

ಜೇಡರದಾಸಿಮಯ್ಯನ ವಚನಗಳಲ್ಲಿ 'ಸೂಳ್ನುಡಿ', 'ನುಡಿಗಡಣ' ಎಂಬ ಪದಗಳು ಮತ್ತು "ನಿಮ್ಮ ಶರಣರ ಸೂಳ್ನುಡಿ ಇತ್ತೊಡೆ ನಿಮ್ಮನಿತ್ತೆ ಕಾಣಾ ರಾಮನಾಥ" ಎಂಬ ಮಾತು ಬಂದಿರುವುದರಿಂದ ಆತನಿಗಿಂತ ಹಿಂದೆ ವಚನ ರಚನೆ ನಡೆದಿತ್ತೆಂದೂ ನುಡಿಗಡಣ ಎಂಬುದರಿಂದ ಅದು ವಿಪುಲವಾಗಿತ್ತೆಂದೂ ತಿಳಿದುಬರುವುದು. "ವೀರಶೈವ ಧರ್ಮದ ಮತ್ತು ವಚನರಚನೆಯ ಉಗಮ ಈಗ ನಮಗೆ ತಿಳಿದಿರುವ ಆಧಾರಗಳ ಪ್ರಕಾರ ೧೧ನೆಯ ಶತಮಾನದಲ್ಲಿ ಆಯಿತೆಂದು ಹೇಳಬಹುದು."[1] ಇದು ಡಾ॥ ರಂ. ಶ್ರೀ. ಮುಗಳಿಯವರ ಅಭಿಪ್ರಾಯ. "ಈ ಆದ್ಯರ ವಚನ ಸಾಹಿತ್ಯವು ಕ್ರಿ.ಶ. ೯–೧೦ ಶತಮಾನದಷ್ಟು ಹಿಂದಿನದು. ಈಗ ನಮಗೆ ಉಪಲಬ್ಧವಿರುವ ಎಷ್ಟೋ ವಚನಗಳು ಪಂಪನ ಸಾಹಿತ್ಯಕ್ಕಿಂತ ಪ್ರಾಚೀನವೆಂದಾಗ ಯಾರಾದರೂ ಹುಸಿನಗುವನ್ನು ನಕ್ಕರೆ ಅವರಿಗೆ ನವನವೋನ್ಮೇಷಿತ ಸತ್ಯ ವಿಚಾರಗಳನ್ನು ಸ್ವಾಗತಿಸುವ ಪ್ರಗತಿಪರ ದೃಷ್ಟಿ ಇಲ್ಲವೆನ್ನಬೇಕಾಗುವುದು."[2] ಇದು ಡಾ॥ ಎಲ್. ಬಸವರಾಜು ಅವರ ಅಭಿಪ್ರಾಯ. ಈ ಅಭಿಪ್ರಾಯವನ್ನು ಒಪ್ಪದ ಡಾ॥ ಮುಗಳಿಯವರು, "ವಚನಸಾಹಿತ್ಯವು ಇಷ್ಟು ಹಿಂದೆ ಇತ್ತೆನ್ನಲು ಆಧಾರ ಸಾಲದೆಂದು ನಮಗೆ ತೋರುತ್ತದೆ"[3] ಎಂದಿದ್ದಾರೆ.

ಹರಿಹರನ ಕೇಶಿರಾಜ ದಣ್ಣಾಯಕರಗಳೆಯಲ್ಲಿ ಬರುವ,

> ಎಡೆಗೊಂಡು ಶಿವಗೋಷ್ಠಿಯುಬ್ಬುತಿರೆ ಛಂದದೊಳ್[4]
> ಪಾಡುವ ಪುರಾತನರ ಗೀತದೊಳ್ಕರಗುತಂ[5]

---

1 ಡಾ॥ ರಂ. ಶ್ರೀ. ಮುಗಳಿ: 'ಪ್ರಾಚೀನ ಕನ್ನಡ ಸಾಹಿತ್ಯದ ರೂಪಗಳು', ಪು. ೧೨೦

2 ಡಾ॥ ಎಲ್. ಬಸವರಾಜು: 'ಅಲ್ಲಮನ ವಚನ ಚಂದ್ರಿಕೆ', ಪೀಠಿಕೆ, ಪು. ೧೧

3 ಡಾ॥ ರಂ. ಶ್ರೀ. ಮುಗಳಿ: 'ಪ್ರಾ. ಕ. ಸಾ. ರೂ', ಪು. ೧೨೧ ಅಡಿಟಿಪ್ಪಣಿ

4 ಬಿ. ವಿ. ಮಲ್ಲಾಪುರ ಸಂಪಾದಿತ: 'ಹರಿಹರನ ರಗಳೆಗಳು', ಪು. ೨೯೭

5 ಅದೇ ಪು. ೨೯೭

ಶರಣ ಸುಗೀತಗೋಷ್ಠಿಯೊಳೀನುವರಿಯದಿರೆ[1]
ಮಾತುಮಾತಿಂಗೆ ಪುರಾತನರ ಗೀತವಂಕುರಿಸೆ[2]

ಮತ್ತು ಶಂಕರದಾಸಿಮಯ್ಯ ರಗಳೆಯಲ್ಲಿ ಬರುವ,

ಶರಣಕುಲ ಸಂಭಾಷಿತ ಶಿವಪುರಾಣ ಶಿವಕಥಾಮೃತರಸದೊ-
ಳವಗಾಹಂಗೈದು ವಿಕಸಿತಹೃದಯಕಮಲನಾಗುತ್ತೊಂದೆರಡು ದಿನಮಿರಲಲ್ಲಿಗೆ....[3]

ಈ ಮಾತುಗಳನ್ನು ನೆನೆಯಬೇಕು. ಇಲ್ಲಿ ಬರುವ ಪುರಾತನರು ಎಂದರೆ ಅರವತ್ತುಮೂವರು ಪುರಾತನರಲ್ಲ.[4] ಅವರ ಯಾವ ಗೀತೆಗಳನ್ನೂ ಈ ನೂತನ ಶರಣರು ಹಾಡಿದಂತೆ ಕಾಣುವುದಿಲ್ಲ. ಇಲ್ಲಿ ಉಕ್ತವಾದ ಪುರಾತನರೆಂದರೆ ಶಂಕರದಾಸಿಮಯ್ಯ ಮತ್ತು ಕೇಶಿರಾಜ ದಣ್ಣಾಯಕರಿಗಿಂತ ಹಿಂದೆ ಆಗಿಹೋದ ನೂತನ ಪುರಾತನರೇ (ಶರಣರೇ) ಇರಬೇಕು. ಗೀತೆ ಎಂದರೆ ವಚನವೆಂದೇ ಅರ್ಥ. ಅನೇಕ ವೇಳೆ ವಚನಗಳಲ್ಲಿ ಗೀತೆ ಇದೇ ಅರ್ಥದಲ್ಲಿಯೇ ಪ್ರಯೋಗವಾಗುತ್ತದೆ. "ಶಿವಗೋಷ್ಠಿ, ಶರಣಸುಗೀತಗೋಷ್ಠಿ, ಶರಣಕುಲ ಸಂಭಾಷಿತ" ಈ ಮಾತುಗಳು ಒಂದು ಪರಂಪರೆಯನ್ನು ಹೇಳುವುವು. ಶರಣರು ಒಬ್ಬರಿಗೊಬ್ಬರು ಕೂಡಿ, ಆಡಿ, ಸಂಭಾಷಿಸಿ, ಗೀತೆ ಹಾಡಿ, ವಚನ ರಚಿಸಿ ಚರ್ಚಿಸುವ ಈ ಸಂಪ್ರದಾಯ ಜೇಡರದಾಸಿಮಯ್ಯ, ಶಂಕರದಾಸಿಮಯ್ಯ, ಕೇಶಿರಾಜ ದಣ್ಣಾಯಕ, ಕೆಂಭಾವಿ ಭೋಗಣ್ಣ ಮೊದಲಾದವರಿಗಿಂತ ಬಹು ಹಿಂದೆಯೇ ಬೆಳೆದು ಬಂದಿರಬೇಕು. "ಶರಣಸುಗೀತಗೋಷ್ಠಿ, ಶರಣಕುಲಸಂಭಾಷಿತ" ಈ ಮಾತುಗಳನ್ನು ಜೇಡರದಾಸಿಮಯ್ಯನ ಸೂಳ್ನುಡಿಯೊಂದಿಗೆ ಹೋಲಿಸಿ ನೋಡಿದರೆ ಈ ಅಭಿಪ್ರಾಯ ಇನ್ನೂ ಖಚಿತವಾಗುವುದು.

"ದಾಸಿಮಯ್ಯನಲ್ಲಿ ವಚನ ಎಂಬ ಮಾತು ಬಂದಿಲ್ಲ. ಸೂಳ್ನುಡಿ ಎಂಬ ಮಾತು ಬಂದಿದೆ....ಸೂಳ್ನುಡಿ ಎಂದರೆ ಸರದಿಯ ಪ್ರಕಾರ ಆಡುವ ಮಾತು ಎಂದರ್ಥ....ಹೀಗೆ ಸೂಳ್ನುಡಿ ಎಂಬ ಮಾತು ಆ ಕಾಲದ ಧಾರ್ಮಿಕಜೀವನಕ್ಕೆ ಒಂದು ಕೈಗನ್ನಡಿ ಇದ್ದಂತಿದೆ. ಶಿವಶರಣರ ಗೋಷ್ಠಿಗಳು, ಅಲ್ಲಿ ನಡೆಯುತ್ತಿದ್ದ ಸಂಭಾಷಣೆ, ಸಂಭಾಷಣೆಯ ಕಾಲದಲ್ಲಿ ರಚನೆಯಾಗುತ್ತಿದ್ದ ವಚನಸಾಹಿತ್ಯ—ಇಷ್ಟನ್ನೂ ತನ್ನ ಗರ್ಭದಲ್ಲಿ ಈ ಪದ ಒಳಗೊಂಡಿರುವಂತಿದೆ."[5] "ದೇವರದಾಸಿಮಯ್ಯನ ಕಾಲದಲ್ಲಿ ಈ ಸೂಳ್ನುಡಿಯ ಸಭೆಗಳ ಸುಳಿವು ನಮಗೆ ದೊರಕುತ್ತದೆ."[6]

ದೇವರದಾಸಿಮಯ್ಯನ ಎರಡು ವಚನಗಳು ಮೇಲಿನ ಮಾತುಗಳಿಗೆ ಸರ್ವರೀತಿಯ ಪುಷ್ಟಿಯೊದಗಿಸುತ್ತವೆ.

ಅನುಭಾವವಿಲ್ಲದವನ ಭಕ್ತಿ ತಲೆಕೆಳಗಾದುದಯ್ಯ
ಅನುಭಾವ ಭಕ್ತಿಗಾಧಾರ
ಅನುಭಾವ ಭಕ್ತಿಗೆ ನೆಲೆವನೆ
ಅನುಭಾವ ಉಳ್ಳವರ ಕಂಡು ತುರ್ಯಸಂಭಾಷಣೆಯ ಬೆಸಗೊಳ್ಳದಿದ್ದರೆ
ನರಕದಲ್ಲಿಕ್ಕಯ್ಯ ರಾಮನಾಥ[7]

ಮಂಡೆಯ ಬೋಳಿಸಿಕೊಂಡು ನುಡಿದು ಗೋಷ್ಠಿಯ ಕಟ್ಟಿದೊಡೇನು ?
ಕಂಡಕಂಡವರಿಗೆ ಕೈಯೊಡ್ಡಿ ಬೇಡುವ
ಭಂಡರನೊಲ್ಲ ರಾಮನಾಥ[8]

---

1 ಅದೇ ಪು. ೨೯೮

2 ಆದೇ ಪು. ೩೦೩

3 ಅದೇ ಪು. ೪೧೨

4 ಈವರೆಗೆ ತಿಳಿದಂತೆ ತಮಿಳುನಾಡಿನ ಪುರಾತನರು ಶರಣರಂತೆ ಶಿವಗೋಷ್ಠಿಯನ್ನಾಗಲೀ ಶಿವಸಂಭಾಷಣೆಯನ್ನಾಗಲೀ ಮಾಡಿದಂತೆ ತಿಳಿದುಬಂದಿಲ್ಲ.

5 ಡಾ॥ ಎಂ. ಚಿದಾನಂದಮೂರ್ತಿ: 'ಸಂಶೋಧನ ತರಂಗ', ಭಾಗ ೧, ಪು. ೩೦

6 ಡಾ॥ ರಂ. ಶ್ರೀ. ಮುಗಳಿ: 'ಪ್ರಾ. ಕ. ಸಾ. ರೂ', ಪು. ೧೨೮

7 ಡಾ॥ ಎಲ್. ಬಸವರಾಜು (ಸಂ) : 'ದೇವರದಾಸಿಮಯ್ಯನ ವಚನಗಳು', ಪು. ೯೪, ವಚನ ೧೩೦

8 ಅದೇ ಪು. ೯೭, ವಚನ ೧೪೧

ಮೇಲಿನ ಎಲ್ಲ ವಿವೇಚನೆಯಿಂದ ಜೇಡರದಾಸಿಮಯ್ಯನಿಗಿಂತ ಹಿಂದೆ ಶರಣಪರಂಪರೆ ಇತ್ತು; ಗೋಷ್ಠಿಗಳು ಇದ್ದುವು; ವಚನರಚನೆ ಇತ್ತು ಎಂದು ನಂಬಲು ಏನೂ ಅಡ್ಡಿಯಿಲ್ಲ. ಶರಣಸುಗೀತಗೋಷ್ಠಿ ನಡೆಯಲು, ಜೇಡರ ದಾಸಿಮಯ್ಯನಂಥ ಅರ್ಥಪೂರ್ಣ ಸುಂದರ ವಚನಗಳ ರಚನೆಯಾಗಲು ಅದರ ಹಿಂದೆ ಬಹುಕಾಲದ ಒಂದು ಪರಂಪರೆ ನಡೆದುಕೊಂಡು ಬಂದಿರಲೇಬೇಕು. ಆದರೆ ಅದು ಎಷ್ಟು ಹಿಂದಿನದು ಎಂದು ನಿರ್ದಿಷ್ಟವಾಗಿ ಹೇಳಲು ಆಧಾರಗಳು ಸದ್ಯ ಇಲ್ಲದಿದ್ದರೂ ಅದು ನೂರು ವರ್ಷಗಳಷ್ಟು ಹಿಂದಿನದು ಎಂದು ಖಚಿತವಾಗಿ ಹೇಳಲು ಆಧಾರಗಳು ಇವೆ. ಸಂಶೋಧನೆ ಮುಂದುವರಿದಂತೆ ಈ ಕಾಲ ಇನ್ನೂ ಹಿಂದೆ ಹೋಗಲು ಸಾಧ್ಯತೆ ಇದೆ. ಈ ಬೆಳಕಿನಲ್ಲಿ ನೋಡಿದಾಗ, "ಇದರಿಂದ ಶರಣರ ಮತ್ತು ವಚನಕಾರರ ಪರಂಪರೆ ದೇವರದಾಸಿಮಯ್ಯನ ಕಾಲದಲ್ಲಿಯೇ ಸಣ್ಣ ಪ್ರಮಾಣದಲ್ಲಿ ಮೊದಲಾಯಿತೆಂದು ತೋರುತ್ತದೆ"[1] ಎಂಬ ಡಾ॥ ಮುಗಳಿಯವರ ಮಾತು ನಿಲ್ಲುವುದಿಲ್ಲ ಎನಿಸುತ್ತದೆ.

೨

ಬಸವಣ್ಣನವರು ತಮ್ಮ ವಚನಗಳಲ್ಲಿ ಜೇಡರದಾಸಿಮಯ್ಯ, ಡೋಹರಕಕ್ಕಯ್ಯ, ಮಾದರಚನ್ನಯ್ಯ, ತೆಲುಗು ಜೊಮ್ಮಯ್ಯ ಮತ್ತು ಕೆಂಭಾವಿಭೋಗಣ್ಣ ಇವರನ್ನು ಹೃದಯತುಂಬಿ ನೆನೆಯುತ್ತಾರೆ. ಇವರೆಲ್ಲ ಬಸವಣ್ಣನವರಿಗಿಂತ —ಕ್ರಿ.ಶ. ೧೧೬೨ಕ್ಕಿಂತ ಹಿಂದೆ ಇದ್ದವರು.

ಬಸವಣ್ಣನವರಿಗಿಂತ ಹಿಂದೆ ಜೇಡರದಾಸಿಮಯ್ಯ, ಆತನಿಗಿಂತ ತುಸು ಹಿಂದೆ ಡೋಹರಕಕ್ಕಯ್ಯ, ಆತನಿಗಿಂತ ಹಿಂದೆ ಮಾದರಚನ್ನಯ್ಯ—ಇದನ್ನು ಕಾವ್ಯ, ಇತಿಹಾಸ, ವಚನ, ಶಾಸನಗಳಿಂದ ಸಿದ್ಧಗೊಳಿಸಲು ಸಾಧ್ಯವಿದೆ.

ಕ್ರಿ.ಶ. ೧೧೫೦[2]ರಲ್ಲಿದ್ದ ಬ್ರಹ್ಮಶಿವ ತನ್ನ ಸಮಯಪರೀಕ್ಷೆಯಲ್ಲಿ ಜೇಡರದಾಸಿಮಯ್ಯನಿಗೆ ರಾಮನಾಥ ಬಾಗಿಲು ತೆರೆದ ಪವಾಡವನ್ನು ಗೇಲಿಮಾಡಿದ್ದಾನೆ.[3] ಕ್ರಿ.ಶ. ೧೧೫೦ಕ್ಕಿಂತ ಹಿಂದೆ ಜೇಡರದಾಸಿಮಯ್ಯ ಇದ್ದಂತಾಯಿತು; ಇಷ್ಟೇ ಅಲ್ಲ, ಆತನ ಆ ಪವಾಡ ನಡೆದು ಜನಜನಿತವಾಗಿ ಬ್ರಹ್ಮಶಿವನ ಕಿವಿಗೆ ಬೀಳಬೇಕಾದರೆ ಬಹಳ ವರ್ಷಗಳು ಕಳೆದಿರಬೇಕು.

ಜೇಡರದಾಸಿಮಯ್ಯನಿಗೆ ಸಂಬಂಧಿಸಿದ ಹತ್ತು ಶಾಸನಗಳು ಈಗ ದೊರಕಿವೆ.[4] ಇವು ಆತನ ಘನತೆ, ವ್ಯಕ್ತಿತ್ವ, ವ್ಯಾಪಕವಾದ ಶಿಷ್ಯಸಂತಾನ ಮತ್ತು ಆ ಶಿಷ್ಯಸಂಪ್ರದಾಯವನ್ನು ಬಿತ್ತರಿಸುತ್ತವೆ; ಅಲ್ಲದೆ ಆತನ ಕಾಲನಿರ್ಣಯಕ್ಕೆ ಹೆಚ್ಚು ಸಹಾಯಕವೂ ಆಗಿವೆ. ಈ ಹತ್ತು ಶಾಸನಗಳಲ್ಲಿ ಕ್ರಿ.ಶ. ೧೧೪೮ರ ಗೊಬ್ಬೂರಿನ ಶಾಸನವೇ ತೀರ ಹಿಂದಿನದು; ಕಾಲನಿರ್ಣಯಕ್ಕೆ ಹೆಚ್ಚು ಮಹತ್ವವುಳ್ಳುದು "ಪಿರಿಯ ಗೊಬ್ಬೂರ ಶೇಷಮಹಾಜನಂಗಳ ದಿವ್ಯ ಶ್ರೀಪಾದಪದ್ಮಾರಾಧಕರ ಶ್ರೀರಾಮೇಶ್ವರದೇವರ ಗಂಧವಾರಣರ್ ಜಾಡಕುಲತಿಲಕ ಜಾಡರದಾಸಿಮಯ್ಯ ಪ್ರಿಯಪುತ್ರರುಮಪ್ಪ ಸಕಲ ಜಾಡಗೊತ್ತುಳಿಗಳು" ಗೊಜ್ಜೇಶ್ವರದೇವರಿಗೆ ದತ್ತಿ ನೀಡಿದ್ದಾರೆ. "ಪ್ರಿಯಪುತ್ರರುಮಪ್ಪ ಸಕಲ ಜಾಡಗೊತ್ತಳಿಗಳು" ಎಂಬುದನ್ನು ವಿಶ್ಲೇಷಿಸಿ ಶ್ರೀ ಎಚ್. ದೇವೀರಪ್ಪನವರು, "....ಪ್ರಿಯಪುತ್ರ, ಪ್ರಿಯಶಿಷ್ಯ, ವರಸುತ ಮುಂತಾದ ವಿಶೇಷಸಹಿತವಾದ ಪದಗಳಿದ್ದರೆ ಅಂತಹವಕ್ಕೆ ಖಾಸಾಶಿಷ್ಯ ಎಂದೇ ಅರ್ಥಯಿಸಬೇಕಾಗುತ್ತದೆ. ಗೊಬ್ಬೂರಿನ ಜಾಡ ಗೊತ್ತಳಿಗಳು ಜೇಡರದಾಸಿಮಯ್ಯನಿಂದಲೇ ನೇರವಾಗಿ ಉಪದೇಶ ಪಡೆದವರು"[5] ಎನ್ನುತ್ತಾರೆ. ಇದರಿಂದ ಈ ಶಾಸನ ಜೇಡರದಾಸಿಮಯ್ಯ ಬದುಕಿದ್ದಾಗಲೇ ಆದುದು ಎಂಬುದು ಅವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಆದರೆ ಇದು ನಮಗೆ ಒಪ್ಪಿಗೆ ಇಲ್ಲ. ಅವರ ವಿಶ್ಲೇಷಣೆಗೆ ಗಟ್ಟಿ ಆಧಾರಗಳಿಲ್ಲ; ಪ್ರಿಯ, ವರ ಎಂಬ ಪದಗಳು ಉಪಯೋಗವಾದಲ್ಲಿ ಖಾಸಾ ಎಂಬ ಅರ್ಥವಾಗುತ್ತದೆ ಎನ್ನಲಿಕ್ಕೆ ಎಲ್ಲಿಯೂ ಆಧಾರಗಳಿಲ್ಲ; ಉದಾಹರಣೆಗಳಿಲ್ಲ. ಪ್ರೀತಿಯವರು, ಬೇಕಾದವರು ಎಂದು ಅರ್ಥ ಮಾಡಬಹುದೇ ಹೊರತು 'ಖಾಸಾ', 'ಸ್ವಂತ' ಎಂದು ಅರ್ಥ ಮಾಡಲಿಕ್ಕಾಗುವುದಿಲ್ಲ. "ಕ್ರಿ.ಶ. ೧೧೪೮ರಲ್ಲಿ ದತ್ತಿ ನೀಡಿದ ಇವರು ದಾಸಿಮಯ್ಯನ ನೇರವಾದ ಶಿಷ್ಯರಾಗಿರದೆ ಪರಂಪರೆಯ ಶಿಷ್ಯರಾಗಿರಬೇಕು"[6] ಎಂಬ ಡಾ॥ ಎಂ. ಎಂ. ಕಲಬುರ್ಗಿಯವರ ಅಭಿಪ್ರಾಯ ಸರಿಯಾದುದು. ಜೇಡರ

---

1 ಡಾ॥ ರಂ. ಶ್ರೀ. ಮುಗಳಿ : 'ಪ್ರಾ. ಕ. ಸಾ. ರೂ', ಪು. ೧೨೮

2 ರಾ. ಬ. ನರಸಿಂಹಾಚಾರ್ : 'ಕರ್ನಾಟಕ ಕವಿಚರಿತೆ', ಭಾಗ ೧, ಪು. ೨೦೪ (೧೯೬೧)

3 'ದೇವರದಾಸಿಮಾರ್ಯ ಪ್ರಶಸ್ತಿ', ಪು. ೧೮೦

4 ಡಾ॥ ಎಂ. ಎಂ. ಕಲಬುರ್ಗಿ : 'ಶಾಸನಗಳಲ್ಲಿ ಶಿವಶರಣರು', ಪು. ೩೫–೩೮

5 ಎಚ್. ದೇವೀರಪ್ಪ ಮತ್ತು ಆರ್. ರಾಜಪ್ಪ : 'ಜೇಡರದಾಸಿಮಯ್ಯನ ವಚನಗಳು', ಪ್ರಸ್ತಾವನೆ ಪು. xxiii (೧೯೭೪)

6 ಡಾ॥ ಎಂ. ಎಂ. ಕಲಬುರ್ಗಿ 'ಶಾಸನಗಳಲ್ಲಿ ಶಿವಶರಣರು', ಪು. ೩೬ (೧೯೭೦)

ದಾಸಿಮಯ್ಯನ ಶಿಷ್ಯಸಂಪ್ರದಾಯ ಬೆಳೆದು ಸುಮಾರು ಒಂದು ಒಂದುವರೆ ತಲೆಮಾರಿನ ಬಳಿಕ ೧೧೪೮ರ ಶಾಸನ ಸೃಷ್ಟಿಯಾಗಿರಬೇಕು ಮತ್ತು ಆ ಶಿಷ್ಯಸಂಪ್ರದಾಯ ಕ್ರಿ.ಶ. ೧೨೦೧ರವರೆಗೆ[1] ಮುಂದುವರಿದಿರಬೇಕೆಂದು ಅಭಿಪ್ರಾಯ ಪಡಬಹುದು.[2] ನಮಗೆನಿಸುವಂತೆ ಜೇಡರದಾಸಿಮಯ್ಯ ಕ್ರಿ.ಶ. ೧೦೭೦ಕ್ಕಿಂತ ಈಚೆ ಹುಟ್ಟಿದವನಲ್ಲ. ಸುಮಾರು ಕ್ರಿ.ಶ. ೧೦೯೦ರಲ್ಲಿ ಪ್ರಸಿದ್ಧನಾಗಿರಬೇಕು; ಪವಾಡಗಳನ್ನು ಮೆರೆದಿರಬೇಕು; ವಚನಗಳನ್ನು ರಚಿಸಿರಬೇಕು. ಆತನ ಶಿಷ್ಯ ಸಂಪ್ರದಾಯ ಆಗ ಪ್ರಾರಂಭವಾಗಿರಬೇಕು.

ಜೇಡರದಾಸಿಮಯ್ಯನ ಮೂರು ವಚನಗಳು ಆತನ, ಆತನ ಸಮಕಾಲೀನರ ಮತ್ತು ಆತನ ಹಿಂದಿನ ಶರಣರ ಕಾಲನಿರ್ಣಯಕ್ಕೆ ಬಹಳ ಸಹಾಯಕಾರಿಯಾಗಿವೆ.

ಕೀಳು ಡೋಹರ ಕಕ್ಕ, ಕೀಳು ಮಾದರಚೆನ್ನ,
ಕೀಳು ಓಹಿಲದೇವ, ಕೀಳು ಉದ್ಭಟಯ್ಯ,
ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥ[3]

ನಂಬಿದ ಚೆನ್ನನ ಅಂಬಲಿಯನುಂಡ
ಕೆಂಭಾವಿ ಭೋಗಯ್ಯನ ಹಿಂದಾಡಿಹೋದ
ಗುಂಡಯ್ಯನ ಕುಂಭದ ಗತಿಗೆ ಕುಕಿಲಿರಿದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ[4]

ನೆಱೆನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೇ ?
ಜಗವೆಲ್ಲಱಿಯಲು ತೊಱೆಯೊಳಗೆ ಬಿದ್ದ ಲಿಂಗ
ಕರೆದರೆ ಬಂದುದು ಕರಸ್ಥಲಕ್ಕೆ !
ನಂಬದೇ ಕರೆದವರ ಹಂಬಲವನೊಲ್ಲನೆಮ್ಮ ರಾಮನಾಥ[5]

ಈ ವಚನಗಳಲ್ಲಿ ಉಕ್ತವಾದ ಕೆಂಭಾವಿ ಭೋಗಣ್ಣ, ಕುಂಬಾರ ಗುಂಡಯ್ಯ ಮತ್ತು ಕೇಶಿರಾಜ ಇವರು ಜೇಡರದಾಸಿಮಯ್ಯನ ಸಮಕಾಲೀನರು. ಡೋಹರಕಕ್ಕ ಮತ್ತು ಮಾದಾರಚನ್ನ ಆತನಿಗಿಂತ ಹಿಂದಿನವರು.

ಮೂರನೆಯ ವಚನದಲ್ಲಿರುವ "ತೊಱೆಯೊಳಗೆ ಬಿದ್ದ ಲಿಂಗವ ಕರೆದರೆ ಬಂದುದು ಕರಸ್ಥಲಕೆ" ಎಂಬ ಮಾತು ಕೊಂಡಗುಳಿ ಕೇಶಿರಾಜನ ಪವಾಡವನ್ನು ಸಾರುತ್ತದೆ.[6] ಕೊಂಡಗುಳಿ ಕೇಶಿರಾಜ ಶಿವಾನುಭವಿಯೂ ಕವಿಯೂ ಆಗಿದ್ದನು. ಈತನ ಶೀಲ ಸೌಜನ್ಯ ಪಾಂಡಿತ್ಯ ಕಲಿತನಗಳಿಗೆ ಮೆಚ್ಚಿ ಕಲ್ಯಾಣ ಚಾಳುಕ್ಯರ ಆರನೆಯ ವಿಕ್ರಮಾದಿತ್ಯ ಈತನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡಿದ್ದ.

ಕೊಂಡಗುಳಿ ಕೇಶಿರಾಜನ ಎರಡು ಶಾಸನಗಳು ಅವನ ಜೀವನದ ನಿಶ್ಚಿತಕಾಲವನ್ನು ಹೇಳಲು ಸಹಾಯಕ ವಾಗಿವೆ. ಅಲ್ಲದೆ ಜೇಡರದಾಸಿಮಯ್ಯನ ಕಾಲನಿರ್ಣಯಕ್ಕೂ ಸಹಾಯಕಾರಿಯಾಗಿವೆ. ಇವೆರಡು ಶಾಸನಗಳು ಆತನ ಹುಟ್ಟೂರಾದ ಡೋಣಿಕೊಂಡಗುಳಿಯಲ್ಲಿಯೇ ದೊರಕಿವೆ. ಡೋಣಿ ಕೊಂಡಗುಳಿ ವಿಜಾಪುರ ಜಿಲ್ಲೆಯ ಸಿಂದಗಿ

---

1 ಅರಸಿಕೆರೆ ತಾಲ್ಲೂಕಿನ ಗೀಗಜಗನಹಳ್ಳಿ ಶಾಸನ : ಇದರಲ್ಲಿ ಜೇಡರದಾಸಿಮಯ್ಯನ ಮಗ ಕಾಟಿಗೌಡ ದತ್ತಿಬಿಟ್ಟ ವಿವರವಿದೆ.

"ಮಗ ಎಂದರೆ ಇಲ್ಲಿ ಶಿಷ್ಯನೆಂದೇ ಅರ್ಥ." ಡಾ. ಎಂ. ಎಂ. ಕಲಬುರ್ಗಿ : ಶಾ. ಶಿ. ಪು. ೩೨

2 'ದೇವರದಾಸಿಮಾರ್ಯ ಪ್ರಶಸ್ತಿ', ಪು. ೧೯೨-೧೯೩ (೧೯೫೩)

3 ಡಾ|| ಎಲ್. ಬಸವರಾಜು : 'ದೇವರ ದಾಸಿಮಯ್ಯನ ವಚನಗಳು', ಪು. ೯೩, ವಚನ ೧೨೬

4 ಡಾ|| ಎಲ್. ಬಸವರಾಜು : 'ದೇವರ ದಾಸಿಮಯ್ಯನ ವಚನಗಳು', ಪು. ೯೩, ವಚನ ೧೨೭

5 ಡಾ|| ಎಲ್. ಬಸವರಾಜು : 'ದೇವರ ದಾಸಿಮಯ್ಯನ ವಚನಗಳು', ಪು. ೬೨, ವಚನ ೨೮

6 ಭೀಮಾನದಿಯಲ್ಲಿ ಕುಳಿತು ಅಂಗೈಯಲ್ಲಿ ಲಿಂಗ ಹಿಡಿದು, ಕೆಂಪುದಾಸವಾಳ ಪುಷ್ಪವೇರಿಸಿ ಕೇಶಿರಾಜ ಪೂಜಿಸುವಾಗ ಒಂದು ಗರುಡ ಆ ಲಿಂಗವನ್ನು ಹೂ ಸಹಿತ ಕಚ್ಚಿಕೊಂಡು ಹೋಯಿತು. ಆದರೆ ಆ ಲಿಂಗ ಅದರ ಬಾಯಿಂದ ಕಳಚಿ ನದಿಯಲ್ಲಿ ಬಿದ್ದಿತು. ಕೇಶಿರಾಜ ಅದನ್ನು ಹುಡುಕಿ ತೆಗೆಯಲು ದೋಣಿಯಲ್ಲಿ ಕುಳಿತು ಹೋದ. ಆತನ ಭಕ್ತಿಗೆ ಮೆಚ್ಚಿ ಹುಟ್ಟಿಲ್ಲದ ಶಿವ ಆತ ಹಾಕುತ್ತಿದ್ದ ಹುಟ್ಟಿನಲ್ಲಿಯೇ ಮೂಡಿಬಂದ. ಇದು ಆ ದಿವ್ಯ ಪವಾಡ. (ಹರಿಹರ : 'ಕೇಶಿರಾಜ ದಣ್ಣಾಯಕ ರಗಳೆ')

ತಾಲ್ಲೂಕಿನಲ್ಲಿದೆ. ಮೊದಲ ಶಾಸನದ ಕಾಲ ಕ್ರಿ.ಶ. ೧೧೦೭.[1] ಇದರಲ್ಲಿ "ಪಂಚಮಹಾಶಬ್ದ, ಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ....ಕೇಶಿರಾಜರಸರು" ಎಂದು ಹೇಳಿದೆ. ಈ ಶಾಸನದ ಕಾಲಕ್ಕೆ ಕೇಶಿರಾಜ ದಂಡನಾಯಕನಾಗಿದ್ದ. ಎರಡನೆಯ ಶಾಸನದ ಕಾಲ ಕ್ರಿ.ಶ. ೧೧೩೨.[2] ಈ ಶಾಸನ ಕಲ್ಯಾಣ ಚಾಳುಕ್ಯರ ಭೂಲೋಕಮಲ್ಲ ಸೋಮೇಶ್ವರನ ಕಾಲಕ್ಕೆ ಸಂಬಂಧಿಸಿದ್ದು. ಇದರಲ್ಲಿ ಮೊದಲಶಾಸನದಲ್ಲಿರುವಂತೆ ಯಾವ ಬಿರುದುಗಳು ಇಲ್ಲದೆ "ಶ್ರೀಮತ್ ಕೇಶಿಮಯ ದಂಡನಾಯಕರು" ಎಂದು ಕರೆಯಲಾಗಿದೆ. ಇದರಿಂದ ಈತ ಈ ಕಾಲದಲ್ಲಿ ಮಂತ್ರಿಯಾಗಿರಲಿಲ್ಲವೆಂದು ಖಚಿತವಾಗುತ್ತದೆ. ಆದರೆ ಆತ ಮಂತ್ರಿಪದವಿ ಎಂದು ಬಿಟ್ಟನೆಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಆದರೆ ಆತ ಮಂತ್ರಿಯಾದ ಬಳಿಕ ಕೆಲವೇ ವರ್ಷಗಳಲ್ಲಿ ಅವನಿಗೂ ದೊರೆಗೂ ಮನಸ್ತಾಪವಾಯಿತೆಂದು ರಗಳೆಯಿಂದ ತಿಳಿಯುತ್ತದೆ. ಚಾಲುಕ್ಯ ವಿಕ್ರಮನಿಗೂ ಈತನಿಗೂ ಮನಸ್ತಾಪವಾದ ಬಳಿಕ ಮಂತ್ರಿಪದವಿ ತ್ಯಜಿಸಿ ಕೊಂಡಗುಳಿಗೆ ಹೋಗುವಾಗ ನಡುವೆ ನದಿ(ಭೀಮ)ಯಲ್ಲಿ ಆ ಪವಾಡ ನಡೆಯಿತೆಂದು ಹರಿಹರ ಹೇಳುತ್ತಾನೆ.[3] ಜೇಡರದಾಸಿಮಯ್ಯನ ಮುದನೂರಿಗೂ ಕೊಂಡಗುಳಿಗೂ ಬಹಳ ದೂರವಿಲ್ಲ. ಈ ಪವಾಡದ ಸುದ್ದಿ ತಿಳಿಯಲು ಹದಿನೈದು ದಿನಗಳಾದರೆ ಬಹಳವಾಯಿತು. ಕ್ರಿ.ಶ. ೧೧೨೦ಕ್ಕಿಂತ ಮುಂಚೆಯೇ ಕೇಶಿರಾಜ ಮಂತ್ರಿಪದವಿ ತ್ಯಜಿಸಿರಬೇಕು. ಅದೇ ಸುಮಾರಿಗೆ ಜೇಡರದಾಸಿಮಯ್ಯ ತನ್ನ ಆ ವಚನ ರಚಿಸಿರಬೇಕು. ಇವರಿಬ್ಬರೂ ಒಮ್ಮೆಯಾದರೂ ಕೂಡಿ ಶಿವಗೋಷ್ಠಿ ನಡೆಸಿರಬೇಕೆಂದು ಊಹಿಸಬಹುದು. "ಕೊಂಡಗುಳಿ ಕೇಶಿರಾಜ ದಣ್ಣಾಯಕ ೧೧೦೭ಕ್ಕಿಂತ ಮೊದಲು ಹುಟ್ಟಿ ಕ್ರಿ.ಶ. ೧೧೩೨ರ ತರುವಾಯ ಲಿಂಗೈಕ್ಯನಾಗಿರುವುದು ಸತ್ಯ."[4]

ಈ ಮೊದಲ ವಿವೇಚನೆಯಿಂದ ಮತ್ತು ಕೊಂಡಗುಳಿ ಕೇಶಿರಾಜನ ಶಾಸನಗಳಿಂದ ಮತ್ತು ಆತನ ಪವಾಡವನ್ನು ತನ್ನ ವಚನದಲ್ಲಿ ಉಲ್ಲೇಖಿಸುವುದರಿಂದ ಜೇಡರದಾಸಿಮಯ್ಯ ಕ್ರಿ.ಶ. ೧೧೨೫ಕ್ಕಿಂತ ಈಚಿನವನಲ್ಲ ಮತ್ತು ಕ್ರಿ.ಶ. ೧೦೬೦ಕ್ಕಿಂತ ಆಚೆಯವನಲ್ಲ ಎಂದು ಒಂದು ನಿಶ್ಚಯಕ್ಕೆ ಬರಬಹುದು. ಕೇಶಿರಾಜನ ಪವಾಡವನ್ನು ಆತ ತನ್ನ ಕೊನೆಗಾಲದಲ್ಲಿ ವರ್ಣಿಸಿರಲು ಸಾಧ್ಯ.

ಡೋಹರಕಕ್ಕಯ್ಯ ಜೇಡರದಾಸಿಮಯ್ಯನಿಗಿಂತ ತುಸು ಹಿಂದಿನವ. ಈತ ಮಾಳವದಿಂದ ಬಂದವನೆಂದು ಡಾ|| ಪಿ. ಜಿ. ಹಳಕಟ್ಟಿಯವರು ಹೇಳುತ್ತಾರೆ.[5] ಇದಕ್ಕೆ ಏನು ಆಧಾರವೋ ತಿಳಿಯದು. ಬಸವಣ್ಣನವರ ಕಾಲಕ್ಕೆ ಆತ ಕಲ್ಯಾಣದಲ್ಲಿ ಇದ್ದ. ಅವರಿಗೆ ಆತ ಹಿರಿಯ ಸಮಕಾಲೀನ. ಕಲ್ಯಾಣಕ್ಕೆ ಬರುವ ಮುಂಚೆ ಆತ ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿಯಂತೆ ಬೆಜವಾಡದಲ್ಲಿ ಇದ್ದ. ಈ ಕಾವ್ಯ ಬಿಟ್ಟರೆ ಈತನ ಕಾಲನಿರ್ಣಯಕ್ಕೆ ಬೇರೆ ಯಾವ ಸಾಧನಗಳೂ ಇಲ್ಲ. ಶಿವತತ್ವಚಿಂತಾಮಣಿಯಲ್ಲಿನ ಶ್ರೀಪತಿಪಂಡಿತನ ಚರಿತ್ರೆ ಕಕ್ಕಯ್ಯನ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಶ್ರೀಪತಿಪಂಡಿತ ಬೆಜವಾಡದಲ್ಲಿದ್ದ ; ಕಕ್ಕಯ್ಯ ಅಲ್ಲಿಯೇ ಇದ್ದ. ಒಂದು ದಿನ ಶ್ರೀಪತಿಪಂಡಿತ ಕಕ್ಕಯ್ಯನ ಮನೆಯಲ್ಲಿ ಪ್ರಸಾದ ಸೇವಿಸಿದ. ಇದರಿಂದ ಬ್ರಾಹ್ಮಣರು ಶೂದ್ರನಾದ ಕಕ್ಕಯ್ಯನ ಮನೆಯಲ್ಲಿ ಕುಲಜನಾದ ಶ್ರೀಪತಿಪಂಡಿತ ಉಣ್ಣಬಹುದೇ ಎಂದು ರೊಚ್ಚಿಗೆದ್ದರು. ಕುಲಜರು ನಿಜವಾಗಿ ಯಾರು ಎಂಬ ವಾದ ನಡೆದು ಶ್ರೀಪತಿಪಂಡಿತರು 'ಅಗ್ನಿಪವಾಡ' ಮಾಡಿ ಬ್ರಾಹ್ಮಣರನ್ನು ಜಯಿಸಿದರು.[6] ಆದರೆ ಶ್ರೀಪತಿಪಂಡಿತ ಅಂತ್ಯಜನಾದ ಗೋಡಗರಿ ಮಲ್ಲಯ್ಯನ ಮನೆಯಲ್ಲಿ ಊಟ ಮಾಡಿದನು ; ಆ ಕಾರಣದಿಂದ ಅಗ್ನಿಪವಾಡ ನಡೆಯಿತೆಂದು ಡಾ|| ಹಳಕಟ್ಟಿಯವರು ಹೇಳುತ್ತಾರೆ.[7] ಈ ಗೋಡಗರಿ ಮಲ್ಲಯ್ಯ ಯಾರೋ ತಿಳಿಯುವುದಿಲ್ಲ. ಕಕ್ಕಯ್ಯನ

1 ಡಾ|| ಎಂ. ಎಂ. ಕಲಬುರ್ಗಿ : 'ಶಾಸನಗಳಲ್ಲಿ ಶಿವಶರಣರು', ಪು. ೪೨

2 ಜಿ. ಎಚ್. ಹನ್ನೆರಡುಮಠ : 'ಚಿತ್ರಭ', ಪು. ೬೨೩–ಹುಬ್ಬಳ್ಳಿ ಮೂರುಸಾವಿರಮಠ ಪ್ರಕಾಶನ : ಡಾ|| ಕಲಬುರ್ಗಿಯವರ ಲೇಖನ.

3 ಹರಿಹರ : 'ಕೇಶಿರಾಜ ದಣ್ಣಾಯಕರ ರಗಳೆ'

4 ಡಾ|| ಎಂ. ಎಂ. ಕಲಬುರ್ಗಿ : 'ಚಿತ್ರಭೆ'ಯಲ್ಲಿ ಲೇಖನ, ಪು. ೬೨೬

5 ಡಾ|| ಪಿ. ಜಿ. ಹಳಕಟ್ಟಿ : 'ಅಮರಗಣಾಧೀಶ್ವರರ ಚರಿತ್ರೆಗಳು', ಪು. ೮೮

6 ವಿದ್ವಾನ್ ಪಂಡಿತ ಎಸ್. ಬಸಪ್ಪ (ಸಂ) : 'ಶಿವತತ್ವಚಿಂತಾಮಣಿ', ಪು. ೩೬೬, ಪದ್ಯಗಳು ೧೨೭, ೧೨೮, ೧೨೯ (೧೯೬೦)

(ಅಗ್ನಿಯನ್ನು ಬಟ್ಟೆಯಲ್ಲಿ ಕಟ್ಟಿ ಶ್ರೀಪತಿ ಪಂಡಿತ ಶಮೀವೃಕ್ಷಕ್ಕೆ ತೂಗಹಾಕಿದ. ಅವೊತ್ತಿನಿಂದ ಯಾರ ಮನೆಯಲ್ಲಿಯೂ ಅಗ್ನಿ ಹೊತ್ತಲಿಲ್ಲ. ಆಗ ವೈದಿಕರು ಅವರಿಗೆ ಶರಣಾಗತರಾದರು. ಇದೇ ಆ ಪವಾಡ)

7 ಡಾ|| ಪಿ. ಜಿ. ಹಳಕಟ್ಟಿ : 'ಶಿವಶರಣರ ಚರಿತ್ರೆಗಳು', ಭಾಗ II, ಪು. ೩೩೬

ಹೆಸರು ಹಳಕಟ್ಟಿಯವರ ಶ್ರೀಪತಿಪಂಡಿತನ ಚರಿತ್ರೆಯಲ್ಲಿ ಬರುವುದಿಲ್ಲ. ಶ್ರೀಪತಿಪಂಡಿತನ ಅಗ್ನಿಪವಾಡ ಕ್ರಿ.ಶ. ೧೦೯೦ರಿಂದ ೧೧೧೮ರವರೆಗೆ ಆಳಿದ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಅನಂತಪಾಲನ ಕಾಲದಲ್ಲಿ ನಡೆಯಿತೆಂದು ಡಾ॥ ಹಳಕಟ್ಟಿ ಹೇಳುತ್ತಾರೆ.[1] ಶ್ರೀ ಎಚ್. ದೇವೀರಪ್ಪನವರು ಇದೇ ಕಾಲವನ್ನು ಸೂಚಿಸಿ "ಕ್ರಿ.ಶ. ೧೧೨೦ರಲ್ಲಿಯೂ ಡೋಹರಕಕ್ಕಯ್ಯ ಇದ್ದನೆಂದು ಊಹಿಸಬೇಕಾಗುತ್ತದೆ" ಎನ್ನುತ್ತಾರೆ.[2] ಅಗ್ನಿಪವಾಡ ನಡೆದ ಬಳಿಕ ಡೋಹರಕಕ್ಕಯ್ಯ ಪ್ರಸಿದ್ಧಿಗೆ ಬಂದಿರಬೇಕು. ಬೆಜವಾಡದಿಂದ ಕರ್ನಾಟಕದ ಮುದನೂರಿಗೆ ಈ ಸುದ್ದಿ ಮುಟ್ಟಬೇಕಾದರೆ ಕೆಲವು ವರ್ಷಗಳಾದರೂ ಹಿಡಿದಿರಬೇಕು. ಈ ಪವಾಡ ಕ್ರಿ.ಶ. ೧೧೦೦ರ ತರುವಾಯ ಮತ್ತು ೧೧೧೦ರ ಒಳಗೆ ಆಗಿರಬೇಕು. "ಬೆಜವಾಡದ ಮಲ್ಲೇಶ್ವರ ದೇವಾಲಯದಲ್ಲಿರುವ ಅಗ್ನಿಪವಾಡ ಹೇಳುವ ಶಾಸನದಲ್ಲಿ ವರ್ಷವಿದ್ದ ಭಾಗವು ಸವೆದುಹೋಗಿದೆಯಾದುದರಿಂದ ಅದು ಯಾವ ಕಾಲದ್ದೆಂದು ನಿಶ್ಚಿತವಾಗಿ ಗೊತ್ತಾಗುವುದಿಲ್ಲ."[3] ಡಾ॥ ಎಂ. ಎಂ. ಕಲಬುರ್ಗಿಯವರ 'ಶಾಸನಗಳಲ್ಲಿ ಶಿವಶರಣರು' ಎಂಬ ಗ್ರಂಥದಲ್ಲಿ ಈ ಶಾಸನದ ಕಾಲ ತೋರಿಸಿಲ್ಲ.

ಜೇಡರದಾಸಿಮಯ್ಯ ಕಕ್ಕಯ್ಯನನ್ನು ನೆನೆದು ಕ್ರಿ.ಶ. ೧೧೧೦ರ ತರುವಾಯ ವಚನ ರಚಿಸಿರಬೇಕು.

ಡೋಹರಕಕ್ಕಯ್ಯ ಬಹುದೀರ್ಘಕಾಲ ಬದುಕಿದನೆಂದು ತೋರುತ್ತದೆ. ಬೆಜವಾಡದ ಪವಾಡದ ಕಾಲಕ್ಕೆ ಆತ ತರುಣನಾಗಿರಬೇಕು. ಮುಂದೆ ಆತ ಬಸವಣ್ಣನವರ ಸಮಕಾಲೀನನಾಗಿ ಕಾದರವಳ್ಳಿಯ ಕದನದಲ್ಲಿಯೂ ಭಾಗವಹಿಸುತ್ತಾನೆ. ಹೀಗಾಗಿ ಆತ ಸುಮಾರು ಕ್ರಿ.ಶ. ೧೧೬೦ರಿಂದ ೧೧೬೨ರ ವರೆಗೆ ಜೀವಿಸಿದ್ದನೆಂದು ನಿಶ್ಚಯಿಸಬಹುದು.

ಮಾದರಚನ್ನಯ್ಯ ಕರಿಕಾಲಚೋಳನ ಕಾಲದಲ್ಲಿದ್ದನು.[4] ಕರಿಕಾಲಚೋಳನೆಂಬ ಬಿರುದು ವೀರರಾಜೇಂದ್ರ, ಪರಾಕೇಸರಿ ಅಧಿರಾಜೇಂದ್ರ ಮತ್ತು ಒಂದನೆಯ ಕುಲೋತ್ತುಂಗ ಈ ಮೂವರಿಗೂ ಇತ್ತು. ಇವರಲ್ಲಿ ಚನ್ನಯ್ಯ ಯಾರ ಕಾಲದಲ್ಲಿದ್ದನೆಂಬುದೇ ಪ್ರಶ್ನೆ. ಡಾ॥ ಹಳಕಟ್ಟಿಯವರು ಇವನು ಒಂದನೆಯ ಕುಲೋತ್ತುಂಗನ ಕಾಲದಲ್ಲಿದ್ದನೆಂದು ಹೇಳುತ್ತ, "ಚಾಳುಕ್ಯರಾಜನಾದ ಆರನೆಯ ವಿಕ್ರಮಾದಿತ್ಯನ ಕೂಡ ಅವನು (ಕರಿಕಾಲಚೋಳ) ಅನೇಕ ತುಮುಲ ಯುದ್ಧಗಳನ್ನು ನಡೆಸಿದನು. ಆದರೆ ಕಡೆಗೆ ವಿಕ್ರಮಾದಿತ್ಯ ಅವನ ಮಗಳನ್ನು ಲಗ್ನವಾಗಿ ಉಭಯರು ಸಂಧಾನಮಾಡಿಕೊಂಡಂತೆ ತೋರುತ್ತದೆ. ಆ ಕಾಲದಲ್ಲಿ ಕರ್ನಾಟಕಸ್ಥರಿಗೂ, ತಮಿಳರಿಗೂ ಅನೇಕ ರೀತಿಯಿಂದ ನಿಕಟ ಸಂಬಂಧವಿದ್ದಿತು....ಅನೇಕ ಶಿವಶರಣರು ತಮಿಳುದೇಶಕ್ಕೆ ಹೋಗಿ ಅಲ್ಲಿ ತಮ್ಮ ಶಿವಾನುಭವದ ನಡೆಯನ್ನು ಪಸರಿಸಿದ್ದೂ ಕಂಡುಬರುತ್ತದೆ. ಆದ್ದರಿಂದ ಚನ್ನಯ್ಯನು ಇವರಂತೆಯೇ ಕರ್ನಾಟಕವನ್ನು ಬಿಟ್ಟು ಕಾಂಚೀಪುರಕ್ಕೆ ಹೋಗಿ ಅಲ್ಲಿ ವಾಸಮಾಡಿದನೆಂದು ತೋರುತ್ತದೆ"[5] ಎಂದು ಅಭಿಪ್ರಾಯಪಡುತ್ತಾರೆ.

ಡಾ॥ ಹಳಕಟ್ಟಿಯವರ ಮೇಲಿನ ಅಭಿಪ್ರಾಯ ಸರಿ ಎಂದು ತೋರುತ್ತದೆ. ಆರನೆಯ ವಿಕ್ರಮಾದಿತ್ಯ ಮತ್ತು ಕರಿಕಾಲಚೋಳರಲ್ಲಿ ಸಂಬಂಧ ಬೆಳೆದ ಬಳಿಕ ಎರಡೂ ನಾಡುಗಳಲ್ಲಿ ಒಂದು ಮಧುರವಾದ ಸಾಂಸ್ಕೃತಿಕ ಸಂಬಂಧ ಉಂಟಾಗಿರಲು ಸಾಧ್ಯ. ಈ ಸಂಬಂಧದಿಂದ ಅನೇಕ ಜನ ಇಲ್ಲಿಂದ ಅಲ್ಲಿಗೆ ಹೋಗಿ, ಅಲ್ಲಿಂದ ಇಲ್ಲಿಗೆ ಬಂದು ನೆಲೆಸಿರುವುದು ಸಾಧ್ಯವೆಂದು ನಂಬಬಹುದು. ಅಲ್ಲದೆ ಆ ಕಾಲದಲ್ಲಿ ಕರ್ನಾಟಕದಲ್ಲಿ ಶರಣಪರಂಪರೆ ಪ್ರಾರಂಭವಾಗಿ ಅದು ದಕ್ಷಿಣ ಭಾರತದಲ್ಲಿ ಹರಡಿಕೊಳ್ಳುತ್ತಿತ್ತೆಂದು ಊಹಿಸಲು ಬಲವಾದ ಆಧಾರಗಳಿವೆ. ಈ ಸಂಪ್ರದಾಯವನ್ನು ಹರಡುವ ಮಹಾಮಣಿಹ ಹೊತ್ತು ಚನ್ನಯ್ಯ ತಮಿಳುನಾಡಿಗೆ ಹೋಗಿರಬೇಕು. ಅಲ್ಲದೆ, ಕರಿಕಾಲಚೋಳನ ಶಿವಭಕ್ತಿ ಆತನನ್ನು ಕಾಂಚಿಗೆ ಆಕರ್ಷಿಸಿರಲೂಬಹುದು.

ಆದರೆ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಮದುವೆಯಾದುದು ವೀರರಾಜೇಂದ್ರನ ಮಗಳನ್ನು ; ಒಂದನೆಯ ಕುಲೋತ್ತುಂಗನ ಮಗಳನ್ನಲ್ಲ. ಆ ಮದುವೆ ಕ್ರಿ.ಶ. ೧೦೭೦ಕ್ಕಿಂತ ಮುಂಚೆ ಆಗಿರಬೇಕು.[6] ಆಗಿನ್ನೂ ಆರನೆಯ ವಿಕ್ರಮಾದಿತ್ಯ ರಾಜನಾಗಿರಲಿಲ್ಲ. ಚನ್ನಯ್ಯ ಕ್ರಿ.ಶ. ೧೦೭೦ರ ತರುವಾಯವಾಗಲೀ ಅಥವಾ ಮೊದಲೇ ಆಗಲೀ ಕರ್ನಾಟಕದಿಂದ ತಮಿಳುನಾಡಿಗೆ ಹೋಗಿರಬೇಕು. ಆತ ಕುಲೋತ್ತುಂಗನ ಕಾಲದಲ್ಲಿಯೂ ಕಂಚಿಯಲ್ಲಿಯೇ ಇರಬೇಕು.

---

[1] ಅದೇ ಪು. ೩೩೮

[2] ಎಚ್. ದೇವೀರಪ್ಪ ಮತ್ತು ಆರ್. ರಾಚಪ್ಪ : 'ಜೇಡರದಾಸಿಮಯ್ಯನ ವಚನಗಳು', ಪ್ರಸ್ತಾವನೆ ಪು. XXV

[3] ಡಾ॥ ಫ. ಗು. ಹಳಕಟ್ಟಿ : 'ಶಿವಶರಣರ ಚರಿತ್ರೆಗಳು', ಭಾಗ I, ಪು. ೩೩೯

[4] ಹರಿಹರ : 'ಮಾದರಚೆನ್ನಯ್ಯನ ರಗಳೆ'

[5] ಡಾ॥ ಫ. ಗು. ಹಳಕಟ್ಟಿ : 'ಶಿವಶರಣರ ಚರಿತ್ರೆಗಳು', ಭಾಗ II, ಪು. ೧೮೦

[6] Dr. P. B. Desai : *A History of Karnataka,* p. 171 (First edition 1970)

ಪೆರಿಯಪುರಾಣವನ್ನು ಬರೆಸಿದ ಈ ಕುಲೋತ್ತುಂಗನೊಡನೆ ಚನ್ನಯ್ಯನ ಸಂಬಂಧ ಬಂದುದು. ಹರಿಹರ ಹೇಳುವ ಕುಲೋತ್ತುಂಗ ಇವನೇ. ಇವನು ಕ್ರಿ.ಶ. ೧೦೭೦ರಿಂದ ೧೧೨೦ರವರೆಗೆ ರಾಜ್ಯವಾಳಿದ. ಇದೇ ಅವಧಿಯಲ್ಲಿ ಚೆನ್ನಯ್ಯನ ಗುಪ್ತಭಕ್ತಿ ಬಯಲಾದುದು. ಗುಪ್ತಭಕ್ತಿ ಬಯಲಾದ ಈ ಪವಾಡ ತಮಿಳುನಾಡಿನಿಂದ ಕನ್ನಡನಾಡಿಗೆ ಬರಲು ಕೆಲವು ಕಾಲ ಹಿಡಿದಿರಬೇಕು. ಈ ಪವಾಡ ಸುಮಾರು ೧೧೦೦ರಲ್ಲಿ ಜರುಗಿದುದೆಂದು ಇಟ್ಟುಕೊಳ್ಳಬಹುದು.

ಜೇಡರದಾಸಿಮಯ್ಯ, ಡೋಹರಕಕ್ಕಯ್ಯ ಮತ್ತು ಮಾದರಚೆನ್ನಯ್ಯನನ್ನು ಕುರಿತು ಕ್ರಿ.ಶ. ೧೧೦೦ರ ಬಳಿಕ ವಚನರಚನೆ ಮಾಡಿದನೆಂಬುದಕ್ಕೆ ಮೇಲಿನ ವಿವೇಚನೆಯಿಂದ ಪುಷ್ಟಿ ದೊರೆಯುತ್ತದೆ.

ಮಾದರಚನ್ನಯ್ಯ ತಮಿಳುನಾಡಿಗೆ ಹೋಗುವುದಕ್ಕಿಂತ ಮುಂಚೆ (೧೦೭೦) ಪ್ರಸಿದ್ಧನಾಗಿರಬೇಕು. ಕ್ರಿ.ಶ. ೧೦೪೦ರಲ್ಲಿ ಹುಟ್ಟಿ ಕ್ರಿ.ಶ. ೧೧೨೦ರವರೆಗೂ ಬಾಳಿರಬೇಕು.

ಹೀಗೆ ಬಸವಪೂರ್ವಯುಗದ ವಚನಕಾರರಲ್ಲಿ ಚನ್ನಯ್ಯ ಮೊದಲಿಗನೆನಿಸುತ್ತಾನೆ.

೨

ಮಾದರಚನ್ನಯ್ಯನ ಜೀವನವನ್ನು ಬಗಿದುನೋಡಿದರೆ ಆತ ಕನ್ನಡನಾಡಿನ ಶರಣರು ಮಾಡಿದ ಕ್ರಾಂತಿಗೆ ಬೀಜರೂಪವೆನಿಸುತ್ತಾನೆ. ಹುಟ್ಟಿನಿಂದ ಬೆಲೆಯಿಲ್ಲ, ಯೋಗ್ಯತೆಯಿಂದ ಬೆಲೆ ಬರುತ್ತದೆ. ಜಾತಿಭಾವನೆ ಸಲ್ಲ, ಸರ್ವರು ಸಮ ಎಂಬ ತತ್ವದ ಸಾಕಾರಮೂರ್ತಿ ಆತ. ಅನುಭಾವ, ಭಕ್ತಿ, ಕಾಯಕ ಮುಂತಾದ ಹೊಸ ಸಮಾಜದ ಆಧಾರ ಸ್ತಂಭಗಳಾದ ತತ್ವಗಳ ಆಚರಣೆಯಲ್ಲಿ ಆತ ನಿಸ್ಸೀಮ.

....ದೇವನೊಲ್ದನ ಕುಲಂ ಸತ್ಕುಲಂ
ಘನಮಹಿಮನೊಲ್ದನಜಾತಿಯೆ ಜಾತಿನಿರ್ಮಲಂ
ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೆ[1]

ಕರಿಕಾಲಚೋಳನ ಈ ಮಾತುಗಳು ನವಮನ್ವಂತರದ ಮಂತ್ರಗಳಾಗಿವೆ ; ಅಂದಿನವರೆಗೆ ನಡೆದು ಬಂದ ಸಂಪ್ರದಾಯದ ತಾಯಿಬೇರನ್ನೇ ಅಲುಗಿಸಿತು ಚನ್ನಯ್ಯನ ಜೀವನ.

ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ !
ತರ್ಕ ತರ್ಕಿಸಲಱಿಯದೆ ಮೂಗುವಟ್ಟಿದ್ದಿತ್ತಯ್ಯಾ !
ಆಗಮ ಹೆಱತೊಲಗಿ ಅಗಲಿದ್ದಿತ್ತಯ್ಯಾ
ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ ![2]

ವೇದ, ಆಗಮ, ತರ್ಕ, ಶಾಸ್ತ್ರ—ಹಿಂದಿನ ಕಾಡುಕುಟ್ಟುವ ನಂಬುಗೆಗಳೆಲ್ಲ ಏರುಪೇರಾದುವು. ಚನ್ನಯ್ಯ ನವಸಮಾಜದ- ಸರ್ವಸಮಾನತೆಯ, ಭಕ್ತಿ, ಅನುಭಾವ, ಕಾಯಕ, ದಾಸೋಹದ ತತ್ವಗಳಿಂದ ಕೂಡಿದ, ಸಕಲಜೀವರ ಲೇಸಬಯಸುವ ನವಸಮಾಜದ ಮುಂಬೆಳಗಾಗಿ ಜೀವಿಸಿದ ಕಾರಣಿಕಪುರುಷ.

ಮಾದರಚನ್ನಯ್ಯನ ವಚನಗಳು ನವಸಮಾಜದ ಸ್ಪಷ್ಟ ಹೊಳಹುಗಳನ್ನೊಳಗೊಂಡಿವೆ. ಆತನ ವಚನಗಳಲ್ಲಿ ಹೆಚ್ಚಾಗಿ ಕುಲದ ಸಮಸ್ಯೆಯೇ ಎದ್ದುಕಾಣುತ್ತದೆ. ನವಸಮಾಜ ಮೊಟ್ಟಮೊದಲಿಗೆ ಕುಲದ ಸಮಸ್ಯೆಯನ್ನೆ ಬಗೆ ಹರಿಸಬೇಕಾಗಿತ್ತು ; ಸರ್ವಸಮಾನತೆ ತರುವವರೆಗೆ ಯಾವ ತತ್ವಗಳೂ ಜನಜೀವನದಲ್ಲಿ ನೆಲೆಗೊಳಿಸಲು ಸಾಧ್ಯವಿರಲಿಲ್ಲ. ಈ ಜಾತಿಯ ಸಮಸ್ಯೆ ಸಮಾಜದಲ್ಲಿ ನೂರಾರು ಸಮಸ್ಯೆಗಳನ್ನುಂಟುಮಾಡಿತ್ತು. ಅವೆಲ್ಲವುಗಳನ್ನು ಹೊಡೆದುಹಾಕಿ ನವ ಸಮಾಜ ನಿರ್ಮಾಪಕರು ಸಮಾನತೆಯನ್ನು ತರಬೇಕಾಗಿತ್ತು. ಆದುದರಿಂದ ಪ್ರತಿಯೊಬ್ಬ ವಚನಕಾರ ಕುಲದ ಸಮಸ್ಯೆ ಎತ್ತಿಕೊಳ್ಳುತ್ತಾನೆ. ಬಸವಣ್ಣನವರ ಕಾಲಕ್ಕಿಂತಲೂ ಚನ್ನಯ್ಯ ಹೆಚ್ಚಾದ ಸಮಸ್ಯೆಗಳನ್ನು ಎದುರಿಸಿರಬೇಕೆಂದು ಅವನ ವಚನಗಳಿಂದ ಕಂಡುಬರುತ್ತದೆ.

[1] ಬಿ. ವಿ. ಮಲ್ಲಾಪುರ (ಸಂ) : 'ಹರಿಹರನ ರಗಳೆಗಳು : ಮಾದಾರಚೆನ್ನಯ್ಯಗಳ ಮಹಾತ್ಮೆ', ಪು. ೨೫೭

[2] ಡಾ॥ ಆರ್. ಸಿ. ಹಿರೇಮಠ (ಸಂ) : 'ಬಸವಣ್ಣನವರ ವಚನಗಳು', ವಚನ ೭೪೯

ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ
ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ
ವ್ಯಾಪಾರದೊಳಗಾಗಿ ಕೃಷಿಯಮಾಡುವುದಕ್ಕೆ ಶೂದ್ರನಾಗಿ
ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ
ಎರಡು ಕುಲವಲ್ಲದೆ
ಹೊಲೆ ಹದಿನೆಂಟು ಜಾತಿ ಎಂಬ ಕುಲವಿಲ್ಲ
ಬ್ರಹ್ಮವನರಿದಲ್ಲಿ ಬ್ರಾಹ್ಮಣ
ಸರ್ವಜೀವ ಹತಕ್ಕೊಳಗಾಗಿದ್ದಲ್ಲಿ ಸಮಗಾರ
ಈ ಉಭಯವನರಿದು ಮರೆಯಲಿಲ್ಲ
ಕೈಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ
ಅರಿನಿಜಾತ್ಮ ರಾಮರಾಮನ[1]

ಆವ ಕುಲವಾದಡೂ ಅರಿದಲ್ಲಿಯೇ ಪರತತ್ವಭಾವಿ
ಮರೆದಲ್ಲಿಯೇ ಮಾಯಾಮಲಸಂಬಂಧಿ
ನಡೆನುಡಿ ಸಿದ್ಧಾಂತವಾದಲ್ಲಿ ಕುಲಸೂತಕವಿಲ್ಲ
ಆಚಾರವೇ ಕುಲ ಅನಾಚಾರವೇ ಹೊಲೆ
ನರಕುಲಹಲವಾದಲ್ಲಿ ಯೋನಿಯ ಉತ್ಪತ್ತಿ ಒಂದೇ ಭೇದ
ಎಲ್ಲಕ್ಕೂ ನೀರು  ನೆಲ ಸೂರ್ಯ  ಸೋಮ ಆರೈದು  ನೋಡುವ  ದೃಷ್ಟಿ ಒಂದೇ
ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ,
ದಧೀಚಿ ಕೀಲಿಗ. ಕಶ್ಯಪ ಕಮ್ಮಾರ, ರೋಮಜ ಕಂಚುಗಾರ,
ಕೌಂಡಿಲ್ಯ ನಾವಿದನೆಂಬುದನರಿದು
ಮತ್ತೆ ಕುಲವುಂಟೆಂದು ಹೋರಲೇತಕ್ಕೆ ?
ಇಂತೀ ಸಪ್ತಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲ್ಲಿ ನಡೆದು ವಿಪ್ರರು ನಾವು ಘನವೆಂದು
ಹೋರುವ ಹೊತ್ತುಹೋಕರ ಮಾತೇತಕ್ಕೆ?
ಕೈಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ
ಅರಿನಿಜಾತ್ಮರಾಮರಾಮನ

ಮೇಲಿನ ವಚನಗಳಲ್ಲಿ ಚನ್ನಯ್ಯ ಕುಲಜಾತಿಗಳನ್ನು ಕುರಿತು ಬಹು ಸಮರ್ಥ ರೀತಿಯ ವಿಮರ್ಶೆ ಮಾಡಿದ್ದಾನೆ. ಕುಲದ ಮೂಲಬೇರನ್ನೇ ಕಿತ್ತೆಸೆದಿದ್ದಾನೆ.

ಚನ್ನಯ್ಯ ಕೆರವ ಹೊಲಿಯುವ ಕಾಯಕ ಮಾಡಿದಾತ. ಕೆಳಗಿನ ವಚನದಲ್ಲಿ ಕಾಯಕ ರೂಪಕಮಾಡಿ ಸಮಗಾರ ವೃತ್ತಿಯನ್ನು ಅನುಭಾವದ, ಸಾಮರಸ್ಯದ ಮಟ್ಟಕ್ಕೆ ಏರಿಸಿದ್ದನ್ನು ಕಾಣಬಹುದು. ಕಾಯಕವೇ ಕೈಲಾಸ, ಕಾಯಕವೇ ಸಾಮರಸ್ಯ ಎಂಬುದನ್ನು ತೋರಿ ಆತ ಬದುಕಿದ್ದಾನೆ.

ಸ್ಥೂಲಸೂಕ್ಷ್ಮಕಾರಣವೆಂಬ ಮೂರು ಕಂಬವ ನೆಟ್ಟು
ಆಗು ಭೇಗು ಎಂಬ ದಡಿಗೋಲಿನಲ್ಲಿ
ಆಗಡದ ಎಮ್ಮೆಯ ಚರ್ಮವ ತೆಗೆದು
ಉಭಯ ನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವಮಾಡಿ
ಭಾವವೆಂಬ ತಿಗುಡಿನಲ್ಲಿ ಸರ್ವಸಾರವೆಂಬ ಕಾರದ ನೀರ ಹೊಯ್ದು
ಅಟ್ಟೆಯ ದುರ್ಗುಣಕಟ್ಟು ಮೆಟ್ಟಡಿಯವರಿಗೆ ಮೆಟ್ಟಿಸಬಂದೆ
ಮೆಟ್ಟಡಿಯ  ತಪ್ಪಲಕಾಯದ ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ
ಕೈಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ
ಅರಿನಿಜಾತ್ಮರಾಮರಾಮನ

---

1 ಶ್ರೀ ಚೆನ್ನಮಲ್ಲಿಕಾರ್ಜುನರು ಸಂಪಾದಿಸಿ ಪ್ರಕಟಿಸಿದ 'ಸರ್ವಪುರಾತನರ ವಚನ' ಎಂಬ ಗ್ರಂಥದಿಂದ ಇಲ್ಲಿ ಉದಾಹರಿಸಿದ ಚೆನ್ನಯ್ಯನ ಎಲ್ಲ ವಚನಗಳನ್ನು ಎತ್ತಿಕೊಂಡಿದೆ.

ಅನುಭಾವ, ಸಾಮರಸ್ಯಕ್ಕೆ ಉದಾಹರಣೆ :

ವಸ್ತು ತನ್ನಯ ಭಾವದಲ್ಲಿ ನಿಶ್ಚಯವಾಗಿ ನಿಂದಲ್ಲಿ
ಕೃತ್ಯ ಅಕೃತ್ಯವೆಂಬ ಹೆಚ್ಚು ಕುಂದಿಲ್ಲ
. . . . . . . . . . . . . . . . . .
ಉಮ್ಮಳ ದುಮ್ಮಳವೆಂಬ ಉಭಯವಳಿದ ಸುಮ್ಮಾನ ಸುಖಿಗೆ
ಕರ್ಮ ವಿಕರ್ಮವೆಂಬುದೊಂದೂ ಇಲ್ಲ....

ಮಾದರಚನ್ನಯ್ಯನ ವಚನಗಳಲ್ಲಿ ಸೌಂದರ್ಯ ಕಡಮೆ ; ಶೈಲಿ ನಯವಾಗಿಲ್ಲ. ಆದರೆ ಕೊಡುವ ಉದಾಹರಣೆ ದೃಷ್ಟಾಂತಗಳು ಸೊಗಸಾಗಿವೆ. ನೇರವಾಗಿ ಹೇಳುವುದರಿಂದ ಒರಟೂ ಹಿತವೆನಿಸುತ್ತದೆ. ಭಾಷೆಯನ್ನು ದುಡಿಸಿ ಕೊಳ್ಳುವಿಕೆಯಲ್ಲಿ ಹೊಸತನವಿದೆ. ಅದು ಅರ್ಥವಾಹಕವಾಗಿ, ಅನುಭಾವ ವಾಹಕವಾಗಿ ಪಳಗಿದೆಯಾದರೂ ಮೃದು ವಾಗಿಲ್ಲ, ಚೆಲುವಾಗಿಲ್ಲ. ಅಟ್ಟೆ, ದಡಿಗೋಲು, ಚರ್ಮ, ಮೆಟ್ಟಡಿ, ಅಡಿಗೂಂಟ, ಕೈಯುಳಿಗತ್ತಿ, ತಿತ್ತಿ, ಉಮ್ಮಳ ದುಮ್ಮಳ ಮುಂತಾದ ಸಾಮಾನ್ಯ ಶಬ್ದಗಳ ಬಳಕೆಯಿಂದ ಅನುಭಾವ ಹೇಳುವುದು ತೀರ ಹೊಸತನ. ಚನ್ನಯ್ಯನಿಂದ ಭಾಷೆಗೆ ಅಂಟಿದ ಮಲಿನತೆ, ದೂರಾಗಿದೆ ; ಮೈಲಿಗಿ ಮಡಿಚಿಟ್ಟು ಮುಂತಾದ ಬಂಧನಗಳಿಂದ ಅದು ಬಿಡುಗಡೆಪಡೆದಿದೆ; ಅತೀಂದ್ರಿಯ ಅನುಭವ ಮೂಡಿಸುವ ಶಕ್ತಿ ಅದಕ್ಕೆ ಬಂದಿದೆ.

ರೂಪಕ, ಉಪಮಾನ, ನೇರ ಹೇಳುವಿಕೆ, ದಿಟ್ಟನಿಲುವು, ಅತಿಸೂಕ್ಷ್ಮ ವಿಚಾರಗಳನ್ನು ಒಳಗೊಳ್ಳುವ ಭಾಷೆ—ಇವುಗಳನ್ನು ನೋಡಿದರೆ ವಚನರಚನೆ ಪ್ರಾರಂಭವಾಗಿ ಆಗಲೇ ಬಹಳ ಕಾಲವಾಗಿರಬೇಕು ಎನಿಸುತ್ತದೆ. ಆದರೆ ನಮಗೀಗ ದೊರಕಿದ ವಚನಗಳಲ್ಲಿ ಇವೇ ಮೊದಲ ವಚನಗಳು : ಈತನೇ ಮೊದಲ ವಚನಕಾರ.

---

ಭಾವ ಶುದ್ಧವಾಗಿಪ್ಪುದೇ ಗುರುಪೂಜೆ;
ಜ್ಞಾನಶುದ್ಧವಾಗಿಪ್ಪುದೇ ಲಿಂಗಪೂಜೆ;
ತ್ರಿಕರಣಶುದ್ಧವಾಗಿ ತ್ರಿವಿಧಮಲ
ಶುದ್ಧವಾಗಿ ನಿಂದುದೇ ಜಂಗಮಪೂಜೆ;
ಆ ತ್ರಿವಿಧ ಭೇದದಲ್ಲಿ ತ್ರಿವಿಧಾರ್ಪಣವನರ್ಪಿಸಿ
ನಿಂದುದೇ ಚಂದೇಶ್ವರ ಲಿಂಗಕ್ಕರ್ಪಿತವಯ್ಯಾ.

ನುಲಿಯ ಚಂದಯ್ಯ

# “ಪುರಾಣ” ಮತ್ತು “ಕಾವ್ಯ”—ಬಸವಣ್ಣನ ಬಗ್ಗೆ

**ಡಾ॥ ಎಂ. ಚಿದಾನಂದಮೂರ್ತಿ**

‘ಪುರಾಣ’ ಎಂಬ ಮಾತಿಗೆ ಪ್ರಾಚೀನವಾದುದು, ಹಳೆಯದು ಎಂಬ ಅರ್ಥವಿದೆ. ಎಂದೋ ಆಗಿಹೋದ ಸಂಗತಿಗಳನ್ನು ನಿರೂಪಿಸುವುದು ಪುರಾಣಕೃತಿ ಅರ್ಥಾತ್ ಪುರಾಣ. ಪುರಾಣಕಾರನ ದೃಷ್ಟಿ ಯಾವಾಗಲೂ ಹಿಂದಿನದರ ಕಡೆ ಇರುತ್ತದೆ ಎಂಬುದು ಇದರಿಂದ ಸೂಚಿತವಾಗುತ್ತದೆ.

ಸಂಸ್ಕೃತದಲ್ಲಿ ಪುರಾಣ ಸಾಹಿತ್ಯ ಅಪಾರವಾಗಿದೆ. ಸುಪ್ರಸಿದ್ಧ ಮಹಾಪುರಾಣಗಳು ಮತ್ತು ಉಪ-ಪುರಾಣಗಳಲ್ಲದೆ, ಸಾವಿರಾರು ಪುರಾಣ ಕೃತಿಗಳು ಅಲ್ಲಿ ಹುಟ್ಟಿವೆ. ಅವುಗಳಲ್ಲಿ ಬರುವ ಸಂಗತಿಗಳ ವೈವಿಧ್ಯ, ನಿರೂಪಣೆಯಲ್ಲಿ ಏಕಮುಖತೆಯಿಲ್ಲದಿರುವುದು, ಕಲ್ಪಿತ ಸಂಗತಿಗಳ ಆಧಿಕ್ಯ, ಕಾಲಕಾಲಕ್ಕೆ ಪುರಾಣಗಳು ಬೆಳೆದು ಬಂದಿರುವುದು ಇತ್ಯಾದಿ ಕಾರಣಗಳಿಂದಾಗಿ ಪುರಾಣ ಸಾಹಿತ್ಯ ಮೊದಮೊದಲು ವಿದ್ವಾಂಸರ ಗಮನವನ್ನು ಸೆಳೆಯಲಿಲ್ಲ. ಈಚೆಗೆ ಅವುಗಳ ಮಹತ್ವವನ್ನು ವಿದ್ವಾಂಸರು ಮನಗಾಣುತ್ತಿದ್ದಾರೆ. ಅವುಗಳ ಕ್ರಮಬದ್ಧವಾದ ಅಧ್ಯಯನ ಭಾರತೀಯ ಸಂಸ್ಕೃತಿಯನ್ನು ತಿಳಿಸಿಕೊಡುತ್ತದೆ: ಇದಕ್ಕೆ ನಿದರ್ಶನವಾಗಿ *Cultural History from the Vayupurana* ಎಂಬ ಗ್ರಂಥವನ್ನು ನೋಡಬಹುದು.

ಪುರಾಣವನ್ನು (*myth*) ‘ಪ್ರಾಚೀನರ ಭಾಷೆ’ ಎಂದು ಕರೆಯುವುದುಂಟು. ಜಗತ್ತು ಮತ್ತು ಜೀವನಗಳನ್ನು ಕತೆ ಸಾದೃಶ್ಯ ಸಾಮತಿಗಳ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನ ಅಲ್ಲಿ ಕಾಣುತ್ತದೆ. ಒಬ್ಬ ವ್ಯಕ್ತಿ ಅಲ್ಲಿ ಪ್ರಧಾನವಾಗಿರಬಹುದು ಅಥವಾ ಇಲ್ಲದಿರಬಹುದು, ವ್ಯಕ್ತಿ ಪ್ರಧಾನವಾಗಿದ್ದರೂ, ಅವನೊಬ್ಬನನ್ನೇ ಕೇಂದ್ರ ವ್ಯಕ್ತಿಯಾಗಿ ಮಾಡಿಕೊಂಡು, ಎಲ್ಲ ಗಮನವನ್ನು ಅವನತ್ತ ಕೇಂದ್ರೀಕರಿಸಿ ಚಿತ್ರಿಸುವುದು ಪುರಾಣಗಳಲ್ಲಿ ಅಪೂರ್ವ. ವ್ಯಕ್ತಿಯ (ವ್ಯಕ್ತಿಗಳ ಜೊತೆ) ಒಂದು ಇಡೀ ಪರಂಪರೆಯನ್ನು ಪುರಾಣ ಕೊಡುತ್ತದೆ. ಸಮಗ್ರತೆ ಅದರ ಪ್ರಧಾನ ಲಕ್ಷಣ. ಆದ್ದರಿಂದಲೇ ಸಂಸ್ಕೃತ ಪುರಾಣಗಳಲ್ಲಿ ಸೃಷ್ಟಿಪೂರ್ವ ಸ್ಥಿತಿ, ಸೃಷ್ಟಿ ಕರ್ಮ, ದೇವಾನುದೇವತೆಗಳ ಕತೆ, ಭೂಲೋಕದಲ್ಲಿ ಆಳಿದ ರಾಜರು, ಅವರ ವಂಶ, ಸ್ಥಳಪುರಾಣಗಳು, ಶಿಲ್ಪ, ಕಾವ್ಯಮೀಮಾಂಸೆ, ವಾಸ್ತು, ಮತಗಳು ಇತ್ಯಾದಿ ಇತ್ಯಾದಿ ಎಷ್ಟೆಷ್ಟೋ ಸಂಗತಿಗಳು ಬರುತ್ತವೆ. ಇಡೀ ಜಗತ್ತನ್ನು ಸಮಗ್ರವಾಗಿ ನೋಡುವ ದೃಷ್ಟಿ ಪುರಾಣಗಳದು. ಇಲ್ಲಿ ಸಂಕ್ಷಿಪ್ತವಾಗಿ, ಸಾರವತ್ತಾಗಿ ಹೇಳುವುದೆಂಬುದಿಲ್ಲ. ಎಲ್ಲವನ್ನೂ ವಿವರಿಸಬೇಕು, ಆದಷ್ಟು ಹೆಚ್ಚು ವಿವರಗಳಿರಬೇಕು ಎಂಬುದೇ ಪ್ರಧಾನ ದೃಷ್ಟಿ. ಪುರಾಣದ ಮಧ್ಯೆ ಈಚಿನವರು ಯಾರೋ ಒಂದು ಕತೆಯನ್ನು ಸೇರಿಸಿದರೆ ಅದು ನಿರಾಕರಣೀಯವೇನೂ ಅಲ್ಲ. ಪುರಾಣಗಳು ಕಾಲದಿಂದ ಕಾಲಕ್ಕೆ ಬೆಳೆದುಬಂದ ರೀತಿ ಹೀಗೆ. ಪ್ರಸಿದ್ಧ ಪುರಾಣಗಳ ಕರ್ತೃತ್ವವನ್ನು ವ್ಯಾಸರಿಗೆ ಆರೋಪಿಸಿದ್ದರೂ, ಅವುಗಳು ಅಜ್ಞಾತ ಲೇಖಕ ಕೃತ ಎಂದೇ ತೆಗೆದುಕೊಳ್ಳಬೇಕಾಗುತ್ತದೆ. ಪುರಾಣಗಳು ಒಬ್ಬನ ಸೃಷ್ಟಿಯಲ್ಲ: ಹಲವರ ಸೃಷ್ಟಿ; ಅವು ಎಲ್ಲರಿಗೂ ಸೇರಿದಂಥವು ಎಂಬ ಭಾವನೆಯೇ ಮೊದಲಿಂದ ರೂಢವಾಗಿದೆ. ಸಂಸ್ಕೃತ ಪುರಾಣಗಳು ಸಂಸ್ಕೃತ ಭಾಷೆಯಲ್ಲಿದ್ದರೂ ಅವುಗಳು ಒಂದು ರೀತಿಯಲ್ಲಿ ಜಾನಪದವೂ ಹೌದು ಎಂಬುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ವೇದಗಳಿಗೆ ಅನಧಿಕಾರಿಗಳಾದ ಸ್ತ್ರೀ, ಶೂದ್ರರ ಬೋಧನೆಗಾಗಿ ಪುರಾಣಗಳು ರಚಿತವಾಗಿವೆ ಎಂಬ ಮಾತು ಅರ್ಥಪೂರ್ಣವಾದುದು. ಪುರಾಣಗಳು ಮುಖ್ಯವಾಗಿ ವಿದ್ವಾಂಸರಿಗಲ್ಲ, ಸಾಮಾನ್ಯ ಜನತೆಗಾಗಿ.

* * *

ಮೇಲಿನ ಕೆಲ ಸಂಗತಿಗಳ ಹಿನ್ನೆಲೆಯಲ್ಲಿ, ಕನ್ನಡದ ಎರಡು ಕೃತಿಗಳನ್ನು ಇಲ್ಲಿ ಪರಿಶೀಲಿಸುತ್ತೇನೆ. ಅವೆರಡರ ವಸ್ತುವೂ ಒಂದೇ: ಬಸವಣ್ಣನವರು. ಆದರೆ ಆ ಎರಡು ಕೃತಿಗಳಲ್ಲಿ ಮೂಲಭೂತವಾದ ದೃಷ್ಟಿಭೇದವಿದೆ. ಅದು ಈ ಪ್ರಬಂಧದ ಮುಖ್ಯ ವಸ್ತು.

ಬಸವಣ್ಣನವರಿಗೆ ಸಂಬಂಧಿಸಿದಂತೆ ಸು. ೧೨೦೦–೧೨೩೦ರ ಸುಮಾರಿನಲ್ಲಿದ್ದ ಹರಿಹರ "ಬಸವರಾಜದೇವರ ರಗಳೆ"ಯನ್ನು ಬರೆದ. ಬಹುಶಃ ಅವನಾದ ಬಳಿಕ, ಅದೇ ಶತಮಾನದಲ್ಲಿದ್ದ ಪಾಲ್ಕುರಿಕೆ ಸೋಮನಾಥ ತೆಲುಗಿನಲ್ಲಿ "ಬಸವಪುರಾಣಮು" ಎಂಬ ಕೃತಿಯನ್ನು ರಚಿಸಿದ. ಇದನ್ನು ಭೀಮಕವಿ ಕ್ರಿ.ಶ. ೧೩೬೯ರಲ್ಲಿ "ಬಸವಪುರಾಣ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ. ಈ ಅನುವಾದ ಬಹುಮಟ್ಟಿಗೆ ಮೂಲವನ್ನೇ ಅನುಸರಿಸಿರುವುದರಿಂದ ಭೀಮ ಕವಿಯ ಕಾವ್ಯದ ಬಗ್ಗೆ ಹೇಳಿದ್ದೆಲ್ಲ ಪಾಲ್ಕುರಿಕೆ ಸೋಮನಿಗೆ ಅನ್ವಯವಾಗುತ್ತದೆ.

ಹರಿಹರನದು ಮುಖ್ಯವಾಗಿ ಕಾವ್ಯದೃಷ್ಟಿ : ಅವನ ಕೃತಿಯ ಹೆಸರೇ ಹೇಳುವಂತೆ 'ಬಸವರಾಜದೇವ'ನ ಬಗ್ಗೆ ಬರೆದಿರುವ ರಗಳೆಯ ರೂಪದ ಕಾವ್ಯ ಅವನದು. 'ರಾಜ' ಎಂಬುದನ್ನು ಗಮನಿಸಬೇಕು : ಬಿಜ್ಜಳನಂತೆಯೇ ಇವನೂ ರಾಜ. ಬಿಜ್ಜಳ ಲೌಕಿಕ ರಾಜ, ಬಸವಣ್ಣ ಆಧ್ಯಾತ್ಮಿಕ ರಾಜ ಮತ್ತು ಬಿಜ್ಜಳನಿಗಿಂತ ಒಂದು ಕೈ ಮಿಗಿಲು ಎಂಬುದು ಸ್ಪಷ್ಟವಾಗಿ ಧ್ವನಿತವಾಗುತ್ತದೆ. ಕಾವ್ಯದಲ್ಲಿಯೂ ಬಸವ ತಾನು ಬಿಜ್ಜಳನ ಕೈಕೆಳಗಿನ ಮಂತ್ರಿಯಾಗಿದ್ದರೂ ಅವನಿಗೆ ತಾನು ಸರಿಸಮಾನನಂತೆ ನಡೆದುಕೊಳ್ಳುವ ರೀತಿಯಲ್ಲಿಯೇ ಚಿತ್ರಿತನಾಗಿದ್ದಾನೆ. ಅವನೇ ಇಲ್ಲಿಯ ಕೇಂದ್ರವ್ಯಕ್ತಿ: ಎಲ್ಲ ಘಟನೆಗಳಿಗೂ ಅವನು ಒಂದಲ್ಲ ಒಂದು ರೀತಿ ಸಂಬಂಧಿಸಿದ್ದಾನೆ. ಅವನು ಬರದ ಅಧ್ಯಾಯವಿಲ್ಲ, ಕತೆಯಿಲ್ಲ. ಕವಿಯ ಗಮನ ಬಸವನನ್ನು ಬಿಟ್ಟು ಅತ್ತ ಇತ್ತ ಸರಿಯುವುದಿಲ್ಲ. ಆದ್ದರಿಂದ ಹರಿಹರನ ಕೃತಿ ಏಕಮುಖ ಉದ್ದೇಶವುಳ್ಳ ಕಾವ್ಯವಾಗಿ ತೋರುತ್ತದೆ. ಇಲ್ಲಿ ಇತರ ಪಾತ್ರಗಳು ಬಂದರೂ ಅವು ಬಸವನಿಗೆ ಸಂಬಂಧಿಸಿದಂತೆ ಮಾತ್ರ ಕಾಣಿಸಿಕೊಳ್ಳಲು ಸಾಧ್ಯ.

ಭೀಮಕವಿಯ (ಪಾಲ್ಕುರಿಕೆ ಸೋಮನ) "ಬಸವಪುರಾಣ" ("ಬಸವಪುರಾಣಮು") ಹೆಸರೇ ಹೇಳುವಂತೆ ಪುರಾಣ. ಬಸವಣ್ಣ ಈ ಕೃತಿಯ ಪ್ರಮುಖ ವ್ಯಕ್ತಿಯೇ. ಆದರೆ ಕೃತಿಕಾರನದು ಪ್ರಮುಖವಾಗಿ ಪುರಾಣದೃಷ್ಟಿ. ಬಸವನನ್ನು ಒಂದು ಮಹಾ ಪರಂಪರೆಯ ಅಂಗವಾಗಿ ಸಮಗ್ರವಾಗಿ ನೋಡಲು ಕೃತಿಕಾರ ಬಯಸುತ್ತಾನೆ. ಇಲ್ಲಿ ಇತರ ಅನೇಕ ಐತಿಹಾಸಿಕ ವ್ಯಕ್ತಿಗಳ ಕತೆಗಳಿವೆ ಇಲ್ಲಿ ಪೌರಾಣಿಕವಾದ ಕೋಳೂರು ಕೊಡಗೂಸಿನ, ಬೇಡರ ಕಣ್ಣಪ್ಪನ ಕತೆಗೆ ಮತ್ತು ಅಂತಹ ಇತರ ಕತೆಗಳಿಗೂ ಸ್ಥಾನವಿದೆ. ಅವರೆಲ್ಲರೂ ಭಕ್ತರು ಮತ್ತು ಬಸವ ಅವರ ಪರಂಪರೆಗೆ ಸೇರಿದವನು. ಅವರ ಕತೆ ಅವನ ರಕ್ತಗತವಾಗಿದೆ : ಅವರ ಆದರ್ಶಗಳು ಅವನನ್ನು ರೂಪಿಸಿವೆ. ಬಸವನ ಜೀವನ ರೂಪಿತವಾಗಲು ಹಿಂದಿನ ಪರಂಪರೆಯಂತೆಯೇ ಅವನ ಸಮಕಾಲೀನ ಘಟನೆಗಳೂ ವ್ಯಕ್ತಿಗಳೂ ಮುಖ್ಯರು ತಾನೆ : "ಬಸವ ಪುರಾಣ"ವನ್ನು ಓದಿದರೆ ಒಂದು ಸಮಗ್ರ ಪರಂಪರೆಯ ಪರಿಚಯವಾಗುತ್ತದೆ. ಅದರ ಜನಪ್ರಿಯತೆಗೆ ಇದೂ ಒಂದು ಕಾರಣವೆಂಬುದನ್ನು ಮರೆಯಬಾರದು.

ಹರಿಹರನ ಬಸವರಾಜದೇವರ ರಗಳೆಯ ಕತೆ ಇತಿಹಾಸವಲ್ಲದಿದ್ದರೂ ಕಾಲ ಮತ್ತು ರೀತಿಗಳೆರಡರ ದೃಷ್ಟಿಯಿಂದಲೂ ಇತಿಹಾಸಕ್ಕೆ ಸಮೀಪ. ಬಸವನ ಬಗ್ಗೆ ಆಸಕ್ತರಾದ ಆಧುನಿಕರಿಗೆ ಆ ಕಾರಣದಿಂದಲೇ ಆ ಕೃತಿ ಪ್ರಿಯವಾಗುವುದು (ಹೀಗೆ ಪ್ರಿಯವಾಗಲು ಅದರ ಕಾವ್ಯಗುಣವೂ ಕಾರಣ). ಅದು ಓದಿ ಸಂತೋಷಪಡಬಹುದಾದ ಕಾವ್ಯ. ಆದರೆ "ಬಸವಪುರಾಣ" ಓದಿಸಿ ಕೇಳಿ ಭಕ್ತಿಭಾವ ಭರಿತವಾಗಲು ಅರ್ಹವಾದ ಪುರಾಣ. ಅದರ ಭಿತ್ತಿ ವಿಶಾಲ. ಇಲ್ಲಿ ಕತೆಗಳು ಹೆಚ್ಚು : ಎಷ್ಟೋ ಕತೆಗಳಲ್ಲಿ ಬಸವನ ಮಾತೇ ಬರುವುದಿಲ್ಲ : ಬಸವನಿಗೂ ಆ ಕತೆಗೂ ಪ್ರತ್ಯಕ್ಷ ಸಂಬಂಧವೇ ಇಲ್ಲ. ಆ ಕತೆಗಳನ್ನು ಓದಿ ವ್ಯಾಖ್ಯಾನಿಸುವವರು ಮಧ್ಯೆ ಮಧ್ಯೆ ವಿವರಿಸಲಿಕ್ಕೆ, ಬೇರೆ ಕತೆಗಳನ್ನು ಸೇರಿಸಿ ವಿವರಿಸಲಿಕ್ಕೆ ಅವಕಾಶವಿದೆ. ಸಾಮಾನ್ಯ ಜನತೆಗೆ ಇದು ಪ್ರಿಯವಾಗುತ್ತದೆ. ದಿನದಿನವೂ ಸ್ವಲ್ಪ ಕೇಳುತ್ತ ಅಲ್ಲಿಯ ಭಕ್ತರ ಕತೆಗಳನ್ನು ಮೆಲುಕುಹಾಕುತ್ತ ಆ ಭಕ್ತರಿಗೆಲ್ಲ ನಾಯಕಮಣಿಯಂತಿರುವ ಬಸವನ ಕತೆಯನ್ನು ಪರಿಚಯ ಮಾಡಿಕೊಳ್ಳುತ್ತಾರೆ. ಕೃತಿಯ ಕಾವ್ಯಗುಣ ಇಲ್ಲಿ ಅಮುಖ್ಯವಾಗುತ್ತದೆ. ಅದರ ಪುರಾಣತ್ವ ಪ್ರಧಾನವಾಗುತ್ತದೆ, ಜನಗಳ ದೃಷ್ಟಿಯಲ್ಲಿ.[1] ಪುರಾಣಕರ್ತೃವಿಗೆ ಬಸವ ಒಂದು ಕಾಲ, ದೇಶಕ್ಕೆ ಬದ್ಧನಾದ ವ್ಯಕ್ತಿಯಾಗದೆ, ಅವನು ತತ್ವಶಃ ಯಾವ ಕಾಲಕ್ಕಾದರೂ ಸೇರಬಹುದಾದ ಒಂದು ಮಾದರಿಯಾಗುತ್ತಾನೆ. ಎಲ್ಲಾ ಕಾಲದ ಒಂದು ಆದರ್ಶವಾಗುತ್ತಾನೆ. ಅವನು ಬಿಜ್ಜಳನ ಕಾಲದಲ್ಲಿದ್ದುದರಿಂದ ಬಿಜ್ಜಳನ ಹೆಸರು ಬರುವುದು ಅನಿವಾರ್ಯ. ಸಾಮಾನ್ಯ ಜನತೆಗೂ ಇತಿಹಾಸದಲ್ಲಿ ಆಸಕ್ತಿ ಅಷ್ಟಕ್ಕಷ್ಟೆ! ಬಸವನ ಹಿರಿಮೆ, ಮಹತ್ಕಾರ್ಯ, ಪವಾಡ ಇವೇ ಅವರಿಗೆ ಇತಿಹಾಸ ಮತ್ತು ಮುಖ್ಯ. ಅವನು ಯಾವ ಕಾಲದಲ್ಲಿದ್ದ ಎಂಬುದು ಮುಖ್ಯ. ಬಸವ ಯಾವ ಪರಂಪರೆಯ ಅಂಗವಾಗಿ, ಹೇಗೆ ಬದುಕಿದ ಎಂಬುದರ ಸಾರ ಅವರಿಗೆ ದೊರಕಿದರೆ ಸಾಕು : ಇತಿಹಾಸವನ್ನು ಕಟ್ಟಿಕೊಂಡು ಅವರಿಗೇನು ! "ಕಾವ್ಯ",

---

[1] ಆಧುನಿಕ ದೃಷ್ಟಿಗೂ 'ಬಸವಪುರಾಣ' ಒಳ್ಳೆಯ ಕಾವ್ಯವೆಂಬುದನ್ನು ನಾವು ಮರೆಯಬಾರದು.

"ಪುರಾಣ"ಗಳ ಕಲ್ಪನೆಯ ವ್ಯತ್ಯಾಸದ ಹಿನ್ನೆಲೆಯಲ್ಲಿ ಹರಿಹರ ಮತ್ತು ಭೀಮಕವಿಯ (ಅರ್ಥಾತ್ ಪಾಲ್ಕುರಿಕೆ ಸೋಮನ) ಕೃತಿಗಳನ್ನು ಪರಿಶೀಲಿಸಿದಾಗ. ಪುರಾಣದೃಷ್ಟಿಯು ಕಾವ್ಯದೃಷ್ಟಿಗಿಂತ ಕನಿಷ್ಠವಾದದ್ದೆಂದು ಭಾವಿಸುವ ಅಗತ್ಯವೇನೂ ತೋರುವುದಿಲ್ಲ. ಕಾವ್ಯ. ಪುರಾಣಗಳ ದೃಷ್ಟಿಯಿಂದ ನೋಡಿದಾಗ, ಹರಿಹರ, ಭೀಮಕವಿಗಳ ಕೃತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆಂಬುದನ್ನು ಸೂಚಿಸುವುದು ಈ ಚಿಕ್ಕ ಲೇಖನದ ಉದ್ದೇಶ.

---

ದೇವಾ, ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ,
ಮರ್ತ್ಯಲೋಕಕ್ಕೆ ಬಂದು ಮಾನವ ಜನ್ಮವ ಕಂಡೆ
ಆ ಮಾನವ ಜನ್ಮಕ್ಕೆ ಘುಣಾಕ್ಷರನ್ಯಾಯದಂತೆ ಲಿಂಗ ಬಂದುದ ಕಂಡೆ,
ಎನಗಿದು ಚೋದ್ಯ, ಎನಗಿದು ವಿಪರೀತವಯ್ಯಾ !
ಇದಕ್ಕೆ—ನುಡಿದಂತೆ ನಡೆಸು ; ನಡೆದಂತೆ ನುಡಿಸು,
ನುಡಿ-ನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು
ನಿಮ್ಮ ಶರಣರೊಪ್ಪದಿದ್ದರೆ ನೀನೊಪ್ಪೆ
ನೀನೊಪ್ಪದಲ್ಲಿಯೇ ಬಂದಿತೆನಗೆ ಹಿಂದಣ ಭವದ ಹೆಮ್ಮಾರಿ,
ಅದಕ್ಕೆ ನಾನಂಜುವೆನಯ್ಯಾ, ನಾನಳುಕುವೆನಯ್ಯಾ !
ನುಡಿ ನಡೆ ಎರಡಾಗದಂತೆ ನಡೆಸಯ್ಯಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ

ಘನಲಿಂಗ ಶಿವಯೋಗಿ

* * *

ನೆನೆವ ಮನಕ್ಕೆ ಹೊನ್ನ ತೋರಿದೆ
ನೋಡುವ ಕಂಗಳಿಗೆ ಹೆಣ್ಣ ತೋರಿದೆ
ಈ ಪೂಜಿಸುವ ಕೈಗಳಿಗೆ ಮಣ್ಣ ತೋರಿದೆ
ಇಂತೀ ತ್ರಿವಿಧಕ್ಕೆ ತ್ರಿವಿಧವ ತೋರಿ ನೀ ಬೇರಾದ
ಬಿನ್ನಾಣಕ್ಕೆ ಬೆರಗಾದೆನ್ನೈ ಅಮರ ಗುಂಡದ ಮಲ್ಲಿಕಾರ್ಜುನಾ.

ಮಲ್ಲಿಕಾರ್ಜುನಪಂಡಿತಾರಾಧ್ಯ

# ಶಿಕ್ಷಣ : ಬಸವಣ್ಣನವರು ಮತ್ತು ಗಾಂಧೀಜಿ

**ಕೆ. ಎಸ್. ಸದಾಶಿವಯ್ಯ**

ವಿಶ್ವದಲ್ಲಿ ಅತಿ ದೊಡ್ಡದಾದ ಶಿಕ್ಷಣಕ್ರಮ ಭಾರತದಲ್ಲಿ ವ್ಯವಸ್ಥೆಗೊಂಡಿದೆ. ನಮ್ಮ ಹಿಂದಿನ ಆಳರಸರಾದ ಆಂಗ್ಲರಿಂದ ಪ್ರಾರಂಭವಾದ ಈ ವಿದೇಶೀಯವಾದ ಶಿಕ್ಷಣ ಇಂದು ಹೆಮ್ಮರೋಪಮವಾಗಿ ಬೆಳೆದಿದೆ ಮುಂದೆ ಸಮುದ್ರೋಪಮವಾಗಿ ಬೆಳೆಯಲಿದೆ.

೧೯೪೭ರಲ್ಲಿ ಭಾರತದಲ್ಲಿ ೧.೭೫,೦೦೦ ಪ್ರಾಥಮಿಕ ಶಾಲೆಗಳಿದ್ದು ಹದಿನಾಲ್ಕು ದಶಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಪ್ರಸ್ತುತದಲ್ಲಿ ೫,೦೦,೦೦೦ ಪ್ರಾಥಮಿಕ ಶಾಲೆಗಳಿದ್ದು ೭೫ ದಶಲಕ್ಷ ಮಕ್ಕಳು ವಿದ್ಯಾರ್ಜನೆಯಲ್ಲಿ ತೊಡಗಿದ್ದಾರೆ. ಮಾಧ್ಯಮಿಕ ಶಾಲೆಗಳ ಸಂಖ್ಯೆ ೧೩,೦೦೦, ಎರಡು ದಶಲಕ್ಷ ಮಕ್ಕಳಿಗೆ ವಿದ್ಯೆಯನ್ನು ಒದಗಿಸುತ್ತಿದ್ದವು. ಇಂದು ಈ ಸಂಖ್ಯೆ ೧.೦೦.೦೦೦ ಶಾಲೆಗಳಿಗೇರಿ ೧೫ ದಶಲಕ್ಷ ಮಕ್ಕಳು ವಿದ್ಯಾಲಾಭ ಪಡೆಯುತ್ತಿದ್ದಾರೆ. ಸ್ವಾತಂತ್ರ್ಯ ಬಂದ ಸಮಯದಲ್ಲಿ ೫,೩೦೦ ಸೆಕೆಂಡರಿ ಶಾಲೆಗಳು ೮.೭೦,೦೦೦ ವಿದ್ಯಾರ್ಥಿಗಳನ್ನು ಹೊಂದಿದ್ದವು. ಆದರೆ ಈ ಸಂಖ್ಯೆ ಇಂದು ೪೦,೦೦೦ಕ್ಕೆ ಏರಿ ೮೫,೦೦.೦೦೦ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿದ್ದಾರೆ.

ಸ್ವಾತಂತ್ರ್ಯದ ಸಮಯದಲ್ಲಿ ರಾಷ್ಟ್ರದಲ್ಲಿ ೧೭ ವಿಶ್ವವಿದ್ಯಾಲಯಗಳು ಮತ್ತು ೭೫೦ ಕಾಲೇಜುಗಳಿದ್ದು ೨,೪೦,೦೦೦ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದರು. ಇಂದು ೧೦೦ ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಿವೆ. ಒಟ್ಟು ೪.೦೦೦ ಕಾಲೇಜುಗಳಿದ್ದು ಇವುಗಳಲ್ಲಿ ೩೫.೦೦,೦೦೦ ವಿದ್ಯಾರ್ಥಿಗಳು ಅಭ್ಯಾಸ ನಿರತರಾಗಿದ್ದಾರೆ. ೧೯೪೭ರಲ್ಲಿ ೧೭ ಕೃಷಿ ಕಾಲೇಜುಗಳಿದ್ದವು. ಇಂದು ೨೦ ಕೃಷಿ ವಿಶ್ವವಿದ್ಯಾಲಯಗಳಿವೆಯಲ್ಲದೆ ೧೦೦ ಕಾಲೇಜುಗಳು ಸ್ಥಾಪಿತವಾಗಿವೆ. ಅಂದು ಕೇವಲ ೧೫ ವೈದ್ಯಕೀಯ ಕಾಲೇಜುಗಳಿದ್ದು ೧.೨೦೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಇಂದು ೧೦೦ ವೈದ್ಯಕೀಯ ಕಾಲೇಜುಗಳು ೧೨.೫೦೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿವೆ.

ಈ ಅಂಕಿಸಂಖ್ಯೆಗಳು ನಾವು ಈ ಮೇಲೆ ಮಾಡಿದ ಹೇಳಿಕೆಯನ್ನು ಸಮರ್ಥಿಸುತ್ತವೆ. ನಾವು ಪರಿಮಾಣಾತ್ಮಕ ಶಿಕ್ಷಣಕ್ರಮದಿಂದಲೆ ತೃಪ್ತಿಪಡೆಯಬೇಕೆ ಅಥವಾ ಗುಣಾತ್ಮಕ ಶಿಕ್ಷಣದ ಬಗ್ಗೆ ಲಕ್ಷ್ಯವೀಯಬೇಕೆ ಎಂಬ ಸಮಸ್ಯೆ ಸಂಶಯಗಳು ಒಟ್ಟಿಗೆ ಉದ್ಭವಿಸುತ್ತವೆ. ಗುಣಾತ್ಮಕ ಶಿಕ್ಷಣ ಅಥವಾ ಸಾರ್ಥಕ್ಯವಾದ ಶಿಕ್ಷಣಕ್ರಮ ನಮಗೆ ಲಭ್ಯವಾಗುವುದು ಅದು ಈ ತಾಯಿನಾಡಿನಲ್ಲಿ ಆಳವಾಗಿ ಬೇರುಬಿಟ್ಟು ಮೇಲೆ ಹೊಮ್ಮಿ ದೇಶಾದ್ಯಂತ ಹರಡಿದಾಗ. ಆದರೆ ಆಂಗ್ಲರಿಂದ ಎರವಲಾಗಿ ಬಂದ ಪ್ರಸ್ತುತ ಶಿಕ್ಷಣಕ್ರಮ ಹುಚ್ಚಾಬಟ್ಟೆ ಬೆಳೆಯುತ್ತಿದೆ. ತನ್ನ ಪ್ರಭಾವಕ್ಕೆ ಒಳಗಾದ ಜನರನ್ನು ಸುಸಂಸ್ಕೃತಿಸದೆ. ಸಂಸ್ಕರಿಸದೆ. ಅವರ ಜೀವನವನ್ನು ಮಾರ್ಪಡಿಸದೆ. ಅವರಿಗುಚಿತವಾದ ಉದ್ಯೋಗವನ್ನು ಒದಗಿಸದೆ. ಅವರನ್ನು ಶ್ರಮದುಡಿಮೆಯಲ್ಲಿ ತರಬೇತಿಸದೆ. ಮೇಲಾಗಿ ಈ ಆಂಗ್ಲ ಶಿಕ್ಷಣಪದ್ಧತಿ ಜೀವನ ಭೂಮಿಕೆಯಲ್ಲಿ ಸಹಸ್ರಾರು ಹುದ್ದೆಗಳಿದ್ದರೆ ಕೇವಲ ಸರಕಾರಿ ನೌಕರಿಗೆ ಯುಕ್ತವಾದ ಶಿಕ್ಷಣವನ್ನು ಮಾತ್ರ ಒದಗಿಸುತ್ತಿದೆ. ತತ್ಫಲವಾಗಿ ನಿರುದ್ಯೋಗಿಗಳ ಸಂಖ್ಯೆ ದಿನೇದಿನೇ ವರ್ಧಿಸುತ್ತಿದೆ. ಈ ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡು ತೀವ್ರತರಗೊಳ್ಳುತ್ತಿದ್ದರೂ ನಮ್ಮ ಶಿಕ್ಷಣಕ್ರಮವನ್ನು ಜೀವನೋಪಯೋಗಿಯಾಗಿ ಮಾಡುವ ಶಿಕ್ಷಣಮುಖಂಡರಾಗಲಿ ಶಿಕ್ಷಣತಜ್ಞರಾಗಲಿ ಇಂದು ನಮಗೆ ಕಂಡುಬರುತ್ತಿಲ್ಲ. ಇಂಗ್ಲೆಂಡ್ ಅಮೆರಿಕ ಮತ್ತು ಇನ್ನಿತರ ಸುಪ್ರತಿಷ್ಠಿತ ರಾಷ್ಟ್ರಗಳ ಶಿಕ್ಷಣ ಕ್ಷೇತ್ರದಲ್ಲಿ ಸಂಭವಿಸುತ್ತಿರುವ ಬದಲಾವಣೆಗಳನ್ನು ನಮ್ಮಲ್ಲೂ ತರುವ ದ್ವಿತೀಯ ತೃತೀಯ ದರ್ಜೆಯ ನೌಕರ ಮುಖಂಡರು ನಮ್ಮಲ್ಲಿ ಶಿಕ್ಷಣತಜ್ಞರ ಮುಖವಾಡದಲ್ಲಿ ಪ್ರಮುಖಪಾತ್ರ ವಹಿಸುತ್ತಿದ್ದಾರೆ. ಇಂತಹ ಶಿಕ್ಷಣತಜ್ಞ ವೇಷಿಗಳಿಂದ ನಮ್ಮ ಶಿಕ್ಷಣಕ್ರಮ ಹದಗೆಡುವುದಲ್ಲದೆ ಉದ್ದೇಶರಹಿತವಾಗುತ್ತದೆ, ಜೀವನವಿದೂರವಾಗುತ್ತದೆ.

ಹಾಗಾದರೆ ನಮ್ಮಲ್ಲಿಂದು ಶ್ರೇಷ್ಠಮಟ್ಟದ ಶಿಕ್ಷಣತಜ್ಞರಿಲ್ಲವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಪ್ರಶ್ನೆಗೆ

ಉತ್ತರವನ್ನು ಕಂಡುಕೊಳ್ಳುವುದು ಅಷ್ಟು ಕಷ್ಟವೇನಲ್ಲ. ಎಂ. ಇಡಿ.. ಪಿಎಚ್. ಡಿ. ಪದವಿಗಳನ್ನು ಪಡೆದು ಸರಕಾರದಲ್ಲಿ ಇಲ್ಲವೆ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಪುಷ್ಟವೇತನವನ್ನು ಪಡೆಯುತ್ತಿದ್ದರೆ ಮತ್ತು ಗ್ರಂಥರಚನೆಯಲ್ಲಿ ತೊಡಗಿ ಹತ್ತಾರು ಕೃತಿಗಳನ್ನು ರಚಿಸಿ ಪ್ರತಿಷ್ಠಿತ ಬಹುಮಾನಗಳನ್ನು ಪಡೆದಾಕ್ಷಣ ಶಿಕ್ಷಣತಜ್ಞನಾಗುವುದು ಅಸದಳ. ಶಿಕ್ಷಣತಜ್ಞನ ಪಾತ್ರ ನಿರ್ವಹಿಸುವುದಕ್ಕೆ ಪದವಿಗಳನ್ನು ಪಡೆಯುವುದು ಕೃತಿರಚನೆ ಮಾಡುವುದು ಅಗತ್ಯ. ಆದರೆ ಇಷ್ಟರಿಂದಲೆ ಯಾವನೂ ಶಿಕ್ಷಣತಜ್ಞ ಎನ್ನಿಸಿಕೊಳ್ಳಲಾರ. ಈ ಪದವಿಗೇರಲು ಸತತವಾದ ಅಧ್ಯಯನದಲ್ಲಿ ತಲ್ಲೀನವಾಗುವಿಕೆ. ಸಂಶೋಧನೆಯಲ್ಲಿ ನಿರತನಾಗುವಿಕೆ, ಹೊಸ ಹೊಸ ಆವಿಷ್ಕಾರದಲ್ಲಿ ತೊಡಗುವಿಕೆ, ಪ್ರಯೋಗಗಳನ್ನು ನಡೆಸಿ ಆವಿಷ್ಕೃತ ಭಾವಗಳ ಅಪರಂಜಿತನವನ್ನು ಕಂಡುಕೊಳ್ಳುವಿಕೆ, ಶಿಕ್ಷಣ ಕುರಿತ ಚಿಂತನಮಂಥನದಲ್ಲಿ ಸಮಯ ಸವೆಸುವಿಕೆ, ವಸ್ತುವಿಷಯಗಳನ್ನು ತನ್ನದೇ ಆದ ಹೊಸ ದೃಷ್ಟಿಯಿಂದ ನೋಡುವಿಕೆ ಮತ್ತು ತಾನು ಮಾಡುವ ಕೆಲಸದಲ್ಲಿ ಸ್ವಪ್ರಾತ್ಯಕ್ಷಿಕತೆ ವಿಮರ್ಶನದೃಷ್ಟಿ, ಸ್ವಂತಿಕೆ, ವಿಚಾರಪರತೆ ಮೊದಲಾದವುಗಳು ಮೇಳವಿಸಬೇಕು. ಇವೆಲ್ಲಕ್ಕಿಂತ ಮಿಗಿಲಾಗಿ ತಾಯ್ನಾಡಿನ ಜೀವನ. ಸಂಸ್ಕೃತಿ, ಜನಜೀವನ, ಹವೆ, ಭೂಗುಣ. ಜನತೆಯ ಆಶೆ ಅಭೀಪ್ಸೆಗಳು. ರಾಷ್ಟ್ರಸಮಸ್ಯೆಗಳು. ಆರ್ಥಿಕಸ್ಥಿತಿ, ಸಂಪನ್ಮೂಲಗಳು, ಜನಜೀವನ ಮಟ್ಟ, ಜನತೆಯ ಶಿಕ್ಷಣಮಟ್ಟ, ನೈತಿಕಮಟ್ಟ. ಸರಕಾರದ ಧೋರಣೆ. ನಿಲವುಗಳು—ಇತ್ಯಾದಿಗಳು ಕರಗತವಾಗಿರಬೇಕು ರಾಷ್ಟ್ರದ ಜನಜೀವನ ನಾಡಿಯನ್ನು ಹಿಡಿದು ನೋಡುವ ಶಕ್ತಿಯೊಂದೇ ಸಾಲದು. ರಾಷ್ಟ್ರದ ಬಗ್ಗೆ ಅಪಾರ ಪ್ರೇಮ. ಜನಗಳ ಬಗ್ಗೆ ಅನುಕಂಪ. ಅವರ ಜೀವನವನ್ನು ಎತ್ತರಿಸುವ ಕಾತರತೆ. ಜನಜೀವನ ಸಮಸ್ಯೆಗಳನ್ನು ಬಿಡಿಸುವಲ್ಲಿ ಕಳಕಳಿ ಮೊದಲಾದುವನ್ನು ಮೈಗೂಡಿಸಿಕೊಂಡು ಮಾನವ ಪ್ರೇಮಿಯಾಗಬೇಕು. ಈ ಎಲ್ಲ ಗುಣಗಳನ್ನು ಏಕೈಕ ವ್ಯಕ್ತಿಯಲ್ಲಿ ಕಾಣುವುದು ದುರ್ಲಭ. ಇವುಗಳಲ್ಲಿ ಕೆಲವನ್ನಾದರೂ ಅಳವಡಿಸಿಕೊಂಡಿರುವ ವ್ಯಕ್ತಿಗಳನ್ನೂ ಕಾಣುವುದು ಕಷ್ಟ. ಈ ಮೇಲೆ ಹೆಸರಿಸಿದ ಗುಣಗಳಲ್ಲಿ ಬಹುತೇಕವನ್ನು ತಮ್ಮ ನಡೆನುಡಿಯಲ್ಲಿ ಪ್ರತಿಬಿಂಬಿಸಿದ ಶಿಕ್ಷಣ ತಜ್ಞರನ್ನು ಕಾಣಬೇಕಾದರೆ ಶಿಕ್ಷಣದ ಇತಿಹಾಸದ ಪುಟಗಳನ್ನು ತಿರುವಿಹಾಕಬೇಕಾಗುತ್ತದೆ. ಇವರುಗಳಲ್ಲಿ ಮುಖ್ಯರಾದವರೆಂದರೆ ಶ್ರೀ ಬಸವೇಶ್ವರರು, ಮಹಾತ್ಮಗಾಂಧೀಜಿಯವರು, ರವೀಂದ್ರನಾಥ ಠಾಕೂರರು ಮತ್ತು ಶ್ರೀ ಅರವಿಂದರು. ಇನ್ನು ಮುಂದೆ ಶ್ರೀ ಬಸವೇಶ್ವರರ ಕಾಯಕ ಶಿಕ್ಷಣ ಪದ್ಧತಿ ಮತ್ತು ಮಹಾತ್ಮಾಜಿಯವರ ಮೂಲಶಿಕ್ಷಣ ಪದ್ಧತಿಗಳನ್ನು ಸೂಕ್ಷ್ಮವಾಗಿ ವಿವೇಚಿಸುವ ಪ್ರಯತ್ನಮಾಡುತ್ತೇನೆ.

## ಕಾಯಕ ಶಿಕ್ಷಣ

ಮೂಲಶಿಕ್ಷಣ ಪದ್ಧತಿಯು ಬಹುಜನರ ಪ್ರಶಂಸೆಗೆ ಪಾತ್ರವಾಗಿರುವುದಲ್ಲದೆ ಗಣನೀಯ ಶಿಕ್ಷಣತಜ್ಞರ ಗಮನವನ್ನು ಸೆಳೆದಿದೆ. ಈ ಶಿಕ್ಷಣದ ಪ್ರಚಾರಕೀರ್ತಿ ಮಹಾತ್ಮಗಾಂಧೀಜಿಯವರಿಗೆ ಸಲ್ಲತಕ್ಕದ್ದು. ಗಾಂಧೀಜಿಯವರು ಈ ಶಿಕ್ಷಣದ ಸೃಜನೆಗೆ ಕಾರಣರಾದರೂ ಈ ಶಿಕ್ಷಣದ ಮೂಲ ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ಕಂಡುಬರುತ್ತದೆ. ಮೂಲಶಿಕ್ಷಣಕ್ಕೆ ಸಮಾನವಾದ ಇಲ್ಲವೆ ಅನುರೂಪವಾದ ಶಿಕ್ಷಣಕ್ರಮವು ಮಹಾತ್ಮ ಶ್ರೀ ಬಸವೇಶ್ವರರ ದಿವ್ಯ ನೇತೃತ್ವದಲ್ಲಿ ಶಿವಶರಣರಿಂದ ಹನ್ನೆರಡನೆಯ ಶತಮಾನದಲ್ಲಿ ಆವಿಷ್ಕಾರಗೊಂಡಿರುವುದು ಕಂಡುಬರುತ್ತದೆ. ಅಂದು ಇದು ಕಾಯಕ ಶಿಕ್ಷಣಪದ್ಧತಿಯೆಂದು ಪ್ರಸಿದ್ಧಿಗೆ ಬಂದಿತು. ಅಂದು ಕರ್ನಾಟಕದಲ್ಲಿ ನಡೆದ ಮಹಾಸಮಾಜ ಕ್ರಾಂತಿಯ ಒಂದು ಭಾಗವಾಗಿ ಈ ಶಿಕ್ಷಣಕ್ರಮವೂ ಚಾಲನೆಗೆ ಬಂದಿತು. ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಶಿಕ್ಷಣಕ್ರಮದಿಂದ ಮಾತ್ರ ಸಾಧ್ಯ. ಇದನ್ನು ಅರಿತೇ ಅಂದಿನ ಶಿವಶರಣರು ತಮ್ಮ ಕ್ರಾಂತಿಕಾರಕ ಬೋಧನೆಗಳನ್ನು ಚಿರಸ್ಥಾಯಿಗೊಳಿಸಲು ನವೋನವಶಿಕ್ಷಣಪದ್ಧತಿಯನ್ನೇ ಸೃಷ್ಟಿಸಿ ಪ್ರಚಾರಕ್ಕೆ ತಂದರು.

ಕರ್ನಾಟಕದಲ್ಲಿ ಶಿವಶರಣರು ತಮ್ಮ ಕಾರ್ಯವನ್ನು ಆರಂಭಿಸುವ ಮುನ್ನ ರಾಷ್ಟ್ರದ ಇತರ ಭಾಗಗಳಂತೆ ಇಲ್ಲಿಯೂ ಶಿಕ್ಷಣವು ಕೆಲವು ವರ್ಗದವರ ಸ್ವತ್ತಾಗಿತ್ತು. ಅಗ್ರಹಾರ ಮತ್ತು ಬ್ರಹ್ಮಪುರಿಗಳು ಅಂದಿನ ಮುಖ್ಯ ಶಿಕ್ಷಣ ಕೇಂದ್ರಗಳಾಗಿದ್ದವು. ಇವು ಆಳರಸರು ಮತ್ತು ಶ್ರೀಮಂತರಿಂದ ಬಂದ ದತ್ತಿಯಿಂದ ದಾನದಿಂದ ನಡೆಸಲ್ಪಡುತ್ತಿದ್ದವು. ಇವು ಮುಖ್ಯವಾಗಿ ಬ್ರಾಹ್ಮಣರ ವಿದ್ಯಾಕೇಂದ್ರಗಳಾಗಿದ್ದವು. ಜನಸಾಮಾನ್ಯರಿಗೆ ಈ ಕೇಂದ್ರಗಳಲ್ಲಿ ವಿದ್ಯೆಗೆ ಅವಕಾಶವಿರಲಿಲ್ಲ. ಈ ಕಾರಣದಿಂದ ಜನತೆ ಅನಕ್ಷರತೆಗೆ ಮೌಢ್ಯತೆಗೆ ಈಡಾಗಿ ಶಿಕ್ಷಿತವರ್ಗದವರ ಶೋಷಣೆಗೆ ಗುರಿಯಾಗಿದ್ದಿತು. ಬೌದ್ಧರು ಮತ್ತು ಜೈನರು ವರ್ಣಾಶ್ರಮಧರ್ಮದ ವಿರುದ್ಧವಾಗಿ ಬಂಡೆದ್ದರೂ ಜನತೆಗೆ ಸಾರ್ವತ್ರಿಕವಾದ ಶಿಕ್ಷಣವನ್ನು ಒದಗಿಸಿ ಸ್ವತಂತ್ರಜೀವಿಗಳನ್ನಾಗಿಸಲು ಸಮರ್ಪಕ ಕ್ರಮವನ್ನು ಕೈಗೊಳ್ಳಲಿಲ್ಲ. ದೇಶವು

ಸಾಂಸ್ಕೃತಿಕವಾಗಿ ಕ್ಷೀಣವಾಗುತ್ತ ನಡೆಯಿತು. ಪರಿವ್ರಾಜಕರಾದ ಸಂನ್ಯಾಸಿಗಳು, ಧರ್ಮಪ್ರಚಾರಕರು ಸಮಾಜಕ್ಕೆ ಹೊರೆಯಾಗತೊಡಗಿದರು.

ಕರ್ನಾಟಕದಲ್ಲಿ ಶಿವಶರಣರ ಕಾಲವು ಜ್ಞಾನಪುನರುಜ್ಜೀವನದ ಮತ್ತು ವಿಚಾರವಂತರ ಯುಗವೆಂದು ಪ್ರಸಿದ್ಧವಾಗಿದೆ. ಮಹಾತ್ಮ ಶ್ರೀ ಬಸವೇಶ್ವರರು ಮಾನವ ಜನಾಂಗದಲ್ಲಿ ಅತ್ಯಂತ ಉನ್ನತಶ್ರೇಣಿಯ ಸಮಾಜಸುಧಾರಕರಾಗಿ ಜೀವನದ ಕೊಳೆ ಕಲ್ಮಶಗಳನ್ನು ತೊಳೆದು ಜನತೆಯಲ್ಲಿ ಮಾನವಿಕ ಪ್ರಜ್ಞೆಯನ್ನು ಬಡಿದೆಚ್ಚರಿಸುವ ಮಹಾಕಾರ್ಯವನ್ನು ಕೈಕೊಂಡರು. ಮಾನವನನ್ನು ಮಹಾದೇವತ್ವಕ್ಕೆ ಏರಿಸುವ ತತ್ವಬೋಧೆಯನ್ನು ಮೊದಲು ಮಾಡಿದವರೇ ಶ್ರೀ ಬಸವೇಶ್ವರರು. ಮತ್ತು ದೈಹಿಕಶ್ರಮ ಗೌರವದ ಮಹತ್ವವನ್ನು ಎತ್ತಿಹಿಡಿದ ಕೀರ್ತಿ ಶ್ರೀ ಬಸವೇಶ್ವರರಿಗೇ ಸಲ್ಲಬೇಕು. ಸ್ತ್ರೀಪುರುಷರಲ್ಲಿರುವ ಭೇದಭಾವವನ್ನು ತೊಡೆದುಹಾಕಿ ಸಮಾನತೆಯನ್ನು ಸ್ಥಾಪಿಸಿದರು. ಶತಶತಮಾನಗಳ ದಾಸ್ಯದಿಂದ ಜನಸಾಮಾನ್ಯರನ್ನು ವಿಮುಕ್ತಗೊಳಿಸಲು ಸತತವಾಗಿ ಹೋರಾಡಿದರು. ಬಸವೇಶ್ವರರು ಕೇವಲ ಧಾರ್ಮಿಕ ಅಥವಾ ಸಾಮಾಜಿಕ ಸುಧಾರಕರು ಮಾತ್ರವಲ್ಲ, ಪ್ಲೇಟೊ, ಅರಿಸ್ಟಾಟಲರಂತೆ ಶ್ರೇಷ್ಠಮಟ್ಟದ ಶಿಕ್ಷಣ ತಜ್ಞರೂ ಹೌದು. ಕಾಯಕತತ್ವವನ್ನು ಅದರ ಮಹತ್ವವನ್ನು ಸೃಷ್ಟಿಸಿದ, ಪ್ರಚಾರಿಸಿದ ಹಿರಿಮೆ ಈ ಭಕ್ತಿಭಂಡಾರಿಗೆ ಸಲ್ಲಬೇಕು. ಅವರು ಹೊಸದಾಗಿ ಕಟ್ಟಿದ ಹೊಸ ಸಮಾಜದ ಮೂಲತತ್ವವಾಗಿ ಪರಿಣಮಿಸಿತು ಈ ಕಾಯಕ ತತ್ವ. ಕಾಯಕಶಿಕ್ಷಣದ ವಿಶೇಷಾರ್ಥವೆಂದರೆ "ಕಾಯಕವೇ ಕೈಲಾಸ." ಇದನ್ನು ಕೇವಲ ತತ್ವವೆಂದು ಮಾತ್ರ ಪರಿಗಣಿಸದೆ ಆಚರಣೆಯಲ್ಲಿಯೂ ತರಲಾಯಿತು. ಕಲ್ಯಾಣವು ಕಾಯಕಶಿಕ್ಷಣದ ಮೂಲಕೇಂದ್ರವಾಯಿತು ಎಂಬುದನ್ನು ತಿಳಿಯುವುದೇ ಕುತೂಹಲಕಾರಿಯಾಗಿದೆ.

ಶಿವಶರಣರು ಕಲ್ಯಾಣವನ್ನು ತಮ್ಮ ಕಾರ್ಯಾಚರಣೆಯ ಕೇಂದ್ರವಾಗಿ ಚುನಾಯಿಸಿದರು. ಇವರು ಒಂದು ವಿದ್ಯಾಸಂಸ್ಥೆಯನ್ನು ಬಸವಣ್ಣನವರ ಮಾರ್ಗದರ್ಶನದಲ್ಲಿ ಸ್ಥಾಪಿಸಿದರು. ಇದೇ ಕೊನೆಗೆ "ಅನುಭವ ಮಂಟಪ"ವೆಂದು ಪ್ರಸಿದ್ಧವಾಯ್ತು. ಅನುಭವಮಂಟಪವೆಂದರೆ ಪ್ರಾರ್ಥನಾ ಮಂದಿರವಲ್ಲ; ಇಲ್ಲವೆ ಜಂಗಮರು ಸೇರಿ ನಡೆಸುವ ಧರ್ಮಜಿಜ್ಞಾಸೆಯ ವೇದಿಕೆಯಲ್ಲ. ಆದರೆ ಇದು ಅನುಭವಜನ್ಯ ಜ್ಞಾನದ ಕೇಂದ್ರ. ಶಿವಶರಣರು ತಮ್ಮ ಉದಾತ್ತ ಅನುಭವದಿಂದಲೂ ಜೀವನ ಮೂಲವಾದ ಜ್ಞಾನದಿಂದಲೂ ಅನುಭವಮಂಟಪದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಶಿವಶರಣರ ಮುಖ್ಯೋದ್ದೇಶ, ಸತ್ಯದ ಸಂಶೋಧನೆಯಾಗಿತ್ತು. ಮತ್ತು ಇದರಿಂದ ಜನಜೀವನವನ್ನು ಪರಿಶುದ್ಧಗೊಳಿಸುವುದಾಗಿತ್ತು. ಕಾಯಕ ಶಬ್ದವು ಅಲ್ಲಿ ನೆರೆದ ಶರಣರ ಮಂತ್ರವಾಗಿ ಪರಿಣಮಿಸಿತು. ಇದು ಜನತೆಗೆ ನಾಲ್ಕು ಮುಖ್ಯ ತತ್ವಗಳನ್ನು ಬೋಧಿಸಿತು:

(೧) ಕಾಯಕದ ಮೂಲಕ ದೈವತ್ವಕ್ಕೆ ಏರುವುದು.

(೨) ದಾಸೋಹ, ದೈಹಿಕ ಮತ್ತು ಮಾನಸಿಕವಾಗಿ ಜನತಾಸೇವೆ ಮಾಡುವುದು.

(೩) ಅರ್ಪಣ, ಸರ್ವಸ್ವವನ್ನೂ ತ್ಯಾಗಮಾಡುವುದು.

(೪) ಅನುಭವ, ಆತ್ಮಾನುಭವವನ್ನು ಹೊಂದುವುದು.

ಕಾಯಕವನ್ನು ಸಾಧಿಸಲು ಅಥವಾ ಅಭ್ಯಸಿಸಲು ಸಾಧ್ಯವಾಗುವುದು ಮನಃಪೂರ್ವಕವಾಗಿ ದುಡಿಯಲು ಪ್ರಾರಂಭಿಸಿದಾಗ, ಮಾಡುವ ಕೆಲಸದಲ್ಲಿ ಪೂರ್ಣತೃಪ್ತಿಯನ್ನು ಪಡೆಯಲು ಪ್ರಯತ್ನಿಸಿದಾಗ, ಮಾಡುವ ಕಾಯಕದಲ್ಲಿ ತಾದಾತ್ಮ್ಯ ಹೊಂದಿದಾಗ ಕಾಯಕದ ಪ್ರಜ್ಞೆ ಮೂಡುತ್ತದೆ; ಆತ್ಮಾನುಭವದಲ್ಲಿ ಪರ್ಯವಸಾನವಾಗುತ್ತದೆ. ಇದು ಮಹೋದಾತ್ತವೂ ಗೌರವಾನ್ವಿತವೂ ಆದ ವ್ಯಾಪಕಾರ್ಥವನ್ನು ಹೊಂದಿದೆ. ಕಾಯಕವು ಕೇವಲ ಭೌತಿಕವಾದ ಸೌಲಭ್ಯಗಳನ್ನು ಒದಗಿಸುವುದಲ್ಲದೆ ಆಧ್ಯಾತ್ಮಿಕವಾದ ಆನಂದದ ಔನ್ನತ್ಯಕ್ಕೂ ಕೊಂಡೊಯ್ಯುತ್ತದೆ. ಕಾಯಕ ಶಿಕ್ಷಣವು ಶ್ರಮವಿಭಜನೆಗೆ ಮಹತ್ವಕೊಡುತ್ತದೆ. ಶಿರ, ಹೃದಯ ಮತ್ತು ಕೈಗಳ ಪರಸ್ಪರ ಪೂರ್ಣ ಸಹಕಾರಭಾವದಿಂದ ಅಂದರೆ ತ್ರಿಕರಣಪೂರ್ವಕವಾಗಿ ಕಾಯಕದಲ್ಲಿ ನಿರತವಾದಾಗ, ಇಂತಹ ಕಾಯಕಜೀವನ ಪರಿಶುದ್ಧತೆಗೆ ಮಾರ್ಗ ಕಲ್ಪಿಸುತ್ತದೆ. ಭಿಕ್ಷೆಗೆ ತಾವಿಲ್ಲ ಕಾಯಕದ ಪ್ರಪಂಚದಲ್ಲಿ. ಇದು ಅನುಭವ, ಗುಣಧರ್ಮ, ಸೌಶೀಲ್ಯ ಮತ್ತು ಶಿಸ್ತು ನಿಯಮಗಳಿಗೆ ಆದ್ಯತೆ ಕೊಡುತ್ತದೆ.

ಹೊಟ್ಟೆಗಿಲ್ಲದ ಭಿಕ್ಷಾಟನೆಗೆ ಮತ್ತು ಶಿಕ್ಷಿತ ವರ್ಗದವರ ಶೋಷಣೆಗೆ ಸಿಲುಕಿ ಸಮಾಜವು ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಅಧೋಗತಿಗಿಳಿದ ಸಮಯದಲ್ಲಿ ಶಿವಶರಣರು ಕಾಯಕ ಶಿಕ್ಷಣವನ್ನು ವ್ಯವಸ್ಥೆಗೊಳಿಸಿ ಜನತೆಯನ್ನು ವಿಮೋಚನೆಗೊಳಿಸುವ ಕಾರ್ಯದಲ್ಲಿ ನಿರತರಾದರು. ಶಿವಶರಣನು ಕೇವಲ ಧರ್ಮಬೋಧಕನಲ್ಲ. ಅವನು ಮುಖ್ಯ

ವಾಗಿ ಚಿಂತಕ, ಕಾಯಕದಿಂದ ಪ್ರಪಂಚದ ಅನುಭವವನ್ನು ಹೊಂದಿದವನು. ಇವನು ಸನ್ಮಾರ್ಗಿ. ಅಹಿಂಸಾವ್ರತಿ. ನ್ಯಾಯಕ್ಕಾಗಿ ತನ್ನ ಜೀವನವನ್ನೇ ತ್ಯಾಗಿಸಬಲ್ಲ ಶ್ರೀವ್ಯಕ್ತಿ. ಸತ್ಯ ಅಹಿಂಸೆ ಮತ್ತು ನ್ಯಾಯಮಾರ್ಗಗಳನ್ನು ಸರ್ವರೂ ಅನುಸರಣೆ ಮಾಡಬೇಕೆಂಬುದೇ ಶರಣನ ಅಭಿಮತ. ಕಾಯಕಶಿಕ್ಷಣ ಚಳುವಳಿಯನ್ನು ಕರ್ನಾಟಕಾದ್ಯಂತ ಪ್ರಚಾರಗೈದ ಸಾಹಸಿಗಳೇ ಈ ಶಿವಶರಣರು. ಇವರು ಆಲೋಚಕರು ಹಾಗೂ ಆಚಾರಕರು. ಇವರು ತಮ್ಮ ತತ್ವಗಳನ್ನು ಆಚರಣೆಗೆ ತರಲು ಸರ್ವದಾ ಪ್ರಯತ್ನಿಸುತ್ತಿದ್ದರೂ ಅಂತೆಯೇ ತಮ್ಮ ಆಚರಣಾಜನ್ಯವಾದ ತತ್ವಗಳನ್ನು ನಿರೂಪಿಸುವುದನ್ನು ಮರೆಯುತ್ತಿರಲಿಲ್ಲ. ಕಾಯಕಶಿಕ್ಷಣವು ಶರಣರನ್ನು ಸೃಜನಾತ್ಮಕ ವ್ಯಕ್ತಿಗಳನ್ನಾಗಿ ಪರಿವರ್ತಿಸುತ್ತಿತ್ತು. ಅವರ ಅನುಭವಗಳು ವಚನರೂಪವನ್ನು ತಳೆದು. ಸಾರ್ವಕಾಲಿಕವಾಗಿವೆ, ಜೀವನಕ್ಕೆ ದಾರಿದೀಪವಾಗಿವೆ.

ಕಾಯಕ ಶಿಕ್ಷಣದಲ್ಲಿ ಅನುಸರಿಸಲಾಗುತ್ತಿದ್ದ ಬೋಧನವನ್ನು ಅನುಭವ ಪದ್ಧತಿ ಎಂದು ಕರೆಯಲಾಗಿದೆ. ಮಾಡುವಿಕೆಯ ಮೂಲಕ ಕಲಿಯಬೇಕಾಗಿತ್ತು ಈ ಪದ್ಧತಿಯಲ್ಲಿ. ತತ್ವವಿಚಾರ, ಧಾರ್ಮಿಕ ಮತ್ತು ನೈತಿಕ ವಿಷಯಗಳನ್ನು ಕಾಯಕದ ಮೂಲಕವೇ ಒದಗಿಸಲಾಗುತ್ತಿತ್ತು. ಮಂತ್ರಮುಗ್ಧರಂತೆ ನಿಶ್ಚೇಷ್ಟಿತರಾಗಿ ಕಲಿಯುವ ವಿಷಯಗಳೇ ಇರುತ್ತಿರಲಿಲ್ಲ. ಇಲ್ಲಿ ಎಲ್ಲವೂ ಕ್ರಿಯಾತ್ಮಕವಾಗಿ ತಾನೇತಾನಾಗಿ ಸಾಗುತ್ತಿದ್ದವು. ಈ ಅನುಭವ ಶಿಕ್ಷಣದ ಪದ್ಧತಿಯಲ್ಲಿ ಕುಲಗೋತ್ರಗಳ ತರತಮಗಳ ಭೇದಭಾವನೆಗಳೇ ಗಣನೆಗೆ ಬರದೆ ಅದೃಶ್ಯವಾಗುತ್ತಿದ್ದವು. ಶಿಕ್ಷಣದಲ್ಲಿ ಸಮಾನ ಅವಕಾಶಗಳನ್ನು ಎಲ್ಲರಿಗೂ ಕಲ್ಪಿಸಲಾಗುತ್ತಿತ್ತು. ದೈಹಿಕ ಮತ್ತು ಮಾನಸಿಕ ಶ್ರಮಗಳು ಸರಿಸಮಾನ ಸ್ಥಾನಗಳನ್ನು ಪಡೆದಿದ್ದವು. ವ್ಯಕ್ತಿಯು ತನಗೆ ಅವಶ್ಯವಾದುದಕ್ಕಿಂತ ಮಿಗಿಲಾಗಿ ಸಂಪಾದಿಸಿದ್ದರೆ ಅದನ್ನು ದಾಸೋಹಕ್ಕೆ ಕೊಡುತ್ತಿದ್ದನು.

## ಕಾಯಕ ಶಿಕ್ಷಣ ಚಳುವಳಿಯ ಗುರಿಗಳು

(೧) ಅನಕ್ಷರತೆಯನ್ನು ಇಲ್ಲಗೈದು ಜ್ಞಾನಪ್ರಸರಣ ಮಾಡುವುದು.

(೨) ಆರ್ಥಿಕವಾದ ಸಮಾನತೆಯನ್ನು ಸಾಧಿಸುವುದು.

(೩) ಸಮಾಜದಲ್ಲಿ ಪ್ರತಿಯೋರ್ವನಿಗೂ ತನ್ನ ವ್ಯಕ್ತಿತ್ವವನ್ನು. ವೈಯಕ್ತಿಕತೆಯನ್ನು ಬೆಳೆಸಿಕೊಳ್ಳಲು ಸಮಾನ ಅವಕಾಶ ಕಲ್ಪಿಸುವುದು.

(೪) ಸಾಮಾಜಿಕವಾದ ಸಮಾನತೆಯನ್ನೂ ಸಹೋದರ ಭಾವವನ್ನೂ ವರ್ಧಿಸಿ. ಜನತೆ ಕೈಗೊಳ್ಳುವ ಉದ್ಯೋಗದಿಂದ ಸಂಭವಿಸುವ ಅಸಮಾನತೆಗಳನ್ನು ಇಲ್ಲಗೈಯುವುದು.

(೫) ಭಿಕ್ಷಾಟನೆಯನ್ನು ನಿರ್ಮೂಲನ ಮಾಡಿ. ಎಲ್ಲರನ್ನೂ ಸ್ವಾವಲಂಬಿಗಳನ್ನಾಗಿ ಮಾಡುವುದು.

ಈ ತತ್ವಗಳು ಆಕರ್ಷಕವೂ ಕ್ರಿಯಾತ್ಮಕವೂ ಆದ ಪ್ರಯುಕ್ತ ಜನತೆಯು ಕಾಯಕ ಶಿಕ್ಷಣವನ್ನು ಸ್ವಾಗತಿಸಿದರು. ಭಾರತಾದ್ಯಂತ ಜನರು ಕಲ್ಯಾಣದತ್ತ ಧಾವಿಸಿದರು ಅನುಭವಮಂಟಪಶಾಲೆಯಲ್ಲಿ ಪೀಯೂಷಪಾನದಿಂದ ಪಾವನತೆಯನ್ನು ಪಡೆಯಲು. ಈ ಶಾಲೆಯ ಶಿಕ್ಷಣಮಾಧ್ಯಮವು ಕನ್ನಡ. ಹೊರಗಿನಿಂದ ಕಲ್ಯಾಣಕ್ಕೆ ಬಂದವರು ಮೊದಲು ಕನ್ನಡ ಕಲಿಯಬೇಕಾಯಿತು. ಅನುಭವಮಂಟಪದಲ್ಲಿ ಸಕ್ರಿಯವಾಗಿ ಭಾಗವಹಿಸಿದವರೆಲ್ಲ ಚಿಂತಕರಾದರು, ವಿಚಾರಶೀಲರಾದರು. ಕಟುವಿಮರ್ಶಕರಾದರು. ಅವರ ಉದಾತ್ತ ವಿಚಾರಧಾರೆಗಳು, ಅನುಭವಪೂರ್ಣ ಹೇಳಿಕೆಗಳು ತಿಳುವಳಿಕೆಗಳು ವಚನ ಮತ್ತು ಕಾವ್ಯರೂಪಗಳನ್ನು ಧಾರಣೆ ಮಾಡಿವೆ. ಕಾಶ್ಮೀರದ ಹೆಸರಾದ ಮೋಳಿಗೆ ಮಾರಯ್ಯ, ರಾಣಿ ಮಹಾದೇವಿ ಮತ್ತು ಸೌರಾಷ್ಟ್ರದ ಆದಯ್ಯ ಇವರುಗಳು ಕಾಯಕ ಶಿಕ್ಷಣದ ಮೂಸೆಯಿಂದ ಅಪರಂಜಿಯಾಗಿ ಹೊರಬಿದ್ದ ಅನರ್ಘ್ಯ ಜ್ಞಾನರತ್ನಗಳು.

ಶಿವಶರಣರ ಕಾಲದಲ್ಲಿ ಶಿಕ್ಷಣವು ಉಚಿತವೂ ಸಾರ್ವತ್ರಿಕವೂ ಆಗಿದ್ದಿತು. ಅನುಭವಮಂಟಪದಲ್ಲಿ ತರಬೇತಿಯನ್ನು ಪಡೆದ ಅನುಭಾವಿಗಳು, ಶಿಕ್ಷಣವು ಪ್ರತಿಯೊಬ್ಬ ಮಾನವನ ಆಜನ್ಮ ಹಕ್ಕು ಎಂಬ ಸಂದೇಶವನ್ನು ಮನೆಮನೆಗೂ ಕೊಂಡೊಯ್ದರು. ಹೀಗೆ ಉಚಿತವಾಗಿ ಒದಗಿಸಲಾಗುತ್ತಿದ್ದ ಶಿಕ್ಷಣಕ್ಕೆ ಬಸವೇಶ್ವರನ ಅನುಯಾಯಿಗಳು ಒಂದು ರೂಪ ಕೊಟ್ಟು ವ್ಯವಸ್ಥೆಗೈದು ಕಾಯಕ ಶಿಕ್ಷಣದ ಪ್ರಚಾರದಲ್ಲಿ ತೊಡಗಿದರು. ಈ ಶಿಕ್ಷಣ ಮಹಾಜಂಗಮರ ಆಶೀರ್ವಾದ ಫಲವಾಗಿಯೇ ಬೆಳೆಯತೊಡಗಿತು. ಜಂಗಮರು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿತವಾದ ಮಠಗಳ. ಶಾಖಾ ಮಠಗಳ ಸಹಾಯದಿಂದ ತಮ್ಮ ಶಿಕ್ಷಣ ಪ್ರಚಾರಕಾರ್ಯವನ್ನು ನಡೆಸುತ್ತಿದ್ದರು. ಕೆಲವು ಮಠಗಳು ತಾವು

ಕೈಕೊಂಡಿದ್ದ ಕಾಯಕದಿಂದಲೇ ಸ್ವಾವಲಂಬಿಯಾಗಿದ್ದವು. ಕೆಲವಕ್ಕೆ ಉದಾರಸ್ವಭಾವದ ಶ್ರೀಮಂತರು ಶಿಕ್ಷಣ ಪ್ರಚಾರಕ್ಕಾಗಿ ಹಣದ. ಧಾನ್ಯದ ಮತ್ತು ಭೂಮಿಯ ಮೂಲಕ ಸಹಾಯ ಮಾಡುತ್ತಿದ್ದರು.

## ಕಾಯಕಶಿಕ್ಷಣವ್ಯವಸ್ಥೆಯ ಮುಖ್ಯ ತತ್ವಗಳು

(೧) ಅಕ್ಷರಮಾಲೆಯ ಅಭ್ಯಾಸ.

(೨) ಈ ಜ್ಞಾನವನ್ನು ಒದಗಿಸಲು ಶಿವಶರಣರ ಮಠಗಳನ್ನು ಶಿಕ್ಷಣ ಕೇಂದ್ರಗಳನ್ನಾಗಿ ಮಾಡುವುದು.

(೩) ಕನ್ನಡವೇ ಶಿಕ್ಷಣದ ಮಾಧ್ಯಮ (ಶಿವಶರಣರ ಬಹುತೇಕ ಸಾಹಿತ್ಯವೆಲ್ಲವೂ ಕನ್ನಡದಲ್ಲಿಯೇ ಸೃಷ್ಟಿಯಾಗಿದೆ.)

(೪) ವೃತ್ತಿಯ ಮೂಲಕವೇ ಜ್ಞಾನವನ್ನು ಒದಗಿಸುವ ಶಿಕ್ಷಣತತ್ವವನ್ನು ಅನುಸರಿಸುವುದು.

(೫) ಶಿಕ್ಷಣದಲ್ಲಿ ಲಿಂಗಭೇದವನ್ನು ತೊಡೆದುಹಾಕಿ ಸ್ತ್ರೀಪುರುಷರಿಗೆ ಸಮಾನವಾಗಿಯೇ ಶಿಕ್ಷಣವನ್ನು ಒದಗಿಸುವುದು. (ಅನುಭವಮಂಟಪದಲ್ಲಿ ಪ್ರಖ್ಯಾತ ಸ್ತ್ರೀ ವ್ಯಕ್ತಿಗಳಾದ ಅಕ್ಕಮಹಾದೇವಿ. ನೀಲಾಂಬಿಕೆ. ರಾಣಿ ಮಹಾದೇವಿ, ಮುಕ್ತಾಯಕ್ಕ. ಲಿಂಗಮ್ಮ—ಇವರು ಭಾಗವಹಿಸುತ್ತಿದ್ದರು.)

(೬) ಅಷ್ಟಾವರಣಗಳು. ಪಂಚಾಚಾರಗಳು. ಷಟ್ಸ್ಥಲಗಳು—ಮೊದಲಾದ ತತ್ವಗಳನ್ನು ಕಾಯಕದ ಮೂಲಕವೇ ಬೋಧಿಸುವುದು.

(೭) ಈ ಶಿಕ್ಷಣವನ್ನು ಉತ್ಪಾದಕಾರಕವನ್ನಾಗಿ ಮಾಡುವುದು.

(೮) ಈ ಶಿಕ್ಷಣದ ಮುಖ್ಯ ಕಾಯಕಗಳು: ನೂಲುವುದು. ನೇಯುವುದು. ವ್ಯವಸಾಯ. ಮರಗೆಲಸ. ಕಮ್ಮಾರಿಕೆ. ಕಾಗದ ತಯಾರಿಕೆ. ಚಾಪೆ. ಬುಟ್ಟಿ ಮಾಡುವುದು, ಕಸೂತಿ. ಹೊಲಿಗೆ. ಚರ್ಮ ಹದ ಮಾಡುವುದು. ಪಾದರಕ್ಷೆಗಳನ್ನು ಮಾಡುವುದು ಇತ್ಯಾದಿ....ಇತ್ಯಾದಿ.

ಕಾಯಕಶಿಕ್ಷಣದ ಪರಿಣಾಮವಾಗಿ ಜನರು ಸುಶಿಕ್ಷಿತರಾದರು. ಸ್ತ್ರೀಯರು ಸ್ವಾತಂತ್ರ್ಯ ಪಡೆದು ಪುರುಷರಿಗೆ ಸಮಾನವಾದ ಸ್ಥಾನಮಾನ ಗಳಿಸಿದರು. ವೃತ್ತಿಯ ಮೂಲಕ ಶಿಕ್ಷಣ ಪಡೆದು ಅದನ್ನು ಜೀವನದೊಡನೆ ಸಹಸಂಬಂಧವನ್ನು ಕಲ್ಪಿಸುವಲ್ಲಿ ಯಶಸ್ಸುಗಳಿಸಿದರು. ಸಮಾಜ ಸ್ವಾವಲಂಬಿಯಾಯಿತು. ಶೈಕ್ಷಣಿಕವಾಗಿಯೂ ಸಾಂಸ್ಕೃತಿಕವಾಗಿಯೂ ದೇಶ ಮಹತ್ತರವಾದ ಪ್ರಗತಿಯನ್ನು ಸಾಧಿಸಿತು. ಭಿಕ್ಷಾಟನೆ ಹೇಳಹೆಸರಿಲ್ಲದಾಯಿತು. ಪ್ರತಿಯೊಬ್ಬ ವ್ಯಕ್ತಿಯೂ ಕಾಯಕದಲ್ಲಿ ನಿಷ್ಠೆ ಹೊಂದಿ ಅದರ ಮೌಲ್ಯದ ಮತ್ತು ಅಗತ್ಯತೆಯ ಬಗೆಗೆ ಆಸ್ಥೆ ವಹಿಸತೊಡಗಿದನು. ಇಹದಲ್ಲಿ ಜೀವನಯಾಪನೆಗೆ ಅದನ್ನು ಅವಲಂಬಿಸಿ ಪರದಲ್ಲಿ ಮೋಕ್ಷಸಾಧನೆಗೆ ಆಶ್ರಯಿಸಿದರು. ಕಾಯಕ ಶಿಕ್ಷಣ ಪದ್ಧತಿಯು ಮಹಿಮಾನ್ವಿತ ಶರಣರನ್ನು ಸೃಷ್ಟಿಸಿ ಸಮಾಜದ ಪುರೋಭಿವೃದ್ಧಿಗೆ ಕಾರಣವಾಯಿತು. ಸ್ವತಂತ್ರವಾದ ಆಲೋಚನೆಯು ಮಹತ್ತು ಜನತೆಯಲ್ಲಿ ಬೆಳೆಯತೊಡಗಿತು. ಮಾನವಸೇವೆ ಮತ್ತು ಸೋದರಭಾವಗಳು ಜನಜೀವನದ ಅವಿಚ್ಛಿನ್ನಭಾಗಗಳಾದವು. ಪೌರಪ್ರಜ್ಞೆ ಜನತೆಯಲ್ಲಿ ಉದ್ದೀಪಿತವಾಯಿತು. ಆಚಾರಸಂಹಿತೆ ರೂಪುಗೊಂಡು ಅನುಸರಿಸಲ್ಪಟ್ಟಿತು.

## ಶಿಕ್ಷಣ ಕೇಂದ್ರಗಳು

ಕರ್ನಾಟಕದಲ್ಲಿ ವೀರಶೈವ ಮಠಗಳು ಕಾಯಕಶಿಕ್ಷಣದ ಕೇಂದ್ರಗಳಾದವು. ಬೃಹತ್ ಮಠಗಳು ತಯಾರಿಸಿದ ಪಠ್ಯವಿಷಯಕ್ಕೆ ಅನುಗುಣವಾದ ಶೈಕ್ಷಣಿಕ ಚಟುವಟಿಕೆಗಳು ಶಾಖಾಮಠಗಳಲ್ಲಿ, ಚಿಕ್ಕ ಶಾಲೆಗಳಲ್ಲಿ ಅನುಷ್ಠಾನಕ್ಕೆ ತರಲ್ಪಟ್ಟವು. ಈ ಮಠಗಳಲ್ಲಿ ಮುಖ್ಯವಾದುವುಗಳೆಂದರೆ: ವಿರಕ್ತಮಠಗಳು, ಓದಿಸುವ ಮಠಗಳು. ಸಾಲಿಮಠಗಳು ಇತ್ಯಾದಿ. ವಿರಕ್ತ ಮಠಗಳು ಅನುಭವಮಂಟಪಗಳಂತೆಯೇ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದವು. ಧಾರ್ಮಿಕ ಸಮ್ಮೇಳನಗಳನ್ನು, ವಿಚಾರಗೋಷ್ಠಿಗಳನ್ನು ಮತ್ತು ಉಪನ್ಯಾಸ ಶಿಬಿರಗಳನ್ನು ಈ ವಿರಕ್ತ ಮಠಗಳು ನಡೆಸುತ್ತಿದ್ದವು. ವಿದ್ಯಾರ್ಥಿಗಳು ಓದಿಸುವ ಮತ್ತು ಸಾಲಿ ಮಠಗಳಲ್ಲಿ ಶಿಕ್ಷಣ ಪಡೆದ ನಂತರ ಉಚ್ಚಶಿಕ್ಷಣಕ್ಕಾಗಿ ವಿರಕ್ತ ಮಠಗಳಿಗೆ ಬರುತ್ತಿದ್ದರು.

ಅನೇಕ ಹಳ್ಳಿಗಳಲ್ಲಿ ಈಗಲೂ ಓದಿಸುವ ಮಠಗಳು ಉದಾಸಿ ಮಠಗಳೆಂದು ಕರೆಯಲ್ಪಡುತ್ತಿವೆ. ಅನೇಕ ಹಿರೇಮಠಗಳು ಓದಿಸುವ ಮಠಗಳ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದವು. ಓದಿಸುವ ಮಠಗಳಲ್ಲಿ ಹೆಸರಿಗೆ ತಕ್ಕಂತೆ

ವೃತ್ತಿಶಿಕ್ಷಣಕ್ಕೆ ಅವಕಾಶವಿಲ್ಲದೆ ಬರಿ ಓದುಬರಹಗಳನ್ನು ಮಾತ್ರ ಹೇಳಿಕೊಡಲಾಗುತ್ತಿತ್ತು. ಬಹುತೇಕ ವಿದ್ಯಾರ್ಥಿಗಳು ಸಾಲಿ ಮಠಗಳಲ್ಲಿ (ವೃತ್ತಿಶಾಲೆಗಳು) ಶಿಕ್ಷಣ ಪಡೆದ ನಂತರ ಸಾಹಿತ್ಯ ಮತ್ತು ಇತರ ವಿಷಯಗಳ ಅಧ್ಯಯನಕ್ಕೆ ಓದಿಸುವ ಮಠಗಳಿಗೆ ಬರುತ್ತಿದ್ದರು. ಸಂಸ್ಕೃತಭಾಷೆಗೆ ಈ ಮಠಗಳಲ್ಲಿ ಮುಖ್ಯ ಸ್ಥಾನವನ್ನು ಕಲ್ಪಿಸಲಾಗಿತ್ತು. ಕ್ರಮೇಣ ಈ ಮಠಗಳು ವೀರಶೈವ ಸಂಸ್ಕೃತ ಪಾಠಶಾಲೆಗಳಾಗಿ ಹತ್ತೊಂಭತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಪ್ರಥಮ ಭಾಗದಲ್ಲಿ ಪರಿವರ್ತಿತವಾದವು. ಇಂತಹ ಪಾಠಶಾಲೆಗಳು ಹುಬ್ಬಳ್ಳಿ. ಜಮಖಂಡಿ. ಅಬ್ಬಿಗೆರೆ ಮತ್ತಿತರ ಪ್ರದೇಶಗಳಲ್ಲಿ ಕಾಣಬರುತ್ತವೆ. ಟೀಕೆಯ ಮಠಗಳು. ಟಿಪ್ಪಣಿ ಮಠಗಳು. ಶಬ್ದ ಮಣಿದರ್ಪಣ ಮಠಗಳು ಮತ್ತು ಇತರ ನೂರಾರು ಮಠಗಳು ಭಾಷೆ. ಸಾಹಿತ್ಯ ಮತ್ತು ವಿಮರ್ಶೆಗಳಲ್ಲಿ ಶಿಕ್ಷಣವನ್ನು ಒದಗಿಸುವಲ್ಲಿ ನಿರತವಾಗಿದ್ದವು.

## ಸಾಲಿಮಠಗಳು

ಸಾಲಿಮಠಗಳು ಆಧುನಿಕ ಮೂಲಶಿಕ್ಷಣ ಶಾಲೆಗಳನ್ನು ಹೋಲುತ್ತವೆ. ಈ ಮಠಗಳಲ್ಲಿ ಬೋಧನಕ್ರಮ ಅನುಭವಪದ್ಧತಿಯ ಮೂಲಕ ನಡೆಯುತ್ತಿತ್ತು. ಓದುವ. ಬರೆಯುವ. ಲೆಕ್ಕವಿಡುವ ಕ್ರಮಗಳೊಡನೆ ವೃತ್ತಿ ಶಿಕ್ಷಣವನ್ನು ಕಡ್ಡಾಯವಾಗಿ ಹೇಳಿಕೊಡಲಾಗುತ್ತಿತ್ತು. ಕಾಗದ ಮತ್ತು ರಟ್ಟು ಮಾಡುವುದನ್ನೂ ಹೇಳಿಕೊಡಲಾಗುತ್ತಿತ್ತು. ಇಂದೂ ಸಹ ಈ ವಸ್ತುಗಳನ್ನು ಮಾಡಲು ಬಳಸುತ್ತಿದ್ದ ಉಪಕರಣಗಳು ಕಂಡುಬರುತ್ತವೆ. ಪುಸ್ತಕ ಗಾತ್ರದ ಸುರುಳಿ ಸುತ್ತಲಾಗುವ ರಟ್ಟುಗಳನ್ನು ಮಾಡಲಾಗುತ್ತಿತ್ತು. ಇವನ್ನು ಕಡತಗಳೆಂದು ಕರೆಯಲಾಗುತ್ತಿತ್ತು. ಈ ಕಡತಗಳನ್ನು ಕೈಯಿಂದ ಮಾಡಿದ ಬಟ್ಟೆಯಿಂದ ಸಿದ್ಧಗೊಳಿಸಿ ಗಂಜಿಯಿಂದ (ಅಕ್ಕಿ) ನುಣ್ಣಗೆ ಪಾಲಿಷ್ ಮಾಡಿ ಬರೆಯಲು ಯೋಗ್ಯವಾಗುವಂತೆ ಮಾಡಲಾಗುತ್ತಿತ್ತು. ಇಂತಹ ಕಡತಗಳು ಈಗಲೂ ದೊಡ್ಡ ಮಠಗಳಲ್ಲಿ ಕಂಡುಬರುತ್ತವೆ. ಈ ಕಡತಗಳು ಅಮೂಲ್ಯವಾದ ವಿಷಯಗಳಿಂದ ಕೂಡಿರುತ್ತವೆ. ಕೆಲವು ಕಡತಗಳು ವಚನಗಳನ್ನು. ಪದ್ಯಗಳನ್ನು ಪ್ರಾರ್ಥನಾ ಗೀತೆಗಳನ್ನು ಒಳಗೊಂಡಿರುತ್ತವೆ. ಈ ಕಡತಗಳ ಸಹಾಯದಿಂದ ಅಂದಿನ ಮಠಗಳು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಗ್ರಂಥಾಲಯವನ್ನೇ ನಿರ್ಮಿಸಿದ್ದವು.

## ಕಾರ್ಯಾನುಭವ

ಇನ್ನು ಕೆಲವು ಸಾಲಿಮಠಗಳಲ್ಲಿ ಇಂದೂ ಸಹ ಅಂದಿನಿಂದ ಉಳಿದು ಬಂದಿರುವ ಕೈಮಗ್ಗಗಳನ್ನು ಕಾಣಬಹುದಾಗಿದೆ. ಮಕ್ಕಳಿಗೆ ಬಟ್ಟೆ. ಜಮಖಾನ ಮತ್ತು ಕಂಬಳಿಗಳನ್ನು ನೇಯುವುದನ್ನು ಹೇಳಿಕೊಡಲಾಗುತ್ತಿತ್ತು. ವ್ಯವಸಾಯಕ್ಕೆ ಸಹಾಯವಾಗುವ ದಪ್ಪ ನೂಲನ್ನು ತೆಗೆಯುವುದು. ಹಗ್ಗಗಳನ್ನು ಹೊಸೆಯುವುದನ್ನು ಹೇಳಿಕೊಡುವುದರ ಜೊತೆಗೆ ಹಸಬಿ (ಚೀಲ) ಹಡಪ. ಹಮ್ಮಿನಿ ಮೊದಲಾದವುಗಳನ್ನು ತಯಾರಿಸುವ ವಿಧಾನವನ್ನು ಕಲಿಸಲಾಗುತ್ತಿತ್ತು. ಕಡತ ಮತ್ತು ತಾಳೆಗರಿ ಪುಸ್ತಕಗಳ ಮೇಲ್ಭಾಗವನ್ನು ಬಣ್ಣಗೆಲಸದಿಂದ ಅಲಂಕರಿಸಬೇಕಿತ್ತು. ವೀರಶೈವರ ಧಾರ್ಮಿಕ ಗ್ರಂಥವಾದ ಉದ್ಧರಣೆ ಗ್ರಂಥದಲ್ಲಿರುವ ಷಟ್ಸ್ಥಲ ಸಿದ್ಧಾಂತವನ್ನು ಸಾಲಿಮಠಗಳಲ್ಲಿ ವರ್ಣಚಿತ್ರಗಳಲ್ಲಿ ನಿರೂಪಿಸಿರುವುದು ಕಂಡುಬರುತ್ತದೆ. ವಿದ್ಯಾರ್ಥಿಗಳು ಶ್ರೀಗಂಧದ ಮರದಲ್ಲಿ ಕರಡಿಗೆಗಳನ್ನು ಮಾಡುವುದನ್ನು ಸಹ ಕಲಿಯುತ್ತಿದ್ದರು. ಈ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ವಿಶೇಷವಾದ ಬೇಡಿಕೆಯಿತ್ತು. ಕಸೂತಿ ಕೆಲಸ, ಬುಟ್ಟಿ ಮಾಡುವುದು. ಚಾಪೆ ಹೆಣೆಯುವುದನ್ನು ಕಲಿಯಬೇಕಿತ್ತು. ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಮರಗೆಲಸ ಮತ್ತು ಕಮ್ಮಾರಿಕೆಗಳನ್ನು ಕಲಿಸಲಾಗುತ್ತಿತ್ತು. ಮರದಪಟ್ಟಿಗಳನ್ನು ಪುಸ್ತಕದ ಗಾತ್ರಕ್ಕೆ ಸರಿಯಾಗಿ ಕತ್ತರಿಸಲು ತರಬೇತಿಯನ್ನು ಬಡಗಿಗಳಿಗೆ ಕೊಡಲಾಗುತ್ತಿತ್ತು. ಇಷ್ಟೇ ಅಲ್ಲದೆ ಈ ಪುಸ್ತಕಗಳ ಮೇಲ್ಭಾಗದಲ್ಲಿ ಗ್ರಂಥಕರ್ತರ ಸೂಚನೆಯ ಮೇರೆಗೆ ರಂಗಿನ ಕುಸುರಿ ಕೆಲಸ ಮಾಡಬೇಕಿತ್ತು. ಬೇಡಿಕೆಗೆ ತಕ್ಕಂತೆ ನೂಲುವ ಚಕ್ರಗಳನ್ನೂ ಕೈಮಗ್ಗಗಳನ್ನೂ ತಯಾರು ಮಾಡಲಾಗುತ್ತಿತ್ತು. ಇವಲ್ಲದೆ ವಿದ್ಯಾರ್ಥಿಗಳು ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಮಾಡಿ ಅವನ್ನು ಹೊಲಗಳಲ್ಲಿ ಬಳಸಬೇಕಿತ್ತು. ಇಂದೂ ಸಹ ಅನೇಕ ಹಳ್ಳಿಗಳಲ್ಲಿ ಮರಗೆಲಸಗಳನ್ನು ಸಾಲಿಮಠಗಳಲ್ಲಿ ಮಾಡಲಾಗುತ್ತಿದೆ. ಉಕ್ಕಿನ ಲೇಖನಿಗಳನ್ನು ತಾಳೆಗರಿಗಳ ಮೇಲೆ ಬರೆಯಲು ಸಾಧ್ಯವಾಗುವಂತೆ ವಿದ್ಯಾರ್ಥಿಗಳು ತಯಾರು ಮಾಡುತ್ತಿದ್ದರು. ಕಂತೆ ಮಾಡಲ್ಪಟ್ಟ ಲಿಂಗಗಳ ಮೇಲೆ ಹೊಳಪು ಮಾಡಲು ಸಹಾಯಕವಾಗುವ ಪುಟ್ಟ ಕರಣಿಗಳನ್ನೂ ಸಹ ಅಂದಿನ ವಿದ್ಯಾರ್ಥಿಗಳು ಮಾಡುವುದನ್ನು ಕಲಿಯಬೇಕಿತ್ತು. ವ್ಯವಸಾಯಕ್ಕೆ. ಕಬ್ಬಿಣದ ಉಪಕರಣಗಳನ್ನು ಮಾಡುವುದನ್ನು

ಕಲಿಯಬೇಕಾಗಿತ್ತು. ಅಂದು ಮಠಗಳಲ್ಲಿ ತಯಾರಾದ ಉಪಕರಣಗಳಿಗೆ ಮಾರುಕಟ್ಟೆಯಲ್ಲಿ ಅತಿಶಯವಾದ ಬೇಡಿಕೆಯಿತ್ತು ಎಂಬುದು ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತದೆ. ಕೆಲವು ಮಠಗಳು ಕೃಷಿವಿಜ್ಞಾನವನ್ನು ವಿಶೇಷವಾಗಿ ಹೇಳಿಕೊಡುತ್ತಿದ್ದವು. ಕೃಷಿವಿಜ್ಞಾನಪ್ರದೀಪಕ ಎಂಬುದು ಕೃಷಿವೃತ್ತಿಯ ಬಗೆಗಿನ ವಿಶಿಷ್ಟಜ್ಞಾನವನ್ನು ನಿರೂಪಿಸುವ ಉತ್ತಮ ಗ್ರಂಥವಾಗಿತ್ತು. ಪ್ರಥಮ ಚಿಕಿತ್ಸೆಯನ್ನು ಕುರಿತ ವೈದ್ಯಕೀಯ ಜ್ಞಾನವನ್ನು ಮಕ್ಕಳಿಗೆ ಒದಗಿಸಲಾಗುತ್ತಿತ್ತು. ಇಂದೂ ಸಹ ಅನೇಕ ಮಠಗಳು ಎಲಬು ಮುರಿಯುವಿಕೆ ಮತ್ತು ಮಕ್ಕಳ ರೋಗಗಳಿಗೆ ಚಿಕಿತ್ಸೆಯನ್ನು ನೀಡುತ್ತಿವೆ.

ಕಾಯಕಶಿಕ್ಷಣಕ್ರಮದಲ್ಲಿ ನೂರಾವೊಂದು ಕಾಯಕಗಳನ್ನು ಹೇಳಿಕೊಡಲಾಗುತ್ತಿತ್ತೆಂದು ತಿಳಿದುಬಂದಿದೆ. ಉಪವಾಸ ಮಾಡುವ, ಮೊನಚಾದ ಮೊಳೆಗಳಿಂದ ಕೂಡಿದ ಆವಿಗೆಗಳ ಮೇಲೆ ನಿಲ್ಲುವ, ಶಿರವನ್ನು ಕುಯ್ದುಕೊಳ್ಳುವುದೇ ಮೊದಲಾದ ವಿದ್ಯೆಗಳನ್ನೂ ಶಿವಶರಣರು ಅಭ್ಯಾಸ ಮಾಡುತ್ತಿದ್ದರು. ಜನಗಳನ್ನು ನೈತಿಕಮಾರ್ಗದಲ್ಲಿ ಕೊಂಡೊಯ್ಯಲು. ಕಾಯಕವು ಧರ್ಮಕ್ಕಿಂತ ಮಿಗಿಲಾಗಿ ಸಮಾಜಕ್ಕೆ ಸಂಬಂಧಿಸಿರುತ್ತಿತ್ತು.

ಕರ್ನಾಟಕದ ಸಂಸ್ಕೃತಿಯ ವಿಶಿಷ್ಟ ಲಕ್ಷಣವೆಂದರೆ, ಅಸಂಖ್ಯಾತ ಮಠಗಳನ್ನು ಹೊಂದಿರುವುದು. ಭಾರತದ ಇನ್ನಾವ ಭಾಗದಲ್ಲೂ ಇಷ್ಟು ಸಂಖ್ಯೆಯಲ್ಲಿ ಮಠಗಳು ಕಂಡುಬರುವುದಿಲ್ಲ. ಮಠಗಳು ಜನಪ್ರಿಯಗೊಂಡುದು, ಅವು ಧಾರ್ಮಿಕ ಕೇಂದ್ರಗಳಾದ್ದರಿಂದಲ್ಲದೆ ಶಿಕ್ಷಣ ಪ್ರಚಾರ ಕೇಂದ್ರಗಳಾದ್ದರಿಂದಲೂ ಸಹ. ಪ್ರತಿಯೊಂದು ಮಠವೂ ಗುರುವಿನ ನೇತೃತ್ವದಲ್ಲಿ ಶ್ರೀಸಾಮಾನ್ಯನಿಗೆ ಜ್ಞಾನದ ದಾಸೋಹ ಮಾಡುವ ಪುಣ್ಯಕಾರ್ಯದಲ್ಲಿ ಭಾಗಿಯಾಗುತ್ತಿದ್ದವು. ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಪಟ್ಟಣ ನಗರಗಳಿಗೆ ಸೀಮಿತಗೊಳಿಸದೆ ಹಳ್ಳಿಹಳ್ಳಿಗಳಲ್ಲೂ ವ್ಯಾಪಿಸುವಂತೆ ಮಾಡಿ ಸಮಾಜದ ಬಹುತೇಕ ಜನರಿಗೆ ಶಿಕ್ಷಣ ಒದಗಿಸುವ ವ್ಯವಸ್ಥೆಯನ್ನು ಅನುಗೈದಿದ್ದವು. ಸಾಲಿಮಠಗಳು ಕರ್ನಾಟಕಾದ್ಯಂತ ಸ್ಥಾಪಿತವಾಗಿರುವುದು ಕಂಡುಬರುತ್ತದೆ. ಆಂಗ್ಲರ ಆಗಮನದಿಂದ ಈ ಶಿಕ್ಷಣಕ್ಕೆ ಬರಸಿಡಿಲು ಬಡಿಯಿತು. ಇಂದೂ ಸಹ ಕೆಲವು ಹಳ್ಳಿಗಳಲ್ಲಿ ಸಾಲಿಮಠಗಳು ನೆರೆಹೊರೆಯವರಿಗೆ ಶಿಕ್ಷಣ ಒದಗಿಸುತ್ತಿದ್ದವು ಎಂಬುದಕ್ಕೆ ಜೀವಂತ ಸಾಕ್ಷಿಗಳಾಗಿವೆ.

ಶಿವಶರಣರ ಕಾರ್ಯಕ್ರಿಯೆಗಳನ್ನು ಅಧ್ಯಯನ ಮಾಡಿದಾಗ ಅನ್ನಿಸುತ್ತದೆ, ಇವರ ಧಾರ್ಮಿಕ ಸಾಮಾಜಿಕ ಸುಧಾರಣೆಗಳ ಹಿಂಬದಿಯಲ್ಲಿ ಉತ್ತಮೋತ್ತಮ ಶಿಕ್ಷಣ ಪದ್ಧತಿಯೊಂದು ಆವಿಷ್ಕಾರಗೊಂಡಿರಬೇಕೆಂದು. ಅಂದಿನ ಸಾಮಾಜಿಕವಾದ ಧಾರ್ಮಿಕವಾದ ಅಸ್ತವ್ಯಸ್ತತೆಯಲ್ಲಿ ಆಂದೋಲನದಲ್ಲಿ ಈ ಶಿವಶರಣರು ಸಮರ್ಪಕವಾಗಿ ತಮ್ಮ ಅನುಭವಗಳನ್ನು ಕಾಯಕಶಿಕ್ಷಣ ಪದ್ಧತಿಯ ಮೂಲಕ ಪ್ರಚಾರ ಮಾಡಿದರು. ಆಧುನಿಕ ಶಿಕ್ಷಣಕ್ರಮವೂ ಕಾಯಕ ಶಿಕ್ಷಣ ಪದ್ಧತಿಯ ಅನೇಕ ಅಂಶಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಶಿಕ್ಷಣದ ಎಲ್ಲೆಗಳು ವಿಶಾಲಗೊಳ್ಳುತ್ತಿರುವ ಈ ಕಾಲದಲ್ಲಿ, ಮೂಲ ಶಿಕ್ಷಣವು ಸರಕಾರದ ಶಿಕ್ಷಣನೀತಿಯಾಗಿ ಅಂಗೀಕೃತವಾಗಿರುವ ಈ ಸಮಯದಲ್ಲಿ ಸ್ಫೂರ್ತಿಗೆ, ಪ್ರೇರಣೆಗೆ, ಮಾರ್ಗದರ್ಶನಕ್ಕೆ ಇತಿಹಾಸದ ಪುಟಗಳನ್ನು ನೆಮ್ಮುವುದು ಆಶ್ರಯಿಸುವುದು ಸರ್ವದೃಷ್ಟಿಯಿಂದಲೂ ವಿಹಿತವೆನಿಸುತ್ತದೆ. ಇಂದು ಕಾಯಕಶಿಕ್ಷಣ ನಿರ್ಲಕ್ಷಿಸಲ್ಪಟ್ಟಿದ್ದರೂ ಮುಂದಾದರೂ ರಾಷ್ಟ್ರದ ಹಿತದೃಷ್ಟಿಯಿಂದ, ಜನತೆಯ ಶ್ರೇಯೋಭಿವೃದ್ಧಿಗಾಗಿ, ಭಾವಿ ಜನಾಂಗದ ಕಲ್ಯಾಣಕ್ಕಾಗಿ, ಅದಕ್ಕೆ ತಕ್ಕುದಾದ ಸ್ಥಾನವನ್ನು ಕಲ್ಪಿಸುವುದು ಅನಿವಾರ್ಯವೆನಿಸುತ್ತದೆ. ಕಾಯಕಶಿಕ್ಷಣಕ್ರಮದಂತಹ ಉತ್ಕೃಷ್ಟ ಶಿಕ್ಷಣಪದ್ಧತಿಯನ್ನು ಸರಕಾರ ನಿರ್ಲಕ್ಷಿಸಿದ್ದರೂ ನಾಡಿನಾದ್ಯಂತವಿರುವ ವೀರಶೈವ ಮಠಗಳೂ ಉಪೇಕ್ಷಿಸಿ ಮಾಮೂಲಿ ಶಿಕ್ಷಣ ಒದಗಿಸುತ್ತಿರುವುದು ನಮ್ಮ ದೌರ್ಭಾಗ್ಯ.

## ಮೂಲಶಿಕ್ಷಣ

### ಹಿನ್ನೆಲೆ

ಗಾಂಧೀಜಿಯವರು ತಮ್ಮ ಸುದೀರ್ಘವಾದ ರಾಜಕೀಯ ಜೀವನದ ಪ್ರಯುಕ್ತ ಭಾರತದ ಜೀವನದರ್ಶನವನ್ನು ಹೊಂದಿದರು. ಇವರು ಸ್ಪರ್ಶಿಸಿದ ದರ್ಶಿಸಿದ ಜೀವನ ಭೂಮಿಕೆಗಳಲ್ಲಿ ಸುಧಾರಣೆಗಳನ್ನು ತರಲು ಪ್ರಯತ್ನಿಸಿದರು. ೧೯೧೭ರಲ್ಲಿ ಚಂಪಾರಣ್ಯ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅಸಹಕಾರ ಚಳುವಳಿಯನ್ನು ೧೯೨೦ರಲ್ಲಿ ಆರಂಭಿಸಿದರು. ಇದೇ ಸಮಯದಲ್ಲಿ ಖಾದಿ ಚಳುವಳಿಯನ್ನು ಉದ್ಘಾಟಿಸಿದರು. ೧೯೨೭ರಲ್ಲಿ ರಾಷ್ಟ್ರಾದ್ಯಂತ ಪರ್ಯಟನೆಗೈದು ಖಾದಿಯ ಮಹತ್ತರವಾದ ಸಂದೇಶವನ್ನು ಜನತೆಗೆ ತಲುಪಿಸಿದರು. ೧೯೩೦ರಲ್ಲಿ ಉಪ್ಪಿನ ಸತ್ಯಾಗ್ರಹವನ್ನೂ, ೧೯೩೨ರಲ್ಲಿ ನೌಕರರ ಅಸಹಕಾರ ಚಳುವಳಿಗಳನ್ನೂ ಪ್ರಾರಂಭಿಸಿದನಂತರ ಅಸ್ಪೃಶ್ಯತೆಯ ವಿರುದ್ಧವಾಗಿ ೧೯೩೪ರಲ್ಲಿ ರಾಷ್ಟ್ರ

ಪರ್ಯಟನ ಕೈಗೊಂಡರು. ಕೆಲವು ವರ್ಷಗಳು ಉರುಳಿದನಂತರ ಜನತೆಯ ಆರ್ಥಿಕವಾದ ಪ್ರಗತಿಗಾಗಿ ಅಖಿಲ ಭಾರತೀಯ ಗ್ರಾಮೋದ್ಯೋಗ ಚಳುವಳಿಯನ್ನು ಉದ್ಘಾಟಿಸಿದರು. ಈ ಪರ್ಯಟನೆಯು, ಚಳುವಳಿಗಳ ಸತ್ಯಾಗ್ರಹಗಳ ಸಾಮಾಜಿಕ ಆಂದೋಲನಗಳ ಪರಿಣಾಮವಾಗಿ ಗಾಂಧೀಜಿಯವರ, ರಾಷ್ಟ್ರವನ್ನು ಜನತೆಯನ್ನು ಕುರಿತ ಅನುಭವ ಪಕ್ವಗೊಂಡಿತು ಮತ್ತು ದಕ್ಷಿಣ ಆಫ್ರಿಕಾ ಘಟನೆಗಳೂ ಸಹ ಇವರ ಹಿನ್ನೆಲೆಯನ್ನು ಸಂಸ್ಕರಿಸಿ ಶ್ರೀಮಂತಗೊಳಿಸಿದವು. ಸಾಮಾಜಿಕ ರೋಗರುಜಿನಗಳಿಗೆ ಸಿದ್ಧೌಷಧ, ಸಂಜೀವಿನಿಶಕ್ತಿ ಶಿಕ್ಷಣವೆಂಬುದನ್ನು ಗಾಂಧೀಜಿ ಕಂಡುಕೊಂಡರು. ಗಾಂಧೀಜಿಯವರ ಸತತ ಸಂಶೋಧನ ಮೂಸೆಯಿಂದ ದೀಪ್ತಗೊಂಡು ಹೊಮ್ಮಿದುದೇ "ಮೂಲಶಿಕ್ಷಣ." ಇದು ಗಾಂಧೀಜಿಯವರು ಭಾರತಕ್ಕೆ ತನ್ಮೂಲಕ ಲೋಕಕ್ಕೆ ಇತ್ತ ಕೊನೆಯದಾದರೂ ಅತಿ ಶ್ರೇಷ್ಠವಾದ ಕೊಡುಗೆಯಾಗಿದೆ.

೧೯೩೭ರಲ್ಲಿ ಮೂಲಶಿಕ್ಷಣಪದ್ಧತಿ ಲೋಕಕ್ಕೆ ಪ್ರಕಟಿತವಾದಿತಾದರೂ ಅದು ಗಾಂಧೀಜಿಯವರ ಮನಃಪಟಲದಲ್ಲಿ ಸೃಷ್ಟಿಗೊಳ್ಳುತ್ತಿದ್ದು, ಅವರ ಚಿಂತನ-ಮಂಥನಗಳಿಗೆ ಸಿಲುಕಿ, ಅವರ ಪರಿಶೀಲನಾ ಸಂಶೋಧನಾ ಮೂಸೆಗಳಲ್ಲಿ ಸ್ಫುಟಗೊಂಡು ಸುರುಳಿ ಬಿಚ್ಚುತ್ತಿದ್ದುದು ಬಹಳ ಕಾಲದ ಹಿಂದೆಯೇ. ಖಾದಿ ಮತ್ತು ಮೂಲಶಿಕ್ಷಣ ಪದ್ಧತಿಗಳು ಗಾಂಧೀಜಿಯವರಿಗೆ ಸ್ಫುರಿಸಿದುದು ಅವರು ಒರಿಸ್ಸಾದಲ್ಲಿ ಕ್ಷಾಮಪರಿಹಾರಾರ್ಥವಾಗಿ ನಿಧಿಯನ್ನು ಸಂಗ್ರಹಿಸಲು ನಿರತರಾದಾಗ. ನಿರ್ಗತಿಕರೂ ದೀನದಲಿತರೂ ಕ್ಷಾಮದ ದವಡೆಗೆ ಸಿಲುಕಿ ಪರಿತಪಿಸುತ್ತಿದ್ದ ಅಲ್ಲಿನ ಜನರು ಗಾಂಧೀಜಿಯನ್ನು ಇರುವೆಗಳಂತೆ ಮುತ್ತುತ್ತಿದ್ದರು—ಹಿಡಿ ಕೂಳಿಗಾಗಿ ಗೇಣು ಬಟ್ಟೆಗಾಗಿ. ಗಾಂಧೀಜಿಯವರು ಅನ್ನಬಟ್ಟೆಗಳನ್ನು ಒದಗಿಸಿದಂತೆಲ್ಲಾ ಅದಕ್ಕೆ ಬೇಡಿಕೆ ವಿಪರೀತವಾಗುತ್ತಿತ್ತೇ ವಿನಾ ಕಡಮೆಯಾಗುತ್ತಿರಲಿಲ್ಲ. ಹೀಗೆ ಪುಕ್ಕಟೆಯಾಗಿ ದೊರೆಯುತ್ತಿದ್ದ ಅನ್ನ ಆಹಾರಗಳಿಂದ ನಿರ್ಗತಿಕ ಜನರು ಕೆಲಸ ಮಾಡುವುದರಲ್ಲಿ ಆಸಕ್ತಿ ತಳೆಯದೆ ಭಿಕ್ಷೆಯೇ ಒಂದು ನಿತ್ಯವೃತ್ತಿಯಾಗತೊಡಗಿತು. ಈ ವೃತ್ತಿ ಜನತೆಯ ಆತ್ಮಗೌರವಕ್ಕೆ ಕಳಂಕವನ್ನೂ ತಂದಿತು. ಈ ದಾನಧರ್ಮ ಜನತೆಗೆ ಸಹಾಯ ಒದಗಿಸುವುದರ ಬದಲಾಗಿ ಅವರ ವ್ಯಕ್ತಿತ್ವವನ್ನು ವಿನಾಶಗೊಳಿಸುತ್ತದಲ್ಲದೆ ಅವರನ್ನು ನಿರ್ವೀರ್ಯರನ್ನಾಗಿ ಮಾಡುತ್ತೆಂಬುದನ್ನು ಗಾಂಧೀಜಿಯವರು ಕಂಡುಕೊಂಡರು. ಮತ್ತು ಅನ್ನ, ಬಟ್ಟೆ, ಹಣಗಳ ಬದಲಾಗಿ ಕೆಲಸವನ್ನು ಕೊಡುವುದು ಯೋಗ್ಯವೆಂದು ಗಾಂಧೀಜಿಯವರಿಗೆ ಮನವರಿಕೆಯಾಯಿತು. ಅನ್ನ ಬಟ್ಟೆ ಮತ್ತು ಹಣದ ಜೊತೆಗೆ ಶಕ್ತಿ, ಆತ್ಮವಿಶ್ವಾಸ, ಆತ್ಮಗೌರವಗಳನ್ನು ಜನತೆಯಲ್ಲಿ ತುಂಬಬೇಕೆಂಬುದನ್ನು ಅವರು ಅರಿತರು.

ಲಕ್ಷಾಂತರ ಜನಗಳಿಗೆ ಯಾವ ಕೆಲಸವನ್ನು ಕೊಡಲು ಸಾಧ್ಯ ! ಆ ಕೆಲಸ ಸುಲಭವೂ ಸರಳವೂ ತಾಂತ್ರಿಕ ದೂರವೂ ಆಗಿರಬೇಕು. ಈ ಕೆಲಸ ಹೆಚ್ಚು ಬಂಡವಾಳ ಹಿಡಿಯದೆ ಹಗುರವಾಗಿರಬೇಕು. ಸತತ ಚಿಂತನೆಯ ಫಲವಾಗಿ ಮನಗಂಡರು, ನೂಲುವುದು ಮತ್ತು ನೇಯುವುದು ಸುಲಭೋಪಾಯವೆಂದು. ಚರಕ ಕೊಳ್ಳಲು ಹಗುರ. ನೇಯುವುದು ಸುಲಭ. ಹೊಟ್ಟೆಗೆ ಅನ್ನವನ್ನು ಬಿಟ್ಟರೆ ಮೈಗೆ ಬಟ್ಟೆಯೇ ಅತ್ಯಂತ ಮುಖ್ಯ. ಗಾಂಧೀಜಿಯವರು ಇಂತು ಅಭಿವ್ಯಕ್ತಪಡಿಸುತ್ತಾರೆ : ಜನತೆ ಪರಿತಪಿಸುತ್ತಿರುವುದು ಹಣಕ್ಕಾಗಿಯಲ್ಲ, ಕೆಲಸದ ಅಭಾವದಿಂದ. ದುಡಿಮೆಯೇ ಹಣ. ಲಕ್ಷಾಂತರ ಜನಗಳಿಗೆ ಅವರವರ ಗೃಹಗಳಲ್ಲಿ ಅವರವರ ಯೋಗ್ಯತೆಗುಚಿತವಾದ ಕೆಲಸವನ್ನು ಒದಗಿಸಿದಲ್ಲಿ ಅನ್ನಬಟ್ಟೆಗಳನ್ನು ಒದಗಿಸಿದಂತೆಯೇ. ಬಡತನಕ್ಕಿಂತಲೂ ಸೋಮಾರಿತನವು ಅಪಾಯಕಾರಿಯಾದುದು. ಸೋಮಾರಿತನವೇ ಅಭ್ಯಾಸವಾಗಿ ಪರಿಣಮಿಸಿದಲ್ಲಿ ಅದು ಜೀವನದ ಬೃಹತ್ ಸಮಸ್ಯೆಯಾಗಿ ಪರಿಣಮಿಸುತ್ತದೆ. ಈ ಸಮಸ್ಯೆಯನ್ನು ಬೇರುಸಹಿತ ಕಿತ್ತೆಸೆದಲ್ಲಿ ಸಮಾಜದ ಅನೇಕ ರೋಗರುಜಿನಗಳು ಇಲ್ಲವಾಗುತ್ತವೆ.

ಗಾಂಧೀಜಿಯವರು ಒರಿಸ್ಸಾದ ದಾರುಣಸ್ಥಿತಿಯನ್ನು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯವೇ ಸಮಸ್ತ ಭಾರತಕ್ಕೂ ಅನ್ವಯಿಸುತ್ತದೆ. ಮಾನವಮಹಾಸಮುದ್ರದಂತಿರುವ ಭಾರತವು ವಿಶ್ವದ ಅತ್ಯಂತ ಖ್ಯಾತ ದೇಶಗಳಲ್ಲಿ ಒಂದು. ನಿತ್ಯೋಪಯೋಗಿ ವಸ್ತುಗಳ ಅಭಾವ, ಜನತೆಯಲ್ಲಿ ಆತ್ಮವಿಶ್ವಾಸದ ಕೊರತೆ. ಸೋಮಾರಿತನ ಬೇರುಬಿಟ್ಟಿರುವಿಕೆ, ಮೇಲಾಗಿ ದೇಹದುಡಿಮೆ ಕೀಳುದರ್ಜೆಯ ಜನರ ಸೊತ್ತೆಂಬ ಮನೋಭಾವ—ಮೊದಲಾದ ಅಮಾನುಷವಾದ ಭಾವತರಂಗಗಳು ಜನತೆಯನ್ನು ಬಡತನದ ನಿತ್ಯಸಂಗಾತಿಯನ್ನಾಗಿ ಮಾಡಿವೆ. ನಮ್ಮ ಸಾಮಾಜಿಕ ರಚನೆಯು ಕೈದುಡಿಮೆಯನ್ನು ಹೀನಾಯವೆಂದು ಪರಿಗಣಿಸಿರುವುದು ಕಂಡುಬರುತ್ತದೆ. ಯಾವ ಮನುಷ್ಯನು ತನ್ನ ದೇಹದುಡಿಮೆಯಿಂದ ನಾಡಿನ ಸಂಪತ್ತನ್ನು ಹೆಚ್ಚಿಸಲು ಕಾರಣನಾದನೊ ಅವನನ್ನು ಸಮಾಜದ ನಾಲ್ಕನೇ ದರ್ಜೆಯ ಸದಸ್ಯನನ್ನಾಗಿ ಪರಿಗಣಿಸಲಾಗಿದೆ. ವ್ಯಾಪಾರಿ ವೈಶ್ಯ ಇವರಿಗಿಂತ ಮೇಲಿನ ಹಂತವನ್ನು ಸಂಪಾದಿಸಿದನು. ಖಡ್ಗಗಳನ್ನು ಹಿಡಿದು ವೀರಾವೇಶದಿಂದ ಹೋರಾಡಿದ, ಉತ್ಪಾದನೆಯ ಕೆಲಸದಲ್ಲಿ ಕಿಂಚಿತ್ತೂ ಭಾಗವಹಿಸದ ಕ್ಷತ್ರಿಯರು ಇನ್ನೂ ಮೇಲಣ ಅಂತಸ್ತನ್ನು ಗಿಟ್ಟಿಸಿದರು. ಏನೂ ಕೆಲಸ ಮಾಡದ ಪುರೋಹಿತನು ಇವರನ್ನೆಲ್ಲ ಮೆಟ್ಟಿ ಮೇಲೆ ನಿಂತನು. ಇಂತಹ ಸಮತೋಲನ

ವಿಲ್ಲದ ಸಾಮಾಜಿಕ ರಚನೆಯ ಫಲವಾಗಿ ಕೊನೆಯ ವರ್ಗದವರು ಮೇಲಣ ವರ್ಗದವರನ್ನು ಅನುಕರಣೆ ಮಾಡುವುದು ಅನಿವಾರ್ಯವಾಯಿತು. ಶ್ರಮದುಡಿಮೆಯು ಕಾಲಕಳೆದಂತೆ ತುಚ್ಛೀಕೃತವಾಯಿತು, ಗೌರವಹೀನವಾಯಿತು. ಎಲ್ಲರೂ ಶ್ರಮದೂರವಾದ ಜೀವನ ನಡೆಸಲು ಬಯಸಿದರು. ನಮ್ಮ ರಾಜಕೀಯ, ಸಾಮಾಜಿಕ ವಿಫಲತೆಗಳು ನಮ್ಮ ಬಡತನ ಮತ್ತು ಪರಾವಲಂಬನೆಗಳು ಮಾನಸಿಕ ಮತ್ತು ಸಾಮಾಜಿಕ ದೌರ್ಬಲ್ಯಗಳ ಫಲವೆನ್ನಬಹುದು. ಭಾರತವು ಶಕ್ತಿಯ ಆಗರವಾಗಬೇಕಾದರೆ, ಒಂದು ಹೊಸ ಸಮಾಜವನ್ನು ಸೃಜಿಸಿ ಎಲ್ಲರೂ ಬದುಕಿನಲ್ಲಿ ಭಾಗಿಯಾಗಬೇಕಾಗುತ್ತದೆ. ದುಡಿಮೆಯೇ ಜನತೆಯಲ್ಲಿ ಆತ್ಮವಿಶ್ವಾಸವನ್ನು ಶಕ್ತಿಯನ್ನು ತುಂಬುತ್ತದೆ. ರಾಷ್ಟ್ರೀಯ ಶಿಕ್ಷಣಕ್ರಮವು ಒಂದು ಸಮಾಜದ ಸೃಷ್ಟಿಯಲ್ಲಿ ತೊಡಗಬೇಕಾದರೆ ಅದು ಗಾಂಧೀಜಿಯವರ ಕಾಯಕತತ್ವಕ್ಕೆ ಶರಣುಹೋಗಲೇಬೇಕು. ಪ್ರಸಕ್ತ ಶಿಕ್ಷಣ ಈ ಮೇಲಿನ ತತ್ವಕ್ಕೆ ತದ್ವಿರುದ್ಧವಾಗಿದೆಯೆಂದು ಗಾಂಧೀಜಿಯವರು ಅಭಿಪ್ರಾಯಿಸಿದರು. ಶೇಕಡ ಎಂಭತ್ತರಷ್ಟು ಕೃಷಿಕರೂ, ಶೇಕಡ ಹತ್ತರಷ್ಟು ಕೈಗಾರಿಕರೂ ಇರುವ ಭಾರತದಲ್ಲಿ ಕಾಯಕಕ್ಕೆ ಪ್ರಾಧಾನ್ಯತೆ ಕೊಡದೆ ಸಾಹಿತ್ಯಕವಾದ ಅಕ್ಷರಜ್ಞಾನಪ್ರಧಾನವಾದ ಶಿಕ್ಷಣಕ್ಕೆ ಪ್ರಾಶಸ್ತ್ಯವಿತ್ತು ಮಕ್ಕಳನ್ನು ಸಮಾಜಕ್ಕೆ ರಾಷ್ಟ್ರಕ್ಕೆ ಹೊರೆಯಾಗಿಸುವಂಥ ಶಿಕ್ಷಣ ಯೋಗ್ಯವಾದುದಲ್ಲ. ನಮ್ಮ ಜೀವಿತದ ಬಹುವೇಳೆಯು ಹೊಟ್ಟೆಗೆ ದುಡಿಯುವಲ್ಲಿಯೇ ವ್ಯಯವಾಗುತ್ತದೆ. ಅಂದಮೇಲೆ ಮಕ್ಕಳನ್ನು ಪ್ರಥಮದಿಂದಲೂ ದೇಹದುಡಿಮೆಗಳ ಬಗೆಗೆ ಗೌರವಭಾವ ಮೂಡುವಂತೆ ಮಾಡಬೇಕು. ಈಗಿನ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಶ್ರಮದುಡಿಮೆಗಳ ಬಗೆಗೆ ಅಷ್ಟು ಪುರಸ್ಕಾರವಿಲ್ಲ. ಆದಕಾರಣವೇ ನಮ್ಮ ಶಿಕ್ಷಣ ಶ್ರಮಗೌರವಗಳಿಗೆ ಹೆಚ್ಚಿನ ಮಹತ್ವದ ಸ್ಥಾನ ನೀಡಿ ಅದನ್ನು ಕ್ರಿಯಾತ್ಮಕಗೊಳಿಸಬೇಕು. ಇದೇ ಮೂಲ ಶಿಕ್ಷಣದ ಅಸ್ತಿಭಾರ.

ಮಹಾತ್ಮಾಜಿಯವರು ಈ ಶಿಕ್ಷಣಕ್ರಮವನ್ನು ೧೯೩೭ರಲ್ಲಿ ನೆರೆದ ಶಿಕ್ಷಣತಜ್ಞರ ಅವಗಾಹನೆಗೆ ತರುವ ಪೂರ್ವಭಾವಿಯಾಗಿಯೇ ಇತರ ರಾಷ್ಟ್ರೀಯ ಸಮಸ್ಯೆಗಳೊಡನೆ ಪರ್ಯಾಲೋಚಿಸಿದ್ದರು. ನೆರೆದ ಸಭೆಯ ಮುಂದೆ ಯೋಜನೆಯನ್ನು ಮಂಡಿಸಿದ ರೀತಿ ಇದು : ನಮ್ಮ ದೇಶಕ್ಕೆ ಹೊಸ ಶಿಕ್ಷಣಪದ್ಧತಿಯ ಅಗತ್ಯವಿದೆ. ಈ ಹೊಸ ಶಿಕ್ಷಣವು ಶಾಲಾವಯೋಪರಿಮಿತಿಯಲ್ಲಿರುವ ಮಕ್ಕಳಿಗೆಲ್ಲಾ ದೊರೆಯಬೇಕು. ಈ ವ್ಯಾಪಕವಾದ ಶಿಕ್ಷಣಕ್ಕೆ ಹೆಚ್ಚು ಹಣದ ಅವಶ್ಯಕತೆಯಿದೆ. ಆದರೆ ಈ ಹಣವನ್ನು ತೆರಿಗೆ ವಿಧಿಸುವ ಮೂಲಕ ಪಡೆಯಬಾರದು. ಶಿಕ್ಷಣಪದ್ಧತಿಯೇ ತನಗೆ ಅವಶ್ಯವಾದ ಹಣವನ್ನು ಕಂಡುಕೊಳ್ಳಬೇಕು. ಕೆಲಸವೇ ಶಿಕ್ಷಣದ ಮೂಲಾಧಾರವಾದ ಮೇಲೆ, ಈ ಕೆಲಸ ಕಲಿಕೆಗೆ ಮತ್ತು ಈ ಕೆಲಸವನ್ನು ಹಣದ ರೂಪಕ್ಕೆ ತಿರುಗಿಸುವುದು ಸಾಧ್ಯವಿಲ್ಲವೆ ? ಗಾಂಧೀಜಿಯವರು ಸ್ಪಷ್ಟಪಡಿಸಿದ್ದೆಂದರೆ ಕೆಲಸದ ಮೂಲಕ ವಿದ್ಯಾರ್ಥಿಯು ವಿದ್ಯೆಯನ್ನು ಕಲಿಯುವುದು ಹಾಗೂ ಸಂಪಾದಿಸಿ ಶಾಲೆಯ ನಿರ್ವಹಣೆಗೆ ಸಹಾಯಕವಾಗುವುದು.

ಗಾಂಧೀಜಿಯವರ ಭಾಷಣ ಮುಗಿದನಂತರ ಅನೇಕ ಉಪಸಮಿತಿಗಳು ರಚಿತವಾಗಿ ಈ ನವಶಿಕ್ಷಣವನ್ನು ಕುರಿತ ಚರ್ಚೆಯಲ್ಲಿ ನಿರತವಾದವು. ಈ ಸಮಿತಿಗಳಲ್ಲಿ ಭಾಗವಹಿಸಿದವರಲ್ಲಿ ಮುಖ್ಯರೆಂದರೆ ಡಾ. ಜಕೀರ್‌ಹುಸೇನ್, ಆರ್ಯನಾಯಕಮ್, ಡಾ. ಕೆ. ಟಿ. ಷಾ ಮತ್ತು ಭಾರತಾದ್ಯಂತ ಶಿಕ್ಷಣ ಸಂಶೋಧನೆಯಲ್ಲಿ ತೊಡಗಿದ ತಜ್ಞರು ಮತ್ತು ಪ್ರಾಂತ್ಯಸರಕಾರಗಳ ಮಂತ್ರಿಗಳು. ಈ ಶಿಕ್ಷಣ ಸಮ್ಮೇಳನದ ಚರ್ಚೆಯ ಸಂಭಾಷಣೆಯ ಫಲವಾಗಿ ಕೈಗೊಂಡ ಠರಾವುಗಳೇ ಈ ಮುಂದಿನವು :

೧. ರಾಷ್ಟ್ರಾದ್ಯಂತವೂ ಏಳು ವರ್ಷಗಳತನಕ ಉಚಿತವೂ ಕಡ್ಡಾಯವೂ ಆದ ಶಿಕ್ಷಣವನ್ನು ಮಕ್ಕಳಿಗೆ ಒದಗಿಸಬೇಕು.
೨. ಶಿಕ್ಷಣ ಮಾಧ್ಯಮವು ಮಾತೃಭಾಷೆಯಾಗಬೇಕು.
೩. ಈ ಅವಧಿಯಲ್ಲಿ ಶಿಕ್ಷಣವು ದೇಹದುಡಿಮೆಗೆ, ಉತ್ಪಾದನೆಗಳಿಗೆ ಪ್ರಾಮುಖ್ಯತೆಯಿತ್ತು ಮಕ್ಕಳಿಗೆ ಪರಿಚಿತವಾದ ಕಸುಬಿನ ಸುತ್ತ ಶಿಕ್ಷಣವನ್ನು ನೀಡಬೇಕು.
೪. ಈ ಹೊಸ ಶಿಕ್ಷಣವು ಶಿಕ್ಷಕರ ವೇತನಕ್ಕೆ ಸಾಕಾಗುವಷ್ಟನ್ನಾದರೂ ಉತ್ಪಾದಿಸಬೇಕು.

ಈ ಶಿಕ್ಷಣ ಸಮ್ಮೇಳನವು, ಡಾ. ಜಕೀರ್ ಹುಸೇನ್‌ರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಮೇಲಿನ ಠರಾವುಗಳ ಹಿನ್ನೆಲೆಗೆ ಅನುರೂಪವಾದ ಪಠ್ಯವಿಷಯವನ್ನು ರಚಿಸಬೇಕೆಂದು ಸೂಚಿಸಿತು. ೧೯೩೮ರಲ್ಲಿ ಈ ಸಮಿತಿಯು ಗಾಂಧೀಜಿಯವರಿಗೆ ವರದಿಯನ್ನು ಸಲ್ಲಿಸಿತು. ಗಾಂಧೀಜಿಯವರು ಇದನ್ನು ಅನುಮೋದಿಸಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಮುಂದೆ ಪರಿಶೀಲನೆಗೆ ಮಂಡಿಸಿದರು. ೧೯೩೮ರ ಹರಿಪುರದ ಕಾಂಗ್ರೆಸ್

ಸಮ್ಮೇಳನದಲ್ಲಿ ಇದನ್ನು ರಾಷ್ಟ್ರೀಯ ಶಿಕ್ಷಣ ಪದ್ಧತಿಯೆಂದು ಪರಿಗಣಿಸಲಾಯಿತು. ಹೀಗೆ ಮೂಲಶಿಕ್ಷಣವು ಕ್ರಮ ಕ್ರಮವಾಗಿ ಆವಿಷ್ಕಾರಗೊಂಡಿತು.

## ಮೂಲಶಿಕ್ಷಣದ ತಾತ್ವಿಕತೆ

ಈ ಹೊಸ ಶಿಕ್ಷಣ ಭೂಮಿಕೆಯಲ್ಲಿ ಕಾಯಕವೇ ಕೇಂದ್ರ. ಆಧಾರಸ್ತಂಭ. ಅದರ ಸುತ್ತ ಬೋಧನವಿಷಯಗಳು ನೆಯ್ದುಕೊಂಡಿರುತ್ತವೆ. ಕೆಲಸ ನಾನಾ ತರನಾಗಿರುತ್ತದೆ. ವೈಯಕ್ತಿಕ ಮತ್ತು ಸಾಮುದಾಯಿಕ ಸ್ವಚ್ಛತೆಯನ್ನು ಕುರಿತ ಚಟುವಟಿಕೆಗಳು ಮೂಲಶಿಕ್ಷಣ ಶಾಲೆಗಳಲ್ಲಿ ಪರಮೋಚ್ಚಸ್ಥಾನವನ್ನು ಹೊಂದಿರುತ್ತವೆ. ಕೆಲಸಕ್ಕೆ ಬಾರದ ವಿಷಯ ಗಳನ್ನು ಮಕ್ಕಳ ತಲೆಗೆ ತುರುಕುವ ಸಾಹಸವನ್ನು ಮಾಡದೆ, ಅವರಿಗೆ ಉಪಯುಕ್ತವಾಗುವ ಹವ್ಯಾಸಗಳನ್ನು ಕಲಿಸ ಲಾಗುತ್ತದೆ. ಸ್ವಚ್ಛತೆ ಮತ್ತು ಆರೋಗ್ಯಕರವಾದ ಚಟುವಟಿಕೆಗಳಲ್ಲಿ ದಿನನಿತ್ಯವೂ ಭಾಗವಹಿಸಿ ಅವುಗಳನ್ನು ವೈಜ್ಞಾನಿಕ ವಾಗಿ ಅರ್ಥವಿಸಿಕೊಳ್ಳಲು ಪ್ರಾರಂಭಿಸಬೇಕು. ಮೊದಲ ಮೂಲಶಿಕ್ಷಣ ಶಾಲಾದಿನಗಳಲ್ಲಿ. ಪ್ರತಿನಿತ್ಯವೂ ಪ್ರಾತಃ ಸಮಯದಲ್ಲಿ ಮಕ್ಕಳು ಬಾಯಿ ಸ್ವಚ್ಛಗೊಳಿಸುವುದು. ಹಲ್ಲು ಉಜ್ಜುವುದು. ಮುಖ ತೊಳೆಯುವುದು. ಸ್ನಾನ ಮಾಡುವುದು. ವ್ಯಾಯಾಮ ಮಾಡುವುದು. ಬಟ್ಟೆ ತೊಳೆಯುವುದು. ಈ ಚಟುವಟಿಕೆಗಳ ಮೂಲಕ ಬೋಧನವನ್ನು ಒದಗಿಸುವುದೇ ಈ ಶಿಕ್ಷಣದ ತತ್ತ್ವ, ಮತ್ತು ಇವುಗಳನ್ನು ಜೀವನದ ದಿನನಿತ್ಯದ ಕರ್ಮವನ್ನಾಗಿ ಮಾರ್ಪಡಿಸುವುದು. ಇದೇ ರೀತಿ ಸಾಮಾಜಿಕ. ಧಾರ್ಮಿಕ ಹಬ್ಬಗಳು. ಮದುವೆ ಮುಂಜಿಗಳು. ದೇವಮಂದಿರಗಳಿಗೆ ಹೋಗುವುದು ಮೊದ ಲಾದ ಸಾಮಾಜಿಕ ಘಟನೆಗಳನ್ನು ಬೋಧನಸಾಮಗ್ರಿಗಳನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಇವೆಲ್ಲಕ್ಕಿಂತಲೂ ಮಿಗಿ ಲಾಗಿ ಉಪಯುಕ್ತ ದೈಹಿಕ ದುಡಿಮೆಗೆ ಆದ್ಯತೆಯಿತ್ತು ಕೆಲಸ ಕಸಬುಗಳನ್ನು ಜಾಣ್ಮೆಯಿಂದ ಮಾಡುವ ವಿಧಾನವನ್ನು ಬೋಧಿಸಿ ಬೌದ್ಧಿಕವಾದ ಸಮತೆಗೆ ಮೂಲಶಿಕ್ಷಣ ದಾರಿಮಾಡುತ್ತದೆ.

ಮೂಲಶಿಕ್ಷಣದ ಉದ್ದೇಶ. ಉತ್ತಮ ವ್ಯಕ್ತಿಗಳನ್ನು ಸೃಷ್ಟಿಸುವುದು ಮಾತ್ರವಲ್ಲದೆ. ಸಮಾಜದಲ್ಲಿ ತಮ್ಮ ಸ್ಥಾನಮಾನಗಳನ್ನು ಅರಿತು. ಕರ್ತವ್ಯ ಹೊಣೆಗಳನ್ನು ನಿರ್ವಹಿಸುವಂತೆ ಸಮಾಜದ ಪ್ರಗತಿಯಲ್ಲಿ ಆಸ್ಥೆಯನ್ನು ಹೊಂದಿದ ಸಮಾಜೀಕೃತ ವ್ಯಕ್ತಿಗಳನ್ನಾಗಿ ಪರಿವರ್ತಿಸುವುದು. ಅಂದರೆ ಪೌರನಿಗುಚಿತವಾದ ತರಬೇತಿಯನ್ನು ಒದಗಿಸು ತ್ತದೆ ಮೂಲಶಿಕ್ಷಣ. ಶಿಕ್ಷಣವು ಅಪೂರ್ಣವಾಗುತ್ತದೆ ಪೌರಕರ್ತವ್ಯಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ಒದಗಿಸ ದಿದ್ದಲ್ಲಿ. ಪೌರಶಿಕ್ಷಣಕ್ಕೆ ಸಲ್ಲದ ಸ್ಥಾನವನ್ನು ಕೊಡಲಾಗುತ್ತದೆ. ಪೌರಶಿಕ್ಷಣವನ್ನು ನಾಲ್ಕು ಗೋಡೆಗಳ ಮಧ್ಯೆ ಮಕ್ಕಳನ್ನು ಸೆರೆಹಿಡಿದು ಬಲವಂತವಾಗಿ ಶಬ್ದಗಳ ಮೂಲಕ ಒದಗಿಸದೆ. ಕಾರ್ಯತಃ ಆ ಶಿಕ್ಷಣವನ್ನು ಕಂಡರಿಯುವ. ಮನನಮಾಡಿಕೊಳ್ಳುವ. ಭಾಗವಹಿಸುವ. ಪ್ರಶ್ನೆ ಉಪಪ್ರಶ್ನೆಗಳ ಮೂಲಕ ಬೋಧಿಸುವ ತನ್ಮೂಲಕ ಜೀವಂತ ಪೌರಶಿಕ್ಷಣವನ್ನು ನಾಲ್ಕು ಗೋಡೆಗಳ ಹೊರಗಡೆಯೇ ಒದಗಿಸಲಾಗುತ್ತದೆ. ಈ ಶಿಕ್ಷಣ ಮಕ್ಕಳಲ್ಲಿ ಸಾಮೂಹಿಕ ಶಕ್ತಿ ಯನ್ನೂ. ಐಕ್ಯತೆಯನ್ನೂ. ಶಿಸ್ತನ್ನೂ ಮೊಳೆಯುವಂತೆ ಮಾಡುತ್ತದೆ. ಹೀಗೆ ದೈಹಿಕವಾಗಿಯೂ ಮಾನಸಿಕವಾಗಿಯೂ ಭಾಗವಹಿಸುವಿಕೆ ನಮ್ಮ ಇಂದಿನ ಶಿಕ್ಷಣದಲ್ಲಿ ಕಾಣಬರುವುದಿಲ್ಲ. ಹೀಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸು ವುದರಿಂದ ಮಕ್ಕಳಲ್ಲಿ ಕ್ರಮೇಣ ಸಾಮಾಜಿಕ ಪ್ರಜ್ಞೆ ಒಡಮೂಡುತ್ತದೆ. ಮೇಲಾಗಿ ತಮ್ಮ ವೈಯಕ್ತಿಕ ಹಿತಕ್ಕಿಂತ ಸಾಮಾಜಿಕ ಹಿತವೇ ಮೇಲೆಂಬ ಮನೋಭಾವವೂ ಮೂಡುತ್ತದೆ.

ಮೊನಚಾದ ಬುದ್ಧಿ ಸಂಪ್ರದಾಯಶಾಲೆಗಳಲ್ಲಿ ಬೆಳೆಯಲಸಾಧ್ಯವಿದೆ : ಆದರೆ ಅದು ಸಾಮಾಜಿಕವಾಗಿ ಬೆಳೆದಿರು ವುದಿಲ್ಲ. ಇದರ ಬದಲಾಗಿ ಬೌದ್ಧಿಕತೆಯು ಮೂಲಶಿಕ್ಷಣ ಶಾಲೆಗಳಲ್ಲಿ ದೈಹಿಕವಾದ ಸಾಮಾಜಿಕವಾದ ದುಡಿಮೆಗೆ ಒಳಗಾಗಿ ಬೆಳೆದು ಸೇವಾಮನೋಭಾವವೃತ್ತಿಯೂ ವೃದ್ಧಿಯಾಗುತ್ತದೆ. ಕೇವಲ ಬೌದ್ಧಿಕವಾಗಿ ಬೆಳೆದ ಮಗುವು ವ್ಯಷ್ಟಿವಾದಿಯಾಗಬಹುದು. ಆದರೆ ಕೆಲಸದ, ಚಟುವಟಿಕೆಗಳ ಮೂಲಕ ಶಿಕ್ಷಣವನ್ನು ಒದಗಿಸಿದಲ್ಲಿ ಮಕ್ಕಳು ಇತರ ಮಕ್ಕಳ ಸಂಪರ್ಕವನ್ನು ಹೊಂದಿ ಸಹಕಾರ ಮನೋಭಾವ ಬೆಳೆಸಿಕೊಂಡು ಸಮಷ್ಟಿವಾದಿಗಳಾಗಬಹುದು. ಈ ತರನಾದ ಶಿಕ್ಷಣ, ಮುಂದಣ ಜೀವನಕ್ಕೆ ಮಾರ್ಗದರ್ಶಿಯಾಗುವುದಲ್ಲದೆ ಸಹಕಾರ ಪ್ರಜ್ಞೆಯನ್ನೂ, ನಾಯಕತ್ವದ ಮುಖ್ಯ ಗುಣ ಗಳನ್ನೂ ಮೈಗೂಡಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ.

ಮೂಲಶಿಕ್ಷಣವು ಕೇವಲ ಹೊಸ ಮಾರ್ಗಗಳನ್ನು ರೂಪಿಸುವುದು ಮಾತ್ರವಲ್ಲದೆ ಹೊಸ ಜೀವನತತ್ತ್ವವನ್ನು ನಿರೂಪಿಸುತ್ತದೆ. ಮನುಷ್ಯನು ಕೈಗೊಳ್ಳುವ ಕಾಯಕವೆಲ್ಲವೂ ಪೂಜ್ಯವೆಂದು ಮಾನ್ಯವಾಗುತ್ತದೆ. ಜೀವನದ ಸಿರಿಸಂಪದ ವೆಲ್ಲವೂ ಮಾನವನ ಪರಿಶ್ರಮದ ಫಲವೆಂದು ಪರಿಗಣಿಸಿ ದಿನನಿತ್ಯದ ಕರ್ಮಕ್ರಿಯೆಗಳಿಗೆ ಪರಮೋಚ್ಚಸ್ಥಾನವನ್ನು

ಕಲ್ಪಿಸುತ್ತದೆ. ಕರ್ಮಕ್ರಿಯೆಗಳಲ್ಲಿ ಮೇಲು–ಕೀಳೆಂಬ ಉಚ್ಚ–ನೀಚವೆಂಬ ತರತಮ ಭಾವನೆಗಳಿಗೆ ಎಡೆಗೊಡುವುದಿಲ್ಲ. ಬೀದಿ ಗುಡಿಸುವುದು ಹೀನಾಯವೆಂದೂ. ತರಗತಿಯಲ್ಲಿ ಉಪನ್ಯಾಸಿಸುವುದು ಶ್ರೇಷ್ಠತಮವೆಂದೂ ಪರಿಗಣಿಸದೆ. ಕಾಯಕವೆಲ್ಲವೂ ಪೂಜ್ಯ, ಆದರೆ ಮನುಷ್ಯ ಮೇಲುಕೀಳಾಗುವುದು ತಾನು ಮಾಡುವ ಕೆಲಸದ ಗುಣಮಟ್ಟದಿಂದ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮನುಷ್ಯನು ತನ್ನ ಕೆಲಸವನ್ನು ಸಮಾಜದ ಹಿತದೃಷ್ಟಿಯಿಂದ. ನಿಸ್ವಾರ್ಥವಾಗಿ ಸಮರ್ಪಕವಾಗಿ ಮಾಡಿದಲ್ಲಿ ಅವನು ಯಾವ ಕೆಲಸದಲ್ಲೇ ಇರಲಿ ಅವನು ಮಾನ್ಯನು. ಅಂತೆಯೇ ಯಾವ ವ್ಯಕ್ತಿಯೇ ಆಗಲಿ ತನ್ನ ಕಾರ್ಯವನ್ನು ನಿಷ್ಠೆಯಿಂದ. ಸಮರ್ಪಕವಾಗಿ ಮಾಡದಿದ್ದಲ್ಲಿ ಅವನು ಯಾವ ಕಾರ್ಯದಲ್ಲೇ ನಿರತನಾಗಿರಲಿ ತ್ಯಾಜ್ಯನು.

ಮಹಾತ್ಮಾ ಗಾಂಧೀಜಿಯವರು ಮೂಲಶಿಕ್ಷಣದ ಮುಖ್ಯ ಲಕ್ಷಣಗಳನ್ನು ಈ ಮುಂದಣ ವಾಕ್ಯಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ:

ನವೋನವ ಶಿಕ್ಷಣದ ಪರಮ ಉದ್ದೇಶ ಕೇವಲ ಸಮತೋಲನವೂ ಸಾಮಂಜಸ್ಯವೂ ಆದ ವ್ಯಕ್ತಿಯನ್ನು ಸೃಷ್ಟಿಸುವುದು ಮಾತ್ರವಲ್ಲದೆ ಸಮತೋಲನವೂ ಸಾಮಂಜಸ್ಯವೂ ಆದ ಸಮಾಜವನ್ನೂ ಸೃಷ್ಟಿಸುವುದು. ಇಂತಹ ಸಮಾಜದಲ್ಲಿ ಬಡವಬಲ್ಲಿದರ ಮಧ್ಯೆ ಗೋಡೆ ಎದ್ದಿರುವುದಿಲ್ಲ. ಪ್ರತಿಯೊಬ್ಬನಿಗೂ ದುಡಿಯಲು ಅವಕಾಶವಿದೆ, ಅಭಿವ್ಯಕ್ತಿಗೆ ಸ್ವಾತಂತ್ರ್ಯವಿದೆ....ಶಿಕ್ಷಣವೆಂದರೆ ಮಕ್ಕಳಲ್ಲಿ ವಯಸ್ಕರಲ್ಲಿ, ದೇಹದಲ್ಲಿ ಮನದಲ್ಲಿ ನಿಗೂಢವಾಗಿರುವ ಶಕ್ತಿಗಳನ್ನು ಕಂಡುಕೊಂಡು ಅವನ್ನು ಪೋಷಿಸಿ ಬೆಳೆಸುವುದು. ಅಕ್ಷರಜ್ಞಾನವನ್ನು ಒದಗಿಸುವುದನ್ನು ಶಿಕ್ಷಣದ ಕೊನೆಮೊದಲೆನ್ನಲಾಗದು. ಇದು ಸ್ತ್ರೀಯರನ್ನೂ ಪುರುಷರನ್ನೂ ಶಿಕ್ಷಣದತ್ತ ಕೊಂಡೊಯ್ಯುವ ಮಾರ್ಗವಷ್ಟೆ. ಅಂದಮೇಲೆ ಅಕ್ಷರಜ್ಞಾನವೇ ಶಿಕ್ಷಣವಾಗದು. ನೈಜಶಿಕ್ಷಣ ಪ್ರಾರಂಭವಾಗುವುದು ಮಗುವಿಗೆ ಉಪಯುಕ್ತ ಕಸಬಿನ ಮೂಲಕ ಹೇಳಿಕೊಟ್ಟಾಗ. ವ್ಯಕ್ತಿಯ ಮನಸ್ಸು ಮತ್ತು ಆತ್ಮಗಳು ಬೆಳೆಯಲು ಸಾಧ್ಯವಾಗುವುದು. ಶಿಕ್ಷಣವನ್ನು ಯಾವುದಾದರೂ ಒಂದು ಉಪಯುಕ್ತ ಕಸಬಿನ ಮಾಧ್ಯಮದ ಮೂಲಕ ಒದಗಿಸಿದಾಗಲೇ. ಕೈಕಸಬುಗಳನ್ನು ಕೇವಲ ಯಾಂತ್ರಿಕವಾಗಿ ಹೇಳಿಕೊಟ್ಟರೆ ಸಾಲದು. ಅದನ್ನು ವೈಜ್ಞಾನಿಕವಾಗಿ ತಿಳಿಯಹೇಳಬೇಕು. ಮಗುವು ಕೈಕಸಬಿನ ಪೂರ್ವಪಶ್ಚಿಮಗಳನ್ನು ತಿಳಿಯುವಂತಾಗಬೇಕು. ಗ್ರಾಮಕೈಗಾರಿಕೆಗಳ ಮೂಲಕ ಹೇಳಿಕೊಡುವ ಶಿಕ್ಷಣವು ಸಾಮಾಜಿಕ ಮೌನಕ್ರಾಂತಿಗೆ ನಾಂದಿಯಾಗಿ ಫಲಿತಾಂಶಗಳು ಪರಿಣಾಮಕರವಾಗಿರಬೇಕು. ಈ ಶಿಕ್ಷಣದಿಂದ ಹಳ್ಳಿಪಟ್ಟಣಗಳಿಗಿರುವ ವೈಷಮ್ಯ ಉದುರಿ ಪರಸ್ಪರಾವಲಂಬನೆಗೆ ದಾರಿಯಾಗಬೇಕು ಮತ್ತು ಪ್ರಸ್ತುತ ಸಾಮಾಜಿಕವಾದ ಅನಿಶ್ಚಿತತೆ ಮತ್ತು ವರ್ಣದ್ವೇಷಗಳು ಮಾಯವಾಗಬೇಕು.

ಹೊಸ ಶಿಕ್ಷಣವು ಆತ್ಮಾವಲಂಬನೆಗೆ. ಆರೋಗ್ಯಪೂರ್ಣವೂ ಸಮತೋಲನವೂ ಆದ ಜೀವನಕ್ಕೆ ಅಂದರೆ ಆರ್ಥಿಕ, ದೈಹಿಕ, ನೈತಿಕ, ಸಾಂಸ್ಕೃತಿಕವಾದ ಪೂರ್ಣತೆಗೆ ಮಾರ್ಗ ಕಲ್ಪಿಸಬೇಕು. ಜೀವನದ ವಿವಿಧ ಮುಖಗಳೇ ಶಿಕ್ಷಣದ ಮಾಧ್ಯಮವಾಗಬೇಕು. ಅಗತ್ಯವಾದಷ್ಟು ಜ್ಞಾನವನ್ನು ಒದಗಿಸಬೇಕು. ಹಿತಮಿತವಾದ ಅಭ್ಯಾಸಗಳು. ವರ್ತನೆಗಳು ಮಕ್ಕಳ ಜೀವನದ ಅವಿಭಾಜ್ಯಭಾಗವಾಗಬೇಕು.

## ಆರ್ಥಿಕ ಸ್ವಾವಲಂಬನೆ

ಮೂಲಶಿಕ್ಷಣಕ್ರಮದ ತತ್ತ್ವಗಳಾವುವೂ ಈ ತತ್ತ್ವ ಕಟುಟೀಕೆಗೆ ಒಳಗಾದಂತೆ, ಒಳಗಾಗಿಲ್ಲ. ಮೂಲಶಿಕ್ಷಣ ಶಾಲೆಗಳು ತಮ್ಮ ವೆಚ್ಚವನ್ನು ಪೂರೈಸಲು ಉತ್ಪಾದನಾಕಾರ್ಯಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದಾಗ ಪ್ರಾಧ್ಯಾಪಕನೊಬ್ಬ ಮಾಡಿದ ಕಟುಟೀಕೆ ಇಂತಿದೆ: "ಸ್ವಾವಲಂಬನಾ ಶಾಲಾಕಾರ್ಯಾಗಾರಗಳು ದೇಹದುಡಿಮೆಯ ಮೂಲಕ ಶಿಕ್ಷಣವನ್ನು ಒದಗಿಸುತ್ತವೆ ಎಂಬ ನಂಬುಗೆಗೆ ಪಕ್ಕಾಗದಿರುವುದು ಲೇಸು. ನೇರವಾಗಿ ಹೇಳುವುದಾದರೆ ಮೂಲಶಿಕ್ಷಣ ಶಾಲೆಗಳನ್ನು ಮಕ್ಕಳ ಬಲವಂತ ಶ್ರಮಶಿಬಿರಗಳು ಎಂದು ಕರೆಯಬಹುದು. ಈ ಸಂಕುಚಿತ ದೃಷ್ಟಿಯ ಆರ್ಥಿಕ ವ್ಯವಸ್ಥೆಯಿಂದ ಶಾಲೆಗಳು ದುರ್ಬಲಗೊಳ್ಳುತ್ತವೆ. ರಾಷ್ಟ್ರ ದಿವಾಳಿಯಾಗುತ್ತದೆ." ಈ ಅಭಿಪ್ರಾಯವನ್ನು ಈ ಕ್ರಾಂತಿಕಾರಿ ಶಿಕ್ಷಣದಲ್ಲಿ ನಂಬಿಕೆಯನ್ನಿಡದ ಅನೇಕರು ಸಮ್ಮತಿಸಿದರು. ಮೂಲಶಿಕ್ಷಣ ಯೋಜನೆಯ ಸೃಜನೆಯಲ್ಲಿ ತೊಡಗಿದವರು. ಈ ಶಾಲೆಗಳಲ್ಲಿ ಉತ್ಪಾದಿತ ವಸ್ತುಗಳು ಆರ್ಥಿಕ ಮೌಲ್ಯವನ್ನು ಹೊಂದಿರುತ್ತವೆ ಎಂಬುದನ್ನು ಪ್ರತಿಪಾದಿಸಿದರೇ ವಿನಾ, ಉತ್ಪಾದಿತ ವಸ್ತುಗಳ ಮಾರಾಟದಿಂದ ಶಾಲೆಯ ವೆಚ್ಚವನ್ನು ನಿರ್ವಹಿಸಬೇಕೆಂಬುದನ್ನು ಒತ್ತಿ ಹೇಳಲಿಲ್ಲ. ಆದರೆ ಉತ್ಪಾದಕ ಚಟುವಟಿಕೆಗಳು ಈ ನವಶಿಕ್ಷಣದ ಹೃದಯಪ್ರಾಯವೆಂಬುದನ್ನು ಸಮರ್ಥಿಸಿದರು.

ಡಾ. ಜಕೀರ್ ಹುಸೇನ್ ಸಮಿತಿಯು ಇಂತು ಪ್ರತಿಪಾದಿಸಿತು: "ವಾರ್ಧಾ ಶಿಕ್ಷಣಯೋಜನೆಯು ಸತ್ವಪೂರ್ಣವಾಗಿರಬೇಕು. ಈ ಶಿಕ್ಷಣವು ಸ್ವಾವಲಂಬನೆಯನ್ನು ಪಡೆಯದಿದ್ದರೂ ಈ ತತ್ವವನ್ನು ಶಿಕ್ಷಣದ ನೀತಿಯ ಹಿತದೃಷ್ಟಿಯಿಂದಲೂ ಮತ್ತು ಶಿಕ್ಷಣದ ಪುನರೀಕರಣದ ದೃಷ್ಟಿಯಿಂದಲೂ ಸಮ್ಮತಿಸುವುದು ಮೇಲು." ಸ್ವಾವಲಂಬನಾ ಅಂಶವನ್ನು ಗಾಂಧೀಜಿಯವರು ಪ್ರತಿಪಾದಿಸಿದರು ಕೂಡ. "ಮೂಲಶಿಕ್ಷಣದ ಸತ್ವ ಯಶಸ್ಸು ಕಂಡುಬರುವುದು ಅದರ ಸ್ವಾವಲಂಬನೆಯಲ್ಲಲ್ಲ. ಮನುಷ್ಯನಲ್ಲಿನ ನಿಗೂಢಶಕ್ತಿಗಳನ್ನು ಕಂಡುಕೊಂಡು ಅವುಗಳನ್ನು, ಕೈಕಸಬುಗಳನ್ನು ವೈಜ್ಞಾನಿಕವಾಗಿ ಬೋಧಿಸುವುದರ ಮೂಲಕ ಹೇಗೆ ವೃದ್ಧಿಸಿದೆ ಎಂಬುದರಲ್ಲಿ."

ಶಿಕ್ಷಣದ ಮೂಲಗುರಿ, ಮನುಷ್ಯನ ಅಂತಸ್ಸತ್ವಗಳನ್ನು ಚೇತನಾತ್ಮಕಗೊಳಿಸಿ ಆತ್ಮಾಭಿವ್ಯಕ್ತಿಗೆ ಮಾರ್ಗ ಕಲ್ಪಿಸುವುದು. ಮೂಲಶಿಕ್ಷಣವು ಈ ಉದ್ದೇಶವನ್ನು ಸಾಧಿಸಲು ಉಪಯುಕ್ತ ಕೈಕಸಬಿನ ಸಹಾಯ ಪಡೆಯುತ್ತದೆ. ಸಮೂಹ ಸಹಕಾರ, ಅನ್ಯೋನ್ಯ ಸಹಜೀವನ, ಸಮುದಾಯಪ್ರಜ್ಞೆ ಮತ್ತು ಕೈಕಸಬುಗಳನ್ನು ಕುರಿತ ಜ್ಞಾನ ಮೊದಲಾದುವು ಗಳು ಮೂಲಶಿಕ್ಷಣ ಶಾಲೆಗಳಿಂದ ಲಭಿಸುತ್ತವೆ. ಕೈಕಸಬುಗಳ ಜ್ಞಾನ ಕೇವಲ ತಾತ್ವಿಕರೂಪದ್ದಾಗಿರದೆ, ಆಚರಣಾರೂಪದ್ದಾಗಿರಬೇಕು. ಸಂಗ್ರಹಿಸಿದ ಜ್ಞಾನವನ್ನು ಸಮರ್ಪಕವಾಗಿ ಆಚರಣೆಗೆ ತರುವುದೇ ಕ್ರಿಯಾತ್ಮಕ ಶಿಕ್ಷಣದ ಮುಖ್ಯ ಉದ್ದೇಶ. ವಿದ್ಯಾರ್ಥಿಯು ಕೈಕಸಬಿನಲ್ಲಿ ತನ್ನ ನಿಪುಣತೆಯನ್ನು ತೋರಿಸಲು ಸಾಧ್ಯವಾಗುವುದು ಉತ್ತಮ ವಸ್ತುಗಳನ್ನು ನಿರ್ಮಿಸುವುದರಿಂದ. ಈ ವಸ್ತುಗಳು ಆರ್ಥಿಕ ಮೌಲ್ಯವನ್ನು ಹೊಂದಿರಬೇಕು, ಸ್ವಾವಲಂಬನಾ ಶಿಕ್ಷಣವು ವಿದ್ಯಾರ್ಥಿಗೆ ತನ್ನಲ್ಲಿನ ಶಕ್ತಿಗಳ ಪೂರ್ಣಪ್ರಯೋಜನ ಪಡೆಯಲು ತರಬೇತಿಯನ್ನು ಕೊಡುತ್ತದೆ.

ಈಗ ಕೇಂದ್ರೀಯ ಸಲಹಾ ಶಿಕ್ಷಣಸಮಿತಿಯು ನೇಮಿಸಿದ ಸಮಿತಿಯು ಮೂಲಶಿಕ್ಷಣವನ್ನು ಕುರಿತು ತನಿಖೆಯನ್ನು ದೇಶದ ಅನೇಕ ಭಾಗಗಳಲ್ಲಿ ನಡೆಸಿ ಕೈಗೊಂಡ ಹಲವು ನಿರ್ಣಯಗಳನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವೆನಿಸುತ್ತದೆ. ಈ ಸಮಿತಿಯು ಸಿದ್ಧಪಡಿಸಿದ ವರದಿ "ಪೈರ್ಸ್ ಲಖನಿ ವರದಿ"ಯೆಂದು ಪ್ರಸಿದ್ಧವಾಗಿದೆ. ಈ ವರದಿಯು ಮೂಲಶಿಕ್ಷಣ ಶಾಲೆಗಳಲ್ಲಿ ಮಕ್ಕಳ ಉತ್ಪಾದನಾಶಕ್ತಿ ಹಾಗೂ ಓದುಬರಹಗಳು ಏಕರೂಪವಾಗಿ ಬೆಳೆದಿವೆ ಎಂಬುದನ್ನು ಸಮರ್ಥಿಸುತ್ತದೆ ಮತ್ತು ಮೂಲಶಿಕ್ಷಣ ಶಾಲೆಗಳ ಉತ್ಪಾದನಾಶಕ್ತಿಯನ್ನು ಹೆಚ್ಚಿಸಲು ಈ ಮುಂದಣ ಸೌಲಭ್ಯಗಳು ಆವಶ್ಯಕವೆಂದು ಪರಿಗಣಿಸುತ್ತದೆ :

(೧) ಮೂಲಶಿಕ್ಷಣ ಶಾಲೆಯು ಎಂಟು ತರಗತಿಗಳನ್ನು ಹೊಂದಿರಬೇಕು. ಐದು ತರಗತಿಗಳನ್ನೊಳಗೊಂಡ ವರಕು ಮುರುಕಾದ ಶಾಲೆಯಂತಿರಕೂಡದು.

(೨) ಪ್ರತಿ ತರಗತಿಯೂ ಮೂವತ್ತು ವಿದ್ಯಾರ್ಥಿಗಳಿಂದ ಕೂಡಿರಬೇಕು.

(೩) ಪ್ರತಿ ಮೂಲಶಿಕ್ಷಣ ಶಾಲೆಯೂ ಅಗತ್ಯವಾದ ಉಪಕರಣಗಳಿಂದ, ಜಾನುವಾರುಗಳಿಂದ, ನಿರ್ದಿಷ್ಟ ಭೂಮಿಯಿಂದ ಕೂಡಿರಬೇಕು.

(೪) ಈ ಶಾಲೆಗಳು ದಕ್ಷಶಿಕ್ಷಕರಿಂದ ಕೂಡಿದ್ದು ಆಗಾಗ್ಗೆ ತನಿಖೆಗೆ ಒಳಪಡಬೇಕು. ಮೇಲಾಗಿ ಶಿಕ್ಷಕರಿಗೆ ಶಾಲೆಯ ಸ್ವಾವಲಂಬನಾತತ್ತ್ವದಲ್ಲಿ ಪೂರ್ಣ ವಿಶ್ವಾಸವಿರಬೇಕು.

ಪೈರ್ಸ್ ಲಖನಿ ವರದಿಯ ಮೇಲಣ ಅಂಶಗಳಿಂದಾಗಿ, ಮೂಲಶಿಕ್ಷಣ ಶಾಲೆಯಲ್ಲಿ ಸ್ವಾವಲಂಬನಾ ಅಂಶಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲು ನಿರ್ಧರಿಸಲಾಯಿತು. ೧೯೫೨ರಲ್ಲಿನ ವರದಿಯನ್ನು ವೀಕ್ಷಿಸಿ ಕೇಂದ್ರೀಯ ಸಲಹಾ ಸಮಿತಿಯು, "ಮೂಲಶಿಕ್ಷಣದ ಕೈಗೆಲಸವು ಶೈಕ್ಷಣಿಕದೃಷ್ಟಿಯಿಂದ ಬಹು ಮುಖ್ಯವಾಗಿರುವುದರಿಂದ, ಈ ಕೆಲಸ ಆರ್ಥಿಕ ಮೌಲ್ಯವನ್ನು ಒಳಗೊಳ್ಳದಿದ್ದರೂ, ಕ್ರಮೇಣವಾಗಿ ಸಂಪ್ರದಾಯ ಶಾಲೆಗಳನ್ನು ಮೂಲಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾಂತ್ಯ ಸರಕಾರಗಳ ಗಮನವನ್ನು ಈ ಮುಂದಣ ಅಂಶಗಳತ್ತ ಹರಿಸಲಾಯಿತು : (೧) ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ಏಕೀಕರಿಸಿ ಶಿಕ್ಷಣ ಒದಗಿಸುವುದು. (೨) ಕೈಕಸಬುಗಳಿಗೆ ಪ್ರಾಶಸ್ತ್ಯವೀಯುವುದು, ಉತ್ಪಾದಕ ಮತ್ತು ಶೈಕ್ಷಣಿಕ ಅಂಶಗಳನ್ನು ಗಮನದಲ್ಲಿಡುವುದು.

ಈ ಮೇಲಣ ಅಂಶಗಳಿಂದ ಸ್ವಾವಲಂಬನಾ ಶಿಕ್ಷಣದ ಮಹತ್ತು ಹೆಚ್ಚಿದ್ದರೂ ಸಹ ಅದರ ಬಗ್ಗೆ ಜನತೆಗೆ ವಿಶ್ವಾಸ ಮೂಡಿದಂತೆ ಕಂಡುಬರುವುದಿಲ್ಲ. ಈ ಅಂಶವನ್ನು ಜನರ ಅವಗಾಹನೆಗೆ ತಂದಾಗ ದೇಶದಲ್ಲಿ ಪರದೇಶಿ ಸರಕಾರವಿದ್ದುದರಿಂದ ಅದು ಮೂಲಶಿಕ್ಷಣಕ್ಕೆ ಆಗುವ ವೆಚ್ಚವನ್ನು ಭರಿಸಲು ಮುಂದೆ ಬರಲಿಲ್ಲ. ದೇಶೀಯ ಸರಕಾರಗಳು ಸ್ಥಾಪಿತವಾದ ಮೇಲೂ ಈ ಸ್ವಾವಲಂಬನಾ ಮೂಲಶಿಕ್ಷಣ ಯಶಸ್ವಿಯಾಗಿಲ್ಲ. ಅನೇಕ ಪ್ರಾಂತೀಯ ಸರಕಾರಗಳು ಶಾಲೆಯ

ಮಕ್ಕಳ ಕೈಗೆಲಸದಿಂದ ಉತ್ಪಾದಿತ ವಸ್ತುಗಳ ಮಾರಾಟದ ಹಣದಿಂದ ಅಲ್ಲಿನ ಮಕ್ಕಳ ಮಧ್ಯಾಹ್ನದ ಉಪಹಾರಕ್ಕೆ ವಿನಿಯೋಗವಾಗಬೇಕೆಂದು ನಿರ್ಣಯವನ್ನು ಕೈಗೊಂಡಿವೆ.

## ಕೊನೆಯ ಮಾತು

ಈವರೆವಿಗೂ ಇಡೀ ಸಮಾಜವನ್ನು ಸುಧಾರಿಸಲು, ಜೀವನಮಟ್ಟವನ್ನು ಎತ್ತರಿಸಲು, ಜನತೆಯ ನೈತಿಕತೆಯನ್ನು ಮುಗಿಲು ಮುಟ್ಟಿಸಲು ವಿಭೂತಿಪುರುಷರೀರ್ವರು ಸೃಜಿಸಿದ ಶಿಕ್ಷಣ ಯೋಜನೆಗಳ ರೂಪರೇಖೆಗಳನ್ನು ಸೂಕ್ಷ್ಮವಾಗಿ ನೋಡಿದ್ದೇವೆ. ಈ ಎರಡು ಶಿಕ್ಷಣ ಯೋಜನೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.

ಕಾಯಕ ಶಿಕ್ಷಣಪದ್ಧತಿ ಹನ್ನೆರಡನೇ ಶತಮಾನದ ಕ್ರಾಂತಿಪುರುಷ ಶ್ರೀ ಬಸವೇಶ್ವರರ ನೇತೃತ್ವದಲ್ಲಿ ಅನುಭವ ಮಂಟಪಸದಸ್ಯರ ನೆರವಿನಿಂದ ಸೃಜನಗೊಂಡರೆ, ಇಪ್ಪತ್ತನೇ ಶತಮಾನದಲ್ಲಿ ಆಂಗ್ಲರ ಕೈತವಕ್ಕೆ ಸಿಲುಕಿದ ಭಾರತವನ್ನು ಸ್ವತಂತ್ರಿಸಲು ಜೀವನವನ್ನೇ ಮುಡುಪಿಟ್ಟ ಮಹಾತ್ಮಾಗಾಂಧೀಜಿಯವರ ಶಿಕ್ಷಣವನ್ನು ಕುರಿತ ಸತತ ಚಿಂತನೆ ಮತ್ತು ಪ್ರಯೋಗಗಳಿಂದ ಮೂಲಶಿಕ್ಷಣ ಯೋಜನೆ ಸೃಷ್ಟಿಗೊಂಡಿತು. ಒಂದು ಯೋಜನೆಯು ಸಂಪ್ರದಾಯ ಹಿಂದೂ ಧರ್ಮದ ಶೋಷಕ ಪುರೋಹಿತಶಾಹಿಯಿಂದ ಬಿಡುಗಡಿಸುವ ಪ್ರಯತ್ನ ಮಾಡಿದರೆ ಮತ್ತೊಂದು ಆಂಗ್ಲರ ವಿದೇಶೀಯ ಶಿಕ್ಷಣದಿಂದಲೂ ಮತ್ತು ಸಮಾಜದ ಅವೈಜ್ಞಾನಿಕ ಕಟ್ಟುಕಟ್ಟಳೆಗಳಿಂದಲೂ ವಿಮುಕ್ತಗೊಳಿಸಲು ಸರ್ವ ಪ್ರಯತ್ನ ಮಾಡಿತು.

ಈ ಎರಡು ಶಿಕ್ಷಣಯೋಜನೆಗಳ ಗುರಿಗಮ್ಯಗಳು ಒಂದೆ. ಈ ಎರಡು ಪದ್ಧತಿಗಳು ವ್ಯಷ್ಟಿಸಿದ್ಧಿಯು ಸಮಷ್ಟಿ ಸಿದ್ಧಿಗೆ ಕಾರಣವಾಗಬೇಕೆನ್ನುತ್ತವೆ. ಕಾಯಕವೆಂದರೆ ಮನಃಪೂರ್ವಕವಾಗಿ ದುಡಿಯುವುದು. ಕಾಯಕದಲ್ಲಿ ತಾದಾತ್ಮ್ಯ ಹೊಂದಿದಲ್ಲಿ ಅದು ಆತ್ಮಾನುಭವದಲ್ಲಿ ಪರ್ಯವಸಾನಗೊಳ್ಳುತ್ತದೆ. ಕಾಯಕಶಿಕ್ಷಣವು ತಲೆ, ಹೃದಯ ಮತ್ತು ಕೈ ಕಾಲುಗಳಿಗೆ ಸಮನಾದ ಶ್ರಮ ಕೊಡುತ್ತದೆ. ವ್ಯಕ್ತಿಯ ಧರ್ಮ ಗುಣಮೌಲ್ಯಗಳಿಗೆ ಒತ್ತುಕೊಡುತ್ತದೆ. ಶೋಷಣೆಯಿಂದ ಜನತೆಯನ್ನು ಮುಕ್ತಗೊಳಿಸುತ್ತದೆ. ಶಿವಶರಣ (ಗುರು) ಧರ್ಮಬೋಧಕನಲ್ಲ ಚಿಂತಕ, ಕಾಯಕದಿಂದ ಅನುಭವ ಪಡೆದವನು. ಇವರು ಆಲೋಚಕರು ಆಚಾರಕರು ತತ್ತ್ವವಿಚಾರ, ಧಾರ್ಮಿಕ ಮತ್ತು ನೈತಿಕ ವಿಷಯಗಳನ್ನು ಕಾಯಕದ ಮೂಲಕ ಒದಗಿಸಲಾಗುತ್ತಿತ್ತು. ಇಲ್ಲಿ ಮಂತ್ರಮುಗ್ಧರಾಗಿ ನಿಶ್ಚೇಷ್ಟಿತರಾಗಿ ಕಲಿಯುವ ವಿಷಯಗಳಿರುತ್ತಿರಲಿಲ್ಲ. ಕಲಿಕೆ ಅನುಭವದ ಮೂಲಕ ನಡೆಯುತ್ತಿತ್ತು. ಇಲ್ಲಿ ಎಲ್ಲವೂ ಕ್ರಿಯಾತ್ಮಕ. ಕನ್ನಡವೇ ಶಿಕ್ಷಣ ಮಾಧ್ಯಮ.

ದೈನಂದಿನ ಕರ್ಮದಿಂದ ಮೂಲಶಿಕ್ಷಣ ಪ್ರಾರಂಭವಾಗುತ್ತದೆ. ಹಲ್ಲು ಉಜ್ಜುವುದು, ಬಾಯಿ ಸ್ವಚ್ಛಿಸುವುದು, ಮುಖ ತೊಳೆಯುವುದು, ಸಾಮಾಜಿಕ ಧಾರ್ಮಿಕ ಹಬ್ಬಗಳನ್ನು ಆಚರಿಸುವುದು....ಇತ್ಯಾದಿಗಳು ಮುಖ್ಯ ಚಟುವಟಿಕೆಗಳು. ಪೌರಶಿಕ್ಷಣ, ದೈಹಿಕ ಮಾನಸಿಕ ಕೆಲಸ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಸಾಮಾಜಿಕಪ್ರಜ್ಞೆ, ವೈಯಕ್ತಿಕತೆಗಿಂತ ಸಾಮೂಹಿಕ ಹಿತಗಳು ಮೊದಲಾದವುಗಳಿಗೆ ಆದ್ಯತೆ ನೀಡಲಾಗುತ್ತದೆ.

ಕೆಲಸಗಳಲ್ಲಿ ಉಚ್ಚ-ನೀಚಗಳೆಂಬುವಿಲ್ಲ.ಬೀದಿಗುಡಿಸುವುದು ಹೀನಾಯವಲ್ಲ. ಕಾಯಕವೆಲ್ಲವೂ ಪೂಜ್ಯ. ಮನುಷ್ಯ ಮೇಲು-ಕೀಳಾಗುವುದು ತಾನು ಮಾಡುವ ಕೆಲಸದ ಗುಣಮಟ್ಟದಿಂದ. ನಿಸ್ವಾರ್ಥತೆ ಸಮತೋಲನತೆಯಿಂದ ಕೂಡಿದ ವ್ಯಕ್ತಿಯ ಸೃಷ್ಟನೆಗೆ ಗಮನಕೊಡಲಾಗುತ್ತದೆ. ನಿಗೂಢ ಅಂತಃಶಕ್ತಿಗಳನ್ನು ಕಂಡುಕೊಂಡು ಅವನ್ನು ಬೆಳೆಸುವ ಕ್ರಮ ಕೈಗೊಳ್ಳುತ್ತದೆ. ಶಿಕ್ಷಣವು ಸಾಮಾಜಿಕವಾದ ಕ್ರಾಂತಿಗೆ ನಾಂದಿಯಾಗಬೇಕು. ಶಿಕ್ಷಣವು ಆತ್ಮಾವಲಂಬನೆ ಆರೋಗ್ಯ ಪೂರ್ಣ ಸಮತೋಲನ ಜೀವನಕ್ಕೆ, ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕವಾದ ಪೂರ್ಣತೆಗೆ ಕಾರಣವಾಗಬೇಕು. ಪ್ರ ವಿಷಯ ಜೀವನದಿಂದ ಶಾಲೆಗೆ ನಡೆದು ಬರಬೇಕು.

ಹೀಗೆ ಕಾಯಕಶಿಕ್ಷಣ ಮತ್ತು ಮೂಲಶಿಕ್ಷಣಪದ್ಧತಿಗಳು ಒಂದಕ್ಕೊಂದು ಪೂರಕ ಪೋಷಕವಾಗಿರುವುವಲ್ಲದೆ ಶಿಕ್ಷಣವು ನಮ್ಮ ದೇಶೀಯವಾದ ಸಂಸ್ಕೃತಿಕ ಜೀವನಶೈಲಿ, ಉದ್ಯೋಗಗಳಿಗೆ ಅನುಗುಣವಾಗಿರಬೇಕೆಂದು ಪ್ರತಿಪಾದಿಸುತ್ತವೆ. ನಮ್ಮ ಜನಜೀವನ ಸಂಸ್ಕೃತಿಯನ್ನು ತುಂಬಿಕೊಂಡಿರುವ ಈ ಎರಡು ಶಿಕ್ಷಣಕ್ರಮಗಳು ದೇಶೀಯವಾಗಿದ್ದು ಮಣ್ಣಿನ ವಾಸನೆಯಿಂದ ಆವೃತವಾಗಿದ್ದರೂ ಅದೇಕೆ ಈ ನಮ್ಮ ಮಣ್ಣಿನಲ್ಲಿ ಹುಲುಸಾಗಿ ಬೆಳೆಯದೆ ಫಲಕೊಡುವ ಮುನ್ನವೇ ಮುರುಟಿಹೋಗಿವೆಯಲ್ಲ, ಪುಸ್ತಕಸ್ಥವಾಗಿವೆಯಲ್ಲ ?

ಇವಕ್ಕೆ ಹಲವಾರು ಕಾರಣಗಳುಂಟು. ಹದಿನೆಂಟನೆಯ ಶತಮಾನದಿಂದಲೂ ಆಂಗ್ಲೇಯ ಶಿಕ್ಷಣ ನಮ್ಮಲ್ಲಿ ಬೇರುಬಿಟ್ಟಿದೆ. ಸ್ವಾತಂತ್ರ್ಯದ ನಂತರವೂ ಇದು ವರ್ಧಿಸುತ್ತಾ ನಡೆದಿದೆ. ನಮ್ಮ ಜನರು ಈ ಯಕ್ಷಿಣೀವಿದ್ಯೆಗೆ

ಮೋಹಿತರಾಗಿದ್ದಾರೆ; ಮಾರುಹೋಗಿದ್ದಾರೆ. ನಮ್ಮ ಶಿಕ್ಷಣಕ್ಕೆ ಸಂಬಂಧಿಸಿದ ನೀತಿಗಳನ್ನು ಸೃಜಿಸುವವರು ಆಂಗ್ಲ ಶಿಕ್ಷಣ ಮೋಹಿನಿಯ ಸೆರಗಿನಲ್ಲಿ ಸೆರೆಯಾದವರು. ಇವರ ಕಣ್ಣಿಗೆ ಬೀಳುವುದು ಈ ಶಿಕ್ಷಣವೊಂದೇ. ಆಂಗ್ಲ ಮತ್ತು ಅಮೆರಿಕ ಶಿಕ್ಷಣಕ್ರಮದಲ್ಲಿ ಬದಲಾವಣೆಗಳು ಸಂಭವಿಸಿದಾಗೆಲ್ಲ ಅವನ್ನು ಇಲ್ಲಿಯೂ ತರುತ್ತಾರೆ. ಹೀಗೆ ತಮ್ಮ ಸ್ವಂತ ಚಿಂತನೆ ಆಲೋಚನೆಗಳಿಂದ ಬದಲಾವಣೆ ತರುವ ಬದಲು ಅನ್ಯರ ಚಿಂತನೆಗೆ ಜೋತುಬಿದ್ದಿರುವದು ಸೋಜಿಗದ ಸಂಗತಿ. ಶಿಕ್ಷಣವು ಎಲ್ಲರಿಗೂ ಸಂಬಂಧಿಸಿದ ವಿಷಯ. ಆದರೆ ಇದರ ಸೃಜನೆಯಲ್ಲಿ ತೊಡಗಿರುವವರು ಜನಜೀವನದ ಅನುಭವವಿಲ್ಲದ ನೌಕರ ಮುಖಂಡರು. ಹೀಗಾಗಿ ಈ ಎರಡು ಉತ್ಕೃಷ್ಟ ಶಿಕ್ಷಣಪದ್ಧತಿಗಳು ಜನಜೀವನದಿಂದ ದೂರವಾಗಿವೆ. ಈ ನೌಕರ ಮುಖಂಡರ ಹಿಡಿತದಿಂದ ನಮ್ಮ ಶಿಕ್ಷಣ ವಿಮುಕ್ತವಾಗುವವರೆಗೂ ನಮಗೆ ಭವಿಷ್ಯವಿಲ್ಲ.

## ಆಧಾರ ಗ್ರಂಥಗಳು

1 ಕೆ. ಎಸ್. ಸದಾಶಿವಯ್ಯ : 'ಸಮುದಾಯ ಶಾಲೆ', (ಮೈಸೂರು : ವಿಶ್ವನಾಥ ಪ್ರಕಾಶನ, ೧೯೬೨)

2 B. S. Gaddagimutt : 'Kayaka system of Education' in '*Studies in Education & Culture*' (Dharwar: Diamond Jubilee celebration, 1959)

3 '*Indian year Book of Education*', (New Delhi : National council of Educational Research and Training, 1964).

4 '*Report of the Education Commision*' 1964–66 (New Delhi : Ministry of Education, Govt of India, 1966).

5 N. R. Hiremutt, '*Basic syllabus in Practice*', (Dharwar : Karnataka University, 1966).

6 J. B. Kripalani, '*The Latest*', Fad, (Sevagram : Hindusthani Talimi Sangh, 1948)

7 K. Kuruvila Jacob, '*Understanding Education in India*' in *Illustrated Weekly* Dec 2, 1979

---

ಕೋತಿಗೆ ಕೊಂಬು ಹುಟ್ಟಬಲ್ಲುದೇ ?
ನುಚ್ಚಕ್ಕಿ ಮೊಳೆಯಬಲ್ಲುದೇ ?
ಸತ್ತ ಮರ ಎಳಕಬಲ್ಲುದೇ ?
ಆರೆಯ ಮೇಲೆ ತಾವರೆ ಬೆಳೆಯಬಲ್ಲುದೇ ಅಯ್ಯಾ ?
ದುರ್ಬುದ್ಧಿ ಮಾನವರ ಭಾವದಲ್ಲಿ
ಶಿವಜ್ಞಾನ ಕಂಗೊಳಬಲ್ಲುದೆ ಅಯ್ಯಾ ?
ಶಿವಜ್ಞಾನವಿಲ್ಲದವಂಗೆ ಶಿವಕೃಪೆ ಎಲ್ಲಿಯದೋ?
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ತೋಂಟದ ಸಿದ್ಧಲಿಂಗೇಶ್ವರರು

# ಬಸವಣ್ಣನವರ ವಚನಗಳಲ್ಲಿ ಯುಗಪ್ರಜ್ಞೆ ಮತ್ತು ಮೌಲ್ಯಗಳು

**ಸುಜನಾ**

ತನ್ನ ಕಾಲ ಮತ್ತು ದೇಶಗಳ ಪ್ರಜ್ಞೆಯನ್ನು ಮೈಗೂಡಿಸಿಕೊಂಡಾತನನ್ನು ಯುಗಪ್ರಜ್ಞೆಯುಳ್ಳವನೆನ್ನಬಹುದು. ಯುಗ ಎಂಬುದು ಕೇವಲ 'ಕಾಲಮಾನ'ವೆಂಬಂತೆ ತೋರಿದರೂ ಅದಕ್ಕೆ ವಿಶಿಷ್ಟತೆಯೊದಗುವುದು ತಾನು 'ದೇಶ' ಸಂಬಂಧಿ ಆದಾಗ ಮಾತ್ರವೆ. ಯುಗ ಎಂದರೆ ಕಾಲ × ದೇಶ. ಅದು ಕಾಲ + ದೇಶ ಕೂಡ ಅಲ್ಲ. ಕಾಲಮಾನವನ್ನು ದೇಶ ಸ್ವತಂತ್ರವಾಗಿ ಕಲ್ಪಿಸಿಕೊಳ್ಳುವುದೂ ಕಷ್ಟ. ಭೂಮಿಯ ಮೇಲೆ ನಾವು ಕಾಣುವ ಒಂದು ದಿನ, ಚಂದ್ರ ಶುಕ್ರ ಗುರು ಶನಿ ಮಂಗಳ ಗ್ರಹಗಳಲ್ಲಿ ಒಂದೆ ಆಗಿದ್ದಿರಲಾರದು. ಅಷ್ಟೆ ಅಲ್ಲ, ಒಬ್ಬನೆ ವ್ಯಕ್ತಿಯ ಜೀವನದಲ್ಲಿ ದಿನದ ಅನುಭವ ಅವನ ನಾನಾ ವಯಸ್ಸಮಯದಲ್ಲಿ ನಾನಾ ರೀತಿಯಾಗಿರುತ್ತದೆ. ಬಾಲ್ಯದ ದಿನ, ತಾರುಣ್ಯದ ದಿನ, ಮುಪ್ಪಿನ ದಿನ ಅನುಭವದೃಷ್ಟಿಯಿಂದ ಬೇರೆ ಬೇರೆ. ಆದ್ದರಿಂದಲೆ ಕಾಲಮಾನವನ್ನು ದೇಶಸ್ಥಾನದಲ್ಲಲ್ಲದೆ ಗ್ರಹಿಸುವುದು ಸರಿಯಲ್ಲ ವೆಂದದ್ದು. ಹೀಗೆಯೆ ದೇಶವನ್ನೂ ಕಾಲಸೀಮೆಯಲ್ಲಲ್ಲದೆ ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಲ್ಲ. ಆದಿಮಾನವನಿಗೆ ಯಾವುದು ದೇಶವಾಗಿತ್ತೊ, ಅದೇ ಇಂದಿನ ಆಧುನಿಕ ಮಾನವನ ದೇಶವಾಗಿಲ್ಲ. ಆ ಅವನ ದೇಶ ತನ್ನ ಸಮೀಪ ದಲ್ಲಿದ್ದಷ್ಟು ಹಣ್ಣುಕಚ್ಚಿದ್ದ ಗಿಡಮರಗಳಿಂದ ತುಂಬಿದ, ಪ್ರಾಣಿಸಮೃದ್ಧವಾದ ಕಾಡಾಗಿತ್ತು; ಆ ದೇಶ–ಪ್ರದೇಶವೇ ಅವನ ವಿಶ್ವವೂ ಆಗಿತ್ತು. ಆದರೆ ಇಂದಿನ ನಮಗೆ, ನಾವು ಕರ್ನಾಟಕದವರೇ ಆಗಿದ್ದರೂ ಭಾರತದಾಚೆಯ ಅಮೆರಿಕಾ ರಷ್ಯಾ ಚೀನಾ ವಿಯಟ್‌ನಾಮ್‌ಗಳೂ ನಮ್ಮ ಜೀವನದ ಮೇಲೆ ಓರೆಯಾಗಿಯೋ ನೇರವಾಗಿಯೋ ಅಥವಾ ಮಗ್ಗು ಲಾಗಿಯೋ ನೆಳಲು-ಬೆಳಕು ಬೀರುತ್ತಲೆ ಇವೆ. ನಾವಾರೂ ವಿದ್ಯಾವಂತ ನಾಗರಿಕರಾಗಿ ಕೇವಲ ನಮ್ಮ ದೇಶದ ಎಲ್ಲೆ ಯಷ್ಟರಲ್ಲೆ ಬದುಕತಕ್ಕವರೆಂದು ಹೇಳಬರದು. ನಾವು ಒಪ್ಪಲಿ ಬಿಡಲಿ ನಮ್ಮ ದೇಶಸೀಮೆಯನ್ನು ಸುತ್ತೂ ಇರುವ ಪ್ರದೇಶಗಳು ಒತ್ತುತ್ತಲೆ ಇವೆ. ಎಳೆಯವನಾಗಿದ್ದಾಗ ನನ್ನ ದೇಶವೆಂದರೆ ನನ್ನ ತಾಯಿ; ಆಮೇಲೆ ತಂದೆ, ಅಣ್ಣ ಅಕ್ಕ ತಂಗಿ, ಅಜ್ಜಿ ಅಜ್ಜ ಬಂಧು ಬಳಗ; ಆಮೇಲಾಮೇಲೆ ಊರು. ಬೆಳೆದಂತೆಲ್ಲ, ರಕ್ತಕ್ಕೆ ಹೊಗರೇರಿದಂತೆಲ್ಲ ದೇಶವೂ ಬೆಳೆಯುತ್ತ ಹೋಗುತ್ತದೆ.

ಆದ್ದರಿಂದಲೆ ಯುಗ ಎಂದರೆ ಬರಿಯ ಕಾಲವೂ ಅಲ್ಲ, ಬರಿಯ ದೇಶವೂ ಅಲ್ಲ, ಕಾಲ + ದೇಶವೂ ಅಲ್ಲ: ಕಾಲ × ದೇಶ (Time × Space). ಈ ಯುಗದ ಎಚ್ಚರಕ್ಕೆ, ಅರಿವಿಗೆ (Awareness, Conscious Awareness) ಯುಗಪ್ರಜ್ಞೆ ಎನ್ನಬಹುದು. ೧೯೭೮ರಲ್ಲಿ ಬದುಕುತ್ತಿದ್ದೂ ಕೂಡ ಎಷ್ಟೊ ಜನ ಕಳೆದ ಶತಮಾನಗಳಲ್ಲೆ ಬದುಕು ತ್ತಿರಬಹುದು. ಆದ್ದರಿಂದಲೆ ಅಂತಹವರು ಈ ಕಾಲವೆಲ್ಲ ಕೆಟ್ಟುಹೋಯಿತು, ಹಿಂದೆ ಬಹಳ ಚೆನ್ನಾಗಿತ್ತು ಎನ್ನುವುದು. ಮತ್ತೆ ಕೆಲವರು ನಲವತ್ತು ದಾಟಿದ್ದರೂ ಮಾನಸಿಕವಾಗಿ ಹತ್ತರಲ್ಲಿರಬಹುದು. ಅಲ್ಲದೆ ಶಾರೀರಿಕವಾಗಿ ಮುಪ್ಪಿನಲ್ಲೂ ಹರೆಯವನ್ನೆ ಅನುಭವಿಸುತ್ತಿರಬಹುದು. ಹಾಗೆಯೆ ನಮ್ಮ ದೇಶದಲ್ಲೆ ಇದ್ದೂ ನಾವೆಷ್ಟೋ ಮಂದಿ ಅಮೆರಿಕೆಯ ಅಮರ ಅಲಕಾವತಿಯಲ್ಲೊ, ಇಂಗ್ಲೆಂಡಿನ ಇಂದ್ರಾವತಿಯಲ್ಲೊ, ಪ್ಯಾರಿಸ್ಸಿನ ಭೋಗಾವತಿಯಲ್ಲೊ ಇರುತ್ತೇವೆ. ಆದ್ದರಿಂದಲೆ ನಾವು ಇಲ್ಲೆ ಇದ್ದೂ ಅಲ್ಲಿನ ಜೀವನ ವಿಧಾನವನ್ನು ಅನುಕರಿಸುತ್ತ ಭೋಗಸೌಲಭ್ಯವನ್ನು ಬಯಸುತ್ತ ಅವರ ಭಾಷೆಯನ್ನೆ ಬಳಸುತ್ತ ಇರುತ್ತೇವೆ. ಆದ್ದರಿಂದ ಯುಗಪ್ರಜ್ಞೆಯೆಂದರೆ ತನ್ನ ಕಾಲದ ತನ್ನದೇ ದೇಶದಲ್ಲಿ, ತನ್ನದೇ ದೇಶದ ತತ್‌ಕಾಲದಲ್ಲಿ ಬಾಳುವುದು: ಅದು ಆಗದಿದ್ದರೆ ಅದರ ಅರಿವೆಚ್ಚರ–ಕುರುಡೆಚ್ಚರವಾದರೂ ಇರು ವುದು ಎಂದರ್ಥವಾಗುತ್ತದೆ. ಇಂಥ ಯುಗಪ್ರಜ್ಞೆಯುಳ್ಳವನು ಕೇವಲ ತತ್ಕಾಲೀನನೂ ಅಲ್ಲ, ತದ್ದೇಶೀಯನೂ ಅಲ್ಲ. ಏಕೆಂದರೆ, ಯಾವಾಗ ತನ್ನ ಕಾಲದೇಶದಲ್ಲಿ ಜೀವಂತವಾಗಿರುವನೊ ಅವನು ಎಲ್ಲ ಕಾಲದೇಶದಲ್ಲೂ ಜೀವಂತವಾಗಿರು ತ್ತಾನೆ. ತನ್ನ ದೇಶಕಾಲದ ಎಚ್ಚರವಿರುವಾತನಿಗೆ ಎಲ್ಲ ದೇಶಕಾಲದ ಎಚ್ಚರರಿವೂ ಇರುವುದು ಸಾಧ್ಯ. ಬಂದೆಡೆಯೆ

ನೆಲವನ್ನು ಸಾವಿರಡಿಯಷ್ಟು ಕೊರೆದರೆ. ಆ ಎಡೆಗೇ ಹತ್ತಾರು ಸಾವಿರ ಗಜ ದೂರಾಂತರದ ಎಲ್ಲ ನೀರೂ ಧಾವಿಸಿ ಬರುತ್ತದೆ. ಅದು ಬಿಟ್ಟು, ನೂರು ಕಡೆ ಹತ್ತು ಹತ್ತು ಅಡಿ ಆಳದ ಬಾವಿಗಳನ್ನು ತೋಡಿದರೆ ಲೆಕ್ಕಕ್ಕೆ ಸಾವಿರಡಿ ಆಗೆ ದಂತಾದೀತೆ ವಿನಾ ನೀರು ಮಾತ್ರ ಬರುವುದಿಲ್ಲ.

ಈ ಅರ್ಥದಲ್ಲಿ ಬಸವಣ್ಣನವರು ತಮ್ಮ ಕಾಲದ ತಮ್ಮ ದೇಶದಲ್ಲಿ ತುಂಬು ಬಾಳು ಬಾಳಿದರು. ಆದ್ದರಿಂದಲೆ ಅವರು ಈ ಕಾಲಕ್ಕೂ ಆ ಈದೇಶಕ್ಕೂ ಒಪ್ಪಂದವಾಗತಕ್ಕವರಾಗಿದ್ದಾರೆ. ಎಷ್ಟೋ ಜನ ಮಹಾಮೇಧಾವಿ ವ್ಯಾಖ್ಯಾನ ಕಾರರು ತಮ್ಮ ಭೂತಗಳಲ್ಲಿ ಮಗ್ನವಾಗಿರುವುದೂ ಉಂಟು. ಎಷ್ಟೋ ಜನ ವಿದ್ಯಾವಂತರು ವಿದೇಶಗಳಲ್ಲಿಯೆ ವಿದೇಹ ರಾಗಿರುವುದುಂಟು. ಮಹಾಜ್ಞಾನಿಗಳೆನಿಸಿಕೊಂಡವರೂ ಈ ನೆಲವನ್ನು ಮರ್ತ್ಯ ಮಾಯಾಬಂಧನವೆಂದು ಸದಾ ಇದರ ಉಲ್ಲಂಘನಚಿಂತೆಯಲ್ಲೆ ಮೋಕ್ಷಲಕ್ಷ್ಮೀಕಟಾಕ್ಷ ಸುಖದಲ್ಲೆ ನಿರತರಾಗಿರುವುದುಂಟು. ಮತ್ತೆಷ್ಟೊ ಜನ ಭಾವುಕರು– ಹಗಲುಗನಸುಗಳು ಕಾಣದ ಸ್ವರ್ಗದ ನಂದನವನವಿಹಾರದಲ್ಲಿ ರಂಭೋರ್ವಶಿಯರನ್ನು ಕಾಣುತ್ತಲೊ ಇರುವು ದುಂಟು. ಅಣ್ಣ ಬಸವಣ್ಣ ತಮ್ಮ ಹಿಂದಿನ ಯಾವ ಭೂತಕಾಲದಲ್ಲೂ ಬದುಕುವಾಸೆ ತೋರಲಿಲ್ಲ. ಅಷ್ಟೆ ಅಲ್ಲ ಯಾವ ಕೈಲಾಸದೇಶ ಪ್ರಜೆಯೂ ಆಗಿರಬಯಸಲಿಲ್ಲ. ಅವರಿಗೆ ವೇದಶಾಸ್ತ್ರಗಳಲ್ಲೂ ಬದುಕುವುದು ಅಸಾಧ್ಯವಾಯಿತು. ಆದ್ದರಿಂದಲೆ:

ವೇದಕ್ಕೆ ಒರೆಯಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯ, ಮಹಾದಾನಿ ಕೂಡಲ ಸಂಗಮದೇವಾ, ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ.

ಇದು ಬಸವಣ್ಣನವರೊಬ್ಬರ ವೈಯಕ್ತಿಕ ದೃಷ್ಟಿಯಲ್ಲ. ಅವರಿದ್ದ ಯುಗದ ಅವರ ಸ್ವಧರ್ಮದ ಶರಣರೆಲ್ಲರ ಭಾವನೆಯೂ ಇದೆ ಆಗಿತ್ತು.

ವೇದಂಗಳ ಹಿಂದೆ ಹರಿಯದಿರು ಹರಿಯದಿರು!
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು ಬಳಲದಿರು!
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು!
ಸೌರಾಷ್ಟ್ರ ಸೋಮೇಶ್ವರನ ಕೈಹಿಡಿದು,
ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು!

ಆದಯ್ಯನಂತೆಯೆ ಅಕ್ಕನೂ ದನಿಸೇರಿಸುತ್ತಾಳೆ:

ವೇದಶಾಸ್ತ್ರ ಪುರಾಣಂಗಳೆಲ್ಲ ಕೊಟ್ಟಣವ ಕುಟ್ಟುತ್ತ ನುಚ್ಚುತೌಡು ಕಾಣಿಭೋ
ಇವ ಕುಟ್ಟಲೇಕೆ? ಅತ್ತಲಿತ್ತ ಹರಿವಮನದ ಶಿರವನರಿದಡೆ
ಬಚ್ಚಬರಿಯ ಬಯಲು—ಚೆನ್ನಮಲ್ಲಿಕಾರ್ಜುನ!

ಏಕೀ ವೇದನಿಂದೆ? ಶಾಸ್ತ್ರಾಗಮ ಸಮಯಾಚಾರನಿಂದೆ? ನಾಸ್ತಿಕತೆ? ಹೌದು ಇವರು ಅವೈದಿಕರಾಗಬಹುದಿತ್ತು. ನಾಸ್ತಿಕರಾಗಬಹುದಿತ್ತು.ಆದರೆ ಆಗಲಿಲ್ಲ.ವೇದಾಂತಿಗಳಾದರು.ವೇದಜರಾಗಲಿಲ್ಲ! ಶಿವಾನುಭವ ಆಸ್ತಿಕರಾದರು. ನಾಸ್ತಿಕ ರಾಗಲಿಲ್ಲ. ತಮ್ಮ ಭೂತವನ್ನು ಅಲ್ಲಗಳೆಯುವ ರಭಸದಲ್ಲಿ. ಪರಂಪರೆಯಿಲ್ಲದ ತಲೆಬೊರೆಯಿಲ್ಲದ ತಬ್ಬಲಿಯಾಗ ಬಹುದಿತ್ತು. ಆದರೆ ಬಾಳೆಯ ಗೊನೆಯನ್ನು ಕೊರೆದುಕೊಳ್ಳುವ ರೈತ ಬಾಳೆಯಗಿಡವನ್ನೂ ಕತ್ತರಿಸುವಂತೆ ವೇದಾಂತ ಸಾರವನ್ನು ಕೊಂಡು ಅದರ ಭೂತದೇಹವನ್ನಷ್ಟೆ ಕೊರೆದು ಹಾಕಿದರು. ಬುಡವನ್ನುತ್ತು ಮತ್ತೂ ಹಯನು ಬೆಳಸನ್ನೆ ತೆಗೆದರು ಅವರು. ಅದೆ ನೆಲದಲ್ಲೆ. ಹಾಗಾದರೇಕೀ ವೇದ ನಿಂದೆ? ಆದಿ ಅನಾದಿ ನಿಂದೆ? ಉತ್ತರವಿಲ್ಲಿದೆ:

ಆದಿ ಅನಾದಿ ಎಂದು ಗಾದೆಯ ಮಾತು ನುಡಿದಾಡುವರೆಲ್ಲ ಇವೆರಡ
ಮಧ್ಯದಲ್ಲಿ ಮಾಯಾಪ್ರಪಂಚವನೆ ಅಳಿವುತ್ತ ಸುಳಿವುತ್ತಿಪ್ಪರಲ್ಲದೆ.
ಆದಿಯಿಂದತ್ತತ್ತಲಾರು ಬಲ್ಲರು? ಅನಾದಿಯಿಂದತ್ತತ್ತಲಾರು ಬಲ್ಲರು?
ಇದರ ಭೇದಾದಿಭೇದವ ಮುನ್ನಿನ ಆದ್ಯರು ಬಲ್ಲರಲ್ಲದೆ ಸಾಧಕರಿಗಳವಲ್ಲ
ವೇದಶಾಸ್ತ್ರಾಗಮ ಪುರಾತನವಚನ ಬಹುಶ್ರುತಿಯ ಇದಿರಿಟ್ಟುಕೊಂಡು
ಕೂಗಿಯಾಡಿ. ಗೋಡೆಹಾಯಿಸುವ ಜಡವಾದಿಗಳ ಮೆಚ್ಚರು ನಮ್ಮ ಶರಣರು.
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ!

ಎಂದು ಪಡಪದಪ್ಪಣ್ಣ ಸೂಕ್ಷ್ಮವಾಗಿ ಆದಿ ಅನಾದಿಗಳ ವಿಶ್ಲೇಷಣೆ ಮಾಡುತ್ತಾನೆ. ಹೀಗೆ ಶರಣರ ದೃಷ್ಟಿಯಲ್ಲಿ ಜಡವಾದಿಗಳು ಸದಾ ಆದಿ ಅನಾದಿ ಚಿಂತಕರೆ ಹೊರತು ಸದ್ಯ ಕಾಲಚಿಂತಕರಲ್ಲ. ಆದರೆ ಇವರು ವರ್ತಮಾನದಲ್ಲಿ–ನಿತ್ಯ ವರ್ತಮಾನದಲ್ಲಿ–ಬಾಳಿದರು. ಭೂತದಲ್ಲಲ್ಲ. ಈ ಇವರ ವರ್ತಮಾನ ಜೀವನ ನಮ್ಮ ಕಾಲಕ್ಕೂ ಭೂತವಾಗದೆ ವರ್ತಮಾನವಾಗಿಯೆ ಉಳಿದಿದೆ — ಈ ಕಾರಣದಿಂದಾಗಿಯೆ.

ಹೀಗೆಯೆ ದೇಶದ ವಿಷಯದಲ್ಲೂ ಶರಣರ ದೃಷ್ಟಿ ನಿರ್ದುಷ್ಟವಾಗಿದೆ. ಈ ದೇಶದಲ್ಲಿದ್ದೂ ಇವರು ಯಾವುದೊ ದೇಶದ ಮಾತನ್ನು ಆಡುವುದಿಲ್ಲ — ಅಥವಾ ಆದೇಶವೇ ಇಲ್ಲವೆಂದೂ ಹೇಳುವುದಿಲ್ಲ. ಆದರೆ, ಅದೂ ಇಲ್ಲೆ ಇರಬಲ್ಲದು; ಅದೂ ಇಲ್ಲಿಗಿಂತ ಭಿನ್ನವಲ್ಲದ್ದಾಗಿರುವುದು ಸಾಧ್ಯ. ಎಂದಷ್ಟೆ ಅವರ ನಿಲವು. ಹಾಗೂ ಆ ಲೋಕವೆಂಬುದೊಂದು ಇದ್ದರೆ–ಅದು ಇಲ್ಲವೆಂದಲ್ಲ–ಅದು ಇಲ್ಲೆ ಅವತರಿಸಿ ಬಾಳಬೇಕು. ಇದರಲ್ಲಿ ಅದು, ಅದರಲ್ಲಿ ಇದು ಐಕ್ಯವಾಗಬೇಕು ಎಂಬ ಅನುಭಾವ ಕಂಡರು. ಅದ್ವೈತವೂ ಈ ಲೋಕವನ್ನು ಮಿಥ್ಯೆಗೊಳಿಸಿತೇ ವಿನಾ ಇದರಲ್ಲೆ ಬ್ರಹ್ಮಸಾಕ್ಷಾತ್ಕಾರ ಮಾಡಿಸಹೋಗಲಿಲ್ಲ. ದೇವರಿಲ್ಲವೆಂದು ತರ್ಕಿಸಿದರೂ, ಮೋಕ್ಷಲಕ್ಷ್ಮಿಯನ್ನು ಕಲ್ಪಿಸಿಕೊಂಡ ಜೈನಧರ್ಮ ಮರ್ತ್ಯವನ್ನು ಅಲ್ಲಗಳೆಯಿತು. ಈ ಎಲ್ಲ ದೃಷ್ಟಿಯಿಂದ ಶರಣರ ದೃಷ್ಟಿ ವಿಶಿಷ್ಟ.

> 'ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ!'
> 'ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯೆ'
> 'ದೇವಲೋಕವೆಂಬುದು ಮತ್ತೆ ಬೇರುಂಟೆ ? ಈ ಲೋಕದೊಳಗೆ ಮತ್ತೆ
> ಅನಂತಲೋಕ ! ಶಿವಲೋಕ ಶಿವಾಚಾರವಯ್ಯ. ಭಕ್ತನಿರ್ದ ಠಾವೇ
> ದೇವಲೋಕ ! ಭಕ್ತನಂಗಳವೆ ವಾರಣಾಸಿ ! ಕಾಯವೇ ಕೈಲಾಸ !
> ಇದು ಸತ್ಯ ಕೂಡಲ ಸಂಗಮದೇವಾ !'
> 'ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸಮರ್ಥರು
> ಲಿಂಗದಲ್ಲಿ ಸೊಮ್ಮುಸಂಬಂಧವರಿತ ಸ್ವಾಮಿಭೃತ್ಯರೆಲ್ಲರೂ
> ನಿಮ್ಮ ಬೇಡೆ, ಅಂಜದಿರಿ !
> ಎನಗೆ ಮರ್ತ್ಯಲೋಕ'ದ ಮಹಾಗಣಂಗಳುಂಟು
> ಇದು ಕಾರಣ, ಕೂಡಲ ಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮನಿಮಗೆ !'

ಎಂಥ ನಿಲವು ಇದು ! ಶಿವನನ್ನು ಭವಕ್ಕೆ, ಕೈಲಾಸವನ್ನು ಕಾಯಕ್ಕೆ ಅವತರಿಸಿಸುವ ಅದ್ಭುತಸಾಧನೆಯಿದು. ಯಾವಾತನಿಗಿದು ಸಾಧ್ಯ? ತನ್ನ ದೇಶದಲ್ಲೆ ಲೋಕಾಲೋಕಗಳನ್ನು ಕಾಣಬಲ್ಲಾತನಿಗೆ. ತನ್ನ ದೇಶದಲ್ಲೆ ಅತೃಪ್ತನಾಗಿದ್ದು ಅನ್ಯಲೋಕಜಪದಲ್ಲೆ ಕೊರಗುವಂತಹವನಿಗಲ್ಲ !

ಬಸವಣ್ಣನವರು, ವಚನಕಾರರು ಒಟ್ಟಿನಲ್ಲಿ, ಹೀಗೆ ತಮ್ಮ ದೇಶ ಕಾಲದಲ್ಲಿ ಪೂರ್ಣವಾಗಿ ಬದುಕುವ ಮೂಲಕ ಸರ್ವದೇಶಕಾಲದಲ್ಲಿ ಬಾಳತಕ್ಕವರಾಗಿದ್ದಾರೆ. ಅಂತಹವರು ನೀಡಿದ, ಮೌಲ್ಯಗಳು ಆದ್ದರಿಂದಲೆ ಸಾರ್ವಕಾಲಿಕ ಸಾರ್ವದೇಶಿಕವಾಗುವ ಸತ್ತ್ವವನ್ನು ಹೆಚ್ಚುಹೆಚ್ಚು ಪಡೆದಿವೆ. ಅವರು ನೀಡಿದ ಮೌಲ್ಯಗಳು ಎಂತಹವು ? ಮೌಲ್ಯ ಎಂದರೇನು ? ಎಂಬುದನ್ನು ತಿಳಿಯುವ ಮುನ್ನ ಬಸವಣ್ಣನವರು ಹಾಗೂ ಅವರ ಸಹಾನುಭಾವಿ ವಚನಕಾರರು ಇದ್ದ ದೇಶ-ಕಾಲ ಎಂಥದು ಎಂಬುದನ್ನು ಕೊಂಚ ವಿವೇಚಿಸುವುದೂ ಸೂಕ್ತ.

ಬಸವಣ್ಣನವರು. ಬದುಕಿದ್ದ ಕಾಲ ನಮ್ಮ ಕಾಲದಷ್ಟು ವೇಗಚರವಾಗಿಯೇನೂ ಇರಲಿಲ್ಲ. ಅಂತೆಯೆ ಅವರಿದ್ದ ದೇಶವೂ ನಮ್ಮ ದೇಶದಷ್ಟು ವಿಶಾಲವೂ ನಾನಾ ದೇಶಬದ್ಧವೂ ಆಗಿದ್ದಿರಲಿಲ್ಲ. ಈ ಪರಿಮಿತ ಕಾಲದೇಶದಲ್ಲೆ ಇದ್ದೂ ಅವರು ಅಪರಿಮಿತಿಯಲ್ಲಿ ಬಾಳಿದರು ಎಂಬುದೆ ದೊಡ್ಡ ಸಂಗತಿ. ಬಸವಣ್ಣನವರಿದ್ದ ದೇಶ ಕರ್ನಾಟಕದ ಒಂದು ಭಾಗಮಾತ್ರವಾಗಿದ್ದರೂ ಅಲ್ಲಿನ ಮಾನವ ಸಮಾಜಕ್ಕಿದ್ದ ಹಲವು ಮುಖ್ಯ ಸಮಸ್ಯೆಗಳು ಅಂದಿನ ಭಾರತದ ಇತರ ಪ್ರದೇಶಗಳಿಗಿದ್ದ ಸಮಸ್ಯೆಗಳಿಗಿಂತಲೂ ಬೇರೆಯಾಗಿರಲಿಲ್ಲ. ಅದೇ ಮೇಲುಕೀಳು, ಅದೇ ಪಾಪಪುಣ್ಯ, ಅದೇ ಇಹಪರ, ಅದೇ ಸಿರಿತನ ಬಡತನ, ಅದೇ ಜಾತಿಭೇದ—ಇತ್ಯಾದಿಗಳೆಲ್ಲ ಕರ್ನಾಟಕಕ್ಕೆ ಮಾತ್ರವೆ ಮೀಸಲಾಗಿರಲಿಲ್ಲ. [ಜತೆಗೆ ಮಾನವಕೋಟಿಗೆ ತಾತ್ಕಾಲಿಕ–ಪ್ರಾದೇಶಿಕ ಸಮಸ್ಯೆಗಳಿರುವಂತೆಯೆ ಸಾರ್ವಕಾಲಿಕ ಸಾರ್ವದೇಶಿಕ ಸಮಸ್ಯೆಗಳೂ ಇರುವುದರಿಂದ. ಬಸವಣ್ಣಾದಿಗಳು ಅವುಗಳನ್ನೂ ಗಮನಿಸಿದರು. ಆದರಿಂದಾಗಿ ಅವರ ಮಾತು ಇಂದಿಗೂ ಬೋಧ್ಯವಾಗಿದೆ]. ಬಸವಣ್ಣನವರಿದ್ದ ಕಾಲದಲ್ಲಿ ಕರ್ನಾಟಕದಲ್ಲಿ ಅದು ತನಕವೂ ಪ್ರಬಲವಾಗಿದ್ದ ರಾಜಮನೆತನಗಳು ಇಳಿ

ಮುಖವಾಗಿದ್ದು ಹೊಸ ರಾಜ್ಯಗಳು ಉದಿಸುತ್ತಿದ್ದವು. ರಾಜಕೀಯವಾದ ಅಸ್ಥಿರತೆಯಿತ್ತು. ಜೈನಧರ್ಮ ತನ್ನ ಹಿಡಿತವನ್ನು ಕಳೆದುಕೊಳ್ಳುವುದರಲ್ಲಿತ್ತು. ರಾಜಕೀಯವಾಗಿ ಧಾರ್ಮಿಕವಾಗಿ ತಮಿಳುನಾಡಿನಿಂದ ಹೊಸ ಗಾಳಿ-ಬಿರುಗಾಳಿ ಬೀಸಿ ಬರುತ್ತಿತ್ತು. ಕೊಳ್ಳೆಕಾರರು ಬಂದಂತೆಯೆ, ಧರ್ಮರಕ್ಷೆ ಪಡೆಯಲು ಬಂದಂತಹ ರಾಮಾನುಜರೂ ಇದ್ದರು. ಅವರನ್ನಟ್ಟಿ ಬಂದ ಶೈವಧರ್ಮಾನುಯಾಯಿಗಳೂ ಇದ್ದರು. ಜೈನಧರ್ಮ ತನ್ನ ಉಚ್ಛ್ರಾಯಸ್ಥಿತಿಯಲ್ಲೂ ಸಾಮಾನ್ಯನಿಗೆಷ್ಟರಮಟ್ಟಿಗೆ ಮುಟ್ಟಿತೊ ತಿಳಿಯದು. ಮಾನವ ಸಾಧನೆಯ ಪಾರಮ್ಯವನ್ನು ಸಾರಿದ ಆ ಪರಮ ಮಾನವತಾಧರ್ಮವಾದರೂ ದೇವರನ್ನು ಪ್ರತಿಪಾದಿಸದಿದ್ದುದರಿಂದ, ವಿರಕ್ತಿಯನ್ನಲ್ಲದೆ ಭಗವದ್ ಅವತಾರನಿಷ್ಠವಾದ ಭಕ್ತಿಯನ್ನು ಎತ್ತಿಹಿಡಿಯದುದರಿಂದ, ಅದು ಸಾಮಾನ್ಯಜನಕ್ಕೆ ಅಗ್ರಾಹ್ಯವಾಗಿಯೆ ಉಳಿದುಕೊಂಡಿತು. ಹಾಗೂ ಅಹಿಂಸಾದಿ ಕೆಲವು ತತ್ತ್ವಗಳು ತಮ್ಮ ಭಯಂಕರ ವಾಚ್ಯಾರ್ಥನಿಷ್ಠೆಗೆ ಇಳಿದಿದ್ದರಿಂದ ಆ ಧರ್ಮ ಅಸಾಮಾಜಿಕವೆಂಬಂತೆಯೂ ಕಂಡಿದ್ದಿರಬೇಕು. ಇದೂ ಅಲ್ಲದೆ ಆ ಧರ್ಮ ಕರ್ಮತತ್ತ್ವವನ್ನು ಅತಿ ವರ್ಣರಂಜಕವಾಗಿ ಪ್ರತಿಪಾದಿಸಿದ್ದರೂ 'ಕರ್ಮಯೋಗ'ವನ್ನು ಮಾತ್ರ ಒಪ್ಪಿಕೊಂಡಿರಲಿಲ್ಲ. ವಿರಕ್ತಿ–ಸಂನ್ಯಾಸವೆ ಅದರ ಮಂತ್ರವಾಯಿತು. ಮೋಕ್ಷಲಕ್ಷ್ಮೀಕಟಾಕ್ಷ ಕಾಂತಿಯಲ್ಲಿ ಮರ್ತ್ಯಸೂರ್ಯನ ಪ್ರಖರತೇಜಸ್ಸೂ ಮಂಜುಮಂಜಾಗಿ ತೋರಿತು, ಅದಕ್ಕೆ. ಅದರ ಪರಿಣಾಮ ಮರ್ತ್ಯದ ಬಗ್ಗೆ ಅರುಚಿ, ದೇಹದೂಷಣೆ . . . . . . ಇದೇ ವೇಳೆಗೆ ಶ್ರೀ ಶಂಕರರು ಬೋಧಿಸಿದ್ದ ಅದ್ವೈತ ತತ್ತ್ವಮಾಯಾವಾದಗಳು ವಿಪರೀತವಾಗಿ ಬೇರೂರುತ್ತಿದ್ದವೆನ್ನಬಹುದು. 'ಬ್ರಹ್ಮಸತ್ಯಂ ಜಗನ್‌ಮಿಥ್ಯಾ' ಎಂಬ ಮಂತ್ರ ಸತ್ಪರಿಣಾಮದ ಜೊತೆಗೆ ವಿಷಮ ಫಲವನ್ನೂ ಬಿಟ್ಟಿತು. ಜಗತ್ತು ಮಿಥ್ಯ: ಹಾಗಿದ್ದ ಮೇಲೆ ಕೆಲಸವನ್ನಾದರೂ ಏಕೆ ಮಾಡಬೇಕು ? ಮಿಥ್ಯೆಗಾಗಿ ಏಕೆಲ್ಲ ಈ ಕಷ್ಟ? ಮೇಲಾಗಿ ಜ್ಞಾನವೆ ಕರ್ಮಕ್ಕಿಂತ ಶ್ರೇಷ್ಠವಾದಮೇಲೆ ಕಾಯಕವಾದರೂ ಏಕೆ ? ಅದ್ವೈತಭಾವನೆ ಶ್ರೇಷ್ಠಸಿದ್ಧಿಯಾದರೆ ಕೆಟ್ಟದ್ದು ಎಂಬುದೆ ಇಲ್ಲವಾಗಿ. ಅದನ್ನು ಎದುರಿಸುವುದಾದರೂ ಎಲ್ಲಿ ಬಂತು ?—ಹೀಗೆಲ್ಲ ಅರ್ಥಕ್ಕೆ ಎಡೆಗೊಟ್ಟುದರಿಂದ ಸಾಮಾನ್ಯನ ಮೇಲೆ ಅದರಿಂದ ಆದ ಪರಿಣಾಮ ವಿಪರೀತವಾಯಿತು. ನಾನೆ ಬ್ರಹ್ಮ ಎಂಬ ಶ್ರದ್ಧೆ ಮೂಡಿ ದಿವ್ಯನಿರ್ಭೀತಿ ಮೂಡಿತೊ ಇಲ್ಲವೊ ; ಅಂತೂ ಅದಕ್ಕಿಂತ ಮಿಗಿಲಾಗಿ, ಜಗನ್‌ಮಿಥ್ಯಾ—ಜ್ಞಾನಶ್ರೇಷ್ಠ ಎಂಬ ಶ್ರದ್ಧೆಯಿಂದಾಗಿ ಕಾಯಕ ಕೀಳೆಂಬ ಹಾಗೂ ಕರ್ಮಜೀವಿಗಳಾದ ಜನತೆಯೆಲ್ಲ ಜ್ಞಾನೋಪಜೀವಿಗಳಿಗಿಂತ ಕೀಳೆಂಬ ಭಾವ.ಬೇರೂರಿ ನಿಷ್ಕ್ರಿಯೆ ಬೆಳೆಯತೊಡಗಿತು. ಅದ್ವೈತದಿಂದಾಗಿ ಅಳಿಯಬೇಕಿದ್ದ ಜಾತಿವ್ಯವಸ್ಥೆ ಬಲಿಯತೊಡಗಿತು. ದೇವರ ಜತೆ ಸಮತೆಯನ್ನು ಗಿಟ್ಟಿಸಿಕೊಟ್ಟ ಅದ್ವೈತ ತತ್ತ್ವ ಕೂಡ ವ್ಯಕ್ತಿ ವ್ಯಕ್ತಿಗಳನ್ನು ಕುಲಕ್ಕಾಗಿ ಛಲಮಲಕ್ಕಾಗಿ ಎರಡೆಂದೆ, ನೂರೆಂದೇ ಒಪ್ಪಿಕೊಳ್ಳದೆ ವಿಧಿಯಿರಲಿಲ್ಲ. ನಮ್ಮ ಸುತ್ತಣ ವಸ್ತು-ಸತ್ಯ ಜಗತ್ತನ್ನೂ, ಸದಾ ನಮ್ಮನ್ನು ಬಿಡದಿರುವ ಸಂಸಾರಾದಿ ಶಾರೀರಿಕ ಮಾನಸಿಕ ಉಪಾಧಿಯನ್ನೂ ಬ್ರಹ್ಮಸತ್ಯದ ನಿಲುವಿನಿಂದ ಮಿಥ್ಯವಾಗಿಸಿದ ಅದ್ವೈತತತ್ತ್ವ-ಮಾಯಾತತ್ತ್ವ,ಕ್ರೈಸ್ತ, ಮುಹಮ್ಮದೀಯ ಮತಗಳಂತಹ ಕೇವಲ ದ್ವೈತ ಪಂಥಗಳೂ ಒಪ್ಪದ, ಆದರೆ ನಮ್ಮಲ್ಲಿ ಮಾತ್ರ ಅರ್ಬುದರೋಗವಾಗಿರುವ ಈ ಜಾತಿವ್ಯವಸ್ಥೆಯಂತಹ ಅತ್ಯಂತ ಬಹಿರ್ ವ್ಯವಸ್ಥೆಯನ್ನೇನೂ ಮಿಥ್ಯೆಯೆಂದಾಗಲಿ ಅಸತ್ಯವೆಂದಾಗಲಿ ಘೋಷಿಸಿ ಸಾಧಿಸಿ ತೋರುವ ಆತ್ಮ-ಪರಮಾತ್ಮ ಸಂಪತ್ತನ್ನೇಕೋ ತೋರಲಿಲ್ಲ. ಪ್ರಾಯಶಃ ಸಹಜ ಮಿಥ್ಯೆಗಳಾದ ಜಾತಿಗಳ ಬಗ್ಗೆ ಏಕೆ ಪ್ರತ್ಯೇಕ ಕಂಠಶೋಷಣೆ ಎಂದು ಬಿಟ್ಟಿರಬೇಕು ! ಆದರೆ ಈ ಮಾಯಾವಾದಕ್ಕೆ ಅದೇಕೋ ಹೇಗೋ ಬೌದ್ಧ ಜೈನ ಚಾರ್ವಾಕಾದಿತತ್ತ್ವಗಳು ಮಾತ್ರ ಮಿಥ್ಯಾವಾದಗಳೆಂಬಂತೆ ತೋರುವಷ್ಟುಮಟ್ಟಿಗಾದರೂ ಸತ್ಯ ಅಸ್ತಿತ್ವವಾಗಿದ್ದುವು ! ಮಾನವತೆಯ ಅತ್ಯಂತ ಶ್ರೇಷ್ಠ ತಾತ್ತ್ವಿಕಸಾಧನೆಯಾದ ಅದ್ವೈತತತ್ತ್ವವೆ ಜಾತಿವ್ಯವಸ್ಥೆಯ ಬಗೆಗೆ ಅನಾಸಕ್ತಿ ತೋರಿ ದ್ವೈಧೀಭಾವ ತೋರಿದ ಮೇಲೆ ಮತ್ತೇನೆನ್ನಬೇಕು ? ಜಾತಿವ್ಯವಸ್ಥೆಯೇನಿದ್ದರೂ ಬರಿ ಮಿಥ್ಯೆ, ಅದರ ಬಗ್ಗೆಯೇಕೆ ತಲೆಕೆಡಿಸಿಕೊಳ್ಳಬೇಕೆಂದೊ ಈ ಅನಾಸಕ್ತಿ? ವೈದಿಕ ವಿರೋಧಿ ಧರ್ಮವೆನಿಸಿಕೊಂಡೂ, ಮಾನವ ಪಾರಮ್ಯವನ್ನು ಸಾರಿದ ಧರ್ಮವಾಗಿಯೂ ಜೈನ ಧರ್ಮ ಜಾತಿಪದ್ಧತಿಯನ್ನು ನಿರ್ನಾಮಗೊಳಿಸುವುದಿರಲಿ. ಚಾತುರ್ ವರ್ಣವ್ಯವಸ್ಥೆಯನ್ನೆ ರೂಪಾಂತರಿಸಿ ತನ್ನ ವ್ಯವಸ್ಥೆಯನ್ನಾಗಿ ಮಾಡಿಕೊಂಡು ಬೆಳೆಸಿತು.

ಇದರ ಫಲ ಮೇಲುಕೀಳು ಭಾವನೆ ಮತ್ತೂ ಗಾಢವಾಗಿ ಬೆಳೆಯುತ್ತ, ತತ್ತ್ವಕ್ಕೂ ವಾಸ್ತವಜೀವನಕ್ಕೂ ಅಂತರ ಹೆಚ್ಚುತ್ತ ಬಂತು. ಈ ಒಡಕನ್ನು ಬೆಸೆಯುವ, ಕಡೆಗೆ ಮುಚ್ಚುವ ದಿವ್ಯಭಾವ ಯಾವುದೂ ಸಾಮೂಹಿಕ ಪ್ರಮಾಣದಲ್ಲಿ ಉದಿಸಿರಲಿಲ್ಲ. ಈ ಒಂದು ಮರುಸ್ಥಿತಿಯಲ್ಲಿದ್ದ ಜನಕ್ಕೆ ಹೊಸ ಧರ್ಮವಾಗಿ ಏನಂಥದು ಬರಬಲ್ಲದು ? ಇಹವನ್ನು ತ್ಯಜಿಸದ, ಪರವನ್ನು ದೂರದ ; ಅಷ್ಟೆ ಏಕೆ ಎಲ್ಲ ಕ್ರಿಯೆಯನ್ನೂ —ಸಕಲ ಶಿವಸಾಧನೆಯ ಸಿದ್ಧಿ ಫಲವನ್ನೂ —ನೆಲದ ಮೇಲೇ ಬೆಳೆಯುವಂಥ ಧರ್ಮ ಬೇಕಿತ್ತು. ಜ್ಞಾನಪಾರಮ್ಯವನ್ನು ಅಲ್ಲಗಳೆಯದೆ ಕರ್ಮದ ಅನಿವಾರ್ಯ

ಮಹತ್ತನ್ನು ತೋರಿಸಿಕೊಡುವ. ಕರ್ಮವನ್ನೆ ಜ್ಞಾನಸಾಧ್ಯಮವನ್ನಾಗಿ–ಜ್ಞಾನವನ್ನಾಗಿ ಪರಿವರ್ತಿಸುವ ಧರ್ಮ ಬೇಕಿತ್ತು. ದೇಹವನ್ನೆಂದೂ ಅಸಹ್ಯವೆಂದು ತಿಳಿಯದೆ. ಆದರೆ ಆತ್ಮದ ಅನುಸಂಧಾನಕ್ಕೆ ಅದನ್ನು ಅಗತ್ಯ ಭೂಮಿಕೆ ಯನ್ನಾಗಿ ಮಾಡಿಕೊಳ್ಳುವ ಧರ್ಮಬೇಕಿತ್ತು. ಮೇಲುಕೀಳುಭಾವಗಳನ್ನು. ಜಾತಿ ವ್ಯವಸ್ಥೆಯ ಉಸಿರುಬ್ಬಸವನ್ನೂ ನಿವಾರಿಸುವ: ಕೀಳ್ಮೆಯನ್ನು ಮೀರಿ ಶಿವದೆತ್ತರಕ್ಕೇರಬೇಕೆಂಬ—ಭವದಿಂದ ಅಭವಕ್ಕೇರಬೇಕೆಂಬ; ಹಾಗೂ ವೃತ್ತಿ ಗೌರವವನ್ನು ಮಾನ್ಯಮಾಡುವ. ಯಾವ ವೃತ್ತಿಯೂ ಆರ್ಥಿಕವಾಗಿಯಾಗಲಿ ಧಾರ್ಮಿಕವಾಗಿಯಾಗಲಿ ಕೀಳಲ್ಲವೆಂಬ ಭಾವನೆಯನ್ನುಂಟುಮಾಡುವ ವಾಸ್ತವ ಧರ್ಮ ಬೇಕಿತ್ತು. ಹೆಣ್ಣಿಗೂ ಆಧ್ಯಾತ್ಮಿಕ ಸಾಧನೆ ಸಿದ್ಧಿಗಳು ಸಾಧ್ಯ, ಹಾಗೂ ಅಗತ್ಯ : ಆಕೆ ಗಂಡಿಗಿಂತ ಹೇಗೂ ಕೀಳಲ್ಲವೆಂಬುದನ್ನು ಒಪ್ಪಿಕೊಳ್ಳುವ ಸಂಸಾರ ಧರ್ಮ ಬೇಕಿತ್ತು.

ಒಟ್ಟಿನಲ್ಲಿ ಹಳೆಯ ನಾಣ್ಯಗಳಲ್ಲಿ ಸೇರಿಕೊಂಡಿದ್ದ ಹಲವಾರು ಖೋಟಾನಾಣ್ಯಗಳನ್ನು ಪತ್ತೆಹಚ್ಚುವ ಕಾರಣ ದಿಂದ ಆ ಎಲ್ಲ ನಾಣ್ಯದ ಬೆಲೆ ಇಳಿಸುವುದೂ ಅನಿವಾರ್ಯವಾಯಿತು. ಆಮೇಲೆ ವರಾಹಮುದ್ರೆ ನಾಣ್ಯಗಳನ್ನು ವೃಷಭ ಮುದ್ರೆ ನಾಣ್ಯಗಳನ್ನು ಆಯ್ದುಕೊಳ್ಳುವ ಸಾಹಸ ಮಾಡಬೇಕಾಯಿತು. ಆದ್ದರಿಂದಲೆ ಶರಣರು ಪುರಾತನ ಶಾಸ್ತ್ರಾದಿ ಗಳಿಗೆಲ್ಲ ಬೆಲೆ ಕಳೆದರು. ಅನಂತರವೇ ಅವರು ಹೊಸ ಬೆಲೆಯನ್ನು ತಂದರು. ಈ ಕಾರ್ಯವನ್ನವರು ಅಪೂರ್ವ ಧೈರ್ಯ ಸಾಹಸಗಳಿಂದಲೆ ಮಾಡಿದರೂ ಅದಕ್ಕೆ ಅನುಕೂಲವಾದ ಆವರಣವೂ ಒದಗಿಬಂತೆನ್ನಬಹುದು. ಶರಣರು ಮಾಡಿದ, ಮಾಡಬೇಕಾಗಿ ಬಂದ ಕೆಲವೊಂದು ದೃಷ್ಟಿಪರಿವರ್ತನ ಕಾರ್ಯವನ್ನು ತಕ್ಕಮಟ್ಟಿಗೆ ಶ್ರೀರಾಮಾನುಜರೆ ಆ ಶತಮಾನದ ಪೂರ್ವದಲ್ಲಿ ಕರ್ನಾಟಕದ ದಕ್ಷಿಣದಲ್ಲಿ ಸಾಧಿಸಿದ್ದರು. ಜಗತ್ತನ್ನು ದೇವರ ಆವಾಸವೆಂದೂ, ಅಷ್ಟೆ ಅಲ್ಲ ದೇವರ ಸುಂದರ ಶರೀರವೆಂದೂ. ಮನುಷ್ಯಶರೀರವೂ ದೇವಾಲಯವೆಂದೂ—ಈ ಯಾವನ್ನೂ ವಿಕೃತಗೊಳಿಸಬಾರದೆಂದೂ ಸಾರಿದ್ದರು. ಭಗವದ್ ಕರುಣೆಯ. ಭಕ್ತಿಯ ಶಕ್ತಿಸಾಮರ್ಥ್ಯವನ್ನು ತೋರಿದ್ದರು. ಜಾತಿಯ ಬಗೆಗೂ ಯಾವ ಇತರ ಸಂಪ್ರದಾಯಸ್ಥರೂ ಕಲ್ಪಿಸಿಕೊಳ್ಳಲಾಗದ ಔದಾರ್ಯವನ್ನು ಪ್ರಕಟಿಸಿದ್ದರು. ಎಷ್ಟೋ ಪತಿತ ಜನರಿಗೆ ವೈಷ್ಣವ ದೀಕ್ಷೆಯನ್ನಿತ್ತು ಪುರಸ್ಕರಿಸಿದ್ದರು. ಇದಕ್ಕಿಂತ ಮಿಗಿಲಾಗಿ. ರಾಮಾನುಜರು ತಮ್ಮ ಹಿಂದಿದ್ದ ಆಳ್ವಾರರನ್ನು ತಮ್ಮ ಅನುಭವದ ಸೆಲೆಯಾಗಿ ತೆಗೆದುಕೊಂಡದ್ದು. ಅವರು. ಮತಾಚಾರ್ಯರು ಮಾಡಲೆಬೇಕಿದ್ದ ಪ್ರಸ್ಥಾನತ್ರಯ ವ್ಯಾಖ್ಯಾನ ವನ್ನು ಮಾಡುವಾಗಲೂ. ವೇದೇತರ ಮೂಲಗಳಿಂದ–ಆಳ್ವಾರರ ಹಾಡುಗಳಿಂದ–ಆಧಾರವನ್ನು ಉದ್ಧರಿಸಿ ತಮ್ಮ ವಿಶಿಷ್ಟಾದ್ವೈತತತ್ತ್ವವನ್ನು ಪ್ರತಿಪಾದಿಸುತ್ತಾರೆ. ಈ ಆಳ್ವಾರರಲ್ಲಿ ಬಹುತೇಕರು ಶೂದ್ರರು, ಅಂತ್ಯಜರು. ಈ ಶರಣರ ಪ್ರತಿಮೆಗಳನ್ನು ವೈಷ್ಣವ ದೇವಾಲಯದಲ್ಲಿ ದೇವರ ಸಮೀಪದಲ್ಲಿಟ್ಟು ಪೂಜಿಸುವ ಪರಿಪಾಟಿತಂದರು. ಅವರ ತಮಿಳು ಹಾಡುಗಳನ್ನು ವೇದಘೋಷದ ಜೊತೆಯಲ್ಲಿ ಸರಿಮಿಗಿಲೆನ್ನುವಂತೆ ಇಂದೂ ವೈಷ್ಣವ ದೇವಾಲಯಗಳಲ್ಲಿ ಹಾಡುವ ಪದ್ಧತಿಯನ್ನು ಆಗಲೇ ತಂದರು. ಆದರೆ ಇದೆಲ್ಲವೂ ಸಂಪ್ರದಾಯ ಅವಿರೋಧಿಯಾಗದಂತಹ ಸಂಸ್ಕೃತ ಆವರಣದಲ್ಲಿಯೆ ಆಯಿತು. ಬಸವಣ್ಣನವರೆ ಮೊದಲಾದವರ ಕ್ರಾಂತಿಯ ಮುನ್ನಡಿಯನ್ನು ಶ್ರೀರಾಮಾನುಜರ ಉತ್ಕ್ರಾಂತಿಯಲ್ಲಿ ನಾವು ಕಂಡರೂ. ಅದೂ ಆ ಶರಣೋತ್ಸಾಹಕ್ಕೆ ಸಪ್ಪೆಯಾಗಿಯೆ ಕಂಡಿದ್ದರೆ ಆಶ್ಚರ್ಯವಿಲ್ಲ. ಇದಕ್ಕೆ ಕಾರಣ ಬಸವಣ್ಣನವರಿಗಿದ್ದ ಶರಣ ಅನುಭಾವಿಗಳ ಒಂದು ಪಡೆ ಅವರ ಸಮೀಪದಲ್ಲಿರಲಿಲ್ಲ. ಒಟ್ಟಿನಲ್ಲಿ ಆ ಯುಗ ಪ್ರವಾಹ ಯಾವ ದಿಕ್ಕನ್ನರಸುತ್ತ ಹರಿದಿತ್ತು ಎಂಬುದನ್ನು ಶ್ರೀರಾಮಾನುಜ ಶ್ರೀಬಸವಾದಿಮಹಾಂತರ ವಿಚಾರಲಹರಿ ಸೂಚಿಸುತ್ತದೆ.

ಶಿವಶರಣರು ವೈದಿಕತತ್ತ್ವವನ್ನು ಲಕ್ಷಿಸದೆ ಆ ಬಗ್ಗೆ ಪ್ರಕಟ ವಿರೋಧವನ್ನು ವ್ಯಕ್ತಪಡಿಸಿದುದಕ್ಕೆ ಇದ್ದ ಕಾರಣ ಗಳಲ್ಲಿ ಮತ್ತೂ ಒಂದು ಪ್ರಮುಖವಾದದ್ದೆಂದರೆ ಜಾತಿವರ್ಗ. ವೈದಿಕ ಮಾರ್ಗಾನುಯಾಯಿಗಳಲ್ಲೆ ಅದ್ವೈತಿಗಳು ಕೂಡ ಈ ವ್ಯವಸ್ಥೆಯನ್ನು ಒಪ್ಪಿಕೊಂಡೆ ಬರುವ ಮೂಲಕ ಅದ್ವೈತದ ಒಡಕನ್ನು ತೋರಿದುದರಿಂದ ಶರಣಲೋಕ ಆ ಇಬ್ಬಗೆಯನ್ನು ಒಪ್ಪಲು ಬರಲಿಲ್ಲ. ಮಾದಾರ ಚೆನ್ನಯ್ಯ. ಕುಂಬಾರ ಗುಂಡಯ್ಯ. ಇಳೆಯಾಂಡ ಗುಡಿಮಾರ, ದೇವರ ದಾಸಿಮಯ್ಯ, ಬೇಡರ ಕಣ್ಣಪ್ಪರಂತಹ ಪ್ರಾಚೀನ ಜಾನಪದ ಶರಣರನ್ನು ಸ್ಫೂರ್ತಿಕೇಂದ್ರವಾಗುಳ್ಳ; ಮೋಳಿಗೆಯ ಮಾರಯ್ಯ. ಅಂಬಿಗರ ಚೌಡಯ್ಯ. ಮಡಿವಾಳ ಮಾಚಯ್ಯ ಮುಂತಾದ ನಾನಾ ಸಮಕಾಲೀನ 'ಸಾಮಾನ್ಯ' ಶರಣ ರನ್ನು ತಮ್ಮ ಅನುಭಾವದ ಮಹಾಮನೆಗೆ ಸೇರಿಸಿಕೊಂಡ ಶರಣಧರ್ಮ ಹೇಗೆ ತಾನೆ ಪ್ರಾಚೀನ ಜಾತಿಪದ್ಧತಿಯನ್ನೆ ಅನುಲ್ಲಂಘನೀಯ ಪೂಜ್ಯಪ್ರಮಾಣವೆಂದು ಸ್ವೀಕರಿಸ ಬರುತ್ತದೆ ? ಒಂದು ವೇಳೆ ಜಾತಿವ್ಯವಸ್ಥೆಗೆ ಮಣೆಯಿತ್ತರೆ ಈ ಭಕ್ತರನ್ನು ಬಿಡಬೇಕು. ಬಿಡದೆ ತೋರಿಕೆಯ ಮಾತಾಡಿದರೆ, ಆ ಭಕ್ತರನ್ನು ಅವರಿಗೊದಗಿದ ಶಿವಕರುಣೆಯ ಕಾರಣ ದಿಂದಾಗಿ ಮಾತ್ರ ಪುರಸ್ಕರಿಸಿ. ಜಾತಿಕಾರಣದಿಂದಾಗಿ ಅವರಿಗೆ ದೂರಮಣೆ ನೀಡಿದರೆ ಇಬ್ಬಂದಿತನವಾಗುತ್ತದೆ.[1] ಶರಣ

ರೆಂದೂ ಈ ಒಡಕುಬಾಳನ್ನು ಒಪ್ಪಿದವರಲ್ಲ. ಆದರಿಂದಾಗಿ ಅವರು ವೈದಿಕಸಂಪ್ರದಾಯಸ್ಥರನ್ನೆ ದೂರವಿಟ್ಟರು. ಇಂಥ 'ಅವೈದಿಕ' ನವ್ಯರು ವೈದಿಕರ ತಿರಸ್ಕಾರಕ್ಕೂ ಗುರಿಯಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ವೇದಬಾಹಿರವೆಂಬ ಆಕ್ಷೇಪಣೆಗೂ ಗುರಿಯಾದುದು ಸಹಜವೆ. ತತ್ಕಾರಣವಾಗಿ ಇವರು ತಮ್ಮ ತಲೆದೊರೆಯನ್ನು ವೇದಗಳಲ್ಲಿ ಅರಸದೆ ತಮಿಳುನಾಡಿನ ಶಿವಭಕ್ತರಲ್ಲಿ ಕಂಡರು. ಆ ಪರಂಪರೆಯನ್ನು ಕೆಲವೊಂದು ಪರಿಷ್ಕಾರಗಳಿಂದ ಸ್ವೀಕರಿಸಿಕೊಂಡೂ ತಮ್ಮ ಅನುಭಾವದ ಸಂಗಮದಿಂದ ವಿಲಕ್ಷಣ ವಿನೂತನ ಪರಂಪರೆಯನ್ನೆ ಸೃಷ್ಟಿಸಿಕೊಂಡರು. ಹಾಗಾಗಿ ಇವರು ಸನಾತನಿಗಳಾದರೂ ವಿನೂತನರಾದರು.

ಈ ಶರಣರು ಕೇವಲ ತಮ್ಮ ದೇಶಕಾಲದ ಶಿಶುಗಳಾಗಿ ಬೆಳೆದುದಕ್ಕೆ ಈ ಎಲ್ಲ ಕಾರಣಗಳಲ್ಲದೆ ಮತ್ತೂ ಒಂದು ಕಾರಣವುಂಟು. ಜಾನಪದ ಸಾಮಾನ್ಯರಲ್ಲಿ ಸಹಾನುಭೂತಿ ತೋರಿ ಅವರ ಉದ್ಧಾರದಲ್ಲಿ ಇವರು ಅತಿ ಆಸಕ್ತಿ ವಹಿಸಿದುದಕ್ಕೆ ಒಂದು ಕಾರಣ ಮೂಲತಃ ಈ ಶರಣರೆಲ್ಲ ಬಹುತೇಕವಾಗಿ ಸಾಮಾನ್ಯ ಕುಲಗಳಿಂದಲೇ ಬಂದವರಾಗಿದ್ದುದಾಗಿತ್ತು. ಅಸಾಮಾನ್ಯದ ರುಚಿವುಂಡ ಸಾಮಾನ್ಯರಿಗೆ ಮತ್ತೆ ತಮ್ಮ ಜನಕಸ್ಥಾನದ ಬಗ್ಗೆ ತಿರಸ್ಕಾರ ಬರದೆ ಆದರ ಉಂಟಾಗುವುದು, ಅದರ ಮೇಲ್ಮೆಯ ಬಗ್ಗೆ ಕಳಕಳಿ ಬರುವುದು, ಅಸಾಧಾರಣ ವಿಶೇಷವೆ ಸರಿ.[2] ಸುದೈವದಿಂದ ಈ ಶರಣರೆಲ್ಲರಿಗೂ ಬಸವಣ್ಣನವರ ಸ್ಫೂರ್ತಿಯಿಂದಾಗಿ (ಉತ್ತಮ ವರ್ಗದಲ್ಲಿ ಹುಟ್ಟಿಯೂ ಆ ಹಿರಿಮೆಯನ್ನೂ ತಿರಸ್ಕಾರ ಮಾಡಿ ದಲಿತ ಪತಿತರ ಉದ್ಧಾರಕ್ಕೆ ಅವರೆ ಕಟಿಬದ್ಧರಾದ್ದರಿಂದ) ಕೇವಲ ಆತ್ಮಸಾಕ್ಷಾತ್ಕಾರ, ಮೋಕ್ಷಾನುಸಂಧಾನ, ಸ್ವರ್ಗಾಭಿಗಮನಗಳಲ್ಲಿ ಮಾತ್ರ ರುಚಿಯೊಡೆಯದೆ, ತಮ್ಮ ಪತಿತಸಹಜೀವರ ಮೋಕ್ಷದ ಬಗೆಗೆ ಹೆಚ್ಚುಕಾತರ ಮೂಡಿತು. ಅದನ್ನು ಸಾಧಿಸುವ ದಾರಿ ಹೇಗೆ ? ಸಾಮಾನ್ಯ ಮನುಷ್ಯನಿಗೆ ಅವನ ಉದ್ಧಾರವೂ ಸಾಧ್ಯ ಎಂಬ ಶ್ರದ್ಧೆ ಬರುವಂತೆ ಮಾಡುವುದು ಮೊದಲ ಕರ್ತವ್ಯ. 'ತಾನು ಕೀಳುಜಾತಿಯವ; ಪಾಪಿಯಾದ್ದರಿಂದಲೆ ಕೀಳನಾಗಿ ಹುಟ್ಟಿದೆ' ಎಂಬ ನಿರಾಶಾದೈನ್ಯದಿಂದ ಅವನನ್ನು ಉದ್ಧರಿಸುವುದು ಹೇಗೆ ? ಪಾಪವನ್ನೆ ಅಲ್ಲಗಳೆಯುವುದರಿಂದ ? ಅಥವಾ ಅವನ ಆ ಪಾಪಕ್ಕೂ ಮಾನವಕೃತ ವೃತ್ತಿಜಾತಿಗೂ ಏನೂ ಸಂಬಂಧವಿಲ್ಲವೆಂದೂ, ಅವನ ಪಾಪವೇನಾದರೂ ಇದ್ದರೆ ಅದೂ ಕೂಡ ಪರಿಹಾರ್ಯವೆಂದೂ ಆತ್ಮವಿಶ್ವಾಸ ಮೂಡಿಸುವುದರಿಂದಲೆ ? ಶರಣರಿಗೆ ಕಡೆಯ ವಿಧಾನ ಸರಿಯೆನಿಸಿತು. ಅವರಿಗೆ ಪಾಪಪರಿಹಾರಮಾರ್ಗವಾಗಿ ಶಿವಭಕ್ತಿ ತೋರಿತು. ಉದ್ಧಾರದ ಆಶ್ವಾಸನೆಯನ್ನು, ಆದರಲ್ಲಿನ ಶ್ರದ್ಧೆಯನ್ನು, ಎಲ್ಲಕ್ಕೂ ಮೇಲಾಗಿ ತಾನು ಚಿರಪತಿತನಾಗಿ ಶಪಿತನಾಗಬೇಕಿಲ್ಲವೆಂಬ, ತನಗೂ ಒಳ್ಳಿತು ಕಾದಿದೆಯೆಂಬ ದಿವ್ಯಧೈರ್ಯದ ದಾನ ಮಾಡಬೇಕಿತ್ತು. ಬಸವಣ್ಣನವರು ಹೀಗೆ ಆ ಧೈರ್ಯದಾನವಮಾಡುತ್ತಾರೆ :[3]

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ 'ಶರಣೆ'ನ್ನೆಲವೋ !
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು !
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು
ಒರ್ವಂಗೆ ಶರಣೆನ್ನು, ನಮ್ಮ ಕೂಡಲ ಸಂಗಮದೇವಂಗೆ !

ಶರಣೆಂದರೆ ಸಾಕು ಎಲ್ಲ ಪಾಪಗಳೂ ಬಿಟ್ಟೋಡಲಾರಂಭಿಸುತ್ತವೆ. ಆದರೆ ಯಾರಿಗೆ ಶರಣು ? ದೊರೆಗೊ ? ನರಗೊ ? ಆ ಓರ್ವನಿಗೆ-ಶಿವನಿಗೆ-ಶರಣೆಂದರೆ ಸಾಕು. ಅವನಿಗೊಬ್ಬನಿಗೆ ಶರಣೆಂದರೆ ಮತ್ತಾರಿಗೂ-ಮರಣಕ್ಕೂ ಶರಣೆನ್ನಬೇಕಿಲ್ಲ. ಇಲ್ಲವಾದರೆ ಎಲ್ಲರಿಗೂ ಹಲ್ಲು ಹಲ್ಲು ಕಿರಿದು !...ಇದೇನೊ ಸರಿ. ಆದರೆ ಶರಣೆಂದರೇ ಪಾಪ ಓಡೀತೆ ? ಪಾಪ ಅಷ್ಟು ದುರ್ಬಲವೆ ? ಪಾಪಿಗೆ ಚಿರನರಕವಂತೆ ? ಉದ್ಧಾರವಿಲ್ಲವಂತೆ ? ಅದಕ್ಕೆ ಬಸವಣ್ಣನವರ ಅಭಯ ಹೀಗೆ :

ಕರಿ ಘನ, ಅಂಕುಶ ಕಿರಿದೆನ್ನಬಹುದೆ ? ಬಾರದಯ್ಯ !
ಗಿರಿ ಘನ, ವಜ್ರ ಕಿರಿದೆನ್ನಬಹುದೆ ? ಬಾರದಯ್ಯ !
ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ ? ಬಾರದಯ್ಯ !
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೆ ? ಬಾರದಯ್ಯ
ಕೂಡಲ ಸಂಗಮದೇವಾ !

ನಾನೂ ಶಿವದ ಅಂಶವೆ ಎಂಬ ಅರಿವು ತಪ್ಪಿದಾಗ-ಮರೆವು ಆವರಿಸಿದ್ದಾಗ ಮಾತ್ರವೆ ಈ ಎಲ್ಲ ತೊಳಲಾಟ. ಅರಿವು ಮೊಳೆತರೆ-ಮನ ತಾನೆಷ್ಟೆ ಸೂಕ್ಷ್ಮರೂಪಿಯಾದರೂ ಶಿವಸ್ಮರಣೆ ಮಾಡಿದರೆ—ಮರಹು ತಾನೆಷ್ಟು ಘನವಾದದ್ದಾಗು

ತ್ತದೆ ? ಕತ್ತಲು ತಾನೆಷ್ಟೆ'ಸಾವಿರ ವರ್ಷದಿಂದ ಇದ್ದರೂ ದೀಪ್ತಿ ಬಂದೊಡನೆಯೆ ಅದಲ್ಲಿರದು. ತಾನು ನಿರ್ಗಮಿಸಲೂ ಸಾವಿರ ವರ್ಷವೆ ತೆಗೆದುಕೊಳ್ಳುತ್ತೇನೆಂದು ವಾದ ಹೂಡಲಾರದು—ಶ್ರೀರಾಮಕೃಷ್ಣ ಪರಮಹಂಸರು ಹೀಗೆನ್ನು ತ್ತಾರೆ. ಈ ಆಶ್ವಾಸನವನ್ನೆ ಬಸವಣ್ಣನವರೂ ನೀಡಿರುತ್ತಾರೆ. ಇಷ್ಟಾದರೂ ಪತಿತನಿಗೆ ನಂಬಿಕೆ ಬಾರದು—ತನ್ನಲ್ಲೂ ಈ ಆಶ್ವಾಸನದ ಮಾತಿನಲ್ಲೂ. ತಾನು ಪತಿತನಂತೆ—ಶಾಸ್ತ್ರ ಬಲ್ಲವರು ಹಾಗೆಂದು ಹೇಳುತ್ತಾರೆ! ಅವರ ಮಾತು ದೇವರಂತೆ ! ಅದನ್ನು–ಆ ಮಂತ್ರವನ್ನು–ತಾನು ಕೇಳುವುದೂ ಕೂಡದಂತೆ! ಕೇಳಿದರೇ ಘೋರ ನರಕವಂತೆ !—ಹೀಗೆ ಪತಿತನಿಗೆ ಭೀತಿ ಇದ್ದರೆ ಇನ್ನೇನು ಮಾಡುವುದು ? ಇದಕ್ಕಿರುವ ಮದ್ದುಗಳಲ್ಲಿ ಭಾಷೆಯ ಮದ್ದೂ ಹಿರಿದಾದುದೆ.

ಆರ್ತತೆಯಿಂದ ಕೇಳುವವನ ಮತ್ತು ಪ್ರತಿಷ್ಠೆಯಿಂದ ಹೇಳುವವನ ನಡುವೆ ಸದಾ ಅನ್ಯಭಾಷೆಯ ಪರದೆ ಇರುತ್ತದೆ. ಕೇಳುವ ಜನ ಹೇಳುವವನಲ್ಲಿ ಆತ್ಮೀಯತೆಯನ್ನು ವಿಶ್ವಾಸವನ್ನು ನಿರ್ಭೀತಿಯನ್ನು ಬೆಳಸಿಕೊಳ್ಳಬೇಕಾದರೆ, ಹೇಳುವಾತನಿಗೆ ತಾನು ಕೇಳುವವನಿಗಿಂತ ಬಹಳ ಮೇಲೆಂಬ ಗರ್ವಮೂಡದಂತೆ ಇರಬೇಕಾದರೆ, ತಾನು ತನಗೆ, ಹಾಗೂ ಅವನಿಗೆ ಸುಸ್ಪಷ್ಟವಾಗಬೇಕಾದರೆ ಇಬ್ಬರ ಭಾಷೆಯೂ ಒಂದೇ ಆಗಿರಬೇಕು. ಅವರವರದೇ ನುಡಿ–ತಾಯಿ ನುಡಿ–ಆಗಿರಬೇಕು. ಸಾಮಾನ್ಯರ ನುಡಿಯನ್ನು ತನ್ನದನ್ನಾಗಿಮಾಡಿಕೊಳ್ಳಬೇಕು, ವಿಶೇಷಮಾನ್ಯ. ತನ್ನೊಳಗಿನ ಅನುಭವಕ್ಕೂ ಹೊರಮಾತಿನ ಭವಕ್ಕೂ ಕಿಂಚಿದಂತರವಿರದಂತೆ ಎಚ್ಚರವಿರುವುದು ಇಬ್ಬರ ಮಾತೂ ಒಂದಾದಾಗಲೆ ಸಾಧ್ಯ. ಬಿದ್ದ ಜನರನ್ನೆತ್ತಬಂದ—ತಮ್ಮ ಭೂತವನ್ನು ವ್ಯಾಖ್ಯಾನ ಮಾಡುತ್ತ ಕೂರದೆ, ಸದ್ಯದ ಉದ್ಧಾರದಲ್ಲಿ ಆಸಕ್ತರಾದ—ಬುದ್ಧ ಮಹಾವೀರ ಕ್ರಿಸ್ತ ರಾಮಕೃಷ್ಣಾದಿಗಳೆಲ್ಲ ತಮ್ಮತಮ್ಮ ಜನದ ಭಾಷೆಯನ್ನೆ ಬಳಸಿದುದಕ್ಕೆ ಕಾರಣವಾದರೂ ಇದೆ.

ಆದ್ದರಿಂದ ಬಸವಣ್ಣ ಅಲ್ಲಮಾದಿಗಳು ಮಾತಿನ ಬಗ್ಗೆ ಬಹಳ ಎಚ್ಚರವಿದ್ದು ತಮ್ಮ ನುಡಿಯನ್ನು ಉತ್ತು ಪರಿಷ್ಕಾರ ಮಾಡಿದರು.

ನುಡಿದರೆ ಮುತ್ತಿನಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ 'ಅಹುದಹು'ದೆನ್ನಬೇಕು !
ನುಡಿಯೊಳಗಾಗಿ ನಡೆಯಲ್ಲಿಲ್ಲದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ

ಇಲ್ಲಿ ಅಣ್ಣನವರು ಮಾತಿನ ನಾನಾಸ್ತರಗಳನ್ನು ವಿವರಿಸುವ ಮೂಲಕ ಮನಸ್ಸಿನ ನಾನಾಸ್ತರಗಳನ್ನೂ ಬಿಡಿಸಿ ತೋರಿದ್ದಾರೆ. ಮಾತುಮಾತಿಗೂ ಇರಬೇಕಾದ ಮುತ್ತುಮುತ್ತಿನ ಸಾಮರಸ್ಯವಾಗಲಿ, ಮುತ್ತುಮುತ್ತನ್ನೆಲ್ಲ ಕೂಡಿಸಿ ಎಳೆ ಪೋಣಿಸುವುದಾಗಲಿ ನಮಗೂ ತಿಳಿಯುತ್ತದೆ. ಇದನ್ನು ಕಷ್ಟಪಟ್ಟು ಸಾಧಿಸಬಹುದು. ಆದರೆ ಮಾತಿಗೆ ಮಾಣಿಕ್ಯದ ದೀಪ್ತಿ ತುಂಬಿರುವುದಾದರು ಹೇಗೆ ? ಸ್ಫಟಿಕದ ಶಲಾಕೆ ಉಕ್ಕಿಸುವುದಾದರು ಹೇಗೆ, ಒಳಗೆಲ್ಲ ತಿಳಿಯಾಗದೆ ? ಇದನ್ನೂ ಕೆಲವು ಮಹಾಕವಿಗಳು ಸಾಧಿಸಬಲ್ಲರು. ಅವರ ಮಾತಿಗೇನೊ ನಾವು ತಲೆತೂಗಿ ಎದೆ ಸೂರೆಹೋಗುತ್ತೇವೆ. ಆದರೆ ಶಿವ ಮೆಚ್ಚಿ 'ಅಹುದಯ್ಯ ! ಅಹುದಯ್ಯ !' ಎಂದೆನ್ನುವುದು ಹೇಗೆ ? ಹೀಗಾಗುವುದು ಯಾವಾಗ ? ನಡೆ ನುಡಿ, ಒಳಗು ಹೊರಗು ಒಂದಾಗುವಂತಾದಾಗ, ವಚನಕ್ಕೆ ಮನ ನಾಚಿ, ಮನಕ್ಕೆ ವಚನ ನಾಚಿದಾಗ.

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ !
ಕುಂದು ಹೆಚ್ಚ ನುಡಿವೆ !
ಒಂದು ಮಾತಿನ ಗೆಲ್ಲ-ಸೋಲಕ್ಕೆ ಹಿಡಿದು ಹೋರುವೆ
ಕೂಡಲ ಸಂಗನ ಶರಣರೆನ್ನಾಳ್ದರೆಂಬೆ

ತಾನು ಮನಸ್ಸಿಗಿಂತ ಅನುಭವಕ್ಕಿಂತ ಭಾರವಾದಾಗ ವಚನ ನಾಚಬೇಕು. ಒಳ ಬೆಲೆಗಿಂತ ತೋರವಾದಾಗ ಹೊರಬೆಲೆ ತಾನು ನಾಚಬೇಕು. ಹಾಗೆಯೆ ಒಳಗು ತಿಣ್ಣವಾಗಿದ್ದೂ ಹೊರಗು ಅದನ್ನು ಹೊರಲಾಗದಿರುವಾಗ ಅದಕ್ಕಾಗಿ ಮಾತು ತಾನೂ ನಾಚಬೇಕು. ಆದರೆ ಒಂದನಾಡ ಹೋಗಿ ಒಂಬತ್ತನಾಡಿದರೆ ಡಾಂಬಿಕತನವಾಗುತ್ತದೆ. ಹೊಲೆಯರ ಮದ್ದಳೆಯ ಸದ್ದಾಗುತ್ತದೆ ಮಾತು. ಅದೂ ಸರಿಯಲ್ಲವೆಂದು ಮಾತನ್ನು ಒಪ್ಪವಿಡುವುದಾದರೆ ? ಅದು ಚಿನ್ನಗೆಯ್ಕನ

ಕೆಲಸವಾಗುತ್ತದೆ. "ಒಪ್ಪವ ನುಡಿವರಯ್ಯ : ತುಪ್ಪವ ತೊಡೆದಂತೆ ! ಶರಣ ತನ್ನ ಮೆರೆವನೆ, ಬಿನ್ನಾಣಿಯಂತೆ ?" ಹೀಗೆ ಚೆನ್ನಗೆಯ್ಯನ ಒಪ್ಪಗೆಯ್ಮೆಯನ್ನು ಯಾರೂ ತಿಳಿಯುವುದಿಲ್ಲವೆಂದರೆ ತಪ್ಪಾಗುತ್ತದೆ.

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪನಂತೆ !
ನುಡಿಯಲು ಬಾರದು, ನಡೆಯಲೂ ಬಾರದು !
ಲಿಂಗದೇವನೆ ದಿಬ್ಬವೊ, ಅಯ್ಯಾ !!

ಇಲ್ಲಿ ನುಡಿಯೊಡನೆ ಒಳಗಿನ ಅಭಿಪ್ರಾಯಮಾತ್ರವಷ್ಟೆ ಒಪ್ಪಂದವಾಗಿದ್ದರೆ ಸಾಲದು. ನುಡಿ ನಡೆಯೊಡನೆ ಎರಕವಾಗುವ ವಾಸ್ತುಕಾವ್ಯವನ್ನು ಶರಣರು ನಿರೀಕ್ಷಿಸಿದರು. ಇದರಲ್ಲಿ ವಂಚನೆಯಾದರೆ ಇತರ ಯಾರ ಸಾಕ್ಷಿಯೂ ಬೇಕಿಲ್ಲ ; ಕೈಯಲ್ಲಿರುವ ಲಿಂಗದೇವನೆ ದಿಬ್ಯವಾಗುತ್ತಾನೆ, ಘಟಸರ್ಪವಾಗುತ್ತಾನೆ. ಲೌಕಿಕ ವಿಮರ್ಶಕ ಪೋಲಿಸ್ ಅಗತ್ಯವಿಲ್ಲ.

ನಾವು ಮಾತಿನಲ್ಲಿ ಎಚ್ಚರವಾಗಿದ್ದರೂ ನಡೆಯಲ್ಲೇಕೆ ತಪ್ಪುತ್ತೇವೆ ? ಒಳಗಿಲ್ಲದ್ದನ್ನು ಹೇಳ ಹೋದಾಗ, ನಮ್ಮಲ್ಲಿಲ್ಲದ್ದನ್ನು ಅನ್ಯರಿಂದ ತಂದು ಪ್ರತಿಪಾದಿಸಿ ಮಿಥ್ಯಾತೃಪ್ತಿಕೊಳ್ಳಹೋದಾಗ, ಅದು ಬೇಡ ಎಂದರು ಅಣ್ಣ. ಅವರಿವರನ್ನೇಕೆ ಹಾಡಹೋಗುವೆ ? ಶಿವನನ್ನು ಹಾಡು. ಅದು ಆಗದಿದ್ದರೆ ನಿನ್ನನ್ನೆ ಹಾಡಿಕೊ. ನೀನೊಲಿದಂತೆಯೆ—ಅದೂ ಕೂಡ ಇತರರು, ಶಾಸ್ತ್ರಾಗಮಗಳು ಹೇಳಿದಂತೆಯೂ ಅಲ್ಲ—ಹಾಡು, ಶಿವನನ್ನು ಕುರಿತು : ಶಿವಕ್ಕೆ ಕೇಡಿಲ್ಲವಾದರೆ ಸರಿ ! ಹೀಗೆ ಹಾಡ ಹೋದಾಗ ನಿನ್ನನ್ನಷ್ಟೆ ಹಾಡಿಕೊಳ್ಳುವೆ ; ಶಬ್ದಮುಗ್ಧನಾಗುವೆ. ಆಗ 'ಮಾತು ಕೆಡುತ್ತದೆ.' ನೀನು ನೀನೇ ಆಗುವೆ. ಕಾರಣ 'ಮಾತು ಕೆಟ್ಟಲ್ಲದೆ ತಾನಾಗಬಾರದು'—ಎನ್ನುತ್ತಾರೆ ಬಸವಣ್ಣನವರು.

ಹೀಗೆ ಮಾತಿನ ನಾನಾ ಪದರಗಳನ್ನು ಚಿತ್ತದ—ಅಂತರಂಗದ ನಾನಾ ಪದರಗಳನ್ನು ಅರಿತವರಾದ್ದರಿಂದಲೆ ಕನ್ನಡಕ್ಕೆ ಅವರೂ ಮತ್ತೂ ಉಳಿದ ಶರಣಕೋಟಿಯೂ ಶ್ರೇಷ್ಠವಾದ ಅನುಭಾವ ಪದಕೋಶವನ್ನಿತ್ತರು. ಅರಿವು–ಮರಹು, ಸುಳುಹು, ಹೊಳಹು, ಅನುವು, ನಿಲವು, ಕುರುಹು, ತೆರಹು, ನೆನಹು, ತಳುವು, ಬಯಲು, ಬೆರಗು, ಒಲವು, ನಲವು ಮುಂತಾದ ಮೂರಕ್ಷರದ ವಾಮನ ಪಾದಗಳಿಂದಲೆ ; ಕೆಲವೊಮ್ಮೆ ನೆಲೆ, ಬೆಲೆ, ಕಳೆ, ಹುಸಿ, ದಿಟ, ಸಟೆ, ಮುಂತಾದ ಎರಡಕ್ಷರದ ಎರಡಡಿಯಿಂದಲೆ ಅನುಭಾವಲೋಕವನ್ನೆಲ್ಲ ಅಳೆಯ ಹೊರಟರು. ಈ ಪದಗಳನ್ನೆ ಏಕೆ ಬಳಸಿದರು ? ಸಂಸ್ಕೃತದ ಪ್ರಸಿದ್ಧ ಮಂತ್ರಶಬ್ದಗಳನ್ನ ಇಟ್ಟುಕ್ಕೊಳ್ಳಬಹುದಿತ್ತಲ್ಲ? ಜ್ಞಾನ-ಮಾಯೆ, ಪ್ರೇಮ, ಪೂರ್ಣ, ಶೂನ್ಯ, ಆದಿ-ಅಂತ್ಯ, ಸತ್-ಚಿತ್-ಆನಂದ ಇತ್ಯಾದಿ ಸಂಸ್ಕೃತ ಜ್ಞಾನಪದಗಳನ್ನು ಗುರುತಿಸದೆ ಹಾಗಾದರೆ ? ಅವರು ಆ ಪದಗಳನ್ನು ಕಂಡರು, ಅವುಗಳನ್ನು ಧಾರಾಳವಾಗಿ ಬಳಸಿಯೂ ಬಳಸಿದರು. ಆದರೆ ಈ ಶರಣರು ಅನುಭಾವಿಸಿದ ಲೋಕ ಪ್ರಾಚೀನದ ಅನುವಾದವಷ್ಟನ್ನೆ ಅಲ್ಲ ; ಪುನರ್ ಅನುಭಾವವನ್ನು. ಅದರಿಂದಲೆ ಇವರು ತಮ್ಮ ಅನುಭಾವದ ಅನುವಾದವನ್ನಲ್ಲದೆ ಪ್ರಾಚೀನರ ಛಾಯಾನುವಾದವನ್ನು ಮಾಡಹೋಗಲಿಲ್ಲ. ಇವರ ಪದಗಳು ಹಿಂದಿನವಕ್ಕೆ ಎಷ್ಟೋ ವೇಳೆ ಸಂವಾದಿಯಾಗಿದ್ದರೂ ಮತ್ತೆಷ್ಟೋ ವೇಳೆ ಆ ಈ ಪದಗಳ ಅನುಭವವ್ಯಾಪ್ತಿಯೆ ಬೇರೆಬೇರೆ ಆಗುತ್ತದೆ. ಉದಾಹರಣೆಗೆ ಅರಿವು, ಮರಹು, ಕುರುಹು, ಬಯಲು—ಜ್ಞಾನ, ಮಾಯೆ, ಲಿಂಗ, ಶೂನ್ಯ.

ಇವರ ಈ ಸಾಧನೆಯ ಕೂಡ ಜೈನ ಕವಿಗಳು ತಮ್ಮ ಧರ್ಮಪ್ರಕ್ರಿಯೆಯನ್ನು ಪ್ರತಿಪಾದಿಸಲು ಬಳಸಿದ ಉಂಡೆ ಉಂಡೆ ಸಂಸ್ಕೃತ ಶಬ್ದಗಳನ್ನೂ, ಕೆಲವೊಮ್ಮೆ ಅವರು ಮಾಡಿದ ಅನುವಾದ ಪದಗಳನ್ನೂ ಹೋಲಿಸಿನೋಡಿದಾಗ ತಿಳಿಯುತ್ತದೆ. ಯಾರ ಅನುಭವ ಪ್ರತ್ಯಕ್ಷವಾದದ್ದು ಯಾರದ್ದು ಒಂದು ಕೈದಾಟಿ ಬಂದದ್ದು ಎಂಬುದು. ಪ್ರಥಮಾನುಭವವಾದ ವ್ಯಕ್ತಿ ತಾನೆ ತನ್ನ ಉಕ್ತಿಯನ್ನು ಕಡೆದುಕೊಳ್ಳುತ್ತಾನೆ. ಇಲ್ಲವಾದರೆ ತಾನು ಮಧ್ಯವರ್ತಿ ಮಾತ್ರವಾಗಿ ಅನುವಾದಕನಾಗುತ್ತಾನೆ. ಇದನ್ನು ಸ್ಪಷ್ಟೀಕರಿಸಲು ಮೇಲೆ ಉದ್ಧರಿಸಿರುವ ನಾಲ್ಕು ಪದಗಳನ್ನೆ ವಿಶದೀಕರಿಸಬಹುದು. ಜ್ಞಾನ ಎಂಬ ಪದಕ್ಕೆ ಅರಿವು ಸಮಾನಾರ್ಥಕಪದವೆಂಬಂತೆ ತೋರಿದರೂ ಮಾಯೆ-ಮರಹುಗಳು ತೋರುವುದಿಲ್ಲ. ಮಾಯೆ ಎಂದರೇನೆಂದು ಎಷ್ಟೆಷ್ಟೆ ಹೇಳಿದರೂ ಅದರ ಕಲ್ಪನೆ ಕರಗತವಾಗುವುದಿಲ್ಲ. "ಅದೆ, ಹೆಣ್ಣು ಹೊನ್ನು ಮಣ್ಣು" ಎಂದು ಮಾಯೆಗೆ ಅರ್ಥ ತಿಳಿದುಕೊಳ್ಳುತ್ತೇವೆ. 'ಮರಹು' ಎಂಬ ಮಾತಿನಲ್ಲಿ ಅದರ ಗುಣಕ್ರಿಯೆ ತಿಳಿಯುತ್ತದೆ. ತಾನು ಪರಮಾತ್ಮನು. ಅಂಶೀಭೂತನೆಂಬ ಅರಿವನ್ನು ಮರಸಿರುವುದೆ ಆ ಮರಹು. ಕ್ಷಣಮಾತ್ರ ಬರುವ ಆ ಅರಿವನ್ನು ಮರಸುವುದೆ ಮಾಯೆ. ಇದೆಷ್ಟು ಮುಷ್ಟಿಗ್ರಾಹ್ಯವಾಯಿತು ! ಆದರೆ ಇಷ್ಟೆ ಇದರ ಕಲ್ಪನೆಯ ವ್ಯಾಪ್ತಿಯೂ ಅಲ್ಲ ; ಅದಿಲ್ಲಿ ಬೇಕಿಲ್ಲ. ಕುರುಹು ಎಂಬ ಪದಕ್ಕೂ ಲಿಂಗಕ್ಕೂ ಮೂಲಾನುವಾದ ಸಂಬಂಧವೆ

ಇಲ್ಲ. ಇಂಗ್ಲಿಷಿನಲ್ಲಿ ಲಿಂಗಕ್ಕೆ ಮಾಡುವಂತೆ ವಾಚ್ಯಾರ್ಥ ಭಾಷಾಂತರವನ್ನೆ ಇವರೂ ಮಾಡಿದ್ದರೆ ಎಷ್ಟು ವಿಕಾರವಾಗುತ್ತಿತ್ತು! ಆದರೆ, ಕುರುಹು ಎಂದು ಹೇಳಿ ಮೂಲಕಲ್ಪನೆಯನ್ನು ಉದ್ದೀಪಿಸಿದ್ದಾರೆ. ಧಾರಣ ಮಾಡುವ ಇಷ್ಟಲಿಂಗವನ್ನು ಆರಂಭದಲ್ಲಿ ಶಿವಾದ್ವೈತಭಾವದಿಂದಲೆ ಆರಾಧಿಸಬೇಕಾದರೂ, ಅದು ಅನುಭೂತಿ ಆಗುವತನಕ ಮಾತ್ರ ಅವಶ್ಯ, ಆಮೇಲೆ ಕಳಚಿಹೋಗತಕ್ಕುದು ಎಂಬ ಆ ಅರಿವನ್ನು ಈ ಕುರುಹು ಎಂಬ ಮಾತು ಮಾತ್ರ ಮಾಡಿಕೊಡುತ್ತದೆ. 'ಲಿಂಗ' ಎನ್ನುವ ಪದದಿಂದಲೂ ಅದು ಸಾಧ್ಯವಿಲ್ಲ. ಹಾಗೆಯೆ ಶೂನ್ಯ ಎಂಬ ಪದ ತರುವ ಚಿತ್ರವೆ ಬೇರೆ, ಬಯಲು ತರುವ ಕಲ್ಪನೆಯೆ ಬೇರೆ. 'ಶೂನ್ಯ' ಏನೂ ಇಲ್ಲವೆಂಬ ಚಿತ್ರ ತಂದುಕೊಟ್ಟರೆ; ಬಯಲು, ಮೊದಲು ತುಂಬಿದ ಬೆಳೆಯು, ಆಮೇಲೆ ಬೀಜಕೊಟ್ಟು ಕಟುವಾಗಿ ಬಯಲಾದ ಚಿತ್ರವನ್ನು ತಂದುಕೊಡುತ್ತದೆ. ಇದು ಶರಣರ ತತ್ತ್ವಕ್ಕೂ ಒಪ್ಪಂದವಾಗಿದೆ. ಅವರು ಶೂನ್ಯವಾದಿಗಳಲ್ಲ; ಅವರ ಬಯಲು ಶೂನ್ಯವೂ ಅಲ್ಲ. ಅಲ್ಲಿ ತುಂಬು ಬೆಳೆ ಇದೆ, ಬೋಳು ಹೊಲ ಇದೆ. ಆದರೆ ಅಲ್ಲೆ ಮರುಬೆಳೆಯ ಬಸಿರೂ ಬಿತ್ತನೆಯೂ ಅಡಗಿರುತ್ತದೆ. ಅದು ಶೂನ್ಯವಲ್ಲವೆ ಅಲ್ಲ. ಈ ಅನುಭವ 'ಶೂನ್ಯ' ಶಬ್ದದಲ್ಲಿ ಆಗದು. ಆದ್ದರಿಂದ ವಚನಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಬೇಕಾದರೂ ಈ ಎಲ್ಲಾ ಪದಗಳನ್ನು ಹಾಗೆಹಾಗೆಯೆ ಪುನರ್ ಅನುವಾದ ಮಾಡಬರುವುದಿಲ್ಲ. ಇವರ ದರ್ಶನ ಹಾಗೆ ಮಾಡುವುದರಿಂದ ನಷ್ಟವಾಗುತ್ತದೆ. ಇವರದು ಅನುವಾದಿತ ದರ್ಶನವಲ್ಲವೆಂಬುದೆ ಇಷ್ಟೂ ವಿವರಣೆಯ ಉದ್ದೇಶ. ಆದ್ದರಿಂದಲೆ ಅನುವಾದ ಪದಗಳನ್ನಾಗಲಿ, ಅದೇ ಪದ-ಭಾಷೆಯನ್ನಾಗಲಿ ಇವರು ಬಳಸಲಿಲ್ಲ. ಅವರ ಗಮನವೂ ಕೂಡ ಸಂಸ್ಕೃತ ಲೋಕವಲ್ಲ; ಪ್ರತ್ಯಕ್ಷ ಸಾಮಾನ್ಯರು. ಅವರಿಗೆ ತತ್ಕಾಲ ತದ್ದೇಶ—ಒಟ್ಟಿನಲ್ಲಿ ವರ್ತಮಾನ, ನಿತ್ಯವರ್ತಮಾನ ಪ್ರಧಾನವಾಯಿತು. ಭಾಷೆಯ ಆಯ್ಕೆಯ ಬಗೆಗೆ, ಬಳಕೆಯ ಬಗೆಗೆ ವಚನಕಾರರು ತಾಳಿದ ನಿಲುವಿನಲ್ಲಿ ಅವರ ಯುಗಪ್ರಜ್ಞೆಯೂ ಒಡಮೂಡಿದೆ. ಈ ಯುಗಪ್ರಜ್ಞೆ ತೀವ್ರವಾಗಿದ್ದುದರಿಂದಲೆ ಅವರು ಅಂದು ಕಂಡ ಮೌಲ್ಯಗಳಿಗೆ ಇಂದೂ ಮೌಲಿಕತೆ ಒದಗಿದೆ.

ಯಾವ ಯಾವ ಮೌಲ್ಯಗಳನ್ನು ಅವರ ಯುಗಪ್ರಜ್ಞೆ ಹೇಗೆ ಸೃಷ್ಟಿಸಿತೆಂಬುದನ್ನು ನಾವೀಗ ವಿವೇಚಿಸಬಹುದು. ಹಾಗೂ ಅವರು ಕಂಡ ಮೌಲ್ಯ ಹೇಗೆ ಆ ಯುಗದ ಅನಿವಾರ್ಯ ಆವಿರ್ಭಾವಗಳಾಗಿದ್ದುವು ಎಂಬುದನ್ನೂ ಚರ್ಚಿಸಬಹುದು. ಇದಕ್ಕೆ ಪೋಷಕವಾಗಿ ಮೌಲ್ಯ ಎಂದರೇನು ಎಂದು ನಿರ್ಧರಿಸಿಕೊಳ್ಳುವುದು ವಾಸಿ. ಮೌಲ್ಯ ಎಂದರೆ ಕನ್ನಡದಲ್ಲಿ 'ಬೆಲೆ' ಎಂದರ್ಥ. ಬದುಕು ಸಾರ್ಥಕವಾದ ಬಾಳಾಗಲು ತನಗೆ ತಾನೇ ಇಟ್ಟುಕೊಳ್ಳುವ, ಕೊಟ್ಟುಕೊಳ್ಳುವ —ಕಂಡುಕೊಳ್ಳುವ ಬೆಲೆಯೆ ಇದು. ಬೌದ್ಧಿಕ ಗ್ರಹಣೆಯಾಗದೆ ಬಾಳಿನ ಸಾಧನೆಯ ಫಲವಾಗಿ ಬಂದಾಗ ಮಾತ್ರವೇ ಈ ಬೆಲೆಗೆ ಮಂತ್ರತ್ವ ಒದಗುತ್ತದೆ. ತನಗೆ ತಾನೆ ಇಟ್ಟುಕೊಳ್ಳುವ ಬೆಲೆಯನ್ನೂ ತಾನು ಎಷ್ಟರಮಟ್ಟಿಗೆ ಬದುಕಿದ್ದೇನೆ ಎಂಬುದೂ ಮುಖ್ಯ. ಅನ್ಯರ ಬೆಲೆಯನ್ನು ತನ್ನದನ್ನಾಗಿ ಮಾಡಿಕೊಳ್ಳುವುದರಲ್ಲಿ ಎಷ್ಟೆಲ್ಲ ಬೆಲೆ ತೆರಬೇಕು! ಕಡೆಗೆ ತನ್ನದೆ ಬೆಲೆಗೆ ತಾನು ತನ್ನೆಲ್ಲವನ್ನೂ ತೆರಬೇಕಾದ ಪ್ರಸಂಗ ಬರುತ್ತದೆ. ಸತ್ಯದ ಶಿವಶಿಶುವಾಗಿ ಹರಿಶ್ಚಂದ್ರ ತನ್ನೆಲ್ಲ ತೆತ್ತ. ಅದೇ ಸತ್ಯವನ್ನು ನಾವು ಪಡೆಯಬೇಕಾದರೆ ಮತ್ತೆ ನಮ್ಮ ಬದುಕನ್ನೆ ಅದರ ಬೆಲೆಯಾಗಿ ತೆರಬೇಕಾಗಬಹುದು. ಏನನ್ನೂ ತೆರದೆ ಬರಿದೆ ಬೆಲೆಗಳನ್ನು ಇಟ್ಟುಕೊಂಡವರು—ಕೊಳ್ಳುವ ಹಣವಾಗಲಿ ಮನಸ್ಸಾಗಲಿ ಇಲ್ಲದೆ ಸುಮ್ಮಸುಮ್ಮನೆ 'ಹರಾಜು ಕೂಗು'ವಂತಾಗುತ್ತಾರೆ. ಹರಾಜು ತಮ್ಮ ಹೆಸರಿಗೆ ನಿಂತಾಗ ಅವರಿಗೆ ಪೀಕಲಾಟ ಬರುವಂತೆ, ಇವರಿಗೂ ಸಂಕಷ್ಟ-ಸಂದಿಗ್ಧಗಳು ಬಂದಾಗ ಮೌಲ್ಯಗಳ ನಿಜಮೌಲ್ಯವೇನೆಂದು ತಿಳಿಯುತ್ತದೆ. ಇಂಥ ಮೌಲ್ಯಗಳು ಪರಮ ಮೌಲ್ಯಗಳು. ಸಾಮಾನ್ಯ ಮೌಲ್ಯಗಳು ಬೇರೆ. ನಾವು ಬದುಕಲು ನಮ್ಮ ಜೀವನದ ಅಗತ್ಯಗಳಿಗೆಲ್ಲ ನಮ್ಮದೇ ಬೆಲೆಗಳನ್ನು ಕಟ್ಟಿಕೊಳ್ಳುತ್ತೇವೆ. ಈ ಮೌಲ್ಯಗಳೂ ಆ ಪರಮ ಮೌಲ್ಯದ ನೆಲೆಯಿಂದಲೆ ನಿರ್ಧಾರಿತವಾಗುತ್ತದೆ.

ಬಸವಣ್ಣನವರಾಗಲಿ ಅವರ ಕಾಲದ ಶರಣರಾಗಲಿ ಈ ಮೌಲ್ಯಗಳನ್ನು ಬುದ್ಧಿಜೀವಿಗಳಾಗಿ ಗ್ರಹಿಸಿಕೊಳ್ಳಲಿಲ್ಲ. ಅವರಾರೂ ಬುದ್ಧಿ-ಪರೋಪಜೀವಿಗಳೂ ಅಲ್ಲ. ಅವರು ಶರಣರು, ಅನುಭಾವಿಗಳು, ಮರಣನಿರ್ಭೀತರು. ಆಲೋಚನೆಯಷ್ಟರಿಂದಲೆ ಈ ಮೌಲ್ಯಗಳು ಬಂದಿದ್ದರೆ ಯಾವ ಮಹತ್ತರ ಕ್ರಾಂತಿ-ಉತ್ಕ್ರಾಂತಿಯೂ ಆಗುತ್ತಿರಲಿಲ್ಲ. ಆಗ ಅವರ ಮೌಲ್ಯಗಳೂ ಆಚಾರ್ಯ ಭಾಷ್ಯವಾಗುತ್ತಿದ್ದುವು. ಆದರೆ ಆ ಮೌಲ್ಯಗಳು ಅವರ ಸಾಧನೆಯ ಫಲಗಳು. ಆ ಫಲಗಳಲ್ಲಿ ಅವರ ಜೀವಿತಸಾರವಿದೆ—ಮರದಸಾರ ಹೂ ಕಾಯಿ ಹಣ್ಣು ಬೀಜಗಳಲ್ಲಿ ಮೂಡಿಬರುವಂತೆ. ಅವರು ಯಾವ ಮೌಲ್ಯವನ್ನೂ ಅದು ಕೇವಲ ಪುರಾತನವೆಂಬ, ವೇದಾಗಮೋಕ್ತವೆಂಬ ಭಾವನೆಯಿಂದಲೆ ಸ್ವೀಕರಿಸಿಕೊಳ್ಳಲಿಲ್ಲ. ಎಷ್ಟೊ ಹಳೆಯ ಬೆಲೆಗಳನ್ನು ಸ್ವೀಕರಿಸಿಕೊಳ್ಳದೆ ಅವುಗಳಿಗೆ ಬೆಲೆ ಕಳೆದರು. ಗಟ್ಟಿ ಬೆಲೆಗಳನ್ನು ಒಪ್ಪಿ ಮತ್ತೆ ಚಲಾ

ವಣೆಗೆ ತಂದರು. ಈ ಕೆಲಸ ಕೇವಲ ವೈಯಕ್ತಿಕವಾಗಿ ನಡೆಯುಲಿಲ್ಲ. ಸಾಮೂಹಿಕ-ಪರಸ್ಪರ ಸಹಕಾರನಿಷ್ಪವಾಗಿ ನಡೆಯಿತು. ಒಬ್ಬರು ತಪ್ಪಿದ್ದರೆ ಮತ್ತೊಬ್ಬರು ತಿದ್ದಿ ಅವರನ್ನು ನಡೆಸುತ್ತಿದ್ದರು. ಇದರಿಂದಾಗಿ ಒಬ್ಬೊಬ್ಬರು ಕಂಡ ಮೌಲ್ಯಗಳಲ್ಲೂ ಸಾಮಾನ್ಯತೆಯಿದೆ, ವಿಶಿಷ್ಟತೆ ಇದೆ. ಒಬ್ಬೊಬ್ಬರ ಮೌಲ್ಯಕ್ಕೂ ಕೇವಲ ವೈಯಕ್ತಿಕ ಮುದ್ರೆಯೆ ಅಲ್ಲದೆ, ಶರಣ ಸಮಷ್ಟಿಯ ಬಸವಮುದ್ರೆ—ಶಿವಮುದ್ರೆ ಮೂಡಿದೆ.

ಬಸವಣ್ಣನವರು ತಮ್ಮ ಸಾಧನೆಯ ಆರಂಭದಲ್ಲಿ ಭಾವವಶಿ ಆದರ್ಶವಶಿ ಆಗಿ ಕೆಲವೊಂದು ಮೌಲ್ಯ ಕಂಡರು. ಆದರೆ ಅವರಿಗೆ ತೀವ್ರಾನುಭವ ಆಗುತ್ತ ಹೋದಂತೆ ಆವೇಶಜನ್ಯ ಮೌಲ್ಯಗಳು ಮಾಗುತ್ತ ಹೋಗುತ್ತವೆ. ಸಿದ್ಧಿಯ ನೆಲೆಗೆ ಬಂದಮೇಲೆ ಅವರು ಕಂಡ ಮೌಲ್ಯಗಳಿಗೆ ಹೆಚ್ಚು ಘನತೆ ಸ್ಥಿರತೆ ಬಂತು. ತೆಂಗಿನ ಎಳೆಯಸಸಿ ಗುಂಬ ತಿರುಗುವ ತನಕ ಒಂದು ತೆರ, ಆಮೇಲೆ ಸೋಗೆ ಕಳಚುವುದಕ್ಕಾರಂಭಿಸಿದರೆ ಅದರಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ; ಹಾಗೆ ಇವರು ನಡೆ ನುಡಿಗಳನ್ನು ಒಂದಾಗಿ ಮಾಡಿಕೊಳ್ಳುತ್ತಹೋದುದರಿಂದ, ಮರ್ತ್ಯವನ್ನೂ ಶಿವವನ್ನಾಗಿಯೆ ಪರಿವರ್ತಿಸುತ್ತ ನಡೆದುದರಿಂದ ಇವರ ಮೌಲ್ಯಗಳು ಬೌದ್ಧಿಕ ಮೌಲ್ಯಗಳಂತೆ ವಿಚಾರರಮಣೀಯ ಮಾತ್ರವಲ್ಲ. ಇವುಗಳ ಹೊರ ಬೆಲೆ ಬೇರೆಯಲ್ಲ ಒಳಬೆಲೆ ಬೇರೆಯಲ್ಲ. ಈ ಅದ್ವೈತಭಾವನೆ ಎಷ್ಟರಮಟ್ಟಿಗೆ ಇವರಿಗೆ-ಸಾಮಾನ್ಯವಾಗಿ ಶರಣರಿಗೆ—ಅನುಭೂತವಾಗಿದೆಯೆಂದರೆ ಇವರು ಎಂಥದೆ ಪ್ರಸಂಗದಲ್ಲೂ ಅದನ್ನು ಮಿಂಚಿಸುತ್ತಾರೆ. ಈ ಲೋಕ ಆ ಲೋಕಗಳ ಬಗೆಗೆ, ದೇಹ ಆತ್ಮದ ಬಗೆಗೆ, ಮೇಲುಕೀಳೆಂಬ ಬಗೆಗೆ ಅವರು ಯೋಚಿಸುವಾಗಲೂ ಅದು ಮೈದಾಳಿ ಬರುತ್ತದೆ. ಈ ದೃಷ್ಟಿಯಿಂದಲೂ ಅವರ ಮೌಲ್ಯಗಳನ್ನು ವಿವೇಚಿಸುವುದು ಅಗತ್ಯ.

ಈ ಲೋಕ ಆ ಲೋಕಗಳ ಬಗೆಗೆ ಇವರು ತಾಳಿದ ನಿಲವನ್ನು ಪ್ರಾರಂಭದಲ್ಲೆ ಸೂಚಿಸಿದೆ. "ದೇವಲೋಕ ಮರ್ತ್ಯಲೋಕವೆಂಬುದು ಮತ್ತೆ ಬೇರಿಲ್ಲ" ಎಂದದ್ದು ನಿಜಕ್ಕೂ ಒಂದು–ಅಪೂರ್ವವಲ್ಲದಿದ್ದರೂ–ಅಸಾಮಾನ್ಯವಾದ ಮೌಲ್ಯವೆ. ಆದರೆ, "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ—ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ: ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ—" ಎಂಬ ಮೌಲ್ಯ ಮೊದಲ ನೋಟಕ್ಕೆ ಪುನರುಕ್ತಿಯಂತೆ ತೋರಿದರೂ ವಾಸ್ತವವಾಗಿ ಇದು ಪುನರ್‌ಮೌಲ್ಯವಾಗಿದೆ; ಅತ್ಯಪೂರ್ವ ಮೌಲ್ಯವಾಗಿದೆ. ದೇವಲೋಕ ಮರ್ತ್ಯಲೋಕಗಳ ಸೀಮೆಯನ್ನು ಕಳಚಿದ ಜೊತೆಯಲ್ಲೆ ಸಕಲ ಸಾಧನೆಯ ಕೇಂದ್ರವನ್ನೂ ಮರ್ತ್ಯಬಿಂದುವಿಗೆ ಸೆಳೆದು ತಂದದ್ದು ಅತಿ ಧೀರ ಸಾಧನೆ. ಈ ಲೋಕ ಕಮ್ಮಟಶಾಲೆ; ಇಲ್ಲಿ ಬೆಲೆಗೊಂಡ ನಾಣ್ಯವೆ ಅಲ್ಲಿಗೂ ನಾಣ್ಯ. ಅದಿಲ್ಲವೆ ಇಲ್ಲ, ಎನ್ನುವ ಶಿವಧೈರ್ಯ ಮೆಚ್ಚತಕ್ಕದ್ದೆ.

'ಜಗನ್‌ಮಿಥ್ಯ', 'ಲೋಕನಶ್ವರ' ಎಂಬ ಇತರ ತತ್ತ್ವಪ್ರಾಚುರ್ಯವಿದ್ದ ಕಾಲದಲ್ಲಿ ಈ ಮೌಲ್ಯದ ಚೇತೋಹಾರಿ ಕ್ರಿಯೆ ಅಗಾಧವಾದುದು. ಈ ಮೌಲ್ಯದೃಷ್ಟಿಯೆ ಅವರ ಇತರ ಮೌಲ್ಯಸೃಷ್ಟಿಯಲ್ಲೂ ಕಂಡುಬರುತ್ತದೆ. ದೇಹ ಆತ್ಮಗಳನ್ನು ತೀರಾ ಪರಸ್ಪರ ವಿಭಿನ್ನದಿಗಂತಗಳಂತೆ ಕಾಣುತ್ತಿದ್ದ ಒಂದು ಕಾಲದಲ್ಲಿ ಇವರು ತಾಳಿದ ದೃಷ್ಟಿ ಹೇಗಿದೆ ನೋಡಿ:

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಭೇದವುಂಟೆ ?
ದೀಪಕ್ಕೆ ದೀಪ್ತಿಗೆ ಭೇದವುಂಟೆ ಅಯ್ಯ ?
ಆತ್ಮಕ್ಕೆ ಅಂಗಕ್ಕೆ ಭೇದವುಂಟೆ ಅಯ್ಯ ?
ಎನ್ನಂಗವನು ಶ್ರೀಗುರುಮಂತ್ರವ ಮಾಡಿ ತೋರಿದನಾಗಿ,
ಸಾವಯವಕ್ಕೆ ನಿರವಯಕ್ಕೆ ಭಿನ್ನವಿಲ್ಲವಯ್ಯ !
ಚೆನ್ನಮಲ್ಲಿಕಾರ್ಜುನದೇವರ ಬೆರಸಿ ಮತಿಗೆಟ್ಟವಳ
ಏನ ನುಡಿವಿರಯ್ಯ !

ಅಕ್ಕಮಹಾದೇವಿ

ಅಂಗಸಂಗದಲ್ಲಿ ಲಿಂಗಸಂಗಿಯಾದೆನು
ಲಿಂಗಸಂಗದಲ್ಲಿ ಅಂಗಸಂಗಿಯಾದೆನು
ಉಭಯಸಂಗವನೂ ಅಱಿಯದೆ, ಪರಿಣಾಮಿಯಾದೆನು
ನುಡಿಗಡಣವ ಮಱೆದು ತೆಱಹಿಲ್ಲದಿದ್ದೆನು
ಎನ್ನದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ,
ಎನ್ನ ನಾನು ಏನೆಂದೂ ಅಱಿಯೆನಯ್ಯಾ

ಅಕ್ಕಮಹಾದೇವಿ

ಎನ್ನ ತನುವಿನೊಳಗೆ ನಿಮ್ಮ ತನುವಡಗಿರ್ಪುದು !
ನಿಮ್ಮ ತನುವಿನೊಳಗೆ ಎನ್ನ ತನುವಡಗಿರ್ಪುದು !
........ .. .................... ................
ಅವಿರಳ ಸಮರಸವಾಗಿರ್ದೆನಯ್ಯಾ ಅಖಂಡೇಶ್ವರಾ !

ಷಣ್ಮುಖಸ್ವಾಮಿ

ಕಾಯವೆ ಕೈಲಾಸ....ಭಕ್ತನಂಗಣವೆ ವಾರಣಾಸಿ

ಬಸವಣ್ಣ

ಕಾಯದಿಂದ ಗುರುವ ಕಂಡೆ, ಕಾಯದಿಂದ ಲಿಂಗವ ಕಂಡೆ !
ಕಾಯದಿಂದ ಜಂಗಮವ ಕಂಡೆ, ಕಾಯದಿಂದ ಪ್ರಸಾದವ ಕಂಡೆ !
ಕಾಯದಿಂದ ಸಕಳೇಶ್ವರದೇವರ ಪೂಜಿಸುವಲ್ಲಿ, ಉತ್ತರಸಾಧಕನಾದೆಯಲ್ಲಾ
ಎಲೆ ಕಾಯವೆ !

ಸಕಲೇಶಮಾದರಸ

ಅಂಗದ ಕಳೆಯುಲೊಂದು ಲಿಂಗವ ಕಂಡೆ.
ಲಿಂಗದ ಕಳೆಯುಲೊಂದು ಅಂಗವ ಕಂಡೆ !
ಅಂಗಲಿಂಗ ಸಂದಣೆಯನರಸಿ ಕಂಡೆ ನೋಡಿರೇ !
ಇಲ್ಲಿ ಐದಾನು ಶಿವನು, ಬಲ್ಲೊಡೆ ಇರಿಸಿಕೊಳ್ಳಿರೇ !
ಕಾಯವಳಿಯದ ಮುನ್ನ ನೋಡಬಲ್ಲಡೆ
ಗೊಹೇಶ್ವರ ಲಿಂಗಕ್ಕೆ ಬೇರೆ ಠಾವುಂಟೆ ಹೇಳಿರೇ ?

ಅಲ್ಲಮಪ್ರಭು

'ನೆನೆ ನೆನೆ' ಎಂದಡೆ ಏನ ನೆನೆವೆನಯ್ಯ ? ಎನ್ನ ಕಾಯವೇ ಕೈಲಾಸವಾಯಿತ್ತು !
ಮನವೇ ಲಿಂಗವಾಯಿತ್ತು, ತನುವೆ ಸೆಜ್ಜೆಯಾಯಿತ್ತು !
ನೆನೆವಡೆ ದೇವನುಂಟೆ ? ನೋಡುವಡೆ ಭಕ್ತನುಂಟೆ ?
ಗೊಹೇಶ್ವರಲಿಂಗ ಲೀಯವಾಯಿತ್ತು !

ಅಲ್ಲಮಪ್ರಭು

ಎನ್ನ ಕಾಯವೇ ದೇಗುಲವಾಗಿ, ಕುರುಹಿಟ್ಟುಕೊಟ್ಟ ಕುರುಹೇ ಪ್ರಾಣಲಿಂಗವಾಗಿ,
ನೋಡುವ ಕಣ್ಣೇ ಪೂಜಿಸುವ ಪುಷ್ಪವಾಗಿ, ಆನಂದಾಶ್ರುಗಳೆ ಸಕಲಭೋಗವಾಗಿ,
... ........................ ಪೂಜಿಸುತ್ತಿದ್ದೆನಯ್ಯ, ಈಶಾನ್ಯಮೂರ್ತಿ
ಮಲ್ಲಿಕಾರ್ಜುನಲಿಂಗವೇ, ಎನ್ನ ಪ್ರಾಣಪೂಜೆ ನಿಮಗೆ !

ಶಿವಲೆಂಕಮಂಚಣ್ಣ

ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ !
ಹೂವಿಲ್ಲದ ಪರಿಮಳದ ಪೂಜೆ, ಹೃದಯಕಮಲದಲ್ಲಿ ಶಿವಶಿವಾ ಎಂಬ ಶಬ್ದ !
ಇದು ಅದ್ವೈತ ಕಾಣಾ ಗೊಹೇಶ್ವರ !

ಅಲ್ಲಮಪ್ರಭು

'ಅಂಗವೆ ಲಿಂಗ ! ಲಿಂಗವೆ ಅಂಗ !' ಎಂದರಿದ ಬಳಿಕ
ನಮ್ಮ ಕೂಡಲ ಚೆನ್ನಸಂಗಮದೇವರು ಅಲ್ಲಿ ಹೆರಹಿಂಗದಿರ್ಪಕಾಣಿರೋ !

ಚೆನ್ನಬಸವಣ್ಣ

ಅಂಗದಿಂದ ಲಿಂಗಸುಖ ! ಲಿಂಗದಿಂದ ಅಂಗಸುಖ !
ಆ ಅಂಗಲಿಂಗಸಂಗದಿಂದ ಪರಮಸುಖ ನೋಡಯ್ಯಾ !
ಅಂಗಲಿಂಗಸಂಗಸುಖವನು
ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯನೇ ಬಲ್ಲ !

ಚೆನ್ನಬಸವಣ್ಣ

ದೇಹಾತ್ಮ ಅಭೇದ ಭಾವ ಭೋಗಾಸಕ್ತ ಭೌತಿಕವಾದವಾಗಿ ರೂಪಾಂತರಗೊಳ್ಳದೆ ಆಧ್ಯಾತ್ಮಿಕವಾಗಿ ಪರಿಣಮಿಸಿರುವುದಿಲ್ಲ ಸುದೈವ. ಶರೀರವನ್ನೇ ಆತ್ಮಸ್ಥಾನದಲ್ಲಿರಿಸದೆ ಅದನ್ನೆ ಆಧ್ಯಾತ್ಮೀಕರಿಸುವುದನ್ನಿಲ್ಲಿ ಕಾಣಬಹುದು. ಮರ್ತ್ಯವನ್ನು ಮಾತ್ರವೆ ಒಪ್ಪಿ ಅಮರ್ತ್ಯವನ್ನು ಅಲ್ಲಗಳೆಯುವ, ಶರೀರವನ್ನು ಮಾತ್ರವೆ ಗೌರವಿಸಿ ಆತ್ಮವನ್ನು ನಿರಾಕರಿಸುವ ಭೋಗೋನ್ಮತ್ತ ಭೌತವಾದಕ್ಕೂ, ಇವರ ಈ ವಿಶಿಷ್ಟತತ್ತ್ವಕ್ಕೂ ಸಂಬಂಧವೆ ಇಲ್ಲ.

ಬಸವಣ್ಣನವರು ಹುಟ್ಟಾ ಬ್ರಾಹ್ಮಣರಾಗಿ,—ಅಥವಾ ಆರಾಧ್ಯ ಬ್ರಾಹ್ಮಣರಾಗಿ—ಸಂಪ್ರದಾಯಸ್ಥರಾಗಿದ್ದು

ತಮ್ಮ ಕುಲಾಚಾರಪರಿಮಿತಾವರಣಕ್ಕೆ ಹೇಸಿ ಹೊರಬಂದು, ಸರ್ವಂಕಷ ವಿಶ್ವಧರ್ಮವೊಂದನ್ನು ಅರಸಿ ವರಿಸಿದುದರ ಸಂಕೇತವಾಗಿ ಜನಿವಾರ ಪ್ರಕರಣ ಬರುತ್ತದೆ. ಜನಿವಾರ ಕಿತ್ತವರು ಲಿಂಗಧಾರಣ ಮಾಡಿದರು. ಹಳೆಯ ಸಂಪ್ರದಾಯ ಕ್ಲಿನ್ನವಾದ ಮೌಲ್ಯಗಳನ್ನೆಲ್ಲ ಯಾವ ಕಾರಣಕ್ಕೂ ಒಪ್ಪದೆ ಕಿತ್ತೊಗೆದು ಹೊಸ ಬೆಲೆಗಳನ್ನು ಅಗೆಹಾಕುತ್ತಾರೆ. ಈ ಜನ್ನಿವಾರ ಲುಂಚನದಲ್ಲಿ ತಿಳಿಯುತ್ತದೆ ಬಸವಣ್ಣನವರು ಯಾವ ಕಾಲದೇಶದ ಬೆಲೆಯಿಂದಲೂ ಮಹಾಕ್ರಾಂತಿಪಟು, ಬಂಡಾಯಗಾರ ಎಂದು. ಈ ಬಂಡಾಯಕ್ಕೆ ಕಾರಣ ವೈಯಕ್ತಿಕರುಚಿ ಅರುಚಿಯಲ್ಲ; ಭೋಗಾಸಕ್ತಿಯೂ ಅಲ್ಲ, (ವಿದೇಶಗಳಿಗೆ ಹೋದ, ದನದ ಮಾಂಸ ತಿನ್ನುವಾಸೆ ಹುಟ್ಟಿಕೊಂಡ, ಸಂಪ್ರದಾಯಸ್ಥ ತರುಣ 'ಬಂಡಾಯ'ವೆದ್ದು ತನ್ನ ಜನ್ನಿವಾರವನ್ನು ಕಿತ್ತುಕೊಳ್ಳುವಂತೆಯೂ ಅಲ್ಲ, ಇದು.) ಅಷ್ಟೆ ಅಲ್ಲ, ಅತಿ ಪರಿಚಯಜನ್ಯವಾದ ಅಸಡ್ಡೆ-ಅಗೌರವವೂ ಅಲ್ಲ. ಆದರೆ ಇದಕ್ಕೆ ವೈಯಕ್ತಿಕವಲ್ಲದ ಯುಗವ್ಯಾಪಕವಾದ ಕಾರಣವಿತ್ತು. ಜ್ಞಾನದ ಹೆಸರಿನಲ್ಲಿ ಅಜ್ಞಾನಿಗಳಾಗಿರುವ, ವರ್ಣಧರ್ಮದ ಹೆಸರಿನಲ್ಲಿ ಸಾವಿರ ಹೋಳಾಗಿ ಒಡೆದು ಕೂಡದೆ ಮುಕ್ಕಾಗಿರುವ, ನಾನಾ ದೈವಗಳ ಭಕ್ತಿಯ ನೆವದಲ್ಲಿ ಭೀತಿಗ್ರಸ್ತರಾಗುಳಿದಿರುವ ಜನಸಾಮಾನ್ಯಸಮೂಹ ಅವರ ಕಣ್ಣಮುಂದೆ ನಿಚ್ಚಳವಿತ್ತು. ಅವರ ಮೇಲ್ಮೆಗೆ ನಿರಂತರ ಆಹ್ವಾನವಿತ್ತು. ಅಂದು ಆ ಕರೆಗೆ ಹಿಂದೆಂದೂ ಇದ್ದಿರದ ತೀವ್ರತೆ, ಅನುಲ್ಲಂಘ್ಯತೆ ಒದಗಿ ಬಂದಿತ್ತು. ಸತ್ಪಾತ್ರರಾದ ಆ ವ್ಯಕ್ತಿ ಅದಕ್ಕೆ ಓಗೊಡದೆ ವಿಧಿಯಿರಲಿಲ್ಲ. ಆದ್ದರಿಂದಲೆ ತಮ್ಮ ಉತ್ತಮಿಕೆಯ ಎಲ್ಲ ಕಿರೀಟಕವಚಾದಿ ಸಿಂಹಪೀಠಗಳನ್ನೆಲ್ಲ—ಜನ್ನಿವಾರ ವೇದಾಗಮಶಾಸ್ತ್ರಾಚಾರಗಳನ್ನೆಲ್ಲ ಕಿತ್ತೆಸೆದರು. ಪತಿತರನ್ನು ಮೇಲೆತ್ತುವ ಮೊದಲು ಅವರನ್ನು ಅಪ್ಪಿಕೊಳ್ಳಹೋದರು. ಆದರೆ ಆತ್ಮಸಂರಕ್ಷಣೆ ಹೊಂದಿಲ್ಲದ ಆ ಬಗೆಯ ಉದ್ಧಾರ ಕಾರ್ಯಕ್ಕೆ ಹೋದರೆ, ಮುಳುಗುವ ನಾವೆಯನ್ನು ಮೇಲೆತ್ತುವೆನೆಂದು ಹೋದ ಅಂಬಿಗನಂತಾಗುತ್ತದೆ. ಆದರೆ ಆದಿ ಕಮಠಸತ್ತ್ವಸಂಪನ್ನರಾಗಿ ಈ ಅಣ್ಣ ಆ ಭವಿಜಲಧಿಯಲ್ಲಿ ಧುಮ್ಮಿಕ್ಕುತ್ತಾರೆ. ಅವರೇನೊ ಕೈಗೆ ಸಿಕ್ಕಷ್ಟು ಜೀವರನ್ನು ಮೇಲೆತ್ತಿದರು; ತಾವೂ—ಉಸಿರುಕಟ್ಟಿದ್ದರೂ, ನೀರು ಕುಡಿದರೂ ಕೆಲವರನ್ನು ಜುಟ್ಟುಹಿಡಿದು ಕೆಲವರನ್ನು ಕೈಕಾಲು ಹಿಡಿದು, ಹಲವರನ್ನು ತಬ್ಬಿ ಮೇಲೆತ್ತಿದ್ದರು. ಅವರು ಈಜಿ ದಡಸೇರಿದ ಮೇಲೆ ರಕ್ಷಿತರಾದವರೆಷ್ಟೊ ಜನ ಕಾಲು ಜಾರಿ ಮತ್ತೆ ಮುಳುಗುವಂತಾದುದೂ ಉಂಟು! ಅದು ಹೋಗಲಿ. ಆದರೆ ಅವರು ಮುಳುಗುವವರನ್ನೆತ್ತುವಾಗ ಆ ಭವನಿಮಗ್ನರಿಗೆ ಈಜುಬುಂಡೆಗಳಾಗಿ, ಗಾಳಿಚೆಂಡುಗಳಾಗಿ ನೀಡಿದುದೆ ಈ ಲಿಂಗ ಲಾಂಛನ !

ಜನ್ನಿವಾರ ಕಿತ್ತವರು ಶಿವದಾರ, ಲಿಂಗಧಾರಣೆ ಮಾಡಿಕೊಂಡರು ! ಅದು ಹೋಯಿತು—ಹಗುರವಾಗಿದ್ದುದು, ಇದು ಬಂತು ಭಾರವತ್ತಾದದ್ದು—ಎಂದು ; ದಾರ ಹೋಗಿ ಭಾರ ಬಂತು ಎಂದು, ಗೇಲಿಮಾಡುವುದು ಸುಲಭ. ಕ್ರಾಂತಿಯ ಹೆಸರಿನಲ್ಲಿ ಜನ್ನಿವಾರ ಕಿತ್ತವರು ಜನೋದ್ಧಾರದ ಹೆಸರಿನಲ್ಲಿ ಮತ್ತೊಂದು ಭಾರಕ್ಕೆ ಕುತ್ತಿಗೆ ತೆತ್ತರಲ್ಲ ಎಂದೂ ಬಸವಣ್ಣನವರನ್ನು ಜರೆಯುವುದು ಸಾಧ್ಯ. ಆದರೆ ಇದರ ಅಗತ್ಯ-ಅನಿವಾರ್ಯ ಶಿವಪ್ರಯೋಜನವೇನು ? ಸಾವಧಾನ ಪರಾಮರ್ಶೆಗೆ ಹೊಳೆಯುತ್ತದೆ.

ಬಸವಣ್ಣನವರು ತತ್ಕ್ಷಣವಾಗಿ ಮಾಡಬೇಕಾಗಿದ್ದ ಮಹತ್ಕಾರ್ಯವೆಂದರೆ ಜಾತಿ ಕಾರಣಕ್ಕಾಗಿ ಒಡೆದು ಚೂರಾಗಿ ಬೆನ್ನೆಲುಬಿಲ್ಲದ ಜಂತುಗಳಾಗಿದ್ದ ದಲಿತರನ್ನೆಲ್ಲ ಒಟ್ಟುಗೂಡಿಸಿ, ತಾವೆಲ್ಲ ಒಂದೇ ದೇವರ ಮಕ್ಕಳೆಂಬುದನ್ನೂ ಹಾಗೂ ಉದ್ಧಾರಸಾಧ್ಯರೆಂಬುದನ್ನೂ, ತಮ್ಮ ಉದ್ಧಾರ ಅನ್ಯಮಧ್ಯವರ್ತಿಯಿಲ್ಲದೆಯೆ ಸಾಧ್ಯ ಎಂಬುದನ್ನೂ ಅವರಿಗೆ ಮನದಟ್ಟುಮಾಡಿಕೊಡಬೇಕಾದುದು. ಇದನ್ನು ಮಾಡಬೇಕಾದರೆ ಅವರನ್ನು, ಅವರು ಆತನಕವೂ ಬಂಧಿತರಾಗಿದ್ದ ನಾನಾ ಆವರಣಗಳಿಂದ ಬಿಡಿಸಿ ಹೊರತರಬೇಕಿತ್ತು. ಹಾಗೆಂದು ಅವರನ್ನು ನಿರಾವರಣದಲ್ಲಿಡುವುದೆಂದೂ ಅಲ್ಲ; ಶಿವಾವರಣ ರಕ್ಷಿತರನ್ನಾಗಿಮಾಡುವುದೆಂದು. ಜಾತಿಯ ಆವರಣ, ವೃತ್ತಿಯ ಆವರಣ—ತನ್ಮೂಲಕವಾಗಿ ಮೇಲುಕೀಳೆಂಬ ಆವರಣ, ಆಯಾ ಜಾತಿ ದೈವಗಳ ಸಮಯಾಚಾರದ ಭಯಂಕರ ಆವರಣ—ಈ ಎಲ್ಲ ಆವರಣವನ್ನೂ ಕಳಚಿ ಸಾಮಾನ್ಯರನ್ನು ರಕ್ಷಿಸುವಂತಹ ಶಿವಾವರಣ ಯಾವುದು ? ಹೊಲೆಯನನ್ನು ಹರಿಜನ ಎಂದು ಕರೆದಮಾತ್ರಕ್ಕೆ ಅವನನ್ನು ಆ ತನ್ನ ಎಲ್ಲ ಆವರಣದಿಂದ ಬದುಕಿಸಿದಂತಾಯಿತೆ ? ಹೊಲೆಯ-ಚಮ್ಮಾರ-ಕಮ್ಮಾರ-ಬಡಗಿ-ಕುಂಬಾರ-ನೇಕಾರ-ಸಿಂಪಿಗ-ಅಂಬಿಗ-ಮಡಿವಾಳ-ಕ್ಷೌರಿಕ ಈ ನೂರಾರು ವೃತ್ತಿ-ಜಾತಿ-ದೇವತಾ ಆವರಣಬದ್ಧರಾದವರನ್ನು ಮಹದಾವರಣದಲ್ಲಿರಿಸುವುದು ಹೇಗೆ? ಅದ್ವೈತಬೋಧನೆಯೂ ಈ ಮಹತ್ಕಾರ್ಯದ ಅಗತ್ಯತೆಯನ್ನು ಕಂಡುಕೊಳ್ಳ ಹೋಗಲಿಲ್ಲ. ಬಸವಣ್ಣನವರಿಗೆ ಇದನ್ನು ಸಾಧಿಸದೆ ವಿಧಿಯಿಲ್ಲದಂತೆ ಅನುಭವಕ್ಕೆ ಬಂತು. ಆದ್ದರಿಂದಲೆ ಶಿವಲಿಂಗ ಲಾಂಛನವನ್ನು ನಾನಾಕ್ಷುದ್ರಾವರಣಭೇದಕಯಂತ್ರವನ್ನಾಗಿ-ಮಂತ್ರವನ್ನಾಗಿ ಮಾಡಿಕೊಳ್ಳುತ್ತಾರೆ, ಬಸವಣ್ಣನವರು. ಜಾತಿಕಟ್ಟಿನಿಂದ ಬಿಡಿಸುವುದೆಂದರೆ ವೃತ್ತಿಯಿಂದ ನಿವೃತ್ತರನ್ನಾಗಿ ಮಾಡುವುದೆಂದಲ್ಲ. ವೃತ್ತಿಯಲ್ಲಿರಿಸಿ, ಆದರೆ ಜಾತಿ

ಮುಕ್ತರನ್ನಾಗಿ ಮಾಡಿ, ಹಾಗೂ ಆಯಾ ಜಾತಿ ದೈವಗಳ ಸಮಯಾಚಾರಗಳಿಂದ—ಭಯಾವರಣದಿಂದ ಬಿಡಿಸಿ, ಸಾಮಾನ್ಯರನ್ನು ಲಿಂಗಲಾಂಛನ ಒಂದುಗೂಡಿಸಿತು. ಲಿಂಗಲಾಂಛನದಂತಹ ಸಂಘಟಕ ಯಂತ್ರದ ನೆರವಿಲ್ಲದಿದ್ದರೆ, ಹೊಸದಾಗಿ ಒಂದುಗೂಡಿದ್ದ ಹಲವಾರು ವಿರುದ್ಧ ಜಾತಿವರ್ಗದ ಜನ ಎಷ್ಟೆ ರಾಜಕೀಯ ಸಾಮಾಜಿಕ ಒತ್ತಡವಿರುತ್ತಿದ್ದರೂ ಒಡೆದೇ ನಿಲ್ಲುತ್ತಿದ್ದರು. ಕಮ್ಯುನಿಸಂನಂತಹ ಜಾತ್ಯತೀತ ಪಕ್ಷದ ಬಲವತ್ತರವಾದ ಆರ್ಥಿಕ ರಾಜಕೀಯ ಆದರ್ಶಗಳೂ ಆ ಪಕ್ಷ ಸದಸ್ಯರ ಒಳಜಾತಿಯನ್ನು ಒಡೆಯುವಲ್ಲಿ ಈ ಯುಗದಲ್ಲೂ ಸಮರ್ಥವಾಗಿಲ್ಲವೆಂದಮೇಲೆ, ಅಂದು ಬಸವಣ್ಣನವರು ಬರಿದೆ ಸಾಮಾಜಿಕ ಕ್ರಾಂತಿಯ ಬಲದಿಂದ ಹೊರಟಿದ್ದರೆ ಆ ಏಕೀಕರಣ ಕಾರ್ಯವನ್ನು ಕಿಂಚಿತ್ತಾದರೂ ಸಾಧಿಸುತ್ತಿರಲಿಲ್ಲ. ಮೇಲಾಗಿ, ಆ ದಿನಗಳಲ್ಲಿ ಸಾಮಾಜಿಕ ರಾಜಕೀಯ ಆರ್ಥಿಕವಾದ ಏನನ್ನೂ ಧಾರ್ಮಿಕಾವರಣಕ್ಕೆ ವಿರುದ್ಧವಾಗದಂತೆಯೆ ಮಾಡಬೇಕಿತ್ತು; ಅಥವಾ ಧಾರ್ಮಿಕ ಮಾಧ್ಯಮಗಳ ಮೂಲಕವೆ ಸುಲಭವಾಗಿ ನೆರವೇರಿಸಬಹುದಿತ್ತು. ಲಿಂಗಲಾಂಛನ ಇಂಥ ಒಂದು ಅನಿವಾರ್ಯಸಾಧನಮಾಧ್ಯಮವಾಯಿತು ಬಸವಣ್ಣನವರಿಗೆ. ಪತಿತನನ್ನು ಹಳೆಯ ಜಾತಿಯಿಂದ ಬಿಡಿಸಬೇಕಾದರೆ, ಹಳೆಯ ಮಾರಿಮಸಣಿಯಿಂದ ರಕ್ಷಿಸಬೇಕಾದರೆ ತತ್ತ್ವನಿಷ್ಠವಾದ ಮಹತ್ತರ ಶಕ್ತಿಯಾಗಿ, ಸಾಧಕ ಮಂತ್ರವಾಗಿ ಈ ಲಿಂಗ ಪ್ರತ್ಯಕ್ಷ-ಸುಲಭವಾಗಿ ಒದಗಿಬರುತ್ತದೆ. ಹಿಂದಿನ ಜಾತಿಯಿಂದ ಬೇರಾಗಿದ್ದವನು, ಇಂದೂ ವೃತ್ತಿಕಾರಣದಿಂದಾಗಿ ಮೇಲುಕೀಳೆಂಬಂತೆ ತೋರುತ್ತಿರುವವನು, ಲಿಂಗದೀಕ್ಷೆಯ ಕಾರಣದಿಂದಾಗಿ ಒಂದಾಗುತ್ತಾನೆ. ಯಾರು ಏನೇ ಹೇಳಿದರು ಅವರು ಒಂದೇ ಎಂಬ ಭಾವ ಗಾಢವಾಗುತ್ತದೆ. ಮೇಲಾಗಿ ಇದು ಪ್ರತ್ಯಕ್ಷದೈವ; ಪರದೈವ ಸಾಧಕಯಂತ್ರ. ಭಗವಂತ ಭಕ್ತರ ಮಧ್ಯವರ್ತಿಯಾಗಿದ್ದ ಪುರೋಹಿತನನ್ನು ತಳ್ಳಿ ಇದು ಬರುತ್ತದೆ.

ಆದರೂ ಯಾವೊಬ್ಬ ವ್ಯಕ್ತಿಯ ಉದ್ಧಾರವೂ ಬರಿ ಲಾಂಛನಮಾತ್ರದಿಂದಲೆ ಆಗುವುದಿಲ್ಲ. ಆ ಲಾಂಛನದ ಕೂಡ ಹೊಸ ಬಾಳು ಮೂಡಬೇಕು. ಹಾಗೆ ಹೊಸ ಬಾಳು ಮೂಡಿ ಬರಲು ಹೊಸ ಮೌಲ್ಯಗಳು ಕಣ್ಣೆದುರಿಗಿರಬೇಕು. ಇದಕ್ಕೆ ಒಪ್ಪುವಂತೆ ಬಸವಣ್ಣನವರು ಹೊಸ ಮೌಲ್ಯಗಳನ್ನು ಕಾಣತೊಡಗಿದರು. ಅವರು ಕಂಡ ಮುಕ್ಕಾಲು ಪಾಲೆಲ್ಲ ಮೌಲ್ಯಗಳು ಈ ಸಾಮಾನ್ಯನ ಉದ್ಧಾರಕ್ಕೆ ಒಪ್ಪಂದವಾಗಿಯೆ ಇವೆ.

ಮೊದಲು ಸಾಮಾನ್ಯರನ್ನೆಲ್ಲ ಶಿವದೀಕ್ಷೆ ಲಿಂಗಲಾಂಛನಗಳ ಮೂಲಕವಾಗಿಯೆ ಸುಲಭವಾಗಿ ಮೇಲೆತ್ತಬಹುದು ದೆಂಬ ಕನಸು ಬಸವಣ್ಣನವರಿಗಾಗಿದ್ದಿರಬೇಕು. ಆದರ್ಶ ಮತ್ತು ಮಹದಾಶಯಗಳ ಆವೇಶದಲ್ಲಿ, ಹಾಗೂ ತಾರುಣ್ಯದ ಅದಮ್ಯ ಉತ್ಸಾಹ-ಲೌಕಿಕಾನುಭವ ಅಭಾವಗಳಿಂದಾಗಿ ಎಂತಹ ಮಹಾಪಾಪಿಯನ್ನೂ ಲಿಂಗಲಾಂಛನದಿಂದಲೆ ರಕ್ಷಿಸ ಬಲ್ಲೆ ಎಂಬ ವಿಶ್ವಾಸವಿರುತ್ತದೆ. ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ಸುರೆ, ಬಾಯಲ್ಲಿ ಮಾಂಸವಿದ್ದೂ ಲಿಂಗಲಾಂಛನವಿದ್ದವನನ್ನು ಸಾಕ್ಷಾತ್ ಶಿವನೆನ್ನುವೆ ಎಂದು ಉತ್ಸಾಹ ತಾಳುತ್ತಾರೆ. ಇದನ್ನು—ಇಷ್ಟು ಸುಲಭ ಉದ್ಧಾರ ಮಾರ್ಗವನ್ನು ಒಪ್ಪಿ ಅನೇಕರು ನುಗ್ಗಿ ಬರುತ್ತಾರೆ. ದಿನ ಕಳೆಯುತ್ತದೆ, ಆಗ ಬಸವಣ್ಣನವರಿಗೆ ಹೊಳೆಯುತ್ತದೆ, ಬಲೆಯಲ್ಲಿ ಬಿದ್ದಿದ್ದ ಮೃಗವನ್ನು ಬಿಡಿಸಿಬಿಟ್ಟರೆ ಅದು ಖೆಡ್ಡದಲ್ಲಿ ಬೀಳುವ ಅಪಾಯವೊದಗಬಹುದೆಂದು. ಪರುಷ ಮುಟ್ಟಿದ ಕೋಡಗವೇನೊ ಚಿನ್ನದ್ದಾಯಿತು. ಆದರೆ ಕೋತಿಯಾಗಿಯೆ ಉಳಿಯಿತು. ಲಿಂಗಮುಟ್ಟಿದ ಅಳಿಮನದವ ಸಂಪಗೆಯ ಅರಳಲ್ಲಿ ಪೂಜಿಸಿದ ಸಗಳಿಯ ಬೆನಕನಂತೆ: ಬರಿಯ ರಂಜನೆಯಷ್ಟೆ. ಆದರೆ ಅದರ ಗಂಜಳ ಹೋಗಲಿಲ್ಲವಲ್ಲ? ಆದ್ದರಿಂದಲೆ ಲಾಂಛನದಿಂದ ಮಾತ್ರವೆ ಸಾಧ್ಯವಾಗದ, ಸಾಧನೆಯಿಂದಲೆ ಲಭ್ಯವಾಗುವ ಮೌಲ್ಯಗಳನ್ನು ಕಂಡುಕೊಳ್ಳುತ್ತಾರೆ. ಅಂದರೆ ಲಾಂಛನದ ಬೆಲೆಯನ್ನು ಈಷತ್ತಾದರೂ ಅಲ್ಲಗಳೆದರೆಂದಲ್ಲ. ಅಥವಾ, ಸಾಮಾನ್ಯರಿಗಿನ್ನು ಉದ್ಧಾರವೆ ಇಲ್ಲ ಎಂದು ಭಾವಿಸಿದರೆಂದೂ ಅಲ್ಲ. ಲಾಂಛನಕ್ಕೂ ಶಿವಶಕ್ತಿ ಉಂಟು; ಸಾಮಾನ್ಯನಿಗೂ ಶಿವತ್ವಲಾಭ ಉಂಟು. ಆದರೆ ಉದ್ಧಾರಕ್ಕೆ ತನ್ನನ್ನು ತಾನು ವ್ಯಕ್ತಿ ತೆರೆದುಕೊಳ್ಳಬೇಕಷ್ಟೆ. ಇಲ್ಲದಿದ್ದರೆ ದೀಕ್ಷೆ ರಕ್ಷೆಯಾಗುವ ಬದಲು ಶಿಕ್ಷೆಯಾಗಲೂ ಬಹುದು. ಅದು ಆಗದಂತೆ ಆಗಲು ಸಾಮಾನ್ಯನು ದೀಕ್ಷಾವಂತ ಮೌಲ್ಯವಂತನಾಗಬೇಕು. ಇಂಥ ಮೌಲ್ಯಗಳನ್ನು ಕಂಡರು.

ಕುಲಜ ಯಾರು, ಯಾರಲ್ಲ ಎಂಬ ಬಗ್ಗೆ: ಹೊಲೆಯ ಯಾರು ಯಾರು ಉತ್ತಮ ಎಂಬ ಬಗ್ಗೆ; ಭಗವಂತನ ಸೃಷ್ಟಿಯಲ್ಲಿ ಹೇಗೆ ಕುಲ ಸಹಜವಲ್ಲ ಎಂಬ ಬಗ್ಗೆ; ಭವಿ-ಶರಣ ಯಾರೆಂಬ ಬಗೆಗೆ; ಅಂತರಂಗ ಬಹಿರಂಗ ಶುದ್ಧಿಗೆ ಏನೆಂಥ ಮೌಲ್ಯಮಾಂಗಲ್ಯ ಪೂಜೆ ಮಾಡಬೇಕೆಂಬ ಬಗೆಗೆ ಬಸವಣ್ಣ ಚಿಂತಿಸುತ್ತಾರೆ. "ಕೊಲುವವನೆ ಮಾದಿಗ, ಹೊಲಸ ತಿಂಬವನೇ ಹೊಲೆಯ, ಕುಲವೇನೊ? ಅವಂದಿರ ಕುಲವೇನೊ? ಸಕಲಜೀವಾತ್ಮರಿಗೂ ಲೇಸನೆ ಬಯಸುವಾತ ನಮ್ಮ ಕೂಡಲ ಸಂಗಮನ ಕುಲಜ" ಎಂದು ಹೇಳಿ, ಆಹಾರಾದಿಗಳಿಂದ ಶುದ್ಧೀಕರಣ ಮಾಡತೊಡಗುತ್ತಾರೆ. ಮದ್ಯ-

ಮಾಂಸ. ಪ್ರಮತ್ತತೆ-ಹಿಂಸೆ ಹೊಲೆಯನನ್ನು ಹೊಲೆಯನನ್ನಾಗಿಯೆ ಇಟ್ಟಿರುವ ಸಾಮರ್ಥ್ಯವುಳ್ಳ ಭಯಂಕರ ತಿರೋಹಿತ ಶಕ್ತಿಗಳು. ಅವುಗಳಿಂದ ಸಾಮಾನ್ಯನ ಬಿಡುಗಡೆ ಆಗಬೇಕು. ಸಕಲ ಜೀವಕ್ಕೆ ಲೇಸುಬಯಸುವವರೆಲ್ಲ ಶಿವಕುಲಜರು: ಆದ್ದರಿಂದ ಕೊಲೆ-ಹಿಂಸೆ ಸಾಧುವಲ್ಲ. ಅಹಿಂಸೆಯ ತತ್ತ್ವವನ್ನು ಬಸವಣ್ಣನವರು ಪಟ್ಟಾಗಿ ಹಿಡಿಯಲು—ಇದು ತಮಿಳುನಾಡಿನ ಶೈವಧರ್ಮದ ಪ್ರಧಾನ ಮಂತ್ರವೇನೂ ಆಗಿಲ್ಲದಿದ್ದರೂ ಇವರು ದೃಢವಾಗಿ ಇದನ್ನು ಪತ್ತಿ ಹಿಡಿಯಲು—ಆ ಕಾಲದಲ್ಲಾಗಲೆ ಪ್ರಭಾವಬೀರಿದ್ದ ಜೈನಧರ್ಮ ತನ್ನ ಪ್ರಪ್ರಮುಖ ಮಂತ್ರವಾಗಿ ಅಹಿಂಸೆಯನ್ನು ಸಾರಿದ್ದುದೂ ಆಗಿತ್ತು. ಮೇಲಾಗಿ ಬಸವಣ್ಣನವರದು ಸಹಜವಾಗಿಯೆ ದಯಾರ್ದ್ರ ಮನೋಧರ್ಮ. ಮತ್ತೆ ಹಿಂಸೆಯ ಆವರಣದಲ್ಲಿ ಇರಿಸಿಯೂ ಯಾವೊಬ್ಬನನ್ನೂ ಮೇಲೆತ್ತುವುದು ಕಷ್ಟವೆಂಬ ಅರಿವಿತ್ತು. ಜಾತಿಯಿಂದ ಹೊಲೆಯನಾದವನು. ನೀತಿಯಿಂದಲೂ ಹೊಲೆಯನೆ ಆಗಬಾರದಲ್ಲ. ಹಾಗಾದಂದು, ಯಾವ ಸಂಪ್ರದಾಯಸ್ಥ ಹೀಗಳೆದರೂ, ಹೊಲಬಿಗನಾದ ಹೊಲೆಯ ಉತ್ತಮನೇ ಆಗುತ್ತಾನೆ. ಆಗ ಉತ್ತಮನೂ ಅಂಥವನನ್ನು ಉಗ್ರವಾಗಿ ಪ್ರತಿರೋಧಿಸಲಾರ. ಆದ್ದರಿಂದ ಬಸವಣ್ಣನವರು ಹೊಲಬಿಗನಾಗುವ ಕರೆ ನೀಡುತ್ತಾರೆ. ಹುಟ್ಟು ಹೊಲೆಯನಿಗೆ:

ಹೊಲೆಯ ಹೊಲಬಿಗನಾದಡೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ!
ಹೊಲಬುಗೆಡದೆ ಲಿಂಗಶರಣೆನ್ನಿರಯ್ಯಾ!
ಹೊಲಬುಗೆಡದೆ, ಶಿವಶರಣೆನ್ನಿರಯ್ಯ!
ನಮ್ಮ ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯ!

ಮಾದಾರ ಚೆನ್ನಯ್ಯ ಹೊಲಬಿಗನಾದ: ಶಿವನ ಮಗನಾದ. ಹಾಗಿರುವಾಗ ಜಾತಿಯಲ್ಲಿ ಬಂತು? ಆದರೂ ಹೊಲಬಿಗನಾಗದೆ ಯಾರೂ, ಉತ್ತಮನೂ, ಶಿವನ ಮಹಾಮನೆಯಲ್ಲಿ ಎಡೆಗಾಣ. ಇಷ್ಟಾದರೂ, ಸಂಪ್ರದಾಯಸ್ಥ ಜಾತಿಭೇದಗಳನ್ನು ಬೌದ್ಧಿಕವಾಗಿಯಾದರೂ ಬಿಟ್ಟು ಬದುಕಲಾರ. ಆಗ ಬಸವಣ್ಣನವರು ನಮ್ಮ ಕುರುಡು ಕಣ್ಮಲರು ವಂತಹ ಹೊಸ ಬೆಳೆಯೊಂದನ್ನು ನೀಡುತ್ತಾರೆ:

ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ!
ಜಲವೊಂದೆ ಶೌಚಾಚಮನಕ್ಕೆ!
ಕುಲವೊಂದೆ ತನ್ನ ತಾನಱಿದವಂಗೆ!
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನಱಿದವಂಗೆ

ನಿರುದ್ವಿಗ್ನರಾಗಿ ಅಣ್ಣ ಈ ದರ್ಶನವನ್ನು ಸಾರುತ್ತಾರೆ. ಅದೇ ನೆಲ, ಅದೇ ಜಲ ಅವಕ್ಕ ಬೇರೆ ಬೇರೆ ಬೆಲೆ ಬಂತು. ಅರಿಯುವತನಕ ಬೇರೆ ಬೇರೆ, ಅರಿತರೆ ಒಂದೆ ನಿಲವು. ಆದರೆ ಅಂಬಿಗರ ಚೌಡಯ್ಯನಂಥವರು ಇಷ್ಟು ಮೃದುವಾಗಿ ಹೇಳಿ ಜಾತಿವಾದಿಗಳನ್ನು ಎದುರಿಸುವುದು ಸುಲಭವೆಂದು ನಂಬಲಿಲ್ಲ. ಅವನ ಮಾತನ್ನಿಲ್ಲಿ ಕೇಳಬಹುದು:

ನೇಮಸ್ತನೆಂಬುವ ಕ್ರೂರಕರ್ಮಿ!
ಶೀಲವಂತನೆಂಬುವ ಸಂದೇಹಿ!
ಭಾಷೆವಂತನೆಂಬುವ ಬ್ರಹ್ಮೇತಿಕಾರ!!
ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು!
ಇವರು ಹೋದ ಬಟ್ಟೆಯ ಹೋಗಲಾಗದು!
ಇವರು ಮೂವರಿಗು ಗುರುವಿಲ್ಲ, ಲಿಂಗವಿಲ್ಲೆಂದಾತನಂಬಿಗರ ಚೌಡಯ್ಯ!

ಲಿಂಗದೀಕ್ಷೆ ತೆಗೆದುಕೊಂಡೂ ಹಳೆಯ ಜಾತಿಭೇದವನ್ನಿನ್ನೂ ಕಳೆದುಕೊಂಡಿಲ್ಲದವರು, ತಮ್ಮ ಹಿಂದಿನ ಜಾತಿಕ್ರಮಾನುಗುಣ್ಯವನ್ನು ನೆನೆದು ತಮ್ಮ ಜೊತೆಯ ಶಿವಭಕ್ತನೊಬ್ಬ ತಮಗಿಂತ ಕೀಳು. ತಾವು ಅವನಿಗಿಂತ ನೇಮಸ್ತರು, ಶೀಲವಂತರು, ಭಾಷೆವಂತರು ಎಂದೆಲ್ಲ ಭಾವಿಸಿರಬೇಕು. ಆಗ ಅಂಬಿಗರ ಚೌಡಯ್ಯ ಕೊಡಲಿಗೊರವನಾಗಿ ಮೇಲಿನಂತೆ ಹೇಳುತ್ತಾನೆ. ತಾನು ಇತರರಿಗಿಂತ ಮೇಲೆಂದು ಹೇಳಿಕೊಳ್ಳಲು ನೆರವಾಗಿ ಬರುವಂಥ ಉಪಕರಣಗಳಲ್ಲಿ ನಾನು ನೇಮಸ್ತ, ಶೀಲವಂತ ಎಂಬಿತ್ಯಾದಿ ಸೂಕ್ಷ್ಮ ಪ್ರತಿಷ್ಠೆಗಳು ಪ್ರಮುಖ. ಆ ಪ್ರತಿಷ್ಠೆಗಳಿಗೆ ಪಟುಬಿದ್ದರೆ, ಆ ಪ್ರತಿಷ್ಠಾ

ಪ್ರಿಯರನ್ನ ಹೊರಕ್ಕಟ್ಟಿದರೆ ಸಮಸ್ಯೆಯೇ ಇಲ್ಲ ಎಂಬುದು ಚೌಡಯ್ಯನ ದೃಷ್ಟಿ. ಆದರೆ ಬಸವಣ್ಣನವರು ಅಷ್ಟು ಉದ್ಧಾಮತೆಯನ್ನು ಪ್ರಕಟಿಸಬರುವುದಿಲ್ಲ. ಎಲ್ಲ ಘಳಿಗೆಯಲ್ಲೂ. ಅದರಿಂದ ಅವರು ಹೀಗೆನ್ನುತ್ತಾರೆ:

ಹಾಲ ನೇಮ, ಹಾಲ ಕೆನೆಯ ನೇಮ !
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ ಬೆಲ್ಲದ ನೇಮ !
ಅಂಬಲಿಯ ನೇಮದವರನಾರನೂ ಕಾಣೆ !
ಕೂಡಲ ಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ !

ಎಂತಹ ಸೂಕ್ಷ್ಮ ವಿಶ್ಲೇಷಣ ! ಎಂತಹ ಅಭಿವ್ಯಕ್ತಿ! ಎಲ್ಲರೂ ನೇಮ-ವ್ರತ ಮಾಡುವವರೆ. ಆದರೆ. ಆ ಎಲ್ಲ ವ್ರತಗಳೂ ಪ್ರತಿಷ್ಠೆಯ ಪ್ರದರ್ಶನಕ್ಕೆ; ತಾವು ಶ್ರೀಮಂತರು ಉತ್ತಮರು ಎಂದು ತೋರಲು ಮಾತ್ರವೆ!—ಹಾಲನೇಮ, ಹಾಲಕೆನೆಯನೇಮ ಇತ್ಯಾದಿ. ಎಲ್ಲವೂ ಅಷ್ಟೆ! ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಹಿಂದೆ ಮೇಲುಕೀಳೆಂಬುದನ್ನು ನಿರ್ಧರಿಸುವಲ್ಲಿ ಆರ್ಥಿಕ ವ್ಯವಸ್ಥೆಯೂ—ಆಹಾರಕ್ರಮವೂ ಗೌಣವಲ್ಲದ ಪಾತ್ರ ವಹಿಸಿದ್ದುವು. ಉತ್ತಮ. ರಾಗಿಯ ಅಂಬಲಿ ಮುಟ್ಟುತ್ತಲೂ ಇರಲಿಲ್ಲ: ವ್ರತನೇಮಕ್ಕೆ ಅದನ್ನು ಬಳಸುತ್ತಲೂ ಇರಲಿಲ್ಲ. ಬಡವ–ಹೊಲೆಯ–ಅಂಬಲಿಯನ್ನೆ ಹಾಲಕೆನೆಗಿಂತ ಪ್ರೀತಿಯಿಂದ ಕಾಣಬೇಕು. [ಇಷ್ಟೆ ಅಲ್ಲ. ಇಂತಿಂಥ ಆಹಾರಗಳಿಂದ ಇಂತಿಂಥ ಜಾತಿಗಳನ್ನೆ ಗುರುತಿಸಬಹುದು: ಆಯಾ ಜಾತಿಯವರನ್ನು ಬೈಯಬೇಕಾದರೆ ಆಯಾ ಆಹಾರ ವಿಶೇಷಗಳನ್ನಷ್ಟೆ ಅಲ್ಲಗಳೆದರೆ ಸಾಕು. ಇಂಗು, ಬೆಳ್ಳುಳ್ಳಿ, ನೀರುಳ್ಳಿ, ಹಾಲು–ಎಮ್ಮೆ ಹಾಲು, ಹಸುವಿನ ಹಾಲು–ಬೆಣ್ಣೆ, ಮೊಸರು ಮಜ್ಜಿಗೆ, ಕುಂಬಳಕಾಯಿ. ರಾಗಿ. ಅಕ್ಕಿ. ಜೋಳ—ಈ ಎಲ್ಲವೂ ಜಾತಿಯ ವರ್ಗೀಕರಣದಲ್ಲಿ ನೆರವಾಗಿವೆ. ಕನಕದಾಸರು ಈ ಸೂಕ್ಷ್ಮವನ್ನು ತಿಳಿದೆ ಉತ್ತಮ ವರ್ಗದವರನ್ನು ಅಕ್ಕಿಯಾಗಿ ಸಂಕೇತಿಸಿ. ಸಾಮಾನ್ಯರನ್ನು ರಾಗಿಯಾಗಿಸಿ—(ಆರ್ಥಿಕವಾಗಿ ಇದು ಸಂಕೇತವೇನೂ ಅಲ್ಲ, ವಾಚ್ಯಾರ್ಥವೆ ಆಗಿದೆ!)—ತಮ್ಮ ವಿಡಂಬನಕಾವ್ಯ ರಚಿಸಿದ್ದಾರೆ.] ಬಸವಣ್ಣನವರಿಗೆ ಈ ವರ್ಗಭೇದ ಒಡೆಯುವ ಆಸೆ; ಅಕ್ಕಿಗೆ ಬೆಲೆ ಕಳೆಯುವುದಲ್ಲ. ರಾಗಿ ಅಂಬಲಿಗೆ ಬೆಲೆ ನೀಡುವ ಬಯಕೆ. ಅದಕ್ಕೆ ಮಾದಾರ ಚೆನ್ನಯ್ಯನೆ ಬೆಲೆತಂದ ಮೇಲೆ ಅವರಿಗೆ ಇದು ಸುಲಭವೆ ಆಯಿತು.

ಹೀಗೆ ನೇಮವನ್ನೂ ಸಾಮಾನ್ಯನ ದೃಷ್ಟಿಯಲ್ಲೆ ನಿರ್ಧರಿಸುವ ಕೆಚ್ಚನ್ನು ಮಾಡುತ್ತಾರೆ. ಅದರ ಜೊತೆಗೆ ನೇಮದ ಬಗೆಗೆ ಮತ್ತೂ ಒಂದು ಹೊಸ ಬೆಲೆಯನ್ನು ಕೊಡುತ್ತಾರೆ:

ಬಂದುದ ಕೈಕೊಳ್ಳ ಬಲ್ಲಡೆ ನೇಮ,
ಇದ್ದುದ ವಂಚನೆಯ ಮಾಡದಿದ್ದಡೆ ಅದು ನೇಮ !
ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ !
ನಮ್ಮ ಕೂಡಲಸಂಗನ ಶರಣರು ಬಂದಡೆ ಒಡೆಯರಿಗೊಡವೆಯನೊಪ್ಪಿಸುವುದೆ ನೇಮ.

ನೇಮಕ್ಕೆ ಹಾಲಕೆನೆಯೆ ಬೇಕೆನ್ನುವಂತೆ, ಭಗವಂತ ಕೃಪೆ ಮಾಡುವುದಾದರೆ ಹಾಲು ಬೆಣ್ಣೆಗಳಾಗಿಯೆ ಅವನು ಪ್ರತ್ಯಕ್ಷವಾಗಿ ಬರಬೇಕೆಂದೂ ತಿಳಿದಿರುತ್ತೇವೆ. ಆದರೆ ಅದು ವ್ರತಹೀನತೆ. ಬಂದುದನ್ನೆಲ್ಲ ಕೈಗೊಳ್ಳುವ ಧೈರ್ಯ ಬೇಕೆನ್ನುತ್ತಾರೆ. ಬೇಡಿ ಪಡೆಯುವುದು. ಬೇಕಾದದ್ದನ್ನು ಮಾತ್ರ ಪಡೆಯುವುದು ಭಕ್ತನನ್ನು ದೀನನನ್ನಾಗಿ, ದುರ್ಬಲನನ್ನಾಗಿ ವ್ಯಾಪಾರಿಯನ್ನಾಗಿ ಮಾಡುತ್ತದೆ. ಅದು ಕೂಡದು. ಅದರ ಜತೆಗೆ ಅಸಂಗ್ರಹ ಭಾವ ಬೇಕು. ಶರಣರು ಏನನ್ನೂ ಕೂಡಿಡಕೂಡದು. ಬಂದುದನ್ನು ಶಿವಶರಣರಿಗೆ ನೀಡುವುದು ನೇಮ. ಇದು ಅಣ್ಣನವರ ಆಧ್ಯಾತ್ಮಿಕ ಸಮತಾವಾದದ ಪೀಠಿಕೆ. ಇದನ್ನು ಮುಂದೆ ವಿವರಿಸುವೆ.

ಬಸವಣ್ಣನವರು ಜಾತಿಗೆ ಸಂಬಂಧಪಟ್ಟಂತೆ ಪುನರ್ ಮೌಲ್ಯಮಾಡಬೇಕಾಗಿ ಬಂದದ್ದು ಅಗಾಧ. ಆ ಎಲ್ಲೆಡೆಯೂ ಅವರು, ಖಚಿತವಾಗಿ, ನಿರ್ಭೀತವಾಗಿ ಇದ್ದಾರೆ. ಇಂಥ ಇಂಥ ಜಾತಿಯವನು ಇದೆ ವೃತ್ತಿ ಮಾಡಬೇಕು. ಈ ವೃತ್ತಿಯವನು ಇದೆ ಜಾತಿಗೆ ಸೇರಿರಬೇಕೆಂಬುದು ಬಹು ಪ್ರಾಚೀನ ಕಾಲದಿಂದ ಬಂದ ವ್ಯವಸ್ಥೆ. ಈ ವ್ಯವಸ್ಥೆಯ ಯಾವ ಕೀಲನ್ನು ಭಾಗಶಃ ತಿದ್ದ ಹೋದರೂ ಅಪಾಯ. ಆದ್ದರಿಂದ ಬಸವಣ್ಣನವರು ಆಮೂಲಾಗ್ರ ಪರಿವರ್ತನವನ್ನೆ ಮಾಡ ಹೋಗುತ್ತಾರೆ. ಅವರ ದೃಷ್ಟಿಯಲ್ಲಿ ಜಾತಿವೃತ್ತಿಯೆ ಸ್ವಧರ್ಮವಲ್ಲ. ಹಾಗೂ ಜಾತಿಯಿಂದ ವೃತ್ತಿಯಲ್ಲ, ವೃತ್ತಿಯಿಂದ ಜಾತಿ ಬಂತು. ಆದ್ದರಿಂದ ಅದು ಚಿರವಾಗಿ ಇರಬೇಕಾದುದೂ ಅಲ್ಲ. ಹಾಗೂ, ಯಾವ ಜಾತಿಯೂ ಯಾವ

ಇತರ ಜಾತಿಗಿಂತಲೂ ಮೇಲಲ್ಲ-ಕೀಳಲ್ಲ. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೆ ಎಂಬೆ."

ಕಾಸಿ ಕಮ್ಮಾರನಾದ. ಬೀಸಿ ಮಡಿವಾಳನಾದ.
ಹಾಸನಿಕ್ಕಿ ಸಾಲಿಗನಾದ. ವೇದವನೋದಿ ಹಾರುವನಾದ !
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ, ಕೂಡಲಸಂಗಮದೇವಾ ಲಿಂಗಸ್ಥಲವನರಿದವನೆ ಕುಲಜನು !

ಇದು ಅತ್ಯಾಧುನಿಕ. ಸಂಪ್ರದಾಯ ವಿರೋಧಿ ದೃಷ್ಟಿ. ಲಿಂಗಸ್ಥಲ ಎಷ್ಟು ಮುಖ್ಯವೊ ಈ ಅಂಗಸ್ಥಲವೂ ಅಷ್ಟೇ ಮುಖ್ಯ. ಅದು ಬೇರೆ ಇದು ಬೇರೆ ಅಲ್ಲ. ಇಷ್ಟಾದರೂ ಯಾರಾದರೂ ಜಾತಿಯನ್ನು ಎತ್ತುತ್ತಲೆ ಇದ್ದರೆ ಆಗ ಅವರ ಸಹನೆ ಮೀರುತ್ತದೆ: ಜಾತಿಪ್ರತಿಷ್ಠಿತರ ಮೂಲಕ್ಕೆ ಕೊಡಲಿ ಎತ್ತುತ್ತಾರೆ ಕಡೆಗೆ:

ಹೊಲೆಯೊಳಗೆ ಹುಟ್ಟಿ ಕುಲವನರಸುವ
ಎಲವೋ. ಮಾತಂಗಿಯ ಮಗ ನೀನು !
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತುತಂದು ನೀವು ಕೊಲುವಿರಿ !
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು !
ನಮ್ಮ ಕೂಡಲಸಂಗನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು
ಅನುಪಮಚರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೋ !
ವ್ಯಾಸ ಬೋಯಿತಿಯ ಮಗ ! ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು ! ಕುಲವನರಸದಿರಿಂ ಬೋ ! ಕುಲದಿಂದ ಮುನ್ನೇನಾದಿರಿಂ ಬೋ !
ಸಾಕ್ಷಾತ್ ಅಗಸ್ತ್ಯ, ಕಬ್ಬಿಲ, ದುರ್ವಾಸ ಮುಚ್ಚಿಗ !
ಕಶ್ಯಪ ಕಮ್ಮಾರ, ಕೌಂಡಿಲನೆಂಬ ಋಷಿ
ಮೂರು ಭುವನವರಿಯೆ ನಾವಿದ ಕಾಣಿಂ ಬೋ !
ನಮ್ಮ ಕೂಡಲಸಂಗನ ವಚನವಿಂತೆಂದುದು
'ಶ್ವಪಚೋಪಿ'ಯಾದಡೇನು. ಶಿವಭಕ್ತನೆ ಕುಲಜನು !

ಇದಕ್ಕೆಲ್ಲ ಬಸವಣ್ಣನವರಿಗೆ ಎಲ್ಲಿ ಮಾಹಿತಿ ದೊರಕಿತೊ ತಿಳಿಯದು.* ಅಂತೂ ಪ್ರಾಚೀನ ಋಷಿವಂಶದವರೆಂದು ತಮ್ಮ ಜಾತಿ ಉತ್ತಮಿಕೆಯನ್ನು ಕೊಚ್ಚಿಕೊಳ್ಳುವವರಿಗೆ ಇದು ಕುಠಾರಪ್ರಹಾರ. ಹಿಂದೆ, ಆ ಸಾಮಾನ್ಯರು ಋಷಿಗಳಾಗಿ ಪರಿಣಾಮಗೊಳ್ಳುವುದೂ ಸಾಧ್ಯವಾಗಿದ್ದ ಮೇಲೆ ಜಾತಿಯ ಕಟ್ಟೇಕೆ ಬಿಗಿಯಾಯಿತು ? ಅದಕ್ಕೇ ಋಷಿಮೂಲ ಪರೀಕ್ಷೆ ಬೇಡ ಎಂದುದು. ಅಣ್ಣನವರು ಇಲ್ಲಿ ಆ ಮೂಲ ಶೋಧನವನ್ನೆ ಮಾಡಿ, ಆ ಋಷಿಗಳ ಋಷಿತ್ವವನ್ನೂ ಕಿಂಚಿತ್ತೂ ಇಳಿಸದೆ, ಆ ಋಷಿವಂಶಸ್ಥರೆಂದು ಉದ್ಭ್ರಮಿಸುವ ಜಾತಿಭ್ರಮಿತರಿಗೆ ಬೆಲೆ ಇಳಿಸಿದ್ದಾರೆ. ಪೂರ್ವಜರ ಬಡ್ಡಿಯಿಂದಲೆ ಬದುಕುವ ಕುಲ ಶ್ರೀಮಂತ ವರ್ಗದ ಬೆಲೆಗಳೆಯುವುದರಲ್ಲಿ ಯಾವ ಅಳುಕನ್ನೂ ತೋರಿಸುವುದಿಲ್ಲ. ಪ್ರಾಯಶಃ ಬಸವಣ್ಣನವರ ಕಾಲದಲ್ಲೂ ವೈದಿಕಾಚಾರಗಳು ಅರ್ಥಹೀನ ಕಂದಾಚಾರಗಳಾಗತೊಡಗಿದ್ದವೊ ಏನೊ. ತೊರೆಮೀಯುವುದು, ಮರಸುತ್ತುವುದು. ಆದರೆ ಒಳಗು ಡೊಳ್ಳಾಗಿರುವುದು ; ಬೆಂಕಿ ಪೂಜಿಸುವುದು, ಆದರೆ ಅದೆ ಬೆಂಕಿಯಿಂದ ಮನೆ ಹೊತ್ತಿಕೊಂಡರೆ ಕೊಚ್ಚೆನೀರು ಹಾಕಿ ಆರಿಸುವುದು—ಈ ಎಲ್ಲ ಅವರ ಕಾಲದಲ್ಲಿದ್ದುದರಿಂದಲೆ ಅವರಿಗೆ ಜಾತಿಪ್ರತಿಷ್ಠಿತ ವೈದಿಕರನ್ನು ಖಂಡಿಸಲು ಅನುವಾಗುತ್ತದೆ. ಈ ಯಾವ ವರ್ಗಪ್ರತಿಷ್ಠೆಯೂ ಇಲ್ಲದೆ, ಹಾಲನೇಮ-ಕೆನೆಯನೇಮಗಳಾವುದನ್ನೂ ಮಾಡದೆ. ಹೊಳೆಮೀಯದೆ. ನೇಣುಬಿಗಿದುಕೊಳ್ಳದೆ ಒಬ್ಬ ಶರಣನಾಗಬಲ್ಲ ಎಂಬುದೆ ಅವರ ವಾದ.

ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು !
ನಿಮಗೆರಗದ ಕಾರಣ ಕೊರಳಲ್ಲಿ ನೇಣು !

ಒಂಡಲೇಕೋ ? ತೊಳೆಯಲೇಕೋ ?
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ ?
ಕೂಡಲಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊಱೆಯಲ್ಲಿ ಮಿಂದ ?

ವೈದಿಕರ ಕರ್ಮಕಾಂಡವೆಲ್ಲ ಅವರಿಗೆ ಭಕ್ತಿಯ ಅಭಾವವನ್ನೆ ಎತ್ತಿ ತೋರಿಸುತ್ತದೆ. ಭಕ್ತಿಗೆ. ಆದ್ದರಿಂದ. ಈ ಯಾವ ಕಲ್ಪಗಳೂ ಅನಗತ್ಯ: ಡೋಹರಕಕ್ಕಯ್ಯನೆ ಆಧಾರ, ಅದಕ್ಕೆ.

ಹಲವಾರು ಹಳೆಯ ಜಾತಿಗಳಿಂದ ಬಂದು ಶಿವದೀಕ್ಷೆಯನ್ನು ತೆಗೆದುಕೊಂಡವರೆಲ್ಲರೂ ಒಂದೆ ಕ್ಷಣದಲ್ಲಿ ತಮ್ಮ ಹಳೆಯ ಆಚಾರಗಳನ್ನಾಗಲಿ. ಮಾಂಸಾದಿ ಆಹಾರಗಳನ್ನಾಗಲಿ. ಜಾತಿ ಜಿಜ್ಞಾಸೆಯನ್ನಾಗಲಿ ಬಿಟ್ಟುಬಿಟ್ಟರೆಂದೇನೂ ಅಲ್ಲ. ಅಷ್ಟು ಬೇಗ ಯಾವ ವ್ಯಕ್ತಿಯ ಸ್ವರೂಪವನ್ನು ಪರಿವರ್ತಿಸುವುದೂ ಸಾಧ್ಯವೆ ಇಲ್ಲ. ರೂಪಾಂತರವೇನೊ ಸುಲಭ. ಸ್ವರೂಪಾಂತರ ದುಸ್ಸಾಧ್ಯ. ಆದ್ದರಿಂದ ಬಸವಣ್ಣನವರು ಶರಣರ ಗಮನವನ್ನು ಅತ್ತಕಡೆ ತಿರುಗಿಸುತ್ತಾರೆ. ಕಬ್ಬಿಣದ ಕೋಡಗ ಚಿನ್ನದ ಕೋಡಗವಾದರೇನು : ಅದು ಆಂಜನೇಯತ್ವಕ್ಕೆ ಏರಬೇಕು ಎಂಬ ಕಲ್ಪನೆ ಮೂಡಿತು ಅವರಿಗೆ. ಅದರಿಂದ ಸಾಮಾನ್ಯ ಶರಣನನ್ನು ಸಾಧನೆಗೆ ಪ್ರೇರಿಸಿ ದಾರಿ ತಿದ್ದಿ ಮುನ್ನಟ್ಟುತ್ತಾರೆ. ಮುನ್ನಡೆಸುತ್ತಾರೆ. ಹೇಗೆ ಸಾಧನೆ ನಡೆಸುವುದು. ತಿಳಿಯೆನಲ್ಲ: ಭಕ್ತಿಯೆಂಬುದೇನೊ ಸುಲಭವೆಂದಿದ್ದೆವಲ್ಲ ? ಸಹಸಾಧಕರು. ಇತರ ಭವಿಗಳು ನಾನಾ ಬಗೆಯಾಗಿ ಗೇಲಿಮಾಡುತ್ತಾರಲ್ಲ ? ಎಂಬ ಶರಣನಿಗೆ:

ಆಳಿಗೊಂಡಿಹರೆಂದು ಅಂಜಲದೇಕೆ ?
ನಾಸ್ತಿಕವಾಡಿಹರೆಂದು ನಾಚಲದೇಕೆ ?
ಆರಾದೊಡಾಗಲಿ ಶ್ರೀ ಮಹಾದೇವಂಗೆ ಶರಣೆನ್ನಿ !
ಏನೂ ಅರಿಯೆನೆಂದು ಮೌನಗೊಂಡಿರಬೇಡ ಕೂಡಲಸಂಗಮದೇವರ ಮುಂದೆ
'ದಂಡಣ. ದತ್ತಣ' ಎನ್ನಿ !

ದಮ್ಮಯ್ಯ ದತ್ತಯ್ಯ ಎಂದು ಬೇಡಿದರೆ ಶಿವ ಒಲಿದೆ ಒಲಿವ ; ಇತರರು ಏನುಬೇಕಾದರೂ ಆಡಿಕೊಳ್ಳಲಿ. ಒಂದು ವೇಳೆ, ನಾನು ನಾನಾದೌರ್ಬಲ್ಯಗಳಿಂದ ಕೂಡಿರುವೆ. ನನಗೆಲ್ಲಿ ಮೋಕ್ಷ ಎಂದೇನಾದರೂ ಭೀತಿಯಿದ್ದರೆ ಅದಕ್ಕೂ ಉತ್ತರವಿದೆ. ನಿನ್ನ ವಿಕಾರಗಳೆ ಶಿವಪ್ರಕಾಶದತ್ತ ಒಯ್ಯುವ ಮಾರ್ಗವಾಗುತ್ತವೆ ಎಂಬ ಆಶ್ವಾಸನ ಬರುತ್ತದೆ.

ಹಾವಿನ ಡೊಂಕು ಹುತ್ತಕ್ಕೆ ಸಸಿನ !
ನದಿಯ ಡೊಂಕು ಸಮುದ್ರಕ್ಕೆ ಸಸಿನ !
ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ !

ಈ ಬಹು ಸಮರ್ಥ ಪ್ರತಿಮೆಯ ಮೂಲಕ ಶರಣನಿಗೆ ಆತ್ಮಪ್ರತ್ಯಯ ಮಾಡುತ್ತಾರೆ. ಹಾಗೂ ಶಿವಶರಣರ 'ವಕ್ರ ಮಾರ್ಗ'ಗಳನ್ನು ಟೀಕಿಸುತ್ತಿದ್ದ ಅನ್ಯಮಾರ್ಗದವರ ಬಾಯನ್ನೂ ಕಟ್ಟಿಸುತ್ತಾರೆ. (ಈ ರೂಪಕ ವಿವಾರಣೆ ಬೇರೆಡೆ ನೀಡಿರುವೆ.)

ಬಸವಣ್ಣನವರಿಗೆ ವೈಯಕ್ತಿಕ ಆತ್ಮಸಾಧನೆ ಒಂದು ಭಾಗವಾದರೆ ಲೋಕೋದ್ಧಾರ ಮೂರು ಭಾಗವಾಯಿತು. ಸಾಮಾನ್ಯರಿಗೆ ಶರಣದೀಕ್ಷೆ ಕೊಡಬೇಕಾದರೆ ಅವರಿಗೆ ತಮ್ಮ ಅಲ್ಪ ಜೀವನದಲ್ಲಿ ಜಿಗುಪ್ಸೆ ಹುಟ್ಟಿಸಬೇಕು. ಪರ್ಯಾಯ ವಾಗಿ ಶ್ರೇಷ್ಠಮೌಲ್ಯವನ್ನೂ ನೀಡಬೇಕು. ಶರಣದೀಕ್ಷೆ ಸ್ವೀಕರಿಸಿಕೊಂಡವರು ಆಮೇಲೆ ನಡೆಸುತ್ತಿದ್ದ ನಾನಾ ವೈಯಕ್ತಿಕ ಹಾಗೂ ಸಾಮೂಹಿಕ ಲೋಪದೋಷಗಳನ್ನು ಎತ್ತಿತೋರಿ—ಹಲವೊಮ್ಮೆ ಮೃದುವಾಗಿ. ಕೆಲವೊಮ್ಮೆ ಕಟುವಾಗಿ—ತಿದ್ದಬೇಕು. ಶರಣಧರ್ಮ ಬಲಿಷ್ಠವಾಗುವಂತೆ ನೋಡಿಕೊಳ್ಳಬೇಕು. ಇವನ್ನೆಲ್ಲ ಒಪ್ಪದೆ ಪ್ರತಿಭಟಿಸು ತ್ತಿದ್ದ ಉತ್ತಮವರ್ಗದವರ ದೌರ್ಬಲ್ಯಗಳನ್ನು ಎತ್ತಿ ಆಡಿ ಅವರನ್ನೂ ನಿರಸ್ತ್ರಗೊಳಿಸಬೇಕು. ಇವರ ಜತೆಗೆ. ಬಸವಣ್ಣನವರಿಗೆ ಶರಣಮಾರ್ಗ ನಿರ್ಮಾಣದಲ್ಲಿ ಅಡ್ಡಿಯಾಗಿ ಬಂದವರು ಕೇವಲ ವೈದಿಕಮಾರ್ಗಿಗಳಷ್ಟೇ ಅಲ್ಲ: ಉತ್ತಮ ಜಾತಿಯವರಷ್ಟೇ ಅಲ್ಲ. ಯಾವ ತಾತ್ತ್ವಿಕಮತವೂ ಇಲ್ಲದೆ ಬರಿಯ ಜಾತಿಯೊಂದರಿಂದಲೆ ಬದುಕಿದ್ದ ನೂರಾರು ಸಾಮಾನ್ಯ ಜಾತಿಯ ಜನ. ಆ ಮೇಲು-ಕೀಳು ವ್ಯವಸ್ಥೆಯ ರಕ್ಷೆಯೆಲ್ಲ ಅಲುಗಿಹೋದದ್ದರಿಂದ ಅವರಿಗೆ ಪ್ರಬಲ ವಿರೋಧ ನೀಡಿದುದನ್ನೂ ಮರೆಯಬಾರದು.

ಭಾರತದಲ್ಲಿ ಜಾತಿರಚನಾವ್ಯವಸ್ಥೆ ಹೇಗಿದೆಯೆಂದರೆ ಪ್ರತಿಯೊಂದು ಜಾತಿಯೂ ತಾನು ಮತ್ತೊಂದು ಜಾತಿಯನ್ನು ತನ್ನ ತಲೆಯ ಮೇಲಿಟ್ಟುಕೊಳ್ಳುವಂತೆಯೆ ಇನ್ನೊಂದು ಜಾತಿಯನ್ನು ತನ್ನ ಕಾಲಡಿಯಲ್ಲಿಟ್ಟುಕೊಂಡಿರುವ ಭ್ರಾಂತಿ ಯುಳ್ಳಿದೆ. ಬ್ರಾಹ್ಮಣ ವರ್ಗವನ್ನೇನೊ ಬಹುತೇಕ ಎಲ್ಲರೂ ಶ್ರೇಷ್ಠವೆಂದು ಒಪ್ಪುತ್ತಲೆ ಬಂದರು. ಆದರೆ ಈ ಏಣಿಯ

ತುದಿಯ ಮೆಟ್ಟಿಲು ಭದ್ರವಾಗಿರಬೇಕಾದರೆ ಅಡಿಯ ಎಲ್ಲ ಮೆಟ್ಟಿಲೂ ಸ್ವಸ್ಥಾನದಲ್ಲಿ ವ್ಯವಸ್ಥಿತವಾಗಿದ್ದಿರಬೇಕು. ಹೊಲೆಯನೆಂದರೆ ಹತ್ತು ಪಂಗಡ. ಅವರಲ್ಲಿ ಇಂತಿಂಥವರೇ ಮೇಲು; ಒಕ್ಕಲಿಗನೆಂದರೆ ಹತ್ತು ಪಂಗಡ, ಅದರಲ್ಲಿ ಇಂತಿಂಥ ಪಂಗಡದವರೇ ಮೇಲು; ಅಗಸ ಕಮ್ಮಾರ ಅಕ್ಕಸಾಲಿ ಕುಂಬಾರ ನೇಕಾರ—ಇವರಲ್ಲಿ ಒಂದೊಂದು ವರ್ಗವೂ ತಾನು ಮಾಡುವ ವೃತ್ತಿ ಪ್ರಾಮುಖ್ಯಾನುಸಾರವಾಗಿ, ತನ್ನ ವೃತ್ತಿಯ ಆರ್ಥಿಕ ಸಾಮಾಜಿಕ ಪ್ರಾಧಾನ್ಯವನ್ನನುಸರಿಸಿ ಮೇಲು-ಕೀಳು ಎಂದು ಸ್ವಕಲ್ಪಿತ ವ್ಯವಸ್ಥಾ ಸುಖದಲ್ಲಿ ಸ್ಥಾಪಿತವಾಗಿದೆ. ಈ ವ್ಯವಸ್ಥೆಯನ್ನು ಒಡೆಯಬಂದವನ ತಲೆ ಒಡೆದುಹೋಗುತ್ತಿತ್ತು ಆ ಕಾಲದಲ್ಲಿ. ಲಿಂಗ ಲಾಂಛನ ಈ ತಳ ಮೇಲನ್ನೆಲ್ಲ ತಳಮೇಲು ಮಾಡಿತು. ತನ್ಮೂಲಕವಾಗಿ ಸಾಮಾಜಿಕ ಆರ್ಥಿಕ ವ್ಯವಸ್ಥೆ 'ಘಾಸಿ'ಗೊಂಡಿತು. ಆದ್ದರಿಂದಲೆ ಬಸವಣ್ಣನವರಿಗೆ ಅತ್ಯುಗ್ರವಾದ ಪ್ರತಿಭಟನೆ ಈ ನಾನಾ ಮೂಲದಿಂದ ಬಂತು. ಉತ್ತಮ ವರ್ಗದವರು ಬೌದ್ಧಿಕವಾಗಿ ಪ್ರತಿಭಟಿಸಿದರೆ ಈ ಅಶಿಕ್ಷಿತ ಜನವರ್ಗ ರೂಕ್ಷವಾಗಿ ಪ್ರತಿರೋಧಿಸಿದರು. ಆಗ ಬಸವಣ್ಣನವರು ಆ ಜನತೆಯನ್ನು ಮರುಕದಿಂದ ಒಮ್ಮೆ. ಉದ್ಧಾರಕ ನೈಷ್ಠುರ್ಯದಿಂದೊಮ್ಮೆ ಖಂಡಿಸಬೇಕಾಗುತ್ತದೆ. ಅವರು ಮಾಡುವ ಅಲ್ಪ ದೈವಾರಾಧನೆಯನ್ನೂ ಕ್ಷುದ್ರಾಚಾರಗಳನ್ನೂ ಉಗ್ರವಾಗಿ ಟೀಕಿಸಿ ಅವರನ್ನು ನವೋದ್ಧಾರಕ ಸರ್ವಸಮತಾ ಶಿವಮೌಲ್ಯದತ್ತ ಆಹ್ವಾನಿಸುತ್ತಾರೆ. ಒಬ್ಬೊಬ್ಬರೂ ತಮ್ಮ ತಮ್ಮ ಭೀತಿ ಶಮನಕ್ಕಾಗಿ ಒಂದೊಂದು ಅಲ್ಪ ದೈವವನ್ನು ಪೂಜಿಸುತ್ತಿದ್ದರೆ ತಾವೆಲ್ಲ ಒಂದೆ ಶಿವನ ಮಕ್ಕಳೆಂಬ ಭಾವ ಮೂಡುವುದು ಕಷ್ಟ. ಎಲ್ಲಕ್ಕಿಂತ ಮಿಗಿಲಾಗಿ ಹೆದರಿಸುವ ದೈವ, ಕಿರುಕುಳ ಕೊಡುವ ದೈವ, ಪೀಡೆಕಾರುವ ದೈವ ಏನಿದ್ದರೂ ಮೂಢನನ್ನು ತಯಾರು ಮಾಡಬಹುದೆ ಹೊರತು ಆಧ್ಯಾತ್ಮಿಯನ್ನಲ್ಲ, ನಿರ್ಭೀತ ಭಕ್ತನನ್ನೂ ಅಲ್ಲ. ಯಾವ ದೈವ, ಯಾವ ದೀಕ್ಷೆ, ವ್ಯಕ್ತಿಯನ್ನು ಭಕ್ತನನ್ನಾಗಿ ಆದರೆ ನಿರ್ಭಯನನ್ನಾಗಿ ಮಾಡಬಲ್ಲದು ? ಯಾವ ದೈವ ತನ್ನನ್ನು ಸದಾ ಭೀತಿಯಲ್ಲಿ ಇಡದೆ. ಸದಾ ತನ್ನ ಕೃಪಾಭಯದಲ್ಲಿ ಬಿಗಿದಿಡದೆ. ಭಕ್ತನನ್ನು ಅರೆದು ಒರೆದು ಹೆರೆದು ನೋಡಿ. ಶಕ್ತಿಗೊಳಿಸಿ ಕಡೆಗೆ ಕೈಹಿಡಿದು ಅವನನ್ನು ತನ್ನ ಪಕ್ಕಕ್ಕೆ ತಂದುಕೊಳ್ಳುತ್ತದೆ ? ಯಾವ ಮಾಧ್ಯಮ ಅದನ್ನು ಸಾಧಿಸಿಕೊಡುತ್ತದೆ ? ಬಸವಣ್ಣನವರಿಗೆ ಅದು ಶಿವಭಕ್ತಿಯಾಗಿ ಲಿಂಗಲಾಂಛನವಾಗಿ ತೋರುತ್ತದೆ. ಇದು ಬರಿಯ ಮತ್ತೊಂದು ಸಮಯಾಚಾರವಾಗದಂತೆ ಆ ಭಕ್ತಿಯನ್ನು ಆದಷ್ಟೂ ತಾತ್ತ್ವಿಕವಾಗಿ ಆಧ್ಯಾತ್ಮಿಕವಾಗಿ ಇರುವಂತೆ ಶರಣಮಂಡಲಿ ಎಚ್ಚರವಿರುತ್ತದೆ. ಎಂಥ ಭಕ್ತಿಯೆ ಆಗಲಿ ಅದು ಉದಾತ್ತ ತಾತ್ತ್ವಿಕಭಿತ್ತಿಯಿಲ್ಲದೆ, ನಿರ್ಭೀತಿಯನ್ನು ಬೋಧಿಸದೆ ಆಧ್ಯಾತ್ಮಿಕವಾಗಲಾರದು. ವ್ಯಕ್ತಿಯ ಲೌಕಿಕಾಕಾಂಕ್ಷೆಗಳಷ್ಟನ್ನೆ ಭಯಮೂಲಕವಾಗಿ ತೃಪ್ತಿಪಡಿಸದೆ. ಅವನ ಆತ್ಮವನ್ನೂ ಎಚ್ಚರಿಸಿ ಉದ್ಧರಿಸುವಂಥದಾಗಬೇಕು. ಈ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರು ಸಾಮಾನ್ಯ ಜಾನಪದದ ಕ್ಷುದ್ರಸಮಯಾಚಾರಗಳ ಮೇಲೆ ಗದಾಪ್ರಹಾರ ಮಾಡಿದುದರ ಕರುಣೆ ಅರ್ಥವಾಗುತ್ತದೆ.[4] ವೇದ ಪ್ರತಿಷ್ಠಿತರನ್ನು ಖಂಡಿಸುವಾಗ ತೋರಿದ ನೈಷ್ಠುರ್ಯವೆ ಬೇರೆ. ಈ ಕರುಣಾವೃತ ಭಿಷಗ್ವರನ ಭೇಷಜ ನೈಷ್ಠುರ್ಯವೆ ಬೇರೆ. ಆದರೂ ಇವರಿಂದ ಆಯಾ ಜಾತಿ ದೈವಗಳನ್ನು ಪೂಜಿಸುವ ಪೂಜಾರಿವರ್ಗ ಬಸವಣ್ಣನವರ ಮೇಲೆ ಸಿಡಿದುಬೀಳುತ್ತದೆ. ಅವರಿಗೇನು. ಆ ದೈವಗಳಿಗೆ ಬಡಿಗೆ ಏಟನ್ನು ಕೊಡುತ್ತಾರೆ ಇವರು. ಇದಕ್ಕೆಲ್ಲ ಮೂಲಕಾರಣ ಆ ಸಾಮಾನ್ಯನಿಗೆ ಅಧ್ಯಾತ್ಮ ದಾನಮಾಡುವುದೆ ಆಗಿದೆ. ಅವನನ್ನು ಆತ್ಮವಿದನನ್ನಾಗಿ ಧೀರನನ್ನಾಗಿ ಮಾಡಬೇಕಾಗಿದೆ. ಈ ದಾನ. ಈ ಸಾಧನೆ ಮಹೋನ್ನತವಾದುದೆ ಸರಿ. ಈ ಕಾಲಕ್ಕಿಂತಲೂ ಬಹು ಹಿಂದೆ ಶೂದ್ರನಿಗೆ ಆಧ್ಯಾತ್ಮದಾನವಿರಲಿ ವಿದ್ಯಾದಾನವನ್ನೆ ದುರ್ಲಭವಾಗಿರಿಸಿದ್ದರು. ಸಂಸ್ಕೃತವನ್ನಾಗಲಿ ಶಾಸ್ತ್ರಾಗಮಗಳನ್ನಾಗಲಿ ಓದಕೂಡದು : ಕೇಳಿದರೆ ಕೇಳಿದ ಕಿವಿಗೆ ಕಾದ ಸೀಸವನ್ನೆರೆಯಬೇಕು ; ಓದಿದರೆ ನಾಲಿಗೆ ಕೀಳಿಸಬೇಕು—ಎಂಬ ಭಯಾನಕ ವಿಧಿಯನ್ನು ಮಾನಸಿಕವಾಗಿ ನಿರ್ಮಿಸಿದ್ದರು. ಅದಕ್ಕೆ ಕಾರಣ ಆಧ್ಯಾತ್ಮಿಕ ತುಡಿತವಾಗಲಿ ಮೋಕ್ಷಾಭಿಲಾಷೆಯಾಗಲಿ ಜ್ಞಾನದ ರುಚಿಯಾಗಲಿ. ವಿದ್ಯಾಕಾಂಕ್ಷೆಯಾಗಲಿ ಜಾನಪದಕ್ಕೆ ಮೂಡಿದರೆ ಜಾತಿವ್ಯವಸ್ಥೆಯೆ ತಳಮೇಲಾಗುತ್ತದೆ : ಆರ್ಥಿಕ ಸಾಮಾಜಿಕ ವ್ಯವಸ್ಥೆ ಬುಡಮೇಲಾಗುತ್ತದೆ. ಅಷ್ಟೆ ಅಲ್ಲ. ಯಾವ ಜಾತಿಯವನೂ ಮತ್ತೊಬ್ಬ ಉತ್ತಮ ಜಾತೀಯನ ಕಸುಬನ್ನೂ ಕಲಿಯುವುದು ಅಕ್ಷಮ್ಯ ಅಪರಾಧವೆ ಆಗಿತ್ತು. ಕಾರಣ. ಇದರಿಂದ ವರ್ಣಸಂಕರವಾಗುತ್ತದೆ. ಈ ಯಾವ ಪಲ್ಲಟದಿಂದಲೂ ರಾಜ್ಯಾಧಿಪತ್ಯವೆ—ರಾಜತ್ವವೆ—ಅಪಾಯಕ್ಕೀಡಾಗುತ್ತದೆ. ಆದ್ದರಿಂದ ರಾಜ. ಜ್ಞಾನಾಧಿಪತಿ ಎಲ್ಲರೂ ಈ ಪುರಾತನ "ಕ್ಷೇಮವ್ಯವಸ್ಥೆ"ಯನ್ನು ಸಂರಕ್ಷಿಸಿಕೊಂಡೆ ಬಂದಿದ್ದರು.* ಇದರ ಪರಿಣಾಮವಾಗಿಯೆ ಶಂಬೂಕನ ತಲೆಯನ್ನು ಬ್ರಾಹ್ಮಣ. ರಾಜನಾದ ಅವತಾರಿಯ ಕೈಯಲ್ಲಿ ತೆಗೆಸುತ್ತಾನೆ. ಬೇಡ ಏಕಲವ್ಯನ ಔತ್ತಮ್ಯವನ್ನು ಸಹಿಸದ ಕ್ಷತ್ರಿಯ ತನ್ನ ಬ್ರಾಹ್ಮಣ ಗುರುವೆ ಹೆಬ್ಬೆರಳ ಬಲಿಕೇಳುವಂತೆ ಮಾಡುತ್ತಾನೆ.

ಇಂಥ ತೀವ್ರ 'ಸೆಳೆತಕ್ಕೆ' ಕಟ್ಟಿಗೆ ಒಳಪಟ್ಟಿರುವ ಸಮಾಜವನ್ನು ಬಿಡಿಸುವುದು ಹೇಗೆ? ಧರ್ಮದಾನವನ್ನು ನೀಡದ ಧರ್ಮವನ್ನೇ ತ್ಯಜಿಸಿಬಿಡಬೇಕು: ವಿದ್ಯಾದಾನ ಮಾಡದ ಭಾಷೆಯನ್ನೆ ತಿರಸ್ಕರಿಸಿಬಿಡಬೇಕು. ಆತ್ಮೋದ್ಧಾರವನ್ನು ಒಪ್ಪದ ದೈವಗಳನ್ನೇ ಎಸೆದುಬಿಡಬೇಕು. ಆದ್ದರಿಂದಲೆ ಬಸವಣ್ಣನವರು ಸಂಸ್ಕೃತವನ್ನೆ ತ್ಯಜಿಸಿಬಿಟ್ಟರು. ವೈದಿಕ ಧರ್ಮವನ್ನೂ. ಆ ವರ್ಣಾಶ್ರಮ ಬದ್ಧದೇವತೆಗಳನ್ನೂ. ಕ್ಷುದ್ರಾಚಾರಕ್ಕೆ ಕಟ್ಟಿರುವ ಸಾಮಾನ್ಯರ ದೇವತೆಗಳನ್ನೂ ಅತ್ತ ಎಸೆದುಬಿಟ್ಟರು. ಈ ಎಲ್ಲ ಬಂಡಾಯಕ್ಕೂ ಧೈರ್ಯನಿಧಿಯಾಗಿರುವಂತೆ, ಆತ್ಮರಕ್ಷಕವಾಗಿರುವಂತೆ ಪ್ರತ್ಯಕ್ಷದೈವವೊಂದನ್ನು ನೀಡಿದರು. ಅದೆ ಲಿಂಗಲಾಂಛನ! ಈ ಇಷ್ಟಲಿಂಗ ಕೇವಲಪ್ರತ್ಯಕ್ಷ ದೈವ. ಅದರ ಮತ್ತು ಭಕ್ತನ ನಡುವೆ ಯಾವ ಮಧ್ಯವರ್ತಿ ಕೂಡಾ ಇಲ್ಲ. ಮಧ್ಯವರ್ತಿ-ಗುರುಜಂಗಮವಿನಾ-ಮತ್ತಾರು ಬಂದರೂ ಸಹಿಸಬಾರದು. ಮತ್ತೆ ಮಧ್ಯವರ್ತಿ ಹುಟ್ಟಿಕೊಂಡನೆಂದರೆ ದಳ್ಳಾಳಿ ಪ್ರಾರಂಭವಾಗುತ್ತದೆ. ಈ ವ್ಯಾಪಾರ ಬಂತೆಂದರೆ ಮತ್ತೆ ಎಲ್ಲ ಹಳೆಯ ಅನಾಚಾರ ಜಾತಿ ಪದ್ಧತಿ. ಪೂಜಾರಿ ವರ್ಗದ ನಿರ್ಮಾಣ ಆರಂಭಿಸುತ್ತದೆ. ಹೀಗೆಂದೆ ಬಸವಣ್ಣನವರು ದೇವಾಲಯತತ್ತ್ವವನ್ನು. ಅದು ಎಷ್ಟೆ ಶ್ರೇಷ್ಠವಾಗಿದ್ದರು ಖಂಡಿಸಿದರು. ಲಿಂಗಪೂಜೆಯಲ್ಲಿ ಅವರಿಗೆ ಮಾಹೇಶ್ವರ ಭಕ್ತಿಯಿದ್ದರೂ ಆ ಲಿಂಗವೂ ದೇವಾಲಯದಲ್ಲಿ ಸ್ಥಾವರವಾಗುಳಿಯಬಾರದೆಂದರು. ಹಾಗುಳಿದರೆ ಅದೂ ಹುಳಿಯುತ್ತದೆ. ಆಧ್ಯಾತ್ಮಿಕ ಸಾಧನೆಯೆಂಬುದು ಯಾರೊ ತಯಾರು ಮಾಡಿ ಎಲ್ಲರಿಗೂ ಹಂಚುವುದೆಂದಲ್ಲ. ದೇವಾಲಯ ಕಾರ್ಖಾನೆಯಾಗಬಾರದು. ಮಾಡುವ ಪ್ರತಿಯೊಂದು ಕರ್ಮದಲ್ಲೂ ಕಾಯಕತ್ವ ಬರಬೇಕು: ಆತ್ಮೀಯತೆ. ಸ್ವಸಂಬಂಧ ಭಾವನೆ ಬರಬೇಕು. ಹಾಗೆ ಭಾವ ಬಂದರೆ ಅದನ್ನು ತೀವ್ರಾಸಕ್ತಿಯಿಂದ ಮಾಡಬಹುದು. ಊಟಕೂಟಗಳನ್ನು ಅನ್ಯಮಧ್ಯವರ್ತಿಯಿದ್ದು ಮಾಡುತ್ತೇವೆಯೆ? ಹಾಗೆ ಭಕ್ತಿಯನ್ನಾದರೂ ತಿಳಿಯಬಾರದೆ? ಭಗವಂತಪತಿ-ಭಕ್ತಸತಿ ಸಂಬಂಧದಲ್ಲಿ ಈ ನೀತಿಯೆ ಇರಬೇಕಲ್ಲ? ಆದ್ದರಿಂದ ಸ್ಥಾವರ ಪೂಜೆ-ಅದು ಲಿಂಗವಾದರೂ-ಬೇಡ. ಮತ್ತೆ ಈ ಸ್ಥಾವರ ಪೂಜೆ ಎಂದೂ ಕ್ಷೀಣಿಸುವಂತಹದು; ಮಧ್ಯವರ್ತಿ ನಿರ್ಮಾಣಕ್ಕೆ ಎಡೆಗೊಡುವಂತಹುದು. ಎಂದೇ "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಘೋಷಿಸಿದರು. ಅವರ ಮನಸ್ಸು ಸ್ಥಿರತೆಯತ್ತಣಿಂದ ಜಂಗಮತೆಯಕಡೆ-ನಿರಂತರ ಕ್ರಾಂತಿಯಕಡೆ-ಇತ್ತು. ಯಾವೊಂದು ಮಹಾತತ್ತ್ವವೂ ಸಾಂಸ್ಥಿಕವಾದುದಾದರೆ ಅದಕ್ಕೆ ದುರ್ಗತಿ ಒದಗುತ್ತದೆ ಎಂಬರಿವು ಅವರಿಗಿತ್ತು. ತಾವೇ ಹೇಳಿದ ಹೊಸ ಮೌಲ್ಯಗಳೂ ಕೂಡ ಸಂಸ್ಥೆಯಾಗಿ ರೂಪಾಂತರ ಹೊಂದಿದರೆ-ಕೆಲವು ಕಾಲ ಹಾಗಾಗುವುದರಿಂದ ತಮ್ಮ ತತ್ತ್ವಗಳಿಗೆ ಒಂದು ಸಂಘಟನೆ ಬಂದಂತಾಗಬಹುದಾದರೂ ದೂರಕಾಲದಲ್ಲಿ ಅದೂ ಕೂಡ-ಅಳಿಯಬಹುದೆಂಬ ಎಚ್ಚರ ಅವರಿಗಿತ್ತೆಂಬಂತೆ ತೋರುತ್ತದೆ. ಯಾವ ಧರ್ಮವೆ ಆಗಲಿ ನಿತ್ಯ ಜಾಗ್ರತವಾಗಿರಬೇಕು. ಕೇವಲ ಅಭ್ಯಾಸಗತವಾಗದೆ ಜೀವಂತವಾಗಿರಬೇಕು ಎಂದು ಅವರಿಗನ್ನಿಸಿದ್ದಂತೆ ನನಗನ್ನಿಸುತ್ತದೆ.[6]

ಅಂತೂ ಬಸವಣ್ಣನವರು ಪ್ರಾಯಶಃ ಪ್ರಥಮಬಾರಿಗೆ ಭಾರತೀಯ ಜಾತಿವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಒಡೆಯುತ್ತಾರೆ. ನಾಸ್ತಿಕರಂತೆ. ಚಾರ್ವಾಕರಂತೆ. ಅಥವಾ ವಿಮತೀಯರಂತೆ ಅಲ್ಲ; ಶಿವಮತೀಯರಂತೆ. ಆತ್ಮವಾದಿಗಳಂತೆ. ವಾಸ್ತವ ಪಾರಮಾರ್ಥಿಕ ಸಾಧಕರಂತೆ. ಬುದ್ಧ ಮಹಾವೀರರೆಲ್ಲ ಈ ಕೆಲಸವನ್ನು ಮಾಡ ಹೋದರೂ ಕೂಡ ಅವರು ಹಿಂದೂ ಧರ್ಮದಿಂದಲೆ ಸಿಡಿದು ಹೋದುದರಿಂದ ಅವರ ಸಾಧನೆ ದುರ್ಬಲವಾಯಿತು. (ಶ್ರೀ ಕುವೆಂಪು ಅವರು ಈ ಅಂಶವನ್ನೊಮ್ಮೆ ಮಾತನಾಡುವಾಗ ಸೂಚಿಸಿದರು.) ಇತರ ಭಕ್ತಿಪಂಥಗಳು ಜಾತಿ ಪಂಥವನ್ನು ಗಣನೆಗೆ ತೆಗೆದುಕೊಳ್ಳದೆ ಭಾಗವತ ಪಂಥವನ್ನು ನಿರ್ಮಿಸ ಹೊರಟರೂ ಕೂಡ. ಹಳೆಯ ಜಾತಿಗಳನ್ನು ಒಡೆಯಲಾಗಲಿಲ್ಲ. ಒಬ್ಬೊಬ್ಬ ಭಕ್ತನೂ ಎಷ್ಟೆ ಭಾಗವತನಾದರೂ ಇಂತಿಂಥ ಜಾತಿಯವನೆಂದೆ ಉಳಿದ. ಪ್ರಾಯಶಃ ಅದಕ್ಕೆ ಕಾರಣ. ಆ ಯಾವ ಪಂಥವೂ ಕೇವಲ ಭಕ್ತಿಪಂಥವಾಗಿರುವುದರಲ್ಲಿ ತೃಪ್ತವಾಯಿತೇ ವಿನಾ ಸಾಮಾಜಿಕ ಧಾರ್ಮಿಕ ಕ್ರಾಂತಿಯನ್ನು ಸಾಧಿಸುವ ಕಡೆಗೆ ಗಮನವಿದ್ದಂತೆ. ಅಥವಾ ಅದು ಸಮರ್ಥವಾದ ತನ್ನದೇ ಆದ ವಿಶಿಷ್ಟ ಮೌಲ್ಯಗಳನ್ನು ಹೊಂದಿದ್ದಂತೆ ತೋರುವುದಿಲ್ಲ. ಅವರೇನಿದ್ದರೂ ಯಾವುದಾದರೂ ಒಂದು ಸುಲಭಲಭ್ಯವಾದ. ಸಮಕಾಲೀನವಾದ ಮತೀಯ ತಾತ್ತ್ವಿಕ ಮೌಲ್ಯವನ್ನು ಸ್ವೀಕರಿಸಿಕೊಂಡರು. ಮತ್ತೆ ಆ ಯಾವ ಭಕ್ತಿಪಂಥದವರೂ ತಮ್ಮದೆ ಆದ ಪ್ರಬಲ ಲಾಂಛನವನ್ನು—ಹಳತನ್ನು ಅಳಿಸಿ. ಹೊಸತಾಗಿ ರೂಪಿಸುವಂತಹ—ಯಂತ್ರವನ್ನು ಕಲ್ಪಿಸಿಕೊಳ್ಳಲಿಲ್ಲ. ಇದರಿಂದ ಏನೇ ಒಳ್ಳೆಯದಿದ್ದಿರಬಹುದಾದರೂ ಜಾತಿವ್ಯವಸ್ಥೆಯನ್ನು ಒಡೆಯಲಾಗಲಿಲ್ಲ. ಲಿಂಗಲಾಂಛನವನ್ನು ಮಾಡದೆಯೆ ಬಸವಣ್ಣನವರು ಏನೆ ಮಾಡಿದ್ದರೂ ಮಾಚಯ್ಯ, ಮಾರಯ್ಯ, ಚೌಡಯ್ಯಾದಿಗಳ ಹಳೆಯ ಜಾತಿಯನ್ನು ಒಡೆದು ಅವರನ್ನೂ ಶಿವಮತಕ್ಕೆ ಸೇರಿಸಲು ಆಗುತ್ತಿತ್ತೆಂದು ಭಾವಿಸುವುದು ಕಷ್ಟವಾಗುತ್ತದೆ.[7]

ಜಾತಿಗಳನ್ನು ಒಡೆದು. ಜಾತೀಯವಾದ ಭಯಂಕರ ದೈವಗಳನ್ನು ವಿಲೀನಗೊಳಿಸಿದರೂ ಅವರಿಗೆಲ್ಲ ವೃತ್ತಿ

ತಪ್ಪದಂತೆ ನೋಡಿಕೊಳ್ಳುವುದು ಬಸವಣ್ಣನವರ ಸಮಸ್ಯೆಯಾಗುತ್ತದೆ. ಒಬ್ಬೊಬ್ಬ ವ್ಯಕ್ತಿಯೂ ಇಷ್ಟಲಿಂಗಧಾರಣ ಮಾಡಿರುವುದರಿಂದ ಸಾಧನೆಯ ದೃಷ್ಟಿಯಿಂದ ಸ್ವಯಂಪೂರ್ಣನಾಗಿರುವಂತೆ—ದೇವಾಲಯಾದಿ ಮಾಧ್ಯಮಗಳ ಅಧೀನ ನಾಗದಂತೆ—ಮಾಡಿದಂತೆಯೆ : ಆರ್ಥಿಕವಾಗಿಯೂ ಪರತಂತ್ರನಾಗದೆ ಸ್ವಯಂ ಉತ್ಪಾದಕನಾಗುವಂತೆ ಮಾಡುವ ಒಂದು ಮಾರ್ಗವನ್ನು ಬಸವಣ್ಣನವರು ಅರಸುತ್ತಾರೆ ; ಕಾಯಕತತ್ತ್ವವನ್ನಾಗಿ ಕಾಣುತ್ತಾರೆ. ಈ ಕಾಯಕತತ್ತ್ವದ ಬಗೆಗೆ ಮೂಗುರಿಬರುವಷ್ಟು ಮಾತುಗಳಾಗಿದ್ದರೂ. ಈ ಪ್ರಬಂಧ ಸಮಗ್ರತೆಯ ದೃಷ್ಟಿಯಿಂದ ಅದನ್ನು ಕುರಿತು ಪುನರಾಲೋಚಿಸದಿದ್ದರೆ ದೋಷವಾಗುವ ಭೀತಿಯಿರುವುದರಿಂದ ಕೆಲವೊಂದು ಅಂಶಗಳು ಪುನರುಕ್ತಿಯಾದರೂ ಆ ಬಗೆಗೆ ಸಮಾಲೋಚನ ಮಾಡಬಯಸುತ್ತೇನೆ.

ಕಾಯಕ ಎಂದರೆ ಕೈಲಾಸವೆಂದು ಬಸವಣ್ಣನವರು ಭಾವಿಸಿದ್ದರೆಂದು ಹೇಳಿದರೂ ನಾವು ಅವರ ನಿಜವಾದ ಕಾಯಕಕಲ್ಪನೆ ಏನಿತ್ತೆಂದು ಕೆಲವೊಮ್ಮೆ ಗ್ರಹಿಸುವಲ್ಲಿ ತಪ್ಪುತ್ತೇವೆ. 'ಕಾಯಕವೆ ಕೈಲಾಸ' ಎಂದರೆ 'Work is worship' ಎಂದು ಹೇಳುವ ವಾಡಿಕೆಯುಂಟು. ಆದರೆ ಕಾಯಕವೆಂಬುದು ಬರಿಯ work ಏನು ? work ಎಂಬುದು ಕಾಯಕವಾಗಲು ಏನೇನು ಪರಿಷ್ಕಾರ ಹೊಂದಬೇಕು ಎಂಬುದನ್ನು ಗಮನಿಸಬೇಕು. ಬರಿಯ ಕೆಲಸವೆ ಕೈಲಾಸವಾಗ ಬಹುದೇನೊ. ಆದರೆ ಬಸವಣ್ಣನವರು ಕೆಲಸವೂ ಕೂಡ ನೈವೇದ್ಯವಾಗಬೇಕು : ಬರಿಯ ಭಾವದಲ್ಲಲ್ಲ, ಭವದ ಅವಸ್ಥೆ ಯಲ್ಲಿಯೂ ಕೂಡ ಎಂದು ಭಾವಿಸುತ್ತಾರೆ. ಮೊದಲು ಕಾಯಕ ಎಂಬುದು ವ್ಯಕ್ತಿ ತಾನೆ, ಅನ್ಯ ಮಧ್ಯವರ್ತಿಗಳಿಂದ ಮಾಡಿಸದೆ. ತನ್ನ ಶರೀರ ಶ್ರಮದಿಂದಲೆ ಮಾಡುವ ಕೆಲಸ. ಊಟ ಕೂಟಗಳು ಹೇಗೊ. ಭಕ್ತಿಯೂ ಹಾಗೆಯೆ. ಕಾಯಕವೂ ಹಾಗೆಯೆ ತಾನೇ ಮಾಡಬೇಕಾದ ಕರ್ತವ್ಯ. ಈ ಕಾಯಕ ಯಾವುದಾಗಬೇಕು ? ಹುಟ್ಟಿನಿಂದ ಬಂದದ್ದೆ ? ತನ್ನ ಕೌಶಲಕ್ಕನುಗುಣವಾಗಿ ಬಂದದ್ದೆ ? ವೃತ್ತಿಜಾತಿಯ ಮಾತೆ ಆಡಬಾರದ ಮೇಲೆ ಹುಟ್ಟಿನಿಂದ ಬಂದ ವೃತ್ತಿಯ ಮಾತೆಲ್ಲಿ ಬಂತು ? ಯಾವುದಾದರೂ ಕೆಲಸ ಮಾಡಲೇಬೇಕು. ನಾನು ಜ್ಞಾನಿ. ಭಕ್ತ. ಸಾಧಕ ಎಂದೇನೇ ಕಾರಣ ದಿಂದಲೂ ಕಾಯಕ ವಂಚನೆ ಮಾಡುವಂತಿಲ್ಲ. ಹಿಂದಿನ ಇತರ ಹಲವು ಪಂಥೀಯರು ಹಾಗೆ ಮಾಡಿದರು. ಆದರೆ ಇವರ ಪ್ರಕಾರ ತಾನು ಕೆಲಸ ಮಾಡಿದಲ್ಲದೆ ಉಣ್ಣುವ ಹಕ್ಕಿಲ್ಲ. ಲಿಂಗಪೂಜೆ. ಅನುಭಾವ ಕೂಟಗಳೇನೂ ಅನ್ನ ತರುವಂತಹ ಕೆಲಸಗಳಲ್ಲ ; ಹಾಗೂ ಶರೀರಶ್ರಮದಿಂದ ಮಾಡಬೇಕಾದವೂ ಅಲ್ಲ. ಅನ್ನಕ್ಕಾಗಿ ಭಿಕ್ಷೆ ಬೇಡುವುದು ಲಿಂಗಕ್ಕೆ ಅಪಚಾರ. "ಹಾವ ತೋರಿ ಹವಿಯ ಬೇಡುವ" ಮೋಸವಾಗುತ್ತದೆ. ತಾನು ತಿರಿದು ಲಿಂಗವನ್ನೂ ತಿರಿಸುವುದು ಪಾಪ. ಹೊಟ್ಟೆಗೂ ವಂಚನೆಯು. ಅಗೌರವದ ದಾರಿ ಹಿಡಿಯಬೇಕಾಗಿ ಬಂದು ಆತ್ಮಗೌರವಕ್ಕೆ. ಲಾಂಛನಕ್ಕೆ, ನಿರ್ಭೀತಿಗೆ ಕುಂದುಂಟಾಗು ತ್ತದೆ. ಸಮಾಜ ಆರ್ಥಿಕ ವ್ಯವಸ್ಥೆಗೂ ಕೇಡುಂಟಾದೀತು. ಆದ್ದರಿಂದ ಪ್ರತಿಯೊಬ್ಬನೂ ತನ್ನ ಕೆಲಸವನ್ನು—ತನ್ನ ಕರ ಕೌಶಲವಿದ್ದ ಕೆಲಸವನ್ನು—ಬಿಡದೆ ತಾನೆ ಮಾಡಬೇಕು.

> "ಭಕ್ತಿವಿಶೇಷವ ಮಾಡುವರೆ ಹತ್ತು ಬೆರಳುಗಳುಂಟು !
> ಹಾಸಿ ದುಡಿದರೆ ತನಗುಂಟು. ತನ್ನ ಪ್ರಮಥರಿಗುಂಟು !"
> "ಕಾಯಕವೆಂದು ಕಾಯವ ಬಳಲಿಸದೆ, ತನುಕರಗದೆ. ಮನನೋಯದೆ
> ಬೇಡಿ ಕಾಡಿ ಮಾಡುವುದು ದಾಸೋಹವೆ ?
> ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ ದ್ರವ್ಯಕಡೆಯಾಗಿ
> ಚಿತ್ತಶುದ್ಧದಲ್ಲಿ ಬಂದುದಕ್ಕೆ ಸರಿಗಂಡು. ದೇಹಿಗಳಿಗೆ ಒಂದೇ ಪ್ರಮಾಣದಲ್ಲಿ
> ಸರಿಗಂಡುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ"
> "ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು
> ಕಾಯಕ ಸತ್ತು. ಹಣ ಹೊನ್ನು ಬೇಡಿಹೆನೆಂಬುದು ಕಷ್ಟವಲ್ಲವೆ ಸದ್ಭಕ್ತಂಗೆ ?
> ಈ ಗುಣ ಅಮರೇಶ್ವರ ಲಿಂಗಕ್ಕೆ ದೂರ"
> "ಕೃಷಿಕೃತ್ಯ ಆವ ಕಾಯಕದಿಂದಾದೊಡೇನು ? ತನು ಮನ ಬಳಲಿಸಿ
> ಗಳಿಸಿತಂದು, ಗುರುಲಿಂಗಜಂಗಮಕ್ಕೆ ಮೆಚ್ಚಿಸಿ ದಾಸೋಹವ ಮಾಡುವ
> ಪರಮಭಕ್ತನ ಪಾದವ ತೋರಯ್ಯ ನನಗೆ....ಕೂಡಲ ಚೆನ್ನಸಂಗಮದೇವಾ."

ನಮ್ಮ ದೇಶದಲ್ಲಿನ ವರ್ಗಸಮಸ್ಯೆ ಉಳಿದ ದೇಶಗಳಲ್ಲಿನದರಷ್ಟು ಸರಳವಲ್ಲ. ಕ್ರಿಶ್ಚಿಯನ್ ಮಹಮ್ಮದೀಯ ಅಥವಾ ಬೌದ್ಧರಿರುವ ಸಮಾಜದಲ್ಲಿ ವರ್ಗಗಳು ಮಾತ್ರವಿದ್ದರೆ. ನಮ್ಮಲ್ಲಿ ವರ್ಗ × ಜಾತಿ ಇದೆ. ವರ್ಗ ಮೂರಾಗಬಹುದು ಆರಾಗಬಹುದು. ಆದರೆ ಜಾತಿ ಸಾವಿರಾರು. ಇಲ್ಲಿನ ಸಮಸ್ಯೆ ಈಗ ಹತ್ತಾರುಸಾವಿರ. ಹಿಂದೆ ಸಮಸ್ಯೆಯೆ ಬರದಂತೆ

ಜಾತಿ ಕುಲಾಚಾರಗಳ ಹೆಸರಿನಲ್ಲಿ ವರ್ಗೀಕರಿಸಿ ಭದ್ರಸ್ತರ ನಿರ್ಮಾಣ ಮಾಡಿದ್ದರಿಂದ ಆಗ ಯಾವ ವರ್ಗ ಜಾತಿ ಕಲಹವೂ ಆಗದಂತೆಯೆ ಇತ್ತು. ಒಂದು ಜಾತಿಯವನು ಮತ್ತೊಬ್ಬನ ವೃತ್ತಿಯನ್ನು ಅನುಕರಿಸುವುದಿರಲಿ ಬಯಸುವುದೂ ಅಪರಾಧವೆಂದಿದ್ದರಿಂದ ಸ್ತರ ಪಲ್ಲಟವಾಗುತ್ತಲೆ ಇರಲಿಲ್ಲ. ಹಾಗಾಗಿ ಆರ್ಥಿಕ ಗೊಂದಲವೂ ಇರಲಿಲ್ಲ. ಏಕೆಂದರೆ ಜಾಡಮಾಲಿ ವ್ಯಾಪಾರಿಯ ಜೊತೆ ಸ್ಪರ್ಧೆಯೂ ಮಾಡುವಂತಿರಲಿಲ್ಲ. ಪರಸ್ಪರ ಅಸೂಯೆಗೊಳ್ಳುವುದೂ ಸಾಧ್ಯವಿರಲಿಲ್ಲ. ಅಂದಮೇಲೆ ಬಡತನ ಸಿರಿತನಗಳ ಘರ್ಷಣೆಗೂ ಎಡೆಯಿರಲಿಲ್ಲ. ಏಕೆಂದರೆ ಬಡತನ ಸಿರಿತನ=ಮೇಲು ಕೀಳು ಜಾತಿ ಎಂಬುದೆಲ್ಲ ಕರ್ಮಫಲ. ಅಥವಾ ದೇವರಿಚ್ಛೆ; ಆದ್ದರಿಂದ ಅನುಲ್ಲಂಘ್ಯ ಎಂಬ ಭಾವವಿತ್ತು. ಇದರಿಂದ ನಮ್ಮಲ್ಲಿ ಹಿಂದೆ ಜಾತಿವ್ಯವಸ್ಥೆ ವರ್ಗೀಕೃತ ಅರ್ಥವ್ಯವಸ್ಥೆಯೂ ಆಯಿತು. ಇವು ಬೇರೆಡೆ ಹೀಗಿರಲಿಲ್ಲ. ಯಾವ ವೃತ್ತಿ ಯಾರೂ ಮಾಡಬಹುದು. ಅಂದರೆ ಯಾರೂ ಶ್ರೀಮಂತ ಗಣ್ಯ ಆಗಬಹುದಿತ್ತು. ಎಂತಲೆ ಸ್ಪರ್ಧೆ ಇತ್ತು: ವರ್ಗಕಲಹ ಇತ್ತು. ನಮ್ಮಲ್ಲಿ ಜಾತಿ ಕಲಹ ಸಾಧ್ಯವಿಲ್ಲದ್ದರಿಂದ ವರ್ಗಕಲಹವೆ ಆಗದಾಯಿತು. ಯಾರಾದರೂ ಉದಾರಿ ಬಂದು ಕೀಳು ಜಾತಿಯವನಿಗೆ ಜ್ಞಾನವಿತ್ತು ಉದ್ಧಾರ ಮಾಡ ಹೊರಟಿದ್ದರೆ ಆತ ಬರಿ ಅದಷ್ಟನ್ನೆ ಮಾಡಿದಂತೆ ಆಗುತ್ತಿರಲಿಲ್ಲ. ಇಡಿ ವರ್ಗವ್ಯವಸ್ಥೆಯನ್ನೆ ಅಲುಗಿಸಿದಂತಾಗುತ್ತಿತ್ತು. ಅದಕ್ಕೆ ಸರ್ವ ವಿರೋಧವೆದ್ದು ಯಾರೂ ಬೃಹತ್‌ಪ್ರಮಾಣದ ಕ್ರಾಂತಿಗೆ ತೊಡಗುತ್ತಲೆ ಇರಲಿಲ್ಲ. ಬಸವಣ್ಣನವರು ಇಂತಹ ಕ್ರಾಂತಿ ನಡೆಸುತ್ತಾರೆ; ವರ್ಗವನ್ನೂ ಜಾತಿಯನ್ನೂ ಒಂದೆ ಬಾರಿಗೆ ಹಿಡಿದಲುಗಿಸುತ್ತಾರೆ. ಬಡವ ಬಲ್ಲಿದರನ್ನು, ಉತ್ಪಾದಕ ಅನುತ್ಪಾದಕರನ್ನು, ಕೀಳು ಮೇಲನ್ನು ಬರಿದೆ ಮಾರಕ ಘರ್ಷಣೆಗೀಡುಮಾಡದೆ ಒಂದೆಡೆಗೆ ಕೂಡಿಸಿ ಸಮರಸಗೊಳಿಸುತ್ತಾರೆ. ಹಿಂದೆ ವೃತ್ತಿ 'ಸಂಪತ್ಕಾರಕವಾಗಿ' ವರ್ಗ ಜಾತಿ ಶ್ರೇಣಿ ನಿರ್ಧಾರಕವಾಗಿ ಇದ್ದಿದ್ದರೆ, ಇವರು ಆ ವೃತ್ತಿಯನ್ನೆ ಕಾಯಕ ಮಾಡಿ ವರ್ಗಜಾತಿ ದೂರವಾಗುವಂತೆ ಮಾಡುತ್ತಾರೆ. ವೃತ್ತಿ ಒಬ್ಬನಿಗೆ ಹೆಚ್ಚು ಹಣ. ಮತ್ತೊಬ್ಬನಿಗೆ ಕಡಿಮೆ ಹಣ ತಂದಾಗ ತಾನೆ ದೂರು? ಹಾಗೂ. ಆ ವೃತ್ತಿ ಒಬ್ಬನನ್ನು ಗಣ್ಯ ಮತ್ತೊಬ್ಬನನ್ನು ನಗಣ್ಯನನ್ನಾಗಿ ಮಾಡಿದರ ತಾನೆ ತೊಂದರೆ? ಆದಾಗದ ಹಾಗೆ ಇವರು ಕಾಯಕವ್ಯವಸ್ಥೆ ಮಾಡುತ್ತಾರೆ.

ಕಾಯಕವೆಂದರೆ ಬರಿಯ ಕೆಲಸವಲ್ಲ. ಕೂಲಿಕಸುಬಲ್ಲ. ಪ್ರತಿಯೊಬ್ಬನೂ ಬದುಕಲು ಅತ್ಯಗತ್ಯವಾಗಿ ಮಾಡಬೇಕಾದ ಒಂದು ಕಸುಬು. ಆದರದು ಅವನನ್ನು ಕೂಲಿಯಾಗಿಡಲಿಲ್ಲ. ಹಾಗೂ ಆ ಕಸುಬು ಜಾತಿಸೂಚಕವಾಗಿ ಬಂದದ್ದೂ ಅಲ್ಲ. ಯಾರೂ ಯಾವ ಕಸುಬನ್ನಾದರೂ ಮಾಡಬಹುದು. ದೊರೆಯಾಗಿದ್ದವನು ಶರಣನಾದ ಮೇಲೆ. ತನ್ನ ಬದುಕಿಗಾಗಿ ಅಕ್ಕಿ ಆಯ್ದು ಕಾಯಕ ಮಾಡಬೇಕಾಯಿತು. ವರ್ಣವ್ಯವಸ್ಥೆಯ ಪ್ರಕಾರ ಅಪ್ಪನ–ಕುಲದ–ಕಸುಬನ್ನೆ ಮಗನೂ ಮಾಡಬೇಕು. ಅದರಲ್ಲಿ ಪಲ್ಲಟವಾದರೆ ಅರ್ಥವ್ಯವಸ್ಥೆ–ಜಾತಿವ್ಯವಸ್ಥೆ–ರಾಜಪುರೋಹಿತರ ಪ್ರತಿಷ್ಠಿತ ಗೌರವ ಪೀಠ ಎಲ್ಲಕ್ಕೂ ಧಕ್ಕೆಯೊದಗುತ್ತಿತ್ತು. ಆದ್ದರಿಂದ. "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಕೃಷ್ಣೋಕ್ತಿಗೆ ಕಾಲಕ್ರಮದಲ್ಲಿ ಮೇಲಿನ ಅರ್ಥದ ವ್ಯಾಖ್ಯಾನ ದೊರೆಯುತ್ತ ಬಂತು. ಈಗಲೂ ಪ್ರಗತಿಪರ ಬುದ್ಧಿಜೀವಿಗಳೆನಿಸಿಕೊಂಡಿರುವವರೂ ಕೂಡ ಅಪ್ಪನ ವೃತ್ತಿಯನ್ನೆ ಮಗನೂ ಮಾಡಬೇಕೆಂದೆ ವಾದಿಸಿದ್ದಾರೆ. ಆದರೆ ಶರಣ ಸಮಾಜ ಈ ಶೋಷಕ ಆನುವಂಶಿಕತೆಯನ್ನು ತಿರಸ್ಕರಿಸಿತು. ವೃತ್ತಿ ಪ್ರವೃತ್ತಿಯನ್ನನುಸರಿಸಿ ಬರತಕ್ಕದ್ದೆಂಬ ಆದರ್ಶ ಕಂಡರು. ಇದರಿಂದ ಜಾತಿ–ಕಸುಬುಗಳ ಆನುವಂಶಿಕ ನೈರಂತರ್ಯ ಮುರಿದುಬಿತ್ತು, ವರ್ಣವ್ಯವಸ್ಥೆಯೆ ಕ್ರಾಂತಿಗೊಳಗಾಯಿತು.

ಮತ್ತೆ ಮಾಡುವ ಕಸುಬಿನಲ್ಲಿ–ಅದು ಅವರವರ ಆಸಕ್ತಿಯ ಆಯ್ಕೆಯಾದಾಗಲೂ—ಮೇಲು ಕೀಳೆಂಬ ಭಾವ ಬರುವುದು ಸಾಧ್ಯ. ಹೆಚ್ಚು ಹಣ ತರುವ ಕಸುಬು ಸಹಜವಾಗಿಯೆ ಕಡಿಮೆ ಲಾಭದಾಯಕವಾದ ಕಸುಬಿಗಿಂತಲೂ ದೊಡ್ಡದಾಗತೊಡಗುತ್ತದೆ. ಹಾಗೂ ಇದೆ ರೀತಿಯಲ್ಲಿ ಲಾಭ ವ್ಯತ್ಯಾಸವನ್ನೆ ಮುಂದುವರಿಸಿದರೆ ಜಾತಿಯನ್ನೂ ವರ್ಗವನ್ನೂ ಮುಂದುವರಿಸಿದಂತಾಗುತ್ತದೆ. ಆದ್ದರಿಂದ ವಚನಕಾರರು ಲಾಭನಿಯಂತ್ರಣದ ಬಗೆಗೂ ಗಮನ ಕೊಟ್ಟರು. ಇದರ ಜೊತೆಗೆ ಕಸುಬನ್ನು ಹಣ ಗಳಿಕೆಯ ಸಾಧನವನ್ನಾಗಿಯಷ್ಟೆ ಅಲ್ಲದೆ ಸಾಧನಮಾರ್ಗವನ್ನಾಗಿಯೂ ಮಾಡಿಕೊಂಡರು. ಪ್ರತಿಯೊಬ್ಬ ಶರಣನೂ ತಾನು ಗಳಿಸಿದ ಗಳಿಕೆಯನ್ನು ತ್ರಿವಿಧ ದಾಸೋಹಕ್ಕೆ ಅಳವಡಿಸಬೇಕಾಯಿತು. ತನುವನ್ನು ಗುರುವಿಗೆ ಧನವನ್ನು ಜಂಗಮಕ್ಕೆ ಮನವನ್ನು ಲಿಂಗಕ್ಕೆ ಅರ್ಪಿಸಬೇಕಾದ ಯೋಗಾಭ್ಯಾಸ ಮಾಡಬೇಕೆಂದು ಕಲ್ಪಿಸಿದರು. ಗಳಿಕೆಯನ್ನು ಹಂಚಿಕೊಳ್ಳಲೆಬೇಕಾದುದು ಅನಿವಾರ್ಯವಾದಾಗ ಅದನ್ನು ಈ ಮೂರು ವಿಧದಿಂದ ವಿನಿಯೋಗಿಸಬೇಕಾಯಿತು. ತಮ್ಮ ಗಳಿಕೆಯನ್ನು ಲಿಂಗಕ್ಕರ್ಪಿಸುವ ಕೆಲಸ ಯಾರೂ ಮಾಡಿದ ತೃಪ್ತಿ ಪಡೆದುಕೊಳ್ಳಬಹುದು. ಅದರಿಂದ ಗಳಿಕೆಗೇನೂ ನಷ್ಟವಾಗದು ತಾನೆ? ಆದರೆ ತನ್ನ ದೀಕ್ಷಾಗುರುವಿಗೆ ಹಾಗೂ ಪಂಥಾಧ್ಯಕ್ಷ

ಜಂಗಮಕ್ಕೆ ಅದನ್ನು ಅರ್ಪಿಸಬೇಕು. ಪಡೆದ ಪ್ರಸಾದವನ್ನು ಉಣ್ಣಬೇಕು. ಅಂದರೆ ಗಳಿಕೆಯು ಕೆಲವೊಂದು ಪಾಲು ಆ ಎರಡೂ ಕಾರಣಕ್ಕಾಗಿ ವೆಚ್ಚವಾಗುತ್ತಿತ್ತು. ಇದರಿಂದಾಗಿ ಯಾರೂ ಗಳಿಕೆಯನ್ನು ಉಳಿಕೆಯಾಗಿಡಲು ಬರುತ್ತಲೆ ಇರಲಿಲ್ಲ. ಒಂದು ವೇಳೆ ಇಟ್ಟರೂ ಅದನ್ನು ಹೂತಿಟ್ಟು ಸಾಯಬಾರದು. ಶಿವಭಕ್ತರಿಗೆ ಹಂಚಿಯೆ ಸಾಯುವುದು ಶಿವ. ಹಾಗದ ಕೆರಹನ್ನು ಹೊರಬಿಟ್ಟು ದೇವಾಲಯದೊಳಕ್ಕೆ ಹೋದರೆ. ಮನಸ್ಸೆಲ್ಲ ಅತ್ತ ಹರಿದುಕೊಂಡಿದ್ದು ಶಿವದತ್ತ ಶೂನ್ಯವಾಗುತ್ತದೆ. ಅಂತೆಯೆ ಗಳಿಕೆ ಹಣವನ್ನು ಹೆಂಡತಿ ಮಕ್ಕಳಿಗೆ ಇರಲೆಂದು ಹೂತಿಟ್ಟು ಹೋದರ ಜೀವ ಶಿವದತ್ತ ಮುಂದಿನ ಯಾತ್ರೆ ಮಾಡದೆ ಹಣದ ಹತ್ತಿರವೆ ಬೆಂತರವಾಗುಳಿದಿರಬೇಕಾದ ದಾರುಣಾವಸ್ಥೆ ಬರುತ್ತದೆ. ತಿನ್ನದೆ ತಿನ್ನಿಸದೆ ಹೂತು ಇಟ್ಟ ಹಣವನ್ನಾದರೂ ಮಕ್ಕಳು ಮಡದಿಗಳು ಸರಿಬಳಕೆ ಮಾಡಬೇಕಲ್ಲ ?

"ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ :
 ಆಯುಷ್ಯ ತೀರಿ ಪ್ರಳಯವು ಬಂದಡೆ ಅರ್ಥವನುಂಬವರಿಲ್ಲಾ
ನೆಲನನಗಿದು ಮಡಗದಿರಾ ! ನೆಲನುಂಗಿದಡುಗುಳುವುದೆ ?
 ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ !
ನಿನ್ನ ಮಡದಿಗಿರಲೆಂದಡೆ ಮಡದಿಯ ಕೃತಕ ಬೇಱೆ[3] !
 ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿಗಡಕದೆ ಮಾಣ್ಬಳೆ ?
ಹೆಱರಿಗಿಕ್ಕಿ ಹೆಗ್ಗುಱಿಯಾಗಿ ಕೆಡಬೇಡಾ : ಕೂಡಲಸಂಗನ ಶರಣರಿಗೆ ಒಡನೆ ಸವೆಸುವುದು !"

"ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ
ದೇವರಿಗೆ ನಮಸ್ಕಾರ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲಾ !
ಧನವನಿರಿಸದಿರಾ ! ಇರಿಸಿದರೆ ಭವಬಪ್ಪುದು, ತಪ್ಪದು !
ಕೂಡಲಸಂಗನ ಶರಣರಿಗೆ ಸವಿಸಲೇಬೇಕು !"

ಹೀಗೆ ಯಾರೂ ಹಣ ಕೂಡಿಡಬಾರದಾದ ಮೇಲೆ ಬಡವ ಬಲ್ಲಿದ ಜಾತಿ ವರ್ಗಗಳ ಮಾತಾದರೂ ಹೇಗುಳಿದೀತು ? ಕೂಡಿಡಬಾರದ ಹಣಕ್ಕಾಗಿ ಯಾರಾದರೂ ಏಕೆ ಗೋಳಾಡುತ್ತಾರೆ ? ಹಾಗೂ ಯಾರೂ ಹಣ ಕೂಡಿಡಬಾರದಾದ ಮೇಲೆ Death dutyಯಾದರೂ ಏಕೆ ? ಯಾವ ಸರ್ಕಾರ ಇದಕ್ಕಿಂತ ಅರ್ಥವ್ಯವಸ್ಥೆಯಲ್ಲಿ ಮುಂದಕ್ಕೆ ಹೋಗಿದೆ ? ಕಮ್ಯುನಿಸ್ಟ್ ರಾಜ್ಯಗಳಲ್ಲಿ ಹಣಗಳಿಕೆ-ಸಂಗ್ರಹಣೆ ಬಗೆಗೆ ಸದಾ ಎಚ್ಚರವಹಿಸಿದ್ದಾರಂತೆ. ರಷ್ಯದಲ್ಲಿ ಆ ರಾಜ್ಯ ಬಂದಿನ್ನೂ ಶತಮಾನವಾಗಿಲ್ಲ. ಆಗಲೆ ಆ ರಾಜ್ಯ ಇತರ ಕಮ್ಯುನಿಸ್ಟ್ ರಾಜ್ಯಗಳ ಬಗೆಗೆ ಹಿರಿಯಣ್ಣನ ಧೋರಣೆ ತಳೆಯುವುದರ ಜೊತೆಗೆ, ಬಂಡವಾಳಶಾಹಿ ರಾಜ್ಯ ವಿರೋಧದ ಹೆಸರಿನಲ್ಲಿ ತನ್ನದೆ ಸಾಮ್ರಾಜ್ಯ ಸ್ಥಾಪಿಸುವ ಹಾದಿಯಲ್ಲಿರುವಂತೆ ತೋರೀತು. ಇಲ್ಲದಿದ್ದರೇಕೆ ಪೋಲೆಂಡ್ ಹಗರಣ ? ಅಫ್ಘಾನಿಸ್ತಾನ್ ಪ್ರಕರಣ ? ಚೀನಾ ಬಗೆಗೇಕೆ ಉತ್ಕಟ ಈರ್ಷೆ ಪರಸ್ಪರ ದ್ವೇಷಾಸೂಯೆ ? ಅಂದರೆ. ಕೇವಲ ಭೌತವಾದದ ನೆಲಗಟ್ಟಿನ ಮೇಲೆ ಇತ್ತೀಚೆಗೆ ನಿಂತುಕೊಂಡಿರುವ ಆಧುನಿಕ ಮತವಾದ ಕಮ್ಯುನಿಸಂ ಕೂಡ ಹದಗೆಡುವಂತಿರುವಾಗ ಎಂಟುನೂರು ವರ್ಷಗಳ ಹಿಂದಿನ ಬಸವಣ್ಣನವರ ಏನಿಲ್ಲವೆಂದರೂ ಅರ್ಥವ್ಯವಸ್ಥೆಯನ್ನು ಉಡಾಫೆಯಿಂದ ಕಡೆಗಾಣುವುದು ಸಲ್ಲ. ಮಾಡುವ ಕರ್ಮವನ್ನು ಕಾಯಕ ಮಾಡುವಾಗ ಕರ್ಮಕ್ಕೆ ಯೋಗಾಂಶವನ್ನು ಸೇರಿಸಿದುದು ಬಸವಣ್ಣನವರ ಒಂದು ಸಾಧನೆಯಾದರೆ ಅದಕ್ಕಿಂತ ಮಿಗಿಲು ಈ ಐಶ್ವರ್ಯ ವಿನಿಯೋಗ ಹಾಗೂ ಐಶ್ವರ್ಯ ಅಸಂಚಯನ ವಿಷಯವಾಗಿ ಕಾಳಜಿವಹಿಸುವುದಾಗಿದೆ. ಜ್ಞಾನಿಯು ಕರ್ಮ ಮಾಡಲೇಬೇಕು ; ಎಂಬ ಮಾತನ್ನು ವೇದಗಳು ಹೇಳಿದರೂ ಕರ್ಮ ಎಂಬ ಪದಕ್ಕೆ ಅರ್ಥ ಬೇರಾಗಿ ಅದನ್ನು ಶ್ರೀಕೃಷ್ಣ ಮತ್ತೆ ತಿದ್ದಬೇಕಾಗುತ್ತದೆ. ಜೈನ ಬೌದ್ಧ ಧರ್ಮಗಳು ಒಂದು ರೀತಿಯಲ್ಲಿ ಕರ್ಮನಿರಸನವನ್ನೆ ಹೆಚ್ಚು ಬೋಧಿಸಿದು ದಾದ್ದರಿಂದ—ಕರ್ಮವೆಂದರೆ ಆಸೆ; ಆಸೆಯೆಂದರೆ ಬಂಧನ; ಅಂದರೆ ಹುಟ್ಟು ಸಾವು ನೋವು; ಆದ್ದರಿಂದ ಆಶಾ ರಹಿತವಾಗುವುದೆ ಮೋಕ್ಷ ಎಂದಿತ್ಯಾದಿ ಬೋಧಿಸಿದ್ದರಿಂದ—ಶ್ರೀಕೃಷ್ಣನ ಭಗವದ್ಗೀತೆ ಅದಕ್ಕೆ ಪ್ರತಿ ಚಿಕಿತ್ಸೆ ಮಾಡ ಬೇಕಾಗುತ್ತದೆ. ಅಂದರೆ ಕರ್ಮ ಮಾಡಿಯೂ ಅಕರ್ಮಿಯಾಗಿರಬೇಕು-ಬಹುದು. ಎಂಬುದನ್ನು ಸಾಧಿಸಿ ಬೋಧಿಸಿದ. ಸೈಕಲ್ ಪೆಡಲ್ ಮೊದಲು ಸುತ್ತಿದರೆ ಚಕ್ರ ಸುತ್ತುವ, ಚಕ್ರ ಸುತ್ತಿದರೆ ತಾನೂ ಸುತ್ತುವ ರೀತಿಯಿಂದ ರೂಪ ಗೊಂಡಿತ್ತು. (ಈಗಲೂ ಸರ್ಕಸ್‌ಗಳಲ್ಲಿವೆ ನೋಡಬಹುದು.) ಆದರೆ ಮುಂದೆ. ಫ್ರೀವ್ಹೀಲ್ ತಂತ್ರದಿಂದ ಪೆಡಲ್

ಮತ್ತು ಚಕ್ರಗಳ ಗಂಟನ್ನು ಒಪ್ಪುಬಿಪಾಗಿ ಬಿಚ್ಚಿದರು. ಪೆಡಲ್ ಒತ್ತಿದರೆ ಚಕ್ರ ಉರುಳಬೇಕಷ್ಟೆ: ಅದರೊಡನೆ ತಾನೂ ಸುತ್ತಬೇಕಿಲ್ಲ. ಈ ಬಗೆಯ ಒಂದು ತಂತ್ರವನ್ನು ಶ್ರೀಕೃಷ್ಣ ಬೋಧಿಸಿದ. ಮಾಡುವ ಕರ್ಮವನ್ನು ಭಗವದರ್ಪಣ ಮಾಡಿ ಅಹಂ ದೂರವಾಗುಳಿದು ನಿಸ್ಸಂಗತ್ವ ಸಂಪಾದಿಸಬಹುದೆಂದು ತೋರಿದ. ಆದರೆ ಅವರಲ್ಲಿ ಅರ್ಥ ವಿಷಯ ಸೇರಿರಲಿಲ್ಲ. ಮಾಡುವ ಕರ್ಮದಿಂದ ಬರುವ ಫಲ ಈಶ್ವರಾರ್ಪಣವಾದುದಕ್ಕೆ ಸಾಕ್ಷಿಯೇನು? ಮಾನಸಿಕ ಕ್ರಿಯೆಗೆ ಭೌತಿಕ ಸಾಕ್ಷಿ ಬೇಡವೆ? ಅದಿಲ್ಲವಾಯಿತು. ಆದರಿಂದ ಆಸ್ತಿಯ ಬಗೆಗೆ ಆತ ಮಾತಾಡಲಿಲ್ಲ. ಬಸವಣ್ಣನವರ ಕಾಯಕತತ್ತ್ವದಲ್ಲಿ ಅಲ್ಲಿದ್ದಿಲ್ಲದ ಒಂದು ಗಣನೀಯಾಂಶವಿದೆ. ಅದೆ ಐಶ್ವರ್ಯ ವಿತರಣ. ಗುರುಲಿಂಗಜಂಗಮಕ್ಕೆ ಮಾಡುವ ತ್ರಿವಿಧ ದಾಸೋಹ. ಮೇಲಾಗಿ ಆಸ್ತಿ ಉಳಿಸಿಹೋಗಬಾರದೆಂಬ ಎಚ್ಚರ. ಸತ್ತವರ ಆಸ್ತಿಯನ್ನು ಕಮ್ಯುನಿಸಂ ಬಂದ ಹೊಸತರಲ್ಲಿ ಮುಟ್ಟುಗೋಲು ಹಾಕಬಹುದು. ಆದರೆ ಅದಕ್ಕೆ ಕರ್ಮವನ್ನು ಆತ್ಮಿಕವಾದುದನ್ನಾಗಿ ಮಾಡಬರುವುದಿಲ್ಲ. ಆತ್ಮಿಕವಾಗಿ ಮಾಡಿದ ಗೀತಾಚಾರ್ಯ ಆರ್ಥಿಕತೆಯನ್ನು ಸ್ಪಷ್ಟಪಡಿಸಲಿಲ್ಲ. ಬಸವಣ್ಣನವರು ಈ ಮಹತ್ಸಾಧನೆ ಮಾಡುತ್ತಾರೆ. ಅವರು = ಕಮ್ಯುನಿಸಂ–ಹಿಂಸೆ + ಅಧ್ಯಾತ್ಮ!

ಕರ್ಮದ ಅನಿವಾರ್ಯತೆಯನ್ನು ಸ್ಥಾಪನೆ ಮಾಡಿದ ಗೀತಾಚಾರ್ಯ ಯಾರುಬೇಕಾದರೂ ಯಾವ ಕರ್ಮವನ್ನು ಮಾಡಬಹುದೆಂದನೆ? ಚಾತುರ್ವರ್ಣ್ಯದ ಮಾತಾಡಿದನಲ್ಲ? ಗುಣ ಕರ್ಮ ವಿಭಾಗಗಳನ್ನೂ ಹೇಳಿದ. ತಾನೆ ಸಾರಥಿ ಕೆಲಸ ಮಾಡಿದ. ದ್ರೋಣಾಶ್ವತ್ಥಾಮರು ಅನ್ಯಧರ್ಮದಲ್ಲಿದ್ದುದನ್ನೇನೂ ವಿರೋಧಿಸಲಿಲ್ಲ. ಅರ್ಜುನ ತನ್ನ ಸಹಜ ಸ್ವಭಾವಕ್ಕೆ ವಿರುದ್ಧವಾದ ಸಂನ್ಯಾಸದ ಹಾದಿ ಹಿಡಿದಾಗ ಹಾಗೆನ್ನುತ್ತಾನೆ. ಎನ್ನಬಹುದು. ಆದರೂ ಮತಾಚಾರ್ಯರು ಗೀತಾಚಾರ್ಯನನ್ನೂ ತಮ್ಮ ಪ್ರಧಾನ ಸಾಕ್ಷಿಯನ್ನಾಗಿಯೆ ಮಾಡಿಕೊಂಡರು! ಬಸವಣ್ಣನವರು ವೇದಾದಿಗಳಿಗೆ–ಪ್ರಸ್ಥಾನತ್ರಯಕ್ಕೆ–ವ್ಯಾಖ್ಯಾನ ಬರೆದ ಮತಾಚಾರ್ಯರಲ್ಲದ ಕಾರಣ ಕೃಷ್ಣನನ್ನು ಉದ್ಧರಿಸುವ ಗೋಜಿಗೂ ಹೋಗುವುದಿಲ್ಲ.

ಹೀಗಿದ್ದೂ ಒಂದು ತಪ್ಪು ಭಾವನೆಯಿದೆ. ಶರಣರು ಕಾಯಕತತ್ತ್ವವನ್ನೊಪ್ಪಿ ಆನುವಂಶಿಕ ವೃತ್ತಿಪಾಲನವನ್ನ ಮಾಡಿದರು ಎಂಬ ಭ್ರಮೆಯಿದೆ. ಆ ಮಾತನ್ನು ಯಾರು ಎಲ್ಲಿ ಆಡಿದರು? ಆಯ್ದಕ್ಕಿಯ ಮಾರಯ್ಯ, ಮೋಳಿಗೆಯ ಮಾರಯ್ಯಗಳ ಮೂಲವೃತ್ತಿಯೇನು? ಮಹಾದೇವಿಯ ಅಲ್ಲಮರ ಮೂಲವೃತ್ತಿಯೇನು? ಬಸವಣ್ಣನವರ ಪಿತ್ರಾರ್ಜಿತ ವೃತ್ತಿಯೇನು? ಈ ಯಾರಾದರೂ ಅವರವರ ವೃತ್ತಿ ಮಾಡಬೇಕಾಯಿತೆ? ಏಕೆ ಈ ತಪ್ಪು ಕಲ್ಪನೆ? ಒಂದು ಮಾತು ನಿಜ. ಕಾಯಕವನ್ನು ಮಾಡಲೇ ಬೇಕಾದಾಗ ಆ ಕಾಲದಲ್ಲಿ ಸುಲಭವಾಗಿ ಅನ್ಯವೃತ್ತಿಗಳನ್ನು ಕೈಗೆತ್ತಿಕೊಳ್ಳುವಂತಿರಲಿಲ್ಲ. ಹಳೆಯ ಪದ್ಧತಿಯಲ್ಲಿ ಸಾಧ್ಯ-ಸಾಧು ಕೂಡ ಆಗಿರಲಿಲ್ಲ. ಹಾಗಿರುವುದರಿಂದ ಅವರವರಿಗೆ ಬಂದಷ್ಟು ಕೆಲಸದಿಂದ ಕಾಯಕಯೋಗವನ್ನು ಶರಣರು ಮಾಡುವುದು ಸಾಧ್ಯವಾಯಿತು. ಇದೇನೊ ಸರಿ. ಹಳೆಯ ಜಾತಿಗಳು ಹಳೆಯ ವೃತ್ತಿಯಿಂದಾಗಿ ಜೀವಂತವಾಗಿ ಉಳಿದುಕೊಂಡವಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಈಗ ನಾವಾದರೂ ಯಾರೂ ಪಿತ್ರಾರ್ಜಿತ ಕರ್ಮಗಳನ್ನು ಮಾಡಬರುತ್ತಿಲ್ಲ, ನಾನಾ ಕಾರಣಗಳಿಂದಾಗಿ. ಒಂದು ವೇಳೆ ಯಾರಾದರೂ ಚಾತುರ್ವರ್ಣ್ಯವಿರಬೇಕೆಂದು ರಾಜ್ಯಾಂಗಬದ್ಧ ಮಾಡಿದರೆ ಮೊಟ್ಟಮೊದಲನೆಯ ಉಗ್ರ ವಿರೋಧ ಬರುವುದು ಉತ್ತಮ ವರ್ಗದಿಂದಲೇ ಆಗುತ್ತದೆ. ಯಾರುತಾನೆ ಅವರಲ್ಲಿ ತಮ್ಮ ಪಿತ್ರಾರ್ಜಿತಕರ್ಮಗಳಿಗೆ ಅಂಟಬಯಸುತ್ತಿದ್ದಾರೆ. ಪ್ರಧಾನಿ–ದಂಡನಾಯಕ–ನ್ಯಾಯಮೂರ್ತಿ–ಪ್ರಾಧ್ಯಾಪಕ-ನಟ–ನಟಿ–ನರ್ತಕ–ಉದ್ಯಮಿ–ಪಾನಾರಾಮಕರ್ಮಿ–ಮತ್ಸ್ಯೋದ್ಯಮಿ–ಪಾದರಕ್ಷೆಗಳ ಉದ್ಯಮಿ ಇತ್ಯಾದಿಯಾಗಿ ಹಲವೊಂದು ರಂಗಕ್ಕೆಲ್ಲ ಸ್ಪರ್ಧಾಳುವಾಗಿ ನುಗ್ಗಿ, ಬುದ್ಧಿಬಲಾದಿ ಕಾರಣದಿಂದಾಗಿ ಮುಂದೆ ಇರುವಾಗ ಹೇಗೆತಾನೆ ಆ ವರ್ಗದ ಜನ ಚಾತುರ್ವರ್ಣ್ಯದ ಪುನರುತ್ಥಾನಕ್ಕೆ ತೊಡಗುತ್ತಾರೆ? ತಮ್ಮನ್ನು ಬಿಟ್ಟು ಉಳಿದವರಿಗೆ ಇರಲಿ ಎಂದಿದ್ದರೂ ಇರಬಹುದು.... ಆದ್ದರಿಂದ ಇನ್ನಾರೂ ಆ ಹಳೆಯ ವ್ಯವಸ್ಥೆ ತರಲಾರರು. ಆದರೆ, ಜಾತಿಗಳ ಸಂಪರ್ಕವನ್ನುಳಿದು ವೃತ್ತಿಗಳನ್ನು ನಡೆಸುವುದು ಸಾಮಾನ್ಯವಾಗಿರುವ ನಮ್ಮ ದಿನಗಳಲ್ಲಿ ಜಾತಿಯನ್ನು "ವಾಸಿಸುವುದು" ಎಷ್ಟು ಸಾಮಾನ್ಯವಾಗುತ್ತಿದೆ. ಹೀಗಿರುವಾಗ ಬಸವಣ್ಣನವರ ಕಾಲದಲ್ಲಿ ಏನೆನ್ನಬೇಕು. ಅದು ಆ ಮಹಾತ್ಮನಿಗೆ ತಿಳಿದಿರಲಿಲ್ಲವೆಂದಲ್ಲ. ಬೇರೆ ಬೇರೆ ಜಾತಿಯ ಶರಣರೆಲ್ಲ ಒಂದೆಡೆ ನೆರೆದು ಶಿವಪೂಜೆ—ಲಿಂಗಾರ್ಚನ ಮಾಡುತ್ತಿದ್ದಾರೆನ್ನೋಣ. ಅವರಲ್ಲಿ ಯಾರು ಯಾರು ಯಾವ ಯಾವ ಜಾತಿಗೆ ಸೇರಿದವರೆಂದು ತಿಳಿಯದಿದ್ದರೆ ಹೇಗೆ? ಏನು ಸುಖವಿದೆ! ಎಷ್ಟೋ ಜನಕ್ಕೆ–ನಮ್ಮ ಈಗಿನವರಿಗಿರುವಂತೆಯೆ—ಜಾತಿ ತಿಳಿಯಬೇಕೆಂಬ ಚಪಲವಿತ್ತು. ಆಗ ಅದನ್ನು ತಿಳಿಯುವುದು ಸುಲಭವಿತ್ತು. ಬಹುಪಾಲು ಜನ ಮುನ್ನಿನ ಕಸುಬನ್ನೆ ಮಾಡಿ ಕಾಯಕ ಮಾಡುತ್ತಿದ್ದುದರಿಂದ ಅವರನ್ನು ಜಾತೀಯವಾಗಿ ತರತಮವೆಂದು ಭಾವಿಸುವುದಕ್ಕೆ ಅವರ 'ಕಾಯಕ' (ಇಲ್ಲಿ ಈ ಪದ ಕಸುಬು ಎಂದಷ್ಟೆ ಅರ್ಥವಾಗುತ್ತದೆ.) ತಿಳಿದರೆ

ಸಾಕು ತಿಳಿದೀತು ಜಾತಿ! ಬಸವಣ್ಣನವರು ನಮ್ಮ ಮೂಲರೋಗವನ್ನು ನಿದಾನಿಸಿ ಔಷಧ ಚಿಕಿತ್ಸೆಯನ್ನೂ ನೀಡಿದ್ದಾರೆ:

ದೇವಸಹಿತ ಭಕ್ತ ಮನೆಗೆ ಬಂದರೆ 'ಕಾಯಕವಾವುದು ?'
  ಎಂದು ಬೆಸಗೊಂಡರೆ ನಿಮ್ಮಾಣೆ! ನಿಮ್ಮ ಪುರಾತನರಾಣೆ!
ತಲೆದಂಡ! ತಲೆದಂಡ! ಕೂಡಲಸಂಗಮದೇವಾ!
  ಭಕ್ತರ ಕುಲವನರಸಿದರೆ ನಿಮ್ಮ ರಾಣಿವಾಸ

ಎಂಥ ಭಯಂಕರ ಶೋಧ-ಶೋಧನವಿದು. ವೃತ್ತಿಯಿಂದ—ಹೆಸರಿನಿಂದ ಬಣ್ಣ—ಮಾತುಕತೆಗಳಿಂದ ಜಾತಿ ತಿಳಿಯುವುದು ಕಷ್ಟವಾಗುತ್ತಿರುವ ನಮ್ಮ ದಿನಗಳಲ್ಲಿ ನಾವಾದರೂ ಅದನ್ನು ಪತ್ತೆಹಚ್ಚಲು ಅಷ್ಟು ಸೂಕ್ಷ್ಮಬುದ್ಧಿಯವರೂ ಆಗುತ್ತಿಲ್ಲವೆ? ಹೇಗೆ ಹೇಗೆಲ್ಲ ಒಬ್ಬನ ಜಾತಿಯನ್ನು ಸನ್ನಿವೇಶಾದಿ ಸಂದರ್ಭ ಸಂಬಂಧ ಪುರಾವೆಗಳಿಂದ ಪತ್ತೆಹಚ್ಚುವುದಿಲ್ಲ ನಾವು! ಬಸವಣ್ಣನವರ ಮಾತು ಯಾರಿಗೆ ತಿಳಿದಿದೆ. ಆಧ್ಯಾತ್ಮಿಕಾದಿಸ್ತರಗಳ ಮಾತಿರಲಿ, ಕೇವಲ ಸಾಮಾಜಿಕಸ್ತರದ ಸುಧಾರಣೆಯ ದಿಟ್ಟಿನಿಂದಲೂ ಬಸವಣ್ಣನವರು ಎಷ್ಟು ಸದಾಜಾಗ್ರತ ಸೂಕ್ಷ್ಮಮತಿಯಾಗಿದ್ದರು.

ಈಗ ಮತ್ತೊಂದು ಮುಖ್ಯಾಂಶವನ್ನಿಲ್ಲಿ ಗಮನಿಸಬಹುದು. ಈ ಶರಣರು ಯಾವುದೊ 'ಕೆಲಸ' ಮಾಡುತ್ತಲೆ ಶಿವ ಸಾಧಿಸಿದರೆಂದಿರಲ್ಲ, ಅವರು ತಮ್ಮ ಕೆಲಸಕ್ಕೂ ಶಿವಾನುಭವಕ್ಕೂ ಬಿರುಕನ್ನನುಭವಿಸಿದರೆ? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಈ ಒಬ್ಬ ಶರಣವಚನಕಾರರನ್ನೆ ಕೇಳಿ ತಿಳಿದುಕೊಳ್ಳಬಹುದು. ಅವರು ಹೇಗೆ ತಮ್ಮ ಆಧ್ಯಾತ್ಮಿಕಾನುಭವಗಳನ್ನು ತಮ್ಮ ಕಾಯಕದ ಜೊತೆಯಲ್ಲೆ ಪಡೆದುಕೊಳ್ಳುತ್ತಿದ್ದರೆಂಬುದನ್ನು ಕಾಣಲು; ಹಾಗೂ ಹೇಗೆ ಅವರ ಕಾಯಕಮಾರ್ಗವೇ ಅವರಿಗೆ ಅನುಭಾವಮಾರ್ಗವೂ ಆಗುತ್ತಿದ್ದಿತೆಂಬುದನ್ನು ತಿಳಿಯಲು. ಅಂಬಿಗರ ಚೌಡಯ್ಯನವರ ಒಂದು ವಚನವನ್ನೆ ಕೇಳಿ:

ತಡೆ ನೆಲೆ ಇಲ್ಲದ ಮಹಾನದಿಯಲ್ಲಿ
  ಒಡಲಿಲ್ಲದ ಅಂಬಿಗ ಬಂದಿದ್ದಾನೆ
ಹಿಡಿವ ಬಿಡುವ ಮನವ ಬೆಲೆಗೊಟ್ಟರೆ
  ಗಡಣವಿಲ್ಲದೆ ಹಾಯಿಸುವೆ ಹೊಳೆಯಾನು
ನುಡಿಯಿಲ್ಲದ ನಿಸ್ಸೀಮಗ್ರಾಮದಲ್ಲಿರಿಸುವೆ
  ನೆಂದಾತನಂಬಿಗರ ಚೌಡಯ್ಯ

ಶಿಷ್ಯನು ತನ್ನ ಗುರುವಿಗೆ ಅರ್ಪಿಸಿಕೊಂಡರೆ ಹೇಗೆ ಅವನು ಇವನನ್ನು ನಿಸ್ಸೀಮದ ನೆಲೆಗೆ ಕರೆದೊಯ್ಯುತ್ತಾನೆಂಬುದನ್ನು ಹರಿಗೋಲು ನಡೆಸಿ ನದಿ ದಾಟಿಸುವ ತನ್ನ ಕಾಯಕ ಪ್ರತಿಮೆಯ ಮೂಲಕ ಧ್ವನಿಸಿದ್ದಾನೆ. ಸಂಸಾರದ—ಭವದ ಮಹಾ ನದಿಗೆ ತಡೆಯೂ ಇಲ್ಲ ನೆಲೆಯೂ ಇಲ್ಲ. ದಡವೂ ಇಲ್ಲವೇನೊ? ಆದರೆ ಆ ಹೊಳೆಯನ್ನು ಹಾಯಿಸಿ ತಾನು ಆಚೆಯ ದಡಕ್ಕಿರಲಿ, ನಿಸ್ಸೀಮದ—ಎಲ್ಲೆಯಿರದ ನೆಲೆಗೆ, ಮತ್ತಾವ ನದಿಗಳಿಂದಲೂ ವಿಭಜಿತವಲ್ಲದ ಭೂಮಿಗೆ ಒಯ್ಯುವ ದಿಟ್ಟತನ ಚೌಡಯ್ಯನಿಗಿದೆ. ಆ ನಿಸ್ಸೀಮದ ಭೂಮಿ ಮೌನಭೂಮಿ. ಅದಕ್ಕೆ ಕೊಡಬೇಕಾದ ಬೆಲೆ ಶಿಷ್ಯನ ಮನಸ್ಸು! ಆ ಮನಸ್ಸಿನ ವರ್ಣನೆಯಾದರೂ ಮನೋಜ್ಞವಾಗಿದೆ. ಮನಸಿನ ಗುಣ ಎರಡು: ಒಂದು ಪ್ರಸನ್ನವಾಗುವುದು—ರಕ್ತಿಗೊಳ್ಳುವುದು, ಮತ್ತೊಂದು ವಿಷಣ್ಣವಾಗುವುದು—ಅನಾಸಕ್ತಿಯ ಹೆಸರಿನಲಿ ಜಿಗುಪ್ಸೆತಾಳುವುದು. ಬಿಡುವುದು ಹಿಡಿಯುವುದು—ಸಂಕೋಚನ ಉತ್ಕೋಚನಗೊಳ್ಳುವುದು, ಅಷ್ಟೆ. ಆ ಎರಡೂ ಕ್ರಿಯೆಗಳಿರುವ ಮನಸ್ಸನ್ನೆ ಬೆಲೆಯಾಗಿತ್ತರೆ ತಾನು ಖಂಡಿತಾ ಆ ನಿಸ್ಸೀಮದ ಮೌನ ಶಿವ ಭೂಮಿಗೆ ಒಯ್ಯುತ್ತೇನೆಂಬ ಆಧ್ಯಾತ್ಮಿಕ ಧೈರ್ಯ ಎಷ್ಟು ಜನಕ್ಕೆ ಬಂದೀತು. ಅಂಬಿಗರ ಕುಲದಲ್ಲಿ ಬಂದವರು ಚೌಡಯ್ಯನಲ್ಲದೆ ಎಷ್ಟು ಜನ ಆಗಿಹೋಗಲಿಲ್ಲ—ಓದಿದವರು, ಅಧಿಕಾರಸ್ಥರು ಇತ್ಯಾದಿಯೆಲ್ಲ? ಯಾರಿಗುಂಟು ಈ ದಿವ್ಯ ಶೌರ್ಯ? ಈ ಶೈವ ಧೈರ್ಯವನ್ನು ತರುವಂತೆ ಪರಿಣಾಮಿಸಿದ ಮಹಾ ಪುಣ್ಯ ಆ ಯುಗಕ್ಕೆ—ಬಸವಣ್ಣ ಅಲ್ಲಮರಿಗೆ ಸೇರೀತು. ಅವರ ಗುರುತ್ವಕ್ಕೆ ಸಿಕ್ಕಿದ ಆ ಮಹಾಚೇತನಗಳಾವರೂ ಉಪಗ್ರಹಗಳಲ್ಲ, ಕ್ಷುದ್ರಗ್ರಹಗಳಂತೂ ಅಲ್ಲವೇ ಅಲ್ಲ. ಅನುಭಾವವನ್ನು ಬರಿದಷ್ಟೆ ಕವಿಯಂತೆ ವರ್ಣಿಸದೆ ತಾನೆ ಗುರುವಾಗಿ ನಡೆಸಬಲ್ಲೆನೆಂಬ ದಿವ್ಯಧೈರ್ಯ ದಾನ ಮಾಡುವಷ್ಟು ಪರಿಪಕ್ವತೆಯನ್ನು ಪಡೆದ ಸಾಮಾನ್ಯವ್ಯಕ್ತಿ ಸಾಮಾನ್ಯನೆ?

ಬಸವಣ್ಣನವರ ಸಾಧನೆಯೇನೆಂದರೆ ಇದೂ ಮುಖ್ಯ. ಸಾಮಾನ್ಯೋದ್ಧಾರದ ಮಾತಾಡುತ್ತಿರುವ ನಾವು ಮಾಡಿರಬಹುದಾದರೂ ಎಷ್ಟು. ಆಗಿಗಿಂತ ಸಾವಿರಪಟ್ಟು ಸಂಪತ್ತನ್ನು ಉತ್ಪಾದನ ಮಾಡುವ ವಿತರಣ ಮಾಡುವ ಸಾಧನಗಳಿದ್ದೂ, ರಾಜಕೀಯ ವೈಜ್ಞಾನಿಕ ಪರಿಸರ ಅಷ್ಟೆಲ್ಲ ಅವಕಾಶವಿತ್ತಿದ್ದರೂ ನಾವು ಸಾಧಿಸಿರುವುದೇನು ? ಕೆಳವರ್ಗದವರನ್ನು ಹೆಚ್ಚೆಂದರೆ ಓದಿಸುತ್ತಿದ್ದೇವೆ, ಒಬ್ಬಿಬ್ಬರನ್ನು ಅಧಿಕಾರಕ್ಕೇರಿಸುತ್ತಿದ್ದೇವೆ. ಅದಕ್ಕೂ ಮುಂದಕ್ಕೆ ಒಯ್ಯಬಂದಿದೆಯೆ ? ಸುಪ್ತಶಕ್ತಿಗಳನ್ನು ಬಿಡುಗಡೆ ಮಾಡುವ ತಂತ್ರವನ್ನು ಭೌತಮಟ್ಟದಲ್ಲಿ ಸಾಧಿಸಿದಂತಾಯಿತು. ಅದನ್ನು ಮೇಲ್‌ಸ್ತರಕ್ಕೆ ಜಾಗ್ರತಗೊಳಿಸುವ ಶಿವಜಾಗರ ನಮ್ಮಲ್ಲಿದೆಯೆ ? ಸಮುದ್ರತಳದಲ್ಲಿ ಭೂಗರ್ಭಸ್ಥವಾಗಿರುವ ಪೆಟ್ರೋಲಿಯಂ ಇಂಧನವನ್ನು ಹೊರತೆಗೆಯುವಷ್ಟು ಕಷ್ಟದಾಯಕ ಶಿವಕರ್ಮವಿದು. ಸಾಗರದ ಭೋರ್ಗರೆತದಲ್ಲಿ ಒಳ ಮುಳುಗುವ ಸಾಧನ ಪಡೆದು ಅಲ್ಲಿನ ತಳ ಕೊರೆದು, ಬರುವ ಇಂಧನವನ್ನು—ಮಿಗಿಲಾಗಿ ಉಕ್ಕಿ ಚಿಮ್ಮುವ ಇಂಧನದ ಅನಿಲವನ್ನು—ಉರಿ ತಾಗಿ ಜ್ವಾಲಾಹುತಿಗೊಳ್ಳದಂತೆ ಎಚ್ಚರವಿರುವ ಶಕ್ತಿ ಬೇಕು. ಅದನ್ನೆಲ್ಲ ಪಡೆದು ಆಮೇಲೆ ಪಡೆಯುವ ಇಂಧನವನ್ನು ತೈಲಶುದ್ಧೀಕರಣಗೃಹಗಳಿಗೆ ಸಾಗಿಸಿ–ಸಾಗರದೊಳಗೇ ಸಾಗಿಸಿ—ಶೋಧಿಸಿ ಜನೋಪಯೋಗಿಯಾಗಿ ಮಾಡುವ ಶಿವಕರ್ಮ ಅಗಾಧವಾದುದು. ಅದಕ್ಕಿಂತಲೂ ಮಹತ್ತರವಾದುದು ಸತ್ತಂತಿರುವ ಜನರನ್ನು ಜಾಗ್ರತಗೊಳಿಸುವ–ಅವರು ಎಚ್ಚೆತ್ತ ಮೇಲೆ ಅಶಿವವಾಗದಂತೆ ನೋಡಿಕೊಳ್ಳುವ–ಶಿವಯೋಗ. ನಾವಿಂದು ಮಾಡಿರುವುದೆಷ್ಟು? ಅಕ್ಷರ ಬರದಿದ್ದವನಿಗೆ ಅಕ್ಷರ ನೀಡುತ್ತಿದ್ದೇವೆ : ಅಧಿಕಾರವಿಲ್ಲದಿದ್ದವನಿಗೆ ಅಧಿಕಾರ ನೀಡಲಾಗಿಲ್ಲದಿದ್ದರೂ ಅದರ ರುಚಿ ಹುಟ್ಟಿಸುತ್ತಿದ್ದೇವೆ. ಸಂಪತ್ತಿಲ್ಲದವರಿಗೆ ಅದರ ಆಮಿಷ ನೀಡಿದ್ದೇವೆ, ಕೊಂಚ ಸಂಪತ್ತೂ ನೀಡಿರಬಹುದು. ಮುಂದೇನು ಮಾಡಿದಂತಾಯಿತು ? ಷೇಕ್ಸ್‌ಪಿಯರನ ಕ್ಯಾಲಿಬನ್ ಹೇಳುವ ಮಾತನ್ನು ಕೇಳಬೇಕೇನೊ: "ನೀನು ಮಾತು ಕಲಿಸಿದೆ, ನಾ ನಿನ್ನನ್ನ ಬೈಯುವೆ" ಎಂದು. ಮಲಗಿದ್ದವನನ್ನು ಎಬ್ಬಿಸುವುದು ಕ್ಲೇಶಕಾರಿಕರ್ಮ. ಎಚ್ಚರಿಸುವಾಗ ಎಷ್ಟೆಲ್ಲ ಗೋಳುಪಡಬೇಕು. ತಾನು ನಿದ್ದೆಗೆಡಬೇಕು : ಮಲಗಿದ್ದವರಿಂದ ಅನ್ನಿಸಿಕೊಳ್ಳಬೇಕು. ಅವರು ಒಬ್ಬೊಬ್ಬರಾಗಿ ಎದ್ದಮೇಲೆ ಅವರ ಅರೆನಿದ್ದೆಯೆಚ್ಚರಕ್ಕೆ ಮಲಗಿರುವವರು ತುಳಿತಗೊಳ್ಳದಂತೆ ನೋಡಿಕೊಳ್ಳಬೇಕು. ಎದ್ದವರು ಆಮೇಲೆ ನನಗೇನು ಕೊಡುವೆ ಈಗ ? ತಿಂಡಿ ಕೊಡು, ಕೆಲಸ ಕೊಡು ಎಂದಾಗ ಅದನ್ನು ಕೊಡುವ ಸ್ಥಿತಿಯಲ್ಲಿರಬೇಕು. ಜಲಾಶಯಗಳನ್ನು ಮಹದಾಶಯದಿಂದ ನಿರ್ಮಿಸಿ, ಜಲಪಾತಗಳ ಪಕ್ಕದ ಕಣಿವೆಗಳಲ್ಲಿ ಆ ಸಂಚಿತ ಜಲಶಕ್ತಿಯಿಂದ ವಿದ್ಯುದುತ್ಪಾದನ ಮಾಡುವ ಯೋಜನೆ ಮಾಡಿದಾತ, ಆ ಉತ್ಪಾದಿತ ವಿದ್ಯುತ್ತನ್ನು ಒಯ್ಯುವ ತಂತಿ ಮಾರ್ಗಗಳನ್ನು, ವಿತರಣ ಮಾಡಿಕೊಳ್ಳುವ ಯಂತ್ರಸ್ಥಾವರಗಳನ್ನೂ ಮೊದಲೆ–ಜೊತೆಜೊತೆಯಲ್ಲೆ–ಸಿದ್ಧಪಡಿಸಿಕೊಂಡಿರಬೇಕು. ನಾವೀಗ ಆಧುನಿಕ ಭಾರತದಲ್ಲಿ ಯಾವ ಸ್ಥಿತಿಯಲ್ಲಿದ್ದೇವೆ ? ಮಹದಾಶಯವುಂಟು—ಅದು ಯಾವ ಮಹಾತ್ಮನ ಕಾರಣದಿಂದಲೊ ! ಅದರೆ ಕಾರ್ಯಕ್ಷಮತೆ–ಶಮತೆ ಉಂಟೆ ? ಭಗೀರಥ ತಾನು ಬಿಡಿಸಿದ ಗಂಗೆಯನ್ನು ಇಳಿಸಿಕೊಂಡು ಬರಲಾಗದಿದ್ದಾಗ ದೈವೀ ಸಹಾಯವಾಗಿ ತಡೆಗಳಾಗಿ ಶಿವ ಜಟೆ–ಋಷಿ ಆಪೋಷಣಗಳು ಬರುತ್ತವೆ. ಒಂದು ವೇಳೆ ಹಾಗೆಯೆ ವಿಷ್ಣುಪಾದೋದ್ಭವೆ ಗಂಗೆ ಧುಮ್ಮಿಕ್ಕಿ ಬಂದಿದ್ದರೆ ? ನಮ್ಮ ನೆಲವೇನಾಗುತ್ತಿತ್ತು?

ಬಸವಣ್ಣನವರು ಯಾವ ಆಧುನಿಕ ಸೌಲಭ್ಯಗಳೂ ಇಲ್ಲದ ಕಾಲದಲ್ಲಿ ಸಾಮಾನ್ಯರನ್ನೆಲ್ಲಾ ಕೂಡಿಹಾಕಿದುದು (–ಸಾಮಾಜಿಕ ರಾಜಕೀಯೋದ್ದೇಶಕ್ಕಲ್ಲ ಎಂದು ತಿಳಿಯಬೇಕು) ಅನುಭಾವ ಕಾರಣಕ್ಕಾಗಿ ಮೊದಲು. ಆಮೇಲೆ ಸರ್ವಾಂಗೀಣ ಜೀವನ ಸಂಸ್ಕರಣಾರ್ಥವಾಗಿ. ಹೀಗೆ ಮಾಡಲು ಅವರು ಅವರಿಗೇನು ಆಮಿಷ ಒಡ್ಡಬಹುದಿತ್ತು? ಬಿಡುಗಡೆಯ ಬಯಕೆಯನ್ನಲ್ಲದೆ ? ಬಿಡುಗಡೆ ? ತನ್ನ ಪತಿತ ಸ್ಥಿತಿಯಿಂದ, ಜಾತಿ–ಭೀತಿ–ಶೋಷಣೆ ದೈನ್ಯಗಳಿಂದ ಬಿಡುಗಡೆ ? ಅದಕ್ಕವರು ಕೊಟ್ಟದ್ದೇನು ಸಾಮೂಹಿಕ ಉನ್ನತ ವಿದ್ಯಾಭ್ಯಾಸ, ಐಶ್ವರ್ಯ, ಅಧಿಕಾರಗಳೇನು ? ಅದೇನೂ ಸಾಧ್ಯವಾಗುತ್ತಿದ್ದಿಲ್ಲದ ಆ ಕಾಲದಲ್ಲಿ ಏನು ಮಾಡುವುದು. ಜ್ಞಾನ ಕೊಡುತ್ತೇನೆಂದರೆ ಪುಸ್ತಕಗಳೂ ಮುದ್ರಣವಾಗುತ್ತಿರಲಿಲ್ಲ. ಪದಾರ್ಥಗಳ ಬೃಹತ್‌ಪ್ರಮಾಣದ ಉತ್ಪಾದನವಿರಲಿಲ್ಲ. ಸಾಮೂಹಿಕ ಶಿಕ್ಷಣ ಕೇಂದ್ರಗಳಿರಲಿಲ್ಲ : ರಾಜಕೀಯ ಅಧಿಕಾರ ನೀಡೋಣವೆಂದರೆ ರಾಜಪದ್ಧತಿಯ ಆಡಳಿತವಲ್ಲದೆ ಪ್ರಜಾಪ್ರಭುತ್ವವಿರಲಿಲ್ಲ. ಹಾಗಿರುವಾಗ ಸಾಮಾನ್ಯರನ್ನೆಲ್ಲ ಆಕರ್ಷಿಸುವುದು ಹೇಗೆ ? ಅವರ ಉದ್ಧಾರಕಾಂಕ್ಷೆಯನ್ನು ಜಾಗ್ರತಗೊಳಿಸುವುದಲ್ಲದೆ ? ಅದಕ್ಕಡ್ಡಿ ಬರುವ ಜಾತಿ-ಪೂರ್ವಾಚಾರಭೀತಿಗಳನ್ನೆಲ್ಲ ಶಿವಲಿಂಗದಲ್ಲಿ ಕಳೆದಂತೆ. ಬಿಡುಗಡೆಯ ನಾನಾಶಕ್ತಿಗಳನ್ನೂ ಅದರಿಂದಲೆ ಪಡೆದುಕೊಳ್ಳುತ್ತಾರೆ. ಕೆಳಜಾತಿಯವರಿಗಿದ್ದ ದೈನ್ಯ-ನೈಚ್ಯಾನುಸಂಧಾನ, ಮೇಲಿನವರಿಗಿದ್ದ ಪ್ರತಿಷ್ಠೆ ಎಲ್ಲವನ್ನು ಕಳೆಯುವ ವಿದ್ಯುತ್ತಾಗಿ ಲಿಂಗಲಾಂಛನ ಒದಗುತ್ತದೆ. ಎಲ್ಲ ಒಂದೆಡೆಗೆ ಬಂದ ಮೊದಲು ಮೊದಲಲ್ಲಿ ಸಾಮಾನ್ಯನಿಗೆ ಕೀಳರಿಮೆ ಮೇಲ್ಮಟ್ಟದಲ್ಲಿ ಕಾಣುವಂತಿದ್ದರೆ ಆಮೇಲಾಮೇಲೆ ಅದು ಒಳಕ್ಕಿಳಿದು ಮೇಲೆ ಸೊಕ್ಕಾಗಿ-ತಲೆತಿರುಗಾಗಿ

ಪರಿಣಮಿಸಿದುದೂ ಉಂಟು. ಬಸವಣ್ಣನವರು ಅದನ್ನು ಗಮನಿಸುತ್ತಾರೆ. ಅದನ್ನೆ ತಮ್ಮ ವಚನವೊಂದರಲ್ಲಿ ತಮ್ಮನ್ನು ಕುರಿತಂತೆ ಹೇಳಿಕೊಳ್ಳುತ್ತಾ ಸೂಚಿಸಿದ್ದಾರೆ—ತಿದ್ದಿದ್ದಾರೆ:

ಬೆಲ್ಲವತಿಂದ ಕೋಡಗದಂತೆ
ಸಿಹಿಯ ನೆನೆಯದಿರಾ. ಮನವೆ!
ಕಬ್ಬುತಿಂದ ನರಿಯಂತೆ
ಹಿಂದಕ್ಕೆಳಸದಿರಾ ಮನವೆ!
ಗಗನವನಡರಿದ ಕಾಗೆಯಂತೆ
ವೆಸೆದೆಸೆಗೆ ಹಂಬಲಿಸದಿರಾ ಮನವೆ!
ಕೂಡಲಸಂಗನ ಶರಣರ ಕಂಡು ಲಿಂಗವೆಂದೇ ನಂಬು ನಂಬು!

ಈ ವಚನದಲ್ಲಿ ಬಂದಿರುವ ಚಿತ್ರಗಳಲ್ಲಿ ಇಲ್ಲಿ ಅತ್ಯಂತ ಗಮನಾರ್ಹವಾದ ಚಿತ್ರ "ಗಗನವನಡರಿದ ಕಾಗೆಯಂತೆ" ಎಂಬುದು. ಕಾಗೆ ಹಾರುವುದನ್ನು ಯಾರಾದರೂ ಗಮನಿಸಿದ್ದರೆ ಒಂದಂಶ ಸ್ಪಷ್ಟವಾಗುತ್ತದೆ. ಪಕ್ಷಿಜಾತಿಗೆ ಸೇರಿದ ಅದು ಹಾರುತ್ತದಾದರೂ ಎಷ್ಟು ಎತ್ತರದಲ್ಲಿ. ಎಷ್ಟು ದೂರದತನಕ? ತುಂಬ ಎತ್ತರವೆಂದರೆ ಇನ್ನೂರಡಿ. ಅಷ್ಟೆ. ಅದು ಹಾರುವಾಗಲೇನಾದರೂ ಗಾಳಿ-ಬಿರುಗಾಳಿಯಲ್ಲ-ಜೋರಾಗಿದ್ದರಂತೂ ಅದರ ಪಜೀತಿ ನೋಡಬೇಕು. ಹಾರ ಬಾರದು, ಇಳಿಯಲಾರದು; ಹೇಗೊ ತೂರಿಹೋಗುತ್ತದೆ. ಅದು ಹೋಗಲಿ ಎಂದರೆ ಅದಕ್ಕೆ ಸದಾ ನೆಲದ ಮೇಲೇ ಕಣ್ಣು. ಯಾರು ಯಾರು ಏನೇನು ಎಸೆದಾರು, ಇತ್ಯಾದಿಯತ್ತಲೇ ಕಣ್ಣು. ಅದರ ಮನಸ್ಸು ಹೇಗಿದೆಯೆಂಬುದು ಬೇಕಿಲ್ಲ. ಅದರ ದೇಹವಂತೂ ರೆಕ್ಕೆಗಿಂತ ತೋರವಾದದ್ದು. ಹಾಗಾಗಿ ದೇಹದ ಭಾರ ಯಾವಾಗಲೂ ಕೆಳಗೆ ಎಳೆದಿರುತ್ತದೆ; ರೆಕ್ಕೆಯು ಬಡಿತ ಅದನ್ನು ಎತ್ತುವಷ್ಟು. ದಾಟಿಸುವಷ್ಟು ಶಕ್ತವಾಗಿರುವುದಿಲ್ಲ. ಈ ಚಿತ್ರವೇಕೆ ಅಣ್ಣನವರನ್ನು ಹಿಡಿಯಿತು? ಅಣ್ಣನವರು ತಾವು ಲಿಂಗಲಾಂಛನಾದಿ ಸಂಸ್ಕಾರಗಳ ಮೂಲಕ ಮೇಲೆತ್ತಿದ್ದ ಸಾಮಾನ್ಯರನ್ನು ನೋಡುತ್ತಾರೆ. ಅವರಿಗೆ ಮರುಕ ಮರುಕಳಿಸುತ್ತದೆ. ಬಹುತೇಕ ಜನ ನೆಲದ ಸೆಳೆತಕ್ಕೆ ಸಿಕ್ಕು ತತ್ತರಿಸುತ್ತಿದ್ದವರಾಗಿದ್ದರು. ಅವರನ್ನು ಶಿವ ನೀಲಾಕಾಶದ ಶೈವವಿಹಾರಕ್ಕೆ ತೊಡಗಿಸುವುದು ಹೇಗೆ? ಎಂಬ ಚಿಂತೆ ಕಾಡುತ್ತದೆ. ಅಲ್ಲಮಪ್ರಭು ಎಚ್ಚರಿಸುತ್ತಲೆ ಇದ್ದರು. 'ಇಟ್ಟ ಕಲ್ಲು ಮೆಳೆಯ ಮೇಲೆ.'

ಲಿಂಗಲಾಂಛನ ಮಾಯಾದಂಡವಾಗಿ ಕೆಲಸ ಮಾಡುತ್ತದೆಂದುಕೊಂಡರೆ ಆದದ್ದೇನು? ಕುಂಬಳಕ್ಕೆ ಕಬ್ಬಿಣದ ಕಟ್ಟು ಕೊಟ್ಟಂತಾಯಿತು. ಹೆಚ್ಚೆಂದರೆ ಕಬ್ಬಿಣದ ಕೋಡಗವನ್ನು ಪರುಷಮುಟ್ಟಿ ಚಿನ್ನದ ಕೋಡಗವನ್ನಾಗಿಮಾಡಿದಂತಾಯಿತು. ಹೋರಾಟದ ಲೋಹಮೌಲ್ಯ ಹೆಚ್ಚಿತು. ಪೂಜ್ಯವಾಗಲಿಲ್ಲ. ಇದಕ್ಕೇನು ಮಾಡಬೇಕು. ಈ ಹಿಂದೆಯೆ ಹೇಳಿದಂತೆ ಕೋತಿಯನ್ನು ಆಂಜನೇಯನನ್ನಾಗಿ ಮಾಡಬೇಕು. ಅದಕ್ಕೆ ಶಿವಸಾಧನೆಯನ್ನು ನಡೆಸಬೇಕು: ಮೌಲ್ಯನಿಷ್ಠ ಜೀವನವನ್ನು ಬಾಳಬೇಕು. ಹಾಗೆ ಮಾಡಲು ಮೌಲ್ಯಗಳನ್ನವರಿಗೆ ನೀಡಬೇಕು ಎನ್ನಿಸಿತು.

ಲಿಂಗಲಾಂಛನವೆಂಬುದು ಕೇಂದ್ರಮೌಲ್ಯವಾಗಿ ನಾನಾಸ್ತರದಲ್ಲಿ ಅರ್ಥವಾಗುವಂತಹ ಮೌಲ್ಯವಾದರೂ ಅದನ್ನು ದೃಢಗೊಳಿಸುವ ಸಾರ್ವತ್ರಿಕ ಮೌಲ್ಯಗಳ ಅನುಷ್ಠಾನವೂ ಅತ್ಯಗತ್ಯವಾಯಿತು. ಅವುಗಳಿಂದಲೆ ಲಿಂಗ ಅರ್ಥಪೂರ್ಣವಾಗುವುದಾದರೂ ಕೂಡ. ಪರಿಧಿ ಬಿಂದುಗಳಿಂದ ಕೇಂದ್ರಕ್ಕೆ ಸ್ಪಷ್ಟ ಅರ್ಥಪೂರ್ಣತೆ ಬರುವಂತೆ. ಕೇಂದ್ರ ಬಿಂದುವಿನಿಂದ ಅವುಗಳಿಗೆ ದೃಢನಿಷ್ಠೆಯತೆ ಲಭಿಸುತ್ತದೆ. ಜಾತಿಗಳನ್ನು ಒಡೆದು ಜೀವಜೀವರನ್ನು ಶಿವಾನುರಕ್ತಿಯಲ್ಲಿ ಕೂಡಿಸುವ; ಜೀವವನ್ನು ದೇವರಿಂದ ದೂರವಿಡದೆ ಸಮೀಪದಲ್ಲಿಡಬಯಸುವ: ತನ್ನ ಸಾಧನೆಯನ್ನು ಯಾರಮೇಲೊ ಹಾಕಿ ತಾನು ಗೇಣಿದಾರನೊ ಗುತ್ತಿಗೆದಾರನೊ ಆಗದೆ ತಾನೆ ತನ್ನ ಸಾಕ್ಷಾತ್ಕಾರವನ್ನು ಸಾಧಿಸಿಕೊಳ್ಳುವಂತೆ ಮಾಡುವ ಕ್ಷುದ್ರದೈವಭೀತಿಯಿಂದ ಪಾರಾಗಿಸಿ ಪರಮ ಆತ್ಮಪ್ರತೀಕವಾದ ಅದನ್ನು ಪೂಜಿಸುವ ಮೂಲಕ ಸದಾ ಶಿವನಿರ್ಭೀತಿಯಲ್ಲಿರುವಂತೆ ಸಾಮಾನ್ಯನಿಗೆ ನೆರವಾಗುವ; ಭೌತಸೆಳೆತಗಳಿಂದ ಜೀವವನ್ನು ಬಿಡಿಸುವ: ಕೆಳಗಿನಿಂದ ಮೇಲಕ್ಕೇರಿದಾಗ ಸಹಜವಾಗಿಯೆ ಬರುವ ತಲೆತಿರುಗಿನಿಂದ ಜೀವವನ್ನು ಪಾರುಮಾಡಿಸುವಂತಹ ಶಿವಸ್ಥೈರ್ಯವಾಗುವ—ಈ ನಾನಾ ಸಾಧನೆಗಳನ್ನು ಲಿಂಗಧಾರಣವೊಂದೇ ಮಾಡುತ್ತದೆಯೆಂದುಕೊಂಡಿದ್ದರು ಬಸವಣ್ಣನವರು. ನಮ್ಮ ಕಾಲದ ಪರಿಭಾಷೆಯಲ್ಲಿ ಹೇಳುವುದಾದರೆ ನಾವೀಗ ಹಲವೊಂದು ಜಾತಿಯವರನ್ನು ಒಗ್ಗೂಡಿಸಲು. ದಲಿತಾದಿಗಳನ್ನು ಮೇಲೆತ್ತಲು ಸಾರ್ವತ್ರಿಕ ಉನ್ನತ ಶಿಕ್ಷಣವನ್ನು ಕೊಡುತ್ತೇವೆಯಲ್ಲ, ಅದನ್ನೆ ಉದಾಹರಣೆಯಾಗಿಟ್ಟುಕೊಳ್ಳಬಹುದು. ಎಲ್ಲ ಜಾತಿಯ ಆಸಕ್ತ ತರುಣರಿಗೂ ಒಂದೇ ಉನ್ನತ ವಿದ್ಯಾಭ್ಯಾಸವನ್ನು ಹತ್ತಾರುವರ್ಷ ಕೊಡುತ್ತೇವೆಂದಿಟ್ಟು

ಕೊಳ್ಳೋಣ. ಎಂ.ಬಿ.ಬಿ.ಎಸ್ ; ಬಿ.ಇ. ಎಂ.ಎ-ಎಂ.ಎಸ್ಸಿ ; ಐ.ಎ.ಎಸ್—ಇತ್ಯಾದಿಗಳನ್ನು ಕೊಡುತ್ತೇವೆಂದೆ ತಿಳಿದು ಕೊಳ್ಳೋಣ. ಅವರಿಗೆ ಯಾವುದೇ ಜಾತಿಭಾವ ಬರದಂತೆ ಶಿಕ್ಷಣ ನೀಡುತ್ತೇವೆನ್ನೋಣ. ಅವರು ಶಿಕ್ಷಣಗೊಳ್ಳುವ ಅವಧಿಯಲ್ಲಿ ಬರುವ ನಾನಾಕ್ಲೇಶಗಳನ್ನು ನಿವಾರಿಸುತ್ತೇವೆ ಎನ್ನೋಣ. ಪದವಿ ಪಡೆದು ಅಧಿಕಾರ ಪದವಿಗಳಿಸುವ ಸ್ಥಿತಿಗವರು ಬಂದೊಡನೆ ಅವರು ತಮ್ಮ ತಮ್ಮ ಹಾದಿಯಲ್ಲಿ ನಡೆಯಬೇಕಾಗುತ್ತದೆ. ಎಲ್ಲರಿಗೂ ಒಂದೆ ಮಟ್ಟದ ಫಲಿತಾಂಶ ಲಭಿಸುತ್ತದೆಂದರೂ ಅವರಿಗೆ ಒಂದೆ ಮಟ್ಟದ ನೌಕರಿ ಒಮ್ಮೆಲೆ ಲಭಿಸುತ್ತದೆನ್ನಬರುವಂತಿಲ್ಲ. ಆಗ ಈ ಮರೆತಿದ್ದ ಜಾತ್ಯಂಶಗಳೆ ಪ್ರಭಾವಶಕ್ತಿಗಳಾಗಿ ಕೆಲಸಮಾಡತೊಡಗುತ್ತವೆ. ಬುದ್ಧಿವಂತನನ್ನೂ ಮಂದಬುದ್ಧಿಯವನನ್ನೂ ಮೇಲೇರಿದವನನ್ನೂ ಮೇಲೇರಲಾಗದವನನ್ನೂ ಈ ಶಕ್ತಿಯೆ ಹಿಡಿದೆಳೆದಾಡತೊಡಗುತ್ತದೆ. ಈ ಸೆಳೆತದಲ್ಲಿ ಹೇಗೊ ಬದುಕುತ್ತಾರೆನ್ನೋಣ. ಆದರೆ ಅವರಲ್ಲಿ ಈರ್ಷಾಸೂಯೆ ಸ್ಪರ್ಧೆ ತಪ್ಪೀತೆ ? ಸಾಮಾಜಿಕವಾಗಿ ಹೊಸ ಸವಲತ್ತು ಪಡೆದುಕೊಂಡ ಮತ್ತಿನಲ್ಲಿ ಅವರಿಗೆ ತಾವು ತಮ್ಮವರಿಗಿಂತಲೆ ಮೇಲೆಂಬ ಕೃತಕಪ್ರತಿಷ್ಠೆ ಮೂಡುತ್ತದೆ. ಆರ್ಥಿಕಸುಸ್ಥಿತಿ-ಅಧಿಕಾರದ ಮತ್ತುಗಳೆಲ್ಲ ಸೇರಿ ಅವರ ತಲೆ ತಿರುಗಿಸುತ್ತದೆ. ಆದರೆ ಅದನ್ನು ಸಮತೋಲಗೊಳಿಸುವ ಮೌಲ್ಯವಂತಿಕೆ ಯಿರುವುದಿಲ್ಲ. ಆಗ 'ಗಗನವನಡರಿದ ಕಾಗೆಯಂತೆ' ಎಂಬ ಅಣ್ಣನವರ ಮಾತು ಸತ್ಯವಾಗಿ ತೋರತೊಡಗುತ್ತದೆ. ಆಗಲೆ ಅವರನ್ನು ತಿದ್ದಬೇಕಾದುದಾದರು. ವಾಹನಗಳು ಸರಳವಾಗಿರುವಾಗ ಅವುಗಳ ವೇಗವೂ ಮಂದವಾಗಿರುತ್ತದೆ. ವೇಗದವಾಹನವಾದಂತೆಲ್ಲ ಅದರ ತಂತ್ರವೂ ಜಟಿಲವಾಗುತ್ತದೆ. ವೇಗವರ್ಧಕಗಳಿರುವಂತೆಯೆ ವೇಗನಿಯಂತ್ರಕಗಳೂ-ಬ್ರೇಕುಗಳೂ ಅಷ್ಟೆ ಸಂಕೀರ್ಣವಾಗಬೇಕಾಗುತ್ತದೆ. ಆ್ಯಕ್ಸಿಲೇಟರ ಪಕ್ಕದಲ್ಲೆ ಬ್ರೇಕ್‌ಗಳನ್ನು ಕಾರುವೋಟರು ಗಳಲ್ಲಿಟ್ಟಿರುತ್ತಾರೆ. ತನ್ನ ವೇಗವನ್ನು ತಾನು ಉತ್ಪಾದಿಸಿಕೊಳ್ಳುವಂತೆ. ತಾನೆ ನಿಯಂತ್ರಿಸಿಕೊಳ್ಳುವ ನಿರ್ದೇಶಿಸಿ ಕೊಳ್ಳುವ ಕರ್ಮವನ್ನು ವಹಿಸಿಕೊಳ್ಳಬೇಕಾಗುತ್ತದೆ. ಆಧುನಿಕ ಭಾರತೀಯನ ಜೀವನದಲ್ಲಿರುವ-ಇಂದು ತಲೆದೋರು ತ್ತಿರುವ ಅಸ್ವಾಸ್ಥ್ಯಕ್ಕೆ ಕಾರಣ ಅವನು ತಾನೀಗ ಪಡೆದಿರುವ ಹೊಸ ಶಕ್ತಿಗಳನ್ನು ನಿಯಂತ್ರಿಸಿಕೊಳ್ಳುವ-ಸಂಯಮಿಸಿ ಕೊಂಡು ವಿನಿಯೋಗಿಸಿಕೊಳ್ಳುವ ಶಕ್ತಿಯನ್ನು ಗಳಿಸಿಕೊಂಡಿಲ್ಲದಿರುವುದೇ ಆಗಿದೆ. ಆದ್ದರಿಂದ ಸರಳ ವಾಹನಕ್ಕೆ ಸೈಕಲ್ಲಿಗೆ-ಪೆಟ್ರೋಲ್ ಯಂತ್ರವನ್ನು ಜೋಡಿಸಿ ವೇಗವಾಗಿ ನಡೆಯಬಿಟ್ಟಂತಾಗಿದೆ. ವೇಗ ಬಂತು : ವೇಗಧಾರಣ ಶಕ್ತಿ ವೇಗಘಾತನಿವಾರಣ-ಧಾರಣಶಕ್ತಿ ಬಂದಿಲ್ಲ. ಸೈಕಲ್ಲಿಗೆ ಸೈಕಲ್ಲಿನ ವೇಗಕ್ಕನುಕೂಲವಾಗುವ ಬ್ರೇಕ್ ವ್ಯವಸ್ಥೆ ಯಿದೆ. ಆ ವೇಗಘಾತವನ್ನು ತಾಳಿಕೊಳ್ಳುವಷ್ಟು ಮಾತ್ರ ಶಕ್ತಿ ಉಳಿದ ಚಕ್ರಾದಿ ಭಾಗಗಳಿಗಿದೆ. ಘಾತನಿವಾರಕವಿಲ್ಲ. ಆದರೆ ಸ್ಕೂಟರ್ ವೇಗ ಪಡೆದ ಅದಕ್ಕೆ ಅದಿಲ್ಲದೆ ಅಪಾಯ. ಸಾಮಾನ್ಯನಿಗೆ ಅಂತಸ್ಸತ್ತ್ವ ನೀಡದೆ ಹೊರಸತ್ತ್ವವಷ್ಟ ರಿಂದಲೆ ನಡೆಸುತ್ತಿರುವ ತಪ್ಪನ್ನು ಮಾಡುತ್ತಿರುವಂತೆ ತೋರುತ್ತದೆ. ಭೋಗ ಅಧಿಕಾರಕ್ಕನುಗುಣಪ್ರಮಾಣದಲ್ಲಿ ಯೋಗವನ್ನು ಪಡೆಯದಾಗ ಮನಸ್ಸು ರೋಗಗ್ರಸ್ತವಾಗುತ್ತದೆ. ಇದೆಲ್ಲ ಭ್ರಮೆಯ ಮಾತಾಗಿ ತೋರಬಹುದು. ರೋಗ ಉಲ್ಬಣವಾಗದೆ ಅದರ ನಿವಾರಣದ ಬಗೆಗೆ ರೋಗಿಗಾಗಲಿ ಆತನ ಬಂಧುವರ್ಗಕ್ಕಾಗಲಿ ವೈದ್ಯದ ಬಗೆಗೆ ಗೌರವವಾಗಲಿ ಆಸಕ್ತಿಯಾಗಲಿ ಬರದು. ತುಂಬಾ ಶ್ರುತಿ ಕೆಟ್ಟಾಗ ಗಾಯಕನಿಗೆ ಶ್ರುತಿಯ ತಂಬೂರಿಯ ಕಡೆಗೆ ಕಿವಿ ಹೋಗುತ್ತದೆ ; ಶ್ರೋತೃಗಳಿಗೂ ಎಚ್ಚರ ಬರುತ್ತದೆ.

ಬಸವಣ್ಣನವರು ತಾವು ಮೇಲೆತ್ತಬಯಸಿದ ನಾನಾವರ್ಗದ ಜನರೆಲ್ಲ ಹೊಸ ಆವರಣದಲ್ಲಿ ಅನಾಮತ್ತಾಗಿ ಹೊಸಬರಾಗದೆ ಪೂರ್ತಿ ಹಳಬರಾಗಿಯೂ ಇರದೆ, ಎರಡರ ಸದ್ಗುಣಗಳನ್ನು ರೂಢಿಸಿಕೊಳ್ಳಲಾಗದೆ ದೌರ್ಬಲ್ಯ ಗಳತ್ತಲೆ ವಾಲುತ್ತಿದ್ದಾಗ ಅವರು ಎಚ್ಚತ್ತು ಆ ಜನರನ್ನು ತಿದ್ದಹೊರಡುತ್ತಾರೆ. ಆಗಲೆ ಈ ಮೌಲ್ಯಗಳ ಮಾತು ಬರುವುದು...."ಎಲವೊ ಎಲವೊ ಬ್ರಹ್ಮಹತ್ಯವ ಮಾಡಿದವನೆ ಒಮ್ಮೆ ಶಿವ ಎನ್ನಲೊ....ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು...." ಎಂದು ಮೊದಲು ಹೇಳಿದರು.

ಲಿಂಗಲಾಂಛನದ ಪ್ರಭಾವವನ್ನು ಸಾರಿದ್ದರು. ಆದರೆ ಅದರಷ್ಟರಿಂದ ಒಂದನೆ ತರಗತಿಗೆ ಸೇರಿದಂತಾಯಿತು. ಮಕ್ಕಳು ತಪ್ಪಕ್ಷರಗಳನ್ನು ಲೆಕ್ಕವಿಲ್ಲದಂತೆ ಬರೆಯುವದನ್ನು ಕಂಡಾಯಿತು. ಏನುಮಾಡುವುದು ? ತಿದ್ದಬೇಕೆ. ಅಕ್ಷರ ಕಲಿಕೆಯನ್ನೆ ಕೈಬಿಡಬೇಕೆ ? ಆಗ ಅನಿಸುತ್ತದೆ, ಈ ಜನ ಶಿವಮೌಲ್ಯವಂತರಾಗಬೇಕು. ಎಂದು. ಆಗ, "ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ ಅನ್ಯರಿಗೆ ಅಸಹ್ಯಪಡಬೇಡ ಇದಿರುಹಳಿಯಲುಬೇಡ. ತನ್ನ ಬಣ್ಣಿಸಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ, ಇದೇ ಕೂಡಲಸಂಗಮದೇವರ ಒಲಿಸುವ ಪರಿ"—ರೋಗಿಯನ್ನು ಮೊದಲು ಹೆದರಿಸದೆ ಆಸ್ಪತ್ರೆಗೆ ಸೇರಿಸಿಕೊಂಡಂತಾಯಿತು. ಆಮೇಲೆ ನಿದಾನವಾಗಿ ನಿದಾನಕಾರ್ಯ ಆರಂಭವಾಗುತ್ತದೆ. ಆಮೇಲೆ ವೈದ್ಯದ-ಚಿಕಿತ್ಸೆಯ ಆರಂಭ. ಶಸ್ತ್ರಚಿಕಿತ್ಸೆಯೂ ಆಗಬಹುದು.

ಈ ವಚನದಲ್ಲಿ ಆ ಕೆಲಸವಿದೆ. ಆಶ್ಚರ್ಯವೆಂದರೆ ಇಲ್ಲಿ ಹೇಳಿರುವ ಬಹುತೇಕ ಮೌಲ್ಯಗಳನ್ನು ಬುದ್ಧ ಮಹಾವೀರ ಕ್ರಿಸ್ತ ಗಾಂಧಿ ಮಹಮ್ಮದರೆಲ್ಲ ಹೇಳಿದ್ದರು–ಹೇಳಿದ್ದಾರೆ. ಸಾಮಾನ್ಯ ರಾಜ್ಯವ್ಯವಸ್ಥೆಯೂ ಹೇಳುವ ಮೌಲ್ಯಗಳೂ ಇವೆ. ಕೊಲ್ಲಬೇಡ ಕದಿಯಬೇಡ ಎಂದು ಎಲ್ಲ ರಾಜ್ಯಾಡಳಿತಗಳೂ ವಿಧಿಸುತ್ತವೆ. ಧರ್ಮದ ಮಾತಾಗಿದ್ದ ಈ ಮೌಲ್ಯಗಳೀಗ ಪ್ರಪಂಚದೆಲ್ಲೆಡೆಯೂ ರಾಜ್ಯಾಡಳಿತದ ಮೂಲ ಮೌಲ್ಯಗಳಾಗಿವೆ. ಆದರೆ ರಾಜ್ಯಾಡಳಿತಕ್ಕೆ ಸಿಲುಕಿರುವ ಮೌಲ್ಯಗಳುಂಟು. ಒಬ್ಬನನ್ನು ಕೊಲ್ಲಬೇಡ ಎಂದದು ಹೇಳಬಹುದು. ಒಬ್ಬನನ್ನು ಪ್ರೀತಿಪೂರ್ವಕವಾಗಿ ಪ್ರೀತಿಸು ಎಂದು ಅದು ಒತ್ತಾಯಮಾಡಬರುವುದಿಲ್ಲ. ಅದಕ್ಕೆ ಧರ್ಮವಲಯಕ್ಕೇ ಹೋಗಬೇಕಾಗುತ್ತದೆ. ರಾಜ್ಯಾಡಳಿತ ಪದ್ಧತಿ ಹೇಳಲಾಗದ ಇತರ ಧರ್ಮಾಚಾರ್ಯರು ಎತ್ತಿ ಹೇಳದ ಒಂದು ಮಹಾಮೌಲ್ಯವನ್ನು ಬಸವಣ್ಣನವರು ಹೇಳುತ್ತಾರೆ. ಅದೇ 'ಅನ್ಯರಿಗೆ ಅಸಹ್ಯಪಡಬೇಡ' ಎಂಬುದು. ಇದು ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯಾಡಳಿತದ ಮೌಲ್ಯವೂ ಆಗುತ್ತಿದೆ. ಅಸ್ಪೃಶ್ಯರನ್ನು ಹೀನೈಸುವುದು ಅಪರಾಧ ಎಂಬ ನ್ಯಾಯನೀತಿಯೀಗ ಮೂಡಿದೆ. ಬಸವಣ್ಣನವರ ಮಾತು ಹರಿಜನರನ್ನು ದೂರವಿಟ್ಟಿರುವುದೆ ಧರ್ಮವಾಗಿದ್ದ ಕಾಲದಲ್ಲಿ ಬಂದದ್ದೆಂಬುದನ್ನು ನೆನಪಿಡಬೇಕು. ಅಸಹ್ಯಭಾವದಿಂದ ಜಾತಿಪ್ರತಿಷ್ಠೆ ಶೋಷಣೆ ಬೆಳೆದಂತೆ. ಮತಾಂಧತೆ ಮತಕಲಹ ಹೆಚ್ಚಿತು. ಅಷ್ಟೆ ಅಲ್ಲ ಸಾಂಸಾರಿಕವಾಗಿ ಒಬ್ಬರನ್ನು ಕಂಡು ಮತ್ತೊಬ್ಬರು ಅಸಹ್ಯಪಡುವುದೆಷ್ಟಿಲ್ಲ. ಓದಿದವನು ಓದದವನನ್ನಷ್ಟೆ ಅಲ್ಲ: ಒಂದು ಶಾಖೆಯಲ್ಲಿ ವಿಶೇಷಾಧ್ಯಯನ ಮಾಡಿದವನನ್ನು ಮತ್ತೊಂದು ಲಾಭದಾಯಕ-ಪ್ರತಿಷ್ಠಾಪೂರ್ಣ ವಿಷಯದಲ್ಲಿ ವ್ಯಾಸಂಗಮಾಡಿದವನನ್ನು ಹೇಗೆ ನಡೆಸಿಕೊಳ್ಳುತ್ತಾನೆ ? ಓದಿದ ಗಂಡ ಅಷ್ಟಾಗಿ ಓದಿರದ ಹೆಂಡತಿಯನ್ನು ಹೇಗೆ ನಡೆಸಿಕೊಳ್ಳುತ್ತಾನೆ. ಇಲ್ಲೆಲ್ಲ ಅಸಹನೆ ಪ್ರಧಾನಕಾರಕ. ಅದರಿಂದಲೆ ಅಸಹ್ಯಭಾವ ಬಲಿಯುವುದಾದರು. ಆಚಾರ್ಯ ಆಚಾರ್ಯರಲ್ಲೂ ಈ ಅಸಹ್ಯಭಾವ ಎಷ್ಟಿಲ್ಲ. ಈ ಅಸಹ್ಯಭಾವಕ್ಕೆ ಯಾವ ನ್ಯಾಯಾಂಗ ಶಿಕ್ಷೆ ವಿಧಿಸಬಲ್ಲದು ಧರ್ಮವಲ್ಲದೆ ? ಬಸವಣ್ಣನವರು ಈ ಮೌಲ್ಯವನ್ನು ಹೇಳಿದಾಗ ಜಾತಿಸ್ತರದಿಂದ ಸಾಂಸಾರಿಕ-ಸಾಮಾಜಿಕ-ಮಾನಸಿಕಸ್ತರದವರೆಗೆ ಇರುವ ಎಲ್ಲ ಅಸಹ್ಯವನ್ನೂ ಕುರಿತೂ ಹೇಳಿದ್ದರು. ಎಲ್ಲ ಜಾತಿಯಿಂದ ಬಂದ ಲಿಂಗಲಾಂಛನದ ಸಾಧಕರಾಗಿದ್ದ ಬಹುತೇಕ ಶರಣರನ್ನು ಹೇಗೆಲ್ಲ ಈ ಭಾವ ಕಾಡುತ್ತಿತ್ತೆಂಬುದನ್ನವರು ಕಂಡಿದ್ದರು. ಈ ಒಂದು ಮಹಾ ಔಷಧದಲ್ಲಿ ಅನೇಕ ರೋಗಗಳನ್ನವರು ಗುಣಪಡಿಸುವುದಕ್ಕೆ ಹೊರಟರು. ಆ 'ಅಸಹ್ಯಪಡಬೇಡ' ಎಂಬ ಮಂತ್ರದ ವಿವರಣೆಯೆ "ಇದಿರು ಹಳಿಯಲುಬೇಡ. ತನ್ನ ಬಣ್ಣಿಸಬೇಡ" ಎಂಬ ಮೌಲ್ಯಗಳು. ಈ ಮೌಲ್ಯೋದ್ದೇಶವೇನು ? ಬಹಿರಂಗಶುದ್ಧಿ ಮಾತ್ರವಲ್ಲ ಅಂತರಂಗಶುದ್ಧಿ. ಇವರ ದೃಷ್ಟಿಯಲ್ಲಿ ಆ ಎರಡೂ ಅವಿಭಾಜ್ಯವಾಗಿ ಅಬಾಧಿತವಾಗಿ ಈ ಮಂತ್ರಗಳಿಂದ ಸಾಧಿತವಾಗುತ್ತವೆ.,

ಈ ಸಾಧನವನ್ನು ತಾನೇ ಮಾಡಬೇಕು. ತನಗಾಗಿ ಬೇರೊಬ್ಬರು ಮಾಡಬರುವಂತಿಲ್ಲ. ತನ್ನ ಕೆಲಸ ಕರ್ಮಕಾಯಕ ತಾನೇ ಮಾಡುವಂತೆ. Absentee Landlordism ನಡೆಯುವುದಿಲ್ಲ. "ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ? ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ?" "ಹಸಿವಾದೊಡುಂಬುದನು. ಸತಿಯ ಸಂಭೋಗವನು ಆನಾಗಿ ನೀ ಮಾಡೆಂಬವರುಂಟೆ ? ಮಾಡುವುದು ಮಾಡುವುದು ಮನಮುಟ್ಟಿ ; ಮಾಡುವುದು ಮಾಡುವುದು ತನುಮುಟ್ಟಿ. ತನುಮುಟ್ಟಿ ಮನಮುಟ್ಟದಿದ್ದೊಡೆ ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ !" ಇದಕ್ಕಿಂತಲೂ ಶಕ್ತಿವತ್ತಾಗಿ ಹೇಳಬರುವುದಿಲ್ಲ. ಸತಿಯಕೂಟ—ರತಿಸುಖದ ಮಾತಂತೂ ಯಾರ ಅಹಂಕಾಮ ಮೂಲವನ್ನೂ ಭೇದಿಸಿ ಈ ಮೌಲ್ಯವನ್ನು ನಾಟುತ್ತದೆ. ಮತ್ತೊಂದಂಶವೆಂದರೆ ತನುಮುಟ್ಟಿ ಮಾಡುವ ಮನಮುಟ್ಟಿ ಮಾಡುವ Passionate Actನ್ನು ವರ್ಣಿಸಿರುವುದು. ನಾವು ಮಾಡುವ ಯಾವ ಕರ್ಮದಲ್ಲಿ ಈ ಎರಡೂ ಮುಟ್ಟಿರುತ್ತದೆ ? ಗೇಣಿದಾರಿ ಪದ್ಧತಿಯೆ ಬರುತ್ತಿದೆಯೇನು ? ಆ ತನುಮನೈಕ್ಯಕ್ರಿಯೆ ಕರ್ಮದಲ್ಲಿರುವುದರ ಕೂಡೆ ಹಮ್ಮು ಸೇರಿರಬಾರದು. "ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು" ಶ್ರೀಕೃಷ್ಣನ ಕರ್ಮಯೋಗ ಇದಕ್ಕಿಂತ ಸುಲಭವಾಗಿ ಹೇಳಬಹುದೆ ?

ಹಮ್ಮು ಹೋಗುವುದು ಸಾಧ್ಯವೇ ಇಲ್ಲ. ಅದೇ ಆತ್ಯಂತಿಕವಾದುದು. ಆದರೆ ಅದಕ್ಕೆ ಹಲವೊಂದು ಮಾರ್ಗವುಂಟು. ತನ್ನ ಅಹಂಮೂಲವಾದ ಒಂದೊಂದನ್ನು ನಿರೋಧಿಸಬೇಕು. ಇಲ್ಲವೆ ಅದನ್ನು ಮಹತ್ತಿನ ಕೈಂಕರ್ಯಕ್ಕೆ ಬಿಟ್ಟುಬಿಡಬೇಕು. "ಕುಲಮದ"ವೆಂಬುದು ಆಗ ತುಂಬ ಘನಮದ. ಅದನ್ನು ಕಿಯುವುದೆಂದರೆ ಪುನರ್‌ಜನ್ಮ ಬಂದಂತೆ. ಅದನ್ನು ಬಿಡಲಾಗದಿದ್ದರೆ ಉಳಿದ ಅಹಂಕಾರ ಬಿಡುವುದು ಹೇಗೆ ? ತಮ್ಮನ್ನು ಅವರಿವರೆನ್ನದೆ ಬಂದು ನಮಸ್ಕರಿಸು

ತ್ತಿದ್ದರೆ ತಮ್ಮ ಅಯ್ಯತನ ಹೇಗೆ ಒಳಗೊಳಗೇ ಉಬ್ಬಿ ಹೆಗ್ಗೋಡಾಗುತ್ತಿದ್ದಿತೆಂಬುದನ್ನು ಕಂಡಿದ್ದ ಅಣ್ಣನವರು ಅದನ್ನು ಸುಟ್ಟುಬಿಡೆಂದು ಭಗವಂತನನ್ನು ಕೇಳಿಕೊಳ್ಳುತ್ತಾರೆ.

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬೆರೆವೆ ನಾನು ! ಕೆಚ್ಚು ಬೆಳೆಯಿತ್ತಯ್ಯ !
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರವ ಮಾಡು, ಕೂಡಲಸಂಗಮದೇವಾ

ಬರಿದೆ ನಮಸ್ಕರಿಸಿದರೆ ಸಾಕು ನಮ್ಮೊಳಗಿನ ಹಿರಿಯ ಜಾತಿ ಹಿಗ್ಗಿ ಬೆಬ್ಬಳಿಸುತ್ತದೆ. ನಮಸ್ಕಾರವಿಲ್ಲದಾಗ ನಮೆಯುತ್ತದೆ. ಹಾಗಿರುವಾಗ ಕಿಚ್ಚಾಡಬೇಕಾಗುತ್ತದೆ ಪಾಲಾಕ್ಷ ಧನಂಜಯ.

ಕುಲಮದವಳಿಯದನ್ನಕ್ಕ ಶರಣನಾಗಲೇಕೆ ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ
ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು
ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ
ಇಪ್ಪರು, ಕೂಡಲ ಸಂಗಮದೇವಾ, ನಿಮ್ಮ ಶರಣರು

ಕುಲಮದ ಹೀಗೆ ಕೆಡಬೇಕು. ವಾಮಾಚಾರದ ಬಯಕೆಯಿಂದ ಜಾತಿಭ್ರಷ್ಟರಾಗುವುದರಿಂದ ಜಾತಿಮದವಳಿದಂತಲ್ಲ; ಹಾಲು ಕೆಟ್ಟು ಮೊಸರು ತುಪ್ಪ ಆದಂತೆ ಆಗಬೇಕು. ಹಮ್ಮಿನ ಸೊಮ್ಮಿನ ಸಂಬಂಧ Property relationship ತಪ್ಪಬೇಕು. ಮಹಾವೀರ ಹೇಳಿದ "ಅಸ್ವಾಮ್ಯ ಪ್ರವೃತ್ತಿ." ಆಸ್ತಿಗಳಲ್ಲಿ ಈ ಕುಲಮದವೂ ಮುಖ್ಯ.

ಕಳೆಯಲಾಗದ ಇದನ್ನು ಮಹತ್ಕೈಂಕರ್ಯಗೊಡ್ಡುವ ಮೂಲಕ ತಿದ್ದಬಹುದೆಂದೆ. ಕೀಳಾಗಬೇಕು. ಯಾರಿಗೆ ? ಹಯನಕ್ಕೆ ಮಾತ್ರ. ಹಾಲು ಕೆಚ್ಚಲು ತುಂಬಿದ ಹಸುವಿನ ಮುಂದೆ ಕೀಳಾಗಿ ಕುಳಿತರಷ್ಟೇ ಹಾಲು ಕರೆಯಬಹುದು. "ಮೇಲಾಗಲೊಲ್ಲೆನು ಕೀಳಾಗಲಲ್ಲದೆ: ಕೀಳಿಂಗಲ್ಲದೆ ಹಯನಕರೆವುದೆ ?" ಭೌತಸುಖಭೋಗಕ್ಕಾಗಿ ಎಷ್ಟೆಲ್ಲ ದೈನ್ಯ ಪಡುವುದಿಲ್ಲ. ಕತ್ತೆಕಾಲು ಕಟ್ಟಬಹುದು. ಹಸುಮುಂದೆ ಮಂಡಿಯೂರ ಬರುವುದಿಲ್ಲ. ಶ್ರೀ ರಾಮಾನುಜರು ಮುಗಿದ ಕೈ ಮುಗಿದಿರಲಿ ಎಂಬ ದೃಷ್ಟಿತಾಳಿದರು. ಬಸವಣ್ಣನವರು ಆ ವಿನಯಭಕ್ತಿಗೆ ಒಂದು ವಿಶದೀಕರಣ ನೀಡುತ್ತಾರೆ. ಕೈಮುಗಿವ-ತಲೆಬಾಗುವ ಕ್ರಿಯೆ ಪ್ರೀತಿಗೌರವದ ಕ್ರಿಯೆಯಾದರೆ—ಅಹಂನಿರಸನದ ವಿಧಿಯಾದರೆ ಸಾಧನೆಯಾಗುತ್ತದೆ. ಲೌಕಿಕರಾದ ನಮ್ಮ ಬಾಗು-ಮುಗಿತಗಳು ಏತದ ತಲೆಬಾಗು. ಇಕ್ಕುಳದ ಕೈಮುಗಿತವಾಗಿವೆ ತಾನೆ. ಕೈಯಲ್ಲಿ ಹಿಡಿದುಕೊಳ್ಳಬರುವುದಾದರೆ ಯಾರುತಾನೆ ಇಕ್ಕುಳ ಬಳಸುತ್ತಾರೆ. ಕಾದದ್ದನ್ನು ಬಿಗಿಯಾದದ್ದನ್ನು ಇಕ್ಕುಳದಿಂದ ಮಾತಾಡಿಸುತ್ತಾರೆ. ನೀರುಕೊಂಡುಹೋಗುವಾಗಷ್ಟೆ ಏತ ತಲೆಬಾಗಿ ಬಾವಿಯ ತಳಕ್ಕೆರಗುತ್ತದೆ. ತುಂಬಿಕೊಂಡೊಡನೆಯೆ ತುಂಬು ಬಾನಿಯನ್ನು ಮೇಲೆತ್ತಿ ಒಯ್ಯುತ್ತ ಚೆಲ್ಲುತ್ತ ಹೋಗುತ್ತದೆ. ಖಾಲಿಯಾದ ಮೇಲೆ ಮತ್ತೆ ಕಾಲಿಗೆರಗುತ್ತದೆ. ಈ ಬಗೆಯ ದೈನ್ಯ ಅವಮಾನಕರ.

ಏತ ತಲೆವಾಗಿದರೇನು ? ಗುರುಭಕ್ತನಾಗಬಲ್ಲುದೆ ?
ಇಕ್ಕುಳ ಕೈಮುಗಿದರೇನು ? ಭೃತ್ಯಾಚಾರಿಯಾಗಬಲ್ಲುದೆ ?

ನಿಜವಾದ ವಿನಯ-ಗೌರವಗಳು ಬೇರೆಯ ರೀತಿಯವು. ಸಾಮಾಜಿಕ ವಿನಯವನ್ನು ಗಮನಿಸುವಂಥವು. ತನ್ನೆಡೆ ಬರುವವರನ್ನ ಎಷ್ಟು ಜನ ಅಧಿಕಾರಿಗಳು ಪ್ರೀತಿಯಿಂದ ಆದರದಿಂದ ಮಾತನಾಡಿಸಿಯಾರು? ಏಕೆ ಹಾಗೆ ಮಾಡುತ್ತಾರೆ ? ತಮಗಿಂತ ಮೇಲಿನವರಿಗೆ ಬಾಗಿದ ತಲೆಯನ್ನು ಮೇಲೆತ್ತುವ ವಿಧಾನವೆ ಅದು ?

ಏನಿ ಬಂದಿರಿ ಹದುಳವಿದ್ದಿರೆ ? ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ ?

ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ . . .

ಬಸವಣ್ಣನವರು ಹೇಳಿದ ಎಂಟುನೂರು ವರ್ಷಗಳಾದ ಮೇಲೂ ಈ ವಚನವನ್ನು ಹೇಳಬೇಕಾದ ಅಗತ್ಯ ತಪ್ಪಿಲ್ಲ. ಮತ್ತೂ ಹೆಚ್ಚುತ್ತಿದೆಯೇನೊ. ಬದುಕಿಗೆ ಬಂದಮೇಲೆ ಅದಕ್ಕೆ ಕೊಡಬೇಕಾದ ಸುಂಕ-ಬೆಲೆ ತೆರಲೇಬೇಕು. ಕರ್ತವ್ಯ ಮಾಡಲೇಬೇಕು. ಈ ಕರ್ತವ್ಯದಲ್ಲಿ ಮೋಸ ಸಲ್ಲದು. "ಭಾಂಡವ ತುಂಬಿದ ಬಳಿಕ ಸುಂಕವತೆತ್ತಲ್ಲದೆ ಹಿರಹಿತ ಹೋಗಬಾರದು. ಕಳ್ಳನಾಣ್ಯ ಸಲುಗೆಗೆ ಸಲ್ಲದು. ಕಳ್ಳನಾಣ್ಯವ ಸಲ್ಲಲೀಯರಯ್ಯ." ಸುಂಕದಕಟ್ಟೆಯಲ್ಲಷ್ಟೆ ಸುಂಕಿಗ ಇದ್ದಾನೆಂದಲ್ಲ. ಎಲ್ಲೆಲ್ಲೂ ಇದ್ದಾನು. ಕಳ್ಳ ನಾಣ್ಯದ ಅರಿವು ಅವನಿಗೆ ಚೆನ್ನಾಗಿ ಗೊತ್ತುಂಟು. ಈ ಸಂಸಾರದ ವ್ಯವಹಾರದಲ್ಲಿ ಗೆಲ್ಲುವುದು ಸೋಲುವುದು ಎಂದಿಲ್ಲ. ಈ ಭೂಮಂಡಲದ ಮೇಲೊಂದು ಹಿರಿದಾದ ಅಂಗಡಿ ಹಾಕಿರುವ ಮಹಾದೇವಶೆಟ್ಟಿ ಕುಶಿಗಾರ. ಒಮ್ಮನವಾದರ ನುಡಿಯುತ್ತಾನೆ; ಇಮ್ಮನವಾದರೆ ನುಡಿಯ. ಕಾಣೆಯ ಗೆಲ್ಲ ಅರ್ಧಗಾಣೆಯ ಸೋಲ. ಕೊಳ್ಳುವ ಮಾನ ಕೊಡುವ ಮಾನಗಳನ್ನು ಬೇರೆಬೇರೆ ಇಟ್ಟಿರುವುದು ಸಾಧ್ಯವಿಲ್ಲ. ನನ್ನದಾದರೆ ಒಂದಳತೆ: ನಿನ್ನದಕ್ಕೆ ಮತ್ತೊಂದು ಎಂಬಂತಿಲ್ಲ. ಮೇಲಾಗಿ ಅವನು ನಮ್ಮ ಮನ ನೋಡುತ್ತಾನೆ. ತನ್ನ ಮನದೊಡನೆ ಕೂಡಿ ಒಮ್ಮನವಾದರೆ ನುಡಿಯುತ್ತಾನೆ: ಇಲ್ಲವೆ ಇಲ್ಲ. ಕಾರಣ ಅವನ ಧ್ಯೇಯ **No Profit, No Loss.** ಹಾಗಿರುವಾಗ ಕೃತಕ ವಿನಯವೇಕೆ ? "ಕಾಣೆಯ ಗೆಲ್ಲ ಅರ್ಧಗಾಣೆಯ ಸೋಲ". "ಒಮ್ಮನವಾದರೆ ನುಡಿವ ಇಮ್ಮನವಾದರೆ ನುಡಿಯ" ಎಂಬ ಧೋರಣೆ ಎಷ್ಟು ಆರೋಗ್ಯಕಾರಿ! ಭಗವದ್‌ವ್ಯಾಪಾರದಲ್ಲಿ ಯಾರನ್ನು ಸೋಲಿಸಿ ಮೆರೆಯಬೇಕೆಂದಿಲ್ಲ. ಗೆಲುವೂ ಸೋಲೂ ಇರದ ಸಮಭಾವಸಿದ್ಧಿ ಲಭಿಸಬೇಕೆಂಬುದು ಮುಖ್ಯ.

ಹರಸಿಕೊಂಡು ಮಾಡುವುದೆಲ್ಲ ವ್ಯಾಪಾರ. ಹಾಗೆಯೆ ನೆರಪಿಕೊಂಡು ಮಾಡುವುದು ಡಾಂಭಿಕತನ. ದೇವರನ್ನು ಶೆಟ್ಟಿಮಾಡಿದರೆ ಅವನೇನು ಮಾಡಿಯಾನು. ಭಕ್ತಿಯೆಂಬುದು ಕೈಕೂಲಿಯಲ್ಲವಲ್ಲ ಹಾಗೂ ಪ್ರದರ್ಶನವೂ ಅಲ್ಲ. "ಸಾ ಪರಮಪ್ರೇಮರೂಪಾ" ಎಂಬ ನಾರದಭಕ್ತಿಸೂತ್ರದ ಉಕ್ತಿಯನ್ನು ನೆನೆದುಕೊಳ್ಳಬಹುದು. "ಹರಸಿ ಮಾಡುವುದು ಹರಕೆಯ ದಂಡ. ನೆರಪಿ ಮಾಡುವುದು ಡಂಬಿನಭಕ್ತಿ. ಹರಸಬೇಡ. ನೆರಹಬೇಡ. ಬಂದ ಬರವನರಿದರೆ ಕೂಡಿಕೊಂಡಿಪ್ಪ...." ಈ ಹರಕೆಯ ಭಕ್ತಿಯಂತೆ ನೇಮಾಚರಣದ ಭಕ್ತಿಯಿದೆ. ಈ ನೇಮಗಳಾದರೂ ಎಂತಹವು ? ಈ ಹಿಂದೆಯೆ ವಿವರಿಸಿರುವಂತೆ ಎಲ್ಲ ರುಚಿಕರ, ದುಬಾರಿಯಾದುವು. ಅಷ್ಟರಿಂದಲೆ ಮೇಲ್ಸ್ವರ್ಗವಾಗುವ ಹಮ್ಮು. "ಹಾಲ ನೇಮ, ಹಾಲಕೆನೆಯ ನೇಮ ; ಕೆನೆತಪ್ಪಿದ ಬಳಿಕ ಕಿಚ್ಚಡಿಯ ನೇಮ ; ಬೆಣ್ಣೆಯ ನೇಮ! ಬೆಲ್ಲದ ನೇಮ! ಅಂಬಲಿಯ ನೇಮದವರಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯನೇಮದವ ಮಾದಾರಚೆನ್ನಯ್ಯ !" ಈ ವಚನದ ಮೂಲಕ ಅಂತ್ಯಜಗಮನವನ್ನು ಮಾರ್ಮಿಕರೀತಿಯಿಂದ ಹರಿಸಿದ ಅಣ್ಣನವರು ನೇಮಕ್ಕೆ ಅದ್ಭುತವಾದ ರೀತಿಯಲ್ಲಿ ಹೊಸ ವ್ಯಾಖ್ಯಾನವನ್ನು ನೀಡುತ್ತಾರೆ: ಬಂದುದ ಕೈಕೊಳ್ಳಬಲ್ಲರೆ ನೇಮ. ಇದ್ದುದ ವಂಚನೆಯ ಮಾಡದಿದ್ದರೆ ಅದು ನೇಮ: ನಡೆದು ತಪ್ಪದಿದ್ದರೆ ನೇಮ. ನುಡಿದು ತಪ್ಪದಿದ್ದರೆ ನೇಮ. ನಮ್ಮ ಕೂಡಲಸಂಗನ ಶರಣರು ಬಂದರೆ ಒಡೆಯರಿಗೊಡವೆಯನೊಪ್ಪಿಸುವುದೇ ನೇಮ!"

ಬಂದುದನ್ನು ಕೊಳ್ಳುವುದಿದೆಯಲ್ಲ ಅಸಾಧಾರಣಶಕ್ತಿಯನ್ನಪೇಕ್ಷಿಸುವ ಸವಾಲು. ಅಷ್ಟು ಶಕ್ತಿ ಉಳಿದುವಕ್ಕೂ ಬೇಕು. ಈ ಶಕ್ತಿವಂತರನ್ನು ಸಿದ್ಧಮಾಡುವುದೆ ಅಣ್ಣನವರ ಧ್ಯೇಯ. ಶಿವನಿರ್ಭಯವಿದ್ದುದರಿಂದಲೆ: "ನಾಳೆ ಬಪ್ಪುದು ನಮಗಿಂದೆ ಬರಲಿ ; ಇಂದು ಬಪ್ಪುದು ನಮಗೀಗಲೆ ಬರಲಿ ; ಇದಕಾರಂಜುವರು ಇದಕಾರಳುಕುವರು ಜಾತಸ್ಯಮರಣಂ ಧ್ರುವಂ !" ಈ ಶಿವಧೈರ್ಯ ಭಯಂಕರವಾದದ್ದೆ ಸರಿ. ಈ ಧೈರ್ಯ ಕೂಲಿಗಾಗಿ ಮಾಡುವಾಗ, ಸುಖಾಂಕ್ಷಿಯಾಗಿ ಮಾಡುವಾಗ ಬರುವುದಿಲ್ಲ. "ಜೋಳವಾಳಿಯಾನಲ್ಲ ವೇಳೆವಾಳಿಯಾನಲ್ಲ ; ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ ! ಕೇಳು ಕೂಡಲಸಂಗಮದೇವಾ : ಮರಣವೆ ಮಹಾನವಮಿ." ಈ ಕೆಚ್ಚನ್ನು ಕೂಲಿಯ ಸೈನಿಕರಲ್ಲಿ ತುಂಬಿ ತಾವು ಅರಸುತನದ ಕನಸು ಕಾಣುವವರೆ ಹೆಚ್ಚು. ಆದರಿಲ್ಲಿ ಅಣ್ಣ ತನ್ನನ್ನೆ ಕುರಿತು ಹೇಳಿಕೊಳ್ಳುವ ಮಾತಿದು. ಕಾಯುವುದು ಯಾವುದಕ್ಕೆ? ಅಲ್ಪಭೋಗಕ್ಕಾಗಿ. ಅದು ನಾಳೆ ಬರುವುದು ಈವಾಗಲೆ ಬರಲೆಂಬ ದೈನ್ಯ. ಆದರೆ ಸಾವಿಗೆ ಹಾಗೆ ಸಿದ್ಧವಾಗಿರಲು ಬೇಕಾದುದು ದೈನ್ಯವಲ್ಲ, ಬರಿಯ ಧೈರ್ಯವೂ ಅಲ್ಲ ; ಶಿವಧೈರ್ಯ. ಸಾವಾದರೂ ಆಯುಷ್ಯತೀರದೆ ಬಾರದು ! "ಆಯುಷ್ಯ ತೀರಿದಲ್ಲದೆ ಮರಣವಿಲ್ಲ! ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ! ಅಂಜಲದೇಕೋ ಲೋಕವಿಗರ್ಭಣೆಗೆ ಅಂಜಲದೇಕೋ ಕೂಡಲಸಂಗಮದೇವಾ, ನಿಮ್ಮಾಳಾಗಿ !" ನಿರ್ಭೀತಿಯಿಲ್ಲದ ಯಾವ ಶಿವಸಾಧನೆಯ...

ಆಗದು. ಸ್ವಾಮಿ ವಿವೇಕಾನಂದರು ಹೇಡಿಗಳನ್ನು ಮಾಡುವುದಾದರೆ ದೇವರನ್ನೂ ತಿರಸ್ಕರಿಸೆಂದು ಗುಡುಗಿದರು. ಪರಮ ಆತ್ಮವನ್ನು ಅಭೀತಿಯೆಂದೆ ಕರೆದರು. ಈ ದೃಷ್ಟಿಯ ಬಸವಣ್ಣನವರು ಭಯಕಾರಕವಾದ ಎಲ್ಲ ಕ್ಷುದ್ರದೈವಗಳನ್ನೂ ಕಿತ್ತೆಸೆಯುತ್ತಾರೆ.

ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ
ಮುರುಟುವ ದೈವವನೆಂತು ಸರಿಯೆಂಬೆನಯ್ಯ,
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯ
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯ
ಸಹಜಭಾವ ನಿಜೈಕ್ಯ ಕೂಡಲ ಸಂಗಮದೇವನೊಬ್ಬನೇ ದೇವ!

ಈ ವಚನದಲ್ಲಿ ತುಂಬಾ ಸ್ಪಷ್ಟವಾಗಿದೆ ಅಣ್ಣನವರ ದೃಷ್ಟಿ. ಜಾನಪದದ ಬಗೆಗೆ ಅಸಾಮಾನ್ಯ ಪ್ರೀತಿಯನ್ನು ತೋರಿದ ಅವರು ಏಕಾದರೂ ಅವರ ದೈವಕ್ಕೆ ಮುನಿದೆದ್ದರು ಎಂಬುದಕ್ಕೆ ಮೂಲಕಾರಣವಿಲ್ಲಿದೆ. ಭಯಕಾರಕ ದೈವಗಳು ಭಕ್ತನನ್ನಲ್ಲ ಸೃಷ್ಟಿಸುವುದು. ಜೋಳವಾಳಿ ವೇಳೆವಾಳಿಗಳನ್ನು, ಗುಲಾಮರನ್ನು. ರೋಗಗಳೂ ರೋಗಿಯನ್ನು ಹಾಗೆಯೆ ಮಾಡುತ್ತವೆ. ಮಾನವವಿಕಾಸದಲ್ಲಿ ಭಯಕಾರಕ ದೈವಗಳದು ಒಂದು ಘಟ್ಟ. ಅದರಂತೆ ಗುಲಾಮ-ಒಡೆಯ ಪದ್ಧತಿಯೂ ಒಂದು ಘಟ್ಟ. ಎರಡನ್ನು ಯಾರು ಮುಂದುವರಿಸಬಯಸುತ್ತಾರೆ ? ಸಹಜಭಾವದ ನಿಜಐಕ್ಯದ— ಯಾರ ಒತ್ತಾಯಕ್ಕೂ ಪೂಜಿಸದ ತಂತಾನೆ ಒಲಿಯುವ ಹಾಗೂ ತನ್ನಲ್ಲೆ ನಮ್ಮನ್ನು ಐಕ್ಯಗೊಳಿಸಿಕೊಳ್ಳುವ ಯಾವ ದೈವವುಂಟೊ ಅದನ್ನು ತೋರಲೆಂದೆ ಈ ದೈವಗಳನ್ನೆಲ್ಲ ಓಡಿಸುತ್ತಾರೆ. ಅರೇಬಿಯಾದಲ್ಲಿ ಮಹಮ್ಮದ್ ನಿರಾಕಾರದೈವವನ್ನು ತೋರಿ ತನ್ನ ಕಾಲದ ಜನರನ್ನು ಕಾಡುತ್ತಲಿದ್ದ ಭಯಕಾರಕ ದೈವಗಳನ್ನೆಲ್ಲ ಪುಡಿಮಾಡಿದರು. ಆದರೆ ಅವರ ದೈವದ್ವೈತಿ. ಆ ದೇವರು ತಂದೆಯಲ್ಲ : ದೇವರಿಗೆ ಯಾರೂ ಹೆಂಡತಿಯಿಲ್ಲ, ಮಕ್ಕಳಿಲ್ಲ. ನಾವೆಲ್ಲ ಗುಲಾಮರು. ಹಾಗಾಗಿ ಅಲ್ಲಿ ಅಂಜಿಕೆ ಉಳಿಯುತ್ತದೆ. ಈ ತತ್ತ್ವಕ್ಕಿಂತ ಭಿನ್ನ ಅಣ್ಣನವರದು. ದಾಸ್ಯಭಾವದಿಂದಾರಂಭವಾದರೂ ಕಡೆಯಲ್ಲಿ ಶಿವೈಕ್ಯದಲ್ಲಿ ಕೊನೆಗೊಳ್ಳುವುದು ಇದು. ಇವರು ಕಲ್ಪಿಸಿಕೊಂಡ ದೈವವೂ ನಿರಾಕಾರದೈವವೇ. "ಜಗದಗಲ ಮುಗಿಲಗಲ ಮಿಗೆಯಗಲದ" ದೈವವ. ಆದರೆ ಅದೇ ದೈವ ತನ್ನ ಲೀಲೆಯಿಂದ ಕೃಪೆಯಿಂದ ಕರಸ್ಥಲದಲ್ಲಿ ಚುಳುಕಾಗಿ ಬಂದಿದ್ದಾನೆ. ಅವನು ನಿರಾಕಾರ ; ಲೀಲಾರ್ಥವಾಗಿ ಸಾಕಾರ. ಅವನ ಸಾಧನೆ ಎಲ್ಲಿಯತನಕ ?

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ
ಮಾಟವುಳ್ಳನ್ನಬರ ಜಂಗಮವ ಹಾಡಿದೆ
ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ
ಈ ತ್ರಿವಿಧನಾಸ್ತಿಯಾದ ಬಳಿಕ
ಎನ್ನನಾಹಾಡಿಕೊಂಡೆ, ಕಾಣಾ, ಕೂಡಲಸಂಗಮದೇವಾ !

ಗುಲಾಮ ಪದ್ಧತಿಯಲ್ಲಿ; ಯಾವಾಗಲೂ ನಮ್ಮ ತಂದೆತಾಯಿ ಮಾಡಿದ ಸಾಲಕ್ಕಾಗಿ ನಾವೆಲ್ಲ ಅನುವಂಶಿಕವಾಗಿ ಗುಲಾಮ ಸೇವೆಯಲ್ಲೇ ತೊಡಗಬೇಕಾಗುತ್ತದೆ. ನಮ್ಮ ಭಕ್ತಿವಿಧಾನದಲ್ಲಿ ಹಾಗಲ್ಲ.

ಕಬ್ಬುನ ಪರುಷವೇದಿಯಾದರೇನು
ಕಬ್ಬುನ ಹೊನ್ನಾಗದೊಡಾ ಪರುಷವದೇಕೊ ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮಹರಿಯದೊಡಾ ಪೂಜೆಯದೇಕೊ !

ಅಲ್ಲಮಪ್ರಭು ಈ ಬಗೆಯ ಅನುಭೂತಿಯ ಸೆಲೆಯಾಗಿದ್ದ. ಆರಂಭವನ್ನು ಮಾಡುತ್ತಲೆ ಇದ್ದು ಉಣ್ಣಲಾಗದಿದ್ದರೇನು ಬಂತು. ಭಕ್ತಿಯನ್ನು ಮಾಡುತ್ತಲೆ ಇದ್ದರೇನು ಬಂತು ? ತನ್ನತಾನರಿಯದನಕ ಎಂದಾತ ಸ್ಪಷ್ಟಪಡಿಸಿದ. ಬಸವಣ್ಣನವರು ಒಂದು ಹೆಜ್ಜೆ ಮುಂದು ಹೋಗುತ್ತಾರೆ!

ಭಕ್ತನೆನಿಸುವೆನಯ್ಯ: ಮೆಲ್ಲಮೆಲ್ಲನೆ!
ಯುಕ್ತನೆನಿಸುವೆನಯ್ಯ : ಮೆಲ್ಲಮೆಲ್ಲಮೆಲ್ಲನೆ!
ಸಾರಿ ಶರಣೆನಿಸುವೆನಯ್ಯ : ಮೆಲ್ಲಮೆಲ್ಲನೆ!
ಎಡಹುಗುಳಿಗಳದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ
ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯ

ಶಿವಸಾಧನೆಗೆ ಆತುರವೇನೂ ಇಲ್ಲ: ಮೆಲ್ಲಮೆಲ್ಲನೆಯೆ ಸಾಧಿಸಬಹುದು. ತಾಳ್ಮೆ ಮಾತ್ರ ಬೇಕು. ಎಡಹುಕುಳಿಗಳನ್ನೆಲ್ಲ ದಾಟಿ ಶಿವೈಕ್ಯವಾಗುತ್ತ ಶಿವಾಧಿಕವೂ ಆಗಬಹುದೆಂಬ ನಚ್ಚು ಅಣ್ಣನವರಿಗೆ. ಯಾವ ಮಾರಿಮಸಣಿ ಹೀಗೆ ಆಗ ಮಾಡೀತು? ಆದರೆ ಮಾರಿಮಸಣಿಯೆಂಬ ಭಯಾನಕ ದೈವಗಳಾರು?

ಮಾರಿಮಸಣಿಯೆಂಬುವು ಬೇರಿಲ್ಲ ಕಾಣಿರೊ!
ಮಾರಿಯೆಂಬುದೇನು? ಕಂಗಳು ತಪ್ಪಿ ನೋಡಿರೆ ಮಾರಿ?
ನಾಲಿಗೆ ತಪ್ಪಿ ನುಡಿದರೆ ಮಾರಿ!
ನಮ್ಮ ಕೂಡಲಸಂಗಮದೇವರ ನೆನಹು ಮರೆದೊಡೆ ಮಾರಿ!

ಇದೂ ಕೂಡ ತುಂಬಾ ನವೀನ ದೃಷ್ಟಿ. ಮಾರಿ ಇಲ್ಲವೆಂದಲ್ಲ; ಇದೆ. ಆದರೆ ಹಾಗಲ್ಲ ಇರುವುದು, ಹೀಗೆ, ಎಂಬುದು ಅಣ್ಣನವರ ದೃಷ್ಟಿ. ಹೀಗೆ ದೃಷ್ಟಿಯನ್ನು ತಿದ್ದುತ್ತ ಧೈರ್ಯವನ್ನೂ ತುಂಬುತ್ತ ಸಾಮಾನ್ಯನನ್ನು ನಿರ್ಭೀತನನ್ನಾಗಿ ಮಾಡಿದ ಬಸವಣ್ಣನವರು ಜೀವನ ವಿರಾಗವನ್ನು ಬೋಧಿಸಲಿಲ್ಲ. ಆ ಲೋಕಕ್ಕಾಗಿ ಈ ಲೋಕವನ್ನು ಪಾಳುಮಾಡು ಎಂದೂ ಹೇಳಲಿಲ್ಲ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರುಯೆಂದರೆ ವಿನಾ, 'ಅಲ್ಲಿ'ಯನ್ನು ಇಲ್ಲಗೊಳಿಸಲಿಲ್ಲ. ಅಷ್ಟೆ ಅಲ್ಲ. "ಸ್ವಯಲಿಂಗದನುಭಾವ ತನಗೆ ದೊರಕೊಂಡ ಬಳಿಕ. ದೇವಲೋಕವೆಂಬುದೇನೊ ಮರ್ತ್ಯಲೋಕವೆಂಬುದೇನೊ? ಆವುದರಲ್ಲಿಯೂ ಭೇದವೇನಯ್ಯ! ಕೂಡಲಸಂಗಮದೇವ, ಬಳಿಕ ಆಲಸ್ಯವುಂಟೆ?" ಹಾಗೆಯೇ ದೇಹಾರಾಧನೆಯಲ್ಲಿ ಆತ್ಮ ಅಂಧರಾಗದಂತೆ ಎಚ್ಚರವಿದ್ದಂತೆಯೆ ಆತ್ಮಾನುರಕ್ತಿಯಲ್ಲಿ ದೇಹೋದಾಸೀನರಾಗದಂತೆ ನೋಡಿಕೊಂಡರು. ಕಾಯುವೆ ಕೈಲಾಸಯೆಂದರು. ಆದರೆ ಯಾರ ಕಾಯ? ಭಕ್ತನ ಕಾಯ. ಅಷ್ಟೇಕೆ, ನಾವೆಲ್ಲ ಶರಣರಾದರೆ ನಮ್ಮ ಕಾಯವೂ ಹಾಗಾದೀತು, ಅಲ್ಲ. ನಮ್ಮೆಲ್ಲರ ದೇಹವೂ ಶಿವಾರ್ಪಿತವಾಗಬೇಕು. ಆಗ ಅದು ಪ್ರಸಾದ ಕಾಯವಾಗುತ್ತದೆ. ಅಂಥ "ಪ್ರಸಾದಕಾಯುವ ಕೆಡಿಸಬಾರದು."

ಒಲ್ಲೆನೆಂಬುದು ವೈರಾಗ್ಯ : ಒಲಿವೆನೆಂಬುದು ಕಾಯಗುಣ!
ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ!
ಕೂಡಲಸಂಗಮದೇವನನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು!

ವೈರಾಗ್ಯ–ಕಾಯಗುಣಗಳ ನಡುವೆ ಸುವರ್ಣಮಾಧ್ಯಮವೊಂದನ್ನು ಕಂಡುಹಿಡಿಯುತ್ತಾರೆ. ಇದೇನು ಲಂಪಟತನವಲ್ಲ. ಸುಖಭೋಗವೂ ಅಲ್ಲ. ಕಷ್ಟಸಾಧ್ಯವಾದ ಸಂಸಾರಯೋಗ. ಆ ಯೋಗಕ್ಕೆ "ಸಂಸಾರವ ಸವೆಯೆ ಬಳಸುವ" ಶಕ್ತಿ ಲಭಿಸುತ್ತದೆ. ಆ ಯೋಗವೆಂಥದು?

ಸುಖ ಬಂದರೆ ಪುಣ್ಯದ ಫಲವೆನ್ನೆನು
ದುಃಖ ಬಂದರೆ ಪಾಪದ ಫಲವೆನ್ನೆನು
ನೀ ಮಾಡಿದೊಡಾಯಿತ್ತೆಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲಸಂಗಮದೇವಾ, ನೀ ಮಾಡಿದುಪದೇಶವ ಎನಗೀ ಪರಿಯಲಿ :
ಸಂಸಾರವ ಸವೆಯೆ ಬಳಸುವೆನು!

ಕರ್ಮವಾದ-ವಿಧಿವಾದ-ಉದಾಸೀನತಾವಾದ, ಯಾವುದೂ ಇಲ್ಲದೆ ಹಾಯಾಗಿರುವುದೆಷ್ಟು ಕಷ್ಟ. ಆಗ ಸಂಸಾರವನ್ನು ಸವೆಯೆ ಬಳಸಬೇಕು. ಬಳಸದೆ ಸವೆಸಬೇಕೆಂದಲ್ಲ. "ಬಳಸುತ್ತ ಬಳಸುತ್ತ ನಂಟು, ಬೆಳಗುತ್ತ ಬೆಳಗುತ್ತ ಕಂಚು"—ಎಂಬೊಂದು ಗಾದೆಯಿದೆ. ಆದರೆ ಬಳಸುತ್ತ ಬಳಸುತ್ತ ಸಂಸಾರ ಸವಿಯುವುದಿದೆಯಲ್ಲ ದೊಡ್ಡಯೋಗ. ಈ ಅರಿವೆ

ಶರಣತನದ ಸಿದ್ಧಿ : ಶಿವಯೋಗ. ಈ ದೂರವೆಲ್ಲಿ ನಾನೆಲ್ಲಿ ಎಂದರೆ. ಅರಿದರೆ ಶರಣ ಮರೆದರೆ ಮಾನವ! ಎನ್ನುತ್ತಾರೆ ಅಣ್ಣ.

> ಉಂಬ ಬಟ್ಟಲು ಬೇರೆ ಕಂಚಲ್ಲ: ನೋಡುವ ದರ್ಪಣ ಬೇರೆ ಕಂಚಲ್ಲ
> ಭಾಂಡವೊಂದೆ, ಭಾಜನವೊಂದೆ ; ಬೆಳಗೆ ಕನ್ನಡಿಯೆನಿಸಿತ್ತಯ್ಯ !
> ಅರಿದರೆ ಶರಣ, ಮರೆದರೆ ಮಾನವ : ಮರೆಯದೆ ಪೂಜಿಸು ಕೂಡಲ ಸಂಗಯ್ಯನ!

ಹಿಂದೆ ಕಂಚಿನಿಂದಲೆ ಕನ್ನಡಿಮಾಡುತ್ತಿದ್ದರು. ಉಜ್ಜಿ ಹೊಳೆಯುವಂತಾದ ಕಂಚು ಕನ್ನಡಿಯಾಗುತ್ತಿತ್ತು. ಹಾಗಾಗ ದಿದ್ದರೆ ಪಾತ್ರೆಪದಾರ್ಥವಾಗುತ್ತಿತ್ತು. ಕೂಲಿಗೂ ತಜ್ಞನಿಗೂ ಅಂತರವಿರುವುದು ಸರಿ. ಆದರೆ ಅದು ಆಜನ್ಮಸಿದ್ಧ-ಮರಣಾಂತಿಕವಲ್ಲ. ಬೆಳಗಿದರೆ ಕನ್ನಡಿ. ಇಲ್ಲವೆ ಬರಿಯ ಪಾತ್ರೆ ಎಂಬಂತೆ ಅರಿತರೆ ಶರಣ. ಮರೆತರೆ ಮಾನವ. ಇಬ್ಬರೂ ಎರಡು ಸ್ಥಿತಿಯ ಪ್ರತಿನಿಧಿಗಳು. ಸಾಮಾನ್ಯ ಶರಣನಾಗುವ-ಶಿವೈಕ್ಯನಾಗುವ ಯೋಗ ಎಲ್ಲರಿಗೂ ತೆರೆದಿದೆ. ಯಾರೊ ಕೆಲವರು ಹೋಗುತ್ತಾರೆ. ನನ್ನ ಜೀವ ಅಲ್ಪ ಎನ್ನಬೇಕಿಲ್ಲ. ದೀಪ ಅಲ್ಪ, ಕತ್ತಲು ಘನ ಎಂಬುದಿಲ್ಲದಂತೆ ಮರಹು-ಮಾಯೆ-ಘನವಾದದ್ದು, ಶಿವವನ್ನು ನೆನೆಯುವ ಮನ ಅಲ್ಪವಾದುದ್ದು ಎನ್ನುವುದು. ಹೀಗೆ ಶಿವಸುಲಭತೆಯ ಧೈರ್ಯನೀಡುತ್ತಾರೆ ಅಣ್ಣನವರು. ಸಾಧನೆ ಮಾಡುವುದು ನಮಗೆ ಬಿಟ್ಟುದು. ನಾವಾದರೂ ಬೆರಣಿ ಆಯುವುದರಲ್ಲಿ ಕಾಡುಮೇಡೆಲ್ಲ ಸುತ್ತುತ್ತಿದ್ದೇವೆ. ಆದರೆ ಅದು ಸಿಕ್ಕಾಗಲೆ ಅಟ್ಟುಣ್ಣುವುದು ತಿಳಿದಿಲ್ಲ. ಈ ದೇಹ ಶಿವಪ್ರಸಾದ ವಾದ್ದರಿಂದ ಇಲ್ಲಿರುವಾಗಲೆ ಶಿವಪಾಕವನ್ನು ಅಟ್ಟುಣಬೇಕೆಂಬುದು ಬಸವಣ್ಣನವರ ದರ್ಶನವಾಗಿತ್ತು.

ಎಂಟುನೂರು ವರ್ಷಗಳಾದ ಮೇಲೆ ಬಸವಣ್ಣನವರ ಈ ಮೌಲ್ಯಗಳನ್ನು ವಿವೇಚಿಸಿದರೆ ನಮಗೇನನ್ನಿಸೀತು ? ನಮ್ಮ ಇಂದಿನ ಬದುಕಿಗೆ ಇವು ಅಸಂಗತವೆನಿಸಾವೆ ? ಅಥವಾ ಸುಸಂಗತ-ಸ್ವೀಕಾರ್ಯ ಎನಿಸಿಯಾವೆ ? ಪ್ರಪಂಚದ ಹಲವು ಧರ್ಮಗ್ರಂಥಗಳಿಂದ ಆಧುನಿಕ ಜೀವನಯೋಗ್ಯವಾದ ಮೌಲ್ಯಗಳನ್ನು ಆಯ್ಕೆಮಾಡಿಕೊಳ್ಳಬೇಕೆನ್ನಿಸಿದರೆ, ನನಗನ್ನಿಸುತ್ತದೆ ಬಸವಣ್ಣನವರ ಈ ಮೌಲ್ಯಗಳನ್ನು ಹೆಚ್ಚು ಸೆಣಸದೆ ಒಪ್ಪಿಕೊಳ್ಳಬೇಕಾದೀತೆಂದು. ಇಲ್ಲಿ ಹೇಳಿರದ ಕೆಲವೊಂದು ಪ್ರಾಸಂಗಿಕವಾದ ವಿಧಿನಿಷೇಧಗಳನ್ನೂ ಅಣ್ಣನವರು ಆಡಿದ್ದಾರೆ. ಅವರ ಮೂಲ ಶಿವಾದರ್ಶಕ್ಕೆ ಒಪ್ಪಂದವಾಗದ ಕೆಲವೊಂದು ಅಂಥ ಬೆಲೆಗಳನ್ನೂ ನಾವೀಗ ಒಪ್ಪಬೇಕಿಲ್ಲ. ಅಧ್ಯಾತ್ಮ ಪುರುಷರ ಮೂಲಸತ್ತ್ವ ಅಂಥ ಚರಮೌಲ್ಯಗಳಿಂದ ಬದುಕುವುದಿಲ್ಲ. ಧರ್ಮದಲ್ಲಿ ಶ್ರುತಿ ಮತ್ತು ಸ್ಮೃತಿ ಅಂಶಗಳಿರುತ್ತವೆ. ಎಲ್ಲ ಕಾಲಕ್ಕೂ ಉಪಾದೇಯವಾಗಿರತಕ್ಕದ್ದು ಶ್ರುತಿ ; ತನ್ನಕಾಲಕ್ಕೆ ಅಗತ್ಯವಾಗಿದ್ದು ಆಮೇಲೆ ಅನಗತ್ಯವಾಗುತ್ತಹೋಗುವುದೆ 'ಸ್ಮೃತಿ.' ಹೀಗೆಂದು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದರು. ಮತ್ತವರಿಗೆ ಸ್ಮೃತ್ಯಂಶವೆ ಅಪ್ರಾಯವಾನವಾಗಿ ತೋರೀತು. ವಿಶ್ವಮಾನವೋಪಾಸಕರಿಗೆ ಶ್ರುತಿಯ ಅಂಶ ಸ್ವಾದು-ಸಾಧು ಎನಿಸುತ್ತದೆ—ಬಸವಣ್ಣನವರ ಮಾಹೇಶ್ವರ ಸ್ಥಲಭಕ್ತಿಯ ಮಾತುಗಳು, ಅವರ ಹಾಗೂ ಆ ಕಾಲದ ಶರಣಮಂಡಲಿಯ ಬೆಳವಣಿಗೆಯ ಅನಿವಾರ್ಯಾಂಗಗಳಾಗಿದ್ದುವು. ಈಗವು ಅಷ್ಟು ಪ್ರತಿಪಾದ್ಯವಲ್ಲ. ಬಸವಣ್ಣನವರ ಜೀವನದಲ್ಲಿ ಇಂಥ ಮಂಥನಕಾರ್ಯ. ಆಲೋಡನ-ಆಲೋಚನಕಾರ್ಯ ನಡೆಯುತ್ತಲೆ ಇತ್ತು. ಅವರು ಪ್ರಾರಂಭಿಕದಿನಗಳಲ್ಲಿ ತೋರಿದ ಉತ್ಸಾಹ-ಆವೇಶ-ಅಸಹನೆ-ರಭಸಗಳನ್ನು ಆಮೇಲಾ ಮೇಲೆ ಅಲ್ಲಮಾದಿ ಸಂಸರ್ಗದಿಂದ. ಮೇಲಾಗಿ ತಮ್ಮ ಆಂತರಂಗಿಕ ಹಾಗೂ ಸಾಮಾಜಿಕ ಅನುಭವಗ್ರಥನದಿಂದ ತಿದ್ದಿ ಕೊಳ್ಳುತ್ತಾರೆ. ಅವರಾದರೂ ಬುದ್ಧಕ್ರಿಸ್ತ ಮಹಾವೀರ ಮಹಮ್ಮದ್ ಶ್ರೀಕೃಷ್ಣರಂತೆ ಒಂದು ಮಥಿತಾರ್ಥಕ್ಕೆ ಬಂದು ತಲುಪಿದಮೇಲೆ ಬೋಧೆಗೆ ಹೊರಟವರಲ್ಲ. ತಮ್ಮ ಆತ್ಮಸಾಧನೆಯನ್ನೂ ಶೋಧನೆಯನ್ನೂ ಲೋಕಸೇವೆಯ ಶೋಧನೆಯ ಜೊತೆಜೊತೆಯೆ ಮಾಡುತ್ತಹೋದದ್ದರಿಂದ ಅವರ ಮಾತುಗಳಲ್ಲಿ ಆ ಎಲ್ಲ ತಳಮಳ ಆ ಎಲ್ಲ ಬೆಳವಣಿಗೆ ಕಾಣುತ್ತೇವೆ. ಅದ್ದರಿಂದಲೆ ಅವರು ಕೆನೆಗಟ್ಟಿದಾಗ ಆಡಿದ ಮಾತುಗಳನ್ನೆ ಹೆಚ್ಚು ಗಣನೆಗೆ ತೆಗೆದುಕೊಂಡು ಅವರನ್ನು ಮುಡಿದುಕೊಳ್ಳುವುದು ಶ್ರೇಯಸ್ಕರ.

ಅವತಾರ ತತ್ತ್ವದಲ್ಲಾದರೂ ಒಂದಂಶ ಸ್ಪಷ್ಟವಾಗಿದೆ. ಲೋಕೋದ್ಧಾರದ ಅಗತ್ಯ ಹೆಚ್ಚಿದಾಗ-ಧರ್ಮಗ್ಲಾನಿ ಅಧರ್ಮಾಭ್ಯುದಯ ಹೆಚ್ಚಿದಾಗ—ಭಗವತ್‌ಸತ್ತ್ವ ಅವತಾರಮನಸ್ಕವಾಗಿ ಲೋಕಕ್ಕೆ ಬಂದಾಗ ಯಾವ ರೂಪದಲ್ಲಿ ಬರುತ್ತದೆ. ಜಲಪ್ರಳಯಕಾಲದಲ್ಲಿ ಮೀನಾಗಿಯೆ ಬರಬೇಕು : ಅಂತೆ ಮಲಮಯವಾಗಿದ್ದಾಗ ಅದನ್ನೆ ಆಹಾರಮಾಡಿ ಕೊಳ್ಳುವ-ಅದನ್ನೂ ಭೇದಿಸುವ ವರಾಹರೂಪದಲ್ಲೆ ಬರಬೇಕಾಗುತ್ತದೆ, ಕ್ಷತ್ರಿಯ ಮತ್ತರಿಗೆ ಕೊಡಲಿಗೊರವನಾಗಿ : ಅವನೇ ಮತ್ತನಾದಾಗ ಮಹತ್ತಮ ಕ್ಷತ್ರಿಯ ಶ್ರೀರಾಮನಾಗಿ ಬರುತ್ತದೆ. ಸನಾತನ ಧರ್ಮವಾದರೂ ಹೀಗೆಯೆ

ಹೊಸಕಾಲದ ಅಗತ್ಯ ಪೂರೈಕೆಗೆ ಬರಬೇಕಾಗುತ್ತದೆ. ಧರ್ಮದೊಳಗೇ ಆ ರೀತಿಯ ಪುನರ್ಜನ್ಮ-ಧಾರಣ-ಪರಿಷ್ಕರಣ ಆಗದಿದ್ದಾಗ ಆ ಕೆಲಸ ಮಾಡಲಿಕ್ಕಾಗಿ ಬಂದ ಮತ್ತೊಬ್ಬ ಶ್ರೇಷ್ಠನೆ ನವಪಂಥದ ಅಧ್ವರ್ಯುವಾಗುತ್ತಾನೆ. ಬಸವಣ್ಣನವರ ಕಾಲದಲ್ಲಿ ಅಲ್ಲಮಾಧ್ಯಕ್ಷತೆಯಲ್ಲಿ ಶಿವಾನುಭಾವ ಪರಿಷ್ಕರಣಗೊಂಡರೂ ಮುಂದೆ ಅದು ವೈದಿಕ ಸ್ಪರ್ಧಿಯಾಗಿ ಅದರ ಕೆಲವೊಂದು ಸ್ಮೃತ್ಯಂಶಗಳನ್ನೂ ಗೊತ್ತಿಲ್ಲದಂತೆ ಸ್ವೀಕರಿಸಿಕೊಂಡಿತು. ಈಗ ವಿಚಾರ ಸಂಘರ್ಷಿತವಾದ ನಮ್ಮ ಜಗತ್ತಿಗೆ, ಕೆಳವರ್ಗ ಮೇಲೆ ಏರುತ್ತ-ಕೆಲವೊಮ್ಮೆ ಸರಿದಿಕ್ಕು ಕಾಣದೆ ತತ್ತರಿಸುತ್ತಿರುವ ಈ ಕಾಲದಲ್ಲಿ, ನಮ್ಮ ತ್ಯಕ್ತರು ಬಲಿಷ್ಠ ಮತಗಳ ಕರ್ಷಣಕ್ಕೆ ಸಿಕ್ಕುತ್ತಿರುವ ಹೊತ್ತಿನಲ್ಲಿ ಯಾವ ರೀತಿಯಲ್ಲಿ ಆ ಶಿವಾನುಭಾವ ಒದಗಿ ಬರಬೇಕು ? ಹರಿಜನರ ಕಾಲೋನಿಗೆ ಹೋಗಿ ಮರುಕದ ಮಾತಾಡಿ ಬಂದು, ತಮ್ಮ ಮಠಗಳ ಪ್ರತ್ಯೇಕತಾ ತತ್ತ್ವವನ್ನೆ ಬೆಳೆಸುವ ಹುನ್ನಾರು ಮಾಡಬೇಕೆ ? ದ್ವೈತವನ್ನೆ ಒಳಗೆ ಬೆಳೆಸಬೇಕೆ ? ಈಗಿರುವುದು ಧರ್ಮದಿಂದ ಉದ್ಧಾರ ಆಗಿರುವಾಗಿರುವಂತೆಯೆ. ಧರ್ಮದ ಉದ್ಧಾರವೂ ಆಗಿದೆ. ವಿಜ್ಞಾನದ ಸವಾಲನ್ನೂ ಎದುರಿಸಿ ಅದರ ಮಿತಿಗಳನ್ನೂ ತೋರಿ. ಅಲ್ಲಿ ತನ್ನ ಕಾಣಿಕೆಯನ್ನು ನೀಡಬೇಕಾಗಿದೆ. ಒಂದು ಕಾಲದಲ್ಲಿ ಧರ್ಮಮತವಾಗಿ ಒಳ್ಳೆಯ ಸಾಧನೆಯನ್ನು ಮಾಡಿದರೂ ಅದೂ ಆಳುವ ವ್ಯಸನಕ್ಕೆ ಸಿಕ್ಕುಕೊಂಡು ಅವಿವೇಕಕ್ಕೆ ಗುರಿಯಾಯಿತು. ಈಗ ವಿಜ್ಞಾನ ಪಾರಮ್ಯ ಆ ಅಪಾಯಕ್ಕೆ ಧಾವಿಸುತ್ತಿದೆ. ಆಳುವ-ಪ್ರಭುತ್ವಮಾಡುವ ಗೀಳುಬಂದಾಗ ಯಾವುದೂ ತಲೆತಿರುಗುತ್ತದೆ. ವಿಜ್ಞಾನವಾದರೂ ಈಗ ತನ್ನ ಅಂದಂದಿನ ಖಂಡದರ್ಶನವನ್ನೆ ಅಖಂಡಗೊಳಿಸುತ್ತ ಹೊರಟು ವಿನಯಮೀರಿದೆ. ಹಿಂದೆ ಮತ ಮಾಡಿದುದನ್ನೆ ಅದೂ ಮಾಡುತ್ತಿರುವಂತಿದೆ. ಇದರ ಜೊತೆಗೆ. ಈ ದಿನಗಳಲ್ಲಿ ಯುದ್ಧದ ಭೀತಿಯು. ಅದು ಮಾಡಬಹುದಾದ ಜಾಗತಿಕ ಸಂಪೂರ್ಣ ನಾಶಗಳ ಎಚ್ಚರವಿದ್ದರೂ : ಹಾಗೂ ಯುದ್ಧವೆಂಬುದು ಸಾಧ್ಯವೇ ಇಲ್ಲವೆಂಬುದು ಗೊತ್ತಿದ್ದರೂ ಶಸ್ತ್ರಪೂರೈಕೆಗಾಗಿ ಮಾಡುತ್ತಿರುವ ವೆಚ್ಚವೆಷ್ಟು ? ಅಮೆರಿಕೆ ಈಗ ಯೋಜಿಸಿರುವುದು ಸುಮಾರು ಒಂದೂಕಾಲು ಲಕ್ಷ ಕೋಟಿ ರೂಪಾಯಿಯಷ್ಟು-ನಮ್ಮ ರಾಷ್ಟ್ರದ ಹತ್ತೆಂಟುವರ್ಷದ ಸಮಗ್ರಯೋಜನೆಯ ವೆಚ್ಚ. ಈಗ ಸಿದ್ಧಪಡಿಸಿರುವ ಆಸ್ಫೋಟಕಗಳಾದರೂ ಎಷ್ಟು. ಪ್ರಪಂಚದ ೩೫೦ ಕೋಟಿ ಜನಗಳೊಬ್ಬೊಬ್ಬರ ತಲೆಯಮೇಲೂ ಐದೈದು ಟನ್ ಟಿ.ಎನ್.ಟಿ. ಪ್ರಮಾಣ. ಈ ಪ್ರಮಾಣದ ಜಗನ್ನಾಶಕ ಶಕ್ತಿಯನ್ನು ತಯಾರಿಸಲು ಮಾಡಿದ ವೆಚ್ಚ ಜಗತ್ತಿನ ಎಷ್ಟು ಶತಮಾನದ ಆಹಾರದ ವೆಚ್ಚ. ಇಷ್ಟಿದ್ದರೂ ಮತ್ತೂ ಅಸ್ತ್ರ ಸಿದ್ಧತೆಯ ವಾಂಛೆಯೇಕೆ ? ಯುದ್ಧ ಸಾಧ್ಯವಿಲ್ಲವೆಂದು ತಿಳಿದೂ ಯುದ್ಧ ವ್ಯಸನಬಿಡದ ಕಷ್ಟವೇಕೆ ? ಯುದ್ಧ ಬೇಡವೆಂದರೆ ಈಗಿರುವ ವಿನಾಶಕ ಸ್ಫೋಟಕಗಳನ್ನೆಲ್ಲ ಎಲ್ಲಿ ಬಿಸಾಡುವುದು ? ಭಸ್ಮಾಸುರನ ಸಹಸ್ರಾರು ಹಸ್ತಗಳನ್ನೀಗ ಎಲ್ಲಿ ಮುಚ್ಚಿಡುವುದು ? ಹಿಂದಿನ ಆಯುಧ ವಿಶೇಷಗಳಾದ ಗದಾ-ಚಕ್ರ ತ್ರಿಶೂಲ-ಕೋದಂಡ-ಬಾಣಾದಿಗಳನ್ನು ಶಸ್ತ್ರಾಗಾರದಲ್ಲಿಟ್ಟು ಕಾವಿನಾಳುಗಳನ್ನಿಟ್ಟು ಬಚ್ಚಿಟ್ಟಿರಬಹುದಾಗಿತ್ತು. ಅವುಗಳೇನೂ ತಮಗೆ ತಾವೇ ಯುದ್ಧ ಮಾಡಬರುತ್ತಿರಲಿಲ್ಲ. ಆದರೀಗಿನ ಅಣ್ವಸ್ತ್ರಗಳು ಯಾರ ಕಾವಿನಲ್ಲಿ ಸುಮ್ಮನಿರಬಲ್ಲವು ? ಯಾವಾಗ ಯಾರಿಂದ ಆಸ್ಫೋಟನಕ್ಕೆ ಈಡಾಗಬಹುದು.

ಹೀಗೆ ಜಾಗತಿಕವಾಗಿ ವಿನಾಶಕ ಶಕ್ತಿಯನ್ನು ಬಿಡುಗಡೆ ಮಾಡುತ್ತಿರುವ ಈ ದಿನಗಳಲ್ಲಿ ಮಾನವಜೀವ ಹೆಚ್ಚು ಅಂತಸ್ಸತ್ತ್ವ ಬೆಳಸಿಕೊಳ್ಳದಿದ್ದರೆ ಮತ್ತಾವ ರಕ್ಷೆಯಿದೆ. ಪ್ರಕೃತಿಯಲ್ಲಿ ಸಹಜವಾಗಿ ಇದ್ದಿಲ್ಲದ ಸರ್ಕಾರವೆಂಬೊಂದು ಮಾನವಕೃತ ವ್ಯವಸ್ಥೆಯನ್ನು ಮಾನವ ಕಲ್ಯಾಣಕ್ಕಾಗಿ ಒಪ್ಪಿಕೊಂಡು ಅದು ತರುವ ಕ್ಲೇಶಾದಿ ಸುಖಗಳನ್ನು ಅನುಭವಿಸುತ್ತಿರುವ ನಾವು ಈಗ ಮಾನವ ಕಲ್ಯಾಣಕ್ಕಾಗಿಯೆ ಹೆಚ್ಚಿನ ಸರ್ಕಾರಗಳನ್ನೆ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ದೈವಭಾವ ಅಂಥದು. ಅಧ್ಯಾತ್ಮ ಅಂಥದು. ಧರ್ಮ ಪ್ರಾರಂಭಿಕ ದಿನಗಳಲ್ಲಿ ಆ ಕೆಲಸ ಮಾಡುತ್ತದೆ. ಮತವಾದಾಗ ಸಾಮಾನ್ಯ ಸರ್ಕಾರ ಸಂಸ್ಥೆಗಳ ಮಟ್ಟಕ್ಕೂ ಹೋದಿತು. ಅವರಿಂದಾದಷ್ಟು ಅದರಿಂದಷ್ಟೆ ಮಾಡಿಸಬಹುದು. ಇಲ್ಲ ಬಿಡಬಹುದು. 'If there is no God let us create one' ಎಂದು ವಾಲ್ಟೇರ್‌ನಂಥ ವಿಚಾರವಾದಿ ಭಾವಿಸಿದ. ನಾವೀಗ ಇಲ್ಲದ ದೈವವನ್ನೇನೂ ಸೃಷ್ಟಿಸಬೇಕಿಲ್ಲ. ಅದರತ್ತ ನಮ್ಮ ದೃಷ್ಟಿಯನ್ನು ಹರಿಸಬೇಕಷ್ಟೆ. ಅದಕ್ಕೆ ನೆರವಾಗುವ ವಿಜ್ಞಾನ-ಧರ್ಮಗಳನ್ನೀಗ ಪೂಜಿಸಬಹುದು. ಈ ದಾರಿಯಲ್ಲಿ ಬಸವಣ್ಣನವರ ಮೌಲ್ಯ ಎಷ್ಟು ಸಾಧಕ ? ಅವರ ಸಂಕೀರ್ಣ ಮೌಲ್ಯವಾದ ಲಿಂಗಧಾರಣವಾದರೂ ಈಗ ಅಂದಿನ ತನ್ನ ರೂಪದಲ್ಲೆ ಸಾರ್ವತ್ರಿಕವಾಗಿ ಬರಲಾದೀತೆ ? ಆಧ್ಯಾತ್ಮಿಕ ದೀಕ್ಷೆಯಾಗಿ-ಸಾಮಾಜಿಕ ಭೇದ ನಿವಾರಕವಾಗಿ ನಮಗೀಗೊಂದು ಅಂಥ ಮೌಲ್ಯ ಬೇಕಿದೆ. ಯಾವ ರೂಪದಲ್ಲಿ. ಅವತಾರ ತತ್ತ್ವದಿಂದ ಅದಕ್ಕೆ ಸ್ಫೂರ್ತಿ ಲಭಿಸೀತು.

# ಅಡಿಟಿಪ್ಪಣಿ

* ಶಿವಶರಣರಿಗೂ ಹರಿದಾಸರಿಗೂ ಇರುವ ಸಾಮ್ಯಕ್ಕಿಂತ ವೈಷಮ್ಯಗಳು ಒಂದು ರೀತಿಯಿಂದ ವಿಶಿಷ್ಟವಾದವು. ಮೇಲು ನೋಟಕ್ಕೆ ಸಹೋದರರೆಂಬಂತೆ ಕಂಡರೂ ಸೂಕ್ಷ್ಮ ವಿಮರ್ಶೆಗೆ, ಆಧ್ಯಾತ್ಮಿಕ ಶ್ರದ್ಧಾ ವಿಚಾರಗಳಲ್ಲಾಗಲಿ ಸಾಮಾಜಿಕ ಆಚಾರ ವಿಚಾರಗಳಲ್ಲಾಗಲಿ, ಅನುಭವದ ಕ್ರಿಯೆಯಲ್ಲಾಗಲಿ, ಅಭಿವ್ಯಕ್ತಿಯ ಶಕ್ತಿಯಲ್ಲಾಗಲಿ, ದೂರಸಂಬಂಧಿಯಾಗಿಯೂ ಇರದ ಸಜಾತೀಯವಾಗಿಯೂ ಇರದ ಭಿನ್ನ ಜಾತಿಪ್ರಕೃತಿಯವರಾಗಿ ತೋರುತ್ತಾರೆ ಇವರಿಬ್ಬರೂ. ಶಿವಶರಣ ಮಂಡಲಿಯಲ್ಲಿ ಎಲ್ಲ ಜಾತಿಯ ಎಲ್ಲ ಸಂಸ್ಕಾರದ ವ್ಯಕ್ತಿಗಳೂ ನೆರೆದಿದ್ದರು. ಹರಿದಾಸರಲ್ಲಿ ಕನಕದಾಸರೊಬ್ಬರನ್ನು ಬಿಟ್ಟರೆ ಯಾರೂ ಸಾಮಾನ್ಯ ಜಾತಿಯವರೆ ಇಲ್ಲ. ಅವು ಹೋಗಲಿ ಮಧ್ವ ಪಂಥಕ್ಕೆ ಸೇರದವರೂ ಇಲ್ಲ. ಶರಣ ಸಮೂಹದಲ್ಲಿ ಕಂಡುಬರುವಷ್ಟು ಜನ ಸಾಧಕರು ಸಂಖ್ಯೆಯ ದೃಷ್ಟಿಯಿಂದಲೂ ಹರಿದಾಸರಲ್ಲೆಂದೂ ಇರಲಿಲ್ಲ, ಮಾತ್ರವಲ್ಲ ೪-೫ ಶತಮಾನದ ಅವಧಿಯಲ್ಲಿ ಹರಡಿಕೊಂಡಿರುವ ಆ ಪೀಳಿಗೆಯನ್ನೆಲ್ಲಾ ಸೇರಿಸಿದರೂ ಆಗುವುದಿಲ್ಲ. ಅಷ್ಟೆ ಅಲ್ಲ, ಭಾರತದ ಯಾವ ಪ್ರಾಂತದಲ್ಲೂ ಒಂದೇ ಕಾಲದಲ್ಲಿ ಆ ಪ್ರಮಾಣದಲ್ಲಿ ಭಗವದ್‌ಸಾಧಕರು ಬರಲಿಲ್ಲ. ಶರಣರು ಎಲ್ಲರೂ ವೀರಶೈವ ಪಂಥಕ್ಕೆ ಸೇರಿದವರಾದರೂ ಹಲವು ಅರಿವಿನ ಹಲವು ಇರವಿನವರಾದುದರಿಂದ ಅವರಲ್ಲಿ ಭಾವದ ವಿಚಾರದ ಏರುಬ್ಬರಗಳು ಸಂಘರ್ಷಗಳು ಇರುವುದು ಮಾತ್ರವಲ್ಲದೆ ವೈವಿಧ್ಯದ ಹರವು ಬರುವುದೂ ಸಾಧ್ಯವಾಯಿತು. ಹಲವು ವೃತ್ತಿ ಪ್ರವೃತ್ತಿಯ ಜನರಾದ್ದರಿಂದ ಅವರ ವಚನಗಳಲ್ಲಿ ಏನಿಲ್ಲದಿದ್ದರೂ ವೃತ್ತಿ ವಿಶಿಷ್ಟವಾದ ಅನುಭವಗಳು ಸಮರ್ಥ ಪ್ರತಿಮೆಗಳಾಗುವುದು ಸುಲಭವಾಯಿತು. ಒಬ್ಬರ ಪ್ರವೃತ್ತಿ ಮತ್ತೊಬ್ಬರ ಪ್ರವೃತ್ತಿಯೊಡನೆ ಸೆಣಸುವುದೂ ಮಣಿಯುವುದೂ ಒಬ್ಬರ ಅನುಭಾವ ಮತ್ತೊಬ್ಬರದನ್ನು ನಡೆಸುವ ತಿದ್ದುವ ಬೆಳೆಸುವ ಸಹಾಯಯೋಗ ಸಾಧ್ಯವಾಯಿತು. ವಚನದ ಮಾತಿಗೆ ವೀರ್ಯವತ್ತಾದ ಜಾನಪದೀಯವಾದ ಹೊಸ ತಿರುವು ಬಂತು. ಅದು ತನಕ ನೆಲಮನೆಗತ್ತಲಲ್ಲಿದ್ದ ವೃತ್ತಿವಿಶೇಷ ಅನುಭವಗಳು ಅನುಭಾವದ್ಯೋತಕವಾಗಿ ಸಮಯೋಗಗೊಂಡು ಭಾಷೆಯಲ್ಲಿ ಮೈದಾಳುವಂತಾಯಿತು. ಮೇಲಾಗಿ ಶರಣಧರ್ಮ ಪ್ರಾರಂಭವಾದದ್ದು ಸಂಪ್ರದಾಯದ ಪ್ರತಿಭಟನೆಯಿಂದ. ಸನಾತನಧರ್ಮದ ಅನಿವಾರ್ಯ ಅಂಗವೆಂದು ಆ ವೇಳೆಗಾಗಲೆ ಸಿದ್ಧವಾಗಿದ್ದ ಚಾತುರ್ವರ್ಣ್ಯದ ಹಾಗೂ ಅದರ ಸಂತಾನವಾದ ಜಾತಿಕೋಟೆಗಳ ವಿರುದ್ಧವಾಗಿ ಖಡ್ಗವೆತ್ತಿದ ಕೆಚ್ಚನ್ನು ಕಾಣುತ್ತೇವೆ. ವರ್ಣಾಶ್ರಮ ವ್ಯವಸ್ಥೆಯ ನೈರಂತರ್ಯದ ಬಗೆಗೆ ವೃಥಾಭಿಮೋಹವುಳ್ಳವರಿಗೆ ಇವರ ಹೋರಾಟ ನಾಸ್ತಿಕ ಪ್ರತಿರೋಧವಾಗಿ, ಇವರ ಧರ್ಮ ಅವೈದಿಕವಾಗಿ ಕಾಣುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಶಿಕ್ಷಿತರೂ ಅನಕ್ಷರಸ್ಥರೂ, ಪೂರ್ವ ಸಂಸ್ಕೃತಿಯ ಆನುವಂಶಿಕ ಸಂಪತ್ತಿಲ್ಲದ ಬಡವರೂ ಆಗಿದ್ದ ಶರಣರ ಮಾತಿನಲ್ಲಿ ಒರಟುತನ, ಪಂಡಿತ ದೃಷ್ಟಿಯ ಅಶುದ್ಧ ಪ್ರಯೋಗ ಶಾಸ್ತ್ರೀಯ ಜ್ಞಾನದ ಅಭಾವ ಕಾಣುವುದು ಸಹಜ. ಜಾತಿವ್ಯವಸ್ಥೆಯನ್ನು ಉಗ್ರವಾಗಿ ಖಂಡಿಸಿದುದು ಮಾತ್ರವಲ್ಲದೆ ಅದನ್ನು ಒಡೆದು ಒಂದೆ ಜಾತಿಯನ್ನು ಕಟ್ಟ ಹೊರಟುದುದು, ಹಾಗೂ ಅದಕ್ಕೆ ವೈಯಕ್ತಿಕ ವೈಚಾರಿಕ–ಸಾರ್ವತ್ರಿಕ ಭಾವನಾತ್ಮಕ ಸಮೃದ್ಧಿಯ ಧರ್ಮವೊಂದನ್ನು ಸನಾತನ ಸಾರದಿಂದಲೆ ಕರೆದು ಕಡೆದು ತಂದುದೂ, ಸರ್ವಸಮಾನ ಜಾತಿಯ ಜೊತೆಯಲ್ಲೆ ಆರ್ಥಿಕ ಸಾಮಾಜಿಕ ಸಮಾನ ಸ್ಥಿತಿಗತಿಗಳನ್ನು ಕಲ್ಪಿಸಹೊರಟುದೂ ಶಿವಶರಣರದೇ ಆದ ಹರಿದಾಸರದಲ್ಲದ ವೈಶಿಷ್ಟ್ಯ. ಹರಿದಾಸರಾರೂ ಪ್ರತಿಭಟನೆಯ ಫಲವಾಗಿ ಬಂದವರಲ್ಲ.

1 ಹರಿದಾಸ ಪಂಥದವರು ಕನಕದಾಸರನ್ನು ಎಂತಹ ರೀತಿಯಲ್ಲಿ ಸ್ವೀಕರಿಸಿಕೊಂಡರೆಂಬುದನ್ನು ನೋಡಿದರೆ ಈ ಅಂಶ ತಿಳಿದೀತು. ಹರಿದಾಸರೆಂದು ಕನಕದಾಸರನ್ನು ಪುರಂದರಾದಿಗಳೆಲ್ಲ ಮನ್ನಿಸಿದರೂ, ಸಾಮಾನ್ಯವಾಗಿ ಶಿಷ್ಟವರ್ಗವೆಲ್ಲ ಇವರನ್ನು ದಾಸರನ್ನಾಗಿಯೆ ಕಂಡುಕೊಂಡಿತು; ಕುರುಬರನ್ನಾಗಿಯೆ ಉಳಿಸಿಕೊಂಡಿತು ! ರಾಮಾನುಜ ಪಂಥದವರು ದೀಕ್ಷೆ ಕೊಟ್ಟಾಗಲೂ ಕನಕಣ್ಣ ಕುರುಬಣ್ಣನಾಗಿಯೆ ಉಳಿಯಬೇಕಾಯಿತು. ಕನಕ ಸಂತತಿ ಮತ್ತೆ ತನ್ನ ಹಳೆಯ ಕುರುಬ ಕುಲದಲ್ಲೆ ಮಲಗಬೇಕಾಯಿತು. ಆದರೆ ಶರಣ ಧರ್ಮಕ್ಕೆ ಬಂದ ಬ್ರಾಹ್ಮಣ ಬಸವಣ್ಣ, ಮಡಿವಾಳ ಮಾಚಯ್ಯ, ಹರಿಜನ ಹರಳಯ್ಯರೆಲ್ಲ ತಾವು ಸಮಾನರೆಂಬುದನ್ನು ಬಾಳಿ ತೋರಿಸಲು ತಮ್ಮ ಹಿಂದಿನ ಮೇಲು-ಕೀಳಿನ ಎಲ್ಲ ಪ್ರತಿಷ್ಠಾವಶೇಷಗಳನ್ನೂ ಸ್ವಯಂ ಪ್ರೀತಿಯಿಂದ, ಒಮ್ಮೊಮ್ಮೆ ಒತ್ತಡದಿಂದ ಬಿಟ್ಟುಕೊಟ್ಟರು. ಆಮೇಲೆ ಅವರ ಸಂತಾನವೆಲ್ಲ ಒಂದೇ ಜಾತಿಯಾಯಿತು. ತಾತ್ತ್ವಿಕವಾಗಿಯೂ ದ್ವೈತವನ್ನೆ ಒಪ್ಪಿಕೊಂಡ ಹರಿದಾಸ ಪಂಥ ಬದುಕಿನಲ್ಲಿ ಇಂಥ ಮಹತ್ತರ ಅದ್ವೈತ ಸಾಧನೆಯನ್ನೆಂದೂ ಮಾಡಲಾಗಲಿಲ್ಲ. ಇದೂ ಗಮನಾರ್ಹ ಸಂಗತಿಯೆ. ಇತ್ತೀಚಿನ ನಾವಾದರೂ, ಶ್ರೀರಾಮಕೃಷ್ಣ ಪರಮಹಂಸರ ಮಹಾತ್ಮ ಗಾಂಧೀಜಿಯವರ ಪ್ರಭಾವ ವಲಯಕ್ಕೆ ಬಂದಂತಹ ಹಿರಿಯ ಆಯ್ಕೆವಾಳರನ್ನು ಪರೀಕ್ಷಿಸಿ ನೋಡಿದರೂ ತಿಳಿಯುತ್ತದೆ: ನಾವು ನಮ್ಮ ನಮ್ಮ ಜಾತಿಕವಚಗಳನ್ನೆಷ್ಟೂ ಕಳಚಿ ಹೊರಬರಲಾರದವರಾಗಿದ್ದೇವೆ, ನಮ್ಮ ಜಾತಿ ಖರ್ಪರಗಳನ್ನು ಆ ಮಹಾಪುರುಷರ ಪಂಥವೂ ಕಳೆಯಲಾಗದಿದೆ, ಎಂಬ ಘೋರ ಸತ್ಯ. ಈ ದೃಷ್ಟಿಯಿಂದಲೂ ಶರಣರ ಸಾಧನೆಯನ್ನು ಪರೀಕ್ಷಿಸಬೇಕು.

ಅಷ್ಟೆ ಅಲ್ಲ, ಪುರಂದರದಾಸರಂತಹ ಮಹಾತ್ಮರು ತಾವು ಜಂಗಮರೆಂದು ಒಂದೆಡೆ ಹೇಳುವ ಮಾತನ್ನೂ ಕೂಡ ವ್ಯಂಗ್ಯಾರ್ಥದಲ್ಲಿ ಗಮನಿಸುವ—ಜಂಗಮ ಎಂದರೆ ವೀರಶೈವ ಅರ್ಥವಲ್ಲ, ಮಾಧ್ವತತ್ತ್ವ ದೃಷ್ಟಿಯಲ್ಲಿ ಒಂದು ವರ್ಗದ ಹರಿಗಣ ಎಂದೇನೊ ಅರ್ಥವನ್ನು ಕಲ್ಪಿಸುವ ಆಧುನಿಕ ಮತೀಯರಿರುವಾಗ ಏನೆನ್ನಬೇಕು ? ಒಂದು ವೇಳೆ ಇವರೆನ್ನುವಂತೆ ಅವರೇ ಎರಡರ್ಥವಿಟ್ಟು ಮಾತನಾಡಿದರೆ ಆಗ ನಮಗೆ ಆ ದಾಸವರೇಣ್ಯರ ಬಗೆಗೆ ಭ್ರಾಂತಿನಿರಸನವಾಗುತ್ತದೆ. ಶರಣರೆಂದೂ ಕವಡು ನುಡಿದವರಲ್ಲ. ಅವರ ಖಂಡನೆಯೂ ಖಡ್ಗನಿಶಿತ, ಬೈಗುಳೂ ಕೂಡ ವಜ್ರಪರುಶ.

[2] ನಮ್ಮವರು ಕುಲಗೋತ್ರಪ್ರವರ ಹೇಳುವಾಗ ಯಾವಾಗಲೂ ಮಹರ್ಷಿಗಳ ಬುಡಕ್ಕೇ ತಮ್ಮನ್ನು ಕಟ್ಟಿಕೊಳ್ಳುವುದು ರೂಢಿ. ಇದರಲ್ಲಿ ಒಳ್ಳೆ ಅರ್ಥವಿಲ್ಲದಿಲ್ಲ. ಆದರೆ ಮತ್ತೊಂದು ಒಗರೂ ಇದರಲ್ಲುಂಟು. ಅದೆಂದರೆ ಮಹರ್ಷಿ ವಂಶ ಮೂಲ ರಲ್ಲದವರು ಪೂಜ್ಯರಲ್ಲವೆಂಬುದು. ಇದೇ ಕಾರಣದಿಂದಾಗಿ ರಾಜರುಗಳೂ ಕೂಡ, ಅವರು ಬಿಟಕ್ಕೂ ಸದ್ಯೋಜಾತ ರಾಜ ವಂಶೀಯರಾಗಿದ್ದರೂ, ತಮ್ಮನ್ನು ಸೂರ್ಯ ಚಂದ್ರ ವಂಶಗಳಿಗೆ ಗಂಟಿಕ್ಕಿಕೊಳ್ಳುವುದರಲ್ಲೆ ಮಹಿಮೆಯನ್ನು ಕಂಡರು; ಅದನ್ನು ಕಂಡು ಸಾಮಾನ್ಯರೂ ಕೂಡ ವಿಸ್ಮಿತರಾದರು. ಇದಿಷ್ಟೆ ಅಲ್ಲ. ಪ್ರಾಚೀನ ಕಾವ್ಯಗಳಲ್ಲಿ ಬರುವ ಶಬರಿಯೆ ಮೊದಲಾದ ಭಗವದ್ಯುಕ್ತರನ್ನು ಪತಿತ ಜಾತೀಯರೆಂದು ಒಪ್ಪಿಕೊಳ್ಳುವ ಔದಾರ್ಯವನ್ನೂ ನಾವೆಷ್ಟೊ ಜನ ಕಳೆದುಕೊಂಡೆವು. ಅದಕ್ಕೊಂದು ನಿದರ್ಶನವನ್ನಿಲ್ಲಿ ಉದಾಹರಿಸಬಹುದು. ೧೯೬೩ರಲ್ಲೊಮ್ಮೆ ಆಕಾಶವಾಣಿಯಲ್ಲಿ ಶಬರಿಯನ್ನು ಕುರಿತ ಹರಿಕಥೆಯೊಂದು ಪ್ರಸಾರ ವಾಯಿತು. ಸಾಮಾನ್ಯವಾಗಿ ಹರಿಕಥೆಯೆಂದರೆ ರುಚಿಕೆಟ್ಟಿರುವ ನಾನು ಅದೇಕೊ ಕುತೂಹಲಗೊಂಡು ೫-೧೦ ನಿಮಿಷ ಕೇಳಿದೆ. ಆ ಹರಿಕಥೆಯ ದಾಸಮಹಾಚಾರ್ಯರು ಪ್ರಾರಂಭದಲ್ಲೆ ಅಪ್ಪಣೆ ಕೊಡಿಸಿದರು: "ಮಾತಂಗಿಯಾಗಿದ್ದ, ಅಂದರೆ ಬೇಡ ಕುಲದವಳಾಗಿದ್ದ ಶಬರಿಗೆ ಶ್ರೀರಾಮಭಗವಂತನ ದರ್ಶನಭಾಗ್ಯವಾದರೂ ಹೇಗೆ ಲಭ್ಯವಾಯಿತು ಎಂದು ಸಂದೇಹವೇಳುತ್ತದೆಯಲ್ಲವೆ? ಅದಕ್ಕೆ ಕೇಳಿ, ಆಕೆ ಹಿಂದಿನ ಜನ್ಮದಲ್ಲಿ ಮಹಾ ಅಪ್ಸರೆ. ಪ್ರಮಾದವಶಾತ್ ಅಪರಾಧವೆಸಗಿ ನಾರದ ಮಹರ್ಷಿಗಳ ಶಾಪಕ್ಕೆ ಬಲಿಯಾಗಿ ಬೇಡತಿಯಾದಳು. ವಿಶಾಪವಾಗಿ ಭಗವಾನ್ ಶ್ರೀರಾಮಚಂದ್ರ ಪ್ರಭುವಿನ ದರ್ಶನ ದೊರೆಯಿತು. ಇಲ್ಲದಿದ್ದರೆ ಬರಿಯ ಮಾತಂಗಿಯಾಗಿದ್ದರೆಲ್ಲಿ ಸಾಧ್ಯವಿತ್ತು?!" ಹೀಗೆಂದು ಪ್ರಸಾರವಾದದ್ದು ಜಾತ್ಯತೀತ ರಾಷ್ಟ್ರದ ಆಕಾಶವಾಣಿಯಿಂದ. ಅದನ್ನು ಕೇಳಿ ನನಗೆ ರೇಡಿಯೋ ಸೆಟ್ಟನ್ನೆ ಕುಟ್ಟಿಬಿಡುವಷ್ಟು ತಾಳ್ಮೆಗೆಟ್ಟಿತು. ಆ ದಾಸವರೇಣ್ಯ ಅಪ್ಪಣೆ ಕೊಡಿಸಿದಂತೆ ಯಾವ ಮಹಾಕವಿ ಹಾಗೆಂದು ಕಲ್ಪಿಸಿದ? ವಾಲ್ಮೀಕಿಗಳಲ್ಲಿ ಯೋಗಿನಿಯಾಗಿದ್ದ ಶಬರಿ ದಾಸರಲ್ಲಿ ಕುಲಗೆಡುತ್ತಾಳೆ. ಈ ಎಲ್ಲ ವಿಕಾರ ಸೃಷ್ಟಿಗೆ ಕಾರಣವೇನು? ಭಗವದ್ವಿಭೂತಿಯಾಗಲಿ ಭಾಗವತರಾಗಲಿ ವರಿಷ್ಠ ಕುಲಜರಲ್ಲಿ ಮಾತ್ರವೇ ಉದ್ಭವಿಸುವುದು ಸಾಧ್ಯ ಎಂಬ ಗುತ್ತಿಗೆದಾರಿ ಮನೋಧರ್ಮದ ವಿತ್ತೋನ್ಮತ್ತ ಭ್ರಮೆ ಇರುವುದರಿಂದ ತಾನೆ? ಒಂದು ವೇಳೆ ಕುಲಹೀನರಲ್ಲಿ ಅವರು ಹುಟ್ಟಿದ್ದರೆ ಆಗ ಅವರ ಬೆಲೆ ಕಳೆಯುವುದು, ಅವರಿಗೆ ಬೆಲೆ ಕೊಡದಿರುವುದು! ಒಂದು ವೇಳೆ ಅವನು ಸತ್ತ್ವದ ಮಹಾ ವ್ಯಕ್ತಿ ಸಾಮಾನ್ಯ ಕುಲದವರಲ್ಲಿ ಹುಟ್ಟಿದಾಗ ಅವನನ್ನು ಕೃಪಾರೂಪದಲ್ಲಿ ಗುರುತಿಸಿದರೂ, ಅದಕ್ಕೇನೊ ಪುರಾಣ ಕಲ್ಪಿಸುವುದು; ಪಿತೃಮೂಲದಲ್ಲೆಲ್ಲೊ ಆ ಹೀನಕುಲಜ ಮಹಾಸತ್ತ್ವ ಬ್ರಹ್ಮಪಿಂಡವಾಗಿದ್ದಿರಬೇಕೆಂದು ಬೀಭತ್ಸ ವಿಕೃತ ಕಲ್ಪನೆ ಕಟ್ಟುವುದು. ಆದರೆ ಈ ವೃತ್ತಾಂತ ವಾಲ್ಮೀಕಿ ರಾಮಾಯಣದಲ್ಲೆ ಮುದ್ರಿತವಾಗಿರುವುದರಿಂದ, ಶ್ರೀರಾಮಾವತಾರಕ್ಕೆ ಪೋಷಕ ಅಗತ್ಯ ಪಾತ್ರವಾಗಿ ಬರುವುದರಿಂದ ಶಬರಿಯನ್ನು ಬಿಡುವಂತೆಯೂ ಇಲ್ಲ. ಆಕೆಯ ಮೌಲ್ಯಚ್ಛೇದ ಮಾಡುವಂತೆಯೂ ಇಲ್ಲ. ಆಗ ಉಳಿದ ದಾರಿಯೇನು? ಅವಳಿಗೊಂದು ದೇವ ಮೂಲವನ್ನು ಹುಡುಕುವುದು. ಅದನ್ನೆ ಹರಿಕಥೆ ದಾಸರು ಮಾಡಿರುವುದೂ ಕೂಡ.

ಈ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರು ತಮ್ಮ ಪಂಥವನ್ನಾಗಲಿ ವೈಯಕ್ತಿಕವಾಗಿ ತಮ್ಮನ್ನಾಗಲಿ ದೇವಯೋನಿಜರೆಂದೊ ಅಯೋನಿಜರೆಂದೊ ವೇದಮೂಲರೆಂದೊ ಹೇಳಿಕೊಳ್ಳಬಹುದಿತ್ತು. ಮತ್ತೆ ಹಾಗೆ ಮಾಡುವುದರಿಂದ ಸಾಮಾನ್ಯ ಮಾತ್ರಕೆಯನ್ನೆ ಅಲ್ಲಗಳೆದಂತಾಗುತ್ತಿತ್ತು; ಹಾಗೂ ಸಾಮಾನ್ಯನು ಆ ವಿಭೂತಿತ್ವಕ್ಕೇರಲಾರನೆಂಬ—ತಮ್ಮ ದರ್ಶನಕ್ಕೆ ವಿರುದ್ಧವಾದೊಂದು ದೃಷ್ಟಿಯನ್ನು ಬೀರಿದಂತಾಗುತ್ತಿತ್ತು. ಆದ್ದರಿಂದಲೆ ಬಸವಣ್ಣನವರು ತಮ್ಮ ಮೊರೆಯನ್ನು ಮಾದರಚೆನ್ನನಲ್ಲಿ ಅರಸುತ್ತಾರೆ. ಆದರೆ, ದುರ್ದೈವ. ಮುಂದೆ ಬಂದ ವೀರಶೈವರು ಆ ಎಚ್ಚರ ಕಾಣದಾದರು. ಆದ್ದರಿಂದಲೆ ಅವರು ಅಲ್ಲಮನನ್ನು ಕಾಮಮುಕ್ತನನ್ನಾಗಿ ಕಲ್ಪಿಸಿದರು; ಅಕ್ಕಮಹಾದೇವಿಯನ್ನು ಅಜನ್ಮ ಬ್ರಹ್ಮಚಾರಿಣಿಯೆಂದು ಭ್ರಮಿಸಿದರು; ಅಷ್ಟೆ ಅಲ್ಲ, ಇವರನ್ನು ಪರಮೇಶ್ವರಾವತಾರವೆಂದೆ ಭಾವಿಸಿದರು; ಹಾಗೆಯೆ ಚನ್ನಬಸವಣ್ಣನನ್ನು ಅಯೋನಿಜನೆಂದೂ ಸೃಷ್ಟಿಸಿದರು.

ಇದೇ ಮನೋಧರ್ಮ ಈಗಿನವರಲ್ಲಿ: ದೇಶೀಯವಾದುದೇನಿದ್ದರೂ 'ಕಂತ್ರಿ'; ಅದಕ್ಕೆ ಸತ್ತ್ವ ಕೂಡಿಬರಬೇಕಿದ್ದರೆ ಅದು ವಿದೇಶೀಯವಾದಾಗ, ವಿದೇಶ ಯಾತ್ರೆ ಹೋಗಿ ಬಂದಾಗ ಮಾತ್ರವೆ ಎಂಬ ಭಾವವಾಗಿ ವ್ಯಕ್ತವಾಗುತ್ತಿದೆ. ಹಾಗೆಯೆ ಸಮಕಾಲೀನಕ್ಕೆ ಬೆಲೆ ಬರಬೇಕಾದರೆ ಅದಕ್ಕೆ ಪ್ರಾಚೀನ ಸಂಗವಾಗಲೇಬೇಕೆಂಬುದಾಗಿ, ಎಲ್ಲಕ್ಕೂ ವೇದಮೂಲವನ್ನೆ ಹುಡುಕುವುದಾಗುತ್ತಿದೆ. ಬಸವಣ್ಣನವರೂ ತಮ್ಮ ಪ್ರಾಚೀನತೆಯನ್ನು ಗುರುತಿಸುತ್ತಾರೆ. ಆದರೆ ಹೀಗಲ್ಲ. ಬೇಕಾದರೆ ನೋಡಿ:

> ಅಯ್ಯಾ ನೀನು ಸಾಟ್ಯಕ್ಕೆ ನಿಂದಾಗ ನಾನು
> ಚೈತನ್ಯವೆಂಬ ವಾಹನವಾಗಿದ್ದೆನಯ್ಯ

ಇಲ್ಲಿ ಅವರು ತಮ್ಮ ಮತ್ತು ಪರಶಿವನ ಅವಿನಾ-ನಿರಂತರ-ಸಂಬಂಧವನ್ನಷ್ಟೆ ಗುರುತಿಸಿದ್ದಾರೆಯೆ ಹೊರತು ಬೇರಲ್ಲ.

[3] ನಮ್ಮಲ್ಲಿ ಯಾವ ಭಾರತೀಯನೂ ತನ್ನ ಇಂದಿನ ಕಷ್ಟಕಾರ್ಪಣ್ಯಗಳಿಗೆ ಪೂರ್ವಜನ್ಮದಲ್ಲಿ ತಾನೆ ಮಾಡಿದ ಕರ್ಮವೊಂದು ಕಾರಣವೆಂದು ಭಾವಿಸುತ್ತಾನೆ. ಇದು ಹಳ್ಳಿಗ–ಮೂಢ–ಶೂದ್ರನ ನಂಬಿಕೆಯಾಗಿರುವಂತೆಯೆ ಜೈನ ಬೌದ್ಧ ಹಿಂದೂ ಎಲ್ಲ ಧರ್ಮಗಳ ಕರ್ಮಸಿದ್ಧಾಂತವೂ ಆಗಿ ರೂಪಾಂತರಗೊಂಡಿದೆ. ಈ ಕರ್ಮಭಾವನೆ ವಿಧಿಕಲ್ಪನೆಗಿಂತ ಭಿನ್ನವೆಂಬುವನ್ನು ಮರೆಯಬಾರದು. ವಿಧಿ ಕಲ್ಪನೆ ಎಲ್ಲ ಆಗುಹೋಗನ್ನೂ ಅತೀತಶಕ್ತಿಯ ಇಚ್ಛೆಗೆ ಒಪ್ಪಿಸಿದರೆ, ಕರ್ಮತತ್ತ್ವ ಅದೃಶ್ಯವಾದ ಆದರೆ ನಾವೆ ಮಾಡಿಟ್ಟ ಕರ್ಮಫಲಕ್ಕೆ ಒಪ್ಪಿಸುತ್ತದೆ. ಇಂದಿನ ಕರ್ಮಗಳನ್ನು ಹಿಂದಿನ ಸದಸದ್ ಕರ್ಮಗಳು ನಿಯಂತ್ರಿಸುತ್ತಿದ್ದರೂ ಸಾಧನೆಯಿಂದ ಆ ಪ್ರಭಾವವನ್ನೂ ಮೀರಿ ಬೆಳೆಯಬಹುದೆಂಬ ಧೈರ್ಯವನ್ನೂ ಈ ಕರ್ಮತತ್ತ್ವ ನೀಡುತ್ತದೆಯೆ ಹೊರತು ನಮ್ಮನ್ನು ಬರಿಯ ನಿಸ್ಸತ್ತ್ವರನ್ನಾಗಿ ಮಾಡುವುದಿಲ್ಲ. ಅಷ್ಟೆ ಅಲ್ಲದೆ ವ್ಯಕ್ತಿಯ ಒಳಿತು ಕೆಡುಕಿಗೆಲ್ಲ ಅವನನ್ನೆ ಕೇಂದ್ರವನ್ನಾಗಿಯೂ ಮಾಡುತ್ತದೆ ಈ ತತ್ತ್ವ. ಎಲ್ಲ ಹೊಣೆಗಾರಿಕೆಯನ್ನೂ ಅವನಿಗೇ ನೀಡಿ ಅವನ ಮಹತ್ತ್ವವನ್ನು ಹೆಚ್ಚಿಸುತ್ತದೆ. ಇಲ್ಲದಿದ್ದರೆ, ಇದೇ

ಮತ್ತೊಂದು ರೀತಿಯ ವಿಧಿವಾದವಾಗುವುದಿದ್ದರೆ, 'ನಿರೀಶ್ವರವಾದಿ'ಗಳೆಂಬಂತೆ ತೋರುವ, ವ್ಯಕ್ತಿಪಾರಮ್ಯವನ್ನು ಸಾರುವ ಜೈನ ಬೌದ್ಧ ಧರ್ಮಗಳಾದರೂ ಏಕೆ ಇದನ್ನೊಪ್ಪುತ್ತಿದ್ದವು? ಆದ್ದರಿಂದ ಬಸವಣ್ಣನವರು ಕರ್ಮತತ್ತ್ವವನ್ನು ಅಲ್ಲಗಳೆಯುವ ಸಾಹಸಕ್ಕೆ ಹೋಗದೆ, ಆ ತತ್ತ್ವವನ್ನು ಜಾತಿವಾದಿಗಳು ಬಳಸಿಕೊಂಡ ವಿಧಾನವನ್ನಷ್ಟೆ ತಿದ್ದಹೊರಟರು. ಈಗ ಕೀಳು ಜಾತಿಯವನಾಗಿ ಹುಟ್ಟಿರುವವನು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕೆ ಸಾಯುವ ತನಕ ಆ ಶಿಕ್ಷೆ ಅನುಭವಿಸಬೇಕೇನೂ ಇಲ್ಲ–ಒಂದು ವೇಳೆ ಪಾಪ ಫಲವಾಗಿಯೆ ಈಗ ಕೀಳು ಜಾತಿಯವನಾಗಿ ಹುಟ್ಟಿದ್ದಾನೆಂದು ಇಟ್ಟುಕೊಂಡರೂ ಕೂಡ. ಚಿರಪತಿತನಿಗೂ ಉದ್ಧಾರ ಸಾಧ್ಯವಿರುವಾಗ ಈ 'ಪಾಪಿ'ಗೇಕೆ ಉದ್ಧಾರವಿಲ್ಲ. ಆ ಹಳೆಯ ಕರ್ಮಋಣವನ್ನೆಲ್ಲ ತೀರಿಸಿ ಋಣಮುಕ್ತನನ್ನಾಗಿ ಮಾಡುವ ಅಧ್ಯಾತ್ಮ-ಭಕ್ತಿ-ಶಿವಭಾವ ಇರುವಾಗ ಏನು ಭೀತಿ? ಬಸವಣ್ಣನವರ ದೃಷ್ಟಿ ಇದು. ಆಧುನಿಕರಂತೆ ಅವರು ಕರ್ಮಕಲ್ಪನೆಯನ್ನೆ ಅದರ ಸೂಕ್ಷ್ಮಾರ್ಥವನ್ನೂ ಗ್ರಹಿಸದೆ ಅನಾಮತ್ತಾಗಿ ಬಿಸಾಡಹೋಗುವುದಿಲ್ಲ. ಕರ್ಮ ಎಷ್ಟು ಬಲವತ್ತರವೊ 'ಅಕರ್ಮ'ಕಗಳಾದ ಸಾಧನೆ-ಭಕ್ತಿ-ಭಗವದ್ ಕರುಣೆಗಳೂ ಅಷ್ಟೆ ಸತ್ಯ ಎಂಬುದನ್ನವರು ಕಂಡರು. ಲಿಂಗ ಲಾಂಛನ, ಪಂಚಾಕ್ಷರಿಮಂತ್ರ, ವಿಭೂತಿ, ತ್ರಿವಿಧದಾಸೋಹಗಳ ಮಾರ್ಗದಲ್ಲಿ ಭಕ್ತಿಯಿಂದ ಶಿವನತ್ತ ನಡೆದರೆ ಅಕರ್ಮ ತಾನಾಗಿಯೆ ಸಿದ್ಧಿಸುತ್ತದೆಂಬ ಧೈರ್ಯ ಅವರಿಗಿತ್ತು. ಹೊಲೆಯ ಮಾದಿಗರೆಲ್ಲ ತಾವು ಪಾಪಿ-ಮಹಾಪಾಪಿ–ಎಂಬ ಭಾವನೆಯನ್ನು ಬಿಡುವಂತೆ ಮಾಡಲು ಏನುತಾನೆ ಮಾಡುವುದು? ಎಷ್ಟೆ ಹೇಳಿದರೂ ಆತ ಇತರ ಉತ್ತಮರನ್ನು ತನ್ನ ಬಳಿಗೂ ಬರಗೊಡದಷ್ಟು ಪಾಪಭೀತನಾಗಿದ್ದ. ಹರಿಜನಕೇರಿಗೆ ಮೊನ್ನೆ ಮೊನ್ನೆಯ ತನಕ ಉತ್ತಮರನ್ನು ಸೇರಿಸಿಕೊಳ್ಳುತ್ತಿರಲಿಲ್ಲ, ಉತ್ತಮರು ಅವರನ್ನು ತಮ್ಮ ಕೇರಿಗಳಿಗೆ ಸೇರಿಸಿಕೊಳ್ಳದಿರುವುದಿರಲಿ! ಇದಕ್ಕೆ ಕಾರಣವೆಂದರೆ, ಉತ್ತಮರ ಪ್ರವೇಶವಾದರೆ ಅಂತ್ಯಜರ ವಂಶ ನಾಶವಾಗುತ್ತದೆ. ಕೇರಿಗೆ ಬೆಂಕಿ ಬೀಳುತ್ತದೆ ಎಂಬ ಭೀತಿ ಅವರೆ ಕಲ್ಪಿಸಿಕೊಂಡ ಅಥವಾ ಅವರನ್ನಾಳುವುದರಲ್ಲಿ ಚಿರಕಾತರರಾದ ಉತ್ತಮೋತ್ತಮರೇ ಸೃಷ್ಟಿಸಿ ಅವರೆದೆಯಲ್ಲಿ ಬಿತ್ತಿ ಬೆಳೆದ ಭೀತಿ—ಮೊನ್ನೆಮೊನ್ನೆಯತನಕ ಹಳ್ಳಿಗಳಲ್ಲಿತ್ತು. ಈಗಲೆ ಹೀಗಿದ್ದ ಮೇಲೆ ಬಸವಣ್ಣನವರ ಕಾಲದಲ್ಲಿ ಹೇಗೆ? ಆ ಪಾಪಭೀತ ವರ್ಗವನ್ನು ಮತ್ತೂ ಹೆದರಿಸದಿರಬೇಕಾದರೆ ಅವರನ್ನು ನಿರ್ಭೀತರನ್ನಾಗಿ ಮಾಡಬೇಕು. ಅವರ ಬಳಿಗೆ ಹೋಗಬೇಕು, ತಮ್ಮನ್ನವರು ಸೇರಿಸಿಕೊಳ್ಳುವಂತೆ ಮಾಡಬೇಕು. ಅದಕ್ಕಾಗಿಯೆ "ಎಲವೊ, ಎಲವೋ, ಪಾಪಕರ್ಮವಮಾಡಿದವನೇ...ಒಮ್ಮೆ ಶರಣೆನ್ನೆಲವೋ! .......ನಮ್ಮ ಕೂಡಲಸಂಗಮದೇವಂಗೆ!" ಎಂದು ಧೈರ್ಯ ತುಂಬಿ ಆಮೇಲೆ ಆ ಧೈರ್ಯ ದೃಢವಾಗಿ ಬಲಿಯಲು, ಸಾಮಾಜಿಕ ಆಘಾತಗಳಾವುದೂ ಅದನ್ನು ಅಲುಗಿಸದಿರಲು, ಲಿಂಗ ಲಾಂಛನಾದಿ ಅಷ್ಟಾವರಣ ರಕ್ಷೆಯನ್ನವರಿಗೆ ನೀಡುತ್ತಾರೆ. ಪತಿತಾವರಣವನ್ನು ಅನಾವರಣಗೊಳಿಸಿ ನಿರಾವರಣನಾಗಿಸಲು ಪಂಚಾವರಣಗಳು ಅಗತ್ಯವಾಗುತ್ತವೆ. ಬರಿಬರಿದೆ ಅದು ಅಸಾಧ್ಯವಾಗಿ ತೋರುತ್ತದೆ ಬಸವಣ್ಣನವರಿಗೆ.

ಬಸವಣ್ಣನವರ ಕಾಲದ ಜಾನಪದ ಕಾಲಿಡಲು ತೆರಪಿಲ್ಲದಷ್ಟು ಕಿಕ್ಕಿರಿದಿದ್ದ ಸಾವಿರಾರು ಕ್ಷುದ್ರ ದೈವಗಳ ಅವಕೃಪೆಗೆ ತುತ್ತಾಗಿ ತತ್ತರಿಸಿದಂತೆ ಕಾಣುತ್ತದೆ. ಎಲ್ಲ ಕಾಲದಲ್ಲೂ ಸಾಮಾನ್ಯ ಜನತೆ ಭಯಂಕರ ಮಾರಿ ಮಸಣಿ ದೈವಗಳ ಆರಾಧಕರಾಗಿರುವುದು ಸಹಜ. ಬಸವಣ್ಣನವರ ಕಾಲದ ಕರ್ನಾಟಕದಲ್ಲಿ ಮೊದಲೆ ತಿಳಿಸಿರುವಂತೆ ಪ್ರಬಲವಾಗಿದ್ದ ಜೈನ ಧರ್ಮ ತನ್ನ ಅವರೋಹಣ ಸ್ಥಿತಿಯಲ್ಲಿತ್ತು. ಎಷ್ಟೇ ಮಹೋನ್ನತ ತತ್ತ್ವವಾದರೂ ಅಧರ್ಮ ಸ್ಥೂಲ ದೇವತಾ ರೂಪವನ್ನು ಸಾಮಾನ್ಯ ಭಕ್ತಿಯ ಆಲಂಬನವಾಗಿ ನೀಡಲಿಲ್ಲ. ಮೇಲಾಗಿ ಅದ್ವೈತವಾದರೂ ಜಾನಪದ ದೃಷ್ಟಿಯುಳ್ಳುದಾಗಿರಲಿಲ್ಲ. ಇದರಿಂದ ಜಾನಪದ ಜಾನಪದವಾಗಿಯೆ ಉಳಿಯಿತು. ಅದರ ನೂರಾರು ಜಾತಿ ಕೋಟಲೆ ದೈವ ಕೋಟಲೆ ಸಮಾಸವಾಗಲಿಲ್ಲ ಸಮೀಕರಣಗೊಳ್ಳಲಿಲ್ಲ. ಜಾನಪದ ಉದ್ಧಾರ ದೃಷ್ಟಿಯ ಬಸವಣ್ಣನವರಿಗೆ ಆ ವರ್ಗದ ಮುಕ್ತಿಯೆಂದರೆ ಅವರನ್ನು ಅವರ ಭಯಂಕರ ದೈವಗಳ ಕೋಟಲೆ ಕಿರುಕುಳದಿಂದ ಬಿಡಿಸುವುದು ಎಂದು ಅರ್ಥವಾಗುತ್ತದೆ. ಆ ದಾರಿ ಯಾವುದು? ವಿಜ್ಞಾನದ ಭೌತಮಾರ್ಗವಾಗಬಹುದು; ಚಾರ್ವಾಕರ ಲೋಕಾಯತ ಮಾರ್ಗವಾಗಬಹುದು; ಜೈನ ಬೌದ್ಧ ಧರ್ಮಗಳ ಹಾಗೂ ಅದ್ವೈತದ ಅಗ್ರಾಹ್ಯ ಲೋಕಾತೀತ ಅಭೌತಮಾರ್ಗವಾಗಬಹುದು. ಆದರೆ ಇಳಿಗಾಲದಲ್ಲಿದ್ದ ಆ ಯಾವುದರಿಂದಲೂ ಸಾಮಾನ್ಯನ ಜೊತೆ ಆತ್ಮೀಯತೆಯಿಂದ ಬೆರೆತು ಅವನನ್ನು ಭೀತಿ ಮೌಢ್ಯಗಳಿಂದ ಹಾಗೂ ಜಾತಿಕೂಪಗಳಿಂದ ಮೇಲೆತ್ತುವುದು ಕಷ್ಟವಾಗಿತ್ತು. ಭಕ್ತಿಯಿಲ್ಲದ ವಿರಕ್ತಿ-ಜ್ಞಾನ ಸಾಮಾನ್ಯನಿಗೆ ಅನರ್ಥ. ಹಾಗೆಯೆ ಭಕ್ತಿಯಿಲ್ಲದ ವಿಚಾರವಾಗಲಿ, ಭೌತವಾದವಾಗಲಿ ಅಪಾಯಕಾರಿ. ಆಧ್ಯಾತ್ಮಿಕವಲ್ಲದ, ಆತ್ಮನಿರ್ಭೀತಿಯನ್ನರುಹದ ಭಕ್ತಿಯೂ ನಿರರ್ಥ. ಅಂತೆಯೆ ಕ್ಷುದ್ರ ಜಾತಿಗಳನ್ನೂ ಮೂಢದೈವಗಳನ್ನೂ ತನ್ನಲ್ಲಿ ಹೀರಿಕೊಳ್ಳದ ಹೊಸ ದೈವ ಜಾತಿಯಾದರೂ ವ್ಯರ್ಥ. ಸಾವಿರ ಬಸವಣ್ಣನವರಿಗೆ ಲಿಂಗಲಾಂಛನದಲ್ಲಿ ಈ ಎಲ್ಲ ದೋಷಕ್ಕೂ ಮದ್ದು ಕಾಣುತ್ತದೆ. ಹಳೆಯ ದೈವಗಳನ್ನೂ ಅರಗಿಸಿಕೊಳ್ಳಬಲ್ಲ ಭೂತನಾಥನ ಸಂಕೇತ ಆ ಲಿಂಗ. ಮೇಲುಕೀಳೆಂಬೆಲ್ಲ ಜಾತಿಗಳನ್ನೂ ಅಳಿಸಬಲ್ಲ ಶಕ್ತಿದಂಡ ಆ ಲಿಂಗ. ಅಂಗವನ್ನು ಷಟ್‌ಸ್ಥಲಸೋಪಾನದಲ್ಲೇರಿಸಿಕೊಂಡು ಲಿಂಗದಲ್ಲಿ ಪರಿಣಾಮಗೊಳಿಸುವ ತನಕ ಕೈಬಿಡದ ರಕ್ಷಾಕವಚ ಆ ಲಿಂಗ. ದೈವಭಕ್ತರ ನಡುವೆ ಮಧ್ಯವರ್ತಿಯ ಅವಕಾಶವಿಲ್ಲದಂತಿರಿಸಿ ಭಕ್ತನನ್ನೆ ಸಾಧನೆಗೆ ಹಚ್ಚಬಲ್ಲ ಶಕ್ತಿಯಿರುವ ಮಂತ್ರದಂಡ ಆ ಲಿಂಗ. ಅಂಗೈಮೇಲಣ ಆ ಲಿಂಗ ಸಾಧಕನಿಗೆ ಇಚ್ಛಿಸಿದಾಗ ಸುಲಭ ಧ್ಯಾನೈಕಾಗ್ರತೆಯನ್ನು ನೀಡುವ ಸಾಮರ್ಥ್ಯವುಳ್ಳದ್ದು. ಅರಿವು ಮಲಗಿರುವ ತನಕ ಮಾತ್ರ ಕುರುಹಾಗಿದ್ದು ಆಮೇಲೆ ಅರತುಹೋಗುವ ಲಾಂಛನ ಆ ಲಿಂಗ. ಆದ್ದರಿಂದ ಬಸವಣ್ಣನವರಿಗೆ ಈ ಲಿಂಗ ಲಾಂಛನ ಮಹಾಸತ್ತ್ವಸಂಪನ್ನಮಂತ್ರವಾಗಿ ಒದಗಿ ಬರುತ್ತದೆ. ಸಾರ್ವತ್ರಿಕ ಲಿಂಗ ಲಾಂಛನ ದೀಕ್ಷೆಯೆ ಘನಮೌಲ್ಯವಾಯಿತು.

ಮೋಸೆಸ್ ಕ್ರಿಸ್ತ ಹಾಗೂ ಮಹಮ್ಮದ್ ಪೈಗಂಬರ್ ಎಲ್ಲ ಇದೇ ರೀತಿಯ ಪರಿಸ್ಥಿತಿಯನ್ನೆದುರಿಸುತ್ತಾರೆ. ಅವರ ಕಾಲದ ಜನ ಸಾವಿರಾರು ಭಯಕಾರಕ ದೈವಗಳ ಪೂಜೆಗೆ ಬಲಿಯಾಗಿ ಅನಧ್ಯಾತ್ಮಿಯಾಗಿರುತ್ತಾರೆ. ಅವರನ್ನು ಮೇಲೆತ್ತಲು ಅವರು ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ನಿರಾಕಾರ ಏಕದೇವತಾಸ್ವರೂಪವನ್ನು ಪ್ರತಿಪಾದಿಸುತ್ತಾರೆ. ಆದರೆ ಅದೆಲ್ಲ ಅವರ ಕಾಲ ದೇಶ ಮಿತಿಗೆ ಅನುಗುಣವಾಗಿದ್ದಷ್ಟು ಆಧ್ಯಾತ್ಮಿಕವಾಗಿದ್ದುವು. ಏನಾಗಲಿ, ಅವರ ಸರ್ವಂಭರ ದೈವಕಲ್ಪನೆಯಿಂದ ಉಳಿದೆಲ್ಲ

ಅಲ್ಪದೈವಗಳೂ ಮೂಲೆಗುಂಪಾಗಿ, ತತ್ಕಾರಣದಿಂದ ಆಯಾದೈವದ ಪೂಜಾರಿವರ್ಗವೆಲ್ಲ ಪದಚ್ಯುತಿಗೊಂಡು ಆ ಪ್ರವಾದಿಗಳ ಮೇಲೆರಗಿ ಧಾಳಿ ಮಾಡುತ್ತಾರೆ. ಅದಕ್ಕೂ ಆ ಒಬ್ಬೊಬ್ಬರೂ ತಮ್ಮ ತಮ್ಮ ಸ್ವಧರ್ಮ ನಿರ್ದೇಶಿಸಿದ ರೀತಿಯಲ್ಲಿ ಹಾಗೂ ಆ ಎದುರಾಳಿಗಳಿಗೆ ಅರ್ಹವಾದ ವಿಧಾನಗಳಿಂದ ಉತ್ತರ ನೀಡುತ್ತಾರೆ. ಬಸವಣ್ಣನವರಾದರೂ ಆ ಯಾವ ವಿಧಾನಕ್ಕಿಂತಲೂ ವಿಶಿಷ್ಟವಾದ ಭಾರತೀಯವಾದ, ಆದರೆ ಅಷ್ಟೇ ದೃಢನಿಶ್ಚಿತವಾದ ಮಾರ್ಗದಿಂದ ಆ ಎಲ್ಲ ಪೂಜಕರನ್ನೂ ಪೂಜಾರಿವರ್ಗದವರನ್ನೂ ಎದುರಿಸುತ್ತಾರೆ.

ಉತ್ತಮ ವರ್ಗದವರನ್ನು ಖಂಡಿಸುವಾಗ ಬಸವಣ್ಣನರಿಗೆ ಸಹಜವಾಗಿಯೆ ಕರುಣೆಗಿಂತ ಆಕ್ರೋಶವೆ ಎದ್ದು ಕಾಣುತ್ತದೆ. ಕಾರಣ ಹೀಗಿರಬಹುದು. ಒಂದು, ತಾವು ಅವರ ಗೌರವಕ್ಕೆ ಪಾತ್ರವಾಗಿಲ್ಲದ ಸಾಮಾನ್ಯ ಜನೋದ್ಧಾರ ಧರ್ಮವನ್ನು ರೂಪಿಸುತ್ತಿರುವುದು ಅವರಿಗೆ ಕಹಿಯಾಗಿದೆಯಾಗಿ ಇವರನ್ನು ಹೀಗಳೆಯುತ್ತಿದ್ದಿರಬೇಕು. ಅದಕ್ಕೆ ಮರುಮದ್ದಾಗಿ ಬಸವಣ್ಣನವರು ಅವರ ಅಸಹ್ಯ ದೋಷಗಳನ್ನೆ ಎತ್ತಿ ತೋರುತ್ತಾರೆ. ಎರಡನೆಯದು, ಪ್ರತಿಷ್ಠಾವಂತ ಉತ್ತಮರ ಸಮಯಾಚಾರಗಳು ಆಗಲೆ ರೂಢಿಗತ ಕಂದಾಚಾರಗಳಾಗಿ ಅನಿಷ್ಟ ಅನಿಷ್ಟವಾಗಿದ್ದುವು. ಹೀಗಿದ್ದೂ ಆ ವರ್ಗ ಹೊಸತನ್ನು ಪ್ರತಿರೋಧಿಸುತ್ತದಲ್ಲ ಎಂಬ ಕೋಪ. ಇದರಿಂದಾಗಿ ಆ ಜನರ ಪ್ರಧಾನ ದೌರ್ಬಲ್ಯಗಳನ್ನೆಲ್ಲ ಬಯಲಿಗೆಳೆಯುತ್ತಾರೆ.

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ
ಕೂಡಲ ಸಂಗಮದೇವಾ, ವಂದನೆಯ ಮರೆದು ನಿಂದಿಸುತ್ತಿದ್ದರು
ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು
ಆರೋ ಮಾಡಿದ ಪಾಪಕ್ಕೆ ತಾನೆ ಕೈಯಾನುವನು !
ಸರಿಯೆ ದೇವ ಭಕರಿಂಗಿವನು ?
ಸರಿಯೆ ಲಿಂಗಭಕ್ತರಿಗಿವನು.

ನೀರ ಕಂಡಲ್ಲಿ ಮುಳುಗುವರಯ್ಯಾ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ ?

ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ,
    ಇರುಳು ಹಗಲಿನ ನಿದ್ರೆ ಸಾಲದೆ
ಬೆರಳನೆಣಿಸಿ ಪರಮಾರ್ಥವ ಹಡೆವಡೆ ಚೋದ್ಯವಲ್ಲವೆ ಹೇಳಾ !
    ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ, ಕೂಡಲಸಂಗಮದೇವಾ ?

5 ಹೀಗೆ ಮಾಡುವಾಗ ದುರ್ದೈವದಿಂದ ಒಳ್ಳೆಯದೆಷ್ಟೋ ಭಗ್ನಗೊಳ್ಳುತ್ತದೆ; ಅವಿವೇಕವಾಗುತ್ತದೆ. ತಪ್ಪಿದ ಕ್ಷತ್ರಿಯನನ್ನು ಶಿಕ್ಷಿಸಹೊರಟ ತಪಸ್ವಿ ಪರಶುರಾಮನೂ ಆವೇಶವಿಳಿಯದೆ ಮಾರಣಮುಖಿಯಾಗಿ ಸರ್ವ ಕ್ಷತ್ರಿಯನಾಶಕನಾಗತೊಡಗಿ ಒಳ್ಳೆಯವರನ್ನೂ ನಾಶಮಾಡುತ್ತಾನೆ. ಕಡೆಗೆ ತಾನೆ, ಮತ್ತೊಬ್ಬ ಕ್ಷತ್ರಿಯನಿಂದಲೇ—ಆದರೆ ಮಹಾಸತ್ತ್ವ ಉನ್ನತತರ ಅವತಾರಿಯಿಂದಲೆ—ಶಿಕ್ಷಿತ ಸುಶಿಕ್ಷಿತನಾಗುತ್ತಾನೆ. ಬಸವಣ್ಣನವರು ದಯಾನಂದ ಸರಸ್ವತಿಯವರಂತೆ—ಪರಶುರಾಮನ ಒಕ್ಕಲಾಗಲಿಲ್ಲ ಸುದೈವದಿಂದ. ಇವಕ್ಕಿಂತ ಮತ್ತೊಂದು ಭಯಂಕರ ವಿಪತ್ತಿಗೂ ಸಿಲುಕಲಿಲ್ಲ. ನಮ್ಮೆಲ್ಲರ ಭಾಗ್ಯದಿಂದ ! ದ್ರಾವಿಡಕಸಗಂ ತನ್ನ ಬ್ರಾಹ್ಮಣ ದ್ವೇಷವನ್ನು ಮೌಲ್ಯಭಂಜಕವಾಗುವಷ್ಟು ಬೆಳೆಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಂತೆಯೂ ಬಸವಣ್ಣನವರು ತೊಡಗಲಿಲ್ಲ. ಆರ್ಯದ್ವೇಷ ರಾಮದ್ವೇಷವಾಗಿ, ದಾಂಪತ್ಯ ಶುದ್ಧಜೀವನ ದ್ವೇಷವಾಗಿ ವ್ಯಭಿಚಾರಪ್ರೀತಿಯಾಗಿ ಮತ್ತೆ ರಾವಣತ್ವ ಸ್ಥಾಪನವಾಗುವ ಭೀತಿ ಮೂಡುತ್ತಿದೆ. ಪತಿತವರ್ಗವನ್ನು ಉತ್ತಮರ ಶೋಷಣದಿಂದ, ಮೂಢಾಚಾರಬಂಧನದಿಂದ ಬಿಡಿಸುವ ರಭಸ ಯಾವ ನರಕಕೂಪಕ್ಕೊಯ್ಯುತ್ತಿದೆ ! ನಮ್ಮ ಕಾಲದಲ್ಲೆ ಈ ಅವಿವೇಕ ಪಾತಾಳಗಮನ ನಡೆಯುತ್ತಿರುವುದಾದರೆ ಬಸವಣ್ಣನವರು ಆ ಕಾಲದಲ್ಲಿ ಆ ಅತಲಲೋಕದತ್ತ ಸಾಗದೆ ಎಷ್ಟು ಶಿವಜಾಗ್ರತರಾಗಿದ್ದು ಕೈಲಾಸಾಭಿಮುಖಿಯಾದರೆಂಬುದನ್ನು ನೆನೆದುಕೊಂಡರೇ ಆಶ್ಚರ್ಯವಾಗುತ್ತದೆ. ಅವರಿಗಿದ್ದ ಪತಿತಜನಾಂಗ ಪ್ರೀತಿ, ಅವರೆಲ್ಲರ ಉದ್ಧಾರದಲ್ಲಿದ್ದ ಶ್ರದ್ಧೆ ಹಾಗೂ ಅದಕ್ಕಾಗಿ ವಿಶಿಷ್ಟವರ್ಗದ ಬಗೆಗಿದ್ದ ಅಸಹ್ಯ ತಿರಸ್ಕಾರ ಏಷ್ಟಿತ್ತೆಂದರೆ ಅವರು ಆ ರಭಸದಲ್ಲಿ ಯಾವ ಅಶಿವಕಂದರ ಪ್ರಪಾತದಲ್ಲುರುಳಿಬಿಡುತ್ತಿದ್ದರೊ ಎಂಬ ಭೀತಿಯಾಗುತ್ತದೆ. ಹಾಗೆ ಅಲ್ಲದಿದ್ದರೆ ಅವರು ಕೇವಲ ಭೌತಾರಾಧನವನ್ನಷ್ಟನ್ನೆ, ಆಧ್ಯಾತ್ಮಿಕ ಕಟು ತಿರಸ್ಕಾರವನ್ನಷ್ಟನ್ನೆ ದೀಕ್ಷೆ ನೀಡುತ್ತಿದ್ದರು. ಆದರೂ ಅಗತಿ ಒದಗಲಿಲ್ಲ. ಅವರು ಹಳೆಯ ಮೌಢ್ಯಬಂಧನ ಮೋಚನ ಮಾಡಲೆಂದೆ, ಭೋಗಮೌಢ್ಯವನ್ನಲ್ಲ, ಆಧ್ಯಾತ್ಮಿಕ ಲಾಂಛನ ದಾನಮಾಡಿದರು. ಆ ಲಾಂಛನ ಮತ್ತೊಂದು ಮೌಢ್ಯವಾಗಿ ಪರಿಣಮಿಸಿರಬಹುದು. ಆದರದು ಅವರ ಉದ್ದೇಶವಲ್ಲ. ಮೌಢ್ಯದಿಂದ ಬಿಡಿಸಿಕೊಂಡ ಆ ಸಾಮಾನ್ಯರು ಅನಾತ್ಮ ಭೌತಭೋಗ

ದಲ್ಲಿ ಮುಳುಗದಿರಲೆಂಬ ಧ್ಯೇಯದಿಂದಲೂ ಲಿಂಗದೀಕ್ಷೆ ನೀಡಿದರು. ಆದ್ದರಿಂದ ಈ ಲಿಂಗಲಾಂಛನವೆ ಒಂದು ಸಂಕೀರ್ಣ ಮಹಾಮೌಲ್ಯವಾಯಿತು ಅವರಿಗೆ.

[6] ಇತಿಹಾಸ ಈ ಪಾಠವನ್ನು ಕಲಿಸುತ್ತಲೆ ಬಂದಿದೆ. ಕ್ರಿಸ್ತ ಬುದ್ಧಾದಿಗಳಿಗೆಲ್ಲ ಇದೆ ಗತಿ ಒದಗಿತು. ಹಿಬ್ರೂ ಭಾಷೆಯಲ್ಲಿ ಆ ಕಾಲದ ಜನಭಾಷೆಯಲ್ಲಿ—ಕ್ರಿಸ್ತ ತನ್ನ ತತ್ತ್ವಗಳನ್ನು ಪ್ರಚಾರ ಮಾಡಿದ. ಪೂಜಾರಿ ವರ್ಗವನ್ನು ಖಂಡಿಸಿದ. ಆದರೆ ಕ್ರಿಸ್ತನನ್ನು ಲೋಕವ್ಯಾಪಕ ಮತವಾಗಿ ಮಾಡಲು ಮಠಗಳೆ ಬೇಕಾಯಿತು; ಹಿಂದಿದ್ದ ಪೂಜಾರಿಗಳು ಹೋದರು; ಹೊಸಬರು ಬಂದರು. ಅಥವಾ ಹಳಬರೆ ಹೊಸಬರಾಗಿ ಬಂದರು. ಜನಭಾಷೆ ಅಂದಿನ ರಾಜಭಾಷೆಯಾದ ಲ್ಯಾಟಿನ್‌ಗೆ ಎಡೆಕೊಟ್ಟು ತಾನು ಸೇವಕಸ್ಥಾನದಲ್ಲೇ ಉಳಿಯಬೇಕಾಯಿತು. ಇದರಿಂದೇನಾಯಿತು? ಕ್ರಿಸ್ತನ ಕ್ರಾಂತಿ ಅವನ ಜೊತೆಯಲ್ಲೆ ಹೋಯಿತೆ? ಹಳೆಯ ದೇವಾಲಯಗಳನ್ನುರುಳಿಸಿ ಮೂರೆ ದಿನಗಳಲ್ಲಿ ಹೊಸತನ್ನು ನಿರ್ಮಿಸುವೆ ಎಂದ ಆತನ ಮಾತನ್ನು ಮತ್ತಾರೂ ಸಾಂಕೇತಿಕವಾದ ಅವನ ಮತದ ಬಗೆಗೆ ಹೇಳುವ ಕ್ರಾಂತಿಯನ್ನು ಆ ಪ್ರಮಾಣದಲ್ಲಿ ಮಾಡಲಾಗಲಿಲ್ಲ. ಬುದ್ಧದೇವನಾದರೂ ತನ್ನ ತತ್ತ್ವಗಳನ್ನು ಪಾಳಿಯಲ್ಲಿ ಹೇಳಿದ. ಅವುಗಳನ್ನೆಂದೂ ಸಂಸ್ಕೃತೀಕರಿಸಬೇಡಿರಿ ಎಂದು ಎಚ್ಚರಿಸಿದ್ದ. ದೇವರ ಹೆಸರು ಹೇಳಿ ಯಜ್ಞಕರ್ಮದಲ್ಲಿ ಮುಳುಗಿದವರ ಗತಿಯನ್ನು ಕಂಡು—ಯಜ್ಞತತ್ತ್ವ ಯಜ್ಞಸಂಸ್ಥೆಯಾಗಿ ಆ ಗತಿಹೊಂದಿದುದನ್ನು ಕಂಡು—ತನ್ನನ್ನು ಪೂಜಾವಸ್ತುವನ್ನಾಗಿ ಮಾಡಲೆಬೇಡಿರಿ, ಎಂದ. ಆದರೂ 'ಸಂಘಂ ಶರಣಂ ಗಚ್ಛಾಮಿ, ಬುದ್ಧಂ ಶರಣಂ ಗಚ್ಛಾಮಿ' ಎಂದು ಅವನೂ ಸಂಸ್ಥೆಯಾದ, ಪೂಜ್ಯದೇವತೆಯಾದ. ವರ್ಗಗಳನ್ನು ನಿರ್ಮೂಲ ಮಾಡಲೆಂದು ಬಂದ ಕಮ್ಯುನಿಸಂ ಕೂಡ ಹೊಸ ವರ್ಗವನ್ನು ಹುಟ್ಟುಹಾಕಿತು. ಸಾಹುಕಾರ ರಾಜರು ಹೋಗಿ ಪಾರ್ಟಿ ಅಧಿಕಾರದಲ್ಲಿರುವ, ಸರ್ಕಾರಿಕ್ಷೇತ್ರದ ಆಡಳಿತಾಧಿಕಾರದಲ್ಲಿ ಇರುವ ಹೊಸ ಒಡೆಯರು ಹುಟ್ಟಿಕೊಂಡರು. ಆದರೆ ಕೂಲಿಕಾರರು ಮಾತ್ರ ಯಾವಾಗಲೂ ಒಂದೆ! ಹೀಗಾದೀತೆಂಬ ಭಯದಿಂದಲೆ ಮಾರ್ಕ್ಸ್ ಕೂಡ ಕ್ರಾಂತಿ ನಿರಂತರವೂ ಆಗುತ್ತಲೆ ಇರಬೇಕು, ಕ್ರಾಂತಿಯನ್ನನುಸರಿಸಿ ಯಾವಾಗಲೂ ಪ್ರತಿಕ್ರಾಂತಿ ಉದ್ಭವಿಸಬೇಕು, ಸರ್ಕಾರವೆ ಅನಗತ್ಯವಾಗುವ ಆದರ್ಶ ಸಾಧನೆ ಆಗುವ ತನಕ—ಎಂದದು.

ಈ ಇತಿಹಾಸ ಕಲಿಸುತ್ತಲೆ ಇರುವ ನಿರಂತರ ಪಾಠ ಬಸವಣ್ಣನವರಿಗೂ ಹೊಳೆಯಿತೋ ಏನೋ? ಕ್ರಿಸ್ತ ಹಳೆಯ ದೇವಾಲಯ ಒಡೆದು ಮಾಡಿದುದೇನು? ಹೊಸತನ್ನು—ಭದ್ರವಾಗಿ ಕಟ್ಟಿದ? ಬುದ್ಧ ಹೊಸ ಸಂಘಪೂಜೆಯನ್ನು ಪ್ರೇರಿಸಿದಂತಾಯಿತು? ಕಮ್ಯುನಿಸಂ ಹೊಸ ವರ್ಗವನ್ನು ಹುಟ್ಟಿಸಿದಂತಾಯಿತು? ಕಡೆಗೆ ಬಸವ ಪಂಥಕ್ಕೂ ಅದೆ ಅನಿವಾರ್ಯ ಗತಿ ಬಂತೆ? ಜಾತಿಗಳನ್ನು ಒಡೆಯಲು ಬಂದ ಶರಣಧರ್ಮವೆ ಹೊಸ ಜಾತಿಯಾಯಿತೇ? ಸ್ಥಾವರವಾಗಬಾರದೆಂಬ ಧರ್ಮವೆ ಸ್ಥಾವರವಾಗತೊಡಗಿತೆ? ಬ್ರಾಹ್ಮಣ್ಯವನ್ನು ತಿರಸ್ಕರಿಸಿದಂತಹ ಕ್ರಾಂತಿಯೆ ಬ್ರಾಹ್ಮಣ್ಯದ ಕೂಡ ಸ್ಪರ್ಧಿಸತೊಡಗಿತೆ? ಜನವಾಣಿಯನ್ನೆ ಶಿವವಾಣಿಯನ್ನಾಗಿ ಮಾಡಿದ ಧರ್ಮವೆ ಸಂಸ್ಕೃತವಾಗತೊಡಗಿತೆ? ಬಸವಣ್ಣನವರು ಈ ಎಲ್ಲವೂ ಆಗಬಹುದೆಂದೇ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದರೆ?

ವಿಗ್ರಹಭೇದಕರಾಗಿ, ಕ್ರಾಂತಿಕಾರಿಗಳಾಗಿ ಬರುವವರೆ ಅನಂತರದಲ್ಲಿ ಅಭೇದ್ಯವಿಗ್ರಹಗಳಾಗಿ—ಕ್ರಾಂತಿನಿರೋಧಕವಾಗಿ ಪರಿಣಮಿಸುವುದೂ ಉಂಟು. ತನ್ನ ಕಾಲದ ಕ್ಷುದ್ರದೈವಗಳನ್ನೆ ಗುಡಿಸಿಹಾಕಿ ನಿರಾಕಾರದೈವದ ಉಪಾಸನೆಯ ಮಾರ್ಗ ತೋರಿದ ಮುಹಮ್ಮದ್ ಆದರೂ ಈಗ ಅಖಂಡ್ಯ ವಿಗ್ರಹವಾಗಿ ಪರಿಣಮಿಸಿದ್ದಾನೆ. ಆತನ ಮಾತಿಗೆ ತುಸು ಆಕ್ಷೇಪ ತಂದವರಿಗೆ ಪ್ರಾಣಾಪಾಯವೆ ಕಾದಿರುವ ದುರ್ಗತಿ ಇನ್ನೂ ಇದೆ. ಎಂದಮೇಲೆ ಏನೆನ್ನಬೇಕು? ಮುಹಮ್ಮದನೆ ಮತ್ತೆ ಬಂದರೆ, ಆ ಪ್ರಮಾಣದ ವ್ಯಕ್ತಿ ಆ ಧರ್ಮದಲ್ಲೀಗ ಹುಟ್ಟಿದ್ದರೆ ಏನಾಗುತ್ತಿತ್ತೋ? ಕ್ರಿಸ್ತ ಬುದ್ಧ ಬಸವ ಗಾಂಧಿ ಅಂತಹವರು ಅವರವರ ಧರ್ಮದಲ್ಲಿ ಮರುಹುಟ್ಟಿದ್ದರೇನಾಗುತ್ತಿತ್ತೊ ಅದಕ್ಕಿಂತಲೂ ಹೆಚ್ಚು ಫಲ ದೊರೆಯುತ್ತಿತ್ತು!

ಜಾತಿವ್ಯವಸ್ಥೆಯಲ್ಲಿ ನಮ್ಮ ಹಿಂದಿನವರು ಯಾವ ರೀತಿಯಾದ ಪಲ್ಲಟವೂ ಆಗದಂತೆ ಸದಾ ಪರಸ್ಪರ ಎಚ್ಚರವಿದ್ದರು. ಜಾಡಮಾಲಿಗೆ ಹೆಚ್ಚು ಹಣ ಸಿಕ್ಕರೆ ಅವನು ತನ್ನ ಕೆಲಸದಲ್ಲಿ ಅಸಹ್ಯಗೊಳ್ಳಬಹುದು ಅಥವಾ ಭೋಗಾಕಾಂಕ್ಷೆ ಬಂದು ಮೇಲಿನವರನ್ನು ಅನುಕರಿಸಬಹುದು ಎಂಬ ಎಚ್ಚರ ಅರ್ಥಶಾಸ್ತ್ರಕಾರ ಕೌಟಿಲ್ಯನಿಗೂ ಇತ್ತು. ಅಷ್ಟೆ ಅಲ್ಲ ಜ್ಞಾನರುಚಿಯಾದರೂ ಹೀನಜಾತೀಯನಿಗೆ ಮೂಡಿದರೆ ಅಪಾಯವಾದೀತೆಂಬ ಭೀತಿ ವರ್ಣ-ವರ್ಗವ್ಯವಸ್ಥಾಪಕರಿಗೆ, ಶಾಸ್ತ್ರಕಾರರಿಗೆ—ರಾಜರಿಗೆ ಇತ್ತೆಂಬುದಕ್ಕೆ ಒಂದು ಪ್ರಸಂಗವನ್ನು ವಡ್ಡಾರಾಧನೆಯಿಂದ ಉದಹರಿಸಬಹುದು. ಚಂದ್ರಗುಪ್ತನೆಂಬ ರಾಜ ಉತ್ತರದಲ್ಲಿ ಹಿಂದೆ ಆಳುತ್ತಿದ್ದ. ಅವನಿಗೆ ಒಮ್ಮೆ ಪದಿನಾರು ಬಗೆಯ ಕೆಟ್ಟ ಕನಸು ಕಾಣುತ್ತದೆ. ಅವನು ಭದ್ರಬಾಹುಭಟಾರರೆಂಬವರಲ್ಲಿ ತನ್ನೆಲ್ಲ ಕನಸನ್ನೂ ಹೇಳಿ ಅವರಿಂದ ಅದಕ್ಕೆ ಫಲಗಳನ್ನು ತಿಳಿದುಕೊಳ್ಳುತ್ತಾನೆ. ಅವುಗಳೆಲ್ಲ ನಾಡಿಗೆ, ಧರ್ಮಕ್ಕೆ ಹಾಗೂ ಅವನಿಗೆ ಕೇಡನ್ನು ತರುವುದೆಂದು ತಿಳಿಯುತ್ತದೆ. ಆ ಪದಿನಾರು ಸ್ವಪ್ನಗಳಲ್ಲಿ ಒಂದನ್ನೂ ಅದಕ್ಕೆ ಆ ಭಟಾರರು ನೀಡಿದ ವಿವರಣೆಯನ್ನೂ ಇಲ್ಲಿ ಉದ್ಧರಿಸಬಹುದು:

"ಕೋಡಗನಾನೆಯನೇಱುವುದಂ ಕಂಡುದಱಿಂದಾದಮಾನುಂ ಶುದ್ಧ ಕುಲದೊಳ್ ಪುಟ್ಟಿದರಸುಮಕ್ಕಳುತ್ತಮ ಕುಲದೊಳಪ್ಪ ಭಿಮಾನಮಂ ತೊಱೆದು ಚಾಟುಕ್ಕಾರಣಮಾಗಿ ಕುಲಜರಲ್ಲದವರ್ಗಾಳಾಗಿ ಬಾೞ್ವರ್;

"ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಕಂಡುದಱಿಂ ದಯೆಯುಮುಪಶಮಮುಂ ಪರಿಗ್ರಹಪರಿತ್ಯಾಗಮುಂ ಸಮಾಧಿಯುಂ ಸತ್ಯಮುಂ ಶೌಚಮುಂ ಕ್ಷಮೆಯುಮೆಂದಿವು ಮೊದಲಾಗೊಡೆಯವಱೊಳ್ ಕೂಡಿದ ಮಿಕ್ಕ ಸದ್ಧರ್ಮ ಮಾರ್ಗಮುಂ ದ್ರವ್ಯಪತಿಗಳುಮರಸುಮಕ್ಕಳುಂ ತಮ್ಮ ಪ್ರವ್ಯಾದಿ ಮದದಿಂದಂ ತೊಱೆವರ್, ನೀಚಜಾತಿಗಳುಂ ಬಡವರೂ ಸದ್ಧರ್ಮಮಂ ಕೈಗೊಂಡು ನೆಗೞ್ವರ್ !!"

ಪರಮ ಮಾನವಧರ್ಮವಾಗಿ ಬಂದ ಈ ಜೈನಧರ್ಮ ಕಡೆಗೆ ಎಷ್ಟು ವರ್ಣಸ್ಥವಾಯಿತೆಂದರೆ, ನೀಚಜಾತಿಗಳು

ಬಡವರು ಕೂಡ ಸದ್ಧರ್ಮವನ್ನು ಕೈಗೊಂಡು ನಡೆದರೆ ನಡೆಸಿದರೆ ವಿಪರೀತ ಕಲಿಯುಗ ಬಂದೀತೆಂದೂ, ಪೃಥ್ವಿ ನಿರ್ವೀರ್ಯವಾದೀತೆಂದೂ, ಗಿಡಮೂಲಿಕೆಗಳಿಗೆ ರಸ ಕಳೆದೀತೆಂದೂ ಆಲೋಚಿಸುವಷ್ಟು ಮಟ್ಟಿಗೆ! ಸು. ೧೦೦೦ರ ವೇಳೆಯ ವಡ್ಡಾರಾಧನೆ ಗದ್ಯ ಗ್ರಂಥದಲ್ಲೆ ಇದು ಬಂದಿರಬೇಕಾದರೆ ನಮ್ಮಲ್ಲಿ ಈ ಜಾತಿಕಲ್ಪನೆ ಎಷ್ಟು ಗಂಭೀರವಾಗಿತ್ತೆಂದು ತಿಳಿಯುತ್ತದೆ. ಬಡವ ಶೂದ್ರ ಜಾತಿಯವ ಸದ್ಧರ್ಮ ಆಚರಿಸಲಾರ ಎಂಬುದು ಹೋಗಲಿ, ಆಚರಿಸಬಾರದು; ಅವ ಹಾಗೆ ಬಯಕೆ ತೋರಿದರೆ ರಾಜ್ಯ ವ್ಯವಸ್ಥೆಗೆ, ರಾಜನಿಗೆ, 'ಧರ್ಮ'ಕ್ಕೆ ಅಪಾಯ ಒದಗುತ್ತದೆ ಎಂಬ ಬಂಡವಾಳಶಾಹಿ ಭಾವನೆಯೆ ಸಹಜವಾಗಿದ್ದಿತಲ್ಲ ಜೈನರಲ್ಲೂ ಕೂಡ! ಅಂದರೇನು? ಎಷ್ಟೇ ಅವೈದಿಕವಾಗಿ ಬಂದ ಧರ್ಮವೂ ಜಾತಿಪದ್ಧತಿಯನ್ನು—ವರ್ಣವರ್ಗಭೇದವನ್ನು ಒಪ್ಪಿಕೊಂಡೇ ಬದುಕಬೇಕಾಗಿದ್ದಿತೆ? ವರ್ಣವ್ಯವಸ್ಥೆಯನ್ನು ಜೈನಧರ್ಮ ಎಷ್ಟರಮಟ್ಟಿಗೆ ಒಪ್ಪಿಕೊಂಡಿತೆಂದರೆ ಮೊದಲನೆಯ ತೀರ್ಥಂಕರ ಆದಿನಾಥನ ಮಗ ಮೊದಲನೆಯ ಚಕ್ರವರ್ತಿ ಭರತನಿಂದಲೆ ಈ ಜಾತಿವ್ಯವಸ್ಥೆಯನ್ನು ನಿರ್ಮಾಣ ಮಾಡಿಸುವಷ್ಟು. ಅಂದರೆ ಜೈನರ ಪ್ರಕಾರ, ಭರತನೆ ಇದರ ಜನಕ. ಪಾಪ! ಅವರಪ್ಪ ಮೊದಲ ತೀರ್ಥಂಕರನಲ್ಲ, ಅಥವಾ ಅವನಿಗೂ ಮೊದಲವರಲ್ಲ. ಅಂದರೆ ಜೈನಧರ್ಮದ ಆದಿಯಲ್ಲಿದು ಇರಲಿಲ್ಲ! ಆದರವರು ಮಾಡಿಕೊಂಡ ವ್ಯತ್ಯಾಸವೆಂದರೆ ಕ್ಷತ್ರಿಯನನ್ನು ಈ ಶ್ರೇಣಿಯ ಮೊದಲಲ್ಲಿರಿಸುತ್ತಾರೆ. ಕಾರಣ, ತೀರ್ಥಂಕರರು ಬಹುತೇಕವಾಗಿ ರಾಜವರ್ಗದಿಂದ ಬಂದವರಾಗಿರುವುದಿರಬಹುದು. ರಾಜತ್ವ ಭದ್ರವಾಗಿರಬೇಕಾದರೆ ಇಂತೊಂದು ನಿಷ್ಠುರ ವರ್ಗಭೇದವಿರಲೇಬೇಕೆಂದು ಅವರಿಗೂ ತಿಳಿಯಿತೇನೊ! ರಾಜ ಸುಕ್ಷೇಮವಾಗಿರಬೇಕಾದರೆ ವರ್ಣಾಶ್ರಮ ವ್ಯವಸ್ಥೆ ಪಲ್ಲಟವಾಗಬಾರದು, ಶೂದ್ರ ಶಂಬೂಕ ತಪಸ್ವಿಯಾಗಬಾರದು, ಬೇಡ ಏಕಲವ್ಯ ಧನಿಯಾಗಬಾರದು? ರಾಜನೇ ಪ್ರತ್ಯಕ್ಷ ದೈವವೆಂದು ಆಶೀರ್ವಾದ ಮಾಡುತ್ತ ಬಂದ ಪುರೋಹಿತವರ್ಗವೂ ಸುಕ್ಷೇಮವಾಗಿರಬೇಕಾದರೆ ಅಡಿವರ್ಗ ಅಲ್ಲಲ್ಲೆ ತೃಪ್ತವಾಗಿರಬೇಕು. ಅವರಲ್ಲೇನಾದರೂ ಉತ್ತಮಸಂಸ್ಕಾರಭಿರುಚಿ ಮೂಡಿದರೂ ಇವರಿಗೆ ಆಸನಕಂಪವಾಗುತ್ತದೆ! ಜೈನಧರ್ಮವೂ ಕೂಡ ಮಠ ಸೇರಿದ ಮೇಲೆ ಅದಕ್ಕೂ ಇದೆ ಗತಿ, ಮನೋಧರ್ಮ ಬಂತು. ರಾಜ ನಿರಾತಂಕವಾಗಿ ಸೂರ್ಯ ಚಂದ್ರರಿರುವ ತನಕ ಆಳಲಿ, ಎಂದು ಆಶೀರ್ವಾದ ಮಾಡುವ ಬುದ್ಧಿ ಬಂತು. ಬಸವಣ್ಣನವರು ಜಾತಿವ್ಯವಸ್ಥೆಯನ್ನೂ ತನ್ಮೂಲಕವಾಗಿ ಅರ್ಥ–ಸಮಾಜ–ಧರ್ಮವ್ಯವಸ್ಥೆಯನ್ನೂ ಅಲುಗಿಸುವ ಸಾಹಸ ಮಾಡಿದರು. ಆದ್ದರಿಂದಲೇ ಅವರಿಗೆ ರಾಜವಿರೋಧದ ಅಪರಾಧ ತಲೆಗೆ ಸುತ್ತಿತು. ರಾಜ್ಯಕ್ರಾಂತಿಯಾಗಿ ಅಲ್ಲೋಲಕಲ್ಲೋಲವಾಯಿತು. ಅದರ ಪರಿಣಾಮವೆಂದರೆ ಮುಂದೆ ಬಂದ ಶರಣಪಂಥೀಯರಿಗೇ ರಾಜಾಶ್ರಯ ತಪ್ಪಿತು—ಪ್ರೌಢದೇವರಾಯನ ಕಾಲದಲ್ಲಿ ವಿನಾ. ಕಾಲಕಳೆದಂತೆ, ಈ ಪಂಥವೂ ಮಠಗತ ಪ್ರಾಣವಾದಂತೆ, ರಾಜಾಶ್ರಯ ಬುದ್ಧಿ ಹೆಚ್ಚಿ ತನ್ನ ಕ್ಷೇಮದಲ್ಲಿ ಕಾತರ ಹೆಚ್ಚುತ್ತ ಬಂದಂತೆ, ರಾಜಾಶ್ರಯ ಇವಕ್ಕೆ ಲಭ್ಯವಾಗುತ್ತ ಬಂದಿತು.

ಇತ್ತೀಚಿನ ಪ್ರಜಾಪ್ರಭುತ್ವದ ದಿನಗಳಲ್ಲಿ ಎಲ್ಲರಿಗೂ ಓಟು ಬಂದಿದೆ; ಅಂದರೆ, ಹಿಂದೆ ಅಧಿಕಾರ ಭೋಗದ ಕನಸನ್ನೂ ಕಾಣಲಾಗದೆ ಪಾತ್ರರಾಗಿದ್ದ ವರ್ಗವೆ ಇಂದು ಗಣನೀಯ ನಿರ್ಧಾರಕ ಘಟಕಗಳಾಗಿ ಮಾರ್ಪಡುತ್ತ ಹಳೆಯ ಆಳರಸಿಕೆಯನ್ನು ತಳಮೇಲು ಮಾಡಿ ಹೊಸ ಆಳರಸಿಕೆಯನ್ನು ನಿರ್ಮಿಸುತ್ತಿದೆ. ಮತ್ತೆ, ಎಲ್ಲರಿಗೂ ಕಡ್ಡಾಯ ಶಿಕ್ಷಣ ಬಂದು, ಅಂದರೆ, ಹಿಂದೆ ಓದನ್ನು ಕೇಳಿದರೂ ಶಿಕ್ಷೆಗೊಳ್ಳಬೇಕಾಗಿದ್ದವರೆಲ್ಲರೂ ಓದಲೇಬೇಕಾದ ಕಟ್ಟಿನೊಳಕ್ಕೆ ಬಂದು ಇಷ್ಟೊ ಅಷ್ಟೊ ಅಕ್ಷರ ವಿದ್ಯೆಯನ್ನಾದರೂ ಪಡೆದುಕೊಂಡು, ತಾವು ಹಿಂದೆ ಯಾವುದನ್ನೂ ಮೂಕರಾಗಿ ಒಪ್ಪಿಕೊಳ್ಳುತ್ತಿದ್ದರೊ ಅದನ್ನೆಲ್ಲಾ ಅಧಿಕಪ್ರಸಂಗಿತನವಾದರೂ ಪ್ರಶ್ನಿಸಿ–ನಿರೋಧಿಸಿ ಹಳೆಯ ಪಟ್ಟಭದ್ರರಿಗೆ ಸ್ವಾಸ್ಥ್ಯಭಂಗಮಾಡುತ್ತಿದ್ದಾರೆ; ಒಮ್ಮೊಮ್ಮೆ ತೋಲ ತಪ್ಪುವುದೂ ಸಹಜವಾಗುತ್ತಿದೆ. ಮತ್ತೆ ವಿಜ್ಞಾನ ಪ್ರಗತಿಯಿಂದಾಗಿ ಉತ್ಪಾದನೆ ಹೆಚ್ಚಿ ಈಗ ಭೋಗ ಹಿಂದಿನಂತೆ ಕೆಲವರ ಸೊತ್ತಾಗಿ ಉಳಿದಿರುವುದು ಅಸಾಧ್ಯವಾಗಿದೆ. ಹಿಂದಿನಂತೆ ಈಗ ಬಲ್ಲಿದನನ್ನು ಬಡವ, ಅವಿದ್ಯಾವಂತನನ್ನು ವಿದ್ಯಾವಂತ, ನಿಮ್ನವರ್ಗದವರನ್ನು ಪ್ರತಿಷ್ಠಿತವರ್ಗ ಸುಕ್ಷೇಮ ದೂರದಲ್ಲಾಗಲಿ ಬಂಧನದಲ್ಲಾಗಲಿ ಇತರರಿಗೆ ತಿಳಿಯದಂತೆ ಬಹಳ ಕಾಲ ಇಟ್ಟು ಶೋಷಿಸುವುದು ಕಷ್ಟವಾಗುತ್ತದೆ. ಇದೆಲ್ಲದರಿಂದ ಹಳೆಯ ಉತ್ತಮ ವರ್ಗ, ಪ್ರತಿಷ್ಠಿತ ವರ್ಗ, ವಿಶೇಷ ಮಾನ್ಯವರ್ಗ ತಳಗೆಟ್ಟಂತಾಗಿ ಶಾಂತಿಗೆಟ್ಟಿದೆ. ಅದರಿಂದಲೆ ಅದು ಹಿಂದೆಯೂ ಇಂದೂ ಪ್ರಜಾಪ್ರಭುತ್ವವನ್ನೆ ದ್ವೇಷಿಸಿ, ಬ್ರಿಟಿಷ್ ಆಧಿಪತ್ಯದ ಪಾರತಂತ್ರ್ಯವನ್ನೆ ಸ್ವರ್ಗವನ್ನಾಗಿ ಆರಾಧಿಸಿತ್ತು. ಆರಾಧಿಸುತ್ತಿದೆ. ಹೊಸತಾಗಿ ಎಚ್ಚರಿಸುತ್ತಿರುವ ಕೆಳವರ್ಗದ ತಪ್ಪನ್ನೆ ಭೂತಾಕಾರಮಾಡಿ ಅಹಿರಾವಣ ಮಹಿರಾವಣ ರಾಜ್ಯವಿದೆಂದೂ ಗೊಂದಲಪುರವೆಂದೂ ಆ ಶಿಷ್ಟ ವರ್ಗ ದುಸ್ಸ್ವಪ್ನ ಕಾಣುತ್ತಿದೆ. ಹಾಗೂ ಹಳೆಯ ಬ್ರಾಹ್ಮಣ್ಯ ಚಾತುರ್ವರ್ಣ್ಯ ರಾಜತ್ವವನ್ನು ಹಾರೈಸುತ್ತಿದೆ. ಪ್ರಜಾಪತ್ಯದಲ್ಲೆ ನವರಾಜತ್ವವನ್ನು—ಅನುವಂಶೀಯ ಆಧಿಪತ್ಯವನ್ನು ಸಂಚುಮಾಡುತ್ತ ಹೊಂಚು ಕಾಯುತ್ತಿದೆ.

ಇತ್ತೀಚಿನ ದಿನಗಳಲ್ಲಿ ವಿದೇಶಯಾತ್ರೆ ಹೋಗಿಬಂದ ಉನ್ನತ ವ್ಯಾಸಂಗಸಂಪನ್ನರೂ, ಆ ನಾಡಿನ ತಮ್ಮ ಉತ್ತಮ ಜಾತಿಗೆ ವಿರುದ್ಧವಾದ ನಡೆನುಡಿ ಆಹಾರಾದಿರುಚಿಗಳನ್ನುಂಡು ಬಂದವರೂ, ತೋರಿಕೆಯ ಮಾತಿನಲ್ಲೇನೊ ಜಾತ್ಯತೀತರಂತೆಯೆ ನಡೆದುಕೊಂಡರೂ ವಾಸ್ತವವಾಗಿ ಜಾತಿಗ್ರಸ್ಥರಾಗಿಯೆ ಇರುತ್ತಾರೆ. ಶ್ರೀರಾಮಕೃಷ್ಣ ಪರಮಹಂಸರ ದಿವ್ಯಪ್ರಭಾವಲಯಕ್ಕೆ ಬಂದ ಭಕ್ತರು ಸಾಧಕರು–ಕಡೆಗೆ, ಸಂನ್ಯಾಸಿಗಳೂ ಕೂಡ; ಮಹಾತ್ಮಗಾಂಧೀಜಿ ವಿನೋಬಾಜಿಯವರ ಸರ್ವೋದಯತತ್ತ್ವ ಪ್ರಭಾವಿತರಾದ ರಾಷ್ಟ್ರೀಯರೂ ಸಹ; ಶ್ರೀ ಅರವಿಂದ ಶ್ರೀರಮಣಾದಿ ಆಧುನಿಕ ಋಷಿಶ್ರೇಷ್ಠರ ಪೂರ್ಣಯೋಗಾದಿ ದರ್ಶನರುಚಿಯುಂಡ ಬುದ್ಧಿಜೀವಿಗಳೂ ಸಹ; ನಿರಪೇಕ್ಷ ವಿಜ್ಞಾನದ ಭೌತ ಸತ್ಯಶೋಧಕರಾಗಿರುವವರೂ ಮೇಧಾವಿಗಳೂ ಕೂಡ; ಕಮ್ಯುನಿಸಂ ತತ್ತ್ವದಂತಹ ವರ್ಣರಹಿತ ವರ್ಗರಹಿತ ಅರ್ಥರಾಜ್ಯ ವ್ಯವಸ್ಥೆಯನ್ನೊಪ್ಪಿಕೊಂಡ ಕಟ್ಟಾ ಪಾಕ್ಷಿಕರೂ ಕೂಡ—ಈ ಜಾತಿಯ ಆವರಣದಾಚೆ ಸಂಪೂರ್ಣವಾಗುಳಿದಿರುವುದಾಗದೆಂದ ಮೇಲೆ ಈ ಜಾತಿಸೂತಕ ಎಂತಹ ಸೂಕ್ಷ್ಮ ಆವರಣವಿದ್ದಿರಬೇಕು!

ಬಸವಣ್ಣನವರು ಲಿಂಗದೀಕ್ಷೆಯ ಅಗ್ನಿಸಂಸ್ಕಾರಕ್ಕೆ ಒಳಪಡಿಸಿದುದು ಹೆಚ್ಚಾಗಿ ಅತ್ಯಂತ ಸಾಮಾನ್ಯ ಸಂಸ್ಕಾರದ ಕೀಳು

ಜಾತೀಯರನ್ನು. ಅಂತಹವರಾದರೂ ಹೇಗೆ ತಾನೆ ತಮ್ಮ ತಮ್ಮ ಹಳೆಯ ಜಾತಿಭಾವಗಳನ್ನು ಸುಲಭವಾಗಿ ಕಳಚಿಡಲು ಸಾಧ್ಯ? ಸ್ವಯಂ ಬಸವಣ್ಣನವರಿಗೆ ಅವರ ಬ್ರಾಹ್ಮಣ್ಯದ ಯಜ್ಞೋಪವೀತ ಆಗಾಗ ಬಂದು ಕತ್ತನ್ನು ಬಿಗಿಯುತ್ತಿದ್ದಾಗ ಉಳಿದವರ ಪಾಡೇನು? ಪಾಪ, ಲಿಂಗದೀಕ್ಷೆ ತೆಗೆದುಕೊಂಡಮೇಲೂ ಆ ಉತ್ತಮರ ಹಳೆಯ ಆಚಾರ ಮಾಡುವುದನ್ನು ಕಂಡ ಬಸವಣ್ಣನವರು ಹೀಗೆನ್ನುತ್ತಾರೆ:

ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ:
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು!
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ'
ಎಂಬ ಕರ್ಮಿಗಳನೇನೆಂಬೆ, ಕೂಡಲಸಂಗಮದೇವಾ?

ಪ್ರಬಲವಾದ ಆಚಾರಸಂಸ್ಕಾರವಿರುವ ಉತ್ತಮಜನ ಮನಸ್ಸನ್ನು ಆ ಆವರಣದಿಂದ ಬಿಡಿಸುವುದು ಹೇಗೂ ಕಷ್ಟವೆ. ಪ್ರಾಣಲಿಂಗದ ಪ್ರಸಾದದ ಮುಂದೆಯೂ ಯಜ್ಞಮಂತ್ರವನ್ನೆ ಪಠಿಸುತ್ತಾನೆ ಅವನು. ಅವನ ಮನಸ್ಸಾಗಲೆ ಒಂದು ಪ್ರಖರ ಸಂಸ್ಕಾರದಿಂದ ವಿದಗ್ಧವಾಗಿ ಸುಟ್ಟ ಮಡಕೆಯಾಗಿದೆ. ಆದ್ದರಿಂದಲೆ ಅಲ್ಲಿ ಬೇರೇನೂ ಬೆಳೆಬಾರದು. ಆದರೆ ಅನುತ್ತಮ ಜಾತೀಯರಿಗಾದರೂ—ಇಷ್ಟು ಕಷ್ಟವಿಲ್ಲದಿದ್ದರೂ—ಸುಲಭವಾಗಿ ಹೊಸ ಸಂಸ್ಕಾರ ಹಿಡಿಸದು. ಶ್ರೀರಾಮಕೃಷ್ಣರು ಹೇಳುವ ಮೀನುಗಾರ ಹೆಂಗಸು ಹೂವಾಡಿಗರ ಮನೆಯಲ್ಲಿ ನಿದ್ರೆಹೋಗಲಾರದ ಕಥೆಯಂತಾಗುತ್ತದೆ. ಗಂಡ ಒಮ್ಮೆ ಮಹೇಶ್ವರ ಭಕ್ತನಾದರೂ ಹೆಂಡತಿ ಮಾತ್ರ ಮಾರಿಮಸಣಿಯ ಭಕ್ತೆಯೆ ಆಗುಳಿದು ಹೆಂಡ ಮಾಂಸಗಳ ಸೇವಕಳಾಗಿರುತ್ತಾಳೆ. ಶರಣ ಸಾಧನೆ ಗಂಡಿಗೆ ಮಾತ್ರ ಮೀಸಲಾದದ್ದಲ್ಲ. ಗಂಡಹೆಂಡಿರು ಕೂಡಿ ಮಾಡಿದ ಭಕ್ತಿ ಮಾತ್ರವೆ ಲಿಂಗಕ್ಕೆ ಅರ್ಪಿತ.

ಹೇಗೂ ಈ ಹಳೆಯ ಜಾತಿಸಂಸ್ಕಾರಗಳು ಶರಣಮಂಡಲಿಯನ್ನು ಒಂದೆರಡು ನೂರು ತಲೆನಾರಿನ ತನಕ ಕಾದಿರಬಹುದು. ಆಮೇಲಾಮೇಲೆ ಅವು ಕ್ಷೀಣಿಸುತ್ತ ಬಂದಿರಬಹುದು. ಅದು ದಿಟವಿರಬಹುದು, ಸಟೆಯಿರಬಹುದು. ಆದರೀಗ ನಮ್ಮೆದುರಿಗಿರುವ ಲಿಂಗವಂತರ ಸಮೂಹದಲ್ಲಿ—ಅವರೀಗ ಕೇವಲ ಜಾತಿಮಾತ್ರವಾಗಿ ಉಳಿದಿದ್ದರೂ ಸಹ—ಅಂದಿನ ಮಾರಯ್ಯ, ಮಾಚಯ್ಯ, ಹರಳಯ್ಯ, ಚೌಡಯ್ಯ, ಬಸವಣ್ಣ, ಸಿದ್ಧರಾಮಾದಿಗಳ ವಂಶೀಯರು ಯಾರು ಯಾರೆಂದೇನಾದರೂ ಗುರುತಿಸಬರುವುದೆ? ಅವರೆಲ್ಲ ಒಂದು ಹೊಸ ಜಾತಿಯಲ್ಲಿ ಕರಗಿ ಹೋಗಿದ್ದಾರೆ ಅನಿಸುತ್ತದೆ. ಆದರೆ ಉಳಿದೆಡೆ ನಡೆದ ಭಕ್ತಿಪಂಥ—ಅದೆಷ್ಟೆ ಜಾತಿದ್ವೇಷಿಯಾಗಿದ್ದರೂ—ಹಳೆಯ ವಿವಿಧ ಜಾತಿವ್ಯವಸ್ಥೆಯನ್ನು ಕರಗಿಸಿಕೊಳ್ಳುವಂಥ ಒಂದು ಶಕ್ತ ಮಂತ್ರವನ್ನು ಕಂಡುಕೊಳ್ಳಲಾಗದ್ದರಿಂದ, ಆ ಕಾಲದಲ್ಲಿ ಭಕ್ತಿಕಾರಣದಿಂದಾಗಿ ಆ ಭಕ್ತರು ಸಮಾನರಾಗಿದ್ದರೂ ಮುಂದಿನ ಅವರ ಸಂತಾನ ಮಾತ್ರ ತನ್ನ ತನ್ನ ಮೊದಲ ಜಾತಿದಾರವನ್ನೆ ಹಿಡಿದು ಮತ್ತೆ ನಡೆಯತೊಡಗಿತು. ತುಕಾರಾಂ, ಏಕನಾಥ್, ಕಬೀರ್, ರಾಮದಾಸ್, ಮೀರಾ, ಚೈತನ್ಯ, ಘೋರಕುಂಬಾರ—ಎಷ್ಟೆಲ್ಲ ಭಕ್ತರ ಸಂತಾನ ಮತ್ತೆ ಆ ಹಿಂದಿನ ಜಾತಿಕಂದಕದಲ್ಲೆ ಸಿಕ್ಕಿಕೊಳ್ಳಲಿಲ್ಲ. ಒಂದು ವೇಳೆ ಈ ಭಕ್ತರು—ಇವರು ಬೇರೆ ಬೇರೆ ಕಾಲದ ಬೇರೆ ಬೇರೆ ದೇಶದ ಭಕ್ತರಾಗಿದ್ದರೂ—ತಮ್ಮ ಕಾಲದ ತಮ್ಮ ದೇಶದ ಎಲ್ಲ ಜನರನ್ನೂ ತಮ್ಮ ಭಾಗವತ ಪಂಥಕ್ಕೆ ಸೇರಿಸಿಕೊಂಡಿದ್ದರೂ ಆಮೇಲಾಮೇಲೆ ಅವರ ಭವಿಷ್ಯ ಸಂತಾನವಾದರೂ ಹಳೆಯ ವಿಭಿನ್ನ ಜಾತಿಯಿಂದ ಮುಕ್ತವಾಗಲು ಬರುತ್ತಿರಲಿಲ್ಲ. ಆದರೆ ಒಂದು ವೇಳೆ ಬಸವಣ್ಣನವರ ಕಾಲದ ಕರ್ನಾಟಕದ ಜನವನ್ನೆಲ್ಲ, ಅವರಿಗೆ ದೀರ್ಘಾಯುಷ್ಯವಿದ್ದು ಭಾರತವನ್ನೆಲ್ಲ ಒಲಿಸಿಕೊಂಡು ಶರಣಪಂಥಕ್ಕೆ ತಿರುಗಿಸಿದ್ದಿದ್ದರೆ—ಆಗ ಈಗಿರುವ ವೈವಿಧ್ಯ ಸಷ್ಟವಾಗುತ್ತಿದ್ದರೂ—ಏನಿಲ್ಲವೆಂದರೂ ಈಗ ನಮ್ಮನ್ನು ತಿನ್ನುತ್ತಿರುವ ನೂರು ಜಾತಿಗಳಿಂದ ನಾವು ಪಾರಾಗಬಹುದಿತ್ತು, ಒಂದು ರೀತಿಯಲ್ಲಿ ಎಂಬ ಅತೃಪ್ತ ಬಯಕೆ ಕಾಡುತ್ತದೆ.

ಹೇಗಾದರಾಗಲಿ, ಎಷ್ಟೆ ಮಿತಪ್ರಮಾಣದಲ್ಲಾಗಲಿ ಶರಣಪಂಥ ಮೇಲುಕೀಳು ಜಾತಿಗಳನ್ನೆಲ್ಲ ಶೋಧಿಸಿ ಒಂದುಮಾಡುವಲ್ಲಿ ಭಾರತದ ಇತರ ಯಾವ ಭಕ್ತಿಪಂಥ ಧರ್ಮಪಂಥಕ್ಕಿಂತ ಮುಂದಿದೆ, ಯಶಸ್ವಿಯಾಗಿದೆ. ಅದೇ ಆಮೇಲೆ ಒಂದು ಜಾತಿಯಾದರೆ ಅದು ನಮ್ಮ ತಪ್ಪು. ಆದರೆ, ಆಗಿಗೂ ಈಗಿಗೂ ಆಶ್ಚರ್ಯದ ಸಂಗತಿಯೆಂದರೆ ಹೊಲೆಯ ಬ್ರಾಹ್ಮಣ ಜಾತಿಗಳ ನಡುವಣ ನಾನಾ ವರ್ಗದ ಜಾತಿಗಳ ಜನ ಲಿಂಗ ಲಾಂಛನದ ಕಾರಣದಿಂದಾಗಿ ಒಂದಾಗುವುದು, ಕಾಲಕ್ರಮೇಣ ಬಂಧುವಾಗುವುದು ಸಾಧ್ಯವಾಯಿತಲ್ಲ ಎಂಬುದು. (ಲಿಂಗವಂತರಲ್ಲೂ ನಾನಾ ಒಳಸಂಗಡಗಳು, ಬೆರೆಯದಷ್ಟು ಗಡುಸಾಗಿರಬಹುದು. ಆದರೆ ಮೊದಲ ವಿಚಾರಜಾತಿಗಳ ವಿಸಂಗತಿಗಿಂತ ಇದೆಷ್ಟೋ ವಾಸಿ.)

ಇತ್ತೀಚಿನ ಹಿಂದೂಧರ್ಮ ಸುಧಾರಕರಲ್ಲಿ ಆರ್ಯಸಮಾಜದವರು, ಬ್ರಾಹ್ಮಸಮಾಜದವರು ಹಾಗೂ ವಿವೇಕಾನಂದ ಗಾಂಧೀಜಿ ಅವರು ಕೂಡ ಜಾತಿಗಳನ್ನೆಲ್ಲ ಹಿಂದೂಧರ್ಮದ ಮಹದ್ದರ್ಶನದಲ್ಲಿ ಕರಗಿಸುವಲ್ಲಿ ಸಫಲವಾದರೆಂದು ಹೇಳಬರುವುದಿಲ್ಲ. ಅದನ್ನಿಲ್ಲಿ ವಿವೇಚಿಸಬಹುದು.

ವೇದಧರ್ಮವನ್ನು ಸ್ಥಾಪಿಸಹೊರಟ ಆರ್ಯಸಮಾಜವಾದರೂ ಜಾತಿಯನ್ನು ವಿರೋಧಿಸಿದರೂ ಚಾತುರ್ವರ್ಣಗಳನ್ನು ಒಪ್ಪಿಕೊಂಡಿತು. ಶ್ರೀ ದಯಾನಂದ ಸರಸ್ವತಿ ಅವರ ಮಾತನ್ನೆ ಕೇಳಿ: "ವರ್ಣವ್ಯವಸ್ಥೆಯೂ ಗುಣಕರ್ಮಸ್ವಭಾವಾನುಸಾರ ಆಗಬೇಕು... ನೀಚಕುಲದವನಾದರೂ ಸಹ ಉತ್ತಮವರ್ಣದ ಗುಣಕರ್ಮಸ್ವಭಾವಯುಕ್ತನಾದವನನ್ನು ಉತ್ತಮ ವರ್ಣದಲ್ಲಿಯೂ

ಮತ್ತು ಉತ್ತಮ ವರ್ಣಸ್ಥನಾದರೂ, ನೀಚಕರ್ಮ ಮಾಡುವವನನ್ನು ನೀಚವರ್ಣದಲ್ಲಿಯೂ, ಅವಶ್ಯವಾಗಿ ಎಣಿಸಬೇಕು... ಎಲ್ಲಾ ವರ್ಣಗಳೂ ತಮ್ಮ ತಮ್ಮ ಗುಣಕರ್ಮಸ್ವಭಾವಯುಕ್ತವಾಗಿ, ಶುದ್ಧತೆಯಿಂದಿರುತ್ತದೆಂದು ಸಿದ್ಧವಾಯಿತು. ಅಂದರೆ, ಬ್ರಾಹ್ಮಣ ಕುಲದಲ್ಲಿ ಯಾರೂ ಕ್ಷತ್ರಿಯ ವೈಶ್ಯ ಶೂದ್ರರಂತೆ ಇರಲಾರರು. ಕ್ಷತ್ರಿಯ ವೈಶ್ಯ ಶೂದ್ರ ವರ್ಣಗಳೂ ಕೂಡ ಶುದ್ಧವಾಗಿರುವುವು. ಅಂದರೆ—ವರ್ಣಸಂಕರತ್ವವುಂಟಾಗುವುದಿಲ್ಲ. ಇದರಿಂದ ಯಾವ ವರ್ಣಕ್ಕೂ ನಿಂದೆ ಅಥವಾ ಅಯೋಗ್ಯತೆಯೂ ಉಂಟಾಗುವುದಿಲ್ಲ.... ನಿಂದೆ, ಈರ್ಷೆ, ಅಹಂಕಾರ ಮೊದಲಾದ ದೋಷಗಳನ್ನು ಬಿಟ್ಟು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆ ಮಾಡುತ್ತಾ ಅದರಿಂದ ಜೀವನ ನಡೆಸಿಕೊಳ್ಳುವುದೇ ಶೂದ್ರನ ಏಕಮಾತ್ರ ಗುಣಕರ್ಮವಾಗಿದೆ .. ಯಾರು ಯಾರಲ್ಲಿ ಯಾವ ಯಾವ ವರ್ಣಗುಣಕರ್ಮಗಳಿರುವುವೋ, ಅವರವರಿಗೆ, ಆಯಾ ವರ್ಣದ ಅಧಿಕಾರವೀಯಬೇಕು... ಈ ರೀತಿ ವರ್ಣಗಳು ತಮ್ಮ ತಮ್ಮ ಅಧಿಕಾರಗಳಲ್ಲಿ ಪ್ರವರ್ತಿಸುವಂತೆ ಮಾಡುವುದು ರಾಜನೇ ಮೊದಲಾದವರ ಕರ್ತವ್ಯವಾಗಿರುತ್ತದೆ"—('ಸತ್ಯಾರ್ಥಪ್ರಕಾಶ': ಚತುರ್ಥಸಮುಲ್ಲಾಸ, ಪುಟ ೧೫೧–೬೨, ದ್ವಿತೀಯ ಮುದ್ರಣ.)

ಇಲ್ಲಿ ದಯಾನಂದರು ಚತುರ್ವರ್ಣಗಳ ಬಗೆಗೆ ಇತ್ತೀಚಿನ ಎಷ್ಟೋ ಜನ ಸಂಪ್ರದಾಯಸ್ಥ ಬುದ್ಧಿಜೀವಿಗಳಿಗಿಂತ ಪ್ರಗತಿಪರರಾಗಿರುವುದು ತೋರುತ್ತದೆಯಾದರೂ ಅವರೂ ಕೂಡ ವರ್ಣಾಶ್ರಮದ ವೇದಮೂಲದಿಂದ ಕಿತ್ತುಬರುವಷ್ಟು ಶಕ್ತರಾಗಿಲ್ಲ. ಅವರು ಮಾಡಿರುವಂತಹ ವ್ಯಾಖ್ಯಾನದೃಷ್ಟಿಯೆ ಪ್ರಾರಂಭದ ದಿನಗಳಲ್ಲಿದ್ದಿರಬೇಕು. ಪ್ಲೇಟೋ ಕೂಡ ತನ್ನ ರಿಪಬ್ಲಿಕ್ ಗ್ರಂಥದಲ್ಲಿ ಇದೆ ಧೋರಣೆ ತಾಳಿದ್ದಾನೆ. ಆದರೆ ಈ ದೃಷ್ಟಿಯಾದರೂ ನಮ್ಮ ಯುಗಕ್ಕೇನು ಫಲಕಾರಿಯಾದೀತು? ಈಗ ವಿಜ್ಞಾನ ಪ್ರಭಾವದಿಂದಾಗಿ ರಾಜಕೀಯ ಸ್ವಾತಂತ್ರ್ಯ ಪ್ರಜಾಪ್ರಭುತ್ವದಿಂದಾಗಿ, ವಿದ್ಯಾಭ್ಯಾಸ ಸೌಲಭ್ಯದಿಂದಾಗಿ ಯಾರೂ ಚತುರ್ವರ್ಣ ವ್ಯವಸ್ಥೆಗಳನ್ನು ಸಂಕರವಾಗದಂತೆ ನೋಡಿಕೊಳ್ಳುವ ಹುಚ್ಚರಾಗರು. ನಮ್ಮಲ್ಲಿರುವುದು ನಾಲ್ಕು ವರ್ಣದ ಸಮಸ್ಯೆಯಲ್ಲ, ಸಾವಿರ ಜಾತಿಯ ಸಮಸ್ಯೆ. ಇದನ್ನು ಪರಿಹರಿಸುವುದು ಹೇಗೆ? ಮಂತ್ರಿಗಳೆಲ್ಲ ಕ್ಷತ್ರಿಯರು, ಓಜಯ್ಯಗಳೆಲ್ಲ ಬ್ರಾಹ್ಮಣರು; ವ್ಯಾಪಾರಿಗಳೆಲ್ಲ ವೈಶ್ಯರು, ಕೂಲಿಗಾರರೆಲ್ಲ ಶೂದ್ರರು ಎಂದು ತಿಳಿಯುವಷ್ಟು ಸರಳವೂ ಅಲ್ಲ, ಇತ್ತೀಚಿನದೂ ಅಲ್ಲ ಈ ಜಾತಿ ಸಮಸ್ಯೆ. ದಯಾನಂದರು ವೇದಪ್ರಮಾಣವನ್ನು ನಿರಂಕುಶಪ್ರಭುವೆಂದು ಒಪ್ಪಿಕೊಂಡದ್ದರಿಂದ ಏನೂ ಮಾಡಬರುವುದಿಲ್ಲ. ಅವರಿಗೆ "ಪರಮಾತ್ಮನು ಪ್ರಕಾಶಪಡಿಸಿದ ವೇದಗಳೇ ಸನಾತನವಾದುವು; ಅದಕ್ಕೆ ವಿರುದ್ಧವಾದ ಮಾತುಗಳು ಎಂದಿಗೂ ಸನಾತನವಾಗಲಾರವು!" ಹೀಗಿರುವಾಗ ವೇದನಿಂದಕರಾದ ಬಸವಣ್ಣನವರಾದರೂ ಅರ್ಥವಾಗುವುದಿಲ್ಲ! "Dayananda' did not propose the abolition of the caste, system, but rather the introduction of a new caste (Varna) system the classes of which would be founded on merit......" (Graham quoted in "Indian Nationalism and Hindu social Reform: by charles H. Heismath. Pp. 299–300). ಇಷ್ಟಾದರೂ ದಯಾನಂದ ಪಂಥದವರು ಅಂತ್ಯಜ ವರ್ಗವನ್ನು ಸ್ವೀಕರಿಸಿಕೊಳ್ಳುವ ಬಗೆಗೆ ಬಹಳ ಕಾಲ ತಾತ್ಸಾರವನ್ನೆ ತಾಳಿದರು. ಆಮೇಲಾಮೇಲೆ 'ಶುದ್ಧಿ' ಮೂಲಕ ಅವರನ್ನು ಒಪ್ಪಿಕೊಳ್ಳುವ ಪರಿಪಾಠ ಬಂದು ಬಹಳ ಜನ ಹಿಂದುಳಿದವರು 'ಆರ್ಯ'ರಾದರು. ೧೮೬೭ರ ವೇಳೆಯಲ್ಲಿ ಆ ಪಂಥ ಹೇಗೆ ಯೋಚಿಸುತ್ತಿತ್ತೆಂಬುದಕ್ಕೆ 'ಆರ್ಯಪತ್ರಿಕೆ'ಯ ಸಂಪಾದಕೀಯ ಭಾಗವನ್ನಿಲ್ಲಿ ಉದ್ಧರಿಸಬಹುದು. "The very idea of converting, such low and *down trodden people seems abominable.* We live amongst people who would not tolerate such conduct on our part for a moment, *and our instinet too treats it with utter repugnance. Yet the christains do it.*" (ಅದೇ ಪುಸ್ತಕದಲ್ಲಿ ಉದ್ಧೃತವಾಗಿದೆ. ಪುಟ ೩೦೧.)

7 ಹಣಕಾಸಿನ ಸೌಲಭ್ಯಗಳನ್ನೊದಗಿಸುವ ಮೂಲಕವಾಗಿ, ರಾಜಕೀಯವಾದ ಅಧಿಕಾರ ನೀಡುವ ಮೂಲಕವಾಗಿ, ವಿದ್ಯಾ ಅರ್ಹತೆಯನ್ನು ಗಳಿಸಿಕೊಳ್ಳುವಂತೆ ಮಾಡುವ ಮೂಲಕವಾಗಿ ನೂರಾರು ಜಾತಿವರ್ಗಗಳನ್ನು ವಿಲೀನಗೊಳಿಸಿ ಜಾತಿಯ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದೆಂಬ ಧೈರ್ಯ ಆಧುನಿಕರಿಗೂ ಇಲ್ಲವಾಗುತ್ತಿದೆ. ಧನಿಕನಾದರೂ, ಅಧಿಕಾರಿಯಾದರೂ, ವಿದ್ಯಾಶ್ರೀಮಂತನಾದರೂ ಜಾತೀಯವಾಗಿ ಹೀನವೆಂಬುವನ ಕೂಡೆ ಅನ್ಯವರ್ಗದವನು ಆತ್ಮೀಯವಾಗಿ ಬೆರೆಯುವುದೆ ಕಷ್ಟ. ಸಾಮಾಜಿಕ ಕ್ಷೇತ್ರಗಳ ಹೊರವಲಯಗಳಲ್ಲಿ—ಆಫೀಸು ಕಾಲೇಜು ಹೋಟೆಲು ಸಿನಿಮಾ ಮೋಟಾರ್ ರೈಲ್‌ಗಳಲ್ಲಿ ಮಿಳಿತವಾದಂತೆ ಭಾಸವಾದರೂ ಮನೆಯೊಳಕ್ಕೆ ಹೋದರೆ, ಹಬ್ಬಹರಿದಿನ ವಿವಾಹಾದಿ ಶುಭದಿನಗಳು ಬಂದರೆ, ಶ್ರಾದ್ಧಕರ್ಮಾದಿ ತಿಥಿಗಳು ಬಂದರೆ ನಾವು ನಮ್ಮ ನಮ್ಮ ಕೋಮಿನವರೊಡನೆಯೆ—ಅವರು ಆರ್ಥಿಕವಾಗಿ ಸಾಮಾಜಿಕ ರಾಜಕೀಯ ಪ್ರತಿಷ್ಠೆಯ ದೃಷ್ಟಿಯಲ್ಲಿ ಎಷ್ಟೆ ವಿಷಮರಾದರೂ ಅವರೊಡನೆಯೆ—ಬೆರೆಯುತ್ತೇವೆ. ಹೊರಗೆ ಶಾಲಾ ಕಚೇರಿಗಳಲ್ಲಿ ಮಿತ್ರರಾಗಿದ್ದ ಅನ್ಯಜಾತೀಯನೂ ಈ ವಲಯಗಳಲ್ಲಿ ಅನಾತ್ಮೀಯನಾಗುತ್ತಾನೆ. ಅಂತರ್ಜಾತೀಯ ವಿವಾಹದ ವಿಷಯವಾಗಿಯಂತೂ ನಾವು, ವೈಚಾರಿಕವಾಗಿ ಎಷ್ಟೇ ಪ್ರಗತಿಪರರಾಗಿದ್ದರೂ, ಪ್ರೀತಿಪೂರ್ವಕವಾಗಿ ಮುಂದೆ ಬರುವುದು ಸಾಧ್ಯವಿಲ್ಲ. ರಾಜಕೀಯವಾಗಿ ಇನ್ನು ಜಾತಿಗಳನ್ನು ಅಳಿಸುವುದಿರಲಿ, ಹಿಂದೆಂದೂ ಇಲ್ಲದ ಪ್ರಮಾಣದಲ್ಲಿ ಬೆಳೆಸಬೇಕಾದಂತಹ ಪ್ರೇರಣೆಗಳೆ ಒದಗಿಬರುತ್ತಿವೆ. ಹೀಗೆ, ವೈಜ್ಞಾನಿಕವಾಗಿ ಸಹಜೀವನ ಅನಿವಾರ್ಯತೆಯ ಆವರಣದಲ್ಲಿರುವ ನಾವೆ, ಆಧುನಿಕ ಉದಾತ್ತ ರಾಜಕೀಯ ತತ್ತ್ವದ ಒತ್ತಡಗಳಿಂದಾಗಿ ಸಮತಾವಾದವನ್ನು ಒಪ್ಪಿಕೊಳ್ಳುತ್ತಿರುವ ನಾವೇ, 'ರಾಜಕೀಯಾದಿ' ಸ್ವಾರ್ಥ ಕಾರಣಗಳಿಗಾಗಿ ದೂರ ಸಿಡಿಯುವಂತಹ ಪ್ರಚೋದಕಗಳಿರುವಾಗ ಈ ಯಾವ ಸಹಜೀವನ ಅನಿವಾರ್ಯತೆಯಾಗಲಿ ರಾಜಕೀಯ ಆರ್ಥಿಕ ಸಮಾನತಾತತ್ತ್ವಗಳೆ ಆಗಲಿ ಉಸಿರಾಡಲಾಗದಿದ್ದಂಥ ಆ ಕಾಲದಲ್ಲಿ, ಮೇಲಾಗಿ ಅಸಮಾನತೆಯ ಪೂಜೆಯೆ ಧರ್ಮವಾಗಿದ್ದ ಕಾಲದಲ್ಲಿ ಜಾತೀಯ ಸಾಮ್ಯಭಾವವನ್ನು ಅಂತರಂಗಬಹಿರಂಗದಲ್ಲಿ ಬೆಳೆಸುವ ಶಕ್ತಿಯಾಗಿ ಬಸವಣ್ಣನವರು ಲಿಂಗ ಲಾಂಛನವನ್ನು ಆವಾಹನೆ ಮಾಡುತ್ತಾರೆ. ಲಾಂಛನ ಧರಿಸಿದ ಬೇರೆ ಬೇರೆ ಜಾತಿಯಿಂದ ಯಾರೆ ಆದರು ಶಿವಭಕ್ತಿಯ ಕಾರಣ

ಕ್ಕಾದರು, ಗುರುಜಂಗಮ ಗೌರವಕ್ಕಾದರೂ ಸಹಪಂಕ್ತಿ ಭೋಜನವನ್ನು ಮೊದಲು, ಕಾಲಕಳೆದಂತೆ ಕೊಳು ಕೊಡೆಯನ್ನೂ ಪ್ರಯತ್ನಿಸುವುದು ಅಗತ್ಯವಾಯಿತು. ಕಡೆಕಡೆಗೆ ಅದೇ ಸಾಧಾರಣ ಪದ್ಧತಿಯಾಗಿ ಜಾತ್ಯಂತರ ಎದ್ದು ಕಾಣುವುದು ತಪ್ಪಿತು. ಇಷ್ಟನ್ನು ನಾವು ಈ ಕಾಲದಲ್ಲೂ ಸಾಧಿಸುವುದು ದುಸ್ಸಾಧ್ಯ. ಅಂತರ್‌ಜಾತೀಯ ವಿವಾಹವನ್ನು ಅನಿವಾರ್ಯವಾಗಿ ಒಪ್ಪಿಕೊಂಡ ಮೇಲೂ ನಾವು ಆ ದಂಪತಿಕುಲವನ್ನೆ ಅಂತರಂಗದಲ್ಲಿ ವಿಜಾತಿವರ್ಗವಾಗಿ ಇನ್ನೂ ಕಾಣುವಂತಾಗಿದೆ. ಒಂದು ವೇಳೆ ಅಂತರ್‌ಜಾತೀಯ ವಿವಾಹಮಾಡಿಕೊಂಡರೂ ಹತ್ತಿರ ಹತ್ತಿರದ ಜಾತಿಗಳಲ್ಲಿ ನಡೆಯುತ್ತಿದೆಯೆ ಹೊರತು ಅಂತ್ಯಜ ಉತ್ತಮಜರಲ್ಲಿ ಇನ್ನೂ ಹೆಚ್ಚಾಗಿ ಪ್ರಚಲಿತವಾಗಿಲ್ಲ. ಹಾಗೂ, ಲೌಕಿಕ ಪ್ರಯೋಜನ ದೊರೆಯುವ ರಾಜಕೀಯಪ್ರಬಲವಾದ ಜಾತಿಯವರೊಡನೆ, ಅಂತಹ ವ್ಯಕ್ತಿಗಳ ಸಂಬಂಧವಿರುವವರೊಡನೆ ಆ ಯಾವ ಸೌಲಭ್ಯವೂ ಇಲ್ಲದವನು ಮದುವೆಯಾಗಬಹುದು. ಅಥವಾ, ತನಗೆ ರಾಷ್ಟ್ರೀಯ ಅಥವಾ ಅಂತರ್‌ರಾಷ್ಟ್ರೀಯ ಚಲಾವಣೆ ನೀಡುವಂತಹ ಜಾತಿಯವರನ್ನು ಇಲ್ಲವೆ ದೇಶೀಯವೇ ಆದರೂ ತನಗೆ ಸಾಮಾಜಿಕಾದಿ ಉತ್ತಮಿಕೆಯನ್ನೊದಗಿಸುವ ಪ್ರತಿಷ್ಠಿತ ಜಾತಿಯವರನ್ನು ಜಾಣನಾದವನೊಬ್ಬ ಮದುವೆಯಾಗಬಹುದು. ಇಲ್ಲವೆ ಪ್ರಣಯಾತುರದಲ್ಲಿ ಮಾಡಿದಪರಾಧಕ್ಕೆ ಶಿಕ್ಷೆಯಾಗಿ ಒಪ್ಪಿಗೆಯಿಲ್ಲದಿದ್ದರೂ ವಿಜಾತೀಯರನ್ನು ಮದುವೆಯಾಗಬಹುದು. ಸ್ನೇಹಪ್ರೇಮಗಳಿಂದ ಮದುವೆಯಾಗುವಾಗಲೂ, ಜಾತಿಸಂಬಂಧವಿಲ್ಲದಿದ್ದಾಗಲೂ, ಅಂತಸ್ತು ವಿದ್ಯೆ ಸ್ಥಾನ ಪ್ರತಿಷ್ಠೆ ಐಶ್ವರ್ಯ ಏನಾದರೊಂದು ಅಂಟುನಂಟಾಗಿ ಬರುತ್ತದೆ. ಆದರೆ ಬಸವಣ್ಣನವರು ಮಾಡಿದ ಹರಳಯ್ಯ ಮಧುವರಸಯ್ಯರ ಬಾಂಧವ್ಯ ಈ ಯಾವ ಗುಂಪಿಗೂ ಸೇರದು ! ಲಿಂಗಸಂಬಂಧವೊಂದನ್ನು ಬಿಟ್ಟರೆ ! ಈ ಎಲ್ಲ ದೃಷ್ಟಿಯಿಂದಲೂ ಬಸವಣ್ಣನವರ ಸಾಧನೆ ಮಹತ್ತರವಾದದ್ದೆ. ಅದು ಸಾರ್ವತ್ರಿಕವಾಗದಿದ್ದುದಕ್ಕೆ ಅವರು ಹೊಣೆಯಲ್ಲ. ಅವರು ಮಾಡಹೋದ ಕಾರ್ಯ ಎಂತಹ ವಿಷಮಾವರಣದಲ್ಲಿ ಎಷ್ಟೆಲ್ಲ ಸಂಕೀರ್ಣ ವಿರುದ್ಧ ಶಕ್ತಿಗಳ ಕೂಡೆ ಹೋರಾಡಿ ಸಾಧಿಸಬೇಕಾಗಿತ್ತು ಎಂಬುದನ್ನಷ್ಟೆ ಸೂಚಿಸುತ್ತದೆ. ತಾವು ಮಾಡಿದಷ್ಟರಲ್ಲಿ ಅವರು ಯಶಸ್ವಿಯಾದರು. ಅದನ್ನು ಅದೇ ಧರ್ಮಶ್ರದ್ಧೆಯಿಂದ—ಮತ್ತಾವೇಶದಿಂದಲ್ಲ—ಮುಂದಿನವರು ಮುಂದುವರಿಸದಿದ್ದುದಕ್ಕಾಗಲಿ, ಅಥವಾ ಅವರ ಶಿವಕುಲವೆ ಮತ್ತೊಂದು ಜಾತಿಯಾದುದಕ್ಕಾಗಲಿ ಅಣ್ಣ ಕಾರಣರಲ್ಲ. ಪ್ರಾಯಶಃ ಅವರೇ ಆಮೇಲೆ ಬಂದಿದ್ದರೆ ಆ ಹೊಸ ಜಾತಿಯನ್ನೂ ಒಡೆಯುವ ಮತ್ತೊಂದು ಕ್ರಾಂತಿ ಹೂಡುತ್ತಿದ್ದರೇನೊ. ಸ್ಥಾವರವಾಗುವ ಯಾವ ಮಂತ್ರವನ್ನೂ ಅವರು ಪೂಜಿಸುತ್ತಿರಲಿಲ್ಲ; ಅಥವಾ ಶಿವಮಂತ್ರವು ಹೇಗೂ ಸ್ಥಾವರವಾಗಿ ನಿರ್ಜೀವವಾಗುವುದನ್ನೆಂದೂ ಅವರು ಸಹಿಸುತ್ತಿರಲಿಲ್ಲ.

---

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ !
ಕುಲವೇನೋ, ಅವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು

—ಬಸವಣ್ಣನವರು

# "ಮಹಾವೀರರು-ಬಸವೇಶ್ವರರು"

ಡಾ. ಹಂ. ಪ. ನಾಗರಾಜಯ್ಯ

ಮಹಾವೀರರು ತುಂಬ ಪ್ರಾಚೀನರು. ಕ್ರಿ.ಪೂ. ೬ನೆಯ ಶತಮಾನದವರು. ಅವರು ಬಿಹಾರಿನಲ್ಲಿ ಹುಟ್ಟಿ ಬೆಳೆದವರು. ಬಸವೇಶ್ವರರು ಅರ್ವಾಚೀನರು. ಕ್ರಿ.ಶ. ೧೨ನೆಯ ಶತಮಾನದವರು, ಕನ್ನಡ ನಾಡಿನಲ್ಲಿ ಆಗಿಹೋದವರು. ಇವರಿಬ್ಬರ ನಡುವೆ ೧೬೫೦ ವರ್ಷಗಳಿಗಿಂತ ಹೆಚ್ಚು ಅಂತರವಿದೆ. ಹೀಗಿದ್ದೂ ಮಹಾವೀರರು ಮತ್ತು ಬಸವೇಶ್ವರರಲ್ಲಿ ವೈಷಮ್ಯಗಳಿಗಿಂತ ಸಾಮ್ಯಗಳೇ ಹೆಚ್ಚು ಕಂಡುಬರುತ್ತವೆ. ಇಬ್ಬರೂ ಅಹಿಂಸಾಧರ್ಮದ ಪ್ರಚಾರಕರು. ದಯಾಧರ್ಮದ ಪ್ರತಿಪಾದಕರು. ಸರ್ವೋದಯಧರ್ಮದ ವ್ಯವಸ್ಥಾಪಕರು.

ಇವರಿಬ್ಬರೂ ಚಾರಿತ್ರಿಕವಾಗಿ ಆಗಿಹೋದ ಮಹಾನ್ ವ್ಯಕ್ತಿಗಳು. ಇವರಿಗೆ ದೇಶ ಕಾಲ ಧರ್ಮಗಳ, ಮಿತಿಗಳ ಕಟ್ಟುಗಳಿಲ್ಲ. ಇವರ ಉಪದೇಶ ಎಲ್ಲಾ ಕಾಲಕ್ಕೂ ಸಲ್ಲುವಂತಹುದು. ಎಲ್ಲ ಜನರಿಗೂ ಅನ್ವಯಿಸುವಂತಹುದು. ನಮ್ಮ ನಾಡಿನ ಸಂಸ್ಕೃತಿಯನ್ನು ಸಂಕೀರ್ಣಸಾಗರಕ್ಕೆ ಹೋಲಿಸಬಹುದು. ಅದರಲ್ಲಿ ಎರಡು ಹೆದ್ದೊರೆಗಳು ಸಂಗಮಿಸಿವೆ. ಅವೆಂದರೆ 'ಶ್ರಮಣ ಮತ್ತು ಶರಣ ಸಂಸ್ಕೃತಿ'ಗಳು. ಮಹಾವೀರರು ಶ್ರಮಣ ಸಂಸ್ಕೃತಿಯನ್ನು ಪ್ರಾರಂಭಿಸಿದವರಲ್ಲವಾದರೂ, ಅವರು ತಮಗಿಂತ ಹಿಂದೆ ಇದ್ದ ಧರ್ಮವನ್ನು ಪುನರುಜ್ಜೀವಿಸಿದರು, ಬೆಳಗಿದರು. ಬಸವೇಶ್ವರರೂ ತಮಗಿಂತ ಮೊದಲು ಅಣಿಯಾಗಿದ್ದ ಪೂರ್ವ ಪಂಚಾಚಾರ್ಯ ಪರಂಪರೆಯಿಂದ ಪ್ರಣೀತವಾದ ವೀರಶೈವಕ್ಕೆ ಪುನರುತ್ಥಾನದ, ನೂತನ ಆವಿಷ್ಕಾರದ ಕಾಯಕಲ್ಪವೆಸಗಿ ಹೊಸ ಸ್ವರೂಪ ಕೊಟ್ಟರು. ಇಂದಿನ ಅದರ ವ್ಯವಸ್ಥಿತರೂಪ ಬಹುಪಾಲು ಬಸವೇಶ್ವರರ ಪ್ರಯತ್ನದ ಫಲ. (ವೀರಶೈವ ಧರ್ಮದ ಸಂಸ್ಥಾಪಕರು ಬಸವೇಶ್ವರರೆಂಬ ನಂಬಿಕೆಯಿರುವಂತೆ ಅದನ್ನು ಒಪ್ಪದೆ ಅವರಿಗಿಂತ ಹಿಂದೆಯೂ ಅದು ಇತ್ತೆಂಬ ಅಭಿಪ್ರಾಯವೂ ಇದೆ.)

ಮಹಾವೀರರು ಜೈನಧರ್ಮದ ಶ್ರೇಷ್ಠ ಪ್ರತಿನಿಧಿಯಾಗಿರುವಂತೆ, ಬಸವೇಶ್ವರರೂ ವೀರಶೈವದ ಉತ್ಕೃಷ್ಟ ಪ್ರತಿನಿಧಿಯಾಗಿದ್ದಾರೆ. ಅಹಿಂಸೆ, ಕಾಯಕ, ಸದಾಚಾರ, ಮಾದಕವಸ್ತು ನಿಷೇಧ — ಮೊದಲಾದವುಗಳಿಗೆ ಇವರಿಬ್ಬರೂ ವಿಶೇಷ ಮಹತ್ವ ಕೊಟ್ಟಿದ್ದಾರೆ.

ಅಚ್ಚರಿಯ ಸಂಗತಿಯೆಂದರೆ, ಎರಡೂವರೆ ಸಾವಿರ ವರ್ಷಗಳ ಹಿಂದಿನ ಮಹಾವೀರರ ಮತ್ತು ಎಂಟುನೂರು ವರ್ಷಗಳ ಹಿಂದಿನ ಬಸವೇಶ್ವರರ ಸಮಗ್ರ, ಸಮರ್ಪಕ ಜೀವನಚಿತ್ರ ರೂಪಿಸುವಲ್ಲಿ ಇರುವ ಕೆಲವು ಕೊರತೆಗಳು. ಇವರಿಬ್ಬರ ಜನನ, ಜೀವನ ಕುರಿತು ಜಿಜ್ಞಾಸೆಗಳಿವೆ. ಇಷ್ಟಾಗಿಯೂ ವಿವಾದಗಳಿಲ್ಲದ, ಅಸ್ಖಲಿತ ಚಾರಿತ್ರಿಕ ದಾಖಲೆಗಳು ಸಾಲವು. ಕೇವಲ ತೌಲನಿಕ ಅಧ್ಯಯನಗಳಿಂದಲೇ ಸಂಗತಿಗಳನ್ನು ಸಂಗ್ರಹಿಸಿಕೊಂಡು ಎಚ್ಚರದಿಂದ ಪುನಃರಚಿಸಬೇಕಾಗಿದೆ.

ಮಹಾವೀರರ ಜನನದ ಬಗ್ಗೆ ಜನ್ಮಸ್ಥಳದ ಬಗ್ಗೆ ವಿವಾದಗಳಿವೆ: ಅವರು ಬಿಹಾರದ ಪಾಟ್ನಾಜಿಲ್ಲೆಯ ನಲಂದದ ಬಳಿ ಇರುವ ಕುಂಡಪುರದಲ್ಲಿ ಹುಟ್ಟಿದರೆ? ಮುಂಘ್ಯಾರಜಿಲ್ಲೆಯ ಲಚ್ಚುವಡದ ಬಳಿಯ ಕ್ಷತ್ರಿಯ ಕುಂಡಪುರದಲ್ಲಿ ಜನಿಸಿದರೆ? ಬಸಾಢದ ಸಮೀಪದಲ್ಲಿರುವ ವಾಸುಕುಂಡದಲ್ಲಿ ಜನ್ಮವೆತ್ತಿದರೆ? ಎಂಬ ಅನುಮಾನಗಳಿಗೆಡೆಯಿದೆ. ಇದೇ ರೀತಿ ಮಹಾವೀರರು ನಿರ್ವಾಣ ಪಡೆದದ್ದು ಈಗಿನ ಪಾಟ್ನಾಜಿಲ್ಲೆಯ ಪಾವಾದಲ್ಲೊ ಅಥವಾ ಉತ್ತರಪ್ರದೇಶದ ದೇವಾರಿಯ ಜಿಲ್ಲೆಯ ಕಾಶೀನಗರಕ್ಕೆ ಹತ್ತಿರದ ಪಾವಾದಲ್ಲೊ ಎಂಬ ಸಂದೇಹವಿದೆ. ಅಂತೂ ಕ್ರಿ.ಪೂ. ೫೯೯ರಿಂದ ೫೨೭, ಅಂದರೆ ಕ್ರಿಸ್ತಪೂರ್ವ ಆರನೆಯ ಶತಮಾನ ಮಹಾವೀರರ ಜೀವಿತಕಾಲವೆಂದು ತಿಳಿಯಲಾಗಿದೆ. ಹೀಗೆಯೇ ಮಹಾವೀರರ ಜೀವನ ಚಿತ್ರವನ್ನು ಒಟ್ಟಾರೆ ರೂಪಿಸಿಕೊಳ್ಳಲು ಅವರ ಪರಮ, ನೇರ ಶಿಷ್ಯೋತ್ತಮ ಇಂದ್ರಭೂತಿ ಗೌತಮನು ಒಂದೆಡೆ ಕೂಡಿಸಿದ್ದ ಸಾಹಿತ್ಯ ಸಾಮಗ್ರಿ ಸಿಗುತ್ತಿಲ್ಲ. ಅವರ ಪರೋಕ್ಷದಿಂದ

ಅರ್ಧಮಾಗಧಿ ಆಗಮಗಳನ್ನು, ಅದರಲ್ಲಿಯೂ ನಾಲ್ಕನೆಯ ಅಂಗವಾದ ಸಮವಾಯಾಂಗದ ಆಧಾರದಿಂದ ಮಹಾವೀರರ ಜನನ ಜೀವನ ಬೋಧನ ಸಂಗತಿಗಳನ್ನು ತೌಲನ ವಿಧಾನದಿಂದ ಸಂಕಲಿಸಬೇಕಾಗಿದೆ: ಮತ್ತು ವ್ಯಾಖ್ಯಾ ಪ್ರಜ್ಞಪ್ತಿ ಉಪಾಸಕಾಧ್ಯಯನ ಅನುತ್ತರೌಪಾತಿಕ, ಉತ್ತರಾಧ್ಯಯನ, ದಶವೈಕಾಲಿಕ, ತಿಲೋಯ ಪಣ್ಣತ್ತಿ, ನಾಮಾವಳೀ ನಿಬದ್ಧ ಮೊದಲಾದ ಪ್ರಾಚೀನ ಮತ್ತು ಸಂಸ್ಕೃತ ಪ್ರಾಕೃತ ಕನ್ನಡದಲ್ಲಿನ ಅರ್ವಾಚೀನ ಗ್ರಂಥಗಳಿಂದಲೂ ಪುನರ್ ರಚಿಸಬೇಕಾಗಿದೆ.

ಬಸವೇಶ್ವರರ ಜನನ. ಜನ್ಮಸ್ಥಳ, ಜೀವನದ ಮುಡಿ-ನಡು-ಅಡಿಗಳನ್ನು ಬಿಡಿಸುವ ಬಗೆಗೂ ಸಾಕಷ್ಟು ಜಿಜ್ಞಾಸೆಗಳಿವೆ. ಅವರು ೧೬–೧–೧೧೧೬, ೧೭–೧–೧೧೪೩, ೨೭–೧೦–೧೧೪೦, ೨೧–೧–೧೧೪೦ ಅಥವಾ ೧೧೩೨ರಲ್ಲಿ ಯಾವಾಗ ಹುಟ್ಟಿದರೆಂಬ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ. ಸಿದ್ಧಾರ್ಥಿನಾಮ ಸಂವತ್ಸರ ಪುಷ್ಯ ಅಮಾವಾಸ್ಯೆ ಆದಿತ್ಯವಾರ ವ್ಯತೀಪಾತಯೋಗ ಶ್ರವಣ ನಕ್ಷತ್ರ ಹಗಲಲ್ಲೊ ಅಥವಾ ಸಿದ್ಧಾರ್ಥಿ ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಿಮೆಯ ಸೋಮವಾರದ ಮಧ್ಯರಾತ್ರಿಯಲ್ಲೋ ಅವರು ಜನಿಸಿರಬಹುದೆಂಬ ನಂಬಿಕೆಯಿದೆ. ಅವರು ೧೧೬೭ಕ್ಕಿಂತ ಮುಂಚಿತವಾಗಿ ಸತ್ತರೆ, ೧೧೮೦ರ ವರೆಗೂ ಬದುಕಿದ್ದರೆ ಎಂಬ ಸಂಶಯಗಳೂ ಇವೆ. ಕಲ್ಯಾಣದಲ್ಲಿ ಹುಟ್ಟಿದರೆ ಅಥವಾ ಬಾಗೇವಾಡಿಯಲ್ಲಾದರೆ ಯಾವ ಬಾಗೇವಾಡಿಯಲ್ಲಿ ಹುಟ್ಟಿದವರು, ಕೂಡಲಸಂಗಮಕ್ಕೆ ಯಾವಾಗ ಬಂದರು, ಬಿಜ್ಜಳನು ಜೈನನೆ-ಅಜೈನನೆ, ಕಲ್ಯಾಣ-ಮಂಗಳವಾಡಗಳಲ್ಲಿ ಇದ್ದುದು ಯಾವಾಗ ಮತ್ತು ಎಷ್ಟು ಕಾಲ—ಎಂಬೆಲ್ಲ ಸಂದೇಹದ ಸುಳಿಗಳಿವೆ. ಇದರ ಸಿಕ್ಕುಗಳನ್ನು ಬಿಡಿಸಲು ಹರಿಹರನ ಅರ್ಧ ದೊರೆತ ಬಸವರಾಜದೇವರ ರಗಳೆ, ರಾಘವಾಂಕನ ಸಿದ್ಧರಾಮಚರಿತೆ, ಚಾಮರಸನ ಪ್ರಭುಲಿಂಗಲೀಲೆ, ಸಿಂಗಿರಾಜಪುರಾಣ, ಪಾಲ್ಕುರಿಕೆ ಸೋಮನಾಥನ ತೆಲುಗು ಬಸವಪುರಾಣ, ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿ, ಕಂಚಿಶಂಕರಾರಾಧ್ಯನ ಸಂಸ್ಕೃತ ಬಸವಪುರಾಣ, ಧರಣಿಪಂಡಿತನ ಬಿಜ್ಜಳರಾಯಚರಿತೆ, ಚಂದ್ರಸಾಗರವರ್ಣಿಯ ಬಿಜ್ಜಣರಾಯಪುರಾಣ, (ಹಂಪನಾ. ಚಂದ್ರಸಾಗರವರ್ಣಿ ಕಸಾಪಸ ೫೮–೨, ಪುಟ ೭೨.) ಹಲವಾರು ಶಿಲಾಶಾಸನಗಳು—ಮೊದಲಾದುವನ್ನು ಆಶ್ರಯಿಸಬೇಕಾಗುತ್ತದೆ. ಈ ಬಗೆಯ ಅಸಮಗ್ರತೆ ಅಂಶರೂಪದಲ್ಲಿ ಇವರಿಬ್ಬರ ಸುತ್ತ ಪರಿವೇಶವಾಗಿ ಕಟ್ಟಿದ್ದರೂ, ಇವರ ವಿಚಾರವಾಗಿ ತಿಳಿದು ಬಂದಿರುವ ವಿಶ್ವಾಸಾರ್ಹ ಸಂಗತಿಗಳೂ ಸಾಕಷ್ಟಿವೆ. ಲಭ್ಯ ಆಧಾರಗಳಿಂದ ಇವರ ವಿಚಾರಧಾರೆಯ ಸ್ವರೂಪ ಬಹುಮಟ್ಟಿಗೆ ಗೊತ್ತಾಗುತ್ತದೆ. ಇಬ್ಬರ ಬದುಕಿನಲ್ಲೂ ಪವಾಡ ನಡೆಸಿದ ಪ್ರಸಂಗಗಳ ಪ್ರಸ್ತಾಪಗಳೂ ಇವೆ. ಅವನ್ನು ಬಿಟ್ಟು ಪ್ರಮಾಣಾರ್ಹ ಸಂಗತಿಗಳನ್ನು ಇಲ್ಲಿ ಗಮನಿಸಲಾಗಿದೆ. ಮಹಾವೀರರು ರಾಜಪುತ್ರರಾಗಿ ಹುಟ್ಟಿದರು. ಜನತಾ ಕಲ್ಯಾಣಕ್ಕಾಗಿ ಸಿಂಹಾಸನ, ಸಂಸಾರಗಳನ್ನು ತ್ಯಾಗಮಾಡಿ ಸಾಮಾನ್ಯ ಜೀವನವನ್ನು ಒಪ್ಪಿಕೊಂಡರು. ತಮ್ಮ ಕಠೋರ ಸಂಯಮದಿಂದ ತಪಸ್ಸಿಗೆ ಬಂದೊದಗಿದ ಅನೇಕ ಕಷ್ಟನಷ್ಟ ನೋವು ಹಿಂಸೆಗಳನ್ನು ತಾಳ್ಮೆಯಿಂದ ಸಹಿಸಿದರು. ತಮ್ಮಲ್ಲೇ ಬಂದ ಚಿತ್ತದ ತಾಕಲಾಟ, ದ್ವಂದ್ವಗಳನ್ನು ನಿಗ್ರಹಿಸಿದರು, ಇಂದ್ರಿಯಗಳ ಮೇಲೆ ಪ್ರಭುತ್ವ ಗಳಿಸಿದರು. ಬಸವೇಶ್ವರರೂ ಜೈನಬಿಜ್ಜಳನಲ್ಲಿ ಮಹಾಮಂತ್ರಿ ಇಲ್ಲವೇ ಕರಣಿಕರಾಗಿದ್ದು, ಅದನ್ನು ತ್ಯಜಿಸಿ ಕಪ್ಪಡಿಯಲ್ಲಿ ಸಂಯಮದ ತಪೋನಿರತ, ಸರಳ, ಭಕ್ತಜೀವನವನ್ನು ಅಪ್ಪಿದರು. ಅವರು ಕೂಡ ಅಂತರಂಗದಲ್ಲಿ ಬಂದ ಕ್ಷುಲ್ಲಕಭಾವನೆಗಳನ್ನೂ ತಳಮಳವನ್ನೂ ತಹಬಂದಿಗೆ ತಂದುಕೊಂಡರೆಂಬುದಕ್ಕೆ ಅವರ ವಚನಗಳೇ ನಿದರ್ಶನ ಕೊಡುತ್ತವೆ. ಇಬ್ಬರ ಈ ಸಮಜೀವನದಿಂದ ಹೊರಪಡುವ ಸತ್ಯವೆಂದರೆ: ಬೆಳವಣಿಗೆಯೆಂಬುದು ಒಮ್ಮೆಲೆ ಜಾದೂ ಆಗಿ ಬರುವಂತಹದಲ್ಲ. ಅದು ಕ್ರಮೇಣ ಮೆಟ್ಟಿಲಾಗಿ ರೂಪಗೊಳ್ಳುತ್ತದೆ, ಸಾಧನೆ ಮಾತ್ರದಿಂದ ಸಿದ್ಧಿ ಸಾಧ್ಯ—ಎಂಬುದು.

ಇವರಿಬ್ಬರೂ ಮಹಾಮಾನವತಾವಾದಿಗಳಾಗಿದ್ದರು. ಮಾನವರೆಲ್ಲರಿಗೂ ಅವಕಾಶಗಳು ಅನುಕೂಲಗಳು ಮುಕ್ತವಾಗಿರುವಂತೆ ತಿಳಿಸಿದರು. ಸರ್ವಸಮಾನತೆಯ ತತ್ವವನ್ನು ಅವರು ಮೊದಲು ಆಚರಿಸಿ, ಅನಂತರ ಲೋಕಕ್ಕೆ ಬೋಧಿಸಿದರು. ಮಹಾವೀರನ ಉಪದೇಶ ಸಭೆ ಸಮವಸರಣ. ಈ ಸಮವಸರಣವೆಂಬುದು ಸರ್ವಜನ–ಧರ್ಮಗಳ ಸಮನ್ವಯದ, ಸಮಾನತೆಯ, ಸಹಿಷ್ಣುತೆಯ ಸ್ನೇಹ ಸೌಹಾರ್ದಗಳ ಸಭೆ. ಅದರಲ್ಲಿ ಜಾತಿ ಮತ ಕೋಮು ಭಾವನೆಗಳ ತಾರತಮ್ಯಕ್ಕೆ ತೆರಪು ಇರಲಿಲ್ಲ. ವ್ಯಕ್ತಿ-ವ್ಯಕ್ತಿಗಳ ನಡುವೆ ಅಂತರವಿರಲಿಲ್ಲ. ಮೇಲುಕೀಳೆಂಬ ವ್ಯತ್ಯಾಸ, ಗಂಡು ಹೆಣ್ಣು ಎಂಬ ಭೇದ ಇರಲಿಲ್ಲ. ಧರ್ಮಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿಸ್ವಾತಂತ್ರ್ಯಗಳಿಂದ ಕೂಡಿದ ಆ ಸಭೆಯ ಒಂದು ಕಟ್ಟುನಿಟ್ಟಾದ ಕಟ್ಟಳೆಯೆಂದರೆ, ಯಾರು ಯಾರ ಪಕ್ಕದಲ್ಲಿ ಬೇಕಾದರೂ ಕೂಡಬಹುದೆಂಬುದು: ಯಾರೊಬ್ಬರೂ ಇನ್ನೊಬ್ಬರನ್ನು ನೀನೇಕೆ ಇಲ್ಲಿ ಕುಳಿತೆ ಎಂದು ಹೇಳಕೂಡದು. ಸಮವಸರಣದಲ್ಲಿ ಶ್ರೇಣಿಕ (ಬಿಂಬಸಾರ) ದೊರೆಯ ಪಕ್ಕದಲ್ಲಿ ಚಂಡಾಲನೊಬ್ಬ ಕುಳಿತಿದ್ದನೆಂದು ತಿಳಿದು ಬರುತ್ತದೆ. ಸಮವಸರಣದಲ್ಲಿ ಪಶುಪಕ್ಷಿಗಳಿಗೂ ಪ್ರವೇಶವಿತ್ತು.

ಸಮವಸರಣದ ಪ್ರತಿಬಿಂಬವೇ ಅನುಭವಮಂಟಪ. ಸಮವಸರಣ ಜಾತೀಯ ಕ್ಷುದ್ರಭಾವನೆಗಳನ್ನು ಹೇಳ ಹೆಸರಿಲ್ಲದಂತೆ ಕರಗಿಸುವ ದ್ರವ. ಇದರ ಕಲ್ಪನೆಯ ಪ್ರಭಾವ ಹೊತ್ತಿರುವ ಅನುಭವಮಂಟಪವೂ ಜಾತಿ ಲಿಂಗಾದಿಗಳ ಭೇದಭಾವದಿಂದ ಹೊರತಾದದ್ದು. ಇದೂ ಕೂಡ ಎಲ್ಲರೂ ಸಮಾನರೆಂಬ ಸಿದ್ಧಾಂತದ ನೆಲಗಟ್ಟಿನ ಮೇಲೆ ನಿಂತಿರುವುದು. ಇಲ್ಲಿ ಮಡಿವಾಳ ಮಾಚಯ್ಯ, ಅಯ್ದಕ್ಕಿ ಮಾರಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಮೇದಾರ ಚೆನ್ನಯ್ಯ ಮೊದಲಾದ ಎಲ್ಲರಿಗೂ ನೇರ ಪ್ರವೇಶವುಂಟು.

ಸಮಾಜಸುಧಾರಕರಿಗೆ ಉನ್ನತವೂ ಉದಾತ್ತವೂ ವ್ಯವಸ್ಥಿತವೂ ಆದ ದೃಷ್ಟಿಗಳಿರಬೇಕು. ಮಹಾವೀರರೂ ಬಸವೇಶ್ವರರೂ ಉಚ್ಚಮಟ್ಟದ ನಿಷ್ಕಾಮ ಕರ್ಮಯೋಗಿಗಳು ಹಾಗೂ ಸಮಾಜಸುಧಾರಕರು. ಮಹಾವೀರರು ಸಮಾಜವನ್ನು ಶ್ರಾವಕ (ಗೃಹಸ್ಥ), ಶ್ರಾವಕಿ (ಗೃಹಿಣಿ), ಸನ್ಯಾಸಿ (ಮುನಿ, ಯತಿ), ಸನ್ಯಾಸಿನಿ (ಆರ್ಯಿಕೆ, ಅಜ್ಜಿಕೆ, ಕಂತಿ) ಎಂದು ನಾಲ್ಕು ವಿಧವಾಗಿ ವಿಂಗಡಿಸಿದ್ದರು. ಇದು ಜಾತಿಯ ಆಧಾರದ ವಿಭಜನೆಯಲ್ಲವೆಂಬುದು ಸ್ವಯಂಸ್ಪಷ್ಟ. ಮಹಾವೀರರ ಪೂರ್ವಭವದ ತಂದೆಯಾದ ಭರತಚಕ್ರವರ್ತಿ (ಈತನಿಂದಲೇ ಈ ದೇಶಕ್ಕೆ ಭಾರತ ಎಂದು ಹೆಸರಾಯಿತೆಂದು ಪುರಾಣಗಳು ತಿಳಿಸುತ್ತವೆ) ಬ್ರಾಹ್ಮಣ ವರ್ಗವೊಂದನ್ನು ತನ್ನ ಕಾಲದಲ್ಲಿ ಪ್ರವರ್ತಿಸಿದಾಗ ಆತನ ತಂದೆ ಆದಿದೇವನು ಇದರಿಂದ ಇಡೀ ಸಮಾಜ ಚೂರುಪಾರಾಗಿ ಹರಿದು ಹೋಗುವುದು ಎಂದು ಎಚ್ಚರಿಸಿದ. ಆ ಎಚ್ಚರ ಎಂದಿನಂತೆ ಇಂದೂ ಅಗತ್ಯ.

ಸ್ವಾರಸ್ಯವೆಂದರೆ ತಮ್ಮ ಪೂರ್ವಭವದ ತಂದೆಯಾದ ಭರತನು ಜಾತಿವರ್ಗವನ್ನು ಪ್ರವರ್ತಿಸಿದರೂ ಮಹಾವೀರರು ಅದನ್ನು ತಿರಸ್ಕರಿಸಿ ಸಮತಾವಾದವನ್ನು ಸಾರಿದರೆಂಬುದು. ಅವರು ಸಂಸಾರಕ್ಕೂ ಮಾನ್ಯತೆ ಕೊಟ್ಟಿದ್ದರು. ಸಂಸಾರದಲ್ಲಿದ್ದೂ ಸಂಯಮ ಪಾಲಿಸುವುದರ ಮೂಲಕ, ಯೋಗಸದೃಶ ಜೀವನ ಸಾಧ್ಯವೆಂದರು. ಸಂಸಾರಯೋಗದಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಾಗಿತ್ತು. ತ್ರಿಶಲಾ (ಪ್ರಿಯಕಾರಿಣೀ), ಚೇಲನಾದೇವಿ, ಪ್ರಭಾವತೀ (ಶೀಲವತೀ), ಮೃಗಾವತೀ, ಸುಪ್ರಭಾ—ಮೊದಲಾದ ಸೋದರಿಯರಿಗೆ ಅಂದಿನ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನವಿತ್ತು. ಅಂತೆಯೇ ಸನ್ಯಾಸದಲ್ಲೂ ಸ್ತ್ರೀಯರಿಗೆ ಸಮಸ್ಥಾನವನ್ನಿತ್ತರು. ಇದರಿಂದ ಆರ್ಯಿಕೆ ಚಂದನಬಾಲೆಯ ನೇತೃತ್ವದಲ್ಲಿ ಮೂವತ್ತಾರು ಸಾವಿರ ಜನ ಪ್ರಜ್ಞಾವಂತರಾದ ಸನ್ಯಾಸಿನಿಯರಿದ್ದರು.

ಬಸವೇಶ್ವರರು ಶರಣ (ಗೃಹಸ್ಥ) ಶರಣೆ (ಗೃಹಿಣಿ)ಯರಿಗೆ ಹಿರಿಯ ಮನ್ನಣೆಯಿತ್ತರು. ಅನುಭವಮಂಟಪದಲ್ಲೂ ಮಹಿಳೆಯರಿಗೆ ಸಮಪ್ರವೇಶ, ಸಮಸ್ಥಾನ, ಸಮಮರ್ಯಾದೆ ಇದ್ದುವು. ಇದರಿಂದ ಅಕ್ಕಮಹಾದೇವಿ, ನೀಲಲೋಚನೆ, ಮುಕ್ತಾಯಕ್ಕ, ರೆಮ್ಮವ್ವ—ಮುಂತಾದ ವಚನಕಾರ್ತಿಯರು ಬರಲು, ಪ್ರತಿಭೆ ತೋರಲು ಸಾಧ್ಯವಾಯಿತು. ಮಹಾವೀರರಂತೆ ಇವರೂ ಸಂಸಾರವನ್ನು ನಿರ್ಲಕ್ಷಿಸಲಿಲ್ಲ. ಇವರು ದಾಂಪತ್ಯ ಜೀವನ ನಡೆಸುತ್ತಾ ವಿಭೂತಿಪುರುಷರಾದರು. ಈಸಬೇಕು, ಇದ್ದು ಜಯಿಸಬೇಕೆಂಬುದಕ್ಕೆ ಇವರು ಉದಾಹರಣೆಯಾದರು.

ಮಹಾವೀರರು ಸದ್ಗೃಹಸ್ಥನು ಪಾಲಿಸಬೇಕೆಂದು ತಿಳಿಸಿದ ಷಟ್‌ಕರ್ಮಗಳಲ್ಲಿ ದಾನವೂ ಒಂದು. ದಾನಗಳಲ್ಲಿ ನಾಲ್ಕು ಬಗೆ—ಆಹಾರ, ಅಭಯ, ಶಾಸ್ತ್ರ, ಭೈಷಜ್ಯ. ಆಹಾರದಾನಕ್ಕೆ ಬಹುಮಾನ ಮಹತ್ವವಿದೆ. ಅವರಲ್ಲಿಯೂ ಗುರುಗಳಿಗೆ ಮುನಿಗಳಿಗೆ ಕೊಡುವ ಆಹಾರಭಿಕ್ಷೆ ಶ್ರೇಷ್ಠವೆಂದು ಪರಿಗಣಿತವಾಗಿದೆ. ಶ್ರಾವಕನಾದವನು ಚರ್ಯಾಮಾರ್ಗದಿಂದ ಬಂದ ಜಿನಮುನಿಗಳಿಗೆ ಆಹಾರವಿತ್ತು ಅನಂತರ ತಾನು ಉಣಬೇಕು. ಇದೇ ಆಹಾರದಾನದ ಪ್ರಭಾವ ಇಲ್ಲಿಯೂ ಕಂಡುಬರುತ್ತದೆ. ಶರಣನಾದವನು ಉಣಬಂದ ಜಂಗಮರಿಗೆ ದಾಸೋಹವಿತ್ತು ಅನಂತರ ಶೇಷಾಹಾರವನ್ನು ತಾನು ಸ್ವೀಕರಿಸಬೇಕು. ಅಂತೆಯೇ ಬಸವೇಶ್ವರರು ತಿಳಿಸಿದ ದಾಸೋಹಕ್ಕೆ ಮಹಾವೀರರು ಒತ್ತಿ ಹೇಳಿದ, ಸಾರಿದ ಆಹಾರದಾನವಿಧಿಯನ್ನು ಮೂಲಸೆಲೆಯೆಂದು ಗುರುತಿಸಬಹುದು. ಸೋಹಂ ಎನಿಸದೆ ದಾಸೋಹಂ ಎನಿಸಯ್ಯ ಎಂದು ಸೇವಕ-ಸೇವ್ಯ ರೂಪದಲ್ಲಿ ಆರಂಭವಾದ ಈ ನಮ್ರತೆಯ ನಿವೇದನೆಯಲ್ಲಿ ಬರುವ ಗುರುಲಿಂಗಜಂಗಮ ಅರ್ಥಾತ್ ತ್ರಿವಿಧ ದಾಸೋಹದಿಂದ ಸಾಧಕ ಮುನ್ನಡೆಯಲು ಸಾಧನವಾಗುತ್ತದೆಂಬುದರಲ್ಲಿ ಜಿನಭಾಷಿತ ರತ್ನತ್ರಯದ ಕಲ್ಪನೆಯೂ ಮೇಳೈಸಿದೆ.

ಮಹಾವೀರ ಪ್ರಣೀತ ಧರ್ಮವನ್ನು ಆಚಾರ್ಯ ಸಮಂತಭದ್ರರು ಸರ್ವೋದಯ ತೀರ್ಥವೆಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ, ಮನನೀಯವಾಗಿದೆ. ಅಹಿಂಸೆ, ಅಸ್ತೇಯ, ಅಪರಿಗ್ರಹ, ಸತ್ಯ, ಬ್ರಹ್ಮಚರ್ಯ ಎಂಬ ಐದು ವ್ರತಗಳ ಅನುಷ್ಠಾನವೇ ಇದಕ್ಕೆ ಅಡಿಪಾಯ. ಮಹಾವೀರರು ಜನಸಾಮಾನ್ಯರೆಲ್ಲರ ಮೇಲ್ಮೆಗಾಗಿ ಚಿಂತಿಸಿ ಪ್ರಯತ್ನಿಸಿದವರು. ತಾವು ಹೇಳುವುದು ಜನತೆಗೆ ತಿಳಿಯಬೇಕೆಂಬುದು ಅವರ ಹಂಬಲವಾಗಿತ್ತು. ಆದರಿಂದ ಅವರು ಪಂಡಿತ

ಮಂಡಲಿಯ ಭಾಷೆಯಲ್ಲಿ ಬೋಧಿಸದೆ ಆ ಕಾಲದ ತಮ್ಮ ಸಂಚಾರ ಪ್ರದೇಶದ ಜನಭಾಷೆಯಾದ ಅರ್ಧಮಾಗಧಿಯಲ್ಲಿ ಉಪದೇಶಿಸಿದರು. ಸರ್ವಭಾಷಾಮಯಿೞ ಸರಸ್ವತೀ ಎಂದು ಉದಾತ್ತವಾಗಿ ಕಲ್ಪಿಸಿಕೊಂಡುದರಿಂದ. ಮಹಾವೀರರು ಭಾಷಾಭೇದಗಳನ್ನು ಅಲಕ್ಷಿಸಿ. ಎಲ್ಲ ಭಾಷೆಗಳೂ ವಿಚಾರಾಭಿವ್ಯಕ್ತಿಗೆ ಸಮಾನ ಮಾಧ್ಯಮಗಳೆಂಬುದನ್ನು ಪುರಸ್ಕರಿಸಿದರು. ಬಸವೇಶ್ವರರು ಕೂಡ ದೇವಭಾಷೆಯನ್ನು ಬಿಟ್ಟು ಜನಭಾಷೆಯಾದ ಕನ್ನಡದಲ್ಲಿ ತಮ್ಮ ವಿಚಾರಗಳನ್ನು ತೋಡಿಕೊಂಡರು. ಅವರ ಸಂಸ್ಕೃತ ಪಾಂಡಿತ್ಯ ಸಮೃದ್ಧವಾಗಿದ್ದೂ ಅವರು ಕನ್ನಡವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಂಡರೇಕೆಂಬುದು ಚಿಂತನೀಯ, ಗಮನಾರ್ಹ. ಮಹಾವೀರರೂ, ಬಸವೇಶ್ವರರೂ ಜಾತಿಪದ್ಧತಿಯನ್ನು ವಿರೋಧಿಸಿದವರು. ದಲಿತ, ಶೋಷಿತ ವರ್ಗಗಳವರ ಉದ್ಧಾರಕ್ಕಾಗಿ ಶ್ರಮಿಸಿದ ಈ ಮಹಾತ್ಮರು ಆ ತತ್ವಗಳನ್ನು ಮೊದಲು ತಾವೇ ಪಾಲಿಸಿ ತೋರಿಸಿದರು. ಕ್ಷತ್ರಿಯರು. ಬ್ರಾಹ್ಮಣರು. ವೈಶ್ಯರು. ಶೂದ್ರರು—ಎಲ್ಲರೂ ಅವರ ಶಿಷ್ಯತ್ವಕ್ಕೆ ಅರ್ಹರಾದರು. ಮಹಾವೀರರ ಸಂಘ ಸೇರಿದರು. ಭಾರತದ ಬೇರೆ ಬೇರೆ ಭಾಗಗಳಿಂದ ಬಂದು ಅವರ ಶಿಷ್ಯರಾದರು. ರಾಜರಿಂದ ಹಿಡಿದು ತೀರ ಸಾಮಾನ್ಯ ಪ್ರಜೆಯವರೆಗೆ ಅವರ ಅನುಯಾಯಿಗಳಿದ್ದರು. ಸಕಡಾಲ (ಸದ್ದಾಲ)ನೆಂಬ ಕುಂಬಾರನೂ. ಹರಿಜನನಾದ ಹರಿಕೇಶಿಯೂ ಮಹಾವೀರನ ಶಿಷ್ಯೋತ್ತಮರಾಗಿ ಉಳಿದ ಶ್ರಾವಕರಿಗೆ ಮಾರ್ಗದರ್ಶಕರಾಗಿದ್ದರು. ನೆನಪಿಡಬೇಕಾದ ಸಂಗತಿಯೆಂದರೆ ಮಹಾವೀರರು ಇವರಲ್ಲಿ ಆಹಾರ ತಾವೂ ಸ್ವೀಕರಿಸಿ ಉಳಿದವರೂ ಸ್ವೀಕರಿಸುವಂತೆ ಮಾಡಿದ್ದು. ಮತ್ತು ಚಂಡಾಲ ಕುಲದ ಹರಿಕೇಶಿಗೆ ಮುನಿದೀಕ್ಷೆಯನ್ನೂ ಕೊಟ್ಟಿದ್ದಲ್ಲದೆ ದೊಡ್ಡ ದೊಡ್ಡ ಶ್ರೀಮಂತರಿಂದ ಚಕ್ರವರ್ತಿಗಳಿಂದ ಆತನಿಗೆ ನಮಸ್ಕಾರ ಮಾಡಿಸಿದರು. ಬಸವೇಶ್ವರರೂ ಈ ಅಂಶದಲ್ಲಿಯೂ, ಮಹಾವೀರರ ತದ್ರೂಪವಾಗಿದ್ದಾರೆ. ಇವರು ಹರಳಯ್ಯ ಮಧುವಯ್ಯ ಪ್ರಕರಣದಲ್ಲಿ ತೋರಿದ ಅಸೀಮ ಉನ್ನತ ನಡವಳಿಕೆ ಇಂದಿಗೂ ಅನುಸರಣೀಯ ಮೇಲ್ಪಂಕ್ತಿಯಾಗಿದೆ. ಇವರು ನಡೆಸಿದ ಸಾಮಾಜಿಕ ಕ್ರಾಂತಿ. ಜಾತಿಪದ್ಧತಿಗೆ ಕೊಟ್ಟ ವಜ್ರಾಘಾತ ಅಸಾಮಾನ್ಯವಾದುದು. ಶರಣ ದೀಕ್ಷೆಯನ್ನೂ ಲಿಂಗಧಾರಣೆಯನ್ನೂ ಎಲ್ಲರಿಗೂ ನೀಡಿದರು—ಜಾತಿ ಲಿಂಗ ವ್ಯತ್ಯಾಸ ತೋರಲಿಲ್ಲ. ಅಹಿಂಸಾ ಪರಮೋಧರ್ಮಃ ಎಂಬುದು ಜಿನವಾಣಿ. ಜೀವದಯೆಯೇ ಜೈನಧರ್ಮವಾಗಿರುವಂತೆ ವೀರಶೈವ ಧರ್ಮವೂ ಆಗಿದೆ. ಇವರ ಧರ್ಮವನ್ನು ಶ್ರೀಸಾಮಾನ್ಯನಿಂದ ಶ್ರೀಮಂತನವರೆಗೆ ಸ್ವೀಕರಿಸಿದರು. ದೂರದ ಕಾಶ್ಮೀರದಿಂದ ಪ್ರಜೆಗಳೂ ಪ್ರಭುಗಳೂ ಬಂದರು.

ಮಹಾವೀರರ ಮತ್ತು ಬಸವೇಶ್ವರರ ಸಮಾನ ವಿಚಾರಧಾರೆಯನ್ನು ತೋರುವ ಅನೇಕ ಸೂಕ್ತಿಗಳಿವೆ. ಅವುಗಳಲ್ಲಿ ಕೇವಲ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಿದೆ:

೧. ಮಹಾವೀರರು: ನೀನೂ ಜೀವಿಸು, ಇತರರಿಗೂ ಜೀವಿಸಲು ಅವಕಾಶ ಕೊಡು. ಅಹಿಂಸೆ, ತಾಯಿಯಂತೆ. ಎಲ್ಲ ಜೀವಿಗಳ ಹಿತವನ್ನು ಬಯಸುತ್ತದೆ. ಜೀವಿಗಳ ವಧೆ ತನ್ನ ವಧೆಯೇ ಆಗಿದೆ. ಪ್ರಾಣಿಗಳಿಗೆ ದಯೆ ತೋರುವುದು ತನ್ನ ಮೇಲೆಯೇ ದಯೆ ತೋರಿದಂತಾಗುವುದು. ಪ್ರಾಣಿಗಳಿಗೆ ಅಭಯ ದಾನ ನೀಡು, ಮೈತ್ರೀಭಾವ ತೋರು.

ಬಸವೇಶ್ವರರು: ದಯವಿಲ್ಲದ ಧರ್ಮವಾವುದಯ್ಯ ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ ದಯವೇ ಧರ್ಮದ ಮೂಲವಯ್ಯ.

೨. ಮಹಾವೀರರು: ಸದಾಚಾರವೇ ಮೋಕ್ಷದ ಮೆಟ್ಟಿಲು ಆಚಾರಹೀನಮನುಷ್ಯನ ಜನ್ಮ ನಿರರ್ಥಕ.

ಬಸವೇಶ್ವರರು: ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೊ ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ ಆಚಾರವೇ ಸ್ವರ್ಗ, ಅನಾಚಾರವೇ ನರಕ.

೩. ಮಹಾವೀರರು: ಯಾರ ಅಂತರಂಗದಲ್ಲಿ ಕಾಮಕ್ರೋಧಾದಿ ಶತ್ರುಗಳು ಕುಳಿತಿದ್ದಾವೋ ಅವರಿಗೆ ಶಾಂತಿ ಹೇಗೆ ಸಿಕ್ಕೀತು? ನಿನ್ನ ಮನಸ್ಸು ವಿಷಯಸುಖದಿಂದ ದೂರ ಸರಿದರೆ, ಆಗ ಉತ್ತಮ ಸುಖ ಪ್ರಾಪ್ತವಾಗುತ್ತದೆ. ಬಾಹ್ಯ ಶತ್ರುಗಳಿಗಿಂತ ಅಂತರಂಗ ಶತ್ರುಗಳನ್ನು ಜಯಿಸು.

ಬಸವೇಶ್ವರರು: ಹುತ್ತವ ಬಡಿದರೆ ಉರಗ ಸಾವುದೆ ಘೋರ ತಪವ ಮಾಡಿದರೇನು ಅಂತರಂಗ ಆತ್ಮ ಶುದ್ಧಿಯಿಲ್ಲದವರನೆಂತು ನಂಬುವನಯ್ಯ.

೪. ಮಹಾವೀರರು: ಹಿಂಸೆ ಮಾಡಬೇಡ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ ಪರಿಗ್ರಹ ಬಿಡು. ಬ್ರಹ್ಮಚರ್ಯ ಪಾಲಿಸು. ಈ ವ್ರತಪಾಲನೆಯೇ ಶುದ್ಧ ತಪಸ್ಸಿಗೆ ಹೆದ್ದಾರಿ. ಅಂತರಂಗ ಬಹಿರಂಗಗಳಿಂದ ಎಲ್ಲ ಗ್ರಂಥಿಗಳನ್ನು ತ್ಯಜಿಸು.

ಬಸವೇಶ್ವರರು : ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯ ಬೇಡ ಅನ್ಯರಿಗೆ ಅಸಹ್ಯಪಡ ಬೇಡ ತನ್ನ ಬಣ್ಣಿಸ ಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ.

೫. ಮಹಾವೀರರು : ವಿನಯದಿಂದ ಸಂಯಮ. ತಪ. ಜ್ಞಾನಪ್ರಾಪ್ತಿ. ಸತ್ಪುರುಷರು ಸದಾಮೃದುಭಾಷಿಗಳು. ಹಿರಿಯರಲ್ಲಿ ಗುರುಗಳಲ್ಲಿ ವಿನಯದಿಂದ ವರ್ತಿಸು. ಯಾವ ಭಾಷೆ ಕಠೋರವೋ, ಪರರಿಗೆ ದುಃಖ ತರುವಂತಹುದೋ ಅದು ಸತ್ಯವಾದರೂ ಹೇಳಬೇಡ.

ಬಸವೇಶ್ವರರು : ಮೃದುವಚನವೇ ಸಕಲ ಜಪಂಗಳಯ್ಯ ಮೃದು ವಚನವೇ ಸಕಲ ತಪಂಗಳಯ್ಯ ಸದುವಿನಯವೇ ಸದಾಶಿವನೊಲುಮೆಯಯ್ಯಾ.

೬. ಮಹಾವೀರರು : ಚಿರಕಾಲದಿಂದ ಕೂಡಿಟ್ಟ ಕ್ರೋಧವೆಂಬ ಅಗ್ನಿಯನ್ನು ಕ್ಷಮೆಯೆಂಬ ನೀರಿನಿಂದ ಆರಿಸು. ಈ ರಾಗದ ಬೆಂಕಿ ನಿನ್ನನ್ನು ನಿರಂತರ ಸುಡುತ್ತಿರುತ್ತದೆ. ಕ್ರೋಧ ಮದ ಮಾಯೆ ಲೋಭಗಳು ಪಾಪಕ್ಕೆ ಮೂಲ ಕಾರಣವಾಗಿವೆ, ಬುದ್ಧಿವಂತರು ದೂರವಿರಬೇಕು.

ಬಸವೇಶ್ವರರು : ತನಗೆ ಮುನಿವರಿಗೆ ತಾಮುನಿಯಲೇಕಯ್ಯ ತನಗಾದೆಡೆಗೇನು ಅವರಿಗಾದೆಡೆಗೇನು ತನುವಿನ ಕೋಪ ತನ್ನ ಹಿರಿಯತನದ ಕೇಡು ಮನದ ಕೋಪ ತನ್ನ ಅರಿವಿನ ಕೇಡು, ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು.

೭. ಮಹಾವೀರರು : ತಲೆಯನ್ನು ಬೋಳಿಸಿದ ಮಾತ್ರಕ್ಕೆ ಜೈನ ಮುನಿಯಾಗಲಾರ ಓಂಕಾರ ಕಲಿತ ಮಾತ್ರಕ್ಕೆ ಬ್ರಾಹ್ಮಣನಾಗಲಾರ ಕಾಡಿನಲ್ಲಿ ವಾಸಮಾಡಿದ ಮಾತ್ರಕ್ಕೆ ಯತಿಯಾಗಲಾರ ಮನಃಶುದ್ಧಿಯಿಲ್ಲದೆ ಆಡಂಬರವೇಷದಿಂದ ಸಾಧುಧರ್ಮ ಬರದು.

ಬಸವೇಶ್ವರರು : ಗೀತವ ಹಾಡಿದರೇನು ಶಾಸ್ತ್ರಪುರಾಣ ಕೇಳಿದರೇನು ವೇದವೇದಾಂತವನೋದಿದರೇನು ಮನ ಪೊಲಿದು ಲಿಂಗಜಂಗಮವ ಪೂಜಿಸಲರಿಯದವರು.

೮. ಮಹಾವೀರರು : ತೀರ್ಥಗಳಲ್ಲಾಗಲಿ ದೇವಾಲಯಗಳಲ್ಲಾಗಲಿ ದೇವರಿಲ್ಲ ಭಗವಂತನಾದರೋ ಈ ದೇಹವೆಂಬ ದೇವಾಲಯದಲ್ಲಿದ್ದಾನೆ.

ಬಸವೇಶ್ವರರು : ಉಳ್ಳವರು ಶಿವಾಲಯವ ಮಾಡಿಹರು ನಾನೇನ ಮಾಡುವೆ ಬಡವನಯ್ಯ ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯ.

೯. ಮಹಾವೀರರು : ಜಾತಿ ಇರುವುದು ಒಂದೇ ಒಂದು, ಅದು ಮನುಷ್ಯ ಜಾತಿ ಆತ್ಮನ ದೃಷ್ಟಿಯಲ್ಲಿ ಎಲ್ಲರೂ ಸಮಾನ. ಮನುಷ್ಯ, ಜನ್ಮದಿಂದ ಅಲ್ಲ. ಕರ್ಮದಿಂದ ಮಹಾನ್ ವ್ಯಕ್ತಿಯಾಗುತ್ತಾನೆ.

ಬಸವೇಶ್ವರರು : ಕೊಲುವವನೇ ಮಾದಿಗ ಹೊಲಸ ತಿಂಬವನೇ ಹೊಲೆಯ ಕುಲವೇನೋ ಅವದಿರ ಕುಲವೇನೋ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು.

೧೦. ಮಹಾವೀರರು : ಪವಿತ್ರವೆಂದು ತಿಳಿದು ನದಿ ಸಮುದ್ರಗಳಲ್ಲಿ ಸ್ನಾನ ಮಾಡುವುದು ಮರಳು ಕಲ್ಲುಗಳನ್ನು ರಾಶಿ ಮಾಡಿ ದೇವರೆಂದು ಪೂಜಿಸುವುದು ದೊಡ್ಡ ದೊಡ್ಡ ಗುಡ್ಡಗಳಿಂದ ಬಿದ್ದು ಬೆಂಕಿಯಲ್ಲಿ ಹಾರಿ ಪ್ರಾಣ ಬಿಡುವುದು ಧರ್ಮಕಾರ್ಯವೆನ್ನುತ್ತಾರೆ. ಇವು ಮಿಥ್ಯೆಯೇ ಹೊರತು ಸತ್ಯವಲ್ಲ. ಈ ರೀತಿ ವರ್ತಿಸಬೇಡಿ.

ಬಸವೇಶ್ವರರು : ನೀರ ಕಂಡಲ್ಲಿ ಮುಳುಗವರಯ್ಯ ಮರನ ಕಂಡಲ್ಲಿ ಸುತ್ತುವರಯ್ಯ ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು ನಿಮ್ಮನೆತ್ತಬಲ್ಲರು (ಇದಲ್ಲದೆ ತೊರೆಯ ಮಿಾವಣ್ಣಗಳಿರಾ—ಮುಂತಾದ ವಚನಗಳಲ್ಲೂ ಇದನ್ನು ಸ್ಪಷ್ಟ ಪಡಿಸಿದ್ದಾರೆ)

ಹೀಗೆ ಮಹಾವೀರ ಬಸವೇಶ್ವರರು ಒಂದೇ ನಾಣ್ಯದ ಎರಡು ಮುಖಗಳಂತೆ ಕಾಣುತ್ತಾರೆಂಬುದನ್ನು ಗುರುತಿಸಿದ ಮೇಲೆ, ಅಲ್ಲಿಗೇ ಕರ್ತವ್ಯ ಮುಗಿಯಲಿಲ್ಲ. ಅಲ್ಲಿಂದ ಪ್ರಾರಂಭವಾಗುತ್ತದೆ. ಸಮಾಜವಾದದ ಸೂತ್ರಗಳನ್ನು ಸೇರಿಸಿ, ಸರ್ವೋದಯ ಸಿದ್ಧಾಂತವನ್ನು ಸಾರಿದ ಮಹಾವೀರ—ಬಸವರಿಂದ ಇಂದೂ ನಾನಾ ಸಮಸ್ಯೆಗಳಿಗೆ ನಾವು ಪರಿಹಾರ ಪಡೆಯಬೇಕಾಗಿದೆ. ಮೂಲಭೂತ ಸಮಸ್ಯೆಗಳಲ್ಲಿ ಅರೆ ಪಾಲು ಇನ್ನೂ ಅಂದಿನಂತೆಯೇ ಇವೆ. ನಮ್ಮ ದೇಶದ ಸ್ವಸ್ಥ ಜೀವನವನ್ನು ಹೀರಿಕೊಂಡು ಬೃಹದಾಕಾರವಾಗಿ ಬೆಳೆದು ನಿಂತಿರುವ ಜಾತಿಯ ರಾಕ್ಷಸನನ್ನು ಎದುರಿಸು

ವುದು ಇಂದು ಅತ್ಯಗತ್ಯ. ವಿಷಮಜಾತಿವಿಚ್ಛಿನ್ನವಾದ ಜನಜೀವನದಲ್ಲಿ ಮತ್ತೆ ಸೌಮನಸ್ಯ ತರಬೇಕಾಗಿದೆ. ಶಾಂತಿ ನೆಲೆಯೂರಬೇಕಾದರೆ ಪ್ರತಿಯೊಂದು ಜೀವದ ಹಿರಿಮೆಯನ್ನು ಮಾನ್ಯ ಮಾಡಿದ ವೀರ-ಬಸವೇಶ್ವರರ ವಿವೇಕವಾಣಿ ಮೇಲ್ಪಂಕ್ತಿಯಾಗಬೇಕು. ಜನತೆ ಎಲ್ಲಿಯವರೆಗೆ ತಮ್ಮ ಸಹಮಾನವರನ್ನು ಸಹಿಸಿಕೊಳ್ಳದೆ. ಮುಟ್ಟಿಸಿಕೊಳ್ಳದೆ ದೂರದಲ್ಲೇ ನಿಲ್ಲಿಸುವ ದುಷ್ಟ ಬುದ್ಧಿಯನ್ನು ಸುಟ್ಟು ಬೂದಿ ಮಾಡುವುದಿಲ್ಲವೋ. ಅಲ್ಲಿಯವರೆಗೆ ವರ್ಧಮಾನ-ಬಸವಾದಿಗಳ ಸಲಹೆ ಸೂಚನೆಗಳು ಭಾಷಣಗಳಿಗಷ್ಟೇ ಸೀಮಿತವಾದ ಚುನಾವಣಾಪ್ರಣಾಲಿ ಮಾದರಿಯ ಬುರುಗುಗನಸಾಗೇ. ಜಯಂತಿ ಆಚರಣೆಗಳ ಸ್ವಪ್ನ ರಮ್ಯವಾಗೇ. ವಾಸ್ತವ್ಯದ ಗಟ್ಟಿ ನೆಲಗಟ್ಟಿನ ಮೇಲೆ ಕಾಲೂರದೆಯೇ ನಮ್ಮಿಂದ ದೂರ ಇರುತ್ತವೆ. ಯಾರು ಇವರ ಹೇಳಿಕೆಗಳನ್ನು ಅನುಸರಿಸುವುದಿಲ್ಲವೋ ಅಂತಹವರಿಗೆ ಇವರ ಜಯಂತಿ, ನಿರ್ವಾಣೋತ್ಸವ ಆಚರಿಸುವ ನೈತಿಕ ಹಕ್ಕೂ ಇಲ್ಲ. ಆಚರಿಸಿದರೆ ಅದಕ್ಕೆ ಅರ್ಥಮಹತ್ವವೂ ಇಲ್ಲ.

ಇದಕ್ಕೆ ಮೊದಲು ಮಹಾವೀರರ—ಬಸವಣ್ಣನವರ ಸಿದ್ಧಾಂತಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ, ಪಾಲಿಸದ ಸ್ವಾಮಿಗಳ. ಮಠಾಧಿಪತಿಗಳ ಸುಧಾರಣೆಯಾಗಬೇಕು : ಅವರ ಕಪಿಮುಷ್ಟಿಯಿಂದ ಜನತೆಗೆ ಬಿಡುಗಡೆ ದೊರೆಯಬೇಕು : ಜನಿವಾರ ಶಿವದಾರಗಳಲ್ಲೇ ಧರ್ಮ ಅಡಗಿದೆಯೆಂಬ ಮೂಢ ನಂಬಿಕೆಗೆ ವಿದಾಯ ಹೇಳಬೇಕು. ಆಮೇಲೆ ಮುಕ್ತ ಮನಸ್ಸಿನ ಸಮೀಕ್ಷೆಗೆ ಅವಕಾಶವಾದೀತು. ಗುಡಿಗುಂಡಾರ ಬಸದಿ ಮಸೀದಿ ಶಿವಾಲಯಗಳನ್ನು ಪೂಜಿಸುವುದರಷ್ಟೇ ಮಹತ್ವದ್ದು. ಮುಖ್ಯವಾದದ್ದು ಸಹಮಾನವರನ್ನು ಸಮಾನವಾಗಿ ಕಾಣುವುದು ಎಂಬ ತಿಳಿವಳಿಕೆ ನಡವಳಿಕೆಯಲ್ಲಿ ಮೂಡಬೇಕು. ಇಂದು ಶಿಕ್ಷಣ ಸಾರ್ವತ್ರಿಕವಾಗುತ್ತಿದೆ. ಮತದಾನದ ಹಕ್ಕು ಎಲ್ಲರಿಗೂ ಇದೆ. ರಾಜಕೀಯ ಸ್ವಾತಂತ್ರ್ಯ ಪ್ರಜ್ಞೆ ಜಾಗ್ರತವಾಗುತ್ತಿದೆ. ಔದ್ಯಮೀಕರಣ ಭರದಿಂದ ಸಾಗಿದೆ. ಇಂಥ ಯಂತ್ರ ನಾಗರೀಕತೆಯಲ್ಲೂ ವರ್ಣಾಶ್ರಮ ವ್ಯವಸ್ಥೆಯ. ಅದೃಶ್ಯ ಸಿದ್ಧಾಂತಗಳ ಅಲೋಕದಲ್ಲಿಯೇ ಉಡ್ಡೀನ ಮಾಡಬೇಕೆ? ಓಟು ಕೇಳುವಾಗ ಜಾತಿಯನ್ನೇ ಅಸ್ತ್ರವಾಗಿ ಆಶ್ರಯಿಸುವುದು ಸರಿಯೆ? ಮಹಾವೀರ ಬಸವಾದಿ ಮಹಾತ್ಮರು ಸಾರಿದ ಗುಣಕ್ಕೆ ಮನ್ನಣೆ ಕೊಡುವುದು ಎಲ್ಲಿ? ಯಾವಾಗ? ಜಾತಿ ರೋಗವನ್ನು ಮಾನಸಿಕ ಶಸ್ತ್ರಕ್ರಿಯೆ ಮಾಡಿ ಮೂಲೋತ್ಪಾಟನ ಮಾಡಲು ಮಹಾವೀರ ಬುದ್ಧ ಬಸವ ಗಾಂಧಿಗಳು ಆಗಿಹೋದರೂ ಏಕೆ ಸಾಧ್ಯವಾಗಿಲ್ಲ? ಜಾತಿಮಾರಿಗೆ. ಜಾತಿಭೂತಗಣಗಳಿಗೆ ನಾನಾ ರೂಪದ ಧೂಪಾರತಿ ಮಾಡುವವರು ಇನ್ನೂ ಇರುವುದರಿಂದ, ಇವರಲ್ಲಿ ಮಹಾವೀರರ ಬಸವೇಶ್ವರರ ಶಿಷ್ಯರೆಂದು ಹೇಳಿಕೊಳ್ಳುವವರೂ ಇದ್ದಾರೆಂಬುದು ವಿಪರ್ಯಾಸದ ಶಿಖರ. ಲೋಕಕಾರುಣ್ಯದ ಚತುರ್ಮುಖಗಳಾದ ಮಹಾವೀರ-ಬುದ್ಧ-ಬಸವ-ಗಾಂಧಿಗಳು ಇನ್ನೂ ಎಷ್ಟು ಸಲ ಹುಟ್ಟಿಬರಬೇಕೊ.

---

ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದ ಮಾಂಬುದೇ ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಶರಣರ ನುಡಿಗಡಣವೇ
ಕಡೆಗೀಲು ಕಾಣಾ ರಾಮನಾಥಾ.

—ದೇವರ ದಾಸಿಮಯ್ಯ

# ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು

ಬಿ. ನಂಜುಂಡಪ್ಪ

ವೀರಶೈವಾಚಾರ ಮಾರ್ಗವಿ-
ಚಾರವಭ್ಯಂತರದೊಳೀಪರಿ
ಯೋರಣಿಸಿ ಹರಕರ್ಮ ಭಕ್ತಿಜ್ಞಾನವಿಹುದೆಂದು ।
ಧಾರುಣಿಯಲಜೀವಂತೆ ಕರುಣಾ-
ಕಾರನಾಗಿ ಷಡುಸ್ಥಲವನು
ಸ್ವರಿಸಿದ ಗುರುಚನ್ನಸಂಗನ ಬಸವ ಶರಣಾರ್ಥಿ ॥

—ಪ್ರಭುಲಿಂಗಲೀಲೆ

## ಹಿನ್ನೆಲೆ

ಕರ್ನಾಟಕದಲ್ಲಿ ಲಕುಲೀಶ (ಪಾಶುಪತ). ಕಾಳಾಮುಖ. ಕಾಪಾಲಿಕ. ಶಾಕ್ತಪಂಥಗಳೂ. ಇಳಿಮುಖವಾಗುತ್ತಿದ್ದ ಜೈನ ಧರ್ಮವೂ. ಕರ್ಮಪ್ರಧಾನವಾದ ವೈದಿಕಧರ್ಮವೂ ತಮ್ಮ ತಮ್ಮ ಭಿನ್ನವಿಭಿನ್ನ ತತ್ತ್ವಪ್ರತಿಪಾದನೆ. ಜಾತೀಯ ಅಂಧ ಶ್ರದ್ಧೆಯ ಆಚರಣೆಗಳಿಂದ ಜನಮನವನ್ನು ಕಲಕುತ್ತಿದ್ದ ಸಂದಿಗ್ಧ ಸಮಯ ಹನ್ನೆರಡನೆಯ ಶತಮಾನ. ಜನಸಾಮಾನ್ಯರ ಆತ್ಮಶಾಂತಿಗೆ ದಾರಿತೋರುವ ವಿಶಾಲಧರ್ಮಬೋಧಕವಾದ ಪ್ರಭಾವೀಶಕ್ತಿಯ ಉದಯವನ್ನು ಕನ್ನಡನಾಡು ಬಯಸುತ್ತಿದ್ದ ಸಮಯವದು. ಡಾ. ಆರ್. ಸಿ. ಹಿರೇಮಠರು ಹೇಳುವಂತೆ[1] : "ಈ ಬಗೆಯ ರಾಜಕೀಯ ಮತ್ತು ಧಾರ್ಮಿಕ ಪ್ರಕ್ಷೋಭೆಯಲ್ಲಿ ಕನ್ನಡನಾಡು–ಭರತಖಂಡವೆಂದರೂ ಸಲ್ಲುವುದು—ಸಿಲುಕಿ ತತ್ತರಿಸುತ್ತಿದ್ದಿತು! ಜನ ಆತ್ಮೋನ್ನತಿಯ ಹಾದಿಯನ್ನು ತೋರಿಸುವ ಪುಣ್ಯಪುರುಷನ ಬರವನ್ನು ಕಾಯುತ್ತಿತ್ತು. ಬಸವಣ್ಣನವರು ನಂಬಿ ಕರೆದ ಜನತೆಗೆ ಇಂಬು ಕೊಟ್ಟುದು ಈ ಸಮಯದಲ್ಲಿ."

"ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ದಂಡನಾಥ ಚೂಡಾಮಣಿಯಾದುದು ಒಂದು ದೃಷ್ಟಿಯಿಂದ ಭುವನದ ಭಾಗ್ಯವೆಂದೇ ಹೇಳಬೇಕು....ಕಲ್ಯಾಣ ಮನುಕುಲದ ಕಲ್ಯಾಣವಾಯಿತು....ಬಿಜ್ಜಳನ ನಿಯೋಗವನ್ನು ಹೊತ್ತು ಬಂದ ಅಮಾತ್ಯರು, ಪುರಕೆ ಬಿಜಯಂಗೈದು ಉದ್ಧರಿಸಬೇಕೆಂದು ಪ್ರಾರ್ಥಿಸುವುದೂ ಬಸವಣ್ಣನವರು ಭಕ್ತಹಿತಾರ್ಥವನ್ನು ನೆನೆದು ಅದಕ್ಕೆ ಒಡಂಬಟ್ಟುದೂ ಅರ್ಥಪೂರ್ಣವಾಗಿದೆ. ಬಸವಣ್ಣನವರು ಲೋಕೋದ್ಧಾರಕ್ಕಾಗಿ ಅವತರಿಸಿದ ಕಾರಣಪುರುಷರು. ಆದುದರಿಂದ ಅವರು ಕಲ್ಯಾಣದಲ್ಲಿ ಅಡಿಯಿಟ್ಟೊಡನೆ ಮಾನವ ಕಲ್ಯಾಣ ಕಾರ್ಯದಲ್ಲಿ ನಿರತರಾದರು. ಅವರ ಅಸದೃಶವಾದ ಭಕ್ತಿ, ಅನುಪಮವಾದ ವ್ಯಕ್ತಿತ್ವ, ಅಸಾಧಾರಣವಾದ ಕರ್ತೃತ್ವಶಕ್ತಿ. ಲೋಕೋತ್ತರವಾದ ಧ್ಯೇಯ ಇವೆಲ್ಲ ಕ್ಷಿಪ್ರದಲ್ಲಿಯೇ ಅಸಂಖ್ಯಾತರ ಚಿತ್ತವನ್ನು ಸೆಳೆದುವು.[2] ಅವರೊಂದಿಗೆ ವ್ಯೋಮಮೂರುತಿ ಅಲ್ಲಮಪ್ರಭುಗಳು. ಸಿದ್ಧರಾಮೇಶ್ವರರು, ಮಡಿವಾಳ ಮಾಚಿದೇವರು ಮುಂತಾದ ಅಸಂಖ್ಯಾತ ಮಹಾಶರಣರು ಒಂದುಗೂಡಿದರು. ಶಿವಾನುಭವಮಂಟಪದಲ್ಲಿ ಎಲ್ಲಾ ಶರಣಶರಣೆಯರೂ ತಮ್ಮ ತಮ್ಮ ಸಾಧನೆಯ ಫಲವಾದ

[1] ಡಾ. ಆರ್. ಸಿ. ಹಿರೇಮಠ, 'ಚನ್ನಬಸವಣ್ಣನವರು', ಪು. ೨೩–೧೯೬೫, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟನೆ.

With quatations from "Musings of Basava. p–10 Basavana's K. R. Srinivasa Iyengar "The political situation was dark and alarmingley uncertain. Karnatak was then all but a sptritually waste land pathetically waiting for the life giving ruins of authentic faith. It was at this juncture. Basava made his appearence in the chequred history of Karnatak.

[2] ಡಾ. ಆರ್. ಸಿ. ಹಿರೇಮಠ, 'ಚನ್ನಬಸವಣ್ಣನವರು', ಪು. ೨೩–೨೪

ಅನುಭವಗಳನ್ನು ಚಿತ್ರಿಸಿದರು. ವೀರಶೈವಧರ್ಮದ ಉದಾತ್ತ ತತ್ತ್ವಗಳ ವಿಮರ್ಶೆ ನಡೆಯಿತು. ಅಲ್ಲಿ ನಡೆದ ಆಧ್ಯಾತ್ಮಿಕ, ಸಾಮಾಜಿಕ. ಧಾರ್ಮಿಕತತ್ತ್ವವಿವೇಚನೆಯಲ್ಲಿ ಚನ್ನಬಸವಣ್ಣನವರು ಸಕ್ರಿಯಪಾತ್ರ ವಹಿಸಿದರು.

## ಅಕ್ಕನಾಗಮ್ಮ

ಅಕ್ಕನಾಗಮ್ಮ ಬಸವಣ್ಣನವರ ಅಕ್ಕ. ತಂದೆ ತಾಯಿಗಳಾದ ಮಾದರಸ ಮಾದಲಾಂಬಿಕೆಯರನ್ನಗಲಿ ಕಪ್ಪಡಿ ಸಂಗಮಕ್ಕೆ ಹೊರಟಾಗ ಬಸವಣ್ಣನನ್ನೇ ಹಿಂಬಾಲಿಸಿದ ಅಕ್ಕ ಅಂದಿನಿಂದ ತಾಯಿಯಂತೆ ಉಪಚರಿಸಿ ಬಸವಣ್ಣನನ್ನು ಪೋಷಿಸಿದವರು. ಆಧ್ಯಾತ್ಮದ ಅನುಭವದಲ್ಲಿ ಅರಿತುನುರಿತ ಮಹಾನುಭಾವಳು. ಬಸವಣ್ಣನವರೊಡನೆ ಮತ್ತೆ ಕಲ್ಯಾಣಕ್ಕೆ ಆಗಮಿಸಿ. ನಿರಂತರ ಶರಣಸೇವೆಯನ್ನೆಸಗುತ್ತ ಶಿವಯೋಗಸಾಧನೆಯಲ್ಲಿ ಅಸಾಧಾರಣವಾದ ಅನುಭವವನ್ನು ಪಡೆದು. ಶಿವಾನುಭವಮಂಟಪದಲ್ಲಿ ಪಾಲ್ಗೊಂಡ ಮಹಾಶರಣೆ, ಆಕೆಯ ಪತಿ ಶಿವಶರಣ ಶಿವಸ್ವಾಮಿ ಎಂಬುದನ್ನು ಸಿಂಗಿರಾಜ ಪುರಾಣದಿಂದ ಅರಿಯಬಹುದು.[1]

## ಚನ್ನಬಸವಣ್ಣನವರ ಜನನ

ಶರಣ ಶಿವಸ್ವಾಮಿ–ನಾಗಲಾಂಬಿಕೆ ಅವರ ಗರ್ಭದಲ್ಲಿ ಚನ್ನಬಸವಣ್ಣನವರು ಜನಿಸಿದರು.[2] ಅವರು ಕಲ್ಯಾಣದಲ್ಲಿ ಕ್ರಿ.ಶ. ಸು. ೧೧೪೩ರಲ್ಲಿ ಜನಿಸಿದರು.[3] ವೀರಶೈವ ಪುರಾಣಗಳಲ್ಲಿ ಕೆಲವು ಚನ್ನಬಸವಣ್ಣನವರು ಬಸವಣ್ಣನವರ ಪ್ರಸಾದ ದಿಂದ. ಕೆಲವು ಮಹಾಶರಣ ಕಕ್ಕಯ್ಯನವರ ಪ್ರಸಾದದಿಂದ ಜನಿಸಿದರೆಂದು ಹೇಳುತ್ತವೆ. ಮಹಾಮಹಿಮರ ಆಶೀರ್ವಚನಪ್ರಭಾವದಿಂದ ಚನ್ನಬಸವಣ್ಣನವರಂತಹ ಮಹಿಮಾಶಾಲಿಗಳು ಉದಯವಾಗುವುದು ಆಶ್ಚರ್ಯವೇನಲ್ಲ. ಆದರೂ ಸಿಂಗಿರಾಜಪುರಾಣದ ನಿರೂಪಣೆ ಹೆಚ್ಚು ವಾಸ್ತವಿಕವಾಗಿದೆ.

## ಗುರುಕರುಣೆ

ಚನ್ನಬಸವಣ್ಣನವರು ತಾಯಿಯ ಗರ್ಭದಲ್ಲಿರುವಾಗಲೇ ಅವರ ಸೋದರಮಾವ ಬಸವಣ್ಣನವರು ಅವರಿಗೆ ಲಿಂಗದೀಕ್ಷೆಮಾಡಿದರು. ಮುಂದೆ ತಮ್ಮ ಬಾಲ್ಯಾವಸ್ಥೆಯಲ್ಲಿಯೇ ತಮಗೆ ಲಿಂಗಧಾರಣೆ ಮಾಡುವಂತೆ ಪ್ರಾರ್ಥಿಸಿದಾಗ ಬಸವಣ್ಣನವರು ನಿರಾಕರಿಸಿದರು. ಆದರೂ ಚನ್ನಬಸವಣ್ಣನವರು "ನಾನು ಶಿಶುವಾಗಿ ಒಡಲೊಳಗೆ ಇದ್ದಲ್ಲಿ ವಿಭೂತಿ ಪಟ್ಟವಕಟ್ಟಿ ಹಸ್ತಮಸ್ತಕ ಸಂಯೋಗವ ಮಾಡಿ ಎನ್ನನುಳುಹಿದವರಾರಯ್ಯ, ನೀವಲ್ಲದೆ ?"[4] ಎಂದು ಹೇಳಿ ಅವರ

---

[1] (1) ಐತಕಾವಮಾತಿನ್ನು ನೋಡಿ.........
..... ..........................
ಭ್ರಾಂತಿಬಿಡಿಯೆಂದು ಬೀಳ್ಕೊಡಲವರು ಸಂಸಾರ
ಭ್ರಾಂತಳಿಯ ದಳಿಯಶಿವದೇವ ಮಹಳ್ನಾಗಾಯ
ನಾತಂಗೆ ಸೇವೆಗೊಸುಗಮಿತ್ತುತಕ್ಕುದಂ ಕೊಟ್ಟು ಬಂದರುಯಿತ್ತಲು ॥ ಪದ್ಯ ೧೧೭

[2] (2) ......................................
ಯುವತಿ ಗಂಗಾಂಬೆಯರ ನಿಲಲೋಚನೆಯವರ
ಕುವರ ಸಂಗಮನಕ್ಕ ನಾಗಾಯನರ ಪತಿ
ಶಿವಸ್ವಾಮಿಗಳ ಚೆನ್ನಬಸವನಿವರಾಭರಣ ವಸ್ತ್ರಾದಿಗಳನು ತೆಗಿಸಿ ॥ ಸಂಧಿ ೩೧, ಪದ್ಯ ೨೧

[3] (1) ಅಕ್ಕನಾಗಮ್ಮಗಳ ಉದರದಿಂ
ಪರುಷದೊಳು ಜನಿಸಿ ಷಟ್ಸ್ಥಲವನುದ್ಧರಿಸಿದಾ ಚನ್ನಬಸವೇಶ ಸಲಹು
ಪ್ರೌಢರಾಯನ ಕಾವ್ಯ ಸಂಧಿ ೧, ೨೨

(2) ತರುಣಿ ನಾಗಾಂಬೆಯ ಸುಗರ್ಭದಿ
......ಚನ್ನಬಸವಂ ಉದ್ಭವಂಗೈದ।—ಬಸವಪುರಾಣ, ಕಾಂಡ ೨ ಸಂ ೭

[4] ಚನ್ನಬಸವಣ್ಣವನರು ಜನಿಸಿದ್ದು ೧೧೪೪ರಲ್ಲಿ ಎಂದು ಡಾ. ಫ. ಗು. ಹಳಕಟ್ಟಿ ಅವರ ಅಭಿಪ್ರಾಯ .ಶಿವಶರಣರ ಚರಿತ್ರೆ—ಭಾಗ ೪, ಪು. ೮೩

ಡಾ. ಆರ್. ಸಿ. ಹಿರೇಮಠ: 'ಚನ್ನಬಸವೇಶ್ವರನ ವಚನಗಳು', ಪು. ೪೯

ಸ್ವೀಕರಿಸಿ ಗುರುಕರುಣೆ ಪಡೆದರು. ಶರಣಬಳಗದಲ್ಲಿ ಬೆಳೆದು ಮುಂದೆ ಶಿವಾಚಾರ ಶಿವಜ್ಞಾನ ಶಿವಾನುಭವದ ಪೂರ್ಣ ಪರಿಶ್ರಮ ಪಡೆದರು ಬಸವಣ್ಣನವರ ಮಹಾಮನೆಯಲ್ಲಿ.

## ಶರಣ ಬಳಗದ ಕಣ್ಮಣಿ ಚನ್ನಬಸವಣ್ಣ

"ಈ ನಾಲ್ವರ–ಬಸವಣ್ಣ, ಅಕ್ಕನಾಗಮ್ಮ, ಗಂಗಾಂಬೆ, ನೀಲಾಂಬೆಯರ ಪುಣ್ಯಪ್ರಭಾವದ ಪ್ರಭಾವಳಿಯಲ್ಲಿ ಬೆಳೆದಾತ ಚನ್ನಬಸವಣ್ಣ. ಅವನೆಂಥ ಸುಕೃತಶಾಲಿ! ಆತನು ಕಣ್ತೆರೆದು ನೋಡಿದರೆ ಎತ್ತಲೂ, ಸುತ್ತಲೂ ಲಿಂಗಪೂಜೆಯನ್ನೇ ಜಂಗಮಾರಾಧನೆಯನ್ನೇ ಕಾಣಬೇಕು. ಆತನು ಕಿವಿಗೊಟ್ಟು ಕೇಳಿದರೆ ಶಿವಾನುಭವಗೋಷ್ಠಿಯನ್ನೇ ಕೇಳುತ್ತಿರಬೇಕು. ಆತನು ನಾಸಿಕದಿಂದ ವಾಸಿಸಿದರೆ ಪೂಜಾಪರಿಮಳದ್ರವ್ಯಗಳ ಸೌರಭಸಂದೋಹವನ್ನೇ ವಾಸಿಸುತ್ತಿರಬೇಕು. ಆತನು ಸ್ಪರ್ಶಿಸಿದರೆ ಗುರುಗಳ, ಶರಣರ, ಬಸವಣ್ಣ, ಅಕ್ಕನಾಗಮ್ಮಾದಿಗಳ ಶ್ರೀಪಾದಶುಭಹಸ್ತಗಳನ್ನೇ ಸ್ಪರ್ಶಿಸುತ್ತಿರಬೇಕು : ಆತನು ಸೇವಿಸಿದರೆ ಶಿವಪ್ರಸಾದವನ್ನೇ ಸೇವಿಸುತ್ತಿರಬೇಕು."[1] ಚನ್ನಬಸವಣ್ಣನ ವಯಸ್ಸು ಏರಿದಂತೆ, ಶಿವಾನುಭವದ ನಡೆ–ನುಡಿ ದಿವ್ಯ ತೇಜಸ್ಸಿನಿಂದ ಅರಳಿದ ಹೃದಯಕಮಲ ಸೌರಭ ಪರಿಸರದಲ್ಲಲ್ಲದೆ ಹೊರಗೂ ವ್ಯಾಪಿಸಿತು. ಶರಣರ ಕಣ್ಮಣಿಯಾದರು. ಕಂಡು ಬೆರಗಾದ ಬಸವಣ್ಣನವರೆಂದರು :

ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯ
ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ!
ಸುಗಂಧ ಬಂಧ ಬಂಧುರದಂತೆ ಹುಟ್ಟುತ್ತದೆ ಪರಿಮಳ.
ಆದಿ ಅನಾದಿ ಇಲ್ಲದ ಮುನ್ನವೆ ತನ್ನಿಂದ ತಾನಾದ ಕಾರಣ :
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು
ಲಿಂಗಸ್ವಯವಾಗಿ : ಎನಗೆ ಗತಿಪಥವ ತೋರಬೇಕೆಂದು
ಹಾಗಾದನು ಕೂಡಲಸಂಗಮದೇವರಲ್ಲಿ.

ಮೂರ್ತಿ ಚಿಕ್ಕದಾದರೂ, ಮರುಗದ ಸಸಿಯಂತೆ. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿ ಬೆಳೆದು, ಲಿಂಗತತ್ತ್ವ—ಶಿವಯೋಗ ಪ್ರಭೆಯಿಂದ ಶಿವಾನುಭಾವಿಗಳ ಪರಿಸರದಲ್ಲಿ ಎಲ್ಲರನ್ನೂ ಆಕರ್ಷಿಸುವ ತೇಜೋಮೂರ್ತಿಯಾದರು ಚನ್ನಬಸವಣ್ಣನವರು. ಪ್ರಭುದೇವರು ಚನ್ನಬಸವಣ್ಣನವರ ದಿವ್ಯಾನುಭವ ಸಂಪತ್ತನ್ನು ಕಂಡು,

ಕಿರಿಯರಾದಡೇನು ಹಿರಿಯರಾದರೇನು
ಅರಿವಿಂಗೆ ಹಿರಿದು ಕಿರಿದುಂಟೆ ?
ಆದಿ ಅನಾದಿಯಿಲ್ಲದಂದು
ಅಜಾಂಡ ಬ್ರಹ್ಮಾಂಡಕೋಟಿಗಳು ಉದಯವಾಗದಂದು
ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ
ಯೆಂಬುದು ಕಾಣಬಂದಿತ್ತು ಕಾಣಾ ಚನ್ನಬಸವಣ್ಣಾ

ಎಂದು ಮೆಚ್ಚಿ ನುಡಿದರು.

ಭಕ್ತಿಭಂಡಾರಿಯಾದ ಬಸವಣ್ಣನವರು ಬಿಜ್ಜಳರಾಯನ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದರೂ, ಶರಣಾಗ್ರಣಿಯಾಗಿ, ದಾಸೋಹಸಂಪನ್ನರಾಗಿ ಶಿವಯೋಗ ಸಂಪತ್ತಿನ ದಿವ್ಯತೇಜೋಮೂರ್ತಿಗಳಾಗಿದ್ದುದು ವಿದಿತವಷ್ಟೆ. ಸೋದರಳಿಯ ಚನ್ನಬಸವಣ್ಣನವರು ಅವರ ಆಪ್ತಸಹಚರರಾಗಿ ಸಂದಿಗ್ಧ ಪರಿಸ್ಥಿತಿಗಳಲ್ಲಿ ಅವರಿಗೆ ಯುಕ್ತ ಸಲಹೆ ನೀಡುತ್ತಿದ್ದರು, ಶರಣಸೇವಾಕಾರ್ಯದಲ್ಲಿ, ಅನುಭವಗೋಷ್ಠಿಗಳಲ್ಲಿ ನೆರವಾಗುತ್ತಿದ್ದರು. ಹಲವು ವೇಳೆ ಮುಖ್ಯ ಪಾತ್ರವನ್ನೆ ವಹಿಸುತ್ತಿದ್ದರು.

ಅಲ್ಲಮಪ್ರಭುದೇವರು ಸೊನ್ನಲಾಪುರದಿಂದ ಕರ್ಮಯೋಗಿಯೆಂದು ಕೀರ್ತಿಗಳಿಸಿದ ಸಿದ್ಧರಾಮಯ್ಯನವರೊಡನೆ ಬಸವೇಶ್ವರರ ಮಹಾಮನೆಯ ಬಾಗಿಲಿಗೆ ಬಂದರು. ಸಿದ್ಧರಾಮಯ್ಯನವರಿಗೆ ಬಸವಣ್ಣನವರ ಸಹಜ ವ್ಯಕ್ತಿತ್ವವನ್ನು

---

[1] ಸಿದ್ಧಯ್ಯಪುರಾಣಿಕರು : 'ಶರಣಚರಿತಾಮೃತ', ಪು. ೧೮೯

ಪರಿಚಯ ಮಾಡಿಸಿ, ಶರಣಸಮೂಹದಲ್ಲಿ ಅವರಿಗೆ ಲಿಂಗದೀಕ್ಷೆ ಕೊಡಿಸಬೇಕೆಂಬುದೇ ಅವರ ಮುಖ್ಯ ಉದ್ದೇಶ. ಶಿವಪೂಜೆಯಲ್ಲಿ ನಿರತರಾಗಿದ್ದ ಬಸವಣ್ಣನವರಿಗೆ ಮೂರ್ತಿಗಳಿಬ್ಬರು ಆಗಮಿಸಿರುವ ವಿಷಯ ಹಡಪದಪ್ಪಣ್ಣನವರ ಮೂಲಕ ತಿಳಿಯಿತು. ಒಳಗೆ ಬರುವಂತೆ ಬಸವಣ್ಣನವರು ಹೇಳಿಕಳುಹಿಸಿದರು. ಆದರೆ ಪ್ರಭುವು ಒಳಗೆ ಬರಲೊಪ್ಪಲಿಲ್ಲ. ಆ ಸಂದಿಗ್ಧಪರಿಸ್ಥಿತಿಯಲ್ಲಿ ಚನ್ನಬಸವಣ್ಣನವರು "ಬಂದ ಶರಣರ ನಿಲವನರಿಯದಿದ್ದರೆ ತಪ್ಪಿತ್ತು ನೋಡಾ ಗುರುವೆ. ಸಂಗಮನಾಥ ಮನೆಗೆ ಅಂಗವಿಡಿದು ಬಂದರೆ ವಿಸ್ಮಿತನೆ ಇದಿರೆದ್ದು ವಂದಿಸಬೇಕು ನೋಡಯ್ಯ: ಕೂಡಲ ಚನ್ನಸಂಗನ ಶರಣರು ಬಂದು ಬಾಗಿಲಲ್ಲಿರಲು ಕಣ್ಣರಿಯದಿದ್ದರೂ ಕರುಳರಿಯಬೇಡವೆ" ಎಂದು ಎಚ್ಚರಿಸಿದರು. ಕೂಡಲೇ ಬಸವಣ್ಣನವರೆದ್ದು ಬಂದು ಪ್ರಭುವಿನ ಕ್ಷಮೆ ಬೇಡಿ ಅತಿಥಿಗಳನ್ನು ಒಳಗೆ ಬರಮಾಡಿಕೊಂಡರು. ಚನ್ನಬಸವಣ್ಣನವರ ಸಮಯೋಚಿತವಾದ ಭಕ್ತಿಬಿನ್ನಹಗಳಿಂದ ಪರಿಸ್ಥಿತಿ ಹದಗೊಂಡಿತು.

## ಅನುಭವಮಂಟಪ[1] ಸು. ೧೧೪೦

ಚನ್ನಬಸವಣ್ಣನವರ ಸ್ಪಷ್ಟ ವ್ಯಕ್ತಿತ್ವವನ್ನು ಅನುಭವಮಂಟಪದ ಕಾರ್ಯಕಲಾಪಗಳಲ್ಲಿ, ಅವರ ವಚನಗಳಲ್ಲಿ ಕಾಣುತ್ತೇವೆ. ಬಸವಣ್ಣನವರು ಅನುಭವಮಂಟಪವನ್ನು ಸ್ಥಾಪಿಸಿ ನಡೆಸಿದ ಮಹತ್ಕಾರ್ಯವನ್ನು ಅವರ ಪತ್ನಿ ನೀಲಮ್ಮನವರು ಹೀಗೆ ಹೇಳಿದ್ದಾರೆ:

..........................................
ಅನುಭವಮಂಟಪವನನುಮಾಡಿ
ಚೆನ್ನಬಸವನೆಂಬ ಪ್ರಸಾದಿಯ ಪಡೆದು.
ಅನುಭವ ಮೂರ್ತಿಯಾದ ನಮ್ಮ ಬಸವಣ್ಣನು
ಅಜೀವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳುನೂರೆಪ್ಪತ್ತು ಅಮರಗಣಂಗಳ
ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು[2]

ಮಾಯಾಕೋಲಾಹಲನಾದ ಅಲ್ಲಮಪ್ರಭುವಿನ ನೇತೃತ್ವದಲ್ಲಿ ಅಸಂಖ್ಯಾತ ಶರಣರು ಅನುಭವಮಂಟಪದಲ್ಲಿ ಭಾಗವಹಿಸುತ್ತಿದ್ದರು. ಬಸವಣ್ಣ, ಚನ್ನಬಸವಣ್ಣನವರಲ್ಲದೆ, ಸಿದ್ಧರಾಮಯ್ಯನವರು, ಮಡಿವಾಳ ಮಾಚಿದೇವರು, ಅಕ್ಕಮಹಾದೇವಿ, ಮೋಳಿಗೆ ಮಾರಯ್ಯ, ಸಕಲೇಶಮಾದರಸ, ಆದಯ್ಯ, ಏಕಾಂತರಾಮಯ್ಯ, ಲಿಂಗಮ್ಮ, ಹಡಪದಪ್ಪಣ್ಣ, ಕಿನ್ನರಿ ಬ್ರಹ್ಮಯ್ಯ, ನೀಲಮ್ಮ, ಮೈದುನ ರಾಮಯ್ಯ, ನಾಗಲಾಂಬಿಕೆ, ನುಲಿಯಚಂದಯ್ಯ ಮಹಾದೇವಮ್ಮ ಸೊಡ್ಡಳ ಬಾಚರಸ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ದೇವರದಾಸಿಮಯ್ಯ[3] ಮುಂತಾದ ಶರಣಶರಣೆಯರು ಭಾಗವಹಿಸುತ್ತಿದ್ದರು. "ನಡೆದಂತೆ ನುಡಿ ನುಡಿದಂತೆ ನಡೆ" ಎನ್ನುವುದು ಅನುಭವಮಂಟಪದ ಸಾಮಾನ್ಯ ಕಟ್ಟಳೆ.[4] ಜ್ಞಾನಕ್ರಿಯೆಗಳ ಸಮುಸಮುಚ್ಚಯ ದೃಷ್ಟಿಯಿಂದ ತತ್ತ್ವವಿವೇಚನೆ ನಡೆಯುತ್ತಿತ್ತು. ವೀರಶೈವಧರ್ಮದ ಅಂಗಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳು—ತದಂಗಗಳಾದ ಏಕೋತ್ತರ ಶತಸ್ಥಲಗಳು, ಕರಣ ಹಸಿಗೆ, ಮಿಶ್ರಾರ್ಪಣ ಮುಂತಾದ ಗಹನ ವಿಚಾರಗಳು ಪರಿಷ್ಕೃತಗೊಳ್ಳುತ್ತಿದ್ದವು. ಮಾನವನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ವ್ಯಾಪಿಸಿರುವ ಒಂದೇ ಪರವಸ್ತು ಇಷ್ಟಪ್ರಾಣಭಾವಲಿಂಗಗಳಾಗಿ ಇಷ್ಟಲಿಂಗದಲ್ಲಿ ಸಮಾವೇಶವಾಗಿ ಪ್ರತಿಬಿಂಬಿಸುವ ಸಹಜ ಸರ್ವಾಂಗಲಿಂಗಮಯತತ್ತ್ವವಿವೇಚನೆ ನಡೆಯುತ್ತಿತ್ತು.

ಕಾಯಕಕ್ಕೆ ಧರ್ಮಸ್ವರೂಪವನ್ನು ಕೊಟ್ಟುದರಿಂದ, ಗುರುಲಿಂಗಜಂಗಮಸೇವೆಗೆ ಸತ್ಯಶುದ್ಧಕಾಯಕವೇ ತಳಹದಿಯಾಗಿದ್ದು, ಎಲ್ಲಾ ಶರಣರೂ ತಮತಮಗೆ ಉಚಿತವಾದ ಯಾವುದಾದರೊಂದು ಕಾಯಕವನ್ನವಲಂಬಿಸಿದ್ದರು.

---

1 ಅನುಭವಮಂಟಪದ ಅಸ್ತಿತ್ವವನ್ನು ಕುರಿತು ಉತ್ತಂಗಿ ಚೆನ್ನಪ್ಪನವರು ಬರೆದಿರುವ "ಅನುಭವಮಂಟಪದ ಐತಿಹಾಸಿಕತೆ" ಎಂಬ ಗ್ರಂಥವನ್ನು ನೋಡಬಹುದು. ನೀಲಮ್ಮನವರ ವಚನಗಳು, ಸಿಂಗಿರಾಜಪುರಾಣ, ಚೆನ್ನಬಸವಪುರಾಣ, ಪ್ರಭುದೇವರ ಪುರಾಣ ಮುಂತಾದುವುಗಳಲ್ಲೂ ಅನುಭವಮಂಟಪದ ಉಲ್ಲೇಖವಿದೆ.

2 ಡಾ. ಆರ್. ಸಿ. ಹಿರೇಮಠ, 'ಶಿವಶರಣೆಯರ ವಚನಗಳು', ಪು. ೧೯೩

3 ಎಂ.ಆರ್.ಶ್ರೀ : 'ಭಕ್ತಿಭಂಡಾರಿ ಬಸವಣ್ಣನವರು', ಪರಿಶಿಷ್ಟ ೨

4 ಟಿ. ಎಸ್. ಮಹಾದೇವಯ್ಯ : 'ಅನುಭವಮಂಟಪ'

ಕಾಯಕದಲ್ಲಿ ಉಚ್ಚನೀಚವೆಂಬುದಿರಲಿಲ್ಲ. ಪುರುಷರಂತೆ ಸ್ತ್ರೀಯರೂ ತತ್ತ್ವವಿವೇಚನೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಅನುಭವಮಂಟಪದಲ್ಲಿ ನಡೆದ ಪ್ರಸಂಗಗಳಲ್ಲಿ ಸಿದ್ಧರಾಮಯ್ಯನವರ ಲಿಂಗದೀಕ್ಷೆ, ಅಕ್ಕಮಹಾದೇವಿಯ ಸತ್ತ್ವಪರೀಕ್ಷೆ ಮುಂತಾದುವು ಗಮನಾರ್ಹವೂ ಹೃದಯಸ್ಪರ್ಶಿಯೂ ಆಗಿವೆ. ಸಿದ್ಧರಾಮಯ್ಯನವರು ಪ್ರಥಮದಲ್ಲಿ ಇಷ್ಟಲಿಂಗಧಾರಿಗಳಲ್ಲವಾದುದರಿಂದ ಅನುಭವಮಂಟಪದ ಪ್ರವೇಶಾವಕಾಶಕ್ಕೆ ತೊಡಕಾಯಿತು. ಅವರು ಇಷ್ಟಲಿಂಗಧಾರಿಗಳಲ್ಲವಾದರೂ ಮಹಾಜ್ಞಾನಿಗಳೂ ಯೋಗಾನುಸಂಧಾನವುಳ್ಳವರೂ ಸಿದ್ಧಪುರುಷರೂ ಆಗಿದ್ದು, ತಮಗೆ ಇಷ್ಟಲಿಂಗದ ಅವಶ್ಯಕತೆಯಿಲ್ಲವೆಂದು ವಾದಿಸಿದರು. ಚನ್ನಬಸವಣ್ಣನವರು "ಆಕಾಶದಲ್ಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು ಕಲಿಯಾದಡೂ ಕೈದು (ಕಜ್ಜ)ವಿಲ್ಲದೆಯಾಗದು. ಭೂಮಿಯಿಲ್ಲದೆ ಬಂಡಿ ನಡೆವುದೆ ? ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು"—ಎಂದು ಮುಂತಾಗಿ ತಿಳಿಸಲು ಸಿದ್ಧರಾಮಯ್ಯನವರಿಗೆ ಶಿವಜ್ಞಾನೋದಯವಾಯಿತು. ಶರಣರೆಲ್ಲರ ಇಚ್ಛೆಯಂತೆ. ಪ್ರಭುದೇವರ ಅಪ್ಪಣೆಯಂತೆ ಚನ್ನಬಸವಣ್ಣನವರೇ ಸಿದ್ಧರಾಮಯ್ಯನವರಿಗೆ ಇಷ್ಟಲಿಂಗಧಾರಣೆ ಷಟ್‌ಸ್ಥಲಬ್ರಹ್ಮೋಪದೇಶವನ್ನು ಮಾಡಿದರು (ಸು. ೧೧೫೬). ಅಕ್ಕನ ವೀರವೈರಾಗ್ಯವೃತ್ತಿ. ಸದ್ಭಕ್ತಿನಿಷ್ಠೆ. ಶಿವಾನುಭವ ಸಾಧನೆಯನ್ನು ಅರಿತ ಶರಣಾಳಿ ಬೆರಗಾಯಿತು. ಪ್ರಭುವಿನ ಅಪ್ಪಣೆ ಪಡೆದು ಅಕ್ಕನು ಶ್ರೀಗಿರಿಯತ್ತ ಹೊರಟಳು. ಶಿವಾನುಭವ ಮಂಟಪದಲ್ಲಿ ನಡೆದ ವಾದವಿವಾದಗಳಿಗೆಲ್ಲ ಪ್ರಭುವಿನದೇ ಅಂತಿಮ ತೀರ್ಮಾನ. ಶರಣರ ಅನುಭವದ ವಚನಗಳನ್ನೆಲ್ಲಾ ಓಲೆಯ ಶಾಂತಯ್ಯನವರು ಓಲೆಯ ಮೇಲೆ ಲಿಖಿಸುತ್ತಿದ್ದರು.

ನಿರಂಜನ ಜಂಗಮಮೂರ್ತಿಯಾದ ಪ್ರಭುದೇವರು ಶೂನ್ಯಸಿಂಹಾಸನದ ಪ್ರಭುವಾಗಿ ಶರಣರೆಲ್ಲರಿಗೂ ಲಿಂಗಾಂಗಯೋಗದ ಅನುವನ್ನು ಬೋಧಿಸಿ, ತಮ್ಮ ಲಿಂಗಲೀಲೆಯಲ್ಲಿ ಶ್ರೀಗಿರಿಯತ್ತ ನಡೆದರು. ಶರಣರೆಲ್ಲರ ಇಚ್ಛೆಯಂತೆ. ಚನ್ನಬಸವಣ್ಣನವರೇ ಶೂನ್ಯಪೀಠಾರೋಹಣ ಮಾಡಿದರು.

## ಶೂನ್ಯಸಂಪಾದನೆ

ಅನುಭವಮಂಟಪದ ಕಾರ್ಯವಿಧಾನ ವಿವರಣೆಗಳನ್ನು ಶಿವಗಣಪ್ರಸಾದಿ ಮಹಾದೇವಯ್ಯಗಳು, ಗೂಳೂರು ಸಿದ್ಧವೀರಣಾರ್ಯ, ಹಲಗೆದೇವರು ಮತ್ತು ಗುಮ್ಮಳಾಪುರದ ಸಿದ್ಧಲಿಂಗದೇವರು ಬರೆದ ಶೂನ್ಯಸಂಪಾದನೆ ಕೃತಿಗಳಿಂದ ತಿಳಿಯಬಹುದಾಗಿದೆ. ಈ ಕೃತಿಗಳು ವೀರಶೈವ ಧರ್ಮದ ಮಹತ್ತ್ವವನ್ನು ಸಾರಿರುವುದಲ್ಲದೆ, ವಚನಧರ್ಮ ಸಾರಸ್ವರೂಪವಾಗಿ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿ ಶೋಭಿಸುತ್ತಿವೆ.

## ಚನ್ನಬಸವಣ್ಣನವರ ಸಾಧನೆ–ಧಾರ್ಮಿಕ ಕ್ರಾಂತಿ

ಶಿವಾಗಮಗಳಲ್ಲಿ ನಿರೂಪಿತವಾದ ವೀರಶೈವ ಸಿದ್ಧಾಂತವನ್ನು ಇಡೀ ಮಾನವಸಮಾಜದ ಏಳಿಗೆಗಾಗಿ, ವಿಶಾಲ ದೃಷ್ಟಿಯಿಂದ ಮಾರ್ಪಡಿಸಿದರು. ಶಂಕರದೇವರು ನಿರೂಪಿಸಿದಂತೆ.

ಪರಪುರುಷಾರ್ಥಮಂ ಪರಹಿತಾರ್ಥಮನರ್ಗಳಪಾರಮಾರ್ಥಮಂ
ನಿರುಪಮಲಿಂಗನಿಷ್ಠೆಯ ಮಹಾಗಣತುಷ್ಟಿಯನೀಶಗೋಷ್ಠಿಯಂ
ಸುರುಚಿರ ಸತ್ಯಶಾಂತಿ ಶಮೆಯಂ ದಮೆಯಂ ಅಭಯಪ್ರಸಾದಮಂ
ಕರುಣಿಸು ದೇವ ಮೂಜಗದ ಜೀವರಿಗುಂ ಗುರುಶಂಕರೇಶ್ವರಾ

ಮಾನವಪ್ರಪಂಚಕ್ಕೇ ಅಲ್ಲ—ಸಕಲ ಜೀವರಾಶಿಗಳಿಗೂ ಅಭಯ ಪ್ರಸಾದವನ್ನು ಕರುಣಿಸುವಂತೆ ಪರಮಾತ್ಮನನ್ನು ಬೇಡುವ ಲಿಂಗಾಂಗಿ ಧರ್ಮವನ್ನು ಶರಣರು ಸಾರಿದರು. "ಶಂ ನೋ ಅಸ್ತು ದ್ವಿಪದೇ. ಶಂ ಚತುಷ್ಪದೇ" ಎಂಬ ವೇದಾರ್ಥವನ್ನು ಪ್ರತಿಪಾದಿಸಿದರು, ಪ್ರಚುರಪಡಿಸಿದರು ಅವರು.

ಈ ಬಗೆಯ ಉದಾತ್ತಧ್ಯೇಯದಿಂದ, ಧರ್ಮದ ಪರಿಷ್ಕಾರಕಾರ್ಯದಲ್ಲಿ ಬಸವಾದಿ ಪ್ರಮಥರು ಆಸ್ಥೆವಹಿಸಿ. ಸಾಧಿಸಿದರು. ಚನ್ನಬಸವಣ್ಣನವರು ಸಕಲಶಾಸ್ತ್ರಕೋವಿದರೂ ಮಹಾನುಭಾವಿಗಳೂ ಆಗಿದ್ದು. ಷಟ್‌ಸ್ಥಲಸಿದ್ಧಾಂತವನ್ನು ಪರಿಷ್ಕರಿಸಿದರು. ಅದರಿಂದ ಶರಣರು ಅವರನ್ನು "ಷಟ್‌ಸ್ಥಲಮೂರ್ತಿ". "ಷಟ್‌ಸ್ಥಲ ಬ್ರಹ್ಮ", "ಷಟ್‌ಸ್ಥಲಸ್ಥಾಪನಾಚಾರ್ಯ", "ಷಟ್‌ಸ್ಥಲ ಚಕ್ರವರ್ತಿ" ಎಂದು ಕರೆದರು. "....ಬಸವಣ್ಣನವರು ಕೈಕೊಂಡ ತತ್ತ್ವ. ಧರ್ಮ, ಸಮಾಜ ಹಾಗೂ ಸಾಹಿತ್ಯಗಳ ಕ್ರಾಂತಿಯ ಹೊಣೆ ವಿಶೇಷವಾಗಿ ಚನ್ನಬಸವಣ್ಣನವರ ಮೇಲೆ ಇದ್ದಂತೆ ತೋರುತ್ತವೆ.

ಬಸವಣ್ಣನವರು ಭಕ್ತಿಭಂಡಾರಿಯಾಗಿ ತಮ್ಮ ಅಸದೃಶವಾದ ಶಕ್ತಿಯಿಂದ ನಾಡಿನ ಅಸಂಖ್ಯಾತರನ್ನು ನಾನಾಮುಖಗಳಿಂದ ಕಲ್ಯಾಣಕ್ಕೆ ಕರೆತಂದರು. ಅವರೆಲ್ಲರನ್ನೂ ಒಂದೆಡೆ ನಿಲಿಸಿ. ವಿಚಾರಮಂಥನಕೆ ಅಣಿಮಾಡಿಕೊಟ್ಟು, ಎಲ್ಲಂದದ ಸಂಘಟನಾಕಾರ್ಯವನ್ನು ಮಾಡಿದವರು ಚನ್ನಬಸವಣ್ಣನವರೆಂದೇ ಹೇಳಬೇಕು."[1]

ಭಕ್ತಿ. ಜ್ಞಾನ. ವೈರಾಗ್ಯಪ್ರಧಾನವಾದ. ವಿಶ್ವಮಾನವಜೀವನಕ್ಕೆ ಅನ್ವಯಿಸುವ. ವಿಶಾಲ ತತ್ವವನ್ನೊಳಗೊಂಡ ಶರಣಧರ್ಮದಿಂದ ಆಕರ್ಷಿತರಾದ ಲಕುಲೀಶ. ಪಾಶುಪತ. ಕಾಪಾಲಿಕ ಮತ್ತಿತರ ಚತುರ್ವರ್ಣಾಶ್ರಮಧರ್ಮಾನುಯಾಯಿಗಳನೇಕರು ತಂಡೋಪತಂಡವಾಗಿ ವೀರಶೈವ ಪರಿಷ್ಕೃತಧರ್ಮವನ್ನಪ್ಪಿದರು. ಅವರಿವರೆನ್ನದೆ ಎಲ್ಲಾ ಪಂಗಡದವರೂ ಇಲ್ಲಿ ಆಶ್ರಯಪಡೆದರು. ಸ್ತ್ರೀಯರಿಗೂ ಧಾರ್ಮಿಕ ಸ್ವಾತಂತ್ರ್ಯ ದೊರೆಯಿತು. ಅಹಿಂಸಾಪ್ರಧಾನವಾದುದರಿಂದ ಯಜ್ಞಯಾಗಾದಿಗಳ ಹಿಂಸಾತ್ಮಕ ಪ್ರವೃತ್ತಿಯಿಂದ ಬಿಡುಗಡೆ ಹೊಂದಿದವರು ಇಲ್ಲಿ ಆಶ್ರಯ ಪಡೆದರು. ಏಕದೈವತೋಪಾಸನೆ. ಜ್ಞಾನಕ್ರಿಯಾತ್ಮಕ ತತ್ವಪ್ರತಿಪಾದನೆ. ಸತ್ಯ, ಅಹಿಂಸೆ, ಸದಾಚಾರ, ವಿಚಾರಸ್ವಾತಂತ್ರ್ಯ, ಸರ್ವಸಮತಾಭಾವನೆಗಳಿಂದ ಕೂಡಿದ ವಿಶಾಲತತ್ವಗಳಿಗೆ ಮಾರುಹೋದವರಿಗೆ ಆಶ್ರಯವಿತ್ತಿತು. ವೀರಶೈವಧರ್ಮ. ಬಸವಣ್ಣನವರು ನಿಯೋಜಿಸಿದ ಈ ನೂತನ ಸಮಾಜರಚನಾಕಾರ್ಯಕ್ಕೆ ಚನ್ನಬಸವಣ್ಣನವರು ಜ್ಞಾನಪ್ರಕಾಶವನ್ನೀಯುತ್ತಿದ್ದರು.

## ಚಿಕ್ಕದಣ್ಣಾಯಕರು

ಬಸವಣ್ಣನವರು ಉನ್ನತ ಸ್ಥಾನದಲ್ಲಿ ಬಿಜ್ಜಳನ ಆಸ್ಥಾನದಲ್ಲಿ ದಣ್ಣಾಯಕರಾಗಿದ್ದರೆ, ಚನ್ನಬಸವಣ್ಣನವರು ಚಿಕ್ಕದಣ್ಣಾಯಕರಾಗಿದ್ದರೆಂಬುದನ್ನು ಚನ್ನಬಸವಪುರಾಣ. ಶೂನ್ಯಸಂಪಾದನೆ ಮುಂತಾದ ಗ್ರಂಥಗಳು ತಿಳಿಸುತ್ತವೆ.

## ಕತ್ತಲೆಯ ದಿನಗಳು

ಧಾರ್ಮಿಕ ಮತ್ತು ಸಾಮಾಜಿಕ ಕ್ರಾಂತಿಯ ಫಲವಾಗಿ. ಹಲವು ದಲಿತ ಮತ್ತು ಸವರ್ಣೀಯರು ಲಿಂಗಾಂಗಿಧರ್ಮವನ್ನವಲಂಬಿಸಿ ಜ್ಞಾನಾನುಭಾವಿಗಳಾದರು. ಶರಣಧರ್ಮವನ್ನವಲಂಬಿಸುವ ಮೊದಲು ಬ್ರಾಹ್ಮಣನಾಗಿದ್ದ ಮಧುವರಸನ ಮಗಳನ್ನು, ಜನ್ಮದಿಂದ ಅಂತ್ಯಜನಾಗಿದ್ದು ಲಿಂಗಾಂಗಿಯಾದ ಶರಣ ಹರಳಯ್ಯನ ಮಗನಿಗೆ ಕೊಟ್ಟು ವಿವಾಹ ನಡೆದುದರ ಪರಿಣಾಮವಾಗಿ ಸನಾತನವರ್ಣಧರ್ಮೀಯರಲ್ಲಿ ತೀವ್ರ ಅಸಮಾಧಾನವುಂಟಾಯಿತು. ಹರಳಯ್ಯ ಮಧುವರಸರು ಲಿಂಗಾಂಗಿಗಳೆಂಬುದನ್ನು ಅವರು ಅಲಕ್ಷಿಸಿದರು. ಹಲವು ವಿರೋಧ ಪಂಥದವರು ಅರಸು ಬಿಜ್ಜಳನಲ್ಲಿ ದೂರಿತ್ತರು. ಬಿಜ್ಜಳನು ಅವರ ದೂರುಗಳಿಗೆ ಕಿವಿಗೊಟ್ಟು, ಹರಳಯ್ಯ ಮಧುವಯ್ಯಗಳ ಕಣ್ಣು ಕೀಳಿಸಿ. ಎಳಹೂಜಿ ಕಟ್ಟಿಸಿದನು. ಸಮಾಜದಲ್ಲಿ ಎಲ್ಲೆಲ್ಲೂ ತಳಮಳವುಂಟಾಯಿತು.

## ಉಳುವೆಗೆ ಪ್ರಯಾಣ

ಸಮಾಜಜೀವನ ಅಸ್ತವ್ಯಸ್ತವಾಯಿತು. ಪ್ರತೀಕಾರ ಮನೋಭಾವವು ಉಲ್ಬಣಗೊಂಡಿತು. ಶರಣರ ಅಮಾನುಷೀಯ ಕೊಲೆಯನ್ನು ಸಹಿಸದ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕೂಡಲಸಂಗಮಕ್ಷೇತ್ರಕ್ಕೆ ತೆರಳಿದರು. ಕಲ್ಯಾಣದಲ್ಲಿ ಜಗದೇವಮೊಲ್ಲಬೊಮ್ಮಣ್ಣಗಳಿಂದ ಬಿಜ್ಜಳನ ಕೊಲೆಯಾಯಿತು. ಚನ್ನಬಸವಣ್ಣನವರು ಉಳುವೆಯ ಕಡೆಗೆ ಹೊರಟರು. ಅಕ್ಕನಾಗಮ್ಮ, ಮಡಿವಾಳ ಮಾಚಯ್ಯ, ಕಿನ್ನರಿ ಬ್ರಹ್ಮಯ್ಯ ಮುಂತಾದ ಶರಣರು ಅವರೊಡನೆ ಹೊರಟರು. ಅಲ್ಲಿಂದ ಮುಂದೆ ತದ್ದೇವಾಡಿ. ಮಲಪ್ರಭಾನದಿಯ ತೀರಪ್ರದೇಶವನ್ನು ದಾಟಿ ಉಳುವೆಯ ಕಡೆಗೆ ಪ್ರಯಾಣಮಾಡಿದರು. ಕಡಕೊಳ, ಮುರಗೋಡ, ಗೊಡಚಿ, ಮೂಗಬಸವ, ನಾಗಲಾಪುರ, ಹುಣಶೀಕಟ್ಟಿ, ಕಾದರವಳ್ಳಿ, ಕಿಕ್ಕೇರಿ, ಕಿತ್ತೂರು ಮುಂತಾದ ಸ್ಥಳಗಳನ್ನು ದಾಟಿ, ಮೇಲುಗೈಯಲ್ಲಾಪುರದ ಮೂಲಕ ಉಳುವೆಗೆ ಪ್ರಯಾಣ ಮಾಡಿದರೆಂದು ಹೇಳಲಾಗಿದೆ. ಅವರ ಆ ಪ್ರಯಾಣದಲ್ಲಿ ಅನೇಕ ಕಷ್ಟಪರಂಪರೆಗಳು ಸಂಭವಿಸಿದುವು. ಬಹುದೂರದವರೆಗೂ ಅಳಿಯ ಬಿಜ್ಜಳನ ಸೈನ್ಯ ಅವರನ್ನು ಹಿಂಬಾಲಿಸಿತು. ಘೋರ ಕಾಳಗವೇ ನಡೆಯಿತು. ಆ ಬಳಿಕ ಅವರು ಉಳುವೆಗೆ ತೆರಳಿದರು. ಉಳುವೆಯಿಂದ ಗಿರಿಗುಹೆಗಳಿಂದ ಕೂಡಿದ ಮಹಾಮನೆಗೆ ತಲುಪಿದರು. ಅಲ್ಲಿ ಕೆಲವು ಕಾಲ

---

1 ಡಾ. ಆರ್. ಸಿ. ಹಿರೇಮಠ, 'ಚನ್ನಬಸವಣ್ಣ'

ನಿಂತು. ಅಲ್ಲಿಯೇ ಐಕ್ಯರಾದರು. (ಸು. ೧೧೬೮) ಚನ್ನಬಸವಣ್ಣನವರು ಉಳಿವೆಗೆ ಬಂದು. ತಮ್ಮ ಕಾರ್ಯದ ಭಾರವನ್ನು ಯೋಗ್ಯರಾದ ಶರಣರ ಮೇಲಿರಿಸಿ. ತಾವು ನಿಜದಲ್ಲಿ ನಿರಾಳವನ್ನೈದಿದರು.

## ಶರಣರು ಸೃಷ್ಟಿಸಿದ ವಚನವಾಙ್ಮಯ

ಶಿವಶರಣರು ತಮ್ಮ ತಮ್ಮ ಶಿವಯೋಗಸಾಧನೆಯ ಅನುಭವದಿಂದ ಉಸುರಿದ ಅಮೃತಸದೃಶ ಪ್ರಸಾದ ವಾಣಿಯೇ ವಚನವಾಙ್ಮಯ. ವಚನವಾಙ್ಮಯವು ಕನ್ನಡಸಾಹಿತ್ಯಕ್ಕೆ ವಿಶೇಷ ಶೋಭೆಯನ್ನು ತಂದಿದೆ. ಮಾನವ ಜೀವನದ ಬಾಹ್ಯ ಮತ್ತು ಆಂತರಿಕ ವಲಯಗಳ ಸಮಸ್ಯೆಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶಿಸಿ. ಸಮಂಜಸವಾದ, ತೃಪ್ತಿಕರವಾದ ಮಾರ್ಗದರ್ಶನವಿತ್ತಿದ್ದಾರೆ ವಚನಗಳಲ್ಲಿ. ಜೀವನದ ಹೊರಮುಖ ಆಂತರಿಕವಾದ ಆತ್ಮನ ಚೈತನ್ಯ ದಿಂದಲೇ ಪ್ರೇರಿತವಾದದ್ದು. ಜ್ಞಾನಕ್ರಿಯಾತ್ಮಕವಾದುದು. ಅನುಭವಪೂರ್ಣವಾದುದು.

ವಚನವಾಙ್ಮಯದ ಬಗೆಗೆ ಮಾನ್ಯ ರಂ. ರಾ. ದಿವಾಕರರು ಅಭಿಪ್ರಾಯವಿದು : "ಶುದ್ಧಕನ್ನಡದಲ್ಲಿರುವ ವಚನ ಶಾಸ್ತ್ರವೆಂಬ ಅಧ್ಯಾತ್ಮಶಾಸ್ತ್ರವು ಎಲ್ಲಕ್ಕೂ ಶ್ರೇಷ್ಠವಾದ ಮಾನವೀಧ್ಯೇಯವನ್ನೂ ತತ್ಸಾಧನವಾದ ವಿಶಿಷ್ಟ ಉಪಾಸನಾಮಾರ್ಗವನ್ನೂ ಒಳಗೊಂಡಿರುವುದು."[1]

ವಚನಶಾಸ್ತ್ರಸಂದೇಶವನ್ನು ಕುರಿತು ಅವರು ಹೀಗೆ ಹೇಳಿದ್ದಾರೆ:[2] "ಬನ್ನಿರಿ. ಎಲ್ಲರೂ ಬನ್ನಿರಿ. ದೊಡ್ಡವರು ಚಿಕ್ಕವರು. ಸ್ತ್ರೀಯರು ಪುರುಷರು. ಹೊಲೆಯರು ಬ್ರಾಹ್ಮಣರು, ಸಮಗಾರರು ಅರ್ಚಕರು. ಆಳುಗಳು ಅರಸರು. ಸೈನಿಕರು ಸೇನಾಪತಿಗಳು, ಜಾಲಗಾರರು ಸಂಗೀತಗಾರರು. ಬನ್ನಿರಿ. ಎಲ್ಲರೂ ಬನ್ನಿರಿ. ನಿಮ್ಮ ನಿಮ್ಮ ಕ್ಷುದ್ರ ಅಹಂ ಭಾವಗಳನ್ನು ಮರೆಯಿರಿ. ನಾವು ಆ ಕುಲದವರು ಈ ಕುಲದವರು ಇಂಥ ಉಚ್ಚ ಉದ್ಯೋಗಮಾಡುವವರು. ಅಂಥ ಹೆಚ್ಚಿನ ಕಾಯಕದವರು ಎಂಬ ವ್ಯಥಾಭಿಮಾನವನ್ನು ತೊರೆಯಿರಿ....ನಿಮ್ಮ ಕಾಯ ವಚನ ಮನಗಳು ಶುದ್ಧವಿರ ಬೇಕು. ಭಾವವು ಅನನ್ಯವಿರಬೇಕು. ನೀವು ನಡೆಯುವ ದಾರಿಯು ಕಠಿಣವಿರಬಹುದು. ಆದರೆ ಚೈತ್ರಯಾತ್ರೆಗೆ ಹೊರಟವರ ವೀರಭಾವವು ನಿಮ್ಮಲ್ಲಿ ನೆಲೆಸಲಿ. ನೀತಿ. ನಿಷ್ಠೆ, ಪರಸ್ಪರ ಸಹಾಯ ಇವುಗಳಿಂದ ನೀವು ಎಲ್ಲಿ ಹೋದರೂ ಗೆದ್ದೇತೀರುವಿರಿ. ನಿಮ್ಮ ಧ್ಯೇಯವನ್ನು ಮುಟ್ಟಿಯೇಬಿಡುವಿರಿ. ಆದುದರಿಂದ ಏಳಿರಿ, ಧೈರ್ಯಗೊಳ್ಳಿರಿ. ಧರ್ಮ ಪಥವನ್ನು ಹಿಡಿಯಿರಿ. ಮತ್ತು ಧರ್ಮಸಾಮ್ರಾಜ್ಯದ ನಿವಾಸಿಗಳಾಗಿ ಪರಮಸುಖದ ಅಧಿಕಾರಿಗಳಾಗಿರಿ. ಹೀಗಿರುವುದು ವಚನಕಾರರ ಸಂದೇಶ."

ವಚನಕಾರರ ಬಗ್ಗೆ ಎಂ.ಆರ್.ಶ್ರೀಯವರು :

....ಪರಮಾತ್ಮನ ಸೌಮ್ಯರೂಪದ ಉಪಾಸನೆಯನ್ನು ಬಿಟ್ಟು ಆತನ ಕರುಣೆ ಅನುಗ್ರಹಗಳನ್ನು ಮರೆತು. ಅಡ್ಡ ದಾರಿಯಲ್ಲಿ ಕೊಂಡೊಯ್ಯುವ ಪಂಥಗಳನ್ನು ಅವು ಯಾವ ಹೆಸರಿನವಾಗಿದ್ದರೂ ಅವುಗಳನ್ನು ಖಂಡಿಸುವುದು ಮಹದುಪಕಾರ. ಆದುದರಿಂದ ವಚನಕಾರರು ಈ ಪಂಥಗಳ ಮೇಲೆ ಧಾಳಿಯೆತ್ತಿ ಅವುಗಳನ್ನು ನಿರ್ಮೂಲಗೊಳಿಸಿದರು.[3]

## ಚನ್ನಬಸವಣ್ಣನವರ ವಚನಗಳು ಮತ್ತು ಇತರ ಸಾಹಿತ್ಯ

ವಚನಸಾಹಿತ್ಯದಲ್ಲಿ ಚನ್ನಬಸವಣ್ಣನವರ ವಚನಗಳು ಮತ್ತು ಸಾಹಿತ್ಯ ಉನ್ನತ ಸ್ಥಾನ ಪಡೆದಿವೆ. ಅವರು ಷಟ್‌ಸ್ಥಲ ವಚನಗಳು. ಕರಣಹಸಿಗೆ. ಮಿಶ್ರಾರ್ಪಣ. ಹಿರಿಯಮಂತ್ರಗೋಪ್ಯ. ಪದಮಂತ್ರಗೋಪ್ಯ. ಸಕೀಲದ ವಚನಗಳು—ಇವುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅವರ ದಿವ್ಯಾನುಭವವು ತುಂಬಿ ತುಳುಕುತ್ತಿದೆ. ವೀರಶೈವ ಧಾರ್ಮಿಕ ಪರಂಪರೆಯಲ್ಲಿ ಬಸವಣ್ಣನವರನ್ನು ಸತ್‌ಸ್ವರೂಪ. ಚನ್ನಬಸವಣ್ಣನವರನ್ನು ಚಿತ್‌ಸ್ವರೂಪ ಮತ್ತು ಪ್ರಭುದೇವರನ್ನು ಆನಂದಸ್ವರೂಪವೆಂತಲೂ. ಈ ಮೂವರನ್ನು ಕ್ರಮವಾಗಿ ಗುರು ಲಿಂಗ ಜಂಗಮವೆಂತಲೂ ಹೆಸರಿಸುವುದುಂಟು.

ಚನ್ನಬಸವಣ್ಣನವರ ವಚನಗಳಲ್ಲಿ ಜ್ಞಾನಕ್ರಿಯಾತ್ಮಕ ಷಟ್‌ಸ್ಥಲಗಳು ಮತ್ತು ತದಂಗವಾದ ಏಕೋತ್ತರ ಶತಸ್ಥಲಾಚರಣೆಗಳು ವಿವರಿಸಲ್ಪಟ್ಟಿವೆ. ಕರಣಹಸಿಗೆಯಲ್ಲಿ ಪ್ರಣವೋತ್ಪತ್ತಿ. ಪಂಚಭೂತಗಳ ಉತ್ಪತ್ತಿ. ಜಗದುತ್ಪತ್ತಿ.

---

1 ವಚನಶಾಸ್ತ್ರ ರಹಸ್ಯ, ೧೯೪೫, ಪುಟ ೨೭

2 ಅದೇ., ಪುಟ ೩೯೪

3 'ವಚನಧರ್ಮಸಾರ', ೧೯೪೬, ಪು. ೪

ಪಿಂಡಸಂಗ್ರಹ. ಪಂಚೀಕರಣ. ಬುದ್ಧೀಂದ್ರಿಯ. ಕರ್ಮೇಂದ್ರಿಯಗಳು. ಅರಿಷಡ್ವರ್ಗಗಳು ಮುಂತಾದ ದೈಹಿಕ ಮಾನಸಿಕ ಪ್ರಕೃತಿಗುಣಧರ್ಮಗಳ ವಿವರಣೆಗಳಿವೆ. ಮಿಶ್ರಾರ್ಪಣದಲ್ಲಿ ಗುರುಕರುಣವನ್ನು ಪಡೆದ ಶರಣನ ಕಾಯಾರ್ಪಣ, ಕರಣಾರ್ಪಣ ಮತ್ತು ಭಾವಾರ್ಪಣಗಳ ಸ್ವರೂಪವಿವರಣೆ ಇದೆ. ಮಂತ್ರಗೋಪ್ಯಗಳಲ್ಲಿ ಲಿಂಗಾಂಗಸಂಬಂಧ ಮಂತ್ರ ಆಚರಣೆಗಳ ರಹಸ್ಯ. ನವಚಕ್ರ ಮೂಲಪ್ರಣವ. ಪರತತ್ತ್ವಪ್ರಕಾಶ. ಜ್ಞಾನಶೂನ್ಯಾಂತ ವಿಚಾರಗಳ ವಿಮರ್ಶೆ ಇದೆ. ಸಕೀಲಗಳಲ್ಲಿ ಇಷ್ಟಲಿಂಗದ ವೃತ್ತ, ಕಟಿ ಮುಂತಾದ ಷಡ್ವಿಧ ಆಕೃತಿಗಳ ಸಂಬಂಧ. ತೊಂಭತ್ತಾರು ಸಕೀಲಗಳ ವಿವರವಿದೆ.

ಚನ್ನಬಸವಣ್ಣನವರ ಷಟ್‌ಸ್ಥಲಾಚರಣೆಯ ಕೆಲವು ವಚನಗಳನ್ನು ಇಲ್ಲಿ ಉದ್ಧರಿಸಲಾಗಿದೆ.

ಪರಮಾತ್ಮನು ಪಿಂಡದಲ್ಲಿ ಅಡಗಿರುವ ರೀತಿ ಹೀಗೆ :

ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು
ಕ್ಷೀರದೊಳಡಗಿದ ತುಪ್ಪದಂತಿದ್ದಿತ್ತು
ಚಿತ್ರಿಕನೊಳಡಗಿದ ಚಿತ್ರದಂತಿದ್ದಿತ್ತು
ಅಲಿಯೊಳಡಗಿದ ತೇಜದಂತಿದ್ದಿತ್ತು
ನುಡಿಯೊಳಡಗಿದ ಅರ್ಥದಂತಿದ್ದಿತ್ತು
ಕೂಡಲಚನ್ನಸಂಗಯ್ಯಾ ನಿಮ್ಮ ನಿಲವು.

ಷಟ್‌ಸ್ಥಲಾಚರಣೆಯುಳ್ಳ ಭಕ್ತನ ಸ್ಥಿತಿ :

ಭಕ್ತನಾದಡೆ ತನುಮನದ ಮೇಲಣಾಸೆಯಳಿದುಳಿದಿರಬೇಕು.
ಮಹೇಶ್ವರನಾದಡೆ ಪರಧನ ಪರಸತಿಯಾಸೆಯಳಿದುಳಿದಿರಬೇಕು.
ಪ್ರಸಾದಿಯಾದಡೆ ಪ್ರಸಾದವ ಕೊಂಡ ಕಾಯ ಅಳಿಯದುಳಿಯಬೇಕು.
ಪ್ರಾಣಲಿಂಗಿಯಾದಡೆ ಸುಖದುಃಖಾದಿಗಳೆಲ್ಲ ಮಱೆದು ಪ್ರಾಣಲಿಂಗದಲ್ಲಿ ಸುಸ್ಥಿರನಾಗಬೇಕು.
ಶರಣನಾದಡೆ ಸತಿಪತಿಭಾವವಳಿದುಳಿದಿರಬೇಕು.
ಐಕ್ಯನಾದಡೆ ಬಯಲು ಬಯಲಾಗಿರಬೇಕು.
ಕೂಡಲಚನ್ನಸಂಗಮದೇವರಲ್ಲಿ ಈ ಷಡುಸ್ಥಲದ ನಿರ್ಣಯ.
ಸಾಧಕರಿಗಳವೆ, ಪೂರ್ವಸಂಸ್ಕಾರದ ಸಹಜದೊಡೆಯರಿಗಲ್ಲದೆ ?

ಭಕ್ತನು ಶ್ರದ್ಧಾಭಕ್ತಿಯಿಂದ ತನು ಮುಟ್ಟಿ ಗುರುಸೇವೆ ಮಾಡಬೇಕು. ಮನಸ್ಸಿಟ್ಟು ಲಿಂಗ ಪೂಜಿಸಬೇಕು. ದಾಸೋಹ ಧನದಿಂದ ಜಂಗಮಸೇವೆ ಸಲ್ಲಿಸಬೇಕು.

ಮಹೇಶ್ವರನು ಪರಧನಪರಸ್ತ್ರೀ ವ್ಯಾಮೋಹವನ್ನು ತ್ಯಜಿಸಬೇಕು ನಿಷ್ಠಾಭಕ್ತಿಯಿಂದ. ಪ್ರಸಾದಿಯು ಅವಧಾನ ಭಕ್ತಿಯಿಂದ ಸರ್ವವನ್ನೂ ಲಿಂಗಕ್ಕರ್ಪಿಸಿ ತತ್ಪ್ರಸಾದವನ್ನು ಸ್ವೀಕರಿಸಬೇಕು. ಕಾಯಕರಣಭಾವಗಳಲ್ಲಿ ಲಿಂಗ ಭೋಗೋಪಭೋಗಿಯಾಗಬೇಕು.

ಪ್ರಾಣಲಿಂಗಿಯು ಅನುಭವಭಕ್ತಿಯಿಂದ ಪ್ರಾಣವೇ ಲಿಂಗ
ಲಿಂಗವೇ ಪ್ರಾಣವಾಗಿ ವರ್ತಿಸಬೇಕು.
ಶರಣನು ಆನಂದಭಕ್ತಿಯಿಂದ ಲಿಂಗವೇ ಪತಿ, ತಾನೇ ಸತಿ ಎಂಬ
ಭಾವದಲ್ಲಿ ಅಚ್ಚುಮೆಚ್ಚಾಗಿರಬೇಕು.
ಐಕ್ಯನು ಸಮರಸಭಕ್ತಿಯಿಂದ ತಾನು-ಲಿಂಗ ಎಂಬ ಎರಡಿಲ್ಲದೆ
ಲಿಂಗದಲ್ಲಿ ದೃಷ್ಟಿ ನಟ್ಟು ಅಂಗ ಲಿಂಗ ಸಮರಸದಿಂದಿರಬೇಕು

ಚನ್ನಬಸವಣ್ಣನವರು ಜ್ಞಾನ ಕ್ರಿಯೆಗಳು ಒಂದಾದಮೇಲೊಂದು ಎಂಬ ಕ್ರಮಸಮುಚ್ಚಯವನ್ನು ಒಪ್ಪುವುದಿಲ್ಲ. ಜ್ಞಾನಕ್ರಿಯೆಗಳೆರಡೂ ಜೊತೆಯಾಗಿ ಆಚರಣೆಯಲ್ಲಿರಬೇಕೆಂಬ ಸಮಸಮುಚ್ಚಯವನ್ನೇ ತಿಳಿಸುವರು.

ಜ್ಞಾನವೆಂದರೆ ತಿಳಿವುದು
ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು

ಪರಸ್ತ್ರೀಯ ಭೋಗಿಸಬಾರದೆಂಬುದೇ ಜ್ಞಾನ ;
ಅದರಂತೆ ಆಚರಿಸುವುದೇ ಕ್ರಿಯೆ.
ಅಂತು ಆಚರಿಸದಿದ್ದಡೆ—ಅದು ಅಜ್ಞಾನ ನೋಡಾ
ಕೂಡಲಚನ್ನಸಂಗಮದೇವಾ.

ಡಾಂಭಿಕಾಚರಣೆ ಫಲಕಾರಿಯಲ್ಲ. ಗುಣವಿಲ್ಲದ ಬರಿಯ ಪೂಜೆ ವ್ಯರ್ಥ :

ಕಬ್ಬುನದ ಸೊಣಗನ ತಂದು ಪರುಷವ ಮುಟ್ಟಿಸಲೊಡನೆ
ಹೊನ್ನ ಸೊಣಗನಪ್ಪುದಲ್ಲದೆ ಪರುಷವಾಗದು ನೋಡಾ !
ಲೋಕದ ಮಾನವನ ತಂದು ಭಕ್ತನ ಮಾಡಿದಡೆ
ವೇಷಲಾಂಛನನಹನಲ್ಲದೆ ಭಕ್ತನಾಗ ನೋಡಾ !
ಇದು ಕಾರಣ ಕೂಡಲ ಚನ್ನಸಂಗಮದೇವಯ್ಯಾ
ಮಜ್ಜನಕ್ಕೆಱೆವ ಭವಿಗಳನೆಂತು ಭಕ್ತರೆಂಬೆನಯ್ಯಾ !

ಲಿಂಗಾಂಗಿಗೆ ಪ್ರಾಣಸ್ವರೂಪವಾದ ಪಂಚಾಚಾರಸ್ವರೂಪವಿದು :

ಲಿಂಗವನಲ್ಲದೆ ಅನ್ಯವನಱಿಯದಿಹುದೆ ಲಿಂಗಾಚಾರ
ಸಜ್ಜನಕಾಯಕದಿಂದ ಗುರುಲಿಂಗಜಂಗಮಕ್ಕೆ ಮಾಡಿ
ಸತ್ಯನಾಗಿಹುದೆ ಸಮಯಾಚಾರ
ಶಿವಭಕ್ತರಲ್ಲಿ ಜಾತಿವರ್ಣಾಶ್ರಮವನಱಸದೆ
ಅವರೊಕ್ಕುದಕೊಂಬುದೆ ಶಿವಾಚಾರ
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ
ಶಿವಶರಣರೆ ಹಿರಿಯರಾಗಿ, ತಾನೆ ಕಿಱಿಯನಾಗಿ
ಭಯಭಕ್ತಿಯಿಂದಾಚರಿಸುವುದೆ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಸದ್ಭಕ್ತರನು ಒಕ್ಕುದಸಿಕ್ಕಿ ಸಲಹಯ್ಯಾ
ಪ್ರಭುವೆ, ಕೂಡಲಚನ್ನಸಂಗಮದೇವಾ.

ಆಚಾರದ ಸ್ವರೂಪವನ್ನು ಈ ರೀತಿ ವಿಶದಪಡಿಸಿದ್ದಾರೆ:

ಆಚಾರವೆಂಬುದು ಕೂರಲಗು ತಪ್ಪಿ ಬಂದಡೆ ಪ್ರಾಣವ ತಗಲುವುದು
ಅದುಕಾರಣ ಅಱಿದಱಿದು ಆಚರಿಸಬೇಕು

...............................................

ಎಂದು ಹೇಳಿ,

ಪರರ ಹೆಣ್ಣಿಗೆ ಕಣ್ಣಿಡದಿಹುದು, ಪರರ ದ್ರವ್ಯವ ಅಪಹಾರಮಾಡದಿಹುದು, ಸುಳ್ಳಾಡದಿಹುದು, ವಿಶ್ವಾಸ ಘಾತವ ಮಾಡದಿಹುದು, ಪ್ರಾಣಿಹಿಂಸೆಯ ಮಾಡದಿಹುದು, ಸಕಲ ಶಿವಶರಣರ್ಗೆ ಸಂತೋಷವಂ ಪುಟ್ಟಿಸುವುದು, ಸ್ವೀಕರಿಸಿದ ನೇಮದ ಪ್ರಾಣಾಂತ್ಯವಾಗಿ ಬಿಡೆನೆಂಬುದು....ಕೆಟ್ಟ ಜನರ ಸಹವಾಸವ ಮಾಡದಿಹುದು. ಸಜ್ಜನ ಸಂಗತಿಯ ಬಿಡದಿಹುದು, ಅನ್ಯದೇವತಾಭಜನೆಗೆ ವಿಮುಖನಾಗಿಹುದು. ಶಿವನೇ ಸರ್ವದೇವಶಿಖಾಮಣಿಯೆಂದು ಮನ ದಲ್ಲಿ ಅಚ್ಚೊತ್ತಿಪ್ಪುದು, ಶಿವನಿಗೆ ಶಿವಗಣಂಗಳಿಗೆ ಭೇದವ ಮಾಡದಿಹುದು, ಸಕಲಜೀವಿಗಳಿಗೆ ಹಿತವ ಬಯಸುವುದು.

......ಆಡಿದ ಭಾಷೆಯ ಕಡೆ ಪೂರೈಸುವುದು. ಸತ್ಯವನು ನುಡಿದು ತಪ್ಪದಿಹುದು....ಶಿವಾನುಭವ ಶಾಸ್ತ್ರವ ವಿಚಾರಿಸುವುದು, ಮನವ ನೋಯಿಸಿ ಮಾತನಾಡದಿಹುದು, ಗುರುಮುಖದಿಂದ ತಾನಾರು, ತನ್ನ ನಿಜವೇನೆಂದು ಬೆಸ ಗೊಳ್ಳುವುದು, ಷಡ್ವರ್ಗಂಗಳ ಮೆಟ್ಟಿ, ಷಟ್‌ಸ್ಥಲನಿಂಬುಗೊಂಡುದುವ...ಲಿಂಗದಲ್ಲಿ ಶಿಲೆಯ ಭಾವವನಱಸದಿಹುದು. ಜಂಗಮದಲ್ಲಿ ಕುಲವನಱಸದಿಹುದು, ವಿಭೂತಿಯ ಮಾಣ್ಬದಿಹುದು....ಪಾದೋದಕದಲ್ಲಿ ಉಚ್ಚಿಷ್ಟವಳಿದುದು. ಪ್ರಸಾದದಲ್ಲಿ ರುಚಿಯ ನೋಡದಿಹುದು, ಮಂತ್ರದಲ್ಲಿ ಕುತ್ಸಿತಕಲ್ಪನೆಯ ಮಾಡದಿಹುದು. ಲಿಂಗಾರ್ಚನವಿರಹಿತ ಭೋಜನ ಮಾಡದಿಹುದು.....ಇಂತಿಪ್ಪು ಐವತ್ತು ಬಗೆಯ ಆಚಾರಸ್ವರೂಪವನ್ನು ನಿರ್ದಿಷ್ಟಪಡಿಸಿದ್ದಾರೆ.

ಲಿಂಗಾಂಗಿಗೆ ವಾರ, ತಿಥಿ ಇತ್ಯಾದಿಗಳ ನಿಯಮವಿಲ್ಲ :

ಸೋಮವಾರ, ಮಂಗಳವಾರ, ಶಿವರಾತ್ರಿಯೆಂದು
ನೋಡಿಮಾಡುವ ಭಕ್ತರ ಲಿಂಗಭಕ್ತಂಗೆ ಎಂತು ಸರಿಯೆಂಬೆನಯ್ಯಾ ?
ದಿನ ಶ್ರೇಷ್ಠವೋ, ಲಿಂಗ ಶ್ರೇಷ್ಠವೋ ?
ಲಿಂಗಶ್ರೇಷ್ಠವೆಂಬುದ ಮಱೆದು, ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು.
ಸಾಕ್ಷಿ : ಸೋಮೇ ಭೌಮೇ ವ್ಯತೀಪಾತೇ ಸಂಕ್ರಾಂತಿಶಿವರಾತ್ರಯೋಃ ।
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಂ ॥
ಇದು ಕಾರಣ ಕೂಡಲಚನ್ನಸಂಗಯ್ಯಾ.
ಇಂತಹರ ಮುಖವ ನೋಡಲಾಗದು.

ಭಕ್ತನು ಗುರೂಪದೇಶದಂತೆ ನಡೆಯಬೇಕು :

ಲಿಂಗ, ಜಂಗಮ, ಪಾದೋದಕ, ಪ್ರಸಾದ
ಇಂತು ಚತುರ್ವಿಧಲಂಪಟನಾಗಯ್ಯಾ, ಮಗನೆ,
—ಎಂದು ಅಂಗದಮೇಲೆ ಲಿಂಗಸಾಹಿತ್ಯವ ಮಾಡಿ.
ಹುಸಿ, ಕಳವು, ವೇಶ್ಯಾಗಮನ, ಪರದಾರ, ಪರದ್ರವ್ಯ,
ಪರನಿಂದೆ, ಪರದ್ವೇಷ ಇಂತೀ ಸಪ್ತಗುಣವಿರಹಿತನಾಗಿ
ಅನ್ಯದೈವನಾಸ್ತಿಯಾಗಿ ಮಜ್ಜನಕ್ಕೆರೆವುದೆ
ಶಿವಪಥವು ಕಂಡಯ್ಯ, ಮಗನೆ,
ಎಂದು ಹೇಳಿಕೊಟ್ಟ ಉಪದೇಶವನೆ ಕೇಳಿ ನಡೆಯಬಲ್ಲಡೆ.
ಅತನೇ ಶಿಷ್ಯ, ಆತನೇ ನಿತ್ಯಮುಕ್ತನು.
ಆ ಗುರುಶಿಷ್ಯರೇಕವಾಗಿ ನಿಮ್ಮೊಳಿರಕ, ಅದಂತಿರಲಿ
ಅದು ಉಪಮಿಸಬಾರದ ಘನವು ; ಅದಕ್ಕೆ ಶರಣಾರ್ಥಿ.
ಇನಿತಿಲ್ಲದೆ ಕೊಡುವ ಕೊಂಬ ಗುರುಶಿಷ್ಯರಿಬ್ಬರಿಗೂ
ಯಮದಂಡನೆ ಕಾಣಾ, ಕೂಡಲಚನ್ನಸಂಗಮದೇವಾ.

ಭಕ್ತನು ತನು, ಮನ, ಭಾವ-ಶುದ್ಧನಾಗಿ, ಇಷ್ಟ ಪ್ರಾಣ ಭಾವಲಿಂಗಪೂಜಕನಾಗಬೇಕು. ಅದರ ವಿಚಾರವರಿಯದೆ ಮಾಡಿದ ಪೂಜೆ ಸಾರ್ಥಕವಾದುದಲ್ಲ. ಅಷ್ಟವಿಧಾರ್ಚನೆ ಷೋಡಶೋಪಚಾರವನ್ನು ಮಾಡಿ, ಜಂಗಮದ ಪಾದತೀರ್ಥವನ್ನು ಅಲಕ್ಷಿಸಿದರೆ ಆತ ಸದ್ಭಕ್ತನಾಗಲಾರನು.

....ಜಂಗಮದ ಪಾದತೀರ್ಥವ ಲಿಂಗಕ್ಕೆ ಮಜ್ಜನಕ್ಕೆರೆದು
ಪ್ರಸಾದವ ಲಿಂಗಕ್ಕೆ ನೈವೇದ್ಯವ ಸಮರ್ಪಿಸಿ,
ಭೋಗಿಸುವಾತನೇ ಸದ್ಭಕ್ತ : ಆತನೇ ಮಾಹೇಶ್ವರ....
..................................................
ಇಂತಲ್ಲದೆ, ಜಂಗಮದ ಪಾದತೀರ್ಥಪ್ರಸಾದರಹಿತನಾಗಿ
ಅವನಾನೊಬ್ಬನು ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ
ಷೋಡಶೋಪಚಾರ ಕ್ರೀಯಿಂದ ಪೂಜೆಯ ಮಾಡುವಲ್ಲಿ
ಅವನು ಶುದ್ಧಶೈವನು ; ಅವನಿಗೆ ಮುಕ್ತಿಯಿಲ್ಲ ಕಾಣಾ
ಕೂಡಲಚನ್ನಸಂಗಮದೇವಾ.

ಭಕ್ತಿ, ನೀತಿವಂತನಲ್ಲದವನಿಗೆ ಲಿಂಗಧಾರಣೆ ಮಾಡಬಾರದು. ಮದ್ಯಪಾನಿಗೆ, ಮಾಂಸಾಹಾರಿಗೆ, ಜೂಜುಗಾರನಿಗೆ, ಸೂಳೆಗೆ ಲಿಂಗಧಾರಣೆ ಸಲ್ಲದು. ಆದರೆ ಅವ ಜಾತಿ, ಕುಲ, ಗೋತ್ರದವನೇ ಆಗಲಿ, ಸದ್ಗುಣಸಂಪನ್ನನಾದರೆ ಲಿಂಗಸಂಬಂಧಿಯಾಗಲು ಅರ್ಹ, ದುರ್ಗುಣಿ ಅನರ್ಹ ಎಂಬುದು ಚನ್ನಬಸವಣ್ಣನವರ ಮತ.

ಲಿಂಗಾಂಗಿಧರ್ಮದ ಪರಮಗುರಿಯಾದ ಶಿವಯೋಗವು ಇತರ ಯೋಗಗಳಿಗಿಂತ ಸರ್ವೋತ್ಕೃಷ್ಟವಾದುದು.

ಸರಳವಾದುದು. ಮಂತ್ರ, ಹಠ, ಲಯಯೋಗಗಳು ಶಿವಯೋಗಿಗೆ ಅವಶ್ಯವಿಲ್ಲ. ಭಕ್ತಿ ಶಿವಯೋಗಕ್ಕೆ ಪೂರಕವಾದುದು. ಶಿವಯೋಗ ಸಾಧಕನ ವಿವಿಧ ಹಂತಗಳಲ್ಲಿ ಓತಪ್ರೋತವಾಗಿರುವುದು.

ಪ್ರಾಣಲಿಂಗವನ್ನು ಇಷ್ಟಲಿಂಗದಲ್ಲಿ ಸಮನಿಸದೆ ಮಾಡುವ ಪೂಜೆ ವ್ಯರ್ಥ, ಪ್ರಯೋಜನಕಾರಿಯಾಗದು.

ಗೋವಿನ ಹೊಟ್ಟೆಯಲ್ಲಿ ಘೃತವಿದ್ದೊಡೇನೋ
ಆ ಗೋವು ದಿನದಿನಕ್ಕೆ ಪುಷ್ಟವಾಗಬಲ್ಲುದೆ ?
ಅದು ಕಾರಣ, ಆ ಗೋವ ಪೋಷಿಸಿ, ಕಱೆದು,
ಕಾಸಿ ಘೃತವ ಮಾಡಿ ಆ ಗೋವಿಗೆ ಕುಡಿಯಲೆಱೆದಡೆ
ಆ ಗೋವು ದಿನದಿನಕ್ಕೆ ಪುಷ್ಟವಹುದು.
ಹಾಂಗೆ, ತನ್ನಲ್ಲಿ ವಸ್ತುವಿದ್ದಡೇನೋ ?
ವಸ್ತುವ ಗುರುಮುಖದಿಂದ ಕರಸ್ಥಲಕ್ಕೆ ಪಡೆದು.
ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿದಲ್ಲದೆ
ಪ್ರಾಣಲಿಂಗವಾಗದು. ಕೂಡಲಚನ್ನಸಂಗಯ್ಯನಲ್ಲಿ
ಇಷ್ಟಲಿಂಗವ ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿ
ತಾನೆಂಬ ಅನಿಷ್ಟವ ತೊಲಗಿಸಿದಲ್ಲದೆ
ಪ್ರಾಣಲಿಂಗವಾಗದು

ಎಂದಿದ್ದಾರೆ.

ಶಿವಯೋಗಸಾಧನೆಯನ್ನರುಹುತ್ತಾ ಶಿವಯೋಗದ ಪ್ರಮುಖಮಾರ್ಗ(ನಾಳ)ವಾದ ಸುಷುಮ್ನೆಯು ತೆರೆದು, ಅದರಲ್ಲಿ ಪ್ರಾಣವಾಯುವಿನ ಸಂಚಲನೆ ನಡೆದು ಪ್ರಾಣಲಿಂಗಾರ್ಚನೆ ಮಾಡುವ ಶಿವಯೋಗಾನುಸಂಧಾನವನ್ನು ಕುರಿತು ಚನ್ನಬಸವಣ್ಣನವರು ಸೂಚಿಸಿರುವ ರೀತಿಯಿದು :

ಪಶ್ಚಿಮಪದ್ಮಾಸನದಲ್ಲಿ ಕುಳ್ಳಿರ್ದು
ನಿಟ್ಟೆಲುವ ನೆಟ್ಟನೆ ಮಾಡಿ
ಅಧೋಮುಖ ಕಮಲವ ಬಲಿದು
ಊರ್ಧ್ವಮುಖವ ಮಾಡಿ
ಇಂದ್ರಿಯಂಗಳನು ಏಕ ಮುಖವ ಮಾಡಿ
ಚಂದ್ರಸೂರ್ಯರನೊಂದೇ ತಾವಿನಲಿರಿಸಿ
ಅತ್ತಿತ್ತ ମಿಸುಕದೆ
ನಡುಗೀಱ ಜ್ಯೋತಿಯ ದೃಢವಾಗಿ ಹಿಡಿದು
ಪರಮಾನಂದ ಮಠದೊಳಗೆ
ಪ್ರಾಣಲಿಂಗಾರ್ಚನೆಯ ಮಾಡುವ
ಮಾಹಾಮಹಿಮರ ತೋಱಿ ಬದುಕಿಸಾ
ಕೂಡಲಚನ್ನಸಂಗಯ್ಯಾ.

ಬೆನ್ನೆಲುವ ನೆಟ್ಟನೆಮಾಡಿ ಕುಳಿತು, ವಿಷಯಮುಖವಾದ ಅಧಃಕುಂಡಲಿಯನ್ನು ವಿಷಯಾಭಿರತಿಯಿಂದ ಬಿಡಿಸಿ ಊರ್ಧ್ವಗೊಳಿಸಿ, ಸಕಲೇಂದ್ರಿಯಗಳನ್ನು ಒಂದೇ ಮುಖವಾಗಿ ಕೇಂದ್ರೀಕರಿಸಿ (ಹುರಿಗೊಳಿಸಿ), ರೇಚಕ ಪೂರಕಶ್ವಾಸಗಳನ್ನು ಕುಂಭಕಗೊಳಿಸಿ, ಅತ್ತಿತ್ತ ಚಲಿಸದಂತೆ, ಹೃದಯಕಮಲದಲ್ಲಿ ಇಷ್ಟಲಿಂಗ ಭ್ರೂಮಧ್ಯ (ನೇತ್ರದ್ವಯಗಳ ದೃಷ್ಟಿಯನ್ನು ಏಕೀಕರಿಸಿ) ಪ್ರಾಣಲಿಂಗಾನುಸಂಧಾನಮಾಡಿ, ಸುಷುಮ್ನೆಯಲ್ಲಿ ಕೂಡಿಸಿ (ಸಹಸ್ರಾರದಲ್ಲಿ)ಭಾವ-ಲಿಂಗಾನುಸಂಧಾನ ನಡೆಸುವುದು ಭಾವಲಿಂಗಾರ್ಚನೆ-ಪರಮಬಿಂದು (ಪರಮಾತ್ಮನ) ಪ್ರಕಾಶದರ್ಶನಕ್ಕೆ ತೆರವಾಗುವುದು. ಇದು ಶಿವಯೋಗಸಾಧನೆಯ ಅನುವು.

## ಉತ್ತಮ ಸಾಹಿತ್ಯಲಕ್ಷಣಗಳು

ಚನ್ನಬಸವಣ್ಣನವರ ವಚನಗಳಲ್ಲಿ ಉತ್ತಮ ಸಾಹಿತ್ಯಲಕ್ಷಣಗಳಿವೆ. ದೃಷ್ಟಾಂತಗಳು–ಉಪಮೆಗಳು, ರೂಪಕಗಳು ಉತ್ತಮರೀತಿಯಲ್ಲಿ ಮೂಡಿಬಂದಿವೆ. ಅವುಗಳ ಮೂಲಕ ತಾಮಸವೃತ್ತಿನಿರಸನ, ನೀತಿಬೋಧೆ, ತತ್ತ್ವಬೋಧೆ

ಗಳ ಅಮೃತಬಿಂದುಗಳು ವಿನೂತನವಾಗಿ ಗೋಚರಿಸುತ್ತವೆ. ಒಂದೆರಡು ನಿದರ್ಶನಗಳಿವು :

ಮಾತು ಮಾಣಿಕ್ಯವ ನುಂಗಿ, ಜ್ಯೋತಿ ಕತ್ತಲೆಯನುಂಗಿ
ಆಳು ಆಳ್ದನ ನುಂಗಿ ಉಗುಳಲಿನ್ನೆಂತೋ ?
ಬಸವನೇ ಬಲ್ಲಾಳಾಗಿ, ಹೊಸಭಕ್ತಿ ಅಂಬಾಗಿ
ಎಸೆದನಯ್ಯಾ ಆ ಲಿಂಗವನು ಗುರಿಮಾಡಿ
ಹಾಲ ಹಿಡಿದು ಬಣ್ಣೆಯಬಿಸಲುಂಟೇ ?
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೇ ?

"ಅವರ ವಚನಗಳಲ್ಲಿ ಕಾವ್ಯಾನುಭವ, ಲೋಕಾನುಭವ, ಶಾಸ್ತ್ರಾನುಭವಗಳು ಕರತಲಾಮಲಕವಾಗಿರುವುದು."[1]

## ಶರಣ ಸಂದೋಹದಲ್ಲಿ ಅಚ್ಚುಮೆಚ್ಚು

ಷಟ್‌ಸ್ಥಲಚಕ್ರವರ್ತಿಯೆನಿಸಿದ ಚನ್ನಬಸವಣ್ಣನವರು ತಮ್ಮ ದಿವ್ಯಜ್ಞಾನ, ಷಟ್‌ಸ್ಥಲಾಚರಣೆ, ಕಾರ್ಯೋತ್ಸಾಹದಕ್ಷತೆ, ಅನುಭಾವಸಂಪತ್ತಿನಿಂದ ಎಲ್ಲಾ ಶರಣರ ಗೌರವಾದರಗಳಿಗೆ ಪಾತ್ರರಾದರು. ಬಸವಣ್ಣನವರು, ಪ್ರಭುದೇವರು, ಸಿದ್ಧರಾಮಯ್ಯನವರು, ಅಕ್ಕಮಹಾದೇವಿಯರು, ಮೋಳಿಗೆ ಮಾರಯ್ಯ ಮತ್ತು ಅವರ ಪತ್ನಿ ಮಹಾದೇವಮ್ಮನವರು, ಮಡಿವಾಳ ಮಾಚಿದೇವರು, ನುಲಿಯ ಚಂದಯ್ಯನವರು, ಸಕಲೇಶ ಮಾದರಸರು, ಮರುಳ ಶಂಕರದೇವರು ಮುಂತಾದ ಶರಣ ಶರಣೆಯರು ಅವರನ್ನು ಬಹುವಾಗಿ ಮೆಚ್ಚಿ ನುಡಿದಿದ್ದಾರೆ.

ಶಿವಕವಿಗಳಾದ ಹರಿಹರದೇವ, ಪಾಲ್ಕುರಿಕೆಯ ಸೋಮನಾಥ, ಭೀಮಕವಿ, ಲಕ್ಕಣ್ಣದಂಡೇಶ, ಚಾಮರಸ, ಕಲ್ಲುಮಠದ ಪ್ರಭುದೇವ, ಮಹಾಮಹಿಮರಾದ ತೋಂಟದ ಸಿದ್ಧಲಿಂಗಶಿವಯೋಗಿಗಳು, ಮಗ್ಗೆಯ ಮಾಯಿದೇವರು, ಗುಬ್ಬಿಯ ಮಲ್ಲಣ್ಣ, ಸುರಂಗಕವಿ, ವಿರಕ್ತ ತೋಂಟದಾರ್ಯ, ವಿರೂಪಾಕ್ಷಪಂಡಿತ, ಷಡಕ್ಷರದೇವ, ಘನಮಠ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಮೈಲಾರದ ಬಸವಲಿಂಗಶರಣರೇ ಮುಂತಾದವರು ಚನ್ನಬಸವಣ್ಣನವರನ್ನು ತಮ್ಮ ಕೃತಿಗಳಲ್ಲಿ ಸ್ತೋತ್ರ ಮಾಡಿದ್ದಾರೆ.

## ಡಾ. ಜ. ಚ. ನಿ. ಅವರ ''ಸಮ್ಯಜ್ಞಾನಿ ಚನ್ನಬಸವಣ್ಣ'' ಕೃತಿಯಲ್ಲಿ

"ಚನ್ನಬಸವಣ್ಣ ಮಹಾಜ್ಞಾನಿ, ಮಹಾನುಭಾವಿ, ತೇಜಸ್ವಿ, ಓಜಸ್ವಿ, ಸುಧಾರಕ, ವಿಮರ್ಶಕ. ಆತನ ವಚನ ವಾಣಿಯಲ್ಲಿ ಈ ವ್ಯಕ್ತಿತ್ವ ಹೆಜ್ಜೆಹೆಜ್ಜೆಗೂ ಹೊಳೆಯುತ್ತದೆ. ಮಾತುಮಾತಿಗೂ ಮಿಂಚುತ್ತದೆ. ಚನ್ನಬಸವಣ್ಣನು ಅವಲೋಕಿಸಿದುದನ್ನು ಆಳವಾಗಿ ಆಲೋಚಿಸುತ್ತಾನೆ. ಆಲೋಚಿಸಿದ್ದನ್ನು ಅನುಭವಿಸಿದ್ದನ್ನು ಭಾವಗರ್ಭಿತವಾಗಿ ಬಿಚ್ಚಿ ಆಡುತ್ತಾನೆ. ಆದ್ದರಿಂದ ಅಲ್ಲಿ ಸತ್ವವಿದೆ. ಸತ್ಯವಿದೆ, ಆತನು ತನ್ನ ಹಿಂದಿದ್ದ ತನ್ನೊಡನಿದ್ದ ಸಮಾಜದ ಕೊರತೆಗಳನ್ನು ಕಂಡ ರೀತಿ ಮುಂಬರಿವ ಸಮಾಜ ಹೇಗೆ ಹೆಜ್ಜೆಹಾಕಬೇಕೆಂಬುದನ್ನು ಹೇಳುವ ನೀತಿ ಇವು ಆದರ್ಶವಾಗಿವೆ; ಅಸನ್ಯ ಸಾಧಾರಣವಾಗಿವೆ. ಅಲ್ಲದೆ ಆತನ ಜ್ಞಾನಾನುಭವಗಳ ಮೆರುಗಿಗೆ ಒರೆಗಲ್ಲಾಗಿವೆ. ಜ್ಞಾನದ ರೂಪನ್ನೂ ಅನುಭವದ ತಿರುಳನ್ನೂ ವಚನರೂಪದಲ್ಲಿ ಚೆನ್ನಾಗಿ ಚಿತ್ರಿಸಿದ್ದಾನೆ. ಸಾಮಾಜಿಕ ಕೊರತೆಗಳನ್ನು ಕಣ್ಣಾರೆ ಕಂಡು ಕಡುನೊಂದು ಸರಿಪಡಿಸಿದ್ದಾನೆ. ಆತನ ಆ ಜ್ಞಾನಾನುಭವಗಳಿಗೆ ಆಗಮಾಮ್ನಾಯವಚನಗಳು ಬೆಂಬಲವಿದ್ದು ಹೊಸ ಪ್ರತಿಭೆಯನ್ನು ನವಚೈತನ್ಯವನ್ನು ತಂದುಕೊಟ್ಟಿವೆ."

[1] ಡಾ. ಆರ್. ಸಿ. ಹಿರೇಮಠರು, "ಚನ್ನಬಸವಣ್ಣನವರು"

# ಅಕ್ಕಮಹಾದೇವಿ

**ಶ್ರೀಮತಿ ಶಾಂತಾದೇವಿ ಮಾಳವಾಡ**

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು. ಆಚಾರವೆಂಬ ಭಕ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು, ತೊಳಗಿ ಬೆಳಗುತಿರ್ಪುದಯ್ಯ ಶಿವನ ಪ್ರಕಾಶ, ಆ ಬೆಳಗಿನೊಳಗೆ ಒಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತ ಮಹಾಗಣಂಗಳು."

ಆ ಭಕ್ತಸಮೂಹದಲ್ಲಿ ಉಜ್ವಲ ನಕ್ಷತ್ರವಾಗಿ ಮಿನುಗಿದಳು ಅಕ್ಕಮಹಾದೇವಿ. ಆಕೆಯ ಜೀವನದ ಮೂರು ಮಹತ್ವದ ಘಟ್ಟಗಳನ್ನು ನಾವು ಕಾಣಬಹುದಾಗಿದೆ. ಉಡುತಡಿಯಲ್ಲಿ ಹುಟ್ಟಿದಳು, ಚನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂಬ ಸಂಕಲ್ಪ ಮಾಡಿದಳು, ಕಲ್ಯಾಣಕ್ಕೆ ಬಂದಳು. ಮಹಾಮನೆಯ ಮಗಳಾಗಿ ಬಾಳಿದಳು, ಸಾಧನೆಗೈದಳು, ಶ್ರೀಶೈಲಕ್ಕೆ ಹೋಗಿ ಸಿದ್ಧಿಯನ್ನು ಪಡೆದಳು. ಹೀಗೆ ಸಂಕಲ್ಪ, ಸಾಧನೆ. ಸಿದ್ಧಿಯಿಂದ ಅಕ್ಕಮಹಾದೇವಿಯ ಬಾಳು ಬೆಳಗಿತು. ಅವಳ ವ್ಯಕ್ತಿತ್ವ ಶ್ರೀಗಿರಿಯಂತೆ ಭವ್ಯವಾದುದು, ಸಾಧಿಕೆ, ಧೈರ್ಯಸ್ಥೈರ್ಯದ ಮೂರ್ತಿ, ಛಲಗಾತಿ, ಲೌಕಿಕಳು, ತಾರ್ಕಿಕಳು, ಅಹಿಂಸಾಮೂರ್ತಿ, ತತ್ವಜ್ಞಾನಿ, ಕವಯಿತ್ರಿ, ಅನುಭಾವಿ, ಮಹಾಯೋಗಿನಿ.

ಈ ರೀತಿ ಪರಿಪೂರ್ಣವ್ಯಕ್ತಿತ್ವ ವಿಕಾಸಗೊಂಡ ಅಕ್ಕಮಹಾದೇವಿಯಲ್ಲಿಯ ಮಾನವತೆ ಅರಳಿತು, ದೇವತ್ವ ಮೊರಹೊಮ್ಮಿತು. ಅವಳಲ್ಲಿರುವ ದೇವತ್ವವನ್ನರಿತ ಕಲ್ಯಾಣದ ಶರಣರು ಅಕ್ಕಮಹಾದೇವಿಯ ಶ್ರೀಚರಣಕ್ಕೆ ಶರಣು ಶರಣಾರ್ಥಿ ಎಂದಿದ್ದಾರೆ.

ವೀರವಿರಾಗಿಣಿ ಅಕ್ಕಮಹಾದೇವಿಯ ಆಧ್ಯಾತ್ಮ ಜೀವನದ ಉನ್ನತಿಯನ್ನು ಆಕೆಯ ವಚನಗಳಿಂದಲೇ ಅರಿಯ ಬಹುದಾಗಿದೆ. ಆದರ ಆಕೆಯ ಜನನ ಬಾಲ್ಯಗಳಿಗಾಗಿ ಕಾವ್ಯ, ಪುರಾಣಗಳ ಮೊರೆಹೋಗಬೇಕಾಗುವುದು. ಪಾರ್ವತಿಯ ತಾಮಸಕಳೆ ಬನವಾಸಿಯ ಅರಸನ ಮಗಳು ಮಾಯಾದೇವಿಯಾಗಿ ಹುಟ್ಟುವಳು. ಶಿವನ ನಿಜರೂಪನಾದ ಅಲ್ಲಮಪ್ರಭು ದೇವನನ್ನು ಗೆಲ್ಲಲಾರದೆ ತಿರುಗಿ ಕೈಲಾಸಕ್ಕೆ ಹೋಗುವಳು. ಆಗ ಪಾರ್ವತಿ ತನ್ನ ಸಾತ್ವಿಕ ಕಳೆಯನ್ನು ಭೂಮಿಗೆ ಕಳಿಸುವಳು. ಅವಳೇ ಉಡುತಡಿಯಲ್ಲಿ ಮಹಾದೇವಿಯಾಗಿ ಜನಿಸುವಳು.

ಮಲೆನಾಡ ಸೃಷ್ಟಿಯ ಸೊಬಗಿನ ಮಧ್ಯದಲ್ಲಿ ಕಂಗೊಳಿಸುವ ಉಡುತಡಿಯಲ್ಲಿ ೧೨ನೇ ಶತಮಾನದಲ್ಲಿ ನಿರ್ಮಲ ಶೆಟ್ಟಿ-ಸುಮತಿಯರೆಂಬ ದಂಪತಿಗಳಿದ್ದರು. ಈ ದಂಪತಿಗಳು ಮಲ್ಲಿಕಾರ್ಜುನನ ಪರಮಭಕ್ತರು. ಸಿರಿವಂತರಾದ ಈ ದಂಪತಿಗಳಿಗೆ ಮಕ್ಕಳಿಲ್ಲದ ಕೊರಗು. ಊರ ಹೊರಭಾಗದಲ್ಲಿದ್ದ ಮಲ್ಲಿಕಾರ್ಜುನನ ದೇವಸ್ಥಾನಕ್ಕೆ ನಿರ್ಮಲಶೆಟ್ಟಿ ಸುಮತಿಯರು ಪ್ರತಿದಿನ ಹೋಗುತ್ತಿದ್ದರು. ಭಕ್ತಿಯಿಂದ ಪೂಜೆ ಮಾಡಿ ಮಕ್ಕಳನ್ನು ಕೊಡು ಎಂದು ಪ್ರಾರ್ಥಿಸು ತ್ತಿದ್ದರು. ಇವರ ಭಕ್ತಿಗೆ ಮೆಚ್ಚಿ ಮಲ್ಲಿಕಾರ್ಜುನನಿತ್ತ ವರದಿಂದ ಮಹಾದೇವಿಯಕ್ಕ ಜನಿಸಿದಳು.

ಸದಾ ಹರಪೂಜೆ, ಗುರುಸೇವೆಯಲ್ಲಿರುತ್ತಿದ್ದ ಸಾತ್ವಿಕರೂ, ಸದಾಚಾರಿಗಳೂ ಆದ ನಿರ್ಮಲಶೆಟ್ಟಿ-ಸುಮತಿಯರ ಮಡಿಲಲ್ಲಿ ಮಹಾದೇವಿ ಭಕ್ತಿಲತೆಯಂತೆ ಬೆಳೆದಳು. ಮನೆಯ ಗುರುಗಳು ಬಂದು ಲಿಂಗಧಾರಣೆಗೈದರು. "ತಾಯ ಮಗ್ಗುಲ ತಂಪಿನೊಳಂ, ಮೊಲೆವಾಲಿಂಪಿನೊಳಂ, ತೊಟ್ಟಿಲ ತೂಕದೊಳಂ, ರಾಗಿಸುವರೆ ಜೋಗುಳದೊಳಂ, ಬಿದಿಗೆಯ ಚಂದಿರನಂತೆ" ಮಹಾದೇವಿ ಬೆಳೆದಳು. ಕಮಲದ ಹೂವರಳಿದಂತೆ ಸದಾಮುಖದಲ್ಲಿ ಮಂದಹಾಸವಿರುತ್ತಿತ್ತು. ಭಸಿತದ ಭಾವರೆ ಹೊಂಗಡಗದ ಲಿಂಗವಂತೆಯಾದ ಮಹಾದೇವಿ ರೂಪ, ಗುಣಸಂಪನ್ನೆಯಾದಳು.

ಬಾಲ್ಯದಲ್ಲಿ ಮಕ್ಕಳೊಡನೆ ಗೊಂಬೆಯಾಟವಾಡದೇ ಮಲ್ಲಿಕಾರ್ಜುನನ ಪೂಜೆಯ ಆಟವನ್ನೇ ಆಡುತ್ತಿದ್ದಳು. ಮಹಾದೇವಿ ಬೆಳೆದಂತೆ ಅವಳಲ್ಲಿ ದೇವರ ಬಗೆಗೆ ಭಕ್ತಿ-ನಿಷ್ಠೆಗಳೂ ಬೆಳೆದುವು.

ಒಂದು ಸಲ ಗೌರಿಹುಣ್ಣಿಮೆಯ ದಿನ ಮಹಾದೇವಿ ಓರಗೆಯ ಗೆಳತಿಯರೊಂದಿಗೆ ಗೌರಿಗೆ ಸಕ್ಕರೆಯ ಆರತಿ

ಬೆಳಗಲು ಹೊರಟಳು. ಎಲ್ಲ ಬಾಲಿಕೆಯರೂ ಆರತಿ ಬೆಳಗಿ ಸೋದರಮಾವನ ಹೆಸರು, ಇಲ್ಲವೆ ಚಂದ್ರನ ಹೆಸರು ಹೇಳು ತ್ತಿದ್ದರು. ಮಹಾದೇವಿ, ಗಂಡನ ಹೆಸರು ಹೇಳು ಎಂದು ಗೆಳತಿಯರೆಲ್ಲ ಕೇಳಿದಾಗ, ಮಹಾದೇವಿ ತಾಯಿಯ ಬಳಿ ಹೋಗಿ "ಅವ್ವಾ ನನ್ನ ಗಂಡ ಯಾರು ? ನಾನು ಯಾರ ಹೆಸರು ಹೇಳಬೇಕು ?" ಎಂದು ಕೇಳಿದಳು. ಪೂಜೆಗೆ ಕುಳಿತ ತಾಯಿ "ಮನೆದೇವರು ಮಲ್ಲಿಕಾರ್ಜುನನೇ ಪತಿಯೆಂದು ಹೇಳವ್ವ" ಎಂದಳು. ಅಂದಿನಿಂದ ಮಲ್ಲಿಕಾರ್ಜುನನೇ ಮಹಾದೇವಿಯ ಮನದಲ್ಲಿ ಪತಿಯ ಸ್ಥಾನ ಪಡೆದನು. ಮಲ್ಲಿಕಾರ್ಜುನನೇ ತನ್ನ ಪತಿಯಾಗಬೇಕೆಂಬ ಸಂಕಲ್ಪ ಮುಗ್ಧ ಬಾಲಿಕೆ ಮಹಾದೇವಿಯ ಮನದಲ್ಲಿ ಮೂಡಿತು.

ಮಹಾದೇವಿಯ ಭಕ್ತಿಭಾವವನ್ನರಿತ ಆಕೆಯ ತಂದೆ ಗುರುಗಳ ಬಳಿ ಕನ್ನಡ-ಸಂಸ್ಕೃತ ಸಾಹಿತ್ಯವನ್ನೋದುವ ಅವಕಾಶ ಕಲ್ಪಿಸಿಕೊಟ್ಟ. ಗುರುಗಳು ಯುಗಾದಿ ಹಬ್ಬಕ್ಕೆ ಶ್ರೀಶೈಲಕ್ಕೆ ಹೋಗಿದ್ದರು. ಬರುವಾಗ ಕಲ್ಯಾಣಕ್ಕೆ ಹೋಗಿ ಬಸವಾದಿ ಪ್ರಮಥರ ವಚನಗಳ ತಾಳೆಗರಿಯೋಲೆಗಳನ್ನು ಮಹಾದೇವಿಗಾಗಿ ತಂದರು. ಆ ವಚನಗಳನ್ನು ಓದಿದಾಗ ಮಹಾದೇವಿಗೆ ಪಂಚಪಕ್ವಾನ್ನಗಳನ್ನು ಸವಿದಷ್ಟು ಸಂತಸವಾಯಿತು. ತಂದೆತಾಯಿಗಳು ಬೆಳೆದು ದೊಡ್ಡವಳಾದ ಮಗಳಿಗೆ ಗುರುಲಿಂಗದೇವರಿಂದ ಲಿಂಗದೀಕ್ಷೆ ಮಾಡಿಸಿದರು. ಗುರುಗಳು ಹೇಳಿದರು :

"ಮಹಾದೇವಿ ನಿನ್ನ ಕರದ ಇಷ್ಟಲಿಂಗದಲ್ಲಿ ಚನ್ನಮಲ್ಲಿಕಾರ್ಜುನನು ಹುದುಗಿದ್ದಾನೆ. ಅವನು ನಿನ್ನ ಹೃದಯದಲ್ಲಿದ್ದಾನೆ, ಮನದಲ್ಲಿದ್ದಾನೆ ಭಾವಭರಿತನಾಗಿದ್ದಾನೆ, ತಾಯಿ. ಇಷ್ಟಲಿಂಗದ ಮೂಲಕ ನೀನು ನಿನ್ನ ಆರಾಧ್ಯದೈವ ಚನ್ನಮಲ್ಲಿಕಾರ್ಜುನನನ್ನು ಕಾಣಬಹುದವ್ವ" ಎಂದು ಹೃದಯ ತುಂಬಿ ಹರಸಿದರು.

ಲಿಂಗದೀಕ್ಷೆಯಾದ ನಂತರ ಮಹಾದೇವಿಯ ಅಂತರಂಗ ಅನುಭವದ ಆಗರವಾಯಿತು. ತ್ರಿಕಾಲಪೂಜೆ ತಪ್ಪದೆ ನಡೆಯುತ್ತಿತ್ತು. ಗುರುಗಳು ಕೊಟ್ಟ ಶರಣರ ವಚನಗಳನ್ನೋದಿ ಅವಳಿಗೂ ವಚನ ರಚಿಸುವ ಆಸೆಯಾಯಿತು. ತನ್ನ ದೀಕ್ಷಾಸಮಾರಂಭದ ಅನುಭವವನ್ನೇ ವಚನರೂಪದಲ್ಲಿ ಹರಿಸಿದಳು.

"ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೆ ಎನ್ನ ಭವಂ ನಾಸ್ತಿಯಾಯಿತ್ತು, ಎನ್ನ ತನ್ನಂತೆ ಮಾಡಿದ ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿದನು ನೋಡಾ !

ಎನ್ನ ಶಿರಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಸರ್ವಾಂಗದೊಳ ಹೊರಗೆ ತೆರಹಿಲ್ಲದಳವಡಿಸಿದ
ನಮ್ಮ ಗುರುಲಿಂಗದೇವ ಚೆನ್ನಮಲ್ಲಿಕಾರ್ಜುನನು

ತಾನು ರಚಿಸಿದ ಈ ವಚನ ಸರಿಯಾಗಿದೆಯೋ ಇಲ್ಲವೋ ಎಂದು ತಂದೆಗೆ ತೋರಿಸಿದಳು. ತಂದೆ-ತಾಯಿಗಳು ಮಗಳ ಭಕ್ತಿ-ಜ್ಞಾನ, ಅನುಭಾವವನ್ನು ಕಂಡು ಸಂತಸಪಟ್ಟರು. ಗುರುಗಳಿಗೂ ಈ ವಚನವನ್ನು ತೋರಿಸಿದರು. ಮಹಾದೇವಿ ಸಾಮಾನ್ಯಳಲ್ಲ, ಮಹಾಯೋಗಿನಿಯಾಗುವಳೆಂಬುದನ್ನು ಆಕೆಯ ವಚನದಿಂದ ಗುರುಗಳು ಮನಗಂಡರು. ಗುರುಗಳ ಪ್ರೋತ್ಸಾಹದಿಂದ, ತಂದೆಯ ಅಭಿಮಾನದ ನುಡಿಗಳಿಂದ ಮಹಾದೇವಿಯ ವಚನರಚನೆ ಬೆಳೆಯುತ್ತ ನಡೆಯಿತು.

ಮಹಾದೇವಿ ಯೌವನದ ಹೊಸ್ತಿಲಲ್ಲಿ ಕಾಲಿರಿಸಿದಾಗ ಆಕೆಯ ತಂದೆತಾಯಿಗಳಿಗೆ ಮಹಾದೇವಿಗೆ ತಕ್ಕ ವರನನ್ನು ಹುಡುಕುವ ಚಿಂತೆ ತಲೆದೋರಿತು. ಅವಳ ಸೌಂದರ್ಯ ನೋಡಿದವರ ಕಣ್ಮನಗಳನ್ನು ಸೆರೆಹಿಡಿಯುತ್ತಿತ್ತು. ಹದಿನಾರು ವಯಸ್ಸಿನ ಮಹಾದೇವಿಯ ವಿಶಾಲವಾದ ಹಣೆಯಲ್ಲಿ ಭಕ್ತಿಯ ಭಾಗ್ಯದಂತೆ ತೋರುವ ವಿಭೂತಿ, ತೇಜಃಪುಂಜವಾದ ಕಣ್ಣುಗಳು, ಜ್ಞಾನದೀವಿಗೆಯಂತೆ ಹೊಳೆವ ಮುಖಮಂಡಲ ಶೋಭಿಸುತ್ತಿತ್ತು. ಎತ್ತರದ ನಿಲುವು, ನಿಲುವಿಗೆ ತಕ್ಕ ಮೈಮಾಟ, ಹಾಲ್ಗೆನ್ನೆಯ ಮೈಬಣ್ಣ ನೋಡಿದರೆ ದೃಷ್ಟಿ ತಾಕುವುದೇನೋ ಎಂದೆನಿಸುತ್ತಿತ್ತು.

ಒಂದು ದಿನ ಸಾಯಂಕಾಲ ಮಹಾದೇವಿ ಗೆಳತಿಯರೊಂದಿಗೆ ಹೊರಬಾಗಿಲಲ್ಲಿ ನಿಂತಾಗ ಆ ಊರ ದೊರೆ ಕೌಶಿಕ ವೈಹಾಳಿಯಿಂದ ತಿರುಗಿ ಅರಮನೆಗೆ ಹೊರಟಿದ್ದ. ಅಕಸ್ಮಾತ್ ಅವನ ದೃಷ್ಟಿ ಮಹಾದೇವಿಯತ್ತ ಹೊರಳಿತು. ಕುದುರೆಯ ಕಡಿವಾಣ ಹಿಡಿದ ಕೈ ಸಡಲಿತು, ಚಿತ್ತ ಚಂಚಲವಾಯಿತು, ಅವನ ಮನದಲ್ಲೆಲ್ಲ ಮಹಾದೇವಿಯ ರೂಪು ನೆಲೆನಿಂತಿತು. ಅರಮನೆಗೆ ಹೋಗಿ ವಿರಹವೇದನೆಯಿಂದ ಮಲಗಿದನು. ನಂತರ, ಮಂತ್ರಿಮಾನ್ಯರನ್ನು ಕರೆಯಿಸಿದ. ತಾನು ನೋಡಿದ ಆ ಯುವತಿಯೊಂದಿಗೆ ತನ್ನ ವಿವಾಹವಾಗಲೇಬೇಕು, ವಿವಾಹಕ್ಕೆ ಆ ಮನೆಯ ಜನ ಒಪ್ಪದಿದ್ದರೆ ಬಲವಂತದಿಂದಲಾದರೂ ಆ ಯುವತಿಯನ್ನು ಕರೆತರಬೇಕೆಂದು ಆಜ್ಞೆ ವಿಧಿಸಿದ. ತಂದೆತಾಯಿಯರಿಗೆ ತನ್ನಿಂದ ತೊಂದರೆಯಾಗಬಾರದೆಂದು ಮಹಾದೇವಿ ಕೌಶಿಕನ ಅರಮನೆಗೆ ಹೋಗುತ್ತಾಳೆ. ಕೌಶಿಕ ಲಿಂಗಧಾರಣೆಗೈದರೆ ಲಗ್ನ ವಾಗುವೆನೆನ್ನುವಳು. ಅವನು ಲಿಂಗಧಾರಣೆಗೆ ಒಪ್ಪುವುದಿಲ್ಲ. ಮಹಾದೇವಿ ತನ್ನವಳಾಗಬೇಕೆಂದು ಅಪೇಕ್ಷಿಸುತ್ತಾನೆ, ಆಗ ಮಹಾದೇವಿ ಉಟ್ಟ ಬಟ್ಟೆಯನ್ನು ತೊರೆದು ಕೈ ಹಿಡಿಯ ಬಂದ ಅರಸನನ್ನೂ, ಆತನ ರಾಜವೈಭವವನ್ನೂ ತಂದೆತಾಯಿಗಳನ್ನೂ ಬಿಟ್ಟು ಉಡುತಡಿಯಿಂದ ಹೊರಡುವಳು. ಬೇಡಿ ಬಯಸಿ ಪಡೆದ ಮಗಳು ತಮ್ಮನ್ನು ಬಿಟ್ಟು ಹೋಗುವಳೆಂದು ತಂದೆತಾಯಿಯರು ಎಷ್ಟು ದುಃಖಿಸಿದರೂ ಮಹಾದೇವಿಯ ಸಂಕಲ್ಪ ಬದಲಾಗುವುದಿಲ್ಲ. ಅರಸು ಕೌಶಿಕನ ಬಳಿ ಚತುರಂಗಬಲವಿದ್ದರೂ ಆಕೆಯ ಆತ್ಮಶಕ್ತಿ, ಸಂಕಲ್ಪಬಲದೆದುರು ಆತನೂ ಮೌನತಾಳುವನು. ತಾಯಿ ಅಳುತ್ತ ಮಗಳ ಮೈದಡವಿ ಹೇಳುವಳು : "ಮಹಾದೇವಿ! ಹೂವಿನಂತೆ ಸುಖವಾಗಿ ನಿನ್ನನ್ನು ಬೆಳೆಸಿದೆವು. ಮಳೆ, ಗಾಳಿ, ಬಿಸಿಲಿನ ಸೋಂಕು ನಿನಗಾಗಿಲ್ಲ ತಾಯಿ. ಈ ವಯಸ್ಸಿನಲ್ಲಿ ಒಬ್ಬಳೇ ಹೇಗಮ್ಮಾ ಹೋಗುವಿ ಎಲ್ಲಿಗೆ ಹೋಗುವಿ ?" ಎಂದು ಕೇಳಿದಾಗ ಮಹಾದೇವಿ ಹೇಳಿದಳು :

ಅವ್ವಾ-ಅಪ್ಪಾ, ನಾನು ಕಲ್ಯಾಣದ ಶರಣರ ಬಳಿಗೆ ಹೋಗುವೆ. ನನಗಾಗಿ ಚಿಂತಿಸಬೇಡಿರಿ, ದುಃಖಿಸಬೇಡಿರಿ, ಚೆನ್ನಮಲ್ಲಿಕಾರ್ಜುನನೇ ನನ್ನ ಪತಿಯಾಗಬೇಕೆಂಬುದು ನನ್ನ ಸಂಕಲ್ಪ. ಅದಕ್ಕಾಗಿ ನಾನು ಸಾಧನೆಗೈಯಬೇಕು, ನನ್ನ ಸಾಧನೆಗೆ ತಕ್ಕ ಸ್ಥಳ ಕಲ್ಯಾಣ ಪಟ್ಟಣ. ನಿಮಗೆಲ್ಲ ಶರಣುಶರಣಾರ್ಥಿ. ನನಗೆ "ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು. ಶಯನಕ್ಕೆ ಹಾಳುದೇಗುಲವುಂಟು ಚೆನ್ನಮಲ್ಲಿಕಾರ್ಜುನಯ್ಯ ಆತ್ಮ-ಸಂಗಾತಕ್ಕೆ ನೀನೆನಗುಂಟು" ಎಂದು ಧ್ಯಾನಸ್ಥಳಾದ ಮಗಳನ್ನು ಅಪ್ಪಿಕೊಂಡು ತಾಯಿ ಅಳುವಳು. ಶಿವಭಕ್ತನಾದ ಬೇರೊಬ್ಬ ವರನನ್ನು ಹುಡುಕಿ ಮದುವೆ ಮಾಡುವುದಾಗಿ ತಂದೆ ಹೇಳುವನು. ಅದಕ್ಕೆ ಮಹಾದೇವಿ ತಾಯಿಯ ಪಾದಕ್ಕೆರಗುತ್ತ ಹೇಳುವಳು :

ತಾಯೆ ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವಂಗಾನೊಲಿದೆನವ್ವಾ
ಎಡೆಯಿಲ್ಲದ, ತಡೆಯಿಲ್ಲದ, ಕುರುಹಿಲ್ಲದ ಚೆಲುವಂಗಾನೊಲಿದೆನವ್ವಾ

ನೀನು ಕೇಳು ತಾಯೆ, ಭವವಿಲ್ಲದ, ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವಗಂಡನೆನಗೆ ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ತಿರಸ್ಕಾರದಿಂದ ನುಡಿದು ಲಗ್ನವಾಗಲು ಬಯಸಿದ ರಾಜನನ್ನು ಬಿಟ್ಟು ಉಡುತಡಿಯಿಂದ ಕಲ್ಯಾಣಕ್ಕೆ ಹೊರಟಳು.

ಆತ್ಮೋನ್ನತಿಯ ಕೇಂದ್ರಸ್ಥಾನವಾದ ಅನುಭವಮಂಟಪದ ಕೀರ್ತಿಯನ್ನೂ, ಬಸವಾದಿ ಪ್ರಮಥರ ಹಿರಿಮೆಯನ್ನೂ ಬಾಲ್ಯದಿಂದ ಕೇಳುತ್ತಿದ್ದ ಮಹಾದೇವಿ, ಬಸವಣ್ಣನವರನ್ನು ನೆನೆಯುತ್ತ ಕಲ್ಯಾಣದತ್ತ ಹೊರಟ ಮಹಾದೇವಿ ಮಾರ್ಗದಲ್ಲಿ ಅನೇಕ ಬಗೆಯ ಎಡರುತೊಡರುಗಳನ್ನೆದುರಿಸಬೇಕಾಯಿತು. ಒಬ್ಬಳೇ ಹೊರಟ ತರುಣಿ ಸೌಂದರ್ಯವತಿ ಮಹಾದೇವಿಯನ್ನು ಕಂಡು, ಮೋಹಗೊಂಡು ಹಿಂಬಾಲಿಸಿದ ಕಾಮುಕರಿಗೆ ಲೆಕ್ಕವಿಲ್ಲ. ಅರಣ್ಯದಲ್ಲಿ ಹೊರಟಾಗ ಖಗಮೃಗಗಳ ಉಪಟಳ ಉಂಟಾಯಿತು. ಇದಾವುದನ್ನೂ ಲೆಕ್ಕಿಸದೆ ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ, ಅವನನ್ನು ಕಾಣುವುದೇ ನನ್ನ ಜೀವನದ ಗುರಿ. ಅದಕ್ಕಾಗಿ ಕಲ್ಯಾಣಕ್ಕೆ ಹೋಗಿ ಬಸವಾದಿ ಪ್ರಮಥರ ಸನ್ನಿಧಿಯಲ್ಲಿ ಸಾಧನೆಗೈಯಬೇಕೆಂದು ಆಳಿಸಿ ಬಿಸಿಲು, ಮಳೆಗಳನ್ನು ಲೆಕ್ಕಿಸದೆ ದೇವರ ಧ್ಯಾನಮಾಡುತ್ತ ಸಾಗಿದ್ದಳು. ಅವಳ ಆತ್ಮಶಕ್ತಿಯ ಬಲದೆದುರು ಕಾಮುಕರು ಕಾಡುಮೃಗಗಳು ಅವಳನ್ನು ಸ್ಪರ್ಶಿಸಲು ಅಂಜಿ ಹಿಂದೆ ಸರಿದವು. ಆಗ ಅಕ್ಕ ಧೈರ್ಯ ಸ್ಥೈರ್ಯದ ಮೂರ್ತಿಯಾದಳು.

## ಧೈರ್ಯ ಸ್ಥೈರ್ಯದ ಮೂರ್ತಿ

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯಾ
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆಱೆಗಳಿಗಂಜಿದೊಡೆಂತಯ್ಯಾ
ಸಂತೆಯೊಳಗೊಂದು ಮನೆಯಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯಾ
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

ಎಂಬ ವಚನ ಮಹಾದೇವಿಯ ಮನದಾಳದಿಂದ ಹೊರಹೊಮ್ಮಿತು. ಅವಳ ಅಂತರಂಗದ ನಿಲುವನ್ನರಿಯದವರು ಹಲವಾರು ಬಗೆಯ ಮಾತುಗಳನ್ನಾಡಿದರು. ಹೆಣ್ಣಾಗಿ ಹುಟ್ಟಿದ ಮೇಲೆ ಮದುವೆ ಬೇಡವೆಂದರೇನು ? ತಂದೆತಾಯಿಗಳನ್ನು, ಕೈಹಿಡಿಯಬಂದ ಅರಸನನ್ನು ಬಿಟ್ಟು ಹೊರಟ ಈ ಯುವತಿಯ ನೋಡಿರಿ ಎಂದು ಟೀಕಿಸುವವರ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಮಲ್ಲಿಕಾರ್ಜುನನ ಧ್ಯಾನಮಾಡುತ್ತ ಮಹಾದೇವಿ ಸಾಗಿದ್ದಳು.

## ಅಹಿಂಸೆಯ ಪ್ರತಿಪಾದಕಳು

ಒಂದು ದಿನ ಮಧ್ಯಾಹ್ನ ಒಂದು ಸುಂದರವಾದ ಸರೋವರದ ಬಳಿ ವಿಶ್ರಾಂತಿ ಪಡೆಯುತಿದ್ದಳು. ಲಿಂಗಪೂಜೆ ಮುಗಿಸಿಕೊಂಡು, ಮಾರ್ಗದಲ್ಲೆ ದೊರೆತ ಪ್ರಸಾದವನ್ನು ಲಿಂಗಕ್ಕೆ ನೈವೇದ್ಯ ಮಾಡಿ. ಪ್ರಸಾದ ಸೇವಿಸಿ. ಸರೋವರದ ತೆರೆಗಳನ್ನು ನೋಡುತ್ತ ಆನಂದದಿಂದ ಕುಳಿತಿದ್ದಳು. ಆಗ ದೂರದಲ್ಲಿ ಅಳುವ ಧ್ವನಿ ಕೇಳಿಬರಲಾರಂಭಿಸಿತು. ಆ ದುಃಖದ ಆರ್ತನಾದ ಹೆಚ್ಚಾದಾಗ ಮಹಾದೇವಿಯ ಹೆಣ್ಣುಹೃದಯ ಕರಗಿತು. ಪಾಪ ಯಾರೋ ದುಃಖಿತರಾಗಿದ್ದಾರೆ ಎಂದು ಎದ್ದುಹೋಗಿ ನೋಡಿದಳು. ಆಗ ಜಾಲಗಾರನೊಬ್ಬ ತನ್ನ ಮಗು ನೀರಿನಲ್ಲಿ ಮುಳುಗಿ ಮರಣಹೊಂದಿದ್ದುದನ್ನು ಕಂಡು ದುಃಖಿತಪ್ಪನಾಗಿ ಮಗುವಿನ ಶವವನ್ನಪ್ಪಿ ದುಃಖಿಸುತ್ತಿದ್ದ. ಅವನ ಬಳಿ ಜಾಳಿಗೆಯಲ್ಲಿ ಬಣ್ಣಬಣ್ಣದ ಮೀನುಗಳು ಒದ್ದಾಡುತ್ತಿದ್ದುವು. ಮಹಾದೇವಿಗೆ ದುಃಖಿಸುವ ಜಾಲಗರನನ್ನು ಕಂಡು ಕೆಡುಕೆನಿಸಿತು.ಅವನ ಬಳಿಯಲ್ಲಿದ್ದ ಜಾಳಿಗೆಯಲ್ಲಿಯ ಮೀನುಗಳು ಒದ್ದಾಡುವುದನ್ನು ಕಂಡು ಮಹಾದೇವಿಯ ಮನ ಕರಗಿತು. ಸರೋವರದಲ್ಲಿ ನಲಿದಾಡುತ್ತಿರುವ ಸಾವಿರಾರು ಮೀನುಗಳನ್ನು ಈ ಜಾಲಗಾರ ನಿತ್ಯ ಒಯ್ದು ಮಾರುತ್ತಾನೆ, ಅವುಗಳ ನಾಶಕ್ಕೆ ಕಾರಣನಾಗುತ್ತಾನೆ. ಇವನು ಅವುಗಳಿಗಾಗಿ ಅನುಕಂಪ ತೋರುವುದಿಲ್ಲ. ತನ್ನ ಮಗನೊಬ್ಬ ಸತ್ತುದನ್ನು ಕಂಡು ರೋದಿಸುತ್ತಿದ್ದಾನಲ್ಲ ಎಂದುಕೊಂಡು ಆ ಜಾಲಗಾರನ ಬಳಿ ಹೋಗಿ ಹೇಳುತ್ತಾಳೆ—ಅಣ್ಣಾ,

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ,
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕೇಕೆ ಮಱುಗ
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ
ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವ ಹಿಂಸೆಯ ಮಾಡುವ ಮಾದಿಗರನೇನೆಂಬೆ

ಛೀಃ ಅಣ್ಣ ಇದೇನು ನಿನ್ನ ಕೆಲಸ ನಿತ್ಯ ಸಾವಿರಾರು ಜೀವಿಗಳ ಜೀವ ತೆಗೆಯುವ ನೀನು ಒಂದು ಜೀವಕ್ಕಾಗಿ ಇಷ್ಟು ದುಃಖಿಸುವುದೆ ನೋಡು ಆ ಮೀನುಗಳ ಒದ್ದಾಟ ಎಂದು ಮಹಾದೇವಿ ಅಂತಃಕರುಣೆಯಿಂದ ಹೇಳಿದಾಗ ಜಾಲಗಾರನ ಹೃದಯ ಪರಿವರ್ತನೆಗೊಂಡಿತು.

ತಾಯಿ, ಸಾಕ್ಷಾತ್ ಪಾರ್ವತೀದೇವಿಯಂತಿರುವ ನಿನ್ನ ಮಾತು ಸತ್ಯ. ಈ ಮೀನುಗಳನ್ನೆಲ್ಲ ನೀರಿಗೆಸೆಯುವೆ, ನನ್ನ ಮಗನ ಆತ್ಮಕ್ಕಾದರೂ ಶಾಂತಿ ದೊರೆಯಲಿ ಎಂದು ಮೀನುಗಾರ ಜಾಳಿಗೆಯಲ್ಲಿಯ ಮೀನುಗಳನ್ನೆಲ್ಲ ಸರೋವರಕ್ಕೆ

ಹಾಕಿ, ಮಗನ ಶವಸಂಸ್ಕಾರದ ವ್ಯವಸ್ಥೆಗೆ ಹೋದ. ಸ್ಮಶಾನ ವೈರಾಗ್ಯದಿಂದ ನೊಂದ ಜಾಲಗಾರನ ಮನದಲ್ಲಿ ಮಹಾದೇವಿ ಹೇಳಿದ ಅಹಿಂಸಾಮಂತ್ರ ನೆಲೆಗೊಂಡಿತು. ಆತ ಮೀನು ಹಿಡಿಯುವ ಕೆಲಸ ಬಿಟ್ಟನು.

### ತಾರ್ಕಿಕಳು

ದಾರಿ ಸಾಗಿದಂತೆ ಮಾರ್ಗದಲ್ಲಿ ಹಣ್ಣಿನ ತೋಟ, ಬತ್ತದ ಗದ್ದೆ, ತೆಂಗಿನ, ಕಬ್ಬಿನ ತೋಟಗಳು, ಮರುಗ. ಮಲ್ಲಿಗೆಯ ತೋಟಗಳನ್ನು ಕಂಡು ದೇವರ ಸೃಷ್ಟಿಯ ಹಿರಿಮೆಯ ಅರಿವು ಅವಳ ಮನವನ್ನರಳಿಸಿತು. ಸೃಷ್ಟಿಯ ಸೊಬಗು ವೈವಿಧ್ಯಗಳಿಗೆ ಮೂಲ ದೇವರೆ ಅಲ್ಲವೇ! ಎಂಬ ತರ್ಕಸರಣಿ ತೋಟಪಟ್ಟಿಗಳನ್ನು ನೋಡಿದಂತೆ ಬೆಳೆಯತೊಡಗಿತು.

ಈಳೆ ನಿಂಬೆ ಮಾವು ಮಾದಳಕ್ಕೆ
ಹುಳಿನೀರನೆಱೆದರಾರಯ್ಯ
ಕಬ್ಬು, ಬಾಳೆ, ಹಲಸು, ನಾರಿಕೇಳಕ್ಕೆ
ಸಿಹಿನೀರನೆಱೆದವರಾರಯ್ಯ
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರು ಆರಯ್ಯ
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕ ಪರಿಮಳದುದಕವನೆಱೆದವರಾರಯ್ಯಾ
ಇಂತೀ ಜಲವು ಒಂದೇ, ನೆಲವು ಒಂದೇ, ಆಕಾಶವು ಒಂದೇ,
ಒಂದೇ ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾದಂತೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದರೇನು ತನ್ನ ಪರಿ ಬೇರೆ

ಎಂದು ದೇವರ ಹಿರಿಮೆಯನ್ನು ನೆನೆಯುತ್ತಿದ್ದಳು. ಚೆನ್ನಮಲ್ಲಿಕಾರ್ಜುನನ ಶಕ್ತಿ ಒಂದೆಯಾದರೂ ವಿವಿಧ ಲೋಕಗಳಲ್ಲಿ, ವಿವಿಧ ಹೆಸರಿನಿಂದ ಮೆರೆಯುತ್ತಿದ್ದಾನೆ, ವಿವಿಧ ಧರ್ಮಗಳಲ್ಲಿ ಆತನ ಹೆಸರು ಬೇರೆಬೇರೆಯಾದರೂ ಆತನೊಬ್ಬನೇ ಎಂಬ ಶ್ರದ್ಧೆ ಹೆಚ್ಚುತ್ತ ಮಹಾದೇವಿ ಕಲ್ಯಾಣದ ಸನಿಹಕ್ಕೆ ಬಂದಂತೆ ಕಲ್ಯಾಣಕ್ಕೆ ಹೋಗುವವರ, ಬರುವವರ ಬಾಯಿಂದ ಬಸವಾದಿ ಪ್ರಮಥರ ಗುಣವರ್ಣನೆ ಕೇಳಿಬರುತ್ತಿತ್ತು. ತನ್ನ ಸೌಂದರ್ಯಕ್ಕೆ ಮೋಹಿಸಿದ ಕೌಶಿಕನಿಂದ ಬಿಡುಗಡೆಹೊಂದಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸುತ್ತ ತಾನು ಹೊರಟಿದ್ದು ಸಾರ್ಥಕವೆನಿಸಿತು.

ನಡೆಶುದ್ಧ, ನುಡಿಶುದ್ಧ, ತನುಶುದ್ಧ, ಮನಶುದ್ಧ
ಭಾವ ಶುದ್ಧವಾಗಿ ಈ ಮರ್ತ್ಯದಲ್ಲಿ ನಿಂದ
ನಿಜಶರಣರ ತೋರಿ ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಯ್ಯ

ಎಂದು ಶರಣರ ದರುಶನಕ್ಕೆ ಕಾತರಳಾಗಿ ಹೊರಟಳು ಮಹಾದೇವಿ. ಚೆನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂಬ ಸಂಕಲ್ಪ ಸಿದ್ಧಿಸಬೇಕು. ಅದಕ್ಕಾಗಿ ಹಗಲಿರುಳು ಸಾಧನೆ ಗೈಯ್ಯಬೇಕು. ಶರಣರ ಸಹವಾಸದಿಂದ ಸತ್ಸಂಗದಿಂದ ಚೆನ್ನಮಲ್ಲಿಕಾರ್ಜುನನನ್ನು ಕಾಣಬೇಕೆಂಬ ಹಂಬಲ ಹೆಚ್ಚಾಯಿತು. ಆತನನ್ನು ಕಾಣದಿದ್ದರೆ ಇಷ್ಟು ದಿನ ತಾನು ಪಡೆದ ಜ್ಞಾನ, ಮಾಡಿದ ಸಾಧನೆ ವ್ಯರ್ಥ ಎಂಬ ಭಾವನೆ ಬಂದಾಗ ಈ ವಚನ ಹೊರಹೊಮ್ಮಿತು.

### ತತ್ವಜ್ಞಾನಿ

ಮರವಿದ್ದು ಫಲವೇನು ? ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ? ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ? ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ? ಗುಣವಿಲ್ಲದನ್ನಕ್ಕ
ಅಲಗಿದ್ದು ಫಲವೇನು ? ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ? ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ.

ಸಾಧಕಳಾದ ಮಹಾದೇವಿಯ ಅಂತರಂಗದಲ್ಲಿ ಬೆಳವಣಿಗೆ ಭರದಿಂದ ಸಾಗಿತ್ತು. ಉಡುತಡಿಯಲ್ಲಿ ಅವಳು ಅಭ್ಯಾಸ ಮಾಡಿದ ಕನ್ನಡ, ಸಂಸ್ಕೃತ ಕಾವ್ಯಪುರಾಣಗಳು, ಶರಣರ ವಚನಗಳು ಅವಳ ಮನಕ್ಕೆ ಸಂಸ್ಕಾರ ನೀಡಿದ್ದುವು. ಉಡು

ತಡಿಯಿಂದ ಕಲ್ಯಾಣ ತಲುಪುವಷ್ಟರಲ್ಲಿ ಆಕೆ ಪಡೆದ ಲೌಕಿಕ ಆಧ್ಯಾತ್ಮಿಕ ಅನುಭವಗಳಿಂದ ತತ್ವಜ್ಞಾನಿಯಾಗಿದ್ದಳು, ಮಹಾದೇವಿ ಕಲ್ಯಾಣಕ್ಕೆ ಬಂದಳು. ಬಸವಣ್ಣನವರ ಭಕ್ತಿ ಹಾಗೂ ಆತ್ಮಶಕ್ತಿಯ ಪ್ರಭಾವದಿಂದ ಕಲ್ಯಾಣ ಪಟ್ಟಣ ಸತ್ಯನಿಷ್ಠರೂ, ಸಾತ್ವಿಕರೂ, ನಿತ್ಯರೂ ಆದ ಶರಣರಿಂದ ತುಂಬಿತ್ತು. ಕೈಲಾಸವೇ ಕಲ್ಯಾಣಕ್ಕೆ ಇಳಿದು ಬಂದಂತಿತ್ತು. ಸತ್ಯದ ಸಾಗರ, ಮುಕ್ತಿಯ ತವರ್ಮನೆಯಾದ ಕಲ್ಯಾಣವನ್ನು ಕಂಡು ಮಹಾದೇವಿಯಲ್ಲಿ ಧನ್ಯತೆಯ ಭಾವ ಮೂಡಿ ನಿಂತಿತು.

ಕಲ್ಯಾಣವೆಂಬುದಿನ್ನಾರಿಗೂ ಹೊಗಬಾರದು
ಆಸೆ ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು
ಒಳಹೊರಗು ಶುದ್ಧವಾದವಂಗಲ್ಲದೆ ಕಲ್ಯಾಣವ ಹೊಗಬಾರದು

ಎಂದು ಧ್ಯಾನಸ್ಥಳಾಗಿ ಕಲ್ಯಾಣದ ಕೋಟೆಯ ಬಾಗಿಲಿಗೆ ಬಂದು ನಿಂತಳು. ಮಹಾದೇವಿಯ ವೈರಾಗ್ಯದ ಕಥೆ ಈ ಮೊದಲೆ ಮಹಾಮನೆಯ ಶರಣರಿಗೆಲ್ಲಾ ಗೊತ್ತಾಗಿತ್ತು. ಮಹಾದೇವಿ ಕಲ್ಯಾಣ ತಲುಪಿದ ಸಮಾಚಾರ ತಿಳಿದೊಡನೆ ಬಸವಣ್ಣನವರು ಮಹಾದೇವಿಯನ್ನು ಕರೆತರಲು ಗಂಗಾಂಬಿಕೆ, ಹಾಗೂ ಕಿನ್ನರಿ ಬ್ರಹ್ಮಯ್ಯನವರನ್ನು ಕಳುಹಿಸಿದರು. ಕಾಲ್ನಡಿಗೆಯಿಂದಲೇ ಉಡುತಡಿಯಿಂದ ಕಲ್ಯಾಣದವರೆಗೆ ಬಂದ ಮಹಾದೇವಿಯನ್ನು ಗಂಗಾಂಬಿಕೆ ಆದರದಿಂದ ಬರಮಾಡಿಕೊಂಡು ಮಹಾಮನೆಗೆ ಕರೆದೊಯ್ದಳು. ನೀಲಾಂಬಿಕೆ. ನಾಗಲಾಂಬಿಕೆಯರು ಅಂತಃಕರುಣೆಯ ಆತಿಥ್ಯ ಮಾಡಿದರು. ಸ್ನಾನ, ಪೂಜೆ, ಪ್ರಸಾದವಾದೊಡನೆ ಮಹಾದೇವಿ ಬಸವಣ್ಣನವರ ದರ್ಶನ ಪಡೆದಳು. ಅವಳ ಬಹು ದಿನದ ಆಸೆ ಇಂದು ಕೈಗೂಡಿತ್ತು. ಆನಂದಪರವಶಳಾಗಿ

ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯ
ಅಯ್ಯಾ ನಿಮ್ಮ ಶರಣರು ಇದ್ದ ಪುರವೆ ಕೈಲಾಸವಯ್ಯಾ
ಅಯ್ಯಾ ನಿಮ್ಮ ಶರಣರು ನಿಂದುದೇ ನಿಜನಿವಾಸವಯ್ಯಾ
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ
ಅವಿಮುಕ್ತ ಕ್ಷೇತ್ರ ಆನು ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಎನ್ನುತ್ತ ಬಸವಣ್ಣನವರಿಗೆ ನಮಸ್ಕರಿಸುತ್ತಾಳೆ. ಬಸವಣ್ಣನವರು ಮಹಾದೇವಿಯ ಭಕ್ತಿವೈರಾಗ್ಯಗಳನ್ನು ಕಂಡು 'ತಾಯಿ ಮಹಾದೇವಿ ಈ ಮಹಾಮನೆಯ ಮಗಳಾಗಿ ನಿಶ್ಚಿಂತೆಯಿಂದ ಬಾಳಮ್ಮ' ಎಂದು ಹರಸಿದರು. ಸಾಯಂಕಾಲ ಮಹಾದೇವಿ ಮಹಾಮನೆಯ ಶರಣ-ಶರಣೆಯರ ಸಮೂಹದೊಂದಿಗೆ ಅನುಭವಮಂಟಪಕ್ಕೆ ಹೋದಳು. ಶೂನ್ಯ ಸಿಂಹಾಸನಾಧಿಪತಿ ಪ್ರಭುದೇವರ ಪಾದಕ್ಕೆರಗಿದಳು. ಬಸವಣ್ಣನವರು ಅಲ್ಲಿನ ಶರಣ-ಶರಣೆಯರಿಗೆ ಆಕೆಯ ಪರಿಚಯ ಮಾಡಿಕೊಟ್ಟರು. ಪ್ರಭುದೇವರಿಗೆ ಮಹಾದೇವಿಯನ್ನು ಕಂಡೊಡನೆ ಆಕೆಯ ಹಿರಿಯ ಚೇತನದ ಅರಿವಾಯಿತು. ಪ್ರತಿಯೊಬ್ಬರನ್ನೂ ಒರೆಗಲ್ಲಿಗೆ ಹಚ್ಚಿ ಆ ಚಿನ್ನ ಚೊಕ್ಕ ಚಿನ್ನ ಎಂಬುದನ್ನು ಎಲ್ಲ ಶರಣರಿಗೆ ಪ್ರಭುದೇವರು ತೋರಿಸಿ ಕೊಡುತ್ತಿದ್ದರು. ಸಿದ್ಧರಾಮೇಶ್ವರ. ಬಸವೇಶ್ವರರ ಭಕ್ತಿ. ಶ್ರದ್ಧೆಗಳನ್ನು ಪರೀಕ್ಷಿಸಿದಂತೆ ಈಗ ಮಹಾದೇವಿಯ ಪರೀಕ್ಷೆಗೆ ತೊಡಗಿದರು.

ಉದಮದದ ಯೌವನವನೊಳಕೊಂಡ ಸತಿ
ಇತ್ತಲೇಕೆ ಬಂದೆಯವ್ವಾ । ಸತಿ ಎಂದರೆ ಮುನಿವರು
ನಮ್ಮ ಶರಣರು, ನಿನ್ನ ಪತಿಯ ಕುರುಹು ಹೇಳಿದರೆ
ಬಂದು ಕುಳ್ಳಿರು । ಇಲ್ಲದಿರೆ ತೊಲಗು ತಾಯೆ

ಎಂದು ಪ್ರಭುದೇವರು ಕೇಳಿದಾಗ ಮಹಾದೇವಿಗೆ ಒಂದು ಕ್ಷಣ ದಿಗಿಲಾಯಿತು. ಈ ಶರಣರಸಮೂಹವನ್ನು ಕಾಣಲೆಂದು ಕಷ್ಟಪಟ್ಟು ಇಲ್ಲಿಯವರೆಗೆ ಬಂದರೆ ಇಂಥ ಪರೀಕ್ಷೆಯೆ. ಎಲ್ಲ ಆ ಚೆನ್ನಮಲ್ಲಿಕಾರ್ಜುನನ ಇಚ್ಛೇ ಎಂದುಕೊಂಡು ಆತ್ಮವಿಶ್ವಾಸದಿಂದ ಕೆಚ್ಚಿನಿಂದ ಉತ್ತರಿಸಿದಳು.

ಹಚ್ಚೆಯ ಉದ ನೆಲೆಗಟ್ಟು, ಕನಕದ ತೋರಣ
ವಜ್ರದ ಕಂಭ, ಪವಳಧ ಚಪ್ಪರವನಿಕ್ಕಿ, ಮುತ್ತುಮಾಣಿಕದ
ಮೇಲುಕಟ್ಟು ಕಟ್ಟಿ, ಮದುವೆಯ ಮಾಡಿದರು ಎಮ್ಮವರೆನ್ನ
ಮದುವೆಯ ಮಾಡಿದರು ಕಂಕಣ ಕೈಧಾರೆ, ಸ್ಥಿರ ಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಮಹಾದೇವಿಯ ಈ ದಿಟ್ಟತನದ, ಜಾಣ್ಮೆಯ ಉತ್ತರ ಕೇಳಿ ಶರಣೆಯರೆಲ್ಲ ಅಭಿಮಾನದಿಂದ ತಲೆದೂಗಿದರು. ಮಹಾದೇವಿ ಕೌಶಿಕನೊಂದಿಗೆ ಬಾಳಲು ಒಪ್ಪದೆ ಕಲ್ಯಾಣಕ್ಕೆ ಬಂದ ಸಂಗತಿ ಪ್ರಭುದೇವರಾದಿಯಾಗಿ ಎಲ್ಲ ಶರಣ ಶರಣೆಯರಿಗೆ ಗೊತ್ತಿದ್ದರೂ ಸಹ ಪ್ರಭುದೇವರು ಈ ರೀತಿ ಪ್ರಶ್ನೆ ಕೇಳಿದಾಗ ಬಸವಣ್ಣನವರ ಮೃದು ಮನ ನೊಂದಿತು. ಮಹಾದೇವಿಯ ಉತ್ತರದಿಂದ ಉಲ್ಲಸಿತವಾಯಿತು.

ಪ್ರಭುದೇವರು ನಾನಾ ಬಗೆಯಾಗಿ ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. ಮಹಾದೇವಿ ಎಲ್ಲದಕ್ಕೂ ಸಮರ್ಪಕ ಉತ್ತರ ಕೊಡುತ್ತಾಳೆ. ಕೊನೆಗೆ ಹೇಳಿದ್ದಾಳೆ :

ಚಂದನವ ಕಡಿದು ಕೊರೆದು ತೇದಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ ?
ತಂದು ಸುವರ್ಣವ ಕಡಿದೊರೆದೊಡೆ, ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದ ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದೆಡೆ ಬೆಂದು ಪಾಕಗೊಳ
ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ ?
ನಾ ಹಿಂದೆ ಮಾಡಿದ ಹೀನಂಗಳನೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ
ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ ಕೊಂದಡೆ ಶರಣೆಂಬುವ ಮಾಣೆ

ಮಹಾದೇವಿಯ ಈ ಉತ್ತರದಿಂದ ಪ್ರಭುದೇವರು ಪ್ರಸನ್ನರಾದರು. ಅಲ್ಲಿ ಕುಳಿತ ಶರಣ-ಶರಣೆಯರೆಲ್ಲ ಅಚ್ಚರಿಗೊಂಡರು. ಮಹಾದೇವಿ ಇಷ್ಟು ಚಿಕ್ಕವಯಸ್ಸಿನಲ್ಲಿ ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಗೆದ್ದಿದ್ದಾಳೆ. ವಯಸ್ಸಿಗೆ ಮೀರಿದ ಜ್ಞಾನ ವೈರಾಗ್ಯಗಳನ್ನು ಸಂಪಾದಿಸಿದ್ದಾಳೆ. ಈಕೆ ವಯಸ್ಸಿನಲ್ಲಿ ಚಿಕ್ಕವಳಾದರೂ ನಮ್ಮೆಲ್ಲರಿಗೆ ಅಕ್ಕ ಎಂದುಕೊಂಡರು. ಅವಳ ಅನುಭಾವ ವಾಣಿಯನ್ನು ಕೇಳಿ ಶರಣ ಸಮೂಹ ಶರಣು ಶರಣೆಂದಿತು.

ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆ ಆಗಿ ಗೊಹೇಶ್ವರ ಲಿಂಗದಲ್ಲಿ
ಸಂದಿಲ್ಲದಿಪ್ಪ ಮಹಾದೇವಿ ಅಕ್ಕನ ಶ್ರೀಪಾದಕ್ಕೆ ನಮೋ ನಮೋ

ಎಂದರು ಪ್ರಭುದೇವರು.

ಎನ್ನ ಭಕ್ತಿಯ ಶಕ್ತಿಯು ನೀನೆ
ಎನ್ನ ಯುಕ್ತಿಯ ಶಕ್ತಿಯು ನೀನೆ
ಎನ್ನ ಮುಕ್ತಿಯ ಶಕ್ತಿಯು ನೀನೆ

ಎಂದು ಬಸವಣ್ಣನವರು ಮಮತೆಯಿಂದ ಮಹಾದೇವಿಯನ್ನು ಕೊಂಡಾಡಿದರು.

ಅಜಕೋಟಿ ವರುಷದವರೆಲ್ಲರೂ ಹಿರಿಯರೇ

...................................................
ಒಂದನಾಡ ಹೋಗಿ ಒಂಭತ್ತನಾಡುವವರೆಲ್ಲ ಹಿರಿಯರೆ
ಅರಿವರನರಿದು, ಹಿರಿದು ಕಿರಿದೆಂಬುದನ್ನು ಮರೆತು
ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು.

ಎಂದು ಅಕ್ಕನನ್ನು ಜ್ಞಾನಸಿಧಿ ಚನ್ನಬಸವಣ್ಣ ಹೊಗಳಿದ್ದಾರೆ. ಅನುಭವಮಂಟಪದ ಶರಣರೆಲ್ಲ ಮಹಾದೇವಿಯನ್ನು ಗೌರವದಿಂದ ಅಕ್ಕಮಹಾದೇವಿ ಎಂದು ಕರೆಯುತ್ತಿದ್ದರು.

ನೀಲಾಂಬಿಕೆ, ಗಂಗಾಂಬಿಕೆಯರಿಗಂತೂ ಅಕ್ಕಮಹಾದೇವಿ ಮಮತೆಯ ಮಗಳಾದಳು. ಶಿವಯೋಗ ಸಾಧನೆ, ವಚನ ರಚನೆ, ಅನುಭವ ಮಂಟಪದ ಅನುಭಾವಗೋಷ್ಠಿಗಳಲ್ಲಿ ಭಾಗವಹಿಸುವುದು, ಮಹಾಮನೆಯ ದಾಸೋಹದ ಕಾರ್ಯದಲ್ಲಿ ನೆರವಾಗುವುದು, ಆಧ್ಯಾತ್ಮ ಜೀವನದಲ್ಲಿ ಮಾರ್ಗದರ್ಶನವನ್ನಪೇಕ್ಷಿಸಿದವರಿಗೆ ಸಹಾಯ ಸಹಕಾರಗಳ ನೀಡುವುದು, ಮಹಾದೇವಿಯ ಅಚ್ಚುಮೆಚ್ಚಿನ ಕೆಲಸವಾಗಿತ್ತು.

## ಅನುಭಾವಿ

"ಅವ್ವ ನೀಲವ್ವನ ಮೋಹದ ಮಗಳಾಗಿ, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿಯಾಗಿ ನಿಃಕಳಂಕ ಪ್ರಭುದೇವರ ಸೊಸೆಯಾಗಿ, ಚೆನ್ನಮಲ್ಲಿಕಾರ್ಜುನನ ಅರ್ಧಾಂಗಿಯಾಗಿ ಬಾಳಿದಳು." ಮಹಾದೇವಿ ತತ್ವಜ್ಞಾನಿಯಾಗಿ ಕಲ್ಯಾಣಕ್ಕೆ

ಬಂದವಳು ಶರಣರ ಸಹವಾಸದಲ್ಲಿ, ಶಿವಯೋಗ ಸಾಧನೆಯಿಂದ ಅನುಭಾವಿಯಾದಳು. ಮೊದಲಿನ ತರ್ಕಭಾವ ಮಾಯುವಾಗಿ ಮನ ನಿಃಶಬ್ದವಾಯಿತು, ಸದಾ ಚೆನ್ನಮಲ್ಲಿಕಾರ್ಜುನನ ಧ್ಯಾನದಲ್ಲಿ ಮಗ್ನಳಾಗುತ್ತಿದ್ದಳು.

ಸಜ್ಜನಳಾಗಿ ಮಜ್ಜನಕ್ಕೆರೆಯುವೆ
ಶಾಂತಳಾಗಿ ಪೂಜೆಯ ಮಾಡುವೆ
ಸಮರತಿಯಿಂದ ನಿಮ್ಮ ಹಾಡುವೆ
ಚನ್ನಮಲ್ಲಿಕಾರ್ಜುನಯ್ಯ ನಿಮ್ಮನಗಲದ
ಪೂಜೆ ಅನುವಾಯಿತ್ತೆನಗೆ

ಲಿಂಗಾಂಗಸಾಮರಸ್ಯಭಾವದಲ್ಲಿ ಮಹಾದೇವಿ ಮಗ್ನಳಾದಳು. ಆಗ ಆಕೆಯು ಕನಸಿನಲ್ಲಿ, ಮನಸಿನಲ್ಲಿ, ನೆನಹಿನಲ್ಲಿ ಸದಾ ಚನ್ನಮಲ್ಲಿಕಾರ್ಜುನ ಕಾಣುತ್ತಿದ್ದ, ಕೈಮಾಡಿ ಶ್ರೀಶೈಲಕ್ಕೆ ಕರೆಯುತ್ತಿದ್ದ.

ಅಕ್ಕ ಕೇಳವ್ವ, ಅಕ್ಕಯ್ಯ ಕೇಳವ್ವ ನಾನೊಂದು ಕನಸ ಕಂಡೆ
ಅಕ್ಕಿ, ಅಡಕೆ, ಓಲೆ, ತೆಂಗಿನಕಾಯಿ ಕಂಡೆ. ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ, ಮಿಕ್ಕು ಮೀರಿ ಹೋಹನ
ಬೆಂಬತ್ತಿ ಕೈವಿಡಿದೆನು, ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು

ಒಂದು ದಿನ ರಾತ್ರಿ ಈ ಕನಸನ್ನು ಕಂಡ ಅಕ್ಕಮಹಾದೇವಿ ಶ್ರೀಶೈಲಕ್ಕೆ ಹೋಗುವ ನಿರ್ಧಾರಗೈದಳು. ತಾಯೆ ನೀಲಾಂಬಿಕೆ ಇದುವರೆಗೆ ನಿಮ್ಮ ಬಳಿ ತೌರುಸುಖವನ್ನನುಭವಿಸಿದೆ. ನಾನು ಶ್ರೀಶೈಲಕ್ಕೆ ಹೋಗಬೇಕೆಂಬ ಆದೇಶ ಪ್ರಭುದೇವರಿಂದ ಹಿಂದೊಮ್ಮೆ ಬಂದಿತ್ತು. ಈಗ ಅಂತರಂಗದ ಕರೆ ದಿನದಿನಕ್ಕೂ ಬಲವತ್ತರವಾಗುತ್ತಿದೆ. ಈ ಕನಸು ಕಂಡ ಮೇಲೆ ನಾನು ಹೊರಡಲೇಬೇಕೆಂದು ನಿರ್ಧರಿಸಿರುವೆ. ಉಡುತಡಿಯಲ್ಲಿದ್ದಾಗ ಬಾಲ್ಯದಲ್ಲಿ ಚೆನ್ನಮಲ್ಲಿಕಾರ್ಜುನನೇ ನನ್ನ ಪತಿಯೆಂಬ ಸಂಕಲ್ಪ ಮಾಡಿದ್ದೆ. ನಿಮ್ಮೆಲ್ಲರ ಅಡಿದಾವರೆಗಳಲ್ಲಿ ಸಾಧನೆಗೈದೆ. ಕಲ್ಯಾಣದವಾಸ ಫಲಪ್ರದವಾಯಿತೆಂಬುದನ್ನು ಕನಸಿನಲ್ಲಿ ಕಂಡೆ. "ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ, ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ, ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು ಅವಧರಿಸಿ" ನಾನಿನ್ನು ಶ್ರೀಶೈಲಕ್ಕೆ ಹೊರಡುತ್ತೇನೆ. ನೀವೆಲ್ಲ ಆಶೀರ್ವದಿಸಿ ಕಳುಹಿಸಿರಿ ನಿಮ್ಮ ಕೃಪೆಯಿಂದ ನನ್ನ ಸಾಧನೆ ಸಿದ್ಧಿಸಲಿ.

ಅಂಗದಲ್ಲಿ ಆಚಾರವ ತೋರಿದ
ಆಚಾರವೇ ಲಿಂಗವೆಂದರುಹಿದ
ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ
ಆ ಅರಿವ ಜಂಗಮವೆಂದು ತೋರಿದ
ಹೆತ್ತ ತಂದೆ ಸಂಗನ ಬಸವಣ್ಣನು
ಎನಗೀ ಕ್ರಮವನರುಹಿದನಯ್ಯಾ

ಈ ಕ್ರಮದಂತೆ ಬಾಳಲು ಕಲಿತಿದ್ದೇನೆ ನಿಮ್ಮ ಕೃಪೆಯು ರಕ್ಷೆ ನನಗಿದ್ದರೆ ಸಾಕು ಎಂದು ಶ್ರೀಶೈಲಕ್ಕೆ ಹೊರಡುವಳು. "ತಾಯೇ ಒಬ್ಬಳೇ ಶ್ರೀಶೈಲದ ಘೋರಾರಣ್ಯಗಳನ್ನು ಹೇಗೆ ಹತ್ತಬಲ್ಲೆ" ಎಂದು ಶರಣ-ಶರಣೆಯರು ಕೇಳಿದಾಗ. "ನಾಮದಲ್ಲಿ ಹೆಣ್ಣುರೂಪಲ್ಲದೆ ಭಾವಿಸಲು ಗಂಡುರೂಪು ನೋಡಾ" ಎಂಬ ಕೆಚ್ಚಿನಿಂದ ಆತ್ಮಶಕ್ತಿಸಂಪನ್ನಳಾದ ಅಕ್ಕಮಹಾದೇವಿ ಕಲ್ಯಾಣದಿಂದ ಶ್ರೀಶೈಲಕ್ಕೆ ಹೊರಟಳು. ಬಸವಾದಿ ಪ್ರಮಥರಿಗೆಲ್ಲ ಹೆತ್ತಮಗಳನ್ನು ಗಂಡನ ಮನೆಗೆ ಕಳುಹಿಸಿದಂತೆ ಆಯಿತು. ಅನುಭವಮಂಟಪ ಮಹಾಮನೆಯೆಲ್ಲ ಅಕ್ಕನ ನುಡಿಮುತ್ತುಗಳಿಲ್ಲದೆ ಬರಿದಾದಂತೆನಿಸಿತು.

## ಕವಿಯಿತ್ರಿ

ಕಲ್ಯಾಣದ ಪುಣ್ಯವೇ ಹೆಣ್ಣುರೂಪಾದಂತೆ ತೋರಿದಳು ಮಹಾದೇವಿ, ಅಕ್ಕನು ಕಲ್ಯಾಣದಲ್ಲಿದ್ದುದರಿಂದ ಕಲ್ಯಾಣದ ಘನತೆ ಹೆಚ್ಚಿತು. ಕಲ್ಯಾಣದ ವಾಸದಿಂದ ಅಕ್ಕನ ಬಾಳು ಕಲ್ಯಾಣಮಯವಾಯಿತು. ಆಧ್ಯಾತ್ಮಶಕ್ತಿಯಿಂದ ಅವಳ ಬಾಳು ಉಜ್ವಲವಾಯಿತು, ಜ್ಞಾನ ಬೆಳೆಯಿತು. ಮಹಾದೇವಿಯಕ್ಕನ ಮನ ಕಾವ್ಯಮಯ, ಶ್ರೀಶೈಲದ ಹಚ್ಚ

ಹಸುರಿನ ಗಿರಿಕಂದರಗಳಲ್ಲಿ ಪ್ರವಾಸ ಮಾಡುವಾಗ ರಚಿಸಿದ ವಚನಗಳು ಕಾವ್ಯಮಯವಾಗಿ ಹರಿದುವು. ಅಂತರಂಗದ ಅನುಭಾವಗೀತೆಗಳಾದುವು. ಪಾಮರರಿಗೆ ಮಹಾದೇವಿಯ ನಡೆಯೆಲ್ಲ ಪಾವನವಾಯಿತು. ನುಡಿಯೆಲ್ಲ ಕನ್ನಡತಾಯಿಗೆ ಮುತ್ತಿನಹಾರವಾಯಿತು.

ಅಳಿಸಂಕುಳವೇ ಮಾಮರವೇ ಬೆಳುದಿಂಗಳೇ ಕೋಗಿಲೆಯೆ
ನಿಮ್ಮೆಲ್ಲರನು ಬಂದು ಬೇಡುವೆನು ಎನ್ನೊಡೆಯ
ಚೆನ್ನಮಲ್ಲಿಕಾರ್ಜುನದೇವನಂ ಕಂಡರೆ ಕರೆದು ತೋರಿರೆ

ಎಂದು ಕೇಳುತ್ತ ಸಾಗುವಳು. ಶ್ರೀಗಿರಿಯ ತುಟ್ಟತುದಿಯನೇರಿದಾಗ ಮನ ಉಲ್ಲಸಿತವಾಗುವುದು, ಹೃದಯ ಆನಂದಭರಿತವಾಗುವುದು. ಎಲ್ಲೆಡೆ ದೈವೀಸ್ವರೂಪ ತೋರುವುದು.

ಮನವೆಲ್ಲ ನೀವೇ, ಮನದೊಳಗಣ ದೇವತರುವೆಲ್ಲ ನೀವೇ.
ತರುವಿನೊಳಗಾಡುವ ಖಗಮೃಗಗಳೆಲ್ಲ ನೀವೇ,
ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಮುಖದೋರಾ

ಎಂದು ಆನಂದಸಾಗರದಲ್ಲಿ ಓಲಾಡುತ್ತ ಸಾಗಿದ ಕವಿಯಿತ್ರಿ ಅಕ್ಕಮಹಾದೇವಿಯ ಮನ ಬೆಳುದಿಂಗಳ ರಾತ್ರಿಯನ್ನು ಕಂಡು ನಲಿಯುವುದು ಅಲ್ಲಿಯ ಕೊಳ್ಳದಲ್ಲಿರುವ ಗಿಡಮರಗಳೆಲ್ಲ ಬೆಳ್ಳಿಯ ರಸದಲ್ಲಿ ಅದ್ದಿದಂತಾಗಿದ್ದುವು. ರಾತ್ರಿಯೆಲ್ಲ ಆ ದಿವ್ಯಸೌಂದರ್ಯವನ್ನು ಸವಿಯುತ್ತ ತನ್ನನ್ನು ತಾನೇ ಮರೆತು ಕುಳಿತಿದ್ದಳು. ಚನ್ನಮಲ್ಲಿಕಾರ್ಜುನನ ಧ್ಯಾನದಲ್ಲಿ ಮೈಮರೆತಿದ್ದಳು. ಬೆಳಗಿನ ಝಾವದಲ್ಲಿ ಸೂರ್ಯೋದಯದ ಹೊಂಗಿರಣದ ಅಪ್ಪುಗೆಯಲ್ಲಿ ಎದುರಿಗಿನ ಸರೋವರದ ನೀರೆಲ್ಲ ಬಂಗಾರದ ಎರಕಹೊಯ್ದಂತಾಗಿತ್ತು. ಮಾರ್ಗದಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಬರುತ್ತಿರುವಾಗ ಅಳಿಸಂಕುಳವನೆಲ್ಲ ಕೇಳುತ್ತಿದ್ದಳಲ್ಲ, ಆ ಅಳಿಸಂಕುಳವೆಲ್ಲ ಸುಪ್ರಭಾತ ಹೇಳುತ್ತ ಸಂತಸದ ಗೀತೆಗಳನ್ನು ಪಾಡುತ್ತಲಿದ್ದುವು.

ಚಿಗಿತು ನಳನಳಿಸುತ್ತಿದ್ದ ಮಾಮರಗಳು ಹೊಂಬೆಳಕಿನಲ್ಲಿ ನಗು ಸೂಸುತ್ತಿದ್ದುವು. ಬೆಳುದಿಂಗಳ ಬೆಳ್ಳಿರಾಶಿಯಡಗಿ, ಹೊಂಗಿರಣದ ಹೊನ್ನ ಹರಿವಾಣವಿಡಿದು ಸೂರ್ಯದೇವ ಮೇಲೇರಿದಾಗ ಸರೋವರದಲ್ಲಾಡುವ ಹಂಸಗಳು ಗಿರಿಗಹ್ವರಗಳಿಂದ ಓಡೋಡಿ ಬಂದು, ಕುಣಿಯುವ ನವಿಲುಗಳನ್ನು ಕಂಡು ಮತ್ತೊಮ್ಮೆ ಚೆನ್ನಮಲ್ಲಿಕಾರ್ಜುನನ ಸಮಾಚಾರ ಕೇಳುತ್ತಾಳೆ. ಬೆಳಗಿನ ಪೂಜೆ, ಫಲಹಾರ ಮುಗಿಸಿ ಶ್ರೀಶೈಲದ ಶಿಖರವನ್ನೇರುತ್ತಾಳೆ.

## ಯೋಗಿಣಿ

ಮಹಾದೇವಿ ಸಾಯಂಕಾಲದ ವರೆಗೆ ನಡೆದು ಸ್ನಾನ ಮಾಡಿ ಪೂಜೆಗೆ ಕುಳಿತಳು. ದಣಿದ ದೇಹಕ್ಕೆ ಶ್ರೀಗಿರಿಯ ತಂಗಾಳಿ ಸೂಸಿದಾಗ, ಚೆನ್ನಮಲ್ಲಿಕಾರ್ಜುನ ಕೈಹಿಡಿದು ಮುನ್ನ ನಡೆಸಿದಂತಾಗುವುದು. ಮನ ನಿಃಶಬ್ದವಾಗುವುದು, ಅಂತರಂಗ ದಿವ್ಯಾನಂದವನ್ನನುಭವಿಸುವುದು. ಆ ಆನಂದದಲ್ಲಿ ಲೀನಳಾದ ಮಹಾದೇವಿಯನ್ನು ಪಕ್ಷಿ ಸಂಕುಳ "ಏಳು ತಾಯಿ ಮಹಾದೇವಿ ನೋಡು ನೋಡಿಲ್ಲಿ ನೀನರಸುತ್ತಿದ್ದ ಚೆನ್ನಮಲ್ಲಿಕಾರ್ಜುನನನ್ನು ಒಮ್ಮೆ ಕಣ್ದೆರೆದು ನೋಡು" ಎಂದು ಎಬ್ಬಿಸಿದಂತಾಯಿತು. ಕಣ್ದೆರೆದರೆ :

ಪಾತಾಳವಿತ್ತಿತ್ತ ಪಾದಂಗಳತ್ತತ್ತ,
ದಶದಿಕ್ಕು ಇತ್ತಿತ್ತ ದಶಭುಜಗಳತ್ತತ್ತ,
ಬ್ರಹ್ಮಾಂಡವಿತ್ತಿತ್ತ ಮಣಿಮಕುಟವತ್ತತ್ತ, ಚೆನ್ನಮಲ್ಲಿಕಾರ್ಜುನಯ್ಯ
ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ

ಎಂದು ಆಶ್ಚರ್ಯದಿಂದ ಇಷ್ಟಲಿಂಗವನ್ನೊಮ್ಮೆ, ಸುತ್ತಲಿನ ಸೃಷ್ಟಿಸೌಂದರ್ಯವನ್ನೊಮ್ಮೆ ನೋಡಿ ನಲಿದಳು.

ಚೆನ್ನಮಲ್ಲಿಕಾರ್ಜುನನ ದೇವಸ್ಥಾನಕ್ಕೆ ಬಂದಳು. ಹೊಸ ಮದುವಣಗಿತ್ತಿ ಗಂಡನ ಮನೆಗೆ ಬಂದ ಭಾವ ಮಹಾದೇವಿಯಕ್ಕನಲ್ಲಿ ಹೊರಸೂಸಿತು. ಪಾತಾಳಗಂಗೆಗೆ ಹೋಗಿ ಸ್ನಾನಮಾಡಿ ದೇವಸ್ಥಾನದಲ್ಲಿ ಕುಳಿತು ಲಿಂಗಪೂಜೆಯಲ್ಲಿ ಮೈಮರೆತಳು. ಬಹುದಿನಗಳಿಂದ ಕನಸಿನಲ್ಲಿ ಕಂಡ ತನ್ನ ಒಲುಮೆಯ ಚೆಲುವ ಚೆನ್ನಮಲ್ಲಿಕಾರ್ಜುನನು ಅವಳ ಭಕ್ತಿಗೆ,

ವಿರಕ್ತಿಗೆ, ನಿಷ್ಠೆಗೆ ಒಲಿದು ಬಂದನು. "ನಂಬಿ ಕರೆದೊಡೆ ಓ ಎನ್ನನೆ ಶಿವನು" ಎಂಬ ಬಸವಣ್ಣನವರ ವಚನದಂತೆ ಚೆನ್ನಮಲ್ಲಿಕಾರ್ಜುನನು ಭಕ್ತಳ ಬಳಿ ಬಂದನು—

ಹೊಳೆವ ಕೆಂಜೆಡೆಗಳ, ಮಣಿಮಕುಟದ, ಒಪ್ಪುವ ಸುಲಿಪಲ್ಗಳ
ನಗೆಮೊಗದ, ಕಂಗಳ ಕಾಂತಿಯ, ಈರೇಳು ಭುವನವ
ಬೆಳಗುವ ದಿವ್ಯಸ್ವರೂಪನ ಕಂಡೆ ನಾನು, ಕಂಡೆನ್ನ ಕಂಗಳ
ಬಱಹಿಂಗಿತ್ತೆನಗೆ ಗಂಡಗಂಡರೆಲ್ಲರ ಹೆಂಡಿರಾಗಿ ಆಳುವ ಗರುವನ
ಕಂಡೆ ನಾನು, ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ
ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

ಎಂಬ ಸಂತಸ ಸಂಭ್ರಮದಲ್ಲಿ ಕೆಲಕಾಲ ಶ್ರೀಶೈಲದಲ್ಲಿ ಕಳೆದಳು.

ಬೆಟ್ಟದ ತುದಿಯಲ್ಲಿ ಕಾಣುವ ಬಣ್ಣಬಣ್ಣದ ಹೂಗಳು ಚೆನ್ನಮಲ್ಲಿಕಾರ್ಜುನನ ನವರತ್ನದ ಕಿರೀಟದಂತೆ ತೋರಿತು. ಮಹಾದೇವಿಗೆ ಬೆಟ್ಟದ ಹಸಿರುಹುಲ್ಲು ಆತನ ಹಸಿರುಬಣ್ಣದ ಮಖಮಲ್ಲಿನ ಹೊದಿಕೆಯಂತೆನಿಸಿತು, ಬೆಟ್ಟದ ಮುಡಿಯಿಂದ ಮೇಲೇರಿ ಬಂದ ಸೂರ್ಯದೇವ ಕಿರಣಗಳು ಆತನ ಕಂಗಳಂತೆ ತೋರಿತು. ಬೆಳಗುತ್ತಿಹ ಕಾಂತಿಯಲಿ ಜಜ್ಜರಿಸಿ ತನು ಮನ ದೃಷ್ಟಿನೆಟ್ಟು ಕುಳಿತಳು.

## ಮಹಾಯೋಗಿಣಿ

ದೇವಸ್ಥಾನಕ್ಕೆ ಬರಹೋಗುವ ಜನರನ್ನು ಕಂಡಾಗಲೇ ಆಕೆಯ ಮನ ಏಕಾಂತವನ್ನು ಬಯಸಿತು. ತನ್ನ ಐಕ್ಯದ ಸ್ಥಾನದ ಬಗೆಗೆ ಪ್ರಭುದೇವರು ಹೇಳಿದ ಮಾತು ನೆನಪಾಯಿತು.

ನೀನು ನಾನೆಂಬುಭಯ ಸಂಗವಳಿದು ತಾನು ತಾನಾದ ತ್ರಿಕೂಟ
ವೆಂಬ ಮಹಾಗಿರಿಯ ಮೆಟ್ಟಿ ತುಟ್ಟತುದಿಯ ನೋಡಲು
ಬಟ್ಟಬಯಲು ಕಾಣಬಹುದು ನೋಡಾ. ಆ ಬಟ್ಟಬಯಲ
ಬೆರಸುವಡೆ ಶ್ರೀಗಿರಿಯೊಳೊಂದು ಕಾಣಬಾರದ
ಕದಳಿಯುಂಟು, ನೋಡಾ ಆ ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ ನಡೆಯಲ್ಲಿಗೆ ತಾಯೆ
ಗೊಹೇಶ್ವರನಲ್ಲಿ ಪರಮ ಪದವು ನಿನಗೆ ಸ್ವಯವಹುದು ನೋಡಾ

ಎಂಬ ಪ್ರಭುವಿನ ನುಡಿ ಮತ್ತೊಮ್ಮೆ ಕಿವಿಯಲ್ಲಿ ನಿನದಿಸಿತು. ಶ್ರೀಶೈಲದ ಆದಿವಾಸಿಗಳನ್ನು ಕೇಳುತ್ತ ಕದಳಿಯ ವನದತ್ತ ಸಾಗಿದಳು, ವೈರಾಗ್ಯದ ಸೋಪಾನವೇರುತ್ತ ಶ್ರೀಗಿರಿಗೆ ಬಂದ ಮಹಾದೇವಿಗೆ ಕದಳಿಯ ವನವನ್ನರಸುವುದು ಕಠಿಣವೆನಿಸಲಿಲ್ಲ, ಮನವಿದ್ದಲ್ಲಿ ಮಾರ್ಗ ತೋರಿತು. ತ್ರಿಕೂಟಗಿರಿಯ ಮಧ್ಯದಲ್ಲಿ ಅಬ್ಬರಿಸಿ ಹರಿವ ಕೃಷ್ಣೆಯನ್ನು ದಾಟಿ ಆಚೆಯ ತೀರಕ್ಕೆ ಹೋದರೆ ಅಲ್ಲಿ ಕದಳಿಯ ವನವುಂಟೆಂದು ಬೇಟೆಗಾರರು ಹೇಳಿದರು. ನದಿಯನ್ನು ದಾಟುವ ಬಗೆಗೆ ವಿಚಾರ ಮಾಡಿದಳು. ಒಂದೆರಡು ದಿನ ಈ ಕಡೆ ಧ್ಯಾನಸ್ಥಳಾಗಿ ಕುಳಿತಳು. ಕೊನೆಗೆ ಭವಸಾಗರವ ದಾಟಲು ಈ ನದಿಯಿಂದ ಆಚೆಗೆ ಹೋಗಬೇಕು, ಜೀವನ ನೌಕೆ ಸಾಗಬೇಕು, ಮನವೆಂಬ ಹುಟ್ಟನ್ನು ಮುಂದೆ ಮಾಡಬೇಕು ಎಂಬ ನಿರ್ಧಾರದಿಂದ ರಭಸದಿಂದ ಹರಿವ ನದಿಗೆ ಹಾರಿದಳು. ಪ್ರವಾಹಕ್ಕೆ ಎದುರಾಗಿ ಈಸಿದಳು. ಚೆನ್ನಮಲ್ಲಿಕಾರ್ಜುನನ ನೆನಹೇ ಈಸಗುಂಬಳಕಾಯಿಯಾಯಿತು. ಚೆನ್ನಮಲ್ಲಿಕಾರ್ಜುನ ಅವಳ ಕೈಹಿಡಿದು ಮುನ್ನಡೆಸಿದ. ಅಪಾರ ಜಲರಾಶಿಯಲ್ಲಿ ಈಸಿದಳು, ಜೈಸಿದಳು, ನದಿತೀರಕ್ಕೆ ಬಂದಳು, ಸುತ್ತಲೂ ಹಚ್ಚಹಸಿರು, ಆಕಾಶದೆತ್ತರದ ಮರಗಳು, ಇನ್ನೂ ಮುಂದೆ ಸಾಗಿದಾಗ ಬಾಳೆಯ ಬನ, ಬಾಳೆಯ ಬನದಲ್ಲಿ ದೊಡ್ಡ ಗುಹೆ ಕಂಡಿತು ಬಳಿಯಲ್ಲಿ ಹರಿಯುವ ನಿರ್ಝರಿ :

ವನವೆಲ್ಲ ಕಲ್ಪತರು, ಗಿಡವೆಲ್ಲ ಮಱುಜವಣೆ
ಶಿಲೆಗಳೆಲ್ಲ ಪರುಷ, ನೆಲನೆಲ್ಲ ಅವಿಮುಕ್ತ ಕ್ಷೇತ್ರ
ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪರುಷಾಮೃಗ,
ಎಡಹುವ ಹರಳೆಲ್ಲ ಚಿಂತಾಮಣಿ, ಚೆನ್ನಮಲ್ಲಿಕಾರ್ಜುನಯ್ಯನ
ಮೆಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ
ಬನವ ಕಂಡೆ ನಾನು

ಮಹಾದೇವಿಯ ಮನ ಉಲ್ಲಸಿತವಾಯಿತು, ಹೃದಯ ನಲಿಯಿತು. ಆತ್ಮ ಸಂತೃಪ್ತವಾಯಿತು. ಈ ಗುಹೆ ಶಯನಾಗೃಹವಾಯಿತು. ಪ್ರಭುದೇವರು ಹೇಳಿದ ಕದಳಿಯ ಬನ ಇದೇ ಎಂದುಸುರಿತು ಅಂತರಂಗ. ಬಳಿಯ ನಿರ್ಝರಿಯಲ್ಲಿ ಸ್ನಾನ ಮಾಡಿದಳು ಗುಹೆಯೊಳಗೆ ಪ್ರವೇಶಿಸಿದಳು. ಈ ಬಾಹ್ಯಗುಹೆ ಮಾತ್ರ ಗುಹೆಯಲ್ಲ ವನವಲ್ಲ.

ಕದಳಿ ಎಂಬುದು ತನು.
ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಂಗಳು
ಕದಳಿ ಎಂಬುದು ಭವಘೋರಾರಣ್ಯ
ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು ಕರುಣದಿಂ ತೆಗೆದು
ಬಿಗಿದಪ್ಪಿದಡೆ ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು

ಅಕ್ಕಮಹಾದೇವಿ ತನು, ಮನ, ಭಾವಗಳನ್ನೆಲ್ಲ ಚೆನ್ನಮಲ್ಲಿಕಾರ್ಜುನನ ಪದತಲಕ್ಕರ್ಪಿಸಿದಳು.

ಒಂಭತ್ತು ವೆಜ್ಜದಾ ಇಂಬುಗಳ ಒಲಿವುತ್ತ
ತುಂಬಿ ಸುಷುಮ್ನೆಯೊಳು ಘನವ ನೋಡಲ್ಕೆ
ಕುಂಭದೊಳಮೃತವ ಸುರಿಯುವುದು
ಸಹಸ್ರಾರವರಳುವುದು

ಆ ಚೆನ್ನಮಲ್ಲಿಕಾರ್ಜುನನ ಅಪ್ಪುಗೆಯಲ್ಲಿ ಎಲ್ಲವನು ಮರೆತು ಆನಂದಸಾಗರದಲ್ಲಿ ಲೀನಳಾದಳು. ಶಿವಯೋಗಿಣಿ, ಮಹಾಯೋಗಿಣಿ ಅಕ್ಕಮಹಾದೇವಿ, ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯವಾದಳು, ಹಾಲಿನೊಳು ಹಾಲು ಕೂಡುವಂತೆ, ನೀರಿನೊಳು ಉಪ್ಪು ಕರಗುವಂತೆ, ಚನ್ನಮಲ್ಲಿಕಾರ್ಜುನನ ನಿಲವನರಿತು ಆತನಲ್ಲಿ ಐಕ್ಯಳಾದಳು. ಆತನ ಮುಡಿಗೆ ಮಲ್ಲಿಗೆಯಾದಳು, ಸ್ತ್ರೀಕುಲದ ಕೀರ್ತಿಗೆ ಕಲಶವಾದಳು. "ನಾಮದಲ್ಲಿ ಹೆಣ್ಣುರೂಪಲ್ಲದೆ ಭಾವಿಸಲು ಗಂಡುರೂಪು ನೋಡಾ ಬಸವಣ್ಣ" ಎಂಬ ಅಕ್ಕನ ಆತ್ಮನಿಷ್ಠೆಯ ಮಾತು ಕನ್ನಡತಿಯರ ಬಾಳಿಗೆ ಬೆಳಕಾಗಲಿ "ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದೊಡೆ ಕೋಪವ ತಾಳದೆ ಸಮಾಧಾನಿಯಾಗಿರಬೇಕು" ಎಂಬ ಸಮತಾಭಾವ ಕನ್ನಡತಿಯರಲ್ಲಿ ಮೂಡಲಿ "ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನವಧರಿಸಿ" ಎಂಬ ನುಡಿಮುತ್ತು ಕನ್ನಡತಿಯರ ಬಾಳಿಗೆ ಮಾರ್ಗದರ್ಶನವಾಗಲಿ.

ಅಕ್ಕ ತನ್ನ ಸಂಕಲ್ಪದ ಬಲದಿಂದ ಬಾಳಿದಳು, ಕಷ್ಟನಷ್ಟಗಳನ್ನನುಭವಿಸಿ ಸಾಧನೆಗೈದಳು, ದೈವೀಸಾಕ್ಷಾತ್ಕಾರದಿಂದ ಸಿದ್ಧಿಯನ್ನು ಪಡೆದಳು. ಅಕ್ಕ ಸಿದ್ಧಿಪಡೆದ ಜೀವನ ಚೈತನ್ಯಪೂರ್ಣವಾಗಿದೆ. ವೀರವಿರಾಗಿಣಿ, ಮಹಾಯೋಗಿಣಿ ಅಕ್ಕಮಹಾದೇವಿಯ ಅಧ್ಯಾತ್ಮ ಸಾಹಿತ್ಯ ಕನ್ನಡತಾಯಿಯ ಕೊರಳಹಾರವಾಗಿದೆ. ಆಕೆಯ ಜೀವನ ಚೆನ್ನಮಲ್ಲಿಕಾರ್ಜುನನ ಮುಡಿಗೆ ಮಲ್ಲಿಗೆಯಾಗಿದೆ.

ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ,
ಧೂಪ ದೀಪಾರತಿ ನೇಮವಲ್ಲ,
ಪರಧನ ಪರಸ್ತ್ರೀ ಪರದೈವಂಗಳಿಗೆಳಗದಿಪ್ಪುದೇ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ

ಸತ್ಯಕ್ಕ

# ‘ಮುಕ್ತಾಯಕ್ಕನ ವಚನಗಳಲ್ಲಿ ತಾತ್ವಿಕ ದರ್ಶನ’

**ಶ್ರೀಮತಿ ಕಮಲಾ ಹಂಪನಾ**

ಕ್ರಿ.ಶ. ಹನ್ನೆರಡನೆ ಶತಮಾನ ಧರ್ಮದ ಒಂದು ಹೂಬನ. ಆ ಬನದಲ್ಲಿ ಅರಳಿನಿಂತು ಧರ್ಮದ ಪರಿಮಳವನ್ನು ಶಾಶ್ವತವಾಗಿ ಕರ್ಣಾಟಕದಲ್ಲೆಲ್ಲಾ ಬೀರಿದ ಅಸಂಖ್ಯಾತ ಶರಣ-ಶರಣೆಯರ ಕುಸುಮ ಸಮುದಾಯದಲ್ಲಿ ತತ್ವಜ್ಞಾನಿ ಮುಕ್ತಾಯಕ್ಕಳೂ ಒಬ್ಬಳು.

ಶಿವಶರಣೆಯರಲ್ಲಿ ಮುಕ್ತಾಯಕ್ಕ ಬಹಳ ದಿಟ್ಟತನದ ಸಾಧಕಳು. ಆಧ್ಯಾತ್ಮ ಸಾಧನೆಯಲ್ಲಿ ಆತ್ಮವಿಶ್ವಾಸವುಳ್ಳವಳು. ಲೌಕಿಕದ ಕ್ಷಣಿಕ ಸುಖದಿಂದ ಅಲೌಕಿಕದ ಅನಿರ್ಬಂಧ ಅನುಭಾವದ ಅಚಲ ಆನಂದಕ್ಕೆ ಕಾಲಿಟ್ಟವಳು. ವಾದದ ಮಾತುಗಾರ್ತಿಯಾಗಿ ಮೌನದ ಮುಕ್ತಿಯನ್ನು ಸಾಧಿಸಿದವಳು ‘ನಾಲ್ಪೆ ಸುಖಮಸ್ತಿ’ ಎನ್ನುವ ತತ್ವದ ಅರ್ಥವನ್ನು ತಾತ್ವಿಕದರ್ಶನದಲ್ಲಿ ಸಾಧಿಸಿ ತೋರಿಸಿದವಳು. ವಿಚಾರವಾದಿ; ಜ್ಞಾನದ ಖಣಿ.

ಮುಕ್ತಾಯಕ್ಕನ ತಾತ್ವಿಕ ಜೀವನವನ್ನು ದೊರೆಯುವ ಆಧಾರಗಳಿಂದ ಮೂರು ಘಟ್ಟಗಳಲ್ಲಿ ಗುರುತಿಸಬಹುದು. ಭ್ರಾತೃವಾತ್ಸಲ್ಯಮಯಿಯಾಗಿ, ಭ್ರಾತೃವಿಯೋಗದುಃಖಿನಿಯಾಗಿ, ತಾತ್ವಿಕ ವಿಚಾರವಾದಿನಿಯಾಗಿ ಕಾಣುವ ಈಕೆಯ ವ್ಯಕ್ತಿತ್ವ ಶಿವಶರಣೆಯರ ಸಮೂಹದಲ್ಲಿ ಅನುಪಮವಾದುದು. ಈಗ ಪ್ರಮುಖತಃ ತಾತ್ವಿಕ ವಿಚಾರವಾದಿಯೇ ಹೊರತು ಕವಯಿತ್ರಿಯಲ್ಲ. ಪ್ರಭುದೇವರೊಡನೆ ನಡೆವ ಸಂಭಾಷಣೆಯಿಂದ ಮುಕ್ತಾಯಕ್ಕನ ತಾತ್ವಿಕದರ್ಶನದ ಲಾಭ ದೊರೆಯುತ್ತದೆ.

ಲಕ್ಕುಂಡಿ ಮುಕ್ತಾಯಕ್ಕನ ತವರೂರು. ಒಕ್ಕಲುತನದ ಕುಟುಂಬದಲ್ಲಿ ಸದಾಚಾರಸಂಪನ್ನ ಶಿವಶರಣರ ವಂಶದಲ್ಲಿ ಅಜಗಣ್ಣನಿಗೆ ತಂಗಿಯಾಗಿ ಮುಕ್ತಾಯಕ್ಕ ಜನಿಸಿದಳು. ಈ ಅಣ್ಣ-ತಂಗಿಯರ ಬಾಂಧವ್ಯ ನೋಡುವವರ ಕಣ್ಣಿಗೆ ಕೇವಲ ಲೌಕಿಕ ಸಂಬಂಧದಂತಿದ್ದರೂ, ಅವರೀರ್ವರ ನಡುವೆ ಇದ್ದ ಅಲೌಕಿಕ ಆಧ್ಯಾತ್ಮಿಕ ಸಂಬಂಧ ಗಮನಾರ್ಹವಾದುದು. ಚಿಕ್ಕಂದಿನಿಂದಲೂ ಅಣ್ಣನೊಡನೆ ಕೂಡಿ. ಆಡಿ, ಬೆಳೆದಳು ಮುಕ್ತಾಯಕ್ಕ. ಹೆಣ್ಣುಮಕ್ಕಳು ತವರನ್ನು ಅಗಲುವ ಕಾಲ ಹೆಚ್ಚು ದೂರವಿರುವುದಿಲ್ಲ. ಮುಕ್ತಾಯಕ್ಕನ ಜೀವನದಲ್ಲೂ ಅದು ಬೇಗನೆ ಕಾಲಿಟ್ಟಿತು. ಮದುಮಗಳಾಗಿ ಗಂಡನ ಊರಾದ ಮಸಳಿಕಲ್ಲಿಗೆ ಮುಕ್ತಾಯಕ್ಕ ಪಯಣ ಬೆಳೆಸಬೇಕಾಯಿತು. ಆಕೆಗೆ ಅಜಗಣ್ಣನೇ ಆಧ್ಯಾತ್ಮ ಗುರುವಾಗಿದ್ದ, ತಂದೆಯಾಗಿದ್ದ, ಏಕೆ! ಸರ್ವಸ್ವವೂ ಆತನೇ ಆಗಿದ್ದ. ಕೇವಲ ಲೌಕಿಕ ಸಂಬಂಧದ ಅಣ್ಣ-ತಂಗಿಯರ ಅನುರಾಗದ ಅಗಲುವಿಕೆಯಲ್ಲ ಇದು, ಅಲೌಕಿಕ ಸಂಬಂಧ. ಮುಕ್ತಾಯಕ್ಕನನ್ನು ಆಧ್ಯಾತ್ಮ ಬೆಳಕಿನತ್ತ ಕರುಣೆಯಿಂದ ಕರೆದೊಯ್ಯುವ ಮಹಾಬೆಳಕನ್ನು ಆಕೆ ಹೇಗೆ ಅಗಲಲು ಸಾಧ್ಯ? ಆದರೂ ಅಣ್ಣನ ಸಮಾಧಾನದ ನುಡಿಯನ್ನು ಹೊತ್ತು ಮುಕ್ತಾಯಕ್ಕ ಗಂಡನ ಮನೆಗೆ ಹೊರಟು ನಿಂತಳು. ಅಗಲಲಾರದ ದುಃಖದಿಂದ ‘ಅಣ್ಣಾ, ನಿನ್ನನ್ನು ಕಾಂಬ ಕುರುಹು ಅವುದು?” ಎಂದಳು. ಅದಕ್ಕೆ ಜ್ಞಾನಯೋಗಿ ಅಜಗಣ್ಣನು, ‘ತಂಗಿ, ಮೂರು ಕುರುಹುಗಳಿವೆ. ನೀನುಟ್ಟ ಸೀರೆಯುನೆರಿಗೆ ಕಳಚುವುದು, ತೋರಮುಡಿಗಟ್ಟು ಬಿಚ್ಚುವುದು, ಕಡೆವ ಮೊಸರು ಕಲ್ಲಾಗುವುದು. ಆಗ ನಾನು ಲಿಂಗೈಕ್ಯನಾದೆನೆಂದು ತಿಳಿ’ ಎಂದು ಹೇಳುತ್ತಾನೆ. ದುಃಖ ಹೊತ್ತೇ ಆಕೆ ಪತಿಗೃಹವನ್ನು ಪ್ರವೇಶಿಸಿದಳು. ದಿನವೆಲ್ಲಾ ಆಕೆಗೆ ಅಣ್ಣನ ಧ್ಯಾನದಲ್ಲೇ ಕಳೆಯುತ್ತಿತ್ತು. ಇತ್ತ ಕಾಯಕದಲ್ಲಿ ಬೇಸಾಯಗಾರನಾದ ಅಜಗಣ್ಣ ಒಮ್ಮೆ ಹೊಲಕ್ಕೆ ಹೋದಾಗ ಅಲ್ಲಿ ನಡೆದ ಒಂದು ಅಪೂರ್ವ ಘಟನೆ ಅವನ ಬದುಕಿಗೆ ಒಂದು ಹೊಸ ತಿರುವನ್ನು ತಂದುಕೊಟ್ಟಿತು. ಒಂದು ದಿವಸ ರಾತ್ರಿ ಅಜಗಣ್ಣ ತನ್ನ ಹೊಲವನ್ನು ಕಾಯುತ್ತಿದ್ದಾಗ ಒಂದು ಫಟಸರ್ಪ ತನ್ನ ಹಣೆಯ ರತ್ನವನ್ನು ಕೆಳಗೆ ಚೆಲ್ಲಿ, ಅದರ ಬೆಳಕಿನಲ್ಲಿ ತನ್ನ ಆಹಾರವನ್ನು ಹುಡುಕಿಕೊಳ್ಳುತ್ತಿತ್ತು. ಅಜಗಣ್ಣನ ಶಿವಮಂತ್ರೋಚ್ಚಾರಣೆಯ ಶಬ್ದ ಕೇಳಿ, ಆ ರತ್ನವನ್ನು ಬಚ್ಚಿಟ್ಟುಕೊಂಡು ಹಾವು ಮರೆಯಾಯಿತು. ಇದನ್ನು ಕಂಡ ಅಜಗಣ್ಣನಿಗೆ ಮಹಾಸತ್ಯದ

ಅರಿವು ಮೂಡಿತು. ಕತ್ತಲಿನಲ್ಲಿ ಬೆಳಕಿನ ದರ್ಶನವಾಯಿತು. ಅಂಡಜ ಪ್ರಾಣಿಯಾದ ಈ ಹಾವು ತನ್ನ ಅಮೂಲ್ಯವಾದ ರತ್ನವನ್ನು ಗೋಪ್ಯವಾಗಿರಿಸಿಕೊಂಡಂತೆ ಸ್ವಪ್ರಕಾಶದ ಸೌಂದರ್ಯದ ಮಹಾಲಿಂಗವನ್ನು ಅಜಗಣ್ಣ ಅಂದಿನಿಂದ ಅಂತರಂಗದಲ್ಲಿಯೇ ಅಡಗಿಸಿ ಆರಾಧಿಸಲು ಪ್ರಾರಂಭಿಸಿದ. ಅಂತರ್ಮುಖಿಯಾದ ಆತ. ವ್ಯಕ್ತಭಕ್ತಿ, ಗುಪ್ತಭಕ್ತಿಯಾಯಿತು. ಬಹಿರಂಗ ಆರಾಧನೆ ಅಂತರಂಗ ಭಕ್ತಿಯಾಯಿತು. ಮನದಲ್ಲಿ ಪೂಜೆ. ಮನದಲ್ಲಿ ಮಂತ್ರ, ಮನದಲ್ಲಿ ಧ್ಯಾನ, ಮನದಲ್ಲಿಯೇ ಜಪತಪಾದಿಗಳು ಅಳವಟ್ಟವು. ಇದರಿಂದ ಅಜಗಣ್ಣನಿಗೆ ಅನಿರ್ವಚನೀಯ ಆನಂದವಾಯಿತು. ಮೌನಧ್ಯಾನವೇ ಮುಕ್ತಿಯ ಸೋಪಾನವಾಯಿತು.

ಬಾಹ್ಯದಲ್ಲಿ ಬೇಸಾಯಗಾರನಾದರೂ ಅಜಗಣ್ಣ ಅಂತರಂಗದಲ್ಲಿ ಆಧ್ಯಾತ್ಮವಾದಿಯಾಗಿ ಕಾಲಕಳೆಯುತ್ತಿದ್ದ. ನಿಶ್ಶಬ್ದ ಬ್ರಹ್ಮತ್ವದ ನಿರುಪಾಧಿಕಸ್ಥಿತಿಯ ಸಿದ್ಧಿಯಲ್ಲಿ ತೃಪ್ತನಾದ. ಆದರೆ ಈ ಸ್ಥಿತಿಯಲ್ಲಿ ಆತ ಹೆಚ್ಚುಕಾಲ ಇರಲಿಲ್ಲ. ಒಂದು ದಿವಸ ಈ ಆಧ್ಯಾತ್ಮಕರ್ಮಯೋಗಿ ತಲೆಗೆ ಬಾಗಿಲು ತಾಗಿದ ನೆಪದಿಂದ ಲಿಂಗೈಕ್ಯನಾದ. ಅತ್ತ ಮಸಣಿಕಲ್ಲಿನಲ್ಲಿದ್ದ ಮುಕ್ತಾಯಕ್ಕನಿಗೆ ಅಣ್ಣ ಹೇಳಿದ್ದ ಕುರುಹುಗಳು ಕಂಡುಬರಲು ದುಃಖಿತಳಾಗಿ ಲಕ್ಕುಂಡಿಗೆ ಓಡಿಬರುತ್ತಾಳೆ. ಆದರೆ ಆ ವೇಳೆಗೆ ಅಜಗಣ್ಣ ಬಯಲನ್ನು ಬೆರಸಿ, ಉರಿಯುಂಡ ಕರ್ಪೂರವಾಗಿದ್ದ.

ಮುಕ್ತಾಯಕ್ಕನ ಶೋಕ ಮೇರೆಮೀರಿತು. ಮನ, ಮನೆ, ಏಕೆ ಜಗತ್ತೇ ಶೂನ್ಯವಾಯಿತು. ಆಧ್ಯಾತ್ಮ ಗುರುವಿನ ವಿಯೋಗದಿಂದ ಎಲ್ಲ ಒಂದಾಗಿ ಕಂಡಿತು ಆಕೆಗೆ. ದಿಕ್ಕುಗೆಟ್ಟು, ಅವಲಂಬನೆಗೆಟ್ಟು ದುಃಖಿಸಲಾರಂಭಿಸಿದಳು. ಈ ಸಂದರ್ಭದ ಆಕೆಯ ಕೆಲವು ವಚನಗಳು ಶೋಕರಸಕ್ಕೆ ಉತ್ತಮ ಉದಾಹರಣೆಗಳಾಗಿವೆ. ಮುಕ್ತಾಯಕ್ಕನ ಶೋಕ ಕೇವಲ ಲೌಕಿಕಕ್ಕೆ ಸಂಬಂಧಿಸಿದುದಲ್ಲ. ತನ್ನ ಆಧ್ಯಾತ್ಮಮಾರ್ಗಕ್ಕೇ ದಾರಿ ತೋರುತ್ತಿದ್ದು, ಇನ್ನು ಆಕೆ ಆ ಮಾರ್ಗದಲ್ಲಿ ತನ್ನ ಗುರಿ ಮುಟ್ಟುವುದಕ್ಕೆ ಮೊದಲೇ ಬಯಲಾಗಿದ್ದ, ಅಣ್ಣನ ವಿಯೋಗ ಅವಳಿಗೆ ಅತೀವ ವೇದನೆಯನ್ನು ತಂದಿತ್ತು. 'ಏಕತತ್ವ ತ್ರಿತತ್ವ ಪಂಚತತ್ವ ಪಂಚವಿಂಶತಿತತ್ವ ಷಟ್ತ್ರಿಂಶತತ್ವವ ಗರ್ಭೀಕರಿಸಿಕೊಂಡಿಪ್ಪಾತನು ಅಜಗಣ್ಣನೇ. ತತ್ವವೆಲ್ಲಕ್ಕಧಿಕವಾಗಿಪ್ಪಾತನು ಅಜಗಣ್ಣನೆ, ಮಹಾತತ್ವವು ಅಜಗಣ್ಣನೆ....ಮಹಾಸದ್ಭಕ್ತನು ಅಜಗಣ್ಣನಪ್ಪಾ ತತ್ವಜ್ಞಾನ ಅಜಗಣ್ಣನೆ, ತತ್ವಮಯಿ ಅಜಗಣ್ಣನೆ....ಈ ಅಜಗಣ್ಣ ತಂದೆಯನಗಲಿ ನಾನೆಂತು ಸೈರಿಸುವೆನೆಲೆ ಸತ್ಯಕ್ಕ ತಾಯೆ ಅಹಾ."

ಈ ವಚನ ಮುಕ್ತಾಯಕ್ಕನ ಭ್ರಾತೃಬಾಂಧವ್ಯದ ತೀವ್ರತೆಯನ್ನು ಎತ್ತಿ ತೋರುತ್ತದೆ. ಸಕಲ ಸರ್ವಸ್ವವೂ ಆಗಿದ್ದ ಅಜಗಣ್ಣ ಗುರು ಇನ್ನಿಲ್ಲ. ಇನ್ನು ಮುಂದೆ ತನ್ನ ತಾತ್ವಿಕ ದಾರಿಗೆ ಮಾರ್ಗದರ್ಶಿಯೆಲ್ಲಿ ? ಆಧ್ಯಾತ್ಮಪಥಕ್ಕೆ ತೋರುಗಂಬವೆಲ್ಲಿ ? ತಮಸ್ಸಿನಿಂದ ತೇಜಸ್ಸಿನ ಕಡೆಗೆ ಕರೆದೊಯ್ಯುವ ಕರುಣಾಳುವೆಲ್ಲಿ ? ಅಣ್ಣನ ಶಕ್ತಿಯನ್ನು ಆತ ಇದ್ದ ಕಾಲದಲ್ಲಿಯೇ ಸಂಪೂರ್ಣವಾಗಿ ಅರಿಯದೆ, ಆತನ ಆಧ್ಯಾತ್ಮ ಪ್ರಭೆಯನ್ನು ಅನುಸರಿಸದೆ ಕೆಟ್ಟೆನೆಂಬ ದುಃಖ ಒಂದು ಕಡೆ. ಆಕೆಗೆ ಅದು ಬೊಕ್ಕೆಯ ಮೇಲೆ ಕುರುವೆದ್ದಂತೆ ಆಕೆಯ ಶೋಕವನ್ನು ಇಮ್ಮಡಿಗೊಳಿಸಿತು.

ತನುವಿಡಿದೆನಾಗಿ ಅನುವರಿಯದೆ ಕೆಟ್ಟೆನು
ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು
ಭಾವದ ಬಯಕೆ ಹಿಂಗದಾಗಿ ವಿಯೋಗಿಯಾಗಿ ಕೆಟ್ಟೆನು
ಅರಿವ ನುಡಿದು ಮಱಹಿಗೊಳಗಾದೆನು
ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ
ಎನ್ನ ಮತಿಗೆ ಮಱವೆಯ ಮಾಡಿಹೋದನು

ಅಣ್ಣ, ಅಜಗಣ್ಣ ತನಗೆ ದಾರಿತೋರದೆ ಹೋದ. ಅಷ್ಟೇ ಅಲ್ಲ "ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು. ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು ನಾನೆಂತು ಬದುಕುವೆನಣ್ಣಾ ?

ಕತ್ತಲೆಯ ಬೆಳಗ ಕಾಂಬ ಸಂದೇಹಿ ನಾನೊಬ್ಬಳು. ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೋ ಅಜಗಣ್ಣಾ, ನಿನ್ನಯೋಗ."

"ಅರಿವನ್ನು ಅಗಿದು ನುಂಗಲಾರದ ಬರಿವಾತಿನ ಈ ಮರ್ತ್ಯಲೋಕದಲ್ಲಿ ಅರಿಯದ ಹಸುಳೆಯನ್ನು ಅಗಲಿ ಹೋದೆ ಅಜಗಣ್ಣಾ, ನಿನ್ನ ಯೋಗದ ಕನ್ನಡಿಯನ್ನು ಮುಂದಿಟ್ಟೆ. ಆದರೆ ಅದನ್ನು ದರ್ಶಿಸುವ ಕಣ್ಣನು ಕಟ್ಟಿಹೋದೆ. ಇನ್ನು ನನ್ನ ಗತಿ ಏನು ? ನಿನ್ನನಗಲಿ ನಾನೆಂತು ಬದುಕಲಿ ?" ಇದು ಮುಕ್ತಾಯಕ್ಕನ ದುಃಖ. ಜ್ಞಾನದಾಹದ ತೀವ್ರತೆಗೆ ಗುರುಬೋಧೆಯೇ ತಪ್ಪಿಹೋಯಿತು.

ಮುಕ್ತಾಯಕ್ಕನ ದುಃಖಕ್ಕೆ ನಿಲುಗಡೆಯ ಬಿಂದುವಾಗಿ ಅಲ್ಲಮಪ್ರಭುಗಳ ಆಗಮನವಾಗುತ್ತದೆ. ಮರಣದ

ತೊಡಕನ್ನು ಬಿಡಿಸಲಾರದೆ ಲೌಕಿಕದ ಸತ್ಯವನ್ನೂ, ಪರಮಾರ್ಥದ ಅಸತ್ಯವನ್ನೂ ಕಂಡುಕೊಂಡಂತೆ ದುಃಖಿಸುತ್ತಿರಲು, ಅಲ್ಲಮಪ್ರಭು. ಈಕೆಯು ಜ್ಞಾನಪಿಪಾಸಾಸಕ್ತಳೆಂದು ಶೋಕ ನಿವೃತ್ತಿಯ ಮಾರ್ಗವನ್ನು ಬೋಧಿಸಲು ಮುಂದೆ ಬಂದನು. ಹೀಗೆ ಕೇಳಿದನು : ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು ಕಂಗಳ ಮುತ್ತ ಪವಣಿಸು ವಾಕೆ ನೀನಾರು ಹೇಳಾ? ಸಂದ ಸಂಪಗೆಯರಳ್ಗೆ ತುಂಬಿ ಬಂದುಂಬ ಭೇದವನಱಿಯದೆ ಹಂಬಲಿಸುವ ಪರಿತಾಪವೇನು ಹೇಳಾ ? ಒಂದೆಂಬೆನೆ ? ಎರಡಾಗಿದೆ. ಎರಡೆಂಬೆನೆ ? ಒಂದಾಗಿದೆ. ಅಱಿವಿನೊಳಗಣ ಮರಹಿದೇನು ಹೇಳಾ? ದುಃಖವಿಲ್ಲದುದಕ್ಕೆ ಅಕ್ಕೆ ಇಲ್ಲದ ಅನುತಾಪ ನಮ್ಮ ಗುಹೇಶ್ವರ ಲಿಂಗದಲ್ಲಿ ತೋಱುತ್ತಿದೆ ನೀನಾರೆಂದು ಹೇಳಾ ಎಲೆ ಅವ್ವಾ."

ಮುಕ್ತಾಯಕ್ಕ ಎದ್ದು ನಮಿಸಿ ತನ್ನ ದುಃಖವನ್ನು ಹೇಳಿಕೊಂಡಳು. ಇವರೀರ್ವರ ಸಂಭಾಷಣೆ ಆಧ್ಯಾತ್ಮ ಪ್ರಪಂಚಕ್ಕೆ ಒಂದು ವಿಶಿಷ್ಟ ಕಾಣಿಕೆ. ಗುರುಗಳಿಗೆ ಗುರುವಾದ ಪ್ರಭುದೇವನನ್ನು ಒರೆಹಚ್ಚಿ ನೋಡುವ ಪರೀಕ್ಷಕ ಳಾಗುತ್ತಾಳೆ ಮುಕ್ತಾಯಿ. ಶಿಷ್ಯರನ್ನು ಗುರು ಪರೀಕ್ಷಿಸುವ ರೂಢಿ ಜಗತ್ತಿನದಾದರೆ ಇಲ್ಲಿ ಶಿಷ್ಯಳೇ ಗುರುವನ್ನು ಪರೀಕ್ಷಿಸಿ, ಈತ ಉತ್ತಮಗುರು ಎನ್ನುವ ಶಿಫಾರಸು ಪತ್ರವನ್ನು ಕೊಡುವುದು ಮುಕ್ತಾಯಕ್ಕನ ಪ್ರಗಲ್ಭ ಪಾಂಡಿತ್ಯಕ್ಕೆ ಕುರುಹಾಗಿದೆ. ಪರೀಕ್ಷೆ ಮುಗಿದ ಮೇಲೆ ಮನಸ್ಸಿನ ಸಂಶಯ ದೂರವಾದ ಮೇಲೆ ಪ್ರಭುದೇವನನ್ನು ತನ್ನ ಗುರು ವಾಗಿ ಪಡೆಯುತ್ತಾಳೆ, ಈಗ ಪರೀಕ್ಷೆ ಪ್ರಾರಂಭವಾಗುತ್ತದೆ :

"ನೀನಾರು ಹೇಳು ಎಲೆ ಅವ್ವಾ" ಎಂದು ಕೇಳಿದ ಪ್ರಭುವಿನ ಪ್ರಶ್ನೆಗೆ

ಮುಕ್ತಾಯಕ್ಕ: ಆರೆಂದು ಕುಱುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ, ಕಾಯದೊಳಗೆ ಮಾಯವಿಲ್ಲ, ಭಾವ ದೊಳಗೆ ಭ್ರಮೆಯಿಲ್ಲ. ಕರೆದು ಬೆಸಗೊಂಬರೆ ಕುಱುಹಿಲ್ಲ—ತಲೆಯುಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯ.

ಪ್ರಭುದೇವ : ಕಾಣದುದ ಕಂಡೆ, ಕೇಳದುದ ಕೇಳಿದೆ. ಮುಟ್ಟಬಾರದುದ ಮುಟ್ಟಿದೆ, ಅಸಾಧ್ಯವ ಸಾಧಿಸಿದೆ, ತಲೆಗೆಟ್ಟುದ ತಲೆವಿಡಿದೆ.ನೆಲೆಗೆಟ್ಟುದ ನಿರ್ಧರಿಸಿದೆ. ಗುಹೇಶ್ವರಾ ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು.

ಮುಕ್ತಾಯಕ್ಕ: ಚಿದ್‌ಘನದೊಳಗೆ ಅವಿರಳೈಕ್ಯವಾದ ಎನ್ನ ಅಜಗಣ್ಣ ತಂದೆಯನಱಿದು ಶರಣೆಂಬಾತ ನೀನಾರು ಹೇಳಯ್ಯಾ ? ಪ್ರಭುವಿನ ಐತಿಹ್ಯವನ್ನು ದಿಟ್ಟ ಹೆಣ್ಣು ಕೇಳಿಯೇಬಿಡುವಳು.

ಪ್ರಭುದೇವ : ಶರಣು ಶರಣಾರ್ಥಿ ಎಲೆ ತಾಯೆ—ನಾ ನಿಮ್ಮ ಭಾವನಲ್ಲಯ್ಯನು. ನೀನೆನಗೆ ನಗೆವೆಣ್ಣು. ನಮ್ಮ ಗುಹೇ ಶ್ವರನ ಕೈವಿಡಿದು ಪರಮಸುಖಿಯಾಗಿ, ಕಳವಳದ ಕಂದೆಱವಿಯೇನು ಹೇಳಾ ?

ಮುಕ್ತಾಯಕ್ಕ: ದೇವ ದೇವ ಶರಣಾರ್ಥಿ ; ಅವಧರಿಸಯ್ಯಾ—ಮದವಳಿದು ಮಹವನೊಡಗೂಡಿದ ಎನ್ನ ಅಜಗಣ್ಣನ ನಗಲಿದ ದುಃಖಪ್ರಭುವೆ.

ಪ್ರಭುದೇವ : ಅಱಿವಱಿತು ಮಱಹುಗೆಟ್ಟು ತನ್ನಲ್ಲಿ ತಾನು ಸನ್ನಿಹಿತನಾದಂಗೆ ದುಃಖಿಸುವರೆ ಹೇಳಾ ? ಶೋಕಿಸುವರೆ ಹೇಳಾ ?

ಮುಕ್ತಾಯಕ್ಕ: ಎಂತು ಮಱೆಯುವೆನಯ್ಯಾ ಎನ್ನ ಅಜಗಣ್ಣತಂದೆಯನು ?

ಪ್ರಭುದೇವ : ಕಂಡೆ, ಕಾಣೆ, ಕೂಡಿದೆ, ಅಗಲಿದೆನೆಂಬ ಭ್ರಾಂತಿಸೂತಕವ ತಿಳಿದು ನೋಡಲು ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ ಎಲೆ ತಾಯೆ.

ಮುಕ್ತಾಯಕ್ಕ: ಕಣ್ಣ ಮೊದಲಲ್ಲಿ ಕುಳ್ಳಿರ್ದು ಬಣ್ಣದೋಱುವ ಪರಿಯ ನೋಡಾ ! ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದನು ಈ ಅಜಗಣ್ಣನ ಯೋಗಕ್ಕೆ ಬೆರಗಾದೆನು.

ಪ್ರಭುದೇವ : ಗುಹೇಶ್ವರನ ಶರಣ ಅಜಗಣ್ಣನ ಅಂತಿಂತೆನಬಾರದು ಕೇಳಾ ತಾಯೇ.

ಮುಕ್ತಾಯಕ್ಕ : ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ ಎನ್ನ ಮತಿಗೆ ಮಱವೆಯ ಮಾಡಿಹೋದನು.

ಪ್ರಭುದೇವ : ಒಮ್ಮೆ ಕಂಡೆ, ಒಮ್ಮೆ ಕಾಣೆ, ಒಮ್ಮೆ ಕೂಡಿದೆ, ಒಮ್ಮೆ ಅಗಲಿದೆನೆಂದರೆ ಕರ್ಮ ಬೆಂಬತ್ತಿ ಬಿಡದು. ನಿನ್ನೊಳಗೆ ನೀ ತಿಳಿದು ನೋಡಲು ಭಿನ್ನ ಉಂಟೆ ?

ಮುಕ್ತಾಯಕ್ಕ: ಹಿಡಿದಾಚಾರವ ಬಿಡದನ್ನಕ್ಕರ, ಎನ್ನ ಅಱಿವು ಮರೆಯದನ್ನಕ್ಕರ, ಎನ್ನ ಮನವ ಸುಡದನ್ನಕ್ಕರ, ಎನ್ನ ಬೆಡಗಿನ ಗುರುವ ತೋಱದನ್ನಕ್ಕರ ಸುಸರವೆಂತಪ್ಪುದು ಹೇಳಾ? ಹೋಹ ಬಟ್ಟೆಯನ್ನಱಿಯದನ್ನ ಕ್ಕರ ತಾನಾಗಬಾರದು ಕಾಣಾ.

ಪ್ರಭುದೇವ : ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನಱಿಯಬಲ್ಲರೆ ಗೊಹೇಶ್ವರನೆಂಬ ಲಿಂಗ ದೂರವಿಲ್ಲ ಕೇಳಾ ಮರುಳೆ.

ಮುಕ್ತಾಯಕ್ಕ: ಅಂತರಂಗದೊಳಗೆ ಅದೆ ಎಂದರೇನು ಹೇಳಾ? ಮನಮುಟ್ಟಿ ಕಾಣಬಾರದು. ಬಹಿರಂಗದಲ್ಲಿ ಅದೆ ಎಂದರೆ. ಪೂಜಿಸುವನ್ನಕ್ಕರ ಕಾಣಬಾರದು. ಸಾಕಾರವಲ್ಲದ ನಿರಾಕಾರಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು.

ಪ್ರಭುದೇವ : ಬೇಱೆ ಮಾಡಿ ನುಡಿಯಬಹುದೇ ಪ್ರಾಣಲಿಂಗವನು ? ಅಱಿವು ಸ್ವಯವಾಗಿ ಮಱಹು ನಷ್ಟವಾದರೆ ಗೊಹೇಶ್ವರನೆಂಬ ಲಿಂಗವು ತಾನೇ ನೋಡಾ !

ಮುಕ್ತಾಯಕ್ಕ: ತನ್ನಲ್ಲಿ ತಾನು ಸನ್ನಿಹಿತನಾದಹೆನೆಂದರೆ ಗುರುವಿಲ್ಲದೆ ಆಗದು ಕೇಳಾ ? ಎನ್ನ ಅಜಗಣ್ಣನೆಂಬ ಗುರು ವಿಲ್ಲದೆ ಆಱೂಢಿಯ ಕೂಟ ಸಮನಿಸದು ಕೇಳಾ.

ಪ್ರಭುದೇವ: ಆದಿ ಅನಾದಿಯಿಂದತ್ತಣತ್ತ ಮುನ್ನಲಾದ ಪರತತ್ವಮಂ ತಿಳಿದು ನೋಡಲು ನೀನೆ ಸ್ವಯಂಜ್ಯೋತಿ ಪ್ರಕಾಶನೆಂದಱಿಯಲು, ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವುಪ್ಪ ಗುರುವುಂಟೆ ?

ಮುಕ್ತಾಯಕ್ಕ: ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ.

ಪ್ರಭುದೇವ: ಸಹಜ ಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರುವುಂಟೆ ? ಗೊಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರು ವುಂಟಲ್ಲದೆ ಸ್ವಯವೆಂದಲ್ಲಿ ನುಡಿಯಲಿಲ್ಲ.

ಮುಕ್ತಾಯಕ್ಕ: ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬುವರು ಶಿಶು ಕಂಡ ಕನಸಿನಂತಿರಬೇಕಲ್ಲದೆ ನುಡಿದು ಹೇಳು ವನಕ್ಕರ ಭಿನ್ನವಲ್ಲವೆ ಹೇಳಾ ?

ಪ್ರಭುದೇವ: ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ, ತಾಳೋಷ್ಠ ಸಂಪುಟವೆಂಬುದೇ ನಾದ ಬಿಂದುಕಳಾತೀತ, ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ.

ಮುಕ್ತಾಯಕ್ಕ: ನಡೆದು ನಡೆದು ನಡೆಯ ಕಂಡವರು ನುಡಿದು ನುಡಿದು ಹೇಳುತ್ತಿಹರೆ ? ನುಡಿದು ನುಡಿದು ಹೇಳುವ ನಕ್ಕರ ನಡೆದುದೆಲ್ಲಾ ಹುಸಿ ಎಂಬೆನು. ಮಾತಿನ ಮಥನದಿಂದಱಿವು ಕರಣಮಥನದಿಂದಾದವಲ್ಲದೆ ಅನುಪಮ ಸ್ವರಭೇದವಾದ ಪರಿ ಎಂತು ಹೇಳಾ ?

ಪ್ರಭುದೇವ: ತನ್ನ ತಾನಱಿದೊಡೆ ನುಡಿಯೆಲ್ಲಾ ತತ್ವ ನೋಡಾ ! ತನ್ನತಾ ಮಱೆದೊಡೆ ನುಡಿಯೆಲ್ಲಾ ಮಾಯೆ ನೋಡಾ ! ಅಱಿದು ಮಱೆದ ಶಿವಯೋಗಿಯ ಶಬುದವೆಲ್ಲಾ ಉಪದೇಶವಲ್ಲದೆ ಭಿನ್ನಉಂಟೆ ?

ಮುಕ್ತಾಯಕ್ಕ: ನುಡಿಯ ಹಂಗಿನ್ನೂ ನಿಮಗೆ ಹಿಂಗದು. ನಡೆಯನೆಂತು ಪರರಿಗೆ ಹೇಳುವಿರಿ ?

ಪ್ರಭುದೇವ: ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದ.

ಮುಕ್ತಾಯಕ್ಕ: ಕಂಪ್ಯದು ಕುಱುಹು, ಬಾಯದು ಬೊಬ್ಬೆ, ಉಲಿಯದಿರೋ ಭಾವ, ಉಲಿಯದಿರೂ ಭಾವ ;

ಪ್ರಭುದೇವ: ಅಱಿವುಗೆಟ್ಟು ಮಱಹುಹಳಿದು ಭಾವಭ್ರಾಂತು ನಿಭ್ರಾಂತವಾದವರ ಕಯ್ಯಲ್ಲಿ ಕುರುಹನರಸುವರೆ ?

ಮುಕ್ತಾಯಕ್ಕ: ಅಱಿದು ಮಱೆದ ಪರಿ ಎಂತು ಹೇಳಾ ?

ಪ್ರಭುದೇವ: ತನ್ನಲ್ಲಿ ತಾನು ತದ್ಗತವಾಗಿಪ್ಪ ಶಿವಯೋಗಿಗೆ ಭಿನ್ನವಿಲ್ಲಾ ನೋಡಾ.

ಮುಕ್ತಾಯಕ್ಕ: ಸಿಡಿಲು ಹೊಯಿದ ಬಾವಿಗೆ ಸೋಪಾನವೇಕೋ ? ತನ್ನಲ್ಲಿ ತಾನು ತದ್‌ಗತವಾದ ಬಳಿಕ ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲಾ ನೋಡಾ ಪ್ರಭುವೆ.

ಪ್ರಭುದೇವ: ನುಡಿಯಿಂದ ನಡೆಗೆಟ್ಟಿತ್ತು. ನಡೆಯಿಂದ ನುಡಿಗೆಟ್ಟಿತ್ತು. ಭಾವದ ಗುಸುಟು ಅದು ತಾನೆ ನಾಚಿ ಮಾದುದು ನೋಡಾ ಗೊಹೇಶ್ವರನೆಂಬ ಅಱಿವು ನಿನೆ ಬಂಜೆಯಾದುದಲ್ಲಾ ?

ಮುಕ್ತಾಯಕ್ಕ: ಅಹುದುಹುದು, ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು. ಅಱಿವಡೆ ಮತಿಯಿಲ್ಲ, ನೆನೆವಡೆ ಮನವಿಲ್ಲ, ಎನ್ನ ಅಜಗಣ್ಣ ತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನು ತಿರ್ದೆನು.

ಪ್ರಭುದೇವರ ತಾರ್ಕಿಕ ಉತ್ತರಗಳಿಂದ ಮುಕ್ತಾಯಕ್ಕನ ಮನದ ದುಗುಡ ಮಾಯವಾಯಿತು. ಪ್ರಭುದೇವರಿಗಾದರೋ ವಿಚಾರವಾದಿ ಶಿವಶರಣೆಯೊಬ್ಬಳನ್ನು ಕರಾಳ ಅಜ್ಞತೆಯಿಂದ ನಿರಾಳ ಜ್ಞಾನದ ಕಡೆಗೆ ಕರೆತಂದ ಸಮಾಧಾನವಾಯಿತು. 'ಗುಹೇಶ್ವರನ ಶರಣ ಅಜಗಣ್ಣನ ನಿಲವು ಬಯಲ ಬೆರಸಿದ ಮರೀಚಿಯಂತಾಯಿತ್ತು, ಬೆರಸಿ ನೋಡಾ

ಬೇರಿಲ್ಲದೆ' ಎಂದು ಮುಕ್ತಾಯಕ್ಕನಿಗೆ ಸಮಾಧಾನ ಉಂಟುಮಾಡಿದ, ಅಲ್ಲಮನು ಬೋಧಿಸಿದ ಗುಣಗಳೆಲ್ಲವನ್ನೂ ತನ್ನ ಅಣ್ಣನಲ್ಲಿ ಕಂಡಿದ್ದಳು. ತನ್ನ ಅಣ್ಣನ ನಿಶ್ಯಬ್ದದಲ್ಲಿಯ ನಂಬುಗೆಯನ್ನು ಪ್ರಭುದೇವನ ಶಬ್ದದಲ್ಲಿಟ್ಟು ಶರಣಾಗುತ್ತಾಳೆ. ಲಿಂಗಾಂಗಗಳ ಸಾಮರಸ್ಯಪಡೆದು ಕೃತಾರ್ಥಳಾಗುತ್ತಾಳೆ. ಸಮತೆ ನೆಲಸಿ ಶಾಂತಿಯನ್ನು ಪಡೆಯುತ್ತಾಳೆ. ಅಜಗಣ್ಣನ ನಡೆ, ಪ್ರಭುದೇವರ ಉಪದೇಶ ಆಕೆಯ ಮುಂದಿನ ಬದುಕಿಗೆ ದಾರಿದೀಪವಾಗುತ್ತದೆ. ಆಧ್ಯಾತ್ಮದ ದಾರಿ ಸುಗಮವಾಗುತ್ತದೆ, ತನ್ನ ದಾರಿಯನ್ನು ತಾನೇ ಹಿಡಿದು ನಡೆಯುತ್ತಾಳೆ."

ನುಡಿಯಲು ಬಾರದು ಕೆಟ್ಟ ನುಡಿಗಳ
ನಡೆಯಲು ಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು ?
ಹಿಡಿದ ವ್ರತ ಬಿಡದಿರಲು ಅದೇ ಮಹಾಜ್ಞಾನ-
ವಾಚರಣೆ ಎಂಬೆನು ಅಜಗಣ್ಣತಂದೆ

ಈ ನುಡಿಯು ನಡೆಯೇ ಮುಕ್ತಾಯಕ್ಕನದಾಯಿತು. ಈ ವಚನದಲ್ಲಿ ಮುಕ್ತಾಯಕ್ಕ ಆಡುನುಡಿಯಲ್ಲಿ ಆಧ್ಯಾತ್ಮಕ ಸಾರವನ್ನು ಘಟ್ಟಿ ಇಳಿಸಿದ್ದಾಳೆ.

ಆಳಿಯೊಳಡಗಿದ ಪರಿಮಳದಂತೆ, ಪತಂಗದೊಳಡಗಿದ ಅನಲದಂತೆ. ಶಶಿಯೊಳಡಗಿದ ಷೋಡಶ ಕಳೆಯಂತೆ, ಉಲುಹಡಗಿದ ವಾಯುವಿನ ಪರಿಯಂತೆ. ಸಿಡಿಲೊಳಡಗಿದ ಗಾತ್ರದ ತೇಜದಂತೆ ಇರಬೇಕಯ್ಯ ಯೋಗ ಎನ್ನ ಅಜಗಣ್ಣ ತಂದೆಯಂತೆ."

ಹೀಗೆ ಯೋಗಯುಕ್ತಳಾಗಿ ಆಕೆ ಕೆಲವು ದಿವಸಗಳನ್ನು ಕಳೆದಳು, ಗುರುವನ್ನೇ ಗೆದ್ದ ಮುಕ್ತಾಯಕ್ಕನ ತಾತ್ವಿಕ ಶಕ್ತಿಗೆ ಶರಣಕುಲವೆಲ್ಲಾ ನಮೋ ಎಂದಿತು. ಆದರೆ ಮುಕ್ತಾಯಕ್ಕನೂ ಅವರ ಹಸಾದಕ್ಕೆ, ಒಳಗಿದ್ದಳು, ಅವರೆಲ್ಲರ ಕೃಪೆಗೆ ತಾನು ಪಾತ್ರಳು ಎನ್ನುವ ವಿನಯದ ಅರಿವು ಆಕೆಯಲ್ಲಿ ಮೂಡಿತು.

ಎನ್ನ ಭಾವಕ್ಕೆ ಗುರುವಾದನಯ್ಯಾ ಬಸವಣ್ಣನು
ಎನ್ನ ನೋಟಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು
ಎನ್ನ ಪರಿಣಾಮಕ್ಕೆ ಪ್ರಸಾದವಾದನಯ್ಯಾ ಮರುಳಶಂಕರದೇವರು
ಎನ್ನ ಹೃದಯಕ್ಕೆ ಮಂತವಾದನಯ್ಯಾ ಮಡಿವಾಳಯ್ಯನು
ಇಂತೀ ಐವರ ಕಾರುಣ್ಯಪ್ರಸಾದವ ಕೊಂಡು ಬದುಕಿದೆನಯ್ಯಾ ಅಜಗಣ್ಣತಂದೆ

ಪ್ರಭುದೇವನು ಪ್ರತಿಭಟಿಸಿದ ಆ ದಿಟ್ಟ ಹೆಣ್ಣಿನಿಂದ ಈ ವಿನಯದ ಶ್ರೀಮಂತಿಕೆಯ ಮಾತುಗಳು; ಅಂದಿನ ಮುಕ್ತಾಯಕ್ಕ ಎಲ್ಲಿ ? ಇಂದಿನ ಮುಕ್ತಾಯಕ್ಕ ಎಲ್ಲಿ ? ಅದು ಅಂದು ತಾತ್ವಿಕ ಸತ್ವದಿಂದ ಅರ್ಥತುಂಬಿದ ಕೊಡ ಮಾತ್ರವಾದರೆ ಇಂದು ಅದು ಪರಿಪೂರ್ಣ ಮಂಗಳ ಕಳಸ.

ಮುಕ್ತಾಯಕ್ಕನ ವಚನಗಳು ಪ್ರಧಾನತಃ ತಾತ್ವಿಕ ವಿಷಯವನ್ನು ಕುರಿತದ್ದಾದರೂ ಅಲ್ಲಲ್ಲಿ ಕಾಣುವ ಉಪಮೆಗಳು ಭಾವತೀವ್ರತೆಯನ್ನು ಅಭಿವ್ಯಕ್ತಗೊಳಿಸಲು ಸಮರ್ಥವಾಗಿರುವುದಲ್ಲದೆ ವಚನ ಸೌಂದರ್ಯವನ್ನೂ ಉನ್ನತಗೊಳಿಸಿವೆ.

ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವಡಿಗಳವಲ್ಲದಿರಬೇಕು ಅಣ್ಣಾ
ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ
ಆರೂಢಗೆಟ್ಟೆಯೋ ಅಜಗಣ್ಣಾ ;

ಕೇವಲ ತತ್ವಜ್ಞಾನಿಯಾಗಿ ಕುಳಿತು ಮುಕ್ತಾಯಕ್ಕ ಪ್ರಾಪಂಚಿಕ ವ್ಯವಹಾರದ ಕಡೆಗೆ ಕಣ್ಣು ಮುಚ್ಚಿ ಕುಳಿತವಳಲ್ಲ. ಲೋಕದ ಆಗು-ಹೋಗುಗಳನ್ನು ಕಂಡಿದ್ದಾಳೆ, ಉಂಡಿದ್ದಾಳೆ. ಆ ಅನುಭವಗಳು ಆಕೆಯ ವಚನಗಳಲ್ಲಿ ಅಲ್ಲಲ್ಲಿ ಹಣಕಿ

ಹಾಕಿವೆ ; 'ತೊರೆಯ ಕಟ್ಟೆಯ ಕಟ್ಟಿ ನಿಲಿಸಲುಬಹುದೆ ? ನೆರೆ ಮರುಳಿಗೆ ಬುದ್ಧಿಯ ಹೇಳಲುಬಹುದೆ ? ಉಟ್ಟುದ ತೊರೆದವಂಗೆ ಊರೇನು ಕಾಡೇನು ?' 'ನಷ್ಟ ಸಂತಾನಕ್ಕೆ ಕುಲವೇನು. ಛಲವೇನು ?' 'ಹುಟ್ಟುಗೆಟ್ಟಾತಂಗೆ ಪುಣ್ಯವೇನು. ಪಾಪವೇನು' ಇಂಥ ಅರ್ಥಗರ್ಭಿತ ನುಡಿಗಳಿಗೇನೂ ಕೊರತೆಯಿಲ್ಲ ಈಕೆಯ ವಚನಗಳಲ್ಲಿ.

ಗುರುವಿನ ಕರುಣೆ ಪಡೆದ ಮುಕ್ತಾಯಕ್ಕನ ವಚನಗಳಲ್ಲಿ ಸಂತೃಪ್ತಮನೋಭಾವ ವ್ಯಕ್ತವಾಗಿದೆ. ಕೆಳಗಿನ ವಚನ ಆಕೆಯ ಅನುಭಾವಕ್ಕೆ ಹಿಡಿದ ಮಣಿದರ್ಪಣವಾಗಿದೆ :

ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ.
ಅಱಿಯಲಿಲ್ಲ ; ಮಱಿಯಲಿಲ್ಲ, ಕೂಡಲಿಲ್ಲ, ಅಗಲಲಿಲ್ಲ
ಮನ ಮೇರೆದಪ್ಪಿ ನಿರವಯಲಾದ ಸುಖವ
ಶೂನ್ಯ ನಿಶ್ಶೂನ್ಯವೆಂದು ನುಡಿಯಲುಂಟೆ ?
ಶಬ್ದ ಮುಗ್ಧವಾಗಿ ಎನ್ನ ಅಜಗಣ್ಣತಂದೆಯ ಬೆರಸಿದ ಬಳಿಕ.
ಉರಿಯುಂಡ ಕರ್ಪೂರದಂತಾದೆನಯ್ಯಾ

ಉರಿಯುಂಡ ಕರ್ಪೂರದಂತಾದ ಮುಕ್ತಾಯಕ್ಕ ಆಧ್ಯಾತ್ಮಜೀವಿಯಾಗಿ, ತತ್ವಜ್ಞಾನಿಯಾಗಿ, ದಿಟ್ಟವಿಚಾರವಾದಿಯಾಗಿ ಶಿವಶರಣೆಯರಲ್ಲಿ ಅಗ್ರಸ್ಥಾನವನ್ನು ಪಡೆದಿದ್ದಾಳೆ.

---

ತನುವ ಕರಗಿಸಿ, ಹರಿವ ಮನವ ನಿಲಿಸಿ
ಅಂಗಗುಣವ ಅಳಿದು, ಲಿಂಗಗುಣವ ನಿಲಿಸಿ
ಭಾವವಳಿದು ಬಯಕೆ ಸವೆದು ಮಹಾದೇವನಾದ ಶರಣರ
ಜಗದ ಮಾನವರೆತ್ತ ಬಲ್ಲರು, ಅಪ್ಪಣ್ಣಪ್ರಿಯ ಚನ್ನಬಸವಣ್ಣಾ ?

ಲಿಂಗಮ್ಮ

# “ವಚನಕಾರರ ದೃಷ್ಟಿಯಲ್ಲಿ ಸ್ತ್ರೀ”

ಶ್ರೀಮತಿ ಜಗದಂಬಾ ಮಲ್ಲೇದೇವರು

೧೨ನೆಯ ಶತಮಾನವು ಭಾರತೀಯ ಧಾರ್ಮಿಕ ಇತಿಹಾಸದಲ್ಲಿಯೇ ಒಂದು ಅಭೂತಪೂರ್ವ ಯುಗ. ಅದರಲ್ಲಿಯೂ ಸ್ತ್ರೀಯರಿಗೆ ಈ ಯುಗವು ಸುವರ್ಣಯುಗವೆನ್ನಬಹುದು. ಏಕೆಂದರೆ ಅದುವರೆಗೂ ಅಜ್ಞಾನಾಂಧಕಾರದಲ್ಲಿ ಮುಳುಗಿ ಸ್ವಾತಂತ್ರ್ಯಹೀನರಾದ ಮಹಿಳೆಯರಿಗೆ ವಚನಕಾರರು ಈ ಶತಮಾನದಲ್ಲಿ ಎಲ್ಲ ರೀತಿಯ ಸ್ವಾತಂತ್ರ್ಯ ದೊರೆಯುವಂತೆ ಮಾಡಿದರು.

ಮಹಿಳೆಯರ ಸ್ಥಾನಮಾನಗಳನ್ನು ಕುರಿತು ಭಾರತದ ಇತಿಹಾಸವನ್ನು ಅವಲೋಕಿಸಿದಾಗ ವೇದೋಪನಿಷತ್ತುಗಳ ಕಾಲದಲ್ಲಿ ಮಹಿಳೆಯರಿಗೆ ಬಹುಮಟ್ಟಿಗೆ ಉನ್ನತಸ್ಥಾನ ದೊರೆತಿದ್ದಿತು. ಅಪಾಲಾ, ಘೋಷಾ, ಸೂರ್ಯಾ, ವೈವಸ್ವತಿ, ಯಮಿ ಮೊದಲಾದ ಮಹಿಳೆಯರು ವೇದಗಳ ಕಾಲದಲ್ಲಿಯೂ ಗಾರ್ಗಿ, ಮೈತ್ರೇಯಿ, ಸುಲಭಾ ಮೊದಲಾದ ಮಹಿಳೆಯರು ಉಪನಿಷತ್ತುಗಳ ಕಾಲದಲ್ಲಿಯೂ ಪ್ರಸಿದ್ಧರಾಗಿ ಅಧ್ಯಾತ್ಮವಿದ್ಯೆಯಲ್ಲಿ ಬಲ್ಲಿದರಾಗಿದ್ದರೆಂಬುದು ಖಚಿತವಾಗಿ ತಿಳಿದುಬರುವುದು. ಆದರೆ ಮುಂದೆ ಸ್ಮೃತಿ ಗ್ರಂಥಗಳ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು ಕೇವಲ ಮನೆಗೆ ಸೀಮಿತವಾದುವು.'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂಬ ಉಕ್ತಿ ಪ್ರಚಲಿತದಲ್ಲಿದ್ದರೂ ಪ್ರಾಯಶಃ ಈ ಹೇಳಿಕೆಯು ಕೇವಲ ಗೃಹಕ್ಕೆ ಮಾತ್ರ ಸೀಮಿತವಾಯಿತು. ಹೊರಜಗತ್ತಿನಲ್ಲಿ ಆಕೆಗೆ ಸ್ಥಾನಮಾನ ಲಭಿಸದುದರ ಪರಿಣಾಮವಾಗಿ ಭಾರತದ ಸಾಂಸ್ಕೃತಿಕ ಹಾಗೂ ಬೌದ್ಧಿಕಕ್ಷೇತ್ರದಲ್ಲಿ ಸ್ವಾತಂತ್ರ್ಯಹೀನಳಾಗಿ ಪುರುಷರ ಕೈಗೊಂಬೆಯಾದಳು.

ಪಿತಾ ರಕ್ಷತಿ ಕೌಮಾರೇ, ಭರ್ತಾ ರಕ್ಷತಿ ಯೌವನೇ ।
ಪುತ್ರೋ ರಕ್ಷತಿ ವಾರ್ಧಕ್ಯೇ, ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥

ಕುಮಾರಿಯಾಗಿದ್ದಾಗ ತಂದೆ,ಯೌವನದಲ್ಲಿ ಪತಿ,ವೃದ್ಧಾಪ್ಯದಲ್ಲಿ ಪುತ್ರನು ರಕ್ಷಣೆ ಮಾಡುವುದರಿಂದ ಸ್ತ್ರೀಗೆ ಸ್ವಾತಂತ್ರ್ಯ ಇಲ್ಲವೆಂಬ ಮನುವಿನ ಮಾತೇ ಇದಕ್ಕೆ ನಿದರ್ಶನ. ಸ್ತ್ರೀಯ ಸಂಪೂರ್ಣ ಸ್ವಾತಂತ್ರ್ಯಹರಣ ಮಾಡಿ, ಆಕೆಯು ತನ್ನ ಜೀವಿತದ ಎಲ್ಲ ಕಾಲದಲ್ಲಿಯೂ ಒಂದಲ್ಲ ಒಂದು ರೀತಿ ಪುರುಷನ ಅಧೀನದಲ್ಲಿರುವಂತೆ ಮಾಡಿ ಗೃಹಸಂಕೋಲೆಯಲ್ಲಿ ಬಂಧಿಸಿದರು. ಇಷ್ಟು ಸಾಲದೆಂಬಂತೆ ಆಕೆ, ಮನೆಯಲ್ಲಿ ಧಾರ್ಮಿಕ ಆಚರಣೆಗಳನ್ನು ಆಚರಿಸಲೂ ಅವಕಾಶವಿರಲಿಲ್ಲ. "ತನ್ನ ಪತಿ ಗುಣಹೀನನಾಗಿದ್ದರೂ ಕಾಮುಕನಾಗಿದ್ದರೂ ಸದ್ಗುಣರಹಿತನಾಗಿದ್ದರೂ ಸತಿ ಅವನನ್ನು ದೇವರೆಂದೇ ಭಾವಿಸಬೇಕು" ಎಂದು ಮನು ಮೊದಲಾದ ಶಾಸ್ತ್ರಕಾರರು ಹೇಳಿದರಷ್ಟೇ ಅಲ್ಲದೆ ದುರ್ನಡತೆಯಿಂದ ಕೂಡಿದ ಪತಿಯಾದರೂ ಸತಿಯಾದವಳು ಆತನ ಸೇವೆ ಮಾಡಬೇಕೆಂದೂ ವಿಧಿಸಿದರು. ವೇದಾಧ್ಯಯನ ಮಾಡುವ ಅವಕಾಶವೂ ಸ್ತ್ರೀಯರಿಗೆ ಲಭಿಸದಾಯಿತು, ಧಾರ್ಮಿಕ ಸಂಸ್ಕಾರಕ್ಕೂ ಅನರ್ಹಳಾದಳು, ಘೋಷಾಪದ್ಧತಿಗೆ ಹಾಗೂ ಸಹಗಮನ ಪದ್ಧತಿಗೆ ಪುರಸ್ಕಾರ ದೊರೆಯಿತು. ಒಟ್ಟಿನಲ್ಲಿ ಸ್ತ್ರೀ ವ್ಯಕ್ತಿಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಕಳೆದುಕೊಂಡಳು.

ನೆಚ್ಚಿನ ಶಿಷ್ಯನಾದ ಆನಂದನ ಪ್ರಾರ್ಥನೆಯನ್ನು ಮನ್ನಿಸಿ ಬುದ್ಧ ಸ್ತ್ರೀಯರಿಗೆ ಸ್ವಾತಂತ್ರವನ್ನು ಕೊಟ್ಟನಾದರೂ ಪರಿಪೂರ್ಣ ಸ್ವಾತಂತ್ರ್ಯ ಮಹಾತ್ಮಬುದ್ಧನ ಕಾಲದಲ್ಲಿಯೂ ಸ್ತ್ರೀಯರಿಗೆ ಲಭಿಸದಾಯಿತು. ಅನಂತರ ವರಾಹಮಿಹಿರ ಮೊದಲಾದ ಕೆಲವರು ಕ್ರಾಂತಿಕಾರಿ ವ್ಯಕ್ತಿಗಳು ಈ ತೆರನಾದ ವಿಚಾರಧಾರೆಯನ್ನು ಖಂಡಿಸಿದರು. ಸಮಾಜವು ಇದಕ್ಕೆ ಪ್ರೋತ್ಸಾಹ ನೀಡದಿದ್ದುದರ ಫಲವಾಗಿ ಮಹಿಳೆಯರ ಸ್ಥಿತಿಗತಿಯು ಸುಧಾರಿಸಲಿಲ್ಲ. ಈ ದಿಸೆಯಲ್ಲಿ ಕ್ರಾಂತಿಕಹಳೆಯನ್ನೂದಿ ದಿಟ್ಟಹೆಜ್ಜೆಯನ್ನಿಟ್ಟು ಸಮಾಜವನ್ನು ಬಡಿದೆಬ್ಬಿಸಿ, ಸ್ತ್ರೀಯರಿಗೆ ಸರ್ವಸಮಾನತೆಯನ್ನು ಕಲ್ಪಿಸಿಕೊಟ್ಟವ

ರೆಂದರೆ ವಚನಕಾರರು. ಮಹಿಳೆಯರಿಗೆ ಸಾಮಾಜಿಕ ಸ್ವಾತಂತ್ರ್ಯವನ್ನು ಕೊಟ್ಟುದಲ್ಲದೆ, ಧಾರ್ಮಿಕ ಸ್ವಾತಂತ್ರ್ಯವನ್ನು ಅನುಗ್ರಹಿಸಿ, ಸ್ತ್ರೀಯರೂ ಮುಕ್ತಿಮಾರ್ಗಾವಲಂಬಿಗಳಾಗುವಂತೆ ಮಾಡಿದ ಕೀರ್ತಿ ಶಿವಶರಣರದು. ಶರಣರು ನುಡಿದಂತೆ ನಡೆದು ಮಹಿಳೆಯರೂ ಅನುಭವಮಂಟಪದ ಚರ್ಚೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿ ಅವರನ್ನು ಅಧ್ಯಾತ್ಮದ ತುಟ್ಟತುದಿಗೇರಿಸಿದ ಹಿರಿಮೆ ಶರಣರದು. ಅದುವರೆಗೂ ಅನ್ಯಾಯ ಹಾಗೂ ದಬ್ಬಾಳಿಕೆಗಳಿಂದ ಬಳಲಿ ಬೆಂಡಾಗಿದ್ದ ಸ್ತ್ರೀಯರು ತಮ್ಮತನವನ್ನು ಕಂಡುಕೊಳ್ಳಲು ಅನುವು ದೊರೆಯಿತು. ವೈಜ್ಞಾನಿಕಯುಗವೆಂದು ಕರೆಯಲ್ಪಡುವ ಈ ೨೦ನೆಯ ಶತಮಾನದಲ್ಲಿಯೂ, ಇನ್ನೂ ಕೆಲವು ಧರ್ಮಗಳು ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡಲು ಹಿಂದೆ ಮುಂದೆ ನೋಡುತ್ತಿರುವಾಗ ಎಂಟು ಶತಮಾನಗಳ ಹಿಂದೆಯೇ ಮಹಿಳೆಯರಿಗೆ ಪರಿಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟವರು ಬಸವಾದಿ ಶರಣರು.

ವಚನಕಾರರಲ್ಲಿ ಅಗ್ರಮಾನ್ಯರಾದ ದೇವರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ ಮೊದಲಾದ ಶರಣರು ಮಹಿಳೆಯರ ಸ್ಥಾನಮಾನಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೇಗೆ ವ್ಯಕ್ತಪಡಿಸಿದ್ದಾರೆಂಬುದನ್ನು ನೋಡೋಣ:

ಹೆಣ್ಣು ಮಾಯೆ, ಅಧ್ಯಾತ್ಮಸಾಧನೆಗೆ ತೊಡಕು ಎಂಬ ಸಂಪ್ರದಾಯವಾದಿಗಳ ಭಾವನೆಯನ್ನು ನಿರಾಕರಿಸಿ—

> ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ
> ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ

ಎಂದು ಶರಣರು ಪ್ರತಿಪಾದಿಸಿದರು.

> ಇಂದ್ರಿಯನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು
> ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು
> ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು
> ಸತಿಪತಿ ರತಿಸುಖ ಭೋಗೋಪಭೋಗ ವಿಳಾಸವ ಬಿಟ್ಟನೆ ಸಿಂಧು ಬಲ್ಲಾಳನು

ಎನ್ನುತ್ತಾರೆ ಬಸವಣ್ಣ. ಆದುದರಿಂದ ಧನ್ಯಗೃಹಸ್ಥಾಶ್ರಮವೂ ಕೂಡ ಅಧ್ಯಾತ್ಮಮಾರ್ಗಕ್ಕೆ ಸಹಕಾರಿ ಎಂಬುದನ್ನು ಬಸವಣ್ಣನವರು ನಿದರ್ಶನಗಳೊಂದಿಗೆ ಪ್ರತಿಪಾದಿಸಿ, ಸ್ತ್ರೀ ಅಧ್ಯಾತ್ಮಕ್ಕೆ ತೊಡಕಲ್ಲ ಆಕೆ ಮಾನವನು ಅಧ್ಯಾತ್ಮಮಾರ್ಗದಲ್ಲಿ ಮುನ್ನಡೆಯಲು ಹೇಗೆ ಸಹಕಾರಿಯಾಗುವಳೆಂಬುದನ್ನು ಕೂಡ ವಿವರಿಸಿದ್ದಾರೆ.

ಬಸವಣ್ಣ, ದಾಸಿಮಯ್ಯ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯ, ಹಡಪದ ಅಪ್ಪಣ್ಣ, ಅಮುಗಿದೇವ ಮೊದಲಾದ ಅನೇಕ ಜನ ಶರಣರು ದಾಂಪತ್ಯ ಜೀವನವನ್ನು ನಡೆಸಿ ಅದರ ಮಹತ್ವವನ್ನು ಅರುಹಿದ್ದಾರೆ. ಸಮರಸ ದಾಂಪತ್ಯದ ಶ್ರೇಷ್ಠತೆಯನ್ನೂ, ವಿರಸ ದಾಂಪತ್ಯದ ಕಹಿಯನ್ನೂ ಅರ್ಥವತ್ತಾಗಿ ನಿರೂಪಿಸಿದ್ದಾರೆ:

> ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ
> ದಂಪತಿಗಳು ಏಕೋಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು

ಎಂದು ಅಪ್ಪಣೆ ಕೊಡಿಸಿದ್ದಾರೆ ವೈರಾಗ್ಯನಿಧಿ ಅಲ್ಲಮಪ್ರಭು.

> ಸತಿಪತಿಗಳೊಂದಾದವರ ಭಕ್ತಿ ಹಿತವಾಗಿಪ್ಪುದು ಶಿವಂಗೆ
> ಸತಿಪತಿಗಳೊಂದಾಗದವರ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ

ಎಂಬುದಾಗಿ ಉದ್ಗರಿಸಿದ್ದಾರೆ ದೇವರ ದಾಸಿಮಯ್ಯನವರು. ಬಸವಣ್ಣನವರೂ ಸಹ:

> ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆ
> ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ
> ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ, ಹೆಂಡದ ಮಡಿಕೆಯ ಹೊರ
> ತೊಳೆದಂತೆ ಕೂಡಲ ಸಂಗಮದೇವಾ

ದಾಂಪತ್ಯ ಜೀವನದಲ್ಲಿ ಪತಿಪತ್ನಿಯರು ಸಮರಸವಾಗಿಲ್ಲದಿದ್ದರೆ ಹೆಂಡದ ಮಡಿಕೆಯ ಹೊರ ತೊಳೆದಂತೆ. ಏಕೆಂದರೆ ಕೇವಲ ಹೊರ ತೊಳೆಯುವಿಕೆಯಿಂದ ಅದರ ಅಂತರಂಗದ ವಾಸನೆ ಹೋಗುವುದಿಲ್ಲ. ಒಳ ಹೊರಗೆ ಶುದ್ಧ

ವಾಗಿರದಿದ್ದರೆ ಪ್ರಯೋಜನವಿಲ್ಲ ಎಂದು ಹೇಳಿ ದೃಷ್ಟಾಂತದ ಮೂಲಕ ದಾಂಪತ್ಯ ಜೀವನದ ಹೊಂದಾಣಿಕೆಯನ್ನು ಅರುಹಿದ್ದಾರೆ :

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ, ಹಾವಿನ ಸಂಗವೇ ಲೇಸು ಕಂಡಯ್ಯ,
ಕಾಯದ ಸಂಗವ ವಿವರಿಸಬಲ್ಲಡೆ, ಕಾಯದ ಸಂಗವೇ ಲೇಸು ಕಂಡಯ್ಯ,
ತಾಯಿ ರಕ್ಕಸಿಯಾದಂತೆ ಕಾಯವಿಕಾರವು
ಚೆನ್ನಮಲ್ಲಿಕಾರ್ಜುನಯ್ಯ, ನೀನೊಲಿದವರು ಕಾಯಗೊಂಡಿದ್ದರೆನಬೇಡಾ

ಘೋರವಿಷದಿಂದ ಕೂಡಿದ ಹಾವಿನ ಹಲ್ಲನ್ನು ತೆಗೆದರೆ ಅದರ ಸಹವಾಸ ಅಪಾಯಕಾರಿಯಲ್ಲ. ಹಾಗೆಯೇ ಸ್ತ್ರೀ ಪುರುಷರು ಈ ಕಾಯವಿಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಹಾಗಲ್ಲದಿದ್ದರೆ ರಕ್ಷಿಸುವ ತಾಯಿಯೇ ರಾಕ್ಷಸಿ ಆದಂತೆ ಈ ಕಾಯವಿಕಾರಗಳು ಮಾನವರನ್ನು ಕಬಳಿಸುವವು.

ವಚನಕಾರರು ಸ್ತ್ರೀ ಪುರುಷರಲ್ಲಿ ತರತಮಭಾವನೆಯನ್ನು ಕಲ್ಪಿಸುವುದಿಲ್ಲ. ದೇವರದಾಸಿಮಯ್ಯನವರು ಹೇಳು ವಂತೆ :

ನಿಡಿದೊಂದು ಕೋಲನು ಕಡಿದು ಎರಡು ಮಾಡಿ
ಅಡಿಯ ಹೆಣ್ಣು ಮಾಡಿ, ಬಡತನವ ಗಂಡು ಮಾಡಿ,
ನಡುವೆ ಹೊಸೆದೊಡೆ ಹುಟ್ಟಿದ ಕಿಚ್ಚು
ಹೆಣ್ಣೋ ಗಂಡೋ ರಾಮನಾಥ

ಒಂದು ಬಿದಿರುಕೋಲನ್ನು ಎರಡು ಭಾಗ ಮಾಡಿ ಮೇಲಣ ಭಾಗವನ್ನು ಪುರುಷನೆಂದೂ, ಕೆಳಗಣ ಭಾಗವನ್ನು ಸ್ತ್ರೀಯೆಂದೂ ಭಾವಿಸಿದಾಗ ಅವುಗಳ ಸಂಪರ್ಕದಿಂದ ಉದಿಸುವ ಕಿಚ್ಚು ಹೆಣ್ಣೋ ಗಂಡೋ ? ಎನ್ನುತ್ತಾರೆ. ಮತ್ತೂ ಮುಂದುವರಿದು :

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ ?
ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತಬಲ್ಲರೈ, ರಾಮನಾಥ ?

ನಿರಾಕಾರವಾದ ಪ್ರಾಣಕ್ಕೆ ಸ್ತ್ರೀಪುರುಷರೆಂಬುದಿಲ್ಲ. ಸ್ತ್ರೀಗೆ ಧಾರ್ಮಿಕ ಸಂಸ್ಕಾರವಿಲ್ಲವೆನ್ನಕೂಡದು. ಹೇಗೆ ಪುರುಷನ ಪ್ರಾಣಕ್ಕೆ ಯಜ್ಞೋಪವೀತವು ಗಂಟುಹಾಕಿರಲ್ಪಡದೆ, ಆತನಿಗೆ ಅವನ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಕೊಡಲ್ಪಡುವುದೋ ಅಂತೆಯೇ ಸ್ತ್ರೀಯರಿಗೂ ಧಾರ್ಮಿಕ ಆಚರಣೆಯ ಹಕ್ಕನ್ನು ಕೊಡಬೇಕೆನ್ನುತ್ತಾರೆ ಶರಣರು. ಏಕೆಂದರೆ ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ದಾಸಿಮಯ್ಯನವರು ಹೇಳುವಂತೆ :

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ
ಗಂಡೂ ಅಲ್ಲ ಕಾಣಾ ರಾಮನಾಥ

ಅವಿನಾಶಿಯಾದ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ, ಎನ್ನುವ ಮಹೋನ್ನತ ಮನೋಭಾವ ಉಳ್ಳವರಾದ ವಚನ ಕಾರರು ಸಮಾಜದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನತೆಯನ್ನು ಕಲ್ಪಿಸಿ, ಧಾರ್ಮಿಕಸ್ವಾತಂತ್ರ್ಯವನ್ನು ಅನುಗ್ರಹಿಸಿ ಸ್ತ್ರೀಕುಲೋದ್ಧಾರಕರಾದರು.

ವಚನಕಾರರು ತಾವು ನುಡಿದಂತೆ ನಡೆದು ಮನುಕುಲಕ್ಕೆ ಮಾರ್ಗದರ್ಶಕರಾಗಿದ್ದಾರೆ.

ಅಣ್ಣ ಬಸವಣ್ಣನವರ ತಂದೆತಾಯಿಗಳು ಅವರ ಎಂಟನೆಯ ವಯಸ್ಸಿಗೆ ಉಪನಯನ ಸಂಸ್ಕಾರಕ್ಕೆ ಸಿದ್ಧತೆ ಮಾಡಿ, ಅದನ್ನು ಪಡೆಯುವಂತೆ ಹೇಳಿದಾಗ, ತನಗಿಂತ ಹಿರಿಯಳಾದ ತನ್ನ ಅಕ್ಕನಿಗೆ ಮೊದಲು ಸಂಸ್ಕಾರವನ್ನು ಕೊಡು ವಂತೆ ಪ್ರಾರ್ಥಿಸುವರು. ಆದರೆ 'ಹೆಣ್ಣಿಗೆ ಆ ಸಂಸ್ಕಾರ ಸಲ್ಲದೆಂದಾಗ' ನೊಂದ ಬಸವಣ್ಣನವರು 'ಹೆಣ್ಣಿಗೊಂದು ಪರಿ ಗಂಡಿಗೊಂದು ಪರಿಯ ನಡೆ ಸಲ್ಲದು, ಅಂತಹ ಧರ್ಮ ನನಗೆ ಬೇಡ' ಎಂದು ಅದನ್ನು ತ್ಯಜಿಸಿ ತಮ್ಮ ಸೋದರಿಯೊಡ ಗೂಡಿ ಕಪ್ಪಡಿ ಸಂಗಮಕ್ಕೆ ಧಾವಿಸುವರು. ಅಲ್ಲಿ ಸೋದರ ಸೋದರಿಯರು ಜಾತವೇದಮುನಿಗಳಿಂದ ಧಾರ್ಮಿಕ ಸಂಸ್ಕಾರ ಪಡೆಯುವರು. ಅನಂತರ ಕಲ್ಯಾಣದಲ್ಲಿ ಮಹಾಮಂತ್ರಿಪದವಿ ಪಡೆದು ತಮ್ಮ ಸಹಧರ್ಮಿಣಿಯರಾದ

ನೀಲಾಂಬಿಕೆ, ಗಂಗಾಂಬಿಕೆ ಹಾಗೂ ಸೋದರಿ ಅಕ್ಕನಾಗಲಾಂಬಿಕೆಯರೊಡಗೂಡಿ ಅನುಭವಮಂಟಪದ ಅನುಭಾವ ಗೋಷ್ಠಿಯಲ್ಲಿ ಭಾಗವಹಿಸಿದರು. ತಾವು ನುಡಿದಂತೆ ನಡೆದು ಇತರರಿಗೂ ಮಾರ್ಗದರ್ಶಕರಾಗಿ, ಪ್ರೇರಕಶಕ್ತಿಯಾಗಿ ಸ್ತ್ರೀಕುಲವನ್ನು ಅಧ್ಯಾತ್ಮಿಕ ದಾಸ್ಯಶೃಂಖಲೆಯಿಂದ ಮುಕ್ತಿಗೊಳಿಸಿದರು.

ದಾಸಿಮಯ್ಯನವರು :

ಗಂಡ ಭಕ್ತನಾಗಿ ಹೆಂಡತಿ ಭವಿಯಾದಡೆ ಉಂಡ ಊಟ ಇಬ್ಬರಿಗೂ ಸರಿಭಾಗ
ಸತ್ತನಾಯ ತಂದಟ್ಟದ ಮೇಲೆ ಇಳುಹಿ ಒಬ್ಬರೊಪ್ಪಚ್ಚಿಯ
ಹಂಚಿಕೊಂಡು ತಿಂಬಂತೆ ಕಾಣಾ ರಾಮನಾಥ

ಪುರುಷ ಶ್ರೇಷ್ಠ ಸ್ತ್ರೀ ಕನಿಷ್ಠವೆನ್ನುತ್ತಿದ್ದ ಅಂದಿನ ಸಮಾಜಕ್ಕೆ ದಾಸಿಮಯ್ಯನವರ ಈ ಮಾತು ಛಾಟಿ ಏಟಿನಂತಿದೆ. ಗಂಡನಾದವನು ತಾನು ಭಕ್ತ, ಧಾರ್ಮಿಕ ಸಂಸ್ಕಾರ ಪಡೆದು ಸನ್ಮಾರ್ಗಕ್ಕೆ ಹೋಗುವವನು ಎಂದಾದರೆ ಆತನ ಸಹಧರ್ಮಿಣಿ, ಸಹಭಾಗಿನಿ ಎಂದು ಹೇಳಿಕೊಳ್ಳುವ ಸ್ತ್ರೀಯನ್ನು ಭವಿಯನ್ನಾಗಿಟ್ಟರೆ ಆತನೆಂತು ಶುದ್ಧನಾಗುವನು? ಹೀಗೆ ಪುರುಷರಷ್ಟೇ ಸಮಾನಸ್ಥಾನ ಕೊಡಬೇಕೆಂದು ಪ್ರತಿಪಾದಿಸುತ್ತ ಅಂಧಶ್ರದ್ಧೆ, ಅಜ್ಞಾನ, ಸಂಪ್ರದಾಯಗಳಿಂದ ಕೂಡಿದ ಸಮಾಜವನ್ನು ಬಡಿದೆಬ್ಬಿಸಿದರು. ಶರಣರು ಸಮಾನಸ್ಥಾನ ಪಡೆದ ಸ್ತ್ರೀಯು ಸಮಾಜದಲ್ಲಿ ಹೇಗಿರಬೇಕು ಎನ್ನುವುದರ ಜೊತೆಗೆ, ಪುರುಷರಿಗೂ ಸ್ತ್ರೀಯರನ್ನು ಹೇಗೆ ಕಾಣಬೇಕು ಎಂಬ ನೀತಿಸಂಹಿತೆಯನ್ನು ಅರುಹಿದರು.

ವಚನಕಾರರು ಸ್ತ್ರೀಯರನ್ನು ಎಷ್ಟು ಗೌರವಾದರಗಳಿಂದ ಕಾಣುತ್ತಿದ್ದರೆಂಬುದು ಅವರ ವಚನಗಳನ್ನು ಓದಿದಾಗ ವ್ಯಕ್ತವಾಗುವುದು. ಅಂದಿನ ಸ್ತ್ರೀಸಮಾಜಕ್ಕೆ ಗುರುವಾಗಿ, ಅಣ್ಣನಾಗಿ, ತಂದೆಯಾಗಿ, ಅರಿವಿನ ಮಹಾಂತರಾಗಿ ದಾರಿ ತೋರಿ ಅಜ್ಞಾನ ಮತ್ತು ದಾಸ್ಯದಲ್ಲಿ ತೊಳಲುತ್ತಿದ್ದ ಮಹಿಳೆಯರನ್ನು ಉದ್ಧರಿಸಿದರು. ಶರಣರು ಮಹಿಳೆಯರನ್ನು ತಾಯಿಯಾಗಿ, ಮಹಾದೇವಿಯಾಗಿ, ಅಕ್ಕನಾಗಿ ಕಂಡಿರುವುದು ಅನೇಕ ವಚನಗಳಿಂದ ತಿಳಿದುಬರುತ್ತದೆ. ನಿಂಬವ್ವೆಯನ್ನು ಸಂಬೋಧಿಸುವಾಗ "ಎನ್ನ ತಾಯಿ ನಿಂಬವ್ವೆ...." ಎನ್ನುವರು. ಮಹಾದೇವಿಯಕ್ಕನವರ ಬಗೆಗೆ ಹೇಳುತ್ತ ಬಸವಣ್ಣನವರು ". . . . ಕೂಡಲಸಂಗಮದೇವನಲ್ಲಿ ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲವು ನೋಡಾ ಪ್ರಭುವೆ" ತಮಗಿಂತ ಕಿರಿಯರಾದ ಮಹಾದೇವಿಯನ್ನು 'ಎನ್ನ ಹೆತ್ತ ತಾಯಿ' 'ಎನ್ನ ಅಕ್ಕ' ಎಂದು ಹೇಳುವರು. ಅಷ್ಟೇ ಅಲ್ಲದೆ ಪರಸ್ತ್ರೀಯರನ್ನು ಹೇಗೆ ಕಾಣಬೇಕು ಎಂಬುದರ ಬಗೆಗೆ ಅನೇಕ ವಚನಕಾರರು ತಮ್ಮದೇ ಆದ ರೀತಿಯಲ್ಲಿ ಹೇಳಿದ್ದಾರೆ.

ಕೇಶಿರಾಜ ದಣ್ಣಾಯಕರು ನಿರೂಪಿಸಿದ ೬೪ ಶೀಲಗಳಲ್ಲಿ ೨೭ನೆಯ ಶೀಲವೆಂದರೆ :

ಪರಸತಿಯ ಕಾಣುತಾಗಂ । ವರಜನನಿಯ ಪುತ್ರಿ
ತನ್ನ ವೊಡಹುಟ್ಟಿದಳೆಂದಿರುಹ ಮನದಾರನವರಂ
ಪರಿಭಾವಿಸಿ ನೊಡನಾವ ತೆರದಿ ಮಹೇಶಂ

ತನಗೊಂದು ತನ್ನ ಸತಿಗೊಂದು ಎಂದೆನ್ನದೆ ಭಿನ್ನಮನಸ್ಕರಾಗದೆ ಏಕಮನಸ್ಕರಾಗಿರುವುದು ಅವರು ನಿರೂಪಿಸಿರುವ ಶೀಲ.

ಪರಸ್ತ್ರೀಯರನ್ನು ತನ್ನ ಒಡಹುಟ್ಟಿದ ಸೋದರಿಯಂತೆ ಕಾಣಬೇಕು ಎನ್ನುತ್ತಾರೆ. ಬಸವಣ್ಣನವರು :

ಎಲ್ಲಿ ನೋಡಿದೊಡಲ್ಲಿ ಮನವೆಳಸಿದರೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ ।
ಪರವಧುವನು ಮಹಾದೇವಿಯೆಂಬೆ.
ಕೂಡಲಸಂಗಮದೇವ

ಎಂಬ ವಚನವನ್ನು ನೋಡಿದಾಗ, ಅವರು ಪರಸ್ತ್ರೀಯರನ್ನು ಸಾಕ್ಷಾತ್ 'ಮಹಾದೇವಿ' ಎಂದು ಪೂಜ್ಯಭಾವದಿಂದ ಕಂಡಿರುವುದು ವ್ಯಕ್ತವಾಗುತ್ತದೆ. ಇಂತಹ ಮಹಾದೇವಿ ಸ್ವರೂಪಳಾದ ಪರಸ್ತ್ರೀಯನ್ನು 'ತುಡುಗುಣಿತನವಲ್ಲಿ ಪರವಧುವ ನೋಡುವ ಸರಸ ಬೇಡ ಕಾಣಿರಣ್ಣಾ' ಎಂದು ಹೇಳಿ ಕಳ್ಳನೋಟದಿಂದ ಪರವಧುವನ್ನು ನೋಡುವುದಾಗಲಿ ಇಲ್ಲವೆ ಅವರೊಡನೆ ಸರಸವಾಡುವುದಾಗಲಿ ಸಲ್ಲದು ಎಂದಿದ್ದಾರೆ.

ನೋಡಲಾಗದು ನುಡಿಸಲಾಗದು ಪರಸ್ತ್ರೀಯ ಬೇಟ ಕಾಣಿರೋ
ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ ಕಾಣಿರೊ
ಒಂದಾಸೆಗೆ ಸಾಸಿರ ವರುಷ ನರಕದೊಳದ್ದುವ
ಕೂಡಲಸಂಗಮದೇವ

ಅಲ್ಪಸುಖಕ್ಕೆ ಬಯಸಿ ಸಾಸಿರವರುಷ ನರಕಭಾಜನವಾಗಬಾರದೆಂದು ಎಚ್ಚರಿಕೆಯನ್ನು ಇತ್ತಿದ್ದಾರೆ:

ಹರಿವ ಹಾವಿಂಗಂಜೆ, ಉರಿವ ನಾಲಿಗೆಗಂಜೆ
ಸುರಗಿಯ ಮೊನೆಗಂಜೆ
ಒಂದಕ್ಕಂಜುವೆ, ಒಂದಕ್ಕಳುಕುವೆ
ಪರಧನ ಪರಸ್ತ್ರೀವೆಂಬೀಜೂಬಿಂಗಂಜುವೆ
ಮುನ್ನಂಜದ ರಾವಣನೇ ವಿಧಿಯಾದ
ಅಂಜುವೆನಯ್ಯಾ, ಕೂಡಲಸಂಗಮದೇವ

ಹರಿವ ಹಾವಿಗಾಗಲಿ. ಉರಿವ ಕೆನ್ನಾಲಿಗೆಗಾಗಲಿ. ಕತ್ತಿಯ ಮೊನೆಗಾಗಲಿ ಅಂಜುವುದಿಲ್ಲ. ಆದರೆ ಪರಧನ, ಪರಸ್ತ್ರೀ ಇವುಗಳಿಗೆ ನಾನು ಅಂಜುವೆ. ಏಕೆಂದರೆ ಈ ಹಿಂದೆ ಪರಸ್ತ್ರೀವ್ಯಾಮೋಹಕ್ಕೆ ಗುರಿಯಾದ ರಾವಣನ ಗತಿ ಏನಾಯಿತು ? ಬಸವಣ್ಣನವರು ಹೇಳುವಂತೆ 'ಮಾರಿ. ಮಸಣಿಯೆಂಬುವು ಬೇರಿಲ್ಲ ಕಾಣಿಭೋ. ಕಂಗಳು ತಪ್ಪಿ ನೋಡಿದರೆ ಮಾರಿ' ಆದುದರಿಂದ ಪರಸ್ತ್ರೀಯನ್ನು ದುರ್ಭಾವನೆಯಿಂದ ನೋಡಲಾಗದು. ನುಡಿಸಲಾಗದು ಏಕೆಂದರೆ ಜೋದರ ಮಾದಣ್ಣನು ಹೇಳುವಂತೆ :

ಮುನ್ನ ಪರಸತಿ ಪಾರ್ವತಿ ಎಂದು
ನಡೆಸಿತ್ತು, ನುಡಿಸಿತ್ತು ಗುರುವಚನ
ಬಳಿಕ ಎನ್ನ ಶರಣಸತಿ ಎಂದು ನಡೆಸಿತ್ತು, ನುಡಿಸಿತ್ತು ಗುರುವಚನ
ಇನ್ನು ಸತಿಯರೆಲ್ಲ ಗುರುಸತಿಯರೆಂದು
ನಡೆಸಿತ್ತು, ನುಡಿಸಿತ್ತು ಗುರುವಚನ

ಪರಸತಿಯರೆಲ್ಲ ಜಗತ್ತಿನ ಶಕ್ತಿಯಾದ ಹಾಗೂ ಆ ಪರಾತ್ಪರ ವಸ್ತುವಿನ ಸತಿಯಾದ ಪಾರ್ವತಿಯ ಸ್ವರೂಪ ಎಂದಿದ್ದಾರೆ. ಚೆನ್ನಬಸವಣ್ಣನವರು ಹೇಳುವಂತೆ:

ಶಿವಲಿಂಗವ ನೋಡುವ ಕಣ್ಣಿನಲಿ
ಪರಸ್ತ್ರೀಯ ನೋಡಿದಡೆ ಅಲ್ಲಿ ಲಿಂಗವಿಲ್ಲ

ಇದನರಿಯದಿರ್ದಡೆ ಬಳ್ಳದಲ್ಲಿ ಸುರೆಯ ತುಂಬಿ, ಮೇಲೆ ಬೂದಿಯ ಹೂಸಿದಂತಾಯಿತ್ತು. ಏಕೆಂದರೆ 'ಲಿಂಗವಂತರು ತಾವಾದ ಬಳಿಕ ಅಂಗನೆಯರ ನಡೆ, ನುಡಿಗೊಮ್ಮೆ ಲಿಂಗದ ರಾಣಿಯರೆಂದು ಭಾವಿಸಬೇಕು' ತಾನು ಪ್ರಾಪಂಚಿಕನಾಗಿ ಪರಮಾರ್ಥವ ಪಡೆಯಬೇಕೆಂಬಾಶೆಯುಳ್ಳಡೆ 'ಪರಧನ, ಪರಸ್ತ್ರೀಯ ವಿವರ್ಜಿಸಿ ಪೂಜಿಸು ಪರಶಿವನ' ಎನ್ನುತ್ತಾರೆ ಶಿವಯೋಗಿ ಸಿದ್ಧರಾಮರು. ಬಸವಣ್ಣನವರು ಹೇಳುವಂತೆ :

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ

ಛಲದಂಕಮಲ್ಲನಾಗಿ. ಅನ್ಯವಧುವೆಂಬುದು ನಿಮ್ಮ ರಾಣಿವಾಸ ಎಂದು ಭಾವಿಸುವನು. ದೇವರದಾಸಿಮಯ್ಯನವರು ಹೇಳುವಂತೆ :

ಗಂಡನುಳ್ಳಮ್ಮನ ಗೌರಿ ಎಂದು ಕಂಡಡೆ
ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತನು

ಭೂಮಂಡಲಕ್ಕೆ ಅಧಿಪತಿಯಾಗುವನು. ಇಂತಹ ಉದಾತ್ತ ವ್ಯಕ್ತಿತ್ವವನ್ನು ಮಾನವನು ತಾನು ಪಡೆದು ಏಕಪತ್ನೀ ವ್ರತಸ್ಥನಾಗಿ ಆ ಮೂಲಕ ತನ್ನ ಸುತ್ತಲಿನ ಸಮಾಜದ ನೈತಿಕಮೌಲ್ಯವನ್ನು ಹೆಚ್ಚಿಸಬೇಕು ಎನ್ನುತ್ತಾರೆ ವಚನಕಾರರು.

ವಚನಕಾರರು ಇಂತಹ ನೀತಿಸಂಹಿತೆಯನ್ನು ಕೇವಲ ಪುರುಷರಿಗೆ ಮಾತ್ರ ಹೇಳದೆ ಸ್ತ್ರೀಯರಿಗೂ ಅರುಹಿದ್ದಾರೆ. ಅದೇತಾನೆ ಸರ್ವಸ್ವಾತಂತ್ರ್ಯವನ್ನು ಪಡೆದ ಮಹಿಳೆ ಸಹಜವಾಗಿ ತಪ್ಪುನಡೆದರೂ ನಡೆಯಬಹುದು. ಹಾಗೆ ನಡೆಯದಂತೆ ಶರಣರು ಅವರಿಗೆ ಎಚ್ಚರಿಕೆಯ ನುಡಿಗಳನ್ನಿತ್ತಿದ್ದಾರೆ. ಸತಿಪತಿಗಳು ಒಂದು ನಾಣ್ಯದ ಎರಡು ಮುಖ—ಒಂದು ರಥದ ಎರಡು ಚಕ್ರಗಳಿದ್ದಂತೆ. 'ನೀರಿಗೆ ನೈದಿಲೆ ಶೃಂಗಾರ, ಸಮುದ್ರಕ್ಕೆ ತೆರೆಯೆ ಶೃಂಗಾರ, ನಾರಿಗೆ ಗುಣವೇ ಶೃಂಗಾರ' ಇಂತಹ ಸುಗುಣಯುಕ್ತಳಾದಾಗ ಮಾತ್ರ ಅವಳ ಬಾಳು ಸಾರ್ಥಕ. ಹಾಗಲ್ಲದೆ :

> ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
> ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
> ಇದ್ದರೇನೋ, ಶಿವಶಿವ ಹೋದರೇನೊ ?

ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತನ ಇರುವು ಹೇಗೆ ವ್ಯರ್ಥವೋ ಅಂತೆಯೇ ತನ್ನ ಪತಿಯಲ್ಲಿ ಸ್ನೇಹವಿಡದ ಹೆಂಡತಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. "ಅವಳ ವಚನ ಬೆಲ್ಲದಂತೆ. ಹೃದಯದಲ್ಲಿರ್ಪುದು ನಂಜು' ಎಂದು ದುರ್ನಡತೆಯ ಸ್ತ್ರೀಯನ್ನು ಖಂಡಿಸಿದ್ದಾರೆ. ಪರಮಪತಿವ್ರತೆಗೆ ಗಂಡನೊಬ್ಬ ಅಂತೆಯೇ ನಂಬಬಲ್ಲ ಭಕ್ತನಿಗೆ ದೇವನೊಬ್ಬ.

> ದೇವನೊಬ್ಬ ನಾಮ ಹಲವು
> ಪರಮ ಪತಿವ್ರತೆಗೆ ಗಂಡನೊಬ್ಬ
> ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ಯುವನು
> . . . . . . . . . . . . . . . . . .

ಆದುದರಿಂದ ಮತ್ತೊಂದಕ್ಕೆ ಎಳಸಬಾರದು. ಹಾಗೆ ಅಪೇಕ್ಷಿಸಿದ್ದೇ ಆದರೆ :

> ಅರಸನ ಕಂಡು ತನ್ನ ಪುರುಷನ ಮರೆದರೆ
> ಮರನೇರಿ ಕೈಬಿಟ್ಟಂತಾಯಿತ್ತಯ್ಯ
> ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ . . . .

ಕ್ಷಣಿಕವಾದ ರೂಪ, ಲಾವಣ್ಯ, ವೈಭವಗಳಿಗೆ ಮಾರುಹೋಗಿ ತನ್ನ ಪತಿಯನ್ನು ಕಡೆಗಣಿಸಿ ತನ್ನ ಸತೀತ್ವಕ್ಕೆ ಕಲಂಕ ಹಚ್ಚಿಕೊಂಡರೆ ಮರದ ತುದಿಯವರೆಗೆ ಏರಿ ಕೊನೆಯಲ್ಲಿ ಕೈಬಿಟ್ಟರೆ ಏನಾಗಬಹುದು ? ಅಂತಹ ಗತಿ ಸ್ತ್ರೀಗೆ ಪ್ರಾಪ್ತವಾಗುವುದು. ಇಂತಹ ವಿಷಮ ದಾಂಪತ್ಯದಿಂದ ತಾನು ಹಾಳಾಗುವುದಲ್ಲದೆ ಸಮಾಜಕ್ಕೇ ಕಂಟಕಪ್ರಾಯಳಾಗುವಳು. ಅದಕ್ಕೆ ಬದಲಾಗಿ 'ಸತಿಪತಿಗಳೊಂದಾಗಿ ನಡೆದಪ್ಪೇ ಆದರೆ ಅವರ ನಡೆ ಹಿತವಾಗಿಪ್ಪುದು ಶಿವಂಗೆ' ಎಂದಿದ್ದಾರೆ ಶರಣರು.

ವಚನಕಾರರು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಸ್ಥಾನ ಕಲ್ಪಿಸಿಕೊಟ್ಟುದಲ್ಲದೆ ಅಧ್ಯಾತ್ಮಮಂದಿರವಾದ ಅನುಭವ ಮಂಟಪದ ಚರ್ಚೆಯಲ್ಲಿಯೂ ಸ್ತ್ರೀಯರು ಭಾಗಿಗಳಾಗಲು ಅವಕಾಶ ಮಾಡಿಕೊಟ್ಟಿದ್ದಾರೆ. ಅವರು ಯಾವುದಾದರೂ ಒಂದು ಕಾಯಕವನ್ನು ಕೈಗೊಂಡು ಅಧ್ಯಾತ್ಮಮಾರ್ಗಾವಲಂಬಿಗಳಾಗಿ ತಮ್ಮ ತಮ್ಮ ಇಷ್ಟದೈವಗಳನ್ನೇ ತಮ್ಮ ವಚನಗಳ ಅಂಕಿತವನ್ನಾಗಿಟ್ಟುಕೊಂಡು ವಚನರಚನೆ ಮಾಡಲು ಅನುವುಮಾಡಿಕೊಟ್ಟರು. ಇಂತಹ ಸದವಕಾಶ ಕಲ್ಪಿಸಿಕೊಟ್ಟ ಪರಿಣಾಮವಾಗಿ, ಅದುವರೆಗೆ ಅಜ್ಞಾನಾಂಧಕಾರದಲ್ಲಿ ಮುಳುಗಿ. ತಮ್ಮ ಮನೆಯೇ ಸರ್ವಸ್ವ. ಅಹಿತನಾದ ಪತಿಯಾದರೂ ಆತನೇ ದೈವ, ಮನೆಯೇ ಮುಕ್ತಿಮಂದಿರ ಎಂದು ಭಾವಿಸಿದ ಅಸಂಖ್ಯಾತ ಸ್ತ್ರೀಯರಿಗೆ ತಮ್ಮ ಭಾಗ್ಯದ ಬಾಗಿಲು ತೆರೆದಂತಾಯಿತು. ಇದರ ಪರಿಣಾಮ. ಅನೇಕ ಜನ ಮಹಿಳೆಯರು ಅಧ್ಯಾತ್ಮ ಚರ್ಚೆಯಲ್ಲಿ ಭಾಗವಹಿಸಿ ತಾವೂ ವಚನರಚನೆ ಮಾಡಿದುದಲ್ಲದೆ, ಇನ್ನೂ ಅನೇಕ ಮಹಿಳೆಯರು ಅಪ್ರತ್ಯಕ್ಷವಾಗಿ ಅಧ್ಯಾತ್ಮ ಸುಧಾಮೃತವನ್ನೀಂಟಿ ಪಾವನರಾಗಿ ಎಲೆಯ ಮರೆಯ ಕಾಯಂತೆ ಅದೃಶ್ಯರಾದರು. ವಚನರಚನೆ ಮಾಡಿ ಸ್ತ್ರೀ ಸಮುದಾಯದಲ್ಲೇ ಅಜರಾಮರರಾಗಿರುವ ಮಹಿಳೆಯರೆಂದರೆ ವೈರಾಗ್ಯನಿಧಿ ಅಕ್ಕಮಹಾದೇವಿ, ಜ್ಞಾನನಿಧಿ ಮುಕ್ತಾಯಿ, ಅಧ್ಯಾತ್ಮನಿಧಿ ಲಿಂಗಮ್ಮ, ಕಾಯಕನಿಷ್ಠೆಯ ಲಕ್ಕಮ್ಮ, ದಾಸೋಹಮೂರ್ತಿ ನೀಲಾಂಬಿಕೆ, ಭ್ರಾತೃಪ್ರೇಮಿ ಅಕ್ಕನಾಗಲಾಂಬಿಕೆ, ಗಣಾಚಾರ ನಿಷ್ಠೆಯ ಗಂಗಾಂಬಿಕೆ, ತತ್ವನಿಧಿ ರಾಣಿ ಮಹಾದೇವಿ ಹೀಗೆ ಅನೇಕ ಜನ ಶರಣೆಯರು ತಮಗೆ ದೊರೆತ ಸದವಕಾಶವನ್ನು ಸದ್ವಿನಿಯೋಗಪಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ ಕೆಲವೊಂದು ಸಂದರ್ಭದಲ್ಲಿ ಶರಣರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವರಿಗೇ ಮಾರ್ಗದರ್ಶನ ಮಾಡಿರುವುದು ಕಂಡುಬರುತ್ತದೆ. ನಿದರ್ಶನಕ್ಕೆ

ವಚನಕಾರರಲ್ಲಿಯೇ ಕಿರೀಟಪ್ರಾಯರಾದ ಬಸವಣ್ಣನವರ ಪತ್ನಿ ನೀಲಾಂಬಿಕೆಯನ್ನೇ ತೆಗೆದುಕೊಳ್ಳೋಣ. ನೀಲಾಂಬಿಕೆ ಯಾದರೋ ಬಸವಣ್ಣನವರು ನಿರ್ಮಿಸಿದ ಮಹಾಮನೆಯಲ್ಲಿ ದಾಸೋಹಕಾರ್ಯವನ್ನು ಕೈಗೊಂಡು ಅವಿರತವಾಗಿ ಸೇವೆ ಸಲ್ಲಿಸುತ್ತಿದ್ದರು. ಕಲ್ಯಾಣದ ಕ್ರಾಂತಿ ಒದಗಿ ಬಂದಾಗ ಬಸವಣ್ಣನವರು ಕೂಡಲಸಂಗಮನಲ್ಲಿ ಐಕ್ಯವಾಗಲು ಹೊರಟರು. ನೀಲಾಂಬಿಕೆಯವರನ್ನು ಕರೆದೊಯ್ಯುವ ಅಪೇಕ್ಷೆಯಿಂದ ಹಡಪದ ಅಪ್ಪಣ್ಣನವರನ್ನು ಕರೆಯಲು ಕಳುಹಿಸುವರು. ನೀಲಾಂಬಿಕೆ ಇದಕ್ಕೆ ಕೊಡುವ ಉತ್ತರ ಅದ್ಭುತ :

ನಾನಾರ ಸಾರುವೆನೆಂದು ಚಿಂತಿಸಲೇಕಯ್ಯ ?
ನಾನಾರ ಹೊಂದುವೆನೆಂದು ಭ್ರಮೆಪಡಲೇಕಯ್ಯ ?
ನಾನಾರ ಇರವನರಿವೆನೆಂದು ಪ್ರಳಾಪಿಸಲೇಕಯ್ಯ ?
ಪರಿಣಾಮಮೂರ್ತಿ ಬಸವನ ರೂಪು ಕರಸ್ಥಲದಲ್ಲಿ ಬೆಳಗಿದ ಬಳಿಕ
ಸಂಗಯ್ಯನ ಹಂಗು ನಮಗೇತಕ್ಕೆ ಅಪ್ಪಣ್ಣಾ

ಮೋಹದಿಂದ ನಿಜವನ್ನು ಮರೆತರಲ್ಲಾ? ಪರಿಣಾಮಮೂರ್ತಿ ಬಸವಣ್ಣನ ರೂಪು ಎನ್ನ ಕರಸ್ಥಲದಲ್ಲಿ ಇರುವಾಗ ಸಂಗಯ್ಯನ ಹಂಗೇಕೆ ? "....ಇಲ್ಲಿ ತಾವಿಲ್ಲವೇ ಸಂಗಯ್ಯನು ? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೇ ?" ಎಂದು ಕೇಳುವ ಪ್ರಶ್ನೆ ಎಷ್ಟು ಅದ್ಭುತ. ಭಕ್ತಿಭಂಡಾರಿ ಎನಿಸಿದ ಮಹಾತ್ಮರಾದ ಬಸವಣ್ಣನವರಿಗೂ ಅಲ್ಲಿ ಇಲ್ಲಿ ಎಂಬ ಸಂದೇಹ ಅಳಿಯಲಿಲ್ಲವಲ್ಲ ? ಎಂದು ವ್ಯಸನಿಸಿ :

ಸಂಗನ ಬಸವಣ್ಣನೆಂದ ನಿರೂಪಕ್ಕೆ ಹಿಂಗದೆ ಕರವೆತ್ತಿ ಮುಗಿವುತಲಿ
ಸಂಗಮನಾಥನೆ, ಈತನೆಂದೆನುತಲಿ ಎನ್ನಂಗೈಯ ಲಿಂಗದೊಳಡಗುವೆ

ಎಂದು ಹೇಳುತ್ತ ತಮ್ಮ ಇಷ್ಟಲಿಂಗದಲ್ಲಿ ಲೀನರಾಗುತ್ತಾರೆ, ಲಿಂಗಪ್ರಾಣಿ ನೀಲಾಂಬಿಕೆ.

ಜ್ಞಾನನಿಧಿ ಎನಿಸಿಕೊಂಡ ಮುಕ್ತಾಯಿಯಾದರೋ ಶೂನ್ಯಸಿಂಹಾಸನದ ಅಧಿಪತಿಯಾದ ಅಲ್ಲಮಪ್ರಭುವಿ ನೊಡನೇ ಅಧ್ಯಾತ್ಮ ವಿಚಾರದಲ್ಲಿ ವಾದಕ್ಕೆ ತೊಡಗುತ್ತಾಳೆ. ತನ್ನ ಅಣ್ಣ ಅಜಗಣ್ಣನ ಅಕಾಲಮೃತ್ಯುವಿನಿಂದ ತಲ್ಲಣ ಗೊಂಡ ಮುಕ್ತಾಯಿ ಇದರ ಮರ್ಮವನ್ನು ಅರುಹುವಂತೆ ಪ್ರಾರ್ಥಿಸುತ್ತಾಳೆ. ಪ್ರಭುವಾದರೊ ಲಿಂಗೈಕ್ಯದ ನಿಲವನ್ನು ಹೇಳಿದಾಗ ತೃಪ್ತಿಗೊಳ್ಳದೆ ದಿಟ್ಟತನದಿಂದ :

ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು
ಶಿಶುಕಂಡ ಕನಸಿನಂತಿರಬೇಕಲ್ಲದೆ ನುಡಿದು
    ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ ? . . . . .
ನೆರೆಯರಿತು ಮರೆಯಬಲ್ಲರೆ, ಎನ್ನ ಅಜಗಣ್ಣನಂತೆ
ಶಬ್ದ ಮುಗ್ಧವಾಗಿರಬೇಕಲ್ಲದೆ,
ಶಬ್ದಸಂದಣಿಯ ಮಾತು ಸಯವಲ್ಲ ನೋಡಾ ಪ್ರಭುವೇ

ಎಂದು ಹೇಳಿ ಅದ್ವೈತವನ್ನು ಅರಿತವನು ಶಿಶು ಕಂಡ ಕನಸಿನಂತೆ ಇರಬೇಕಲ್ಲದೆ ಉಪದೇಶ ಮಾಡ ಹೊರಟವನು ದ್ವೈತಿಯಲ್ಲದೆ ಅದ್ವೈತಿಯಲ್ಲ ಎನ್ನುತ್ತಾರೆ. ಮುಕ್ತಾಯಿಯ ದಿಟ್ಟತನ, ದ್ವೈತಾದ್ವೈತಗಳ ಅರಿವು, ಅಧ್ಯಾತ್ಮ ಮಾರ್ಗದಲ್ಲಿ ಆಕೆಗಿರುವ ಹಂಬಲ, ಅವಳ ಆಳವೂ, ಅದ್ಭುತವೂ ಆದ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡ ಬೇಕಾದರೆ ಅಲ್ಲಮಪ್ರಭುವಿನಂತಹವರೂ ಸಾಕಷ್ಟು ಪರಿಶ್ರಮಪಡಬೇಕಾಯಿತು. ಇಲ್ಲಿ ಒಂದು ರೀತಿ ಶಿಷ್ಯೆಯಿಂದ ಗುರುವಿನ ಪರೀಕ್ಷೆಯೇ ನಡೆದಿದೆ ಎನ್ನಬಹುದು. ಕೊನೆಯಲ್ಲಿ ಮುಕ್ತಾಯಿ ಅಲ್ಲಮಪ್ರಭುವಿನಿಂದ ಉಪದೇಶ ಪಡೆಯುವಳು. ಈ ಪ್ರಕರಣದಿಂದ ಸ್ತ್ರೀ ಅವಕಾಶ ದೊರೆತರೆ ಅಧ್ಯಾತ್ಮದಲ್ಲಿಯೂ ಎಂತಹ ಅದ್ಭುತ ಸಾಧನೆ ಮಾಡ ಬಲ್ಲಳೆಂಬುದನ್ನು ಮುಕ್ತಾಯಕ್ಕ ತೋರಿಸಿಕೊಟ್ಟಿದ್ದಾರೆ.

ಕಾಯಕನಿಷ್ಠೆಯ ಶರಣೆ ಲಕ್ಕಮ್ಮನವರು, ಕಾಯಕವನ್ನು ಮರೆತ ತಮ್ಮ ಪತಿಯನ್ನು ಎಚ್ಚರಿಸುವುದಲ್ಲದೆ, ಅವರಿಗೆ ಅರಿವಿನ ಮಾರ್ಗವನ್ನು ಅರುಹುತ್ತಾರೆ. ತಮ್ಮ ಪತಿಗೆ ಪರಮಾತ್ಮನ ಬಗೆಗೆ, ಭಕ್ತಿಯ ಶಕ್ತಿಯ ಬಗೆಗೆ ಇನ್ನೂ ಸಂಶಯವಿರುವುದಲ್ಲ ಎಂದು ನೊಂದು :

ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ

ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ.
ಚಿತ್ತಶುದ್ಧವಾಗಿ ಕಾಯಕ ಮಾಡುವಲ್ಲಿ, ಸದ್ಭಕ್ತಂಗೆ ಎತ್ತ ನೋಡಿದತ್ತ
ಲಕ್ಷ್ಮಿ ತಾನಾಗಿಪ್ಪಳು. ಮಾರಯ್ಯಪ್ರಿಯ ಅಮಲೇಶ್ವರ ಲಿಂಗದ
ಸೇವೆಯುಳ್ಳನಕ್ಕ

ಅಮಲೇಶ್ವರ ಲಿಂಗದ ಸೇವೆಯಲ್ಲಿ ನಿರತರಾದ ಭಕ್ತರಿಗೆ ಬಡತನವೆಂಬುದಿಲ್ಲ ಎನ್ನುವ ಲಕ್ಕಮ್ಮನವರ ನಿಲುವು ಅವರು ಅಧ್ಯಾತ್ಮದ ಅರಿವಿನಲ್ಲಿ ಎಂತಹ ಮಟ್ಟವನ್ನು ಮುಟ್ಟಿದ್ದರು ಎಂಬುದು ತಿಳಿಯುವುದಲ್ಲದೆ ತಮ್ಮ ಪತಿ ಸಂಶಯಗೊಂಡಾಗ ಅವರಿಗೆ ಅರಿವಿನ ಮಾರ್ಗವನ್ನರುಹಿದರು. ಇದೇ ರೀತಿ ಮೋಳಿಗೆಮಾರಯ್ಯನವರ ಪತ್ನಿ ಮಹಾದೇವಿಯಮ್ಮ ತಮ್ಮ ಪತಿಗೆ ಅಧ್ಯಾತ್ಮಸಾಧನೆಯಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಒಮ್ಮೆ ಮಾರಯ್ಯನವರು ಲಿಂಗದಲ್ಲಿ ಐಕ್ಯರಾಗಬೇಕೆಂದು ಹಂಬಲಿಸುತ್ತಿರುವಾಗ 'ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಹೆನೆಂಬುದು ಕೈಕೂಲಿ' ಭಕ್ತಿಯನ್ನು ಆಚರಿಸಿದ ಭಕ್ತ ಎಲ್ಲ ಆಸೆಗಳಿಂದ ನಿರ್ಲಿಪ್ತನಾಗಿರಬೇಕು. ಹಾಗಲ್ಲದೆ ಇನ್ನೂ ಆಸೆ ಉಳಿದಿದ್ದಾದರೆ ಅದು ಮಾಡಿದ ಭಕ್ತಿಗೆ ಕೈಕೂಲಿ ಪಡೆದಂತೆ. ಭಕ್ತನಾದವನು :

ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ?
ಪರುಷರಸ ಕೈಯಲ್ಲಿದ್ದು ಕೂಲಿಯ ಮಾಡಲೇತಕ್ಕೆ?
ಕ್ಷುತ್ತು ನಿವೃತ್ತಿಯಾದವರಿಗೆ ಕಟ್ಟೋರಗದ ಹೊರೆಯ ಹೊರಲೇತಕ್ಕೆ?
ನಿತ್ಯ ಅನಿತ್ಯವ ನೀ ತಿಳಿದು, ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ
ನಿಶ್ಚಯವ ತಾನರಿತು, ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ,
ಆ ಬಚ್ಚಬಯಲ ಬೆಳಗ ನಿನ್ನ ನೀನೆ ನೋಡಿಕೊ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ

ಎಂಬ ಉಭಯ ಸಂದೇಹವನ್ನು ಹೋಗಲಾಡಿಸಲು ಯತ್ನಿಸಿದಾಗ, ಕೈಲಾಸದ ವ್ಯಾಮೋಹಕ್ಕೆ ಗುರಿಯಾದ ಮಾರಯ್ಯನವರಿಗೆ ಅದರ ಅಂತರಾರ್ಥದ ಅರಿವು ಸಂಪೂರ್ಣವಾಗಿ ಆಗಲಿಲ್ಲ. ಆಗ ಮತ್ತೆ ಮಾರಯ್ಯನವರು 'ನಿನ್ನ ಭಕ್ತಿಯ ಬೆಳೆಯೆ ಎನಗೆ ಸತ್ಯದ ಹಾದಿ' ಅಂತಹ ಸತ್ಯದ ಹಾದಿಯನ್ನು ತೋರಿಸು 'ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ, ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ, ಎನ್ನ ಸುಖ ದುಃಖ ನಿನ್ನ ಸುಖ ದುಃಖ ಅನ್ಯವಿಲ್ಲ. ಇದಕ್ಕೆ ಭಿನ್ನ ಭೇದವಿಲ್ಲ ಹೇಳಾ' ಎಂದು ತಮ್ಮ ಸತಿಯನ್ನು ಕೇವಲ ಸ್ತ್ರೀ ಎಂದು ಭಾವಿಸದೆ ತಮ್ಮ ಭಕ್ತಿಗೆ ಶಕ್ತಿಯಾಗಿ, ಸತ್ಯದ ಹಾದಿಯ ಬೆಳಕಾಗಿ ಕಂಡಿದ್ದಾರೆ. ಅರಿವಿನ ಮಹಾಂತರಾದ ಮೋಳಿಗೆ ಮಾರಯ್ಯನವರಿಗೆ ಅರಿವಿನ ಗುಡಿಯ ಬಾಗಿಲು ತೆರೆದು ತೋರಿದ್ದಾರೆ ಮಹಾದೇವಿಯಮ್ಮ. ಇದು ವಚನಕಾರರು ಸ್ತ್ರೀಯರಿಗೂ ಅಧ್ಯಾತ್ಮದ ಅಧ್ಯಯನದ ಅವಕಾಶವನ್ನು ಕಲ್ಪಿಸಿಕೊಟ್ಟುದರ ಪರಿಣಾಮವಲ್ಲದೆ ಮತ್ತೇನು ?

ಅಕ್ಕ ನಾಗಲಾಂಬಿಕೆ ತನ್ನೆಲ್ಲ ಸರ್ವಸ್ವವೂ ಬಸವಣ್ಣನ ದಯದಿಂದ ಎನ್ನುತ್ತಾರೆ. ಅವರು ಹೇಳುವಂತೆ :

ಎನ್ನ ಕುಲಸೂತಕವ ಕಳೆದಾತ ಬಸವಣ್ಣ
ಎನ್ನ ಛಲಸೂತಕವ ಕಳೆದಾತ ಬಸವಣ್ಣ
ಎನ್ನ ತನುಸೂತಕವ ಕಳೆದಾತ ಬಸವಣ್ಣ
ಎನ್ನ ಮನಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ
ಎನ್ನ ಭಾವಸೂತಕವ ಕಳೆದಾತ ಬಸವಣ್ಣ
ಎನ್ನ ಅರಹುಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ
ಬಸವಣ್ಣ ಪ್ರಿಯ ಚನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನ ಬಸವಣ್ಣನು

ಬಸವಣ್ಣನವರಿಗೆ ಅಕ್ಕನಾಗಿ, ತಾಯಿಯಾಗಿ, ಗುರುವಾಗಿ ಜಂಗಮ ದಾಸೋಹಕಾರ್ಯದಲ್ಲಿ ಹಿರಿಯಳಾಗಿ ಭಾಗವಹಿಸಿದ ಅಕ್ಕ ನಾಗಲಾಂಬಿಕೆ ತನ್ನ ಸರ್ವಸ್ವವೂ ಬಸವಣ್ಣನ ದಯದಿಂದ ಎನ್ನುತ್ತಾಳೆ. ತನ್ನ ಕುಲ, ಛಲ, ತನು, ಮನ, ಭಾವ, ನೆನಹುಗಳನ್ನು ಕಳೆದು ಅರುಹುಮರಹಿನ ಸಂಶಯವನ್ನು ಬಿಡಿಸಿ ತನ್ನನ್ನು ಎನ್ನೊಳಗೂ ಎನ್ನಲ್ಲಿ ತಾನೂ ಒಂದಾಗಿ ನಿಜವನಿರ್ವಯಲನ್ನು ತನಗೆ ತೋರಿಸಿಕೊಟ್ಟ 'ಗುರು' ಎನ್ನುತ್ತಾಳೆ. ಅಕ್ಕ ನಾಗಲಾಂಬಿಕೆಯ ಈ ವಚನದಿಂದ ವಚನಕಾರರು ಸ್ತ್ರೀಯರನ್ನು ಹೇಗೆ ಪ್ರಗತಿಪಥದತ್ತ ಒಯ್ಯುತ್ತಿದ್ದರೆಂಬುದು ವ್ಯಕ್ತವಾಗುವುದು.

ಅಧ್ಯಾತ್ಮ ಮೇರುವಿನಂತಿದ್ದ ಅಕ್ಕಮಹಾದೇವಿಯ ವಚನಗಳನ್ನು ಹಾಗೂ ಆಕೆಯನ್ನು ಕುರಿತು, ಉಳಿದ ವಚನಕಾರರು ಹೇಳಿದ ಮಾತುಗಳನ್ನು ಗಮನಿಸಿದರೆ ಅಂದಿನ ಸ್ತ್ರೀಕುಲಕ್ಕೆ ಸಂದ ಹಿರಿಮೆ ವ್ಯಕ್ತವಾಗುತ್ತದೆ. ಮಹಾದೇವಿಯಾದರೋ ವೀರ ವಿರಾಗಿಣಿಯಾಗಿ 'ಶರಣಸತಿ-ಲಿಂಗಪತಿ' ಭಾವದಿಂದ ಚೆನ್ನಮಲ್ಲಿಕಾರ್ಜುನನನ್ನೇ ಪತಿಯೆಂದು ಭಾವಿಸಿದಳು. ಹೀಗೆ ಆತನಿಗೆ ಒಲಿದ ಮಹಾದೇವಿ :

ಕಾಮಾರಿಯಗೆಲಿದೆನು ಬಸವಾ ನಿಮ್ಮ ದಯದಿಂದ
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ?
ಭಾವಿಸಲು ಗಂಡುರೂಪು ಬಸವಾ ನಿಮ್ಮ ದಯದಿಂದ
ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ ।
ಎರಡುವಳಿಯದೆ ಕೂಡಿದೆನು ಬಸವಾ ನಿಮ್ಮ ಕೃಪೆಯಿಂದ

ಕಾಮವೈರಿಯ ಗೆದ್ದು ಸೋಮಧರನನ್ನು ಹಿಡಿತರಲು ಶ್ರೀಶೈಲಕ್ಕೆ ಹೊರಟಿದ್ದಾಳೆ. ಅವಳು ನಾಮ ಮಾತ್ರದಲ್ಲಿ ಹೆಂಗೂಸಾದರೂ ಭಾವಿಸಲು ಗಂಡುರೂಪವನ್ನು ತಾಳಿದ್ದಾಳೆ. ಅತಿಕಾಮಿಯಾದ ತನ್ನ ನಲ್ಲನನ್ನು ಕೂಡಲು ಹೊರಟಿದ್ದಾಳೆ. ಇದೆಲ್ಲವೂ ಬಸವ ಕೃಪೆಯಿಂದ, ಇಂತಹ ಕೃಪೆಗೆ ಪಾತ್ರಳಾಗಬೇಕಾದರೆ ಅವಳ ಸತ್ವಪರೀಕ್ಷೆ ಅಲ್ಲಮನಿಂದ ಅವಿರತವಾಗಿ ನಡೆದು, ಆ ಪರೀಕ್ಷೆಯಲ್ಲಿ ಅವಳು ಉತ್ತೀರ್ಣಳಾಗಿ :

ಚೆನ್ನಮಲ್ಲಿಕಾರ್ಜುನನ ಕೈವಿಡಿದು, ನಿಮ್ಮ ತಲೆಗೆ
ಹೂವತಹೆನಲ್ಲದೆ ಹುಲ್ಲತಾರೆನು

ಎಂಬ ಆಶ್ವಾಸನೆಯಿತ್ತು ಹೊರಡುತ್ತಾಳೆ. ಆಗ ಶರಣರೆಲ್ಲರೂ ಒಮ್ಮನದಿಂದ ಬೀಳ್ಕೊಡುತ್ತಾ ಆಕೆಯನ್ನು ಹೊಗಳುವ ಪರಿಯನ್ನಾದರೂ ನೋಡೋಣ.

ಎನ್ನ ಭಕ್ತಿಯ ಶಕ್ತಿಯೂ ನೀನೆ
ಎನ್ನ ಮುಕ್ತಿಯ ಶಕ್ತಿಯೂ ನೀನೆ
ಎನ್ನ ಯುಕ್ತಿಯ ಶಕ್ತಿಯೂ ನೀನೆ
ಎನ್ನ ಮಹಾಘನದ ನಿಲುವಿನ ಪ್ರಭೆಯನುಟ್ಟು
ತಳುವೆಳಗಾದ ಸ್ವಯಜ್ಞಾನಿ ಕೂಡಲಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ನಿಲವ ಮಡಿವಾಳನಿಂದರಿದು
ಬದುಕಿದೆನಯ್ಯಾ ಪ್ರಭುವೆ

ಭಕ್ತಿ, ಮುಕ್ತಿ, ಯುಕ್ತಿಗಳ ಶಕ್ತಿಸ್ವರೂಪಳಾಗಿ ಮಹಾಘನದ ನಿಲವಿನ ಪ್ರಭೆಯನ್ನುಟ್ಟ ಮಹಾದೇವಿಯ ನಿಲವನ್ನು ಅರಿತು ಬದುಕಿದೆ ಎನ್ನುತ್ತಾರೆ ಬಸವಣ್ಣನವರು :

ಮಹಾಜ್ಞಾನಿ ಎನಿಸಿದ ಚೆನ್ನಬಸವಣ್ಣನವರು ಹೇಳುವಂತೆ :

ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು
ಅಂಗಸಂಗವ ತೊರೆದು ಭವವ ಗೆದ್ದಳು
ಕೂಡಲಚೆನ್ನಸಂಗಯ್ಯನ ಹೃದಯಕಮಲವ
ಬಗಿದು ಹೊಕ್ಕು ನಿಜಪದವನೆಯ್ದಿದ–ಮಹಾದೇವಿಯಕ್ಕನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು

ತನು, ಮನ, ವಿಷಯ ಇತ್ಯಾದಿಗಳನ್ನು ಗೆದ್ದು ಕೂಡಲ ಚೆನ್ನಸಂಗಯ್ಯನ ಹೃದಯದಲ್ಲಿ ನಿಜಪದವಿಯನ್ನು ಹೊಂದಿದ ಮಹಾದೇವಿಯ ಪಾದಕ್ಕೆ ನಮೋ ನಮೋ ಎನ್ನುತ್ತಿದ್ದಾರೆ ಮಹಾಜ್ಞಾನಿ ಚೆನ್ನಬಸವಣ್ಣ. ಇನ್ನು ಅನುಭಾವ ಸಾಮ್ರಾಟನಾದ ಅಲ್ಲಮನ ಮಾತನ್ನು ಕೇಳೋಣ :

ಆದಿಶಕ್ತಿ ಅನಾದಿಶಕ್ತಿಯೆಂಬರು ಅದನಾರು ಬಲ್ಲರಯ್ಯಾ ?
ಆದಿ ಎಂದರೆ ಕುರುಹಿಂಗೆ ಬಂದಿತ್ತು
ಅನಾದಿ ಎಂದರೆ ನಾಮಕ್ಕೆ ಬಂದಿತ್ತು
ಆದಿಯಲ್ಲ, ಅನಾದಿಯಲ್ಲ. ನಾಮವಿಲ್ಲದ ಸೀಮೆಯಿಲ್ಲದ
ನಿಜಶಕ್ತಿ ಚಿಚ್ಛಕ್ತಿಯಾಯಿತ್ತು ನೋಡಾ !
ಅಂತರಂಗ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ಗೊಹೇಶ್ವರ
ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು

ಇಂತಹ ಚಿಚ್ಛಕ್ತಿಸ್ವರೂಪಳಾದ ಮಹಾದೇವಿಯ ಶ್ರೀಪಾದಕ್ಕೆ ನಮೋ ನಮೋ ಎಂದಿದ್ದಾರೆ ವ್ಯೋಮ ಮೂರ್ತಿ ಅಲ್ಲಮಪ್ರಭು. ಇದಕ್ಕಿಂತ ಬೇಕೆ ಸ್ತ್ರೀಗೆ ಸಂದ ಗೌರವ ?

ಹೆಣ್ಣು ಮಾಯೆ, ರಕ್ಕಸಿ, ಸರ್ವ ಅನರ್ಥಗಳಿಗೂ ಆಕೆಯೇ ಕಾರಣ. ಆಕೆಗೆ ಸ್ವಾತಂತ್ರ್ಯ ಸಲ್ಲದು. ಆಕೆಗೆ ಧಾರ್ಮಿಕ ಸ್ವಾತಂತ್ರ್ಯದ ಅವಶ್ಯಕತೆ ಇಲ್ಲ ಎಂದು ಅದುವರೆಗೂ ತುಳಿಯಲ್ಪಟ್ಟು ಅಜ್ಞಾನಾಂಧಕಾರದಲ್ಲಿ ಮುಳುಗಿ ತಮ್ಮತನವನ್ನೇ ಕಳೆದುಕೊಂಡ ಸ್ತ್ರೀಯರಿಗೆ, ಪರವಸ್ತುವಿನಲ್ಲಿ ಅವಿನಾಭಾವದಿಂದ ಶಕ್ತಿರೂಪ ತಾಳಿದವಳೇ ಸ್ತ್ರೀ ಎಂಬ ಅಭೂತಪೂರ್ವ ಗೌರವವನ್ನು ಕೊಟ್ಟು ಆಕೆಯನ್ನು ದೈವತ್ವಕ್ಕೇರಿಸಿದ ಕೀರ್ತಿ ವಚನಕಾರರದು. ಶಿವಯೋಗಿ ಸಿದ್ಧರಾಮರು :

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ ನೋಡಾ

ಶಿವನ ತಲೆಯಲ್ಲಿ ಹಾಗೂ ತೊಡೆಯಲ್ಲಿ ಶೋಭಿಸುತ್ತಿರುವವಳು ಹೆಣ್ಣು. ಬ್ರಹ್ಮನ ನಾಲಗೆಯಲ್ಲಿ ನರ್ತಿಸುತ್ತಿರುವವಳು ಹೆಣ್ಣು. ನಾರಾಯಣನ ಹೃದಯಮಂದಿರದಲ್ಲಿ ನೆಲೆಸಿರುವವಳು ಹೆಣ್ಣು. ಆದುದರಿಂದ ಆಕೆ ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನ ಸ್ವರೂಪ ಎನ್ನುತ್ತಾರೆ ಶಿವಯೋಗಿ ಸಿದ್ಧರಾಮರು. ಹೀಗೆ ಸ್ತ್ರೀಯರಿಗೆ ಮಹೋನ್ನತ ಗೌರವ ವನ್ನಿತ್ತು ಅವರ ಸರ್ವಾಂಗೀಣ ಪ್ರಗತಿಗೆ ಕಾರಣೀಭೂತರಾದವರೇ ವಚನಕಾರರು.

---

ಕೆಡದಿರೆ, ಕೆಡದಿರೆ, ಮೃಡನಡಿಯ ಹಿಡಿಯಿರೇ
ದೃಢವಲ್ಲ ನೋಡಿರೆ ನಿಮ್ಮೊಡಲು
ದೃಢವಲ್ಲ ನೋಡಿರೆ ಸಂಸಾರಸುಖವು
ಚನ್ನಮಲ್ಲಿಕಾರ್ಜುನ ಬರೆದ ಅಕ್ಷರವು ತೊಡೆಯದ ಮುನ್ನ
ಬೇಗ, ಬೇಗ, ಶಿವಶರಣೆನ್ನಿ

ಅಕ್ಕಮಹಾದೇವಿ

# ಕೆರೆಯ ಪದ್ಮರಸ ಮತ್ತು ಕುಮಾರ ಪದ್ಮರಸ

ಎನ್. ಬಸವಾರಾಧ್ಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರ ರಾಘವಾಂಕರು ಬಂಧುಬಾಂಧವರಾಗಿ ಎಷ್ಟು ಪ್ರಖ್ಯಾತವಾಗಿರುವರೋ ಅದೇ ರೀತಿ ಕೆರೆಯ ಪದ್ಮರಸ, ಕುಮಾರಪದ್ಮರಸರು ವಿಖ್ಯಾತರಾಗಿದ್ದಾರೆ. ಹರಿಹರ ರಾಘವಾಂಕರದು ಗುರುಶಿಷ್ಯ ಮಾವ ಅಳಿಯಂದಿರ ನಂಟಾದರೆ. ಕೆರೆಯ ಪದ್ಮರಸ ಕುಮಾರ ಪದ್ಮರಸರದೂ ಗುರುಶಿಷ್ಯ ಪಿತಸುತರ ಸಂಬಂಧವಾದುದು. ಈ ನಾಲ್ವರೂ ಹಿರಿಯಕಿರಿಯ ಸಮಕಾಲೀನರಾಗಿ ಬಾಳಿಬದುಕಿ ಕನ್ನಡ ಸಾಹಿತ್ಯಕ್ಕೆ ಅಮಿತವಾದ ಸೇವೆಯನ್ನು ಸಲ್ಲಿಸಿ ಅಮರರಾಗಿದ್ದಾರೆ. ಇವರ ತರುವಾಯದ ಹಲವಾರು ವೀರಶೈವ ಕವಿಗಳಿಗೆ ಸ್ಫೂರ್ತಿದಾಯಕರೂ ಆದರ್ಶಪ್ರಾಯರೂ ಮಾರ್ಗದರ್ಶಕರೂ ಆಗಿದ್ದಾರೆ. ಇವರೆಲ್ಲರೂ ಉಭಯಭಾಷಾಕವಿಗಳಾಗಿ ವಿದ್ವನ್ಮಣಿಗಳಾಗಿ ವಿರಾಜಿಸಿದ್ದಾರೆ.

ಕೆರೆಯ ಪದ್ಮರಸ ಕುಮಾರ ಪದ್ಮರಸರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು ಬರೆದಿದ್ದಾರೆ. ಇವರ ಪೂರ್ವಜರೆಲ್ಲ ಪ್ರಕಾಂಡಪಂಡಿತರೂ ದೇಶಿಕಶಿಖಾಮಣಿಗಳೂ ವೀರಶೈವ ಸಾಹಿತ್ಯಸಂಸ್ಕೃತಿಗಳ ಪ್ರವರ್ತಕರೂ ಆಗಿ ಮೆರೆದಿದ್ದಾರೆ. ಈ ಇಬ್ಬರು ಕವಿಗಳ ಶಾಸ್ತ್ರಜ್ಞರ ಕಿರುಪರಿಚಯವನ್ನು ಮುಂದೆ ಮಾಡಿಕೊಡಲಾಗಿದೆ.

## ಕೆರೆಯ ಪದ್ಮರಸ

ಹೊಯ್ಸಳ ನರಸಿಂಹಬಲ್ಲಾಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖನಾಗಿದ್ದಾನೆ. ಅಷ್ಟೇ ಅಲ್ಲ ವೀರಶೈವ ಕವಿಗಳ ಸಾಲಿನಲ್ಲಿ ಅಗ್ರಗಣ್ಯನಾಗಿದ್ದಾನೆ. ಈತನ ಪ್ರಭಾವ ಕೀರ್ತಿ ಪ್ರತಿಷ್ಠೆ ಅನುಪಮ ಜಂಗಮಭಕ್ತಿ ತರುವಾಯದ ಹಲವಾರು ವೀರಶೈವ ಕವಿಗಳಿಗೆ ಪ್ರೇರಕವಾಗಿದೆ. ಈತನ ವಂಶದಲ್ಲಿಯೇ ಜನಿಸಿದ ಪದ್ಮಣಾಂಕನೆಂಬುವನು ಈತನ ಜೀವನ ಚರಿತ್ರೆಯನ್ನೇ ಆಧರಿಸಿ ಪದ್ಮರಾಜ ಪುರಾಣವೆಂಬ ಸತ್ಕಾವ್ಯವನ್ನು ಬರೆದಿದ್ದಾನೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರ ರಾಘವಾಂಕ ಕೆರೆಯ ಪದ್ಮರಸ ಇವರು ಮೂವರ ಕಾಲವಿಚಾರ ತುಂಬ ಜಟಿಲವಾದುದು. ಇವರು ಮೂವರೂ ಹಿರಿಯ ಕಿರಿಯ ಸಮಕಾಲೀನರಾಗಿ ಬಾಳಿಬೆಳಗಿದವರು. ಇವರೆಲ್ಲ ೧೩ನೆಯ ಶತಮಾನದ ಪೂರ್ವಾರ್ಧದಲ್ಲೇ ಆಗಿಹೋದವರು. ಈ ಒಬ್ಬೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ಹೆಸರಾಂತವರು. ಹರಿಹರ ಶಿವಶರಣರ ಚರಿತ್ರೆಗಳನ್ನು ಬರೆದು ಅವಿಸ್ಮರಣೀಯನಾಗಿರುವಂತೆ ರಾಘವಾಂಕ ಶೈವಕೃತಿ ಪಂಚಕಗಳನ್ನು ವಿವಿಧ ಷಟ್ಪದಿಪ್ರಕಾರಗಳಲ್ಲಿ ಬರೆದು ಖ್ಯಾತನಾಗಿದ್ದಾನೆ. ಕೆರಯ ಪದ್ಮರಸನಾದರೋ ಸಂಸ್ಕೃತದಲ್ಲಿ ಸಾನಂದ ಚರಿತೆಯನ್ನೂ ಕನ್ನಡದಲ್ಲಿ ದೀಕ್ಷಾಬೋಧೆಯನ್ನೂ ಬರೆದು ಶಾಶ್ವತನಾಗಿದ್ದಾನೆ. ಕೆರೆಯ ಪದ್ಮರಸನ ತರುವಾಯದ ಹಲವಾರು ವೀರಶೈವ ಕಾವ್ಯಗಳಲ್ಲಿ ಈತನ ಇತಿವೃತ್ತಗಳು ಕಂಡುಬರುತ್ತವೆ. ಉಭಯಭಾಷಾವಿದ್ವಾಂಸನೂ ಪ್ರಕಾಂಡಪಂಡಿತನೂ ಆದ ಕೆರೆಯ ಪದ್ಮರಸ ನರಸಿಂಹಬಲ್ಲಾಳನ ಆಸ್ಥಾನದಲ್ಲಿ ತ್ರಿಭುವನ ತಾತನನ್ನು ವಾದದಲ್ಲಿ ಸೋಲಿಸಿದ ಪ್ರಸಂಗ ಒಂದು ಮಹತ್ತ್ವದ ಐತಿಹ್ಯವಾಗಿದೆ.

ಕೆರೆಯ ಪದ್ಮರಸನ ವಂಶದವರು ಆರಾಧ್ಯಕುಲಚಕ್ರವರ್ತಿಗಳೆಂದೂ ದೇಶಿಕ ಶಿಖಾಮಣಿಗಳೆಂದೂ ಹೆಸರುವಾಸಿಯಾಗಿದ್ದಾರೆ. ಈ ವಂಶದ ಮೂಲಪುರುಷನಾದ ಶಿವಯೋಗಿ ಮಲ್ಲರಸನು ಕರ್ನಾಟಕ ರಾಜ್ಯದ ಕಲ್ಲುಕುರಿಕೆಯಲ್ಲಿ ಆಳುತ್ತಿದ್ದು ವೈರಾಗ್ಯವನ್ನು ಪಡೆದು ಶ್ರೀಶೈಲದಲ್ಲಿ ಲಿಂಗೈಕ್ಯನಾಗುವನು. ಈತನ ಮಗನಾದ ಸಕಲೇಶ ಮಾದರಸನು ಸ್ವಲ್ಪಕಾಲ ರಾಜ್ಯಭಾರಮಾಡಿ ವಿರಕ್ತನಾಗಿ ಶ್ರೀಶೈಲಕ್ಕೆ ಹೊರಟನು. ಆದರೆ ದಾರಿಯಲ್ಲಿ ಅಂಬೆ ಎಂಬ ಊರಿನ

ಭಕ್ತರು ಅವನನ್ನು ತಡೆದರು. ಕೆಲಕಾಲ ಅಲ್ಲೇ ಇದ್ದು ತರುವಾಯ ಶ್ರೀಶೈಲಕ್ಕೆ ಹೋಗಿ ತಂದೆಯನ್ನು ಕಾಣಲು "ನೀನು ಇನ್ನೂ ಐವತ್ತು ವರ್ಷಕಾಲ ಭೂಲೋಕದಲ್ಲಿದ್ದು ಬಸವಾದಿ ಪ್ರಮಥರೊಡನೆ ಕೆಲಕಾಲ ಕಳೆದು ಮತ್ತೆ ನನ್ನಲ್ಲಿಗೆ ಬಾ" ಎಂದು ಆಣತಿ ಮಾಡಿದನು. ಅದರಂತೆ ಸಕಲೇಶ ಮಾದರಸನು ಬಸವಣ್ಣನ ಹಿರಿಯ ಸಮಕಾಲೀನನಾಗಿ ಬಾಳಿ ಬದುಕಿ ವಚನಗಳನ್ನು ರಚಿಸಿ ಆಮೇಲೆ ಶ್ರೀಶೈಲಕ್ಕೆ ತೆರಳಿ ಅಲ್ಲೇ ಬಯಲಾದನು. ಈ ಸಕಲೇಶ ಮಾದರಸನ ಮಗ ಮಾಯಿದೇವನೂ ಅಂಬೆಯಲ್ಲೇ ನೆಲಸಿದನು. ಈತನಿಗೆ ನರಸಿಂಹಬಲ್ಲಾಳನ ದಂಡನಾಯಕನಾದ ಕಮ್ಮೆಕುಲವಲ್ಲಭ ಗೌರಪನ ಅಕ್ಕ ಮಂಗಲೆಯನ್ನು ಮದುವೆ ಮಾಡಿಕೊಟ್ಟಿದ್ದರು. ಈ ದಂಪತಿಗಳ ಸುಪುತ್ರನೇ ಕೆರೆಯ ಪದ್ಮರಸ. ಈತನಿಗೆ ದಂಡನಾಯಕ ಗೌರಪನ ಮಗಳಾದ ಮಾದೇವಿಯನ್ನು ಕೊಟ್ಟು ಮದುವೆಯಾಗಿತ್ತು. ಗೌರಪ ದಂಡನಾಯಕನ ಕಾಲಾನಂತರ ಕೆರೆಯ ಪದ್ಮರಸನು ನರಸಿಂಹಬಲ್ಲಾಳನ ಮಂತ್ರಿಯಾದನು. ಈತನಿಗೆ ನಡೆವಲ್ಲಿ ನುಡಿವಲ್ಲಿ ಉಡುವಲ್ಲಿ ಉಂಬಲ್ಲಿ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ ಹಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಂಬಲ್ಲಿ ಕುಳಿತಲ್ಲಿ ಏಳುವಲ್ಲಿ ಮೃಡಮಂತ್ರವನ್ನು ಬಿಡದಿರ್ಪುದೇ ನಡೆಯಾಯಿತು. ಶಿವನಿಷ್ಠೆ ಶಿವಪೂಜೆ ಶಿವೈಕ್ಯರ ಸೇವೆ, ಶಿವವೃತ್ತಿ ಶಿವವೀಕ್ಷಣ ಶಿವಕಥಾಪ್ರಸಂಗ ಶಿವಸ್ತೋತ್ರದ ಭಾಷಣ ಶಿವವೈಭವ ಶಿವತತ್ತ್ವನಿರ್ಣಯ ವಿಚಾರ ಇವೇ ಪದ್ಮರಸನ ದಿನಚರಿಯಾಯಿತು.

ಕೆರೆಯ ಪದ್ಮರಸ ಗುರುಪರಂಪರೆಗೆ ಸೇರಿದವನು. ಚತುಶ್ಶಾಸ್ತ್ರಪಂಡಿತನು. ಬೇಲೂರಿನಲ್ಲಿ ಒಂದು ಕೆರೆಯನ್ನು ಕಟ್ಟಿಸಿಕೊಡಬೇಕೆಂದು ಆ ಊರಿನ ಪ್ರಮುಖರು ನರಸಿಂಹಬಲ್ಲಾಳನಲ್ಲಿ ಪ್ರಾರ್ಥಿಸಿಕೊಳ್ಳಲು ಆ ಕಾರ್ಯವನ್ನು ದೊರೆ ಕೆರೆಯ ಪದ್ಮರಸನಿಗೆ ವಹಿಸಿದನು. ಅದಕ್ಕಾಗಿ ಹನ್ನೆರಡು ಸಾವಿರ ಹೊನ್ನುಗಳನ್ನು ಭಂಡಾರದಿಂದ ಪದ್ಮರಸನಿಗೆ ಕೊಡಿಸಿದನು. ಪದ್ಮರಸನ ಭಕ್ತಿಯನ್ನೂ ನಿಷ್ಠೆಯನ್ನೂ ಪರೀಕ್ಷಿಸುವ ಸಲುವಾಗಿ ಪರಶಿವನು ಜಂಗಮ ಭುಜಂಗ ವೇಷವನ್ನು ತಾಳಿ ಬಂದು ಮುಳಿದಿರುವ ತನ್ನ ನಲ್ಲೆಯ ಪ್ರೀತ್ಯರ್ಥವಾಗಿ ಆ ಹೊನ್ನನ್ನು ತನಗೆ ಕೊಡಬೇಕೆಂದು ಕೇಳಿಕೊಂಡನು. ಪದ್ಮರಸನು ಹಿಂದುಮುಂದು ನೋಡದೆ ಆ ಹೊನ್ನುಗಳನ್ನು ವಿಟ ಜಂಗಮರಿಗೆ ಕೊಟ್ಟುಬಿಟ್ಟನು. ಚಾಡಿಕೋರರು ಈ ಸಂಗತಿಯನ್ನು ಅರಸನಲ್ಲಿ ದೂರಿದಾಗ ಅವನು ಪದ್ಮರಸನನ್ನು ಕರೆಸಿ 'ಕೆರೆ ಸಿದ್ಧವಾಗಿದೆಯೆ' ಎಂದು ಕೇಳಲು ಪದ್ಮರಸ 'ಎಲ್ಲವೂ ಸಿದ್ಧವಾಗಿದೆ ಬೇಲೂರಿಗೆ ಹೋಗಿ ನೋಡಬಹುದು' ಎಂದು ಉತ್ತರಿಸಿದನು. ಅದರಂತೆ ಬಲ್ಲಾಳ ಪದ್ಮರಸನನ್ನೊಡಗೊಂಡು ಅಧಿಕಾರವರ್ಗದೊಡನೆ ಬೇಲೂರಿಗೆ ಹೋಗಿ ನೋಡಿದಾಗ ಪದ್ಮರಸನ ತಪಶ್ಶಕ್ತಿಯಿಂದ ಗದ್ದೆ ತೋಟಗಳೊಂದಿಗೆ ಕೆರೆ ನೀರಿನಿಂದ ತುಂಬಿ ತುಳುಕುತ್ತಿದ್ದುದನ್ನು ಕಂಡು ಆಶ್ಚರ್ಯಚಕಿತನಾದನು. ಪದ್ಮರಸ ಮೆರೆದ ಪವಾಡಕ್ಕೆ ಮಾರುಹೋಗಿ ಅವನ ಮಹಿಮೆಗೆ ಮಣಿದನು. "ಅಸಮಾಕ್ಷನಿಂದ ಬಿಟ್ಟಿಗೆ ಕಟ್ಟಿಸಿದ ಕತದಿ" ಆ ಕೆರೆಗೆ ಕಾಲಾಂತರದಲ್ಲಿ "ಬಿಟ್ಟಿಸಮುದ್ರ"ವೆಂಬ ಹೆಸರೇ ರೂಢಿಗೆ ಬಂದಿತು. ಪದ್ಮರಸನಿಗೆ ಕೆರೆಯಪದ್ಮರಸನೆಂಬ ಹೆಸರೇ ಪ್ರಚಲಿತವಾಯಿತು.

ಅಪಾರ ಕೀರ್ತಿಗೌರವಗಳನ್ನು ಗಳಿಸಿದ ಪದ್ಮರಸನನ್ನು ನರಸಿಂಹಬಲ್ಲಾಳ ವಿಶೇಷವಾಗಿ ಗೌರವಿಸಿದನು. ಆಗ ಪದ್ಮರಸ ಇನ್ನು ಮೇಲೆ ಮಹೇಶ್ವರ ಸೇವೆಯಲ್ಲದೆ ಉಳಿದವರ ಸೇವೆ ಅಗ್ರಾಹ್ಯವೆಂದು ನಿರ್ಧರಿಸಿ ತನ್ನ ಮಂತ್ರಿಪದವಿಯನ್ನು ತ್ಯಜಿಸಿ ಧನಕನಕ ವಸ್ತುವಾಹನಾದಿ ಸರ್ವಸಂಪತ್ತನ್ನೂ ಈಶ ಭಕ್ತರಿಗಿತ್ತು ಬೇಲೂರಿಗೆ ಪ್ರಯಾಣಮಾಡಿದನು.

ಇತ್ತ ತ್ರಿಭುವನತಾತನೆಂಬ ಆಂಧ್ರದೇಶದ ಬ್ರಾಹ್ಮಣನೊಬ್ಬನು ವಿಷ್ಣುವೇ ಪರದೈವನೆಂದು ಸ್ಥಾಪಿಸುತ್ತ ದೋರಸಮುದ್ರಕ್ಕೆ ಬಂದನು. ಆತನನ್ನು ಎದುರಿಸಲು ನರಸಿಂಹಬಲ್ಲಾಳ ಪದ್ಮರಸನನ್ನು ಬೇಲೂರಿನಿಂದ ಕರೆಸಿದನು. ಪದ್ಮರಸನ ಜೊತೆಯಲ್ಲಿ ದೋರಾಂಬುಧಿಯ ರಾಮಣ್ಣ, ಉಭಯಕವಿಶರಭಭೇರುಂಡನೆನಿಪ ಕವೀಂದ್ರ ರಾಘವ, ಹುಲಿಗೆರೆಯ ಮಾಯಿದೇವ ಪುರಾಣಭಟ್ಟ, ಗುರುಭಕ್ತಕಾಮಣ್ಣ, ವಿಶ್ವಣ್ಣ, ಉದ್ಧತ ಶಾಸ್ತ್ರಿನಿಕರ ಭಂಜನ ನಾಗನಾಥಾರ್ಯ, ಅತಿರಸಿಕ ಕರ್ಣಾಭರಣ ಬುಧವರ, ಪದವಾಕ್ಯ ಪ್ರಮಾಣಜ್ಞ ದೇವರಸ ಪಂಡಿತ, ಅನೇಕಕಲಾವಿದ ಹಂಪೆಯ ರಾಮಿತಂದೆ, ಜಗದಾರಾಧ್ಯ ನಾಗಿದೇವ, ಅಷ್ಟಭಾಷಾ ಕವೀಶ್ವರ ಶಿವದಾಸ, ಶೈವವಿರುದ್ಧ ಮತದಾವದಾವ ಪಾವರಸ, ಶರಣ ಕವಿ ಮೊದಲಾದ ಪಂಡಿತರು ಹೋದರು.

ಪದ್ಮರಸನು ನರಸಿಂಹಬಲ್ಲಾಳನ ಸಭೆಯಲ್ಲಿ ಶಿವಾದ್ವೈತ ಸಾಕಾರ ಸಿದ್ಧಾಂತ ಸಾನಂದ ಚರಿತ್ರವೆಂಬ ಸಂಸ್ಕೃತ ಗ್ರಂಥವನ್ನು ರಚಿಸಿ ತ್ರಿಭುವನ ತಾತನನ್ನು ವಾದದಲ್ಲಿ ಜಯಿಸಿದನು. ಒಪ್ಪಂದದ ಪ್ರಕಾರ ತ್ರಿಭುವನತಾತ ವೀರಶೈವ ದೀಕ್ಷೆಯನ್ನು ಪಡೆದು ಪದ್ಮರಸನ ಶಿಷ್ಯನಾದನು. ಆ ಸಂದರ್ಭದಲ್ಲಿ ಸಭೆಯಲ್ಲಿದ್ದ ಸಕಲ ವಿದ್ವಾಂಸರೂ ಪದ್ಮರಸರನ್ನು ಪರಿಪರಿಯಾಗಿ ಈ ರೀತಿ ಸ್ತುತಿಸಿದ್ದಾರೆ :

ದೋರಸಮುದ್ರಮೆಂಬ ಪೆಸರಿಂ ಕರಮೊಪ್ಪುವ ರಾಜಧಾನಿಯೊಳ್
ಧೀರನೃಸಿಂಹಭೂವನಹೋಮಹಿಯಂ ಪರಿಪಾಲಿಸುತ್ತಿರ
ಲ್ಕಾ ರಸೆಯಾಣ್ಮನೋಲಗಕೆ ಬಂದನಗುರ್ವಿಸುತಾಂಧ್ರದೇಶದಿಂ
ಶೌರಿಯ ಭೃತ್ಯನೋವೊ ಭುವನತ್ರಯತಾತನೆತನಿಪ್ಪನೊರ್ವನ್ ॥

ಶಿವನಿಲ್ಲಾ ಶಿವಭಕ್ತಿಯಿಲ್ಲ ಶಿವಸಿದ್ಧಾಂತಂ ದಲಿಲ್ಲಾ ಮತಂ
ಸುವಿಚಾರಸ್ಥಿತಿಗಿಲ್ಲ ನಾಡೆ ವನಜಾಕ್ಷಂ ದೈವಮಾ ವೈಷ್ಣವಂ
ಸುವಿಶಾಲಂ ನಿಜಭಕ್ತಿಗೆಂದೆನುತೆ ಪತ್ರಾಲಂಬನಂಗೆಯ್ಯೆ ತ
ದ್ವಿವಿಯಂ ಪದ್ಮರಸಾರ್ಯರೋಡಿಸಿದರೀ ಸಾನಂದಚಾರಿತ್ರದಿಂ ॥

ಪಿಂದೆ ಸಮಸ್ತ ನೀಲಪಟಸಾಂಖ್ಯರ ಬೌದ್ಧರ ಜೈನಭೇದದೊಳ್
ಸಂದರ ಭಾಟ್ಟತಾರ್ಕಿಕರ ಕೂಡತಿವಾದಿಸಿ ಸೊರ್ಕಿ ಸೂಕ್ತಿಯ
ಲ್ಲೊಂದದಬದ್ಧವಾದಿಯೆನಿಪುದ್ಧತವೈಷ್ಣವನಂ ವಿಭಾಡಿಸು
ತ್ತಿಂದುಧರಪ್ರತಿಷ್ಠೆಯನೆ ಪದ್ಮರಸರ್ ನೆಗಟ್ದರ್ ಧರಿತ್ರಿಯೊಳ್ ॥

ಪದ್ಮರಸನ ಪಾಂಡಿತ್ಯ ಪ್ರತಿಭೆಗಳನ್ನು ಕಂಡು ಸಭೆಯಲ್ಲಿದ್ದ ಪಂಡಿತರೆಲ್ಲರೂ ಶ್ಲಾಘಿಸಿ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಪದ್ಯಗಳನ್ನು ಬರೆದಿದ್ದಾರೆ. ಅವರಲ್ಲಿ ದೋರಾಂಬುಧಿಯ ರಾಮಣ್ಣಗಳ ಹೇಳಿಕೆ:

ಪ್ರಭುತೆಯ ಪೆರ್ಮೆಗಮಾಮಾ
ತ್ರಿಭುವನ ತಾತಾಖ್ಯೆಯಾಂತ ವೈಷ್ಣವನುದ್ಯ
ದ್ವಿಭು ಪದ್ಮಣಾರ್ಯರೊಳ್ ಸೋ
ಲ್ತಭಯಮನೆರೆದಂಘ್ರಿಗೆಱಗಿದಂ ನೃಪ ಸಭೆಯೊಳ್ ॥

ಉಭಯಕವಿ ಶರಭ ಭೇರುಂಡ ರಾಘವರ ಹೇಳಿಕೆ:

ಮಿಹಿರಂಗೆ ತಿಮಿರಮಿದಿರೇ
ಸಹಜಕ್ಕೆ ಠವಮಾಳಮಿದಿರೆ ಪದ್ಮರಸಾರ್ಯಂ
ಗಹಹಾ ತ್ರಿಭುವನತಾತಂ
ಬಹುವಿಧದಿಂ ಬಗೆಯಲಿದಿರೆ ತಾನೇ ಕೆಟ್ಟಂ ॥

ಅತಿರಸಿಕ ಕರ್ಣಾಭರಣ ಬುಧವರರ ಹೇಳಿಕೆ:

ಪರಸಮಯಾಂಧಕಾರ ಘನಚಂಡಕರಂ ಹರಿಯೆಂದು ಸಾಱಿ ಧಿ
ಕ್ಕರಿಸುವ ವಾದಿಯಂ ಸಕಲವೇದಪುರಾಣ ಪುರಾತನೋಕ್ತಿಯಿಂ
ದೊರಸುವಿಪದುರ್ವರಾತಳದೊಳೊರ್ವನೆ ಶೈವತಟಾಕ ಪ
ದ್ಮರಸನನಂತಶಾಸ್ತ್ರಸರಸಂ ಬೆರಸಂ ಪರದೈವಜೀವರಂ ॥

ಪದವಾಕ್ಯ ಪ್ರಮಾಣಜ್ಞ ದೇವರಸ ಪಂಡಿತರ ಹೇಳಿಕೆ:

ಏಕೆ ಬಿಡು ಮತ್ತೆ ಗಟಿಪದಿ
ರೇಕೋರುದ್ರೋ ದಲೆಂಬ ಶ್ರುತಿವಿಡಿದೆಲ್ಲಾ
ಕಾಕುಮತಂಗಳನಲೆದು ನಿ
ರಾಕರಿಸಿದ ಸತ್ಯಶರಣ ಕವಿಗಿದಿರುಂಟೇ ॥

ಜಗದಾರಾಧ್ಯ ನಾಗದೇವರ ಹೇಳಿಕೆ:

ಪರವಾದಿಧ್ವಾಂತ ಸೂರ್ಯಂ ಕೆಱೆಯ ಪದುಮರಾಜಂ ಸ್ವಗುರ್ವಾಜ್ಞೆಯಿಂದೀ
ಶ್ವರಭಕ್ತರ್ ಮೆಚ್ಚೆಯಾಹಾ ವಿರಚಿಸಿದ ಶಿವಾದ್ವೈತ ಸಾಕಾರಸಿದ್ಧಾಂ
ತರಸಂ ಸಾನಂದಚಾರಿತ್ರಮನೆ ಪಸರಿಸುತ್ತಿರ್ಪುದೀ ಕ್ಷೋಣಿಗೆಂದಂ
ಗುರುಭಕ್ತಂ ಕಾರಣಾತ್ಮಂ ವರಗುಣಿ ಜಗದಾರಾಧ್ಯನಾ ನಾಗಿದೇವಂ ॥

ಶರಣಕವಿ ಪ್ರಯೋಗ:

ಒಳ್ಳಿಗಳುಂ ಗರಳದ ಕರಿ
ಗೊಳ್ಳಿಗಳುಂ ಕೈಪೆಸೊರೆಯ ಒಳ್ಳಿಗಳುಂ ಚೀ
ಟೊಳ್ಳಿಗಳುಂ ದೈವಾಖ್ಯಕೆ
ಕಳ್ಳರೆ ಗುರುರೂಪ ವಿಶ್ವನಾಥಂಗೆಣೆಯೇ ॥

ಕೆರೆಯ ಪದ್ಮರಸನಿಗೆ ಸಕಲಶಾಬ್ದಿಕ ಸಾರ್ವಭೌಮ, ಉದ್ಧತವಾದಿ ನಿಕರವೇಶ್ಯಾಭುಜಂಗ, ತಾರ್ಕಿಕ ಚಕ್ರವರ್ತಿ· ಶಿವಾದ್ವೈತ ಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ. ಶರಣಕವಿ. ಭವಿದೂರ—ಇವೇ ಮೊದಲಾದ ಬಿರುದುಗಳಿರುವುದು ಕಂಡುಬರುತ್ತದೆ.

ಕೆರೆಯ ಪದ್ಮರಸ ಸಂಸ್ಕೃತದಲ್ಲಿ ಸಾನಂದ ಚರಿತೆಯನ್ನೂ ಕನ್ನಡದಲ್ಲಿ ದೀಕ್ಷಾಬೋಧೆಯನ್ನೂ ಬರೆದಿದ್ದಾನೆ. ಈತನ ಸಾನಂದ ಚರಿತೆ ಉಪಲಬ್ಧವಿಲ್ಲ. ಆದರೆ ಈತನ ಮಗನಾದ ಕುಮಾರ ಪದ್ಮರಸನು ತಂದೆಯ ಆಜ್ಞಾನುಸಾರವಾಗಿ ಕನ್ನಡದಲ್ಲಿ ಸಾನಂದ ಚರಿತೆಯನ್ನು ಬರೆದಂತೆ:

ಪಿರಿದುವಾರುಂ ಮುನ್ನ
ವಿರಚಿಸಿದರಿಲ್ಲೆಂದು
ಧರೆಯೊಳೊಳುಗನ್ನಡದಿ ಪಸರಿಸೆಂದು
ಗುರುರೂಪ ವಿಶ್ವಪತಿ
ಕರುಣಿಸಿದ ತೆಱದಿ ನಾಂ
ವರಪುರಾಣಾರ್ಥಮಂ ಕನ್ನಡಿಸಿದಂ

ಈ ಪದ್ಯದಿಂದ ವಿದಿತವಾಗುತ್ತದೆ. ಇದೇ ಅಭಿಪ್ರಾಯವನ್ನು ಪದ್ಮಣಾಂಕನೂ ಕೂಡ ಮುಂದಿನ ಪದ್ಯವಲ್ಲಿ ಪುಷ್ಟೀಕರಿಸಿದ್ದಾನೆ.

ಬಳಿಕೆ ಸಮಯಸ್ಥಾಪನಾರ್ಥಂ ಶ್ರುತಿ ಸ್ಮೃತಿಪಿ
ಮಳ ಪುರಾಣಾಗಮೋಪರಿಷತ್ಪ್ರಭೃತಿ ಶಾಸ್ತ್ರ
ಕುಲದ ಸಾರಂದೆಗೆದು ದೃಷ್ಟಕೆ ಬರೆದು ಸರ್ವರಱಿಯೆ ಕರ್ಣಾಟವಾಗಿ
ಅಲಘು ವರ್ಣಕರೀತಿಯಿಂ ರಸಂ ಮುಸುಕಿಯು
ಜ್ವಳಿಪಂತೆ ಸಾನಂದ ಚರಿತಾಖ್ಯಶಾಸ್ತ್ರಮನ
ತುಳ ಗುರುವರಂ ನಿಜಾತ್ಮನಿನೊರೆಯಿಸುತೆ ಶಿವಸುಖದೊಳಿಂ
ತೋಪ್ಪುತಿರ್ದಂ ॥

ನೀಲಕಂಠ ನಾಗನಾಥಾಚಾರ್ಯನು ತನ್ನ ವೀರಮಾಹೇಶ್ವರಾಚಾರ ಸಾರಸಂಗ್ರಹದ ಪೀಠಿಕೆಯಲ್ಲಿ "ಸಾನಂದ ಚರಿತಂ ನಾಮ ಗ್ರಂಥಂ ಚಕ್ರೇಽತಿಯತ್ನತಃ। ಯಸ್ತಸ್ಮೈ ಪದ್ಮರಾಜಾಯ ನಮೋ ದುರ್ವಾದದಾಹಿನೇ" ಎಂದು ಹೇಳಿದ್ದಾನೆ. ಇದರಂತೆ ಪದ್ಮರಸನು ಸಂಸ್ಕೃತದಲ್ಲಿ ಸಾನಂದಚರಿತ್ರೆಯನ್ನು ಬಹುಪ್ರಯತ್ನದಿಂದ ಬರೆದಿರುವನೆಂದೂ ಆತನು ದುರ್ವಾದಿಗಳನ್ನು ದಹಿಸತಕ್ಕವನು ಎಂದೂ ಸ್ಪಷ್ಟವಾಗುತ್ತದೆ. ಈ ಸಾನಂದ ಚರಿತವು ಕೇವಲ ಪುರಾಣಕಥೆಯಾಗಿರದೆ ಪುರಾಣಾರ್ಥವನ್ನು ಹಿಡಿದು ಆ ಜಾಡಿನಲ್ಲಿ ಸಾಕಾರ ಶಿವಾದ್ವೈತಸಿದ್ಧಾಂತಕ್ಕೆ ಪೂರಕವಾಗಿ ಇತರ ಮತಾಂತರಗಳಿಗೆ ಮಾರಕವಾಗಿ ಸಾಧಾರಪೂರ್ವಕವಾಗಿ ವಿರಚಿಸಿದ ಮಹಾಪ್ರಕರಣ ಪ್ರಬಂಧವೆಂದು ಗೋಚರವಾಗುತ್ತದೆ.

ದೀಕ್ಷಾಬೋಧೆ ಒಂದು ವೀರಶೈವ ವೈದಿಕ ಗ್ರಂಥ. ಮೂರುಸ್ಥಲಗಳುಳ್ಳ ಈ ಗ್ರಂಥದಲ್ಲಿ ವೀರಶೈವ ದೀಕ್ಷೆಯನ್ನು ಪಡೆಯಲು ಬೇಕಾದ ವಿಷಯಗಳು ಗುರುಶಿಷ್ಯ ಸಂವಾದ ರೂಪದಲ್ಲಿ ವಿವರಿಸಲಾಗಿದೆ. ದೀಕ್ಷಾಬೋಧೆಯ ಒಂದು ಮತ್ತು ಮೂರನೆಯ ಸ್ಥಲಗಳು ಲಲಿತ ರಗಳೆಯಲ್ಲಿಯೂ ಎರಡನೆಯ ಸ್ಥಲವು ಮಂದಾನಿಲ ರಗಳೆಯಲ್ಲಿಯೂ ಇದೆ. ಗ್ರಂಥದ ಮಧ್ಯೆ ವೇದಾಗಮ ಪುರಾಣಾದಿಗಳಿಂದ ಉದ್ಧರಿಸಿದ ಸಂಸ್ಕೃತ ಶ್ಲೋಕಗಳು ಸಾಕ್ಷಿಯ ರೂಪವಾಗಿ ಬಂದಿವೆ.

ದೀಕ್ಷಾಬೋಧೆಯ ಹೆಸರೇ ಸೂಚಿಸುವಂತೆ ದೀಕ್ಷೆಯ ಕಾಲದಲ್ಲಿ ಗುರು ಶಿಷ್ಯನಿಗೆ ಮಾಡುವ ಉಪದೇಶವನ್ನು ನಿರೂಪಿಸಲಾಗಿದೆ. ವೀರಶೈವಧರ್ಮದಲ್ಲಿ ಶಿವದೀಕ್ಷಾಸಂಸ್ಕಾರಕ್ಕೆ ಬಹಳ ಮಹತ್ವವಿದೆ. ವೇದಾಗಮಗಳ ಕಾಲ

ದಿಂದಲೂ ಈ ದೀಕ್ಷಾಪದ್ಧತಿ ಆಚರಣೆಯಲ್ಲಿದೆ. ಅಂಗದ ಮೇಲೆ ಲಿಂಗಸಂಬಂಧವನ್ನುಂಟುಮಾಡುವುದರ ಮೂಲಕ ಮಲತ್ರಯವನ್ನು ನಾಶಪಡಿಸುವುದೇ ದೀಕ್ಷೆ. ದೀಕ್ಷಾಬೋಧೆ ಶಾಸ್ತ್ರಗ್ರಂಥವಾದರೂ ಕಾವ್ಯಗುಣಗಳೂ ಅಲ್ಲಲ್ಲಿ ಮಿಂಚಿ ಮರೆಯಾಗಿವೆ.

ಶಿವಭಕ್ತನ ನಡತೆ ಹೇಗಿರಬೇಕೆಂಬುದನ್ನು ಕವಿ ಈ ರೀತಿ ಹೇಳಿದ್ದಾನೆ:

ಉತ್ಸಾಹ ಶಿವಭಕ್ತಿಯಳಿಯದಿರಬೇಕು
ನಿಚ್ಚಟದ ನಿಷ್ಠೆ ದೃಢ ಕೆಚ್ಚುಗೊಂಡಿರಬೇಕು
ನಿಯುತಮಪ್ಪಾಚಾರಸಮಯ ತಾನಿರಬೇಕು
ನಯದ ವಾಕ್ಯಂ ದಯವು ದಾಕ್ಷಿಣ್ಯವಿರಬೇಕು
ದಂಭಮಾತ್ಸರ್ಯಕ್ಕೆ ಇಂಬುಗುಡದಿರಬೇಕು
ಶಂಭುಪದಭಕ್ತಿ ನಂಬುಗೆಯ ಹಂಬಲು ಬೇಕು
ಮನುಷ್ಯರ ಚಿತ್ತಚಾಪಲ್ಯದ ಬಗೆಗೆ :
ಒಂದು ಹೊತ್ತಿಗೊಂದು ಪರಿಯಹುದು ಈ ಮನಂ
ಬಂದ ವಿಷಯಂಗಳಂ ಬಿಟ್ಟುಬಿಡದೀಮನಂ
ಒಡಲೊಡವೆ ಮಡದಿಯರ ತೊಡರಿ ಪೂಣ್ದೀ ಮನಂ
ಕಡೆಗೆ ಮೃಡಭಕ್ತಿ ದೃಢವಿಡಿಯದಿಹುದೀ ಮನಂ

ಎಂದಿದ್ದಾನೆ. ಜಾತಿಮತಗಳಿಗಾಗಿ ಬಡಿದಾಡುತ್ತಿದ್ದುದನ್ನು ಕಂಡು ಈ ಕುಲಮದ ನಿರಸನವನ್ನು ಕುರಿತು :

ಕುಲಮಂ ವಿಚಾರಿಪೊಡೆ ನೆಲವಿಲ್ಲ ಫಲವಿಲ್ಲ
ನೆಲೆಯನಱಿಪೊಡೆ ಶುದ್ಧ ಹೊಲೆಯೈಸೆ ಕುಲವೆಲ್ಲ
ಕಾಯಕ್ಕೆ ಕುಲವೋ ಜೀವಕ್ಕೆ ಕುಲವೋ ಪೇಳು
ಈ ಯೆರಡಱೊಳಗೆ ಇನ್ನಾವುದಕೆ ಕುಲ ಪೇಳು

ಎಂದು ಪ್ರಶ್ನಿಸಿದ್ದಾನೆ.

ನಾನು ನನ್ನದು ಎಂಬ ಮಾನವರ ಮಮಕಾರವನ್ನೂ ಅದರ ನಿರಸನವನ್ನೂ ಈ ರೀತಿ ವ್ಯಾಖ್ಯಾನಿಸಿದ್ದಾನೆ:

ಜಡವೆಯಾರದು ಒಡೆಯರಾರೆಂಬುದನು ಅಱಿಯೆ
ಕಡುಲೋಭಿ ಜಡನೆಯಕಟಱಿಯಲಾ ನರಗುಱಿಯೆ
ಕಟ್ಟೊಡೆಯತನವ ಬಲಿದಿಂತು ಹೋರುವೆ ನೀನು
ಹುಟ್ಟುವಾಗಲೆ ಧನವ ಕಟ್ಟಿ ತಂದೆಯೊ ನೀನು
ನೀ ತಾರದೊಡೆ ನಿನ್ನ ತಾತ ತಂದನೊ ಇದಂ
ಏತಱಿಂದಾಯ್ತು ನಿನಗೊಡೆತನಂ ಪೇಳಿದಂ
ಹುಟ್ಟುವಲಿ ತಾರೆ ಹೊಂದುವಲೊಯ್ಯೆ ಕಂಡಿದಕೆ
ನಟ್ಟನಡುವೆಹಗಾಯ್ತು ಒಡೆತನಂ ಪೇಳಿದಕೆ
ಇದುಕಾರಣಂ ನಿನ್ನ ಸೊಮ್ಮಲ್ಲ ಎಲೆ ಮರುಳೆ
ಕುದಿದು ಕೋಟಲೆಗೊಂಡೊಡಂ ಇಲ್ಲ ಎಲೆ ಮರುಳೆ

ಹಲವಾರು ಧರ್ಮಗಳ ತವರೂರಾದ ಈ ಭರತಖಂಡದಲ್ಲಿ ಒಂದೊಂದು ಕಾಲಕ್ಕೆ ಒಂದೊಂದು ಧರ್ಮ ತಲೆಯೆತ್ತಿ ಮೆರೆದಿರುವುದನ್ನು ನಮ್ಮ ಇತಿಹಾಸ ಸಾರುತ್ತಿದೆ. ವಿಭಿನ್ನ ಧರ್ಮಗಳಿಂದಲೂ ವಿಶಿಷ್ಟ ಸಂಸ್ಕೃತಿಯಿಂದಲೂ ಕೂಡಿದ ಈ ದೇಶದಲ್ಲಿ ಆಗಿಂದಾಗ್ಗೆ ಈ ಧರ್ಮಗಳಿಗೆ ಪರಸ್ಪರ ಘರ್ಷಣೆಯು ಸಂಭವಿಸಿದೆ. ಸ್ವಧರ್ಮ ಪ್ರತಿಷ್ಠಾಪನೆಗಾಗಿ ರಾಜರ ಆಸ್ಥಾನದಲ್ಲಿ ಪ್ರಕಾಂಡ ಪಂಡಿತರು ತಮ್ಮ ಅಪಾರವಾದ ಪಾಂಡಿತ್ಯವನ್ನು ಪ್ರದರ್ಶಿಸಿದ್ದಾರೆ. ಅವುಗಳಲ್ಲಿ ಕೆರೆಯ ಪದ್ಮರಸನಿಗೂ ತ್ರಿಭುವನತಾತನಿಗೂ ನಡೆದ ವಾದಪ್ರಕರಣ ಪ್ರಮುಖವಾದುದು. ಈ ಎಲ್ಲ ವಾದ ವಿವಾದಗಳ ಸಾರಾಂಶವಿಷ್ಟೆ. ಪರಮತ ನಿರಾಕರಣೆ. ಸ್ವಮತ ಸ್ಥಿರೀಕರಣೆ.

ಕೆರೆಯ ಪದ್ಮರಸನು ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲೂ ಕೃತಿರಚನೆ ಮಾಡಿ, ಅದರಲ್ಲೂ ಶಾಸ್ತ್ರೀಯ ಮತ್ತು ಧಾರ್ಮಿಕ ಗ್ರಂಥಗಳನ್ನು ರಚಿಸಿ ಅಮರನಾಗಿದ್ದಾನೆ. ತನ್ನ ನಡೆನುಡಿ ಆಚಾರ ವಿಚಾರಗಳಿಂದ ಶಿವಸಾಕ್ಷಾತ್ಕಾರವನ್ನು ಪಡೆದುಕೊಂಡಿದ್ದಾನೆ. ಇಂತಹ ಪುಣ್ಯಪುರುಷನ ನಾಮಸಂಕೀರ್ತನೆ ಮಾನವರ ಉದ್ಧಾರಕ್ಕೂ ಉತ್ಥಾನಕ್ಕೂ ನೆರವಾಗಬಲ್ಲುದು. ಈ ಪುಣ್ಯಚರಿತರನ್ನು ಕುರಿತು 'ಪದ್ಮರಾಜಪುರಾಣ'ವನ್ನು ಬರೆದ ಪದ್ಮಣಾಂಕ ಕೃತಾರ್ಥನಾಗಿದ್ದಾನೆ.

## ಕುಮಾರ ಪದ್ಮರಸ

ಈ ಹಿಂದೆಯೇ ಹೇಳಿರುವಂತೆ ಕುಮಾರ ಪದ್ಮರಸನು ಕೆರೆಯ ಪದ್ಮರಸನ ತನೂಭವ. ಈತನಿಗೆ ಪದುಮಿಗ, ಪದುಮಿದೇವ ಎಂಬ ಪರ್ಯಾಯನಾಮಗಳೂ ಕಂಡುಬರುತ್ತವೆ. ಈತನು 'ಶರಣಕವಿ' ಎಂಬ ಬಿರುದಿಗೂ ಪಾತ್ರನಾಗಿದ್ದಾನೆ. ಈತನ ತಾಯಿ ಮಾದೇವಿ. ತಂದೆಯ ಬಳಿಯೇ ವಿದ್ಯಾಭ್ಯಾಸವನ್ನು ಮಾಡಿದ ಈತ ತಂದೆಯ ಆಜ್ಞಾನುಸಾರವಾಗಿಯೇ 'ಸಾನಂದಚರಿತೆ'ಯನ್ನು ರಚಿಸಿದ್ದಾನೆ. ಈ ಸಾನಂದಚರಿತೆಗೆ 'ಶಿವಾದ್ವೈತಸಾಕಾರಸಿದ್ಧಾಂತ'ವೆಂಬ ಅನ್ವರ್ಥನಾಮವೂ ಇದೆ. ಸಂಸ್ಕೃತದಲ್ಲಿ ಕೆರೆಯ ಪದ್ಮರಸ ರಚಿಸಿರುವ ಸಾನಂದಚರಿತೆಯನ್ನೇ ಕುಮಾರಪದ್ಮರಸ ಆತನ ಆಜ್ಞಾನುಸಾರವಾಗಿ ಕನ್ನಡಿಸಿರುವುದಾಗಿ ಈ ಪದ್ಯದಲ್ಲಿ ಸ್ಪಷ್ಟಪಡಿಸಿದ್ದಾನೆ:

ಪಿರಿದುವಾರುಂ ಮುನ್ನ
ವಿರಚಿಸಿದರಿಲ್ಲೆಂದು
ಧರೆಯೊಳೊಳುಗನ್ನಡದಿ ಪಸರಿಸೆಂದು
ಗುರುರೂಪ ವಿಶ್ವಪತಿ
ಕರುಣಿಸಿದ ತೆಱದಿನಾಂ
ವರಪುರಾಣಾರ್ಥಮಂ ಕನ್ನಡಿಸಿದೆಂ (೧–೩)

ಕೆರೆಯ ಪದ್ಮರಸನ 'ಸಾನಂದಚರಿತೆ' ಉಪಲಬ್ಧವಿಲ್ಲ. ಈ ಸಾನಂದಚರಿತೆಯಲ್ಲಿ ಪಂಚಾಕ್ಷರೀಮಹಿಮೆಯನ್ನು ವರ್ಣಿಸಲಾಗಿದೆ. ಇದಕ್ಕೆ ಸಾನಂದಚರಿತೆಯೆಂಬ ಹೆಸರಿದ್ದರೂ ಇದರ ಜೊತೆಗೆ ಶಿವಾದ್ವೈತಸಿದ್ಧಾಂತಕ್ಕೆ ಸಂಬಂಧಿಸಿದ ನಲವತ್ತಾರು ಮಹತ್ವದ ಪ್ರಕರಣಗಳಿವೆ. ಈ ಕೃತಿಯಲ್ಲಿ ಶಿವಾದ್ವೈತಸಿದ್ಧಾಂತವೇ ಮೂರ್ತಿವತ್ತಾಗಿ ಮೂಡಿಬಂದಿದೆ. ಈ ಸಿದ್ಧಾಂತದ ನಿರೂಪಣೆಗಾಗಿ ಕುಮಾರಪದ್ಮರಸ ಆಧರಿಸಿರುವ ವೇದಾಗಮ ಪುರಾಣೇತಿಹಾಸಗಳು ಅಸಂಖ್ಯಾತವಾದುವು. ಈ ಸಾನಂದಚರಿತೆಯನ್ನು ವಿವಿಧ ಛಂದಸ್ಸಿನಲ್ಲಿ ರಚಿಸಲಾಗಿದೆ. ಇದರ ೧, ೨, ೩ ಮತ್ತು ೫ನೆಯ ಸಂಧಿಗಳು ಕುಸುಮಷಟ್ಪದಿಯಲ್ಲಿಯೂ, ೭, ೮ ಮತ್ತು ೯ನೆಯ ಸಂಧಿಗಳು ಭಾಮಿನಿಷಟ್ಪದಿಯಲ್ಲಿಯೂ, ನಾಲ್ಕನೆಯ ಸಂಧಿ ಲಲಿತರಗಳೆಯಲ್ಲಿಯೂ, ೬ನೆಯ ಸಂಧಿ ಉತ್ಸಾಹ ರಗಳೆಯಲ್ಲಿಯೂ ರಚಿತವಾಗಿವೆ. ಈತನು ಶಿವಪುರಾಣ, ಸಾಂದಪುರಾಣ, ಬ್ರಹ್ಮಾಂಡಪುರಾಣ, ಕೂರ್ಮಪುರಾಣ, ಮಾನವಪುರಾಣ. ಸೌರಪುರಾಣ, ಆದಿತ್ಯಪುರಾಣ, ಶಾಂಭವಪುರಾಣ, ಶಿವಗೀತೆ, ಭಗವದ್ಗೀತೆ, ಕಾಳಿಕಾಖಾಂಡ, ಮಹಾಭಾರತ, ಋಗ್ವೇದ, ಯಜುರ್ವೇದ, ಶಿವಸಂಕಲ್ಪ, ಶ್ವೇತಾಶ್ವತರೋಪನಿಷತ್, ಸನತ್ಕುಮಾರಸಂಹಿತೆ, ಮಾನವೀಯಸಂಹಿತೆ—ಇವೇ ಮುಂತಾದ ಶಾಸ್ತ್ರಗ್ರಂಥಗಳಿಂದ ತನ್ನ ಕಾವ್ಯಕ್ಕೆ ಅಪಾರವಾದ ಸಾಕ್ಷ್ಯಗಳನ್ನು ಒದಗಿಸಿದ್ದಾನೆ. ನಾರಕಿಗಳ ಯಾತನೆಯನ್ನು ಕೇಳಿ ಮಹಾಕರುಣೆಯಿಂದ ಆ ನಾರಕಿಗಳನ್ನು ಶ್ರೀಮಹಾಪಂಚಾಕ್ಷರೀ ಮಂತ್ರದಿಂದ ಉದ್ಧರಿಸಿ ಶಿವಲೋಕಕ್ಕೈದಿದ ಪರಿಯನ್ನು ಈ ಕವಿ ಹೃದಯಂಗಮವಾಗಿ ವಿವರಿಸಿದ್ದಾನೆ. ಸಾನಂದಚರಿತೆಯಲ್ಲಿ ವಿವಿಧ ರಾಗತಾಳಗಳು ಕಂಡುಬರುತ್ತವೆ. ಆದ್ದರಿಂದ ಈ ಕೃತಿಯನ್ನು ಓದುವಲ್ಲೂ ಒಂದು ವಿಶಿಷ್ಟ ಕ್ರಮವಿದ್ದಂತೆ ಕಂಡುಬರುತ್ತದೆ.

ಕುಮಾರಪದ್ಮರಸನ ಪಿತಾಮಹರಾದಿಯಾಗಿ ಆತನ ವಂಶಜರೆಲ್ಲ ಗುರುಪರಂಪರೆಗೆ ಸೇರಿದವರು ; ಚತುಶ್ಶಾಸ್ತ್ರಪಂಡಿತರು ; ನಿತ್ಯಶಿವಾನುಭಾವಿಗಳು ; ಲಿಂಗಾಂಗಸಾಮರಸ್ಯ ಸುಖಿಗಳು ; ಕಾಶಿವಿಶ್ವನಾಥನ ನಿಸ್ಸೀಮಭಕ್ತರು ; ಘನವಿದ್ವಾಂಸರು. ಈ ಪರಂಪರೆಯಲ್ಲೇ ಬಂದ ಕುಮಾರ ಪದ್ಮರಸ ತನ್ನ ಹಿರಿಯರ ಗುಣಗಳನ್ನೆಲ್ಲಾ ಗರ್ಭೀಕರಿಸಿಕೊಂಡು ವೀರಶೈವ ಸಿದ್ಧಾಂತಗ್ರಂಥವಾದ ಸಾನಂದಚರಿತೆಯನ್ನು ರಚಿಸಿದ್ದಾನೆ. ಸಂಸ್ಕೃತಸಾನಂದಚರಿತೆ ಉಪಲಬ್ಧವಿಲ್ಲದಿರುವುದರಿಂದ ಕನ್ನಡದ ಸಾನಂದಚರಿತೆಗೆ ಬಹುಮುಖ್ಯವಾದ ಸ್ಥಾನವಿದೆ. ಈ ಕೃತಿಯಲ್ಲಿ ಧರ್ಮಸಾಹಿತ್ಯಗಳ ಸಂಗಮವನ್ನು ಕಾಣಬಹುದಾಗಿದೆ. ಧರ್ಮವನ್ನು ಸಾಹಿತ್ಯದ ಮೂಲಕ ಪರಿಣಾಮಕಾರಿಯಾಗಿ ನಿರೂಪಿಸಿರುವ ಕೃತಿಗಳಲ್ಲಿ ಇದು ಪ್ರಮುಖವಾದುದು. ಈ ಸಾನಂದಚರಿತೆಯನ್ನು ಕುರಿತು ಕುಮಾರಪದ್ಮರಸ ಹೇಳಿರುವ ಮಾತುಗಳನ್ನೇ ಉದ್ಧರಿಸಬಹುದು:

ಇದು ಪುರಾಣದ ಸಾರ
ವಿದು ಶ್ರುತಿಸ್ಮೃತಿಯುಳುವೆ
ಯಿದು ಶಿವಾಗಮದೊಂದು ಗೂಢಾರ್ಥವು
ಇದು ತತ್ತ್ವದೀಪವಿಂ
ತಿದು ಶಿವಾದ್ವೈತವಿಂ
ತಿದು ಸತ್ಪಥಪ್ರತಿಷ್ಠಾಪದ್ಧತಿ (೧–೨೫)

ಚರಿತೆ ಸಾನಂದೇಶ
ಚರಿತೆ ಜಗದಾನಂದ
ಚರಿತೆ ಪಂಚಾಕ್ಷರೀ ವರಮಹಿಮೆಯು
ಚರಿತೆ ಶಿವಭಕ್ತಿಗಿದು
ಚರಿತೆ ಗುರುನಿಷ್ಠೆಗಿದು
ಚರಿತೆ ಸತ್ಪಥಕೆ ತಾನೆಂತೆಂತೆನೆ (೧–೨೬)

ಶಾಸ್ತ್ರಾನುಭವವಿಲ್ಲದವರು ಈ ಕಾವ್ಯವನ್ನು ಓದಿ ಅರ್ಥೈಸಿಕೊಳ್ಳುವುದು ಕಷ್ಟಸಾಧ್ಯವಾದುದು. ಕವಿಯಾ ವರೋ "ಇಕ್ಕಿದೆಂ ಶ್ರುತನಿಚಯ, ಮುಡಿಗೆಯನಿಕ್ಕಿದೆಂ ಶಾಸ್ತ್ರಾದಿ ಮುಡಿಗೆಯನಿಕ್ಕಿದೆಂ ಶೈವಾಗಮಾದಿಯ ವಾಕ್ಯ ಮುಡಿಗೆಯಿಂದಂ" ಎಂಬ ಸವಾಲನ್ನು ಎಸೆದಿದ್ದಾನೆ. ಮತ್ತು "ನೆರೆದ ನಿಗಮಾಳಿಯೊಳು ಕಥೆಗಳನುೞಿ ಸಸಾಕ್ಷಿಕ ವಾಗೆ ಪೊಸತೆನಲೊರೆದೆ ಸಾಸಿರದೈದನೂಱಱಿಂದಱಿಯೆ ಕಿಱಿದಱೊಳೆ" ಎಂಬಂತೆ ಸಾಸಿವೆಯಲ್ಲಿ ಸಾಗರವನ್ನು ತುಂಬಿದಂತೆ ಬಹುಪರಿಶ್ರಮದಿಂದ ವಿವೇಚನೆಯಿಂದ ರಚಿಸಿರುವ ಈ ಶಾಸ್ತ್ರಕೃತಿ ಸಹೃದಯರಾದ ಶಾಸ್ತ್ರಜ್ಞರಿಗೆ ಧರ್ಮಮರ್ಮಜ್ಞರಿಗೆ ಪರಿಶೀಲನಾರ್ಹವೂ ಅತ್ಯಂತ ಪ್ರಯೋಜನಕಾರಿಯೂ ಆಗಿದೆ. ಜಗದಾನಂದಚರಿತೆಯಾದ ಈ ಸಾನಂದಚರಿತೆ ಬಹುಕಾಲ ನಿಲ್ಲುವುದರಲ್ಲಿ ಸಂದೇಹವಿಲ್ಲ.

---

ಆನೆಯ ತೊರೆದು ಕೋಣನನೇರಿದೊಡೆ ಆರೇನ ಮಾಡುವರೋ !
ಕಸ್ತುರಿಯ ಬಿಟ್ಟು ಕೆಸರ ಪೂಸಿದೊಡೆ ಆರೇನ ಮಾಡುವರೋ !
ಪಾಯಸನ ಜರಿದು ಸುರೆಯ ಕುಡಿದೊಡೆ ಆರೇನ ಮಾಡುವರೋ !
ಅರಿಪರಿದು ಗುಹೇಶ್ವರನ ಶರಣರ ಅನುಭಾವವ ಬಿಟ್ಟು
ಬೇರೆ ವಾದಿಸಿದೊಡೆ ಆರೇನ ಮಾಡುವರಯ್ಯಾ !

ಅಲ್ಲಮಪ್ರಭು

# ಮಹಾನುಭಾವ ಮಾದರ ಧೂಳಯ್ಯ

ಡಾ. ಸಿದ್ಧಯ್ಯಪುರಾಣಿಕ

ಆಗದಿಹುದೇ ಸಿದ್ಧರಸ ಸಂ
ಯೋಗದಿಂ ಸೌವರ್ಣಮುಂ ಚೆ-
ನ್ನಾಗಿ ಶುಕ್ತಿಯೊಳೊಂದಿ ತಾಮ್ರವಹಂಗೆ ಲೋಕದೊಳು
ಶ್ರೀಗುರುಕರ ಸ್ಪರುಶನದಿ ಪರಿ
ಭಾಗಿಸಲು ಕುಲಮೊಂದೆಯಲ್ಲಾ
ಆಗಮೋಕ್ತಿಯೊಳಿಂತು ಅಂತ್ಯಜನಾದಡಗ್ರಜನು

(ಬಸವಪುರಾಣ : ಸಂಧಿ ೫೬, ಪದ್ಯ ೬೬)

'ವಿಶ್ವಾಚಾರಧರ್ಮವಿಕಸನ' ನಿರತ ಬಸವನ ಬೋಧೆಯಿಂದ ಅಗ್ರಜರಾದ ಅಂತ್ಯಜರು ಅನೇಕರು; ದಿವ್ಯತೆಗೇರಿದ ದಲಿತರು ಅನೇಕರು; ಶರಣಪದವಿಯನ್ನು ಪಡೆದ ಶ್ವಪಚರು ಅನೇಕರು; ಅರಿವಿನ ದೊರೆಗಳಾದ ಅಸ್ಪೃಶ್ಯರು ಅನೇಕರು; ಕಾಯಕಯೋಗಿಗಳಾದ ಕುಲಹೀನರು ಅನೇಕರು; ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಶಿವನಾಗಮಯ್ಯ, ನಾವದಿಗೆಯ ಗುಡ್ಡಮ್ಮ, ಸೂರಂಬೆ ಮೊದಲಾದವರು 'ಹಿಂದಿನ ಜನನವೇನಾದೊಡಾಗಲಿ, ಇಂದಿನ ಭೋಗವು ಕೈಯಮೇಲೆ' ಎಂಬ ಬಸವೋಕ್ತಿಗೆ ಸೂಕ್ತ ನಿದರ್ಶನಗಳಾಗಿ ಶೋಭಿಸುತ್ತಿದ್ದಾರೆ. ಮಹಾನುಭಾವ ಮಾದರ ಧೂಳಯ್ಯನು ಇದಕ್ಕೆ ಉಜ್ವಲ ಉದಾಹರಣೆಯಾಗಿ ಬೆಳಗುತ್ತಿದ್ದಾನೆ.

ಹುಟ್ಟಿದುದು ಮಾದರ ಕುಲದಲ್ಲಿ;* ಮಾಡುತ್ತಿದ್ದುದು ಮೆಟ್ಟು ಹೊಲಿಯುವ ಕಾಯಕವನ್ನು ಬಸವನ ಕಲ್ಯಾಣದಲ್ಲಿ. ಶಿವಾನುಭವದ ಪರಮೋನ್ನತ ಸ್ಥಿತಿಯನ್ನು ಪಡೆದಿದ್ದ ಅವನ ಮೆಟ್ಟು ಹೊಲಿಯುವ ಕಾಯಕ ಶಿವನನ್ನು 'ಹೃದಯದೊಳಗೆ ಅಚ್ಚೊತ್ತಿದಂತಿರಿಸುವ, ಭವದ ಬಂಧನಗಳನ್ನು ಬಿಚ್ಚಿ ಎಸೆವ ಕಾಯಕವಾಗಿದ್ದಿತು' ಅವನೇ ಉಸಿರಿಲ್ಲವೆ ?

ಸತ್ಯ ಶುದ್ಧ ಕಾಯಕವ ಮಾಡಿ ತಂದು ವಂಚನೆಯಿಲ್ಲದೆ
ಪ್ರಪಂಚಳಿದು ನಿಚ್ಚಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ ಕಾಮಧೂಮ ಧೂಳೇಶ್ವರ

ಸತ್ಯಶುದ್ಧಕಾಯಕ; ಅದರಿಂದ ಬಂದುದರಲ್ಲಿ ಸರಳ ಶರಣಜೀವನ ಮತ್ತು ಜಂಗಮದಾಸೋಹ. ಇನ್ನೇನು ಬೇಕು? ಕೈಕೊಂಡ ವೃತ್ತಿಯನ್ನೇ ತತ್ತ್ವಮಯ ಮಾಡಬಲ್ಲ, ಕಾಯಕದಲ್ಲಿಯೇ ಕೈಲಾಸವನ್ನು ಕಾಣಬಲ್ಲ, ಲಿಂಗಕ್ಕಾಗಿ ಪ್ರವೃತ್ತರಾಗಿ ಲಿಂಗದಲ್ಲಿಯೇ ನಿವೃತ್ತರಾಗಬಲ್ಲ, ಲಿಂಗದ ಬಾಯಿ ಜಂಗಮವೆಂದು ಜಂಗಮದಾಸೋಹದಿಂದ ಸಂತೃಪ್ತರಾಗಬಲ್ಲ ಶರಣರಿಗೆ ಇನ್ನೇನೂ ಬೇಡ; ಅವರೊಲಿದ ಕಾಯಕ ತಾರ್ಕಿಕದೃಷ್ಟಿಯಲ್ಲಿ ಕನಿಷ್ಠವಾದುದೇ ಇರಲಿ, ಅವರದನ್ನು ಕೈಕೊಂಡ ಮೇಲೆ ಅದಕ್ಕೆ ಎಂದಿಲ್ಲದ ಶ್ರೇಷ್ಠತ್ವ ಬರುತ್ತದೆ. ಧೂಳಯ್ಯನು ಮೆಟ್ಟು ಹೊಲಿಯುವುದನ್ನು ನೋಡಿ:

ಕಟ್ಟಿದೆ ಘಟದಟ್ಟೆಯ ಹೊಲಿದು,
ಇಕ್ಕಿದೆ ಚತುರ್ವಿಧದ ನಾಲ್ಕು ಗುಂಟವ ಒಲಿದು

---

* 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'ದ ಪ್ರಕಾರ ಧೂಳಯ್ಯ, ಕಕ್ಕಯ್ಯ—ಮಲ್ಲಿದೇವಿಯರ ಮಗ; ಕಕ್ಕಯ್ಯನ ಅನುಜೆಯ ಮಗಳು ದಾರುಕೆಯನ್ನು ಮದುವೆಯಾಗಿ ವರದಾನಿಯೆಂಬ ಮಗಳನ್ನು ಪಡೆಯುತ್ತಾನೆ.

ಗುಂಟಿದ ದ್ವಾರದಲ್ಲಿ ಉಭಯ ಸಂಚದ ಬಾರತೆಗೆದು,
ತೊಡಕು ಬಂಧವನಿಕ್ಕಿ, ಅಡಿಯ ಬಿಡದಂತೆ
ಹಿಂದಣ ಮಡ ಮುಂದಣ ಉಂಗುಷ್ಟಕ್ಕೆ ಒಂದನೊಂದು ಜಾರದಂತೆ ಬಂಧಿಸಿ
ಸಕಲೇಂದ್ರಿಯವೆಂಬ ಉಭಯವ ಸಂಧಿಸಿ ಕುಣಿಕೆಯನಿಕ್ಕಿ, ಕಾಮದ ಒಡಲ ಮಾದಿಗ ಬಂದೆ ;
ಘಟ ತೋಕುಳು ತೊಗಲು ಹದಬಂದಿತ್ತು,
ಹೊತ್ತು ಹೋದಿಹಿತಣ್ಣಾ, ಮೆಟ್ಟಡಿಯಕೊಂಡ ರೊಕ್ಕವ ಕೊಡಿ
ಒಪ್ಪಿದರಿರಲಿ, ಒಪ್ಪದಿದ್ದಡೆ ಮೂರು ಮುಖದಪ್ಪಗೆ ಕೊಟ್ಟಿಹೆ
ತಪ್ಪಡಿಯ ಮೆಟ್ಟಿ ಹೋಗುತ್ತಿದೇನೆ ಚನ್ನಯ್ಯಪ್ರಿಯ ಧೂಳನ ಧೂಳನೊಳಗಾಗಿ

ಇದು ಬರಿ ಚಮ್ಮಾರಿಕೆಯಲ್ಲ ; ಚಮ್ಮಾರಿಕೆಯ ಮೂಲಕ ದಿವ್ಯಜೀವನ ರೂಪಾರಿಕೆಯನ್ನು ಸಾಧಿಸಿದ ಸೋಜಿಗ ; ದನದ ಚರ್ಮದಿಂದ ಮೆಟ್ಟು ಮಾಡುವುದರಲ್ಲಿ ಆವ ಅಚ್ಚರಿಯೂ ಇಲ್ಲ; ಆದರೆ ಭವವಿಮುಖ ಜೀವವೆಂಬ ಚರ್ಮದಿಂದಲೇ ಪಾದರಕ್ಷೆಯನ್ನು ಸಿದ್ಧಪಡಿಸಿ ಅವನ್ನು ಸತ್ಯರ, ಸತ್ಯಶರಣರ ಪಾದಗಳಿಗೆ ತೊಡಿಸಿ ಬಟ್ಟಬಯಲನ್ನು ಕಾಣುವ ಕೌಶಲ್ಯ ಧೂಳಯ್ಯನಂಥ ಕಾಯಕ ಯೋಗಿಗಳಿಗೆ ಮಾತ್ರ ಸಾಧ್ಯ.

ಅರಿದು ಚುಚ್ಚುವರೆಲ್ಲರೂ ದನದಟ್ಟೆ
ಮರೆದು ಚುಚ್ಚುವರೆಲ್ಲರೂ ದನದಟ್ಟೆ
ನಾ ಚುಚ್ಚುವುದೆಲ್ಲವು ಸತ್ಯಜೀವ ದನದಟ್ಟೆ
ಅಟ್ಟೆಯ ಕೊಯ್ದು ಮೆಟ್ಟಿಸಿದೆ ಸತ್ಯರಿಗೆಲ್ಲರಿಗು
ಎನಗೆ ಬಟ್ಟಬಯಲ ತೋರಬೇಕೆಂದು
ನಿಮ್ಮ ಬಟ್ಟೆಯಲ್ಲಿ ನೀವೆ ಹೋಗಿ
ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೆ ಸಾಕು !

ಶಿವನ ಬಟ್ಟೆಯೇ ಬಟ್ಟೆಯಾದವರಿಗೆ ಪವಾಡಗಳ ಪ್ರಲೋಭನವೆಲ್ಲಿ ? ಆದರೂ ಧೂಳಯ್ಯನ ಹೆಸರಿನಲ್ಲಿಯೂ ಎರಡು ಪವಾಡಗಳು ಉಲ್ಲೇಖಿತವಾಗಿವೆ : ಇವನ ಬಚ್ಚಲಮನೆಯ ನೀರಿನಿಂದ ವಿಪ್ರನೊಬ್ಬನ ಕುಷ್ಟರೋಗ ಪರಿಹಾರವಾದ ಪವಾಡ ಮತ್ತು ಅವನ ಉಳಿಯ ಮೊನೆಯಲ್ಲಿ ಶಿವನು ಪ್ರಕಟವಾದ ಪವಾಡ.* ಎರಡನೆಯ ಪವಾಡಕ್ಕಂತೂ ಅಂತಸ್ಥ ಆಧಾರ ಅವನ ವಚನದಲ್ಲಿಯೇ ಸಿಕ್ಕುತ್ತಿದೆ :

ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ ಪ್ರತ್ಯಕ್ಷವಾದ ಪರಮೇಶ್ವರನ ಕಂಡು,
ಇತ್ತಲೇಕಯ್ಯಾ ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ ?
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು
ನೀ ಹೊತ್ತ ಬಹುರೂಪ ತಪ್ಪದೆ ರಜತದ ಬೆಟ್ಟದ ಮೇಲಕ್ಕೆ ಹೋಗು
    ನಿನ್ನ ಭಕ್ತರ ಮುಕ್ತಿಯ ಮಾಡು
    ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು !

ನಡೆದ ಪವಾಡದ ನೈಜತೆಯೇನೇ ಇರಲಿ, ಧೂಳಯ್ಯನ ವ್ಯಕ್ತಿತ್ವವನ್ನು ಮೇರುಸದೃಶವನ್ನಾಗಿ ಮಾಡುವ ವಚನವಿದು : ಕರೆದರೆ ಕೈಲಾಸಕ್ಕೆ ಬರಲೊಲ್ಲೆನೆಂದ ಭಕ್ತನ ಮನವೊಲಿಸಿ ಸಂಗಡ ಕರೆದೊಯ್ಯಲೆಂದು ಉಳಿಯ ಮೊನೆಯಲ್ಲಿಯೇ ಅವನ ಸತ್ಯಶುದ್ಧ ಕಾಯಕದ ಕುರುಹಿನಲ್ಲಿಯೇ ಶಿವ ಪ್ರಕಟವಾಗಿ ಸಮ್ಮುಖದಲ್ಲಿ ನಿಂತರೂ ಕೈಲಾಸಕ್ಕಿಂತ ಕಾಯಕವೇ ಶ್ರೇಷ್ಠವೆಂದು ನಂಬಿದ್ದ ಧೂಳಯ್ಯ, 'ನಿನ್ನ ಭಕ್ತರ ಮುಕ್ತಿಯ ಮಾಡು, ನೀನೆ ಬದುಕು' ಎಂದು ಶಿವನನ್ನೇ ಹಿಂದಿರುಗಿಸಿದುದು. ನಿಜವಾಗಿಯೂ ಶರಣಸಮೂಹದಲ್ಲಿಯೇ ಅವನಿಗೊಂದು ವಿಶಿಷ್ಟ ಸ್ಥಾನವನ್ನು ತಂದಿತ್ತಿದೆ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಈ ಪ್ರಸಂಗ ವರ್ಣಿತವಾಗಿರುವುದು ಹೀಗೆ :

". . . . ಹಿಡಿದಿರ್ದ ಉಳಿಯಲ್ಲಿ ಶಿವನು ನಿಜರೂಪದೋರಿ ನಿಂದಿರಲು, ಹರಿಯಜೇಂದ್ರರು 'ಅಚ್ಚರಿ'ಯೆಂದು ಕೀರ್ತಿಸುತ್ತಿರಲು ಶಿವನು 'ಮೆಚ್ಚಿದೆ, ಬೇಡು, ಬೇಡು' ಎನಲು, ಧೂಳಯ್ಯನೆಂದನು : "ಕೋಪದಲ್ಲಿ ನೀ ತೊಟ್ಟ ಬಹುರೂಪು ಸಹಜವಾಗಿ ಇತ್ತಲೇತಕ್ಕೆ ಬಂದೆ ? ಭಕ್ತರು ನೋಡರು ; ಬೇಡಿದವರಿಗೆ ವರವಕೊಡು. ಬೆಳ್ಳಿಯ ಬೆಟ್ಟಕ್ಕೆ

* ಆಕರಗಳು, ಬಸವಪುರಾಣ ಮತ್ತು ಭೈರವೇಶ್ವರ ಕಾವ್ಯಗಳು, ಬೇರೆ ಆಕರಗಳೂ ಇರಬಹುದು.

ಪೋಗು, ಸುಖಿಯಾಗು ; ನಮ್ಮ ಕಾಮ ಧೂಮ ಧೂಳೇಶ್ವರನ ಕರುಣವ ಪಡೆದು ನೀನೇ ಸುಖಿಯಾಗು ಪೋಗೆಂ"ದು ನೋಡದೆ ಮುಖವ ತಿರುಹಿ ನುಡಿಯದೆ ಮೌನಗೊಂಡಿರಲು, ಶಿವನು ಹರಿಯಜೇಂದ್ರರಿಗೆ ತೋರಿ ಆಶ್ಚರ್ಯಂಬಡುತ . . . . .ಧೂಳಯ್ಯನ ಉಳಿಯ ಮುಱಿದೆನು, ತನ್ನ ಕೊಲ್ಲದೆ ಬಿಟ್ಟರೆ ಸಾಕೆಂದು ಕೈಲಾಸಕ್ಕೆ ಪೋಗಲು, ಇತ್ತ ಧೂಳಯ್ಯಗಳು ಕಾಯಕವ ಮಾಡಿ ಜಂಗಮಕ್ಕೆ ನೀಡುತ್ತ, ಗುಪ್ತಭಕ್ತಿಯಲ್ಲಿ ಸುಖದಲ್ಲಿರ್ದು ಕಾಮಧೂಮ ಧೂಳೇಶ್ವರನೆಂಬ ತಮ್ಮ ಇಷ್ಟಲಿಂಗದಲ್ಲಿ ಬೆರೆದು ಸುಖದಲ್ಲಿರ್ದರು."

ಈ ಪವಾಡಗಳಂತಿರಲಿ, ಒಬ್ಬ ಶ್ರೀಸಾಮಾನ್ಯ ಜನ್ಮದಿಂದ ಅಂತ್ಯಜನಾಗಿ ಹುಟ್ಟಿ, ಅದರಿಂದ ಒದಗಿದ ಪ್ರತಿಕೂಲ ಪರಿಸ್ಥಿತಿಗಳನ್ನೆಲ್ಲ ಪಾದಾಕ್ರಾಂತಮಾಡಿ, ಎದುರಾದ ಎಡರು ತೊಡರುಗಳನ್ನೆಲ್ಲ ಮೆಟ್ಟಿ, ಮೇಲಿನವರ ವಿರೋಧವನ್ನು ಮೀರಿ, ಸಾಧನೆಯ ಮೆಟ್ಟಲುಗಳನ್ನು ದಿಟ್ಟತನದಿಂದ ಒಂದೊಂದಾಗಿ ಏರಿ ಅರಿವಿನಿಂದ ಅಗ್ರಜನಾದ ಹಿರಿಮೆ-ಗರಿಮೆಗಳನ್ನು ಸಂಪಾದಿಸಿದುದು ಪವಾಡಗಳಲ್ಲಿ ಪವಾಡ :

> "To me every hour of the light and dark is a miracle. Every cubic inch of Spase is a miracle."

ಎಂದು ಉದ್ಗರಿಸಿರುವ ಪಾಲ್ಟ್ ವಿಟ್‌ಮನ್ ಧೂಳಯ್ಯನ ಸಿದ್ಧಿಯನ್ನು ಕಂಡಿದ್ದರೆ "It is a miracle of miracles" ಎಂದು ಉದ್ಗರಿಸುತ್ತಿದ್ದನೇನೋ.

ಈಗ ಧೂಳಯ್ಯನ ಅರಿವಿನ ಪರಿಯನ್ನಿಷ್ಟು ಒರೆದು ನೋಡೋಣ. "ತಾತನ್ನ ಮಱೆದಲ್ಲಿ ಮರಣ, ತಾತನ್ನನಱಿದಲ್ಲಿ ಜನನ" ಎಂಬ ನಂಬಿಕೆಯಲ್ಲಿ ಬಾಳಿದ ಧೂಳಯ್ಯ ಅರಿವಿನ ಗಿರಿಯ ಶಿರವನ್ನೇರಿ ನರ್ತಿಸಿದುದು ಸಹಜವೇ. ಅಚ್ಚಾಗಿರುವ ಅವನ ೧೦೨ ವಚನಗಳು ಅವನ ಉಚ್ಚ ವಿಚಾರ ವೈಭವಕ್ಕೆ ಕನ್ನಡಿ ಹಿಡಿದಿವೆ. ಕನ್ನಡ ನುಡಿಯ ತಿರುಳು ಹುರುಳುಗಳು ಕರಗತವಾಗಿವೆ ಇವನಿಗೆ. ಅಂತೆಯೇ ಸಾರೋಕ್ತಿಗರ್ಭಿತ ವಿಚಾರಪ್ರಚೋದಕ ವಚನಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಬರೆಯುವುದು ಇವನಿಗೆ ಸಾಧ್ಯವಾಗಿದೆ. ಇಲ್ಲಿ ನೋಡಿ :

ಅಱಿದೆಹೆ ಅಱುಹಿಸಿಕೊಂಡೆಹೆನೆಂಬ ಉಭಯವುಳ್ಳನ್ನಕ್ಕ
ಆ ಗುಣ ಅಱಿವೊ ಮಱವೆಯೊ ಎಂಬುದ ತಿಳಿವುದು ಅದೇನು ಹೇಳಾ ?
ಶ್ರೀ ಉಳ್ಳನ್ನಕ್ಕ ನಿಃಶ್ರೀ ಕುಱುಹುಗೊಂಡಿತ್ತು
ಅಱಿವುಳ್ಳನ್ನಕ್ಕ ಅಜ್ಞಾನವೊಡಲುಗೊಂಡಿತ್ತು
ತಮವುಳ್ಳನ್ನಕ್ಕ ಆ ಬೆಳಗು ತಮಕ್ಕೊಳಗಾಯಿತ್ತು
ಅದೆಂತೆಂದಡೆ :
ವಾಯುವ ಬೆಂಬಳಿಯಲ್ಲಿ ಗಂಧಸ್ವರೂಪವಾದಂತೆ,
ಆವಾವ ಕುಸುಮದ ಗಂಧವ ವಾಯು ತಾಬೆರೆವಲ್ಲಿ ಬಂಧವಿಲ್ಲದ ತೆಱದಂತೆ ;
ಅಱಿವುದು ಅಱುಹಿಸಿಕೊಂಬುದು ಎರಡಳಿದಲ್ಲಿ
ಕುಱುಹೆಂದು ಪ್ರಮಾಣಿಸುವುದಕ್ಕೆ ಅಱಿವೆಂದು ಕೂಡುವುದಕ್ಕೆ
        ಉಭಯದ ಎಡೆಯ ಹೇಳಾ ;
ಶ್ರೀಯಿಂದ ಕಾಬ ಮುಕ್ತಿ ಜ್ಞಾನದಿಂದ ಕಾಬ ನಿರವಯ:
        ಆ ಗುಣ ಶುಕ್ತಿಯಲ್ಲಿ ಅಡಗಿಪ್ಪ ಅಪ್ಪುವಿನಂತೆ
        ಒಪ್ಪಕ್ಕೆ ತಾನಾಗಿ ಕುಕ್ಕಿದಡೆ ಅಪ್ಪುವೆಂಬ ನಾಮಕ್ಕೆ ಸಿಕ್ಕಿದಲ್ಲದೆ ನಿಶ್ಚಯವಾದುದು
        ನೀರು ಸಾರ ಕೂಡಿದಲ್ಲಿ ಏಱಿಕಾಸಲಿಕ್ಕೆ ನೀರಱತು ಸಾರವುಳಿದಂತೆ,
        ಸಾರನೀರಿಂದ ಕುರುಹುಗೊಂಡಿತ್ತು
ಆ ನೀರೇ ಸಾರವಾದಲ್ಲಿ ಕೂಡಿ ಸವಿಯೆಂಬ ನಾಮವಾಯಿತ್ತು
ಸವಿಸಾರ ಕೂಡಿ ಅಂಗದ ಮೇಲೆ ರೂಪಾಯಿತ್ತು.
ನುಂಗಿದ ಮತ್ತೆ ಸವಿಸಾರ ಒಂದೂ ಇಲ್ಲ!
ಅಂಗವೆಂಬನ್ನಕ್ಕ ಲಿಂಗ, ಲಿಂಗವೆಂಬನ್ನಕ್ಕ ಅಂಗ
ಉಭಯದ ಸಂಗವ ಜಡನೆಂದು ನುಂಗಿದ ಮತ್ತೆ
ಅರ್ತಂಗೆ ಬಂಧಮೋಕ್ಷವೆಂಬುದೊಂದೂ ಇಲ್ಲ ;
ಕಾಮಧೂಮ ಧೂಳೇಶ್ವರನೆಂದು ಎನಲಿಲ್ಲ ;

ಇಂಥ ದೀರ್ಘವಚನರಚನಾಚತುರನಷ್ಟೇ ಅಲ್ಲ ಧೂಳಯ್ಯ : ಮಿಂಚಿನ ಮಾತುಗಳ ಚಿಕ್ಕ ವಚನಗಳನ್ನೂ ಚೊಕ್ಕಟ ವಾಗಿ ಬರೆಯಬಲ್ಲ :

ವಾದ್ಯಕ್ಕೆ ಬಂಧವಲ್ಲದೆ ನಾದಕ್ಕೆ ಬಂಧವುಂಟೆ ?
ಅಱಿವಿಂಗೆ ಬಂಧವಲ್ಲದೆ ಅಱುಹಿಸಿಕೊಂಬವಂಗುಂಟೆ ಬಂಧ ?
ಅಱಿದೆಹೆನೆಂಬ ಭ್ರಮೆ ಅಱುಹಿಸಿಕೊಂಡೆಹೆನೆಂಬ ಕುಱುಹು
ಉಭಯ ನಾಸ್ತಿಯಾಗಿಯಲ್ಲದೆ
ಭಾವಶುದ್ಧವಿಲ್ಲ ಕಾಮಧೂಮ ಧೂಳೇಶ್ವರಾ

ಇವನ ವಚನಗಳ ಓದುಗರಿಗೆ ಇವನಲ್ಲೊಂದು ಸ್ವಂತಿಕೆಯಿದೆಯೆಂಬುದು ವಿದಿತವಾಗದೆ ಇರದು. ಉದ್ದಕ್ಕೂ ಬೆಳಕಿನ ಬಾಳನ್ನು ಬಾಳಿ ಬೆಳಕಾಗಿ ಹೋದ ಧೂಳಯ್ಯ ತನ್ನ ಕೊನೆಯನ್ನು ಈ ವಚನದಲ್ಲಿ ಸೂಚಿಸಿದಂತಿದೆ :

ಬಂದ ಮಣಿಹ ಹಿಂಗಿತ್ತು—ಎದೆಯಲ್ಲಿದ್ದ ಲಿಂಗದ ಕುಱುಹೇಕೆ ಅಡಗದು ?
ಸಂದಣಿಸಿ ಸಂಶಯವ ಮಾಡುವ ನಿರಂಗದ ನಿಜವೇಕೆ ಉಡುಗದು ?
ಹಾಗೆಂಬುದಕ್ಕೆ ಮುನ್ನವೆ ಕಾಯದ ಕುಱುಹು ಶೂನ್ಯವಾಗಿ
ಭಾವ ಭಾವಿಸುವುದಕ್ಕೆ ಇಂಬಿಲ್ಲದೆ ಉಭಯ ನಿರ್ಯಾಣ ನಿರಾಳವಾಯಿತ್ತು
ಕಾಮಧೂಮ ಧೂಳೇಶ್ವರಾ

ಇವನ ವಚನಗಳ ಅಭ್ಯಾಸ ಇನ್ನಷ್ಟು ಆಗಬೇಕಾಗಿದೆ. ಜಿಜ್ಞಾಸುಗಳು ಇದನ್ನು ಕೈಕೊಂಡು ಧೂಳಯ್ಯನ ಅರಿವಿನ ಪರಿಮಳವನ್ನು ನಾಡಿನಲ್ಲಿ ಹರಡಿಸಲಿ.

---

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ,
ಇಂದ್ರಿಯಂಗಳೆಂಬ ಶಾಖೆಶಾಖೆಗೆ ಹಾರಿ, ವಿಷಯಂಗಳೆಂಬ
ಹಣ್ಣು ಫಲಂಗಳ ಗ್ರಹಿಸಿ; ಭವದತ್ತ ಮುಖವಾಗಿ
ಹೋಗುತಿದೆ ನೋಡಾ; ಈ ಮನವೆಂಬ ಮರ್ಕಟನ
ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ
ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ.

ಷಣ್ಮುಖ ಶಿವಯೋಗಿ

# ವಚನಕಾರ ಗಣದಾಸಿ ವೀರಣ್ಣ

ಎಸ್. ಎಸ್. ಭೂಸರೆಡ್ಡಿ

ಶರಣಶಿರೋಮಣಿಗಳಲ್ಲಿ ಗಣದಾಸಿ ವೀರಣ್ಣ ಜ್ಞಾನದ ಖಣಿ ; ತತ್ತ್ವಂಗಳ ಮಣಿ ; ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಮಹಾಕವಿ ಸರ್ವಜ್ಞರಂತೆ ಸ್ಪಷ್ಟವಾದಿ ; ವಿಚಾರವಾದಿ ; ಖಂಡಿತವಾದಿ. ವೀರಶೈವ ಧರ್ಮ, ತತ್ತ್ವಗಳ ನಿರೂಪಣೆ ಅವನ ವಚನಗಳಲ್ಲಿ ಮನೋಜ್ಞವಾಗಿ, ಮಾರ್ಮಿಕವಾಗಿ ಮೂಡಿಬಂದಿರುವುದು ಗಮನಾರ್ಹವಾಗಿದೆ. ಅಷ್ಟಾವರಣಗಳ ಮಹತ್ವವನ್ನು, ಎತ್ತಿ ಹೇಳುವದರಲ್ಲಿ ಇವನ ನುಡಿಗಡಣಗಳು ಅತ್ಯಂತ ಮಹತ್ವದ ಪಾತ್ರ ವಹಿಸಿವೆ ; ಓದುಗರ ಮೇಲೆ ಪರಿಣಾಮಕಾರಿ ಪ್ರಭಾವ ಬೀರುತ್ತವೆ. ಕನ್ನಡಿಗರ ಮನಃಪಟಲಗಳಿಂದ ಮರೆಯಾಗುತ್ತಿರುವ ಈತನ ವಚನಗಳನ್ನು ಶುದ್ಧವಾಗಿ ಸಂಸ್ಕರಿಸುವ ಮಣಿಹ ಇತ್ತೀಚೆಗೆ ನನಗೊದಗಿ ಬಂದಿತ್ತು. ಆ ಬೆಳಕಿನಲ್ಲಿಯೇ ಕೆಲವು ವಚನಗಳನ್ನು ಎತ್ತಿಕೊಂಡು ಇಲ್ಲಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ.

ಗಣದಾಸಿ ವೀರಣ್ಣನ ಜೀವನಚಿತ್ರವನ್ನು ಸಮಗ್ರವಾಗಿ ನಿರೂಪಿಸುವ ಯಾವ ಗ್ರಂಥಗಳೂ ಇನ್ನೂ ದೊರಕಿಲ್ಲ ; ಅದೊಂದು ದೊಡ್ಡ ಕೊರತೆ. ನಮ್ಮ ಘನ ವಿದ್ವಾಂಸರು ಈ ಕಡೆಗೆ ಗಮನ ಹರಿಸುವುದು ಅತ್ಯವಶ್ಯ. ಆದರೆ ಈತನ ಹೆಸರು ಗಣಸಹಸ್ರನಾಮಾವಳಿಯಲ್ಲಿ ಉಲ್ಲೇಖಗೊಂಡಿದೆ. ಇದರ ಆಧಾರದ ಮೇಲೆಯೇ ಕರ್ನಾಟಕ ಕವಿಚರಿತೆಕಾರರು ಈತನ ಕಾಲವನ್ನು ಸು. ೧೧೬೦ ಎಂದು ಗುರುತಿಸಿದ್ದಾರೆ. ಬಸವಾದಿ ಪ್ರಮಥರ ಸಮಕಾಲೀನರೆಂದು ಬರೆದಿದ್ದಾರೆ. ಈವರೆಗೆ ಈತನ ೩೭ ವಚನಗಳು ದೊರಕಿವೆ. ಆತನ ವಚನಗಳ ಅಂಕಿತ 'ಶಾಂತಕೂಡಲ ಸಂಗಮದೇವ.' ಅವುಗಳ ಸಮಗ್ರವಾದ ಅಭ್ಯಾಸ ಮಾಡಿದರೆ, ಈತನು ಬಸವಾದ್ಧಿ ಪ್ರಮಥರ ನಂತರವೂ ಬಹುಕಾಲ ಬಾಳಿ ಬೆಳಗಿದಂತೆ ತೋರಿ ಬರುತ್ತದೆ. ಆತನ ವಚನದಲ್ಲಿ ಮಹಾತಾಯಿ ನೀಲಮ್ಮನವರು ಲಿಂಗೈಕ್ಯರಾದ ವಿಚಾರ ಬಂದಿರುವದರಿಂದ ಈ ಮಾತನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ. ಈತನು ಸಂಸ್ಕೃತ ಪಂಡಿತನಾಗಿದ್ದನೆಂಬುದಕ್ಕೆ ಆತನ ವಚನಗಳಲ್ಲಿ ಸಮುಚಿತವಾಗಿ ಅಳವಡಿಸಿಕೊಂಡಿರುವ ಸುಮಾರು ೨೮ ಶ್ಲೋಕಗಳೇ ಸಾಕ್ಷಿ. ಅವು ವಚನಗಳಲ್ಲಿ ತುಂಬಿ ನಿಂತಿರುವ ನಿತ್ಯಸತ್ಯತತ್ತ್ವಗಳಿಗೆ ಪೋಷಕವಾಗಿವೆ ; ಪರಿಪೂರಕವಾಗಿವೆ. ಈತನ ವಚನಗಳ ಶೈಲಿ ನೇರವಾದ ಗದ್ಯಗಂಧಿ ; ಹೇಳಬೇಕಾದುದನ್ನು ಸ್ಪಷ್ಟವಾಗಿ ಸ್ಫುಟವಾಗಿ ಸುಂದರವಾದ ದೃಷ್ಟಾಂತಗಳಿಂದ ಸ್ಪಷ್ಟೀಕರಿಸಿದ್ದಾನೆ. ಅವು ತರ್ಕಬದ್ಧವಾಗಿವೆ. ತೂಕಬದ್ಧವಾಗಿವೆ. ಅಣ್ಣ ಬಸವಣ್ಣನವರ ಬಗೆಗೆ ಅತ್ಯಂತ ಗೌರವಾದರಗಳನ್ನು ತೋರಿಸಿದ್ದಾನೆ. ಅವರು ಮಂತ್ರಮೂರ್ತಿಗಳೆಂದು ಹೃದಯದುಂಬಿ ಬಣ್ಣಿಸಿದ್ದಾನೆ. ಅವರ ಬಗೆಗೆ ಸುದೀರ್ಘವಾದ ವಚನ ರಚನೆ ಮಾಡಿದ್ದಾನೆ. ಆ ವಚನದ ಕೆಲವು ಸಾಲುಗಳಿವು :

> ಎನ್ನ ಪಶ್ಚಿಮದಲ್ಲಿ ನಿರಂಜನ ಪ್ರಣವವಾಗಿ ನಿಂದಾತ ನಮ್ಮ ಬಸವಣ್ಣ
> ಎನ್ನ ಶಿಖೆಯಲ್ಲಿ ಬಸವಾಕ್ಷರತ್ರಯವಾಗಿ ನಿಂದಾತ ನಮ್ಮ ಬಸವಣ್ಣ
> ಎನ್ನ ಬ್ರಹ್ಮರಂಧ್ರದಲ್ಲಿ ಅ ಉಮ ಅಕ್ಷರತ್ರಯವಾಗಿ
> ಪ್ರಸಾದ ಪಂಚಾಕ್ಷರಿಯಾಗಿ ನಿಂದಾತ ನಮ್ಮ ಬಸವಣ್ಣ

ಇನ್ನೊಂದು ಮುತ್ತಿನಂತಹ ವಚನದಲ್ಲಿ ಬಸವಣ್ಣ—ನೀಲಲೋಚನೆಯರನ್ನು ವರ್ಣಿಸಿದ ಪರಿಯಿದು—ವೀರಶೈವರ ನಾಲಗೆಯಲ್ಲಿ ಸದಾ ನಿಲ್ಲಬೇಕಾದ ವಚನವಿದು :

> ಬಸವ ನೀಲಲೋಚನೆ ಇಬ್ಬರ ನಾಮ ಕೂಡಲು ಎಂಟಕ್ಷರವಾದವು
> ಆ ಎಂಟಕ್ಷರವೇ ಮಾಯಾಖ್ಯ ಪಂಚಾಕ್ಷರವಾದವು
> ಮಾಯಾಖ್ಯ ಪಂಚಾಕ್ಷರ ಎಂತೆಂದೊಡೆ ಓಂ ಹ್ರಾಂ ಹ್ರೀಂ ನಮಃ ಶಿವಾಯ

ಸಹಜಜ್ಞಾನದ ವಿವರವಿದು: ಅದೆಷ್ಟು ನಿರಾಡಂಬರ! ಅದೆಷ್ಟು ಅಂದವಾಗಿದೆ; ಸೊಗಸಾಗಿದೆ; ನೋಡಿ:

ತಮಂಧಕಾರ ಮೋಡವಿಲ್ಲದ ನಿರ್ಮಲಾಕಾಶದಂತೆ;
ಎಲೆಯಿಲ್ಲದ ವೃಕ್ಷದಂತೆ; ರೆಕ್ಕೆಯಿಲ್ಲದ ಪಕ್ಷಿಯಂತೆ,
ಗಾಳಿಯಿಲ್ಲದ ದೀಪದಂತೆ;
ನೊರೆ ತೆರೆ ಬುದ್ಬುದಾಕಾರವಿಲ್ಲದ ಸಮುದ್ರದಂತೆ;
ಇದು ಸಹಜ ಜ್ಞಾನವು ಎಂದು ಎನ್ನೊಳಗೆ ತೋರಿದಾತ
ನಮ್ಮ ಶಾಂತಕೂಡಲ ಸಂಗಮದೇವ

ಕುಲದ ಬಗೆಗಿನ ಆತನ ವಿಚಾರಪ್ರಣಾಲಿಯನ್ನು ಆಲಿಸಿ; ಅದೆಷ್ಟು ಸುಂದರ, ಅದೆಷ್ಟು ಬಂಧುರ:

ಕುಲ ಎಷ್ಟು ಎಂದರೆ; ಎರಡು ಕುಲ
ಅವಾವೆಂದಡೆ: ಭವಿ ಒಂದು ಕುಲ; ಭಕ್ತ ಒಂದು ಕುಲ;
ಅಷ್ಟಾವರಣವೇ ಅಂಗವಾಗಿ; ಪಂಚಾಚಾರವೇ ಪ್ರಾಣವಾಗಿಪ್ಪ;
ಭಕ್ತರ ಕುಲವನರಸಿದರೆ, ಬಾರದ ಭವಂಗಳಲ್ಲಿ ಬಪ್ಪುದು, ತಪ್ಪುದು.
ನೀರಿಂದಾದ ಮುತ್ತು ಮತ್ತೆ ಮರಳಿ ಉದಕವಪ್ಪುದೆ?
ಕ್ಷೀರದಿಂದಾದ ತುಪ್ಪ ಮರಳಿ ಕ್ಷೀರವಪ್ಪುದೇ?
ಮಣ್ಣಿಂದಾದ ಮಡಕೆ ಮತ್ತೆ ಮಣ್ಣಪ್ಪುದೇ?
ಆ ವಾಮನ ಮುನಿ ಹಿರಿಯ ಭಕ್ತರ ಮನೆಯ ಬಿನ್ನಹ ಕೈಕೊಂಡು
ಮತ್ತೆ ಕುಲಕಂಜಿ ಉಣಲೊಲ್ಲದೆ ಹೋದರೆ;
ಹಾವಿನಹಾಳ ಕಲ್ಲಯ್ಯನ ಮನೆಯೊಳಗೆ ಶ್ವಾನವಾಗಿ
ಹುಟ್ಟೆಂದು ಕಳುಹಿದರು.
ಆದ್ದರಿಂದ ಶಿವಭಕ್ತರ ಒಕ್ಕಮಿಕ್ಕ ಪ್ರಸಾದವ ಕೊಳಬೇಕು;
ಎಂದಾತ ನಮ್ಮ ಶಾಂತಕೂಡಲ ಸಂಗಮದೇವ

ಇಷ್ಟಲಿಂಗದ ಮಹತ್ವವನ್ನು ವಿಶದೀಕರಿಸುವ ಆಣಿಮುತ್ತಿನಂತಹ ವಚನವಿದು:

ಲಿಂಗದೊಳಗೆ ಅಖಿಳಾಂಡಕೋಟಿಬ್ರಹ್ಮಾಂಡಗಳಡಗಿಹವು;
ಲಿಂಗವು ತಾನೇ ಬ್ರಹ್ಮಾಂಡದೊಳಡಗಿ;
ಆ ಬ್ರಹ್ಮಾಂಡವು ಲಿಂಗವು ತನ್ನೊಸಳಳಡಗಿದ ಭೇದವು,
ಶಾಸ್ತ್ರವ ಬಲ್ಲವರಿಗೆ ಕಾಣಿಸದು; ಆಗಮಯುಕ್ತರಿಗೆ ತಿಳಿಯದು;
ಕರ್ಮ ಭೂಭಾರಿಗಳಿಗೆ ಗುರುಪ್ರತ್ಯಕ್ಷಮಂ ಮಾಡಿ
ತೋರಿಸಿದ ಭೇದವು ಹೇಗೆಂದಡೆ:
ಕರಿಯು ಕನ್ನಡಿಯೊಳಡಗಿದ ಹಾಗೆ
ಮುಗಿಲು ಮರೆಯ ಸೂರ್ಯನ ಹಾಗೆ
ಬೀಜದೊಳಡಗಿದ ವೃಕ್ಷದ ಹಾಗೆ;
ಈ ಭೇದವು ಗುರುಭಕ್ತರಂಶಿಕರಾದವರಿಗೆ ಸಾಧ್ಯವಲ್ಲದೆ;
ಭಿನ್ನ ಜ್ಞಾನಿಗಳಿಗೆ ಅಸಾಧ್ಯವೆಂದಾತ ನಮ್ಮ ಶಾಂತಕೂಡಲಸಂಗಮದೇವ

ವಿಶ್ವಬ್ರಹ್ಮಾಂಡ ಮಾಡುತ್ತಿರುವ ಲಿಂಗಪೂಜೆಯ ವೈಭವದ ವರ್ಣನೆಯ ಸೊಗಸನ್ನು ಗಣದಾಸಿ ವೀರಣ್ಣನ ವಚನಗಳಿಂದಲೇ ಅರಿಯಬೇಕು; ಒರಿಯಬೇಕು. ಆ ವಿಶ್ವಶಕ್ತಿಯ ಪ್ರಚಂಡ ಪ್ರಭಾವವನ್ನು ತಿಳಿಯಬೇಕು:

ಅಖಂಡ ಗೋಳಕಾಕಾರ ಮಹಾಲಿಂಗದ ಪೂಜೆ ಎಂತೆಂದೊಡೆ:
ಸದ್ಯೋಜಾತಮುಖದಿಂದಾದ ಪೃಥ್ವಿ, ಪತ್ರಪುಷ್ಪ ಲಿಂಗಕ್ಕೆ ಬೇಕೆಂದು
ಅನಂತ ಪತ್ರಪುಷ್ಪಗಳಿಂದ ಅರ್ಚಿಸುತ್ತಿಹುದು
ವಾಮದೇವಮುಖದಿಂದಾದಪ್ಪು, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂದು
ಸಪ್ತಸಮುದ್ರ ದಶಗಂಗೆಗಳ ಕುಂಭವ ಮಾಡಿ, ಕೆರೆಬಾವಿಗಳ ಪಂಚಪಾತ್ರೆಯ
ಮಾಡಿ ಮಜ್ಜನ ನೀಡಿಸುತ್ತಿಹುದು.

ಅಘೋರಮುಖದಿಂದಾದಗ್ನಿ. ಲಿಂಗಕ್ಕೆ ಧೂಪ ದೀಪ ಆರುತಿಗಳಾಗಬೇಕೆಂದು
ಕಾಷ್ಠದಲ್ಲಿ ಪಾಷಾಣದಲ್ಲಿ ಬೆಳಗುತ್ತಿಹುದು.
ತತ್ಪುರುಷಮುಖದಿಂದಾದ ವಾಯು. ಲಿಂಗಕ್ಕೆ ಜಪವ ಮಾಡಿಸುತ್ತಿಹುದು.
ಈಶಾನ್ಯಮುಖದಿಂದಾದ ಆಕಾಶ, ಲಿಂಗಕ್ಕೆ ಭೇರಿ ಮೊದಲಾದ
ನಾದಂಗಳ ಬಾರಿಸುತ್ತಿಹುದು ;
ಗೋಪ್ಯಮುಖದಿಂದಾದ ಆತ್ಮನು, ಲಿಂಗಕ್ಕೆ ಸಿಂಹಾಸನವಾಗಿರ್ಪುದು.
ಮನ ಚಕ್ಷುವಿನಿಂದಾದ ಚಂದ್ರಸೂರ್ಯರು ದೀವಿಗೆಗಳಾಗಿಹರು.
ಇಂತಪ್ಪ ಘನವಸ್ತುವು ಎರಡಾಗಿ ತನ್ನ ವಿನೋದಕ್ಕೆ
ಅರ್ಪಿಸಿಕೊಂಬಾತನು ತಾನೆ, ಅರ್ಪಿಸುವಾತನು ತಾನೇ,
ಇಂತಪ್ಪ ಘನಲಿಂಗವು ಎನ್ನ ಕರಸ್ಥಲದೊಳಗೆ ಚುಳುಕಾಗಿ
ನಿಂದ ನಿಲವ ಎನ್ನೊಳರುಹಿದಾತ ನಮ್ಮ ಶಾಂತಕೂಡಲಸಂಗಮದೇವ.

ಮೇಲಣ ವಚನ ಲಿಂಗಮಹಿಮೆಯನ್ನು ಎತ್ತಿಹಿಡಿಯುವುದರಲ್ಲಿ ಉನ್ನತಸ್ಥಾನ ಪಡೆಯುತ್ತದೆ. ವೀರಶೈವತತ್ತ್ವಜ್ಞಾನ ಮಡುಗಟ್ಟಿದೆ. ಅಂಗದ ಮೇಲೆ ಲಿಂಗವಿಲ್ಲದವರು ಲಿಂಗವಂತರೇ ಅಲ್ಲವೆಂಬ ಭಾವವನ್ನು ಇಂದಿನ ವೀರಶೈವರು ಅರಿತಷ್ಟು ಒಳ್ಳೆಯದು. ಲಿಂಗಧಾರಣೆ ಅದೆಷ್ಟು ಅವಶ್ಯವೆಂಬ ಭಾವವನ್ನು ಪುಷ್ಟೀಕರಿಸುತ್ತದೆ ಈ ವಚನ. ಲಿಂಗದ ವ್ಯಾಪ್ತಿ ವಿಶ್ವವಿಶಾಲ. 'ಲಿಂಗಮಧ್ಯೆ ಜಗತ್ಸರ್ವಂ' ಎಂಬ ಮಾತಿಗೆ ನಿದರ್ಶನವಾಗಿದೆ. ಹಾಗೆಯೇ ಲಿಂಗಾಂಗ ಸಮರಸದ ಬಗೆಗೆ ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣಗಳ ಬಗೆಗೆ ಅನೇಕ ಮಹತ್ವದ ವಿಚಾರಗಳ ವಿಶ್ಲೇಷಣೆ ವೀರಣ್ಣನವರ ವಚನಗಳಲ್ಲಿ ಪರೋಕ್ಷವಾಗಿ ಮೂಡಿಬಂದಿದೆ. ಶುದ್ಧ ವೀರಶೈವ ತತ್ತ್ವಗಳನ್ನು ಮನನ ಮಾಡ ಬೇಕೆಂಬ ಅಭಿಲಾಷಿಗಳಿಗೆ ಈತನ ವಚನಗಳು ದಾರಿದೀಪವಾಗಿವೆ. ಈ ವಿಷಯದಲ್ಲಿ ಮೈಲಾರ ಬಸವಪ್ಪನವರು ಇದೇ ಮಹಾದಾರಿಯಲ್ಲಿ ತಮ್ಮ ತ್ರಿಪದಿಗಳನ್ನು ರೂಪಿಸಿರುವುದನ್ನು ಗಮನಿಸಬೇಕು.

ಅಂದು ಇಂದೆಂಬ ಸಂದೇಹಿಗಳಿಗೆ ಗಣದಾಸಿ ವೀರಣ್ಣನ ವಚನಗಳು ಮಾರ್ಮಿಕವಾಗಿವೆ. ಹೃದಯಂಗಮವಾಗಿವೆ; ಅರ್ಥಪೂರ್ಣವಾಗಿವೆ. ಉದಾಹರಣೆಗಾಗಿ ಒಂದು ವಚನವನ್ನು ಇಲ್ಲಿ ಎತ್ತಿ ಹೇಳಲಾಗಿದೆ :

ಅಂದಿನವರಿಗೆ ಅಷ್ಟಾವರಣವು ಸಾಧ್ಯವಪ್ಪುದಲ್ಲದೆ
ಇಂದಿನವರಿಗೆ ಸಾಧ್ಯವಾಗದೆಂಬರು
ಅದೇನು ಕಾರಣ ಸಾಧ್ಯವಿಲ್ಲ ಶ್ರೀಗುರುವೇ ?
ಸೂರ್ಯ ಚಂದ್ರ ಆತ್ಮ ಆಕಾಶ
ವಾಯು ಅಗ್ನಿ ಅಪ್ಪು ಪೃಥ್ವಿ ಎಂಬ ಅಷ್ಟ ತನುಮಂತಿಗಳು :
ಅದುಂಟು ; ಇದುಂಟು !
. . . . . . . . . . . . . . . . . . .
. . . . . . . . . . . . . . . . . . .
ಕೇಳಯ್ಯ ಮಗನೆ, ದೃಢವಿಡಿದು
ಏಕಚಿತ್ತದಲ್ಲಿ ನಂಬಿಗೆಯುಳ್ಳ ಶಿವಭಕ್ತಂಗೆ
ಅಂದೇನು ? ಇಂದೇನು ?
ಗುರುಲಿಂಗಜಂಗಮರಲ್ಲಿ ಪ್ರೇಮ ಭಕ್ತಿ ಇದ್ದವರಿಗೆ,
ವಿಭೂತಿ ರುದ್ರಾಕ್ಷಿಯಲ್ಲಿ ವಿಶ್ವಾಸ ಇದ್ದವರಿಗೆ,
ಶಿವಮಂತ್ರವಲ್ಲದೆ, ಎನಗೆ ಬೇರೆ ಮಂತ್ರವಿಲ್ಲ ಎಂಬವರಿಗೆ,
ಅಂದೇನೋ ? ಇಂದೇನೋ ?
ಪಂಚಾಚಾರವೇ ಪ್ರಾಣವಾಗಿ
ಅಷ್ಟಾವರಣವೇ ಅಂಗವಾಗಿಪ್ಪವರಿಗೆ,
ಅಂದೇನೋ ? ಇಂದೇನೋ ?
ಪುರಾತನರ ವಚನವಿಡಿದು ಆರಾಧಿಸುವವರಿಗೆ,
ಆದಿ ಮಧ್ಯ ಅವಸಾನ ತಿಳಿದವರಿಗೆ,

ಹೀಗೆ ವಿಸ್ತಾರವಾಗಿ ವಿವೇಚಿಸುವ ವಚನವು ವೀರಶೈವ ತತ್ತ್ವಗಳನ್ನು ಚೆನ್ನಾಗಿ ಪ್ರತಿಬಿಂಬಿಸಿದೆ, ವಿಶ್ಲೇಷಿಸಿದೆ. ಓದುಗರ ಮನದಲ್ಲಿ ಅಚ್ಚೊತ್ತಿ ಮೂಡುವಂತೆ ರೂಪಿಸಿದ್ದಾರೆ, ಗಣದಾಸಿ ವೀರಣ್ಣ.

ಗುರುವಿನ ಮಹತಿಯನ್ನು ವರ್ಣಿಸುವ ವಚನವಂತೂ ಬಹು ಹೃದಯಂಗಮವಾಗಿದೆ ; ಬಹು ಸೊಗಸಾಗಿದೆ. ಆ ವಚನದ ಕೆಲವು ಭಾಗವಿದು :

ಗುರುವೆ ಪರಶಿವನು
ಗುರುವೆ ಸಕಲಾಗಮಮೂರ್ತಿ
ಗುರುವೆ ಸಕಲ ವಿದ್ಯಾಸ್ವರೂಪನು
ಗುರುವೆ ಕಾಮಧೇನು ; ಕಲ್ಪವೃಕ್ಷವು
ಗುರುವೆ ಪರುಷದ ಖಣಿ ; ತವನಿಧಿ
ಗುರುವೆ ಕರುಣ ರಸಾಬ್ಧಿ
ಸರ್ವಧ್ಯಾನಕ್ಕೆ ಗುರುಧ್ಯಾನವೇ ಅಧಿಕ
. . . . . . . . . . . . . . . . . .
. . . , . . . . . . . . . . . . . .

ಹೀಗೆ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಪರಿಪೋಷಿಸುವ ಈ ವಚನಗಳು ಅಭ್ಯಾಸ, ಮನನ ಮಾಡಬೇಕಾದುದು ಇಂದಿನ ದಿನಮಾನಗಳಲ್ಲಿ ಅವಶ್ಯವೆಂದೇ ಭಾವಿಸಬೇಕು. ಇನ್ನೂ ಅನೇಕ ಅಜ್ಞಾತ ಶಿವಶರಣರ ವಚನಗಳು ತಾಡೋಲೆಯಲ್ಲಿ ಹುದುಗಿ ಕುಳಿತಿವೆ. ಅವು ಹುಳ ಹತ್ತಿ ಹಾಳಾಗಿ ಹೋಗುವ ಪೂರ್ವದಲ್ಲಿ ಉಳಿಸಿ ಬೆಳಕಿಗೆ ತರುವ ಕಾರ್ಯದಲ್ಲಿ ನಮ್ಮವರು ಮುಂದೆ ಬರದೆ ಹೋದರೆ, ಆ ಅಪಾರ ನಿಧಿಯು ನಷ್ಟಕ್ಕೆ ಗುರಿಯಾಗಬೇಕಾದೀತು.

---

ನಂಬದೊಡೆ ಗುರುವಿಲ್ಲ ; ನಂಬದೊಡೆ ಜಂಗಮವಿಲ್ಲ ;
ನಂಬದೊಡೆ ಪ್ರಸಾದವಿಲ್ಲ, ಪರಿಣಾಮವಿಲ್ಲ ;
ನಂಬಿ ನಂಬದ ಸಂದೇಹ ಸೂತಕಿಗೆ ಸೊಮ್ಮು ಸಂಬಂಧವಿಲ್ಲ ;
ನಂಬದ ನಚ್ಚದ ಮಾನವಂಗೆ ಆನೂ ಇಲ್ಲ,
ನೀನೂ ಇಲ್ಲ, ಚಿಕ್ಕಯ್ಯಪ್ರಿಯಸಿದ್ಧಲಿಂಗಾ ಇಲ್ಲ ಇಲ್ಲ.

ಘಟ್ಟಿವಾಳಯ್ಯ

# ಶಿವಶರಣ-ಶರಣೆಯರು

**ಕೆ. ಪಿ. ಶಿವಲಿಂಗಯ್ಯ**

(ಮಾದರ ಚೆನ್ನಯ್ಯ. ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ. ಅಕ್ಕಮಹಾದೇವಿ. ಮುಕ್ತಾಯಕ್ಕ. ಮಾದರ ಧೂಳಯ್ಯ. ಗಣದಾಸಿ ವೀರಣ್ಣ — ಈ ಎಂಟು ಮಂದಿ ಮಹಾನುಭಾವರ ಬಗೆಗೆ ಈಗಾಗಲೇ ವಿದ್ವಾಂಸರು ಬರೆದ ಬರಹಗಳು ಈ ಮಹಾಸಂಪುಟದಲ್ಲಿ ಸಮಾವೇಶಗೊಂಡಿರುತ್ತವೆ. ಪ್ರಯುಕ್ತ, ಉಳಿದ ಶರಣಶರಣೆಯರ ವಿಷಯವನ್ನು ಪ್ರಕೃತ ಲೇಖನದಲ್ಲಿ ಯಥಾಮತಿ ನಿವೇದಿಸಲಾಗಿದೆ : ಲೇ ॥)

'ವಚನ' ಎಂದರೆ ಮಾತು ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಆದರೆ 'ವಚನ ಸಾಹಿತ್ಯ' ಎಂದಾಗ ಹನ್ನೊಂದು–ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭವಾದ ಶರಣ–ಶರಣೆಯರ ಅನುಭಾವಪೂರಿತವಾದ ನುಡಿಗಳು ಎಂದೇ ವಿದಿತವಾಗುತ್ತದೆ. ರಂ. ಶ್ರೀ. ಮುಗಳಿಯವರು ಅಭಿಪ್ರಾಯಪಟ್ಟಿರುವಂತೆ "ನಡುಗನ್ನಡದ ಶೈಲಿಯ ಅನುಭಾವ — ಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕ ಭಾವಗೀತೆಗಳು"[1] ಎನ್ನುವ ಮಾತು ವಚನಗಳಿಗೆ ಚೆನ್ನಾಗಿ ಒಪ್ಪುತ್ತದೆ. ಜಗತ್ತಿನ ಯಾವುದೇ ಸಾಹಿತ್ಯದಲ್ಲಿ 'ವಚನ ಸಾಹಿತ್ಯ'ದ ಪ್ರಕಾರವು ಅಪೂರ್ವ. "ವಚನಗಳು ನಮ್ಮ ಕನ್ನಡ ಸಾಹಿತ್ಯದ ಉಪನಿಷತ್ತುಗಳು, ಅವುಗಳನ್ನು ರಚಿಸಿದ ಕವಿಗಳು ನಮ್ಮ ಕನ್ನಡ ನಾಡಿನ ರಸಋಷಿಗಳು" ಎಂದು ಎಂ.ಆರ್.ಶ್ರೀ ಅವರು ಉದ್ಗರಿಸಿದ್ದಾರೆ.[2]

ಇಂತಹ 'ವಚನ ಸಾಹಿತ್ಯ'ದ ರಚನೆ ಯಾವಾಗ ಪ್ರಾರಂಭವಾಯಿತು ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಈವರೆಗೆ ಉಪಲಬ್ಧವಾಗಿರುವ ವಚನ ಸಾಹಿತ್ಯವನ್ನು ಸಮೀಕ್ಷಿಸಿದಾಗ ದೇವರ ದಾಸಿಮಯ್ಯನವರ ರಚನೆಯೇ ಮೊದಲಿನದೆಂದು ತಿಳಿಯುತ್ತದೆ. ಆದರೆ ಆತನೆ ಹೇಳಿರುವ "ನಿಮ್ಮ ಶರಣರ ಸೂಳ್ನುಡಿಯನ್ನು ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ" ಎನ್ನುವ ವಚನಭಾಗದಿಂದ ಆತನಿಗಿಂತಲೂ ಮುಂಚೆ ವಚನಗಳ ರಚನಾಕಾರ್ಯ ನಡೆದಿತ್ತೆಂದು ಊಹಿಸಲು ಅವಕಾಶವಿದೆ. ಸದ್ಯಕ್ಕೆ ದೇವರ ದಾಸಿಮಯ್ಯನಿಂದಲೇ ಶರಣವಚನ ಸಮುದಾಯವನ್ನು ಪ್ರಾರಂಭಿಸುವ :

ಬಸವಣ್ಣನವರಿಗಿಂತ ಸುಮಾರು ಒಂದು ಶತಮಾನ ಮುಂಚೆ ಜೀವಿಸಿದ್ದ ದೇವರ ದಾಸಿಮಯ್ಯನವರ ಕಾಲದಲ್ಲಿ "ವೀರಶೈವಧರ್ಮ" ಇದ್ದಿತೇ ? ಎಂದು ಪ್ರಶ್ನಿಸುವ, ಶಂಕಿಸುವ ಜನರು ಇಲ್ಲದಿಲ್ಲ. ಅದಕ್ಕೆ ಉತ್ತರ (ಯಾವುದೋ ಒಂದು ಪರ್ಯಾಯ ರೀತಿಯಲ್ಲಿ) ವೀರಶೈವ ಇದ್ದೇ ಇದ್ದಿತು—ಎಂದು ಮಾತ್ರ ಹೇಳಿ ಪ್ರಕೃತ ವಿಷಯಕ್ಕೆ ಕ್ರಮಿಸುತ್ತೇನೆ.

## ೧. ದೇವರ ದಾಸಿಮಯ್ಯ

ಈತನನ್ನು 'ಜೇಡರ ದಾಸಿಮಯ್ಯ'ನೆಂದೂ ಕರೆಯುವುದುಂಟು. ಶಂಕರ ದಾಸಿಮಯ್ಯನು ಈತನ ಸಮಕಾಲೀನ. ಇವರಿಬ್ಬರೂ ಚಾಲುಕ್ಯ ಜಯಸಿಂಹನ ಕಾಲದಲ್ಲಿ (೧೦೧೫-೪೨) ಇದ್ದವರು. ಈತನ ಸ್ಥಳ ಮುದನೂರು ಅಥವಾ ಮುದೇನೂರು. ಇಷ್ಟದೇವರು ರಾಮನಾಥ. ಮುದೇನೂರು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿದೆ. ಗೊಬ್ಬೂರಿನ ದುಗ್ಗಳೆ, ದಾಸಿಮಯ್ಯನ ಧರ್ಮಪತ್ನಿ. ಈತನ ಕಾಯಕ ಬಟ್ಟೆ ನೇಯುವುದು. ಒಮ್ಮೆ ಈತನು ಬಹು ಬೆಲೆಬಾಳುವ ವಸ್ತ್ರವೊಂದನ್ನು ನೇಯ್ದ. ಸಂತೆಯಲ್ಲಿ ಅದು ಮಾರಾಟವಾಗಲಿಲ್ಲ. ಅದನ್ನು ಜಂಗಮರೂಪಿನಲ್ಲಿ ಬಂದ ಶಿವನಿಗೆ ಅರ್ಪಿಸಿ ತವನಿಧಿಯನ್ನು ಪಡೆದ, ಅನೇಕ ಪವಾಡಗಳನ್ನು ಮೆರೆದ.

ಈ ಜೇಡರ ದಾಸಿಮಯ್ಯನ ಮೂರು ವಚನಗಳು ಆತನ ಸಮಕಾಲೀನರನ್ನು ಕುರಿತು ಹೇಳತಕ್ಕವಾಗಿವೆ :

ಕೀಳು ಡೋಹರಕಕ್ಕ, ಕೀಳು ಮಾದರ ಚೆನ್ನ
ಕೀಳು ಓಹಲದೇವ, ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥ.

ನಂಬಿದ ಚೆನ್ನನ ಅಂಬಲಿಯನುಂಡ
ಕೆಂಭಾವಿ ಭೋಗಯ್ಯನ ಹಿಂದಾಡಿ ಹೋದ
ಗುಂಡಯ್ಯನ ಕುಂಭದ ಗತಿಗೆ ಕುಕಿಲಿರಿದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ.

ನೆಱೆನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯವೆ?
ಜಗವೆಲ್ಲರಿಯಲು ತೊಱೆಯೊಳಗೆ ಬಿದ್ದ ಲಿಂಗ
ಕರೆದರೆ ಬಂದುದು ಕರಸ್ಥಲಕ್ಕೆ!
ನಂಬದೇ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ.

ಈ ಮೂರು ವಚನಗಳಲ್ಲಿ ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯ, ಕೆಂಭಾವಿ ಭೋಗಯ್ಯ ಮತ್ತು ಕೊಂಡಗುಳಿ ಕೇಶಿರಾಜ—ಈ ನಾಲ್ಕು ಜನ ಬಸವ ಪೂರ್ವದ ವಚನಕಾರರ ಹೆಸರುಗಳು ದೊರೆಯುತ್ತವೆ. ಅಂದಮೇಲೆ ಇವರೆಲ್ಲರೂ ಜೇಡರ ದಾಸಿಮಯ್ಯನ ಸಮಕಾಲೀನರೇ ಆಗಿದ್ದಾರೆ.

ಜೇಡರ ದಾಸಿಮಯ್ಯನು ಪೊಟ್ಟಲ ಕೆರೆಗೆ ಹೋಗಿ ಜಯಸಿಂಹರಾಜ ಮತ್ತು ಆತನ ರಾಣಿ ಸುಗ್ಗಲಾದೇವಿ—ಇವರಿಗೆ ಶಿವಲಿಂಗದೀಕ್ಷೆಯನ್ನಿತ್ತು ಶಿಷ್ಯರನ್ನಾಗಿ ಮಾಡಿಕೊಂಡನೆಂದು ಒಂದು ಕಥೆಯುಂಟು. ಶ್ರೀಶೈಲ ಕ್ಷೇತ್ರದ ಆಗಿನ ಜಗದ್ಗುರುಗಳಾಗಿದ್ದ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳವರ ಶಿಷ್ಯನು ಈತನಾಗಿದ್ದನೆಂದು ಮತ್ತೊಂದು ಐತಿಹ್ಯವುಂಟು.[3]

**೨. ಶಂಕರ ದಾಸಿಮಯ್ಯ**

'ನಿಜಗುರು ಶಂಕರದೇವ' ಎಂಬ ಅಂಕಿತದಲ್ಲಿ ವಚನ ರಚಿಸಿರಬಹುದೆಂದು ಊಹಿಸಲಾಗಿದೆ. ಈತನ ಊರು ಸ್ಕಂದಶಿಲೆ ಅಥವಾ ಕಂದಗಲ್ಲು. ಇದು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿದೆ. ಇವನ ಪೂರ್ವಾಶ್ರಮದ ಹೆಸರು ಗೋವಿಂದಭಟ್ಟ ಎಂಬುದು![4] ಕಾಶಿಗೆ ಹೊರಟ. ದಾರಿಯಲ್ಲಿ ನವಿಲೆಗ್ರಾಮದಲ್ಲಿ ಉಳಿದ. ಅಲ್ಲಿನ ಜಟಾ ಶಂಕರನಿಂದ ಶಿವದೀಕ್ಷೆ ಪಡೆದು ಶಂಕರದಾಸಿಮಯ್ಯನಾದ. ಆತನ ಹೆಂಡತಿ ಶಿವದಾಸಿಯಾದಳು. ಶಿವನಿಂದ ಹಣೆಗಣ್ಣು ದೊರಕಲು, ಅದರಿಂದ ಕ್ಷುದ್ರದೇವತೆಗಳನ್ನು ನಾಶಪಡಿಸಿದನು. ಶಿವನಪ್ಪಣೆಯಂತೆ ಶಂಕರದಾಸಿಮಯ್ಯನು ಮುದೆನೂರಿಗೆ ಹೋಗಿ ಜೇಡರ ದಾಸಿಮಯ್ಯನಿಗೆ ಬಂದಿದ್ದ ಅಹಂಕಾರವನ್ನು ಹೋಗಲಾಡಿಸಿದನು. ಆತನೊಂದಿಗೆ ಶಿವಾನುಭವಗೋಷ್ಠಿಯನ್ನೂ ನಡೆಸಿದನು. ಈತನ ವಚನಗಳು ಪ್ರತ್ಯೇಕವಾಗಿ ಸಿಕ್ಕಿರುವುದಿಲ್ಲ.

**೩. ಢಕ್ಕೆಯ ಬೊಮ್ಮಣ್ಣ**

ಶಂಕರ ದಾಸಿಮಯ್ಯನ ಊರಾದ ಕಂದಗಲ್ಲಿನವನೇ ಇನ್ನೊಬ್ಬ ಶರಣ. ಈತ ಮಾರಿಯನ್ನು ಕುಣಿಸುವ ಕಾಯಕ ಕೈಗೊಂಡಿದ್ದನು. ಈತನ ಮಾರಿಯು ಶಕ್ತಿಯ ಸಂಕೇತವಾಗಿದ್ದಿತು. ಒಂದು ದಿನ ಬೊಮ್ಮಣ್ಣ ಶಂಕರದಾಸಿಮಯ್ಯನ ಮನೆಯ ಮುಂದೆ ಮಾರಿಯನ್ನು ಕುಣಿಸುತ್ತ ತತ್ವ (ಪದ) ಹೇಳುತ್ತಿದ್ದ. ಈ ಮೊದಲೇ ಕ್ಷುಲ್ಲಕ ದೈವಗಳನ್ನು ಸುಟ್ಟಿದ್ದ ಶಂಕರದಾಸಿಮಯ್ಯನು ಈ ಮಾರಿಯನ್ನು ಸುಡಲು ತನ್ನ ಹಣೆಗಣ್ಣನ್ನು ತೆರೆದನು. ಆದರೆ ಆ ಮಾರಿ ಅವನ ಹಣೆಗಣ್ಣನ್ನೇ ನುಂಗಿಬಿಟ್ಟಳು. ಬೊಮ್ಮಣ್ಣ ಆ ಮಾರಿಯನ್ನು ತನ್ನ ಲಿಂಗದಲ್ಲಿ ಅಡಗಿಸಿ. ಲಿಂಗವನ್ನೇ ಕುಣಿಸಿದ. ಬೊಮ್ಮಯ್ಯನ ಲಿಂಗ ಮತ್ತು ಮಾರಿ ಬೇರೆಯಲ್ಲವೆಂಬ ಅಂಶವು ಶಂಕರದಾಸಿಮಯ್ಯನಿಗೆ ಮನವರಿಕೆಯಾಯಿತು. ಆಗ ಆತನ ಅಹಂಕಾರ ದೂರಾಯಿತು; ಕೂಡಲೆ ಆ ಮಾರಿ ಶಂಕರದಾಸಿಮಯ್ಯನ ಹಣೆಗಣ್ಣನ್ನು ಪುನಃ ಕರುಣಿಸಿದಳು.

"ಆವ ಸ್ವಕಾಯಕದಿಂದಾದಡೂ ಆಗಲಿ ಭಾವಶುದ್ಧವಾಗಿ ಮಾಡುವುದೇ ಜಂಗಮಪೂಜೆ" (ಢಕ್ಕೆಯ ಬೊಮ್ಮಣ್ಣ ಕೃತ ವಚನ ಭಾಗ)[5]

ಮಱೆದವರ' ಮನದಲ್ಲೆಲ್ಲವೂ ಮಾರಿ
ಅಱಿದವರ ಮನದಲ್ಲೆಲ್ಲವೂ ಸ್ವಯಂಜ್ಯೋತಿ

ಢಕ್ಕೆಯ ಬೊಮ್ಮಣ್ಣನ ವಚನಾಂಕಿತ 'ಕಾಲಾಂತಕ ಭೀಮೇಶ್ವರ ಲಿಂಗ.' ಅವನ ಒಂದು ವಚನವನ್ನು ನೋಡಿರಿ :

ಸೌಭಾಗ್ಯದಿಂದ ಮಾಡುವವರೆಲ್ಲರೂ ಸಂತೋಷಭಾವಿಗಳು
ಭಕ್ತಿಯಿಂದ ಮಾಡುವವರೆಲ್ಲರೂ ತ್ರಿವಿಧಭಾವಿಗಳು
ಒಂದೆಂದು ಹಿಂಗಿ ಮಾಡುವನ್ನಬರ ರುದ್ರನ ಉರಿಗೊಡಲಾಯಿತ್ತು
ಬಂದುದ ನೇತಿಗಳೆಯದೆ ಬಾರದುದಕ್ಕೆ ದೋಟಿಯನಿಕ್ಕದೆ
ಬಂದುದಕ್ಕೆ ಮನಮುಕ್ತನಾಗಿ ಸಂದುದು
ಕಾಲಾಂತಕ ಭೀಮೇಶ್ವರಲಿಂಗಕ್ಕರ್ಪಿತವಾಯಿತ್ತು.

ದೊರೆತುದರಲ್ಲಿ ತೃಪ್ತಿಪಟ್ಟು ಜೀವನ ನಡೆಸಬೇಕೆಂಬುದು ಅದೆಷ್ಟು ಚೆನ್ನ !

ಢಕ್ಕೆಯ ಬೊಮ್ಮಣ್ಣನ ಜೀವಿತವು ಜಾನಪದ ಕಲೆಗಳನ್ನು ಉದ್ಧರಿಸಿದ್ದಲ್ಲದೆ, ಮುಂದೆ ಕಲ್ಯಾಣದಲ್ಲಿ ಬಸವರಸರ ಕಾರ್ಯಕ್ಕೆ ನೆರವು ನೀಡಿದ ಬಹುರೂಪಿ ಚೌಡಯ್ಯ ಮುಂತಾದ ಶರಣರಿಗೆ ಸ್ಫೂರ್ತಿಯನ್ನೂ ನೀಡಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ.[6]

**೮. ಡೋಹರ ಕಕ್ಕಯ್ಯ**

ಮಾಳವದೇಶದಿಂದ ಬಂದ ಅಂತ್ಯಜನಿವನು. ಬಸವಣ್ಣನವರ ಹಿರಿಯ ಸಮಕಾಲೀನ. ಅಣ್ಣನವರ ಪ್ರಭಾವದಿಂದ ಶ್ರೇಷ್ಠ ಶಿವಾನುಭಾವಿಯಾದವನೀತ. ಮಾತುಮಾತಿಗೆ ಕೊಂಡಾಡಿದ್ದಾರೆ ಕಕ್ಕಯ್ಯನನ್ನವರು :

ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದರೆ
ಆನು ಬದುಕೆನೆ ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್ಗುಣವ ನಾನರಿವೆನಯ್ಯಾ
ಕಷ್ಟಜಾತಿಯ ಜನ್ಮದಲ್ಲಿ ಜನಿಸಿದೆ
ಎನಗಿದು ವಿಧಿಯೇ ಕೂಡಲಸಂಗಮದೇವಾ.

ಪರಮಮಾಹೇಶ್ವರರಾದ ಶ್ರೀಪತಿಪಂಡಿತರು ಬೆಜವಾಡದಲ್ಲಿದ್ದಾಗ ಅಲ್ಲಿಯೇ ವಾಸವಾಗಿದ್ದ ಕಕ್ಕಯ್ಯನ ಮನೆಯಲ್ಲಿ ಪ್ರಸಾದ ಸೇವಿಸಿದರಂತೆ! ಇದರಿಂದ ಬ್ರಾಹ್ಮಣರು ಸುಮ್ಮನಿದ್ದಾರೆಯೆ ? ರೊಚ್ಚಿಗೆದ್ದರು. ನಿಜವಾಗಿ ಕುಲಜರು ಯಾರು—ಎಂಬ ವಾದ ನಡೆಯಿತು. ಶ್ರೀಪತಿ ಪಂಡಿತರು ವೈದಿಕರ ದೇವರಾದ ಅಗ್ನಿಯನ್ನು ಬಟ್ಟೆಯಲ್ಲಿರಿಸಿ ಗಂಟು ಹಾಕಿ ಶಮೀವೃಕ್ಷಕ್ಕೆ ತೂಗುಹಾಕಿದರು. ಅಂದಿನಿಂದ ಯಾರ ಮನೆಯಲ್ಲಿಯೂ ಅಗ್ನಿ ಹೊತ್ತಲಿಲ್ಲ. ಆಗ ಬ್ರಾಹ್ಮಣರು ಅವರಿಗೆ ಶರಣಾಗತರಾದರು. ಈ ಅಗ್ನಿಪವಾಡ ನಡೆದುದು ಕ್ರಿ.ಶ. ೧೦೭೬ರಿಂದ ೧೧೨೬ರ ವರೆಗೆ ಆಳಿದ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಅನಂತಪಾಲನ ಕಾಲದಲ್ಲಿ—ಎಂದು ಹಳಕಟ್ಟಿಯವರು ಹೇಳಿರುತ್ತಾರೆ.[7]

ಮಹಾಜ್ಞಾನಿ ಚನ್ನಬಸವಣ್ಣನ ಜನನದ ವಿಚಾರದಲ್ಲಿ ಕಕ್ಕಯ್ಯನವರ ಪ್ರಸಾದ ಮಹಿಮೆಯು ಮಹತ್ವದ್ದು—ಎಂದು ಅನೇಕ ಗ್ರಂಥಗಳಿಂದ ತಿಳಿಯುತ್ತದೆ. ತೊಗಲನ್ನು ಹದಮಾಡುವ ಕಾಯಕದ ಕಕ್ಕಯ್ಯನು ತನ್ನ ನಿಷ್ಠೆಯಿಂದ ಕೂಡಿದ ಸಾಧನೆಯಿಂದ ಮಹಾನುಭಾವನೆನಿಸಿದನು. ಕಲ್ಯಾಣಕ್ರಾಂತಿಯ ಸಮಯದಲ್ಲಿಯೂ ಈತನು ಕಡುಗಲಿಯಾಗಿ ಸಲ್ಲಿಸಿದ ಸೇವೆ ಸ್ಮರಣೀಯ.[8]

'ಅಭಿನವ ಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಕಕ್ಕಯ್ಯ ರಚಿಸಿರುವ ವಚನವನ್ನು ನೋಡೋಣ :

ನೆನೆಯಲರಿಯೆ, ನಿರ್ಧರಿಸಲರಿಯೆ, ಮನವಿಲ್ಲಾಗಿ
ಭಾವಿಸಲರಿಯೆ, ಬೆರೆಸಲರಿಯೆ, ಭಾವ ನಿರ್ಭಾವವಾಯಿತ್ತಾಗಿ
ಜ್ಞಾತೃ, ಜ್ಞಾನ, ಜ್ಞೇಯವೆಲ್ಲವನು ಮೀರಿ
ಅಭಿನವ ಮಲ್ಲಿಕಾರ್ಜುನಯ್ಯನಲ್ಲಿ ಪರಮಸುಖಿಯಾದೆನು.

ಸಂಕಲ್ಪವಿಕಲ್ಪಗಳು ಯಾವುದೂ ಇಲ್ಲದಂತೆ ಮನೋಲಯ ಮಾಡಿಕೊಂಡ ಕ್ರಿಯಾಶೀಲ ಕಕ್ಕಯ್ಯ. ಅವನ ವಚನಗಳಲ್ಲಿ ಕಾಂತಿ-ಲಯ-ಪ್ರಸನ್ನತೆಗಳಿವೆ—ಎಂದಿದ್ದಾರೆ ವಿದ್ವಾಂಸರು.[9]

## ೫. ಕೊಂಡಗುಳಿ ಕೇಶಿರಾಜ (ಸು. ೧೫೦)

ಈತನೂ ಬಸವಣ್ಣನವರ ಪೂರ್ವದಲ್ಲಿದ್ದವನು; ಹಿರಿಯ ಸಮಕಾಲೀನ ಎಂದರೂ ಒಪ್ಪುವುದು. ಈತನು ಬಿಜ್ಜಳರಾಜನ ಕೈಕೆಳಗೆ ದಂಡನಾಯಕನಾಗಿ ಬನವಾಸಿಯ ಪ್ರಾಂತ್ಯವನ್ನು ಆಳುತ್ತ ಬಲಿಪುರದಲ್ಲಿದ್ದನೆಂದು ಶಿಕಾರಿಪುರದ ೧೧೯ ಮತ್ತು ೧೨೩ನೆಯ ಶಾಸನಗಳಿಂದ ತಿಳಿದುಬರುತ್ತದೆ.[10]

ಕೇಶಿರಾಜನ ಜನ್ಮಸ್ಥಳ ಗುಲ್ಬರ್ಗಾ ಜಿಲ್ಲೆಯ ಜೇವರಗಿ ತಾಲ್ಲೂಕಿನ ಕೊಂಡಗುಳಿ. ಅಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದ್ದಾನೆ. ತಾನು ಬರೆದ 'ಷಡಕ್ಷರ ಮಂತ್ರ ಮಹಿಮೆ' ಗ್ರಂಥದಲ್ಲಿ—

ಆರಕ್ಕರದೀ ಮಂತ್ರಂ
ಮೂರುಂ ಕಣ್ಣಭವನಿಂದೆ ವೆಗ್ಗಳ ದೈವಂ
ಬೇರಿಲ್ಲವೆಂದು ಧಾತ್ರಿಗೆ
ಸಾರಿದೆನಾಂ ಕೇಶಿರಾಜ ದಂಡಾಧೀಶಂ

—ಎಂದು ಹೇಳಿದ್ದಾನೆ. ಈ ಗ್ರಂಥಕ್ಕೆ 'ಮಂತ್ರ ಮಹತ್ವದ ಕಂದ' ಎಂಬ ಹೆಸರೂ ಉಂಟು. ೧೧೦ ಕಂದ-ಪದ್ಯಗಳಿವೆ. ಪ್ರತಿಯೊಂದೂ 'ಓಂ ನಮಃ ಶಿವಾಯ' ಎಂದು ಮುಗಿಯುತ್ತದೆ. ಇವನ ಬಂಧವು ಪ್ರೌಢವಾಗಿದೆ. ಇವನ ವಚನಗಳು ದೊರೆತಿಲ್ಲ.[11]

## ೬. ಮಾದಾರ ಚೆನ್ನಯ್ಯ

ಈತನ ಕಾಲ ಸು. ೧೧೦೦[12] ಬಸವಪೂರ್ವದ ವಚನಕಾರರಲ್ಲಿ ಇವನೊಬ್ಬ. ಇವನು ತಮಿಳುನಾಡಿನ ಚೋಳ ಮಂಡಲದವನು. ಈತನ ಜನ್ಮ ಸ್ಥಳ ತಿರುವಾರೂರು (ಸಂಗೀತದ ತ್ರಿಮೂರ್ತಿಗಳು ವಾಸಿಸಿದ ಕ್ಷೇತ್ರ). ಈತನು ಅರುವತ್ತು ಮೂವರು ಪುರಾತನರಲ್ಲಿ ಒಬ್ಬನು. ಹರಿಹರನು ಈತನನ್ನು ಕುರಿತು ಬರೆದ ರಗಳೆಯಲ್ಲಿ 'ಸಮಗ್ರ ಶೈವಾಭರಣ' ಮುಂತಾಗಿ ಕೊಂಡಾಡಿದ್ದಾನೆ. ತಮಿಳುನಾಡಿನವನಾದರೂ ಆ ನಾಡವರಲ್ಲಿ ಇವನೊಬ್ಬನು ಮಾತ್ರ ಕರ್ನಾಟಕ ವೀರಶೈವ ಸಂಸ್ಕೃತಿಯನ್ನು ಕುರಿತು ನಿರೂಪಿಸಿರುತ್ತಾನೆ. ಇವನು 'ಐಘಟದೂರ ರಾಮೇಶ್ವರಲಿಂಗ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾನೆ. ಇವನ ೧೦೧ ವಚನಗಳು ದೊರೆತಿವೆ. ಕೆಲವು ವಚನಗಳು:

ಕುಸುಮ ಬಲಿಗಿದಾಗ ಸೌರಭ ಅಡಗಿತ್ತು
ಸಾರವಚಿತಾಗ ಸಸಿ ಹೊಂದಿತ್ತು
ಕುರುಹ ಮರೆದಾಗ ಅರಿವು ನಿಂದಿತ್ತು
ಐಘಟದೂರ ರಾಮೇಶ್ವರಲಿಂಗವು ಭಜನೆಗೊಳಗಾಗಬೇಕು.
ಫಲ ರಸವನಿರಿಸಿಕೊಂಡಿದ್ದಂತೆ
ನೆಲ ನಿಧಾನವನಿರಿಸಿಕೊಂಡಿದ್ದಂತೆ
ತಾಯಿ ಗರ್ಭದ ಶಿಶುವ ಆರೈಕೆಯಲ್ಲಿ ತಾಳಿಕೊಂಡಿಪ್ಪಂತೆ
ಇದ್ದೆಯಲ್ಲಾ ನೀ ಕುರುಹಾಗಿ
ಅರಿವ ಆತ್ಮನ ಮರೆಯ ಮಾಡಿಕೊಂಡಿದ್ದೆಯಲ್ಲಾ
ಅರಿವನರಿವುದಕ್ಕೆ
ಕುರುಹಿನ ಮೂರ್ತಿಯಲ್ಲಿ
ಅಂಗವ ಮರೆದು ವಸ್ತುವ ಹಿಂಗದಿರು
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ[13]

## ೭. ಸಕಲೇಶ ಮಾದರಸ

ದಕ್ಷಿಣಪ್ರಾಂತದ ಕಲ್ಲುಕುರಿಕೆ ಅರಸನಾದ ಮಲ್ಲರಸನು ವೈರಾಗ್ಯ ಹೊಂದಿ ಶ್ರೀಶೈಲಕ್ಕೆ ಹೋದನು. ಅವನ ಮಗ ಸಕಲೇಶ ಮಾದರಸನು ತಂದೆಯಂತೆಯೇ ವಿರಕ್ತನಾಗಿ ಆತನಾಜ್ಞೆಯಂತೆ ಕಲ್ಯಾಣವನ್ನು ಸೇರಿದನು. ಈತನು ಬಸವಣ್ಣನವರ ಸಮಕಾಲೀನನಾಗಿದ್ದರೂ, ವಯಸ್ಸಿನಲ್ಲಿ ಅಣ್ಣನವರಿಗಿಂತ ಹಿರಿಯನಾಗಿದ್ದನು. ಕಲ್ಯಾಣಕ್ರಾಂತಿಯಾಗುತ್ತಲೆ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಲಿಂಗೈಕ್ಯನಾದನು. ಈಗಲೂ ಅಲ್ಲಿರುವ ಗದ್ದುಗೆಯು ಆತನದೆಂದೂ,

ಆತನ ಹೆಸರಿನ ಮೇಲೆಯೇ ಆ ಗ್ರಾಮಕ್ಕೆ ಆ ಹೆಸರು ಬಂದಿತೆಂದೂ ಬಲ್ಲವರು ಹೇಳುತ್ತಾರೆ.[14] ಸಕಲೇಶ ಮಾದರಸ-ಕೃತ ವಚನಗಳಲ್ಲಿ ಕೆಲವು :

ಸರ್ವಸಂಗ ಪರಿತ್ಯಾಗಿ ಎಂದೊಡೆ, ಭೋಗಕ್ಕೆ ಮರುಗಿಸುವೆ
ಪಾಕನೇಮಿ ಎಂದೊಡೆ, ಷಡ್ರಸಕ್ಕೆ ಆಳಿಸುವೆ
ಮೌನವ್ರತಿ ಎಂದೊಡೆ, ಸನ್ನೆಯಲ್ಲಿ ಬೇಡಿಸುವೆ
ಬ್ರಹ್ಮಚಾರಿ ಎಂದೊಡೆ, ಅಂಗನೆಯರಿಗೆರಗಿಸುವೆ
ಸಕಳೇಶ್ವರದೇವಾ, ಎನ್ನನಳಿವಾಡಿ ಕಾಡುವೆ.
ಶಿವಯೋಗಿ ಭಿಕ್ಷವ ಕೊಂಬಲ್ಲಿ ಜಾತಿಸೂತಕವಿಲ್ಲದಿರಬೇಕು
—ಆಚಾರಸಂಕಲ್ಪವಿಲ್ಲದಿರಬೇಕು
ಶಿವಂಗೆ ಸಲ್ಲದ ದ್ರವ್ಯಕ್ಕೆ ಕೈಯಾನದಿರಬೇಕು.
ಇಂತೀ ಕ್ರಮವರಿದು, ಲಿಂಗ ನೈವೇದ್ಯ ಭಿಕ್ಷವ ಕೊಳಬಲ್ಲರೆ ಆತನೇ ಶರಣ ಸಕಳೇಶ್ವರ.
ಚಂದ್ರೋದಯದಲುಂಬ ಚಕೋರಕೋಗರವ ಹಾಕಿ
ಬಸಿರ ಬಡಿದುಕೊಂಡು ಉಣ್ಣದೆಂದಳುವರು ನೋಡಾ !
ಲೋಕದ ಚಿಂತೆಯನನಂತವನಾಡುವರಲ್ಲದೆ
ತಮ್ಮ ಚಿಂತೆಯನಾಡರೊಪ್ಪಚ್ಚಿಯು ನೋಡಾ !
ಮಹಂತ ಸಕಳೇಶ್ವರದೇವಾ.

ಹಳಕಟ್ಟಿಯವರು ಈತನ ೮೮ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

## ೮. ಏಕಾಂತದ ರಾಮಯ್ಯ

ಈತನು ಕುಂತಳದೇಶಕ್ಕೆ ಸೇರಿದ ಶಿವಶರಣ. ತನ್ನ ಜೀವಮಾನದ ಕೊನೆಯಲ್ಲಿ ಧರ್ಮಪ್ರಸಾರಕ್ಕಾಗಿಯೇ ಈತನು ತನ್ನ ಶಿರವನ್ನು ಬಲಿಗೊಟ್ಟನೆಂದು ಅಬಲೂರು ಶಾಸನದಿಂದ ತಿಳಿದು ಬರುತ್ತದೆ.[15] ಆರು ವಚನಗಳು ಉಪಲಬ್ಧವಿವೆ.

ಇವರು ಗುಲ್ಬರ್ಗ ಜಿಲ್ಲೆಯ 'ಆಲಂದೆ' ಗ್ರಾಮದವರು ಎನ್ನುತ್ತಾರೆ ಡಾ॥ ಶ್ರೀ ಜಚನಿ ಅವರು.[16] ಅವರ ಪ್ರಕಾರ ಇವರ ತಂದೆ-ತಾಯಿಗಳು ಪುರುಷೋತ್ತಮಭಟ್ಟ–ಸೀತಾದೇವಿಯರು. ಸೋಮನಾಥದೇವರ ವರಪ್ರಸಾದದಿಂದ ಜನಿಸಿದವರು. ರಾಮಯ್ಯ ಇವರ ಜನ್ಮನಾಮ. ಏಕಾಂತವಾಸಿಯಾಗಿದ್ದ ಕಾರಣ 'ಏಕಾಂತ ರಾಮಯ್ಯ' ಅಥವಾ 'ಏಕಾಂತ ರಾಮಿತಂದೆ' ಎಂದು ಹೆಸರಾಯಿತು. ಕಿರಿಯ ವಯಸ್ಸಿನಲ್ಲಿಯೇ ವೀರಶೈವರಾಗಿ, ಆ ತತ್ತ್ವಪ್ರಚಾರ ಮಾಡಿದರು.

ಗುರುಭಕ್ತನಾದಲ್ಲಿ ಘಟಧರ್ಮವಳಿದು
ಲಿಂಗಭಕ್ತನಾದಲ್ಲಿ ಸಂಚಲವಳಿದು
ಜಂಗಮಭಕ್ತನಾದಲ್ಲಿ ತ್ರಿವಿಧಾಂಗ ಸಲೆಸಂದು
ಇಂತೀ ತ್ರಿವಿಧ ಭಕ್ತಿಯಲ್ಲಿ ತ್ರಿಕರಣಶುದ್ಧನಾದಾತ್ಮಂಗೆ
ಮರ್ತ್ಯ-ಕೈಲಾಸವೆಂಬ ಕಾಳುಮಾತಿಲ್ಲ
ಆತ ನಿತ್ಯಮುಕ್ತ ಎನ್ನಯ್ಯ ಚೆನ್ನರಾಮನಾಗಿ

## ೯. ಆದಯ್ಯ

ಈತನು ಗುಜರಾತ್ ಪ್ರಾಂತದ ಶ್ರೀಮಂತ ವರ್ತಕನು. ಸೌರಾಷ್ಟ್ರದೇಶದ ದ್ವಾರಕಾಪಟ್ಟಣ ಅವನ ಜನ್ಮಸ್ಥಳ. ಈತನು ವ್ಯಾಪಾರಕ್ಕಾಗಿ ಕರ್ನಾಟಕದ 'ಪುಲಿಗೆರೆ'ಗೆ (ಈಗಿನ ಲಕ್ಷ್ಮೇಶ್ವರ) ಬಂದಿದ್ದನು. ದೋರದತ್ತ-ಪುಣ್ಯವತಿಯರು ಈತನ ತಂದೆತಾಯಿಗಳು. ಬಾಲ್ಯದಿಂದಲೂ ಸೌರಾಷ್ಟ್ರದ ಸೋಮನಾಥನನ್ನು ಭಕ್ತಿಯಿಂದ ಅರ್ಚಿಸುತ್ತಿದ್ದನು. ಒಂದು ಸಂಜೆ ಪುಲಿಗೆರೆಯ ನಗರಸಂಚಾರದಲ್ಲಿರುವಾಗ ಜೈನಮತದ ಪದ್ಮಾವತಿಯೆಂಬ ಸುಂದರಿಯೊಂದಿಗೆ ಪ್ರೇಮವಂಕುರಿಸಿ ಮದುವೆಯೂ ಆಯಿತು. ಮದುವೆಗೆ ಮುನ್ನ ಆಕೆಗೆ ಹೋಜೇಶ್ವರದ ಆಚಾರ್ಯರಿಂದ ಶಿವದೀಕ್ಷಾಸಂಸ್ಕಾರವೂ ನಡೆಯಿತು. ಆಕೆಯ (ತಂದೆಯ) ಮನೆಯಲ್ಲಿಯೇ ಒಂದು ಭಾಗದಲ್ಲಿ ಇಳಿದುಕೊಂಡನು.

ಒಂದು ದಿನ ಶರಣರಿಗೆ ಸಿದ್ಧಪಡಿಸಿದ್ದ ಪ್ರಸಾದವು ಜಿನಸವಣರಿಗೆ ವಿನಿಯೋಗವಾಗಿ ಆ ಸಂಬಂಧದ ಸಿಟ್ಟಿನಿಂದ

ಏನನ್ನೂ ತಿನ್ನದೇ ಇದ್ದ ಆದಯ್ಯನಿಗೆ ಅವನ ಮಾವ 'ನಿನ್ನ ಕುಲದೇವರನ್ನು ತಂದು ಹುಲಿಗೆರೆಯ ಬಸದಿಯಲ್ಲಿ ನಿಲ್ಲಿಸಿ ಆಮೇಲೆ ಊಟ ಮಾಡುವಂತೆ ಕಾಣುತ್ತದೆ' ಎಂದು ಅಣಕವಾಡಿದನು. ಅದರಿಂದ ಸ್ಫೂರ್ತಿಗೊಂಡ ಆದಯ್ಯ ಅದರಂತೆಯೇ ಪ್ರತಿಜ್ಞೆಮಾಡಿ ಅನೇಕಾನೇಕ ಕಷ್ಟಗಳನ್ನನುಭವಿಸಿ ಪುಲಿಗೆರೆಯಲ್ಲಿ ಸೋಮನಾಥನು ನೆಲೆಸಿಲ್ಲುವಂತೆ ಮಾಡಿದನು. ಆ ಸ್ವಾಮಿಯನ್ನು ಬಹುಕಾಲ ಅರ್ಚಿಸಿದ ಆದಯ್ಯನ ಸಮಾಧಿ ಆ ದೇವಾಲಯದಲ್ಲಿಯೇ ಇದೆ.[17]

ಬೆಚ್ಚು ಬೇರಿಲ್ಲದ ಸುಖವೆನಗಚ್ಚಾದ ಪರಿಯ ನೋಡಯ್ಯಾ !
ಅಂಗವಿಲ್ಲದ ಕೂಟ, ಸಂಗವಿಲ್ಲದ ಬೇಟ, ಸಮರತಿ ಇಲ್ಲದಾನಂದ ಸನ್ನಿಹಿತವಾಯಿತ್ತೆನಗೆ.
ಸೌರಾಷ್ಟ್ರ ಸೋಮೇಶ್ವರಲಿಂಗದ ಸಂಗವೇನೂ ಅಲ್ಲದ ನಿಸ್ಸಂಗದ ನಿಜಸುಖವನೇನೆಂಬೆನಯ್ಯಾ ?

### ೧೦. ಪಂಡಿತಾರಾಧ್ಯರು

ಇವರ ಕಾಲ ೧೧ನೆಯ ಶತಮಾನವೆಂಬುದು ಡಾ॥ ಶ್ರೀ ಜಚನಿ ಅವರ ಅಭಿಮತ. ಶ್ರೀಶೈಲಸೂರ್ಯ ಸಿಂಹಾಸನಾಧೀಶ್ವರರಾದ ಇವರೇ ವಚನಕಾರರಲ್ಲಿ ಮೊದಲಿಗರೆಂದು ಶ್ರೀ ಸ್ವಾಮೀಜಿಯವರು ಬರೆದಿದ್ದಾರೆ.[17ಅ] ಆದರೆ ಇದೇ ಅಂತಿಮ ತೀರ್ಮಾನವಲ್ಲ. ಸಂಶೋಧನೆ ಹರಿಯುವ ನೀರೇ ಹೊರತು ನಿಂತ ನೀರಲ್ಲ.

ಸರ್ವಪುರಾತನರ ವಚನಕಟ್ಟಿನಲ್ಲಿ 'ಪಂಡಿತ'ರದೊಂದು ವಚನ ಸಿಕ್ಕಿದೆ :

ಇಲ್ಲದ ಕುತ್ತುವ ಕೊಂಡ ಬಲ್ಲವರ
ಬಾವು ಹೋಗ ಹೋದರೆ ಆ ಬಲ್ಲ ಬಲ್ಲವರೆಲ್ಲಾ
ಆ ಬಲ್ಲಲ್ಲಿಯೆ ಅಲ್ಲತ್ತಗೊಳುತಿದ್ದರು
ಇದೆಲ್ಲಿಯ ಕುತ್ತು ಎಂದು ತಿಳಿದು ವಿಚಾರಿಸಲು
ಅದಲ್ಲೇ ಬಯಲಾಗಿತ್ತು ಗುರುಸಿದ್ಧಮಲ್ಲು

ಈ ವಚನಾಂಕಿತವೇ ಅವರ ಗುರುನಾಮಾಂಕಿತ ಕೂಡ ಆಗಿದೆಯಂತೆ.

### ೧೧. ರೇವಣಸಿದ್ಧ ಶಿವಾಚಾರ್ಯರು

ಆದಿರೇಣುಕರ ಅಂತ್ಯಾವತಾರಿಗಳೆಂದು ನಂಬಿಕೆಯುಂಟು. ಅತ್ಯಂತ ಸಮರ್ಥರಾದ ಸಿದ್ಧರು. ೧೧ನೆಯ ಶತ ಮಾನದಲ್ಲಿದ್ದ ಶಿವಾಚಾರ್ಯರು. ಪವಾಡಪುರುಷರು. ಇವರ ಒಂದು ವಚನ :

ಆದವಲ್ಲ ದಶದಿಕ್ಕಿನಲ್ಲಿ ದಶನಾದಂಗಳು
ಆದುದಲ್ಲ ಪುಷ್ಪವೃಷ್ಟಿ ಕಲ್ಯಾಣಕರವಾಗಿ
ಆಯಿತಲ್ಲ ಸರ್ವಗಣಂಗಳಿಗೆತ್ಯಾನಂದ
ಇನ್ನು ಬಾರನೇ ತ್ರಿಪುರಾಂತಕ ಸೋಮಲಿಂಗ

ರೇವಣಸಿದ್ಧರ ಐದೂ ಜನ ಪತ್ನಿಯರ ಒಂದೊಂದು ವಚನವನ್ನು ಡಾ॥ ಶ್ರೀ ಜಚನಿ ಸನ್ನಿಧಿಯವರು ಉಲ್ಲೇಖಿಸಿರುತ್ತಾರೆ.[18]

### ೧೨. ರೇಕಮ್ಮ

ವ್ರತಹೀನನ ಗುರುತಪ್ಪುಕನ ಲಿಂಗಬಾಹ್ಯನ
ಪ್ರಸಾದ ದೂಷಕನ ಆಚಾರದ್ರೋಹಿಯ ಕಂಡಡೆ
ಕಣ್ಣುಮುಚ್ಚಿ ಶಿವಮಂತ್ರವ ಜಪಿಸುವುದು ;
ಶಕ್ತಿಯುಳ್ಳರೆ ಸಂಹಾರವ ಮಾಡುವುದು
ಇಷ್ಟು ಆಗದಿದ್ದರೆ ಆ ಸ್ಥಲವ ಬಿಡುವುದು ;
ಬಿಡದಿರ್ದಡೆ ಕುಂಭೀಪಾಕ ನಾಯಕ ನರಕ
ಘೋರ ಪಾಪವಯ್ಯ ಶ್ರೀಗುರುಸಿದ್ಧೇಶ್ವರಾ

ಅಶಿವವನ್ನು ಕಂಡ ಸಂದರ್ಭದಲ್ಲಿ ಅದಕ್ಕೆ ಸಮ್ಮತಿಯ ನೀಡಬಾರದೆಂಬುದೇ ತಾತ್ಪರ್ಯವಿಲ್ಲಿ ; ಶಿವಶರಣರ ಪಂಚಾಚಾರಗಳಲ್ಲೊಂದಾದ 'ಗಣಾಚಾರ'ವನ್ನು ಇಲ್ಲಿ ಸ್ಮರಿಸಬಹುದಾಗಿದೆ.

**೧೩. ಆಗಮ ಮೋಹಿನಿದೇವಿ**

ರೇವಣಸಿದ್ಧರ ಪತ್ನಿಯರಲ್ಲಿ ಈಕೆ ವೀರರಾಜೇಂದ್ರನ ಪುತ್ರಿ. ಇವರ ವಚನವಿದು :

ಬಯಲಲಿಂಗ ಬಯಲಾದರೆ ತಪ್ಪಲ್ಲ
ಬಯಲಲಿಂಗವಾಕಾರವಿಡಿದು ಬಂದರೆ ತಪ್ಪಲ್ಲ
ಇಂತಪ್ಪ ಲಿಂಗವ ತರಲು ಅಸಮರ್ಥನೇ
ಎನ್ನಾಗಮ ಮೋಹಿನಿಯಣ್ಣ !

ಶೂನ್ಯ (ಬಯಲು) ತತ್ತ್ವದ ಪ್ರತಿಪಾದನೆಯ ಸೂಚನೆಯಲ್ಲಿ ಮನಗಾಣಬಹುದು.

**೧೪. ವೇದಕಂಚುಕಿದೇವಿ**

ವೀರಭದ್ರಚೋಳನ ಮಗಳು. ಇವರ ವಚನ :

ಎನ್ನಾಚಾರ್ಯರರ್ಚಿಪಲಿಂಗ ಬಯಲಾದುದೆಂಬನೆ ?
ಬಯಲಾದುದಿಲ್ಲ ಆಕಾರವಿಡಿದಿಹರೆಂಬನೆ ?
ನುಡಿಗಡಣದ ಬೆಳಗು ತೋರುವುದಿಲ್ಲ.
ಗುರು ಜಂಗಮ ನುಡಿದಂತೆ ಲಿಂಗ ನುಡಿವರೆ
ಬಂದ ವೇದ ಕಂಚುಕಿ ಓಂಕಾರ ಮುಖ ನೋಡಯ್ಯ

ಇಲ್ಲಿಯೂ ಕೂಡ 'ಬಯಲು' ಶಬ್ದಪ್ರಯೋಗವಾಗಿರುವುದು ಗಮನಾರ್ಹ ; ಸಪತ್ನಿಯರಾದರೂ ತತ್ತ್ವಜಿಜ್ಞಾಸೆಯಲ್ಲಿ ಸಹಭಾಗಿಗಳಾಗಿದ್ದರೆಂದು ಊಹಿಸಬಹುದೆ ?

**೧೫. ಶಾಂಭವೀದೇವಿ**

ಸಿಂಹವಿಕ್ರಮಚೋಳರಾಜನ ಪುತ್ರಿ. ಇವರ ವಚನಗಳಿವು :

ಗುರುಮನೆಯ ವಾರ್ತೆಯ ಅರಮನೆಯವರು ಬಲ್ಲರೆ ?
ಅರಮನೆಯ ವಾರ್ತೆಯ ಅರ್ಕೆಮರುಳರು ಬಲ್ಲರೆ ?
ನಿಮ್ಮ ವಾರ್ತೆ ನೀವೇ ಬಲ್ಲಿರಿ
ಶಾಂಭವೀ ಲಿಂಗ ಶ್ರೀಗುರುವೆ

ಹೊರಗಣ ನಾದ ಮನೋರಂಜನೆಯಲ್ಲದೆ
ಮಹಾಲಿಂಗವ ಕೂಡುವಲ್ಲಿ ಒಂದು ಕೋಣೆಯಲ್ಲಿ
ದಶನಾದ ಪೂರಯಿಸದದು
ಒಂದು ಕೋಣೆಯಲ್ಲಿ ಒಂದೇ ನಾದವಿರ್ಪುದು
ಒಬ್ಬರು ಒಳ್ನಿದ್ದೆ ಮಾಡಿ ಎದ್ದು
ಅರವತ್ತಾರು ಕೋಟಿ ಮಂತ್ರಗಳು ತಂತ್ರೀವಾದ್ಯ
ಮಾಡಿದವು ಕಾಣಾ ಶಾಂಭವೀಲಿಂಗವೆ

—ಸಿದ್ಧಪತ್ನಿಯಾದ ಇವರಿಗೆ ಲೌಕಿಕವಾಗಿ ಅರಮನೆ–ಗುರುಮನೆಗಳೆರಡರ ಪರಿಚಯವೂ ಇದ್ದಿತಲ್ಲದೆ, ಆಧ್ಯಾತ್ಮಿಕವಾಗಿ ದಶನಾದಗಳ ಅನುಷ್ಠಾನ. ಲಿಂಗತತ್ತ್ವಲೀನಶಕ್ತಿಯೂ ಲಭ್ಯವಾಗಿದ್ದಿರಬಹುದಲ್ಲವೆ?

**೧೬. ಸೌಂದರೀದೇವಿ**

ರಾಜೇಂದ್ರಚೋಳರಾಜನ ಮಗಳು. ಇವರ ವಚನ :

ಗುರುಲಿಂಗಜಂಗಮ ಭೇದದಲ್ಲಿ ಆರನಿಂದೆ ಆರಿಗಯ್ಯ ?
ಸಾಗರದಲ್ಲಿಪ್ಪ ಲಹರಿಗಳ ತಾಡನೆ ಲಹರಿಗೆನಲುಂಟೆ ?
ಗುರುದೂಷಣೆ ಇಲ್ಲ. ತನ್ನ ಮೂಗು ತಾ ಕೊಂಡರೆ ಆರಪಮಾನ ?
ಉಸಿರಯ್ಯಾ ಶ್ರೀಗುರು ಸೋಮಲಿಂಗ ಶರಣೆ ಸೌಂದರಿಗೆ !

ಅಷ್ಟಾವರಣಗಳ ಅನುಷ್ಠಾನ ಈ ತಾಯಿಗೆ ಕರಗತವಾಗಿದ್ದಿತೆಂದೂ, ತತ್ರಾಪಿ ಪ್ರಥಮ ಮೂರು ತತ್ತ್ವಗಳಲ್ಲಿ ಭೇದ ಮಾಡಬಾರದೆಂದೂ ಅರಿಯಬಹುದಾಗಿದೆ.

**೧೭. ರುದ್ರಮುನಿ ಶಿವಾಚಾರ್ಯರು**

ರೇವಣಸಿದ್ಧರ ಪುತ್ರರಿವರು. ರಂಭಾಪುರಿ (ಬಾಳೆಹೊನ್ನೂರು) ವೀರಸಿಂಹಾಸನದ ಜಗದ್ಗುರುಗಳಾಗಿದ್ದವರು. ಕಲ್ಯಾಣದ ಶಿವಶರಣರಿಗೆ ಬೆಂಗಾವಲಾಗಿದ್ದರು. 'ಕಾಲಜ್ಞಾನ'ವನ್ನು ಬರೆದಿದ್ದಾರೆ. 'ರುದ್ರಭಾರತ' ಎಂಬ ಗ್ರಂಥ ವನ್ನು ಬರೆದಂತೆ ತಿಳಿಯುತ್ತದೆ; ಆದರೆ ಅದು ಉಪಲಬ್ಧವಿದ್ದಂತಿಲ್ಲ. ಹಾವಿನಹಾಳ ಕಲ್ಲಯ್ಯನಿಗೆ ದೀಕ್ಷೆಯನ್ನು ಅನುಗ್ರಹಿಸಿದ ಗುರು ಇವರು. ಈಗಲೂ ಬಸವಕಲ್ಯಾಣದಲ್ಲಿ 'ರುದ್ರಮುನಿ-ಗವಿ' ಎಂಬೊಂದು ದೇವಾಲಯವು ತ್ರಿಪುರಾಂತಕನ ಕೆರೆಗೆ ಅನತಿದೂರದಲ್ಲಿ ಬಿಲ್ವವನ ಸಹಿತ ಸ್ಮಾರಕವಾಗಿ ಕಂಗೊಳಿಸುತ್ತಿದೆ.

**೧೮. ಮರುಳಸಿದ್ಧ ಶಿವಾಚಾರ್ಯರು**

ವೀರಶೈವ ಪಂಚಪೀಠಗಳಲ್ಲಿ ಒಂದಾದ 'ಉಜ್ಜಯಿನಿ' ಪೀಠಾಧೀಶರಿವರು. ರೇವಣಸಿದ್ಧರ ಸಮಕಾಲೀನರು. ಇಬ್ಬರೂ ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಕೂಡಿದ್ದವರು. ರೇವಣರ ಅಂಕಿತದಲ್ಲಿಯೇ ವಚನಗಳನ್ನು ರಚಿಸಿದ್ದಾರೆ:

ಆಲಿ ಆಲಯದಲ್ಲಿ ಕರಿಗೊಳಲು
ಆಲಿಸುವ ಶ್ರವಣವು ಮೇಲಿಪ್ಪ ಆಕಾಶವನಡರಲು
ಉಲುಹು ನಿರ್ಘೂತ ಚಿತ್ತಸಮಾಧಾನವನೈದಲು
ಕಾಲಕರ್ಮಭವಂಗಳ ಗೆಲುವುದಿದೇನು-
ಸೋಜಿಗವು ಹೇಳಾ ರೇವಣಪ್ರಭುವೆ

ವೀರಶೈವಮತ ಚರಿತ್ರೆಯಲ್ಲಿ ನಾಲ್ವರು ಮರುಳಸಿದ್ಧರ ಉಲ್ಲೇಖವಿದೆಯೆಂದೂ ಇವರಲ್ಲಿ ಪೂರ್ವಾಚಾರ್ಯ ಮರುಳ ಸಿದ್ಧನ ಬಗ್ಗೆ ಸಂಶೋಧನೆ ಅಗತ್ಯವೆಂದೂ ಬಿ. ಶಿವಮೂರ್ತಿಶಾಸ್ತ್ರಿ ಅವರು ಉಲ್ಲೇಖಿಸಿದ್ದಾರೆ.[19]

ಕರ್ಣಾಟಕದ ಅನೇಕ ಸ್ಥಳಗಳಲ್ಲಿ ಮರುಳಸಿದ್ಧೇಶ್ವರನ ಸ್ಮಾರಕ-ಗದ್ದುಗೆಗಳುಂಟು.[20]

ದೇವಕವಿಯ (ಕ್ರಿ.ಶ. ೧೫೮೭) ಮರುಳಸಿದ್ಧ ಕಾವ್ಯದ ಪ್ರಕಾರ....ಮರುಳಸಿದ್ಧನು ಶಿವಕೃಪೆಯಿಂದ ಮಾಯೆಯನ್ನು ಜಯಿಸಿ, ಕಂಭದ ಪವಾಡ–ಸುಣ್ಣದ ಪವಾಡಗಳನ್ನು ಮೆರೆದು, ನವನಾಥ ಸಿದ್ಧನನ್ನು ವಾದದಲ್ಲಿ ಸೋಲಿಸಿ, ಯಜ್ಞಯಾಗಗಳ ಹಿಂಸಾಚಾರವನ್ನು ತಪ್ಪಿಸಿ, ಕಡೆಗೆ ಬಳ್ಳಾರಿ ಜಿಲ್ಲೆ ಉಜ್ಜಯನಿಯಲ್ಲಿ ಬಯಲಾದನೆಂದು ತಿಳಿದುಬರುತ್ತದೆ.[21]

**೧೯. ಶಿವಲೆಂಕ ಮಂಚಣ ಶಿವಾಚಾರ್ಯರು**

ಪಂಡಿತತ್ರಯರಲ್ಲಿ ಇವರೊಬ್ಬರು. ತಂದೆ ಶಂಭುದೇಶಿಕ ಶಿವಾಚಾರ್ಯರು. ಇವರ ಪಿತಾಮಹರಾದ ಸೋಮ ಶಂಭುದೇಶಿಕರು ಕಾಮಿಕಾದಿ ಶಿವಾಗಮಗಳಿಗೆ ವೃತ್ತಿದೀಪಿಕೆಗಳನ್ನು ಬರೆದ ಪುಣ್ಯಾತ್ಮರು. ಕಾಶಿಪಟ್ಟಣದಲ್ಲಿ ವಿಶೇಷಾಧ್ಯಯನ ನಡೆಸಿ ಅಲ್ಲಿಯೇ ನೆಲಸಿದ್ದರು. ವಾದದಲ್ಲಿ ಪಂಡಿತರನ್ನೆಲ್ಲ ಸೋಲಿಸಿ ಶೈವಶ್ರೇಷ್ಠತೆಯನ್ನು ಪ್ರತಿ ಪಾದಿಸಿದರು.

ವೀರಶೈವದ ಅಗ್ಗಳಿಕೆಯನ್ನು ಮನಗಾಣಲೆಂದೇ ಕಾಶಿಯಿಂದ ಇವರು ಕಲ್ಯಾಣಕ್ಕೆ ಬಂದರು. ಬಸವಾದಿ ಪ್ರಮಥರೊಂದಿಗೆ ಶಿವಾನುಭವಗೋಷ್ಠಿಯಲ್ಲಿ ಕಾಲಕ್ಷೇಪ ಮಾಡಿದರು. ೧೩೧ ವಚನಗಳಿವೆಯೆಂದು ತಿಳಿಯುತ್ತದೆ. ಅಣ್ಣನವರ ಹಿರಿಯ ಸಮಕಾಲೀನರಾದ ಇವರ ಹೆಸರು ಗಣಸಹಸ್ರದಲ್ಲಿದೆ. ಇವರ ವಚನ:

ಆದಿಶಕ್ತಿ ಅಂಗರೂಪಾಗಿ ಅನಾದಿಶಕ್ತಿ ಪ್ರಾಣವಾಗಿ
ಚಿದಾತ್ಮನ ಬೆಳಗು ಅರಿವಾಗಿ
ಎನ್ನ ಹೃತ್ಕಮಲ ಮಧ್ಯದಲ್ಲಿ ತೊಳಗಿ ಬೆಳಗಿದಿರಯ್ಯ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ

### ೨೦. ಮಲ್ಲಿಕಾರ್ಜುನ ಪಂಡಿತಾರಾಧ್ಯರು

ಇವರೂ ವೀರಶೈವ ಪಂಡಿತತ್ರಯರಲ್ಲಿ ಒಬ್ಬರು ಹಾಗೂ ಬಸವಣ್ಣನವರ ಹಿರಿಯ ಸಮಕಾಲೀನರು. ಸಂಸ್ಕೃತ-ಆಂಧ್ರ-ಕನ್ನಡ ಮೂರೂ ಭಾಷೆಗಳಲ್ಲಿ ನೈಪುಣ್ಯ ಪಡೆದಿದ್ದರು. ಗಣಸಹಸ್ರನಾಮಾವಳಿ, ಶಿವಾಧಿಕ್ಯ ಕೃತಿಗಳಲ್ಲದೆ ವಚನಗಳನ್ನೂ ರಚಿಸಿದರು. ಇವರ ವಚನ :

ಧನ-ಜವ್ವನವುಳ್ಳಲ್ಲಿ ಶಿವಶರಣೆನ್ನೊ ಮಾನವಾ
ನೆನೆನೆನೆಯಾ ನೀ ಕೆಡದ ಮುನ್ನ
ಧನ ನಿಲ್ಲದು, ಜವ್ವನ ನಿಲ್ಲದು; ನಿನ್ನ ಪ್ರಾಣ ನಿಲ್ಲದು
ಇದನರಿದು ಶ್ರೀ ಮಲ್ಲಿಕಾರ್ಜುನನ
ನೆನೆನೆನೆಯಾ ನೀ ಕೆಡದ ಮುನ್ನ !

ಅಣ್ಣನವರ '....ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲ ಸಂಗಮದೇವನ' ಎಂಬ ವಚನದಂತೆ ಶರೀರದ ನಶ್ವರತೆಯನ್ನು ನೆನಪಿಸಿ, ಮುಖ್ಯ ಕರ್ತವ್ಯದ ಬಗೆಗೆ ಎಚ್ಚರವನ್ನೀಯುವುದಾಗಿದೆ ಈ ಇವರ ವಚನ.

ಈ ಮೇಲೆ ಉಕ್ತರಾಗಿರುವ ಪಂಡಿತಾರಾಧ್ಯರು, ಮಲ್ಲಿಕಾರ್ಜುನಪಂಡಿತಾರಾಧ್ಯರು ಇಬ್ಬರೂ ಭಿನ್ನವ್ಯಕ್ತಿಗಳು. ಫ. ಗು. ಹಳಕಟ್ಟಿಯವರು, ಮಲ್ಲಿಕಾರ್ಜುನರು ಶ್ರೀಶೈಲ ಸಿಂಹಾಸನವನ್ನು ಸ್ಥಾಪಿಸಿದವರಲ್ಲ—ಎಂದು ಶಿವಶರಣ ಚರಿತ್ರೆ ಭಾಗ ೨ರಲ್ಲಿ ಸ್ಪಷ್ಟಪಡಿಸಿರುತ್ತಾರೆ.[22]

### ೨೧. ಕೆಂಭಾವಿ ಭೋಗಣ್ಣ

ಈತನ ಕಾಲ ಕ್ರಿ.ಶ. ೧೦೭೬. ಚಂದಿಮರಸನ ರಾಜಧಾನಿಯಾಗಿದ್ದ ಕೆಂಭಾವಿಯು ಇವನ ಊರು. ಆಚಾರನಿರತನಾದ ಇವನು ಅನೇಕರಿಗೆ ಲಿಂಗಧಾರಣ ದೀಕ್ಷೆಗಳನ್ನು ಕೊಟ್ಟು ಸಂಸ್ಕರಿಸುತ್ತಿದ್ದನು. ಇವನ ವಚನ :

....ಕಂಗಳ ಗದ್ದುಗೆಯ ಮೇಲೆ ಮಹಾ
ಗುರುಲಿಂಗವೆಂಬರಸು ಕುಳ್ಳಿರಲು
ಲಿಂಗ ಕಂಗಳ ನುಂಗಿತ್ತೊ ?' ಕಂಗಳು ಲಿಂಗವ ನುಂಗಿದ್ದವೊ ?
ಈ ಉಭಯವ ನುಂಗಿದ ಬೆಡಗಿನ ಬಿನ್ನಾಣವ
ನಿಜಗುರು ಭೋಗೇಶ್ವರನೇ ಬಲ್ಲ.

ಈತನು ತನ್ನ ಗುರುವಾದ ಭೋಗಿನಾಥನ ಅಂಕಿತವನ್ನೇ ತಾ ಬರೆದ ವಚನಗಳಲ್ಲಿ ಬಳಸಿದ್ದಾನೆ.

### ೨೨. ನಿಜಗುಣದೇವ

ಹನ್ನೊಂದನೆಯ ಶತಮಾನದಲ್ಲಿದ್ದ ವಚನಕಾರನಿವ. ಕೆಂಭಾವಿಯವನಾದ ಈತನು ಅಲ್ಲಿನ ರಾಜ ಚಂದಿಮರಸನ ದೀಕ್ಷಾಗುರುವಾಗಿದ್ದನು. ಈತನನ್ನು ನಿಜಗುಣ ಅಥವಾ ನಿಜಗುಣಯೋಗಿ ಎಂದು ಕರೆಯುತ್ತಾರೆ. ಈತನ ವಚನಾಂಕಿತ 'ನಿಜಗುಣಯೋಗ' ಎಂದು. ಗಣಸಹಸ್ರದಲ್ಲಿ ಈತನ ಹೆಸರಿದೆ. ಇವನ ಸಮಾಧಿಸ್ಥಳ ವಿಜಾಪುರಜಿಲ್ಲೆಯ ಚಿಮ್ಮಲಿಗೆಯೆಂಬ ಹಳ್ಳಿಯಲ್ಲಿದೆಯೆಂದು ಗೊತ್ತಾಗಿದೆ. ಅದುವೆ ನಿಜಗುಣೇಶ್ವರಲಿಂಗ ಎಂಬ ದೇವಸ್ಥಾನ. ನಿಜಗುಣಯೋಗಿಯ ವಚನವಿದು :

ವಾರಿಗಿದಿರಾದ ಕಾಷ್ಠ, ಬವರಕ್ಕಿದಿರಾದ ಬಂಟ ;
ಅರಿದೊರೆಗಿದಿರಾದ ದೊರೆ ಮರಳುವುದಕ್ಕೆ ನೆರೆ ಕನಸು
ಕಾಯಜೀವಕ್ಕೆ ಇದಿರಾದ ಅರಿವು ಭಾವಕ್ಕೆ ಮರಹುಗೊಡಲಿಲ್ಲ
ಉಭಯವಳಿದಲ್ಲದೆ ನಿಜಗುಣಯೋಗಿಯ ಯೋಗಕ್ಕೆ ಹೊರಗಲ್ಲ.

ಷಟ್‌ಶಾಸ್ತ್ರ ರಚಿಸಿದ ಶಂಭುಲಿಂಗಬೆಟ್ಟದ ನಿಜಗುಣ ಶಿವಯೋಗಿಯೇ ಬೇರೆ, ಈ ನಿಜಗುಣದೇವನೇ (ವಚನಕಾರ) ಬೇರೆ—ಎಂಬುದನ್ನು ನೆನಪಿನಲ್ಲಿಡಬೇಕು.

### ೨೩. ಮಸಣಮ್ಮ

ಶಿವಕಂಚಿಯ ಎಡೆಮಠದ ನಾಗಿದೇವನ ಪತ್ನಿಯಿವಳು. ಪರಮಜ್ಞಾನಿಯಾದ ಈ ತಾಯಿ ಪತಿಯೊಂದಿಗೆ ಮತಪ್ರಸಾರಕಾರ್ಯದಲ್ಲಿ ತೊಡಗಿದ್ದಳು. ವಚನ :

ಕಾಗೆಯ ನಾಯ ತಿಂದವರು
ವ್ರತಭ್ರಷ್ಟನ ಕೂಡಿದವರೆಲ್ಲರು
ನಾಯಿಂಗೆ ನಾರಂಗವೊಗ್ಗುವುದೆ ?
ಲೋಕದ ನರಂಗೆ ವ್ರತವಪ್ಪುದೆ, ಶಿವಬೀಜಕ್ಕಲ್ಲದೆ
ನೀವೇ ಸಾಕ್ಷಿಯಾಗಿ ನಿಜಗುಣೇಶ್ವರ ಲಿಂಗದಲ್ಲಿ ?[23]

ವ್ರತಹೀನರಾದವರಿಗೆ ಹಿತಬೋಧೆ ಫಲ ಕೊಡುವುದಿಲ್ಲ—ಎನ್ನುವುದು ಮಸಣಮ್ಮನ ಅನುಭವಕ್ಕೆ ಬಂದಿತ್ತು.

### ೨೪. ಚಂದಿಮರಸ

ಈ ಮೇಲೆ ಹೇಳಿರುವಂತೆ ಕೆಂಭಾವಿ ನಿಜಗುಣದೇವನಿಂದ ದೀಕ್ಷೆ ಪಡೆದುಕೊಂಡ ಅದೇ ಸ್ಥಳದ ರಾಜನೀತ. ಅರಸನ ವಚನ :

ಸಂಸಾರವೆಂಬ ಹೇರಡವಿಯ ಅಂಧಕಾರವೆಂಬ ಜನಪಥದ
ಆದಿವ್ಯಾಧಿಗಳೆಂಬ ಗಿರಿದುರ್ಗ ಜಲದುರ್ಗಂಗಳ
ಧನವನಿತೆ ವಿಷಯಂಗಳೆಂಬ ಮೃಗತೃಷ್ಣೆಯ
ಬಳಿವಿಡಿಮ ರಾಗದ್ವೇಷವ ಕೊಳ್ಳದ....ತಾಪತ್ರಯದ
ಕಾಳ್ಕಿಚ್ಚಿನಲ್ಲಿ ಜೀವ ಸಾವಕೆಡುವ ಅಹಂ ಮಮತೆಯ ಹೊತ್ತು ನಡೆವ
ನರಗುರಿಗಳಾದ ಜೀವರಿಗೆ ಭವಬಂಧನ ಹರಿದು ಗುರುಪಥವಪ್ಪುದು
ನಿಜಗುಣನ ಶ್ರೀಪಾದವ ಶರಣಗತಿ ಹೊಕ್ಕಡೆ ನಿತ್ಯಸುಖಪೂರಿತ
ಸಿಮ್ಮಲಿಗೆಯ ಚೆನ್ನರಾಮ ತಾನಹ ನಿಜಗುಣನ
ಶ್ರೀಪಾದವ ನೆರೆ ನಂಬಿದಡೆ.

ಚಂದಿಮರಾಜನ ಈ ವಚನದಲ್ಲಿ ಗುರು ನಿಜಗುಣ ಬೇರೆಯಲ್ಲ. ದೇವ ಚೆನ್ನರಾಮ ಬೇರಲ್ಲ—ಎಂಬ ನಿಶ್ಚಿತ ಜ್ಞಾನ ವ್ಯಕ್ತಪಡುತ್ತದೆ. ಈತನ ಸಮಾಧಿಯೂ ಗುರುಸಮಾಧಿಯಿರುವ ಸಿಮ್ಮಲಿಗೆ (ಚಿಮ್ಮಲಿಗೆ)ಯಲ್ಲಿಯೇ ಇದೆ.

### ೨೫. ಅಮುಗಿದೇವ

ಸೊನ್ನಲಿಗೆ ಅಥವಾ ಸೊನ್ನಲಾಪುರ (ಈಗಿನ ಸೊಲ್ಲಾಪುರ) ಈತನ ಸ್ಥಳ. 'ಲಿಂಗವೇದಕ', 'ಮಾಹೇಶ್ವರಗಣ ಕುಲಾನ್ವಯ ದಿವಾಕರ', 'ಭಕ್ತಜಿನ ಚಿಂತಾಮಣಿ'—ಮುಂತಾದ ಯೋಗ್ಯ ಪ್ರಶಸ್ತಿಗಳು ಈತನಿಗುಂಟು. ಈತನು ಸೊನ್ನಲಿಗೆಯ ಸಿದ್ಧರಾಮನು ಲಿಂಗಧಾರಿಯಾಗಲು ಕಾರಣನಾಗಿದ್ದಾನೆ.[24] ಶ್ರೀ ರೇವಣಸಿದ್ಧರ ಸಂಪ್ರದಾಯದವನಾದ ಈತನು ಹೂಳಜೆ (ಪುಳುಜ) ಗ್ರಾಮದಲ್ಲಿ ಅಂತಿಮಕಾಲದಲ್ಲಿದ್ದನು. 'ಅಮ್ಮಿದೇವ' ಎಂದೂ ಇವನಿಗೆ ಹೆಸರುಂಟು. ಈತನು ಕವಿ, ವಾಗ್ಮಿ. ಗಮಕಿ ಆಗಿದ್ದನು. ದೂರದರ್ಶನ ದೂರಶ್ರವಣಗಳ ಸಿದ್ಧಿ ಈತನಿಗಿದ್ದವಂತೆ! ಇವರ ವಚನ :

'ಗುರುಶಿಷ್ಯ ಸಂಬಂಧದನುಭಾವ ಕೇಳಿರಯ್ಯ
ಗುರುವೆಂಬ ಪರಾಪರ ; ಶಿಷ್ಯನೆಂಬ ಇಹಪರ
ಗುರುವೆಂಬ ಪರಮಾರ್ಥ ; ಶಿಷ್ಯನೆಂಬ ಇಹಪರ
ಗುರುವೆಂಬ ನಲ್ಲ ; ಶಿಷ್ಯನೆಂಬ ನಲ್ಲೆ
ಏಕೋ ಸಿದ್ಧಸೋಮನಾಥನಲ್ಲಿ ಶಬ್ದಕಿಂಬಿಲ್ಲ....

ಗುರುಶಿಷ್ಯ ಸಂಬಂಧವನ್ನು ತನ್ನೀವಚನದಲ್ಲಿ ಚೆನ್ನಾಗಿ ನಿರ್ದೇಶಿಸಿರುವುದನ್ನು ಕಾಣಬಹುದಾಗಿದೆ.

### ೨೬. ರಾಯಮ್ಮ

ಅಮುಗಿದೇವನಿಂದ ದೀಕ್ಷಾನುಗ್ರಹ ಪಡೆದಿದ್ದ ತಾಯಿ; ರಾಯಸದ ಮಂಚಣ್ಣನ ಧರ್ಮಪತ್ನಿ. ತನ್ನ ಆರಾಧ್ಯ ಮೂರ್ತಿಯಾದ ಗುರುವಿನ ನಾಮಾಂಕಿತದಲ್ಲಿಯೇ ಈಕೆ ವಚನ ರಚಿಸಿದ್ದಾರೆ:

ವಿಶ್ವಮಯ ರೂಪಾಗಿ ಬಂದೆಯಯ್ಯ
ಭಕ್ತಿಗೆ ಎನ್ನ ಮನಕೆ ಸಲೆಸಂದ ನಿಲವು
ಅಮುಗೇಶ್ವರ ಲಿಂಗಕ್ಕೆ ಮಾಟವಾಯಿತ್ತು.

ಪಿ. ಜಿ. ಹಳಕಟ್ಟಿಯವರ ಅಭಿಪ್ರಾಯದಂತೆ ತನ್ನ ದೀಕ್ಷಾಗುರು ಅಮುಗಿದೇವನ ಉದ್ದೇಶಿಸಿಯೇ ರಾಯಮ್ಮನು ನುಡಿದ ವಚನವಿದು.[25-26]

**೨೭. ಪ್ರಸಾದಿ ಭೋಗಣ್ಣ**

೧೨ನೆಯ ಶತಮಾನದವನೆಂದು ಹೇಳಲಾದ ಈತ ೧೦೨ ವಚನಗಳನ್ನು ರಚಿಸಿದ್ದಾನಂತೆ![27] ಆದರೆ ಸಿಕ್ಕಿರುವವು ೨೦ ವಚನಗಳು ಮಾತ್ರ. ಸಂಸ್ಕೃತ-ಕನ್ನಡ ಎರಡೂ ಭಾಷೆಗಳಲ್ಲಿ ಪಂಡಿತನೀತ. ಇವರ ವಚನ :

ಲಿಂಗೋದ್ಭವ ಐವತ್ತೆರಡು ಅಕ್ಷರಂಗಳಲ್ಲಿ ವರ್ತುಳ ಗೋಮುಖ
ಗೋಳಕಾಕಾರಕ್ಕೆ ಸಂಬಂಧಿಸುವಲ್ಲಿ ಆಕಾರ ವರ್ತುಳಾಕಾರಕ್ಕೆ
ಉಕಾರ ಗೋಮುಖಕ್ಕೆ ಮಕ್ಕಾರ ಗೋಳಾಕಾರಕ್ಕೆ ಸಂಬಂಧಿಸುವಲ್ಲಿ
ಇಂತೀ ಆದಿಯಾಧಾರ ಆತ್ಮಬೀಜ ಓಂಕಾರದಿಂದುದ್ಭವವಾದ
ಅಕ್ಷರಾತ್ಮಕ ವಸ್ತುವನರಿದು....
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಾಗಿಹನೆಂದು

ಈ ವಚನದಲ್ಲಿ ಅಉಮಾಕ್ಷರಗಳ ಸಮನ್ವಯವನ್ನು ಪ್ರಣವಾಕ್ಷರದಲ್ಲಿ ಮಾಡಿರುವರು ಪ್ರಸಾದಿಗಳು.

**೨೮. ಗೊಗ್ಗವ್ವೆ**

ಈ ತಾಯಿ ಹನ್ನೆರಡನೆಯ ಶತಮಾನಕ್ಕೆ ಹಿಂದಿನವಳೆಂದೂ, ರೇವಣಸಿದ್ಧರ ಧರ್ಮಪತ್ನಿ ರೇಕಮ್ಮನ ಕಾಲದವಳಾಗಿರಬೇಕೆಂದೂ ಗು. ಶಂಕರಮ್ಮ ಅಭಿಪ್ರಾಯಪಟ್ಟಿದ್ದಾರೆ.[28] ಕೇರಳ ಪ್ರಾಂತದ 'ಅವಲೂರು' ಇವಳದು. ಶೈವಸಂಪ್ರದಾಯದ ಈಕೆಯು ದೇವನಿಗೆ ಧೂಪವನ್ನರ್ಪಿಸುವ ಕಾಯಕವನ್ನು ಕೈಕೊಂಡಿದ್ದಳು. ಗೊಗ್ಗೇಶ್ವರನ ಉಪಾಸಕಳು.

ಕುಡಗಲೂರು ಕೇರಳದ ಇನ್ನೊಂದು ಊರು. ಅಲ್ಲಿನ ಅರಸನಾದ ಚಾರಮರಾಯನಿಗೆ ಈಕೆಯು ದೀಕ್ಷೆಯನ್ನಿತ್ತು ಕೈಲಾಸಕ್ಕೆ ಕಳುಹಿಸಿದಳೆಂದು—ಡಾ॥ ಜಚನಿ ಅವರು ಹೇಳಿರುತ್ತಾರೆ. ಇವರ ವಚನ :

ಅನಲ ಕೊಂಡ ಭೋಗಕ್ಕೆ ಸರಿಪ್ರಕಾರವುಂಟೆ ?
ಶರಧಿಕೊಂಡ ಸಾಗರಕ್ಕೆ ಕುರುಹಿನ ಕಲೆಯೆ ?
ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪ್ರಣ್ಯವುಂಟೆ ?
ಹುಸಿ, ನಾಸ್ತಿ ನಾಥಾ !

**೨೯. ಅಮರಗುಂಡದ ಮಲ್ಲಿಕಾರ್ಜುನತಂದೆ**

ಉತ್ತಮ ವಚನಕಾರನೆಂದು ಹೆಸರು ಪಡೆದಿದ್ದಾನೆ : ಅದಕ್ಕೆ ನಿದರ್ಶನವಾಗಿ ಆತನ ಒಂದು ವಚನ :

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ
ಧರ್ಮಾರ್ಥಕಾಮ ಮೋಕ್ಷಂಗಳೆಂಬ ಉಕ್ಕಡದವರೆಚ್ಚತ್ತಿರಿ
ಭಯಘನ, ಭಯಘನ
ಅಜ್ಞಾನವೆಂಬ ತೀವ್ರ ಕತ್ತಲೆ ಕರಘನ, ಕರಘನ
ಒಂಬತ್ತು ಬಾಗಿಲವ ಜತನವ ಮಾಡಿ, ಜತನವ ಮಾಡಿ
ಜ್ಞಾನಜ್ಯೋತಿಯ ಪ್ರಬಲವ ಮಾಡಿ, ಪ್ರಬಲವ ಮಾಡಿ
ಐವರು ಕಳ್ಳರು ಕನ್ನವ ಕೊರೆಯುತ್ತೈದಾರೆ—ಸುಯಿಧಾನವಾಗಿರಿ. ಸುಯಿಧಾನವಾಗಿರಿ.
ಜೀವಧನವ ಜತನವ ಮಾಡಿ, ಜತನವ ಮಾಡಿ
ಬಳಿಕಿಲ್ಲ, ಬಳಿಕಿಲ್ಲ, ಬಳಿಕಿಲ್ಲ
ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ

ಬಾಗಿಲ ತೆರೆದು ನಡೆವುದೇ ಸುಪಥ ಸ್ವಯಂಭುನಾಥನಲ್ಲಿಗೆ!
ಇದನರಿತು ಮಹಾಮಹಿಮ ಅಮರಗುಂಡದ ಮಲ್ಲಿಕಾರ್ಜುನ
ದೇವರಲ್ಲಿ ಎಚ್ಚರಿಕೆಗುಂದದಿರಿ, ಎಚ್ಚರಿಕೆಗುಂದದಿರಿ.[29]

ಮಹಾಕವಿ ಗುಬ್ಬಿಯ ಮಲ್ಲಣಾರ್ಯನು 'ವೀರಶೈವಾಮೃತಪುರಾಣ'ದಲ್ಲಿ ತನ್ನ ವಂಶದ ಪರಂಪರೆಯನ್ನು ಹೇಳಿಕೊಳ್ಳುವಾಗ ಅಮರಗುಂಡದ ಮಲ್ಲಿಕಾರ್ಜುನರಿಂದಲೇ ಪ್ರಾರಂಭ ಮಾಡಿದ್ದಾನೆ. 'ಮಲ್ಲಿಕಾರ್ಜುನರ ಶಿಷ್ಯ ಗುರುಭಕ್ತ, ಅವನ ಮಗ (ದೇಶಿಕ ಪಟ್ಟವರ್ಧನ ಸೌಂದರ್ಯ) ಮಲ್ಲಿಕಾರ್ಜುನಪಂಡಿತ....ಆ ವಂಶದಲ್ಲಿ ಗಣಭಾಷ್ಯ ರತ್ನಮಾಲೆಯಂ ವಿರಚಿಸಿದ ಗುಬ್ಬಿಯ ಮಲ್ಲಣ್ಣ, ಇವನ ಮಗ ಗುರುಭಕ್ತ, ಹೆಂಡತಿ ಸಪ್ಪೆಯಮ್ಮ—ಈ ಪುಣ್ಯ ದಂಪತಿಗಳ ಮಗ ಗುಬ್ಬಿಯ ಮಲ್ಲಣಾರ್ಯ—ಹೀಗೆ ವಿಶದೀಕರಿಸುತ್ತಾನೆ.[29ಅ]

ಈ ಅಮರಗುಂಡ ಕ್ಷೇತ್ರವೇ ಈಗಿನ 'ಗುಬ್ಬಿ' ಎಂದಾಗಿದೆ.

**೩೦. ಬಿಬ್ಬಿಬಾಚಯ್ಯ**

ಈತನದು ಗೊಬ್ಬೂರು ಎಂಬ ಗ್ರಾಮ. ಬ್ರಾಹ್ಮಣನಾದ ಆದಿತ್ಯದೇವನ ಮಗ. ಈತನು ಶಿವಾಗಮವನ್ನು ಅಭ್ಯಾಸಮಾಡಿ, ವೀರಶೈವದೀಕ್ಷೆ ಪಡೆಯುವನು. 'ಪ್ರಸಾದ' ಮಹಿಮೆಯನ್ನು ಮನಗಂಡು, ಪ್ರಸಾದ ವಿನಿಯೋಗ ಕಾಯಕನಿರತನಾದನು. ತನ್ನೀ ಕಾಯಕಕ್ಕೆ ಅಡ್ಡಬಂದ ಗೊಬ್ಬೂರು ಅಗ್ರಹಾರದ ಬ್ರಾಹ್ಮಣರನ್ನೆಲ್ಲ ಜಯಿಸಿ, ಅವರಿಗೆಲ್ಲ ಶಿವದೀಕ್ಷೆಯನ್ನನುಗ್ರಹಿಸಿದನು.[30] ಪಡಿಪದಾರ್ಥಗಳನ್ನು 'ಪ್ರಸಾದ'ವನ್ನಾಗಿ ಮಾಡಿ ಕೊಡುತ್ತಿದ್ದಂತೆ, ನುಡಿಪ್ರಸಾದವನ್ನೂ ಅನುಗ್ರಹಿಸುತ್ತಿದ್ದನು. ಆ ನುಡಿಪ್ರಸಾದವೇ ಅವರ ವಚನ:

ಹೊಲಬು ಹೊಲಬನೇ ಕಂಡು, ಶಿಲೆ ಕುಲವಳಿದು
ಉದಕಗುಣ ಮಜ್ಜನದಲ್ಲಿ ಇಂಗಿ
ಅನ್ನಗುಣ ಅರ್ಪಿತದಲ್ಲಿ ಹೋಯಿತ್ತಯ್ಯ
ನಿತ್ಯಪ್ರಸಾದವೆನಗಾಯಿತ್ತು
ಆ ಪ್ರಸಾದದಲ್ಲಿ ಎನಗೆ ಏಕವಾಯಿತ್ತಯ್ಯ, ಏಣಾಂಕಧರ ಸೋಮೇಶ್ವರಾ

ಅಷ್ಟಾವರಣಗಳಲ್ಲಿ ಒಂದಾದ, ಅತ್ಯಂತ ಮುಖ್ಯವಾದ 'ಪ್ರಸಾದ'ದ ಮಹತ್ವವನ್ನು ಸ್ವತಃ ಅನುಭವಿಸಿ, ಅದನ್ನೇ ಆಸಕ್ತರಾದ ಇತರ (ಭಕ್ತ)ರಿಗೆ ವಿನಿಯೋಗಿಸುತ್ತಿದ್ದ ಮಹಾನುಭಾವನಿವನು.

**೩೧. ಸಂಗಮೇಶ್ವರಪ್ಪಣ್ಣ**

ಬಸವೇಶ್ವರನ ಗುರುಗಳು ಇವರೆಂದು ನಂಬಲು ಅವಕಾಶವಿದೆಯೆಂದು ಚೆನ್ನಮಲ್ಲಿಕಾರ್ಜುನರು ಅಭಿಪ್ರಾಯ ಪಟ್ಟಿದ್ದಾರೆ.[31] ಇವರ ೨೦ ವಚನಗಳು ಪ್ರಕಟವಾಗಿರುತ್ತವೆ.

ಈ ಪರಮಗುರುವಿನ ವಚನ:

'ಭುವನಸ್ಯ ಪಿತರಂ ಗರ್ಭೇ ರಂಭೇ ರುದ್ರಂ ದಿವಾರ್ದಯಾ
ರುದ್ರಮವೃಕ ಬೃಹಂತ ಮೃಷ್ಟಮಜರಂ ಸುಷುಮ್ನದೃಗ್ಭವೇ
ಮಕ ಮಕ ವಿನೇಷಿವಾಸಃ' ಎಂಬ ಶ್ರುತಿಯ ವಿಚಾರಿಸಲರಿಯದೆ
ಒಲಿದಂತೆ ನುಡಿವುತಿಪ್ಪರು ನೋಡಯ್ಯ
'ಮಾತೃದೇವೋಭವ', ಪಿತೃದೇವೋಭವ ಎಂಬ ಶ್ರುತಿ
ದೇವಿದೇವರೇ ತಾಯಿ ತಂದೆ ಎಂದು ಹೇಳಿತ್ತು
'ಅತಿಥಿದೇವೋಭವ' ಎಂಬುದು ತನ್ನ ಮನೆಗೆ ಬಂದ
ಭಕ್ತನೇ ದೈವವೆಂದು ಹೇಳಿತ್ತು
ಇದಲ್ಲದೆ ಸಾವುತ್ತ ಹುಟ್ಟುತ್ತ ಇಪ್ಪ
ತಂದೆ ತಾಯೇ ದೈವವೆಂದು ಲಜ್ಜೆ ನಾಚಿಕೆ ಬೇಡ
ಚಂಡೇಶ್ವರಪಿಳ್ಳೆ ಶಿವನೇ ತಂದೆಯೆಂದರಿದು
ಹಾಮದ ತಂದೆಯ ಕೊಂದುದನರಿಯಾ!
ಎಂದಿಗೆ ಕೇಡಿಲ್ಲದ ತಾಯಿತಂದೆ "ಬಸವ ಪ್ರಿಯ ಕೂಡಲ
ಚೆನ್ನಸಂಗಮದೇವ" ಎಂದು ವೇದಂಗಳು ಸಾರುತ್ತಿವೆ.[31]

## ೩೨. ಸಿದ್ಧರಾಮ

೧೨ನೇ ಶತಮಾನದಲ್ಲಿ ಬಸವಕಲ್ಯಾಣ ಒಂದು ಮಹತ್ವದ ಕ್ಷೇತ್ರವಾಗಿದ್ದಿತು. ಅಲ್ಲಿನ ಅನುಭವ ಮಂಟಪದಲ್ಲಿ ಸಮಾವೇಶಗೊಂಡಿದ್ದ ಅಸಂಖ್ಯಾತ ಶಿವಶರಣ ಶರಣೆಯರಲ್ಲಿ ಐದು ಜನ ಅತ್ಯಂತ ಪ್ರಮುಖರೆನಿಸಿದ್ದರು. ಅಲ್ಲಮ ಪ್ರಭು, ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ ಮತ್ತು ಶಿವಯೋಗಿ ಸಿದ್ಧರಾಮ—ಇವರೇ ಆ ಪಂಚ ಮಹಾನುಭಾವರು. ಅವರಲ್ಲಿ ಈಗ ಸಿದ್ಧರಾಮನ ವಿಷಯವನ್ನು ಪ್ರಸ್ತಾಪಿಸುವ:

ಸಿದ್ಧರಾಮನು ಸೊನ್ನಲಿಗೆ ಅಂದರೆ ಈಗಿನ ಸೊಲ್ಲಾಪುರ ಕ್ಷೇತ್ರದವನು. ರೇವಣಸಿದ್ಧರ ಕೃಪೆಯಿಂದ ವೃದ್ಧ ದಂಪತಿಗಳಾದ ಸುಗ್ಗವ್ವೆ-ಮುದ್ದಗೌಡರಿಗೆ ಮಗನಾಗಿ ಜನಿಸಿದನು. ಧೂಳಿಮಾಕಾಳ ಎಂಬ ಹೆಸರಿನ ಈ ಹುಡುಗ ಬಾಲ್ಯದಲ್ಲಿ ತುಂಬ ಮುಗ್ಧನಾಗಿದ್ದು ಜೋಳದ ಹೊಲವನ್ನು ಕಾಯುತ್ತಿದ್ದನು. ಬಹುಜನ್ಮಗಳ ಪುಣ್ಯವಿಶೇಷದಿಂದ ಶ್ರೀಶೈಲ ಮಲ್ಲಿಕಾರ್ಜುನಶಿವನು ಜಂಗಮರೂಪಿನಿಂದ ಬಂದು ಈ ಬಾಲಕನನ್ನು ಪ್ರಸಾದ ಕೊಡು—ಎಂದು ಕೇಳಿದನು. ಅತ್ಯಂತ ಸಂತೋಷದಿಂದ ಆ ಬಾಲಕನು ಮನೆಗೆ ಓಡಿಹೋಗಿ ತಾಯಿಯನ್ನು ಕೇಳಿದನು. ಅಪರೂಪಕ್ಕೆ ಮಗನು ಇಷ್ಟರಮಟ್ಟಿಗೆ ಉತ್ಸಾಹಭರಿತನಾಗಿ ಮಾತನಾಡಿದನಲ್ಲ ಎಂದು ಸಂತೋಷಗೊಂಡ ಮಾತೆಯು ಮೊಸರು ಅನ್ನವನ್ನು ಬುತ್ತಿಕಟ್ಟಿಕೊಟ್ಟಳು. ಶಿವನಿಗೆ ಉಣಬಡಿಸುವ ಕಾತರತೆಯಿಂದ ಬಂದ ಹುಡುಗನಿಗೆ ಹೊಲದಲ್ಲಿ ಮಲ್ಲಿಕಾರ್ಜುನನು ಕಾಣಿಸಲಿಲ್ಲ. ಸರಿ, ಹುಡುಕುತ್ತ, ಹುಡುಕುತ್ತ, ಮಲ್ಲಯ್ಯ ಮಲ್ಲಯ್ಯ ಎಂದು ಕೂಗುತ್ತ ಶ್ರೀಶೈಲ ಪರ್ವತದ ದಾರಿ ಹಿಡಿದನು. ಶ್ರೀಶೈಲ ಜಾತ್ರೆಗೆ ಹೊರಟಿದ್ದ ಯಾತ್ರಿಕರು ಇವನನ್ನು ಕರೆದುಕೊಂಡು ಹೋಗಿ ಮಲ್ಲಿಕಾರ್ಜುನ ಲಿಂಗವನ್ನು ತೋರಿಸುವರು. ಆದರೆ, ಹುಡುಗ ಒಪ್ಪಬೇಕಲ್ಲ! ನಾನು ನೋಡಿದ ಶಿವನೇ ಪ್ರತ್ಯಕ್ಷವಾಗಬೇಕು ಎಂದು ಹಟ ಹಿಡಿದು ಪರ್ವತದಲ್ಲೆಲ್ಲಾ ಹುಡುಕಿ ಸಾಕಾಗಿ ಕೊನೆಗೆ ರುದ್ರಗಮ್ಮರಿಯೆಂಬ ದೊಡ್ಡ ಮಡುವಿನ ಬಳಿ ಬಂದು ಅದರಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳಲು ನಿಶ್ಚಯಿಸಿದನು. ಅಷ್ಟರಲ್ಲಿ ಮಲ್ಲಿಕಾರ್ಜುನ ಸ್ವಾಮಿಯು ಪ್ರತ್ಯಕ್ಷನಾಗಿ ಬಾಲಕನನ್ನು ಮುದಗೊಳಿಸಿದನು. ಅಂದಿನಿಂದ ಸಿದ್ಧರಾಮನಾದನು. ಸಿದ್ಧರಾಮನ ಇಚ್ಛೆಯಂತೆ ಸ್ವಾಮಿಯು ಸೊನ್ನಲಿಗೆಯಲ್ಲಿ ಬಂದು ನೆಲೆಸಿದನು. ಆಗಿನಿಂದ ಸಿದ್ಧರಾಮನಿಗೆ ಸದಾ ಕಪಿಲಸಿದ್ಧ ಮಲ್ಲಿಕಾರ್ಜುನನ ಧ್ಯಾನವೇ ಮೈಗೂಡಿತು. ಕೆರೆ ಕಟ್ಟಿಸುವುದು, ದೇವಾಲಯಗಳನ್ನು ನಿರ್ಮಿಸುವುದು, ದೀನದಲಿತರ ಸೇವೆ ಮಾಡುವುದು ಮುಂತಾದ ಲೋಕೋಪಕಾರಕ ಕಾರ್ಯಗಳಲ್ಲಿ ಪ್ರವೃತ್ತನಾಗಿ ಸಿದ್ಧರಾಮನು ಸಹಸ್ರಾರು ಜನ ಶಿಷ್ಯರನ್ನು ಪಡೆದಿದ್ದನು.

ಹೀಗಿರಲು; ಅಲ್ಲಮಪ್ರಭುದೇವರು ಎಲ್ಲ ಜೀವರನ್ನು ಉದ್ಧಾರಮಾಡುತ್ತ. ಸೊನ್ನಲಿಗೆಗೆ ಆಗಮಿಸಿದರು. ಕೆರೆ ಕಟ್ಟಿಸುತ್ತಿದ್ದ ಸಿದ್ಧರಾಮನಿಗೂ, ಪ್ರಭುವಿಗೂ ವಾಗ್ವಾದ ನಡೆದು ಕಡೆಗೆ ಸಿದ್ಧರಾಮನು ಪ್ರಭುದೇವರಿಗೆ ಶರಣು ಹೋದನು. ಅಲ್ಲಮಪ್ರಭುವಿನೊಂದಿಗೆ ಬಸವಕಲ್ಯಾಣಕ್ಕೆ ಆಗಮಿಸುವನು. ಅಲ್ಲಿ ಶಿವಾನುಭವಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದಂತೆ ಸಿದ್ಧರಾಮನಿಗೆ ಲಿಂಗದೀಕ್ಷೆಯಾಗಬೇಕು ಎನ್ನುವ ವಿಷಯದಲ್ಲಿ ವಾದವಿವಾದಗಳು ನಡೆದುವು; ಕೊನೆಗೆ ಚನ್ನಬಸವಣ್ಣನವರಿಂದ ಸಿದ್ಧರಾಮನಿಗೆ ದೀಕ್ಷಾನುಗ್ರಹವಾಗುತ್ತದೆ. ಈ ವಿಷಯದಲ್ಲಿ ಇಂದಿಗೂ ವಿದ್ವಾಂಸರಲ್ಲಿಯಾಗಲೀ ವೀರಶೈವ ಮುಖ್ಯಸ್ಥರಲ್ಲಿಯಾಗಲೀ ಒಮ್ಮತವಿಲ್ಲ ಎನ್ನುವುದು ಪ್ರಚಲಿತ ಸಮಸ್ಯೆಯಾಗಿದೆ. ಏನೇ ಆಗಲಿ, ಸಿದ್ಧರಾಮ ಕರ್ಮಯೋಗದಿಂದ ಶಿವಯೋಗಕ್ಕೆ ಧಾವಿಸಿ ತನ್ನ ಅತ್ಯದ್ಭುತ ಸಾಧನೆಯಿಂದ ಮಹಾಶಿವ ಯೋಗಿಯಾಗಿ ವಿರಾಜಿಸಿದನು—ಎಂಬುದು ಮಾತ್ರ ಸತ್ಯ.

ವಚನಕಾರನಾಗಿ, ತ್ರಿವಿಧಿಗಳ ರಚಕನಾಗಿ ಸಿದ್ಧರಾಮ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದಾನೆ. "ಅರುವತ್ತೆಂಟು ಸಾವಿರ ವಚನಗಳ ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ" ಎಂದು ಆತನೇ ಹೇಳಿದ್ದಾನೆ. ದೊರೆತಿರುವ ಆತನ ವಚನಗಳ ಸಂಖ್ಯೆ ೧೩೭೯.[32] ವಚನಗಳಲ್ಲಿ "ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬ ಅಂಕಿತವಿದ್ದರೆ, ತ್ರಿವಿಧಿಗಳಲ್ಲಿ "ಯೋಗಿನಾಥ" ಎಂಬ ಅಂಕಿತವಿದೆ. ಸಂಕೀರ್ಣ ತ್ರಿವಿಧಿ, ಬಸವಸ್ತೋತ್ರದ ತ್ರಿವಿಧಿ. ಮಿಶ್ರಸ್ತೋತ್ರದ ತ್ರಿವಿಧಿ, ಅಷ್ಟಾವರಣ ಸ್ತೋತ್ರದ ತ್ರಿವಿಧಿ–ಹೀಗೆ ನಾಲ್ಕು ತ್ರಿವಿಧಿಗಳು ಸಿದ್ಧರಾಮನಿಂದ ರಚಿತವಾಗಿವೆ. ಈತನ ಮೂರು ಪದಗಳಲ್ಲಿ "ಕಪಿಲಸಿದ್ಧಮಲ್ಲೇಶ" ಎಂಬ ಅಂಕಿತವಿದೆ.

ಅಲ್ಲಮಪ್ರಭು, ಚನ್ನಬಸವಣ್ಣ—ಇವರಿಬ್ಬರಾದ ಮೇಲೆ ಸಿದ್ಧರಾಮನು ಶೂನ್ಯಸಿಂಹಾಸನದ ಮೂರನೆಯ ಅಧ್ಯಕ್ಷನಾಗಿದ್ದನೆಂಬುದು ಪರಂಪರೆಯಿಂದ ಬಂದ ವಿಚಾರವಾಗಿದೆ. ಕಲ್ಯಾಣಕ್ರಾಂತಿಯಾದಮೇಲೆ ಈ ಮಹಾನು

ಭಾವನು ತಾನು ಕಟ್ಟಿಸಿದ ಸೊನ್ನಲಾಪುರದ ಕೆರೆಯ ಮಧ್ಯದಲ್ಲಿ ಸಜೀವವಾಗಿ ಸಮಾಧಿಸ್ಥನಾದನೆಂದು ತಿಳಿದು ಬರುತ್ತದೆ. ಇಂದಿಗೂ ಆ ಗದ್ದುಗೆಯ ಪೂಜಾವೈಭವವನ್ನು ನಾವು ಕಾಣಬಹುದಾಗಿದೆ.

ಸಿದ್ಧರಾಮ ವಿರಚಿತ ಕೆಲವು ವಚನಗಳು :

ಕೈಗಳ ಸಂದ ಬಿಡಿಸಿದಡೆ ಬಿಡೆನು
ಮೈಗಳ ಕಡಿದು ಹರಹಿದಡೆ ಬಿಡೆನು
ಬಿಡೆ ನಿಮ್ಮ ಚರಣವ
ತನುವಳಿದಡೆ ಜ್ಞಾನತನುವಿನಿಂದ ಕೂಡುವೆ.

ಎನ್ನ ತನುವೆ ಅಗ್ಗವಣಿಯ ಬಿಂದಿಗೆ, ಮನವೆ ಸಿಂಹಾಸನ
ಉಸುರ ಹಿಡಿದು ಮಜ್ಜನಕ್ಕೆರೆವೆನಯ್ಯಾ ನಿಮಗೆ
ವಿಷಯಮಾದು ಗಂಧವನೀವೆನಯ್ಯಾ ನಿಮಗೆ
ನೆನಹ ನೆಲೆಗೊಳಿಸಿ ಕೊಡುವೆನು ಕುಸುಮವನು
ತನುಗುಣಾದಿಗಳನುರುಹಿ ದಶಾಂಗ ಧೂಪವನಿಕ್ಕುವೆನು
ಎನ್ನನೆ ನಿಮಗೆ ಬೋನಕ್ಕೆ ಸವೆವೆನಯ್ಯಾ

ಶಿವ ಶಿವಾ, ಶಿವ ಶಿವಾ, ಶಿವ ಶಿವಾ ಎಂದೊಮ್ಮೆ ಶಿವನಾಗಿ ಶಿವನ ಪೂಜಿಸು ಮನವೇ
ಹರ ಹರಾ ಹರ ಹರಾ ಹರ ಹರಾ ಎಂದೊಮ್ಮೆ ಹರನಾಗಿ ಪುರಹರನ ಪೂಜಿಸು ಮನವೇ
ಲಿಂಗವೇ ಲಿಂಗವೇ ಲಿಂಗವೇ ಎಂದೊಮ್ಮೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸಿ ಲಿಂಗವಾಗು ಮನವೇ.

ಇಂತಹ ಅನೇಕಾನೇಕ ವಚನಗಳಲ್ಲಿ ಸಿದ್ಧರಾಮನು ಹೇಗೆ ಭಾವವನ್ನು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಗೊಳಿಸಿದ್ದಾನೆ ಎಂಬುದನ್ನು ನಾವು ಮನಗಾಣಬಹುದಾಗಿದೆ. ಅವನ ವಚನಗಳಲ್ಲಿ ವೈರಾಗ್ಯ, ಭಕ್ತಿ, ಅನುಭಾವ, ವೀರಶೈವ ತತ್ತ್ವ, ಆಚಾರ, ಧರ್ಮ, ಡಾಂಭಿಕ ಸಮಾಜದ ಟೀಕೆ, ಶರಣ ಸ್ತುತಿ—ಈ ವಿಷಯಗಳು ಅತ್ಯಂತ ಮನೋಜ್ಞವಾಗಿ ಚಿತ್ರಿತವಾಗಿವೆ.

**೩೩. ನಾಗಲಾಂಬಿಕೆ**

ಈ ತಾಯಿ ಬಸವಣ್ಣನವರ ಅಕ್ಕ. ಅದರಿಂದಲೇ ಅಕ್ಕನಾಗಮ್ಮ ಎಂಬ ಹೆಸರು ರೂಢಿಯಲ್ಲಿ ಬಂದಿದೆ. ಇಂಗಳೇಶ್ವರ ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಹಿರಿಯ ಮಗಳು. ಬಸವಣ್ಣನವರ ಜನನವಾದಾಗ ಈಕೆಗೆ ಹನ್ನೆರಡು ವರ್ಷ ವಯಸ್ಸು. ತಮ್ಮನನ್ನು ಅಕ್ಕರೆಯಿಂದ ಲಾಲನೆ ಪಾಲನೆ ಮಾಡಿದ್ದಲ್ಲದೆ ಆತ ಊರು ಬಿಟ್ಟು ಕೂಡಲಸಂಗಮಕ್ಷೇತ್ರಕ್ಕೆ ಹೊರಟಾಗ ಆತನನ್ನು ಹಿಂಬಾಲಿಸಿದಳು. ಸಂಗಮಕ್ಷೇತ್ರ ಆಕೆಯ ಪತಿ ಶಿವಸ್ವಾಮಿಯ ಊರು. ಹೀಗಾಗಿ ಅಕ್ಕಭಾವಂದಿರು ಬಸವಣ್ಣನವರ ಸರ್ವತೋಮುಖ ಪ್ರಗತಿಗೆ ಬಹುಮಟ್ಟಿಗೆ ಕಾರಣರಾದರು. ಚನ್ನಬಸವಣ್ಣನಂಥ ಮಹಾಜ್ಞಾನಿಗೆ ಜನ್ಮವಿತ್ತು ನಾಗಲಾಂಬಿಕೆಯ ಮಹಾ ಶಿವಯೋಗಿಣಿ ಎನಿಸಿಕೊಂಡಿದ್ದಾಳೆ. ಸ್ತ್ರೀ-ಪುರುಷ ಸಮಾನತೆ ಮುಂತಾದ ಸದ್ಗುಣಗಳು ಅಣ್ಣನವರಲ್ಲಿ ಮೈಗೂಡಲು ನಾಗಮ್ಮನು ಬಹುಮಟ್ಟಿಗೆ ಕಾರಣಳು ಎಂದರೆ ಅತಿಶಯೋಕ್ತಿಯೇನಲ್ಲ. ಹೆಣ್ಣುಮಕ್ಕಳಿಲ್ಲದ ನಾಗಲಾಂಬಿಕೆಗೆ ಬಸವಣ್ಣನವರ ಪತ್ನಿಯರಾದ ಗಂಗಾಂಬಿಕೆ, ನೀಲಾಂಬಿಕೆಯರು ಸ್ವಂತ ಮಕ್ಕಳಂತಿದ್ದರು. ಬಸವಣ್ಣನವರ ಮಹಾಮನೆಯಲ್ಲಿ ಅತಿಥಿಗಳ ಸಂಖ್ಯೆ ಮಿತಿಮೀರಿದಮೇಲೆ ಅಕ್ಕನಾಗಮ್ಮನು ತನ್ನ ಶಿವಯೋಗ ಸಾಧನೆಗಾಗಿ ಪ್ರತ್ಯೇಕ ಗವಿಯನ್ನು ಕಟ್ಟಿಸಿಕೊಂಡಳು. ಇಂದಿಗೂ ಬಸವಕಲ್ಯಾಣದಲ್ಲಿ ಅಣ್ಣನವರ ಅರಿವಿನ ಮನೆಯೆಂದು ಕರೆಯಲಾದ ಸ್ಥಳಕ್ಕೆ ಅನತಿದೂರದಲ್ಲಿ ನಾಗಮ್ಮನವರ ಗವಿಯನ್ನು ಕಾಣಬಹುದಾಗಿದೆ.

ಕಲ್ಯಾಣ ಕ್ರಾಂತಿಯು ನಡೆದಾಗ ಬಸವಣ್ಣನವರು ಕೂಡಲಸಂಗಮಕ್ಷೇತ್ರದಲ್ಲಿ ಇದ್ದರು. ಶರಣಧರ್ಮ ರಕ್ಷಣೆಯ ಜವಾಬ್ದಾರಿಯನ್ನು ನಾಗಲಾಂಬಿಕೆ ಹಾಗೂ ಚನ್ನಬಸವಣ್ಣನವರು ನೋಡಿಕೊಳ್ಳಬೇಕಾಯಿತು. ಅಂತಹ ಗೊಂದಲದ ಸಮಯದಲ್ಲಿಯೂ ಅಕ್ಕನಾಗಮ್ಮನವರು ಶರಣರ ವಚನಗಳ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ಇತರ ವೀರಶರಣರೊಂದಿಗೆ ಕಲ್ಯಾಣದಿಂದ ಹೊರಬಂದು ಆ ಮಹಾ ಸಾಹಿತ್ಯವನ್ನು ಸಾಧ್ಯವಾದ ಮಟ್ಟಿಗೂ ರಕ್ಷಿಸಿದರೆಂದು ತಿಳಿದುಬರುತ್ತದೆ. ಅಳಿಯ ಬಿಜ್ಜಳನ ಸೈನ್ಯ ಬೆನ್ನಟ್ಟಿಬಂದಾಗ ಈ ತಾಯಿ ವೀರಯೋಧಳಂತೆ ಹೋರಾಡಿದ್ದಾಳೆ

ಎಂದು ಹಳಕಟ್ಟಿಯವರು "ಶಿವಶರಣೆಯರ ಚರಿತ್ರೆಗಳು" ಎಂಬ ಗ್ರಂಥದಲ್ಲಿ ಬರೆದಿದ್ದಾರೆ.[33] ಉಳವಿ ಮಹಾಮನೆಯಲ್ಲಿ ಚನ್ನಬಸವಣ್ಣ ಮತ್ತಿತರ ಶರಣರು ಐಕ್ಯರಾಗುವವರೆಗೆ ಅವರೊಂದಿಗೆ ಅನುಭಾವಗೋಷ್ಠಿಯಲ್ಲಿದ್ದು, ಅನಂತರ ತರೀಕೆರೆಯ ಪ್ರಾಂತಕ್ಕೆ ನಡೆದು ಅಲ್ಲಿನ ಎಣ್ಣೆಹೊಳೆ ಎಂಬಲ್ಲಿ ಸಮಾಧಿಸ್ಥರಾದರೆಂದು ಗೊತ್ತಾಗುತ್ತದೆ.

ಆ ತಾಯಿಯ ಕೆಲವು ವಚನಗಳು :

ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ
ಎನ್ನ ಛಲ ಸೂತಕವ ಕಳೆದಾತ ಬಸವಣ್ಣ
ಎನ್ನ ತನು ಸೂತಕವ ಕಳೆದಾತ ಬಸವಣ್ಣ
ಎನ್ನ ಮನಸೂತಕವ ಕಳೆದಾತ ಬಸವಣ್ಣ
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ
ಎನ್ನ ಭಾವ ಸೂತಕವ ಕಳೆದಾತ ಬಸವಣ್ಣ
ಎನ್ನ ಅಱುಹು ಮಱುಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ನಿಜದ ನಿರ್ವಯಲ ಬಾಗಿಲ ನಿಜವ ತೋಱಿದಾತ ಬಸವಣ್ಣ
ಬಸವಣ್ಣ ಪ್ರಿಯ ಚನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು (ಶಿ.ಶ.ವ. ೩, ವ. ೧೬೮, ಪು. ೩೦).

ಭಕ್ತಿಯ ತವನಿಧಿಯೆ ಬಸವಾ
ಮುಕ್ತಿಯ ಮೂರುತಿಯೆ ಬಸವಾ
ಲಿಂಗಜಂಗಮದ ಚೈತನ್ಯವೇ ಬಸವಾ
ನಿಮ್ಮನಗಲಿಯಾನೆಂತು ಸೈರಿಸುವನು, ಎಲೆ ಅಯ್ಯಾ ಬಸವಾ ?
ಎಲೆ ಪರಮಗುರುವೆ ಬಸವಾ
ಆಹಾ, ಎನ್ನಂತರಂಗದ ಜ್ಯೋತಿಯೆ ಬಸವಾ (ಶಿ.ಶ.ವ. ೩, ವ. ೧೭೦, ಪು. ೮೧)

ನಾಗಲಾಂಬಿಕೆಯ ವಚನಗಳು ಸರಳಸುಂದರವಾಗಿವೆ—ಎನ್ನುತ್ತಾರೆ ವಿಮರ್ಶಕರು.

೩೪. ನೀಲಾಂಬಿಕೆ

ಈ ತಾಯಿ ಬಸವಣ್ಣನವರ ಪತ್ನಿ. ಸಿದ್ಧರಸ ಮಂತ್ರಿಗಳ ಪುತ್ರಿ, ಸಿದ್ಧರಸರು ಬಸವಣ್ಣನವರ ಇನ್ನೊಬ್ಬ ಪತ್ನಿ ಗಂಗಾಂಬಿಕೆಯ ತಂದೆಯಾದ ಬಲದೇವ ಮಂತ್ರಿಗಳ ಸೋದರಸಂಬಂಧಿಯೇ. ಸಿದ್ಧರಸರು ಬಿಜ್ಜಳರಾಯನ ತಂದೆ ಪೆರ್ಮಾಡಿಯ ಆಪ್ತ ಸ್ನೇಹಿತರಾಗಿದ್ದರು. ಅಲ್ಲದೆ, ಬಿಜ್ಜಳನ ತಮ್ಮ ಕರ್ನದೇವ ಹಸುಳೆಯಾಗಿದ್ದಾಗ ತಾಯಿ ತೀರಿ ಹೋದ್ದರಿಂದ ಸಿದ್ಧರಸರ ಪತ್ನಿಯೇ ಆ ಮಗುವಿಗೆ ಸ್ತನ್ಯಪಾನಮಾಡಿಸಿ ಬೆಳೆಸಿದ್ದರು. ಈ ಕಾರಣಗಳಿಂದ ನೀಲಾಂಬಿಕೆಯೂ ಅರಮನೆಯಲ್ಲಿಯೇ ಬೆಳೆದು ಬಿಜ್ಜಳರಾಯನ ತಂಗಿಯೋಪಾದಿಯಲ್ಲಿದ್ದಳು. ನೀಲಾಂಬಿಕೆಯೂ ಕನ್ನಡ ಸಂಸ್ಕೃತ ಉಭಯಭಾಷಾಪಂಡಿತೆಯಾಗಿದ್ದಳು, ಸಂಗೀತಕೋವಿದೆಯಾಗಿದ್ದಳು. ಹೀಗೆ ವಿದ್ಯಾವಿನಯಸಂಪನ್ನಳಾಗಿದ್ದ ತನ್ನ ಸಾಕುತಂಗಿಯನ್ನು ದೊರೆ ಬಿಜ್ಜಳನು ಪಂಡಿತರೂ, ಸುಸಂಸ್ಕಾರಿಯೂ, ದಯಾ-ಸಂಪನ್ನರೂ, ದಕ್ಷ ಆಡಳಿತಗಾರರೂ, ಸತ್ಯನ್ಯಾಯಪಕ್ಷಪಾತಿಗಳೂ ಆಗಿದ್ದ ಬಸವಣ್ಣನವರಿಗೆ ಅಗ್ರಹಪೂರ್ವಕವಾಗಿ ಧಾರೆಯೆರೆದು ಕೊಟ್ಟನು. ಬಹುಶಃ ಬಿಜ್ಜಳ-ಬಸವೇಶ್ವರರ ಮೈತ್ರಿಯು ಅಂತಹ ಉಗ್ರ ಚಾಡಿಕೋರರ ಮಧ್ಯದಲ್ಲಿಯೂ ಬಹಳ ಕಾಲ ಬೆಳೆದುಬಂದದ್ದು ಈ ಸಂಬಂಧದಿಂದಲೇ ಇರಬಹುದು—ಎಂದು ನಾವಾದರೂ ಊಹಿಸುತ್ತೇವೆ.

ನೀಲಾಂಬಿಕೆ ಅಣ್ಣನವರ ಪತ್ನಿಯಾಗಿ ಅವರ ಮೆಚ್ಚುಗೆಯನ್ನು ಗಳಿಸಿದ್ದು ಮಾತ್ರವಲ್ಲ, ಅವರ ಮೊದಲ ಪತ್ನಿ ಗಂಗಾಂಬಿಕೆಗೆ ಅತ್ಯಂತ ಆತ್ಮೀಯಳಾಗಿ ತಂಗಿಯೇ ಆದಳು. ಬಸವಣ್ಣನವರ ಮಹಾಮನೆಯ ಅನ್ನಪೂರ್ಣೆಯೇ ನೀಲಾಂಬಿಕೆಯಾಗಿದ್ದಳು—ಎನ್ನುವುದನ್ನು ನಾವು ಅನೇಕ ಕವಿಗಳ ಬಾಯಲ್ಲಿ ಕೇಳುತ್ತಿದ್ದೇವೆ. ಕಲ್ಯಾಣದಲ್ಲಿ ಬಸವಣ್ಣನವರ ಮಹಾಮನೆಯಿದ್ದ ಸ್ಥಳದಲ್ಲಿ ನೀಲಮ್ಮನವರ ಶಿವಪೂಜೆಯ ನೆಲಮಾಳಿಗೆ ಇದ್ದುದನ್ನು ಇಂದಿಗೂ ಕಾಣಬಹುದಾಗಿದೆ. "ನೀಲಲೋಚನೆಯಮ್ಮನವರ ಶಿವಪೂಜೆಯ ಮಹಾಣಿಕದ ನೆಲಮಾಳಿಗೆ" ಎಂಬ ಉಲ್ಲೇಖ

ಕಾಲಜ್ಞಾನದ ವಚನಗಳಲ್ಲಿ ದೊರೆಯುತ್ತದೆ.[34] ನೀಲಮ್ಮ ಆದರ್ಶ ಗೃಹಿಣಿಯಾಗಿ, ಶಿವಯೋಗಿಣಿಯಾಗಿ ಇದ್ದುದಲ್ಲದೆ ವಚನಕಾರ್ತಿಯೂ ಆಗಿದ್ದಾಳೆ. ಈಕೆ ರಚಿಸಿದ ಸುಮಾರು ೧೨೫ ವಚನಗಳು ಸಿಕ್ಕಿವೆ.

ಬಸವಣ್ಣನವರು ಸಂಗಮದಲ್ಲಿ ಲಿಂಗೈಕ್ಯರಾಗುವ ಮುನ್ನ ತಮ್ಮ ಆಪ್ತಕಾರ್ಯದರ್ಶಿಗಳಾಗಿದ್ದ ಅಪ್ಪಣ್ಣನವರ ಮೂಲಕ ನೀಲಾಂಬಿಕೆಯನ್ನು ಕರೆದುಕೊಂಡು ಬರಬೇಕೆಂದು ಹೇಳಿಕಳುಹಿಸಿದ್ದ ಸಂದರ್ಭದಲ್ಲಿ ನೀಲಮ್ಮತಾಯಿಯು ಹೇಳಿದರೆಂದು ಹೇಳಲಾದ ಒಂದು ಹಾಡು ಹೃದಯಂಗಮವಾಗಿದೆ :

ನೋಡು ನೋಡು ನೋಡು ನೋಡು ನೋಡು ಲಿಂಗವೇ
ನೋಡು ಬಸವಯ್ಯನವರು ಹೂಡಿದಾಟವಾ।
ಅಲ್ಲಿಗೆ ಎನ್ನನ್ನು ಬರಹೇಳಿದರಂತೆ—ಅಲ್ಲಿರ್ಪ ಸಂಗಯ್ಯ ಇಲ್ಲಿಲ್ಲವೇ ?

ಮುಂತಾಗಿ ಈ ಹಾಡು ಅವರು ಹೇಳಿರಲಿ, ಬೇರೆಯವರು ಅವರ ಹೆಸರಿನಲ್ಲಿ ಬರೆದಿರಲಿ, ನೀಲಮ್ಮನವರು ಆತ್ಮಜ್ಞಾನವನ್ನು ಪ್ರತಿಬಿಂಬಿಸುವುದಂತೂ ಖಂಡಿತ. ಈಗ ಕೂಡಲಸಂಗಮಕ್ಷೇತ್ರಕ್ಕೆ ಸ್ವಲ್ಪ ದೂರದಲ್ಲಿ ತಂಗಡಗಿ ಕ್ಷೇತ್ರದಲ್ಲಿ ನೀಲಮ್ಮ-ತಾಯಿಯವರ ದೇವಾಲಯವನ್ನು ಕಾಣುತ್ತೇವೆ. ಅಲ್ಲಿಯೇ ಹಡಪದ ಅಪ್ಪಣ್ಣನವರ ಸಮಾಧಿಯೂ ಇರುವುದು ಮೇಲಿನ ಐತಿಹ್ಯಕ್ಕೆ ಬೆಂಬಲವೀಯುತ್ತದೆ. ನೀಲಾಂಬಿಕೆಯವರ ಕೆಲವು ವಚನಗಳು :

ಕಲ್ಯಾಣವಿಲ್ಲ ಕೈಲಾಸವಿಲ್ಲ. ಬಸವಾ
ಕಲ್ಯಾಣವಿಲ್ಲದ ಕಾರಣ ಕೈಲಾಸವಿಲ್ಲವೆನಗೆ ಬಸವಾ
ಆ ಕಲ್ಯಾಣ ಕೈಲಾಸವಾಯಿತ್ತು, ಬಸವಾ
ಆ ಕಲ್ಯಾಣವಳಿದು ಕೈಲಾಸವಾದ ಬಳಿಕ, ಬಸವನ ಮೂರ್ತಿಯಿಲ್ಲ
ಬಸವನ ಮೂರ್ತಿಯನಱಿಯದ ಕಾರಣ
ಕೈಲಾಸವಿಲ್ಲ, ಕಲ್ಯಾಣವಿಲ್ಲವಯ್ಯಾ ಸಂಗಯ್ಯಾ (ಶಿ.ಶ.ವ. ೩, ಪು. ೫೧)

ಹೃದಯದ ಮಧ್ಯದಲ್ಲೊಂದು ಜ್ಯೋತಿಯ ಮನೆ ಹುಟ್ಟಿತ್ತು
ಆ ಜ್ಯೋತಿಯ ಮಧ್ಯದಲ್ಲಿ ಸ್ಫಟಿಕದ ತನು ಬೆಳಗಿತ್ತು
ಆ ಬೆಳಗಿದ ತನುಮಧ್ಯದಲ್ಲಿ ಮಱುಜೀವಣಿಯ ಕುಡಿ
ಹೆಸರಿಲ್ಲದ ರೂಪಾಯಿತ್ತು ಬಸವಂಗೆ ಸಂಗಯ್ಯಾ (ಶಿ.ಶ.ವ. ೩, ಪು. ೧೧೮)

ನೀಲಾಂಬಿಕೆಯ ವಚನಗಳು ಆಕೆಯ ಅನುಭಾವದ ನಿಲುವನ್ನು ಬಹಳ ಚೆನ್ನಾಗಿ ಅಭಿವ್ಯಕ್ತಗೊಳಿಸುತ್ತವೆ.

**೩೫. ಗಂಗಾಂಬಿಕೆ**

ಈ ಮಾತೆ ಬಸವಣ್ಣನವರ ಪತ್ನಿ ; ಕಲ್ಯಾಣದ ಮಹಾಮಂತ್ರಿಯಾಗಿದ್ದ ಬಲದೇವನ ಪುತ್ರಿ. ಸಕಲವಿದ್ಯಾಪಾರಂಗತೆಯೂ, ರೂಪಗುಣಸಂಪನ್ನಳೂ ಆಗಿದ್ದ ಗಂಗಾಂಬಿಕೆಯು ಬಸವಣ್ಣನವರ ಕೈಹಿಡಿದುದು ಭುವನದ ಭಾಗ್ಯ ತೀವಿ ಬಂದದ್ದರಿಂದಲೇ,[34ಅ] ಇದನ್ನೇ ಲಕ್ಕಣ್ಣದಂಡೇಶ ತನ್ನ 'ಶಿವತತ್ತ್ವಚಿಂತಾಮಣಿ'ಯಲ್ಲಿ ಅವರ ವಿವಾಹಾವಸರದಲ್ಲಿ ಬರೆದಿದ್ದಾನೆ :

ಗಂಗಾಂಬೆ ಮುನಿಕಶ್ಯಪಂಗದಿತಿ ಸಾವಿತ್ರಿ ಸತ್ಯಪಂ
ಗನಸೂಯೆ ಅತ್ರಿಗೆ ವಶಿಷ್ಠಂಗರುಂಧತಿಯು
ಜನಕ ವಂಶದಲಿ ಲೋಪಾಮುದ್ರೆ ಕುಂಭಜಗೆ ಸೇರಿ ಪತಿಗಳ ಸೇವೆಯ
ವಿನಯದಿಂ ಮಾಳ್ಪಂತೆ ಗಂಗಾಂಬಿಕೆಯು ತನು
ಮನವನೊಚ್ಚತಗೊಟ್ಟು ಬಸವರಾಜನ ಚಿತ್ತ
ದನುಗುಣದ ಸತಿಯಾದಳೆಂದು ಕೊಂಡಾಡುವರ ಚರಣಾಂಬುಜಕ್ಕೆ ಶರಣು

'ಕಾಯಕವೇ ಕೈಲಾಸ'ವೆಂದು ಸಾರಹೊರಟ, ಮಾತ್ರವಲ್ಲ ತನ್ನ ಜೀವನದಿಂದ ತೋರಹೊರಟ ಅಣ್ಣನವರು ಮಾವನ ಮನೆಯ ಸುಖಲೋಲುಪತೆಯಲ್ಲಿ ಮಗ್ನರಾದಾರೆ ? ಸಾಧ್ಯವಿಲ್ಲ, ಕರಣಿಕವೃತ್ತಿಯನ್ನು ಕೈಕೊಂಡು ಪೃಥಕ್ಕಾಗಿ ಕೌಟುಂಬಿಕ ಜೀವನ ಸಾಗಿಸಲುಜ್ಜುಗಿಸಿದರು.

ಮಹಾಮನೆಯ (ಅನ್ನ) ದಾಸೋಹ, ಅನುಭವಮಂಟಪದ (ಜ್ಞಾನ) ದಾಸೋಹ ಕಾರ್ಯಗಳಲ್ಲಿ ತ್ರಿಕರಣ ಪೂರ್ವಕ ಸೇವೆ ಸಲ್ಲಿಸಿ ಯಶಸ್ವಿಯಾದಳು. ಈ ಕಾರ್ಯದಲ್ಲಿ ತಂಗಿ ನೀಲಮ್ಮನೂ, ಮಾತೃಸದೃಶಳಾಗಿದ್ದ ಅಕ್ಕ ನಾಗಮ್ಮನೂ ಸಹಕರಿಸಿದರೆನ್ನುವ ಅಂಶವನ್ನು ನಾವು ಮರೆಯುವಂತಿಲ್ಲ. 'ಇಬ್ಬರು ಹೆಂಡಿರ ಕಾಟ'ದಿಂದ ಮುಕ್ತರಾಗಿದ್ದುದರಿಂದಲೇ ಅಣ್ಣನವರ ಸಾಧನೆ ಆಕಾಶದಿಂದತ್ತತ್ತ ಸಾರಿದ್ದು!

ವಚನಕಾರ್ತಿಯೂ ಆದ ಗಂಗಾಂಬಿಕೆಯ ವಚನ :

ಇದೇನೋ ಮೀಜಿ ತೋಜುವ ಮೂರುತಿ ಪುಷ್ಪಗುಂಪಿನಲ್ಲಿ ಕಾಣದೆ ಹೋಗಿದೆ
ಇದೇನೋ ಮೀಜಿ ತೋಜುವ ಮೂರುತಿ ಕರದಲ್ಲಿಯ ಲಿಂಗದಂತೆ
ಉಲಹದ ಸ್ಥಿತಿ ತೋರುತ್ತಿದೆ
ಇಂತಪ್ಪ ಮೂರ್ತಿಯ ಕಂಡು ಗಂಗಾಪ್ರಿಯೆ ಕೂಡಲಸಂಗನ
ಶರಣನ ಸತಿಯಳು ಧನ್ಯಳಾದಳು ಚೆನ್ನಬಸವಣ್ಣ.

ಕಾಯಕನಿರತಳಾದ, ಭಕ್ತಿಜ್ಞಾನಸಂಪನ್ನಳಾದ ಗಂಗಮ್ಮತಾಯಿಯು ಕರದ ಇಷ್ಟಲಿಂಗದಲ್ಲಿಯೇ ಶಿವನು ಸಾಕ್ಷಾತ್ಕಾರವಾದನೆಂಬುದನ್ನು ಆಕೆಯ ಈ ಮೇಲಿನ ವಚನದಿಂದ ತಿಳಿದುಕೊಳ್ಳಬಹುದಾಗಿದೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಪತಿಸಾನ್ನಿಧ್ಯದಲ್ಲಿ ಇರುವುದು ಅದೆಷ್ಟು ಮುಖ್ಯವೋ ಅದಕ್ಕಿಂತ ಶರಣರ ಹಾಗೂ ವಚನಕಟ್ಟುಗಳ ಸಂರಕ್ಷಣೆ ಹೆಚ್ಚು ಮುಖ್ಯವೆಂದು ಅಪ್ಪಣೆ ಮಾಡಿದ ರುದ್ರಮುನಿಗುರುಗಳ ಮಾತನ್ನು ಅನುಸರಿಸಿ ಉಳಿವೆಯತ್ತ ಹೊರಟುದು ಗಂಗಾಂಬಿಕೆಯ ಧೀರೋದಾತ್ತಗುಣವೇ ಸೈ.[35]

**೩೬. ಅಂಬಿಗರ ಚೌಡಯ್ಯ (ಸು. ೧೧೬೦)**

ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪದ ಪ್ರಮುಖರಲ್ಲಿ ಈತ ಮುಖ್ಯನಾದವನು. ಆದರೆ, ಈತನ ಹೆಸರನ್ನು ಬಹಳ ಜನ ಕವಿಗಳು ಹೇಳಿಲ್ಲ. ಗುರುರಾಜಚಾರಿತ್ರ್ಯದ ಬಸವಾದಿ ಪುರಾತನರ ಪಟ್ಟಿಯಲ್ಲಿ ಈತನ ಹೆಸರು ಸೇರಿದೆ. ಈತನು ೧೩೦ ವಚನಗಳನ್ನು ರಚಿಸಿದ್ದಾನೆಂದು ತಿಳಿದಿದೆ. ಸಾಮಾನ್ಯವಾಗಿ ವಚನಕಾರರು ತಮ್ಮ ವಚನಗಳಲ್ಲಿ ತಂತಮ್ಮ ಇಷ್ಟದೈವವನ್ನಾಗಲೀ ಗುರುವಿನ ಹೆಸರನ್ನಾಗಲೀ ಅಂಕಿತವಾಗಿಟ್ಟುಕೊಂಡು ವಚನ ರಚಿಸುವುದು ರೂಢಿ. ಆದರೆ, ಅಂಬಿಗರ ಚೌಡಯ್ಯ ತನ್ನ ಹೆಸರನ್ನೇ ವಚನಾಂಕಿತವಾಗಿ ಬಳಸಿಕೊಂಡು ವೈಶಿಷ್ಟ್ಯವನ್ನು ಮೆರೆದಿದ್ದಾನೆ. ಅಂಬಿಗರ ಚೌಡಯ್ಯ ಸಾಮಾನ್ಯ ಅಂಬಿಗನಲ್ಲ. ಭವಸಾಗರವನ್ನೇ ದಾಟಿಸಿ ಶಿವನೊಂದಿಗೆ ಸೇರಿಸಬಲ್ಲ ಅಸಾಮಾನ್ಯ ಅಂಬಿಗನಿವ.

ಕಂಡದ್ದನ್ನು ಕಂಡಹಾಗೆ ಹೇಳುವ ಸ್ವಭಾವದ ಅಂಬಿಗರ ಚೌಡಯ್ಯನ ವಚನಗಳಲ್ಲಿ ಆಳವಾದ ಅನುಭವ ಹಾಗೂ ಸಾಮಾಜಿಕ ಪ್ರಜ್ಞೆ ಎದ್ದುಕಾಣುತ್ತವೆ :

ಬಡತನಕೆ ಉಂಬುವ ಚಿಂತೆ ; ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ ; ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ ; ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ ; ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇಪ್ಪವರನ್ನು ಕಂಡೆನು
ಶಿವ ಚಿಂತೆಯಲ್ಲಿ ಇಪ್ಪವರೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಈ ಭವದ ಬಂಧನಕ್ಕಾಗಲೀ ಬಿಡುಗಡೆಗಾಗಲೀ ಮನಸ್ಸೇ ಕಾರಣ ಎನ್ನುವುದನ್ನು ಈ ಕೆಳಗಿನ ವಚನದಲ್ಲಿ ಕಂಡುಕೊಳ್ಳಬಹುದು :

ತಡೆನೆಲೆಯಿಲ್ಲದ ಮಹಾನದಿಯಲ್ಲಿ
ಒಡಲಿಲ್ಲದಂಬಿಗ ಬಂದಿದ್ದೇನೆ
ಹಿಡಿವ ಬಿಡುವ ಮನವ ಬೆಳೆಗೊಟ್ಟೊಡೆ
ಕಡೆಗಣಿಸಿ ಹಾಯಿಸುವೆ ಮಹಾ ಹೊಳೆಯ
ನುಡಿ ಇಲ್ಲದ ನಿಸ್ಸೀಮ ಗ್ರಾಮದಲ್ಲಿರುಸುವೆನೆಂದಾತನಂಬಿಗಚೌಡಯ್ಯ

"ಅಂಬಿಗರ ಚೌಡಯ್ಯ ನಿಜವಾಗಿಯೂ ವಚನಕಾರರಲ್ಲಿ ಒಬ್ಬ ಕ್ರಾಂತಿ ಪುರುಷ; ನಿಷ್ಠುರ ಮನುಜ"[36] ಎಂದು ಜಿ. ಎಸ್. ಶಿವರುದ್ರಪ್ಪ ಅವರು ವಿವೇಚಿಸಿರುವುದು ಅತ್ಯಂತ ಸಮರ್ಪಕವಾಗಿದೆ.

**೩೭. ಮಡಿವಾಳ ಮಾಚಯ್ಯ** (ಸು. ೧೧೬೦)

ಅನುಭವಮಂಟಪದ ಪ್ರಭಾವಲಯದಲ್ಲಿ ತೊಳಗಿಬೆಳಗಿದ ಜ್ಯೋತಿಗಳಲ್ಲಿ ಮಡಿವಾಳ ಮಾಚಯ್ಯ ಪ್ರಮುಖ ಶರಣ; ಹೆಸರೇ ಸೂಚಿಸುವಂತೆ ಈತನ ಕಾಯಕ ಮಡಿ ಮಾಡುವುದು. ಬರೀ ಬಟ್ಟೆಯ ಮೈಲಿಗೆಯನ್ನಷ್ಟೆ ಅಲ್ಲದೆ ಮನದ ಮೈಲಿಗೆಯನ್ನೂ ತೊಳೆಯಬಲ್ಲ ಶಕ್ತನೀತ.[37] ಈತನು ಶಿವಭಕ್ತನು ಮಾತ್ರವಲ್ಲದೆ ಅಜೇಯ ವೀರನೂ ಆಗಿದ್ದನು. ಅನುಭವಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದನು. ಅಲ್ಲದೆ, ದುಷ್ಟ ಶಿಕ್ಷಣ, ಶಿಷ್ಟ ಸಂರಕ್ಷಣ ಕಾರ್ಯವನ್ನು ಕೂಡ ಯಶಸ್ವಿಯಾಗಿ ನಿರ್ವಹಿಸುತ್ತಿದ್ದನು. "ಕಲಿದೇವರ ದೇವ" ಎನ್ನುವ ಅಂಕಿತದಲ್ಲಿ ವಚನ ರಚಿಸಿದ್ದಾನೆ. ಹಳಕಟ್ಟಿಯವರು ೧೯೩೩ರಷ್ಟು ಹಿಂದೆಯೇ ಮಡಿವಾಳ ಮಾಚಿದೇವನ ವಚನಗಳು ಎಂಬ ಹೆಸರಿನಿಂದ ೧೦೦ ವಚನಗಳುಳ್ಳ ಗ್ರಂಥವೊಂದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಬಿ. ಎಸ್. ಗದ್ದಗಿಮಠ ಅವರು ಸಂಗ್ರಹಿಸಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿರುವ ಕನ್ನಡ ಜಾನಪದ ಗೀತಗಳು ಎಂಬ ಸಂಗ್ರಹದಲ್ಲಿ ಮಾಚಯ್ಯನಿಗೆ ವಿವಾಹವಾಗಿದ್ದು ಪತ್ನಿ ಇದ್ದಳೆಂಬ ವಿಚಾರವಾಗಿ ಒಂದು ಖಂತಿಯ ಹಾಡು ಇದೆ. ಅದರ ಕೆಲವು ಸಾಲುಗಳು ಇವು:

ಮಾಚಯ್ಯನಾ ಮಡದಿ ಸೂಚನೆಯನೀಯುತಲಿ
ಯೋಚನೆಯು ಬೇಡ ಪತಿದೇವ ನೀನೆನ್ನ
ನಾಚದಲೆ ಹಿಂಡು ಎಂದೆರಗುತಳ

ಮಡಿವಾಳ ಮಾಚಯ್ಯನಿಗೆ ಬಸವಣ್ಣನವರಲ್ಲಿದ್ದ ಅಪಾರ ಭಕ್ತಿವಿಶ್ವಾಸಗಳಿಗೆ ಮುಂದಿನ ಈ ವಚನ ಸಾಕ್ಷಿ:

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದಡೆ ಅಂಗವೆಂಬ ಗೊಂಚಲು
ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ
ಆಯತವು ಸ್ವಾಯತವು ಸನ್ನಿಹಿತವು ಬಸವಣ್ಣನಿಂದ
ಇದ ಬಲ್ಲಿರೆ ನೀವು ಹೇಳಿರೆ
ಇತ್ತ ಬಲ್ಲಿರೆ ನೀವು ಹೇಳಿರೆ
ಬಸವ ಬಸವನೆಂಬವರ ಭಕ್ತಿ
ಶೂನ್ಯ-ಕಾಣಾ ಕಲಿದೇವರ ದೇವ

ಇದು ಮಾಚಯ್ಯ ಅಣ್ಣನವರನ್ನು ಮುಕ್ತಕಂಠದಿಂದ ಹೊಗಳಿರುವುದು ಮಾತ್ರವಲ್ಲ ಅದು ಸತ್ಯದ ಪ್ರತಿಬಿಂಬ ಕೂಡ ಆಗಿರುತ್ತದೆ.

ಕಲ್ಯಾಣ ಕ್ರಾಂತಿಯ ಸಂಬಂಧದಲ್ಲಿ ಶಿವಶರಣರನ್ನು ಅಟ್ಟಿಸಿಕೊಂಡು ಬಂದ ರಾಯ ಮುರಾರಿಯ ಸೈನ್ಯವನ್ನು ಹಲವಾರು ಕಡೆ ಎದುರಿಸಿ ಹಿಮ್ಮೆಟ್ಟಿಸಿದ ಮಾಚಯ್ಯನು ತನ್ನ ಜನ್ಮಸ್ಥಳವಾದ ಹಿಪ್ಪರಗಿಗೆ ಹಿಂತಿರುಗಿ ಅಲ್ಲಿನ ಕಲ್ಲಿನಾಥನಲ್ಲಿ ಐಕ್ಯವಾದನೆಂಬ ಅಂಶ ಆತನ ಚರಿತ್ರೆಯಿಂದ ತಿಳಿದುಬರುತ್ತದೆ.

**೩೮. ಮೋಳಿಗೆ ಮಾರಯ್ಯ** (೧೧೬೦)

ಈತನು ಕಾಶ್ಮೀರ ದೇಶದ ಒಂದು ಭಾಗವಾಗಿದ್ದ "ಸವಾಲಕ್ಷ" ನಾಡಿನ ಮಾಂಡವ್ಯಪುರದ ರಾಜನಾಗಿದ್ದನು. ಈತನ ಮೊದಲನೆ ಹೆಸರು ಮಹಾದೇವ ಭೂಪಾಲ; ಈತನ ಪತ್ನಿ ಮಹಾದೇವಿ ಎಂಬ ಹೆಸರನ್ನು ಪಡೆಯುವ ರಾಣಿ ಗಂಗಾದೇವಿ. ಶಿವಭಕ್ತರಾದ ಈ ದಂಪತಿಗಳು ಪ್ರತಿದಿನ ಆರು ಸಾವಿರ ಜಂಗಮರ ಆರಾಧನೆ ನಡೆಸುತ್ತಿದ್ದರು. ಇವರೆಲ್ಲ ಬಸವಣ್ಣನವರ ಕೀರ್ತಿಯನ್ನು ಕೇಳಿ ಕಲ್ಯಾಣವನ್ನು ಸೇರಿದರು. ಇದರಿಂದ ಕೋಪಗೊಂಡ ಅರಸು ಅಣ್ಣನವರನ್ನು ಕೊಂದುಬರಲು ತನ್ನ ನೆಚ್ಚಿನ ಭಂಟನಾದ ಚೋರ ಚಿಕ್ಕಯ್ಯನನ್ನು ಕಳುಹಿಸಿದನು. ಆದರೆ, ಆದುದ್ದೇನು? ಕೊಲೆ ಮಾಡಲು ಬಂದ ಚಿಕ್ಕಯ್ಯ ಮನಃಪರಿವರ್ತನೆಹೊಂದಿ ಅಣ್ಣನವರ ಕ್ಷಮೆ ಬೇಡಿ ಶಿವಾನುಭವಗೋಷ್ಠಿಯ

ಸದಸ್ಯನಾದನು. ಅವನೇ ನಿಜಲಿಂಗ ಚಿಕ್ಕಯ್ಯನೆಂಬ ಶರಣ. ಕಾಶ್ಮೀರ ಪ್ರಭುವಿಗೆ ನಿಜವೃತ್ತಾಂತ ತಿಳಿಯಿತು. ಪಶ್ಚಾತ್ತಾಪದಿಂದ ವೈರಾಗ್ಯಹೊಂದಿ ರಾಜಪುತ್ರ ಲಿಂಗಾರತಿಗೆ ಪಟ್ಟಗಟ್ಟಿ ಕಲ್ಯಾಣಕ್ಕೆ ಬಂದ. ರಾಣಿಯೂ ಜೊತೆಗೂಡಿದಳು. ಕಟ್ಟಿಗೆ ಮಾರಿ ಜೀವಿಸುವ ಜಂಗಮಾರಾಧನೆ ಮಾಡುವ "ಮೋಳಿಗೆ" ಕಾಯಕವನ್ನು ಕೈಗೊಂಡರು. ಈಗಿನ ಕಲ್ಯಾಣದಿಂದ ೧೨ ಮೈಲಿ ದೂರದಲ್ಲಿರುವ ಮೋಳಕೇರಿ ಎಂಬ ಊರಿನಲ್ಲಿ ಅವರು ವಾಸಿಸುತ್ತಿದ್ದರೆಂದು ಹೇಳಲಾದ ಗವಿಯೊಂದಿದೆ.[38]

ಅವರ ವಚನವಿದು :

ಬಯಲು ಬತ್ತಲೆಯಾದಡೆ ಹೊದಿಸುವರಿನ್ನಾರು ?
ಏರಿ ನೀರು ಕುಡಿವರೆ ಬಿಡಿಸುವರಿನ್ನಾರು ?
ಮಹಾಮೇರು ನಡೆವಡೆ ಪಥಕಿಂಬುಗೊಡುವರಾರು ?
ಅರಿದವ ಮರೆದವನಾದರೆ ಅರಿಕೆಯ ಹೇಳುವರಾರು ?
ನಿಮ್ಮ ನಿಜವ ನೀವೇ ಬಲ್ಲಿರಿ, ನಾನಂಜುವೆ ನಿಃಕಳಂಕ ಮಲ್ಲಿಕಾರ್ಜುನಾ.

—ಅರಿತವರೇ ಅಜ್ಞಾನಿಗಳಂತೆ ವರ್ತಿಸಿದರೆ ಮುಂದೇನು ಗತಿ ? ಎನ್ನುವ ಆತಂಕ ಆತನದು. (ಮೋಳಿಗಯ್ಯಗಳ ವಚನ ಸಂಖ್ಯೆ ೫೩೨, ಸಕಲ ಪುರಾತನರ ವಚನ)

### ೩೯. ಮೋಳಿಗೆಯ ಮಹಾದೇವಮ್ಮ

'ಪತಿಯಿದ್ದೆಡೆ ಪತ್ನಿ' ಎನ್ನುವ ಭಾರತೀಯ (ನಾರೀ) ಸಂಸ್ಕೃತಿಯನ್ನನುಲಕ್ಷಿಸಿ ಕಾಶ್ಮೀರದ ರಾಣಿ ಗಂಗಾದೇವಿಯು 'ಮಹಾದೇವಿ'ಯೆಂಬ ನಾಮಾಂತರವನ್ನು ಹೊಂದಿ ಗುರುಲಿಂಗಜಂಗಮಸೇವಾಕೈಂಕರ್ಯವನ್ನು ಕೈಕೊಂಡಳು.

ಅನೇಕ ವರ್ಷಕಾಲ ಕಾಯಕಗೈದ ಮೋಳಿಗೆ ಮಾರಯ್ಯನವರಿಗೆ ಒಮ್ಮೆ ಕೈಲಾಸಕ್ಕೆ ಹೋಗಬೇಕೆಂಬ ಆಸೆಯುಂಟಾಯಿತಂತೆ! ಆಗ ಅನುಭಾವಿ-ಮಾತಾ ಮಹಾದೇವಿಯರು ಸುಮ್ಮನಿದ್ದಾರೆಯೆ ? 'ಸಕಲದೇಶಕೋಶವಾಸ-ಭಂಡಾರ ಸವಾಲಕ್ಷ ಮುಂತಾದ ಸಂಬಂಧಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ ದೇವಾ ?' ಎಂದು ಒಳ್ಳೆಯ ನುಡಿಯಲ್ಲಿಯೇ ದಬಾಯಿಸುತ್ತಾರೆ !

ಕಾಯವುಳ್ಳನ್ನಕ್ಕ ಲಿಂಗಪೂಜೆ, ಆತ್ಮವುಳ್ಳನ್ನಕ್ಕ ಅರಿವಿನ ಭೇದ
ಪುರುಷ ನೀ ಸತಿ ನಾನೆಂಬಲ್ಲಿ ಉಭಯದ ಬೀಜ, ನಾ ನೀನೆಂಬನ್ನಕ್ಕ
ಅಂಗದ ಲಿಂಗದಲ್ಲಿಯೆ ನಿರಂಗವಾಗಬೇಕು.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ (ಶಿ.ಶ.ವ. ೩, ಪು. ೧೯)

ಲಿಂಗಪೂಜೆಯಲ್ಲಿಯೆ ಕೈಲಾಸ ಕಾಣಬೇಕು ; ಆತ್ಮಜ್ಞಾನದಲ್ಲಿಯೇ ಆನಂದಪಡಬೇಕು—ಎನ್ನುವುದೆ ಈ ತಾಯಿಯ ಮಾತಿನ ಆಶಯ.

ಮಹಾದೇವಮ್ಮನ ೬೯ ವಚನಗಳಲ್ಲಿಯೂ ಅನುಭಾವ ತುಂಬಿ ತುಳುಕುತ್ತಿದೆ.[39]

### ೪೦. ಹಾವಿನಹಾಳ ಕಲ್ಲಯ್ಯ (೧೧೫೦)

ಬಿಜಾಪುರಕ್ಕೆ ಮೂವತ್ತಾರು ಮೈಲಿ ದೂರದಲ್ಲಿರುವ ಹಾವಿನಹಾಳ ಎಂಬ ಗ್ರಾಮದವನು ಈ ಶರಣ. ಕಲ್ಲಯ್ಯ ಮತ್ತವನ ತಂದೆ ಶಿವನಯ್ಯ ಚಿನ್ನಗೆಲಸದಲ್ಲಿ ನಿಪುಣರಾಗಿದ್ದರು. ಬಿಜ್ಜಳರಾಯನು ಆಭರಣ ಮಾಡಲು ಇವರಲ್ಲಿಗೆ ಕಳ ಹಿಸಿದ್ದ ಹೊನ್ನಗಟ್ಟಿಯ ವಿಚಾರದಲ್ಲಿ ಮಾತಿಗೆ ಮಾತು ಬೆಳೆದು ತಂದೆ ಮಗನನ್ನು ಮೈಮುರಿಯುವಂತೆ ಹೊಡೆದನು. ಬೇಸರಗೊಂಡ ಕಲ್ಲಯ್ಯ ಕಲ್ಲೇಶ್ವರ ದೇವಾಲಯಕ್ಕೆ ಹೋಗಿ ಲಿಂಗದೆದುರು ಇರಿದುಕೊಳ್ಳುವಾಗ ಪರಮಾತ್ಮನೇ ಪ್ರತ್ಯಕ್ಷನಾಗಿ ಸಾಂತ್ವನಗೊಳಿಸಿದನಂತೆ![40] ರುದ್ರಮುನಿಯಿಂದ ವೀರಶೈವ ದೀಕ್ಷೆಯೂ ಪ್ರಾಪ್ತಿಯಾಯಿತು. ಸೊನ್ನಲಿಗೆಯ ಸಿದ್ಧರಾಮೇಶ್ವರನ ಸನ್ನಿಧಿಯಲ್ಲಿ ಶಿವಾನುಭವಗೋಷ್ಠಿಯ ಸತ್ಕಾಲಕ್ಷೇಪದಲ್ಲಿದ್ದನು. ಆ ದೇವಾಲಯದ ಪ್ರಾಕಾರದಲ್ಲಿಯೇ ಕಲ್ಲಯ್ಯನ ಸಮಾಧಿಯಿದೆ. ಇವನ ೨೬ ವಚನಗಳು ದೊರೆತಿವೆ ಎನ್ನುತ್ತಾರೆ ಡಿ. ಎಲ್. ನರಸಿಂಹಾಚಾರ್. ಕಲ್ಲಯ್ಯನಿಗೂ ಸಿದ್ಧರಾಮಯ್ಯನಿಗೂ ಇದ್ದ ಸಂಬಂಧವನ್ನು ಸೂಚಿಸುವ ವಚನ :

ಅತ್ಯಾಸೆ ಎಂಬುದೆ ಪಾಪ
ಬೇರೆ ಪಾಪವೆಂಬುದಿಲ್ಲ ಕಂಡಿರೆ ಅಯ್ಯ
ಪರಿಣಾಮವೆಂಬುದೆ ಪರಮಾನಂದ
ಬೇರೆ ಪರಮಾನಂದವೆಂಬುದಿಲ್ಲ ಕಂಡಿರೆ ಅಯ್ಯ
ಇಹಪರದಾಸೆಯಿಲ್ಲದಿಹುದೆ ಶಿವಯೋಗ
ಬೇರೆ ಶಿವಯೋಗವಿಲ್ಲ ಕಂಡಿರೆ ಅಯ್ಯ
ಮಹಾಲಿಂಗ ಕಲ್ಲೇಶ್ವರ ಬಲ್ಲ ಸಿದ್ಧರಾಮನ ಪರಿಯ

**೪೧. ಹಡಪದ ಅಪ್ಪಣ್ಣ** (೧೧೬೦)

'ಬಸವಪ್ರಿಯ ಕೂಡಲ ಚೆನ್ನಸಂಗಮದೇವ' ಎಂಬ ಅಂಕಿತವನ್ನಿಟ್ಟುಕೊಂಡು ವಚನ ರಚಿಸಿದ ಅಪ್ಪಣ್ಣನು ಬಸವಣ್ಣನವರ ಏಕನಿಷ್ಠ ಸೇವಕನಾಗಿದ್ದನು. ಅಪ್ಪಣ್ಣನು ಅಣ್ಣನವರನ್ನು ಬಿಟ್ಟು ಒಂದುಗಳಿಗೆ ಸಹ ಇರುತ್ತಿರಲಿಲ್ಲ. ಅಪ್ಪಣ್ಣನ ಗುರುವು ಚನ್ನಮಲ್ಲೇಶ್ವರನು ಎಂದಿದ್ದಾರೆ ಹಳಕಟ್ಟಿಯವರು. ಬಸವಣ್ಣನವರ ಅಪ್ಪಣೆಯಂತೆ ನೀಲಾಂಬಿಕೆಯವರನ್ನು ಕರೆದುಕೊಂಡು ಕೃಷ್ಣಾನದಿಯ ದಂಡೆಯ ಮೇಲಿರುವ ತಂಗಡಿಗಿ[41] ಗ್ರಾಮಕ್ಕೆ ಬರುವಷ್ಟರಲ್ಲಿ ಅಣ್ಣನವರು ಲಿಂಗೈಕ್ಯರಾಗಿದ್ದರು. ಈ ಸುದ್ದಿಯು ತಿಳಿದೊಡನೆ ತಾವಿದ್ದಲ್ಲಿಯೆ ಇವರಿಬ್ಬರೂ ತಂತಮ್ಮ ಇಷ್ಟಲಿಂಗಗಳಲ್ಲಿ ಬಯಲಾದರು. ಈಗಲೂ ಅಲ್ಲಿ ಇವರಿಬ್ಬರ ಸಮಾಧಿಗಳಿವೆ. ವೀರಶೈವರಿಗೆ ಇವು ಅತ್ಯಂತ ಪೂಜ್ಯವಾದುವು.

ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದುವು
ಎನ್ನ ಅವಧಾನ-ಅನುಭಾವ ಬಸವಣ್ಣಂಗರ್ಪಿತವಾದುವು
ಎನ್ನ ಸರ್ವಾಚಾರ ಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು
ಬಸವಪ್ರಿಯ ಕೂಡಲ ಚೆನ್ನಸಂಗಮದೇವರಲ್ಲಿ ನಿಜವಾಸಿಯಾಗಿರ್ದೆನು

ಹಡಪದ ಅಪ್ಪಣ್ಣನ ಈ ವಚನದಿಂದ ಆತನಿಗೆ ಬಸವಣ್ಣನವರಲ್ಲಿದ್ದ ಭಕ್ತಿಯ ಆಳವು ಚೆನ್ನಾಗಿ ವ್ಯಕ್ತವಾಗುತ್ತದೆ.

**೪೨. ಹಡಪದ ಲಿಂಗಮ್ಮ**

ಅಪ್ಪಣ್ಣನ ಪತ್ನಿಯಾದ ಲಿಂಗಮ್ಮ ಶಿವಯೋಗ ಸಾಧನೆಯಿಂದ ಪತಿಗೆ ತಕ್ಕ ಸತಿಯಾದಳು. ಈಕೆಯ ಗುರು ಚನ್ನಬಸವಣ್ಣ. ತನ್ನ ವಚನದ ಅಂಕಿತವನ್ನು ಪತಿಯ ಹೆಸರಿನೊಂದಿಗೆ ಗುರುವಿನ ಹೆಸರನ್ನೂ ಸೇರಿಸಿ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ' ಎಂದು ನಿರೂಪಿಸಿದ್ದಾಳೆ. ಬಸವಾದಿ ಪ್ರಮಥರ ಕರುಣೆಯಿಂದ ತಾನು ಆಧ್ಯಾತ್ಮಿಕ ಸುಖವನ್ನು ಅನುಭವಿಸುತ್ತಿದ್ದುದನ್ನು ಹೀಗೆ ವರ್ಣಿಸಿದ್ದಾಳೆ:

ಪಶ್ಚಿಮದ ಕದವ ತೆಗೆದು ಬಚ್ಚಬಚಿಯ ಬೆಳಗ ನೋಡಲೊಲ್ಲದೆ
ಕತ್ತಲೆಯ ಬಾಗಿಲಿಗೆ ನುಗ್ಗಿ
ಕಣ್ಣು ಕಾಣದ ಅಂಧಕರಂತೆ ಜಾಜಿ ಜಜಿಯಲ್ಲಿ ಬಿದ್ದು
ಕರ್ಮಕ್ಕೆ ಗುಜಿಯಾಗುವ ಮರ್ತ್ಯದ ಮನುಜರಿರಾ
ನೀವು ಕೇಳಿರೋ ಹೇಳಿಹೆನು ನಮ್ಮ ಶರಣರ ನಡೆ ಎಂತೆಂದಡೆ:
ಕತ್ತಲೆಯ ಬಾಗಿಲಿಗೆ ಕದವನಿಕ್ಕಿ, ಪಶ್ಚಿಮದ ಕದವ ತೆಗೆದು
ಬಚ್ಚಬಚಿಯ ಬೆಳಗಿನೊಳಗೋಲಾಡುವ ಶರಣರ ಪಾದಕ್ಕೆ ನಮೋ ಎಂದು
ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯ ಚನ್ನಬಸವಣ್ಣಾ

ಈ ವಚನವನ್ನು ಸಮೀಕ್ಷಿಸಿದರೆ, ಲಿಂಗಮ್ಮನು ಅನುಭಾವದ ಮೇರುಪರ್ವತದಂತಿದ್ದಾಳೆ—ಎನ್ನುವುದು ವಿದಿತವಾಗುತ್ತದೆ. ಈ ತಾಯಿಯ ೧೧೩ ವಚನಗಳು ಸುಂದರಶೈಲಿಯ ಉಚ್ಚಮಟ್ಟದ ಅನುಭವವುಳ್ಳವಾಗಿವೆ.[42]

**೪೩. ಆಯ್ದಕ್ಕಿ ಮಾರಯ್ಯ** (೧೧೬೦)

ಬಸವಣ್ಣನವರು ಸಮಾಜಸುಧಾರಣೆಯನ್ನು ವ್ಯವಸ್ಥಿತವಾಗಿ ಮಾಡಿದ ಹಲವು ಕಾರ್ಯಗಳಲ್ಲಿ 'ಕಾಯಕತತ್ತ್ವ' ಬಹಳ ಮುಖ್ಯವಾದುದು. ಈ ತತ್ತ್ವವನ್ನು ಆಚರಿಸಿ ತೋರಿದುದರಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ಆತನ ಪತ್ನಿ ಲಕ್ಕಮ್ಮ ಅಗ್ರಗಣ್ಯರು.

ಅನುಭವಮಂಟಪದ ವಿಚಾರಗೋಷ್ಠಿಯಲ್ಲಿ ಆಯ್ದಕ್ಕಿ ಮಾರಯ್ಯನು ಕಾಯಕದ ಬಗೆಗೆ ತನ್ನ ಅಭಿಪ್ರಾಯವನ್ನು ಈ ವಚನದ ಮೂಲಕ ಸ್ಪಷ್ಟಪಡಿಸುತ್ತಾನೆ :

ಕಾಯಕದಲ್ಲಿ ನಿರತನಾದರೆ ಗುರುದರುಶನವಾದರೂ ಮಱೆಯಬೇಕು
ಲಿಂಗಪೂಜೆಯಾದರೂ ಮಱೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹಱಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು

ಗುರುಲಿಂಗಜಂಗಮಗಳಿಗಿಂತ ಕಾಯಕನಿಷ್ಠೆಗೇ ಹೆಚ್ಚು ಮಹತ್ವ ಕೊಡಬೇಕೆಂಬ ತನ್ನ ಖಚಿತವಾದ ಅಭಿಪ್ರಾಯವನ್ನು ಅರ್ಥವತ್ತಾಗಿ ಪ್ರತಿಪಾದಿಸಿದ್ದಾನೆ—ಮಾರಯ್ಯ.

ರಾಯಚೂರು ಜಿಲ್ಲೆಯ ಅಮರೇಶ್ವರದಲ್ಲಿ ಹುಟ್ಟಿ ಬೆಳೆದ ಮಾರಯ್ಯ ಸಪತ್ನೀಕನಾಗಿ ಕಲ್ಯಾಣಕ್ಕೆ ಬಂದು ಶರಣಜೀವನ ನಡೆಸಿ 'ಕಾಯಕ'ವನ್ನು 'ಕಲೆ'ಯಾಗಿ ಮಾಡಿ ತೋರಿದ ಪುಣ್ಯಾತ್ಮ ಮಾರಯ್ಯ ; ಮಹಾಮನೆಯ ಮುಂದೆ ಅಲ್ಲಲ್ಲಿ ಚೆಲ್ಲಿದ್ದ ಅಕ್ಕಿಯುನ್ನು ಆಯ್ದು ತಂದು ಅದರಲ್ಲಿಯೇ ಜಂಗಮದಾಸೋಹ ಮಾಡುವ ಮಹಾಕಾಯಕ ಈತನದು.[43]

**೪೪. ಆಯ್ದಕ್ಕಿ ಲಕ್ಕಮ್ಮ**[44]

ಮಾರಯ್ಯನಿಗೆ ತಕ್ಕ ಸತಿ ಲಕ್ಕಮ್ಮ ; ಇನ್ನೂ ಒಂದು ಹೆಜ್ಜೆ ಮುಂದಿದ್ದವಳು—ಎಂದರೂ ತಡೆದೀತು ! ಒಮ್ಮೆ ಶಿವತತ್ತ್ವಚಿಂತನೆಯಲ್ಲಿ ಬಹಳ ಹೊತ್ತು ಮಗ್ನನಾಗಿದ್ದ ತನ್ನಾಳ್ದನನ್ನು ಕಾಯಕಕ್ಕೆ ವೇಳೆಯಾಯಿತೆಂದು ಎಚ್ಚರಿಸಿ ಕಳುಹಿಸುತ್ತಾಳೆ ಲಕ್ಕಮ್ಮ. ಯಾವುದೋ ಜ್ಞಾನದಲ್ಲಿ ಆ ದಿನ ಸ್ವಲ್ಪ ಸಮಯದಲ್ಲಿಯೇ ದಿನಕ್ಕಿಂತ ಹೆಚ್ಚು ಅಕ್ಕಿಯನ್ನು ತಂದ ಮಾರಯ್ಯನನ್ನು ಕಂಡ ಸತಿಗೆ ಸಂಶಯ ಬಂದಿತು. ವಿಚಾರಿಸಿದಾಗ, ಕರುಣಾಳು ಬಸವರಸ ತನ್ನ ಮನೆಯಂಗಳ ದಲ್ಲಿ ಸುರಿಸಿದ್ದ ರಾಶಿಯಲ್ಲಿಯೇ ಪಡಿಯಕ್ಕಿ ತಂದುದಾಗಿ ತಿಳಿಯಿತು. ಸರಿ, ಆ ಸತೀಮಣಿಯ ಮುಖದಿಂದ ಹೊರ ಬಿತ್ತೊಂದು ಮುತ್ತಿನಂಥ ಮಾತು :

ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೇ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ

ಹೀಗೆ ಕಾಯಕಕ್ಕೆ ಹೊರತಾದ ಸಂಪಾದನೆ ಬೇಡವೆಂದು ಪ್ರಾರ್ಥಿಸಿ, ಪತಿಯ ಮನವೊಲಿಸಿ ಜಂಗಮಾರಾಧನೆಗೆ ಅಣಿ ಮಾಡಿದಳು. ಮಾರಯ್ಯನವರು ಅಕ್ಕಿಯನ್ನು ಸುರಿದು ಮತ್ತೆ ಆಯುವ ಕಾಯಕ ಮಾಡಿ ಬಂದಷ್ಟರಲ್ಲೇ ಪ್ರಸಾದ ಸಿದ್ಧಪಡಿಸಿ ಆಗಮಿಸಿದ್ದ ಎಲ್ಲ ಜಂಗಮರನ್ನೂ ತೃಪ್ತಿಪಡಿಸಿದರು ಶಿವಕೃಪೆಯಿಂದ.

**೪೫. ಉರಿಲಿಂಗದೇವ (೧೧೬೦)**

ಆರ ಪರಿಯಲ್ಲಿ ನಮ್ಮ ನಲ್ಲನು
ವಿಶ್ವವೆಲ್ಲವು ಸತಿಯರು
ಚೋದ್ಯದ ಪುರುಷನು ಅವರವರ ಪರಿಯಲ್ಲಿ ಅವರವರ ನೆರೆವೆನು
ಅವರವರಿಗೆ ಅವರಂತೆ ಸುಖಮಯ ನೋಡಾ !
ಅವರೆಲ್ಲರ ವಂಚಿಸಿ ಎನ್ನನಗಲದ ಪರಿಯ ಹೇಳಾ, ಕೆಳದಿ !
ನೀನೊಳ್ಳಿದಳಾದಡೆ, ಮಹಾಮಂತ್ರವ ಜಪಿಸಲು, ನಿನ್ನನಗಲ ನಿನ್ನಾಣೆ,
ಉರಿಲಿಂಗದೇವ ತನ್ನಾಣೆ !

—ಮಹಾಮಂತ್ರ ಜಪಿಸಿದರೆ 'ಶರಣಸತಿ'ಯನ್ನು 'ಲಿಂಗಪತಿ' ಎಂದಿಗೂ ಅಗಲಲಾರನೆಂಬ ಆತ್ಮವಿಶ್ವಾಸ! ಇಡೀ ವೀರಶೈವ ಸಿದ್ಧಾಂತ ತುಂಬಿ ಬಂದಂತಿದೆ ಈ ದಿವ್ಯ ವಚನದಲ್ಲಿ !!

ಇಂತಪ್ಪ ಲಿಂಗಾನಂದಸ್ಥಿತಿಯಲ್ಲಿದ್ದವರು ಯಾರು ಗೊತ್ತೆ ?

ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯಲ್ಲಿರುವ ಕಂದಹಾರ್ (ಕಂದಾರ)ಪುರ ಮಠದ ಸ್ವಾಮಿ ಉರಿಲಿಂಗದೇವರು. ಅವರ ಪೂರ್ವಾಶ್ರಮದ ಹೆಸರು ಏನೆಂದು ತಿಳಿಯದು. ಆಗಿನ ಜೀವನ ವಿಧಾನವೂ ಗೊತ್ತಾಗದು. ಇದುವೆ ವೀರಶೈವ ಯತಿವರೇಣ್ಯರ ಚಿದಂಬರ-ರಹಸ್ಯ ! ಶಿವಯೋಗದಲ್ಲಿ ಬಲ್ಲಿದನಾದ ಯಾವ ಸ್ವಾಮಿಯೂ ಪೂರ್ವಾಶ್ರಮಕ್ಕೆ ಎಳಸ !! ಕನ್ನವಿಕ್ಕಲು ಬಂದ ಕಳ್ಳನನ್ನೇ ನಿಜಭಕ್ತನನ್ನಾಗಿಸಿ, ತನ್ನ ಮಠದ ಉತ್ತರಾಧಿಕಾರಿಯನ್ನಾಗಿ ಮಾಡಿದ ಮಹಾ ಮಹಿಮರು ಉರಿಲಿಂಗದೇವರು. ಇವರ ೩೬ ವಚನಗಳು ದೊರೆತಿವೆ.[45]

### ೪೬. ಉರಿಲಿಂಗಪೆದ್ದಿ (೧೧೬೦)[46]

ಉರಿಲಿಂಗದೇವರು ಒಂದು ರಾತ್ರಿ ನಂದವಾಡಗ್ರಾಮದ ಸೂರಯ್ಯನೆಂಬ ಭಕ್ತನಿಗೆ ವೀರಶೈವೋಪದೇಶ ಪಡೆಯಬೇಕೆಂಬ ಆತನ ಅದಮ್ಯ ಆಕಾಂಕ್ಷೆಗನುಗುಣವಾಗಿ ಲಿಂಗದೀಕ್ಷೆ ಕೊಡುತ್ತಿದ್ದರು. ಅದೇ ರಾತ್ರಿ ಆ ಮನೆಗೆ ಕನ್ನವಿಕ್ಕಲು ಬಂದಿದ್ದ ಪೆದ್ದಣ್ಣನೆಂಬ ಕಳ್ಳ. ಆತನು ಮನೆಯೊಳಗೆ ನಡೆಯುತ್ತಿದ್ದ ಶಿವಕಾರ್ಯವನ್ನೆಲ್ಲ ಬೆಳಕಿಂಡಿಯಿಂದ ನೋಡಿದ. ದೈವಕೃಪೆ ದೊಡ್ಡದಲ್ಲವೆ ? ಆತನ ಮನಸ್ಸು ಒಮ್ಮೆಲೆ ಪರಿವರ್ತನಗೊಂಡಿತು !

ಮಾರನೆಯ ದಿನದಿಂದ ಉರಿಲಿಂಗದೇವರ ಮಠಕ್ಕೆ ಪ್ರತಿದಿನ ಒಂದು ಹೊರೆ ಸೌದೆ ಬಂದು ಬೀಳುತ್ತಿತ್ತು. ಅಲ್ಲಿ ತಂದುಹಾಕುತ್ತಿದ್ದವರಾರು ? ಕಡೆಗೊಮ್ಮೆ ಸಿಕ್ಕಿಬಿದ್ದ ಕಳ್ಳ ! 'ಪೆದ್ದಣ್ಣ, ಕಟ್ಟಿಗೆಹೊರೆಯ ಬೆಲೆ ತೆಗೆದುಕೊಳ್ಳುವುದಾದರೆ ಮಾತ್ರ ತಂದು ಹಾಕು' ಎಂದರು ಗುರುಗಳು. 'ಗುರುವೆ, ನಂದವಾಡದ ಸೂರಯ್ಯನಿಗೆ ದೀಕ್ಷೆಯಿತ್ತಂತೆ ನನಗೂ ಕೊಟ್ಟು ಉದ್ಧರಿಸಬೇಕು' ಎಂದು ಬೇಡಿಕೊಂಡ ಪೆದ್ದಣ್ಣ ಅಂದು ರಾತ್ರಿ ತಾನು ನೋಡಿದ್ದನ್ನು ನಿವೇದಿಸಿಕೊಂಡ. 'ಶಿವನಪ್ಪಣೆಯಾಗಲಿ ಪೆದ್ದಣ್ಣ' ಎಂದರು ಗುರುಗಳು. ಆದರೆ, ಇವನು ಅಷ್ಟಕ್ಕೆ ಬಿಡುವ ಶಿಷ್ಯನೇ ? ಗುರುಗಳನ್ನು ಪದೇಪದೇ ಕಾಡಿಬೇಡಿದ. ಉರಿಲಿಂಗದೇವರಿಗೂ ಉತ್ತರ ಹೇಳಿ ಸಾಕಾಗಿ 'ಘೇದಗಡಿಜಾ ತೆಗೆದುಕೋ ಈ ಕಲ್ಲನ್ನು' ಎಂದು ಒಂದು ಕಲ್ಲನ್ನು ಕೊಟ್ಟರು. ಆ ಮಾತೇ ಮಂತ್ರವಾಯಿತು! ಇಟ್ಟ ಕಲ್ಲೇ ಇಷ್ಟಲಿಂಗವಾಯಿತು !!

ಅದನ್ನೇ ಸಾಧನೆ ಮಾಡಿ ಆ ಊರಿನ ಅರಸನಾದ ನಂಜರಾಜನು ಕೆರೆ ಕಟ್ಟಿಸುವಾಗ ಸಿಕ್ಕಿದ ಹಾಸುಬಂಡೆಯನ್ನು ಗುರ್ವಾಜ್ಞೆಯಂತೆ ತಾನು ಅರ್ಚಿಸುತ್ತಿದ್ದ ಲಿಂಗದ ಸಹಾಯದಿಂದ ಕಿತ್ತು, ನೀರುಕ್ಕುವಂತೆ ಮಾಡಿದನು. ಇದೀಗ ಗುರುವಿಗೆ ಕರುಣೆವುಕ್ಕಿ, ಪೆದ್ದಣ್ಣನಿಗೆ ಕ್ರಮವಾಗಿ ದೀಕ್ಷೆ ಮಾಡಿದರು. ಅಂದಿನಿಂದ ಅವನು 'ಉರಿಲಿಂಗಪೆದ್ದಿ' ಎನ್ನುವ ಹೆಸರು ಪಡೆದು ಗುರುವಿಗೆ ತಕ್ಕ ಶಿಷ್ಯನಾದ. ಅಷ್ಟೇ ಅಲ್ಲ, ಸಕಲಶಾಸ್ತ್ರಪಾರಂಗತನಾದ ! ಆತನ ವಚನಗಳನ್ನು ವಿವೇಚಿಸಿದರೆ ಆತನಿಗೆ ಪ್ರಾಪ್ತಿಯಾದ ಪಾಂಡಿತ್ಯದ ಅರಿವಾಗದಿರದು :

ಆಶೆಯೇ ದಾಸತ್ವ, ನಿರಾಶೆಯೇ ಈಶತ್ವ
ನಿರಾಶೆಯಾಗಿಪ್ಪುದೇ ಈಶಪದವಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಕಿರಿದರೊಳ್ ಪಿರಿದರ್ಥವನ್ನು ಪ್ರತಿಪಾದಿಸಬಲ್ಲ ವಚನವಿದೆಂದು ಹೇಳಬಹುದು.

ಉರಿಲಿಂಗದೇವರು ತಮ್ಮ ಪೀಠದ ಉತ್ತರಾಧಿಕಾರಿಗಳನ್ನಾಗಿ ಉರಿಲಿಂಗಪೆದ್ದಿಗಳನ್ನೇ ಆರಿಸಿದರು ! ವೀರಶೈವ ಗೃಹಸ್ಥರು ಮಠಾಧಿಪತಿಗಳಾಗುವುದು ಅಪರೂಪ ! ಇವರಾದರೋ ಕಲ್ಯಾಣ, ಕೊರಳಿ, ಬೇವಿನ ಚಿಂಚೋಳಿ, ಭಾಲಿ, —ಈ ನಾಲ್ಕು ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿದ್ದಾರೆ—ಎನ್ನುತ್ತಾರೆ ಜಚನಿ ಅವರು.

### ೪೭. ಕಾಳವ್ವೆ

ಉರಿಲಿಂಗಪೆದ್ದಿಗಳ ಪತ್ನಿ ಕಾಳವ್ವೆಯೂ ಲಿಂಗದೀಕ್ಷೆ ಪಡೆದು ಅನುಭಾವಿಯಾದಳು. ಕನ್ನಡ-ಸಂಸ್ಕೃತಗಳನ್ನು ಚೆನ್ನಾಗಿ ಬಲ್ಲ ಈ ತಾಯಿಯು 'ಉರಿಲಿಂಗಪೆದ್ದಿಗಳರಸ' ಎನ್ನುವ ಅಂಕಿತದಲ್ಲಿ ವಚನ ರಚಿಸಿದ್ದಾಳೆ.

ಅಡಿಗೆ ಮಾಡುವಾಗ ಉಪಯೋಗಿಸುವ ಕಟ್ಟಿಗೆಯನ್ನೇ ಉದಾಹರಣೆ ಕೊಟ್ಟು ರಚಿಸಿದ ಕಾಳವ್ವೆಯ ವಚನವಿದು :

ತೂಬರು ಕೊಳ್ಳಿಯಂತೆ ಉರಿವಾತ ಭಕ್ತನೆ ?
ಹುಸಿದು ತಂದು ಮಾಡುವಾತ ಭಕ್ತನೆ ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ ?
ನಿಂದಯಾ ಶಿವಭಕ್ತಾನಾಂ ಕೋಟಿಜನ್ಮನಿ ಸೂಕರಃ ।
ಸಪ್ತಜನ್ಮನಿ ಕುಷ್ಠೀ ಸನ್ ದಾಸೀಗರ್ಭೇಷು ಜಾಯತೇ ॥
ಎಂಬುಹಾಗಿ ತನ್ನ ಪ್ರಾಣದ ಮೇಲೆ ಬಂದಡೂ ಬರಲಿ ಇವಜಿ ಬಿಡಬೇಕು
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ. (ಶಿ.ಶ.ವ. ೩, ವ. ೨೧೯, ಪು. ೯೮)

ಈ ವಚನದಲ್ಲಿ ಕಾಳವ್ವೆಯ ಲೋಕಾನುಭವ–ಶಿವಾನುಭವಗಳೆರಡರ ಹಿರಿಮೆಯೂ ಕಂಡುಬರುವುದು.[47]

೪೮. ಕಿನ್ನರಿ ಬ್ರಹ್ಮಯ್ಯ—(೧೧೬೦)

ಆಂಧ್ರ ದೇಶದ ಪೂಂಡೂರು ಗ್ರಾಮದವನು. ಕಲಿದೇವ ಎಂಬ ಭಕ್ತನ ಪುತ್ರ. ಅಕ್ಕಸಾಲೆಯ ಕಾಯಕ. ಒಡವೆಗಳನ್ನು ಮಾಡುವಾಗ ಜಂಗಮರು ಬಂದು ಬೇಡಲು ಅದರೊಳಗೆ ಕತ್ತರಿಸಿಕೊಟ್ಟು ಮತ್ತೆ ತೂಕಕ್ಕೆ ಸರಿಮಾಡಿ ಕೊಡುತ್ತಿದ್ದನು! ಒಮ್ಮೆ ತನ್ನ ಗುರುಗಳಿಗೆ ಹಾಗೆ ಮಾಡಿದಾಗ, ಅವರು ಕೋಪಗೊಂಡರು. ಆಗ 'ಎಮ್ಮಲ್ಲಿ ವಂಚನೆಯಿಲ್ಲ. ಈ ಕಾಯಕವನ್ನು ಬಿಡಿಸುವ ಸಲುವಾಗಿ ಶಿವನು ಹೀಗೆ ಮಾಡಿದನು' ಎಂದು ಕಿನ್ನರಯ್ಯನು ಆ ಕಾಯಕವನ್ನು ಬಿಟ್ಟನು. ಕಿನ್ನರಿಯನ್ನು ಹಿಡಿದನು....ಬಸವಣ್ಣನವರ ಕೀರ್ತಿ ಕೇಳಿ ಕಲ್ಯಾಣಕ್ಕೆ ಬಂದು ಅಲ್ಲಿನ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ವಾಸಿಸತೊಡಗಿದನು.[48]

ಒಂದು ಸಲ ಹರಕೆಯ ಕುರಿಯೊಂದರ ಪ್ರಸಂಗದಲ್ಲಿ ವಿಟನೊಬ್ಬನು ಕಿನ್ನರಯ್ಯನ ಕೋಪಕ್ಕೆ ಆಹುತಿಯಾಗಲು, ಕ್ಷುಬ್ಧನಾದ ದೊರೆ ಬಿಜ್ಜಳನು ಸಾಕ್ಷಾತ್ ತ್ರಿಪುರಾಂತಕನ ವಾಣಿಯನ್ನು ಕೇಳುವಂತಾಗಿ ಅಚ್ಚರಿಯಿಂದ ಶರಣು ಹೋದನು.

ವೈರಾಗ್ಯನಿಧಿ ಅಕ್ಕಮಹಾದೇವಿ ಕಲ್ಯಾಣಕ್ಕೆ ಆಗಮಿಸಿದಾಗ ಅನುಭವಮಂಟಪಕ್ಕೆ ಆಕೆಯನ್ನು ಸ್ವಾಗತಿಸುವ ಸೌಭಾಗ್ಯ ಕಿನ್ನರಯ್ಯನ ಪಾಲಿಗೆ ಬಂದಿತು. ಮೊದಲು ಕಂಡಾಗ—

ಕಾಯದಲ್ಲಿ ಕಳವಳವಿರಲು ಪ್ರಾಣದಲ್ಲಿ ಮಾಯೆ ಇರಲು
ಏತರ ಮನ ? ಇದೇತರ ನಿರ್ವಾಣ ?
ಮಹಾಲಿಂಗ ತ್ರಿಪುರಾಂತಕ ನಿನ್ನ ಸಂಸಾರಿ ಎಂಬನಲ್ಲದೆ
ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ

ಎಂದು ನಿಷ್ಠುರವಾಗಿ ನುಡಿದ : ಕಾಮಕ್ಕೆ ಪಕ್ಕಾದ ; ಪರೀಕ್ಷಿಸಿದಲ್ಲಿ ಅಕ್ಕನ ಸರ್ವಾಂಗದಲ್ಲಿಯೂ ಚೆನ್ನಮಲ್ಲಿಕಾರ್ಜುನನ 'ರೂಹು' ದೊರೆಯಲು ತಾಯಿಗೆ ಶರಣಾಗತನಾದ ; 'ಹುಲಿನೆಕ್ಕಿ ಬದುಕಿದೆ'ನೆಂದ !

ಶರಣು ಶರಣಾರ್ಥಿ ಎಮ್ಮವ್ವ ಶರಣು ಶರಣಾರ್ಥಿಯು
ಮೂರ್ತಳೆ ಶರಣು ಶರಣಾರ್ಥಿ
ಎನ್ನಕ್ಕ ಮಹಾದೇವಿ ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ
ನೀವು ಬಿಡಿಸಿದಿರಾಗಿ ನಿಮ್ಮಿಂದ ನಾನು ಬದುಕಿದೆನು
ಎಲೆ ತಾಯೆ ಶರಣು ಶರಣಾರ್ಥಿ

—ಎಂಬುದಾಗಿ ತನ್ನ ಕೃತಜ್ಞತೆಯನ್ನು ಮನದುಂಬಿ ವ್ಯಕ್ತಪಡಿಸಿದನು.

ಇಂತಹ ಕಿನ್ನರಯ್ಯನ ಪ್ರಾಣಪಕ್ಷಿ ದೇಹಪಂಜರದಿಂದ ಹಾರಿಹೋಗಿರಲು, ಬಸವಣ್ಣನವರು—ಜಂಗಮಪ್ರಾಣ ತನ್ನ ಸಮಕ್ಷದಲ್ಲಿ ಹೋದಾಗ ತಾನೇ ಪ್ರಾಣಸಹಿತ ಇರುವುದಿಲ್ಲವೆನ್ನುವ ತಮ್ಮ ಪ್ರತಿಜ್ಞೆಯಂತೆ ತಾವೂ ಪ್ರಾಣ ಬಿಡಲು ಸಂಕಲ್ಪಿಸಿದಾಗ, ಕಿನ್ನರಯ್ಯ ಬದುಕಿದನು. ಮುಂದೆ ಕಲ್ಯಾಣಕ್ರಾಂತಿ ನಡೆದಾಗ ಶರಣರ ರಕ್ಷಣಾಕಾರ್ಯದಲ್ಲಿ ತನ್ನ ಸಾಹಸವನ್ನು ಪ್ರದರ್ಶಿಸಿ, ಉಳವಿಯ ಮಹಾಮನೆಯ ಸಮೀಪದಲ್ಲಿ ಸಮಾಧಿಸ್ಥನಾದನು.

### ೪೯. ಗಾಣದ ಕನ್ನಪ್ಪ (೧೧೬೦)

ಈತನ ವಚನಗಳಲ್ಲಿ 'ಕನ್ನಯ್ಯಪ್ರಿಯ ಗುಹೇಶ್ವರನ ಶರಣ' ಎಂದೂ 'ಗುಹೇಶ್ವರನಲ್ಲಯ್ಯ' ಎಂದೂ ಅಂಕಿತಗಳಿರುತ್ತವೆ. ಗುರುರಾಜಚಾರಿತ್ರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ—ಈ ಕಾವ್ಯಗಳಲ್ಲಿ ಈತನು ಉಕ್ತನಾಗಿದ್ದಾನೆ,

'ಗಾಣದ' ಎಂಬ ವಿಶೇಷಣವಿದ್ದರೂ, ಇವನು ವೃತ್ತಿಯಿಂದ ಗಾಣಿಗನಲ್ಲ. ಇವನ ವೃತ್ತಿ ಮೀನು ಹಿಡಿಯುವ 'ಗಾಳ'ಕ್ಕೆ ಸಂಬಂಧಿಸಿದುದು. ಈ ಕಾರಣದಿಂದ ಇವನನ್ನು 'ಗಾಳದ ಕನ್ನಪ್ಪ'ನೆಂದೇ ಕರೆಯುವುದು ಹೆಚ್ಚು ಸಮಂಜಸವಾದುದು.[49] ಈತನ ಪತ್ನಿ ರೇಚವ್ವೆ. ಪ್ರತಿನಿತ್ಯ ಲಿಂಗಪೂಜಾನಂತರ ತ್ರಿಪುರಾಂತಕನ ಕೆರೆಯಲ್ಲಿ ಮೀನು ಹಿಡಿದು, ಅದರ ಮಾರಾಟದಿಂದ ಬಂದ ಹಣದಲ್ಲಿ ಜಂಗಮಸೇವೆ ಮಾಡುತ್ತಿದ್ದನು.

ಈತನ ವಚನ :

ಪುಣ್ಯಪಾಪವಿಲ್ಲಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗೆಟ್ಟನಾಗಿ ದೈವದ ಹಂಗಿಲ್ಲ
ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೆ

ಬಹುಶಃ ಬಯಲದೇಹಿಯಾದ ಅಲ್ಲಮಪ್ರಭುವಿನ ಸರ್ವತಂತ್ರಸ್ವತಂತ್ರತೆಯನ್ನು ಈ ವಚನದಲ್ಲಿ ಕನ್ನಪ್ಪ ಅಭಿವ್ಯಕ್ತಗೊಳಿಸಿರಬೇಕೆನಿಸುತ್ತದೆ.

### ೫೦. ಘಟ್ಟಿವಾಳಯ್ಯ (೧೧೬೮)

'...ಬಸವಣ್ಣನೆಂಬ ಪ್ರಸಾದಲಿಂಗವ ಪಿಡಿದು ಘಟ್ಟಿವಾಳಯ್ಯ ಬಸವಣ್ಣನಂತಾದ' ಎಂದು ನೀಲಾಂಬಿಕೆಯೇ ಪ್ರಶಂಸಿಸಿರುವಾಗ, ಈತನ ಘನತೆಯ ಬಗೆಗೆ ಬೇರೆ ಹೇಳಬೇಕಾಗಿಲ್ಲ. ತನ್ನ ಹೆಂಡತಿಯ ಕಾಪಟ್ಯಕ್ಕೆ ಹೇಸಿ-ವೈರಾಗ್ಯವೇ ರೂಪುಗೊಂಡು ಕಲ್ಯಾಣದತ್ತ ಸಾಗಿದಂತೆ ಅಣ್ಣನವರ ಮಹಾಮನೆಯನ್ನು ಸೇರಿದನು. ಅಲ್ಲಿ ಮುದ್ದಣ್ಣನೆಂಬ ಹೆಸರಿನಿಂದ ಮದ್ದಳೆ ನುಡಿಸುತ್ತ ಶಿವಾನುಭವವನ್ನು ಹೇಳುವ ಕಾಯಕವನ್ನು ಕೈಗೊಂಡಿದ್ದನು. ಅವನ ವಚನ :

ಹೊನ್ನು ಹೆಣ್ಣು ಮಣ್ಣಿಂಗೆ ಹೊಡೆದಾಡುವನ್ನಬರ,
ಅವರು ಹಿರಿಯರೆಂತಪ್ಪರೊ ?
ತ್ರಿವಿಧ ಮಲಕ್ಕೆ ತ್ರಿವಿಧ ಅಮಲದಿಂದ ಮಲಹಜಿದಲ್ಲದೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ

ಜಂಗಮರೆನಿಸಿಯೂ ಲೌಕಿಕವ ಬಯಸುವವರನ್ನು ಕಂಡು ಹೀಗೆ ವಿಡಂಬಿಸಿ ನುಡಿದಿದ್ದಾನೆ.

### ೫೧. ತುರುಗಾಹಿ ರಾಮಣ್ಣ (೧೧೬೦)

ದನ ಕಾಯುವ ಕಾಯಕ ಇವನದು. ಇವನ ವಚನಗಳು ಕಾಯಕದ ಗೌರವವನ್ನು ಬೋಧಿಸುತ್ತವೆ:

ಬಂದಿತ್ತು ದಿನ ಬಸವಣ್ಣ ಕಲ್ಲಿಗೆ
ಚೆನ್ನಬಸವಣ್ಣ ಉಳುವೆಗೆ
ಪ್ರಭು ಅಕ್ಕ ಕದಳಿ ದ್ವಾರಕ್ಕೆ
ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ
ನಾನು ತುರುವಿನ ಬೆಂಬಳಿಯಲ್ಲಿ ಹೋದ ಮಜೆಯಲ್ಲಿ ಅಡಗಿಹರೆಲ್ಲರೂ ಅಡಗಿ ಅದ ಕೇಳಿ
ನಾ ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೇ ಉಡುಗುವೆನು

### ೫೨. ತೆಲುಗೇಶ ಮಸಣಯ್ಯ (೧೧೬೦)

ಈತನು ಆಂಧ್ರಪ್ರದೇಶದ ಲಿಂಗಂಪಲ್ಲಿ ಗ್ರಾಮದವನು. ಇವನೂ ರಾಮಣ್ಣನಂತೆ ದನಗಳನ್ನು ಕಾಯುವ ಕಾಯಕ ಮಾಡುತ್ತಿದ್ದನು. 'ತೆಲುಗೇಶ್ವರ' ಇವನ ವಚನಾಂಕಿತ :

ಹಳದಿಯ ಸೀರೆಯನುಟ್ಟು ಬಳಹದ ವಾಲೆಯ ಕಿವಿಯಲ್ಲಿಕ್ಕಿ
ಮೊಳೆಯ ಡಂಗೆಯ ಪಿಡಿದು, ಗುಲುಗಂಜಿಯ ದಂಡೆಯ ಕಟ್ಟಿ
'ತುತ್ತುಱು ತುಱು' ಎಂಬ ಕೊಳಲ ಬಾರಿಸುತ್ತ
'ಅಪಳ ಚಪಳ' ಎಂಬ ಉಲಿವ ಘಂಟೆಯ ಕಟ್ಟಿ
ತುತ್ತುಱಿ ಜಂಗುಳಿ ದೈವಗಳನೆಲ್ಲವ ಹಿಂಡು ಮಾಡಿ
ಕಾವ ನಮ್ಮ ಶಂಭು ತೆಲುಗೇಶ್ವರನ ಮನೆಯ ಗೋವಳನೀತ.

**೫೩. ದಸರಯ್ಯ (೧೧೬೦)**

'ದಸರೇಶ್ವರಲಿಂಗ' ಎಂಬ ಅಂಕಿತದಲ್ಲಿ ವಚನ ರಚಿಸಿರುವ ದಸರಯ್ಯ ತನ್ನ ಅಪೂರ್ವ ದಯಾಗುಣಕ್ಕೆ ಹೆಸರಾಗಿದ್ದಾನೆ. ಸಿಂಗಿರಾಜ, ಭೀಮಕವಿ, ಲಕ್ಕಣ್ಣದಂಡೇಶ, ಷಡಕ್ಷರದೇವ—ಇವರು ತಂತಮ್ಮ ಕಾವ್ಯಗಳಲ್ಲಿ ಈ ದಯಾಮಯನನ್ನು ಕೀರ್ತಿಸಿದ್ದಾರೆ.

ದಸರಯ್ಯನ ವಚನ :

ಸರ್ವದಯಾ ವಸ್ತು ಬೀಜವಲಾ ನೀನು ; ಮಲತ್ರಯ ದೂರನೆ,
ಸರ್ವಾಂಗ ಸಂತೋಷಿಯೆ ನಿಗರ್ವಿಯೇ ದಸರೇಶ್ವರಲಿಂಗವೇ,
ತಥ್ಯಮಿಥ್ಯವ ಬಿಟ್ಟೆನಗೆ ಕಾರುಣ್ಯ ಪ್ರಸಾದವ ಕರುಣಿಸಯ್ಯ.

**೫೪. ನಗೆಯ ಮಾರಿತಂದೆ (೧೧೬೦)**

ಇವನು ನಗುವಿನಿಂದಲೇ ಶಿವನನ್ನು ಒಲಿಸಿ ಕೈಲಾಸಕ್ಕೆ ಹೋದಂತೆ 'ಗುರು ವಿರೂಪಾಕ್ಷ' ಎಂಬ ಅಂಕಿತವಿರುವ ಕವಿ ರಚಿಸಿದ ಒಂದು ರಗಳೆಯಿಂದ ತಿಳಿದು ಬರುತ್ತದೆ. ಈತನ ವಚನಗಳು ಸಂಗ್ರಹವಾಗಿಯೂ ಹಿತಕರವಾಗಿಯೂ ಇವೆ—ಎನ್ನುತ್ತಾರೆ ಡಿ.ಎಲ್.ಎನ್. ಅವರು. ಇವನು ಕುಂಬಾರ ಜಾತಿಗೆ ಸೇರಿದವನಂತೆ ಕಂಡುಬರುತ್ತಾನೆ—ಎಂದು ಅವರೇ ಊಹಿಸಿದ್ದಾರೆ.[50]

ಈತನ ವಚನಗಳ ಕನ್ನಡವು ತಿಳಿಗನ್ನಡ :

ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ
ಹೊಯಿದೊಣ್ಣೆ ಕೈಯಲ್ಲಿ ಲೇಸಾಯಿತ್ತು
ಈತನಿರವು ಮಾತಿನಲ್ಲಿ ಆಗಮ ಮನವಲ್ಲಿ ತೂತಿನ ಕುಡಿಕೆಯ ಆಸೆ
ಇದು ನೀತಿಯಲ್ಲ ಆತುರ ವೈರಿ ಮಾರೇಶ್ವರ

**೫೫. ಸತ್ತಿಗೆಯ ಕಾಯಕದ ಮಾರಿತಂದೆ (೧೧೬೦)**

ಕಂಬಳಕ್ಕೆ ಹೋದಲ್ಲಿ ಅಪರಂಗದ ಹೊತ್ತು ಹೋಹನ್ನಕ್ಕ ಸಂಬಂಧಕ್ಕೆ ಕೂಲಿಯ
ಮಾಡಿ ತಂದು ನಿಂದುದೆ ಕಾಯಕದೊಳಗು
ಎನ್ನಂಗದ ಸತ್ತಿಗೆಯ ಕಾಯಕ ಬಸವಣ್ಣಂಗೆ ನೆಳಲು ಹಿಂಗಿದಾಗವೆ
ಕಾಯಕ ನಿಂದುದೆಂಬ ಭಾಷೆ
ಕಾಯಕ ನಿಂದಲ್ಲಿ ಎನಗೆ ಐಘಂಟೇಶ್ವರ ಲಿಂಗವಿಲ್ಲವೆಂಬ ಶಪಥ

ಈ ವಚನದಿಂದ ಬಸವಣ್ಣನವರಿಗಾಗಿ ಛತ್ರಿ ಹಿಡಿಯುವ ಕಾಯಕ ಮಾಡುತ್ತಿದ್ದನೆಂದು ಗೊತ್ತಾಗುತ್ತದೆ.

**೫೬. ನುಲಿಯ ಚಂದಯ್ಯ (೧೧೬೦)**

ಕಾಯಕಕ್ಕೆ ಬೆಲೆಗೊಟ್ಟು ಬಾಳಿದ ಶಿವಶರಣರಲ್ಲಿ ಚಂದಯ್ಯ ಮುಖ್ಯನಾದವನು. ವಿಜಾಪುರದಿಂದ ಹದಿನೆಂಟು ಮೈಲಿ ದೂರದಲ್ಲಿರುವ 'ಶಿವಣಿಗೆ' ಗ್ರಾಮದಲ್ಲಿ ಹುಟ್ಟಿ ಬೆಳೆದು ಬಸವಕಲ್ಯಾಣ ಸೇರಿದ ಚೇತನವಿದು.

ಕಲ್ಯಾಣದಲ್ಲಿ ಚಂದಯ್ಯ ಶರಣನು ಅರಣ್ಯದಿಂದ ಹುಲ್ಲನ್ನು ಕೊಯಿದು ತಂದು ಅದರಿಂದ ಹಗ್ಗ ಕಣ್ಣಿಗಳನ್ನು ಹೊಸೆದು ಅವನ್ನು ಮಾರಿ ಬಂದ ಕಾಯಕದ್ರವ್ಯದಿಂದ ಗುರುಲಿಂಗಜಂಗಮಸೇವೆ ಮಾಡುತ್ತಿದ್ದನು. ಒಂದು ದಿನ ಅಡವಿಯಲ್ಲಿ ಹುಲ್ಲು ಕುಯ್ಯುತ್ತಿರುವಾಗ ಚಂದಯ್ಯನ ಇಷ್ಟಲಿಂಗವು ಕಳಚಿಕೊಂಡು ಉರುಳಿ ಪಕ್ಕದ ನೀರಿನಲ್ಲಿ ಬಿದ್ದಿತು! ಈ ವಿಷಯ ಅರಿವಾದರೂ ಚಂದಯ್ಯನು ಅದನ್ನು ಹುಡುಕಿ ಮತ್ತೆ ಧರಿಸಿಕೊಳ್ಳದೆ ಹುಲ್ಲಿನ ಹೊರೆ ಹೊತ್ತು ಹೊರ

ಟನು. ಲಿಂಗದೇವನು ಪುರುಷಾಕಾರ ಧರಿಸಿ ಬೆನ್ನುಹತ್ತಿ ಕೂಗಿಕೊಂಡರೂ ಪ್ರಯೋಜನವಾಗಲಿಲ್ಲವು. ಸಮೀಪದಲ್ಲಿಯೇ ಮಡಿ ಮಾಡುವ ಕಾಯಕದಲ್ಲಿ ನಿರತನಾಗಿದ್ದ ಮಾಚಿದೇವನಲ್ಲಿ ಇಬ್ಬರೂ ನ್ಯಾಯದಾನವನ್ನು ಬೇಡಿದರು. ಅಲ್ಲಿ ನಿರ್ಣಯವಾದಂತೆ ಲಿಂಗದೇವನು ಒಡೆಯರ ಸೇವೆಮಾಡಿಕೊಂಡಿರುವುದಾಗಿ ಒಪ್ಪಿ ಚಂದಯ್ಯನ ಮನೆಗೆ ಬಂದನು. ಹಗ್ಗಕಣ್ಣಿಗಳನ್ನು ವಿಕ್ರಯಿಸುವ ಹೊಣೆ ಹೊತ್ತ ಲಿಂಗಯ್ಯನು ಒಮ್ಮೆ ಬಸವರಸರಲ್ಲಿಗೆ ಅವನ್ನು ಒಯ್ದಿತ್ತು ಮೂಲ ಬೆಲೆಗಿಂತ ಒಂದು ಸಾವಿರ ಅಧಿಕ ಹೊನ್ನನ್ನು ಪಡೆದು ಚಂದಯ್ಯನ ಮುಂದೆ ರಾಶಿ ಹಾಕಿದನು. ಚಂದಯ್ಯನು ತನ್ನ ಹಗ್ಗಗಳ ಬೆಲೆಯನ್ನು ಮಾತ್ರ ತೆಗೆದುಕೊಂಡು ಉಳಿದ ಹಣವನ್ನು ಹಿಂದಿರುಗಿ ಕೊಟ್ಟು ಬರುವಂತೆ ಹೇಳಿದನು. ಅಷ್ಟಕ್ಕೇ ಬಿಡದೆ ತನಗೆ ಲಿಂಗದೇವನ ಅವಶ್ಯಕತೆಯಿಲ್ಲೆಂದು ಶಿವಾನುಭವಮಂಟಪದಲ್ಲಿ ಕೂಡ ವಾದಿಸಿದನು. ಆದರೆ ಪ್ರಭುದೇವಾದಿಗಳು 'ಲಿಂಗ–ಜಂಗಮಗಳು ಪರಸ್ಪರ ಅವಲಂಬಿಗಳು ; ಗುರು–ಜಂಗಮ–ಭಕ್ತ ಎಲ್ಲರಿಗೂ ಲಿಂಗಸಾಹಿತ್ಯವಿರಲೇಬೇಕು' ಎಂದು ಹೇಳಿದ ಮೇಲೆ ಚಂದಯ್ಯನು ಮತ್ತೆ ಲಿಂಗಸಾಹಿತ್ಯಭರಿತನಾದನು.

ಕಲ್ಯಾಣಕ್ರಾಂತಿಯ ಅನಂತರದಲ್ಲಿ ಅಕ್ಕನಾಗಮ್ಮನವರೊಂದಿಗೆ ವಚನಭಂಡಾರ ಸಂರಕ್ಷಕನಾಗಿ ಹೊರಟ ಚಂದಯ್ಯನು, (ನಾಗಲಾಂಬಿಕೆಯು 'ಎಣ್ಣೆಹೊಳೆ' ಗ್ರಾಮದ ಸಿದ್ಧವೀರಸ್ವಾಮಿಗಳ ಆಶ್ರಮದಲ್ಲಿ ನಿಲ್ಲಲು) ಹೊಳಲಕೆರೆ ಸಮೀಪದ ಪದ್ಮಾವತಿಯೆಂಬ ಊರಿಗೆ ಬಂದು ಅಲ್ಲಿಯೇ ಲಿಂಗೈಕ್ಯನಾದನು. ಅಲ್ಲಿಂದೀಚೆಗೆ ಆ ಗ್ರಾಮವು 'ನುಲೇನೂರು' ಎಂಬ ಹೆಸರನ್ನೇ ಹೊಂದಿತು. ಈಗಲೂ ಆ ಊರಿನ ಕೆರೆಯ ಏರಿಯ ಮೇಲೆ ನುಲಿಯ ಚಂದಯ್ಯನ ಗದ್ದುಗೆಯನ್ನು ನಾವು ನೋಡಬಹುದಾಗಿದೆ.[51]

ನುಲಿಯಯ್ಯನ ವಚನ :

> ಕಂದಿಸಿ ಕುಂದಿಸಿ ಬಂಧಿಸಿ ನೋಯಿಸಿ ಕಂಡಕಂಡವರ ಬೇಡಿತಂದು
> ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗನೈವೇದ್ಯ ಸಲ್ಲದು
> ತನು ಕರಗಿ, ಮನ ಬಳಲಿ, ಬಂದ ತೆರದನುವರಿದು ಸಂದಿಲ್ಲದೆ ಸಂಶಯವಿಲ್ಲದೆ
> ಜಂಗಮಲಿಂಗಕ್ಕೆ ದಾಸೋಹವೇ ಮಾಟ, ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು
> ಲಿಂಗಾರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ
> ಇದು ಕಾರಣ ಸತ್ಯಶುದ್ಧಕಾಯಕದ ನಿತ್ಯ ದ್ರವ್ಯವಾದರೆ
> ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ

ಈ ವಚನದಲ್ಲಿ ಕಾಯಕದ ಮಹತ್ವವೂ, ಸತ್ಯಶುದ್ಧಕಾಯಕದಿಂದ ಬಂದ ದ್ರವ್ಯ ಮಾತ್ರವೇ ಗುರುಲಿಂಗಜಂಗಮ ಸೇವೆಗೆ ತಕ್ಕುದು—ಎಂಬ ತತ್ತ್ವವೂ ಮನಂಬುಗುವಂತೆ ಚಿತ್ರಿತವಾಗಿವೆ.

ನುಲಿಯ ಚಂದಯ್ಯ ವಚನಗಳು ೪೯ ಸಿಕ್ಕಿವೆ.

**೫೭. ಬಹುರೂಪಿ ಚೌಡಯ್ಯ** (೧೧೬೦)

ಬೀದರ ಜಿಲ್ಲೆಯ ರೇಕಳಿಕೆ ಗ್ರಾಮದ ಜನಸೇವ್ಯ–ಧರ್ಮರತಿ ಎಂಬ ಬ್ರಾಹ್ಮಣ ದಂಪತಿಗಳ ಮಗನೇ ಈ ಚೌಡಯ್ಯ. ಚಿಕ್ಕಂದಿನಿಂದ ಸಂಗೀತ–ನಾಟ್ಯಗಳಲ್ಲಿ ಆಸಕ್ತಿಯಿದ್ದ ಈತನು ಭರತವಿದ್ಯೆಯಿಂದ ರಸಿಕ ಜನರನ್ನು ರಂಜಿಸುತ್ತಿದ್ದನು. ಆ ಕಾಲದ ಅನೇಕ ಜನರಂತೆ ಇವನೂ ಲಿಂಗವಂತ ಧರ್ಮಕ್ಕೆ ಮಾರುಹೋಗಿ, ಚರಮೂರ್ತಿ ರೇಕನಾಥಾಚಾರ್ಯರಿಂದ ವೀರಶೈವ ದೀಕ್ಷೆ ಪಡೆದನು. ಗುರುವಿನ ಆದೇಶದಂತೆ 'ಬಹುರೂಪಿಯ ಕಾಯಕ' ಕೈಕೊಂಡು ಹರನ ಲೀಲೆಗಳ ರೂಪ ಧರಿಸಿ ಕುಣಿಯತೊಡಗಿದ. ಶಿಷ್ಯರು ಹೆಚ್ಚಿದಂತೆಲ್ಲಾ ಚೌಡಯ್ಯನು 'ಮೇಳ' ರಚಿಸಿ, ಅದನ್ನು ಮೆಚ್ಚಿದ ಜನ ನೀಡುತ್ತಿದ್ದ ಧನದಿಂದ ದಾಸೋಹ ನಡೆಸುತ್ತಿದ್ದನು. ಶಿವಪಾರಿಜಾತ ಮತ್ತು ರಾಮಕ್ರಿಯಾರಾಗ—ಇವು ಕಲಾಲೋಕಕ್ಕೆ ಚೌಡಯ್ಯನ ಕೊಡುಗೆಗಳು.[52] ಇವನ ವಚನಗಳ ಸಂಖ್ಯೆ ೩೮.

ಬಸವಾದಿ ಪ್ರಮಥರ ವಿಷಯ ಕೇಳಿದ ಚೌಡಯ್ಯ ತನ್ನ ಗುರು ಹಾಗೂ ಮೇಳದವರೊಂದಿಗೆ ಕಲ್ಯಾಣಕ್ಕೆ ಬಂದು ಅಲ್ಲಿ ಕೊನೆಯವರೆಗೂ ಇದೇ (ಬಹುರೂಪಿ) ಕಾಯಕ ಮಾಡುತ್ತಿದ್ದು ಬಯಲಾದನು.

ಬಸವಣ್ಣನವರನ್ನು ಸ್ತುತಿಸಿರುವ ಚೌಡಯ್ಯನ ವಚನ :

> ಕಾಮನ ಮಂದಿರದಡವಿಯಲ್ಲಿ ಶುಕ್ಲಶೋಣಿತವೆಂಬ ಮಡಕೆಯನೆ ಮಾಡಿ
> ಮೂತ್ರ ಶ್ಲೇಷ್ಮ ಅಮೇಧ್ಯವೆಂಬ ಪಾಕದ್ರವ್ಯವನಾ ಮಡಕೆಯಲ್ಲಿ ನಿಶ್ಚೈಸಿ

ಆ ಮಡಕೆಯನೊಡೆದಾತ ಬಸವಣ್ಣ ;
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂ ಬದುಕಿದೆನು

### ೫೮. **ಬಾಹೂರ ಬೊಮ್ಮಣ್ಣ** (೧೧೬೦)

ಬಿಜಾಪುರ ಜಿಲ್ಲೆಯ ಬಾಹೂರ ಎಂಬ ಗ್ರಾಮದ ಬೊಮ್ಮಣ್ಣನು ತೋಟ ಮಾಡುವ ಕಾಯಕದವನು. ಜೈನ ವರ್ತಕನೊಬ್ಬನೊಂದಿಗೆ ವಾದ ಮಾಡುವ ಅವಸರದಲ್ಲಿ ಶಿವನು 'ಓ' ಎನ್ನುವಂತೆ ಮಾಡಿದನು. ಇನ್ನೂ ಹಲವು ಪವಾಡಗಳು ಇವನಿಂದ ಜರುಗಿದುವು ಎಂದು ತಿಳಿದುಬರುತ್ತದೆ. ಬಸವಣ್ಣನವರ ನೆಚ್ಚಿನವನಾಗಿದ್ದನು.

ಬೊಮ್ಮಣ್ಣನ ವಚನ :

ಕೊರಡು ಕೊನರ್ವೋದಲ್ಲಿ ಬರಡು ಹಯನಾದಲ್ಲಿ
ಚಿತ್ರದ ಗೊಂಬೆ ನಿಜಕರ್ತೃ ರೂಪಾಗಿ ಬಂದಲ್ಲಿ
ಅವು ಹಾಹೆಯ ದೃಷ್ಟವೊ ವಿಶ್ವಾಸಿಯ ಚಿತ್ತವೊ
ಇವು ಭಕ್ತಿಯ ಹೊಲಬಿಗೆ ಮುಖ್ಯ
ಸಂಗನ ಬಸವಣ್ಣನ ಸತ್ಯ, ಬ್ರಹ್ಮೇಶ್ವರ ಲಿಂಗವ ಕೂಡುವ ಕೃತ್ಯ.

### ೫೯. **ಮಧುವಯ್ಯ** (೧೧೬೫)

ಮಧುವರಸ ಎಂದೂ ಈತನಿಗೆ ಹೆಸರುಂಟು. ಹುಟ್ಟಿನಿಂದ ಬ್ರಾಹ್ಮಣನಾದ ಈತನು ಬಸವಣ್ಣನವರ ಕಾರ್ಯಕ್ರಮವನ್ನು ಮೊದಲು ವಿರೋಧಿಸಿದ್ದನು. ಬಿಜ್ಜಳರಾಯನ ಮಂತ್ರಿಗಳಲ್ಲಿ ಒಬ್ಬನು. ಹರಳಯ್ಯ–ಕಲ್ಯಾಣಿ ದಂಪತಿಗಳು ತಂತಮ್ಮ ತೊಡೆಗಳ ಚರ್ಮದಿಂದಲೇ ತಯಾರಿಸಿದ 'ಪಾದರಕ್ಷೆ'ಗಳ ದೆಸೆಯಿಂದಾಗಿ, ಮಧುವರಸರು ವೀರಶೈವ ದೀಕ್ಷೆ ಪಡೆದುದು ಮಾತ್ರವಲ್ಲದೆ ತಮ್ಮ ಮಗಳನ್ನು ಹರಳಯ್ಯನವರ ಮಗನಿಗೆ ಮದುವೆ ಮಾಡಿಕೊಟ್ಟರು. ಇದೇ ಕಲ್ಯಾಣ ಕ್ರಾಂತಿಗೆ ನಾಂದಿಯಾಯಿತು.

ಇವರ ವಚನ :

ಕಾಳಿಂಗನ ಮಡುವ ಕಲಕಿದವನ ನಾಭಿಯ ಕೂಸಿನ ಶಿರಪಾಣಿಯಲ್ಲಿ ಬೇಡುವಾತನ
ಶಕ್ತಿಯ ಸಮರದಲ್ಲಿ ಓಲಾಡುವ ಮುಕ್ತಿವಂತರೆಲ್ಲರೂ ಕೇಳುವ ಬನ್ನಿ ಅರ್ಕೇಶ್ವರಲಿಂಗವ

ಮಧುವಯ್ಯನ ವಚನಗಳು ೧೦೦. (ಸಕಲ ಪುರಾತನರ ವಚನ)

### ೬೦. **ಮರುಳುಶಂಕರದೇವ** (೧೧೬೦)

ಬಸವಣ್ಣನವರ ಅನುಭವದಡಿಗೆಮನೆಗೆ ಶಿವಪಾಕವನ್ನೆಸಗಲು ಬಂದ ಸಹಸ್ರಾರು ಮಂದಿಯಲ್ಲಿ ಮರುಳುಶಂಕರ ದೇವರೂ ಒಬ್ಬರು. ಈಗಿನ ಅಫ್ಘಾನಿಸ್ಥಾನದಿಂದ ಬಂದವರು. ಆ ಪ್ರಾಂತದ ಕಣ್ಬುತ್ತೂರು ಗ್ರಾಮದಲ್ಲಿ ವಿರಕ್ತನಾಗಿದ್ದ ನೈಸರನ ಆಶ್ರಮದಲ್ಲಿದ್ದು ಪ್ರಸಾದದ ಮಹಿಮೆಯನ್ನು ತಿಳಿದುಕೊಂಡವನಾಗಿ ಕಲ್ಯಾಣಕ್ಕೆ ಬಂದು ಮಹಾಪ್ರಸಾದಿಯಾಗಿ ಮರುಳವೇಷದಲ್ಲಿದ್ದ ಸಾಕಾರ ಶಂಕರನಂತಿದ್ದವನು ಈ ಪುಣ್ಯಾತ್ಮ.

ಮಹಾಶ್ರೀಗುರುವೆ ತಂದೆ, ಮಹಾಜಂಗಮವೆ ತಾಯಿ
ಇವರಿಬ್ಬರ ಸಂಗಸಂಯೋಗದಿಂದಾನು ಹುಟ್ಟಿದೆ ನೋಡಯ್ಯಾ
ಸರ್ವಾಂಗ ಸಾಹಿತ್ಯ ನಾನು ಹುಟ್ಟಿದ ಬಳಿಕ
ತಂದೆತಾಯಿಗಳಿಬ್ಬರೂ ಲಿಂಗವೆಂಬ ಹೆಣ್ಣ ತಂದು
ಎನ್ನ ಕೊರಳಲ್ಲಿ ಕಟ್ಟಿ ಮದುವೆಯ ಮಾಡಿದರಯ್ಯಾ
ಆ ಹೆಣ್ಣಿನ ಕೈವಿಡಿದು ನಾನು ಬದುಕಿದೆನು
ಆ ಹೆಣ್ಣಿನ ಸಂಗಸಂಯೋಗದಿಂದ ಮಗನೆಂಬ
ಮಹಾಲಿಂಗ ಹುಟ್ಟಿದನಯ್ಯಾ
ಆ ಮಗ ಹುಟ್ಟದ ಮುನ್ನವೇ ಎನಗೆ ಮರಣವಾಯಿತ್ತು.
ಲಿಂಗವೆಂಬ ಹೆಂಡತಿ ಮುಂಡೆಯಾದಳು
ತಂದೆತಾಯಿಗಳಿಬ್ಬರೂ ಎನ್ನೊಂದಾಗಿ ಅಡಗಿ ಹೋದರು

ಇನ್ನು ಮುನ್ನಿನ ಪರಿಯುಂತುಟಿಲ್ಲವಾಗಿ ನಾನು ಬದುಕಿದೆನು ಕಾಣಾ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಶರಣರ ಕರುಣದಿಂದ ಎನ್ನ ಕರ್ಮ ನಿರ್ಮಳವಾಯಿತ್ತಯ್ಯಾ
ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

ಇಲ್ಲಿ ಉಕ್ತವಾಗಿರುವ 'ಶರಣಪತಿ–ಲಿಂಗಸತಿ' ಭಾವ ಗಮನಾರ್ಹವಾದುದು. ಸಾಮಾನ್ಯವಾಗಿ ಶರಣರ ವಚನಗಳಲ್ಲಿ ಕಂಡುಬರುವುದು 'ಶರಣಸತಿ–ಲಿಂಗಪತಿ' ಭಾವ. ಮರುಳುಶಂಕರದೇವರಲ್ಲಿ ಕಂಡುಬರುವ ಈ 'ಜೀವಪತಿ–ದೇವಸತಿ' ಭಾವವು ಸೂಫಿ ಸಂಪ್ರದಾಯದಲ್ಲಿದೆ. ಆಫ್‌ಘಾನಿಸ್ಥಾನ ಮತ್ತು ಅದರ ಅಕ್ಕಪಕ್ಕದ ಪ್ರಾಂತದಲ್ಲಿ ಸೂಫಿ ಧರ್ಮ ಪ್ರಚಾರದಲ್ಲಿದೆ. ಮರುಳುಶಂಕರದೇವರು ಆಫ್‌ಘಾನಿಸ್ಥಾನದಿಂದ ಬಂದವರೆನ್ನುವುದಕ್ಕೆ ಈ ವಚನ ಒಂದು ಆಂತರಿಕ ಪ್ರಮಾಣವಾಗಬಹುದೆಂದು ವಿದ್ವಾಂಸರು ತರ್ಕಿಸುತ್ತಾರೆ.[53]

ಅಪ್ರತಿಮ ಅಹಿಂಸಾನಿಷ್ಠೆಯುಳ್ಳ ಮರುಳಶಂಕರದೇವರು ಬಸವಣ್ಣನವರ ಮಹಾಮನೆಯ ಅಂಗಳದಲ್ಲಿನ ಪ್ರಸಾದಕುಂಡದ ಪಕ್ಕದಲ್ಲಿಯೇ ಹನ್ನೆರಡು ವರ್ಷಕಾಲವಿದ್ದರೂ ಯಾರ ದೃಷ್ಟಿಗೂ ಬೀಳದಿದ್ದುದು ಆಶ್ಚರ್ಯದ ಸಂಗತಿಯೇ. ಅಲ್ಲಮಪ್ರಭು ಅಲ್ಲಿ ಪಾದವಿರಿಸುತ್ತಿದ್ದಂತೆಯೇ ಈ ಮಹಾತ್ಮನಿರವು ಥಕ್ಕನೆ ಗೋಚರವಾಗುತ್ತದೆ. '....ಗುಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋರಿತ್ತು ಕಾಣಾ ಸಂಗನ ಬಸವಣ್ಣ' ಎಂದು ಉದ್ಗರಿಸುತ್ತಾರೆ ಪ್ರಭುದೇವರು. ಆಗ ಎಲ್ಲ ಶರಣರಿಗೆ ಆತನ ಮಾಹಾತ್ಮ್ಯ ಅಭಿವ್ಯಕ್ತವಾಗುತ್ತದೆ.

ಮರುಳುಶಂಕರದೇವರ ವಚನಗಳು ೨೯ ಸಿಕ್ಕಿರುತ್ತವೆ.

## ೬೧. ಮೋದರ ಕೇತಯ್ಯ (೧೧೬೦)

ಮೋದರ ಕೇತಯ್ಯ, ಮೋದಾರ ಕೇತಯ್ಯ, ಮೋದರ ಕೇತಿದೇವಯ್ಯ—ಎಂಬ ಮೂರು ರೂಪಗಳಿಂದ ಶರಣ ಸಾಹಿತ್ಯಾಕಾಶದಲ್ಲಿ ಬೆಳಗುವ ಈ ಶರಣರ ಪ್ರಸ್ತಾಪ ಜನಪದ ಸಾಹಿತ್ಯದಲ್ಲಿಯೂ ಇದೆ. ಅದರ ಪ್ರಕಾರ ಈತನು ಮಲೆನಾಡಿನ ಉಳಿವೆ ಬೆಟ್ಟದ ಕೆಳಗಿನ ಬೇಲೂರವನೆಂದೂ, ಸಾತೆವ್ವ ಎಂಬುವಳು ಈತನ ಅರ್ಧಾಂಗಿ[54]ಯೆಂದೂ ತಿಳಿದುಬರುತ್ತದೆ. ಅಲ್ಲಿಂದ ಕಲ್ಯಾಣಕ್ಕೆ ಬಂದು ನೆಲೆಸಿದನು.

ಪ್ರತಿದಿನ ಕಾಡಿಗೆ ಹೋಗಿ ಬಿದಿರುಗಳನ್ನು ಕಡಿದು ತಂದು ಅವುಗಳಿಂದ ಬುಟ್ಟಿ ಮೊರ ಮೊದಲಾದುವನ್ನು ಹೆಣೆದು, ಅವುಗಳನ್ನು ಮಾರಿ ಬಂದ ಹಣದಿಂದ ದಾಸೋಹ ನಡೆಸಿ, ತಾವೂ ಜೀವಿಸುವುದು ಆತನ ಸತ್ಯಶುದ್ಧಕಾಯಕವಾಗಿದ್ದಿತು.

ಒಮ್ಮೆ ಬಿದಿರು ಕಡಿಯಲು ಕಾಡಿಗೆ ಹೋದಾಗ ಶಿವನ ಮಾಯೆಯಿಂದ ಮುತ್ತು-ರತ್ನ-ಚಿನ್ನ ಬಿದಿರಿನಲ್ಲಿ ಕಂಡು ಈತ ಬೇಸರಪಟ್ಟು ಮೆಳೆಯಿಂದ ಮೆಳೆಗೆ ಧಾವಿಸಿ ಕಡೆಗೆ ಒಂದು ಮೆಳೆ ಕಡಿಯುವಾಗ ಜಾರಿ ಬೀಳುತ್ತ 'ದಸಿ'ಯೊಂದು ಎದೆಗೆ ನಾಟಿತು. ಆ ನೋವಿನಲ್ಲಿಯೇ ಜಂಗಮದಾಸೋಹವನ್ನೂ ನಡೆಸಿದನು. ಆಮೇಲೆ ಹೆಂಡತಿಯಿಂದ ಆ ದಸಿಯನ್ನು ತೆಗೆಸಲು, ಕೇತಯ್ಯನ ಪ್ರಾಣಪಕ್ಷಿ ಹಾರಿಹೋಯಿತು. ಸುದ್ದಿ ತಿಳಿದೊಡನೆ ಜಂಗಮಪ್ರಾಣಿಯಾದ ಬಸವಣ್ಣನವರೂ ಹರಣ ತೊರೆದರು. ಕಡೆಗೆ ಮಡಿವಾಳ ಮಾಚಯ್ಯನು ವೀರಘಂಟೆ ಬಾರಿಸುತ್ತ ಅವರಿಬ್ಬರನ್ನೂ ಬದುಕಿಸೆಂದು ಶಿವನಲ್ಲಿ ಪ್ರತಿಜ್ಞಾಪೂರ್ವಕ ಮೊರೆಯಿಡಲು ಪ್ರಾರ್ಥಿಸಲು ಇಬ್ಬರೂ ಬದುಕಿದರು.

'ಗೌರೇಶ್ವರಾ' ಹಾಗೂ 'ಗೌರೇಶ್ವರ ಲಿಂಗ' ಎನ್ನುವ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ ಮೋದರ ಕೇತಯ್ಯ:

ಎನ್ನ ಕಾಯದ ಕಳವಳವ ನಿಲಿಸಿ ಗುರುಲಿಂಗವ ತೋರಿದ
ಎನ್ನ ಮನದ ವ್ಯಾಕುಳವ ನಿಲಿಸಿ ಜಂಗಮವ ತೋರಿದ
ಇಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ ಎನ್ನ ಪಾವನವ ಮಾಡಿದನು
ಅಮರ ಗಣಂಗಳು ಮುನಿದು ಎನ್ನ ಕೈಲಾಸಕ್ಕೊಯ್ದರೆ
ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ ಸಂಗನ ಬಸವಣ್ಣನೆ ಗುರುವೆನಗೆ
ಸಂಗನ ಬಸವಣ್ಣನೆ ಪರವೆನಗೆ, ಸಂಗನ ಬಸವಣ್ಣನ ಕರುಣದಿಂದ
ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು, ಕಾಣಾ ಗೌರೇಶ್ವರಾ

**೬೨. ಮೈದುನ ರಾಮಯ್ಯ**

ಆಂಧ್ರದೇಶದ ಭೀಮಾವತೀ ಗ್ರಾಮದ ಸೋಮನಾಥ–ಮಹಾದೇವಿ ದಂಪತಿಗಳ ಮಗ ಈ ರಾಮಯ್ಯ. ತಂದೆ ತೀರಿದ ಮೇಲೆ ಜೊತೆಯ ಮಕ್ಕಳು 'ನಿನಗೆ ಅಕ್ಕಭಾವರು ಎಲ್ಲಿದ್ದಾರೆ ?' ಎನ್ನಲು ರಾಮಯ್ಯ ದುಃಖದಿಂದ ತಾಯಿಗೆ ಹೇಳಿದ. ಆಗ ತಾಯಿಯು 'ನಿನ್ನ ಅಕ್ಕನು ಗೌರಿ, ಭಾವನು ಮಲ್ಲಿಕಾರ್ಜುನ; ಅವರು ಶ್ರೀಶೈಲದಲ್ಲಿದ್ದಾರೆ ?' ಎಂದು ಅರುಹಿದಳು. ರಾಮಯ್ಯನು ಅವರನ್ನು ಹುಡುಕುತ್ತ ಬಸವಳಿದು ಬಿದ್ದನು. ಆಗ ಪರಮಾತ್ಮನು ಪ್ರತ್ಯಕ್ಷನಾಗಿ ರಾಮಯ್ಯನ ಪ್ರಾರ್ಥನೆಯಂತೆ ಭಾವನಾಗಿ ಹೋಗಿ ಹಬ್ಬ ತೀರಿಸಿದನು. ಹೀಗೆ ಮೈದುನನಾಗಿ ಭಕ್ತಿಯನ್ನಾಚರಿಸಿದ ರಾಮಯ್ಯನಿಗೆ ಶಿವನು ವೀರಶೈವೋಪದೇಶಮಾಡಿ—'ಇಷ್ಟಲಿಂಗ'ದ ರೂಪದಲ್ಲಿ ಸದಾ ಇರುವುದಾಗಿ ಹೇಳಿದನು.

ರಾಮಯ್ಯನ ವಚನ :

"...ಚೆನ್ನಬಸವಣ್ಣನೆ ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು. ಆನ ಮಾಡಿದಲ್ಲಿ ಸುಂಡಾಳವೇ ಹೇಳ. ನಾನಿಲ್ಲದಿರ್ದೊಡೆ ನೀನಿಲ್ಲ. ನಾನು ನೀವೆಂಬುದಂತಿರಲಿ. ಒಡಿಯೊ ಮುಡಿಯೊ ನೀ ಮಾಡಿದಂತಿಪ್ಪೆನು. ನಗುವುದು ಕೆಲಕಡೆ ನೋಡ. ಸಾತ್ವಿಕ ಸಜ್ಜನದ ಗುರುವಿನಿಂದ ಬದುಕಿದೆ ನಾನು, ನಿನಗಂಜೆ ಮಹಾಲಿಂಗ ಚೆನ್ನರಾಮ."

**೬೩. ವಚನ ಭಂಡಾರಿ ಶಾಂತರಸ (೧೧೬೦)**

ಬಸವಣ್ಣನವರ ಕೈಕೆಳಗಿದ್ದ ಹನ್ನೆರಡು ಜನ ಭಂಡಾರಿಗಳಲ್ಲಿ ಶಾಂತರಸನೂ ಒಬ್ಬ. 'ಎನ್ನೊಡೆಯ ಬಸವಣ್ಣ ಹೇಳಿದ ಮಾತಿಗೆ ಅಡಿ ಇಡಲಮ್ಮದೆ ಕಟ್ಟಿದೆ' ಶಾಂತರಸನೇ ಹೇಳಿದ ಈ ಮಾತಿನಿಂದ ಅಣ್ಣನವರ ಮಾತಿನಂತೆ ವೀರಶೈವನಾದುದಾಗಿ ತಿಳಿಯುತ್ತದೆ. ಇವನ ೬೨ ವಚನಗಳು ದೊರೆತಿವೆ. (ಸಕಲಪುರಾತನರ ವಚನ)

ಶಾಂತರಸ ತಾನು ವಚನಗಳನ್ನು ಬರೆದುದು ಮಾತ್ರವಲ್ಲದೆ, ವಚನಗಳನ್ನು ಬರೆಯಿಸಿ ಅವುಗಳನ್ನು ಜೋಪಾನ ಪಡಿಸಿ ಕಾಪಿಡುವ ಜವಾಬ್ದಾರಿಯನ್ನೂ ವಹಿಸಿಕೊಂಡ ಪುಣ್ಯಾತ್ಮ.

ಶಾಂತರಸನ ವಚನದಲ್ಲಿ ಅವನ ಆತ್ಮಚರಿತ್ರೆಯೂ, ಆ ಕಾಲದ ಧಾರ್ಮಿಕ ಪರಿಸ್ಥಿತಿಯೂ ಚಿತ್ರಿತವಾಗಿರುವುದು :

ಸ್ಥಳಕುಳವನರಿಯಬೇಕೆಂಬರು ; ಭಕ್ತನಾಗಿ ಮಹೇಶ್ವರನಾಗಬೇಕೆಂಬರು
ಮಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು
ಪ್ರಸಾದಿಯಾಗಿ ಪ್ರಾಣಲಿಂಗಿಯಾಗಬೇಕೆಂಬರು
ಪ್ರಾಣಲಿಂಗಿಯಾಗಿ ಶರಣನಾಗಬೇಕೆಂಬರಿಞ, ಶರಣನಾಗಿ ಐಕ್ಯನಾಗಬೇಕೆಂಬರು
ಐಕ್ಯ ಏತರಿಂದ ? ಕೂಟ ನಾನರಿಯೆ !
ಒಳಗಣ ಮಾತು ಹೊರಹೊಮ್ಮಿಯಲ್ಲದೆ ಎನಗೆ ಅರಿಯಬಾರದು
ಎನಗೆ ಐಕ್ಯನಾಗಿ ಶರಣನಾಗಬೇಕು ; ಶರಣನಾಗಿ ಪ್ರಾಣಲಿಂಗಿಯಾಗಬೇಕು
ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು
ಪ್ರಸಾದಿಯಾಗಿ ಮಹೇಶ್ವರನಾಗಬೇಕು, ಮಹೇಶ್ವರನಾಗಿ ಭಕ್ತನಾಗಬೇಕು
ಭಕ್ತನಾಗಿ ಸಕಲ ಯುಕ್ತನಾಗಬೇಕು. ಯುಕ್ತಿ ನಿಶ್ಚಯವಾದಲ್ಲಿಯೇ ಐಕ್ಯಸ್ಥಳ !
ಒಳಹೊರಗಾಯಿತ್ತು, ಅಲೇಖ ಲೇಖವಾಯಿತ್ತು, ಎನಗೆ ಕಾಣ ಬಂದಿತ್ತು
ಅಲೇಖನಾದ ಶೂನ್ಯ ಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

—ಶಾಂತರಸನ ಹೃದಯತರಂಗವು ಹೊರಹೊಮ್ಮುವ ಅವರೋಹಣ ರೀತಿಯಿದು.[55]

ಒಟ್ಟು ಮಾತು :

ಅರುವತ್ತು ಮೂವರು ಶರಣಶರಣೆಯರ ಸಂಕ್ಷಿಪ್ತ ಜೀವನಚರಿತ್ರೆಯನ್ನೂ ಅವರ ವಚನೋದಾಹರಣೆಯನ್ನೂ ಇಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ. ಇದೇನೂ ಪೂರ್ಣಪಟ್ಟಿಯಲ್ಲ—ಎಂದು ಹೇಳಬೇಕಾದ್ದೇ ಇಲ್ಲ. ಏಕೆಂದರೆ ಹತ್ತಿರ ಹತ್ತಿರ ಒಂದು ಸಾವಿರ ವರ್ಷಗಳಿಂದ ಇಂದಿನವರೆಗೆ ವಚನ-ಸಾಹಿತ್ಯ ರಚಿತವಾಗುತ್ತಲೇ ಇದೆ ; ನೂರಾರು ಜನ ವಚನ ರಚಿಸಿದ್ದಾರೆ, ಈಗಲೂ ರಚಿಸುತ್ತಿದ್ದಾರೆ. 'ಸ್ಥಾಲೀಪುಲಾಕನ್ಯಾಯ'ದಂತೆ ಅಲ್ಲಲ್ಲಿ ಕಣ್ಣಿಗೆ ಬಿದ್ದವರನ್ನು ಇದ್ದುದರಲ್ಲಿ ಮುಖ್ಯರೆನಿಸಿದವರನ್ನು ಪ್ರಕೃತಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ವಚನಕಾರರನ್ನು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು :

ಒಂದು—ಬಸವಣ್ಣನವರಿಗೆ ಮೊದಲು ಇದ್ದ ದೇವರ ಅಥವಾ ಜೇಡರ ದಾಸಿಮಯ್ಯನವರಿಂದ ಹಿಡಿದು ಸಂಗಮೇಶ್ವರ ಅಪ್ಪಣ್ಣನವರ ವರೆಗೆ ೩೧ ಮಂದಿ.

ಎರಡು—ಬಸವಣ್ಣನವರ ಸಮಕಾಲೀನರು—ನಾಗಲಾಂಬಿಕೆಯಿಂದ ಹಿಡಿದು ವಚನ ಭಂಡಾರಿ ಶಾಂತರಸನವರೆಗೆ ೩೨ ಮಂದಿ.

ಮೂರು—ಬಸವಾದಿ ಪ್ರಮಥರ ಕಾಲಾನಂತರದಲ್ಲಿ ವಚನ ರಚಿಸಿ ಪ್ರಖ್ಯಾತರಾದ—ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರು, ಸುತ್ತೂರು ವೀರಸಿಂಹಾಸನಾಧೀಶ್ವರರಾದ ಘನಲಿಂಗಿಗಳು, 'ಅಖಂಡೇಶ್ವರ' ಎಂಬ ಅಂಕಿತದಿಂದ ವಚನ ರಚಿಸಿದ ಷಣ್ಮುಖಸ್ವಾಮಿಗಳು—ಮುಂತಾದವರು.

ನಾಲ್ಕು—ಆಧುನಿಕ ವಚನಕಾರರು: ಡಾ॥ ಶ್ರೀ ಜ.ಚ.ನಿ ಅವರು, ಡಾ. ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ)ರು, ಶ್ರೀಮತಿ ಗು. ಶಂಕರಮ್ಮ—ಮುಂತಾದವರು.

ಮೂರು ಮತ್ತು ನಾಲ್ಕನೆಯ ಭಾಗದವರ ಬಗೆಗೆ ಈ ಲೇಖನದಲ್ಲಿ ಪ್ರಸ್ತಾಪಿಸಲಿಲ್ಲ. ಕಾರಣ, '೧೧ ಮತ್ತು ೧೨ನೆಯ ಶತಮಾನದ ಶಿವಶರಣ–ಶರಣೆಯರ ವಚೋವಿಲಾಸ'ವನ್ನು ಕುರಿತೇ ಪ್ರಕೃತ ಲೇಖನದಲ್ಲಿ ಬರೆಯುವ ಉದ್ದೇಶವನ್ನಿಟ್ಟುಕೊಳ್ಳಲಾಗಿದ್ದಿತು. ಜತೆಗೆ, ಲೇಖನ ಅತಿವಿಸ್ತಾರವಾದೀತೆಂಬ ಶಂಕೆ.

ಒಟ್ಟಿನಲ್ಲಿ ಅದೆಷ್ಟು ಜನ ವಿದ್ವಾಂಸರು ಈ ಶರಣ ಗಣಿಯಲ್ಲಿ ಕೆಲಸ ಮಾಡಿದರೂ ಮುಗಿಯದಷ್ಟು ಅನರ್ಘ್ಯ ರತ್ನಗಳಿರುವುದು ಸರ್ವವಿದಿತ.

ನೆಲುವಿಗೆಯ ಶಾಂತಯ್ಯ, ಕೋಲಶಾಂತಯ್ಯ, ಹರಳಯ್ಯ, ಭರಿತಾರ್ಪಣದ ಚೆನ್ನಬಸವಣ್ಣ, ಸೊಡ್ಡಳ ಬಾಚರಸ, ಕದಿರೆ ರೆಮ್ಮವ್ವೆ, ಸುಗ್ಗವ್ವೆ ಮುಂತಾದ ಇನ್ನೂ ಅನೇಕ ಶರಣಶರಣೆಯರ ವಚನಗಳು ಅವರವರ ಜೀವನೇತಿಹಾಸದೊಂದಿಗೆ ಪ್ರಕಟವಾಗಬೇಕಾಗಿದೆ.

ಅಂತಃಕರಣದಲ್ಲಿ ಮೂಡಿದ ಸದಸದ್ವಿಚಾರಗಳನ್ನು ತೇಜಃಪುಂಜವಾದ ರೀತಿಯಿಂದ ಹೇಳಿದಂತಹವು—ವಚನಗಳು. ಹೇಗೆ ಬೈಬಲ್, ಕುರಾನ, ಉಪನಿಷದ್ಗ್ರಂಥಗಳು ಆಯಾ ಜನಾಂಗಗಳಲ್ಲಿ ಮಹದ್ಗ್ರಂಥಗಳಾಗಿರುವವೋ ಹಾಗೆಯೇ ಶಿವಶರಣರ ವಚನಗಳಾದರೂ ಕನ್ನಡದಲ್ಲಿ ಮಹತ್ವದ ಕೃತಿಗಳಾಗಿರುತ್ತವೆ—ಎಂದು 'ವಚನಪಿತಾಮಹ'ರು ಉದ್ಗರಿಸಿರುವುದು ಅದೆಷ್ಟು ಸತ್ಯಸಂಗತಿ.

ಶರಣ ವಾಣಿಗಳಲ್ಲಿ ಕಾಯಕಮಹತ್ವ, ಅದರ ಬಗೆಗೆ ತಮಗಿದ್ದ ಅತೀವ ನಿಷ್ಠೆ, ತದನುಗುಣವಾಗಿ ಅವರು ಬಳಸಿರುವ ಪ್ರತಿಮೆ, ಭಾಷೆ, ಸಾಹಿತ್ಯಗುಣ—ಇವು ಮೇಳವಿಸಿ ತಮ್ಮದೇ ಆದ ಪ್ರಭಾವವನ್ನು ಎಲ್ಲ ಕಾಲಕ್ಕೂ ಬೀರಬಲ್ಲಂತಹ ರೀತಿಯಲ್ಲಿ ಪ್ರತಿಪಾದಿತವಾಗಿರುವುದು ಕನ್ನಡ ನಾಡಿನ ಹೆಮ್ಮೆಯ ವಿಷಯವೇ ಸರಿ.

"ವಚನ ಸಾಹಿತ್ಯ ಚಿರಾಯುವಾಗಲಿ ॥"

## ಅಡಿಟಿಪ್ಪಣಿಗಳು

1 ಡಾ॥ ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ, ಪು. ೧೫೮ (೫ನೆಯ ಮುದ್ರಣ ೧೯೭೧)
2 ಎಂ. ಆರ್. ಶ್ರೀನಿವಾಸಮೂರ್ತಿ: ವಚನಧರ್ಮಸಾರ, ಪು. ೨೩೪
3 ಡಾ॥ ಶ್ರೀ ಜಚನಿ: ಚಂದ್ರಗುಂಡ ದೇಸಿಕೇಂದ್ರರು.
4 ಶಾಂತರಸ: ವಚನ ಸಾಹಿತ್ಯದ ಪ್ರಾರಂಭಕಾರರು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೬೨
5 ಅದೇ, ಪು. ೬೮
6 ಅದೇ, ಪು. ೬೯
7 ಫ. ಗು. ಹಳಕಟ್ಟಿ: ಶಿವಶರಣರ ಚರಿತ್ರೆಗಳು, ಭಾಗ ೩, ಪ್ರ.ಮು, ಪು. ೩೮೮
8 ಹೀ. ಚಿ. ಶಾಂತವೀರಯ್ಯ: ಡೋಹರ ಕಕ್ಕಯ್ಯ, ಬಸವೇಶ್ವರರ ಸಮಕಾಲೀನರು, ಪು. ೬೯೩–೬೯೪
9 ಶಾಂತರಸ: ಸ. ಕ. ಸಾ. ಚ, ಪು. ೬೫
10 ಬಿ. ಶಿವಮೂರ್ತಿಶಾಸ್ತ್ರೀ: ಬಸವೇಶ್ವರರ ಸಮಕಾಲೀನರು, ಪು. ೭೨೫
11 ಆರ್. ನರಸಿಂಹಾಚಾರ್: ಕರ್ನಾಟಕ ಕವಿಚರಿತೆ, ಭಾಗ ೧, ಪು. ೧೮೫–೧೮೬
12 ಅದೇ, ಪು. ೭೮
13 ಬಿಬ್ಬಿಬಾಚಯ್ಯ ಮತ್ತು ಮೆರೆಮಿಂಡಯ್ಯಗಳ ವಚನಗಳು, ಮೈ.ವಿ.ವಿ. ಕನ್ನಡ ಅಧ್ಯಯನ ಸಂಸ್ಥೆ, ಪು. ೬೭
14 ಡಾ॥ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು, ಶ್ರೀ ಸಿದ್ಧಗಂಗಾಮಠ (ಭಾಷಣ)
15 ಟಿ. ಎಸ್. ಮಹಾದೇವಯ್ಯ: ಅನುಭವಮಂಟಪ, ಪ್ರ.ಮು. ೧೯೬೮, ಪು. ೯

16 ಡಾ॥ ಶ್ರೀ ಜಚನಿ: ವಚನ ರಚಿಸಿದ ಗುರುದೇವ_ಗುರುದೇವಿಯರು, ವಿಭೂತಿ, ಪು. ೩೦೭

17 ಸಿದ್ಧಯ್ಯ ಪುರಾಣಿಕ: ಶರಣಚರಿತಾಮೃತ, ಪು. ೪೦೬ (೧೭_ಅ) ವಿಭೂತಿ, ಪು. ೨೮೮

18 ಅದೇ, ೨೯೦_೨೯೧

19 ಬಿ. ಶಿವಮೂರ್ತಿಶಾಸ್ತ್ರೀ: ಮರುಳಸಿದ್ಧ, ಮಲ್ಲಿಕಾರ್ಜುನಪಂಡಿತಾರಾಧ್ಯ, ಬಸವೇಶ್ವರರ ಸಮಕಾಲೀನರು, ಪು. ೩೧೮

20 ಶಿವಗಂಗಾಕ್ಷೇತ್ರದ ಸಮೀಪದಲ್ಲಿರುವ ಕೆಂಬಾಳು ಸಂಸ್ಥಾನ ಮಠದಲ್ಲಿ ಲೇಖಕನ (ಕೆ.ಪಿ.ಶಿ) ವಂಶಸ್ಥರ 'ಮನೆದೇವರು' ಎಂದು ಪರಂಪರೆಯಿಂದ ಕರೆಯಲಾಗುತ್ತಿರುವ ಶ್ರೀ ಮರುಳಸಿದ್ಧೇಶ್ವರಮೂರ್ತಿಯಿದ್ದು ಪ್ರತಿನಿತ್ಯ ಪೂಜೆ ನಡೆಯುತ್ತಿದೆ.

21 ಕೆ. ಪಿ. ಶಿವಲಿಂಗಯ್ಯ: ಇತರ ಶರಣರ ವಚನಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೩, ಬೆಂ.ವಿ.ವಿ. ಪು. ೧೬೭

22 ವಿಭೂತಿ, ಪು. ೨೯೩

23 ಅದೇ, ಪು. ೨೯೬_೨೯೭

24 ಅದೇ, ಪು. ೨೯೮

25 ಅದೇ, ಪು. ೩೦೦

26 ರಾಯಮ್ಮನ ಪತಿ ರಾಯಸದ ಮಂಚಣ್ಣನು ಬಸವಣ್ಣನವರ ಓಲೆಗಳನ್ನು ಹೊತ್ತೊಯ್ಯುತ್ತಿದ್ದ ನಿಯೋಗಿ.

27 ವಿಭೂತಿ, ಪು. ೨೯೯

28 'ಗೀರ್ವಾಣ' ಗ್ರಂಥ (ಸಂ: ಕೆ.ಪಿ.ಶಿ), ವಾಗ್ವಿಲಾಸ ಪ್ರಕಾಶನ, ಬೆಂಗಳೂರು_೪೦

29 'ಒಂಬತ್ತು ಬಾಗಿಲು...' ಮುಂತಾಗಿ ಉಕ್ತವಾಗಿರುವ ಈ ವಚನವು ಸರ್ಪಭೂಷಣ ಶಿವಯೋಗಿಗಳವರ 'ಶ್ರೀಗಿರಿಯ ಸುಕ್ಷೇತ್ರಕೆಂದು ಹೋಗಿ ಯಾತ್ರೆಯ ಮಾಡಿ ಬಂದೆ। ಶ್ರೀಗಿರಿಯು ಶರೀರದೊಳಗುಂಟು ॥' ಎನ್ನುವ ಯಾಲಪದದ ಹಾಡುಗಬ್ಬವನ್ನು ಜ್ಞಾಪಕಕ್ಕೆ ತರುತ್ತದೆ.

29ಅ ಬಿ. ಶಿವಮೂರ್ತಿಶಾಸ್ತ್ರಿ, ಬಸವೇಶ್ವರರ ಸಮಕಾಲೀನರು, ಪು. ೭೩೩

30 ವಿಭೂತಿ, ಪು. ೩೦೪

31 ಅದೇ, ಪು. ೩೦೬

32 ವಿ. ಎ. ದಿವಾಣಜಿ: ಸಿದ್ಧರಾಮ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೧೩೪

33 ಶಾಂತಾದೇವಿ ಮಾಳವಾಡ: ಇತರ ಶರಣೆಯರ ವಚನಗಳು, ಅದೇ, ಪು. ೧೭೭

34 ಅದೇ, ಪು. ೧೭೬

34ಅ ಸಿದ್ಧಗಂಗಾ ಶ್ರೀ, ಪು. ೮೧೬

35 ಶಾಂತಾದೇವಿ ಮಾಳವಾಡ: ಗಂಗಾಂಬಿಕೆ_ನೀಲಾಂಬಿಕೆ, ಬಸವೇಶ್ವರರ ಸಮಕಾಲೀನರು, ಪು. ೨೩೧

36 ಜಿ. ಎಸ್. ಶಿವರುದ್ರಪ್ಪ: ಅಂಬಿಗರ ಚೌಡಯ್ಯ, ಶರಣ ಸಾಹಿತ್ಯ, ಸಂಪುಟ ೧೧, ಸಂಚಿಕೆ ೧೦_೧೧

37 ಎಚ್. ತಿಪ್ಪೇರುದ್ರಸ್ವಾಮಿ: ಶರಣರ ಸನ್ನಿವೇಶಗಳು, ಶೂನ್ಯಸಂಪಾದನೆ, ಪು. ೧೦೫

38 ಅಮೃತ ಮಹಾದೇವ ಅಣ್ಣಿಗೇರಿ: ಕರ್ನಾಟಕದ ಸಂಸ್ಕೃತಿಯ ಸ್ಥಳಗಳು, ಪು. ೩೪

39 ಶಾಂತಾದೇವಿ ಮಾಳವಾಡ: ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೧೭೮

40 'ಲಾರ್ಡ್‌ಕ್ಲೈವ್' ಆತ್ಮಹತ್ಯೆ ಮಾಡಿಕೊಳ್ಳಬಯಸಿದಾಗ ಅದು ತಪ್ಪಿದ್ದು ಭವಿಷ್ಯ ಸಾಧನೆಗಲ್ಲವೆ?

41 ತಂಗಿ ಅಡಗಿದ ಸ್ಥಳವೇ 'ತಂಗಡಗಿ'

42 ಸ.ಕ.ಸಾ.ಚ, ಪು. ೧೮೧

43 ಅದೇ, ಪು. ೧೫೫-೧೫೬

44 ಅದೇ, ಪು. ೧೭೯_೧೮೦

45 ಅದೇ, ಪು. ೧೫೬

46 ಉರಿಲಿಂಗಪೆದ್ದಿಗಳ ವಚನಗಳು, ಸಂ. ಡಾ॥ ಎಚ್. ಪಿ. ಮಲ್ಲೀದೇವರು

47 ಅದೇ, ಪು. ೧೭೯

48 ಪುಟ್ಟರಾಜ ಗವಾಯಿ: ಬಸವೇಶ್ವರರ ಸಮಕಾಲೀನರು, ಪು. ೪೭೫

49 ಕೆ. ಪಿ. ಶಿವಲಿಂಗಯ್ಯ: ಗಾಣದ ಕನ್ನಪ್ಪ, ಬಸವೇಶ್ವರರ ಸಮಕಾಲೀನರು, ಪು. ೭೧೯

50 ಡಿ. ಎಲ್. ನರಸಿಂಹಾಚಾರ್: ಕೆಲವು ವಚನಕಾರರು, ಪೀಠಿಕೆಗಳು, ಲೇಖನಗಳು, ಪು. ೪೫೯

51 ಈ ಲೇಖಕನೇ ಕಣ್ಣಾರೆ ನೋಡಿ, ಅದರ ವಿಚಾರವನ್ನರಿತು ಬಂದಿರುವುದಾಗಿದೆ.

52 ಶಾಂತರಸ: ಬಹುರೂಪಿ ಚೌಡಯ್ಯ, ಬಸವೇಶ್ವರರ ಸಮಕಾಲೀನರು, ಪು. ೫೨೩

53 ಸಿದ್ಧಯ್ಯ ಪುರಾಣಿಕ: ಶರಣಚರಿತಾಮೃತ, ಪು. ೩೪೬

54 ಅದೇ, ಪು. ೩೧೮

55 ಕೆ. ಪಿ. ಶಿವಲಿಂಗಯ್ಯ: ಇತರ ಶರಣರ ವಚನಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪು. ೧೭೦

# ನಿಜಗುಣ ಶಿವಯೋಗಿ

ಡಾ. ಎಂ. ಬಿ. ಕೊಟ್ರಶೆಟ್ಟಿ

"ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ। ಮಾತು ಮನಂಗಳಿಂದತ್ತತ್ತ ಮೀರಿದ। ಸಾತಿಶಯದ ನಿರುಪಾಧಿಕ ನಿರ್ಮಲ। ಜ್ಯೋತಿ ಬೆಳಗುತಿದೆ...." ಎಂದು ಅನುಭಾವದ ಆನಂದಾತಿಶಯಕ್ಕೆ ಅಭಿವ್ಯಕ್ತಿ ನೀಡಿ ಕನ್ನಡಿಗರ ಆತ್ಮಪ್ರಕಾಶವನ್ನು ದೇದೀಪ್ಯಮಾನಗೊಳಿಸಿದ ನಿಜಗುಣಶಿವಯೋಗಿ ಕರ್ನಾಟಕ ಚರಿತ್ರೆಯಲ್ಲಿ ಅದ್ಭುತ ವ್ಯಕ್ತಿಯಾಗಿದ್ದಾರೆ. ಅವರು ಸಾಧಿಸಿದ ವೈರಾಗ್ಯದ ಅತ್ಯುನ್ನತ ನಿಲುಗಡೆ, ವೈವಿಧ್ಯಪೂರ್ಣವಾದ ಸಾಹಿತ್ಯನಿರ್ಮಾಣ, ಜ್ಞಾನ ಹಾಗೂ ಶಿವಯೋಗಿಗಳ ಸಮನ್ವಯದ ದಾರ್ಶನಿಕ ನೆಲೆ ಇವು ನಿಜಗುಣಶಿವಯೋಗಿಗಳಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಹಾಗೂ ಬಹು ಎತ್ತರದ ಸ್ಥಾನವನ್ನು ಕಲ್ಪಿಸಿವೆ, ಇಂದಿಗೂ ಮನೆಮನೆಗಳಲ್ಲಿ, ಮನಮನಗಳಲ್ಲಿ ನಿಜಗುಣರ ಗೀತೆಗಳು ಅನುರಣಿತವಾಗಿದ್ದು ಕನ್ನಡಿಗರ ಅಧಿಮನಸಸ್ಸಿನ ಮೇಲೆ ಅವರು ಬೀರಿದ ಗಾಢ ಪ್ರಭಾವಕ್ಕೆ ಇದು ದ್ಯೋತಕವಾಗಿದೆ. ನಿಜಗುಣರಿಂದ ಕನ್ನಡದಲ್ಲಿ ಕೈವಲ್ಯ ಸಾಹಿತ್ಯದ ಒಂದು ಬೃಹತ್ಸಂಪ್ರದಾಯವೇ ಪುನರುಜ್ಜೀವನ ಪಡೆಯಿತು. ನಿಜಗುಣರು ಹೊತ್ತಿಸಿದ ಜ್ಞಾನಜ್ಯೋತಿ ಕನ್ನಡಿಗರ ಹೃದಯದ ಪರಂಜ್ಯೋತಿಯಾಗಿ ಬೆಳಗುವದರಲ್ಲಿಯೇ ವಿರಮಿಸಲಿಲ್ಲ ; ನೆರೆಹೊರೆಯ ಮರಾಠಿ, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಅವರ "ವಿವೇಕಚಿಂತಾಮಣಿ"ಯು ಭಾಷಾಂತರಗೊಂಡುದನ್ನು ನೋಡಿದರೆ ಶಿವಯೋಗಿಗಳ ಪ್ರಭಾವ–ವ್ಯಾಪ್ತಿ, ಕಾಲ, ದೇಶ, ಭಾಷೆ ಹಾಗೂ ಮತಗಳ ಸೀಮೆಯನ್ನು ಮೀರಿ ಸಾರ್ವತ್ರಿಕವಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ.

ನಿಜಗುಣಶಿವಯೋಗಿಗಳು ಬಸವಯುಗದ ಉನ್ನತ ಮೌಲ್ಯಗಳ ಪುನಃ ಪ್ರವರ್ತನೆಗೆ ಹೆಣಗಿದರು. ಕನ್ನಡ ಸಾಹಿತ್ಯದಲ್ಲಿ ಬಸವಯುಗವೊಂದು ಕ್ರಾಂತಿಕಾರಕ ಪರ್ವಕಾಲ. ಧರ್ಮ, ಸಾಹಿತ್ಯ, ಸಮಾಜ ಮುಂತಾದ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಆಮೂಲಾಗ್ರವಾದ ನವಪರಿವರ್ತನೆ, ನವನಿರ್ಮಾಣಗಳಿಗೆ ನಾಂದಿ ಹಾಡಿದರು ಬಸವಣ್ಣನವರು. ಅನುಭವಮಂಟಪದ ಬಾಗಿಲುಗಳನ್ನು ಜನಸಾಮಾನ್ಯರಿಗೆ ಮುಕ್ತವಾಗಿರಿಸಿ ಜನವಾಣಿಯಲ್ಲಿಯೇ ಅವರ ಉದ್ಧಾರಕ್ಕಾಗಿ ಯುಗಯುಗದಿಂದ ಅವರಿಂದ ದೂರವಾಗಿರಿಸಿದ ಅನುಭಾವದ ನಿಧಿಗಳನ್ನು ಅವರಿಗೆ ತೋರಿದರು. ಜನಸಾಮಾನ್ಯರ ಹೃದಯದಲ್ಲಿ ಹುದುಗಿದ ಅದಮ್ಯವಾದ ಆಧ್ಯಾತ್ಮಿಕ ಅಭೀಪ್ಸೆಗೆ ಅಚ್ಚಕನ್ನಡದ "ವಚನ"ರೂಪದಲ್ಲಿ ಅಭಿವ್ಯಕ್ತಿ ಕಲ್ಪಿಸಿದ್ದರಿಂದ ಕನ್ನಡ ಸಾಹಿತ್ಯದಲ್ಲಿ ಚೈತನ್ಯದ ಹೊನಲು ಹರಿಯಿತು. ಬುದ್ಧಿಭಾವಗಳ ವಿದ್ಯುದಾಲಿಂಗನ ಸಮನಿಸಿದಂತಾಗಿ ಮಹೋನ್ನತ ಸಾಹಿತ್ಯದಲ್ಲಿ ನಿರ್ಮಾಣಕ್ಕೆ ಮೊದಲಾಯಿತು. ಜಾತಿ–ಮತ, ಉಚ್ಚ–ನೀಚ, ಹೆಣ್ಣು–ಗಂಡು ಮುಂತಾದ ಸಂಕುಚಿತ ಭೇದಭಾವಗಳಿಗೆ ಅತೀತವಾದ ಬಸವಣ್ಣನವರ ವಿಶ್ವಮಾನ್ಯ ಮಾನವೀಯ ದರ್ಶನದಿಂದ ಆ ಯುಗದ ವಾತಾವರಣದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅಂಬಿಗರು, ನುಲಿಯ ಕಾಯಕದವರು, ದನಗಾಹಿಗಳು, ಒಕ್ಕಲಿಗರು, ಅಷ್ಟೇ ಏಕೆ ಹೊಲೆಯರು, ಮಾದಿಗರು, ಶರಣತ್ವದ ನಿಲುವಿಗೆ ಏರಿ ವಚನರಚನೆಗೈದುದು ಒಂದು ಅದ್ಭುತ ಪವಾಡವಲ್ಲದೆ ಮತ್ತೇನು ? ಇಂತಹ ಘಟನೆ ವಿಶ್ವಸಾಹಿತ್ಯದಲ್ಲಿಯೇ ಅಪೂರ್ವ. ೧೬ನೆಯ ಶತಮಾನದಲ್ಲಿ ಬಾಳಿದ ನಿಜಗುಣಶಿವಯೋಗಿಗಳು ಬಸವಯುಗದ ವಾತಾವರಣದ ಪುನರುಜ್ಜೀವನಕ್ಕೆ ಪ್ರೇರಕರಾಗಿದ್ದಾರೆ. ಅಪೂರ್ವ ವ್ಯಕ್ತಿತ್ವ ಸಿದ್ಧಿಯಿಂದ ಜನಸಾಮಾನ್ಯರ ಕಲ್ಪನೆಯನ್ನು ಸೆರೆಹಿಡಿದ ಅವರು ವಚನ, ಸ್ವರವಚನ, ಗೀತೆ, ಸಾಂಗತ್ಯ, ತ್ರಿಪದಿ, ಷಟ್ಪದಿ ಮುಂತಾದ ವೈವಿಧ್ಯಪೂರ್ಣವಾದ ಸಾಹಿತ್ಯರೂಪಗಳಲ್ಲಿ ವಿಪುಲವಾದ ಸಾಹಿತ್ಯನಿರ್ಮಾಣಗೈಯುವುದರೊಂದಿಗೆ ನಿರ್ಭಯ ಪ್ರಜ್ಞೆಯ ಜಾಗ್ರುತಿಯನ್ನುಂಟುಮಾಡಿದ್ದಾರೆ.

## ಜೀವನ ಚರಿತ್ರೆ

ನಿಜಗುಣಶಿವಯೋಗಿಗಳ ಜೀವನಚರಿತ್ರೆಯನ್ನು ಅರಿಯಲು ಅವಶ್ಯಕವಾದ, ಅವರು ಜೀವಿಸಿದ ಕಾಲ ಮತ್ತು

ಜೀವನದ ಪ್ರಮುಖ ಘಟನೆಗಳ ಬಗೆಗೆ ಐತಿಹಾಸಿಕ ವಿವರಗಳು ಇಂದು ನಮಗೆ ಲಭ್ಯವಿಲ್ಲ. ಅವರ ಗುರುಪರಂಪರೆ ಮತದ ವಿಷಯಗಳಲ್ಲಿ ಅನೇಕ ಸಂದೇಹಗಳನ್ನು ಸಂಶೋಧಕರು ಎದುರಿಸಿದ್ದಾರೆ. ಹೀಗಾಗಿ ಅವರ ಜೀವನಚರಿತ್ರೆ ಇನ್ನೂ ನಿಗೂಢವಾಗಿಯೇ ಇದೆ. ಜನಮನದಲ್ಲಿ ಐತಿಹ್ಯದ ರೂಪದಲ್ಲಿ ಪ್ರಚಲಿತವಿದ್ದ ಕಾಲ್ಪನಿಕ ಸಂಗತಿಗಳ ಆಧಾರದ ಮೇಲೆಯೇ ಅವರ ಜೀವನಚರಿತ್ರೆಯನ್ನು ರಚಿಸುವ ಪ್ರಯತ್ನವನ್ನು ಪಂಡಿತರು ಮಾಡಿದ್ದಾರೆ. ವೀರಶೈವ ಕವಿಗಳು ತಮ್ಮ ಕೃತಿಗಳಲ್ಲಿ ಬಸವಾದಿ ನೂತನ ಪ್ರಮಥರ ಸ್ತುತಿ ಮಾಡುವ ಪರಂಪರೆ ೧೫ನೆಯ ಶತಮಾನದಲ್ಲಿ ಪ್ರಚುರ ಗೊಂಡಿತೆಂದೂ ನಿಜಗುಣಶಿವಯೋಗಿಗಳ ಕೃತಿಗಳಲ್ಲಿ ಬಸವಾದಿಗಳ ನೇರಸ್ತುತಿ ಇಲ್ಲದೇ ಇರುವುದರಿಂದ ಅವರ ಕಾಲ ೧೫ನೆಯ ಶತಮಾನಕ್ಕಿಂತ ಹಿಂದೆ ಅಂದರೆ ಕ್ರಿ.ಶ. ೧೩೦೦ ಆಗಿರಬೇಕೆಂದು ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ ಅಭಿಪ್ರಾಯಕ್ಕೆ ಸಬಲ ಆಧಾರಗಳಿಲ್ಲ. ಅವರ ಕಾಲ ಕ್ರಿ.ಶ. ೧೫೦೦ ಎಂಬ ಕವಿಚರಿತೆಕಾರರ ಅಭಿಪ್ರಾಯವು ವಿದ್ವಾಂಸರಿಂದ ಸ್ವೀಕೃತ ವಾಗಿದೆ. ಮುಪ್ಪಿನ ಷಡಕ್ಷರಿಸ್ವಾಮಿಗಳು ನಿಜಗುಣಶಿವಯೋಗಿಗಳ ಸಮಕಾಲೀನರೆಂಬ ಪ್ರತೀತಿ ಇದೆ. ಆದರೆ ಅವರ ಕಾಲವೂ ನಿರ್ಧರಿಸಲ್ಪಟ್ಟಿಲ್ಲವಾದ್ದರಿಂದ ಆದರಿಂದ ಶಿವಯೋಗಿಗಳ ಕಾಲನಿರ್ಣಯಕ್ಕೆ ಯಾವ ಪ್ರಯೋಜನವೂ ಉಂಟಾಗಿಲ್ಲ.

ಶಿವಯೋಗಿಗಳ ವ್ಯಕ್ತಿತ್ವಮಹಿಮೆಯನ್ನು ಬಿತ್ತರಿಸುವ ಅನೇಕ ಕಥೋಪಕಥನಗಳು ಜನಮನದಲ್ಲಿ ನೆಲೆಸಿವೆ. ಅವರು ಪೂರ್ವಾಶ್ರಮದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಶಂಭುಲಿಂಗನ ಬೆಟ್ಟದ ಸುತ್ತಲಿನ ಪ್ರದೇಶಕ್ಕೆ ರಾಜರಾಗಿದ್ದ ರೆಂದೂ, ವೈರಾಗ್ಯಶೀಲರಾಗಿ ರಾಜ್ಯವನ್ನು ಪರಿತ್ಯಜಿಸಿ ಶಂಭುಲಿಂಗನ ಬೆಟ್ಟದಲ್ಲಿ ೧೨ ವರ್ಷಗಳ ದೀರ್ಘ ತಪಸ್ಸುಗೈದ ರೆಂದೂ ಪ್ರತೀತಿ ಇದೆ. ಅಯೋನಿಜರೂ, ಅಪಾರಮಹಿಮಾಶೀಲರೂ ಆಗಿದ್ದು ಅನೇಕ ಪವಾಡಗಳನ್ನು ಮಾಡಿದ ರೆಂದೂ ಕೆಲವು ಕಥೆಗಳು ಹೇಳುತ್ತವೆ. ಶಂಭುಲಿಂಗನ ಬೆಟ್ಟದಲ್ಲಿ ಇಂದಿಗೂ ನಿಜಗುಣಶಿವಯೋಗಿಗಳ ಗುಹೆ ಇದೆ. 'ಶಂಭುಲಿಂಗ'ನ ಉಲ್ಲೇಖವು ಅವರ ಕೃತಿಗಳಲ್ಲಿ ಅಂಕಿತದಂತೆ ಪ್ರಚುರಗೊಂಡಿದೆ. ಇದರಿಂದ ಶಿವಯೋಗಿಗಳು ಈ ಪ್ರದೇಶದಲ್ಲಿ ಬದುಕಿ ಬಾಳಿರಬೇಕೆಂದು ನಿರ್ಧರಿಸಬಹುದಾಗಿದೆ.

ಚೆನ್ನಸದಾಶಿವಯೋಗಿಗಳ "ಶಿವಯೋಗಪ್ರದೀಪಿಕೆ" ಎಂಬ ಸಂಸ್ಕೃತ ಗ್ರಂಥವನ್ನು ಆಧರಿಸಿ ನಿಜಗುಣಶಿವಯೋಗಿ ಗಳು "ಪರಮಾರ್ಥಪ್ರಕಾಶಿಕೆ"ಯನ್ನು ಬರೆದಿದ್ದಾರೆ. ಚೆನ್ನಸದಾಶಿವಯೋಗಿಗಳ ಬಗೆಗೆ ಅಪಾರ ಭಕ್ತಿ ಗೌರವಗಳನ್ನೂ ತೋರುವುದರಿಂದ ಇವರೇ ನಿಜಗುಣಶಿವಯೋಗಿಗಳ ಗುರುಗಳಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಆದರೆ 'ವಿವೇಕಚಿಂತಾಮಣಿ'ಯಲ್ಲಿ ಶ್ರೀಮದನೇಕಭವನಭುವನಾರಂಭ ಮೂಲಸ್ತಂಭರೂಪಶಂಭುಲಿಂಗವಾದಿಯಾಗಿ ನಿರಾಭಾರಿದೇಶಿಕೋತ್ತಮಪರ್ಯಂತ ಮಹಾಗುರು ಪರಂಪರೆಗೆ ಮನೋವಾಕ್ಕಾಯಗಳಿಂದಭಿವಂದಿಸಿ" ಎಂದಿರುವುದ ರಿಂದ ನಿರಾಭಾರಿಗಳೆಂಬುವರೇ ಅವರ ಗುರುಗಳಾಗಿರಬೇಕೆಂದು ಇನ್ನೊಂದು ಅಭಿಪ್ರಾಯವಿದೆ.[1] ಆದರೆ ನಿರಾಭಾರಿದೇಶಿ ಕೋತ್ತಮ ಎಂಬುದನ್ನು ಒಂದು ಅಂಕಿತನಾಮವನ್ನಾಗಿ ಬಳಸಿದ್ದಾರೆ ಎಂಬುದನ್ನು ನಂಬಲಿಕ್ಕಾಗದು. ಸ್ವಾದಿಸಂಸ್ಥಾನದ ಭುಜಲಿಂಗಸ್ವಾಮಿಗಳು ಶಿವಯೋಗಿ ಹಾಗೂ ಅವರ ಸಮಕಾಲೀನ ಮುಪ್ಪಿನ ಷಡಕ್ಷರಿಸ್ವಾಮಿಗಳ ಗುರುಗಳಾಗಿದ್ದ ರೆಂದು ಇನ್ನೊಬ್ಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[2] ಕೇವಲ ಜನಜನಿತವಾದ ಐತಿಹ್ಯದ ಮೇಲೆ ಇದು ಆಧಾರಿತ ವಾಗಿದೆಯೆನ್ನುವುದನ್ನು ಲಕ್ಷಿಸಬೇಕು. ಹೀಗಾಗಿ ಈ ಅಂಶವು ಶಿವಯೋಗಿಗಳ ಜೀವನಚರಿತ್ರೆಯಲ್ಲಿ ಇನ್ನೂ ಸಂದಿಗ್ಧ ವಾಗಿಯೇ ಉಳಿದಿದೆ.[3]

## ದರ್ಶನವೈಶಾಲ್ಯ

ಶಿವಯೋಗಿಗಳು ವೀರಶೈವರೆನ್ನುವುದಕ್ಕೆ ಅವರ ಕೃತಿಗಳಲ್ಲಿ ವಿಪುಲ ಆಧಾರಗಳಿವೆ. ಆದರೂ ಅವರು ಶುದ್ಧ ಅದ್ವೈತಿಗಳೋ, ಶಿವಾದ್ವೈತಿಗಳೋ ಎಂಬ ವಿಷಯದಲ್ಲಿ ಚರ್ಚೆ ನಡೆಯಿತು. ಈ ಸಂದೇಹಕ್ಕೆ ಶಿವಯೋಗಿಗಳ ಉದಾರ ಹಾಗೂ ವಿಶಾಲ ದಾರ್ಶನಿಕ ಮನೋಧರ್ಮವೇ ಕಾರಣವೆಂದು ಹೇಳಬಹುದು. ಅನುಭವಮಂಟಪದ ಆಣಿ ಮುತ್ತುಗಳಾದ ಇಷ್ಟಲಿಂಗ, ಷಟ್‌ಸ್ಥಲಗಳ ಸ್ಪಷ್ಟವಾದ ನಿರೂಪಣೆ ಅವರ ಕೃತಿಗಳಲ್ಲಿ ಇಲ್ಲವೆನ್ನುವುದು ನಿಜವಾದರೂ, 'ನಿರಾಭಾರಿದೇಶಿಕೋತ್ತಮ' ಎಂಬ ಪದಪ್ರಯೋಗ; ವೀರಶೈವದ ಸರ್ವೋತ್ತಮತ್ವ ಪ್ರತಿಪಾದನೆ, ಯೋಗಮಾರ್ಗ

---

1 ಎಸ್. ಎಸ್. ಬಸುಪಟ್ಟದ, 'ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು', ಪು. ೬

2 ಯು. ಪಿ. ಎಸ್. 'ನಿಜಗುಣ ಶಿವಯೋಗಿಗಳ ಸ್ವರೂಪ ದರ್ಶನ', ಪು. ೨೨೯

3 'ನಿಜಗುಣ ಶಿವಯೋಗಿಗಳ ಸ್ವರೂಪ ದರ್ಶನ', ಪು. ೧೨

ಗಳಲ್ಲಿ ಶಿವಯೋಗವೇ ಶ್ರೇಷ್ಠವೆಂಬ ಧೋರಣೆ, ಇವು ಅವರ ವೀರಶೈವತ್ವವನ್ನು ನಿಚ್ಚಳವಾಗಿ ಪ್ರತಿಪಾದಿಸುತ್ತವೆ. ಆದರೆ ಯಾವುದೇ ಒಂದು ಮತದ ಪರಿಮಿತ ಚೌಕಟ್ಟಿಗೆ ಒಳಪಡದೆ ಮತಾತೀತವಾದ ವ್ಯಾಪಕಭೂಮಿಕೆ ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆಯೆಂಬುದನ್ನು ಅರಿಯಬೇಕು. ಭಾರತೀಯ ಆರ್ಷೇಯ ಸಂಪ್ರದಾಯದಲ್ಲಿ ಅತ್ಯುತ್ತಮವಾದುದೆಲ್ಲವನ್ನೂ ಸಮಾಹಿತ ಚಿತ್ತದಿಂದ ಅರಿತು ವಿವರಿಸಿದ ಅವರು ತತ್ವಬೋಧಕರಲ್ಲಿ ಅತ್ಯುನ್ನತವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ನಿಗಮ ಹಾಗೂ ಆಗಮ ಸಂಪ್ರದಾಯಗಳಲ್ಲಿ ಭೇದವನ್ನು ಎಣಿಸದೆ ಎರಡರಲ್ಲಿಯ ಸತ್ವವನ್ನಷ್ಟೇ ಗ್ರಹಿಸಿದ ಗುಣಗ್ರಾಹಕ ದೃಷ್ಟಿ ಅವರದಾಗಿದೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿವಿಶಿಷ್ಟಾದ್ವೈತಗಳು ಒಂದೇ ಸತ್ಯವನ್ನು ಅರಿಯಲು ಇರುವ ಭಿನ್ನಮತಗಳು ಎಂಬ ಉದಾರಚೇತನ ಅವರದು.

## ಕೈವಲ್ಯಸಾಹಿತ್ಯನಿರ್ಮಾಣ

ನಿಜಗುಣಶಿವಯೋಗಿಗಳು ಭಾರತದ ಆರ್ಷೇಯ ಜ್ಞಾನದ ಉನ್ನತ ಶಿಖರವನ್ನೇರಿ ತಾವು ಕಂಡ ದರ್ಶನವನ್ನು ತಿಳಿಗನ್ನಡದಲ್ಲಿ ಸಾಹಿತ್ಯನಿರ್ಮಾಣ ಮಾಡುವುದರೊಂದಿಗೆ ಕನ್ನಡಿಗರ ಹೃದಯಕ್ಕೆ ತಂದಿದ್ದಾರೆ. ಶಾಶ್ವತ ಸತ್ಯದ ಶೋಧನೆಯೇ ಸಕಲಧರ್ಮಗಳ ಎದುರಿಗಿರುವ ಸಮಸ್ಯೆ. ಸತ್ಯಸಾಕ್ಷಾತ್ಕಾರವೇ ಅವುಗಳ ಗುರಿ. ನಿಜಗುಣಶಿವಯೋಗಿ ಆ ಸಮಸ್ಯೆಯ ನಿವಾರಣೆಗಾಗಿ ಸತ್ಯಸಾಕ್ಷಾತ್ಕಾರದ ಬೆಳಗನ್ನು ಜನಸಾಮಾನ್ಯರ ಹೃದಯಕ್ಕೆ ಮುಟ್ಟಿಸುವ ಉದ್ದೇಶದಿಂದ ಪ್ರೇರಿತರಾಗಿ 'ಬೆಳುಗನ್ನಡ'ದಲ್ಲಿ ಕೃತಿರಚನೆಗೈದಿದ್ದಾರೆ. ಅವರ ಅಪೂರ್ವ ವ್ಯಕ್ತಿತ್ವದ ಅಸಾಧಾರಣ ಅಭಿವ್ಯಕ್ತಿ ಅವರ ಕೃತಿಗಳಲ್ಲಿದೆ. ಪರಮಾನುಭವಬೋಧೆ, ಪರಮಾರ್ಥಗೀತೆ, ಪರಮಾರ್ಥಪ್ರಕಾಶಿಕೆ, ಅನುಭವಸಾರ, ಅರವತ್ತುಮೂವರ ತ್ರಿಪದಿ, ಕೈವಲ್ಯಪದ್ಧತಿ ಹಾಗೂ ವಿವೇಕಚಿಂತಾಮಣಿ. ಹೀಗೆ ಏಳು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅರವತ್ತುಮೂವರ ತ್ರಿಪದಿಯನ್ನುಳಿದು ಅವರ ಇತರ ಆರು ಕೃತಿಗಳು ಷಟ್‌ಶಾಸ್ತ್ರಗಳೆಂದು ಪ್ರಖ್ಯಾತವಾಗಿವೆ.

ಪರಮಾರ್ಥಪ್ರಕಾಶಿಕೆ ಹಾಗೂ ವಿವೇಕಚಿಂತಾಮಣಿ ಇವೆರಡೂ ಕೃತಿಗಳು ಗದ್ಯದಲ್ಲಿವೆ. ಚೆನ್ನಸದಾಶಿವಯೋಗಿಗಳು ಸಂಸ್ಕೃತದಲ್ಲಿ ಬರೆದ 'ಶಿವಯೋಗಪ್ರದೀಪಿಕೆ'ಯ ಕನ್ನಡ ಗದ್ಯಾನುವಾದವೇ 'ಪರಮಾರ್ಥಪ್ರಕಾಶಿಕೆ.' ಯೋಗದ ಪ್ರಖ್ಯಾತ ಪ್ರಭೇದವಾದ ಹಠ, ಮಂತ್ರ, ಲಯ, ರಾಜಯೋಗಗಳನ್ನೂ ವಿವರಿಸಿ ಶಿವಯೋಗದ ಸರ್ವೋತ್ತಮತೆಯನ್ನು ಈ ಕೃತಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ನಿಜಗುಣಶಿವಯೋಗಿಗಳ ಉನ್ನತವಾದ ಜ್ಞಾನ ಹಾಗೂ ಪ್ರಗಲ್ಭ ಪಾಂಡಿತ್ಯಗಳಿಗೆ ನಿಕಷವನ್ನೊದಗಿಸುತ್ತದೆ, ಅವರ 'ವಿವೇಕಚಿಂತಾಮಣಿ.' ಅದೊಂದು ವಿದ್ವತ್ತಿನ ಪಾರಾವಾರವಾಗಿದ್ದು ಭಾರತೀಯ ತೌಲಿಕ ಹಾಗೂ ಆಧ್ಯಾತ್ಮಿಕ ಪರಂಪರೆಯಲ್ಲಿ ವಿಕಾಸಗೊಂಡ ವೈವಿಧ್ಯಪೂರ್ಣ ಜ್ಞಾನರಾಶಿಯ ಅರ್ಥಪರಂಪರೆಯನ್ನು ಸೆರೆಹಿಡಿದ ಈ ಕೃತಿಯು ಕನ್ನಡದ ಅಮೂಲ್ಯ ವಿಶ್ವಕೋಶವಾಗಿದೆ. "ವೇದಪುರಾಣಶಾಸ್ತ್ರದೊಳ್ ನೇಮಿಸಿ ತೋರ್ಪ ವಿಶ್ವವಿಷಯಗಳ ಸಂಸ್ಥಿತಿಯಂ ವಿವೇಕಚಿಂತಾಮಣಿಯೆಂದು ಪೆಸರಿಟ್ಟು ಕವಿತಾಪ್ರಬಂಧಮಂ ಪ್ರೇಮದಿ ". ಇದರಲ್ಲಿ ವಿಶ್ವವಿಷಯಗಳ ವಿವೇಚನೆ ಇದೆಯೆಂಬ ಶಿವಯೋಗಿಗಳ ಹೇಳಿಕೆ ಸಾರ್ಥಕವಾಗಿದೆ. ೭೬೫ ವಿಷಯಗಳನ್ನು ಹತ್ತು ಪ್ರಕರಣಗಳಲ್ಲಿ ವಿವರಿಸುವ ಇದು ಗಾತ್ರದಲ್ಲಿ ಮಾತ್ರ ಮಹಾಪ್ರಬಂಧವಾಗಿರದೆ ಜ್ಞಾನದ ವಿಸ್ತಾರ, ಆಳ, ವೈವಿಧ್ಯಗಳ ದೃಷ್ಟಿಯಿಂದಲೂ ಮಹಾಪ್ರಬಂಧವೇ ! ಸರ್ವರಿಗೂ ಸುಲಭವೇದ್ಯವಾಗಬೇಕೆಂಬ ಕಳಕಳಿಯಿಂದ 'ಬೆಳುಗನ್ನಡ'ದಲ್ಲಿ ಕೃತಿರಚನೆಯಾಗಿದೆ. ತತ್ವಜ್ಞಾನ ಹಾಗೂ ಶಾಸ್ತ್ರೀಯ ಗ್ರಂಥಗಳು ಪಾರಿಭಾಷಿಕ ಪದಗಳಿಂದ ತುಂಬಿ ಪಾಂಡಿತ್ಯಪ್ರದರ್ಶನದ ಕಣಗಳಾಗುವುದರಿಂದ ಅಲ್ಲಿ ಅರ್ಥಾಭಿವ್ಯಕ್ತಿಗೆ ಅಪಾಯವೇ ಹೆಚ್ಚು. ನಿಜಗುಣರ ಕೃತಿಗಳು ಈ ಅಪಾಯದಿಂದ ದೂರಾಗಿವೆ. ಸರಳಗನ್ನಡದಲ್ಲಿ ಕೃತಿರಚನೆಯಿಂದ ಜ್ಞಾನಧೀಗಂಗೆಯನ್ನು ಜನತೆಯ ಹೃದಯದ ಹೊನಲಾಗಿಸಿ ಕೃತಕೃತ್ಯರಾಗಿದ್ದಾರೆ. "ಇದು ಒಂದು ಮತದ ಇಲ್ಲವೆ ತತ್ವದ ಜ್ಞಾನಕೋಶವಲ್ಲ...ಮತಾತೀತವಾದ ಸಕಲಜ್ಞಾನಕೋಶವೆಂಬ ಸ್ವರೂಪದಲ್ಲಿ ಇದು ಕನ್ನಡದ ವಾಙ್ಮಯದಲ್ಲಿ ಅಪೂರ್ವ ಗ್ರಂಥ."[1] ಈ ಮಾತುಗಳು ವಿವೇಕಚಿಂತಾಮಣಿಯ ವಿಷಯದಲ್ಲಿ ಸಂಪೂರ್ಣಸತ್ಯವಾಗಿವೆ.

ಕೈವಲ್ಯಪದ್ಧತಿ ನಿಜಗುಣಶಿವಯೋಗಿಗಳ ಕಾವ್ಯಶಕ್ತಿ. ಸ್ವತಂತ್ರ ಪ್ರತಿಭೆಗಳ ದ್ಯೋತಕವಾಗಿದೆ. ವಿವೇಕಚಿಂತಾಮಣಿಯಲ್ಲಿ ಅವರ ಜ್ಞಾನದ ವಿಸ್ತಾರವನ್ನು ಕಂಡರೆ ಇಲ್ಲಿ ಅವರ ಭಕ್ತಿಯ ಗಂಭೀರಗತಿಯನ್ನು ಅರಿಯುತ್ತೇವೆ. ಶಿವಕಾರುಣ್ಯಸ್ಥಲ, ಜೀವಸಂಬೋಧನಸ್ಥಲ, ನೀತಿಕ್ರಿಯಾಚರ್ಯಸ್ಥಲ, ಯೋಗಪ್ರತಿಪಾದನಸ್ಥಲ, ಹಾಗೂ ಜ್ಞಾನಪ್ರತಿ

---

[1] ರಂ. ಶ್ರೀ. ಮುಗಳಿ, 'ಕನ್ನಡ ಸಾಹಿತ್ಯ ಚರಿತ್ರೆ', ಪು. ೩೭೭

ಪಾದನಸ್ಥಲ ಹೀಗೆ ಪಂಚಸ್ಥಲಗಳಲ್ಲಿ ವಿಸ್ತಾರ ಪಡೆದ ಈ ಕೃತಿಯಲ್ಲಿ ಆತ್ಮವಿಕಾಸದ 'ವಿವಿಧ ಹಂತಗಳ ಅನುಭವಗಳಿಗೆ ಉಜ್ವಲ ಅಭಿವ್ಯಕ್ತಿಯಿದೆ. "ಕೋಗಿಲೆ, ಚೆಲ್ವ ಕೋಗಿಲೆ ಮುದ್ದು । ಕೋಗಿಲೆ ಜಾಣ ಕೋಗಿಲೆ ॥ ಮಂಗಳರವದೊಳ ನಂಗನ ಬಣ್ಣಿಸಿ। ಭಂಗವಲ್ಲವೆ ನೋಡು ಕೋಗಿಲೆ। ಕಂಗೊಳಿಸುವ ಸರ್ವಮಂಗಳೆಯರಸನ। ಪಿಂಗದೆ ನೀಪಾಡು ಕೋಗಿಲೆ॥" ಎಂಬಲ್ಲಿ ಆತ್ಮದ ಸಂಕೇತವೇ ಈ ಕೋಗಿಲೆ! ಆತ್ಮವಿಕಾಸದ ಪಂಚಸ್ಥಲಗಳೇ ಈ ಕೃತಿಯ ಪಂಚಸ್ಥಲಗಳು. ಇಲ್ಲಿ ಬರುವ ಪ್ರತಿಯೊಂದು ಹಾಡೂ ಒಂದೊಂದು ಸತ್ವಯುತ ಭಾವಗೀತೆಯಾಗಿದೆ. ನಿಜಗುಣಶಿವಯೋಗಿಗಳ ಈ 'ಕೈವಲ್ಯಪದ್ಧತಿ'ಯು ಅದು ಗರ್ಭೀಕರಿಸಿಕೊಂಡ ಸಂಗೀತವೈಭವದ ದೃಷ್ಟಿಯಿಂದ ಅತ್ಯಂತ ಮಹತ್ವದ ಕೃತಿಯಾಗಿದೆ. ವಚನಸೃಷ್ಟಿಯೊಂದಿಗೆ ರಾಗಬದ್ಧವಾದ ಅನುಭಾವಗೀತೆಗಳನ್ನು ೧೨ನೆಯ ಶತಮಾನದ ಶರಣರೇ ಪ್ರಭೂತವಾಗಿ ಪ್ರಚುರಪಡಿಸಿದ್ದರು. ನಿಜಗುಣಶಿವಯೋಗಿಗಳು ಆ ಶರಣಸಂಪ್ರದಾಯವನ್ನು ಉತ್ತರೋತ್ತರ ಅಭಿವೃದ್ಧಿಪಡಿಸಿದ್ದಾರೆ. ಶಿವಯೋಗಿಗಳ ಸಂಗೀತಜ್ಞಾನದ ವ್ಯಾಪ್ತಿ ವಿಸ್ತಾರಗಳಿಗೆ ಅವರು ಈ ಕೃತಿಯಲ್ಲಿ ಪ್ರಯೋಗಿಸಿದ ೩೮ ರಾಗಗಳು ಸ್ಪಷ್ಟವಾದ ನಿಕಷವನ್ನೊದಗಿಸುತ್ತವೆ.

ಅನುಭಾವದ ಎತ್ತರ, ವೈರಾಗ್ಯದ ವೈಖರಿ, ಜ್ಞಾನದ ಪ್ರಖರ ತೇಜಸ್ಸು, ಶಿವಯೋಗಿಗಳ ಪ್ರಶಾಂತತೆಗಳಿಂದ ಸಮನ್ವಿತವಾದ ನಿಜಗುಣಶಿವಯೋಗಿಗಳ ವ್ಯಕ್ತಿತ್ವವೊಂದು ಕನ್ನಡ ಸಂಸ್ಕೃತಿಯ ಸೋಜಿಗ. ತ್ರಿಪದಿ, ಸಾಂಗತ್ಯ, ಗೀತೆ, ಷಟ್ಪದಿ ಮುಂತಾದ ವೈವಿಧ್ಯಪೂರ್ಣ ಛಂದೋರೂಪಗಳಲ್ಲಿ ಅಪಾರ ಸಾಹಿತ್ಯನಿರ್ಮಾಣವೆಸಗಿದ್ದಾರೆ ಅವರು. ಕರ್ಣಾಟಕ ಸಂಗೀತ ಸಂಪ್ರದಾಯವನ್ನು ಪೋಷಿಸಿ ಪ್ರವರ್ಧಮಾನಗೊಳಿಸಿದವರಲ್ಲಿ ಅವರು ಅಗ್ರಗಣ್ಯರಾಗಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ನಿಜವಾದ ಅರ್ಥದಲ್ಲಿ 'ಜ್ಞಾನಯುಗ'ವೊಂದಕ್ಕೆ ಪ್ರೇರಕರಾಗಿದ್ದಾರೆ.

---

ಕಾಡಬೇಡ ಕಂಡವರ
ಬೇಡ ಬೇಡ ನರರುಗಳ
ಆಡಬೇಡ ಅನೃತವ
ನೋಡಬೇಡ ಪರಸ್ತ್ರೀಯರ
ಗಾಢಗಂಭೀರ ಲಿಂಗಾರೂಢನಾದ
ಬಸವ ಪ್ರಿಯ ಕೂಡಲ ಚೆನ್ನಬಸವಣ್ಣ

ಹಡಪದ ಅಪ್ಪಣ್ಣ

# ಶ್ರೀ ನಿಜಗುಣರ ಅನುಭಾವ ದೀಪ್ತಿ

ಪ್ರೊ. ಪಿ. ಎಂ. ಸಿದ್ಧಯ್ಯ

## ನಿಜಗುಣರ ಅನುಭಾವ ದೀಪ್ತಿ

ನಾಡಿನ ಜನತೆಯ ಜೀವನವನ್ನು ಹಸನುಗೊಳಿಸಲು, ಅವರ ನೈತಿಕಮಟ್ಟವನ್ನು ಮೇಲೆತ್ತಲು, ನರರನ್ನು ಹರರನ್ನಾಗಿ ಮಾಡಲು, ಅನೇಕ ಅವತಾರಪುರುಷರು, ಮಹಾತ್ಮರು, ಅನುಭಾವಿಗಳು ಕಾಲಕಾಲಕ್ಕೆ ಬಾಳಿ ಬೆಳಗಿದ್ದಾರೆ. ಅಂಥ ಮಹಾಮಹಿಮರಲ್ಲಿ ಶ್ರೀ ನಿಜಗುಣಶಿವಯೋಗಿಗಳು ಒಬ್ಬರು. ಅವರು ಕ್ರಿ.ಶ. ೧೫೦೦ರಲ್ಲಿ ಬಾಳಿಬೆಳಗಿದವರು. ಅವರು ಮೈಸೂರು ಪ್ರಾಂತದ ದಕ್ಷಿಣ ಭಾಗದ ನಾಡುಗಳಿಗೆ ಅರಸರಾಗಿದ್ದರು. ಅವರು ಪ್ರೇಮ, ಸತ್ಯ, ಧರ್ಮ, ನ್ಯಾಯ, ನೀತಿ, ಔದಾರ್ಯ ಇತ್ಯಾದಿ ಸದ್ಗುಣಗಳ ನಿಧಿಗಳಾಗಿದ್ದರು. ಅಲ್ಲದೆ ಸಕಲ ವೇದ ಉಪನಿಷತ್ತು, ಶಾಸ್ತ್ರ, ಪುರಾಣ ಇತಿಹಾಸ, ಸಂಗೀತ, ವ್ಯಾಕರಣ, ತರ್ಕ, ಜ್ಯೋತಿಷ್ಯ ಮುಂತಾದ ವಿದ್ಯೆಗಳಲ್ಲಿ ಶ್ರೇಷ್ಠ ಪಂಡಿತರಿದ್ದರು. ಬ್ರಹ್ಮಜ್ಞಾನಸಂಪನ್ನರಾಗಿದ್ದರು. ಕೆಲಕಾಲದನಂತರ ಕಾರಣಾಂತರಗಳಿಂದ ಮನನೊಂದು, ಅವರು ಸಂಸಾರದಿಂದ ವಿಮುಖರಾಗಿ,ಸಮೀಪದ ಶಂಭುಲಿಂಗನ ಬೆಟ್ಟಕ್ಕೆ ತೆರಳಿ,ಅಲ್ಲಿಯೇ ಯೋಗಾಭ್ಯಾಸ ಮಾಡುತ್ತ,ಜೀವನ್ಮುಕ್ತರಾಗಿ ಅಖಂಡಾನಂದವನ್ನು ಸವಿಯುತ್ತ ಶುಕ ವಾಮದೇವರಂತೆ ಉಪರತಿ ಅವಸ್ಥೆ ಉಳ್ಳವರಾಗಿದ್ದರು. ಮುಂದೆ ಕರ್ನಾಟಕದ ಮುಮುಕ್ಷುಗಳ ಭಾಗ್ಯದಿಂದ, ಜಗದೋದ್ಧಾರ ಮಾಡುವ ಇಚ್ಛೆ ಅವರಲ್ಲಿ ಉಂಟಾಯಿತು. (೧) ಕೈವಲ್ಯಪದ್ಧತಿ, (೨) ಪರಮಾನುಭವಬೋಧೆ, (೩) ಅನುಭವಸಾರ, (೪) ಪರಮಾರ್ಥಗೀತೆ, (೫) ಪುರಾತನತ್ರಿವಿಧಿ, (೬) ಪಾರಮಾರ್ಥಪ್ರಕಾಶಿಕೆ ಮತ್ತು (೭) ವಿವೇಕಚಿಂತಾಮಣಿಗಳೆಂಬ ಅಪೂರ್ವ ವೇದಾಂತ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದರು. ಅವು ಅವರ ಸಾಹಿತ್ಯ, ಸಂಗೀತ, ತತ್ವದರ್ಶನ, ಯೋಗ, ಅನುಭಾವ, ಇತ್ಯಾದಿಗಳ ನೆಲೆಬೀಡಾಗಿವೆ, ಪಂಡಿತಪಾಮರರೂ ಮೆಚ್ಚಿ ತಲೆದೂಗುವಂತಿವೆ. ಕನ್ನಡ ಸಾಹಿತ್ಯ ಭಂಡಾರದ ಅನರ್ಘ್ಯ ರತ್ನಗಳಾಗಿವೆ.

## ಅನುಭಾವವೆಂದರೇನು ?

ನೆಲದ ಮರೆಯ ನಿಧಾನದಂತೆ, ದೇಹಾದಿಗಳ ಮರೆಯಲ್ಲಿ ನಾಮರೂಪರಹಿತವಾದ, ಉತ್ಪತ್ತಿನಾಶರಹಿತವಾದ, ಬಂಧ-ಮೋಕ್ಷರಹಿತವಾದ, ಸಕಲ ಚರಾಚರಕ್ಕೆ ಆಧಾರವಾದ, ಸಚ್ಚಿದಾನಂದನಿತ್ಯಪೂರ್ಣರೂಪವಾದ, ನಿರ್ಗುಣ ನಿರ್ವಿಕಾರ, ನಿರಾಕಾರ, ನಿಷ್ಕ್ರಿಯ, ಅಸಂಗ ಅದ್ವಯರೂಪವಾದ ಸಾಕ್ಷಿ ಚೈತನ್ಯ ಉಂಟು. ಅದುವೇ ಬ್ರಹ್ಮ ಅಥವ ಆತ್ಮ. ಆಧ್ಯಾತ್ಮಸಾಧನೆಯಿಂದ ಜಾಗ್ರತ್, ಸ್ವಪ್ನ, ಸುಪ್ತಿ, ತುರ್ಯಗಳನ್ನು ದಾಟಿ ತುರ್ಯಾತೀತ ಅವಸ್ಥೆಯಲ್ಲಿರುವ ಆ ಬ್ರಹ್ಮವಸ್ತುಸ್ಥಿತಿಯನ್ನು ಅಪರೋಕ್ಷವಾಗಿ ಅನುಭವಿಸುವುದೇ ಅನುಭಾವವಾಗಿರುತ್ತದೆ. 'ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವುದು, ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು.[1] 'ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ, ಅನುಭಾವವೆಂಬುದು ಅಂತರಂಗದ ರತ್ನ ಕಾಣಿರೋ.[2] 'ಅನುಭಾವ ಎಂದರೆ ಜೀವಾತ್ಮ ಪರಮಾತ್ಮರ ಏಕರಸತ್ವದ, ಶಿವಜೀವರ ಐಕ್ಯದ ಲಿಂಗಾಂಗಗಳ ಸಮರಸತ್ವದ ಅನುಭವ. ಅದೊಂದು ಅನುಭವ ಎಂಬುದು ನಿಜ. ಆದರೆ ಅದು ಇಂದ್ರಿಯಜನ್ಯವಲ್ಲ. ವಿಷಯಗಳ ಮೂಲಕ ಉಂಟಾದುದಲ್ಲ. ಅದು ಅತೀಂದ್ರಿಯವೂ, ಅತಿಮಾನಸವೂ ಅತ್ಯಂತ ಸೂಕ್ಷ್ಮವೂ, ಆತ್ಮಸರ್ವಸ್ವವನ್ನು ತುಂಬಿಕೊಳ್ಳುವಂತಹದೂ, ನಿರಾಲಂಬ ಆನಂದವನ್ನುಂಟುಮಾಡುವಂತಹದೂ, ದ್ವಂದ್ವಾತೀತವೂ, ತ್ರಿಗುಣರಹಿತವೂ ಇರುವುದು.[3] 'ಅಂತರಂಗದಲ್ಲಿರುವ

---

1 ಸ್ವತಂತ್ರ ಸಿದ್ಧಲಿಂಗೇಶ್ವರ : 'ವಚನ ಸಾಹಿತ್ಯ ಸಂಗ್ರಹ' (ಸಂ) ಸಂ. ಶಿ. ಭೂಸನೂರಮಠ, ೧೯೬೫, ಪು. ೪

2 ಚೆನ್ನಬಸವಣ್ಣ : 'ವಚನ ಸಾಹಿತ್ಯ ಸಂಗ್ರಹ' (ಸಂ) ಸಂ. ಶಿ. ಭೂಸನೂರಮಠ, ೧೯೬೫, ಪು. ೪

3 ಡಾ|| ಆರ್. ಆರ್. ದಿವಾಕರ್ : 'ಶರಣರ ಅನುಭವ ಅನುಭಾವ ಅನುಭೂತಿ', ೧೯೭೬, ಪು. ೩

ಶಕ್ತಿಗಳನ್ನು ಎಚ್ಚರಗೊಳಿಸಿ, ಆ ಎಚ್ಚರದಿಂದ ತೆರೆದ ಒಳಗಣ್ಣಿನಿಂದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸಿಕೊಳ್ಳುವುದನ್ನು ಅನುಭಾವ ಎಂದು ಹೇಳಬಹುದು. ಅದು ಕೇವಲ ಮನ ಬುದ್ಧಿಗಳಿಗೆ ನಿಲುಕದೆ ಅವುಗಳನ್ನು ದಾಟಿದ 'ಅಂತಸ್ಫುರಣ'ದಿಂದ ಅನುಭೂತವಾಗುತ್ತದೆ.[1]

'Mysticism is the immediate experience of oneness with ultimate Reality.[2] It is the perception and realization of the inner spring of our life and the inmost spirituality of man as hc is within himself,beyond the range of sense and of discursive thought.[3]

Who are the Mystics? They are those who are in touch with supra-sensual things, whose experiences are of a world different from the common physical world, the world of the mind and senses.[4]

## ಅನುಭವ ಮತ್ತು ಅನುಭಾವ

(೧) ಸಕಲ ಜೀವರುಗಳಿಗೆ ಜಾಗ್ರತ್ಸ್ವಪ್ನಗಳಲ್ಲಿ ನೇತ್ರಾದಿ ಇಂದ್ರಿಯಜನಿತವಾದ ಆಗುಹೋಗುಗಳು 'ಅನುಭವ' ಎನಿಸಿಕೊಳ್ಳುತ್ತವೆ. ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ ಎಂಬ ತ್ರಿಗುಣಗಳಿಗೆ ಹಾಗೂ ಸುಖದುಃಖ ರಾಗದ್ವೇಷ ಇತ್ಯಾದಿ ದ್ವಂದ್ವಗಳಿಗೆ ಒಳಗಾದ ಸಕಲ ಅನುಭವಗಳ ಭೋಕ್ತೃವೂ ಜೀವಾತ್ಮನೇ ಇರುವನು. ಇನ್ನು ಅಧ್ಯಾತ್ಮ ತಪಸ್ಸಿನಿಂದ, ಶಿವಕೃಪೆ ಗುರುಭೋದೆಯಿಂದ ಉಂಟಾಗುವ ಅತೀಂದ್ರಿಯವಾದ ದ್ವಂದ್ವಾತೀತವಾದ ಆತ್ಮಾನುಭವ 'ಅನುಭಾವ' ಎಂದೆನಿಸಿಕೊಳ್ಳುತ್ತದೆ. ಅದು 'ಜೀವಾತ್ಮ ಪರಮಾತ್ಮರ ಏಕರಸತ್ವದ. ಜೀವಶಿವರ ಐಕ್ಯದ ಅನುಭವವಾಗಿರುತ್ತದೆ,

(೨) ಅನುಭವವು ತ್ರಿಪುಟಿಯುಕ್ತವಾದುದು ಹಾಗೂ ವ್ಯಾವಹಾರಿಕ ಸತ್ಯಕ್ಕೆ ಸಂಬಂಧಿಸಿದುದು. ಆದರೆ ಅನುಭಾವವು ತ್ರಿಪುಟಿಗೆ ಅತೀತವಾದುದು ಹಾಗೂ ಪಾರಮಾರ್ಥ ಸತ್ಯಕ್ಕೆ ಸಂಬಂಧಿಸಿದುದು.

(೩) ಅನುಭವವು ಉಪಾಧಿಕ ಹಾಗೂ ಕ್ಷಣಿಕ ಸುಖದುಃಖಗಳ ಮಿಶ್ರಣ. ಅನುಭಾವವು ನಿತ್ಯ ನಿರತಿಶಯ ನಿರುಪಾಧಿಕವಾದ ಕೇವಲ ಆನಂದ.

(೪) ಅನುಭವವು ಅವರವರ ಕರ್ಮಕ್ಕನುಸಾರವಾಗಿ ಬಿಡದೆ ತಾನಾಗಿಯೇ ಬಂದೊದಗುವುದು ಅನುಭಾವವು ತಾನಾಗಿಯೇ ಬಂದೊದಗುವುದಿಲ್ಲ. ಅದು ಶಿವಕೃಪೆ ಹ್ಾಗೂ ಅಧ್ಯಾತ್ಮ ಸಾಧನೆಯ ಅಮೂಲ್ಯ ಫಲ. ಅದನ್ನು ಪಡೆದವರು ಧನ್ಯರು ; ಕೃತಕೃತ್ಯರು, ಮುಕ್ತರು.

(೫) ಅನುಭವವು ಅನಿತ್ಯ ಹಾಗೂ ಸಾಧಾರಣವಾದುದು. ಅನುಭಾವವು ಅಸಾಧಾರಣ ಹಾಗೂ ನಿತ್ಯವಾದುದು.

ಹೀಗೆ ಲೌಕಿಕವಾದ ಇಂದ್ರಿಯಜನ್ಯವಾದ ವಿಷಯಾನುಭವ ಅನುಭವವಾದರೆ ಅಲೌಕಿಕವಾದ ಇಂದ್ರಿಯಾತೀತವಾದ ಆತ್ಮದ, ಜೀವ–ಬ್ರಹ್ಮರ ಏಕತ್ವದ, ಪರತತ್ವದ ಅಸಾಧಾರಣ ಅನುಭವವು ಅನುಭಾವವಾಗಿರುತ್ತದೆ. ಇಂಥಾ ಆತ್ಮಾನುಭಾವದಲ್ಲಿ ನಿಂದವನೇ ಅನುಭಾವಿ.

ಶ್ರೀಮನ್ನಿಜಗುಣರು ಕನ್ನಡದ ಶ್ರೇಷ್ಠ ಅನುಭಾವಿಗಳಲ್ಲೊಬ್ಬರಾಗಿದ್ದಾರೆ. 'ಗುರುಬೋಧೆಯಿಂದ ಪರಾತ್ಪರವಪ್ಪ ಚಿತ್ತು ತನ್ನಿರವೆಂದು ನಿಜವನರಿದ ನಿಜಗುಣಯೋಗಿ ವಿರಚಿಸಿದನೀ ಕೃತಿಯನಿಲ್ಲಿ' (ಅನುಭವಸಾರ ಸಂ. ೧, ಸೂ. ೧) ಎಂದು ತಾನೇ ಹೇಳಿಕೊಂಡಿರುವಂತೆ, ಭಕ್ತಿ ಜ್ಞಾನ ವೈರಾಗ್ಯಸಂಪನ್ನರಾಗಿ ಅಧ್ಯಾತ್ಮ ತಪಸ್ವಿಗಳಾಗಿ ಹಾಗೂ ಸದ್ಗುರುಗಳಿಂದ ಬೋಧಿತರಾಗಿ, ಮಾಯಾ ಹಾಗೂ ತತ್ಕಾರ್ಯವಾದ ಜಗತ್ತು ದೇಹಗಳನ್ನು ದಾಟಿ, ಪರಾತ್ಪರವಪ್ಪ ಚಿದ್ವಸ್ತುವೇ, ಬ್ರಹ್ಮಾಭಿನ್ನ ಪ್ರತ್ಯಗಾತ್ಮವೇ ತನ್ನ ನಿಜಸ್ವರೂಪವೆಂದು ನಿಜವರಿದ ಮಹಾನುಭಾವಿಗಳು. ಆ ತಮ್ಮ ನಿಜಾನುಭವವನ್ನೇ ಲೋಕದ ಜೀವಿಗಳ ಹಿತಾರ್ಥವಾಗಿ, ಧನ್ಯತೆಗಾಗಿ, ಅಮರಕಾವ್ಯವಾಣಿಯೆಂದುಸುರಿ ಅನುಭಾವಿ ಕವಿಯೂ ಆಗಿದ್ದಾರೆ.

---

1 ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ : 'ಶರಣರ ಅನುಭಾವ ಸಾಹಿತ್ಯ', ೧೯೭೮, ಪು, ೧೬೪

2 Encyclopaedia Britanica, (Vol. 15) p. 1129

3 S. N. Dasagupta, Hindu Mysticism, 1976, p. 38

4 Nalini Kanta Gupta. The approach to Mysticism, 1946, p. 9

ಆದ್ದರಿಂದ ಅವರ ಕಾವ್ಯ ಕೃತಿಗಳಲ್ಲಿ ಭಾವಸಂಪತ್ತು, ನಾದಸಂಪತ್ತು, ಅಧ್ಯಾತ್ಮಸಂಪತ್ತಲ್ಲದೆ ಅನುಭಾವದ ಸಂಪತ್ತು ವಿಶೇಷವಾಗಿದೆ. ಅವರ ಕೃತಿಗಳನ್ನು ಓದಿದಾಗ ಅವರ ಉತ್ಕೃಷ್ಟವಾದ ಅನುಭಾವದ ದೀಪ್ತಿಯ ಹೊಳಪನ್ನು ನಾವು ಕಾಣದೆ ಇರಲಾರೆವು. ನಿಜಕ್ಕೂ ಅವರ ಕೃತಿಗಳು ಅನುಭಾವದ ರನ್ನಗನ್ನಡಿಗಳಾಗಿವೆ. ಉದಾಹರಣೆಗಾಗಿ : ಈ ಕೆಳಗಿನ ಕೆಲವು ಪದ್ಯಗಳನ್ನು ನೋಡಬಹುದು.

ತನುವಿದಾನಲ್ಲವಿಂದ್ರಿಯವಾನಲ್ಲಸುವರ್ಗ
ವೆನಿಪವಾನಲ್ಲ ಹಮ್ಮು ಚಿತ್ತ ಬುದ್ಧಿ
ಮನವಾನಲ್ಲಿಳೆ ವಾರಿ ಶಿಖಿ ವಾಯು ನಭವೆಂಬಿ
ವಿನಿತು ನಾನಲ್ಲವೆನಗೆ ವೇದ್ಯವಾಗಿ
ಗುಣಹಂತೆ ಮಹದವಿದ್ಯಾ ಮಾಯಶಕ್ತಿಗ
ಳೆಣಿಸಲಾನಲ್ಲ ವರಧರ್ಮಕರ್ಮ
ಗುಣವೊಂದುನಾನಲ್ಲವಿದಮಹವೆಂದು
ಗಣಿಸಲಾನಲ್ಲೆನಗವುದೃಶ್ಯವಾಗಿ
ಪರಮ ಜೀವಾಂತರ ವಿಶ್ವ ತೈಜಸ ಪ್ರಾಜ್ಞ
ತುರಿಯಾದಿ ವಿಷಯದೃಕ್ಕುಗಳಿವಾನಲ್ಲ
ಪರತರಾನಂದೈಕರಸರೂಪ ದೃಶಿಮಾತ್ರ
ಗುರುಶಂಭುಲಿಂಗದ ನಿಜವೆ ತಾನಾಗಿ.[1]

ಮತ್ತು

ಆವಪುಣ್ಯದ ಫಲವಿದೆಂದು ಕುರುಹಿಡಲಹುದು,
ಜೀವಭಾವವನುಳಿದ ನಿಜನಿಷ್ಠೆಯ ॥ ಪ ॥

ಅರಸು ನರ್ತಕಿ ತಾಳಧಾರಿ ಸೂರಿಗಳನಾ
ವರಿಸಿ ಬೆಳಗುವ ರಂಗುದೆಡೆಯ ಸೊಡರಂತೆ
ನೆರೆದಹಮು ಬುದ್ಧೀಂದ್ರಿಯಾದಿ ವಿಷಯಂಗಳಾ
ಚರಣ ಸಾಕ್ಷಿಕ ಚಿತ್ತು ತಾನೆಂಬ ಸುಖವ

ಮನೆಯ ಕಂಡಿಯೊಳ್ಳೈದಿದಿನ ಕಿರಣದಲ್ಲಿ ಕರ
ವನು ಚಲಿಸೆ ನೇಸರು ಚಲಿಸಿತೆಂಬಂತೆ
ಜನನಾದಿ ವಿಕೃತಿ ಜೀವಂಗೆ ತೋರಿದೊಡದನು
ತನಗೆ ನಿಜವಲ್ಲವೆಂದರಿದ ಪರಿಣಾಮವ

ಬೆಳಕು ಕತ್ತಲೆಗಳಂ ತಳೆದೊಡಾಗಸದ ನಿ
ರ್ಮಳವಳಿಯದಂತೊಪ್ಪುವರಿವು ಮರವೆಗಳ
ಬಳಕೆಗಾಶ್ರಯವೆನಿಸುತವರೊಡನೆ ಬೆರಸದವಿ
ರಳ ಶಂಭುಲಿಂಗ ತಾನಾದ ಸಂಪದವ.[2]

ಅನುಭಾವವು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚಭೂತಗಳಿಗೆ ಅತೀತವಾದುದು. ಅದು ಭೌತಿಕ ಶರೀರದ ಅವಸ್ಥೆಗಳನ್ನು, ಕರ್ಮಗಳನ್ನು, ವಿಕಾರಗಳನ್ನು, ಜಡತ್ವವನ್ನು, ಬಾಧೆಗಳನ್ನು, ದ್ವಂದ್ವಗಳನ್ನು, ಅಂತಃಕರಣಗಳನ್ನು ಮೀರಿದ ಸಾಕ್ಷಿ ಸ್ಥಿತಿಯಾಗಿರುತ್ತದೆ.

ಅದು ಸಚ್ಚಿದಾನಂದವದು ನಿತ್ಯವೆಂಬ ಭಾ
ವದ ತೋರ್ಕೆಯುಡಗಿ ನಿಂದರಿವದು,
ಸದಮಳವೆನಿಪ ತುರ್ಯಾತೀತವದು ನಿಜ
ಪದವಾದ ಪೂರ್ಣಾದ್ವಯಾತ್ಮನು

1 ವೇದಾಂತ ಗ್ರಂಥಾವಳಿ. (ಕೈವಲ್ಯ ಪದ್ಧತಿ) ಪು. ೭೭

2 ಅದೇ, ಪು. ೭೫

ತಾನೆಂಬುದಿಲ್ಲ ವನ್ಯತೆಗಾಣಲಿಲ್ಲವಿ
ನ್ನೇನೊಂದನುಸುರಲಿಕ್ಕೆಡೆಯಿಲ್ಲ
ಮಾನ ಮೇಯಾದಿಗಳಿಲ್ಲವಂತಿಂತೆಂಬು
ದೇನುಮಿಲ್ಲೆಂದೆಂದು ಪರಿಪೂರ್ಣ

ಕಡೆಯಿಲ್ಲ ಮೊದಲಿಲ್ಲ ತಡೆ ಬಿಡುಗಡೆಯಿಲ್ಲ
ಪಡಿಯಿಲ್ಲ ಪಟ್ಟಾಂತರವೆಯಿಲ್ಲ
ನುಡಿಯಿಲ್ಲ ನೆನಹಿಲ್ಲವರಿವಿನೆಚ್ಚರು ದೋರ
ಲೆಡೆಯಿಲ್ಲವೆಂದೆಂದು ಪರಿಪೂರ್ಣ.[1]

ಅನುಭಾವವು ಜ್ಞಾತೃ–ಜ್ಞಾನ–ಜ್ಞೇಯುಗಳೆಂಬ ತ್ರಿಪುಟಿಗಳನ್ನು ಮೀರಿದ ತ್ರಿಕಾಲಾಬಾಧ್ಯವಾದ ತುರ್ಯಾತೀತದ ಅವಸ್ಥೆಯಾಗಿರುತ್ತದೆ. ಅಲ್ಲಿ ನಾ ನೀನೆಂಬ ದ್ವೈತವಲ್ಲ. ಪ್ರಮಾತೃ–ಪ್ರಮಾಣಗಳಿಲ್ಲ. ಉತ್ಪತ್ತಿ–ನಾಶಗಳಿಲ್ಲ. ಮೇಲು–ಕೀಳುಗಳಿಲ್ಲ. ಹಿಡಿವುದಾಗಲಿ–ಬಿಡುವುದಾಗಲಿ ಇಲ್ಲ. ಅಜ್ಞಾನ–ಆವರಣಗಳಿಲ್ಲ. ಮಾತು–ಮನಗಳಿಲ್ಲ. ಅರಿವು ಮರೆವುಗಳಿಲ್ಲ. ಯಾವ ಕಲ್ಪನೆಗಳಿಲ್ಲ. ಅದು ಉಪಾಧಿರಹಿತವಾದ ಬಿಚ್ಚಬರಿಯ ಅರಿವಿನ ಪೂರ್ಣ ಸ್ಥಿತಿಯಾಗಿರುತ್ತದೆ.

ಆವ ಪರಿಯ ಸುಖವ ಭಾವಿಸಿ ಬೇರೆಣಿಸಿದೊಡೆ
ಜೀವಪರಮಯೋಗದ ನಿಜವರಿದನುಭವಿಯ ಸುಖಕೆ ಸರಿಗಾಣೆ ॥ ಪ ॥

ಕವಿಜನರುಪಮೆಗೆ ಹವಣಿಸ ಬಾರದ
ನವಲಾವಣ್ಯದ ಜವ್ವನೆಯ
ತವಕದ ರತಿಗನುಕೂಲ ಸುಸಾಧನ
ನಿವಹದೆಸೆವ ಸುಖ ಮೊದಲಾದ

ಮೇರುಸಿಂಹಾಸನವಖಿಳ ದೇವ ಪರಿ
ಚಾರಕರಣಿಮಾದಿಗಳೊಡನೆ
ಭೂರಿಭುವನವನಾಳುವ ತನವಿದು
ಕೈಸಾರಿರಲೊದಗುವ ಸುಖವಿಡಿದು

ಸಾಕೆನಿಸದೆ ಸವೆಯದೆ ಬೇರೊಂದನು
ಬೇಕೆನಿಸದೆ ಕಡೆಯೊಳು ತನ್ನ
ಜೋಕೆಗುಂದದೆ ನಿರುಪಮ ಶಂಭುಲಿಂಗದೊ
ಳೇಕಮೆನಿಪ ಸುಖವೊಂದಲ್ಲದೆ.[2]

ಅನುಭಾವವು ಕೇವಲ ಆನಂದ ಸ್ಥಿತಿ. ಅದು ವಿಷಯುಗಳಿಂದಾಗುವ ಇಹಲೋಕದ ಮಾನುಷಾನಂದಕ್ಕೂ ಮಿಗಿಲಾದುದು. ಬ್ರಹ್ಮಲೋಕಾದಿ ದೇವತೆಗಳ ಆನಂದಕ್ಕೂ ಮಿಗಿಲಾದುದು. ಅದು ನಿತ್ಯವಾದುದು, ನಿರತಿಶಯುವಾದುದು, ನಿರುಪಾಧಿಕವಾದುದು ಹಾಗೂ ಉಪಮಾತೀತವಾದುದು.

ಹೀಗೆ ನಿಜಗುಣರು ಅತೀಂದ್ರಿಯುವಾದ ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಪರಂಜ್ಯೋತಿ 'ಪರತತ್ವ'ವನ್ನರಿದು ಅಥವಾ ಬ್ರಹ್ಮಾನುಭೂತಿ ಅಥವಾ ಬ್ರಹ್ಮಸಾಕ್ಷಾತ್ಕಾರ ಹೊಂದಿದ ಪರಮ ಅನುಭಾವಿಗಳು. ಅದನ್ನೇ ಸುಂದರವಾಗಿ ವಾಗ್ರೂಪವಾಗಿ ಅಭಿವ್ಯಕ್ತಿಗೊಳಿಸಿದ ಅನುಭಾವಿ ಸಾಹಿತಿಗಳು. ಶಿವಶರಣ ವಚನಕಾರರಂತೆಯೇ ಅವರ ಆತ್ಮವಿಹಗವು ಅನುಭಾವದ ಗಗನದಲ್ಲಿ ವಿಹರಿಸಿ ತಾನು ಕಂಡ ಪರಮಾರ್ಥ ಸತ್ಯದ ಅಭಿವ್ಯಕ್ತಿಯನ್ನು ಸ್ವಚ್ಛಂದವಾಗಿ ಸಾಧಿಸಿದೆ. ಅನುಭವದ ಅನನ್ಯತೆಯ ಅನಿವಾರ್ಯ ಅಭಿವ್ಯಕ್ತಿಯಾಗಿದೆ

---

[1] ವೇದಾಂತ ಗ್ರಂಥಾವಳಿ. (ಪರಮಾನುಭವಬೋಧೆ) ಪು. ೧೪೭

[2] ವೇದಾಂತ ಗ್ರಂಥಾವಳಿ. (ಕೈವಲ್ಯಪದ್ಧತಿ) ಪು. ೭೯

ನಿಜಗುಣರ ಸಾಹಿತ್ಯ ಸೃಷ್ಟಿ. ಅವರ ಕೃತಿಗಳು (ಪದ್ಯಗಳಾಗಲಿ, ಗದ್ಯಗಳಾಗಲಿ) ಅವರ ಅನುಭಾವದ ಹಿಮಾಲಯದಿಂದ ಹರಿದು ಬಂದ ಗಂಗಾಪ್ರವಾಹವಾಗಿದೆ. ಅವುಗಳಲ್ಲಿ ಮಿಂದವರನ್ನು ಪಾವನಗೊಳಿಸುತ್ತವೆ. ಕನ್ನಡ ಅನುಭಾವ ಸಾಹಿತ್ಯಕ್ಕೆ ನಿಜಗುಣರು ನೀಡಿದ ಕೊಡುಗೆ ಅಪೂರ್ವ, ಅಪಾರ ಹಾಗೂ ಅಮೂಲ್ಯವಾಗಿರುತ್ತದೆ.

೧೫ನೆ ಶತಮಾನದಲ್ಲಿ ವೀರಶೈವ ವೇದಾಂತ ಮತ್ತು ಅನುಭಾವ ಪಂಥಗಳಿಗೆ ಆದ್ಯಪ್ರವರ್ತಕನಾದವನು ಸಪ್ತಕಾವ್ಯದ ಗುರುಬಸವನಾದರೆ, ಉತ್ತರಾರ್ಧದಲ್ಲಿ ನಿಜಗುಣರು. ಈ ಪರಂಪರೆ ಮತ್ತು ವ್ಯಕ್ತಿತ್ವ ಕೃತಿತ್ವಗಳೆರಡರ ಸಿದ್ಧಿಯಿಂದ ಗುರುವಾದರು.[1] 'ನಿಜಗುಣಶಿವಯೋಗಿ ಕನ್ನಡ ನಾಡಿನ ಅದ್ಭುತ ವ್ಯಕ್ತಿಗಳಲ್ಲಿ ಒಬ್ಬರು. ಅಗಾಧ ವಿದ್ವತ್ತೆಯಿಂದಲೂ, ದೀರ್ಘ ತಪಶ್ಚರ್ಯೆಯಿಂದಲೂ ಜ್ಞಾನದ ತುತ್ತತುದಿಯನ್ನೇರಿ ಕೆಳಗಿಳಿದು ಬಂದು ತರತರದ ಗದ್ಯಪದ್ಯಗಳಲ್ಲಿ ಕನ್ನಡ ಜನಕ್ಕೆ ತನ್ನ ಅರಿವನ್ನು ಹಂಚಿಕೊಟ್ಟವರು'[2] ಎಂಬುದಾಗಿ ವಿದ್ವಾಂಸರು ನಿಜಗುಣರ ಅನುಭಾವದ ಬಗ್ಗೆ ನುಡಿದ ಮಾತುಗಳನ್ನು ನಾವು ಒಪ್ಪಲೇಬೇಕು.

---

ಏನನಾದಡೆಯೂ ಸಾಧಿಸಬಹುದು
ಮತ್ತೇನನಾದರೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು
ಕೂಡಲ ಸಂಗಮದೇವರ ಕರುಣವುಳ್ಳವಂಗಲ್ಲದೆ

ಬಸವಣ್ಣ

---

1 ವಿ. ಶಿವಾನಂದ, 'ಶತಮಾನ ಕನ್ನಡ ಸಾಹಿತ್ಯ ಚರಿತ್ರೆ', ೧೯೭೬, ಪು. ೮೭

2 ರಂ. ಶ್ರೀ. ಮುಗಳಿ, 'ಕನ್ನಡ ಸಾಹಿತ್ಯ ಚರಿತ್ರೆ', ೧೯೭೧, ಪು. ೩೦೧

# ಬೋಳಬಸವೇಶ್ವರರ ಕಾಲ

ಡಾ. ಬಿ. ಆರ್. ಹಿರೇಮಠ

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯರಲ್ಲಿ ಅಗ್ರಗಣ್ಯರಾದವರು ಬೋಳಬಸವೇಶ್ವರರು. ಸಿದ್ಧಲಿಂಗ ಶಿವಯೋಗಿಗಳು ಕ್ರಿ.ಶ. ೧೫೬೧ರ ತರುವಾಯವೂ ಬದುಕಿದ್ದರೆಂಬುದು ಇತ್ತೀಚಿನ ಸಂಶೋಧನೆಯಿಂದ ತಿಳಿದುಬಂದಿದೆ.[1] ಆದುದರಿಂದ ಇವರ ಶಿಷ್ಯರಾದ ಬೋಳಬಸವೇಶ್ವರರ ಕಾಲವೂ ಮುಂದೆ ಸರಿಯುತ್ತದೆ. ಹೊಸದಾಗಿ ಲಭಿಸಿದ ಆಧಾರ ಸಾಮಗ್ರಿಯ ಬಲದಿಂದ ಬೋಳಬಸವಾರಾಧ್ಯರ ಕಾಲವನ್ನು ಗುರುತಿಸುವುದು ಈ ಲೇಖನದ ಉದ್ದೇಶ.

ವಿಜಯನಗರ ಅರಸು ೧ನೆಯ ಶ್ರೀರಂಗರಾಯ (ಕ್ರಿ.ಶ. ೧೫೭೨–೧೫೮೫)ನ ಕಾಲದಲ್ಲಿ ಮಹಾನಾಡಪ್ರಭುವಾಗಿದ್ದ ಕರಿತಿಮ್ಮ ಚಿಕ್ಕಭೂಪಾಲನ ಗುರು, ತೋಂಟದ ಸಿದ್ಧಲಿಂಗಯತಿ. ಈ ಭೂಪಾಲನ ಮೊಮ್ಮಗನಾದ ಮುಮ್ಮಡಿ ಚಿಕ್ಕಭೂಪಾಲ (ಸಪ್ಪೇಂದ್ರ)ನಿಗೆ ತೋಂಟದಾರ್ಯರ ಶಿಷ್ಯ ಬೋಳಬಸವೇಶ್ವರರು ಗುರುಗಳಾಗಿದ್ದರು.[2] ಹೀಗೆ ಮಹಾನಾಡ ಪ್ರಭುಗಳ ಮನೆತನಕ್ಕೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪರಂಪರೆಯವರು ಗುರುಗಳಾಗಿದ್ದುದು ತಿಳಿದುಬರುತ್ತದೆ.

ಕರಿತಿಮ್ಮ ಚಿಕ್ಕಭೂಪಾಲ ಹಾಗೂ ಸೋಮಾಂಬೆಯರಿಗೆ ಸಿದ್ಧಲಿಂಗಶಿವಯೋಗಿಗಳ ಆಶೀರ್ವಾದದಿಂದ ಜನಿಸಿದ ಮಗ, ಇಮ್ಮಡಿ ಚಿಕ್ಕಭೂಪಾಲ. ಈತನ ಪಟ್ಟಮಹಿಷಿ, ಚೆನ್ನಾಜಮ್ಮ. ಈ ದಂಪತಿಗಳ ಮಕ್ಕಳು ತೋಂಟದರಾಯ, ಸಪ್ಪೇಂದ್ರ (ಮುಮ್ಮಡಿ ಚಿಕ್ಕಭೂಪಾಲ) ಮತ್ತು ಚೆನ್ನಪ್ಪಗೌಡ. ಇವರಲ್ಲಿ ತಂದೆ ಇಮ್ಮಡಿ ಚಿಕ್ಕಭೂಪಾಲ ಹಾಗೂ ಮಗ ತೋಂಟದರಾಯರು ಕ್ರಿ.ಶ. ೧೫೯೪–೧೬೦೬ರ ಮಧ್ಯ ಘಟಿಸಿರಬಹುದಾದ ಹರವೆಯ ಕಾಳಗದಲ್ಲಿ ಮರಣಹೊಂದಿದರು.[3] ಆ ಸಂದರ್ಭದಲ್ಲಿ ಬೋಳಬಸವೇಶ್ವರರು ಸಪ್ಪೇಂದ್ರನಿಗೆ ಮಹಾನಾಡಿನ ಪಟ್ಟವನ್ನು ಕಟ್ಟಿದರೆಂದು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯಕೃತಿ ತಿಳಿಸುತ್ತದೆ.[4] ಸಪ್ಪೇಂದ್ರನು ಮುಮ್ಮಡಿ ಚಿಕ್ಕಭೂಪಾಲ ಎಂಬ ಹೆಸರಿನಿಂದ ಬಿಜ್ಜಾವರದಲ್ಲಿ ನಿಂತು ರಾಜ್ಯಭಾರ ನಡೆಸಿದನು. ಹೀಗಾಗಿ ಕ್ರಿ.ಶ. ೧೫೯೪–೧೬೦೬ರ ತರುವಾಯ ಬೋಳಬಸವೇಶ್ವರರು ಬದುಕಿದ್ದರೆಂದು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದ ಪ್ರಸ್ತಾವನೆಯಲ್ಲಿ ನಾವು ಈಗಾಗಲೇ ಉಲ್ಲೇಖಿಸಿದ್ದೇವೆ (ಪುಟ XIV). ಈಗ ಈ ಉಲ್ಲೇಖಕ್ಕೆ ಇನ್ನೊಂದು ಆಧಾರವನ್ನು ಒದಗಿಸಬಹುದಾಗಿದೆ. ಅದು:

ಮುಮ್ಮಡಿ ಚಿಕ್ಕಭೂಪಾಲನ ಮತ್ತೊಬ್ಬ ಗುರು, ಹರದನಹಳ್ಳಿ ಬಸವಲಿಂಗಸ್ವಾಮಿಗಳು.[5] ತೋಂಟದ ಸಿದ್ಧ

---

1 ಡಾ॥ ಎಂ. ಎಂ. ಕಲಬುರ್ಗಿ ಹಾಗೂ ಬಿ. ಆರ್. ಹಿರೇಮಠ : ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ, ಬಸವ ಜರ್ನಲ್ : ಸಂಪುಟ–೩, ಸಂಚಿಕೆ–೩ ಹಾಗೂ ಡಾ॥ ಎಂ. ಎಂ. ಕಲಬುರ್ಗಿ : ತೋಂಟದ ಸಿದ್ಧಲಿಂಗಯತಿಗಳ ಕಾಲ ಕಸಾಪ : ೬೩–೧ ; ಬಿ. ಆರ್. ಹಿರೇಮಠ : ತೋಂಟದ ಸಿದ್ಧಲಿಂಗ ಯತಿಗಳ ಕಾಲ—ಒಂದು ಟಿಪ್ಪಣಿ (ಅಪ್ರಕಟಿತ ಲೇಖನ). ಸಿದ್ಧಲಿಂಗ ಯತಿಗಳು ೧೫೭೨–೧೪೮೪ರ ಮಧ್ಯ ಲಿಂಗೈಕ್ಯರಾಗಿದ್ದಾರೆ.

2 ಸಿದ್ಧಲಿಂಗ ಯತಿಗಳ ಶಿಷ್ಯರಾದ ಹರದನಹಳ್ಳಿ ಗೋಸಲ ಬಸವಲಿಂಗದೇವರು, ಮುಮ್ಮಡಿ ಚಿಕ್ಕಭೂಪಾಲನ ಮತ್ತೊಬ್ಬ ಗುರುಗಳು (ಕ್ರಿ.ಶ. ೧೬೪೫ರಲ್ಲಿ).

3 ಡಾ॥ ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠ (ಸಂ) : 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ'—ಪೀಠಿಕೆ, ಪು. xiii.

4 ಅದೇ, ಸಂಧಿ ೧೭, ಪದ್ಯ ೬೮

5 ಬಿ. ಆರ್. ಹಿರೇಮಠ : ಮುಮ್ಮಡಿ ಚಿಕ್ಕಭೂಪಾಲ ಮತ್ತು ಹರದನಹಳ್ಳಿ ಬಸವಲಿಂಗಸ್ವಾಮಿಗಳು (ಅಪ್ರಕಟಿತ ಲೇಖನ).

ಲಿಂಗ ಶಿವಯೋಗಿಗಳ ಶಿಷ್ಯರಲ್ಲಿ ಒಬ್ಬರಾದ ಇವರು[1] ಬೋಳಬಸವಾರಾಧ್ಯರ ನಂತರ ಮಹಾನಾಡಪ್ರಭುಗಳ ಗುರುಗಳಾಗಿದ್ದರು. ಮುಮ್ಮಡಿ ಚಿಕ್ಕಭೂಪಾಲ ಹಾಗೂ ಹರದನಹಳ್ಳಿ ಬಸವಲಿಂಗಸ್ವಾಮಿಗಳಿಗೆ ಸಂಬಂಧಿಸಿದ ಕಾಗದಪ್ರತಿಯೊಂದರ ಆದಿಯಲ್ಲಿ.

"ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು....ತಾರಣ ಸಂವತ್ಸರದ ಮಾರ್ಗಶಿರ ಶುದ್ಧ ೫ ಸ್ಥಿರವಾರದಲ್ಲು ಶ್ರೀಮತ್ತೋಂಟದ ಸಿದ್ಧಲಿಂಗಸ್ವಾಮಿಯವರ ವಂಶೋದ್ಭವರಾದಂಥ ಶ್ರೀ ಬಸವಲಿಂಗಸ್ವಾಮಿಯವರಿಗೆ ಮುಮ್ಮಡಿ ಚಿಕ್ಕಣ್ಣಗೌಡರ ಶಿಷ್ಯರ ವಂಶಾವಳಿಯೇನೆಂದರೆ ಹರದನಹಳ್ಳಿ ಬಸವಲಿಂಗಪ್ಪದೇವರು ಬಿಜಾಪಟ್ಟಣಕ್ಕೆ ಬಂದದ್ದು" ಎಂದಿದೆ.[2] ಇಲ್ಲಿಯ 'ತಾರಣ ಸಂವತ್ಸರ ಮಾರ್ಗಶಿರ ಶುದ್ಧ ೫ ಸ್ಥಿರವಾರ', ಕ್ರಿ.ಶ. ೧೬೪೫ಕ್ಕೆ ಸರಿಹೊಂದುತ್ತದೆ. ಇದು ಮುಮ್ಮಡಿ ಚಿಕ್ಕಭೂಪಾಲನ ಆಳಿಕೆಯ ಕಾಲವೂ ಆಗಿದೆ. ಹೀಗಾಗಿ ಕ್ರಿ.ಶ. ೧೫೯೪–೧೬೦೭ರ ತರುವಾಯವೂ ಜೀವಿಸಿದ್ದ ಬೋಳಬಸವೇಶ್ವರರು ಕ್ರಿ.ಶ. ೧೬೪೫ ಅಥವಾ ಸ್ವಲ್ಪ ಮೊದಲು ಲಿಂಗೈಕ್ಯರಾದ ಪ್ರಯುಕ್ತ ಹರದನಹಳ್ಳಿ ಬಸವಲಿಂಗದೇವರು ಬಿಜ್ಜಾವರಕ್ಕೆ ಬಂದಿರಬೇಕೆಂದು ಕಾಣುತ್ತದೆ. ಆದುದರಿಂದ ಬೋಳಬಸವೇಶ್ವರರ ಕಾಲದ ಕೊನೆಯ ಗಡುವು ೧೬೪೫ ಇಲ್ಲವೆ ಸ್ವಲ್ಪ ಮೊದಲು ಎಂದು ನಿರ್ಧಾರವಾಗುತ್ತದೆ.[3]

---

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು
ಇದು ಚೆನ್ನಬಸವಣ್ಣ ಪ್ರಿಯ ಚಂದ್ರೇಶ್ವರ ಲಿಂಗದ ನಿಲುವು

ನುಲಿಯ ಚಂದಯ್ಯ

---

1 ಬಿಜ್ಜಾವರದ ಪವಾಡದಯ್ಯನವರ ಮನೆಯಲ್ಲಿರುವ ಕಾಗದ ಪ್ರತಿ, ಈ ಅಂಶವನ್ನು ಪ್ರಪ್ರಥಮವಾಗಿ ತಿಳಿಸಿಕೊಡುತ್ತದೆ.

2 ಅಂತ್ಯದಲ್ಲಿ "ಶ್ರೀ ತ್ತೋಂಟದ ಸಿದ್ಧಲಿಂಗಸ್ವಾಮಿಯವರ ವಂಶೋದ್ಭವರಾದಂಥ ಹರದನಹಳ್ಳಿ ಬಸವಲಿಂಗಸ್ವಾಮಿ ಗುರುಗಳಿಗೆ ಮುಮ್ಮಡಿ ಚಿಕ್ಕಪ್ಪ ದೊರೆಗಳು ಬರೆದುಕೊಟ್ಟ ವಂಶಾವಳಿ" ಎಂದಿದೆ (ಬಿಜ್ಜಾವರದ ಪವಾಡಯ್ಯನವರ ಮನೆಯಲ್ಲಿ ಇರುವ ಕಾಗದ ಪ್ರತಿ).

3 ತೋಂಟದ ಸಿದ್ಧಲಿಂಗ ಶಿವಯೋಗಿಗಳು ೧೫೭೨–೧೫೪೪ರ ನಡುವೆ ಲಿಂಗೈಕ್ಯರಾದ ವಿಷಯ ನನ್ನ ಅಪ್ರಕಟಿತ ಲೇಖನ–ತೋಂಟದ ಸಿದ್ಧಲಿಂಗ ಯತಿಗಳ ಕಾಲ: ಒಂದು ಟಿಪ್ಪಣಿ ಹಾಗೂ ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣಗಳಿಂದ ತಿಳಿದುಬರುತ್ತದೆ. ನಂತರ ಅವರ ಶಿಷ್ಯ ಬೋಳಬಸವೇಶ್ವರರು ಎಡೆಯೂರನ್ನು ತ್ಯಜಿಸಿ, ಕ್ರಿ.ಶ. ೧೫೯೦ ಅಥವಾ ೧೬೦೦ರ ಸುಮಾರಿಗೆ ಬಿಜ್ಜಾವರಕ್ಕೆ ಬಂದಂತೆ ಕಾಣುತ್ತದೆ.

# ಕಲಬುರಗಿ ಶ್ರೀ ಶರಣಬಸವೇಶ್ವರರು

**ಡಾ. ಮಲ್ಲಿಕಾರ್ಜುನ ಶಿ. ಲಠ್ಠೆ**

ಕಲ್ಯಾಣದ ಹೆಬ್ಬಾಗಿಲೆನಿಸಿದ ಕಲಬುರಗಿ ಬಹಮನಿ ರಾಜರ ರಾಜಧಾನಿಯಾಗಿ ಮೆರೆದ ನಗರ. ಇಲ್ಲಿ ಒಂದು ಕಡೆ ಶ್ರೀ ಶರಣಬಸವೇಶ್ವರರ ದೇವಾಲಯ ಇದೆ. ಇನ್ನೊಂದು ಬದಿಗೆ ಬಂದೇನವಾಜರ ದರ್ಗಾ ಇರುತ್ತದೆ. ಇವೆರಡೂ ವೀರ ಶೈವ ಹಾಗೂ ಇಸ್ಲಾಂ ಸಂಸ್ಕೃತಿಯ ಕೇಂದ್ರಸ್ಥಳಗಳಾಗಿ ಕಂಗೊಳಿಸುತ್ತಿವೆ. ಈ ದೇವಾಲಯಗಳ ಮಧ್ಯದಲ್ಲಿ ಗುಲ್ ಚಂದ್ ದೊರೆ ಕಟ್ಟಿಸಿದ ಕೋಟೆಯೊಂದು ಐತಿಹಾಸಿಕ ಅವಶೇಷವಾಗಿ ಉಳಿದುಕೊಂಡಿದೆ.

ಕಲಬುರಗಿಗೆ ಮುಸಲ್ಮಾನರು ತಮ್ಮ ಆಳಿಕೆಯಲ್ಲಿ 'ಗುಲ್ಬರ್ಗಾ' ಎಂದು ಕರೆದರು. ಇದು ಪಾರ್ಸಿ ಶಬ್ದ. ಗುಲ್ ಎಂದರೆ ಹೂ : ಬರ್ಗ ಎಂದರೆ ಎಲೆ ; ಹೂವು ಎಲೆಗಳಿಂದ ಆವೃತವಾದ ನಗರವೇ ಗುಲ್ಬರ್ಗಾ ಎಂದಾಗಿದೆ. ಹುಣಸಿ ಹಡಗಲಿ ಗ್ರಾಮದ ೧೦೯೮ರ ಹಾಗೂ ಬೀದರ ಜಿಲ್ಲೆಯ ೧೧೪೩ರ ಶಾಸನಗಳಲ್ಲಿ 'ಕಲಬುರಗೆ' ಎಂಬ ಉಲ್ಲೇಖ ಬರುತ್ತದೆ. ಧಾನ್ಯ ಬೆಳೆಯುವ ಕಲ್ನೆಲದ ಪ್ರದೇಶವಿದಾಗಿದೆ. ಬಿಸಿಲು ಬಹಳ. ಮೊದಲು ಹೈದ್ರಾಬಾದ್ ಸಂಸ್ಥಾನಕ್ಕೆ ಸೇರಿದ ಈ ಭಾಗ, ಅಂದರೆ ಬೀದರ್, ರಾಯಚೂರ್, ಕಲಬುರಗಿ ಜಿಲ್ಲೆಗಳು ಹೈದ್ರಾಬಾದ್ ಸಂಸ್ಥಾನಕ್ಕೆ ಸೇರಿದ್ದು—ರಾಜ್ಯ ಪುನರ್ಘಟನೆಯ ತರುವಾಯ ಕರ್ನಾಟಕ ರಾಜ್ಯಕ್ಕೆ ಸೇರ್ಪಡೆಯಾಯ್ತು.

ಕಲಬುರಗಿ ಸಮೀಪದ ಮಳಖೇಡ ಹಿಂದೊಮ್ಮೆ ರಾಷ್ಟ್ರಕೂಟರ ರಾಜಧಾನಿಯಾಗಿ ಮೆರೆದಿದೆ. ಕಲ್ಯಾಣವು ಚಾಳುಕ್ಯರ ರಾಜಧಾನಿಯಾಗಿತ್ತು. ನಾಗಾಯಿ ಎಂಬುದು ಅಂದಿನ ಕಾಲದ ವಿಶ್ವವಿದ್ಯಾಲಯವೂ ಎನಿಸಿತ್ತು. ಈ ಭಾಗದಲ್ಲಿ ಅಸಂಖ್ಯಾತ ಶರಣರು, ಅನುಭಾವಿ ಕವಿಗಳು, ಸಿದ್ಧಪುರುಷರು, ಕಲಾಕಾರರೂ ಆಗಿಹೋಗಿದ್ದಾರೆ. ಮುದೇನೂರ ದಾಸಿಮಯ್ಯ, ಹಾವಿನಹಾಳ ಕಲ್ಲಯ್ಯ, ಸಗರಬ್ರಹ್ಮಯ್ಯ, ಕೆಂಭಾವಿ ಭೋಗಣ್ಣ, ಸೊಪ್ಪೆಯ ಸಿದ್ಧಬಸವ, ಎಮ್ಮಡಗಿ ಪ್ರಭುದೇವ, ತಿಂಥಣಿ ಮೌನೇಶ್ವರ, ಜೇವರ್ಗಿ ಷಣ್ಮುಖ ಶಿವಯೋಗಿ, ರಾಮಪುರದ ಬಕ್ಕ, ಕಡಕೋಳದ ಮಡಿವಾಳಪ್ಪ, ಕೊಡಲೂರು ಬಸವಲಿಂಗ ಶರಣ, ಕಲಬುರಗಿ ಶರಣಬಸವೇಶ್ವರ ಮೊದಲಾದವರು ಪ್ರಮುಖರಾಗಿದ್ದಾರೆ.

೧೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಬೆಳಗಿದ ಜ್ಯೋತಿ ಕಲಬುರಗಿಯಲ್ಲಿ ನಂದಾದೀಪವಾಗಿ ಇಂದಿಗೂ ಪ್ರಜ್ವಲಿಸುತ್ತಿದೆ. ಭಕ್ತಿಭಂಡಾರಿ ಬಸವಣ್ಣನವರಿಂದ ಕಲ್ಯಾಣ ಕೈಲಾಸ ಎನಿಸಿದರೆ ಶರಣಬಸವೇಶ್ವರರಿಂದ ಕಲಬುರಗಿ ಆ ಕಲ್ಯಾಣದ ಹೆಬ್ಬಾಗಿಲು ಎನಿಸಿದೆ. ಸಮತಾವಾದದ ಕ್ರಾಂತಿಕಾರಕ ವಿಚಾರಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಬಂದ ಶರಣರ ಪುಣ್ಯಕಾರ್ಯದಿಂದ ಕಲಬುರಗಿ ಎಂದರೆ ಶರಣಬಸವೇಶ್ವರ. ಶರಣಬಸವೇಶ್ವರ ಎಂದರೆ ಕಲಬುರಗಿ ಎಂದಾಗಿದೆ.

ಸಕಲಜೀವಾತ್ಮರಿಗೆ ಲೇಸನೆ ಬಯಸಿ, ದಯವೇ ಧರ್ಮದ ಮೂಲವೆಂದು ಸಾರಿ, ಪರಿಶುದ್ಧ ಜೀವನ ಸಾಗಿಸಿದ ಶಿವಶರಣರ ಸತ್‌ಸಂಪ್ರದಾಯದಲ್ಲಿ ನಡೆದು ಬಂದವರು ಶ್ರೀ ಶರಣಬಸವೇಶ್ವರರು. ತನ್ನದೆನ್ನುವುದೆಲ್ಲವನ್ನೂ ಸಕಲ ಜೀವರಾಶಿಗಳಿಗೆ ಅರ್ಪಿಸಿ, ದಾಸೋಹ ನಡೆಸಿ ಮಹಾಮಹಿಮರೆನಿಸಿದ ಶರಣರ ಚರಿತ್ರೆ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದಾಗಿದೆ.

ಶ್ರೀ ಶರಣಬಸವೇಶ್ವರರು ಕ್ರಿ.ಶ. ಸು. ೧೭೪೬ರಲ್ಲಿ ಜೇವರ್ಗಿ ತಾಲ್ಲೂಕಿನ ಅರಳಗುಂಡಿಗೆಯ ಸಾಲೋಕ್ಯರ ಮನೆತನದಲ್ಲಿ ಹುಟ್ಟಿದರು. ಗುರುಲಿಂಗಜಂಗಮಪೂಜಾನಿರತರೂ, ವೀರಶೈವಾಚಾರಸಂಪನ್ನರೂ ಆದ ಆದಪ್ಪ ಮತ್ತು ಮಡಿಯಮ್ಮ ದಂಪತಿಗಳಿಗೆ ಮಕ್ಕಳಿದ್ದಿರಲಿಲ್ಲ. ತನ್ನ ಸಹೋದರ ಮಲಕಪ್ಪ ಮತ್ತು ಸಂಗಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದ ಶರಣಬಸಪ್ಪನವರನ್ನು ತಮ್ಮ ಮಗ ಎಂದು ಸ್ವೀಕರಿಸಿ ಕಕ್ಕುಲತೆಯಿಂದ ಬೆಳೆಸಿದರು.

ಶರಣಬಸಪ್ಪನವರ ಮನೆತನದ ಉದ್ಯೋಗ–ಒಕ್ಕಲುತನ. ಇವರಿಗೆ ಅಣ್ಣಂದಿರು ಇದ್ದರು. ಅವರೂ ಒಕ್ಕಲು

ತನ ಮಾಡುತ್ತಿದ್ದರು. ಚಿಕ್ಕವರಾದ ಶರಣಬಸಪ್ಪನವರನ್ನು ಓದುಬರಹ ಕಲಿಯಲೆಂದು ಶಾಲೆಗೆ ಕಳಿಸಿದರು. ಕಲಕೇರಿಯ ಹಿರೇಮಠದ ಮರುಳಾರಾಧ್ಯ ಗುರುಗಳಿಂದ ದೀಕ್ಷೆ ಕೊಡಿಸಿದರು. ಇವರಿಗೆ ಚಿಕ್ಕಂದಿನಲ್ಲಿಯೇ ಧರ್ಮದ ಕಡೆಗೆ ಒಲವು, ಅದರಲ್ಲೂ ವೀರಶೈವಧರ್ಮದ ಸಿದ್ಧಾಂತವನ್ನು ಆಳವಾಗಿ ಅಭ್ಯಾಸಮಾಡಿದರು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಮರ್ಮವನ್ನು ಅರಿತುಕೊಂಡರು. ಅದರಲ್ಲಿಯ ಪ್ರಸಾದ, ಕಾಯಕ ಹಾಗೂ ದಾಸೋಹ ತತ್ವಗಳನ್ನು ಮೇಲಿಂದಮೇಲೆ ಮೆಲುಕುಹಾಕುತ್ತ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡು ಹೋಗಲು ಪಣ ತೊಟ್ಟರು. ಮಾರ್ಗದರ್ಶನಕ್ಕಾಗಿ ಆಗಾಗ ಗುರುಗಳನ್ನು ಮೊರೆಹೋಗುತ್ತಿದ್ದರು.

ಮಗನು ಸನ್ಯಾಸಿಯಾದಾನೆಂದು ಮನೆಯ ಹಿರಿಯರು ಅಂದಾಜು ಕಟ್ಟಹತ್ತಿದರು. ಹಾಗಾಗಬಾರದೆಂದು ಒಳಗೊಳಗೇ ಶರಣಬಸಪ್ಪನವರ ಲಗ್ನದ ತಯಾರಿ ನಡೆಸಿದರು. ಗುರು ಮರುಳಾರಾಧ್ಯರ ಮುಖಾಂತರ ಕನ್ಯಾ ನೋಡಲು ಶರಣಬಸಪ್ಪನವರನ್ನು ಒಪ್ಪಿಸಿದರು. ಮಾಶ್ಯಾಳದ ಭಾವಿಮನಿ ಶಾಂತಲಿಂಗಪ್ಪನವರ ಮಗಳು ಮಹಾದೇವಿಯೊಂದಿಗೆ ಲಗ್ನ ಮಾಡಿದರು.

ಶರಣಬಸಪ್ಪನವರು ಪ್ರಪಂಚದಲ್ಲಿ ಕಾಲಿಟ್ಟಾಗ ಹೊಸ ಹೊಸ ಅನುಭವಗಳನ್ನು ಪಡೆದರು. ಅಲ್ಲಲ್ಲಿ ಅಡ್ಡಾಡಿ ಜನತೆಗೆ ಒಳ್ಳೆಯದರ ತಿಳುವಳಿಕೆ ಮಾಡಿಕೊಟ್ಟರು. ದಾನ–ಧರ್ಮದ ವಿಷಯ ಎತ್ತಿ ಹೇಳಿದರು, ಸ್ವತಃ ದಾನಗುಣವನ್ನು ಮೆರೆದರು. ಜನ ಬೇಡಿದ್ದನ್ನು ಕೊಟ್ಟುಬಿಡುತ್ತಿದ್ದರು. ಅಷ್ಟು ಶ್ರೀಮಂತರಲ್ಲದ ಇವರ ಬಳಗದವರಿಗೆ ಶರಣಬಸಪ್ಪನವರ ವರ್ತನೆ ಹಿಡಿಸಲಿಲ್ಲ. ಮನೆಯನ್ನೆಲ್ಲಾ ಹಾಳುಮಾಡುತ್ತಾರೆಂದು ಬಗೆದು ಹಾಗೆ ಮಾಡದಿರಲು ಬುದ್ಧಿವಾದ ಹೇಳುತ್ತಾರೆ. ಹೇಳಿದವರಿಗೆ ಪ್ರತ್ಯುತ್ತರ ನೀಡಿ ನೀವು ಹೇಳುವುದು ಸ್ವಾರ್ಥ, ಸಂಗ್ರಹಬುದ್ಧಿ ; ಅದು ಮನುಷ್ಯನಿಗೆ ಅಹಿತಕಾರಿ ; ಹಾಗೆ ನಡೆಯುವುದು ನನ್ನಿಂದ ಸಾಧ್ಯವಿಲ್ಲ ; ಇದ್ದುದರಲ್ಲಿ ಗಳಿಸಿದ್ದರಲ್ಲಿ ಎಲ್ಲರೂ ಕೂಡಿ ತಿನ್ನುವ ಗುಣ ಬೆಳೆಸಿಕೊಳ್ಳಬೇಕೆಂದು ಸಾರಿದರು. ತಮ್ಮ ಮಾತು ಕೇಳಲಾರನೆಂದು ಅಣ್ಣಂದಿರು ಶರಣಬಸಪ್ಪನವರನ್ನು ಬೇರೆ ಇಡಲು ನಿರ್ಧರಿಸಿದರು. ಬೀಳುಬಿದ್ದ ಒಂದು ಹೊಲ, ಮುರುಕುಮನೆ, ಒಡಕು ಗಡಿಗೆ–ಮಡಕೆಗಳು ಶರಣಬಸಪ್ಪನವರ ಪಾಲಿಗೆ ಬಂದವು.

ಪಾಲಿಗೆ ಬಂದದ್ದು ಪಂಚಾಮೃತ ಎಂದು ಎಳ್ಳಷ್ಟೂ ತಬ್ಬಿಬ್ಬಾಗದೆ ಧೈರ್ಯದಿಂದ ಜೀವನ ಸಾಗಿಸಿದರು. ಪ್ರಾಮಾಣಿಕನಾದ ಲಿಂಗಣ್ಣ ಎಂಬ ಒಕ್ಕಲಿಗನನ್ನು ಕರೆದು ತಮ್ಮ ಪಾಲಿನ ಭೂಮಿಯನ್ನು ಮಾಡಲು ಹಚ್ಚಿದರು. ನಿಷ್ಠೆಯಿಂದ ಹಗಲಿರುಳೂ ದುಡಿದು ಉತ್ತಿ–ಬಿತ್ತಿದರು.

ಪತಿಯ ಪ್ರತಿಯೊಂದು ಕಾರ್ಯದಲ್ಲಿ ಸಹಕಾರ ನೀಡುತ್ತಿದ್ದ ಮಹಾದೇವಿಯೂ ಅಷ್ಟೇ ಗಟ್ಟಿಗಳು. ನಿಷ್ಠೆಯಿಂದ ಅವಳೂ ದುಡಿಯುತ್ತಿದ್ದಳು. ತಪ್ಪದೆ ಪತಿಯ ದಾಸೋಹಕಾರ್ಯ ನಡೆಸಿಕೊಡುತ್ತಿದ್ದಳು. ಪತಿಯಲ್ಲಿ ತಪ್ಪು ಕಂಡರೆ ಪ್ರೀತಿಯಿಂದ ಸಲಹೆ ನೀಡುತ್ತಿದ್ದಳು. ಪತಿ ಒಪ್ಪಿಕೊಂಡು ಸುಧಾರಿಸಿಕೊಳ್ಳುತ್ತಿದ್ದರು. ಹೀಗೆ ಶರಣಬಸಪ್ಪನವರ ಕಾಯಕ–ದಾಸೋಹ, ದಾಂಪತ್ಯಜೀವನ ಆದರ್ಶವಾಗಿತ್ತು. ಲೌಕಿಕ ರೀತಿಯಿಂದ ಇಲ್ಲಿ ಇವರಿಬ್ಬರೂ ಸತಿಪತಿಗಳಾದರೆ, ಆಧ್ಯಾತ್ಮದಲ್ಲಿ ಇವರಿಬ್ಬರೂ ಸತಿ, ಇವರಿಗೆ ಆ ಲಿಂಗದೇವನೇ ಪತಿ. 'ಶರಣಸತಿ ಲಿಂಗಪತಿ' ಭಾವವು ಮನದಲ್ಲಿ ಅಚ್ಚೊತ್ತಿ ನಿಂತಿತ್ತು.

ಲೋಕದ ಕಣ್ಣಿಗೆ ವಿಚಿತ್ರವಾಗಿ ಕಂಡ ಶರಣಬಸಪ್ಪನವರಿಗೆ ಲೋಕವ್ಯವಹಾರಜ್ಞಾನ ಇಲ್ಲವೆಂದು ಜನ ಆಡಿಕೊಳ್ಳುತ್ತಿದ್ದರು. ಹೆಂಡತಿಯೂ ಗಂಡನ ಹಾಗೆಯೇ ಕುಣಿಯುತ್ತಾಳಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು. ಯಾರು ಏನೇ ಅಂದುಕೊಂಡರೂ ಶರಣಬಸಪ್ಪನವರು ಹಿಂದೇಟು ಹಾಕಲಿಲ್ಲ. ಹೊಲದಲ್ಲಿ ಪಕ್ಕಿ-ಪಕ್ಕಿ, ದನಕರುಗಳು ತಿಂದು ಹೋದಷ್ಟು ಶರಣಬಸಪ್ಪನವರಿಗೆ ಸಂತೋಷ. ಅಲ್ಲಿಯ ಹಕ್ಕಿಗಳಿಗೆ ನೀರು ಕುಡಿಯಲು ಮಗಿಗಳನ್ನು ಕಟ್ಟಿಸಿದರು. ದನಗಳಿಗೆಂದು ರಂಜನಗಿ ಇಡಿಸಿದರು. ಪಾಲಕಾರನು ಅಡ್ಡಿ ಮಾಡಿದರೂ ಕೂಡ 'ನನ್ನ ಪಾಲಿಗೆ ಬರುವುದನ್ನು ತಿನ್ನಲಿ' ಎಂದು ಹೇಳಿದರು. ದೈವಲೀಲೆಯಿಂದ ಎಲ್ಲರ ಹೊಲಗಳಿಗಿಂತ ಇವರ ಹೊಲದ ರಾಗಿಯೇ ಹೆಚ್ಚಾಯಿತು. ಕೂಲಿ ಹಾಕಿಸಿಕೊಂಡವರ ಮನೆಗಳೂ ತುಂಬಿದವು. ಪಾಲಕಾರ ನಿಂಗಣ್ಣನೂ ಧನ್ಯನಾದ. ಕೊಟ್ಟದ್ದು ತನಗೆ ಎನ್ನುವ ಮಾತು ಜನತೆಗೆ ಮನವರಿಕೆಯಾಯಿತು. ಇವರ ಘನತೆ ಗೌರವ ಹೆಚ್ಚಿತು. ನಮ್ಮ ಭಾಗದ ಶರಣರು ಎಂದು ಕೊಂಡಾಡಿದರು : ಹಾಡಿದರು. ಬಹುದೂರ-ದೂರದ ಜನರು ಶರಣರ ದರ್ಶನಕ್ಕಾಗಿ ಬರತೊಡಗಿದರು.

ಅನುಭಾವಿ ಕವಿಗಳೆಂದು ಪ್ರಖ್ಯಾತಿ ಪಡೆದ ಕಡಕೋಳ ಮಡಿವಾಳಪ್ಪನವರು ಶರಣರ ಮಹಿಮೆ ಕೇಳಿ ತಮ್ಮ ಮುಖ ಪರಿಪರಿಸಿಕೊಳ್ಳಲು ಬಂದರು. ಲಿಂಗದೀಕ್ಷೆ ಕೇಳಿದರು, ಸಂಪ್ರದಾಯದ ವಿರುದ್ಧ ಬಂಡೆದ್ದು ತಲಕೇರಿಯ ಶ್ರೀ

ಮರುಳಾರಾಧ್ಯ ಗುರುಗಳಿಂದ ತಮ್ಮ ಮನೆಯಲ್ಲಿಯೇ ಲಿಂಗದೀಕ್ಷೆ ಕೊಡಿಸಿದರು. ಸಂತೋಷಭರಿತರಾದ ಮಡಿವಾಳಪ್ಪನವರು ಗುರುಗಳ ಮಾರ್ಗದರ್ಶನದಲ್ಲಿ ತಮ್ಮ ಬಾಳನ್ನು ಮುಂದುವರಿಸಿದರು. ಶರಣರ ಕೃಪೆಯೂ ಮಡಿವಾಳಪ್ಪನವರಿಗಿತ್ತು. ಒಬ್ಬರು ಅನ್ನದಾಸೋಹದ ಅಧ್ವರ್ಯುಗಳಾದರು. ಇನ್ನೊಬ್ಬರು ಜ್ಞಾನದಾಸೋಹದ ಮುಖಂಡತ್ವ ವಹಿಸಿದರು. ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಹೋಗಲು ಹಗಲಿರುಳೂ ನಿಸ್ಪೃಹಭಾವನೆಯಿಂದ ದುಡಿದರು.

ಸಂಪ್ರದಾಯದ ಗೊಡ್ಡು ನಂಬಿಕೆಗಳಿಗೆ ಅಂಟಿಕೊಂಡಿದ್ದ ಕರ್ಮಿಷ್ಠರ ಕಿರುಕುಳದಿಂದ ಈ ಇಬ್ಬರು ಮಹನೀಯರೂ ಬೇಸತ್ತರು. ಮುಂದೆ ಬಹುಮುಂದೆ, ಮೇಲೆ ಇನ್ನೂ ಮೇಲೆ ಏರುತ್ತಿರುವ ಈ ಮಹಿಮರ ಮಹಿಮೆಯನ್ನು ತಿಳಿಯದೆ ಅಸೂಯೆಗೊಂಡು ಅರಳಗುಂಡಿಗೆಯನ್ನೇ ತೊರೆಯುವಂತೆ ಅಲ್ಲಿಯ ಜನ ವರ್ತಿಸಿದರು. ನೊಂದುಕೊಂಡ ಮಹಿಮರು ತಮ್ಮ ಸ್ಥಳವನ್ನೇ ಬದಲಿಸಿದರು. ಮಡಿವಾಳಪ್ಪನವರು ಕಡಕೊಳಕ್ಕೆ ತೆರಳಿದರು. ಮುಂದೆ ಶರಣಬಸಪ್ಪನವರಿಗೂ ಅಲ್ಲಿ ನಿಲ್ಲಲು ಮನಸ್ಸಾಗಲಿಲ್ಲ. ಅವರಿಗಿದ್ದ ಒಬ್ಬ ಮಗ ಗುರುಲಿಂಗಜಂಗಮನೂ ಶಿವಾಧೀನನಾದನು. ಇದಾದ ಕೆಲದಿನಗಳಲ್ಲಿ ಸಾಧ್ವೀಮಣಿ ಮಹಾದೇವಿಯೂ ಸ್ವರ್ಗಲೋಕ ಸೇರಿದಳು. ಇನ್ನೇನು ? ಎಂದು ಶರಣರು ಬಸವಣ್ಣನವರ ಕಲ್ಯಾಣನಾಡು ಸೇರಬೇಕೆಂದು ಅರಳಗುಂಡಿಗೆಯಿಂದ ಕಾಲುಕಿತ್ತರು. ದಾರಿಯಲ್ಲಿ ಜನ ಶರಣರನ್ನು ಮಹಾಮಹಿಮರೆಂದು ಅರಿತುಕೊಂಡು ತಮ್ಮ ತಮ್ಮ ಊರುಗಳಿಗೆ ಬರಮಾಡಿಕೊಂಡರು, ಗೌರವಿಸಿದರು. ದಾಸೋಹ ನಡೆಸಿದರು. ನಿಜದ ನೆಲೆ ತಿಳಿಯಲು ಪ್ರಯತ್ನಿಸಿದರು. ಶರಣರ ಬೋಧೆ ಜನತೆಗೆ ಹಿಡಿಸಿತು. ತಮ್ಮ ತಮ್ಮ ಹಸಿವನ್ನು ಹಿಂಗಿಸಿಕೊಂಡರು, ಧನ್ಯರಾದರು. ಮುಂದೆ ಹೋಗುವಾಗ ಭೀಮಾನದಿ ಅಡ್ಡಗಟ್ಟಿತು. ಮಹಾಪೂರವನ್ನು ಧೈರ್ಯದಿಂದ ದಾಟಿದರು. ಮುಂದೆ ಅವರಾದಿಗೆ ನಡೆದುಬಂದರು.

ಅವರಾದಿಗೆ ಬಂದಾಗ ಧಾರಾಕಾರವಾದ ಮಳೆ ಬಿತ್ತು, ಕಟ್ಟಿಗೆ ತೊಯ್ದುದ್ದರಿಂದ ದಾಸೋಹಕ್ಕೆ ಅಡ್ಡಿಯಾಯ್ತು. ತ್ಯಾಗದ ಮೂರ್ತಿಗಳಾದ ಆಲೂರ ದಂಡರಾಯಗೌಡರು ದಾಸೋಹಕ್ಕೆ ತಮ್ಮ ಮನೆಯ ತೊಲೆ ಜಂತೆಗಳನ್ನೇ ಹಿರಿದು ಕೊಟ್ಟರು. ಎರಡು ವರ್ಷಗಳವರೆಗೆ ಈ ಗ್ರಾಮದಲ್ಲಿ ಅನ್ನಸಂತರ್ಪಣೆಗೈಯುತ್ತ ನಿಂತರು. ಮುಂದೆ ಬೆಳಗುಂಪಿ ಮಾರ್ಗವಾಗಿ ಫರ್ತಾಬಾದಿಗೆ ತೆರಳಿದರು. ಫರ್ತಾಬಾದದ ಜನರು ಅತ್ಯಂತ ಉತ್ಸಾಹದಿಂದ ಶರಣರನ್ನು ಮೆರವಣಿಗೆಯಲ್ಲಿ ಕರೆದೊಯ್ದರು. ಶರಣರ ಮಾರ್ಗದರ್ಶನದಲ್ಲಿ, ಅಲ್ಲಿ ನಿತ್ಯವೂ ಜಂಗಮಾರ್ಚನೆ, ಲಿಂಗಪೂಜೆ, ದಾಸೋಹಕಾರ್ಯಗಳು ಎಡೆಬಿಡದೆ ನಡೆದವು. ಪರೀಕ್ಷೆಯ ಕಾಲ ಎನ್ನಬೇಕು, ಮಳೆ ಹೋಯಿತು, ಬೆಳೆ ಬರಲಿಲ್ಲ ಬರಗಾಲಬಿದ್ದಿತು, ಜನರ ಗೋಳು ಹೇಳತೀರದಾಯ್ತು, ದಾಸೋಹ ನಿಲ್ಲುವ ಸ್ಥಿತಿಯಲ್ಲಿತ್ತು. ಜನರು ಮಕ್ಕಳುಮರಿಗಳನ್ನು ಮಾರತೊಡಗಿದರು, ಎಲ್ಲಿ ನೋಡಿದಡಲ್ಲಿ ಹೆಣಗಳ ರಾಶಿ ಬೀಳಹತ್ತಿದವು. ಈ ಡೋಗಿಬರದಲ್ಲಿಯ ಭೀಕರ ದೃಶ್ಯವನ್ನು ಕಣ್ಣಾರೆ ಕಂಡ ಶರಣರು ಮಮ್ಮಲನೆ ಮರುಗಿದರು. ಧನಿಕರಿಂದ ಕಾಳುಕಡ್ಡಿ ಧನ ಸಂಗ್ರಹಿಸಿ ದಾಸೋಹ ಮುಂದುವರಿಸಿದರು. ಜನ ಅಷ್ಟಿಷ್ಟು ಬದುಕಿತು. ಆಗ ಶರಣರ ಮಹಿಮೆ ದಿಗ್‌ದಿಗಂತಗಳಲ್ಲಿ ಹರಡಿತು.

ವ್ಯಾಪಾರಕ್ಕಾಗಿ ಕಲಬುರಗಿಯಿಂದ ಬಂದಿದ್ದ ದೊಡ್ಡಪ್ಪಗೌಡರು ಫರ್ತಾಬಾದದಲ್ಲಿ ಶರಣರ ದರ್ಶನ ಪಡೆದರು. ಶರಣರು ದಾಸೋಹಕ್ಕೆಂದು ಅಲ್ಲಿ ಇಲ್ಲಿ ತಂದಿದ್ದ ಕಾಳು–ಧನ ಎಲ್ಲವನ್ನೂ ತಾವೇ ತೀರಿಸಿದರು. ಶರಣರನ್ನು ಕಲಬುರಗಿಗೆ ಆಮಂತ್ರಿಸಿದರು. ಅವರ ಆಮಂತ್ರಣ ಸ್ವೀಕರಿಸಿದ ಶರಣರು ಕೆಲದಿನ ಬಿಟ್ಟು ಕಲಬುರಗಿಗೆ ದಯಮಾಡಿಸಿದರು. ಕಲಬುರಗಿಯ ದೊಡ್ಡಪ್ಪಗೌಡರ ಮನೆಯಲ್ಲಿ ನಿತ್ಯ ಲಿಂಗಾರ್ಚನೆ ಮಾಡುತ್ತ, ಜಂಗಮಾರ್ಚನೆ ದಾಸೋಹ ನಡೆಸುತ್ತ ನೆಲೆಯೂರಿ ನಿಂತರು. ದೊಡ್ಡಪ್ಪಗೌಡರು ತಮ್ಮ ಆಸ್ತಿಯನ್ನೆಲ್ಲಾ ಶರಣರ ದಾಸೋಹಕ್ಕಾಗಿ ಮೀಸಲಿರಿಸಿದರು.

ಕಲಬುರಗಿಯು ಶರಣರ ವಾಸ್ತವ್ಯ–ದಾಸೋಹಕ್ಕೆ ತವನಿಧಿಯಾಯ್ತು. ಹಾರೊಗೇರಿ (ಬ್ರಹ್ಮಪುರ)ಯಲ್ಲಿಯ ದೊಡ್ಡಪ್ಪಗೌಡರ ಮನೆ ಪವಿತ್ರಕ್ಷೇತ್ರಸ್ಥಳವಾಯ್ತು. ಸುತ್ತಮುತ್ತಲಿನ ಜನ ಶರಣರ ಈ ಸತ್ಕಾರ್ಯಕ್ಕೆ ಕಾಳುಕಡ್ಡಿಗಳನ್ನು ಬಂಡಿ ತುಂಬ ಹೊತ್ತುತಂದು ಕೊಡಹತ್ತಿದರು. ದಾಸೋಹಕಾರ್ಯ ಅದ್ಧೂರಿಯಿಂದ ನಡೆಯಿತು. ನಿತ್ಯ ನಂದಾದೀಪ ಉರಿಯಹತ್ತಿತು. ಜೊತೆಗೆ ಜ್ಞಾನದಾಸೋಹದ ಕಾರ್ಯಗಳನ್ನು ಶರಣರು ಹಮ್ಮಿಕೊಂಡರು. ಭಕ್ತರ ಅಭೀಷ್ಟಗಳನ್ನು ನೆರವೇರಿಸಿಕೊಟ್ಟರು. ಜನರ ನಂಬಿಕೆ ಇನ್ನೂ ಹೆಚ್ಚಿತು. ಶ್ರದ್ಧೆ ಗಟ್ಟಿಗೊಂಡು ನಿಷ್ಠೆಯಾಯ್ತು. ತಮ್ಮ ಪಾಲಿನ ದೇವರೆಂದು ಭಯಭಕ್ತಿಯಿಂದ ಪ್ರಣಾಮಗಳನ್ನು ಅರ್ಪಿಸಿದರು. ಹಿಂದೂ–ಮುಸಲ್ಮಾನರ ಮಧುರಬಾಂಧವ್ಯಕ್ಕೆ ಶರಣಬಸವೇಶ್ವರರು ಮಧ್ಯಸೇತುವೆಯಾದರು. ಎಲ್ಲ ಜಾತಿ–ಪಂಥ–ಮತ ಕೋಮಿನವರೂ ಶರಣರ ಅನುಯಾಯಿಗಳಾದರು. ದಾಸೋಹಕಾರ್ಯಕ್ಕೆ ಹೆಗಲು ಕೊಟ್ಟರು.

ಶರಣರು ಜನತೆಗೆ ನೀಡಿದ ಸಂದೇಶ, ಮಾಡಿದ ಸತ್ಕಾರ್ಯಗಳು ಮಾನವಕುಲದ ಉದ್ಧಾರಕ್ಕಾಗಿ ಮೂಡಿಬಂದವುಗಳು. ಅವರು ಸ್ವತಃ ದಯಾಗುಣದ ಮೂರ್ತಿಯಾಗಿದ್ದರು. ಸರ್ವಪ್ರಾಣಿಗಳಲ್ಲೂ ಅನುಕಂಪ ತೋರಿದರು. ಗೋರಕ್ಷಣೆಯ ಮಹತ್ವವನ್ನು ಕಟುಕರಿಗೂ, ಹಿಂಸೆಗಿಳಿಯುವವರಿಗೂ ಮನವರಿಕೆ ಮಾಡಿಕೊಟ್ಟರು. ಜನತೆಯ ರೋಗರುಜಿನಗಳಿಗಾಗಿ ನೊಂದುಕೊಂಡು ಅವುಗಳ ನಿವಾರಣೆಗಾಗಿ ಹೋರಾಡಿದರು. ಜಂಗಮಾರ್ಚನೆ, ಲಿಂಗಪೂಜೆ, ಅನ್ನಸಂತರ್ಪಣೆಗಳಂತೂ ಜನಪದರ ತನು–ಮನಗಳನ್ನು ತೃಪ್ತಿಪಡಿಸಿದವು. ಜಾತಿಮತಪಂಥಗಳಲ್ಲಿಯ ತಾರತಮ್ಯ ಅಳಿಸಿಹಾಕಿದರು. ಸಂಪ್ರದಾಯಕ್ಕಂಟಿಕೊಂಡು ಬಂದ ಕುರುಡು ನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಅಂತರಂಗ ಬಹಿರಂಗ ಶುದ್ಧಿ ಹೊಂದಿ ಇತರರೂ ಹಾಗೆ ಆಗಲು ಆಶೀರ್ವದಿಸಿದರು. ವೈರಿಗಳನ್ನೂ ಪ್ರೀತಿಸುವ ಮನೋವೈಶಾಲ್ಯ ಮೆರೆದರು. ಸ್ವಾರ್ಥ ಸುಳಿಯಬಾರದು, ಪರಾವಲಂಬಿಗಳಾಗಬಾರದು, ಕೂತು ತಿನ್ನದೆ, ಹೇಡಿಗಳಾಗದೆ, ಕಾಯಕಜೀವಿಗಳಾಗಬೇಕು. ಪ್ರಾಮಾಣಿಕ ದುಡಿತದಿಂದ ಬಂದ ತನ್ನ ಸಂಪತ್ತನ್ನು ಜನತೆಯ ಸೇವೆಗಾಗಿ ಮೀಸಲಿಡಬೇಕು—ಎಂದೆಲ್ಲ ಜನತೆಗೆ ಕರೆ ನೀಡಿದರು. ಶರಣರ ಈ ಉದಾತ್ತ ತತ್ತ್ವಗಳನ್ನು ಜನ ತಲೆಯ ಮೇಲೆ ಹೊತ್ತುಕೊಂಡು ಕುಣಿದಾಡಿದರು. ಅವುಗಳ ಮರ್ಮವನ್ನು ಅರಿತು ಆಚರಣೆಯಲ್ಲಿ ತಂದರು.

ಶರಣರ ಸೇವೆ ನಿಂತಿತು. ದೂರದೂರದ ಭಕ್ತರು ದರ್ಶನಕ್ಕೆಂದು ಬಂದರು. ಕೊನೆಯ ಸಂದೇಶ ಕೇಳಲು ಕಾತುರರಾದರು. ಅಡ್ಡಬಿದ್ದು ಅಂಗಲಾಚಿ ಬೇಡಿಕೊಂಡರು. ವಿನಯದಿಂದ ಶರಣರು "ಪರರಿಗೆ ಉಪಕಾರ ಮಾಡುವುದೇ ಪುಣ್ಯ, ಸದಾಚಾರವೇ ಶ್ರೇಷ್ಠ ಧರ್ಮ, ಅತಿಯಾಸೆಗೆ ಬಲಿಬೀಳಬಾರದು, ಸರ್ವರನ್ನೂ ಸಮದೃಷ್ಟಿಯಿಂದ ಕಾಣಬೇಕು, ಭಕ್ತಿಯೇ ಶಕ್ತಿಯ ಮೂಲ, ಆ ಭಕ್ತಿ ಬೇರೂರಬೇಕಾದರೆ ಗುರು ಬೇಕು, ಗುರುಮುಖೇನ ನಿತ್ಯ ಕಾಯಕ, ಪ್ರಸಾದ, ದಾಸೋಹ ನಡೆಯಬೇಕು ; ಇಂಥ ಶಕ್ತಿಯನ್ನು ಪರಮಾತ್ಮ ತಮ್ಮೆಲ್ಲರಿಗೂ ಕೊಡಲೆ"ಂದು ಆಶೀರ್ವದಿಸಿದರು. ಗುರುಪುಟ್ಟಿ ಗುರುವಾಗಿ, ಕಲಬುರಗಿಯನ್ನೇ ಕಲ್ಯಾಣ ಮಾಡಿ ಶರಣಸಂಸ್ಕೃತಿಯ ಪರಿಮಳವನ್ನು ಎಲ್ಲೆಡೆಗೂ ಹರಡಿದರು.

ಶರಣರು ತಮ್ಮ ತರುವಾಯ ತಾವು ಕೈಕೊಂಡಿದ್ದ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಉತ್ತರಾಧಿಕಾರಿಯೆಂದು ದೊಡ್ಡಪ್ಪಗೌಡ ಶರಣರಿಗೆ ಒಪ್ಪಿಸಿ ಅನುಗ್ರಹಿಸಿದರು. ಸಂತೋಷದಿಂದ ಎಲ್ಲರನ್ನೂ ಕಣ್ತುಂಬ ನೋಡಿದರು. ಜಂಗಮನೊಬ್ಬನ ದಮ್ಮನ್ನು ತಾವೇ ಸ್ವೀಕರಿಸಿ ಅವನನ್ನು ರೋಗದಿಂದ ದೂರಮಾಡಿದರು. ಹೀಗೆ ಲೋಕದ ಜನತೆಗೆ ಅಂಟಿಕೊಂಡ ನಂಜನ್ನು ತಾವೇ ಉಂಡು ಅವರನ್ನು ಬದುಕಿಸಿ ನಂಜುಂಡರೆನಿಸಿದರು—ಸಮಾಧಿಗಿಳಿದು ಕ್ರಿ.ಶ. ೧೮೨೨ರಲ್ಲಿ ಲಿಂಗೈಕ್ಯರಾದರು.

ಶ್ರೀ ಶರಣಬಸವೇಶ್ವರರ ತರುವಾಯ ೨ನೇ ಉತ್ತರಾಧಿಕಾರಿಗಳಾಗಿ ದೊಡ್ಡಪ್ಪಗೌಡರು, ೩ನೇ ಅಧಿಪತಿಗಳಾಗಿ ಶರಣಬಸವಪ್ಪ, ನಾಲ್ಕನೇ ಅಧಿಪತಿಗಳಾಗಿ ಬಸವಣ್ಣಪ್ಪ, ೫ನೆಯವರಾಗಿ ಲಿಂಗಬಸವಪ್ಪ, ೬ನೆಯವರಾಗಿ ಶರಣಬಸವಪ್ಪ ಅವರು ಧರ್ಮಕಾರ್ಯ ನೆರವೇರಿಸಿಕೊಂಡು ಬಂದರು. ಇಂದಿನ ಅಧಿಪತಿಗಳಾದ ಪೂಜ್ಯ ಶ್ರೀ ದೊಡ್ಡಪ್ಪ ಅವರು ೭ನೇ ಉತ್ತರಾಧಿಕಾರಿಗಳಾಗಿದ್ದು ಈ ಶತಮಾನದ ತ್ರಿವಿಧದಾಸೋಹಮೂರ್ತಿಗಳೂ, ತ್ರಿಕಾಲಪೂಜಾನಿಷ್ಠರೂ, ಮಹಾಮಹಿಮರೂ ಆಗಿದ್ದಾರೆ. ಶೈಕ್ಷಣಿಕ, ಸಾಂಸ್ಕೃತಿಕ. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅದ್ಭುತ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಶರಣಬಸವೇಶ್ವರ ಮತ್ತು ಅವರ ಗುರು ಮರುಳಾರಾಧ್ಯರ ಅವಿನಾಭಾವಸಂಬಂಧದ ಸಂಕೇತವಾಗಿ ದೇವಾಲಯದ ಗರ್ಭಗುಡಿಯಲ್ಲಿ ಶರಣಬಸವೇಶ್ವರ ಹಾಗೂ ಮರುಳಾರಾಧ್ಯರ ಮೂರ್ತಿಗಳೂ ಒಂದೇ ಎನ್ನುವಂತೆ ಕಂಗೊಳಿಸುತ್ತಿವೆ. ಪ್ರತಿವರುಷ ರಂಗಪಂಚಮಿಯಂದು ಶರಣರ ಜಾತ್ರೆ ದೊಡ್ಡ ಪ್ರಮಾಣದಲ್ಲಿ ನೆರವೇರುತ್ತದೆ.

ಶ್ರೀ ಶರಣಬಸವೇಶ್ವರರನ್ನು ಕುರಿತು ಕನ್ನಡದಲ್ಲಿ ಮಾವನೂರ ಚನ್ನಬಸವ ಕವಿ, ಮಹಾಗಾಂವದ ಗುರುಲಿಂಗ ಸಿದ್ಧ ಕವಿ, ದ್ಯಾಂಪುರ ಕಲ್ಲಿನಾಥಶಾಸ್ತ್ರಿ, ಕಮಲಾಪುರದ ವಿರೂಪಾಕ್ಷಯ್ಯ, ಹೊನ್ನಕಿರಣಗಿಯ ಶ್ರೀ ಕರಿಬಸವೇಶ್ವರ ಶಿವಾಚಾರ್ಯ, ಡಾ॥ ಪುಟ್ಟರಾಜ ಗವಾಯಿಗಳು ಹಾಗೂ ಮರಾಠಿಯಲ್ಲಿ ಶ್ರೀ ಬಸವಲಿಂಗಶಾಸ್ತ್ರಿಗಳು ಹಲವಾರು ಪುರಾಣಗಳನ್ನು ರಚಿಸಿದ್ದಾರೆ, ನಂದೀಮಠ ಚೆನ್ನಬಸವಯ್ಯನವರು ಶ್ರೀ ಶರಣಬಸವೇಶ್ವರವಿಜಯ, ಶರಣಬಸವೇಶ್ವರ ಮಹಿಮಾದರ್ಶನ, ಅಷ್ಟಕ, ಭಜನಾವಳಿಗಳನ್ನೂ ; ಗರುಡ ಸದಾಶಿವರಾಯ, ಮಾಂಡ್ರೆ, ಚೆನ್ನಬಸವಯ್ಯ, ಮಿಣಜಗಿಯವರು ಶರಣರ ಕುರಿತು ನಾಟಕಗಳನ್ನೂ ; ಶಿವರಾಜ ಪಾಟೀಲ, ಸಾಗರ, ವಿದ್ಯಾಶಂಕರ, ಪಲ್ಲಾಪುರಮಠ ಮೊದಲಾದವರು ಶರಣರ ಕುರಿತು ಚರಿತ್ರೆಗಳನ್ನೂ, ಶಾಂತಾಚಿಂಚೋಳಿ ಅವರು ಮಹಾಮನೆ ಎಂಬ ಕಾದಂಬರಿಯನ್ನೂ ಡಾ॥

ಸಿದ್ಧಯ್ಯಪುರಾಣಿಕರು 'ಕರುಣಾಕರ ಶರಣಬಸವೇಶ್ವರ' ಎಂಬ ಚರಿತಾಮೃತವನ್ನೂ, ಶಾಂತರಸ, ಡಾ॥ ಮಲ್ಲಿಕಾರ್ಜುನ ಲಕ್ಕೆ ಅವರು ರೇಡಿಯೋ ರೂಪಕಗಳನ್ನೂ ಬರೆದದ್ದುಂಟು. ಇತ್ತೀಚೆಗೆ ಡಾ॥ ಮಲ್ಲಿಕಾರ್ಜುನ ಲಕ್ಕೆ ಅವರು ಶರಣರ ಕುರಿತಾದ ಜಾನಪದ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದುಂಟು. ಹೀಗೆ ಈ ಭಾಗದ ಜನರಿಗೆ ಶರಣರನ್ನು ಕುರಿತು ಆಡುವುದು ಹಾಡುವುದು ಎಂದರೆ ಮೈಯುಬ್ಬು, ಸಂತೋಷ.

ಶರಣರ ಮಹಿಮೆಗೆ ಸಂತೋಷ, ಅಭಿಮಾನ ತಾಳಿದವರು ಕೆಲವರಾದರೆ ಅಸೂಯೆಗೊಂಡು ಕುತ್ಸಿತರಾಗಿ ಅವರನ್ನು ಪರೀಕ್ಷಿಸಲು ಹಲವಾರು ಬಲೆಗಳನ್ನು ಒಡ್ಡಿದವರು ಇನ್ನು ಕೆಲವರು. ಅದರಲ್ಲೆಲ್ಲಾ ಪಾರಾದ ಶರಣರ ಅಂತಸ್ತು ಇನ್ನೂ ಮೇಲಕ್ಕೇರಿತು. ಅಘಟಿತ ಘಟನೆಗಳೂ ಜರುಗಿದವು. ಅವು ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಜನಪದರ ನಾಲಿಗೆಯ ಮೇಲೆ ಲಾಸ್ಯವಾಡುತ್ತ ಬಾಯಿಂದ ಬಾಯಿಗೆ ಹರಿಯುತ್ತ ಸಮಷ್ಟಿಪ್ರಜ್ಞೆಯ ಮುದ್ರೆ ಧರಿಸಿಕೊಂಡು ಪವಾಡಗಳಾದವು.

ಪವಾಡಗಳು ಸುಳ್ಳೆಂದು ಅಲ್ಲಗಳೆಯಲೂಬಾರದು, ಸತ್ಯವೆಂದು ಅನುಕರಿಸಲೂ ಹೋಗಬಾರದು. ಮಹಾಪುರುಷರಲ್ಲಿ ಇಟ್ಟಿರುವ ಶ್ರದ್ಧೆ ನಿಷ್ಠೆಗಳ ಪರಿಣಾಮವಾಗಿ, ಅಸಂಭಾವ್ಯ ಘಟನೆಗಳು ನಡೆದುಹೋದಾಗ, ಅವುಗಳಿಗೆ ಕಾರಣಗಳನ್ನು ಹುಡುಕುತ್ತಾ ಹೋದರೂ ಅವುಗಳ ಸುಳಿವು ದೊರೆಯದಿದ್ದಾಗ ಅಂಥ ಘಟನೆಗಳನ್ನು ಪವಾಡ ಎನ್ನುತ್ತೇವೆ. ಪವಾಡಗಳು ಮಾನವನ ವಿಕಾಸಕ್ರಮವನ್ನು ಗುರುತಿಸುವ ಮೈಲಿಗಲ್ಲುಗಳಂತಿವೆ. ಶ್ರೀ ಶರಣಬಸವೇಶ್ವರರ ಬಗ್ಗೆಯೂ ನೂರಾರು ಪವಾಡಗಳನ್ನು ಜನ ಹೇಳುತ್ತಾರೆ. ಧಾನ್ಯ ಸುರಿಸುವಿಕೆ, ಕಳ್ಳಂಗೆ ಹಣವಿತ್ತುದು, ಜೇಡರನ್ನು ಕಾಯ್ದುದು, ಶಿವನಿಂದ ಸಾಲ ತೀರಿಸಿದುದು, ಸತಿಮಹಾದೇವಿಯ ಗರ್ಭತಡೆಗೆ ಆಜ್ಞೆಯಿತ್ತುದು, ಬ್ರಹ್ಮರಾಕ್ಷಸನ ಶಾಪನಿವಾರಣೆ, ಸತ್ತ ಆಕಳನ್ನು ಬದುಕಿಸಿದ್ದು, ಮೂಕನಿಗೆ ಮಾತು ಬಂದದ್ದು, ಕುರುಡರಿಗೆ ಕಣ್ಣು ಬಂದದ್ದು, ಪುತ್ರಸಂತಾನ, ಹೋದ ಪ್ರಾಣ ತಿರುಗಿ ಬಂದದ್ದು, ಹೆಣ್ಣು ಗಂಡಾದದ್ದು. ಗಂಡು ಹೆಣ್ಣಾದದ್ದು, ನೀರು ತುಪ್ಪವಾದದ್ದು ತುಪ್ಪ ನೀರಾದದ್ದು—ಇಂಥ ನೂರಾರು ಪವಾಡಗಳನ್ನು ಶರಣರು ಮೆರೆದರು ಎಂದು ಹೇಳಬಹುದಾಗಿದೆ. ಶರಣರು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳಲ್ಲೂ ಭಕ್ತರಿಗೆ ಆರಾಧ್ಯದೇವರೆನಿಸಿದ್ದಾರೆ.

---

ಮುನೇರಪಿ ವನಸ್ಥಸ್ಯ ಸ್ವಾನಿ ಕರ್ಮಾಣಿ ಕುರ್ವತಃ ।
ಉತ್ಪದ್ಯಂತೇ ತ್ರಯಃ ಪಕ್ಷಾಃ ಮಿತ್ರೋದಾಸೀನಶತ್ರವಃ ॥

ದುರ್ಗಾಚಾರ್ಯ

# ತಮಿಳು ಭಾಷೆಯ ಶಿವಕವಿ ಶೇಕ್ಕಿಳಾರ್

ಡಾ. ಎಂ. ವಿ. ಜಂಬುನಾಥನ್

## ಪೀಠಿಕೆ

ಹಿಂದೂ ಮತಕ್ಕೆ ಮೂಲಭೂತವಾದುವು ವೇದಾಗಮಗಳು. ಇವುಗಳನ್ನೇ ಶ್ರುತಿ ಎಂದು ಹೇಳುವರು. ವೇದಾಗಮಗಳಲ್ಲಿ ಉಕ್ತವಾದ ನಿಗೂಢ ತತ್ವಗಳನ್ನು ಸ್ವಲ್ಪಮಟ್ಟಿಗೆ ಸರಳಗೊಳಿಸಿ ಜನಸಾಮಾನ್ಯರಿಗೆ ತಿಳಿಯಪಡಿಸುವುದಕ್ಕಾಗಿ ಸ್ಮೃತಿಗಳು ಏರ್ಪಟ್ಟಿವೆ. ವೇದಾಗಮಗಳಲ್ಲಿ ನಿರೂಪಿತವಾದ ಧರ್ಮಗಳನ್ನೇ ಕಥಾನಕರೂಪದಲ್ಲಿ ಇತಿಹಾಸ ಮತ್ತು ಪುರಾಣಗಳ ಮೂಲಕ ಸಾರ್ವತ್ರಿಕವಾಗಿ ಪ್ರಚಾರಗೊಳಿಸಲಾಗಿದೆ. ಈ ಕಥಾವಸ್ತುವನ್ನು ಬಳಸಿಕೊಂಡು ನವರಸಗಳನ್ನು ತುಂಬಿ ಉದ್ದಾಮ ಕವಿಗಳು ಅವುಗಳನ್ನು ಕಾವ್ಯರೂಪಕ್ಕೆ ಇಳಿಸಿರುವರು.

ಪುರಾಣಗಳು ಹೆಚ್ಚುಪಾಲು ದೇವರುಗಳನ್ನು ಕುರಿತವಾಗಿರುವುವು. ದೈವಾಂಶಸಂಭೂತರಾದ ಕೆಲವು ಮಹಾನ್ ವ್ಯಕ್ತಿಗಳ ಚರಿತ್ರೆಯೂ ಒಮ್ಮೊಮ್ಮೆ ಕವಿಗಳಿಂದ ಪುರಾಣಗಳ ರೂಪದಲ್ಲಿ ಕಾವ್ಯಮಯವಾಗಿ ಅಳವಡಿಸಲ್ಪಟ್ಟಿದೆ. ಕನ್ನಡದಲ್ಲಿ ಆದಿಪುರಾಣ, ಚಾವುಂಡರಾಯಪುರಾಣ, ಬಸವಪುರಾಣ ಮೊದಲಾದ ಗ್ರಂಥಗಳನ್ನು ಉದಾಹರಿಸಬಹುದು. ತಮಿಳು ಭಾಷೆಯಲ್ಲಿ ತಿರುತ್ತೊಂಡರ್ ಪುರಾಣಂ ಎಂಬ ಪೆರಿಯಪುರಾಣಂ, ಹರಿಶ್ಚಂದ್ರಪುರಾಣಂ, ಶೀರಾಪ್ಪುರಾಣಂ ಎಂಬ ಕೃತಿಗಳು ಇದಕ್ಕೆ ಉದಾಹರಣೆಯಾಗಿರುವುವು. ಶಿವಭಕ್ತಶಿರೋಮಣಿಗಳಾದ ಪುರಾತನರ ಚರಿತ್ರೆಯನ್ನು ಶೇಕ್ಕಿಳಾರ್ ಎಂಬ ತಮಿಳು ಕವಿ ತಿರುತ್ತೊಂಡರ್ ಪುರಾಣಂ ಎಂಬ ಕಾವ್ಯದಲ್ಲಿ ರಸವತ್ತಾಗಿ ವರ್ಣಿಸಿರುವರು. ತೊಂಡರ್ ಎಂದರೆ ದಾಸ ಅಥವಾ ಡಿಂಗರಿಗ ಎಂದರ್ಥ. ಹರಿಹರನ ರಗಳೆಗಳು, ಸುರಂಗ ಕವಿಯ ತ್ರಿಷಷ್ಠಿಪುರಾತನರಚಾರಿತ್ರಂ, ನಿಜಗುಣಶಿವಯೋಗಿಯ ಪುರಾತನರ ತ್ರಿವಿಧಿ ಮುಂತಾದ ಕನ್ನಡ ಕಾವ್ಯಗಳಿಗೆ ತಮಿಳು ಭಾಷೆಯ ಪೆರಿಯ ಪುರಾಣವೇ ಆಕರಗ್ರಂಥವಾಗಿತ್ತು ಎಂದು ತೋರುತ್ತದೆ.

ತೊಂಡೈನಾಡಿನ ಪುಲಿಯೂರ್ ಕೋಟ್ಟದೊಳು ಕುನ್ರತ್ತೂರು ಎಂಬುದೊಂದು ಊರು. ಅದು ಪಾಲಾರ್ (ಹಾಲ್ಹೊರೆ) ಎಂಬ ಹೊಳೆಯಿಂದ ಜಲಸಮೃದ್ಧಿಯನ್ನೂ ನೀರಾವರಿ ಸೌಕರ್ಯವನ್ನೂ ಪಡೆದಿತ್ತು. ಆ ಊರಿನಲ್ಲಿ ಒಕ್ಕಲುತನ ಮಾಡುತ್ತಿದ್ದ ಕುಳಗಳೇ ಹೆಚ್ಚು. ಆ ಪೈಕಿ ಶೇಕ್ಕಿಳಾರ್ ಎಂಬುದೊಂದು ಮನೆತನದಲ್ಲಿ ಅರುಣ್ಮೊಳಿತ್ತೇವರ್ (=ಅರುಳ್–ನುಡಿಯ–ದೇವರು) ಮತ್ತು ಪಾಲರಾವಾಯರ್ ಎಂಬ ಸಹೋದರರು ಇಬ್ಬರು ಇದ್ದರು. ಅರುಣ್ಮೊಳಿತ್ತೇವರ್ ಹರನ ಕೃಪೆಯಿಂದ ಕಲಿಕೆಯಲ್ಲಿ ಏಳಿಗೆ ಹೊಂದಿ ಸಕಲಶಾಸ್ತ್ರಸಂಪನ್ನರಾಗಿ ಬೆಳಗಿದರು. ಶಿವಭಕ್ತರಲ್ಲಿ ಅಗ್ರಗಣ್ಯರಾಗಿದ್ದರು. ನಾಡಿನ ಆಳರಸನಾದ ಅನಪಾಯಚೋಳನು ಅವರ ಪಾಂಡಿತ್ಯವನ್ನೂ ಅವರ ನಿರ್ಮಲ ಹರಭಕ್ತಿಯನ್ನೂ, ಅವರ ಹಿರಿಮೆಯನ್ನೂ ಮನಗಂಡು ಅವರಿಗೆ "ಉತ್ತಮ ಚೋಳಪಲ್ಲವ" ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದನು. ಅಲ್ಲದೆ ಅವರನ್ನು ತನ್ನ ಆಡಳಿತಾಧಿಕಾರಿಯನ್ನಾಗಿ ನೇಮಿಸಿಕೊಂಡನು.

## ಅವೈದಿಕಮತಗಳ ಪ್ರಭಾವ

ಆ ಕಾಲದಲ್ಲಿ ಅವೈದಿಕಮತಗಳ ಪ್ರಭಾವ ತಮಿಳುನಾಡಿನಲ್ಲಿ ಹೆಚ್ಚುತ್ತಲಿತ್ತು. ಸಾಮಾನ್ಯ ಜನರೂ, ಅರಸುಮಕ್ಕಳೂ "ಜೀವಕಚಿಂತಾಮಣಿ" ಮೊದಲಾದ ಜೈನಕಾವ್ಯಗಳನ್ನು ಬಹಳ ಆಸಕ್ತಿಯಿಂದ ಓದಿ ರಸಾಸ್ವಾದನೆ ಮಾಡುತ್ತಿದ್ದರು. ತಿರುತ್ತಕ್ಕದೇವರಿಂದ ರಚಿತವಾದ "ಜೀವಕಚಿಂತಾಮಣಿ" ಎಂಬ ಗ್ರಂಥವು ತಮಿಳುಭಾಷೆಯ ಪಂಚಮಹಾಕಾವ್ಯಗಳಲ್ಲೊಂದಾಗಿದೆ. ಕಾವ್ಯದ ದೃಷ್ಟಿಯಿಂದ ಈ ಗ್ರಂಥ ಪ್ರಶಸ್ತವಾಗಿದ್ದರೂ, ಅದರಿಂದ ಹರಭಕ್ತರಿಗೆ ಪರದಲ್ಲಿ ಏನೂ ಫಲವಿಲ್ಲ ಎಂಬುದನ್ನು ಶೇಕ್ಕಿಳಾರ್ ಮನಗಂಡರು. ಇದನ್ನು ಕುರಿತು ಮಾತನಾಡಬೇಕೆಂದೆಣಿಸಿ ಚೋಳರಾಜನ

ಬಳಿ ಸಾರ್ದರು. ಅರಸನು ಅವರನ್ನು ಆದರದಿಂದ ಸ್ವಾಗತಿಸಿ, "ತಾವು ಬಯಸಿ ಬಂದ ಉದ್ದೇಶವಾವುದು ?" ಎಂದು ಬೆಸಗೊಂಡರು.

"ಇಹದಲ್ಲೂ ಪರದಲ್ಲೂ ಅಪ್ರತಿಮ ಸುಖವನ್ನು ನೀಡಬಲ್ಲ ಹಲವಾರು ಶಿವಭಕ್ತರುಗಳ ಕಥೆಗಳಿರುವುವು. ತಾವು ಅವುಗಳನ್ನು ಶ್ರವಣ ಮಾಡುವುದು ಒಳಿತು. ಶ್ರಮಣ–ಬೌದ್ಧ ಕಾವ್ಯಗಳನ್ನು ಎಳಸಿ ಲಾಲಿಸಿದೊಡೆ ಪಾರಲೌಕಿಕ ಫಲ ದೊರೆಯಲಿಕ್ಕಿಲ್ಲ" ಎಂದು ಶೇಕ್ಕಿಳಾರ್ ನುಡಿದರು. ಇದನ್ನು ಕೇಳಿದ ಚೋಳರಸನು, "ಇಹ–ಪರ ಎರಡರಲ್ಲೂ ಹಿತವನ್ನು ನೀಡತಕ್ಕ ಶಿವಭಕ್ತರ ಕಥೆಗಳು ಒಳ್ಳವೆ ? ಅವುಗಳನ್ನು ಅರಿತವರಾರು ? ಅವು ಪುರಾತನ ಕತೆಗಳೋ ? ಅವಕ್ಕೆ ಮೂಲಗ್ರಂಥಗಳುಂಟೇ ? ಅವುಗಳನ್ನು ನಿರವಿಸಿದವರಾರ್ ? ಕೇಳ್ದವರಾರ್ ? ಅವು ತಪಸ್ಸನ್ನು ಕುರಿತ ಕತೆಗಳೋ ? ಭಕ್ತಿಗೈದು ಶಿವಾನುಗ್ರಹವನ್ನು ಪಡೆದವರ ಕತೆಗಳೋ ? ಪೇಳಿರಿ" ಎಂದನು.

ಅದಕ್ಕೆ ಉತ್ತರವಾಗಿ, "ಸುಂದರಮೂರ್ತಿನಾಯನಾರಿಗೆ ತಿರುವಾರೂರೊಳು ನೆಲೆನಿಂದ ವಲ್ಮೀಕನಾಥನು ಹಾಡಿನ ಮೊದಲಡಿ ಎತ್ತಿಕೊಡಲು, ಸುಂದರರು 'ತಿರುತ್ತೊಂಡತ್–ತೊಕೈ' ಪಾಡಿದರು. ತರುವಾಯ ತಿರುನಾರೈಯೂರಿನ ನಂಬಿಯಾಂಡಾರ್ ನಂಬಿ ಎಂಬುವರು ಅದರ ಆಧಾರದ ಮೇಲೆ 'ತಿರುವಂದಾದಿ' ಎಂಬ ಗ್ರಂಥವನ್ನು ರಚಿಸಿದರು. ಶಿವಶರಣರ ಹಿರಿಮೆಯನ್ನು ಈ ಗ್ರಂಥಗಳಲ್ಲಿ ಬಣ್ಣಿಸಲಾಗಿದೆ. ರಾಜರಾಜಚೋಳನು, ಶಿವಾಲಯದೇವರು ಮೊದಲಾದವರು ಈ ವೃತ್ತಾಂತಗಳನ್ನು ಕೇಳಿ ಪರವಶರಾಗಿ ನಾಡಿನೊಳೆಲ್ಲ ಇದನ್ನು ಪ್ರಚುರಪಡಿಸಿದರು" ಎಂದು ನುಡಿದರು.

ಅಂಥ ನೆಗಳ್ತೆವೆತ್ತ ಶಿವಶರಣರ ಚರಿತ್ರೆಗಳನ್ನು ನಿರವಿಸಬೇಕೆಂದು ಅನಪಾಯಚೋಳನು ಬೇಡಲು ಶೇಕ್ಕಿಳಾರ್ ನಾಯನ್ಮಾರುಗಳೆಂಬ ಶಿವಭಕ್ತರ ಚರಿತ್ರೆಗಳನ್ನು ಸಾಂಗೋಪಾಂಗವಾಗಿ ಹೇಳಿ ಅರಸನನ್ನು ಸಂತಸಗೊಳಿಸಿದರು. ಈ ಕತೆಗಳನ್ನು ಕೇಳಿ ಪ್ರಭಾವಿತನಾದ ಚೋಳನು ಆ ವೃತ್ತಾಂತಗಳನ್ನು ಕಾವ್ಯರೂಪಕ್ಕೆ ಇಳಿಸಿ ಅನುಗ್ರಹಿಸಬೇಕೆಂದು ಬಿನ್ನವಿಸಿದನು. "ಇದು ಎನ್ನ ಭಾಗ್ಯ" ಎಂದು ಹೇಳಿ ಕಾವ್ಯರಚನೆ ಮಾಡಲು ಶೇಕ್ಕಿಳಾರ್ ಒಪ್ಪಿಕೊಂಡರು.

## ಕಾವ್ಯರಚನೆ

ಅರಸನು ಅವರಿಗೆ ಸಾಕಷ್ಟು ವಸತಿಗಳನ್ನೂ ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟು ಅವರನ್ನು ಸನ್ಮಾನಿಸಿದನು. ಅರಸನಿಂದ ಬೀಳ್ಕೊಂಡು ಶೇಕ್ಕಿಳಾರ್ ಚಿದಂಬರ ಕ್ಷೇತ್ರವನ್ನು ಅಯ್ದಿ ಪೊನ್ನಂಬಲದಲ್ಲಿ[1] ಬೆಳಗುತ್ತಿದ್ದ ನಟರಾಜನ ಮುಂದೆ ತಲೆವಾಗಿ ಅಡ್ಡಬಿದ್ದು ಗದ್ಗದಕಂಠದಿಂದ ಪ್ರಾರ್ಥಿಸತೊಡಗಿದರು. "ದೇವದೇವಾ ! ನಾನು ನಿನ್ನ ಭಕ್ತರ ಗುಣಗಾನ ಮಾಡಲಿರುವೆನು ; ಆದ್ದರಿಂದ ಆ ಕಾವ್ಯಕ್ಕೆ ಮೊದಲಡಿಯನ್ನು ಎತ್ತಿಕೊಟ್ಟು ಅನುಗ್ರಹಿಸಬೇಕು." ಅಂಬಲದೊಳಾಡಿದ[2] ನಟರಾಜನ ಕೃಪೆಯಿಂದ ಎಲ್ಲರಿಗೂ ಕೇಳಿಸುವಂತೆ "ಉಲಕೆಲಾಂ" ಎನ್ನುವ ನುಡಿ ಆಗ ಬಾನೊಳು ತೇಲಿಬಂತು. ತಿಲ್ಲೈನಗರದ[3] ವಿಪ್ರರೂ ಇತರ ಹರಭಕ್ತರೂ ಇದನ್ನು ಕೇಳಿ ಅಚ್ಚರಿಗೊಂಡರು, ಮನದೊಳು ಉಬ್ಬತಂಗೊಂಡರು. ಶೇಕ್ಕಿಳಾರ್ ಹೊಂದಿದ ಆನಂದಕ್ಕೆ ಪಾರವೇ ಇರಲಿಲ್ಲ. ಚಿದಂಬರಕ್ಷೇತ್ರದ ದೀಕ್ಷಿತರು ಶೇಕ್ಕಿಳಾರಿಗೆ ದೇವರ ಪ್ರಸಾದವನ್ನಿತ್ತು, ಪೂಮಾಲೆಯನ್ನು ತೊಡಿಸಿ, ಪಾಗು ಪರಿವಟ್ಟವನ್ನು ಉಡಿಸಿ, ಭಸ್ಮವನ್ನಿತ್ತು ಗೌರವಿಸಿದರು. (ಶಿವಕ್ಷೇತ್ರಗಳಲ್ಲಿ ಸೇವಾರ್ಥಿಗಳ ಗೌರವಾರ್ಥ ಅವರ ತಲೆಗೆ ಪಾಗಿನಂತೆ ಸುತ್ತಿ ಕಟ್ಟಲು ಒಂದು ಪಟ್ಟೆವಸ್ತ್ರವನ್ನು ಮೀಸಲಾಗಿ ಇಟ್ಟಿರುವರು. ಇದಕ್ಕೆ ಪರಿವಟ್ಟ ಎಂದು ಹೆಸರು. ಅರ್ಚಕರಿಂದ ಪರಿವಟ್ಟ ಕಟ್ಟಿಸಿಕೊಂಡ ಭಕ್ತರು ಶಿವನಿಗೆ ತಲೆಬಾಗಿ ನಮಸ್ಕರಿಸಿದ ನಂತರ ಅರ್ಚಕರು ಪರಿವಟ್ಟವನ್ನು ಕಳೆದು ತೆಗೆದಿರಿಸಿಕೊಳ್ಳುವರು.)

ತಮ್ಮ ಕೃತಿರಚನೆಯನ್ನು ಪ್ರಾರಂಭಿಸುವ ಮುನ್ನ ಶೇಕ್ಕಿಳಾರ್ ಶೈವ ಲಾಂಛನಗಳನ್ನೂ ಭಸ್ಮವನ್ನೂ ಧರಿಸಿ ತಿರುಜ್ಞಾನಸಂಬಂಧರ್, ತಿರುನಾವುಕ್ಕರಸರ್ (ವಾಗೀಶರ್), ಮಾಣಿಕ್ಯವಾಚಕರ್, ಸುಂದರಮೂರ್ತಿ ನಾಯನಾರ್ ಮೊದಲಾದ ಶೈವಸಮಯಾಚಾರ್ಯರುಗಳನ್ನು ಧ್ಯಾನಿಸಿ ನಟರಾಜ ದೇಗುಲದ ಸಾವಿರಕಾಲು ಮಂಟಪದಲ್ಲಿ ಕುಳಿತು, ಹರನು ಮೊದಲಡಿ ಎತ್ತಿಕೊಟ್ಟಂತೆಯೇ ಮೊದಲು ಮಾಡಿದರು. ಕಾವ್ಯದ ಮೊದಲನೇ ಪದ್ಯ ಇಂತಿರುವುದು :

---

[1] ಪೊನ್ನಂಬಲ = ಕನಕಸಭೆ

[2] ಅಂಬಲ = ಸಭೆ

[3] ತಿಲ್ಲೈನಗರ = ಚಿದಂಬರಕ್ಷೇತ್ರ

ಉಲಕೆಲಾಂ ಉಣರ್ನ್ದು ಓದರ್ಕರಿಯವನ್
ನಿಲವುಲಾವಿಯ ನೀರ್ಮಲಿ ವೇಣಿಯನ್
ಅಲಕಿಲ್ ಜೋತಿಯನ್ ಅಂಬಲತ್ತಾಡುವಾನ್
ಮಲರ್ ಶಿಲಂಬಡಿ ವಾಟ್ತಿ ವಣಂಗುವಾಂ ॥

ಅಂದರೆ,

ಲೋಕದ ಜೀವರಾಶಿಗಳ್ ಅರಿತು ಓದಲರಿದಾದವಂ
ತಿಂಗಳೋಲೈಪ ತುಂಬು ನೀರ ವೇಣಿಧರಂ
ಅಳವಿಲದ ಜ್ಯೋತಿಮಯಂ ಅಂಬಲದೊಳಾಡುವೊನ್
ಮಲರಂದುಗೆಯಡಿ ಪರಸಿ ಆಂ ನಮಿಪುವೆಂ ॥

## ಅರಂಗೇಟ್ರಂ

ಹೀಗೆ ಪ್ರಾರಂಭಿಸಿ ಶೇಕ್ಕಿಳಾರರು ಕಾವ್ಯರಚನೆ ಮಾಡುತ್ತಿರಲು, ಚೋಳರಸನು ಬಹಳ ಕಾತರತೆಯಿಂದ ಆಗಾಗ್ಗೆ ಶೇಕ್ಕಿಳಾರರ ಬಳಿ ದೂತರನ್ನು ಅಟ್ಟಿ, ನಾಯನ್ಮಾರುಗಳ ಚರಿತ್ರೆಗಳ ವರ್ಣನೆ ಯಾವ ಹಂತದವರೆಗೆ ಮುಗಿದಿದೆ ಎಂದು ತಿಳಿದುಕೊಳ್ಳುತ್ತಿದ್ದನು. ಕೊನೆಗೆ ಕಾವ್ಯರಚನೆ ಮುಗಿಯಿತು ಎಂಬುದನ್ನು ತಿಳಿದು ಅತ್ಯಾನಂದ ಗೊಂಡು ಚತುರಂಗಬಲ ಸಮೇತನಾಗಿ ಚಿದಂಬರಕ್ಕೆ ಐತಂದನು. ಆಗ ಶೇಕ್ಕಿಳಾರರು ಅಲ್ಲಿಯೆ ವಿಪ್ರೋತ್ತಮರೊಡ ಗೂಡಿ ಅರಸನನ್ನು ಇದಿರುಗೊಂಡರು. ಶೇಕ್ಕಿಳಾರರ ತೇಜಸ್ಸನ್ನೂ ಮುಖಕಾಂತಿಯನ್ನೂ ಕಂಡು ಅರಸನು ಮುದ ಗೊಂಡು ಅವರಿಗೆ ನಮಸ್ಕರಿಸಿದನು. ಶೇಕ್ಕಿಳಾರರೂ ಪ್ರತಿವಂದನೆ ಮಾಡಿದರು. ಬಳಿಕ ಎಲ್ಲರೂ ತಿಲ್ಲೈ ಅಂಬಲ ದೊಳಹೊಕ್ಕು ಹರನ ಸನ್ನಿಧಿಗೆ ಬಂದು ತಲೆವಾಗಿ ನಿಂದರು. ಆ ವೇಳೆಗೆ, "ಅರಸನೇ ! ನಾವು 'ಉಲಕೆಲಾಂ' ಎಂಬುದಾಗಿ ಹಾಡಿನ ಅಡಿ ಎತ್ತಿಕೊಟ್ಟ ಮೇರೆಗೆ ಶೇಕ್ಕಿಳಾರ್ ರಚಿಸಿ ಮುಗಿಸಿರುವ ತಿರುತ್ತೊಂಡರ[1] ಪುರಾಣವನ್ನು ನೀವೆಲ್ಲರೂ ಶ್ರದ್ಧೆಯಿಂದ ಲಾಲಿಸಿರಿ" ಎಂಬುದಾಗಿ ಅಶರೀರವಾಣಿ ಕೇಳಿಸಿತು. ಈ ವಾಣಿಯನ್ನು ಕೇಳಿ ಅಚ್ಚರಿಗೊಂಡ ಅರಸನೂ ಇತರರೂ ಸಂತೋಷಪಟ್ಟು ಮನಸ್ಸು ಕರಗಿ ಹರನಿಗೆರಗಿ ನುತಿಗೈದರು. ಚೋಳರಾಜನು ಓಲೆಯನ್ನು ಬರೆಯಿಸಿ ಕಳುಹಿಸಿ ನಾಡಿನ ವೇದವಿದರನ್ನೂ ಆಗಮಪಂಡಿತರುಗಳನ್ನೂ ಶಾಸ್ತ್ರಜ್ಞರನ್ನೂ ಸಾಹಿತಿಗಳನ್ನೂ ಚಿದಂಬರಕ್ಕೆ ಕರೆಯಿಸಿ ತಿರುತ್ತೊಂಡರ್ ಪುರಾಣದ ಅರಂಗೇಟ್ರವನ್ನು[2] ನೆರವೇರಿಸಲು ವ್ಯವಸ್ಥೆ ಮಾಡಿದನು. ಈ ಅರಂಗೇಟ್ರಕ್ಕಾಗಿ ಬಂದವರೆಲ್ಲರಿಗೂ ತಂಗುವುದಕ್ಕೆ ಹಾಗೂ ಅಶನ ವಸನಗಳಿಗೆ ತಕ್ಕ ಏರ್ಪಾಡನ್ನು ಮಾಡಿಸಿದನು. ಅರಸನ ಆಣತಿಯಂತೆ ಪೊನ್ನಂಬಲದ ಮುಂದಲ ಅಂಗಳವನ್ನು ಸಾರಿಸಿ ರಂಗವಲ್ಲಿಯಿಟ್ಟು ಅಲಂಕರಿಸಿದರು. ತಳಿರುತೋರಣಗಳನ್ನೂ ಹೂದೊಂಗಲುಗಳನ್ನೂ ಎಲ್ಲೆಡೆಯಲ್ಲೂ ಕಟ್ಟಿಸಿದರು. ಆರು ಕಾಲುಗಳುಳ್ಳ ಪೀಠದ ಮೇಲೆ ಹಸಿರು ಚೀನಾಂಬರ ವನ್ನು ಹಾಸಿ, ಅದರ ಮೇಲೆ ಬಿಳಿಯ ಪಟ್ಟೆವಸ್ತ್ರವನ್ನು ಮಡಿಸಿಟ್ಟು, ಮಲರ್ಗಳನ್ನು ತಳಿದು. ನರುಗಂಪಿನ ಧೂಪ ವಿಟ್ಟು, ತಿರುತ್ತೊಂಡರ್ ಪುರಾಣವೆಂಬ ಶೇಕ್ಕಿಳಾರರ ಗ್ರಂಥವನ್ನು ಅದರ ಮೇಲಿರಿಸಿದರು. ಬಳಿಕ ಅದನ್ನು ಪೂಜಿಸಿ ತಲೆವಾಗಿ ಎರಗಿದರು. ಆಗ, "ಈ ಗ್ರಂಥವನ್ನು ತಾವೇ ಪಠಿಸಿ ಅರ್ಥ ಹೇಳಿ ಅನುಗ್ರಹಿಸಬೇಕು" ಎಂದು ಎಲ್ಲರೂ ಶೇಕ್ಕಿಳಾರರನ್ನು ಪ್ರಾರ್ಥಿಸಿಕೊಂಡರು. ಅದಕ್ಕೊಪ್ಪಿ ಮಂಗಲವಾದ್ಯ ಮೊಳಗಲು ಶೇಕ್ಕಿಳಾರರು ದೇವತಾಪ್ರಾರ್ಥನೆ ಸಲ್ಲಿಸಿ ತನ್ನ ಕಾವ್ಯವನ್ನು ಪಠಿಸಿ ಅರ್ಥ ಹೇಳಲು, ಅರಸನೂ ವಿದ್ವತ್ಸಭೆಯಲ್ಲಿ ನೆರೆದಿದ್ದ ಪಂಡಿತರೂ ಉತ್ಸುಕತೆ ಯಿಂದ ಕೇಳುತ್ತಲಿದ್ದರು.

ಚೈತ್ರಮಾಸದಲ್ಲಿ ತಿರುಜ್ಞಾನಸಂಬಂಧರು ಹುಟ್ಟಿದ ದಿನವೂ ಪರಶಿವನಿಗೆ ಪ್ರಿಯವೂ ಆದ ಆರ್ದ್ರಾ ನಕ್ಷತ್ರ ದಂದು ಪ್ರಾರಂಭ ಮಾಡಿ ಮಾರನೆಯ ವರ್ಷ ಚೈತ್ರಮಾಸದ ಆರ್ದ್ರಾ ನಕ್ಷತ್ರದ ದಿನದವರೆಗೆ ತಿರುತ್ತೊಂಡರ್ ಪುರಾಣದ ಅರಂಗೇಟ್ರಂ ನಡೆಯುತ್ತಲಿತ್ತು. ಪಂಡಿತರೆಲ್ಲರೂ ಶೇಕ್ಕಿಳಾರರ ಕಾವ್ಯವಾಚನವನ್ನೂ ಅವರು ಮಾಡಿದ ವ್ಯಾಖ್ಯಾನವನ್ನೂ ಕೇಳಿ ಅತ್ಯಾನಂದಗೊಂಡು ಅಡಿಯಾರ್ಗಳ ಹಿರಿಮೆಯನ್ನೂ ಶೇಕ್ಕಿಳಾರರ ಕವಿತಾವೈಖರಿಯನ್ನೂ ಬಾಯಿತುಂಬ ಹೊಗಳಿದರು. ಅರಸನು ಈ ಪವಿತ್ರ ಗ್ರಂಥವನ್ನು ಬಂಗಾರದ ತಟ್ಟೆಯಲ್ಲಿರಿಸಿ ಪೂಜೆಗೈದು ಆನೆಯ ಮೇಲಿರಿಸಿದನು. ಶೇಕ್ಕಿಳಾರನ್ನೂ ಆನೆಯ ಮೇಲೆ ಕೂರಿಸಿ ತಾನೂ ಅವರ ಹಿಂದೆ ಕುಳಿತು ಅವರಿಗೆ ಚಾಮರಸೇವೆ

---

1 ತಿರುತ್ತೊಂಡರ್ — ದೇವರ ಸೇವಕ; ಡಿಂಗರಿಗ.

2 ಅರಂಗೇಟ್ರಂ — ಒಬ್ಬ ಕವಿಯ ಗ್ರಂಥವನ್ನು ಪ್ರಪ್ರಥಮವಾಗಿ ವಿದ್ವಜ್ಜನರ ಸಭೆಯಲ್ಲಿ ವಾಚಿಸಿ ಮಂಡಿಸುವುದು; ಒಂದು ನಾಟಕ ಅಥವಾ ನಾಟ್ಯದ ಮೊತ್ತಮೊದಲಿನ ಪ್ರದರ್ಶನ.

ಗೈಯುತ್ತ ತಿಲ್ಲೈನಗರವನ್ನು ಬಲವಂದನು. ಮೃದಂಗ-ನಿಸ್ಸಾಳ-ಭೇರಿ-ಶಂಖ-ಕಹಳೆಗಳ ಮೊಳಗು ಮುಗಿಲನ್ನು ಮುಟ್ಟುವಂತಿದ್ದಿತು. ಆನೆಯ ಮೇಲೆ ಮಂಡಿಸಿ ಮೆರವಣಿಗೆ ಬರುತ್ತಿದ್ದ ಕವಿಚಕ್ರವರ್ತಿಯನ್ನೂ ಭೂವಿಚಕ್ರವರ್ತಿಯನ್ನೂ ಪುರಜನರು ಕಣ್ಣುತುಂಬ ನೋಡಿ, ಬಾಯಿತುಂಬ ಕೊಂಡಾಡಿ ಮನಮುಟ್ಟಿ ಹರಸಿದರು. ಚಿದಂಬರಕ್ಷೇತ್ರವು ಹಿಂದೆಂದೂ ಕಂಡರಿಯದ ಸಂಭ್ರಮವನ್ನು ಅಂದು ಕಂಡಿತು. ತರುವಾಯ ಇಡೀ ಗ್ರಂಥವನ್ನು ತಾಮ್ರದ ತಗಡುಗಳಲ್ಲಿ ಬರೆಯಿಸಿ ಚಿದಂಬರೇಶನ ದೇವಮಂದಿರದಲ್ಲಿ ಅಣಿಮಾಡಿಟ್ಟರು. ಶೇಕ್ಕಿಳಾರರಿಗೆ "ಜ್ಞಾನಮುಡಿ" (ಜ್ಞಾನ ಕಿರೀಟ) ಸೂಡಿದರು. ಹಾಗೂ ಅವರಿಗೆ "ತೊಂಡರ್‌ಶೀರ್ ಪರವುವಾರ್" (ಅಂದರೆ, ಡಿಂಗರಿಗರ ಹಿರಿಮೆಯ ಪ್ರಸಾರಕರು) ಎಂಬ ಬಿರುದನ್ನು ಚೋಳರಾಜನು ದಯಪಾಲಿಸಿದನು.

## ಪೆರಿಯಪುರಾಣದ ಹಿರಿಮೆ

ಈ ಪರಿ ರಚಿಸಲಾಗಿ ಪ್ರಚಾರಕ್ಕೆ ಬಂದ ಶೇಕ್ಕಿಳಾರರ ಕಾವ್ಯವು ನವರಸಗಳಿಂದ ತುಂಬಿ ತುಳುಕುತ್ತಿರುವುದು. ಅರುವತ್ತುಮೂರು ಪುರಾತನರ ಚರಿತ್ರೆಯೂ ಇದರಲ್ಲಿ ಅಡಗಿರುವುದರಿಂದ ಇದಕ್ಕೆ "ಪೆರಿಯಪುರಾಣಂ" (ಮಹಾಪುರಾಣ) ಎಂಬ ಹೆಸರಾಯಿತು. ಕನ್ನಡದ ಹಲವಾರು ಕೃತಿಗಳಿಗೆ ಇದೇ ಆಕರಗ್ರಂಥವಾಯಿತು. ಇದರಲ್ಲಿ ಎಲ್ಲಕ್ಕಿಂತಲೂ ಹೆಚ್ಚಾಗಿ ಭಕ್ತಿರಸ ಬೆಳ್ಳಂಬರಿದು ಪೊನಲ್ವರಿಯುತ್ತಿರುವುದು. ಪೆರಿಯಪುರಾಣವು ಎರಡು ಕಾಂಡಗಳಾಗಿ ವಿಭಾಗಿಸಲ್ಪಟ್ಟು ಒಟ್ಟು ೧೨ ಸರ್ಗಗಳಲ್ಲಿ ೪೨೫೩ ಪದ್ಯಗಳನ್ನೊಳಗೊಂಡಿದೆ. ಉತ್ತಮಕೋಟಿಯ ಈ ಕಾವ್ಯದಲ್ಲಿ ಮಹಾಕಾವ್ಯಕ್ಕೆ ಇರಬೇಕಾದ ಅಷ್ಟಾದಶವರ್ಣನೆಗಳೂ ಇರುವುವು. ಇದು ಓದುಗರ ಮನದಲ್ಲಿ ಉದಾತ್ತವೂ, ಪವಿತ್ರವೂ ಆದ ಭಾವನೆಗಳನ್ನು ಮೂಡಿಸುವ ಗ್ರಂಥ ; ಶಿವಭಕ್ತರನ್ನೂ ಶಿವಲಾಂಛನವನ್ನೂ ಸ್ತುತಿಸಿ ಗುಣಗಾನ ಮಾಡುವಂಥ ಈಡು ಜೋಡಿಲ್ಲದ ರಚನೆ. ಪ್ರತಿಯೊಂದು ಪದ್ಯದಲ್ಲೂ ಹರಭಕ್ತಿ ತುಳುಕಾಡುತ್ತಿರುವುದು. ಹತ್ತೊಂಬತ್ತನೆಯ ಶತಮಾನದ ಮಹಾ ವಿದ್ವಾಂಸರಲ್ಲೊಬ್ಬರಾದ ತಿರಿಶಿರಪುರಂ ಮಹಾವಿದ್ವಾನ್ ಮೀನಾಕ್ಷಿಸುಂದರಂ ಪಿಳ್ಳೈ ಎಂಬವರು ಶೇಕ್ಕಿಳಾರನ್ನೂ ಅವರ ಕಾವ್ಯವನ್ನೂ ಬಾಯಿತುಂಬ ಹೊಗಳಿದ್ದಾರೆ. ಪೆರಿಯಪುರಾಣದ ಹಿರಿಮೆಯನ್ನು ಅವರು ಈ ರೀತಿ ಬಣ್ಣಿಸಿರುವರು.

ಬೋನಮದು ಮುಗಮುಗಿನುಗುಂ ಮಡಂಗಳವೊತ್ತಂ
ಪಾವನತೆ ಪರಿಮಳಿನುಗುಂ ಚಿಂತನಮೆಲ್ಲಂ
ಪೊನ್ನ ಕಂಪುಗುತಿರ್ಕುಂ ಉಡೆಗಳೆಲ್ಲಮುಂ
ಪೂದೊಂಗಲ್ ಸುಗಂಧಂ ಸೂಸುತಿರ್ಕುಂ ತೋಳ್ಗಳೆಲ್ಲಂ
ಪಂಕದ ನರುಗಂಪುಗುತಿರ್ಕುಂ ಕಟಿಪೆಗದ್ದೆಗಳೆಲ್ಲಂ
ತೆಂಕಲಕಂಪು ಬೀರುತಿರ್ಕುಂ ವೇದಿಕೆಗಳೆಲ್ಲಂ
ದೈವಪರಿಮಳ ಪರ್ವುತಿರ್ಕುಂ ಕಬ್ಬಮೆಲ್ಲಂ
ಭಸ್ಮದ ನರುಗಂಪು ಸೂಸುತಿರ್ಕುಂ ನೊಸಲೆಲ್ಲಂ
ನೆಯ್ ಕರಂ ಸುರಿಯುತಿರ್ಕುಂ ಪಲ್ಯಗಳೆಲ್ಲಂ
ಉರಿಯ ಕಂಪು ಸೂಸುತಿರ್ಕುಂ ಕುಂಡಮೆಲ್ಲಂ
ಭಕ್ತಿಕರಂ ಪರಿಮಳಿಸುಗುಂ ಬೀದಿಗಳೆಲ್ಲಂ
ಉಕ್ಕೆವ ನೀಡುಂ ಸೌರಭ ಬೀರುತಿರ್ಕುಂ
ಕುನ್ರತ್ತೂರೊಡೆಯ ತಾಲೋ ತಾಲೇಲೋ
ಸಕಲಾಗಮಪಂಡಿತ ದೈವ ಶೈವನೆ ತಾಲೋ ತಾಲೇಲೋ.

ಕಾವ್ಯದ ಬಗ್ಗೆ ಇಂತು ಬಣ್ಣಿಸಿದವರು ಶೇಕ್ಕಿಳಾರನ್ನು "ಭಕ್ತಿಸೊಪೆ ಸೊರೆಬಿಟ್ಟು ಇಂಪೊಸರ್ವಂತೆ ಪಾಡಿದ ಕವಿವರ" ಎಂಬುದಾಗಿ ಕೊಂಡಾಡಿದ್ದಾರೆ.

## ಶೇಕ್ಕಿಳಾರರ ಕವಿತಾವೈಖರಿ

ಶೇಕ್ಕಿಳಾರರ ಕಾವ್ಯವು ರಸಭರಿತವಾಗಿದ್ದು, ಓದುಗರ ಮನಸ್ಸಿನಲ್ಲಿ ಪರಭಕ್ತಿಯನ್ನೂ, ಸಾತ್ವಿಕತೆಯನ್ನೂ, ಶಾಂತಿಯನ್ನೂ ಮೂಡಿಸುವುದಾಗಿದೆ. ರಸವತ್ತಾದ, ನೀತಿಬೋಧಕವಾದ ಅಥವಾ ಭಕ್ತಿಪೂರಿತವಾದ ಕೆಲವು ವರ್ಣನೆಗಳನ್ನು ಇಲ್ಲಿ ಉದಾಹರಿಸಬಹುದು.

ಮನುನೀತಿಚೋಳನ ನ್ಯಾಯಪರತೆಯನ್ನು ವರ್ಣಿಸುವಾಗ, ನಾಡನ್ನಾಳುವ ಅರಸನ ಕರ್ತವ್ಯವನ್ನು ಇಂತು ನಿರೂಪಿಸಿರುವರು.

ಅರಸನು ಲೋಕಪಾಲನು. ಅವನು ತನ್ನಿಂದಲೂ, ತನ್ನ ಪರಿಜನರಿಂದಲೂ, ಹಗೆಯರಸರ ಪಡೆಗಳಿಂದಲೂ, ಕಳ್ಳಕಾಕರಿಂದಲೂ, ಇತರ ಪ್ರಾಣಿಗಳಿಂದಲೂ ಪ್ರಜೆಗಳಿಗೆ ಉಂಟಾಗಬಹುದಾದ ಐದು ಬಗೆಯ ಭಯವನ್ನೂ ಹೋಗಲಾಡಿಸಿ ತನ್ನ ಪ್ರಜೆಗಳನ್ನು ಕಾಪಾಡತಕ್ಕದ್ದು. ಧರ್ಮಸಂರಕ್ಷಣೆ ಎಂಬುದು ಇದೇ ಅಲ್ಲವೆ ?

ಮತ್ತೊಂದೆಡೆ ಪರಶಿವನ ಅನುಗ್ರಹದ ಮಹಿಮೆಯನ್ನು ಬಣ್ಣಿಸುವಲ್ಲಿ ಹೀಗೆ ಹೇಳಿರುವರು :

ಎಲ್ಲಾರ್ಕುಂ ಮುನ್ನವನೇ ಮುನ್ನಿನ್ರಾಲ್ ಮುಡಿಯಾದ ಪೊರುಳುಳದೋ ?

ಅಂದರೆ. ಎಲ್ಲರಿಗೂ ಮೊದಲಿಗನಾದ ಪರಶಿವನು ಒಲಿದು ಮುಂದೆ ನಿಂತನೆಂದೊಡೆ ಆಗದ ಕೆಲಸ ಒಳದೇ ? ಎಂದು ಹೇಳಿರುವರು. ಈ ಸಂದರ್ಭದಲ್ಲಿ ಬಸವಣ್ಣನವರ ಕೆಳಕಂಡ ವಚನವು ನಮ್ಮ ನೆನಪಿಗೆ ಬರುವುದು.

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷವಮೃತವಹುದಯ್ಯ
ನೀನೊಲಿದರೆ ಸಕಲಪಡಿ-ಪದಾರ್ಥ ಇದಿರಲ್ಲಿಪ್ಪುದು
ಕೂಡಲಸಂಗಮದೇವ.

ವ್ಯಾವಹಾರಿಕ ವಿಷಯಗಳಲ್ಲೂ ಪ್ರಮಾಣವಾದ ವಿಷಯಗಳನ್ನು ಖಚಿತವಾಗಿ ನಿರೂಪಿಸುವರು. ಸುಂದರಮೂರ್ತಿ ನಾಯನಾರ್ ಎಂಬ ನಂಬಿಯಣ್ಣನ ಮದುವೆಗೆ ಸಿದ್ಧತೆಗಳು ನಡೆಯುತ್ತಲಿದ್ದಾಗ ವಿಪ್ರವೇಷದಲ್ಲಿ ಬಂದ ಪರಶಿವನಿಗೆ ತಿರುವೆಣ್ಣೈನಲ್ಲೂರಿನ ನ್ಯಾಯಸಭೆಯವರು ನುಡಿದುದನ್ನು ಹೀಗೆ ವರ್ಣಿಸಿರುವರು :

ಆಟ್ಚಿಯಿಲ್ ಆವಣತ್ತಿಲ್ ಅನ್ರಿ ಮಟ್ರಯಲಾರ್
ತಂಗಳ್, ಕಾಟ್ಚಿಯಿಲ್ ಮೂನ್ರಿಲೊನ್ರುಕಾಟ್ಟುವಾಯ್ ಎನ್ನ....

ಅಂದರೆ. ಬಳಕೆ ಅಥವಾ ಅನುಭೋಗ. ಕಟ್ಟಡಕ (ಒಡಂಬಡಿಕೆ ಪತ್ರ). ಕಣ್ಣಾರೆ ಕಂಡ (ಖುದ್ದಾಗಿ ನೋಡಿದ) ಇತರರ ಸಾಕ್ಷ್ಯ—ಈ ಮೂರರಲ್ಲಿ ಯಾವುದಾದರೂ ಒಂದನ್ನು ಸಾದರಪಡಿಸಿ ನಂಬಿಯಣ್ಣನು ನಿನ್ನ ತೊತ್ತು ಎಂಬುದನ್ನು ನೀನು ರುಜುವಾತು ಮಾಡಬೇಕು ಎಂದು ವಿಪ್ರನಿಗೆ ಹೇಳಿದರು.
ಪೊನ್ನಂಬಲದ ನಟರಾಜನನ್ನು ವರ್ಣಿಸುವ ಪರಿಯನ್ನು ನೋಡಿ.

ಆದಿಯಾಯ್ ನಡುವುಮಾಗಿ ಅಳವಿಲಾ ಅಳವುಮಾಗಿ
ಜೋದಿಯಾಯ್ ಉಣರ್ವುಮಾಗಿ ತೋನ್ರಿಯ ಪೊರುಳುಮಾಗಿ
ಪೇದಿಯಾ ಏಕಮಾಗಿ ಪೆಣ್ಣುಮಾಯ್ ಆಣುಮಾಗಿ
ಪೋದಿಯಾಯ್ ನಿರ್ಕುಂ ತಿಲ್ಲೈ ಪೊದುನಟಂ ಪೋಟ್ರಿ ಪೋಟ್ರಿ.

ಅಂದರೆ, ಆದಿಯಾಗಿ, ನಡುವಾಗಿ, ಅನಂತವಾದ ಅಂತವಾಗಿ, ಜ್ಯೋತಿಯಾಗಿ, ಅರಿವಾಗಿ, ಉಗಮಿಸುವ ವಸ್ತುವಾಗಿ, ಅಭೇದ್ಯವಾದ ಏಕವಾಗಿ, ಪೆಣ್ಣಾಗಿ, ಗಂಡಾಗಿ ಲೋಕಕ್ಕೆ ಬೋಧಿಸುತ್ತಿರುವ ತಿಲ್ಲೈ ಕ್ಷೇತ್ರದ ನಟರಾಜನಿಗೆ ಜಯ ಜಯ.

ಕುಂಗಿಲಿಯಕ್ಕಲಯನಾಯನಾರ್ ಎಂಬ ಶಿವಶರಣರು ಹುಟ್ಟಿದ ಕಡವೂರಿನ ವರ್ಣನೆಯನ್ನು ನೋಡಿ :

ಶ್ರೀಮಂತಿಕೆಯ ಕಡವೂರಿನ ಗದ್ದೆಗಳೆಲ್ಲ ಕೆಂಡಶಾಲಿ ವನಂಗಳ್ ; ಬದುಗಳಲ್ಲೆಲ್ಲ ಶಂಖಗಳುಗಿದ ಮುತ್ತುಗಳ್ ; ಪಾರ್ಶ್ವಗಳಲ್ಲೆಲ್ಲ ಯಾಗಶಾಲೆಗಳು ; ಜಲಾಶಯಗಳಲ್ಲೆಲ್ಲ ಕನ್ನೈದಿಲೆ ಸಮೂಹಗಳು : ಕ್ರಮುಕ ತೋಟಗಳಲ್ಲೆಲ್ಲ ಮುಗಿಲರಾಶಿಗಳು ; ಹೊರವಳೆಯವೆಲ್ಲ ಮಡೆನೀರೋಟ ; ಜನರು ಮಾಡುವ ಕರ್ಮಗಳೆಲ್ಲ ಷಟ್ಕರ್ಮಗಳೆ (ಅಂದರೆ, ಅಧ್ಯಯನ. ಅಧ್ಯಾಪನ, ಯಜನ, ಯಾಜನ, ದಾನ, ಪರಿಗ್ರಹ).

ಶಾಕ್ಯನಾಯನಾರ್ ಎಲ್ಲ ಮತಗಳ ತತ್ವಗಳನ್ನು ಓದಿ, ತಿಳಿದು, ವಿಮರ್ಶಿಸಿ, ಶೈವಸಮಯದ ಹಿರಿಮೆಯನ್ನು ಸ್ಥಾಪನೆ ಮಾಡಿದ ಬಗೆಯನ್ನು ಶೇಕ್ಕಿಳಾರ್ ಈ ಪರಿ ವರ್ಣಿಸುತ್ತಾರೆ :

ಕರ್ಮ, ಕರ್ಮವನ್ನು ಮಾಡುವವ, ಕರ್ಮದ ಫಲ, ಕರ್ಮಫಲವನ್ನು ಕೊಡುವವ—ಎಂಬ ಈ ನಾಲ್ಕು ತತ್ವಗಳನ್ನು ವಿವರಿಸಿ ಹೇಳುವ ಶೈವಸಮಯವೇ ಶ್ರೇಷ್ಠವಾದುದು ಎಂಬುದನ್ನು ಶಿವನ ಅನುಗ್ರಹದಿಂದ ಶಾಕ್ಯನಾಯನಾರರು ಅರಿತುಕೊಂಡರು.

ತೊಂಡರ (ಡಿಂಗರಿಗರ) ಗುಣವನ್ನು ಬಣ್ಣಿಸುವ ಪರಿಯನ್ನು ಲಾಲಿಸಿ–ನಿಂತರೂ, ಕೂತರೂ, ಮಲಗಿದರೂ, ನಡೆದರೂ, ಉಂಡರೂ, ನಿದ್ರಿಸಿದರೂ, ಎಚ್ಚರಿದ್ದರೂ, ರೆಪ್ಪೆಯಾಡಿಸಿದರೂ, ಅಂಬಲದೊಳಾಡಿದಂಥ ಶಿವನ ಪಾದಗಳನ್ನು ಯಾವತ್ತೂ ಮರೆಯದೆ ಏಕಾಗ್ರಚಿತ್ತದಿಂದ ತೊಂಡರು ಚಿಂತಿಸುತ್ತಿರುವರು.

ಶೃಂಗಾರದ ವರ್ಣನೆಗಳನ್ನು ಮಿತವರಿತು ಅಶ್ಲೀಲತೆಯ ಸೋಂಕಿಲ್ಲದೆ ರಸವತ್ತಾಗಿ ಶೇಕ್ಕಿಳಾರ್ ನೆರವೇರಿಸಿರುವರು. ಉದಾಹರಣೆಗೆ, ಪರವೆನಾಚಿಯನ್ನು ಕಂಡು ಮಾರುಹೋದ ನಂಬಿಯಣ್ಣನ ಮನಸ್ಸಿನ ಭಾವಗಳನ್ನು ಹೀಗೆ ವರ್ಣಿಸಿರುವರು :

ಕರ್ಪಕತ್ತಿನ್ ಪೂಂಗೊಂಬೋ ಕಾಮನ್‌ತನ್ ಪೆರುವಾಟ್ಟ್ವೋ
ಪೊರ್ಪುಡೈಯ ಪುಣ್ಣಿಯತ್ತಿನ್ ಪುಣ್ಣಿಯಮೋ ಪುಯಲ್‌ಶುಮಂದು
ವಿಕ್ರುವಳ್ಳೈ ಪವಳಮಲರ್ ಮತಿಪೊತ್ತ ವಿರೈಕ್ಕೊಡಿಯೋ
ಅರ್ಪುತಮೋ ಶಿವನರುಳೋ ಅರಿಯೇನೆನ್ರು ಅತಿಶಯಿತ್ತಾರ್

ಇವಳು ಕಲ್ಪತರುವಿನ ಹೂಗೊಂಚಲೋ ! ಕಾಮದೇವನ ಬಾಳ ಸಂಗಾತಿಯೋ ! ಚೆಲುವಿನ ಪುಣ್ಯಕ್ಕೆ ಪುಣ್ಯವೋ ! ಕಣ್ಮೈದಿಲೆ, ಹವಳ ಹಾಗೂ ಚಂದಿರ ಒಟ್ಟಯಿಸಿ ಅಲರ್ದ ಮಲಗೊಂಚಲೋ ! ಶಿವಪ್ರಸಾದವೋ ! ಏನು ಪವಾಡವೋ ! ನಾನರಿಯೆ ಎಂದು ಮನದೊಳು ಅಚ್ಚರಿಗೊಂಡರು.

ಇದೇ ರೀತಿ, ನಂಬಿಯಣ್ಣನನ್ನು ಕಂಡು ಮೋಹಿತಳಾದ ಪರವೆನಾಚಿಯ ಮನೋಗತವನ್ನು ಈಪರಿ ನಿರೂಪಿಸಿರುವರು.

"ನನ್ನ ಇದಿರಿನಲ್ಲಿ ಕಾಣಿಸಿಕೊಂಡಿರುವ ಇವರು ಯಾರೋ ! ಮುರುಗನೋ ! ಅಸದೃಶತೇಜಸ್ಸಿನಿಂದ ಬೆಳಗುವ ಮನ್ಮಥನೋ ! ಅಥವಾ ಪೂಮಾಲೆಯಾಂತ ವಿದ್ಯಾಧರನೋ ? ಹೊಳೆ ಹೊಳೆವ ಕೆಂಜಡೆಯ ಮಾದೇವನ ಒಲವಂ ಪಡೆದ ಹರಭಕ್ತನೋ ! ನನ್ನ ಮನಸ್ಸನ್ನು ವಿಚಲಗೊಳಿಸಿ ಸೂರೆಗೊಂಡ ಈತನು ಯಾರೋ ! ಎಂದು ಕಳವಳಗೊಂಡಳು.

ತನ್ನ ಮನಸ್ಸನ್ನು ಸೆರೆಹಿಡಿದ ಪರವೆನಾಚಿಯನ್ನು ತನ್ನ ಜತೆ ಸೇರಿಸಬೇಕೆಂದು ಕಾಮಾಸಕ್ತರಾದ ಸುಂದರಮೂರ್ತಿನಾಯನಾರರು ಶಿವನನ್ನು ಪ್ರಾರ್ಥಿಸುತ್ತಿದ್ದರು. ಆಗ ಸೂರ್ಯಾಸ್ತವಾಯಿತು : ಆಕಾಶದಲ್ಲಿ ಮಬ್ಬು ಕವಿಯುತ್ತಿತ್ತು. ಬಳಿಕ ಚಂದ್ರೋದಯವಾಯಿತು. ಅದನ್ನೆಲ್ಲ ಶೇಕ್ಕಿಳಾರರು ಸೊಗಸಾದ ಉಪಮೆಗಳನ್ನಿತ್ತು ಈಪರಿ ವರ್ಣಿಸಿರುವರು.

ಹತ್ತಿಯಂತಹ ಮೆಲ್ಲಡಿಯ ಕಾಮಿನಿಯರ ಹೃದಯದಂತೆ, ವಂಚನೆ ತುಂಬಿದ ಮಂದಿಗಳ ಪಾಪಕರ್ಮಗಳಂತೆ, ಹರನ ಪಂಚಾಕ್ಷರವನ್ನು ಅರಿಯದ ಅಜ್ಞಾನಿಗಳ ಮನದಂತೆ ನೀಳಬಾಂದಳ ಕತ್ತಲಿಸಿತು. ನಿಚ್ಚಟ ಚಿತ್ತದ ಹರಭಕ್ತ ನಂಬಿಯಣ್ಣನವರು ಇಂತು ಕಳವಳಗೊಂಡರೆ, ಲತಾಂಗಿಯರ ಪ್ರೇಮವನ್ನು ಗೆಲ್ಲಬಲ್ಲವರು ಯಾರುಂಟು ? ಎಂದೆಣಿಸಿ ಇರುಳೆಂಬ ವನಿತೆಯು ಮುಗುಳುನಗೆ ನಗುವಂತೆ ಆ ವೇಳೆಯೊಳ್ ತಿಂಗಳು ಮೆಲ್ಲ ಮೆಲ್ಲನೆ ಮೂಡಿಬಂತು.

ಹೀಗೆ ಶೃಂಗಾರದ ಪ್ರಕರಣಗಳ ವರ್ಣನೆಗಳಲ್ಲೂ ಭಕ್ತಿಭಾವ ಮೇಲೆದ್ದು ಕಾಣುವಂತೆ ಗ್ರಂಥರಚನೆ ಮಾಡಿರುವುದು ಶೇಕ್ಕಿಳಾರರ ಮೇಲ್ಮೆ ಎನ್ನಬಹುದು.

ಶಿವನ ವಾಣಿಯಿಂದ ಹೊರಟ "ಉಲಕೆಲಾಂ" ಎಂಬ ಮಾತಿನಿಂದ ಮೊದಲು ಮಾಡಿರುವ ಈ ಕಾವ್ಯದ ಕೊನೆಯಲ್ಲೂ 'ಉಲಕೆಲಾಂ" ಎಂಬ ಅದೇ ಮಾತು ಬರುವಂತೆ ಶೇಕ್ಕಿಳಾರ್ ಮುಗಿಸಿರುವರು. ಕೊನೆಯ ಪದ್ಯ ಇದು :

ಎನ್ರುಂ ಇನ್ಬಂ ಪೆರುಕುಂ ಇಯಲ್ಬಿನೋಡು
ಒನ್ರುಕಾದಲಿತ್ತು ಉಳ್ಳಮುಂ ಓಂಗಿಡ
ಮನ್ರುಳಾರ ಯಾರವರ್ ವಾನ್ ಪುಕಟಿನ್
ನಿನ್ರು ತೆಂಗುಂ ನಿಲವಿ ಉಲಕೆಲಾಂ.

ಅಂದರೆ,

ಎಂದುಂ ಸೊಗಮಿಗುವ ಪ್ರಕೃತಿಯೊಡನೆ
ಒಂದಿ ಕರವೊಲಿದು ಚಿತ್ತವು ಮೇಲಡರ್ದು
ಶಿವನಡಿಯಾರ್ ಅವರ್ ಉತ್ತುಂಗ ಪೊಗಳ್ತೆ
ನಿಂತಿತು ಎತ್ತಣಮುಂ ಪಸರಿಸಿ ಲೋಕದೊಳೆಲ್ಲಂ.

ಲೋಕವೆಲ್ಲವೂ ಶಿವನಿಂದ ಹುಟ್ಟಿ ಕೊನೆಗೆ ಶಿವನಲ್ಲೇ ಐಕ್ಯವಾಗುವುದೆಂಬ ತತ್ತ್ವವನ್ನು ಬೋಧಿಸಲು ಶಿವನು ಅಪ್ಪಣೆ ಕೊಡಿಸಿದ "ಉಲಕೆಲಾಂ" ಎಂಬ ಮೊದಲಡಿಯನ್ನು ಬಳಸಿ ಅದೇ "ಉಲಕೆಲಾಂ" ಎಂಬ ಪದದಿಂದ ಶೇಕ್ಕಿಳಾರರು ತಮ್ಮ ಕಾವ್ಯವನ್ನು ಮುಕ್ತಾಯ ಮಾಡಿರುವರು. ಬೇರೆ ಕಾವ್ಯಗಳಲ್ಲಿ ಈ ಅಸಾಧಾರಣ ಗುಣ ಕಾಣಬರುವುದಿಲ್ಲ. ಇದು ಈ ಕಾವ್ಯದ ವೈಶಿಷ್ಟ್ಯವಾಗಿರುವುದು.

ತೆನ್ನಾಡುಡೈಯ ಶಿವನೇ ಪೋಟ್ರಿ ! ಎನ್ನಾಟ್ಟವರ್ಕುಂ ಇಱೈವಾಪೋಟ್ರಿ ! ಎಂದರೆ–ತೆಂಕನಾಡೊಡೆಯ ಶಿವನೇ ಜಯವಾಗಲಿ ! ಎಂಥ ನಾಡಿನವರಿಗೂ ಎರೆಯ ಜಯವಾಗಲಿ !

---

ಸುಡಿವೆಡೆಯಲ್ಲಿ ನೋಡುವೆಡೆಯಲ್ಲಿ ರಮಿಪ್ಪೆಡೆಯಲ್ಲಿ ವಸ್ತ್ರವಂ
ಪಿಡಿವೆಡೆಯಲ್ಲಿ ಭೋಗಿಪೆಡೆಯಲ್ಲಿ ಸುಖಂಖಡೆವಲ್ಲಿ ದೇಹವಂ।
ಬಿಡುವೆಡೆಯಲ್ಲಿ ಲಿಂಗಕಳೆ ಲಿಂಗಗುಣಂ ಘನಲಿಂಗಯೋಗವಾ
ದೊಡೆ ಬಳಿಕಾ ಮಹಾತ್ಮನನದೇನೆನಬರ್ಪುದದಂ ಶಿವಾಧವಾ ॥

ಮಾಯಿದೇವರು

# ಓನಾಮ ಹಾಕಿತ್ತು

ಪ್ರೊ. ಸಂ. ಶಿ. ಭೂಸನೂರಮಠ

**ಮಹಾದೇವಿಯಕ್ಕ :**

೧

ಎಲೆ ತಂದೆ ಮಲ್ಲರಸ
ಓನಾಮ ಹಾಕಿತ್ತು ಮಾನವನ ಲೀಲೆಗೆ
ಜಗದ ಮಾನವನಾಟ—ಹೆಸರು ಸಂಸಾರ
ಕುಣಿದಂತೆ ಕುಣಿದ—ತನ್ನ ಮಾಯಾ ಪ್ರಕೃತಿ ;
ಕೋಟಿ ಬಣ್ಣದ ಜಗದ ಜಾಲ ಒಳಹೊರಗೆ
ಸೂತ್ರ ಮಾಯಾಸೂತ್ರ ತಾನೆ ಬಣ್ಣದ ಬೊಂಬೆ
ನನ್ನಿಚ್ಛೆ 'ನಾನು' ಆಡುವೆನೆಂದು ಕುಣಿದ.
ವಿಶ್ವ ಬ್ರಹ್ಮಾಂಡಗಳ ಹಡೆದ ಬಯಲೊಳಗೆ
ಎಲ್ಲ ಎಲ್ಲರ ಹೊರೆದು ಹೊಟ್ಟೆಯೊಳಗಿಂಬಿಟ್ಟು—
ಕೊಂಡಿರುವನಂತಚೈತನ್ಯ ಬಯಲೊಳಗೆ
ಪೃಥಿವಿ-ಜಲ-ವಾಯು-ನಕ್ಷತ್ರ-ಕೋಟಿಗಳ
ಬೆಳೆದ ಬೆಳೆಭೂಮಿ ಬಯಲ ಹರವಿನೊಳು
ನಾನು—ಮಾನವ ಬ್ರಹ್ಮ ಸಂಸಾರ ಹೂಡಿದ :
ತೃಣಜೀವಿ ಕಣಗಾತ್ರ ಈ ನಾನು ಬ್ರಹ್ಮ
ಅರಿವ ದೀಪಿಸಿಕೊಂಡು ನಾನು–ಬಣ್ಣದ ಅರಿವ,
ತನ್ನ ಜಾತಿಯು ಜಗದ ಬಣ್ಣಗಳ ಬೆಳಗಿ,
ಹರವಿರ್ದ ಬಯಲಿಗೆ ಅಡ್ಡಗೋಡೆಯು ಕಟ್ಟಿ
ಮೇಲೆ ಚಪ್ಪರ ಹಾಕಿ ಬಯಲ ಹೊರಗಟ್ಟಿ
ಹರವಿರ್ದ ಮಹಾಂತ ವಿಸ್ತಾರದೊಳಗೊಂದು
ಸಂಸಾರ ಹೂಡಿದ ತನ್ನಿರುವೆಗೂಡಿನೊಳು ;
ತನ್ನ ಶಕ್ತಿಯು ಕೂಡಿ ಸೃಷ್ಟಿಮುಖವಾದ.
ತನ್ನಿರವು ನಾನಾಗಿ
ಜಗವೆಲ್ಲ ತನಗನ್ಯಭಿನ್ನದಿರವಾಗಿ
ಸಂಸಾರ ಹೂಡಿದ–ಬ್ರಹ್ಮಸಂಸಾರ !
ನಾನು-ಮಾನವನೊಳಗೆ ತಾನು ಬ್ರಹ್ಮದ ಕಳೆ,
ದ್ವೈತ ಭೂತಾಂಧತಮತಮದ ಪದರೊಳು ಹಾಯ್ದು
ದ್ವೈತಬ್ರಹ್ಮದ ಕಳೆ ನಾನಿನೊಳು ಮೂಡಿದರೆ
ಈ ಅಲ್ಪ ಹಮ್ಮಿಗೆ ಹೊಡೆಯಿತ್ತು ಬ್ರಹ್ಮಗರ.

ಇರವು ತಾನೇ ಇರವು ಮಿಗಿಲಾದ ಇರವು
ಅರಿವು ತನ್ನದೆ ತಾನು ಪರಮ ಪ್ರಮಾಣ
ತನ್ನೊಂದು ಆನಂದ ಕಾರಣ ಜಗವೆಲ್ಲ.
ಹುಟ್ಟು ಸಾವಿನ ನಡುವೆ ಕತ್ತಲೆಗೆ ಸಿಕ್ಕು
ಒದ್ದಾಡಿ ಸತ್ತರೂ ನಿತ್ಯಕ್ಕೆ ಸ್ವಪ್ನ ;
ಸಾಲಾಗಿ ಸರಿದಿರುವ ನಿಮಿಷಗಳ ಸರಕೆ
ನಿತ್ಯವನು ಪವಣಿಸುವ ಹವಣಿಕೆ ತನಗೆ
ಅಲ್ಪಕ್ಕೆ ಅತ್ಯಲ್ಪ ತೃಣಕಾಯ ತೃಣಜೀವಿ
ಈ ನಾನು ಕೋಟಿಗೆ ಆಶೆ ಆಕಾಶ
ಹಸಿವಿನಾ ಹೊಟ್ಟೆ ಬಯಲಗಲ ಬಯಲಾಳ
ಜಗವೆಲ್ಲವನು ನುಂಗಿ 'ನಾನು' ತುಂಬುವ ಭರ !
        ಅಣ್ಣಾ ನಡೆಯಿತ್ತು ಹೋರಾಟ
ನಾನು ಕೋಟಿಯು ನಡುವೆ ಕೋಟಿ ಹೋರಾಟ !
ಈ ನಾನು–ಬ್ರಹ್ಮ ಈ ಅಲ್ಪ ಜಂತು
ಹಬ್ಬಿದಾ ಹಬ್ಬಿದಾ ತನ್ನ ಜಗದಗಲ
ತನ್ನಗಲ ಜಗದಗಲ ಏಕಾಕಾರ
ಆಹಾರ ಅನ್ನಕ್ಕೆ ಮಣ್ಣಿಗೆ ಹಬ್ಬಿದ
ನನ್ನೊಂದು ಹೊಟ್ಟೆಗೆ ನನ್ನವರ ಭರ್ತಿಗೆ ;
ಕಾಮದಿಚ್ಛೆಯ ಭರಕೆ ಹಬ್ಬಿದ ಹೆಣ್ಣಿಗೆ
ನಾಳೆ ನಾಡದು ಬೇಕು ಬಂಧುಬಳಗಕ್ಕೆಂದು
ತನ್ನ ಸೃಷ್ಟಿಯ ಸ್ಥಿತಿಗೆ ಹೊನ್ನಿನೊಳು ಹಬ್ಬಿದ ;
ಬಾಳು ಬದುಕಿಗೆ ದುಡಿದು ದುಡಿದು ಸತ್ತ
ಮುಳುಗಿಹೋಯಿತು ಪ್ರಾಣಿ ಮಾಯವಾಗಿ.
ಈ ನಾನು ಈ ಬ್ರಹ್ಮ ಸಂಸಾರ ನಾಟಕ
ನಟಿಸಿತ್ತು ಜಗದಗಲ
ಭೂತ ಬ್ರಹ್ಮಾಕಾರ 'ನಾನು' ಬೆಳೆದಂತೆ.
ಇಂತಲ್ಲವೇನಯ್ಯ ಜಗದಾಟ ಗುರುತಂದೆ ?
ಬಣ್ಣಬಣ್ಣದ ಆಟ ಅಳಲಿದವು ಬಳಲಿದವು
ಕತ್ತಲೆಯ ಪಂಜು ದೀವಟಿಗೆ ಹಿಡಿದು
ಈ ಬೆಳಕೆ ಬೆಳಕಾಗಿ ಕುಣಿದು ಕುಣಿದು
ನಾನರಿವು ಬೆಳಕಿನೊಳು ಕುಣಿದಿರುವ ಬುದ್ಧಿ
ಈ ಬೆಳಕಿನೊಳು ಕುಣಿವ ಭಾವನಟನೆ
ದಿಟವೆಂದು ದಿಟವೆಂದು ನಟಿಸಿ ನಟಿಸಿ,
ಅರಿವುಗತ್ತಲೆಯೊಳಗೆ ತೊವಲ ನಾಲಿಗೆ ನುಡಿವ
ಆರ್ಭಟವೆ ತನಗೆ ಸಂವಾದ ನಿಜವಾಗಿ
ಕೋಟಿ ಆಟವನಾಡಿ ಆ ರೀತಿ ಈ ರೀತಿ
ದಣಿದಿಲ್ಲವೇ ತಂದೆ ನಾನು ಮಾನವಕೋಟಿ ?
ಒಬ್ಬರೊಬ್ಬರ ಕೊಂದು ಒಬ್ಬರೊಬ್ಬರ ತಿಂದು—
ಏಕೆ ತಂದೇ ಏಕೆ ಈ ಬ್ರಹ್ಮದಾಹ ?

ಮಲ್ಲಣ್ಣನಾ ಮಾತು ನನ್ನೆದೆಯೊಳುಕ್ಕಿ
ಮರುಕಳಿಸಿ ಬರುತಿದೆ ನಡುಗಿ ನಾಲಗೆಯೊಳಗೆ
ಹೋರಾಟ ಹೋರಾಟ ಜಗದಗಲ ಹೋರಾಟ
ದುಃಖರಾಶಿಯ ಮೇಲೆ ಮರಣ ಒಟ್ಟಿಹವು.
ಎಲ್ಲಿಗೆ ಮುಕ್ತಾಯ ಜಗದ ರಣರಂಗ ?

೨

ಗಿರಿಮಲ್ಲ :

**ಜಗದ ಡೊಂಕ ತಿದ್ದುವರಾರು ?**

ಗುರುರಾಯ ಗುರುತಂದೆ
ಗುರುದೈವ ಗುರುದೇವ ಗುರುವೇ ಪರಬ್ರಹ್ಮ
ಭೂಲೋಕ ನಡೆದಿಹುದು ನೆಲದ ಮೇಲಲ್ಲ
ಲೌಕಿಕದ ವ್ಯಾಪಾರ ಕತ್ತಲೆಯ ಕುಹರದೊಳು
ಲೌಕಿಕವು ನಡೆದಿಹುದು ಪಾತಾಳದೊಳಗೆ
ಸುಖ ಸುಖವ ನುಂಗಲ್ಕೆ ದುಃಖ ದುಃಖವು ನುಗ್ಗಿ
ಸತ್ಯವನು ಕೊಲ್ಲಲ್ಕೆ ಮುಸುಕು ಸತ್ಯವು ಸುತ್ತಿ
ಲೇಸು ಕಲ್ಯಾಣ ದಯೆ ದಾಕ್ಷಿಣ್ಯವನು ಹಿಸುಕಿ
ಬಾಳಿದವು ತೇಲಿದವು ಚಕ್ರಬಡ್ಡಿಯ ಲೋಕ
ಉರಿ ಬೆಂಕಿ ಹತ್ತಿದವು ಮನೆ ಬಣವೆ ಸುಟ್ಟವು
ಮಂಚ ಹೇಸಿತು ತಂದೆ ಮಡದಿಯಾಟಕ್ಕೆ
ಬಸವಣ್ಣನೇಕೆ ? ಕಲ್ಯಾಣವೇಕೆ ?
ನೀವೇಕೆ ? ಶರಣಗಣ ಬಂದುದೇಕೆ ?
ಈ ತಾಯಿ ಈ ದೇವಿ
ಶ್ರೀಗಿರಿಯ ಚೆನ್ನಮಲ್ಲನ ಮಹಾರಾಣಿ
ಸುಳಿಯಲೇಕೆನ್ನೊಡೆಯ ನೆಲದ ಮೇಲೆ ?
ಅಂದಿನ ಪುರಾತನರು ಹಿಂದಿನ ಮಹಾತ್ಮರು
ಅವತಾರಪುರುಷರು ಮಹಾವಿಭೂತಿಗಳು
ಸಾಧು ಸಂತರು ಪರಮ ಪುಣ್ಯ ಮೂರುತಿಗಳು
ಏಕೆ ಬಂದರು ತಂದೆ ಏಕೆ ಹೋದರು ಮತ್ತೆ
ಕತ್ತಲೆಯ ಅನ್ಯಾಯ ದ್ರೋಹ ವಂಚನೆ ಕಪಟ
ಒಂದಕೊಂದಕೆ ಗುಣಿಸಿ ದುಃಖದ ಗುಣಾಕಾರ.
ಹನಿರಕ್ತದೊಳಗೆ ರಕ್ಕಸಕೋಟಿ ಒಡೆದಂತೆ
ಪಾಪ ಬೆಳೆಯಿತು ರಕ್ತಬೀಜಾಸುರರ ಲೆಕ್ಕ
........ಎಲೆ ತಂದೆ ಕೇಳುವೆನು
ಕರುಣಿಸಯ್ಯಾ ಗುರುವೆ ನಿಮ್ಮ ವಚನಾಮೃತವ
ಕರುಣಿಸಯ್ಯಾ ಗುರುವೆ ನಿಮ್ಮಯ ನಿರುಪವನು
ಚಂದ್ರ ಸೂರ್ಯರು ಮೂಡಿ ಕತ್ತಲೆಯು ಘನಿಸಿದರೆ
ಸಾಗರವು ಹರಿದು ಸಸಿಯೊಣಗಿಹೋದರೆ
ಹೊನ್ನು ಮಳೆಗರೆದು ಬಡತನವು ಹೆಚ್ಚಿದರೆ

ಕಾಯಕಲ್ಪವಮಾಡಿ ಸೊರಗಿ ಸಾವರೆ ಮತ್ತೆ
ಗತಿಯೇನು ತಂದೇ ಮತಿಮಾರ್ಗವೇನು ?
ಎಲೆ ತಂದೆ ಗುರುರಾಯ
ಏಕೆ ಹುಟ್ಟಿತು ಭೂಮಿ ? ಏಕೆ ಹರಿದವು ನೀರು ?
ಏಕೆ ಬೀಸಿತು ಗಾಳಿ ? ಬೆಂಕಿ ಬೆಳಕಾಯ್ತೇಕೆ ?
ನಕ್ಷತ್ರಕೋಟಿ ಚಂದ್ರಾಮ ಸೂರ್ಯರು
ಸುಳಿದಾಡಿ ಹೊಳೆಯಲಿಕೆ ಕತ್ತಲೆಯನೆತ್ತಲಿಕೆ
ಆಕಾಶದಂಗಳವು ಹರವಿತೇಕೆ ?
ಲೋಕ ಲೋಕವನೆಲ್ಲ ಹಸಗೆಡಿಸಿ ಬಿಟ್ಟಿಹನು
ಜಗದ ಭವ್ಯವನೆಲ್ಲ ಬಂಜೆಗೊಳಿಸಿಹನು
ಕರಿಯು ತಲೆ ಮಾನವಾ ! ಅರಿವುಳ್ಳ ಪ್ರಾಣಿ ?
ಎಲೆ ತಂದೆ ಹೇಳಯ್ಯ ಮರೆ ಮೋಸ ಬೇಡಾ.
ಲೋಕವಿಲ್ಲವೆ ಬೇರೆ ವಾಸವಾಗಿರಲು ?
ಹರವಿನೊಳು ಹರವಿನೊಳನಂತ ಹರವಿನೊಳು
ಲೋಕವಿಲ್ಲವೆ ಬದುಕು ಬಾಳುವೆಯು ಮಾಡಲ್ಕೆ ?
ಇಲ್ಲದಿರೆ ತಂದೇ............................
ನೆಲದೊಳಗೆ ಹೊಸತೊಂದು ಕಲ್ಯಾಣ ನೆಲ ಮೂಡಿ,
ಜಲದೊಳಗೆ ಮತ್ತೊಂದು ಪುಣ್ಯ ಜಲ ಹರಿದು,
ವಾಯುಮಂಡಲದೊಳಗೆ ಶಾಂತಿಮಂಡಲ ಬೀಸಿ,
ಅಗ್ನಿಮಂಡಲದೊಳಗೆ ಜ್ಞಾನಮಂಡಲ ಬೆಳಗಿ
ನಿರುಮಳ ನಿರಾಳಕ್ಕೆ ಹೊಸ ಬಯಲು ಮನೆಯಾಗಿ
ಹೊಸತು ಮಾನವ ಹುಟ್ಟಿ ಹೊಸ ಬದುಕು ಬಾಳಿರುವ
ಹೊಸತೊಂದು ಭವ್ಯಕ್ಕೆ ಹೊಸತೊಂದು ದಿವ್ಯಕ್ಕೆ
ನವ್ಯಲೋಕದ ಮನೆಗೆ ಕಲ್ಯಾಣ ಸೃಷ್ಟಿಗೆ
ಎಲೆ ತಂದೆ ಎಲೆ ಗುರುವೆ ಏಕೆ ಸಾಗಿಸಲಿಲ್ಲ ?
ಏಕೆ ಸಾಗಿಸಲಿಲ್ಲ ಲೋಕದ ಮಹಾಂತರು ?
ಕೊಳವೆಯೊಳಗಿಟ್ಟು ಅರೆಗಳಿಗೆ ನೆಟ್ಟಗೆ
ಮತ್ತೆ ನಾಯಿಯು ಬಾಲ ಡೊಂಕವೆಂಬಂತೆ,
ಅವತಾರ ಇಳಿದರೆ ಮಹಿಮರು ಮೂಡಿದರೆ,
ಧರ್ಮ ಕತ್ತಲೆಯಾಗಿ ನೀತಿ ಕತ್ತಲೆಯಾಗಿ
ಕತ್ತಲೆಗೆ ಮುಳುಗಿರುವ ಭೂಮಿಯಯನು ಎತ್ತಲ್ಕೆ
ದೇವದೇವರು ಬಂದು ಮಾಯವಾದರೆ ಮತ್ತೆ
ಗುರುತಂದೆ ನೋಡಯ್ಯ ಮತ್ತೆ ಮರಳಿ
ಜಗದ ಲೋಕದ ಡೊಂಕು ಮತ್ತೆ ಡೊಂಕಾಗಿಹುದು !
ಹಾಡಿದನು ಕಲ್ಯಾಣ ಬಸವಣ್ಣಲಿಂಗ !
'ಲೋಕದಾ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮನಿಮ್ಮಯ ತನುವ ಸಂತೈಸಿಕೊಳ್ಳಿ'
ನಿಮ್ಮನಿಮ್ಮಯ ಮನವ ಸಂತೈಸಿಕೊಳ್ಳಿ,
ಪರರ ದುಃಖಕ್ಕೆ ಅಳುವವರ ಕಂಡು

ನಗುವನಯ್ಯಾ ನಮ್ಮ ತಂದೆ ಕೂಡಲಸಂಗ—
ಹಾಡಿದನು ಬಸವಯ್ಯ ಸಂಗ ಹಾಡಿಸಿದಂತೆ
ಬಸವಯ್ಯ ತಾ ಬಲಿತು ಲಿಂಗವಾಗದ ಮುನ್ನ
ಬಸವಣ್ಣ ಗುರುಬಸವಲಿಂಗವಾಗದ ಮುನ್ನ
ಘನಮಹಿಮ ಶರಣರು ಲಿಂಗಸಾರಾಯರು
ತಮ್ಮ ತಾವೆತ್ತಿ ನೆಲ ಬಿಟ್ಟು ಹೋದರೆ
ಕೋಟಿ ಕಾಲದ ಜಗದ ಡೊಂಕ ತಿದ್ದುವರಾರು ?

---

ವೇದ ಶಾಸ್ತ್ರ ಆಗಮ ಪುರಾಣ ತರ್ಕ ವ್ಯಾಕರಣ ಇತಿಹಾಸಂಗಳ
ಓದಿ ಕೇಳಿ ಹೇಳುವಾತ ಜಾಣನೆ? ಅಲ್ಲ, ಅಲ್ಲ
ಜಾತಿಗೊಂದು ಮಾತ ಕಲಿತು ಸರ್ವರಿಗೆ ನೀತಿ ಹೇಳುವಾತ ಜಾಣನೆ?
ಅಲ್ಲ, ಅಲ್ಲ. ಮತ್ತಾರು ಜಾಣರೆಂದಡೆ
ಮತ್ತ ಮತಿಯೆಂಬ ಕತ್ತಲೆಯ ಕಳೆದು,
ತಥ್ಯ ಮಿಥ್ಯ ರಾಗದ್ವೇಷವನಳಿದು,
ನಿತ್ಯ ಲಿಂಗದಲ್ಲಿ ಚಿತ್ತವಡಗಿರ್ಪ
ಚಿನ್ಮಯ ಶರಣನೇ ಜಾಣನಯ್ಯಾ ಅಖಂಡೇಶ್ವರಾ

ಷಣ್ಮುಖ ಶಿವಯೋಗಿಗಳು

# ಕಾಶಿಯ ಗುಹಾವಾಸಿ ಮುನಿಗಳು

**ಪ್ರೊ. ಗೌ. ಮ. ಉಮಾಪತಿಶಾಸ್ತ್ರಿ**

ಕಾಶಿ ಭರತಖಂಡದ ಪ್ರಾಚೀನತಮ ಕ್ಷೇತ್ರಗಳ ಮುಕುಟಮಣಿ. ಹಿಮಾಲಯದಿಂದ ಹರಿದುಬರುವ ಗಂಗಾನದಿಗೆ ಕೂಡುವ ವರುಣೆ–ಅಸಿ ನದಿಗಳ ಮಧ್ಯೆ ಪಂಚಕ್ರೋಶಗಳ ವಿಶಾಲವ್ಯಾಪ್ತಿಯಲ್ಲಿರುವ ಈ ಶೈವಕ್ಷೇತ್ರದ ಆಕರ್ಷಣೆಯೇ ಬೇರೆ. ರೇವುಮಣ್ಣಿನ ಫಲವತ್ತಾದ ಪ್ರದೇಶ. ನೂರಾರು ಮೈಲುಗಳವರೆಗೆ ಒಂದು ಕಲ್ಲುಬಂಡೆಯೂ ನಮ್ಮ ಕಣ್ಣಿಗೆ ಬೀಳದು. ಸಮತಲದ ಹೊಲಗಳಲ್ಲಿ ಮೂರು ಮಾರಿಗೂ ಬಾವಿಯ ಏತದ ನೀರಾವರಿ. ಗೋದಿ-ಕಡಲೆಯ ಸಮೃದ್ಧ ಬೆಳೆ, ಸಾಸಿವೆಯ ಹೊನ್ನಿನ-ಅಗಸಿಯ ನೀಲಿ ಬಣ್ಣದ ಹೂಗಳ ಪೈರಿನಿಂದ ಗಂಗಾನದಿಯ ಬಯಲು ರಂಗು-ರಂಗಾಗಿ ನಮ್ಮ ಕಣ್ಮನಗಳನ್ನು ಸೆಳೆಯುತ್ತದೆ. ಮಧ್ಯೆ-ಮಧ್ಯೆ ಮಾವಿನ ತೋಪುಗಳು, ಪುಷ್ಪವಾಟಿಕೆಗಳು ನೋಡಲು ಬಲು ಚೆಂದ. ಈಗಲೂ ಕಾಶಿಯ ಸುತ್ತಲೂ ಸ್ಥಿತಿವಂತರು ವಿರಾಮದಲ್ಲಿ ವೇಳೆ ಕಳೆಯಲು ಬಗೀಚಗಳನ್ನು ಬೆಳೆಸಿರುವುದು ಸಾಮಾನ್ಯವಾಗಿದೆ.

ಕಾಶಿನಗರಿ ಪ್ರಾಚೀನಕಾಲದಿಂದಲೂ ಭಾರತೀಯ ಸಂಸ್ಕೃತಿಯ ಕೇಂದ್ರವಾಗಿ ಬೆಳೆದು ಬಂದಿದೆ. ನಿಸರ್ಗ ಸುಂದರ ಹಾಗೂ ಪ್ರಶಾಂತವಾದ ಈ ಗಂಗಾತೀರದ ಪಟ್ಟಣದ ನೆರೆಯಲ್ಲಿ ಅನೇಕ ತಪಸ್ವಿಗಳು ಆಶ್ರಮಗಳನ್ನು ಕಟ್ಟಿಕೊಂಡು ಸಾತ್ವಿಕ ಜೀವನ ಸಾಗಿಸಿದ ಕುರುಹುಗಳು ಇಂದಿಗೂ ಅಚ್ಚಳಿಯದೆ ಉಳಿದಿವೆ.

ವೈದಿಕಯುಗಕ್ಕೂ ಪೂರ್ವದ ಶೈವ ಲಿಂಗಪೂಜೆಯು ಕಾಶಿಯಲ್ಲಿಯೇ ಪ್ರತಿಷ್ಠಿತವಾದುದು. ಕಶ್ಯರು ಲಿಂಗ ಪೂಜಕ ಅವೈದಿಕ ಜನಾಂಗ. ಅವರು ಬಾಬುಲ (ಬೇಬಿಲೋನ)ದಲ್ಲಿ ಕ್ರಿ.ಪೂ. ಎರಡು ಸಾವಿರ ವರ್ಷ ಪೂರ್ವದಲ್ಲಿ ಇದ್ದವರು. ಅವರು ವೃತ್ತಿಯಿಂದ ಕೃಷಿಕರು.[1] ಫಲವತ್ತಾದ ಭೂಪ್ರದೇಶಗಳನ್ನು ಹುಡುಕುತ್ತಾ ಕೊನೆಗೆ ಉರ್ವರ ಗಂಗಾತೀರದಲ್ಲಿ ಬಂದು ನೆಲಸಿದರು. ಇರಾನ (ಆರ್ಯಾಯಣ)ದ ಅಸುರರು ಇವರನ್ನು ಅಸ್ಸಿಗಳೆಂದು ಕರೆದರು; ಗ್ರೀಕರು ಕೊಸ್ಸೈಓಯಿ (**Kossaioi**) ಎಂದು ಹೆಸರಿಸಿದರು. ಕಸ್ಪಿಯನ್ ಸಾಗರ, ಕಶ್ಯಪಪುರ[2] (ಈಗಿನ ಪಾಕಿಸ್ತಾನದಲ್ಲಿಯ ಮುಲ್ತಾನ ಶಹರ), ಕಾಶ್ಮೀರ (ಕಶ್ಯಪ ಮೇರು) ಕಶ್ಯಜನಾಂಗದ ಇತಿಹಾಸದ ಅವಶೇಷವೆನಿಸಿವೆ.

ಮಹಾಭಾರತ-ರಾಮಾಯಣ ಕಾಲಗಳಲ್ಲಿಯೂ ಕಾಶಿ ಶೈವರ ಕೇಂದ್ರ ನಗರವೆನಿಸಿತ್ತು. ಮಹಾಭಾರತದಲ್ಲಿ ವೈಷ್ಣವ. ಭಾಗವತ ಮತ್ತು ಶೈವಮತಾನುಯಾಯಿ ರಾಜರ ಪರಸ್ಪರ ಸಂಘರ್ಷಗಳು ನಡೆದುದಕ್ಕೆ ಸಾಕಷ್ಟು ಪೌರಾಣಿಕ ಐತಿಹ್ಯಗಳಿವೆ.

ಒಮ್ಮೆ ದ್ವಾರಕೆಯ ರಾಜ ಕೃಷ್ಣನೊಡನೆ ಕಾಶಿರಾಜನ ಮಿತ್ರನಾದ ಪೌಂಡ್ರಕನು[3] ಯುದ್ಧ ಮಾಡುತ್ತಾನೆ. ಆಗ ಶಿವಭಕ್ತರ ನಗರಿ ವಾರಾಣಸಿಯಲ್ಲಿ ಭಾಗವತರಿಗೆ ಪ್ರವೇಶವಿರಲಿಲ್ಲ. ಇದನ್ನು ಗಮನಿಸಿ ಕೃಷ್ಣನು ಪೌಂಡ್ರಕ ಮತ್ತು ಕಾಶಿರಾಜನನ್ನು ಸೋಲಿಸಿ ಕಾಶಿನಗರಿಯನ್ನೇ ಸುಟ್ಟುಹಾಕಿದ ಐತಿಹ್ಯ ಹರಿವಂಶ, ಭಾಗವತ, ಪದ್ಮಪುರಾಣ

---

1 ಕಾ. ಇ. (ಅಧ್ಯಾಯ ೨, ಪುಟ ೨೬) ೨ ಕಶ್ಯಪರೆಂದರೆ ಕೃಷಿಪಾಲಕರು. ಫಾರ್ಸಿ ಭಾಷೆಯಲ್ಲಿ ಕೃಷಿಯ ಪರ್ಯಾಯ ಕಾಶ್ತ, ಕಾಶ್ತಕಾರನೇ ಕೃಷಿಕ. ಸಂಸ್ಕೃತದಲ್ಲಿ ಭೂಮಿಗೆ 'ಕಾಶ್ಯಪೀ' ಪರ್ಯಾಯವಾಗಿರುವುದು ಗಮನೀಯ.

—ಅ. ಕೋ (ದ್ವಿಕಾಂ.)

2 ಮಿ. ಪಾರ್ಜಿಟರ್ ಅವರು ಪುರಾಣಗಳ ಆಧಾರದಿಂದ ಕಾಶಿರಾಜರ ಪರಂಪರೆಯನ್ನು ಗುರುತಿಸಿದ್ದಾರೆ; ಅದರ ಪ್ರಕಾರ ಮನುವಿನ ಮಗ ಪುರೂರವನಿಂದ ಏಳನೆಯವನಾದ 'ಕಾಶ'ನಿಂದ ಕಾಶಿಪದ ಬಳಕೆಯಲ್ಲಿ ಬಂದಿತೆಂದು ತಿಳಿಯುತ್ತಾರೆ.

3 ಮನುವು ಪೌಂಡ್ರಕ, ಚೌಡ್ರ, ದ್ರವಿಡ, ಕಾಂಬೋಜ, ಯವನ, ಶಕ, ಪಾರದ, ಪಹ್ಲವ, ಚೀನ, ಕಿರಾತ, ದರದ, ಖಶ ಜಾತಿಯವರನ್ನೆಲ್ಲ ಶೂದ್ರರೆಂದು ಪರಿಗಣಿಸಿ ಅವರನ್ನು ದಸ್ಯುಗಳೆಂದು ಕರೆದಿರುವನು.

—ಮ. ಸ್ಮೃ. (ಅ. ೧೦, ಶ್ಲೋ. ೪೪).

ಗಳಲ್ಲಿ ಉಲ್ಲಿಖಿತವಾಗಿದೆ.[1] ಕಾಶಿಯ ರಾಜರು ಮೊದಲಿನಿಂದಲೂ ವೈದಿಕ ಸಂಪ್ರದಾಯದವರ ವಿರುದ್ಧ ಹೋರಾಡಿದವರು.

ಮನುವಿನ ಕಾಲದಲ್ಲಿ (ಕ್ರಿ.ಪೂ. ೩೦೦) ಕಾಶಿ ಜನಪದಕ್ಕೆ ವೈದಿಕ ಧರ್ಮದೃಷ್ಟಿಯಿಂದ ಪ್ರಾಮುಖ್ಯತೆ ಇರಲಿಲ್ಲ. ಆಗ ಪವಿತ್ರತಮ ಪ್ರದೇಶವೆನಿಸಿದ ಬ್ರಹ್ಮಾವರ್ತವು[2] ಕಾಶಿಯನ್ನೊಳಗೊಂಡಿರಲಿಲ್ಲ. ಕಾಶಿಯಲ್ಲಿ ವೈದಿಕಕರ್ಮವಾಯ ಸಂಸ್ಕೃತಿಯನ್ನೊಪ್ಪದ ಆದಿಮ[3] ಜಾತಿಯ ಜನರು ವಾಸವಾಗಿದ್ದರು. ದಿವೋದಾಸನ ಪೌರಾಣಿಕ ಆಖ್ಯಾನಗಳು ಇದಕ್ಕೆ ನಿದರ್ಶನವಾಗಿವೆ.

ಕೋಶಲ ಮತ್ತು ವಿದೇಹರಾಜ್ಯಗಳ ರಾಜರೊಡನೆ ಕಾಶಿಯರಸರ ಮಿತ್ರತ್ವಸಂಬಂಧವಿತ್ತು. ಈ ರಾಜ್ಯಗಳಲ್ಲಿ ವೈದಿಕಸಂಸ್ಕೃತಿಯನ್ನು ಪ್ರತಿಭಟಿಸಿದ ಕ್ಷತ್ರಿಯ ರಾಜಕುಲಗಳು ಪ್ರಬಲವಾಗಿದ್ದವು. ಅವರು ಶುಷ್ಕ ಕರ್ಮವನ್ನು ತೊಡೆದುಹಾಕಿ ಜ್ಞಾನಮಾರ್ಗವನ್ನು ತುಳಿದವರು. ಉಪನಿಷತ್ತುಗಳಲ್ಲಿ[4] ಈ ಕ್ರಾಂತಿಯ ಕಿಡಿಗಳು ಸ್ಪಷ್ಟವಾಗಿ ಪ್ರಕಾಶಗೊಂಡಿವೆ. ಪಾರಂಪರ್ಯದಿಂದ ಬಂದ ವರ್ಣಾಶ್ರಮದಾಚಾರದ ಔಚಿತ್ಯವನ್ನು ಪ್ರಶ್ನಿಸಿದವರಲ್ಲಿ ಅವರೇ ಮೊದಲಿಗರು.

ಕಾಶಿಯಲ್ಲಿ ಯಕ್ಷ, ಗಂಧರ್ವ, ಕಿನ್ನರರಂತಹ ಅವೈದಿಕ ಜನರು ಬಹುಸಂಖ್ಯೆಯಲ್ಲಿದ್ದರು. ಅವರನ್ನು ಆರ್ಯರು ಬಹಳ ಕೀಳುದೃಷ್ಟಿಯಿಂದ ಕಂಡರು. ವೈದಿಕಾಚರಣೆಯ ಕಟ್ಟುಗಳನ್ನು ಕಿತ್ತೊಗೆದ ವಿಚಾರವಂತ ವ್ರಾತ್ಯರು ಕಾಶಿಯಲ್ಲಿಯೇ ನೆಲೆಯಾದರು. ಕಾಶಿಯಲ್ಲಿ ವಿಚಾರ ಮತ್ತು ಆಚಾರಗಳಿಗೆ ಸ್ವಾತಂತ್ರ್ಯವಿತ್ತು. ವರ್ಣಾಶ್ರಮ ಧರ್ಮದ ಕಟ್ಟುನಿಟ್ಟಿನಿಂದಾಗಿ ಸಮಾಜದಲ್ಲಿ ಸಾಮಾನ್ಯ ಮಾನವನು ಗೌರವದಿಂದ ಬಾಳುವುದು ದುಸ್ತರವೆನಿಸಿತ್ತು. ಸಂಕರಜಾತಿಗಳು, ಶೂದ್ರವರ್ಗದವರು ದಾಸ್ಯದಲ್ಲಿಯೇ ಬದುಕಬೇಕಾಗಿತ್ತು. ವೈದ್ಯವೃತ್ತಿಯನ್ನವಲಂಬಿಸಿದ ಅಂಬಷ್ಠರು, ಬಡಗಿತನದಿಂದ ಜೀವಿಸಬೇಕಾದ ಕಾರುಷರು, ರಥ ನಡೆಸಿ ಜೀವನ ಸಾಗಿಸಿದ ಸೂತರು ಇವರೆಲ್ಲ ಸಂಕರ ಸಂತಾನವೆನಿಸಿ ಉತ್ತಮರ ಸೇವೆಯಲ್ಲಿಯೇ ಇರಬೇಕಾಯಿತು. ಯಕ್ಷ ಮೊದಲಾದ ಜನಾಂಗದವರೂ ಆರ್ಯರಿಗಿಂತ ಯಾವ ಮಟ್ಟದಲ್ಲಿಯೂ ಕಡಿಮೆಯವರಾಗಿರಲಿಲ್ಲ. ವೈದ್ಯಕ, ಸಂಗೀತ, ಶಿಲ್ಪ ಮೊದಲಾದ ಲೋಕೋಪಯೋಗಿ ಶಾಸ್ತ್ರಕಲೆಗಳಲ್ಲಿ ಅವರು ನಿಪುಣರಾಗಿದ್ದರು. ಆದರೆ ಅವರು ವೃಷಭ, ನಾಗ ಮೊದಲಾದ ಪ್ರಾಣಿಗಳನ್ನು ಪೂಜಿಸುವುದಲ್ಲದೆ ಮರಗಳಲ್ಲಿ ಭೂತಗಳನ್ನು ಕಲ್ಪಿಸಿ ಅವುಗಳನ್ನು ಆರಾಧಿಸುತ್ತಿದ್ದರು. ಈ ಪ್ರಾಕೃತ ಕಾಶ್ಯ ಜನಾಂಗಗಳನ್ನು ಒಂದುಗೂಡಿಸಿ ಅವರಿಗೆ ಏಕೋದೇವನ ಉಪಾಸನೆಯನ್ನು ಕಲಿಸಲು ಶೈವ ಪಂಥ ಪ್ರಯತ್ನಿಸಿತು. ಇವರೆಲ್ಲ ಶಿವನ ಗಣದಲ್ಲಿ ಪರಿಗಣಿತರಾದರು. ಹಿಮಾಲಯದ ಕೈಲಾಸದಿಂದ, ಗಂಗೋತ್ರಿಯಿಂದ ಶಿವ-ಪಾರ್ವತಿಯರ ಪರಿವಾರದೊಡನೆ ಇವರೂ ಬಂದು ಗಂಗಾತೀರದಲ್ಲಿ ನೆಲಸಿದರು. ಶಿವನು ಕಾಶಿಯಲ್ಲಿ ಆನಂದವನವನ್ನು ಸ್ಥಾಪಿಸಿದನು. ಇಲ್ಲಿ ಪ್ರತಿಯೊಬ್ಬ ದುಃಖಿತ ಮಾನವನೂ ಬಂದು ಮಾನಸಿಕ ಶಾಂತಿಯನ್ನು ಪಡೆಯಬಹುದಾಗಿತ್ತು. ಪತಿತ ಪಾವನ ಶಿವನ ಈ ಆನಂದ ಕಾನನ ಕೈಲಾಸಕ್ಕೂ ಮಿಗಿಲೆನಿಸಿತ್ತು.

ತಂದೆ-ತಾಯಿಗಳಿಂದ, ಬಂಧು-ಮಿತ್ರರಿಂದ ಪರಿತ್ಯಕ್ತರೂ, ಪಾಪಾತ್ಮರೆನಿಸಿ ಸಾಮಾಜಿಕವಾಗಿ ಬಹಿಷ್ಕೃತರೂ, ಶ್ರುತಿ-ಸ್ಮೃತಿ ಸಂಸ್ಕಾರಹೀನರಾಗಿ ವ್ರಾತ್ಯರೆನಿಸಿದವರೂ ಶಿವನ ಈ ಆನಂದಕಾನನದಲ್ಲಿ ಬಂದು ನಿಶ್ಚಿಂತರಾಗಬಹು

---

[1] ಕೃಷ್ಣನು ಪರಮ ಶೈವ. ಶೈವರ ಬಗೆಗೆ ಅವನಲ್ಲಿ ವೈಷಮ್ಯವಿರಲೇ ಇಲ್ಲ. ಅವನೇ ವೈದಿಕ ಇಂದ್ರಪೂಜೆ, ಹಿಂಸಾಮಯ ಯಜ್ಞಗಳನ್ನು ವಿರೋಧಿಸಿ ಸಾತ್ವಿಕ ಪ್ರಕೃತಿ ಪೂಜೆಯನ್ನು ಪ್ರವರ್ತಿಸಿದವನು. ಭಾಗವತದಲ್ಲಿಯೇ ಇದರ ಉಲ್ಲೇಖವಿದೆ. ಕೃಷ್ಣನು ಕಾಶಿಯನ್ನು ಸುಟ್ಟ ಪ್ರಸಂಗಗಳೆಲ್ಲ ಪ್ರಕ್ಷಿಪ್ತವಾಗಿರಬೇಕು.

[2] ಸರಸ್ವತಿ-ದೃಷದ್ವತಿ ನದಿಗಳ ಮಧ್ಯಭಾಗ (ಹಸ್ತಿನಾಪುರದ ಪಶ್ಚಿಮೋತ್ತರ ಪ್ರದೇಶ) :

ಸರಸ್ವತೀ ದೃಷದ್ವತ್ಯೋರ್ದೇವನದ್ಯೋರ್ಯದಂತರಮ್ ।
ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥

—ಮ. ಸ್ಮೃ. (ಅ. ೨, ಶ್ಲೋ. ೧೭)

[3] ಕಾಶಿಯ ಹತ್ತಿರದ ಬೈರಾಟ ಮತ್ತು ಮಿರ್ಜಾಪುರದಲ್ಲಿ ನಡೆದ ಉತ್ಖನನದಲ್ಲಿ ಶಿಲಾಯುಗದ ಆಯುಧ ಮೊದಲಾದ ಅವಶೇಷಗಳು ಸಿಕ್ಕಿವೆ.

[4] ಛಾಂ. ಉ. (ಅಧ್ಯಾಯ ೧, ಖಂಡ ೪)

—ಕಾ. ಇ. (ಅ. ೨, ಪು. ೧೯)

ವಾಗಿತ್ತು.[1] ಕಾಶಿಯಲ್ಲಿ ಶಿವನನ್ನು ಆರಾಧಿಸಿ ಜನರು ಮನೋವಾಂಛಿತಫಲಗಳನ್ನು ಪಡೆಯುತ್ತಿದ್ದರು. ಯಕ್ಷರೊಡೆಯ ಪೂರ್ಣಭದ್ರನಿಗೆ ಬಹಳ ದಿನಗಳಿಂದ ಮಕ್ಕಳಾಗಿರಲಿಲ್ಲ. ಆಗ ಅವನು ಸಂಗೀತವಿದ್ಯೆಯಿಂದ ಮಹಾದೇವನನ್ನು ಆರಾಧಿಸಿ ಹರಿಕೇಶನೆಂಬ ಪುತ್ರನನ್ನು ಪಡೆದನು.[2] ನಾದಪ್ರಿಯ ಶಿವನನ್ನು ಹರಿಕೇಶನು ಆನಂದವನದಲ್ಲಿ ತಪಸ್ಸಿನಿಂದ ಒಲಿಸಿದ ಪ್ರಸಂಗ ಪುರಾಣೋಕ್ತವಾಗಿದೆ.

ಬೌದ್ಧಯುಗದಲ್ಲಿಯೂ ಕಾಶಿ ರಾಜಕೀಯವಾಗಿ, ಧಾರ್ಮಿಕವಾಗಿಯೂ ನಡೆದ ಕ್ರಾಂತಿಗಳ ಕೇಂದ್ರವೆನಿಸಿ ಇಡಿಯ ಭಾರತೀಯರನ್ನೇ ಆಕರ್ಷಿಸಿದ್ದಿತು. ವರುಣಾತೀರದ ಸಾರಂಗನಾಥಕ್ಷೇತ್ರದಲ್ಲಿ ಸಿದ್ಧಾರ್ಥನು ಬುದ್ಧನಾದನು. ಸೌಗತ ಅನೀಶ್ವರವಾದಕ್ಕೂ ಈ ಶೈವಕ್ಷೇತ್ರದ ಪ್ರಭಾವವನ್ನು ಅಳಿಸಿಹಾಕುವುದು ಸಾಧ್ಯವಾಗಲಿಲ್ಲ. ತಲೆ ಮತ್ತು ಹೆಗಲ ಮೇಲೆ ಶಿವಲಿಂಗವನ್ನು ಧರಿಸಿದ ವಾಕಾಟಕಭಾರಶಿವರಿಗೆ ಕಾಶಿ ಮೆಚ್ಚುಗೆಯದಾಗಿತ್ತು.[3] ಗಾಂಗೇಯ ಕಲಚುರಿಯ ಮಗ ಕರ್ಣನು (ಕ್ರಿ.ಶ. ೧೦೪೧-೧೦೭೨) ಕಾಶಿಯಲ್ಲಿ ಕರ್ಣಮೇರುವೆಂಬ ಏಳಂತಸ್ತಿನ ಶಿವಾಲಯವನ್ನು ನಿರ್ಮಿಸಿದ್ದನು.[4] ಅವನ ಶಾಸನಕಾಲದಲ್ಲಿ ಕಾಶಿಯು ಪಾಶುಪತಪಂಥದ ಪ್ರಧಾನತೀರ್ಥವೆನಿಸಿತ್ತು. ಕಲಚುರಿ ಯಶಃಕರ್ಣನನ್ನು (ಕ್ರಿ.ಶ. ೧೦೭೩-೧೧೨೫) ಸೋಲಿಸಿ ಗಾಹಡವಾಲ ವಂಶದ ಚಂದ್ರದೇವನು ಕಾಶಿಯ ಅಧಿಪತಿಯಾದನು.

ಗಾಹಡವಾಲರು ತಮ್ಮನ್ನು ಕಾಶಿಯ ಪ್ರಥಮ ರಾಜ ದಿವೋದಾಸನ ವಂಶಜರೆಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಆದರೆ ಅವರು ಅನಾರ್ಯ ಆದಿಮಜಾತಿಯವರೆಂದು ಇತಿಹಾಸಕಾರರು ಊಹಿಸಿದ್ದಾರೆ. 'ಗಹ್ವರ'ದ ಅಪಭ್ರಂಶವೇ 'ಗಾಹರ-ಗಾಹಡ'ವೆಂದು ಅವರ ವಾದ. ಗಹ್ವರ ಅಥವಾ ಗುಹೆಗಳಲ್ಲಿ ವಾಸವಾಗಿದ್ದ ಗಿರಿಶರೇ-ವನವಾಸಿಗಳೇ ಮುಂದೆ ವೀರತನದಿಂದ ರಾಜರಾದರೆಂದು ತಿಳಿಯಬೇಕಾಗಿದೆ.[5]

ಗಾಹಡವಾಲರು ಪರಮಶೈವರಾಗಿದ್ದರು. ಕಾಶಿಯೇ ಅವರ ರಾಜಧಾನಿಯಾಗಿತ್ತು. ದಾಕ್ಷಿಣಾತ್ಯ ಶೈವರಾಜ ಚೋಳರೊಡನೆ ಅವರ ಮಿತ್ರತ್ವವಿದ್ದ ಉಲ್ಲೇಖ ವಿಶಿಷ್ಟವಾಗಿದೆ.[6] ಗಾಹಡವಾಲರ ಕಾಲದಲ್ಲಿ ಕಾಶಿಯ ಕೇದಾರ ಮಠ ಪ್ರಸಿದ್ಧ ವಿದ್ಯಾಧಿಷ್ಠಾನವೆನಿಸಿತ್ತು.[7] ಗಾಹಡವಾಲ ರಾಜರಿಗಿಂತ ಪೂರ್ವದಲ್ಲಿ ಸ್ವಯಂಭು ಅವಿಮುಕ್ತೇಶ್ವರ ಲಿಂಗವು ಕಾಶಿಯಲ್ಲಿ ಪರಮಪೂಜ್ಯವೆನಿಸಿತ್ತು. ಅದು ಗಜನಿ ಮಹಮ್ಮದನ ದಾಳಿಯಲ್ಲಿ ಹಾಳಾಯಿತು. ಆ ಮೇಲೆ ಮತ್ತೆ ಗಾಹಡವಾಲ ರಾಜರೇ ವಿಶ್ವನಾಥ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಭವ್ಯ ದೇವಾಲಯವನ್ನು ಕಟ್ಟಿಸಿದರು.[8]

ಗುಪ್ತ ಸಮ್ರಾಟರ ಯುಗದಲ್ಲಿ ಕಾಶಿಯಲ್ಲಿ ಪ್ರಸಿದ್ಧವಾಗಿದ್ದ ಶಿವಾಲಯಗಳಿವು: (೧) ಹರಿಶ್ಚಂದ್ರ, (೨) ಆಮ್ರಾತಕೇಶ್ವರ, (೩) ಜ್ವಾಲೇಶ್ವರ, (೪) ಶ್ರೀಪರ್ವತ, (೫) ಮಹಾಲಯ, (೬) ಕೃಮೀಚಂಡೇಶ್ವರ, (೭) ಕೇದಾ

---

1 ಮಾತ್ರಾ ಪಿತ್ರಾ ಪರಿತ್ಯಕ್ತಾ ಯೇ ತ್ಯಕ್ತಾ ನಿಜಬಂಧುಭಿಃ ।
ಯೇಷಾಂ ಕ್ವಾಪಿ ಗತಿರ್ನಾಸ್ತಿ ತೇಷಾಂ ವಾರಾಣಸೀ ಗತಿಃ ॥
ಪಾಪರಾಶಿಭಿರಾಕ್ರಾಂತಾ ಯೇ ದಾರಿದ್ರ್ಯಪರಾಜಿತಾಃ ।
ಸಂಸಾರಭಯಭೀತಾ ಯೇ ಯೇ ಬದ್ಧಾಃ ಕರ್ಮಬಂಧನೈಃ ॥
ಶ್ರುತಿ-ಸ್ಮೃತಿವಿಹೀನಾ ಯೇ ಶೌಚಾಚಾರವಿವರ್ಜಿತಾಃ ।
ತೇಷಾಮಾನಂದದಂ ಚೈತತ್ ಶಂಭೋರಾನಂದಕಾನನಮ್ ॥

—ಸ್ಕಾಂ. ಪು. (ಕಾಶೀಖಂಡ, ಪೂರ್ವಾರ್ಧ ಉತ್ತರಭಾಗ, ಅಧ್ಯಾಯ ೩೨, ಶ್ಲೋ. ೭೫-೮೧)

2 ಆರಾಧ್ಯ ಶ್ರೀಮಹಾದೇವಂ ಗೀತಜ್ಞೋ ಗೀತವಿದ್ಯಯಾ ॥ ೪೩ ॥
ನಾದೇಶ್ವರಂ ಸಮಭ್ಯರ್ಚ್ಯ ಕೈಃ ಕೈರ್ನಾಪ್ತಂ ಸ್ವಚಿಂತಿತಮ್ ।
ತಸ್ಮಾತ್ ಕಾಶ್ಯಾಂ ಪ್ರಯತ್ನೇನ ಸೇವ್ಯೋ ನಾದೇಶ್ವರೋ ನೃಭಿಃ ॥ ೪೫ ॥

—ಅದೇ, (ಅಧ್ಯಾಯ ೩೨)

3 ಕಾ. ಇ. ಅಧ್ಯಾಯ ೭, ಪುಟ ೭೮

4 ಅದೇ, ಅಧ್ಯಾಯ ೧೧, ಪು. ೧೦೧

5 ಅದೇ, ಅಧ್ಯಾಯ ೧೩, ಪು. ೧೧೮

6 ಅದೇ, ಅಧ್ಯಾಯ ೧೩, ಪು. ೧೨೦ ಮತ್ತು ೧೨೫

7 ಅದೇ, ಅಧ್ಯಾಯ ೧೪, ಪು. ೧೪೩

8 ಅದನ್ನು ಮತ್ತೆ ಔರಂಗಜೇಬನು ಒಡೆದುಹಾಕಿದನು. ಅದರ ಭಗ್ನಾವಶೇಷ ಈಗ ಜ್ಞಾನವಾಪಿಯ ಮಸೀದಿಯ ಒಂದೆ ಇದೆ. ಅಲ್ಲಿಯೇ ಈಗಿರುವ ವಿಶ್ವನಾಥ ದೇವಾಲಯ ಮಹಾತಾಯಿ ಶಿವಭಕ್ತೆ ಅಹಲ್ಯಾಬಾಯಿ ಕಟ್ಟಿಸಿದುದು

ರೇಶ್ವರ, (೮) ಅವಿಮುಕ್ತೇಶ್ವರ. ಇವೆಲ್ಲ ಶಿವಾಲಯಗಳು ಸುಂದರ ಪುಷ್ಕರಣಿ ಮತ್ತು ಪುಷ್ಪವಾಟಿಕೆಗಳಿಂದ ಶೋಭಿಸಿದ್ದವು. ಈ ಕಾಶಿಪಟ್ಟಣವನ್ನು ಪಡೆಯಲು ಆರ್ಯ ಮತ್ತು ಅನಾರ್ಯ ರಾಜರು ಹೋರಾಡಿದ ಪ್ರಸಂಗಗಳು ಅನೇಕ. ಹೈಹಯರಾಜ ಭದ್ರಶ್ರೇಣ್ಯನು ದಿವೋದಾಸನನ್ನು ಸೋಲಿಸಿ ಕಾಶಿಯ ಜನಪದವನ್ನು ಆಕ್ರಮಿಸಿದಾಗ ರಾಕ್ಷಸ ಕ್ಷೇಮಕನು ಯುದ್ಧ ಮಾಡಿ ವಾರಾಣಸಿಯನ್ನು ಗೆದ್ದುಕೊಂಡನು. ಆಮೇಲೆ ದಿವೋದಾಸನ ಮಗ ಅಲರ್ಕನು ಕ್ಷೇಮಕನನ್ನು ಸೋಲಿಸಿ ಕಾಶಿಯನ್ನು ಪಡೆದುಕೊಂಡನು.[1] ಕೊನೆಗೆ ಆರ್ಯರು ತಪಃಪ್ರಧಾನವಾದ ಶೈವ ಸಂಸ್ಕೃತಿಯನ್ನು ಒಪ್ಪಿ ರುದ್ರನನ್ನು ಶಿವನೆಂದೇ ಭಾವಿಸಿ ಪೂಜಿಸಿದರು. ಹೀಗೆ ಕಾಶಿಯಲ್ಲಿಯೇ ಮೊದಲಿಗೆ ವೈದಿಕ–ಶೈವ ಸಂಸ್ಕೃತಿಗಳ ಸಂಗಮವಾಯಿತು.

ಯೋಗೀಶ್ವರ ಶಿವನಿಗೆ ಕಾಶಿಯೆಂದರೆ ಪಂಚಪ್ರಾಣ. ಕೈಲಾಸಕ್ಕಿಂತಲೂ ಕಾಶಿಯೇ ಅವನಿಗೆ ಮೆಚ್ಚುಗೆಯ ನಿವಾಸವೆನಿಸಿತ್ತು. ಪೌರಾಣಿಕ ಆಖ್ಯಾನವೊಂದರ ಪ್ರಕಾರ ದಿವೋದಾಸನು ಕಾಶಿಯನ್ನು ಆಕ್ರಮಿಸಿದನು. ಶಿವನು ಸಪರಿವಾರ ಮಂದರಪರ್ವತದತ್ತ ಹೋಗಬೇಕಾಯಿತು. ಕಾಶಿಯನ್ನು ಬಿಟ್ಟುದಕ್ಕೆ ಶಿವನಿಗೆ ಚಿಂತೆಯಾಯಿತು. ಆಗ ಗಣಾಧಿಪತಿ ಢುಂಢಿಯು ಭೇದೋಪಾಯದಿಂದ ದಿವೋದಾಸನನ್ನು ಕಾಶಿಯಿಂದ ಹೊರಹೊರಡುವಂತೆ ಮಾಡಿದನು. ಕಾಶಿಯಲ್ಲಿ ಶೈವಪಂಥ ಮತ್ತೆ ವಿಜೃಂಭಿಸಿತು. ಆಮೇಲೆ ಶಿವಪಾರ್ವತಿಯರು ಕಾಶಿಯನ್ನು ಬಿಡದೆ ನೆಲೆಯಾಗಿ ನಿಂತರು. ಅಂದಿನಿಂದ ಕಾಶಿ 'ಅವಿಮುಕ್ತಕ್ಷೇತ್ರ'ವೆನಿಸಿತು. ಜ್ಯೇಷ್ಠ ಮಾಸ, ಶುಕ್ಲ ಚತುರ್ದಶಿ, ಸೋಮವಾರ ಶಿವನು ಕಾಶಿಪುರಿಯಲ್ಲಿ ಪುನಃ ಪ್ರವೇಶ ಮಾಡಿದ ಸುದಿನ. ಅದರ ಸ್ಮರಣೆಯಲ್ಲಿ ಜ್ಯೇಷ್ಠತೀರ್ಥ ಪವಿತ್ರವೆನಿಸಿತು.

ಶಿವನ ಕಾಶಿಪುರಿಯ ಆನಂದವನದಲ್ಲಿ ಅನೇಕ ತಪಸ್ವಿಗಳು ಧ್ಯಾನಾಸಕ್ತರಾಗಿದ್ದರು. ಅವರೆಲ್ಲರಿಗೂ ಶಿವನ ಬರುವಿಕೆ ಸಂತಸ ತಂದಿತು. ಜ್ಯೇಷ್ಠೇಶ್ವರ ಗುಡಿಯ ಕೆಳಗಿನ ಗವಿಯಲ್ಲಿ ಜೈಗೀಷವ್ಯನೆಂಬ ಮುನಿ ಕಠೋರ ತಪದಲ್ಲಿದ್ದನು. ಶಿವನು ಕಾಶಿಯನ್ನು ಬಿಟ್ಟಂದಿನಿಂದ ನಿರ್ಜಲ–ನಿರಾಹಾರ ವ್ರತ ಕೈಕೊಂಡು ಉಗ್ರತಪವನ್ನಾಚರಿಸುತ್ತಿದ್ದನು. ಅವನ ಶರೀರ ಎಲುಬಿನ ಹಂದರವಾಗಿತ್ತು. ಚರ್ಮವೆಲ್ಲ ಸುಕ್ಕುಗಟ್ಟಿತ್ತು. ಅವನು ಶಿವನ ಬರುವಿಕೆಯನ್ನೇ ಕಾಯ್ದಿದ್ದನು. ಭಕ್ತಪ್ರೇಮಿ ಶಿವನು ಕಾಶಿಯನ್ನು ಪ್ರವೇಶಿಸಿದ ಕೂಡಲೇ ಮೊದಲು ಜೈಗೀಷವ್ಯನನ್ನು ನೋಡಬಯಸಿದನು. ತನ್ನ ಪ್ರಿಯ ಅಂಗರಕ್ಷಕ ನಂದಿಯನ್ನು ಕುರಿತು ಕೆಳಗೆ ಗವಿಯೊಳಗೆ ಹೋಗಿ ಶಿವನ ದರ್ಶನದ ದೃಢವ್ರತ ತಾಳಿದ ಜೈಗೀಷವ್ಯನನ್ನು ಕರೆತರುವಂತೆ ಹೇಳಿದನು.[2] ಅಮೃತಕಮಲವೊಂದನ್ನು ಅವನ ಕೈಗಿತ್ತು, ಅದರ ಸ್ಪರ್ಶದಿಂದ ಜೈಗೀಷವ್ಯನ ಶರೀರದಲ್ಲಿ ಚೈತನ್ಯ ತುಂಬುವುದೆಂದು ಹೇಳಿ ಕಳುಹಿದನು. ನಂದಿಕೇಶ್ವರನು ಪರಮಾತ್ಮನ ಹಸ್ತದಿಂದ ಆ ಲೀಲಾಕಮಲವನ್ನು ತೆಗೆದುಕೊಂಡು ಅಂಧಕಾರಮಯವಾಗಿದ್ದ ಆ ಗುಹೆಯೊಳಗೆ ಪ್ರವೇಶಿಸಿದನು. ಗುಹೆಯಲ್ಲಿದ್ದು ಶಿವಧ್ಯಾನದಲ್ಲಿ ಮನವನ್ನು ಲಯಗೊಳಿಸಿದ, ತಪದ ತೇಜದಿಂದ ಬೆಳಗಿದ ಅವನ ಮೈಗೆ ಲೀಲಾಕಮಲವನ್ನು ಸೋಂಕಿಸಿದನು. ಆ ಕೂಡಲೇ ಕಲ್ಲುಪೊರಟೆಯಲ್ಲಿ ಹುದುಗಿದ ಕಪ್ಪೆಯು ಬೇಸಿಗೆಯನ್ನು ಕಳೆದು ಮಳೆಗಾಲ ಬರುತ್ತಲೇ ಉಲ್ಲಾಸಗೊಳ್ಳುವಂತೆ ಲೀಲಾಕಮಲದ ಸ್ಪರ್ಶದಿಂದ ಜೈಗೀಷವ್ಯನ ಶರೀರ ಪುಷ್ಟಿಗೊಂಡಿತು.[3]

ಜೈಗೀಷವ್ಯ ಮುನಿ ಶಿವನ ದರ್ಶನ ಪಡೆದು ಆನಂದತುಂದಿಲನಾದ. 'ಶಿವನ ದರ್ಶನ ಮಾಡಿಯೇ ಆಹಾರ ಸ್ವೀಕರಿಸಬೇಕೆಂ'ಬ ಅವನ ನಿಯಮಕ್ಕೆ ಮೆಚ್ಚಿ ಪರಶಿವನು ಅವನಿಗೆ ಯೋಗಶಾಸ್ತ್ರವನ್ನು ಬೋಧಿಸಿದನು ; ಯೋಗಿಗಳ ಮಧ್ಯದಲ್ಲಿ ಅವನು ಯೋಗಾಚಾರ್ಯನಾಗಿರುವ ವರವನ್ನು ಕರುಣಿಸಿದನು. ನಂದಿ–ಭೃಂಗಿಗಳಂತೆ ಅವನು ಶಿವನ ಭಕ್ತೋತ್ತಮನೆನಿಸಿದನು.[4]

ಜೈಗೀಷವ್ಯ ಪರಮಶಿವಭಕ್ತ. ಶಿವನನ್ನಲ್ಲದೆ ಅನ್ಯವ ನೆನೆಯದಿರುವುದು ಅವನ ಕಡುಶೀಲ. ಶಿವನಲ್ಲದೆ

---

[1] ಕಾ.ಇ. ಅಧ್ಯಾಯ ೨, ಪು. ೧೯

[2] ಶೈಲಾದೇ ಪ್ರವಿಶಾಶು ತ್ವಂ ಗುಹಾಸ್ತತ್ರ ಮನೋಹರಾಃ ।
ತದಂತರೇಽಸ್ತಿ ಮೇ ಭಕ್ತೋ ಜೈಗೀಷವ್ಯಸ್ತಪೋಧನಃ ॥ ೨೨ ॥
ಮಹಾನಿಯಮವಾನ್ ಸಂದಿಂಸ್ತ್ವಗಸ್ಥಿಸ್ನಾಯುಶೇಷತಃ ।
ತಮಿಹಾನಯ ಮದ್ಭಕ್ತಂ ಮದ್ದರ್ಶನದೃಢವ್ರತಮ್ ॥ ೨೩ ॥
(ಸ್ಕಾಂ. ಪು. ಕಾ. ಖಂ. ಉ. ಪೂ. ಭಾಗ, ಅಧ್ಯಾಯ ೬೩)

[3] ಸ್ಕಾಂ.ಪು. (ಕಾ. ಖಂ. ಉ. ಪೂ. ಭಾಗ, ಅಧ್ಯಾಯ ೬೩, ಶ್ಲೋ. ೨೪–೨೮)

[4] ಅದೇ, (ಅ. ೬೩, ಶ್ಲೋಕ. ೭೩)

ಮತ್ತೊಂದ ಹೆಸರನೆತ್ತದೆ ಮೂಕನಾಗಿದ್ದನು; ಮತ್ತೊಂದ ಕೇಳದೆ ಕಿವುಡನಾಗಿದ್ದನು; ಮತ್ತೊಂದನಾಶ್ರಯಿಸದೆ ಹೆಳವನಾಗಿದ್ದನು; ಮತ್ತೊಂದ ನೋಡದಂತೆ ಕುರುಡನಾಗಿದ್ದನು. ಅವನಿಗೆ ಶಿವನೊಬ್ಬನೇ ಏಕೋದೇವ. ಅವನು ನಾನಾದೈವ ಕಲ್ಪನೆಯನ್ನು ಮೂಢತನವೆಂದೇ ಬಗೆದಿದ್ದನು.[1] ಅವನ ಹೆಸರಿನ ಶಿವಲಿಂಗ ಜ್ಯೇಷ್ಠಸ್ಥಾನದಲ್ಲಿ ಪೂಜೆಗೊಂಡಿತು. ದಂಡೀಶ್ವರ ಕ್ಷೇತ್ರದಲ್ಲಿ ಅವನ ಸ್ಮಾರಕ ಗುಡಿ ಪ್ರಸಿದ್ಧವಾಗಿದೆ.

ಜೈಗೀಷವ್ಯನಂತೆ ಅನೇಕ ಶೈವ ಮುನಿಗಳು ಕಾಶಿಯಲ್ಲಿ ಗುಹಾವಾಸಿಗಳಾಗಿದ್ದು ತಪಸ್ಸನ್ನು ಆಚರಿಸಿ ಮೃತ್ಯುವನ್ನೇ ಗೆದ್ದರು. ಕಪಿಲೇಶ್ವರ ದೇವಸ್ಥಾನದ ಕೆಳಗೆ 'ಶ್ರೀಮುಖಿ' ಎಂಬ ಗುಹೆಯಲ್ಲಿ ಪಾಶುಪತ ಅಘೋರನು ಸಿದ್ಧಿಪಡೆದನು.[2] ಕಲಶೇಶ್ವರ ಗುಡಿಯ ಉತ್ತರಕ್ಕೆ ಚಿತ್ರಗುಪ್ತನು ಸ್ಥಾಪಿಸಿದ ಗುಹೇಶ್ವರಲಿಂಗ ಪೂಜನೀಯವೆನಿಸಿದೆ.[3]

ಶೈವಯೋಗಿಯು ಗುಹಾವಾಸಿಯಾಗಿದ್ದು ಸಾಧನೆಯಿಂದ ಶಾರೀರಿಕ ಸವಕಳಿಯನ್ನು ತಡೆದು ಅಂತಃಶಕ್ತಿಯನ್ನು ಸಂಚಯಿಸಿ ಸಾವನ್ನೇ ಗೆದೆಯಬಲ್ಲ. ಇಂದಿನ ವಿಜ್ಞಾನಿಗಳೂ ಈ ಸತ್ಯವನ್ನು ಪ್ರತ್ಯಕ್ಷ ಪ್ರಮಾಣಿಸಿದ್ದಾರೆ. ರಶಿಯನ್ನರು ಭಾರತೀಯ ಹಠಯೋಗವನ್ನು ಆಕಾಶದ ಉಡ್ಡಯನದಲ್ಲಿ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಅಲ್ಲಿಯ ಇಂದಿನ ವಿಜ್ಞಾನಿಗಳಲ್ಲಿ ಕೆಲವರು ಗುಹಾವಾಸದ ಪರಿಣಾಮದ ಬಗೆಗೆ ಸಂಶೋಧನ ಹಾಗೂ ಪ್ರಯೋಗ ನಡೆಸಿರುವುದು ನಮ್ಮ ಕಣ್ಣನ್ನು ತೆರೆಯಿಸಿದಂತಿದೆ:

> "ಮಾಸ್ಕೊ ಸಮೀಪದ ತೆರ್ನೋಪೋಲ್ ಬಳಿ ಇರುವ ಓರ್ಝೊರ್ನಯ ಗುಹೆಯಲ್ಲಿ ಗುಹಾಶಾಸ್ತ್ರಜ್ಞರಾದ ಡಾ॥ ವ್ಲದಿಮಿರ್ ಗೋರ್ಬೆಂಕೊ ಮತ್ತು ಇಗೋರ್ ಕುರ್ನಾಲ್ ಅವರುಗಳು ೩೦ ಮೀಟರುಗಳ ಆಳದಲ್ಲಿ ಸುಮಾರು ಒಂದು ತಿಂಗಳು ಕಾಲವನ್ನು ಕಳೆದರು. ಇದರಿಂದ ಶ್ವಾಸೋಚ್ಛ್ವಾಸ ಅಂಗಗಳ ಕಾಹಿಲೆಗಳನ್ನು ಶ್ವಾಸನಾಳದ ಒಳಚರ್ಮದ ಊತ, ರಕ್ತ ಒತ್ತಡ ಮುಂತಾದ ಕಾಹಿಲೆಗಳನ್ನು ಗುಣಪಡಿಸಬಹುದೆಂದು ಕಂಡುಬಂದಿದೆ. ಸೋವಿಯತ್ ದೇಶದ ಉಪ್ಪಿನ ಗಣಿಗಳಲ್ಲಿ ಮತ್ತು ಕೆಲವು ಗುಹೆಗಳಲ್ಲಿ ಈ ರೀತಿಯ ಭೂಗತ ಆಸ್ಪತ್ರೆಗಳು ಕಾರ್ಯ ಮಾಡುತ್ತಿವೆ."[4]

ಗುಹಾವಾಸಿಗಳಾಗಿ ಕಾಷ್ಠಭಾವದ[5] ಸಿದ್ಧಿಯನ್ನು ಪಡೆದ ಕನ್ನಡ ನಾಡಿನ ಶಿವಯೋಗಿಗಳಲ್ಲಿ ಅನಿಮಿಷದೇವರು ಅಗ್ರಗಣ್ಯರು. ಬಳ್ಳಿಗಾವೆಯ ಬಿಲ್ವಬನದಲ್ಲಿ ಈಗಲೂ 'ಅನಿಮಿಷನ ಕೊಪ್ಪಲು' ಎಂಬ ಶಿವಯೋಗ ಸಮಾಧಿ ಜಾಗೃತವಾಗಿದೆ. ಅನಿಮಿಷಯ್ಯಗಳು ಜೈಗೀಷವ್ಯಮುನಿಯಂತೆ ನಂದಿ-ಲಿಂಗಗಳ ದರ್ಶನ ಪಡೆಯದೆ, ಅವಕ್ಕೆ ನಿವೇದಿಸದೆ ಏನನ್ನೂ ಸ್ವೀಕರಿಸದ ಕಠೋರಶೀಲದವರು.[6] ಬಸವಣ್ಣನವರ 'ಅತ್ತಲಿತ್ತ ಹೋಗದಂತೆ' ಎಂಬ ವಚನದಲ್ಲಿ ಜೈಗೀಷವ್ಯನ ಅನನ್ಯ ಶಿವೋಪಾಸನೆ ನೆನಪಿಗೆ ಬರುತ್ತದೆ.

ಹತ್ತು–ಹನ್ನೊಂದನೆಯ ಶತಮಾನಗಳಲ್ಲಿ ಯವನರ ಧಾಳಿಯಿಂದಲೋ, ದುಷ್ಕಾಳದಿಂದಲೋ ಪೀಡಿತರಾಗಿ ಉತ್ತರದ ನಿವಾಸಿಗಳು ದಕ್ಷಿಣಾಪಥದಲ್ಲಿಯೇ ಸುರಕ್ಷಿತ ಹಾಗೂ ಸಮೃದ್ಧವಾದ ಮಲೆಯನಾಡಿನಲ್ಲಿ ಬಂದು ನೆಲಸಿರಬಹುದೇ?

---

1 ನಾನ್ಯಂ ವೇದ್ಮಿ ಮಹಾದೇವ! ನಾನ್ಯಂ ಸ್ತೌಮಿ ಮಹೇಶ್ವರ ।
ನಾನ್ಯಂ ನಮಾಮಿ ಗೌರೀಶ! ನಾನ್ಯಾಖ್ಯಾಮಾದದೇ ಶಿವ ॥
ಮೂಕೋಽನ್ಯನಾಮಗ್ರಹಣೇ ಬಧಿರೋಽನ್ಯಕಥಾಶ್ರುತೌ ।
ಪಂಗುರನ್ಯಾಭಿಗಮನೇಽಸ್ಮ್ಯಂಧೋಽನ್ಯಪರಿವೀಕ್ಷಣೇ ॥

—ಅದೇ, ಶ್ಲೋಕ, ೬೨–೬೩

2 ರಾ. ವಿ. (೬–೧೫, ಪು. ೧೮೫)

3 ಕಾ. ಇ. ಅಧ್ಯಾಯ ೧೫, ಪು. ೧೮೨)

4 ಜ. ವಿ. ನವಂಬರ್ ೧೯೭೯, ಪು. ೧೩೫

5 "ಆ ಪರಬ್ರಹ್ಮದೊಳ್ ದೃಷ್ಟಿ ನಟ್ಟು ಸಕಲಾಚಾರಸಂಪತ್ತು ತನ್ನೊಳಡಂಗಿ ಭಿನ್ನವಿಲ್ಲದಿತರರೇತವರಿಯದೆ ಪೂರ್ಣಕುಂಭಾಂಭೋಧಿಯಂತೆ ನಿಸ್ತರಂಗ ಚಿದಂಭೀರಾಂಭೋಧಿಯೊಳ್ ಮುಳುಂಗಿ ಪರಮಕಾಷ್ಠಭಾವದೊಳೊಪ್ಪದಿಂ ನಿಃಪತಿಯಾಗಿ ಶಿವಯೋಗಸಮಾಧಿಯೊಳಿರ್ದ ಅನಿಮಿಷದೇವರಿರವಂ ಪೇಳಲನುಪಮಾಪ್ರಮಾಣಾಗೋಚರಮಾಗಿರ್ದುದದ್ಭುತಂ."

—ರಾ. ವಿ. (ಪ್ರ. ೫, ಪು. ೯೭)

6 "ತನಗೆ ಬೇಕಾದ ವಸ್ತುಗಳಂ ಶಿವಲಿಂಗಕ್ಕೆ ಕೊಟ್ಟಲ್ಲದೆ ಕೊಳಲಾಗದೆಂಬ ಶೀಲಮುಂಟಾಗಿಯುಂ ಪರಮ ಶೈವಭಕ್ತಂ."

—ಅದೇ, (ಪ್ರ. ೪, ಪು. ೮೧)

ಬಳ್ಳಿಗಾವೆ ದಕ್ಷಿಣದ ಕಾಶಿಯೆನಿಸಿದೆ. ಇಲ್ಲಿ ಕಾಶಿಯಲ್ಲಿರುವಂತೆ ವಿಶ್ವೇಶ್ವರ, ಮಹಾಕಾಲ, ಕೇದಾರೇಶ್ವರ ದೇವಸ್ಥಾನಗಳು ನಿರ್ಮಿತವಾಗಿದೆ. ಕಾಶಿನಿವಾಸಿಗಳಂತೆ ಬಳ್ಳಿಗಾವೆಯ ಜನರೂ ನಾಗ ಮತ್ತು ಯಕ್ಷ–ಯಕ್ಷಿಣಿಯರ ಪೂಜೆಯಲ್ಲಿ ನಂಬುಗೆ ತಾಳಿದವರು. ಬಳ್ಳಿಗಾವೆ–ಬನವಸೆ ನಾಡುಗಳು ನಾಗರಖಂಡದಲ್ಲಿದ್ದವು.

ಹಳೆಯ ನಂಬುಗೆಗಳನ್ನು ಸುಲಭವಾಗಿ ಬಿಡದಿರುವುದು ಕಾಶಿಜನಪದನಿವಾಸಿಗಳ ವೈಶಿಷ್ಟ್ಯ. ಶಿವಭಕ್ತ ಹರಿಕೇಶನು ಕಾಶಿಯ ಸುತ್ತಮುತ್ತ ಪ್ರದೇಶಗಳಲ್ಲಿ ಇಂದಿಗೂ ಪೂಜೆಗೊಳ್ಳುತ್ತಿರುವನು. ವಾರಣಾಸಿಯ ಹತ್ತಿರ ಭಭುದಾಹಳ್ಳಿಯಲ್ಲಿ ಹರಿಕೇಶನನ್ನು ಜನರು 'ಹರಸೂ ಬರಮ್' ಹೆಸರಿನಿಂದ ಪೂಜಿಸುತ್ತಿರುವರು. ಗ್ರಾಮೀಣರು ಹರಸೂನ ಹೆಸರಿನಲ್ಲಿ ಹರಕೆ ಹೊರುತ್ತಾರೆ[1], ಸಂತಾನ ಪಡೆಯುತ್ತಾರೆ. ಹರಸೂ ಪೂಜಾರಿಗಳ ಮೈಮೇಲೆ ಬಂದು ಭೂತ–ಭವಿಷತ್ತುಗಳನ್ನು ನುಡಿಯುತ್ತಾನೆ; ದೆವ್ವ ಬಿಡಿಸುತ್ತಾನೆ. ಕಾಶಿ ಜನಪದಗಳಲ್ಲಿ ಶಿವಭಕ್ತ ಹರಿಕೇಶನ ಸ್ಮರಣೆ 'ಹರಸೂ ಬರಮ್' ಮತ್ತು 'ಬೀರ'ದ ರೂಪದಲ್ಲಿ ಅಚ್ಚಳಿಯದೆ ಉಳಿದಿದೆ.[2] ಕನ್ನಡ ಜಾನಪದ ಜೀವನದಲ್ಲಿಯೂ 'ಬರಮಪ್ಪ–ಬೀರಪ್ಪ' ದೇವತೆಗಳು ಮನೆಮಾತಾಗಿವೆ. ಪ್ರಾಚೀನಕಾಲದಲ್ಲಿ ಕಾಶಿಯಲ್ಲಿ ಅಗ್ನಿಪಾತದ ಕಠೋರವ್ರತ ಪ್ರಸಿದ್ಧವಾಗಿತ್ತು. ಅದರ ಸಂಕೇತಗಳು ಬಳ್ಳಿಗಾವಿಯ ಶಿಲ್ಪಗಳಲ್ಲಿ ಮೂರ್ತಿಮತ್ತಾಗಿರುವುದನ್ನು ಕಾಣುತ್ತೇವೆ. ಹಾಗೆಯೇ ಗುಹಾವಾಸಿ ತಾಪಸರ ಆಚರಣೆಯೂ ಕನ್ನಡನಾಡಿನಲ್ಲಿ ಕಾಶಿಯಿಂದ ಬಂದಿರಬಹುದೇ ?[3]

ಭಾರಶಿವರ ಅನಂತರ ಸ್ಥಾವರದ ಪೂಜೆಯನ್ನು ತೊರೆದು ಮುಖ, ಹಣೆ. ಶಿರಸ್ಸು, ಕುತ್ತಿಗೆ. ಎದೆ, ತೋಳುಗಳಲ್ಲಿ ಕಿರು ಶಿವಲಿಂಗವನ್ನು ಧರಿಸಿದ ಜಂಗಮರು ಕಾಶಿಯಲ್ಲಿ ಬಹಳ ಮನ್ನಣೆ ಪಡೆದಿದ್ದರು. ಶ್ರೀಶೈಲದಿಂದ ಬಂದು ಕಾಶಿಯ ಜಂಗಮವಾಟಿಕೆಯಲ್ಲಿ ನೆಲಸಿದ ವೃಷಭಯೋಗಿಯ ಗುರುಪರಂಪರೆ ಭವ್ಯ ಇತಿಹಾಸ ಹೊಂದಿದೆ. ಕಾಶಿಯಲ್ಲಿ ಶ್ರೀಶೈಲ ಶಿವಾಲಯವಿದ್ದುದು ಗಮನೀಯ.

ಕನ್ನಡ ದಾನಶಾಸನಗಳ ಕೊನೆಯಲ್ಲಿ ಪವಿತ್ರಕ್ಷೇತ್ರ ಕಾಶಿಯ ಉಲ್ಲೇಖವಿದ್ದೇ ಇರುತ್ತದೆ. ಹನ್ನೆರಡನೆಯ ಶತಮಾನದ ವಚನಸಾಹಿತ್ಯದಲ್ಲಿಯೂ ಕಾಶಿಯ ಬಗೆಗೆ ಉಲ್ಲೇಖಗಳಿವೆ. ಪ್ರಭುದೇವರು ಶಿವಶರಣ ನಿಮ್ಮದೇ ಅವಿಮುಕ್ತ ಕ್ಷೇತ್ರವೆನ್ನುತ್ತಾರೆ.[4] ಅನೇಕರು ವಿಶ್ವನಾಥಲಿಂಗದ ಮುದ್ರಿಕೆಯಲ್ಲಿ ವಚನರಚನೆ ಮಾಡಿರುವರು. ತುರುಗಾಹಿ ರಾಮಣ್ಣನ ಆರಾಧ್ಯದೈವ 'ಗೋಪತಿನಾಥವಿಶ್ವೇಶ್ವರಲಿಂಗ.' ಉರಿಲಿಂಗಪೆದ್ದಿಗಳ ಮುದ್ರಿಕೆ 'ವಿಶ್ವೇಶ್ವರಾ' ಎಂಬುದು. ಮಹಾಕವಿ ಕೆರೆಯ ಪದ್ಮರಸ (ಕ್ರಿ.ಶ. ೧೧೬೫) ಕಾಶಿ ವಿಶ್ವೇಶ್ವರನ ಪರಮ ಭಕ್ತ. ಅವನು ತನ್ನ ಜೀವಿತದ ಕೊನೆಯಲ್ಲಿ ಕಾಶಿಗೆ ಬಂದು ವಿಶ್ವೇಶ್ವರನ ಕಾರುಣ್ಯವನ್ನು ಪಡೆದ ಪ್ರಸಂಗ ಪುರಾಣೋಕ್ತವಾಗಿದೆ. ಇಲ್ಲಿ ವಿಶ್ವಪತಿಯ ನಿಜನಿವಾಸವಾದ ಕಾಶಿಯ ವರ್ಣನೆ ಮನೋಜ್ಞವಾಗಿದೆ :[5]

ಆ ನದೀತಟದೊಳ್ ಜಪಂಗೆಯ್ವ ಪರಶಿವ-
ಧ್ಯಾನಮಂ ಮಾಳ್ಪ ಶಿವಪೂಜೆಯಂ ನೆಗಳ್ವ ವಿಮ-
ಲಾನುಭವದೊಳ್ ಸಲ್ವ ವೇದಮಂ ಪಠಿಪ ವಿವಿಧಾಧ್ವರಂಗಳನೆಸಗುವಾ ।
ನಾನಾವಿಧೋರುಯೋಗಾಭ್ಯಾಸಮಂ ರಚಿಪ
ನೂನ ಮನುಸಂಸಿದ್ಧಿಯಂ ಮಾಡಿಕೊಂಬ ಸು
ಜ್ಞಾನಿಗಳ್ ಮೌನಿಗಳ್ ತಾಪಸರ್ ಮೆರೆದರತಿಶಾಂತಿರಸಮಂ ಸೂಸುತೆ ॥

---

[1] ಬಿಹಾರ–ಉತ್ತರಪ್ರದೇಶಗಳ ಗಡಿನಾಡಿನಲ್ಲಿ ಗಂಗೆ–ಸರಯೂ ನದಿಗಳ ಸಂಗಮ. ಅಲ್ಲಿ ಗಂಗಾನದಿಯ ನಡುಗಡ್ಡೆಯಲ್ಲಿಯ ಗ್ರಾಮ ಸಿತಾಬದಿಯರಾ. ಅದು ಶ್ರೀ ಜಯಪ್ರಕಾಶರ ಜನ್ಮಭೂಮಿ. ಅವರ ತಂದೆ ಹರಸೂಪ್ರಸಾವ ಹರಿಕೇಶನ ಕೃಪೆಯಿಂದ ಹುಟ್ಟಿದ್ದರಂತೆ.

—ಜ. ಪ್ರ. ಏಕ್ ಜೀವನೀ

[2] ಕಾ. ಇ. ಅಧ್ಯಾಯ ೩, ಪು. ೩೪

[3] ರಾಷ್ಟ್ರಕೂಟ ಮತ್ತು ಚಾಲುಕ್ಯರಾಜರು ಉತ್ತರಾಪಥದಲ್ಲಿಯ ಬಿಹಾರ, ಕಾಶಿ, ಬಂಗಾಳ ಪ್ರಾಂತಗಳಲ್ಲಿ ವಿಜೇತರಾಗಿ ಕನ್ನಡ ರಾಜವಂಶಗಳನ್ನು ಸ್ಥಾಪಿಸಿದ್ದರು; ಅವರು ತಮ್ಮೊಡನೆ ಅಲ್ಲಿಯ ವಿದ್ವಾಂಸರನ್ನೂ ತಾಪಸರನ್ನೂ ಕರೆತಂದಿದ್ದರೆಂಬುದು ಐತಿಹಾಸಿಕವಾಗಿದೆ.

[4] ಅ. ವ. ಚ. ಅಧಿಕ ವಚನಗಳು, ವ. ೭೮೫

[5] ಪ. ರಾ. ಪು. ಸಂಧಿ ೧೩, ಪದ್ಯ ೩೨

ಹನ್ನೆರಡನೆಯ ಶತಮಾನದಲ್ಲಿ ಕಾಶಿಯಲ್ಲಿ ಗುಹಾವಾಸಿ ಯೋಗಿಗಳು ಇದ್ದರೆಂಬುದನ್ನು ಈ ಪದ್ಯ ಸ್ಪಷ್ಟಪಡಿಸುತ್ತದೆ.

ಹದಿನೈದನೆಯ ಶತಮಾನದ ಶಿವಯೋಗಿ ತೋಂಟದ ಶ್ರೀ ಸಿದ್ಧಲಿಂಗಯತಿಗಳ ಬಳಿವಿಡಿದು ಬಂದ ಮುರುಘಾ ಸಮಯದ ವಿರಕ್ತ ಮಠಗಳು ವಿಶೇಷವಾಗಿ ಗವಿಮಠಗಳಾಗಿರುವುದೊಂದು ಗಮನೀಯವಾದ ಅಂಶ. ಈ ಬಗೆಯಲ್ಲಿ ಹೆಚ್ಚಿನ ಸಂಶೋಧನೆಗೆ ಈ ಲೇಖನ ದಿಶಾಸೂಚಿಯಷ್ಟೆ.

## ಸಂದರ್ಭ ಸಾಹಿತ್ಯ


ಅ. ಕೋ. ಅಮರಕೋಶ : ಸಂ. ಲೂಯಿ ರೈಸ್ ಮತ್ತು ಎನ್. ಬಾಲಸುಬ್ರಹ್ಮಣ್ಯ, ಪ್ರಸಾರಾಂಗ, ಮೈ. ವಿ. ನಿ., ಮೈಸೂರು, ಮೊದಲನೆಯ ಮುದ್ರಣ, ೧೯೬೦.

ಅ. ವ. ಚ. ಅಲ್ಲಮ ವಚನ ಚಂದ್ರಿಕೆ: ಸಂ. ಎಲ್. ಬಸವರಾಜು, ಎಂ. ಎ. ; ನಳಿನೀಶಂಕರ ಪ್ರಕಾಶನ, ಮೈಸೂರು, ಪ್ರ. ಮು. ೧೯೬೦.

ಕಾ. ಇ. ಕಾಶೀ ಕಾ ಇತಿಹಾಸ್ (ಹಿಂದಿ): ಡಾ. ಮೋತಿಚಂದ್, ಡಾಯರೆಕ್ಟರ್ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ, ಮುಂಬಯಿ, ಪ್ರಕಾಶಕರು ; ಹಿಂದೀ ಗ್ರಂಥರತ್ನಾಕರ, ಮುಂಬಯಿ, ಪ್ರ. ಸಂ. ೧೯೬೨.

ಛಾ. ಉ. ಛಾಂದೋಗ್ಯೋಪನಿಷತ್ (ಶಾಂಕರಭಾಷ್ಯಸಹಿತ) : ಗೀತಾ ಪ್ರೆಸ್, ಗೋರಖಪುರ, ಚ. ಸಂ., ಸಂವತ್ ೨೦೧೯

ಜ. ಪ್ರ. ಜಯಪ್ರಕಾಶ : ಮೂಲ ಲೇಖಕರು : ಎಲನ್ ಮತ್ತು ವೆಂಡಿ ಸ್ಕಾರ್ಫ್ ; ಅನು : ಕೇಶವಾನಂದ, ರಾಧಾಕೃಷ್ಣ ಪ್ರಕಾಶನ, ಹೊಸದಿಲ್ಲಿ, ಪ್ರಥಮ ಹಿಂದೀ.ಸಂಸ್ಕರಣ, ಹೊಸದಿಲ್ಲಿ, ೧೯೬೮.

ಜ. ವಿ. ಜನಪ್ರಿಯ ವಿಜ್ಞಾನ (ಮಾಸಪತ್ರಿಕೆ) : ಪ್ರಸಾರಾಂಗ. ಬೆಂ. ವಿ. ವಿ., ಬೆಂಗಳೂರು.

ಪ. ರಾ. ಪು. ಪದ್ಮರಾಜ ಪುರಾಣ : ಸಂ : ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿ.ಎಚ್.ಡಿ ; ಪ್ರಕಾಶಕರು–ಮುರುಘಾಮಠ, ಧಾರವಾಡ, ೧೯೫೮.

ಮ. ಸ್ಮೃ. ಮನುಸ್ಮೃತಿ : ಸಂ : ವಾಸುದೇವ ಶರ್ಮಾ ಪಣಶೀಕರ, ನಿರ್ಣಯಸಾಗರ ಮುದ್ರಣ, ಮುಂಬಯಿ. ನವಮಾವೃತ್ತಿ, ೧೯೪೩.

ರಾ. ವಿ. ರಾಜೇಂದ್ರವಿಜಯ (ಹಮ್ಮೀರ ಕಾವ್ಯ) : ಮುರಿಗೆ ದೇಶಿಕೇಂದ್ರ ; ಸಂ : ಎಂ. ಎಸ್. ಸುಂಕಾಪುರ, ಸುಕುಮಾರ ಗ್ರಂಥಮಾಲೆ. ಶಿವಯೋಗಮಂದಿರ ಸಂಸ್ಥೆ, ಪ್ರಥಮ ಮುದ್ರಣ, ೧೯೫೭.

ಸ್ಕಾ. ಪು. ಸ್ಕಾಂದಪುರಾಣ (ಕಾಶೀಖಂಡ) : ಜಯಚಾಮರಾಜೇಂದ್ರಗ್ರಂಥರತ್ನಮಾಲಾ. ಅರಮನೆ ಪ್ರಕಾಶನ, ಮೈಸೂರು.


---

ಜ್ಞಾನದಲರಿದಡೇನಯ್ಯ, ಕ್ರಿಯೆಯನ್ನಾಚರಿಸದನ್ನಕ್ಕ ?
ನೆನೆದ ಮಾತ್ರದಲ್ಲಿ ಅಹುದೆ, ಕಾರ್ಯದಲ್ಲಲ್ಲದೆ ?
ಕುರುಡ ಕಾಣ ಪಥವ, ಹೆಳವ ನಡೆಯಲರಿಯ,
ಒಂದಿಲ್ಲದಿರ್ದಡೊಂದಾಗದು, ಜ್ಞಾನವಿಲ್ಲದಿರ್ದ ಕ್ರೀ ಜಡ
ಕ್ರೀಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು ಇದು ಕಾರಣ
ಸಿದ್ಧಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು

ಅಮುಗಿದೇವಯ್ಯ

# ಅನುಭಾವವೇ ಅಲ್ಲಮ

ಪ್ರೊ. ಎಸ್. ಅನಂತನಾರಾಯಣ

ಅಲ್ಲಮ ಪ್ರಭುದೇವ ಒಮ್ಮೆ ಪಯಣದಲ್ಲಿ ತೊಡಗಿದ್ದಾಗ ನಡೆದ ಘಟನೆಗಳಲ್ಲಿ ಬಹು ಮುಖ್ಯವಾದುದು ಗೋರಕ್ಷನೊಂದಿಗೆ ನಡೆದ ಪರೀಕ್ಷಣ. ಶ್ರೀಶೈಲ ಕ್ಷೇತ್ರದ ಬಳಿಗೆ ಅಲ್ಲಮ ಬಂದಾಗ ಅಲ್ಲಿ ಸಿದ್ಧರೂ ಸಾಧಕರೂ ಎದುರಾದರು. ಅಂತಹ ಸಾಧಕರಲ್ಲಿ ಗೋರಕ್ಷ ಪ್ರಚಂಡ ಯೋಗಶಕ್ತಿಯಿಂದ ಅನೇಕಾನೇಕ ಸಿದ್ಧಿಗಳನ್ನು ಪಡೆದಿದ್ದು ಪ್ರಖ್ಯಾತನಾಗಿದ್ದ. ಆತನ ಅಹಂಕಾರ ದೇಹದ ಮಮಕಾರದಲ್ಲಿ ಮೂರ್ತಿವೆತ್ತಿತ್ತು. ಕಾಯವೇ ಸರ್ವಸ್ವವೂ ಎಂದು ನಂಬಿದ ಆತ, ಸಾಧನೆಯ ಫಲವಾಗಿ ದೇಹವನ್ನು ವಜ್ರಕ್ಕಿಂತಲೂ ಗಟ್ಟಿಗಡುಸಾಗಿಸಿಕೊಂಡಿದ್ದ. ತನ್ನ ದೇಹವೇ ಎಲ್ಲವೂ ಎಂದೇ ನಂಬಿದ್ದ ಗೋರಕ್ಷ ಆ ದೇಹದ ಪೋಷಣೆಗೇ ತನ್ನ ಸಿದ್ಧಿಗಳನ್ನು ಪರಿಮಿತಗೊಳಿಸಿಕೊಂಡು—ಈ ನಶ್ವರ ದೇಹವನ್ನು ತಾನು ಶಾಶ್ವತಗೊಳಿಸಿಕೊಂಡಿದ್ದೇನೆ ಎಂಬ ಭ್ರಮೆಯಲ್ಲಿದ್ದು, ಆತ್ಮದ ಅರಿವು ಕೂಡ ಇಲ್ಲದ ಅಂಧಕಾರದಲ್ಲಿದ್ದ. ಇಂತಹ ಗೋರಕ್ಷನಿಗೆ ಅಲ್ಲಮನಂತಹ ಜಂಗಮ—ಬಡಕಲು ದೇಹದ ಸನ್ಯಾಸಿಯ ಬಗ್ಗೆ ಗೌರವವಾದರೂ ಎಲ್ಲಿ ! ಅಲ್ಲಮನನ್ನು ಕಂಡ ಗೋರಕ್ಷ ಪ್ರಾಯಶಃ ಮೊದಲು ತಿರಸ್ಕಾರದಿಂದ ಅನಂತರ ಈ ಜಂಗಮನ ದಿಟ್ಟ ನಿಲುವಿಗೆ ಬೆರಗಾಗಿ ಸ್ವಲ್ಪಮಟ್ಟಿನ ಗೌರವದಿಂದ ಅಲ್ಲಮನನ್ನು ಮಾತನಾಡಿಸಿರಬೇಕು. ಕೊಳಚೆ, ಎಲುವು ಮಾಂಸಗಳ ದೇಹದ ಬಗ್ಗೆ ಅಷ್ಟೊಂದು ವ್ಯಾಮೋಹವಿದ್ದ ಗೋರಕ್ಷನನ್ನು ಆತ್ಮಸಾಕ್ಷಾತ್ಕಾರದ ಹಾದಿಗೆ ತರುವಲ್ಲಿ ಅಲ್ಲಮ ತೋರಿದ ಆಸಕ್ತಿಯ ಜತೆಗೆ ಈ ಘಟನೆ, ಇದ್ದರೂ ಇಲ್ಲದಂತಿದ್ದ ಅಲ್ಲಮನ ಅನುಭಾವದ ವ್ಯಕ್ತಿತ್ವದ ಸಾಕ್ಷಿ. ತನ್ನ ದೇಹಕ್ಕೇನೂ ಗಾಸಿಯಾಗದೆಂದು ಹೇಳಿ ಗೋರಕ್ಷ ಅಲ್ಲಮನ ಕೈಗೆ ಕತ್ತಿ ಕೊಟ್ಟು ಹೊಡೆಯಲು ಹೇಳಿದ. ಕತ್ತಿ ಮೈಮೇಲೆ ಬಿದ್ದಾಗ ಖಣಲ್ ಖಣಲ್ ಎಂದು ಶಬ್ದ ಮಾಡಿಕೊಂಡು ಹಿಂದಕ್ಕೆ ಪುಟಿಯುತ್ತಿತ್ತು. ತನ್ನ ದೇಹ ಎಲ್ಲ ಗಾಸಿಗಳನ್ನೂ ಮೀರಿದೆ—ಮೃತ್ಯುವನ್ನು ದಾಟಿದೆಯೆಂದು ಗೋರಕ್ಷ ಬಿಗಿದ. ಆದರೆ ಇದು ಕೇವಲ ಕ್ಷುದ್ರಸಿದ್ಧಿಯೆಂದು ಅವನಿಗೆ ತೋರಿಕೊಡಲು ಅಲ್ಲಮ—ತನ್ನ ಮೇಲೆ ಕತ್ತಿ ಬೀಸುವಂತೆ ಗೋರಕ್ಷನಿಗೆ ಹೇಳಿದ. ಜಂಗಮನನ್ನು ಕೊಲ್ಲಲು ಹಿಂದೆಗೆದ ಗೋರಕ್ಷ. ಅವನಲ್ಲಿ ಆತ್ಮದ ಬೆಳಕಿನ ಕುಡಿ ಇತ್ತೆಂಬುದಕ್ಕೆ ಇದೊಂದು ಸಾಕ್ಷಿ. ಆಗ ಅಲ್ಲಮನ ಬಲವಂತಕ್ಕೆ ಗೋರಕ್ಷ ಕತ್ತಿಯನ್ನು ಬೀಸಿದಾಗ, ಕತ್ತಿ ದೇಹವನ್ನು ತೂರಿಕೊಂಡು ಈಚೆಗೆ ಆಚೆಗೆ ಬಂತು. ಅಲ್ಲಮ ಅಂತೆಯೇ ನಿಂತೇ ಇದ್ದ. ಶೂನ್ಯದಲ್ಲಿ ಕತ್ತಿ ತಾರಾಡಿದಂತಿತ್ತು—ಬಯಲಲ್ಲಿ ಬಾಳನ್ನು ಆಡಿಸಿ ಬಳಲಿದ ಗೋರಕ್ಷನಿಗೆ ಕಾಯದ ವ್ಯಾಮೋಹ ತಪ್ಪಿಸಿದ ಅಲ್ಲಮ. ಇಲ್ಲಿ ಬಹು ಮುಖ್ಯವಾಗಿ ಅರಿಯುವುದು ಅಲ್ಲಮನ ಅನುಭಾವ—ದೇಹವು ಇದ್ದರೂ ಇಲ್ಲದಂತೆ-ನೇತಿ-ನೇತಿ ಅದು ಅಲ್ಲ, ಅಲ್ಲವೆಂದೇ ಅಲ್ಲಮನಾದ ಈ ವ್ಯಕ್ತಿತ್ವ ತನುಕರಗಿ ಶಿವನಲ್ಲಿ ಬೆರೆತಾಗ ಇದ್ದರೂ ಇಲ್ಲದಂತೆಯೇ ಅಲ್ಲವೇ ? ಕಾಯದ ಕಟ್ಟಳೆಗೆ ಸಿಲುಕಿದ ವ್ಯಕ್ತಿಗೆ ಜಡಜಗತ್ತಿಗೆ ಬಂದಿಯಾಗಿ ಸಿಲುಕಿಕೊಂಡ ಬಗೆ ಇರುತ್ತದೆ. ಆದರೆ ಕಾಯದ ಕಟ್ಟಳೆಯನ್ನು ಮೀರಿದ ವ್ಯಕ್ತಿಗೆ-ದೇಹವು ಇದ್ದರೂ ಇಲ್ಲದಂತೆ ಆಗುವ ವ್ಯಕ್ತಿಗೆ ಕಾಯದ ಸಂಕೋಲೆಯೆಲ್ಲಿ! ಹಾಗೆ ನೋಡಿದಲ್ಲಿ ಕಾಯವೇ ಕಾಲದ ಮಾಪಕವಾಗುತ್ತದೆ—ದಿನಗಳೆದಂತೆ ಕಾಲ ಉರುಳಿತೆಂದು ತೋರುವುದೇ ಕಾಯ. ಈ ಕಾಯದ ಕಟ್ಟಳೆಯನ್ನು ಮೀರಿದವನು ಕಾಲದ ಕಟ್ಟಳೆಯನ್ನು ಮೀರುತ್ತಾನೆ. ಆಗ ಕಾಲದ ಕಟ್ಟು ಕಳಚಿ ಕಾಲಾಂತಕನಾದ ಶಿವನಲ್ಲಿ ಒಂದಾದ ಅನುಭಾವಿಯಾಗುತ್ತಾನೆ. ಇಂತಹ ಅನುಭಾವಿಗಳ ಬಗ್ಗೆಯೇ ಅಲ್ಲಮ ಒಂದು ಕಡೆಯಲ್ಲಿ ಹೇಳಿರುವುದು ಗಮನಾರ್ಹ—

ಅಲ್ಲಮನಿಗಾಗಿ ಬಸವಣ್ಣ ಆರೋಗಣೆಯನ್ನು ಸಿದ್ಧಪಡಿಸಿ ಒತ್ತಾಯಿಸಿದಾಗ ಅಲ್ಲಮ ನುಡಿದ ಮಾತು ಈ ವಚನ.

> ಕಾಯದಲ್ಲಿ ಕಾಯ ಸವೆದು, ಪ್ರಾಣದಲ್ಲಿ ಪ್ರಾಣ ಸವೆದು
> ನಿಶ್ಚಿಂತವಾದ ಬಳಿಕ ಹಸಿವು ತೃಷೆಗಳೆಂಬುವು

ಅಳಿದು ಹೋದುವು ಕೇಳಾ ; ಉಂಡೆವೆಂಬ ಬಯಕೆಯೂ ಇಲ್ಲ
ಒಲ್ಲೆನೆಂಬ ವೈರಾಗ್ಯವೂ ಇಲ್ಲ. ಇದು ಸ್ವಭಾವ ತೃಪ್ತಿಯೊಳಡಗಿತ್ತು !

ಇಲ್ಲಿನ ಮಾತುಗಳನ್ನು ಗಮನಿಸಿದಾಗ ಬೇಕೆಂಬುದೂ ಇಲ್ಲ, ಬೇಡವೆಂಬುದೂ ಇಲ್ಲದ ತೃಪ್ತಿಯ ಸ್ಥಿತಿ ಬಂದುದು ಆತ್ಮಕ್ಕೆ ಆತ್ಮ-ಲಿಂಗಾಂಗ ಸಾಮರಸ್ಯದಲ್ಲಿ ಬೆರತಾಗ ಎಂಬುದು ಸ್ಪಷ್ಟವೆನಿಸುತ್ತದೆ. ಇಂತಹ ಸ್ಥಿತಿಯನ್ನೇ ಅನುಭಾವ ವೆನ್ನುವುದು. ತನುವಿನಲ್ಲಿ ಆಸಕ್ತಿಯಿರುವವರೆಗೆ ಹಸಿವೆ, ತೃಷೆ ಮುಂತಾದುವು—ಅವುಗಳನ್ನು ಪೂರೈಸುವ ಚಿಂತೆ. ಇದರಿಂದಾಗಿ ತನುವಿನಲ್ಲಿ ಮನವಿಟ್ಟಾಗ ತಾನು, ತಾನು ಎಂಬುದೇ ನಾಡಿ ನಾಡಿಯಲ್ಲೂ ಮಿಡಿಯುವ ತಾನವಾಗುತ್ತದೆ. ಆದರೆ ತನುವಿನ ಮೋಹ ಕಳೆದಾಗ—ಕಾಯದಲ್ಲಿ ಕಾಯವೇ ಸವೆದಾಗ, ಪ್ರಾಣದಲ್ಲಿ ಪ್ರಾಣ ಬೆರತಾಗ 'ತಾನುತನ' ಹೋಗುತ್ತದೆ. ಆಗ—'ನಾ' 'ನಾ' ಎಂಬುದು ಅಳಿದು, 'ನಾನಾ' ಎಂಬುದೂ ಅಳಿಯುತ್ತದೆ. ಆಗ ಎಲ್ಲವೂ ಒಂದೇ ಆಗಿ—ಅನುಭಾವದ ಪಾರಮ್ಯ ತೋರಿಕೊಳ್ಳುತ್ತದೆ. ಅಂತಹ ಸ್ಥಿತಿಯಲ್ಲಿ ಉಳಿದವರು ಮಾಡುವಂತಹ ಪೂಜೆ ಕೂಡ ಅನಗತ್ಯವಾಗುತ್ತದೆ.

ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣಿ
ಚಂದ್ರ ಸೂರ್ಯರಿಬ್ಬರು ಪುಷ್ಪ, ಬ್ರಹ್ಮ ಧೂಪ
ವಿಷ್ಣು ದೀಪ, ರುದ್ರನೋಗರ ; ಸುಯಿಧಾನ ನೋಡಾ
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ.

ಸಮಸ್ತ ಚರಾಚರ ವಸ್ತುಗಳ ಎಲ್ಲ ಕ್ರಿಯೆಯೂ ಗುಹೇಶ್ವರನ ಪೂಜೆಯಾಗಿ, ವಿಜೃಂಭಿಸಿದಾಗ ಕಾಲದ ಕಾಯದ ಪರಿಮಿತಿಗೊಳಪಟ್ಟ ಪೂಜೆಯಾದರೂ ಏಕೆ ? ಕೇವಲ ಸಂಕೇತವಾಗಿ ಮಾತ್ರ ಈ ಪೂಜೆ ಉಳಿಯಬಲ್ಲುದು ಅಷ್ಟೇ—ಕರ್ಪೂರವು ತನ್ನನ್ನು ತಾನೇ ಬೆಳಕಿಗೆ ಸಮರ್ಪಿಸಿಕೊಂಡು ಬಯಲಲ್ಲಿ ಬಯಲಾದಾಗ ಉರುವು ಕೂಡ ಉಳಿಯುವುದಿಲ್ಲ. ಬಯಲಲ್ಲಿ ಬಯಲಾದ ಮೇಲೆ ಬೇರೆಲ್ಲಿಯ ಬವಣೆ—ದೃಕ್ ದೃಶ್ಯಗಳೆರಡೂ ಬೆರೆತಾಗ ದರ್ಶನವೇ ಪ್ರಾಪ್ತಿಯಲ್ಲವೇ—ಈ ದರ್ಶನವನ್ನೇ ಅನುಭಾವದ ಅಂತರಾಳವೆನ್ನುವುದು. ದರ್ಶನ ಪ್ರಾಪ್ತವಾದವನು ಅದರಲ್ಲಿಯೇ ಒಂದಾದಾಗ ಸಾಮಾನ್ಯ ಆಚರಣೆಗಳಿಗೇನೂ ಅರ್ಥವಿಲ್ಲವೆಂಬುದು ಅಲ್ಲಮ ಇಲ್ಲಿ ತೋರಿದ ತತ್ವ.

ಸಿದ್ಧರಾಮನನ್ನು ಪರೀಕ್ಷಿಸುವಾಗಲೂ ಅಲ್ಲಮ ಇದೇ ಬಗೆಯನ್ನೆ ತೋರುವುದನ್ನು ನೋಡಬಹುದು.

ಕೆರೆದೇಗುಲಂಗಳೆಲ್ಲವೂ ಹಿಂದಣ ಅಡಿವಜ್ಜೆಗೊಳಗು
ಕರ್ಮಕಾಂಡ ಯೋಗಂಗಳೆಲ್ಲವೂ ಭವದ ತೆಕ್ಕೆಗೆ ಒಳಗು

ಎಂದು ಸಿದ್ಧರಾಮನಿಗೆ ಅಲ್ಲಮ ಬೋಧಿಸುವ ಅರ್ಥವೂ ಇದೆ. ದುಡಿಮೆಯೇ ದೇವರೆಂಬುದೂ ಒಂದು ಮಾಯೆಯಾಗಿಯೇ—ಕಟ್ಟಳೆಯಾಗಿಬಿಡುತ್ತದೆ—ಕಾರಣ ತಾನು ದುಡಿಯುತ್ತಿದೇನೆ—ಅದು ಪರಮಸೇವೆಯೆಂಬ ಅಹಮಿಕೆಯು ಮುತ್ತಿ ಮಾಯೆಯಾಗಿ ಆವರಿಸಿಕೊಳ್ಳುತ್ತದೆ. ಅದನ್ನು ಮೀರಬೇಕು ವ್ಯಕ್ತಿ—ಆಗಲೇ ಅರಿವು—

ದೇಹಭಾವವಳಿಯದೆ ಜೀವಭಾವವಳಿಯದು
ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು
ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು
ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ
ತಿಳಿಯಬಲ್ಲರೆ, ಗುಹೇಶ್ವರಲಿಂಗದ ಅರಿವು ಸಾಧ್ಯವಪ್ಪುದು.

ಎಂದು ಅಲ್ಲಮ ಸಿದ್ಧರಾಮನಿಗೆ ಬೋಧಿಸುತ್ತಾನೆ. ಹೆಣ್ಣಿಗೆ ಗಂಡಾಗಿ, ಗಂಡಿಗೆ ಹೆಣ್ಣಾಗಿ ಕಾಡುತ್ತದೆ ಮಾಯೆ. ಈ ಮಾಯೆಯು ಹೊರಗಿನ ಕುರುಹೇ ದೇಹದ ಕುರುಹು-ಈ ಕುರುಹು ಅಳಿಯಬೇಕಾದರೆ ಅಲ್ಲಮ ಹೇಳುವಂತೆ ಭಕ್ತಿಭಾವ ಉದಿಸಬೇಕು—ದೇಹಭಾವ, ಜೀವಭಾವಗಳು ಅಳಿಯಬೇಕು.

ಇಂತಹುದೇ ಪ್ರಸಂಗ ಅಕ್ಕಮಹಾದೇವಿಯನ್ನು ಅಲ್ಲಮ ಪರೀಕ್ಷಿಸುವ ಬಗೆ. ಎಲ್ಲವನ್ನು ತೊರೆದು ದಿಗಂಬರ ದಿವ್ಯಾಂಬರದಲ್ಲಿ ಬಂದ ಅಕ್ಕಮಹಾದೇವಿ ತನ್ನ ನೀಳಕೂದಲಿನಲ್ಲಿ ಮೈಮುಚ್ಚಿಕೊಂಡು ಕಲ್ಯಾಣಕ್ಕೆ ಬಂದಾಗ, ಅವಳ ಗರಿಮೆಯನ್ನರಿತ ಮಹಾಮನೆಯ ಶರಣರೆಲ್ಲ ಅವಳನ್ನು ಸ್ವಾಗತಿಸಲು ಸಿದ್ಧರಾಗಿರುತ್ತಾರೆ. ಆಗ ಅಲ್ಲಮ ಮಾತ್ರ ಅವಳ ನಿಷ್ಕಳಂಕ ನಿಜಾತ್ಮವನ್ನು ಪ್ರಕಟಿಸುವುದಕ್ಕಾಗಿಯೇ ಅವಳನ್ನು ಕಠಿಣ ಪರೀಕ್ಷಣಕ್ಕೊಳಪಡಿಸುತ್ತಾನೆ. ಅವಳ ಯೌವನವನ್ನು ಕುರಿತು, ದೇಹಭಾವವನ್ನು ಕುರಿತು ಅಲ್ಲಮ ಕೆಣಕುಮಾತನ್ನಾಡುತ್ತಾನೆ. ಆ ದೇಹದ ಮೇಲಿನ ವ್ಯಾಮೋಹವಿಲ್ಲದಿದ್ದರೆ, ದೇಹದ ಕುರುಹೇ ಮಾಯೆಯಾಗಿ ಕಾಡದಿದ್ದರೆ ಈ ಬತ್ತಲನ್ನು ಮುಚ್ಚುವ ಪ್ರಯತ್ನ ವೇಕೆಂದು ಕೇಳಿದ್ದೇ ಅಲ್ಲದೆ, ಕೌಶಿಕನೊಂದಿಗೆ ವಿವಾಹವಾಗಿದ್ದರೂ ಚೆನ್ನಮಲ್ಲಿಕಾರ್ಜುನನೇ ಪತಿಯೆಂದು ಸಾರುವುದು ಅವಳ ಔದ್ಧತ್ಯವಲ್ಲವೇನೆಂದೂ ಜರಿಯುತ್ತಾನೆ. ಆಗ ಅವಳು ದಿಟ್ಟತನದಿಂದ ಉತ್ತರಕೊಟ್ಟು ತನಗಾಗಿ ಈ ಕೇಶದ ಮರೆಯಲ್ಲ–ಉಳಿದವರಿಗಾಗಿ–ದೇಹದ ಕುರುಹನ್ನು ಮೀರದವರಿಗಾಗಿ ಎನ್ನುತ್ತಾಳೆ. "ಅಂತರಂಗದ ನಾಚಿಕೆ ಬಹಿರಂಗ ವಲ್ಲಿ ತೋರುತ್ತದೆ. ಇದು ನಮ್ಮ ಗುಹೇಶ್ವರಲಿಂಗಕ್ಕೆ ಮೆಚ್ಚಿಗೆಯಲ್ಲ" ಎಂದು ಅಲ್ಲಮ ಕಟಕಿಯಾಡಿದಾಗ ಅಕ್ಕ ಮಹಾದೇವಿಯ ಉತ್ತರ—

ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು
ಆ ಭಾವದಿಂದ ಮುಚ್ಚಿದೆ.

ಕೇಳಿದಾಗ ಅಲ್ಲಮನಿಗೆ ಅಂತರಂಗದಲ್ಲಿ ಸಂತೋಷ—ಇದೀಗ ಆಕೆಯ ಸರಿಯಾದ ನಿಲುವು—ಆದರೂ ಅವಳ ಎತ್ತರ ಎಲ್ಲರಿಗೂ ತಿಳಿಯಲು ಮತ್ತೆ ಪರೀಕ್ಷಣ–ಅವಳು 'ನಾನುತನ'ವನ್ನು ಕಳೆದುಕೊಂಡಿದ್ದಾಳೆಂಬುದನ್ನು ಪ್ರಚುರ ಪಡಿಸಲು ಈ ತಂತ್ರ. ಅವಳ ನಾನುತನ ಪೂರ್ಣವಾಗಿ ಚೆನ್ನಮಲ್ಲಿಕಾರ್ಜುನನಲ್ಲಿ ಕರಗಿರುವುದು ಅವಳ ಮಾತಿನಿಂದ ಸ್ಪಷ್ಟವಾಗುತ್ತದೆ. ಆದರೂ

ಕಾಮದಿಂದ ಕಂಡ, ಕ್ರೋಧದಿಂದ ಅಸ್ಥಿ
ಲೋಭದಿಂದ ಸಕಲ ವಿಷಯಂಗಳು
ಮೋಹದಿಂದ ನೋಡಿಹೆನೆಂಬುದೆಲ್ಲವು ಕಾಮನ ಬಲೆಯೊಳಗು.

ಆದ್ದರಿಂದ ಅವಳು ಕಾಮವನ್ನು ಗೆದ್ದಳೆಂದರೆ ನಂಬುವುದಾದರೂ ಹೇಗೆ, ಮಾಯೆಯನ್ನು ಗೆದ್ದೆನೆಂಬ, ಕಾಮವನ್ನು ಅಳಿಸಿಬಿಟ್ಟೆನೆಂಬ ಅಹಮಿಕೆಯ ಮಂಕುತನ ಕವಿದರೆ ಅದೂ ಮಾಯೆಯ ಆಟವೇ ಅಲ್ಲವೇ ? ಆಗ ಅವಳು ಕೊಡುವ ಉತ್ತರ ಅಲ್ಲಮ ನಿರೀಕ್ಷಿಸಿದ್ದೇ—ಲಿಂಗ, ಅರುಹು, ಶಿವಾನುಭವಗಳಿಂದ ತನ್ನ ಮೈಮನ ಮತ್ತು ಜೀವಗಳನ್ನು ಪೂತಗೊಳಿಸಿಕೊಂಡ ಅಕ್ಕಮಹಾದೇವಿಯು ಕಾಮನ ಸುಟ್ಟುರಿಹಿದ ಭಸ್ಮವಾಗಿದ್ದಾಳೆಂಬುದನ್ನು ಅಲ್ಲಮ ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತಾನೆ. ಕೊನೆಗೆ ತಾನೇ ಅವಳನ್ನು ಮೆಚ್ಚಿ :

ಅಂಗ ಅಂಗನೆಯ ರೂಪಲ್ಲದ
ಮನ, ವಸ್ತು ಭಾವದಲ್ಲಿ ಬೆಚ್ಚಂತಿಪ್ಪುದು
ಬಂದ ಕದನದಲ್ಲಿ ಬಂದು ಹಿಂಗಿದೆಯಲ್ಲಾ, ಅಕ್ಕಾ ?
ಗುಹೇಶ್ವರ ಲಿಂಗದಲ್ಲಿ ಉಭಯ ನಾಮವಳಿದೆ ಎನ್ನಕ್ಕ

ಎಂದು ಅಕ್ಕಮಹಾದೇವಿಯನ್ನು ಅನುಭಾವಯೋಗದಲ್ಲಿ ತನ್ನ ಅಕ್ಕನೆಂದು ಸಾರುತ್ತಾನೆ ಅಲ್ಲಮ ; ಮಾಯೆಯನ್ನು ಕಳಚಿಕೊಂಡಿದ್ದ ಅಲ್ಲಮನಿಗೆ ಮಾಯೆಯನ್ನು ಕಳಚಿದುದು ಗುರುತಾಗುವುದು ಸುಲಭಸಾಧ್ಯವಾಗಿದ್ದುದರಿಂದ. ಇಲ್ಲಿ ಪ್ರಮುಖವಾದ ವಿಷಯ—ಅನುಭಾವವೇ ಮೂರ್ತಿವೆತ್ತ ಅಲ್ಲಮ ವೈರಾಗ್ಯವೇ ಮೂರ್ತಿಗೊಂಡ ಅಕ್ಕಮಹಾ ದೇವಿಯ ಅನುಭಾವವನ್ನು ಎಲ್ಲರಿಗೂ ಪ್ರಕಟಗೊಳಿಸಿದುದು. ಬೆಳಕು ಸಣ್ಣದು, ದೊಡ್ಡದು ಎಂಬುದಿಲ್ಲ—ಎಲ್ಲವೂ ಬೆಳಕೇ ಎಂದು ತೋರುವ ಬೆರಗಿನ ಬೆಳಕು ಇದು. ಕೊನೆಗೆ ಅಕ್ಕಮಹಾದೇವಿ ಕದಳೀವನಕ್ಕೆ ತೆರಳುವಾಗ ಅಲ್ಲಮ ಆಕೆಗೆ ಹೇಳುವ ಈ ಮಾತು—ಅನುಭಾವದ ಪಾರಮ್ಯ.

ನೀನಾನೆಂಬುಭಯಸಂಗವಳಿದು ತಾನುತಾನಾದ
ತ್ರಿಕೂಟವೆಂಬ ಮಹಾಗಿರಿಯ

ಹರಿ ನೋಡಿದರೆ ಎಲ್ಲವೂ ಬಟ್ಟಬಯಲು—ಆ ಶೂನ್ಯದಲ್ಲಿ ಅಕ್ಕಮಹಾದೇವಿ ಜ್ಯೋತಿಯನ್ನು ಕಾಣುವಳು—ಅಲ್ಲಿ ಐಕ್ಯವಾಗುತ್ತಾಳೆ. ಆದರೆ ನಿಜವಾಗಿ ಅವಳಿಗೆ ಈ ಸಿದ್ಧಿ ಅನುಭಾವ ಸಾಧಿಸಿದೆ ಎನ್ನುವುದು ನಿಚ್ಚಳವಾಗಿ ಅರಿಯುತ್ತದೆ.

ತನುಗುಣನಾಸ್ತಿಯಾಗಿ ಲಿಂಗಸಂಗಿಯಾದಳು
ಮನಗುಣನಾಸ್ತಿಯಾಗಿ ಅರಿವುಸಂಗಿಯಾದಳು
ಭಾವಗುಣನಾಸ್ತಿಯಾಗಿ ಮಹಾಪ್ರಭೆ ತಾನಾದಳು
ತಾನಿದಿರೆಂಬೆರಡಳಿದು ನಮ್ಮ ಗುಹೇಶ್ವರ ಲಿಂಗದಲ್ಲಿ
ಸ್ವಯಲಿಂಗವಾದ ಮಹಾದೇವಿಯಕ್ಕಗಳ ನಿಲಪಿಂಗೆ
ಶರಣೆನುತಿರ್ದೆನು

ಎಂದು ಅಲ್ಲಮ ಘೋಷಿಸಿದ್ದು ಅನುಭಾವದ ಅಂತರಾಳದ ಆತ್ಮ.

ಭಕ್ತಿಭಾಂಡಾರಿ ಬಸವಣ್ಣ ಬಿಜ್ಜಳನ ಭಂಡಾರಿಯೂ ಆಗಿದ್ದುದು ಆತನ ಕಾರ್ಯಕ್ಷಮತೆಗೆ ಪ್ರತೀಕವಾಗಿದ್ದುದು ಸರಿ. ಆದರೆ ಹೀಗೆ ರಾಜ್ಯದ ಭಂಡಾರಿಯಾಗಿದ್ದುದರಿಂದ ಆತನ ಉಳಿದ ಕಾರ್ಯ ಪರಿಮಿತಿಗೊಂಡಿದ್ದುದೂ ನಿಜ. ಮಹಾಮನೆಯ ಆಡಳಿತ, ರಾಜ್ಯದ ಖಜಾನೆಯ ವ್ಯವಹಾರಗಳ ಮೇಲ್ವಿಚಾರಣೆ, ನಿತ್ಯದಾಸೋಹದ ಎಲ್ಲ ಕಾಯಕಗಳನ್ನು ಕೈಲಾಸವೆಂದೇ ನಂಬಿ ನಡೆಸುತ್ತಿದ್ದ ಬಸವಣ್ಣ. ಆದರೆ ಲೌಕಿಕವ್ಯವಹಾರದ ಜಂಜಡ, ಸೆಳೆತಗಳಿಂದ ಕೇವಲ ಕೆಲವೇ ಕ್ಷಣಗಳಷ್ಟು ಕಾಲ ಮಾತ್ರವೇ ಬಸವಣ್ಣ ಬಿಡುಗಡೆ ಹೊಂದುತ್ತಿದ್ದುದು. ಈ ಬಿಡುವಿನ ವೇಳೆಯಲ್ಲಿ ಬೇರೆಲ್ಲರ ಅನುಭಾವಗಳನ್ನು ಹಂಚಿಕೊಳ್ಳಲೆಂದೇ ಬಸವಣ್ಣ ಅನುಭವಮಂಟಪವನ್ನು ರೂಪಿಸಿದ್ದುದೂ ಸತ್ಯ. ಈ ಅನುಭವ ಮಂಟಪದ ಅಧ್ಯಕ್ಷಸ್ಥಾನವೇ ಶೂನ್ಯಸಿಂಹಾಸನ. ಈ ಶೂನ್ಯವೇ ಪರಿಪೂರ್ಣತೆಯ ಹೊರಬಿಂಬವಾಗಿದ್ದು ಆ ಸ್ಥಾನಕ್ಕೆ ತಕ್ಕವನಿಗಾಗಿ ಕಾಯುತ್ತಿದ್ದ ಕಾತರದಿಂದ ಬಸವಣ್ಣ. ಆಗಲೇ ಶೂನ್ಯತೆಯೇ ಮೈವೆತ್ತ ಪರಿಪೂರ್ಣ ಅನುಭಾವಿ ಅಲ್ಲಮ ಅಲ್ಲಿಗೆ ಆಗಮಿಸಿದುದು. ಅಲ್ಲಮ ಬಂದೊಡನೆ ಅನುಭವಮಂಟಪವೂ ಪೂರ್ಣವಾಯಿತು. ಉಳಿದಂತೆ ಬಂದವರೆಲ್ಲ ಮಹತ್ತರ ಬೆಳಕಿಗೆ ಬಂದು ಸೇರುವ ಕಿರುಹಣತೆಗಳಂತೆ ಅಲ್ಲಿ ಬೆರೆತರು. ಅಲ್ಲಮ ಬಂದು ಅನುಭವ ಮಂಟಪಕ್ಕೆ ಬೇರೆ ತಿರುವನ್ನೇ ಕೊಟ್ಟ—ಎಲ್ಲರೂ ತಮ್ಮ ತಮ್ಮ ಶಿವಾನುಭವವನ್ನು ಉಳಿದವರೊಂದಿಗೆ ಹಂಚಿಕೊಂಡು ಹೆಚ್ಚಿಸಿಕೊಳ್ಳುವಂತೆ ಮಾಡಿದ. ಸಂದೇಹಗಳನ್ನು ತೊಡೆದುಹಾಕಲು ಚರ್ಚೆಗಳನ್ನು ಪ್ರಾರಂಭಿಸಿ ಮಾರ್ಗದರ್ಶನ ಮಾಡಿದ. ಸಮಸ್ಯೆಗಳನ್ನು ಬಿಡಿಸಲು ಶರಣರು ತಮ್ಮ ತಮ್ಮ ವಿಚಾರ, ಶಿವಾನುಭವಗಳನ್ನು ಪ್ರಕಟಿಸುವಂತೆ ಉತ್ತೇಜಿಸಿ, ಮಥಿಸಿ ಮಥಿಸಿ ಅನುಭಾವವನ್ನು ಕಡೆದು ತೆಗೆಯುತ್ತಿದ್ದುದು ಅಲ್ಲಮನ ಉದಾತ್ತ ನಿಲುವು. ಹೀಗಾಗಿ ಬಸವಣ್ಣನ ಅನುಭವಮಂಟಪಕ್ಕೆ ನಿಜವಾದ ನಿಲುವನ್ನು ನೀಡಿದುದು ಅಲ್ಲಮ, ಅಂತೆಯೇ ಅನುಭಾವವೇ ಈ ರೂಪದಲ್ಲಿ ಪರಿಪೂರ್ಣತೆಯನ್ನು ಪಡೆದು ಬಂದಿದೆಯೆಂಬುದನ್ನರಿತ ಬಸವಣ್ಣ ಶೂನ್ಯಸಿಂಹಾಸನಕ್ಕೆ ಈ ಬಟ್ಟಬಯಲ ಮೂರ್ತಿಯನ್ನೇ–ಶೂನ್ಯರೂಪಿಯನ್ನೇ ಅಧ್ಯಕ್ಷನನ್ನಾಗಿಸಿ ಕೂರಿಸಿದುದು. ಆಗ ಅಲ್ಲಮನಿಂದ ಅನುಭವಮಂಟಪ ಅನುಭಾವಮಂಟಪವಾಯಿತು. ಹಲಕಾಲ, ಕೆಲವು ರೀತಿಯಲ್ಲಿ ಎಲ್ಲರಿಗೂ ಈ ಲಿಂಗಾಂಗ ಸಾಮರಸ್ಯದ ತಿರುಳನ್ನು ನೀಡಿದ ಅಲ್ಲಮ—ಕೊನೆಯಲ್ಲಿ

ಕಾಯವೆಂಬ ಕದಳಿಯ ಹೊಕ್ಕು
ಪ್ರಾಣವೆಂಬ ಗಹ್ವರದೊಳಗೆ
ಸಕಲೇಂದ್ರಿಯವೆಂಬ ಕೋಣೆ ಕೋಣೆಗಳಲ್ಲಿ
ತಿರುಗಾಡುತ್ತಾ ಬರಲಾಗಿ
ಮೇರುಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು
ಗುಹೇಶ್ವರ ಲಿಂಗವೆಂಬೊಂದು ರೂಪಾಯಿತ್ತು

ಎಂಬರಿವಿನಿಂದ ಶ್ರೀಶೈಲದ ಕದಳಿವನಕ್ಕೆ ಪ್ರವೇಶಿಸಿದ ಅಲ್ಲಮ. ಅವಧಿಯುಳಿದಿತ್ತು. ತಾನು ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವುದು ಪರಿಣಾಮ. ಇದನ್ನರಿತ ಅಲ್ಲಮ ಶ್ರೀಶೈಲದಲ್ಲಿ ಪ್ರವೇಶಿಸಿದಾಗ 'ಘನವ ಕಂಡು ಮನವು ಗ್ರಹಿಸಿತ್ತು—ಕಂಡು ಕಂಡು ಮನ ಮಹಾಘನವಾಯಿತ್ತು," ಆಗ ಅಲ್ಲಮ ಗುಹೇಶ್ವರನಲ್ಲಿ ತದ್ಗತನಾದ–ಘನ ಘನದಲ್ಲಿ ಕೂಡಿತು—ಅಲ್ಲಮ ಶ್ರೀಶೈಲದಲ್ಲಿ ಶ್ರೀಶೈಲನಾದ. ಅಂತೆಯೇ ಅನುಭಾವವೇ ಅಲ್ಲಮ.




ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು, ನಂಜನಗೂಡು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳಾ ಕಾಲೇಜು, ಸರಸ್ವತೀಪುರಂ, ಮೈಸೂರು-9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮಸಿ ಕಾಲೇಜು, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮಸಿ ಕಾಲೇಜು, ಊಟಿ, ತಮಿಳುನಾಡು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ದೈಹಿಕ ಶಿಕ್ಷಣ ಕಾಲೇಜು, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಾನೂನು ಕಾಲೇಜು, ಮೈಸೂರು.



ಶ್ರೀ ಜಯಚಾಮರಾಜೇಂದ್ರ ಇಂಜನಿಯರಿಂಗ್ ಕಾಲೇಜು, ಮೈಸೂರು—4.





ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಿಳಾ ತಾಂತ್ರಿಕ ವಿದ್ಯಾಲಯ, (ಪಾಲಿಟೆಕ್ನಿಕ್) ಮೈಸೂರು–6.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ನಂಜನಗೂಡು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ಚಾಮರಾಜನಗರ.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಕೈಗಾರಿಕಾ ತರಬೇತಿ ಸಂಸ್ಥೆ, ತಾಳವಾಡಿ, ತಮಿಳುನಾಡು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಆರೋಗ್ಯ ಕೇಂದ್ರ, ರಾಮಾನುಜ ರಸ್ತೆ, ಮೈಸೂರು–4.




ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿಕ್ಷಕಿಯರ ಪ್ರಶಿಕ್ಷಣ ಸಂಸ್ಥೆ, ಸರಸ್ವತೀಪುರಂ, ಮೈಸೂರು–9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಮಾಜ ಸೇವಾ ಪ್ರಶಿಕ್ಷಣ ಸಂಸ್ಥೆ, ಬನ್ನಿಮಂಟಪ ಬಡಾವಣೆ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಜಯನಗರ, 8ನೆಯ ಬ್ಲಾಕ್, ಬೆಂಗಳೂರು–41.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ರಾಮಾನುಜರಸ್ತೆ, ಮೈಸೂರು–4.




ಜಗದ್ಗುರು ಶ್ರೀ ಶಿವರಾತ್ರೀಶ್ವರ ಹಿಂದಿ ಪ್ರೌಢಶಾಲೆ, ವಾಣೀವಿಲಾಸ ರಸ್ತೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಬಾಲಕಿಯರ ಪ್ರೌಢಶಾಲೆ, ಸರಸ್ವತೀಪುರಂ, ಮೈಸೂರು–9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಯುಕ್ತ ಕಿರಿಯ ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಯುಕ್ತ ಕಿರಿಯ ಕಾಲೇಜು, ರಾಮಾಪುರ, ಕೊಳ್ಳೇಗಾಲ ತಾಲ್ಲೂಕು.




ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಚಾಮರಾಜನಗರ.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಬಂಡಳ್ಳಿ, ಕೊಳ್ಳೇಗಾಲ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ದೊಡ್ಡಕಾಡನೂರು, ಹೊಳೆನರಸೀಪುರ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಗೌಡಹಳ್ಳಿ, ಯಳಂದೂರು ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಬಾಲಕಿಯರ ಪ್ರೌಢಶಾಲೆ,
ಯಳಂದೂರು.



ಶ್ರೀ ಮಹದೇಶ್ವರ ಪ್ರೌಢಶಾಲೆ, ಕಾಮಗೆರೆ, ಕೊಳ್ಳೇಗಾಲ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಅರಕಲವಾಡಿ, ಚಾಮರಾಜನಗರ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಉಮ್ಮತ್ತೂರು, ಚಾಮರಾಜನಗರ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಹಿರಿಯ ಪ್ರಾಥಮಿಕ ಶಾಲೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಹಿರಿಯ ಪ್ರಾಥಮಿಕ ಶಾಲೆ, ಸರಸ್ವತೀಪುರಂ, ಮೈಸೂರು–9.

# ವೀರಶೈವ ದರ್ಶನ

# ವೀರಶೈವಧರ್ಮದ ಹಿನ್ನೆಲೆ

ಟಿ. ಎಸ್. ಮಲ್ಲಪ್ಪ

ಮಹಾತ್ಮಗಾಂಧೀಜಿಯವರು ೧೯೨೪ರ ಬೆಳಗಾವಿ ಕಾಂಗ್ರೆಸ್ಸಿನ ೩೯ನೆಯ ಅಧಿವೇಶನದಲ್ಲಿ ಪ್ರಚುರಪಡಿಸಿದಂತೆ—"ಎಂಟುನೂರು ವರ್ಷಗಳ ಹಿಂದೆ ಬಸವೇಶ್ವರರು ಯಾವ ತತ್ವವನ್ನು ಅರಿತು ಆಚರಿಸಿ, ಉಪದೇಶ ಮಾಡಿದರೋ ಅಷ್ಟೆಲ್ಲಾ ತತ್ವಗಳನ್ನು ನನಗೆ ಆಚರಿಸಲಿಕ್ಕೆ ಆಗುವುದಿಲ್ಲ. ಅದರಲ್ಲಿ ಕೆಲವು ತತ್ತ್ವಗಳನ್ನು ನಾನು ಆಚರಿಸುತ್ತಿದ್ದೇನೆ. ಸಾಧಕಸ್ಥಿತಿಯಲ್ಲಿದ್ದೇನೆ ; ಸಿದ್ಧನಲ್ಲ. ಆದರೆ ಬಸವಣ್ಣನವರು, ಹೇಳಿದ ತತ್ತ್ವಗಳನ್ನೆಲ್ಲ ಆಚರಣೆಯಲ್ಲಿ ತಂದಿದ್ದರು. ಅದರಲ್ಲಿ ಅಸ್ಪೃಶ್ಯತಾನಿವಾರಣೆ, ಕಾಯಕತತ್ತ್ವ ಮುಖ್ಯವಾದುವು. ಯಾವುದೇ ವಿಧವಾದ ಜಾತಿಭೇದ ಅವರಲ್ಲಿ ಕಂಡುಬರುವುದಿಲ್ಲ. ಈ ಕಾಲದಲ್ಲಿ ಅವರು ಇದ್ದಿದ್ದರೆ ಜಗತ್ತಿಗೆ ಪೂಜ್ಯವ್ಯಕ್ತಿಯಾಗಿ ಪರಿಣಮಿಸುತ್ತಿದ್ದರು. ಆ ಧರ್ಮಾನುಯಾಯಿಗಳಾದ ನೀವು ಅವರು ಉಪದೇಶಿಸಿದ ತತ್ತ್ವಗಳನ್ನು ಆಚರಣೆಯಲ್ಲಿ ತಂದರೆ ಭಾರತಭೂಮಿಯನ್ನೇ ಏಕೆ—ಜಗತ್ತನ್ನೇ ಉದ್ಧಾರಮಾಡಬಲ್ಲಿರಿ. ಸುಪ್ರಸಿದ್ಧ ಸಾಹಿತಿಗಳಾದ ಸರೋಜಿನೀದೇವಿಯವರ ಅಭಿಪ್ರಾಯದಂತೆ ವೀರಶೈವಧರ್ಮವು ಸರ್ವ ಸೌಹಾರ್ದಾದಿ ಉದಾತ್ತ ತತ್ತ್ವಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿರುತ್ತಾಗಿ ಇದು ವಿಶ್ವಧರ್ಮವಾಗಿರಲು ಯೋಗ್ಯವಾಗಿದೆ.

ಇಂತಹ ಶ್ರೇಷ್ಠವಾದ ಮತಧರ್ಮದ ಹಿನ್ನೆಲೆ ಏನು, ಅದು ಯಾವಾಗ ಉದಯವಾಯಿತು, ಹೇಗೆ ಪ್ರಗತಿಯನ್ನು ಹೊಂದಿತು, ಹೇಗೆ ಯಾವ ರೀತಿಯಲ್ಲಿ ಯಾವಾಗ ಸಂಸ್ಕರಿಸಲ್ಪಟ್ಟಿತು ಎಂಬ ವಿಷಯಗಳು ವಿದ್ವಾಂಸರ ವಿಮರ್ಶೆಗೆ ಒಳಗಾದುದು ಸ್ವಾಭಾವಿಕವೆ. ಮೇಲಿನ ಅಭಿಪ್ರಾಯಗಳಿಗೆ ಗಮನವನ್ನು ಸೆಳೆದಿರುವ ಲಿಂಗತತ್ತ್ವನಿರ್ಣಯ ಗ್ರಂಥದ ಮುನ್ನುಡಿಯಲ್ಲಿ ರಾಜರ್ಷಿಗಳಾದ ಮೈಸೂರು ಮಹಾರಾಜರು ಹೀಗೆ ಹೇಳಿದ್ದಾರೆ "ನಮ್ಮ ಭಾರತೀಯ ಇತಿಹಾಸದಲ್ಲಿ ಲಿಂಗೋಪಾಸನೆಯು ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದೆಂದು ನಾವು ಧಾರಾಳವಾಗಿ ಹೇಳಬಹುದು. ಮಾನವನ ಅನುಭವವು ವಿಚಾರಧಾರೆಯಿಂದ ಕ್ರಮೇಣ ವಿಕಾಸವಾಗುತ್ತ ಬಂದಂತೆ ಲಿಂಗತತ್ತ್ವದ ಕಲ್ಪನೆ ಮತ್ತು ಪ್ರತಿಪಾದನೆಯು ವೀರಶೈವಧರ್ಮದಲ್ಲಿ ಪರಿಪೂರ್ಣತೆಯನ್ನು ಪಡೆದಿರುವುದು ಗೋಚರವಾಗುವುದು." ಅನೇಕ ವಿದ್ವಾಂಸರ, ವಿಮರ್ಶಕರ ಮತ್ತು ಶಾಸನ ತಜ್ಞರ ಅಭಿಪ್ರಾಯವಾದರೂ ಲಿಂಗಪೂಜೆ ಲಿಂಗಧಾರಣೆಗಳ ಮೂಲಕ ಶಿವೋಪಾಸನೆಯು ಬಹಳ ಹಿಂದಿನದಾಗಿದ್ದು ಅದು ಕಾಲಕಾಲಕ್ಕೆ ತಕ್ಕಂತೆ ವಿಕಾಸಗೊಂಡಿದೆ ಎಂಬುದೇ ಆಗಿದೆ.

ವೀರಶೈವಧರ್ಮಗ್ರಂಥಗಳ ನಿಲುವಾದರೂ ಈ ಧರ್ಮವು ಶಿವನಿಂದಲೇ ಪ್ರೋಕ್ತವೆನ್ನುವಷ್ಟು ಸನಾತನವಾದುದು. ವೀರಶೈವಭಾಷ್ಯವೆನಿಸಿರುವ ಶ್ರೀಕರಭಾಷ್ಯದಲ್ಲಿಯೇ ಆಧಾರವಾಗಿ ತೆಗೆದುಕೊಂಡಿರುವ ಸಿದ್ಧಾಂತಶಿಖಾಮಣಿಯಲ್ಲಿ ಹೇಳಿರುವಂತೆ ವೀರಶೈವಧರ್ಮವು ಶಿವಪ್ರೋಕ್ತವಾದುದು 'ತತ್‌ಸಂಪ್ರದಾಯಸಿದ್ಧೇನ ರೇಣುಕೇನ ಮಹಾತ್ಮನಾ' ಎಂದರೆ ಅಂತಹ ಶಿವೋಕ್ತ ವೀರಶೈವಸಂಪ್ರದಾಯದಲ್ಲಿ ಸಿದ್ಧರಾದ ರೇಣುಕಾಚಾರ್ಯರಿಂದ ಈ ಸಿದ್ಧಾಂತವು ಅಗಸ್ತ್ಯರಿಗೆ ಉಪದೇಶಿಸಲ್ಪಟ್ಟಿತು. ಸಿದ್ಧಾಂತಶಿಖಾಮಣಿಯ ಭಾಷಾಂತರವಾದ ಮಣಿಮುಕುರದ ಮಾತಿನಲ್ಲಿ 'ಪರಶಿವಂ ಪಾರ್ವತಿಗೆ ಪುತ್ರ ಷಣ್ಮುಖಂಗೆ ಪೇಳಿದ ಪಳೆಯ ಷಟ್‌ಸ್ಥಲದ ಸಿದ್ಧಾಂತಮಂ' ಈ ಹಳೆಯ ಷಟ್‌ಸ್ಥಲ ಸಿದ್ಧಾಂತವೇ. ಅದರಲ್ಲಿ ಪ್ರವೀಣರಾಗಿದ್ದ ರೇಣುಕಾಚಾರ್ಯರಿಂದ ಅಗಸ್ತ್ಯರಿಗೆ ಉಪದೇಶವಾಯಿತು. ಸನಾತನವಾದ ವೀರಶೈವ ಧರ್ಮವನ್ನು ಆಗಾಗ ಅದು ಕ್ಷೀಣದೆಸೆಯಲ್ಲಿದ್ದಾಗ ಪರಶಿವನು ಪಂಚಾಚಾರ್ಯರಿಗೆ 'ಮದ್ ಭಕ್ತಿಂ ಸ್ಥಾಪಯಿತ್ವಾ ಮಹೀತಲೇ ಮನ್ಮತಂ ಪ್ರಬಲೀಕೃತ್ವಾ' ಎಂದರೆ ಶಿವಭಕ್ತಿಯನ್ನು ಸ್ಥಾಪಿಸಿ ಮತವನ್ನು ಪ್ರಬಲೀಕರಿಸಬೇಕೆಂದು ಶಿವನ ಆಜ್ಞೆಯಾಗಿರುವುದಾಗಿ ಸ್ವಾಯಂಭುವಾಗಮಾದಿಗಳಲ್ಲಿ ಉಕ್ತವಾಗಿದೆ.

ಈ ಧರ್ಮವು ಶಿವನಿಂದಲೇ ಉಕ್ತವಾಗಿದೆಯೆನ್ನುವಷ್ಟು ಸನಾತನವಾದುದೆಂಬುದೂ, ಇದು ಗ್ಲಾನಿಯಾಗುವ

ಲಕ್ಷಣಗಳನ್ನು ಕಂಡಾಗ ಅದು ಸಂಪೂರ್ಣವಾಗಿ ನಾಶವಾಗಲು ಅವಕಾಶಕೊಡದೆ ಆಚಾರ್ಯಪುರುಷರು ಅದನ್ನು ತಮ್ಮ ಉಪದೇಶದಿಂದ ಪ್ರಬಲೀಕರಿಸುತ್ತಿದ್ದರೆಂಬುದೂ ನಮ್ಮ ನಿಲುವೆನ್ನುವುದು ನಮ್ಮ ಗ್ರಂಥಗಳಲ್ಲಿ ಮೊದಲಿಂದಲೂ ವ್ಯಕ್ತವಾಗಿದೆ. ಇದು ಸ್ಕಾಂದಪುರಾಣಾಂತರ್ಗತ ಕೇದಾರಖಂಡದಲ್ಲಿನ ಈ ಶ್ಲೋಕಗಳಿಂದ ತಿಳಿಯಬರುತ್ತದೆ.

ಕಥಿತಾಶ್ಯಂಕರೇಣೈವ ಲಿಂಗಸ್ಯಾರ್ಚನಸೂಚಕಾಃ ।
ಸಂತಿ ರುದ್ರೇಣ ಕಥಿತಾಃ ಶಿವಧರ್ಮಾಸ್ಸನಾತನಾಃ ॥

ವೀರಭದ್ರೋ ಯಥಾರುದ್ರಸ್ತ್ವನ್ಯೇ ಚ ಗುರವಃ ಸ್ಮೃತಾಃ ।
ಗುರೋರ್ಜಾತಾಶ್ಚ ಗುರವೋ ವಿಖ್ಯಾತಾ ಭುವನತ್ರಯೇ ॥

ಲಿಂಗಸ್ಯ ಮಹಿಮಾನಂ ತು ನಂದೀ ಜಾನಾತಿ ತತ್ತ್ವತಃ ।
ತಥಾ ಸ್ಕಂದೋ ಹಿ ಭಗವಾನನ್ಯೇ ತೇ ನಾಮಧಾರಕಾಃ ॥

ಯಥೋಕ್ತಾಃ ಶಿವಧರ್ಮಾ ಹಿ ನಂದಿನಾ ಪರಿಕೀರ್ತಿತಾಃ ।
ಶೈಲಾದೇನ ಮಹಾಭಾಗಾ ವಿಚಿತ್ರಾ ಲಿಂಗಧಾರಕಾಃ ॥

ಶವಸ್ಯೋಪರಿ ಲಿಂಗಂ ಚ ಧ್ರಿಯತೇ ಚ ಪುರಾತನೈಃ ।
ಲಿಂಗೇನ ಸಹ ಪಂಚತ್ವಂ ಲಿಂಗೇನ ಸಹ ಜೀವಿತಂ ॥

ಏತೇ ಧರ್ಮಾಃ ಸುಪ್ರತಿಷ್ಠಾಃ ಶೈಲಾದೇನ ಪ್ರತಿಷ್ಠಿತಾಃ ।
ಧರ್ಮಃ ಪಾಶುಪತಃ ಶ್ರೇಷ್ಠಃ ಸ್ಕಂದೇನ ಪ್ರತಿಪಾದಿತಃ ॥

ಸ್ಕಂದಾತ್ ತತ್ ಸಮನುಪ್ರಾಪ್ತಮಗಸ್ತ್ಯೇನ ಮಹಾತ್ಮನಾ ।
ವೀರಮಾಹೇಶ್ವರಾ ಜ್ಞೇಯಾಃ ಪಾಪಕ್ಷಯಕರಾ ನೃಣಾಂ ॥

ವೀರಶೈವಧರ್ಮವು ಸನಾತನವಾದುದೆಂದೂ, ಬದುಕಿರುವಾಗಲೂ ಮೃತರಾದ ಮೇಲೂ ಲಿಂಗವನ್ನು ಧರಿಸುವ ಈ ಲಿಂಗಧಾರಿಗಳನ್ನು ಪುರಾತನರೆಂದೂ ಈ ಆಧಾರದಲ್ಲಿ ಹೇಳಿರುವುದು ಗಮನಾರ್ಹವಾಗಿದೆ. ಸತ್ತಮೇಲೂ ಲಿಂಗವನ್ನು ಧರಿಸುವ ಲಿಂಗಧಾರಿಗಳನ್ನು ವಿಚಿತ್ರರಾದವರೆಂದು ಹೇಳಿರುವುದನ್ನು ಗಮನಿಸಿದರೆ ಇದನ್ನು ರಚಿಸಿದವನು ವೀರಶೈವೇತರ ರೇನೋ ಎನಿಸುವುದು. ಶಿವನಿಂದಲೇ ಈ ಧರ್ಮವು ಉಪದೇಶಿಸಲ್ಪಟ್ಟುದೆಂದೂ ಹೇಳಿರುವುದರಿಂದ ಶಿವನೇ ಇದಕ್ಕೆ ಪ್ರಥಮ ಗುರು. ಗುರುಪುತ್ರನು ಗುರುವೇ ಆದುದರಿಂದ ಶಿವಪುತ್ರನಾದ ವೀರಭದ್ರನೂ ಗುರುವೇ. ಆದುದರಿಂದ ವೀರಭದ್ರನಿಗೆ ವೀರಶೈವಧರ್ಮೋಪದೇಶದಲ್ಲಿ ಶಿವನನ್ನು ಬಿಟ್ಟರೆ ಅಗ್ರ ಸ್ಥಾನವೇ ದೊರೆತಂತಾಯಿತು. ಆದುದ ರಿಂದಲೇ ಅವನು ಶ್ರೀ ಜಗದ್ಗುರು ರೇಣುಕಪೀಠದವರ ಪೂಜ್ಯಮೂರ್ತಿಯಾಗಿದ್ದಾನೆ. ಇದಲ್ಲದೆ ವೀರಭದ್ರನು ಗೋತ್ರ ಪುರುಷನೂ ಆಹುದು. ಮೇಲೆ ಕಾಣಿಸಿದ ಆಧಾರದಲ್ಲಿ ಪಾಶುಪತವೆನಿಸಿದ ಮತವಿದ್ದು ಸ್ಕಂದ ಪ್ರತಿಪಾದಿತವೆಂದೂ ಅದು ಅವನಿಂದ ಅಗಸ್ತ್ಯನಿಗೆ ಉಪದೇಶವಾಗಿದೆಯೆಂದೂ ಹೇಳಿದೆ. ಅಗಸ್ತ್ಯರೆಂಬುವರು ಅನೇಕರಿರುವರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ರೇಣುಕಾಚಾರ್ಯರಿಂದ ಉಪದೇಶವನ್ನು ಪಡೆದ ಅಗಸ್ತ್ಯನು ಸ್ಕಂದನಿಂದ ಉಪದೇಶವನ್ನು ಪಡೆದ ಅಗಸ್ತ್ಯನಿಗಿಂತ ಬೇರೆಯೇ ಎನ್ನಬೇಕಾಗುವುದು. ಹಾಗೆಯೇ ಶಿಲಾದಪುತ್ರನಾದ ನಂದಿಗೂ ಈ ಮತತತ್ತ್ವವು ಚೆನ್ನಾಗಿ ತಿಳಿದು ಇದ್ದುದಾಗಿಯೂ ಈ ಮತದ ಪ್ರಚಾರವನ್ನು ಈತನು ಮಾಡಿದನೆಂದೂ ಮೇಲಿನ ಆಧಾರದಲ್ಲಿ ಹೇಳಿದೆ. ಆಚಾರ್ಯ ರೇಣುಕರಿಗೂ ವೀರಭದ್ರನಿಗೂ ಇರುವ ಸಂಬಂಧವೂ, ನಂದೀಶ್ವರನಿಗೂ ಬಸವೇಶನಿಗೂ ಇರುವ ಸಂಬಂಧವೂ ಪ್ರಸಿದ್ಧವಾದುವೇ. ವೀರಭದ್ರನು ದಕ್ಷಯಜ್ಞನಾಶಮಾಡಿರುವುದು ಪ್ರಸಿದ್ಧ ವಿಷಯ. ಹಿಂಸಾತ್ಮಕ ಯಜ್ಞಯಾಗಗಳನ್ನು ವಿರೋಧಿಸುವುದು ವೀರಶೈವಧರ್ಮದ ಮುಖ್ಯ ಲಕ್ಷಣಗಳಲ್ಲಿ ಒಂದು. ವೀರಭದ್ರನು ಯಜ್ಞ ಧ್ವಂಸ ಮಾಡಿದ ನೆನಪಿಗಾಗಿ ನಡೆವ ವೀರಭದ್ರನ ಹಲಗೆಯ ನರ್ತನವೂ, ಅದಕ್ಕೆ ಸಂಬಂಧಪಟ್ಟಂತೆ ಅಗ್ನಿಕೊಂಡ ವನ್ನು ತುಳಿಯುವುದೂ ರೋಮಾಂಚನಕಾರಿಯಾದುದಾಗಿವೆ. ವೀರಭದ್ರನ ಮಹತ್ಕಾರ್ಯದ ಕುರುಹಾಗಿ ವೀರಶೈವ ಪದದಲ್ಲಿನ 'ವೀರ' ಪದವು ಶೈವಪದಕ್ಕೆ ಸೇರಿಸಲ್ಪಟ್ಟಿತೋ ಎನ್ನುವುದು ವಿಚಾರಾರ್ಹ ವಿಷಯವಾಗಿದೆ.

ವೀರಶೈವಧರ್ಮಗ್ರಂಥಗಳ ನಿಲುವೂ, ವಿದ್ವಾಂಸರ ವಿಮರ್ಶಕರ ನಿಲುವಿನಂತೆ ಬಸವೇಶ್ವರನು ತನಗಿಂತಲೂ ಹಿಂದೆಯೇ ಇದ್ದ ಧರ್ಮವನ್ನು ಸಂಸ್ಕರಿಸಿದನೆಂಬುದೇ ಆದರೂ ವೀರಶೈವಧರ್ಮವನ್ನು ಬಸವೇಶ್ವರನೇ ಸ್ಥಾಪಿಸಿದ ನೆಂದೂ, ಆ ಹಿಂದೆ ಈ ಮತವೇ ಇರಲಿಲ್ಲವೆಂದೂ ಹೇಳುವವರುಂಟು. ಡಾ. ಎಂ. ಆರ್. ಸಾಖರೆಯವರಂತಹ ವೀರ ಶೈವ ವಿದ್ವಾಂಸರು ಈ ಅಭಿಪ್ರಾಯವನ್ನು ಸಮರ್ಥಿಸಿದುದರಿಂದ ಈ ಅಭಿಪ್ರಾಯಕ್ಕೆ ಪ್ರೋತ್ಸಾಹವುಂಟಾಯಿತು.

ಇದಲ್ಲದೆ ಅನ್ವೇಷಣಾರ್ಥವಾದ ಕೆಲವು ವಿಷಯಗಳು ವಿಚಾರಾರ್ಹವಾಗಿವೆ. ಈ ಎಲ್ಲ ದೃಷ್ಟಿಯಿಂದ ಅಖಿಲ ಭಾರತ ವೀರಶೈವ ಮಹಾಸಭೆಯ ತ್ರೈಮಾಸಿಕ ಪತ್ರಿಕೆ 'ವೀರಶೈವ'ದ ೧೯೬೧ನೆಯ ಇಸವಿಯ ಜೂನ್ ತಿಂಗಳ ಸಂಚಿಕೆಯ ಸಂಪಾದಕೀಯ ಲೇಖನದಲ್ಲಿ ಹೀಗೆ ವಿಚಾರಾರ್ಹ ವಿಷಯಗಳನ್ನು ಉಲ್ಲೇಖಿಸಿದ್ದಾರೆ—"ವೀರಶೈವದ ಉಗಮ ಎಂದು ಮತ್ತು ಹೇಗೆ ಆಗಿದೆ? ವೀರಶೈವ ಅಥವಾ ಲಿಂಗಾಯತ ಎಂಬ ಹೆಸರು ಎಂದಿನಿಂದ ಪ್ರಚಾರದಲ್ಲಿ ಬಂದಿತು? ಅದಕ್ಕೂ ಮೊದಲು ಇದಕ್ಕೆ ಬೇರೆ ಯಾವುದಾದರೂ ಹೆಸರಿದ್ದಿತೆ? ಇದ್ದರೆ ಅದು ಯಾವುದು? ವೀರ ಶೈವ ಪದದ ಉತ್ಪತ್ತಿ ಮತ್ತು ಪ್ರಾಚೀನತೆ. ಬಸವಾದಿ ಪ್ರಮಥರ ಪೂರ್ವದಲ್ಲಿ ಇದರ ಸ್ವರೂಪ ಹೇಗಿದ್ದಿತು? ಶೈವ ಧರ್ಮದಲ್ಲಿರುವ ಅನೇಕ ಪಂಥಗಳಲ್ಲಿ ಇದೊಂದು ಸ್ವತಂತ್ರವಾದ ಪಂಥವೋ ಅಥವಾ ಯಾವುದಾದರೂ ಪಂಥಕ್ಕೆ ಸಂಬಂಧಿಸಿದುದೋ? ವೇದೋಪನಿಷತ್ತುಗಳಲ್ಲಿ ವೀರಶೈವಧರ್ಮದ ಅಂಶಗಳೇನಾದರೂ ದೊರೆಯುವುವೆ? ಆಗಮಾದಿ ಗಳಲ್ಲಿ ವರ್ಣಿತವಾದ ವೀರಶೈವಧರ್ಮವಾವುದು? ಶಿವಶರಣರ ವಚನಗಳಲ್ಲಿ ಶರಣರು ಆಧಾರವಾಗಿಟ್ಟುಕೊಂಡ ಸಂಸ್ಕೃತ ಶ್ಲೋಕಗಳಲ್ಲಿ ದೊರೆಯುವ ವೀರಶೈವಧರ್ಮಸ್ವರೂಪ, ೧೨ನೆಯ ಶತಮಾನಕ್ಕೂ ಪೂರ್ವದಲ್ಲಿ ವೀರಶೈವ ಧರ್ಮವಿದ್ದರೆ ಅದರ ಇತಿಹಾಸ . . . . ವೀರಶೈವರ ಇತಿಹಾಸ ಆಚಾರ ವಿಚಾರಗಳಿಗೆ ಸಂಬಂಧಪಟ್ಟ ಇಂತಹ ಅನೇಕ ವಿಷಯಗಳನ್ನು ಚರ್ಚಿಸುವುದು ಅಗತ್ಯವಾಗಿದೆ. ಇವೇ ಮೊದಲಾದ ವಿಷಯಗಳು ವಿಚಾರಾರ್ಹವಾದುವು ಎಂಬುದು ನಿರ್ವಿವಾದವಾದುದಾಗಿದೆ. ಈ ವಿಷಯಗಳನ್ನೆಲ್ಲ ಅನ್ವೇಷಿಸಲು ಒಂದು ವಿದ್ವಾಂಸರ ಸಮಿತಿಯು ಅವಶ್ಯವಾದರೂ ಅಂತಹ ಸಮಿತಿಯು ರಚಿಸಲ್ಪಡದಿದ್ದುದರಿಂದ, ಅಂತಹ ಸಮಿತಿಯು ರಚಿತವಾದಾಗ ಸಾಕಾದಷ್ಟು ಸಾಮಗ್ರಿಯು ಅವರ ಮುಂದೆ ಇರಲೆಂಬ ದೃಷ್ಟಿಯಿಂದ 'ವೀರಶೈವ ಉಗಮ ಮತ್ತು ಪ್ರಗತಿ' ಎಂಬ ಗ್ರಂಥವು ರಚಿಸಲ್ಪಟ್ಟಿತು. ಆ ಗ್ರಂಥವನ್ನು ಆಮೂಲಾಗ್ರವಾಗಿ ಓದಿ ಮೆಚ್ಚಿದ ಶ್ರೀಶೈಲ ಮತ್ತು ಉಜ್ಜಯಿನಿ ಜಗದ್ಗುರುಗಳಿಂದ ಅದು 'ವೀರ ಶೈವಭಾಷ್ಯ'ವೆಂದು ಹೊಗಳಲ್ಪಟ್ಟಿದೆ. ಶ್ರೀಮನ್ನಿರಂಜನ ಜಗದ್ಗುರು ಶಿವಲಿಂಗೇಶ್ವರ ಮಹಾಸ್ವಾಮಿಗಳು ನಿಡುಸೋಸಿ ಯವರ ಪ್ರಕಾರ—"ಗ್ರಂಥವು ಪಠನೀಯವಾಗಿದೆ ಮನನೀಯವಾಗಿದೆ. ಇತಿಹಾಸ ಸಂಶೋಧಕರಿಗೆ ವಿಪುಲವಾದ ಸಂಪತ್ತಿದೆ; ತತ್ತ್ವವೇತ್ತರಿಗೆ ಸತ್ಯದ ದರ್ಶನವಿದೆ; ಧರ್ಮಾಭಿಮಾನಿಗಳಿಗೆ ತಮ್ಮದೆನ್ನುವ ಹೆಮ್ಮೆ ಇದೆ, ಪುಣ್ಯದ ಪಣ್ಯವಿದೆ: ವಿಮರ್ಶಕರಿಗೆ ವಿಚಕ್ಷಣ ಒಲವನ್ನೀಯುವ ಅಮೃತದ ಗುಟುಕುಗಳಿವೆ." ವೀರಶೈವದ ಉಗಮ ಮತ್ತು ಪ್ರಗತಿ ಗ್ರಂಥವನ್ನು ಈ ವಿಷಯದಲ್ಲಿ ಆಸಕ್ತಿ ಇರುವವರು ಓದಲೆಂಬ ದೃಷ್ಟಿಯಿಂದ ಈ ಅಭಿಪ್ರಾಯಗಳನ್ನು ಇಲ್ಲಿ ಹೇಳಲಾಯಿತು. ಆ ಗ್ರಂಥದಲ್ಲಿರುವ ವಿಷಯಗಳನ್ನೆಲ್ಲ ಈ ಲೇಖನದಲ್ಲಿ ಹೇಳುವುದು ಅಸಾಧ್ಯವಾದರೂ ಅವುಗಳಲ್ಲಿ ಮುಖ್ಯವಾದ ವಿಷಯಗಳನ್ನೂ ಈ ವಿಷಯದಲ್ಲಿ ಈಚೆಗೆ ನನ್ನ ಗಮನಕ್ಕೆ ಬಂದಿರುವ ವಿಷಯಗಳನ್ನೂ ಈ ಲೇಖನ ದಲ್ಲಿ ಉಲ್ಲೇಖಿಸಲಾಗುತ್ತದೆ.

ವೀರಶೈವಸಿದ್ಧಾಂತದ ಮೂಲವನ್ನು ಪರಿಶೀಲಿಸುವ ಮೊದಲು ಆ ಸಿದ್ಧಾಂತದ ಮುಖ್ಯ ತತ್ತ್ವಗಳೇನು ಎಂಬು ದನ್ನು ನಿಷ್ಕರಿಸಿ ಆ ಮುಖ್ಯ ತತ್ತ್ವಗಳು ಈ ಸಿದ್ಧಾಂತದ ಉಗಮಕಾಲದಲ್ಲಿ ಇದ್ದುವೇ ಇಲ್ಲವೇ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಸ್ಕಾಂದಪುರಾಣಾಂತರ್ಗತ ಕೇದಾರಖಂಡದ ಆಧಾರವನ್ನು ಮೇಲೆ ಕೊಡಲಾಗಿದೆಯಷ್ಟೆ. ಲಿಂಗಧಾರೀ ಧರ್ಮವು ಶಿವನಿಂದಲೇ ಸ್ಥಾಪಿಸಲ್ಪಟ್ಟಿತೆಂದು ಹೇಳುವ ಈ ಆಧಾರದಲ್ಲಿ ಈ ಧರ್ಮವನ್ನು 'ಧರ್ಮಃ ಪಾಶುಪತಶ್ರೇಷ್ಠಃ' ಎಂದು ಕರೆಯಲಾಗಿದೆ. ಶಿವನನ್ನುಳಿದ ಜೀವರುಗಳೆಲ್ಲ ಪಶುಗಳು. ಅವರಿಗೆ ಒಡೆಯನಾದ ಶಿವನು ಪಶುಪತಿ; ಮಲತ್ರಯಗಳೆಂಬ ಪಾಶದಿಂದ ಜೀವರುಗಳಾದ ಪಶುಗಳು ಬಂಧಿತರಾಗಿದ್ದಾರೆ. ಪಶುಪತಿಶಿವನನ್ನು ಲಿಂಗ ರೂಪದಲ್ಲಿ ಪೂಜಿಸಿ ಧರಿಸುವುದರಿಂದ ಶಿವನನ್ನು ಪ್ರಸನ್ನಗೊಳಿಸಬಹುದು: ಶಿವಶಕ್ತಿಯರಲ್ಲಿ ಅಭೇದವಿದೆ; ಶಿವಯೋಗ ದಿಂದ ಪಾಶವು ಹರಿದುಹೋಗಿ ಮೋಕ್ಷವಾಗುತ್ತದೆ; ದಯವೇ ಧರ್ಮದ ಮೂಲವಾದುದರಿಂದ ಯಜ್ಞಯಾಗಾದಿ ಗಳಲ್ಲಿ ಪ್ರಾಣಿಹಿಂಸೆಯನ್ನು ಮಾಡುವುದು ಧರ್ಮಕ್ಕೆ ವಿರೋಧವಾದುದು: ಇವೇ ವೀರಶೈವಧರ್ಮದ ಮುಖ್ಯ ಲಕ್ಷಣಗಳು.

## ವೇದಪೂರ್ವ ಮೊಹೆಂಜೋದಾರೋ—ಹರಪ್ಪ ದ್ರಾವಿಡ ನಾಗರಿಕತೆಯಲ್ಲಿ ವೀರಶೈವದ ಮೂಲ

ವೀರಶೈವ ಲಿಂಗಧಾರೀಧರ್ಮದ ಮೂಲವನ್ನು ಋಗ್ವೇದಕಾಲಕ್ಕಿಂತಲೂ ಸಹಸ್ರಾರು ವರ್ಷಗಳಷ್ಟು ಹಿಂದಿನ ದಾದ ಸಿಂಧೂ ತೀರದ ಮೊಹೆಂಜೋದಾರೋ-ಹರಪ್ಪದ ದ್ರಾವಿಡ ನಾಗರೀಕರಲ್ಲಿ ಕಾಣಬಹುದೆನ್ನುವುದು ಎಷ್ಟು ಆಶ್ಚರ್ಯಕರವೋ ಅಷ್ಟೇ ನಿಜವೆನ್ನುವುದು ಸರ್ ಜಾನ್‌ಮಾರ್ಷಲ್ಲರು ಆ ನಾಗರೀಕತೆಯ ಅವಶೇಷಗಳಿಂದ ನಿರ್ಧರಿಸಿದ

ವಿಷಯುಗಳಿಂದ ತಿಳಿದುಬರುವುದು. ಋಗ್ವೇದಕಾಲದ ಆರ್ಯರಲ್ಲಿ ವೀರಶೈವಧರ್ಮದ ಸುಳಿವಂತಿರಲಿ ಶೈವಧರ್ಮದ ಸುಳಿವೇ ಇಲ್ಲದಿರುವುದನ್ನು ಮೊದಲು ಗಮನಿಸಬೇಕಾಗುವುದು. ಮಹಾಮಹೋಪಾಧ್ಯಾಯ ಅರ್ಥಶಾಸ್ತ್ರವಿಶಾರದ ಡಾ. ಆರ್. ಶಾಮಾಶಾಸ್ತ್ರಿಗಳು ಜಯಕರ್ನಾಟಕದ ಒಂಬತ್ತನೆಯ ಸಂಪುಟದಲ್ಲಿ ಪ್ರಕಟವಾದ ಲೇಖನದಲ್ಲಿ ಹೀಗೆ ಬರೆದಿರುವರು:

"ವೈದಿಕ ಆರ್ಯರ ಪೂಜೆ ಮುಖ್ಯವಾಗಿ ಅಗ್ನಿಪೂಜೆಯು. ಅವರ ದೇವತೆಗಳು ಭೂಮ್ಯಂತರಿಕ್ಷಗಳಲ್ಲಿ ತೋರಿಯಡಗುವ ಅನೇಕ ದಿವ್ಯಶಕ್ತಿಗಳು. ಅಗ್ನಿಯೊಂದನ್ನುಳಿದು ಆರ್ಯರ ಯಾವ ದೇವರನ್ನಾಗಲೀ ಸಾಕಾರವಾಗಿ ತೋರಿಸಲು ಬರುವಂತಿಲ್ಲ . . . ಆರ್ಯರ ರುದ್ರನು ಈಗಿನ ತ್ರಿಶೂಲಧಾರಿಯಾದ ಶಿವನಲ್ಲ ; ಅದ್ಭುತ ಶಕ್ತಿಯುಳ್ಳ ಪ್ರಚಂಡ ವಾಯುವು. ಆರ್ಯರ ವಿಷ್ಣುವು ಶಂಖಚಕ್ರಧಾರಿಯಾದ ಈಗಿನ ವಿಷ್ಣುವಲ್ಲ : ವಿಶ್ವಪೋಷಕವಾದ ಸೂರ್ಯನು. ಆರ್ಯರ ನಿತ್ಯನೈಮಿತ್ತಿಕ ಕರ್ಮಗಳಲ್ಲಿಯೂ ಕೂಡ ನಾವು ಭಾವಿಸುವಂತೆ ವಿಷ್ಣು ಶಿವರ ಉಲ್ಲೇಖವಿರುವುದಿಲ್ಲ . . . ಅಗ್ನಿಪೂಜೆಯನ್ನು ಮಾಡುತ್ತಿದ್ದರು : ತ್ರಿಕಾಲಗಳಲ್ಲಿ ಸೂರ್ಯನನ್ನು ಆರಾಧಿಸುವರು. ಪಂಚಮಹಾಯಜ್ಞಬಲಿಹರಣಗಳನ್ನು ನೆರವೇರಿಸುವರು. ಈ ಎಲ್ಲ ವಿಧಿಗಳಲ್ಲಿ ಅವರು ತಕ್ಕ ವೇದದ ಭಾಗಗಳನ್ನು ಪಠಿಸುತ್ತಿದ್ದರು. ಆದರೆ ಈಗಿನ ಶೈವರು ವೈಷ್ಣವರು ಪೂಜೆಯ ಕಾಲಕ್ಕೆ ಪಠಿಸುವ ಮಂತ್ರಗಳಿಗೂ ಪೂಜೆಗೂ ಸಂಬಂಧವೇ ತೋರದು. ಒಂದು ಉದಾಹರಣೆಯನ್ನು ಹೇಳಬೇಕಾದರೆ—ದೇವರಿಗೆ ಗಂಧ ಹಚ್ಚುವ ಕಾಲದಲ್ಲಿ 'ಗಂಧದ್ವಾರಾಂ' ಎಂಬ ಮಂತ್ರವನ್ನು ಅನ್ನುವ ಪರಿಪಾಠವಿದೆ. ಈ ಮಂತ್ರದಲ್ಲಿ ಗಂಧವೆಂಬ ಶಬ್ದಮಾತ್ರವಿದೆ : ಆದರೆ ವಿಷ್ಣುವಿಗಾಗಲೀ ಶಿವನಿಗಾಗಲೀ ಹಚ್ಚುವ ಗಂಧಕ್ಕಾಗಲೀ ಏನೂ ಸಂಬಂಧವಿಲ್ಲ. ಭಾಗ್ಯದೇವತೆಯಾದ 'ಶ್ರೀ'ಯನ್ನು ಕರೆಯುವ ಮಂತ್ರವಿದು."

ಈ ಚಿತ್ರದಿಂದ ಋಗ್ವೇದಕಾಲದ ಆರ್ಯರಲ್ಲಿ ವೀರಶೈವದ ಹಿನ್ನೆಲೆಯನ್ನು ನಿರೀಕ್ಷಿಸುವುದಿರಲಿ ಶೈವದ ಹಿನ್ನೆಲೆಯನ್ನೇ ಅದರಲ್ಲಿ ನಿರೀಕ್ಷಿಸಲಾಗುವುದಿಲ್ಲವೆನ್ನುವದು ಸ್ಪಷ್ಟ.

ದ್ರಾವಿಡ ಸಂಸ್ಕೃತಿಯ ಮೂಲವು ಕಾಲಗರ್ಭದಲ್ಲಿ ಅಡಗಿಹೋಗಿದ್ದಿತು. ಸಿಂಧೂ ನದಿಯ ತೀರದ ಮೊಹೆಂಜೋದಾರೊ—ಹರಪ್ಪ ಜನರಿಗೆ ಸಂಬಂಧಪಟ್ಟ ಅವಶೇಷಗಳು ಬೆಳಕಿಗೆ ಬಂದಾಗ, ದ್ರಾವಿಡ ಸಂಸ್ಕೃತಿಯ ದೃಶ್ಯವು ವಿಚಾರಪರರ ಆಶ್ಚರ್ಯವನ್ನು ಚಕಿತಗೊಳಿಸಿತು. ಆ ಹಿಂದೆ, ನಾಗರಿಕರಾದ ಆರ್ಯರು ಅನಾಗರಿಕ ದ್ರಾವಿಡರನ್ನು ಸುಲಭವಾಗಿ ಜಯಿಸಿ ದಕ್ಷಿಣದ ಕಡೆಗೆ ದೂಡಿದರೆಂಬ ಭಾವನೆ ಇದ್ದಿತು. ಆದರೆ ಮೊಹೆಂಜೋದಾರೊ-ಹರಪ್ಪಗಳಲ್ಲಿ ಕಂಡುಬಂದ ಅವಶೇಷಗಳಿಂದ ದೊರೆತ ದೃಶ್ಯವು ದ್ರಾವಿಡರು ವೇದಕಾಲದ ಆರ್ಯರಿಗಿಂತಲೂ ಉತ್ಕೃಷ್ಟವಾದ ನಾಗರೀಕತೆಯುಳ್ಳವರೆಂಬುದನ್ನು ಹೊರಗೆಡವಿತು. ಹಳ್ಳಿಗಳಲ್ಲಿ ವಾಸಮಾಡುತ್ತ ಕೃಷಿ ಪಶುಪಾಲನೆಗಳಿಂದ ಜೀವನ ಮಾಡುತ್ತಿದ್ದ ಆರ್ಯರಿಗಿಂತ ವಾಣಿಜ್ಯದಿಂದ ಜೀವನ ಮಾಡುತ್ತ ಪಟ್ಟಣಗಳಲ್ಲಿ ವಾಸಮಾಡಿಕೊಂಡು ಪರದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದ ದ್ರಾವಿಡರು ಹೆಚ್ಚು ನಾಗರಿಕರಾಗಿದ್ದರೆಂಬುದು ತಜ್ಞರ ಅಭಿಪ್ರಾಯ. ಐದಾರು ಸಹಸ್ರವರ್ಷಗಳ ಹಿಂದೆ, ಋಗ್ವೇದದ ಆರ್ಯರ ಕಾಲಕ್ಕೂ ಮೊದಲು, ಅನೇಕ ದೇಶಗಳಲ್ಲಿ ಇನ್ನೂ ನಾಗರೀಕತೆಯ ಬೆಳಕು ಬೀಳದಿದ್ದಾಗ ದ್ರಾವಿಡರು ಆಗಲೇ ದೊಡ್ಡ ದೊಡ್ಡ ನಗರಗಳನ್ನು ಕಟ್ಟಿಕೊಂಡು, ರತ್ನಖಚಿತವಾದ ಬಂಗಾರದ ಒಡವೆಗಳನ್ನು ಉಪಯೋಗಿಸುತ್ತ ಓದುಬರಹ ಬಲ್ಲವರಾಗಿ ಧಾರ್ಮಿಕಜೀವನವನ್ನು ನಡೆಸುತ್ತಿದ್ದರು. ನಗರದಲ್ಲಿ ವಿಶಾಲವಾದ ನೇರವಾದ ರಸ್ತೆಗಳು, ಒಳಚರಂಡಿಗಳು, ಸ್ನಾನದ ದೊಡ್ಡ ಕೊಳಗಳೂ ಇರುತ್ತಿದ್ದವು. ಗೋಧಿ, ಜವೆಗೋಧಿಗಳನ್ನು ಬೆಳೆಯುತ್ತಿದ್ದರು ; ಎಮ್ಮೆ ಎತ್ತು ಕುರಿ ಹಂದಿ ನಾಯಿ ಆನೆ ಒಂಟೆಗಳನ್ನು ಆಗಲೇ ಪಳಗಿಸಿಕೊಂಡಿದ್ದರು. ಚಿತ್ರಕಲೆ ಮೊದಲಾದವುಗಳಲ್ಲಿ ಪರಿಣಿತರಾಗಿದ್ದರು. ಶಿವಶಕ್ತಿಗಳ ಪೂಜೆಗೆ ಸಂಬಂಧಪಟ್ಟ ಅವರ ಮತಧರ್ಮವು ಇಂದು ಹಿಂದುಗಳಲ್ಲಿ ಪ್ರಚಾರದಲ್ಲಿರುವ ಆ ಧರ್ಮದ ಮುಖ್ಯ ಲಕ್ಷಣಗಳಿಂದ ಕೂಡಿದ್ದಿತು. ಮೊಹೆಂಜೋದಾರೋ ಹರಪ್ಪಗಳಲ್ಲಿನ ಅವಶೇಷಗಳಿಂದ ತಿಳಿದುಬರುವ ಅತ್ಯಂತ ಚಕಿತಗೊಳಿಸುವ ವಿಷಯವೇನೆಂದರೆ ಶೈವಧರ್ಮವು ಶಿಲಾಯುಗದ ಆದಿಮಾನವಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ಮತ್ತು ಅದು ಪ್ರಪಂಚದಲ್ಲಿನ ಎಲ್ಲ ಧರ್ಮಗಳಿಗಿಂತಲೂ ಪುರಾತನವಾದುದು ಎಂಬುದು ಎಂದು ಸರ್‌ಜಾನ್ ಮಾರ್ಷಲ್ಲರು ಅಭಿಪ್ರಾಯಪಡುತ್ತಾರೆ.[1] ಅವಶೇಷಗಳಲ್ಲಿ

---

[1] Equally peculiar to the indus valley and stamped with an individual character of their own, are its art and religion . . . . taken as a whole, their religion is so characterestically Indian, as hardly to be distinguishable from still living Hinduism or at least from that aspect of it which is bound with animism and the cults of siva and the mother goddes–still the most popular forces in popular worship. Among the many revelations that Mohonjo–Daro and Harappa have had instore for us, none perhaps is more

ದೊರೆತಿರುವ ಲಿಂಗವಿಷಯವಾಗಿ ಅವರು ಹೇಳುವಂತೆ ವೇದಪೂರ್ವದ ಈ ದ್ರಾವಿಡ ಜನರು ಲಿಂಗಗಳನ್ನು ಪೂಜಿಸುತ್ತಿದ್ದರಲ್ಲದೆ ಅವನ್ನು ಇಂದಿನ ಶಿವಭಕ್ತರಂತೆ ದೇಹದ ಮೇಲೆ ಧರಿಸಿಕೊಳ್ಳುತ್ತಿದ್ದರು.[2] ಹೀಗೆ ಸರ್ ಜಾನ್ ಮಾರ್ಷೆಲ್ಲರು ಅವರ ಗ್ರಂಥದ ೫೯ನೆಯ ಪುಟದಲ್ಲಿ ಹೇಳಿರುವುದಲ್ಲದೆ, ೬೧ನೆಯ ಪುಟದ ಅಡಿಟಿಪ್ಪಣಿಯಲ್ಲಿ ಶಿವಭಕ್ತರೆಂದರೆ ವೀರಶೈವರೇ ಎಂಬುದನ್ನು ಸ್ಪಷ್ಟಮಾಡಿದ್ದಾರೆ. ಅದೃಷ್ಟವಶಾತ್ ಇಂತಹ ಅವಶೇಷಗಳನ್ನು ಪರೀಕ್ಷಿಸುವುದರಲ್ಲಿ ತಜ್ಞರೂ ಅನುಭವಿಗಳೂ ಆದ ಅರ್ನೆಸ್ಟ್ ಮ್ಯಾಕೆಯವರ ಸಹಾಯವು ತಮಗೆ ದೊರಕಿತೆಂದೂ ತಮ್ಮ ಅನ್ವೇಷಣೆಯಲ್ಲಿ ಅವರ ಭಾಗ ಹೆಚ್ಚಿನದೆಂದೂ ಅದಕ್ಕೆ ತಾವು ಋಣಿಗಳೆಂದೂ ತಮ್ಮ ಗ್ರಂಥದ ಮುನ್ನುಡಿಯಲ್ಲಿ ಮಾರ್ಷೆಲ್ಲರು ಹೇಳಿಕೊಂಡಿದ್ದಾರೆ.[3] ಆದುದರಿಂದ ಪ್ರಸಿದ್ಧ ವಿಮರ್ಶಕರಾದ ಮ್ಯಾಕೆಯವರ ಅಭಿಪ್ರಾಯವು ಮಾನ್ಯವಾದುದು. ಇವರ 'ಅನ್ವೇಷಣೆ'ಯು ಮುಗಿದ ಮೇಲೆ ಈ ವಿಷಯವಾಗಿ ಅವರು ಮಾಡಿದ ಭಾಷಣದ ಅನುವಾದವನ್ನು ಶ್ರೀಯುತ ಡಿ. ಎಲ್. ನರಸಿಂಹಾಚಾರ್ಯರು ಪ್ರಬುದ್ಧ ಕರ್ನಾಟಕದ ಭಾವಸಂವತ್ಸರದ ಕಾಮನ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ, ಅದರ ೫೧ನೆಯ ಪುಟದ ಭಾಗವಿದು ಗಮನಾರ್ಹವಾಗಿದೆ :

"ಎಂಟನೆಯ ಚಿತ್ರದಲ್ಲಿ ಪುರೋಹಿತನು ತನ್ನ ಎದೆಯಲ್ಲಿ ಧರಿಸುತ್ತಿದ್ದ ಒಂದು ಬಗೆಯ ಭಾರವಾದ ಪದಕವಿದೆ. ಇದನ್ನು ಹಳದಿಯ ಬಳಪದ ಕಲ್ಲಿನಲ್ಲಿ ಕೊರೆದಿದೆ. ಅಳತೆ ಎಲ್ಲ ಕಡೆಯಲ್ಲಿಯೂ ಎರಡೂವರೆ ಅಂಗುಲ. ಮುದ್ರಿಕೆಗಳಲ್ಲಿ ಕಂಡುಬರುವ ಪ್ರಾಣಿಯ ಚಿತ್ರವೇ ಇದರಲ್ಲಿಯೂ ಇದೆ. ಈ ಪ್ರಾಣಿಯ ಎದುರುಗಡೆ ಯಾವುದೋ ಪೂಜಾವಸ್ತು ಇದೆ. . . ಈ ಪದಕವನ್ನು ಬಹುಶಃ ಚಿನ್ನದ ಕರಡಿಗೆಯಲ್ಲಿಯೋ ಅಥವಾ ಇನ್ನಾವುದೋ ಲೋಹದ ಭರಣಿಯಲ್ಲಿಯೋ ಇಡುತ್ತಿದ್ದಂತೆ ಕಾಣುತ್ತದೆ."

ಇದರಿಂದ ಪೂಜ್ಯವಸ್ತುವನ್ನು ಎದೆಯ ಮೇಲೆ ಧರಿಸಲು ಆ ಕಾಲದ ಜನರು ಚಿನ್ನದ ಅಥವಾ ಬೇರೆಯ ಲೋಹದ ಕರಡಿಗೆಯನ್ನು ಉಪಯೋಗಿಸುತ್ತಿದ್ದರೆಂಬುದು ಡಾ. ಮ್ಯಾಕೆಯವರ ವರದಿಯಿಂದ ಸ್ಪಷ್ಟವಾಗುವುದು : ಹಾಗೆಯೇ ಆ ಲಿಂಗವನ್ನು ಆ ಜನರು ದೇಹದ ಮೇಲೆ ಧರಿಸುತ್ತಿದ್ದರೆಂಬುದೂ ಮಾರ್ಷೆಲ್ಲರ ವರದಿಯಿಂದ ಸ್ಪಷ್ಟವಾಗುವುದು. ಮೆಡಿಟರೇನಿಯನ್ ತೀರದ ಜನರಲ್ಲಿಯೂ ಲಿಂಗವನ್ನು ಧರಿಸುವ ಪದ್ಧತಿಯು ಆಗಿನ ಕಾಲದ ಜನರಲ್ಲಿದ್ದಿತೆಂಬುದೂ ಅದೂ ಹಿಂದೂದೇಶದಿಂದ ಆ ದೇಶಕ್ಕೆ ಹರಡಿದ ಪದ್ಧತಿಯೆಂಬುದೂ ಕೀಥರ ಮತ್ತು ಫ್ರೀಲಸ್ಕಿಯವರ ಮತ. ಸಿಂಧೂನದೀತೀರದ ನಾಗರೀಕರ ಅವಶೇಷಗಳಲ್ಲಿ ದೊರಕಿರುವ ಮುದ್ರಿಕೆಗಳಲ್ಲಿ ಪದ್ಮಾಸನಾರೂಢನಾಗಿ, ನಾಸಿಕಾಗ್ರದಲ್ಲಿ ದೃಷ್ಟಿಯಿಟ್ಟು ಊರ್ಧ್ವಮೇಢ್ರನಾಗಿ ಕುಳಿತಿರುವ ಪಶುಪತಿಯ ವಿಗ್ರಹವಿದೆ—ಇದಲ್ಲದೆ ಶಿವಯೋಗವು ಆಗಿನ ಕಾಲದಲ್ಲಿ ಪ್ರಚಾರದಲ್ಲಿದ್ದಿತೆಂಬುದನ್ನು ತೋರಿಸುವ ಇತರ ಮುದ್ರಿಕೆಗಳೂ ಸಿಕ್ಕಿವೆ. ವೇದಿಕ್ ಏಜ್ ಎಂಬ ಗ್ರಂಥದಲ್ಲಿ ಅಲೆನ್‌ಅನ್‌ವಿಲ್ ಎಂಬುವರು ಶಿವಶಕ್ತಿಯರು ಪೂಜಿಸಲ್ಪಡುತ್ತಿದ್ದುದನ್ನೂ, ಯೋಗೇಶ್ವರನ ಕಲ್ಪನೆ ಇದ್ದುದನ್ನೂ ಗಮನಿಸಿದ್ದಾರೆ.[4] ಪ್ರೀ ಇಂಡಿಯನ್ ಕಲ್ಚರ್ ಗ್ರಂಥದಲ್ಲಿ ಈ ಕಾಲದಲ್ಲಿ ಶಿವಯೋಗಪದ್ಧತಿ ಇದ್ದುದೂ ಬ್ರಹ್ಮಚರ್ಯಕ್ಕೆ ಪ್ರಾಮುಖ್ಯತೆ ಇದ್ದುದೂ ಬಿಲ್ವಪತ್ರಧಾರಣೆ ಮೊದಲಾದ ವಿಷಯಗಳಿದ್ದುದೂ ಗಮನಿಸಲ್ಪಟ್ಟಿವೆ.[5]

---

remarkable than this discovery that saivism has a history going back to the chalcolithic Age or perhaps even further still, and that it thus takes its place as the most ancient living faith in the world (extract from the Introduction of Sir John Marshall to his Report on Mohonjodaro and the Indus Civilization)

[2] *Pre-historic lingas in the Indus valley and Beluchistan*—Indeed the only explanation, applicable to them are is that they were sacred objects of some sort, the larger ones serving as aniconicagalmata for cult purposes, the smaller as amulets to be carried on the person, just as miniature lingas are commonly carried by saivites to day (page 59)

[3] By a stroke of good fortune I was able to secure the services of Mr. Ernest Mackey well-known for his excavations at kish and jamet nasr and an archieologist of long experience to this officer my debt is in regard to these volumes is particularly a heavy one.

[4] Siva was one of the principle deites of the people, along with mother goddess . . . The deity is sitting crolegged in padmasana posture with eyes turned towards the tip of the nose which evidences Yogeeshwara aspect of the deity.

[5] One marble statuette has the head, neck and body guiet errect and half shunt eyes fixed on the tip of the nose. Another is drapet in the upaveeta fassion passing over the left shoulder and under his right arm. His shawl has rosettes having in form of the 'bilva' leaf, the most sacred material for worship in siva

ಯೋಗಾರೂಢನಾದ ಶಿವನ ಪ್ರತಿಮೆಯಿಂದ ಶಿವಯೋಗದ ಕಲ್ಪನೆಯು ಆ ಕಾಲದಲ್ಲಿ ಇತ್ತೆಂಬುದು ನಿಶ್ಚಯವಾಗುವುದು. ಎದೆ, ಕತ್ತು, ಶಿರಸ್ಸುಗಳು ನೇರವಾಗಿದ್ದು ಅರ್ಧನಿಮೀಲಿತನೇತ್ರದ ದೃಷ್ಟಿಯು ನಾಸಾಗ್ರದಲ್ಲಿರುವುದರಿಂದ ಇಂದ್ರಿಯಗಳನ್ನು ಮನಸ್ಸಿನಿಂದ ದಮನಮಾಡಿ ಹೃದಯಕುಹರದಲ್ಲಿ ನಿಲ್ಲಿಸಿ ಪರಮಾತ್ಮನ ಅನುಸಂಧಾನ ಮಾಡುವುದು ಯೋಗಾನುಸಂಧಾನ. ಶ್ವೇತಾಶ್ವತರ ಉಪನಿಷತ್ತಿನ ಒಂದು ಮಂತ್ರದಿಂದ ಇದನ್ನು ಸ್ಪಷ್ಟಮಾಡಬಹುದು :

'ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ ಹೃದೀಂದ್ರಿಯಾಣಿ ಮನಸಾ ಸನ್ನಿವೇಶ್ಯ ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್ ಶ್ರೋತಾಂಸಿ ಸರ್ವಾಣಿ ಭಯಾನಕಾನಿ.'

ಶಾಂಕರ ಭಾಷ್ಯ—'ತ್ರಿರುನ್ನತಂ—ತ್ರೀಣಿ ಉರೋಗ್ರೀವಶಿರಾಂಸಿ ಉನ್ನತಾನಿ ಯಸ್ಮಿನ್ ಶರೀರೇ' ಈ ಮಂತ್ರದ ಕನ್ನಡ ಪದ್ಯಾನುವಾದವಿದು :

ಕಂದ ॥ ನಿಲೆ, ಕಂಧರವಕ್ಷಶಿರಂ । ಸಲೆನೆಟ್ಟನೆ, ಮನದಿನಿಂದ್ರಿಯತತಿ ಹೃದಯದೊಳ್ ॥
ನಿಲಲಾ ಬ್ರಹ್ಮೋಡುಪದೊಳ್ । ಜಲದ ಭಯಾನಕ ಸೆಳೆವನೆ ದಾಂಟುಗಮಲ್ತೆ।

ಮೂರು ಮುಖಗಳಿರುವ ಶಿವನ ಮುದ್ರಿಕೆಗಳು ದೊರಕಿರುವುದರಿಂದ, ಸೃಷ್ಟಿಸ್ಥಿತಿಲಯಗಳನ್ನು ಮಾಡುವ ತ್ರಿಮೂರ್ತಿಗಳ ಹಿನ್ನೆಲೆಯನ್ನು ಇವುಗಳಲ್ಲಿ ಕಾಣಬಹುದೆಂಬುದು ಸರ್ ಜಾನ್‌ಮಾರ್ಷಲ್ಲರ ಅಭಿಪ್ರಾಯ. ಚಾರಿತ್ರಿಕ ಕಾಲದಲ್ಲಿ ಈ ದೃಷ್ಟಿಯಿಂದ ಇಂತಹ ವಿಗ್ರಹಗಳನ್ನು ಮಾಡಿರುವುದರ ಆಧಾರದ ಮೇಲೆ ಅವರು ಹಾಗೆ ಹೇಳಿದ್ದಾರೆ. ಶಿವನ ಮುದ್ರಿಕೆಗಳಲ್ಲಿ ಜಿಂಕೆಯ ವಿಗ್ರಹವಿರುವುದು ಮುಂದೆ ಆದ ಮೃಗಧರನ ಕಲ್ಪನೆಗೆ ಹಿನ್ನೆಲೆಯೆಂದು ಹೇಳಿದ್ದಾರೆ. ವೇದಕಾಲದ ಆರ್ಯರಲ್ಲಿ ಕಂಡುಬರದ ಶಿವಶಕ್ತಿಯರ ಪೂಜೆ ಶಿವಯೋಗದ ಆಚರಣೆ ಆ ಕಾಲದ ಜನರಲ್ಲಿದ್ದುದನ್ನು ಮಾರ್ಷಲ್ಲರು ಹೇಳಿದ್ದಾರೆ[6]. ಈಚಿನ ವಿದ್ವಾಂಸರೂ ಈ ಅಭಿಪ್ರಾಯಗಳನ್ನು ಅನುಮೋದಿಸುವರೆನ್ನುವುದು ಪ್ರೊ. ಕೆ. ಎ. ನೀಲಕಂಠಶಾಸ್ತ್ರಿಗಳು ಬರೆದಿರುವ ದಕ್ಷಿಣ ಇಂಡಿಯಾದ ಮತದ ಚರಿತ್ರೆಯಲ್ಲಿನ ಪುಟ ೧೮–೧೯ರ ಉಲ್ಲೇಖದಿಂದ ತಿಳಿದುಬರುತ್ತದೆ.[7] ಶಕ್ತಿವಿಶಿಷ್ಟ ಕಲ್ಪನೆಯು ಅರ್ಧನಾರೀಶ್ವರ ವಿಗ್ರಹವು ಸಿಕ್ಕಿರುವುದರಿಂದ ಆಗಿನ ಕಾಲದಲ್ಲಿದ್ದಿತೆಂದು ಫಾದರ್ ಹೆರಾಸರ ಲೇಖನವೊಂದರಿಂದ ತಿಳಿದುಬರುತ್ತದೆ. ಇನ್ನು ಲೇಖನವನ್ನು ಈ ವಿಷಯದಲ್ಲಿ ಬೆಳಸುವುದಕ್ಕಿಂತ ಆ ವಿಷಯಗಳನ್ನು ಸಾಧಾರವಾಗಿ ಕೊಟ್ಟಿರುವ 'ವೀರಶೈವ ಉಗಮ ಮತ್ತು ಪ್ರಗತಿ' ಗ್ರಂಥದಲ್ಲಿನ ವಿಷಯ ಸೂಚಿಯ ಸ್ವಲ್ಪ ಭಾಗವನ್ನು ಕೆಳಗೆ ಕೊಟ್ಟಿದೆ. ಕುತೂಹಲಿಗಳು ಅದರಿಂದ ಆ ವಿಷಯಗಳನ್ನು ತಿಳಿಯಬಹುದು:

ವೀರಶೈವದ ಆಧ್ಯಾತ್ಮಿಕ, ಆದಿದೈವಿಕ ಆದಿಭೌತಿಕ ಕಲ್ಪನೆಗಳನ್ನು ಮೊಹೆಂಜೊದಾರೋ ಕಾಲದಲ್ಲಿಯೇ ಗುರುತಿಸಬಹುದು (ಪುಟ ೪೮) ; ಶಿವನು ಯೋಗಾರೂಢನಾದ ದಕ್ಷಿಣಾಮೂರ್ತಿಯೆಂಬ ಕಲ್ಪನೆ ಆಗಿನದೆ (ಪುಟ ೫೦) ; ಮೂರು ಕಣ್ಣನವನೆಂದರೆ ಶಿವನೆಂದು ಆಗಲೇ ಪ್ರಸಿದ್ಧವಾಗಿದ್ದಿತು (ಪುಟ ೫೦) ; ಶಿವನು ಸ್ವಯಂಭು, ಅಷ್ಟತನು, ನಟರಾಜ ತಾಂಡವನ್ ಎಂಬ ಕಲ್ಪನೆಗಳು ಆಗಿನವೆ (ಪುಟ ೫೧) ; ಶಿವನು ತ್ರಿಶೂಲಧಾರಿ, ಸರ್ಪಭೂಷಣ ಪರಶುಧಾರಿ ಎಂಬ ಕಲ್ಪನೆಗಳೂ ಆಗಿನವೆ (ಪುಟ ೫೧) ; ಶಿವನು ಪರಾತ್ಪರ ಸರ್ವಜ್ಞ ವರದ ಎಂಬುದೂ ಅಂದಿನ ಕಲ್ಪನೆ. ಊರ್ಧ್ವರೇತು ಪಶುಪತಿ ಎಂಬ ಕಲ್ಪನೆ (ಪುಟ ೫೨).

---

cult. The philosophy of the age crystallised in the discipline known later as 'Brahmacharya', sextual restraint is in evidence in the Urdhvamedhra representation of siva on the seal.

6 In the first place he (siva) is three faced (Trimukha) and we are at once reminded that in historic times siva was portrayed with one, three, fuor are five faces and always with three eyes and that the familiar tread of siva, brahma and Vishnu is habitually represented by a three faced image (page 55) finally there remain the deer or ibesus beneath the seat of God. Twodeer in a like position are potrayed on many mediaeval images of siva (Page 55) there is evidance that Yoga was already playing its part as a religious practice (page 77).

7 The name siva is unknown in that (Rig) Veda, as the name of a god . . . In later times this divinity was also regarded as pasupati and Mahayogi ; these epithets are anticipated in the celebrated seal from Mohenjodaro, where we find, perhaps a three headed figure seated in the posture of a Yogi and surrounded by a number of animals . . . As for Yoga . . . it is attested in Harappa Civilization not only by the Pasupati seal just mentioned but by a number of other minor antiquities.

ಋಗ್ವೇದದ ಆರ್ಯರಿಗೆ ಇಂದ್ರನೇ ಮುಖ್ಯದೇವತೆ. ಇಂದ್ರಾದಿಗಳನ್ನು ಯಜ್ಞಯಾಗಾದಿಗಳಿಂದ ತೃಪ್ತಿಪಡಿಸುವುದೇ ಅವರ ಧಾರ್ಮಿಕ ಕರ್ಮವಾಗಿದ್ದಿತು. ಶಿವನೆಂಬುದು ಋಗ್ವೇದದಲ್ಲಿ ದೇವರ ಹೆಸರೇ ಅಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ. ಲಿಂಗಪೂಜಕರಾದ ಸಿಂಧೂತೀರದ ದ್ರಾವಿಡನಾಗರೀಕರಿಗೂ ಯಜ್ಞಯಾಗರತರಾದ ಆರ್ಯರಿಗೂ ಧಾರ್ಮಿಕ ನಿಲುವಿನಲ್ಲಿ ಅಜಗಜಾಂತರ. ಆರ್ಯರು ದ್ರಾವಿಡರನ್ನು ದಾಸ, ದಸ್ಯುಗಳೆಂದು ಕರೆಯುತ್ತಿದ್ದರು. ದಾಸದಸ್ಯುಗಳು ಯಜ್ಞಯಾಗಾದಿಗಳನ್ನು ವಿರೋಧಿಸುತ್ತಿದ್ದುದರಿಂದ ಅವರನ್ನು ಋಗ್ವೇದದಲ್ಲಿ (ಪ್ರ. ೧–೩–೩೫) 'ಅಯಜ್ವಾನಃ, ಯಜ್ವಭಿಃ ಸ್ಪರ್ಧಮಾನಾಃ' ಎಂದು ಕರೆಯಲಾಗಿದೆ. ಅಯಜ್ವಾನಃ ಸ್ವಯಂ ಯಾಗರಹಿತಾಃ ಪ್ರಸ್ತುತ ಯಜ್ವಭಿಃ ಯಾಗಾನುಷ್ಠಾತೃಭಿಃ ಸಹ ಸ್ಪರ್ಧಮಾನಾಃ ಎಂಬುದು ಇದರ ಸಾಯಣ ಭಾಷ್ಯ. ಅಯಜ್ವಾನಃ ಎಂದರೆ ಸ್ವತಃ ಯಾಗಮಾಡದಿರುವವರು ಎಂದರ್ಥ. ಯಜ್ವಭಿಃ ಸ್ಪರ್ಧಮಾನಾಃ ಎಂದರೆ ಯಜ್ಞವನ್ನು ವಿರೋಧಿಸುವವರೆಂದರ್ಥ. ಆರ್ಯರು ಇವರನ್ನು 'ಅವ್ರತ'ರೆಂದು ಹೇಳುವರಲ್ಲದೆ ಅನ್ಯವ್ರತರೆಂದೂ ಕರೆಯುತ್ತಿದ್ದರು. ದ್ರಾವಿಡರು ಶಿವವ್ರತವುಳ್ಳವರಾದುದರಿಂದ ಅವರು ಆರ್ಯರಿಗೆ ಅನ್ಯವಾದ ಶಿವನ ವ್ರತವುಳ್ಳವರು. ಇಂದು ವೀರಶೈವರಲ್ಲಿ ಯಜ್ಞವಿರೋಧವು ಮುಖ್ಯಲಕ್ಷಣವಾಗಿದ್ದು ಅದರ ಮೂಲವು ವೇದಪೂರ್ವ ದ್ರಾವಿಡಲಿಂಗಪೂಜಕ ಲಿಂಗಧಾರಿಗಳಲ್ಲಿ ಕಂಡುಬರುವುದು ಗಮನಾರ್ಹ. ಯಜ್ಞವೇನೆಂದೆಂಬುದು ತಿಳಿದರೆ ಯಜ್ಞವಿರೋಧಕ್ಕೆ ಕಾರಣವು ತಿಳಿಯಬರುವುದು. ೧೯೫೮ನೆಯ ಇಸವಿಯ ಸೆಪ್ಟೆಂಬರ್ ತಿಂಗಳ ಕಸ್ತೂರೀ ಮಾಸಿಕದ ೧೦೬ ಪುಟದಲ್ಲಿನ ಲೇಖನಭಾಗವು ಯಜ್ಞಯಾಗಗಳು ಎಷ್ಟು ಹಿಂಸಾತ್ಮಕವಾದುವು ಎಷ್ಟು ನೀತಿಬಾಹಿರವಾದುವು ಎಂಬುದನ್ನು ಸ್ಪಷ್ಟಪಡಿಸುತ್ತದೆ :

"ಇನ್ನು ಕೊನೆಯ ಘಟ್ಟವು ಪ್ರಾರಂಭವಾಗುತ್ತದೆ. ಯಜ್ಞಾಶ್ವವೂ, ಒಂದು ಕಾಡು ಹೋರಿಯೂ ಯಜ್ಞವೇದಿಕೆಯ ಬಳಿ ಯೂಪಗಳಿಗೆ ಕಟ್ಟಲ್ಪಡುತ್ತವೆ. ಇತರ ೨೧ ಯೂಪಗಳಿಗೆ ೩೪೯ ಸಾಧುಪಶುಗಳನ್ನು. ಅವುಗಳ ನಡುನಡುವೆ ೨೬೦ ಕಾಡುಪಶುಗಳನ್ನೂ ಬಿಗಿಯಬೇಕು....ಕುದುರೆ ಪ್ರಜಾಪತಿಗೆ ಆಹುತಿಯಾಗುತ್ತದೆ. ಇತರ ದೇವತೆಗಳಿಗೆ ಇತರ ಪ್ರಾಣಿಗಳು ಆಹುತಿಯಾಗುತ್ತಿದ್ದವು....ರಾಣಿಯರು ಅಲಂಕರಿಸಿ ರಾಜನು ಕೊನೆಯ ಕವಳವನ್ನು ಕೊಟ್ಟು ಆದರಿಸಿದ ಬಳಿಕ ಕುದುರೆಯನ್ನು ವಧಿಸುತ್ತಿದ್ದರು....ಯಜುರ್ವೇದದಲ್ಲಿ ಆ ರಾತ್ರಿಯನ್ನು ಪಟ್ಟಮಹಿಷಿಯು ಆ ಸತ್ತ ಯಜ್ಞಪಶುವಿನ ಸಂಗಡ ಕಳೆಯಬೇಕೆಂದೂ, ಅದರಿಂದ ಅವಳು ಗರ್ಭವತಿಯಾಗುವಳೆಂದೂ ಹೇಳಿದೆ ; ಆದರೆ ಮುಂದೆ ಈ ರೂಢಿಯು ತ್ಯಜಿಸಲ್ಪಟ್ಟಂತೆ ತೋರುತ್ತದೆ."

ಇಂತಹ ಅಸಹ್ಯ ಕರ್ಮಗಳಿಂದ ಆರ್ಯರಲ್ಲಿಯೇ ಕೆಲವರು ಬೇಸತ್ತು ಯಜ್ಞವಿರೋಧಿ ದ್ರಾವಿಡರನ್ನು ಸೇರಿಕೊಂಡುದರಲ್ಲಿ ಆಶ್ಚರ್ಯವಾಗುವುದಿಲ್ಲ. ಆರ್ಯರು ಇವರನ್ನು ವ್ರಾತ್ಯರೆಂದು ಕರೆದರೂ ಈ ವ್ರಾತ್ಯರು ಬಸವೇಶ್ವರನು ಹನ್ನೆರಡನೆಯ ಶತಮಾನದಲ್ಲಿ ಮಾಡಿದಂತೆ ಯಜ್ಞಮಾಡಲು ಅಧಿಕಾರವನ್ನು ಕೊಡುವ ಯಜ್ಞೋಪವೀತವನ್ನು ತಿರಸ್ಕರಿಸಿದವರು. ಮನುಸ್ಮೃತಿಯಲ್ಲಿ 'ಸಾವಿತ್ರೀಪತಿತಾವ್ರಾತ್ಯ ಭವಂತ್ಯಾರ್ಯವಿಗರ್ಹಿತಾಃ' ಎಂದು ಹೇಳಿರುವುದು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಪಂಚವಿಂಶತಿ ಬ್ರಾಹ್ಮಣದಲ್ಲಿ ಹೇಳಿರುವಂತೆ ಇವರು ಆರ್ಯಭಾಷೆಯನ್ನಾಡುತ್ತಿದ್ದರು ಮತ್ತು ಅಥರ್ವವೇದದಲ್ಲಿ ಹೇಳಿದಂತೆ ಇವರು ಆರ್ಯರಂತೆ ಸೋಮಪಾನ ಮಾಡುತ್ತಿದ್ದರು. ಬ್ರಾಹ್ಮಣ ಕ್ಷತ್ರಿಯ ಜಾತಿಗನುಸಾರವಾದ 'ಅರ್ಹಂತಾ' ಮತ್ತು 'ಯೌಧ' ಎಂಬ ಎರಡು ಜಾತಿಗಳು ವ್ರಾತ್ಯರಲ್ಲಿ ಇದ್ದುದನ್ನು ನೋಡಿದರೆ ಉತ್ತಮ ಜಾತಿಯವರೂ ಬುದ್ಧಿವಂತರೂ ಆದ ಬ್ರಾಹ್ಮಣ ಕ್ಷತ್ರಿಯ ಜಾತಿಯವರಲ್ಲಿಯೇ ಕೆಲವರು ವ್ರಾತ್ಯರಾದರೆಂದು ತೋರುವುದು. ಹರ್ಡೇಕರ್ ಮಂಜಪ್ಪನವರು ಅವರ ಶುದ್ಧಿ ಮತ್ತು ಸಂಘಟನೆ ಗ್ರಂಥದಲ್ಲಿ ಗಮನಿಸಿರುವಂತೆ ಸುಪ್ರಸಿದ್ಧ ಇತಿಹಾಸ ಸಂಶೋಧಕ ರಾಜವಾಡೆಯವರು ಹೀಗೆ ಬರೆದಿದ್ದಾರೆ—"ನಟನಾಮಕವ್ರಾತ್ಯ ಕ್ಷತ್ರಿಯರಲ್ಲಿ ಜಿನ ಮತ್ತು ಶಕನಾಮಕವ್ರಾತ್ಯ ಕ್ಷತ್ರಿಯರಲ್ಲಿ ಗೌತಮಬುದ್ಧ ಜನ್ಮವೆತ್ತಿ, ವೇದ ಮತ್ತು ಚತುರ್ವರ್ಣಗಳ ವಿರೋಧವಾದ ಮತಗಳನ್ನು ಸ್ಥಾಪಿಸಿ, ವ್ರಾತ್ಯ ಮತ್ತು ಶೂದ್ರರಲ್ಲಿ ಐಕಮತ್ಯವನ್ನುಂಟುಮಾಡಿ ತ್ರೈವರ್ಣಿಕರನ್ನು ಹೀನಸ್ಥಿತಿಗೆ ತರಲಾರಂಭಿಸಿದನು." ಯಜ್ಞ ಮತ್ತು ವರ್ಣತಾರತಮ್ಯವನ್ನು ವಿರೋಧಿಸುತ್ತಿದ್ದ ಜೈನ ಬೌದ್ಧ ಮತಗಳು ವ್ರಾತ್ಯರಾಜನ್ಯರಿಂದ ಸ್ಥಾಪಿತವಾದುವು ಎಂಬುದರಿಂದ ವ್ರಾತ್ಯರು ಆರ್ಯರಿಂದ ಬೇರೆಯಾದುದಕ್ಕೆ ಕಾರಣ ವೇನೆಂಬುದು ಸ್ಪಷ್ಟವಾಗುತ್ತದೆ. ವ್ರಾತ್ಯರಲ್ಲಿ ಯಜ್ಞಮಾಡುವುದನ್ನು ಒಪ್ಪದಿರುವುದರಲ್ಲಿ ತೃಪ್ತರಾಗದೆ ಯಜ್ಞಧ್ವಂಸದಲ್ಲಿ ತೊಡಗಿದವರು ದೈತ್ಯರೂ, ಅಸುರರೂ ಎಂದು ಕರೆಯಲ್ಪಟ್ಟರು. ಛಾಂದೋಗ್ಯೋಪನಿಷತ್ತಿನಲ್ಲಿ 'ಅಯಜಮಾನಮಾಹುರಸುರಃ' ಎಂದು ಹೇಳಿದೆ. ಅಯಜಮಾನಂ ಅಯಜನಸ್ವಭಾವಂ ಎಂದು ಇದರ ಶಾಂಕರಭಾಷ್ಯದಲ್ಲಿ ಹೇಳಿದೆ. ಯಜ್ಞಮಾಡದಿರುವವರು ಅಸುರರು ಎಂದಭಿಪ್ರಾಯ. ಅದಿತಿಯ ಮಕ್ಕಳು ಆದಿತೇಯರಾದ ಸುರರು,

ದಿತಿಯ ಮಕ್ಕಳು ದೈತ್ಯರು. ದಿತಿಅದಿತಿಯರು ಸಹೋದರಿಯರು. ಆರ್ಯದೈತ್ಯರಲ್ಲಿ ವಿರೋಧವಿರುವುದಕ್ಕೆ ದಾಯಾದಿ ಮಾತ್ಸರ್ಯವೂ ರಾಜಕೀಯವೂ ಕಾರಣವಾಗಿರಬಹುದು. ದೈತ್ಯರೂ, ಅಸುರರೂ, ರಾಕ್ಷಸರೂ ಎಂದು ಕರೆಯಲ್ಪಟ್ಟ ವ್ರಾತ್ಯ ಉಗ್ರಪಂಥಿಗಳು ಶೈವರೆಂಬುದೂ ಯಜ್ಞಧ್ವಂಸಕರೆಂಬುದೂ ಪ್ರಸಿದ್ಧ ವಿಷಯ ; ಈ ರಾಕ್ಷಸರುಗಳಲ್ಲಿ ಲಿಂಗಧಾರಿಗಳಿದ್ದರೆಂಬುದರಲ್ಲಿ ಸಂದೇಹವಿಲ್ಲ. ಪೌಲಸ್ತ್ಯ ಬ್ರಹ್ಮನ ವಂಶದವನಾದ ರಾವಣನು ತಾನು ಹೋದ ಹೋದ ಕಡೆಗಳಲ್ಲೆಲ್ಲ ಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದನೆಂದು ರಾಮಾಯಣದಲ್ಲಿ ಹೇಳಿದೆ :

ಯತ್ರ ಯತ್ರ ಚ ಯಾತಿಸ್ಮ ರಾವಣೋ ರಾಕ್ಷಸೋತ್ತಮಃ
ಜಂಬೂನದಮಯಂ ಲಿಂಗಂ ತತ್ರ ತತ್ರ ಚ ನೀಯತೇ ॥

ಸ್ಕಾಂದಪುರಾಣದ ಮಹೇಶ್ವರಖಂಡ ವಿಭಾಗದಲ್ಲಿ ಮಹಿಷಾಸುರಮರ್ದನದ ಕಥೆಯಿದೆ. ಅದರಲ್ಲಿ ಹೇಳಿರುವಂತೆ 'ಆದತ್ತ ಸಹಸಾ ಗೌರೀ ಲಿಂಗಂ ತಸ್ಯ ಗಳೇ ಸ್ಥಿತಂ' ಎಂದರೆ ಮಹಿಷಾಸುರನ ಕೊರಳಿನಲ್ಲಿದ್ದ ಲಿಂಗವನ್ನು ಗೌರಿಯು ಕೈಗೆ ತೆಗೆದುಕೊಂಡಳು ; ಆ ಲಿಂಗವು ಅವಳ ಕೈಗೆ ಅಂಟಿಕೊಂಡಿತು. ಗೌತಮಋಷಿಯನ್ನು ದೇವಿಯು ಈ ವಿಷಯವಾಗಿ ವಿಚಾರಿಸಲು ಅವನು ತ್ರಿಪುರಾಸುರಸಂಹಾರಕಾಲದಲ್ಲಿ, ಎಲ್ಲಿಯವರೆಗೆ ಆ ಅಸುರರ ಕೊರಳೊಳಗೆ ಲಿಂಗವಿದ್ದಿತೋ ಅಲ್ಲಿಯವರೆಗೆ ಅವರನ್ನು ಸೋಲಿಸಲಾಗಲಿಲ್ಲ ಎಂದು ಹೇಳಿದನೆಂದು ಮೇಲಿನ ಆಧಾರದಲ್ಲಿ ಹೀಗೆ ಹೇಳಿದೆ:

ಪುರತ್ರಯಾವಾಸಾ ದೈತೇಯಾ ಲಿಂಗಧಾರಕಾಃ ।
ಅಜಿತಾಃ ಶಂಭುನಾ ಪೂರ್ವಂ ಮುಕ್ತಲಿಂಗಾ ವಿದೂಷಿತಾಃ ॥

ಪದ್ಮಪುರಾಣದ ಪಾತಾಳಖಂಡದ ೧೩೪ನೆಯ ಶ್ಲೋಕದಲ್ಲಿ 'ಧಾರಯಂತಿ ತಥಾ ಲಿಂಗಂ ರಾಕ್ಷಸಾಃ ಕೇಚಿದುತ್ತಮಾಃ' ಎಂದರೆ ರಾಕ್ಷಸರಲ್ಲಿ ಉತ್ತಮರಾದವರು ಲಿಂಗವನ್ನು ಧರಿಸುತ್ತಾರೆ ಎಂದು ಹೇಳಿದೆ. ಈ ವ್ರಾತ್ಯರಾಕ್ಷಸರು ಯುದ್ಧ ಮಾಡುತ್ತಿದ್ದಾಗಲೂ ಲಿಂಗವನ್ನು ಧರಿಸುತ್ತಿದ್ದರಾದುದರಿಂದಲೇ ಅದನ್ನು ನೋಡಿದ ಆರ್ಯರು ಅವರನ್ನು ಶಿಶ್ನದೇವಾಃ ಎಂದು ಕರೆದರು ಎನ್ನುವುದು, ಅವರು ಮನೆಯಲ್ಲಿ ಲಿಂಗಪೂಜೆ ಮಾಡುತ್ತಿದ್ದವರನ್ನು ಹಾಗೆ ಕರೆದರೆನ್ನುವುದಕ್ಕಿಂತ ಹೆಚ್ಚು ಸಂಭವನೀಯವಾಗಿದೆ. ಪಶುಗಳ ಮೇವನ್ನು ಹುಡುಕಿಕೊಂಡು ಭಾರತಕ್ಕೆ ಬಂದ ಪಶುಪಾಲಕ ಆರ್ಯರು ನಾಗರೀಕ ಸಿಂಧೂತೀರವಾಸಿಗಳನ್ನು ಅಶ್ವಾರೂಢರಾಗಿ ಆಕ್ರಮಿಸಿದಾಗ ಅವರ ಕೈ ಮೇಲಾಯಿತು. ದ್ರಾವಿಡರು ಹಿಂದೆ ಹಿಂದಕ್ಕೆ ಗಂಗಾತೀರದ ಕಡೆಗೂ, ಕೊನೆಗೆ ದಕ್ಷಿಣದೇಶದ ಕಡೆಗೂ ಸರಿಯುತ್ತಿದ್ದಂತೆ, ಆರ್ಯರು ಸುಲಭವಾಗಿ ಜಯಶೀಲರಾಗಲು ಅವಕಾಶಕೊಡುತ್ತಿರಲಿಲ್ಲ. ಬೆಟ್ಟಗುಡ್ಡಗಳಲ್ಲಿ ರಕ್ಷಣೆಯನ್ನು ಪಡೆಯುತ್ತ ಆರ್ಯರು ವಾಸವಾಗಿದ್ದ ಕಡೆಗೆ ಹರಿಯುತ್ತಿದ್ದ ನೀರನ್ನು ಅಡ್ಡಗಟ್ಟೆ ಕಟ್ಟಿ ತಡೆಯುತ್ತ ಅವರ ಗೋಧನವನ್ನು ಅಪಹರಿಸುತ್ತ ಅವರ ಯಜ್ಞಗಳನ್ನು ಕೆಡಿಸುತ್ತ ಕಾಟ ಕೊಡುತ್ತಿದ್ದರು. ಗೋವುಗಳನ್ನು ಅಪಹರಿಸುತ್ತಿದ್ದುದು ಮಹಾಭಾರತದಲ್ಲಿ ಕಂಡುಬರುವ ಗೋಗ್ರಹಣದ ಕಥೆಗಳಂತಹ ಯುದ್ಧಕಾಲದ ಚಟುವಟಿಕೆಯಾದರೂ ಆರ್ಯರ ಕಣ್ಣಿನಲ್ಲಿ ಅದು ಕಳ್ಳತನವೆ. ಆದುದರಿಂದ ಆರ್ಯರು ಅವರನ್ನು ಕಳ್ಳರೆಂದೂ, ಅವರ ದೇವರಾದ ಶಿವನನ್ನು ಕಳ್ಳರ ದೇವರೆಂದೂ ಕರೆದರು. ಕಳ್ಳಪ್ಪ ಕುಳ್ಳಪ್ಪ ಎಂಬಂತಹ ಹೆಸರುಗಳು ಕುಚೋದ್ಯವಾಗಿ ಮೊದಲು ಕರೆದ ಹೆಸರಾದರೂ ಅನೇಕ ವೇಳೆ ಅವು ಉಳಿದು ಹೋಗುವಂತೆ ರುದ್ರಸ್ತುತಿಯಲ್ಲಿ "ಸ್ತೇನಾನಾಂ ಪತಯೇ ನಮಃ" ಎಂಬುದು ಉಳಿದು ಹೋಗಿದೆ. ಹಾಗೆಯೇ ಯಜ್ಞಧ್ವಂಸಿಗಳ ದೇವರಾದ ಶಿವನಿಗೆ ಯಜ್ಞಧ್ವಂಸಿ ಮತ್ತು ಕ್ರತುಧ್ವಂಸಿ ಎಂಬ ಹೆಸರುಗಳೂ ಈಗಲೂ ಇರುವುದು ನಿಘಂಟುಗಳಲ್ಲಿ ಈ ಪದಗಳಿಗೆ ಕೊಟ್ಟಿರುವ ಅರ್ಥದಿಂದ ತಿಳಿದುಬರುತ್ತದೆ.

**ವೇದಗಳ ಕಾಲದಲ್ಲಿ ವೇದಪೂರ್ವಲಿಂಗಧಾರೀಧರ್ಮದ ಮುನ್ನಡೆ:** ಆರ್ಯದ್ರಾವಿಡರಲ್ಲಿದ್ದ ಈ ವಿದ್ವೇಷವು ಕಾಲಕ್ರಮದಲ್ಲಿ ಮಾಯವಾಯಿತು. ಏಕೆಂದರೆ ಗುಣಗ್ರಾಹಿಗಳಾದ ಆರ್ಯರು ತಾವು ಸೋಲಿಸಿದ ವ್ರಾತ್ಯ ದ್ರಾವಿಡರಲ್ಲಿ ಇದ್ದ ಗುಣಗಳನ್ನು ಮೆಚ್ಚಿಕೊಂಡರು. ಅಮೇರಿಕಾಕ್ಕೆ ಹೋದ ಐರೋಪ್ಯರು ರೆಡ್ಇಂಡಿಯನ್ನರನ್ನು ನಾಶ ಮಾಡಿದಂತೆ ಅವರು ಹಿಂದೂ ದೇಶದ ಪೂರ್ವನಿವಾಸಿ ದ್ರಾವಿಡರನ್ನು ನಾಶಮಾಡಲಿಲ್ಲ ; ಅವರೊಡನೆ ಎಷ್ಟರಮಟ್ಟಿಗೆ ಬೆರೆತುಹೋದರೆಂದರೆ ಬ್ರಾಹ್ಮಣರಲ್ಲಿ ಕಪ್ಪುವರ್ಣದವರನ್ನು ಶೂದ್ರರಲ್ಲಿ ಬಿಳಿಯ ವರ್ಣದವರನ್ನು ಇಂದು ನೋಡಬಹುದು. ಇದಕ್ಕೆ ಮುಖ್ಯ ಕಾರಣ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಮಗಿಂತಲೂ ಕಡಮೆಯ ವರ್ಣದ ಸ್ತ್ರೀಯರನ್ನು ಮದುವೆಯಾಗಲು ಅವಕಾಶವಿತ್ತು. ಇದು ಕಾಲಕ್ರಮದಲ್ಲಿ ಆದ ಮಾರ್ಪಾಡು. ಆದರೆ ಆರ್ಯರೂ ದ್ರಾವಿಡರೂ

ಮೊದಲು ಸಂಧಿಸಿದಾಗ ಆರ್ಯರು ದ್ರಾವಿಡರ ದೈವಿಕ ರಾಜಕೀಯ ಕಲ್ಪನೆಗಳನ್ನು ಮೆಚ್ಚಿಕೊಂಡು ಅವುಗಳಿಂದ ಆಕರ್ಷಿತರಾದರು. ಆರ್ಯರ ವೈದಿಕ ಸಂಸ್ಕೃತಿಯು ದ್ರಾವಿಡರ ಮೇಲೆ ಅದರ ಪ್ರಭಾವವನ್ನು ಬೀರಿತು. ಆರ್ಯದ್ರಾವಿಡ ಸಂಸ್ಕೃತಿಗಳು ಮಿಲನವಾಗಿ ಹಾಲು ಜೇನು ಸೇರಿದಂತೆ ಸುಸ್ವಾದವಾಯಿತು. ಆರ್ಯರ ಇಂದ್ರನು ನಾಮಾವಶೇಷವಾಗಿ ಹೋದನು ; ಇಂದೂ ದ್ರಾವಿಡರ ದೇವರುಗಳು ವೇದಮಂತ್ರಗಳಿಂದ ಪೂಜೆಗೊಳ್ಳುತ್ತಿವೆ.

ಆರ್ಯರ ಮೇಲೆ ದ್ರಾವಿಡವ್ರಾತ್ಯರ ಧಾರ್ಮಿಕ ಸಾಮಾಜಿಕ ರಾಜಕೀಯ ನಿಲುವು ಎಷ್ಟು ಚೆನ್ನಾಗಿ ತನ್ನ ಪ್ರಭಾವವನ್ನು ಬೀರಿತೆಂಬುದು ಅರಿವಾಗಲು ಕಸ್ತೂರಿಮಾಸಿಕದಲ್ಲಿನ 'ಕ್ಷೇತ್ರರಾಜಕಾಶಿ'–ಇಲ್ಲಿ "ಭಾರತದ ಸಂಯುಕ್ತ ಸಂಸ್ಕೃತಿಯ ಬೀಜಾರೋಪವಾಯಿತು" ಎಂಬ ಲೇಖನದಲ್ಲಿನ ಈ ಭಾಗವು ಉಲ್ಲೇಖಾರ್ಹವಾಗಿದೆ.

"ಗಂಗಾಕಣಿವೆಗೆ ಕಾಲಿಟ್ಟ ಆರ್ಯರಲ್ಲಿ ಕಾಶಿಗಳೆ ಮೊದಲಿಗರು. ಅದು ಭಾರತದೊಳಗಿನ ಭಾರತವೆಂದು ವಿದ್ವಾಂಸರಿಂದ ಕರೆಸಿಕೊಳ್ಳುತ್ತಿದ್ದಿತು. ಅಲ್ಲಿ ಪ್ರವೇಶಿಸಿದ ಕಾಶಿಗಳು ತಮಗಿಂತ ಪೂರ್ವನಾಗರಿಕತೆಯ ಸಂಪರ್ಕ ಹೊಂದಿದಾಗ ವಿಜಿಗೀಷುಗಳಂತೆ ವರ್ತಿಸದೆ, ಸಮಾನ ನಾಗರಿಕರಂತೆ ವರ್ತಿಸತೊಡಗಿದರು. ಗಂಗಾಕಣಿವೆಯ ಅನುಪಮ ದೇಶವನ್ನಾಳುತ್ತಿದ್ದ ವ್ರಾತ್ಯರಾಜನ್ಯರು ಜೀವನದಲ್ಲಿಯೂ ವಿಚಾರದಲ್ಲಿಯೂ ಆರ್ಯರಿಗಿಂತ ಮಿಗಿಲಾಗಿದ್ದರು. ಅವರ ರಾಜ್ಯಭಾರ ಪದ್ಧತಿಯು ಬೌದ್ಧಿಕ ಹೆಚ್ಚಳಕ್ಕೆ ಸಾಕ್ಷ್ಯವಾಗಿದ್ದರೆ, ಅವರ ತಾತ್ವಿಕ ಹಾಗೂ ಪೌರಾಣಿಕ ವಿಶ್ವಕಲ್ಪನೆಗಳು ಆರ್ಯ ಬ್ರಾಹ್ಮಣರಿಗೂ ಅವರಿಗೂ ಉಂಟಾದ ಸಾಮಾಜಿಕ ರಾಜಕೀಯ ಸಂಪರ್ಕದಲ್ಲಿ ಪ್ರದರ್ಶವಾಗಿತ್ತು. ಆರ್ಯಬ್ರಾಹ್ಮಣರು ವ್ರಾತ್ಯರಾಜನ್ಯರಿಂದ ಹಲವಾರು ವಿಷಯಗಳನ್ನು ಉತ್ಸಾಹದಿಂದ ಕಲಿತುಕೊಳ್ಳುವಂತಾಯಿತು" ಎಂದು ನರೇಂದ್ರನಾಥ ಘೋಷರು ಬರೆದಿದ್ದಾರೆ.

ಆರ್ಯವ್ರಾತ್ಯದ್ರಾವಿಡ ಜನಾಂಗಗಳ ಧಾರ್ಮಿಕ ಸಾಮಾಜಿಕ ರಾಜಕೀಯ ಭಾವನೆಗಳು ಹೊಂದಿಕೊಂಡವು. ವೈದಿಕರುದ್ರನಿಗೆ ಪಶುಪತಿಶಿವನಪಟ್ಟವು ಕಟ್ಟಲ್ಪಟ್ಟು ಅವನನ್ನು ದೇವಸ್ಥಾನಗಳಲ್ಲಿ ವೇದಮಂತ್ರಗಳಿಂದ ಪೂಜಿಸುವುದು ಪ್ರಾರಂಭವಾಯಿತು. ಹಿಂದೆ 'ಶಿಶ್ನದೇವಾಃ' ಎಂದು ಮೊದಲಾಗಿ ತೆಗಳುತ್ತಿದ್ದ ಮಾತುಗಳಿಗೆ ದೂಷಣ ದೃಷ್ಟಿಯು ಹೋಗಿ ಭೂಷಣ ದೃಷ್ಟಿಯು ಬರುವಂತಹ ಅರ್ಥಗಳು ಕಲ್ಪಿತವಾದುವು. ನಿರುಕ್ತದ ವಿವರಣೆಯನ್ನು ಮಾಡಿರುವ ದುರ್ಗಾಚಾರ್ಯರು 'ಶಿಶ್ನದೇವಾಃ' ಎಂದರೆ 'ಶಿಶ್ನೇನ ಪ್ರಕೀರ್ಣಾಭಿಃ ಪುಂಶ್ಚಲೀಭಿಃ ಸ್ತ್ರೀಭಿಃ ದೀವ್ಯಂತಿ ಕ್ರೀಡಂತಿ' ಎಂದು ಅರ್ಥಮಾಡಿದ್ದಾರೆ. ಇದನ್ನು ಅನುಸರಿಸಿ ಸಾಯಣಾಚಾರ್ಯರು ಸಹಾ 'ಶಿಶ್ನೇನ ದೀವ್ಯಂತಿ ಕ್ರೀಡಂತಿ ಇತಿ' ಎಂದು ಅರ್ಥಮಾಡಿದ್ದಾರೆ. ಶಿಶ್ನದೇವಾಃ ಎಂದು ದೂಷಿಸಿರುವುದು ಶಿಶ್ನವೇ ದೇವರನ್ನಾಗಿ ಉಳ್ಳವರನ್ನಲ್ಲ ; ಹಾಗೆ ದೂಷಿಸಿರುವುದು ಶಿಶ್ನದಿಂದ ಕ್ರೀಡಿಸುವ ಅಬ್ರಹ್ಮಚಾರಿಗಳನ್ನು ಎಂದಭಿಪ್ರಾಯ. ಹಿಂದೆ ದೂಷಿಸಿ ಹೇಳಿದುದನ್ನು ಸ್ನೇಹವುಂಟಾಗಿ, ಯಾವುದನ್ನು ಶಿಶ್ನವೆಂದು ದೂಷಿಸಿದ್ದರೋ ಆ ದೇವನನ್ನೇ ಪೂಜಿಸಲು ಪ್ರಾರಂಭಿಸಿದಾಗ ಕೆ. ಎ. ನೀಲಕಂಠಶಾಸ್ತ್ರಿಗಳು ಹೇಳುವಂತೆ[8] ತೇಲಿಸಿ ಬುದ್ಧಿವಂತಿಕೆಯಿಂದ ಮಾಡಿದ ಅರ್ಥವು ಸ್ಪಷ್ಟವಾದ ಆ ಪದದ ಅರ್ಥಕ್ಕೆ ವಿರುದ್ಧವಾದ ಅರ್ಥ. ಹಾಗೆಯೇ 'ಸ್ತೇನಾನಾಂ ಪತಯೇ ನಮಃ' ಎಂದು ರುದ್ರಾಧ್ಯಾಯದಲ್ಲಿರುವ ಮಾತುಗಳಿಗೆ ಕಳ್ಳರ ದೇವರಿಗೆ ನಮಸ್ಕಾರ ಎಂದು ವಿರೋಧಕಾಲದಲ್ಲಿ ದೂಷಣೆದೃಷ್ಟಿಯಿಂದ 'ಸ್ತೇನಾನಾಂ ಪತಿ' ಎಂದು ಹೇಳಿದುದರ ದೃಷ್ಟಿಯಿಂದ ಅರ್ಥಮಾಡದೆ, 'ರುದ್ರಸ್ಯ ಸರ್ವಾತ್ಮಕತ್ವಂ ಅನುಸಂಧಾತುಂ ಮಂತ್ರೈಃ ಏವಂ ಉಚ್ಯತೇ' ಎಂದು ತೇಲಿಸಿ ಭಾಷ್ಯದಲ್ಲಿ ಅರ್ಥಮಾಡಿದ್ದಾರೆ. ಆದರೆ ರುದ್ರನು ಸರ್ವಾತ್ಮನೆಂದು ಭಾವಿಸಲು ಕಳ್ಳರ ದೇವನೆನ್ನಬೇಕಾಗಿಲ್ಲ. ಇದು ಹೇಗೆ ಇರಲಿ ; ಹೀಗೆ ಮಾಡಿರುವುದು ಆರ್ಯವ್ರಾತ್ಯದ್ರಾವಿಡರಿಗೆ ಬೆಳೆಯುತ್ತಿದ್ದ ಸೌಹಾರ್ದದ ಕುರುಹು, ವ್ರಾತ್ಯಸ್ತೋಮವೆಂಬ ಕರ್ಮದಿಂದ ವ್ರಾತ್ಯರನ್ನು ಆರ್ಯಪಂಗಡದೊಳಕ್ಕೆ ಸೇರಿಸಿಕೊಳ್ಳುವ ಕಾಲ ಬಂದಿತು ; ಅಷ್ಟೇ ಅಲ್ಲ ಋಗ್ವೇದದಲ್ಲಿಯೇ (೬–೨೨–೧೦) 'ದಾಸಾನ್ಯಾರ್ಯಾಣಿ . . . . ಕರಃ' ಎಂದು ಹೇಳಿರುವಂತೆ ದಾಸರೆಂದು ಕರೆಯಲ್ಪಡುತ್ತಿದ್ದ ದ್ರಾವಿಡರನ್ನು ಆರ್ಯರನ್ನಾಗಿ ಮಾಡುವ ಪ್ರಯತ್ನವೂ ನಡೆಯಿತು. ಯಜುರ್ವೇದದಲ್ಲಿ 'ಏಕ ಏವ ರುದ್ರೋ ನದ್ವಿತೀಯಾಯ ತಸ್ಥೇ' ಎಂದರೆ ರುದ್ರನೊಬ್ಬನೇ ದೇವನು ಮತ್ತೊಬ್ಬನಿಲ್ಲ ಎನ್ನುವಂತೆ ರುದ್ರನ ಸ್ಥಾನವು ಉಕ್ತವಾಗಿರುವುದಲ್ಲದೆ 'ಶಿವನಾಮಾಸಿ' ಎಂದರೆ ಶಿವನೆಂಬ ಹೆಸರಿನಿಂದಲೂ ರುದ್ರನು ಕಾಣಿಸಿಕೊಂಡಿರುವನು. ಯಜುರ್ವೇದದ ಪಂಚಮಾಧ್ಯಾಯವಾದ ಶತರುದ್ರೀಯದಲ್ಲಿ ಅವನು ಶಂಕರ, ಶಂಭು, ಈಶಾನ, ಈಶ, ಭವ, ಶರ್ವ, ಉಗ್ರ, ಸೋಮ, ಪಶುಪತಿ,

[8] The old Indian Commentators on the Veda explain the term Sisnadevas differently and think it is a reference to libertines ; but this flies in the face of the plain meaning of the word and is abviously unhistorical linguistic ingenuity.

ನೀಲಕಂಠ, ಗಿರೀಶ, ಮಹದೇವ ಮೊದಲಾದ ಋಗ್ವೇದದಲ್ಲಿ ಕಾಣದ ಹೆಸರುಗಳಿಂದ ಉಕ್ತನಾಗಿದ್ದಾನೆ. ಈ ವೇದದ ಆರನೆಯ ಅಧ್ಯಾಯದಲ್ಲಿ ತ್ರಿಪುರಸಂಹಾರದ ಕಥೆಯಿದೆ. 'ರುದ್ರಃ ಪಶೂನಾಮಧಿಪತಿರಿತಿ ವಯಂ ಬ್ರಹ್ಮಾದಯಃ ಸರ್ವೇ ಪಶವಃ' ಎಂದು ಅದರಲ್ಲಿ ಹೇಳಿರುವುದರಲ್ಲಿ ಪಶುಪತಿಯ ಆಧಿಕ್ಯವು ಸ್ಥಾಪಿತವಾಗಿದೆ. ಸಾಮವೇದವು ಶಿವನ ಪ್ರೀತ್ಯರ್ಥವಾಗಿ ರಾವಣನಿಂದ ಗಾನಮಾಡಲ್ಪಟ್ಟಿತೆಂದು ಭಾವಿಸಲ್ಪಟ್ಟಿದೆ. ಅಥರ್ವವೇದದಲ್ಲಿ ವ್ರಾತ್ಯರನ್ನು ಆರ್ಯರು ತಮ್ಮೊಳಗೆ ಸೇರಿಸಿಕೊಳ್ಳುವ ಮಾತಿರಲಿ, ಅವರೇ ಸಂಪೂಜ್ಯರಾದುದು ಕಂಡುಬರುವುದು. ಅಥರ್ವವೇದದಲ್ಲಿ ಶಿವನಿಗೆ 'ಏಕವ್ರಾತ್ಯ' ಎಂಬ ಹೆಸರಿನಿಂದ ಮಹದೇವ ಪಟ್ಟವು ಕಟ್ಟಲ್ಪಟ್ಟಿದೆ. ಅಥರ್ವವೇದದ ಹದಿನೈದನೆಯ ಅಧ್ಯಾಯವು ವ್ರಾತ್ಯರ ವಿಷಯಕ್ಕೆ ಮೀಸಲಾಗಿದೆ. ವ್ರಾತ್ಯವಿದ್ವಾಂಸರು ಮನೆಗೆ ಬಂದರೆ ರಾಜನು ಅವರನ್ನು ಎದುರುಗೊಂಡು ತನ್ನ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಸತ್ಕರಿಸಬೇಕೆಂದು ಹೇಳಿದೆ.

ತದ್ಯಸ್ಯೈವಂ ವಿದ್ವಾನ್ ವ್ರಾತ್ಯೋ ರಾಜ್ಞೋಽತಿಥಿರ್ಗೃಹಾನಾಗಚ್ಛೇತ್
ಶ್ರೇಯಾಂಸಮೇನಮಾತ್ಮನೋಮಾನಯೇ, ತಥಾ ಕ್ಷತ್ರಾಯ ವೃಶ್ಚತೇ ತಥಾ ರಾಷ್ಟ್ರಾಯ ವೃಶ್ಚತೇ

ಇದು ಅಥರ್ವವೇದದ ೧೫–೧೦ನೆಯ ಮಂತ್ರ ; ಮುಂದಿನೆರಡು ಮಂತ್ರಗಳಲ್ಲಿ ವ್ರಾತ್ಯ ವಿದ್ವಾಂಸನು ಮನೆಗೆ ಬಂದರೆ ಅವನನ್ನು ಗೌರವದಿಂದ ಕಾಣಬೇಕೆಂದೂ, ಅವನು ಅಪ್ಪಣೆ ಕೊಟ್ಟರೆ ಅಗ್ನಿಕಾರ್ಯ ಮಾಡಬೇಕೆಂದೂ ಇಲ್ಲವಾದರೆ ಮಾಡಕೂಡದೆಂದೂ ಹೇಳಿದೆ. ಹೀಗೆ ಯಜ್ಞವಿರೋಧವಾದ ಅಥರ್ವವೇದಕ್ಕೆ, ಕರ್ಮಠರಾಗಿಯೇ ಉಳಿದಿದ್ದ ಆರ್ಯ ತ್ರೈವಿದ್ಯರು ವೇದವೆಂಬ ಮಾನ್ಯತೆಯನ್ನು ಕೊಡದಿದ್ದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಕಾಲಕ್ರಮದಲ್ಲಿ ಇದೂ, ಯಜ್ಞಯಾಗಕರ್ಮಗಳ ವಿರುದ್ಧವಾಗಿ ಪ್ರಾರಂಭವಾದ ಜ್ಞಾನಕ್ಕೆ ಪ್ರಧಾನವನ್ನು ಕೊಡುವ ಉಪನಿಷತ್ತುಗಳೂ, ವೇದದ ಭಾಗವೆಂಬ ಭಾವನೆ ಬಂದಿತು.

**ಉಪನಿಷತ್ತುಗಳ ಕಾಲದಲ್ಲಿ ಯಜ್ಞವಿರೋಧಿವೇದಪೂರ್ವಲಿಂಗಧಾರೀಧರ್ಮದ ಮುನ್ನಡೆ:** ಯಜ್ಞವಿರೋಧಿದ್ರಾವಿಡರ ಪ್ರಭಾವವು ಹೆಚ್ಚುತ್ತಿರಲು ಕರ್ಮಕಾಂಡದ ಒಲವು ಕಡಮೆಯಾಗಿ ಜ್ಞಾನಕಾಂಡದ ಉಪನಿಷದ್ಗೀತೆಗಳ ಉದಯವಾಯಿತು. ಋಗ್ಯಜುಸ್ಸಾಮವೇದಗಳೇ ವೇದಗಳು, ಯಜ್ಞಕ್ಕೆ ಅವಶ್ಯವಿಲ್ಲದ ಅಥರ್ವವು ವೇದವೇ ಅಲ್ಲ ಎನ್ನುತ್ತಿದ್ದ ತ್ರಯೀಧರ್ಮದ ಕರ್ಮಠರು ಜ್ಞಾನಕಾಂಡದ ಉಪನಿಷತ್‌ಗಳನ್ನು ನಿಂದಿಸುತ್ತಿದ್ದರು. ಮಹಾಮಹೋಪಾಧ್ಯಾಯ ಪಂಡಿತರತ್ನಂ ಶ್ರೀನಿವಾಸಾಚಾರ್ಯರ ಹಿಂದೂದರ್ಶನಸಾರದ ೧೭೩ನೆಯ ಪುಟದಲ್ಲಿ ಹೇಳಿರುವಂತೆ—ವೇದವಾದರತರು ಕುರುಡರಾಗಿ ಮೂಢರಾಗಿ ಕಾಮಪರವಶರಾಗಿ ಸ್ವರ್ಗಕ್ಕಿಂತಲೂ ಬೇರೆ ಪುರುಷಾರ್ಥವಿಲ್ಲವೆಂದು ವಾದಿಸುತ್ತ ಮೋಕ್ಷವನ್ನು ನಿಂದಿಸುತ್ತ ನಾಸ್ತಿಕರಾಗಿ ಇರುತ್ತಾರೆಂದು ಉಪನಿಷತ್ತು ಭಗವದ್ಗೀತಾ ಮೊದಲಾದ ಗ್ರಂಥಗಳಲ್ಲಿ ತ್ರಯೀಧರ್ಮವೆಂಬ ಶುದ್ಧ ವೈದಿಕಮತವನ್ನು ನಿಂದಿಸಿರುತ್ತದೆ. ಉಪನಿಷತ್ತುಗಳೆಲ್ಲವೂ ಕಟ್ಟುಕಥೆಗಳು, ಅವುಗಳಿಗೆ ಅರ್ಥವೇ ಇಲ್ಲವೆಂದು, ಶುದ್ಧವಾದ ಔಪನಿಷದ ಮತವನ್ನು ಪ್ರಾಚೀನ ಮೀಮಾಂಸಕರು ನಿಂದಿಸುತ್ತಿದ್ದರು. 'ವೇದೋಷರಾ ವೇದಾಂತಾಃ' ವೇದಾಂತಗಳು ಬಂಜರುಭೂಮಿಗಳೆಂದರ್ಥ. ನಮ್ಮ ಪೂರ್ವಾಚಾರ್ಯರುಗಳು ಈ ಅಂಶವನ್ನು ಖಂಡಿಸಿ ವೇದಾಂತಾರಂಭವನ್ನು ಸಮರ್ಥಿಸುತ್ತಾರೆ.

ಅಥರ್ವವೇದಕ್ಕೆ ಸೇರಿದ ಮುಂಡಕೋಪನಿಷತ್ತು ಯಜ್ಞಗಳನ್ನು ನಂಬಿದ ಈ ಕರ್ಮಠರನ್ನು ನಿಂದಿಸುವುದರಲ್ಲಿ ಅಗ್ರಸ್ಥಾನವನ್ನು ಪಡೆದಿದೆ. 'ಪ್ಲವಾಹ್ಯೇತೇ ಅದೃಢಾ ಯಜ್ಞರೂಪಾಃ' ಎಂದರೆ ಭವಸಾಗರವನ್ನು ದಾಟಲು ಯಜ್ಞರೂಪವಾದ ದೋಣಿಗಳು ಒಡಕು ದೋಣಿಗಳು, ಉಪಯೋಗವಿಲ್ಲದವು, ಅವನ್ನು ನಂಬಿದವರು ಮೂಢಾಃ ಎಂದರೆ ಮೂಢರು. 'ಅಂಧೇನೈವ ನೀಯಮಾನಾ ಯಥಾಂಧಾಃ' ಎಂದರೆ ಬಳ್ಳಿಗುರುಡರು ಎಂದು ಮೊದಲಾಗಿ ತ್ರಯೀಧರ್ಮದ ವೇದವಾದರತರನ್ನು ನಿಂದಿಸುವುದು ಮುಂಡಕೋಪನಿಷತ್ತು. ಇದನ್ನನುಸರಿಸಿಯೇ ಭಗವದ್ಗೀತೆಯಲ್ಲಿ 'ಅವಿಪಶ್ಚಿತಾಃ ವೇದವಾದರತಾಃ ಪಾರ್ಥ ನಾನ್ಯದಸ್ತೀತಿವಾದಿನಃ ಕಾಮಾತ್ಮಾನಃ ಸ್ವರ್ಗಪರಾಃ' ಎಂದು ಮುಂಡಕ ಉಪನಿಷತ್ತಿನಂತೆಯೇ ವೇದವಾದರತರನ್ನು ನಿಂದಿಸಿ "ತ್ರೈಗುಣ್ಯವಿಷಯಾವೇದಾನಿಸ್ತ್ರೈಗುಣ್ಯೋ ಭವಾರ್ಜುನ" ಎಂದು ವೇದವಾದರತರನ್ನು ಹಿಂಬಾಲಿಸದಂತೆ ಅರ್ಜುನನಿಗೆ ಬುದ್ಧಿಯನ್ನು ಹೇಳಿದೆ. ಈ ಮುಂಡಕ ಉಪನಿಷತ್ತಿನಲ್ಲಿ ಅಲಿಂಗಿಗಳಿಗೆ ಮೋಕ್ಷವಾಗುವುದಿಲ್ಲ ಎಂದು ಹೇಳಿರುವುದು ಗಮನಿಸಲ್ಪಡದಿರುವ ಗಮನಾರ್ಹ ವಿಷಯವಾಗಿದೆ. ಮುಂಡಕೋಪನಿಷತ್ತು 'ನಾಯಮಾತ್ಮಾ ಬಲಹೀನೇನ ಲಭ್ಯಃ ನ ಚ ಪ್ರಮಾದಾತ್ತಪಸೋವಾಪ್ಯಲಿಂಗಾತ್' ಎಂದು ಸ್ಪಷ್ಟವಾಗಿ ಹೇಳಿದೆ. ಶಂಕರಾಚಾರ್ಯರು ಅಲಿಂಗಾತ್ ಲಿಂಗರಹಿತಾತ್ ಎಂದರ್ಥ ಮಾಡಿರುವರು. ಇದರಂತೆ ಲಿಂಗರಹಿತರಿಗೆ ಮೋಕ್ಷವಿಲ್ಲವೆಂದಾಗುವುದು, ಆದರೆ ಅಲಿಂಗಿಗಳಾದ ಶಂಕರಾಚಾರ್ಯರು ಲಿಂಗವೆಂದರೆ ಅದರ ನೇರವಾದ

ಅರ್ಥವಾದ ಶಿವಲಿಂಗವೆಂಬ ಅರ್ಥವನ್ನು ಬಿಟ್ಟು 'ಲಿಂಗಂ ಸಂನ್ಯಾಸಃ ತದ್‌ರಹಿತಾತ್' ಎಂದು ಅರ್ಥಮಾಡಿ ಸಂನ್ಯಾಸವಿಲ್ಲದೆ ಮೋಕ್ಷವಾಗುವುದಿಲ್ಲವೆಂದು ಅರ್ಥಮಾಡಿದ್ದಾರೆ. ಒಂದು ವೇಳೆ ಲಿಂಗವೆಂದರೆ ಸಂನ್ಯಾಸವೆಂದು ಅರ್ಥಮಾಡುವುದು ಸಾಧ್ಯವಾದರೂ ರೂಢಿಯ ಅರ್ಥವಾದ ಶಿವಲಿಂಗವೆಂಬ ಅರ್ಥವು ಮೋಕ್ಷವನ್ನು ಹೇಳುವಾಗ ಹೊಂದುವುದಾದರೂ ಬೇರೆ ಹೇಗೋ ಅರ್ಥವನ್ನು ತಿಣುಕಿ ಸಂನ್ಯಾಸವೆಂದು ಅರ್ಥಮಾಡುವುದು 'ರೂಢಿರ್ಯೋಗಾತ್ ಬಲೀಯಸೀ' ಎಂಬ ಆಧಾರದಂತೆ ತಪ್ಪಾಗುತ್ತದೆ. ಆದರೆ ಲಿಂಗವೆಂದರೆ ಸಂನ್ಯಾಸವೆಂದು ಅರ್ಥಮಾಡಲು ಸಾಧ್ಯವೇ ಇಲ್ಲ. ಯಾವ ನಿಘಂಟಿನಲ್ಲಿಯೂ ಲಿಂಗವೆಂದರೆ ಸಂನ್ಯಾಸವೆಂಬ ಅರ್ಥವು ದೊರೆಯುವುದಿಲ್ಲ. ಯಾವ ಶಾಸ್ತ್ರೀಯ ಅಥವಾ ಲೌಕಿಕಗ್ರಂಥದಲ್ಲಾಗಲೀ ಲಿಂಗ ಪದವನ್ನು ಸಂನ್ಯಾಸವೆಂಬ ಅರ್ಥದಲ್ಲಿ ಪ್ರಯೋಗಿಸಿಲ್ಲ. ಲಿಂಗವೆಂದರೆ ಚಿಹ್ನೆವೆಂಬ ಅರ್ಥವಿದೆ. ಈ ದೃಷ್ಟಿಯಿಂದ ಲಿಂಗಿ ಎಂದರೆ ಸಂನ್ಯಾಸ ಚಿಹ್ನವಾದ ಕಾಷಾಯವಸ್ತ್ರವನ್ನು ಧರಿಸಿದ ಸಂನ್ಯಾಸಿಯೆಂದು ಅರ್ಥವಾಗುವುದು. ಆದರೆ ಮತ್ತೆ ಈ ಅರ್ಥವನ್ನು ದೃಷ್ಟಿಯಲ್ಲಿಟ್ಟುಕೊಂಡು ಲಿಂಗವೆಂದರೆ ಸಂನ್ಯಾಸವೆಂದು ಅರ್ಥಮಾಡಲಾಗುವುದಿಲ್ಲ. ಲಿಂಗವೆಂದರೆ ಚಿಹ್ನವೆಂದು ಮಾತ್ರವೇ ಅರ್ಥವಾಗುತ್ತದೆ. ಶೂಲವೆನ್ನುವುದೊಂದು ಆಯುಧ. ಶೂಲವನ್ನು ಧರಿಸಿರುವುದರಿಂದ ಶಿವನಿಗೆ ಶೂಲಿಯೆಂದು ಹೆಸರು. ಶೂಲಿ ಎಂದರೆ ಶಿವನೆಂದು ಅರ್ಥವಾಗುವ ದೃಷ್ಟಿಯಿಂದ ಶೂಲವೆಂದರೆ ಶಿವತ್ವವೆಂದು ಹೇಗೆ ಅರ್ಥವಾಗುವುದಿಲ್ಲವೋ ಹಾಗೆಯೇ ಲಿಂಗಿ ಎಂದರೆ ಸಂನ್ಯಾಸಿಯೆಂಬ ಅರ್ಥವಾದ ಮಾತ್ರಕ್ಕೆ ಲಿಂಗವೆಂದರೆ ಸಂನ್ಯಾಸವೆಂದು ಅರ್ಥಮಾಡಲು ಸಾಧ್ಯವೇ ಇಲ್ಲ. ಈ ಉಪನಿಷತ್ತಿನಲ್ಲಿ ಸಂನ್ಯಾಸವಿಲ್ಲದೆ ಮೋಕ್ಷವಾಗುವುದಿಲ್ಲವೆಂದು ಹೇಳುವುದು ಸಾಧ್ಯವಿಲ್ಲವೆಂದು ಉಪಕ್ರಮೋಪಸಂಹಾರಾದಿಗಳಿಂದ ನನ್ನ 'ತ್ರಿಮತಾಚಾರ್ಯಭಾಷ್ಯೋಪೇತವಿವರಣಾತ್ಮಕ ಮುಂಡಕೋಪನಿಷತ್ತಿನಲ್ಲಿ' ಸಿದ್ಧಾಂತ ಮಾಡಿದೆ. ಈ ಉಪನಿಷತ್ ವಿದ್ಯೆಯನ್ನು ಬ್ರಹ್ಮದೇವನು 'ಜ್ಯೇಷ್ಠಪುತ್ರಾಯ ಪ್ರಾಹ' ಎಂದರೆ ತನ್ನ ಪುತ್ರನಿಗೆ ಹೇಳಿದನೆಂದು ಹೇಳುವುದರಿಂದ ಈ ಉಪನಿಷತ್ತು ಪ್ರಾರಂಭವಾಗುತ್ತದೆ. ಈ ಉಪನಿಷತ್ತು ಉಪದೇಶವಾಗಿರುವುದು. 'ಶೌನಕೋ ಹ ವೈ ಮಹಾಶಾಲಃ' ಎಂದರೆ ಮಹಾಗೃಹಸ್ಥನಾದ ಶೌನಕನಿಗೆ 'ಮಹಾಶಾಲಃ' ಎಂದರೆ 'ಮಹಾಗೃಹಸ್ಥಃ' ಎಂದು ಶಂಕರಾಚಾರ್ಯರೇ ಅರ್ಥಮಾಡಿದ್ದಾರೆ. ಏತಾಂಬ್ರಹ್ಮ ವಿದ್ಯಾಂ ವದೇತ ಶಿರೋವ್ರತಂ ವಿಧಿವದ್‌ಯೈಸ್ತುಚೀರ್ಣಂ.... ನೈತದಚೀರ್ಣವ್ರತೋಽಧೀತೇ' ಎಂದರೆ ಯಾರು ಶಿರೋವ್ರತವನ್ನು ಮಾಡುತ್ತಾರೋ ಅವರಿಗೆ ಈ ವಿದ್ಯೆಯನ್ನು ಉಪದೇಶಮಾಡಬೇಕು, ಅವ್ರತರು ಈ ಉಪನಿಷತ್ತನ್ನು ಅಧ್ಯಯನ ಮಾಡಬಾರದೆಂದು ಸಹಾ ಈ ಉಪನಿಷತ್ತಿನಲ್ಲಿ ಹೇಳಿದೆ. ಸಂನ್ಯಾಸಿಗಳು ಅವ್ರತರು. ಆದುದರಿಂದ ಈ ಉಪನಿಷತ್ತು ಸಂನ್ಯಾಸಿಗಳಿಗೆ ಹೇಳಿದ್ದಲ್ಲ. ಶಿರೋವ್ರತವನ್ನು ಆಚರಿಸುವವರಿಗೆ ಇದನ್ನು ಉಪದೇಶಮಾಡಬೇಕಾದುದರಿಂದ ಈ ಉಪನಿಷತ್ತಿಗೆ ಮುಂಡಕವೆಂಬ ಹೆಸರು ಬಂದಿದೆ. ಶಿರೋವ್ರತವೆಂದರೆ ಮುಂಡಕವ್ರತ.

ಇನ್ನು ಶಿರೋವ್ರತವೆಂದರೇನೆಂಬುದು ವಿಚಾರಾರ್ಹ. ಶಿರೋವ್ರತವೆಂದರೆ ತಲೆಯ ಮೇಲೆ ಅಗ್ನಿಯನ್ನು ಧರಿಸುವ ವ್ರತವೆಂದು ಶಾಂಕರಭಾಷ್ಯದಲ್ಲಿ ಹೇಳಿದೆ. ಆದರೆ ಈ ಅರ್ಥಕ್ಕೆ ಯಾವ ಆಧಾರವನ್ನೂ ಕೊಟ್ಟಿಲ್ಲ. ಸೂತ ಸಂಹಿತೆಯು ಶಾಂಕರಾದ್ವೈತಕ್ಕೆ ಮುಖ್ಯ ಆಧಾರಗ್ರಂಥವೆಂದು ಪ್ರಸಿದ್ಧವಾಗಿದೆ. ಪಾಶುಪತವ್ರತವುಳ್ಳವರಿಗೇ ಉಪನಿಷದ್ವಿದ್ಯೆಯನ್ನು ಉಪದೇಶಿಸಬೇಕೆಂದು ವೇದಾನುಶಾಸನವಿರುವುದಾಗಿ ಸೂತಸಂಹಿತೆಯು ಹೇಳಿ ಶಿರೋವ್ರತವನ್ನು ಹೇಳುವ ಮುಂಡಕದ ಆಧಾರಕ್ಕೆ ಗಮನವನ್ನುಸೆಳೆಯುತ್ತದೆ. ಶಿರೋವ್ರತವೆಂದರೆ ಪಾಶುಪತವ್ರತವೆಂದಾಯಿತು.

> ವ್ರತಂ ಪಾಶುಪತಂ ಚೀರ್ಣಂ ಯೈರ್ದ್ವಿಜೈರಾದರೇಣ ಚ ।
> ತೇಷಾಮೇವೋಪದೇಷ್ಟವ್ಯಮಿತಿವೇದಾನುಶಾಸನಂ ।

ಸೂತಸಂಹಿತೆಯ ಪಾಶುಪತಮಹಾತ್ಮ್ಯಂ ಎಂಬ ಅಧ್ಯಾಯದಲ್ಲಿರುವ ಈ ಶ್ಲೋಕದಿಂದ ಪಾಶುಪತವ್ರತವು ಶಿರೋವ್ರತವೆಂಬ ಹೆಸರಿನಿಂದ ಮುಂಡಕದಲ್ಲಿ ಉಕ್ತವಾಗಿದೆಯೆಂಬುದು ಸ್ಪಷ್ಟ. ವಿದ್ಯಾರಣ್ಯರದೆಂದು ಉಕ್ತವಾಗಿರುವ ಸೂತ ಸಂಹಿತೆಯ ತಾತ್ಪರ್ಯದೀಪಿಕೆಯಲ್ಲಿ 'ವೇದಾನುಶಾಸನಮಿತಿ ಕ್ರಿಯಾವಂತಃ...ಏತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ವಿಧಿವದ್‌ಯೈಸ್ತು ಚೀರ್ಣಂ' ಎಂದು ಹೇಳಿ ಶಿರೋವ್ರತವೆಂದರೆ ಪಾಶುಪತವೆಂಬುದನ್ನು ಸ್ಪಷ್ಟಮಾಡಿದೆ. ಪಾಶುಪತವ್ರತದಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸಬೇಕಾದುದರಿಂದ ಅಲಿಂಗಾತ್ ಎಂದರೆ ಶಿವಲಿಂಗರಹಿತರಿಗೆ ಮೋಕ್ಷವಿಲ್ಲವೆಂದು ಮುಂಡಕದಲ್ಲಿ ಹೇಳಿರುವುದು ಸ್ಪಷ್ಟ. ಸೂತಸಂಹಿತೆಯಲ್ಲಿಯೇ 'ಶಿವಾಗಮೋಕ್ತಾಶ್ರಮನಿಷ್ಠೋ ಮಾನವಃ । ತ್ರಿಪುಂಡ್ರಲಿಂಗಂ ತು ಸದೈವ ಧಾರಯೇತ್॥' ಎಂದು ಹೇಳಿ ಲಿಂಗಧಾರಣೆಯನ್ನು ವಿಧಿಸಿದೆ. ಇದಲ್ಲದೆ ಇಲ್ಲಿ ಹೇಳಿರುವ ಶಿವಾಗಮಗಳಲ್ಲಿ ಶಿರೋವ್ರತ, ಪಾಶುಪತವ್ರತವೆಂದರೇನೆಂದು ಹೇಳಿದೆಯೆಂಬುದು ವಿಚಾರಾರ್ಹವಾಗಿದೆ.

**ಆಗಮಗಳ ಕಾಲದಲ್ಲಿ ವೇದಪೂರ್ವಲಿಂಗಧಾರೀಧರ್ಮದ ಮುನ್ನಡೆ**: ಯಜ್ಞಯಾಗಾದಿಗಳಲ್ಲಿ ಇಂದ್ರಾದಿದೇವತೆಗಳಿಗೆ ಆಹುತಿಯನ್ನೀಯುವ ಮೂಲಕ ತೃಪ್ತಿಪಡಿಸುವ ಬದಲು ಗುಡಿಗಳಲ್ಲಿ ಶಿವಾದಿದೇವರುಗಳನ್ನು ಪೂಜಿಸುವ ಪದ್ಧತಿಯನ್ನು ರೂಢಿಗೆ ತಂದ ಹಿರಿಮೆಯು ಆಗಮಗಳಿಗೆ ಸೇರಿದುದು. ಶಿವನನ್ನೂ ವಿಷ್ಣುವೇ ಮೊದಲಾದವರ ಪ್ರತಿಮೆಗಳನ್ನೂ ಪೂಜಿಸುವುದಲ್ಲದೆ ಲಿಂಗ ಸಾಲಿಗ್ರಾಮಗಳನ್ನು ಪೂಜಿಸುವುದೂ ಲಿಂಗವನ್ನು ಧರಿಸುವುದೂ ಆಗಮೋಕ್ತವಾಗಿದೆ :

ಅತ್ಯಾಶ್ರಮಂ ಪಾಶುಪತಂ ಶಾಂಭವಂ ತಚ್ಛಿರೋವ್ರತಂ ।
ಇತೀದಂ ನಾಮಭಿರ್ಪುಣ್ಯೈರ್ನಿಗಮಾಂತೇಷು ಗೀಯತೇ ॥
ತನುತ್ರಯಗತಾನಾದಿಮಲತ್ರಯಮಸೌಗುರುಃ ।
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶೇತ್ ॥ —ಕಾರಣೋತ್ತರತಂತ್ರ. ಕ್ರಿಯಾಪಾದ ॥
ಭಸ್ಮರುದ್ರಾಕ್ಷ ಶ್ರೀಲಿಂಗಧಾರಣಾತ್ಮಕಮುತ್ತಮಂ ।
ಶಾಂಭವವ್ರತಮೇತದ್ಧಿ ವೇದ ಶಾಸ್ತ್ರೈಕ ಚೋದನಂ ॥ —ಚಂದ್ರಜ್ಞಾನೋತ್ತರತಂತ್ರ. ಕ್ರಿಯಾಪಾದ ॥
ಷಡಧ್ವಶುದ್ಧಿಪೂರ್ವೇಣ ಶಾಂಭವೇನ ವ್ರತೇನ ತು ॥
ದೀಕ್ಷಯಿಷ್ಯೇ ಇಮಂ ಶಿಷ್ಯಂ ಶಕ್ತಿಪಾತವಿಧಾನತಃ ॥ —ಕಾರಣೋತ್ತರತಂತ್ರ. ಕ್ರಿಯಾಪಾದ ॥

ಇವೇ ಮೊದಲಾದ ಆಧಾರಗಳಿಂದ ಶಿರೋವ್ರತ, ಅತ್ಯಾಶ್ರಮ ಪಾಶುಪತ ಶಾಂಭವವ್ರತಗಳೆಂಬ ಹೆಸರಿನಿಂದ ಉಕ್ತವಾಗುವ ವ್ರತದಲ್ಲಿ ಇಷ್ಟಪ್ರಾಣಭಾವಲಿಂಗಧಾರಣೆಯು ದೀಕ್ಷಾಪೂರ್ವಕವಾಗಿ ಮಾಡಲ್ಪಡಬೇಕೆಂದು ಉಕ್ತವಾಗಿದೆ. ಆದುದರಿಂದ ಮುಂಡಕೋಪನಿಷತ್ತಿನಲ್ಲಿ ವಿಧಿಸಲ್ಪಟ್ಟ ಶಿರೋವ್ರತವೆಂದರೆ ಲಿಂಗಧಾರಣೆಯೆಂಬುದೂ, ಅದಿಲ್ಲದೆ ಮೋಕ್ಷವಾಗುವುದಿಲ್ಲವೆಂಬುದೂ ಆ ಉಪನಿಷತ್ತಿನಲ್ಲಿ ಹೇಳಿದೆಯೆಂದೂ ಆ ಉಪನಿಷತ್ತಿನ ಸಿದ್ಧಾಂತವೆಂದೂ ಧಾರಾಳವಾಗಿ ಹೇಳಬಹುದು. ದೀಕ್ಷೆಯಿಂದ ಶಕ್ತಿಪಾತವಾಗುವುದು ಎಂದು ಆಗಮದಲ್ಲಿ ಹೇಳಿರುತ್ತಾಗಿ 'ನಾಯಮಾತ್ಮಾ ಬಲಹೀನೇನ' ಎಂದು ಮುಂಡಕದಲ್ಲಿ ಹೇಳಿರುವುದಕ್ಕೆ ದೀಕ್ಷೆಯಿಂದ ಶಕ್ತಿಪಾತವಾಗದ ಬಲಹೀನನಿಗೆ ಮೋಕ್ಷವಾಗುವುದಿಲ್ಲವೆಂಬಭಿಪ್ರಾಯ ಶಿರೋವ್ರತವೂ ಅತ್ಯಾಶ್ರಮವೂ ಒಂದೇ ವ್ರತವಾದುದರಿಂದ ಅತ್ಯಾಶ್ರಮಿಗೆ ಹೇಳಲ್ಪಟ್ಟ ಶ್ವೇತಾಶ್ವತರ ಉಪನಿಷತ್ತೂ ಲಿಂಗಧಾರಣಪರವೇ.

**ಪುರಾಣೇತಿಹಾಸಗಳ ಕಾಲದಲ್ಲಿ ಲಿಂಗಧಾರೀಧರ್ಮದ ಮುನ್ನಡೆ**: ಸ್ಕಾಂದಪುರಾಣಾಂತರ್ಗತ ಕೇದಾರಖಂಡದಲ್ಲಿ ಲಿಂಗಧಾರಣೆಯನ್ನು ಹೇಳಿರುವುದರ ಆಧಾರಗಳನ್ನು ಹಿಂದೆಯೇ ಕೊಟ್ಟಿದೆ. ಕೂರ್ಮವಾಯುಪುರಾಣಗಳಲ್ಲಿ ಲಿಂಗಧಾರಣೆಯನ್ನು ಹೇಳಿರುವ ಆಧಾರಗಳನ್ನು ಮುಂದೆ ಕೊಡಲಾಗುವುದು. ರಾಮಾಯಣದಲ್ಲಿ ರಾವಣನು ಹೋದ ಕಡೆಯಲ್ಲೆಲ್ಲ ಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದನೆಂಬ ಆಧಾರವನ್ನು ಹಿಂದೆ ಕೊಟ್ಟಿದೆ. ಮಹಾಭಾರತದಲ್ಲಿ ಪಾಶುಪತರ ವಿಷಯ ಉಕ್ತವಾಗಿದೆ. ಕರಣಹಸಿಗೆಯಲ್ಲಿ ಚೆನ್ನಬಸವೇಶನು ಹೇಳಿರುವ ಸೃಷ್ಟಿಕ್ರಮವು ಸಾಮಾನ್ಯವಾಗಿ ವೇದಾಂತದಲ್ಲಿ ಹೇಳುವ ಸೃಷ್ಟಿಕ್ರಮಕ್ಕಿಂತ ಭಿನ್ನವಾಗಿದೆಯೆಂಬ ವಿವರಣೆಯನ್ನು ಕನ್ನಡನಾಡಿನ ಚರಿತ್ರೆಯ ದ್ವಿತೀಯ ಭಾಗದ ೨೦೫ ಪುಟಗಳಲ್ಲಿ ಹೇಳಿ, ಆ ಸೃಷ್ಟಿಕ್ರಮವು ಮಹಾಭಾರತದಲ್ಲಿಯೂ ಇರುವುದರಿಂದ "ಕರಣಹಸಿಗೆಯ ತತ್ತ್ವವಿವೇಚನೆ ಮಹಾಭಾರತದಷ್ಟು ಹಳೆಯದೆಂಬುದನ್ನು ಒಪ್ಪಿಕೊಳ್ಳಬೇಕಾಗುವುದು" ಎಂದು ನಿರ್ಧರಿಸಲ್ಪಟ್ಟಿದೆ.

ಯುಧಿಷ್ಠಿರ ಉವಾಚ—ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾಃ ॥
ಬ್ರಾಹ್ಮಣಂ ಲಿಂಗಿನಂ ಚೈವ ಬ್ರಾಹ್ಮಣಂ ವಾಪ್ಯಲಿಂಗಿನಂ ॥
ಭೀಷ್ಮ ಉವಾಚ— ಸ್ವವೃತ್ತಿಮಭಿಪನ್ನಾಯ ಲಿಂಗಿನೇ ಚೇತರಾಯ ಚ ।
ದೇಯಮಾಹುರ್ಮಹಾರಾಜ ಉಭಾವೇತೌತಪಸ್ವಿನೌ ॥

ಮಹಾಭಾರತದ ಈ ಶ್ಲೋಕಗಳಲ್ಲಿ ಲಿಂಗಿಬ್ರಾಹ್ಮಣನು ದಾನಾರ್ಹನೇ ಅಲಿಂಗಿಬ್ರಾಹ್ಮಣನು ದಾನಾರ್ಹನೆ ಎಂಬ ಪ್ರಶ್ನೆಯೆದ್ದಿರುವುದು ಲಿಂಗಿ ಎಂದರೆ ಸಾಮಾನ್ಯವಾಗಿ ಅರ್ಥ ಹೇಳುವಂತೆ ಸಂನ್ಯಾಸಿ ಎಂದು ಅರ್ಥ ಮಾಡುವುದು ಸರಿಯಲ್ಲ. 'ಮುಂಡೋಽಪರಿಗ್ರಹಃ' (ಜಾ ೫) ಎಂಬ ಆಧಾರವು ಬೃಹದಾರಣ್ಯಕದ ಶಾಂಕರಭಾಷ್ಯದಲ್ಲಿಯೇ ಉಕ್ತವಾಗಿದೆ. ಸಂನ್ಯಾಸಿಯು ದಾನಾರ್ಹನಲ್ಲವಾದುದರಿಂದ ಬ್ರಾಹ್ಮಣ ಸನ್ಯಾಸಿಯು ದಾನಾರ್ಹನೇ ಅಲ್ಲವೇ ಎಂಬ ಪ್ರಶ್ನೆ

ಏಳುವುದೇ ಇಲ್ಲ. ಮೇಲಿನ ಶ್ಲೋಕಗಳಿಗೆ ಲಿಂಗಧಾರೀಬ್ರಾಹ್ಮಣನಾಗಲೀ ಲಿಂಗಧಾರಿಯಲ್ಲದ ಬ್ರಾಹ್ಮಣನಾಗಲೀ ಯೋಗ್ಯನಾದರೆ ದಾನಾರ್ಹನೆಂದರ್ಥ. ಮಹಾಭಾರತಕಾಲದಲ್ಲಿ ಲಿಂಗಧಾರೀಬ್ರಾಹ್ಮಣರಿದ್ದರೆಂಬುದು ಸ್ಪಷ್ಟ.

**ಚಾರಿತ್ರಿಕಕಾಲದಲ್ಲಿ ಲಿಂಗಧಾರೀಧರ್ಮದ ಮುನ್ನಡೆ** : ಕರ್ಮಕಾಂಡವನ್ನು ನಿರಾಕರಿಸಿ ಜ್ಞಾನಕಾಂಡವನ್ನು ಬೋಧಿಸಿದ ಉಪನಿಷತ್ತುಗಳ ಉಪದೇಶವಾಗಲೀ, ಆ ನಿಲುವನ್ನೇ ಮುಂದುವರಿಸಿದ ಬೌದ್ಧರ ಶೂನ್ಯವಾದವಾಗಲೀ ಅವರ ವಾದದಿಂದಲೇ ಅವರ ಸಿದ್ಧಾಂತವನ್ನು ಖಂಡಿಸಿದ ಶಂಕರಾಚಾರ್ಯರ ನಿರ್ವಿಶೇಷಬ್ರಹ್ಮವಾದವಾಗಲೀ ಸಾಮಾನ್ಯಜನರಿಗೆ ಅರ್ಥವಾಗಲಿಲ್ಲ. ಸುಖಸಂಪತ್ತನ್ನು ಬೇಡಲು ಸಂಕಟವನ್ನು ಪರಿಹರಿಸಲು ಒಂದು ದೈವ ಬೇಕಾಗಿತ್ತು.ಅವರಿಗೆ ಪಾಶುಪತಾಗಮ ಮತ್ತು ಪಾಂಚರಾತ್ರಾಗಮಗಳು ಶಿವವಿಷ್ಣುಗಳೆಂಬ ದೈವಗಳನ್ನು ಅವರಿಗೆ ಒದಗಿಸಿದವು. ಈ ಆಗಮಗಳನ್ನು ಬ್ರಹ್ಮಸೂತ್ರವು ಅವೈದಿಕವೆಂದು ತಿರಸ್ಕರಿಸಿತು. ಲಕುಲೀಶನು ಪಾಶುಪತವನ್ನು ಸಂಸ್ಕರಿಸಿ ವೈದಿಕವಾಗಿ ಮಾಡಿದನು. ಶ್ರೀಕಂಠ ರಾಮಾನುಜಾಚಾರ್ಯರು ಭಾಷ್ಯಗಳನ್ನು ಬರೆದು ಈ ಆಗಮಗಳು ಬ್ರಹ್ಮಸೂತ್ರಕ್ಕನುಸಾರವಾಗಿವೆಯೆಂದು ಸಿದ್ಧಾಂತ ಮಾಡಿದರು. ಪಾಶುಪತಮಾಹೇಶ್ವರರು ಅನೇಕ ಶಾಸನಗಳಲ್ಲಿ ಹೇಳಿರುವಂತೆ 'ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನುಷ್ಠಾನಜಪತಪ ಸಮಾಧಿಗುಣಶೀಲಸಂಪನ್ನರಾಗಿಯೂ ; ಋಗ್‌ಯಜುಸ್ಸಾಮಾಥರ್ವವೇದವೇದಾಂಗಗಳನ್ನು ಕಲಿಸುವ ವಿದ್ಯಾಕೇಂದ್ರಗಳ ಅಧಿಪತಿಗಳಾಗಿಯೂ, ರಾಜಮಹಾರಾಜರುಗಳ ರಾಜಗುರುಗಳಾಗಿಯೂ ರಾರಾಜಿಸಿದರು. ಯಜ್ಞಯಾಗಾದಿಗಳ ಹಾಗೂ ವರ್ಣಾಶ್ರಮಧರ್ಮದ ವಿರೋಧವಾಗಿ ಪ್ರಾರಂಭವಾದ ಪಾಶುಪತಧರ್ಮವು ವೈದಿಕಧರ್ಮವಾಗಿ ಬ್ರಾಹ್ಮಣರಲ್ಲಿ ಪರಿವರ್ತನೆಗೊಂಡಿತು. ಇವರ ಶಿಷ್ಯರಾದ ಪಲ್ಲವರಾಜರು ಅಶ್ವಮೇಧಾದಿಯಜ್ಞಗಳನ್ನು ಮಾಡಿ ಹೆಮ್ಮೆಪಡುತ್ತಿದ್ದರು. ಪಾಶುಪತರಲ್ಲಿ 'ಲಿಂಗರುದ್ರಾಕ್ಷಭಸ್ಮಾದಿಧಾರಣಂ ವೈದಿಕಂ ಭವೇತ್ ಲಿಂಗರುದ್ರಾಕ್ಷಿಭಸ್ಮಗಳನ್ನು ಧರಿಸುವ ವೈದಿಕರೂ, ತಪ್ತಲಿಂಗಮುದ್ರೆಯನ್ನು ಧರಿಸುತ್ತಿದ್ದ ತಾಂತ್ರಿಕರೂ, ಶಿವನೊಡನೆ ಇತರ ದೇವತೆಗಳನ್ನು ಪೂಜಿಸುತ್ತಿದ್ದ ಮಿಶ್ರಶೈವರೂ ಇದ್ದಂತೆ ಕೂರ್ಮಪುರಾಣದಿಂದ ತಿಳಿದುಬರುತ್ತದೆ. ಆನಂದಗಿರಿಯ 'ಶಂಕರ ವಿಜಯ'ದಲ್ಲಿ 'ಭುಜದ್ವಯಲಿಂಗಾಂಕಧರಾಃ ಶೈವಾಃ.... ಶಿರಸಿ ಪಾಷಾಣಲಿಂಗಂ ಚ ಧಾರಿಣಃ ಜಂಗಮಾಃ, ಲಲಾಟೇ ಭುಜದ್ವಯೇ ಹೃನ್ನಾಭಿಷು ಲಿಂಗಧಾರಿಣಃ ಪಾಶುಪತಾಃ' ಎಂದು ಹೇಳಿದೆ. ಪಾಶುಪತರಲ್ಲಿ ಸಂನ್ಯಾಸಿಗಳು ಶ್ರೇಷ್ಠರೆಂದೂ ತಲೆಯಲ್ಲಾಗಲೀ 'ಜಟಾಪೌ ಪ್ರಾಣಲಿಂಗಧರಾಃ' ಜಟೆಯಲ್ಲಾಗಲೀ ಲಿಂಗವನ್ನು ಧರಿಸುವರೆಂದು ಹತ್ತನೆಯ ಶತಮಾನದ ಹರಿಭದ್ರನ ಷಡ್ದರ್ಶನಸಮುಚ್ಚಯದಲ್ಲಿ ಹೇಳಿದೆ. ಸರ್ವದರ್ಶನಸಂಗ್ರಹದಲ್ಲಿ ಪಾಶುಪತರ ವಿಷಯದಲ್ಲಿ 'ನಿರ್ಮಾಲ್ಯಲಿಂಗಧಾರೀತಿ' ಎಂದು ಹೇಳಿರುವುದರ ಆಧಾರದಿಂದ ಭಂಡಾರ್ಕರ್ ಅವರು ಪಾಶುಪತರು ಲಿಂಗಧಾರಿಗಳೆಂದು ಅಭಿಪ್ರಾಯಪಟ್ಟಿದ್ದಾರೆ. ಇವೆಲ್ಲಕ್ಕೂ ಮಿಗಿಲಾಗಿ ಪಾಶುಪತಸೂತ್ರಗಳ ಮೊದಲೇ 'ಲಿಂಗಧಾರೀ' ಎಂಬ ಸೂತ್ರವಿದೆ. ಅದರ ಕೌಂಡಿನ್ಯ ಭಾಷ್ಯದಲ್ಲಿ 'ಲಿಂಗಂ ತದ್ಧಾರಯನ್ ಲಿಂಗಧಾರೀ ಭವತಿ' ಎಂದು ಹೇಳಿದೆ. ಕ್ರಿ.ಶ. ೫೦೦ರಿಂದ ೭೦೦ರ ಒಳಗೆ ರಚಿತವಾಗಿರುವ ವಡ್ಡಾರಾಧನೆಯಲ್ಲಿ 'ಪೊಲ್ಲಲಿಂಗಿಗಳರಸರ್ಕಳಿಂ ಪೂಜೆವಡವರ್ ಎಂದಿರುವುದೂ, ಕ್ರಿ.ಶ. ೭೦೦ರ ಜಿನಸೇನನ ಮಹಾಪುರಾಣದಲ್ಲಿ 'ಕುಲಿಂಗಿ'ಗಳ ಹೆಸರಿರುವುದೂ ಲಿಂಗಧಾರಿಗಳಾದ ಪಾಶುಪತರಾಜಗುರುಗಳ ಪ್ರಾಬಲ್ಯವನ್ನು ಸಹಿಸದೆ ಹೇಳಿದ ಮಾತುಗಳು. ಡಿ. ಎಲ್. ನರಸಿಂಹಾಚಾರ್ಯರು ಜಯಕರ್ನಾಟಕ (ಸಂ ೧೩–೩)ದಲ್ಲಿ ಹೀಗೆ ಹೇಳಿದ್ದಾರೆ:

ವಯಲೂರು ಶಾಸನದಲ್ಲಿ (ಇ ೧ VIII ಲಿಪಿ ೧೪೯–೧೫೦) ಆ ಶಾಸನೋಕ್ತ ಎರಡನೆಯ ರಾಜಸಿಂಹನೆಂಬ ದೊರೆಯನ್ನು 'ಮಹೇಶ್ವರಶಿಖಾಮಣಿದೀಪ್ತಿಮೌಲಿಃ' ಎಂದು ಕರೆದಿದೆ. ಇದನ್ನು ಶಿವಚೂಡಾಮಣಿಯೆಂದು ಆ ದೊರೆಗಿರುವ ವಿಶೇಷಣದೊಡನೆ (೫೧೧.೧.೧೮, ೧೯, ೨೧, ೨೨) ಹೋಲಿಸಿ ನೋಡಿದರೆ ರಾಜಸಿಂಹನು ಮೂರ್ಧ್ನಿಪ್ರದೇಶದಲ್ಲಿ ಲಿಂಗಲಾಂಛನವನ್ನು ಧರಿಸಿದ್ದಂತೆ ಕಾಣುತ್ತದೆ. ಈ ಶಾಸನದ ಕಾಲ ೮ನೇ ಶತಮಾನ. ಆದುದರಿಂದ ಆ ಕಾಲದಲ್ಲಿಯೇ ಲಿಂಗಧಾರಣೆ ಇತ್ತೆಂದು ತೋರುತ್ತದೆ. ಇದು ಮತ್ತು ಈತರದ ಆಧಾರಗಳಿಂದ ಶಾಸನ ಇಲಾಖಾತಜ್ಞರಾದ ಹೆಚ್. ಕೃಷ್ಣಶಾಸ್ತ್ರಿಗಳು ಹೀಗೆ ಬರೆದಿದ್ದಾರೆ.

All these references clearly point to the existance of a lingacult long before the revival of Veerasaiva faith under the auspicies of the famous kalachuri minister Basava (Channabasava) in which the wearing of linga plays a prominent part (*El*, Vol. 18).

ಈ ಎಲ್ಲ ಆಧಾರಗಳಿಂದ ಬಸವಪೂರ್ವಕಾಲದ ಪಾಶುಪತರು ಲಿಂಗಧಾರೀಬ್ರಾಹ್ಮಣರೆಂಬುದು ಖಚಿತವಾಯಿತೆನ್ನಬಹುದು. ಲಕುಳೀಶನು ಪಾಶುಪತವನ್ನು ವೈದಿಕಮತವನ್ನಾಗಿ ಮಾಡಿದ ಮೇಲೆ ಅದರಲ್ಲಿ ಶೈವ ಪಾಶುಪತ ಕಾಳಾ

ಮುಖ ಕಾಪಾಲಿಕ ಎಂಬ ನಾಲ್ಕು ಶಾಖೆಗಳಾದವು, ಹಳೆಯ ಪಾಶುಪತವು ಒಂದು ಶಾಖೆಯಾಯಿತು. ಅದೂ ಅದರಲ್ಲಿದ್ದ ಶಾಕ್ತಸಂಪ್ರದಾಯವೇ ಅತಿರೇಕವಾಗಿದ್ದ ಕಾಳಾಮುಖಶಾಖೆಯೂ ಕಾಲಕ್ರಮದಲ್ಲಿ ನಾಮಾವಶೇಷವಾದುವು. ಹೊಸವಾಗಿ ಬ್ರಾಹ್ಮಣ್ಯವನ್ನು ಪಡೆದಿದ್ದ ಶೈವಕಾಳಾಮುಖಶಾಖೆಗಳ ಗುರುಗಳು ರಾಜಗುರುಗಳಾಗಿ ಹುರುಪಿನಿಂದ ರಾಜರನ್ನು ವರ್ಣಾಶ್ರಮಧರ್ಮಪರಿಪಾಲಕರನ್ನಾಗಿ ಪ್ರೋತ್ಸಾಹಿಸಿ ಅಶ್ವಮೇಧಾದಿಯಜ್ಞಗಳನ್ನು ಮಾಡಿಸಿದರು. ಲಕುಳೀಶನ ಪರಂಪರೆಯ ಶ್ವೇತಾಚಾರ್ಯನ ಶಿಷ್ಯನಾದ ಶ್ರೀಕಂಠಶಿವಾಚಾರ್ಯನು ವರ್ಣಾಶ್ರಮಧರ್ಮವನ್ನು ಎತ್ತಿಹಿಡಿಯುವ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆದನು. 'ಮೌನವದಿತರೇಷಾಮಪ್ಯುದೇಶಾತ್' ಎಂಬ ಸೂತ್ರದ ಭಾಷ್ಯದಲ್ಲಿ 'ಯಾವದಾಯುಷಂ ಪಾಶುಪತವ್ರತಧಾರಿಣಾಂ ಮುಕ್ತಿರೇವ ಫಲಂ' ಎಂದರೆ ಬದುಕಿರುವವರೆಗೂ ಪಾಶುಪತವನ್ನಾಚರಿಸಿದರೆ ಮುಕ್ತಿಯು ಲಭಿಸುತ್ತದೆ ಎಂದು ಶ್ರೀಕಂಠ ಶಿವಾಚಾರ್ಯನು ಹೇಳಿದ್ದಾನೆ. ಪಾಶುಪತವ್ರತವು ಪುರಾಣೋಕ್ತವೆಂದು ಹೇಳಿ 'ಯಾವಚ್ಛರೀರಪಾತಂ ವಾ' ಎಂದು ಮೊದಲಾಗುವ ವಾಯುಪುರಾಣದಲ್ಲಿರುವ ಶ್ಲೋಕವನ್ನು ಉದಾಹರಿಸಿ ಆ ಪುರಾಣದಲ್ಲಿ ಉಕ್ತವಾದ ಪಾಶುಪತವ್ರತವನ್ನು ಆಚರಿಸಿದರೆ ಮುಕ್ತಿಯಾಗುವುದೆಂದು ಸ್ಪಷ್ಟಪಡಿಸಿದ್ದಾನೆ. ಇನ್ನು ವಾಯುಪುರಾಣದಲ್ಲಿ ನಿವೃತ್ತರೆಂದರೆ ಮೋಕ್ಷಾಪೇಕ್ಷಿಗಳಾಗಿ ಇಹಲೋಕವ್ಯಾಪಾರನಿವೃತ್ತರಾದವರು. ಕರದಲ್ಲಿ ಲಿಂಗವನ್ನು ಪೂಜಿಸಿ, ತಾನು ತಿನ್ನುವ ಅನ್ನವನ್ನು ಅದಕ್ಕೆ ಅರ್ಪಿಸಿ, ಪೂಜಾಂತ್ಯದಲ್ಲಿ ಸದಾ ತಲೆಯಲ್ಲಿ ಲಿಂಗವನ್ನು ಧರಿಸಬೇಕೆಂದು ಹೇಳಿದೆ. ಅಲ್ಲದೆ ಪಾಶುಪತವ್ರತವನ್ನು ಹೇಳುವ ಕೂರ್ಮಪುರಾಣದಲ್ಲಿಯೂ ಸೂತಸಂಹಿತೆಯಲ್ಲಿಯೂ ಲಿಂಗಧಾರಣೆಯನ್ನು ವಿಧಿಸಿರುವುದು ಅದು ಪಾಶುಪತವ್ರತದ ಲಿಂಗವೆಂಬುದು ಸಿದ್ಧವಾಗುತ್ತದೆ.

ಕರಪೂಜಾನಿವೃತ್ತಾನಾಂ ಸ್ವಭೋಜ್ಯಂ ತು ನಿವೇದಯೇತ್ ।
ಪೂಜಾಂ ಕೃತ್ವಾಥ ತಲ್ಲಿಂಗಂ ಶಿರಸಾ ಧಾರಯೇತ್ ಸದಾ ॥ —ವಾಯುಪುರಾಣ
ತ್ರಿಪುಂಡ್ರಂ ಲಿಂಗಂತು ಸದೈವ ದಾರಯೇತ್ —ಸೂತಸಂಹಿತೆ
ಲಿಂಗರುದ್ರಾಕ್ಷಭಸ್ಮಾದಿಧಾರಣಂ ವೈದಿಕಂ ಭವೇತ್ —ಕೂರ್ಮಪುರಾಣ

ಯಾವಜ್ಜೀವವೂ ಲಿಂಗಧಾರಣೆಯನ್ನು ಹೇಳುವ ಪಾಶುಪತವ್ರತದಿಂದಲೇ ಮೋಕ್ಷವೆಂದು ಶ್ರೀಕಂಠಭಾಷ್ಯದಲ್ಲಿ ಶಕ್ತಿವಿಶಿಷ್ಟಾಶಿವಾದ್ವೈತಸಿದ್ಧಾಂತ ಮಾಡಿರುವ ಶ್ರೀಕಂಠಶಿವಾಚಾರ್ಯನನ್ನು ಭಗವತ್ಪಾದ ಎಂಬ ಪದದಿಂದ ಗೌರವಿಸಿರುವ ಶ್ರೀಕರಭಾಷ್ಯದ ಶ್ರೀಪತಿಯಂತೆ ಶ್ರೀಕಂಠಶಿವಾಚಾರ್ಯನೂ ವೀರಶೈವಬ್ರಾಹ್ಮಣನೆಂಬುದರಲ್ಲಿ ಸಂದೇಹವಿಲ್ಲ. ಬಸವೇಶ್ವರನು ಬ್ರಾಹ್ಮಣ್ಯವನ್ನು ತ್ಯಜಿಸಿ ಶೂದ್ರರೂ ಲಿಂಗವನ್ನು ಧರಿಸಲು ಅವಕಾಶಕೊಡುವವರೆಗೆ, ಲಿಂಗಧಾರಣೆಯು ವೈದಿಕವೆ—ಎಂಬ ಪ್ರಶ್ನೆ ಎದ್ದಿರಲಿಲ್ಲ. ಆದುದರಿಂದ ಶ್ರೀಕಂಠನ ಗ್ರಂಥಗಳಲ್ಲಾಗಲೀ ಪಂಡಿತಾಚಾರ್ಯರ ಗ್ರಂಥಗಳಲ್ಲಾಗಲೀ ಶ್ರೀಕರಭಾಷ್ಯದಂತೆ ಲಿಂಗಧಾರಣೆಯ ಔಚಿತ್ಯದ ಪ್ರಶ್ನೆಯನ್ನು ಎತ್ತಿಕೊಂಡು ಅದರ ಪ್ರಸ್ತಾಪವಿಲ್ಲ. ಆದಮಾತ್ರಕ್ಕೆ ಅವರಿಬ್ಬರೂ ಲಿಂಗಧಾರಿಗಳಲ್ಲವೆನ್ನಲಾಗುವುದಿಲ್ಲ. ಪಂಡರಾಪುರದ ವಿಠಲ ಮತ್ತು ಕೊಲ್ಲಾಪುರದ ಲಕ್ಷ್ಮಿ ಮೊದಲಾದವರ ವಿಗ್ರಹದ ತಲೆಯಲ್ಲಿ ಲಿಂಗವಿರುತ್ತಿರಲು ಆ ಪ್ರಶ್ನೆ ಹೇಗೆ ಏಳುವುದು ?

ಬಸವಪೂರ್ವಲಿಂಗಧಾರೀ ಧರ್ಮಕ್ಕೆ ಪಾಶುಪತವೆಂಬ ಹೆಸರಿದ್ದುದು ಸ್ಕಾಂದ ಪುರಾಣದ ಪೂರ್ವೋಕ್ತ ಆಧಾರದಿಂದ ತಿಳಿದುಬಂದಿತು. ವೀರಶೈವಧರ್ಮದ ಉದ್ಗ್ರಂಥವಾದ ಸಿದ್ಧಾಂತ ಶಿಖಾಮಣಿಯ ಪ್ರಥಮಾಧ್ಯಾಯದ ಕೊನೆಯಲ್ಲಿ 'ಪಶುಪತಿಮತಸಾರೇ' ಎಂದು ಹೇಳಿದೆ. ಬಸವೇಶ್ವರ ವಚನದಲ್ಲಿ 'ಬಾರದು ಬಾರದು ವಿಷಯಿಗೆ ಪಶುಪತಿವ್ರತವು' ಎಂದಿದೆ. ಅವನ ವಚನಗಳಲ್ಲಿ ವೀರಶೈವ ಪದವೇ ಇಲ್ಲ. ಶ್ರೀಕರಭಾಷ್ಯದಲ್ಲಿ 'ಲೈಂಗ್ಯಸ್ಕಂದಕೂರ್ಮಪುರಾಣೇಷು ಪಾಶುಪತಾಶ್ರಮಿ ಶಬ್ದಯೋರ್ಲಿಂಗಧಾರಿಪರ್ಯಾಯತ್ವೇನ ನಿರ್ದೇಶಾತ್ ತತ್ಪರತ್ವಮೇವೇತಿ ಸಿದ್ಧಂ' ಎಂದು ಹೇಳಿ ಹೇಗೆ ಹಿಂದಿನಿಂದಲೂ ಲಿಂಗಧಾರೀ ಮತವು ಪಾಶುಪತ ಅತ್ಯಾಶ್ರಮಿಪದಗಳಿಂದ ಉಕ್ತವಾಗಿದ್ದಿತೆಂಬುವನ್ನು ಸಿದ್ಧಾಂತಮಾಡಿದೆ. ಕೆಲವು ಆಗಮಗಳಲ್ಲಿ ಬಸವಾಲ್ಲಮಾದಿಗಳು ಉಕ್ತರಾಗಿದ್ದಾರೆ. ಪ್ರಕ್ಷಿಪ್ತವಲ್ಲವಾದರೆ, ಅಪರೂಪವಾಗಿ ಆಗಮಗಳಲ್ಲಿ ಉಕ್ತವಾಗಿರಬಹುದಾದ ವೀರಶೈವಪದವನ್ನು ಬಸವೇಶ್ವರನಿಂದ ಸಂಸ್ಕರಿಸಲ್ಪಟ್ಟ ಪಾಶುಪತ ಮತಕ್ಕೆ ತಕ್ಕ ಹೆಸರಾಗಿ ಚೆನ್ನಬಸವೇಶನು ನಾಮಕರಣ ಮಾಡಿದ್ದಂತೆ ಕಾಣುತ್ತದೆ. ವೀರಶೈವಪದವು ಶಾಸನಗಳಲ್ಲಿ ಪ್ರಥಮತಃ ಕಂಡುಬರುವುದು ಕ್ರಿ.ಶ. ೧೨೬೧ನೆಯ ಇಸವಿಯ ಮಲ್ಕಾಪುರಶಾಸನದಲ್ಲಿ. ಈ ಶಾಸನದಲ್ಲಿ ವಿಶ್ವೇಶ್ವರ ಶಿವಾಚಾರ್ಯನು 'ಶೈವಸಿದ್ಧಾಂತಪಾರಗ'ನೆಂದೂ, ಮಹೀಸುರನೆಂದೂ, ವೀರಶೈವಾಚಾರ್ಯ ಎಂದೂ, ವೀರಶೈವಗಜಪತಿ ಚಕ್ರವರ್ತಿಯ ದೀಕ್ಷಾಗುರುವೆಂದೂ ಹೇಳಿದೆ. ಈ ಶಾಸನವಿಷಯದಲ್ಲಿ ಶ್ರೀ ಕಪಟರಾಳಕೃಷ್ಣ

ರಾಯರ ವಿಮರ್ಶೆಯಿದು ಗಮನಾರ್ಹ: ಈ ಶಾಸನದಲ್ಲೂ ಶುದ್ಧಶೈವಸಂಪ್ರದಾಯದ ಶಿವಯೋಗಿಗಳಿಗೆ ವೀರಶೈವಾಚಾರ್ಯರು ಸ್ಥಾನಪತಿತಪೋಧನರೆನ್ನಲಾಗಿದೆ...ನಿಜಗುಣ ಶಿವಯೋಗಿ, ಹರಿಹರ, ರಾಘವಾಂಕರು ಬ್ರಾಹ್ಮಣರಾಗಿದ್ದು ಈ ಶುದ್ಧಶೈವಸಂಪ್ರದಾಯದವರಾಗಿದ್ದರೆಂದು ತೋರುವುದು. ಆಂಧ್ರದಲ್ಲಿ ಶುದ್ಧಶೈವಸಂಪ್ರದಾಯದ ಬ್ರಾಹ್ಮಣ ವೀರಶೈವ ಸಂಸ್ಥೆ ಇದ್ದುದು ಈ ಶಾಸನದಿಂದ ವ್ಯಕ್ತವಾಗುತ್ತದೆ. ಈಗಲೂ ಆಂಧ್ರದಲ್ಲಿ ಈ ಸಂಪ್ರದಾಯದ ಶೈವಬ್ರಾಹ್ಮಣರಿರುವರು.

ಶ್ರೀ ಕೃಷ್ಣರಾಯರು ಆಂಧ್ರದ ಲಿಂಗಯಜ್ಞೋಪವೀತಧಾರಿ ಆರಾಧ್ಯಬ್ರಾಹ್ಮಣರನ್ನೂ ಲಿಂಗಯಜ್ಞೋಪವೀತಧಾರಿಗಳಾದ ಹರಿಹರ ರಾಘವಾಂಕರನ್ನೂ ಶುದ್ಧಶೈವರು ಎಂದಿದ್ದಾರೆ. ಲಿಂಗಯಜ್ಞೋಪವೀತಧಾರಿಬ್ರಾಹ್ಮಣರನ್ನು ವೀರಶೈವರು ಎನ್ನದೆ ಶುದ್ಧಶೈವರು ಎನ್ನುತ್ತಿದ್ದರೆನ್ನುವುದು ಕೃಷ್ಣರಾಯರ 'ಕರ್ನಾಟಕದ ಸಂಸ್ಕೃತಿಯ ಸಂಶೋಧನ'ವೆಂಬ ಅವರ ಗ್ರಂಥದ ೨೬೨ನೆಯ ಪುಟದಲ್ಲಿ ಹರಿಹರ ದ್ವಿತೀಯ ಚಕ್ರವರ್ತಿಯ ಕಾಲದ ಶೃಂಗೇರಿ ಮಠದ ಭೂರಿವಾಳ ಪರಿಷತ್ತಿಗೆ ಸೇರಿದ ಬ್ರಹ್ಮಾನಂದಭಾರತಿ ಬರೆದ ಪುರುಷಾರ್ಥಪ್ರಬೋಧ ಗ್ರಂಥದಲ್ಲಿ ಹೇಳಿರುವುದರ ವಿಷಯವಾಗಿ ಅವರು ಬರೆದಿರುವುದು ಅವರು ಮೇಲೆ ಹೇಳಿರುವುದನ್ನು ಸಮರ್ಥಿಸುತ್ತದೆ:

ಮಹತ್ವದ ವಿಷಯವೇನೆಂದರೆ ಈಗ ವೀರಶೈವ ಪರಿಭಾಷೆಯಾಗಿರುವ ಇಷ್ಟಲಿಂಗ, ಪ್ರಾಣಲಿಂಗ ಮುಂತಾದವುಗಳ ಬಗ್ಗೆ (ಪುರುಷಾರ್ಥಪ್ರಬೋಧ ಗ್ರಂಥದಲ್ಲಿ) ವಿವರಿಸಲಾಗಿದೆ. ಇದರಿಂದ ಜಂಗಮ, ಪ್ರಾಣಲಿಂಗ, ಇಷ್ಟಲಿಂಗ ಮುಂತಾದ ಸಾಂಕೇತಿಕ ಪದಗಳು ವೈದಿಕ ಶೈವಪ್ರಕ್ರಿಯೆಯಲ್ಲಿ ಬಳಕೆಯಲ್ಲಿದ್ದುವೆಂದು ಧಾರಾಳವಾಗಿ ಹೇಳಬಹುದು. ಇಷ್ಟಲಿಂಗಾರ್ಚನವಿಧಿಯನ್ನು ಹೇಳುವ ಶ್ಲೋಕಗಳನ್ನು ಕೆಳಗೆ ಕೊಟ್ಟಿದೆ:

. . . . ಇಷ್ಟಲಿಂಗಾರ್ಚನಾರಂಭೇ ಜಪ್ತ್ವೇದಂ ಶ್ಲೋಕಪಂಚಕೈಃ . . . ಜಂಗಮಪ್ರಾಣಲಿಂಗೈಕ್ಯ ಶಿವಲಿಂಗಾರ್ಚನ . . . ವ್ರತಂ ಪಾಶುಪತಂ . . . ಅಶ್ರುತಂ

ಮೇಲೆ ಕೊಟ್ಟಿರುವ ಸ್ವಲ್ಪಭಾಗದಿಂದಲೇ ಲಿಂಗಧಾರೀ ಬ್ರಾಹ್ಮಣರನ್ನು ವೀರಶೈವರೆಂದು ಕರೆಯದೆ ಶುದ್ಧಶೈವರೆಂದು ಕರೆಯುತ್ತಿದ್ದರೆಂಬುದೂ, ಈ ಸಂಪ್ರದಾಯವು ಬಸವೇಶ್ವರನ ಸಂಸ್ಕಾರವನ್ನೊಪ್ಪದವರಲ್ಲಿ ವಿಜಯನಗರ ಸಂಸ್ಥಾಪನೆಯ ಕಾಲದವರೆಗೂ, ಬಹುಮಟ್ಟಿಗೆ ಪ್ರೌಢದೇವರಾಯನ ನೂರೊಂದು ವಿರಕ್ತರ ಕಾಲದವರೆಗೂ ಮುಂದುವರೆಯಿತೆನ್ನಬಹುದು. ಇ. ಸಿ. ೭ ಎಸ್‌ಕೆ ೨೮೧ ಶಾಸನದಲ್ಲಿ ಹೇಳಿದಂತೆ ವಿದ್ಯಾರಣ್ಯನೆಂದೇ ನಂಬಲ್ಪಟ್ಟಿದ್ದ ಶುದ್ಧಶೈವನೆಂದು ಉಕ್ತನಾದ ಮಾಧವಾಚಾರ್ಯನು ಅವನ ಗುರು ಕ್ರಿಯಾಶಕ್ತಿಯ ಅಧಿಷ್ಠಾನದಲ್ಲಿ "ನಿಜೇಷ್ಟಲಿಂಗಕೃತಾಧಿಷ್ಠಾನಂ ದೇವದೇವಂ....ಯಜನ್" ಎಂದರೆ ನಿಜೇಷ್ಟಲಿಂಗದಲ್ಲಿ ಅಧಿಷ್ಠಿತನಾದ ಶಿವನನ್ನು ಪೂಜಿಸುತ್ತಿದ್ದನು ಎಂದು ಹೇಳಿರುವುದರಿಂದ ಬಸವೇಶ್ವರನು ಸಂಸ್ಕರಿಸಿದ ಲಿಂಗಾಧಾರೀಬ್ರಾಹ್ಮಣ ಮತವು ಶುದ್ಧಶೈವವೆಂದು ಕರೆಯಲ್ಪಡುತ್ತಿದ್ದಿತೆಂಬುದು ಸ್ಪಷ್ಟವಾಗುವುದು. ಬಸವರಾಜದೇವರ ರಗಳೆಯಲ್ಲಿ ಬಸವೇಶನು 'ಶುದ್ಧಶೈವ ಸರೋನಿಧಿತರಂಗಮಾಲಾನಿಮಗ್ನಚಿತ್ತನಾಗಿರ್ದಂ' ಎಂದು ಹೇಳಿರುವುದರಿಂದ, ಅವನ ಶುದ್ಧಶೈವಲಿಂಗಧಾರೀಬ್ರಾಹ್ಮಣರ ಅದೇ ಗ್ರಂಥದ ಬೇರೆ ಕಡೆ ಹೇಳಿದಂತೆ ಕಮ್ಮೆಕುಲದಲ್ಲಿ ಹುಟ್ಟಿದವನು. ಕವಿಚರಿತ್ರೆಯಲ್ಲಿ ಹೇಳಿದಂತೆ ಲಿಂಗಯಜ್ಞೋಪವೀತಧಾರಿ ಪದ್ಮರಸನ ತಾಯಿ 'ಕಮ್ಮೆಕುಲವಲಭಗೌರವನ ಅಕ್ಕ, ಏಕೋರಾಮಪುರಾಣದಲ್ಲಿ ಹೇಳಿದಂತೆ ಏಕೋರಾಮ ಆಚಾರ್ಯರು ಕಮ್ಮೆಕುಲದ ರಾಮಭದ್ರಾಚಾರ್ಯರ ಪುತ್ರರು. ಆದುದರಿಂದ ಕಮ್ಮೆಕುಲದಲ್ಲಿ ಲಿಂಗಧಾರಣೆಯಿತ್ತೆಂಬುದು ನಿಶ್ಚಯ. ಹರಿಹರ ರಾಘವಾಂಕ ಪದ್ಮರಸರೂ ಈ ಕುಲದವರೇ ಆದುದರಿಂದ ಇವರ ಗ್ರಂಥಗಳಲ್ಲಿ ಇವರು ಶುದ್ಧಶೈವರೆಂದು ಕರೆಯಲ್ಪಟ್ಟಿದ್ದಾರೆ. ಇದು ಹಿಂದೆ ಅವರ ಜಾತಿ ವಿಷಯದಲ್ಲಿ ಎದ್ದಿದ್ದ ಸಂಶಯವನ್ನು ಪರಿಹರಿಸುತ್ತದೆ. ಲಿಂಗಿಬ್ರಾಹ್ಮಣಶುದ್ಧಶೈವ ಕಮ್ಮೆಕುಲದಲ್ಲಿ ಹುಟ್ಟಿದ ಬಸವೇಶ್ವರನು ಆ ಧರ್ಮದಲ್ಲಿ ಆಗಂತುಕವಾಗಿ ಬಂದು ಸೇರಿಕೊಂಡಿದ್ದ ವರ್ಣಾಶ್ರಮ ತಾರತಮ್ಯ ಸ್ತ್ರೀಪುರುಷತಾರತಮ್ಯ ಯಜ್ಞಯಾಗಾದಿ ಹಿಂಸಾತ್ಮಕಕರ್ಮ ಮೊದಲಾದ ಕಲ್ಮಷಗಳನ್ನು ತೆಗೆದುಹಾಕಿ ಸರೋಜಿನೀದೇವಿಯವರ ಅಭಿಪ್ರಾಯದಂತೆ ಸರ್ವಧರ್ಮಸೌಹಾರ್ದಾದಿ ಉದಾತ್ತತತ್ತ್ವಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಶ್ವಧರ್ಮವಾಗಿರಲು ತಕ್ಕುದಾಗಿರುವಂತೆ ಸಂಸ್ಕರಿಸಿದನು.

ಬಸವೇಶಾದಿಶರಣರ ಕಾಲದಲ್ಲಿ ಪರಿಪೂರ್ಣತೆಯನ್ನು ಪಡೆದ ವೀರಶೈವಮಹಾವೃಕ್ಷವು ಪಲ್ಲವಿಸಿ ಹೂತು ಫಲಪುಷ್ಪಗಳಿಂದ ರಾರಾಜಿಸುತ್ತಿದ್ದುದು ಹನ್ನೆರಡನೆಯ ಶತಮಾನದ ಅನಂತರವೇ ಆದರೂ, ಅದು ಅಂದಂದು ಅವತರಿಸಿದ ಆಚಾರ್ಯರಿಂದಲೂ ಮಹಾರಾಜರಾಜಗುರುಗಳಿಂದಲೂ ಪರಿಪೋಷಿತವಾಗಿ ಬೆಳೆದುಬಂದಿತೆಂಬುದೂ, ಆದಿಮಾನವನಕಾಲದಲ್ಲಿಯೇ ಮೊಳಕೆಯೊಡೆದು ಚಿಗುರಿನಿಂದ ಸಸಿಯಲ್ಲಿಯೇ ಈ ಮಹಾವೃಕ್ಷದ ಲಕ್ಷಣಗಳಿದ್ದುವೆಂಬುದೂ ಗಮನಾರ್ಹವಿಷಯಗಳಾಗಿವೆ.

# ಶಕ್ತಿವಿಶಿಷ್ಟಾದ್ವೈತ ದರ್ಶನ

**ಡಾ. ಟಿ. ಜಿ. ಸಿದ್ದಪ್ಪಾರಾಧ್ಯ**

ಶಕ್ತಿವಿಶಿಷ್ಟಾದ್ವೈತದರ್ಶನವು ಶಿವಶಕ್ತಿಯರ ಸಾಮರಸ್ಯವನ್ನೂ, ಶಿವನ ಇಚ್ಛೆಯಂತೆ ಶಕ್ತಿಯ ಪ್ರವೃತ್ತಿಯನ್ನೂ, ಅವನ ಸಹಜಸ್ಥಿತಿಯಲ್ಲಿ ಅವನಲ್ಲಿಯೇ ಚಿದ್ರೂಪದಿಂದ ಶಕ್ತಿಯ ಅಡಗುವಿಕೆಯನ್ನೂ ತಿಳಿಸುವುದು. ಪರಮಾತ್ಮನು ಹೇಗೆ ಸಚ್ಚಿದಾನಂದನೋ ಅವನ ಸಹಧರ್ಮಿಣಿಯಾದ ಶಕ್ತಿಯೂ ಹಾಗೆಯೇ ಸಚ್ಚಿದಾನಂದಳೇ ಆಗಿರುವಳು. ಆದ್ದರಿಂದ ಅವರಿಬ್ಬರಿಗೂ ಸಾಮರಸ್ಯವು ಸ್ವಾಭಾವಿಕವೆನಿಸಿದೆ. ಇಬ್ಬರೂ ಒಂದೇ ಸ್ವಭಾವದವರಾದ್ದರಿಂದ ಅವರಿಗೆ ಸಾಮರಸ್ಯವು ಸಹಜವಾಗಿ ಹೊಂದುವುದು. ಶಿವಶಕ್ತಿಯರ ಈ ಬಗೆಯ ಸಾಮರಸ್ಯವೇ ಶಕ್ತಿವಿಶಿಷ್ಟಾದ್ವೈತವೆನಿಸಿದೆ.

ಹೀಗೆ ಶಿವಶಕ್ತಿಯರ ಸಾಮರಸ್ಯವನ್ನೂ ಶಕ್ತಿ ಶಿವನ ಪ್ರಾಣವೆಂಬ ಭಾವನೆಯನ್ನೂ ಮತ್ತು ಶಿವನಿಗೆ ಶಕ್ತಿಯ ಮೇಲಿನ ಅಧಿಕಾರವನ್ನೂ, ಅವನ ಇಚ್ಛೆಯಂತೆ ಅದರ ಪ್ರವರ್ತನೆಯನ್ನೂ ಸುಗಮವಾಗಿ ತಿಳಿಸುವುದರಿಂದಲೇ ಶಕ್ತಿವಿಶಿಷ್ಟಾದ್ವೈತವೆಂಬ ಪದವು ಈ ದರ್ಶನಕ್ಕೆ ಅನ್ವರ್ಥವೆನಿಸಿದೆ. ಕಾಶ್ಮೀರ ಶೈವದಲ್ಲೂ, ದಕ್ಷಿಣ ಶೈವದಲ್ಲೂ, ಶಾಕ್ತಮತದಲ್ಲೂ ಇಂತಹ ಅದ್ವೈತಭಾವನೆಗೆ ಅವಕಾಶವಿಲ್ಲ. ಆ ಮತಗಳಲ್ಲಿ ಶಿವನು ಕೇವಲ ನಿಮಿತ್ತನೆನಿಸಿ ಶಕ್ತಿಯ ಸಂಪರ್ಕದಿಂದಲೇ ಅವನಿಗೆ ಪೂಜ್ಯತೆ, ಪರಿಪೂರ್ಣತೆ ಮತ್ತು ಸಾಮರ್ಥ್ಯಗಳು ಲಭಿಸುತ್ತವೆ. ಶಕ್ತಿವಿಶಿಷ್ಟಾದ್ವೈತಮತದಲ್ಲಾದರೋ ಶಕ್ತಿಗೆ ಸ್ವಾತಂತ್ರ್ಯದ ಪ್ರವೃತ್ತಿಯಿಲ್ಲ ; ಹಾಗೆಯೇ ಪರಾಧೀನತೆಯ ನಿವೃತ್ತಿಯೂ ಇಲ್ಲ. ವಿರುಪೇರುಗಳಿಗವಕಾಶವಿಲ್ಲದಂತೆ ಶಿವನಿಗೂ ಶಕ್ತಿಗೂ ಸಾಮರಸ್ಯವನ್ನು, ಶಿವನ ಪೂರ್ಣಸ್ವಾತಂತ್ರ್ಯವನ್ನು ಮತ್ತು ಸ್ವಶಕ್ತಿಮಹಿಮೆಯಿಂದ ಶಿವನಲ್ಲಿ ಜಗದ್ವ್ಯಾಪಾರವನ್ನು ನಿರ್ವಹಿಸುವ ಸಾಮರ್ಥ್ಯವನ್ನೂ ಶಕ್ತಿವಿಶಿಷ್ಟಾದ್ವೈತದರ್ಶನವು ಮನೋಹರವಾಗಿ ಬೋಧಿಸುತ್ತಿದೆ. ಇಲ್ಲಿ ಶಕ್ತಿಗೆ ಅಭಿಮಾನದ ಪ್ರವೃತ್ತಿ ಇಲ್ಲ; ಹಾಗೆಯೇ ನಿರಭಿಮಾನದ ನಿವೃತ್ತಿಯೂ ಇಲ್ಲ. ಶಿವಶಕ್ತಿಯರ ಈ ಬಗೆಯ ಪೂರ್ಣ ಸಾಮರಸ್ಯವೇ ಈ ದರ್ಶನದ ವೈಶಿಷ್ಟ್ಯವೆನಿಸಿದೆ.

ಈ ದರ್ಶನದಲ್ಲಿ ಶಕ್ತಿವಿಶಿಷ್ಟನೂ ಅದ್ವೈತನೂ ಆದ ಪರಮಾತ್ಮನೊಂದೇ ತತ್ವವೆನಿಸಿರುವನು. ಅವನು ಚಿದ್ರೂಪನೂ ನಿಷ್ಕಲನೂ ಆಗಿ ಪರಮಶಿವ, ಪರಮೇಶ್ವರ, ಮಹಾಲಿಂಗ, ರುದ್ರ, ಬ್ರಹ್ಮ, ಸ್ಥಲ ಎಂಬ ಹೆಸರಿನಿಂದ ವ್ಯವಹರಿಸಲ್ಪಡುತ್ತಿರುವನು. ಅಲ್ಲಿಗೆ ಸತ್ಯಜ್ಞಾನಾದ್ಯನಂತಕಲ್ಯಾಣಗುಣಗಳಿಗಾಶ್ರಯವಾದ ಮಹಾಪ್ರಕಾಶವೇ ಪರಮಾತ್ಮನೆಂದು ಹೇಳಿದಂತಾಯಿತು. ಇವನಲ್ಲಿ ಶಕ್ತಿ ಅವಿನಾಭಾವದಿಂದ ನಿತ್ಯಸಂಬದ್ಧವಾಗಿ ಅವನ ಸ್ವರೂಪವೆನಿಸಿದೆ. ಶಕ್ತಿ ಎಂದರೆ ಸಾಮರ್ಥ್ಯವೆಂದರ್ಥ. ಸಾಮರ್ಥ್ಯವಿಲ್ಲದೆ ಯಾವ ವ್ಯಕ್ತಿಯೂ ಇರಲಾರನು, ಪ್ರಕಾಶಿಸಲಾರನು ಮತ್ತು ಸಂತೋಷಪಡಲಾರನು. ಇಂತಹ ಶಕ್ತಿ ಪರಮಾತ್ಮನಲ್ಲಿ ಸ್ವಾಭಾವಿಕವಾಗಿ ಜ್ಞಾನಕ್ರಿಯಾರೂಪದಿಂದ ಅನೇಕ ಪ್ರಕಾರವಾಗಿ ನೆಲೆಸಿರುವುದು. ಇದೇ ಶಕ್ತಿ, ಸಮಸ್ತ ಪ್ರಪಂಚಗಳನ್ನು ನಿರ್ಮಾಣ ಮಾಡುವಾಗ ಅವನಿಗೆ ಕಾರಣ ದ್ರವ್ಯವಾಗಿರುವುದು. ಗಡಿಗೆಯನ್ನು ಮಾಡಲಿಚ್ಛಿಸುವ ಕುಂಬಾರನಿಗೆ ಮಣ್ಣು ಹೇಗೆ ಕಾರಣವಾಗಿರುವುದೋ ಹಾಗೆ ಶಕ್ತಿ ಪರಮಾತ್ಮನಿಗೆ ಜಗತ್ಸೃಷ್ಟಿಗೆ ಉಪಯೋಗವಾಗುತ್ತದೆ.

ಪ್ರಳಯಕಾಲದಲ್ಲಿ ಉಪಯೋಗವಿಲ್ಲವಾದ್ದರಿಂದ ಆ ಶಕ್ತಿ, ಉಗ್ರಾಣದಲ್ಲಿ ಇಟ್ಟಿರುವ ಬೀಜದಲ್ಲಿ ಮೊಳಕೆಯನ್ನು ಹುಟ್ಟಿಸುವ ಸಾಮರ್ಥ್ಯ ಅಡಗಿರುವಂತೆ, ಪರಮಾತ್ಮನಲ್ಲಿ ಪೂರ್ಣವಿಲೀನವಾಗಿ ಅವನಿಗಿಂತ ಬೇರೆ ಎಂದು ಕರೆಯಲು ಬರುವಂತಿರುವುದಿಲ್ಲ. ತನ್ನಲ್ಲಿಯೇ ಸಮಸ್ತಜೀವರನ್ನೂ ಪಂಚಭೂತಗಳನ್ನೂ ಸೂಕ್ಷ್ಮವಾಗಿ ಅಡಗಿಸಿಕೊಂಡಿರುವ ಶಕ್ತಿ ಪರಮಾತ್ಮನಲ್ಲಿ ಲೀನವಾಗಿರುವುದರಿಂದ ಪ್ರಳಯಕಾಲದಲ್ಲಿ ಪರಮಾತ್ಮನೊಬ್ಬನೇ ಶೋಭಿಸುತ್ತಿರುವನು. ಆವಾಗ ಅವನ ಸ್ವರೂಪವೇ ಆಗಿರುವ ಶಕ್ತಿಯೂ ಅವನಲ್ಲೇ ಗುಪ್ತವಾಗಿ ಅಡಗಿರುವುದು. ಈ ಶಕ್ತಿಯಾವರೋ ಅವನಲ್ಲಿ ಸಚ್ಚಿದಾನಂದಾನುಭವರೂಪವಾಗಿದ್ದು ವಿಮರ್ಶ ಶಕ್ತಿ ಎನಿಸಿರುವುದು. ಇದರೊಡನೆ ಕೂಡಿ

ಪರಮಾತ್ಮನೊಬ್ಬನೇ ಕೇವಲನೂ ಆತ್ಮಾರಾಮನೂ ಆಗಿ ಸಹಜಸ್ಥಿತಿಯಲ್ಲಿ ನೆಲೆಸಿರುವನು. ಪರಮಾತ್ಮನ ಈ ಬಗೆಯ ಕೈವಲ್ಯಸ್ಥಿತಿಯನ್ನು "ಲೋಕವತ್ತು ಲೀಲಾ ಕೈವಲ್ಯಂ" ಎಂಬ ಬ್ರಹ್ಮಸೂತ್ರವು ಸ್ಪಷ್ಟಪಡಿಸಿದೆ. ಪರಮಾತ್ಮನಲ್ಲಿ ಲೀಲಾವಸ್ಥೆ ಇರುವಂತೆಯೇ ಕೇವಲಾವಸ್ಥೆಯೂ ಉಂಟೆಂದು ಇದರಿಂದ ಸ್ಪಷ್ಟಪಡುತ್ತದೆ. "ಲೀಲೆಯೆಂದೊಡೆ ಉಮಾಪತಿ, ಲೀಲೆ ತಪ್ಪಿದೊಡೆ ಸ್ವಯಂಭು" ಎಂಬ ಶರಣರ ವಚನವೂ ಪರಮಾತ್ಮರಲ್ಲಿ ಭಕ್ತಾನುಗ್ರಹಲೀಲೆಯೂ ಆತ್ಮಾರಾಮಸ್ಥಿತಿಯೂ ಏಕಕಾಲದಲ್ಲಿ ಉಂಟೆಂಬುದನ್ನು ತಿಳಿಸುತ್ತದೆ. ಹೇಗೆ ಪ್ರಳಯದಲ್ಲಿ ಶಕ್ತಿ ಶಿವನ ಚಿತ್ಸ್ವರೂಪದಲ್ಲಿ ಅಡಗಿದ್ದು, ಅವನ ವಿನೋದಕಾಲದಲ್ಲಿ ಮಾತ್ರವೇ ಅವನ ಇಚ್ಛೆಯಂತೆ ಹೊರಗೆ ಬಂದು ಕಾರ್ಯವು ಮುಗಿದೊಡನೆ ಅವನಲ್ಲಿಯೇ ಸೇರುವುದರಿಂದಲೂ, ಅದು ಅವನನ್ನು ಬಿಟ್ಟು ಬೇರೆಯಾಗಿ ಇರಲಾರದಾದ್ದರಿಂದಲೂ ಅದಕ್ಕೆ ಪ್ರತ್ಯೇಕತೆಯ ಗಣನೆಯಿಲ್ಲ. ಪರಮಾತ್ಮನಲ್ಲಿ ಸಚ್ಚಿದಾನಂದಾತ್ಮಕವಾಗಿ ಇರುವ ವಿಮರ್ಶಶಕ್ತಿಯೇ ಅವನ ವಿನೋದಕಾಲದಲ್ಲಿ ಭಕ್ತಾನುಗ್ರಹಲೀಲೆಗಾಗಿ ಹೊರಗೆ ಬಂದು ಮಾಯಾಶಕ್ತಿ ಎನಿಸಿ ಸ್ವತಂತ್ರ ದ್ರವ್ಯವಾಗಿ ತನ್ನ ಸತ್ತ್ವರಜಸ್ತಮೋಗುಣಗಳ ಪ್ರಭಾವದಿಂದ ಜಗತ್ತನ್ನಾವರಿಸುವುದು. ಆಗಲೂ ಸಹ ಪರಮಾತ್ಮನು ಸದ್ರೂಪದಿಂದ ಭೋಜ್ಯವಸ್ತುಗಳಲ್ಲೂ, ಸಚ್ಚಿದ್ರೂಪದಿಂದ ಜೀವವರ್ಗದಲ್ಲೂ ತನ್ನ ಶಕ್ತಿಯೊಡನೆ ಇದ್ದೇ ಇರುವನು. ಪರಮಾತ್ಮನಿಲ್ಲದೆ ಶಕ್ತಿಯೊಂದೇ ಸ್ವತಂತ್ರಿಸಿ ಏನೂ ಕೆಲಸಮಾಡಲಾರದು. ಹಾಗೆಯೇ ಶಕ್ತಿಯ ಸಹಕಾರವಿಲ್ಲದೆ ಪರಮಾತ್ಮನೊಬ್ಬನೇ ಯಾವ ಕಾರ್ಯದಲ್ಲಿಯೂ ಪ್ರವರ್ತಿಸಲಾರನು. ಹೀಗೆ ಶಕ್ತಿವಿಶಿಷ್ಟ ಪರಮಾತ್ಮನು ಲೀಲಾವಸ್ಥೆಯಲ್ಲಿ ಜಗದ್ವ್ಯಾಪಾರಗಳನ್ನು ನಿರ್ವಹಿಸುತ್ತ, ತನ್ನ ಕೈವಲ್ಯಾವಸ್ಥೆಯಲ್ಲಿ ತನ್ನ ಆನಂದವನ್ನು ಅನುಭವಿಸುತ್ತಿರುವನು. ಆನಂದಾನುಭವವು ಅವನಿಗೆ ಸಹಜಸ್ಥಿತಿ, ಜಗದ್ವ್ಯಾಪಾರಗಳ ನಿರ್ವಾಹವು ಅವನಿಗೆ ಲೀಲಾವಿನೋದ. ಇವೆಲ್ಲವೂ ಅವನಲ್ಲಿ ಏಕಕಾಲದಲ್ಲಿ ಸಮರಸವಾಗಿ ಹೊಂದಿಕೊಂಡಿರುವುವು. ಇದು ಅವನ ಸ್ವಾತಂತ್ರ್ಯದ ಮತ್ತು ಪರಿಪೂರ್ಣತೆಯ ಸತ್ಪರಿಣಾಮ.

ಈ ಲೀಲಾಕೈವಲ್ಯಗಳೆರಡನ್ನೂ ಅವನು ಹೇಗೆ ನಿರ್ವಹಿಸುತ್ತಿರುವನೆಂಬುದನ್ನು ಶಕ್ತಿವಿಶಿಷ್ಟಾದ್ವೈತದರ್ಶನವು ಶ್ರುತಿಗೀತೆ ಬ್ರಹ್ಮಸೂತ್ರಗಳ ಮತ್ತು ಆಗಮಗಳ ಆಧಾರದ ಮೇಲೆ ಹೃದಯಂಗಮವಾಗಿ ಚಿತ್ರಿಸಿದೆ. ಪ್ರಳಯಕಾಲದಲ್ಲಿ ಅವನಿಗೆ ಏಕಾಕಿಯಾಗಿದ್ದುದರಿಂದ ಕೆಲವು ವೇಳೆ ಬೇಸರವಾಗುವುದು. ಸರ್ವೈಶ್ವರ್ಯಸಂಪನ್ನನಾದ ಮಹಾರಾಜನಂತೆ ಪೂರ್ಣಕಾಮನೂ ಸ್ವತಂತ್ರನೂ ಆದ ಪರಮಾತ್ಮನಿಗೆ ಏಕಾಂತವಾಸದ ಬೇಸರವನ್ನು ಹೋಗಲಾಡಿಸಲು ತನ್ನ ಸ್ವಾತಂತ್ರ್ಯದಿಂದಲೇ ವಿನೋದದ ಪ್ರವೃತ್ತಿ ಹುಟ್ಟುವುದು. ಆವಾಗಲೇ ಈ ಪ್ರಪಂಚವನ್ನು ನಿರ್ಮಿಸಬೇಕೆಂಬ ಇಚ್ಛೆ ಅವನಿಗುಂಟಾಗುವುದು. ಮನಸ್ಸಿನಲ್ಲಿ ಸಂಕಲ್ಪಮಾಡಿದೊಡನೆಯೇ ಅವನ ಇಚ್ಛಾಶಕ್ತಿ ತನ್ನ ಸಹಚಾರಿಣಿಯರಾದ ಜ್ಞಾನಕ್ರಿಯಾಶಕ್ತಿಗಳೊಡನೆ ಮುಂದೆ ಬರುವಳು. "ಸ ಏಕಾಕೀ ನ ರಮತೆ ಸ ದ್ವಿತೀಯಮೈಚ್ಛತ್ ಸ ಈಕ್ಷಾಂ ಚಕ್ರೆ ಇದಂ ಸೃಜೇಯಮಿತಿ" ಎಂದು ಮಹೋಪನಿಷತ್ತು ಪರಮಾತ್ಮನ ಸೃಷ್ಟಿಕ್ರಮವನ್ನು ವರ್ಣಿಸಿದೆ. "ಅವನೊಬ್ಬನೇ ರಮಿಸಲಾರದೆ ಎರಡನೆಯವನನ್ನಿಚ್ಛಿಸಿದನು. ಇದೆಲ್ಲವನ್ನೂ ಸೃಷ್ಟಿಸುವೆನೆಂದು ಅವನು ದೃಷ್ಟಿಯಿಂದ ಈಕ್ಷಿಸಿದನು" ಹೀಗೆ ಪರಮಾತ್ಮನಿಗೆ ಏಕಾಂತವಾಸದಲ್ಲಿ ಆಗಿರುವ ಬೇಸರವನ್ನು ಹೋಗಲಾಡಿಸಲಿಕ್ಕಾಗಿ ಅವನ ಶಕ್ತಿಯಲ್ಲದೆ ಬೇರೆ ಯಾರು ತಾನೇ ಮುಂದೆ ಬಂದಾರು ? ಈ ಶಕ್ತಿಯಲ್ಲಿಯೇ ವಿಶ್ವವು ಸೂಕ್ಷ್ಮವಾಗಿ ಅಡಗಿರುವುದರಿಂದ, ಪರಮಾತ್ಮನು ಈ ಶಕ್ತಿಸಂಪರ್ಕದಿಂದಲೇ ವಿನೋದ ಭೂಮಿಕೆಯನ್ನು ಪಡೆದು ತನ್ನ ಲೀಲೆಯನ್ನಾರಂಭಿಸುವನು. ಅಲ್ಲಿಗೆ ಜಗತ್ತೆಲ್ಲವೂ ಪರಮಾತ್ಮನ ಲೀಲಾವಿನೋದದ ರಂಗಮಂಟಪವೆಂಬುದು ಸ್ಪಷ್ಟವಾಯಿತು. ಇದರಿಂದ ಜಗತ್ತು ಅದ್ವೈತಮತದಲ್ಲಿ ಹೇಳಿರುವಂತೆ ಮಿಥ್ಯೆ ಎನಿಸಲಾರದು. ಅವನೇ ಜಗತ್ತಾಗಿ ಪರಿಣಮಿಸಿ ಅದರಲ್ಲಿ ಸೂಕ್ಷ್ಮವಾಗಿ ಅಡಗಿರುವುದರಿಂದ ಇದೆಲ್ಲವೂ ಸತ್ಯವೆಂಬುದು ಇಲ್ಲಿ ಸ್ಪಷ್ಟಪಡುವುದು.

ವಾಯುಸಂಪರ್ಕವೇ ಇಲ್ಲದೆ ನಿಶ್ಚಲವೂ ಗಂಭೀರವೂ ಆಗಿರುವ ಸಮುದ್ರದಲ್ಲಿ ಕೆಲವು ವೇಳೆ ವಾಯುಸಂಪರ್ಕದಿಂದ ಕೊಂಚ ಚಲನೆಯುಂಟಾಗುವುದು. ಹೀಗೆ ಪರಮಾತ್ಮನಿಗೆ ವಿನೋದಿಸಬೇಕೆಂಬ ಇಚ್ಛೆಯುಂಟಾದಾಗ ಕೊಂಚ ವಿಕಾರವಾಗುವುದು. ಇಂತಹ ವಿಕಾರವಿಶೇಷವೇ ಶಕ್ತಿಕ್ಷೋಭೆ ಎನಿಸುವುದು. ಶಕ್ತಿಯಲ್ಲಿ ಸ್ವಸ್ಥಾವಸ್ಥೆ. ಕ್ಷುಭಿತಾವಸ್ಥೆ ಎಂದು ಎರಡು ಅವಸ್ಥೆಗಳು ಸಹಜವೆನಿಸಿವೆ. ಪರಮಾತ್ಮನು ಸ್ವೀಯ ಆನಂದದಲ್ಲಿ ಮಗ್ನನಾಗಿರುವಾಗ ಅವನ ಶಕ್ತಿಯು ಸ್ವಸ್ಥಾವಸ್ಥೆಯಲ್ಲಿ ಸಚ್ಚಿದಾನಂದರೂಪದಿಂದಲೇ ಇರುವುದು. ಪರಮಾತ್ಮನಿಗೆ ವಿನೋದಿಸುವ ಇಚ್ಛೆಯುಂಟಾದಾಗ ಆ ಶಕ್ತಿ ಕ್ಷುಭಿತಾವಸ್ಥೆಯಲ್ಲಿ ಸತ್ತ್ವರಜಸ್ತಮೋಗುಣಾತ್ಮಕವಾಗಿ ಮಾಯೆ ಎನಿಸುವಳು. ಅಲ್ಲಿಗೆ ಮಾಯೆ ಈ ದರ್ಶನದಲ್ಲಿ ಪರಮಾತ್ಮನ ಬಾಹ್ಯಶಕ್ತಿ ಎನಿಸಿ ಜಗದ್ರೂಪದಿಂದ ಸತ್ಯವಾಗಿ ಲೋಕವನ್ನಾವರಿಸಿರುವುದು.

ಈ ಶಕ್ತಿಯನ್ನೇ ಭಗವದ್ಗೀತೆಯಲ್ಲಿ ತೇಜಸ್ಸೆಂದು ಪರಮಾತ್ಮನು ತಿಳಿಸಿದ್ದಾನೆ. ಅಲ್ಲಿಗೆ ಶಕ್ತಿ–ತೇಜಸ್ಸು ಇವೆರಡ

ಪರಮಾತ್ಮನ ದಿವ್ಯಪ್ರಕಾಶವನ್ನು ತಿಳಿಸುವ ಪದಗಳೆಂದು ಹೇಳಿದಂತಾಯಿತು. ಪರಮಾತ್ಮನ ಸಾನ್ನಿಧ್ಯವಿಲ್ಲದೆ ಈ ತೇಜಸ್ಸು ಒಂದು ಗಳಿಗೆಯೂ ಪ್ರತ್ಯಕ್ಷವಾಗಿ ಸ್ವತಂತ್ರಿಸಿ ಪ್ರವರ್ತಿಸಲಾರದು. ಆದರೆ ಸ್ವಸ್ಥಾವಸ್ಥೆಯಲ್ಲಿ ಈ ತೇಜಸ್ಸು ಅವನಲ್ಲಿ ತಾದಾತ್ಮ್ಯಭಾವದಿಂದ ಇದ್ದು ಕ್ಷುಭಿತಾವಸ್ಥೆಯಲ್ಲಿ ಅವನಿಂದ ಹೊರಬಂದು ಬೇರೆಯಾಗುವುದರಿಂದ ಇದು ಭೇದಾಭೇದರೂಪವಾದ ಜಗತ್ತನ್ನಾವರಿಸಿರುವುದು. ಬೆಂಕಿಯಲ್ಲಿ ಸುಡುವ ಶಕ್ತಿ ಸಹಜವಾಗಿ ನೆಲೆಸಿರುವಂತೆ ಪರಮಾತ್ಮನ ಶಕ್ತಿ ಅವನನ್ನಾಶ್ರಯಿಸಿಕೊಂಡು ಅವನಲ್ಲಿಯೇ ಏಕೀಭಾವದಿಂದ ಇರುವ ಪ್ರಯುಕ್ತ ಅವನು ಶಕ್ತ್ಯಾತ್ಮಕನೂ ಶಕ್ತಿಗೆ ನಿಯಾಮಕನೂ ಆಗಿರುವನು. ದಾಸಗುಪ್ತನು ಶಿವನು ಮತ್ತು ಶಕ್ತಿ ಇವರ ನಿತ್ಯಸಂಬಂಧವನ್ನು ಹೀಗೆ ವಿವರಿಸಿದ್ದಾನೆ. "ನಾವು ಶಕ್ತಿಯನ್ನು ಶಕ್ತಿಮಾನ್ ಶಿವನಿಂದ ಬೇರ್ಪಡಿಸಲಾರೆವು. ಶಿವನನ್ನು ಶಕ್ತಿ ಎಂದೂ, ಶಕ್ತಿಗಳೆಲ್ಲದರ ಉಗ್ರಾಣವೆಂದು ಭಾವಿಸಲಾಗಿದೆ. ಅವನ ಆಶ್ರಯವಿಲ್ಲದೆ ಶಕ್ತಿ ಇರಲಾರದು. ಅವನೇ ಮೂಲವಸ್ತುವೂ ಶಕ್ತಿಯೂ ಆಗಿ ಎರಡು ರೀತಿಗಳಲ್ಲೂ ಕೆಲಸ ಮಾಡುತ್ತಿರುವನು" ಹೀಗೆ ಶಕ್ತಿಯಾಗಿಯೂ ಶಕ್ತಿಯುಳ್ಳವನಾಗಿಯೂ ಇರುವವನು ಅವನೊಬ್ಬನೇ ಆಗಿರುವನು. ಇದೇ ಅವನ ಅದ್ಭುತ ಮಹಿಮೆ. ಅವನ ಮಾಯಾಶಕ್ತಿ ಜಗತ್ತನ್ನು ಆವರಿಸಿ ಅವನಿಂದ ಬೇರೆಯಾಗಿದ್ದರೂ, ಅದರೊಡನೆ ಅವನೂ ಸೂಕ್ಷ್ಮವಾಗಿ ಸೇರಿದ್ದು ಜಗದ್ವ್ಯಾಪಾರಗಳನ್ನು ನಡೆಸುತ್ತಲಿರುವುದರಿಂದ ಅದಕ್ಕೂ ಅವನಿಗೂ ಅದ್ವೈತವನ್ನು ಬೋಧಿಸುವುದೇ ಈ ದರ್ಶನದ ಮುಖ್ಯ ಧ್ಯೇಯವೆನಿಸಿದೆ.

ಈ ದರ್ಶನದಲ್ಲಿ ಶಕ್ತಿವಿಶಿಷ್ಟ ಪರಮಾತ್ಮನ ಪರಿಣಾಮವನ್ನು ತಿಳಿಸುವಾಗ ಒಬ್ಬ ಪರಮಾತ್ಮನೇ ತನ್ನ ಲೀಲಾವಿನೋದಕ್ಕಾಗಿ ಶಿವಾದಿಭೂಮ್ಯಂತ ಮೂವತ್ತಾರು ತತ್ತ್ವಗಳಾಗಿ ಪರಿಣಮಿಸುವನೆಂದು ಹೇಳಿದೆ. ಸೃಷ್ಟಿಕಾಲದಲ್ಲಿ ಪ್ರವೃತ್ತಿಕ್ರಮದಿಂದ ಪರಮಾತ್ಮ ಚೈತನ್ಯವು ಶಿವನಿಂದಾರಂಭಿಸಿ ಕ್ರಮಕ್ರಮವಾಗಿ ಸಂಕೋಚಗೊಂಡು ಭೂಮಿಯಾಗಿರುವುದು. ಪ್ರಳಯಕಾಲದಲ್ಲಿ ನಿವೃತ್ತಿಕ್ರಮದಿಂದ ಒಂದೊಂದು ತತ್ತ್ವವೂ ಹಿಂದು ಹಿಂದಕ್ಕೆ ಸರಿದು ಎಲ್ಲವೂ ಶಕ್ತಿಯಲ್ಲಿ ಸೇರಿ ಆ ಶಕ್ತಿ ಶಿವನಲ್ಲಿ ಅಡಗಿ ಆ ಸಾಕಾರ ಶಿವನೂ ತನ್ನ ಮೂಲವಸ್ತುವೆನಿಸಿದ ನಿರಾಕಾರಪರಶಿವನಲ್ಲಿ ಲಯವಾಗಿ ಆ ನಿರಾಕಾರವಸ್ತುವೊಂದೇ "ಶಿವ ಏವ ಕೇವಲಃ" ಎಂಬ ಶ್ರುತಿಪ್ರಮಾಣದಂತೆ ಸಾಕ್ಷಿಚೈತನ್ಯವಾಗಿ ಪ್ರಳಯಕಾಲದಲ್ಲಿಯೂ ಶೋಭಿಸುತ್ತಿರುವುದು.

ಈ ಮೂವತ್ತಾರು ತತ್ತ್ವಗಳೂ ಶಕ್ತಿವಿಶಿಷ್ಟಪರಮಾತ್ಮನ ಪರಿಣಾಮಗಳಾದುದರಿಂದ ಕಾರ್ಯಕೋಟಿಯಲ್ಲಿ ಪ್ರವೇಶಿಸಿವೆ. ನಿರಾಕಾರಪರಶಿವನು ಇವೆಲ್ಲಕ್ಕೂ ಮೂಲವೆನಿಸಿ ಆದಿಕಾರಣನಾಗಿರುವನು. ಅವನು ಕೇವಲ ಸಚ್ಚಿದಾನಂದ ಸ್ವರೂಪನಾಗಿರುವನು. ಇದನ್ನು ಬಿಟ್ಟು ಬೇರೆ ಯಾವ ಆಕಾರವೂ ಅವನಲ್ಲಿ ಕಾಣದಿರುವುದರಿಂದ ಅವನು ನಿರ್ವಿಕಲ್ಪನೂ ನಿರಾಕಾರನೂ ನಿರಂಜನನೂ ಪ್ರಪಂಚಾತೀತನೂ ಆಗಿರುವನು. ಅವನು ಪ್ರಪಂಚಾತೀತನಾದುದರಿಂದ ಅವನಿಗೆ ಮೂವತ್ತಾರು ತತ್ತ್ವಗಳಲ್ಲಿ ಗಣನೆಯಿಲ್ಲ. ಈ ತತ್ತ್ವಗಳೆಲ್ಲವೂ ಅವನಿಂದಲೇ, ಅವನ ವಿನೋದಕ್ಕಾಗಿಯೇ ಹೊರಗೆ ಬಂದು ಕೊನೆಗೆ ಅವನಲ್ಲಿಯೇ ಸೇರುವುವು. ಇವೆಲ್ಲಕ್ಕೂ ಅವನೇ ಆಶ್ರಯನಾಗಿರುವುದರಿಂದ ಅವನು ಇವೆಲ್ಲದರೊಳಗೆ ಇದ್ದರೂ ನೈಜಸ್ಥಿತಿಯಲ್ಲಿ ಇವೆಲ್ಲಕ್ಕೂ ಬೇರೆಯಾಗಿರುವುದರಿಂದ ಪ್ರಪಂಚಾತೀತನೆನಿಸಿರುವನು. ಇವನು ಷಟ್ತ್ರಿಂಶ-ತ್ತತ್ತ್ವಮಯನೂ ಹಾಗೆಯೇ ಸರ್ವತತ್ತ್ವಾತೀತನೂ ಆಗಿರುವನು. ಈ ನಿರಾಕಾರಪರಮಾತ್ಮನನ್ನು ಈ ದರ್ಶನದಲ್ಲಿ ಪರಮಶಿವ, ಮಹಾಲಿಂಗ, ಮಹಾದೇವ, ಸ್ಥಲ ಎಂಬ ಶಬ್ದಗಳಿಂದ ಕರೆಯಲಾಗಿದೆ. ಸಮಸ್ತ ಜಗತ್ತಿನ ಸೃಷ್ಟಿಸ್ಥಿತಿ ಲಯಗಳಿಗೆ ಆಶ್ರಯನೂ, ಕೊನೆಯ ಎಲ್ಲೆಯೂ ಆಗಿರುವನಾದ್ದರಿಂದ ಅವನಿಗೆ ಲಿಂಗ, ಸ್ಥಲ ಎಂಬ ಹೆಸರುಗಳು ಈ ದರ್ಶನದಲ್ಲಿ ಸಮಂಜಸವಾಗಿ ಹೊಂದುತ್ತವೆ. ಅನುಭವಸೂತ್ರದಲ್ಲಿ—

'ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ। ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ' (೩–೩) ಜಗತ್ತಿನ ಸಕಲವಸ್ತುಗಳೂ ಯಾವನಲ್ಲಿ ಅಡಗಿದ್ದು ಹೊರಗೆ ಬರುತ್ತವೆಯೋ ಅವನನ್ನು ಲಿಂಗವೆಂದು ಅನುಭಾವಿಗಳು ಕರೆಯುತ್ತಾರೆ. ಚರಾಚರಜಗತ್ತಿನ ಉತ್ಪತ್ತಿಪ್ರಳಯಗಳಿಗೆ ಕಾರಣಭೂತನೂ ಆವಾಸಸ್ಥಾನನೂ ಆದ್ದರಿಂದಲೇ ಅವನನ್ನು ಸ್ಥಲವೆಂದು ಈ ದರ್ಶನವು ಕರೆದಿದೆ.

ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ

ಎಂದು ಶ್ರುತಿ ಪರಮಶಿವನನ್ನು ಪ್ರಪಂಚಕ್ಕೆ ಉಪಶಮ ಅಂದರೆ ವಿಶ್ರಾಂತಿಸ್ಥಳವೆಂದೂ, ಶಕ್ತಿವಿಶಿಷ್ಟನಾದ್ದರಿಂದ ಅದ್ವೈತನೆಂದೂ, ಚತುರ್ಥ ಅಂದರೆ ತ್ರಿಮೂರ್ತ್ಯತೀತನೂ, ಮೂಲಕಾರಣನೂ ಆದ ನಿರಾಕಾರತತ್ತ್ವವೆಂದೂ ವರ್ಣಿಸಿದೆ. ವಿಶ್ವದ ವ್ಯವಹಾರಕ್ಕೆ ಆಧಾರವಾಗಿರುವ ಈ ಬಯಲು ಯಾವನಿಂದ ಹೊರಬಂದಿತೋ ಇಂತಹ ಬಯಲಿಗೇ ಆಶ್ರಯನಾಗಿರುವ ಸಚ್ಚಿದಾನಂದ ಪರಶಿವನು ಎಷ್ಟು ವಿಶಾಲನೂ ವ್ಯಾಪಕನೂ ಆಗಿರುವನೆಂಬುದನ್ನು

ನಾವು ಪ್ರತಿನಿಮಿಷವೂ ಮನಸ್ಸಿನಲ್ಲಿ ಭಾವಿಸುತ್ತಿರಬೇಕು. "ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದ್ಯೇಷ ಆಕಾಶ ಆನಂದೋ ನ ಸ್ಯಾತ್" ಎಂದು ತೈತ್ತಿರೀಯ ಶ್ರುತಿಯಲ್ಲಿ ಹೇಳಿರುವಂತೆ ಈ ಆಕಾಶವು ತುಂಬ ವಿಶಾಲವಾಗಿರುವುದರಿಂದ ನಮಗೆ ಈ ಲೋಕದಲ್ಲಿ ಸುಖಸ್ಥಿತಿಗೆ ಅವಕಾಶವಾಗಿರುವುದು. ಪರಶಿವನಿಂದ ಹೊರಬಂದಿರುವ ಈ ಆಕಾಶವೇ ನಮಗೆ ಇಷ್ಟು ಸುಖಕರವಾಗಿದ್ದರೆ ಇಂತಹ ಬಯಲಿಗಾಶ್ರಯನೂ ಚಿದಾಕಾಶನೂ ಆದ ಪರಶಿವನು ನಮಗೆ ಇನ್ನೆಷ್ಟು ಸುಖರೂಪನಾಗಿರುವನೆಂಬುದನ್ನು ಮಾನವರು ವಿವೇಕದಿಂದ ಅರಿಯಬೇಕಾಗಿದೆ. ಇಂತಹ ಸುಖಕ್ಕೆ ಆವಾಸಸ್ಥಾನವಾಗಿರುವ ಪರಶಿವನು ಸ್ಥಲವೆನ್ನಿಸಿಕೊಂಡಿರುವುದು ಅನ್ವರ್ಥವೆನಿಸಿದೆ.

ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪೌರುಷಂ ಯತಃ ।
ಲೀಯತೇ ಪುನರಂತೇ ಚ ಸ್ಥಲಂ ತತ್ಪ್ರೋಚ್ಯತೇ ತತಃ ॥
ಆಲಯಃ ಸರ್ವದೇಹಾನಾಂ ಲೋಕಾನಾಂ ಸರ್ವಸಂಪದಾಂ ।
ಯದ್ಭವೇತ್ಪರಮಂ ಬ್ರಹ್ಮ ಸ್ಥಲಂ ತತ್ಪ್ರಾಹುರಕ್ಷರಂ ॥
ಸ್ಥಲಂ ನಾಮ ಪರಂ ತತ್ತ್ವಂ ಶಿವರುದ್ರಾದಿಸಂಜ್ಞಿತಂ ।

ಎಂದು ಮಗ್ಗೆಮಾಯಿದೇವರು ಅನುಭವಸೂತ್ರದಲ್ಲಿ ಪರಶಿವನು ಸರ್ವಕ್ಕೂ ಆಶ್ರಯನೂ ಅವಿನಾಶಿಯೂ ಆದ್ದರಿಂದ ಸ್ಥಲವೆಂದು ಕರೆದಿದ್ದಾರೆ. ಇಂತಹ ಸ್ಥಲವೂ ಲಿಂಗವೂ ಆದ ಪರಶಿವನು ಮಹತ್ವವುಳ್ಳವನಾಗಿ ತನ್ನನ್ನು ಆಶ್ರಯಿಸಿದವರಲ್ಲಿಯೂ ಅಂತಹ ಮಹತ್ವವನ್ನುಂಟುಮಾಡುವುದರಿಂದ ಬ್ರಹ್ಮನೆನಿಸಿರುವನು. ಎಲ್ಲಕ್ಕೂ ಕರ್ತೃವಾಗಿ ಎಲ್ಲರಿಗೂ ಗಮ್ಯನೂ ಧ್ಯೇಯನೂ ಆಗಿರುವ ಈ ಲಿಂಗವೇ ವಿಶ್ವದ ಮೂಲಕಾರಣವಾಗಿರುವುದು. ಈ ದರ್ಶನದಲ್ಲಿ ಇದೇ ಮಾನವನ ಆಧ್ಯಾತ್ಮಸಾಧನೆಯ ಲಕ್ಷ್ಯವಾಗಿರುವುದು. "ಅಸ್ಥೂಲಂ ಅನಣು ಅಹ್ರಸ್ವಂ" ಎಂದು ಬೃಹದಾರಣ್ಯಕ ಶ್ರುತಿಯಲ್ಲಿ ತಿಳಿಸುವ ವಸ್ತುವೂ ಇದೇಯೆ. ಇದು ಅಮೂರ್ತವೂ, ಚಿದ್ರೂಪವೂ, ಸರ್ವವ್ಯಾಪಕವೂ ಆಗಿ ಎಲ್ಲೆಲ್ಲಿಯೂ ಶೋಭಿಸುತ್ತಲಿರುವುದು. "ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂದು ಮುಂಡಕಶ್ರುತಿಯು ನಿರಾಕಾರಪರಶಿವನ ಸರ್ವವ್ಯಾಪಕ ಪ್ರಕಾಶವನ್ನು ಪ್ರಶಂಸಿಸುತ್ತದೆ. "ಅದರ ಪ್ರಕಾಶದಿಂದಲೇ ಲೋಕದ ಎಲ್ಲಾ ವಸ್ತುಗಳೂ ಶೋಭಿಸುತ್ತಲಿರುವುವು. ಆ ಪ್ರಕಾಶವನ್ನು ಅವಲಂಬಿಸಿಕೊಂಡೇ ಎಲ್ಲವೂ ಬೆಳಗುತ್ತಿರುವುವು" ಎಂದು ಶ್ರುತಿ ಮಾನವನ ಗುರಿಯನ್ನು ಸ್ಪಷ್ಟಪಡಿಸುತ್ತಲಿದೆ. "ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್" (೧೦–೪೨) ಎಂದು ಗೀತೆಯಲ್ಲಿ ಪರಮಾತ್ಮನು ತನ್ನ ತೇಜೋವ್ಯಾಪ್ತಿಯ ವೈಶಾಲ್ಯವನ್ನು ವಿಶದಪಡಿಸಿರುವನು. ಮೂಲವಸ್ತುವೆನಿಸಿದ ನಿರಾಕಾರಪರಶಿವನು ತನ್ನ ಶಕ್ತಿಯ ಅತ್ಯಲ್ಪಾಂಶದಿಂದ ಮೂವತ್ತಾರು ತತ್ತ್ವಗಳಾಗಿ ಪರಿಣಮಿಸಿ, ಅಧಿಕಾಂಶದಿಂದ ಲಿಂಗವೆನಿಸಿ ಆತ್ಮಾನಂದವನ್ನು ಅನುಭವಿಸುತ್ತಲೇ ಮುಮುಕ್ಷುಗಳಿಗೆ ಚಿಂತಾಮಣಿಯಂತೆ ಆದರ್ಶವಾದ ಆಶ್ರಯಸ್ಥಲವಾಗಿರುವನು. "ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಎಂದು ಪುರುಷಸೂಕ್ತವು ಪರಶಿವನ ಮಹಿಮೆಯನ್ನು ತಿಳಿಸುತ್ತದೆ. ಅವನ ಅತ್ಯಲ್ಪಾಂಶದಲ್ಲಿ ಸಕಲಬ್ರಹ್ಮಾಂಡಗಳೂ ಕ್ರೋಢೀಕೃತವಾಗಿವೆ. ಉಳಿದ ಅಧಿಕವಾದ ಭಾಗವೆಲ್ಲವೂ ತನ್ನ ದಿವ್ಯ ಅಮೂರ್ತಸ್ಥಿತಿಯಲ್ಲಿ ಸ್ವಪ್ರಕಾಶವೇ ಆಗಿ ಶೋಭಿಸುತ್ತಲಿದೆ. ತ್ರಿಮೂರ್ತಿಗಳು ಸಹ ಹೃದಯಾಕಾಶದಲ್ಲಿ ಸ್ವಪ್ರಕಾಶನೂ ದಿವ್ಯಲಿಂಗಸ್ವರೂಪನೂ ಆದ ಪರಶಿವತತ್ತ್ವವನ್ನು ಸದಾ ಧ್ಯಾನಿಸುತ್ತಲೇ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿರುವರು. ಇಂತಹ ಶಕ್ತಿವಿಶಿಷ್ಟ ಪರಶಿವನೇ ಸರ್ವಮಾನವರಿಗೂ ಉಪಾಸ್ಯನೂ ಧ್ಯೇಯನೂ ಆಗಿರುವನೆಂಬುದನ್ನು ಸಾಧಕರು ಮನಗಾಣಬೇಕು.

ಇಂತ ಅದ್ವೈತಶಕ್ತಿವಿಶಿಷ್ಟನೂ ಮಹಾಪ್ರಕಾಶನೂ ಆದ ಮಹಾಲಿಂಗದ ಲೀಲಾವಿನೋದ ಭೂಮಿಯೇ ಈ ಪ್ರಪಂಚ. ಹೀಗೆ ಪರಶಿವನು ಭಕ್ತಾನುಗ್ರಹಕ್ಕಾಗಿ ಏಕಕಾಲದಲ್ಲಿ ಮೂರ್ತ ಅಮೂರ್ತ ಅಂದರೆ ಸಾಕಾರ ನಿರಾಕಾರ ಎರಡೂ ಸ್ಥಿತಿಗಳಲ್ಲೂ ಶೋಭಿಸುತ್ತಿರುವನು. ಸಾಕಾರಸ್ಥಿತಿಯಲ್ಲಿ ದಿವ್ಯಸ್ಥಿತಿ ಮತ್ತು ಪ್ರಾಕೃತಸ್ಥಿತಿ ಎಂದು ಎರಡು ಬಗೆಗಳಿವೆ. ಅವನ ದಿವ್ಯಸ್ಥಿತಿಯನ್ನು ಮೂವತ್ತಾರು ತತ್ತ್ವಗಳೊಳಗೆ ಮೊದಲನೆಯ ಐದು ತತ್ತ್ವಗಳಲ್ಲಿ ನಾವು ಕಾಣಬಹುದು. ಶಿವ. ಶಕ್ತಿ, ಸದಾಶಿವ (ರುದ್ರ), ಈಶ್ವರ (ವಿಷ್ಣು), ಶುದ್ಧ ವಿದ್ಯೆ (ಬ್ರಹ್ಮ) ಇವು ಐದೂ ಪರಶಿವನ ದಿವ್ಯಸ್ಥಿತಿಗಳು. ಅವನಿಗೂ ಈ ಐದು ಸ್ಥಿತಿಗಳಿಗೂ ಏಕೀಭಾವ (ತಾದಾತ್ಮ್ಯ) ಇರುತ್ತದೆ. ಈ ಐದು ಅವಸ್ಥೆಗಳಿಂದ ಅವನೇ ಜಗತ್ತಿನ ಐದು ವ್ಯಾಪಾರಗಳೆನಿಸಿದ ಅನುಗ್ರಹ, ತಿರೋಧಾನ, ಪ್ರಳಯ, ಸ್ಥಿತಿ, ಸೃಷ್ಟಿ ಇವನ್ನು ನಿರ್ವಹಿಸುತ್ತಿರುವನು. ಅಮೂರ್ತನಾದರೂ ಅವನು ಜಗದ್ವ್ಯಾಪಾರಗಳ ನಿರ್ವಾಹಕ್ಕಾಗಿ ದಿವ್ಯಮೂರ್ತನಾಗುವನು. ಇಂತಹ ಜಗದ್ರಚನಾನೈಪುಣ್ಯವು ಅದ್ವೈತದರ್ಶನದ ಮಾಯಾಕಲ್ಪಿತನಾದ ಈಶ್ವರನಲ್ಲಿ ಹೇಗೆ ಸಂಭವಿಸೀತು ? ಮಾಯಾ

ಶಬಲಿತನಾದ ಈಶ್ವರನು ಉಪಾಸಕರಿಗೆ ಹೇಗೆ ತಾನೆ ಅನುಗ್ರಹಿಸಿಯಾನು ? ಆದ್ದರಿಂದಲೇ ಕಲ್ಪಿತೇಶ್ವರನಿಂದ ನಿರ್ಮಿತವಾದ ಜಗತ್ತನ್ನು ಅದ್ವೈತದರ್ಶನವು ಮಿಥ್ಯೆ ಎಂದು ಭಾವಿಸಿದ್ದು ಯುಕ್ತವೆನಿಸಿದೆ. ಈಶ್ವರನೂ ಸತ್ಯವಾಗಿದ್ದರೆ ಅವನ ಕೃತಿಯೂ ಸತ್ಯವಾಗಿದ್ದೀತು ! ಮೂಲವೇ ಕಲ್ಪಿತವಾಗಿರುವಾಗ ಅದರ ಪ್ರತಿಬಿಂಬವೂ ಕಲ್ಪಿತವೇ ಆಗಿರುವುದರಲ್ಲಿ ಆಶ್ಚರ್ಯವೇನಿದೆ. ಕುಂಬಾರನು ಸತ್ಯವಾಗಿದ್ದರೆ ಅವನಿಂದ ನಿರ್ಮಿತವಾದ ಗಡಿಗೆಯೂ ಸತ್ಯವಾಗಿದ್ದೀತು ! ಕುಂಬಾರನೆಂಬ ಜೀವನೇ ಅವಿದ್ಯಾಕಲ್ಪಿತನಾಗಿರುವಾಗ ಅವನ ಗಡಿಗೆ ಹೇಗೆ ಸತ್ಯವೆನಿಸೀತು ? ಆದರೆ ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಮೂಲವಸ್ತುವೆನಿಸಿದ ಪರಶಿವನೇ ಸತ್ಯವಾಗಿರುವುದರಿಂದ ಅವನ ಪರಿಣಾಮವಾಗಿರುವ ಜಗತ್ತೂ ಸತ್ಯವೇ ಆಗಿರುವುದು. ಇದನ್ನು ಪ್ರಪಂಚದಲ್ಲಿ ಬಂಧವಿಮೋಚನೆಗಾಗಿ ಪ್ರಯತ್ನಿಸುವ ಸಾಧಕರೆಲ್ಲರೂ ಮನದಲ್ಲಿ ದೃಢವಾಗಿ ನಂಬಬೇಕಾದ್ದು ಶ್ರೇಯಸ್ಕರ. ಕಲ್ಪಿತವಾದ ದೇವರನ್ನು ಭಕ್ತರು ಎಷ್ಟು ಭಕ್ತಿ ಶ್ರದ್ಧೆಗಳಿಂದ ಅರ್ಚನೆ ಮಾಡಿದರೂ ಅವನು ಅವರಿಗೆ ಹೇಗೆ ವರಗಳನ್ನು ಕೊಡಬಲ್ಲನು ?

ಇಂತಹ ಮಹಾಮಹಿಮನಾದ ಪರಶಿವನು ಪೂಜ್ಯಪೂಜಕಲೀಲೆಯಲ್ಲಿ ಸೃಷ್ಟ್ಯುನ್ಮುಖನಾದಾಗ ಶಕ್ತಿಯ ಕಿಂಚಿಚ್ಚಲನರೂಪವಾದ ಅಭಿಮಾನವೇ ಮೂವತ್ತಾರು ತತ್ವಗಳಿಗೆ ಮೂಲಕಾರಣವೆನಿಸಿತು.

ನಿರಾಕಾರಪರಶಿವನ ಈ ಬಗೆಯ ಪರಿಣಾಮವನ್ನು ಶಿವಾಗಮವು ಹೀಗೆ ತಿಳಿಸುತ್ತದೆ.

ಅನಾದಿನಿಧನಾತ್ ಶಾಂತಾತ್ ಶಿವಾತ್ ಪರಮಕಾರಣಾತ್ ।
ಇಚ್ಛಾಶಕ್ತಿರ್ವಿನಿಷ್ಕ್ರಾಂತಾ ತತೋ ಜ್ಞಾನಂ ತತಃಕ್ರಿಯಾ ॥
ತತ್ರೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ ॥

ಆದಿಅಂತ್ಯಗಳಿಲ್ಲದೆ ಸನಾತನನೂ ಪರಮಕಾರಣನೂ ಆದ ನಿರಾಕಾರಪರಶಿವನಿಂದ ಇಚ್ಛಾಶಕ್ತಿಯು ಹೊರಹೊಮ್ಮಿ ಅದರಿಂದ ಜ್ಞಾನ ಕ್ರಿಯೆಗಳು ಹೊರಟವು. ಅನಂತರ ಸಕಲ ಪ್ರಪಂಚವೂ ಹೊರಬಂದಿತು. ಇಲ್ಲಿ ಶಿವಪದವು "ಶಾಂತಾತ್ ಪರಮಕಾರಣಾತ್" ಎಂಬ ವಿಶೇಷಣಗಳಿಂದ ಮೂಲಕಾರಣನಾದ ನಿರಾಕಾರಪರಶಿವನಿಗೆ ಅನ್ವಯಿಸುವುದು. ಅಲ್ಲಿಂದ ಮುಂದೆ ಹೇಳಿರುವ ಇಚ್ಛಾದಿಶಕ್ತಿಗಳು ಪರಶಿವನ ಪ್ರಾಣರೂಪವಾದ ವಿಮರ್ಶಶಕ್ತಿಯ ಪರಿಣಾಮಗಳೆನಿಸುವುವು. ಹೀಗೆ ಮಹಾಪ್ರಕಾಶನೂ ಸಚ್ಚಿದಾನಂದಸ್ವರೂಪನೂ ಘನಲಿಂಗವೂ ಆದ ನಿರಾಕಾರ ಪರಶಿವನೇ ಸರ್ವಸಾಧಕರ ಧ್ಯಾನಕ್ಕೆ ಯೋಗ್ಯನೂ ಉಪಾಸ್ಯನೂ ಆಗಿರುವನೆಂದು ಈ ದರ್ಶನ ಸ್ಪಷ್ಟಪಡಿಸಿದೆ. ತ್ರಿಮೂರ್ತಿಗಳೊಳಗೆ ಪ್ರಳಯಾಧಿಕಾರಿಯಾದ ರುದ್ರನು ಸಾಧಕರಿಗೆ ದೇಹಾಭಿಮಾನವನ್ನು ತೊಲಗಿಸಲಿಕ್ಕೂ, ವಿಷ್ಣುವು ರಕ್ಷಣೆ ಮಾಡಲಿಕ್ಕೂ, ಬ್ರಹ್ಮನು ದೇಹಕ್ಕೆ ಜೀವಚೈತನ್ಯವನ್ನು ತುಂಬಲಿಕ್ಕೂ ಅಧಿಕಾರಿಗಳಾಗಿರುವರು. ಹೀಗೆ ತ್ರಿಮೂರ್ತಿಗಳ ಕೃತಿ ಮುಗಿದ ಮೇಲೆ ಶಕ್ತಿಯು ಜೀವಾತ್ಮನ ಯೋಗ್ಯತೆಯನ್ನು ತಿರೋಧಾನಗಳ ಮೂಲಕ ಪರೀಕ್ಷಿಸಲಿಕ್ಕೂ, ಹಾಗೆ ಸಿದ್ಧವಿದ್ದ ಶುದ್ಧ ಜೀವನಿಗೆ ಸಾಕಾರಶಿವನು ಅನುಗ್ರಹಿಸಲಿಕ್ಕೂ ಅಧಿಕಾರಿಗಳಾಗಿರುವರು. ಹೀಗೆ ಪರೀಕ್ಷೆಯಿಂದ ಪರಿಶುದ್ಧವಾದ ಜೀವನು ನಿರಾಕಾರಪರಶಿವನಲ್ಲಿ ಐಕ್ಯನಾಗಿ ಆನಂದವನ್ನು ಅನುಭವಿಸುತ್ತ ಮಹಾ ಕೈಲಾಸದಲ್ಲಿ ಅಂದರೆ ವಿಶಾಲವಾದ ಬಯಲಿನಲ್ಲಿ ನೆಲಸುವನೆಂದು ಈ ದರ್ಶನವು ಬ್ರಹ್ಮ, ವಿಷ್ಣು, ರುದ್ರ, ಶಕ್ತಿ, ಶಿವ ಎಂಬ ಐವರು ದಿವ್ಯಮೂರ್ತಿಗಳ ಕೃತಿವಿಲಾಸಗಳನ್ನು ವರ್ಣಿಸಿದೆ. ಸಾಧಕನು ಸಿದ್ಧನಾದ ಮೇಲೆ ಈ ದೇಹದಲ್ಲಿಯೇ ಹೃದಯದ ಪ್ರಾಣಲಿಂಗದೊಡನೆ ಐಕ್ಯಸ್ಥಿತಿಯನ್ನು ಅನುಭವಿಸುತ್ತಲಿದ್ದು ಈ ಐದು ದಿವ್ಯಪ್ರಕೃತಿಗಳಿಗಾಶ್ರಯವಾದ ನಿರಾಕಾರಪರಶಿವತತ್ತ್ವದಲ್ಲಿ ಕೊನೆಗೆ ಸಮರಸವಾಗಿ ಬೆರೆಯುವನು ಎಂಬುದನ್ನು ಪ್ರತಿನಿಮಿಷವೂ ಅವನು ಮನದಲ್ಲಿ ಭಾವಿಸುತ್ತಿರಬೇಕು. ಹಾಗೆ ಭಾವಿಸಿದರೆ ಅವನಿಗೆ ಗುರಿಯಲ್ಲಿ ಸಂಶಯವೇ ಹುಟ್ಟಲಾರದು. ಗುರಿ ಸ್ಪಷ್ಟವಾಗಿದ್ದರೆಯೇ ಸಾಧನೆ ಫಲಿಸಬಲ್ಲದು. ಗುರಿಯಲ್ಲಿಯೇ ನಿಶ್ಚಯವಿಲ್ಲದಿದ್ದರೆ ಸಾಧನೆಯೂ ಫಲಿಸದೆ ವ್ಯರ್ಥ ಪ್ರಯಾಸವೇ ಆಗಬಲ್ಲದು. ಸಾಧಕನು ಬ್ರಹ್ಮ ವಿಷ್ಣು, ರುದ್ರರನ್ನಾಗಲೀ, ಶಕ್ತಿ, ಶಿವರನ್ನಾಗಲಿ ಧ್ಯಾನಿಸುವಾಗ ಅವರಲ್ಲಿ ನಿರಾಕಾರ ಪರಶಿವಲಿಂಗದ ತಾದಾತ್ಮ್ಯಭಾವನೆಯನ್ನು ಅವಶ್ಯವಾಗಿ ಹೊಂದಿರಬೇಕು. ಇವರನ್ನು ಅವನು ಭಜಿಸಿದರೂ ಫಲವನ್ನು ಕೊಡುವವನು ನಿರಾಕಾರ ಪರಶಿವನೇ ಎಂಬ ಆಶಯವು ಸಾಧಕನ ಮನದಲ್ಲಿ ಸ್ಥಿರವಾಗಿ ನೆಲೆಸಿರಬೇಕು. ಹೀಗೆ ತಾದಾತ್ಮ್ಯಭಾವನೆ ಈ ದರ್ಶನದಲ್ಲಿ ನೆಲೆಸಿರುವುದನ್ನು ಶರಣರ ನಿತ್ಯಜೀವನದಲ್ಲಿ ನಾವು ಕಾಣಬಹುದು. ಅಲ್ಲಮಪ್ರಭು ನಿರಾಕಾರಪರಶಿವನನ್ನು ಗುಹೇಶ್ವರ ಎಂದೂ, ಬಸವಣ್ಣನು ಅದೇ ವಸ್ತುವನ್ನು ಕೂಡಲಸಂಗಮನಾಥನೆಂದೂ ಹೀಗೆ ಒಬ್ಬೊಬ್ಬರು ಒಂದೊಂದು ಹೆಸರಿನಿಂದ ಕರೆದು ತಮ್ಮ ಆಧ್ಯಾತ್ಮಸಾಧನೆಯನ್ನು ಮುಂದುವರಿಸಿರುವರು. ಆದರೆ ಅಲ್ಲಮಪ್ರಭು ಎದುರಿಗೆ

ಬಸವಣ್ಣ, ಚನ್ನಬಸವಣ್ಣ ಮೊದಲಾದ ಯಾವ ಸಾಧಕರನ್ನು ಕಂಡರೂ ಅವರನ್ನು ಗುಹೇಶ್ವರನೆಂದೇ ಸಂಬೋಧಿಸುತ್ತಾರೆ. ಬಸವಣ್ಣನೂ ಹಾಗೆಯೇ ಎಲ್ಲರನ್ನೂ ಸಂಗಮನಾಥನೆಂದೇ ಸಂಬೋಧಿಸುತ್ತಾನೆ. ತಾವು ಎಲ್ಲಿಯೇ ಇರಲಿ, ಹೇಗೆಯೇ ಇರಲಿ, ಯಾರೊಡನೆಯೇ ಮಾತನಾಡಲಿ, ಸೇರಲಿ ತಮ್ಮ ಗುರಿಯಲ್ಲಿ ಮಾತ್ರ ಕೊಂಚವೂ ಚಲಿಸದೆ ನೆಲೆಯಾಗಿ ನಿಂತು, ನಿರಾಕಾರತತ್ತ್ವದಲ್ಲಿ ಸಾಮರಸ್ಯವನ್ನು ಪ್ರತಿನಿಮಿಷವೂ ಶರಣರು ಅನುಭವಿಸುತ್ತಾರೆ. ಇದು ಶಕ್ತಿವಿಶಿಷ್ಟಾದ್ವೈತದರ್ಶನ ಜಗತ್ತಿಗೆ ಕೊಟ್ಟಿರುವ ದಿವ್ಯಸಂದೇಶ. ತ್ರಿಮೂರ್ತಿಗಳಲ್ಲೊಬ್ಬರನ್ನು ಒಂದೊಂದು ಕಾರ್ಯಕ್ಕಾಗಿ ಆಶ್ರಯಿಸಿದರೂ ಸಹ ಅವರೊಡನೆ ಸಾಮರಸ್ಯವನ್ನು ಹೊಂದಲಿಕ್ಕೆ ಸಾಧ್ಯವಾಗುವುದಿಲ್ಲ. ಈ ದರ್ಶನ ಅದನ್ನು ಬೋಧಿಸುವುದೂ ಇಲ್ಲ. ಈ ದರ್ಶನದ ಬೋಧೆಯಾವರೋ ತ್ರಿಮೂರ್ತಿಗಳಿಗೂ, ಶಕ್ತಿ ಶಿವರಿಗೂ ಮೂಲಾಧಾರವೆನಿಸಿ ಮಹಾಲಿಂಗವೂ ಸರ್ವವಿಶ್ರಾಂತಿ ಸ್ಥಲವೂ ಎನಿಸಿದ ನಿರಾಕಾರಪರಶಿವನ ಉಪಾಸನೆ ಮತ್ತು ಸಾಮರಸ್ಯವೇ ಹೊರತು ಬೇರೆ ಬಗೆಯಲ್ಲವೆಂಬುದನ್ನು ಸಾಧಕರೆಲ್ಲರಿಗೆ ಮನಮುಟ್ಟುವ ರೀತಿ ಬೋಧಿಸಿದೆ. ಇದೇ ನಿರಾಕಾರಪರಶಿವತತ್ತ್ವವೇ ಅವ್ಯಾಜವಾತ್ಸಲ್ಯದಿಂದ ಮಾನವರ ಹೃದಯದಲ್ಲಿ ನೆಲೆಸಿದ್ದು ಗುರುವಿನಿಂದ ಅಂಗುಷ್ಠಪ್ರಮಾಣದ ಲಿಂಗರೂಪದಲ್ಲಿ ಹೊರಗೆ ಬಂದು ಇಷ್ಟಲಿಂಗವೆನಿಸಿ ಕರಪೀಠದಲ್ಲಿ ಅರ್ಚನೆಯನ್ನು ಮಾಡಿಸಿಕೊಳ್ಳುತ್ತಿರುವುದು. ಗುರುವು ಹೃದಯದೊಳಗೆ ಅಡಗಿರುವ ನಿರಾಕಾರ ಪರಶಿವನ ದಿವ್ಯಕಲೆಯನ್ನು ಶಿಷ್ಯನ ಶಿರಸ್ಸಿನಿಂದ ಮನಸ್ಸಿಗೂ, ಅಲ್ಲಿಂದ ನೇತ್ರಗಳಿಗೂ ತಂದು ಈ ಮೂರರಲ್ಲಿಯೂ ನೆಲೆಗೊಂಡಿರುವ ದಿವ್ಯಕಲೆಯನ್ನು ಶಿವಲಿಂಗದಲ್ಲಿ ಸಮಾವೇಶಗೊಳಿಸಿ ಅದನ್ನು ಅವನ ಹಸ್ತಪೀಠದಲ್ಲಿ ಅನುಗ್ರಹಿಸುವನು. ಒಳಗಿನ ನಿರಾಕಾರಶಿವಕಳೆಯೇ ಹೊರಗೆ ಮಹಾಬೆಳಕಾಗಿ ವಿರಾಜಿಸುತ್ತಿರುವುದೆಂದೂ, ಇದರ ಅರ್ಚನೆಯಿಂದ ಸಾಧಕರು ಒಳಗೆ ಗೋಪ್ಯವಾಗಿ ನೆಲೆಸಿರುವ ನಿರಾಕಾರ ಶಿವನ ಚಿತ್ಕಳೆಯನ್ನು ಮನಗಾಣಬೇಕೆಂದೂ ಗುರು ಶಿಷ್ಯನಿಗೆ ಬೋಧಿಸುವನು. ಇದೇ ನಿಜವಾದ ಶಿವಪೂಜೆ ಎಂದು ಶಕ್ತಿವಿಶಿಷ್ಟಾದ್ವೈತದರ್ಶನವು ತನ್ನ ಸಂಪ್ರದಾಯದಲ್ಲಿ ವ್ಯಕ್ತಪಡಿಸಿದೆ. ಹೀಗೆ ಪರಮಾತ್ಮಸ್ವರೂಪವನ್ನು ವಿವರಿಸಿ ಈ ದರ್ಶನವು ಜೀವಸ್ವರೂಪವನ್ನು ಹೇಗೆ ತಿಳಿಸಿದೆ ಎಂಬುದನ್ನು ಈಗ ಪರಿಶೀಲಿಸೋಣ. ನಿರಾಕಾರಪರಶಿವನೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ ಜೀವರೆನಿಸಿರುವನೆಂದು ಈ ದರ್ಶನವು ತಿಳಿಸುತ್ತದೆ. ಅಲ್ಲಿಗೆ ಜೀವನು ನಿರಾಕಾರಪರಶಿವನ ಅಂಶನೆಂದೂ ಅವನೊಡನೆ ಸಾಧರ್ಮ್ಯ ವೈಧರ್ಮ್ಯಗಳೆರಡನ್ನೂ ಪಡೆದಿರುವನೆಂದೂ ತಿಳಿಸಿದ್ದರಿಂದ ಪರಶಿವನಲ್ಲಿ ಜೀವರಿಗೆ ಚಿದ್ರೂಪವಾದ ಸಾಧರ್ಮ್ಯವಿದ್ದರೂ, ಶಕ್ತಿಸಂಬಂಧವಾದ ವೈಧರ್ಮ್ಯವೂ ಉಂಟೆಂಬುದು ಸಿದ್ಧವಾಗುತ್ತದೆ. ಪರಮಾತ್ಮನು ಸರ್ವಜ್ಞನೂ ಸರ್ವಶಕ್ತನೂ ಆದರೆ, ಜೀವರು ಕಿಂಚಿಜ್ಞರೂ ಕಿಂಚಿತ್ಕರ್ತರೂ ಆಗಿರುವರು. ಅವಿದ್ಯೆ ಎಂಬ ಮಲಪಾಶದಿಂದ ಬದ್ಧರಾಗಿ ಜೀವರು ಪರಶಿವನನ್ನು ಮರೆತು ಕರ್ಮಗಳಲ್ಲಿ ಅಭಿಮಾನಿಸಿ ಪ್ರವರ್ತಿಸುತ್ತ ಸಂಸಾರದಲ್ಲಿ ನೆಲೆಯಿಲ್ಲದೆ ಅಲೆಯುತ್ತಿರುವರು. "ಅವಿದ್ಯಾಶಕ್ತಿಭೇದೇನ ಜೀವಾಃ ಬಹುವಿಧಾಃ ಸ್ಮೃತಾಃ" "ಅವಿದ್ಯಾ ಆಶ್ರಯ ಮೋಹಿನೀ" ಎಂಬಂತೆ ಅಶುದ್ಧಮಾಯೆ ಎನಿಸಿದ ಅವಿದ್ಯಾಶಕ್ತಿಯು ಜೀವರನ್ನು ಮೋಹಗೊಳಿಸುತ್ತಿರುವುದು. ಇದು ಸತ್ವರಜಸ್ತಮೋಗುಣಾತ್ಮಕವಾಗಿ ವಿವಿಧವೂ ವಿಚಿತ್ರವೂ ಆದುದರಿಂದ ಜೀವರೂ ಬಹುವಿಧವಾಗಿದ್ದಾರೆ ಎಂದು ಸಿದ್ಧಾಂತ ಶಿಖಾಮಣಿಯು ತಿಳಿಸಿದೆ. ಜೀವರು ರಜೋಗುಣದಿಂದ ಕೂಡಿಕೊಂಡು ಭಿನ್ನಭಿನ್ನ ಸ್ವಭಾವದವರಾಗಿ ಲೋಕವ್ಯವಹಾರಗಳಲ್ಲಿ ತೊಳಲುತ್ತಿರುವರು. "ಸಾಕ್ಷೀಚೇತಾ ಕೇವಲೋ ನಿರ್ಗುಣಶ್ಚ" ಎಂಬ ಶ್ರುತಿಯಲ್ಲಿ ಹೇಳಿರುವಂತೆ ಪ್ರೇರಕನೆನಿಸಿ ದೇಹದಲ್ಲಿ ಗೋಪ್ಯವಾಗಿ ಅಡಗಿರುವ ನಿರಾಕಾರಪರಶಿವನು ಜೀವನಕರ್ಮಗಳನ್ನು ನಿರೀಕ್ಷಿಸುತ್ತ ಉದಾಸೀನನಾದ ಪ್ರೇಕ್ಷಕನಂತೆ ಕೇವಲನೂ ನಿರ್ಲಿಪ್ತನೂ ಆಗಿ ಜೀವನೊಡನೆ ನೆಲೆಸಿರುವನು. ಅವರವರ ಕರ್ಮಾನುಸಾರವಾಗಿ ಅವರನ್ನು ಪ್ರೇರಿಸುತ್ತಲೂ, ಅವರು ತಮ್ಮ ದುಷ್ಕರ್ಮಗಳಿಗೆ ಪಶ್ಚಾತ್ತಾಪವನ್ನು ಅನುಭವಿಸಿದಾಗ ಅವರಿಗೆ ಸದ್ಬುದ್ಧಿವಿವೇಕಗಳನ್ನು ಅನುಗ್ರಹಿಸುತ್ತಲೂ ಆಗ ಅವರನ್ನು ಕ್ರಮವಾಗಿ ತನ್ನ ಕಡೆಗೆ ತಿರುಗಿಸುತ್ತಲೂ ನಿರಾಕಾರಪರಶಿವನ ಚಿತ್ಕಲೆಯು ಮಾನವದೇಹದಲ್ಲಿ ಜೀವರೊಡನೆ ಕೂಡಿ ನೆಲೆಸಿ ಲೀಲಾವಿನೋದವನ್ನು ಅನುಭವಿಸುತ್ತಿರುವುದು. ಅಲ್ಲಿಗೆ ನಿರಾಕಾರಶಿವನಿಗೂ ಅವನ ಅಂಶರೇ ಆದ ಜೀವರಿಗೂ ತುಂಬಾ ವೈಲಕ್ಷಣ್ಯವಿರುವುದೆಂಬುದು ಸ್ಪಷ್ಟವಾಯಿತು. ಆದರೆ ಇಬ್ಬರಿಗೂ ಕೊಂಚ ಸತ್ವಗುಣಸಂಬಂಧವಿರುವುದರಿಂದ ಕೊನೆಗೆ ಇಬ್ಬರೂ ಸಮರಸವಾಗಿ ಒಂದುಗೂಡಲು ಅವಕಾಶವಾಗುತ್ತದೆ. ಆದರೆ ಸಂಸಾರದಶೆಯಲ್ಲಿ ಪರಶಿವನ ಚಿತ್ಕಳೆಯು ಪೂರ್ಣಸತ್ವಗುಣವಿಶಿಷ್ಟವೂ, ಜೀವನು ಪೂರ್ಣರಜೋಗುಣವಿಶಿಷ್ಟನೂ ಆಗಿರುವುದರಿಂದ ಇಬ್ಬರಿಗೂ ಬಹಳ ಭೇದವಿರುತ್ತದೆ. ಆದ್ದರಿಂದಲೇ ಜೀವನು ಅಲ್ಪಶಕ್ತಿಜ್ಞಾನಪ್ರಕಾಶವುಳ್ಳವನು. ನಿರಾಕಾರಶಿವಕಳೆಯು ಅಪರಿಮಿತಶಕ್ತಿಜ್ಞಾನಪ್ರಕಾಶವುಳ್ಳದ್ದು ಎಂಬುದು ಸ್ಪಷ್ಟಪಡುತ್ತದೆ. ಜೀವನು ಅಣುಶಕ್ತಿವಿಶಿಷ್ಟನಾದರೆ, ನಿರಾಕಾರಶಿವನು ವಿಭುಶಕ್ತಿವಿಶಿಷ್ಟನಾಗಿರುವನು. ಈ ಜೀವ

ಶಿವರನ್ನೇ ಈ ದರ್ಶನದಲ್ಲಿ 'ಅಂಗ ಲಿಂಗ' ಎಂದು ಕರೆಯಲಾಗಿದೆ. ಅಂಗನೆಂದರೆ ಅಲ್ಪಪ್ರಕಾಶನಾದ ದೇವ. ಲಿಂಗನೆಂದರೆ ಮಹಾಪ್ರಕಾಶನಾದ ನಿರಾಕಾರಶಿವಕಲೆ. ಈ ಅಲ್ಪತ್ವ ಮಹತ್ವಗಳು ರಜಸ್ತಮೋಗುಣಗಳಿಂದ ಬಂದ ಭೇದಗಳು. ಸಮಾನ ಧರ್ಮಯೋಗವು ಅತ್ಯಲ್ಪಾಂಶದಲ್ಲಿ ಇದ್ದು ವಿಷಮಧರ್ಮಯೋಗವೇ ವಿಶೇಷವಾಗಿರುತ್ತದೆ. ಹೃದಯದೊಳಗೆ ನೆಲೆಸಿರುವ ಶಿವಕಲೆಯೇ ಸತ್ವಗುಣದ ಸಂಪರ್ಕದಿಂದ ಈಶ್ವರನೆನಿಸಿದೆ. ಈ ಈಶ್ವರನೇ ಜೀವನಿಗೆ ಪ್ರೇರಕನೂ ಸಾಕ್ಷಿಯೂ ಆಗಿರುವನು.

ಆದರೆ ಜೀವರು ವಾಸ್ತವವಾಗಿ ತಮ್ಮನ್ನು ಪರಶಿವನ ನೇರವಾದ ಅಂಶರೆಂಬುದನ್ನು ಮರೆತು ಇಂದ್ರಿಯಗಳೊಡನೆ ವ್ಯವಹರಿಸುತ್ತಿರುವ ಸಾಮಾನ್ಯ ಚೇತನರೆಂದು ಭಾವಿಸಿಕೊಂಡಿರುವರು. ಪರಶಿವನ ನೇರವಾದ ಸಂಬಂಧವನ್ನು ಪೂರ್ಣವಾಗಿ ಮರೆತು ಅವರು ಈ ಸಂಸಾರದಲ್ಲಿ ಅನೇಕ ಜನ್ಮಗಳನ್ನು ಎತ್ತುತ್ತ ಸಂಚರಿಸುತ್ತಿರುವರು. ಹೀಗೆ ದೇಹದಲ್ಲಿ ಜೀವನೂ ಪರಶಿವನೂ ಒಬ್ಬನು ಅಭಿಮಾನದಿಂದಲೂ, ಮತ್ತೊಬ್ಬನು ನಿರಭಿಮಾನದಿಂದಲೂ ನೆಲೆಸಿರುವುದನ್ನು ಶ್ರುತಿಯು ಸ್ಪಷ್ಟವಾಗಿ ತಿಳಿಸುತ್ತದೆ. "ಜ್ಞಾಜ್ಞೌ ದ್ವಾವಜಾವೀಶಾನೀಶೌ।"

"ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋಽಭಿಚಾಕಶೀತಿ." ಹೀಗೆ ಶ್ರುತಿಗಳು ಜೀವಶಿವಭೇದವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಜೀವನು ಅಜ್ಞ, ಅನೀಶ ; ಆದರೆ ತನ್ನೊಡನೆ ಇರುವ ಶಿವನು ಜ್ಞ ಎಂದರೆ ಸರ್ವಜ್ಞನೂ, ಈಶ ಎಂದರೆ ಸರ್ವಕರ್ತನೂ ಆಗಿರುವನು. ಆದರೆ ಇಬ್ಬರೂ ಅಜರು. ಎಂದರೆ ಸನಾತನ ವಸ್ತುಗಳು, ಪಕ್ಷಿದೃಷ್ಟಾಂತದಿಂದ ಶ್ರುತಿಯು ಈ ದೇಹ ವೃಕ್ಷದಲ್ಲಿ ಜೀವಶಿವರ ಇರುವಿಕೆಯನ್ನು ಪ್ರತಿಪಾದಿಸಿದೆ. ಒಂದೇ ವೃಕ್ಷದಲ್ಲಿ ಸಮಾನವರ್ಣದ ಪಕ್ಷಿಗಳೆರಡು ನೆಲೆಸಿರುವುವು. ಅವುಗಳಲ್ಲಿ ಒಂದು ಕೊಂಬೆಗಳಲ್ಲಿ ಹಾರಾಡುತ್ತ ಕಾಯಿ ಹಣ್ಣುಗಳನ್ನು ತಿನ್ನುತ್ತ ಕಾಯಿಗಳನ್ನು ತಿಂದಾಗ ಮುಖವನ್ನು ಸೊಟ್ಟಗೆ ಮಾಡಿಕೊಂಡು ಕಹಿಯನ್ನು ವ್ಯಕ್ತಪಡಿಸುವುದು; ಹಣ್ಣನ್ನು ತಿಂದಾಗ ಸಂತೋಷದಿಂದ ಮೆರೆಯುವುದು. ಇನ್ನೊಂದು ಹಕ್ಕಿಯು ಏನನ್ನೂ ತಿನ್ನದೆ ನಿರ್ಲಿಪ್ತವಾಗಿ ನೆಲೆಸಿ ಬೇರೆ ಹಕ್ಕಿಯ ವರ್ತನೆಯನ್ನು ನಿರೀಕ್ಷಿಸುತ್ತ ತಟಸ್ಥವಾಗಿ ಕುಳಿತಿರುವುದು. ಹಾಗೆ ಈ ದೇಹದಲ್ಲಿ ಜೀವನು ಅಭಿಮಾನಿಸಿಕೊಂಡು ಇಂದ್ರಿಯಗಳೊಡನೆ ವ್ಯವಹರಿಸುತ್ತ ಸುಖದುಃಖಗಳನ್ನು ಅನುಭವಿಸುತ್ತಿರುವನು. ದುಃಖ ಬಂದಾಗ ಮರಣಯಾತನೆಯನ್ನು ಪಡುತ್ತಲೂ, ಸುಖ ಬಂದಾಗ ಯಾರೂ ತನ್ನ ಸಮಾನರಿಲ್ಲವೆಂದು ಮೆರೆಯುತ್ತಲೂ ಸಂಸಾರದಲ್ಲಿ ಮಗ್ನವಾಗಿರುವನು. ಶಿವನಾದರೋ ಸುಖದುಃಖಗಳ ಸೋಂಕಿಲ್ಲದೆ ನಿರಭಿಮಾನನೂ ನಿರಂಜನನೂ ಆಗಿ ಹೃದಯದಲ್ಲಿ ಈಶ್ವರನೆನಿಸಿ ಜೀವನ ಆಗುಹೋಗುಗಳನ್ನು ನಿರೀಕ್ಷಿಸುತ್ತ ನೆಲೆಸಿರುವನು. ಗೀತೆಯಲ್ಲಿ ಕೃಷ್ಣನು ಹೃದಯದೊಳಗೆ ಈಶ್ವರನು ನೆಲೆಸಿರುವನೆಂದೂ ಅವನಿಗೆ ಶರಣಾಗತನಾದ ಜೀವನು ಶಿವಾನುಗ್ರಹಪ್ರಸಾದಗಳಿಂದಲೇ ಶಾಂತಿಯನ್ನು ಪಡೆಯುವನೆಂದೂ ಸ್ಪಷ್ಟವಾಗಿ ತಿಳಿಸಿದ್ದಾನೆ. ದೇಹದ ಇಂಪುಸೊಂಪುಕಂಪುಗಳಿಗೆ ಬಲಿಬೀಳುವಂತೆ ಜೀವರನ್ನು ಈಶ್ವರನು ಈ ದೇಹದಲ್ಲಿ ಭ್ರಮೆಗೊಳಿಸುತ್ತ ವ್ಯಾಮೋಹಾಭಿಮಾನಗಳಿಂದ ಕಾಡಿಸಿ ಉಗ್ರವಾದ ಪರೀಕ್ಷೆಗೆ ಸಿಲುಕಿಸಿರುವನು. ಜೀವನಿಗೆ ಸುಲಭವಾಗಿ ಶಿವನ ಅನುಗ್ರಹವು ದೊರೆಯುವಂತಿಲ್ಲ. ಜೀವನ ಅಭಿಮಾನ ಅಹಂಕಾರಗಳೆಲ್ಲವೂ ತೊಲಗುವವರೆಗೂ ಶಿವನ ಪ್ರಸಾದವು ದೊರೆಯಲಾರದು. ಜೀವನು ತನ್ನ ನಡೆನುಡಿಗಳಲ್ಲಿ ಪೂರ್ಣಶುದ್ಧನಾಗಿ ಶಿವನ ಕಡೆ ದೃಷ್ಟಿ ಇಡುವವರೆಗೂ ಅವನಿಗೆ ಶಿವನ ಅನುಗ್ರಹ ದೊರೆಯಲಾರದು. ಗುರುವಿನ ಕೃಪೆಯಿಂದ ಜೀವನು ತನ್ನೊಡನೆ ತನಗಾಗಿ ಇರುವ ಶಿವನ ವಿಚಾರವನ್ನು ತಿಳಿದು ತನ್ನ ತನುಮನಧನಗಳನ್ನೂ ಅವನ ಸೇವೆಗೆ ಉಪಯೋಗಿಸುತ್ತ ಅವನಿಗೆ ಆತ್ಮಾರ್ಪಣಪೂರ್ವಕವಾಗಿ ಶರಣಾಗತನಾದರೆ ಆಗ ದೇವನು ಶಿವನ ಪ್ರಸಾದವನ್ನು ಪಡೆದು ಅವನೊಡನೆ ಸಮರಸವಾಗಿ ಬೆರೆತು ನಿರಭಿಮಾನಸ್ಥಿತಿಯಲ್ಲಿ ಈ ದೇಹದಲ್ಲಿ ನಿಂತು ಶಿವಭಾವದಿಂದ ವ್ಯವಹರಿಸಬಲ್ಲನು. ಹೀಗೆ ಗೀತೆಯು ಈ ದೇಹದಲ್ಲಿ ಶಿವಜೀವರು ಇರುವುದನ್ನು ಅವರ ವರ್ತನೆಗಳಲ್ಲಿ ವೈಷಮ್ಯವನ್ನು ಕೊನೆಗೆ ಜೀವಾತ್ಮನ ಸದ್ವರ್ತನೆ ಸೌಶೀಲ್ಯ ಸುಜ್ಞಾನಗಳ ಫಲವಾಗಿ ಶಿವನೊಡನೆ ಸಮರಸವಾಗಿ ಬೆರೆಯುವುದನ್ನೂ ಸ್ಪಷ್ಟವಾಗಿ ತಿಳಿಸಿದೆ. ಹೃದಯದ ಶಿವಕಲೆಯು ಸತ್ತ್ವಗುಣಯೋಗದಿಂದ ಈಶ್ವರನೆನಿಸಿದ್ದರೂ ಅದು ವಾಸ್ತವವಾಗಿ ನಿರಾಕಾರಪರಶಿವನೇ ಆಗಿರುವುದು.

ದಾಸಗುಪ್ತನು ಜೀವರ ವಾಸ್ತವ ಹಾಗೂ ಸಹಜ ಸ್ಥಿತಿಗಳನ್ನು ಹೀಗೆ ತಿಳಿಸಿದ್ದಾನೆ. ಜೀವರು ವಾಸ್ತವವಾಗಿ ಪರಮಾತ್ಮಸ್ವರೂಪರೇ ಆಗಿರುವರು. ಆದರೂ ಸಹಜವಾಗಿ ಅಶುದ್ಧರಾಗಿದ್ದಾರೆ. ಇದು ಅವರಿಗೆ ಮಾಯಾಸಂಬಂಧದಿಂದ ಉಂಟಾಗಿದೆ. ಜೀವರು ಯಥಾರ್ಥವಾಗಿ ಪರಮಾತ್ಮನಿಂದ ಬೇರೆಯಲ್ಲ. ಕಿಡಿಗಳು ಬೆಂಕಿಯಿಂದ ಉಂಟಾಗಿರು

ವಂತೆ ಜೀವರು ಪರಮಾತ್ಮನ ಅಂಶಗಳಾಗಿದ್ದಾರೆ. ದೇವಾಂಶರಾದ ಈ ಜೀವರು ಪರಮಾತ್ಮನೊಡನೆ ತಾತ್ತ್ವಿಕವಾಗಿ ಒಂದೇ ಆಗಿದ್ದರೂ ಸನಾತನಕಾಲದಿಂದಲೂ ಅಜ್ಞಾನ ಆಶೆ ಕರ್ಮಗಳ ಹಿಡಿತಕ್ಕೆ ಸಿಕ್ಕಿಕೊಂಡಿರುವರು. ಜೀವರಿಗೆ ಸಹಜವಾಗಿ ಈ ಬಗೆಯ ಮಲಗಳಿರುವುದರಿಂದಲೇ ಅವರು ಜನನಮರಣಚಕ್ರದಲ್ಲಿ ಸುತ್ತುತ್ತಿರುವರು. ಹೀಗೆ ವಾಸ್ತವವಾಗಿ ಶಿವನ ಅಂಶವಾಗಿದ್ದರೂ ಜೀವರು ಈ ದೇಹದಲ್ಲಿ ಮಾಯಾಕಾರ್ಯಗಳಾದ ಆಣವಮಲ, ಮಾಯಾಮಲ, ಕಾರ್ಮಿಕಮಲಗಳಿಂದ ಆಚ್ಛಾದಿತರಾಗಿ ತಮ್ಮ ಶಿವಭಾವವನ್ನು ಸಹಜವಾಗಿ ಕಳೆದುಕೊಂಡು ಜೀವಭಾವದಿಂದ ಅಭಿಮಾನಿಸಿ ವ್ಯವಹಾರಗಳನ್ನು ನಡೆಸುತ್ತಿರುವರು. ಇದು ಜೀವನ ಸಹಜ ಮತ್ತು ವಾಸ್ತವ ಸ್ವರೂಪ.

ಪರಶಿವನ ಅಂಶನಾದ ಜೀವನು ವಾಸ್ತವವಾಗಿ ಯಾವ ಸಂಪರ್ಕವೂ ಇಲ್ಲದೆ ಇದ್ದರೆ ಶುದ್ಧನೆನಿಸುವನು. ಪರಶಿವನಂತೆಯೇ ಜೀವನೂ ನಿರ್ಮಲನೂ ನಿತ್ಯನೂ ಶಾಂತನೂ ನಿರಂಜನನೂ ಆಗಿಯೇ ಇರುವನು. ಇಂತಹ ಶುದ್ಧ ಜೀವನಿಗೆ ಆಣವ ಮಲದ ಸಂಪರ್ಕದಿಂದ ಅಭಿಮಾನದುಃಖಗಳು ಒದಗಿರುವುವು. ಆದರೂ ವಾಸ್ತವವಾಗಿ ಅವನು ಶಿವಾಂಶನಾದುದರಿಂದಲೇ ಮುಕ್ತಿದೆಶೆಯಲ್ಲಿ ಶಿವನೊಡನೆ ಸಮರಸವಾಗಿ ಐಕ್ಯ ಹೊಂದಲು ಅವಕಾಶವಿರುವುದು. ಜೀವನು ಶಿವನ ಅವಯವವಾಗಿರದೇ ಇದ್ದಿದ್ದರೆ ಮುಕ್ತಿಯಲ್ಲಿ ಇಬ್ಬರಿಗೂ ಐಕ್ಯವು ಹೇಗೆ ಸಂಭವಿಸುತ್ತಿತ್ತು? ಪರಸ್ಪರರಿಗೆ ಅತ್ಯಂತ ಭಿನ್ನವಾಗಿರುವ ಎರಡು ವಸ್ತುಗಳಿಗೆ ಐಕ್ಯವು ಎಂದೆಂದಿಗೂ ಸಂಭವಿಸಲಾರದು. ಹಾಲು-ನೀರು ಪರಸ್ಪರವಾಗಿ ಬೆರೆಯುವಂತೆ ತಿಲ-ತಂಡುಲಗಳಿಗೆ ಹೊಂದಿಕೆಯಾಗಲಾರದು. ಹಾಗೆ ಶಿವ-ಜೀವರಿಗೆ ಏಕಜಾತೀಯತೆ ಇರುವುದರಿಂದಲೂ, ಇಬ್ಬರೂ ಒಂದೇ ಸ್ಥಲದವರಾದ್ದರಿಂದಲೂ, ಒಂದೇ ಕಡೆಯಿಂದ ಬಂದವರಾದ್ದರಿಂದಲೂ, ಕೊನೆಗೆ ಒಂದೇ ಕಡೆ ಸಮರಸವಾಗಿ ಬೆರೆಯುವುದಕ್ಕೂ ಸದವಕಾಶವಿರುತ್ತದೆ.

ಈ ದರ್ಶನವು ಜೀವಶಿವರಿಗೆ ಮುಕ್ತಿಯಲ್ಲಿ ಸರಿತ್ಸಮುದ್ರದೃಷ್ಟಾಂತವನ್ನು ಕೊಡುತ್ತದೆ; ಅಲ್ಲಿ ಅವಯವಕ್ಕೆ ಅವಯವಿಯಲ್ಲಿ ಐಕ್ಯವನ್ನು ನಾವು ಕಾಣುತ್ತೇವೆ. ಸಮುದ್ರ ಜಲವೇ ಸೂರ್ಯಕಿರಣಗಳಿಂದ ಆಕರ್ಷಿತವಾಗಿ ಮೇಲೆ ಮೇಘವಾಗುವುದು. ಗಾಳಿಯ ಹೊಡೆತದಿಂದ ಮೇಘವು ಚದುರಿ ಅದರಿಂದ ನೀರು ಸುರಿದು ಒಂದೆಡೆ ಕಲೆತು ನದಿ ಎನಿಸುತ್ತದೆ. ಆದ್ದರಿಂದ ನದಿಯು ಸಮುದ್ರದ ಅವಯವವೇ ಆಗಿದೆ. ಆದರೂ ನದಿಯ ಅವಸ್ಥೆಯಲ್ಲಿ ಅದು ಸಮುದ್ರದಿಂದ ಭಿನ್ನವೇ ಆಗಿದೆ. ಸಮುದ್ರದಿಂದಲೇ ನದಿ ಹುಟ್ಟಿ ಹರಿಯುತ್ತಿದ್ದರೂ, ನದಿಯನ್ನು ಯಾರೂ ಸಮುದ್ರವೆಂದು ಕರೆಯುವುದಿಲ್ಲ. ಅದರೆ ನದಿಯೆಂದೇ ಎಲ್ಲರೂ ಕರೆಯುತ್ತಾರೆ. ಅದೇ ಸಮುದ್ರಕ್ಕೆ ಸೇರಿದ ಮೇಲೆ ಅದನ್ನು ನದಿಯೆಂದು ಕರೆಯದೆ, ಸಮುದ್ರವೆಂದೇ ಎಲ್ಲರೂ ಕರೆಯುತ್ತಾರೆ. ಹಾಗೆ ಜೀವನು ಶಿವನ ಅವಯವವಾಗಿ ಅವನಿಂದಲೇ ಬಂದಿದ್ದರೂ ಜೀವನನ್ನು ಶಿವನೆಂದು ಯಾರೂ ಕರೆಯಲಾರರು. ಶಿವನಿಂದ ಪೂರ್ಣವಾಗಿ ಬೇರೆಯಾಗಿರುವುದರಿಂದಲೂ, ತದ್ವಿರುದ್ಧ ಧರ್ಮಗಳೇ ಇರುವುದರಿಂದಲೂ ಅವನನ್ನು ಸಹಜವಾಗಿ ಜೀವನೆಂದೇ ಎಲ್ಲರೂ ಕರೆಯುತ್ತಾರೆ. ಅವನು ಮುಂದೆ ಶಿವನೇ ಆದಾಗ ಅವನನ್ನು ಜೀವನೆಂದು ಕರೆಯದೆ, ಶಿವಯೋಗಿ ಅಥವಾ ನಿರಂಜನ ಜಂಗಮ ಎಂದು ಕರೆಯುತ್ತಾರೆ. ಮುಕ್ತಜೀವನು ತನ್ನ ಜೀವಭಾವವನ್ನು ಕಳೆದುಕೊಂಡು ತನ್ನ ಶಕ್ತಿವಿಕಾಸದಿಂದ ಶಿವನೇ ಆದಾಗ ಅವನಿಗೆ ಶಿವಯೋಗಿ ಎಂಬ ಹೆಸರು ಸಮುಚಿತವಾಗಿ ಅನ್ವಯಿಸುತ್ತದೆ. ಹೀಗೆಯೇ ಸರಿತ್ಸಮುದ್ರ ದೃಷ್ಟಾಂತದಿಂದಲೂ, ಅಗ್ನಿವಿಸ್ಫುಲಿಂಗ ದೃಷ್ಟಾಂತದಿಂದಲೂ ಜೀವಶಿವರಿಗೆ ಅಂಶಾಂಶಿಭಾವವೇ ಯುಕ್ತವಾಗಿ ಹೊಂದುವುದೆಂದು ಈ ದರ್ಶನವು ಸಾಧಿಸುತ್ತದೆ. ಅಗ್ನಿಸ್ಥಾನದಲ್ಲಿರುವವನು ಪರಶಿವನು. ಕಿಡಿಗಳ ಸ್ಥಾನದಲ್ಲಿರುವವರು ಜೀವರು. ಬೃಹಜ್ಜ್ವಾಲೆಯಿಂದ ಕಿಡಿಗಳು ಉದುರುವಂತೆ, ಜೀವರು ಮಾಯಾಸ್ವಭಾವದಿಂದ ಶಿವನಿಂದ ಹೊರ ಬಿದ್ದಿರುವರು.

ಈ ದರ್ಶನದಲ್ಲಿ ಮಾಯೆ ಪರಮಾತ್ಮನಿಷ್ಠವಾದ ಶಕ್ತಿ ಎನಿಸಿದೆ. ಇದೇ ಪರಮಾತ್ಮನ ಇಚ್ಛೆಯಂತೆ ಅವನಿಂದಲೇ ಹೊರಗೆ ಬಂದು ಅವನನ್ನು ವಿನೋದಪಡಿಸಿ ತನ್ನ ಕಾರ್ಯ ಮುಗಿದೊಡನೆ ಅವನಲ್ಲಿಯೇ ಸಹಜವಾಗಿ ಸೇರುವಂತಹುದು. ಅದೇ ಮೂಲದಲ್ಲಿ ಬೆರೆಯುವಾಗ ಅದರಿಂದಾಗಿರುವ ಜೀವರೂ ಸಹ ತನ್ನ ಮೂಲ ಪ್ರಕಾಶದಲ್ಲಿ ಬೆರೆಯಲೇಬೇಕು. ಅಲ್ಲಿಗೆ ಜೀವಭಾವವು ಸ್ವಾಭಾವಿಕವೆಂದೂ ಮಾಯಾಶಕ್ತಿಯು ವಿಮರ್ಶಶಕ್ತಿ ಎನಿಸಿದ ಚಿತ್ ಶಕ್ತಿಯ ಪರಿಣಾಮವೆಂದೂ ಸ್ಪಷ್ಟವಾಯಿತು. ಅದ್ವೈತದರ್ಶನದಲ್ಲಿ ಮಾಯೆ ಮೂಲಬ್ರಹ್ಮದಲ್ಲಿ ಕಲ್ಪಿತವಾದ ಅವಿದ್ಯೆ ಎಂಬ ದೋಷವೆನಿಸಿದೆ. ಈ ಮಾಯೆ ಎಂಬ ದೋಷದಲ್ಲಿ ಶುದ್ಧಚೈತನ್ಯವು ಪ್ರತಿಬಿಂಬಿಸಿ ಈಶ್ವರನೆಂದೂ. ಅವಿದ್ಯೆಯಲ್ಲಿ ಪ್ರತಿಬಿಂಬಿಸಿ ಜೀವನೆಂದೂ ಕರೆಯಲ್ಪಡುವುದು. ಅಲ್ಲಿಗೆ ಜೀವಭಾವವೂ ಈಶ್ವರಭಾವವೂ ಕಾಲ್ಪನಿಕವೆಂದು ಅದ್ವೈತದರ್ಶನವು ಬೋಧಿಸುತ್ತದೆ. ಜಗದ್ವ್ಯಾಪಾರ ನಿರ್ವಾಹಕ್ಕಾಗಿ ಈಶ್ವರನನ್ನೂ, ಲೋಕವ್ಯವಹಾರ

ನಿರ್ವಾಹಕ್ಕಾಗಿ ಜೀವನನ್ನು, ಮಾಯೆ ಅವಿದ್ಯೆಗಳೆಂಬ ದೋಷಗಳಿಂದ ಅಲ್ಲಿ ಕಲ್ಪಿಸಲಾಗಿದೆ. ನದೀದಡದಲ್ಲಿ ಮರದ ಕೊಂಬೆಯೊಳಗೆ ರಸಭರಿತವಾದ ಪಕ್ವಫಲಗಳು ಇದ್ದು ನೀರಿನಲ್ಲಿ ಅವುಗಳ ನೆರಳು ಹಣ್ಣುಗಳಂತೆಯೇ ಕಾಣು ತ್ತಿರುವುವು. ಈ ಪ್ರತಿಬಿಂಬಿತವಾದ ಫಲಗಳನ್ನು ನೋಡಿ ಮೋಹಿಸಿದರೆ ಅವುಗಳ ರಸಾಸ್ವಾದನೆ ನಮಗೆ ದೊರೆಯ ಲಾರದು. ಆದ್ದರಿಂದ ಕಲ್ಪಿತೇಶ್ವರನೂ ಕಲ್ಪಿತಜೀವನೂ ಮಾಯೆ ಅವಿದ್ಯೆ ಎಂಬ ದೋಷಗಳೂ ಜ್ಞಾನದಿಂದಲೇ ತೊಲಗಬೇಕೆಂದು ಅದ್ವೈತದರ್ಶನವು ತಿಳಿಸುತ್ತದೆ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಾದರೋ ಮಾಯೆ ಕಲ್ಪಿತವೆನಿಸದೆ ಪರಶಿವನ ಸನಾತನಶಕ್ತಿ ಎನಿಸಿರುವುದು. ಮಯೂರಾಂಡರಸನ್ಯಾಯದಂತೆ ನವಿಲಿನ ಮೊಟ್ಟೆಯೊಳಗಿನ ರಸದಲ್ಲಿ ಅದರ ಕೈಕಾಲು ಮೊದಲಾದ ಎಲ್ಲಾ ಅವಯವಗಳೂ ಸೂಕ್ಷ್ಮವಾಗಿ ಅಡಗಿರುವಂತೆ, ಮಾಯೆಯಲ್ಲಿ ಭಾವಿ ಪ್ರಪಂಚವೆಲ್ಲವೂ ಸೂಕ್ಷ್ಮವಾಗಿ ಅಡಗಿದ್ದು ಪರಶಿವನ ಇಚ್ಛೆಯಂತೆ ಹೊರಗೆ ಬರುವುದು. ಈ ಮಾಯಾಶಕ್ತಿ ಅವನಿಂದಲೇ ಹೊರಬಿದ್ದು ಅವನು ವಹಿಸಿದ ಕಾರ್ಯವನ್ನು ಅವನ ಇಚ್ಛೆಯಂತೆ ನಿರ್ವಹಿಸಿ, ಅವನಲ್ಲಿಯೇ ಸೇರುವ ಪ್ರಯುಕ್ತ ಇಲ್ಲಿ ಕಲ್ಪಿತವಾದುದಲ್ಲ ; ಆದರೆ ಪರಶಿವನ ಸಹಜವಾದ ಶಕ್ತಿ. ಈ ಶಕ್ತಿಯ ಸಂಬಂಧದಿಂದಾಗಿರುವ ಜೀವರೂ ಮಿಥ್ಯಾಕಲ್ಪಿತರೆನಿಸದೆ ಸ್ವಾಭಾವಿಕವಾಗಿ ಭೇದದೃಷ್ಟಿಯುಳ್ಳವರಾಗಿರುವ ಶಿವಾಂಶರಾದ ಜೀವರಿಗೆ ಶಿವ ಸಂಬಂಧವನ್ನು ಶಿವಜ್ಞಾನವನ್ನು ಮರೆಸುವುದರಿಂದ ಮಾಯೆಗೆ ಈ ದರ್ಶನದಲ್ಲಿಯೂ ಅವಿದ್ಯೆ ಎಂಬ ಹೆಸರು ಬಂದಿದೆ. ಇದು ಸನಾತನ ಕಾಲದಿಂದಲೂ ಇದ್ದು ತನ್ನ ಕಾರ್ಯಭಾರವನ್ನು ನಡೆಸುತ್ತಲಿರುವುದರಿಂದ ಇದಕ್ಕೆ ಅನಾದಿ ಎಂದೂ ಕರೆಯಲಾಗಿದೆ. ಹೀಗೆ ಜೀವರು ಲೋಕವ್ಯವಹಾರಗಳನ್ನು ನಡೆಸುತ್ತ, ದೇಹೇಂದ್ರಿಯಗಳೊಡನೆ ಅಭಿಮಾನಿಸಿ ಪ್ರವರ್ತಿಸುತ್ತ ಪರಶಿವನನ್ನು ಮರೆತು ತಾವೇ ಸ್ವತಂತ್ರರೆಂದು ಭಾವಿಸಿರುವರು. ಅಲ್ಲಿಗೆ ಜೀವರಿಗೆ ಜೀವಭಾವವು ಯಾದೃಚ್ಛಿಕವಲ್ಲ ; ಆಗಂತುಕವಲ್ಲ ; ಕಾಲ್ಪನಿಕವಲ್ಲ ; ಔಪಾಧಿಕವೂ ಅಲ್ಲ ; ಆದರೆ ಸ್ವಾಭಾವಿಕವೆನಿಸಿರುವುದು. ಹೀಗೆ ಸಂಸಾರದೆಶೆಯಲ್ಲಿ ಜೀವರಿಗೆ ಪರಶಿವನಿಂದ ಭೇದವು ಸಹಜವಾಗಿದ್ದರೂ ಅವನ ನಿರಂತರ ಧ್ಯಾನ ಧಾರಣರೂಪವಾದ ಉಪಾಸನದಿಂದ ಜೀವಭಾವವು ತೊಲಗಿ ಅವನ ವಾಸ್ತವವಾದ ಶಿವಭಾವವು ದೊರಕುವುದು. ಇದು ಎಲ್ಲರ ಅನು ಭವಕ್ಕೂ ಹೊಂದಿಕೆಯಾಗಲಿದೆ. ಹಾಗೆಯೇ ಶ್ರುತಿಯುಕ್ತಿಗಳಿಗೂ ಸಮನ್ವಯವಾಗುತ್ತದೆ.

ಈ ದರ್ಶನದಲ್ಲಿ ಮಾಯೆ ಯಥಾರ್ಥವಾದ ವಸ್ತುವೆನಿಸಿ ಜಗತ್ತಿಗೆ ಕಾರಣವಾದ ಸ್ವತಂತ್ರ ದ್ರವ್ಯವಾಗಿದೆ. ಅದರ ಕಾರ್ಯಗಳಿಂದಲೇ ಜೀವನಿಗೆ ಬಂಧನ ಒದಗಿದೆ. ಆದ್ದರಿಂದಲೇ ಮಾಯೆ ಬಂಧನದ ಮೂಲಕಾರಣವೆನಿಸಿದೆ. ಅದ್ವೈತಿಗಳು ಹೇಳುವ ಹಾಗೆ ಇದು ಕಲ್ಪನೆ ಅಥವಾ ಭ್ರಮವಲ್ಲ. ಆದರೆ ಇದು ಜಗತ್ತಿಗೆ ಉಪಾದಾನಕಾರಣ. ಇಲ್ಲಿ ಬ್ರಹ್ಮಶಕ್ತಿಯೇ ಮಲಮಾಯಾಕರ್ಮಗಳೆನಿಸಿ ಜೀವರನ್ನು ಬಂಧಿಸುತ್ತಲಿದೆ. ಹೀಗೆ ಮಾಯೆ ವಿಚಿತ್ರಕಾರ್ಯ ಗಳನ್ನು ನಿರ್ವಹಿಸುವ ಪಾರಮೇಶ್ವರೀಶಕ್ತಿಯೇ ಆಗಿದ್ದರೂ ಸಹಜವಾಗಿ ಜೀವರನ್ನು ಮೋಹಗೊಳಿಸುತ್ತಲಿರುವುದು. ಜೀವನಿಗೆ ಸ್ವಪ್ರಕಾಶವನ್ನು ಮುಚ್ಚಿ 'ನಾನು ಶಿವನಲ್ಲ ; ಆದರೆ ಅವನಿಂದ ಪೂರ್ಣಭಿನ್ನನಿರುವೆ' ಎಂಬ ಭಾವನೆಯನ್ನು ಮಾಯೆ ಸಹಜವಾಗಿ ಹುಟ್ಟಿಸಿ ವಿಚಿತ್ರ ಕಾರ್ಯಗಳನ್ನು ನಡೆಸುತ್ತಲಿರುವುದು. ಆದ್ದರಿಂದಲೇ 'ಮಮ ಮಾಯಾ ದುರತ್ಯಯಾ' ಎಂದು ಗೀತೆಯಲ್ಲಿ ಹೇಳಿದ್ದು ಸ್ಪಷ್ಟವಾಗಿದೆ. ಮಾಯೆ ಪರಶಿವನ ಸನಾತನಶಕ್ತಿಯಾದುದರಿಂದ ಅದರ ಹಿಡಿತದಿಂದ ಜೀವನು ಸುಲಭವಾಗಿ ಬಿಡಿಸಿಕೊಳ್ಳಲಾರನು. ಜೀವನು ತನ್ನ ವಾಸ್ತವವಾದ ಶಿವಸ್ವರೂಪವನ್ನು ತಿಳಿಯುವುದರಿಂದಲೇ ಈ ಮಾಯಾಶಕ್ತಿಯಿಂದ ಬಿಡುಗಡೆ ಹೊಂದಲಾರನು. ಹೀಗೆ ಅದ್ವೈತದರ್ಶನದಂತೆ ಜೀವನಿಗೆ ಕೇವಲಜ್ಞಾನದಿಂದಲೇ ಬಿಡುಗಡೆಯಾಗಲಾರದು. ಆದ್ದರಿಂದ ಮಾಯಾಶಕ್ತಿಗೆ ಪ್ರತಿಸ್ಪರ್ಧಿಯಾದ ಭಕ್ತಿಯ ಪ್ರಭಾವ ದಿಂದ ಜೀವನು ತನ್ನ ವಾಸ್ತವಸ್ವರೂಪದ ಅರಿವಿನಿಂದಲೂ, ಭಕ್ತಿಯ ಅನುಷ್ಠಾನದಿಂದಲೂ ಶಿವನ ಅನುಗ್ರಹವನ್ನು ಪಡೆದು ಆಮೂಲಕವಾಗಿ ಮಾಯೆಯ ಹಿಡಿತದಿಂದ ತಪ್ಪಿಸಿಕೊಳ್ಳಬೇಕಾಗಿದೆ. ಭಕ್ತಿಯೂ ಸಹ ಪರಶಿವನ ಶಕ್ತಿಯ ಪರಿಣಾಮವೇ ಆಗಿದೆ. ಶಿವಾನುಗ್ರಹದಿಂದಲೇ ಶುದ್ಧ ಜೀವನಿಗೆ ಈ ಭಕ್ತಿ ದೊರೆಯಲಿದೆ. ಭಕ್ತಿಯನ್ನು 'ಶಿವಪ್ರಸಾದ ಜನನಿ' ಎಂದು ಮಾಯಿದೇವರು ಹೇಳಿದ್ದಾರೆ. ಇದರ ಮೂಲಕವೇ ಜೀವನು ತನ್ನ ಸಹಜವಾದ ಜೀವಭಾವವನ್ನು ಕಳೆದುಕೊಂಡು ವಾಸ್ತವವಾದ ಶಿವಭಾವವನ್ನು ಹೊಂದಬೇಕಾಗಿದೆ. ಇದನ್ನು ಗೀತೆಯಲ್ಲಿ ಕೃಷ್ಣನು ಸ್ಪಷ್ಟವಾಗಿ ಹೇಳಿರುವನು. 'ಮಾಮೇವ ಯೇ ಪ್ರಪದ್ಯಂತೆ ಮಾಯಾಮೇತಾಂ ತರಂತಿ ತೇ' ಯಾರು ಪರಶಿವನನ್ನೇ ನಿರಂತರ ಧ್ಯಾನ ಧಾರಣ ಅರ್ಚನಗಳಿಂದ ಆಶ್ರಯಿಸುವರೋ ಅವರು ಮಾಯೆಯಿಂದ ಬಿಡುಗಡೆ ಹೊಂದುವರು. ಹೀಗೆ ಮಾಯಾಸಂಬಂಧವು ಜೀವರಿಗೆ ಅಗಾಧವೂ ಅಸಾಧ್ಯವೂ ಆದ ಅಂಶವಾಗಿರುವುದು. ಇದರ ಬಿಡುಗಡೆಯ ವಿಚಾರ ವನ್ನು ದರ್ಶನದ ಸಂಪ್ರದಾಯಭಾಗದಲ್ಲಿ ನೋಡಬಹುದು. ಹೀಗೆ ಜೀವನಲ್ಲಿ ಜೀವಭಾವವು ಈ ದರ್ಶನದಂತೆ

ಸ್ವಾಭಾವಿಕವೂ ಸತ್ಯವೂ ಆಗಿದ್ದರೂ ಶಿವೋಪಾಸನದ ನೈರಂತರ್ಯದಿಂದ ಮಾಯಾಪಾಶದ ಪೂರ್ಣನಿವೃತ್ತಿಯಾಗಿ ಜೀವಭಾವವಳಿದು ಶಿವಭಾವವು ಅನುಭವಕ್ಕೆ ಬರುವುದು. ಶಿವಾಗಮಗಳು ಈ ವಿಷಯವನ್ನು ಸ್ಪಷ್ಟಪಡಿಸಿವೆ.

ಜೀವಃ ಸತ್ಯಂ ಜಗತ್ಸತ್ಯಂ ಶಿವಃ ಸತ್ಯಂ ಸ್ವಭಾವತಃ ।
ತಯೋರಭೇದಃ ಸತ್ಯಂ ವಾ ಕ್ರಿಮಿಭ್ರಮರಯೋರಿವ ॥
ಮಾನವಃ ಶಿವಯೋಗೇನ ಶಿವೋ ಭವತಿ ನಾನ್ಯಥಾ ।
ಭ್ರಮದ್ಭ್ರಮರಚಿಂತಾಯಾಂ ಕೀಟೋಽಪಿ ಭ್ರಮರಾಯತೇ ॥

ಜೀವನ ಸತ್ಯತ್ವವನ್ನೂ, ಹಾಗೆಯೇ ಅದರ ನಿವೃತ್ತಿಯನ್ನೂ, ವಾಸ್ತವಿಕ ಶಿವಭಾವಪ್ರಾಪ್ತಿಯನ್ನೂ ಈ ರೀತಿಯಾಗಿ ಆಗಮಗಳು ತಿಳಿಸಿವೆ. ಇದರಿಂದ ಜೀವ ಜಗತ್ತು ಶಿವ ಇವರ ಸತ್ಯತೆಯೂ, ಇವರ ಅಭೇದದ ಸತ್ಯತೆಯೂ ನಮಗೆ ಸಹಜವಾಗಿ ತಿಳಿದುಬರುತ್ತದೆ. ಗುಂಗೆ ಹುಳವು ಭ್ರಮರದ ರೂಪವನ್ನು ನೋಡಿ ರಸವನ್ನು ಕುಡಿದು ಶಬ್ದವನ್ನು ಕೇಳಿ. ಚರ್ಮಕ್ಕೆ ಮುಟ್ಟಿಸಿಕೊಂಡು, ಅದರ ವಾಸನೆಯನ್ನು ಮೂಸಿ ಪಂಚೇಂದ್ರಿಯಗಳಿಂದಲೂ ಭ್ರಮರದ ಸಂಪರ್ಕ ವನ್ನು ಹೊಂದಿ ಕೊನೆಗೆ ಹೇಗೆ ಭ್ರಮರವೇ ಆಗುವುದೋ, ಹಾಗೆ ಜೀವನು ಶಿವನ ಧ್ಯಾನಧಾರಣ ಮೊದಲಾದ ನಿತ್ಯ ಸಂಪರ್ಕದಿಂದ ಶಿವನೇ ಆಗುವನು. ಶಿವಯೋಗವಲ್ಲದೆ ಬೇರೆ ಯಾವ ರೀತಿಯಿಂದಲೂ ಜೀವನಿಗೆ ಜೀವಭಾವ ತೊಲಗ ಲಾರದು. ಜೀವನು ಶಿವನ ಅಂಶವೇ ಆದುದರಿಂದ ಶಿವನ ಚಿಂತನ ಸ್ಮರಣ ಧ್ಯಾನಧಾರಣಗಳಿಂದ ಶಿವನಲ್ಲದೆ ಬೇರೆ ಏನೂ ಆಗಲು ಸಾಧ್ಯವೇ ಇಲ್ಲ. ಏಕೆಂದರೆ ಮನಸ್ಸು ಯಾವ ವಸ್ತುವಿನಲ್ಲಿ ತನ್ನ ವಿಶಿಷ್ಟಶಕ್ತಿಯನ್ನು ಕೇಂದ್ರೀಕರಿಸು ವುದೋ ಅದು ಅದರ ಆಕಾರವರ್ತನೆಗಳನ್ನೇ ಹೊಂದುವುದು ಸಹಜ. ಜೀವನು ನಿತ್ಯಾರ್ಚನೆಯಲ್ಲಿ ನಿರತನಾಗಿ ಸಕಲ ವ್ಯವಹಾರಗಳನ್ನು ಶಿವನ ಸೇವೆ ಎಂದು ಮಾಡತೊಡಗಿದರೆ ಮನಸ್ಸು ನಿಯತವಾಗಿ ಶಿವನ ಸ್ಮರಣದಲ್ಲಿಯೇ ಲೀನ ವಾಗುವುದು. ಈ ಬಗೆಯ ಶಿವಯಜ್ಞದಿಂದಲೇ ಮಾನವನು ಶಿವನಾಗಬೇಕೆಂದು ಈ ದರ್ಶನವು ಸ್ಪಷ್ಟಪಡಿಸಿದೆ.

ಇನ್ನು ಜಗತ್ಸ್ವರೂಪವನ್ನು ಈ ದರ್ಶನವು ಹೇಗೆ ತಿಳಿಸಿದೆ ಎಂಬುದನ್ನು ಪರಿಶೀಲಿಸೋಣ. ಈ ದರ್ಶನದ ಪ್ರಕಾರ ನಿರಾಕಾರಪರಶಿವನೇ ಜಗತ್ತಾಗಿ ಪರಿಣಮಿಸಿರುವನು. ಆದರೂ ಅವನಲ್ಲಿ ವಿಕಾರದೋಷಗಳಿಗೆ ಅವಕಾಶವಿಲ್ಲ ವೆಂಬುದನ್ನು ಈ ದರ್ಶನವು ಸುವರ್ಣಕುಂಡಲ, ಅಹಿಕುಂಡಲ ಮೊದಲಾದ ಅನೇಕ ದೃಷ್ಟಾಂತಗಳಿಂದ ಸ್ಪಷ್ಟಪಡಿಸಿದೆ. ಬಂಗಾರ ಆಭರಣವಾಗಿರುವಾಗಲೂ ಬಂಗಾರವೇ ಆಗಿರುತ್ತದೆ. ಆದರಿಂದ ಅನೇಕ ಒಡವೆಗಳಾಗಿದ್ದರೂ ಅದರ ಸುವರ್ಣತ್ವಕ್ಕೆ ಭಂಗಬರುವುದಿಲ್ಲ. ಹಾಗೇ ಪರಶಿವನು ಜಗತ್ತಾಗಿ ಪರಿಣಮಿಸಿದ್ದರೂ. ಜಗತ್ತಿನ ಪ್ರತಿಯೊಂದು ವಸ್ತುವಿ ನಲ್ಲಿ ಸದ್ರೂಪದಿಂದ ನೆಲೆಸಿದ್ದರೂ, ಅದರಿಂದ ಆಯಾ ವಸ್ತುಗಳ ವಿಕಾರವು ಎಂದಿಗೂ ಅವನಿಗೆ ಅಂಟುವುದಿಲ್ಲ. ಸಿದ್ಧಾಂತಶಿಖಾಮಣಿಯು ಶಿವನಿಂದ ಉತ್ಪನ್ನವಾದ ಜಗತ್ತು ಶಿವನಿಂದ ಬೇರೆಯಾಗಲಾರದು ಎಂದು ತಿಳಿಸಿದೆ. ಹೀಗೆ ಪರಶಿವನೇ ಅಪರಿಮಿತಶಕ್ತಿಯೊಡಗೂಡಿ ಜಗದ್ರೂಪದಿಂದ ಪರಿಣಮಿಸಿರುವನೆಂಬುದೇ ಈ ದರ್ಶನದ ಸಿದ್ಧಾಂತ. 'ಶಕ್ತಯೋಽಸ್ಯ ಜಗತ್ಸರ್ವಂ" "ಸ್ವಶಕ್ತಿಪ್ರಚಯೋಽಸ್ಯ ವಿಶ್ವಂ" "ಯಸ್ಯೈಕಶಕ್ತಿಶಕಲೇ ಸಕಲಃ ಸಮಾಪ್ತಃ" ಅವನ ಶಕ್ತಿಯ ರಾಶಿಯೇ ಈ ಜಗತ್ತು. ಅನೇಕ ಬಗೆಯ ಶಕ್ತಿಗಳ ವ್ಯಾಪ್ತಿಯೇ ಈ ಜಗತ್ತು. ಅವನ ಶಕ್ತಿಯ ಅತ್ಯಲ್ಪಾಂಶ ದಲ್ಲಿ ಬ್ರಹ್ಮಾಂಡಗಳೆಲ್ಲವೂ ಅಡಗಿವೆ—ಎಂದು ಅಭಿಜ್ಞರು ಹೇಳುತ್ತಾರೆ. ಹೀಗೆ ಪರಶಿವನು ತನ್ನ ಇಚ್ಛಾಜ್ಞಾನಕ್ರಿಯಾ ಶಕ್ತಿಗಳ ಪ್ರಭಾವದಿಂದ ಜಗದಾಕಾರವಾಗಿ ಪರಿಣಮಿಸಿದ್ದಾನೆ. ಅವನು ನಿರವಯವನಾದರೂ ಹೀಗೆ ಜಗದಾಕಾರವಾಗಿ ಪರಿಣಮಿಸುವುದರಲ್ಲಿ ಯಾವ ಅನೌಚಿತ್ಯವೂ ಇರಲಾರದು. ಅನೇಕ ಶಕ್ತಿಗಳ ಸಹಕಾರದಿಂದ ಅನೇಕ ಬಗೆಯಾಗಿ ಮಾರ್ಪಡುವ ಸಾಮರ್ಥ್ಯ ಅವನಲ್ಲಿ ಸಹಜವಾಗಿದೆ. ಅವನಲ್ಲಿ ಎರಡು ಬಗೆಯ ಶಕ್ತಿಗಳಿವೆ. ಒಂದರಿಂದ ಅವನು ಭೋಜ್ಯ ವಸ್ತುಗಳಾಗಿಯೂ, ಮತ್ತೊಂದರಿಂದ ಭೋಕ್ತೃಜೀವರಾಗಿಯೂ ಪರಿಣಮಿಸಿದ್ದಾನೆ. ಹೀಗೆ ಅವನಲ್ಲಿ ಅನೇಕ ಬದಲಾವಣೆಗಳಾಗಿದ್ದರೂ ಅವನು ತನ್ನ ಪರಿಶುದ್ಧತೆ, ಪರಿಪೂರ್ಣತೆ, ಸ್ವಾತಂತ್ರ್ಯಗಳಿಂದ ಯಾವ ವಿಕಾರವೂ ಇಲ್ಲದೆ ಸ್ವಸ್ಥನಾಗಿಯೇ ಇರುವನು.

ಪರಶಿವನ ಚೈತನ್ಯವು ಅತ್ಯಂತ ತಮೋಗುಣದಿಂದ ಆವರಿಸಲ್ಪಟ್ಟು ಭೋಜ್ಯವಸ್ತುವೆನಿಸಿದೆ ಎಂದು ಈ ದರ್ಶನವು ತಿಳಿಸುತ್ತದೆ. ಅಲ್ಲಿಗೆ ಭೋಜ್ಯವಸ್ತುಗಳೆಲ್ಲದರಲ್ಲೂ ಪರಶಿವನು ತಮೋಗುಣದಿಂದ ಆಚ್ಛಾದಿತನಾಗಿ ಅವ್ಯಕ್ತಸ್ಥಿತಿಯಲ್ಲಿ ಬಹಳ ಸೂಕ್ಷ್ಮವಾಗಿ ನೆಲೆಸಿರುವನೆಂಬುದು ಈ ದರ್ಶನದ ಪ್ರಕಾರ ಸಿದ್ಧವಾಗುತ್ತದೆ. ವಿಜ್ಞಾನಿಗಳು ಹೇಳುವುದೂ ಸಹ ಇದೇಯೆ. ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುವಿನಲ್ಲೂ ಚೈತನ್ಯವು ಕೊಂಚವಾಗಿಯಾದರೂ ಇದ್ದೇ ಇರುತ್ತದೆ ಎಂದು ಅವರು ಹೇಳಿದ್ದಾರೆ. ಎಲ್ಲಾ ವಸ್ತುಗಳಲ್ಲೂ ಜೀವವಿದೆ ಎಂಬುದು ವಿಜ್ಞಾನಿಗಳ ಮತ.

ಇದನ್ನು ಸಾವಿರಾರು ವರ್ಷಗಳ ಹಿಂದೆಯೇ ಶಕ್ತಿವಿಶಿಷ್ಟಾದ್ವೈತದರ್ಶನವು ಮನಮೆಚ್ಚುವಂತೆ ತೋರಿಸಿಕೊಟ್ಟಿದೆ. ಎಲ್ಲಾ ವಸ್ತುಗಳಲ್ಲೂ ಚೇತನಶಕ್ತಿ ಬಹಳ ಸೂಕ್ಷ್ಮವಾಗಿ ನೆಲೆಸಿರುವುದೆಂದು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗೆ ಜಗತ್ಸ್ವರೂಪವನ್ನು ವಿವರಿಸುವಾಗ ಸ್ಪಷ್ಟಪಡಿಸಿದ್ದಾರೆ. ಜಗತ್ತಿನ ಪ್ರತಿಯೊಂದು ಜಡವಸ್ತುವಿನಲ್ಲೂ ನೆಲೆಸಿರುವ ಚೇತನಶಕ್ತಿಯು ತಮೋಗುಣದಿಂದ ತಿರೋಹಿತವಾಗಿರುವುದರಿಂದ ಜನರಿಗೆ ಸುಲಭವಾಗಿ ಅನುಭವಕ್ಕೆ ಬರುತ್ತಿಲ್ಲ. ಅನುಭವಕ್ಕೆ ಬರಲಿ ಅಥವಾ ಬಿಡಲಿ ಚೈತನ್ಯವು ಎಲ್ಲದರಲ್ಲೂ ಇರುವುದು ಮಾತ್ರ ಸಹಜಸಿದ್ಧವಾಗಿದೆ. ಎಲ್ಲಾ ಭೋಜ್ಯ ವಸ್ತುಗಳಲ್ಲೂ ಜೀವವಿರುವುದೆಂದೂ ಶಿವಲಿಂಗಕ್ಕೆ ಅರ್ಪಿಸಲು ಚೇತನಸಂಬಂಧವಿಲ್ಲದಿರುವ ಯಾವ ವಸ್ತುವನ್ನೂ ತಾವು ಕಾಣರೆಂದೂ ಬಸವಣ್ಣನವರು ತಿಳಿಸಿರುವುದು ಅವರ ದರ್ಶನದ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ನಾವು ಶಿವನಿಗೆ ಯಾವ ವಸ್ತುವನ್ನು ಅರ್ಪಿಸಿದರೂ, ಅವನದನ್ನು ಅವನಿಗೆ ಅರ್ಪಿಸಿದಂತಾಗುವುದೇ ಹೊರತು ಸ್ವಂತವಾಗಿ ಏನನ್ನೂ ನಾವು ತಂದೊಪ್ಪಿಸಲಾರೆವು. ಜಗತ್ತಿನ ಎಲ್ಲಾ ವಸ್ತುಗಳೂ ಅವನವೇ ಆಗಿರುವಾಗ ಅವುಗಳಲ್ಲಿ ನಮ್ಮದೆಂಬ ಅಭಿಮಾನ ನಮಗೆ ಒಪ್ಪುವುದಿಲ್ಲ. ಅವನಿಗೆ ಅರ್ಪಿಸಲಿಕ್ಕಾಗಿ ಇವೆಲ್ಲವೂ ನಮ್ಮಲ್ಲಿ ಬಂದಿವೆಯೇ ಹೊರತು ನಾವು ಭೋಗಿಸಿ ಮೆರೆಯಲಿಕ್ಕಾಗಿ ಬಂದಿಲ್ಲ. ಇದನ್ನು ಯುವಕಯುವತಿಯರು ಚೆನ್ನಾಗಿ ಮನಗಾಣಬೇಕೆಂದು ಈ ದರ್ಶನವು ಅಪೇಕ್ಷಿಸುತ್ತದೆ. ಭೋಜ್ಯವಸ್ತುಗಳನ್ನು ಅವನಿಗೆ ಅರ್ಪಿಸದೆ ನಮ್ಮದೆಂಬ ಅಭಿಮಾನದಿಂದ ನಾವೇ ಭೋಗಿಸ ತೊಡಗಿದರೆ ಜೀವ ಇನ್ನೊಂದು ಜೀವವನ್ನು ಕೊಲೆಮಾಡಿದಂತಾಗುತ್ತದೆ. ಇದರಿಂದ ನಮಗೆ ಪಾಪದ ಹೊರೆ ದಿನದಿನಕ್ಕೆ ಹೆಚ್ಚುತ್ತ ಬರುವುದು. ಈ ಜೀವಂತವಾದ ಭೋಜ್ಯವಸ್ತುಗಳನ್ನು ಶಿವನಿಗೆ ಅರ್ಪಿಸಿದರೆ ಅದರಿಂದ ಅವನಿಗೆ ಪಾಪ ಬರುವುದಿಲ್ಲವೆ ? ಅಂದರೆ ಶಿವನ ಭೋಗ ನಿರಭಿಮಾನದ ನೋಟವಷ್ಟೇ. ಆದ್ದರಿಂದ ಅವನಿಗೆ ಯಾವ ಪಾಪವಿಕಾರದೋಷಗಳೂ ಅಂಟುವಂತಿಲ್ಲ. ಅವನೇ ಭೋಜ್ಯವಸ್ತುಗಳಾಗಿದ್ದು ಅವುಗಳಲ್ಲಿ ಅವನೇ ಇರುವುದರಿಂದಲೂ ಅವನ ಲೀಲಾವಿನೋದಕ್ಕಾಗಿಯೇ ಇವೆಲ್ಲವೂ ಸೃಷ್ಟಿಯಾಗಿರುವುದರಿಂದಲೂ ನಾವು ಇವೆಲ್ಲವನ್ನೂ ಅವನಿಗೆ ಭಕ್ತಿಯಿಂದ ಸಮರ್ಪಣಮಾಡಿ ಪ್ರಸಾದಭಾವನೆಯಿಂದ ಇತಿಮಿತಿಗಳೊಡನೆ ವ್ಯವಸ್ಥಿತ ರೀತಿಯಲ್ಲಿ ಭೋಗಿಸುತ್ತ ನಿತ್ಯ ಸುಖಿಗಳಾಗಿ ಬದುಕಬೇಕೆಂದು ಬಸವಣ್ಣನವರು ನಮಗೆ ಎಚ್ಚರಿಕೆ ನೀಡಿರುವರು.

ಜಡವಸ್ತುಗಳಲ್ಲಿ ಚೈತನ್ಯವಿರುವುದೆಂದು ಯಾವ ದರ್ಶನವೂ ಒಪ್ಪಿಲ್ಲ. ಶಕ್ತಿವಿಶಿಷ್ಟಾದ್ವೈತದರ್ಶನ ಒಂದೇ ಈ ರೀತಿಯಾಗಿ ಒಪ್ಪಿರುವುದು. ಇದರ ಪ್ರಕಾರ ಅಕ್ಕಿ, ಗೋಧಿ, ಹಣ್ಣು ಎಲ್ಲದರಲ್ಲೂ ಚೈತನ್ಯವು ಬಹಳ ಗೂಢವಾಗಿ ನೆಲೆಸಿರುವುದು. ವೈಜ್ಞಾನಿಕ ಯುಗದಲ್ಲಿ ಇದು ಬಹಳ ಸಮಂಜಸವೂ ನ್ಯಾಯಬದ್ಧವೂ ಆಗಿರುವುದು. ಗಿಡಮರಗಳ ಬಳಿ ಕೊಡಲಿ ಹಿಡಿದವನೊಬ್ಬನು ಹೋದರೆ, ಅವು ತಮಗೆ ಪ್ರಾಣಾಪಾಯ ಸಂಭವಿಸಿತೆಂದು ನಡುಗುತ್ತವೆ ಎಂದು ವಿಜ್ಞಾನವು ನಿಶ್ಚಯಿಸಿದೆ. ಧಾನ್ಯಗಳಿಗಿಂತ ಗಿಡಮರಗಳಲ್ಲೂ, ಗಿಡಮರಗಳಿಗಿಂತ ಪ್ರಾಣಿಗಳಲ್ಲೂ, ಚೈತನ್ಯವು ವಿಕಾಸಕ್ಕೆ ಉನ್ಮುಖವಾಗಿರುವುದು. ಮಾನವನಲ್ಲಾದರೋ ಚೈತನ್ಯಶಕ್ತಿಯು ವಿಕಾಸವಾಗುವಂತೆ ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿರುತ್ತದೆ. ಹೀಗೆ ಭೋಜ್ಯವಸ್ತುಗಳಿಂದಾವರಿಸಿದ ಈ ಜಗತ್ತೆಲ್ಲವನ್ನು ಶಿವಮಯವೆಂದು ಈ ದರ್ಶನವು ಭಾವಿಸಿದೆ. ಚೈತನ್ಯವು ತಮೋಗುಣದಿಂದ ಅತ್ಯಂತ ತಿರೋಹಿತವಾಗಿದ್ದರೂ, ಸದ್ರೂಪದಿಂದ ಅದು ಎಲ್ಲದರಲ್ಲೂ ನೆಲೆಸಿರುವದೆಂಬುದು ಈ ದರ್ಶನದ ಸಿದ್ಧಾಂತ. 'ಸನ್ ಹೃದಯೇ ಪ್ರಕಾಶಃ' ಎಂದೇ ಶಿವಾಗಮವು ಎಲ್ಲಾ ವಸ್ತುಗಳಲ್ಲೂ ಸದ್ರೂಪದಿಂದ ಶಿವಚೈತನ್ಯವು ನೆಲೆಸಿದ್ದರೂ ಮಾನವನ ಹೃದಯದಲ್ಲಿ ಮಾತ್ರ ಪ್ರಕಾಶಗೊಂಡು ಉತ್ತಮ ಸಾಧನೆಯಿಂದ ಅನುಭವಗೋಚರವಾಗುವುದೆಂದು ತಿಳಿಸಿದೆ. ಗೀತೆಯಲ್ಲೂ 'ಮಯಿ ಸರ್ವಮಿದಂ ಪ್ರೋಕ್ತಂ ಸೂತ್ರೇ ಮಣಿಗಣಾ ಇವ' ಒಂದು ದಾರದಲ್ಲಿ ಸಣ್ಣ ದೊಡ್ಡ ಮಣಿಗಳನ್ನು ಪೋಣಿಸಿರುವಂತೆ ಸದ್ರೂಪವಾದ ಬ್ರಹ್ಮಸೂತ್ರದಲ್ಲಿ ಎಲ್ಲಾ ವಸ್ತುಗಳೂ, ಎಲ್ಲ ಜೀವರೂ ಸಂಬಂಧಿಸಿಯೇ ಇರುವರೆಂದು ಕೃಷ್ಣನು ಸ್ಪಷ್ಟಪಡಿಸಿದ್ದಾನೆ. ಪರಮಾತ್ಮನಿಲ್ಲದ ಯಾವ ವಸ್ತುವೂ ಎಲ್ಲಿಯೂ ಕಾಣದು. 'ಈಶಾವಾಸ್ಯಮಿದಂ ಸರ್ವಂ' ಎಂದು ಶ್ರುತಿಯು ಎಲ್ಲದರಲ್ಲೂ ಪರಮೇಶ್ವರನ ಅಸ್ತಿತ್ವವನ್ನು ಸ್ಪಷ್ಟಪಡಿಸಿದೆ. "ಸ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಂ ಚರಾಚರಂ" (೧೦-೩೯) ಅವನಿಲ್ಲದ ಯಾವ ವಸ್ತುವೂ ಜಗತ್ತಿನಲ್ಲಿ ಪ್ರತ್ಯೇಕವೂ ಸ್ವತಂತ್ರವೂ ಆಗಿ ಬದುಕಲಾರದು ಎಂದು ಪರಮಾತ್ಮನು ತನಗೆ ಎಲ್ಲದರ ಸಂಬಂಧವನ್ನು ಒತ್ತಿಹೇಳಿರುವನು. ಅಲ್ಲಿಗೆ ಪರಮಾತ್ಮನು ಜಗತ್ತಿನ ಎಲ್ಲಾ ವಸ್ತುಗಳಲ್ಲೂ ಅನುವರ್ತಿಸಿಕೊಂಡಿರುವನೆಂಬುದು ಖಚಿತವಾಯಿತು.

ಪರಮಾತ್ಮನು ಸಚ್ಚಿದಾನಂದನಾದ್ದರಿಂದ ಅವನ ಅಂಶನಾದ ಜೀವನಲ್ಲೂ, ಜಗತ್ತಿನ ಎಲ್ಲಾ ವಸ್ತುಗಳಲ್ಲೂ, ಸಚ್ಚಿದಾನಂದಸ್ವರೂಪ ಇರಲೇಬೇಕು. ಆದರೆ ರಜೋಗುಣದ ಸಂಪರ್ಕದಿಂದ ಜೀವನಲ್ಲಿ ಸದಂಶಕ್ಕಿಂತಲೂ ಚಿದಂಶ

ಕಡಿಮೆ, ಚಿದಂಶಕ್ಕಿಂತಲೂ ಆನಂದಾಂಶ ಕಡಿಮೆ. ಹೀಗೆ ಜೀವನ ಶಕ್ತಿಜ್ಞಾನ ಪ್ರಕಾಶಗಳು ಸಹಜವಾಗಿ ಸಂಕೋಚ ಗೊಂಡಿವೆ. ಇದು ರಜೋಗುಣದ ಸಹಜವಾದ ಕಾರ್ಯ. ಭೋಜ್ಯವಸ್ತುಗಳಲ್ಲಿ ಚಿದಂಶವು ತಮೋಗುಣದಿಂದ ಅತ್ಯಂತ ಆಚ್ಛಾದಿತವಾಗಿ ತುಂಬ ಅವ್ಯಕ್ತಸ್ಥಿತಿಯಲ್ಲಿದ್ದು ಸದಂಶ ಒಂದೇ ಪ್ರಕಟವಾಗುತ್ತದೆ. ಆನಂದಾಂಶಕ್ಕಂತೂ ಅಲ್ಲಿ ಅವಕಾಶವೇ ಇರುವುದಿಲ್ಲ. ತಿರೋಧಾನವೇ ತಮೋಗುಣದ ಅಸಾಧಾರಣಕೃತ್ಯವೆನಿಸಿದೆ. ಚಿದಾನಂದಾಂಶಗಳು ಪೂರ್ಣ ವಾಗಿ ಮುಚ್ಚಿಹೋಗಿದ್ದರೂ, ಸದಂಶವು ಕಲ್ಲುಮಣ್ಣು ಮೊದಲಾದ ಎಲ್ಲಾ ವಸ್ತುಗಳಲ್ಲೂ ನೆಲೆಸಿರುವುದರಿಂದ ಜಗತ್ತು ಶಿವಸ್ವರೂಪವೇ ಆಗಿರುವುದು. 'ತತ್ರಲೀನಮಭೂತ್ಪೂರ್ವಂ ಚೇತನಾಚೇತನಂ ಜಗತ್' (೨–೭) ಎಂದು ಸಿದ್ಧಾಂತ ಶಿಖಾಮಣಿಯು ಜೀವರು, ಭೋಜ್ಯವಸ್ತುಗಳು, ಪ್ರಳಯಕಾಲದಲ್ಲಿ ಅವ್ಯಕ್ತಸ್ಥಿತಿಯಲ್ಲಿ ಪರಮಾತ್ಮನೊಳಗೆ ಶಕ್ತಿಯ ಮೂಲಕ ಅಡಗಿದ್ದವೆಂದು ತಿಳಿಸುತ್ತದೆ. ಅಲ್ಲಿಗೆ ಇದೆಲ್ಲವೂ ಪ್ರಳಯದಲ್ಲಿ ವ್ಯಕ್ತಸ್ಥಿತಿಯಿಂದ ಅವ್ಯಕ್ತಸ್ಥಿತಿ ಯನ್ನು ಹೊಂದಿ ಪರಮಾತ್ಮನಲ್ಲಿ ಅಡಗುತ್ತೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಯಾವ ವಸ್ತುವಿಗೂ ಯಾವ ಕಾಲದಲ್ಲೂ ನಾಶವಿಲ್ಲವೆಂದು ಹೇಳಿದಂತಾಯಿತು. ಇದರಿಂದ ಜಗತ್ತು ಸತ್ಯವೆಂಬುದು ಸಿದ್ಧಾಂತವಾಯಿತು. ಈ ಅಂಶವು ಶ್ರೀಕರಭಾಷ್ಯದಲ್ಲೂ ಗೀತೆಯಲ್ಲೂ ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಶ್ರುತಿಯೂ ಸಹ ಇದನ್ನು ವಿಶದ ಪಡಿಸಿದೆ. ಛಾಂದೋಗ್ಯದಲ್ಲಿ ಇದು ಸ್ಪಷ್ಟಪಡುತ್ತದೆ. "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ (೩–೧೪–೧) ಜಗತ್ತಿನಲ್ಲಿರುವ ಸಕಲ ವಸ್ತುಗಳು ಪರಮಾತ್ಮನಿಂದಲೇ ಹೊರಬಂದು ಅವನಲ್ಲಿಯೇ ಲೀನವಾಗುವುದ ರಿಂದಲೂ, ಇಲ್ಲಿಯೂ ಅವನೊಡನೆಯೇ ಬದುಕುತ್ತಿರುವುದರಿಂದಲೂ, ಜಗತ್ತನ್ನು ಶಿವಾತ್ಮಕವೆಂದೇ ತಿಳಿದು ಜೀವನು ಶಾಂತನಾಗಿ ಈ ಜಗತ್ತಿನಲ್ಲಿ ಎಲ್ಲೆಲ್ಲೂ ಶಿವನನ್ನೇ ಕಾಣುತ್ತಿರಬೇಕು, ಇದೇ ಇಲ್ಲಿ ಜೀವನು ಮಾಡಬೇಕಾಗಿರುವ ನಿತ್ಯಾರ್ಚನೆ ಮತ್ತು ಪಡೆಯಬೇಕಾದ ಶಿವದೃಷ್ಟಿ. ಹೀಗೆ ಶ್ರುತಿಯು ಜಗತ್ತನ್ನು ಶಿವಮಯವೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಜಗನ್ಮಿಥ್ಯಾತ್ವವಾದವೂ, ಘಟಪಟಗಳಂತೆ ಜಗದ್ಬ್ರಹ್ಮರಿಗೆ ಭೇದವನ್ನು ಹೇಳಿರುವ ದ್ವೈತ ವಾದವೂ, ಶರೀರಿ ಎನಿಸಿದ ಅಂತರ್ಯಾಮಿ ಪರಮಾತ್ಮನು, ಶರೀರವೆನಿಸಿದ ಜೀವನೊಡನೆ ಕೂಡಿದ್ದರೂ ಭಿನ್ನವೇ ಆಗಿರುವನೆಂದು ಹೇಳುವ ವಿಶಿಷ್ಟಾದ್ವೈತವಾದವೂ ಶ್ರುತಿಗೆ ಸಂಪೂರ್ಣವಾಗಿ ಹೊಂದುವುದಿಲ್ಲ. ಹೀಗೆಯೇ ಜಗದ್ ಬ್ರಹ್ಮಗಳಿಗೆ ರಜ್ಜುಸರ್ಪದಂತೆ ಅಧ್ಯಾಸವಾದವೂ ಅನ್ವಯಿಸುವುದಿಲ್ಲ. ಜಗತ್ತು ಸಾಕ್ಷಾತ್ ಶಿವಸ್ವರೂಪವೇ ಆಗಿದ್ದು ಸತ್ಯವಾಗಿರುವುದೆಂದು ಸಿದ್ಧಾಂತಶಿಖಾಮಣಿಯಲ್ಲಿ ರೇಣುಕಾಚಾರ್ಯರು ದೃಷ್ಟಾಂತಗಳೊಡನೆ ಸಮರ್ಥಿಸಿದ್ದಾರೆ.

> ಯಸ್ಮಾದೇತತ್ಸಮುತ್ಪನ್ನಂ ಮಹಾದೇವಾಚ್ಚರಾಚರಂ ।
> ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ॥ (೧೦–೬೨)
>
> ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ ।
> ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ ॥ (೧೬.೩೧)
>
> ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ ।
> ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಂ ॥ (೬೪)
>
> ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ ।
> ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ ॥ (೬೫)

ಮಣ್ಣಿನಿಂದ ಹುಟ್ಟಿದ ಕೊಡ ಮೊದಲಾದವು ಮಣ್ಣಿನಿಂದ ಹೇಗೆ ಬೇರೆಯಲ್ಲವೋ ಹಾಗೆಯೇ ಶಿವನಿಂದ ಹುಟ್ಟಿರುವ ಜಗತ್ತು ಶಿವನಿಂದ ಬೇರೆಯಾಗಿರುವುದಿಲ್ಲ. ಸಮುದ್ರದಿಂದ ಹುಟ್ಟಿದ ನೊರೆತೆರೆಗಳು, ಸಮುದ್ರಕ್ಕಿಂತ ಹೇಗೆ ಭಿನ್ನವಲ್ಲವೋ, ಹಾಗೆಯೇ ಶಿವನಿಂದ ಉತ್ಪನ್ನವಾದ ಜಗತ್ತು ಶಿವನಿಗಿಂತ ಬೇರೆಯಾಗಿರುವುದಿಲ್ಲ. ತಂತುಗಳಿಂದ ಉತ್ಪನ್ನವಾದ ಪಟವು ಹೇಗೆ ತಂತುಮಯವೇ ಆಗಿರುವುದೋ, ಹಾಗೆಯೇ ಶಿವನಿಂದ ಉತ್ಪನ್ನವಾದ ಜಗತ್ತು ಶಿವ ಸ್ವರೂಪವೇ ಆಗಿರುವುದು. ವೃಕ್ಷವು ಪತ್ರ ಶಾಖೆ ಮೊದಲಾದ ರೂಪದಿಂದ ಹೇಗೆ ಪ್ರಕಾಶಿಸುತ್ತಲಿರುವುದೋ. ಹಾಗೆಯೇ ಶಿವನು ನೆಲ ನೀರು ಬೆಂಕಿ ಗಾಳಿ ಬಯಲು ಹೀಗೆ ಪಂಚಭೂತಗಳಾಗಿ ವಿರಾಜಿಸುತ್ತಲಿರುವನು. ಹೀಗೆ ಶಕ್ತಿವಿಶಿಷ್ಟಾದ್ವೈತದರ್ಶನವು, ಜಗತ್ತು ಶಿವನ ಪರಿಣಾಮವೇ ಆದ್ದರಿಂದ ಸತ್ಯವಾದುದೆಂದು ಪ್ರತಿಪಾದಿಸುತ್ತವೆ.

ಶ್ರೀಪತಿಪಂಡಿತಾರಾಧ್ಯರು 'ಅಪಿಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಂ' (೩–೨–೨೪) 'ಅತೋಽನಂತೇನ ತಥಾಹಿ ಲಿಂಗಂ' (೩–೨–೨೬) ಎಂಬ ಬ್ರಹ್ಮಸೂತ್ರಗಳಲ್ಲಿ ಸೂತ್ರಕಾರರೇ ಜಗತ್ತಿಗೆ ಶಿವಾತ್ಮತ್ವವನ್ನು ಪ್ರತಿಪಾದಿಸಿ

ಶಿವಯೋಗಿಗೆ ಈರೀತಿಯಾಗಿಯೇ ಜಗತ್ತು ಕಾಣುತ್ತಿರುವುದೆಂದು ತಿಳಿಸಿರುವರೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಸೂತ್ರಗಳಿಗೆ ಅವರು ಹೀಗೆ ವಿವರಣಮಾಡಿದ್ದಾರೆ. ಸಂರಾಧನವೆಂದರೆ ಸಮ್ಯಕ್‌ರಾಧನಂ ಅಂದರೆ ಒಳಗೂ ಹೊರಗೂ ಪರಶಿವನ ಲಿಂಗವನ್ನು ನಿರಂತರವೂ ಧರಿಸಿ ಸ್ಮರಣಮಾಡುವಿಕೆ ಅರ್ಚನೆ ಎಂದರ್ಥ. ಅಂದರೆ ಹೃದಯದಲ್ಲಿ ಪ್ರಾಣಲಿಂಗದ ಧ್ಯಾನ, ದೇಹದಲ್ಲಿ ಇಷ್ಟಲಿಂಗದ ಧಾರಣ ಅರ್ಚನ ಹೀಗೆ ಪರಶಿವಲಿಂಗದ ನಿತ್ಯಸಂಪರ್ಕವನ್ನು ಜೀವನು ಪೂರ್ಣವಾಗಿ ಪಡೆದಿರುವುದೇ ಸಂರಾಧನವೆನಿಸುವುದು. ಈ ಬಗೆಯ ಉಪಾಸನಮಹಿಮೆಯಿಂದ ಭಕ್ತರಿಗೆ ಅವರವರ ಭಕ್ತಿವಿಕಾಸಕ್ಕೆ ಅನುಗುಣವಾಗಿ ಸ್ವಪ್ನದಲ್ಲೂ ಜಾಗ್ರದವಸ್ಥೆಯಲ್ಲೂ ನಿರಾಕಾರಪರಶಿವನ ಸಾಕ್ಷಾತ್ಕಾರವಾಗುವುದೆಂದು ಶ್ರುತಿಸ್ಮೃತಿಗಳಿಂದ ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಸೂತ್ರದಲ್ಲಿ ಬಂದಿರುವ ಪ್ರತ್ಯಕ್ಷವೆಂಬುದಕ್ಕೆ ಶ್ರುತಿ ಎಂದೂ ತಿಳಿಯಬೇಕು. ಶ್ರುತಿ ಸ್ವತಂತ್ರವೂ ಪ್ರತ್ಯಕ್ಷವೂ ಆದ ಪ್ರಮಾಣವಾದ್ದರಿಂದ ಅದು ಪ್ರತ್ಯಕ್ಷವೆನಿಸಿದೆ. ಸ್ಮೃತಿಗೆ ಮೂಲಭೂತವಾದ ಶ್ರುತಿಯನ್ನು ಅನುಮಾನದಿಂದ ಊಹಿಸಬೇಕಾಗಿರುವುದರಿಂದ, ಸ್ಮೃತಿಯನ್ನು ಅನುಮಾನ ಎಂಬ ಪದದಿಂದ ಕರೆಯಲಾಗಿದೆ. ಹೀಗೆ ಜೀವನಿಗೆ ಸಂರಾಧನಕಾಲದಲ್ಲಿ ಜಗತ್ತು ಶಿವಾತ್ಮಕವಾಗಿ ಕಾಣುವುದೆಂದು ಶ್ರುತಿಸ್ಮೃತಿಗಳು ಸ್ಪಷ್ಟವಾಗಿ ತಿಳಿಸುತ್ತಲಿವೆ ಎಂದು ಸೂತ್ರಕಾರರಾದ ವ್ಯಾಸಮಹರ್ಷಿಗಳು ಹೇಳಿದ್ದಾರೆ. ಶ್ವೇತಾಶ್ವತರ ಶ್ರುತಿಯ 'ತಸ್ಯಾಭಿಧ್ಯಾನಾತ್ ಯೋಜನಾತ್ ತತ್ತ್ವಭಾವಾತ್ ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ' (ಶ್ವೇ ೧-೧೦) ಎಂದು ಜೀವನಿಗೆ ಪರಶಿವಲಿಂಗದ ಧ್ಯಾನಯೋಜನಗಳನ್ನು ಒತ್ತಿ ಹೇಳಿದೆ. ಪರಶಿವಲಿಂಗವನ್ನು ಪ್ರಾಣಲಿಂಗರೂಪದಲ್ಲಿ ನಿರಂತರವೂ ಧ್ಯಾನ ಮಾಡುವುದರಿಂದಲೂ, ಇಷ್ಟಲಿಂಗರೂಪದಿಂದ ದೇಹದಲ್ಲಿ ಧಾರಣರೂಪವಾದ ಯೋಜನದಿಂದಲೂ, ಅವೆರಡರ ಏಕೀಕರಣರೂಪವಾದ ಸಾಮರಸ್ಯದ ಅನುಭವದಿಂದಲೂ ಶಕ್ತಿಸಂಕೋಚರೂಪವಾದ ಮಲಾವರಣವನ್ನು ಪರಿಹರಿಸಿಕೊಂಡು, ಸದ್ಭಕ್ತನು ವಿಶ್ವವನ್ನು ಆವರಿಸಿರುವ ಜಡಮಾಯಾಶಕ್ತಿಯಿಂದ ಪೂರ್ಣವಾಗಿ ನಿವೃತ್ತಿಹೊಂದಿ, ಜಗತ್ತನ್ನು ಶಿವಮಯವಾಗಿ ಕಾಣತೊಡಗುವನು. ಆದರೆ ಶಿವಸಾಮರಸ್ಯವನ್ನು ಒಮ್ಮೆ ಅನುಭವಿಸಿದರೆ ಸಾಲದು ; ಅಷ್ಟರಿಂದಲೇ ಮಾಯಾಪಾಶವು ನಾಶವಾಗಲಾರದು. ಮಾಯೆ ಎಂದರೆ ಭೇದಬುದ್ಧಿ, ಅದರ ನಾಶವೆಂದರೆ ಶಿವಾಭೇದದೃಷ್ಟಿ. ಈ ಶಿವಾಭೇದದೃಷ್ಟಿಯು ಜೀವರಲ್ಲಿ ಸ್ಥಿರವಾಗಿ ನೆಲೆಸಬೇಕಾದರೆ ಒಮ್ಮೆ ಸಾಮರಸ್ಯದ ಅನುಭವವಾದರೆ ಸಾಲದು. ಪುನಃ ಅದು ನಿರಾತಂಕವಾಗಿ ಆಗುತ್ತಿರಬೇಕು. "ಯೋಗೋ ಹಿ ಪ್ರಭವಾಪ್ಯಯೌ" ಎಂದು ಕಠೋಪನಿಷತ್ತಿನಲ್ಲಿ ಹೇಳಿರುವಂತೆ ಜೀವನಿಗೆ ಒಮ್ಮೆ ಉಂಟಾದ ಶಿವಯೋಗವು ಮತ್ತೆ ನಶಿಸಬಹುದು. ಮಾಯೆಯ ಕೈಚಳಕದಿಂದ ಶಿವಯೋಗವು ಮುಗ್ಗರಿಸಬಹುದು. ಅದಕ್ಕಾಗಿಯೇ "ಭೂಯಾಶ್ಚ ತತ್ತ್ವಭಾವಾತ್" ಎಂದು ಶ್ರುತಿಯಲ್ಲಿ ಮತ್ತೆ ಮತ್ತೆ ಶಿವಾನುಭವಸಾಮರಸ್ಯಗಳಿಗಾಗಿ ಜೀವನು ಪ್ರಯತ್ನಪಡುತ್ತಲೇ ಇರಬೇಕೆಂದು ತಿಳಿಸಲಾಗಿದೆ. ಹೀಗಾದರೆಯೇ ಜೀವನ ಶಕ್ತಿ ಪ್ರಕಾಶಗಳು ವಿಕಾಸವಾಗುತ್ತ ಬಂದು, ಅವನಲ್ಲಿ ಶಿವಭಾವವು ನೆಲೆಯಾಗಿ ನಿಲ್ಲುವುದು. 'ಜ್ಞಾನಪ್ರಸಾದೇನ ವಿಶುದ್ಧಸತ್ತ್ವಃ ತತಸ್ತು ತಂ ಪಶ್ಯತಿ ನಿಷ್ಕಲಂ ಧ್ಯಾಯಮಾನಃ' (ಮುಂಡಕ ೩–೧–೮) ಎಂದು ಶ್ರುತಿಯು ಶಿವಾನುಭವದ ಬಗ್ಗೆ ವಿವರಣಮಾಡಿದೆ. ದೀಕ್ಷಾಕಾಲದಲ್ಲಿ ಗುರುವು ಬೋಧಿಸಿದ ಶಿವಜ್ಞಾನರೂಪವಾದ ಪ್ರಸಾದದಿಂದ ರಜಸ್ತಮೋಗುಣಗಳು ದೂರವಾಗುವುವು. ಇದರಿಂದ ಜೀವನು ಶುದ್ಧಸಾತ್ತ್ವಿಕವರ್ತನೆಯುಳ್ಳವನಾಗಿ ಸದ್ಭಕ್ತನೆನಿಸುವನು. ಇವನು ನಿರಂತರವೂ ನಿಷ್ಕಲನಿರಾಕಾರನಾದ ಪರಶಿವಲಿಂಗವನ್ನು ಹೃದಯದಲ್ಲಿ ಧ್ಯಾನಿಸುತ್ತ ಮಹಾಪ್ರಕಾಶವನ್ನು ಅನುಭವಿಸಲು ಸಮರ್ಥನಾಗುವನು.

ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ। (ಕಠ ೩–೨–೨)

ಯಾವನು ಪರಮಾತ್ಮನ ಸಂಕಲ್ಪದಂತೆ ನಡೆದುಕೊಳ್ಳುವನೋ ಅಂತವನಿಗೆ ಮಾತ್ರ ಪರಮಾತ್ಮನು ತನ್ನ ನಿಜಸ್ವರೂಪದ ಪರಿಚಯವನ್ನು ಮಾಡಿಸಿಕೊಡುವನು. ಒಳಗೂ ಹೊರಗೂ ವ್ಯಾಪಿಸಿರುವ ಪರಮಾತ್ಮನನ್ನು ಯಾವನು ವಿಹಿತಮಾರ್ಗದಲ್ಲಿ ಆರಾಧಿಸುವನೋ, ಅವನೇ ಜಗತ್ತನ್ನು ಶಿವಮಯವಾಗಿ ಕಾಣುತ್ತ ಬಾಳಿನಲ್ಲಿ ಭಯಶೋಕಮೋಹಗಳಿಲ್ಲದೆ ಸಮಾಧಾನದಿಂದ ಇದ್ದು ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವನು. ಹೀಗೆ ಶಿವಧ್ಯಾನಧಾರಣಪೂಜಾದಿಗಳಲ್ಲಿ ನಿರತರಾಗಿದ್ದು ಶಿವಪ್ರೀತ್ಯರ್ಥವಾಗಿಯೇ ಜಗದ್ವ್ಯವಹಾರಗಳನ್ನು ಹಿತಮಿತರೀತಿಯಲ್ಲಿ ನಡೆಸುತ್ತಿರುವ ಸದ್ಭಕ್ತರು ಶಿವಾನುಗ್ರಹದಿಂದ ಜೀವಭಾವವನ್ನು ಕಳೆದುಕೊಂಡು ಶಿವಭಾವವನ್ನು ಹೊಂದುವರು. ಇದು ಎಲ್ಲರ ಅನುಭವಯುಕ್ತಿಗಳಿಗೂ ಸಮಂಜಸವೆನಿಸುತ್ತದೆ. ಅತಃ ಹೀಗೆ ಸಂರಾಧನ ಮಾಡುವುದರಿಂದ ಉಪಾಸಕನಿಗೆ,

'ಅನಂತೇನ'ಚರಾಚರಾತ್ಮಕವಾದ ಜಗತ್ತಿನ ಆಕಾರದಿಂದ, ಲಿಂಗಂ ಪ್ರಕಾಶತೇ—ಶಿವನೇ ಎಲ್ಲಾ ಕಡೆಗಳಲ್ಲೂ ಕಾಣಿಸುತ್ತಾನೆ' ಎಂದು ಶ್ರೀಪತಿಪಂಡಿತಾರಾಧ್ಯರು ಈ ಸೂತ್ರಗಳಿಗೆ ಅರ್ಥಮಾಡಿದ್ದಾರೆ. ಅಲ್ಲಿಗೆ ಉಪಾಸಕರಿಗೆ ಉಪಾಸನ ಕಾಲದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗುತ್ತೆಂಬುದು ಖಚಿತವಾಯಿತು. ಪ್ರಾಣಲಿಂಗದ ಧಾರಣ ಅರ್ಚನ ಧ್ಯಾನಗಳಿಂದ ಜೀವನು ಶಿವಾತ್ಮಕನಾಗಿ ತನ್ನ ಸುತ್ತಲಿರುವ ಆವರಣವನ್ನು ಶಿವಾತ್ಮಕವಾಗಿಯೇ ಕಾಣುತ್ತಾನೆ. ರುದ್ರನಾಗಿ ರುದ್ರನನ್ನು ಕಾಣುವ ಮತ್ತು ಅರ್ಚಿಸುವ ಈ ಮಾರ್ಗವನ್ನು ಷಟ್ಸ್ಥಲೋಪಾಸನಕ್ರಮವೆಂದು ಅನುಭಾವಿಗಳು ಹೇಳುತ್ತಾರೆ. ಪೂಜಾಕಾಲದ ಈ ಬಗೆಯ ಶಿವಾನುಭವವನ್ನು ನಿರಂತರವೂ ಅನುಸಂಧಾನ ಮಾಡುವುದರಿಂದ ಅದೇ ಅಭ್ಯಾಸವಾಗಿ, ಮುಂದೆ ಅದೇ ಸ್ವಭಾವವಾಗಿ ವ್ಯವಹಾರಕಾಲದಲ್ಲೂ ಜಗತ್ತನ್ನು ಹಾಗೆಯೇ ಕಾಣುವ ಪದ್ಧತಿ ಸಹಜವಾಗುವುದು. ಧ್ಯಾನಧಾರಣಗಳಿಲ್ಲದೆ ಕೇವಲ ಶ್ರವಣಮನನಾದಿಗಳು ಶಿವನ ಸಾಕ್ಷಾತ್ಕಾರಕ್ಕೆ ಕಾರಣಗಳಾಗಲಾರವು. ಆರಾಧನದೊಡಗೂಡಿದ ಶ್ರವಣ ಮನನಗಳೇ ಸಾಕ್ಷಾತ್ಕಾರದ ಕಾರಣಗಳೆನಿಸುವುವು ಎಂದು ಈ ಎರಡೇ ಸೂತ್ರಗಳಲ್ಲಿ ಸೂತ್ರಕಾರರು ತೀರ್ಮಾನಿಸಿರುವರೆಂದು ಶ್ರೀಪತಿಪಂಡಿತಾರಾಧ್ಯರು ಶ್ರೀಕರಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ.

ಇಷ್ಟೇ ಅಲ್ಲದೆ ಅಹಿಕುಂಡಲಾಧಿಕರಣದಲ್ಲೂ ಶ್ರೀಪತಿಪಂಡಿತಾರಾಧ್ಯರು ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಸರ್ಪಕ್ಕೆ ಕುಂಡಲಾಕಾರ, ದಂಡಾಕಾರ ಎರಡೂ ಸಹಜವಾಗಿ ಅನ್ವಯಿಸುವಂತೆ ಪರಮಾತ್ಮನಲ್ಲಿ ನಾನಾಕಾರಗಳಾಗುವ ಸ್ಥಿತಿ, ಕೇವಲ ಸ್ವಸ್ಥಸ್ಥಿತಿ ಎರಡೂ ಸಹಜವಾಗಿರುವುದೆಂದು ಅಲ್ಲಿ ಅವರು ತಿಳಿಸಿದ್ದಾರೆ. ಸರ್ಪ ಕೆಲವು ವೇಳೆ ಸುರುಳಿ ಸುತ್ತಿಕೊಂಡಿರುವುದು, ಕೆಲವು ವೇಳೆ ತನ್ನ ಶರೀರವನ್ನು ನೇರವಾಗಿ ನೀಡಿರುವುದು. ಈ ಎರಡು ಸ್ಥಿತಿಗಳಲ್ಲೂ ಅದು ಸರ್ಪವೇ ಆಗಿರುವುದು. ಹಾಗೆ ಪರಶಿವನು ನಿರಾಕಾರನಾಗಿ ತನ್ನ ಸಹಜಾನಂದವನ್ನು ಅನುಭವಿಸುತ್ತಲೂ, ಸಾಕಾರನಾಗಿ ಜಗದ್ವ್ಯಾಪಾರಲೀಲೆಯನ್ನು ನಡೆಸುತ್ತಲೂ ಇರುವನು. ಈ ಸ್ಥಿತಿಯಲ್ಲಿ ಶಿವಜಗತ್ತುಗಳಿಗೆ ಅಂಶಾಂಶಿಭಾವವಿರುವುದರಿಂದಲೇ ಭೇದ ಅಭೇದ ಇವೆರಡೂ ಹೊಂದುತ್ತವೆ. ಶಿವಜಗತ್ತುಗಳಿಗೆ ಸದ್ರೂಪದಿಂದ ಏಕತ್ವವೂ ಶಿವನು ಉಪಾದಾನಕಾರಣವಾಗಿ ಜಗತ್ತು ಉಪಾದೇಯವಾಗಿರುವುದರಿಂದ ಭೇದವೂ ಹೊಂದುತ್ತವೆ. ಶಿವನು ಸದ್ರೂಪದಿಂದ ಜಗತ್ತನ್ನು ವ್ಯಾಪಿಸದೆ ಇದ್ದಿದ್ದರೆ ಆಗ ಜಗತ್ತು ಸತ್ತಾಸ್ಫೂರ್ತಿಗಳಿಲ್ಲದೆ ಅಸ್ತಿ ಭಾತಿ ಎಂಬ ವ್ಯವಹಾರಗಳಿಗೆ ಸಿಲುಕದೇ ಇರಬೇಕಾಗುತ್ತಿತ್ತು. ಆದ್ದರಿಂದ ಜಗತ್ತಿಗೂ ಶಿವನಿಗೂ ಭೇದಾಭೇದಸಂಬಂಧವೇ ಸಮ್ಮತವೆಂದು ಸಿದ್ಧವಾಯಿತು. ಎರಡು ವಸ್ತುಗಳಲ್ಲಿ ಭೇದವೂ ಅಭೇದವೂ ಪರಸ್ಪರವಿರುದ್ಧವಾದ್ದರಿಂದ ಒಂದೇ ಕಡೆ ಹೇಗೆ ಸೇರಬಲ್ಲ ವಸ್ತುಗಳು ಒಂದರಿಂದೊಂದು ಭಿನ್ನವಾಗಿರಬೇಕು ಅಥವಾ ಎರಡೂ ಒಂದೇ ಆಗಿರಬೇಕು. ಅದನ್ನು ಬಿಟ್ಟು ಎರಡು ವಸ್ತುಗಳೂ ಭಿನ್ನವೂ ಅಭಿನ್ನವೂ ಆಗಿರುವುದು ಎಂಬುದನ್ನು ಹೇಗೆ ಒಪ್ಪುವುದು ? ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಹುಟ್ಟುತ್ತದೆ. ಇದಕ್ಕೆ ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಹೀಗೆ ಸಮಾಧಾನವಿದೆ. ಕಾರ್ಯಕಾರಣಭಾವವಿರುವ ಕಡೆ ಭೇದವೂ ಅಭೇದವೂ ಸಹಜವಾಗಿ ಹೊಂದುತ್ತವೆ. ಕಾರಣದಿಂದ ಕಾರ್ಯ ಹುಟ್ಟುವುದಾದರೆ ಭೇದವಿದ್ದೇ ಇರಬೇಕು. ಆದರೆ ಕಾರಣವೇ ಕಾರ್ಯವಾಗಿ ಪರಿಣಮಿಸುವುದರಿಂದ ಎರಡಕ್ಕೂ ಅಭೇದವೂ ಇರುತ್ತದೆ. ಆದ್ದರಿಂದ ಭೇದಾಭೇದಗಳೆರಡೂ ಒಂದೇ ಕಡೆ ಸೇರಲು ಯಾವ ವಿರೋಧವೂ ಇರಲಾರದು. ಕಾರ್ಯಕಾರಣಭಾವವನ್ನು ಬಿಟ್ಟು ಉಳಿದ ಘಟ ಪಟ, ತಿಲ ತಂಡುಲ ಇಂತಹ ಪೂರ್ಣ ಭಿನ್ನ ವಸ್ತುಗಳಿಗೆ ಭೇದಾಭೇದಸಂಬಂಧವನ್ನು ಹೇಳಲಿಕ್ಕೆ ಆಗುವುದಿಲ್ಲ. ಆದರೆ ಕಾರ್ಯಕಾರಣಗಳಿಗೆ ಮಾತ್ರ ಕಾರಣರೂಪದಿಂದ ಭೇದವೂ ಕಾರ್ಯರೂಪದಿಂದ ಅಭೇದವೂ ಇರುತ್ತವೆ. ಕಾರಣದಲ್ಲಿ ಕಾರ್ಯವು ಸೂಕ್ಷ್ಮವಾಗಿ ಅಡಗಿರುವುದರಿಂದ ಕಾರಣಾವಸ್ಥೆಯಲ್ಲಿ ಅವೆರಡಕ್ಕೂ ಐಕ್ಯವಿರುತ್ತದೆ. ಅದರಂತೆ ಕಾರಣವೇ ಕಾರ್ಯವಾಗುವ ಪ್ರಯುಕ್ತ ಭೇದವೂ ಇರುತ್ತದೆ. ಹಾಗೆಯೇ ಶಿವಜಗತ್ತುಗಳಲ್ಲಿ ಶಿವನು ಕಾರಣವೂ, ಜಗತ್ತು ಕಾರ್ಯವೂ ಆದ್ದರಿಂದ ಭೇದವಿರುತ್ತದೆ. ಶಿವನೇ ಜಗತ್ತಾಗಿರುವ ಪ್ರಯುಕ್ತ ಅಭೇದವೂ ಇದೆ. ಹೀಗೆ ಶಿವಜಗತ್ತುಗಳಿಗೆ ಶಿವಜೀವರಂತೆಯೇ ಭೇದ ಅಭೇದಗಳೆರಡೂ ಸಹಜವಾಗಿ ಹೊಂದಿಕೆಯಾಗುತ್ತವೆ.

ಇಲ್ಲಿಯವರೆಗೆ ಶಕ್ತಿವಿಶಿಷ್ಟಾದ್ವೈತದರ್ಶನದ ಪ್ರಕಾರ ಪರಮಾತ್ಮ–ಜೀವ–ಜಗತ್ತು ಇವುಗಳ ಸ್ವರೂಪವನ್ನು ಪರಿಶೀಲಿಸಿದ್ದಾಯಿತು. ಇದರ ಉಪಯೋಗ ಮಾನವನಿಗೆ ಹೇಗೆ ಸಂಭವಿಸುವುದೆಂಬುದನ್ನು ಈಗ ತಿಳಿಸಿ ಲೇಖನವನ್ನು ಮುಗಿಸಲಾಗುವುದು. ಪ್ರಳಯಕಾಲದಲ್ಲಿ ತನ್ನಲ್ಲಿ ಅವ್ಯಕ್ತವಾಗಿ ಅಡಗಿದ್ದ ಈ ಜಗತ್ತನ್ನು ಪರಶಿವನು ಅವ್ಯಾಜವಾತ್ಸಲ್ಯದಿಂದ ಹೊರಗೆಡಹುವನು ; ಜೀವರಿಗೆ ಜ್ಞಾನವಿಕಾಸಕ್ಕೆ ಅವಕಾಶವನ್ನು ಕಲ್ಪಿಸುವನು. ಅದಕ್ಕಾಗಿಯೇ ಅವರಿಗೆ ದೇಹೇಂದ್ರಿಯಗಳನ್ನು ಅನುಗ್ರಹಿಸಿರುವನು. ಜೀವರು ಈಶ್ವರಾನುಗ್ರಹರೂಪವಾದ ಈ ದೇಹೇಂದ್ರಿಯ

ಗಳನ್ನು ದುರುಪಯೋಗಪಡಿಸದೆ ಇವುಗಳ ಸಹಕಾರದಿಂದಲೇ ಉತ್ತಮವಾದ ಜ್ಞಾನವನ್ನು ಪಡೆದು ಸ್ವರೂಪವನ್ನು ಚೆನ್ನಾಗಿ ತಿಳಿದು ಮುಕ್ತಿಸುಖವನ್ನು ಅನುಭವಿಸಲೆಂಬುದೇ ಪರಶಿವನ ಸಮೀಚೀನವಾದ ಬಯಕೆ. ಆದರೆ ಪರಶಿವನ ಅನುಭವವನ್ನು ಪಡೆಯಲಿಕ್ಕಾಗಿ ತಮಗೆ ದೊರೆತಿರುವ ದೇಹೇಂದ್ರಿಯಗಳನ್ನು ಜೀವರು ಭೋಗಸಾಧನೆಗಳೆಂದು ಭಾವಿಸಿ ವಿಷಯಾಸಕ್ತರಾಗಿ ಮತ್ತೆ ಮತ್ತೆ ಸಂಸಾರಸಾಗರದಲ್ಲಿ ಬೀಳುತ್ತಲಿರುವುದು ಶೋಚನೀಯ. ಸಂಸಾರವೆಂಬ ವಿಷವೃಕ್ಷದಡಿಯಲ್ಲಿ ಇದ್ದು ಜೀವರು ಇಂದ್ರಿಯಸುಖಗಳೆಂಬ ವಿಷಫಲಗಳಲ್ಲಿಯೇ ರಮಿಸುತ್ತ ಸತ್ಸಂಗ, ಸತ್‌ಸೇವೆ ಎಂಬ ಅಮೃತಫಲಗಳ ಕಡೆಗೆ ಗಮನವನ್ನು ಕೊಡದೆ ಜೀವನವನ್ನು ವ್ಯರ್ಥಪಡಿಸಿಕೊಳ್ಳುತ್ತಿರುವರು. ಈ ವಿಷಮ ಸಂಸಾರದ ಸುಖ ಎಷ್ಟು ವಿಷಮಯವಾದುದೆಂದು ತಿಳಿಯುವಷ್ಟು ಸಹನೆ ಶಾಂತಿ ಸಮಾಧಾನಗಳೂ ಸಹ ಅವರಿಗೆ ಇಲ್ಲವಾಗಿದೆ. ಹೀಗೆ ದೇಹಸುಖಕ್ಕಾಗಿ ಹಾತೊರೆಯುತ್ತಿರುವ ಜೀವರು ಮನಬುದ್ಧಿಗಳ ಪ್ರಶಾಂತತೆ ಸ್ವಚ್ಛತೆಗಳನ್ನು ಪೂರ್ಣವಾಗಿ ಕಳೆದುಕೊಂಡಿರುವರು. ಒಬ್ಬರನ್ನೊಬ್ಬರು ನೋಡಿ ಕೇಳಿ ಮುಟ್ಟಿ ಪಡೆಯುವ ಸುಖ ಎಷ್ಟರಮಟ್ಟಿಗೆ ಎಲ್ಲಿಯತನಕ ಇರಬಲ್ಲದು ಎಂಬ ವಿಷಯವಂತೂ ಅವರ ತಲೆಗೆ ಹಿಡಿಸುವುದೇ ಇಲ್ಲ. ಸಂಸಾರದಲ್ಲಿ ದೊರೆಯುವ ಸುಖವೇ ಇಂತಹದು. ಸಗಣಿಯಲ್ಲಿ ಇರುವ ಹುಳುವಿಗೆ ಸಗಣಿಯ ದುರ್ವಾಸನೆ ಅಹಿತವಾಗಿ ಕಾಣುವುದಿಲ್ಲ. ಅದರ ಒಳಗೇ ಇರುವುದೆಂದರೆ ಅದಕ್ಕೆ ಒಂದು ಹೆಚ್ಚಿನ ಆನಂದ. ಅಲ್ಲಿಂದ ಹೊರಕ್ಕೆ ಬಂದರೆ ಅದಕ್ಕೆ ದುಃಖ ಮತ್ತು ಹಿಂಸೆ. ಈ ಸಂಸಾರದಲ್ಲಿ ಮಾನವನ ಬಾಳೂ ಹೀಗೆಯೇ ಇದೆ. ಇದರಲ್ಲಿ ಅವನು ಅನುಭವಿಸುತ್ತಿರುವ ಸುಖವೂ ದುಃಖದ ತೌರುಮನೆಯೇ ಆಗಿದೆ. ಇದನ್ನು 'ದುಃಖಯೋನಿ' ಎಂದೇ ಗೀತೆ ತಿಳಿಸಿದೆ. ನಾವು ಅನುಭವಿಸುತ್ತಿರುವ ಸುಖವೇ ನಮ್ಮ ಎಲ್ಲಾ ಬಗೆಯ ದುಃಖಗಳಿಗೂ ಮೂಲಕಾರಣವೆನಿಸಿ ಬಾಧಿಸುತ್ತಿದೆ. ಈ ಸುಖವನ್ನು ಯಾವ ರೀತಿ ಉಪಯೋಗಿಸಿದರೆ ಅದು ಅವನಿಗೆ ಬಂಧಕವಾಗಲಾರದು ಎಂಬ ಮರ್ಮವನ್ನು ಮಾನವ ಅವಶ್ಯವಾಗಿ ತಿಳಿಯಬೇಕಾಗಿದೆ. ಅವನಿಗೆ ಇಂದ್ರಿಯಗಳಿಂದ ಆಗಾಗ ಒದಗುವ ಸುಖದುಃಖಗಳನ್ನು ಶಿವಪ್ರಸಾದವೆಂದು ಭಾವಿಸಿ ಸ್ವೀಕರಿಸುವುದರಿಂದ ಅವೆಲ್ಲವೂ ಅವನ ಪಾಲಿಗೆ ಸುಖಮಯವೇ ಆಗುವುವು. ಭೋಜ್ಯವಸ್ತುಗಳನ್ನು ಉಪಯೋಗಿಸುವುದರಲ್ಲಿ ತಿಳಿಯಬೇಕಾದ ಮರ್ಮವೇ ಇದು. ಈ ಪ್ರಸಾದಭಾವನೆಯಿಂದ ಮಾನವನ ಎಲ್ಲಾ ದುಃಖಗಳೂ ಭಯಮೋಹಗಳೂ ತೊಲಗುವುವು. ಜಗತ್ತನ್ನು ಶಿವಮಯವಾಗಿ ಕಾಣುವ ಸದ್ಭಾವನೆ, ಸುಖದುಃಖಗಳನ್ನು ಶಿವಪ್ರಸಾದವಾಗಿ ಸ್ವೀಕರಿಸುವ ದಿವ್ಯದೃಷ್ಟಿ ಇವೆರಡೇ ಮಾನವನಿಗೆ ನಿಜವಾದ ಸುಖವನ್ನು ಕೊಡುವ ಸಾಧನಗಳು. ಉಳಿದ ಭೋಗಗಳೆಲ್ಲವೂ ಅವನಿಗೆ ಮಾರಕವಾಗುವುವು. ಹೀಗೆ ಸದ್ಭಾವನೆ, ದಿವ್ಯದೃಷ್ಟಿ, ಪ್ರಸಾದ ಜೀವನಗಳಿಂದ ನಿತ್ಯವ್ಯವಹಾರಗಳನ್ನು ಕರ್ತವ್ಯವೆಂದು ನಿರ್ವಹಿಸುತ್ತ ಅವನ್ನು ತಾನು ಮಾಡಿದೆನೆಂದು ಮನದಲ್ಲೂ ಭಾವಿಸದಿರುವುದೇ ನಿರ್ಮಲ ಸ್ಥಿತಿ. ಹೀಗೆ ಕರ್ತವ್ಯದೃಷ್ಟಿಯನ್ನು ಬೆಳೆಸಿಕೊಂಡು ಸರ್ವರೂ ನಿರ್ಮಲರಾಗಬೇಕೆಂಬುದೇ ಈ ದರ್ಶನದ ಮುಖ್ಯೋದ್ದೇಶ. ಇದನ್ನು ಸಾಧಿಸಲು ಉತ್ಕಟವಾದ ಇಚ್ಛೆಯುಳ್ಳ ಹೆಣ್ಣುಗಂಡುಗಳೆಲ್ಲರೂ ಜಾತಿಮತಭೇದಗಳಿಲ್ಲದೆ ಅಧಿಕಾರಿಗಳಾಗಿದ್ದಾರೆ. ಹೀಗೆ ಶಕ್ತಿವಿಶಿಷ್ಟಾದ್ವೈತದರ್ಶನದ ಸ್ವರೂಪವನ್ನು ಯಥಾಮತಿ ಪರಿಶೀಲಿಸಿದ್ದರೂ ಮಾನವರೆಲ್ಲರ ಶ್ರೇಯೋಭಿವೃದ್ಧಿಗಳಿಗಾಗಿ ನಿರಂತರವೂ ಶ್ರಮಿಸುತ್ತಲಿರುವ ಪರಮಪೂಜ್ಯ ಜಗದ್ಗುರು ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಅಹಂಕಾರ ಮಮಕಾರಗಳಿಗೆ ಬಲಿಬೀಳದೆ, ರಾಗದ್ವೇಷಗಳ ಸುಳಿಗೆ ಸಿಲುಕದೆ, ಶಾಂತಿಸಮಾಧಾನಗಳ ತೌರುಮನೆಯಾಗಿ ವಿಶ್ವಕ್ಕೆ ಶಕ್ತಿವಿಶಿಷ್ಟಾದ್ವೈತದರ್ಶನಸ್ವರೂಪರೇ ಆಗಿರುವುದರಿಂದ ಅವರ ದರ್ಶನಾಶೀರ್ವಾದಾನುಗ್ರಹಗಳೇ ಇಡೀ ಜಗತ್ತಿಗೆ ಮಾರ್ಗದರ್ಶಕವೆನಿಸಿವೆ ಎಂದು ಸಾಧಕರೆಲ್ಲರೂ ಮನಗಾಣಬೇಕಾಗಿದೆ. ಆದ್ದರಿಂದಲೇ ವಿಶಾಲಭಾವನೆ, ಆತ್ಮೌಪಮ್ಯದೃಷ್ಟಿ, ನಿಷ್ಪಕ್ಷಪಾತವಾಗಿ ವಿಶ್ವವನ್ನು ಪ್ರೀತಿಸಿ ಗೌರವಿಸುವ ಉದಾತ್ತವರ್ತನೆ, ಸೌಜನ್ಯ–ಸೌಶೀಲ್ಯ, ನಿರಹಂಭಾವಸ್ಥಿತಿ ಈ ಬಗೆಯ ಆದರ್ಶ ಗುಣಗಳು ಅವರಲ್ಲಿ ಕಾಣುತ್ತಿರುವುವೆಂದರೆ ಅತಿಶಯೋಕ್ತಿ ಎನಿಸಲಾರದು. ದ್ವೇಷಮಾತ್ಸರ್ಯಗಳಿಂದ ಸ್ವಾರ್ಥಸಾಧನೆಗಾಗಿ ಸ್ಪರ್ಧಾಳುಗಳಾಗಿರುವ ಮಾನವರು ಅವರನ್ನು ನೋಡಿ ತಮ್ಮತಮ್ಮಲ್ಲಿ ಪರಸ್ಪರವಾಗಿ ನೆಲೆಸಿರುವ ತಾರತಮ್ಯವನ್ನು ಪರಿಹರಿಸಿಕೊಂಡು, ತಾವೆಲ್ಲರೂ ಒಂದೇ ಸ್ಥಲದವರೆಂಬ ಸಾಜಾತ್ಯಸಂಬಂಧವನ್ನು ದೃಢಮನಸ್ಸಿನಿಂದ ಭಾವಿಸಿ ಆಚರಿಸುತ್ತ, ಪ್ರಕೃತಿಸಂಬಂಧವಾದ ಬೌದ್ಧಿಕ ಮಾನಸಿಕ ದೈಹಿಕ ಪ್ರಭೇದಗಳನ್ನು ಪ್ರಧಾನವೆಂದೆಣಿಸದೆ, ಆಧ್ಯಾತ್ಮಿಕವೂ ನೈತಿಕವೂ ಧಾರ್ಮಿಕವೂ ಆದ ಚಿದೈಕ್ಯದೃಷ್ಟಿಯಿಂದ ವ್ಯವಹರಿಸಲೆಂದು ಈ ದರ್ಶನವು ನಿರೀಕ್ಷಿಸುವಂತೆಯೇ ಮಹಾಸ್ವಾಮಿಗಳ ದಿವ್ಯಜೀವನವು ದರ್ಶನಮಾತ್ರದಿಂದಲೇ ಪ್ರೇರಿಸುತ್ತಲಿರುವುದು ಅಭಿನಂದನೀಯವೆನಿಸಿದೆ. ಆದ್ದರಿಂದಲೇ ಮಹಾಸ್ವಾಮಿಗಳ ದಿವ್ಯಜೀವನದಲ್ಲಿ ಸರ್ವಮತಸಮನ್ವಯವನ್ನೂ, ಸರ್ವಜಗತ್ಸಮನ್ವಯವನ್ನೂ ಹಾಗೂ ತ್ಯಾಗಭೋಗಯೋಗಗಳ ಸಮನ್ವಯವನ್ನೂ ನಾವು ಕಾಣಬಹುದಾಗಿದೆ. ಭೇದ

ವೈಷಮ್ಯಗಳ ಸನ್ನಿವೇಶವಾತಾವರಣಗಳಲ್ಲಿ ಅಭೇದಸಮನ್ವಯಸಾಮರಸ್ಯಗಳ ದಿವ್ಯದರ್ಶನವನ್ನು ಮಹಾಸ್ವಾಮಿಗಳ ನಿರ್ಮಲ ಹಾಗೂ ಪ್ರಶಾಂತ ಜೀವನದಲ್ಲಿ ಎಲ್ಲರೂ ಮನಗಾಣಬಹುದಾಗಿದೆ. ಜ್ಞಾನಕೇಂದ್ರವೆನಿಸಿದ ಪವಿತ್ರವಾದ ಸುತ್ತೂರುಮಠದ ಅಧೀಶ್ವರರಾಗಿದ್ದರೂ ನಿಗರ್ವಿಗಳೂ ವಿಶ್ವಪ್ರೇಮಿಗಳೂ ಉದಾರಚರಿತರೂ ಆಗಿದ್ದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು ನಿರಾಶರಾದ ಜನತೆಗೆ ಜ್ಞಾನ ಸುಖದ ದಿವ್ಯಸಂಪತ್ತನ್ನು ಒದಗಿಸಿ ಶಾಂತಿ ಸಮಾಧಾನಗಳ ಪರಮೈಶ್ವರ್ಯವನ್ನು ಶಾಶ್ವತವಾಗಿ ಕರುಣಿಸಲೆಂದೂ, ಶಕ್ತಿವಿಶಿಷ್ಟಾದ್ವೈತದರ್ಶನದ ಪುರುಷಾವತಾರಿಗಳಾದ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯ ಜಗದ್ಗುರು ಮಹಾಸ್ವಾಮಿಗಳು ವಿಶ್ವವನ್ನು ನಿರಂತರವೂ ಬೆಳಕಿನ ಕಡೆಗೆ ಒಯ್ಯುತ್ತಿರಲೆಂದೂ ಹಾರೈಸಿ ಈ ಲೇಖನವನ್ನು ಮುಗಿಸಲಾಗಿದೆ. ಇತಿ ಶಿವಂ ಭೂಯಾತ್.

---

ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೇಸರವ್ರೋಗದೆ,
ಹಿಡಿದ ಭಕ್ತಿಯು ಕಡೆತನಕ ಬಿಡದೆ, ಬಡತನ ಎಡರು
ಕಂಟಕಗಳು ಬಂದಲ್ಲಿ ಚಿಂತೆಯಿಂದ ಕಾಂತಿಗುಂದದೆ,
ಅಡಿಗಡಿಗೆ 'ಶಿವಶಿವಾ' ಎಂಬ ನುಡಿಯು ನುರಿಯುದಿರ್ಪ
ಸದ್ಭಕ್ತರಿಗೆ ಬೇಡಿದ ಪದವನೀವ ನಮ್ಮ ಅಖಂಡೇಶ್ವರ

ಷಣ್ಮುಖ ಶಿವಯೋಗಿಗಳು

* * *

ನುಡಿದಡೆ ಮುತ್ತಿನ ಹಾರದಂತಿರಬೇಕು
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯುಲ್ಲಿಲ್ಲದಿರ್ದೊಡೆ
ಕೂಡಲ ಸಂಗಮದೇವನೆಂತೊಲಿವನಯ್ಯಾ !

ಬಸವಣ್ಣ

# ವೀರಶೈವಧರ್ಮದ ತಿರುಳು

ಸೌ. ನೀಲಗಂಗಾದೇವಿ ಸಿ. ಚರಂತಿಮಠ

ಭಾರತೀಯಧರ್ಮದ ಅತಿಪುರಾತನವಾದ ಶಾಖೆಗಳಲ್ಲಿ ಶೈವಧರ್ಮವೂ ಒಂದು. ವೇದಗಳಿಗಿಂತ ಇದು ಪ್ರಾಚೀನವಾದುದು. ಸಿಂಧುಸಂಸ್ಕೃತಿಯಲ್ಲಿಯೇ ಶಿವನ ಉಪಾಸನೆಯ ಬೇರುಗಳಿವೆ. ಪಶುಜೀವರುಗಳಿಗೆ ಒಡೆಯನಾದ 'ಪಶುಪತಿ' ಆತನೆಂಬ ಸಾಂಕೇತಿಕಕಲ್ಪನೆಯು ಆಗಲೇ ತಲೆದೋರಿರಬಹುದೆಂಬುದಕ್ಕೆ ಸಿಂಧುಸಂಸ್ಕೃತಿಯಲ್ಲಿ ದೊರೆತ ಶಿವನ ಚಿತ್ರವೇ ಸಾಕ್ಷಿ. ತ್ರಿಶೂಲದ ಆಕಾರವುಳ್ಳ ರುಂಡಮಾಲೆ ಧರಿಸಿದ ಶಿವ ಎತ್ತರವಾದ ಪೀಠದ ಮೇಲೆ ಯೋಗಮುದ್ರೆಯಲ್ಲಿ ಕುಳಿತಿದ್ದಾನೆ. ಸುತ್ತಲೂ ಕೆಲವು ಪ್ರಾಣಿಗಳಿವೆ. ಈ ಪಶುಪತಿಯ ಕಲ್ಪನೆ ಮುಂದಿನ ಶೈವಧರ್ಮದಲ್ಲಿ ಪ್ರಧಾನವಾಗಿ ಬೆಳೆದು ಬಂದಿತು. ವೇದದಲ್ಲಿ 'ರುದ್ರ' ಎಂಬ ಹೆಸರಿನಿಂದ ಗೋಚರಿಸುವ ಉಗ್ರದೇವತೆ ಕ್ರಮೇಣ ಪಶುಪತಿ ಎಂಬ ಹೆಸರನ್ನು ಪಡೆಯುತ್ತಾನೆ, ಭಯಂಕರನಾಗಿದ್ದವನು ಶಂಭುವಾಗುತ್ತಾನೆ, ಶಿವನಾಗುತ್ತಾನೆ, ಶಂಕರನಾಗುತ್ತಾನೆ. ಉಪನಿಷತ್ತುಗಳಿಗೆ ಬರುವ ವೇಳೆಗೆ ಶಿವನ ಕಲ್ಪನೆ, ಅತ್ಯುನ್ನತ ಪರಬ್ರಹ್ಮಸ್ವರೂಪಕ್ಕೇರಿತು. ಕಾಲಕಳೆದಂತೆ ಶಿವನ ಉಪಾಸನೆಯು ಪ್ರಭಾವ ಬಹುಮುಖವಾಗಿ ಬೆಳೆಯತೊಡಗಿತು; ಬಹುರೂಪಗಳನ್ನು ಧರಿಸಿತು. ಇತಿಹಾಸ ಪುರಾಣ ಆಗಮಾದಿಗಳು ಮತ್ತು ರಾಮಾಯಣ ಮಹಾಭಾರತ ಕಾಲದಲ್ಲಿ ಬಗೆಬಗೆಯಾಗಿ ಬೆಳೆಯಿತು. ಶಿವ–ರುದ್ರ ಇವರ ಸಾಂಕೇತಿಕರೂಪವಾದ ಲಿಂಗ ಇವುಗಳ ಉಪಾಸನೆಯಿಂದ ಶೈವಧರ್ಮ ಬಹು ಶಾಖೆಗಳನ್ನು ಚಾಚಿ ಬೆಳೆಯುತ್ತಿತ್ತು. ಶೈವಧರ್ಮದ ಬೆಳವಣಿಗೆಯಲ್ಲಿ ಪ್ರಧಾನವಾದ ಎರಡು ಶಕ್ತಿಪ್ರವಾಹಗಳನ್ನು ಕಾಣಬಹುದು. ಒಂದು ಆಗಮಿಕ ಶೈವ ಮತ್ತೊಂದು ಪಾಶುಪತ ಶೈವ. ಪಾಶುಪತ, ಕಾಪಾಲಿಕ, ನಾಥಪಂಥ, ಗೋರಖನಾಥ ಪಂಥ, ರಸೇಶ್ವರ ಈ ಎಲ್ಲವನ್ನೂ—ಒಟ್ಟಾಗಿ ಪಾಶುಪತ ಎಂಬ ಸಾಮಾನ್ಯ ಹೆಸರಿನಿಂದ ನಿರ್ದೇಶಿಸುವುದು ವಾಡಿಕೆ. ಆಗಮಿಕ ಶೈವ ವಿಭಾಗದಲ್ಲಿ ಮುಖ್ಯವಾದುವು ಕಾಶ್ಮೀರಶೈವ, ತಮಿಳುಶೈವ ಮತ್ತು ವೀರಶೈವ.

ಪಾಶುಪತ ಸಿದ್ಧಾಂತವನ್ನು ಪ್ರತಿಪಾದಿಸಿದವನು 'ಶ್ರೀಕಂಠ'ನೆಂಬ ಅಂಶ ಮಹಾಭಾರತದಿಂದ ತಿಳಿದುಬರುತ್ತದೆ. ಹಾಗೆಯೇ ತಂತ್ರಾಲೋಕ, ಶಿವದೃಷ್ಟಿ, ಶಿವಪುರಾಣ ಮೊದಲಾದ ಗ್ರಂಥಗಳಲ್ಲಿ ಶ್ರೀಕಂಠನ ಉಲ್ಲೇಖವಿದೆ. ಶ್ರೀಕಂಠ ತನ್ನ 'ಮಾಂಗಲ್ಯಶಾಸ್ತ್ರ'ದಲ್ಲಿ 'ಶಕ್ತಿ' ಮತ್ತು 'ಶಕ್ತಿಮಾನ್' ಈ ಅಂಶಗಳನ್ನು ಚರ್ಚಿಸಿರುವುದಾಗಿ ತಂತ್ರಾಲೋಕ ಹೇಳುತ್ತದೆ. ಸಾಕ್ಷಾತ್ ಶಿವನೇ ಈತನೆಂದು ಅವನನ್ನು ಹೊಗಳಿರುವ ಉದಾಹರಣೆಗಳೂ ಸಿಗುತ್ತವೆ. ಈ ಶೈವ ಶಾಖೆಯಲ್ಲಿ ಶ್ರೀಕಂಠನಷ್ಟೇ ಪ್ರಸಿದ್ಧವಾದ ಇನ್ನೊಂದು ಹೆಸರೆಂದರೆ ಲಕುಲೀಶನದು. 'ತಂತ್ರಾಲೋಕ'ವು ಶ್ರೀಕಂಠನ ಜೊತೆಯಲ್ಲಿಯೇ ಈತನನ್ನು ಹೆಸರಿಸುತ್ತದೆ. ಇವರಿಬ್ಬರೂ 'ಶಿವಶಾಸನ'ದ ಪ್ರತಿಪಾದನೆಗೆ ಅಧಿಕಾರಿಗಳೆನ್ನುತ್ತದೆ. ಪಾಶುಪತದಲ್ಲಿ ಪ್ರಸಿದ್ಧವಾದ ಇನ್ನೊಂದು ಶಾಖೆಯೆಂದರೆ ಕಾಪಾಲಿಕರದು. ಇವರಿಗೆ "ಮಹಾವ್ರತಾಧಾರಿ"ಗಳೆಂಬ ಹೆಸರೂ ಇದ್ದಂತಿದೆ. ನರ ಕಪಾಲವನ್ನು ಕೈಯಲ್ಲಿ ಧರಿಸಿ, ಶಿವನನ್ನು ಮಹಾಭೈರವನ ಉಗ್ರರೂಪದಲ್ಲಿ ಪೂಜಿಸುವ ಭಯಂಕರವಾದ ಆಚರಣೆಯಿಂದ ಅವರಿಗೆ ಈ ಹೆಸರು ಬಂದಿರಬಹುದು. ಕಾಲಾನನ ಅಥವಾ ಕಾಳಾಮುಖರೆಂಬ ಇನ್ನೊಂದು ಬಹು ಪ್ರಧಾನವಾದ ಶೈವಶಾಖೆಯನ್ನು ಹೆಸರಿಸಬಹುದು.

ಈ ಎಲ್ಲ ಪಾಶುಪತ ಶೈವಮಾರ್ಗದ ಶಾಖೆಗಳನ್ನು ಬಿಟ್ಟರೆ, ಉಳಿದವು ತಾಂತ್ರಿಕ ಅಥವಾ ಆಗಮಿಕ ಶೈವ ಗುಂಪಿಗೆ ಸೇರುತ್ತವೆ. ಭಾರತೀಯ ಧಾರ್ಮಿಕ ಸಾಹಿತ್ಯದಲ್ಲಿ ಆಗಮಗಳಿಗೆ ಒಂದು ವಿಶಿಷ್ಟಸ್ಥಾನವಿದೆ. ಶಿವನನ್ನು ಏಕಮಾತ್ರ ಉಪಾಸ್ಯದೇವತೆಯಾಗುಳ್ಳ ಶೈವಾಗಮಗಳಲ್ಲಿ ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು ಆಗಮಗಳು ಪ್ರಮುಖವಾದುವು. ಇವುಗಳಲ್ಲಿ ಪ್ರತಿಪಾದಿತವಾದ ಮುಖ್ಯ ವಿಷಯ, ಧಾರ್ಮಿಕ ಆಚರಣೆ, ಮೂರ್ತಿನಿರ್ಮಾಣ, ದೇವಾಲಯಗಳ ರಚನೆ ಮೊದಲಾದ ಅಂಶಗಳಿಗೆ ಸಂಬಂಧಿಸಿದುದು. ತಾತ್ವಿಕ ವಿವೇಚನೆಯೂ ಅಲ್ಪಮಟ್ಟಿಗೆ ಬರುತ್ತದೆ. ಸೃಷ್ಟಿ,

ಸೃಷ್ಟಿಕರ್ತ, ಜೀವಾತ್ಮರುಗಳನ್ನು ಕುರಿತು ಆಗಮಗಳು ವಿವೇಚಿಸುತ್ತವೆ. ಶೈವಧರ್ಮದ ಬೆಳವಣಿಗೆಯಲ್ಲಿ ಪುರಾಣಗಳು ಕೊಟ್ಟ ಕೊಡುಗೆಯೂ ಗಮನಾರ್ಹ. ಇನ್ನು 'ಕಾಶ್ಮೀರಶೈವ' ಎಂಬುದಾಗಿಯೇ ಪ್ರಸಿದ್ಧವಾದ ಒಂದು ಶೈವ ಶಾಖೆ ಅಲ್ಲಿ ಬೆಳೆದುಬಂದಿತು. ಆಗಮಗಳ ಒಟ್ಟು ಪ್ರಾಮಾಣ್ಯವನ್ನು ಇದು ಒಪ್ಪಿಕೊಂಡಿದ್ದರೂ ಮುಖ್ಯವಾಗಿ ಇದಕ್ಕೆ ಆಧಾರಭೂತವಾದುವು ವಸುಗುಪ್ತನು ಪ್ರಚುರಪಡಿಸಿದ ಶಿವಸೂತ್ರಗಳು. ಇದರಂತೆ ತಮಿಳುನಾಡಿನ ಶೈವಪಂಥವೂ ಪ್ರಸಿದ್ಧವಾಗಿದೆ.

ಶೈವಧರ್ಮದ ಬೆಳವಣಿಗೆಯಲ್ಲಿ ಬಹುಶಃ ಪರಿಪೂರ್ಣತೆಯನ್ನು ಸಾಧಿಸಿದ ಶಾಖೆಯೆಂದರೆ ವೀರಶೈವ ಎನ್ನಬಹುದು. ಎಲ್ಲ ಶೈವಸಿದ್ಧಾಂತಗಳ ಒಳ್ಳೆಯ ಅಂಶಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಂಡು ವ್ಯಾಪಕವಾದ ಒಂದು 'ತತ್ತ್ವಸಿದ್ಧಾಂತ'ವನ್ನೂ 'ಆಚರಣೆಯ ಮಾರ್ಗ'ವನ್ನೂ ಇದು ರೂಪಿಸಿಕೊಂಡಿತು. ಇದರ ಪ್ರಾಚೀನತೆಯ ವಿಚಾರದಲ್ಲಿ ಸದ್ಯಕ್ಕೆ ದೊರಕುವ ಆಧಾರಗಳಿಂದ ಏನನ್ನೂ ಹೇಳಲು ಸಾಧ್ಯವಿಲ್ಲವಾಗಿದೆ. ೧೨ನೇ ಶತಮಾನದಲ್ಲಿ ಅಂದರೆ ಬಸವಣ್ಣನವರ ಕಾಲದಲ್ಲಿ ಇದು ನಿರ್ದಿಷ್ಟವಾದ ಒಂದು ಸ್ವರೂಪವನ್ನು ಪಡೆದು ಸರ್ವಸಮಾನತೆಯ ತನ್ನ ಆಶಯವನ್ನು, ಬಹು ದೊಡ್ಡ ಪ್ರಮಾಣದಲ್ಲಿ ಈಡೇರಿಸುವ ಶಕ್ತಿಯುತವಾದ ಧರ್ಮವಾಗಿ ಪರಿಣಮಿಸಿತೆಂಬ ವಿಚಾರದಲ್ಲಿ ಸಂದೇಹವಿಲ್ಲ. ಬಸವಣ್ಣನವರಿಂದಲೇ ಈ ಧರ್ಮ ಸ್ಥಾಪಿತವಾಯಿತೆಂದು ಹೇಳುವಂತಿಲ್ಲ, ಅವರಿಗಿಂತ ಹಿಂದೆಯೇ ಈ ಧರ್ಮ ಅಸ್ತಿತ್ವದಲ್ಲಿತ್ತೆಂಬುದಕ್ಕೆ ಸ್ಪಷ್ಟವಾದ ಆಧಾರಗಳಿವೆ. ಹಿಂದಿನ ಪುರಾತನರನ್ನು ಬಸವಾದಿ ಪ್ರಮಥರು ಭಕ್ತಿಭಾವನೆಯಿಂದ ಸ್ಮರಿಸಿರುವರು, ತ್ರಿಷಷ್ಟಿಪುರಾತನರು ಬಸವಣ್ಣನವರಿಗೆ ಪೂಜ್ಯರಾಗಿದ್ದರೆಂಬುದನ್ನು ಅರ್ಜುನವಾಡದ ಶಿಲಾಶಾಸನವು ವ್ಯಕ್ತಪಡಿಸುತ್ತದೆ. ಹಿಂದಿನ ಪುರಾತನರನ್ನೂ ಆದ್ಯರನ್ನೂ ಬಸವಾದಿ ಪ್ರಮಥರು ಪೂಜ್ಯಭಾವನೆಯಿಂದ ಸಂಸ್ಮರಿಸಿದಂತೆ, ಆದ್ಯರ ವಚನಗಳನ್ನು ಹಲವಾರು ಸಲ ಉಲ್ಲೇಖಿಸಿದುದುಂಟು. "ಆದ್ಯರ ವಚನ ಪರುಷ ಕಂಡಯ್ಯ" ಎಂದು ಬಸವಣ್ಣನವರು ನುಡಿದಿರುವಲ್ಲಿ ಕನ್ನಡ ವಚನಗಳನ್ನೇ ಕಣ್ಮುಂದೆ ಇಟ್ಟುಕೊಂಡಿರುವರೋ ಏನೋ ಎಂಬ ಭಾವನೆ ಮೊಳೆದೋರುತ್ತದೆ. ಬಸವಾದಿ ಪ್ರಮಥರ ಪೂರ್ವದ ಕೆಲವು ಶಿವಶರಣರ ಹೆಸರುಗಳು ತಿಳಿದುಬಂದಿವೆ. ದೇವರದಾಸಿಮಯ್ಯ, ಮಾದಾರಚೆನ್ನಯ್ಯ, ಕೊಂಡಗುಳಿ ಕೇಶಿರಾಜ, ಚಂದಿಮರಸ. ಶಂಕರದಾಸಿಮಯ್ಯ, ಕೆಂಭಾವಿ ಭೋಗಣ್ಣ, ಡೋಹರ ಕಕ್ಕಯ್ಯ, ಸಕಲೇಶ ಮಾದರಸ, ಮೆರೆಮಿಂಡಯ್ಯ ಇವರೇ ಮುಂತಾದವರು ಬಸವಾದಿ ಪ್ರಮಥರ ಪೂರ್ವದಲ್ಲಿದ್ದಿರಬೇಕೆಂದು ತೋರುತ್ತದೆ. ಇವರಲ್ಲದೆ ತಮಿಳುನಾಡಿನ ತ್ರಿಷಷ್ಟಿ ಪುರಾತನರು ಕೆಲವರು ವೀರಶೈವರಾಗಿದ್ದರೆಂದು ತೋರುತ್ತದೆ. ಈ ಎಲ್ಲ ಆಧಾರಗಳಿಂದ ಬಸವಣ್ಣನವರಿಗಿಂತ ಹಿಂದೆಯೇ ಈ ಧರ್ಮ ಅಸ್ತಿತ್ವದಲ್ಲಿತ್ತೆಂದು ಹೇಳಬಹುದು.

ಮುಖ್ಯವಾಗಿ ಈ ಧರ್ಮ, ಆಗಮಗಳ ತಳಹದಿಯಮೇಲೆ ರೂಪಿತವಾದುದು. ಸೂಕ್ಷ್ಮಾಗಮ ವೀರಶೈವಧರ್ಮವನ್ನು ಪ್ರತಿಪಾದಿಸುವುದಕ್ಕೆ ಮೀಸಲಾಗಿದೆ. ಅಂತೆಯೆ ಸುಪ್ರಭೇದ, ಸ್ವಾಯಂಭುವ, ಕಾಮಿಕ. ಪಾರಮೇಶ್ವರ, ವಾತುಲ ಈ ಆಗಮಗಳಲ್ಲಿಯೂ ವೀರಶೈವಧರ್ಮದ ಅಂಶಗಳು ಕಂಡುಬರುತ್ತವೆ. ಇತರ ಆಗಮಿಕ ಶೈವಗಳಿಗಿಂತ ವೀರಶೈವದಲ್ಲಿ ವಿಶಿಷ್ಟವಾಗಿರುವ ಎರಡು ಪ್ರಮುಖವಾದ ಅಂಶಗಳೆಂದರೆ ಷಟ್‌ಸ್ಥಲ ಮತ್ತು ಲಿಂಗಧಾರಣ. ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸುವುದು ಎಷ್ಟು ಪ್ರಾಚೀನವೋ, ಲಿಂಗವನ್ನು ದೇಹದಮೇಲೆ ಧರಿಸುತ್ತಿದ್ದುದೂ ಬಹುಶಃ ಅಷ್ಟೇ ಪ್ರಾಚೀನವೆನ್ನಬಹುದು.

ಇನ್ನು ಯುಗಯುಗಗಳಲ್ಲಿಯೂ ಲಿಂಗಗಳಿಂದ ಅವತರಿಸಿದ ರೇಣುಕಾದಿ ಪಂಚಾಚಾರ್ಯರಿಂದ ಈ ಮತ ಸೃಷ್ಟಿಯಾಯಿತೆಂಬುದು ಸಾಂಕೇತಿಕ ನಿರೂಪಣೆಯಾಗಬಹುದೇ ಹೊರತು ಐತಿಹಾಸಿಕಸತ್ಯವೆಂದು ಇತಿಹಾಸಜ್ಞರು ಒಪ್ಪಲಾರರು. ವೀರಶೈವದ ಪ್ರಾಚೀನತೆಯನ್ನು ಕುರಿತು ಹೀಗೇ ಸರಿ ಎಂದು ನಿರ್ದಿಷ್ಟವಾಗಿ ಹೇಳಲು ಸಾಕಷ್ಟು ಸಾಮಗ್ರಿ ದೊರೆತಿಲ್ಲ. ಆದ್ದರಿಂದ ವೀರಶೈವ ಧರ್ಮದ ಉಗಮದ ಬಗ್ಗೆ ಇಷ್ಟೇ ಸಾಮಗ್ರಿಯಿಂದ ಖಚಿತವಾಗಿ ಹೇಳುವದು ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ಹೇಳಬಹುದು. ಲಿಂಗವನ್ನು ಅಂಗದಮೇಲೆ ಧರಿಸುವ ಪದ್ಧತಿ ಯಾರೊಬ್ಬರಿಂದಲೂ ಪ್ರವರ್ತಿತವಾದುದಲ್ಲ; ಶೈವಧರ್ಮದ ವಿಕಾಸದಲ್ಲಿ ಅಳವಟ್ಟ ಸಹಜ ಪ್ರಕ್ರಿಯೆ. ರೇಣುಕಾದಿ ಪಂಚಾಚಾರ್ಯರು ಅದರ ಬೆಳವಣಿಗೆಗೆ ಕಾರಣವಾಗಿರಬಹುದು. ತಮಿಳುಶೈವ, ಕಾಶ್ಮೀರಶೈವ, ಪಾಶುಪತಶೈವ ಈ ವಿವಿಧ ಶಾಖೆಗಳಲ್ಲಿನ ಉದಾತ್ತ ಅಂಶಗಳನ್ನು ಅಳವಡಿಸಿಕೊಳ್ಳುವ ಮಾರ್ಗದಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳು ರೂಪುಗೊಂಡಿರಬೇಕು. ಬಸವಣ್ಣನವರು ಬರುವ ವೇಳೆಗೆ ಲಾಕುಳ, ಕಾಳಾಮುಖ ಮೊದಲಾದ ವಿವಿಧ ಶೈವ ಶಾಖೆಗಳಲ್ಲಿ ಕೆಲವಕ್ಕಾದರೂ ದೀಕ್ಷೆ ಮೊದಲಾದ ವೀರಶೈವ ಸಂಸ್ಕಾರ ಒದಗಿರಬಹುದು. ಈ ಮತದ ಅನುಯಾಯಿಗಳು

ಕಾರ್ಯನಿರತರಾಗಿರಬಹುದು. ಏಕಾಂತರಾಮಯ್ಯ ಮತ್ತು ದೇವರದಾಸಿಮಯ್ಯರನ್ನೂ ಇಲ್ಲಿ ಸ್ಮರಿಸಬಹುದು.

ಮುಂದೆ ಬಸವಾದಿ ಪ್ರಮಥರ ಪ್ರಭಾವದಿಂದ ಈ ಧರ್ಮ ಹೊಸ ಮೆರುಗನ್ನು ಪಡೆಯಿತು. "ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತಿರ್ದುದಯ್ಯಾ ಶಿವನ ಪ್ರತಾಪ." ಬಸವಣ್ಣನೆಂಬ ಜ್ಯೋತಿಗೆ ಆಕರ್ಷಿತರಾಗಿ ನಾಡಿನ ನಾನಾ ಭಾಗಗಳಿಂದ ಸಾಧಕರು ಬಂದು ಕಲ್ಯಾಣದಲ್ಲಿ ಸೇರಿದರು. ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ಸ್ವತಂತ್ರ ವಿಚಾರವಿಮರ್ಶೆ ಅಲ್ಲಿ ನಡೆಯಿತು. ಅನುಭವಮಂಟಪದ ಮಂಥನದಿಂದ ವೀರಶೈವಧರ್ಮದ ತಾತ್ವಿಕ ವಿವೇಚನೆ ಆಳವಾಗಿ ಬೇರು ಬಿಟ್ಟಿತು. ಆಚಾರಮಾರ್ಗಗಳಾದ ಷಟ್‌ಸ್ಥಲ, ಅಷ್ಟಾವರಣಾದಿಗಳು ಇನ್ನೂ ಎತ್ತರಕ್ಕೆ ಬೆಳೆದವು. ಪ್ರಾಚೀನ ವೀರಶೈವಧರ್ಮ ತನ್ನ ಸನಾತನ ತತ್ವಗಳನ್ನು ನಿತ್ಯನೂತನವಾದ ಮಾನವೀಯ ಮಟ್ಟಕ್ಕೇರಿಸಿ, ವಿಶ್ವಧರ್ಮವಾಗಿ ಪರಿಣಮಿಸಿತು. ಇನ್ನು ವೀರಶೈವಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳು—ವೀರಶೈವವನ್ನು ಪ್ರತಿಪಾದಿಸುವ ಸಂಸ್ಕೃತ ಗ್ರಂಥಗಳೂ ಅನೇಕವಿವೆ. ಅವುಗಳಲ್ಲಿ ಮುಖ್ಯವಾಗಿ ಹೆಸರಿಸಬಹುದಾದುವು:ಶಿವಾಗಮಗಳು, ಅದರಲ್ಲಿಯೂ ಮುಖ್ಯವಾಗಿ ವೀರಶೈವವನ್ನು ಪ್ರತಿಪಾದಿಸುವ ವೀರಶೈವಾಗಮಗಳು. ಅನಂತರ ಸಿದ್ಧಾಂತಶಿಖಾಮಣಿ, ಶ್ರೀಕರ ಭಾಷ್ಯ, ಶಿವಾದ್ವೈತಮಂಜರಿ ಮುಂತಾದವುಗಳನ್ನು ಬಿಟ್ಟರೆ ಬಸವಣ್ಣನವರ ಕಾಲದಿಂದ ಈಚೆಗೆ ಅನೇಕ ಸಂಸ್ಕೃತ ಗ್ರಂಥಗಳು ಮತ್ತು ಕನ್ನಡ ಗ್ರಂಥಗಳು ಹುಟ್ಟಿಕೊಂಡವು. ಅವುಗಳಲ್ಲಿ ಮಗ್ಗೆಯಮಾಯಿದೇವರ ಶಿವಾನುಭವ ಸೂತ್ರ, ನೀಲಕಂಠಶಿವಾಚಾರ್ಯರ ಕ್ರಿಯಾಸಾರ, ನಂದಿಕೇಶ್ವರನ ಲಿಂಗಧಾರಣಚಂದ್ರಿಕಾ ಮತ್ತು ವೀರಶೈವ ಸದಾಚಾರಸಂಗ್ರಹ, ವೀರಶೈವಸದಾಚಾರಪ್ರದೀಪಿಕಾ, ಈ ಮೊದಲಾದ ಕೃತಿಗಳನ್ನು ಹೆಸರಿಸಬಹುದು. ಕನ್ನಡದಲ್ಲಿಯೂ ವೀರಶೈವಧರ್ಮವನ್ನು ಕುರಿತು ಗ್ರಂಥಗಳು ರಚಿತವಾದುವು. ೧೫ನೆಯ ಶತಮಾನ ಈ ದೃಷ್ಟಿಯಿಂದ ಬಹಳ ಮುಖ್ಯವಾದ ಕಾಲ. ವಚನಸಾಹಿತ್ಯವನ್ನೇ ಆಧಾರವನ್ನಾಗಿಟ್ಟುಕೊಂಡು ವೀರಶೈವಧರ್ಮದ ವಿವೇಚನೆ ಪ್ರತಿಪಾದನೆ ಸಮರ್ಥನೆಗಳು ವಿಜಯನಗರದ ಸುವರ್ಣಯುಗದ ಆ ಕಾಲದಲ್ಲಿ ನಡೆದವು. ಕಲ್ಲುಮಠದ ಪ್ರಭುದೇವನ ಲಿಂಗಲೀಲಾವಿಲಾಸಚಾರಿತ್ರ, ಮಹಾಲಿಂಗದೇವನ ಮತ್ತು ಜಕ್ಕಣಾರ್ಯನ ಏಕೋತ್ತರಶತಸ್ಥಲಗಳು, ಲಕ್ಕಣ್ಣನ ಶಿವತತ್ವಚಿಂತಾಮಣಿ, ಚಾಮರಸನ ಪ್ರಭುಲಿಂಗಲೀಲೆ, ಗುರುಬಸವನ ಸಪ್ತಕಾವ್ಯಗಳು, ಅನಂತರ ಬಂದ ಶೂನ್ಯಸಂಪಾದನೆಗಳು, ಗುಬ್ಬಿಮಲ್ಲಣಾರ್ಯನ ವೀರಶೈವಾಮೃತಮಹಾಪುರಾಣ ಮೊದಲಾದವು. ಮುಖ್ಯವಾಗಿ ಇವೆಲ್ಲಕ್ಕೆ ವಚನಸಾಹಿತ್ಯವೇ ಆಧಾರ. ಆದುದರಿಂದ ವಚನಸಾಹಿತ್ಯ ವೀರಶೈವಧರ್ಮದ ಆಧಾರಸ್ತಂಭ. ಯಾವುದನ್ನು ವೀರಶೈವಧರ್ಮ ತಾತ್ವಿಕವಾಗಿ ಚರ್ಚಿಸಿತೋ, ಅದನ್ನು ಜೀವಂತವಾಗಿ ಆಚರಿಸಿ ತೋರಿಸಿದವರು ಶರಣರು. ಅವರ ಮಾತುಗಳಿಂದ ಆ ಧರ್ಮ ಚೈತನ್ಯಪೂರ್ಣವಾಗಿ ಪರಿಣಮಿಸಿತು. ವಚನಕಾರರು ಧರ್ಮವನ್ನು ಕೇವಲ ಬೌದ್ಧಿಕವಾಗಿ ಪ್ರತಿಪಾದಿಸಿ ತೃಪ್ತರಾಗಲಿಲ್ಲ. ಆ ಧರ್ಮದಿಂದ ಪ್ರೇರಿತವಾದ ಸ್ವತಂತ್ರ ವಿಚಾರಧಾರೆಯನ್ನು ಸಮಾಜದಲ್ಲಿ ಹರಿಯಬಿಟ್ಟರು, ಸಾಹಿತ್ಯರೂಪದಲ್ಲಿ ವ್ಯಕ್ತಪಡಿಸಿದರು.

ಯಾವುದೇ ಧರ್ಮವಾಗಲಿ ಗಮನಿಸಬೇಕಾದ ಮುಖ್ಯವಾದ ಅಂಶಗಳು ಎರಡು. ಒಂದು ತಾತ್ವಿಕ ಸಿದ್ಧಾಂತ, ಇನ್ನೊಂದು ಆಚರಣೆಯ ಮಾರ್ಗ. ತಾತ್ವಿಕ ಸಿದ್ಧಾಂತದಲ್ಲಿ ಬಹಿರಂಗ–ಅಂತರಂಗಗಳನ್ನು ಕುರಿತು ಬೌದ್ಧಿಕ ವಿವೇಚನೆ ಕಂಡುಬರುತ್ತದೆ. ಈ ಸೃಷ್ಟಿಯ ರಹಸ್ಯವೇನು ? ಇದಕ್ಕೆ ಕಾರಣಕರ್ತನಾರು ? ಆತನ ಸ್ವರೂಪವೇನು ? ಜೀವಿಗಳ ಹುಟ್ಟು ಹೇಗೆ ? ಸೃಷ್ಟಿಕರ್ತನಿಗೂ ಜೀವಿಗಳಿಗೂ ಇರುವ ಸಂಬಂಧವೇನು ? ಇತ್ಯಾದಿ ವಿಷಯಗಳ ಜಿಜ್ಞಾಸೆ ಇಲ್ಲಿ ಬರುತ್ತದೆ. ಇದು ಧರ್ಮದ ಒಂದು ಮುಖ. ಈ ತಾತ್ವಿಕ ಜಿಜ್ಞಾಸೆಯ ಆದರ್ಶವನ್ನು ಆಚರಣೆಯಿಂದ ಮುಟ್ಟಿ ಆನಂದದ ನಿಲುವನ್ನು ಅನುಭವಪೂರ್ವಕವಾಗಿ ಕಂಡುಕೊಂಡಾಗ. ಇದು ಧರ್ಮದ ಆಚರಣೆಯ ಮಾರ್ಗ. ವೀರಶೈವ ಧರ್ಮ ಈ ಎರಡೂ ರೀತಿಯಿಂದ ಪರಿಪುಷ್ಟವಾಗಿ ಬೆಳೆದಿರುತ್ತದೆ.

ಈ ಧರ್ಮವನ್ನು ದ್ವೈತಾದ್ವೈತ, ಶಿವಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂದು ಕರೆದಿರುವುದುಂಟು. ಆದರೆ ಜೀವ, ಜಗತ್ತು, ಈಶ್ವರ ಇವುಗಳ ವಿವೇಚನೆಯಲ್ಲಿ ಈ ಮಾರ್ಗ ಅನುಸರಿಸುವ ರೀತಿಯನ್ನು ನೋಡಿದರೆ 'ಶಕ್ತಿವಿಶಿಷ್ಟ' ಎಂಬ ಮಾತು ಇದಕ್ಕೆ ಹೆಚ್ಚು ಸೂಕ್ತ ಎಂಬಂತೆ ತೋರುತ್ತದೆ. ಸೃಷ್ಟಿಕರ್ತನಿಂದ ಹಿಡಿದು ಸೃಷ್ಟಿಯಲ್ಲಿ ಕಂಡುಬರುವ ಕೊನೆಯ ಅಣುವಿನ ವರೆಗೆ ಎಲ್ಲೆಲ್ಲಿಯೂ ಪ್ರಾಪ್ತವಾಗಿರುವ ಶಕ್ತಿತತ್ವವನ್ನು ಇದು ಗಮನಿಸಿ ಅದರ ಅಭಿವ್ಯಕ್ತಿಯ ವಿರಾಡ್ರೂಪವನ್ನೂ ವಿಶಿಷ್ಟತೆಯನ್ನೂ ಗಮನಿಸಿದೆ. ಶಕ್ತಿವಿಶಿಷ್ಟನಾದವನು ಶಿವ, ಶಕ್ತಿವಿಶಿಷ್ಟನಾದವನು ಜೀವ. ಹೀಗೆ ಶಕ್ತಿವಿಶಿಷ್ಟರಾದ ಜೀವ ಶಿವರಲ್ಲಿ ಕಂಡುಬರುವ ಅದ್ವೈತವೇ ಶಕ್ತಿವಿಶಿಷ್ಟಾದ್ವೈತ. 'ಶಕ್ತಿವಿಶಿಷ್ಟಾದ್ವೈತ' ಎಂಬ

ಮಾತನ್ನು ಸಂಸ್ಕೃತ ಗ್ರಂಥಗಳಲ್ಲಿ ಹೀಗೆ ವಿವರಿಸಲಾಗಿವೆ. "ಶಕ್ತಿಶ್ಚ ಶಕ್ತಿಶ್ಚ ಶಕ್ತೀ-ತಾಭ್ಯಾಂ ವಿಶಿಷ್ಟೌ ಜೀವೇಶೌ ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ" ಎರಡು ಬಗೆಯ ಶಕ್ತಿಗಳಿಂದ ಕೂಡಿದ ಜೀವಬ್ರಹ್ಮರ ಅದ್ವೈತ ಅಥವಾ ಸಾಮರಸ್ಯವೇ ಶಕ್ತಿವಿಶಿಷ್ಟಾದ್ವೈತ. ಶಕ್ತಿ ಎಂಬುದು ಒಂದಲ್ಲ ಒಂದು ರೂಪದಲ್ಲಿ ಎಲ್ಲ ಸಿದ್ಧಾಂತಗಳಲ್ಲಿಯೂ ಕಂಡು ಬರುವ ಅಂಶ. ಶ್ವೇತಾಶ್ವತರ ಉಪನಿಷತ್ತು ಹೇಳುವ ಈ ಮಾತನ್ನು ಗಮನಿಸಬಹುದು.

ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ

ಅಂದರೆ ಪರಬ್ರಹ್ಮದಲ್ಲಿರುವ ಶಕ್ತಿ ಸ್ವಾಭಾವಿಕವಾದುದು ; ಮತ್ತು ಇದು ಜ್ಞಾನಶಕ್ತಿ, ಕ್ರಿಯಾಶಕ್ತಿ ಇತ್ಯಾದಿ ರೂಪದಿಂದ ನಾನಾಪ್ರಕಾರವಾಗಿರುವದು. ಮಾಯೆ ಎಂಬ ಪದವನ್ನು ಉಪನಿಷತ್ತಿನಲ್ಲಿ ಬಳಸಿದ್ದರೂ ಅದು ಅದ್ವೈತಿಗಳು ಹೇಳುವಂಥ ಮಾಯೆಯಲ್ಲ. ಅದ್ವೈತ ಸಿದ್ಧಾಂತದಲ್ಲಿ ಪ್ರಸಿದ್ಧವಾದ ಮಾಯೆಯೇ ಬೇರೆ ಈ ಶಿವಶಕ್ತಿಯೇ ಬೇರೆ. ಇದರ ಸಹಾಯವಿಲ್ಲದೆ ಶಿವ ಕಾರ್ಯಪ್ರವೃತ್ತನಾಗಲಾರ. ಅದರ ಹೊರತು ಸೃಷ್ಟಿನಿರ್ಮಾಣ ಸಾಧ್ಯವಾಗದು. ಶಿವನಿಂದ ಶಕ್ತಿ ಬೇರೆಯಲ್ಲ. ಶಿವ ಮತ್ತು ಶಕ್ತಿ ಒಂದನ್ನು ಬಿಟ್ಟು ಇನ್ನೊಂದು ಇರಲಾರದು ಎಂಬ ಅಭಿಪ್ರಾಯವನ್ನು ಕಾಳಿದಾಸನ ಶ್ಲೋಕ ಹೀಗೆ ಹೇಳುತ್ತದೆ :

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ರಘುವಂಶದ ಈ ಮಂಗಳಶ್ಲೋಕ ಶಿವಶಕ್ತಿಯರ ಅವಿನಾಭಾವಸಂಬಂಧವನ್ನು ಬಹಳ ಅರ್ಥವತ್ತಾಗಿ ಸೂಚಿಸುತ್ತದೆ. ನಿಜಗುಣಶಿವಯೋಗಿಗಳು ಒಂದು ಕಡೆ ಹೇಳಿರುವ—

ಇಂಗಡಲೊಳಿಂಪು ಬೆಳದಿಂಗಳೊಳು ತಂಪು, ಕುಸು
ಮಂಗಳೊಳು ಕಂಪು ಬೆರೆದಂತೆ। ಪರಮನೊಳು
ಹಿಂಗದಗಸುತೆಗೆ ನತನಪ್ಪೆಂ ॥

ಎಂಬ ಮಾತಿನಲ್ಲಿ ಶಕ್ತಿತತ್ವದ ರಹಸ್ಯವನ್ನೇ ಬಯಲಿಗೆಳೆದಿದ್ದಾರೆ, ಸಚ್ಚಿದಾನಂದಸ್ವರೂಪನಾದವನು ಶಿವ, ಈ ಸತ್, ಚಿತ್ ಆನಂದಸ್ವರೂಪ ಎಂಬುದು ಅಸ್ಮಿ, ಪ್ರಕಾಶೇ. ನಂದಾಮಿ—ಅಂದರೆ ನಾನು ಇದ್ದೇನೆ. ಪ್ರಕಾಶಿಸುತ್ತೇನೆ, ಆನಂದಿಸುತ್ತೇನೆ ಎಂಬ ಅನುಭವದ ಎಚ್ಚರದಿಂದ ಕೂಡಿರುವದು. ಇದನ್ನೇ ವಿಮರ್ಶಶಕ್ತಿ ಎಂದು ಕರೆಯಲಾಗಿದೆ. ಈ ಶಕ್ತಿ ಇಲ್ಲದಿದ್ದರೆ ಶಿವನೂ ಜಡನೆನಿಸಿಕೊಳ್ಳುತ್ತಾನೆ, ಸೃಷ್ಟಿಗಿಂತ ಮೊದಲು ಶಿವ, ನಿರಂಜನ ಸ್ವರೂಪನಾಗಿದ್ದ. ಸೃಷ್ಟಿಯನ್ನು ನಿರ್ಮಿಸಬೇಕೆಂಬ ನೆನಹು ಆತನಲ್ಲಿ ಸುಳಿಯಿತು. ಅದೇ 'ಶಕ್ತಿ' ಎನಿಸಿಕೊಂಡಿತು, ಈ ಸೃಷ್ಟಿಗೆ ಕಾರಣವಾಯಿತು.

ಯಾವುದೇ ಧರ್ಮದ ವಿವೇಚನೆ ಪೂರ್ಣಗೊಳ್ಳಬೇಕಾದರೆ ಅದು ಮುಖ್ಯವಾಗಿ ಮೂರು ಅಂಶಗಳನ್ನು ಒಳಗೊಂಡಿರುತ್ತದೆ; ತಾತ್ವಿಕವಿವೇಚನೆ, ಧಾರ್ಮಿಕ ಆಚರಣೆ, ನೈತಿಕ ನಿಯಮಗಳು—ಈ ಮೂರು ಕಣ್ಣುಗಳಿಂದ ಕೂಡಿ ಮುಕ್ಕಣ್ಣನಾಗುತ್ತಾನೆ; ಧರ್ಮಪುರುಷ. ವೀರಶೈವಧರ್ಮಕ್ಕೆ ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತಸಿದ್ಧಾಂತ ತಾತ್ವಿಕ ಹಿನ್ನೆಲೆಯನ್ನು ನಿರ್ಮಿಸಿದ್ದರೆ, ಆ ತಾತ್ವಿಕದರ್ಶನವನ್ನು ಅನುಭಾವಪೂರ್ವಕವಾಗಿ ಕೈಗೂಡಿಸಿಕೊಡುವ ಧಾರ್ಮಿಕಮಾರ್ಗವಾಗಿದೆ ಷಟ್‌ಸ್ಥಲ. ಈ ಮಾರ್ಗಕ್ಕೆ ಅಷ್ಟಾವರಣ ಅಂಗಭೂತವಾಗಿ ಅಳವಟ್ಟಿದೆ. ವೀರಶೈವ ಧರ್ಮದ ವಿಶಿಷ್ಟವಾದ ಕೊಡುಗೆ ಷಟ್‌ಸ್ಥಲ. ಸಾಧಕನ ಆಧ್ಯಾತ್ಮಿಕ ಅನುಭವದ ವಿಕಾಸವನ್ನು ತಳಹದಿಯನ್ನಾಗಿ ಉಳ್ಳ ಇದರ ವಿವೇಚನೆಯಲ್ಲಿ ವೀರಶೈವಧರ್ಮದ ಸಾರವೆಲ್ಲಾ ಅಡಕವಾಗುತ್ತದೆ. ತಾತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗಗಳೆರಡೂ ಇಲ್ಲಿ ಸಮಾವೇಶಗೊಳ್ಳುತ್ತವೆ. ಈ ಧರ್ಮದ ತಾತ್ವಿಕ ಹಿನ್ನೆಲೆಗೆ ಅನುಗುಣವಾಗಿ ಭೇದಾಭೇದಗಳ ಸಮನ್ವಯ ಇಲ್ಲಿ ರೂಪುಗೊಂಡಿದೆ. ಭಕ್ತಿ ಜ್ಞಾನ ಕರ್ಮಗಳು ಇಲ್ಲಿ ಮುಪ್ಪುರಿಗೊಂಡು ಸಾಮರಸ್ಯಕ್ಕೇರಿಸುವ ನಿಚ್ಚಣಿಗೆಗಳನ್ನು ನಿರ್ಮಿಸಿವೆ. ೧೨ನೇ ಶತಮಾನದ ಶರಣರು ಈ ಮಾರ್ಗದಲ್ಲಿ ನಡೆದು ಈ ನಿಚ್ಚಣಿಗೆಗಳಿಂದ ಮೇಲೇರಿ ತಮ್ಮ ಗುರಿಯನ್ನು ಸಾಧಿಸಿದರು. ಇವರಿಗಿಂತ ಹಿಂದೆಯೇ ಷಟ್‌ಸ್ಥಲ ಉಲ್ಲೇಖ ಕಂಡುಬಂದರೂ ಅದಕ್ಕೊಂದು ವ್ಯಾಪಕತೆಯನ್ನು ತಂದುಕೊಟ್ಟವರು ಶರಣರು. ಅವರ ಸಾಧನೆಯಿಂದ ಅದು ಹೊಸ ಕಾಂತಿಯನ್ನು

ಪಡೆಯಿತು. ವಿವಿಧ ಹಂತಗಳಲ್ಲಿರುವ ವಿಭಿನ್ನ ಮನೋಧರ್ಮದ ಎಲ್ಲ ವರ್ಗದ ಸಾಧಕರನ್ನೂ ಯಾವ ತಾರತಮ್ಯವೂ ಇಲ್ಲದೆ ಶರಣರು ಈ ಮಾರ್ಗಕ್ಕೆ ಸ್ವಾಗತಿಸಿದರು.

ವಚನಕಾರರಿಗಿಂತ ಮೊದಲೇ ಷಟ್‌ಸ್ಥಲಸಿದ್ಧಾಂತ ಉಗಮಗೊಂಡು ಆಗಮಾದಿಗಳಲ್ಲಿ ಬೆಳೆಯುತ್ತಾ ಬಂದಿತ್ತು. ಅದನ್ನು ಶಿವಾಚಾರ್ಯರು ಸೂಚಿಸಿದ್ದಾರೆ. ಅಂತೆಯೇ ಮಗ್ಗೆಯ ಮಾಯಿದೇವರೂ ಸಹ ತಮ್ಮ ಶಿವಾನುಭವಸೂತ್ರ ದಲ್ಲಿ—

ವಾತುಲಾಖ್ಯೇ ಮಹಾತಂತ್ರೇ ಪೂರ್ವೋತ್ತರವಿಭೇದತಃ ।
ಭಾಗದ್ವಯತಯಾಖ್ಯಾತಂ ತಸ್ಮಿನ್ನುತ್ತರನಾಮನಿ ॥
ತಂತ್ರೋತ್ತರಪ್ರದೀಪಾಖ್ಯಂ ಶಿವಸಿದ್ಧಾಂತತಂತ್ರಕಂ ।
ಅಸ್ತಿ ತತ್ರಾಹ ದೇವೇಶೋ ದೇವ್ಯೈ ಷಟ್‌ಸ್ಥಲನಿರ್ಣಯಮ್ ॥

ಎಂದು. ವಾತುಲಾಗಮದ ಉತ್ತರಭಾಗದಲ್ಲಿರುವ 'ತಂತ್ರೋತ್ತರ ಪ್ರದೀಪ'ವೆಂಬ ಹೆಸರಿನ ಶಿವಸಿದ್ಧಾಂತ ತಂತ್ರ ದಲ್ಲಿ ಈಶ್ವರನು ಪಾರ್ವತಿಗೆ ಷಟ್‌ಸ್ಥಲನಿರ್ಣಯವನ್ನು ನಿರೂಪಿಸುವುದಾಗಿ ಹೇಳುತ್ತಾನೆ. ಇದರಿಂದ ಬಹುಶಃ ಬಸವಾದಿ ಪ್ರಮಥರಿಗಿಂತ ಮೊದಲೇ ಷಟ್‌ಸ್ಥಲ ಸಿದ್ಧಾಂತ ರೂಪಗೊಂಡಿದ್ದು ಬಸವಾದಿ ಶರಣರ ಕಾಲದಲ್ಲಿ ಅದಕ್ಕೆ ಒಂದು ಚೇತನ, ಮೆರುಗು ದೊರೆಯಿತು. ಅದು ಒಂದು ಕೇವಲ ಸಿದ್ಧಾಂತವಾಗಿ ಉಳಿಯದೇ ಸಾಧನ ಮಾರ್ಗವಾಗಿ ಪರಿಣಮಿಸಿತು.

'ಸ್ಥಲ' ಎನ್ನುವ ಮಾತಿಗೆ ಸ್ಥಾನ, ಮೆಟ್ಟಲು ಎಂಬ ರೂಢವಾದ ಅರ್ಥವಿದೆ. ಸಾಧಕ ತನ್ನ ಕೊನೆಯ ಗುರಿ ಯನ್ನು ಸೇರುವ ಮಾರ್ಗದಲ್ಲಿ ನಿರ್ಮಿತವಾದ ವಿವಿಧ ಹಂತಗಳು ಎಂಬರ್ಥ ಇದಕ್ಕಿದೆ. ಆದರೆ ಇಷ್ಟೇ ಅಲ್ಲದೆ 'ಸ್ಥಲ' ಶಬ್ದಕ್ಕೆ ಒಂದು ವಿಶಿಷ್ಟವಾದ ಅರ್ಥವನ್ನು ವೀರಶೈವ ಕಲ್ಪಿಸಿಕೊಂಡಿದೆ. ಚರಾಚರವಾದ ಈ ಜಗತ್ತು ಯಾವುದರಲ್ಲಿ ಹುಟ್ಟಿ, ಯಾವುದರಲ್ಲಿ ಲಯವಾಗುತ್ತಿದೆಯೋ, ಆ ಏಕಮೇವಾದ್ವಿತೀಯವಾದ ಪರಶಿವಬ್ರಹ್ಮವನ್ನೇ ಸ್ಥಲ ಎಂದು ಇಲ್ಲಿ ಕರೆಯಲಾಗಿದೆ. ಮಗ್ಗೆಯ ಮಾಯಿದೇವರು ಸ್ಥಲ ಶಬ್ದದ ವ್ಯುತ್ಪತ್ತಿಯನ್ನು ಕುರಿತು ಹೀಗೆ ಹೇಳುತ್ತಾರೆ—

ಸ್ಥಕಾರಃ ಸ್ಥಾನವಾಚೀಸ್ಯಾಲ್ಲಕಾರೋ ಲಯವಾಚಕಃ ।
ತಯೋಃ ಕಾರಣಭೂತಂ ಯತ್ತದೇವ ಸ್ಥಲಮುಚ್ಯತೇ ॥

ಅಂದರೆ 'ಸ್ಥ'ಕಾರ ಸ್ಥಾನವಾಚಕ. 'ಲ'ಕಾರ ಲಯವಾಚಕ, ಸೃಷ್ಟಿಯ ಸ್ಥಿತಿ ಲಯಗಳಿಗೆ ಕಾರಣವಾದ ಪರಶಿವತತ್ವವೇ ಸ್ಥಲ. ಈ ಸ್ಥಲ ಅಂದರೆ ಶಿವತತ್ವ. ಹಿಂದೆ ನೋಡಿದಂತೆ ಶಕ್ತಿವಿಶಿಷ್ಟವಾದದ್ದು ತನ್ನಲ್ಲಿ ಅವಿನಾಭಾವದಿಂದ ನಿಹಿತ ವಾಗಿರುವ ಆ ವಿಮರ್ಶೆ ಶಕ್ತಿಯಿಂದ ಈ ಸೃಷ್ಟಿಗೆ ಕಾರಣವಾಗುತ್ತದೆ. ಅಂತೆಯೇ ಎರಡಿಲ್ಲದಂತಿದ್ದ ಆ ನಿಃಕಲ ಲಿಂಗ, ತನ್ನ ಶಕ್ತಿಯ ಕ್ಷೋಭೆಯಿಂದ ಅಂದರೆ ಚಲನೆಯಿಂದ ಲಿಂಗಸ್ಥಲ, ಅಂಗಸ್ಥಲ ಎಂದು ಎರಡಾಗುತ್ತದೆ. ಹೀಗೆ ಏಕ ಮೇವಾದ್ವಿತೀಯವಾಗಿದ್ದ ನಿಷ್ಕಲಲಿಂಗಸ್ಥಲ ಉಪಾಸ್ಯ ಉಪಾಸಕಲೀಲೆಯಿಂದ ಎರಡಾಗಿ ಅನಂತರ ಲಿಂಗಷಟ್ ಸ್ಥಲ, ಅಂಗಷಟ್‌ಸ್ಥಲ ಎಂದು ಒಂದೊಂದೂ ಆರಾಗಿ ಪರಿಣಮಿಸಿದೆ. ಈಗ ಇದನ್ನು ಇನ್ನೊಂದು ದೃಷ್ಟಿಯಿಂದ ನೋಡಬಹುದು. ಮಲತ್ರಯಗಳಿಂದ ಕೂಡಿ ಸಂಸಾರದಲ್ಲಿ ಬದ್ಧವಾದ ಜೀವ ಅಭೀಪ್ಸೆಯಿಂದ ಸಾಧನೆಯಲ್ಲಿ ತೊಡಗಿ ದಾಗ ಅವಲಂಬಿಸಬೇಕಾದ ಮೊದಲನೆ ಹಂತ ಭಕ್ತಸ್ಥಲ. ಭಕ್ತನ ಊರ್ಧ್ವಗಮನ ಪ್ರತೀಕ್ಷೆ ಅಂಗಸ್ಥಲಕ್ಕೆ ಆತನನ್ನು ಅರ್ಹನಾಗುವಂತೆ ಮಾಡುತ್ತದೆ. ಕೇವಲ ಬದ್ಧಜೀವಿಯಾಗಿದ್ದ ಆತ ಎಚ್ಚರಗೊಂಡು ಗುರುಲಬ್ಧವಾದ ದೀಕ್ಷಾತ್ರಯ ದಿಂದ ಶುದ್ಧಜೀವನಾದಾಗಲೇ ಅಂಗನೆಂದು ಕರೆಯಿಸಿಕೊಳ್ಳಲು ಅರ್ಹನಾಗುತ್ತಾನೆ. ಸುಜ್ಞಾನ ಸದ್ಭಕ್ತಿಯ ಹಾದಿ ಯಲ್ಲಿ ನಡೆಯುತ್ತ, ಬಲಿದು ಬೆಳೆಯುತ್ತ, ಅರಳಿ ಹೂವಾಗುತ್ತ ಪರಿಪಕ್ವವಾಗಿ ಲಿಂಗದ ರಸ ತುಂಬಿ ಲಿಂಗದಲ್ಲಿ ಸಮರಸ ವಾಗುವ ಭಕ್ತಿಯ ವಿಕಾಸವೇ ಷಟ್‌ಸ್ಥಲ. "ವಿಶ್ವಾಸವೇ ಪ್ರಾಣವಾಗಿ ಇರುವ ಭಕ್ತ; ಆ ವಿಶ್ವಾಸದೊಳಗಣ ಏಕೋ ನಿಷ್ಠೆಯಲ್ಲಿ ನಿಂದಿರುವಾತ ಮಾಹೇಶ್ವರ; ಈ ನಿಷ್ಠೆಯೊಳಗೆ ಅತ್ತಿತ್ತ ಓಸರಿಸದೆ ನಿರಂತರ ಸಾವಧಾನದಿಂದ ಅರ್ಪಿತವ ಮಾಡುವಾತ ಪ್ರಸಾದಿ: ಆ ಸಾವಧಾನಾರ್ಪಿತದೊಳಗಣ ಸ್ವಾನುಭಾವ ವಿವೇಕ ಅಳವಟ್ಟಾತನೆ ಪ್ರಾಣಲಿಂಗಿ; ಆ ವಿವೇಕದೊಳಗಣ ಅರಿವಿನಿಂದ ಶರಣನಾಗಿ: ಆ ಅರಿವು ನಿಜದಲ್ಲಿ ಸಮರಸಭಾವವನ್ನೈದಿದ ನಿರ್ಭಾವಪದದೊಳು ನಿಂದಾತನೆ ಐಕ್ಯ."

ಭಕ್ತಸ್ಥಲದ ಮುಖ್ಯ ಲಕ್ಷಣ ಅಚಲವಿಶ್ವಾಸ, ಅಂದರೆ ಶ್ರದ್ಧೆ. ಭಕ್ತಸ್ಥಲದ ಈ ಮೊದಲನೆಯ ಹಂತವನ್ನು ಪಿಂಡಸ್ಥಲ ಎಂದು ಕರೆಯಲಾಗಿದೆ. "ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ" ಎಂದು ಸಿದ್ಧಾಂತ ಶಿಖಾಮಣಿ ಹೇಳುವಂತೆ ಪಾಪಸಮೂಹವನ್ನು ಕಳೆದುಕೊಂಡು ಶುದ್ಧಾಂತಃಕರಣನಾದವನು ಪಿಂಡಸ್ಥಲಯೋಗ್ಯನಾಗುತ್ತಾನೆ. ಅವನಲ್ಲಿ ಶಿವತತ್ತ್ವ ಸುಪ್ತವಾಗಿ ಅಡಗಿರುತ್ತದೆಂಬುದನ್ನು ಶರಣರು ಅನೇಕ ವಚನಗಳಲ್ಲಿ ಹೇಳಿದ್ದಾರೆ. "ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು" "ನೆಲದ ಮರೆಯ ನಿಧಾನದಂತೆ" "ಮರೀಚಿಯೊಳಡಗಿದ ಬಿಸಿಲಿನಂತಿದ್ದಿತ್ತು" ಎಂಬ ಮುಂತಾದ ವಚನಗಳಲ್ಲಿ ನೋಡಬಹುದು. ಈ ಭಕ್ತಸ್ಥಲದಲ್ಲಿ ತನುವಂಚನೆ, ಮನವಂಚನೆ, ಧನವಂಚನೆಗೆ ಅನುವಿಲ್ಲ. ಸಾಧಕನಿಗೆ ತನ್ನ ಮಾರ್ಗದ ಸ್ಪಷ್ಟಕಲ್ಪನೆ ಇರಬೇಕು. ತಾನು ಶಿವಸ್ವರೂಪನೆಂದು ತಿಳಿದು ಶಿವನಾಗಿಯೇ ಶಿವನನ್ನು ಪೂಜಿಸತೊಡಗುತ್ತಾನೆ. "ನಾಶಿವಸ್ಯ ಶಿವೋಪಾಸ್ತಿರ್ಘಟತೇ ಜನ್ಮಕೋಟಿಭಿಃ" ಎಂದು ಮಗ್ಗೆಯ ಮಾಯಿದೇವನು ಶಿವನಲ್ಲದವನಿಗೆ ಶಿವೋಪಾಸನೆ ಸಿದ್ಧಿಸದು ಎಂದು ಹೇಳುತ್ತಾನೆ. ಹೀಗೆ ತನ್ನ ಸ್ವರೂಪವನ್ನು ತತ್ತ್ವತಃ ತಿಳಿದ ಭಕ್ತ ಅದರಿಂದ ವಿಸ್ಮೃತಿಗೊಂಡ ತನ್ನ ಇಂದಿನ ಪರಿಮಿತ ಶಕ್ತಿಯನ್ನು ಪರಿಭಾವಿಸುತ್ತಾನೆ. 'ತನ್ನ' ಮರವೆಗೆ ಕಾರಣವಾದ ಸಂಸಾರದ ವಿಚಾರದಲ್ಲಿ ಒಂದು ಜಿಹಾಸೆ ಸಹಜವಾಗಿಯೇ ಉಂಟಾಗುತ್ತವೆ. ಅದೇ ಸಂಸಾರಹೇಯಸ್ಥಲ. ಈ ಸಂಸಾರ ತಿರಸ್ಕರಣೀಯ ತ್ಯಾಜ್ಯ ಎಂಬುದು ಇಲ್ಲಿನ ಉದ್ದೇಶವಲ್ಲ; ಇದನ್ನು ಮೀರಿ ಮುನ್ನಡೆಯಬೇಕಾದರೆ ಕ್ಷಣಕಾಲ ಇದರಿಂದ ದೂರನಿಂತು ನೋಡುವ ನಿರ್ಲಿಪ್ತ ಮನೋಧರ್ಮ ಆವಶ್ಯಕವೆಂಬುದನ್ನು ಇದು ಸೂಚಿಸುತ್ತದೆ. ಕಾಣದ ಶಕ್ತಿಯೊಂದರ ವಿಚಾರದಲ್ಲಿ ಶ್ರದ್ಧೆ, ನಿಷ್ಠೆಗಳು ಕೈಗೂಡಬೇಕಾದರೆ ನಾವು ಕಂಡುಂಡುದರ ಈ ವಿಚಾರದಲ್ಲಿ ಒಂದು ಬಗೆಯ ಅತೃಪ್ತಿ ಅನಿವಾರ್ಯ. ಸಂಸಾರಹೇಯಸ್ಥಲದ ನಿರೂಪಣೆಯನ್ನು ಶರಣರು ಬಹಳ ಪರಿಣಾಮಕಾರಿಯಾಗಿ ಮಾಡಿದ್ದಾರೆ. ಮುಂದೆ ಗುರುಕಾರುಣ್ಯದಿಂದ ಶಿವಜ್ಞಾನೋದಯವಾಗಿ ಸರ್ವಾಂಗದಲ್ಲಿ ಲಿಂಗಕಳೆ ಅಂಕುರವಾಗಿ ತಾನು ಜೀವಾತ್ಮನೆಂಬ ಜೀವಭಾವ ಹಿಂಗಿ, ತನ್ನ ಕಳೆಯಾದ ಲಿಂಗಕಳೆ, ಚಿತ್ಕಳೆಯನ್ನು ಪ್ರತ್ಯಕ್ಷವಾಗಿ ಅಂಗೈಯ ನೆಲ್ಲಿಯಂತೆ ಕರಸ್ಥಲದಲ್ಲಿ ಕಂಡು ಜೀವಾತ್ಮರತಿ ಕರಗುತ್ತ 'ತಾನು ಶಿವ'ನೆಂಬ ಶಿವಾತ್ಮಕಾಮಪಟುವಾಗಿ, ಶಿವಕಳೆಯೆ ತನ್ನ ಆತ್ಮಕಾಮದ ಶಿವಾಪೇಕ್ಷೆಯ ಇಷ್ಟಮೂರ್ತಿಯ ಕಳೆ ದಿಟದಿಟವೆಂದು ನಂಬಿರುವುದೇ ವಿಶ್ವಾಸ.

ಮಾಹೇಶ್ವರಸ್ಥಲದ ವಿಶೇಷವೆಂದರೆ ನಿಷ್ಠೆ. ಏಕೈಕ ನಿಷ್ಠೆ. ಸದ್ಭಕ್ತಿಗೆ ಇಲ್ಲಿ ಯೌವನ ಪ್ರಾಪ್ತವಾಗಿದೆ. ಈ ಸ್ಥಲದಲ್ಲಿ ಪತಿವ್ರತೆಯ ತನು ಮನ ಹೃದಯ ನೆಟ್ಟಿರುವುದು ತನ್ನ ಪತಿದೇವನಲ್ಲಿ. ಅದರಂತೆ ಲಿಂಗದಲ್ಲಿ ನೆಟ್ಟ ಭಕ್ತನ ಭಕ್ತಿಯೇ ನಿಷ್ಠಾಭಕ್ತಿ. ಆ ಏಕೈಕ ನಿಷ್ಠೆಯೇ ಮಾಹೇಶ್ವರನ ಪ್ರಾಣ. ನಿಷ್ಠೆ ಇಲ್ಲದೆ ಭಕ್ತಿ, ಪೂಜೆ, ಧ್ಯಾನ ಧಾರಣಗಳನ್ನು ಏಸು ಕಾಲ ಮಾಡಿದರೇನು ? "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ" ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ" "ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ" ಒಮ್ಮೆ ಲಿಂಗಭಕ್ತ; ಮತ್ತೊಮ್ಮೆ ಶೈವಭಕ್ತ ಒಮ್ಮೆ ಕಾಶೀವಿಶ್ವನಾಥ, ಮತ್ತೊಮ್ಮೆ ಬರ್ಮಪ್ಪ, ಬೀರಪ್ಪ, ಕೆಂಚಪ್ಪ, ತೀರ್ಥಯಾತ್ರೆ ಕ್ಷೇತ್ರ, ತಿಥಿ, ವಾರ, ನಕ್ಷತ್ರ, ಪಂಚಪಾತಕ, ಉಪವಾಸ, ಜಾಗರಣೆ—ಹೀಗೆ ಹಲವಕ್ಕೆ ಹರಿವ ಹೃದಯದಲ್ಲಿ ಭಕ್ತಿನಿಷ್ಠೆಯ ಕುರುಹುಂಟೇ ? ಅನುಕೂಲ ಬಂದಂತೆ ಭಕ್ತಿಯನ್ನು ಊರುತ್ತ ಹೋದರೆ, ಭಕ್ತಿ ಬೇರುಬಿಟ್ಟು ದಿವ್ಯದ ವಿಸ್ತಾರಕ್ಕೆ ಹರಡುವುದೆಂತು ? ಗುರುವು ಕರುಣಿಸಿ ಕರಸ್ಥಲಕ್ಕೆ ತಂದುಕೊಟ್ಟ ಚಿತ್‌ಕಲಾಲಿಂಗವು ಕಣ್ಣಮುಂದೆ ಬೆಳಗುತ್ತಿರಲು ಬೇರೆ ತಿಥಿ, ವಾರ, ಕರ್ಮಸೂತಕ ತೀರ್ಥಯಾತ್ರೆಗೆ ಇಲ್ಲಿ ಇಂಬಿಲ್ಲ, ಎಡೆಯಿಲ್ಲ. ನಿಚ್ಚಳ ಪತಿವ್ರತೆಗೆ ದೇವನೊಬ್ಬ ಪತಿದೇವ ವ್ರತ ಒಂದು, ಪತಿವ್ರತೆಗೆ ಪತಿಯೇ ಕುಲ. ಪತಿಯೇ ಜಾತಿ, ಪತಿಯೇ ತೀರ್ಥಕ್ಷೇತ್ರ ಯಾತ್ರೆ. ಪತಿಯೇ ತಿಥಿ, ವಾರ, ನಕ್ಷತ್ರ, ಆತನೇ ಭಾಗ್ಯ, ಆತನೇ ಸಂಪತ್ತು. ಇಂಥ ಮಹಾಸತಿಯ ಪರಿಶುದ್ಧ ಪ್ರೇಮ ತನ್ನ ನಾಥನಲ್ಲಿಯೇ ನಿಷ್ಠವಾಗಿರುವಂತೆ ಸದ್ಭಕ್ತನ ಭಕ್ತಿ ಲಿಂಗೈಕನಿಷ್ಠವಾಗಿದೆ. ಲಿಂಗದೇವೈಕನಿಷ್ಠವಾಗಿದೆ. ಅಸತ್ಯ, ಅನೀತಿ, ಪರಧನ, ಪರಸ್ತ್ರೀ, ಪರಹಿಂಸೆ, ಪರಲೋಕ, ಪರದೈವವ ಹೊದ್ದಲೀಯದೆ ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದು ಬೇಕು ನಾಳಿಗೆ ಕಾದಿಡಬೇಕು ಎಂಬ ಲೋಭವ ಅತ್ತತ್ತ ಕೆಡನೂಕಿ "ಸದಾಸಂತುಷ್ಟಹೃದಯಃ ಸರ್ವಪ್ರಾಣಿಹಿತೇ ರತಃ" ತಾನಾಗಿ ನಯ, ವಿನಯ, ಭಯ, ಭೃತ್ಯಾಚಾರವೆ ಅಂಗವಾಗಿ ಇರಬಲ್ಲರೆ ಆತ ಮಾಹೇಶ್ವರ.

ಶ್ರದ್ಧಾಭಕ್ತಿ ನೈಷ್ಠಿಕೀಭಕ್ತಿಯನ್ನು ದಾಟಿ, ಭಕ್ತ ಅವಧಾನಭಕ್ತಿಯೆಡೆಗೆ ಮುನ್ನಡೆಯುತ್ತಾನೆ. ಪ್ರಸಾದಿಸ್ಥಲದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ: ಸತತಕ್ರಿಯೆಯಲ್ಲಿ ನಿರತನಾದರೂ ಅವುಗಳಿಗೆ ಅತೀತವಾಗಿರುವ ನಿರ್ಲಿಪ್ತತೆಯನ್ನು ರೂಢಿಸಿಕೊಳ್ಳುವ ಬಗೆ. ಕರ್ಮನಿರತರಾಗದೆ ಈ ಲೋಕದಲ್ಲಿ ಬದುಕುವ ಹಕ್ಕು

ಯಾರಿಗೂ ಇಲ್ಲ. "ಕೃಷಿಯ ಮಾಡದೆ ಹಸಿವು ಹರಿವ ಪರಿ ಇನ್ನೆಂತೋ ?" ಅಂತರಂಗದಲ್ಲಿ ಅರಿವಾದಡೇನಯ್ಯಾ ಬಹಿರಂಗದಲ್ಲಿ ಕ್ರೀ ಇಲ್ಲದನ್ನಕ್ಕರ ? ಕರ್ಮವನ್ನು ಮಾಡಲೇಬೇಕು. ಆದರೆ ಮಾಡಿದೆನೆಂಬುದು ಮನದಲ್ಲಿ ಹೊಳೆಯಬಾರದು : ಅದು ಅಹಂಕಾರಕ್ಕೆ ಕಾರಣವಾಗಬಾರದು : ಬಯಕೆಯ ಮೂಲವಾಗಬಾರದು. "ಫಲಪದದಾಸೆಯ ಮಾಡಲಾಗದು ಕ್ರಿಯೆಯಲ್ಲಿ" ಎಂಬ ಶರಣರ ಮಾತು ಗೀತೆಯ ನಿಷ್ಕಾಮ ಕರ್ಮಯೋಗದ ರಹಸ್ಯವನ್ನು ಒಳಗೊಂಡಿದೆ. ಆದರೆ ಇಲ್ಲಿ ನಿಷ್ಕಾಮ ಎಂಬುದಕ್ಕೆ ಇನ್ನೂ ಹೆಚ್ಚಿನ ವ್ಯಾಪಕತೆ ಕಂಡುಬರುತ್ತದೆ. ಅವರು ದುಡಿಯುವುದು ಹೇಮದಾಸೆಯಿಂದಲ್ಲ, ನೇಮದ ಕೂಲಿಯ ನಿಷ್ಠೆಯಿಂದ. ಭಕ್ತ ದುಡಿಯುವದು ತನಗಾಗಿ ಅಲ್ಲ, ದಾಸೋಹಕ್ಕಾಗಿ, ದಾಸೋಹಕ್ಕೆ ಶರಣರ ಭಕ್ತಿಸಾಧನೆಯಲ್ಲಿ ಬಹಳ ಮಹತ್ವದ ಸ್ಥಾನವಿದೆ. ಭಕ್ತನು ಯಾವುದೇ ಕಾರ್ಯವನ್ನು ಮಾಡಿದರೂ ಅದು ಗುರು, ಲಿಂಗ, ಜಂಗಮಕ್ಕೆ. ಅವನು ತನು, ಮನ, ಧನಗಳನ್ನು ಅರ್ಪಿಸುವುದು ಗುರು, ಲಿಂಗ, ಜಂಗಮಕ್ಕೆ ಅಲ್ಲದೆ ಮತ್ತೊಂದಕ್ಕಲ್ಲ.

ಬಂದುದೆಲ್ಲವನ್ನು ಲಿಂಗಕ್ಕೆ ಅರ್ಪಿಸುವದು ಪ್ರಸಾದ ತತ್ವದ ಒಂದು ಮುಖವಾದರೆ, ತನ್ನನ್ನೇ ಸಂಪೂರ್ಣವಾಗಿ ಲಿಂಗಕ್ಕೆ ಅರ್ಪಿಸಿಕೊಳ್ಳುವುದು ಇನ್ನೊಂದು ಮುಖ. "ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ ; ಹತ್ತೆ ಕರೆದಿಕ್ಕುವುದು ಪ್ರಸಾದವಲ್ಲ ; ತಕ್ಕೈಸಿ ನಿಮ್ಮವನಪ್ಪಿಕೊಂಡುದೇ ನಿಶ್ಚಯ ಪ್ರಸಾದ" ಎಂಬ ದೇವರದಾಸಿಮಯ್ಯನ ಮಾತಿನಲ್ಲಿ ಪ್ರಸಾದದ ನಿಜಸ್ವರೂಪ ವ್ಯಕ್ತವಾಗಿದೆ. ದೇವರಿಗೆ ನೈವೇದ್ಯ ಮಾಡಿದುದು ಅರ್ಪಿತವಾಗಿ ಉಳಿದುದನ್ನು ಪ್ರಸಾದವೆಂದು ಭಾವಿಸುವುದು ಒಂದು ಹಂತದಲ್ಲಿ ಮಾತ್ರ. ನಿಜವಾದ ಪ್ರಸಾದವೆಂದರೆ ತಕ್ಕೈಸಿ ಶಿವನನ್ನೇ ಅಪ್ಪಿಕೊಳ್ಳುವದು. ಭಕ್ತನ ಸಕಲೇಚ್ಛೆಗಳು, ಶಿವನೇಚ್ಛೆಗಳು, ಭಕ್ತನ ಸುಖಭೋಗಗಳೆಲ್ಲ ಶಿವನ ಭೋಗಗಳು. ವೀರಶೈವ ಧರ್ಮದಲ್ಲಿ ಪ್ರಸಾದತತ್ವ ವಿಶಿಷ್ಟವಾಗಿದೆ.

ಇನ್ನು ಪ್ರಾಣಲಿಂಗಿ ಸ್ಥಲದಲ್ಲಿ ಸಾಧನೆ ಧ್ಯಾನದ ಕಡೆಗೆ, ಅನುಸಂಧಾನದ ಕಡೆಗೆ ತಿರುಗುತ್ತದೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಇಲ್ಲಿ ಲಿಂಗ ಉಪಾಸ್ಯವಾದ ಸ್ಥೂಲವಸ್ತು ಮಾತ್ರವಾಗಿ ಉಳಿಯುವುದಿಲ್ಲ. ಅದು ಅಂತರಂಗ ಬಹಿರಂಗವನ್ನೆಲ್ಲಾ ವ್ಯಾಪಿಸಿದ ಶಕ್ತಿಯಾಗುತ್ತದೆ. ಪ್ರಸಾದಿಸ್ಥಲದ ಇಷ್ಟಲಿಂಗೋಪಾಸನೆ ಪ್ರಾಣಲಿಂಗಿ ಸ್ಥಲದಲ್ಲಿ ಅಂತಃಶಕ್ತಿಗಳನ್ನು ಜಾಗೃತಗೊಳಿಸುವ ಯೋಗದ ಕಡೆಗೆ ತಿರುಗುತ್ತದೆ. ಅನುಭಾವ ಭಕ್ತಿಯಿಂದ ಇಷ್ಟಲಿಂಗದ ಅನುಸಂಧಾನವನ್ನು ಕೈಕೊಳ್ಳುತ್ತದೆ. ಪ್ರಾಣಲಿಂಗಿಸ್ಥಲ ಯೋಗಾಭ್ಯಾಸದ ಕೊನೆಯ ಹಂತವನ್ನು ಒಳಗೊಂಡಿದೆ. ಶರಣರು ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. "ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನಿಷ್ಠೆ, ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ, ಐಕ್ಯಂಗೆ ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ" ಎಂದು ಮೋಳಿಗೆ ಮಾರಯ್ಯಗಳ ಪತ್ನಿ ಮಹಾದೇವಮ್ಮ ಹೇಳುತ್ತಾಳೆ: ಮೊದಲನೆಯ ಮೂರು ಸ್ಥಲಗಳಲ್ಲಿ ಭಕ್ತಿ, ಕ್ರಿಯೆ, ಜ್ಞಾನರೂಪವಾದ ಪೂರ್ವಸಿದ್ಧತೆ ಪಡೆದು, ಇಲ್ಲಿ ಆ ಮೂರು ಮುಪ್ಪುರಿಗೊಂಡು ದೇಹದಲ್ಲಿರುವ ಅಂತಃಶಕ್ತಿಯನ್ನು ಜಾಗೃತಗೊಳಿಸುವ ಯೋಗಸಾಧನೆಯನ್ನು ಕೈಕೊಳ್ಳುತ್ತವೆ. ಕರಸ್ಥಲದಲ್ಲಿದ್ದ ಇಷ್ಟಲಿಂಗ, ದೃಷ್ಟಿಯೋಗದಿಂದ ಕಣ್ಣುಗಳನ್ನು ತುಂಬುತ್ತದೆ. ಕಂಗಳ ನೋಟದ ಮೂಲಕ ಮನದ ಕೊನೆಯನ್ನು ಹೋಗುತ್ತದೆ. ಮನದ ಕೊನೆಯಲ್ಲಿ ನೋಡಿದರೆ ಭಾವದಲ್ಲಿ ಇಂಬಿಡುತ್ತದೆ ; ಆತನ ಸರ್ವಾಂಗವನ್ನೂ ವ್ಯಾಪಿಸುತ್ತದೆ. ಅಂದರೆ ಇಷ್ಟಲಿಂಗವೇ ಪ್ರಾಣಲಿಂಗ ಭಾವಲಿಂಗವಾಗಿ, ಕೊನೆಯಲ್ಲಿ ಸರ್ವಾಂಗಲಿಂಗವಾಗಿ ಪರಿಣಮಿಸುತ್ತದೆ. ಒಟ್ಟಿನಲ್ಲಿ ಪ್ರಾಣಲಿಂಗಿಸ್ಥಲದಲ್ಲಿ ಸಾಧಕ ತನ್ನ ಅಂತಃಶಕ್ತಿಯ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಪ್ರಾಣಲಿಂಗಿಸ್ಥಲದಲ್ಲಿ ಪ್ರಯತ್ನಪೂರ್ವಕವಾಗಿ ಕೈಕೊಂಡ ಯೋಗಸಾಧನೆಯು ಶರಣ ಐಕ್ಯಸ್ಥಲಗಳಲ್ಲಿ ಸಹಜಸ್ಥಿತಿಯಾಗಿ ಪರಿಣಮಿಸುತ್ತದೆ. ಇಲ್ಲಿ ಭಾವಲಿಂಗ ಭರಿತವಾಗಿ ಆನಂದ ಮತ್ತು ಸಮರಸ ಭಕ್ತಿಗಳಿಂದ ಆತ್ಯಂತಿಕ ತೃಪ್ತಿಯನ್ನು ಪಡೆಯುತ್ತಾನೆ. 'ಶರಣ' ಎನ್ನುವ ಮಾತನ್ನು ಶಿವನಿಗೆ ಶರಣ ಹೊಕ್ಕವನು 'ಶಿವಯೋಗಸಾಧಕ' ಎಂಬ ಸಾಮಾನ್ಯಾರ್ಥ್ಯದಲ್ಲಿಯೂ ಬಳಸಿರುವುದುಂಟು. ಆದರೆ ಶರಣ ಸ್ಥಲದ ನಿಲುವನ್ನು ಹೇಳುವಾಗ ಇದಕ್ಕೆ ಲಭಿಸುವ ಅರ್ಥವೇ ಬೇರೆ. ಮೊದಲು ನಾಲ್ಕು ಹಂತಗಳನ್ನು ದಾಟಿ ಶಿವಯೋಗದ ತುತ್ತತುದಿಯಲ್ಲಿ ನಿಂತ ಅನುಭಾವಿ ಎಂಬ ಅರ್ಥದಲ್ಲಿ ಈ ಮಾತು ಬರುತ್ತದೆ. ಆಧ್ಯಾತ್ಮಿಕವಾಗಿ ಆತ ಸಿದ್ಧಿಯ ಶಿಖರದಲ್ಲಿ ನಿಂತವನು. ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ ಭಕ್ತಿಗಳನ್ನು ದಾಟಿ ಆನಂದ ಭಕ್ತಿಯಲ್ಲಿ ನಿಬ್ಬೆರಗಾದವನು. "ಲಿಂಗವೇ ಪತಿಯಾಗಿ ಅನ್ಯವನರಿಯದೆ, ಪಂಚೇಂದ್ರಿಯವಿರಹಿತನಾಗಿ, ತೆರಹಿಲ್ಲದ ಅರುಹು ತಾನಾಗಿ, ನೆರೆ ಆರುಹಿನೊಳು ನಿಬ್ಬೆರಗಾಗಿ, ಹೃದಯ ಕಮಲ ಮಧ್ಯದಲ್ಲಿ ಪರಮೇಶ್ವರನೊಳಗಣ ಪರಸ್ನೇಹವೆರಸಿ ಅಗಲದಿಪ್ಪುದೀಗ ಶರಣಸ್ಥಲ" ಎನ್ನುತ್ತಾನೆ ಒಬ್ಬ ಶರಣ. "ಸ್ಫಟಿಕದ ಘಟದೊಳಗೆ ಎತ್ತಿದ ಜ್ಯೋತಿ ಒಳಹೊರ

ಗೊಂದೇ ಸ್ವಯವಾಗಿ ಪ್ರಜ್ವಲಿಸುವಂತೆ" ಲಿಂಗಭರಿತ ಶರಣನ ಅಪೂರ್ವ ಕಾಂತಿ ಒಳಹೊರಗೊಂದಾಗಿ ಪ್ರಜ್ವಲಿಸುತ್ತದೆ.

ಈ ಸ್ಥಲದಲ್ಲಿ ಕಾಣುವ ಮುಖ್ಯ ವೈಶಿಷ್ಟ್ಯವೆಂದರೆ, ಈ ಐಕ್ಯತೆಯನ್ನು ಸಹಜಸ್ಥಿತಿಯನ್ನಾಗಿ ಪಡೆದಿದ್ದರೂ ಆತ ಲೌಕಿಕ ಜಗತ್ತಿನ ಸಂಪರ್ಕವನ್ನು ಕಳೆದುಕೊಳ್ಳದಿರುವುದು. ಶರಣ ಸತಿ ಲಿಂಗ ಪತಿ ಎಂಬ ಭಾವನೆಯಿಂದ ತನ್ನನ್ನು ಸಂಪೂರ್ಣವಾಗಿ ತನ್ನ ಪತಿ ಶಿವನಿಗೆ ಅರ್ಪಿಸಿಕೊಳ್ಳುತ್ತಾನೆ ಶರಣ.

ಇನ್ನು ಐಕ್ಯಸ್ಥಲ ಇದರ ಮುಂದಿನ ಹಂತ. ತನ್ನ ಕರ್ತವ್ಯವನ್ನು ನಿರ್ವಹಿಸಿದ ಅನುಭಾವಿ ಸಂಪೂರ್ಣ ಸಾಮರಸ್ಯದಲ್ಲಿ ಲೀನವಾಗುವುದನ್ನು ಇಲ್ಲಿ ಕಾಣುತ್ತೇವೆ. "ಘೃತ ಘೃತವ ಬೆರೆಸಿದಂತೆ, ಕ್ಷೀರ ಕ್ಷೀರವ ಬೆರೆಸಿದಂತೆ, ತೈಲ ತೈಲವ ಬೆರೆಸಿದಂತೆ, 'ಜ್ಯೋತಿ ಜ್ಯೋತಿಯ ಬೆರೆಸಿದಂತೆ, ಬಯಲು ಬಯಲ ಬೆರೆಸಿದಂತೆ" ಪ್ರಾಣ ಸಂಯೋಗವಾಗಿ ಲಿಂಗ ಸಮರಸವಾಗುತ್ತದೆ, ಕರ್ಪೂರ ಅಗ್ನಿಸಂಯೋಗವಾಗಿ ಕರ್ಪೂರದ ಗುಣವಳಿದು ಅಗ್ನಿಯಾದಂತೆ, ಲಿಂಗವ ನೆನೆದು ಲಿಂಗವೇ ತಾನಾಗಿ ಪರಿಣಮಿಸುತ್ತಾನೆ. ಅಂಗ ಲಿಂಗಗಳಲ್ಲಿ ಎರಡೆಂಬ ಭಾವವಳಿದು ಏಕೋಭಾವ ಮೂಡುತ್ತದೆ. ಭಿನ್ನದಲ್ಲಾದ ಪ್ರಾಪ್ತಿಯಳಿದು ಅವಿರಳ ಸಮರಸಸೌಖ್ಯದ ಅದ್ವೈತ ಸಿದ್ಧಿಸುತ್ತದೆ. ಪ್ರವೃತ್ತಿಮಾರ್ಗದಲ್ಲಿ ಒಂದು ಮೂರಾಗಿ, ಮೂರು ಆರಾದಂತೆ ನಿವೃತ್ತಿಮಾರ್ಗದಲ್ಲಿ ಆರು ಮೂರಾಗಿ, ಮೂರು ಒಂದರಲ್ಲಿ ಅಡಗುತ್ತದೆ. "ಭಕ್ತಸ್ಥಲ ಮಾಹೇಶ್ವರಸ್ಥಲದೊಳಡಗಿ, ಮಾಹೇಶ್ವರಸ್ಥಲ ಪ್ರಸಾದಿಸ್ಥಲದೊಳಡಗಿ, ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಳದೊಳಡಗಿ, ಪ್ರಾಣಲಿಂಗಿಸ್ಥಲ ಶರಣಸ್ಥಲದೊಳಡಗಿ, ಶರಣಸ್ಥಲ ಐಕ್ಯಸ್ಥಲದೊಳಡಗಿ ಇಂತೀ ಷಡಂಗಯೋಗ ಸಮರಸವಾಗಿ, ಷಟ್‌ಸ್ಥಲವ ಮೀರಿ, ನಿರವಯುವಸ್ಥಲವನೈದಿ, ಆ ನಿರವಯಸ್ಥಲ, ನಿರಾಳದಲ್ಲಿ ಅಡಗಿ" ಭಾವವೆಲ್ಲಾ ನಿರ್ಭಾವವಾಗುತ್ತದೆ : ನಿರ್ಲೇಪನಿರಂಜನ ವಸ್ತು ತಾನೇ ತಾನಾಗುತ್ತದೆ. ಷಟ್‌ಸ್ಥಲಗಳಿಗೂ ಅತೀತವಾದ ನಿಃಸ್ಥಲದ ನಿಲವು ಇಲ್ಲಿ ಕಾಣುತ್ತದೆ. ಮನವೇ ಲಿಂಗವಾದ ಬಳಿಕ ಅಲ್ಲಿ ಯಾರನ್ನು ಯಾರು ನೆನೆವುದು? ಭಾವವೇ? ಐಕ್ಯವಾದ ಬಳಿಕ ಬಯಸುವುದೇನನ್ನು? ಅರಗಿನ ದೇಗುಲದಲ್ಲಿ ಉರಿಯಲಿಂಗ ಮೂಡಿದಂತೆ, ಉರಿಯುಪರ್ವತಕ್ಕೆ ಅರಗಿನ ಬಾಣದಲೆಚ್ಚಂತೆ, ಕರ್ಪೂರದ ಗಿರಿಯು ಉರಿಕೊಂಡಂತೆ.

ವೀರಶೈವಧರ್ಮದ ಧಾರ್ಮಿಕ ಆಚರಣೆಯ ಗುಂಪಿಗೆ ಸೇರಿದವು ಅಷ್ಟಾವರಣಗಳು. ಷಟ್‌ಸ್ಥಲದಲ್ಲಿಯೇ ಅಷ್ಟಾವರಣಗಳು ಸೇರಿದರೂ ಆ ಎಂಟು ಆವರಣಗಳನ್ನು ಒಂದು ಗುಂಪುಮಾಡಿ ಅದರದೇ ಆದ ವಿಶಿಷ್ಟ ನಿರೂಪಣೆ ವೀರಶೈವಧರ್ಮದಲ್ಲಿ ಬರುತ್ತದೆ. ಎಂಟು ಆವರಣಗಳ ಗುಂಪಿಗೆ ಅಷ್ಟಾವರಣ ಎಂದು ಕರೆದಿರುವರು. ಅವು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ. ಈ ಅಷ್ಟಾವರಣಗಳಲ್ಲಿ ಗುರು, ಲಿಂಗ, ಜಂಗಮ ಬಹಳ ಪ್ರಮುಖ ಸ್ಥಾನವನ್ನು ಪಡೆಯುತ್ತವೆ. ಷಟ್‌ಸ್ಥಲಮಾರ್ಗದ ತ್ರಿವಿಧ ದಾಸೋಹಕ್ಕೆ ಇವು ಆಧಾರ ಸ್ವರೂಪವಾದವುಗಳು. ಸಾಧನೆಯ ನೆಲೆ, ಸಾಧ್ಯಮಾನವಾದ ಕುರುಹು ಮತ್ತು ಸಿದ್ಧಿಯ ನಿಲವು ಈ ಮೂರೂ ಅಂಗಗಳನ್ನು ಇವು ಪ್ರತಿನಿಧಿಸುತ್ತವೆ. ಪಾದೋದಕ ಪ್ರಸಾದಗಳೆರಡೂ ಇವುಗಳಿಂದ ಲಭ್ಯವಾದವು. ಅಂತರಂಗಿಕವಾದ ಚಿತ್‌ಶಕ್ತಿಯ ವಿದ್ಯುತ್ ಸ್ಪರ್ಶಕ್ಕೆ ಕಾರಣವಾದ ಕರುಣೆಯ ಸಾಧನೆಗಳು. ಇನ್ನು ವಿಭೂತಿ ರುದ್ರಾಕ್ಷಿಗಳು ಒಂದು ಗುಂಪಾಗಿ ನಿಲ್ಲುತ್ತವೆ. ಸ್ಥೂಲದೇಹದ ಮೇಲೆ ಧರಿಸುವ ಇವುಗಳೂ ತಮ್ಮ ಮೂಲ ಮತ್ತು ಜಾಲಗಳೆರಡನ್ನೂ ಆಂತರಿಕ ವಿದ್ಯುತ್‌ಕೋಶದ ಶಕ್ತಿಕೇಂದ್ರಕ್ಕೆ ಸೇರಿಸುತ್ತವೆ. ಅಷ್ಟಾವರಣಗಳಲ್ಲಿ ಕೊನೆಯದು ಮಂತ್ರ; ಇವೆಲ್ಲಕ್ಕಿಂತಲೂ ಬೇರೆಯಾದ ಒಂದು ವಿಶಿಷ್ಟ ನಿಲವು ಇದರದು. ಇವೆಲ್ಲಕ್ಕೂ ಜೀವವನ್ನು ತುಂಬುವ ಮಾಂತ್ರಿಕ ಶಕ್ತಿ ಇದು.

ಅಷ್ಟಾವರಣಗಳು ದೇಹದಲ್ಲಿರುವ ಸುಪ್ತಶಕ್ತಿಗಳನ್ನು ಜಾಗ್ರತಗೊಳಿಸುವುದಕ್ಕೆ ಕಾರಣವಾಗುವುವಲ್ಲದೆ ಅವು ವಿಕಾಸಗೊಳ್ಳುವುದಕ್ಕೆ ಅಗತ್ಯವಾದ ಪ್ರಾಯೋಗಿಕ ಮಾರ್ಗವನ್ನು ಅಷ್ಟಾವರಣಗಳು ಕಲ್ಪಿಸಿಕೊಡುತ್ತವೆ. ಇವುಗಳಿಂದ ಸಾಧನೆಯಲ್ಲಿ ಶ್ರದ್ಧೆ, ಧ್ಯಾನದಲ್ಲಿ ಏಕಾಗ್ರತೆ, ಅಂತರಂಗ ಬಹಿರಂಗ ಶುದ್ಧಿ ಲಭಿಸುತ್ತವೆ. ಸ್ಥೂಲ ಶರೀರದಲ್ಲಿ ಇವುಗಳನ್ನು ಧರಿಸಿದಂತೆ ಸೂಕ್ಷ್ಮ ಶರೀರದಲ್ಲಿಯೂ ಇವುಗಳನ್ನು ಅಳವಡಿಸಿಕೊಳ್ಳಬೇಕು.

ವೀರಶೈವಧರ್ಮದ ಈ ತಾತ್ವಿಕ ಚಿಂತನೆ ಮತ್ತು ಧಾರ್ಮಿಕ ಮಾರ್ಗಗಳಿಗೆ ಪೂರಕವಾಗಿ ನೈತಿಕ ನಿಯಮಗಳು ಬೆಳೆದು ಬಂದಿವೆ: 'ಪಂಚಾಚಾರ' ಎಂದು ಪಾರಿಭಾಷಿಕವಾಗಿ ಕರೆಯುವ ಐದು ಆಚಾರಗಳಲ್ಲಿ ಈ ಧರ್ಮದ ನೈತಿಕ ನಿರೂಪಣೆಯ ವ್ಯಾಪಕವಾದ ಸ್ವರೂಪವನ್ನು ಶರಣರು ಪ್ರತಿಪಾದಿಸಿದ್ದಾರೆ. "ಅಷ್ಟಾವರಣ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲಮಾರ್ಗದಲ್ಲಿ ನಡೆದರೆ ಅವನಿಗೆ ಲಿಂಗಾಂಗಸಾಮರಸ್ಯ ಸಿದ್ಧಿಸುವುದು" ಎಂದು ಹೇಳಿರುವುದೂ ಉಂಟು. ಇದು ವೀರಶೈವಧರ್ಮದ ಪೂರ್ಣಸ್ವರೂಪವನ್ನು ಸೂಚ್ಯವಾಗಿ ನಿರೂಪಿಸುತ್ತದೆ.

ಧಾರ್ಮಿಕ ಆಚರಣೆಯಲ್ಲಿ ನೀತಿಗೆ ಬಹಳ ಮಹತ್ವದ ಸ್ಥಾನವನ್ನು ಕೊಟ್ಟಿದೆ. ವೀರಶೈವ ನೈತಿಕನಿಷ್ಠೆಯಿಲ್ಲದ ಧಾರ್ಮಿಕತೆ ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಹಿತಕಾರಿಯಾಗದೆಂಬುದು ಅವರ ನಂಬುಗೆ. 'ಪಂಚಾಚಾರವೇ ಪ್ರಾಣ' ಎಂಬ ಮಾತು ನೈತಿಕ ನಿಲುವಿನ ವ್ಯಾಪಕತೆಯನ್ನು ಸೂಚಿಸುತ್ತದೆ. ಶರಣರ ಆಚಾರ, ಜ್ಞಾನ ಮತ್ತು ಕ್ರಿಯೆಗಳೆರಡನ್ನು ಗರ್ಭೀಕರಿಸಿಕೊಂಡಿದೆಯೆಂಬುದು ಅವರ ಮಾತಿನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಹೀಗೆ ಸತ್ಕ್ರಿಯಾಚಾರದ ತಳಹದಿಯ ಮೇಲೆ ಶರಣರು ಧಾರ್ಮಿಕ ಜೀವನದ ಸೌಧವನ್ನು ಕಟ್ಟಿದರು. ಪಂಚಾಚಾರಗಳು ಮುಖ್ಯವಾಗಿ ನೈತಿಕ ನಿಯಮಗಳನ್ನು ಕುರಿತವುಗಳು. ಇವುಗಳ ಸ್ವರೂಪವನ್ನು ಚೆನ್ನಬಸವಣ್ಣ ಸಾರಸಂಗ್ರಹವಾಗಿ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ :

"ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಪಂಚಾಚಾರದ ಆಚರಣೆಯೆಂತೆಂದಡೆ ;
ಲಿಂಗವಲ್ಲದೆ ಅನ್ಯದನರಿಯದುದೇ ಲಿಂಗಾಚಾರ ;
ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ ನೀಡಿ ಸತ್ಯಶುದ್ಧನಾಗಿಹುದೇ ಸದಾಚಾರ ;
ಶಿವಭಕ್ತರಲ್ಲಿ ಕುಲ, ಗೋತ್ರ, ಜಾತಿ, ವರ್ಣಾಶ್ರಮವನರಸದೆ ಅವರೊಕ್ಕುದ ಕೊಂಬುದೆ ಶಿವಾಚಾರ ;
ಶಿವಶರಣರೇ ಹಿರಿಯರಾಗಿ ತಾನೆ ಕಿರಿಯನಾಗಿ ಭಯಭಕ್ತಿಯಿಂದ ಆಚರಿಸುವುದೆ ಭೃತ್ಯಾಚಾರ ;
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯ ಪ್ರಭುವೆ ಕೂಡಲ ಚೆನ್ನಸಂಗಮದೇವಾ."

ಪಂಚಾಚಾರಗಳಲ್ಲದೆ 'ಸಪ್ತಾಚಾರಗಳು' ಎಂಬ ಮಾತೂ ಬರುತ್ತದೆ. ಒಟ್ಟಿನಲ್ಲಿ ಪಂಚಾಚಾರಗಳು ವೀರಶೈವ ಮಾರ್ಗಕ್ಕೆ ನೈತಿಕ ತಳಹದಿಯನ್ನು ಹಾಕಿಕೊಟ್ಟಿವೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಈ ಐದು ಆಚಾರಗಳಲ್ಲಿ ಶರಣರು ಪ್ರತಿಪಾದಿಸಿರುವ ನೈತಿಕನಿಷ್ಠೆ, ಪೂರ್ಣದೃಷ್ಟಿಯಿಂದ ಅವರು ಜೀವನವನ್ನು ಕಂಡುದಕ್ಕೆ ಸಾಕ್ಷಿಯಾಗಿದೆ. ವಿಶ್ವಧರ್ಮದ ಸಮಾನ ತತ್ವಗಳನ್ನು ಪಂಚಾಚಾರಗಳು ಎತ್ತಿಹಿಡಿದಿವೆ. ಪಾರಿಭಾಷಿಕ ವಿವರಗಳ ಹಿನ್ನಲೆಯಲ್ಲಿ ಅವು ಪರಿಮಿತವಾಗಿರುವಂತೆ ಕಂಡರೂ ಅವುಗಳ ಹಿಂದಿರುವ ಮನೋಧರ್ಮ ವಿಶ್ವವ್ಯಾಪಕವಾದದ್ದು ; ಸಕಲ ಮಾನವಕುಲದ ಕಲ್ಯಾಣಕ್ಕೆ ಕಾರಣವಾದದ್ದು.

ವೀರಶೈವಧರ್ಮ ಸಮನ್ವಯಮಾರ್ಗವಾಗಿ ಪರಿಣಮಿಸಿದೆ. ಇಹಪರಗಳ ಸಮನ್ವಯ ; ಆಚಾರ-ವಿಚಾರಗಳ ಸಮನ್ವಯ ; ಭಕ್ತಿ, ಜ್ಞಾನ, ಕರ್ಮಗಳ ಸಮನ್ವಯ ; ಭೇದ ಅಭೇದಗಳ ಸಮನ್ವಯ ; ವ್ಯಷ್ಟಿ ಸಮಷ್ಟಿಗಳಲ್ಲಿ ಸಮನ್ವಯ ; ವ್ಯಕ್ತಿ ಸಮಾಜದಲ್ಲಿ ಸಮನ್ವಯ—ಹೀಗೆ ಎಲ್ಲವನ್ನೂ ಸಮಗ್ರ ದೃಷ್ಟಿಯಿಂದ ನೋಡಿದ ಶರಣರು ವ್ಯಕ್ತಿಯ ಮತ್ತು ಸಮಾಜದ ಜೀವನದಲ್ಲಿ ಪರಿಪೂರ್ಣತೆಯನ್ನು ಸಾಧಿಸುವ ಮಾರ್ಗವನ್ನು ರೂಪಿಸಿದರು. ಅವರ ಸಂದೇಶಗಳು ಉಜ್ವಿದಷ್ಟೂ ಹೊಳಪನ್ನು ನೀಡುತ್ತಿವೆ. ಇಡೀ ಮಾನವ ಕುಲಕ್ಕೇ ಈ ಸಾಧನೆಯ ಸತ್ವ ಅರಿವಾಗುವಂತಾಗಬೇಕು. ವೀರಶೈವ ಸಂದೇಶ ಮಾನವ ಕುಲದ ಸಾಧನೆಗೆ ತನ್ನ ಬೆಳಕನ್ನು ಬೀರಬೇಕು.

---

ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋ-
ಹರವೆ ನಿಜಭಕ್ತಿ ಜ್ಞಾನವೈರಾಗ್ಯಮಂ-
ದಿರವೆ ಮುದ್ಗುರುವೆ ಕೃಪೆಯಾಗು

ಮೈಲಾರದ ಶ್ರೀ ಬಸವಲಿಂಗಶರಣರು

# ವೀರಶೈವರಲ್ಲಿ ಪ್ರಮಾಣಗಳು

ಪ್ರೊ. ಡಾ. ಜಿ. ಮರುಳಸಿದ್ಧಯ್ಯ

## ಸೃಷ್ಟಿವೈಚಿತ್ರ್ಯ

ಸೃಷ್ಟಿವೈಚಿತ್ರ್ಯ ಎಲ್ಲರಿಗೂ ಸರಿಯಾಗಿ ಅರ್ಥವಾಗುವುದಿಲ್ಲ. ಇದು ಕರ್ತೃ ಪರಮಾತ್ಮನೇ ಜನಸಾಮಾನ್ಯರಿಗೆ ಒಡ್ಡಿರುವ ಒಣಕ. ಇದನ್ನು ಬಗೆಹರಿಸುವುದು ಕೆಲವರಿಗೇ ಸಾಧ್ಯ. ಈ ಸೃಷ್ಟಿಯಲ್ಲಿರುವ ಗೋಚರ ಮತ್ತು ಅಗೋಚರ ಅಂದರೆ ಪ್ರಕೃತಿ ಮತ್ತು ಜೀವಾತ್ಮ ಇವರ ಪರಸ್ಪರ ತಿಳಿವಳಿಕೆ ಬಹು ಜಟಿಲ. ಅಂದರೆ ಮನುಷ್ಯ ಮತ್ತು ಉಳಿದ ಜೀವಿಗಳು ತಮ್ಮ ನಿತ್ಯಜೀವನದಲ್ಲಿ ಜೀವಿಸಿ ವ್ಯವಹರಿಸುವ ಬಗೆ ಅವರಿಗೇ ಚೆನ್ನಾಗಿ ಅರ್ಥವಾಗುತ್ತಿಲ್ಲ. ಆದರೆ :

'ಗತಾನುಗತಿಕೋ ಲೋಕಃ ನ ಲೋಕಃ ಪಾರಮಾರ್ಥಿಕಃ' ಎಂಬಂತೆ ಜಗತ್ತಿನ ಸಂಸಾರ, ವ್ಯವಹಾರ ಎಲ್ಲಾ ನಡೆದುಹೋಗುತ್ತೆ. ಆದರೆ ಇದು ಹೇಗೆ ನಡೆಯುವುದೆಂದು ವಿಚಾರಿಸುವವರು ಬಹು ಕಡಿಮೆ.

## ಚೇತನ-ಅಚೇತನ

ಇದನ್ನು ಅಂದರೆ ಭಗವಂತನ ಇಚ್ಛಾಜಾಲವನ್ನು ತಿಳಿದು 'ಇದು ಹೀಗೇ ಸರಿ' ಎಂದು ವಿವೇಚಿಸುವವರು ವಿವೇಕಿಗಳೆನಿಸಿಕೊಳ್ಳುತ್ತಾರೆ. ತಿಂದು ತಿರುಗಾಡಿ ತೀರಿಹೋಗುವವರು ಮಾನವರಾಗಲಿ ಅಥವಾ ಕ್ರಿಮಿಕೀಟ ಮೃಗ ಪಕ್ಷಿ ಸಸ್ಯ ಮುಂತಾದುವುಗಳಾಗಲಿ ಎಲ್ಲವೂ ಒಂದು ರಾಶಿಯಾಗುತ್ತವೆ. ಹೀಗೆ ನಡೆಯುವ ಸೃಷ್ಟಿಜಾಲದಲ್ಲಿ ಚೇತನಗಳೆಲ್ಲಾ ಇಂದ್ರಿಯಜ್ಞಾನ ವ್ಯವಹಾರಿಗಳು ; ಉಳಿದವೆಲ್ಲಾ ಅಚೇತನ. ಚೇತನಗಳು ಶ್ರೇಷ್ಠ ; ಅಚೇತನ ಕನಿಷ್ಠ ಮನುಷ್ಯನ ದೃಷ್ಟಿಯಲ್ಲಿ. ಚೇತನಗಳಲ್ಲೂ ಅನಂತ ದರ್ಜೆ. ಕಾರಣ ಅವರವರ ವಿವೇಕ, ವಿವೇಕದ ದರ್ಜೆಗಳು. ಈ ವಿವೇಕ ಶರೀರದಲ್ಲಿ ಹುಟ್ಟಿ ಬರುವುದಿಲ್ಲ. ಆದರೆ ಶರೀರದಲ್ಲಿ ಇದಕ್ಕೆ ಸಾಮಗ್ರಿಗಳಿಲ್ಲವೆಂದೂ ಅಲ್ಲ. ಎಲ್ಲರಿಗೂ ಶರೀರದೊಡನೆ ಪರಮಾತ್ಮನು ಅನುಗ್ರಹಿಸಿರುವ ಬುದ್ಧಿಸಾಮಗ್ರಿ ಇದ್ದೇ ಇರುತ್ತೆ. ಆದರೆ ಆತನು ಅದನ್ನು ಬೆಳೆಸಿ ಉಳಿಸಿಕೊಳ್ಳಬೇಕು. ಹೀಗೆ ಚೇತನಾಚೇತನಗಳಿಗೆ ಒಂದು ಅಂತರವುಂಟು. ಅದರಲ್ಲೂ ಚೇತನಗಳು ತಮ್ಮ ಇಂದ್ರಿಯ ಬುದ್ಧಿ ಇತ್ಯಾದಿಗಳನ್ನು ವಿಶೇಷವಾಗಿ ಬೆಳೆಸಿ ವಿವೇಕಿಗಳಾಗಿ ಪ್ರೌಢರು ಅಥವಾ ಮಹಾಂತರು ಮಹನೀಯರು ಹಾಗೂ ಮಹಾತ್ಮರೂ ಆಗುತ್ತಾರೆ. ಹೀಗೆ ಚೇತನವಸ್ತು ಇಂದ್ರಿಯಾದಿಗಳನ್ನೂ ಬುದ್ಧಿಯನ್ನೂ ಬೆಳೆಸಿಕೊಂಡು 'ನಾನು ಯಾರು', 'ಎಲ್ಲಿಂದ ಬಂದೆ', 'ಎಲ್ಲಿಗೆ ಹೋಗಬೇಕು' ಇತ್ಯಾದಿ ಸೃಷ್ಟಿವೈಚಿತ್ರ್ಯವನ್ನು ಅಳೆದು ತೂಗಿ ನೋಡಿ ತನ್ನದೇ ಆದ ಸಿದ್ಧಾಂತಕ್ಕೆ ಬರುತ್ತಾನೆ. ಈ ಅಳತೆ. ಮಾನ, ಮೌಲ್ಯ ನಿಷ್ಕರ್ಷೆ ಇವೇ ಅವರವರ ದರುಶನ.

## ಪ್ರಮಾಣಗಳು-ಇಂದ್ರಿಯಗಳು

ಶಾಸ್ತ್ರಕಾರರು 'ಪ್ರಮಿತಿಕರಣಂ ಪ್ರಮಾಣಮ್' ಅಂದರೆ ಅಳತೆ ಮಾಡುವ ಒಂದು ರೀತಿಯ ಅಳತೆಕೋಲು. ಆಂತರಿಕ ವಿಷಯದಲ್ಲಿ ಅಳತೆಕೋಲು ಎಲ್ಲಿ ಬಂತೆಂದು ಪ್ರಶ್ನಿಸಬಹುದು. ।ಇಲ್ಲಿ ಗಜಕಡ್ಡಿಯಂತಹ ಕೋಲಿಲ್ಲದಿದ್ದರೂ ಮೂರ್ತಿಮತ್ ಕೋಲಿಲ್ಲದಿದ್ದರೂ ಅಮೂರ್ತವಾದ ಬುದ್ಧಿ, ಜ್ಞಾನ, ಅಂತಃಕರಣ, ಮನಸ್ಸು[1] ಇವೆಲ್ಲವೂ ಜ್ಞಾನಸಾಧಕ ; ವಿವೇಚಕ ಇಂದ್ರಿಯ[2]ಗಳು ಸಾಧನಗಳು. ಅಂದರೆ ರೈಲ್ವೆ ಸಿಬ್ಬಂದಿ ತಿಳಿದ ವಿಷಯಗಳು ಕೇಂದ್ರ

---

[1] ಬುದ್ಧಿರುಪಲಬ್ಧಿರ್ಜ್ಞಾನಮಿತ್ಯನರ್ಥಾಂತರಮ್ । (ನ್ಯಾಯಸೂತ್ರ ೧.೧.೧೫)

[2] ಶಬ್ದೇತರೋದ್ಭೂತವಿಶೇಷಗುಣಾನಾಶ್ರಯತ್ವೇ ಸತಿ ಜ್ಞಾನಕಾರಣಮನಃ ಸಂಯೋಗಾಶ್ರಯತ್ವಂ ಇಂದ್ರಿಯತ್ವಮ್ ।
(ತರ್ಕಸಂಗ್ರಹದೀಪಿಕಾ, ಪು. ೧೪೯, ಬಾಲಮನೋರಮಾ ಸೀರೀಸ್ ೪, ೧೯೧೬)

ಕಛೇರಿಗೆ ತಂತಿ ಮೂಲಕ ಕಳುಹಿಸುವಂತೆ ಈ ಇಂದ್ರಿಯಗಳು ತಾವು ಹೊರಗಣ ಪ್ರಪಂಚದೊಡನೆ ಕಲೆತು ಸಂಗ್ರಹಿಸಿದ ವಿಷಯವನ್ನು ಅಥವಾ ಅನುಭವವನ್ನು (ಪ್ರತ್ಯಕ್ಷ) ಕೇಂದ್ರ ಕಛೇರಿಯಾದ ಜೀವಾತ್ಮ ಪರಮಾತ್ಮರಿಗೆ ಅಥವಾ ಆತ್ಮನಿಗೆ ತಿಳಿಸಿ ಆತನ ಅಪ್ಪಣೆಯನ್ನು ಪಡೆದು ದುಡಿಯುತ್ತವೆ. ಇದು ಶಾಸ್ತ್ರಕಾರರು ತಮ್ಮ ಅನುಭವದಿಂದ ಕಂಡು ಹಿಡಿದಿರುವ ಅನುಭಾವ.

## ಪ್ರಮಾಣಪ್ರಮೇಯಗಳು

ಮೇಲೆ ಹೇಳಿದಂತೆ ನಮ್ಮ ಶರೀರದ ಒಳಗಡೆ ನಮಗೆ ತಿಳಿದೂ ತಿಳಿಯದಂತೆ ನಡೆಯುವ ಜ್ಞಾನಕ್ರಿಯಾಪದ್ಧತಿಗಳನ್ನು ಪ್ರಮಾಣಪ್ರಮೇಯನ್ಯಾಯ ಎನ್ನಬಹುದು. ಇದನ್ನು ಇಲ್ಲಿ ಬೆಳೆಸುವುದೂ ಸಾಧ್ಯವಿಲ್ಲ. ಬೆಳೆಸದೆ ಬಿಡುವುದೂ ಉಚಿತವಲ್ಲ. ಪ್ರಮಾಣಪ್ರಮೇಯಗಳು ಜೀವಿಯ ಸಂಸ್ಕೃತಿ ಮಟ್ಟವನ್ನನುಸರಿಸುತ್ತವೆ. ಜೀವಿಯು ವ್ಯವಹರಿಸುವಾಗ ಇಂದ್ರಿಯಗಳನ್ನು ಅವುಗಳಿಂದ ಬರುವ ಜ್ಞಾನಕ್ಕಾಗಿ ಪ್ರಮಾಣಗಳನ್ನು ಬಳಸಲೇಬೇಕು. ಅದೇ ಈ ಇಂದ್ರಿಯ ಮನಸ್ಸು ಮತ್ತು ಆತ್ಮ ಈ ತ್ರಿಕೂಟ ಸಂಗ್ರಹವೇ ಚೇತನದ ಬೆಳಸು (Harvest). ಈ ಬೆಳಸಿನ ಯುಕ್ತಾಯುಕ್ತತೆಯೇ ಜೀವನ್ಮುಕ್ತಿಯ ಹೋರಾಟ. ಹೀಗೆ ಪ್ರಪಂಚದಲ್ಲಿ ಶರೀರದ ಒಳಗೂ ಹೊರಗೂ ನಡೆಯುವ ಜ್ಞಾನಕ್ರಿಯಾಯಾತ್ರೆಯೇ ಜೀವನಯಾತ್ರೆ ಅಥವಾ ಸಂಸಾರಚಕ್ರ.

## ಪಾರಮಾರ್ಥಿಕ ಪ್ರಮಾಣಗಳು

ಮೇಲೆ ಸೂಕ್ಷ್ಮವಾಗಿ ತಿಳಿಸಿದಂತೆ ಅಂತರಾತ್ಮ ಮತ್ತು ಇಂದ್ರಿಯಗಳು ತಮ್ಮ ಅನುಭವಗಳನ್ನು ರೂಪಿಸಿಕೊಳ್ಳುತ್ತವೆ. ತಿನ್ನುವುದು ತಿಳಿಯುವುದು ಬೆಳೆಸುವುದು ಉಳಿಸುವುದು ಮತ್ತು ಅಳಿಯುವುದು ಇವು ಸಾಮಾನ್ಯ ಕಾರ್ಯಕಲಾಪಗಳು. ಜೀವನಮಾರ್ಗಗಳು ಅನಂತವಾಗಿ ಜೀವಿಯಮಾರ್ಗ ವ್ಯವಹಾರದಲ್ಲಿ ಅನಂತವಾಗಿವೆ. ಇದನ್ನೇ ಇನ್ನೂ ಬೆಳಸಿದರೂ ಬೆಳಸಬಹುದು. ಒಟ್ಟಿನಲ್ಲಿ ಇದೆಲ್ಲಾ ಪ್ರಾಪಂಚಿಕ ಬಹಿರಂಗ. ಶಿವನು ಕೊಟ್ಟ ಶರೀರವನ್ನು ತನ್ನ ಪ್ರಾಪಂಚಿಕ ಸುಖದುಃಖಗಳಿಗಾಗಿ ಮಾತ್ರ ಮೀಸಲಿಡುವುದು ಇದೆಲ್ಲಾ ಒಂದು ರೀತಿ ಬಹಿರಂಗ. ಇದು ಇಲ್ಲಿ ಪ್ರಸ್ತುತವಲ್ಲವಾದ್ದರಿಂದ ಈ ಅತ್ಯಗತ್ಯ ಒಕ್ಕಣೆಯನ್ನು ಇಲ್ಲಿಗೆ ನಿಲ್ಲಿಸೋಣ. ಇಲ್ಲಿ ಪ್ರಸ್ತುತವಾದದ್ದು ಪ್ರಮಾಣಗಳು. ಆದ್ದರಿಂದ ಈ ಬಹಿರಂಗವನ್ನು ಬಿಟ್ಟು ಅಂತರಂಗವನ್ನು ವಿವೇಚಿಸೋಣ.

## ಅಂತರಂಗ (ಪ್ರಮಾಣಗಳು)

ವಿಜ್ಞಾನಿಗಳು ಬಾಹ್ಯಪ್ರಪಂಚದ ಇತಿತತ್ತ್ವವನ್ನು ನಿಶ್ಚಯಿಸುತ್ತಾರೆ. ಪ್ರಮಾಣಗಳು ಬಾಹ್ಯಪ್ರಪಂಚಕ್ಕೆ ಹೆಚ್ಚು ಸಂಬಂಧಿಸಿಲ್ಲ. ಅವು ಅಂತಃಕರಣ, ಬುದ್ಧಿ, ಮನಸ್ಸು ಮತ್ತು ಇಂದ್ರಿಯಗಳು ಇವುಗಳಿಗೆ ಸಂಬಂಧಪಟ್ಟಿದ್ದು. ಈ ನಾಲ್ಕು ನಮ್ಮ ಅಂತರಂಗದಲ್ಲಿ ಜೀವಾವಧಿ ಇದ್ದುಕೊಂಡು ಬಾಹ್ಯಪ್ರಪಂಚದ ವಿಷಯಗಳೊಡನೆ ಕಲೆತು ಪುನಃ ನಮ್ಮ ಅಂತರಂಗಕ್ಕೆ ತಮ್ಮ ಅನುಭವಗಳನ್ನು ತಿಳಿಸುತ್ತವೆ. ಇಂದ್ರಿಯ ಅರ್ಥ (ಬಾಹ್ಯ) ಇವುಗಳ ಸಂಬಂಧದಿಂದ ಬರುವ ಜ್ಞಾನವೇ ಪ್ರತ್ಯಕ್ಷ.[1] ಈ ಪ್ರತ್ಯಕ್ಷವು ಬಹು ಮುಖ್ಯ ಪ್ರಮಾಣ. ಉಳಿದ ಪ್ರಮಾಣಗಳು ಅನೇಕ ಇವೆ: ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಐತಿಹ್ಯ ಇತ್ಯಾದಿಗಳು. ಈ ಪ್ರಮಾಣಗಳನ್ನು ಅನೇಕ ದರ್ಶನಕಾರರು ಅನೇಕ ರೀತಿಯಲ್ಲಿ ಬಳಸುತ್ತಾರೆ. ಆದ್ದರಿಂದ ಇವು ಅವರವರ ಮಟ್ಟಕ್ಕೆ ಪ್ರಮಾಣವಾಗಿರುತ್ತವೆ.

## ಷಡ್ದಾರ್ಶನಿಕರು

ಕಪಿಲನ ಸಾಂಖ್ಯ, ಪತಂಜಲಿಯ ಯೋಗ, ಜೈಮಿನಿಯ ಪೂರ್ವಮೀಮಾಂಸಾ, ಗೌತಮನ ನ್ಯಾಯ, ಕಣಾದನ ವೈಶೇಷಿಕ, ಬಾದರಾಯಣನ ಉತ್ತರಮೀಮಾಂಸಾ ಅಥವಾ ವೇದಾಂತ ಈ ಆರು ಆಸ್ತಿಕದರ್ಶನಗಳಂತೆ. ಜೈನರು ಬೌದ್ಧರು ಮತ್ತು ಲೋಕಾಯತರು (Materialists) ಇವರು ನಾಸ್ತಿಕರಂತೆ.[2] ಹೀಗೆ ಭರತಖಂಡದಲ್ಲಿ ಆಧ್ಯಾತ್ಮಿಕ

---

1 ಇಂದ್ರಿಯಾರ್ಥಸನ್ನಿಕರ್ಷಜನ್ಯಂ ಜ್ಞಾನಂ ಪ್ರತ್ಯಕ್ಷಮ್
(ತರ್ಕಸಂಗ್ರಹ, ಪು. ೪೨, ಬಾಲಮನೋರಮಾ ಸೀರೀಸ್–೪, ೧೯೧೬)

2 ಈ ಆಸ್ತಿಕ ನಾಸ್ತಿಕ ವಿಭಾಗಗಳು ಸ್ವಕಪೋಲಕಲ್ಪಿತ; ಸ್ಥಿರವಲ್ಲ.

ಮತ್ತು ಲೌಕಿಕ ಸಿದ್ಧಾಂತಗಳಿಗಾಗಿ ಬಹು ಕಾಲದಿಂದಲೂ ಉಚಿತ ಹಾಗೂ ಅನುಚಿತವಾದ ಜಿಜ್ಞಾಸೆಗಳು ಬೆಳೆದು ನಿಂತಿವೆ. ಇವುಗಳ ಪರಿಚಯು ಇಲ್ಲಿ ಅನಗತ್ಯವಾದರೂ ಸ್ಥೂಲವಾಗಿ ಅವುಗಳನ್ನು ನಮೂದಿಸುವುದು ಯುಕ್ತವಿರಬಹುದೆಂದು ಇಲ್ಲಿ ಅವುಗಳನ್ನು ವಿಹಂಗಮದೃಷ್ಟಿಯಿಂದ ಸ್ವಲ್ಪ ನೋಡೋಣ.

'ದರ್ಶನ' ಎಂದರೆ ಒಂದು ಪದಾರ್ಥದ ದರ್ಶನ ಅಥವಾ ಪ್ರತ್ಯಕ್ಷ. ಯಾವ ಸಿದ್ಧಾಂತದ ಸಹಾಯದಿಂದ ನಾವು ನಿತ್ಯ ಶುದ್ಧ ಬುದ್ಧವಾದ ಪರವಸ್ತುವಿನ ಅನುಭವವನ್ನು ಸ್ವಯಂ ತಿಳಿಯಬಹುದೋ ಅಂತಹ ಒಂದು ಸಿದ್ಧಾಂತ ಅಂದರೆ ಅದರ ಆಮೂಲಾಗ್ರ ಅನುಭವವನ್ನು ನಾವು ಸ್ಥೂಲವಾಗಿ ದರ್ಶನವೆನ್ನುತ್ತೇವೆ. ಆ ಪರವಸ್ತುವಿನ ಅನುಭವವನ್ನು ಅನೇಕರು ಅನೇಕ ರೀತಿಯಲ್ಲಿ ಮಾಡಿಕೊಂಡಿರುವರಂತೆ. ಅದರಲ್ಲಿ ಆರು ಆಸ್ತಿಕದರ್ಶನಗಳು ; ಉಳಿದವು ನಾಸ್ತಿಕ ದರ್ಶನ. ಪಾಣಿನಿಯು :

'ಅಸ್ತಿ ನಾಸ್ತಿ ದಿಷ್ಟಂ ಮತಿಃ' (ಪಾಣಿನಿಸೂತ್ರ ೪-೪-೬೦)

ಈ ಸೂತ್ರದಿಂದ ಆಸ್ತಿಕ ನಾಸ್ತಿಕ ಶಬ್ದಗಳ ಅರ್ಥವನ್ನು ವಿವರಿಸುತ್ತಾರೆ. ಅವರವರು ಅವರವರಿಗೆ ತೋರಿದಂತೆ ಅರ್ಥ ಹೇಳುತ್ತಾರೆ. ಇದು ವಿಶ್ವಕ್ಕೆಲ್ಲಾ ಅನ್ವಯಿಸುವುದೇ ಇಲ್ಲವೇ ಎಂಬುದು ಓದುಗರಿಗೆ ಬಿಟ್ಟದ್ದು. ಅಲ್ಲದೆ ಈ ಆರು ದರ್ಶನಗಳಿಂದ ಮಾತ್ರ ಪರವಸ್ತುವಿನ ಅನುಭವ ಹಾಗೂ ಮುಕ್ತಿ ಸಿಗುವುದೇ ಇಲ್ಲವೇ ಎಂಬ ಪ್ರಶ್ನೆಗೆ ನೇರ ಉತ್ತರ ಸಾಧ್ಯವಿಲ್ಲ. ಈ ಆರು ದರ್ಶನಗಳಲ್ಲಿ ಭಾರತೀಯ ಅಧ್ಯಾತ್ಮಪರಂಪರೆ ಬಹುಮಟ್ಟಿಗೆ ಅಡಗಿದೆಯೆಂಬುದು ಸತ್ಯ.

ವೀರಶೈವ ಈ ಷಡ್ದರ್ಶನದಲ್ಲಿ ಶಕ್ತಿವಿಶಿಷ್ಟಾದ್ವೈತದರ್ಶನ, ಶೈವಸಿದ್ಧಾಂತ ಇತ್ಯಾದಿ ರೂಪದಲ್ಲಿ ಅಡಗಿದೆ ಎನ್ನುವವರು ಕೆಲವರು. ವೀರಶೈವಸಿದ್ಧಾಂತ ಭಕ್ತಿ ಆಚಾರಗಳ ಭಟ್ಟಿ. ಅದು ಷಡ್ದರ್ಶನಗಳನ್ನು ಮೀರಿದೆ. ಅದರಲ್ಲಿ ಪರವಸ್ತುವಿನ ಅನುಭವ ಹಾಗೂ ಬಂಧಮೋಕ್ಷ ನಿತ್ಯಸತ್ಯ ಮಹಾಲಿಂಗನಲ್ಲಿ ಬಯಲಾಗುವುದು ವ್ಯಕ್ತಿಪಕ್ಷ. ಒಬ್ಬರ ದಾರಿ ಇನ್ನೊಬ್ಬರಿಗಿಲ್ಲ. ಪರಮಸಿದ್ಧಾಂತವನ್ನರಿಯದ ಪರಮಹಂಸಗಳು ಪುಸ್ತಕ ಪ್ರಪಂಚದಲ್ಲಿ ಪರದಾಡುತ್ತಿರುವವರೇ ಹೊರತು ಬಯಲ ಬಗೆ ಪರಬ್ರಹ್ಮ ಅಥವಾ ಮಹಾಲಿಂಗನ ಮಹಾಮನೆಯಲ್ಲಿ ವಾಸಿಸುವ ಅರಿವು ಅಹಂವಾದಿಗಳಿಗೆ ಸಲ್ಲದೇ ಸಲ್ಲದು. 'ಕುರುಹೇನು ತೋರದೆ ಬೆರೆದೇಕವಾಗೆಂ'ಬ ಶರಣರ ಪರಮನಿರಂಜನಪಂಥ ಉಳಿದವರಿಗೆ ಅರಿಯದು ಎಂಬ ಒಂದು ಉದ್ದಾಮ ಸಾಧನೆಯು ವೀರಶೈವಶರಣರಲ್ಲಿ ಕಂಡುಬಂದಿದೆ. ಆದ್ದರಿಂದ :

ತರ್ಕೋಽಪ್ರತಿಷ್ಠಃ ಶ್ರುತಯೋ ವಿಭಿನ್ನಾ  
ನೈಕೋ ಮುನಿಃ ಯಸ್ಯ ಮತಂ ಪ್ರಮಾಣಮ್ ।  
ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ  
ಮಹಾಜನೋ ಯೇನ ಗತಃ ಸ ಪಂಥಾಃ ॥

(ಮಹಾಭಾರತ ೩, App. ೩೨, ೬೫, ಸಂ. ಸುಕ್ತಂಕರ್, ಪೂನಾ, ೧೯೪೨)

ಈ ಮಾತು ಬಹುಮಟ್ಟಿಗೆ ಸತ್ಯ.

ಮೇಲೆ ಹೇಳಿದ ಆರು ದರ್ಶನಗಳ ಪ್ರಮಾಣಗಳನ್ನು ಸ್ವಲ್ಪ ನೋಡಿ ಅವುಗಳಲ್ಲಿ ವೀರಶೈವರ ಪ್ರಮಾಣಗಳು ಇವೆಯೋ ಇಲ್ಲವೇ ನೋಡೋಣ. ಅಲ್ಲದೆ ಅವರವರಿಗೆ ಆಯಾ ಪ್ರಮಾಣಗಳು ಅನಾದಿಯೋ ಸಾದಿಯೋ ವಿಚಾರ ಮಾಡಬೇಕು. ಈ ಷಡ್ದರ್ಶನಕಾರರಿಗಿಂತ ಮುಂಚೆ ಜನತೆ ಇರಲಿಲ್ಲವೆ ? ಅವರು ಆ ಮಹಾವಸ್ತುವಿನಲ್ಲಿ ಬೆರೆತಿರಲಿಲ್ಲವೆ? ಈ ಪ್ರಮಾಣಗಳು ಇಷ್ಟಿಷ್ಟೇ ಎಂದು ಯಾವ ಸಭೆ ಸರ್ಕಾರ ಗರಿಷ್ಠವಾಣಿಯನ್ನು ಅಂಗೀಕರಿಸಿವೆ. ಇವನ್ನು ಬಿಟ್ಟು ಬೇರೆ ಪ್ರಮಾಣಗಳನ್ನು ಹೇಳುವುದು ನ್ಯಾಯವೇ ಅಲ್ಲವೇ ಇತ್ಯಾದಿ ಆಲೋಚನೆಗಳು ಸಂಪ್ರದಾಯಶರಣರಿಗೆ ಹಿಡಿಸುವುದಿಲ್ಲ. ಇವೆಲ್ಲಕ್ಕೂ ಶರಣುಹೊಡೆಯುವುದು ವಿಚಾರವಾದಿಗಳಿಗೆ ಸರಿಬರುವುದಿಲ್ಲ.

ಗತಾನುಗತಿಕೋ ಲೋಕಃ ನ ಲೋಕಃ ಪಾರಮಾರ್ಥಿಕಃ

ಎಂಬಂತೆ ಆಯಾ ಕಾಲದಲ್ಲಿ ಆಯಾ ಸಮಾಜಗಳನ್ನು ತಮ್ಮ ಪಾಂಡಿತ್ಯಪ್ರಭಾವಗಳಿಂದ ಒತ್ತಿಹಿಡಿದು ಇತರರ ಅಜ್ಞಾನ ಮತ್ತು ದಾರಿದ್ರ್ಯಗಳನ್ನು ಒತ್ತೆಇಟ್ಟುಕೊಂಡು ತಮ್ಮದೇ ಆದ ಪ್ರಮಾಣ ಪ್ರಣಾಳಿಕೆಗಳನ್ನು ಜಗತ್ತಿನ ಮೇಲೆ ಹೇರುವುದು ಸತ್ಸಂಪ್ರದಾಯವೆನಿಸದು. ಆದರೂ ಈ ವಿಚಾರ ಅವರವರಿಗೇ ವೈಯಕ್ತಿಕವಾಗಿ ಸೇರಿದ್ದರೂ ಸಾಮೂಹಿಕವಾಗಿ, ಸಾಂಪ್ರದಾಯಿಕವಾಗಿ ಭಾರತೀಯದರ್ಶನಗಳೆಂದರೆ ಜನಸಮೂಹದಲ್ಲಿ, ಪ್ರೌಢಶಾಲೆಗಳಲ್ಲಿ, ವೇದಿಕೆಗಳಲ್ಲಿ ಯಾವ ಸಂಪ್ರದಾಯ ಹೇಗೆ ಅಚಲವಾಗಿ ನಿಂತಿದೆ ಎಂಬುದನ್ನು ಸ್ವಲ್ಪ ನೋಡೋಣ.

೧. ಕಪಿಲಋಷಿಯ ಸಾಂಖ್ಯದರ್ಶನದಲ್ಲಿ ಮೂರು ಪ್ರಮಾಣಗಳು.[1]
ಪ್ರತ್ಯಕ್ಷ, ಅನುಮಾನ ಮತ್ತು ಆಪ್ತವಚನ.

೨. ಪತಂಜಲಿಋಷಿಯ ಯೋಗದರ್ಶನದಲ್ಲಿ ಮೂರು ಪ್ರಮಾಣಗಳು.[2]
ಪ್ರತ್ಯಕ್ಷ, ಅನುಮಾನ ಮತ್ತು ಆಗಮ (ವೇದ).

೩. ಗೌತಮಋಷಿಯ ನ್ಯಾಯದರ್ಶನದಲ್ಲಿ ಪ್ರಮಾಣಗಳು ನಾಲ್ಕು,[3]
ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ.

೪. ಕಣಾದಋಷಿಯ ವೈಶೇಷಿಕದರ್ಶನದ ಪ್ರಕಾರ ಎರಡೇ ಪ್ರಮಾಣಗಳು.[4]
ಪ್ರತ್ಯಕ್ಷ ಮತ್ತು ಅನುಮಾನ.

೫. ಜೈಮಿನಿಯ ಪೂರ್ವಮೀಮಾಂಸಾದರ್ಶನದಲ್ಲಿ ಆರು ಪ್ರಮಾಣಗಳು.[5]
ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಮತ್ತು ಅನುಪಲಬ್ಧಿ.

೬. ಉತ್ತರಮೀಮಾಂಸಾ ಅಥವಾ ವೇದಾಂತದಲ್ಲಿ ಆರು ಪ್ರಮಾಣಗಳು.[6]
ಪ್ರತ್ಯಕ್ಷ, ಅನುಮಾನ, ಉಪಮಾನ, ಆಗಮ, ಅರ್ಥಾಪತ್ತಿ ಮತ್ತು ಅನುಪಲಬ್ಧಿ.

## ವೀರಶೈವರು ಮತ್ತು ಅವರಿಗೆ ಪ್ರಮಾಣಗಳು

ವೀರಶೈವಮತ ಅನಾದಿಯಿಂದಲೂ ಬಂದಿದೆ. ಇದಕ್ಕೆ ಐತಿಹಾಸಿಕ ಪ್ರಮಾಣವೆಂದರೆ ಹರಪ್ಪಾ ಮತ್ತು ಮೊಹೆಂಜೊದಾರೋದಲ್ಲಿ ದೊರೆತಿರುವ ಲಿಂಗಮುದ್ರಿಕೆ, ನಂದಿ ಮತ್ತು ಲಿಂಗಪೀಠಗಳು. ಈ ವೀರಶೈವಮತದವರು ಅಷ್ಟಾಗಿ ಯಶೋಭಿಲಾಷಿಗಳಾಗಿರಲಿಲ್ಲ. ಆದ್ದರಿಂದ ಎಲ್ಲವನ್ನೂ ಲಿಂಗಾರ್ಪಿತವೆಂದು ಭಾವಿಸಿ:

ಲಿಂಗ ಮೆಚ್ಚಿ ಅಹುದೆಂದರೆ ಸಾಕು

ಎಂಬ ಅಭಿಪ್ರಾಯದವರು. ಎಲ್ಲಾ ಪ್ರಸಿದ್ಧ ಯಾತ್ರಾಸ್ಥಳಗಳಲ್ಲೂ ಲಿಂಗಗಳು ಸಿಕ್ಕುವುದೇ ಸಾಕು. ವೇದಗಳಲ್ಲಿ ವಿಷ್ಣು ರುದ್ರ ಇವರ ಪಾರಮ್ಯ ಆಯಾ ಸೂಕ್ತಗಳಲ್ಲಿದೆ. ಭಾರತದ ಎಲ್ಲಾ ಅನಾದಿಕ್ಷೇತ್ರಗಳಲ್ಲಿಯೂ ಎಲ್ಲಾ ಗ್ರಾಮಗಳಲ್ಲಿಯೂ ಬಸವಣ್ಣ ಮತ್ತು ಹನುಮಂತರ ನಿಧಿಗಳು ಸಿಕ್ಕುವುದೇ ಈ ಎರಡು ಮತಗಳ ಅಸ್ತಿತ್ವಕ್ಕೆ ಸಾಕ್ಷಿ.

## ಪದ್ಮಪುರಾಣ ಮತ್ತು ವೀರಶೈವ

ಪದ್ಮಪುರಾಣದಲ್ಲಿ ಲಿಂಗಧಾರಣೆ ಮತ್ತು ಲಿಂಗಪೂಜೆ ಇವುಗಳ ಬಳಕೆಯಿದ್ದುದು ಪ್ರಸ್ತಾಪಿತವಾಗಿದೆ.[7] ಪುರಾಣಗಳಲ್ಲಿ ಬಂದದ್ದು ಇತಿಹಾಸ ವೇದಗಳಲ್ಲಿ ಇಲ್ಲವೆ ಇಲ್ಲ. ಬಸವಣ್ಣನವರು :

---

1 ದೃಷ್ಟಮನುಮಾನಮಾಪ್ತವಚನಂ ಚ ಸರ್ವಪ್ರಮಾಣಸಿದ್ಧತ್ವಾತ್ ।
ತ್ರಿವಿಧಂ ಪ್ರಮಾಣಮಿಷ್ಟಂ ಪ್ರಮೇಯಸಿದ್ಧಿಃ ಪ್ರಮಾಣಾದ್ಧಿ ॥ ೪ ॥
(ಸಾಂಖ್ಯಕಾರಿಕಾ, ಪು. ೡ೫, ನಿರ್ಣಯಸಾಗರ ಪ್ರಕಾಶನ, ೧೯೪೦)

2 ಪ್ರತ್ಯಕ್ಷಾನುಮಾನಾಗಮಾಃ ಪ್ರಮಾಣಾನಿ ।
(ಪಾತಂಜಲದರ್ಶನ ೧.೭ ೨, ಶ್ರೀರಂಗಮ್)

3 ಪ್ರತ್ಯಕ್ಷಾನುಮಾನೋಪಮಾನಶಬ್ದಾಃ ಪ್ರಮಾಣಾನಿ ।
(ನ್ಯಾಯಸೂತ್ರ ೧.೧.೩, ಭಾರತೀಯ ವಿದ್ಯಾಪ್ರಕಾಶನ, ವಾರಾಣಸಿ)

4 ಶಬ್ದೋಪಮಾನಯೋರ್ನೈವ ಪೃಥಕ್ ಪ್ರಾಮಾಣ್ಯಮಿಷ್ಯತೇ ।
ಅನುಮಾನಗತಾರ್ಥತ್ವಾತ್ ಇತಿ ವೈಶೇಷಿಕಂ ಮತಮ್ ॥
(ಕಾರಿಕಾವಲೀ ೧೪೦–೧೪೧, ಪು. ೭೧, ನಿರ್ಣಯಸಾಗರ ಪ್ರಕಾಶನ, ೧೯೫೨)

5 ಪ್ರತ್ಯಕ್ಷಮನುಮಾನಂ ಚ ಶಾಬ್ದಂ ಚೋಪಮಿತಿಸ್ತಥಾ ।
ಅರ್ಥಾಪತ್ತಿರಭಾವಶ್ಚ ಷಟ್ ಪ್ರಮಾಣಾನಿ ಮಾದೃಶಾಮ್ ॥
(ಮಾನಮೇಯೋದಯಃ, ಪ್ರಮಾಣಪರಿಚ್ಛೇದಃ, ೪–೫, ತ್ರಿವೇಂಡ್ರಂ ಸಂಸ್ಕೃತ ಸೀರೀಸ್–೧೯, ೧೯೧೨)

6 ತಾನಿ ಚ ಪ್ರಮಾಣಾನಿ ಷಟ್, ಪ್ರತ್ಯಕ್ಷಾನುಮಾನೋಪಮಾನಾಗಮಾರ್ಥಾಪತ್ತ್ಯನುಪಲಬ್ಧಿಭೇದಾತ್ ।
(ವೇದಾಂತಪರಿಭಾಷಾ, ಪ್ರ.ಪ. ಪು. ೩೦, ಜ್ಞಾನಪ್ರಕಾಶನ ಮಂದಿರ, ನರ್ಮದಾಪುರ, ೧೯೬೭)

7 ಪದ್ಮಪುರಾಣ (೧೦೦ರಿಂದ ೧೨೫ ಅಧ್ಯಾಯಗಳಲ್ಲಿ)

ಭರ್ಗೋ ದೇವಸ್ಯ ಧೀಮಹಿ

ಈ ವಾಕ್ಯದ 'ಭರ್ಗ' ಶಬ್ದಕ್ಕೆ ಅಮರಸಿಂಹನಂತೆ ಲಿಂಗವಾಚಕವೆನ್ನುತ್ತಾರೆ. ಯಜುರ್ವೇದದಲ್ಲಿ ಬರುವ ಶಿವ ಋಗ್ವೇದದ ರುದ್ರನೇ ಎನ್ನುತ್ತಾರೆ ಪಾಶ್ಚಾತ್ಯ ಪೌರ್ವಾತ್ಯ ವಿಮರ್ಶಕರು. ಪುರಾಣಕಾಲದಲ್ಲಿ ಲಿಂಗಧಾರಣೆ ಶರೀರದ ಯಾವ ಯಾವ ಭಾಗದಲ್ಲಿ ಧರಿಸಬಹುದು ಮತ್ತು ಅದರ ಫಲ ಇತ್ಯಾದಿ ಚಿತ್ರಿತವಾಗಿದೆ. ಅದ್ದರಿಂದ ವೀರಶೈವಪದ್ಧತಿ ವೀರ ವೈಷ್ಣವ ಪದ್ಧತಿಯಂತೆ ಅನಾದಿಯಿಂದ ನಡೆದುಬಂದಿದೆ. ಈ ಬಗ್ಗೆ ಹೆಚ್ಚು ಸಂಶೋಧನೆ ನಡೆದಲ್ಲಿ ಇನ್ನೂ ಹೆಚ್ಚು ಸತ್ಯಾಂಶ ಹೊರಬರಬಹುದು. ಬಾಣಾಸುರ ಮುಂತಾದ ಪೌರಾಣಿಕ ವ್ಯಕ್ತಿಗಳು ಶಿರದಲ್ಲಿ ಎಡಬಿಡದೆ ಲಿಂಗವನ್ನು ಧರಿಸಿದ್ದರಂತೆ. ಆದ್ದರಿಂದ ಲಿಂಗಧಾರಿಗಳಾದ ವೀರಶೈವರು ಅನಾದಿಯಿಂದಲೂ ಬಂದಿದ್ದಾರೆ. ಆದರೆ ಈಗಿನ ನಿಸ್ಸಾರವಾದ, ನಿಸ್ತೇಜವಾದ ವೀರಶೈವಕ್ಕಿಂತಲೂ ಬೇರೆ ರೀತಿ ವೀರಶೈವ ಇದ್ದಿರಬೇಕು. ಅದನ್ನು ಭದ್ರ ಬುನಾದಿಯ ಮೇಲೆ ಕಟ್ಟಲು ಆಚಾರ್ಯಪುರುಷರು, ರಾಜರು ಮತ್ತು ಬಸವಾದಿಗಳು ; ಸತ್ಯಶುದ್ಧ ಜಂಗಮರು ಮುಂದೆಯೂ ಇರುವರೆಂದು ಭ್ರಮೆಗೊಂಡು ಮಠಮಹಾಂತು ಇತ್ಯಾದಿಗಳನ್ನು ವೀರಶೈವರ ನಿಕೇತನಗಳನ್ನು ಮಾಡಿರಬೇಕು. ಕಾಲಮಹಿಮೆಯಿಂದ ವೀರಶೈವ ಇಂದಿನ ನಿಸ್ಸಾರ ವೀರಶೈವವಾಗಿದೆ. ಇದು ನಮ್ಮ ದುರದೃಷ್ಟ.

ಈ ಅನಾದಿಯ ವೀರಶೈವಕ್ಕೆ ಯಾವ ಪ್ರಮಾಣಗಳು ಎಷ್ಟು ಇತ್ಯಾದಿ ಯಾವ ಆಧಾರಗಳೂ ಇತಿತತ್ತ್ವಗಳೂ 'ಇದಮಿತ್ಥಂ' ಎಂದು ವೀರಶೈವಗ್ರಂಥಕಾರರು ಸ್ಪಷ್ಟವಾಗಿ ಒಂದು ಕಡೆ ನಮೂದಿಸಿಲ್ಲ. ಇಲ್ಲಿ ಒಂದು ಮಾತು. ಪ್ರಮಾಣಗಳು ವಿವೇಕಿ ಜನರಿಗೆ ಸಲ್ಲುವ ಸಾಮಾನ್ಯ ಹಕ್ಕು. ವಕ್ರದೃಷ್ಟಿಯ ವಾದವಿವಾದಗಳಿಗಲ್ಲ. ಆದಿಯಲ್ಲಿ ಸೂಚಿಸಿದಂತೆ ಎಲ್ಲ ಇಂದ್ರಿಯಗಳು ಮನಸ್ಸು ಬುದ್ಧಿ ಒಂದೇ ವಿಧವಾಗಿ ವ್ಯವಹರಿಸಬೇಕು. ಒಬ್ಬರಿಗೊಂದೊಬ್ಬರಿಗೊಂದು ದೈವಸೃಷ್ಟಿಯಲ್ಲಿಲ್ಲ. ಆದ್ದರಿಂದ ಈ ವಿಷಯವನ್ನು ಹೆಚ್ಚಿಗೆ ಇಲ್ಲಿ ಬೆಳೆಸದೆ ಮನುಷ್ಯನ ಆಧ್ಯಾತ್ಮಿಕ ಅಂತಸ್ತನ್ನು ಅನುಸರಿಸಿ ಎಲ್ಲ ಪ್ರಮಾಣಗಳೂ ಎಲ್ಲರಿಗೂ ಬೇಕು. ಅಂದಮೇಲೆ ವೀರಶೈವರಿಗೆ ಈ ಪ್ರಮಾಣಗಳು ಉಳಿದವರಿಗೆ ಇವು ಇಂತಹ ವ್ಯವಹಾರ ಅಶಾಸ್ತ್ರೀಯ. ಆದರೆ ಈ ಲೇಖನಕ್ಕಾಗಿ ನಾವು ಆ ಪ್ರಮಾಣಗಳನ್ನು ಇಲ್ಲಿ ನಮೂದಿಸುವುದಾದರೆ ವೀರಶೈವರಿಗೆ ಮೂರೇ ಪ್ರಮಾಣಗಳು. ಅವು (೧) ಪ್ರತ್ಯಕ್ಷ, (೨) ಅನುಮಾನ ಮತ್ತು (೩) ಆಪ್ತವಚನ. ಶಬ್ದವಲ್ಲ. ಏಕೆಂದರೆ ಶಬ್ದಪ್ರಧಾನವಾದ ವೇದದ ಎಲ್ಲ ಕರ್ಮಭಾಗವನ್ನೂ ಇವರು ಒಪ್ಪುವುದಿಲ್ಲ. ಇವೆಲ್ಲಕ್ಕೂ ಮಿಗಿಲಾಗಿ ಅನುಭಾವಿ ವೀರಶೈವರು ತಮ್ಮ ಅಂತರಂಗ ಅಥವಾ ಯೌಗಿಕ ಪ್ರತ್ಯಕ್ಷಪ್ರಮಾಣವನ್ನು ವಿಶೇಷವಾಗಿ ಅಂದರೆ ಪ್ರತ್ಯಕ್ಷಾದಿಗಳಿಗಿಂತ ಹೆಚ್ಚಾಗಿ ಪ್ರಮಾಣವನ್ನಾಗಿಟ್ಟುಕೊಂಡಿರುವುದನ್ನು ನಾವು ಅನಾದಿಯಿಂದ ಕಾಣಬಹುದು. ಆದ್ದರಿಂದ ವೀರಶೈವರು ಅಷ್ಟೇ ಏಕೆ ನಿಜವಾದ ದೈವಭಕ್ತರೆಲ್ಲಾ ಲೌಕಿಕಪ್ರಮಾಣಗಳಿಗಿಂತ ಅಲೌಕಿಕಪ್ರಮಾಣಕ್ಕೆ ಹೆಚ್ಚು ಪ್ರಾಧಾನ್ಯ ಕೊಡುತ್ತಾರೆ. ಈ ಪ್ರಮಾಣಗಳಲ್ಲಿ ಶಾಸ್ತ್ರೀಯವಾದ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ, ಅನುಪಲಬ್ಧಿ ಹಾಗೂ ಕೆಲಸಕ್ಕೆ ಬಾರದ ಐತಿಹ್ಯ ಈ ಪ್ರಮಾಣಗಳಿಗಿಂತ ವೀರಶೈವರು ಅಂದರೆ ನಿಜವಾದ ಶರಣಮಾರ್ಗಾನುಯಾಯಿಗಳು ಬಾಹ್ಯಪ್ರಮಾಣಗಳಿಗಿಂತ (ಲೌಕಿಕಪ್ರಮಾಣಗಳು) ಎಂದೆಂದಿಗೂ ಮೋಸ ಮಾಡದ ನಿತ್ಯಸತ್ಯವಾದ ಆಂತರಿಕ ಅಥವಾ ಆಧ್ಯಾತ್ಮಪ್ರಮಾಣಗಳಿಗೆ (Mystic perceptions) ಆದ್ಯತೆ ಕೊಡುತ್ತಾರೆ.

ಇಂದ್ರಿಯಗಳು ಬುದ್ಧಿ ಮತ್ತು ಮನಸ್ಸು ಗೀತೆಯಲ್ಲಿ ಹೇಳುವಂತೆ ಸರ್ವವ್ಯವಹಾರಸಾಧನಗಳು. ಬುದ್ಧಿಗೂ ಮೀರಿದವನು ಪರಮಾತ್ಮ.[1]

## ವೀರಶೈವರ ಸಂಪ್ರದಾಯ (ಪ್ರಮಾಣಗಳು)

ವೇದಕಾಲದಿಂದ ಈವರೆಗೆ ಶೈವ ಹಾಗೂ ವೀರಶೈವಸಂಪ್ರದಾಯಗಳು ವೈಷ್ಣವಸಂಪ್ರದಾಯಗಳೊಡನೆ ಹಾಸುಹೊಕ್ಕಾಗಿ ಬೆಳೆದುಬಂದಿವೆ. ಋಗ್ವೇದದ ವಿಷ್ಣು ಹಾಗೂ ರುದ್ರ ಇವರು ವೈದಿಕ ಸಾಹಿತ್ಯದಲ್ಲಿ ಸಮಪ್ರಧರೂ ಆಗಿದ್ದು ವೈದಿಕಕಾಲದ ಅನಂತರ ಅಂದರೆ ಶ್ರುತಿಘಟ್ಟವನ್ನು ಇಳಿದು ಸ್ಮೃತಿಕಣಿವೆಯನ್ನು ಸೇರಿದಾಗ ಇವರ ಆರಾಧಕರಲ್ಲಿ ತರತಮಭಾವ ಉಚ್ಚನೀಚಭಾವ ಇತ್ಯಾದಿ ಭೇದಭಾವಗಳು ಹಠಾತ್ತನೆ ತೋರುತ್ತವೆ. ವೈಷ್ಣವದರ್ಶನಕಾರರು

---

1 ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥

(ಭಗವದ್ಗೀತಾ. ಅ, ೩. ೪೨)

ತಮ್ಮ ದರ್ಶನಗಳನ್ನು ವಿವರಿಸುತ್ತಾ ಮೇಲಿನ ಪ್ರಮಾಣಗಳನ್ನು ಕೈದೀಪಗಳನ್ನಾಗಿ ಹೆಸರಿಸಿದರು ; ಕಂಡುಹಿಡಿದರು. ಶೈವರು ಇದೇ ಹಾದಿಯಲ್ಲಿ ಹೋಗಿ ಈ ಪ್ರಮಾಣಗಳ ಜೊತೆಗೆ ಶಿವಸೂತ್ರಗಳು, ಪ್ರತ್ಯಭಿಜ್ಞಾಪಂಥ (ಉತ್ಪಲಾಚಾರ್ಯನ ಸೂತ್ರಗಳನ್ನು ನೋಡಿ) ಸಾಂಖ್ಯಯೋಗಸೂತ್ರಗಳು (ಕಪಿಲ ಮತ್ತು ಪತಂಜಲಿಸೂತ್ರಗಳನ್ನು ನೋಡಿ) ಇವುಗಳಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿರುವ ಶಿವಜೀವರ ಪರಸ್ಪರಯೋಗ ಅಥವಾ ಲಿಂಗಾಂಗಸಾಮೀಪ್ಯ (ಸಾಮರಸ್ಯವಲ್ಲ)ವನ್ನು :

'ಕುರುಹೇನು ತೋರದೆ ಬೆರದೇಕವಾಗೆಂಬಂ'ತೆ ಆಧ್ಯಾತ್ಮ ಸಾಕ್ಷಾದಪರೋಕ್ಷಾತ್—ಈ ದಿಟ್ಟ ಹಾಗೂ ದಿಷ್ಟ ನಿಲುವಿಗೆ ಮುಖ್ಯಸಾಧಕವಾದ ಯೋಗಪ್ರಮಾಣವನ್ನೇ ಭಕ್ತಿಜ್ಞಾನವೈರಾಗ್ಯಗಳ ಸಹಾಯದಿಂದ ಆಶ್ರಯಿಸಿದರು.

## ವೀರಶೈವರ ಪರಮಪ್ರಮಾಣ

ಮುಖ್ಯವಾದ ಈ ಅನುಭಾವಪ್ರಮಾಣವೇ ವೀರಶೈವರ ಪರಮಪ್ರಮಾಣ. ಈ ಮಾತು :

ಹರನನ್ನೆ ಹೊರಗೆಂದು ಬೇಡೆ ಮತ್ತೊಳಕೈದ
ಹರನೆ ಬಾರೆನಲೊಲ್ಲೆನೆನುತಟ್ಟಿಪ
ಹರನಿಗಂ ವೀರಶೈವೋಪದೇಶವನಿತ್ತ
ಹರನ ಕೈಲಾಸಪುರವೆಲ್ಲ ಕೋಳ್ ಗಂಡ ॥[1]

## ವೀರಶೈವರಿಗೆ ಆಪ್ತವಾಕ್ಯಪ್ರಮಾಣ

ತಾರ್ಕಿಕರು—'ಆಪ್ತವಾಕ್ಯಂ ಶಬ್ದಃ' ಎಂದು ವಿವರಿಸಿ ಶಬ್ದವು ಒಂದು ಪ್ರಮಾಣವೆನ್ನುತ್ತಾರೆ. ಯಾರೇ ಹೇಳಲಿ ; ಬಿಡಲಿ : ಶಬ್ದವು ವ್ಯವಹಾರಸಾಧನವಾಗಿ ಪೂರ್ವಾಪರ ಪ್ರಪಂಚಗಳ ಸಾಂಸ್ಕೃತಿಕ ಸೇತುವೆಯಾಗಿದೆ.

ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯಮ್ ।
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥[2]
ಅಣೀಯಸ್ತ್ವಾಚ್ಚ ಶಬ್ದೇನ ಸಂಜ್ಞಾಕರಣಂ ವ್ಯವಹಾರಾರ್ಥಂ ಲೋಕೇ ।[3]

ಈ ರೀತಿ ಶಬ್ದ ವ್ಯವಹಾರಕ್ಕೆ ಉಚಿತ. ಇದನ್ನು ತಾತ್ತ್ವಿಕವಾಗಿ ಪರಿಗಣಿಸಿ ಶಬ್ದ ಎಂದರೆ ಆಸ್ತಿಕರು ವೇದ ಮತ್ತು ವೈದಿಕರ ಪ್ರಮಾಣಗಳು ಇತ್ಯಾದಿಯಾಗಿ ವಿವರಿಸುತ್ತಾರೆ. ಇದನ್ನು ಒಪ್ಪುವುದು ಬಿಡುವುದು ಅವರವರ ಇಷ್ಟ.

## ವೇದ ಮತ್ತು ವೀರಶೈವರು

ಎಲ್ಲಾ ಶಾಸ್ತ್ರಗಳು ಪುರಾಣೇತಿಹಾಸಗಳಿಗೆ ಮೂಲವಾದ ವೇದಗಳು ವೀರಶೈವರಿಗೆ ಪ್ರಮಾಣಗಳಲ್ಲವೆಂಬುದಂತಿಲ್ಲ. ಆದರೆ ವೇದವನ್ನು ಜ್ಞಾನ ಮತ್ತು ಕ್ರಿಯಾಕಾಂಡಗಳೆಂದು ಎರಡು ಭಾಗ ಮಾಡುತ್ತಾರೆ ವೀರಶೈವರು. ವೀರಶೈವರೇ ಅಲ್ಲ ; ಉಳಿದ ಎಲ್ಲಾ ಬ್ರಾಹ್ಮಣೇತರರು ಈ ಅಂಶವನ್ನು ಒಪ್ಪುತ್ತಾರೆ. ಕಾರಣ ಇಷ್ಟೆ—ವೇದದ ಕರ್ಮಕಾಂಡದಲ್ಲಿ ಪ್ರಾಣಿಹಿಂಸೆಯಿದೆ.[4] ಆದ್ದರಿಂದ ವೇದದ ಜ್ಞಾನಕಾಂಡ ವೀರಶೈವರಿಗೂ ಪ್ರಮಾಣಗ್ರಂಥ. ಆ ಉಪನಿಷದ್ಭಾಗವು ಭಕ್ತಿಜ್ಞಾನಪಾರಮ್ಯದ ಉಳಿದ ವೇದದ ಎಲ್ಲ ಜ್ಞಾನ ಮತ್ತು ಪ್ರಾರ್ಥನಾಭಾಗಗಳು ಎಲ್ಲರಿಗೂ ಪ್ರಮಾಣ.

---

ಒಂದು **ಮಾತು :** ಈ ಪುಟದಲ್ಲಿರುವ ವಿಷಯಗಳು ಕೆಲವರಿಗೆ ಹಿಡಿಸಬಹುದು ; ಹಿಡಿಸದಿರಬಹುದು. ಆದರೆ ಈ ಪುಟದ ಮಾತುಗಳು ಸತ್ಯವೆಂದೇ ಲೇಖಕನ ಅಭಿಪ್ರಾಯ. ಆಧಾರಸಹಿತವಾಗಿರುವ ಅಂಶಗಳನ್ನು ವೀರಶೈವ ವಿದ್ವಾಂಸರು ಅವಲೋಕಿಸಿ ತಿದ್ದುವಡಿಯಿದ್ದಲ್ಲಿ ಕೃಪೆಯಿಟ್ಟು ಶಾಸ್ತ್ರೀಯವಾಗಿ ಸಲಹೆ ಕೊಡಬೇಕಾಗಿ ಪ್ರಾರ್ಥನೆ.

1 ಸರ್ಪಭೂಷಣ ಶಿವಯೋಗಿ ವಿರಚಿತ ಕೈವಲ್ಯ ಕಲ್ಪವಲ್ಲರಿ, ಪು. ೪, ಸಂ. ಶಿ. ಶಿ. ಬಸವನಾಳರು, ಬೆಂಗಳೂರು, ೧೯೪೯

2 ಕಾವ್ಯಾದರ್ಶ, ಪ್ರ.ಪ. ಶ್ಲೋ ೪. ಚೌಖಂಬಾ ವಿದ್ಯಾಭವನ, ವಾರಾಣಸೀ, ೧೯೫೮.

3 ನಿರುಕ್ತ. ಪು. ೧೯, ಸಂ. W. K. ರಾಜವಾಡೆ, B. O. R. I. ಪೂನಾ, ೧೯೪೦.

4 ವೇದ ಘನವೆಂಬೆನೆ ಪ್ರಾಣಿವಧೆಯ ಹೇಳುತ್ತಿದೆ.

(ಬಸವೇಶ್ವರ ವಚನಗಳು, ಪು. ೩೧. ವ. ೯೪. ಸಂ. ಫ. ಗು. ಹಳಕಟ್ಟಿ, ೧೯೩೦)

## ಸ್ಮೃತಿ ಆಗಮ ಮತ್ತು ವೀರಶೈವರು

ವೀರಶೈವರಲ್ಲಿ ವೈದಿಕಬ್ರಾಹ್ಮಣರನ್ನು ಅನುಸರಿಸಿ ಅನುಕರಿಸಿ ಬಾಳುವ ಬದುಕುವ ವೀರಶೈವರು (ಅನಂತ ಸಾಮಾಜಿಕ ವಿಭಾಗಗಳವರು) ಇವರು ಶಕ್ತಿವಿಶಿಷ್ಟಾದ್ವೈತಪಂಥವೇ ವೀರಶೈವರ ತಾತ್ತ್ವಿಕಪ್ರತಿಷ್ಠೆಯೆಂದು ಹೇಳು ತ್ತಾರೆ. ಉಳಿದವರು ವಚನಶಾಸ್ತ್ರದ ವೀರವಿಚಾರವಾದಿ ಶರಣರನ್ನನುಸರಿಸಿ ದ್ವೈತಾದ್ವೈತ, ವಿಶಿಷ್ಟಾದ್ವೈತ; ಶಕ್ತಿ ವಿಶಿಷ್ಟಾದ್ವೈತ ಇತ್ಯಾದಿಗಳಿಗೂ ವೀರಶೈವಕ್ಕೂ ಸಂಬಂಧವಿಲ್ಲವೆನ್ನುವವರೂ ಇದ್ದಾರೆ. ಈ ಮಾತು ಇಲ್ಲಿ ಬೆಳೆಸುವುದು ಬೇಡ. ಈ ಎರಡು ಪಂಥದವರು ಅವರವರಿಗೆ ತೋರಿದ ಸಾಂಪ್ರದಾಯಿಕ ಅಥವಾ ಅನುಭಾವಿಕ ಪ್ರಮಾಣಗಳನ್ನು ಒಪ್ಪುತ್ತಾರೆ.

ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು ಶೈವಾಗಮಗಳು ವೀರಶೈವರಿಗೆ ವೇದಗಳಷ್ಟೇ ಪ್ರಮಾಣವೆಂದು ಕೆಲವರೂ, ಶ್ರುತಿಯಂತೆ ಸ್ಮೃತಿಯೂ ಪ್ರಮಾಣವೆಂದು ಹೇಳಿ ಸ್ಮಾರ್ತಯಾಜುಷ ತಂತ್ರಮಂತ್ರಪ್ರಯೋಗಗಳನ್ನು ಆಚರಣೆಗೆ ಇಟ್ಟುಕೊಂಡು 'ಕೃಷ್ಣಾರ್ಪಣಮಸ್ತು' ಎನ್ನುವ ಕಡೆ 'ಶಿವಾರ್ಪಣಮಸ್ತು' ಎನ್ನುವ ವೀರಶೈವ ವೈದಿಕರೂ ಉಂಟು. ಆದ್ದರಿಂದ ಸಾಂಪ್ರದಾಯಿಕರಿಗೆ ವೇದ ಆಗಮಗಳು ಪ್ರಮಾಣ. ವಚನಶಾಸ್ತ್ರಪಂಥದ ವೀರಶೈವರಿಗೆ ಇವು ಅಂದರೆ ವೇದ ಆಗಮ ಸ್ಮೃತಿ ಪುರಾಣ ಇವು ಯಾವುವೂ ಪ್ರಮಾಣವಲ್ಲ.

ಆದಿಪುರಾಣ ಅಸುರರಿಗೆ ಮಾರಿ ; ವೇದ ಪುರಾಣ
ಹೋತಿಂಗೆ ಮಾರಿ[1]
ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲಯ್ಯ
ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲಯ್ಯ
ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯ
ವಾಯಿತ್ತು; ವೇದವನೋದಿದ ಬ್ರಹ್ಮನ ಶಿರ
ಹೋಯಿತ್ತು[2]
ವೇದವೆಂಬುದು ನಿಮಗೆ ತಿಳಿಯದು[3]
ಶಾಸ್ತ್ರ ಬಲ್ಲಿತ್ತೆಂಬೆನೆ ಶಬ್ದಕ್ರಿ ; ಪುರಾಣ ಬಲ್ಲಿ
ತ್ತೆಂಬೆನೆ ಪೂರ್ವಕ್ರಿ. ಆಗಮ ಬಲ್ಲಿತ್ತೆಂಬೆನೆ
ಮಾಯ ಹೊಂದಿತ್ತು. ಇದು ಕಾರಣ ಕೂಡಲ
ಸಂಗಮದೇವ ನಿತ್ಯ. ಉಳಿದ ದೈವವೆಲ್ಲಾ ಅನಿತ್ಯ ಕಾಣಭೋ[4]

ಈ ರೀತಿಯಾಗಿ ಆರು ದರ್ಶನದವರು ಅವರ ನಂತರ ಬಂದ ಬೌದ್ಧ ಜೈನ ಕ್ರೈಸ್ತ ಹಾಗೂ ವೀರಶೈವ ಇವರೆಲ್ಲರೂ ಪ್ರಮಾಣಗಳನ್ನು ಹೇಗೆ ನಂಬಿದ್ದಾರೆ, ಆಚರಿಸಿದ್ದಾರೆ, ಪ್ರತಿಪಾದಿಸಿದ್ದಾರೆ ಎಂಬುದನ್ನು ಈವರೆಗೆ ನಾವು ಸೂಕ್ಷ್ಮವಾಗಿ ನೋಡಿದ್ದೇವೆ. ಆಸ್ತಿಕ ನಾಸ್ತಿಕ ಎಂಬ ಶಬ್ದಗಳು ಆ ಪದಗಳಿಗೆ ಸಾಂಪ್ರದಾಯಿಕರು ಹೇಳುವ ಕುಂಟು ನೆಪ[5] ಸರ್ವಗ್ರಾಹ್ಯವಲ್ಲ. ಬಸವಾದಿ ಪ್ರಮಥರು ಮೇಲಿನ ಎಲ್ಲಾ ಪ್ರಮಾಣಗಳನ್ನೂ ಒಪ್ಪಿ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಕಂಡೆ ಎನ್ನುವುದರಿಂದ ಪ್ರತ್ಯಕ್ಷ, ತರ್ಕಿಸಿ ಮಥಿಸಿ ತಿಳಿಯಬೇಕೆನ್ನುವುದರಿಂದ ಅನುಮಾನ, 'ಭರ್ಗೋ ದೇವಸ್ಯ ಧೀಮಹಿ' ಎಂಬ ಶ್ರುತಿಯ ಬಸವಣ್ಣನೋದುವನು, 'ಅತ್ಯತಿಷ್ಠದ್ದಶಾಂಗುಲಂ' ಇತ್ಯಾದಿ ವೇದದ ಜ್ಞಾನ ಕಾಂಡ ವಾಕ್ಯಗಳಿಂದ ಶಬ್ದಪ್ರಮಾಣವನ್ನೂ, 'ಉಪಮಿಸಿ ನೋಡುವೆನು' ಎಂಬುದರಿಂದ ಉಪಮಾನವನ್ನೂ, 'ಕಾಳಯ್ಯ ಕೇತಯ್ಯ ಭೂತಯ್ಯ ಮಾರಿ ಎಂಬ ನೂರೊಂದು ಮಡಕೆಗಳಿಗೆ ಕೂಡಲಸಂಗಮದೇವನೆಂಬ ಒಂದು ದೊಣ್ಣೆ ಸಾಲದೆ' ಎಂಬ ಮಾತಿನಿಂದ ಐತಿಹ್ಯ, 'ಜಗದಗಲ ಮುಗಿಲಗಲ ಮಿಗೆಯಗಲ....' ಎಂಬುದರಿಂದ ಅರ್ಥಾಪತ್ತಿ, ಎಲ್ಲ ಕ್ಕಿಂತಲೂ ಮಿಗಿಲಾಗಿ—'ತ್ರಿವಿಧ ದಾಸೋಹಿಗಳ ಕೆರವ ಕಾದಿರಿಸು ; ಎನಗೆ ಲಿಂಗವ ನುಡಿಸುವ ಅನುಭಾವಿಗಳ

---

1 ಬ. ವ. ಪು. ೮೫, ವ. ೪೪

2 ಬ. ವ. ಪು. ೨೭, ವ. ೬೮

3 ಬ. ವ. ಪು. ೮೬, ವ. ೪೯

4 ಬ. ವ. ಪು. ೮೨, ವ. ೨೫

5 ವೇದಪ್ರಾಮಾಣ್ಯವನ್ನು ಒಪ್ಪುವುದು ಆಸ್ತಿಕತ್ವ; ಇಲ್ಲದಿದ್ದರೆ ನಾಸ್ತಿಕತ್ವ.

ತೋರು' ಎಂಬ ಅನುಭಾವ ಪ್ರಮಾಣದ (Mystic intuitional) ಕುರುಹು ನಮಗೆ ಸಿಗುತ್ತದೆ. ಒಂದು ವೇಳೆ ವೀರಶೈವರಲ್ಲಿ ಉಗ್ರಪಂಥದವರು ಮಹಾಕವಿ ಕಾಳಿದಾಸ ಹೇಳುವಂತೆ:

ಸತಾಂ ಹಿ ಸಂದೇಹಪದೇಷು ವಸ್ತುಷು
ಪ್ರಮಾಣಮಂತಃಕರಣಪ್ರವೃತ್ತಯಃ ।[1]

ಆತ್ಮಪ್ರಮಾಣ, ಅಂತಃಕರಣಪ್ರಮಾಣ, ಅನುಭಾವವೇ ಪ್ರಮಾಣ ; ಉಳಿದವು ಅಲ್ಲ ಎನ್ನಬಹುದು. ಅದು ಅತಿ ವ್ಯವಹಾರದ ಮಾತು. ಆದರ್ಶ ವೀರಶೈವನ ಮುಖ್ಯ ಕುರುಹು ಎಂದರೆ 'ಲಿಂಗವ ನುಡಿಸಿಂಭೋ' ಅಂದರೆ ತನ್ನ ಹೆಜ್ಜೆ ಹೆಜ್ಜೆಗೂ ಲಿಂಗನ ಅಂದರೆ ಪರಮಾತ್ಮನೊಡನೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮಾತನಾಡಿ ಅವನ ಅಪ್ಪಣೆಯಂತೆ ತನ್ನ ವ್ಯವಹಾರವನ್ನು ಜರುಗಿಸಿ 'ಉರಿಗೊಡ್ಡಿದರಗಿನಂತೆ' ಲಿಂಗದಲ್ಲೇ ಲೀನವಾಗುವ ಬಯಲಾಗುವ ಲಿಂಗಾಂಗಸಂಗಿಗಳನ್ನು ನಮ್ಮಂತಹ ಸಾಮಾನ್ಯರೊಡನೆ ಹೋಲಿಸಬಾರದು. ಆನೆಯ ದಾರಿಯೇ ಬೇರೆ; ಅಜದ ದಾರಿಯೇ ಬೇರೆ. ಈ ಅಜಗಜನ್ಯಾಯ ಪ್ರಮಾಣನ್ಯಾಯವಲ್ಲ. ವೀರಶೈವರಿಗೆಂದು ಪ್ರಮಾಣಗಳನ್ನು ಬೇರ್ಪಡಿಸುವುದು ಕೇವಲ ವ್ಯಾವಹಾರಿಕ; ತಾತ್ತ್ವಿಕವಲ್ಲ. ಷಟ್‌ದರ್ಶನಕಾರರು ಉಳಿದವರು ಅವರವರಿಗೆ ತೋರಿದಂತೆ ಅವರವರು ಹೇಳಿದರು.

### ಪ್ರಮಾಣಗಳು ವ್ಯಾವಹಾರಿಕ ; ತಾತ್ತ್ವಿಕವಲ್ಲ

ತತ್ತ್ವ ವೈಯಕ್ತಿಕ. ಮುಪ್ಪಿನ ಷಡಕ್ಷರಿಗಳು ಹೇಳುವಂತೆ:

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗುಂ
ಅವರವರಿಗೆಲ್ಲ ಶಿವ ನೀನೊಬ್ಬನೆ[2]

ಇದೇ ಮುಖ್ಯವಾದ ತತ್ತ್ವವಲ್ಲದೆ ದ್ವೈತ ಅದ್ವೈತ ಇತ್ಯಾದಿ ಪಂಥಗಳು ಒಂದು ನಾಟಕ.

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ[3]

ಇದು ನಿತ್ಯ ಸತ್ಯ

ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ ;
ಉರಿಗೊಡ್ಡಿದರಗಿನಂತೆ ಬೆರೆಯದನ್ನಕ್ಕ[4]
ಕುರುಹೇನು ತೋರದೆ ಬೆರದೇಕವಾಗೆಂದು[5]

ಈ ತ್ರೈಕಾಲಿಕಸತ್ಯವೇ ಸತ್ಯ. ದ್ವೈತಾದ್ವೈತಾದಿಗಳೆಲ್ಲಾ ತತ್ತ್ವನವನೀತಕ್ಕಾಗಿ ಮಾಡುವ ಮಥನಗಳೇ ಹೊರತು ಆತ್ಯಂತಿಕ ಅಥವಾ ಪಾರಮಾರ್ಥಿಕ ಸತ್ಯವಲ್ಲ. ಎಲ್ಲ ತತ್ತ್ವಗಳೂ ದ್ವೈತವಾಗಿ ಕಂಡು ಅದ್ವೈತವಾಗಿ ಕೊನೆಗಾಣು

---

1 ಅಭಿಜ್ಞಾನ ಶಾಕುಂತಲಂ, ಪ್ರಥಮೋಽಂಕಃ, ಶ್ಲೋ. ೧೯, ನಿರ್ಣಯಸಾಗರ ಪ್ರಕಾಶನ, ಬೊಂಬಾಯಿ.

2 ಸುಬೋಧಸಾರ, ಪು. ೨. ಸಂಗ್ರಾಹಕರು: ಲಿಂ. ಹರ್ಡೇಕರ ಮಂಜಪ್ಪನವರು, ಪ್ರಕಾಶಕರು: ಮುರುಘಾಮಠ, ಧಾರವಾಡ.

3 ಸುಬೋಧಸಾರ, ಪು. ೩. ಸಂಗ್ರಾಹಕರು: ಲಿಂ. ಹರ್ಡೇಕರ ಮಂಜಪ್ಪನವರು, ಪ್ರಕಾಶಕರು: ಮುರುಘಾಮಠ, ಧಾರವಾಡ.

4 ಬ. ವ., ಪು. ೨೯, ವ. ೭೮.

5 ಸರ್ಪಭೂಷಣ ಶಿವಯೋಗಿ ವಿರಚಿತ ಕೈವಲ್ಯಕಲ್ಪವಲ್ಲರಿ, ಪು. ೯೩. ಸಂ. ಶಿ. ಶಿ. ಬಸವನಾಳ, ಬೆಂಗಳೂರು, ೧೯೪೯

ಪ್ರವು. ಆ ಅದ್ವೈತ ಭಿನ್ನಾದ್ವೈತವೇ ಹೊರತು ಅಭಿನ್ನಾದ್ವೈತವಲ್ಲ. ಲಿಂಗಾಂಗಸಮರತಿಯೇ ಹೊರತು ಲಿಂಗಾಂಗ ಸಾಮರಸ್ಯವಲ್ಲ. ನಿಸರ್ಗನಿಯಮಗಳೇ ಪ್ರಭುವಾದಲ್ಲಿ ಬಂಧ; ನಿಸರ್ಗನಿಯಮಗಳ ಪ್ರಭು ತಾನಾದಲ್ಲಿ ಮುಕ್ತಿ. ಅದು ಸದೇಹಮುಕ್ತಿ, ವಿದೇಹಮುಕ್ತಿ, ಜೀವನ್ಮುಕ್ತಿ ಇತ್ಯಾದಿ ನಾನಾವಿಧ. ತಾನುಂಬ ಊಟ, ತಾಪಡುವ ರತಿಸುಖ ಪ್ರತ್ಯೇಕ ವಿಶೇಷ, ಅದು ಸಾಮಾನ್ಯವಲ್ಲವೇ ಅಲ್ಲ. ಅದನ್ನು ವ್ಯವಹಾರದಲ್ಲಿ ಸಾಮಾನ್ಯವೆನ್ನುವುದು ತಪ್ಪಲ್ಲ. ಅದರಂತೆ ಪ್ರತಿ ವ್ಯಕ್ತಿಯ ಪ್ರತಿಜೀವಿಯ ಪ್ರತಿಚೈತನ್ಯದ ತಾತ್ತ್ವಿಕದರ್ಶನ ಪಾರಮ್ಯ ಅನುಭವ ಆತನ ಪರಮಗತಿ ದಾರ್ಶನಿಕರು ಹೇಳಿದಂತಲ್ಲ. ಆಯಾ ಚೈತನ್ಯದ ಗತಿ ಅವನವನ ಕರ್ಮಧರ್ಮವನ್ನನುಸರಿಸಿರುತ್ತೆ. ಆದ್ದರಿಂದ ಪರಮಾತ್ಮ, ಪ್ರಮಾಣ, ಪಾರಮ್ಯ, ದರ್ಶನ ಇವೆಲ್ಲವೂ ಆಯಾ ಆಚಾರ್ಯರ ವೈಯಕ್ತಿಕ ಅನುಭವಗಳೇ ಹೊರತು ಸಾರ್ವಜನಿಕಗಳಲ್ಲ. ಇದು ಲೇಖಕನ ವೈಯಕ್ತಿಕ ಅಭಿಪ್ರಾಯ.

ಈ ಲೇಖನ ವೀರಶೈವ ಪ್ರಮಾಣಗಳ ಮೇಲೆ ಬರೆಯಲಾಗಿದೆ. ಅದಕ್ಕಾಗಿ ಕೆಲವು ದಾರ್ಶನಿಕರ ಆಧಾರಗಳನ್ನು ಇಲ್ಲಿ ಪೋಣಿಸಿದೆ. ಸಾಂಪ್ರದಾಯಿಕ ವೀರಶೈವರ ಆಧಾರ ಪ್ರಮಾಣಗಳೆಂದು ಹೇಳಿಕೊಳ್ಳುವ ಶ್ರೀಕರಭಾಷ್ಯ, ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ, ಲಿಂಗಧಾರಣಚಂದ್ರಿಕಾ, ಶೈವಪರಿಭಾಷಾ ಈ ಮುಂತಾದ ಗ್ರಂಥಗಳಲ್ಲೂ ವಚನಶಾಸ್ತ್ರದಲ್ಲೂ ಈ ಪ್ರಮಾಣಗಳ ವಿವರಣೆಗಾಗಿ ಪ್ರತ್ಯೇಕ ಭಾಗವಿರದೆ ಅಲ್ಲಲ್ಲಿ ಈ ಪ್ರಮಾಣಗಳ ವಿಷಯ ಹರಡಿದೆ. ಅದನ್ನು ಇಲ್ಲಿ ಸಂಗ್ರಹಿಸಿ ವಿಸ್ತರಿಸಿದೆ. ಕೆಲವು ಕಡೆ ಲೇಖಕ ತನ್ನ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಪ್ರಮಾಣಗಳನ್ನು ಮತ್ತು ಪ್ರಮೇಯಗಳನ್ನು ನಿತ್ಯನೈಮಿತ್ತಿಕ ವ್ಯವಹಾರಕ್ಕಾಗಿ ಪರಮಾತ್ಮ ಸೃಷ್ಟಿಸಿದ್ದಾನೆ. ಅವುಗಳನ್ನು ಅವರ ಪ್ರಮಾಣಗಳು ಇವರ ಪ್ರಮಾಣಗಳೆನ್ನುವುದು ಕೇವಲ ಮಮಕಾರ. ಮನುಷ್ಯನಿಗೆ ಮಹಾಲಿಂಗನು ನೀರು ನೆಲ ಬೆಳಕು ಗಾಳಿ ಮುಂತಾದ ಭೌತಿಕ ವರಪ್ರಸಾದವನ್ನು ಅನುಗ್ರಹಿಸಿದಂತೆ ಪ್ರಮಾಣಗಳನ್ನು ಬೌದ್ಧಿಕ ವರಪ್ರಸಾದವಾಗಿ ಅನುಗ್ರಹಿಸಿದ್ದಾನೆ. ಅದನ್ನು ಅವರವರು ಅವರವರಂತೆ ಅಷ್ಟು ಇಷ್ಟು ಪ್ರಮಾಣಗಳೆಂದು ಬರೆದಿರುವುದೆಲ್ಲಾ ಅವರವರ ತಾತ್ತ್ವಿಕ ಹಿನ್ನೆಲೆ (philosophical preoccupation) ಯನ್ನನುಸರಿಸಿದೆ. ಇದು ತಪ್ಪು ಸರಿ ಎನ್ನುವ ಪ್ರಶ್ನೆಗೆ ಕೈಹಾಕಿದರೆ ಭಾರತದ ತಾತ್ತ್ವಿಕ ಪ್ರಸ್ಥಾನವನ್ನು ಕೆಣಕಿದಂತಾಗುವುದು. ಅದಕ್ಕೆ ಕೊನೆ ಮೊದಲಿಲ್ಲ. ಲೇಖಕ ಹಿಂದೆ ತಿಳಿಸಿರುವಂತೆ ತಾತ್ತ್ವಿಕ ನಿಲುವು ಅವರವರ ಆಹಾರ ವಿಹಾರ ನಿಲುವಿನಂತೆ. ವ್ಯಕ್ತಿಯ ಶಕ್ತಿಯನ್ನನುಸರಿಸಿ ಪ್ರಮಾಣಪ್ರಮೇಯಪ್ರಪಂಚವಿರುತ್ತೆ. ವಾದವಿವಾದಗಳು ಬುದ್ಧಿಯ ಪ್ರಖರತೆಯಿಂದ ಜೀವಿಗಳು ಅನುಭವಿಸುವ ಶಬ್ದಸುಖವಷ್ಟೆ. ಎಲ್ಲೆಲ್ಲಿಯೂ ಅನುಭವ (Experience and conscience) ಅನುಭಾವ (Mystic ecstasy and experience).

ಈ ವಿಷಯದಲ್ಲಿ ವೀರಶೈವರ ಪ್ರಮಾಣಗಳು ಎಂಬ ಲೇಖನವು ಕೇವಲ ವ್ಯಾವಹಾರಿಕ ಮಾತ್ರ.

ಶ್ರೀ ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶ್ರೀ ಶಿವರಾತ್ರಿರಾಜೇಂದ್ರಶ್ರೀಗಳವರು ಕರ್ನಾಟಕದಲ್ಲಿ ವ್ಯಕ್ತಿಮಾತ್ರವಲ್ಲದೆ ಅದ್ಭುತಶಕ್ತಿಯಾಗಿದ್ದಾರೆ. ಆದಿ ಶ್ರೀ ಶಿವರಾತ್ರೀಶ್ವರರ ಪರಮಾನುಗ್ರಹದಿಂದ ಅನಂತ ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಎಲ್ಲರಿಗೂ ಅವರಿಂದ ಸಹಾಯ ಸೌಲಭ್ಯಗಳು ದೊರಕುತ್ತಿವೆ. ಅವರು ಸ್ಥಾಪಿಸಿರುವ ಅನಂತ ಸಂಸ್ಥೆಗಳು ಮತ್ತು ಅವರ ಸಂಪತ್‌ಶ್ರೀ ಅನಂತಕಾಲ ಬಾಳಿ ಜನತೆಯನ್ನು ಪಾಲಿಸಲಿ. ವರಗುರು ಆದಿ ಶ್ರೀ ಶಿವರಾತ್ರಿ ಶಿವಯೋಗಿಗಳು ಗುರುಭಕ್ತಿಪ್ರಾಣರಾದ ಶ್ರೀ ಜಗದ್ಗುರು ಶಿವರಾತ್ರಿರಾಜೇಂದ್ರಶ್ರೀಗಳವರಿಗೆ ಷಷ್ಟ್ಯಬ್ದಪೂರ್ತಿ ಉತ್ಸವವನ್ನೇ ಅಲ್ಲದೆ ಹಿತಾಯು-ಶತಾಯು ಉತ್ಸವಾದಿಗಳನ್ನೂ ಉಂಟುಮಾಡಲೆಂದು ಭಕ್ತಿಪೂರ್ವಕವಾಗಿ ಶಿವನನ್ನೂ ಶಿವಯೋಗಿಗಳನ್ನೂ ಪ್ರಾರ್ಥಿಸಿ ಈ ಲೇಖನ ಈ ಸಂದರ್ಭದಲ್ಲಿ ಸನ್ನಿಧಿಗೆ ಸಮರ್ಪಿತ.

---

ದಯವಿರಬೇಕು ಸಕಲ ಪ್ರಾಣಿಗಳಲ್ಲಿ,
ಸ್ನೇಹವಿರಬೇಕು ಸಕಲ ಗುಣಗಳಲ್ಲಿ,
ನಯವಿರಬೇಕು ನುಡಿಗಡಣದಲ್ಲಿ
ಇಂತೀ ಗುಣವಿಲ್ಲದವರ ಕಂಡಡೆ ಸೊಗಸದಯ್ಯ ಎನಗೆ ಅಖಂಡೇಶ್ವರಾ

ಷಣ್ಮುಖ ಶಿವಯೋಗಿ

# ಶರಣರ ಶೂನ್ಯತತ್ತ್ವ

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಬಸವಣ್ಣನವರು ಅನುಭವಮಂಟಪದಲ್ಲಿ ಅಲ್ಲಮಪ್ರಭುವಿಗಾಗಿ ನಿರ್ಮಿಸಿದ ಪೀಠವನ್ನು 'ಶೂನ್ಯಸಿಂಹಾಸನ' ಎಂದು ಕರೆದರು. ೧೫ನೇ ಶತಮಾನದಲ್ಲಿ ರೂಪಿತವಾದ ವಚನಸಂಕಲನಗ್ರಂಥ 'ಶೂನ್ಯಸಂಪಾದನೆ' ಎಂಬ ಹೆಸರನ್ನು ಪಡೆಯಿತು. ಈ ಹೆಸರುಗಳೇ ಆಶ್ಚರ್ಯಕರವಾದುವು. ಅಗೆದಷ್ಟೂ ಅರ್ಥವನ್ನು ಕೊಡುವ ಧ್ವನಿಸಮನ್ವಿತವಾದ ಕಾವ್ಯದಂತಿವೆ ಈ ಪದಸಮುಚ್ಚಯ. 'ಶೂನ್ಯ' ಎನ್ನುವ ಮಾತಿಗೆ ಶರಣರು ಕೊಟ್ಟಿರುವ ಅರ್ಥವ್ಯಾಪ್ತಿಯನ್ನು ಗಮನಿಸಿದಾಗ ಈ ಧ್ವನಿ ಅನುರಣಿತವಾಗುತ್ತದೆ. ಶರಣರ ತಾತ್ವಿಕ ವಿವೇಚನೆಯಿಂದ ಮತ್ತು ಅನುಭಾವದ ನಿಲುವಿನಿಂದ ಈ ಮಾತು ವಿಶಿಷ್ಟವಾದ ಅರ್ಥವ್ಯಾಪ್ತಿಯನ್ನೂ ಕಾಂತಿಯನ್ನೂ ಪಡೆದಿದೆ.

'ಶೂನ್ಯ' ಎನ್ನುವ ಮಾತು ಭಾರತೀಯ ತತ್ತ್ವಶಾಸ್ತ್ರದಲ್ಲಿ ಬಹಳ ಹಳೆಯದು. ಬೌದ್ಧಧರ್ಮದಲ್ಲಿ 'ಶೂನ್ಯವಾದ' ಎಂಬ ಒಂದು ಶಾಖೆಯೇ ಬೆಳೆದುಬಂದಿತ್ತು. ಈ ಧರ್ಮದ ಒಂದು ಪ್ರಮುಖವಾದ ಘಟ್ಟ ಮಾಧ್ಯಮಿಕ ಮತ. ನಾಗಾರ್ಜುನ ಆರ್ಯದೇವ ಮೊದಲಾದವರಿಂದ ಪ್ರತಿಪಾದಿತವಾಗಿ ಇದು ಒಂದು ಸುಪುಷ್ಟವಾದ ಮಧ್ಯಮ ಮಾರ್ಗವನ್ನು ಬೌದ್ಧಧರ್ಮಕ್ಕೆ ಹಾಕಿಕೊಟ್ಟಿತು. ಬೌದ್ಧಧರ್ಮದ ಇತರ ಶಾಖೆಗಳಂತೆ ಇದು "ಅನಾತ್ಮ"ವಾದವನ್ನೇ ಅವಲಂಬಿಸಿದರೂ 'ಶೂನ್ಯ'ದ ಪ್ರತಿಪಾದನೆಯಲ್ಲಿ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ: 'ಅನಾತ್ಮವಾದ'ವನ್ನು ಕುರಿತು ಎತ್ತಬಹುದಾದ ಸಂದೇಹಗಳಿಗೆಲ್ಲಾ ಉತ್ತರವನ್ನು ಕೊಟ್ಟಿದೆ.

ಬುದ್ಧ ಆತ್ಮವೆಂಬುದನ್ನು ಒಪ್ಪಿಕೊಳ್ಳಲಿಲ್ಲವೇ ಹೊರತು ದೇಹವನ್ನಾಳುತ್ತಿರುವ ಧರ್ಮಸಂಕೇತದ ಶಕ್ತಿಯನ್ನು ತಿರಸ್ಕರಿಸಲಿಲ್ಲ. ದೇಹದಲ್ಲಿರುವ ಭೌತಿಕ ವ್ಯವಸ್ಥೆಗಳಿಗೆ ಹಿನ್ನೆಲೆಯಾಗಿ ಮನಸ್ಸಿನ ನಿರಂತರ ಧಾರೆ (ಮೈಂಡ್-ಕಂಟಿನ್ಯೂಯಿಸಂ)ಯೊಂದು ಅದನ್ನಾಳುವ ನಿಯಾಮಕಶಕ್ತಿಯಾಗಿ ನಿಂತಿದೆ. ಈ ಶಕ್ತಿಯೇ ಜೀವನದ ನಿರಂತರತೆಗೂ ಪ್ರಗತಿಗೂ ಕಾರಣ. ಇಂದಿನ ಜೀವನದ ಮಾನಸಿಕ ವ್ಯವಸ್ಥೆ ಮುಂದಿನ ಜೀವನದ ಈ ವ್ಯವಸ್ಥೆಗೆ ಕಾರಣವಾಗುತ್ತದೆ: ಮತ್ತು ಅದು ಹಿಂದಿನ ವ್ಯವಸ್ಥೆಯನ್ನು ಅವಲಂಬಿಸಿದೆ. ಈ ತತ್ತ್ವವು ಆತ್ಮವಾದಕ್ಕೂ ಭೌತವಾದಕ್ಕೂ ಒಳಗಾಗದೆ ತಾನೇ ಸ್ವತಂತ್ರವಾಗಿ ನಿಂತಿತು. ಇಲ್ಲಿ ಪುನರ್ಜನ್ಮವೆಂದರೆ 'ಆತ್ಮ' ಈ ದೇಹವನ್ನು ಬಿಟ್ಟು ಇನ್ನೊಂದು ಕಡೆ ಹೋಗಿ ಜನಿಸುತ್ತದೆ ಎಂದಲ್ಲ; ಈ ದೇಹದಲ್ಲಿರುವ ಮನಸ್ಸಿನ ನಿರಂತರ ನಿಯಾಮಕಶಕ್ತಿ ಈ ವ್ಯವಸ್ಥೆಯಿಂದ ಬೇರಾಗಿ ಇದರ ಆಧಾರದ ಮೇಲೆ ರೂಪಿತವಾದ ಇನ್ನೊಂದು ವ್ಯವಸ್ಥೆಗೆ ಒಳಪಡುತ್ತದೆನ್ನುವುದೇ ಇಲ್ಲಿ ಪುನರ್ಜನ್ಮವೆಂಬುದಕ್ಕೆ ಅರ್ಥ.

ಈ ವ್ಯವಸ್ಥೆಗೆ ಅತೀತವಾಗುವುದೇ 'ನಿರ್ವಾಣ.' ಶೂನ್ಯವಾದ, ಇದನ್ನು ಎಲ್ಲಾ ಸಂಸ್ಕಾರಗಳ ನಿರ್ಮೂಲನವೆಂದು ಕರೆಯುತ್ತದೆ. ನಮಗೂ ಸೃಷ್ಟಿಗೂ ಇರುವ ಸಂಬಂಧವನ್ನು ಕುರಿತು ಆಲೋಚಿಸುವ ಭಾವನೆಗಳೆಲ್ಲವೂ ಈ ಸಂಸ್ಕಾರದಲ್ಲಿ ಸೇರುತ್ತವೆ. ಇವಲ್ಲದೆ ಆಶೆ ಮೋಹ ದ್ವೇಷಾದಿಗುಣಗಳು, ಭೌತಿಕದೇಹದಲ್ಲಿರುವ ಗ್ರಹಣಶಕ್ತಿಸಂವೇದನೆ, ಮಾನಸಿಕ ಕ್ರಿಯೆಗಳು ಮತ್ತು ಪ್ರಜ್ಞೆ—ಇವೆಲ್ಲವೂ ಸಂಪೂರ್ಣವಾಗಿ ನಿರ್ಮೂಲವಾಗುತ್ತವೆ ನಿರ್ವಾಣದಲ್ಲಿ. ಇಲ್ಲಿ "ಉಪಾಧಿಶೇಷ ನಿರ್ವಾಣ" ಮತ್ತು "ನಿರುಪಾಧಿಶೇಷ ನಿರ್ವಾಣ" ಅಥವಾ 'ಪರಿನಿರ್ವಾಣ'—ಎಂದು ಎರಡು ಬಗೆಯನ್ನು ಮಾಡುವುದುಂಟು. ದೇಹ ಮನಸ್ಸುಗಳು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದರೂ ಆಶೆ ದ್ವೇಷ ಮೋಹಾದಿಗಳನ್ನು ಬಿಟ್ಟು ಪ್ರಶಾಂತ ಮನಸ್ಸಿನಿಂದ ಕೂಡಿರುವುದು 'ಉಪಾಧಿಶೇಷ ನಿರ್ವಾಣ.' 'ಪರಿನಿರ್ವಾಣ'ದಲ್ಲಿ ದೇಹ ಮನಗಳಿಂದ ಹಿಡಿದು ಎಲ್ಲವೂ ಸಂಪೂರ್ಣವಾಗಿ ಇಲ್ಲದಂತಾಗುತ್ತವೆ, ಶೂನ್ಯದಲ್ಲಿ ಕೊನೆಗೊಳ್ಳುತ್ತವೆ.

ಈ ನಿರ್ವಾಣದ ಪೂರ್ಣಕಲ್ಪನೆಯನ್ನು ಅರಿಯಬೇಕಾದರೆ 'ಶೂನ್ಯ' ಎಂಬುದರ ಅರ್ಥವನ್ನೂ ಬೌದ್ಧರ ಶೂನ್ಯವಾದದ ತಿರುಳನ್ನೂ ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಶೂನ್ಯವಾದಿಗಳ ಪ್ರಕಾರ ಈ ಸೃಷ್ಟಿಯಲ್ಲಿ ಸತ್ಯ

ವಾದುದು ಯಾವುದೂ ಇಲ್ಲ. ಏಕೆಂದರೆ ಯಾವ ವಸ್ತುಗಳೂ ತಮ್ಮಲ್ಲಿ ಸಹಜವಾಗಿ ಅಂತರ್ಗತವಾದ ಮತ್ತು ಸ್ವತಂತ್ರವಾದ ಸ್ವಭಾವಗಳನ್ನು ಪಡೆದಿಲ್ಲ. ನಮಗೆ ಗೋಚರವಾಗುವ ಪ್ರತಿಯೊಂದು ವಸ್ತುವೂ ತನ್ನ ಆ ರೀತಿಯ ಅಸ್ತಿತ್ವಕ್ಕೆ ಇನ್ನೊಂದು ಕಾರಣವನ್ನೂ ನಿಯಮವನ್ನೂ ಅವಲಂಬಿಸಿರುತ್ತದೆ. ಆದುದರಿಂದ ಯಾವ ವಸ್ತುವೇ ಆಗಲಿ ತನ್ನ ಸಹಜಸ್ವರೂಪದಿಂದ ಅಸ್ತಿತ್ವದಲ್ಲಿದೆಯೆಂದು ಹೇಳುವುದಕ್ಕಾಗುವುದಿಲ್ಲ. ನಾವು ಒಂದು ವಸ್ತುವನ್ನು ನೋಡುವಾಗ ಆ ವಸ್ತುವಿನ 'ಆರೋಪಿತ ರೂಪ'ವನ್ನು ನೋಡುತ್ತೇವೆಯೇ ಹೊರತು 'ಸ್ವರೂಪ'ವನ್ನಲ್ಲ.

ಹಾಗಾದರೆ ಸತ್ಯದ 'ಸ್ವ'ರೂಪವೇನು ? 'ಸ್ವ'ಭಾವವೇನು ? ಒಂದು ವಸ್ತುವಿನ ಸಹಜವಾದ ಸ್ವಭಾವವೆಂದರೆ ಅದು ಇನ್ನೊಂದರ ಅಪೇಕ್ಷೆ ಇಲ್ಲದೆ ತನ್ನಲ್ಲಿಯೇ ಅಂತರ್ಗತವಾಗಿರುವ ಗುಣಗಳಿಂದ ಸ್ವತಂತ್ರವಾಗಿರುವುದು. ಇದನ್ನು 'ಪರನಿರಪೇಕ್ಷಾ' ಎಂದು ಕರೆದಿದ್ದಾರೆ. ಈ ದೃಷ್ಟಿಯಿಂದ ನೋಡಿ ಶೂನ್ಯವಾದದ ಪ್ರತಿಪಾದಕರು ಈ ಜಗತ್ತಿನ ಅಸ್ತಿತ್ವವನ್ನೇ ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಈ ಜಗತ್ತಿನಲ್ಲಿ ಕಾಣುವ ವಸ್ತುಗಳೆಲ್ಲವೂ ಆರೋಪಿತವಾದವುಗಳೇ ಹೊರತು ಸಹಜಸ್ವಭಾವದಿಂದ ಕೂಡಿದವುಗಳಲ್ಲ. ಆದುದರಿಂದ ಇವೆಲ್ಲಾ ಗಂಧರ್ವನಗರದಂತೆ ಕಲ್ಪಿತವಾದವುಗಳು. ಈ ಸೃಷ್ಟಿ ಮಿಥ್ಯವಾದುದು. 'ನಾನು' 'ನನ್ನದು' ಎಂಬ ಭಾವನೆಗಳೂ ಸುಳ್ಳು. ಈ ಭಾವನೆಯಲ್ಲಿ ಆಳವಾಗಿ ಬೇರುಬಿಟ್ಟಿರುವ ಸಂಸಾರದ ಬಂಧನಗಳೂ ಇದನ್ನು ಅರಿತೊಡನೆಯೇ ನಾಶವಾಗುತ್ತವೆ—ಹೀಗೆ ಶೂನ್ಯವಾದದ ಮೂಲಭೂತವಾದ ಅಂಶ, ಈ ಜಗತ್ತನ್ನು ನಾನು ಎಂಬುದನ್ನು ಅಳಿಸಿಹಾಕುವುದು : ಅಂದರೆ 'ಆತ್ಮ' ಮತ್ತು ಅದಕ್ಕೆ ಸಂಬಂಧಿಸಿದ ತತ್ತ್ವಗಳನ್ನು ಇಲ್ಲಗೈಯುವುದೇ ಆಗಿದೆ.

ಹೀಗೆ ಮಾಧ್ಯಮಿಕರು ತೋರಿಕೆಯ ವಸ್ತುಗಳೆಲ್ಲವನ್ನೂ ಸುಳ್ಳೆಂದು ತಿರಸ್ಕರಿಸಿ ತಾವು ಕಂಡ ಅಖಂಡ (ಅಬ್ಸಲ್ಯೂಟ್) ವಸ್ತುವಿನ ಸ್ವರೂಪವನ್ನು 'ಶೂನ್ಯ' ಎಂದು ನಿರ್ದೇಶಿಸಿದರು. ಅವರ ಆ ಅಭಿಪ್ರಾಯವನ್ನು ಹೀಗೆ ಸಂಗ್ರಹಿಸಬಹುದು : ಅನೇಕ ಅಭಿಪ್ರಾಯಗಳೂ ಆಲೋಚನೆಗಳೂ ತತ್ತ್ವಸಿದ್ಧಾಂತಗಳೂ ನಮ್ಮ ಮನಸ್ಸನ್ನು ಆಕ್ರಮಿಸಿವೆ. ಅವುಗಳ ಒತ್ತಡವನ್ನು ತೆಗೆದುಹಾಕಿದಾಗ ಮಾತ್ರ ಶೂನ್ಯತೆಯ ಅರಿವು ನಮಗಾಗುತ್ತದೆ. ನಮ್ಮ ಆಲೋಚನೆಗಳ ಮಿತಿಗೆ ನಾವು ಒಳಗಾಗಿ ಒಂದು ಪೂರ್ವಕಲ್ಪಿತ ಭಾವನೆಯಿಂದ ಸತ್ಯವನ್ನರಿಯಲು ಪ್ರಯತ್ನಿಸುತ್ತೇವೆ. ಆಗ ಸತ್ಯದ ಸಹಜಸ್ವರೂಪ ತಿಳಿಯುವುದಿಲ್ಲ. ಈ ಎಲ್ಲ ಆವರಣಗಳನ್ನೂ ತೆಗೆದುಹಾಕಿ, ಎಲ್ಲ ಆರೋಪಿತ ಗುಣಗಳನ್ನೂ ತಿರಸ್ಕರಿಸಿ ನೋಡಿದಾಗ ಶೂನ್ಯತೆಯ ಅನುಭವವಾಗುತ್ತದೆ—ಎನ್ನುತ್ತದೆ ಶೂನ್ಯವಾದ.

ಇದು ನಿಷೇಧಾತ್ಮಕ ಮಾರ್ಗದಿಂದ ಸತ್ಯವನ್ನು ಕಾಣುವ ಪ್ರಯತ್ನವೆಂಬಂತೆ ತೋರುತ್ತದೆ. ಆದರೆ ಇದರ ಪ್ರತಿಪಾದಕರಲ್ಲಿ ಪ್ರಮುಖನಾದ ನಾಗಾರ್ಜುನ, ಇದು ನಿಷೇಧಾತ್ಮಕವಲ್ಲವೆಂದು ತೋರಿಸಲು ಪ್ರಯತ್ನಪಡುತ್ತಾನೆ. ವಿಧಿ, ನಿಷೇಧಗಳು ಸತ್ಯವನ್ನು ಕಾಣಲು ನಾವು ನಿರ್ಮಿಸಿಕೊಂಡಿರುವ ಕೃತಕವಾದ ಪರಿಮಿತವಲಯಗಳು. ಇವುಗಳನ್ನು ತೆಗೆದುಹಾಕಿದಾಗ ಮಾತ್ರ ಸತ್ಯವನ್ನು ಕಾಣಲು ಸಾಧ್ಯವಾಗುತ್ತದೆ. ಅಂದರೆ ಇಲ್ಲಿ ಶೂನ್ಯತೆ ಎಂಬುದು ಎಲ್ಲ ತತ್ತ್ವಗಳನ್ನೂ ನಿಷೇಧಿಸಿ ಆ ನಿಷೇಧವನ್ನೂ ಮೀರಿನಿಂತ ಸತ್ಯವೆಂಬ ಅರ್ಥವನ್ನು ಕೊಡುತ್ತದೆ.

ಈ ನಿರ್ವಾಣದ ಸ್ವರೂಪ ಅನಿರ್ವಚನೀಯವೆಂದು ಬುದ್ಧ ಹೇಳಿದ್ದಾನೆಯೇ ಹೊರತು ಇದರ ಅಸ್ತಿತ್ವವನ್ನೇ ಅಲ್ಲಗಳೆದಿಲ್ಲ. ಇದರ ಇರುವಿಕೆ ಬೆಂಕಿಯ ಅಸ್ತಿತ್ವದಂತೆ ಎಂದು ಉದಾಹರಣೆ ಕೊಡಲಾಗಿದೆ. ಯಾವುದೇ ಒಂದು ಸ್ಥಳವನ್ನು ಆಕ್ರಮಿಸಿಕೊಳ್ಳದಹಾಗೆ ಬೆಂಕಿ ಅದರ ಮೂಲರೂಪದಲ್ಲಿ ಸುಪ್ತವಾಗಿರುತ್ತದೆ, ಉಜ್ಜಿದಾಗ ಅಲ್ಲಿಯೇ ಉದ್ಭವವಾಗುತ್ತದೆ, ಮತ್ತೆ ಹಾಗೇ ಅಡಗುತ್ತದೆ. ನಿರ್ವಾಣದ ಸ್ಥಿತಿ ಅಂತಹದು. ಸಹಜವಾಗಿರುವ ಸತ್ಯದ ಜ್ಞಾನವನ್ನು ಗ್ರಹಿಸುವುದೇ ನಿರ್ವಾಣ. ಇದಕ್ಕೆ ಮುಖ್ಯವಾಗಿ ನಮ್ಮ ಮನಸ್ಸಿನ ಕ್ರಿಯೆಯಲ್ಲಿ ಪರಿವರ್ತನೆಯಾಗಬೇಕಾಗುತ್ತದೆ. ಆ ಪರಿವರ್ತನೆಯಿಂದ ನಮ್ಮ ನಿಜಸ್ಥಿತಿಯನ್ನು ಅರಿಯುವುದು ಸಾಧ್ಯವಾಗುತ್ತದೆ. ಅಂದರೆ 'ಶೂನ್ಯ'ವೆನ್ನುವುದು ಜಗತ್ತನ್ನು ನೋಡುವ ನಮ್ಮ ಮನಸ್ಥಿತಿಯಲ್ಲಾಗುವ ಬದಲಾವಣೆ.

ಮಾಧ್ಯಮಿಕರ ಈ ಶೂನ್ಯವಾದದ ಪ್ರಭಾವ ವೇದಾಂತದ ಮೇಲೆ, ಅದರಲ್ಲೂ ಮುಖ್ಯವಾಗಿ ಶಂಕರರ ಅದ್ವೈತದ ಮೇಲೆ, ವಿಶೇಷವಾಗಿ ಆಗಿದೆಯೆಂದು ಹೇಳುವುದುಂಟು. ಶಂಕರಾಚಾರ್ಯರಿಗಿಂತ ಪೂರ್ವದ ವೇದಾಂತದಲ್ಲಿ ಮುಖ್ಯವಾಗಿ ಏಕತ್ವವಾದ (ಮಾನಿಸಂ) ಗೋಚರವಾಗುತ್ತದೆ. ಆದರೆ ಅದು ಶಂಕರರಲ್ಲಿ ಶೂನ್ಯವಾದದ ಪ್ರಭಾವವನ್ನುಳ್ಳ ಅದ್ವೈತಮಾರ್ಗವನ್ನು ಹಿಡಿದುದು ಹೇಗೆ ? ಶೂನ್ಯವಾಗದಂತೆ ಇವರೂ ಸೃಷ್ಟಿಯೆಲ್ಲಾ ಮಿಥ್ಯೆಯೆಂದು ಹೇಳಿದರು : ಮತ್ತು ಜೀವ ಬ್ರಹ್ಮರ ದ್ವೈತವನ್ನು ನಿಷೇಧಿಸುವುದರ ಮೂಲಕ ಬ್ರಹ್ಮದ ಸ್ವರೂಪವನ್ನು ಸ್ಥಾಪಿಸಲು ಯತ್ನಿಸಿದರು. ಇದ್ದಕ್ಕಿದ್ದಂತೆಯೇ ವೇದಾಂತ ಈ ದಿಕ್ಕಿಗೆ ತಿರುಗಲು ಕಾರಣವೇನು ? ಇವಕ್ಕೆ ಎರಡು ಕಾರಣ

ಗಳನ್ನು ಕೊಡಬಹುದಾಗಿದೆ. ಒಂದು, ಈ ಭಾವನೆ ಬೆಳೆಯುವುದಕ್ಕೆ ಉಪನಿಷತ್ತಿನ ಹೇಳಿಕೆಗಳಲ್ಲಿಯೇ ಸಾಕಷ್ಟು ಅವಕಾಶವಿತ್ತು; ಅದು ಶಂಕರರಲ್ಲಿ ಪ್ರಕಟಗೊಂಡಿತು. ಇನ್ನೊಂದು ಕಾರಣ. ಮಾಧ್ಯಮಿಕರ ಶೂನ್ಯವಾದದ ಪ್ರಭಾವವೂ ಶಂಕರರ ಮೇಲಾಗಿದೆ ಎನ್ನುವುದು. ಮೊದಲನೆಯ ಕಾರಣವು ನಿಜವಿರಬಹುದಾದರೂ ಎರಡನೆಯದನ್ನು ತಳ್ಳಿಹಾಕು ವಂತಿಲ್ಲ. ಶೂನ್ಯವಾದ ತನ್ನ ಪ್ರಭಾವವನ್ನು ಅದ್ವೈತದ ಮೇಲೆ ಬೀರಿದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಶೂನ್ಯವಾದದ ಕೆಲವು ಅಂಶಗಳಿಂದ ಶಂಕರರು ಪ್ರಭಾವಿತರಾಗಿರಬಹುದಾದರೂ ಅವರ ಅದ್ವೈತಸಿದ್ಧಾಂತ ಬೌದ್ಧರ ಅನಾತ್ಮವಾದಕ್ಕೆ ದೊಡ್ಡ ಏಟನ್ನೇ ಕೊಟ್ಟಿತು. ಅವರ ಪ್ರಚಂಡ ತರ್ಕಶಕ್ತಿ ಬೌದ್ಧಧರ್ಮದ ಬೇರನ್ನೇ ಹಿಡಿದು ಅಲುಗಾಡಿಸಿತು. ಆತ್ಮವನ್ನು ತಿರಸ್ಕರಿಸಿ ಸತ್ಯದ ಸ್ವರೂಪವನ್ನು 'ಶೂನ್ಯ'ವೆಂದು ಪ್ರತಿಪಾದಿಸಿದ ಮಾಧ್ಯ ಮಿಕವಾದಕ್ಕೆ ಸಾಕಷ್ಟು ತಾತ್ವಿಕವಾದ ತಳಹದಿ ಇರಲಿಲ್ಲ. ಶೂನ್ಯವೆಂಬುದು ನಿಷೇಧವಲ್ಲವೆಂದೂ, ಅದು ಎಲ್ಲ ಆರೋಪಿತಗಳನ್ನೂ ಕಳೆದು ಉಳಿಯುವ ಸಹಜಸ್ಥಿತಿಯೆಂದೂ ಹೇಳುವುದಕ್ಕೆ ಎಷ್ಟೇ ಪ್ರಯತ್ನಪಟ್ಟರೂ ಅದು ನಿಷೇಧಾರ್ಥವಲ್ಲಿಯೇ ಕೊನೆಗೊಂಡಿತ್ತು. ಏಕೆಂದರೆ ವಿಧಾಯಕವಾದ ಯಾವ ಕಲ್ಪನೆಯನ್ನೂ ಮಾಧ್ಯಮಿಕರು ಶೂನ್ಯತತ್ತ್ವಕ್ಕೆ ಕೊಡಲಿಲ್ಲ. ಸೃಷ್ಟಿ ಸುಳ್ಳು, ದೇಹ ಮಿಥ್ಯೆ, ಈ ತೋರಿಕೆಯ ವಸ್ತುಗಳೆಲ್ಲಾ ಈ ರೂಪದಲ್ಲಿಲ್ಲ ಎಂದು ಮುಂತಾಗಿ 'ಇದಲ್ಲ ಇದಲ್ಲ' ಎನ್ನುತ್ತಾ ಹೊರಟು ಅಷ್ಟಕ್ಕೇ ನಿಂತುಬಿಟ್ಟರು. ವೇದಾಂತದಲ್ಲಿಯೂ 'ನೇತಿ ನೇತಿ' ಎಂಬ ನಿಷೇಧಮಾರ್ಗವನ್ನು ಕಾಣುತ್ತೇವೆ. ಆದರೆ ಅದು ಅಷ್ಟಕ್ಕೇ ನಿಲ್ಲದೆ 'ಇದು' ಎಂದು ವಿಧಾಯಕಸ್ವರೂಪದ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಡುತ್ತದೆ. ಶೂನ್ಯವಾದಕ್ಕೂ ವೇದಾಂತಕ್ಕೂ ಇರುವ ವ್ಯತ್ಯಾಸ ಇದೇ. ಶೂನ್ಯವಾದ ಎಲ್ಲಿಗೋ ನಮ್ಮನ್ನು ಕರೆದೊಯ್ದು ಮಧ್ಯದಲ್ಲಿ ಕೈಬಿಟ್ಟುಹೋದಂತೆ ಭಾಸವಾಗುತ್ತದೆ. ಆದರೆ ವೇದಾಂತ ಮೇಲಕ್ಕೆ ನಮ್ಮನ್ನು ಕರೆದೊಯ್ದು ಅಲ್ಲಿ ಕೈಬಿಡದೆ ನಮ್ಮ ಕಣ್ಣಮುಂದೆ ಉಜ್ವಲವಾದ ಬೆಳಕನ್ನು ಬೀರುತ್ತದೆ; ಇನ್ನೂ ಮೇಲೇರುವುದಕ್ಕೆ ಪ್ರಚೋದನೆಯನ್ನೂ ಶಕ್ತಿಯನ್ನೂ ಕೊಡುತ್ತದೆ.

ಪರಿಪೂರ್ಣಸ್ವರೂಪವಾದ ಬ್ರಹ್ಮಶಕ್ತಿಯೇ ಜೀವನದ ಈ ನಿರಂತರತೆಗೆ ಕಾರಣ. ಆ ವಿಶ್ವಾತ್ಮಶಕ್ತಿ, ಸರ್ವ ಭೂತಗಳಲ್ಲಿಯೂ ಆತ್ಮಶಕ್ತಿಯಾಗಿ ನೆಲೆಸಿ ವಸ್ತುಗಳ ಒಳಗೂ ಹೊರಗೂ ಅನೇಕ ರೂಪಗಳಿಂದ ವ್ಯಾಪಿಸಿದೆ—ಎಂದು ಉಪನಿಷತ್ತುಗಳು ಹೇಳುತ್ತವೆ. ತಾನು ಅವಲಂಬಿಸಿದ ವಸ್ತುಗಳಿಂದ ಅಗ್ನಿಯ ರೂಪ ಬೇರೆಬೇರೆಯಾದಂತೆ ಕಾಣ ಬಹುದಾದರೂ ಮೂಲತಃ ಅದು ಒಂದೇ. ಹಾಗೆಯೇ ಈ ಪರಬ್ರಹ್ಮಶಕ್ತಿ ತೋರಿಕೆಯ ಅನೇಕ ರೂಪಗಳನ್ನು ಅವ ಲಂಬಿಸಿದ್ದರೂ ಮೂಲತಃ ಅದರ ಸ್ವರೂಪ ಒಂದೇ. ಅದರ ಪೂರ್ಣತೆಗೆ ಚ್ಯುತಿಯಿಲ್ಲ:

> ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ,
> ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ

ಎಂಬ ಈಶಾವಾಸ್ಯದ ಶಾಂತಿಮಂತ್ರವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಪಾರವಾದ ಅರ್ಥವನ್ನು ಒಳಗೊಂಡಿರುವ ಈ ಶ್ಲೋಕ, ಸೃಷ್ಟಿಯ ಮತ್ತು ಸೃಷ್ಟಿಶಕ್ತಿಯ ಪೂರ್ಣಸ್ವರೂಪವನ್ನು ಸೂಚಿಸುತ್ತದೆ.

ಶರಣರು ಬಳಸಿದ 'ಶೂನ್ಯ' ಎನ್ನುವ ಮಾತು ಈ 'ಪೂರ್ಣ' ಎನ್ನುವ ಮಾತಿಗೆ ಸಂವಾದಿಯಾಗಿ ಬರುತ್ತದೆ. ಶರಣರ ಮಾತಿನಲ್ಲಿ 'ಶೂನ್ಯ'ವೆಂದರೆ ಏನೂ ಇಲ್ಲದುದು ಎಂದಲ್ಲ, ಅದು ಎಲ್ಲವನ್ನೂ ಒಳಗೊಂಡುದು ಮತ್ತು ಇದೆಲ್ಲದರ ಅಸ್ತಿತ್ವಕ್ಕೆ ಕಾರಣವಾದುದು ಎಂಬ ಅರ್ಥವನ್ನು ಪಡೆಯುತ್ತದೆ. ಶರಣರದು ಬೌದ್ಧಧರ್ಮದ ಅನಾತ್ಮವಾದ ವಲ್ಲ; ಆತ್ಮವಾದದ ಪೂರ್ಣ ಮಾರ್ಗ. ಆ ವಿಶ್ವಾತ್ಮನೇ ಬಹುರೂಪದಿಂದ ಕೂಡಿದ ಈ ಸೃಷ್ಟಿಯಾಗಿ, ಈ ಸೃಷ್ಟಿಯಲ್ಲಿ ಇರುವ ಜೀವರುಗಳಾಗಿ ಪರಿಣಮಿಸಿ ಮತ್ತೆ ಅದಕ್ಕೆ ಅತೀತನಾಗಿ ನಿಲ್ಲುತ್ತಾನೆ. ಈ ಸೃಷ್ಟಿವಿಕಾಸಕ್ರಮದಲ್ಲಿ ಮೊಟ್ಟ ಮೊದಲನೆಯ ಹಂತವನ್ನು "ಶೂನ್ಯಲಿಂಗ" ಎಂದು ಶರಣರು ಕರೆದು ಅದರ ಸ್ವರೂಪವನ್ನು ಅನೇಕ ರೀತಿಯಲ್ಲಿ ವರ್ಣಿಸಿದ್ದಾರೆ. ಇವರು ಸೃಷ್ಟಿಯನ್ನು ಬೌದ್ಧರಂತೆ ತೋರಿಕೆಯ ಗಂಧರ್ವನಗರಿ ಎಂದಾಗಲೀ, ಶಂಕರಾಚಾರ್ಯರಂತೆ ಮಾಯೆಯ ಆವರಣದಿಂದ ಕಲ್ಪಿತವಾದ ಮಿಥ್ಯೆಯೆಂದಾಗಲೀ ಭಾವಿಸಲಿಲ್ಲ. ಜಗತ್ತು ಸತ್ಯವಾದುದು ಎಂದು ಹೇಳಿ ಈ ಪರಿಮಿತ ಸತ್ಯದ ಹಿಂದಿರುವ ಅಪರಿಮಿತ ಶಕ್ತಿಯ ಸ್ವರೂಪವನ್ನರಿಯುವ ಮಾರ್ಗವನ್ನು ಪೂರ್ಣದೃಷ್ಟಿಯಿಂದ ಬೋಧಿಸಿದ್ದಾರೆ.

ನಿರಾಕಾರಸ್ವರೂಪವಾದ ಅನಾದಿ ಪರವಸ್ತು ಸೃಷ್ಟಿಮುಖವಾಗಿ ಈ ಜಗತ್ತಿನ ನಿರ್ಮಾಣದಲ್ಲಿ ತೊಡಗುತ್ತದೆ; ಬಹುಮುಖವಾದ ಈ ಸೃಷ್ಟಿ ರೂಪುಗೊಳ್ಳಲು ಕಾರಣವಾಗುತ್ತದೆ. ಅದಕ್ಕೆ ಪೂರ್ವದಲ್ಲಿ ಅದು ತಾಳುವ ಮೊಟ್ಟ ಮೊದಲನೆಯ ಸ್ಥಿತಿಯೇ ಶೂನ್ಯಲಿಂಗಸ್ಥಿತಿ. ಇದರ ಸ್ವರೂಪವನ್ನು ಅಲ್ಲಮಪ್ರಭು ಹೀಗೆ ಹೇಳಿದ್ದಾನೆ:

ಅಯ್ಯಾ, ನಿರವಯ ಶೂನ್ಯಲಿಂಗ ಮೂರ್ತಿಯ ನಿಲುಕಡೆ ಎಂತೆಂದೊಡೆ
ಸಾಕಾರ ನಿರಾಕಾರನಲ್ಲ ನೋಡಾ, ನಿರವಯ ಶೂನ್ಯಲಿಂಗ ಮೂರ್ತಿ;
ಆದಿಯಲ್ಲ, ಅನಾದಿಯಲ್ಲ; ಇಹದವನಲ್ಲ, ಪರದವನಲ್ಲ;
ಸುಖದವನಲ್ಲ, ದುಃಖದವನಲ್ಲ; ನಿರವಯ ಶೂನ್ಯಲಿಂಗಮೂರ್ತಿ
ಪುಣ್ಯಪಾಪದವನಲ್ಲ; ಕರ್ತೃಭೃತ್ಯನಲ್ಲ, ಕಾರಣಕಾರ್ಯನಲ್ಲ;
ಧರ್ಮಕರ್ಮಿಯಲ್ಲ, ಪೂಜ್ಯಪೂಜಕನಲ್ಲ—ಇಂತು ಉಭಯವಳಿದು
ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು.

ಇದು ನಿರವಯ ಶೂನ್ಯಲಿಂಗಮೂರ್ತಿಯ ಸ್ವರೂಪ. ಸಾಕಾರನಿರಾಕಾರಗಳು, ಆದಿ ಅನಾದಿಗಳು, ಇಹಪರಗಳು, ಸುಖದುಃಖಗಳು, ಪುಣ್ಯಪಾಪಗಳು ಇವಾವುವೂ ಇಲ್ಲದ ಸತ್ಯದ ಸ್ವರೂಪ ಅದು. ಇಲ್ಲಿಯೂ 'ಇಲ್ಲ' ಎಂಬ ನಿಷೇಧದ ಮಾತು ಬಂದರೂ ಅದು ಬೌದ್ಧರಂತೆ ಅಭಾವದಲ್ಲಿ ನಿಲ್ಲದೆ "ಈ ಎಲ್ಲ ಇರುವಿಕೆಗಳನ್ನು ಸಂಕಲ್ಪಶಕ್ತಿರೂಪದಲ್ಲಿ ಒಳಗೊಂಡ ಶೂನ್ಯಲಿಂಗ ಅದು"—ಎಂಬ ಪೂರ್ಣಭಾವದಲ್ಲಿ ನಿಲ್ಲುತ್ತದೆ. ಪ್ರಭುದೇವನ ಈ ಮಾತನ್ನೂ ಗಮನಿಸ ಬಹುದು:

ಆದಿ ಅನಾದಿ ಇಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು,
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನೊಬ್ಬನೇ ಇದ್ದೆಯಲ್ಲ ಇಲ್ಲದಂತೆ.

ಇಲ್ಲಿ ಈ ಕೊನೆಯ ಮಾತು ಬಹಳ ಅರ್ಥವತ್ತಾದುದು: "ಇದ್ದೆಯಲ್ಲ, ಇಲ್ಲದಂತೆ" ಇಲ್ಲದಂತೆ ಇರುವ ಪರಿಯನ್ನು ಆ ಪೂರ್ಣಸತ್ಯದ ಸ್ವರೂಪದಲ್ಲಿ ಕಂಡಿದ್ದಾರೆ, ಶರಣರು. ಹಾಗೆಯೇ ಈ ಮಾತುಗಳನ್ನೂ ನೋಡ ಬಹುದು:

ಅಂತರವಿಲ್ಲದಂದು, ಬಾಹ್ಯವಿಲ್ಲದಂದು
ಅಡಿಮುಡಿ ಒಡಲು ಮತ್ತೊಂದೆಡೆ ಏನೂ ಇಲ್ಲದಂದು,
ದಶದಿಕ್ಕುಗಳು ವಿಶ್ವಪ್ರಪಂಚಗಳು, ಏನೂ ಇಲ್ಲದಂದು,
ಸ್ಥಾವರಾತ್ಮಕಂಗಳಿಗೆ ಆಧಾರ ಕರ್ತೃ ಎಂಬ ನಾಮಂಗಳೇನೂ ಇಲ್ಲದಂದು,
ಸರ್ವಶೂನ್ಯನಿರಾಲಂಬನಾಗಿರ್ದೆಯಲ್ಲ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.
ಆದಿ ಅನಾದಿಗಳಿಲ್ಲದಂದು, ನಾದ ಬಿಂದು ಕಳೆ ಮೊಳೆದೋರದಂದು,
ದೇಹಿದೇಹಂಗಳು ಉತ್ಪತ್ಯವಾಗದಂದು,
ಜೀವಾತ್ಮ ಪರಮಾತ್ಮರೆಂಬುವರಿಲ್ಲದಂದು,
ಸಕಲ ಚರಾಚರಂಗಳ ಸುಳುಹಿಲ್ಲದಂದು,
ನೀನು ಶೂನ್ಯನಾಗಿ ಇರ್ದೆಯಯ್ಯಾ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಈ ಮಾತುಗಳಲ್ಲಿ ಶೂನ್ಯಲಿಂಗದ ಸ್ವರೂಪವನ್ನು ಕಾಣುತ್ತೇವೆ. ಇಲ್ಲಿ, "ಶೂನ್ಯನಾಗಿ ಇರ್ದೆಯಯ್ಯ" ಎಂಬ ಮಾತನ್ನು ಗಮನಿಸಬೇಕು. ಇದು ಏನೂ ಇಲ್ಲದ ಶೂನ್ಯವಲ್ಲ, ಎಲ್ಲವನ್ನು ಒಳಗೊಂಡು "ಇರುವ ಶೂನ್ಯ." ಇಂತಹ ಅನೇಕ ವಚನಗಳನ್ನು ಶರಣರ 'ಶೂನ್ಯಲಿಂಗ' 'ನಿಃಕಲಲಿಂಗ'ಗಳ ವರ್ಣನೆಯಲ್ಲಿ ಕಾಣಬಹುದಾಗಿದೆ.

ಈ ತೋರಿಕೆಯ ಸೃಷ್ಟಿಯೆಲ್ಲಾ ಇಂತಹ ಪರಿಪೂರ್ಣ ಅನಾದಿ ಪರಶಿವನಿಂದ ಹೊರಹೊಮ್ಮುತ್ತದೆ. ನಿರಾಕಾರವೇ ಸಾಕಾರಲಿಂಗವಾಗಿ ಅದರಿಂದ ಸೃಷ್ಟಿ ಮುಂದುವರಿದ ಬಗೆಯನ್ನು ಶರಣರ ಮಾತುಗಳಲ್ಲಿ ಹೀಗೆ ಸಂಗ್ರಹಿಸ ಬಹುದು: ಸರ್ವಶೂನ್ಯನಿರಾಲಂಬಸ್ಥಿತಿಯಲ್ಲಿದ್ದ ಶಿವ, ಮೊದಲು ನಿರಂಜನಬ್ರಹ್ಮನಾಗಿ ಪರಿಣಮಿಸಿದ. ಈ ನಿರಂಜನಬ್ರಹ್ಮನಲ್ಲಿ ಉಂಟಾದ ನೆನಹೇ ಓಂಕಾರಶಕ್ತಿ. ಈ ಶಕ್ತಿಯಿಂದ ಶೂನ್ಯಲಿಂಗವಾಯಿತು. ಇದಕ್ಕೆ ಮಹಾಜ್ಞಾನ ಚಿತ್ತು ಎಂಬುದು ಅಂಗವಾಗಿ ಪರಿಣಮಿಸಿತು. ಈ ಶೂನ್ಯಲಿಂಗದಿಂದ ಜ್ಞಾನಚಿತ್ತನ್ನು ಅಂಗವಾಗಿ ಉಳ್ಳ ನಿಷ್ಕಲಬ್ರಹ್ಮ ಉದ್ಭವಿಸಿತು. ಇದರಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಹುಟ್ಟಿದವು. ಇವು ತಮ್ಮ ಮೂಲಶಕ್ತಿಯಾದ ಜ್ಞಾನಚಿತ್ತುವಿ

ನೊಡನೆ ಸೇರಿ ಈ ನಾಲ್ಕೂ ಒಟ್ಟುಗೂಡಿ ಓಂಕಾರವೇ ಪೀಠವಾದ ಮಹಾಲಿಂಗವಾಗಿ ಪರಿಣಮಿಸಿತು. ಮಹಾಲಿಂಗದಿಂದ ಪಂಚಸಾದಾಖ್ಯಗಳೂ, ಇವುಗಳಿಂದ ಸದಾಶಿವನ ಪಂಚಮುಖಗಳೂ ಉಂಟಾದುವು. ಅದರಿಂದ ಪಂಚಭೂತಗಳು ಹುಟ್ಟಿದುವು. ಆ ಮೂರ್ತಿಯ ಕಣ್ಣು ಮತ್ತು ಮನಸ್ಸಿನಿಂದ ಸೂರ್ಯ ಚಂದ್ರರು ಹುಟ್ಟಿದರು. ಆ ಮೂರ್ತಿಯ ಗೋಪ್ಯಮುಖದಿಂದ ಆತ್ಮ ಆವಿರ್ಭವಿಸಿತು. ಪಂಚಭೂತಗಳು, ಸೂರ್ಯ, ಚಂದ್ರ, ಆತ್ಮ—ಇವು ಆ ಸದಾಶಿವ ಮೂರ್ತಿಯ ಅಷ್ಟತನುಗಳಾಗಿ ಪರಿಣಮಿಸಿದವು. ಹೀಗೆ ಸೃಷ್ಟಿ, ಬಹುಮುಖವಾಗಿ ವಿಕಾಸಗೊಳ್ಳುವುದು ಮತ್ತೆ ಆತನಲ್ಲಿಯೇ ಲೀನವಾಗುವುದು. ಇದು ಸರ್ವಶೂನ್ಯ ನಿರಾಲಂಬಸ್ವರೂಪನಾದ ಶಿವನ ಲೀಲೆ. ಆತ "ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದೊಡೆ ಸ್ವಯಂಭು."

ಇಲ್ಲಿ ಶರಣರ ದೈವತ್ವದ ಕಲ್ಪನೆಯ ವ್ಯಾಪಕವಾದ ಸ್ವರೂಪವನ್ನು ಕಾಣುತ್ತೇವೆ. ಕೇವಲ ಅನುಭವ ಗೋಚರವಾಗುವ ಭೂಮವಾದ ಕಲ್ಪನೆ ಅವರದು. ಬ್ರಹ್ಮ, ವಿಷ್ಣು, ರುದ್ರ—ಈ ತ್ರಿಮೂರ್ತಿಗಳನ್ನೂ ಮೀರಿನಿಂತ ನಿರ್ಲೇಪ ನಿರಂಜನನ ಆ ನಿಲುವನ್ನು ಅವರು 'ಶೂನ್ಯ' ಎಂದು ಕರೆದರು. ಅದನ್ನು ಕೆಲವು ವೇಳೆ 'ಬಯಲು'—ಎಂಬ ಮಾತಿನಿಂದಲೂ ನಿರ್ದೇಶಿಸಿದ್ದಾರೆ. ಸಿದ್ಧರಾಮನು ಹೇಳುವುದು :

ಬೀಜವೃಕ್ಷದಂತೆ ನೀನಿಪ್ಪೆಯಯ್ಯಾ
ನಿರಾಕಾರವೇ ಮೂರ್ತಿಯಾಗಿ, ಮೂರ್ತಿಯೇ ನಿರಾಕಾರವಾಗಿ
ಇವೆಲ್ಲವನುಳಿದು ಬಯಲಾಗಿಪ್ಪೆ
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವಾ.

ಸಾಕಾರ ಮತ್ತು ನಿರಾಕಾರಗಳು ಬೀಜವೃಕ್ಷನ್ಯಾಯವಿದ್ದಂತೆ. ಯಾವುದು ಮೊದಲು, ಯಾವುದು ಅನಂತರ ಎಂದು ಹೇಳುವಂತಿಲ್ಲ. ಅಂದರೆ ಈ ಸೃಷ್ಟಿ ಅನಾದಿ. ಇದರೊಡನೆಯೇ ರೂಪ ಅರೂಪಗಳು ಉಂಟಾದವು. ಆದರೆ ಅದಕ್ಕೆ ಕಾರಣವಾದ ಪರಾತ್ಪರ ವಸ್ತುವಿನ ಸಹಜಸ್ವರೂಪವು ಇವೆರಡನ್ನೂ ದಾಟಿದ ಆಚೆಯ ನಿಲುವು. ಅದೇ ಬಯಲು:

ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ ;
ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ,
ಆತನ ಶಾಂತಿ ಸೈರಣೆಯಿಂದ ಹುಟ್ಟಿದಾತ ವಿಷ್ಣು,
ಆತನ ಕೋಪದಿಂದ ಹುಟ್ಟಿದಾತ ರುದ್ರ,
ಈ ಮೂರು ಪೀಠವಂತಿರಲಿ, ಈ ತತ್ತ್ವತ್ರಯಂಗಳಿಗೆ
ತಾನೆ ಕಾರಣವಾಗಿಪ್ಪ ಶರಣನ ನಿಲವನರಿದು
ಶರಣೆನುತಿರ್ದೆನು ಕೂಡಲಚೆನ್ನಸಂಗಮದೇವಾ

ಎಂಬ ಚೆನ್ನಬಸವಣ್ಣನ ಮಾತನ್ನು ಇಲ್ಲಿ ಗಮನಿಸಬೇಕು. ತ್ರಿಮೂರ್ತಿಗಳ ಉತ್ಪತ್ತಿಗೆ ಕಾರಣವಾದ ಶಕ್ತಿಯನ್ನು 'ಶರಣ' ಎಂದು ನಿರ್ದೇಶಿಸಿದ್ದಾನೆ. ಆ 'ನಿರಾಕಾರಶರಣ'ನನ್ನು ಶರಣರು ಸೃಷ್ಟಿಕ್ರಮದಲ್ಲಿ 'ಮಹಾಲಿಂಗ' ಎಂದು ಕರೆಯುತ್ತಾರೆ. ಆ ಮಹಾಲಿಂಗದ ಉತ್ಪತ್ತಿಗೆ ಕಾರಣವಾದ ತತ್ತ್ವವೇ 'ಶೂನ್ಯಲಿಂಗ' ಅಥವಾ 'ಬಯಲು'. ಆದ್ದರಿಂದಲೇ ಚನ್ನಬಸವಣ್ಣ "ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ" ಹಾಗೆಯೇ ಸಿದ್ಧರಾಮನು, ನಿರಾಕಾರ ಮತ್ತು ಸಾಕಾರ ಇವೆರಡನ್ನೂ ದಾಟಿ "ಬಯಲಾಗಿಪ್ಪೆ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವಾ"—ಎನ್ನುತ್ತಾನೆ ಆ ಸತ್ಯವನ್ನು ಕುರಿತು. ಇದನ್ನು ಇನ್ನೂ ಸ್ಪಷ್ಟವಾಗಿ ಅಲ್ಲಮಪ್ರಭುವಿನ ಈ ಕೆಳಗಿನ ವಚನದಲ್ಲಿ ಕಂಡುಕೊಳ್ಳಬಹುದು :

ವಾರಿ ಬಲಿದು ಕಲ್ಲಾದಂತೆ ಶೂನ್ಯವೇ ಸ್ವಯಂಭುವಾಯಿತ್ತು
ಆ ಸ್ವಯಂಭು ಲಿಂಗದಿಂದಾಯಿತ್ತು ಮೂರ್ತಿವತ್ತು
ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ
ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ
ಆ ಸಂಸಾರದಿಂದಾಯಿತ್ತು ಮರವೆ
ಆ ಮರವೆಯೆಂಬ ಮಹಾಮಾಯೆ ವಿಶ್ವವ ಮುಸುಕಿದಲ್ಲಿ
ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲ

ತಾಮಸಕ್ಕೊಳಗಾಗಿ ಮೀನಕೇತನನ ಬಲೆಗೆ ಸಿಲುಕಿ
ಮಾಯೆಯ ಬಾಯ ತುತ್ತಾದರಲ್ಲಾ ಗುಹೇಶ್ವರಾ.

ಶೂನ್ಯವೇ ಸ್ವಯಂಭುವಾಯಿತು. ಅದೇ ಮೂರ್ತಿಯಾಗಿ, ಆ ಮೂರ್ತಿಯಿಂದ ವಿಶ್ವೋತ್ಪತ್ತಿ, ಸಂಸಾರ ಮರವೆಗಳುಂಟಾದುದನ್ನು ಇಲ್ಲಿ ಹೇಳಿದ್ದಾನೆ. ಆತನೇ ಇನ್ನೊಂದು ಕಡೆ ಹೇಳುವ :

ಏನೂ ಇಲ್ಲದ ಬಯಲೊಳಗೊಂದು
ಬಗೆಗೊಳಗಾದ ಬಣ್ಣ ತಲೆದೋರಿತ್ತು
ಆ ಬಯಲನಾಬಣ್ಣ ಶೃಂಗರಿಸಲು
ಬಯಲು ಸ್ವರೂಪಗೊಂಡಿತ್ತು
ಅಂತಪ್ಪ ಸ್ವರೂಪಿನ ಬೆಡಗು ತಾನೆ
ನಮ್ಮ ಗುಹೇಶ್ವರಲಿಂಗದ ಪ್ರಥಮ ಭಿತ್ತಿ.

ಏನೂ ಇಲ್ಲದ ಬಯಲಲ್ಲಿ ಒಂದು ಬಣ್ಣ ತಲೆದೋರಿ, ಅದರಿಂದ ಗುಹೇಶ್ವರಲಿಂಗದ ಪ್ರಥಮಭಿತ್ತಿ ಸಿದ್ಧಗೊಂಡು ಮುಂದಿನ ಸೃಷ್ಟಿಗೆ ಕಾರಣವಾಯಿತು—ಎಂಬ ಮಾತನ್ನು ಗಮನಿಸಬೇಕು.

ಹೀಗೆ ಶಿವನ ಮೂಲರೂಪವಾದ ಪರಿಪೂರ್ಣತೆಯನ್ನು ಶರಣರು 'ಶೂನ್ಯ' ಮತ್ತು 'ಬಯಲು'—ಎಂಬ ಪದಗಳಿಂದ ನಿರ್ದೇಶಿಸಿದ್ದಾರೆ. ಈ ಎರಡು ಪದಗಳಿಗೆ ವಿಶಿಷ್ಟವಾದ ಅರ್ಥವನ್ನು ತುಂಬಿ ಹೊಸ ಕಾಂತಿಯನ್ನು ಅವುಗಳಿಗೆ ಕೊಟ್ಟಿದ್ದಾರೆ. ಬೌದ್ಧರಲ್ಲಿ 'ಶೂನ್ಯ' ಮತ್ತು 'ನಿರ್ವಾಣ' ಎಂಬ ಶಬ್ದಗಳನ್ನು ಕಾಣುವಂತೆ ಶರಣರಲ್ಲಿ 'ಶೂನ್ಯ' 'ಬಯಲು' ಎಂಬ ಎರಡು ಶಬ್ದಗಳನ್ನು ಕಾಣುತ್ತೇವೆ. ಎರಡೂ ಕಡೆಗಳಲ್ಲಿ 'ಶೂನ್ಯ' ಎಂಬ ಮಾತು ಒಂದೇ ಆದರೂ ಮೇಲೆ ನೋಡಿದಂತೆ ಅವುಗಳ ಅರ್ಥದಲ್ಲಿ ಅಗಾಧವಾದ ಅಂತರವಿದೆ. 'ಬಯಲು' ಮತ್ತು 'ನಿರ್ವಾಣ'ಗಳಲ್ಲಿಯೂ ಅಷ್ಟೇ ಅಂತರ ಕಂಡುಬರುತ್ತದೆ.

'ನಿರ್ವಾಣ' ಎಂಬ ಮಾತನ್ನು ಬೌದ್ಧರು ಬಳಸಿದುದು ಅವರ ಶೂನ್ಯದ ಕಲ್ಪನೆಗೆ ಅನುಗುಣವಾಗಿದೆ. ಅಂದರೆ ಅಭಾವವೆಂದು ಸ್ಪಷ್ಟವಾಗಿ ಹೇಳದಿದ್ದರೂ ಯಾವ ಭಾವವೂ ಇಲ್ಲದ ಒಂದು ಸ್ಥಿತಿ ಅದು. 'ನಿರ್ವಾಣ' ಎಂಬ ಮಾತು ಭಗವದ್ಗೀತೆಯಲ್ಲೂ ಒಂದೆರಡು ಕಡೆ ಬರುತ್ತದೆ. "ಲಭಂತೇ ಬ್ರಹ್ಮನಿರ್ವಾಣಂ", "ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾ"—ಇಲ್ಲಿ ನಿರ್ವಾಣ ಎಂಬುದಕ್ಕೆ ಆನಂದಮಯವಾದ ಸ್ಥಿತಿಯೆಂದೇ ಹೇಳಬೇಕಾಗುತ್ತದೆ. ಇಲ್ಲಿ ಅಭಾವದ ಸೋಂಕಿಲ್ಲ. ಬರುಬರುತ್ತಾ ಕೆಲವು ವೇಳೆ ಬೌದ್ಧರಲ್ಲಿಯೂ ಆನಂದವೆಂಬ ಅರ್ಥದಲ್ಲಿಯೇ ಇದನ್ನು ಬಳಸಿರುವುದೂ ಉಂಟು. ಆದರೆ ಪ್ರಾರಂಭದಲ್ಲಿ ಅದು, ಎಲ್ಲವನ್ನು ಇಲ್ಲಗೈದಾಗ ಉಳಿಯುವ ಸ್ಥಿತಿ ಎಂಬ ನಿಷೇಧಾರ್ಥವನ್ನೇ ಪಡೆದಿತ್ತು. ಆದರೆ ಶರಣರು 'ಶೂನ್ಯ' ಎಂಬುದಕ್ಕಾಗಲೀ 'ಬಯಲು' ಎಂಬುದಕ್ಕಾಗಲೀ ಎಂದೂ ನಿಷೇಧಾರ್ಥವನ್ನು ಕೊಡಲಿಲ್ಲ. 'ಶೂನ್ಯ' ಎಂಬುದಕ್ಕೆ ಪರಿಪೂರ್ಣತೆಯ ಅರ್ಥವನ್ನು ಕೊಟ್ಟು ಅದರಲ್ಲಿ ಲೀನವಾದ ಜೀವಾತ್ಮನ ನಿಲವನ್ನು 'ಬಯಲು' ಎಂದು ನಿರ್ದೇಶಿಸಿದರು. ಬಯಲು ಬಯಲಾಗುವುದನ್ನು 'ನಿರ್ಬಯಲು' ಎಂದೂ ಆಗಾಗ ಅವರು ಹೇಳುವುದುಂಟು.

ವ್ಯಕ್ತಿ ತನ್ನನ್ನು ಪರಿಮಿತಗೊಳಿಸುವ ಆಸೆ, ದ್ವೇಷ, ಮೋಹಗಳನ್ನೆಲ್ಲಾ ನಾಶಗೊಳಿಸಿ, ತನ್ನ ವ್ಯಕ್ತಿತ್ವವನ್ನು ಆ ಪೂರ್ಣ ಶೂನ್ಯದಲ್ಲಿ ಲೀನಗೊಳಿಸಿ ಅದರೊಡನೆ ಸಮರಸವಾಗುವುದು ಎಂಬ ಅರ್ಥವನ್ನು 'ಬಯಲು' ಎಂಬ ಈ ಮಾತಿನಲ್ಲಿ ಕಾಣುತ್ತೇವೆ. 'ನಿರ್ವಾಣಕ್ಕೂ' 'ಬಯಲಿ'ಗೂ ಇರುವ ವ್ಯತ್ಯಾಸವನ್ನು ಈಗ ಸ್ಪಷ್ಟವಾಗಿ ಕಂಡುಕೊಳ್ಳಬಹುದು. 'ನಿರ್ವಾಣ'ವು ಆಶೆ ದ್ವೇಷ ಮೋಹಗಳನ್ನೆಲ್ಲಾ ನಿರಸನಗೊಳಿಸಿದನಂತರ ಉಳಿಯುವ ಅಭಾವಸ್ಥಿತಿ. ಆದರೆ 'ಬಯಲು' ಎಂದರೆ ಅವನ್ನೆಲ್ಲಾ ನಿರಸನಗೊಳಿಸಿದನಂತರ ವಿಕಾಸಗೊಂಡ ಆತ್ಮವು ವಿಶ್ವಾತ್ಮನೊಡನೆ ಸಮರಸಗೊಳ್ಳುವ ಪರಿಪೂರ್ಣಸ್ಥಿತಿ. 'ನಿರ್ವಾಣ'ದಲ್ಲಿ ವ್ಯಕ್ತಿ ಏನೂ ಇಲ್ಲದವನಾಗುತ್ತಾನೆ; 'ಬಯಲಿ'ನಲ್ಲಿ ಎಲ್ಲವೂ ತಾನೇ ಆಗಿ ಪರಿಣಮಿಸುತ್ತಾನೆ.

ಏನೆಂಬೆನೇನೆಂಬೆ, ಏನೆಂಬೆನೇನೆಂಬೆ, ಎರಡೊಂದಾದುದ ?
ಏನೆಂಬೆನೇನೆಂಬೆನವಿರಳಘನವ ?
ಮಹಾದಾನಿ ಕೂಡಲಸಂಗಮದೇವ ತಾನೇ ಬಲ್ಲ

ಎಂದು ಬಸವಣ್ಣನವರು ಹೇಳುವ ಮಾತನ್ನು ನೋಡಬಹುದು. ಎರಡು ಒಂದಾಗುವ ಅವಿರಳಘನ—ಅದೇ 'ಬಯಲು' ಈ 'ಘನ' ಎಂಬ ಮಾತನ್ನೂ ಶರಣರು 'ಶೂನ್ಯ' 'ಬಯಲು'ಗಳಂತೆಯೇ ವಿಶಿಷ್ಟವಾದ ಅರ್ಥದಲ್ಲಿ ಬಳಸಿದ್ದಾರೆ.

ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯ ;
ಕೂಡಲಸಂಗಮದೇವನೆಂಬ ಮಹಾಬೆಳಗಿನೊಳಗಿರ್ದು
ಶಬ್ದಮುಗ್ಧವಾದುದನೇನೆಂಬೆನಯ್ಯ.

'ಘನ'ಕ್ಕೆ ಘನವಾಗುವುದು, ಮಹಾಬೆಳಗಿನಲ್ಲಿ ಶಬ್ದಮುಗ್ಧವಾಗುವುದು—ಇವು ಬಯಲಿನ ಸ್ವರೂಪವನ್ನು ಸೂಚಿಸುತ್ತವೆ. ಬಸವಣ್ಣನವರ ಇನ್ನೂ ಒಂದು ವಚನವನ್ನು ನೋಡಬಹುದು :

ಬಯಲರೂಪ ಮಾಡಬಲ್ಲಾತನೇ ಶರಣ ;
ಆ ರೂಪ, ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ
ಆ ಬಯಲು, ರೂಪಮಾಡಲರಿಯದಿರ್ದಡೆ ಎಂತು ಶರಣನೆಂಬೆ ?
ಆ ರೂಪ, ಬಯಲ ಮಾಡಲರಿಯದಿರ್ದಡೆ
ಎಂತು ಲಿಂಗಾನುಭಾವಿಯೆಂಬೆ ?
ಈ ಉಭಯವನೊಂದಾಗಿಯರಿಯದಿರ್ದಡೆ
ನಿಮ್ಮಲ್ಲಿ ತೆರಹುಂಟೇ ಕೂಡಲಸಂಗಮದೇವಾ.

ಬಯಲು ಮತ್ತು ರೂಪಗಳ ಮೂಲಕ ಶಿವ ಜೀವರ ಸಂಬಂಧವನ್ನು ಇಲ್ಲಿ ಬಸವಣ್ಣನವರು ಮಾಡಿಕೊಟ್ಟಿದ್ದಾರೆ. ಅಲ್ಲಮಪ್ರಭು ಹೇಳುವ ಈ ಮಾತಂತೂ ಬಯಲಿನ ಅನೇಕ ಅರ್ಥಗಳನ್ನು ಸೂಚ್ಯವಾಗಿ ನಿರ್ದೇಶಿಸುತ್ತಿದೆ :

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯ
ಬಯಲು ಜೀವನ ಬಯಲ ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯ
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು
ನಾ ನಿನ್ನ ನಂಬಿ ಬಯಲಾದೆ ಗುಹೇಶ್ವರಾ.

ಬಯಲಿನ ಅನೇಕ ಛಾಯೆಗಳನ್ನು ಇಲ್ಲಿ ಕಾಣಬಹುದು. ಚನ್ನಬಸವಣ್ಣ ತನ್ನೊಂದು ವಚನದಲ್ಲಿ ಈ ಅರ್ಥವನ್ನು ಇನ್ನೊಂದು ರೀತಿ ವ್ಯಕ್ತಪಡಿಸಿದ್ದಾನೆ :

ತನು ಬಯಲು ನಿರವಯದೊಳಗಡಗಿತ್ತು
ಮನ ಬಯಲು ನಿರವಯದೊಳಗಡಗಿತ್ತು
ಭಾವ ಬಯಲು ನಿರವಯದೊಳಡಗಿತ್ತು
ಬಯಲು ಬಯಲ ಬೆರಸಿ ಬಯಲೇಯಾಯಿತ್ತು
ಕೂಡಲ ಚೆನ್ನಸಂಗಯ್ಯನೆಂಬ ನುಡಿಯಡಗಿತ್ತು.

ಬಯಲು ಬಯಲನ್ನು ಸೇರಿ ಬಯಲೇ ಆಗಿ ಉಳಿಯುತ್ತದೆ. ಅಲ್ಲಿ ಕೂಡಲ ಚೆನ್ನಸಂಗಯ್ಯನೆಂಬ ನಾಮವೂ ಅಡಗುತ್ತದೆ. ಷಣ್ಮುಖಸ್ವಾಮಿಯು, ಬಯಲು ನಿರವಯಲು, ನಿರಾಳ, ನಿಶ್ಶೂನ್ಯ—ಈ ಮೊದಲಾದ ಮಾತುಗಳನ್ನು ಬಳಸಿಕೊಂಡು ಒಂದು ಸುಂದರವಾದ ಸಾದೃಶ್ಯದಿಂದ ಲಿಂಗಾಂಗಸಾಮರಸ್ಯದ ನಿಲವನ್ನು ಹೀಗೆ ವರ್ಣಿಸಿದ್ದಾನೆ.

ಬಯಲ ಸ್ತ್ರೀಯಳ ನಿರವಯಲ ಪುರುಷ ಬಂದು ಕೂಡಲು
ಚಿದ್ಘನವೆಂಬ ಶಿಶು ಹುಟ್ಟಿತು. ಆ ಶಿಶುವಿನ
ಮಹಾನುಭಾವವೆಂಬ ಬಯಲ ತೊಟ್ಟಿಲೊಳಗೆ ಮಲಗಿಸಿ
ನಿರಾಳ ನಿಶ್ಶೂನ್ಯವೆಂಬ ನೇಣುಗಳ ಕಟ್ಟಿ
ತಾನಾಗಿ ಜೋಗುಳ ಪಾಡಲು, ಆ ಶಿಶುವು
ತನ್ನಿಂದ ತಾನೇ ತಂದೆ ತಾಯಿಗಳ ಇಬ್ಬರ ನುಂಗಿತ್ತು.
ಆ ತಂದೆ ತಾಯಿಗಳ ನುಂಗಲೊಡನೆ

ಜೋಗುಳ ಉಲುಹು ಅಡಗಿತ್ತು.
ಆ ಜೋಗುಳ ಉಲುಹು ಅಡಗಲೊಡನೆ
ನಿರಾಳ ನಿಶ್ಶೂನ್ಯವೆಂಬ ನೇಣುಗಳು ಹರಿದುವು.
ಆ ನಿರಾಳ ನಿಶ್ಶೂನ್ಯ ನೇಣು ಹರಿಯಲೊಡನೆ
ಆ ಶಿಶುವು ತೊಟ್ಟಿಲ ಸಹವಾಗಿ ಬಟ್ಟಬಯಲಾಯಿತು.
ಆ ಶಿಶುವು ತೊಟ್ಟಿಲ ಸಹವಾಗಿ ಬಟ್ಟಬಯಲಾಗಲೊಡನೆ
ಅಖಂಡೇಶ್ವರನೆಂಬ ಬಯಲು
ಬಚ್ಚಬರಿಯಚ್ಚ ಘನಗಂಭೀರ ಮಹಾಬಯಲೊಳಗೆ
ನಾನೆತ್ತ ಹೋದೆನೆಂದರಿಯೆನು.

ಬೇರೆ ಬೇರೆ ದೃಷ್ಟಿಗಳಿಂದ ವಿವರಿಸಿದಷ್ಟೂ ವಿಸ್ತಾರವಾದ ಅರ್ಥವನ್ನು ಕೊಡುವ ಆಧ್ಯಾತ್ಮಿಕ ಅನುಭವ ಇಲ್ಲಿದೆ.

ಈ ಆನಂದದ ನಿಲವನ್ನು ಪಡೆಯುವುದನ್ನೇ ಶರಣರು ತಮ್ಮ ಸಾಧನೆಯ ಮಾರ್ಗದಲ್ಲಿ ರೂಪಿಸಿದ್ದಾರೆ. ಅವರ ಉಪಾಸನೆಯಲ್ಲಿಯೂ ಈ ಬಯಲಿನ ಕಲ್ಪನೆಯ ಜ್ಞಾನಮಾರ್ಗ ಪ್ರಧಾನವಾಗಿ ಕಾಣುತ್ತದೆ. ಬಯಲೇ ಮೂರ್ತಿಗೊಂಡು ಬಂದ ಆ ಪರಶಿವನನ್ನು ಮಾನವರೂಪದಿಂದ ಪೂಜಿಸುವುದಕ್ಕಿಂತ ಬಯಲಿನ ಸಂಕೇತದಿಂದಲೇ ಅನುಸಂಧಾನಮಾಡುವುದು ಅವರಿಗೆ ಹೆಚ್ಚು ಪ್ರಿಯವಾಗಿ ತೋರಿತು. ಅಪಾರವಾದ ಆ ಬಯಲಿನ ವ್ಯಾಪಕತೆಯನ್ನೆಲ್ಲಾ ಸಂಕೇತರೂಪದಿಂದ ಇಷ್ಟಲಿಂಗದಲ್ಲಿ ಅಡಗಿಸಿ ಅದನ್ನು ಕರಸ್ಥಲದಲ್ಲಿಟ್ಟು ಪೂಜಿಸುತ್ತಾರೆ ಶರಣರು.

ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದರೆ
ಎನಗಿದು ಸೋಜಿಗ, ಎನಗಿದು ಸೋಜಿಗ.
ಅಹುದೆನಲಮ್ಮೆನು ಅಲ್ಲೆನಲಮ್ಮೆನು
ಗುಹೇಶ್ವರಲಿಂಗ ನಿರಾಕಾರಬಯಲು ಆಕಾರವಾದರೆ.

ನಿರಾಳ ನಿರಾಕಾರವಾದ ಬಯಲು ಆಕಾರವಾಗಿ ಕರಸ್ಥಲಕ್ಕೆ ಬಂದು ಉಪಾಸನೆಗೊಳ್ಳುತ್ತಿರುವುದೇ ಸೋಜಿಗ—ಎನ್ನುತ್ತಾನೆ ಪ್ರಭು. ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಈ ಅಭಿಪ್ರಾಯವನ್ನು ಹೀಗೆ ಹೇಳಿದ್ದಾಳೆ :

ಪಾತಾಳವಿತ್ತಿತ್ತ ಪಾದಂಗಳತ್ತತ್ತ
ದಶದಿಕ್ಕು ಇತ್ತಿತ್ತ, ದಶಭುಜಗಳತ್ತತ್ತ
ಬ್ರಹ್ಮಾಂಡವಿತ್ತಿತ್ತ ಮಣಿಮಕುಟವತ್ತತ್ತ
ಚೆನ್ನಮಲ್ಲಿಕಾರ್ಜುನಯ್ಯ ನೀವೆನ್ನ ಕರಸ್ಥಳಕ್ಕೆ ಬಂದು
ಚುಳುಕಾದಿರಲ್ಲಾ ಲಿಂಗವೇ.

ವಿಶ್ವವನ್ನೆಲ್ಲಾ ವ್ಯಾಪಿಸಿ ಮೀರಿ ನಿಂತಿರುವ ಪರಿಪೂರ್ಣ ಶೂನ್ಯಸ್ವರೂಪವಾದ ಶಿವತತ್ತ್ವ, ಮಹಾದೇವಿಯ ಕರಸ್ಥಲಕ್ಕೆ ಬಂದು ಚುಳುಕಾಗಿದೆ. ಆ ಉಪಾಸನೆಯ ಅನುಭವವನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು :

ಬಯಲ ಮೂರ್ತಿಯ ಮಾಡಿ ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು
ಆ ಬಯಲ ಮೂರ್ತಿಯ ಅಮೂರ್ತಿಯ ಮಾಡಿ
ಎನ್ನ ಪ್ರಾಣದೊಳಗೆ ಇರಿಸಿದನಯ್ಯಾ ಶ್ರೀಗುರು
ಬಯಲು ಬಯಲನೇ ಬಯಸಿ ಬಯಲೆಂದೆನಿಸಿ
ಎನ್ನ ಭಾವದಲ್ಲಿರಿಸಿದನಯ್ಯ ಶ್ರೀಗುರು
ಇದು ಕಾರಣ ಎಲ್ಲ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ
ನಾನು ಅಂಗಲಿಂಗ ಸಂಬಂಧಿಯಾದೆನಯ್ಯ
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಹೀಗೆ ಶೂನ್ಯವೇ ಮೂರ್ತಿಗೊಂಡು ಬಯಲಿನ ಕುರುಹಾಗಿ ಬಂದ ಇಷ್ಟಲಿಂಗದ ಅನುಸಂಧಾನ ಶರಣವನ್ನು ಕೊನೆಯಲ್ಲಿ ಆ ಬಯಲಿನ ನಿಲವಿಗೇ ತರುತ್ತದೆ. ಅದನ್ನು ಅಲ್ಲಮಪ್ರಭು ಈ ವಚನಗಳಲ್ಲಿ ಅರ್ಥವತ್ತಾಗಿ ನಿರೂಪಿಸಿದ್ದಾನೆ :

ಘನವ ಕಂಡು ಮನವು ಗ್ರಹಿಸಿತ್ತು
ಕಂಡು ಕಂಡು ಮನ ಮಹಾಘನವಾಯಿತ್ತು

ತತ್ತ್ವಲ್ಲೀಯವಾಯಿತ್ತು, ತದುಗತವಾಯಿತ್ತು
ಶಬ್ದಮುಗ್ಧವಾದುದನೇನೆಂಬೆ ಗುಹೇಶ್ವರಾ.
ಮನದ ಕೊನೆಯ ಮೇಲೆ ನೆನೆದ ನೆನಹು
ಜವನಮರಣವ ನಿಲಿಸಿ ಜ್ಞಾನಜ್ಯೋತಿಯ ಉಭಯ
ಭಾನುಕೋಟಿಯ ಮೀರಿ
ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ
ಘನವನೇನೆಂಬೆನು ಗುಹೇಶ್ವರಾ.

"ಸ್ವಾನುಭಾವದ ಉದಯಜ್ಞಾನ ಶೂನ್ಯದಲ್ಲಿ ಅಡಗಿತು"—ಎಂಬ ಮಾತು ಮನನೀಯವಾದುದು. ಸ್ವಾನುಭಾವದ ನಿಲವು ನಮ್ಮನ್ನು "ಜ್ಞಾನಶೂನ್ಯ"ದಲ್ಲಿ ಅಡಗಿಸುತ್ತದೆ. ಈ ಕೆಳಗಿನ ವಚನ ಶರಣರ ಶೂನ್ಯದ ವ್ಯಾಪಕತೆಯನ್ನೂ ಅವರ ಮೋಕ್ಷದ ಕಲ್ಪನೆಯನ್ನೂ ಮಾಡಿಕೊಡುತ್ತದೆ :

ಕರ್ಪೂರದ ಕಳ್ಳನ ಹುಲ್ಲಿನಲ್ಲಿ ಕಟ್ಟಿರಲು
ಅಗ್ನಿ ಎಂಬ ಹಿತವು ಬಂದು ಬಿಡಿಸಲು
ಪಾಶ ಬೆಂದು ಕಳ್ಳ ತನ್ನಲ್ಲಿಯೇ ಅಡಗಿದನು
ಬಯಲ ಶರಣಂಗೆ, ಬಯಲ ಪಾಶ ಬಂದು ಕಟ್ಟಿರಲು
ಬಯಲ ಲಿಂಗ ಬಂದು ಬಿಡಿಸಲು
ಬಯಲು ಬಯಲೇಕವಾಯಿತ್ತು
ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತು
ಸದಾಶೂನ್ಯವಾಯಿತ್ತು.

ಲಿಂಗಾಂಗಸಾಮರಸ್ಯದ ನಿಲವನ್ನು ಹೇಳುವಾಗ "ಉರಿಯುಂಡ ಕರ್ಪೂರದಂತೆ" ಎಂಬ ಮಾತು ಶರಣರಿಗೆ ಬಹಳ ಪ್ರಿಯವಾದುದು. ಇಲ್ಲಿ ಹಾವಿನ ಹಾಳ ಕಲ್ಲಯ್ಯ ಇದೇ ಮಾತನ್ನು "ಕರ್ಪೂರದ ಕಳ್ಳನನ್ನು ಬೆಂಕಿ ಬಂದು ಬಿಡಿಸಿತೆ"ಂಬ ಸಾದೃಶ್ಯದಿಂದ ಹೇಳಿದ್ದಾನೆ. ಹುಲ್ಲಿನ ಕಟ್ಟುಗಳು ಬೆಂದು ಬೂದಿಯಾದುವು ; ಕರ್ಪೂರ ಅದರಲ್ಲಿ ಅಡಗಿಹೋಯಿತು. ಹಾಗೆಯೇ ಬಯಲು, ಬಯಲು ಏಕವಾಯಿತು—ಎನ್ನುತ್ತಾನೆ ಕಲ್ಲಯ್ಯ. ಹೀಗೆ ಕೇವಲ ಅನುಭವವೇದ್ಯವಾಗ ಬಹುದಾದ ಅನುಭಾವದ ಮಟ್ಟಕ್ಕೆ ಶರಣರ ಬಯಲಿನ ಕಲ್ಪನೆ ಏರುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಶರಣರ ಶೂನ್ಯತತ್ತ್ವ ಅಗಾಧವಾದ ಅರ್ಥವನ್ನು ಒಳಗೊಂಡಿರುವ ಮತ್ತು ಅನುಭವಪ್ರಧಾನವಾದ ತಾತ್ವಿಕವಿವೇಚನೆಯಾಗಿ ಪರಿಣಮಿಸಿದೆ. ಬೌದ್ಧರಂತೆ ಅವರು ಅನಾತ್ಮವಾದದ ಮಾರ್ಗ ವನ್ನು ಹಿಡಿಯದೇ ಹಿಂದೂಧರ್ಮದ ತಳಹದಿಗೆ ಅನುಗುಣವಾದ ರೀತಿಯಲ್ಲಿ ಆತ್ಮವಾದದ ಮಾರ್ಗವನ್ನು ಅವಲಂಬಿ ಸಿದರು. ಮಾತಿಗೆ ನಿಲುಕದ ಪರಿಪೂರ್ಣಶೂನ್ಯವನ್ನು ಮಾತುಗಳಲ್ಲಿ ಹಿಡಿದಿಡುವ ಸಾಹಸವನ್ನು ಶರಣರು ಯಶಸ್ವಿ ಯಾಗಿ ನಿರ್ವಹಿಸಿದರು. ಆಳವಾಗಿ ಆ ತತ್ತ್ವವನ್ನು ವಿವೇಚಿಸಿದರು. ಆ ಶೂನ್ಯತತ್ತ್ವದ ತೌಲನಿಕವಾದ ಅಧ್ಯಯನ ಇನ್ನೂ ಹೆಚ್ಚಾಗಿ ಆಗುವುದು ಆವಶ್ಯಕ.

---

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥಾ.

ದೇವರ ದಾಸಿಮಯ್ಯ

# ಲಿಂಗತತ್ತ್ವ

ಎಸ್. ಎಸ್. ಪಾಟೀಲ

## ವೀರಶೈವಸಿದ್ಧಾಂತದಲ್ಲಿ ದೇವರ ಪರಿಕಲ್ಪನೆ

ಭಾರತೀಯ ವಿವಿಧ ತತ್ತ್ವಶಾಸ್ತ್ರಗಳನ್ನು (ವೀರಶೈವವನ್ನುಳಿದು) ವಿಶ್ಲೇಷಣಾತ್ಮಕ ದೃಷ್ಟಿಯಿಂದ ಅವಲೋಕಿಸಿದಾಗ ಅವುಗಳಲ್ಲಿ ಕಂಡುಬರುವ ದೇವರ ಪರಿಕಲ್ಪನೆ, ಒಂದಿಲ್ಲೊಂದು ಕೊರತೆಯನ್ನು ಹೊಂದಿರುವುದು ಕಂಡುಬರುತ್ತವೆ. ಅಂದರೆ ಅದು ಮಾನವನ ಧಾರ್ಮಿಕ ಅವಶ್ಯಕತೆಗಳನ್ನು ಹಾಗೂ ಅವನ ಧಾರ್ಮಿಕ ಜಿಜ್ಞಾಸೆಯ ಪೂರ್ಣ ಹಸಿವನ್ನು ಹಿಂಗಿಸಲು ಅಸಮರ್ಥವಾಗಿದೆ. ವೀರಶೈವತತ್ತ್ವಜ್ಞಾನಿಗಳು ಅನೂಚಾನವಾಗಿ ಬಂದಂತಹ ಯುಗಬಂಧನದಿಂದ ವಿಮುಕ್ತರಾಗಿ ದೇವರ ಪರಿಕಲ್ಪನೆಗಳ ಎಲ್ಲ ವಿಚಾರಸರಣಿಗಳನ್ನು ಪರೀಕ್ಷಿಸಿ ಅವುಗಳಲ್ಲಿಯ ಏಕಸೂತ್ರದ ಆಧಾರದ ಮೇಲೆ, ಒಂದು ಸಮನ್ವಯವಾದ ಮತ್ತು ಮಾನವನ ಅನುಭವಕ್ಕೆ ನಿಲುಕುವ ದೇವರ ಪರಿಕಲ್ಪನೆಯನ್ನು ಸೂತ್ರೀಕರಿಸಿದ್ದಾರೆ. ವೀರಶೈವರ ದೇವರ ಪರಿಕಲ್ಪನೆಯು ಮಾನವನ ಧಾರ್ಮಿಕಜಿಜ್ಞಾಸೆ ಹಾಗೂ ಅವನ ಅವಶ್ಯಕತೆಗಳನ್ನು ತೃಪ್ತಿಪಡಿಸುವ ಸ್ವರೂಪವನ್ನು ಹೊಂದಿದೆ.

ಯಾವ ಚರಾಚರಜಗತ್ಕಾರಣ ಮೂಲತತ್ತ್ವವನ್ನು ವೇದಾಂತಿಗಳು ಪರಬ್ರಹ್ಮವೆಂದು ಉಪದೇಶದ ವಿಷಯವನ್ನಾಗಿ ಮಾಡುವರೋ ಅದನ್ನು ವೀರಶೈವದಾರ್ಶನಿಕರು ಪರಶಿವನೆಂಬ ಅಭಿಧಾನದಿಂದ ಕರೆಯುತ್ತಾರೆ.[1] ಪರಶಿವನು ಮೂರು ಲೋಕಕ್ಕೆ ಭಿತ್ತಿಸ್ವರೂಪನೂ, ಸಚ್ಚಿದಾನಂದಸ್ವರೂಪನೂ ಮತ್ತು ಪರಬ್ರಹ್ಮಸ್ವರೂಪನೂ ಆಗಿರುವನು.[2]

ವೀರಶೈವದಾರ್ಶನಿಕರು ಶಕ್ತಿರಹಿತವಾದ ಪರತತ್ತ್ವವನ್ನು ತಳ್ಳಿಹಾಕಿದ್ದಾರೆ. ಪರತತ್ತ್ವವು ಶಕ್ತಿವಿಶಿಷ್ಟವಾದದ್ದೆಂದು ಪ್ರತಿಪಾದಿಸಿದ್ದಾರೆ. ಶಕ್ತಿವಿಹೀನ ಶಿವ ಶವ. ಶಿವ ಮತ್ತು ಶಕ್ತಿಯು ಅವಿನಾಭಾವಸಂಬಂಧದಿಂದ ಕೂಡಿರುತ್ತವೆ. ಶಕ್ತಿಯು ಪರಶಿವನ ಸಂಬಂಧಿನಿಯೂ,ಸಮವಾಯ ಸ್ವರೂಪಿಣಿಯೂ ಆಗಿರುವುದರಿಂದ ಪರಶಿವನ ಸಚ್ಚಿದಾನಂದ ಲಕ್ಷಣವನ್ನೇ ಹೊಂದಿರುವಳು.[3] ಶಿವನು ೩೬ ತತ್ತ್ವಗಳ ಸಮುಚ್ಚಯ,[4] ಶಕ್ತಿಯೂ ೩೬ ತತ್ತ್ವಗಳ ಸಮುಚ್ಚಯ,[5] ಈ ಶಿವಶಕ್ತಿಗಳ ಸಂಯೋಗದಿಂದಲೆ ವಿಶ್ವಸೃಷ್ಟಿ.[6] ಶಿವಶಕ್ತಿಸಮಾಯೋಗದಿಂದಾದ ವಿಶ್ವವೇ ಲಿಂಗ.[7] ಯಾವ ವಸ್ತುವಿನಲ್ಲಿ ಈ ಚರಾಚರಾತ್ಮಕವಾದ ಜಗತ್ತು ಲಯವನ್ನು ಹೊಂದುವುದೋ, ಯಾವ ವಸ್ತುವಿನಲ್ಲಿ ಪುನಃ ಪುನಃ ಉತ್ಪತ್ತಿಯನ್ನು ಹೊಂದುವುದೋ ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆಂದು ಹೇಳಿಸಿಕೊಳ್ಳುವುದು.[8]

---

1 ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ ।
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್ ॥ (೧-೨ ಸಿ. ಶಿಖಾಮಣಿ)

2 ತ್ರೈಲೋಕ್ಯಸಂಪದಾಲೇಖ್ಯಸಮುಲ್ಲೇಖನಭಿತ್ತಯೇ ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ॥ (೧-೧ ಸಿ. ಶಿಖಾಮಣಿ)

3 ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ॥ (೨-೧೨ ಸಿ. ಶಿಖಾಮಣಿ)

4 ಷಟ್ತ್ರಿಂಶತತ್ತ್ವಸಂಚಯಃ । (೧-೩ ಸಿ. ಶಿಖಾಮಣಿ)

5 ಸದಾಶಿವಮುಖಾಶೇಷತತ್ತ್ವಮೌಕ್ತಿಕ ಶುಕ್ತಿಕಾಂ । (೨ ೨ ಸಿ. ಶಿಖಾಮಣಿ)

6 ಶಿವಶಕ್ತಿಸಮುತ್ಪನ್ನೇ ಪ್ರಪಂಚೇಽಸ್ಮಿನ್ ವಿಶಿಷ್ಯತೇ । (೫-೩೨ ಸಿ. ಶಿಖಾಮಣಿ)

7 ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ ॥ (೧೧-೩೨ ಸಿ. ಶಿಖಾಮಣಿ)

8 ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಂ ।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್ ॥ (೬-೩೬ ಸಿ. ಶಿಖಾಮಣಿ)

ಮೇಲಿನ ನಿರೂಪಣೆಯಿಂದ ಸ್ಪಷ್ಟವಾಗುವುದೇನೆಂದರೆ ವೀರಶೈವರ ದೃಷ್ಟಿಯಲ್ಲಿ ಸೃಷ್ಟಿಯ ಪ್ರತಿಯೊಂದು ಚೇತನವೂ ೩೬ ತತ್ತ್ವಗಳಿಂದ ಕೂಡಿದೆ. ಇದಕ್ಕೆ ಯಾವ ವಸ್ತುವೂ ಹೊರತಲ್ಲ. ವೀರಶೈವದಾರ್ಶನಿಕರು ದ್ವಿಪ್ರಮಾಣ ಪದ್ಧತಿಯನ್ನು ನಿರಾಕರಿಸಿ ಏಕಪ್ರಮಾಣ ಪದ್ಧತಿಗೆ ಒಳಪಡಿಸಿದ್ದಾರೆ. ಯಾವ ಅವಿನಾಭಾವಸಂಬಂಧವು ಶಿವಶಕ್ತಿಯರ ಮಧ್ಯೆ ಉಂಟೋ ಅದೇ ಸಂಬಂಧ ಜೀವಜೀವಗಳ ಮಧ್ಯೆ, ಜೀವಜಗತ್ತುಗಳ ಮಧ್ಯೆ, ಶಿವ ಜೀವಿಗಳ ಮಧ್ಯೆ ಮತ್ತು, ಶಿವಜಗಗಳ ಮಧ್ಯೆ ಇದೆ ಎಂದು ವೀರಶೈವದಾರ್ಶನಿಕರು ಪ್ರತಿಪಾದಿಸಿದ್ದಾರೆ. ಇದೇ ವೀರಶೈವರ ಮೂಲ ತಾತ್ತ್ವಿಕ ನಿಲವು. ಇದು ವೀರಶೈವರ ಅ–ದ್ವೈತ (ನಾನ್–ಡ್ಯೂಯಲಿಸಂ).

ವೀರಶೈವದಾರ್ಶನಿಕರು ಸತ್ಯದ ದ್ವಿಧ್ರುವತ್ವ (ಬೈ–ಪೊಲಾರಿಟಿ ಆಫ್ ಎಕ್ಸಿಸ್‌ಟೆನ್ಸ್)ವನ್ನು ಪ್ರತಿಪಾದಿಸಿದ್ದಾರೆ. ಯಾವ ಚೇತನವೂ ತಾತ್ವಿಕವಾಗಿ ಮೂಲಸ್ವರೂಪಗಳಿಗೆ ಹೊರತಲ್ಲ. ಲಿಂಗವೂ ಕೂಡಾ ಚೇತನಗಳಲ್ಲಿ ಒಂದು. ಪ್ರತಿಯೊಂದು ವಸ್ತುವಿಗೆ ಬಹಿರಂಗ ಅಂತರಂಗಗಳಿರುವಂತೆ ದೇವ(ಲಿಂಗ)ನಿಗೂ ಬಹಿರಂಗ ಅಂತರಂಗಗಳಿರುವುವು. ಹಾಗೆಯೇ ಅದು ಆದಿಯೂ ಹೌದು ಅನಾದಿಯೂ ಹೌದು. 'ಆದಿಯೇ ದೇಹ, ಅನಾದಿಯೇ ಆತ್ಮ' ದೇಹವೆಂದರೆ ಕಾಯ, ಕಾಯವೆಂದರೆ ಕ್ರಿಯೆ, ಇದೇ ಬಹಿರಂಗ. ಆತ್ಮವೆಂದರೆ ಜಂಗಮ, ಜಂಗಮವೆಂದರೆ ಪ್ರಾಣ ಇದೇ ಅಂತರಂಗ. ಹಾಗೇನೇ ಲಿಂಗವು ಚರನೂ ಹೌದು ಅಚರನೂ ಹೌದು. 'ಲಿಂಗಂ ಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ' ಎಂದು ಸಿದ್ಧಾಂತಶಿಖಾಮಣಿ ಸಾರುತ್ತದೆ. 'ಅಕಾಯಮುಖದಲ್ಲಿ ಕಾಯ ಪ್ರತಿಬಿಂಬಿಸುವುದು, ಸಕಾಯಮುಖದಲ್ಲಿ ಅಕಾಯ ಪ್ರತಿಬಿಂಬಿಸುವುದು ಸೋಕಿಲ್ಲದೇ ಸೊಗಸಿಲ್ಲದೆ ಹೂಣೆ ಹೋಗುವನು, ಅನುಭಾವ ಸಕಾಯನಾಗಿ', "ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ" (ಚಬ), 'ಅಂತರಂಗ ಬಹಿರಂಗ ಆತ್ಮಸಂಗ ಒಂದೇ', 'ಸ್ಥಾವರ ಜಂಗಮ ಉಭಯಪಕ್ಷ ಒಂದೇ' (ಬವ) ಎಂದು ವಚನಕಾರರು ಕೂಡಾ ಸ್ಪಷ್ಟವಾಗಿ ಹೇಳಿದ್ದಾರೆ. ದೇವರ ಜಂಗಮತ್ವವು ವಿಶ್ವದಲ್ಲಿಯ ಸೃಜನಶೀಲ ಶಕ್ತಿಯನ್ನು, ಅಚರತೆಯು ವಿಶ್ವದಲ್ಲಿಯ ಸ್ಥಾಯಿ (ಅನನ್ಯ) ರೂಪವನ್ನು ಪ್ರತಿನಿಧಿಸುತ್ತವೆ. ದೇವರು ಕಾರಣವೂ ಹೌದು, ಕಾರ್ಯವೂ ಹೌದು. ದೇವರು ಕಾರ್ಯಕಾರಣಗಳ ಸಮಾಹಿತ ವಸ್ತು.[1] ದೇವರನ್ನು ಕೇವಲ ಕಾರಣಪುರುಷನೆಂದಾಗಲಿ ಅಥವಾ ಕೇವಲ ಪರಿಣಾಮಗಳ ಪಿತೃವೆಂದಾಗಲಿ ಭಾವಿಸುವುದು ಆಂಶಿಕಸತ್ಯ.

ದೇವರು ಮೂರ್ತಸ್ವರೂಪನೂ ಹೌದು ಅಮೂರ್ತಸ್ವರೂಪನೂ ಹೌದು. ಈ ಸತ್ಯವನ್ನು ಕೆಳಗಿನ ವಚನಗಳು ಪುಷ್ಟೀಕರಿಸುತ್ತವೆ.

ಸಕಳ ನಿಷ್ಕಳ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೇ ನಿಷ್ಕಳ ನೀನೇ ಕಂಡಯ್ಯಾ
'ವಿಶ್ವತಃಚಕ್ಷು' ನೀನೇ ದೇವಾ, 'ವಿಶ್ವತೋಮುಖ' ನೀನೇ ದೇವಾ,
'ವಿಶ್ವತೋಬಾಹು' ನೀನೇ ದೇವಾ, ಕೂಡಲಸಂಗಮದೇವಾ
ನೀನು ನಿರಾಕಾರ, ಸಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ,
ಒಂದ ಜರಿದು ಒಂದ ಹಿಡಿದಿಹೆನೆಂದಡೆ ಅದೇ ಕೊರತೆ ನೋಡಾ ಪ್ರಭುವೆ, ಕೂಡಲಸಂಗಮದೇವಾ

ದೇವರ ಅಮೂರ್ತಸ್ವರೂಪವು ಅವನ ಪರಮಕಾರಣತ್ವವನ್ನು, ಮೂರ್ತಸ್ವರೂಪವು ಎಲ್ಲಾ ಪರಿಣಾಮಗಳ ಸಮೂಹವನ್ನು ಪ್ರತಿನಿಧಿಸುತ್ತವೆ. ಮೂರ್ತ ಅಮೂರ್ತ ಸ್ವರೂಪಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಏಕೆಂದರೆ ಒಂದನ್ನು ಹಿಡಿದು ಇನ್ನೊಂದನ್ನು ಜರಿದರೆ ದೇವನ ಸ್ವರೂಪ ಅಪೂರ್ಣವಾಗುವುದು.

---

1 ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಂ ।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ ।
ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ ।
ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ ।
ತಥಾ ಶಿವಾತ್ಸಮುತ್ಪನ್ನಂ ಶಿವ ಏವ ಚರಾಚರಂ ।
ಆತ್ಮಶಕ್ತಿ ವಿಕಾಸೇನ ಶಿವೋಽವಿಶ್ವಾತ್ಮನಾ ಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ।
ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ । (೧೦–೬೨, ೬೩, ೬೪, ೬೫, ೬೬ ಸಿ. ಶಿಖಾಮಣಿ)

ಅಂಗಕ್ಕೆ ಮೂರು ಸ್ತರ ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳು ಇರುವಂತೆ ಲಿಂಗದೇವನಿಗೂ. ಇಷ್ಟಲಿಂಗ, ಪ್ರಾಣಲಿಂಗ ಮತ್ತು ತೃಪ್ತಿಲಿಂಗವೆಂದು ಮೂರು ಸ್ತರಗಳಿವೆ.[1] ಇಷ್ಟಲಿಂಗದಿಂದ ಅಂಗಾನುಭಾವ(ಆಯತ) ಪ್ರಾಣಲಿಂಗದಿಂದ ಕರಣಾನುಭಾವ (ಸ್ವಾಯತ) ಮತ್ತು ತೃಪ್ತಿಲಿಂಗದಿಂದ (ಸನ್ನಿಹಿತ) ಭಾವಾನುಭಾವ, ಲಿಂಗಾನುಭಾವ ಮತ್ತು ಕರುಣಾನುಭಾವಗಳ ಸಮರಸದ ಪರಿಣಾಮವೇ ತೃಪ್ತಿಲಿಂಗದ ಭಾವಾನುಭಾವ. ಅಂಗವು ಅನುಷ್ಠಾನದ ಸಿದ್ಧಿಯ ಮೂಲಕ ಸ್ಥೂಲ, ಸೂಕ್ಷ್ಮಗಳ ಸಮರಸದಿಂದ ಪರಿಣಮಿಸುವ ಆನಂದವನ್ನು ಕಾರಣಶರೀರದಲ್ಲಿ ಅನುಭವಿಸುವಂತೆ ಲಿಂಗದೇವನು ಸಮರಸಾನಂದವನ್ನು ಪಡೆಯಲೋಸುಗ ಸಕಲಪದಾರ್ಥಗಳನ್ನು ಇಷ್ಟಲಿಂಗಸ್ತರದಲ್ಲಿ ಗ್ರಹಿಸಿ, ಭಾವಸ್ತರದಲ್ಲಿ ಪರಿಗ್ರಹಿಸಿ ತನ್ನ ಮೂಲವಿಚಾರವನ್ನು ಕಾರ್ಯಗತಗೊಳಿಸಿ ತೃಪ್ತಿಸ್ತರದಲ್ಲಿ ಸಮರಸಾನಂದವನ್ನು ಅನುಭವಿಸುತ್ತಾನೆ.[2] ಹಾಗೇನೆ ಲಿಂಗದೇವನು ಭೋಕ್ತೃ, ಭೋಜ್ಯ, ಪ್ರೇರಕನು ಹೌದು.[3] ಶುದ್ಧೋಪಾಧಿವಿಶಿಷ್ಟದಿಂದ ಪ್ರೇರಕನೆಂದೂ, ಮಿಶ್ರೋಪಾಧಿಗಳಿಂದ ಕೂಡಿ ಭೋಕ್ತೃವೆಂದೂ, ಶುದ್ಧತಾಮಸದಿಂದ ಭೋಜ್ಯನೆಂದೂ ಪರಿಗಣಿಸಲ್ಪಡುತ್ತಾನೆ.[4] ಅಂದರೆ ಲಿಂಗದೇವನೇ ಉಪಾಧಿವಶದಿಂದ ಈಶ (ಪ್ರೇರಕ), ಜೀವ (ಭೋಕ್ತೃ) ಮತ್ತು ಪ್ರಕೃತಿ (ಭೋಜ್ಯ) ಮೊದಲಾದ ವಿಶ್ವರಚನೆಯಾಯಿತು.

ದೇವನು ವಿಶ್ವಾತೀತ ಹಾಗೂ ವಿಶ್ವಾಂತರ್ಯಾಮಿ.[5] ವಿಶ್ವಾತೀತನಾದಾಗ್ಯೂ ಅವನು ಪ್ರಕಟಿತ ಹಾಗೂ ಸೀಮಿತ. ತನ್ನಲ್ಲಿ ಅಂತರ್ಗತವಾದ ಅಗಣಿತ ಬೋಧನಾಶಕ್ತಿಯಿಂದ ದೇವರು ಈ ವಿಶ್ವಸೃಷ್ಟಿಗೆ ಪ್ರೇರಕನಾಗಿದ್ದಾನೆ.[6] ಅವನು ಏಕನೂ ಹೌದು, ಅನೇಕನೂ ಹೌದು. ಅವನು ವಿವಿಧತೆಯ ಸಮನ್ವಯತತ್ತ್ವ. ಅವನು ಘನಕ್ಕೆ ಘನನೂ ಹೌದು, ಕಿಂಚಿತ್ತ್ವಕ್ಕೆ ಕಿಂಚಿತ್ತ್ವವೂ ಹೌದು.

ಮೇಲೆ ಹೇಳಿದ ಲಿಂಗದೇವನ ವೈಪರೀತ್ಯ ಗುಣಗಳು ಒಂದಕ್ಕೊಂದು ಪೂರಕವಾಗಿ ಅವನ ಸ್ವರೂಪದ ಸಮಗ್ರತೆಯನ್ನು ಬಿಂಬಿಸುತ್ತವೆ. ವೀರಶೈವ ಸಿದ್ಧಾಂತವು–ಅನೇಕತ್ವವನ್ನು ನಿರಾಕರಿಸಿ ಏಕತ್ವವನ್ನು ಪ್ರತಿಪಾದಿಸುವ ಪರಮತತ್ತ್ವ (ದಿ ಅಬ್ಸಲ್ಯೂಟ್)ವನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತದೆ. ಈ ಪರಮತತ್ತ್ವವು ವೀರಶೈವದ ಪ್ರಕಾರ "ಸರ್ವಾಲಯ ಭೂತಾನಾಂ" ಅಂದರೆ, ಮೃತ್ತಿಕೆಯೊಂದರಲ್ಲಿ ಮಡಿಕೆಗಳು ನೂರಾರು, ಮನವೊಂದರಲ್ಲಿ ಕ್ರಿಯಾದಿಗಳು ನೂರಾರು ಜನಕನೊಬ್ಬನಲ್ಲಿ ಸಂತತಿಗಳು ನೂರಾರು 'ಇರುವಂತೆ' ಘನಕ್ಕೆ ಘನವಾದ ಚಿನ್ಮಯಕುಲ ಸಿದ್ಧಮಲ್ಲಿಕಾರ್ಜುನನಲ್ಲಿ ಜಗತ್ತುಗಳು ನೂರಾರು ಇರುವುವು. ವೀರಶೈವ ಪರಿಭಾಷೆಯಲ್ಲಿ 'ಪರಮ' ಪದವು ವಿಶಿಷ್ಟವಾದ ಮತ್ತು ನವೀನ ಅರ್ಥವನ್ನು ಪಡೆದಿದೆ. ಪರಾತ್ಪರವಸ್ತು (ಮಹಾಘನ)ವು ತನ್ನ ಲೀಲೆಯಿಂದ ತಾನೇ ಸ್ವಯಂಭುಲಿಂಗವಾಯಿತು. ತಾನೇ ಅನಂತ ವಿಶ್ವರೂಪವನ್ನು ತಾಳಿತು, ವೀರಶೈವರ ಪ್ರಕಾರ ದೇವರು ನಿರಂಕುಶಪ್ರಭು ಅಲ್ಲ, ಕರುಣಾರಹಿತ ಬೋಧಕನಲ್ಲ, ಅಚಲಿತ ಚಾಲಕನೂ ಅಲ್ಲ. ವೀರಶೈವರ ದೇವನು ಸಜೀವನೂ, ವಾತ್ಸಲ್ಯಭರಿತನೂ, ವಿಶ್ವದ ವಿಷಯಗಳಲ್ಲಿ ಭಾಗಿಯೂ, ಸಂಘಜೀವಿಯೂ ಮತ್ತು ಜೀವಿಗಳ ಸುಖದುಃಖಗಳಲ್ಲಿ ಸಮಾನಶೀಲನೂ, ಅಮಿತಸಹನೆ ಉಳ್ಳವನೂ ಆಗಿರುವುದರಿಂದ ಮಾನವನ ಬಯಕೆಗಳನ್ನು ಈಡೇರಿಸುವಲ್ಲಿ ಸಹಾನುಭೂತಿಪರನೂ ಹಾಗೂ ಸೂಕ್ಷ್ಮಗ್ರಾಹಿಯೂ ಆಗಿದ್ದಾನೆ.

ದೇವನನ್ನು ನಿರಪೇಕ್ಷಕ, ಅಚಲಿತ, ನಿರಪೇಕ್ಷಸ್ವತಂತ್ರ ಮತ್ತು ಸಂಘೇತರವೆಂದು ಪರಿಗಣಿಸಿದರೆ ಧರ್ಮದ ಮೂಲಾರ್ಥವನ್ನೇ ನಿಷೇಧಿಸಿದಂತಾಗುತ್ತದೆ. ಇಂತಹ ದೇವರ ಕಲ್ಪನೆಯಿಂದ ಧರ್ಮವು ಭ್ರಾಂತಿಗಳ ಸಮುಚ್ಚಯ

---

1 ಲಿಂಗಂ ತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಂ । (೬-೪೮ ಸಿ. ಶಿಖಾಮಣಿ)

2 ಇಷ್ಟಲಿಂಗಕ್ಕೆ ಮಜ್ಜನ, ಪ್ರಾಣಲಿಂಗಕ್ಕೆ ಭೋಜನ ತೃಪ್ತಿಲಿಂಗಕ್ಕೆ ಪರಿಣಾಮವಯ್ಯಾ । (೧೦೨೮ ಚ. ಬ)

3 ಪರತತ್ತ್ವಮುಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ । ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಂ ॥ (೫-೩೮ ಸಿ. ಶಿಖಾಮಣಿ)

4 ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ । ಸಮಿಶ್ರೋಪಾಧಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ ॥ ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಂ । (೫-೩೯ ಸಿ. ಶಿಖಾಮಣಿ)

5 ಪರಂ ಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಂ ।
ತದೇವ ಸರ್ವಭೂತಾನಾಮಂತಸ್ತ್ರಿಸ್ಥಾನಗೋಚರಂ ॥ (೬-೩೩ ಸಿ. ಶಿಖಾಮಣಿ)

6 ಜಗವಭರಿತನೆನ್ನ ದೇವ, ಜಗವ ಹೊದ್ದನೆನ್ನ ದೇವ, ಭಕ್ತನ ಕರಸ್ಥಲಕ್ಕೆ ಬಂದನೆನ್ನ ದೇವ, ಭಕ್ತನನವಗ್ರಹಿಸಿಕೊಂಡನೆನ್ನ ದೇವ । ಇದು ಕಾರಣ ಕೂಡಲಚನ್ನಸಂಗಮದೇವರು
ಅಕ್ಷರಾಕ್ಷರವ ಮೀರಿದ ಘನ (ಚಬ)

ವಾಗಿ ಆತ್ಮ ವಿಕಾಸದ ಮಾತು ಅರ್ಥಹೀನವಾಗುತ್ತದೆ. ಇಂತಹ ಕಲ್ಪನೆಯು ಸೃಜನಶೀಲತೆಯನ್ನು ನಿಷೇಧಿಸುತ್ತದೆ. ಜಂಗಮತ್ವವಿದ್ದಾಗಲೇ ದೇವ ಎಂಬ ಮಾತಿಗೆ ತುಂಬು ಅರ್ಥ ಬರುತ್ತದೆ. ಜಂಗಮತ್ವದಿಂದಲೇ ವೀರಶೈವರ ದೇವನು ಪರಿಪೂರ್ಣ. ಆದ್ದರಿಂದಲೇ ವೀರಶೈವರು 'ಪರಮತತ್ತ್ವ'ವನ್ನು 'ಘನಲಿಂಗಜಂಗಮ'ವೆಂದು ಸಂಬೋಧಿಸುತ್ತಾರೆ. ಅದು ಸೃಜನಾತ್ಮಕತತ್ತ್ವವೂ ಹೌದು. ಅಂದರೆ ಅದು ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವ ಸೂತ್ರ. ಆದುದರಿಂದ ದೇವರು ವಾತ್ಸಲ್ಯರಹಿತ ನಿರಪೇಕ್ಷ ಕಟ್ಟಳೆಯಲ್ಲ. 'ಪರಮತತ್ತ್ವ'ವು 'ಘನಲಿಂಗ ಜಂಗಮ'ವಾದುದರಿಂದಲೇ ವಿಶ್ವಸೃಷ್ಟಿಸಾಧ್ಯ. 'ಪಂಚಬ್ರಹ್ಮಾಂಡ ಸಾಕಾರಮೂರ್ತಿ ಲೀಲಾಸ್ವಯಂಭುವಾದಲ್ಲಿ, ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾದಲ್ಲಿ ಅಂಗಕರಂಡ ಆತ್ಮಸುಗಂಧ' ತಾನೇ ಆದನು 'ಏಣಾಂಕಧರ ಸೋಮೇಶ್ವರಲಿಂಗ' 'ನಿಜವಸ್ತುವೊಂದೇ ತನ್ನ ಲೀಲೆಯಲೆರಡಾಗಬಲ್ಲುದದೊಂದೇ, ಬೇರೆ ತೋರಬಲ್ಲುದದೊಂದೇ, ತನ್ನ ಮರೆಯಬಲ್ಲುದದೊಂದೆ, ಆ ಮರವೆಯ ಬಲ್ಲುದದೊಂದೆ, ತಾನಲ್ಲದನ್ಯವಿಲ್ಲೆಂದರಿದ ಅರಿವು ತಾನೆ ಸಿಮ್ಮಲ್ಲಿಗೆಯ ಚೆನ್ನರಾಮಾ' ಹುಟ್ಟುಮೆಟ್ಟಂಬುದು ಇಲ್ಲದ, ತಂದೆ ತಾಯಿ ಇಲ್ಲದ 'ಘನಲಿಂಗ ಜಂಗಮ'ವು ಹರುಷದಿಂದ ತನಗೆ ತಾನೇ ಹುಟ್ಟಿ ತಾನೇ ಬೆಳೆದು ತನ್ನ ಪರಿಣಾಮದಿಂದ ಪ್ರಾಣತೃಪ್ತಿಯನ್ನು ಪಡೆಯುತ್ತದೆ. ಆದುದರಿಂದ ವೀರಶೈವರ ಪರಿಕಲ್ಪನೆಯಲ್ಲಿ ದೇವನು ಎಲ್ಲಾ ವೈಪರೀತ್ಯಗಳ ಸುಂದರ ಸಮನ್ವಯ ಸತ್.

ದೇವನು ಏಕ-ಅನೇಕ, ಅಕಾಯ-ಸಕಾಯ, ಅಮೂರ್ತ-ಮೂರ್ತ, ಅನಾದಿ-ಆದಿ, ಸ್ಥಿರ-ಚರ, ಘನ-ಕಿಂಚಿತ್, ಕಾರಣ-ಕಾರ್ಯ, ಸನಾತನ-ಕಾಲಿಕ, ಭೋಕ್ತೃ-ಭೋಜ್ಯ, ಸುಖಿ-ದುಃಖಿ ಆಗಿದ್ದಾನೆ. ಈ ಎಲ್ಲಾ ತತ್ತ್ವಗಳಿಂದ ಕೂಡಿದ ದೇವನು ಸೃಷ್ಟಿಲೀಲೆಯ ಪ್ರಮುಖ ಮಾದರಿಯಾಗಿದ್ದಾನೆ. ಪರಶಿವನ ಅಖಂಡಸುಪ್ತಚೇತನವೇ ಅನಾದಿ ದೇವ (ಮಹಾಲಿಂಗ). ಈ ಅನಾದಿದೇವನು ಗಾರ್ಭಿಕದೃಷ್ಟಿ (ನೆನಹು)ಯಿಂದ ತನ್ನ ಸೃಷ್ಟಿಯ ಸವಿಸ್ತಾರ ರೂಹನ್ನು ನಿರ್ದಿಷ್ಟಗಮನದಲ್ಲಿ ರೂಪಿಸಿಕೊಳ್ಳುತ್ತಾನೆ. ಈ ನೆನಹೇ (ಎನ್ವಿಸೇಜ್‌ಮೆಂಟ್) ಸೃಷ್ಟಿಯ ಮೂಲಬಿಂದು. ಈ ದೃಷ್ಟಿಯಿಂದ ದೇವರು ಸೃಷ್ಟಿಯ ಪೂರ್ವದವನಲ್ಲ. ಅವನು ಸೃಷ್ಟಿಯೊಂದಿಗೆ ಇದ್ದವನು. ಆದ್ದರಿಂದ ಅವನು ಸೃಷ್ಟಿಯ ಎಲ್ಲಾ ಚೇತನಗಳೊಂದಿಗೆ ಸೃಷ್ಟಿಗೊಂಡವನು.

ಅನಾದಿ ಶಿವನು, ಅನಾದಿಶಕ್ತಿ ಮತ್ತು ಅನಾದಿ ಚೈತನ್ಯಗಳನ್ನು ಒಂದುಗೂಡಿಸುವ, ಹಾಗೂ ವಿಶ್ವದಲ್ಲಿಯ ನಿಯತಿಯನ್ನು ಕಾಪಾಡುವವನಾಗಿದ್ದಾನೆ. ವಿಶ್ವದ ಪ್ರಾರಂಭಿಕ ಉದ್ದೇಶ ಅಥವಾ ಸಂಕಲ್ಪ ಅನಾದಿಶಿವನಿಂದ ಬಂದಿದೆ. ಈ ದೃಷ್ಟಿಯಲ್ಲಿ ಅನಾದಿಶಿವನು ಕೇವಲ ಅನುಭವಾತ್ಮಕವಾಗಿ, ಅಭಿನ್ನವಾಗಿ (ಅದ್ವೈತಿಯಾಗಿ)ರುತ್ತಾನೆ. ಅವನ ನೆನಹು ಯಾವ ಬಂಧನವೂ ಇಲ್ಲದ ಸೃಜನಾತ್ಮಕ ಕ್ರಿಯೆ. ಈ ವಿಶ್ವದ ಪ್ರತಿಯೊಂದು ಕ್ರಿಯೆಯು ಅನಾದಿಶಿವನನ್ನು ಮುಂಭಾವಿಸಿದರೆ, ಅನಾದಿಶಿವನು ತನ್ನಲ್ಲಿ ಅಂತರ್ಗತವಾದ ಚೈತನ್ಯವನ್ನು ಮುಂಭಾವಿಸುತ್ತಾನೆ. ಈ ಅಂತರ್ಗತವಾದ ಚೈತನ್ಯದಿಂದಲೇ ಪರಶಿವನು ಮೂರ್ತಸ್ವರೂಪವನ್ನು ಪಡೆಯುತ್ತಾನೆ. ಈ ಮೂರ್ತಸ್ವರೂಪವನ್ನು ತಳೆದ ಅನಾದಿಶಿವನಿಗೆ ಆದಿಶಿವ ಎಂದು ಕರೆಯಲಾಗಿದೆ. ಈ ಆದಿಶಿವನು ಕಾಲಸೀಮಿತನು. ಆದಿಶಿವನು ಆದಿಶಕ್ತಿಸಮೇತನಾಗಿರುತ್ತಾನೆ. ಆದಿಶಿವನು ಪ್ರಜ್ಞಾವಂತನೂ, ಪರಿಪೂರ್ಣನೂ, ಸಾಪೇಕ್ಷಿಯೂ ಆಗಿ ವಿಕಾಸಕ್ಕೆ ಒಳಪಟ್ಟಿರುತ್ತಾನೆ. ಅನಾದಿಶಿವನ ಪರಮಜ್ಞಾನವೇ ಆದಿಶಿವನು. ಆದಿಶಿವನು ವೈಯಕ್ತಿಕ ವಿಚಾರದ ಮುದ್ರೆಯಲ್ಲ. ಆದರೆ ಅವನು ತನ್ನ ಏಕೈಕ ಸಮೀಚೀನ ದೃಷ್ಟಿಯಲ್ಲಿ ಜ್ಞಾನದ ಮಹಾ ಆಗರವನ್ನು ಸೆರೆಹಿಡಿದಿರುತ್ತಾನೆ. ಈ ಆದಿಶಿವನ ದೃಗ್ಗೋಚರದಲ್ಲಿ ವಿಶ್ವವುಂಟು, ಆ ವಿಶ್ವದೊಳಗೆ ಆದಿಶಿವನುಂಟು.

ದೇವನು ಆದಿಸ್ವರೂಪದಲ್ಲಿ ಜೀವಿಗಳನ್ನು ಕರುಣೆ, ವಾತ್ಸಲ್ಯ ಹಾಗೂ ವಿಶ್ವವ್ಯಾಪಕದೃಷ್ಟಿಯಿಂದ ಕಂಡು ಅವುಗಳಲ್ಲಿ ಸಾಮರಸ್ಯ ಉಂಟಾಗಿಸಿ ಪ್ರತಿಯೊಂದು ಜೀವಿಯನ್ನು ಸಂರಕ್ಷಿಸುತ್ತಾನೆ. ಅವನು ಪ್ರತಿಯೊಂದು ಜೀವಿಯ ತಂದೆತಾಯಿಯಾಗಿ, ಬಂಧುಬಳಗವಾಗಿ, ಮಿತ್ರನಾಗಿ ವರ್ತಿಸುತ್ತಾನೆ. ಜಗತ್ತಿನ ಸುಖದುಃಖಗಳಲ್ಲಿ ಭಾಗಿಯಾಗುತ್ತಾನೆ. ದೇವನು ಪ್ರತಿಯೊಂದು ಜೀವಿಗೂ ತನ್ನಲ್ಲಿ ಆಶ್ರಯವನ್ನು ಕೊಡುತ್ತಾನೆ. ಅಂತೆಯೇ ದೇವನಲ್ಲಿ ಜೀವನು ಹುಟ್ಟು ಸಾವುಗಳ ಚಕ್ರಸುಳಿಯಿಂದ ಬಿಡುಗಡೆ ಪಡೆದು ಸಾಮರಸ್ಯವನ್ನು ಪಡೆಯುತ್ತಾನೆ. ಸೃಷ್ಟಿಯ ಸಮಸ್ತ ಚೇತನಗಳ ಆಗುಹೋಗುಗಳಲ್ಲಿ ಆದಿಶಿವನು ಮಾತೆಯಂತೆ ವಾತ್ಸಲ್ಯಭರಿತನಾಗಿರುತ್ತಾನೆ.

ತಂದೆ ನೀನು ತಾಯಿ ನೀನು, ಬಂಧು ನೀನು ಬಳಗ ನೀನು
ನೀನಲ್ಲದೆ ಮತ್ತಾರೂ ಇಲ್ಲವಯ್ಯ
ಕೂಡಲಸಂಗಮದೇವಾ

ಹಾಲಲ್ಲದ್ದು ನೀರಲ್ಲದ್ದು
ಎನ್ನ ಆಪತ್ತು ಸುಖದುಃಖ ನೀನೆ ಕಂಡಯ್ಯಾ ;
ಮತ್ತಾರೂ ಇಲ್ಲ, ಹರಹರಾ ನೀನೆ ಕಂಡಯ್ಯಾ
ಎನ್ನ ಮಾತಾಪಿತನು ನೀನೆ ಕಂಡಯ್ಯಾ,
ಕೂಡಲಸಂಗಮದೇವಾ
ಹಾವು, ಕಿಚ್ಚು ಮುಟ್ಟಿಹ ಶಿಶುವೆಂದು
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ ಇಪ್ಪೆಯೆನ್ನೊಡನೆ
ಕೂಡಲಸಂಗಮದೇವ ಕಾಯ್ದುಕೊಂಡಿಪ್ಪನಾಗಿ
ಎನ್ನ ಜನ್ಮವ ತೊಡೆದ ನೀ ಧರ್ಮಿ,
ಎನ್ನ ಜನ್ಮವನತಿಗಳೆದ ಧರ್ಮಿ,
ಎನ್ನ ಭವಬಂಧನವ ನಿಃಕರಿಸಿದೆಯಾಗಿ,
ಶಿವನೆ ಗತಿಮತಿಯೆಂದು ನಂಬಿದೆನಯ್ಯಾ
ಎನ್ನ ಅಷ್ಟಮದಂಗಳ ಸುಟ್ಟುರುಹಿದೆಯಾಗಿ,
ಕಟುಗ್ರದಿಂದ ನಿಮ್ಮ ಶ್ರೀಚರಣವ ಕಂಡೆ,
ಸೃಷ್ಟಿಪ್ರತಿಪಾಲಕಾ, ನಿಮ್ಮ ನಂಬಿದೆ, ಕರುಣಿಸು,
ಕೂಡಲಸಂಗಮದೇವಾ.

ಆದುದರಿಂದ ಎಲ್ಲ ಜೀವಿಗಳ ಚಲನವಲನಗಳು ಅಸಂಬದ್ಧವಾಗಿರದೆ ದೈವಿಕಪ್ರೇರಣೆಯಿಂದ ಕೂಡಿ ಸುಸಂಬದ್ಧವಾಗಿರುತ್ತದೆ. ಸೃಷ್ಟಿಯ ಚಲನವಲನಗಳು ದೈವಿಕಪ್ರೇರಣೆಯಿಂದ ಕೂಡಿದ್ದರೂ ದೇವನು ಸ್ವೇಚ್ಛಾಚಾರಿಯಲ್ಲ. ಅಂದರೆ ದೇವನು ಸರ್ವಶಕ್ತನಾಗಿದ್ದರೂ ಪ್ರತಿಯೊಂದು ಜೀವಿಗಳ ಇರುವಿಕೆಯಲ್ಲಿ ಅವುಗಳ ಸ್ವಾತಂತ್ರ್ಯಕ್ಕೆ ಸೀಮೆಯನ್ನು ಕಲ್ಪಿಸುವನೇ ವಿನಾ ಅವುಗಳ ಸ್ವಾತಂತ್ರ್ಯವನ್ನು ಅಪಹರಿಸುವುದಿಲ್ಲ.

ದೇವನು ಕಾರ್ಯಕಾರಣನಿಮಿತ್ತನು. ನಿಷ್ಕಲಸ್ವರೂಪದಲ್ಲಿ ದೇವನು ಕಾರಣನಾಗಿಯೂ, ಸಕಲಸ್ವರೂಪದಲ್ಲಿ ಕಾರ್ಯನಾಗಿಯೂ ಪ್ರವರ್ತಿಸುತ್ತಾನೆ. ಅನಾದಿಸ್ವರೂಪದಲ್ಲಿ ದೇವನು ವಿಶ್ವಸೃಷ್ಟಿಗೆ ಕಾರಣನಾದರೆ ತನ್ನ ಆದಿಸ್ವರೂಪದಲ್ಲಿ ಸಮಷ್ಟಿಸ್ವರೂಪನಾಗಿದ್ದಾನೆ. ಆದ್ದರಿಂದ ಆದಿಶಿವನು ಅನಾದಿಶಿವನ ಕಾಲಿಕ ಮೂರ್ತಸ್ವರೂಪ, ಈ ಕಾಲಿಕ ಮೂರ್ತಸ್ವರೂಪಕ್ಕೆ ಅನಾದಿಶಿವನಲ್ಲಿ ಅಂತರ್ಗತವಾದ ವಿಮರ್ಶಾಶಕ್ತಿಯೇ ಕಾರಣ. ಪರಶಿವನು ಅಗಾಧವಾದ ಪರಮಶಕ್ತಿಯ ಆಶ್ರಯಸ್ಥಾನವಾಗಿದ್ದಾನೆ. ಪರಶಿವನು ಏಕತ್ವ ತತ್ವದ ಪ್ರಾತಿನಿಧಿಕಸ್ವರೂಪನಾದರೆ ಪರಾಶಕ್ತಿಯು ಅನೇಕತ್ವ ತತ್ತ್ವದ ಪ್ರಾತಿನಿಧಿಕ ಸ್ವರೂಪ. ಇವೆರಡೂ ಅಪಕರ್ಷಣದಲ್ಲಿ ಅಪರಿಪೂರ್ಣ, ಪರಶಿವನ ಹಾಗೂ ಪರಶಕ್ತಿಗಳು ಆದಿಲಿಂಗ(ದೇವ)ದಲ್ಲಿ ಪೂರಕ ಪೋಷಕಗಳಾಗಿ ಪೂರ್ಣತೆಯನ್ನು ಪಡೆಯುತ್ತವೆ. ಆದುದರಿಂದ ಆದಿಲಿಂಗವು ಪರಶಿವ ಹಾಗೂ ಪರಶಕ್ತಿಗಳ ಸಂಪುಟವಾಗಿರುತ್ತದೆ. ಆದಿಲಿಂಗವು ಏಕತ್ವ-ಅನೇಕತ್ವ, ನಿತ್ಯತ್ವ-ಅನಿತ್ಯತ್ವ, ಕಾರಣ-ಕಾರ್ಯ, ಸಕಲ-ನಿಷ್ಕಲ ತತ್ತ್ವಗಳ ಸಂಕೀರ್ಣತತ್ತ್ವ. ಮೇಲಾಗಿ ದೇವನು ಸೃಷ್ಟಿಯ ಸಮಸ್ತ ಚೇತನಗಳ ಲಯ ಹಾಗೂ ಗಮನ ಸ್ಥಾನವಾಗಿದ್ದಾನೆ. ಆದುದರಿಂದ ಈ ದೇವನಾಚ್ಚೆ ಏನೂ ಇಲ್ಲ ಎಲ್ಲವೂ ನಿಶ್ಶಬ್ದ.

ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದೆ ಬಿರುದ ಜಗವೆಲ್ಲರಿಯಲು
ಮಹದೇವ, ಮಹದೇವ
ಇಲ್ಲಿಂದ ಮುಂದೆ ಶಬ್ದವಿಲ್ಲ
ಪಶುಪತಿ ಜಗಕ್ಕೇಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ

# ಲಿಂಗ ಸಕೀಲಗಳು

**ಶ್ರೀ ಮುರಿಗೆಪ್ಪ ವೀರಪ್ಪ ಎಂ. ಹಂಸಭಾವಿ**

ವೀರಶೈವಧರ್ಮತತ್ತ್ವವಿಚಾರ ಗೂಢವಾಗಿದೆ, ಗಾಢವಾಗಿದೆ, ತಿಳಿಯ ಹೊರಟವರಿಗೆ ಅಷ್ಟೇ ಸರಳವಾಗಿದೆ, ಸಲೀಲವಾಗಿದೆ. ಷಟ್‌ಸ್ಥಲ ತತ್ತ್ವದ ರಹಸ್ಯವು ಲಿಂಗಾಂಗಗಳ ಪ್ರಭೆಯನ್ನು ಹೊಂದಿಸುವವರಲ್ಲಿಯೇ ಅಡಕವಾಗಿದೆ. ಲಿಂಗಾಂಗಗಳನ್ನು ಹೊಂದಿಸುವ ಶೀಲಗಳೇ ಲಿಂಗಸಕೀಲಗಳು. ಮನುಷ್ಯನು ಯಾವ ವೃತ್ತಿಯಲ್ಲಿಯೇ ಇರಲಿ, ಅವನ ವೃತ್ತಿಗೆ, ಇರುವಿಕೆಗೆ ಅನುಸರಿಸಿ ಲಿಂಗಾಂಗಸಾಮರಸ್ಯವನ್ನು ಬೋಧಿಸುವುದು ಶ್ರೀ ಪ್ರಭುದೇವರ ಅಥವಾ ಷಟ್‌ಸ್ಥಲದ ವೈಶಿಷ್ಟ್ಯ. ವೀರಶೈವಧರ್ಮತತ್ತ್ವಗಳು ಸಮಸಮುಚ್ಚಯಮಾರ್ಗವನ್ನು—ಕ್ರಿಯಾಜ್ಞಾನಗಳಿಂದೊಡಗೂಡಿದ ಸುಲಭಮಾರ್ಗವನ್ನು ಬೋಧಿಸುತ್ತವೆ.

ವೀರಶೈವನು ತನು, ಮನ, ಭಾವಗಳಲ್ಲಿ (ಕರಣೇಂದ್ರಿಯ, ಪ್ರಾಣಗಳು, ಧಾತುಗಳಾದಿಯಲ್ಲಿ) ಲಿಂಗಸಂಬಂಧವನ್ನು ಮಾಡಿಕೊಂಡು ತಾನು ಮಾಡುವ ಕ್ರಿಯೆಗಳೆಲ್ಲವೂ ಲಿಂಗಕ್ರಿಯೆ ಭೋಗಿಸುವ ಭೋಗವೆಲ್ಲವೂ ಲಿಂಗಭೋಗವನ್ನಾಗಿಸಬೇಕು. ಲೋಕಾನುಭವವನ್ನೇ ಶಿವಾನುಭವವಾಗಿ ಮಾಡಿಕೊಂಡು ಶಿವಪ್ರಪಂಚವುಳ್ಳವನಾಗಬೇಕು. ಲೀಲೆಯಾದೊಡೆ ಉಮಾಪತಿ ಲೀಲೆ ಮುಗಿದೊಡೆ ಸ್ವಯಂಭುವಾಗಿರುವ ದಿವ್ಯಮಾರ್ಗವಿದು. ಕೀಲು ಎರಡು ಬಿಡಿ ಬಿಡಿ ಭಾಗಗಳನ್ನು ಜೋಡಿಸುತ್ತದೆ, ಸಂಬಂಧಪಡಿಸುತ್ತದೆ. ಸಕೀಲ ಅಂದರೆ ಸಂಬಂಧಪಡಿಸುವುದು ಮತ್ತು ಸಮರಸಗೊಳಿಸುವುದು. ಲಿಂಗಸಕೀಲು ಲಿಂಗಅಂಗಗಳನ್ನು ಸಂಬಂಧಪಡಿಸಿ ಸಮರಸಗೊಳಿಸುತ್ತದೆ.

## ವೀರಶೈವನ ಸ್ಥಿತಿ (ನಿಲವು)

(೧) ವೀರಶೈವನು ತ್ಯಾಗಿ, ಭೋಗಿ, ಯೋಗಿಯಾಗಿ ಜೀವಿಸಬೇಕು. (೨) ಅವನು ಮಂತ್ರಶರೀರಿಯು. (೩) ಸರ್ವಾಂಗಲಿಂಗಿಯು. (೪) ಪ್ರಸಾದಕಾಯನು. (೫) ಅತಿವರ್ಣಿಯು (ವರ್ಣಾತೀತನು). (೬) ಅಪ್ರಾಕೃತನು.

ಭೂತಪಂಚಂ ಪಂಚ ಭೂತತವೆ ಕೂಡಲ
ದ್ಭೂತಮಯವಾದ—ಭೂತಳಕೆ ಕರ್ತ ಭೂ
ನಾಥ ಶ್ರೀ ಗುರುವೆ, ಕೃಪೆಯಾಗು ॥

ಅಂದರೆ ದೇಹದಲ್ಲಿನ ಪೃಥ್ವಿ, ಅಪ್, ತೇಜ, ವಾಯು, ಆಕಾಶವೆಂಬ ಐದು ಭೂತಂಗಳಿಗೆ (ಭೂತ ಪಂಚಕ) ಆಧ್ಯಾತ್ಮಿಕ ಪಂಚಭೂತವು: ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗವೆಂಬ ಶಿವಭಾವನೆಯ ಪಂಚಭೂತಗಳು ಅಥವಾ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚಬ್ರಹ್ಮ ಮೂರ್ತಿಗಳು ಕೂಡಿದುದರಿಂದ ಅದ್ಭುತವಾದ ಶಿವರೂಪದ ದೇಹವಾಯಿತು. ಅದಕ್ಕೆ ಕರ್ತನಾದವನು ಗುರುವು. ಗುರುವು ತನುವನ್ನು ಲಿಂಗಮಯವನ್ನಾಗಿಸಿದ್ದಾನೆಂದು ಶ್ರೀ ಮೈಲಾರ ಬಸವಲಿಂಗ ಶರಣರು ತಮ್ಮ ಅನುಭವ ವಾಣಿಯಿಂದ ವ್ಯಕ್ತಗೊಳಿಸಿದ್ದಾರೆ. (ಗುರುವು ಅಂದರೆ ಇಲ್ಲಿ ವಿರಕ್ತರಾದ ಶ್ರೀ ನಿ. ಪ್ರ. ಚನ್ನವೀರ ಮಹಾಶಿವ ಯೋಗಿಗಳು.)

## ಸಕೀಲಗಳಲ್ಲಿ ವಿಧಗಳು

(೧) ಷಡ್ವಿಧ ಸಕೀಲಗಳು, (೨) ಅಷ್ಟವಿಧ ಸಕೀಲಗಳು, (೩) ಮುವ್ವತ್ತಾರು ವಿಧ ಸಕೀಲಗಳು, (೪) ಎರಡು ನೂರಹದಿನಾರು, (೨೧೬) ವಿಧ ಸಕೀಲಗಳು. (೫) ೧೦೮ ವಿಧ ಸಕೀಲಗಳು, (೬) ನೂರಾ ಒಂದು ಸ್ಥಲಗಳು.

## ಮೂರು ಲಿಂಗಗಳ ಸಕೀಲ

ಪ್ರತಿಯೊಬ್ಬ ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣವೆಂದು ಮೂರು ತನುಗಳು. ಜಾಗ್ರದವಸ್ಥೆಯಲ್ಲಿ ವ್ಯವಹರಿಸುವ ತನುವೇ ಸ್ಥೂಲತನು, ಸ್ಥೂಲತನುವಿನಲ್ಲಿ ೨೫ ತತ್ತ್ವಗಳಿರುತ್ತವೆ. ಕನಸಿನ ಅಥವಾ ಮನಸ್ಸಿನ ವ್ಯವಹಾರವು ಸೂಕ್ಷ್ಮತನುವಿನ ವ್ಯವಹಾರವು. ಈ ಸೂಕ್ಷ್ಮಶರೀರದಲ್ಲಿ ಹದಿನೇಳು ತತ್ತ್ವಗಳಿರುತ್ತವೆ. ಭಾವವು ಅಂದರೆ ಗಾಢನಿದ್ರೆಯಲ್ಲಿ ಆನಂದವನ್ನನುಭವಿಸುತ್ತಿರುವ ತನುವು ಕಾರಣಶರೀರವು. ಈ ಶರೀರದಲ್ಲಿ ಮೂರು ತತ್ತ್ವಗಳಿರುತ್ತವೆ.

"ಭಾವ ಮನಕ್ಕೆ ಲಿಂಗವ ಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುದೇ ?" "ಎರಡಂಗ ಭಕ್ತರಾಗಿ ಒಂದಂಗ ಭವಿಯಾಗಿಪ್ಪ ಭ್ರಾಂತರ ಮುಖವ ನೋಡಲಾಗದು. ತನು, ಮನ, ಭಾವದಲ್ಲಿ ಲಿಂಗವ ಧರಿಸಿ ಲಿಂಗತ್ರಯಕ್ಕೆ ಅಂಗತ್ರಯಕ್ಕೆ ಅಗಲಿಕೆಯಿಲ್ಲದ ಅಚಲನಾಗಿರ್ದನಯ್ಯ ಮಹಾಲಿಂಗ ಗುರು. ಶಿವಸಿದ್ಧೇಶ್ವರ ಪ್ರಭುವೇ" ಈ ಮೊದಲಾದ ಅನುಭವದ ವಚನಗಳು ೩ ತನುಗಳಿಗೆ ಮೂರು ಲಿಂಗಗಳ ಅವಶ್ಯಕತೆಯನ್ನು ತಿಳಿಸುತ್ತವೆ. ಲಿಂಗಸಂಬಂಧವಿಲ್ಲದ ತನು ಭವಿಯಾಗುತ್ತದೆಂಬುದನ್ನು ಎಚ್ಚರಿಸುತ್ತವೆ.

ಸ್ಥೂಲ ತನುವಿನಲ್ಲಿ ಸತ್ಕ್ರಿಯೆಗಳು ನೆಲೆಗೊಂಡಿದ್ದರೆ ಅಲ್ಲಿ ಇಷ್ಟಲಿಂಗಸಂಬಂಧವಿದೆಯೆಂದು ತಿಳಿಯಬೇಕು. ಪರಹಿತಕಾರ್ಯಗಳೂ ಲಿಂಗಸಂಬಂಧವಾದ ಕ್ರಿಯೆಗಳೂ ಸತ್ಕ್ರಿಯೆಗಳು.

ಮನದಲ್ಲಿ ಸದ್ವಿಚಾರಗಳು, ಲಿಂಗಧ್ಯಾನ, ಲಿಂಗಚಿಂತೆಗಳು ಗಟ್ಟಿಗೊಂಡಿದ್ದರೆ ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗ ಸಂಬಂಧವಿದ್ದಂತೆ.

ಭಾವದಲ್ಲಿ ಶಿವಭಾವನೆಗಳೂ ಸದಾ ಆನಂದವೂ ತುಂಬಿದ್ದರೆ ಕಾರಣಶರೀರದಲ್ಲಿ ಭಾವಲಿಂಗವಿದ್ದಂತೆ. ಆಗುಹೋಗುಗಳೆಲ್ಲವೂ ಈಶ್ವರೇಚ್ಛೆ. ಸುಖದುಃಖಗಳು ಒದಗಿದಾಗ ಹಿಗ್ಗದೇ ಕುಗ್ಗದೇ ಅವೆಲ್ಲ ಪ್ರಸಾದವೆಂದು ಭಾವಿಸುವುದು ಹಾಗೂ ಲಿಂಗದೆಚ್ಚರದಲ್ಲಿರುವುದು ಭಾವಲಿಂಗಸಂಬಂಧ. ಈ ಮೂರು ಲಿಂಗಗಳ ಸಂಬಂಧದಿಂದ ತನು. ಮನ, ಭಾವಗಳು ಲಿಂಗಮಯವಾಗಿ ಉಳಿಯುವುದೇ ಈ ಮೂರು ಲಿಂಗಗಳ ಸಕೀಲಿನ ಪ್ರಯೋಜನ.

## ಷಡ್ವಿಧ ಲಿಂಗಸಕೀಲಗಳು

ನೋಡುವುದು, ನುಡಿಯುವುದು, ಮೂಸುವುದು, ರುಚಿ ನೋಡುವುದು, ಮುಟ್ಟುವುದು, ತೃಪ್ತಿಪಡುವುದು ಈ ಸ್ಥೂಲದೇಹದ ಎಲ್ಲ ಕೆಲಸಗಳು ಇಂದ್ರಿಯಗಳಿಂದ ನಡೆಯುತ್ತವೆ. "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ"ವೆಂದು ಶ್ರೀ ಅಕ್ಕಮಹಾದೇವಿಯವರು ಹೇಳಿರುವಂತೆ ಇಂದ್ರಿಯಗಳ (ಕರಣಗಳ) ಕ್ರಿಯೆಗಳಿಗೆ ಮನವೇ ಮೂಲಕಾರಣವು. ಮನವಿಲ್ಲದಿದ್ದರೆ ಇಂದ್ರಿಯಗಳು ಕೆಲಸ ಮಾಡಲಾರವು. ಅಲ್ಲದೆ ಭಾವದಿಂದ ಪ್ರೇರಣೆಯಾಗದ ಹೊರತು ಮನ ಮತ್ತು ಇಂದ್ರಿಯಗಳು ಕೆಲಸ ಮಾಡಲಾರವು. ಮೂರೂ ತನುಗಳು ಸ್ವತಂತ್ರವಲ್ಲ. ಅವು ಪರಸ್ಪರಾವಲಂಬಿಗಳಾಗಿ ಕಾರ್ಯಮಾಡುತ್ತವೆ.

ಕ್ರಿಯೆಗಳು ಸ್ಥೂಲ ಮತ್ತು ಸೂಕ್ಷ್ಮಶರೀರಗಳಿಂದ ಉಂಟಾಗುತ್ತವೆ. ಅವುಗಳ ಪರಿಣಾಮವು ಕಾರಣ ಶರೀರದಲ್ಲಿ ಒಡಮೂಡುತ್ತದೆ. ಕಾರಣಶರೀರವು ಈ ಅನುಭವಗಳನ್ನು ಕಾದಿಡುತ್ತದೆ. ಎಂದೋ ಕಲಿತಂತಹ ಶ್ಲೋಕಗಳನ್ನು ಎಂದೋ ನೋಡಿದಂತಹ ಪ್ರಸಂಗಗಳನ್ನು ಸ್ಮರಣೆಗೆ ತಂದುಕೊಂಡು ಇದೇ ಈಗ ಕಲಿತಂತೆ ಹಾಗೂ ನೋಡಿದಂತೆ ಮುಖಪಾಠ ಹೇಳಿಬಿಡುತ್ತೇವೆ. ಒಳ್ಳೆಯ ವಿಷಯಗಳ ಸಂಗ್ರಹವಿದ್ದರೆ ಒಳ್ಳೆಯ ಕೆಲಸಗಳಾಗುತ್ತವೆ. ಹಾಗಲ್ಲದೆ ದುಷ್ಟಸಂಗ್ರಹವಿದ್ದರೆ ಆ ಮನುಷ್ಯನಿಂದ ದುಷ್ಟ ಕೆಲಸಗಳೇ ಸಂಭವಿಸುತ್ತವೆ. ಒಳ್ಳೆಯ ಸಂಗ್ರಹ ಮಾಡುವ ರೀತಿಯನ್ನು ಷಟ್‌ಸ್ಥಲಶಾಸ್ತ್ರವು ತಿಳಿಸುತ್ತದೆ. ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ಸಂಬಂಧಿಸುವುದರಿಂದ ಭಾವದಲ್ಲಿ ಒಳ್ಳೆಯ ಸಂಗ್ರಹವಾಗುತ್ತದೆ. ಈ ರೀತಿ ಮೂರೂ ಶರೀರಗಳ ವ್ಯಾಪಾರವು ಸರಾಗವಾಗಿ ನಡೆಯುತ್ತದೆ.

ಇಂದ್ರಿಯಗಳಿಂದಾಗುವ ಕ್ರಿಯೆಗಳು, ಇಂದ್ರಿಯಗಳ ಮುಖವಾಗಿ ಬರುವ ಭೋಗವೆಲ್ಲವೂ ಲಿಂಗಪ್ರಸಾದವಾಗಿ ಪರಿಣಮಿಸಬೇಕಾದರೆ ಇಂದ್ರಿಯಗಳಲ್ಲಿ ಲಿಂಗಸಂಬಂಧಪಡಿಸುವುದು ಅವಶ್ಯವು. ಒಂದು ಲಿಂಗವೇ ಮೂರು ತನುಗಳನ್ನು ಕುರಿತು ಇಷ್ಟ, ಪ್ರಾಣ, ಭಾವಲಿಂಗವೆಂದು ಮೂರು ರೂಪಾದಂತೆ, ಆ ಮೂರು ಲಿಂಗಗಳು ಆರು ಇಂದ್ರಿಯಗಳನ್ನು ಕುರಿತು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗವೆಂದು ಆರು ಲಿಂಗಗಳಾಗಿವೆ. ಈ ಆರು ಲಿಂಗಗಳು ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳನ್ನು ಕೆಳಗಿನಂತೆ ಸಂಬಂಧಿಸಿವೆ :

| ಕರ್ಮೇಂದ್ರಿಯಗಳು | ಜ್ಞಾನೇಂದ್ರಿಯಗಳು | ಲಿಂಗಗಳು |
|---|---|---|
| ೧. ಗುದ | ನಾಸಿಕಾ | ಆಚಾರಲಿಂಗ |
| ೨. ಗುಹ್ಯ | ಜಿಹ್ವಾ | ಗುರುಲಿಂಗ |
| ೩. ಪಾದ | ನೇತ್ರ | ಶಿವಲಿಂಗ |
| ೪. ಪಾಣಿ (ಹಸ್ತ) | ತ್ವಚ | ಜಂಗಮಲಿಂಗ |
| ೫. ವಾಕ್ | ಕರ್ಣ (ಶ್ರೋತ್ರ) | ಪ್ರಸಾದಲಿಂಗ |
| ೬. ಹೃದಯ | ಹೃದಯ | ಮಹಾಲಿಂಗ |

ಈ ರೀತಿಯಾಗಿ ಷಡ್ವಿಧ ಲಿಂಗಸಕೀಲಿನಿಂದ ವೀರಶೈವನ ಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳಾಗುತ್ತವೆ. ಭೋಗವೆಲ್ಲವೂ ಲಿಂಗಭೋಗವಾಗುತ್ತದೆ: ಮಂಗಲಮಯಪಾದ ಇವುಗಳ ಪರಿಣಾಮವು ಭಾವದಲ್ಲಿ ಸಂಗ್ರಹವಾಗುತ್ತದೆ. ಇಂದ್ರಿಯಗಳೆಲ್ಲವೂ ಲಿಂಗಸ್ವರೂಪವಾಗುತ್ತವೆ. ಈ ರೀತಿ ಇಂದ್ರಿಯಗಳ ಮುಖವಾಗಿ ಲಿಂಗಗಳಿಗೆ ಅರ್ಪಿಸುವ ಅರ್ಪಣಾಕ್ರಮವು ಜ್ಞಾನಾರ್ಪಣವು.

## ಜ್ಞಾನಾರ್ಪಣವು

ವೀರಶೈವನು ನಿತ್ಯಲಿಂಗಾರ್ಚನೆಯ ನಂತರ ಲಿಂಗಾರ್ಪಿತವಾದದ್ದನ್ನು ಪ್ರಸಾದವೆಂದು ಸೇವಿಸುತ್ತಾನೆ. ಆದರೆ ಸರ್ವತ್ರ, ಸದಾ ಅನಿರೀಕ್ಷಿತವಾಗಿ, ಅನಿಚ್ಛಾಪೂರ್ವಕವಾಗಿ ಇಂದ್ರಿಯಗಳ ಮುಖವಾಗಿ ಬರುವ ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿಗಳನ್ನು ಆಚಾರಾದಿಷಡ್ಲಿಂಗಗಳಿಗೆ ಅರ್ಪಿಸುತ್ತ ಪ್ರಸಾದಭೋಗಿಯಾಗುತ್ತಾನೆ: ಈ ಅರ್ಪಣಾ ಕ್ರಿಯೆಗೆ ಜ್ಞಾನಾರ್ಪಣವೆನ್ನುತ್ತಾರೆ. ಇಂದ್ರಿಯಗಳು ಕ್ರಿಯಾಮುಖವೂ ಹೌದು, ಜ್ಞಾನಮುಖವೂ ಹೌದು.

ಯಾವುದಾದರೂ ವಸ್ತುವನ್ನು ಕಣ್ಣಿನಿಂದ ನೋಡಿದರೆ ಆ ಕ್ರಿಯೆ ಶಿವಲಿಂಗದ ಕ್ರಿಯೆ. ನೋಡಿ ಆನಂದ ಪಡುವುದು ಶಿವಲಿಂಗದ ತೃಪ್ತಿ. ಪತ್ರಪುಷ್ಪವನ್ನೆತ್ತುವಾಗ, ಲೇಖನ ಮೊದಲಾದ ಕೈಕೆಲಸ ಮಾಡುವಾಗ ಆ ಕ್ರಿಯೆಯು ಜಂಗಮಲಿಂಗದ ಕ್ರಿಯೆ. ಕೈ ಕರ್ಮೇಂದ್ರಿಯಗಳಲ್ಲಿ ಜಂಗಮಲಿಂಗ, ಶೀತ, ಉಷ್ಣ, ಮೃದು, ಕಠಿಣ-ಸ್ಪರ್ಶಗಳನ್ನನು ಭವಿಸಿದಾಗ ಅದು ಜಂಗಮಲಿಂಗದ ತೃಪ್ತಿ, ತ್ವಕ್ಕು (ಮೈಮೇಲಿನ ಚರ್ಮ) ಜ್ಞಾನೇಂದ್ರಿಯಗಳಲ್ಲಿ ಜಂಗಮಲಿಂಗ.

ಮಾತನಾಡುವಾಗ ವಾಕ್ಕಿನ ಆ ಕ್ರಿಯೆ ಪ್ರಸಾದಲಿಂಗದ ಕ್ರಿಯೆ. ಕಿವಿಯಿಂದ ಕೇಳುವುದು ಪ್ರಸಾದಲಿಂಗದ ಭೋಗ, ಕರ್ಮೇಂದ್ರಿಯಗಳಲ್ಲಿ ವಾಕ್ಕು ಪ್ರಸಾದಲಿಂಗ ಇದು ಶಬ್ದವನ್ನು ಹುಟ್ಟಿಸುತ್ತದೆ. ಜ್ಞಾನೇಂದ್ರಿಯಗಳಲ್ಲಿ ಕರ್ಣ (ಕಿವಿ) ಪ್ರಸಾದಲಿಂಗ. ಇದು ಶಬ್ದವನ್ನು ಸ್ವೀಕರಿಸುತ್ತದೆ.

ನಾವು ಎಲ್ಲಿಯೇ ಇರಲಿ, ಹೂವು ಹಣ್ಣು ಮೊದಲಾದವುಗಳ ವಾಸನೆಯು ಮೂಗಿಗೆ ಬಂದರೆ ಅದು ಆಚಾರ ಲಿಂಗಕ್ಕೆ ತೃಪ್ತಿಯು, ಮೂಸಿನೋಡುವುದು ಆಚಾರಲಿಂಗದ ಕ್ರಿಯೆ.

ಲಿಂಗಾಂಗಿಗಳು ನಾವು ಮೂಸಿದೆವು, ನೋಡಿದೆವು, ರುಚಿಸಿದೆವು, ಮುಟ್ಟಿದೆವು, ಕೇಳಿದೆವು, ತೃಪ್ತಿಪಟ್ಟೆವು ಎಂದು ಜೀವಭಾವದಿಂದ ವರ್ತಿಸುವುದಿಲ್ಲ. ಆದರೆ ಇಂದ್ರಿಯಗಳಲ್ಲಿ ಲಿಂಗಸಂಬಂಧಮಾಡಿಕೊಂಡು ಇಂದ್ರಿಯಗಳ ಕ್ರಿಯೆಗಳನ್ನೆಲ್ಲಾ ಲಿಂಗಕ್ರಿಯೆಗಳನ್ನಾಗಿ, ಭೋಗವನ್ನೆಲ್ಲಾ ಲಿಂಗಭೋಗವನ್ನಾಗಿಸಿಕೊಂಡು ವರ್ತಿಸುತ್ತಾರೆ. ಇವರ ರೀತಿಯು ತನು, ಮನ ಭಾವ ಶುದ್ಧಿಯಾದವರಿಗೆಲ್ಲ ಸಾಧಿಸಲು ಯೋಗ್ಯವಾದದ್ದು. ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ನೆಲೆಗೊಂಡವರಿಗೆ ಸಾಧ್ಯವಾದದ್ದು. ಅನ್ಯರಿಗೆ ಸಾಧ್ಯವಿಲ್ಲ.

## ೩೬ ವಿಧ ಸಕೀಲಗಳು (ಕರಣಾರ್ಪಣ)

ಆಚಾರ ಮೊದಲಾದ ಆರು ಲಿಂಗಗಳಿಗೆ ಗಂಧ, ರಸ, ರೂಪ, ಸ್ಪರ್ಶ, ಶಬ್ದ, ಪರಿಣಾಮ (ತೃಪ್ತಿ)ಗಳೆಂಬ ವಿಷಯಗಳನ್ನು ಅರ್ಪಿಸಿ ಆ ಪ್ರಸಾದವನ್ನು ಸ್ವೀಕರಿಸುವ ಕ್ರಮವು ಹಿಂದೆ ಷಡ್ವಿಧಸಕೀಲದಲ್ಲಿ ಹೇಳಿದೆ. ಆದರೆ ಗಂಧಾದಿ ಪ್ರತಿಯೊಂದು ವಿಷಯದಲ್ಲಿ ಸ್ವಾಭಾವಿಕವಾಗಿ ಆರಾರು ಭಾಗಗಳಿರುತ್ತವೆ. ನಾವು ಷಡ್ರಸಾನ್ನವನ್ನು ಭೋಜನ ಮಾಡಿದೆವೆಂದು ಲೌಕಿಕರು ಸ್ವಾಭಾವಿಕವಾಗಿ ಹೇಳುತ್ತಾರೆ. ರಸದಲ್ಲಿ ಮಧುರ, ಒಗರು, ಕಾರ, ಹುಳಿ, ಕಹಿ, ಉಪ್ಪು ಎಂದು ಆರು ವಿಧಗಳಿರುತ್ತವೆ. ಹೀಗೆಯೇ ಪ್ರತಿಯೊಂದು ವಿಷಯದಲ್ಲಿ ಆರು ಆರು ಭಾಗಗಳಿರುತ್ತವೆ. ಈ ಭಾಗಗಳ ಅರ್ಪಿತಕ್ಕೆ ಆಚಾರಾದಿ ಪ್ರತಿಯೊಂದು ಲಿಂಗವೂ ಆರಾರು ಭಾಗಗಳಾಗಿರುತ್ತದೆ. ಲಿಂಗಗಳಿಗೆ ಪದಾರ್ಥ

ಗಳನ್ನರ್ಪಿಸುವ ಭಕ್ತನು ಆರು ರೂಪಗಳನ್ನು ಹೊಂದಲೇಬೇಕು. ಆದ್ದರಿಂದ ಭಕ್ತಾದಿ ಆರು ಅಂಗಸ್ಥಲಗಳಲ್ಲಿಯೂ ಆರಾರು ಭಾಗಗಳಾಗಿರುತ್ತವೆ. ಹೀಗೆ ಪ್ರತಿಯೊಂದು ಲಿಂಗದಲ್ಲಿ ಆರು ಭಾಗಗಳಾಗಿ ಆರು ಲಿಂಗಗಳು ೬ × ೬ = ೩೬ ಲಿಂಗಗಳಾಗಿರುತ್ತವೆ. ಅಂಗಸ್ಥಲಗಳೂ ಒಂದರಲ್ಲಿ ಆರಾರು ಭಾಗಗಳಾಗುತ್ತ ಆರು ಅಂಗಸ್ಥಲಗಳು ೬ × ೬ = ೩೬ ಅಂಗಸ್ಥಲಗಳಾಗಿರುತ್ತವೆ.

ಅಂಗ ಲಿಂಗಗಳು ಆರಾರು ವಿಭಾಗಗಳಾದಂತೆ ಶಕ್ತಿ, ಭಕ್ತಿ, ಹಸ್ತ, ಮುಖ, ಪದಾರ್ಥ, ಪ್ರಸಾದಗಳೂ ಆರಾರು ಭಾಗಗಳಾಗಿ ೩೬ ವಿಭಾಗಗಳಾಗಿರುತ್ತವೆ.

ಯಾವುದೊಂದು ಸ್ಥಲವನ್ನು ಆಶ್ರಯಿಸಿದರೂ ಷಟ್‌ಸ್ಥಲಾಚರಣೆಯನ್ನು ಸಾಧಿಸಿ, ಆ ಸ್ಥಲದಲ್ಲಿಯೇ ಆರೂ ಸ್ಥಲಗಳ ಅನುಭವವನ್ನೂ ಲಿಂಗಾಂಗಸಾಮರಸ್ಯವನ್ನೂ ಪಡೆಯಬಹುದೆಂಬುದು ಶಿವಶರಣರ ಅನುಭವ ಹಾಗೂ ಸ್ಥಲವಿಚಾರದಲ್ಲಿ ಅವರು ಪ್ರಗತಿಮಾರ್ಗವನ್ನು ಕಂಡುದುದರ ಹೆಗ್ಗುರುತಾಗಿರುವುದು.

"ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಹೇಶ್ವರ, ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ, ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯವಾದೆವೆಂಬರು ನಿಮ್ಮ ಶರಣರು ತಾವೇನು ಮರುಜೀವಣಿಯ ಕೊಂಡಿದ್ದಾರೆಯೋ, ಅಮೃತಸೇವನೆಯ ಮಾಡಿದ್ದಾರೆಯೋ ಆವಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗದಿದ್ದರೆ ಆ ಭಕ್ತನ ಬಾಯಲ್ಲಿ ಹುಡಿಮಣ್ಣು ಹೊಯ್ದು ಹೋಗವೇ ನಮ್ಮ ಕೂಡಲಚೆನ್ನಸಂಗಮದೇವ!"

"ಪ್ರಥಮದಲ್ಲಿ ಭಕ್ತನಾದೆನೆಂಬರು, ದ್ವಿತೀಯದಲ್ಲಿ ಮಹೇಶ್ವರನಾದೆನೆಂಬರು, ತೃತೀಯದಲ್ಲಿ ಪ್ರಸಾದಿಯಾದೆನೆಂಬರು, ಚತುರ್ಥದಲ್ಲಿ ಪ್ರಾಣಲಿಂಗಿಯಾದೆನೆಂಬರು, ಐದನೆಯದರಲ್ಲಿ ಶರಣನಾದೆನೆಂಬರು, ಆರನೆಯದರಲ್ಲಿ ಐಕ್ಯನಾದೆನೆಂಬರು, ಆರು ಸ್ಥಲವ ಮೀರಿ ನಿರವಯವನೊಂದಿಹೆನೆಂಬರು; ಇದು ಖಂಡಿತ ಷಟ್‌ಸ್ಥಲಜ್ಞಾನನಿರ್ಣಯ ನಿರ್ಣಯವಲ್ಲ. ಆವಾವ ಸ್ಥಲವ ಅಂಗಂಗೊಂಡರು, ಆ ಸ್ಥಲದಲ್ಲಿ ಷಡ್ವಿಧಲಿಂಗದಲ್ಲಿ ಬೆರೆಸಿ ಬೇರಿಲ್ಲದಿರಬಲ್ಲಡೆ ಸದ್‌ಭಕ್ತನೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ" ಈ ಮೊದಲಾದ ಅನುಭಾವಿಗಳ ವಚನಗಳು, ಆವ ಸ್ಥಲದಲ್ಲಿ ನಿಂದರೂ ಅದೇ ಸ್ಥಲದಲ್ಲಿ ಷಟ್‌ಸ್ಥಲವಳವಡಬೇಕೆಂಬುದನ್ನು ದೃಢೀಕರಿಸುವುವು.

ಭಕ್ತನಾದವನು ಭಕ್ತಸ್ಥಲದ ಎಲ್ಲ ಲಕ್ಷಣಗಳನ್ನೂ ಆಚರಣೆಯನ್ನೂ ಮೈಗೂಡಿಸಿಕೊಂಡಿರಬೇಕು. ಅಲ್ಲದೆ ಇನ್ನುಳಿದ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳ ಆಚರಣೆಯೂ ಅನುಭವವೂ ಅವನಿಗೆ ಅಳವಟ್ಟಿರಬೇಕು. ಭಕ್ತನಿಗೆ ಲಿಂಗಾಂಗಸಾಮರಸ್ಯವು ಬೇಡವೇ? ಐಕ್ಯಸ್ಥಲದ ನಿತ್ಯಾನಂದ, ಸಹಜ ಸಮರಸಸ್ಥಿತಿಯು ಅವನಿಗೂ ಅತ್ಯಾವಶ್ಯಕವು.

ಐಕ್ಯನು ಷಟ್‌ಸ್ಥಲಾಚರಣೆಯ ಪರಾಕಾಷ್ಠಸ್ಥಿತಿಯನ್ನು ಸಾಧಿಸಿದ್ದರೂ, ಭಕ್ತಿಯು ಆ ಮಹಿಮನಿಗೆ ಅವಶ್ಯವು.

ಷಟ್‌ಸ್ಥಲಾಚರಣೆಯು ಕ್ರಮಸಮುಚ್ಚಯವಲ್ಲ. ಅದು ಸಮಸಮುಚ್ಚಯವೆಂಬುದು ಶಿವಶರಣರ ವಚನಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

## ಮಿಶ್ರಾರ್ಪಣ

ಮಿಶ್ರವೆಂದೊಡೆ ಪದಾರ್ಥ, ಅರ್ಪಣವೆಂದೊಡೆ ಲಿಂಗಾರ್ಪಣವು. ಆ ಲಿಂಗಾರ್ಪಣದ ಸಕೀಲಂಗಳನ್ನು ಹೇಳುವ ಶಾಸ್ತ್ರವು ಮಿಶ್ರಾರ್ಪಣವು. ಇದು ಅಷ್ಟಾವರಣ ಷಟ್‌ಸ್ಥಲಗಳನ್ನು ತಿಳಿದವರಿಗೆ ಮಾತ್ರ ಸಾಧ್ಯವು. ಷಡ್ವಿಧಾಂಗವನ್ನು ಷಡ್ವಿಧ ಲಿಂಗದಲ್ಲಿ ಒಡಗೂಡಿಸಿ, ಷಡ್ವಿಧಲಿಂಗಸಂಬಂಧವನ್ನು ಮಾಡಿಕೊಂಡು ಷಡ್ವಿಧಭಕ್ತಿವಿಡಿದು ಆಚರಿಸಿ ಪರಮಾತ್ಮನೊಡನೆ ಇರುವ ಸ್ಥಿತಿಯನ್ನುಂಟುಮಾಡಿಕೊಳ್ಳುವುದೇ ಮಿಶ್ರಾರ್ಪಣದ ಮುಖ್ಯ ಉದ್ದೇಶವು. ಇದರಲ್ಲಿ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳೆಂದು ಮೂರು ಭಾಗಗಳಿವೆ.

## ೨೧೬ ವಿಧ ಸಕೀಲಗಳು (ಭಾವಾರ್ಪಣ)

"ಮೂವತ್ತಾರು ಲಿಂಗಗಳೇ ವಿಭಾಗವಾಗಿ, ಷಡ್ವಿಧವಾಗಿ, ಒಂದೊಂದು ಆರಾರಾಗಿ, ವಿಶಾಲತರವನೈದಿ ಇನ್ನೂರ ಹದಿನಾರು ಲಿಂಗಗಳಾಗಿ ಭಾವಲಿಂಗದೊಡನೆ ಕೂಡಿದ ೨೧೬ ಲಿಂಗಗಳೇ ಅರ್ಪಣದಲ್ಲಿ ಆತ್ಮಸಂಬಂಧವಾದ ೨೧೬ ತೃಪ್ತಿಪದಾರ್ಥಗಳನ್ನೂ ೨೧೬ ತೆರದ ಭಕ್ತಿಸಕೀಲಂಗಳಿಂದ ಸಮರ್ಪಿಸಿಕೊಂಡಾಗ ಪರಿಣಾಮ (ತೃಪ್ತಿ) ಪ್ರಸಾದದೊಳಗೆ ಎಂಬುದು."

ಕರಣಾರ್ಪಣದಲ್ಲಿಯ ೩೬ ಭಾಗಗಳಲ್ಲಿ ಪ್ರತಿಯೊಂದರಲ್ಲಿ ಭಾವಲಿಂಗಸಂಬಂಧದಲ್ಲಿ ಆರು ಕ್ರಿಯೆಗಳಿರುತ್ತವೆ. ಅವು ಯಾವುವೆಂದರೆ :

೧. ವಿಷಯಗಳನ್ನು ಇಂದ್ರಿಯಗಳು ತಟ್ಟುವುದು (ಸೋಂಕುವುದು) ಅಥವಾ ತೃಪ್ತಿಪದಾರ್ಥಗಳು ಇಂದ್ರಿಯ ಗಳಿಗೆ ತಟ್ಟುವುದು. ಆಚಾರಲಿಂಗಕ್ಕೆ

೨. ತಟ್ಟಿದ್ದನ್ನು ತಿಳಿಯುವುದು ಗುರುಲಿಂಗಕ್ಕೆ

೩, ತಿಳಿದದ್ದನ್ನು ನಿಶ್ಚಯಿಸುವುದು ಶಿವಲಿಂಗಕ್ಕೆ

೪. ನಿಶ್ಚಯಿಸಿದ್ದನ್ನು ಅನುಭವಿಸುವುದು ಜಂಗಮಲಿಂಗಕ್ಕೆ

೫. ಅನುಭವದಿಂದ ಆನಂದಿಸುವುದು ಪ್ರಸಾದಲಿಂಗಕ್ಕೆ

೬. ಆನಂದದಿಂದ ತೃಪ್ತನಾಗುವುದು ಮಹಾಲಿಂಗಕ್ಕೆ ಅರ್ಪಿತವಾಗುತ್ತದೆ.

ಉದಾಹರಣೆ : ಕೋಗಿಲೆಯು ಆನಂದದಿಂದ ಧ್ವನಿಮಾಡುವಾಗ ಅನಿರೀಕ್ಷಿತವಾಗಿ ಆ ಧ್ವನಿಯು ನಮ್ಮ ಕಿವಿಗೆ ತಟ್ಟುವುದೇ ಆಚಾರಲಿಂಗಕ್ಕೆ ಅರ್ಪಿತ. ತಟ್ಟಿದ ಕೂಡಲೆ ಈ ಗಾನವು ಎಲ್ಲಿಂದ ಬಂತು ? ಯಾರು ಹಾಡಿದವರು ಎಂದು ಯೋಚಿಸಿ, ಇದು ಕೋಗಿಲೆಯ ಗಾನವೆಂದು ತಿಳಿಯುವುದು ಗುರುಲಿಂಗಕ್ಕೆ ಅರ್ಪಿತವು. ಇಂಥಲ್ಲಿಯೇ ಕೋಗಿಲೆಯು ಕುಳಿತಿದೆ, ನಾನು ಕೇಳಿದ ಧ್ವನಿಯು ಈ ಕೋಗಿಲೆಯದೇ ಇರಬೇಕೆಂದು ನಿಶ್ಚಯಿಸುವುದು ಶಿವಲಿಂಗಕ್ಕೆ ಅರ್ಪಿಸು ವುದು. ಕಿವಿಗೊಟ್ಟು ಕೇಳಿ ಅದನ್ನು ಅನುಭವಿಸುವುದು ಜಂಗಮಲಿಂಗಕ್ಕೆ ಅರ್ಪಿತವು. ಅನುಭವದಿಂದ ಆನಂದ ಉಂಟಾಗುವುದು ಪ್ರಸಾದಲಿಂಗಕ್ಕೆ ಅರ್ಪಿತವು. ಆನಂದದಿಂದ ತೃಪ್ತನಾಗುವುದು ಮಹಾಲಿಂಗಕ್ಕೆ ಅರ್ಪಿತವು. ಈ ಎಲ್ಲ ಕ್ರಿಯೆಗಳು ವಿಳಂಬವಿಲ್ಲದೆ ನಡೆಯುತ್ತವೆ. ಇವು ಆತ್ಮಸಂಬಂಧವಾದವುಗಳು. ಇದಕ್ಕೆ ಆಧಾರವಾಗಿ ಶಿವಶರಣರ ವಚನಗಳೂ ಇವೆ. ಲೇಖನ ದೀರ್ಘವಾಗುತ್ತದೆಂದು ಇಲ್ಲಿ ಕೊಟ್ಟಿಲ್ಲ.

ಷಟ್‌ಸ್ಥಲಗಳು ಸ್ಥೂಲಶರೀರಕ್ಕೆ ಸಂಬಂಧವುಳ್ಳವುಗಳು.

೩೬ ಸ್ಥಲಗಳು ಸೂಕ್ಷ್ಮಶರೀರಕ್ಕೆ ಸಂಬಂಧವುಳ್ಳವುಗಳು.

೨೧೬ ಸ್ಥಲಗಳು ಕಾರಣಶರೀರಕ್ಕೆ ಸಂಬಂಧವುಳ್ಳವುಗಳು.

ಕಾಯಾರ್ಪಣದಲ್ಲಿ ತನುಶುದ್ಧಿಯೂ
ಕರಣಾರ್ಪಣದಲ್ಲಿ ಕರಣಗಳ (ಇಂದ್ರಿಯಗಳ) ಶುದ್ಧಿಯೂ
ಭಾವಾರ್ಪಣದಲ್ಲಿ ಆತ್ಮನೂ ಆತ್ಮನ ಭಾವಗಳೂ ಶುದ್ಧವಾಗುತ್ತವೆ.

ಕಾಯಾರ್ಪಣದಲ್ಲಿ ಇಷ್ಟಲಿಂಗಕ್ಕೆ ಪ್ರಾಧಾನ್ಯತೆಯೂ ತನುಶುದ್ಧಿಯೂ, ಕರಣಾರ್ಪಣದಲ್ಲಿ ಪ್ರಾಣಲಿಂಗಕ್ಕೆ ಪ್ರಾಧಾನ್ಯ ತೆಯೂ, ಕರಣಶುದ್ಧಿಯೂ ಭಾವಾರ್ಪಣದಲ್ಲಿ ಭಾವಲಿಂಗಕ್ಕೆ ಪ್ರಾಧಾನ್ಯತೆಯೂ ಭಾವಶುದ್ಧಿಯೂ ಇರುತ್ತದೆ.

---

ನಡೆಯೊಳಗೆ ನುಡಿತುಂಬಿ
ನುಡಿಯೊಳಗೆ ನಡೆ ತುಂಬಿ
ನಡೆನುಡಿ ಎರಡನು ಪರಿಪೂರ್ಣ ತುಂಬಿ
ಲಿಂಗವ ಕೂಡ ಬಲ್ಲಾತನೇ
ಶರಣ ನೋಡಾ ಅಖಂಡೇಶ್ವರ

ಷಣ್ಮುಖ ಶಿವಯೋಗಿ

# (ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ) ಜೀವಾತ್ಮ

ಎಂ. ಸಿ. ಶಾಂತಮೂರ್ತಿ

ಮಾನವನು ವಿವೇಕಪ್ರಧಾನವಾದ ಜೀವಿಯಾಗಿದ್ದಾನೆ. ಆ ವಿವೇಚನಾಶಕ್ತಿಯಿಂದ ದೃಶ್ಯ ಮತ್ತು ಅದೃಶ್ಯ ಜಗತ್ತಿಗೆ ಸೇರಿದ ಅನೇಕ ತತ್ತ್ವಗಳನ್ನು ಅರಿಯಲು ಪ್ರಯತ್ನಿಸಿದ್ದಾನೆ. ಮುಖ್ಯವಾಗಿ ನಾನು ಯಾರು ? ಎಲ್ಲಿಂದ ಬಂದೆ ? ನನ್ನ ಕರ್ತವ್ಯವೇನು ? ಹಾಗೂ ಬದುಕಿನ ಗುರಿಯೇನು ? ಎಂಬಂತಹ ಅತ್ಯಂತ ಗಹನವಾದ ವಿಷಯಗಳೆಡೆಗೆ ಗಮನಹರಿಸಿದ್ದಾನೆ. ಹಾಗೂ ಈ ವಿಷಯಗಳನ್ನೇ ಮನನ ಮಾಡುತ್ತಾ ಸುಖದುಃಖಮಿಶ್ರಿತವಾದ, ಜನನಮರಣ ಗಳಿಂದ ಕೂಡಿದ ಈ ಜಗತ್ತಿಗಿಂತ ಮಹತ್ತರವಾದ ಯಾವುದೋ ಒಂದು ನೆಲೆಯಿರಬೇಕೆಂಬುದನ್ನು ಮನಗಂಡು ಆ ಶಾಶ್ವತವಾದ, ಪವಿತ್ರವಾದ ಹಾಗೂ ಮಹತ್ತರವಾದ ನೆಲೆಯನ್ನು ಹೊಂದಲು ಪ್ರತಿಯೊಬ್ಬ ಜೀವಿಯೂ ಬಯಸು ತ್ತಾನೆ—ಹಾಗೂ ಅದಕ್ಕಾಗಿ ಪ್ರಯತ್ನಿಸುತ್ತಾನೆ. ಈ ಹಿನ್ನೆಲೆಯಲ್ಲಿ ಅನೇಕ ಸಿದ್ಧಾಂತಗಳು ಹೊರಟಿವೆ. ಈ ಎಲ್ಲ ದಾರ್ಶನಿಕ ಸಿದ್ಧಾಂತಗಳೂ ಸಹ ಜೀವ-ಜಗತ್ತು-ಪರಮಾತ್ಮ ಇವುಗಳ ಸ್ವರೂಪವೇನು ? ಮತ್ತು ಈ ಮೂರು ತತ್ತ್ವಗಳಿಗೂ ಇರುವ ಸಂಬಂಧವೇನು ಎಂಬುದನ್ನು ಸಿದ್ಧಾಂತಪಡಿಸಲು ಪ್ರಯತ್ನಿಸಿ ಇದಮಿತ್ಥಂ ಎಂದು ನಿರ್ಣಯಿ ಸಿವೆ. ಆದರೆ ಈ ನಿರ್ಣಯವು ಪ್ರತಿಯೊಂದು ಸಿದ್ಧಾಂತದಲ್ಲಿಯೂ ಭಿನ್ನತೆಯಿಂದ ಕೂಡಿದ್ದು ತನ್ನದೇ ಆದ ವೈಶಿಷ್ಟ್ಯ ವನ್ನುಳಿಸಿಕೊಂಡಿದೆ.

ಶಕ್ತಿವಿಶಿಷ್ಟಾದ್ವೈತದರ್ಶನವು ಆಸ್ತಿಕದರ್ಶನಗಳಲ್ಲೊಂದಾಗಿದ್ದು ಐಹಿಕ ಮತ್ತು ಪಾರಲೌಕಿಕ ತತ್ತ್ವಗಳಾದ ಬ್ರಹ್ಮ-ಜೀವ-ಜಗತ್ತುಗಳ ವಿಶ್ಲೇಷಣೆಯಲ್ಲಿ ಈ ದರ್ಶನವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ ಮತ್ತು ಸರ್ವ ಶ್ರುತಿಗಳ ಸಮನ್ವಯವೂ ಇಲ್ಲಿ ಕಂಡುಬರುತ್ತದೆಂದು ಶ್ರೀಕರಭಾಷ್ಯದಲ್ಲಿನ—

> ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ ।
> ವೀರಶೈವಕಸಿದ್ಧಾಂತೇ ಸರ್ವಶ್ರುತಿ ಸಮನ್ವಯಃ ॥

ಎಂಬ ಶ್ಲೋಕವು ಈ ಮೇಲಿನ ಹೇಳಿಕೆಯನ್ನು ಪ್ರತಿಧ್ವನಿಸುತ್ತದೆ.

ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಜೀವಾತ್ಮನನ್ನು 'ಅಂಗಸ್ಥಲ'ವೆಂದೂ ಹೆಸರಿಸಲಾಗಿದೆ. ಜೀವನು ಶಿವನ ಅಂಶವೇ ಎಂಬುದಾಗಿ ಈ ಸಿದ್ಧಾಂತವು ಪ್ರತಿಪಾದಿಸುವುದರಿಂದ ಜೀವನಿಗೆ 'ಅಂಗ'ನೆಂದು ಕರೆದಿರುವುದು ಬಹು ಸಮಂಜಸವಾಗಿದೆ. 'ಸ್ಥಲ'ವೆಂದರೆ ಚೇತನಾಚೇತನಾತ್ಮಕಪ್ರಪಂಚದ ಸೃಷ್ಟಿಸ್ಥಿತಿಲಯಗಳಿಗೆ ಕಾರಣಭೂತನಾದ ಪರಶಿವತತ್ತ್ವವೆಂದೂ, ಈ ದರ್ಶನದ ಗ್ರಂಥಗಳಲ್ಲಿ ಹೇಳಿದ್ದರೂ ಜೀವಾತ್ಮನಿಗೂ ಸ್ಥಲವೆಂದೇ ಕರೆದಿರುವುದು ಒಂದು ವೈಶಿಷ್ಟ್ಯ. ಅದಕ್ಕೆ ಕಾರಣ ಶಿವಜೀವರ ಅಭೇದವನ್ನು ಹೇಳಲೋಸುಗವೇ ಇವೆರಡೂ ತತ್ತ್ವಗಳನ್ನು ಸ್ಥಲವೆಂದೇ ನಿರ್ದೇಶಿಸಲಾಗಿದೆ. 'ಅಂಗ'ನ ಉತ್ಪತ್ತಿ, ಸ್ವರೂಪ ಮೊದಲಾದುವುಗಳನ್ನು ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರ ಎಂಬ ಗ್ರಂಥದಲ್ಲಿ ಬಹು ಸುಂದರವಾಗಿ ವರ್ಣಿಸಲಾಗಿದೆ. 'ಸ್ಥಲ'ವು ತನ್ನ ವಿಮರ್ಶ (ಚಿತ್) ಶಕ್ತಿಯ ಕ್ಷೋಭಮಾತ್ರದಿಂದ ಲಿಂಗಸ್ಥಲವೆಂದೂ ಮತ್ತು ಅಂಗಸ್ಥಲವೆಂದೂ ಎರಡಾಗುವುದು. ಮಹಾಕಾಶ ಘಟಾಕಾಶ ಗಳಂತೆ ಇವೆರಡೂ ಭಿನ್ನವಾದವುಗಳು. ಆದರೆ ಇವೆರಡೂ ಪರಶಿವನ ಸ್ವರೂಪವೇ ಆಗಿರುವುದರಿಂದ ಇವೆರಡೂ ಭಿನ್ನವಲ್ಲ. ಹಾಗೂ ತನ್ನ ಲೀಲೆಯಿಂದ ಎರಡರಲ್ಲಿಯೂ ಅವಿಕಾರಿಯಾದ ಚೇತನಸ್ವರೂಪನಾದ ಶಿವನಿರುವನು. 'ಶಿವನಲ್ಲದವನಿಗೆ ಕೋಟಿ ಜನ್ಮಗಳನ್ನೆತ್ತಿದರೂ ಶಿವೋಪಾಸನೆಯು ಸಂಭವಿಸುವುದಿಲ್ಲ'[1]ವಾದುದರಿಂದ ಉಪಾಸಕನ

[1] ನಾಶಿವಸ್ಯ ಶಿವೋಪಾಸ್ತಿರ್ಘಟತೇ ಜನ್ಮಕೋಟಿಭಿಃ । ಶಿವಾನುಭವಸೂತ್ರ, ೨-೧೫

ಶಿವನೇ ಉಪಾಸ್ಯನೂ ಶಿವನೇ ಆಗಿರುತ್ತಾನೆ. "ಶಿವೋ ಭೂತ್ವಾ ಶಿವಂ ಯಜೇತ್। ನಾರುದ್ರೋ ರುದ್ರಮರ್ಚಯೇತ್। ನಾರುದ್ರೋ ಕೀರ್ತಯೇತ್ ರುದ್ರಮ್।" ಇವೇ ಮುಂತಾದ ಶ್ರುತಿಪ್ರಮಾಣಗಳ ಆಧಾರದಿಂದ ಶುದ್ಧ ಜೀವನಾದ ಅಂಗನು ಶಿವನೇ ಆಗಿರುವುದರಿಂದ ಅಂಗತತ್ತ್ವಕ್ಕೂ ಸ್ಥಲವೆಂದೇ ಹೇಳಲಾಗಿದೆ. ಪರಶಿವನೇ ಜೀವಭಾವವನ್ನು ಹೊಂದಿದ್ದು ಏತಕ್ಕೆ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಇದಕ್ಕೆ ಪರಶಿವನ ಲೀಲೆಯೇ ಕಾರಣವೆಂದು ಹೇಳಲಾಗಿದೆ. ಶಿವನು ಲೀಲಾಮಯ. ಅವನಿಗೆ ಪೂಜ್ಯ-ಪೂಜಕ ಅಥವಾ ಉಪಾಸ್ಯ-ಉಪಾಸಕಲೀಲೆಯುಂಟಾದಾಗ ಸ್ವಯಂ ತಾನಾಗಿಯೇ ಜೀವಭಾವವನ್ನು ಹೊಂದಿ ಸೃಷ್ಟಿಕಾರ್ಯದಲ್ಲಿ ಪ್ರವೃತ್ತನಾಗುತ್ತಾನೆ.[1] 'ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭೂ' ಎಂಬ ವಚನದ ಅರ್ಥವೂ ಇದೇ ಆಗಿದೆ. ಹೀಗೆಯೇ ಭಗವದ್ಗೀತೆ[2]ಯಲ್ಲಿಯೂ ಸಹ ಜೀವ-ಬ್ರಹ್ಮರಿಗೆ ಅಂಶ-ಅಂಶಿಭಾವವನ್ನು ಅಗ್ನಿಸ್ಫುಲಿಂಗನ್ಯಾಯದಂತೆ ಹೇಳಲಾಗಿದೆ.

ಬೌದ್ಧಮತದಲ್ಲಿ ಆತ್ಮದ ಸ್ವರೂಪವು ಕ್ಷಣಭಂಗವಾದದ ಅಡಿಪಾಯದ ಮೇಲೆಯೇ ನಿಂತಿದೆ. ಈ ಕ್ಷಣಿಕ ವಿಜ್ಞಾನಸಂತಾನವು ಅನೇಕವಾದುದರಿಂದ ಜೀವಾತ್ಮರೂ ಅನೇಕ. ಜೀವಾತ್ಮರು ಪ್ರವಾಹದಂತೆ ನಿತ್ಯರೇ ಹೊರತು ಸ್ವರೂಪದಿಂದ ನಿತ್ಯರಲ್ಲ. ಬೌದ್ಧಮತದ ಪ್ರಭೇದಗಳಾದ ಸೌತ್ರಾಂತಿಕ ಹಾಗೂ ವೈಭಾಷಿಕರಿಗೂ ಈ ವಾದವೇ ಸಮ್ಮತ. ಆದರೆ ಯೋಗಾಚಾರಮತದಲ್ಲಿ ಕ್ಷಣಿಕವಾದ ದೇಹಕ್ಕಿಂತ ಬೇರೆಯಾದ ವಿಜ್ಞಾನಧಾತುವೇ ಜೀವಾತ್ಮ. ವೀರಶೈವರಲ್ಲಿ ಬೌದ್ಧರಂತೆ ಜೀವಾತ್ಮರು ಅನೇಕರೆಂದು ಒಪ್ಪಿದರೂ ಅವರ ಕ್ಷಣಿಕವಾದವನ್ನು ಒಪ್ಪುವುದಿಲ್ಲ. ಹಾಗೂ ಜೀವನು ಶಿವನಂತೆಯೇ ನಿತ್ಯಸತ್ಯನೆಂದು ಪ್ರತಿಪಾದಿಸಲಾಗಿದೆ.

ಜೈನಮತದಲ್ಲಿ ಜೀವಾತ್ಮನು ಬೆಳಕಿನಂತೆ ಸಂಕೋಚ ವಿಕಾಸಸ್ವಭಾವವುಳ್ಳವನು. ಜೀವಾತ್ಮನು ತಾನು ನೆಲೆಸಿದ ಶರೀರಕ್ಕೆ ತಕ್ಕಂತೆ ತನ್ನ ಪರಿಮಾಣವನ್ನು ಹೊಂದುತ್ತಾನೆಂದು ತಿಳಿಸಲಾಗಿದೆ. ಆದರೆ ವೀರಶೈವಸಿದ್ಧಾಂತದಲ್ಲಿ ಇದನ್ನು ಅಲ್ಲಗಳೆದು ಜೈನರು ಹೇಳುವ ಜೀವಾತ್ಮರು ಅನೇಕ ಎಂಬ ವಿಷಯವನ್ನು ಮಾತ್ರ ಒಪ್ಪಲಾಗಿದೆ.

ರಾಮಾನುಜಮತದಲ್ಲಿ ಜೀವನು ಅಣುಪರಿಮಾಣ. ಪರಮಾತ್ಮನ ಅಧೀನನಾಗಿರುತ್ತಾನೆ. ಶರೀರ-ಆತ್ಮ ಇವುಗಳು ಒಂದನ್ನೊಂದು ಬಿಟ್ಟಿರಲಾರದಂತೆ ಜೀವಾತ್ಮನು ಪರಮಾತ್ಮನನ್ನು ಬಿಟ್ಟಿರಲಾರ. ಇದನ್ನೇ ಶರೀರ-ಶರೀರಿಭಾವವೆನ್ನುತ್ತಾರೆ. ಬದ್ಧ, ಮುಕ್ತ ಎಂಬ ವಿಭಾಗವನ್ನಷ್ಟೇ ಅಲ್ಲದೆ ನಿತ್ಯಸಿದ್ಧರು ಹಾಗೂ ನಿತ್ಯಸಂಸಾರಿಗಳು ಎಂಬ ವಿಭಾಗವನ್ನೂ ಕಲ್ಪಿಸಲಾಗಿದೆ. ವೀರಶೈವದರ್ಶನದಲ್ಲಿಯೂ ಜೀವನು ಅಣುಪರಿಮಾಣನೆಂದು ಒಪ್ಪಿಕೊಂಡಿರುತ್ತಾರೆ. ಶರೀರ-ಶರೀರಿ ಭಾವವನ್ನೂ ಸಹ ಅಂಶ-ಅಂಶಿಭಾವವೆಂದು ಒಂದು ಘಟ್ಟದಲ್ಲಿ ವೀರಶೈವರು ಒಪ್ಪುತ್ತಾರೆ. ಅಂದರೆ ಈ ಅಂಶ-ಅಂಶಿ ಭಾವವು ಐಕ್ಯಸ್ಥಿತಿಯಲ್ಲಿ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ವಿಶಿಷ್ಟಾದ್ವೈತಸಿದ್ಧಾಂತದಲ್ಲಿನ ಜೀವರಲ್ಲಿ ತಾರತಮ್ಯವನ್ನು ಕಲ್ಪಿಸುವ ವಿಷಯವನ್ನು ವೀರಶೈವರು ಒಪ್ಪುವುದಿಲ್ಲ. ಪರಶಿವನೇ ತನ್ನ ಲೀಲಾವಿನೋದಕ್ಕೋಸ್ಕರ ಜೀವನಾಗುತ್ತಾನೆಂದು ವೀರಶೈವಮತ ಪ್ರತಿಪಾದಿಸಿದರೆ, ವಿಶಿಷ್ಟಾದ್ವೈತವು ತನ್ನ ಕರ್ಮಫಲಕ್ಕನುಸಾರವಾಗಿ ಜೀವನಾಗಿ ನಾರಾಯಣನಿಗಿಂತ ಭಿನ್ನನಾಗಿದ್ದು ಆತನ ಚರಣದಾಸನಾಗಿರುತ್ತಾನೆಂದು ಪ್ರತಿಪಾದಿಸಿದೆ.

ಮಾಧ್ವಸಿದ್ಧಾಂತದಲ್ಲಿ ಜೀವಾತ್ಮದ ಸ್ವರೂಪ ತರತಮಭಾವವುಳ್ಳದ್ದು ಮತ್ತು ಅಣುಅಣುವಿನಲ್ಲಿಯೂ ತಾರತಮ್ಯವುಂಟು. ವೀರಶೈವರು ಇದನ್ನು ಒಪ್ಪುವುದಿಲ್ಲ.

ಅದ್ವೈತದಲ್ಲಿ ಪಾರಮಾರ್ಥಿಕವಾಗಿ ಜೀವಾತ್ಮನಿಗೆ ಬ್ರಹ್ಮನಿಗಿಂತ ಬೇರೆಯಾದ ಅಸ್ತಿತ್ವವಿಲ್ಲ, ಬುದ್ಧಿ ಎಂಬ ಅಂತಃಕರಣದಿಂದ ಉಪಹಿತವಾದ ಚೈತನ್ಯವನ್ನೇ ಜೀವಾತ್ಮನೆನ್ನುತ್ತಾರೆ. ಈತನು ಅವಿದ್ಯಾಸಂಬಂಧದಿಂದ ಕರ್ತೃ, ಭೋಕ್ತೃ ಎನಿಸಿಕೊಳ್ಳುತ್ತಾನೆ. ಅವಿಕಾರಿಯಾದ ಒಂದೇ ಬ್ರಹ್ಮವು ಅವಿದ್ಯಾಸಂಬಂಧದಿಂದ ಅನೇಕ ಜೀವಾತ್ಮರಾಗಿ ತೋರುತ್ತದೆ. ಆದರೆ ವೀರಶೈವರಲ್ಲಿ ಜೀವನು ಸತ್ಯ. ಅವನ ಸ್ವರೂಪ ಔಪಾಧಿಕವಲ್ಲವೆಂದು ಅದ್ವೈತಮತದ ನಿಲುವನ್ನು ಖಂಡಿಸುತ್ತದೆ.

ಜೀವನು ವಾಸ್ತವವಾಗಿ ಪರಶಿವನ ಅಂಶವೇ ಆಗಿರುವುದರಿಂದ ಜ್ಞಾನಕ್ರಿಯಾಶಕ್ತಿಗಳ ಅಲ್ಪಾಂಶಗಳನ್ನು ಸ್ವಾಭಾವಿಕವಾಗಿಯೇ ಪಡೆದು ಕಿಂಚಿದ್‌ಜ್ಞನೂ, ಕಿಂಚಿತ್ಕರ್ತನೂ, ಮಾಯಾಪಾಶಬದ್ಧನೂ ಆಗಿ ಅಹಂಕಾರ ಮಮಕಾರಗಳಿಂದ ಮೋಹಿತನಾಗಿ ತಾಪತ್ರಯಗಳಿಂದ ಪೀಡಿಸಲ್ಪಟ್ಟು, ನಾನು ಶಿವನ ಅಂಶವೆಂಬುದನ್ನೇ ಮರೆತು ಪ್ರಾಪಂಚಿಕ ವ್ಯವಹಾರಗಳಲ್ಲಿ ಮಗ್ನನಾಗಿರುತ್ತಾನೆ. ಪರಶಿವನ ನೇರವಾದ ಸಂಬಂಧವನ್ನು ಪೂರ್ಣವಾಗಿ ಮರೆತು ಜೀವನು ಈ

---

1 ಲೋಕವತ್ತು ಲೀಲಾಕೈವಲ್ಯಮ್। (ಬ್ರಹ್ಮಸೂತ್ರ, ೨-೧-೩)

2 ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ।—(ಭಗವದ್ಗೀತಾ, ೧೫-೭)

ಜನನಮರಣಗಳ ಚಕ್ರದಲ್ಲಿ ಸಿಕ್ಕಿಕೊಂಡಿರುವನು. ಹೀಗೆ ದೇಹದಲ್ಲಿ ಜೀವನು ಅಭಿಮಾನದಿಂದಲೂ, ಪರಶಿವನು ನಿರಭಿಮಾನದಿಂದಲೂ ನೆಲೆಸಿರುವುದನ್ನು ಈ ಮುಂದಿನ ಶ್ರುತಿಯು ಸ್ಪಷ್ಟಪಡಿಸುತ್ತದೆ.

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದತ್ತ್ಯ-
ನಶ್ನನ್ನನ್ಯೋ ಅಭಿಚಾಕಶೀತಿ ॥[1]

ಈ ಶ್ರುತಿಯು ದೇಹವೆಂಬ ವೃಕ್ಷದಲ್ಲಿ ಜೀವ-ಶಿವರ ಇರುವಿಕೆಯನ್ನು ತಿಳಿಸುತ್ತದೆ. ಒಂದೇ ವೃಕ್ಷದಲ್ಲಿ ಸಮಾನವಾದ ಹಕ್ಕಿಗಳು ನೆಲೆಸಿ ಅವುಗಳಲ್ಲಿ ಒಂದು ಹಣ್ಣನ್ನು ತಿಂದು ಸುಖದುಃಖಗಳನ್ನು ಅನುಭವಿಸುತ್ತಿರುವುದು. ಮತ್ತೊಂದು ಏನೂ ತಿನ್ನದೆ ನಿರ್ಲಿಪ್ತವಾಗಿ ಬೇರೆ ಹಕ್ಕಿಯ ವರ್ತನೆಯನ್ನು ನೋಡುತ್ತಾ ತಟಸ್ಥವಾಗಿ ಕುಳಿತಿರುವುದು—ಎಂಬುದಾಗಿ ಜೀವ-ಶಿವರ ಸ್ವರೂಪ ಹಾಗೂ ಸಂಬಂಧಗಳನ್ನು ಅತ್ಯಂತ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ.

ಜೀವಿಯು ಮಾಯಾಪಾಶದಿಂದ ಬದ್ಧನಾಗಿರುತ್ತಾನೆ. ಮಾಯೆ ಎಂದರೆ ಪರಮಾತ್ಮನಿಷ್ಠವಾದ ಶಕ್ತಿ.[2] ಅಂದರೆ ಶಿವನಿಗೆ ಲೀಲೆಯುಂಟಾದಾಗ ಅವನಲ್ಲಿರುವ ವಿಮರ್ಶಶಕ್ತಿಯೇ ಅತ್ಯಲ್ಪಾಂಶದಿಂದ ಹೊರಬಂದು 'ಮಾಯಾಶಕ್ತಿ' ಎನಿಸುತ್ತದೆ. ಈ ದರ್ಶನದ ಗ್ರಂಥಗಳಲ್ಲಿ ಈ ಪರಮಾತ್ಮನಿಷ್ಠವಾದ ಶಕ್ತಿಗೆ ಸಂವಾದಿಯಾಗಿ 'ಮಾಯೆ' ಎಂದೂ ಅಲ್ಲಲ್ಲಿ ಬಳಸಲಾಗಿದೆ. ಅಂದಮಾತ್ರಕ್ಕೆ ಇಲ್ಲಿನ ಮಾಯಾಪದ ಅದ್ವೈತಿಗಳ ಅರ್ಥದಲ್ಲಿಲ್ಲ. ಸಿದ್ಧಾಂತಶಿಖಾಮಣಿಯಲ್ಲಿ ಈ ಮಾಯೆಯನ್ನು ಎರಡು ವಿಧವಾಗಿ ವಿಂಗಡಿಸಿ ಪರಾಮಾಯೆ ಮತ್ತು ಅಧೋಮಾಯೆ ಎನ್ನಲಾಗಿದೆ. ಇವುಗಳಲ್ಲಿ ಪರಾಮಾಯೆಯು ಶಿವನನ್ನು ಆಶ್ರಯಿಸಿದ್ದು ಅವನಿಗೆ ಮೋಹವನ್ನುಂಟುಮಾಡುವುದಿಲ್ಲ.[3] ಅಶುದ್ಧಮಾಯೆಯು (ಅವಿದ್ಯಾ) ಜೀವನನ್ನು ಆಶ್ರಯಿಸಿದ್ದು ಅವನಿಗೆ ಮೋಹವನ್ನುಂಟುಮಾಡುವಂತಹುದಾಗಿದೆ.[4] ಜೀವನನ್ನಾಶ್ರಯಿಸಿದ ಅವಿದ್ಯಾಶಕ್ತಿಯು ತ್ರಿಗುಣಾತ್ಮಕವಾದುದರಿಂದ ಜೀವರು ಅನೇಕ ವಿಧವಾಗಿದ್ದಾರೆ.[5]

ಅದ್ವೈತದರ್ಶನದಲ್ಲಿಯಾದರೋ 'ಮಾಯೆ' ಬ್ರಹ್ಮದಲ್ಲಿ ಕಲ್ಪಿತವೆನಿಸಿದೆ. ಇದರಲ್ಲಿ ಶುದ್ಧಚೈತನ್ಯವು ಪ್ರತಿಬಿಂಬಿಸಿ ಈಶ್ವರನೆಂದೂ, ಅವಿದ್ಯೆಯಲ್ಲಿ ಪ್ರತಿಬಿಂಬಿಸಿ ಜೀವನೆಂದೂ ಕರೆಯಲ್ಪಡುವುದು. ಆದುದರಿಂದ ಜೀವಭಾವವೂ ಈಶ್ವರಭಾವವೂ ಕಾಲ್ಪನಿಕವೆಂದು ಅದ್ವೈತದರ್ಶನವು ತಿಳಿಸುತ್ತದೆ. ಈ ಕಲ್ಪಿತವಾದ ಮಾಯೆಯು ಜ್ಞಾನದಿಂದಲೇ ಹೋಗಬೇಕೆಂಬುದು ಈ ದರ್ಶನದ ಅಭಿಪ್ರಾಯವಾಗಿದೆ. ಆದರೆ ವೀರಶೈವದರ್ಶನದಲ್ಲಿ ಈ ಮಾಯಾಶಕ್ತಿ ಶಿವನಿಂದಲೇ ಹೊರಬಂದು ಅವನು ವಹಿಸಿದ ಕಾರ್ಯವನ್ನು ಅವನ ಇಚ್ಛೆಯಂತೆ ಮಾಡಿ ಅವನಲ್ಲಿಯೇ ಸೇರುವುದಾದ್ದರಿಂದ ಮಾಯೆ ಇಲ್ಲಿ ಕಲ್ಪಿತವಾದುದಲ್ಲ. ಇದು ಪರಶಿವನ ಸಹಜಶಕ್ತಿ. ಆದರೆ ಇದು ಈಶ್ವರನ ನಿತ್ಯಸ್ವರೂಪವಲ್ಲದೆ ಅವನ ಇಚ್ಛಾಮಾತ್ರವಾಗಿರುತ್ತದೆ. ಇದನ್ನು ಈಶ್ವರನು ಯಾವಾಗ ಬೇಕಾದರೂ ಸಂಕೋಚ ಮಾಡಿಕೊಳ್ಳಬಹುದು. ಶಕ್ತಿ ಉನ್ಮೇಷವಾಗದಿರುವಾಗ ಈಶ್ವರನಿಗೆ ಸೃಷ್ಟಿಯಲ್ಲಿ ಪ್ರವೃತ್ತಿಯೇ ಉಂಟಾಗುವುದಿಲ್ಲ. ಆದುದರಿಂದ ಈ ಶಕ್ತಿಯ ಸಂಬಂಧದಿಂದ ಆಗಿರುವ ಜೀವರೂ ಸಹ ಕಲ್ಪಿತರೆನಿಸುವುದಿಲ್ಲ. ಆದರೆ ಶಿವ-ಜೀವರಿಗೆ ಭೇದವನ್ನು ಹುಟ್ಟಿಸುವ ಸಾಮರ್ಥ್ಯ ಈ ಮಾಯೆಗೆ ಇದೆ.

ಶುದ್ಧಚೈತನ್ಯನಾದ ಶಿವನಿಗೆ ಜೀವಭಾವವುಂಟಾಗುವುದಕ್ಕೆ ಕಾರಣವಾದ ಮಾಯೆಗೆ 'ಮಲ'ವೆಂದು ಈ ಸಿದ್ಧಾಂತದಲ್ಲಿ ಹೆಸರಿದೆ. ಪರಮಾತ್ಮನ ಚಿತ್‌ಶಕ್ತಿಯು ಸಹಜವಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳೆಂದು ಮೂರು ಬಗೆಯಾಗಿರುವಂತೆ ಆ ಶಕ್ತಿಯ ಪರಿಣಾಮವೆನಿಸಿದ ಮಾಯಾಶಕ್ತಿಯೂ ಆಣವಮಲ, ಮಾಯಾಮಲ, ಕಾರ್ಮಮಲವೆಂದು ಮೂರು ಬಗೆಯಾಗಿ ಜೀವನನ್ನು ಆವರಿಸಿತು. ಈ ಆಣವಮಲದಿಂದ ಜೀವನಿಗೆ ಅಣುತ್ವವೂ ಅಲ್ಪತ್ವವೂ ಉಂಟಾಯಿತು. ಮಾಯಾಮಲವು ಜೀವನಲ್ಲಿ ವ್ಯಾಮೋಹ, ಅಭಿಮಾನಗಳನ್ನು ಉಂಟುಮಾಡಿತು. ಈ

---

[1] ಮುಂಡಕೋಪನಿಷತ್ (೩.೧.೧.)

[2] ಮಂ ಶಿವಂ ಪರಮಂ ಬ್ರಹ್ಮ ಅಯತೀತಿ ಸ್ವಭಾವತಃ ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥

[3] 'ಪರಾಮಾಯಾ ಸ್ವಾಶ್ರಯಾವ್ಯಾಮೋಹಕಾರಿಣೀ' (ಸಿ. ಶಿ. ೫-೪೧)

[4] 'ಅವಿದ್ಯಾಶ್ರಯಮೋಹಿನೀ' (ಸಿ. ಶಿ. ೫-೪೨)

[5] ಅವಿದ್ಯಾಶಕ್ತಿಭೇದೇನ ಜೀವಾ ಬಹುವಿಧಾಃ ಸ್ಮೃತಾಃ (ಸಿ. ಶಿ. ೫-೪೨)

ವ್ಯಾಮೋಹ ಅಭಿಮಾನಗಳಲ್ಲೇ ಹೆಚ್ಚುಹೆಚ್ಚಾಗಿ ಪ್ರವರ್ತಿಸುತ್ತಾ ಜೀವನು ತನ್ನ ಅಹಂಕಾರವನ್ನು ಬೆಳೆಸಿಕೊಳ್ಳುವಂತೆ ಕಾರ್ಮಮಲವು ಮಾಡುತ್ತದೆ. ಹೀಗೆ ಶಿವನಲ್ಲಿ ಶಕ್ತಿವಿಕಾಸವು ಸ್ವಾಭಾವಿಕವಾಗಿರುವಂತೆ ಜೀವನಲ್ಲಿ ಶಕ್ತಿಸಂಕೋಚವು ಸ್ವಾಭಾವಿಕವಾಗಿದೆ. ಹೀಗೆ ಜೀವನು ಈ ತ್ರಿಮಲಗಳಿಂದ ಆವೃತನಾಗಿ ತನ್ನ ಮೊದಲಿನ ಸರ್ವಕರ್ತೃತ್ವ, ಸರ್ವಜ್ಞತ್ವ, ಪರಿಪೂರ್ಣತ್ವ, ನಿತ್ಯತೃಪ್ತತ್ವ, ಸರ್ವವ್ಯಾಪಕತ್ವಗಳನ್ನು ಕಳೆದುಕೊಂಡು ಅವುಗಳ ಬದಲಾಗಿ ಕಿಂಚಿತ್ ಕರ್ತೃತ್ವ, ಕಿಂಚಿದ್‍ಜ್ಞತ್ವ, ಅಪೂರ್ಣತ್ವ, ಅನಿತ್ಯತ್ವ, ಅವ್ಯಾಪಕತ್ವಗಳೆಂಬ ನ್ಯೂನಶಕ್ತಿಗಳಿಂದ ಕೂಡಿಕೊಂಡಿರುವನು.

ಈ ಮಲತ್ರಯಗಳಿಂದಾಗಿ ಜೀವನಿಗೆ ಕಾರಣತನು, ಸೂಕ್ಷ್ಮತನು, ಸ್ಥೂಲತನುಗಳು ಪ್ರಾಪ್ತವಾಗಿವೆ. ಈ ತನುಗಳನ್ನನುಸರಿಸಿ ಅಂಗನು ಮೂರು ಬಗೆಯಾಗುತ್ತಾನೆ. ಕಾರಣತನುವು ಜೀವನ ಮೊದಲನೆಯ ಆವರಣವಾಗಿ ಹತ್ತಿರದಲ್ಲಿಯೇ ಇದ್ದು ಕೊನೆಗೆ ಲಿಂಗದಲ್ಲಿ ಸಾಮರಸ್ಯ ಹೊಂದುವುದರಿಂದ ಯೋಗಾಂಗವೆನಿಸುವುದು. ಲಿಂಗಭೋಗವನ್ನು ಉಪಭೋಗಿಸುವುದರಿಂದ ಸೂಕ್ಷ್ಮತನುವು ಭೋಗಾಂಗವೆನಿಸುವುದು. ಗುರುವಿನಿಂದ ಲಬ್ಧವಾದ ದೀಕ್ಷೆಯಿಂದ ಮಲತ್ರಯಗಳನ್ನು ತ್ಯಾಗಮಾಡುವುದರಿಂದ ಸ್ಥೂಲತನುವು ತ್ಯಾಗಾಂಗವೆನಿಸುವುದು. ಈ ತನುತ್ರಯಗಳಿಗೆ ಲಿಂಗವು ಕ್ರಮವಾಗಿ ಭಾವ, ಪ್ರಾಣ, ಇಷ್ಟ-ಲಿಂಗಗಳಾಗಿ ಪರಿಣಾಮ ಹೊಂದಿ ಸೇವೆ ಮಾಡಿಸಿಕೊಳ್ಳಲು ಸಿದ್ಧವಾಗಿದೆ. ಗುರುವು ಈ ಅಂಗತ್ರಯದಲ್ಲಿ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವನ್ನು ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ ಎಂಬ ದೀಕ್ಷಾತ್ರಯಗಳಿಂದ ಸಂಯೋಜಿಸುವನು. ಈ ದೀಕ್ಷಾತ್ರಯದಿಂದಲೇ ಜೀವನ ಮಲತ್ರಯಗಳು ನಾಶವಾಗಿ ಅಂಗನೆನಿಸುವನು.

ಈ ಮೇಲೆ ಹೇಳಿದ ಮೂರು ಅಂಗಸ್ಥಲವೂ ಪ್ರತ್ಯೇಕವಾಗಿ ಎರಡೆರಡು ಬಗೆಯಾಗುವುದು. ಯೋಗಾಂಗವು ಶರಣ-ಐಕ್ಯವೆಂದು, ಭೋಗಾಂಗವು ಪ್ರಾಣಲಿಂಗಿ-ಪ್ರಸಾದಿ ಎಂದು, ತ್ಯಾಗಾಂಗವು ಮಹೇಶ-ಭಕ್ತನೆಂದು ಪ್ರತಿಯೊಂದೂ ಎರಡೆರಡು ತೆರನಾಗುತ್ತದೆ. ಇವುಗಳನ್ನೇ ಷಟ್ಸ್ಥಲತತ್ತ್ವವೆಂದು ಶಕ್ತಿವಿಶಿಷ್ಟಾದ್ವೈತಸಿದ್ಧಾಂತದಲ್ಲಿ ವಿವರಿಸಲಾಗಿದೆ. ಈ ಷಟ್ಸ್ಥಲವು ಮಾನಸಿಕವಾಗಿ ಪರಮಾತ್ಮನ ಅನುಸಂಧಾನದ ಮಾರ್ಗವಾಗಿದೆ. ಈ ಅಂಗನ ಜೊತೆಯಲ್ಲಿಯೇ ಲಿಂಗವೂ ಸಹ ಪರಿಣಾಮ ಹೊಂದುತ್ತಾ ಅಂಗನಿಂದ ಸೇವೆ ಮಾಡಿಸಿಕೊಳ್ಳುವುದಕ್ಕೂ, ಅಂಗನನ್ನು ಉದ್ಧಾರ ಮಾಡುವುದಕ್ಕೂ ಇದ್ದೇ ಇರುತ್ತದೆ. ಲಿಂಗದಲ್ಲಿರುವ ಶಕ್ತಿಯ ಒಂದು ಭಾಗ ಅಂಗನಲ್ಲಿ ಸೇರಿಕೊಂಡು ಭಕ್ತಿ ಎಂಬ ಹೆಸರಿನಿಂದ ವ್ಯವಹರಿಸಲ್ಪಡುವುದು. ಈ ಭಕ್ತಿ ಎಂಬುದು ಜೀವನಿಗೆ ಶಿವನು ನೀಡಿರುವ ಮಹದನುಗ್ರಹವೇ ಸರಿ. ಏಕೆಂದರೆ ಈ ಭಕ್ತಿಯು ನಿವೃತ್ತಿಪರವಾದುದು. ಇದರಿಂದ ಅಂಗನು ಅಜ್ಞಾನದಿಂದ ನಿವೃತ್ತಿಹೊಂದಿ ಊರ್ಧ್ವಮುಖನಾಗಿ ಹೋಗಿ ಲಿಂಗದಲ್ಲಿ ಐಕ್ಯವನ್ನು ಹೊಂದಬಹುದಾಗಿದೆ. ಹೀಗೆ ಅಂಗನು ಅಧೋಮುಖನಾಗಿ ಇಳಿದು ಬಂದು ಮತ್ತೆ ಭಕ್ತಿಯ ಸಹಾಯದಿಂದ ಊರ್ಧ್ವಮುಖನಾಗಿ ಏರಿ ಹೋಗುವ ಆರು ಮೆಟ್ಟಲುಗಳೇ ಷಟ್ಸ್ಥಲಗಳು.

ಸಾಧಕನ ಸಾಧನಾವಸ್ಥೆಗಳಲ್ಲಿ ಆರು ಮಜಲುಗಳನ್ನು ಮಾಡಿ ಅವುಗಳಿಗೆ ಷಟ್ಸ್ಥಲಗಳು ಎಂದು ಬೇರೆಬೇರೆಯಾದ ಹೆಸರನ್ನಿತ್ತಿದ್ದಾರೆ. ಲಿಂಗ-ಅಂಗಗಳ ವಿಶಿಷ್ಟ ಬಗೆಯ ಸಂಬಂಧವೇ ಆಯಾ ಸ್ಥಲಗಳ ಹೆಸರುಗಳಿಗೆ ಕಾರಣವಾಗಿರುವುದರಿಂದ ಈ ಸ್ಥಲಗಳ ಲಕ್ಷಣಗಳನ್ನು ಅರಿಯುವುದು ಮುಖ್ಯವಾಗಿದೆ. ಲಿಂಗದಲ್ಲಿ ಪೂರ್ಣವಿಶ್ವಾಸವು ಭಕ್ತಸ್ಥಲದ ಮುಖ್ಯ ಲಕ್ಷಣವು. ಆ ವಿಶ್ವಾಸವು ದೃಢವಾಗಿ ಪೂರ್ಣನಿಷ್ಠೆಯಿಂದ ಸೇವೆಗೈಯ್ಯುವುದು ಮಹೇಶಸ್ಥಲದ ಮುಖ್ಯ ಲಕ್ಷಣ. ಸಾಧನದಿಂದ ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿ ಬಳಿಕ ತಾನು ಸ್ವೀಕರಿಸುವುದು ಪ್ರಸಾದಿಯ ಲಕ್ಷಣ. ತನ್ನ ಪ್ರಾಣವನ್ನು ಲಿಂಗದಲ್ಲಿ ಲಯಗೊಳಿಸಿ ಎರಡನ್ನೂ ಅಭೇದದೃಷ್ಟಿಯಿಂದ ನೋಡುವುದೇ ಪ್ರಾಣಲಿಂಗಿಯ ಲಕ್ಷಣ. ಲಿಂಗಾಂಗಯೋಗದ ಅನುಭವಯುಕ್ತ ಜ್ಞಾನವೇ ಶರಣನ ಲಕ್ಷಣ. ಆ ಜ್ಞಾನವು ಸಮರಸ ಹೊಂದಿ ಶಿವೋऽಹಂಭಾವವೇ ಐಕ್ಯಸ್ಥಲವೆನಿಸುವುದು. ಈ ಸ್ಥಲಗಳಲ್ಲಿ ಇನ್ನೂ ಸೂಕ್ಷ್ಮವಾದ ಭೇದಗಳನ್ನು ಸಾಧನಾಭೇದದಿಂದ ಕಲ್ಪಿಸುವುದಕ್ಕೆ ಸಾಧ್ಯವಾದರೂ ಷಟ್ಸ್ಥಲಗಳೇ ಮುಖ್ಯವಾಗಿವೆ. ಈ ಆರು ಸ್ಥಲಗಳಲ್ಲಿ ಮೊದಲಿನ ಮೂರು ಸ್ಥಲಗಳಲ್ಲಿ ಜೀವ-ಶಿವರಿಗೆ ಭೇದವನ್ನೂ ಕೊನೆಯ ಮೂರರಲ್ಲಿ ಅಭೇದವನ್ನೂ ತಿಳಿಸಲಾಗಿದೆ.

ಜೀವಾತ್ಮನು ಸಾಧನೆಯ ಮೂಲಕ ಮೇಲೇರಿದಂತೆಲ್ಲಾ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲಗಳಲ್ಲಿ ಕ್ರಮವಾಗಿ ಸದ್ಭಕ್ತಿ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ, ಭಕ್ತಿ ಎಂಬ ಹೆಸರುಗಳನ್ನು ಪಡೆಯುತ್ತದೆ. ಹಾಗೂ ಈ ಆರು ತೆರನಾದ ಭಕ್ತಿಗಳಿಂದ ಆಚಾರ, ಗುರು, ಶಿವ, ಚರ, ಪ್ರಸಾದ, ಮಹಾಲಿಂಗಗಳನ್ನು ಸಾಧಕನು ಷಟ್ಸ್ಥಲಗಳಲ್ಲಿ ಪೂಜಿಸುವನು. ಶುದ್ಧಾತ್ಮನಾದ ಅಂಗನು ಮಹಾಲಿಂಗವನ್ನು ನೋಡಿ ಅತಿಶಯವಾದ ಆನಂದವನ್ನು ಅನುಭವಿಸಿ ಲಿಂಗದಲ್ಲಿ ಸೇರಿ ಎರಡಿಲ್ಲದಂತಾಗುತ್ತಾನೆ. ಇದನ್ನೇ ಲಿಂಗಾಂಗಸಾಮರಸ್ಯ, ಶಿವಜೀವರ

ಐಕ್ಯ ಮುಂತಾಗಿ ಈ ಸಿದ್ಧಾಂತದಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಲಿಂಗಾಂಗಸಾಮರಸ್ಯವನ್ನು ಈ ಕೆಳಗಿನ ವಚನವು ಬಹು ಸುಂದರವಾಗಿ ನಿರೂಪಿಸುತ್ತದೆ.

ಘೃತ ಘೃತವ ಬೆರಸಿದಂತೆ, ಕ್ಷೀರ ಕ್ಷೀರವ ಬೆರಸಿದಂತೆ,
ತೈಲ ತೈಲವ ಬೆರಸಿದಂತೆ, ನೀರು ನೀರ ಬೆರಸಿದಂತೆ,
ಜ್ಯೋತಿ ಜ್ಯೋತಿಯ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ,
ಪ್ರಾಣಸಂಯೋಗವಾದ ಲಿಂಗಸಮರಸವನೇನೆಂಬೆನಯ್ಯಾ
ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

ಈ ಮೇಲಿನ ವಚನವನ್ನೇ ಹೋಲುವಂತೆ ಸಿದ್ಧಾಂತಶಿಖಾಮಣಿಯ

ಜಲೇ ಜಲಮಿವ ನ್ಯಸ್ತಂ, ವಹ್ನೌ ವಹ್ನಿರಿವಾರ್ಪಿತಃ ।
ಪರಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ॥

ಎಂಬ ಶ್ಲೋಕದಲ್ಲಿಯೂ ಸಹ ಜಲವು ಜಲದಲ್ಲಿ, ವಹ್ನಿಯು ವಹ್ನಿಯಲ್ಲಿ ಸೇರಿದಂತೆ ಪರಬ್ರಹ್ಮನಲ್ಲಿ ಜೀವಾತ್ಮನು ಲೀನವಾಗುತ್ತಾನೆ. ಐಕ್ಯಸ್ಥಿತಿಯಲ್ಲಿ ಶಿವಭಾವವೂ, ಜೀವಭಾವವೂ, ಐಕ್ಯನಾದೆನೆಂಬ ಹೇಳುವಿಕೆಯೂ ಪ್ರತ್ಯೇಕವಾಗಿ ಕಾಣುವುದಿಲ್ಲ. ಮುಂಡಕೋಪನಿಷತ್ತಿನ—

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ ।
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥ (೩೩-೨.೮)

ಎಂಬ ಮಂತ್ರವೂ ಸಹ ಇದನ್ನೇ ಸ್ಪಷ್ಟಪಡಿಸುತ್ತದೆ. ನದಿಗಳು ಸಮುದ್ರಕ್ಕೆ ಸೇರಿ ಹೇಗೆ ತಮ್ಮ ನಾಮರೂಪಗಳನ್ನು ಕಳೆದುಕೊಳ್ಳುತ್ತವೆಯೋ ಹಾಗೆಯೇ ಜೀವರು ಶಿವನನ್ನು ಸೇರಿ ತಮ್ಮ ವ್ಯಕ್ತಿತ್ವವನ್ನೂ, ಅದಕ್ಕೆ ಸಂಬಂಧಿಸಿದ ಅಹಂಕಾರಮಮಕಾರಗಳನ್ನೂ, ನಾಮರೂಪಗಳನ್ನೂ ತೊರೆಯುವರು. ಈ ಸರಿತ್ಸಮುದ್ರದ ದೃಷ್ಟಾಂತವನ್ನೇ ವೀರಶೈವದರ್ಶನವು ಮುಕ್ತಿಯ ನಿರೂಪಣೆಯಲ್ಲಿ ಅನುಸರಿಸುತ್ತದೆ. ವಚನಕಾರರು ಈ ಸ್ಥಿತಿಯನ್ನು ಶೂನ್ಯ, ಬಯಲು ಎಂದು ಕರೆದು ಈ ಆನಂದದ ಪರಮೋಚ್ಚಸ್ಥಿತಿಯನ್ನು ತಮ್ಮ ವಚನಗಳಲ್ಲಿ ಬಹು ಸುಂದರವಾಗಿ ವರ್ಣಿಸಿರುವುದನ್ನು ಕಾಣಬಹುದಾಗಿದೆ—

ಆನೆಂಬುದಿಲ್ಲ, ನೀನೆಂಬುದಿಲ್ಲ, ಸ್ವಯಂವೆಂಬುದಿಲ್ಲ, ಪರವೆಂಬುದಿಲ್ಲ.
ಅರಿವೆಂಬುದಿಲ್ಲ, ಮರೆವೆಂಬುದಿಲ್ಲ, ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ,
ಕೂಡಲಚನ್ನಸಂಗಯ್ಯನೆಂಬ ಶಬ್ದ ಮುನ್ನಿಲ್ಲ.

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ, ಬಯಲಾಯಿತ್ತಯ್ಯಾ !
ಬಯಲ ಜೀವನೆ, ಬಯಲ ಭಾವನೆ, ಬಯಲು ಬಯಲಾದೆ ಗುಹೇಶ್ವರಾ

ವೀರಶೈವಸಿದ್ಧಾಂತಗ್ರಂಥವಾದ 'ಶ್ರೀಕರ ಭಾಷ್ಯ'ದಲ್ಲಿ ಮುಕ್ತಿದೆಶೆಯನ್ನು ಕಿಂಚಿತ್‌ಭೇದಘಟಿತವಾದ ಮುಕ್ತಿ ಎಂದು ಹೇಳಲಾಗಿದೆ.[1] ಆದರೆ ಈ ಕಿಂಚಿತ್‌ಭೇದವನ್ನೂ ಸಹ ವೀರಶೈವಸಿದ್ಧಾಂತಪರವಾದ ಮತ್ತಾವ ಗ್ರಂಥಗಳೂ, ವಚನಕಾರರೂ ಒಪ್ಪುವುದಿಲ್ಲ.

ಶಕ್ತಿವಿಶಿಷ್ಟಾದ್ವೈತದ ದೃಷ್ಟಿ ಶುದ್ಧ ಅದ್ವೈತವನ್ನು ಮೇಲ್ನೋಟಕ್ಕೆ ತೋರಿಸಿದರೂ ಶಂಕರರ ಅದ್ವೈತ ದೃಷ್ಟಿಗೂ ಇದಕ್ಕೂ ವ್ಯತ್ಯಾಸವೇನೆಂದರೆ ಕೇವಲ 'ಅಹಂಬ್ರಹ್ಮಾಸ್ಮಿ' ಎಂಬ ಸ್ಥಿತಿಯೊಂದೇ ಸತ್ಯ, ಮಿಕ್ಕೆಲ್ಲ ಮಿಥ್ಯವೆಂದು ಅದ್ವೈತದಂತೆ ಶಕ್ತಿವಿಶಿಷ್ಟಾದ್ವೈತವು ಹೇಳುವುದಿಲ್ಲ. ಇಲ್ಲಿ ಬ್ರಹ್ಮ-ಜೀವರು ಇಬ್ಬರೂ ಸತ್ಯವೇ. (ಅದ್ವೈತದಲ್ಲಿ ಜೀವಭಾವ ಉಪಾಧಿಕೃತವಾದುದರಿಂದ ಮಿಥ್ಯೆ). ಹಾಗೂ ಜೀವನು ಶಿವನಾಗಲು ಈ ಸಿದ್ಧಾಂತವು ರೂಪಿಸಿಕೊಂಡಿರುವ ಷಟ್ಸ್ಥಲಮಾರ್ಗವೂ ತೀರ ಭಿನ್ನವಾದುದಾಗಿದೆ.

---

[1] ಜಗದ್ವ್ಯಾಪಾರವರ್ಜಂ ಪ್ರಕರಣಾದಸನ್ನಿಹಿತತ್ವಾಚ್ಚ. (ಶ್ರೀಕರಭಾಷ್ಯ, ೪-೪-೫-೧೭)

ವಿಶಿಷ್ಟಾದ್ವೈತದರ್ಶನದಲ್ಲಿ ಜೀವನು ಭಗವಂತನ ಕೈಂಕರ್ಯಕ್ಕೆ ತನ್ನನ್ನೇ ಮೀಸಲು ಮಾಡಿಕೊಂಡು ತಾನು ಆತನ ಸೇವಕ, ಚರಣದಾಸನೆಂದು ತಿಳಿದಿರುತ್ತಾನೆ. ಪರಬ್ರಹ್ಮನೆನಿಸಿದ ವಿಷ್ಣುವಿಗೂ ಆತನ ಅಂಶನಾದ ಜೀವನಿಗೂ ಮೋಕ್ಷಸ್ಥಿತಿಯಲ್ಲಿ ಐಕ್ಯವಿಲ್ಲ, ಅದೊಂದು ಪರಮಾನಂದದ ಸ್ಥಿತಿ. ಈ ಆನಂದಾವಸ್ಥೆಯು ನಾರಾಯಣನ ಅನುಗ್ರಹದಿಂದಲೇ ಜೀವನಿಗೆ ಒದಗುತ್ತದೆ. ಇಂತಹ ಮುಕ್ತಿಯು ಉದಯವಾಗುವುದಕ್ಕೆ ಪ್ರಪತ್ತಿರೂಪವಾದ ಭಕ್ತಿಯೇ ಪ್ರಧಾನವಾದ ಕಾರಣವಾಗಿರುತ್ತದೆ.

ದ್ವೈತದರ್ಶನದಲ್ಲಿ ಸಂಸಾರದ ಸ್ಥಿತಿಯಲ್ಲಿ ಪ್ರತಿಯೊಂದು ಜೀವಿಯಲ್ಲಿಯೂ ತಾರತಮ್ಯವಿರುವಂತೆ ಮುಕ್ತಾವಸ್ಥೆಯಲ್ಲಿಯೂ ಭಿನ್ನತೆ ಇರುತ್ತದೆ. ಮುಕ್ತಾವಸ್ಥೆಯಲ್ಲಿ ಪ್ರತಿಯೊಬ್ಬ ಜೀವಿಯೂ ಅನುಭವಿಸುವ ಆನಂದದಲ್ಲಿಯೂ ಪರಸ್ಪರ ತಾರತಮ್ಯವಿರುತ್ತದೆ. ಹಾಗೂ ಇಲ್ಲಿಯೂ ಸಹ ಮುಕ್ತಿಗೆ ಭಕ್ತಿ ಧ್ಯಾನಗಳೇ ಸಾಧನಗಳಾಗಿ ಭಗವದನುಗ್ರಹದಿಂದ ಮುಕ್ತಿ ಲಭಿಸುವುದು.

ಹೀಗೆ ಸಂಸಾರದೆಶೆಯಲ್ಲಿ ಜೀವನು ಶಿವನಿಂದ ಅತ್ಯಂತ ಭಿನ್ನನಾಗಿದ್ದು ಮುಕ್ತಿದೆಶೆಯಲ್ಲಿ ಅತ್ಯಂತ ಅಭಿನ್ನನಾಗಿ ಶಿಖಿಕರ್ಪೂರದಂತೆ[2] ಸಾಮರಸ್ಯವನ್ನು ಹೊಂದಿ ಐಕ್ಯನಾಗುತ್ತಾನೆಂದು ವೀರಶೈವದರ್ಶನವು ಪ್ರತಿಪಾದಿಸಿದೆ. 'ಅಹಂ ಬ್ರಹ್ಮಾಸ್ಮಿ' (ಬೃ. ೩.೪.೧೦) 'ತತ್ತ್ವಮಸಿ' (ಛಾಂ. ೬.೮.೭)—ಇವೇ ಮೊದಲಾದ ಶ್ರುತಿಗಳು ಜೀವ-ಬ್ರಹ್ಮರ ಅಭೇದವನ್ನು ಪ್ರತಿಪಾದಿಸುತ್ತವೆ. 'ದ್ವಾ ಸುಪರ್ಣಾ ಸಯುಜಾ ಸಖಾಯಾ........' (ಮುಂಡಕ. ೩–೧–೧) ಇವೇ ಮುಂತಾದ ಶ್ರುತಿಗಳು ಜೀವ-ಬ್ರಹ್ಮರ ಭೇದವನ್ನು ಪ್ರತಿಪಾದಿಸುತ್ತವೆ. ಈ ರೀತಿಯಾಗಿ ಶ್ರುತಿಗಳಲ್ಲಿಯೇ ಪರಸ್ಪರ ವಿರೋಧವಿರುವುದನ್ನು ಮನಗಂಡು ಭೇದ, ಹಾಗೂ ಅಭೇದಪರವಾದ ಶ್ರುತಿಗಳೆರಡಕ್ಕೂ ಸಮನ್ವಯವನ್ನು ಸಾಧಿಸಲು ಹೊರಟಂತಹ ಶಕ್ತಿವಿಶಿಷ್ಟಾದ್ವೈತದರ್ಶನವು ಅತ್ಯಂತ ವೈಶಿಷ್ಟ್ಯಪೂರ್ಣವಾದುದಾಗಿದೆ.

---

ಸುರಭಿಯಾಕಳೊಳಲ್ಲ ಸುರತರುವು ಮರನಲ್ಲ
ಪರುಷ ಶಿಲೆಯಲ್ಲ ಚರಲಿಂಗ ನರನಲ್ಲೆಂ-
ದೊರೆದ ಶ್ರೀಗುರುವೆ ಕೃಪೆಯಾಗು

ಅಣಿಮಾದಿ ಸಿದ್ಧಿಗಳು ತೃಣವೆಂಬ ಸಡಗರವ
ಕ್ಷಣದೊಳೀವುದಕೆ ಪ್ರಣವ ಷಡ್ವಿಧ ಚಿಂತಾ-
ಮಣಿಯೆಂದ ಗುರುವೆ ಕೃಪೆಯಾಗು

ಗುರುಲಿಂಗ ಚರತೀರ್ಥ ಚಿರಶೇಷ ಭಸಿತಾಕ್ಷಿ
ವರಮಣಿ ಮಂತ್ರಾಷ್ಟಾವರಣ ನಿನ್ನಂಗವೆಂ-
ದೊರೆದ ಶ್ರೀಗುರುವೆ ಕೃಪೆಯಾಗು

ಮೈಲಾರದ ಶ್ರೀ ಬಸವಲಿಂಗ

---

2 'ಏತಲ್ಲಿಂಗಾಂಗ ಸಂಯೋಗಃ ಶಿಖಿಕರ್ಪೂರಯೋಗವತ್' (ಶಿವಾನುಭವಸೂತ್ರ ೫-೫೬)

# ವೀರಶೈವದರ್ಶನದಲ್ಲಿ ಜಗತ್ತು

ಜಿ. ಎಸ್. ರೇಚಣ್ಣ

ವಿಚಾರವಂತ ಪ್ರಾಣಿಯಾದ ಮಾನವ ತಾನು ವಾಸಿಸುವ ಈ ಜಗತ್ತಿನಲ್ಲಿ ತನ್ನ ಅನುಭವಕ್ಕೆ ಬರುವ ವಿಷಯಗಳ ಪರಮಸತ್ಯದ ಸ್ವರೂಪವನ್ನು ಕುರಿತು ಮಾಡುವ ಜಿಜ್ಞಾಸೆಗೆ ತತ್ವಶಾಸ್ತ್ರ ಎಂದು ಹೆಸರು. ಮಾನವ ಜಾಗೃತಚಿತ್ತನಾದಾಗಿನಿಂದಲೂ ಈ ಬೌದ್ಧಿಕ ಸಾಹಸದಲ್ಲಿ ತೊಡಗಿದ್ದಾನೆ. ಮೌಲಾನಾ ಅಬುಲ್ ಕಲಾಂ ಅಜಾದ್ ಅವರು ತತ್ವಜ್ಞಾನವು "ಬದುಕಿನ ಇರವಿನ ಸ್ವರೂಪವನ್ನು ಕುರಿತ ಜಿಜ್ಞಾಸೆ"[1] ಎಂದು ಸ್ಪಷ್ಟೀಕರಿಸಿರುವರು.

ಪರಮಸತ್ಯದ ಸಮಗ್ರ ಹಾಗೂ ಸಮ್ಯಕ್‌ಜ್ಞಾನಾರ್ಜನೆಗೆ ನಾವು ಕೈಕೊಳ್ಳುವ ಜಿಜ್ಞಾಸೆ ತತ್ವಶಾಸ್ತ್ರವಾದರೆ, ಆ ಪರಮಸತ್ಯದ ನೇರ ಸಾಕ್ಷಾತ್ಕಾರಕ್ಕೆ ನಾವು ರೂಪಿಸುವ ಸಾಧನವೇ ಧರ್ಮ. ತತ್ವಶಾಸ್ತ್ರದ ಸ್ವರೂಪವು ಪ್ರಧಾನವಾಗಿ ತಾರ್ಕಿಕ ಮತ್ತು ಸೈದ್ಧಾಂತಿಕ (Theoretical)ವಾದರೆ, ಧರ್ಮದ ಸ್ವರೂಪವು ನೈತಿಕ (Moral) ಮತ್ತು ಅನುಭಾವಾತ್ಮಕವಾಗಿರುವುದು. ತತ್ವಜ್ಞಾನವು ಜೀವನವನ್ನು ಕುರಿತ ಒಂದು ದೃಷ್ಟಿ, ಧರ್ಮವು ಒಂದು ಜೀವನಕ್ರಮ. ಹೀಗೆ ತತ್ವಶಾಸ್ತ್ರ ಹಾಗೂ ಧರ್ಮಗಳ ನಡುವೆ ಭಿನ್ನತೆ ಇದೆ. ಆದಾಗ್ಯೂ ಭಾರತದಲ್ಲಿ, ತತ್ವಶಾಸ್ತ್ರವು ಧರ್ಮದ ಸೈದ್ಧಾಂತಿಕ ಅಂಗವಾಗಿ (Theoretical aspect) ಧರ್ಮವು ತತ್ವಶಾಸ್ತ್ರದ ಪ್ರಾಯೋಗಿಕ ಅಂಗವಾಗಿ, ಒಂದನ್ನೊಂದು ಶ್ರೀಮಂತಗೊಳಿಸುತ್ತಾ ಒಟ್ಟಿಗೆ ಪ್ರವಹಿಸುತ್ತವೆ. ಪ್ರೊ. ಎಂ. ಹಿರಿಯಣ್ಣನವರ ಹೇಳಿಕೆಯಂತೆ : "ಭಾರತದಲ್ಲಿ ಧರ್ಮ ಮತ್ತು ತತ್ವಶಾಸ್ತ್ರ ಬೇರ್ಪಟ್ಟು ನಿಲ್ಲುವುದಿಲ್ಲ." ಭಾರತೀಯ ತತ್ವಶಾಸ್ತ್ರದ ಪರಿಧಿಗೊಳಪಟ್ಟ ಎಲ್ಲ ದಾರ್ಶನಿಕ ಪದ್ಧತಿಗಳಲ್ಲಿಯೂ ತತ್ವಶಾಸ್ತ್ರ ಮತ್ತು ಧರ್ಮಗಳ ಒಡನಾಟವನ್ನು ನಾವು ಕಾಣುತ್ತೇವೆ. ವಿಚಾರ ಮತ್ತು ಆಚಾರಗಳ ಸಮನ್ವಯಕ್ಕೆ ಹೆಸರಾದ ವೀರಶೈವದರ್ಶನಕ್ಕೂ ಈ ಮಾತು ಅನ್ವಯಿಸುವುದು. ಅಂದರೆ ವೀರಶೈವವು ಒಂದು ತತ್ವಶಾಸ್ತ್ರವೂ ಅಹುದು ಮತ್ತು ಒಂದು ಧರ್ಮವೂ ಅಹುದು.

ವೀರಶೈವದಾರ್ಶನಿಕರು ತಮ್ಮ ಅಧ್ಯಾತ್ಮಶಾಸ್ತ್ರವನ್ನು (Metaphysics) "ಶಕ್ತಿವಿಶಿಷ್ಟಾದ್ವೈತ"ವೆಂಬ ಅಭಿಧಾನದಿಂದ ಕರೆಯುವರು. ಅಧ್ಯಾತ್ಮಶಾಸ್ತ್ರ ಅಥವಾ ತತ್ವಮೀಮಾಂಸೆ ಎಂದರೆ ಈಶ್ವರ, ಜೀವ ಮತ್ತು ಜಗತ್ತು ಇವುಗಳ ಸ್ವರೂಪ ಹಾಗೂ ಪರಸ್ಪರ ಸಂಬಂಧ ಮುಂತಾದುವುಗಳನ್ನು ಕುರಿತ ವ್ಯವಸ್ಥಿತ ವಿಚಾರ. "ಶಕ್ತಿವಿಶಿಷ್ಟಾದ್ವೈತ"ವನ್ನು "ಶಕ್ತಿಶ್ಚ ಶಕ್ತಿಶ್ಚ ಶಕ್ತೀ, ತಾಭ್ಯಾಂ ವಿಶಿಷ್ಟೌ ಜೀವೇಶೌ ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ" ಎಂದು ವ್ಯಾಖ್ಯಾನಿಸಲಾಗಿದೆ. ಸ್ಥೂಲಶಕ್ತಿವಿಶಿಷ್ಟನಾದ ಜೀವನಿಗೂ ಮತ್ತು ಸೂಕ್ಷ್ಮಶಕ್ತಿವಿಶಿಷ್ಟನಾದ ಶಿವನಿಗೂ ಸಾಮರಸ್ಯ ಉಂಟೆಂದು ಇದರ ಸಂಕ್ಷಿಪ್ತಾರ್ಥ. ವೀರಶೈವಾಧ್ಯಾತ್ಮಶಾಸ್ತ್ರವನ್ನು "ಶಕ್ತಿವಿಶಿಷ್ಟಾದ್ವೈತ"ವೆಂಬ ಹೆಸರಿನಿಂದಲ್ಲದೆ "ದ್ವೈತಾದ್ವೈತ", "ಭೇದಾಭೇದ", "ವಿಶೇಷಾದ್ವೈತ" ಇವೇ ಮುಂತಾದ ಪರ್ಯಾಯನಾಮಗಳಿಂದಲೂ ನಿರ್ದೇಶಿಸಲಾಗಿದೆ. ತೋಂಟದ ಸಿದ್ಧಲಿಂಗಶಿವಯೋಗಿಗಳು ಷಟ್‌ಸ್ಥಲಮಾರ್ಗವು ಶಿವಾದ್ವೈತಮಾರ್ಗವೆಂದು ಹೇಳುವ ಮೂಲಕ ವೀರಶೈವ ಅಧ್ಯಾತ್ಮಶಾಸ್ತ್ರವನ್ನು "ಶಿವಾದ್ವೈತ"ವೆಂದು ಕರೆದಂತಾಗಿದೆ. ಶಿವಯೋಗಿಗಳ ವಚನೋಕ್ತಿಯಲ್ಲಿ "ಈ ಷಟ್‌ಸ್ಥಲಮಾರ್ಗವು ದ್ವೈತಾದ್ವೈತಪರಿವರ್ತನೆಯಲ್ಲ. ಅದೇನು ಕಾರಣವೆಂದಡೆ ; ಇದು ಶಿವಾದ್ವೈತಮಾರ್ಗವಾದ ಕಾರಣ."[2] ವೀರಶೈವವನ್ನು "ಷಟ್‌ಸ್ಥಲಸಿದ್ಧಾಂತ"ವೆಂದೂ ಹೆಸರಿಸುವುದುಂಟು.

ಈಶ್ವರ, ಜೀವ ಮತ್ತು ಜಗತ್ತು ಇವು ವೀರಶೈವ ಅಧ್ಯಾತ್ಮಶಾಸ್ತ್ರವು ಅಂಗೀಕರಿಸಿರುವ ತತ್ವತ್ರಯಗಳು. ಈ ಮೂರು ತತ್ವಗಳೂ ಸತ್ಯವೇ. ಈ ತ್ರಿಪುಟಿಯಲ್ಲಿ ಈಶ್ವರತತ್ವವೇ ಉಳಿದೆರಡು ತತ್ವಗಳಿಗೆ ಮೂಲ ಹಾಗೂ ಆತ್ಯಂತಿಕ

[1] ತತ್ವಶಾಸ್ತ್ರ : ಪ್ರಾಚ್ಯ ಮತ್ತು ಪಾಶ್ಚಾತ್ಯ, ಸಂಪುಟ ೧, ಪುಟ ೬

[2] ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೨೮

ಆಶ್ರಯ. ಈಶ್ವರ ತತ್ತ್ವವು, ಜೀವ ಮತ್ತು ಜಗತ್ತುಗಳಂತೆ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಅಧೀನವಾಗಿರದೆ ಅವುಗಳಿಗೆ ಅತೀತವಾದ ತತ್ತ್ವವಾಗಿದೆ. ಉರಿಲಿಂಗಪೆದ್ದಿಪ್ರಿಯ ಹೇಳುವಂತೆ: "ಶಿವ....(ಈಶ್ವರ) ಅಜಾತನಾಗಿ ಉತ್ಪತ್ತಿ ಇಲ್ಲ. ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ; ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳ ಹೊದ್ದಲರಿಯ.[1]" ಆದರೆ ಈಶ್ವರನೇ ಜೀವ, ಜಗತ್ತುಗಳ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಕಾರಣನಾಗಿರುತ್ತಾನೆ. ಬಸವಣ್ಣನವರು ಹೇಳುವಂತೆ: "ಶಿವನೇ ಜಗತ್ರಯಕ್ಕೊಡೆಯನೆಂಬುದು ವೇದ. ಉತ್ಪತ್ತಿ, ಸ್ಥಿತಿ, ಲಯ ಕಾರಣವೆಂಬುದು ವೇದ. 'ಈಶ್ವರಸ್ಸರ್ವಜಗತ್‌ಪ್ರಭುಃ ಪ್ರೇರಕೋ ವಿಶ್ವಭುಕ್' ಇದು ಕಾರಣ ಕೂಡಲ ಸಂಗಮದೇವನೊಬ್ಬನೇ ದೇವನು."[2] ಈ ಕಾರಣದಿಂದಾಗಿ ವೀರಶೈವದರ್ಶನದಲ್ಲಿ ಈಶ್ವರತತ್ತ್ವವೇ ಪರತತ್ತ್ವವೆಂದು ಪರಿಗಣಿತವಾಗಿದೆ. ಈ ಪರತತ್ತ್ವವೇ ಪರಶಿವ. ಪರಶಿವತತ್ತ್ವವನ್ನು ವೀರಶೈವದಲ್ಲಿ 'ಬಯಲು', 'ಲಿಂಗ', 'ನಿರವಯ', 'ಶೂನ್ಯ', 'ಸಹಜ' ಎಂದು ನಿರ್ದೇಶಿಸಲಾಗಿದೆ.

ಏಕಮೇವಾದ್ವಿತೀಯವೂ, ಸಚ್ಚಿದಾನಂದನಿತ್ಯಪರಿಪೂರ್ಣವೂ ವಾಙ್ಮನಕ್ಕಗೋಚರವೂ, ಅನುಭಾವದಿಂದಲೇ ಅರಿಯಬಹುದಾದ, ಘನಕ್ಕೆ ಘನವಾದ ಪರವಸ್ತುವನ್ನು ಶಿವಶರಣರು ಸಾಕ್ಷಾತ್ಕರಿಸಿಕೊಂಡು ಅದರ ಸ್ವರೂಪವನ್ನು ತಾತ್ತ್ವಿಕ ಮತ್ತು ಧಾರ್ಮಿಕದೃಷ್ಟಿಗಳಿಂದ ವಿವೇಚಿಸಿ ವಚನಗಳ ಮೂಲಕ ಜನತೆಗೆ ಕೊಟ್ಟಿರುವರು. ವಚನಕಾರರ ವಿವೇಚನೆಯಲ್ಲಿ ಶಿವನು ಅಣೋರಣೀಯಾನ್ ಮಹತೋ ಮಹೀಯಾನ್, ನಿತ್ಯನು, ಸರ್ವಜ್ಞನು, ಸರ್ವಶಕ್ತನು, ಸರ್ವಕರ್ತೃವು ಆಗಿರುವನು. ಮಾತ್ರವಲ್ಲದೆ, ಶಿವನು ವಿಶ್ವಪತಿ, ವಿಶ್ವವ್ಯಾಪಿ ಮತ್ತು ವಿಶ್ವಾತೀತ. ನಿರ್ಗುಣ ಹಾಗೂ ಸಗುಣ, ನಿರಾಕಾರ ಹಾಗೂ ಸಾಕಾರ, ಸಕಲ ಹಾಗೂ ನಿಷ್ಕಲ, ಹಾಗೂ ಅವುಗಳನ್ನು ಮೀರಿದವನೂ ಅಹುದು.[3] "ತಾನೆ ಸಗುಣ ನಿರ್ಗುಣಕ್ಕಾಧಾರಮೂರ್ತಿ, ತಾನೇ ಸಾಕಾರ ನಿರಾಕಾರಕ್ಕಾಧಾರಮೂರ್ತಿ, ನಿಜವಸ್ತು....ಕೂಡಲ ಸಂಗಮದೇವ.[4] ಈ ತೆರನಾಗಿ ವಚನಕಾರರು ಜ್ಞಾನ ಹಾಗೂ ಭಾವದೃಷ್ಟಿಗಳಿಂದ ಒಂದೇ ಪರವಸ್ತುವಿನ ಸ್ವರೂಪವನ್ನು ವಚನಗಳ ಮೂಲಕ ಚಿತ್ರಿಸಿರುವರು. "ಲೀಲೆಯಾದೊಡೆ ಉಮಾಪತಿ ಲೀಲೆ ತಪ್ಪಿದೊಡೆ ಸ್ವಯಂಭು" ಎಂಬ ಪ್ರಭುದೇವರ ಈ ಮಾತು ಶಿವಶರಣರ ದೈವತ್ವಕಲ್ಪನೆಯ ಸಾರಸಂಗ್ರಹವಾಗಿದೆ.

ವೀರಶೈವದರ್ಶನದಲ್ಲಿ ಶಿವನು ಶಕ್ತಿವಿಶಿಷ್ಟನು; ಅರ್ಥಾತ್ ಸವಿಶೇಷನು. ವೀರಶೈವದರ್ಶನದಲ್ಲಿ ಶಿವ-ಶಕ್ತಿಯರ ಸಂಬಂಧವನ್ನು[5] ಅವಿನಾಭಾವಸಂಬಂಧವೆಂದು ಕರೆಯಲಾಗಿದೆ. ಶಿವ ಮತ್ತು ಶಕ್ತಿ ಒಂದನ್ನು ಬಿಟ್ಟು ಇನ್ನೊಂದಿರಲಾರದು. "ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ" ವಾಕ್ ಮತ್ತು ಅರ್ಥ, ಪುಷ್ಪ-ಪರಿಮಳ, ಬೆಳದಿಂಗಳು-ತಂಪು, ಇಂಗಡಲು-ಇಂಪು, ರತ್ನ-ಕಾಂತಿ, ಇವು ಒಟ್ಟಿಗೆ ಇರುವಂತೆ ಶಿವ-ಶಕ್ತಿಯರು ಒಟ್ಟಿಗೇ ಇರುತ್ತಾರೆ. "ಶಕ್ತಿ ಮತ್ತು ಶಿವ ಇವೆರಡೂ ಸಚ್ಚಿದಾನಂದ ನಿತ್ಯಪರಿಪೂರ್ಣವಾಗಿ ಸರ್ವಾವಸ್ಥೆಯಲ್ಲಿಯೂ ಅವಿನಾಭಾವದಿಂದ ಎರಡಲ್ಲದ ಒಂದಾಗಿರುತ್ತವೆ."[6] ಈ ತೆರನಾದ "ಬಿಚ್ಚಿ ಬೇರಾಗದ, ಬೆರಸಿ ಒಂದಾಗದ, ದೀಪ ದೀಪ್ತಿ"ಯಂತಿರುವ ಶಿವಶಕ್ತಿಯರ ಸಂಬಂಧವೇ ಅವಿನಾಭಾವ ಸಂಬಂಧ. ಶಿವಶರಣರ ಅನೇಕ ವಚನಗಳು ಶಿವ-ಶಕ್ತಿಯರ ಅವಿನಾಭಾವ ಸಂಬಂಧವನ್ನು ಸೂಚಿಸುತ್ತವೆ. ಅಲ್ಲಮಪ್ರಭು ಶಿವ-ಶಕ್ತಿಯರ ಸಂಬಂಧ ಅಭಿನ್ನ ಮತ್ತು ನಿತ್ಯವೆಂಬುದನ್ನು ತನ್ನ ವಚನವೊಂದರಲ್ಲಿ ರಹಸ್ಯವಾಗಿ ಹೇಳಿರುವನು. "ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ ? ಶಿವನೇ ಚೈತನ್ಯಾತ್ಮನು ಶಕ್ತಿಯೇ ಚಿತ್ತು. ಇಂತು ಚೈತನ್ಯಾತ್ಮನೇ ಚಿತ್‌ಸ್ವರೂಪನೆಂದರಿಯ ಬಲ್ಲರೆ ಭಿನ್ನವೆಲ್ಲಿಯದು ಗುಹೇಶ್ವರಾ ?"[7]

ವೀರಶೈವ ದಾರ್ಶನಿಕರು ಶಿವನಲ್ಲಿ ಅವಿನಾಭಾವ ಸಂಬಂಧದಿಂದ ನೆಲಸಿರ್ಪ ಈ ಶಕ್ತಿಯನ್ನು "ವಿಮರ್ಶಾ

---

1 ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಪುಟ ೯೧

2 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಪುಟ ೩೨, ಭಾಗ ೧

3 ದ್ರವ್ಯ ನೀನು, ಪ್ರತ್ಯಾರ್ಥಿ ನೀನು...ಸಕಲನು ನೀನು, ನಿಷ್ಕಲನು ನೀನು, ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೧, ಪುಟ ೧೬

4 ಅದೇ. ಪುಟ ೫೪

5 'ಶಿವಾದ್ವೈತ'ಮತದಲ್ಲಿ ಶಿವನು ನಿರ್ವಿಶೇಷನಲ್ಲ; ಸವಿಶೇಷ. ಶಕ್ತಿವಿಶಿಷ್ಟನಾದ ಕಾರಣ ಸವಿಶೇಷನೆನಿಸಿದ್ದಾನೆ. ಡಾ. ಜ.ಚ.ನಿ : ಶಿವಾದ್ವೈತದರ್ಶನ, ಪುಟ ೧೧

6 ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೧೩೨

7 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೧, ಪುಟ ೫೪

ಶಕ್ತಿ"[1] ಎಂದಿದ್ದಾರೆ. ಅಸ್ಮಿ, ಪ್ರಕಾಶೇ, ನಂದಾಮಿ ಎಂಬ ಪರಶಿವನ ಸ್ವಾನುಭವವೇ ವಿಮರ್ಶಶಕ್ತಿ. ಈ 'ವಿಮರ್ಶ' ಇಲ್ಲದಿದ್ದಲ್ಲಿ ಶಿವನು ಜಡನಾಗುತ್ತಿದ್ದನು. ಈ ಶಕ್ತಿಯನ್ನು ಕೆಲವೆಡೆ ವಚನಕಾರರು 'ಮಾಯೆ' ಎಂದು ಕರೆದಿರುವರು. "ಅನಾದಿಯಾಗಿ ಶಿವನುಂಟು, ಮಾಯೆಯುಂಟು. ಇಂತು ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡಾ."[2]

ವೀರಶೈವದರ್ಶನವು ಪ್ರತಿಪಾದಿಸಿರುವ ಶಿವ-ಶಕ್ತಿಯರ ಅವಿನಾಭಾವಸಂಬಂಧವು ಅದರ ಸಮನ್ವಯ ದೃಷ್ಟಿಗೆ ಒಂದು ಜೀವಂತ ನಿದರ್ಶನ. ಡಾ. ಜ.ಚ.ನಿ.ಯವರ ನುಡಿಯಲ್ಲಿ "ಶಿವಪಾರಮ್ಯವನ್ನು ಹೇಳುತ್ತದೆ ಶೈವ ಮತ. ಶಕ್ತಿಪಾರಮ್ಯವನ್ನು ಹೇಳುತ್ತದೆ ಶಾಕ್ತಮತ. ಶಿವ-ಶಕ್ತಿ ಈ ಉಭಯಸಮಪಾರಮ್ಯವನ್ನು ಹೇಳುತ್ತದೆ ವೀರಶೈವಮತ."[3]

ವೀರಶೈವದಲ್ಲಿ ಶಕ್ತಿವಿಶಿಷ್ಟನಾದ ಪರಶಿವನೇ ಜಗತ್ತಿನ ನಿಮಿತ್ತ ಹಾಗೂ ಉಪಾದಾನಕಾರಣ.[4] ವೀರಶೈವವು ಪರಶಿವನು ಶಕ್ತಿವಿಶಿಷ್ಟನೆಂದು ಅಂಗೀಕರಿಸದಿದ್ದರೆ ಆಗ ವೀರಶೈವದರ್ಶನದ ಪರವಸ್ತುವು ಶ್ರೀಶಂಕರಾದ್ವೈತದ ಬ್ರಹ್ಮದಂತೆ ನಿಷ್ಕ್ರಿಯವಾಗುತ್ತಿತ್ತು. ತತ್ಪರಿಣಾಮವಾಗಿ ವೀರಶೈವವು ಮಿಥ್ಯಾವಾದವನ್ನು ಆಶ್ರಯಿಸಿ ಅದ್ವೈತದ ಜಾಡನ್ನೇ ಹಿಡಿದು, ಜಗತ್ತು ಮತ್ತು ಜೀವಗಳ ಸ್ವರೂಪವನ್ನು ಪ್ರತಿಪಾದಿಸಬೇಕಾಗುತ್ತಿತ್ತು. ಡಾ. ಆರ್. ಸಿ. ಹಿರೇಮಠ ಅವರ ಅಭಿಪ್ರಾಯದಲ್ಲಿ: "ಪರಶಿವನಲ್ಲಿ ಸ್ವವಿಮರ್ಶರೂಪದ ಶಕ್ತಿಯನ್ನು ಅಂಗೀಕರಿಸದಿದ್ದರೆ, ಅಲ್ಲಿ ಅಸ್ಮಿ, ಪ್ರಕಾಶೇ, ನಂದಾಮಿ ಎಂಬ ಸಂವಿತ್ತು ಉಂಟಾಗುತ್ತಿರಲಿಲ್ಲ. ಈ ಶಕ್ತಿವಿಶಿಷ್ಟತೆಯನ್ನು ಅಂಗೀಕರಿಸದಿದ್ದರೆ ಸರ್ವಜ್ಞತ್ವ, ಸರ್ವಶಕ್ತಿಮತ್ತ್ವ, ಸರ್ವಕಾರಣತ್ವ, ಸರ್ವನಿಯಂತೃತ್ವ, ಸರ್ವಾನುಗ್ರಾಹಕತ್ವ ಮುಂತಾದವುಗಳು ಆ ಬ್ರಹ್ಮದಲ್ಲಿ ತೋರದೆ ಆತನು ತೇಜೋಮಯನಾಗಿ ಬೆಳಗುವ ಶಿಲೆಯಾಗಬಲ್ಲನು. ಇದನ್ನು ದೂರಮಾಡುವುದಕ್ಕಾಗಿಯೇ ವೀರಶೈವಸಿದ್ಧಾಂತವು ಶಕ್ತಿವಿಶಿಷ್ಟಪರಮಾತ್ಮನನ್ನು ಅಂಗೀಕರಿಸಿತು."[5]

ವೀರಶೈವದರ್ಶನದಲ್ಲಿ ಜಗತ್ತು ಎಂದರೆ ಶಿವಾದಿಯಾಗಿ ಭೂಮ್ಯಂತದವರೆಗೆ, ಆತ್ಮತತ್ತ್ವವನ್ನೊಳಗೊಂಡು (ಅಥವಾ ಸಕಲ ಜೀವರಾಶಿಯಿಂದೊಡಗೂಡಿ) ಮುವತ್ತಾರು ತತ್ತ್ವಗಳಿಂದ ನಿರ್ಮಿತವಾದ ಒಂದು ವ್ಯವಸ್ಥೆ. ತತ್ತ್ವಸಮನ್ವಿತವಾದ ಈ ಜಗತ್ತನ್ನು ಪ್ರಪಂಚ, ಬ್ರಹ್ಮಾಂಡ, ವಿಶ್ವ, ಲೋಕ ಎಂದು ಮುಂತಾಗಿ ವಚನಕಾರರು ಕರೆದಿರುವರು. ಮಾತ್ರವಲ್ಲದೆ ಶರಣರ ತಾತ್ತ್ವಿಕ ವಿವೇಚನೆಯಲ್ಲಿ ಈ ಜಗತ್ತು ಒಂದು ಕಾರ್ಯ. ಅದರ ಉತ್ಪತ್ತಿ, ನಿಮಿತ್ತ ಮತ್ತು ಉಪಾದಾನಕಾರಣಗಳಿಂದಾಗಿದೆ. ವೀರಶೈವದರ್ಶನದಲ್ಲಿ ಶಿವನೇ ಜಗತ್ತಿನ ನಿಮಿತ್ತಕಾರಣನು. ಶಕ್ತಿಯೇ ಅದರ ಉಪಾದಾನಕಾರಣ. "ಅನಾದಿಯಾಗಿ ಶಿವನುಂಟು ಮಾಯೆಯುಂಟು, ಇಂತೀ ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡಾ"[6] ಎಂಬ ಈ ವಚನದಲ್ಲಿ ಶಕ್ತಿಯೂ ಜಗತ್ತಿನ ಉಪಾದಾನಕಾರಣವೆಂಬುದು ಧ್ವನಿತವಾಗಿದೆ. ಜಗತ್ತಿನ ಉಪಾದಾನಕಾರಣವೆನ್ನಲಾದ ಶಕ್ತಿಯು ಶಿವನಲ್ಲಿ ಅವಿನಾಭಾವಸಂಬಂಧದಿಂದ ನೆಲಸಿರುವ ಶಕ್ತಿಯೇ ಹೊರತು ಬೇರೆಯಲ್ಲ. ಆದ್ದರಿಂದ ಶಿವನೇ ಜಗತ್ತಿನ ನಿಮಿತ್ತ ಹಾಗೂ ಉಪಾದಾನಕಾರಣವೆಂದಂತಾಯಿತು. ವಾಸ್ತವವಾಗಿ ಶಿವನೇ ಜಗತ್ತಿನ "ಅಭಿನ್ನನಿಮಿತ್ತೋಪಾದಾನಕಾರಣ"ವೆಂಬುದು ವೀರಶೈವದ ಮತವಾಗಿದೆ. ಜೇಡರಹುಳು ತನ್ನ ಎಂಜಲಿನಿಂದಲೇ ಬಲೆ ಹೆಣೆಯುವಂತೆ, ಶಿವನು ತನ್ನಿಂದ ಬೇರೆಯಾದ ಯಾವ ವಸ್ತುವಿನ ನೆರವಿಲ್ಲದೇ ತನ್ನಲ್ಲಿಯೇ ಅವಿನಾಭಾವಸಂಬಂಧದಿಂದ ಕೂಡಿರುವ ಶಕ್ತಿಯಿಂದ ಜಗತ್ತನ್ನು ಸೃಷ್ಟಿಸುವುದರಿಂದ ಶಿವನು ಜಗದ "ಅಭಿನ್ನನಿಮಿತ್ತೋಪಾದಾನಕಾರಣ"ನೆನಿಸಿದ್ದಾನೆ. "ಕಟಕಸೂತ್ರದ ಕೂಡ ಮಾಡಿಕೊಂಡಿಪ್ಪಲ್ಲಿ ಸೂತ್ರಕ್ಕೆ ನೂಲನು ಅದೆಲ್ಲಿಂದ ತಂದಿತ್ತು? ರಾಟೆ ಇಲ್ಲ, ಹಂಜಿ ಇಲ್ಲ. ತನ್ನಲ್ಲಿಯೇ ನೂಲ ಕಲ್ಪಿಸಿ, ತಾನದ ಮಾಡಿಕೊಂಡು ಆಡಿ ಅಡಗಿಸಿಕೊಂಡು ಹೋಹಂತೆ ತನ್ನ ಲೀಲೆಗೆ ತಾನೇ ಮಾಡಿಕೊಂಡ ವಿಶ್ವಪ್ರಪಂಚ. ತನ್ನಲ್ಲಿಯೇ ಲಯವನೈದಿಸಿಕೊಂಡು ಕೂಡಲ ಚೆನ್ನಸಂಗಯ್ಯ ನಿರ್ವಯಲಾದನು."[7] ಈ ವಚನದಲ್ಲಿ ಶಿವನು ಜಗದ "ಅಭಿನ್ನನಿಮಿತ್ತೋಪಾದಾನಕಾರಣ"ನೆಂಬ

---

1 ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ। ಡಾ. ಹೆಚ್. ತಿಪ್ಪೇರುದ್ರಸ್ವಾಮಿ: ವಚನಗಳಲ್ಲಿ ವೀರಶೈವ ಧರ್ಮ, ಪುಟ ೭೫

2 ಡಾ. ಹೆಚ್. ತಿಪ್ಪೇರುದ್ರಸ್ವಾಮಿ: ವಚನಗಳಲ್ಲಿ ವೀರಶೈವಧರ್ಮ, ಪುಟ ೭೮

3 ಜೀವನಸಿದ್ಧಾಂತ, ಪುಟ ೫೩

4 Sri Basaveswara Commemoration Volume, p. 355

5 ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೧೩೦

6 ಡಾ. ಹೆಚ್. ತಿಪ್ಪೇರುದ್ರಸ್ವಾಮಿ: ವಚನಗಳಲ್ಲಿ ವೀರಶೈವಧರ್ಮ, ಪುಟ ೭೮

7 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೧, ಪುಟ ೪೬

ಕಲ್ಪನೆಯೂ ಮತ್ತು ಶಿವನಿಂದ ಸೃಷ್ಟಿನಿರ್ಮಾಣಕ್ಕೆ ಕಾರಣವೂ ಸೂಚಿತವಾಗಿರುವುದನ್ನು ಕಾಣಬಹುದು.

ಶ್ರೀರಾಮಾನುಜರಿಂದ ಬೋಧಿಸಲ್ಪಟ್ಟ ವಿಶಿಷ್ಟಾದ್ವೈತಸಿದ್ಧಾಂತದಲ್ಲಿಯೂ ಸೃಷ್ಟಿ, ನಿಮಿತ್ತ ಹಾಗೂ ಉಪಾದಾನಕಾರಣಗಳಿಂದಾಯಿತೆಂದೂ ಮತ್ತು ಈಶ್ವರ (ವಿಷ್ಣು)ನೇ ಸೃಷ್ಟಿಯ ನಿಮಿತ್ತ ಹಾಗೂ ಉಪಾದಾನ ಕಾರಣನೆಂದೂ ಪ್ರತಿಪಾದಿಸಲಾಗಿದೆ. "ಬ್ರಹ್ಮನು ವಿಶ್ವಕ್ಕೆ ಉಪಾದಾನ ಮತ್ತು ನಿಮಿತ್ತಕಾರಣ. ಅವನಿಂದ ಹೊರಗೆ ಬೇರೆ ಯಾವುದೂ ಇರಲಾರದು. ಆದ್ದರಿಂದ ವಿಶ್ವಕ್ಕೆಲ್ಲಾ ಅವನು ಉಪಾದಾನಕಾರಣ. ವಿಶ್ವದಲ್ಲಿರುವುದೆಲ್ಲ ಅವನ ನಿಯಮಕ್ಕೆ ಒಳಪಟ್ಟದ್ದಾದ್ದರಿಂದ ಅವನು ಅವುಗಳ ನಿಮಿತ್ತಕಾರಣ."[1] ಶೈವಸಿದ್ಧಾಂತವು ನಿಮಿತ್ತ ಹಾಗೂ ಉಪಾದಾನಕಾರಣಗಳ ಜೊತೆಗೆ ಮೂಲಕಾರಣ ಒಂದನ್ನು ಒಪ್ಪಿ, ಸೃಷ್ಟಿ ಈ ಮೂರೂ ಕಾರಣಗಳಿಂದಾಯಿತೆಂದು ಪ್ರತಿಪಾದಿಸಿದೆ. ಶೈವಸಿದ್ಧಾಂತದ ಪ್ರಕಾರ 'ಶಿವ' ಜಗತ್ತಿನ ಮೂಲಕಾರಣವಾದರೆ ಅವನ 'ಶಕ್ತಿ' ನಿಮಿತ್ತಕಾರಣ ಮತ್ತು 'ಮಾಯೆ' ಉಪಾದಾನಕಾರಣವಾಗಿರುತ್ತವೆ.

ಜಗತ್ತು ಶಕ್ತಿವಿಶಿಷ್ಟನಾದ ಶಿವನಿಂದ ಉತ್ಪತ್ತಿಯಾಯಿತು. ಇದು ವೀರಶೈವದ ಮತವಷ್ಟೆ. ಈಗ ಶಕ್ತಿವಿಶಿಷ್ಟನಾದ ಶಿವನಿಂದ ಜಗತ್ತಿನ ಸೃಷ್ಟಿ ಹೇಗಾಯಿತು ಮತ್ತು ಏಕಾಯಿತು ಎಂಬುದನ್ನು ತಿಳಿಯೋಣ.

ಈ ಬ್ರಹ್ಮಾಂಡದ ಸೃಷ್ಟಿಗೆ ಪೂರ್ವದಲ್ಲಿ ಶಿವನು ಏಕೈಕನಾಗಿದ್ದ. ಪ್ರಭುದೇವರ ವಚನೋಕ್ತಿಯಂತೆ: "ಆದಿ ಅನಾದಿ ಇಲ್ಲದಂದು, ಶೂನ್ಯ ನಿಶ್ಶೂನ್ಯಗಳಿಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು ಸುರಾಳ ನಿರಾಳವಿಲ್ಲದಂದು; ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರ ನೀನೊಬ್ಬನೇ ಇದ್ದೆಯಲ್ಲ ಇಲ್ಲದಂತೆ."[2]

ಚರಾಚರಾತ್ಮಕವಾದ ಈ ಜಗತ್ತು ಅಸ್ತಿತ್ವದಲ್ಲಿಲ್ಲದಿದ್ದ ಕಾಲ ಒಂದಿತ್ತು; ಆಗ ಪರವಸ್ತುವೊಂದೇ ಇತ್ತು—ಎಂಬೀ ಭಾವಗಳು ಮೇಲಿನ ವಚನದಿಂದ ಹೊರಡುತ್ತವೆ. ಆದರೆ ಜಗತ್ತು ಅಸ್ತಿತ್ವಕ್ಕೇ ಬಾರದಿದ್ದ ಕಾಲ ಯಾವುದು ? ಜಗತ್ತಿನ ಸೃಷ್ಟಿ ಎಂದಾಯಿತು ? ಈ ಪ್ರಶ್ನೆಗಳಿಗೆ ಉತ್ತರವಿಲ್ಲ. ಏಕೆಂದರೆ, ಜಗತ್ತು ಒಂದು ದೃಷ್ಟಿಯಿಂದ ಒಂದು ನಿರಂತರ ಸೃಜನಾತ್ಮಕ (Creative) ಪ್ರವಾಹವಾಗಿದ್ದು ಅದು ಒಂದು ಗೊತ್ತಾದ ಕಾಲದಲ್ಲಿ ಪ್ರಕಟವಾಯಿತೆಂದು ಹೇಳಲು ಸಾಧ್ಯವಿಲ್ಲ, ಆ ಬಗ್ಗೆ ಆಧಾರವೂ ಇಲ್ಲ. ಅಂತೂ ಶಿವಶರಣರು ಜಗತ್ತಿನ ಸ್ವರೂಪವನ್ನು ವಿವರಿಸುವಾಗ ಬೋಧನಾಸೌಕರ್ಯಕ್ಕಾಗಿಯೋ ಅಥವಾ ಸೃಷ್ಟಿಕರ್ತನ ನಿತ್ಯತ್ವವನ್ನು ಸ್ಪಷ್ಟಪಡಿಸುವ ಸಲುವಾಗಿಯೋ ಜಗತ್ತಿಗೆ ಆದಿಯುಂಟೆಂದು ಊಹಿಸಿಕೊಂಡಿರುವರು. ಜಗತ್ತಿನ ಉದಯಕ್ಕೆ ಮುನ್ನ ಇದ್ದಿದ್ದು ಪರವಸ್ತು ಒಂದೇ ಎಂಬುದನ್ನು ತೋಂಟದ ಸಿದ್ಧಲಿಂಗಯತಿಗಳು ಹೀಗೆ ವಚನಿಸಿದ್ದಾರೆ: "ಆದಿ ಮಧ್ಯಾವಸಾನವಿಲ್ಲದಂದು, ಆದಿ, ಅನಾದಿ, ನಾದ-ಬಿಂದು-ಕಳೆಗಳಿಲ್ಲದಂದು, ಸಾವಯವ-ನಿರವಯವವಿಲ್ಲದಂದು, ತತ್ವಬ್ರಹ್ಮಾಂಡಾದಿಲೋಕಾದಿ ಲೋಕಂಗಳೇನೂ ಇಲ್ಲದಂದು ನಿತ್ಯನಿರಂಜನಪರವಸ್ತು ನೀನೊಬ್ಬನೇ ಇದ್ದೆಯಲ್ಲಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ."[3] ಸಿದ್ಧಲಿಂಗಶಿವಯೋಗಿಗಳ ಈ ವಚನವು ಕೈವಲ್ಯೋಪನಿಷತ್ತಿನ "ತಮಾದಿಮಧ್ಯಾಂತವಿಹೀನಮೇಕಂ" ಎಂಬುದನ್ನು ನೆನಪಿಗೆ ತಂದುಕೊಡುವುದು.

ಜಗತ್ತು ಮೈದೋರುವ ಮುನ್ನ ಅದಕ್ಕೆ ಮೂಲವಾದ "ಏಕ ಏವ" ಎಂದೆನಿಸಲ್ಪಟ್ಟ ಪರಶಿವನು ಇದ್ದೂ ಇಲ್ಲದಂತೆ, ನಿಸ್ತರಂಗಸಮುದ್ರದಂತೆ ಸ್ವಲೀಯಾವಸ್ಥೆಯಲ್ಲಿದ್ದನು. ಪರಶಿವನ ಸೃಷ್ಟಿಪೂರ್ವದ ಈ ಸ್ವಯಂಭೂ ಸ್ಥಿತಿಯನ್ನು ಅಲ್ಲಮಪ್ರಭು "ಗಗನ ಕಮಲ ಕುಸುಮ ಪರಿಮಳದಿಂದತ್ತತ್ತ"ವೆಂದಿದ್ದಾನೆ. ಅಂದರೆ ಪರಮಾತ್ಮನ ಸೃಷ್ಟಿಪೂರ್ವದ ನಿಲವು ವಾಙ್ಮನಕ್ಕತೀತವು. ಅರ್ಥಾತ್ ಅಜ್ಞೇಯವು, ವರ್ಣಿಸಲಸಾಧ್ಯವು. ಆದರೆ ಪರಶಿವನ ಸೃಷ್ಟಿಪೂರ್ವದ ಈ ಕೇವಲಸ್ಥಿತಿ ಶಿವಜ್ಞಾನದೃಷ್ಟಿಗೆ ನಿಲುಕುವುದೆಂಬುದು ಶಿವಶರಣರ ದೃಢ ನಿಲವು. "ಆದಿ ಅನಾದಿ ಸುರಾಳ ನಿರಾಳವಿಲ್ಲದಂದು ಮಾಯೆಯನು ಕಾಣೆ ಆತ್ಮನನು ಕಾಣೆ. ಮಹಾದೇವ ತಾನೊಬ್ಬನೇ ಇದ್ದನೆಂಬುದು ಕಾಣಬಂದಿತ್ತು ನೋಡಾ ಶಿವಜ್ಞಾನ ದೃಷ್ಟಿಗೆ."[4] ಲೋಕಾದಿಲೋಕಂಗಳು ಹುಟ್ಟುವ ಮುನ್ನ ಅವುಗಳ ಉತ್ಪತ್ತಿಗೆ ಮೂಲವಾಗಿ ಸೃಷ್ಟಿಕರ್ತನೆನಿಸಿಕೊಳ್ಳದೆ ತಾನೇತಾನಾಗಿದ್ದ ಪರಶಿವವಸ್ತುವನ್ನು ಗೂಳೂರ ಸಿದ್ಧವೀರಣ್ಣಾರ್ಯರು 'ನಿಷ್ಕಲಲಿಂಗ'ವೆಂದು ಕರೆದಿರುವರು. "ಪ್ರಥಮದಲ್ಲಿ ಅಖಂಡ, ಅದ್ವಯ, ಅನುಪಮ, ನಿರವಯ, ನಿರಂಜನ ಸರ್ವ

1 ಜಿ. ಹನುಮಂತರಾವ್ : ವಿಶಿಷ್ಟಾದ್ವೈತ, ಪುಟ ೨೪

2 ದೇಗುಲ ಜ್ಯೋತಿ, ಪುಟ ೨೯೫

3 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೪

4 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೧೪

ಶೂನ್ಯವನೊಳಗೊಂಡ ಸಚ್ಚಿದಾನಂದ-ನಿತ್ಯ-ಪರಿಪೂರ್ಣ-ನಿಃಕಲ-ಲಿಂಗವು."[1] ಸೃಷ್ಟಿಯನ್ನು ಕುರಿತ ಕೆಲವು ವಚನಗಳಲ್ಲಿಯೂ ಕೂಡ ಪರವಸ್ತುವನ್ನು "ನಿಷ್ಕಲಲಿಂಗ" ಎಂದು ಕರೆಯಲಾಗಿದೆ.[2] ಈಗ ಪರವಸ್ತುವೆನಿಸಿದ 'ನಿಷ್ಕಲಲಿಂಗ'ದಿಂದ ಸೃಷ್ಟಿಯಾದ ಬಗೆಯನ್ನು ನೋಡೋಣ.

ಸೃಷ್ಟಿಗೆ ಮುನ್ನ ತಾತ್ವಿಕಸತ್ಯವಾದ ನಿಷ್ಕಲಲಿಂಗವು ಒಂದೇ ಇರುತ್ತಿರಲು ಸ್ವಲೀಲೆಯಿಂದ ಜಗತ್ತನ್ನು ಸೃಷ್ಟಿಸಬೇಕೆಂಬ 'ನೆನಹು' ಅದರಲ್ಲಿ ತಲೆದೋರುವುದು.[3] ಆ ನೆನಹೇ ನಿರ್ಧರವಾಗಿ ಮಹಾಜ್ಞಾನಚಿತ್ತೆನಿಸಿಕೊಳ್ಳುವುದು.[4] ಆ ಚಿತ್ತಿನಿಂದ ನಾದ, ಬಿಂದು ಮತ್ತು ಕಲೆಗಳು ಉತ್ಪತ್ತಿಯಾಗಿ ಮೂಲ ಚಿತ್ತುವಿನೊಡನೆ ಬೆರೆತು ಓಂಕಾರ ಪ್ರಣವದ ಉದಯವಾಗುವುದು. ಆ ಓಂಕಾರಪ್ರಣವವೇ ಅಖಂಡ ಗೋಳಾಕಾರದ ಮಹಾಲಿಂಗ. "ಈ ಚಿನ್ನಾದ ಚಿದ್ಬಿಂದು, ಚಿತ್ಕಳೆ ಮೂಲ ಚಿತ್ತೆಂಬ ಚತುರ್ವಿಧವು ಗಟ್ಟಿಗೊಂಡು ಅಖಂಡ ಗೋಳಕಾಕಾರ ತೇಜೋಮೂರ್ತಿಯಾಗಿ ನಿಂದು ಮಹಾಲಿಂಗವೆನಿಸಿತ್ತು."[5] ಈ ಮಹಾಲಿಂಗವನ್ನು ಶಿವತತ್ವವೆಂದೂ ಕರೆಯಬಹುದು.[6] ಹೀಗೆ ನಿಷ್ಕಲ ಲಿಂಗವು ಸೃಷ್ಟಿಮುಖವಾಗಿ ಮಹಾಲಿಂಗವಾಗಿ ಪರಿಣಮಿಸುವುದು. ಇದುವೆ ಪರಶಿವನು ಹುಟ್ಟದೇ ಬೆಳೆಯುವ ಮತ್ತು ಅವನ ನೆನಹು ನಿರ್ಧರಿಸಿ ಚಿತ್‌ಶಕ್ತಿಯಾಗಿ ಪರಿಣಮಿಸುವ ರೀತಿ. ಈ ಅಂಶವನ್ನು ಅಲ್ಲಮಪ್ರಭು ಮಾರ್ಮಿಕವಾಗಿ ಹೀಗೆ ವಚನಿಸಿದ್ದಾನೆ: "ಧರೆಯಾಕಾಶ ಮನೆಗಟ್ಟದಂದು, ಹರಿವನಿಲ ಅಗ್ನಿ ಜಲ ಮೊಳೆದೋರದಂದು, ಹುಟ್ಟಿದಳೆಮ್ಮವ್ವೆ ; ಅದಕ್ಕೆ ಮುನ್ನವೇ ಹುಟ್ಟದೇ ಬೆಳೆದ ನಮ್ಮಯ್ಯ ; ಈ ಇಬ್ಬರ ಬಸಿರಲ್ಲಿ ಬಂದೆ ನಾನು."[7]

ಮೇಲೆ ಹೇಳಿದ ಪ್ರಣವಸ್ವರೂಪಿ ಮಹಾಲಿಂಗದಿಂದ ಐದು ಸಾದಾಖ್ಯಗಳು ಪ್ರಕಟವಾಗುವುವು. ಅವುಗಳು : (೧) ಶಿವಸಾದಾಖ್ಯ (೨) ಅಮೂರ್ತಿಸಾದಾಖ್ಯ (೩) ಮೂರ್ತಿಸಾದಾಖ್ಯ (೪) ಕರ್ತೃಸಾದಾಖ್ಯ ಮತ್ತು (೫) ಕರ್ಮಸಾದಾಖ್ಯ. ಈ ಸಾದಾಖ್ಯಗಳು ಒಂದಾದ ಮೇಲೆ ಮತ್ತೊಂದರಂತೆಯೂ ಮತ್ತು ಮೂಲಸಾದಾಖ್ಯಕ್ಕಿಂತ ಅದರ ಮುಂದಿನ ಸಾದಾಖ್ಯಗಳು ಹೆಚ್ಚುಹೆಚ್ಚಾಗಿ ಸ್ಥೂಲವಾಗುತ್ತಾ ಉತ್ಪತ್ತಿಯಾಗುವವು. ಈ ಸಾದಾಖ್ಯಗಳನ್ನು ಮಹಾಲಿಂಗದ ಐದು ಲಿಂಗಸ್ವರೂಪಗಳೆನ್ನಬಹುದು. ಇವುಗಳನ್ನು ಅನುಕ್ರಮವಾಗಿ (೧) ಪ್ರಸಾದಲಿಂಗ (೨) ಜಂಗಮಲಿಂಗ (೩) ಶಿವಲಿಂಗ (೪) ಗುರುಲಿಂಗ ಮತ್ತು (೫) ಆಚಾರಲಿಂಗವೆಂದು ಕರೆಯಲಾಗಿದೆ. ಈ ಐದು ಲಿಂಗಗಳ ಬೆಳಗೇ ಮಹಾಲಿಂಗದ ಪಂಚಮುಖಗಳು. ಈ ಪಂಚಮುಖಗಳನ್ನು ಅನುಕ್ರಮವಾಗಿ (೧) ಈಶಾನ (೨) ತತ್ಪುರುಷ (೩) ಅಘೋರ (೪) ವಾಮದೇವ ಮತ್ತು (೫) ಸದ್ಯೋಜಾತ ಎಂಬುದಾಗಿ ಕರೆಯಲಾಗಿದೆ. ಈ ಪಂಚಮುಖಗಳಿಂದ ಪಂಚಾಕ್ಷರಗಳು ಮತ್ತು (೧) ಶಾಂತಾತೀತ (೨) ಶಾಂತಿ (೩) ವಿದ್ಯಾ (೪) ಪ್ರತಿಷ್ಠಾ ಮತ್ತು (೫) ನಿವೃತ್ತಿ ಎಂಬ ಕಲೆಗಳು ಆವಿರ್ಭವಿಸುವುವು. ಈ ಪಂಚಕಲೆಗಳೇ ಪಂಚಶಕ್ತಿಗಳಿಗೆ ಕಾರಣವಾಗುವುವು. ಅಂದರೆ (೧) ಶಾಂತ್ಯತೀತಕಲೆಯಿಂದ ಪರಾಶಕ್ತಿ (೨) ಶಾಂತಿಕಲೆಯಿಂದ ಆದಿಶಕ್ತಿ (೩) ವಿದ್ಯಾಕಲೆಯಿಂದ ಇಚ್ಛಾಶಕ್ತಿ (೪) ಪ್ರತಿಷ್ಠಾಕಲೆಯಿಂದ ಜ್ಞಾನಶಕ್ತಿ ಮತ್ತು (೫) ನಿವೃತ್ತಿಕಲೆಯಿಂದ ಕ್ರಿಯಾಶಕ್ತಿ—ಇವುಗಳು ಉತ್ಪತ್ತಿಯಾಗುವವು.[8] ಈ ಐದು ಶಕ್ತಿಗಳೂ ಮೇಲೆ ಹೇಳಿದ ಐದು ಲಿಂಗಗಳ ಶಕ್ತಿಗಳು. ಅಂದರೆ : (೧) ಪರಾಶಕ್ತಿಯು ಪ್ರಸಾದಲಿಂಗದ ಶಕ್ತಿ (೨) ಆದಿಶಕ್ತಿಯು ಜಂಗಮಲಿಂಗದ ಶಕ್ತಿ (೩) ಇಚ್ಛಾಶಕ್ತಿಯು ಶಿವಲಿಂಗದ ಶಕ್ತಿ (೪) ಜ್ಞಾನಶಕ್ತಿಯು ಗುರುಲಿಂಗದ ಶಕ್ತಿ ಮತ್ತು (೫) ಕ್ರಿಯಾಶಕ್ತಿಯು ಆಚಾರಲಿಂಗದ ಶಕ್ತಿ.[9] ಈ ಐದು ಲಿಂಗಗಳೂ ಮಹಾಲಿಂಗದ ಐದು ರೂಪಗಳೆನಿಸಿದರೆ, ಅವುಗಳನ್ನಾಶ್ರಯಿಸಿದ ಈ ಐದು ಶಕ್ತಿಗಳೂ ಮಹಾಲಿಂಗದಲ್ಲಿ ತಾದಾತ್ಮ್ಯಸಂಬಂಧದಿಂದ ನೆಲಸಿರುವ ಚಿಚ್ಛಕ್ತಿಯ ಐದು ಪ್ರಕಾರಗಳೆಂದೆನ್ನಬಹುದು. "ಸಾದಾಖ್ಯಗಳು ಜಗತ್ತಿನ ಸೃಷ್ಟಿಯ ಕಾಲದಲ್ಲಿ ವಿಧವಿಧ ಸ್ವರೂಪ

[1] ದೇಗುಲ ಜ್ಯೋತಿ, ಪುಟ ೨೯೩

[2] Dr. H. P. Malledevaru : *Essentials of Virasaivism*, p. 45

[3] ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೧೪

[4] ಆ ನೆನಹಿಲ್ಲದ ಘನವಸ್ತು ನೆನದ ನೆನಹೇ ಸಾವಯವಾಗಿ ಚಿತ್ತೆನಿಸಿಕೊಂಡಿತ್ತು. ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲ ಜ್ಞಾನಸಾರಾಮೃತ, ಪುಟ ೧೫೦

[5] ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೧೮

[6] Dr. H. P. Malledevaru : *Essentials of Virasaivism*, p. 47

[7] ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಪುಟ ೮೫

[8] ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೫೪

[9] ಅಲ್ಲಮಪ್ರಭು ಕಲಾ ಮತ್ತು ಶಕ್ತಿ ಪರ್ಯಾಯವೆಂಬ ಅಭಿಪ್ರಾಯ ಹೊಂದಿದ್ದನು. Dr. H. P. Malledevaru : *Essentials of Virasaivism*, p. 47

ಗಳನ್ನು ತಾಳುತ್ತಾ ಜಗತ್ತಿಗೆ ಕಾರಣವಾಗಿವೆ. ಪ್ರತಿಯೊಂದು ಸಾದಾಖ್ಯದಲ್ಲಿ ಸೃಷ್ಟಿಯ ಕಾರ್ಯಕ್ಕೆ ಅವಶ್ಯಕವಾಗಿ ಬೇಕಾಗುವ ಎಲ್ಲ ತರದ ವಸ್ತುಗಳೂ, ಶಕ್ತಿಗಳೂ ಹುಟ್ಟುತ್ತವೆ....ಹಾಗೆಯೇ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂಬ ಶಕ್ತಿಗಳೂ ಇಲ್ಲಿ (ಸಾದಾಖ್ಯಗಳಲ್ಲಿ) ಉತ್ಪನ್ನವಾಗುತ್ತವೆ."[1] ಈ ಪಂಚಶಕ್ತಿಗಳು ಪಂಚಭೂತಗಳಿಗೆ ಕಾರಣವಾಗಿರುತ್ತವೆ. ಅಂದರೆ (೧) ಪರಾಶಕ್ತಿಯಿಂದ ಆಕಾಶ (೨) ಆದಿಶಕ್ತಿಯಿಂದ ವಾಯು (೩) ಇಚ್ಛಾಶಕ್ತಿಯಿಂದ ಅಗ್ನಿ (೪) ಜ್ಞಾನಶಕ್ತಿಯಿಂದ ಅಪ್ಪು ಮತ್ತು (೫) ಕ್ರಿಯಾಶಕ್ತಿಯಿಂದ ಪೃಥ್ವೀತತ್ವ—ಇವುಗಳು ಮೈದಾಳುತ್ತವೆ.[2] ಮಹಾದೇವಿಯಕ್ಕನ ಸೃಷ್ಟಿವಚನದ ರೀತ್ಯಾ ಪಂಚಶಕ್ತಿಯಿಂದ ಪಂಚಕರಣಂಗಳು, ಪಂಚಕರಣಂಗಳಿಂದ ಪಂಚತನ್ಮಾತ್ರೆಗಳು ಮತ್ತು ಆ ಪಂಚತನ್ಮಾತ್ರೆಗಳಿಂದ ಪಂಚಭೂತಗಳು ಉತ್ಪತ್ತಿಯಾಗುವವು.[3] ವಚನಕಾರರಲ್ಲಿ ತತ್ವೋದಯದ ಕ್ರಮದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿರುವುದನ್ನು ಸೃಷ್ಟಿಯ ವಚನಗಳ ಅಧ್ಯಯನದಿಂದ ತಿಳಿದುಕೊಳ್ಳಬಹುದು. ಅದೇನೆ ಇರಲಿ ಶರಣರ ಪ್ರಕಾರ ಪಂಚಭೂತಗಳ ಹಂಚಿಕೆಯಿಂದ ಉಂಟಾದದ್ದು ಭೌತಿಕಜಗತ್ತು. ಈ ಪಂಚಭೂತಗಳೇ ಪಂಚೀಕರಣವನ್ನು ಹೊಂದಿ ಉಳಿದ ತತ್ವಗಳಿಗೆ ಕಾರಣವಾಗುತ್ತವೆ. ಅಂದಮೇಲೆ ಈಗ ಪಂಚಭೂತಗಳ ಪಂಚೀಕರಣದಿಂದ ಉತ್ಪತ್ತಿಯಾಗುವ ತತ್ವಗಳನ್ನು ನೋಡೋಣ.

**೧. ಆಕಾಶತತ್ವದಿಂದ ಅಂತಃಕರಣಗಳು**—ಹೇಗೆಂದರೆ : (೧) ಆಕಾಶ ಆಕಾಶದೊಡನೆ ಸೇರಿ ಜ್ಞಾನ (೨) ಆಕಾಶ ವಾಯುವಿನೊಡನೆ ಬೆರೆತು ಮನಸ್ಸು (೩) ಆಕಾಶ ಅಗ್ನಿಯಲ್ಲಿ ಕೂಡಿ ಅಹಂಕಾರ (೪) ಆಕಾಶ ಅಪ್ಪುವಿನಲ್ಲಿ ಕೂಡಿ ಬುದ್ಧಿ ಮತ್ತು (೫) ಆಕಾಶ, ಪೃಥ್ವಿಯಲ್ಲಿ ಸೇರಿ ಚಿತ್ತ. ಹೀಗೆ ಜ್ಞಾನ, ಮನಸ್ಸು, ಅಹಂಕಾರ, ಬುದ್ಧಿ ಮತ್ತು ಚಿತ್ತೆಂಬ ಅಂತಃಕರಣಗಳು ಉತ್ಪತ್ತಿಯಾಗುವುವು. ತೋಂಟದ ಸಿದ್ಧಲಿಂಗಶಿವಯೋಗಿಗಳು ನಾಲ್ಕು ಅಂತಃಕರಣಗಳನ್ನು ಹೇಳಿರುತ್ತಾರೆ. ಜ್ಞಾನವು ಅಂತಃಕರಣವಲ್ಲ.[4]

**೨. ವಾಯುತತ್ವದಿಂದ ಪಂಚಪ್ರಾಣವಾಯುಗಳು**—ಹೇಗೆಂದರೆ: (೧) ವಾಯು ಮತ್ತು ಆಕಾಶದಿಂದ ಸಮಾನ (೨) ವಾಯು ಮತ್ತು ವಾಯುವು ಸೇರಿ ಉದಾನ (೩) ವಾಯು ಮತ್ತು ಅಗ್ನಿ ಕೂಡಿ ವ್ಯಾನ (೪) ವಾಯು ಮತ್ತು ಅಪ್ಪು ಬೆರೆತು ಅಪಾನ ಮತ್ತು (೫) ವಾಯು ಮತ್ತು ಪೃಥ್ವೀ ಬೆರೆತು ಪ್ರಾಣ—ಇವುಗಳ ಜನನ. ಹೀಗೆ ಸಮಾನ, ಉದಾನ, ವ್ಯಾನ, ಅಪಾನ ಮತ್ತು ಪ್ರಾಣ ಎಂಬೀ ಪಂಚ ಪ್ರಾಣವಾಯುಗಳು ಪಂಚಮಹಾಭೂತಗಳಿಂದ ಉದಿಸಿವೆ.

**೩. ಅಗ್ನಿತತ್ವದಿಂದ ಐದು ಜ್ಞಾನೇಂದ್ರಿಯಗಳು**—ಹೇಗೆಂದರೆ: (೧) ಅಗ್ನಿ ಮತ್ತು ಆಕಾಶದಿಂದ ಶ್ರೋತ್ರೇಂದ್ರಿಯ (೨) ಅಗ್ನಿ ಮತ್ತು ವಾಯು ಬೆರೆತು ತ್ವಕ್ (೩) ಅಗ್ನಿ ಮತ್ತು ಅಗ್ನಿ ಕೂಡಿ ಕಣ್ಣು (೪) ಅಗ್ನಿ ಮತ್ತು ಅಪ್ಪು ಬೆರೆತು ನಾಲಿಗೆ ಮತ್ತು (೫) ಅಗ್ನಿ ಮತ್ತು ಪೃಥ್ವಿಯಿಂದ ಮೂಗು ಇವುಗಳ ಉತ್ಪತ್ತಿ. ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು ಇವು ಐದು ಜ್ಞಾನೇಂದ್ರಿಯಗಳು. ಇವುಗಳನ್ನು ಬುದ್ಧೀಂದ್ರಿಯಗಳೆಂದೂ ಕರೆಯಲಾಗಿದೆ.[5]

**೪. ಅಪ್ಪುತತ್ವದಿಂದ ಐದು ವಿಷಯಗಳು ಅಥವಾ ತನ್ಮಾತ್ರೆಗಳು**—ಹೇಗೆಂದರೆ: (೧) ಅಪ್ಪು ಮತ್ತು ಆಕಾಶದಿಂದ ಶಬ್ದ (೨) ಅಪ್ಪು ಮತ್ತು ವಾಯುವಿನಿಂದ ಸ್ಪರ್ಶ (೩) ಅಪ್ಪು ಮತ್ತು ಅಗ್ನಿ ಕೂಡಿ ರೂಪ (೪) ಅಪ್ಪು ಮತ್ತು ಅಪ್ಪು ಬೆರೆತು ರಸ ಮತ್ತು (೫) ಅಪ್ಪು ಮತ್ತು ಪೃಥ್ವೀ ಇವುಗಳಿಂದ ಗಂಧ ಸಂಭವಿಸುವವು. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಇವು ಐದು ತನ್ಮಾತ್ರೆಗಳು.

**೫. ಪೃಥ್ವೀತತ್ವದಿಂದ ಐದು ಕರ್ಮೇಂದ್ರಿಯಗಳು**—ಹೇಗೆಂದರೆ : (೧) ಪೃಥ್ವೀ ಮತ್ತು ಆಕಾಶದಿಂದ ವಾಗಿಂದ್ರಿಯ (೨) ಪೃಥ್ವೀ ಮತ್ತು ವಾಯುವಿನಿಂದ ಪಾಣೀಂದ್ರಿಯ (೩) ಪೃಥ್ವೀ ಮತ್ತು ಅಗ್ನಿಯಿಂದ ಪಾದೇಂದ್ರಿಯ (೪) ಪೃಥ್ವೀ ಮತ್ತು ಅಪ್ಪುವಿನಿಂದ ಉಪಸ್ಥ ಮತ್ತು (೫) ಪೃಥ್ವಿ ಮತ್ತು ಪೃಥ್ವಿ ಸೇರಿ ಪಾಯು ಇವುಗಳು ಆವಿರ್ಭವಿಸುವವು. ವಾಕ್, ಪಾಣಿ, ಪಾದ, ಉಪಸ್ಥ ಮತ್ತು ಪಾಯು ಇವು ಐದು ಕರ್ಮೇಂದ್ರಿಯಗಳು.

---

1 ಫ. ಗು. ಹಳಕಟ್ಟಿ : ವಚನಶಾಸ್ತ್ರಸಾರ, ಭಾಗ ೨, ಪುಟ ೫೬೬

2 ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೧೫೬

3 ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ವಚನಗಳಲ್ಲಿ ವೀರಶೈವಧರ್ಮ, ಪುಟ ೧೦೬

4 ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೧೫೬

5 ಡಾ. ಆರ್. ಸಿ. ಹಿರೇಮಠ : ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೫೨

ಈ ತೆರನಾಗಿ ಪಂಚಮಹಾಭೂತಗಳು ಪಂಚೀಕರಣವನ್ನೈದಿ ಇಪ್ಪತ್ತನಾಲ್ಕು (೨೪) ತತ್ವಗಳು ಉಗಮವಾಗುತ್ತವೆ. ಶ್ರೀಸಿದ್ಧಲಿಂಗಶಿವಯೋಗಿಗಳು ಚತುರ್ವಿಂಶತಿತತ್ವಗಳಾದ ಬಗೆಯನ್ನು ವಚನದ ಮೂಲಕ ಹೀಗೆ ತಿಳಿಸಿರುವರು: "ಆಕಾಶದಿಂದ ಅಂತಃಕರಣಚತುಷ್ಟಯಂಗಳು ಹುಟ್ಟಿದವು; ವಾಯುವಿನಿಂದ ಪಂಚಪ್ರಾಣವಾಯುಗಳಾದುವಯ್ಯಾ; ಅಗ್ನಿಯಿಂದ ಬುದ್ಧೀಂದ್ರಿಯಗಳು ಪುಟ್ಟಿದುವಯ್ಯಾ; ಅಪ್ಪುವಿನಿಂದ ಶಬ್ದಾದಿವಿಷಯಂಗಳು ಪುಟ್ಟಿದುವಯ್ಯಾ; ಪೃಥ್ವಿಯಿಂದ ವಾಗಾದಿ ಕರ್ಮೇಂದ್ರಿಯಗಳು ಹುಟ್ಟಿದುವಯ್ಯಾ."[1]

ಈ ಮೇಲಿನ ಇಪ್ಪತ್ತನಾಲ್ಕು ತತ್ವಗಳೊಡನೆ ಅಂಗ ಅಥವಾ ಆತ್ಮತತ್ವವನ್ನು ಕೂಡಿಸಿದರೆ ಇಪ್ಪತ್ತೈದು ತತ್ವಗಳಾಗುವವು. "ಇಂತಿವು ಚತುರ್ವಿಂಶತಿತತ್ವಗಳುತ್ಪತ್ತಿ. ಈ ತತ್ವಂಗಳಿಗೆ ಎಲ್ಲಕ್ಕೆಯೂ ಆಶ್ರಯವಾಗಿ, ಚೈತನ್ಯವಾಗಿ ಆತ್ಮನೊಬ್ಬನು; ಇಂತು ಇಪ್ಪತ್ತೈದು ತತ್ವಂಗಳ ಭೇದವೆಂದು ಅರಿಯಲು ಯೋಗ್ಯವಯ್ಯಾ."[2]

ಈ ಇಪ್ಪತ್ತೈದು ತತ್ವಗಳಿಂದ ಪಂಚಪ್ರಾಣವಾದ ತತ್ವಗಳನ್ನು ಹೊರತುಪಡಿಸಿ ಉಳಿದ ಇಪ್ಪತ್ತು ತತ್ವಗಳೊಡನೆ ಒಂದು ಶಿವತತ್ವ, ಐದು ಸಾದಾಖ್ಯ, ಐದು ಶಕ್ತಿ ಅಥವಾ ಕಲೆ ಮತ್ತು ಐದು ಭೂತ ಈ ಹದಿನಾರು ತತ್ವಗಳನ್ನು ಕೂಡಿಸಿದರೆ ವೀರಶೈವದ ಮೂವತ್ತಾರು ತತ್ವಗಳಾಗುತ್ತವೆ. ಅಥವಾ ಪಂಚತನ್ಮಾತ್ರೆಗಳಿಗೆ ಬದಲಾಗಿ ಪಂಚಪ್ರಾಣವಾಯುತತ್ವಗಳನ್ನುಳಿಸಿಕೊಂಡು ಇವುಗಳನ್ನು ಉಳಿದ ತತ್ವಗಳೊಡನೆ ಕೂಡಿಸಿ ಮೂವತ್ತಾರು ತತ್ವಗಳನ್ನು ಪಡೆಯಬಹುದು. ಒಟ್ಟಿನಲ್ಲಿ ವೀರಶೈವವು ಶೈವಸಿದ್ಧಾಂತ ಮತ್ತು ಕಾಶ್ಮೀರ ಶೈವಗಳಂತೆ ಮೂವತ್ತಾರು ತತ್ವಗಳನ್ನು ಅಂಗೀಕರಿಸಿದೆ. ಆದರೆ ವೀರಶೈವದ ಮೂವತ್ತಾರು ತತ್ವಗಳು, ಶೈವಸಿದ್ಧಾಂತ ಮತ್ತು ಕಾಶ್ಮೀರ ಶೈವದರ್ಶನಗಳು ಒಪ್ಪಿಕೊಂಡಿರುವ ತತ್ವಗಳಿಂದ ಭಿನ್ನವಾಗಿರುತ್ತವೆ.[3] ಸೃಷ್ಟಿಯ ಕ್ರಮದಲ್ಲಿ ತೋರುವ ಮೇಲಿನ ಮೂವತ್ತಾರು ತತ್ವಗಳನ್ನು ಶಿವತತ್ವ, ವಿದ್ಯಾತತ್ವ ಮತ್ತು ಆತ್ಮತತ್ವಗಳೆಂದು ಮೂರು ಬಗೆಯಾಗಿ ಇಲ್ಲವೇ ಅಂಗತತ್ವ ಮತ್ತು ಲಿಂಗ ತತ್ವಗಳೆಂದು ಎರಡು ಬಗೆಯಾಗಿ ವರ್ಗೀಕರಿಸಲಾಗಿದೆ. ಈ ಮೂವತ್ತಾರು ತತ್ವಗಳಿಂದ ಏರ್ಪಟ್ಟ ಒಂದು ವ್ಯವಸ್ಥೆಗೆ ವೀರಶೈವದಲ್ಲಿ ಬ್ರಹ್ಮಾಂಡ ಅಥವಾ ಜಗತ್ತು ಎಂದು ಹೆಸರು.

ಶಿವಶರಣರು ವಿವೇಚಿಸಿರುವ ಸೃಷ್ಟಿಕ್ರಮದ ಒಂದು ಮೂಲಭೂತಕಲ್ಪನೆ ಎಂದರೆ: ಶಿವ ಶಕ್ತಿವಿಶಿಷ್ಟನಾಗದೆ ಅರ್ಥಾತ್ ಶಕ್ತಿಯ ಸಹಾಯವಿಲ್ಲದೆ ವಿಶ್ವೋತ್ಪತ್ತಿಗೆ ಕಾರಣಕರ್ತನಾಗಲಾರನೆಂಬುದು. ಶರಣರ ಈ ಕಲ್ಪನೆ ವಿದ್ಯಾರಣ್ಯರ ಒಂದು ವಾಕ್ಯವನ್ನು ನೆನಪಿಗೆ ತಂದುಕೊಡುವುದು. ಅದೆಂದರೆ:

ನ ಕೇವಲಂ ಬ್ರಹ್ಮೈವ ಜಗತ್ಕಾರಣಂ ನಿರ್ವಿಕಾರತ್ವಾತ್ ನಾಪಿ ಕೇವಲಾ ಶಕ್ತಿಃ ಕಾರಣಂ ಸ್ವಾತಂತ್ರ್ಯಾಭಾವಾತ್ ತಸ್ಮಾದುಭಯಂ ಮಿಲಿತ್ವೈವ ಜಗತ್ಕಾರಣಂ ಭವತಿ ॥[4]

ವೀರಶೈವದ ಪ್ರಕಾರ ಪರಶಿವ (ನಿಷ್ಕಲಲಿಂಗ)ನಲ್ಲಿ ನಿಷ್ಪತ್ತಿಯಾದ 'ನೆನಹು'ವೇ ಶಕ್ತಿಯಾಗಿ ಪರಿಣಮಿಸಿ ಶಿವ ಶಕ್ತಿ, ಸಂಪನ್ನ ಅಥವಾ ಶಕ್ತಿವಿಶಿಷ್ಟನಾಗುತ್ತಾನೆ ಮತ್ತು ಸೃಷ್ಟಿಮುಖನಾಗುತ್ತಾನೆ. ಶಿವ ಸೃಷ್ಟಿಮುಖನಾದಾಗ ಅವನೊಡನೆ ಅವಿನಾಭಾವಸಂಬಂಧಿಯಾಗಿರುವ ಶಕ್ತಿ ವಿಕಾಸಗೊಂಡು ವಿವಿಧ ತತ್ವಗಳಾಗಿ ಪರಿಣಮಿಸಿ ಬಹುರೂಪಿಯಾದ ಸೃಷ್ಟಿ ನಿರ್ಮಾಣವಾಗುವುದು. ಹೀಗೆ ಶಿವ ತನ್ನ ಶಕ್ತಿವಿಕಾಸಮಾತ್ರದಿಂದಾದ ಸೃಷ್ಟಿಯಲ್ಲಿ ವಿಶ್ವಾತ್ಮನಾಗಿ ಉಳಿಯುವನು. "ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ" ಜಗತ್ತಿನ ನಿರ್ಮಾಣಕ್ರಮದಲ್ಲಿ ಶಿವಶಕ್ತಿಯು ವಿಕಾಸವಾದಂತೆಲ್ಲಾ ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಯನ್ನು ತಾಳುತ್ತಾ ಹೋಗುವುದು. ವೀರಶೈವದ ಈ ನಿಲವು ಗಮನಾರ್ಹವಾಗಿದ್ದು, ಭೌತಿಕವಾದಾಗ್ಯೂ ಸೂಕ್ಷ್ಮವೆನಿಸಿದ ಪ್ರಕೃತಿತತ್ವವು ಕ್ರಮಕ್ರಮವಾಗಿ ಸ್ಥೂಲತತ್ವಗಳಾಗಿ ಪರಿಣಮಿಸಿ ಸೃಷ್ಟಿರಚನೆಯಾಯಿತೆಂಬ ಸಾಂಖ್ಯದರ್ಶನದ ಮತವನ್ನು ಹೋಲುತ್ತದೆ. ಒಟ್ಟಿನಲ್ಲಿ ಶಿವಶಕ್ತಿಯು ಪ್ರವೃತ್ತಿಮುಖವಾಗಿ ತತ್ವಗಳಾಗಿ ಪರಿಣಮಿಸುವುದರಿಂದ ಸೃಷ್ಟಿ ಅಥವಾ ಜಗತ್ತಿನ ಉತ್ಪತ್ತಿ-ಸ್ಥಿತಿ. ಅಂತೆಯೆ ಶಿವಶಕ್ತಿಯು ನಿವೃತ್ತಿಮುಖವಾಗಿ ತತ್ವಗಳು ಒಂದರಲ್ಲೊಂದು ಲಯವಾಗಿ ಕೊನೆಗೆ ಶಿವನಲ್ಲಿ ಸೂಕ್ಷ್ಮರೂಪದಲ್ಲಿ ಅಡಗುವುವು. ಇದೇ ಜಗತ್ತಿನ ಪ್ರಳಯ ಅಥವಾ ಲಯ. ಹೀಗೆ ಶಿವನಲ್ಲಿ ಅಡಗಿದ ತತ್ವಗಳು ಮತ್ತೆ ಹೊರಹೊಮ್ಮಿ ಪುನಃ ಶಿವನಲ್ಲಿ

---

1 ಡಾ. ಆರ್. ಸಿ. ಹಿರೇಮಠ: ಷಟ್‌ಸ್ಥಲಜ್ಞಾನಸಾರಾಮೃತ, ಪುಟ ೫೨

2 Dr. H. P. Malledevaru: *Essentials of Virasaivism*, p. 47

3 ನಿರ್ವಿಕಾರನಾದ ಬ್ರಹ್ಮ ಮಾತ್ರ ಕಾರಣನಲ್ಲ, ಅಸ್ವತಂತ್ರಳಾದ ಶಕ್ತಿಯೂ ಕಾರಣಳಲ್ಲ; ಇಬ್ಬರೂ ಕೂಡಿಯೇ ಜಗತ್ತಿಗೆ ಕಾರಣರಾಗಿದ್ದಾರೆ. ಶ್ರೀ ಮಾತೆ ಮಹಾದೇವಿ, ಬಸವತತ್ವದರ್ಶನ, ಪುಟ ೧೪೦

4 ಡಾ. ಜ.ಚ.ನಿ. ಶಿವಾದ್ವೈತದರ್ಶನ, ಪುಟ ೨೬

ಅಡಗುವುವು. ವೀರಶೈವದರ್ಶನದ ರೀತ್ಯಾ "ಜಗತ್ತಿನ ವಿಕಾಸಕ್ಕೆ ಶಕ್ತಿ ಎಂತು ಕಾರಣವೋ ಅದರ ನಿವೃತ್ತಿಗೂ ಅದೇ ಕಾರಣವಾಗುತ್ತದೆ ಇನ್ನೊಂದು ರೂಪದಿಂದ."[1]

ಈ ತೆರನಾಗಿ ಸೃಷ್ಟಿಯ ಉತ್ಪತ್ತಿ, ಲಯ, ವಿಕಸನ ಮತ್ತು ಆಕುಂಚನಗಳು ಹಗಲು ರಾತ್ರಿಗಳಂತೆ ಅನುಕ್ರಮವಾಗಿ ಸಂಭವಿಸುವ ಕ್ರಿಯೆಗಳು. ಈ ಕ್ರಿಯೆಗಳು ಅನಾದಿಯಾಗಿದ್ದು ಶಿವನ ಲೀಲೆಯಿಂದುಂಟಾಗುವ ಜಗದ್ವ್ಯಾಪಾರಗಳು. ಶಿವಯೋಗಿಸಿದ್ಧರಾಮನ ವಚನೋಕ್ತಿಯಂತೆ :

ಲೀಲೆಯದು ಪರಬೊಮ್ಮದ ಇಚ್ಛೆ ಇಚ್ಛೆಯದು ಸಕಲಜೀವಜಾಲೋತ್ಪತ್ತಿ
ಸಕಲಜೀವಜಾಲೋತ್ಪತ್ತಿಯದು ಜಗದ್ರಚನೆ ಜಗದ್ರಚನೆಯದು ಜಗತ್ಪ್ರಳಯ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ[2]

ಸ್ಥಲವಾಚಕವಾದ ಪರಶಿವನಲ್ಲಿಯೇ ಚರಾಚರವೆಲ್ಲವೂ ಹುಟ್ಟಿ ಅಲ್ಲಿಯೇ ಅಂತ್ಯದಲ್ಲಿ ಲಯವಾಗುವುದರಿಂದ ಸೃಷ್ಟಿಯ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಶಕ್ತಿವಿಶಿಷ್ಟನಾದ ಶಿವನೇ ಕಾರಣನು. ವೀರಶೈವದ ಪ್ರಕಾರ ಶಿವನು ವಿಶ್ವದ "ಅಭಿನ್ನನಿಮಿತ್ತೋಪಾದಾನಕಾರಣ"ನೆಂದು ಈ ಹಿಂದೆಯೇ ಹೇಳಿದೆ. ವೀರಶೈವವು "ಅವಿಕೃತಪರಿಣಾಮವಾದ"ವನ್ನು ಪ್ರತಿಪಾದಿಸುವ ಮೂಲಕ ಶಿವನಿಗೆ ಉಪಾದಾನಕಾರಣಕಥನದಿಂದ ಕಾರ್ಯರೂಪದ ವಿಕಾರದೋಷವುಂಟಾಗುವುದಿಲ್ಲವೆಂಬುದು ವೀರಶೈವದಾರ್ಶನಿಕರ ಮತ." ತೆರಣಿಯ ಹುಳು ತನ್ನ ನೂಲನ್ನು ತಾನೇ ಹುಟ್ಟಿಸಿ ತನ್ನಲ್ಲಿಯೇ ಸಂಹರಿಸಿ (ಇರಿಸಿ)ಕೊಳ್ಳುವಂತೆ ಶಕ್ತಿವಿಶಿಷ್ಟನಾದ ಪರಶಿವನು ಈ ಜಡಜಂಗಮಾತ್ಮಕ ಜಗತ್ತನ್ನು ಬೇರೊಬ್ಬರ ನೆರವಿಲ್ಲದೆ ತಾನೇ ಹುಟ್ಟಿಸಬಲ್ಲ ; ತನ್ನೊಳಗಿರಿಸಿಕೊಳ್ಳಬಲ್ಲ. ಇದು ಕಾರಣ ವಿಶ್ವಕಾರ್ಯದಲ್ಲಿ ಆತನು ಅಭಿನ್ನನಿಮಿತ್ತೋಪಾದಾನಕಾರಣನಾಗಿದ್ದಾನೆ. ಶಿವನಿಗೆ ಉಪಾದಾನಕಾರಣಕಥನದಿಂದ ಕಾರ್ಯರೂಪವಿಕಾರದೋಷವುಂಟಾಗುವುದಿಲ್ಲ. ಏಕೆಂದರೆ ಅವಿಕಾರರೂಪಪರಿಣಾಮವನ್ನು ಶಿವಾದ್ವೈತಮತವೊಪ್ಪಿದೆ."[3]

ಶಿವನು ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಕರ್ತನೆಂಬುದು ವೀರಶೈವದ ಮತವಷ್ಟೆ. ಆದರೆ ಈ ಜಡಜಂಗಮಾತ್ಮಕವಾದ ಸೃಷ್ಟಿಯೊಡನೆ ಶಿವನ ಸಂಬಂಧವೆಂಥದು ? ಶಿವಶರಣರ ತಾತ್ವಿಕವಿವೇಚನೆಯ ಪ್ರಕಾರ ಶಿವನು ಜಗತ್ತಿಗೆ ಅನನ್ಯನಾಗಿಯೂ ಮತ್ತು ಅನ್ಯನಾಗಿಯೂ ಇರುವ ಕಾರಣ ಶಿವನು ಜಗತ್ತಿನೊಡನೆ ಬೆರಸಿಯೂ ಬೆರಸದಂತೆ ಸಂಬಂಧವನ್ನು ಹೊಂದಿರುತ್ತಾನೆ. ಈ ತೆರನಾದ ಸಂಬಂಧವನ್ನು ವಿಶ್ವಾಂತರ್ಯಾಮಿತ್ವ ಮತ್ತು ವಿಶ್ವಾತೀತತ್ವ (One of both Immanence and Transcendence) ಎಂದು ಕರೆಯಬಹುದು. ಇದು ಶರಣರ ನಿಲವು. ಶಿವಶರಣರ ಈ ನಿಲವನ್ನು ಉರಿಲಿಂಗಪೆದ್ದಿಯ ಈ ಕೆಳಗಿನ ವಚನದಿಂದ ನಿದರ್ಶಿಸಬಹುದು :

ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು
ರಚಿಸಿದವನು ವಿಶ್ವಕ್ಕೆ ಹೊರಗಾಗದಿರ್ದನೇ ? ಇಲ್ಲ.
ವಿಶ್ವಮಯ ತಾನಾದನು.
ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿ, ಸ್ಥಿತಿ, ಲಯಕ್ಕೊಳಗಾದನೆ ? ಇಲ್ಲ.
ಅದೇನು ಕಾರಣವೆಂದಡೆ ಅಜಾತನಾಗಿ ಉತ್ಪತ್ತಿ ಇಲ್ಲ.
ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ ;
ಮರಣರಹಿತನಾಗಿ ಲಯಕ್ಕೊಳಗಲ್ಲ.
ಇಂತೀ ಗುಣತ್ರಯಂಗಳ ಹೊದ್ದಲರಿಯ

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಶಿವಶರಣರ ಶಿವ-ಸೃಷ್ಟಿಸಂಬಂಧದ ಕಲ್ಪನೆಯಲ್ಲಿ ವಿಶ್ವದೇವೈಕ್ಯವಾದ (Pantheism) ಮತ್ತು ವಿಶ್ವದೇವಾನ್ಯವಾದ (Deism) ಇವುಗಳ ಸಮನ್ವಯವನ್ನು ಕಾಣಬಹುದು. ಅರ್ಥಾತ್ ಶಿವನನ್ನು ಬಿಟ್ಟು ಸೃಷ್ಟಿಯಿಲ್ಲ ಮತ್ತು ಸೃಷ್ಟಿಯೇ ಶಿವನಲ್ಲ.

## ಸೃಷ್ಟಿನಿರ್ಮಾಣವೇಕಾಯಿತು ?

"ಜಗತ್ತು ಕರ್ತಾರನ ಕಮ್ಮಟ"ವೆಂದು ಬಸವಣ್ಣನವರಿಂದ ವರ್ಣಿತವಾಗಿದೆ. ಸಚ್ಚಿದಾನಂದ-ನಿತ್ಯ-ಪರಿಪೂರ್ಣನೆನಿಸಿದ ಪರಶಿವನೇ ಆ ಕರ್ತನು. ಪರಿಪೂರ್ಣನಾದ ಪರಶಿವನೇಕೆ ಸೃಷ್ಟಿನಿರ್ಮಾಣ ಮಾಡಿದ ? ಇದೊಂದು ತಾತ್ವಿಕ

---

1 ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ವಚನಗಳಲ್ಲಿ ವೀರಶೈವಧರ್ಮ, ಪುಟ ೭೯

2 ಅದೇ., ಪುಟ ೯೮

3 ಡಾ. ಜ.ಚ.ನಿ. ಶಿವಾದ್ವೈತದರ್ಶನ, ಪುಟ ೧೧

ಮೂಲಭೂತ ಪ್ರಶ್ನೆ. ಈ ಪ್ರಶ್ನೆಯು ದರ್ಶನಾಚಾರ್ಯರುಗಳನ್ನು ಕಾಡಿಸಿರುವಂತೆ ವಚನಕಾರರನ್ನೂ ಕಾಡಿಸದೇ ಬಿಟ್ಟಂತೆ ಕಾಣುವುದಿಲ್ಲ. ಸೃಷ್ಟಿನಿರ್ಮಾಣದಲ್ಲಿ ಶಿವನಿಗೆ ಉದ್ದೇಶವನ್ನು ಆರೋಪಿಸುವುದರಿಂದ ಕೆಲವು ಕ್ಲಿಷ್ಟ ಸಮಸ್ಯೆಗಳು ಉದ್ಭವಿಸುತ್ತವೆ. ಪ್ರಾಯಶಃ ಇದನ್ನು ಮನಗಂಡಿದ್ದ ಶಿವಶರಣರು ಈ ಪ್ರಶ್ನೆಗೆ ತಮ್ಮದೇ ಆದ ಉತ್ತರವನ್ನು ಕಂಡುಕೊಂಡಿರುವರು. ಶಿವಶರಣರ ಅಭಿಪ್ರಾಯದಲ್ಲಿ, ಶಿವನ ಲೀಲೆ ಅಥವಾ ವಿನೋದ ಅಥವಾ ಇಚ್ಛೆ ಸೃಷ್ಟಿಯ ನಿರ್ಮಾಣಕ್ಕೆ ಕಾರಣವಾಗಿದೆ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಸೃಷ್ಟಿಗೆ ಶಿವನ "ಸ್ವಲೀಲಾನಂದ ವಿಲಾಸ"ವೇ ಕಾರಣವೆಂದಿರುವರು. ಮಹಾದೇವಿಯಕ್ಕ, ಶಿವನ ವಿನೋದವೇ ಸೃಷ್ಟಿನಿರ್ಮಾಣಕ್ಕೆ ಕಾರಣವೆಂದಿರುವಳು. ಅಕ್ಕನ ವಚನೋಕ್ತಿಯಂತೆ: "ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನು. ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಂಗಳಲ್ಲಿ. ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು ಜಗದ್ವಿಲಾಸ ಸಾಕಾದಡೆ ಮತ್ತೆ ಪರಿವನಾ ಮಾಯಾಪಾಶವನು." ಅಲ್ಲಮಪ್ರಭು "ಹರಭಾವದಿಚ್ಛೆಗೆ" ಸೃಷ್ಟಿಯಾಯಿತೆಂದು ಹೇಳಿಕೊಂಡಿರುವನು. ಪ್ರಭು ಹೇಳುವಂತೆ "ಮರದೊಳಗಣ ಪತ್ರಫಲಂಗಳು ಮರಕಾಲವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿಸ್ವಭಾವಂಗಳು ಹರಭಾವದಿಚ್ಛೆಗೆ ತೋರುವುವು."[1]

ಸೃಷ್ಟಿನಿರ್ಮಾಣವೇಕಾಯಿತೆಂಬ ಪ್ರಶ್ನೆಗೆ ಶಿವಶರಣರಿತ್ತಿರುವ ಈ ಪರಿಹಾರವು ಮುಕ್ತಾಯವಾದುದಲ್ಲ: ಅಭಿಪ್ರಾಯರೂಪದ ಪರಿಹಾರವಷ್ಟೆ. ಆದರೆ ಇದೇ ಪ್ರಶ್ನೆಗೆ ಸಾಂಖ್ಯ ಹಾಗೂ ಶೈವಸಿದ್ಧಾಂತಗಳು ವಿವೇಚಿಸಿರುವ ಪರಿಹಾರಕ್ಕಿಂತ ಶರಣರ ಪರಿಹಾರವು ಭಿನ್ನವಾಗಿರುತ್ತದೆ. ಒಟ್ಟಿನಲ್ಲಿ ಜಗತ್ಸೃಷ್ಟಿಗೆ ಶಿವನ ಲೀಲೆ ಅಥವಾ ವಿನೋದ ಅಥವಾ ಇಚ್ಛೆ ಕಾರಣವೆಂಬ ಶರಣರ ಅಭಿಪ್ರಾಯದ ಗುಣಾವಗುಣಗಳು ಏನೇ ಇರಲಿ. ಶರಣರ ತತ್ತ್ವ ವಿವೇಚನೆಯಲ್ಲಿ ಜಗತ್ತು ಮಿಥ್ಯವಲ್ಲ, ಸತ್ಯ.

ಶ್ರೀಶಂಕರಾದ್ವೈತವು ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯ ಎಂದು ಪ್ರತಿಪಾದಿಸಿದರೆ, ವೀರಶೈವವು ಬ್ರಹ್ಮ. ಜಗತ್ತು ಮತ್ತು ಜೀವ ಈ ಮೂರೂ ಸತ್ಯವಾದವುಗಳೆಂದು ಪ್ರತಿಪಾದಿಸಿದೆ. ಜಗತ್ತು ಶಿವಶಕ್ತಿಯಿಂದಾದ ಒಂದು ಕಾರ್ಯ. ಕಾರಣದಂತೆ ಕಾರ್ಯವೂ ಸತ್ಯವೇ ಅಲ್ಲದೆ ಆರೋಪಿತವಾದುದಲ್ಲ ಎಂಬ ವೀರಶೈವದ ತಾತ್ವಿಕ ನಿಲವಿನಲ್ಲಿ ಜಗನ್ಮಿಥ್ಯಾವಾದಕ್ಕೆ ಅವಕಾಶವಿಲ್ಲ. ಅಷ್ಟೇ ಅಲ್ಲದೆ, ಜಗದೀಶನ ಸೃಷ್ಟಿಯಾದ ಈ ಜಗತ್ತು, ಮಾನವ ಮಹಾದೇವನಲ್ಲಿ ತನ್ನ ಬಾಳಿನ ಚರಮಗುರಿಯಾದ ಐಕ್ಯದ ಸಿದ್ಧಿಗೂ ಸಹಾಯಕವಾಗಿದೆ. ಆದರೆ ಮಾನವ ಶರಣಮಾರ್ಗಾವಲಂಬಿಯಾಗಿ ತನ್ನಲ್ಲಿ ಸುಪ್ತವಾಗಿರುವ ಆತ್ಮಶಕ್ತಿ ಅಥವಾ ಭಕ್ತಿಯನ್ನು ಬೆಳೆಸಿಕೊಳ್ಳಲು ಈ ಮರ್ತ್ಯದಲ್ಲಿ ಪ್ರಯತ್ನಶೀಲನಾಗಿ ಬಾಳಬೇಕಾಗಿದೆಯಷ್ಟೆ. ಅದಕ್ಕೆಂದೇ ಬಸವಣ್ಣನವರು ಹೀಗೆ ಹೇಳಿರುತ್ತಾರೆ:

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ;
ಕೂಡಲಸಂಗಮದೇವಾ.[2]

---

ಸಜ್ಜನಸ್ಯ ಹೃದಯಂ ನವನೀತಂ
ಯದ್ವದಂತಿ ಕವಯಃ ತದಲೀಕಮ್ ।
ಅನ್ಯದೇಹವಿಲಸತ್ಪರಿತಾಪಾತ್
ಸಜ್ಜನೋ ದ್ರವತಿ ನೋ ನವನೀತಮ್ ॥

---

[1] ಫ. ಗು. ಹಳಕಟ್ಟಿ, ವಚನಶಾಸ್ತ್ರಸಾರ, ಭಾಗ ೧, ಪುಟ ೪

[2] ಪ್ರೊ. ಬಸವನಾಳ ಶಿವಲಿಂಗಪ್ಪನವರು, ಬಸವಣ್ಣನವರ ಷಟ್‌ಸ್ಥಳದ ವಚನಗಳು, ೪೧

# ಮೂವತ್ತಾರು ತತ್ತ್ವಗಳು

ಡಾ. ಜ.ಚ.ನಿ.

## ಮೂವತ್ತಾರು ತತ್ತ್ವೋದಯ ವಿಚಾರ

'ಮೂವತ್ತಾರು ತತ್ತ್ವಾತ್ಮಕವಾಗಿದೆ ಈ ಚರಾಚರ ಸಮಷ್ಟಿಸೃಷ್ಟಿ! ಪಿಂಡಾಂಡವು ಲಿಂಗ – ಅಂಗ, ಶಕ್ತಿ – ಭಕ್ತಿ, ಮುಖ – ಹಸ್ತ ಇವಾರು ಒಂದೊಂದೂ ಆರಾರರಂತೆ ಮೂವತ್ತಾರಾಗಿ ಉತ್ಪತ್ತಿಯಾದಂತೆ, ಬ್ರಹ್ಮಾಂಡವೂ ಮೂವತ್ತಾರು ತತ್ತ್ವೋದಯದಿಂದ ಕೂಡಿದೆ. ಶಿವಾದ್ವೈತಮತದ ಪಿಂಡಾಂಡ ಬ್ರಹ್ಮಾಂಡ ಸೃಷ್ಟಿಗಳೆರಡರ ಸುಂದರ ಸಮನ್ವಯವಿದು.

ಈ ಜಗತ್ತು ಜಗದೀಶನ ಲೀಲೆ ! ಈ ಜಗನ್ನಿರ್ಮಾಣಕಾರ್ಯದಲ್ಲಿ ಆತ ಸಮರ್ಥ ಮತ್ತು ಸ್ವತಂತ್ರ ! ಲೀಲಾಜಾಲವಾಗಿ ಸೃಷ್ಟಿಸಬಲ್ಲ; ಸಂಹರಿಸಬಲ್ಲ. ಆತ ಸೃಷ್ಟಿಸಿದ ಸೃಷ್ಟಿವೈಚಿತ್ರಕ್ಕೆ ವೈವಿಧ್ಯಕ್ಕೆ ತುದಿ ಮೊದಲಿಲ್ಲ. ಈ ಜಗತ್ತು ನಮ್ಮೆದುರಿನಲ್ಲಿದ್ದು ಆ ಜಗದೀಶನ ಅಗಾಧ ಕ್ರಿಯಾಶಕ್ತಿಯನ್ನೂ ಅದ್ಭುತ ಅನುಭವಸಿದ್ಧಿಯನ್ನೂ ಉಗ್ಗಡಿಸುತ್ತಿದೆ ; ಆತನ ವಿಶ್ವರೂಪ ವಿರಾಟ್‌ದೃಶ್ಯವನ್ನು ತೋರಿಸುತ್ತಿದೆ. ಆ ಶಿವದೃಷ್ಟಿಯುಳ್ಳವರಿಗೆ ಈ ಸೃಷ್ಟಿಯೆ ಸತ್ಯಂ ಶಿವಂ ಸುಂದರಂ !

> ಶಿವಾಭಿಧಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ ।
> ಸ್ವರೂಪಮಾದಧೇ ಕಿಂಚಿತ್‌ಸುಖಸ್ಫೂರ್ತಿವಿಜೃಂಭಿತಂ ॥ (ಸಿ. ಶಿಖಾಮಣಿ ೨–೮)

ಈ ಸೃಷ್ಟಿಯೆಂಬುದೊಂದು ಸತ್ಯ ಸುಂದರ ಚಿತ್ರ. ಇದನ್ನು ಬರೆಯಲು ಭಿತ್ತಿಯಂತಿದೆ ಆ ಸ್ಥಲ. ಅದು ನ್ಯೂನಾಧಿಕಭಾವರಹಿತವಾದುದು. ನಿಸ್ತರಂಗ ಸಾಗರದಂತಿಹುದು. ಅದರೊಳಗೆ ಅವಿರಳವಾಗಿ ವಿಮರ್ಶಶಕ್ತಿಯಿರುವುದು. ಅದರಿಂದಾಗಿ ಅಸ್ಮಿ=ಇದ್ದೇನೆ. ಪ್ರಕಾಶೇ=ಪ್ರಪಂಚರೂಪದಲ್ಲಿ ಪ್ರಕಟವಾಗಿ ಬೆಳಗುವೆ. ನಂದಾಮಿ=ನಲಿಯುವೆ ಎಂದು ವಿಚಾರಿಸಿತು. ಉಪಾಸ್ಯ – ಉಪಾಸಕಭಾವಸ್ವಲೀಲೆಯತಾಳುವಿಚ್ಛೆಯುಂಟಾಯಿತು. ಸಚ್ಚಿದಾನಂದಸ್ವರೂಪಿಯಾದ ಶಿವಶಕ್ತಿಯು ಅದನ್ನರಿಪಳು. ಆ ಚಣದಲ್ಲಿಯೇ ನ್ಯೂನಾಧಿಕಭಾವವ ತಳೆವಳು.

ಈಷಚ್ಚಲನ ತಾಳಿದ ಈಶ್ವರೀವಿಶಿಷ್ಟ ಆ ಪರಶಿವಬ್ರಹ್ಮದಲ್ಲಿ ಬ್ರಹ್ಮಾಂಡರೂಪವಾದ ಈ ಮೂವತ್ತಾರು ತತ್ತ್ವಗಳು ತೋರುವವು : ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯೆ, ಮಾಯೆ, ಕಲಾ, ಕಾಲ, ಅಶುದ್ಧವಿದ್ಯೆ, ನಿಯತಿ, ರಾಗ, ಪುರುಷ, ಪ್ರಕೃತಿ ; ಬುದ್ಧಿ, ಅಹಂಕಾರ, ಮನಸ್ಸು ; ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಪಂಚತನ್ಮಾತ್ರ, ಪಂಚಭೂತಂಗಳು. ಇವುಗಳ ವಿಕಾಸವೆ ಸೃಷ್ಟಿ – ಸ್ಥಿತಿಗಳು ; ಸಂಕೋಚವೆ ಲಯ – ತಿರೋಧಾನಗಳು.

> ಮಯ್ಯೇವ ಸಕಲಂ ಜಾತಂ, ಮಯಿ ಸರ್ವಂ ಪ್ರತಿಷ್ಠಿತಮ್ ।
> ಮಯಿ ಸರ್ವಂ ಲಯಂ ಯಾತಿ.... ॥

ಹೀಗೆ ಶಿವಾದ್ವೈತಿಗಳು ಸೃಷ್ಟಿಯ ಕ್ರಮವನ್ನು ಸೂಕ್ಷ್ಮದಿಂದ ಸ್ಥೂಲೋತ್ಪತ್ತಿಯನ್ನು ಒಪ್ಪಿದ್ದಾರೆ. ಇದುವೆ ನೈಜವಾಗಿದೆ. ಏಕೆಂದರೆ ಸತಿಯ ಗರ್ಭದಲ್ಲಿನ ಪಿಂಡೋತ್ಪತ್ತಿಯು ಇದಕ್ಕೆ ನಿದರ್ಶನವಾಗಿದೆ. ಪತಿಯ ಬೀಜರೂಪ ಓಜವಿಲ್ಲದೆ ಹೇಗೆ ಸಂತತಿ ಸೃಷ್ಟಿಯಾಗದೋ ಹಾಗೆ ಶಿವನ ಚೈತನ್ಯರೂಪ ಓಜವಿಲ್ಲದೆ ಜಗತ್‌ಸೃಷ್ಟಿಯಾಗದು. ಪ್ರಾಪಂಚಿಕದಲ್ಲಿ ಸತಿ ಭಿನ್ನ ವ್ಯಕ್ತಿಯಾಗಿ (ಇದೂ ದೈಹಿಕವಾಗಿ ಮಾತ್ರ) ತೋರುತ್ತಾಳೆ. ಪಾರಮಾರ್ಥಿಕದಲ್ಲಿ ಆ ಶಿವಶಕ್ತಿಯರು ಅವಿರಳ ಅಂದರೆ ಅವಿನಾಭಾವರೂಪದಲ್ಲಿಯೇ ಇರುತ್ತಾರೆ. ಇದರಿಂದಾಗಿ ಪರಶಿವನು ಸೃಷ್ಟಿರಚನೆಗೆ ಅಭಿನ್ನ ನಿಮಿತ್ತೋಪಾದಾನಕಾರಣನಾಗಿದ್ದಾನೆ.

ಈ ಮೂವತ್ತಾರು ತತ್ತ್ವಗಳಲ್ಲಿ ಮೊದಲಿನವೈದು ಶುದ್ಧಾಧ್ವತತ್ತ್ವಗಳು. ಮಧ್ಯದವು ಎಂಟು ಮಿಶ್ರಾಧ್ವ

ತತ್ತ್ವಗಳು. ಮುಂದಿನವು ಇಪ್ಪತ್ತುಮೂರು ಅಶುದ್ಧಾಧ್ವತತ್ತ್ವಗಳು. ಮೊದಲಿನವು ಆತ್ಮಭೋಗಕ್ಕೆ, ನಡುವಿನವು ತನುಕರಣಾದಿ ಭೋಗಕ್ಕೆ, ಕೊನೆಯುವು ಭುವನಾದಿ ಭೋಗಕ್ಕೆ ಸಾಧನವಾಗಿರುವುವು.

ಪಂಚಭೂತಗಳ ಪಂಚೀಕರಣದಿಂದ ಪ್ರಪಂಚೋತ್ಪತ್ತಿಯಾಗುತ್ತದೆ. ಪ್ರಪಂಚವೇ ಬ್ರಹ್ಮಾಂಡವೆನಿಸುತ್ತದೆ. ಬ್ರಹ್ಮಾಂಡದಲ್ಲಿ ಚತುರ್ದಶಭುವನಗಳೂ ಎಂಬತ್ತುನಾಲ್ಕುಲಕ್ಷ ಜೀವರಾಶಿಗಳೂ ಜನಿಸುವುವು. ಇವೆಲ್ಲಕ್ಕೆ ಆ ಪರಶಿವನೇ ಮೂಲ ಕಾರಣನು.

ಅನಾದಿನಿಧನಾಚ್ಛಾಂತಾಚ್ಛಿವಾತ್ ಪರಮಕಾರಣಾತ್ ।
ಇಚ್ಛಾಶಕ್ತಿರ್ವಿನಿಷ್ಕ್ರಾಂತಾ ತತೋ ಜ್ಞಾನಂ ತತಃ ಕ್ರಿಯಾ ॥
ತತೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ । (ಆಗಮೋಕ್ತಿ)

ಅಪ್ಯಂತರಹಿತನಾದ ಶಾಂತನಾದ ಪರಮಕಾರಣನಾದ ಶಕ್ತಿಸಹಿತನಾದ ಆ ಪರಮೇಶ್ವರನು ಸೃಷ್ಟಿಗೆ ಅಭಿಮುಖನಾಗಲು ಅವನೊಳಗಿರುವ ಆ ವಿಮರ್ಶಾಶಕ್ತಿಯೇ ಇಚ್ಛಾಶಕ್ತಿಯಾಗಿ ಪರಿಣಮಿಸುವುದು. ಆ ಇಚ್ಛಾಶಕ್ತಿಯಲ್ಲಿ ಜ್ಞಾನಶಕ್ತಿ–ಕ್ರಿಯಾಶಕ್ತಿಗಳು ಸಂಭವಿಸುವುವು. ಆ ಜ್ಞಾನಶಕ್ತಿಯಲ್ಲಿ ಪರಶಿವನು ಸ್ಫುರಿಸಿ ಸರ್ವಜ್ಞನೆನಿಸಿ ಶಿವತತ್ತ್ವವೆನಿಸುವನು. ಆ ಕ್ರಿಯಾಶಕ್ತಿಯಲ್ಲಿ ಆ ಪರಶಿವನು ಸ್ಫುರಿಸಿ ಸರ್ವಕರ್ತನೆನಿಸಿ ಶಕ್ತಿತತ್ತ್ವವೆನಿಸುವನು. ಶಕ್ತಿವಿಶಿಷ್ಟ ಶಿವನು ಭಾವೀಸೃಷ್ಟಿಗೆ ಅಭಿನ್ನನಿಮಿತ್ತೋಪಾದಾನಕಾರಣನಾಗುವನು.

ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ॥
ತದಿಚ್ಛಯಾಽಭವತ್ ಸಾಕ್ಷಾತ್ ತತ್‌ಸ್ವರೂಪಾನುಕಾರಿಣೀ (ಸಿ. ಶಿಖಾಮಣಿ ೨–೧೨)

ಆ ಶಿವಶಕ್ತಿ ಸಂಪುಟದಲ್ಲಿ ಸ್ಫುರಿಸಿ ನೀರೊಳಗೆ ನೆನೆದ ಕಾಳಿನಂತೆ. ಅಂಕುರಮುಖವಾದ ಪ್ರಪಂಚಾಭಿಮಾನದಿಂದ ಸದಾಶಿವತತ್ತ್ವೋದಯವಾಯಿತು. "ಮೊದಲು ನಿಷ್ಕಲಬ್ರಹ್ಮವು. ಆ ನಿಷ್ಕಲಬ್ರಹ್ಮದಿಂದ ಜ್ಞಾನಚಿತ್ತು. ಆ ಚಿತ್ತಿನಿಂದ ಚಿನ್ನಾದ-ಚಿದ್ಬಿಂದು-ಚಿತ್ಕಳೆಗಳು ಹುಟ್ಟಿದವು...ಆ ಸದಾಶಿವನ ಸದ್ಯೋಜಾತಾದೀಶಾನಾಂತ್ಯಮಾದ್ಯೈದು ವದನಂಗಳಿಂದ ಹುಟ್ಟಿದ ಪೃಥಿವ್ಯಾದಿ ಐದು ತತ್ತ್ವಂಗಳೇಕೀಕರಿಸಿ ಚತುರ್ದಶಭುವನ-ಚರಾಚರಪ್ರಾಣಿಂಗಳ ಸಮೂಹವನ್ನುಳ್ಳ ವಿಶ್ವೋತ್ಪತ್ತಿಯಾದ ಕಾರಣ ಜಗದುತ್ಪತ್ತಿಗೆ ಮೂಲ ಕಾರಣವಾಗಿರುವಂಥಾದ್ದೇ ಸದಾಶಿವಮೂರ್ತಿಯು."

(ಚನ್ನಬಸವಣ್ಣನ ಕರಣಹಸಿಗೆ)

ದೃಕ್ಕ್ರಿಯಾಶಕ್ತಿಯು ಉದ್ರೇಕಾವಸ್ಥೆಯಲ್ಲಿ ಪ್ರತಿಫಲಿಸಿ ಭೂಮಿಯಲ್ಲಿ ಬಿತ್ತಿದ ಬೀಜದಂತೆ ಜಲಾಶ್ರಯದಲ್ಲಿ ನೆನೆದು ಪೂರ್ವಾವಸ್ಥೆಗೆ ವಿಲಕ್ಷಣವಾಗಿ ಅಂಕುರೋನ್ಮುಖವಾದುದೆ ಇದಂತಾರೂಪವು. ಇದು ಮುಂದೆ ಅಹಂತೆಯಿಂದ ಆಚ್ಛಾದಿತವಾಗುತ್ತದೆ. ಹೀಗೆ ಇದಂ ಮತ್ತು ಅಹಂ ಎಂಬೆರಡರಿಂದ ಕೂಡಿದುದೆ ಕಾಣುವ ಈ ವಿಶ್ವರೂಪ. ಹೀಗೆ ಅಂಕುರಿಸಿದ ಅಖಂಡಪ್ರಪಂಚಾಭಿಮಾನವುಳ್ಳವನಾಗಿ ಅಹಂತೆಯಿಂದ ಆವರಿಸಿದ ಇದಂರೂಪ ವಿಶ್ವಸ್ಫೂರ್ತಿಮಯನಾಗಿ ಈಶ್ವರತತ್ತ್ವವುಂಟಾಯಿತು.

ಇದಂ ಎಂಬ ಭಾವವು ಕ್ರಿಯಾಪ್ರಧಾನವಾದುದು. ಅಹಂ ಎಂಬುದು ಜ್ಞಾನಪ್ರಧಾನವಾದುದು. ಒಂದು ಬಹಿರಂಗ; ಇನ್ನೊಂದು ಅಂತರಂಗ. ಇವೆರಡಕ್ಕೂ ನೀರುತೆರೆಗಳಂತೆ ಭೇದವಿದ್ದರೂ ಸ್ವರೂಪೈಕ್ಯರೂಪ ಅಭೇದವುಂಟು. ಆ ಅಭೇದರೂಪ ಐಕ್ಯಪ್ರತಿಪತ್ತಿಯೆ ಶುದ್ಧವಿದ್ಯಾತತ್ತ್ವ. ಕಡಲ ತೆರೆಗಳಂತೆ ಚಲನವುಂಟಾಗಿ ಈ ಶುದ್ಧವಿದ್ಯಾತತ್ತ್ವವು ಸಂಭವಿಸುತ್ತದೆ. ಇದಕ್ಕೆ ಸೃಷ್ಟಿಕಾರ್ಯದಲ್ಲಿ ಸಹಕರಿಸುವ ಚೇತನಕ್ಕೆ ಚತುರ್ಮುಖವುಳ್ಳ ಬ್ರಹ್ಮ ಎಂಬುದು ನಾಮಾಂತರವಾಗಿದೆ. ಈ ಶುದ್ಧವಿದ್ಯಾತತ್ತ್ವವು ಗುರುಕೃಪೆಯಿಂದ ಲಭ್ಯವಾಗುತ್ತದೆ. ಈ ತತ್ತ್ವದಲ್ಲಿ ಕ್ರಿಯಾಶಕ್ತಿ ಗೌಣವಾಗಿರುತ್ತದೆ. ಒಟ್ಟಾರೆ ಒಂದು ಮಾತು. ದೃಕ್ಕ್ರಿಯಾಶಕ್ತಿಸಮರೂಪವೆ ಸದಾಶಿವತತ್ತ್ವ. ಕ್ರಿಯಾಶಕ್ತಿಯ ಆಧಿಕ್ಯವುಳ್ಳುದೇ ಈಶ್ವರತತ್ತ್ವ. ಜ್ಞಾನಶಕ್ತಿಯ ಆಧಿಕ್ಯವುಳ್ಳದ್ದೇ ಶುದ್ಧವಿದ್ಯಾತತ್ತ್ವ.

ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ – ಇವೈದು ಶುದ್ಧತತ್ತ್ವಗಳು. ಸದಾಶಿವತತ್ತ್ವದಲ್ಲಿ ಅಕ್ಷರಾತ್ಮಕವಾದ ಬಿಂದುಪದಾರ್ಥವೂ ಸ್ಥೂಲಧ್ವನಿಯುಳ್ಳ ನಾದಪದಾರ್ಥವೂ ಅಂತರಿತವಾಗಿರುವುವು. ಈಶ್ವರತತ್ತ್ವದಲ್ಲಿ ಅನಂತನೇ ಮೊದಲಾದ ವಿದ್ಯೇಶ್ವರರೆಲ್ಲರೂ ಅಂತರ್ಭೂತರಾಗಿರುವರು. ಶುದ್ಧವಿದ್ಯಾತತ್ತ್ವದಲ್ಲಿ ಸಪ್ತಕೋಟಿ ಮಹಾಮಂತ್ರಗಳು, ಇತರ ಸರ್ವವಾಚಕ ಶಬ್ದಗಳು, ಕಾಮಿಕಾದಿ ಇಪ್ಪತ್ತೆಂಟು ಆಗಮಗಳು ಅಂತರ್ಗತವಾಗಿರುವುವು.

ಸದಾಶಿವ, ಈಶ್ವರ, ಶುದ್ಧವಿದ್ಯಾ – ಈ ಮೂರು, ಮೊದಲಿರುವ ಆ ಶಿವಶಕ್ತಿಸಂಪುಟದೊಳಗಿನವು. ಪಾರಮಾರ್ಥಿಕವಾಗಿ ಇವಕ್ಕೆ ಭಿನ್ನಭಾವವಿಲ್ಲ.

ಶಿವಾದ್ವೈತದಲ್ಲಿ ಆರನೆಯದೆ ಮಾಯಾತತ್ತ್ವ! ಇದು ಮೊದಲ್ಗೊಂಡು ಮುಂದಿನವೆಲ್ಲ ಅಶುದ್ಧತತ್ತ್ವಗಳೆನಿಸುತ್ತವೆ. ಮಾಯಾತತ್ತ್ವವು ಈ ಚಿತ್ರವಿಚಿತ್ರವಾದ ಪ್ರಪಂಚೋತ್ಪತ್ತಿಗೆ ಮೂಲವಾಗಿದೆ. ಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನೆಲ್ಲ ತನ್ನೊಳಗೆ ಮಯೂರಾಂಡರಸದಂತೆ ಸೂಕ್ಷ್ಮವಾಗಿ ಇರಿಸಿಕೊಂಡಿದೆ. ಭೇದಸ್ವರೂಪಪ್ರಪಂಚಕ್ಕೆ ಇದುವೆ ಪ್ರಧಾನತತ್ತ್ವವಾಗಿದೆ.

ಶುದ್ಧಾಧ್ವದಲ್ಲಿ ಶಿವನಿಗೆ ಶಕ್ತಿಸಾಧನವಾದಂತೆ ಅಶುದ್ಧಾಧ್ವದಲ್ಲಿ ಸಾಧನವಾಗುವುದೇ ಮಾಯೆ. ಅಶುದ್ಧಾಧ್ವದಲ್ಲಿ ಆದಿಯಲ್ಲಿ ಪರಿಣಾಮಗೊಳ್ಳುವುದೇ ಮಾಯೆ. ಈ ಮಾಯೆ ತನ್ನ ಬಳಿಕ ಪರಿಣಮಿಸುವ ಪ್ರಪಂಚಕಾರ್ಯಕ್ಕೆ ಉಪಾದಾನಕಾರಣವಾಗಿರುವುದು. ಇದು ಅತ್ಯಂತ ಸೂಕ್ಷ್ಮವಾಗಿದ್ದು ಅಮೂರ್ತವೆನಿಸಿದೆ. ಏಕತ್ವ-ನಿತ್ಯತ್ವ-ವ್ಯಾಪಕತ್ವ ಧರ್ಮವುಳ್ಳದ್ದು. ಆದ್ಯಂತಶೂನ್ಯವಾಗಿ ಶಿವಾಸಕ್ತವಾದುದು.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥ (ಶ್ವೇತಾಶ್ವತರ ಶ್ರುತಿ)

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥ (ಸಿದ್ಧಾಂತಾಗಮ)

'ಮಂ – ಶಿವಂ, ಅಯತಿ – ಸ್ವಭಾವತಃ ಪ್ರಾಪ್ನೋತೀತಿ ಮಾಯಾ' ಎಂದು ಮಾಯಾಶಬ್ದವನ್ನು ವಿಗ್ರಹಿಸಿ ಮಾಯಾಸ್ವರೂಪವನ್ನೂ ಸ್ವಭಾವವನ್ನೂ ಸ್ಪಷ್ಟಗೊಳಿಸಿದ್ದಾರೆ ಶಿವಾಚಾರ್ಯರು. ವೀರಶೈವೋಕ್ತ ಈ ಮಾಯೆಯು ಮಿಥ್ಯಾಭೂತವಾದ ಅವಿದ್ಯೆಯಲ್ಲ. ಪಾರಮಾರ್ಥಿಕವಾದ ಪ್ರಕೃತಿ! ಇದು ಕ್ರಿಯಾಶಕ್ತಿ–ನಿವೃತ್ತಿಕಲೆಗಳಿಂದ ಕೂಡಿಕೊಂಡಿರುತ್ತದೆ. ಮಹೇಶ್ವರನ ಸಂಕಲ್ಪದಂತೆ ಇರುತ್ತದೆ. ಅವನ ಕ್ರೀಡೋ(ಲೀಲೋ)ಪಕರಣವಾಗಿರುತ್ತದೆ.

ಗುಣತ್ರಯಸಮನ್ವಿತಳು ಮಾಯೆ. ಸೃಷ್ಟಿಸಮರ್ಥಳು ಮಾಯೆ. ಈ ಮಾಯೆಯ ಸತ್ವಗುಣದಲ್ಲಿ ಪ್ರತಿಫಲಿಸಿದ ಶುದ್ಧಚೈತನ್ಯವೆ ಸೃಷ್ಟಿಕ್ರಮಕ್ಕೊಳಗಾದ ರುದ್ರನು. (ಸೃಷ್ಟಿಗಾದಿರುದ್ರನೊಬ್ಬ ಬೇರೆಯಿದ್ದಾನೆ.) ರಜೋಗುಣದಲ್ಲಿ ಪ್ರತಿಫಲಿಸಿದ ಚೈತನ್ಯವೇ ಬ್ರಹ್ಮ. ತಮೋಗುಣದಲ್ಲಿ ಪ್ರತಿಫಲಿಸಿದ ಚೈತನ್ಯವೇ ವಿಷ್ಣು. ರುದ್ರನಲ್ಲಿ ಅಗ್ನಿತತ್ತ್ವ, ಬ್ರಹ್ಮನಲ್ಲಿ ಸೋಮತತ್ತ್ವ, ವಿಷ್ಣುವಿನಲ್ಲಿ ಸೂರ್ಯತತ್ತ್ವಗಳು ಅಂತರ್ಗತವಾಗಿರುವುವು. ರುದ್ರನ ತೇಜೋಂಶದಲ್ಲಿ ಜಂಗಮರ ಉತ್ಪತ್ತಿಯೆಂಬರು. ವಿಶ್ವಾಧಿಕನೂ ವಿಶ್ವವಂದ್ಯನೂ ರುದ್ರನಾಗಿರುವುದರಿಂದ ಅವನಿಂದ ಉತ್ಪನ್ನರಾದ ಗಣಂಗಳು ವಿಶ್ವವಂದ್ಯರು.

"ಅನಾದಿಯಾಗಿ ಶಿವನುಂಟು, ಮಾಯೆಯುಂಟು. ಇಂತು ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡಾ! ಇದ ನಾವರಿದೆವಯ್ಯಾ!........ಆ ಲಿಂಗನಿರ್ಮಿತದಿಂದ ಮಾಯೆ ಹುಟ್ಟಿ, ಆ ಮಾಯೆಯಿಂದ ತತ್ತ್ವಬ್ರಹ್ಮಾಂಡಾದಿ ಲೋಕಾದಿಲೋಕಂಗಳು ಹುಟ್ಟಿದವು ನೋಡಾ!...." ಎಂದು ಸಿದ್ಧೇಶ್ವರ ವಚನವುಂಟು.

## ಪುರುಷತತ್ತ್ವವಿಚಾರ

ಇದು ಹನ್ನೆರಡನೆಯ ತತ್ತ್ವ. ಪ್ರಾಪಂಚಿಕಪ್ರಧಾನತತ್ತ್ವ. ಅಂತೆಯೆ ಪಾರಮಾರ್ಥಿಕತತ್ತ್ವವಾಗಿಯೂ ಪ್ರತಿಪಾದಿತವಾಗಿದೆ ಶಾಸ್ತ್ರಗ್ರಂಥಗಳಲ್ಲಿ. ಪುರುಷ ಎಂದರೆ ಆತ್ಮ, ಮನುಷ್ಯ, ಗಂಡು ಎಂಬ ಅರ್ಥಗಳಿರುವಂತೆ ಪರಶಿವ, ಪರಬ್ರಹ್ಮ, ವಿಷ್ಣು ಎಂಬರ್ಥಗಳೂ ಇವೆ. ಪ್ರಕೃತದಲ್ಲಿ ದೇಹಿಯನ್ನು ಕುರಿತು ವಿಚಾರವಿದೆ.

ಪರಂಜ್ಯೋತೀರೂಪನಾದ ಪರಮಾತ್ಮನ ಇಚ್ಛಾಶಕ್ತಿಯ ಪ್ರೇರಣೆಯಿಂದ ಬೇರ್ಪಟ್ಟು ಮಾಯಾತತ್ತ್ವದಲ್ಲಿ ಪ್ರತಿಫಲಿಸಿದ ಆತನ ಪ್ರಕಾಶಾಂಶವೆ ಪುರುಷತತ್ತ್ವ! ಅಗ್ನಿ–ಸ್ಫುಲಿಂಗಗಳಂತೆ ಪರಮೇಶ್ವರ – ಪುರುಷರ ಭೇದಾಭೇದ ಪ್ರವೃತ್ತಿ! ಸ್ಫುಲಿಂಗಗಳಂತೆ ಪುರುಷರು ಅನೇಕರು. ಅಗ್ನಿಯಂತೆ ಆ ಪರಶಿವನೊಬ್ಬ. ಪುರುಷತತ್ತ್ವವು ಅಜಡ, ವ್ಯಾಪಕ. ಆದರೂ ತ್ರಿಮಲಬದ್ಧನಾಗಿ ತ್ರಿಕರ್ಮಾವೃತನಾಗಿ ಸಂಸಾರಜೀವಿಯೆನಿಸಿದ್ದಾನೆ. ತ್ರಿಮಲಗಳ ಆವರಣದ ಫಲವಾಗಿ ಅಲ್ಪಕರ್ತೃ, ಅಲ್ಪಜ್ಞ, ಅಪೂರ್ಣ, ಅನಿತ್ಯ, ಅವ್ಯಾಪಕನೆನಿಸಿದ್ದಾನೆ. ಸ್ವಯಂಪ್ರಕಾಶಸ್ವರೂಪ ಪರಶಿವನಿಂದ ವಿಭಾಗವಾಗಿ – ವಿಚ್ಛಿನ್ನನಾಗಿ ಅಶುದ್ಧಮಾಯೆಯಿಂದ ಆವೃತನಾಗಿ ನಾನು ದೇವನಲ್ಲವೆಂಬ ತನ್ನ ದೇಹಾದಿಗಳೆ ತಾನೆಂಬ, ತಾನು ಅಲ್ಪನೆಂಬ ಭಾವನೆಯ ಆಣವಮಲದಿಂದ ಆವೃತನಾಗುತ್ತಾನೆ. ಆ ಆಣವಮಲಜನ್ಯ ಅಜ್ಞಾನದಿಂದ

ವೈಷಯಿಕವಾಸನೆಯಿಂದ ಕರ್ಮತ್ರಯಸಂಚಯದೊಳಗೆ ಮುಳುಗಿ ಕಾರ್ಮಿಕಮಲದಿಂದ ಕೂಡಿದವನಾಗುತ್ತಾನೆ. ಈ ಕಾರ್ಮಿಕಮಲದಿಂದ ಸ್ವಾರ್ಥಸಂಕುಚಿತಸ್ವಭಾವದವನಾಗಿ ಅನ್ಯೋನ್ಯ ಭೇದಭಾವದಿಂದ ಸಮದರ್ಶಿತ್ವವನ್ನು ಕಳೆದುಕೊಂಡು ಮಾಯಾಮಲವುಳ್ಳವನಾಗುತ್ತಾನೆ. ಈ ತ್ರಿಮಲಶೃಂಖಲೆಯಿಂದ ಬಂಧಿತನಾಗಿ ಬದ್ಧಜೀವಿಯಾಗಿ – ಅಶುದ್ಧಜೀವಿಯಾಗಿ ಬಾಳುತ್ತಾನೆ. 'ಪುರಿ ಶೇತೆ ಇತಿ ಪುರುಷಃ' ದಹರಪುಂಡರೀಕಪುರಿಯಲ್ಲಿರುವವನಾಗಿ ಪುರುಷನಾಗಿದ್ದಾನೆ. ಈ ಮಲಯುಕ್ತಪುರದಲ್ಲಿ ಅಂದರೆ ದೇಹದಲ್ಲಿ ಮೋಹವುಳ್ಳವನಾಗಿ ಇಲ್ಲಿ ಪುರುಷನಾದಂತೆ, ಗುರುಕರುಣದಿಂದ ದೇಹವನ್ನು ತನ್ನನ್ನು ದೇವನನ್ನಾಗಿಸಿ ಪುರುಷಪದವನ್ನು ಆ ಅರ್ಥದಲ್ಲಿ ಸಾರ್ಥಕಗೊಳಿಸಿ ಶಿವಾದ್ವೈತಿಯೆನಿಸುತ್ತಾನೆ. ಇಹ – ಪರಗಳಿಗೆ ಇವನೇ ಕಾರಣ ; ಇವನೇ ಅಗ್ರಗಣ್ಯ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ ಪರಃ ॥
ಮಹತಃ ಪರಮವ್ಯಕ್ತಮವ್ಯಕ್ತಾತ್ ಪುರುಷಃ ಪರಃ ।
ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ ॥ (ಕಠೋಪನಿಷತ್)

ಪುರುಷನ ವ್ಯಕ್ತಿತ್ವ ಹಿರಿಯದು ; ಹರವಾದುದು. ಪ್ರಪಂಚ ಪರಮಾರ್ಥಗಳೆರಡರ ಜೀವಾಳ ಆತನಾಗಿದ್ದಾನೆ. ಪ್ರಕೃತಿ ಈತನ ಒಂದಂಶ. ಇದರ ವಶನಾದ ಪುರುಷ ತನ್ನ ಆ ದಿವ್ಯವ್ಯಕ್ತಿತ್ವವನ್ನು ಮಂಕಾಗಿಸಿಕೊಳ್ಳುತ್ತಾನೆ. ದಿಟವಾಗಿ ಪುರುಷನಿಗೆ ಸಂಸಾರಸಂಬಂಧವಿಲ್ಲ. ಭವದ ಬಂಧನವಿಲ್ಲ. ಅಚ್ಚಬೆಳಗಾಗಿ ಅವಸ್ಥೆಗಳ ನೀಗಿ ತುರೀಯ-ತುರೀಯಾತೀತನಾಗಿ ತೊಳಗುವ ಅಗ್ಗಳಿಕೆಯುಳ್ಳವನು. ಎಲ್ಲವನ್ನು ವಿಚಾರಿಸಬಲ್ಲ ಪುರುಷ. ಈ ಶಕ್ತಿಯನ್ನು ಸಂಗಳಿಸಿಕೊಂಡಲ್ಲಿ ಈ ಪುರುಷ (ಮಾನುಷ)ನೆ ಆ ಪುರುಷ (ಪರಮೇಶ)ನಾಗಬಲ್ಲ.

ಈ ಪ್ರಪಂಚದಲ್ಲಿ ತಲ್ಲೀನನಾದ ಈತನಿಗೆ ಕಲಾ, ಅಶುದ್ಧವಿದ್ಯಾ, ರಾಗ, ಕಾಲ, ನಿಯತಿ – ಇವೈದು ಕಂಚುಕಗಳಾಗಿವೆ. ಇವುಗಳಿಂದ ಪರಿವೀತನಾಗಿ ಪರಿಮಿತಶಕ್ತನಾಗಿ ಇವನು 'ಕಂಚುಕಿ'ಯೆನಿಸುತ್ತಾನೆ.

## ಪಂಚಕಂಚುಕ

ಕಲಾ, ಅಶುದ್ಧವಿದ್ಯಾ, ರಾಗ, ಕಾಲ, ನಿಯತಿ ಇವು ಪುರುಷನ ಪಂಚಕಂಚುಕಗಳು. ಇವು ಪುರುಷತತ್ತ್ವದ ಪಂಚಶಕ್ತಿಗಳಾದ ಕರ್ತೃತ್ವಶಕ್ತಿ, ಜ್ಞಾತೃತ್ವಶಕ್ತಿ, ಪೂರ್ಣತ್ವಶಕ್ತಿ, ನಿತ್ಯತ್ವಶಕ್ತಿ, ವ್ಯಾಪಕತ್ವಶಕ್ತಿ ಎಂಬೀ ಐದು ಧರ್ಮಗಳ ಅತ್ಯಂತ ಸಂಕೋಚಾವಸ್ಥೆಯಿಂದ ಕ್ರಮವಿಡಿದು ರೂಪುಗೊಳ್ಳುತ್ತವೆ. ಇವು ಪಂಚಕಂಚುಕಗಳೆಂದು ಶಿವಾಗಮಗಳು ಸಾರುತ್ತವೆ. ಶಿವಶಾಸನದಿಂದ ಇವು ಈ ಪುರುಷನ ಆವರಣಗಳಾಗಿವೆ. ಅಂದರೆ ಮಲತ್ರಯದಿಂದ ಸಂಕುಚಿತವಾದ ಕರ್ತೃತ್ವಶಕ್ತಿಯುಳ್ಳ ಪುರುಷನ ಕಿಂಚಿತ್‌ಕರ್ತೃತ್ವರೂಪವೇ ಕಲಾತತ್ತ್ವ. ಅಲ್ಪಜ್ಞಾತೃತ್ವರೂಪವೆ ಅಶುದ್ಧವಿದ್ಯಾತತ್ತ್ವ. ಕಿಂಚಿತ್ಪೂರ್ಣತ್ವ ಅಂದರೆ ಅಪೂರ್ಣತ್ವರೂಪವೆ ವಿಷಯಾಸಕ್ತಿರೂಪ ರಾಗತತ್ತ್ವ. ಅನಿತ್ಯತ್ವರೂಪವೇ ತ್ರಿಕಾಲರೂಪಕಾಲತತ್ತ್ವ. ಅವ್ಯಾಪಕತ್ವರೂಪವೇ ನಿಯಮಹೇತುಭೂತವಾದ ನಿಯತಿತತ್ತ್ವ. ಇವುಗಳಿಂದಾಗಿ ಪುರುಷನು ಸಂಕುಚಿತನಾಗಿದ್ದಾನೆ. ಪ್ರಕೃತಿಪ್ರೀತಿಯುಳ್ಳವನಾಗಿದ್ದಾನೆ.

ತನ್ನ ಮಣಿಹ – ಮರವೆಗೆ ತ್ಯಾಗ – ಯೋಗ ವಿಘ್ನಗಳಿಗೆ ಅನಿತ್ಯ – ಅವ್ಯಾಪ್ತಿಗಳಿಗೆ ಕಾರಣಗಳಾದ ಕಂಚುಕಗಳಿಗೆ ತ್ರಿಮಲಗಳೇ ಮೂಲ. ಆ ತ್ರಿಮಲಗಳನ್ನು ಶ್ರೀಗುರುಕಾರುಣ್ಯದಿಂದ ತೊಳೆದು ತ್ರಿಲಿಂಗಗಳನ್ನು ತಳೆಯಬೇಕು. ಪಂಚಾವರಣಕಂಚುಕಗಳ ಪರಿಹಾರಕ್ಕಾಗಿ ಅಷ್ಟಾವರಣಗಳನ್ನು ತನ್ನ ಗುರುವಿನಿಂದ ಪುರುಷನು ಪಡೆಯಬೇಕು. ಪಡೆದರೆ ಮಲವೆಂಬ ಮಣ್ಣಿನ ಗಡಿಗೆಯಿಂದ ಮುಚ್ಚಿದ ಪುರುಷಪ್ರಕಾಶವು ಗುರುಕಾರುಣ್ಯಬಲದಿಂದ ಮಣ್ಣುಕೊಡದಿಂದೀಚೆಗೆ ಬಂದ ಸೊಡರಿನಂತೆ ಉಜ್ವಲಗೊಳ್ಳುತ್ತದೆ. ಇದರಿಂದ ಪುರುಷನು ಜೀವತ್ವದಿಂದ ಶಿವತ್ವಕ್ಕೇರುತ್ತಾನೆ. ಅಣುತ್ವವನ್ನು ಬಿಟ್ಟು ವಿಭುತ್ವವನ್ನು ಪಡೆಯುತ್ತಾನೆ. ನಿಯಮ್ಯನೆನಿಸದೆ ನಿಯಾಮಕನೆನಿಸುತ್ತಾನೆ. ದಿವ್ಯಕಳಾಮೂರ್ತಿಯಾಗುತ್ತಾನೆ.

ಕಂಚುಕಮೂಲವಾದ ತ್ರಿಮಲಗಳು ಆನುವಂಶಿಕ, ಆರ್ಜಿತ ಎಂದು ಎರಡು ವಿಧ. ತಂದೆಯ ರೇತಸ್ಸು, ತಾಯಿಯ ರಕ್ತಗಳೆರಡು ಕ್ರಮವಾಗಿ ಕಾರ್ಮಿಕ, ಮಾಯಾ – ಮಲಗಳೆಂದು ಆ ರೇತೋರಕ್ತಸಮ್ಮಿಶ್ರಣವೆ ಆಣವಮಲವೆಂದು ಹೇಳುವುದೇ ಆನುವಂಶಿಕ ಮಲತ್ರಯ. ಈ ವಾದದಲ್ಲಿ ತಂದೆಯ ಕರ್ಮ ಆತನ ರೇತಸ್ಸಿನಲ್ಲಿ, ತಾಯಿಯ ಅಜ್ಞಾನ ಅವಳ ರಕ್ತದಲ್ಲಿ ಬೆರೆತುಬಂದಿರುತ್ತವೆಯೆಂದೂ ಅವೆರಡರ ಕೂಟದಿಂದಾದ ಪಿಂಡದಲ್ಲಿ ಬಂದ ವಿಭು

ಚೈತನ್ಯವು ಅಣುವಾಗುವುದರಿಂದ ಆಣವವೆಂದೂ ಅಭಿಪ್ರಾಯ. ಇನ್ನು ಸಂಚಿತಾದಿ ಕರ್ಮ, ಪ್ರಾಕೃತಿಕ ಮಾಯೆ, ಅಲ್ಪತ್ವಭಾವಾದಿರೂಪ ಅಣುತ್ವ ಇವು ಆರ್ಜಿತ ಮಲತ್ರಯಾದಿಗಳು. ತ್ರಿವಿಧ ಲಿಂಗಧಾರಣದಿಂದ ತ್ರಿವಿಧಮಲನಿವೃತ್ತಿ!

ಇಲ್ಲಿ ಮಲವೆಂದರೆ ಬರೀ ಸ್ಥೂಲವಾದ ಬಾಹ್ಯವಾದ ಕೊಳೆಯೆಂದರ್ಥವಲ್ಲ. ಬಾಹ್ಯಾಭ್ಯಂತರಗಳಲ್ಲಿ ಆವರಿಸಿರುವ ಸಂಕೋಚರೂಪದೋಷ. ಅಂತೆಯೆ ಆ ಶಿವಾದ್ವೈತತತ್ತ್ವದಲ್ಲಿರುವ ಮಹದಿಚ್ಛಾಶಕ್ತಿಯ ಸಂಕೋಚಸ್ವರೂಪವೆ ಅಂದರೆ ಅಲ್ಪಭೋಕ್ತೃತ್ವವೇ ಅಥವಾ ಅಪರಿಪೂರ್ಣತ್ವವೇ ಆಣವಮಲ. ಆ ಮಹಾಕ್ರಿಯಾಶಕ್ತಿಯ ಸಂಕೋಚತ್ವವೇ ಅಂದರೆ ಅಲ್ಪಕರ್ತೃತ್ವವೇ ಕಾರ್ಮಿಕಮಲ. ಆ ಮಹಾಜ್ಞಾನಶಕ್ತಿಯ ಸಂಕೋಚವೇ ಅಂದರೆ ಅಲ್ಪಜ್ಞತ್ವವೇ ಮಾಯಾ ಮಲ. ಇವು ಮೂರು, ಕಾರಣ–ಸ್ಥೂಲ-ಸೂಕ್ಷ್ಮ-ತನುಗಳಲ್ಲಿರುತ್ತವೆ; ಜೀವನನ್ನು ಆವರಿಸಿರುತ್ತವೆ; ಪಂಚಕಂಚುಕ ಗಳನ್ನು ನಿರ್ಮಿಸುತ್ತವೆ.

ತನುತ್ರಯಗತಾನಾದಿಮಲತ್ರಯಮಸೌ ಗುರುಃ ।
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶತ್ ॥

ಮಲತ್ರಯ ಅನಾದಿ. ಅಂತೆಯೇ ಅವುಗಳಿಂದಾದ ಪಂಚಕಂಚುಕಗಳು ಅನಾದಿ. ಅವುಗಳ ನಿವಾರಣೆಯಾಗಬೇಕಾದರೆ ಗುರುದೀಕ್ಷೆಯನ್ನು ಪಡೆಯಬೇಕು.

## ಪ್ರಕೃತಿ ತತ್ತ್ವೋತ್ಪತ್ತಿ

ಇದು ಪುರುಷನ ಸ್ವಭಾವ; ಮೂಲರೂಪ. ಇದು ಪುರುಷನಿಗೆ ಭಿನ್ನವಲ್ಲ. ಪುರುಷನ ಶಕ್ತಿಸ್ವರೂಪಿಣಿ, ಗುಣ ವಿಕಾಸಕಾರಿಣಿ.

ಕಾರ್ಯೋನ್ಮುಖವಾದ ಆ ಇಚ್ಛಾಶಕ್ತಿಯು ತನ್ನೊಳಗಿರುವ ಜ್ಞಾನಕ್ರಿಯಾಶಕ್ತಿಗಳ ಅನ್ಯೋನ್ಯಾಭಾವರೂಪ ಮಾಯಾತತ್ತ್ವದಲ್ಲಿ ಮರಳಿ ಪ್ರತಿಸ್ಫುರಣಗೊಂಡು ಪ್ರಕೃತಿತತ್ತ್ವವೆನಿಸುವುದು. ಇದರ ಸುಖ-ದುಃಖ-ಮೋಹ ಗಳನ್ನು ಪರಿವಿಡಿದು ಹುಟ್ಟಿಸುವ ಸತ್ವರಜತಮೋಗುಣಗಳಿಂದ ಕೂಡಿರುವುದು. ಇದು ಪುರುಷನ ಸ್ಥೂಲಾಂಗ ದಲ್ಲಿ ದೇಹಾಕಾರವಾಗಿ, ಸೂಕ್ಷ್ಮಾಂಗದಲ್ಲಿ ಪ್ರಾಣಾಕಾರವಾಗಿ, ಕಾರಣಾಂಗದಲ್ಲಿ ಮನೋಮಯವಾಗಿ ಇರುತ್ತದೆ. ಜಾಗ್ರದವಸ್ಥೆಯಲ್ಲಿ ಸತ್ವಗುಣವನ್ನೂ ಸ್ವಪ್ನದಲ್ಲಿ ರಜೋಗುಣವನ್ನೂ ಸುಷುಪ್ತಿಯಲ್ಲಿ ತಮೋಗುಣವನ್ನೂ ಅಭಿವ್ಯಕ್ತ ಗೊಳಿಸುತ್ತದೆ. ಮೂಲಭೂತವಾಗಿ ಈ ಮೂರು ಗುಣಗಳೂ ಪ್ರಕೃತಿಯಲ್ಲಿ ಹೆಚ್ಚುಕಮ್ಮಿಯಿಲ್ಲದೆ ಸಮವಾಗಿರುತ್ತವೆ. ಪ್ರಕೃತಿಯು ತನ್ನ ಸಾಮ್ಯಗುಣವನ್ನು ಬಿಟ್ಟು ವಿಷಮಾವಸ್ಥೆಗೆ ಬಂದಾಗ ಮುಂದಿನ ಇಪ್ಪತ್ತುಮೂರು ತತ್ತ್ವೋತ್ಪತ್ತಿಗೆ ಕಾರಣವಾಗುವುದು. ವಿಶ್ವವಿಕಾಸವಾದಕ್ಕೆ ಸಮಷ್ಟಿಪ್ರಕೃತಿ ಪ್ರಥಮ ವಸ್ತು. ಅಂತೆಯೇ ಪಿಂಡಾಂಡ ವಿಕಾಸಕ್ಕೂ ವ್ಯಷ್ಟಿ ಪ್ರಕೃತಿಯೊಡನೆ ಸಹಕರಿಸುತ್ತದೆ. ಕಲೆಯು ಉಭಯಪ್ರಕೃತಿಯ ಆವರಣಶಕ್ತಿ!

ಕಲೆಯೈದು ಆರಿಂದ ಸೃಷ್ಟಿಯಂ ತಾಳ್ದಪವೊ
ಕಲೆಗಳ್ಗೆ ಮೂಲಮಾಕುಂಡಲಿನಿ ಉದಯಿಸಿತೊ
ಅವಳ ನಾಂ ಕೆಯ್ಮುಗಿದು ಕೊಂಡಾಡುವೆಂ ಮಿಗೆ
ಅವಳೆ ಲೋಕಕೆ ಮಾತೆ, ಅವಳೆ ಮಂಗಳದಾತೆ! (ಸಿ. ಶಿಖಾಮಣಿಯ ಕನ್ನಡ ಅನುವಾದ)

ಇಚ್ಛಾಶಕ್ತಿಯು ಪುರುಷನ ಭೋಗಸಿದ್ಧಿಗಾಗಿ ಕಲಾಮಯವಾದ ಪ್ರಕೃತಿತತ್ತ್ವವನ್ನು ಹುಟ್ಟಿಸುವುದು. ಈ ಪ್ರಕೃತಿಯಲ್ಲಿ ಸತ್ವಾದಿಗುಣಗಳು ಮೂಲದಲ್ಲಿ ಅವ್ಯಕ್ತವಾಗಿರುವುದರಿಂದ ಇವನ್ನು ಅವ್ಯಕ್ತವೆಂದು ಕರೆವುದುಂಟು.

ತ್ರಿಗುಣ ಪರಿಣಾಮವು ಪ್ರಕೃತಿಗುಣ. ತನ್ನ ತ್ರಿಗುಣಗಳಿಂದ ತ್ರಿವಿಧ ಅವಸ್ಥೆಗಳಲ್ಲಿ ಪುರುಷನೊಡನೆ ವ್ಯವಹರಿಸು ತ್ತದೆ. ಜಾಗ್ರತ್‌ಸ್ವಪ್ನಸುಷುಪ್ತಿಗಳಲ್ಲಿ ಕ್ರಮವಾಗಿ ಕಾಯ-ಪ್ರಾಣ-ಮನಗಳನ್ನಾಶ್ರಯಿಸಿ ವ್ಯವಹರಿಸುತ್ತದೆ. ಈ ಪ್ರಕೃತಿತತ್ತ್ವವನ್ನು ಶಿವಾದ್ವೈತಿಗಳು 'ಚಿತ್ತ' ಎಂದು ಹೇಳುತ್ತಾರೆ. ಹಾಗೂ ಪ್ರಕೃತಿ – ಪುರುಷರಿಗೆ ಪರಸ್ಪರ ಸಾಪೇಕ್ಷತೆ ಸಮಾನತೆ ಸಮನ್ವಯಗಳನ್ನು ಅಂಗೀಕರಿಸುತ್ತಾರೆ.

ಅವಳಂ ಸರ್ವಲೋಕಕೆ ಪ್ರಕೃತಿಯೆಂಬರೊ
ಅವಳಂ ಪರಶಿವೆಯ ಪೆಸರಿನಿಂ ಕರೆವರೊ
ಅವಳಂ ಶಂಭುಧರ್ಮಚಾರಿಣಿಯೆನುವರೊ
ಅವಳ ನಾಂ ಪೊಡಮಡುವೆ ಹೃದಯಾಂತರಾಳದೊಳ್ । (ಸಿ. ಶಿಖಾಮಣಿಯ ಕನ್ನಡ ಅನುವಾದ)

ಪ್ರಕೃತಿವಿಷಯದಲ್ಲಿ ಶಿವಾದ್ವೈತಿಗಳ ಪವಿತ್ರದೃಷ್ಟಿಯಿದು. ಸರ್ವಲೋಕಪ್ರಕೃತಿಯೆಂದು ಸ್ವರೂಪವನ್ನು, ಶಂಭುಧರ್ಮಚಾರಿಣಿಯೆಂದು ಸ್ವಭಾವವನ್ನು, ಪರಶಿವೆಯೆಂದು ಶಿವಸಾಮ್ಯ–ಸ್ವಾಯತ್ತತೆಗಳನ್ನು, ಅವಳ ಸಾಂಪ್ರೊಡ ಮಡುವೆಯೆಂದು ಪೂಜ್ಯಾರ್ಹತೆಯನ್ನು ಉಗ್ಗಡಿಸಿದ್ದಾರೆ. ಇದರಿಂದಾಗಿ ಸಾಂಖ್ಯರು ಹೇಳುವಂತೆ ಪ್ರಕೃತಿ ಜಡವಲ್ಲ. ಪ್ರಕೃತಿವಿಷಯದಲ್ಲಿ ಇತರರಂತೆ ಜಿಪಾಸೆಯಿಲ್ಲ.

## ಬುದ್ಧಿತತ್ತ್ವ

ನಿಶ್ಚಯಾತ್ಮಕವಾದುದೇ ಬುದ್ಧಿತತ್ತ್ವ. ಮಹತ್‌ತತ್ತ್ವವೆಂಬುದು ಈ ಬುದ್ಧಿಗೆ ಇನ್ನೊಂದು ಹೆಸರು. ಇದು ಪುರುಷನ ನಿಶ್ಚಯರೂಪ ಅಧ್ಯವಸಾಯಸಾಧನವಾಗಿರುವುದು. ಇದು ಪುರುಷನ ಕಾರ್ಯಸೌಕರ್ಯಕ್ಕಾಗಿ ಸಾತ್ತ್ವಿಕ ರಾಜಸ ತಾಮಸ ಎಂದು ಮೂರು ಬಗೆಯಾಗಿರುವುದು. ಅಶುದ್ಧ ವಿದ್ಯೆಯೆ ಇದರ ಮೂಲವಸ್ತು.

ಎಲ್ಲ ವಿಚಾರಗಳ ಕೇಂದ್ರ ಬುದ್ಧಿ. ಪ್ರಕೃತಿಪುರುಷರನ್ನು ತನ್ನ ಜ್ಞಾನಸಂವೇದನ–ನಿವೇದನಗಳಿಂದ ಬೆಸುಗೆ ಹಾಕುವ ಅವಸ್ಥೆಯೆ ಬುದ್ಧಿತತ್ತ್ವ! ಇದರಿಂದಾಗಿ ಇದು ಮಹತ್ ಎಂದೆನಿಸಿಕೊಂಡಿದೆ. ಸತ್ವಶಾಲಿಯಾಗಿದೆ. ಬುದ್ಧಿಯು ಜ್ಞಾತೃವಿಗೆ ಭಿನ್ನವಾದ ತತ್ತ್ವವಲ್ಲ; ಜ್ಞಾತೃವಿನ ಅವಸ್ಥಾಂತರವೇ ಬುದ್ಧಿ. ಆತ್ಮನು ಜಲತತ್ತ್ವದ ಜತೆಗೂಡಿದಾಗ ಬುದ್ಧಿತತ್ತ್ವೋತ್ಪತ್ತಿಯಾಗುತ್ತದೆ. ಇದಕ್ಕೆ ವಿಷ್ಣು ಅಧಿದೇವತೆಯೆಂಬುದರಿಂದ ಇದರ ವ್ಯಾಪ್ತಿ ಸೂಚಿತವಾಗುತ್ತದೆ. ಪುರುಷನ ಜ್ಞಾನಶೀಲತೆಯೆ ಬುದ್ಧಿತತ್ತ್ವ!

## ಅಹಂಕಾರತತ್ತ್ವ

ನಾನು–ನನ್ನದು–ನನ್ನವರು ಎಂದು ಅಭಿಮಾನಿಸುವುದೇ ಅಹಂಕಾರತತ್ತ್ವ. ಗ್ರಾಹಕಾಧ್ಯವಸಾಯವೆ ಇದರ ಕಾರ್ಯ. ಬುದ್ಧಿಯು ವಸ್ತುವಿಚಾರವನ್ನುಂಟುಮಾಡಿಕೊಟ್ಟರೆ ಅಹಂಕಾರವು ವಸ್ತುಸ್ವರೂಪವೆ ತಾನಾಗಬಲ್ಲುದು ಪಾರಮಾರ್ಥದಲ್ಲಿ! ವ್ಯಕ್ತಿಸ್ವರೂಪವ ತೋರಬಲ್ಲುದು ಪ್ರಾಪಂಚಿಕದಲ್ಲಿ! ಆತ್ಮನು ಅಗ್ನಿತತ್ತ್ವದಲ್ಲಿ ಕೂಡಿ ಅಹಂಕಾರೋತ್ಪತ್ತಿಯಾಗುತ್ತದೆ. ಇದಕ್ಕೆ ರುದ್ರನು ಅಧಿದೇವತೆಯಾದುದರಿಂದ ಇದು ಸರ್ವವನ್ನೂ ತನ್ನೊಳಗೆ ಒಳಗೊಳ್ಳುತ್ತದೆ. ಇದು ರಜೋಗುಣದ ಪರಿಣಾಮವಾದ ಕಾರಣ ಪ್ರೇರಕತ್ವ ಮತ್ತು ಸಂಗ್ರಾಹಕತ್ವಶಕ್ತಿಯುಳ್ಳದ್ದಾಗಿದೆ. ಅಲ್ಲದೆ ಇದೂ ಸಹ ತ್ರಿಗುಣಗಳಿಂದ ತ್ರಿಗುಣವೂ ಆಗಿದೆ. ಸಾತ್ತ್ವಿಕ – ರಾಜಸ – ತಾಮಸಾಹಂಕಾರಗಳಿಗೆ ಕ್ರಮವಾಗಿ ತೈಜಸ – ವೈಕಾರಿಕ – ಭೂತಾದಿ ಎಂದು ಹೆಸರುಗಳುಂಟು. ರಾಗತತ್ತ್ವವೇ ಇದರ ಆವರಣ. ಮಾನವನ ಅಸ್ತಿತ್ವದ ಅರಿವಿಗೆ ಇದು ಕಾರಣ.

ಪ್ರಕೃತಿಯಿಂದ ಮಹತ್ (ಬುದ್ಧಿ); ಮಹತ್ತಿನಿಂದ ಅಹಂಕಾರ, ಅಹಂಕಾರದಿಂದ ಮನಸ್ಸು, ಸಾಕ್ಷಾತ್ತಾಗಿ ಹುಟ್ಟುವುವೆಂದು ಸಾಂಖ್ಯರ ಅಭಿಪ್ರಾಯ.

## ಮನಸ್ತತ್ತ್ವ

ಇದು ಮೋಟುಮರವೋ ಮನುಷ್ಯನೋ ಎಂಬ ಸಂಕಲ್ಪ – ವಿಕಲ್ಪಗಳಿಗೆ ಸಾಧನವಾದುದೆ ಮನಸ್ತತ್ತ್ವ. ಇಲ್ಲಿ ಮೋಟುಮರವೆಂಬುದೆ ಸಂಕಲ್ಪ. ನಸುಗತ್ತಲಲ್ಲಿ ಕಾಣಿಸಿಕೊಂಡುದು ಮೋಟುಮರವೆ. ಆದಕಾರಣ ಅದು ಸಂಕಲ್ಪ; ಅದು ಸಮ್ಯಕ್‌ಕಲ್ಪ. ಮರಳಿ ಮನುಷ್ಯನಿರಬಹುದೆಂದು ಊಹಿಸಿದ ಕಾರಣ ಇದು ವಿಕಲ್ಪ; ವಿಪರೀತಕಲ್ಪ.

ಬೇಕು – ಬೇಡೆಂದು ಬಯಸುವುದೆ ಮನೋಧರ್ಮ. ಹರಿದಾಟವೇ ಮನದ ಗುಣ. ಆತ್ಮನು ವಾಯುತತ್ತ್ವದಲ್ಲಿ ಕೂಡಿದಾಗ ಮನಸ್ತತ್ತ್ವ ಹುಟ್ಟುತ್ತದೆ. ಇದಕ್ಕೆ ಚಂದ್ರನಧಿದೇವತೆಯಾದ ಕಾರಣ ಇದು ಕೃಷ್ಣಶುಕ್ಲಧರ್ಮವುಳ್ಳದ್ದಾಗಿದೆ. ಐಂದ್ರಿಯಿಕವಾಗಿ ಪ್ರಾಪಂಚಿಕವಾಗಿ ಹರಿದಾಗ ಮಲಿನವಾಗುತ್ತದೆ. ಆತ್ಮಿಕವಾಗಿ ಪಾರಮಾರ್ಥಿಕವಾಗಿ ನಿವೃತ್ತಿಗೊಂಡಾಗ ಉನ್ಮನವಾದಾಗ ಶುಭ್ರವಾಗಿರುತ್ತದೆ. ಇಲ್ಲಿ ಮಲಿನವೆಂದರೆ ಮರೆವು. ಶುಭ್ರವೆಂದರೆ ಅರಿವು.

ಬುದ್ಧಿ, ಅಹಂಕಾರ, ಮನ—ಇವು ಮೂರು ಶರೀರದೊಳಗಿರುವ ಕಾರಣ ಮತ್ತು ಸುಖ – ದುಃಖಾದಿಗಳನ್ನೂ ತನ್ನನ್ನೂ ತಿಳಿಯಲು ಕಾರಣವಾಗಿರುವುದರಿಂದ ಇವಕ್ಕೆ ಅಂತಃಕರಣವೆನ್ನುವರು. ಇವು ಮೂರೂ ಇಚ್ಛಾಶಕ್ತಿಪ್ರಧಾನವಾದವು.

ಆತ್ಮಾನಂ ರಥಿನಂ ವಿದ್ಧಿ, ಶರೀರಂ ರಥಮೇವ ಚ।
ಬುದ್ಧಿಂ ತು ಸಾರಥಿಂ ವಿದ್ಧಿ, ಮನಃ ಪ್ರಗ್ರಹಮೇವ ಚ॥

ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ॥ (ಕಠೋಪನಿಷತ್)

ಪುರುಷ – ಪ್ರಕೃತಿ, ಬುದ್ಧಿ – ಮನ, ಇಂದ್ರಿಯ – ವಿಷಯಗಳಿಗೆ ಹೃದಯಂಗಮವಾದ ಒಂದು ರೂಪಕವನ್ನು ಕೊಟ್ಟಾಗಿದೆ. ಇದರಿಂದಾಗಿ ಇವುಗಳ ಕರ್ತೃತ್ವಕಾರಣಕರಣತ್ವಾದಿಗಳು ಸ್ಪಷ್ಟವಾಗಿ ವೇದ್ಯವಾಗುತ್ತವೆ. ಅಂತರಿಂದ್ರಿಯಗಳಾದ ಮನೋಬುದ್ಧ್ಯಾದಿಗಳು ಮನನಾದಿಕಾರಣಗಳಾಗಿವೆಯಲ್ಲದೆ ಮುನ್ನುಡಿಯಲಾರವು. ಮನಕ್ಕೆ ಬಂದುದನ್ನು ನುಡಿಯಬೇಕಾದರೆ ಜ್ಞಾನೇಂದ್ರಿಯಗಳು ಅಗತ್ಯ !

## ಜ್ಞಾನೇಂದ್ರಿಯಪಂಚಕ

ಪೂರ್ವೋಕ್ತ ಪ್ರಕೃತಿತತ್ತ್ವವೇ ಶರೀರದ ಹೊರಗಿದ್ದು ಪಂಚಜ್ಞಾನೇಂದ್ರಿಯಗಳಾಗುತ್ತದೆ. ಜ್ಞಾನೇಂದ್ರಿಯ ಪಂಚಕಕ್ಕೆ ಜ್ಞಾನಶಕ್ತಿ ಪ್ರಧಾನವಾಗಿರುತ್ತದೆ. ಇವನ್ನು ಬುದ್ಧೀಂದ್ರಿಯವೆಂದೂ ಪಂಚಹೃಷೀಕವೆಂದೂ ಹೇಳುತ್ತಾರೆ.

ಶಬ್ದಜ್ಞಾನಮಾತ್ರಸಾಧನವಾಗಿ ಶ್ರೋತ್ರ, ಸ್ಪರ್ಶಜ್ಞಾನಮಾತ್ರಸಾಧನವಾಗಿ ತ್ವಕ್, ರೂಪಗ್ರಹಣಮಾತ್ರ ಸಾಧನವಾಗಿ ನೇತ್ರ, ರಸಗ್ರಹಣಮಾತ್ರಸಾಧನವಾಗಿ ರಸನ, ಗಂಧಗ್ರಹಣಮಾತ್ರಸಾಧನವಾಗಿ ಘ್ರಾಣ—ಹೀಗೆ ಇವ್ವೈದು ಜನಿಸುವುವು. ಇವುಗಳಿಗೆ ಕ್ರಮವಾಗಿ ಮುಗಿಲು – ಗಾಳಿ – ಬೆಂಕಿ – ನೀರು – ನೆಲ ಇವು ಭೂತಗಳಾಗಿವೆ. ದಿಕ್ಕು, ಚಂದ್ರ, ಸೂರ್ಯ, ಅರುಣ, ಅಶ್ವಿನಿ—ಇವು ಕ್ರಮವಾಗಿ ಅಧಿದೇವತೆಗಳು. ಪಂಚಜ್ಞಾನೇಂದ್ರಿಯಗಳಿಗೂ ಅಂತಃಕರಣ ಗಳಿಗೂ ವ್ಯತ್ಯಾಸವಿದೆ. ಅದೆಂದರೆ : ಅಂತಃಕರಣಗಳು ಶಬ್ದಾಶಬ್ದ – ಸ್ಪರ್ಶಾಸ್ಪರ್ಶಗಳಿಗೂ ಶಬ್ದಾದಿಪಂಚವಿಷಯಗಳಿಗೂ ಸಾಧಾರಣಸಾಧನಗಳಾಗಿರುವುದರಿಂದ ಜ್ಞಾನೇಂದ್ರಿಯಗಳ ಉಕ್ತಲಕ್ಷಣ ಅವುಗಳಲ್ಲಿ ಬರುವುದಿಲ್ಲ. ಅಂದರೆ ಅತಿ ವ್ಯಾಪ್ತಿದೋಷ (ಲಕ್ಷಣಸಾಂಕರ್ಯ)ವು ಉಂಟಾಗುವುದಿಲ್ಲ. ಜ್ಞಾನೇಂದ್ರಿಯಪಂಚಕವು ನುಡಿಯಬಲ್ಲದು. ಅಂದರೆ ವಿಚಾರಿಸಬಲ್ಲದು, ನಡೆಯಲಾರದು. ನಡೆಗೆ ನಿಲುಕುವುದು ಕರ್ಮೇಂದ್ರಿಯಪಂಚಕ! ಆದ್ದರಿಂದ ಅದರ ಉತ್ಪತ್ತಿ!

## ಕರ್ಮೇಂದ್ರಿಯಪಂಚಕ

ವಾಣಿ – ಪಾಣಿ – ಪಾದ – ಪಾಯು – ಉಪಸ್ಥ ಇವು ಕರ್ಮೇಂದ್ರಿಯಪಂಚಕ. ಮಾತಿಗೆ ಸಾಧನವಾಗಿ ವಾಣಿ, ದಾನಾದಾನಾದಿಕ್ರಿಯಾಸಾಧನವಾಗಿ ಪಾಣಿ, ಗಮನಾಗಮನಸಾಧನವಾಗಿ ಪಾದ, ಮಲಾಪಾನವಿಸರ್ಜನಸಾಧನವಾಗಿ ಪಾಯು, ಶುಕ್ರ – ಮೂತ್ರವಿಸರ್ಜನಸಾಧನವಾಗಿ ಉಪಸ್ಥ—ಎಂಬೀ ಪಂಚಕರ್ಮೇಂದ್ರಿಯಗಳು ಕ್ರಿಯಾಶಕ್ತಿ ಪ್ರಧಾನವಾಗಿ ಜನ್ಮಿಸುವುವು. ಇವಕ್ಕೂ ಆಕಾಶಾದಿಗಳು ಭೂತಗಳಾಗಿವೆ. ಸರಸ್ವತಿ, ಇಂದ್ರ, ವಿಷ್ಣು, ಮೃತ್ಯು, ಬ್ರಹ್ಮ ಇವರು ಅಧಿದೇವತೆಗಳು. ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ—ಇವು ವಾಯುಗಳು. ಈ ವಾಯುಗಳು ಕ್ರಮವಾಗಿ ವಾಗಾದಿಗಳಿಗೆ ಚೇತನಕಾರಿಗಳಾಗಿವೆ. ಇವಕ್ಕೆ ಕ್ರಿಯಾರೂಪ ಪಂಚ ಹೃಷೀಕಗಳೆಂದು ಹೇಳುತ್ತಾರೆ. ಜ್ಞಾನೇಂದ್ರಿಯಗಳು ವಿಚಾರಿಸುತ್ತವೆ. ಕರ್ಮೇಂದ್ರಿಯಗಳು ಆಚರಿಸುತ್ತವೆ. ಕರ್ಣ – ವಾಣಿಗಳಿಗೂ ತ್ವಕ್ – ಪಾಣಿ ಗಳಿಗೂ ನೇತ್ರ – ಪಾದಗಳಿಗೂ ಜಿಹ್ವಾ – ಗುಹ್ಯಗಳಿಗೂ ಘ್ರಾಣ – ಗುದಗಳಿಗೂ ವ್ಯತ್ಯಾಸವಿಲ್ಲ, ಸಹಕಾರವಿದೆ. ಜ್ಞಾನೇಂದ್ರಿಯಗಳಿಗಿರುವ ತನ್ಮಾತ್ರ – ಭೂತಗಳೇ ಕರ್ಮೇಂದ್ರಿಯಕ್ಕೂ ಇವೆ. ಗಂಧಾದಿಗಳು ಜ್ಞಾನೇಂದ್ರಿಯಗಳಲ್ಲಿ ಕ್ರಮವಾಗಿ ಸೃಷ್ಟಿಗೊಂಡು ಆಧಾರಾದಿ ಚಕ್ರಗಳಲ್ಲಿ ಸ್ಥಿತಿಗೊಂಡು ಕರ್ಮೇಂದ್ರಿಯಗಳಲ್ಲಿ ಲಯಗೊಳ್ಳುತ್ತವೆ.

## ತನ್ಮಾತ್ರಪಂಚಕ, ಸ್ಥೂಲಭೂತಪಂಚಕ

ಮೇಲ್ಕಂಡ ಪಂಚಜ್ಞಾನೇಂದ್ರಿಯಗ್ರಾಹ್ಯವಾಗಿ ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ—ಎಂಬೀ ಪಂಚತನ್ಮಾತ್ರಗಳು ತೋರುವುವು. ಈ ತನ್ಮಾತ್ರಗಳಿಗೆ ಆಶ್ರಯವಾಗಿ ಗುಣಿಗಳಾಗಿ ಆಕಾಶಾದಿ ಪಂಚಭೂತಗಳು ಉದ್ಭವಿಸುವುವು.

ಸ್ಥೂಲಭೂತಗಳಿಗೆ ಮೊದಲು ತನ್ಮಾತ್ರಗಳು ನಿರ್ಮಾಣವಾಗುತ್ತವೆ. ಇವು ಸೂಕ್ಷ್ಮತತ್ತ್ವಗಳು. ಇವು ಘನೀಭವಿಸಿ ಆಕಾಶಾದಿ ಸ್ಥೂಲಭೂತಗಳು ಪರಿಣಮಿಸುತ್ತವೆ.

ಶಬ್ದಾದಿಗಳಿಗೆ ತನ್ಮಾತ್ರವೆಂಬ ಹೆಸರು ಬರಲು ಇದು ಕಾರಣ : ಅವುಗಳಲ್ಲಿ ಧ್ವನಿ-ವರ್ಣ, ಶೀತ-ಉಷ್ಣ, ಬಿಳುಪು-ಕಪ್ಪು, ಸಿಹಿ-ಕಹಿ, ಗಂಧ-ದುರ್ಗಂಧ—ಎಂಬೀ ವಿಭಾಗವಿಲ್ಲದೆ ಸಾಮಾನ್ಯರೂಪದಿಂದಿರುವುವು. ಅಲ್ಲದೆ ಪ್ರಕೃತಿಯ ಪರಿಣಾಮವಿಶೇಷವಾದ ತಾಮಸಾಹಂಕಾರದ್ರವ್ಯವೆ ಪಂಚತನ್ಮಾತ್ರದ್ರವ್ಯವಾಗಿ ಪರಿಣಮಿಸುವುದು.

ಸ್ಥೂಲವಾದ ಪಂಚಭೂತಗಳ ಅವ್ಯವಹಿತ ಸೂಕ್ಷ್ಮಾವಸ್ಥೆಯಿಂದೊಡಗೂಡಿದ ದ್ರವ್ಯವು ತನ್ಮಾತ್ರವೆನಿಸಿಕೊಳ್ಳುವುದು. ಅಂದರೆ ತನ್ಮಾತ್ರಗಳು ಉತ್ಕಟಾವಸ್ಥೆಯನ್ನು ಹೊಂದದೆ ಸೂಕ್ಷ್ಮಶಬ್ದಾದಿಗುಣಾಶ್ರಯವಾಗಿರುವುವೆಂದಭಿಪ್ರಾಯ. ಇನ್ನು ಇವುಗಳ ಉತ್ಪತ್ತಿಲಕ್ಷಣ ವಿವರ :

೧. ತಾಮಸಾಹಂಕಾರ – ಆಕಾಶಗಳೆರಡರ ಮಧ್ಯಮಾವಸ್ಥೆಯಿಂದ ಕೂಡಿ, ಉತ್ಕಟಾವಸ್ಥೆಯಿಲ್ಲದ ಶಬ್ದಗುಣವುಳ್ಳದ್ದಾಗಿ ಸ್ಪರ್ಶಶೂನ್ಯವಾಗಿ ಆಕಾಶಕ್ಕೆ ಉಪಾದಾನಕಾರಣವಾಗಿ ಇರುವ ದ್ರವ್ಯವೇ ಶಬ್ದತನ್ಮಾತ್ರವೆನಿಸುವುದು.

೨. ಆಕಾಶ – ವಾಯುಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆಯಿಲ್ಲದ ಸ್ಪರ್ಶಗುಣವುಳ್ಳದ್ದಾಗಿ ರೂಪಶೂನ್ಯವಾಗಿ ವಾಯುವಿಗೆ ಉಪಾದಾನಕಾರಣವಾಗಿರುವ ದ್ರವ್ಯವೇ ಸ್ಪರ್ಶತನ್ಮಾತ್ರವೆನಿಸುವುದು.

೩. ವಾಯು – ಅಗ್ನಿಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆಯಿಲ್ಲದ ರೂಪಗುಣವುಳ್ಳದ್ದಾಗಿ ರಸಶೂನ್ಯವಾಗಿ ಅಗ್ನಿಗೆ ಉಪಾದಾನಕಾರಣವಾಗಿರುವ ದ್ರವ್ಯವೇ ರೂಪತನ್ಮಾತ್ರವೆನಿಸುವುದು.

೪. ಅಗ್ನಿ – ಜಲಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆಯಿಲ್ಲದ ರಸಗುಣವುಳ್ಳದ್ದಾಗಿ ಗಂಧಶೂನ್ಯವಾಗಿ ಜಲಕ್ಕೆ ಉಪಾದಾನಕಾರಣವಾಗಿರುವ ದ್ರವ್ಯವೇ ರಸತನ್ಮಾತ್ರವೆನಿಸುವುದು.

೫. ಜಲಪೃಥ್ವಿಗಳೆರಡರ ಮಧ್ಯಮಾವಸ್ಥೆಯಿಂದೊಡಗೂಡಿ, ಉತ್ಕಟಾವಸ್ಥೆಯಿಲ್ಲದ ಗಂಧಗುಣವುಳ್ಳದ್ದಾಗಿ ಪೃಥ್ವಿಗೆ ಉಪಾದಾನಕಾರಣವಾಗಿರುವ ದ್ರವ್ಯವೇ ಗಂಧತನ್ಮಾತ್ರವೆನಿಸುವುದು.

ಇನ್ನು ಇವೇ ವ್ಯಕ್ತಾವಸ್ಥೆಯನ್ನು ಹೊಂದಿ ಶಬ್ದಾದಿಗುಣಗಳಿಗೆ ಆಶ್ರಯವಾಗಿರುವ ದ್ರವ್ಯಗಳೇ ಭೂತಗಳೆನಿಸಿಕೊಳ್ಳುವುವು. ಇದು ಪಂಚಭೂತಗಳ ಸಾಮಾನ್ಯ ಲಕ್ಷಣ.

ಈ ಪಂಚಭೂತಗಳಲ್ಲಿ ಶಾಂತತೆ, ಘೋರತೆ, ಮೂಢತೆಗಳೆಂಬ ಮೂರು ಅವಸ್ಥೆಗಳುಂಟು. ಇಲ್ಲಿ ಮೂಢತೆಯೆಂದರೆ ಉದಾಸೀನತೆ; ಅಂದರೆ ಶಾಂತತ್ವವೂ, ಘೋರತ್ವವೂ ಅಲ್ಲದೆ ಇರುವಿಕೆ: ಶಾಂತ-ಘೋರ ಪದಗಳಿಗೆ ಅನುಕೂಲ-ಪ್ರತಿಕೂಲವೆಂದು ಅರ್ಥ! ಈ ಶಾಂತತ್ವಾದಿಧರ್ಮಗಳು ತನ್ಮಾತ್ರಗಳಲ್ಲಿಲ್ಲ. ಇವನ್ನೇ ಉತ್ಕಟಾವಸ್ಥೆಗಳೆಂದು ತಿಳಿಯುವುದು. ತನ್ಮಾತ್ರಪಂಚಕ – ಭೂತಪಂಚಕಗಳು ಶಬ್ದಾದಿಗುಣಗಳಿಗೆ ಆಶ್ರಯವಾಗಿರುವುದರಿಂದ ಅವೆರಡಕ್ಕೂ ವೈಲಕ್ಷಣ್ಯವನ್ನು ಈ ಮೂರವಸ್ಥೆಗಳು ತೋರಿಸುತ್ತವೆ.

## ಪಂಚಭೂತಗಳ ವಿಶೇಷ (ಅಸಾಧಾರಣ) ಲಕ್ಷಣಗಳಿವು

೧. ಉತ್ಕಟಾವಸ್ಥೆಯುಳ್ಳ ಶಬ್ದಗುಣಕ್ಕೆ ಆಶ್ರಯವಾಗಿ ಶ್ರೋತ್ರೇಂದ್ರಿಯಕ್ಕೆ ಆಪ್ಯಾಯಮಾನವಾಗಿ ಸ್ಪರ್ಶಗುಣವಿಲ್ಲವಾಗಿ ಇರುವ ಭೂತದ್ರವ್ಯವು ಆಕಾಶವೆನಿಸುವುದು. ಉಳಿದ ನಾಲ್ಕು ಭೂತಗಳಿಗೆ ಅವಕಾಶ ಕೊಡುವುದರಿಂದ ಆಕಾಶವೆನಿಸುವುದು.

೨. ಉತ್ಕಟಾ(ವ್ಯಕ್ತಾ)ವಸ್ಥೆಯುಳ್ಳ ಸ್ಪರ್ಶಗುಣಾಶ್ರಯವಾಗಿ ತ್ವಗಿಂದ್ರಿಯಗೋಚರವಾಗಿ ರೂಪರಹಿತವಾಗಿ ಇರುವ ಭೂತದ್ರವ್ಯವು ವಾಯುವೆನಿಸುವುದು. ತಿರ್ಯಗ್ಗಮನವು ಇದರ ಸ್ವಾಭಾವಿಕ ಗುಣ. ಭೂಮ್ಯಾದಿಗಳ ಅಭಿಘಾತದಿಂದ ಊರ್ಧ್ವಗಮನ, ಭ್ರಮಣ, ಕಂಪನ, ಶೋಷಣಾದಿ ಗುಣಗಳುಂಟಾಗುವುದುಂಟು. ಮೋಹನಕ್ರಿಯೆಯುಂಟು.

೩. ಉತ್ಕಟಾವಸ್ಥೆಯುಳ್ಳ ಉಷ್ಣ ಮತ್ತು ರೂಪಗುಣಾಶ್ರಯವಾಗಿ ನೇತ್ರೇಂದ್ರಿಯಗೋಚರವಾಗಿ ರಸರಹಿತವಾಗಿ ಇರುವ ಭೂತದ್ರವ್ಯವು ಅಗ್ನಿ ಅಥವಾ ತೇಜವೆನಿಸುವುದು. ದಾಹಕ – ಪ್ರಕಾಶಕ – ಪಾಚಕಶಕ್ತಿಯುಳ್ಳದ್ದು ಅಗ್ನಿತತ್ತ್ವ!

೪. ಉತ್ಕಟಾವಸ್ಥೆಯುಳ್ಳ ಶೀತ ಮತ್ತು ರಸಗುಣವುಳ್ಳದ್ದಾಗಿ ರಸನೇಂದ್ರಿಯಗೋಚರವಾಗಿ ಗಂಧಶೂನ್ಯವಾಗಿ ಗುರುತ್ವಗುಣವುಳ್ಳದ್ದಾಗಿ ಇರುವ ಭೂತದ್ರವ್ಯವು ಜಲವೆನಿಸಿಕೊಳ್ಳುವುದು. ದ್ರವತ್ವ – ಶುಕ್ಲತ್ವಗುಣಗಳುಂಟು. ಪಿಂಡೀಕರಣಕ್ರಿಯೆಯೂ ಉಂಟು.

೫. ಉತ್ಕಟಾವಸ್ಥೆಯುಳ್ಳ ಗಂಧಗುಣವುಳ್ಳದ್ದಾಗಿ ಘ್ರಾಣೇಂದ್ರಿಯಗೋಚರವಾಗಿ ಗುರುತ್ವಗುಣವುಳ್ಳದ್ದಾಗಿ ಕಾಠಿಣ್ಯವುಳ್ಳದ್ದಾಗಿ ಇರುವ ಭೂತದ್ರವ್ಯವು ಪೃಥ್ವಿಯೆನಿಸುವುದು. ಇದು ಅನ್ನೋತ್ಪತ್ತಿಗೆ ಆಕರವಾಗಿದೆ. ಧಾರಣಕ್ರಿಯಾಶ್ರಿತವೂ ಆಗಿದೆ.

ನೆಲದಲ್ಲಿ ಶಬ್ದ ಸ್ಪರ್ಶ ರೂಪ ರಸ ಗಂಧ—ಈ ಐಯ್ದು ಗುಣಗಳಿರುವುವು. ಜಲದಲ್ಲಿ ಶಬ್ದ ಸ್ಪರ್ಶ ರೂಪ ರಸ-

ಈ ನಾಲ್ಕು ಗುಣಗಳಿರುವುವು. ತೇಜವಲ್ಲಿ ಶಬ್ದ ಸ್ಪರ್ಶ ರೂಪ—ಈ ಮೂರು ಗುಣಗಳಿರುವುವು. ವಾಯುವಿನಲ್ಲಿ ಶಬ್ದ ಸ್ಪರ್ಶ—ಈ ಎರಡು ಗುಣಗಳಿರುವುವು. ಆಕಾಶದಲ್ಲಿ ಶಬ್ದಗುಣವೊಂದೇ ಇರುವುದು.

ಪೀತವರ್ಣದ ಪೃಥ್ವಿಗೆ ಬ್ರಹ್ಮನೊಡೆಯ. ಶ್ವೇತವರ್ಣದ ಸಲಿಲಕ್ಕೆ ವಿಷ್ಣುವೊಡೆಯ. ರಕ್ತವರ್ಣದ ಅಗ್ನಿಗೆ ರುದ್ರನೊಡೆಯ. ಹಸುರು ಬಣ್ಣದ ಗಾಳಿಗೆ ಈಶ್ವರನೊಡೆಯ. ನೀಲವರ್ಣದ ಮುಗಿಲಿಗೆ ಸದಾಶಿವನೊಡೆಯ.

ಈ ಮೂವತ್ತಾರು ತತ್ವಗಳಲ್ಲಿ ಮೊದಲಿನ ಹನ್ನೊಂದು ಲಿಂಗತತ್ತ್ವಗಳು. ಉಳಿದ ಇಪ್ಪತ್ತೈದು ಅಂಗತತ್ತ್ವಗಳು. ಲಿಂಗತತ್ತ್ವಗಳು ನಿಃಕಲತತ್ತ್ವದಲ್ಲಿ ಉತ್ಪತ್ತಿಗೊಳ್ಳುವುವು. ಅಂಗತತ್ತ್ವಗಳು ಸಕಲತತ್ತ್ವದಲ್ಲಿ ಉತ್ಪತ್ತಿಗೊಳ್ಳುವುವು.

ಈ ಮೂವತ್ತಾರು ತತ್ತ್ವಗಳಲ್ಲಿ ಮೊದಲಿನ ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ—ಈ ಐದು ತತ್ತ್ವಗಳು, ಅಂಕುರಿಸುವ – ಅಂಕುರಿಸಿರುವ ಇದಂರೂಪವಾದ ವಿಶ್ವಕ್ಕೆ ಸ್ಫುರಣರೂಪವಾಗಿರುವುದರಿಂದ ಅಪರತತ್ತ್ವವೆನಿಸುವುವು. ಇವುಗಳಲ್ಲಿರುವ ಅಹಂ – ಇದಂ – ಇಚ್ಛಾದಿಧರ್ಮಗಳು ಪರತತ್ತ್ವವೆನಿಸುವುವು. ಈ ಪರಾಪರತತ್ತ್ವಗಳು ಮೋಕ್ಷಕಾರಣಗಳಾಗಿರುವುದರಿಂದ 'ತುರೀಯ'ವೆಂದೆನಿಸುವುವು. ಆರನೆಯದಾದ ಮಾಯಾತತ್ತ್ವವೂ ಅಪರವೆನಿಸುವುದು. ಏಕೆಂದರೆ ಅದು ಸಾಗರ ತರಂಗನ್ಯಾಯದಿಂದ ಅಭೇದದಲ್ಲಿ ಪರ್ಯವಸಾನವನ್ನು ಪಡೆಯುವುದಾಗಿ ಅಪರತತ್ತ್ವಪ್ರಾಪ್ತಿ. ಅಲ್ಲದೆ ವಿಭಾಗವಾಗಿ ಬಂದು ಭೇದಬುದ್ಧಿಪ್ರಧಾನವುಳ್ಳದ್ದಾಗಿ ಬಂಧಕಾರಣವಾಗಿ ಸ್ಥೂಲವಿಶ್ವವಾಗಿ ಪರಿಣಮಿಸುವುದರಿಂದ ಪರತತ್ತ್ವಸಮಾವೇಶವೂ ಉಂಟು.

ಬುದ್ಧಿ, ಅಹಂಕಾರ, ಮನ, ಪ್ರಕೃತಿಗಳಿಂದ ಕೂಡಿದ ಪುರುಷನಿಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ತನ್ಮಾತ್ರ, ಭೂತ – ಪಂಚಕಗಳು ಸೇರಿ ಈ ಇಪ್ಪತ್ತು ತತ್ತ್ವಗಳು ಜಾಗ್ರದವಸ್ಥೆಯಲ್ಲಿ ಉಪಯೋಗವಾಗುವುದರಿಂದ ಪುರುಷನಲ್ಲಿಯೆ ಅಂತರ್ಗತಗಳಾಗುತ್ತವೆ,

ಪೃಥಿವ್ಯಾದಿಪುರುಷಾಂತವಾದ ಇಪ್ಪತ್ತೈದು ತತ್ತ್ವಗಳಿಗೆ ಕ್ರಮವಾಗಿ ಕ – ಕಾರಾದಿ ಮ – ಕಾರಾಂತವಾದ ವರ್ಗೀಯಾಕ್ಷರಗಳು ಸ್ಪರ್ಶಾಕ್ಷರಗಳಾದ ಕಾರಣ ವಾಚಕಗಳಾಗಿವೆ. ಅಂತಃಸ್ಥವರ್ಣಗಳಾದ ಕಾರಣ, ಯ – ರ – ಲ – ವಗಳು ಮನೋಬುದ್ಧ್ಯಹಂಕಾರಪ್ರಕೃತಿವಿಶಿಷ್ಟ ಪುರುಷವಾಚ್ಯಗಳಾಗಿವೆ ಮತ್ತು ಕಲಾದಿಪಂಚತತ್ತ್ವಗಳು ಸ್ವಪ್ನಾವಸ್ಥೆಯಲ್ಲಿ ಅಂತರ್ಗತವಾಗಿರುತ್ತವೆ. ಮಾಯಾತತ್ತ್ವವು ಮೋಹಕವಾಗಿ ಪುರುಷತತ್ತ್ವಕ್ಕೆ ಸುಷುಪ್ತ್ಯವಸ್ಥಾಂತರ್ಗತವಾಗಿರುತ್ತದೆ.

ಕಲಾ, ಅಶುದ್ಧವಿದ್ಯಾ, ರಾಗ, ಕಾಲ, ನಿಯತಿ ಎಂಬೈದು ಕಂಚುಕಗಳಿಂದ ಕೂಡಿದ ಅಂದರೆ ಆವೃತನಾದ ಪುರುಷನು ಭೋಕ್ತೃ ಎನಿಸುತ್ತಾನೆ. ಈ ಕಲಾದಿ ಪಂಚಕಗಳು ಮಾಯಾಜನ್ಯಗಳಾಗಿ ಮಾಯಾಕಾರ್ಯಗಳೆನಿಸಿವೆ. ಇದರಿಂದ ಮಾಯೆ ಮೊದಲಾಗಿ ಈ ಆರು. ಭೋಕ್ತೃವಾದ ಪುರುಷತತ್ತ್ವದಲ್ಲಿ ಅಂತರ್ಗತವಾಗುವುವು. ಇನ್ನು ಪ್ರಕೃತಿ ಮಹತ್ ಅಹಂಕಾರ ಮನಸ್ಸುಗಳೆಂಬೀ ನಾಲ್ಕು, ಭೋಕ್ತೃಪುರುಷನ ಭೋಗನಿರ್ವಹಣೆಗಾಗಿ ಬೇಕಾದ ಅಂತಃಕರಣಗಳಾಗಿ ಆ ಪುರುಷನಲ್ಲಿಯೇ ಅಂತರ್ಭಾವವಾಗುತ್ತವೆ. ಜ್ಞಾನೇಂದ್ರಿಯ – ಕರ್ಮೇಂದ್ರಿಯ ದಶಕವು ಆ ಅಂತಃಕರಣಗಳಿಗೆ ವಿಷಯಭೋಗಕಾಲದಲ್ಲಿ ಸಹಕಾರಿಗಳಾಗಿದ್ದುಕೊಂಡು ಭೋಕ್ತೃವಿಗೆ ಭೋಗೋಪಕರಣಗಳಾಗಿರುವ ಕಾರಣ, ಇವೂ ಸಹ ಆ ಪುರುಷತತ್ತ್ವದಲ್ಲಿಯೇ ಅಂತರ್ಭೂತವಾಗುವುದು.

ಭೋಗ್ಯವಸ್ತುವಿಲ್ಲದೆ ಭೋಗವುಂಟಾಗದಾಗಿ ಭೋಗ್ಯವಸ್ತುಗಳಾದ ತನ್ಮಾತ್ರಗಳೂ ಭೋಗಾಯತನವಾದ ಶರೀರರೂಪ ಪಂಚಭೂತಗಳೂ ಪುರುಷತತ್ತ್ವದಲ್ಲಿಯೇ ಅಂತರ್ಭೂತಗಳಾಗುತ್ತವೆ. ಹೀಗೆ ಈ ಮೂವತ್ತು ತತ್ತ್ವಗಳು ಪುರುಷತತ್ತ್ವದಲ್ಲಿ ಸಮಾವೇಶಗೊಳ್ಳುವುವು. ಉಳಿದ ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ—ಎಂಬೀ ಐದು ತತ್ತ್ವಗಳು 'ಶ. ಷ. ಸ. ಹ' ಎಂಬೀ ಊಷ್ಮವರ್ಣಗಳಿಗೆ ವಾಚ್ಯಗಳಾಗಿವೆ. ಈ ಊಷ್ಮವರ್ಣಗಳು ಶಕ್ತಿರೂಪವಾಗಿವೆ. ಶಕ್ತಿ ಪರಶಿವಸ್ವಭಾವವಾಗಿದೆ. ಇದರಿಂದಾಗಿ ಆ ಪರಶಿವನಲ್ಲಿ ಶುದ್ಧ ಅನುಸಂಧಾನರೂಪದಿಂದ ಏಕರೂಪಾಗಿವೆ.

ಹೇಗೆ ಓಂಕಾರದಲ್ಲಿ ಉಳಿದೆಲ್ಲ ಅಕ್ಷರಗಳು ಅಡಕವಾಗುವುವೋ ಹಾಗೆಯೇ ಶಿವನಲ್ಲಿ ಸಕಲ ತತ್ತ್ವಗಳು ಅಂದರೆ ಮೂವತ್ತೈಯ್ದು ತತ್ತ್ವಗಳು ಅಡಕವಾಗಿ ಶಿವಾದ್ವೈತವು ಸಿದ್ಧಾಂತವಾಗುತ್ತದೆ.

ವಾಚಕವಾದ ಓಂಕಾರವೂ ಸಹ ವಾಚ್ಯನಾದ ಆ ಪರಶಿವನಲ್ಲಿ ಸಮರಸಗೊಳ್ಳುತ್ತದೆ. ಪ್ರಣವ – ಪರಶಿವರಿಗೆ ಅಭೇದರೂಪವಿದೆಯಲ್ಲದೆ ಭೇದರೂಪವಿಲ್ಲ. 'ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಂ' ಎಂಬ ಶ್ರುತಿಪ್ರಮಾಣವು

ಅಭೇದವನ್ನೇ ಸಮರ್ಥಿಸುತ್ತದೆ. 'ಪ್ರಕರ್ಷೇಣ ನವಂ ಯಸ್ಮಾತ್ ಪರಂ ಬ್ರಹ್ಮ ಸ್ವಭಾವತಃ' ಎಂಬುದಾಗಿ ಶಿವತತ್ತ್ವ ರತ್ನಾಕರದಲ್ಲಿ ಉಕ್ತವಾಗಿದೆ. ಪ್ರಣವವೇ ಪರಬ್ರಹ್ಮ. ಪ್ರಣವವೇ ಹೃದ್ಗತ ನವಚೈತನ್ಯ. 'ಓಂಕಾರ ಏವ ಲಿಂಗಂ ಸ್ಯಾತ್' ಎಂಬೀ ಯೋಗಜಾಗಮೋಕ್ತಿಯಂತೆ ಓಂಕಾರವೇ ಲಿಂಗವಾಗಿದೆ. 'ಲಿಂಗಂ ಸತ್ಯನಿಷ್ಕಳಂ ಬ್ರಹ್ಮರೂಪಂ' ಲಿಂಗವೇ ಪರಶಿವಬ್ರಹ್ಮವಾಗಿದೆ. 'ಮಂತ್ರಂ ಲಿಂಗಮಿತಿ' ಎಂಬೀ ಶಿವಾನುಭವಸೂತ್ರವೂ ಮಂತ್ರವೇ ಲಿಂಗವೆಂದು ಘೋಷಿಸಿದೆ.

ಇನ್ನು ಜಗತ್ರಯವನ್ನು ಬಳಸಿಕೊಂಡಿರುವ ಅಹಂ ಎಂಬ ಪದವೂ ಸಹ ಶಿವಾದ್ವೈತವಾಗಿದೆ. ಅಕಾರಕ್ಕೆ ಪ್ರಕಾಶ ಸ್ವರೂಪನಾದ ಪರಶಿವನೆಂತಲೂ ಹ ಕಾರಕ್ಕೆ ಕಲಾರೂಪವಿಮರ್ಶಾಶಕ್ತಿಯೆಂತಲೂ ಶಿವ – ಶಕ್ತಿಸಾಮರಸ್ಯಸೂಚಕವೇ ಅಂತ್ಯದಲ್ಲಿರುವ ಶೂನ್ಯಪದವೆಂತಲೂ ಅರ್ಥವಾಗುತ್ತದೆ. ಇದರಿಂದಾಗಿ ಶಕ್ತಿವಿಶಿಷ್ಟಾದ್ವೈತವೇ ಶಿವಾದ್ವೈತಪದದರ್ಥ ವೆಂಬುದು ಸಿದ್ಧಾಂತವಾಗುತ್ತಿದೆ ಮತ್ತು ಅ ಕಾರ ಆದಿ ಅಕ್ಷರ. ಹ ಕಾರ ಅಂತ್ಯಾಕ್ಷರ. ಇವೆರಡರ ಮಧ್ಯದಲ್ಲಿರುವ ಅಕ್ಷರಗಳೆಲ್ಲವೂ 'ಅಹಂ' ಪದದಲ್ಲಿ ಅಡಕವಾಗಿವೆ. ಆ ಅಹಂಪದವಾಚ್ಯನು ಅಕ್ಷರಸ್ವರೂಪ. ಆ ಚಿದಹಂಭಾವವೇ ಚಿನ್ಮಯರೂಪ. ಮೂರನೆಯದಾಗಿ ಅಕಾರವು ಸರ್ವಜ್ಞಾದಿಗುಣವುಳ್ಳ ಶಿವ ಅಂದರೆ ಲಿಂಗವಾಚಕ. ಹ ಕಾರವು ಅಲ್ಪ ಜ್ಞಾದಿಗುಣವುಳ್ಳ ಜೀವ ಅಂದರೆ ಅಂಗವಾಚಕ. ಈ ಲಿಂಗಾಂಗಸಾಮರಸ್ಯಬೋಧಕವೇ ಅಂತ್ಯದ ಶೂನ್ಯಪದದರ್ಥ. ಇವೆಲ್ಲ ಅರ್ಥಗಳಿಂದ ಅಹಂಪದವೈಶಿಷ್ಟ್ಯವು ವ್ಯಕ್ತವಾಗುತ್ತದೆ. ಹಾಗೂ ಅಂಗನು ಲಿಂಗಸಾಮರಸ್ಯವನ್ನು ಸಂಪಾದಿಸು ವುದೇ ಶಿವಾದ್ವೈತ ಸಹಜ ಸಿದ್ಧಾಂತವೆಂಬುದು ಸ್ಪಷ್ಟವಾಗುತ್ತಿದೆ.

---

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿಕಿರಾತ ಮಾಮಕಮನಃಕಾಂತಾರಸೀಮಾಂತರೇ ।
ವರ್ತಂತೇ ಬಹುಶೋ ಮೃಗಾ ಮದಜುಷೋ ಮಾತ್ಸರ್ಯಮೋಹಾದಯಃ
ತಾನ್ ಹತ್ವಾ ಮೃಗಯಾ ವಿನೋದರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ ॥

ಶಿವಾನಂದಲಹರೀ

# ಅಷ್ಟಾವರಣ

ಟಿ. ಆರ್. ಮಹಾದೇವಯ್ಯ

ಗುರುಕೃಪೆಯು ಪಡೆದಿಷ್ಟಲಿಂಗಪೂಜೆಯು ಮಾಡಿ
ಹರುಷದಿಂ ಜಂಗಮಾರ್ಚನೆಗೈದು ಬಳಿಕ ವರ
ಚರಣತೀರ್ಥವ ಕೊಂಡು ಸುಪ್ರಸಾದವನುಂಡು ಚಿದ್‌ಭಸಿತರುದ್ರಾಕ್ಷಿಯಂ
ಪರಚಿದಂಗಕ್ಕಲಂಕರಿಸಿ ಪಂಚಾಕ್ಷರಿಯ
ಸ್ಮರಿಸುವೀ ಪರಿಯೊಳಷ್ಟಾವರಣದಾಚರಣೆ
ಶರಣನಲ್ಲದೆ ಪರನಿಗಿಲ್ಲವಾದುದರಿಂದೆ ಪರನಿಗಿಂದಧಿಕ ಶರಣಂ

(ಮೈಲಾರ ಬಸವಲಿಂಗಶರಣರು, ೧.೩೫)

ಲೋಕದಲ್ಲಿ ಎಲ್ಲ ಧರ್ಮಗಳೂ ತಮ್ಮವೇ ಆದ ಸ್ವರೂಪ ಹಾಗೂ ನೀತಿನಿಯಮಗಳನ್ನು ಹೊಂದಿರುತ್ತವೆ. ಅವು ಆಯಾ ಧರ್ಮಗಳನ್ನು ಅನುಸರಿಸುವವರಿಗೆ ಮಾರ್ಗದರ್ಶಕಗಳಾಗಿರುತ್ತವೆ. ವೀರಶೈವಧರ್ಮದಲ್ಲಿಯೂ ಕೂಡ ಇಂಥ ನಿರ್ದಿಷ್ಟತತ್ತ್ವಗಳಿವೆ. ಮನುಷ್ಯನಿಗೆ ಅಂಗ, ಪ್ರಾಣ, ಆತ್ಮಗಳು ಹೇಗೆ ಮುಖ್ಯವಾದವುಗಳೋ ಹಾಗೇ ವೀರಶೈವ ಧರ್ಮಕ್ಕೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಳಗಳು ಮುಖ್ಯತತ್ತ್ವಗಳೆನಿಸಿವೆ. ಅದಕ್ಕೇ "ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ" ಎಂಬ ಸಾರ್ಥಕವಾದ ಸುಂದರ ರೂಪಕ ರೂಪುಗೊಂಡಿದೆ. ಈ ಮೂರರ ಆಚರಣೆಯನ್ನು ಒಟ್ಟುಗೂಡಿಸಿ 'ಸರ್ವಾಚಾರಸಂಪತ್ತು' ಎಂದು ಶಿವಾನುಭವಿಗಳು ಕರೆಯುತ್ತಾರೆ.

ಅಷ್ಟಾವರಣವೆಂದರೆ ಎಂಟು ಆವರಣಗಳು, ಹೊದಿಕೆಗಳು ಎಂದರ್ಥ. ಬ್ರಹ್ಮಾಂಡಧಾರಿಯಾದ ಶಿವನಿಗೆ ಎಂಟು ಆವರಣಗಳಿವೆ. ಅವನು "ವ್ಯೋಮಾರ್ಕೇಂದುಕ್ಷಮಾತ್ಮಾನಲಜಲಪವಮಾನ ಅಷ್ಟಮೂರ್ತಿ ಪ್ರಸಿದ್ಧಂ" (ಗಿರಿಜಾ ಕಲ್ಯಾಣ, ೧–೧)—ಆಕಾಶ, ಸೂರ್ಯ, ಚಂದ್ರ, ಭೂಮಿ, ಆತ್ಮ, ಬೆಂಕಿ, ನೀರು ಮತ್ತು ಗಾಳಿಗಳ ಅಷ್ಟದೇಹಿ. ಹಾಗೆಯೇ ಪಿಂಡಾಂಡಧಾರಿಯಾದ ಅಂಗನಿಗೆ ಅಥವಾ ಜೀವನಿಗೆ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದವೆಂಬ ಎಂಟು ಆವರಣಗಳಿವೆ. "ಪೃಥ್ವಿಯೇ ಪ್ರಸಾದ, ಅಪ್ಪುವೇ ಪಾದೋದಕ, ತೇಜವೇ ರುದ್ರಾಕ್ಷಿ, ವಾಯುವೇ ವಿಭೂತಿ, ಆಕಾಶವೇ ಮಂತ್ರ, ಸತ್ತೇ ಗುರುವು, ಚಿತ್ತೇ ಲಿಂಗವು, ಆನಂದವೇ ಜಂಗಮ"ವೆಂದು ಸಮೀಕರಿಸಬಹುದು (ವೈರಾಗ್ಯ ೨೬೬).

ಹೇಗೆ ದೇಹವಿಲ್ಲದೆ ಯಾವ ಸಾಧನೆಗೂ ಅವಕಾಶವಿಲ್ಲವೋ ಹಾಗೇ ಅಷ್ಟಾವರಣವಿಲ್ಲದೆ ಪಂಚಾಚಾರಕ್ಕಾಗಲೀ, ಷಟ್‌ಸ್ಥಲಗಳಿಗಾಗಲೀ ಅವಕಾಶವಿಲ್ಲ. ಯಾವ ಸಾಧನೆಗಾಗಲೀ ಅಂಗ ಅತ್ಯವಶ್ಯಕ. ಧಾರ್ಮಿಕಾಚರಣೆಗೆ ಮೊದಲ ಹೆಜ್ಜೆ ಅಷ್ಟಾವರಣಗಳ ಅರಿವು. ಅಂತೆಯೇ ಇವು ವೀರಶೈವರ ಧಾರ್ಮಿಕ ಆಚರಣೆಯಲ್ಲಿ ಮಹತ್ತರ ಅರ್ಥವ್ಯಾಪ್ತಿಯನ್ನು ಪಡೆದಿವೆ. "ಇವು ಸಾಧಕನ ಸುತ್ತ ನೈತಿಕಕ್ರಿಯಾಚಾರಗಳ ತಳಹದಿಯಾದ ಭಕ್ತಿ-ಜ್ಞಾನ-ಕರ್ಮಗಳ ಸಮನ್ವಯನ್ನು ಪಡೆದಿವೆ. "ಇವು ಸಾಧಕನ ಸುತ್ತ ನೈತಿಕಕ್ರಿಯಾಚಾರಗಳ ತಳಹದಿಯಾದ ಭಕ್ತಿ-ಜ್ಞಾನ-ಕರ್ಮಗಳ ಸಮನ್ವಯದ ಗೋಡೆಯನ್ನು ಕಟ್ಟಿ ಅವನ್ನು ರಕ್ಷಿಸುವ ವಜ್ರಕವಚಗಳು" (ಪ್ರಸಾದ, ೩೭೪). ಒಂದು ಮನೆಯನ್ನು ಕಟ್ಟಲು ಅನೇಕ ಜನರ ನೆರವು ಬೇಕು; ಅನೇಕ ತರತರದ ಸಾಮಾನುಗಳು ಬೇಕು. ಅದರಲ್ಲಿ ಪಾಲ್ಗೊಂಡ ಜನರಲ್ಲಿ, ಬಳಸುವ ಉಪಕರಣಗಳಲ್ಲಿ ವೈವಿಧ್ಯವಿದ್ದರೂ ಅಲ್ಲಿ ಸಾಮರಸ್ಯವೇರ್ಪಟ್ಟು ಸುಂದರವಾದ ಮನೆ ನಿರ್ಮಾಣವಾಗುತ್ತದೆ. ಹಾಗೆಯೇ ನಮ್ಮ ದೇಹವೆಂಬ ಸದ್ಗೃಹ ನಿರ್ಮಾಣವಾಗಲು ಅಷ್ಟಾವರಣಗಳು ಅವಶ್ಯ ಬೇಕೇಬೇಕು. ಈ ಉಪಕರಣಗಳನ್ನು ನಿರಾಕರಿಸುವಂತಿಲ್ಲ. ಆಧ್ಯಾತ್ಮವಿಕಾಸಕ್ಕೆ ಇವು ಅತ್ಯಗತ್ಯ. ಸರ್ಪಭೂಷಣರು ಹೇಳಿರುವಂತೆ ಭಕ್ತನು 'ಕಾಯ ಕಾಂತಾರವ ಹೊಕ್ಕು ಬೇಂಟೆಯನಾಡಿ ಮಾಯಾ ಮೋಹದ ಮೃಗಗಳ ಕೊಲ್ಲಲು' (ಕೈವಲ್ಯ, ೭೩–೧೮) ಮತ್ತು

'ಶರೀರವೆಂದೆಂಬುವ ಹೊಲನ ಹಸನಮಾಡಿ ಪರತತ್ವವೆಂಬ ಬೆಳೆಯನೆ ಬೆಳೆದುಣ್ಣಲು' (ಅದೇ. ೭೭–೨೨), ಅಷ್ಟಾವರಣ ಗಳು ಪ್ರಥಮ ಸೋಪಾನ.

ಅಷ್ಟಾವರಣಗಳಲ್ಲಿ **ಬಾಹ್ಯ ಅಷ್ಟಾವರಣ** ಮತ್ತು **ಅಂತರಷ್ಟಾವರಣ** ಎಂದು ಎರಡು ವಿಧ. ಬಾಹ್ಯ ಅಷ್ಟಾವರಣಗಳು ಕ್ರಿಯೆಗೆ ಸಂಬಂಧಿಸಿದ್ದರೆ, ಅಂತರಷ್ಟಾವರಣಗಳು ಜ್ಞಾನಕ್ಕೆ ಸಂಬಂಧಿಸಿವೆ. ಜ್ಞಾನ-ಕ್ರಿಯೆಗಳ ಸಾಮರಸ್ಯ ವೀರಶೈವಧರ್ಮದ ವೈಶಿಷ್ಟ್ಯ. ಜ್ಞಾನರಹಿತವಾದ ಕ್ರಿಯೆ, ಕ್ರಿಯಾರಹಿತವಾದ ಜ್ಞಾನ ಎರಡೂ ನಿರರ್ಥಕ. ಆದಕ್ಕಾಗಿಯೇ ಅಷ್ಟಾವರಣದಲ್ಲಿ ಈ ಎರಡು ಪ್ರಭೇದಗಳು ಸಾಧುವೆನಿಸಿವೆ.

**ಬಾಹ್ಯ ಅಷ್ಟಾವರಣ :** ಗುರುವೇ ತನು, ಲಿಂಗವೇ ಮನ, ಜಂಗಮವೇ ಪ್ರಾಣ, ಪಾದೋದಕವೇ ನಾಲಿಗೆ, ಪ್ರಸಾದವೇ ಮೂಗು, ವಿಭೂತಿಯೇ ತ್ವಚೆ, ರುದ್ರಾಕ್ಷಿಯೇ ಕಣ್ಣು, ಮಂತ್ರವೇ ಕಿವಿ. ಅಂದರೆ ನಿರ್ಮಲವಾದ ಶರೀರವೇ ಗುರು, ಹರಿದಾಡುವ ಮನಸ್ಸನ್ನು ಇಷ್ಟಲಿಂಗದಲ್ಲಿ ತೊಡಗಿಸಿ ಪೂಜಿಸುವುದರಿಂದ, ಜಂಗಮಸೇವೆಯಿಂದ ಅನ್ನಮಯ ಶರೀರ ಜ್ಞಾನಮಯವಾಗುತ್ತದೆ. ಹೀಗೆ ತನು-ಮನ-ಪ್ರಾಣಗಳನ್ನು ಪವಿತ್ರಗೊಳಿಸಿ ಆ ಭಾವನೆಯಿಂದ ಜಲವನ್ನು ಕುಡಿದರೆ ಅದೇ ಪಾದೋದಕ. ಪವಿತ್ರ ಭಾವನೆಯಿಂದ ಅನ್ನವನ್ನು ಸೇವಿಸಿದರೆ ಅದೇ ಪ್ರಸಾದ. ಪರಸ್ತ್ರೀ, ಪರಧನ, ಪರಸೊತ್ತುಗಳ ಕಡೆಗೆ ಹೋಗುವ ಕಣ್ಣನ್ನು ಇಷ್ಟಲಿಂಗದ ಕಡೆಗೆ ತಿರುಗಿಸಿದರೆ ಆ ಕಣ್ಣೇ ರುದ್ರಾಕ್ಷಿ. ಶರಣರ ವಚನ, ಶಿವಸ್ತೋತ್ರ, ಪಂಚಾಕ್ಷರೀಮಂತ್ರಗಳನ್ನೂ ಗುರುಮುಖದಿಂದ ಕೇಳಿ ಕಿವಿಯನ್ನು ಪವಿತ್ರವಾಗಿಸುವುದೇ ಮಂತ್ರ.

**ಅಂತರಷ್ಟಾವರಣ :** ಅರಿವೇ ಗುರು, ಆತ್ಮವೇ ಲಿಂಗ, ಸುಜ್ಞಾನವೇ ಜಂಗಮ, ಅಂತಃಕರಣವೇ ಪಾದೋದಕ, ಪ್ರಸನ್ನಚಿತ್ತವೇ ಪ್ರಸಾದ, ದೈವೀಸಂಪತ್ತೇ ವಿಭೂತಿ, ಜ್ಞಾನನೇತ್ರವೇ ರುದ್ರಾಕ್ಷಿ, ಪ್ರಣವನಾದವೇ ಮಂತ್ರ. ಇದಕ್ಕೆ ವಿವರಣೆ ಹೀಗಿದೆ : "ಬಾಳಿನಲ್ಲಿ ಒಳಿತಾವುದು ಕೆಡುಕಾವುದು ಎಂಬುದನ್ನು ಕಂಡುಕೊಳ್ಳಲು ಮಾರ್ಗದರ್ಶಕವಾಗುವ ವಿವೇಕವೇ **ಗುರು** ; ದೇಹ, ಇಂದ್ರಿಯ, ಮನಸ್ಸುಗಳಿಂದ ಭಿನ್ನವಾದ ಶಕ್ತಿಸ್ವರೂಪವೇ **ಲಿಂಗ**, ಅಂಗನು ಲಿಂಗದಲ್ಲಿ ಬೆರೆವ ಸ್ಥಿತಿಯ ಸುಜ್ಞಾನವೇ **ಜಂಗಮ** ; ಸಕಲಜೀವಿಗಳಲ್ಲಿ ದಯೆ ತೋರಿ, ಲೇಸ ಬಯಸುವ ವಿಶ್ವಪ್ರೇಮದ ಅಂತಃ ಕರಣವೇ **ಪಾದೋದಕ** ; ಸದಾ ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟುಕೊಂಡು ಪ್ರಸನ್ನವಾದ ಚಿತ್ತವುಳ್ಳುದೇ **ಪ್ರಸಾದ** ; ಮನುಷ್ಯ ತನ್ನ ದುರ್ಗುಣಗಳನ್ನು ಹೋಗಲಾಡಿಸಿಕೊಂಡು ದೈವೀಗುಣಗಳನ್ನು ಹೆಚ್ಚಿಸಿಕೊಳ್ಳುವುದೇ **ವಿಭೂತಿ** ; ಮಾಯೆ ಮುಸುಗಿ ತಾನಾರು ತನ್ನ ಉದ್ಧಾರಮಾರ್ಗವಾವುದು—ಎಂಬುದು ತಿಳಿಯದೆ ಮೂಢನಾಗಿರುವಾಗ ಸುಜ್ಞಾನವನ್ನು ಒದಗಿಸುವುದೇ **ರುದ್ರಾಕ್ಷಿ** ಅಥವಾ ಜ್ಞಾನನೇತ್ರ ; ಪ್ರಣವಪಂಚಾಕ್ಷರಿಯ ಪಠಣದಿಂದ ದೇವನಲ್ಲಿ ಒಂದಾಗುವ ಹಂತವೇ **ಮಂತ್ರ**" (ವೈರಾಗ್ಯ, ೨೬೭).

ಅಷ್ಟಾವರಣಗಳಲ್ಲಿ ಗುರು, ಲಿಂಗ, ಜಂಗಮ—ಇವರು ಪೂಜಾಮೂರ್ತಿಗಳು ; ವಿಭೂತಿ, ರುದ್ರಾಕ್ಷಿ, ಮಂತ್ರ—ಇವು ಪೂಜಾಸಾಧನಗಳು ; ಪಾದೋದಕ, ಪ್ರಸಾದಗಳು ಸಿದ್ಧಿರೂಪವಾದ ಪೂಜಾಫಲಗಳು. ಇದು ವೀರಶೈವ ದರ್ಶನಕಾರರ ವೈಜ್ಞಾನಿಕದೃಷ್ಟಿಗೆ ನಿದರ್ಶನ. ಅವ್ಯಕ್ತಕ್ಕೆ ವ್ಯಕ್ತರೂಪವನ್ನು ಕೊಟ್ಟು ಆಚರಣೆಗೆ ಯೋಗ್ಯವಾದ ತತ್ವನಿರೂಪಣೆಯನ್ನು ಮಾಡುವಲ್ಲಿ ಅವರು ತೋರಿರುವ ಕ್ರಮ ತಲೆದೂಗುವಂತಿದೆ. ಇತರ ಧರ್ಮಗಳಲ್ಲಿಯೂ ಈ ಬಗೆಯ ಉಪಾಸ್ಯದೇವತೆ ಉಪಾಸನಾ ಸಾಮಗ್ರಿಗಳು ಉಪಾಸನಾ ಫಲಗಳು ಇದ್ದರೂ, ವೀರಶೈವಧರ್ಮದಲ್ಲಿ ಅವುಗಳ ಸ್ವರೂಪ ಮತ್ತು ಪ್ರಯೋಜನಗಳನ್ನು ವಿಶಿಷ್ಟ ರೀತಿಯಲ್ಲಿ ಪ್ರತಿಪಾದಿಸಲಾಗಿದೆ. ಪ್ರತಿಯೊಬ್ಬ ವೀರಶೈವನೂ ಅಷ್ಟಾವರಣಯುಕ್ತನಾಗಿಯೇ ಬಾಳಬೇಕು. ಇದು ಸಮಾಜದಲ್ಲಿರುವ ಧಾರ್ಮಿಕ ಸುವ್ಯವಸ್ಥೆ. ವೀರಶೈವ ತನ್ನ ತನು ಮನಧನಗಳನ್ನು ಗುರುಲಿಂಗಜಂಗಮರಿಗೆ ನೀಡಿ ಕ್ರಮಬದ್ಧವಾದ ಆಚರಣೆಯಲ್ಲಿ ತೊಡಗಿ ಭಗವದನುಗ್ರಹರೂಪವಾದ ಪ್ರಸಾದವನ್ನು ಉಪಭೋಗಿಸಬೇಕೆನ್ನುವುದು ಈ ಕಟ್ಟಳೆಯ ಸದುದ್ದೇಶ. ಏಕೆಂದರೆ 'ಭಕ್ತನು ಗುರುವು ಹೇಳಿದ ಆಚಾರಕ್ಕೆ ತನ್ನ ತನುವನ್ನು ಅರ್ಪಿಸಿದರೆ ಅಂದರೆ ಅದನ್ನು ಆಚರಿಸಿದರೆ ತನು ಶುದ್ಧವಾಗುವುದು ; ಲಿಂಗಪೂಜೆ, ಧ್ಯಾನ ಗಳಿಗೆ ಮನಸ್ಸನ್ನು ಅರ್ಪಿಸಿದರೆ ಮನಸ್ಸು ಶುದ್ಧವಾಗುವುದು ; ಜಂಗಮಕ್ಕೆ ತನ್ನದು ಎಂಬ ಮಮಕಾರವನ್ನು ಉಂಟುಮಾಡುವ ಹಣ ಮೊದಲಾದುವನ್ನು ಅರ್ಪಿಸಿ, ಅವನ್ನು ಅವರ ಪ್ರಸಾದವೆಂದು ಸ್ವೀಕರಿಸುವದರಿಂದ ಆತ್ಮ ಶುದ್ಧವಾಗುವುದು' (ಅಷ್ಟಾವಿ. ೧೭). ಗುರು ಲಿಂಗ ಜಂಗಮ—ಇವು ಮೂವರೂ ಒಂದೇ ವಸ್ತುವಿನಿಂದಾದವರು. ಈ ಮೂವರಲ್ಲಿ ಭೇದವಿಲ್ಲ. 'ಗುರುವೆಂಬ ತೈಲ, ಲಿಂಗವೆಂಬ ಬತ್ತಿ, ಜಂಗಮವೆಂಬ ಜ್ಯೋತಿ' ಎಂಬ ರೂಪಕ ಈ ಮೂವರ ಸಂಬಂಧವನ್ನು ಸೂಚಿಸುತ್ತದೆ. ಆದಕ್ಕೇ ಸಿದ್ಧರಾಮೇಶ್ವರರು 'ಗುರುವಾಗಿ ಬಂದೆನಗೆ ದೀಕ್ಷೆಯ ನೀಡಿದಿರಿ, ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ, ಜಂಗಮವಾಗಿ ಬಂದೆನ್ನ ಪ್ರಪಂಚತನವ ಕಳೆದು ಪರಮಶೀವಮಯ

ಮಾಡಿದಿರಿ' (ಸಿದ್ಧ.ವ. ೪೧೪) ಎಂದಿರುವುದು. ಸರ್ವಜ್ಞನೂ ಕೂಡ 'ಗುರು-ಲಿಂಗ-ಜಂಗಮವು ಹರನೊಲಿದ ರೂಪೆಂದು ಅರಿದು ನಿಶ್ಚಯಿಸಿ ನಡೆಯುವಾ ಭಕ್ತಂಗೆ ಪರಮಪದವಹುದು' (ಸರ್ವಜ್ಞ. ೧೨೪) ಎಂದಿದ್ದಾನೆ. ಆದ್ದರಿಂದಲೇ ವೀರಶೈವರು ಈ ಮೂವರು ಉಪಾಸನಾಮೂರ್ತಿಗಳನ್ನುಳಿದು ಅನ್ಯರನ್ನು ಪೂಜಿಸಬಾರದು.

ವಿಭೂತಿ, ರುದ್ರಾಕ್ಷಿ, ಮಂತ್ರಗಳು ವೀರಶೈವರ ಪೂಜಾಸಾಧನಗಳು. ವಿಭೂತಿ, ರುದ್ರಾಕ್ಷಿಗಳನ್ನು ಧರಿಸಿಕೊಂಡು ಮಂತ್ರಪೂರ್ವಕವಾಗಿ ಗುರುಲಿಂಗಜಂಗಮರನ್ನು ಉಪಾಸಿಸಬೇಕು. ಇವೆಲ್ಲವೂ ಶಿವನ ಚಿಹ್ನೆಗಳೇ. ಶಿವನ ತೇಜಸ್ಸೇ ವಿಭೂತಿ, ಶಿವನ ನೇತ್ರವೇ ರುದ್ರಾಕ್ಷಿ, ಶಿವನ ನಾಮವೇ ಮಂತ್ರ. ಗುರುವಿನ ಅನುಗ್ರಹದಿಂದ 'ಅಂಗಗುಣ' ಅಳಿದು 'ಲಿಂಗಗುಣ' ಅಳವಟ್ಟ ಭಕ್ತನು ಪ್ರತಿನಿತ್ಯವೂ ತಪ್ಪದೆ ಈ ಪೂಜಾಸಾಧನಗಳಿಂದ ಆರಾಧನೆ ಮಾಡಬೇಕು.

ಶಿವನು ಗುರುಲಿಂಗಜಂಗಮರೂಪನಾದ ತನ್ನನ್ನು ಪೂಜಿಸುವ ವೀರಶೈವರಿಗೆ ದಯೆಯಿಂದ ಅನುಗ್ರಹಿಸುವ ಫಲಗಳೇ ಪಾದೋದಕ, ಪ್ರಸಾದಗಳು. ಪ್ರಸಾದವೆಂದರೆ ಶಿವನ ಪ್ರಸನ್ನತೆ. ಶಿವನ ದಯಾಮಯವಾದ ಚಿದ್ರಸವೇ ಪಾದೋದಕ. ಇವುಗಳ ಸೇವನೆಯಿಂದ ಭಕ್ತನ ತನುಕರಣಾದಿಗಳು ಶುದ್ಧವಾಗಿ, ಅವನು ಪ್ರಸಾದಕಾಯನಾಗುವನು.

ಇನ್ನು ಈ ಅಷ್ಟಾವರಣಗಳನ್ನು ಕುರಿತು ನಮ್ಮ ಕವಿಗಳು, ಶರಣರು, ಅನುಭಾವಿಗಳು ಹೇಳಿರುವ ಮಾತುಗಳ ಮೂಲಕ ಬಿಡಿಯಾಗಿ ಹೆಚ್ಚು ವಿವರಗಳನ್ನು ತಿಳಿಯಲು ಪ್ರಯತ್ನಿಸೋಣ :

**ಗುರು**

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥
ಗುರುವೆನಲು ಕೊರೆವುದು ಜನನ ಮರಣದ ಬೇರ ನೋಡಾ
ಗುರುವೆನಲು ಸುಡುವುದು ಭವಾರಣ್ಯವ ನೋಡಾ
ಗುರುವೆನಲು ಕಡಿವುದು ಭವಕುಜಲತೆಗಳ ನೋಡಾ
ಇಂತಪ್ಪ ಸದ್‌ಗುರುದೇವಂಗೆ ನಮೋ ನಮಃ ಎಂಬೆನಯ್ಯಾ

(ಅಖಂಡೇ. ೧೭.೨)

ಸಮಾಜದಲ್ಲಿ ಗುರು ಒಬ್ಬ ಪೂಜ್ಯ ವ್ಯಕ್ತಿ. 'ಗುರು' ಶಬ್ದಕ್ಕೆ ಆಚಾರ್ಯ, ದೇಶಿಕ, ಆರಾಧ್ಯ ಎಂಬುವು ಪರ್ಯಾಯ ನಾಮಗಳು. ಅಷ್ಟಾವರಣದಲ್ಲಿ ಗುರುವಿಗೆ ಪ್ರಥಮಸ್ಥಾನ ಸಂದಿದೆ. ಜೀವನದಲ್ಲಿ ಸುಮಾರ್ಗ ಯಾವುದು ? ಸದಾಚಾರ ಯಾವುದು ಎಂಬುದನ್ನು ತೋರಿಸಿ, ಭಕ್ತನ ಆತ್ಮೋದ್ಧಾರಮಾಡುವ ಮಹಾನ್ ಶಕ್ತಿಯೆಂದರೆ ಗುರು. ಗುರುಕರುಣ ವಿಲ್ಲದೆ ಆತ್ಮವಿಕಾಸವಾಗದು. 'ಅರಿತರೆ ಶರಣ, ಮರೆತರೆ ಮಾನವ' ಎಂಬ ಶರಣರ ಉಕ್ತಿಯಂತೆ ಮನುಷ್ಯನಿಗೆ ಅರಿವು ನೀಡಿ, ಶರಣನನ್ನಾಗಿಸುವ ಗುರು ಅವನಿಗೆ ಮುಕ್ತಿಮಾರ್ಗವನ್ನು ಕರುಣಿಸುತ್ತಾನೆ. 'ನ ಗುರೋರಧಿಕಂ ನಾಸ್ತಿ ನಾಸ್ತಿ ತತ್ವಂ ಗುರೋಃ ಪರಂ' ಎಂಬ ಆಗಮವಾಕ್ಯವು ಗುರುವಿನ ಹಿರಿಮೆಗೆ ನಿದರ್ಶನ. ಗುರುವು ಶಿಷ್ಯನಿಗೆ ಶಿವದೀಕ್ಷಾ ಸಂಸ್ಕಾರಪೂರ್ವಕ ಅವನ ಅರಿವಿನ ಕುರುಹಾಗಿ ಇಷ್ಟಲಿಂಗಧಾರಣೆಮಾಡಿ ಅವನ 'ಅಂಗಗುಣ'ಗಳನ್ನು ಕಳೆದು 'ಲಿಂಗ ಗುಣ'ಗಳು ಅಳವಡುವಂತೆ ಮಾಡುತ್ತಾನೆ. 'ಗುರುವು ತ್ರಿಕರಣಗಳಲ್ಲಿರುವ ತ್ರಿಮಲಗಳನ್ನು ತೊಳೆಯುವ ತಿಳಿಜಲ' (ಅಷ್ಟಾವಿ. ೨೨).

ಹುಟ್ಟಿನಿಂದ ಸಾಯುವವರೆಗೆ ಮಾನವನಿಗೆ ಗುರುವಿನ ಅಗತ್ಯವಿದ್ದೇ ಇರುತ್ತದೆ. ಮೊದಲು ಪ್ರಕೃತಿ ಗುರುವಾಗಿ ಸ್ವಾಭಾವಿಕ ಅಂಗಚೇಷ್ಟೆಗಳನ್ನು ಕಲಿಸುತ್ತದೆ. ಅನಂತರ ತಾಯಿ ಗುರುವಾಗಿ ಹಾಲೂಡಿ ಬೆಳೆಸಿ ಮಾತು ಕಲಿಸುತ್ತಾಳೆ. ಅನಂತರ ತಂದೆಯು ಗುರುವಾಗಿ ಕೆಲಸವನ್ನು ಕಲಿಸುತ್ತಾನೆ. ಬಳಿಕ ಶಿಕ್ಷಕನು ಗುರುವಾಗಿ ಬುದ್ಧಿ ಬೆಳೆಸುತ್ತಾನೆ. ಕೊನೆಗೆ ಆಧ್ಯಾತ್ಮಗುರುವು ಆತ್ಮೋದ್ಧಾರದ ಮಾರ್ಗವನ್ನರುಹುತ್ತಾನೆ. ಗುರುವಿಗೆ ಹೋಲಿಸಲು ತಕ್ಕ ವಸ್ತುಗಳೇ ಇಲ್ಲ. ಸ್ಪರ್ಶಶಿಲೆಯೂ ಅವನ ಮುಂದೆ ಮಸಕು. ಕಾರಣ. ಸ್ಪರ್ಶಶಿಲೆಯು ತನ್ನನ್ನು ಮುಟ್ಟಿದ ಇತರ ಲೋಹಗಳನ್ನು ಚಿನ್ನ ವಾಗಿಸುತ್ತದೆ. ಆದರೆ ಚಿನ್ನವಾದ ಲೋಹಕ್ಕೆ 'ಹೊನ್ನಾಗಿಸುವ ಶಕ್ತಿ' ಬರುವುದಿಲ್ಲ. ಆದರೆ ಶ್ರೀಗುರು ಮುಟ್ಟಿದ ಶಿಷ್ಯ ಶ್ರೀಗುರುವೇ ಆಗುವುದಲ್ಲದೆ, ತನ್ನ ಬಳಿ ಸಂದವರನ್ನೂ ತನ್ನಂತೆಯೇ ಪವಿತ್ರಾತ್ಮರನ್ನಾಗಿಸುತ್ತಾನೆ. ಆದ್ದರಿಂದ ಗುರು ಕರುಣೆ ಅನ್ಯಾದೃಶವಾದದ್ದು (ಅಷ್ಟಾವ. ೨೧). ಶ್ರೀಗುರು ಭಕ್ತನಿಗೆ ಇಷ್ಟಲಿಂಗಧಾರಣೆ ಮಾಡುವ ಕ್ರಮವನ್ನು ಬಸವಲಿಂಗಶರಣರು ಒಂದೇ ಪದ್ಯದಲ್ಲಿ ಬಹಳ ಸಾರವತ್ತಾಗಿ ಹೇಳಿದ್ದಾರೆ :

ಪಾವನಾತ್ಮಕಸುಪುತ್ರನ ಮಸ್ತಕದೊಳು ಗುರು-
ದೇವ ಕರವಾಂತು ಸಾಸಿರದಳದ ಚಿತ್‌ಕಳೆಯ

ಭಾವದಿಂ ಮನ ಮನದಿ ನೇತ್ರ ನೇತ್ರಂಗಳಿಂ ತೆಗೆದಿಷ್ಟರೂಪಗೊಳಿಸಿ
ಶೀವಿ ತಚ್ಛಿಷ್ಯನಂಗದ ಮೇಲೆ ಧರಿಸಿ ಸಂ-
ಜೀವ ಪಞ್ಚಮಂತ್ರಲಿಂಗವಿದೆಂದು ತಿಳುಪೆ ಚಿದ್-
ಭಾವಕಳೆಂತೊಳಗಿಷ್ಟಲಿಂಗವೇ ತಾನಾದ ಲಿಂಗಭಕ್ತನೇ ಶ್ರೇಷ್ಠನು

(ನ್ಯೈಲಾರ. ೧–೪)

ಗುರುಕರುಣೆಯಿಂದ ಕೃತಾರ್ಥರಾದ ಶರಣರು ಅವನನ್ನು ಬಗೆಬಗೆಯಾಗಿ ಕೊಂಡಾಡಿದ್ದಾರೆ: 'ಶಿವಪಥವರಿವಡೆ ಗುರುಪಥವೇ ಮೊದಲು' (ಬಸವ. ೭೦), 'ಗುರುಪಥವ ವಿಚಾರಿ ಮಾಡುವ ನೇಮ ಸಲ್ಲದು ಸಲ್ಲದು' (ಬಸವ. ೭೭) ಎಂದು ಬಸವಣ್ಣನವರೂ, 'ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ....ಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ' (ಮಹಾದೇ. ೪೩), 'ಇಂತು ಮುಂದೆ ತೋರಿ ಹಿಂದೆ ಬಿಡಿಸಿದ ಶ್ರೀಗುರುಸಾನ್ನಿಧ್ಯದಿಂದಾನು ಬದುಕಿದೆನಯ್ಯಾ' (ಮಹಾದೇ. ೨೦೧) ಎಂದು ಮಹಾದೇವಿಯಕ್ಕನವರೂ, 'ಭವತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು ಕಾಣಬಾರದೆ ಇದ್ದ ಕಣ್ಣಿಗೆ ಜ್ಞಾನವೆಂಬ ಅಂಜನವನೆಚ್ಚಿ ಶಿವಪಥವಿದೆಂದು ತೋರಿಸಿದ ಸದ್ಗುರು ದೇವಂಗೆ ನಮೋ ಎಂಬೆನಯ್ಯ' (ಸಿದ್ಧೇಶ್ವ. ೧೫೮) ಎಂದು ತೋಂಟದ ಸಿದ್ಧಲಿಂಗೇಶ್ವರರೂ ನಮನವನ್ನು ಸಲ್ಲಿಸಿದ್ದಾರೆ. ಗುರುವು ದೇವರಿಗಿಂತ ದೊಡ್ಡವನೆಂದು ಅಭಿಪ್ರಾಯಪಡುವ ಕನ್ನಡದ ಗಂಡುಕವಿ ಸರ್ವಜ್ಞ ಹೀಗೆನ್ನುತ್ತಾನೆ :

ಗುರುವಿಂಗೆ ದೈವಕ್ಕೆ ಹಿರಿದು ಅಂತರವುಂಟು
ಗುರುವು ತೋರ್ವ ದೈವದೆಡೆಗಳನು ದೈವ ತಾ
ಗುರುವ ತೋರುವದೆ ?

(ಸರ್ವಜ್ಞ. ೩೭)

ನಿಜಗುಣರು ತಮಗೆ ಗುರುವಿನ ಅನುಗ್ರಹದಿಂದ ಉಂಟಾದ ಜ್ಞಾನೋದಯವನ್ನು ರಮ್ಯವಾಗಿ ಹೀಗೆ ಹೇಳಿದ್ದಾರೆ: "ತಿಳಿಯಲೆನ್ನಯ ಸುಕೃತಮುದಯ ಗಿರಿಯಗ್ರದೊಳು ಬೆಳಗಿದೋರಲು ಗುರುದಯಾದಿವಾಕರನು ಘಳಿಲಜ್ಞಾನ ತಮವಿರವಡಗೆ . . . ." (ವೇದಾಂತ. ೪೫). ಸರ್ಪಭೂಷಣರು ಗುರುವಿಗೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಾ, 'ಗುರುದೇವ ನೀ ಮಾಡಿದುಪಕೃತಿಯನು ನಾನು ಮರೆಯುವೃದೆಂದೆಂದಿಗಿಹದೊಳು . . . . ಗುರುರೂಪದಿಂದೆನ್ನ ಬೋಧಿಸಿ ತನ್ನೊಳು ಬೆರಸುತ್ತ ಮೋಕ್ಷವಿತ್ತುದರಿಂದೆ' (ಕೈವಲ್ಯ. ೯೪) ಎಂದಿದ್ದಾರೆ.

ಇಂಥ ಸದ್ಗುರುವಿಗೆ ನಮೋ ನಮಃ :

ಎನ್ನ ಕರಕಮಲಮಧ್ಯದಲ್ಲಿ ಪರಮನಿರಂಜನದ ಕುರುಹು ತೋರಿದ
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ
ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ
ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ
ಎನ್ನೊಳಗೆ ಎನ್ನಿಂಬಿಟ್ಟುಕೊಂಡ ಮಹಾಗುರುವಿಂಗೆ
ನಮೋ ನಮಃ ಎನುತಿರ್ದೆನಯ್ಯಾ

(ಅಖಂಡೇ. ೨೩–೨೧)

## ಲಿಂಗ

ಲಿಂಗಸ್ಯ ಧಾರಣಂ ಪುಣ್ಯಂ ಸರ್ವಪಾಪಪ್ರಣಾಶನಮ್ ।
ಆದೃತಂ ಮುನಿಭಿಃ ಸರ್ವೈರಾಗಮಾರ್ಥವಿಶಾರದೈಃ ॥

(ಸಿದ್ಧಾಂತ. ೨೬–೨೮)

ಲಿಂಗಸ್ಯ ದರ್ಶನಂ ಪುಣ್ಯಂ, ದರ್ಶನಾತ್ ಸ್ಪರ್ಶನಂ ಶುಭಂ
— ಇಂತಪ್ಪ ಶಿವಲಿಂಗವನು ಹೆರೆಹಿಂಗದೆ ಅಂಗದ ಮೇಲೆ
ನಿರಂತರ ಧರಿಸಿಕೊಂಡಿಪ್ಪಾತನೆ ಎಲ್ಲರಿಂದಧಿಕ ನೋಡಾ

(ಅಖಂಡೇ. ೨೬–೩)

ಲಿಂಗವು ಪರಬ್ರಹ್ಮಸೂಚಕ. ಅದು ಅರಿವಿನ ಕುರುಹು ; ಹೃದಯದಲ್ಲಿ ಬೆಳಗುವ ಜ್ಯೋತಿ ; ಮಹಾಜ್ಞಾನದ ಬೆಳಕು. ಅದಕ್ಕೇ ಇಷ್ಟಲಿಂಗವನ್ನು 'ಕರಸ್ಥಲದ ಪರಬ್ರಹ್ಮ' ಎನ್ನುತ್ತಾರೆ. 'ಎತ್ತನೇರಿ ಎತ್ತನರಸುವಂತೆ, ತಾನಿರ್ದು ತನ್ನರಸಿ ಕೊಳ್ಳುವಂತೆ' (ಆದವ. ೧೦೪) ಇದ್ದ ಅಜ್ಞಾನಿ ಶಿಷ್ಯನಿಗೆ ನಿಜವ ಅರಿಯುವಂತೆ ಗುರುವು ಲಿಂಗಧಾರಣೆ ಮಾಡಿಸುತ್ತಾನೆ. ಇಷ್ಟಲಿಂಗಪೂಜೆ ವೀರಶೈವರ ವೈಶಿಷ್ಟ್ಯ. ಇಷ್ಟಲಿಂಗಧಾರಣವು ಬಹಳ ಮಹತ್ವದ ವಿಷಯ. "ಇದು ಭಕ್ತನ 'ಅಂಗಗುಣ'ಗಳು ಅಳಿದು 'ಲಿಂಗಗುಣ'ಗಳು ಅಳವಡುವ ಸಾಧನ. ದೀಕ್ಷಾಕಾಲದಲ್ಲಿ ಶ್ರೀಗುರುವು ಶಿಷ್ಯನ ಸ್ಥೂಲ, ಸೂಕ್ಷ್ಮ, ಕಾರಣತನುಗಳನ್ನು ಸಂಸ್ಕರಿಸಿ ಅವುಗಳಲ್ಲಿ ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವ ಲಿಂಗಗಳನ್ನು ಅನುಗೊಳಿಸುತ್ತಾನೆ. ಸಾಧಕನ ಸೌಕರ್ಯಕ್ಕಾಗಿ ವೀರಶೈವಧರ್ಮದ ಶಾಸ್ತ್ರಕಾರರು ಲಿಂಗತತ್ತ್ವವನ್ನು ಬಹಳ ಸೂಕ್ಷ್ಮರೀತಿಯಿಂದ ವಿವೇಚನೆ ಮಾಡಿದ್ದಾರೆ. ವೀರಶೈವರ ಕ್ರಿಯಾಪ್ರಧಾನವಾದ ಅಷ್ಟಾವರಣದಲ್ಲಿ ಜ್ಞಾನ ಪ್ರಧಾನವಾದ ಷಟ್ಸ್ಥಲಗಳ ಅನುಸಂಧಾನ ಸೌಕರ್ಯಕ್ಕಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗವೆಂಬ ಆರು ನಾಮಗಳಿಂದ ವಿಕಾಸಗೊಳಿಸಲಾಗಿದೆ' (ವೀಸಾ ೩. ೧೭೨).

ಚಂಚಲ ಮನಸ್ಸನ್ನು ದೃಢವಾಗಿ ನಿಲ್ಲಿಸಲು ದೃಷ್ಟಿಯ ಸಹಕಾರ ಬೇಕು. ದೃಷ್ಟಿಯನ್ನು ಒಂದು ಕಡೆ ನಿಲ್ಲಿಸಲು ಒಂದು ಕುರುಹು ಬೇಕು. ಆ ಪವಿತ್ರ ಕುರುಹೇ ಇಷ್ಟಲಿಂಗ. ಆದ್ದರಿಂದ ಮಾನವ ಅಂತರ್ಮುಖಿಯಾಗಲು ಇಷ್ಟಲಿಂಗ ಒಳ್ಳೆಯ ಸಾಧನವಾಗುತ್ತದೆ. ಈ ಲಿಂಗದ ಮಹತ್ವವನ್ನು ಕುರಿತು 'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ, ಅಗಮ್ಯ ಅಗೋಚರ ಅಪ್ರತಿಮಲಿಂಗವೆ, ಕೂಡಲಸಂಗಮದೇವಯ್ಯಾ, ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯ' (ಬಸವ. ೭೪೩) ಎನ್ನುತ್ತಾರೆ ಬಸವಣ್ಣನವರು. ಇಂಥ ಮಹಿಮಾನ್ವಿತ ಇಷ್ಟಲಿಂಗವನ್ನು ಬರೀ ಧರಿಸಿದರೆ ಸಾಲದು, ಪ್ರತಿದಿನವೂ ತಪ್ಪದೆ ಕ್ರಮವರಿತು ಪೂಜಿಸಬೇಕು. ಅದಕ್ಕೇ ಪ್ರಭುದೇವರು, 'ಹೊಟ್ಟೆಯ ಮೇಲೆ ಕಟ್ಟೋಗರವ ಮೊಟ್ಟೆಯ ಕಟ್ಟಿದರೇನು, ಹಸಿವು ಹೋಹುದೆ ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು, ಭಕ್ತನಾಗಬಲ್ಲನೇ' (ಅವಚಂ. ೧೭೯) ಎಂದು ಪ್ರಶ್ನಿಸಿದ್ದಾರೆ.

ಲಿಂಗಮಹತ್ವವನ್ನು ಅರಿತೇ ಸಿದ್ಧರಾಮೇಶ್ವರರು, 'ಕರಿಯು ಕನ್ನಡಿಯೊಳಡಗಿ ಉರಿಯು ಕಾಷ್ಠದೊಳಡಗಿ। ಶರಧಿಯೊಳು ವಾರಿಕಲ್ಲಡಗಿದಂತೆ। ಪರಮಚಿದ್ಘನಲಿಂಗವೆನ್ನ ಕರದೊಳಡಗಿ। ಪರಿಭವವ ತಪ್ಪಿಸಿದೆ ಯೋಗಿನಾಥ' (ಅಷ್ಟಾತ್ರಿ. ೬೦) ಎಂದೂ, 'ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ ಪ್ರಾಣದಲ್ಲಿ ಲಿಂಗಪರಿಣಾಮವನ್ನೆಯ್ದುವ ಪರಿ ಎಂತಯ್ಯಾ, ಅಂಗತ್ರಯವುಳ್ಳವರು ಲಿಂಗತ್ರಯಸಂಪನ್ನರಾಗಬೇಕು' (ಚನ್ನವ. ೨೪೬) ಎಂದು ಚನ್ನಬಸವೇಶ್ವರರೂ, 'ಲಿಂಗದಲಿ ಮನವಾಗಿ, ಲಿಂಗದಲಿ ನೆನಹಾಗಿ। ಲಿಂಗದಲಿ ನೋಟ ನುಡಿಕೂಟವಾದವನು। ಲಿಂಗವೇ ಅಕ್ಕು (ಸರ್ವಜ್ಞ ೧೨೦) ಎಂದು ಸರ್ವಜ್ಞನೂ ಹೇಳಿರುವುದು. ಸರ್ಪಭೂಷಣರು ಲಿಂಗಪೂಜೆಯ ಸಂಭ್ರಮವನ್ನು, ಪ್ರಾಣಲಿಂಗ ಪೂಜೆಯ ಸುಳುಹನ್ನು ತಮ್ಮ ಹಾಡೊಂದರಲ್ಲಿ ಅನುಭವರಸಾಯನವಾಗಿಸಿ ಉಣಬಡಿಸಿದ್ದಾರೆ:

ಲಿಂಗಪೂಜೆಯ ಮಾಡಿರೊ। ನಿಮ್ಮೊಳೆ ಪ್ರಾಣ-
ಲಿಂಗಪೂಜೆಯ ಮಾಡಿರೋ॥
ವರಭಕ್ತಿಜಲವ ನೀಡಿ ಮಿರುಗುವಕ್ಷತೆಯನಿಟ್ಟು
ಅರಿವೆಂಬ ನಿರ್ಮಲ ಸರಸಪುಷ್ಪವ ಸೂಡಿ
ಹರುಷವೆಂಬುವ ಧೂಪವ ಸಮರ್ಪಿಸಿ....

(ಕೈವಲ್ಯ. ೧೦೧-೨೯)

ಹೀಗೆ ಪೂಜಿಸಿದ ಫಲವು ಹೇಗಿರುತ್ತದೆ ? 'ದೇವರ ಪೂಜಿಸಿ ನದಿಯೊಳಗೆ ನದಿ ಬೆರೆತಂತಾಗಬೇಕು' (ಬಸವ. ೯೨೯).

ದೇಹದ ಮೇಲೆ ಇಷ್ಟಲಿಂಗವನ್ನು ಧರಿಸಿದ ಮೇಲೆ ಅನ್ಯದೈವಗಳಿಗೆರಗಲಾಗದು. ಸ್ಥಾವರಲಿಂಗಕ್ಕೆ ಶರಣು ಹೋಗುವುದು ವೀರಶೈವಧರ್ಮಕ್ಕೆ ವಿರೋಧ. ಅದನ್ನು ಶರಣರು ಪ್ರತಿಭಟಿಸಿ ನುಡಿದಿದ್ದಾರೆ: 'ಲಿಂಗವ ಪೂಜಿಸಿ ಮರಳಿ ಅನ್ಯದೈವಕ್ಕೆರಗಿದಡೆ ಕೂಡಲಸಂಗಮದೇವ ಹಲ್ಲ ಕಳೆವ' (ಬಸವ. ೬೪೯). 'ಬೆಟ್ಟದ ಲಿಂಗವ ಹಿಡಿದು ಮಾಡಿ ಕಂಡು ಪರಿವ ಕೊಟ್ಟೆಮೂಳರಿರಾ ಬಿಟ್ಟುಕೊಡಿ ನಿಮ್ಮ ಇಷ್ಟಲಿಂಗವ' (ಅಂಬಿವ. ೧೨೫), 'ಇಷ್ಟಲಿಂಗವಿದ್ದಂತೆ ಸ್ಥಾವರ ಲಿಂಗಕ್ಕೆ ಶರಣೆಂದೆನಾದಡೆ ತಡೆಯದೆ ಹುಟ್ಟಿಸುವುದು ಶ್ವಾನನ ಗರ್ಭದಲ್ಲಿ....ಗುರು ಕೊಟ್ಟ ಲಿಂಗದಲ್ಲಿ ಎಲ್ಲ ತೀರ್ಥಂಗಳೂ, ಎಲ್ಲ ಕ್ಷೇತ್ರಂಗಳೂ ಇಪ್ಪಾವೆಂದು ತಿಳಿದು ಮುಕ್ತರಪ್ಪುದಯ್ಯಾ,(ಆದವ. ೭೪).

ಇಂಥ ಮಹಿಮಾಸ್ಪದ ಲಿಂಗಕ್ಕೆ ಮಣಿಯುತ್ತಾ ಮೊಗ್ಗೆಯ ಮಾಯಿದೇವರ ವಾಣಿಯನ್ನಾಲಿಸೋಣ :

ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಂ
ಲಿಂಗದಿನೊಲ್ದು ವಿಸ್ತರಿಸೆ ಲಿಂಗಕ್ಕೆ ಅಂಗಮನರ್ಪಿಸುತ್ತಮಾ
ಲಿಂಗಪದಾರ್ಥಮಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ
ಲಿಂಗನಿಜೈಕ್ಯನಯ್ಯ ಪರಮಪ್ರಭುವೆ ಮಹದೈಪುರೀಶ್ವರಾ.

(ಶತಕ. iii, ೫೬)

## ಜಂಗಮ

ವೇದಶಾಸ್ತ್ರಕತೀತ ಜಂಗಮವು ಚಿ-
ನ್ನಾದ ಚಿದ್‌ಬಿಂದು ಚಿತ್‌ಕಳೆಯೆ ಜಂಗಮವು ಭ-
ಕ್ತಾದಿ ಮಹೇಶ ಪ್ರಸಾದಿಯ ಸುಲಿಂಗ ಶರಣೈಕ್ಯ ಷಟ್‌ಸ್ಥಲ ಜಂಗಮಂ
ಸಾಧಿಸುವೆನೆಂಬರಿಗಸಾಧ್ಯವಹ ಜಂಗಮವು
ಭೇದಿಸುವೆನೆಂಬರಿಗಸಾಧ್ಯವಹ ಜಂಗಮವು
ಮೂದೇವತಾರಾಧ್ಯಗತ್ತತ್ತ ಜಂಗಮದ ದಾಸೋಹಿಭಕ್ತನಧಿಕಂ

(ಮೈಲಾರ. ೧–೮)

ಜಂಗಮವೆಂದರೆ ಚೈತನ್ಯವೆಂದರ್ಥ. ಜಗತ್ತಿನ ಜೀವಜಂತುಗಳೆಲ್ಲ ಜಂಗಮವೇ. ವೀರಶೈವಧರ್ಮದಲ್ಲಿ ಜಂಗಮ ಶಬ್ದಕ್ಕೆ ಚರ, ಮಾಹೇಶ್ವರ, ಶಿವಯೋಗಿಗಳೆಂಬ ಪರ್ಯಾಯಪದಗಳಿವೆ. ವೀರಶೈವಧರ್ಮದಲ್ಲಿ ಜಂಗಮನ ಸ್ಥಾನವು ಮೇಲಾದುದಾಗಿದೆ. ಗುರುಲಿಂಗಗಳ ಚೈತನ್ಯವೇ ಜಂಗಮ. ಗುರುವು ಧಾರ್ಮಿಕ ಸಂಸ್ಕಾರಗಳನ್ನು ಮಾಡಿ ಧರ್ಮ ಬೋಧೆ ಮಾಡಿದರೆ, ಜಂಗಮನು ಅಂಥ ಧರ್ಮವನ್ನು ರಕ್ಷಣೆ ಮಾಡುತ್ತಾನೆ. ಅಂದರೆ ಗುರು ಬೋಧಿಸಿದ ಧಾರ್ಮಿಕ ಆಚಾರ-ವಿಚಾರಗಳು ಸಮಾಜದಲ್ಲಿ ಸರಿಯಾಗಿ ನಡೆಯುತ್ತವೋ ಇಲ್ಲವೋ ಎಂಬುದನ್ನು ನೋಡುವ ಗುರುತರ ಹೊಣೆ ಆತನದು.

ಗುರುವು ಶಿಷ್ಯನಿಗೆ ಲಿಂಗವನ್ನು ಕೊಡುವುದರ ಜೊತೆಗೆ ಜಂಗಮವನ್ನೂ ನೀಡುತ್ತಾನೆ. ಏಕೆಂದರೆ ಲಿಂಗದ ಮುಖ ಜಂಗಮ. ಲಿಂಗವು ಗರ್ಭದಲ್ಲಿರುವ ಶಿಶುವಾದರೆ, ಜಂಗಮ ತಾಯಿ. ತಾಯಿ ತೃಪ್ತಿಪಟ್ಟರೆ ಶಿಶು ತೃಪ್ತಿಪಡುತ್ತದೆ. ಅದಕ್ಕೇ ಬಸವಣ್ಣನವರು 'ಮರಕ್ಕೆ ಬಾಯಿ ಬೇರೆಂದು ಶೆಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ. ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ ಮುಂದೆ ಸಕಲಪದಾರ್ಥವನೀವನು' (ಬಸವ. ೪೨೦).

ಜಂಗಮಕ್ಕೆ ನೀಡುವಲ್ಲಿ ಒಂದು ವೈಶಿಷ್ಟ್ಯವಿದೆ. ಜಂಗಮನು ಭೋಗಮೂರ್ತಿ. 'ಜಂಗಮಕ್ಕೆ ನೀಡಿದ ತೃಪ್ತಿ ಜಗಕ್ಕೆಲ್ಲಾ ತೃಪ್ತಿಯಾಯಿತ್ತು. ಹರಿಸುರಬ್ರಹ್ಮಾದಿಗಳಿಗೆಲ್ಲ ತೃಪ್ತಿಯಾಯಿತ್ತು. ಸಾಕ್ಷಾತ್ ಪರಬ್ರಹ್ಮ ಪರಶಿವಂಗೆ ತೃಪ್ತಿಯಾಯಿತ್ತು' (ಅಖಂಡೇ. ೬೧–೧೨). ಇಂಥ ಜಂಗಮನನ್ನು ಜಗದೀಶನೆಂದು ನಂಬದವನ ಜನ್ಮ ಹಾಳು. ಭಕ್ತನು ಜಂಗಮನಿಗೆ ತನ್ನ ಧನವನ್ನು ನೀಡಬೇಕು. ಅಂದರೆ ನನ್ನದು, ನಾನು ದುಡಿಯುತ್ತೇನೆ ಎಂಬ ಮಮಕಾರ ಗಳನ್ನು ಬಿಟ್ಟು ದಾಸೋಹಂಭಾವದಿಂದ ಜಂಗಮಕ್ಕೆ ಅರ್ಪಿಸಬೇಕು. ಅವರಿಂದ ಮತ್ತೆ ಪ್ರಸಾದರೂಪವಾಗಿ ಬಂದು ದನ್ನು ಉಪಭೋಗಿಸಬೇಕು.

ಇಲ್ಲಿ ಇನ್ನೂ ಒಂದು ಸೂಕ್ಷ್ಮವಿಚಾರವಿದೆ. ಜಂಗಮನು ಆಚಾರನಿಷ್ಠನಿದ್ದು ಲೋಭರಹಿತನಾಗಿರುತ್ತಾನೆ. 'ಬೇಡಲಾಗದು ಜಂಗಮ, ಬೇಡಿಸಲಾಗದು ಭಕ್ತ' (ಸಿದ್ಧವ. ೩೮೨). ಬೇಡುವಾತ ಜಂಗಮನಲ್ಲ; ಕಾಂಚನವನ್ನು ಕಾಷ್ಠವೆಂದು ಬಗೆವ ವಿರಾಗಿ. ಈತನಿಗೆ ಭಕ್ತನು ಸಲ್ಲಿಸುವ ಧನ ಹೇಗೆ ವಿನಿಯೋಗವಾಗಬೇಕು ? ಜಂಗಮನು ಭಕ್ತನು ಅರ್ಪಿಸಿದ್ದನ್ನು ತನ್ನದೆಂದು ಭಾವಿಸದೆ, ಶಿವಪ್ರಸಾದವೆಂದು ಭಾವಿಸಿ. ಸಮಾಜದಲ್ಲಿ ಜ್ಞಾನಪ್ರಸಾರ ಹಾಗೂ ಧರ್ಮ ರಕ್ಷಣೆಗೆ ವಿನಿಯೋಗಿಸುತ್ತಾನೆ.

ಜಂಗಮದ ಮಹತ್ವವನ್ನರಿತೇ ಬಸವಣ್ಣನವರು 'ಲಿಂಗದಲಿ ದಿಟವನರಸುವಡೆ ಜಂಗಮವ ನೆರೆ ನಂಬುವುದು (ಬಸವ. ೪೨೬) ಎಂದೂ, ಅಕ್ಕ 'ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ, ಜಂಗಮವೆನ್ನ ನಿಧಿನಿಧಾನ, ಜಂಗಮ ವೆನ್ನ ಪುಣ್ಯದ ಫಲ, ಜಂಗಮವೆ ಹರುಷದ ತೊರೆ . . . . ಜಂಗಮದ ತಿಂಥಿಣಿಯೊಳಗೆ ಓಲಾಡುವೆ' (ಮಹಾದೇ. ೧೬೯) ಎಂದೂ ಅಭಿಪ್ರಾಯಪಟ್ಟಿದ್ದಾರೆ. ಜಂಗಮಸೇವೆಯ ಮಹತ್ವವು ಅಖಂಡೇಶ್ವರ ವಚನವೊಂದರಲ್ಲಿ ಬಹಳ

ವಿಶಿಷ್ಟವಾದ ರೀತಿಯಲ್ಲಿ ನಿರೂಪಿತವಾಗಿದೆ. 'ಜಂಗಮಸೇವೆಯ ಒಂದೊಂದು ಹಂತವೂ ಸ್ವರ್ಗಕ್ಕೆ ಒಂದೊಂದು ಮೆಟ್ಟಿಲು' ಎಂಬುದನ್ನು ಷಣ್ಮುಖಸ್ವಾಮಿಗಳು ಹೀಗೆ ತಿಳಿಸುತ್ತಾರೆ—ಇವೇ ಆ **ಸಪ್ತಸೋಪಾನಗಳು :**

೧. ಜಂಗಮವ ಕಾಣುತ್ತ ಸದ್‌ಭಕ್ತ ಎದ್ದು ಸ್ವಾಗತಿಸುವುದು.
೨. ಮನಕರಗಿ ತನು ಉಬ್ಬಿ ಕಂಗಳಲ್ಲಿ ಆನಂದಬಾಷ್ಪ ತುಂಬಿ ಅವರ ಚರಣಕಮಲಕ್ಕೆ ಎರಗುವುದು.
೩. ತನ್ನ ಮನೆಗೆ ಬಿಜಯಂಗೈಸಿ, ಉನ್ನತಾಸನ ಕೊಟ್ಟು ಪಾದಪ್ರಕ್ಷಾಲನ ಮಾಡುವುದು.
೪. ಜಂಗಮದೇವರನ್ನು ಅಷ್ಟವಿಧಾರ್ಚನೆ, ಷೋಡಶೋಪಚಾರದಿಂದ ಅರ್ಚಿಸಿ ಪಾದತೀರ್ಥವ ಕೊಂಬುದು.
೫. ಮೃಷ್ಟಾನ್ನಪಾನಂಗಳಿಂದ ತೃಪ್ತಿಪಡಿಸುವುದು.
೬. ಒಕ್ಕು ಮಿಕ್ಕ ಪ್ರಸಾದವ ಕೊಂಬುದು.
೭. ಜಂಗಮದಲ್ಲಿ ಅನುಭಾವವ ಬೆಸಗೊಂಬುದು.

—ಇಂತೀ ಸಪ್ತಸೋಪಾನಂಗಳ ಬಲ್ಲ ಸದ್ಭಕ್ತಂಗೆ ಕೈಲಾಸ ಕರತಲಾಮಲಕ. ಅಲ್ಲದೆ ತನುವ ಸವೆಸದೆ, ಮನವ ದಂಡಿಸದೆ ಧನವ ಸಮರ್ಪಿಸದೆ ಮಿಥ್ಯಾಸಂಸಾರದಲ್ಲಿ ಸಿಲ್ಕಿ ಹೊತ್ತುಗಳೆದು ಹೊಡೆದಾಡಿ ಸತ್ತುಹೋಗುವ ವ್ಯರ್ಥ ಜೀವರಾಗುವಂತಿಲ್ಲ.

(ಅಖಂಡೇ, ೭೪–೭೬)

## ವಿಭೂತಿ

ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮ ನಾಮ ಯಥಾವಿಧಿ।
ರಕ್ಷಾ ಚ ಮೋಕ್ಷಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ ॥

(ಸಿದ್ಧಾಂತ, ೭–೧೦)

ವೀರಶೈವರ ಪೂಜಾಸಾಧನಗಳಲ್ಲಿ ವಿಭೂತಿ ಮೊದಲನೆಯದು. ಇದನ್ನು ಭಸ್ಮವೆಂದೂ ಕರೆಯುತ್ತಾರೆ. ಇದು ಶಿವನ ಚಿತ್ಕಳೆ. ಇದನ್ನು ಹಸುವಿನ ಬೆರಣಿಯಿಂದ ಹರಮಂತ್ರನ್ಯಾಸದಿಂದ ಶಿವಾಗ್ನಿಯಿಂದ ಸುಟ್ಟು ಶಿವಮಂತ್ರದಿಂದ ಶೋಧಿಸಿ ಮಾಡುತ್ತಾರೆ. ಇದು ಕಾಮಾದಿ ಅರಿಷಡ್ವರ್ಗಗಳನ್ನು ಸುಡುವುದಲ್ಲದೆ, ಆಣವಮಲ, ಮಾಯಾಮಲ ಮತ್ತು ಕಾರ್ಮಿಕಮಲಗಳನ್ನು ನಾಶಮಾಡುತ್ತದೆ. ಇದು ಭೂತಪಿಶಾಚಿಗಳ ಕಾಟದಿಂದ ಪಾರುಮಾಡುವ ರಕ್ಷೆ. ಇದು ಅದನ್ನು ಸಿದ್ಧಮಾಡುವ ವಿಧಾನದಿಂದ ಕಲ್ಪ, ಅನುಕಲ್ಪ, ಉಪಕಲ್ಪ. ಅಕಲ್ಪ ಎಂದು ನಾಲ್ಕು ತೆರನಾಗಿರುವುದು. ಇದು ಅಷ್ಟೈಶ್ವರ್ಯಸಿದ್ಧಿಗೆ ಕಾರಣವಾದ್ದರಿಂದ **ವಿಭೂತಿ**ಯೆಂದೂ, ಶಿವತತ್ತ್ವವನ್ನು ಪ್ರಕಾಶಪಡಿಸುವುದರಿಂದ **ಭಸಿತ**ವೆಂದೂ, ಮನೋವಾಕ್ಕಾಯಗಳಲ್ಲಿ ಹುಟ್ಟುವ ತಾಪಗಳಿಗೆ ಭಯವನ್ನುಂಟುಮಾಡುವುದರಿಂದ **ಭಸ್ಮ**ವೆಂದೂ, ತಾಪತ್ರಯಗಳಿಂದ ಜನಿಸುವ ವಿಪತ್ತುಗಳನ್ನು ನಾಶಗೊಳಿಸುವುದರಿಂದ **ಕ್ಷಾರ**ವೆಂತಲೂ, ಗ್ರಹಯಕ್ಷಾದಿಗಳ ಭಯ ವಿಲ್ಲದಂತೆ ಕಾಪಾಡುವುದರಿಂದ **ರಕ್ಷೆ**ಯೆಂತಲೂ ಈ ಐದು ಹೆಸರುಗಳು ಬಂದಿವೆ. ಇದನ್ನು ಸ್ನಾನ, ಉದ್ಧೂಲನ, ಧಾರಣವೆಂಬ ಮೂರು ಬಗೆಯಿಂದ ಉಪಯೋಗಿಸಬೇಕು. ವಿಭೂತಿಯನ್ನು ಶಿವಪೂಜಾಸಂದರ್ಭದಲ್ಲಿ ಮಂತ್ರೋಚ್ಚಾರಣೆಯೊಡನೆ ಶರೀರದ ತಲೆ, ಹಣೆ. ಕುತ್ತಿಗೆ ಇತ್ಯಾದಿ ಹದಿನೈದು ಕಡೆ ಧರಿಸಿಕೊಳ್ಳಬೇಕು.

ಭಕ್ತನು ವಿಭೂತಿಯಿಂದ ತನ್ನ ದೇಹವನ್ನು ಅಲಂಕರಿಸಿಕೊಂಡು ಪೂಜೆ ಮಾಡಿದರೆ ಅದು ಎಷ್ಟು ಪುಣ್ಯ ದಾಯಕ, ಪಾಪಪರಿಹಾರಕ ಎಂಬುದನ್ನು ಶರಣರು ಮನದುಂಬಿ ಹಾಡಿದ್ದಾರೆ: 'ಕೂಡಲ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ' (ಬಸವ. ೭೪) ಎಂದ ಬಸವಣ್ಣನವರು, 'ಲಲಾಟದಲ್ಲಿ ವಿಭೂತಿ ಬರಲಿಕೆ ಪಾಪಪಲ್ಲಟ ವಾಗದೇ' (ಬಸವ. ೭೩) ಎಂದೂ, ಅಕ್ಕ 'ಶ್ರೀ ವಿಭೂತಿಯ ನೊಸಲಲ್ಲಿ ಧರಿಸಿ ದೃಷ್ಟಿವಾರೆ ನಿಮ್ಮ ನೋಡಲೊಡನೆ ಬೆಟ್ಟದಷ್ಟು ತಪ್ಪುಳ್ಳೊಡೆಯು ಮುಟ್ಟಲೆಮ್ಮವು ನೋಡಾ' (ಮಹಾದೇ. ೨೧೮) ಎಂದೂ, ಸಿದ್ಧಲಿಂಗೇಶ್ವರರು 'ಅಡಿಗಡಿಗೆ ಭವಹರನ ನೆನೆವುತ್ತ ಭಸಿತವ ಧರಿಸುತ್ತ ಭವವ ತಪ್ಪಿಸಿಕೊಂಬ ಸುಖಕಿನ್ನು ಸರಿಯುಂಟೆ' (ಸಿದ್ಧೇಶ್ವ. ೧೮೯) ಎಂದು ನುಡಿದಿದ್ದಾರೆ. ಷಣ್ಮುಖಸ್ವಾಮಿಗಳು 'ಶ್ರೀ ವಿಭೂತಿಯ ಅಂತರಂಗದಲ್ಲಿ ವಿಶ್ವಾಸ ತುಂಬಿ ಧರಿಸಿದ ಮನುಜನಿಗೆ ಅನಂತಕೋಟಿಪಾತಕಂಗಳು ಪರಿಹಾರವಾಗಿ ಮುಂದೆ ಶಿವಸಾಯುಜ್ಯಪದವು ದೊರೆಕೊಂಬುದು' (ಅಖಂಡೇ. ೩೮–೬) ಎಂದರೆ. ಸರ್ವಜ್ಞನು ಅದನ್ನು ಮತ್ತಷ್ಟು ಸ್ಪಷ್ಟಪಡಿಸಿದ್ದಾನೆ:

ರುದ್ರಾಕ್ಷಿ ಭಸಿತವನು ಹೊದ್ದಿರಲು ದೇಹದೊಳ-
ಗಿದ್ದ ಪಾಪಗಳು ಬಯಲಾಗಿ ಶಿವನು ತಾ-
ನಿದ್ದಲ್ಲಿ ಬರುವ.

(ಸರ್ವಜ್ಞ. ೯೮)

ಶಿವತತ್ತ್ವಚಿಂತಾಮಣಿಯಲ್ಲಿ ಶಿವನು ಪಾರ್ವತಿಗೆ ವಿಭೂತಿಯ ಮಹತ್ವವನ್ನು ನಿರೂಪಿಸಿದ ಪ್ರಸಂಗವೊಂದಿದೆ. ಅಲ್ಲಿ ಶಿವನು "....ವಿಭೂತಿಯ ಧರಿಸಿಪ್ಪವರ ಮುದವನೇವಣ್ಣಿಸುವೆ. ತತ್ಫಲದ ಸಂಖ್ಯೆಯಂ ಸದುಹೃದಯರೆನ್ನ ಸದ್ಭಕ್ತರೇ ಬಲ್ಲರೌ ಕಾಂತೆ ಕೇಳು .... ಇದು ಮಹಾಪಾತಕವ ಸುಡುವಗ್ನಿ" (ಶಿವಚಿಂ. ೪೧-೨೫) ಎಂದಿದ್ದಾನೆ.

ಬಸವಲಿಂಗಶರಣರು ಕೂಡ

ಶಿವನಿಂದಲಧಿಕವೆಂದೆನಿಪ ಚಿದ್‌ಭಸ್ಮವನು
ಅವಿರತಾಪಾದಮಸ್ತಕಪರ್ಯಂತರವು
ಸುವಿವೇಕಷಣ್‌ಮಂತ್ರಸ್ಮರಣೆಯಿಂದನವರತ ಧರಿಸುವರು ಸದ್‌ಭಕ್ತರು

(ಮೈಲಾರ, ೧-೨೭)

ಎಂದು ವಿಭೂತಿಯ ಮಹಿಮೆಯನ್ನು ಸಾರಿದ್ದಾರೆ.

## ರುದ್ರಾಕ್ಷಿ

ದರ್ಶನಾತ್ ಸ್ಪರ್ಶನಾಚ್ಚೈವ ಸ್ಮರಣಾದಪಿ ಪೂಜನಾತ್ ।
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೇ ಪಾತಕೈರ್ಜನಾಃ ॥

(ಸಿದ್ಧಾಂತ, ೭-೬೦)

ರುದ್ರಾಕ್ಷಿಯೆಂಬುದು ಒಂದು ಮರದ ಕಾಯಿ. ಒಳ್ಳೆಯ ಔಷಧಿಗುಣ ಈ ಕಾಯಿಗಳಿಗೆ ಇದೆ. ಇದು ರುದ್ರನ ಕಣ್ಣಿನಿಂದ ಹುಟ್ಟಿತು ಎಂಬ ನಂಬುಗೆಯಿದೆ. 'ಹಿಂದೊಮ್ಮೆ ಯೋಗಸಮಾಧಿಯಲ್ಲಿದ್ದ ಶಿವನು ತ್ರಿಪುರಸಂಹಾರಕ್ಕಾಗಿ ತ್ರಿನೇತ್ರಗಳನ್ನು ತೆರೆದು ನಿಟ್ಟಿಸಿದನೆಂದೂ, ಆಗ ಆ ಕಣ್ಣುಗಳಿಂದ ಉದುರಿದ ಕಂಬನಿಗಳು ಭೂಮಿಯಲ್ಲಿ ಬೀಜವಾಗಿ ಮೊಳೆತು ಮರಗಳಾದುವೆಂದೂ, ಆ ಮರದ ಕಾಯಿಗಳೇ ರುದ್ರಾಕ್ಷಿಗಳೆಂದೂ ಪುರಾತನ ಗ್ರಂಥಗಳು ಸಾರುತ್ತವೆ' (ಅಷ್ಟಾವ. ೭೯). ಪಾಪಪರಿಹಾರಕವೆನಿಸಿರುವ ಈ ರುದ್ರಾಕ್ಷಿಗಳನ್ನು ಮೈಮೇಲೆ ಧರಿಸಲು ಮತ್ತು ಜಪದ ಮಣಿಯಾಗಿ ಬಳಸಲು ಉಪಯೋಗಿಸುತ್ತಾರೆ. ವೈಷ್ಣವರಿಗೆ ತುಳಸಿ ಇದ್ದಂತೆ ವೀರಶೈವರಿಗೆ ರುದ್ರಾಕ್ಷಿ. 'ರುದ್ರಾಕ್ಷಿಯೆಂದರೆ ಉರಿಗಣ್ಣು. ಪಾಪ, ಅಜ್ಞಾನಗಳನ್ನು ಸುಟ್ಟುಬಿಟ್ಟಿದ್ದರ ಕುರುಹು ಅದು. ಆಸುರೀಗುಣಗಳನ್ನು ಛೇದಿಸಿದ್ದೇವೆಂಬುದರ ದ್ಯೋತಕ ರುದ್ರಾಕ್ಷಿ' (ವೈರಾಗ್ಯ. ೨೭೨) ಎಂಬ ವಿವರಣೆಯೂ ಇದೆ. ಇವು 'ಶಿವಾನುಭವದ ನೆಲೆಯನ್ನು ಗೊತ್ತುಮಾಡಿ ಕೊಡುವ ತತ್ತ್ವಚಿಂತಾಮಣಿಗಳು' (ಅಷ್ಟಾವಿ. ೬೧) ಎಂಬ ಮಾತಂತೂ ಸತ್ಯ.

ಕೋಟಿ ಗೋವುಗಳನ್ನು ದಾನಮಾಡಿದ ಪುಣ್ಯ ರುದ್ರಾಕ್ಷಿ ಧರಿಸಿದರೆ ಸಮನಿಸುವುದೆಂದು ಸಿದ್ಧಾಂತಶಿಖಾಮಣಿ (೭-೬೨) ಹೇಳಿದರೆ, ಬಸವಣ್ಣನವರು 'ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವ ಪಾವನ, ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ...ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿಯೇ ಸಾಧನವಯ್ಯ' (ಬಸವ. ೯೫೯) ಎಂದು ಹೇಳಿ, 'ಶ್ರೀವಿಭೂತಿ ರುದ್ರಾಕ್ಷಿಯಿದ್ದವರ ಭಕ್ತರೆಂಬೆ ಇಲ್ಲದವರ ಭವಿಯೆಂಬೆ' (ಬಸವ. ೪೫೧) ಎಂದಿದ್ದಾರೆ. ಸಿದ್ಧರಾಮೇಶ್ವರರು ತಮ್ಮ ಅಷ್ಟಾವರಣ ತ್ರಿವಿಧಿಯಲ್ಲಿ ರುದ್ರಾಕ್ಷಿಯನ್ನು ಕುರಿತು ಹೀಗೆಂದಿದ್ದಾರೆ:

ರುದ್ರಾಕ್ಷಿಯನಾವಾಗಲು ರುದ್ರಮುಖವೆಂದರಿದು
ರುದ್ರನ ನೆನಹಿಂದ ಧರಿಸಿದಾತ ರುದ್ರಪದವಿಯ ಪಡೆದು
ರುದ್ರ ಜ್ಞಾನದಿಂ ರುದ್ರ ತಾನಪ್ಪನೈ ಯೋಗಿನಾಥ

(ಅಷ್ಟಾತ್ರಿ, ೧೨೯)

'ತತ್ತ್ವಚಿಂತಾಮಣಿಗಳೆಂಬ ರುದ್ರಾಕ್ಷಿಗಳನ್ನು ಭಕ್ತಿದಾರದಲ್ಲಿ ಸಂಗೊಳಿಸಿ ಯುಕ್ತಿವಿಧಾನವರಿದು ಧರಿಸಿ ಸದ್ಯೋನ್ಮುಕ್ತನಾದೆನಯ್ಯ' (ಸಿದ್ಧೇಶ್ವ. ೧೯೪) ಎಂದಿದ್ದಾರೆ ತೋಂಟದ ಸಿದ್ಧಲಿಂಗೇಶ್ವರರು. ಸರ್ವಜ್ಞನು 'ರುದ್ರಾಕ್ಷಿಮಾಲೆಯನು ಭದ್ರದಲಿ ಧರಿಸಿದವಗೆ। ಹೊದ್ದಿರ್ದ ಪಾಪ ಹೋಗಲವ ಸಾಕ್ಷಾತ್ ರುದ್ರನೇ ಅಕ್ಕು' (ಸರ್ವಜ್ಞ. ೨೫೯) ಎಂದಿದ್ದರೆ. ಷಣ್ಮುಖಸ್ವಾಮಿಗಳು 'ಅನಂತಕೋಟಿಯಜ್ಞಂಗಳ ಮಾಡಿ ತೊಳಲಿ ಬಳಲಲದೇಕೋ. ಆ ಯಜ್ಞಂಗಳ ಫಲವು

ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ ದೊರೆಕೊಂಬುದು ನೋಡಾ' (ಅಖಂಡೇ. ೪೪-೧) ಎಂದಿದ್ದಾರೆ. ಕೊನೆಯದಾಗಿ ಲಕ್ಕಣದಂಡೇಶನು ರುದ್ರಾಕ್ಷಿಯ ಮಹತ್ವವನ್ನು ಕುರಿತು ಹೇಳಿರುವುದನ್ನು ಕೇಳೋಣ :

ಹೆಸರುಗೊಳೆ ನಿಷ್ಪಾಪ ಕಂಡಡಂ ದುರಿತಹರ
ಒಸೆದು ಮುಟ್ಟಿದಡೆ ನರಜನ್ಮಮಂ ಕೆಡೆಯೊದೆವ
ಭಸಿತಸಹಿತಂ ಧರಿಸೆ ರುದ್ರಾಕ್ಷೆಯಂ ಮಹಾತೇಜವಹ ಸುರಪದವಿ
ಪಶುಪತಿಯ ಹೃತ್ಕಮಲಕರ್ಣಿಕಾಪೀಠದೊಳು
ಬೆಸುಗೆ ಬಿಡದಿರ್ಪ ನಿತ್ಯ ಧರಿಸಿದಾತನುಂ
ವಸುಮತಿಯೊಳಿದನರಿದು ನಡೆವ ಮಾಹೇಶ್ವರರ ಚರಣಾಂಬುಜಕ್ಕೆ ಶರಣು

(ಶಿವಚಿಂ. ೪೨-೨೧)

## ಮಂತ್ರ

ಪ್ರಣವೇನೈವ ಮಂತ್ರೇಣ ಬೋಧ್ಯತೇ ನಿಷ್ಕಲಃ ಶಿವಃ ।
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ ॥

(ಸಿದ್ಧಾಂತ. ೮-೨೧)

ಪಂಚಾಕ್ಷರಿಯೆಂದಡೆ ಪರತತ್ತ್ವವು ನೋಡಾ....
ಪಂಚಾಕ್ಷರಿಯೆಂದಡೆ ಸಾಕ್ಷಾತ್ ಪರಶಿವನು ತಾನೆ ನೋಡಾ
ಇಂತಪ್ಪ ಪಂಚಾಕ್ಷರಿಮಂತ್ರವ ಹಗಲಿರುಳೆನ್ನದೆ ಸದಾಸನ್ನಿಹಿತನಾಗಿ
ಜಪಿಸಿದಾತನು ಅನಂತಪಾತಕಂಗಳ ಮೀರಿ
ಪರಮಪದವನೈದುತಿಪ್ಪನು ನೋಡಾ

(ಅಖಂಡೇ. ೪೯-೧)

ಇದು ಹರಿದಾಡುವ ಮನಸ್ಸನ್ನು ಲಿಂಗದಲ್ಲಿ ನೆಟ್ಟನೆ ನಿಲ್ಲಿಸುವ ದಿವ್ಯಸಾಧನ. 'ಓಂ ನಮಃ ಶಿವಾಯ' ಎಂಬ ಆರು ಅಕ್ಷರಗಳಿಂದ ಕೂಡಿದ ಶಬ್ದ. ಈ ಮಂತ್ರವು ಪಾಪಪರಿಹಾರಕ ಹಾಗೂ ಮುಕ್ತಿದಾಯಕ. ಇದಕ್ಕೆ 'ಶಿವನಿಗೋಸ್ಕರ ನಮಸ್ಕಾರ', 'ಸಕಲ ನಿಷ್ಕಲ ಲಿಂಗಕ್ಕೆ ನಮಸ್ಕಾರ' ಎಂಬ ಸಾಮಾನ್ಯಾರ್ಥದ ಜೊತೆಗೆ ಲಿಂಗಾಂಗಸಂಯೋಗಾರ್ಥವೂ ಇದೆ. ಅಲ್ಲದೆ 'ಓಂ=ಅಖಿಲ ಜಗತ್ತು, ನ ಮಮ=ನನ್ನದಲ್ಲ, ಶಿವಾಯ=ಶಿವನಿಗೋಸ್ಕರ'—ಎಂಬ ಅರ್ಥವನ್ನೂ ಶಿವಾನುಭವಿಗಳು ಹೇಳಿದ್ದಾರೆ. 'ಆಲದ ಬೀಜದಲ್ಲಿ ಮಹಾಮರ ಅಡಗಿರುವಂತೆ ಷಡಕ್ಷರಸೂಕ್ಷ್ಮಮಂತ್ರದಲ್ಲಿ ಎಲ್ಲ ವೇದಗಳು, ಎಲ್ಲ ಆಗಮಗಳು, ಉಪನಿಷತ್ತುಗಳು, ಇತಿಹಾಸ ಪುರಾಣಗಳು ಮತ್ತು ಎಲ್ಲ ಅಖಂಡ ವಿಶ್ವವೂ ಅಡಕವಾಗಿವೆ. ಷಡಕ್ಷರ ಮಂತ್ರ ಅಣುವಿಗೆ ಅಣು, ಮಹತ್ತಿಗೆ ಮಹತ್ತು. ಆಕಾರದಲ್ಲಿ ಕಿರಿದು, ಅಂತರಾರ್ಥದಲ್ಲಿ ಅತ್ಯಂತ ಹಿರಿದು' (ಅಷ್ಟಾವ. ೮೮). ವೀರಶೈವನಿಗೆ ಅಂಗದ ಮೇಲೆ ಸದಾ ಲಿಂಗಸಂಬಂಧವಿರುವಂತೆ ಮನದಲ್ಲಿ ಸದಾ ಮಂತ್ರಸಂಬಂಧವಿರಬೇಕು.

ಮಂತ್ರಜಪಗಳಲ್ಲಿ ವಾಚಕ, ಉಪಾಂಶು, ಮಾನಸಿಕ ಎಂಬ ಮೂರು ಬಗೆಗಳಿದ್ದು ಅವುಗಳಲ್ಲಿ ಮಾನಸಿಕ ಜಪವೇ ಮಿಗಿಲಾದದ್ದು. ಮಂತ್ರಸಿದ್ಧಿಯನ್ನು ಪಡೆದವನ ಮಾತೇ ಮಂತ್ರವಾಗಿ ಪರಿಣಮಿಸುತ್ತದೆ.

ಮಂತ್ರಮಹಿಮೆಯನ್ನು ಅರಿತು ಬಾಳಿನಲ್ಲಿ ಅಳವಡಿಸಿ ಆಚರಿಸಿದ ಶರಣರು ಅದರ ಮಹತ್ವನ್ನು ಕುರಿತು ಮನವಾರೆ ಹೇಳಿದ್ದಾರೆ: 'ನಮಃ ಶಿವಾಯ ಎಂದಡೆ ಕೋಟಿ ಕೋಟಿ ನರಕಂಗಳನೀಡಾಡಿ ಮಹಾದೇವಿಯರ ಮಂದಿರದ ಕೋಟೆಯನೇರಿಸಿತ್ತು ನೋಡು' (ಸಿದ್ಧವ. ೨೫೦) ; 'ದುರಿತವ ಪರಿಹರಿಸಬಲ್ಲಡೆ ಓಂ ನಮಃ ಶಿವಾಯ ಶರಣೆಂಬುದೇ ಮಂತ್ರ' (ಮಹಾದೇ. ೨೧೮).

ಆವನೊಬ್ಬನ ಹೃದಯ ಓಂ ನಮಃ ಶಿವಾಯ ಎಂಬ ಮಂತ್ರವು ನಿಶ್ಚಲವಾಗಿರಲು ಆತಂಗೆ
ಸಕಲಶಾಸ್ತ್ರಗಳ ಸಕಲತಂತ್ರಂಗಳ ಹಂಗಿಲ್ಲ, ಆತಂಗೆ ಸಕಲಶಾಸ್ತ್ರಗಳ ಸಕಲ ವಿದ್ಯಂಗಳ
ಅಭ್ಯಸಿಸಬೇಕೆಂಬ ಭ್ರಾಮಕವಿಲ್ಲ. ಆತನಿರ್ದಲ್ಲಿ ಸಕಲಭುವನ ಸಕಲತತ್ತ್ವಂಗಳಿರ್ಪವು
ಆತ ನಿರಾವರಣ ನಿರುಪಮ ನಿರಾಲಯ ನಿಜಮುಕ್ತನು ನೋಡಾ

(ಅಖಂಡೇ. ೪೯-೧)

ಕೇಶಿರಾಜನು 'ಷಡಕ್ಷರಮಂತ್ರಮಹಿಮೆ' ಎಂಬ ಗ್ರಂಥವನ್ನೇ ರಚಿಸಿ ಅದರ ಹಿರಿಮೆ-ಗರಿಮೆಗಳನ್ನು ಮನದಟ್ಟು ಮಾಡಿದ್ದಾನೆ. ಅದು ಪುಣ್ಯಕ್ಷೇತ್ರದ ಬೀಜವೆಂದೂ, ಪುಣ್ಯಮಹಾನದಿಗಳ ಇರವು ಎಂದೂ, ಪುಣ್ಯದ ಬೆಳಸೆಂದೂ, ವರ್ಣನೆಗೆ ನಿಲುಕದ ಶ್ರೇಷ್ಠಮಂತ್ರವೆಂದೂ ಹೇಳಿ

ಶ್ರೀಯಂ ಪಡೆವೂಡೆ ಶಾಶ್ವತ-
ಡಾಯುಷ್ಯದಪೇಕ್ಷೆ ತನಗೆ ಕೈಗೂಡುವೊಡಾ ।
ಮಾಯೆಗೊಳಗಾಗದಿರ್ಪೊಡೆ
ಜೀಯೆನೆ ಜಪಮೋಂ ನಮಃ ಶಿವಾಯೆಂಬ ಪದಂ

(ಷಮಂತ್ರ. ೧)

ಎಂದು ಸಾರಿದ್ದಾನೆ. ಸರ್ವಜ್ಞ ಈ ಆರಕ್ಕರದ ಮಹಿಮೆಯನ್ನು ಹೀಗೆ ಹೇಳಿದ್ದಾನೆ:

ಭಕ್ತಿಗೆರಡಕ್ಕರವು ಮುಕ್ತಿಗೆರಡಕ್ಕರವು
ಭಕ್ತಿಯಿಂ ಮುಕ್ತಿ ಪಡೆಯುವರೆ ಬಿಡದೆ ಆ-
ರಕ್ಕರವ ಹೇಳು

(ಸರ್ವಜ್ಞ. ೨೫೩)

ಅಂತಲೇ ಮಂತ್ರವು 'ಕಾಮಧೇನು, ಚಿಂತಾಮಣಿ, ಪರುಷದಮಣಿ, ಪ್ರಾಣಮೂಲಿಕೆ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ.

**ಪಾದೋದಕ**

ಕರುಣಜಲವೇ ಗುರುಪಾದೋದಕ, ವಿನಯಜಲವೇ ಲಿಂಗಪಾದೋದಕ,
ಸಮತಾಜಲವೇ ಜಂಗಮ ಪಾದೋದಕ.
ಗುರುಪಾದೋದಕದಿಂದ ಸಂಚಿತಕರ್ಮ ನಾಸ್ತಿ,
ಲಿಂಗಪಾದೋದಕದಿಂದ ಪ್ರಾರಬ್ಧಕರ್ಮ ನಾಸ್ತಿ,
ಜಂಗಮಪಾದೋದಕದಿಂದ ಆಗಮಕರ್ಮ ನಾಸ್ತಿ
ತ್ರಿವಿಧೋದಕದಲ್ಲಿ ತ್ರಿವಿಧಕರ್ಮ ನಾಸ್ತಿ

(ಚೆನ್ನವ. ೧೬೬)

ಪಾದೋದಕ ಮತ್ತು ಪ್ರಸಾದಗಳು ಪೂಜಾಫಲಗಳು. ಪಾದೋದಕವೆಂದರೆ ಪಾದದ ತೀರ್ಥವೆಂದರ್ಥ. ಶ್ರೀಗುರು ಜಂಗಮರ ಪಾದಗಳು ಪವಿತ್ರವಾದವು. ಅವರ ಪಾದಗಳನ್ನು ತೊಳೆದ ಜಲ ಎಲ್ಲ ತೀರ್ಥಗಳಿಗೂ ಶ್ರೇಷ್ಠವಾದದ್ದು. ಪೂಜಿಸುವವನ ಮತ್ತು ಪೂಜೆಗೊಳ್ಳುವವನ ಸಾಮರಸ್ಯದ ಫಲವಾಗಿ ಈ ಅನುಪಮಸಿದ್ಧಿಗಳು—ಪಾದೋದಕ ಹಾಗೂ ಪ್ರಸಾದಗಳು ಲಭಿಸುವುವು. ಪಾದೋದಕವನ್ನು ಶಿವಣ ಚಿದ್ರಸವೆನ್ನುವರು. ಇದನ್ನು ಇಬ್ಬರೂ ಸೇವಿಸುವರು. ಗುರುವಿನ ಹಸ್ತ ಶಿಷ್ಯನ ಮಸ್ತಕ ಇವೆರಡರ ಸಂಯೋಗದಿಂದ ಶಿಷ್ಯನಲ್ಲಿರುವ ಶಿವಕಳೆಯು ಇಷ್ಟಲಿಂಗದಲ್ಲಿ ಮೂಡು ವಂತೆ, ಗುರು ಅಥವಾ ಜಂಗಮನ ಪಾದ ಮತ್ತು ಶಿಷ್ಯನ ಅಥವಾ ಭಕ್ತನ ಹಸ್ತ—ಇವುಗಳ ಸಂಯೋಗದಿಂದ ಗುರು ಅಥವಾ ಜಂಗಮನಲ್ಲಿರುವ ಜ್ಞಾನಾಮೃತವು ಪಾದೋದಕರೂಪದಲ್ಲಿ ಬರುವುದು.

'ಪಾದೋದಕದಲ್ಲಿ ಗುರುಪಾದೋದಕ, ಲಿಂಗಪಾದೋದಕ ಮತ್ತು ಜಂಗಮಪಾದೋದಕವೆಂದು ಮೂರು ವಿಧ. ಇವು ಮೂರು ಪ್ರಕಾರಗಳಿದ್ದರೂ ಪ್ರತಿಯೊಂದರಲ್ಲಿಯೂ ಉಳಿದ ಎರಡೂ ಕೂಡಿಯೇ ಇರುವುವು.... ಪಾದೋದಕಕ್ರಿಯೆಯನ್ನು ನಡೆಸುವಾಗ ಭಕ್ತನು ಮಂತ್ರಪೂರ್ವಕವಾಗಿ ಕ್ರಿಯಾಮೂರ್ತಿಯ ಬಲದಂಗುಷ್ಠದಲ್ಲಿ ಎರೆದ ಉದಕವೇ ಗುರುಪಾದೋದಕ, ಎಡದಂಗುಷ್ಠದಲ್ಲಿ ಎರೆದುದಕವೇ ಲಿಂಗಪಾದೋದಕ, ಎರಡೂ ಅಂಗುಷ್ಠಗಳ ಮಧ್ಯದಲ್ಲಿ ಎರೆದುದಕವೇ ಜಂಗಮಪಾದೋದಕವೆಂದು ಭಾವಿಸಲಾಗುವುದು' (ಅಪ್ಪಾವಿ. ೪೫).

ಪಾದೋದಕವನ್ನು ಸಿದ್ಧಪಡಿಸುವ ಹಾಗೂ ಸೇವಿಸುವ ಕ್ರಮವು ಶಾಸ್ತ್ರಬದ್ಧವಾದ ಕಟ್ಟುನಿಟ್ಟಿನ ಕಾರ್ಯಕ್ರಮ. ಅದನ್ನು ಅರಿತು ಆಚರಿಸಿದರೆ ಗುರುಲಿಂಗಜಂಗಮಸೇವೆಯು ಪೂರ್ಣಸಿದ್ಧಿಯುಂಟಾಗುತ್ತದೆ. ಇದನ್ನೇ ಬಸವಲಿಂಗ ಶರಣರು ಹೀಗೆಂದು ವಿವರಿಸಿದ್ದಾರೆ:

ಮಂತ್ರಮಯ ಚರಲಿಂಗದಡಿಗೆ ಭಕ್ತನು ಕರವ
ಸಂತಸದೊಳಿಟ್ಟು ಪತಿಭಕ್ತಿಯಿಂದುಪಚರಿಸಿ
ಮುಂತೆ ಪರಬ್ರಹ್ಮರಂಧ್ರದೊಳಿರ್ದ ಸತ್ಯೋದಕವ ಚರಣದಿಂದ ಪಡೆದು।
ಇಂತೊಗೆದ ಸುಜ್ಞಾನತೀರ್ಥಪುತ್ರನ ಶರಣ-

ಸಂತತಿಗಳಾಲಿಂಗಿಸುತ್ತೆತ್ತಿ ಮುದ್ದಾಡಿ
ಸಂತೈಸುತಾ ಪಾದತೀರ್ಥದಾಚರಣೆಯೊಳಗಿರ್ಪ ಸದ್‌ಭಕ್ತನಧಿಕಂ

(ಮೈಲಾರ. ೧-೧೦)

ಈ ಪವಿತ್ರಪ್ರಣ್ಯೋದಕದ ಸೇವನೆಯಿಂದ ಆಗುವ ಲಾಭ ಸಣ್ಣದಲ್ಲ. ಜಗತ್ತಿನ ಅನೇಕ ಪುಣ್ಯನದಿಗಳ ಸ್ನಾನ, ಸಪ್ತ ಸಾಗರಗಳ ಜಳಕದ ಫಲ, 'ಅಷ್ಟಷಷ್ಟಿಕೋಟಿ ತೀರ್ಥಯಾತ್ರೆಯ ಫಲವು, ಗುರುಲಿಂಗಜಂಗಮದ ಶ್ರೀಚರಣದಂಗುಷ್ಠ ದಿಂದೊಗೆವ ಜಲಬಿಂದು ಸಾಸಿರಭಾಗದಷ್ಟಕ್ಕೆ ಎಣೆಯಾಗದು.' ಅದಕ್ಕೇ ಬಸವಣ್ಣನವರು 'ಪಾದೋದಕಪ್ರಸಾದದಿಂದ ಭವಗೆಟ್ಟೆನು' (ಬಸವ. ೭೭೯) ಎಂದಿರುವುದು. ಚೆನ್ನಬಸವಣ್ಣನವರಂತೂ ಪಾದೋದಕಕ್ರಿಯೆ ಹಾಗೂ ಅದರ ಮಹತ್ವವನ್ನು ಕುರಿತು ಹತ್ತಾರು ವಚನಗಳಲ್ಲಿ ಶಾಸ್ತ್ರೀಯವಾಗಿ ನಿರೂಪಿಸಿದ್ದಾರೆ.

## ಪ್ರಸಾದ

ಪ್ರಸಾದವೇ ಪರಮಜ್ಞಾನ, ಪ್ರಸಾದವೇ ಪರಾಪರ
ಪ್ರಸಾದವೇ ಪರಬ್ರಹ್ಮ, ಪ್ರಸಾದವೇ ಪರಮಾನಂದ
ಪ್ರಸಾದವೇ ಗುರು, ಪ್ರಸಾದವೇ ಲಿಂಗ,
ಪ್ರಸಾದವೇ ಜಂಗಮ, ಪ್ರಸಾದವೇ ಪರಿಪೂರ್ಣ,
ಸೌರಾಷ್ಟ್ರಸೋಮೇಶ್ವರಲಿಂಗದ ಪ್ರಸನ್ನತೆಯೇ ಪ್ರಸಾದ,
ಇಂತಪ್ಪ ಪ್ರಸಾದವುಳ್ಳ ಮಹಾತ್ಮಂಗೆ ಆನು ನಮೋ ನಮೋ ಎನುತಿರ್ದೆನು

(ಆದವ. ೧೯೬)

ವೀರಶೈವರಲ್ಲಿ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ತತ್ತ್ವವನ್ನು ತಿಳಿದು ಆಚರಿಸಿ ಪಡೆಯುವ ಫಲವೇ ಪ್ರಸಾದ, ಪ್ರಸಾದಕ್ಕೆ ಅನುಗ್ರಹವೆಂದರ್ಥ. ಪ್ರಸಾದವೆಂದರೆ ಶಿವನ ಪ್ರಸನ್ನತೆ. ಗುರುಲಿಂಗಜಂಗಮರಿಗೆ ಅರ್ಪಿತವಾಗಿ ಬಂದುದು. ಭಕ್ತನು ತನ್ನ ಆಹಾರವನ್ನು ತನ್ನದು ಎಂದು ಭಾವಿಸದೆ ಭಗವಂತನದೆಂದು ಭಾವಿಸಿ ಗುರುಲಿಂಗಜಂಗಮ ರಿಗೆ ಅರ್ಪಿಸಿ, ಅನಂತರ ದಾಸೋಹಂಭಾವದಿಂದ ಉಪಭೋಗಿಸುವ ಆಹಾರವು ಪ್ರಸಾದವೆನಿಸುತ್ತದೆ. ಅದನ್ನೇ ಆದಯ್ಯ 'ಅನ್ನವೇ ಪ್ರಸಾದವಲ್ಲ, ಜಂಗಮಮುಖದಿಂದ ತೋರಿತ್ತು ಪ್ರಸಾದ' (ಆದವ. ೧೯೭) ಎಂದಿದ್ದಾರೆ. ದೇಹಕ್ಕೆ ಬರುವ ರೋಗವನ್ನು ಔಷಧಿ ಕಳೆದಂತೆ ಭವರೋಗವನ್ನು ಪ್ರಸಾದವು ನೀಗುತ್ತದೆ.

'ಪ್ರಸಾದ'ಕ್ಕೆ ಇನ್ನೊಂದು ವಿಶೇಷಾರ್ಥವಿದೆ. 'ಶಿವನೂ ಸೇರಿದಂತೆ ಜಗತ್ತೆಲ್ಲವೂ ಪ್ರಸಾದರೂಪ. ಜೀವ ಶಿವ ನಾಗಲು ಅವನಂತೆ ಪ್ರಸಾದರೂಪವಾಗಬೇಕು. ದೀಕ್ಷೆಯಿಂದ ಶುದ್ಧನಾಗಿ ಭೋಗಸಾಧನವಾದ ದೇಹ, ಲೋಕದ ಭೋಗವಸ್ತುಗಳು—ಇವೆಲ್ಲವನ್ನೂ ಜಂಗಮಕ್ಕರ್ಪಿಸಿ, ಅನಂತರ ಪ್ರಸಾದವಾಗಿ ಸೇವಿಸಿದರೆ ತಾನೂ ಪ್ರಸಾದರೂಪ ವಾಗುವನು' (ಅಷ್ಟಾವಿ. ೪೮). ಹೀಗಾಗಿ ಪ್ರಸಾದಕ್ಕೆ ಎರಡು ಅರ್ಥಗಳಿರುವುದು ಸ್ಪಷ್ಟವಾಗುತ್ತದೆ. ಒಂದು ಬಾಹ್ಯಾರ್ಥ: ಶಿವನಿಗೆ ಅರ್ಪಿತವಾಗಿ ಉಳಿದ ಪದಾರ್ಥ. ಇನ್ನೊಂದು ಅಂತರಾರ್ಥ: ಮನಸ್ಸಿನ ಪ್ರಸನ್ನತೆ, ಶಿವನ ಅನುಗ್ರಹ ಎಂಬುದು. ಬಾಹ್ಯಪ್ರಸಾದದಿಂದ ಮನಸ್ಸಿಗೆ ಪ್ರಸನ್ನತೆಯುಂಟಾಗುತ್ತದೆ. ಮನಸ್ಸಿನ ಪ್ರಸನ್ನತೆಯು ಶಿವನ ಅನುಗ್ರಹಕ್ಕೆ ಕಾರಣವಾಗುತ್ತದೆ (ಪ್ರಸಾದ. ೩೭೫).

ಅದಕ್ಕೇ ವೀರಶೈವನು ಬಾಹ್ಯವಸ್ತುಗಳನ್ನು ಕೇವಲ ಪದಾರ್ಥಗಳಾಗಿ ಸ್ವೀಕರಿಸದೆ, ಗುರುಲಿಂಗಜಂಗಮರಿಗೆ ಅರ್ಪಿಸುವುದರ ಮೂಲಕ ಪ್ರಸಾದವನ್ನಾಗಿ ಪರಿವರ್ತಿಸಿ ಸ್ವೀಕರಿಸುತ್ತಾನೆ. ಹೀಗೆ ಕ್ರಮೇಣ ಭಕ್ತನ ನಡೆ-ನುಡಿಗಳೆಲ್ಲವೂ ಪ್ರಸಾದರೂಪವಾಗಿ, ಎಲ್ಲ ಕ್ರಿಯೆಗಳಲ್ಲಿಯೂ ಶಿವನ ಪ್ರಸಾದವನ್ನೇ ಕಾಣುವ ದೈವಿಕದೃಷ್ಟಿ ಪ್ರಾಪ್ತವಾಗುತ್ತದೆ.

ಪ್ರಸಾದಗಳಲ್ಲಿ ಮೂರು ವಿಧ—ಶುದ್ಧ, ಸಿದ್ಧ, ಪ್ರಸಿದ್ಧ ಎಂದು. ಗುರುವಿನಿಂದ ಬಂದುದು ಶುದ್ಧಪ್ರಸಾದ, ಇದರಿಂದ ತನುಶುದ್ಧಿ; ಲಿಂಗದಿಂದ ಬಂದುದು ಸಿದ್ಧಪ್ರಸಾದ, ಇದರಿಂದ ಮನಶ್ಶುದ್ಧಿ; ಜಂಗಮದಿಂದ ಬಂದುದು ಪ್ರಸಿದ್ಧ ಪ್ರಸಾದ, ಇದರಿಂದ ಭಾವಶುದ್ಧಿ. ರೂಪು, ರುಚಿ, ತೃಪ್ತಿ ಎಂಬ ಪದಾರ್ಥಗಳ ಗುಣಗಳನ್ನನುಸರಿಸಿ ಇದನ್ನು ಇನ್ನೊಂದು ಬಗೆಯಾಗಿಯೂ ಹೇಳುವರು. 'ಎಲ್ಲ ಪದಾರ್ಥಗಳ ರೂಪಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಿದರೆ ಅದು ಶುದ್ಧಪ್ರಸಾದ: ರುಚಿಗಳನ್ನು ಪ್ರಾಣಲಿಂಗಕ್ಕೆ ಅರ್ಪಿಸಿದರೆ ಅದು ಸಿದ್ಧಪ್ರಸಾದ; ತೃಪ್ತಿಯನ್ನು ಭಾವಲಿಂಗಕ್ಕೆ ಅರ್ಪಿಸಿ ದರೆ ಪ್ರಸಿದ್ಧಪ್ರಸಾದವೆನಿಸುವುದು' (ಅಷ್ಟಾವ. ೧೦೮). ಇದನ್ನೇ ಚೆನ್ನಬಸವಣ್ಣನವರು 'ಶುದ್ಧವೆಂದಡೆ ಗುರುಮುಖ ದಿಂದ ಮಲತ್ರಯವ ಕಳೆದುಳಿದ ಶೇಷ, ಸಿದ್ಧವೆಂದಡೆ ಲಿಂಗದಿಂದ ಕರಣಮಥನಂಗಳ ಕಳೆದುಳಿದ ಶೇಷ, ಪ್ರಸಿದ್ಧ

ವೆಂದಡೆ ಜಂಗಮಮುಖದಿಂದ ಸರ್ವಚೈತನ್ಯಾತ್ಮಕ ತಾನೆಯಾಗಿ ಖಂಡಿತವಳಿದುಳಿದ ಶೇಷ' (ಚೆನ್ನವ. ೧೧೧) ಎಂದಿದ್ದಾರೆ.

ವೀರಶೈವರಲ್ಲಿ ಪ್ರಸಾದ ಸ್ವೀಕರಿಸುವ ಕ್ರಮದಲ್ಲಿ ಕೆಲವು ನಿರ್ದಿಷ್ಟ ನಿಯಮಗಳಿವೆ. ಉಂಡು ಉಳಿಸದೆ ಇರುವುದು, ಹೆಚ್ಚು ತಿನ್ನದೆ ಇರುವುದು, ಚೆಲ್ಲದೆ ಊಟ ಮಾಡುವುದು, ದ್ರುವಗುಂದದಂತೆ ಉಣ್ಣುವುದು, ಪ್ರಸಾದಸೇವನೆಯ ಕಾಲದಲ್ಲಿ ಲಿಂಗನಿರೀಕ್ಷಣೆ, ಮಂತ್ರಧ್ಯಾನ, ಸಾವಧಾನಚಿತ್ತವಿರಬೇಕು ಎಂಬುದು ; ಪ್ರಸಾದ ಸೇವಿಸಲು ನಿರ್ದಿಷ್ಟ ಸ್ಥಳಕಾಲಗಳು ಬೇಕು ಎಂಬುದು, ಇತ್ಯಾದಿ.

'ಅರಸರ ಮನೆಯ ಅರಸಿಯಾಗಿಪ್ಪುದಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯ' ಎನ್ನುತ್ತಾರೆ ಬಸವಣ್ಣನವರು. ಏಕೆಂದರೆ ಅಲ್ಲಿ 'ಲಿಂಗಕ್ಕೆ ಬೋನವಿಡುವ, ಒಕ್ಕುದನುಣ್ಣುವ' ಸೌಭಾಗ್ಯವಿರುತ್ತದೆ. ಅದಕ್ಕೇ ಅವರು 'ಪ್ರಸಾದಕ್ಕಲ್ಲದೆ ಮಾಡೆನೀ ತನುವನು. ಲಿಂಗಜಂಗಮದ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂಬುದೆನ್ನಯ ಭಾಷೆ' (ಬಸವ. ೭೨೭) ಎಂದಿರುವುದು. ಇದಕ್ಕೆ 'ಗುರುಜಂಗಮಪಾದೋದಕಪ್ರಸಾದವ ಭಕ್ತಿಯಿಂದ ಪಡೆದು ನಿಚ್ಚನಿಚ್ಚ ಸೇವಿಸಬಲ್ಲಡೆ, ಆ ಭಕ್ತನ ಕಾಯಕರಣಾದಿಗಳ ಸೋಂಕಲಮ್ಮದೆ ದುರಿತವು ದೂರಾಗಿಪ್ಪುದು' (ಚೆನ್ನವ. ೧೬೭) ಎಂದು ಚೆನ್ನಬಸವಣ್ಣನವರೂ ದನಿಗೂಡಿಸಿದ್ದಾರೆ.

* * *

ಢಕ್ಕೆಯ ಮಾರಯ್ಯನವರು ತಮ್ಮ ಕಾಯಕದಂತೆ ಢಕ್ಕೆಯನ್ನು ಬಾರಿಸುತ್ತ ಅಷ್ಟಾವರಣಗಳ ಮಹತ್ವವನ್ನು ನಿದರ್ಶನಪೂರ್ವಕ ಹೇಗೆ ನಿರೂಪಿಸುತ್ತಿದ್ದರೆಂಬುದನ್ನು ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಹೀಗೆ ನಿರೂಪಿಸಲಾಗಿದೆ : 'ಢಕ್ಕೆಯ ಮಾರಯ್ಯಗಳು ಭಕ್ತರಂಗಳದಲ್ಲಿ ಢಕ್ಕೆಯ ಬಾರಿಸಿ, ಮಾರಿಯಂ ಕುಣಿಸಿ ಉಡಿಯಲ್ಲಿ, ತಲೆಯಲ್ಲಿ ಬೇವಿನಸೊಪ್ಪಂ ಕಟ್ಟಿಕೊಂಡು ಮಾರಿಯಂ ಮುಂದಿಟ್ಟುಕೊಂಡು, ಆಚಾರವಂ ತೋರಿ ಸಾರುತ್ತಿಹರು :

'**ಗುರು**ಮಹತ್ವದಿಂದ ಗೂಗೆಗೆ ಶ್ವಪಚಗೆ ಮುಕ್ತಿಯಾಯಿತ್ತು; **ಲಿಂಗ**ಮಹತ್ವದಿಂದ ಕಾಗೆಗೆ ಕಳ್ಳಗೆ ಮುಕ್ತಿಯಾಯಿತ್ತು; **ಜಂಗಮ** ಮಹತ್ವದಿಂದ ವ್ಯಾಘ್ರಗೆ ಮತ್ಸ್ಯಗೆ ಮುಕ್ತಿಯಾಯಿತ್ತು; **ಪ್ರಸಾದ**ದಿಂದ ಕಪ್ಪೆಗೆ ಇರುವೆಗೆ ಮುಕ್ತಿಯಾಯಿತ್ತು; **ವಿಭೂತಿ**ಯಿಂದ ಮೂರ್ಖಗೆ ಕುಂಬಾರಂಗೆ ಮುಕ್ತಿಯಾಯಿತ್ತು; **ರುದ್ರಾಕ್ಷಿ**ಯಿಂದ ಅಗಸಗೆ ಶೂದ್ರನಿಗೆ ಮುಕ್ತಿಯಾಯಿತ್ತು. **ಪಂಚಾಕ್ಷರಿ**ಯಿಂದ ಅನಂತಪ್ರಾಣಿಗಳು ಮುಕ್ತಿವಡೆದವು—**ಅಷ್ಟಾವರಣ** ಜಡದೆ ನಂಬಿ'

ಎಂದು ಸಾರುತ್ತ, ಭಕ್ತರ ಮನೆಗೆ ಹೋಗಿ ಕಾಯಕವಂ ತಂದು ಜಂಗಮಕ್ಕೆ ನೀಡುತ್ತಿರಲು....(ಭೈರಸೂ. ೨೪೪).

ತತ್ತ್ವಗಳು ಎಷ್ಟು ಮಹತ್ವದವಿದ್ದರೂ ಆಚರಿಸುವವರು ನಂಬುಗೆಯನ್ನು, ವಿಶ್ವಾಸವನ್ನು ತಳೆಯದಿದ್ದರೆ ಅವು ನಿಷ್ಪ್ರಯೋಜಕ ; ನಿರರ್ಥಕ. ನಂಬುಗೆಯೊಂದಿದ್ದರೆ ಶ್ರದ್ಧಾಸಕ್ತಿಗಳು ತಾನಾಗಿಯೇ ಬರುತ್ತವೆ. ಅದಿಲ್ಲದೆ ಸಂಶಯ ತಳೆದರೆ ಕೇಡು ತಪ್ಪದು. ಭಕ್ತಿಯಿಲ್ಲದಿದ್ದರೆ ಗುರು ನರ, ಲಿಂಗ ಶಿಲೆ, ಜಂಗಮ ಜಡಮತಿ, ಪಾದೋದಕ ಜಡನೀರು, ಪ್ರಸಾದ ಕೂಳು, ರುದ್ರಾಕ್ಷಿ ಗಿಡದ ಕಾಯಿ, ಮಂತ್ರ ಬರಿಯ ಶಬ್ದ. 'ಶಂಕಿತಂಗೆ ಪ್ರಸಾದ ಸಿಂಗಿಕಾಳಕೂಟ ವಿಷ' (ಬಸವ. ೭೭೧) ಎಂಬ ಬಸವಣ್ಣನವರ ಎಚ್ಚರಿಕೆಯನ್ನು ನಾವು ನೆನಪು ಮಾಡಿಕೊಳ್ಳಬಹುದು. ಷಣ್ಮುಖಸ್ವಾಮಿಗಳು ಈ ಬಗೆಯ ಪಂಚಮಹಾಪಾತಕಗಳನ್ನು ಹೆಸರಿಸಿದ್ದಾರೆ:

ಗುರುವಿನಲ್ಲಿ ಗುಣವನರಸಿದಡೆ ಒಂದನೆ ಪಾತಕ
ಲಿಂಗದಲ್ಲಿ ಶಿಲೆಯನರಸಿದಡೆ ಎರಡನೆಯ ಪಾತಕ
ಜಂಗಮದಲ್ಲಿ ಕುಲವನರಸಿದಡೆ ಮೂರನೆಯ ಪಾತಕ
ಪಾದೋದಕದಲ್ಲಿ ಸೂತಕವನರಸಿದಡೆ ನಾಲ್ಕನೆಯ ಪಾತಕ
ಪ್ರಸಾದದಲ್ಲಿ ರುಚಿಯನರಸಿದಡೆ ಐದನೆಯ ಪಾತಕ
ಇಂತೀ ಪಂಚಮಹಾಪಾತಕರ ಎನಗೊಮ್ಮೆ ತೋರದಿರಯ್ಯ

(ಅಂಖಡೇ. ೭೫–೫೦)

ತತ್ತ್ವದಲ್ಲಿ ವಿಶ್ವಾಸವಿಟ್ಟು ನಿಷ್ಠೆಯಿಂದ ನಡೆಯುವವರಿಗೆ ಅಷ್ಟಾವರಣಗಳು ಲೌಕಿಕ ಹಾಗೂ ಪಾರಮಾರ್ಥಿಕ ಸುಖಸಾಧನೆಗೆ ನೆರವಾಗುತ್ತವೆ ಎಂಬ ಮಾತಿನಲ್ಲಿ ಸಂಶಯವಿಲ್ಲ.

## ಸಹಾಯಕ ಗ್ರಂಥಗಳು

**ಅಂಬಿವ** : ಅಂಬಿಗರಚೌಡಯ್ಯನ ವಚನಗಳು
**ಅಖಂಡೇ** : ಅಖಂಡೇಶ್ವರ ವಚನಗಳು
**ಅವಚಂ** : ಅಲ್ಲಮ ವಚನಚಂದ್ರಿಕೆ
**ಅಷ್ಟಾತ್ರಿ** : ಅಷ್ಟಾವರಣ, ತ್ರಿವಿಧಿ
**ಅಷ್ಟಾವ** : ಅಷ್ಟಾವರಣ ಜ.ಚ.ನಿ.
**ಅಷ್ಟಾವಿ** : ಅಷ್ಟಾವರಣ ವಿವೇಕ, ವೈ ನಾಗೇಶಶಾಸ್ತ್ರಿ
**ಆದವ** : ಆದಯ್ಯನ ವಚನಗಳು
**ಕೈವಲ್ಯ** : ಕೈವಲ್ಯಕಲ್ಪವಲ್ಲರಿ
**ಚೆನ್ನವ** : ಚೆನ್ನಬಸವೇಶ್ವರರ ವಚನಗಳು
**ಪ್ರಸಾದ** : ಪ್ರಸಾದ (ಸುತ್ತೂರು ಜಗದ್ಗುರುಗಳ ಸಂಭಾವನಾ ಗ್ರಂಥ)
**ಬಸವ** : ಬಸವಣ್ಣನವರ ವಚನಗಳು
**ಭೈರಸೂ** : ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ
**ಮಹಾದೇ** : ಮಹಾದೇವಿಯಕ್ಕನ ವಚನಗಳು
**ಮೈಲಾರ** : ಮೈಲಾರ ಬಸವಲಿಂಗ ಶರಣರ ಕೃತಿಗಳು
**ವಿಸಾಇ** : ವೀರಶೈವ ಸಾಹಿತ್ಯ ಮತ್ತು ಇತಿಹಾಸ, ಬಿ. ಶಿವಮೂರ್ತಿಶಾಸ್ತ್ರೀ
**ವೇದಾಂತ** : ವೇದಾಂತಗ್ರಂಥಾವಳಿ (ನಿಜಗುಣರ ಕೃತಿಗಳು)
**ವೈರಾಗ್ಯ** : ವೈರಾಗ್ಯದಲರು (ಬಾಲಲೀಲಾಮಹಂತಶಿವಯೋಗಿಗಳ ಸ್ಮಾರಕ ಗ್ರಂಥ)
**ಶತಕ** : ಶತಕತ್ರಯ
**ಶಿವಚಿಂ** : ಶಿವತತ್ತ್ವಚಿಂತಾಮಣಿ
**ಸಿದ್ಧವ** : ಸಿದ್ಧರಾಮೇಶ್ವರರ ವಚನಗಳು
**ಸಿದ್ಧಾಂತ** : ಸಿದ್ಧಾಂತಶಿಖಾಮಣಿ
**ಸಿದ್ಧೇಶ್ವ** : ಸಿದ್ಧೇಶ್ವರರ ವಚನಗಳು(ತೋಂಟದ ಸಿದ್ಧಲಿಂಗೇಶ್ವರರು)
**ಷಮಂತ್ರ** : ಷಡಕ್ಷರಮಂತ್ರಮಹಿಮೆ
**ಸರ್ವಜ್ಞ** : ಸರ್ವಜ್ಞ ವಚನಗಳು

---

ಅನುಭವ ಸಾಮಾನ್ಯಮನುಷ್ಯನಿಗೆ ನಿಲುಕದ ಮಾತು. ಇದು ಹೇಗೆ ಗೊತ್ತೆ? ಕರ್ಪೂರ ಉರಿಸಿದರೆ ಕೊನೆಗೆ ಏನೂ ಉಳಿಯುವುದಿಲ್ಲ; ಸೌದೆ ಉರಿಸಿದರೆ ಒಂದಿಷ್ಟು ಬೂದಿಯಾದರೂ ಉಳಿಯುತ್ತದೆ. ವಿಚಾರದ ಪರಮಾವಧಿಯನ್ನು ಮುಟ್ಟಿದನಂತರ ಸಮಾಧಿಯುಂಟಾಗುತ್ತದೆ. ಆಗ ನಾನು ನೀನು ಈ ಜಗತ್ತು ಇವುಗಳ ಸಮಾಚಾರವೇ ಇರದು.

ಶ್ರೀ ರಾಮಕೃಷ್ಣಪರಮಹಂಸರು

# ಪಂಚಾಚಾರಗಳ ಮಹತ್ವ

ಪ್ರೊ. ಸಿದ್ಧಣ್ಣ ಲಂಗೋಟಿ

ಇಂದಿನ ಆಧುನಿಕಯುಗದಲ್ಲಿ ಧರ್ಮ, ದೇವರು, ನೀತಿ, ತತ್ವಜ್ಞಾನ. ಭಕ್ತಿ, ಪೂಜೆ, ಮುಕ್ತಿ ಇತ್ಯಾದಿಗಳು ಅರ್ಥಹೀನ ವೆನಿಸತೊಡಗಿವೆ. ಇದಕ್ಕೆ ಕಾರಣ ಆಧುನಿಕ ಶಿಕ್ಷಣ, ಬೆಳೆಯುತ್ತಿರುವ ವೈಜ್ಞಾನಿಕದೃಷ್ಟಿ ಎಂದು ಅನೇಕರು ಹೇಳು ತ್ತಾರೆ. ಕೇವಲ ಇದಷ್ಟೇ ಅಲ್ಲ, ಧರ್ಮ-ದೇವರುಗಳನ್ನು ಕುರಿತಾದ ತಪ್ಪು ತಿಳಿವಳಿಕೆ, ಧರ್ಮದ ನೇತಾರರೆನಿಸಿ ಕೊಂಡಿರುವವರ ಮೂಢಾಚಾರ, ಅನೀತಿಯ ಬದುಕು, ಸಂಪ್ರದಾಯಗಳ ಕೋಟಲೆ ಇವೂ ಕೂಡ ಯುವ-ಜನಾಂಗ ವನ್ನು ನಾಸ್ತಿಕವಾದದ ಕಡೆಗೆ ಒಯ್ಯುತ್ತಿವೆ. ಧರ್ಮದ-ದೇವರ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯನ್ನು ಕಂಡು ಕಾರ್ಲ್‌ಮಾರ್ಕ್ಸ್ "ದೇವರು-ಧರ್ಮ ಇವು ಅಫೀಮು ಇದ್ದಂತೆ, ಮಾನವನ ಬುದ್ಧಿಯನ್ನು ಮತ್ತೇರಿಸಿ ಹಾಳು ಮಾಡುತ್ತವೆ" ಎಂಬ ನಿರ್ಣಯಕ್ಕೆ ಬಂದನೇನೋ ! ನೂರೆಂಟು ಗುಡಿ-ಗುಡಾರಗಳು, ಮತ-ಪಂಥಗಳು, ಆಚರಣೆಗಳು ಮಾನವನ ಬದುಕಿನಲ್ಲಿ ಶೋಷಣೆಯ ಕೇಂದ್ರಗಳಾಗಿರುವುದನ್ನೂ, ಪುರೋಹಿತ-ಪೂಜಾರಿಗಳು ಶೋಷಣೆಗೈಯುತ್ತಿರು ವುದನ್ನೂ ಯುವಜನತೆ ಕಾಣುತ್ತಿದೆ. ಆದ್ದರಿಂದ ಕೇವಲ ಮಡಿ-ಹುಡಿ-ನಾಮಗಳಲ್ಲಿಯೇ ಸಿಲುಕಿರುವ ಧರ್ಮ ಮಾನವ-ಪ್ರೀತಿಯನ್ನು ಮರೆತಾಗ, ಯುವಜನಾಂಗ ಅದನ್ನು ತಿರಸ್ಕರಿಸುತ್ತಿರುವುದು ಸಹಜವೇ ಆಗಿದೆ.

ಧರ್ಮದ ನಿಜವಾದ ಅರ್ಥ ತಿಳಿಯಬೇಕು. ಧರ್ಮ ವ್ಯಕ್ತಿ-ವ್ಯಕ್ತಿಗಳಲ್ಲಿ ಸೌಹಾರ್ದ-ಪ್ರೇಮಭಾವನೆಯನ್ನು ತರಬೇಕು. ಬಸವಣ್ಣನವರು ಬೋಧಿಸಿದ ಧರ್ಮ ಇವನಾರು-ಇವನಾರು ಎಂದು ಬೊಟ್ಟುಮಾಡಿ ಮಾನವ-ಮಾನವರನ್ನು ವಿಂಗಡಿಸಿ ತೋರಿದ ಧರ್ಮವಲ್ಲ, ಹಾರುವ ಮೊದಲು ಅಂತ್ಯಜ ಕಡೆಯಾಗಿ ಎಲ್ಲರನ್ನೂ ಇವ ನಮ್ಮವ-ಇವ ನಮ್ಮವನೆಂದು ಅಪ್ಪಿಕೊಂಡ ವಿಶ್ವಧರ್ಮ. ಇಲ್ಲಿ ಪ್ರೇಮವಿದೆ. ಸತ್ಕಾಮಯುಕ್ತಪ್ರೇಮವೇ ಇಲ್ಲಿ ಸದ್ಭಕ್ತಿ ಯಾಗಿದೆ. ಮಾನವನ ಅಂತರಂಗದಲ್ಲಿ ಸ್ಫುರಿಸುತ್ತಿರುವ ಚೈತನ್ಯವೇ ದೇವರಾಗಿದೆ. "ಧರ್ಮ ವ್ಯಕ್ತಿ-ಸಮಷ್ಟಿಯನ್ನು ಸುಂದರವಾಗಿ, ಸುವ್ಯವಸ್ಥಿತವಾಗಿ ಎತ್ತಿಹಿಡಿಯುವ ತತ್ವವಿಶೇಷವಾಗಿದೆ." ಇಂತಹ ಸುಂದರ-ಸರಳ ಧರ್ಮವನ್ನು ಬಸವಾದಿ ಶರಣರು ಜನ-ಮನದಲ್ಲಿ ಹರಡಿದರು.

ಲಿಂಗಾಯತಧರ್ಮದ ಕಡೆಗೆ ದೃಷ್ಟಿ ಹರಿಸಿದಾಗ ಮೂರು ಪ್ರಮುಖ ತತ್ವ-ವಿಶೇಷಗಳನ್ನು ಕಾಣುತ್ತೇವೆ : ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ. ಆದ್ದರಿಂದಲೇ "ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣ ವಾಗಿ, ಷಟ್‌ಸ್ಥಲವೇ ಆತ್ಮವಾಗಿಪ್ಪುದೇ ಲಿಂಗಾಯತ" ಎಂದು ಹೇಳಬಹುದು.

ಅಷ್ಟಾವರಣಗಳು ಧಾರ್ಮಿಕತತ್ವಗಳು, ಷಟ್‌ಸ್ಥಲಗಳು ಆತ್ಮವಿಕಾಸದ ಹಂತಗಳು, ಪಂಚಾಚಾರಗಳು ವ್ಯಕ್ತಿಯ ಸಾಮಾಜಿಕತೆ-ನೈತಿಕತೆಯನ್ನು ರೂಪಿಸುವ ತತ್ವಗಳಾಗಿವೆ. ದೇವನನ್ನು ಕಾಣಲು ವ್ಯಕ್ತಿ ಕಾಡು-ಮೇಡನ್ನಾಗಲೀ, ಗುಹೆ-ಗಹ್ವರಗಳನ್ನಾಗಲೀ ಹುಡುಕುತ್ತ ಅಲೆಯುತ್ತಾ ಹೋಗಬೇಕಾಗಿಲ್ಲ. ತಾನು ಬದುಕಿರುವ ಪರಿಸರದಲ್ಲಿ, ತನ್ನ ಗೃಹಸ್ಥ-ಜೀವನದಲ್ಲಿ ಸತಿ-ಪತಿ, ಬಂಧು-ಬಳಗ, ಜನಾಂಗದ ಮಧ್ಯದಲ್ಲಿಯೇ ಸರಳ-ಸುಂದರ ಬದುಕನ್ನು ಬದುಕಿ, ಜನಾಂಗದ ಸಮೂಹದಲ್ಲಿಯೇ ತನ್ನ ಅನುಭಾವದಲ್ಲಿಯೇ ತನ್ನ ಕಾಯಕದಲ್ಲಿಯೇ ದೇವರನ್ನು ಕಾಣಬೇಕಾಗಿದೆ. ದೇವರೆಂದರೆ ನಮ್ಮ ಪೌರಾಣಿಕರು ವರ್ಣಿಸಿದ ಕಣ್ಣು, ಕಿವಿ, ಮೂಗು, ನೂರೆಂಟು ಕೈ-ಕಾಲು, ಪ್ರಾಣಿ-ಪಕ್ಷಿಗಳ ರೂಪದವಲ್ಲ, ವಿಶ್ವದ ಜೀವರಾಶಿಗಳಲ್ಲಿರುವ ಚೈತನ್ಯ. ಈ ಎಲ್ಲ ಚೇತನರುಗಳಿಗೆ ಆಧಾರಭೂತವಾಗಿರುವ ಮೂಲ ಚೇತನ. (Ultimate Reality) ಅದುವೇ ದೇವರು.

ಇಂತಹ ದೇವರನ್ನು ಶಿವಶರಣರು ತಮ್ಮ ಜೀವನಾನುಭವದಲ್ಲಿ ಕಂಡುಕೊಂಡರು, ಉಸಿರಾಡಿದರು, ಬಾಳಿದರು. ನೀತಿಯು ಧರ್ಮ-ಸಮಾಜದ ನೆಲಗಟ್ಟು. 'ಅಹಂ ಬ್ರಹ್ಮಾಸ್ಮಿ' ಎಂದು ವೇದಾಂತವನ್ನು ಬಹಿರಂಗದಲ್ಲಿ ಸಾರಿ,

ಪರರಿಗೆ ಆಚಾರ ಹೇಳುತ್ತ ತಾವು ಅನಾಚಾರ ನಡೆಸುವ ದುರ್ಬುದ್ಧಿಯ ಸನ್ಯಾಸಿಗಳನ್ನು, ಧಾರ್ಮಿಕ ಪುರೋಹಿತಶಾಹಿಯ ಕಟ್ಟಳೆಯನ್ನು ಶರಣರು ದೂರೀಕರಿಸಿದರು. ಜನಸಾಮಾನ್ಯರಿಗೆ ಆದರ್ಶವಾದ, ಸಹಜವಾದ ಗೃಹಸ್ಥ ಜೀವನವನ್ನು ಬದುಕಲು ತೋರಿದರು. ಧರ್ಮಪಿತ ಬಸವಣ್ಣನವರು ಹೇಳುವಂತೆ—

ಹುಳಿವಿಡಿದು ಘೃತವ ಕಾಣ್ಬಂತೆ
ಅಕ್ಷರವಿಡಿದು ವಿದ್ಯವನರಿವಂತೆ
ಅನ್ನವ ಭೋಗಿಸಿ ಚೈತನ್ಯವ ಕೊಂಬಂತೆ
ಕೂಡಲಸಂಗನ ಶರಣರು
ಸತಿವಿಡಿದು ನಿರ್ವಾಣಸತಿಯ ಕಾಣ್ಬವರು ಕೇಳಾ ಪ್ರಭುವೆ (ಬ.ಸ.ವ. ೧೧೫೮)

ಸತಿಪತಿಗಳೊಂದಾಗಿ, ಸಾತ್ವಿಕ ಜೀವನ ಬದುಕಿದ ನೀತಿಯ ಸಾರವೇ ಪಂಚಾಚಾರ. ಈ ಪಂಚಾಚಾರಗಳು ಇಡೀ ಮನುಕುಲವನ್ನು ವಿಶ್ವಧರ್ಮದೆಡೆಗೆ ಮುನ್ನಡೆಸುವುವು. ಷಟ್‌ಸ್ಥಲಚಕ್ರವರ್ತಿ ಚನ್ನಬಸವಣ್ಣನವರು ತಮ್ಮದೊಂದು ವಚನದಲ್ಲಿ ಬಹುಮಾರ್ಮಿಕವಾಗಿ ಈ ಐದೂ ಆಚಾರಗಳನ್ನು ಕುರಿತು ವಿವರಿಸಿದ್ದಾರೆ—

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ—
ಲಿಂಗವನಲ್ಲದೆ ಅನ್ಯವನರಿಯದಿಹುದೇ ಲಿಂಗಾಚಾರ
ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗಜಂಗಮಕ್ಕೆ ನೀಡಿ
ಸತ್ಯಶುದ್ಧನಾಗಿಹುದೇ ಸದಾಚಾರ
ಶಿವಭಕ್ತರಲ್ಲಿ ಕುಲಗೋತ್ರಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೇ ಶಿವಾಚಾರ
ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ
ಭಯ-ಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯಾ
ಪ್ರಭುವೇ ಕೂಡಲಚನ್ನಸಂಗಮದೇವಾ. (ಚ.ಬ.ವ. ೧೧೯೦)

ಈ ಪಂಚಾಚಾರಗಳು ಬಸವಾದಿ ಶರಣರ ಬಾಳಿನಲ್ಲಿ ಹಾಸುಹೊಕ್ಕಾಗಿದ್ದವು. ಅವು ಶರಣರ ಪ್ರಾಣವಾಗಿದ್ದವು. ಸಮತಾವಾದಸಮಾಜದ ಅಡಿಪಾಯವಾಗಿದ್ದವು.

**೧. ಲಿಂಗಾಚಾರ:** ವಿಶ್ವವ್ಯಾಪಿಯಾದ, ಜಗದಗಲ-ಮುಗಿಲಗಲ-ಮಿಗೆಯಗಲ-ನಿಮ್ಮಗಲವಾದ ವಿಶ್ವಚೈತನ್ಯವನ್ನು ಗೋಲಾಕಾರದಲ್ಲಿ ಇಷ್ಟಲಿಂಗರೂಪದಲ್ಲಿ ಪೂಜಿಸುವುದೇ ಲಿಂಗಾಚಾರ. ನೂರಾರು-ಸಾವಿರಾರು ದೇವಾನುದೇವತೆಗಳ ಪೂಜೆಯನ್ನು ಕಲ್ಪಿಸಿಕೊಂಡು ನನ್ನ ದೇವ ಶ್ರೇಷ್ಠ ನಿನ್ನ ದೇವ ಕನಿಷ್ಠವೆಂದು ವಾದ ಮಾಡುತ್ತ ಜಗಳ-ಬಡಿದಾಟ-ಅಸೂಯೆ-ಮಾತ್ಸರ್ಯದಲ್ಲಿದ್ದ ಮನುಕುಲಕ್ಕೆ, ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ತೋರಿ ನಿಮಗಿಷ್ಟಬಂದ ಹೆಸರಿನಲ್ಲಿ ಕರೆಯಿರಿ, ದೇವನೊಬ್ಬ ನಾಮ ಹಲವೆಂದು ಸಾರಿ ಏಕದೇವೋಪಾಸನೆಯನ್ನು ಶರಣರು ಉಪದೇಶಿಸಿದರು. ಸತಿಪತಿಗಳೀರ್ವರೂ ಏಕಮನಭಾವದಿಂದ ಒಂದನ್ನೇ (ಇಷ್ಟಲಿಂಗ) ಪೂಜಿಸಬೇಕು. ಇಲ್ಲದಿದ್ದರೆ ಗಂಡ ಶಿವಲಿಂಗದೇವರ ಭಕ್ತ—ಹೆಂಡತಿ ಮಾರಿಮಸಣಿಯ ಭಕ್ತೆಯಾಗಿಬಿಟ್ಟರೆ, ಒಬ್ಬರು ಪಾದೋದಕಪ್ರಸಾದ ಮತ್ತೊಬ್ಬರು ಸುರೆ-ಮಾಂಸ ಸೇವಕರಾದರೆ, ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತಾಗುತ್ತದೆಂದು ಎಚ್ಚರಿಸಿದರು. (ಬ.ವ. ೧೦೪) ದೇವರ ಪೂಜೆಯನ್ನು ಧನ-ಕನಕ ಕೊಟ್ಟು ಪೂಜಾರಿ-ಪುರೋಹಿತರ ಮುಖಾಂತರ ಮಾಡಿಸುವ ರೀತಿಯನ್ನು ಖಂಡಿಸಿ, ತಾನುಂಬ ಊಟವನು ತನ್ನ ರತಿಸುಖವನು ತಾನೇ ಮಾಡುವಂತೆ ತನ್ನ (ಇಷ್ಟಲಿಂಗ) ದೇವರಪೂಜೆ ತಾನೇ ಮಾಡಬೇಕು. ಶೈವಸಂಸ್ಕೃತಿಯ ಸಪ್ತಶೈವಗಳಲ್ಲಿರದ "ಸತಿ-ಪತಿ"ಭಾವದ ಉಪಾಸನೆಯನ್ನು ಜಗತ್ತಿಗೆ ಮೊಟ್ಟಮೊದಲಿಗೆ ಸಾರಿದವರು ಬಸವಾದಿ ಶರಣರು.

**೨. ಸದಾಚಾರ:** ಸಜ್ಜನ ಶುದ್ಧ ಕಾಯಕದಲ್ಲಿ ತಂದು ಜೀವನ ನಡೆಸಬೇಕು. ಇದು ಸದಾಚಾರ. **ಕಾಯಕ-ದಾಸೋಹ** ಈ ಎರಡು ಪ್ರಮುಖ ತತ್ವಗಳು ಬಸವಾದಿ ಶರಣರ ಕೊಡುಗೆಗಳು. ಈ ಎರಡೂ ತತ್ವಗಳು ವಿಶಿಷ್ಟವಾದ ಸಿದ್ಧಾಂತವನ್ನೊಳಗೊಂಡಿವೆ. ೧೯–೨೦ನೇ ಶತಮಾನದಲ್ಲಿ ಆಚರಣೆಯಲ್ಲಿ ಬಂದಿರುವ ಸಮತಾವಾದದ

(ಕಮ್ಯುನಿಜಂ) ತತ್ವಗಳನ್ನು ಬಸವಾದಿ ಶರಣರು ಬಹುಮಾರ್ಮಿಕವಾಗಿ ೧೨ನೇ ಶತಮಾನದಲ್ಲಿಯೇ ಸದಾಚಾರದ ಪ್ರಕ್ರಿಯೆಯಲ್ಲಿ ಬಳಕೆಗೆ ತಂದರೆನ್ನಬಹುದು. ಗುರು-ಜಂಗಮ-ಭಕ್ತ ಎಂಬ ಭೇದವಿಲ್ಲದೇ ಎಲ್ಲರೂ ಕಾಯಕ ಮಾಡಬೇಕು. ಕಾಯಕವೇ ಕೈಲಾಸವಾಗಿದೆ. "ಪೂಜೆ ತಪ್ಪಿದರೆ, ವ್ರತ ತಪ್ಪಿದರೆ ಸೈರಿಸಬಹುದು, ಕಾಯಕ ತಪ್ಪಿದರೆ ಸೈರಿಸಲಾಗದು." ಪ್ರತಿಯೊಬ್ಬನೂ ಕಾಯಕ ಮಾಡಬೇಕು. ಅನ್ಯಾಯದಿಂದ ಬಂದ ಸಹಸ್ರ ಹೊನ್ನಿಗಿಂತ ಸತ್ಯ ಶುದ್ಧ ಕಾಯಕದಿಂದ ಬಂದ ಕಾರೆಯು ಸೊಪ್ಪಾದರೂ ಲಿಂಗಕ್ಕೆ ಅರ್ಪಿತವಾಗುತ್ತದೆ. ಹೀಗೆ ಕಾಯಕದಿಂದ ಬಂದ ಧನ ಒಂದೆಡೆ ಶೇಖರವಾಗದೇ ವ್ಯಕ್ತಿ-ಸಮಾಜ-ರಾಷ್ಟ್ರದಲ್ಲಿ ಸರಿಯಾಗಿ ವಿತರಣೆಯಾಗಬೇಕು, ಅದೇ ದಾಸೋಹ. ಕಮ್ಯುನಿಜಂನ ಮೂಲತತ್ವಗಳಾದ production of wealth ಹಾಗೂ Distribution of wealthಅನ್ನು (ಹಣದ ಗಳಿಕೆ, ಹಣದ ಬಳಕೆ) ಈ ಎರಡು ತತ್ವಗಳನ್ನೂ ಬಸವಣ್ಣನವರು ಕಾಯಕ-ದಾಸೋಹಗಳಲ್ಲಿ ಅಳವಡಿಸಿದರು. ಪ್ರತಿಯೊಬ್ಬ ವ್ಯಕ್ತಿ ದುಡಿದಾಗ ಪರಾವಲಂಬನೆ ತಪ್ಪಿ, ಸ್ವಾವಲಂಬನೆ ಸಾಧ್ಯವಾಗುವುದು. ನೂರಾರು ಕಾಯಕಗಳನ್ನು ನಿರ್ಮಿಸಿ, ರಾಷ್ಟ್ರದಲ್ಲಿಯ ನಿರುದ್ಯೋಗ ತೊಡೆದರು. ನಿರುದ್ಯೋಗಿ ಆಲಸಿ ಸೋಮಾರಿ ಜನಾಂಗ ಅನೀತಿಯಿಂದ ಕೂಡಿರುತ್ತದೆ ಎಂಬುದನ್ನು ಮನಗಂಡ ಬಸವಣ್ಣನವರು ಕಾಯಕಕ್ಕೆ ಮಹತ್ವದ ಸ್ಥಾನವಿತ್ತರು.

**೩. ಶಿವಾಚಾರ:** ಶಿವಭಕ್ತರಲ್ಲಿ ಜಾತಿ-ಕುಲ-ಗೋತ್ರವನ್ನರಸದೇ ವರ್ಣಾಶ್ರಮ ಹುಡುಕದೇ ಅವರೊಕ್ಕುದ ಕೊಂಬುದೇ ಶಿವಾಚಾರ. ಇಂದು ಅನೇಕರು ಬಸವಾದಿ ಶರಣರ ಮೇಲೆ ಉದ್ದುದ್ದ ಭಾಷಣ-ಉಪನ್ಯಾಸ ನೀಡುವರು. ಆದರೆ ಕೊಡು-ತಕ್ಕೊಳ್ಳುವ ವ್ಯವಹಾರ ಬಂದಾಗ ಪಂಗಡ-ಜಾತಿಯನ್ನರಸುವರು. ಇದು ತಪ್ಪಬೇಕು. ಬಸವಧರ್ಮ ಧೀರರಿಗೆ ಇದೆಯೇ ವಿನಹ ಹೇಡಿಗಳಿಗಿಲ್ಲ. "ಉಂಬಲ್ಲಿ-ಉಡುವಲ್ಲಿ ಕುಲವನರಸುವರು ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು ಅವರೆಂತು ಭಕ್ತರೆಂಬೆ ?" ಎನ್ನುತ್ತಾರೆ ಅಣ್ಣನವರು. ಜಾತಿಯ ಭೂತ, ಅಸ್ಪೃಶ್ಯತೆಯ ಕಲಂಕ ದೂರಾಗಬೇಕು. ಇದು ನಮ್ಮ ಆಚರಣೆಯಿಂದ ದೂರಾಗದಿರುವ ಕಾರಣವೇ ವಿಶ್ವಧರ್ಮವಾಗಬೇಕಿದ್ದ ಬಸವಧರ್ಮ ಈ ಸ್ಥಿತಿಗಿಳಿದಿದೆ. ಜಾತಿ-ಕುಲ-ವರ್ಣಗಳ ಕಟ್ಟಳೆಯನ್ನು ಕಿತ್ತೊಗೆದು ವಿಶ್ವಧರ್ಮದತ್ತ ಮುಂದುವರೆಯಬೇಕು. "ಆವ ಕುಲವಾದರೇನು ? ಶಿವಲಿಂಗವಿದ್ದವನೇ ಕುಲಜನು, ಕುಲವನರಸುವರೇ ಶರಣರಲ್ಲಿ ಜಾತಿಸಂಕರವಾದ ಬಳಿಕ ? ಒಕ್ಕುದ ಕೊಂಬುವೆನವರಲ್ಲಿ ಕೂಸ ಕೊಡುವೆ, ಕೂಡಲಸಂಗಮದೇವಾ ನಂಬುವೆ ನಿಮ್ಮ ಶರಣರನು" (ಬ.ವ. ೭೧೭). ಇಂತಹ ಆತ್ಮವಿಶ್ವಾಸ ಬಂದರೆ, ಈ ಶಿವಾಚಾರತತ್ವ ಕಾರ್ಯರೂಪಕ್ಕೆ ಇಳಿದರೆ, ಭಾರತದಲ್ಲಿ ಜಾತಿಯ ಭೂತ ಹೇಳಹೆಸರಿಲ್ಲದಂತೆ ಪರಾರಿಯಾಗಬಹುದಲ್ಲವೆ ?

**೪. ಗಣಾಚಾರ:** ಪ್ರತಿಯೊಬ್ಬ ಮಾನವನೂ ಈ ಸಮಾಜದಲ್ಲಿ ಬದುಕಬೇಕಾದರೆ ಕೆಲವೊಂದು ವೈಯಕ್ತಿಕ ಹಾಗೂ ಸಾಮಾಜಿಕ ಅನಿಷ್ಟಗಳನ್ನು (Evils) ಎದುರಿಸಬೇಕಾಗುತ್ತದೆ. ಸಮಾಜದಲ್ಲಿ ಜಾತೀಯತೆ ಬಡವ-ಬಲ್ಲಿದರೆಂಬ ಅಸಮಾನತೆ, ದೇವರು-ಧರ್ಮಗಳ ಹೆಸರಿನಲ್ಲಿ ನಡೆಯುವ ಶೋಷಣೆ ಇತ್ಯಾದಿಗಳನ್ನು ಎದುರಿಸಿ, ಗೆದ್ದು ಸಮಾಜ ಜೀವನದ ನೆಮ್ಮದಿಗೆ ಕಾರಣವಾಗಬೇಕು. ಆದ್ದರಿಂದ ಇಂತಹ ಧೀರಪ್ರವೃತ್ತಿಯ ಹೋರಾಟಮಯ ಬದುಕಿಗೆ ಗಣಾಚಾರವೇ ಬೇಕು.

ಗಣಾಚಾರದ ಹೆಸರಿನಲ್ಲಿ ಕ್ರೌರ್ಯ-ದೌರ್ಜನ್ಯಗಳು, ಅನಾಚಾರ-ಅತ್ಯಾಚಾರಗಳು ನಡೆಯಬಾರದು. ವಿನಯವಿಲ್ಲದ ವೀರತನ ಕ್ರೂರತನವಾದರೆ, ವೀರತನವಿಲ್ಲದ ವಿನಯ ಹೇಡಿತನವಾಗುತ್ತದೆ. ಸದ್‌ವಿನಯ-ವೀರತನಗಳೆರಡೂ ವ್ಯಕ್ತಿಜೀವನದಲ್ಲಿ ಹಾಸುಹೊಕ್ಕಾಗಿರಬೇಕು. ಅದನ್ನೇ ಬಸವಣ್ಣನವರು "ಎಡದ ಕೈಯಲಿ ಹಾಲುಬಟ್ಟಲು, ಬಲದ ಕೈಯಲಿ ಓಜುಗಟ್ಟಿಗೆ" ಎನ್ನುವರು. ಹಾಲುಬಟ್ಟಲು ವಿನಯ-ಪ್ರೇಮದ ಸಂಕೇತ, ಓಜುಗಟ್ಟಿಗೆ ಧೀರತ್ವ-ಶೌರ್ಯದ ಪ್ರತೀಕ.

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ
ಕೇಳು ಕೂಡಲಸಂಗಮದೇವಾ
ಮರಣವೇ ಮಹಾನವಮಿ (ಬ.ಷ.ವ-೬೯೮)

ಹೆಣ್ಣು-ಹೊನ್ನು-ಮಣ್ಣುಗಳ ದುರಾಸೆಗಾಗಿ ಹೋರಾಡದೇ ತತ್ವನಿಷ್ಠ ಬದುಕಿಗಾಗಿ ಜೀವನ ಸವೆಸುವವನು ಗಣಾಚಾರಿ. ತಾನೂ ಪರಿಶುದ್ಧನಾಗಿ, ತನ್ನ ನೀತಿಯನ್ನೂ ಅಂಗಕ್ಕಳವಡಿಸಿಕೊಂಡು ಸಮಾಜದಲ್ಲಿ ಆದರ್ಶವಾಗಿ ಬಾಳುವವನು.

**೫. ಭೃತ್ಯಾಚಾರ:** ಭೃತ್ಯಾಚಾರ ಶರಣಧರ್ಮದ ಜೀವಾಳವೆಂದರೂ ಅಡ್ಡಿಯಿಲ್ಲ. ವ್ಯಕ್ತಿ ಸಮಾಜ ರಾಷ್ಟ್ರಗಳಲ್ಲಿ ಬದುಕುವಾಗ, ಗರ್ವ-ಅಹಂಕಾರ-ಮದಗಳಿಂದ ಬದುಕದೇ ಸದ್ಗುಣ-ಸದ್‌ವಿನಯ-ಸದ್ವರ್ತನೆಯಿಂದ ಬದುಕಬೇಕು. ಪ್ರತಿಯೊಬ್ಬನೂ "ನನಗಿಂತ ರಾಷ್ಟ್ರ ದೊಡ್ಡದು, ನನಗಿಂತ ಸಮಾಜ ದೊಡ್ಡದು" ಎಂದು ಭಾವಿಸಿ, ರಾಷ್ಟ್ರ-ಸಮಾಜ ತನಗೆ ಏನು ಮಾಡಿದೆ ಎಂದು ಕೇಳದೆ, ಸಮಾಜ—ರಾಷ್ಟ್ರಕ್ಕೆ ತಾನೇನು ಸೇವೆ ಮಾಡಿರುವೆನೆಂದು ವಿಚಾರಿಸಿಕೊಳ್ಳಬೇಕು. ಆದ್ದರಿಂದಲೇ ಬಸವಪ್ರಭು ಹೇಳುತ್ತಾರೆ:

> ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ
> ಮಾವಿನಕಾಯಿಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ
> ನೆಲ್ಲ ಗಿಡದೊಳಗೊಂದು ಹುಲ್ಲುಗಿಡ ನಾನಯ್ಯ

ಇಂತಹ ಸದ್‌ವಿನಯದ ಸಾಕಾರಮೂರ್ತಿಯಾಗಿದ್ದರೆಂದೇ ಬಸವಮಹಾನುಭಾವರು ಕಲ್ಯಾಣರಾಜ್ಯ ನಿರ್ಮಿಸಿದರು. ಅವರ ಕಲ್ಯಾಣರಾಜ್ಯದಲ್ಲಿ "ನೀಡುವವರುಂಟು—ಬೇಡುವವರಿಲ್ಲ."

ಈ ತೆರನಾಗಿ ಪಂಚಾಚಾರಗಳಲ್ಲಿ ವ್ಯಕ್ತಿಯ ಜೀವನಾಭ್ಯುದಯಕ್ಕೆ ಬೇಕಾದ ಎಲ್ಲಾ ನೀತಿ-ತತ್ವಗಳನ್ನು ಅಳವಡಿಸಿ ಮನುಕುಲದ ಸರ್ವಾಂಗೀಣ ಪ್ರಗತಿ ಸಾಧಿಸಿದವರು ಬಸವಾದಿ ಶರಣರು.

## ಗ್ರಂಥಋಣ

೧. ಬಸವಣ್ಣನವರ ವಚನಗಳು, ಕ.ವಿ.ವಿ. ಪ್ರಕಟನೆ
೨. ಚನ್ನಬಸವಣ್ಣನವರ ವಚನಗಳು, ,,
೩. ಡಾ. ಹೆಚ್. ತಿಪ್ಪೇರುದ್ರಸ್ವಾಮಿ: ವಚನಗಳಲ್ಲಿ ವೀರಶೈವಧರ್ಮ
೪. ಪ್ರೊ. ಸಿದ್ದಣ್ಣ. ಲಂಗೋಟಿ: ಲಿಂಗಾಯತಧರ್ಮದ ಸಮಾಜತತ್ವಜ್ಞಾನ
೫. ಶ್ರೀ. ಸಿದ್ಧಯ್ಯ ಪುರಾಣಿಕರು: ಬಸವಣ್ಣನವರ ಜೀವನ-ಸಾಧನೆ
೬. ಶ್ರೀ. ಹರ್ಡೇಕರ ಮಂಜಪ್ಪನವರು: ಕಾಯಕ
೭. ಜ. ಮಾತೆ ಮಹಾದೇವಿ: ಬಸವತತ್ವದರ್ಶನ

---

> ದುರ್ಜನಸ್ಯ ಚ ಸರ್ಪಸ್ಯ ವರಂ ಸರ್ಪೋ ನ ದುರ್ಜನಃ ।
> ಸರ್ಪೋ ದಶತಿ ಕಾಲೇ ತು ದುರ್ಜನಸ್ತು ಪದೇಪದೇ ॥
>
> (ಸಮಯೋಚಿತಪದ್ಯರತ್ನಮಾಲಿಕಾ)

# ವೀರಶೈವರ ದೃಷ್ಟಿಯಲ್ಲಿ ಭಕ್ತಿ

ಡಾ. ಬಿ. ಸಿ. ಜವಳಿ

೧

'ಭಕ್ತಿ' ಎಂಬ ಪದವು ಸಂಸ್ಕೃತದ ಪದವಿದ್ದು ಕನ್ನಡದಲ್ಲಿ ಸ್ವೀಕೃತವಾಗಿದೆ. ಸಂಸ್ಕೃತದ ನಿಘಂಟುವಿನಲ್ಲಿ ಅದಕ್ಕೆ ಈ ಕೆಳಗಿನ ಅರ್ಥಗಳಿವೆ :

ಭಕ್ತಿಃ =

1. Separation, partition, division
2. A division, portion, share
3. Devotion, attachment, loyalty, faithfulness
4. Reverence, service, worship, homage
5. Texture, arrangement
6. Decoration, ornament, embellishment
7. An attribute,[1]

ಡಾ. ಎಫ್. ಕಿಟೆಲ್ಲರು 'ಭಕ್ತಿ' ಎಂಬ ಪದಕ್ಕೆ ಈ ಕೆಳಗಿನ ಅರ್ಥಗಳನ್ನು ಒದಗಿಸಿದ್ದಾರೆ :

ಭಕ್ತಿ = ಬಕುತಿ, ಭಕುತಿ

1. Allotment, Partition, division
   Separation, separating into,
   Division, share, the being a part of
   belonging to
2. Devotion, devotedness, attachment
   Loyalty, loving faith,
   Love, affection, fondness for,
   Reverence, homage, worship

ಕಿಟೆಲ್ ಅವರು "ಭಕ್ತಿತ್ರಯ" ಎಂಬುದಕ್ಕೆ Devation to Guru, Linga and Jangama ಎಂಬ ಅರ್ಥಗಳನ್ನು ಕೊಟ್ಟಿದ್ದಾರೆ.[2]

ಡಾ. ಫ. ಗು. ಹಳಕಟ್ಟಿಯವರು 'ಶಿವಾನುಭವ ಶಬ್ದಕೋಶ'ದಲ್ಲಿ 'ಭಕ್ತಿ' ಎಂಬ ಪದವನ್ನು ಇಂತು ವಿವರಿಸಿದ್ದಾರೆ :

> ಶಕ್ತಿಯು ಸರಿಯಾದ ಮಾರ್ಗದಿಂದ ಪ್ರವಹಿಸಿದಲ್ಲಿ 'ಭಕ್ತಿ' ಎಂದು ಹೇಳಲ್ಪಡುತ್ತದೆ. ಏಕೆಂದರೆ ಈ ಭಕ್ತಿಯಲ್ಲಿಯೂ ಶಕ್ತಿ ಇದೆ. ಷಟ್‌ಸ್ಥಲಗಳ ಪ್ರಕಾರ ಭಕ್ತಿಯು ಆರು ವಿಧವಾಗಿರುತ್ತದೆ. ಅವು ಯಾವುವೆಂದರೆ : (ಅ) ಶ್ರದ್ಧಾಭಕ್ತಿ, (ಆ) ನಿಷ್ಠಾಭಕ್ತಿ, (ಇ) ಅವಧಾನಭಕ್ತಿ, (ಈ) ಅನುಭಾವಭಕ್ತಿ, (ಉ) ಸುಜ್ಞಾನಭಕ್ತಿ, (ಊ) ಸಮರಸಭಕ್ತಿ. ವಚನಕಾರರು ಭಕ್ತಿಗೆ ಬಹು ವ್ಯಾಪಕಾರ್ಥವನ್ನು ಕೊಟ್ಟಿದ್ದಾರೆ. ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗ ಎಂದು ಹಿಂದೂಧರ್ಮಶಾಸ್ತ್ರಕಾರರು ಹೇಳು

---

[1] ವಿ. ಎಸ್. ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ನಿಘಂಟು, ಪುಟ ೩೯೭, (೧೯೬೩)

[2] ಕನ್ನಡ-ಇಂಗ್ಲಿಷ್ ನಿಘಂಟು, ಪುಟ ೧೧೬೧ (೧೮೯೪)

ವುದುಂಟು. ಆದರೆ ಅವರು ಹೇಳುವ ಈ ಭಕ್ತಿಮಾರ್ಗವು ವಚನಕಾರರ ಪ್ರಕಾರ ಶ್ರದ್ಧಾಭಕ್ತಿ ಮತ್ತು ನಿಷ್ಠಾಭಕ್ತಿ ಇವುಗಳಲ್ಲಿ ಮಾತ್ರ ಬರುತ್ತದೆ.
ವಚನಕಾರರು ಈ ಪ್ರಕಾರ ಭಕ್ತಿಗೆ ವ್ಯಾಪಕಾರ್ಥ ಕೊಟ್ಟಿದ್ದಾರೆ. ಸರಿಯಾದ ಅಂದರೆ ಒಳ್ಳೆಯ ರೀತಿಯಿಂದ ನಡೆಯಿಸಿಕೊಂಡು ಹೋಗುವ ಯಾವ ಮಾರ್ಗವಾದರೂ ಕೂಡ ಭಕ್ತಿಯೆಂದು ಭಾವಿಸಿ ಅವರು ವಿವೇಚಿಸುತ್ತಾರೆ. ಜ್ಞಾನವು ಸರಿಯಾದ ಮಾರ್ಗದಿಂದ ಪ್ರವಹಿಸುತ್ತ ಪರಮಾತ್ಮನೆಡೆಗೆ ಮನುಷ್ಯನನ್ನು ಒಯ್ದಿದ್ದಾದರೆ ಅದು ಕೂಡ "ಸುಜ್ಞಾನಭಕ್ತಿ" ಎಂದು ವಚನಕಾರರು ತಮ್ಮ ಷಟ್‌ಸ್ಥಲವಿವೇಚನೆಯಲ್ಲಿ ಹೇಳುತ್ತಾರೆ[1]."

ಮಗ್ಗೆಯ ಮಾಯಿದೇವರು "ಶಿವಾನುಭವಸೂತ್ರ"ದಲ್ಲಿ ಹೀಗೆ ಹೇಳುತ್ತಾರೆ:

"ಸ್ಥಲವೇ ಚಿನ್ಮಾತ್ರವು. ಲಿಂಗವೇ ಶಿವನು; ಅಂಗವೇ ಆತ್ಮನು. ಶಿವನು ತನ್ನ ಪರಮಾತ್ಮಭಾವಕ್ಕೆ ಚ್ಯುತಿ ಇಲ್ಲದಿರುವನು – ಎಂದರೆ ಉಪಾಸಕನೂ (ಅಂಗನು) ಶಿವಸ್ವರೂಪನಲ್ಲದೆ ಅನ್ಯನಲ್ಲ; ಸ್ಥಲವು ಎರಡಾದಂತೆ ಸ್ಥಲಗತವಾದ ಶಕ್ತಿಯೂ ಎರಡು ತೆರನಾದುದು; ಆ ಶಕ್ತಿಯು ಅಘಟಿತಘಟನಾಸಾಮರ್ಥ್ಯವುಳ್ಳುದುದರಿಂದ ಸಮಾನರಹಿತವೆಂದೂ, ಶಿವನೊಡನೆ ತಾದಾತ್ಮ್ಯಸಂಬಂಧದಿಂದಿರುವುದರಿಂದ ಶಿವನ ಸಹಧರ್ಮಿಣಿಯೆಂದೂ ಹೇಳಲ್ಪಡುವುದು. ಮತ್ತು ಆ ಶಕ್ತಿಯು ಸರ್ವಸಾಕ್ಷಿಣಿಯೂ, ಸತ್ಯಸಂಪೂರ್ಣೆಯೂ, ವಿಕಲ್ಪರಹಿತೆಯೂ, ಮಹೇಶ್ವರಿಯೂ ಎಂಬ ಹೆಸರುಳ್ಳುದಾಗಿರುವುದು. ಆ ಶಕ್ತಿಯು ತನ್ನ ಸ್ವಾತಂತ್ರ್ಯದ ಬಲದಿಂದ ಭಕ್ತಹಿತಾರ್ಥವಾಗಿ - ಸಮಾನಧರ್ಮದಿಂದ ಎರಡು ತೆರನಾಗಿ, ಒಂದು ಲಿಂಗಸ್ಥಲವನ್ನೂ ಮತ್ತೊಂದು ಅಂಗಸ್ಥಲವನ್ನೂ ಆಶ್ರಯಿಸಿತು. ಲಿಂಗಗತಶಕ್ತಿಯು ಕಲೆಯೆಂತಲೂ ಅಂಗಗತಶಕ್ತಿಯು ಭವವನ್ನು ನೀಗುವ "ಭಕ್ತಿ"ಯೆಂತಲೂ ಹೇಳಲ್ಪಡುತ್ತದೆ.[2]

ಶ್ರೀ ನಿಜಗುಣಶಿವಯೋಗಿಗಳು 'ಕೈವಲ್ಯಪದ್ಧತಿ'ಯಲ್ಲಿ ಇಂತು ಹೇಳಿದ್ದಾರೆ:

ಕರುಣಿಸೆನಗಿದನೆ ಬೇಡುವೆನಭವ ಬೇರೊಂದು
ಪರವನೊಲ್ಲೆನು ಮುಕ್ತಿದೊರೆವ ಸಾಧನವ
ಆವ ಕಾಲದೊಳು ಬಳಿಕಾವ ದೇಶದೊಳು ಬೇ-
ರಾವ ವಸ್ತುವಿನೊಳೊಡವೆರೆಯದತಿಮಮತೆ
ಆವ ಪರಿಯೊಳು ತನ್ನ ಮೇಲಿರ್ಪುದಂತೆ ಗುರು
ದೇವತೆಯೊಳನುರಾಗವಿಹುದೆ ನಿಜಭಕ್ತಿ[3]

ನಿಜಗುಣಶಿವಯೋಗಿಗಳು ಭಕ್ತಿಯು ಮುಕ್ತಿ ದೊರೆವ ಸಾಧನವೆಂದೂ ಮತ್ತು ವ್ಯಕ್ತಿಯು ಕಾಲದೇಶಗಳ ಪರಿವೆಯಿಲ್ಲದೆ ತನ್ನ ಹಾಗೂ ಇಷ್ಟವಿಷಯಗಳ ಮೇಲೆ ತೋರುವ ಮಮತೆಯಂತೆ ಗುರು ಹಾಗೂ ದೇವರಲ್ಲಿ ತೋರುವ ಅನುರಾಗವೇ ಭಕ್ತಿಯೆಂದೂ ಸ್ಪಷ್ಟವಾಗಿ ತಿಳಿಸಿದ್ದಾರೆ. ಕನ್ನಡದ ಸುಪ್ರಸಿದ್ಧ ಕವಿ ಸರ್ವಜ್ಞನು:

ಭಕ್ತಿಯೆಂಬುದೆ ಬೀಜ ಮುಕ್ತಿಯೆಂಬುದೆ ಫಲವು
ಯುಕ್ತಿಯಿಂ ವೃಕ್ಷವೇರಿದಗೆ ಇಹದಲ್ಲಿ
ಮುಕ್ತಿಯಹುದೆಂದ ಸರ್ವಜ್ಞ[4]

ಎಂದು ತಿಳಿಸಿದ್ದಾನೆ. ಮೋಕ್ಷವೆಂಬ ಫಲಕ್ಕೆ ಭಕ್ತಿಯೇ ಬೀಜವೆಂಬುದು ಸರ್ವಜ್ಞನ ಅಭಿಪ್ರಾಯವಾಗಿದೆ. ಈ ಎಲ್ಲ ಮಾತುಗಳನ್ನೂ ಅವಲೋಕಿಸಿದರೆ–ಭಕ್ತಿಯೆಂಬುದು ಗುರು, ದೇವರಲ್ಲಿಡುವ ಅನುರಕ್ತಿಯೆಂದೂ, ಮುಕ್ತಿಗೆ ಸಾಧನವೆಂದೂ, ಮುಕ್ತಿಗೆ ಬೀಜವೆಂದೂ ಕರೆಯಬಹುದಾಗಿದೆ. ಸಂಸಾರ, ಭವ, ದುಃಖಗಳನ್ನು ಗೆಲ್ಲುವುದು; ಮಮತೆ, ರಾಗಾದಿಗಳಿಗೆ ನಿಗ್ರಹವೊದಗಿಸುವುದು ಎಂದು ಕರೆಯಬಹುದು. ಭಕ್ತಿಯೆಂಬುದು ಭವರೋಗಕ್ಕೆ ಕೊಡುವ ಔಷಧವೆಂದು ಬಸವಣ್ಣನವರು ತಿಳಿಸಿದ್ದಾರೆ. ಅದು ಪಾಪನಿವಾರಕವೆಂದೂ ಸಂಸಾರಸಾಗರದಿಂದ ದಾಟುವ ಸಾಧನವೆಂದೂ ಬಂಧನವನ್ನು ಹರಿದೊಗೆದು ಮುಕ್ತಿ ಪಡೆವ ಮಾರ್ಗವೆಂದೂ ಕರೆದಿದ್ದಾರೆ. ಜೀವನು ದೇವನಲ್ಲಿ ಬೆರೆಯುವ ಸಾಧನವೇ ಭಕ್ತಿಯಾಗಿದೆ. ಜೀವನದ ಕಷ್ಟಗಳನ್ನೆಲ್ಲವನ್ನೂ ಹೋಗಲಾಡಿಸಿ ಜೀವಿಯು ಸ್ವತಂತ್ರನಾಗಿ, ಧೀರನಾಗಿ, ಸಂಯಮಿ

1 ಶಿವಾನುಭವ ಶಬ್ದಕೋಶ, ಪುಟ ೮, (೧೯೭೨) ಸಮಾಜಪುಸ್ತಕಾಲಯ ಪ್ರಕಟನೆ
2 ಶಿವಾನುಭವಸೂತ್ರಂ, ಪುಟ ೨೬–೨೭, ಸಂಪಾದಕರು : ಪಂಡಿತ ವೈ. ನಾಗೇಶಶಾಸ್ತ್ರಿ (೧೯೫೮)
3 ಕೈವಲ್ಯಪದ್ಧತಿ, ಪುಟ ೮೫, ಸಂಪಾದಕರು : ಪಂಡಿತ ನಾಗಭೂಷಣಶಾಸ್ತ್ರಿ (೧೯೬೯)
4 ಸರ್ವಜ್ಞ ವಚನ ಸಂಗ್ರಹ, ಪುಟ ೧೬೦, ಸಂಪಾದಕರು : ಎಂ. ಮರಿಯಪ್ಪಭಟ್ಟ (೧೯೭೧)

ಯಾಗಿ ಬಾಳುವ ದಾರಿಯೆಂಬ ಅಭಿಪ್ರಾಯವನ್ನು ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ.[1] ವೀರಶೈವರ ಅಭಿಪ್ರಾಯದಲ್ಲಿ ಭಕ್ತಿಯೆಂದರೆ ಅಂಗನು ಲಿಂಗನಾಗುವ ಸಾಧನಮಾರ್ಗವೆಂದು ಹೇಳಬಹುದು. ಇದು ಅನುಭಾವಕ್ಕೆ ಬೀಜವೂ ಅಹುದು.

ಭಕ್ತಿಯು ಸುಲಭವಲ್ಲವೆಂದೂ ಅದು ಗರಗಸದಂತೆ ಹೋಗುತ್ತ ಬರುತ್ತ ಕೊಯ್ಯುವುದೆಂದೂ ಬಸವಣ್ಣನವರು ಹೇಳಿದ್ದಾರೆ. ಭಕ್ತಿಯು ಪರಮಾತ್ಮನಿಗೆ ತೋರುವ ಅನುರಕ್ತಿಯಾದುದರಿಂದ ಅದು ಭಕ್ತ ಹಾಗೂ ಪರಮಾತ್ಮನ ನಡುವಣ ಸಂಬಂಧವನ್ನು ವಿವರಿಸುವ ವಿಧಾನವೇ. ಒಬ್ಬ ವ್ಯಕ್ತಿ ತನ್ನ ವಸ್ತುಗಳನ್ನು ಒಡವೆಗಳನ್ನು ಧನಕನಕ ಹೆಣ್ಣು ಮಣ್ಣು ಪುತ್ರ—ಮೊದಲಾದವರನ್ನು ಪ್ರೀತಿಸುವಂತೆ ಅರ್ಚಿಸುವಂತೆ ಮೋಹಿಸುವಂತೆ, ಪರಮಾತ್ಮ, ಗುರು-—ಶರಣ ಜಂಗಮ, ಭಕ್ತ, ತತ್ಸಂಬಂಧ ಸಾಹಿತ್ಯಗಳನ್ನು ಪ್ರೀತಿಸುವುದೇ ಭಕ್ತಿಯಾಗಿದೆ. ಬಸವಣ್ಣನವರು "ಭಕ್ತಿ ದಿಟಪಲಗಿನ ಕಾಳಗ" ಎಂದು ಕರೆದಿದ್ದಾರೆ. "ಒಳಗೆ ಕುಟಿಲ ಹೊರಗೆ ವಿನಯ ಇವು ಭಕ್ತಿಗೆ ಸಲ್ಲವು" ಎಂದಿದ್ದಾರೆ.

ಈ ಭಕ್ತಿ ಎಂಬ ಪದವು ಮೂಲತಃ 'ಭಜ್' ಎಂಬ ಧಾತುವಿನಿಂದ ರೂಪಗೊಂಡು ವೀರಶೈವರಲ್ಲಿ ಉಪಾಸನೆ ಮಾಡು. ಅರ್ಚಿಸು, ಪೂಜಿಸು, ದೇವನ ಸಾನ್ನಿಧ್ಯವನ್ನು ಪಡೆ ಎಂದು ಅರ್ಥಗಳನ್ನೂ ಕೊಡುತ್ತಿದ್ದರೂ ಅದು ಈ ಅರ್ಥವ್ಯಾಪ್ತಿಯನ್ನು ಕಾಲಕ್ರಮದಲ್ಲಿ ಪಡೆದುದಾಗಿದೆ. ಅದರಿಂದ ಭಕ್ತಿ ಎಂದರೆ ಪ್ರೀತಿ, ಅನುರಕ್ತಿ, ಅತಿಶಯ ಪ್ರೀತಿ, ಸ್ವಾರ್ಪಣ, ದೇವನಲ್ಲಿ ಮಮತೆ ಎಂಬ ಅರ್ಥಗಳನ್ನೂ ಈ ಪದವು ಕೊಡುತ್ತದೆ. ದೈಹಿಕವಾಗಿ, ಮಾನಸಿಕ ವಾಗಿ, ನೈತಿಕವಾಗಿ ಪರಮಾತ್ಮನ ಸಾನ್ನಿಧ್ಯವನ್ನು ಕೊಡುವುದು ಭಕ್ತಿಯೇ ಆಗಿದೆ.[2]

ಶ್ರೀ ಸ್ವಾಮಿ ವಿವೇಕಾನಂದರು ಭಕ್ತಿಯ ವಿಷಯದಲ್ಲಿ ಇಂತು ತಿಳಿಸಿದ್ದಾರೆ:

> "ಪರಮಪ್ರೇಮಸ್ವರೂಪವೇ ಭಕ್ತಿ ; ಭಕ್ತಿಯ ಒಂದು ಗುಣವೇ ಮನಸ್ಸನ್ನು ಶುದ್ಧಮಾಡುವುದು. ಭಕ್ತಿಮಾರ್ಗಕ್ಕೆ ದ್ವೇಷವು ಒಂದು ದೊಡ್ಡ ಆತಂಕ. ಭಗವಂತನನ್ನು ನಾವು ಸದಾ ಚಿಂತಿಸುತ್ತಿರಬೇಕು. ಎಲ್ಲಾ ಧರ್ಮವೂ ನೀತಿಯ ಮೇಲೆ ನಿಂತಿರಬೇಕು. ಆಚಾರವೆಂದರೆ ಬಾಹ್ಯ ಮತ್ತು ಆಂತರಿಕ ಪರಿಶುದ್ಧಿ. ಸುಳ್ಳು ಹೇಳಬಾರದು ; ಮಾದಕವಸ್ತುವನ್ನು ಸೇವಿಸ ಬಾರದು. ಯಾರು ತನ್ನ ಬಾಹ್ಯ ಮತ್ತು ಅಂತರಂಗವನ್ನು ಶುದ್ಧಿಮಾಡಿಕೊಂಡಿರುವನೋ ಅವನೇ ಭಕ್ತ. ದೇವರನ್ನು ನಮ್ಮ ತಂದೆ, ತಾಯಿ, ಬಂಧುವೆನ್ನುವೆವು ; ಪ್ರಪಂಚದಲ್ಲಿ ಯಾವ ಪ್ರೀತಿಯೂ, ಗಂಡಸಿಗೂ ಹೆಂಗಸಿಗೂ ಇರುವ ಪ್ರೀತಿಯನ್ನು ಮೀರ ಲಾರದು. ನಿಜವಾದ ಭಕ್ತನು ದೇವರ ಹೆಸರನ್ನು ಕೇಳಿದೊಡನೆಯೇ ಭಾವೋನ್ಮತ್ತನಾಗುವನು ; ಅವನ ವಿಷಯವನ್ನು ಓದು ವಾಗ ಕಂಬನಿ ಸುರಿಸುವನು."[3]

ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ 'ಭಕ್ತಿಯೋಗ'ದ ಬಗೆಗೆ ಹೇಳಲಾಗಿದೆ. ಇಪ್ಪತ್ತು ಶ್ಲೋಕಗಳು ಈ ವಿಷಯವನ್ನು ಪ್ರತಿಪಾದಿಸುತ್ತವೆ. ಅಲ್ಲಿ ಭಕ್ತಿಯೆಂದರೆ:

> ಭಗವಂತನ ಅರ್ಚನೆ, ಭಗವಂತನ ಧ್ಯಾನ, ಸಮದರ್ಶಿಯಾಗಿ ಸರ್ವಭೂತ ಹಿತದಲ್ಲಿ ತೊಡಗಿರುವುದು, ಪರಮಾತ್ಮನಲ್ಲಿ ಸರ್ವಾರ್ಪಣಭಾವದಿಂದಿರುವುದು, ಸರ್ವವಿಚಾರಗಳನ್ನು ಭಗವಂತನಲ್ಲಿರಿಸಿಕೊಳ್ಳುವುದು, ಇಲ್ಲವೆ ಭಗವಂತನ ಸೇವೆ ಮಾಡು ವುದು, ಇಲ್ಲವೆ ಕರ್ಮಫಲವನ್ನು ಪರಮಾತ್ಮನಿಗೆ ಅರ್ಪಿಸಿ ಶರಣಾಗತನಾಗುವುದು; ಸಕಲ ಪ್ರಾಣಿಗಳಲ್ಲಿ ಪ್ರೀತಿ ಇಟ್ಟು, ದಯೆ-ಮರುಕದಿಂದ ನೋಡಿಕೊಳ್ಳುವುದು ; ಸಂಯಮ ಹೊಂದುವುದು ; ಧೈರ್ಯದಿಂದಿದ್ದು ಸಂತಸ-ದುಃಖಗಳಿಂದ ಮುಕ್ತನಾಗಿರು ವುದು ; ಶಾಂತನೂ, ನಿರಾಶಾವಾದಿಯೂ ಆಗಿರುವುದು ; ಸುಖದುಃಖಗಳ ಕಡೆಗೆ ಗಮನವೀಯದೆ ಪರಮಾತ್ಮನ ಚಿಂತನೆ ಯಲ್ಲಿರುವುದು ; ಸರ್ವವನ್ನೂ ತ್ಯಾಗಮಾಡುವುದು—ಈ ರೀತಿ ಶ್ರದ್ಧೆಯಿಂದ ನಡೆಯುವುದೇ ಭಕ್ತಿಯೋಗ.[4]
>
> "ಭಕ್ತಿ ಪ್ರಥಮತಃ ಭಯದಿಂದ ಪ್ರಾರಂಭವಾಗುತ್ತದೆ. ವಿಶಾಲ ವಿಶ್ವವನ್ನೂ ವಿಶ್ವಯಾಂತ್ರಿಕ ಮಹಾಕುಶಲತೆಯನ್ನೂ ವಿಶ್ವ ಜೀವನದಲ್ಲಿ ತೋರಿಬರುವ ಬಿರುಮಳೆ, ಬಿರುಗಾಳಿ, ಬಿರುಬಿಸಿಲು, ಭೂಕಂಪ, ಪ್ರಳಯ,ಪ್ರವಾಹ, ಜ್ವಾಲಾಮುಖಿ, ಸಾಂಕ್ರಾಮಿಕ ರೋಗರುಜಿನಗಳು, ದುಃಖ, ಮೃತ್ಯು ಮೊದಲಾದ ಭಯಂಕರ ವ್ಯಾಪಾರಗಳನ್ನು ಕಂಡು, ಮಾನವನು ಸರ್ವಕರ್ತನಾದ ಜಗದೀಶ್ವರನನ್ನು ಆತನ ಅಪಾರ ಶಕ್ತಿ,-ಅಪ್ರತಿಹತ ಸಾಮರ್ಥ್ಯ-ಅನಂತ ಐಶ್ವರ್ಯಗಳಿಗಾಗಿ ಭಯಭಕ್ತಿಯಿಂದ—ಎಂದರೆ ಭಯದಿಂದ ಪ್ರೇರಿತವಾದ ಭಕ್ತಿಯಿಂದ ದಾಸ್ಯಭಾವದಿಂದ ಸೇವೆಮಾಡಿ, ಸಂತುಷ್ಟಿಗೊಳಿಸಿ ಕೃಪಾಪಾತ್ರನಾಗಿ ಕಷ್ಟಸಂಕಟಗಳಿಂದ

---

1 ಬಿ. ಸಿ. ಜವಳಿ, ಎಂ.ಎ., ಧರ್ಮಭಂಡಾರಿ ಬಸವಣ್ಣ, ಪುಟ ೧೫೦, (೧೯೬೩)

2 Sri A. N. Subrahmania Shastri : '*Analysis of Bhakti*', ಶ್ರೀ ವೆಂಕಟೇಶ್ವರ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆಯ ಪತ್ರಿಕೆ, ೧೯೫೦, ಭಾಗ ೨, ಪುಟ ೧೬೮–೧೮೧

3 'ಕೊಲಂಬೊ ಇಂದ ಅಲ್ಮೋರಕೆ' ; ಪುಟ ೨೫೦–೨೬೨ ಮತ್ತು ೨೮೭–೨೯೫ ಶ್ರೀ ರಾಮಕೃಷ್ಣ ಆಶ್ರಮ ಪ್ರಕಟನೆ (೧೯೫೮)

4 Dr. D. S. Sharma : '*The Bhagavad Gita*', p. 124–128 (1952)

ಪಾರಾಗಬೇಕೆಂದು ಪೂಜಿಸುತ್ತಾನೆ. ಆದರೆ ಬರಬರುತ್ತ ಭಯಭಾವವು ಕ್ರಮೇಣ ಪರಿಚಯದಿಂದ ಸಲಿಗೆಯಾಗಿ, ಸ್ನೇಹವಾಗಿ, ಪ್ರೇಮವಾಗಿ, ನೈಜಭಕ್ತಿಯಾಗಿ ಪರಿಣಮಿಸುತ್ತದೆ. ಆಗ ಭಕ್ತನ ದೃಷ್ಟಿ ಭಗವಂತನ ಶಕ್ತಿಸಾಮರ್ಥ್ಯಐಶ್ವರ್ಯಗಳ ಕಡೆಯಿಂದ ಅಪಮುಖವಾಗಿ ಆತನ ಮಹಾಘನಗೌರವಪ್ರೇಮದ ಕಡೆಗೆ ತಿರುಗುತ್ತದೆ. ಎಂದರೆ, ಈಶ್ವರನು ಐಶ್ವರ್ಯದಿಂದ ಈಶ್ವರನಾಗದೆ ಆನಂದದಿಂದ ಈಶ್ವರನಾಗುತ್ತಾನೆ. ಆಗ ಭಕ್ತಿ ಅಹೇತುಕವಾಗಿ, ನಿಃಸ್ವಾರ್ಥವಾಗಿ, ತ್ಯಾಗಪೂರ್ಣವಾಗಿ, ಅತೀಂದ್ರಿಯ ಪ್ರೇಮಮಾತ್ರವಾಗಿ ಪರಿಣಮಿಸುತ್ತದೆ. ಅಂತಹ ಅತೀಂದ್ರಿಯಪ್ರೇಮಸಿದ್ಧಿಯೇ ಮಧುರಭಾವಸಾಧನೆಯ ಸರ್ವೋಚ್ಚ ಗಮ್ಯ. ಮಧುರಭಾವಸಾಧನೆಯನ್ನು 'ಧರ್ಮಪ್ರಪಂಚದ ಸೌಂದರ್ಯೋಪಾಸನೆ' ಎಂದು ಕರೆಯಬಹುದು. ಅದು ಭಾವಜೀವಿಯಾದ ಮಾನವನಿಗೆ ಅತ್ಯಂತ ಪ್ರಿಯವೂ ಹೌದು."[1]

"ಭಕ್ತನು ಈಶ್ವರನನ್ನು ಐದು ವಿಧವಾದ ಸಂಬಂಧಗಳಿಂದ ಆರಾಧಿಸಬಹುದು. ಮೊದಲನೆಯದು ಶಾಂತಭಾವ. ವೇದೋಪನಿಷತ್ತುಗಳೇ ಮೊದಲಾದ ಪವಿತ್ರಶಾಸ್ತ್ರಗಳನ್ನು ಅಧ್ಯಯನ ಮಾಡಿ, ಪರಮಾತ್ಮನು ಸರ್ವಾಂತರ್ಯಾಮಿಯಾಗಿರುವನೆಂದು ತಿಳಿದು ಸರ್ವೇಂದ್ರಿಯಗಳನ್ನೂ ವಸ್ತುವಿಷಯಗಳಿಂದ ಹಿಂದಿರುಗಿಸಿ, ಜಗತ್ತಿನ ಅಂತರಾತ್ಮವಾದ ಬ್ರಹ್ಮವೊಂದೇ ಪರಮ ಸತ್ಯವೆಂದು ಅದನ್ನೇ ಧ್ಯಾನಿಸುತ್ತ, ಸುಖದುಃಖ, ಶೀತೋಷ್ಣ, ಜಯಾಪಜಯಗಳಲ್ಲಿ ಸಮದೃಷ್ಟಿಯಿಂದ ವರ್ತಿಸುತ್ತ, ಸದಾ ಶಾಂತಚಿತ್ತರಾಗಿರುವ ಧ್ಯಾನಜೀವಿಗಳೇ ಶಾಂತಭಾವ ಮಾರ್ಗಾನುಗಾಮಿಗಳು. ಈ ಭಾವವು ಸ್ವಲ್ಪಮಟ್ಟಿಗೆ ಜ್ಞಾನಸಮ್ಮಿಶ್ರವಾದುದೆಂದೇ ಹೇಳಬೇಕು. ವೇದಕಾಲದ ಋಷಿಗಳೇ ಇದಕ್ಕೆ ಉದಾಹರಣೆ. ಎರಡನೆಯದು ದಾಸ್ಯಭಾವ ; ಎಂದರೆ ಸೇವಕನಿಗೆ ಯಜಮಾನನಲ್ಲಿರುವ ಸಂಬಂಧ. ಚಿತ್ರವಿಚಿತ್ರವಾದ ವಿಶ್ವರಚನೆಯನ್ನು ನೋಡಿದ ಯಾವನಿಗಾದರೂ ಯಾವನೋ ಒಬ್ಬ ಸರ್ವಶಕ್ತನೂ ಸರ್ವವ್ಯಾಪಿಯೂ ಸರ್ವಜ್ಞಾನಿಯೂ ಅಪಾರ ಕರುಣಾಶಾಲಿಯೂ ಆಗಿರುವ ಜಗದುದಯಕಾರಣನು ನಿಶ್ಚಿತನಿಯಮಗಳಿಗನುಸಾರವಾಗಿ ಅಧಿಕಾರಮಾಡುತ್ತಿರುವನೆಂದು ಮನಸ್ಸಿಗೆ ಹೊಳೆಯುವುದು. ಅಂತಹ ಅನಂತಪ್ರೇಮಸ್ವರೂಪಿಯಾದ ಪರಮಸ್ವಾಮಿಗೆ ಸ್ವಸುಖಾಭಿಲಾಷೆಗಳನ್ನು ತ್ಯಜಿಸಿಯಾದರೂ ಸೇವೆ ಮಾಡಿ ಆತನನ್ನು ಒಲಿಸಿಕೊಂಡು ಕೃಪೆಗೆ ಪಾತ್ರರಾಗಬೇಕೆಂದು ಕೆಲವರ ಆಸೆ. ಅಂಥವರು ತಮಗೂ ತಮ್ಮ ಆ ಇಷ್ಟದೈವಕ್ಕೂ, ಕಿಂಕರನಿಗೂ ರಾಜನಿಗೂ ಇರುವ ಸಂಬಂಧವನ್ನು ಕಲ್ಪಿಸುತ್ತಾರೆ. ಉದಾಹರಣೆಗೆ: ಹನುಮಂತನಿಗೂ ಶ್ರೀರಾಮಚಂದ್ರನಿಗೂ ಇರುವ ಸಂಬಂಧ. ಮೂರನೆಯದು ಸಖ್ಯಭಾವ; ಎಂದರೆ ಮಿತ್ರರಿಗಿರುವ ಸಂಬಂಧ. ಇದರಲ್ಲಿ ಭಕ್ತನು ತನ್ನ ಇಷ್ಟದೈವವನ್ನು ಗೆಳೆಯನಂತೆ ಭಾವಿಸಿ, ಆತನ ಸಾನ್ನಿಧ್ಯದಲ್ಲಿ ಸ್ವಲ್ಪವೂ ಭಯವಿಲ್ಲದೆ ಸಲುಗೆಯಿಂದಿರುತ್ತಾನೆ. ತನ್ನ ಮಿತ್ರನಿಗೆ ಸಂತೋಷದಾಯಕವಾಗಿರುವುದೇ ಭಕ್ತನಿಗೆ ಪರಮತೃಪ್ತಿ. ಅರ್ಜುನ ಶ್ರೀಕೃಷ್ಣನಿಗಿರುವ ಭಾವ ಇದಕ್ಕೆ ಉದಾಹರಣೆ. ನಾಲ್ಕನೆಯದು ವಾತ್ಸಲ್ಯಭಾವ; ಎಂದರೆ ಮಾತಾಪಿತೃಗಳಿಗೆ ತಮ್ಮ ಶಿಶುವಿನಲ್ಲಿರುವ ಮೃದುಮಧುರವಾದ ಕೋಮಲ ಸಂಬಂಧ. ಇಲ್ಲಿ ಭಕ್ತನು ತನ್ನ ಇಷ್ಟದೈವವನ್ನು ತನ್ನ ಮಗುವೆಂದೇ ಭಾವಿಸುತ್ತಾನೆ. ತಾನೇ ಬಲಿಷ್ಠನಾಗಿರುತ್ತಾನೆ. ತನ್ನ ಶಿಶುವನ್ನು ಲಾಲಿಸಿ ಪಾಲಿಸಿ ಮುದ್ದುಗರೆವುದೊಂದೇ ಆತನ ಆಕಾಂಕ್ಷೆ. ಶ್ರೀಕೃಷ್ಣನ ತಂದೆತಾಯಿಗಳ ಭಕ್ತಿ ಇದಕ್ಕೆ ಉದಾಹರಣೆ. ಐದನೆಯದು ಮಧುರಭಾವ; ಎಂದರೆ ಪ್ರಿಯಪ್ರೇಯಸಿಯರಲ್ಲಿರುವ ಪರಸ್ಪರ ಅನುರಾಗದ ಸಂಬಂಧ; ಈ ಪ್ರೇಮಬಂಧನ ವಜ್ರಸಮನಾದುದು. ಪ್ರಣಯಿನಿ ಪ್ರಣಯಿಯ ವಿಯೋಗವನ್ನು ಕ್ಷಣಮಾತ್ರವಾದರೂ ಸಹಿಸಳು. ವಾತ್ಸಲ್ಯಭಾವದಲ್ಲಿ ಕಂಡುಬರಬಹುದಾದ ಅಲ್ಪಸ್ವಲ್ಪ ಪೃಥಗ್ಭಾವವೂ ಮಧುರಭಾವದಲ್ಲಿ ಲಯಹೊಂದುತ್ತದೆ. ಈ ಭಾವಸಾಧನೆಯಲ್ಲಿ ಪರಮಾತ್ಮನು ಜೀವನಿಗೆ ಇನಿಯನಾಗುತ್ತಾನೆ. ಇತರ ಭಾವಗಳಿಗಿಂತ ಇದು ಮಹೋನ್ನತವಾದುದು. ಗೋಪೀಕೃಷ್ಣರ ಸಂಬಂಧವು ಇದಕ್ಕೆ ಉದಾಹರಣೆ."[2]

"ವ್ಯಕ್ತಿಗಳನ್ನು ಅನುಸರಿಸಿ ಹೇಳುವುದಾದರೆ ಅದು ರಾಜಸಿಕ, ತಾಮಸಿಕ, ಸಾತ್ವಿಕ ಎಂದು ಮೂರು ವಿಧ. ಸಾತ್ವಿಕ ಭಕ್ತಿ ರಹಸ್ಯವಾದುದು. ಈಶ್ವರನಿಗೋರ್ವನಿಗೆ ವಿದಿತ; ರಾಜಸಿಕಭಕ್ತಿಯು ಪ್ರದರ್ಶನಶೀಲ; ತಾಮಸಿಕಭಕ್ತಿ ಅಬ್ಬರದಿಂದ, ಉದ್ಘೋಷದಿಂದ ಕೂಡಿದುದು. ಭಕ್ತಿಯು ಸಂಸಾರಸಾಗರದ ಒಂದು ದಡದಿಂದ ಇನ್ನೊಂದು ದಡಕ್ಕೆ ಒಯ್ಯುವ ಸಾಧನೆ. ದುಷ್ಟರನ್ನು ಕಂಡರೆ ಉಪೇಕ್ಷೆ ತಾಳಬೇಕು. ಪ್ರತಿಯೊಂದು ಸಲವೂ ಬರುವ ಕೋಪ ಮತ್ತು ದ್ವೇಷದ ಭಾವನೆಯನ್ನು ತಡೆದಷ್ಟೂ, ಒಳ್ಳೆಯ ಶಕ್ತಿಯನ್ನು ನಮ್ಮ ಹಿತಕ್ಕೆ ಕೂಡಿಟ್ಟಂತೆ."

"ಯಾರು ಮತ್ತಾರನ್ನೂ ದ್ವೇಷಿಸುವುದಿಲ್ಲವೋ, ಯಾರು ಎಲ್ಲರ ಸ್ನೇಹಿತನೋ, ಯಾರು ಎಲ್ಲರಿಗೂ ಅನುಕಂಪ ತೋರಿಸುವನೋ, ಯಾರಿಗೆ ಸ್ವಾರ್ಥವಿಲ್ಲವೋ, ಯಾರು ಅಹಂಕಾರದಿಂದ ಮುಕ್ತರಾಗಿರುವರೋ, ಯಾರು ಸುಖದುಃಖದಲ್ಲಿ ಸಮಬುದ್ಧಿಯುಳ್ಳವರೋ, ಯಾರು ಎಲ್ಲವನ್ನೂ ಸಹಿಸುವರೋ, ಯಾರು ನಿತ್ಯತೃಪ್ತನೋ, ನಿತ್ಯಯೋಗದಲ್ಲಿ ಕೂಡಿರುವನೋ, ಯಾರು ಜಿತಾತ್ಮನೋ, ಯಾರ ಮನಸ್ಸು ದೃಢವಾಗಿದೆಯೋ, ಯಾರ ಮನಸ್ಸು ಮತ್ತು ಬುದ್ಧಿ ದೇವರಲ್ಲಿ ಲೀನವಾಗಿದೆಯೋ, ಯಾರಿಂದ ಉಳಿದವರಿಗೆ ತೊಂದರೆಯಾಗುವುದಿಲ್ಲವೋ, ಯಾರು ಸಂತೋಷ, ದುಃಖ ಅಂಜಿಕೆ ಆತಂಕಗಳಿಂದ ದೂರವಾಗಿರುವನೋ ಅಂತಹವನು ದೇವರ ಭಕ್ತ."[3]

ಸರ್ಪಭೂಷಣ ಶಿವಯೋಗಿಗಳು ಭಕ್ತಿಯನ್ನು ನವವಿಧವಾಗಿದೆಯೆಂದು ಅದರ ಒಂಬತ್ತು ಪರಿಗಳನ್ನು ಇಂತು ವಿವರಿಸಿದ್ದಾರೆ:

1 ಕುವೆಂಪು : 'ರಾಮಕೃಷ್ಣ ಪರಮಹಂಸ', ಪುಟ ೭೯-೮೦ (೧೯೫೯)

2 ಕುವೆಂಪು : ಶ್ರೀರಾಮಕೃಷ್ಣ ಪರಮಹಂಸ, ಪುಟ ೫೭-೫೯

3 ಸ್ವಾಮಿ ವಿವೇಕಾನಂದ ಅವರ "ರಾಜಯೋಗ", ಪುಟ ೮೨-೮೩, ರಾಮಕೃಷ್ಣಾಶ್ರಮ ಪ್ರಕಟನೆ, ಮೈಸೂರು (೧೯೫೫)

೧. **ಶ್ರವಣಭಕ್ತಿ:** ಪರಮಾತ್ಮನ ಲೀಲಾವಳಿಯನಾಲಿಪುದು
೨. **ಕೀರ್ತನಭಕ್ತಿ:** ಪರಮಾತ್ಮನ ಮಹಿಮೆಗಳ ಹಾಡುವುದು
೩. **ಸ್ಮರಣಭಕ್ತಿ:** ಪರಮಾತ್ಮನ ಮೂರ್ತಿಯನೆ ಜಾನಿಸುವುದು
೪. **ಸೇವನಾಭಕ್ತಿ:** ಪರಮಾತ್ಮನನ್ನು ಉಪಚರಿಸುವುದು
೫. **ಪೂಜಾಭಕ್ತಿ:** ಪರಮಾತ್ಮನನ್ನು ಸಿಂಗರಿಸುವುದು
೬. **ವಂದನಾಭಕ್ತಿ:** ಪರಮಾತ್ಮನಡಿಗೆ ಮೆಯ್ಯನೀಡಾಡುವುದು
೭. **ದಾಸ್ಯಭಕ್ತಿ:** ಪರಮಾತ್ಮನ ಚರಣಕೈಂಕರ್ಯವೆಸಗುವುದು
೮. **ಸಖ್ಯಭಕ್ತಿ:** ಪರಮಾತ್ಮನಿಗೆ ಆಪ್ತರಂತೆ ಅನುಕೂಲತೆಯಿಂದಿರುವುದು
೯. **ಅರ್ಪಣಾಭಕ್ತಿ:** ಪರಮಾತ್ಮನಿಗೆ ದೇಹ, ಅರ್ಥ, ಮಾನ, ಪ್ರಾಣಗಳನ್ನು ಕೊಡುವುದು

ಶ್ರವಣ, ಕೀರ್ತನ, ಘನಸ್ಮರಣ, ಸೇವನ, ಪೂಜೆ,
ತವ ನತಿಯು, ದಾಸ್ಯ, ಸಖ್ಯಾರ್ಪಣಗಳೆಂಬ
ನವಭಕ್ತಿಯಿಂ ನವಪ್ರಕೃತಿ ನವಗುಣವಳಿದು ಗುರುಸಿದ್ಧನೊಲುಮೆಯಕ್ಕುಂ[1]

ಹೀಗೆ ಭಕ್ತಿಯ ವಿಧಗಳು ಇಷ್ಟೇ ಎಂದು ಹೇಳುವುದು ಸುಲಭವಲ್ಲ. ಮೂರು ವಿಧದಿಂದ ಒಂಬತ್ತು ವಿಧಗಳ ವಿವರಗೊಂಡಿದೆ. ಈ ಒಂಬತ್ತು ವಿಧಗಳಲ್ಲಿ ಪ್ರಣಯಿನಿ-ಪ್ರಣಯಿಯ ಭಾವವನ್ನು ವ್ಯಕ್ತಪಡಿಸುವುದೇ ಶ್ರೇಷ್ಠವಾದುದೆಂಬ ಅಭಿಪ್ರಾಯಗಳು ಹೊರಹೊಮ್ಮಿವೆಯಲ್ಲದೆ ಭಯದಿಂದ ಹೊರಹೊಮ್ಮುವ ಭಾವಕ್ಕಿಂತ ಪ್ರೀತಿಯಿಂದ ಹೊರಹೊಮ್ಮುವ ಭಾವವೇ ಹಿರಿದೆಂದೂ, ರಾಜಸ, ತಾಮಸಕ್ಕಿಂತ ಸಾತ್ವಿಕಭಾವದಿಂದ ಕೂಡಿದ ಭಕ್ತಿಯೇ ಶ್ರೇಷ್ಠವೆಂದೂ ಹೇಳಬಹುದಾಗಿದೆ. ವೀರಶೈವರ ಭಕ್ತಿಯು ಪರಮಾತ್ಮನ ಮೇಲೆ ಪ್ರೀತಿಯಿಂದ ಕೂಡಿದುದೂ ಜ್ಞಾನಾತ್ಮಕವೂ ಆಗಿದೆ.

## ೨

ವಚನಕಾರರಲ್ಲಿ 'ಭಕ್ತಿಭಂಡಾರಿ' ಎಂಬ ಬಿರುದು ಬಸವಣ್ಣನವರಿಗೆ ಸಂದಿರುವುದರಿಂದ ಅವರ ವಚನಗಳಲ್ಲಿ ಬಂದಿರುವ ಭಕ್ತಿಯ ಭಾವಗಳನ್ನು ನೋಡಬಹುದಾಗಿದೆ. ಬಸವಣ್ಣನವರು ತಮ್ಮನ್ನು 'ಪಶು'ವನ್ನಾಗಿ ಕರೆದುಕೊಂಡಾಗ, ದೇವನನ್ನು 'ಪಶುಪತಿ'ಯೆಂದು ಕರೆದಿರುವಲ್ಲಿ ಪಶುಪತಿಭಾವವು ವ್ಯಕ್ತವಾಗಿದೆ. ದೇವನನ್ನು ತಂದೆ ತಾಯಿಯೆಂದು ಕರೆದಿರುವಲ್ಲಿ ತಾವು ಮಗನಾಗಿ ದೇವನ ವಾತ್ಸಲ್ಯ-ಕ್ಷಮೆಯನ್ನು ಕೋರಿ ವಾತ್ಸಲ್ಯಭಾವವನ್ನು ವ್ಯಕ್ತಪಡಿಸಿದ್ದಾರೆ. ದೇವನನ್ನು ಒಡೆಯನೆಂದು ಭಾವಿಸಿ ತಮ್ಮನ್ನು ದಾಸ, ಕಿಂಕರನೆಂದು ಭಾವಿಸಿ ಕಿಂಕರಭಾವವನ್ನು ವ್ಯಕ್ತಪಡಿಸಿದ್ದಾರೆ. ಪರಮಾತ್ಮನು ಪತಿಯೆಂದೂ ತಾನು ಸತಿಯೆಂದೂ ತಿಳಿಸುವಲ್ಲಿ ಸತಿಪತಿಗಳ ಮಧುರಭಾವವನ್ನು ವ್ಯಕ್ತಪಡಿಸಿದ್ದಾರೆ. ಪಶುಪತಿಭಾವದಲ್ಲಿ ಪರಮಾತ್ಮನಿಗೆ ಅನನ್ಯ ಶರಣಾಗತಿಯನ್ನು ತಿಳಿಸಿದ್ದಾರೆ. ಇದರಿಂದ ಭಕ್ತನಿಗೆ ತನ್ನಲ್ಲಿಯ ಪಶುತ್ವವನ್ನು ಕಳೆದುಕೊಂಡು ಇಂದ್ರಿಯಗಳಿಗೆ ಅಂಟಿದ ಮಲಿನತೆಯನ್ನು ಹೋಗಲಾಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಪರಮಾತ್ಮನ ಹಿರಿಮೆಯನ್ನೂ, ತನ್ನ ಅಲ್ಪತೆಯನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜಗತ್ತಿನಲ್ಲಿ ಅದ್ಭುತವನ್ನು ಕಂಡು ಇದನ್ನು ನಿರ್ಮಿಸಿದ ಒಂದು ಶಕ್ತಿ (ಪರಮಾತ್ಮ) ಇರಬೇಕೆಂದು ಅನುಭವ ಪಡೆಯುತ್ತಾನೆ. ಈ ಭಾವದಿಂದ ಕರ್ಮವನ್ನು ನೀಗುವುದು ಸಾಧ್ಯವಾಗುತ್ತದೆ. ಈ ಜಗತ್ತು ನಿರ್ಮಿತವಾದುದು ಆ ದೇವನ ಶಕ್ತಿಯಿಂದೆಂಬುದನ್ನು ತಿಳಿದುದರಿಂದ ಈ ಜಗತ್ತಿಗೆ ಒಬ್ಬನೇ ಕರ್ತ, ಅವನೇ ಸರ್ವಕ್ಕೂ ಒಡೆಯನಾದುದರಿಂದ, ತಾನು ಅವನ ಸೇವೆ ಮಾಡುವ ದಾಸ ಇಲ್ಲವೆ ಕಿಂಕರನೆಂದು ತಿಳಿಯುವುದರಿಂದ, ಸರ್ವವಸ್ತುಗಳಿಗೂ ಹಕ್ಕುದಾರನು ಪರಮಾತ್ಮನೆಂಬ ಭಾವವನ್ನು ತಾಳಲು, ವೈರಾಗ್ಯಶೀಲನಾಗಲು ಸಹಾಯವಾಗುತ್ತದೆ. ಎಲ್ಲವನ್ನೂ ಸೃಷ್ಟಿಸುವ ಶಿವನು ತನ್ನ ಸಂರಕ್ಷಕನೂ ಅಹುದು ಎಂಬುದು ತೋರಿ ಭಗವಂತನ ಮೇಲೆ ಅಧಿಕ ಗೌರವವುಂಟಾಗುತ್ತದೆ. ಮಾನವನನ್ನು ಸೃಷ್ಟಿಸಿರುವುದರಿಂದ ಅವನು ತಂದೆ-ತಾಯಿಯೂ ಅಹುದು. ಇದರಿಂದ ಅವನಲ್ಲಿ ವಾತ್ಸಲ್ಯ ಪಡೆಯಲು ಕಾರಣವಾಗುತ್ತದೆ. ತಂದೆ-ತಾಯಿಯರು ಮಗನ ಏಳ್ಗೆಗಾಗಿ ಪ್ರಯತ್ನಿಸುವಂತೆ ದೇವರೂ ತನ್ನ ಅಭಿವೃದ್ಧಿಗಾಗಿ ಸಹಾಯ ಮಾಡಬೇಕೆಂಬ ಅಧಿಕಾರವನ್ನೂ ಪಡೆಯುತ್ತಾನೆ. ತಂದೆ-ತಾಯಿಗಳ ವಾತ್ಸಲ್ಯವು ಬೆಳೆದು ಸತಿಪತಿಗಳ ಮಧುರಭಕ್ತಿಯಾಗಿ ಪರಿಣಮಿಸಿದಾಗ ಪ್ರೀತಿ, ಭಯ, ಸ್ನೇಹ, ದಾಸ್ಯ, ಸಖ್ಯ ಈ ಎಲ್ಲಾ ಅತ್ಯುತ್ಕೃಷ್ಟಭಾವನೆಗಳು ದೇವನ ಬಗೆಗೆ ವ್ಯಕ್ತಿಯಲ್ಲಿ

[1] ಕೈವಲ್ಯಕಲ್ಪವಲ್ಲರಿ, ಪುಟ ೬, ಸಂಪಾದಕರು: ಶಿ. ಶಿ. ಬಸವನಾಳ, ಎಂ.ಎ., (೧೯೪೮)

ಉಂಟಾಗುವುದರಿಂದ ಇದು ಶ್ರೇಷ್ಠತರವಾದುದೆಂದು ಬೇರೆ ಹೇಳಬೇಕಿಲ್ಲ. ಉತ್ತಮ ಸತಿಪತಿಗಳು ಉಂಟುಮಾಡುವ ಆನಂದದ ಪರಿಣಾಮವನ್ನೇ ನಾವಿಲ್ಲಿ ಅನುಭವಿಸುತ್ತೇವೆ.

ದೇವರು ಅನೇಕಮುಖವಾಗಿ ವ್ಯಕ್ತಿಗೆ ಪ್ರಕಟವಾಗುತ್ತಿದ್ದರೂ ಬಸವಣ್ಣನವರು ತಮ್ಮ ವಚನಗಳಲ್ಲಿ ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ, ಸಮಯಭಕ್ತಿ ಎಂದು ಕರೆದುದಲ್ಲದೆ ಭಕ್ತ, ಶರಣ ಇವರುಗಳನ್ನೂ ಪರಮಾತ್ಮನ ಸ್ವರೂಪವೆಂದೇ ಭಾವಿಸಿ ಇವರನ್ನು ಅತ್ಯಂತ ಗೌರವದಿಂದ ಪೂಜ್ಯಭಾವದಿಂದ ಕಾಣಬೇಕೆಂದು ತಿಳಿಸಿದ್ದಾರೆ. ಗುರು 'ಭವರೋಗವೈದ್ಯ'; ಜಂಗಮ 'ಶಸ್ತ್ರವೈದ್ಯ': ಭಕ್ತನು 'ಈಶ್ವರದೇಹಿ' ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ. ಪರಮಾತ್ಮನನ್ನು ನಾನಾವಿಧದಿಂದ ಪ್ರೀತಿಸಿ, ಭಕ್ತಿಯನ್ನು ವ್ಯಕ್ತಪಡಿಸಲು ತಿಳಿಸಿದ್ದಾರೆ. ಗೀತವ ಹಾಡಿ, ಶಾಸ್ತ್ರ ಪುರಾಣವ ಕೇಳಿ, ಅರ್ಚಿಸಿ, ಕುಣಿದು. ತನುಮನಧನ ಸತಿ ಸುತ ಹೊನ್ನುಮಣ್ಣು ಮೊದಲಾದವುಗಳನ್ನು ತ್ಯಾಗ ಮಾಡಿ, ಪರಮಾತ್ಮನಿಗೆ ಭಕ್ತನು ತನ್ನೊಲುಮೆಯನ್ನು ವ್ಯಕ್ತಪಡಿಸಬೇಕೆಂದಿದ್ದಾರೆ. ಈ ಕ್ರಿಯೆಯು ಜೀವಿಗೆ ನಿತ್ಯ ನಿರಂತರವೂ ನಡೆಯಬೇಕು. ಒಲಿದು, ಮುದ್ದಿಸಿ, ಪೂಜಿಸಿ ಶಿವನೊಲುಮೆ ಪಡೆಯಬೇಕು. ಹೀಗೆ ಮಾಡುವುದರಿಂದ ದೇವರಲ್ಲಿ ನಂಬಿಕೆ. ಸ್ನೇಹ, ಪ್ರೇಮ ಬಲಿತು ಅವನ ಅನುಗ್ರಹಕ್ಕೆ ದಾರಿಯಾಗುತ್ತದೆ. ಬಸವಣ್ಣನವರು 'ತ್ರಿವಿಧ ದಾಸೋಹ' ಮಾಡಬೇಕೆಂದಿದ್ದಾರೆ. ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವ ತ್ಯಾಗ ಮಾಡುವುದೇ 'ತ್ರಿವಿಧ ದಾಸೋಹ'ದ ಲಕ್ಷಣವೆಂದಿದ್ದಾರೆ. ಹೀಗೆ ಮಾಡಿದರೆ ಅಂಗನು ಲಿಂಗವಾಗುವುದು ಸಾಧ್ಯವೆಂಬುದು ಅವರ ಭಾವನೆ.

ಮಹಾಕವಿಯೂ ವೀರಶೈವ ಧುರಂಧರನೂ ಪ್ರಮಥನೂ ಆದ ಹಂಪೆಯ ಹರೀಶ್ವರಕವಿಯು ಭಕ್ತಿಯ ವಿವಿಧಮುಖಗಳನ್ನು ಚಿತ್ರಿಸುವ ಹಾಗೆ ಶಿವಶರಣರ ಕಥೆಗಳನ್ನು ರಗಳೆಗಳ ಮೂಲಕ ವಿವರಿಸಿದ್ದಾನೆ. ಅಲ್ಲಿ ವ್ಯಕ್ತಿಗಳ ಮನೋಭಾವಕ್ಕನುಗುಣವಾಗಿ ಕಥೆಗಳಲ್ಲಿ ದಾಸ್ಯಭಾವ, ವಾತ್ಸಲ್ಯಭಾವ, ಸಖ್ಯಭಾವಾದಿಗಳನ್ನು ನಿರೂಪಿಸಿದ್ದಾನೆ. ಗಿರಿಜಾಕಲ್ಯಾಣದಲ್ಲಿ ಸತಿಪತಿಭಾವ, ನಂಬಿಯಣ್ಣನ ರಗಳೆಯಲ್ಲಿ ಸಖ್ಯಭಾವ, ಮಹಾದೇವಿಯಕ್ಕನಲ್ಲಿ ಸತಿಪತಿಗಳ ಮಧುರಭಾವ, ಬಿಜ್ಜಮಹಾದೇವಿಯಲ್ಲಿ ವಾತ್ಸಲ್ಯಭಾವ, ಕಣ್ಣಪ್ಪನಲ್ಲಿ ದಾಸ್ಯಭಾವ–ಹೀಗೆ ವಿವಿಧ ಭಾವಗಳನ್ನು ತೋರಿಸಿದ್ದಾನೆ. ನೂತನ ಶಿವಶರಣರ ಚರಿತ್ರೆಗಳಲ್ಲಿ ಗುರುಭಕ್ತಿ. ಲಿಂಗಭಕ್ತಿ, ಜಂಗಮಭಕ್ತಿ, ಶರಣಭಕ್ತಿ. ಭಕ್ತಭಕ್ತಿ, ಸಮಯಭಕ್ತಿಗಳನ್ನು ಪ್ರಕಟಪಡಿಸಿದ್ದಾನೆ. ದೇವರನ್ನು ಕುರಿತು ದೇವನು ರಕ್ಷಕ, ಜನನೀ, ಜನಕ, ಮಹಾಬಂಧು, ಮಹಾದೇವ, ಗುರು, ನಿರ್ಮಳಘನನಿಧಿ, ದಾನಿ, ನಿಷ್ಕಾಮ, ಶಾಂತರಸ, ಲೋಕೈಕಾರಾಧ್ಯ, ಭವಕರ್ಮಧ್ವಂಸಿ ಎಂದು ಕರೆದುದಲ್ಲದೆ ಹರನ ಕೃಪೆಯು ಗುರುಸಂಗ, ಲಿಂಗಾರೂಢನ, ಶರಣರ ಸಂಗವನ್ನುಂಟುಮಾಡಿ ಮುಕ್ತಿಗೆ ದಾರಿಮಾಡಿಕೊಡುತ್ತದೆಯೆಂದು ತಿಳಿಸಿದ್ದಾನೆ. ಹರಭಕ್ತರ ಪ್ರೇಮ, ಅವರ ಸೇವೆ ಮಾಡುವುದು, ಲಿಂಗಪೂಜೆಯನ್ನು ಮನದಣಿಯೆ ಮಾಡುವುದು. ಪ್ರಾರ್ಥಿಸುವುದು, ಶಿವಾನುಗ್ರಹಕ್ಕೆ ಕಾರಣ. ಭಕ್ತಿಗೆ ಸಾಧನವೆಂದು ಹೇಳಿದ ಈ ಪದ್ಯವನ್ನು ನೋಡಬಹುದು:

ನೆನೆಯುತ್ತುಂ ಪೂಜಿಸುತ್ತುಂ ಚರಣದೊಳಲರುತ್ತುಂ ಮರಲ್ದೀಕ್ಷಿಸುತ್ತುಂ
ಮುನಿಯುತ್ತುಂ ಮುದ್ದಿಸುತ್ತುಂ ತೊನೆದು ತವಕಿಸುತ್ತುರ್ವುತುಂ ಗರ್ವಿಸುತ್ತುಂ
ಜಿನುಗುತ್ತುಂ ಜೀವಿಸುತ್ತುಂ ಧಿಣಿಧಿಣಿರವದಿಂದಾಡುತುಂ ಪಾಡುತಿರ್ಪೊಂ-
ದನುರಾಗಂ ಮಾಡಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನ ॥[1]

ಗುರುಭಕ್ತಿಗಾಗಿ ಹರೀಶ್ವರನ ಈ ಕೆಳಗಿನ ಪದ್ಯವನ್ನು ಉದಾಹರಿಸಬಹುದು :

ಗುರುವಂ ನಂಬಿರ್ದು, ಮತ್ತಾ ಗುರುಕರುಣದೆ ಪಂಚಾಕ್ಷರೀಮಂತ್ರಮಂ ತಾ-
ಳ್ದು, ರಹಸ್ಯಂ ಭಕ್ತಿಯಿಂದಂ ಜಪಮನೆಣಿಸಿ, ಗುರ್ವಾಜ್ಞೆಯಂ ಮೀಱದತ್ಯಾ-
ದರದಿಂದಂ ನೆತ್ತಿಯೊಳ್ ಪೊತ್ತನುಪಮಸುಖದಿಂ ಬಾಳ್ವ ಭೃತ್ಯತ್ವಮಂ ಮ-
ದ್ಗುರುವೇ ನೀನಿತ್ತು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಗುರುವಿನಿಂದ ಶುದ್ಧಾತ್ಮನೂ. ಜಗತ್ಪೂಜ್ಯನೂ. ನಿಷ್ಕಾಮನೂ, ಶಾಂತಿಸಂಪನ್ನನೂ, ಸರ್ವಜ್ಞನೂ ಆಗುತ್ತಾನೆಂದು ಕವಿಯು ಹೇಳುತ್ತಾನೆ. ಶಿಷ್ಯನನ್ನು ಗುರುವು ಹರನಂತಹ ಮನುಷ್ಯನನ್ನು ಮಾಡುವುದರಿಂದ ಅವನು ಪರಮೇಶ್ವರನೆ.

1 ರಕ್ಷಾಶತಕಂ, ಪದ್ಯ ೬೫, ಸಂಪಾದಕರು : ಶಿ. ಶಿ. ಬಸವನಾಳ (೧೯೫೨)
2 ರಕ್ಷಾಶತಕಂ, ಪದ್ಯ ೭೪

ಎಂದು ಕವಿಯ ಭಾವನೆ.[1] ಲಿಂಗಪೂಜೆಯ ಉಜ್ವಲ ಚಿತ್ರಣಕ್ಕೆ ಹರಿಹರ ಕವಿಯ ಅನೇಕ ಪದ್ಯಗಳನ್ನು ರಕ್ಷಾಶತಕದಲ್ಲಿ ಕಾಣಬಹುದು. ಶಿವಪೂಜೆ ಮಾಡಿ, ಶಿವಸ್ತುತಿ ಹಾಡಿ. ಶಿವಕೀರ್ತನೆ ಕೇಳಿ. ಶಿವನ ಧ್ಯಾನ ಮಾಡಿ, ಶಿವನ ಹಿರಿಮೆಯನ್ನು ಹೊಗಳಿ, ಶಿವಭಕ್ತರು ದೇವನಿಗೆ ತೋರಿದ ಭಕ್ತಿಯ ಪರಿಗಳನ್ನು ನಟಿಸಿ ಕುಣಿದು ಶಿವಾನುಗ್ರಹವನ್ನು ಪಡೆವುದೇ ದೈವ ಭಕ್ತಿಯಾಗಿದೆ. ಈ ಭಕ್ತಿಯನ್ನು ಗುರುಮತ, ಶ್ರುತಿಸ್ಮೃತಿಮತ. ಇಷ್ಟಮತ, ಆದ್ಯರ ಮತಂಗಳಿಂದರಿಯಬೇಕೆಂದು ತಿಳಿಸಿದ್ದಾನೆ. ಭಕ್ತಿಯೇ ಈ ಜೀವನಕ್ಕೆ ದುಃಖನಿವಾರಕವೂ ಪರಮತಾರಕವೂ ಎಂಬುದನ್ನು ಇಂತು ಹೇಳಿದ್ದಾನೆ:

ಜನಿಯಿಸುತಿರ್ಪ ಕೋಟಿಜನನಂಗಳೊಳ್ ಉತ್ತಮಮುತ್ತಮೋತ್ತಮಂ
ಮನುಜಭವಂ, ವಿಚಾರಿಪೊಡಿದಂ ಪಡೆದುಂ ಮರುಳಾಗಿ ಸತ್ತೊಡೀ
ಜನನವಿದೆಂದು ಬರ್ಪುದು ? ವೃಥಾ ಕೆಡದಿರ್ ಕೆಡದಿರ್ ! ನಿರಂತರಂ
ನಿನಗೆ ಹಿತೋಪದೇಶಮಿದು ಮಾನವ ಪೂಜಿಸು ಹಂಪೆಯಾಳ್ದನಂ ॥[2]

ಈ ಭಕ್ತಿಯು ಫಲಾಪೇಕ್ಷೆಯಿಲ್ಲದೆ ನಡೆಯಬೇಕೆಂಬುದನ್ನು ಇಂತು ತಿಳಿಸುತ್ತಾನೆ :

ಆಱುತುಮರ್ಚಿಸುಬ್ಬರಿಸುತರ್ಚಿಸು ಮತ್ತೊತ್ತಿಯುತ್ತುಮರ್ಚಿಸಿಂ
ಪೇಱುತುಮರ್ಚಿಸುನ್ನತಿಯೊಳರ್ಚಿಸು ಕೂರ್ಪುತುಮರ್ಚಿಸೆಲ್ಲರೊಳ್
ಪೋಱುತುಮರ್ಚಿಸೀ ಜನನಮಂ ಪಡೆದಲ್ಲಿ ಮನುಷ್ಯ ಏನುಮಂ
ಪಾಱದೆಯರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ವನಂ ॥[3]

ಇಂತು ಪರಮೇಶ್ವರನನ್ನು ಅರ್ಚಿಸಿ, ಪೊಗಳಿ, ನೆನೆದು, ನೋಡಿ. ಆಶ್ರಯಿಸಿ, ನಂಬಿ, ಬಲ್ವಿಡಿದು ನಡೆಯುವುದೇ ದೈವ ಭಕ್ತಿಯ ಲಕ್ಷಣಗಳೆಂದು ಕವಿಯು ತಿಳಿಸಿದ್ದಾನೆ.

೩

ವಚನಕಾರರು ಸಾಮಾನ್ಯವಾಗಿ ಷಟ್ಸ್ಥಲಸಿದ್ಧಾಂತವನ್ನು ಅನುಭಾವದ ಮೂಲಕ ಬೋಧಿಸಿದ್ದಾರೆಂಬುದು ಸರ್ವ ವಿದಿತವಿದೆ. ಈ ಷಟ್ಸ್ಥಲವು ಮಾನವನು ದೇವನೊಡನೆ ಬೆರೆಯುವ ಸಾಧನೆಯ ಮಾರ್ಗವಾಗಿದೆ. ವಿವಿಧ ಆಚರಣೆ ಗಳಿಂದ ವಿವಿಧ ಹಂತಗಳಲ್ಲಿ ಜೀವನು ಪಡೆಯುವ ಆಧ್ಯಾತ್ಮಿಕ ವಿಕಾಸದ ವಿವರವೇ ಈ ಷಟ್ಸ್ಥಲಗಳ ಗುರಿಯಾಗಿದೆ. ಈ ಷಟ್ಸ್ಥಲಮಾರ್ಗಕ್ಕೆಯೇ ಶಕ್ತಿವಿಶಿಷ್ಟಾದ್ವೈತವೆಂದೂ, ಶಿವಾದ್ವೈತವೆಂದೂ, ದ್ವೈತಾದ್ವೈತವೆಂದೂ ಅಭಿಪ್ರಾಯ ಗಳು ವ್ಯಕ್ತವಾಗಿವೆ ವಚನವಾಙ್ಮಯದಲ್ಲಿ ಷಟ್ಸ್ಥಲಕ್ಕೆ ಪರ್ಯಾಯವಾಗಿ ಇತರ ಪದಗಳಾವುವೂ ಬಳಕೆಯಾದಂತಿಲ್ಲ ವೆಂದು ಎನಿಸುತ್ತದೆ. ಈ ಷಟ್ಸ್ಥಲದಲ್ಲಿಯೇ ಭಕ್ತಿಯ ವಿವಿಧ ಹಂತಗಳನ್ನೂ ಕಾಣುತ್ತೇವೆ. ಭಕ್ತಿಯು ಮೂಲತಃ ದೇವನಲ್ಲಿ ತೋರುವ ಅನುರಾಗವೇ. ಆದರೆ ವೀರಶೈವರಲ್ಲಿ ಅದು ಕೇವಲ ದೇವನಲ್ಲಿ ಮಾತ್ರ ತೋರುವ ಅನುರಾಗ ವಾಗಿರದೆ ಗುರು-ಜಂಗಮರಲ್ಲಿಯೂ, ಭಕ್ತಶರಣರಲ್ಲಿಯೂ ತೋರುವ ಗೌರವವೂ ಆಗಿದೆ. ದೇವನು ಜೀವಿಗಳಿಗೆ ಅಗೋಚರ. ಆತನು ಗೋಚರಿಸುವುದು ಯಾವುದಾದರೊಂದು ಜೀವಿಯ ಮೂಲಕವೇ. ಸದ್ಗುಣವುಳ್ಳವನಲ್ಲಿ ದೇವ ನಿದ್ದಾನೆಂಬುದೇ ಶಿವಶರಣರ ಮತ. ಈ ಕಾರಣದಿಂದಲೇ ಮಹಾಕವಿ ರಾಘವಾಂಕನು "ಅನ್ಯತವರಿಯದ ಹೊಲೆಯನಂ ನೆನೆಯೆ ಪುಣ್ಯ"ವೆಂದಿರುವುದು. ಹರಿಹರಕವಿಯು ಅನೇಕ ಶಿವಶರಣರ ರಗಳೆಗಳಲ್ಲಿ ಶಿವನೇಮ, ಶಿವವ್ರತದಿಂದ ಬಾಳಿದವರು, ಹುಸಿ ನುಡಿಯದ ಭಕ್ತರು,ಹುಸಿ ನಡೆಯದ ಭಕ್ತರು, ಶಿವಭಕ್ತಪ್ರೇಮಿಗಳು, ಶಿವನ ಮೇಲೆ ಆಣೆಯಿಟ್ಟು ಹುಸಿಯದವರು, ಕಾಯಕದಲ್ಲಿಯೇ ಶಿವನನ್ನು ಕಂಡ ಭಕ್ತರು. ಇಷ್ಟಲಿಂಗಾರಾಧನೆ ಮಾಡಿದವರು. ಸ್ಥಾವರ ಲಿಂಗಾರಾಧಕರು, ಶಿವನಿಗಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ಅನುಪಮರು—ಇತ್ಯಾದಿಯಾಗಿ ಭಕ್ತರ ವಿರಾಟ್ ಸ್ವರೂಪವನ್ನೇ ಕೊಟ್ಟಿರುವುದರಿಂದ ಅವರ ಬಗೆಗೆ ಸಂಪೂರ್ಣವಾಗಿ ವಿವರಿಸುವುದು ಅಸಾಧ್ಯವೇ. ಹರಿಹರನೇ ಹೇಳು ವಂತೆ ಆ ಭಕ್ತರ ವೈವಿಧ್ಯಗಳಿಂತಿವೆ :

---

1 ರಕ್ಷಾಶತಕಂ ೯೫, ೯೬

2 ಪಂಪಾಶತಕಂ ; ಪದ್ಯ ೮೪

3 ,, ,, ೭೬

ಪೂಜೆಯವರೊಂದು ದೆಸೆ, ನಿಷ್ಠೆಯವರೊಂದು ದೆಸೆ,
ಓಜೆಯವರೊಂದು ದೆಸೆ, ಒಲುಮೆಯವರೊಂದು ದೆಸೆ,
ಓದಿನವರೊಂದು ದೆಸೆ, ವೇದಿಸುವರೊಂದು ದೆಸೆ,
ವಾದಿನವರೊಂದು ದೆಸೆ, ಸಾಧುಗಳದೊಂದು ದೆಸೆ,
ಭಕ್ತಿಯವರೊಂದು ದೆಸೆ, ಯುಕ್ತಿಯವರೊಂದು ದೆಸೆ,
ಶಕ್ತಿಯವರೊಂದು ದೆಸೆ, ಮುಕ್ತಿಯವರೊಂದು ದೆಸೆ[1]
ಭಿನ್ನರುಚಿ ಭಿನ್ನಭಾವಂ ಭಕ್ತಿಯೆಲೆ ಮಗನೆ
ನಿನ್ನೆನ್ನ ವಶವೆ ಶರಣರ ಚರಿತ್ರಂ ಮಗನೆ
ನಾನೊಲಿವವರ್ಕೆಲರು ತಾವೊಲಿವವರ್ಕೆಲರು
ಏನೆಂಬೆ ಭಕ್ತಿಯಂ ಬಯಸುತಿಪ್ಪರ್ಕೆಲರು
ಇಂತೆಂದು ಘಟಿಯಿಸಲು ಬಾರದೆನ್ನಯಭಕ್ತಿ
**ಇಂತೊಂದು ತೆಜನೆನಲ್ಬಾರದೆನ್ನಯ ಭಕ್ತಿ**
ವೀರರುಂ ಶಾಂತರುಂ ನೇಮದಚಲಿತರುಂಟು
ಧೀರರುಂ ಗುಪ್ತರುಂ ಕರುಣಮುಳ್ಳವರುಂಟು.[2]

ಹೀಗೆ ಮಹಾಕವಿ ಹರಿಹರದೇವನೇ ಶಿವನ ವಾಣಿಯಾಗಿ ಈ ಮಾತು ಹೇಳಿರುವುದರಿಂದ ಭಕ್ತಿಯ ಸ್ವರೂಪ, ಅದರ ವಿವಿಧಮುಖಗಳನ್ನು ಹೀಗೆಯೇ ಎಂದು ಹೇಳಲಿಕ್ಕಾಗುವುದಿಲ್ಲ. ಹೀಗಿರುವುದು ಸತ್ಯವಾಗಿದ್ದರೂ ವೀರಶೈವರು ಸಾಕಾರವಾಗಿಯೂ ನಿರಾಕಾರವಾಗಿಯೂ ಪರಮಾತ್ಮನಲ್ಲಿ ಅನುರಕ್ತಿಯುಂಟಾಗುವಂತೆ ಭಕ್ತಿಯನ್ನು ಯೋಜಿಸಿದ್ದಾರೆ.

"ಹಣವಿರ್ದಾಗತಿ ಭಕ್ತಿ ನೆಣವಿರ್ದಾಗತಿ ಸೇವೆ ಗುಣವಿರ್ದಾಗತಿ ಮಾಡಿ ಮುಕ್ತಿಪಡೆಯಾತ್ಮಾ" ಎಂದು ಹೇಳಿರುವುದು ಗುರು-ಲಿಂಗ-ಜಂಗಮಭಕ್ತಿಯನ್ನೇ ಹೇಳುತ್ತದೆ. ಗುರು-ಜಂಗಮರಿಗೆ, ಭಕ್ತ-ಶರಣರಿಗೆ ಮಾಡುವ ಭಕ್ತಿ ಒಂದು ವಿಧದಿಂದ ಸಾಕಾರ ಶಿವನಿಗೆ ತೋರುವ ಪ್ರೇಮ. ಲಿಂಗಪೂಜೆ – ಲಿಂಗದ ನೆನಹುಗಳಿಂದುಂಟಾಗುವುದು ನಿರಾಕಾರ ಭಕ್ತಿಯ ದ್ಯೋತಕ. ಗುರು-ಲಿಂಗ-ಜಂಗಮಕ್ಕೆ, ಭಕ್ತ-ಶರಣರಿಗೆ ಕಿಂಕರನಾಗಿರುವಲ್ಲಿ ದಾಸಭಾವವೇ ಮುಖ್ಯ. 'ದಾಸೋಹಂ'ಭಾವದಲ್ಲಿ, 'ದಾಸೋಹಿ' ಎಂಬಲ್ಲಿ ಈ ಭಾವವೇ ಮುಖ್ಯ. ಭಕ್ತಸ್ಥಲದಲ್ಲಿ ಈ ಭಾವವೇ ಪ್ರಮುಖವಾದುದು. ಬಸವಣ್ಣನವರಂತೂ ಯಾವಾಗಲೂ ಕಿಂಕರನಾಗಿಯೇ ಇರಬೇಕೆಂದು ತಿಳಿಸಿದರು. ಪರಮಾತ್ಮನು ಸ್ವಾಮಿಯೂ, ಶಾಶ್ವತನೂ, ಅನುಪಮನೂ, ಅತ್ಯದ್ಭುತಶಕ್ತಿಯುಳ್ಳವನೂ, ಸರ್ವಶಕ್ತನೂ, ನಿತ್ಯನೂ, ಸರ್ವಕರ್ತ, ಸರ್ವಭಕ್ಷಕ, ಅತಿಮಹತ್—ಇತ್ಯಾದಿಯಾಗಿಯೂ, ಜೀವಿಯೂ, ಅಲ್ಪನೂ, ಕ್ಷಣಿಕನೂ, ಅಣುವೂ ಆಗಿರುವುದರಿಂದ ಆ ಪರಮಾತ್ಮನಿಗೆ ಕಿಂಕರನಾಗಿರುವುದೇ ಲೇಸೆಂದು ಭಾವಿಸುವುದು ವಿಹಿತ. ಇದೇ ಭಾವವು ಭಕ್ತಸ್ಥಲದಲ್ಲಿರುತ್ತದೆ. ಗುರುವಿನ ಮೂಲಕ ದೇವರಲ್ಲಿ, ಭಕ್ತರಲ್ಲಿ, ಶರಣರಲ್ಲಿ, ಸಾಹಿತ್ಯದಲ್ಲಿ ಶ್ರದ್ಧೆ ಹುಟ್ಟುತ್ತದೆ ಪ್ರಥಮದ ಈ ಅವಸ್ಥೆಯಲ್ಲಿ. ವೀರಶೈವತಲ್ಲಿ ಷಟ್ಸ್ಥಲಕ್ಕನುಗುಣವಾಗಿ ಭಕ್ತಿಯೂ ಆರು ವಿಧವೆಂದು ವಿಂಗಡಿತವಾಗಿದೆ : (೧) ಶ್ರದ್ಧಾಭಕ್ತಿ, (೨) ನಿಷ್ಠಾಭಕ್ತಿ (೩) ಅವಧಾನಭಕ್ತಿ (೪) ಅನುಭವಭಕ್ತಿ (೫) ಆನಂದಭಕ್ತಿ (೬) ಸಮರಸಭಕ್ತಿಯೆಂದು. ಶ್ರದ್ಧಾಭಕ್ತಿಯಲ್ಲಿ ತನುಮನೋವ್ಯಾಪಾರಗಳೆಲ್ಲವೂ ದೇವನವೆಂದು ಭಾವಿಸಿ ಅಂಗಕ್ರಿಯೆಗಳೆಲ್ಲವನ್ನೂ ಲಿಂಗಕ್ರಿಯೆಗಳಾಗಿ ಮಾರ್ಪಡಿಸಿಕೊಳ್ಳುವ ಕ್ರಿಯೆ ನಡೆಯುತ್ತದೆ. ನಿಷ್ಠಾಭಕ್ತಿಯಲ್ಲಿ ಮೂಲವಾದ ಧ್ಯೇಯ ವಸ್ತುವಿನಿಂದ ಬೇರೆಡೆಗೆ ಮನವನ್ನು ಹೋಗಗೊಡಲೀಯದೆ, ಆ ವಸ್ತುವಲ್ಲದೆ ಬೇರೆ ಆಧಾರವಿಲ್ಲೆಂದು ತಿಳಿಯುವುದೇ ಮುಖ್ಯ. ನಿಷ್ಠಾವಂತ ಗರತಿ ತನ್ನ ಪತಿಯನ್ನೇ ಸರ್ವಸ್ವವೆಂದು ತಿಳಿಯುವಂತೆ ಮಾಹೇಶ್ವರಸ್ಥಲದಲ್ಲಿ ಜೀವಿಯು ನಡೆಯಬೇಕಾಗುತ್ತದೆ. ಅವಧಾನ ಭಕ್ತಿಯಲ್ಲಿ ಲಿಂಗದೇವನಿಗೆ ಅರ್ಪಿಸಿದಲ್ಲದೆ ಏನನ್ನೂ ವ್ಯಕ್ತಿಯು ಸ್ವೀಕರಿಸದ ಅರ್ಪಣಾಭಾವವು ತಲೆದೋರಬೇಕು. ಪತಿ ಸ್ವೀಕರಿಸದ ಮುನ್ನ ಪತಿವ್ರತೆಯಾದವಳು ಯಾವ ವಸ್ತುವನ್ನೂ ತಾನು ಸ್ವೀಕರಿಸಳು – ಅಂತೆಯೇ 'ಪ್ರಸಾದಿ' ಸ್ಥಲದ ವ್ಯಕ್ತಿಯ ಭಕ್ತಿಯು ಮುಂದುವರಿದು ನಡೆಯುತ್ತದೆ. ಅನುಭವಭಕ್ತಿಯಲ್ಲಿ ಶಿವನಿಗಾಗಿಯೇ ಬದುಕು, ಅವನಿದ್ದರೆಯೇ ಬದುಕು ತನ್ನದು ; ತನ್ನ ಸುಖ-ದುಃಖಗಳಿಗೆಲ್ಲ ಶಿವನೇ ಕಾರಣ. ಶಿವನಿಗಾಗಿಯೇ ತಾನು ಬಾಳಬೇಕು

1 ಬೇಡರಕಣ್ಣಪ್ಪನ ರಗಳೆ, 'ಶರಣಚರಿತಮಾನಸಂ', ಪುಟ ೧೪೩-೪೪ ; ಸಂಪಾದಕರು : ಎಚ್. ದೇವೀರಪ್ಪ, ಎಂ.ಎ.; (೧೯೬೪)

2 ಕಲಿಕಾಮದೇವರ ರಗಳೆ ; 'ಶರಣಚರಿತಮಾನಸಂ', ಪುಟ ೩೦೪

ಎಂಬ ಭಾವ ತಲೆದೋರುವುದೇ ಅನುಭವಭಕ್ತಿ; ಇದು ಪ್ರಾಣಲಿಂಗಸ್ಥಲದಲ್ಲಿ ನಡೆಯುತ್ತದೆ. ಆನಂದಭಕ್ತಿಯಲ್ಲಿ "ಶರಣಸತಿ-ಲಿಂಗಪತಿ" ಭಾವ ನೆಲೆಗೊಂಡು ಶ್ರೇಷ್ಠ ಪತಿವ್ರತೆಯು ಗಂಡನಿಗಾಗಿ ತನ್ನನ್ನೂ ಅರ್ಪಿಸಲು ಸಿದ್ಧಳಿರುವಂತೆ ಅರ್ಪಿಸುವ ಭಾವವನ್ನು ತಾಳಬೇಕು. ಇದು ಶರಣಸ್ಥಲದಲ್ಲಿ ಕಂಡುಬರುತ್ತದೆ. ಕೊನೆಯದಾದ ಸಮರಸಭಕ್ತಿಯಲ್ಲಿ ಅಂಗ-ಲಿಂಗಭಾವವೆಲ್ಲ ಒಂದೇ ಆಗಿ ಸಮಸ್ತವೂ ಲಿಂಗವಾಗುತ್ತದೆ. ಐಕ್ಯಸ್ಥಲದಲ್ಲಿ ಇದು ತಲೆದೋರುತ್ತದೆ. ಎಲ್ಲವನ್ನೂ ಭಗವಂತನಿಗೆ ಅರ್ಪಿಸಿದಮೇಲೆ ತನಗಾಗಿ ಉಳಿಯುವುದೇನು ? ಸಮುದ್ರದಲ್ಲಿ ಬೆರೆತ ನದಿಯಂತಾಗುತ್ತಾನೆ ವ್ಯಕ್ತಿ; ಆಗ ನಾನು-ನೀನೆಂಬ ಉಭಯಭೇದವಳಿದುಹೋಗುತ್ತದೆ. ಅದ್ವೈತದ ಆಚೆಯು ಸಿಲುಕಡೆ ಅಂಗನಿಗೆ ಉಂಟಾಗುತ್ತದೆ. ಭಕ್ತಸ್ಥಲದಲ್ಲಿದ್ದ ದ್ವೈತಭಾವವು ಸಂಪೂರ್ಣ ಅಳಿದುಹೋಗುತ್ತದೆ.[1] ಒಟ್ಟಿನಲ್ಲಿ ವೀರಶೈವರ ಭಕ್ತಿಯು ತ್ರಿವಿಧಭಕ್ತಿಯೆಂದು ಹೆಸರಾಗಿ ಸಾಕಾರ-ನಿರಾಕಾರದ ಅರ್ಚನೆಯನ್ನೂ, ದ್ವೈತದಿಂದ ಅದ್ವೈತದ ಸ್ಥಿತಿಯನ್ನೂ ಒಳಗೊಂಡು, ಭಕ್ತಿಯು ಎಲ್ಲ ವಿಧಗಳಲ್ಲಿಯೂ ಶ್ರೇಷ್ಠವಾದ ಮಧುರಭಕ್ತಿಯನ್ನೇ – ಎಂದರೆ ಸತಿ-ಪತಿಭಾವವನ್ನೇ ಸ್ಥಾಯಿಯಾಗಿರಿಸಿಕೊಂಡು ಲಿಂಗದೇವನೊಡನೆ ಪಡೆವ ಸಮರಸವನ್ನು ಬೋಧಿಸುವ ಶ್ರೇಷ್ಠಮಾರ್ಗವಾಗಿದೆಯೆಂದು ಹೇಳಬೇಕು; ಅಲ್ಲದೆ ಅತ್ಯಂತ ಜ್ಞಾನಪೂರ್ಣವೂ ಸಾತ್ವಿಕವೂ ಆಗಿದೆಯೆಂದು ಹೇಳಬೇಕು.

---

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ !
ಜ್ಯೋತಿಯ ಬಲದಿಂದ ತಮಾಂಧದ ಕೇಡು ನೋಡಯ್ಯಾ !
ಸತ್ಯದ ಬಲದಿಂದ ಅಸತ್ಯದ ಕೇಡುನೋಡಯ್ಯಾ !
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ !
ಕೂಡಲಸಂಗನ ಶರಣರ ಅನುಭಾವದಿಂದ
ಎನ್ನಭವದ ಕೇಡು ನೋಡಯ್ಯಾ !

ಬಸವಣ್ಣನವರು

[1] ಉಡುತಡಿಯ ಮಹಾದೇವಿಯಕ್ಕನವರ ಸಾಹಿತ್ಯ; ಪ್ರಸ್ತಾವನೆ ಪುಟ ೫೦-೫೫; ಸಂಪಾದಕರು: ಬಿ. ಸಿ. ಜವಳಿ ಮತ್ತು ವೀ. ಎಂ. ಮಲ್ಲಾಬಾದಿ (೧೯೬೩)

# ಭಕ್ತಿಗಳು ಮತ್ತು ಷಟ್‌ಸ್ಥಲ

ಡಾ. ಎಸ್. ಜಿ. ಮಹಾದೇವಪ್ಪ

## (ಅ) ಭಕ್ತಿಗಳು

**೧. ಶಕ್ತಿ ಮತ್ತು ಅದರ ಚಲನೆ :** ವೀರಶೈವದರ್ಶನದಲ್ಲಿ ಶಿವತತ್ತ್ವಕ್ಕಿರುವಷ್ಟೇ ಮಹತ್ವದ ಸ್ಥಾನ ಶಕ್ತಿ ತತ್ತ್ವಕ್ಕೂ ಇದೆ. ಇಲ್ಲಿ, ಶಕ್ತಿಯು ವಾಸನೆ ಅಥವಾ ಬಣ್ಣದಂತಹ ಒಂದು ಗುಣವೆಂದಲ್ಲದೆ, ಒಂದು ಸಾಮಗ್ರಿಯೆಂದು ಪರಿಗಣಿತವಾಗಿದೆ. ಶಿವನು ತನ್ನಲ್ಲೇ ಅವಿಭಾಜ್ಯವಾಗಿ ಬೆರೆತಿರುವ ಈ ಸಾಮಗ್ರಿ(ಶಕ್ತಿ)ಯನ್ನು ಬಳಸಿಕೊಂಡು ವಿಶ್ವದ ವಿವಿಧ ವಸ್ತುಗಳನ್ನು ರಚಿಸುತ್ತಾನೆ ಎಂಬುದು ವೀರಶೈವರ ನಿಲುವು.

ಸೃಷ್ಟಿಯ ವಚನಗಳನ್ನು ಪರಿಶೀಲಿಸಿದಾಗ, ಶಕ್ತಿಯು ಕಲಾಶಕ್ತಿ (ಅಥವಾ ಶಕ್ತಿ) ಮತ್ತು ಭಕ್ತಿ-ಶಕ್ತಿ (ಅಥವಾ ಭಕ್ತಿ) ಎಂದು ಎರಡು ವಿಧವಾಗಿದೆ ಎಂಬುದು ವ್ಯಕ್ತವಾಗುತ್ತದೆ. ನಿಃಕಲ ಲಿಂಗದೊಡನೆ ಅವಿನಾಭಾವದಿಂದ ಬೆರೆತಿರುವ ಶಕ್ತಿಯಲ್ಲಿ ಕ್ಷೋಭೆ ಅಥವಾ ಚಲನೆ ಉಂಟಾದಾಗ ಅದು ಲಿಂಗಸ್ಥಲ ಮತ್ತು ಅಂಗಸ್ಥಲ ಎಂಬ ಎರಡು ಭಾಗವಾಗುತ್ತದೆ. ಆಗ ಅವರಲ್ಲಿರುವ ಶಕ್ತಿಯೂ ಎರಡಾಗಿ ಲಿಂಗಸ್ಥಲದಲ್ಲಿರುವ ಶಕ್ತಿಯು ಕಲಾಶಕ್ತಿಯೆಂದೂ, ಅಂಗಸ್ಥಲದಲ್ಲಿರುವ ಶಕ್ತಿಯು ಭಕ್ತಿಯೆಂದೂ ಎನಿಸಿಕೊಳ್ಳುತ್ತದೆ. ಲಿಂಗಸ್ಥಲದಲ್ಲಿರುವ ಶಕ್ತಿಯು ಚಿತ್-ಶಕ್ತಿ, ಆದಿಶಕ್ತಿ, ಪರಾಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂದು ಆರು ವಿಧವಾಗಿದೆ ; ಮತ್ತು ಪರಶಿವನು ಈ ಶಕ್ತಿಗಳನ್ನು ಬಳಸಿಕೊಂಡು ವಿಶ್ವದ ಚರಾಚರವಸ್ತುಗಳನ್ನು ಸೃಷ್ಟಿಸುತ್ತಾನೆಂದು ಹೇಳಲಾಗಿದೆ. ಮನುಷ್ಯನ ದೇಹದ ವಿವಿಧ ಭಾಗಗಳು ರಚಿತವಾಗಿರುವುದು ಈ ಶಕ್ತಿಗಳಿಂದಲೇ.

**೨. ಅಂಗದ ಗುರಿ :** ಅಂಗಸ್ಥಲವೆಂದರೆ ಅಂಗಗಳ (ಆತ್ಮರುಗಳ) ಗುಂಪು. ಸೃಷ್ಟಿಪೂರ್ವದಲ್ಲಿ ಅಂಗಗಳಲ್ಲಿ ಪರಸ್ಪರ ವ್ಯತ್ಯಾಸವಾಗಲೀ ಪ್ರತ್ಯೇಕತೆಯಾಗಲೀ ಇರುವುದಿಲ್ಲ. ವಿಶ್ವಸೃಷ್ಟಿಯಾದ ಮೇಲೆ ಈ ಗುಂಪಿನಲ್ಲಿರುವ ಅಂಗಗಳು ಬೇರೆಬೇರೆಯಾಗಿ, ಪ್ರತಿಯೊಂದು ಅಂಗವೂ ತನ್ನ ಕರ್ಮಕ್ಕನುಸಾರವಾಗಿ, ಶಕ್ತಿಗಳಿಂದ ರಚಿತವಾದ ದೇಹವನ್ನು ಪಡೆದುಕೊಳ್ಳುತ್ತದೆ. ಎಲ್ಲಿಯವರೆಗೆ ಅದು ಶಕ್ತಿಗಳಿಗೆ ಅಧೀನವಾಗಿ ಸುಖದುಃಖಗಳನ್ನು ಅನುಭವಿಸಿ, ತಿರುತಿರುಗಿ ಭವಚಕ್ರದಲ್ಲಿ ತಿರುಗುತ್ತಿರುತ್ತದೆಯೋ ಅಲ್ಲಿಯವರೆಗೆ ಅದು ಶಿವನಿಂದ ದೂರವಾಗಿರುತ್ತದೆ. ವೀರಶೈವನಾದವನ ಮುಖ್ಯ ಗುರಿಯೆಂದರೆ ಶಿವನಿಂದ ದೂರವಾಗಿರದೆ ಅವನಲ್ಲಿ ಬೆರೆಯುವುದು. ಈ ಸ್ಥಿತಿಗೆ ಲಿಂಗಾಂಗಸಾಮರಸ್ಯ ಎಂದು ಹೆಸರು. ಈ ಸ್ಥಿತಿಯನ್ನು ತಲುಪಿದವನಿಗೆ ಶಕ್ತಿಗಳ ಪ್ರಭಾವವಿರುವುದಿಲ್ಲ ; ಅಂದರೆ ಅರಿಷಡ್ವರ್ಗ ಇತ್ಯಾದಿ ಅನಿಷ್ಟಗಳ ಸೋಂಕಿರುವುದಿಲ್ಲ ; ಕರ್ಮದ ಪರಿಣಾಮವಾದ ಪುನರ್ಜನ್ಮವಿರುವುದಿಲ್ಲ.

**೩. ಭಕ್ತಿಯೆಂದರೇನು ? :** ಒಂದು ವಿಶಿಷ್ಟರೀತಿಯ ದೇಹವನ್ನು ಪಡೆಯಲು ಶಕ್ತಿಗಳ ಸಂಯೋಜನೆ ಹೇಗೆ ಅವಶ್ಯಕವೋ ಹಾಗೆಯೇ ಆ ದೇಹದ ದುಷ್ಪರಿಣಾಮಗಳನ್ನು ತಪ್ಪಿಸಿಕೊಂಡು ಲಿಂಗದೊಡನೆ ಬೆರೆಯಲು ಭಕ್ತಿ ಅವಶ್ಯ. ವಚನಕಾರರು ಶಕ್ತಿಗಳ ಸ್ವರೂಪ, ವಿಧ ಇತ್ಯಾದಿಗಳನ್ನು ಕೂಲಂಕಷವಾಗಿ ವಿವೇಚಿಸಿದಷ್ಟು ಭಕ್ತಿಗಳ ಬಗೆಗೆ ವಿವೇಚಿಸಿಲ್ಲ. ಭಕ್ತಿಗಳ ಬಗೆಗೆ ವಚನಗಳಲ್ಲಿ ಸಿಗುವ ಮಾಹಿತಿಯು ತೃಪ್ತಿಕರವಾಗಿಲ್ಲ ; ಸಿಗುವಷ್ಟು ಮಾಹಿತಿಯೂ ಸ್ಪಷ್ಟವಾಗಿಲ್ಲ. ವಚನಗಳ ಆಧಾರದ ಮೇಲೆ ಇಷ್ಟನ್ನು ಮಾತ್ರ ಸ್ಪಷ್ಟವಾಗಿ ಹೇಳಬಹುದು : ತನ್ನಲ್ಲಿರುವ ಭಕ್ತಿಯ ಸಹಾಯದಿಂದ ಮಾನವನು ಶಕ್ತಿಗಳ ದುಷ್ಟಪ್ರಭಾವವನ್ನು ಇಲ್ಲವಾಗಿಸಿ ಲಿಂಗದಲ್ಲಿ ಐಕ್ಯವಾಗಲು ಸಾಧ್ಯವಿದೆ. ಆದರೂ ಇಲ್ಲಿ ಅನೇಕ ಪ್ರಶ್ನೆಗಳು ಏಳುತ್ತವೆ. ಅವುಗಳಲ್ಲಿ ಇವು ಮುಖ್ಯವಾದುವು : ಭಕ್ತಿ ಎಂಬುದು ಶಕ್ತಿಯಂತಹ ಒಂದು ವಸ್ತುವೋ ಅಲ್ಲವೋ? ಅದಕ್ಕೂ ಆತ್ಮಕ್ಕೂ ಇರುವ ಸಂಬಂಧವೇನು? ಭಕ್ತಿಗಳಿಗೂ ಶಕ್ತಿಗಳಿಗೂ ಇರುವ ಸಂಬಂಧವೇನು?

ಭಕ್ತಿಯೆಂಬುದು ಶಕ್ತಿಯಂತಹ ಒಂದು ತತ್ತ್ವವಾಗಿದ್ದರೆ, ಅದು ಮೂವತ್ತಾರು ತತ್ತ್ವಗಳಲ್ಲಿ ಒಂದಾಗಿರ

ಬೇಕಿತ್ತು. ದೇಹದ ವಿವಿಧ ಭಾಗಗಳು ವಿವಿಧ ಶಕ್ತಿಗಳಿಂದ ರಚಿತವಾಗಿರುವಂತೆ ಭಕ್ತಿಗಳಿಂದ ರಚಿತವಾದ ಭಾಗಗಳು ಯಾವುವೂ ಇಲ್ಲ ಎಂಬುದು "ಕರಣಹಸಿಗೆ"ಯಿಂದ ವ್ಯಕ್ತವಾಗುತ್ತದೆ. ಆದರೆ ಭಕ್ತಿಗಳು ಅಂಗದ ಜೊತೆಯಲ್ಲಿರುತ್ತವೆ. ಹಾಗೂ ಅವುಗಳ ಸಹಾಯದಿಂದ ಅಂಗವು ಲಿಂಗದೊಡನೆ ಸಾಮರಸ್ಯ ಪಡೆಯುತ್ತದೆ ಎಂದಾಗ, ಅವುಗಳು ಶಕ್ತಿಗಳ ಪ್ರಭೇದಗಳಾದ ವಸ್ತುಗಳೋ ಅಥವಾ ಕೇವಲ ಒಂದು ವಿಶಿಷ್ಟ ರೀತಿಯ ಆಲೋಚನೆಯೋ ಎಂಬ ಪ್ರಶ್ನೆಗಳು ಏಳುತ್ತವೆ.

ಶಕ್ತಿಗಳ ವಿವಿಧ ರೂಪಗಳಾದ ಬುದ್ಧಿ, ಅಹಂಕಾರ, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳು ತಿಳಿಯುತ್ತವೆ. ಯೋಚಿಸುತ್ತವೆ, ತೀರ್ಮಾನಿಸುತ್ತವೆ, ಕೆಲಸಮಾಡುತ್ತವೆ ಎಂದಾಗ ಅವುಗಳಿಗೆ ತಮ್ಮ ಸ್ವ-ಇಚ್ಛೆಯಿಂದ ಹೀಗೆ ಮಾಡುವ ಸಾಮರ್ಥ್ಯವಿದೆಯೇನೋ ಎನಿಸುತ್ತದೆ. ಆದರೆ ಕೆಲವುವೇಳೆ ವಚನಗಳು ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮುಂತಾದವು ಆತ್ಮನ ಇಚ್ಛೆಗನುಸಾರವಾಗಿ ವರ್ತಿಸುತ್ತವೆ ಎಂದೂ ತಿಳಿಸುತ್ತವೆ. ಶಕ್ತಿಗಳು ನಿಜವಾಗಿಯೂ ಅಚೇತನ ವಸ್ತುಗಳಾದ್ದರಿಂದ, ಅವುಗಳಿಗೆ ವಿವಿಧ ರೀತಿಯಲ್ಲಿ ವರ್ತಿಸುವ ಸಾಮರ್ಥ್ಯ ಬರುವುದು ಚೈತನ್ಯವಸ್ತುವಾದ ಆತ್ಮನ (ಅಂಗದ) ಸಹವಾಸದಿಂದಲೇ. ಆದರೂ ಕೆಲವೊಮ್ಮೆ ಆತ್ಮವು ಈ ಶಕ್ತಿಗಳಿಂದ ರಚಿತವಾದ ಇಂದ್ರಿಯಗಳ ಪ್ರಭಾವ ಕ್ಕೊಳಗಾಗಿ ಕರ್ಮವನ್ನು ಮಾಡುತ್ತದೆ ಎಂದು ಹೇಳುವುದುಂಟು. ಆಗಲೂ, ಇಂದ್ರಿಯಗಳು ತಾವೇ ಸುಖವನ್ನು ಅನುಭವಿಸಲು ಇಚ್ಛಿಸುತ್ತವೆ ಎಂದಾಗಲೀ, ಇಂದ್ರಿಯಗಳು ಆತ್ಮವನ್ನು ಪ್ರೇರೇಪಿಸುತ್ತವೆ ಎಂದಾಗಲೀ ಅರ್ಥೈಸಿದರೆ ತಪ್ಪಾಗುತ್ತದೆ: ಆತ್ಮವು ಇಂದ್ರಿಯಗಳಿಗೆ ಸಂಬಂಧಿಸಿದ ಸುಖವನ್ನು ಪಡೆಯಲು ಇಚ್ಛಿಸುತ್ತದೆ ಎಂಬುದೇ ಅದರ ನಿಜ ವಾದ ಅರ್ಥ. ಅಂದರೆ, ಸುಖವನ್ನಾಗಲಿ ದುಃಖವನ್ನಾಗಲಿ ಅನುಭವಿಸುವುದು ಆತ್ಮವೇ ಹೊರತು, ಶಕ್ತಿಯಲ್ಲ. ಅದ ಕಾರಣ ಧಾರ್ಮಿಕಭಾವನೆಗಳು ಆತ್ಮದಲ್ಲಿಯೂ ಅಧಾರ್ಮಿಕಭಾವನೆಗಳು ಶಕ್ತಿಯಲ್ಲಿಯೂ ಹುಟ್ಟುತ್ತವೆ, ಎಂದರೆ ತಪ್ಪಾಗುತ್ತದೆ. ಎಲ್ಲ ಭಾವನೆಗಳೂ ಜನಿಸುವುದು ಆತ್ಮದಲ್ಲಿಯೇ ಹೊರತು ಶಕ್ತಿಯಲ್ಲಿ ಅಲ್ಲ. ಶಕ್ತಿಗಳ ಪ್ರಭಾವವನ್ನು ಕಡಿಮೆ ಮಾಡಬೇಕು ಎಂಬ ಆದೇಶವನ್ನು ಗಮನಿಸಿದರೆ, ಹಾಗೆ ಮಾಡಬಲ್ಲ ಸಾಮರ್ಥ್ಯ ಆತ್ಮಕ್ಕೆ ಮಾತ್ರವಿದೆ ಎಂಬುದು ವಿದಿತವಾಗುತ್ತದೆ.

ಹೀಗೆಂದಮಾತ್ರಕ್ಕೆ ಆತ್ಮವು ಅಂತಃಕರಣಗಳ ಸಹಾಯವಿಲ್ಲದೆ ಮಾನಸಿಕ ಹಾಗೂ ಬೌದ್ಧಿಕಕ್ರಿಯೆಗಳನ್ನೂ. ಕರ್ಮೇಂದ್ರಿಯಗಳ ಸಹಾಯವಿಲ್ಲದೆ ಕರ್ಮಗಳನ್ನೂ ಮಾಡಬಲ್ಲದು ಎಂದರ್ಥವಲ್ಲ. ಕರ್ಮಗಳನ್ನು ಮಾಡಲು ಕರ್ಮೇಂದ್ರಿಯಗಳು ಹೇಗೆ ಅಗತ್ಯವೋ ಹಾಗೆಯೇ ಯೋಚಿಸಲು ಅಥವಾ ತೀರ್ಮಾನಿಸಲು ಅಂತಃಕರಣಗಳು ಅಗತ್ಯ. ಆದ್ದರಿಂದ ಯಾವ ಶಕ್ತಿಗಳ ಸಂಪರ್ಕದಿಂದ ಆತ್ಮಕ್ಕೆ ಬಂಧನವುಂಟಾಯಿತೋ ಅವೇ ಶಕ್ತಿಗಳ ಸಂಪರ್ಕದಿಂದ ಮಾತ್ರ ಲಿಂಗಾಂಗಸಾಮರಸ್ಯ ಉಂಟಾಗಲು ಸಾಧ್ಯ.

ಹಾಗಾದರೆ ಭಕ್ತಿಗಳು ಯಾವುವು? ಅವು ಶಕ್ತಿಗಳ ಪ್ರಭಾವವನ್ನು ಹೇಗೆ ಕಡಿಮೆ ಮಾಡಬಲ್ಲವು?

'ಭಕ್ತಿ'ಗೆ ಸಾಮಾನ್ಯವಾಗಿ 'ಆರಾಧನೆ', 'ನಿಷ್ಠೆ' ಎಂಬರ್ಥವಿದೆ. ಆದರೆ ಭಕ್ತಿಯು ಭಕ್ತನ ಒಂದು ಮಾನಸಿಕ ಸ್ಥಿತಿಯೂ ಅಲ್ಲದೆ, ಆ ವ್ಯಕ್ತಿಯ ಜೀವನವನ್ನು ಪೂರ್ಣವಾಗಿ ಮಾರ್ಪಾಟು ಮಾಡಿ, ಅವನನ್ನು ಧಾರ್ಮಿಕವಾಗಿ ಜೀವಿಸುವಂತೆ ಪ್ರೇರೇಪಿಸುವ ಒಂದು ಶಕ್ತಿ. ಅಂತಹ ಒಂದು ಶಕ್ತಿ ಕಲಾಶಕ್ತಿಯಾಗಿರಲು ಸಾಧ್ಯವಿಲ್ಲ. ಏಕೆಂದರೆ, ಕಲಾಶಕ್ತಿಗಳು ಬಂಧನವನ್ನುಂಟುಮಾಡುತ್ತವೆಯೇ ಹೊರತು, ಮೋಕ್ಷವನ್ನಲ್ಲ. ಅನೇಕ ವೇಳೆ ಶಕ್ತಿ (ಕಲಾಶಕ್ತಿ) ಗಳನ್ನು ದೇಹಶಕ್ತಿಗಳೆಂದೂ, ಭಕ್ತಿಗಳನ್ನು ಆತ್ಮಶಕ್ತಿಗಳೆಂದೂ ಕರೆಯುವುದುಂಟು. ಹಾಗೆಯೇ ಲಿಂಗಸ್ಥಲದಲ್ಲಿ ಕಲಾ ಶಕ್ತಿಗಳಿರುತ್ತವೆ ಎಂದೂ ಅಂಗಸ್ಥಲದಲ್ಲಿ ಭಕ್ತಿಶಕ್ತಿಗಳಿರುತ್ತವೆ ಎಂದೂ ಸೃಷ್ಟಿಯ ವಚನಗಳು ಹೇಳುತ್ತವೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಶಕ್ತಿ ಮತ್ತು ಭಕ್ತಿಗಳು ಎರಡೂ ಬೇರೆ ಬೇರೆ ವಸ್ತುಗಳಾಗಿರದೆ ಒಂದು ವಸ್ತುವಿನ ಎರಡು ಬೇರೆ ಬೇರೆ ರೂಪಗಳು ಎಂದು ತಿಳಿಯುತ್ತದೆ. ಅಂಗವು ಶುದ್ಧವಾದಾಗ ಮಾತ್ರ ಕಲಾಶಕ್ತಿಗಳು ಭಕ್ತಿಗಳಾಗಿ ಮಾರ್ಪಡುತ್ತವೆ. ಆದ್ದರಿಂದಲೇ ಅಂಗದ ಜೊತೆಗೆ ಭಕ್ತಿಗಳಿರುತ್ತವೆ ಎನ್ನುವುದು. ಅಂದರೆ, ಶಕ್ತಿಯು ಸೃಷ್ಟಿಮುಖಿ ವಾದರೆ ಕಲಾಶಕ್ತಿಯೆಂದೂ ಅದೇ ಶಕ್ತಿ ಮೋಕ್ಷಮುಖವಾದರೆ ಭಕ್ತಿಯೆಂದೂ ಎನಿಸಿಕೊಳ್ಳುತ್ತದೆ.

**೪. ಭಕ್ತಿಗಳ ಕ್ಷೋಭೆ:** ಮೊದಲು ಪರಶಿವನಿಗೆ ಸೃಷ್ಟಿಸಬೇಕೆಂಬ ಇಚ್ಛೆಯುಂಟಾದಾಗ ಶಕ್ತಿಯಲ್ಲಿ ಕ್ಷೋಭೆ ಯುಂಟಾಗುತ್ತದೆ; ಹಾಗೂ ಅದರ ಪರಿಣಾಮವಾಗಿ ಸಕಲ ವಸ್ತುಗಳ ಸೃಷ್ಟಿಯಾಗುತ್ತದೆ: ಅದರ ಪರಿಣಾಮವಾಗಿ. ಅಂಗವು ದೇಹಶಕ್ತಿಗಳ ಬಂಧನಕ್ಕೊಳಗಾಗುತ್ತದೆ. ಅಂಗವು ತನ್ನ ಮೊದಲಿನ ಸ್ಥಾನವನ್ನೂ ಸ್ಥಿತಿಯನ್ನೂ ಪಡೆಯ ಬೇಕಾದರೆ—ಅಂದರೆ, ಲಿಂಗದೊಡನೆ ಬೆರೆಯಬೇಕಾದರೆ—ಅದರಲ್ಲಿರುವ ಭಕ್ತಿಗಳ ಜಾಗೃತಿಯಾಗಬೇಕು. ಭಕ್ತಿಗಳ

ಜಾಗೃತಿಯಾಯಿತೆಂದರೆ, ಅಂಗವು ತನ್ನ ಮೂಲಸ್ಥಾನದ ಬಗೆಗೆ ತಿಳಿದುಕೊಂಡು ಅದನ್ನು ತಲುಪಬೇಕೆಂಬ ತೀರ್ಮಾನವನ್ನು ಕೈಕೊಂಡಂತೆಯೇ. ಆದರೆ ಅಂತಹ ಜಾಗೃತಿ ಹೇಗಾಗುತ್ತದೆ ? ವಚನಗಳಲ್ಲಿ ಬರುವ 'ಸಂಸಾರಹೇಯಸ್ಥಳ', 'ಪಿಂಡಜ್ಞಾನಸ್ಥಳ'ಗಳನ್ನು ಪರೀಕ್ಷಿಸಿದರೆ, ಪ್ರಪಂಚವು ಏಕಿದೆ ? ಅದರ ಸ್ವರೂಪವೆಂತಹುದು ? ಮನುಷ್ಯನಿಗೆ ಸುಖದುಃಖಗಳು ಹೇಗೆ ಉಂಟಾಗುತ್ತವೆ ? ಅವನ ಬಾಳಿನ ಗುರಿಯೇನು ? ಮುಂತಾದ ಪ್ರಶ್ನೆಗಳ ಪರಿಶೀಲನೆಯಿಂದ ಭಕ್ತಿಗಳ ಜಾಗೃತಿ ಮತ್ತು ವೃದ್ಧಿಯಾಗುತ್ತದೆ ಎಂಬುದು ವ್ಯಕ್ತವಾಗುತ್ತದೆ. ಅಂತಹ ಜಾಗೃತಿ ಒಬ್ಬ ಗುರುವಿನ ಉಪದೇಶದಿಂದಲೂ ಆಗಬಹುದು. ಅಂತೂ, ಭಕ್ತಿಗಳ ಜಾಗೃತಿಯಾಗದೆ ಲಿಂಗಾಂಗಸಾಮರಸ್ಯ ಅಸಾಧ್ಯ.

## (ಆ) ಭಕ್ತಿ ಮತ್ತು ಅಂಗಸ್ಥಲಗಳು

**೫. ಸ್ಥಲ :** ಸ್ಥಲ ಅಥವಾ ಸ್ಥಳ ಎಂಬ ಪದಕ್ಕೆ ವಚನಸಾಹಿತ್ಯದಲ್ಲಿ ಕನಿಷ್ಠಪಕ್ಷ ಮೂರು ಅರ್ಥಗಳಾದರೂ ಇವೆ. 'ಸದಾಶಿವ', 'ನಿಃಕಲಲಿಂಗ' ಮತ್ತು 'ಸ್ಥಳ' ಈ ಮೂರು ಪದಗಳೂ ಸಮಾನಾರ್ಥದಲ್ಲಿ ಉಪಯೋಗವಾಗಿವೆ. ಸ್ಥಲವು ಲಿಂಗಸ್ಥಲ ಮತ್ತು ಅಂಗಸ್ಥಲವಾಗಿ ಭಾಗವಾಗುತ್ತದೆ ಎಂದಾಗ, ಅದಕ್ಕೆ 'ನಿಃಕಲಲಿಂಗ' ಎಂಬ ಅರ್ಥ ಬರುತ್ತದೆ. ಎರಡನೆಯದಾಗಿ, ಮನುಷ್ಯನ ದೇಹದಲ್ಲಿ ಆರು ಚಕ್ರಗಳಿವೆಯೆಂದೂ ಆ ಆರು ಚಕ್ರಗಳಲ್ಲಿ ಆರು ಲಿಂಗಗಳಿವೆಯೆಂದೂ ಹೇಳಿದಾಗ, ಅಂಗ ಮತ್ತು ಲಿಂಗಗಳು ಬೆರೆಯುವ ಸ್ಥಳಗಳೇ ಚಕ್ರಗಳೆಂದು ಅರ್ಥವಾಗುತ್ತದೆ. ಉದಾಹರಣೆಗೆ, 'ಆಚಾರಲಿಂಗಸ್ಥಲ' ಎಂಬುದರ ನಿಹಿತಾರ್ಥವನ್ನು ಗಮನಿಸಿ. ಮೂರನೆಯದಾಗಿ, 'ಸ್ಥಲ'ಕ್ಕೆ 'ಹಂತ' ಎಂಬ ಅರ್ಥವೂ ಉಂಟು. ಉದಾಹರಣೆಗೆ, ಮುಮುಕ್ಷುವು ಮೊದಲು ಭಕ್ತಸ್ಥಲದಲ್ಲಿಯೂ ಕೊನೆಯಲ್ಲಿ ಐಕ್ಯಸ್ಥಲದಲ್ಲಿಯೂ ಇರುತ್ತಾನೆ ಎಂಬ ಪ್ರಯೋಗಗಳನ್ನು ಗಮನಿಸಿ.

**೬. ಸ್ಥಲಗಳ ಸಂಖ್ಯೆ :** ತನ್ನ ಗುರಿಯ ಬಗ್ಗೆ ಅರಿವು ಮೂಡಿದವನು ಅದನ್ನು ಹೇಗೆ ಸಾಧಿಸಬೇಕೆಂದು ತಿಳಿದುಕೊಳ್ಳಲು ಒಬ್ಬ ಯೋಗ್ಯ ಗುರುವಿನ ಬಳಿ ಹೋಗಿ, ಗುರು-ಲಿಂಗ-ಜಂಗಮನೊಡನೆ ಹೇಗೆ ವ್ಯವಹರಿಸಬೇಕೆಂಬುದನ್ನೂ; ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರಗಳನ್ನು ಹೇಗೆ ಮತ್ತು ಏಕೆ ಉಪಯೋಗಿಸಬೇಕೆಂಬುದನ್ನೂ; ಪ್ರಸಾದ ಮತ್ತು ಪಾದೋದಕಗಳನ್ನು ಹೇಗೆ ಮತ್ತು ಏಕೆ ಪಡೆಯಬೇಕೆಂಬುದನ್ನೂ ಮೊದಲು ತಿಳಿದುಕೊಳ್ಳಬೇಕು. ಈ ಎಂಟು (ಅಷ್ಟಾವರಣದ) ಆಚರಣೆಯ ಜೊತೆಗೆ ಪಂಚಾಚಾರಗಳನ್ನೂ ಮನಃಪೂರ್ವಕವಾಗಿ ಆಚರಿಸಿದಂತೆಲ್ಲಾ ಭಕ್ತಿಯೂ ಹಂತಹಂತವಾಗಿ ವೃದ್ಧಿಯಾಗುತ್ತಾ ಹೋಗುತ್ತದೆ. ಶರಣರು ಭಕ್ತಿಯ ವೃದ್ಧಿಗೆ ಸಂಬಂಧಿಸಿದಂತೆ ಆರು ಹಂತಗಳನ್ನು ಗುರುತಿಸಿದ್ದಾರೆ. ಕೆಲವರು ಒಂಬತ್ತು ಹಂತಗಳನ್ನೂ ಮತ್ತೆ ಕೆಲವರು ಮೂವತ್ತಾರನ್ನೂ ಮತ್ತೆ ಕೆಲವರು ೧೦೧ನ್ನೂ ಇನ್ನೂ ಕೆಲವರು ೨೧೬ನ್ನೂ ಗುರುತಿಸಿದ್ದಾರೆ. ಆದರೆ, ಇಲ್ಲಿ ಎಲ್ಲರಿಗೂ ಪರಿಚಿತವಿರುವ ಆರು ಹಂತದ ಸಿದ್ಧಾಂತ (ಷಟ್‌ಸ್ಥಲ ಸಿದ್ಧಾಂತ)ವನ್ನೇ ವಿವೇಚಿಸಲಾಗುವುದು.

**೬.೧. ಭಕ್ತಸ್ಥಲ ಮತ್ತು ಶ್ರದ್ಧಾಭಕ್ತಿ:** ಪ್ರತಿಯೊಂದು ಹಂತದಲ್ಲಿಯೂ ಭಕ್ತನು ಶಕ್ತಿಗಳ ಪ್ರಭಾವವನ್ನು ಕಡಿಮೆ ಮಾಡಿ, ಅವುಗಳನ್ನು ಶರಣಜೀವನಕ್ಕೆ ಪೂರಕವಾಗುವಂತೆ ಮಾಡುವ ಮೂಲಕ ತನ್ನ ಆತ್ಮವನ್ನು 'ಅಂಗ'ವನ್ನಾಗಿ ಮಾಡುತ್ತಾನೆ. ಇಂತಹ ಅಂಗವು ಪರಶಿವನಲ್ಲಿ ಬೆರೆಯಲು ಯೋಗ್ಯವಾಗುತ್ತದೆ. ಮೊದಲನೆಯ ಹಂತದಲ್ಲಿರುವ ಅಂಗಕ್ಕೆ ಭಕ್ತನೆಂದೂ, ಆ ಹಂತಕ್ಕೆ ಭಕ್ತಸ್ಥಲವೆಂದೂ, ಭಕ್ತಸ್ಥಲದಲ್ಲಿ ಜಾಗೃತಿಯಾಗಿರುವ ಭಕ್ತಿಗೆ ಶ್ರದ್ಧಾಭಕ್ತಿಯೆಂದೂ ಹೆಸರು. ಈ ಹಂತದಲ್ಲಿ ಭಕ್ತನು ಕ್ರಿಯಾಶಕ್ತಿಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಿ ಆಚಾರಲಿಂಗದಲ್ಲಿ ಬೆರೆಯುತ್ತಾನೆ.

ಸ್ವತಂತ್ರ ಸಿದ್ಧಲಿಂಗೇಶ್ವರರ ಪ್ರಕಾರ 'ಆಚಾರವುಳ್ಳವನೇ ಭಕ್ತನು' ಆದರೆ 'ಜ್ಞಾನವಿಲ್ಲದವನಿಗೆ ಆಚಾರವಿಲ್ಲ' ಮೊದಲನೆ ಹಂತದಲ್ಲಿರುವ ಭಕ್ತನು ಪೂರ್ಣಯೋಗಿಯೇನಲ್ಲ. ಅವನು ಕೇವಲ ಶ್ರದ್ಧೆಯಿಂದ ಎಲ್ಲವನ್ನೂ ಆಚರಿಸುವವನು. ಆದರೆ ಹೀಗೆ ಆಚರಿಸುವ ಮೂಲಕವೇ ಗುರು ಕೊಟ್ಟ ಜ್ಞಾನವನ್ನು ತನ್ನದಾಗಿ ಮಾಡಿಕೊಳ್ಳುತ್ತಾನೆ. ಅಂದರೆ 'ಸದಾಚಾರವನಾಚರಿಸುವ ಸತ್ಕ್ರಿಯಾಚಾರಸಂಪನ್ನಂಗೆ ಸಮ್ಯಗ್‌ಜ್ಞಾನ ಉದಯುವಹುದು.' ಇಂತಹ ಜ್ಞಾನೋದಯವಾದಾಗ ಭಕ್ತನಿಗೆ ತಾನು ಶಿವನ ಅಂಶವೆಂದೂ, ತನ್ನ ಮಿತಿಗಳಿಂದಾಗಿ ಭವಿಯಾಗಿದ್ದೇನೆಂದೂ ಅರಿವು ಉಂಟಾಗುತ್ತದೆ. ಈ ಅರಿವಿನ ಜೊತೆಗೆ ತನ್ನ ಭಕ್ತಿಯು ಬಹಳ ಶಿಥಿಲವಾದದ್ದೆಂಬ ನಂಬಿಕೆ ಅವನಿಗಿದ್ದರೆ ಒಳ್ಳೆಯದು. ಅದರ ಬದಲು ತಾನು ಸ್ವತಂತ್ರನೆಂದೋ ಅಥವಾ ತನ್ನ ಭಕ್ತಿಯು ಬಹಳಷ್ಟು ವೃದ್ಧಿಯಾಗಿದೆಯೆಂದೂ ಅವನು ನಂಬಿದರೆ ಭಕ್ತಿಯು ವೃದ್ಧಿಯಾಗಲು ಸಾಧ್ಯವಿಲ್ಲ.

ತನ್ನ ದೇಹಧರ್ಮ (ಕಲಾಶಕ್ತಿ)ಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದು ಕೊರಗುವ ಭಕ್ತನಿಗೆ ಮುಂದೆ ದಾರಿಯೇ ಇಲ್ಲದಂತಾಗುತ್ತದೆ; ಅದೇ ರೀತಿ, ದೇಹಧರ್ಮದ ಇಚ್ಛೆಯಂತೆ ಹೋಗುವವನು ಬೇರೆಯೇ ಆದ ದಾರಿಯಲ್ಲಿ ಹೋಗುತ್ತಾನೆ. ಆದರೆ ನಿಜವಾದ ಭಕ್ತನು ದೇಹಧರ್ಮಗಳನ್ನು ನಿಯಂತ್ರಿಸಲು ಸಾಧ್ಯವಿದೆಯೆಂದು ನಂಬುವುದೂ ಅಲ್ಲದೆ, ಅವುಗಳನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಿಸುತ್ತಾನೆ.

ಹೃತ್ಪೂರ್ವಕವಾಗಿ ಭಕ್ತಸ್ಥಲದ ಆಚರಣೆಗಳನ್ನು ಮಾಡುವವನು ಕಲಾಶಕ್ತಿಯ ಪರಿಣಾಮಗಳಾದ ಷಡೂರ್ಮಿಗಳನ್ನು—ಅಂದರೆ ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು ಮತ್ತು ಮರಣ ಎಂಬ ಆರು ಅಡಚಣೆಗಳನ್ನು ಗೆಲ್ಲುತ್ತಾನೆ. ಅವುಗಳನ್ನು ಗೆಲ್ಲಲು ಸ್ವತಂತ್ರ ಸಿದ್ಧಲಿಂಗೇಶ್ವರರು ಈ ಉಪಾಯವನ್ನು ಸೂಚಿಸುತ್ತಾರೆ: ಅಂಗದಾಪ್ಯಾಯದ ಬದಲು ಲಿಂಗದಾಪ್ಯಾಯವ ಬೆಳೆಸಿಕೊಂಡರೆ, ಹಸಿವು ಇಲ್ಲವಾಗುತ್ತದೆ; ಪಾದೋದಕವನ್ನು ಕುಡಿದರೆ ನೀರಡಿಕೆ ನೀಗುತ್ತದೆ; ಲಿಂಗಪೂಜೆಯ ಆನಂದದಲ್ಲಿ ಅಶ್ರುಗಳು ಬಂದರೆ, ಶೋಕ ನಾಶವಾಗುತ್ತದೆ; ಲಿಂಗಮೋಹಿಯಾದರೆ ಮೋಹ ಹಾಳಾಗುತ್ತದೆ; ಲಿಂಗದಲ್ಲಿ ಕರಣೇಂದ್ರಿಯಗಳು ಕರಗಿದರೆ, ಜರೆ ಹೋಗುತ್ತದೆ; ಹಾಗೂ ಲಿಂಗದಲ್ಲಿ ಐಕ್ಯನಾದರೆ ಮರಣವನ್ನು ಗೆಲ್ಲಬಹುದು.

ಭಕ್ತಸ್ಥಲದಲ್ಲಿರುವವನು ಕ್ರಿಯಾಶಕ್ತಿಯಿಂದ ರಚಿತವಾದ ಕರ್ಮೇಂದ್ರಿಯಗಳನ್ನು ಲಿಂಗಕ್ಕೆ ಸಂಬಂಧಿಸಿದ ಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕೆಂಬುದು ವಚನಗಳ ಆದೇಶ. ಬೇರೆಯವರ ಬಗ್ಗೆ—ಅದರಲ್ಲೂ ಗುರು, ಲಿಂಗ ಮತ್ತು ಜಂಗಮರ ಬಗ್ಗೆ ಕೆಟ್ಟ ಮಾತುಗಳನ್ನಾಡದೆ, ಯಾವಾಗಲೂ 'ಓಂ ನಮಃ ಶಿವಾಯ' ಎಂಬ ಮಂತ್ರವನ್ನು ಉಚ್ಚರಿಸುವ ಮೂಲಕ ವಾಗಿಂದ್ರಿಯವನ್ನು ಶುದ್ಧಗೊಳಿಸಬೇಕು. ಹೃತ್ಪೂರ್ವಕವಾಗಿ ಹಾಗೆ ಮಾಡುವವನ ಮಾತುಗಳು ಆ ಮಂತ್ರದ ವಿವಿಧ ರೂಪಗಳೇ ಆಗಿರುತ್ತವೆ.

ಭಕ್ತನ ಅಂಗವು ಕ್ರಿಯಾಶಕ್ತಿಯಿಂದಾಗಿ ಆಧಾರಚಕ್ರದಲ್ಲಿರುವ ಆಚಾರಲಿಂಗದಲ್ಲಿ ಬೆರೆಯದೆ ಪ್ರತ್ಯೇಕವಿರುತ್ತದೆ. ಆದರೆ ಶ್ರದ್ಧಾಭಕ್ತಿಯು ಕ್ರಿಯಾಶಕ್ತಿಯನ್ನು ನಿಯಂತ್ರಿಸಿ ಭಕ್ತನ ಅಂಗವು ಆಚಾರಲಿಂಗದಲ್ಲಿ ಬೆರೆಯುವಂತೆ ಮಾಡುತ್ತದೆ.

**೬.೨. ಮಹೇಶ್ವರಸ್ಥಲ ಮತ್ತು ನಿಷ್ಠಾಭಕ್ತಿ:** ಭಕ್ತಸ್ಥಲದಲ್ಲಿರುವವನ ಭಕ್ತಿಯು ಬಹಳ ಶಿಥಿಲವಾದುದು. ಅದನ್ನು ಒಂದು ಸಣ್ಣ ಪ್ರಚೋದನೆ ಸಹ ಕೆಡಿಸಬಹುದು. ಭಕ್ತನು ಯಾವಾಗ ತನ್ನ ಭಕ್ತಿಯನ್ನು ಭದ್ರಪಡಿಸಿಕೊಂಡು, ಯಾವ ಸಂಶಯಕ್ಕೂ ಪ್ರಚೋದನೆಗೂ ಎಡೆಯಿಲ್ಲದಂತೆ ಮಾಡಿಕೊಳ್ಳುತ್ತಾನೋ ಆಗ ಅವನು ಮಹೇಶ್ವರಸ್ಥಲಕ್ಕೆ ಬಂದಿದ್ದಾನೆಂದು ಅರ್ಥ. ಇಲ್ಲಿ 'ಮಹೇಶ್ವರ' ಎಂಬ ಪದಕ್ಕೆ 'ನಿಯಂತ್ರಿಸುವವನು' ಎಂಬರ್ಥವಿದೆ. ಅಂದರೆ, ಆ ಸ್ಥಲದಲ್ಲಿರುವವನಿಗೆ ತನ್ನ ಆಸೆ-ಆಕಾಂಕ್ಷೆಗಳನ್ನು ನಿಯಂತ್ರಿಸುವ ಶಕ್ತಿಯಿದೆ. ಅಲ್ಲದೆ, ಅವನ ಭಕ್ತಿಯನ್ನು ಅಲುಗಾಡಿಸಲು ಯಾರಿಗೂ ಸಾಧ್ಯವಿಲ್ಲ. ಅರ್ಥಾತ್, ಅವನಿಗೆ ಲಿಂಗದಲ್ಲಿ ಪ್ರಬಲವಾದ ನಿಷ್ಠೆಯಿದೆ. ಆದ್ದರಿಂದಲೇ ಅವನ ಭಕ್ತಿಗೆ ನಿಷ್ಠಾ(ನೈಷ್ಠಿಕೀ)ಭಕ್ತಿ ಎಂಬ ಹೆಸರಿರುವುದು.

ನಿಷ್ಠಾಭಕ್ತಿಯ ಲಕ್ಷಣಗಳಾವುವು? ಪತಿವ್ರತೆಯಾದವಳಿಗೆ ತನ್ನ ಗಂಡನನ್ನುಳಿದು ಬೇರೆ ಗಂಡಸರಲ್ಲಿ ಹೇಗೆ ಆಸಕ್ತಿಯಿರುವುದಿಲ್ಲವೋ ಹಾಗೆ ನಿಷ್ಠೆ (ನಿಷ್ಠಾಭಕ್ತಿ) ಉಳ್ಳವನಿಗೆ ಶಿವನಿಗಿಂತ ಹೆಚ್ಚಿನ ದೇವರಿಲ್ಲವೆಂದೂ ಮತ್ತು ಉಳಿದ ದೇವರುಗಳನ್ನು ಪೂಜಿಸುವುದರಿಂದ ಯಾವ ಹೆಚ್ಚಿನ ಉಪಯೋಗವಿಲ್ಲವೆಂದೂ ದೃಢವಿಶ್ವಾಸವಿರುತ್ತದೆ. "ಎಲುದೋರಿದರೆ ನರ ಹರಿದರೆ, ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ ಸಿರ ಹರಿದು ಅಟ್ಟೆ ನೆಲಕ್ಕೆ ಬಿದ್ದರೆ ನಾಲಗೆ 'ಕೂಡಲಸಂಗಾ ಶರಣೆ'ನ್ನುತ್ತಿದ್ದೀತಯ್ಯಾ" ಎಂಬ ಬಸವಣ್ಣನವರ ದೃಢನಿರ್ಧಾರ ನಿಷ್ಠಾಭಕ್ತಿಗೆ ಒಂದು ಉತ್ತಮ ಉದಾಹರಣೆ.

ಲಿಂಗದಲ್ಲಿ ನಿಷ್ಠೆಯಿದ್ದವನು ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳಬೇಕು. ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪ್ರಕಾರ "ಇಂದ್ರಿಯಂಗಳ ಮುಸುಕನುಗಿಯದೆ, ವಿಷಯಂಗಳ ಶಿರವನರಿಯದೆ, ಕರಣಂಗಳ ಕಳವಳವ ಕೆಡಿಸದೆ, ಕರ್ಮೇಂದ್ರಿಯಂಗಳ ಮೂಲದ ಬೇರ ಕಿತ್ತು ಭಸ್ಮವ ಮಾಡದೆ, ಕಷ್ಟಕಾಮನ ನಷ್ಟವ ಮಾಡಲರಿಯದೆ" ತಾವು ಲಿಂಗನಿಷ್ಠರೆಂಬುವವರು ನಿಜವಾಗಿಯೂ ಲಿಂಗನಿಷ್ಠರಲ್ಲ. ಲಿಂಗನಿಷ್ಠನಾದವನ ಭಕ್ತಿ ಎಷ್ಟು ನಿಷ್ಠುರವಾಗಿರಬೇಕೆಂದರೆ ಪರಧನ, ಪರಸತಿ, ಪರದೈವ—ಇವಾವೂ ಒಲ್ಲೆನೆಂಬ ಛಲವಿರಬೇಕು.

ಲಿಂಗದಲ್ಲಿ ನಿಷ್ಠೆಯಿರಬೇಕೆಂದರೂ ಒಂದೇ, ಶಕ್ತಿಗಳ ಪ್ರಭಾವವನ್ನು ತಗ್ಗಿಸಬೇಕೆಂದರೂ ಒಂದೇ. ಸಿದ್ಧಲಿಂಗ ಶಿವಯೋಗಿಗಳು ಶಕ್ತಿಯನ್ನು ಮಾಯಾಶಕ್ತಿಯೆಂದೂ ಭಕ್ತಿಯನ್ನು ಶಿವಶಕ್ತಿಯೆಂದೂ ಕರೆದು, ಮೊದಲಿನದನ್ನು

ಪರಸತಿಯ ಸಂಗಕ್ಕೂ, ಎರಡನೆಯದನ್ನು ಸ್ವ-ಸತಿಯ ಸಂಗಕ್ಕೂ ಹೋಲಿಸಿದ್ದಾರೆ. 'ಮಾಯಾಶಕ್ತಿಯ ಸಂಗ ಭಂಗವೆಂದು ನಿವೃತ್ತಿ ಮಾಡಿ ಶಿವಶಕ್ತಿಸಂಪನ್ನ'ರಾಗುವುದು ಶಿವಶರಣರ ಲಕ್ಷಣ; "ಅನ್ಯಸ್ತ್ರೀಯ ಸಂಗ ಅಘೋರ ನರಕ ನೋಡಾ" ಎನ್ನುತ್ತಾರೆ ಅವರು.

ಜ್ಞಾನೋದಯವು ಮಾಹೇಶ್ವರಸ್ಥಲದ ಮತ್ತೊಂದು ಮುಖ್ಯ ಲಕ್ಷಣ. ನಿಷ್ಠಾಭಕ್ತಿ ನಿಂತಿರುವುದು ಇದರ ಮೇಲೆಯೇ. ಏಕೆಂದರೆ ಭಕ್ತನಿಗೆ ತನ್ನ ಸ್ವರೂಪವೆಂತಹುದು, ಪರಮಾತ್ಮನ ಸ್ವರೂಪವೇನು, ತಾನು ಏನು ಮಾಡಿದರೆ ಉಚಿತ ಮುಂತಾದುವುಗಳ ಬಗ್ಗೆ ಸರಿಯಾದ ಜ್ಞಾನವಿಲ್ಲದಿದ್ದರೆ. ಅವನು ಲಿಂಗದಲ್ಲಿ ನಿಷ್ಠೆಯನ್ನು ತೋರಿಸಲಾರ.

ಇಂಥ ಜ್ಞಾನಕ್ಕೂ ಜ್ಞಾನ-ಶಕ್ತಿಗೂ ಸಂಬಂಧವಿದೆ. ಜ್ಞಾನವನ್ನು ಪಡೆಯುವುದೆಂದರೆ ಜ್ಞಾನಶಕ್ತಿಯ ದುಷ್ಟ ಪರಿಣಾಮಗಳನ್ನು ಕಡಿಮೆ ಮಾಡುವುದು ಅಥವಾ ಜ್ಞಾನಶಕ್ತಿಯನ್ನು ಶುದ್ಧೀಕರಿಸುವುದು ಎಂದರ್ಥ. ಜ್ಞಾನಶಕ್ತಿಯ ಉತ್ಪನ್ನಗಳಾದ ವಿಷಯ (ತನ್ಮಾತ್ರೆ)ಗಳನ್ನು ನಿಯಂತ್ರಿಸುವುದು ಎಂದರ್ಥ. ಇದನ್ನೇ ಪಾರಿಭಾಷಿಕವಾಗಿ ಹೀಗೆ ಹೇಳಲಾಗಿದೆ : ಮಾಹೇಶ್ವರಸ್ಥಾನದಲ್ಲಿರುವ ಅಂಗವು ಸುಬುದ್ಧಿ ಎಂಬ 'ಹಸ್ತ'ದಿಂದ ಐದು ವಿಷಯಗಳನ್ನು ಗುರುಲಿಂಗಕ್ಕೆ ಅರ್ಪಿಸುತ್ತದೆ. ಇದರ ಪರಿಣಾಮವಾಗಿ ಆ ಅಂಗವು ಸ್ವಾಧಿಷ್ಠಾನ ಚಕ್ರದಲ್ಲಿರುವ ಗುರುಲಿಂಗದೊಂದಿಗೆ ಬೆರೆಯುತ್ತದೆ.

**೬.೩. ಪ್ರಸಾದಿಸ್ಥಲ ಮತ್ತು ಅವಧಾನಭಕ್ತಿ** : ನಾವು ಲಿಂಗಕ್ಕೆ ಅರ್ಪಿಸುವ ವಸ್ತುಗಳಿಗೆ 'ಪದಾರ್ಥಗಳು' ಎಂದು ಹೆಸರು. ಇದು ಹಾಲು, ಹಣ್ಣು ಮುಂತಾದ ಯಾವುದೇ ಆಹಾರವಾಗಿರಬಹುದು. ಹಾಗೆ ಅರ್ಪಿಸಿದ ವಸ್ತುಗಳನ್ನು ಶಿವನು ಸ್ವೀಕರಿಸುತ್ತಾನೆ ಎಂಬುದು ನಂಬಿಕೆ. ಶಿವನು ಸ್ವೀಕರಿಸಿದ ಪದಾರ್ಥಗಳು ಪ್ರಸಾದಗಳಾಗುತ್ತವೆ. ವೀರಶೈವನಾದವನು ಆ ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸಿದರೆ ಸಾತ್ವಿಕನಾಗುತ್ತಾನೆ. ಅವನು ಈ ಕ್ರಿಯೆಯನ್ನು ಎಷ್ಟೆಷ್ಟು ಭಕ್ತಿಯಿಂದ ಸ್ವೀಕರಿಸುತ್ತಾನೋ ಅಷ್ಟಷ್ಟು ಸಾತ್ವಿಕನಾಗುತ್ತಾನೆ.

ಈ ಕ್ರಿಯೆಯನ್ನು ಅನೇಕರು ಯಾಂತ್ರಿಕವಾಗಿಯೂ ಮತ್ತೆ ಕೆಲವರು ಅಲ್ಪಾರ್ಥದಲ್ಲಿಯೂ ವ್ಯಾಖ್ಯಾನ ಮಾಡುತ್ತಾರೆ. ಏಕೆಂದರೆ ಅವರಿಗೆ ಪ್ರಸಾದವೆಂಬುದರ ನಿಜವಾದ ಅರ್ಥವೇ ಗೊತ್ತಿರುವುದಿಲ್ಲ. ಕೇವಲ ಲಿಂಗಪೂಜೆಯ ಸಮಯದಲ್ಲಿ ಹಾಲನ್ನೋ ಹಣ್ಣನ್ನೋ ಅರ್ಪಿಸಿ ಅದನ್ನು ಭುಂಜಿಸಿದರೆ ಪ್ರಸಾದವನ್ನು ಸ್ವೀಕರಿಸಿದಂತೆ ಅಲ್ಲ. ಯಾವನು ತನ್ನ ಇಂದ್ರಿಯ ವಿಷಯಗಳನ್ನು ಶಿವನಿಗೆ ಅರ್ಪಿಸಿ ಅವುಗಳನ್ನು ಪ್ರಸಾದವೆಂದು ಅನುಭವಿಸುತ್ತಾನೋ ಅವನಿಗೆ ಮಾತ್ರ ಪ್ರಸಾದವೆಂಬುದರ ಅರ್ಥ ಗೊತ್ತು. ಈ ಹಂತದಲ್ಲಿರುವ ಭಕ್ತನಿಗೆ ಪ್ರಸಾದಿಯೆಂದು ಹೆಸರು. "ಘ್ರಾಣ ಮುಟ್ಟದ ಮುನ್ನ ನಿಮಗರ್ಪಿತವಾಗಿತ್ತು." ಅದೇ ರೀತಿ "ಜಿಹ್ವೆ....ನೇತ್ರ....ತ್ವಕ್ಕು....ಶ್ರೋತ್ರ....ಮನ ಮುಟ್ಟದ ಮುನ್ನ ನಿಮಗರ್ಪಿತವಾಗಿತ್ತು" ಎಂದು ಹೇಳುವ ಮನಸ್ಸು ಪ್ರಸಾದಿಗೆ ಇರಬೇಕು. ನಿಜವಾದ ಪ್ರಸಾದಿಯು 'ನಾನು ಪ್ರಸಾದವನ್ನು ಸ್ವೀಕರಿಸುತ್ತಿದ್ದೇನೆ' ಎಂದು ತಿಳಿಯದೆ 'ಶಿವನೇ ಸ್ವೀಕರಿಸುತ್ತಿದ್ದಾನೆ' ಎಂದು ತಿಳಿಯುತ್ತಾನೆ. ಏಕೆಂದರೆ "ಸರ್ವೇಂದ್ರಿಯಂಗಳಲ್ಲಿ ಸರ್ವಮುಖವಾಗಿ ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು ಅವಧಾನದಿಂದ ಕೊಂಬಾತ ನೀನಾದ ಕಾರಣ" "ಪದಾರ್ಥವೇ ಆತ್ಮನು ಪ್ರಸಾದವೇ ಪರವಸ್ತುವು" ಎನ್ನುವಲ್ಲಿ ಪ್ರಸಾದಸ್ಥಲದಲ್ಲಿರುವವನ ಉದ್ದೇಶವು ವ್ಯಕ್ತವಾಗುತ್ತದೆ. ಪ್ರಸಾದಿಗೆ ತನ್ನದೇ ಆದ ದೇಹವಿದ್ದರೂ, ಅವನು ತನ್ನ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣಗಳೆಲ್ಲ ಶಿವನಿಗೆ ಸೇರಿದವೆಂದೂ, ತನ್ನ ಕಾರ್ಯಗಳೆಲ್ಲವೂ ಶಿವನ ಸಂತೋಷಕ್ಕೆಂದೂ ತಿಳಿಯುತ್ತಾನೆ. ಈ ಅರ್ಥದಲ್ಲಿ ಪ್ರಸಾದಿಗೂ ಶಿವನಿಗೂ ಒಂದೇ ದೇಹವಿರುತ್ತದೆ. ಇಂತಹ ದೇಹವನ್ನೇ ಬಸವಣ್ಣ ಪ್ರಸಾದಕಾಯವೆಂದಿದ್ದಾರೆ.

ಪ್ರಸಾದಿಯ ಹಂತದ ಭಕ್ತಿಗೆ ಅವಧಾನಭಕ್ತಿ ಎಂದು ಹೆಸರು. ಅವಧಾನವೆಂದರೆ ಎಚ್ಚರಿಕೆಯಿಂದ ಇರುವುದು ಎಂದರ್ಥ. ಇಲ್ಲಿ, ಭಕ್ತನು ತನ್ನ ಸ್ವಾರ್ಥಕ್ಕೆ ಎಡೆಯಿಲ್ಲದಿರುವಂತೆ, ಅಂದರೆ ತನ್ನ ದೇಹವೆಲ್ಲವೂ ಶಿವನ ದೇಹವೆಂದೂ, ತನ್ನ ಭೋಗವೆಲ್ಲವೂ ಶಿವನ ಭೋಗವೆಂದೂ ಸದಾ ತಿಳಿದಿರುತ್ತಾನೆ. ಹೀಗೆ ಮಾಡುವುದರಿಂದ ಇಚ್ಛಾಶಕ್ತಿಯನ್ನು ನಿಯಂತ್ರಿಸಿ—ಅಂದರೆ,ಕೆಟ್ಟ ಇಚ್ಛೆಗಳನ್ನು ನಿಯಂತ್ರಿಸಿ—ಅದರಲ್ಲೂ ಮುಖ್ಯವಾಗಿ ಅಹಂಕಾರವನ್ನು ನಿರ್ಮೂಲನ ಮಾಡಿದಂತಾಗುವುದಲ್ಲದೆ, ಶಿವನ ಪ್ರಸಾದ ಅಥವಾ ಅನುಗ್ರಹವನ್ನೂ ದೊರಕಿಸಿಕೊಂಡಂತಾಗುತ್ತದೆ. ಇದರ ಪರಿಣಾಮವಾಗಿ ಮಣಿಪೂರಕಚಕ್ರದಲ್ಲಿರುವ ಶಿವಲಿಂಗದಲ್ಲಿ ಪ್ರಸಾದಿಯು ಬೆರೆಯುತ್ತಾನೆ.

**೬.೪. ಪ್ರಾಣಲಿಂಗಸ್ಥಲ ಮತ್ತು ಅನುಭಾವ ಭಕ್ತಿ** : ಪ್ರಾಣಲಿಂಗಸ್ಥಲವನ್ನು ಹಿಂದಿನ ಸ್ಥಲವಾದ ಪ್ರಸಾದಿಸ್ಥಲದಿಂದ ಪ್ರತ್ಯೇಕಿಸುವುದು ಕಷ್ಟ. ಏಕೆಂದರೆ ಪ್ರಾಣಲಿಂಗಿಸ್ಥಲದಲ್ಲಿ, ಅದರ ಹೆಸರೇ ಸೂಚಿಸುವಂತೆ, ಭಕ್ತನು ಲಿಂಗವನ್ನು ಹಸ್ತದಲ್ಲೂ ಅಲ್ಲದೆ ಪ್ರಾಣದಲ್ಲಿಯೂ (ಅಥವಾ ಮನಸ್ಸಿನಲ್ಲಿ) ಪ್ರತಿಷ್ಠಾಪಿಸುತ್ತಾನೆ. ಪ್ರಸಾದಿಯೂ

ಆ ಕಾರ್ಯವನ್ನು ತನ್ನ ದೇಹ ಮತ್ತು ಆತ್ಮ ಎರಡೂ ಶಿವನಿಗೇ ಸೇರಿದವು ಎಂದು ತಿಳಿಯುವ ಮೂಲಕ ಆಗಲೇ ಮಾಡಿದ್ದಾನೆ. ಇದು ಪ್ರಸಾದಿಸ್ಥಲದಲ್ಲೇ ಒಂದು ಮೇಲಿನ ಸ್ತರ ಎಂದರೆ ತಪ್ಪಲ್ಲ.

ಪ್ರಾಣವು ದೇಹದ ಪ್ರತಿಯೊಂದು ಕಣದಲ್ಲಿಯೂ ಇರುವಂತೆ, ಲಿಂಗವು ಪ್ರಾಣವಿರುವಲ್ಲೆಲ್ಲಾ ಇರುತ್ತದೆ ಎಂದೇ ಪ್ರಾಣಲಿಂಗಿಯು ತಿಳಿಯುತ್ತಾನೆ ("ಲಿಂಗವೇ ಪ್ರಾಣ, ಪ್ರಾಣವೇ ಲಿಂಗ"). ಅಂದರೆ ಲಿಂಗವು ತನ್ನ ದೇಹದ ಹೊರಗಿರುವ ವಸ್ತುವಲ್ಲ, ತಾನೇ ಲಿಂಗಮಯವಾಗಿರುವುದು ಎಂಬುದು ಅವನ ಭಾವ. ಈ ಅರ್ಥದಲ್ಲಿ ಪ್ರಸಾದಿಗೂ ಪ್ರಾಣಲಿಂಗಿಗೂ ಒಂದು ಸೂಕ್ಷ್ಮ ಅಂತರವಿದೆ: ಪ್ರಸಾದಿಯು ತನ್ನ ಅನುಭವಗಳೆಲ್ಲವೂ ಶಿವನಿಗೆ ಅರ್ಪಿತವೆಂದು ತಿಳಿಯುವಾಗ, ಅವನು ಶಿವನೊಡನೆ ಪೂರ್ಣ ತಾದಾತ್ಮ್ಯವನ್ನು ಸ್ಥಾಪಿಸಿಕೊಂಡಿರುವುದಿಲ್ಲ; ಹಾಗೆ ಸ್ಥಾಪಿಸಿಕೊಂಡರೆ ಅವನು ಪ್ರಾಣಲಿಂಗಿಯಾಗುತ್ತಾನೆ. ಹಾಗೆ ಮಾಡಿದಾಗ ತಾನು, ತನ್ನದು ಎಂಬ ಭಾವ ಮಾಯವಾಗುತ್ತದೆ. ಅಹಂಕಾರ ಇಲ್ಲವಾದಾಗ ಆಸೆಗಳೂ ಇಲ್ಲವಾಗಿ, ಆಸೆಗಳು ಇಲ್ಲವಾದಾಗ ಸ್ವಾರ್ಥಕರ್ಮಗಳೂ ಇಲ್ಲವಾಗಿ, ಸ್ವಾರ್ಥಕರ್ಮಗಳೂ ಇಲ್ಲವಾದಾಗ ಪುನರ್ಜನ್ಮವೂ ಇಲ್ಲವಾಗುತ್ತದೆ.

ಪ್ರಾಣಲಿಂಗಿಯು ಸ್ಥಲದಲ್ಲಿರುವುದೆಂದರೆ, ಆದಿಶಕ್ತಿಯನ್ನು—ಅಂದರೆ, ಅದರ ರೂಪಾಂತರಗಳಾದ ಹತ್ತು ವಾಯುಗಳನ್ನು—ನಿಯಂತ್ರಿಸುವುದೆಂದರ್ಥ. ಈ ಹತ್ತು ವಾಯುಗಳು ನಮ್ಮ ದೇಹದಲ್ಲಿ ವಿವಿಧ ರೀತಿಯಲ್ಲಿ ಕೆಲಸ ಮಾಡಿ ನಮ್ಮನ್ನು ವಿವಿಧ ಲಾಲಸೆಗಳಿಗೆ ಗುರಿ ಮಾಡುತ್ತವೆ. ಈ ವಾಯುಗಳನ್ನು ನಿಯಂತ್ರಿಸುವ ಪ್ರಾಣಲಿಂಗಿಯ ಭಕ್ತಿಗೆ 'ಅನುಭಾವಭಕ್ತಿ' ಎಂದು ಹೆಸರು. ಅನುಭಾವಭಕ್ತಿಯು ಶಕ್ತಿಯನ್ನು ನಿಯಂತ್ರಿಸುವಲ್ಲಿಯೂ ಅಲ್ಲದೆ, ಪ್ರಾಣಲಿಂಗಿಯ ಧ್ಯಾನವನ್ನು ಬೆಳೆಸಿಕೊಂಡು ಅನುಭಾವವನ್ನು ಪಡೆಯುವಲ್ಲಿಯೂ ಸಹಾಯ ಮಾಡುತ್ತದೆ. ಇದು ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ಅನುಭವವಲ್ಲ. ಇದು 'ನಾನು ಶಿವನಲ್ಲಿ ಬೆರೆತಿದ್ದೇನೆ' ಎಂಬ ಸತತವಾದ ಅರಿವು. ಇದನ್ನೇ ಹೀಗೂ ಹೇಳಬಹುದು: ಪ್ರಾಣಲಿಂಗಿಯ ಸ್ಥಾನದಲ್ಲಿರುವ ಅಂಗವು ಅನಾಹತಚಕ್ರದಲ್ಲಿರುವ ಜಂಗಮಲಿಂಗದಲ್ಲಿ ಬೆರೆಯುತ್ತದೆ.

**೬.೫. ಶರಣಸ್ಥಲ ಮತ್ತು ಆನಂದಭಕ್ತಿ :** ತೋಂಟದ ಸಿದ್ಧಲಿಂಗಶಿವಯೋಗಿ ಮತ್ತು ಷಣ್ಮುಖಸ್ವಾಮಿಗಳ ಪ್ರಕಾರ, ಶರಣನೆಂದರೆ ದೇಹದ ಬಾಧೆಗಳಿಂದಲೂ, ಮನಸ್ಸಿನ ಮಾಯೆಯಿಂದಲೂ, ಅಂತಃಕರಣದ ತಮಸ್ಸಿನಿಂದಲೂ, ಇಂದ್ರಿಯಗಳ ಸುಖದಿಂದಲೂ ದೂರವಿರುವವನು; ಸತ್ಯ, ದಯೆ, ಕ್ಷಮೆ, ದಮೆ, ಸ್ಮರಣೆ, ಸಮಾಧಾನ, ಸಂತೋಷ, ಸ್ಥೈರ್ಯ ಮುಂತಾದ ಸದ್ಗುಣಗಳನ್ನುಳ್ಳವನು; ಅಂಗದ ನೈಜಸ್ವರೂಪವನ್ನು ಕೆಡಿಸಿರುವ ಶಕ್ತಿಯ ವಿವಿಧ ರೂಪಗಳಾದ ಅರಿಷಡ್ವರ್ಗ, ಅಷ್ಟಮದಗಳನ್ನು ಗೆದ್ದವನು; ಮುಖ್ಯವಾಗಿ, ಶಿವನಿಗೆ ಸಂಪೂರ್ಣವಾಗಿ ಶರಣಾದವನು.

ಶರಣಸ್ಥಲದಲ್ಲಿರುವವನು ಶಕ್ತಿಗಳ ಸಂಯೋಜನೆಯಾದ ದೇಹವನ್ನು ಶಿವನಿಗರ್ಪಿಸುವುದರಿಂದ ತನಗೊಂದು ದೇಹವಿದೆ ಎಂದು ತಿಳಿಯುವುದಿಲ್ಲ. ಇದನ್ನೇ ಸಂಸ್ಕೃತದಲ್ಲಿ "ಅಕಾಯೋ ಭಕ್ತಕಾಯಸ್ತು" ಎನ್ನಲಾಗಿದೆ. ಹೀಗೆಂದ ಮಾತ್ರಕ್ಕೆ ಶರಣನಿಗೆ ದೇಹವೇ ಇರುವುದಿಲ್ಲ ಎಂದರ್ಥವಲ್ಲ. ದೇಹವಿದ್ದರೂ, ಅದು ಅವನದಲ್ಲ: ಅರ್ಥಾತ್ ಅದಕ್ಕೆ ಭೌತಶರೀರಕ್ಕಿರುವ ಮಿತಿಗಳಿರುವುದಿಲ್ಲ. ಇಂಥ ಕಾಯವನ್ನೇ ಬೌದ್ಧರು 'ಜ್ಞಾನಕಾಯ' ಅಥವಾ 'ಬೋಧಿಕಾಯ' ಎನ್ನುತ್ತಾರೆ. ಅಲ್ಲಮಪ್ರಭು ಶೂನ್ಯಕಾಯ ಅಥವಾ ವ್ಯೋಮಕಾಯನಾಗಿದ್ದನೆಂಬುದನ್ನು ಇಲ್ಲಿ ಸ್ಮರಿಸಬಹುದು.

ಶರಣಸ್ಥಲದ ಮುಖ್ಯ ಅಂಶವೆಂದರೆ ಶರಣಾಗತಿಭಾವ. ಇದನ್ನು ಶರಣರು 'ಶರಣ-ಸತಿ, ಲಿಂಗ-ಪತಿ' ಭಾವದ ಮೂಲಕ ವ್ಯಕ್ತಪಡಿಸುತ್ತಾರೆ; ಅಂದರೆ ಶರಣರು ತಾವು ತಮ್ಮನ್ನು ಶಿವನ ಪತ್ನಿಯರೆಂದೂ, ಶಿವನೇ ತಮಗೆ ಗಂಡನೆಂದೂ ತಿಳಿಯುತ್ತಾರೆ. ಗಂಡನ ಸಂಗದಿಂದ ಸುಖವನ್ನು ಪಡೆದ ಪತ್ನಿಯು ಹೇಗೆ ಅವನಿಂದ ಸ್ವಲ್ಪಕಾಲ ದೂರ ವಿದ್ದಾಗ ಅವನ ಸಂಗಕ್ಕಾಗಿ ಹಾತೊರೆಯುತ್ತಾ ಇರುತ್ತಾಳೋ, ಹಾಗೆಯೇ ಶರಣಸತಿಯು ಲಿಂಗ-ಪತಿಯ ಸಂಗಕ್ಕಾಗಿ ಹಾತೊರೆಯುತ್ತಾ ಇರುತ್ತಾಳೆ. ಇಂತಹ ಭಕ್ತಿಪೂರ್ವಕ ವಿರಹವೇದನೆಯ ತೀವ್ರತೆಯನ್ನು ಅಕ್ಕಮಹಾದೇವಿಯ ವಚನಗಳಲ್ಲಿ ಕಾಣುವಷ್ಟೇ ಸ್ಪಷ್ಟವಾಗಿ ಷಣ್ಮುಖಸ್ವಾಮಿಯ ವಚನಗಳು ಘನಲಿಂಗ ಶಿವಯೋಗಿಗಳ ವಚನಗಳು ಹಾಗೂ ಇತರರ ವಚನಗಳಲ್ಲಿಯೂ ಕಾಣಬಹುದು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಇದು: ಸತಿಯು ಗಂಡನಿಂದ ಪಡೆದ ಸುಖಕ್ಕಾಗಿ ತನ್ನ ದೇಹವನ್ನೂ ಆತ್ಮವನ್ನೂ ಅವನಿಗೆ ಹೇಗೆ ಮುಡಿಪಾಗಿಡುತ್ತಾಳೋ, ಹಾಗೆಯೇ ಶರಣನು ಶಿವನ ಅನುಗ್ರಹದಿಂದ ಪಡೆದ ಅನುಭಾವಕ್ಕಾಗಿ, ತನ್ನ ದೇಹ ಮತ್ತು ಆತ್ಮವನ್ನು ಶಿವನಿಗೆಂದೇ ಮೀಸಲಾಗಿಡುತ್ತಾನೆ: ಅಂದರೆ ದೇಹ ಮತ್ತು

ಆತ್ಮಗಳ ಸಾಮಗ್ರಿಗಳಾದ ಶಕ್ತಿಗಳು ತನ್ನವಲ್ಲ ಶಿವನವು ಎಂದು ತಿಳಿಯುತ್ತಾನೆ. ಇಂಥ ಒಂದು ಮಾನಸಿಕ ಸ್ಥಿತಿ ಮತ್ತು ವರ್ತನೆಗೆ ಆನಂದಭಕ್ತಿ ಎನ್ನುತ್ತಾರೆ. ಆನಂದಭಕ್ತಿಯಿಂದ ಪರಾಶಕ್ತಿಯನ್ನೂ, ಅದರಿಂದ ಉತ್ಪನ್ನವಾಗುವ ಆದಿಶಕ್ತಿ, ಇಚ್ಛಾಶಕ್ತಿ ಮುಂತಾದ ಶಕ್ತಿಗಳನ್ನೂ ಮರ್ದಿಸಿದಾಗ, ಶರಣನ ಅಂಗವು ವಿಶುದ್ಧಚಕ್ರದಲ್ಲಿರುವ ಪ್ರಸಾದ ಲಿಂಗದಲ್ಲಿ ಬೆರೆಯುತ್ತದೆ.

**೬.೬. ಐಕ್ಯಸ್ಥಲ ಮತ್ತು ಸಮರಸಭಕ್ತಿ :** ಐಕ್ಯಸ್ಥಲದಲ್ಲಿರುವವನಿಗೂ ಶರಣಸ್ಥಲದಲ್ಲಿರುವವನಿಗೂ ಇರುವ ಅಂತರ ಬಹಳ ಕಡಿಮೆ. ಶರಣ ಲಿಂಗದಲ್ಲಿ ಬೆರೆತಾಗ ತನ್ನ ಹಾಗೂ ಲಿಂಗದ ಬಗೆಗಿನ ಅರಿವು ಮಾಯವಾಗಿ 'ಐಕ್ಯ'ನಾಗುತ್ತಾನೆ. ಇಂತಹ ಐಕ್ಯವನ್ನು ಶರಣರು ನದಿಯು ಸಮುದ್ರಕ್ಕೆ ಸೇರಿದುದಕ್ಕೂ, ಕರ್ಪೂರಕ್ಕೆ ಬೆಂಕಿ ತಗುಲಿದುದಕ್ಕೂ, ಬೆಳಗಿನೊಳಗೆ ಬೆಳಗು ಸೇರಿದುದಕ್ಕೂ, ಬಯಲಿನೊಳಗೆ ಬಯಲು ಸೇರಿದುದಕ್ಕೂ ಹೋಲಿಸಿದ್ದಾರೆ. ಐಕ್ಯನಲ್ಲಿ 'ತಾನು ಐಕ್ಯ'ನೆಂಬ ಭಾವನೆಯೂ ಇಲ್ಲವಾಗಿ ಶಿವನೊಡನೆ ಸಾಮರಸ್ಯ ಪಡೆಯುತ್ತಾನೆ. ಈ ಸ್ಥಲದ ಭಕ್ತಿಯನ್ನು 'ಸಮರಸಭಕ್ತಿ' ಎನ್ನಲಾಗಿದೆ.

ಐಕ್ಯನ ಮೇಲೆ ಶಕ್ತಿಗಳ ಪ್ರಭಾವ ತೀರಾ ಅಲ್ಪ. ಬೇರೆ ಮನುಷ್ಯರಂತೆ ಅವನೂ ತಿನ್ನುತ್ತಾನೆ, ನಗುತ್ತಾನೆ, ನಡೆಯುತ್ತಾನೆ—ಆದರೆ ಆ ಕಾರ್ಯಗಳನ್ನು ಮಾಡುವುದು ತಾನಲ್ಲ ಮತ್ತು ತನಗಾಗಿ ಅಲ್ಲ ಎಂಬುದು ಅವನಿಗೆ ಗೊತ್ತು. ಇದನ್ನು ಚೆನ್ನಬಸವಣ್ಣನವರು ಬಹಳ ಪರಿಣಾಮಕಾರಿಯಾಗಿ ಹೇಳಿದ್ದಾರೆ :

ಎನ್ನ ಕಾಯದೊಳಗೆ ನಿನ್ನ ಕಾಯವಿಪ್ಪುದು
ನಿನ್ನ ಕಾಯದೊಳಗೆ ನನ್ನ ಕಾಯವಿಪ್ಪುದು
ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು
ನಿನ್ನ ಜೀವದೊಳಗೆ ಎನ್ನ ಜೀವವಿಪ್ಪುದು
.........................................
ಎನ್ನ ಕರಣಂಗಳೊಳಗೆ ನಿನ್ನ ಕರಣಂಗಳಿಪ್ಪವು
ನಿನ್ನ ಕರಣಂಗಳೊಳಗೆ ಎನ್ನ ಕರಣಂಗಳಿಪ್ಪವು
.........................................
ಆನು ಕರ್ಪೂರ, ನೀನು ಜ್ಯೋತಿ
ಆನು ನಿಮ್ಮೊಳಡಗಿದೆನು........

ಇದರಿಂದಾಗಿ, ಸರ್ವಾಂಗವೂ ಲಿಂಗವೇ ಆಗಿರುವುದರಿಂದ ಆ ಲಿಂಗದಲ್ಲೇ ಶಕ್ತಿಗಳು ಅಡಗಿ, ಐಕ್ಯನ ಮೇಲಿನ ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತವೆ.

ಖಂಡಿತವಿಲ್ಲಾಗಿ ಸರ್ವಾಂಗವೂ ನಾಸಿಕವಾಯಿತ್ತು
ತಾನಲ್ಲದೆ ಅನ್ಯವಾಸನೆಯಿಲ್ಲದಾಗಿ
ಅಲ್ಲಿಯೇ ಮಹತ್ವಪ್ಪ ಪೃಥ್ವಿಯಡಗಿತ್ತು

ಅದೇ ರೀತಿ,

....ತಾನಲ್ಲದೆ ಅನ್ಯರುಚಿಯಾಗಿ....ಅಪ್ಪುವಡಗಿತ್ತು
....ತಾನಲ್ಲದೆ ಅನ್ಯರೂಪಿಲ್ಲಾಗಿ....ಅಗ್ನಿಯಡಗಿತ್ತು
....ತಾನಿಲ್ಲದೆ ಅನ್ಯಸ್ಪರ್ಶವಿಲ್ಲಾಗಿ....ವಾಯುವಡಗಿತ್ತು....

ಇತ್ಯಾದಿ

**೭. ಕೊನೆಯ ಮಾತು :** ೭.೧. ಇಲ್ಲಿ, 'ಶಕ್ತಿಗಳ ಪ್ರಭಾವ ಹೆಚ್ಚಿರುವಾಗ ಭಕ್ತಿಗಳು ನಿಷ್ಕ್ರಿಯವಾಗಿರುತ್ತವೆಯಾದರೆ, ಭಕ್ತಿಗಳ ಪ್ರಭಾವ ಹೆಚ್ಚಾದಾಗ ಶಕ್ತಿಗಳು ನಿಷ್‌ಕ್ರಿಯವಾಗಿರುತ್ತವೆಯೆ ?' ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಭಕ್ತಿಗಳ ಪ್ರಭಾವದಿಂದಾಗಿ ಒಂದು ವೇಳೆ ಶಕ್ತಿಗಳು ನಿಷ್ಕ್ರಿಯವಾದರೆ, ಐಕ್ಯನ ಮನಸ್ಸು, ಕೈಕಾಲು, ಇಂದ್ರಿಯಗಳು ನಿಷ್ಕ್ರಿಯವಾಗಬೇಕಾಗುತ್ತದೆ. ಅರ್ಥಾತ್, ಐಕ್ಯಸ್ಥಿತಿಯನ್ನು ಮುಟ್ಟುವುದೆಂದರೆ ಸಾಯುವುದು ಎಂದರ್ಥವಾಗುತ್ತದೆ. ಆದರೆ ವಾಸ್ತವಿಕವಾಗಿ ಹೀಗಾಗುವುದಿಲ್ಲ. ಭಕ್ತನಿಂದ ಹಿಡಿದು ಐಕ್ಯನವರೆಗೆ, ಶಕ್ತಿಗಳಿಂದ ಉತ್ಪತ್ತಿಯಾದ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಮುಂತಾದುವುಗಳು ಸಾಧಾರಣ ಮನುಷ್ಯನಲ್ಲಿ ಮಾಡುವಂತೆಯೇ

ಕೆಲಸ ಮಾಡುತ್ತವೆ. ಆದರೆ, ಅವುಗಳ ಬಳಕೆಯಲ್ಲಿ ತೀವ್ರ ವ್ಯತ್ಯಾಸವಿರುತ್ತದೆ. ಉದಾಹರಣೆಗೆ, ಭಕ್ತನಾಗುವ ಮೊದಲು ಒಬ್ಬ ತನ್ನ ಬಗ್ಗೆ ಪ್ರಶಂಸೆಗಳನ್ನೂ ಉಳಿದವರ ಬಗ್ಗೆ ಅವಹೇಳನವನ್ನೂ ಕೇಳಲು ತನ್ನ ಕಿವಿಗಳನ್ನು ಬಳಸುತ್ತಿದ್ದ. ಆದರೆ ಭಕ್ತನಾದ ಮೇಲೆ ಅದೇ ಕಿವಿಗಳನ್ನು ತನ್ನ ಆಧ್ಯಾತ್ಮಿಕ ಜೀವನಕ್ಕೆ ಸಹಾಯವಾಗುವಂತಹ ಮಾತುಗಳನ್ನು (ಉದಾಹರಣೆಗೆ, ಶರಣರ ಉಪದೇಶಗಳನ್ನು) ಕೇಳಲು ಉಪಯೋಗಿಸುತ್ತಾನೆ. ಅದೇ ರೀತಿ, ಉಳಿದ ಶಕ್ತಿಗಳನ್ನೂ ಆಧ್ಯಾತ್ಮಿಕ ಉದ್ದೇಶಗಳಿಗಾಗಿಯೇ ಬಳಸುತ್ತಾನೆ. ಹೀಗೆ ಸದುಪಯೋಗವಾದ ಶಕ್ತಿಗಳಿಗೆ "ಕಲೆ"ಗಳೆಂದು ಹೆಸರು. ಇದೇ ಅರ್ಥದಲ್ಲಿ ನಿವೃತ್ತಿಕಲೆ, ಪ್ರತಿಷ್ಠಾಕಲೆ, ಇತ್ಯಾದಿಗಳು ಚಿದಾಕಾಶ ಚಿದಪ್, ಚಿದ್-ಪೃಥ್ವಿ, ಮುಂತಾದುವುಗಳಿಗೆ ಸಮವೆಂದು ಪರಿಗಣಿತವಾಗಿವೆ. ಹೀಗೆ ಶುದ್ಧಿಯಾದ ಶಕ್ತಿಗಳೇ ಭಕ್ತಿಗಳೆನಿಸಿಕೊಳ್ಳುತ್ತವೆ. ಶುದ್ಧವಾದ ಆತ್ಮವು ಅಂಗವೆನಿಸಿಕೊಳ್ಳುತ್ತದೆ.

೭. ೨ : ಶರಣರು ದೇಹ ಮತ್ತು ವಿಶ್ವದ ಮೂಲ ಸಾಮಗ್ರಿಯಾದ ಶಕ್ತಿಯನ್ನು ಮಾಯೆಯೆಂದು ಹೇಸಿಕೊಳ್ಳದೆ ಅಥವಾ ಕಡೆಗಣಿಸದೆ, ಅದೇ ಶಕ್ತಿಯನ್ನು ಆಧ್ಯಾತ್ಮಿಕ ಜೀವನದ ಅಡಿಗಲ್ಲಾಗಿಯೂ ಉನ್ನತಿಗಾಗಿಯೂ ಬಳಸಿಕೊಂಡಿದ್ದಾರೆ. ನಾವು ಮಾಡುವ ಪ್ರತಿಯೊಂದು ಕಾರ್ಯವೂ-ಅದು ಮಾನಸಿಕವಿರಲಿ ದೈಹಿಕವಿರಲಿ-ಶಕ್ತಿಯ ಮೂಲಕವೇ ಆದ್ದರಿಂದ ಅದನ್ನು ಯಾವ ರೀತಿಯಿಂದಲೂ ಮಾಯೆಯೆಂದು ಪರಿಗಣಿಸಲು ಬರುವುದಿಲ್ಲ. ಅಷ್ಟೇ ಅಲ್ಲ, ಶಕ್ತಿಯ ಮೂಲಕವಲ್ಲದೆ ಬೇರಾವ ಮೂಲಕವೂ ನಾವು ಏನನ್ನೂ ಮಾಡಲು ಬರುವುದಿಲ್ಲ. ಇದನ್ನರಿತ ಶರಣರು ಶಕ್ತಿಯನ್ನೇ ಸದುಪಯೋಗಪಡಿಸಿಕೊಂಡುದುದು ಅವರ ವ್ಯಾವಹಾರಿಕ ಜ್ಞಾನವನ್ನು ತೋರಿಸುತ್ತವೆ. ಬ್ರಹ್ಮ ಅಥವಾ ಲಿಂಗವನ್ನುಳಿದು ಎಲ್ಲವೂ ಮಾಯೆ ಎಂದಾಗಿದ್ದರೆ, ಲಿಂಗಾಂಗ ಸಾಮರಸ್ಯಕ್ಕೆ ಪಡುವ ನಮ್ಮ ಪ್ರಯತ್ನವೂ, ಅದರಲ್ಲಿ ಸಹಕರಿಸುವ ಆತ್ಮ, ಮನಸ್ಸು, ಮುಂತಾದ ಶಕ್ತಿಗಳೂ ಮಾಯೆಯಾಗುತ್ತಿದ್ದವು.

೭. ೩ : ಶಕ್ತಿಗಳನ್ನು ಕ್ರಮಕ್ರಮವಾಗಿ ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ, ಭಕ್ತನಾದವನು ಇಂದು ಕ್ರಿಯಾಶಕ್ತಿಯ ಉತ್ಪನ್ನಗಳಾದ ಕರ್ಮೇಂದ್ರಿಯಗಳನ್ನೂ ನಾಳೆ ಜ್ಞಾನಶಕ್ತಿಯ ಉತ್ಪನ್ನಗಳಾದ ವಿಷಯ (ತನ್ಮಾತ್ರೆ)ಗಳನ್ನೂ ನಿಯಂತ್ರಿಸಬೇಕೆಂದರೆ ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ ಕರ್ಮೇಂದ್ರಿಯಗಳನ್ನು ನಿಯಂತ್ರಿಸಬೇಕಾದರೆ, ಮೊದಲು ಬುದ್ಧಿ, ಮನಸ್ಸುಗಳನ್ನು ನಿಯಂತ್ರಿಸಬೇಕು ; ಇದಕ್ಕೂ ಮೊದಲು ಅಹಂಕಾರವನ್ನು ಇಲ್ಲವಾಗಿಸಬೇಕು ; ಅಹಂಕಾರವನ್ನು ಇಲ್ಲವಾಗಿಸಬೇಕಾದರೆ ಶಿವನೊಡನೆ ಐಕ್ಯಭಾವ ಪಡೆಯಬೇಕು. ಐಕ್ಯನಲ್ಲಿರುವ ಕೆಲವು ಮುಖ್ಯಗುಣಗಳು ಭಕ್ತನಲ್ಲಿಯೇ ಇರುತ್ತವೆ ; ವ್ಯತ್ಯಾಸವಿರುವುದು ತೀವ್ರತೆಯಲ್ಲಿ. ಸ್ಥಲವಿಂಗಡಣೆ ಭಕ್ತಿಯ ತೀವ್ರತೆಗನುಗುಣವಾಗಿದೆಯೇ ಹೊರತು ಶಕ್ತಿಗಳ ನಿಯಂತ್ರಣಕ್ಕೆ ಅನುಗುಣವಾಗಿಅಲ್ಲ. ಆದರೂ ಹಾಗೆ ಹೇಳಿದರೆ ಅದು ಕೇವಲ ಅಭಿವ್ಯಕ್ತಿಯ ಅನುಕೂಲಕ್ಕಾಗಿ.

## ಗ್ರಂಥಋಣ


೧. ವಚನಶಾಸ್ತ್ರಸಾರ, ಸಂಪುಟ ೨ (ಸಂ: ಶ್ರೀ ಫ. ಗು. ಹಳಕಟ್ಟಿ), ಪುಟ ೮೪. (ವಿಜಾಪುರ, ೧೯೩೮)
೨. ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು (ಸಂ : ಡಾ. ಎಚ್. ಪಿ. ಮಲ್ಲೇದೇವರು, ಧಾರವಾಡ ೧೯೭೯) ವಚನ ೮೯
೩. ಅದರಲ್ಲೇ ೯೧ ೪. ಅದರಲ್ಲೇ ೧೦೦ ೫. ಅದರಲ್ಲೇ ೧೧೯
೬. ಬಸವಣ್ಣನವರ ಷಟ್‌ಸ್ಥಲದ ವಚನಗಳು (ಸಂ: ಪ್ರೊ. ಬಸವನಾಳ ಶಿವಲಿಂಗಪ್ಪನವರು ; ಮೈಸೂರು ಸರ್ಕಾರ, ಬೆಂಗಳೂರು ೧೯೬೮), ವ ೫೨೯, ೫೩೦, ೫೪೮
೭. ಅದರಲ್ಲೇ ೫೪೦-೫೪೫ ೮. ಅದರಲ್ಲೇ ೬೯೪
೯. ಷಟ್‌ಸ್ಥಲ ಜ್ಞಾನಸಾರಾಮೃತ (ಸಂ: ಡಾ. ಆರ್. ಸಿ. ಹಿರೇಮಠ; ಮುರುಘಾಮಠ, ಧಾರವಾಡ, ೧೯೬೪) ವ. ೨೬೬
೧೦. ಬಸವಣ್ಣನವರ ವಚನಗಳು ೬೭೯; ಷಟ್‌ಸ್ಥಲ ಜ್ಞಾನಸಾರಾಮೃತ ೨೬೪ ೧೧. ಷಟ್‌ಸ್ಥಲ ಜ್ಞಾನಸಾರಾಮೃತ ೨೯೧
೧೨. ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು ೨೦೯
೧೩. ಅದರಲ್ಲೇ ೨೦೮ ೧೪. ಅದರಲ್ಲೇ ೨೨೦. ೧೫. ಬಸವಣ್ಣನವರ ವಚನಗಳು ೩೯೪

೧೬. ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು ೨೫೦; ಷಟ್‌ಸ್ಥಲ ಜ್ಞಾನಸಾರಾಮೃತ ೩೬೪, ೪೩೦; ಉರಿಲಿಂಗ ಪೆದ್ದಿಯ ವಚನಗಳು (ಸಂ: ಎಚ್. ಪಿ. ಮಲ್ಲೇದೇವರು; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೫), ವ. ೨೯, ೧೧೧. ೧೩೨, ಇತ್ಯಾದಿ

೧೭. ಷಟ್‌ಸ್ಥಲ ಜ್ಞಾನಸಾರಾಮೃತ, ೪೬೩. ೪೬೨; ಅಖಂಡೇಶ್ವರ ವಚನಗಳು (ಸಂ: ಸಿದ್ಧವೀರದೇವರು ಹೊಸಮಠ, ಧಾರವಾಡ ೧೯೪೪) ಅಧ್ಯಾಯ ೧೩, ವ ೧, ೨

೧೮. ಚನ್ನಬಸವಣ್ಣನವರ ವಚನಗಳು (ಸಂ. ಆರ್. ಸಿ. ಹಿರೇಮಠ; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೬೨) ವ. ೧೪೧೫

೧೯. ಅದರಲ್ಲೇ ೧೪೧೬

---

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ !
ವಿಚಾರಿಸುವನ್ನಕ್ಕರ ನೀ ನಾನೆಂಬುದನೆತ್ತ ಬಲ್ಲೆ ಮರುಳೇ ?
ವಾಜ್ಮನೋತೀತವಾದ ಘನವು ವಿಚಾರಕ್ಕೆ ನಿಲುಕುವುದೇ ?
ಗುಹೇಶ್ವರ ಲಿಂಗವು ತನ್ನ ತಿಳಿದು ನೋಡಿಹೆನೆಂಬವರ
ವಿಚಾರವೆಂಬ ಬಲೆಯಲ್ಲಿ ಕೆಡಹಿದನು

ಅಲ್ಲಮಪ್ರಭು

* * *

ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪದ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀನು ಬೆರೆಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥಾ !

ದೇವರ ದಾಸಿಮಯ್ಯ

# ಷಟ್ಸ್ಥಲಗಳು ಮತ್ತು ನವವಿಧ ಭಕ್ತಿಮಾರ್ಗಗಳು

**ಡಾ. ಜಿ. ವರದರಾಜರಾವ್**

ಕನ್ನಡನಾಡಿನ ಭಕ್ತಿಪಂಥದ ಬೆಳವಣಿಗೆಯಲ್ಲಿ ಶಿವಶರಣರು ಮತ್ತು ಹರಿದಾಸರು ಪ್ರಮುಖ ಪಾತ್ರವನ್ನು ವಹಿಸಿರುತ್ತಾರೆ. ಇಬ್ಬರೂ, ತಮ್ಮ ಭಕ್ತಿಸಾಧನೆಯಲ್ಲಿ ವಿಶಿಷ್ಟವಾದ ಮಾರ್ಗಗಳನ್ನು ಅನುಸರಿಸಿರುತ್ತಾರೆ. ಶಿವಶರಣರು ಷಟ್ಸ್ಥಲಗಳೆಂಬ ಮೆಟ್ಟಲುಗಳನ್ನೇರಿ ತಮ್ಮ ಇಷ್ಟದೈವವಾದ ಹರನ ಅನುಗ್ರಹಕ್ಕೆ ಪಾತ್ರರಾದರೆ, ಹರಿದಾಸರು ಭಾಗವತದಲ್ಲಿ ಉಕ್ತವಾಗಿರುವ ನವವಿಧಭಕ್ತಿಮಾರ್ಗಗಳಲ್ಲಿ ಯಾವುದಾದರೂ ಒಂದು ಪ್ರಕಾರವನ್ನು ಅವಲಂಬಿಸಿ ತಮ್ಮ ಇಷ್ಟದೇವತೆಯಾದ ಹರಿಯ ಅನುಗ್ರಹಕ್ಕೆ ಪಾತ್ರರಾಗುವರು. ಈ ದೈವಭಕ್ತರ ಭಕ್ತಿಪ್ರತಿಪಾದನೆಯಲ್ಲಿ ಕಂಡುಬರುವ ವಿಶೇಷಾಂಶಗಳನ್ನು ಇಲ್ಲಿ ಸಂಗ್ರಹವಾಗಿ ಪರಿಶೀಲಿಸಲಾಗಿದೆ.

ವೀರಶೈವಧರ್ಮದಲ್ಲಿ ಲಿಂಗಾಂಗಸಾಮರಸ್ಯಕ್ಕೆ ಬಹಳ ಮಹತ್ತ್ವವಾದ ಸ್ಥಾನವಿದೆ. ಲಿಂಗದಿಂದ ವಿಭಿನ್ನವಾಗಿ ಪ್ರವೃತ್ತಿಮಾರ್ಗದಲ್ಲಿ ತೊಡಗಿ ಐಹಿಕ ಸುಖದುಃಖಗಳ ಸುಳಿಯಲ್ಲಿ ಸಿಕ್ಕಿ ಬಿದ್ದ ಲಿಂಗ, ತನ್ನಲ್ಲಿ ಹುದುಗಿರುವ ಸಚ್ಚಿದಾನಂದಸ್ವರೂಪದ ಶಕ್ತಿಯನ್ನು ಮನಗಂಡ ಒಡನೆಯೇ ಕ್ರಮಕ್ರಮವಾಗಿ ನಿವೃತ್ತಿಮಾರ್ಗದಲ್ಲಿ ಮುಂದುವರಿದು ತನ್ನ ಉನ್ನತಿಯನ್ನು ಸಾಧಿಸುವ ವಿವಿಧ ಹಂತಗಳೇ ಷಟ್‌ಸ್ಥಲಗಳು. ಇವುಗಳ ಹೆಸರುಗಳನ್ನು ಕೇಳಿದ ಕೂಡಲೆ ಜೀವಾತ್ಮನ ಆರೋಹಣಗತಿಯ ಪರಿಯನ್ನು ಪರಿಭಾವಿಸಬಹುದು. ಒಂದೊಂದು ಸ್ಥಲವನ್ನು ಸಾಧಿಸಿ ಮುಂದುವರಿದಂತೆಲ್ಲ ಭಕ್ತಿಯ ಬೆಳವಣಿಗೆ ಹೇಗಾಗುವುದೆನ್ನುವುದನ್ನು ಶಾಸ್ತ್ರಸಮ್ಮತವಾಗಿ ಹೀಗೆ ನಿರೂಪಿಸಿದೆ.—

| ಸ್ಥಲ | ಭಕ್ತಿ |
|---|---|
| ಭಕ್ತಸ್ಥಲ | ಸದ್ಭಕ್ತಿ |
| ಮಾಹೇಶ್ವರಸ್ಥಲ | ನೈಷ್ಠಿಕೀಭಕ್ತಿ |
| ಪ್ರಸಾದಿಸ್ಥಲ | ಅವಧಾನಭಕ್ತಿ |
| ಪ್ರಾಣಲಿಂಗಿಸ್ಥಲ | ಅನುಭವಭಕ್ತಿ |
| ಶರಣಸ್ಥಲ | ಆನಂದಭಕ್ತಿ |
| ಐಕ್ಯಸ್ಥಲ | ಸಮರಸಭಕ್ತಿ |

ಈ ಆತ್ಮಸಿದ್ಧಿಯಲ್ಲಿ ಕರ್ಮಭಕ್ತಿಜ್ಞಾನಗಳು ಮುಪ್ಪುರಿಯಾಗಿ ಕೂಡಿಕೊಂಡು ಬರುತ್ತವೆ. ವಚನಕಾರರು ತಮ್ಮ ವಚನಗಳಲ್ಲಿ ಈ ಷಟ್ಸ್ಥಲಗಳ ಹಿರಿಮೆಯನ್ನು ಸ್ವಾನುಭವದಿಂದ ಬಹಳ ಮಾರ್ಮಿಕವಾಗಿಯೂ, ತಾತ್ತ್ವಿಕವಾಗಿಯೂ ನಿರೂಪಿಸಿರುತ್ತಾರೆ. ನಿದರ್ಶನಾರ್ಥವಾಗಿ, ಆಯಾ ಸ್ಥಲದ ಮಹತ್ತ್ವವನ್ನು ಸೂಕ್ತವಾದ ವಚನಗಳ ಮೂಲಕ ತಿಳಿಯಬಹುದು.

ಸದ್ಭಕ್ತಿಯ ಅಂಕುರಾರ್ಪಣೆಗೆ ಮಾನವನ ಮನಸ್ಸು ಹೇಗೆ ಹದವಾಗಿರಬೇಕೆಂಬುದನ್ನು ಈ ಕೆಳಗಿನ ವಚನ ಸ್ಪಷ್ಟಪಡಿಸುತ್ತದೆ—

"ಭಕ್ತನಾದಡೆ ಬಾಳೆಯ ಹಣ್ಣಿನಂತಿರಬೇಕು. ಭಕ್ತನಾದಡೆ ಬೆಲ್ಲದ ಕುಳ್ಳಿಯಂತಿರಬೇಕು. ಭಕ್ತನಾದಡೆ ಮಾವಿನ ಫಲದಂತಿರಬೇಕು. ಇಂತಪ್ಪಾತನೆ ಸದ್ಭಕ್ತ ಕಾಡಿನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೇ."

ಇಲ್ಲಿ ಕೊಟ್ಟಿರುವ ಪಕ್ವವಾದ ಬಾಳೆಯಹಣ್ಣು, ಮಾವಿನಹಣ್ಣು, ಬೆಲ್ಲದ ಅಚ್ಚಿನ ಉಪಮಾನಗಳಿಂದ ಸದ್ಭಕ್ತನ ಮನಸ್ಸು ಎಷ್ಟರಮಟ್ಟಿಗೆ ಪುಟಕ್ಕಿಟ್ಟ ಚಿನ್ನದಂತೆ ಪರಿಶುದ್ಧವಾಗಿರಬೇಕು: ಎಂಬುದು ವಿದಿತವಾಗುತ್ತದೆ.

ಸದ್ಭಕ್ತಿಯೊಂದಿಗೆ ಸುಚಿತ್ತವೂ ಸಂವರ್ಧನೆಯಾಗುವುದರಿಂದ ಸುವರ್ಣಪುಷ್ಪಕ್ಕೆ ಸುವಾಸನೆ ಪ್ರಾಪ್ತವಾದಷ್ಟು ಮೇಲ್ಮೆಯು ಲಭಿಸುವುದು.

ಎರಡನೆಯ ಮೆಟ್ಟಲೇ ಮಾಹೇಶ್ವರ ಸ್ಥಲ. ಇಷ್ಟದೈವದಲ್ಲಿ ಅಚಲವಾದ ಭಕ್ತಿ ಬೇರೂರಬೇಕಾದರೆ ಅದು ನೈಷ್ಠಿಕೀಭಕ್ತಿಯಿಂದ ಮಾತ್ರ ಸಾಧ್ಯ. ಇಲ್ಲಿನ ಹೆಸರೇ ಶ್ರುತಪಡಿಸುವಂತೆ ತನ್ನ ಆರಾಧ್ಯದೈವದಲ್ಲಿ ನಿಷ್ಠೆಯನ್ನು ಬೆಳಸಿಕೊಳ್ಳುವುದೇ ಇಲ್ಲಿನ ಮಹತ್ಕಾರ್ಯ. ಭಕ್ತನ ಸಾಧನೆಯ ಮಾರ್ಗದಲ್ಲಿ ಅಡ್ಡವಾಗಿ ಒಡ್ಡಿಬರುವ ಕಷ್ಟನಷ್ಟಗಳನ್ನು, ಈ ಕ್ಷಣತ್ರಯಗಳ ವ್ಯಾಮೋಹವನ್ನು ಜಯಿಸಿ, ಶಿವನೇ ಸರ್ವೋತ್ತಮನೆಂಬ ದೃಢವಿಶ್ವಾಸವನ್ನು ಬೆಳಸಿಕೊಳ್ಳುವುದೇ ಈ ಸ್ಥಲದ ಮಹತ್ವ. ಭಕ್ತನು ವೀರವ್ರತಿಯೆನ್ನಿಸಿ, ತನ್ನ ನಿಷ್ಠಾಭಕ್ತಿಯ ಮೂಲಕ, "ಸುಬುದ್ಧಿ"ಯ ನಿಧಿಗೆ ಒಡೆಯನಾಗುವನು. ಭಕ್ತನು ಈ ನಿಷ್ಠಾಭಕ್ತಿಯನ್ನು ಗಳಿಸುವಲ್ಲಿ ಭಗವಂತನು ಅವನನ್ನು ಯಾವ ರೀತಿ ಒರೆಗಲ್ಲಿಗಿಟ್ಟು ಪರೀಕ್ಷಿಸುವನೆಂಬುದನ್ನು ದೇವರದಾಸಿಮಯ್ಯನ ಈ ವಚನದಲ್ಲಿ ಕಾಣಬಹುದು—

"ಹರ ತನ್ನ ಭಕ್ತರ ತಿರಿವಂತೆ ಮಾಡುವ ಒರೆದು ನೋಡುವ ಸುವರ್ಣದ ಚಿನ್ನದಂತೆ, ಅರೆದು ನೋಡುವ ಚಂದನದಂತೆ, ಅರಿದು ನೋಡುವ ಕಬ್ಬಿನ ಕೋಲಿನಂತೆ, ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ."

ಇಲ್ಲಿ ಉದಾಹರಿಸಿರುವ ಒಂದೊಂದು ವಸ್ತುವೂ, ಪರೀಕ್ಷಿಸಿದಂತೆಲ್ಲ ಹೆಚ್ಚುಹೆಚ್ಚಾಗಿ ತಮ್ಮ ಸತ್ತ್ವದಿಂದ ಬೆಳಗುವ ಸ್ವಭಾವವುಳ್ಳವು. ಈ ಅಗ್ನಿಪರೀಕ್ಷೆಯಲ್ಲಿ ಭಕ್ತನು ಗೆದ್ದಿದ್ದೇ ಆದರೆ, ಪರಮಾತ್ಮನು ಅವನನ್ನು "ಕರವಿಡಿದೆತ್ತಿಕೊಂಬ" ಎಂಬ ಮಾತಿನಲ್ಲಿ ದೇವರ ಅಕ್ಕರೆಯ ಆಳವೂ ವಿಶ್ವಾಸದ ವೈಶಾಲ್ಯವೂ ಸ್ವವಿದಿತವಾಗುವುವು. ಈ ಹಂತದಲ್ಲಿ ವಿಜಯಿಯಾದ ಭಕ್ತನ ನೈಷ್ಠಿಕೀಭಕ್ತಿ ಇನ್ನೂ ಒಂದು ಹೆಜ್ಜೆ ಮುಂದುವರಿದು ಅದು "ಅವಧಾನಭಕ್ತಿ" ಎನ್ನಿಸಿಕೊಳ್ಳುವುದು.

ಈ ಅವಧಾನಭಕ್ತಿಯೇ ಪ್ರಸಾದಿಸ್ಥಲದ ಭದ್ರವಾದ ಬುನಾದಿ. ಭಕ್ತನ ಪಂಚೇಂದ್ರಿಯಗಳೆಲ್ಲವೂ, ಆತನ ಅಂತರಂಗದಲ್ಲಿಯೇ ಲಿಂಗಕ್ಕೆ ಅರ್ಪಿತವಾಗುವುದರಿಂದ ಅವುಗಳೆಲ್ಲವೂ ಅಂತರ್ಮುಖವಾಗುವುವು. ಆ ಒಂದೊಂದು ಇಂದ್ರಿಯವೂ ಹೇಗೆ ಭಕ್ತಿಸಾಧನೆಯಲ್ಲಿ ನಿರತವಾಗುತ್ತವೆಯೆನ್ನುವುದನ್ನು ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಚಿತ್ರಿಸಿರುತ್ತಾರೆ :

> "ನಾಸಿಕವಾಚಾರ, ಜಿಹ್ವೆ ಗುರು, ಕಂಗಳು (ಶಿವ)ಲಿಂಗ, ತ್ವಕ್ಕು ಜಂಗಮಲಿಂಗ, ಕರ್ಣ ಪ್ರಸಾದ,
> ಭಾವ ಮಹಾಲಿಂಗ ಕೂಡಲಚೆನ್ನಸಂಗಯ್ಯ ನಿಮ್ಮ ಶರಣ ಇಂತು ಸರ್ವಾಂಗಪ್ರಸಾದಿ"

ಶಿವಶರಣನು ಈ ನೆಲೆಯನ್ನು ಸ್ವಪ್ರಯತ್ನದಿಂದ ಸಾಧಿಸಬೇಕೇ ವಿನಾ ಬೇರೆ ಯಾರೂ ಅವನ ನೆರವಿಗೆ ಬರಲಾರರು. ಈ ಅಂತರ್ಮುಖವಾದ ಪ್ರಜ್ಞೆ ಮುಂದಿನ ಮೆಟ್ಟಲಾದ ಪ್ರಾಣಲಿಂಗಿ ಸ್ಥಲಕ್ಕೆ ತಾನಾಗಿಯೇ ದಾರಿಮಾಡಿಕೊಡುವುದು. ಇಲ್ಲಿಗೆ ಅಂಗನ ಕರ್ಮಗಳೆಲ್ಲ ಮುಗಿದು, ಮುಂದೆ ಶಿವಭಕ್ತನ ಅಂತರಂಗ ಜ್ಞಾನಾಭಿಮುಖವಾಗುವುದು. ಆತನ "ಅವಧಾನಭಕ್ತಿ", "ಅನುಭವಭಕ್ತಿ"ಯಾಗಿ ಪರಿಣಮಿಸುವುದು.

ಲಿಂಗಾಂಗಗಳ ಅಭೇದತ್ವವನ್ನು ಮನವರಿಕೆಮಾಡಿಕೊಡುವ ಈ ಸ್ಥಿತಿಯಲ್ಲಿ ಜ್ಞಾನದ ಪಾತ್ರ ಬಹಳ ದೊಡ್ಡದು. ಆ ಮೂಲಕ ಶಿವಶರಣನು ಯಾವ ದರ್ಶನಾನುಭವವನ್ನು ಗಳಿಸುವನೆಂಬುದನ್ನು ಚೆನ್ನಬಸವಣ್ಣನವರು ಅತ್ಯಂತ ಪರಿಣಾಮಕಾರಿಯಾಗಿ ಪ್ರಸ್ತಾಪಿಸಿರುತ್ತಾರೆ :

> "ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಯಿತ್ತು. ಅಂಗ ಲಿಂಗವಾಯಿತ್ತು. ಗುಹೇಶ್ವರಲಿಂಗದಲ್ಲಿ ಸರ್ವಾಂಗ
> ಪ್ರಾಣಲಿಂಗ ಸ್ವಾಯತ್ತವಾಯಿತ್ತು ಕಾಣಾ" (ಚನ್ನಬಸವಣ್ಣ)

ಈ ಅಂತರಂಗದ ಕ್ರಿಯೆಯನ್ನು ಎಳೆಎಳೆಯಾಗಿ ಬಿಡಿಸಿ ಹೇಳುವ ವಚನಗಳು ಹಲವಾರಿವೆ. ಮುಖ್ಯವಾಗಿ, ನಮ್ಮ ಯೋಗಶಾಸ್ತ್ರದಲ್ಲಿ ನಿರೂಪಿಸಿರುವ ಮೇರೆಗೆ ಷಟ್ಚಕ್ರಗಳ ಮೂಲಕ ಲಿಂಗಜ್ಞಾನವಾಗುವ ಕ್ರಮವನ್ನು ವಚನಕಾರರು ಹಂತಹಂತವಾಗಿ ವರ್ಣಿಸಿರುತ್ತಾರೆ. ಶಿವಶರಣನಿಗೆ "ಲಿಂಗಬಾಹ್ಯಪರಂ ನಾಸ್ತಿ" ಎಂಬ ಅರಿವು ದೃಢವಾಗಿ ನೆಲೆಗೊಳ್ಳಲು ಮುಂದಿನ ಹೆಜ್ಜೆಯಾದ ಶರಣಸ್ಥಲವನ್ನು ಹತ್ತಲು ಅರ್ಹನಾಗುತ್ತಾನೆ.

ಶರಣಸ್ಥಲದ ಹಿರಿಮೆಗರಿಮೆಗಳನ್ನು ಹೇಳತೀರದು. ಆತನು ಲೌಕಿಕಜೀವನದ ಸಂಕಲೆಗಳನ್ನೆಲ್ಲ ನಿವಾರಿಸಿಕೊಂಡು ಅಲೌಕಿಕನೆಲೆಯನ್ನು ಪಡೆಯಲು ತಕ್ಕುದಾದ ಚೈತನ್ಯಸ್ವರೂಪನೆನ್ನಿಸುತ್ತಾನೆ. ನೆಪಮಾತ್ರಕ್ಕೆ ಅವನು

ದೇಹಿಯೇ ಹೊರತು, ವಾಸ್ತವವಾಗಿ ಲಿಂಗಸದೃಶನು. ಶರಣಸ್ಥಲದ ಮಹತ್ವವನ್ನು ಕುರಿತು ತೋಂಟದ ಸಿದ್ಧಲಿಂಗ ಯತಿಗಳ ವಚನ ಗಮನಾರ್ಹವಾಗಿದೆ :

"ಲಿಂಗವೇ ಪತಿಯಾಗಿ ಅನ್ಯವನರಿಯದೆ, ಪಂಚೇಂದ್ರಿಯವಿರಹಿತನಾಗಿ, ತೆರಹಿಲ್ಲದ ಅರುಹು ತಾನಾಗಿ, ನೆರೆ ಅರುಹಿನೊಳು ನಿಬ್ಬೆರಗಾಗಿ, ಹೃದಯಕಮಲಮಧ್ಯದಲ್ಲಿ ಪರಮೇಶ್ವರನೊಳಗಣ ಪರಮಸ್ನೇಹವೆರಸಿ ಅಗಲದಿಪ್ಪುದೀಗ ಶರಣಸ್ಥಲವೆಂದೆಂಬೆನಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ."

ಇಂಥ ಅಭೇದಸ್ಥಿತಿಯನ್ನು ತಲುಪಿದ ಶರಣನಿಗೆ ಶಿವನನ್ನು ಬಿಟ್ಟು ಯಾರೂ ಸಮರಿಲ್ಲ. ಶರಣನ ಬಗ್ಗೆ ಹರಿಹರನು ಹೇಳಿರುವ ಈ ಮಾತುಗಳು ತುಂಬ ಅತಿಶಯವಾಗಿವೆ :

ಶರಣಂ ಸಂಸಾರಿಯೇ ಮಾಣ್ ಪುಸಿ ಪುಸಿ ಶರಣಂ ಕಾಮಿಯೇ ಪೇಳಲೆಂತುಂ
ಶರಣಂ ತಾಂ ಕ್ರೋಧಿಯೇ ಸಲ್ಲದು ತೆಗೆ ಶರಣಂ ಮರ್ತ್ಯನೇ ಅಲ್ಲವೈ ಕೇಳ್
ಶರಣಂ ನಿರ್ಮಾಯನೆಂತುಂ ಶರಣನತುಳನಿಷ್ಕಾಮಿಯೆಲ್ಲಂದದಿಂದಂ
ಶರಣಂ ಶಾಂತಂ ಸುಮರ್ತ್ಯಂ ಶರಣನಮಮ ತಾನೇ ವಿರೂಪಾಕ್ಷಲಿಂಗಂ (ಪಂಪಾಶತಕಂ ೪೩)

ಪ್ರಭುದೇವರಂತೂ ಶರಣನ ಈ ಅಸದೃಶ ಮೇಲ್ಮೆಯನ್ನು ಬಹಳ ಸರಳವಾಗಿ, ಆದರೆ ಸಾಕಷ್ಟು ಗಹನವಾಗಿ ನಿರೂಪಿಸಿರುವರು :

"ಆನು ನೀನು ಎಂಬುದು ತಾನು ಇಲ್ಲ, ತಾನರಿದ ಬಳಿಕ ಏನೂ ಇಲ್ಲ. ಇಲ್ಲದ ಇಲ್ಲವೆ ಎಲ್ಲಿಂದ ಬರ್ಪುದೋ ? ಅನುವರಿತು, ತನುವಮರೆದು ಭಾವರಹಿತಗುಹೇಶ್ವರಾ."

"ಇಂಥ ಶರಣನಿರವು ಶಿವಶಕ್ತಿಸಂಪುಟದಂತೆ ಶಿವಶಕ್ತಿಯರಿಗೆ ಹೇಗೆ ಅವಿನಾಭಾವವೋ ಹಾಗೆಯೇ ಪ್ರಕೃತಿ ಪುರುಷಾದಿಗಳನ್ನು ಮೀರಿದ ಶರಣ ಮತ್ತು ಲಿಂಗ ಇವರಿಗೆ ಅವಿನಾಭಾವವಿರುತ್ತದೆ. ಶಕ್ತಿಯೇ ಶಿವ, ಶಿವನೇ ಶಕ್ತಿ ಹೇಗೋ ಹಾಗೆ ಶರಣನೇ ಲಿಂಗ, ಲಿಂಗವೇ ಶರಣ" ಎಂಬುದಾಗಿ ಎಂ. ಆರ್. ಶ್ರೀನಿವಾಸಮೂರ್ತಿಗಳು ಈ ಸಂಗತಿಯನ್ನು ಸ್ಪಷ್ಟಪಡಿಸಿರುವರು. ಈ ದಿವ್ಯಪದವಿಯನ್ನು ಗಳಿಸಿದ ಶರಣನ ಜೀವನದ ಕಣಕಣವೂ ಆನಂದಮಯವಾಗಿ ಪರಿಣಮಿಸುವುದರಿಂದ ಆತನ ಭಕ್ತಿಯನ್ನು 'ಆನಂದಭಕ್ತಿ' ಎಂದು ನಿರ್ದೇಶಿಸುವುದುಂಟು.

"ನಾಹಂ ಕೋಽಹಂ ಸೋಽಹಂ" ಎಂಬ ಭಾವಗಳೆಲ್ಲವೂ ಕಳಚಿ ಬಿದ್ದ ಬಳಿಕ ಶರಣನಿಗೆ ಉಳಿದಿರುವ ಒಂದೇ ಒಂದು ಮಾರ್ಗವೆಂದರೆ ಲಿಂಗಾಂಗಸಾಮರಸ್ಯದ ಸ್ಥಿತಿಯನ್ನು ಮುಟ್ಟುವುದು. ಇದೇ ಐಕ್ಯಸ್ಥಲ. ಇದರ ಲಕ್ಷಣವನ್ನು ವಚನಕಾರನು ಹೀಗೆ ಹೇಳಿರುತ್ತಾನೆ.

"ಘೃತ ಘೃತವ ಬೆರಸಿದಂತೆ, ಕ್ಷೀರ ಕ್ಷೀರವ ಬೆರಸಿದಂತೆ, ತೈಲ ತೈಲವ ಬೆರಸಿದಂತೆ, ನೀರ ನೀರ ಬೆರಸಿದಂತೆ, ಜ್ಯೋತಿ ಜ್ಯೋತಿಯ ಬೆರಸಿದಂತೆ, ಬಯಲ ಬಯಲ ಬೆರಸಿದಂತೆ, ಪ್ರಾಣ ಪ್ರಾಣಸಂಯೋಗವಾದ ಲಿಂಗಸಮರಸವನೇನೆಂಬೆನಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ."

ಲಿಂಗಾಂಗಗಳಾಗಿ ಕವಲೊಡೆದಿದ್ದ ಏಕೈಕ ಪರವಸ್ತು, ಮತ್ತೆ ನಿವೃತ್ತಿಮುಖವಾಗಿ ಹೆಜ್ಜೆ ಹೆಜ್ಜೆಯಿಟ್ಟು ಮುಂದುವರೆದು ಕಟ್ಟಕಡೆಗೆ ಪುನಃ ಸಂಯೋಗಗೊಂಡು ಒಂದಾಗುವುದೇ ಈ ಸಾಮರಸ್ಯವೆಂಬ ಐಕ್ಯತತ್ವದ ರಹಸ್ಯ. ಈ ನೆಲೆಯನ್ನು ಸಾಧಿಸುವುದು ಸುಲಭಸಾಧ್ಯವಲ್ಲ. ಆದ್ದರಿಂದಲೇ "ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ" ಎಂಬ ಮಾತು ಅಕ್ಷರಶಃ ನಿಜವಾದುದು.

ಷಟ್ಸ್ಥಲಸಿದ್ಧಾಂತದಲ್ಲಿ ಕಂಡುಬರುವ ಪ್ರಮುಖ ಲಕ್ಷಣವೆಂದರೆ ಶಿವಭಕ್ತಿಯ ವಿಕಾಸತತ್ವ. ಶಿವಶರಣನು, ತನ್ನ ನಿರಂತರವಾದ ಸಾಧನೆಯ ಮೂಲಕ ಕ್ರಮಕ್ರಮವಾಗಿ ಎಂತಹ ಮಹೋನ್ನತ ಪದವಿಯನ್ನು ಪಡೆಯಬಲ್ಲನೆಂಬ ದಿವ್ಯದರ್ಶನ.*—

## ೨

ಹರಿದಾಸರಿಗಾದರೋ ತಮ್ಮ ಹರಿಭಕ್ತಿಯನ್ನು ಸಾಧಿಸುವುದರಲ್ಲಿ ಶ್ರೀಮದ್ಭಾಗವತ, ಪರಮಪ್ರಮಾಣಗಳಲ್ಲಿ ಒಂದಾದ ಆರ್ಷಗ್ರಂಥ. ಅಲ್ಲಿ ಕಂಡುಬರುವ ಶ್ರೀಕೃಷ್ಣನ ಒಂದೊಂದು ಲೀಲೆಯೂ ಅವರಿಗೆ ಅನಂತಸುಖವನ್ನು

* ಈ ವಿಭಾಗವನ್ನು ಬರೆಯುವಲ್ಲಿ ಎಂ. ಆರ್. ಶ್ರೀನಿವಾಸಮೂರ್ತಿ ಅವರ "ವಚನಧರ್ಮಸಾರ"ದ ನೆರವನ್ನು ಸಾಕಷ್ಟು ಪಡೆದಿರುತ್ತೇನೆ.

ನೀಡಬಲ್ಲದು. ಅಲ್ಲಿ ಉಕ್ತನಾಗಿರುವ ಒಬ್ಬೊಬ್ಬ ಹರಿಭಕ್ತನೂ ಅವರಿಗೆ ಆದರ್ಶಪುರುಷ. ಆದ್ದರಿಂದ, ಹರಿಭಕ್ತಿಯನ್ನು ಗಳಿಸಿಕೊಳ್ಳುವುದರಲ್ಲಿ ಭಾಗವತದ ಈ ಕೆಳಗಿನ ಶ್ಲೋಕ ಹರಿದಾಸರಿಗೆ ತುಂಬ ಪ್ರಿಯವಾದದ್ದು. ಅಲ್ಲಿನ ಒಂದೊಂದು ಮಾತೂ ಅದರ ಪಾಲಿಗೆ ಹರಿಭಕ್ತರು ಬಿಟ್ಟು ಹೋಗಿರುವ ಹೆಜ್ಜೆಗುರುತುಗಳಂತೆ ಸರ್ವದಾ ಪೂಜ್ಯವೆನ್ನಿಸಿದೆ :

"ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥

ಇಲ್ಲಿ ಉಕ್ತವಾಗಿರುವ ಒಂದೊಂದು ಶಬ್ದವೂ ಹರಿಭಕ್ತಿಸಾಧನೆಯ ಒಂದೊಂದು ಪ್ರಕಾರವೆಂದು ಪರಿಗಣಿತವಾಗಿದೆ. ಎಂದರೆ, ಹರಿಯ ಪರಮಾನುಗ್ರಹಕ್ಕೆ ಪಾತ್ರರಾಗಲು ಬಯಸುವ ಹರಿದಾಸರು, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನಗಳೆಂಬ ಈ ನವವಿಧ ಭಕ್ತಿಮಾರ್ಗಗಳಲ್ಲಿ ಯಾವುದು ತಮಗೆ ಸಮ್ಮತವೋ ಅದನ್ನು ಆರಿಸಿಕೊಂಡು ಆ ಮೂಲಕ ತಮ್ಮ ಉದ್ಧಾರವನ್ನು ಗಳಿಸಬಹುದೆಂದು ಅಭಿಪ್ರಾಯ. ಈ ಒಂಬತ್ತು ಮಾರ್ಗಗಳ ಮೂಲಕ ಆತ್ಮಕಲ್ಯಾಣವನ್ನು ಪಡೆದ ಭಕ್ತರ ಪರಂಪರೆಯನ್ನು ಕುರಿತ ಮತ್ತೊಂದು ಸಾಕ್ಷಿಪದ್ಯ ಇಂತಿದೆ :

"ವಿಷ್ಣೋಸ್ತು ಶ್ರವಣೇ ಪರೀಕ್ಷಿದಭವದ್ ವೈಯಾಸಕಿಃ ಕೀರ್ತನೇ
ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ ।
ಅಕ್ರೂರಸ್ತ್ವಭಿನಂದನೇ ಚ ಹನುಮಾನ್ ದಾಸ್ಯೇಽಥ ಸಖ್ಯೇಽರ್ಜುನಃ
ಸರ್ವಸ್ವಾತ್ಮನಿವೇದನೇ ಬಲಿರಭೂತ್ ಕೈವಲ್ಯಮೇಷಾಂ ಸಮ್ ॥

ಪರೀಕ್ಷಿತ್‌ರಾಜನು ಶ್ರವಣದಿಂದಲೂ, ನಾರದರು ಹರಿನಾಮಸಂಕೀರ್ತನೆಯಿಂದಲೂ, ಪ್ರಹ್ಲಾದನು ಹರಿಸ್ಮರಣೆಯಿಂದಲೂ, ಲಕ್ಷ್ಮೀದೇವಿ ನಾರಾಯಣನ ಪಾದಭಜನೆಯಿಂದಲೂ, ಭೂದೇವಿ ಹರಿಯ ಪೂಜೆಯಿಂದಲೂ, ಅಕ್ರೂರನು ಅಭಿನಂದನದ ಮೂಲಕವೂ, ಹನುಮಂತನು ದಾಸ್ಯಭಕ್ತಿಯಿಂದಲೂ, ಅರ್ಜುನನು ಸಖ್ಯಭಕ್ತಿಯಿಂದಲೂ, ಬಲಿಚಕ್ರವರ್ತಿ ಆತ್ಮನಿವೇದನೆಯ ಮುಖಾಂತರವೂ ಒಂದೇ ತೆರನಾದ ಕೈವಲ್ಯವನ್ನು ಗಳಿಸಿದರೆಂದು ಇಲ್ಲಿ ತಿಳಿಸಿದೆ. ಪ್ರಕೃತ ನವವಿಧ ಭಕ್ತಿಗಳಿಗೂ ಈ ಮೊದಲು ಪರಿಶೀಲಿಸಿದ ಷಟ್ಸ್ಥಲಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಇಲ್ಲಿ ಒಂದೊಂದು ಭಕ್ತಿಯೂ ಒಂದೊಂದು ಸ್ವತಂತ್ರವಾದ ಪ್ರಕಾರವೆನ್ನಿಸಿದರೆ, ಷಟ್ಸ್ಥಲದಲ್ಲಿ ಒಂದೊಂದೂ ಒಂದು ಹಂತವೆನ್ನಿಸಿ ಪರಮಲಕ್ಷ್ಯವನ್ನು ಸಾಧಿಸುವುದರಲ್ಲಿ ಸಾರ್ಥಕವೆನ್ನಿಸುತ್ತದೆ. ಈ ನವವಿಧಭಕ್ತಿಗಳನ್ನು ಕುರಿತು ಪುರಂದರದಾಸರು ರಚಿಸಿರುವ ಒಂದು ಸುಳಾದಿಯಲ್ಲಿ ಇವುಗಳ ಸ್ವರೂಪ ತಕ್ಕಮಟ್ಟಿಗೆ ತಿಳಿದುಬರುತ್ತದೆ. ಆ ಸುಳಾದಿಯ ಪ್ರಾರಂಭ ಹೀಗಿದೆ :

ಹರಿಯ ಒಂಬತ್ತು ಭಕ್ತಿಯ ಬಲ್ಲ ಧೀರ
ಮರಳಿ ಸಂಸತ್ತಿಯ ದಾರಿಗೆ ಹುಟ್ಟಿ ಬಾರ
ದುರಾಚಾರ ದುಷ್ಕೃತಿಗಳ ಕಂಡು ಸೇರ
ಹಿರಿಯರೊಳ್ ಬಿರುನುಡಿ ಜಿಹ್ವೆಗೆ ತಾರ
ಪುರಂದರವಿಠಲಕೀಯನುದಾರ
ಚರಣಾಬ್ಜನಿಷ್ಠೆಯಂಗಡಿಯಿಟ್ಟು ತೋರ

ಪ್ರಕೃತ ಚರಣದಲ್ಲಿ ಪುರಂದರದಾಸರು ನವವಿಧ ಭಕ್ತಿಮಾರ್ಗಗಳಿಂದ ಪರಿಪಕ್ವವಾದ ಹರಿಭಕ್ತನ ಹಿರಿಮೆಯನ್ನೂ, ವಿನಯವನ್ನೂ, ಆತನ ನಡೆನುಡಿಗಳ ಸಂಸ್ಕಾರವನ್ನೂ ಬಹಳ ಅರ್ಥವತ್ತಾಗಿ ನಿರೂಪಿಸಿರುವರು. ನವವಿಧ ಭಕ್ತಿಗಳನ್ನು ಬಲ್ಲವನಿಗೆ ಅವು ಅಕ್ಷಯನಿಧಿಯೆನ್ನಿಸಿ ಆತನು ಧೀರನಾಗುವನೆಂಬ ಭಾವನೆಯೂ, ಪುನಃ ಸಂಸಾರದ ಹಂದುಗ ಆತನನ್ನು ಬಂದು ಎಡುವುದಿಲ್ಲವೆಂಬ ಮಾತೂ ಗಮನಾರ್ಹವಾದುವು. ಕೆಟ್ಟ ನಡತೆ, ಕೆಟ್ಟ ಕೆಲಸಗಳು ಆತನ ಹತ್ತಿರ ಸುಳಿಯಲಾರವು. ಹಿರಿಯರಲ್ಲಿ ಆತನಿಗೆ ಗೌರವ ಬೆಳೆಯುವುದರಿಂದ ಆತನ ನಾಲಿಗೆಗೆ ಬಿರುಸು ನುಡಿಯ ಸೋಂಕಿಲ್ಲ. ಎಲ್ಲಕ್ಕಿಂತಲೂ ಮಿಗಿಲಾಗಿ ಆತನು ತಾನು ಅರ್ಜಿಸಿದ ಭಕ್ತಿಯನ್ನು ತನ್ನ ಆತ್ಮಕಲ್ಯಾಣಕ್ಕಾಗಿ ಬಳಸಿಕೊಳ್ಳು

ವನೇ ವಿನಾ ಬಹಿರಾಡಂಬರಕ್ಕಾಗಿ ಎಂದೆಂದಿಗೂ ಮೆರೆಸಲು ಬಯಸುವುದಿಲ್ಲ. ಸದ್ಭಕ್ತನ ಸದ್ಗುಣಗಳನ್ನೆಲ್ಲ ಈ ಒಂದು ನುಡಿಯಲ್ಲಿ ಪುರಂದರದಾಸರು ಬಹಳ ಸರಳವಾಗಿ ಹುದುಗಿಟ್ಟಿರುವರು.

ಶ್ರವಣಭಕ್ತಿಯ ಸ್ವರೂಪವನ್ನು ಕುರಿತು ಪುರಂದರದಾಸರು ಹೀಗೆ ವ್ಯಾಖ್ಯಾನ ಮಾಡಿರುತ್ತಾರೆ:

ಹರಿಕಥಾಶ್ರವಣಕ್ಕೆ ಮನವಿತ್ತ ಪ್ರೌಢ
ಅರವತ್ತು ಘಳಿಗೆ ವ್ಯರ್ಥದಿ ಹೋಗಾಡ
ಪರಮಪದವಿಯನೈದುವನವ ಗಾಢ
ನಿರಯದ ಬಟ್ಟೆ ದೂರದಲೊಮ್ಮೆ ನೋಡ
ಪುರಂದರವಿಠಲನಂಘ್ರಿಯ ಗಾಢಾ
ವರದಲಪ್ಪುವ ಮೈಮರೆದು ಮಾತಾಡ

ಹರಿಕಥಾಶ್ರವಣದಿಂದ ಹರಿಭಕ್ತನ ಮನಸ್ಸು ಹೇಗೆ ಏಕಮುಖವಾಗುತ್ತದೆಯೆನ್ನುವುದನ್ನು ಈ ನುಡಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಆತನು ಒಂದು ನಿಮಿಷವನ್ನೂ ಪೋಲುಮಾಡುವುದಿಲ್ಲ. ಆ ಏಕೈಕ ಚಿತ್ತದಿಂದ ಹರಿಕಥಾಶ್ರವಣ ಮಾಡುವ ಮೂಲಕ ಆತನಿಗೆ ಸದ್ಗತಿಯೆನ್ನುವುದು ಸಿದ್ಧ. ಆತನಿಗೂ ನರಕಕ್ಕೂ ಬಲುದೂರ. ದೇವರ ಪಾದಪದ್ಮಗಳನ್ನೇ ಮುಚ್ಚಿ ನೆಚ್ಚಿಕೊಂಡಿರುವ ಆತನ ಮನಸ್ಸು, ಮೈಮರೆತಾದರೂ ಇತರ ವಿಷಯಗಳತ್ತ ಸುಳಿಯುವುದಿಲ್ಲ. ಈ ಶ್ರವಣಭಕ್ತಿಯನ್ನು ಕುರಿತು ಹರಿದಾಸರು ಒಂದಲ್ಲ ಒಂದು ಬಗೆಯಾಗಿ ಕೊಂಡಾಡಿರುವುದುಂಟು. ಪುರಂದರದಾಸರ ಮಾತನ್ನೇ ಉದಾಹರಿಸುವುದಾದರೆ, "ಹರಿಕಥಾಶ್ರವಣ ಮಾಡೋ, ಪಾಡೋ, ಹರಿಕಥಾಶ್ರವಣ ಮಾಡೋ ಪಥ ವೈಕುಂಠಕೆ ನೋಡೋ" ಎಂಬ ಪಲ್ಲವಿಯಲ್ಲಿಯೇ ಹರಿಕಥೆಯ ಹಿರಿಮೆ ತಾನಾಗಿ ವ್ಯಕ್ತವಾಗುತ್ತದೆ. ಅದು ವೈಕುಂಠಕ್ಕೆ ಪಥವೆಂದಮೇಲೆ ಇನ್ನು ಹೆಚ್ಚು ಹೇಳಬೇಕಾದದ್ದಾದರೂ ಏನಿದೆ? ಕೀರ್ತನ ಭಕ್ತಿಯನ್ನು ಈ ರೀತಿ ವಿವರಿಸಿದ್ದಾರೆ:

"ಹರಿಕೀರ್ತನೆಯ ಭಕುತಿ ತುಂಬಿ ಪೇಳ್ವ
ಚಿರಸ್ವಭಾವದಲಿ ಕಣ್ಣೊರತೆಯ ತಾಳ್ವ
ಹರಿಯೆಂದು ಕೂಗಿ ಸುಜನರಲ್ಲಿ ಬೀಳ್ವ
ದುರಿತಗಜಗಳ ಮಂಡೆಯನೇರಿ ಸೀಳ್ವ
ಪುರುಷಾಮೃತಾಬ್ಧಿಯೊಳು ಮುಳುಗೇಳ್ವ
ಪುರಂದರವಿಠಲನ ಹೊಂದಿ ಬಾಳ್ವ"

ಹರಿಕೀರ್ತನೆಯನ್ನು ಮಾಡುತ್ತಿದ್ದಂತೆಯೇ ಹರಿಭಕ್ತನು ಆನಂದಪುಳಕಿತನಾಗಿ ಹರ್ಷಬಾಷ್ಪವನ್ನು ಸುರಿಸುವನು. ಆತನ ಆ ರೋಮಾಂಚವನ್ನು ಎಷ್ಟು ವರ್ಣಿಸಿದರೂ ಮುಗಿಯುವಂತಿಲ್ಲ. ತನ್ನಂತೆಯೇ ಸಮಾನ ಧರ್ಮವುಳ್ಳ ಭಕ್ತರ ಸಹವಾಸವನ್ನೇ ಅಪೇಕ್ಷಿಸುವನು. ಆನೆಗಳಂತೆ ಮೇಲಪ್ಪಳಿಸಿ ಬರುವ ಕಷ್ಟಕೋಟಲೆಗಳನ್ನೆಲ್ಲ ಮೆಟ್ಟಿ ಅಡಗಿಸುವನು. ಈ ಪರಮಾನಂದದ ಸ್ಥಿತಿಯಲ್ಲಿ ಆತನು ಪುರಂದರವಿಠಲನ ಅನುಗ್ರಹವನ್ನು ಸಂಪಾದಿಸುವನು.

ಹರಿಕೀರ್ತನೆ, ನಾಮಸಂಕೀರ್ತನೆಗಳೆಂಬುದು ಹರಿಭಕ್ತನ ಮುಖ್ಯ ಸಾಧನಗಳು. "ಹರಿನಾರಾಯಣ ಹರಿನಾರಾಯಣ ಎನು ಮನವೆ" ಎಂದು ಮೊದಲಾಗುವ ಕೀರ್ತನೆಯಲ್ಲಿ, ಪುರಂದರದಾಸರು ತರಳ ಧ್ರುವನಿಂದ ಮೊದಲ್ಗೊಂಡು ಪತಿತನಾದ ಅಜಾಮಿಳನವರೆಗೆ ಹರಿನಾಮಬಲದಿಂದ ಭಕ್ತರು ಹೇಗೆ ಉದ್ಧೃತರರಾದರೆಂಬುದನ್ನು ಮನವರಿಕೆ ಮಾಡಿಕೊಟ್ಟಿರುತ್ತಾರೆ. "ನಾಮಸಂಕೀರ್ತನೆ ಅನುದಿನ ಮಾಳ್ಪಗೆ ನರಕಭಯಗಳುಂಟೆ? ಒಂದೇ ನಾಮದೊಳಡಗಿದವು ಆನಂದದಿಂದ ಸುರುವ ಅಖಿಳವೇದಗಳು," "ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವೈ" ಎಂಬ ಕೀರ್ತನೆಗಳಲ್ಲಿ ನಾಮಮಹಿಮೆಯನ್ನು ನಾನಾ ವಿಧವಾಗಿ ವರ್ಣಿಸಿರುವರು. "ಹರಿನಾಮವರಗಿಣಿಯು ಹಾರುತಿದೆ ಜಗದಿ ಪರಮಭಾಗವತರು ಬಲೆಯ ಬೀಸುವರು" ಎಂಬ ಕೀರ್ತನೆಯಂತೂ ತನ್ನ ರೂಪಕನಿರೂಪಣೆಯಿಂದ ತುಂಬ ಆನಂದದಾಯಕವಾಗಿದೆ.

ಸ್ಮರಣಭಕ್ತಿಯ ಸಾರವೇನೆಂಬುದನ್ನು ಪುರಂದರದಾಸರು ಒಂದು ನುಡಿಯಲ್ಲಿ ಅಡಗಿಸಿಟ್ಟು ಹೇಳಿರುವರು:

"ಹರಿಸ್ಮರಣೆಗೆ ವಿಸ್ಮೃತಿಯಾದವನ ಜರಿವ
ಚಿರಕಾಲದಘವ ಒಮ್ಮೆಂದೊಮ್ಮೆ ತರಿವ
ಪರಮಭಾಗವತಸಮ್ಮೇಳನದಿ ಬೆರೆವ
ನೆರೆ ಹಿತಿದವರಿಗೆ ಮುಕುತಿಯನೊರೆವ

ವರಬಿಂಬ ಕಾಂಬ ಕಣ್ಣುಳನು ತೆರೆವ
ಪುರಂದರವಿಠಲರಾಯನ ದಯಹೊಂದಿ ಮೆರೆವ"

ಹರಿಭಕ್ತನಿಗೆ ಹರಿವಿಸ್ಮೃತಿಯೆಂಬುದು ಹತ್ತಿರವೂ ಸುಳಿಯದು. ಆದ್ದರಿಂದ, ಹಾಗೆ ಹರಿಯನ್ನು ಮರೆತವರನ್ನು ಹೀಯಾಳಿಸದೆ ಬಿಡುವುದಿಲ್ಲ; ಎಂಬ ಮೊದಲನೆಯ ಪಂಕ್ತಿಯ ಹೇಳಿಕೆ ಅರ್ಥವತ್ತಾಗಿದೆ.ಹರಿಸ್ಮರಣೆಯಿಂದ ಹರಿಭಕ್ತನು ಏನನ್ನು ಸಾಧಿಸುವನೆಂಬ ವಿವರ ಇತರ ಪಂಕ್ತಿಗಳಲ್ಲಿ ನಿರೂಪಿತವಾಗಿದೆ. ಆತನು ಒಮ್ಮಿದೊಮ್ಮೆಗೇ ಪಾಪವಿಮುಕ್ತನಾಗುವನು. ಸರ್ವದಾ ಭಗವದ್ಭಕ್ತರ ಬಳಗದಲ್ಲಿ ಬೆರೆಯುವನು. ಆಪ್ತರಿಗೆ ಮುಕ್ತಿಯ ವಿಚಾರವನ್ನು ತಿಳಿಸುವನು. ಬಿಂಬರೂಪಿಯಾದ ಭಗವಂತನನ್ನು ಕಾಣಲಣಿಯಾಗುವಂತೆ ಒಳಗಣ್ಣನ್ನು ತೆರೆಸುವನು. ಈ ಕೈಂಕರ್ಯಗಳಿಂದ ಪುರಂದರವಿಠಲನ ಪ್ರೀತಿಯನ್ನು ಸಂಪಾದಿಸುವನು. ಈ ಭಕ್ತ್ಯಾನುಭವವನ್ನು ಪುರಂದರದಾಸರು "ಸ್ಮರಣೆ ಒಂದೇ ಸಾಲದೆ, ಗೋವಿಂದನ ಸ್ಮರಣೆ ಒಂದೇ ಸಾಲದೆ, ಪರಿಪರಿ ವಿಧವೆಲ್ಲ ಭ್ರಾಂತಿಯೆಂದು ತಿಳಿದು ಪರಮಪುರುಷ ಹರಿಯ ನೆರೆ ನಂಬಿದವರಿಗೆ" ಎಂಬ ಕೀರ್ತನೆಯಲ್ಲಿ ಸ್ಪಷ್ಟಪಡಿಸಿರುವರು. ತರಳೆಯಾದ ದ್ರೌಪದಿ, ಬಲಿಷ್ಠನಾದ ಗಜೇಂದ್ರ ಮೊದಲಾದವರು ತಮ್ಮ ಆಪತ್ಕಾಲದಲ್ಲಿ ಹರಿಸ್ಮರಣೆಯಿಂದ ಹೇಗೆ ಕಷ್ಟಗಳಿಂದ ಪಾರಾದರೆಂಬುದನ್ನು ಉದಾಹರಿಸಿರುವರು. ಪಾದಸೇವನಾಭಕ್ತಿಯನ್ನು ಕುರಿತ ದಾಸರ ಸೂಕ್ತಿಗಳು ಇಂತಿವೆ :

"ಹರಿಪಾದಸೇವನಾಧ್ಯಾನವ ಬಲ್ಲಣ್ಣ
ವರಪುಟವಿಟ್ಟ ಚಿನ್ನವು ಮುಖಬಣ್ಣ
ದುರುಚಿ ದುರ್ವಿಷಯಕ್ಕೆ ಎತ್ತನು ಕಣ್ಣ
ಹರಿಗುರುಗಳಿಗಲ್ಲದೆ ಶರಣೆನ್ನ
ಪುರಂದರ ವಿಠಲರಾಯ ಪತಿತಪಾವನ್ನ"
ಚರಣಾಬ್ಜರಸವೀಂಟಿಮೊಲೆವಾಲನುಣ್ಣ

ಹರಿಭಕ್ತರು ಹರಿಯ ಪಾದಪದ್ಮಸೇವಕರು ಮಾತ್ರವಲ್ಲದೆ, ಆ ಹರಿಭಕ್ತಿಗೆ ದೀಕ್ಷೆಕೊಡಬಲ್ಲ ತಮ್ಮ ಗುರುಗಳ ಪಾದ ಸೇವಕರೂ ಹೌದು ಎಂಬ ಭಾವ ಇಲ್ಲಿ ಗಮನಾರ್ಹವಾದುದಾಗಿದೆ. ಪುರಂದರದಾಸರು ತಮ್ಮ ಗುರುಗಳಾದ ವ್ಯಾಸ ರಾಯರ ಚರಣದರ್ಶನದಿಂದ ತಾವು "ಶ್ರೀಶನ್ನ ಭಜಿಸುವುದಕಧಿಕಾರಿ ತಾನಾದೆ" ಎನ್ನುವ ಮಾತೇ ಇದಕ್ಕೆ ಉತ್ತಮೋತ್ತಮ ನಿದರ್ಶನವಾಗಬಲ್ಲದು. ಅದೇ ಸುಳಾದಿಯಲ್ಲಿ ದಾಸರು ಕಡೆಗೆ "ಗುರುವ್ಯಾಸರಾಯರ ಚರಣವೆನಗೆ ಗತಿ ಪುರಂದರವಿಠಲನ ಅರಿತೆ ಇವರಿಂದ" ಎಂದು ಹೇಳಿರುವ ನುಡಿಗಳಂತೂ ಬಹು ಅರ್ಥಗರ್ಭಿತವಾಗಿವೆ. "ಬಿಡೆನು ನಿನ್ನ ಚರಣಕಮಲವ ಎನ್ನ ಹೃದಯ ಮಧ್ಯದೊಳಿಟ್ಟು ಭಜಿಸುವೆ ಅನುದಿನ" ಎಂಬ ವಾದಿರಾಜರ ಮಾತಿನಿಂದಲೂ ಪಾದಸೇವನಾಭಕ್ತಿಯ ಪಾವಿತ್ರ್ಯವನ್ನು ಮನಗಾಣಬಹುದು. ಭಗವಂತನ ಈ ಪಾದಸಾನ್ನಿಧ್ಯ ದೊರೆತ ಭಕ್ತನಿಗೆ ಪುನರ್ಜನ್ಮದ ಕೋಟಲೆಗಳಾವುವೂ ಇಲ್ಲ; ಎಂಬ ಅಭಿಪ್ರಾಯವನ್ನು "ಚರಣಾಬ್ಜರಸವೀಂಟಿ ಮೊಲೆವಾಲನುಣ್ಣ" ಎಂಬ ಮಾತಿನ ಮೂಲಕ ತಿಳಿಸಿರುವುದು ಧ್ವನಿಪೂರ್ಣವಾಗಿದೆ.

ಅರ್ಚನಾಭಕ್ತಿಯ ಸ್ವರೂಪವನ್ನು ಪುರಂದರದಾಸರು ಈ ರೀತಿ ಚಿತ್ರಿಸಿರುತ್ತಾರೆ :

"ಹರಿಯರ್ಚನೆಯ ಭಕ್ತಿಪ್ರವೀಣ
ತೆರತೆರ ಬರುವ ಎಡರೊಮ್ಮೆ ಕಾಣ
ಹರಿಗೆ ದೇಹೇಂದ್ರಿಯವರ್ಪಿಸಿ ಪ್ರಾಣ
ಹರಿಪುರದೊಳಗೆ ಮಾಡಿದ ತನ್ನ ಠಾಣ
ಪುರಂದರವಿಠಲನ ಪೂಜೆಯ ತ್ರಾಣ
ವರಿತು ಕಾಯದೊಳಿಟ್ಟು ನಿರ್ವಾಣ"

ತನ್ನ ದೇಹೇಂದ್ರಿಯಗಳನ್ನು ಹರಿಗರ್ಪಿಸಿ, ಆತನ ಪಟ್ಟಣದೊಳಗೆ ತನ್ನ ನೆಲೆಯನ್ನು ಮಾಡಿಕೊಂಡಿರುವ ಹರಿಭಕ್ತನ ಅರ್ಚನೆಯ ಮಹತ್ವವನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಪ್ರಕ್ರಿಯೆಯ ರಹಸ್ಯವನ್ನು ಶ್ರೀವ್ಯಾಸರಾಯರು "ಎನ್ನ ಬಿಂಬ ಮೂರುತಿಯ ಪೂಜಿಸುವೆನು ನಾನು ಮನಮುಟ್ಟಿ ಅನುದಿನವು ಮರೆಯದೆ" ಎಂಬ ಕೀರ್ತನೆಯಲ್ಲಿ ವಿಶದಪಡಿಸಿರುವರು. "ಅನ್ಯ ದೇವತೆ ಯಾಕೆ ಅನ್ಯ ಪ್ರತಿಮೆಯು ಯಾಕೆ, ಅನ್ಯವಾದ ಮಂತ್ರತಂತ್ರವ್ಯಾಕೆ ಎನ್ನಲ್ಲಿ ಭರಿತ ಸಾಧನಂಗಳಿರುತಿರೆ ಚೆನ್ನಾಗಿ ಶ್ರೀ ಕೃಷ್ಣಸ್ವಾಮಿಯ ಪೂಜಿಪೆ" ಎಂಬ ಕಟ್ಟಕಡೆಯ ನುಡಿಯಲ್ಲಿ ಹರಿಭಕ್ತರು ತಮ್ಮ ಅಂತರಂಗದಲ್ಲಿರುವ ಬಿಂಬ ಮೂರ್ತಿಯನ್ನು ಮನಗಂಡ ಬಳಿಕ ಯಾವ ಉನ್ನತ ನೆಲೆಯನ್ನು ಮುಟ್ಟುವರೆಂಬುದು ಸ್ಪಷ್ಟವಾಗುತ್ತದೆ.

ವಂದನಾರ್ಪಣೆಯ ಕ್ರಮವಾದರೋ ಹೀಗೆ ನಿರೂಪಿತವಾಗಿದೆ:

ಹರಿಗೆ ಅಷ್ಟಾಂಗದಿ ಪೊಡಮಟ್ಟ ನಿಚ್ಚ
ಉರು ಪಾಪಾಟವಿಗೆ ಧರ್ಮನೆಯಿಟ್ಟ ಕಿಚ್ಚ
ಸುರಲೋಕ ಮುಂತಾದ ಸಿರಿಗವ ಮೆಚ್ಚ
ನರರ ಸಂಪದವೆಲ್ಲ ಸ್ಥಿರವೆಂದು ನೆಚ್ಚ
ಪುರಂದರವಿಠಲರಾಯನ ನಂಬಿದ ಹುಚ್ಚ
ನಿರಯದರಸನಿಗೆ ಬೆದರನು ಬೆಚ್ಚ

ಸಾಷ್ಟಾಂಗನಮಸ್ಕಾರವೆಂಬ ಮಾತನ್ನು ನಾವು ಕೇಳಿ ಬಲ್ಲೆವಷ್ಟೆ. ಎದೆ, ಶಿರಸ್ಸು, ದೃಷ್ಟಿ, ಮನಸ್ಸು, ಮಾತು, ಪಾದಗಳು, ಕೈಗಳು, ಜಾನುಗಳು ಮೊದಲಾಗಿ ಇಡೀ ದೇಹವನ್ನು ನೆಲಕ್ಕೆ ಮುಟ್ಟಿಸಿ ಮಾಡುವ ನಮಸ್ಕಾರವೇ ಸಾಷ್ಟಾಂಗಭಕ್ತಿಯೆಂದು ಪರಿಗಣಿತವಾಗಿರುವುದು. ಹರಿಭಕ್ತಿಯಲ್ಲಿಯೇ ನಿರತವಾಗಿ, ತನ್ನ ಸ್ವಾಮಿಗೆ ನಮಸ್ಕಾರ ಸೇವೆಯನ್ನು ಸಲ್ಲಿಸುವ ಹರಿಭಕ್ತನನ್ನು ಬೇರಾವ ಬಯಕೆಯೂ ಬಾಧಿಸದು. ಅತನಿಗೆ ಸುರಲೋಕವಾಗಲಿ, ಲೌಕಿಕ ಸಂಪತ್ತಾಗಲಿ ಬೇಕಿಲ್ಲವೆಂಬ ಇಲ್ಲಿನ ಮಾತು ಬಹಳ ಮುಖ್ಯವೆನ್ನಿಸುತ್ತದೆ. ಈ ಎಲ್ಲ ತೆರನಾದ ಆಶಾಪಾಶಗಳಿಂದ ಮುಕ್ತನಾದ ಆತನನ್ನು "ಹುಚ್ಚ" ಎಂದು ಕರೆದಿರುವ ಮಾತೂ ಮಾರ್ಮಿಕವಾದುದು. "ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು, ಅಚ್ಯುತನ ನಾಮವೆಂಬ ಮೆಚ್ಚುಮದ್ದು ತಲೆಗೆ ಏರಿ" ಎಂಬ ಪುರಂದರದಾಸರ ಕೀರ್ತನೆಯಲ್ಲಿ ಕಂಡು ಬರುವ ಹರಿಭಕ್ತನ ಪರಮಾನಂದದ ವಿವಿಧ ಅವಸ್ಥೆಗಳನ್ನು ಮನಗಂಡರೆ ಈ ಹುಚ್ಚಿನ ಹಿರಿಮೆ ವೇದ್ಯವಾಗುತ್ತದೆ. "ವಂದಿಸುವ ದಾರಿಯಲಿ ಗಣನಾಥನ ಸಂದೇಹ ಸಲ್ಲ ಶ್ರೀ ಹರಿಯಾಜ್ಞೆಯಿದಕುಂಟು" ಎಂಬಲ್ಲಿ ವಂದನೆಗೆ ದೊರೆತಿರುವ ಸ್ಥಾನ ಬಹಳ ದೊಡ್ಡದು.

ದಾಸ್ಯಭಕ್ತಿಯನ್ನು ಕುರಿತ ಪುರಂದರದಾಸರ ಮೆಚ್ಚುಗೆ ಮನನೀಯವಾದುದು:

ಹರಿದಾಸರ ದಾಸತ್ವ ಪಡೆದ
ನರ ಜೀವನ್ಮುಕ್ತನೆನಿಸಿ ಕೀರ್ತಿ ಪಡೆದ
ಹರಿನಾನೆಂಬುವನ ಎದೆಯ ಮೆಟ್ಟಿ ನಡೆದ
ಹರಿಯ ಬಂಟರ ಚೌಕುಳಿವೃತ್ತಿ ಹಿಡಿದ
ಪುರಂದರವಿಠಲರಾಯನ ಎಡಪ್ಪ
ಚರಣ ನಿರ್ಜರತರು ಛಾಯವ ಹಿಡಿದ

ಹರಿದಾಸನಾದವನು ಜೀವನ್ಮುಕ್ತ ; ಎಂಬ ಮಾತು ಬಹಳ ಮಿಗಿಲಾದುದು. ದಾಸೋಹಂ ತತ್ತ್ವಕ್ಕೆ ತಲೆಬಾಗಿರುವ ಆತನು ಸೋಽಹಂ ಎಂಬುದನ್ನು ಹೇಗೆ ತಾನೆ ಸಹಿಸಿಯಾನು? ಆತನಾದರೋ ಹರಿದಾಸನು ಮಾತ್ರವೇ ಅಲ್ಲ. ಹರಿದಾಸರ ದಾಸರ ದಾಸನೂ ಹೌದು. ಈ ರೀತಿ ಹರಿದಾಸತ್ವವನ್ನು ಕೈಕೊಂಡಿರುವ ಆತ ಪರಮಾತ್ಮನ ಪಾದ ಸಾನ್ನಿಧ್ಯವೆಂಬ ಕಲ್ಪವೃಕ್ಷದ ನೆರಳಿನಲ್ಲಿ ಸರ್ವದಾ ಸಂತೃಪ್ತನಾಗಿರಬಲ್ಲ. ದಾಸ್ಯಭಕ್ತಿಯೇ ಹರಿಭಕ್ತನ ಪ್ರಧಾನ ಲಕ್ಷಣವಾಗಿರುವುದರಿಂದ ಹರಿದಾಸಸಾಹಿತ್ಯದಲ್ಲಿ ಈ ತತ್ತ್ವವನ್ನು ಪ್ರತಿಪಾದಿಸುವ ನಿದರ್ಶನಗಳು ಹಲವಾರಿವೆ. ಶ್ರೀವ್ಯಾಸರಾಯರು ತಮ್ಮ ಒಂದು ಸುಳಾದಿಯಲ್ಲಿ ಈ ಬಗ್ಗೆ ಆಡಿರುವ ನುಡಿಗಳು ಗಮನಾರ್ಹವಾಗಿವೆ:

ಆಳಿದ ನೀನು ನಿನ್ನಾಳು ನಾನು
ತಂದೆ ನೀನು ನಿನ್ನ ಕಂದ ನಾನು
ಶರಣ್ಯ ನೀನು ನಿನ್ನ ಶರಣಾಗತ ನಾನು
ದಯಾಳು ನೀನು ನಿನ್ನ ದಯಕೆ ಪಾತುರ ನಾನು
ನೋವ ನೋಡಿನ್ನು ಕಾವರಿಲ್ಲೆಂದು
ಶ್ರೀಕೃಷ್ಣ ಎನ್ನನು ಕಾಯಬೇಕೈ ತಂದೆ

ಈ ಸ್ವಾಮಿ-ಭೃತ್ಯಸಂಬಂಧದ ಸೊಗಸು ಅಷ್ಟಿಷ್ಟಲ್ಲ. ಭಗವಂತನಿಗಾದರೋ ತನ್ನ ಭಕ್ತರ ಮೇಲಿನ ವಾತ್ಸಲ್ಯವೂ ಅಷ್ಟೇ ಗಾಢವಾದುದು. ಒಮ್ಮೊಮ್ಮೆ ತನ್ನ ಭಕ್ತರೇ ತನಗಿಂತಲೂ ಮಿಗಿಲೆಂಬ ಭಾವ ಉಂಟಾಗುವಂತೆ ಭಗವಂತನು ವರ್ತಿಸುವನೆಂಬ ಹೇಳಿಕೆಗಳು ಕೇಳಿಬರುತ್ತವೆ.

ಸಖ್ಯಭಕ್ತಿಯಲ್ಲಿ ಹರಿಗೂ ಹರಿಭಕ್ತನಿಗೂ ಇರುವ ಗೆಳೆತನದ ಪ್ರಸ್ತಾಪವಿದೆ :

ಹರಿಯ ಭಕುತಿಯ ಗೆಳೆತನವಿಟ್ಟ
ತರುಣಿಸಂಪದವ್ರಜಗಳ ಸ್ನೇಹಬಿಟ್ಟ
ಕರ್ಮತ್ರಯಂಗಳನವ ಹಿಂದಕಿಟ್ಟ
ತಿರುಗಿ ಬರುವ ಪುರದ ಬಟ್ಟೆಯ ಮೆಟ್ಟ
ಪುರಂದರವಿಠಲನಲ್ಲಿ ಚಿತ್ತವಿಟ್ಟ
ನರಸಿಂಹನೊಲಿಸಿ ಲಿಂಗರಾಗವ ಸುಟ್ಟ

ಹರಿಯಲ್ಲಿ ಭಕ್ತಿಯ ಗೆಳೆತನವನ್ನು ಬೆಳಸಿದವನು, ಸ್ತ್ರೀ ಮತ್ತು ಸಂಪತ್ತುಗಳ ಗೊಡವೆಯನ್ನೇ ಬಿಟ್ಟವನೆಂದೂ ಪ್ರಾರಬ್ಧ, ಸಂಚಿತ ಮತ್ತು ಅಗಾಮಿಕರ್ಮಗಳನ್ನೆಲ್ಲ ಗೆದ್ದವನೆಂದೂ, ಪುನರ್ಜನ್ಮದಿಂದ ಪಾರಾದವನೆಂದೂ ಪುರಂದರ ದಾಸರು ವರ್ಣಿಸಿರುತ್ತಾರೆ. ಆತನ ಮನಸ್ಸೆಲ್ಲ ಪುರಂದರವಿಠಲನಲ್ಲಿಯೇ ನಾಟಿ, ನರಸಿಂಹನ ಕೃಪೆಯಿಂದ ತನ್ನ ಲಿಂಗ ಶರೀರವನ್ನು ನಿವಾರಿಸಿಕೊಂಡು ಅದು ಸದ್ಗತಿಗೆ ಸಲ್ಲಬಲ್ಲುದೆಂದೂ ತಿಳಿಸುವರು. ಪ್ರಕೃತ ಸಖ್ಯಭಕ್ತಿಯ ಸ್ವರೂಪವನ್ನು ವಿಶ್ಲೇಷಿಸಿ ನೋಡಿದ್ದೇ ಆದರೆ, ಭಕ್ತನಾದವನು ಬಾಹ್ಯಸಂಕಲೆಗಳನ್ನೆಲ್ಲ ನಿವಾರಿಸಿಕೊಂಡು, ಪರಮಾತ್ಮನೊಂದಿಗೆ ಮಿತ್ರನಂತೆ ವರ್ತಿಸುವನೆಂದು ವಿಶದವಾಗುತ್ತದೆ. ಹಿಂದೆ ಹೇಳಿರುವ ಸಂಸ್ಕೃತ ಶ್ಲೋಕದಲ್ಲಿ ಇದಕ್ಕೆ ಅರ್ಜುನನನ್ನು ಉದಾಹರಿಸಿದೆ. ಪುರಂದರದಾಸರ ವಿವರಣೆಯಲ್ಲಿನ "ಗೆಳೆತನ" ಎಂಬ ಮಾತನ್ನೇ ಅವಲಂಬಿಸಿ ಹೇಳಬಹುದಾದರೆ ಈ ಸ್ಥಿತಿಯಲ್ಲಿ ಭಕ್ತನಿಗೂ ಭಗವಂತನಿಗೂ ಸಾಕಷ್ಟು ಸಲಿಗೆ ಬೆಳೆಯುತ್ತದೆಯೆಂದು ಹೇಳಬಹುದು. ಪುರಂದರದಾಸರೇ ತಮ್ಮ ಒಂದು ಕೀರ್ತನೆಯಲ್ಲಿ "ಎನಗೂ ಆಣೆ ರಂಗ ನಿನಗೂ ಆಣೆ, ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ" ಎಂದು ಆಣೆಯಿಡುವ ಪ್ರಸಂಗವನ್ನು ಮನಗಂಡರೆ, ಈ ಸಖ್ಯಭಕ್ತಿ ಭಗವಂತನಿಗೆ ಎಷ್ಟು ನಿಕಟವಾದುದೆಂದು ತಿಳಿದುಬರು ತ್ತದೆ. ಈ ದೃಷ್ಟಿಯ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದೇ ಆದರೆ, ಹರಿದಾಸರು ಬರೆದಿರುವ ಅನೇಕ ನಿಂದಾಸ್ತುತಿಗಳನ್ನು ಈ ವಿಭಾಗದಲ್ಲಿ ಅಳವಡಿಸಬಹುದು.

ನವವಿಧ ಭಕ್ತಿಗಳಲ್ಲಿ ಕಟ್ಟಕಡೆಯದಾದ ಆತ್ಮನಿವೇದನಭಕ್ತಿಯಲ್ಲಿ ಭಕ್ತನು ಭಗವಂತನ ಪಾದಗಳಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುವುದೇ ಮುಖ್ಯವೆಂದು ಪುರಂದರದಾಸರ ಈ ವಿವರಣೆಯಿಂದ ವ್ಯಕ್ತವಾಗುತ್ತದೆ :

ಹರಿಗೆ ತನ್ನಾತ್ಮನಿವೇದನದಿಂದ
ಉರಿ ಜಲ ಮಣ್ಣು ಬೈಲು ಗಾಳಿಯ ಪೊಂದ
ಸ್ವರೂಪವ ಹರಿಯಂಘ್ರಿಗರ್ಪಿಸಿ ನಿಂದ
ಹರುಷವನುಂಬ ಉನ್ನಾಹಗಳಿಂದ
ಪುರಂದರ ವಿಠಲರಾಯನ ದಯದಿಂದ
ಸುರ ಋಷಿ ನರರಿಗೆಲ್ಲವು ನಿಜಾನಂದ

ಹರಿಭಕ್ತನು ಸಶರೀರನಾಗಿ ಹರಿಯ ಚರಣಾರವಿಂದಗಳಲ್ಲಿ ತನ್ನ ಆತ್ಮವನ್ನು ನಿವೇದಿಸಿಕೊಳ್ಳುವನೆಂಬ ಇಲ್ಲಿನ ವಿವರಣೆ ಬಹಳ ಅತಿಶಯವಾದದ್ದೇ ಸರಿ. (ಪಂಚಭೂತಗಳ ಹೆಸರುಗಳನ್ನು ತಿಳಿಗನ್ನಡದಲ್ಲಿಯೇ ಹೇಳಿರುವ ದಾಸರ ಕನ್ನಡದ ಅಭಿಮಾನ ಗಮನಾರ್ಹವಾದುದು.) ಆ ಮೂಲಕ ಪರಮಾತ್ಮನ ಪ್ರಸಾದವನ್ನು ಗಳಿಸಿಹ "ಸುರ, ಋಷಿ, ನರರಿಗೆಲ್ಲ" ನಿಜಾನಂದ ದೊರೆಯುವುದೆಂಬ ಮಾತೂ ಮನನೀಯವಾದದ್ದು. ಹರಿಭಕ್ತನಂತೂ ಉನ್ನತವಾದ ಹರ್ಷವನ್ನು ಪಡೆಯುವುದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ. ಈ ಪ್ರಕಾರಕ್ಕೆ ಉದಾಹರಣೆಯನ್ನಾಗಿ ಕೊಟ್ಟಿರುವ ಬರಿಯ ಸರ್ವ ಸಮರ್ಪಣಭಾವ ಅಸದೃಶವಾದದ್ದು. "ತನು ನಿನ್ನದು, ಜೀವನ ನಿನ್ನದೋ" ಎಂಬ ಕನಕದಾಸರ ಮಾತುಗಳನ್ನಾಗಲಿ, "ಎನ್ನ ತನು ಮುನ್ನಾತನಧೀನವೆಲೆ ಕೆಳದಿ, ಅನ್ಯವನರಿಯೆವು ತಾನೊಲಿದಂತೆ ಮಾಡಲಿ· ಉನ್ನತಗುಣನಿಧಿಯೆಂದು ಮರೆಹೊಕ್ಕೆವೆ ಅನ್ಯವನರಿಯೆವು ತಾನೊಲಿದಂತೆ ಮಾಡಲಿ" ಎಂಬುದಾಗಿ ಗೋಪಿಯರ ಅಂತರಂಗವನ್ನು ಪ್ರತಿ ಬಿಂಬಿಸುವ ಶ್ರೀಪಾದರಾಜರ ಸವಿನುಡಿಗಳನ್ನಾಗಲಿ ಗಮನಿಸಿದರೆ, ಆತ್ಮನಿವೇದನಾಭಕ್ತಿಯಲ್ಲಿನ ಪರಾಕಾಷ್ಠದೆಸೆಯನ್ನು ನಾವು ಗ್ರಹಿಸಬಹುದು.

ಸುಳಾದಿಯ ಕಡೆಯಲ್ಲಿ, ಒಟ್ಟು ರಚನೆಯ ಸಾರವನ್ನು ತಿಳಿಯ ಹೇಳುವ 'ಜತೆ'ಯನ್ನು ಬರೆಯುವುದು ರೂಢಿ,

ಪ್ರಕೃತ ಸುಳಾದಿಯಲ್ಲಾದರೋ ಪುರಂದರದಾಸರು 'ಜತೆ'ಗೆ ಬದಲಾಗಿ ಒಂದು ನುಡಿಯನ್ನೇ ರಚಿಸಿ, ನವವಿಧಭಕ್ತಿಗಳ ಮೇಲ್ಮೆಯನ್ನು ಮನವರಿಕೆ ಮಾಡಿಕೊಟ್ಟಿರುವರು :

ಹರಿಶ್ರವಣ ಕೀರ್ತನ ಹರಿನಾಮಸ್ಮರಣ
ಹರಿಪಾದ ಸೇವನ ಹರಿಪೂಜಾ ವಂದನ
ಹರಿದಾಸ್ಯ ಸಖ್ಯತ್ವ ಹರಿಗಾತ್ಮಾರ್ಪಣ
ಹರಿಭಕ್ತಿಯೇ ಮುಕ್ತಿಪಥ ತತ್ತ್ವ
ಪುರಂದರವಿಠಲನೇ ಪರಮಾತ್ಮಸಿದ್ಧ
ವರಮಧ್ವಮತ ಶ್ರುತಿ ಸ್ಮೃತಿಯೊಳ್ ಪ್ರಸಿದ್ಧ

ಈ ಮುಕ್ತಾಯದಲ್ಲಿ ದಾಸರು ಹರಿಯ ಪ್ರಾಧಾನ್ಯ, ಹರಿಭಕ್ತಿಯ ಪ್ರಕಾರಗಳು ಮತ್ತು ಮಾಧ್ವಮತದ ಅಗ್ಗಳಿಕೆ ಮೊದಲಾದುವುಗಳನ್ನೆಲ್ಲ ತಿಳಿಯ ಹೇಳಿ, 'ಹರಿಭಕ್ತಿಯೇ ಮುಕ್ತಿಪಥ ತತ್ತ್ವ' ಎಂಬ ತಮ್ಮ ಅಚ್ಚಳಿಯದ ನಂಬಿಕೆಯನ್ನು ಸೂತ್ರಬದ್ಧವಾಗಿ ಸಾರಿರುವರು.

೩

ದೈವಭಕ್ತಿ ಪ್ರತಿಪಾದನೆಯಲ್ಲಿ ಷಟ್ಸ್ಥಲಗಳು ಮತ್ತು ನವವಿಧಭಕ್ತಿಗಳ ಪರಮಲಕ್ಷ್ಯ ಒಂದೇ ಆದರೂ, ಷಟ್ಸ್ಥಲಗಳಲ್ಲಿ ಒಂದೊಂದು ಸ್ಥಲವೂ ಕ್ರಮಕ್ರಮವಾಗಿ ಮುಂದಿನ ಸ್ಥಲಕ್ಕೆ ಮೆಟ್ಟಲಿನಂತೆ ಕಂಡುಬಂದರೆ, ನವವಿಧ ಭಕ್ತಿಗಳಲ್ಲಿ ಒಂದೊಂದು ಮಾರ್ಗವೂ ಪ್ರತ್ಯೇಕವಾದ ಒಂದು ಪ್ರಕಾರವೆಂದು ಪರಿಗಣಿತವಾಗಿರುವುದನ್ನು ಗುರುತಿಸ ಬಹುದು. ಆಯಾ ಮಾರ್ಗವನ್ನು ಅನುಸರಿಸಿ ತಮ್ಮ ಧ್ಯೇಯವನ್ನು ಸಾಧಿಸಿರುವ ಹರಿಭಕ್ತರ ನಿದರ್ಶನಗಳೂ ಈ ಅಭಿಪ್ರಾಯವನ್ನೇ ಸಮರ್ಥಿಸುವಂತಿವೆ. ವಾಸ್ತವವಾಗಿ ಈ ನವವಿಧಭಕ್ತಿಮಾರ್ಗಗಳನ್ನು ಸ್ವಲ್ಪ ವಿಶ್ಲೇಷಿಸಿ ನೋಡಿದ್ದೇ ಆದರೆ, ಶ್ರವಣ ಕೀರ್ತನ ಮತ್ತು ಸ್ಮರಣಗಳು 'ಧ್ಯಾನ'ದ ಅಂಗಗಳೆಂಬುದಾಗಿಯೂ ಪಾದಸೇವನ, ಅರ್ಚನ ಮತ್ತು ವಂದನೆಗಳು 'ಆರಾಧನ'ದ ಅಂಗಗಳೆಂಬುದಾಗಿಯೂ ಭಾವಿಸಲು ಅವಕಾಶವಿದೆಯೆನ್ನಿಸುತ್ತದೆ. ಆಯಾ ಪ್ರಕಾರಗಳಲ್ಲಿ ಸಾಕಷ್ಟು ಅಂತರವಿರುವುದಕ್ಕಿಂತ ಬದಲಾಗಿ, ಪರಸ್ಪರ ಪೂರಕ ಗುಣಗಳೇ ಹೆಚ್ಚಾಗಿರುವಂತಿವೆ. ಸಾಮಾನ್ಯ ಮಾನವನೊಬ್ಬನ ಮನಸ್ಸು ದೈವಾಭಿಮುಖವಾಗಿ ಪ್ರವರ್ತಿಸುವಲ್ಲಿ ಈ ಒಂದೊಂದು ಭಕ್ತಿ ಪ್ರಕಾರವೂ ಅವನ ಸಾಧನೆಯ ಸೋಪಾನಗಳೆಂಬಂತೆ ಸಹಕರಿಸುತ್ತವೆ ಎನ್ನಬಹುದು. ಅಂಥ ವ್ಯಕ್ತಿಯೊಬ್ಬನು ಹರಿನಾಮವನ್ನು ಕೇಳಿ ಹರಿಭಕ್ತಿಯಲ್ಲಿ ಅನುರಕ್ತನಾಗಿ, ಆ ಬಳಿಕ ಹರಿನಾಮಸಂಕೀರ್ತನೆಯಿಂದ ವ್ರತನಿಷ್ಠನಾಗಿ, ಹರಿನಾಮಸ್ಮರಣೆಯಿಂದ ಸರ್ವದಾ ಪುನೀತನೆನ್ನಿಸಿ ಹರಿಪಾದಸೇವೆಯನ್ನು ಕೈಗೊಂಡು, ಅರ್ಚನ, ವಂದನಾದಿಗಳನ್ನು ಮಾಡಿ ಮಾನ್ಯನೆನ್ನಿಸಿ ಹರಿದಾಸ್ಯದಲ್ಲಿ ಧನ್ಯನಾಗಿ ಸಖ್ಯಭಕ್ತಿಯಲ್ಲಿ ಹರಿಯಸಾಮೀಪ್ಯವನ್ನು ಸಂಪಾದಿಸಿ ಕಟ್ಟಕಡೆಗೆ ಆತ್ಮನಿವೇದನೆಯ ಮೂಲಕ ಕೃತಕೃತ್ಯನಾಗುವ ದರ್ಶನ ಸರ್ವಮಾನ್ಯವಾದೀತೆಂದು ಹೇಳಬಹುದು. ಭಾಗವತೋತ್ತಮರು ಏಕೈಕ ಪ್ರಕಾರವನ್ನು ಅನುಸರಿಸಿ ತಮ್ಮಗುರಿಯನ್ನು ಸಾಧಿಸಬಲ್ಲವರಾದರೆ, ಸಾಮಾನ್ಯ ಸಾಧಕನೊಬ್ಬನು, ಪರಸ್ಪರ ಪೂರಕವೆನ್ನಿಸಬಹುದಾದ ಈ ನವವಿಧ ಪ್ರಕಾರಗಳನ್ನು ಕ್ರಮಕ್ರಮವಾಗಿ ಸಾಧಿಸುತ್ತ ಸದ್ಗತಿಯನ್ನು ಪಡೆಯಬಲ್ಲನೆಂದು ಹೇಳಿದಲ್ಲಿ ಈ ಶ್ಲೋಕದ ಮುಖ್ಯ ಆಶಯಕ್ಕೆ ಯಾವ ಭಂಗವೂ ಆಗಲಾರದು.

ಶಿವಶರಣರಾಗಲಿ, ಹರಿದಾಸರಾಗಲಿ ಸಾಧಿಸಬೇಕಾದದ್ದು ತಮ್ಮ ಇಷ್ಟದೈವಾನುಗ್ರಹ. ಒಬ್ಬರ ಪಾಲಿಗೆ ಷಟ್ಸ್ಥಲಗಳು ಮೆಟ್ಟಲು ಮೆಟ್ಟಲುಗಳಾಗಿ ನೆರವಾದರೆ ಮತ್ತೊಬ್ಬರಿಗೆ ನವವಿಧ ಭಕ್ತಿಮಾರ್ಗಗಳು ಪರಸ್ಪರ ಪೂರಕವಾದ ಪ್ರಕಾರಗಳಾಗಿ ಆಶ್ರಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

# ಪ್ರಸಾದ

ವಿ. ಆರ್. ಕೊಪ್ಪಳ

'ಪ್ರಸಾದ' ಎಂಬ ಶಬ್ದದಿಂದ ಒಂದು ವಿಶೇಷವಾದ ಸಭ್ಯತೆಯು, ಒಂದು ವಿಶಿಷ್ಟವಾದ ಸಂಸ್ಕೃತಿಯು ವಿದಿತವಾಗುತ್ತದೆ. ಈ ಪದವು ಜನತೆಯ ಸಾಹಿತ್ಯದಲ್ಲಿ, ಸಮಾಜಜೀವನದಲ್ಲಿ ಅದರಂತೆ ಅಧ್ಯಾತ್ಮಕ್ಷೇತ್ರದಲ್ಲಿ ತನ್ನದೇ ಆದ ಅರ್ಥಸೌಷ್ಠವದಿಂದ ಬಳಕೆಯನ್ನು ಹೊಂದಿದೆ. ಅನುಗ್ರಹ, ಕಾರುಣ್ಯ, ದಯೆ, ವರ, ಅಂತಃಕರುಣೆ ಈ ಮುಂತಾದ ಶಬ್ದಗಳನ್ನು ಪ್ರಸಾದ ಎಂಬ ಅರ್ಥದಲ್ಲಿ ಪರ್ಯಾಯವಾಗಿ ಒಮ್ಮೊಮ್ಮೆ ಬಳಸುತ್ತಿರುವುದುಂಟು. ಆದರೆ ಪ್ರಸಾದ ಶಬ್ದದಲ್ಲಿಯ ಅರ್ಥಸಂಪತ್ತಿಯೇ ಬೇರೆ. ಕ್ರೈಸ್ತರಲ್ಲಿ ಕಾರುಣ್ಯದ (grace) ಬಗೆಗೆ ಸುಮಧುರವಾದ ಭಾವನೆಯಿರುತ್ತದೆ. ಮಹಮ್ಮದೀಯರಲ್ಲಿ ದೇವನು ತುಂಬಾ ಕರುಣಾಮಯನು (Alla merciful) ಎಂಬ ನಂಬಿಗೆಯಿರುತ್ತದೆ. ಭಾರತದ ವಿವಿಧ ಮತಧರ್ಮಗಳಲ್ಲಿ ದೇವರ ಪ್ರಸಾದಕ್ಕೆ ಹಾರೈಸುವ ಪ್ರಸಂಗಗಳಿಗೆ ಮಿತಿಯಿಲ್ಲ. ಪ್ರಸಾದ, ಕಾರುಣ್ಯ ಅಥವಾ ಅನುಗ್ರಹ ಎಂದರೇನು ? ಅದು ಒಂದು ಆಶ್ರಯ— ಆಶ್ರಯೀಸಂಬಂಧವನ್ನು ಸೂಚಿಸುವ ಪದವಾಗಿರುತ್ತದೆ. ಅಧ್ಯಾತ್ಮಜೀವನದಲ್ಲಿ ಅದೊಂದು ಆಕರ್ಷಕ ಧರ್ಮವಾಗಿರುತ್ತದೆ. ವಿಜ್ಞಾನದಲ್ಲಿ ಗುರುತ್ವಾಕರ್ಷಣ ಶಕ್ತಿಗೆ ಯಾವ ಸ್ಥಾನವಿದೆಯೋ ಅಂಥ ಒಂದು ಸ್ಥಾನವು ಅಧ್ಯಾತ್ಮದಲ್ಲಿ ಪ್ರಸಾದಕ್ಕೆ ಇರುತ್ತದೆ. ಪ್ರಸಾದವು ಅದಕ್ಕಾಗಿ ಹಾರೈಸಿ ಹಂಬಲಿಸುತ್ತಿರುವ ಆತ್ಮ ಮತ್ತು ಅದನ್ನು ಅನುಗ್ರಹಿಸುವ ಪರಮಾತ್ಮ ಇವರಲ್ಲಿಯ ಒಂದು ಎಳೆತ, ಒಂದು ಸೆಳೆತ ಒಂದು ಆಕರ್ಷಣೆ ಇವನ್ನು ಸೂಚಿಸುತ್ತದೆ.

ಈವರೆಗೆ ರೂಢಗೊಳಿಸಲ್ಪಟ್ಟ ಅನೇಕ ಮತಧರ್ಮಗಳಲ್ಲಿ, ಅನೇಕ ಆಧ್ಯಾತ್ಮ ಅನುಭವದ ಶಾಸ್ತ್ರಗಳಲ್ಲಿ ಪ್ರಸಾದದ ವಿಷಯವಾಗಿ ಮಹತ್ವಪೂರ್ಣವಾದ ವಿಚಾರಗಳನ್ನು ಕಾಣಬಹುದು. ಹೀಗೆ ಪ್ರಚಲಿತವಾಗಿರುವ ವಿಚಾರಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ವಿಂಗಡಿಸಬಹುದು : ಪ್ರಸಾದ ಇಲ್ಲವೆ ಅನುಗ್ರಹ ಎಂಬುದು ಇಲ್ಲವೇ ಇಲ್ಲ ; ಅದು ಮಾನವನಿರ್ಮಿತ ಕಾಲ್ಪನಿಕ ಚಿತ್ರವೆಂದು ಕೆಲವರ ಮತ. ದೇವರ ಅಸ್ತಿತ್ವವು ಇಲ್ಲವೆಂದು ತಿಳಿದಿರುವವರ ಅಭಿಪ್ರಾಯವಿದು. ಈ ಜಗದ ಆಗುಹೋಗುಗಳೆಲ್ಲ ಆಕಸ್ಮಿಕವಾಗಿ ಜರುಗುತ್ತವೆ, ಇಲ್ಲವೇ ಅವು ಸೃಷ್ಟಿಯ ಕೆಲವೊಂದು ನಿಯಮಾನುಸಾರವಾಗಿ ಸಂಭವಿಸುತ್ತವೆ. ಇದರಿಂದ ಅನುಗ್ರಹ ಅನುಗ್ರಹ ಎಂದು ಕಾಯ್ದುಕೊಂಡು ಕುಳಿತಿರುವುದೇಕೆ? ಆಕಸ್ಮಿಕ ಇಲ್ಲವೆ ಸೃಷ್ಟಿಯ ನಿಯಮಗಳ ದೆಸೆಯಿಂದ ಅನುಗ್ರಹದ ಅವಶ್ಯಕತೆಯೇ ಉಂಟಾಗುವುದಿಲ್ಲ : ಅದು ಇರುವುದೇ ಇಲ್ಲ— ಎಂದು ಅವರು ವಾದಿಸುವರು. ಇನ್ನು ಕೆಲವರು ಮನುಷ್ಯನು ಸ್ವಭಾವತಃ ಪ್ರಯತ್ನಶೀಲನು : ಅವನು ಪ್ರಯತ್ನಶೀಲನಾಗಬೇಕು ; ಅವನ ಪ್ರಯತ್ನಗಳಿಗೆ ತಕ್ಕಂತೆ ದೇವನ ಕರುಣೆಯು ಕೈಗೂಡುವುದು. ಆ ಪ್ರಯತ್ನಗಳು ವಿಶಾಲವಾಗಿ ಬೆಳೆದಷ್ಟೂ ಆ ಕರುಣೆಯು ವಿಪುಲವಾಗಿ ದೊರಕೊಳ್ಳುವುದು ಎಂದು – ಅಭಿಪ್ರಾಯಪಡುವರು. ಅವರ ಅಭಿಮತದಲ್ಲಿ ದೇವನೊಬ್ಬ ಹರದ. ವಿವಿಧ ಸರಕುಗಳ ನ್ನಿಟ್ಟುಕೊಂಡಿರುವ ವ್ಯವಹಾರಿ. ಆದರೆ ಅವನು ನಿಷ್ಠುರವಾದ ವ್ಯವಹಾರಿ. ಅವನು ಅರ್ಥಕಾಣೆಯ ಸೋಲ : ಅರ್ಥಕಾಣೆಯ ಗೆಲ್ಲ. ಆದ್ದರಿಂದ ಅವನ ಕರುಣೆಯು, ಅವನ ಅನುಗ್ರಹವು ಕರ್ತೃವಿನ ಕೃತಿಯನ್ನವಲಂಬಿಸಿ ಕಂಗೊಳಿಸುತ್ತದೆ ; ಎಂದು ಧ್ವನಿತವಾಗುತ್ತದೆ. ಆದರೆ ಆ ಕರುಣೆಯು, ಆ ಪ್ರಸಾದವು ಸ್ವತಂತ್ರವಾಗಿದೆ. ಅದು ಪರವಸ್ತುವಿನ ಇಚ್ಛೆಗನುಗುಣವಾಗಿ ಮಾನವನಿಗೆ ಲಭಿಸುತ್ತದೆ ; ಎಂದು ಬೇರೆ ಕೆಲವರ ಮತ. ಅವರ ವಿಚಾರದಲ್ಲಿ ಅನುಗ್ರಹವು ನಿತ್ಯನಿರಂತರವಾಗಿ ಓತಪ್ರೋತವಾಗಿ ಅಮೃತಧಾರೆಯಂತೆ ಸುರಿಯುತ್ತಿದೆ. ಮಾನವನು ಹಂಬಲಿಸಲಿ ಹಂಬಲಿಸದಿರಲಿ, ಅದಕ್ಕಾಗಿ ಅವನು ಪ್ರಯತ್ನಿಸಲಿ ಬಿಡಲಿ ಅದರ ಗೊಡವೆ ಆ ದೇವನಿಗಿಲ್ಲ : ಕಾರುಣ್ಯವನ್ನು ಸುರಿಸುವುದು ಕೇವಲ ಅವನ ಕಾರ್ಯ : ಅದನ್ನು ಉಪಯೋಗಿಸಿಕೊಳ್ಳುವುದು ಬಿಡುವುದು ಅಥವಾ ಅದನ್ನು ಹೇಗೆ ಬಳಸಿಕೊಳ್ಳುವುದು

ಎಂಬಿವು ಮಾನವನಿಗೆ ಸಂಬಂಧಪಟ್ಟ ಸಂಗತಿಗಳು. ಆ ದೇವನು ಮಾನವ ಮತ್ತು ಮಾನವೇತರರಿಗಾಗಿ ಏನೇನು ಮಾಡಿರುವುದಿಲ್ಲ ? ಎಲ್ಲವನ್ನೂ ಮಾಡಿದ್ದಾನೆ ! ಇಳೆ ಮಳೆ ಬೆಳೆ ಸುಳಿದು ಬೀಸುವ ಗಾಳಿ ಎತ್ತು ಬಿತ್ತು ಸುತ್ತಿಮುತ್ತಿದ ಸಾಗರ ಇತ್ಯಾದಿ ಎಲ್ಲವೂ ಅವನ ದಾನ. ಅವನ ಪ್ರಸಾದ ಕಾರುಣ್ಯದಿಂದ ಅವೆಲ್ಲ ಮಾನವ ಮೊದಲಾದವರಿಗೆಲ್ಲ ದೊರಕುತ್ತವೆ. ದೇವನು ದಾನವನ್ನು ನೀಡುವನು ; ದಯೆಯನ್ನು ತೋರುವನು. (God gives and Forgives) ಮಾನವನು ಮಾತ್ರ ಅವನ್ನು ಪಡೆಯುವನು ; ಅವನನ್ನು ಮರೆತುಬಿಡುವನು. (Man gets and forgets) ಇದೊಂದು ವಿಚಿತ್ರ. ಆದರೆ ದೇವನ ಕಾರುಣ್ಯದಲ್ಲಿ ಇಡಿಯ ವಿಶ್ವವೇ ಚೇತನಗೊಂಡು ಬಾಳತೊಡಗಿದೆ. ಇಂಥ ಅನುಪಮವಾದ ಉದಾರಿಯಾದವನು ಮಹಾದೇವನು ; ಮಹಾದಾನಿಯುವನು ; ಎಂಬುದು ಈ ಮೂರನೆಯ ವರ್ಗದವರ ವಿಶ್ವಾಸವಾಗಿದೆ.

ವೈವಿಧ್ಯಪೂರ್ಣವಾದ ಈ ಸೃಷ್ಟಿಯಲ್ಲಿ ಸೃಷ್ಟಿಕರ್ತಾರನ ಬಗೆಗೆ ಜ್ಞಾನವನ್ನು ಪಡೆದುಕೊಳ್ಳುವುದೂ ಪ್ರತಿಯೊಬ್ಬನ ಕರ್ತವ್ಯವಾಗಿದೆ. ಅದು ಅವನ ಜನ್ಮಸಿದ್ಧವಾದ ಅಧಿಕಾರವೂ ಆಗಿದೆ. ಸೃಷ್ಟಿಕರ್ತನೇ ಇಲ್ಲವೆಂದು ತಿಳಿದಿರುವವರೂ ಪ್ರಥಮತಃ ಅವನು ಇದ್ದಾನೆ ; ಎಂಬ ನಂಬುಗೆಯಿಂದಲೇ ಸಾಗಿ ಅವನ ಅಸ್ತಿತ್ವವನ್ನು ಅಲ್ಲಗೆಳೆಯಲು ಹವಣಿಸುವರು. ಇದರಿಂದ ಅಧ್ಯಾತ್ಮದೃಷ್ಟಿಯು ಉಚ್ಚವಾದ ತಿಳುವಳಿಕೆಯನ್ನು ಪಡೆದಿರುವ ಮಾನವನಲ್ಲಿ ಸ್ವಾಭಾವಿಕವಾಗಿಯೇ ಹುದುಗಿರುತ್ತದೆ ; ಎಂಬುದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯನ್ನು ವಿಕಾಸಗೊಳಿಸಿಕೊಂಡು ಜೀವನಸಾರ್ಥಕ್ಯವನ್ನು ಪಡೆಯುವುದು ಮಾನವನ ಬಾಳಿನ ಗುರಿಯಾಗಬೇಕು. ಈ ವಿಕಾಸದ ಧ್ಯೇಯವನ್ನು ಈಡೇರಿಸಿಕೊಳ್ಳುವಲ್ಲಿ ಮಾನವನು ಸಾಕಷ್ಟು ಸಮರ್ಥನಾಗಿರಲಿಕ್ಕಿಲ್ಲ ; ಅವನ ಧ್ಯೇಯಸಾಧನೆಯ ಕೃತಿಗಳಲ್ಲಿ ಪ್ರಗತಿಯೂ ಕಾಣಿಸಿಕೊಳ್ಳದಿರಬಹುದು ; ಅನೇಕ ಸಲ ಈ ಕೃತಿಗಳಲ್ಲಿ ಪರಿಶುದ್ಧತೆಯೂ ಕಂಡುಬರಲಿಕ್ಕಿಲ್ಲ. ಇದರಿಂದ ನಿರಾಸೆಪಟ್ಟುಕೊಂಡು ಅವನು ಗುರಿಯಿಂದ ವಿಮುಖನಾಗಬೇಕಾಗಿಲ್ಲ. ಮಾನವನಲ್ಲಿ ಅಸಹಾಯಭಾವನೆಯು ಮೂಡಿಕೊಂಡು ದೈವೀಶಕ್ತಿಯ ಭವ್ಯವಾದ ಸ್ವರೂಪವು ಸ್ಮರಣೆಗೆ ಬಂದಾಗಲೇ ಆ ಪ್ರಭುವಿನ ಕರುಣೆಯು ಇಳಿದು ಬಂದು ಮಾನವನ ನೊಂದ ಮನಕ್ಕೆ ತಣಿವನ್ನೂ ತೃಪ್ತಿಯನ್ನೂ ನೀಡಲು ಅವಕಾಶವೊದಗುತ್ತದೆ. ಮಾನವನಿಗೆ ಧನಬಲ, ವಿದ್ಯಾಬಲ, ಬಾಹುಬಲ, ತಪೋಬಲ ಆತ್ಮಬಲ ಇವೆಲ್ಲ ಸಾಕಷ್ಟು ಇರುವುವೆಂದು ತಿಳಿಯೋಣ. ಆದರೆ ಅವನ ಧ್ಯೇಯಸಾಧನೆಗೆ ಅದರ ಸಿದ್ಧಿಗೆ ಅವು ಸಾಕಾಗವು. ಆ ಪ್ರಭುವಿನ ಕೃಪಾಬಲ ಒಂದಿಲ್ಲದಿದ್ದರೆ ಇವು ಇದ್ದರೂ ಇಲ್ಲದಂತೆಯೇ ! ಯಾಕೆಂದರೆ ಕೃಪಾಬಲವು ಎಲ್ಲ ಬಲಗಳಿಗಿಂತ ಮಿಗಿಲಾದುದು. ಅಸಹಾಯಕ ಸ್ಥಿತಿಯಲ್ಲಿ ಮಾನವನು "ಪ್ರಭುವೆ ಅಖಂಡವಾದ ಈ ವಿಶ್ವದ ಭೌತಿಕ ನೈತಿಕ ಆಧ್ಯಾತ್ಮಿಕ ಭಾರವನ್ನೇ ಹೊತ್ತುಕೊಂಡಿರುವ ನಿನಗೆ ನನ್ನ ಭಾರವನ್ನು ಹೊರವುದು ಅಸಾಧ್ಯವೇ ? ಕೃಪಾಳುವೇ ! ದಯಾದೃಷ್ಟಿಯನ್ನು ತೆರೆ ಕಾರುಣ್ಯ ದೃಷ್ಟಿಯನ್ನು ಕರೆ"— ಎಂದು ಪೂರ್ಣಶರಣಾಗತಿಯಿಂದ ಅವನಿಗೆ ಮೊರೆಯಿಡುವುದು ಅನುಭವಗಮ್ಯವಾದ ಸಂಗತಿಯಾಗಿರುತ್ತದೆ. ಅವನ ಪ್ರಸನ್ನದೃಷ್ಟಿಯು ಹೊರಳಿದಾಗ ಮಾನವನಿಗೆ ಅಗತ್ಯವೆಂದು ತೋರಿದ ಎಲ್ಲ ಸಂಗತಿಗಳೂ ಸುಲಭವಾಗಿ ಕೈಗೂಡುವುವು. ಇದಕ್ಕಾಗಿ ದೇವನ ಅನುಗ್ರಹವು ಅನಿವಾರ್ಯವಾಗುವುದು.

ದೇವನನ್ನು ಕಾಣಬಯಸಿ ಜೀವನವನ್ನೇ ಅದಕ್ಕಾಗಿ ಮೀಸಲಾಗಿರಿಸಿದ್ದ ಸಾಧಕನಿಗೆ ಆತನ ಅನುಗ್ರಹವು ಇನ್ನೂ ಅವಶ್ಯಕವಾಗುವುದು. ಆ ಸಾಧಕನು ದೇವನ ಸಾಕ್ಷಾತ್ಕಾರಕ್ಕೆ ತನ್ನ ಸಾಧನೆಯೊಂದೇ ಪ್ರಾಮುಖ್ಯವೆಂದು ಭಾವಿಸಿರುವುದಿಲ್ಲ ; ಅಥವಾ ದೇವನ ಕರುಣೆಯೇ ಸಾಕ್ಷಾತ್ಕಾರದ ಬಾಗಿಲನ್ನು ತೆರೆಯುವುದೆಂದು ತನ್ನ ಸಾಧನೆಯನ್ನೂ ಬಿಡುವುದಿಲ್ಲ. ಅನನ್ಯವಾದ ತನ್ನ ಸಾಧನೆಯಲ್ಲಿರುವಾಗ ಕಾಲಕಾಲಕ್ಕೆ ದೇವನ ಕರುಣೆಯ ಅರಿವೂ ಅವನಿಗೆ ಆಗುತ್ತಾ ಇರುವುದರಲ್ಲಿ ಆಶ್ಚರ್ಯವಿಲ್ಲ. ಸಾಧನೆಯಿಂದ ಸಿದ್ಧಾವಸ್ಥೆಗೆ ದೃಷ್ಟಿಯನ್ನಿರಿಸಿದ ಸಾಧಕನಲ್ಲಿ ಆ ದೇವನ ಪ್ರಸಾದವು ಸಾಮಾನ್ಯವಾಗಿ ಮೂರು ಹಂತಗಳಲ್ಲಿ ಕಾಣಿಸಿಕೊಳ್ಳುವುದು. ಆರಂಭದ ಮೆಟ್ಟಿಲಿನಲ್ಲಿ ಅವನ ಬುದ್ಧಿಭಾವನೆಗಳಲ್ಲಿ ಒಂದು ಹದವನ್ನುಂಟುಮಾಡಿ ದೇವನು ಅವನ ಕೃತಿಗಳಿಗೆ ಚೈತನ್ಯವನ್ನೂ, ಸರಳವೂ ಸುಗಮವೂ ಆದ ಮಾರ್ಗವನ್ನೂ ನೀಡುವನು. ದ್ವಿತೀಯ ಹಂತದಲ್ಲಿ ಅವನ ಸಾಧನೆಗೆ ಉಂಟಾದ ಅಪಾರ ಚೈತನ್ಯದ ದೆಸೆಯಿಂದ ಸಾಧಕನಲ್ಲಿ ನಿಷ್ಠೆಯೂ ಬಲಿಯುವುದು. ತಲೆದೋರುವ ಅಡೆತಡೆಗಳನ್ನು ಎದುರಿಸಿ ಮುನ್ನುಗ್ಗುವ ಒಂದು ಕಲಿತನವೂ ಬೆಳೆಯತೊಡಗುವುದು. ಆಗ ಸಾಧಕನ ಬಗೆಗೆ ದೇವನಲ್ಲಿ ಅನುಕಂಪವು ಹುಟ್ಟಿಕೊಂಡು ಅವನ ಕಾರುಣ್ಯಕ್ಕೆ ಪಾತ್ರನಾಗುವ ಪರಿಸ್ಥಿತಿಯು ಒದಗಿಬರುವುದು. ಕೊನೆಯ ಹಂತದಲ್ಲಿ ಸಾಧಕನ ಸಾಧನೆಯ ಸಿದ್ಧಿಗೆ ಕಲಶವೆನ್ನುವಂತೆ ದೇವನು ತನ್ನ ಅನುಗ್ರಹದ ದಾನವನ್ನು ನೀಡುವುದರಿಂದ ಸಾಧಕನಲ್ಲಿ ಅಪಾರವಾದ ಶಾಂತಿಯೂ ಅಮಿತವಾದ

ಆನಂದವೂ ಮೂಡಿಕೊಳ್ಳುವಂತಾಗುವುದು. ಸಾಧಕನು ಬುದ್ಧಿಯೋಗ, ಅನುಕಂಪ, ಪ್ರಸಾದ ಎಂಬೀ ಮೂರು ಹಂತಗಳನ್ನು ದಾಟಿದಾಗ ದೇವನ ಅನುಗ್ರಹವು ತನ್ನಲ್ಲಿ ಸಂಪೂರ್ಣವಾಗಿ ಇಳಿದು ಬಂದಿದೆಯೆಂಬ ಪ್ರಜ್ಞೆಯನ್ನು ಪಡೆಯುವನು.

ದೇವನ ಅಸ್ತಿತ್ವದಲ್ಲಿ ವಿಶ್ವಾಸವುಳ್ಳವರಲ್ಲಿ ಒಂದು ವರ್ಗವು ಆತನು ಕರುಣಾಕರನೆಂದು ಭಾವಿಸಿದರೆ ಇನ್ನೊಂದು ವರ್ಗ ಅವನು ಕರುಣಾಮಯನೆಂದು ತಿಳಿಯುವುದು. ಅವನು ಕರುಣಾಕರನಿರಲಿ, ಕರುಣಾಮಯನಿರಲಿ, ಮಾನವನು ತನಗಾಗಿ ಹಾಗೂ ಆ ದೇವನಿಗಾಗಿ ಕೆಲವು ಕರ್ತವ್ಯಗಳನ್ನು ಪಾಲಿಸಬೇಕಾಗುತ್ತದೆ. ಕೆಲವು ಹೊಣೆಗಾರಿಕೆಗಳನ್ನು ನಿರ್ವಹಿಸಬೇಕಾಗುತ್ತದೆ. ಶುದ್ಧ ಮನಸ್ಕನಾಗಿ ಪರಿಶುದ್ಧವಾದ ತನ್ನ ಆಚರಣೆಯಿಂದ ಆ ಕರ್ತವ್ಯಗಳನ್ನು ಆ ಹೊಣೆಗಾರಿಕೆಗಳನ್ನು ಆತನು ಹೊತ್ತುಕೊಳ್ಳುವುದರಿಂದ ಇಳಿದು ಬರುವ ದೇವನ ಕಾರುಣ್ಯಕ್ಕೆ ಅವನು ತಕ್ಕುದಾದ ಪಾತ್ರವಾಗುವನು. ಮಾನವನ ಈ ಕರ್ತವ್ಯ ಹೊಣೆಗಾರಿಕೆಗಳು ಅವನಿಗಿರುವ ಪರಮಾದರ್ಶವನ್ನು ಎತ್ತಿ ತೋರಿಸುತ್ತವೆ. ಇವು ಉನ್ನತವಾದಷ್ಟೂ ವಿಶಾಲವಾದಷ್ಟು ಅವನ ಪರಮಾದರ್ಶವು ಎತ್ತರದ ಮಟ್ಟವನ್ನು ಮುಟ್ಟುತ್ತದೆ. ಈ ಪರಮಾದರ್ಶವು ಉತ್ತುಂಗವಿದ್ದಷ್ಟೂ ಅವನ ಕರ್ತವ್ಯ ಹೊಣೆಗಾರಿಕೆಗಳ ಔನ್ನತ್ಯದ ಮಟ್ಟವೂ ಬೆಳೆಯುತ್ತದೆ—ಎಂದು ಈ ಮಾತನ್ನು ಇನ್ನೊಂದು ವಿಧವಾಗಿ ಹೇಳಬಹುದು. ಇಂಥ ಪರಮಾದರ್ಶವು ಅವನಲ್ಲಿ ನೈಜವಾಗಿರುವ ಭಕ್ತಿಭಾವನೆಯು ವಿಕಾಸಕ್ಕೆ ಅವಕಾಶವನ್ನು ನೀಡಿ, ದೇವನ ಸೃಷ್ಟಿಸಂಕಲ್ಪದ ರಹಸ್ಯವನ್ನು ಅರಿತುಕೊಳ್ಳಲೂ ಅನುವನ್ನು ಮಾಡಿಕೊಡುತ್ತದೆ. ಪರಮಾದರ್ಶವನ್ನು ಹೊಂದಲಿಕ್ಕೆ ಮಾನವನು ಭಕ್ತಿಭಾವನಾಯುತನಾಗಿ ಕಾರ್ಯಗಳನ್ನೆಸಗಿದರೆ ತೀರಲಿಲ್ಲ. ಆ ಕಾರ್ಯಗಳಿಂದ ದೇವನು ಮೆಚ್ಚಿಕೊಳ್ಳಬೇಕು. ಅವನು ಮೆಚ್ಚಿಗೆಯಾದಾಗ ಮಾತ್ರ ಅವನ ಕಾರುಣ್ಯದ, ಅವನ ಪ್ರಸಾದದ ಅರಿವು ಉಂಟಾಗುವುದು. ಆಗ ತನ್ನ ಉಪಕರಣವೆನಿಸುವ ಆ ವ್ಯಕ್ತಿಯ ಸಹಕಾರ ಸಮರ್ಪಣೆಗಳ ಮೂಲಕವಾಗಿ ವಿಶ್ವಗತಿಯನ್ನು ಮಾರ್ಪಡಿಸಲೂ ದೇವನಿಗೆ ಒಂದು ಅನುಕೂಲವಾದ ಅವಕಾಶವು ರೂಪುಗೊಳ್ಳುವುದು. ದೇವ ಮಾನವರ ಈ ಪರಸ್ಪರಸಂಬಂಧವನ್ನು 'ಶಿವಶರಣ' ಎಂಬ ಪದವು ಬಹಳ ಮನೋಹರವಾಗಿ ಅರ್ಥಗರ್ಭಿತವಾಗಿ ನಿರೂಪಿಸುತ್ತದೆ. ಶಿವನನ್ನು ಶರಣನು ಮೊರೆಹೋಗುವಂತೆ ಶರಣನಲ್ಲಿ ಶಿವನೂ ಆಶ್ರಯವನ್ನು ಪಡೆದು ಅನ್ಯೋನ್ಯವಾಗುವನು ಮಾತ್ರವಲ್ಲ, ಈ ಬಿಚ್ಚಿ ಬೇರಾಗದ ಬೆರಸಿ ಒಂದಾಗದ ಭಾವಸಮರಸದಿಂದ ವಿಶ್ವಕಲ್ಯಾಣವನ್ನು ರೂಪಿಸಲು ಒಂದು ಸುಮಧುರವಾದ ಸನ್ನಿವೇಶವು ಉಂಟಾಗುತ್ತದೆ; ಎಂಬ ಅನುಭವ, ಗೋಚರವಾಗುತ್ತದೆ – ಈ 'ಶಿವಶರಣ' ಪದದಿಂದ, ಈ ಶಿವಶರಣ ಸಂಬಂಧದಿಂದ.

ಶಿವಶರಣರು ತಮ್ಮ ನಂಬಿಕೆ ಆಚರಣೆಗಳಲ್ಲಿ ತಮ್ಮ ತತ್ತ್ವಜ್ಞಾನ ಅನುಭವಗಳಲ್ಲಿ ಪ್ರಸಾದಕ್ಕೆ ಒಂದು ಉಚ್ಚತಮವಾದ ಸ್ಥಾನವನ್ನು ಕಂಡಿರುವರು. 'ಭಕ್ತಿ ಶಿವಪ್ರಸಾದಜನನೀ, ಭವನೂ ಶಿವನ ಪ್ರಸಾದನಾಭಕ್ತಿಗೆ ಜನ್ಮಭೂಮಿ' ಎಂಬ ಉಕ್ತಿಯಲ್ಲಿ ಅವರು ಪರಶಿವನ ಪ್ರಸಾದದ ಪಾರಮ್ಯವನ್ನು ಸೂಚಿಸಿ ಪ್ರಸಾದಭಕ್ತಿಗಳ ಅನ್ಯೋನ್ಯವಾದ ಹೊಂದಾಣಿಕೆಯನ್ನು ಗಮನಿಸಿರುವರು. ಅವರ ಅನುಭವದ ಆಚರಣೆಯ ಅಂಗಗಳಾದ ಅಷ್ಟಾವರಣಗಳಲ್ಲಿ ಪ್ರಸಾದವೂ ಒಂದು ಆವರಣವಾಗಿರುತ್ತದೆ. ಅನುಭವದ ಅಳವಡಿಕೆಗೆ ಸೋಪಾನದಂತಿರುವ ಅವರ ಷಟ್‌ಸ್ಥಲ-ಸಿದ್ಧಾಂತದಲ್ಲಿ ಪ್ರಸಾದಿಸ್ಥಲವೂ ಒಂದು ಸ್ಥಲವಾಗಿರುತ್ತದೆ. ಅವರು ಅನುಸಂಧಾನಕ್ಕೆಂದು ಇರಿಸಿಕೊಂಡಿರುವ ಪರವಸ್ತುವಿನ ಪ್ರತೀಕವಾದ ಇಷ್ಟಲಿಂಗದ ವಿವಿಧ ಸ್ವರೂಪಗಳಲ್ಲಿ ಪ್ರಸಾದಲಿಂಗವೂ ಒಂದು ಸ್ವರೂಪವನ್ನು ವ್ಯಕ್ತಗೊಳಿಸುವುದು. ಪರವಸ್ತುವಿನೊಡನೆ ಇರಿಸಿಕೊಂಡಿರುವ ಸಂಬಂಧದಿಂದ ಪದಾರ್ಥದ ಪೂರ್ವಾಶ್ರಯವಳಿದು ಅದು ಪರಿಶುದ್ಧವಾದ ಪಾವನವಾದ ಪ್ರಸಾದವಾಗಬೇಕೆಂದು ಅವರ ಸರ್ವೋತ್ಕೃಷ್ಟವಾದ ಗುರಿಯಾಗಿರುವುದು. ಅವರ ದೃಷ್ಟಿಯಲ್ಲಿ ಅಖಂಡ ವಿಶ್ವವು ಮಾನವನಿಗಾಗಿ ಆ ಪರವಸ್ತುವು ನೀಡಿದ ಮಹಾಪ್ರಸಾದವಾಗಿದೆ. "...ಅಯ್ಯಾ ಹಸಾದ, ಮಹಾಪ್ರಸಾದ...." ಎಂಬುದು ಪ್ರಸಾದ ಸಂಪಾದನೆಯ ಕಾಲದಲ್ಲಿ ಅನವರತವೂ ಅವರು ಪಠಿಸುವ ಮಂತ್ರವಾಗಿದೆ. ಅವರ ಈ ವಿಧವಾದ ಪ್ರಸಾದದ ತಿಳುವಳಿಕೆಯಿಂದ ಇಹಲೋಕ, ಇಹದ ಬಾಳುವೆ, ಮಾನವಜನ್ಮ ಇತ್ಯಾದಿಗಳ ಬಗೆಗೆ ಅವರಿಗೆ ಇದ್ದ ಗೌರವಭಾವವು ವಿದಿತವಾಗುವುದಲ್ಲದೆ, ಜೀವನ ಸಾರ್ಥಕ್ಯಗೋಸುಗ ಯಾವುದೂ ತ್ಯಾಜ್ಯವಾಗುವುದಿಲ್ಲ. ಎಲ್ಲರಲ್ಲಿಯೂ ಪೂಜ್ಯಭಾವನೆಯನ್ನು ಬಲಿಸಿಕೊಳ್ಳುವುದು ಅವರ ಕಾರ್ಯಗೌರವವಾಗಿ ಪರಿಣಮಿಸಿರುವುದೆಂಬ ದಿವ್ಯತತ್ತ್ವವು ಅಭಿವ್ಯಕ್ತಿಗೊಳ್ಳುವುದು.

ಪರವಸ್ತುವು ಪ್ರಕಾಶಮಯನಾಗಿದ್ದಾನೆ; ಸ್ವಪ್ರಕಾಶದ ವಿಮರ್ಶೆಯೂ ಅವನಿಗಿದೆ; ಈ ಪ್ರಕಾಶ ವಿಮರ್ಶೆಗಳ ಪ್ರಭೆಯಿಂದ ಅವನ ಪ್ರಸಾದವು ಅಮಿತವಾಗಿ ಗೋಚರಿಸುತ್ತದೆ; ಎಂಬ ನಂಬಿಗೆಯಿಂದ ಮೂಡಿಬಂದಿರುವ ಶಿವಶರಣರ

ತತ್ವ ಅನುಭಾವಗಳಲ್ಲಿ ಪ್ರಸಾದಕ್ಕೆ ಒಂದು ಅನುಪಮವಾದ ಸ್ಥಾನವನ್ನು ಕೊಡಲಾಗಿದೆ. ಆಗಮಗಳು ಮತ್ತು ಶಿವಶರಣರ ವಚನಗಳು ಪ್ರಸಾದವನ್ನು ಅಥವಾ ಕರುಣೆಯನ್ನು ಕುರಿತು ಬಹಳ ಕೂಲಂಕಷವಾಗಿ ವಿವರಿಸುತ್ತವೆ. ಅಧ್ಯಾತ್ಮಜೀವನದಲ್ಲಿ ಆಕರ್ಷಕಧರ್ಮವಾಗಿ ತೋರುವ ಈ ಪ್ರಸಾದವು ಒಂದು ಮಹತ್ತರವಾದ ಸಂಕಲ್ಪವನ್ನು ಈಡೇರಿಸಿಕೊಡುತ್ತದೆ : ಒಂದು ಅಲೌಕಿಕವಾದ ಸಂಸಿದ್ಧಿಯನ್ನು ಒದಗಿಸಿ ನೀಡುತ್ತದೆ. ಉಗಮಗೊಂಡು ಪರಿಣಾಮವನ್ನು ಪಡೆಯುವ ಪ್ರವೃತ್ತಿಯನ್ನು ಜೀವನವು ನಿತ್ಯ ನೂತನವಾಗಿ ಪ್ರಕಟಗೊಳಿಸುತ್ತಿದೆಯಷ್ಟೆ ! ಇಂತಿರುವಾಗ ಆಧ್ಯಾತ್ಮದಲ್ಲಿ ಸ್ವಾನುಭವವು ಬಹಳ ವ್ಯಾಪಕವಾಗಬೇಕು. ಅದಕ್ಕಾಗಿ ತನ್ನ ಮನೋಹರವಾದ ಸ್ವಭಾವಧರ್ಮವನ್ನು ಒತ್ತಿ ತಿಳಿಸುವ ಒಂದು ಸುಂದರವಾದ ಪ್ರಭಾವಿಯಾದ ಪ್ರವೃತ್ತಿಯಿಂದ ಅದು ಕೂಡಿಕೊಂಡಿದ್ದಾಗಿರಬೇಕು. ಜೀವನದ ಎಳೆತ ಸೆಳೆತಗಳಿಂದ ಬಿಡುಗಡೆಯನ್ನು ಪಡೆವ ಕಾಲದಲ್ಲೆಲ್ಲ ಆತ್ಮವು ಏಕಾಂತವಾಗಿ ಯಾವ ಗದ್ದಲವಿಲ್ಲದೆ ಪರವಸ್ತುವಿನ ಅನುಗ್ರಹವನ್ನೂ ಅವನ ಕಾರುಣ್ಯವನ್ನೂ, ಅವನ ಪ್ರಸಾದವನ್ನೂ, ಹುಡುಕಲು ಹಂಬಲಿಸುವುದು. ಪ್ರಶಾಂತವಾದ ಈ ಶೋಧವು ಜೀವನದಲ್ಲಿ ಹುಡುಕಿಕೊಳ್ಳಲೇಬೇಕಾದ ಉದ್ಧಾರಕಶಕ್ತಿಯನ್ನು ತೋರಿಸಿಕೊಡುವುದು. ಇದರಿಂದ ಅನುಗ್ರಾಹಕವಾದ ದಿವ್ಯಶಕ್ತಿಯ ಇನ್ನೊಂದು ಸ್ವರೂಪವೂ ವ್ಯಕ್ತವಾಗುವುದು. ಶಕ್ತಿಯ ಈ ದಿವ್ಯಸ್ವರೂಪವು ವರ್ಣನಾತೀತವಾದ ದಿವ್ಯಪ್ರಭೆಯಿಂದೊದಗುವ ಶಾಂತಿ ಮತ್ತು ದಿವ್ಯಪ್ರತಿಭೆಯಿಂದೊಡಗೂಡಿದ ಆನಂದ. ಇವಕ್ಕೇ ಹಂಬಲಿಸುತ್ತಾ ಹಂಬಲಿಸಿ ಕಾರ್ಯೋನ್ಮುಖವಾಗಲು ಹರಿದಾಡುವ, ಹರಿದಾಡಿ ಅದನ್ನು ಕರಗತ ಮಾಡಿಕೊಳ್ಳುವ ನಿರ್ಮಲಾತ್ಮರಿಗೆ ಮಾತ್ರ ಅದು ನಿಲುಕುವುದು. ಕಂಡಕುಡಂತೆ ಸಿಕ್ಕಾಬಟ್ಟೆಯಾಗಿ ನಡೆಯುತ್ತಲಿರುವ ಪ್ರಬಲವಾದ ಪ್ರವೃತ್ತಿಯವರಿಗೆ ಆ ಸ್ವರೂಪವು ಕಾಣದು ; ತಿಳಿಯದು. ಆತ್ಮನ ಶುದ್ಧಸ್ವರೂಪವನ್ನು ವ್ಯಕ್ತಗೊಳಿಸುವುದೂ ಮಾನವತೆಯನ್ನು ರೂಪಿಸುವ ಆತ್ಮಶಕ್ತಿಗಳನ್ನು ಪ್ರಕಟಿಸುವುದೂ ಪರವಸ್ತುವಿನ ಅನುಗ್ರಹ ಶಕ್ತಿಯ ಅವನ ಕಾರುಣ್ಯಶಕ್ತಿಯ ಇಲ್ಲವೆ ಪ್ರಸಾದಶಕ್ತಿಯ ಪ್ರಮುಖವಾದ ಕಾರ್ಯವಾಗಿದೆ. ಮಾನವನ ಶಕ್ತಿಗಳು ಈ ದಿವ್ಯವಾದ ಪ್ರಸಾದ ಶಕ್ತಿಯ ನೇರವಾದ ಸಂಬಂಧದಲ್ಲಿರಬೇಕಾಗುತ್ತದೆ. ಆತ್ಮಶಕ್ತಿಗಳು ಈ ದಿವ್ಯ ಶಕ್ತಿಯ ಉದ್ದೇಶಗಳಿಗೆ ಸರಿಯಾಗಿ ಸಮನ್ವಯವಾಗಿರದಿದ್ದರೆ ಪರವಸ್ತುವಿನೊಡನೆ ಸಮರಸವನ್ನು ಪಡೆಯಬೇಕೆಂಬ ಪರಮಾದರ್ಶದ ಹೊಂದಾಣಿಕೆಯಲ್ಲಿ ಅನೇಕ ತೊಂದರೆ ತೊಡಕುಗಳನ್ನು ಅನುಭವಿಸಬೇಕಾಗುತ್ತದೆ.

ಅಧ್ಯಾತ್ಮದ ಆದರ್ಶವು ಆತ್ಯಂತಿಕ ಬಿಡುಗಡೆ – ಮೋಕ್ಷ ಎಂಬುದನ್ನು ಆಗಮಗಳು ಅಂಗೀಕರಿಸುತ್ತವೆ. ಸಮರಸ ಎಂಬುದನ್ನು ಶಿವಶರಣರ ವಚನವಾಙ್ಮಯವು ನಿರೂಪಿಸುತ್ತದೆ. ಜ್ಞಾನಪ್ರಭಾಪುಂಜವನ್ನೂ ಅವರ್ಣನೀಯವಾದ ಶಾಂತಿ-ಆನಂದಗಳನ್ನೂ ಅಧಿಕರಿಸುವ ಶಿವತತ್ವವೇ ಆ ಪರವಸ್ತುವೇ ಜೀವನದ ಪರಮಾದರ್ಶವೆಂದು ಅವು ಒಪ್ಪಿಕೊಳ್ಳುತ್ತವೆ. ಈ ಬಿಡುಗಡೆಯು ಈ ಸಮರಸವು ಆ ದಿವ್ಯಪ್ರಸಾದಶಕ್ತಿಯು ದಯಪಾಲಿಸುವ ಒಂದು ಅನುಪಮವಾದ ವರವಾಗಿದೆ ; ಕೊಡುಗೆಯಾಗಿದೆ. ಆ ಶಕ್ತಿಯು ಇಹಪರದ ಎಲ್ಲ ವರಗಳನ್ನೂ ನೀಡಬಲ್ಲದು ; ಕಾಣಿಕೆಗಳನ್ನೂ ಕೊಡಬಲ್ಲದು ; ಮತ್ತು ತುರೀಯಜ್ಞಾನ ಆನಂದಗಳನ್ನು ಸುರಿಸಿ ಜೀವನ ಪಥವು ಸುಗಮವಾಗುವಂತೆ ಆತ್ಮನಿಗೆ ಎಲ್ಲಾ ಸಹಾಯ ಸಂಪದವನ್ನೂ ಅನುಗ್ರಹಿಸಬಲ್ಲದು. ಸೂಕ್ಷ್ಮವಾದ ಸ್ವರೂಪದಿಂದ ಒಡವೆರೆದ ಹೃದಯವನ್ನು ತೆರೆದಿಡುವ ಕಾರ್ಯದತ್ತ ಸಹಾಯವನ್ನು ಸಲ್ಲಿಸುತ್ತಿರುವುದರಿಂದ ಇವನ್ನೆಲ್ಲ ಪರವಸ್ತುವಿನ ಆ ಪ್ರಸಾದ ಶಕ್ತಿಯು ಈಡೇರಿಸಿಕೊಡುವುದು. ಸ್ಥಲ, ಕಾಲ ಅವಕಾಶಗಳ ಪರಿಮಿತಿಯ ಎಲ್ಲೆಯನ್ನು ಮೀರಿ ಆಚೆಗೆ ಇರುವ ನಿರರ್ಗಳವಾದ ಸ್ವತಂತ್ರವಾದ ಜೀವನದಲ್ಲಿ ಈ ದಿವ್ಯಶಕ್ತಿಯ ಹೊರತು ಇನ್ನು ಯಾವುದಕ್ಕೂ ಆಧಿಕ್ಯವಿಲ್ಲ ; ಅನುಕೂಲ್ಯವಿಲ್ಲ. ಇಂಥ ಶಕ್ತಿಯು ಇಂಥ ದಿವ್ಯಪ್ರಸಾದವು ನಮ್ಮೆಲ್ಲರನ್ನು ಉದ್ಧರಿಸಲಿ.

---

"ಸಂಸಾರವೆಂಬುದೊಂದು ಗಾಳಿಯಸೊಡರು
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ !
ಇದ ನಚ್ಚಿ ಕೆಡಬೇಡ ಸಿರಿಯೆಂಬುದ !
ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ"

– – ಬಸವಣ್ಣ

# ದಾಸೋಹಧರ್ಮ

ಬಿ. ಜಿ. ಯಲ್ಲಟ್ಟಿ

ಎಂಥ ಶಾಂತಿ. ಏನು ಸೊಬಗು, ಆನಂದವೆ ಅರಳಿ ನಿಂತಿದೆ ಇಲ್ಲಿ! ಮೂಡಲ ಮನೆಯು ಚಿನ್ನದಂಗಣದಲ್ಲಿ ರನ್ನ ಮಾಣಿಕ ಬಿಡಿಸಿ ಬರೆದ ರಂಗವಲ್ಲಿ, ತಂಗಾಳಿ ತೀಟದ ರಸಚೇತನದ ಅಮೃತಧಾರೆ, ಪಕ್ಷಿಕುಲ ಸಂಗೀತದ ರಸಾನಂದ ಸಂಯೋಜನೆ! ಯಾರ ವರದಾನವಿದು? ಯಾವ ಚಿದ್ಬೆಳಗು ಈ ಬೆಳಗನ್ನು ಬೆಳಗಿಸಿದೆ? ಮೂಡಲಮನೆ ಮಹಾ ದಾಸೋಹ ಮಂದಿರವಾಗಿದೆ. ದಯಾಘನನ ಘನವಾದ ಮನವೇ ಇಲ್ಲಿ ವರಪ್ರಸಾದವಾಗಿ ಸೂರೆಗೊಂಡಿದೆ. ತನು-ಮನ-ಭಾವಕ್ಕೆಲ್ಲ ವಿಭಿನ್ನ ರುಚಿಯ ಪ್ರಸಾದವುಣಿಸಿ ಚೇತರಿಸುತ್ತಲಿದೆ. ಕರ್ತಾರನ ಈ ದಾಸೋಹದಲ್ಲಿ ಮೈಮನವೆಲ್ಲ ಬಾಯಾಗಿ ಉಂಡರೂ ತೀರದ ತೃಪ್ತಿ!

ನಿಸರ್ಗದ ಮಕ್ಕಳಾಗಿ ಈ ಅಪೂರ್ವ ದಾಸೋಹವನ್ನು ಕಂಡವರೆಷ್ಟು ಜನ? ಈ ಮಹಾಪ್ರಸಾದವುಂಡು ತಣಿದವರೆಷ್ಟು ಜನ? ಹಕ್ಕಿಪಕ್ಕಿ ಈ ಮಹಾಪ್ರಸಾದವುಂಡು ಪಡೆದ ಆನಂದ— ಅವುಗಳ ಸವಿ ರಾಗದಲ್ಲಿ, ಹಾರಾಡುವ ಹಿಗ್ಗಿನಲ್ಲಿ ನೋಡಬೇಕು. ಮೂಡಲ ಮನೆ ತಾ ಪಡೆದ ಶಾಂತಿಸೊಬಗಿನ ಐಸಿರಿಯ ಪ್ರಸಾದವನ್ನು ಪಡುವಣ ಮೊದಲುಗೊಂಡು ದೆಸೆದೆಸೆಗೆಲ್ಲ ಕೊಟ್ಟು ಕೃತಾರ್ಥವಾಗಿದೆ! ತಾನು ಪಡೆದುದನ್ನು ಮನವೊಪ್ಪಿ ಕೊಡುವುದೆ ದಾಸೋಹವೆಂಬ ಶಾಸನವನ್ನು ಬರೆದಂತಿದೆ ಈ ಬೆಳಗು!!

"ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ,
ಸುಳಿದು ಬೀಸುವ ವಾಯು ನಿಮ್ಮ ದಾನ!...."

ದೇವರದಾಸಿಮಯ್ಯನ ಅನುಭಾವ ಈ ನಿಟ್ಟಿನಲ್ಲಿ ಎಷ್ಟೊಂದು ನಿತ್ಯಸತ್ಯವಾಗಿ ಪರಿಣಮಿಸಿದೆ. ಸೃಷ್ಟಿಕರ್ತ ಈ ವಿಶ್ವವನ್ನೇ ದಾಸೋಹವನ್ನಾಗಿ ಮಾಡದಿದ್ದರೆ, ಇಳೆ ಬೆಳೆ—ಆದಿಯಾಗಿ ಸಕಲ ಸಂಪದವನ್ನು ಪ್ರಸಾದವನ್ನಾಗಿ ದಯಪಾಲಿಸಲಪದಿದ್ದರೆ ಸಕಲ ಜೀವಾತ್ಮರ ಹಾಡುಪಾಡು ಏನಾಗಬಹುದಿತ್ತು? ಆದರೆ ಅವನ ಮಕ್ಕಳಾಗಿ ಬಂದ ನಮಗೆ ಅವನ ದಾಸೋಹದ ದಾರಿಯಲ್ಲಿ ನಡೆಯಬೇಕೆಂಬ ಪ್ರಜ್ಞೆ ಹೊಳೆದುದುಂಟೆ? ಅವನು ಕೊಟ್ಟ ಪ್ರಸಾದದಲ್ಲಿ ಒಂದಿಷ್ಟನ್ನು ಹಸಿದ ಜೀವ–ಜಂಗಮಕ್ಕೆ ಕೊಟ್ಟು ಕೃತಾರ್ಥರಾಗಬೇಕೆಂಬ ಅರಿಕೆ ನಮ್ಮಲ್ಲಿ ಮೂಡಿರುವುದುಂಟೆ? ನಮ್ಮನ್ನೇ ನಾವು ವಿಚಾರಿಸಿಕೊಳ್ಳಬೇಕು; ನಮ್ಮ ನಡವಳಿಕೆಯನ್ನು ನಾವೇ ಪ್ರಶ್ನಿಸಬೇಕು!

ಆದರೆ ಶರಣನ ರೀತಿಯೇ ಬೇರೆ. 'ದೇಹಭಾವದ– ಅಹಂಕಾರವು ದಾಸೋಹಭಾವದೊಳಗಲ್ಲದೆ ಅಳಿಯದೆಂದು.' ಶರಣರೆಲ್ಲ ದಾಸೋಹಕ್ಕೆ ತನು ಮನ ಧನವನರ್ಪಿಸಿ, ದಾಸೋಹಿಯಾದರು. ಆದರೆ ದೇಹಭಾವದಲ್ಲಿ ಮುಳುಗಿದ ಸಾಧಾರಣ ಮನುಷ್ಯನು ಕರಣೇಂದ್ರಿಯಗಳ ಸ್ವಚ್ಛಂದ ಸುಖವೆ ತನ್ನ ಜೀವನೋದ್ದೇಶವೆಂದು ಭಾವಿಸಿದ್ದಾನೆ. ದೇಹವೆಂಬುದು ತನಗೆ ಆಶ್ರಯವಿತ್ತ ಗೂಡು. ತನ್ನ ನಿಜಸ್ವರೂಪ ಅಂಗವಲ್ಲ; ಲಿಂಗ. ಆದರೆ ಅಂಗ (ದೇಹ)ವನ್ನು ಅಲಕ್ಷಿಸಬೇಕೆಂದು ಇದರ ಅರ್ಥವಲ್ಲ. ಏಕೆಂದರೆ:

"ಕೂಡಲಸಂಗಮ ದೇವರನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು...."

ಎಂದು ಬಸವಣ್ಣ ಸ್ವಾನುಭಾವದಿಂದ ನುಡಿದಿದ್ದಾನೆ. ಆದುದರಿಂದ ಈ ಅಂಗವನ್ನು ಕೆಡಿಸದೆ ಲಿಂಗವನ್ನಾಗಿ ಮಾಡಿ, ತಾನೂ ಲಿಂಗವಾಗಿ ನಿಲ್ಲುವುದೇ— ತನ್ನ ಪರಮೋದ್ದೇಶವೆಂಬುದನ್ನು ಅರಿತುಕೊಂಡರೆ ಲೇಸು. ಈ ಅರಿವು ಬರುವುದು 'ದಾಸೋಹಂಭಾವ'ದಿಂದ:

ತನುವ ಗೆಲಲರಿಯದೆ ಮನವ ಗೆಲಲರಿಯದೆ
ಧನವ ಗೆಲಲರಿಯದೆ ಭ್ರಮೆಗೊಂಡಿತ್ತು ಲೋಕವೆಲ್ಲವು
ತನುವ ದಾಸೋಹಕ್ಕೆ ಸವೆಸಿ, ಮನವ ಲಿಂಗಧ್ಯಾನದಲ್ಲಿ ಸವೆಸಿ
ಧನವ ಜಂಗಮದಲ್ಲಿ ಸವೆಸಿ ಗೆಲಬಲ್ಲರೆ ಸಂಗನ ಬಸವನಲ್ಲದೆ
ಮತ್ತಾರನು ಕಾಣೆ.......... ...................

ಪ್ರಭುದೇವ ಮೆಚ್ಚಿ ನುಡಿದ ಮಾತಿದು. ದೇಹಭಾವದಲ್ಲಿ ಮುಳುಗಿದ ಮನುಷ್ಯರಿಗೂ, ಅದರೊಳಗಿಂದ ಮೇಲೆದ್ದು ಬಂದ ಬಸವಣ್ಣನಿಗೂ ಇರುವ ಅಂತರವಿಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಅವರು ದೇಹಭಾವದಲ್ಲಿ ಸುಖಿಸಿ ಗೆದ್ದೆವೆಂಬ ಭ್ರಮೆಯಲ್ಲಿ ಸೋಲುತ್ತಾರೆ. ಬಸವಣ್ಣ ಎಲ್ಲವನ್ನು ಜಂಗಮ-ಲಿಂಗ ದಾಸೋಹಕ್ಕೆ ಸೋತು (ಒಪ್ಪಿಸಿ) ಶರಣಾಗತನಾಗಿ ಗೆದ್ದುಕೊಂಡಿದ್ದಾನೆ. ಗುರು, ಲಿಂಗ, ಜಂಗಮ— ಇವು ಪರಶಿವನ ಮೂರು ರೂಪಗಳು. ತನು–ಮನ–ಧನ ಗೆಲ್ಲುವುದೆಂದರೆ ಈ ಮೂರನ್ನು ಮೂರಕ್ಕೆ ಅರ್ಪಿಸಿಬಿಡುವುದು. ತನುವ ಗುರುವಿಗರ್ಪಿಸಿ, ಗುರುವಿನಲ್ಲಿ ಗುರುವಾಗಿ ನಿಲ್ಲಬಲ್ಲ, ಉಪಾಸಕ. ಮನವ ಲಿಂಗಕ್ಕರ್ಪಿಸಿ, ಲಿಂಗದಲ್ಲಿ ಲಿಂಗವಾಗಬಲ್ಲನವನು. ಧನವ ಜಂಗಮಕ್ಕೆ ಅರ್ಪಿಸಿ, ಜಂಗಮದಲ್ಲಿ ಜಂಗಮವಾಗಬಲ್ಲನಾತ. ಹೀಗೆ ತ್ರಿವಿಧಕ್ಕೆ ತ್ರಿವಿಧವನರ್ಪಿಸಿ. ತ್ರಿವಿಧಮುಖದಲ್ಲಿ ಶಿವಸ್ವರೂಪ ಪಡೆಯುವ ಸಮರ್ಪಣ–ಸದ್ಭಾವವೆ ದಾಸೋಹಂಭಾವವಾಗಿದೆ.

## ಸೋಹಂ-ಶಿವೋಹಂ-ದಾಸೋಹಂ

ಸೋಹಂ ಎಂಬುದು ಅಂತರಂಗದ ಮದ ನೋಡಯ್ಯ
ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ
ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ

'ಸೋಹಂ'—ನಾನೇ ಅವನು ಎನ್ನುವಲ್ಲಿ ಒಂದು ತರದ ಮದವಿದೆ. 'ಶಿವೋಹಂ'— ನಾನೇ ಶಿವನು ಎನ್ನುವಲ್ಲಿ ಸಹ ಒಂದು ಬಗೆಯ ಹಮ್ಮು ಇದೆ. ಜೀವ ಶಿವನಾಗುವುದು ತಪ್ಪಲ್ಲ. ಅದುವೆ ಮಾನವನ ಮಹೋದ್ದೇಶ. ಕಾಯಿ ಕಸುಕಾಗಿರುವಾಗ ಅದನ್ನು ಹಣ್ಣೆಂದು ಕರೆಯುವುದು ಹೇಗೆ ? ಪಕ್ವತೆ ಬಾರದೆ ಹಣ್ಣಾಗುವುದೆಂತು ? ಶಿವನಾಗುವ ಮೊದಲೆ 'ಶಿವೋಹಂ' ಎನ್ನುವುದು ಹೇಗೆ ? ಹಾಗೆನ್ನುವುದು ಅಹಮಿಕೆಯ ಲಕ್ಷಣ. ಅಹಮಿಕೆಯೆಂಬುದು ಮನೋವಿಕಾರ. ಈ ವಿಕಾರವಿರುವೆಡೆಯಲ್ಲಿ ನಿರ್ವಿಕಾರ ನಿರಂಜನರೂಪಿ ಶಿವನು ಸುಳಿಯಲಾರ. ಈ 'ಸೋಹಂ' 'ಶಿವೋಹಂ' ದ್ವಂದ್ವವಳಿದಾಗ ದಾಸೋಹಂಭಾವ ಅಂಕುರಿಸುವುದು. 'ದಾಸೋಹಂಭಾವ' ಪಕ್ವಗೊಂಡಾಗ 'ಶಿವೋಹಂ'ಭಾವ ತಾನಾಗಿ ಬೆಳಗುವುದು. ಶಿವನಾದಾಗ 'ಶಿವೋಹಂ' ಎಂದು ಹೇಳಿಕೊಳ್ಳುವುದಿಲ್ಲ ; ಆಗದವನು ಹೇಳಿಕೊಳ್ಳುತ್ತಾನೆ ; ಆದವನು ಮೌನಿಯಾಗಿರುತ್ತಾನೆ.

ಹಾಗಾದರೆ ಈ ದಾಸೋಹವೆಂದರೇನು ? ಒಂದೇ ಮಾತಿನಲ್ಲಿ ಹೇಳುವಷ್ಟು ಸುಲಭವಲ್ಲ. "ಇಲ್ಲಿ ದಾಸನೆಂದರೆ ಏನೊಂದರಿಯದ, ಏನೊಂದನ್ನೂ ಆಚರಿಸಲು ಬಾರದ, ಯಾವ ಅನುಭವವಿಲ್ಲದ ಸೇವಕ ಅಥವಾ ಆಳು ಎಂದರ್ಥವಲ್ಲ. ಸನ್ನಿಹಿತ–ಸಂಬಂಧವುಳ್ಳವನೆಂದರ್ಥ. ಶಿವನೇ ತಾನಾಗಿದ್ದು ತನ್ನ ಉಪಾಸನೆಯಲ್ಲಿ ತಾನೇ ನಿರತನಾಗಿರುವನು ಎಂದು ಅದರ ಅಭಿಪ್ರಾಯ."[1]

ಶರೀರಾದಿಪದಾರ್ಥಂ ಚ ದತ್ವಾ ದಾನಂ ಸಮರ್ಪಣಮ್ ।
ಸಮರ್ಪ್ಯ ಸೋऽಹಮಸ್ಮೀತಿ ದಾಸೋಹಂಭಾವ ಉಚ್ಯತೇ ॥[2]

ಶರೀರಾದಿ ಪದಾರ್ಥಗಳನ್ನು ದಾನ ಮಾಡುವುದು ದಾಸೋಹಂಭಾವದ ಇಂಗಿತವಾಗಿದೆ. ಇಲ್ಲಿ ವ್ಯಕ್ತವಾದ 'ದಾನ' ಪದದಲ್ಲಿ ಮೇಲರಿಮೆಯ ಭಾವವಿಲ್ಲ; 'ನಾನು ದಾನ ಮಾಡುವವ' ಎಂಬ ಅಹಮಿಕೆಯ ವಾಸನೆಯಿಲ್ಲ. ಕೊಡುವ ದಾನದಲ್ಲಿ ಸದುವಿನಯದ ಸಮರ್ಪಣಭಕ್ತಿಭಾವವಿದೆ. ಏನೆಲ್ಲವನ್ನು ಕೊಟ್ಟ ಕರ್ತಾರನಿಗೆ ಅರ್ಪಿಸುವುದೆಂದರೆ ಕೈಲಾಗದ

[1] 'ದಾಸೋಹದೀಪ್ತಿ', ಜ.ಚ.ನಿ. ಪುಟ ೮೬

[2] ಅದೇ ಪುಸ್ತಕದಿಂದ ಆಯ್ಕೆ, ಪುಟ ೨, ಮೂಲ : ವಾತುಲತಂತ್ರ

ತಪ್ಪಿಗೆ ಒಪ್ಪಿಸಿಬಿಡುವ ದೌರ್ಬಲ್ಯವಲ್ಲ. ಒಪ್ಪಿಸುವುದೆಂದರೆ ಭಯದಿಂದ ಕೊಡುವುದಲ್ಲ. ತನ್ನದೇ ಆದ ಇನ್ನೊಂದು ಪರಿಪೂರ್ಣಸ್ವರೂಪಕ್ಕೆ ಪರಿಪೂರ್ಣವಾಗುವುದಕ್ಕಾಗಿ ಈಗ ಅಪೂರ್ಣವಾದುದನ್ನು ಅರ್ಪಿಸುವುದು ಎಂಬರ್ಥ. ತಾನೇ ಉಪಾಸಕನಾಗಿ ಉಪಾಸ್ಯವಾಗುವ ಸಾಧನೆಯಲ್ಲಿ ಭಕ್ತಿಯಿಂದ ಆಚರಿಸಬೇಕಾದ ಕ್ರಮವಿದು. 'ಕೀಳಿಂಗಲ್ಲದೆ ಹಯನು ಕರೆಯದು ? ದಾಸೋಹಂಭಾವ ಆಚಾರದಲ್ಲಿ ತುಂಬಿಕೊಳ್ಳದೆ ಈಶತ್ವಬಾರದು.' "ನನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಬಸವಣ್ಣ ತನ್ನನ್ನು ಕಿರಿಯನಾಗಿ ಭಾವಿಸಿದ. ಜಗತ್ತು ಅವನನ್ನು ಹಿರಿಯನನ್ನಾಗಿ ಮನ್ನಿಸಿತು. ಸದುವಿನಯಲ್ಲಿ ದಾಸೋಹಂಭಾವವಿದೆ. ದಾಸೋಹಂಭಾವ ಜನಾದರಣೆಗೆ ಪಾತ್ರವಾಗಿ ಶಿವಾನುಗ್ರಹವನ್ನು ಗೆಲ್ಲುತ್ತದೆ. ಹಾಲು ಕುದಿದ ಮೇಲೆ ಕೆನೆಗಟ್ಟುವುದು. ದೇಹಭಾವ ಸುಟ್ಟ ಮೇಲೆ ದಾಸೋಹಂಭಾವ ತೆನೆಗಟ್ಟುವುದು. ಬಸವಣ್ಣನಲ್ಲಿ ದಾಸೋಹಂಭಾವ ತೆನೆಗಟ್ಟಿದ್ದು ಭೃತ್ಯಾಚಾರದಿಂದ. ಆದಕ್ಕಾಗಿ " 'ಸೋಹಂ' ಎಂದೆನಿಸದೆ 'ದಾಸೋಹಂ' ಎಂದೆನಿಸಯ್ಯ" ಎಂದು ಅಣ್ಣ ತಳೆದ ನಿಲುವು ಉಚಿತವೆನ್ನಬಹುದು. "ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ" ಬೇಕೆಂದು ಕುದಿಯಲಿಲ್ಲ ಬಸವಣ್ಣ; ಕೊಟ್ಟು ಮಿಡುಕಲಿಲ್ಲ. ಕೊಡುವ ಅವಕಾಶ ತಪ್ಪಿದರೆ ಮಾತ್ರ ಎದೆಗುದಿ ಅಣ್ಣನಿಗೆ. ವಿಶ್ವತೋಮುಖನನ್ನು ಸಕಲ ವಿಸ್ತಾರದ ರೂಹಿನಲ್ಲಿ ಕಂಡುಕೊಂಡ ಬಸವಣ್ಣ 'ಅಂಗದ ಮೇಲೆ ಲಿಂಗವುಳ್ಳವರೆಲ್ಲ ಸಂಗಮನಾಥ' ಎಂದು ಅವರನ್ನೆಲ್ಲ ಮನ್ನಿಸಿದ. 'ನಾನೊಬ್ಬನೆ ಭಕ್ತ, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮಲಿಂಗ' ಎಂದು ಅಣ್ಣ ನಂಬಿ ನುಡಿದ. ಆ ನಂಬಿಗೆಯಲ್ಲಿ ಬಾಳಿದ. 'ನೀ ಕೊಟ್ಟ ದ್ರವ್ಯ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು' ಎಂದು ಆ ಜಂಗಮಲಿಂಗಕ್ಕೆ ನಿವೇದಿಸಿದ. ಹೀಗೆ ಸಕಲ ವಿಸ್ತಾರದ ಜಂಗಮಲಿಂಗಕ್ಕೆ ತನ್ನನ್ನು ತಾನು ಅರ್ಪಿಸಿಕೊಂಡು ಬಸವಣ್ಣ ದಾಸೋಹಿಯಾದ. ಬಸವಣ್ಣನನ್ನು ಒಳಗೊಂಡವರು ಒಳಗೊಂಡಷ್ಟು 'ಬಸವಣ್ಣ'ರಾದರು. ಈ ದಾಸೋಹಿಯನ್ನು ಒಳಗೊಂಡವರು 'ದಾಸೋಹಿ'ಯಾದರು. ಬಸವಣ್ಣ ಪರಿಪೂರ್ಣದಾಸೋಹಿ ! ದಾಸೋಹವೆಂಬುದು ಪರಿಪೂರ್ಣರೂಪತಾಳಿದ್ದು ಬಸವಣ್ಣನಿಂದ !! ದಾಸೋಹಿಗೆ ದಾಸೋಹಂಭಾವವೆ ಅಂತರಂಗ ಬಹಿರಂಗ. ಅಣ್ಣನ ದಾಸೋಹಂಭಾವದಿಂದ ಮಾದರಚನ್ನಯ್ಯ ಅಪ್ಪನಾದ, ಡೋಹರ ಕಕ್ಕಯ್ಯ ಬೊಪ್ಪನಾದ. ಕಲ್ಯಾಣ – ಮಾನವಕುಲಕಲ್ಯಾಣಕೇಂದ್ರವೆನಿಸಿತು !!

ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಭಕ್ತಂಗೆ
ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಜಂಗಮಕ್ಕೆ
ಆ ಜಂಗಮದ ಕರ್ತವ್ಯವೆ ಆ ಭಕ್ತಂಗೆ ದಾಸೋಹ !
ಆ ಭಕ್ತನ ಕಿಂಕಿಲವೆ ಆ ಜಂಗಮಕ್ಕೆ ದಾಸೋಹ !
ಆ ಭಕ್ತನೊಳಗೆ ಜಂಗಮವಡಗಿ
ಆ ಜಂಗಮದೊಳಗೆ ಭಕ್ತನಡಗಿ
ಇದನೇನೆಂದು ಹವಣಿಸುವೆನಯ್ಯಾ ಎರಡೊಂದಾದ ಘನವ....

ಭಕ್ತನ ಕಿಂಕಿಲಭಾವವೆ ಜಂಗಮಕ್ಕೆ ಸಲ್ಲುವ ದಾಸೋಹವೆನಿಸಿದರೆ, ಜಂಗಮದ ಕರ್ತವ್ಯವೆ (ಮಾರ್ಗದರ್ಶನ) ಭಕ್ತನಿಗೆ ಅನುಗ್ರಹಿಸುವ ದಾಸೋಹವಾಗಿದೆ. ಹೀಗೆ ದಾಸೋಹ ಮಾಡುವಲ್ಲಿ ಕಿರಿಯರ (ಭಕ್ತರ) ಕಿಂಕಿಲಭಾವ (ಸದುವಿನಯ ಸದ್ಭಕ್ತಿ)ಹಿರಿಯರ (ಜಂಗಮದ) ಗುರುತ್ವಭಾವ — ಮೇಳವಿಸುವುದು ಅಗತ್ಯವಾಗಿದೆ. ಈ ಬಗೆಯ ದಾಸೋಹದಿಂದ— ಭಕ್ತನೊಳಗೆ ಜಂಗಮವಡಗಿ, ಜಂಗಮದೊಳಗೆ ಭಕ್ತನಡಗಿ, ಇಬ್ಬರೂ ಎರಡಿಲ್ಲದ ಏಕೋಭಾವದೊಳಗೆ ಒಂದಾಗಿ, ಘನದೊಳಗೆ ಘನವಾಗಿ ನಿಲ್ಲುವರು !!

ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ !
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವ !

ಭಕ್ತ ಭಕ್ತನಲ್ಲಿ ಬೆರೆದು, ಭಕ್ತಿ ಭಕ್ತಿಯಲ್ಲಿ ಮೇಳವಿಸಿ, ಒಬ್ಬರನ್ನೊಬ್ಬರು ಅರಿತುಕೊಳ್ಳುವುದು ಸದಾಚಾರ. ಮೇಳವಿಸಿದ ಭಕ್ತಿಯನ್ನು ಸಂಗಮನಿಗೆ ಸಮರ್ಪಿಸುವುದೆ ದಾಸೋಹವಾಗಿದೆ. ಭಕ್ತಿರಸಕೂಟ ದಾಸೋಹದ ಇನ್ನೊಂದು

ಗುಣಧರ್ಮವಾಗಿದೆ. ಹೀಗೆ ಸಂಗಮನನ್ನು ಒಲಿಸಿಕೊಳ್ಳುವಲ್ಲಿ— ತಾನೇ ಸಂಗಮನಾಗಿ ನಿಲ್ಲುವಲ್ಲಿ ದಾಸೋಹದಂಥ ನೇರ ದಾರಿ ಬೇರೊಂದಿಲ್ಲ. ಇದಕ್ಕಿಂತ ಮಿಗಿಲಾದ ಧ್ಯೇಯ ಮಾನವನಿಗೆ ಬೇರಾವುದಿದೆ ? ದಾಸೋಹಿಯಾಗಿ ನುಡಿದು, ದಾಸೋಹಿಯಾಗಿ ಬದುಕಿ ಬಾಳಿದ ಶಿವಶರಣರ ಪ್ರತ್ಯಕ್ಷ ಜೀವನದರ್ಶನವನ್ನು ಸಮೀಕ್ಷಿಸಿ, ದಾಸೋಹದರ್ಶನವನ್ನು ಇನ್ನಷ್ಟು ಖಚಿತವಾಗಿ ಮಾಡಿಕೊಳ್ಳುವುದು ಲೇಸು.

## ಜಂಗಮದಾಸೋಹ ಮುಖದಲ್ಲಿ ಲಿಂಗದರ್ಶನ

ಬಸವಣ್ಣನ ಮಹಾಮನೆಯ ಮುಂದೆ ಮಹಾ ಜಂಗಮವೆ ಮೂರ್ತಿಮತ್ತಾಗಿ ಪ್ರಭುದೇವ ನಿಂತಿದ್ದಾನೆ. ಭಕ್ತಿಯ ಆಗರವಾದ ಬಸವಣ್ಣ ಒಳಗಡೆ ಲಿಂಗಾರ್ಚನೆಯಲ್ಲಿ ಒಂದಾಗಿದ್ದಾನೆ. ಅಪ್ಪಣ್ಣ ಬರಮಾಡಿಕೊಳ್ಳಲು ಬಂದ. ಪ್ರಭುದೇವ ಅಚಲನಾಗಿ ನಿಂತ. 'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?' ಬಸವಣ್ಣನ ಮಾತಿನಲ್ಲಿಯೆ ಬಸವಣ್ಣನಿಗೆ ಪ್ರಶ್ನಿಸುವ ರೀತಿಯಲ್ಲಿ ಪ್ರಭುವಿನ ಹುಬ್ಬು ಮೇಲೇರಿ ನಿಂದಿತ್ತು. ಅಪ್ಪಣ್ಣ ಮತ್ತೆ ಮತ್ತೆ ಬಂದ, ಬಾಗಿದ. ಬೇಡಿ ಕೊಂಡ. ಬೆಟ್ಟವನ್ನು ಅಲ್ಲಾಡಿಸಬಹುದೆ! ಮುನಿದ ಹೆಜ್ಜೆ ಮುಂದೆ ಸಾಗಿತು.

ಪ್ರಭುದೇವನನ್ನು ಕಾಣದೆ ಅಣ್ಣ ಅರ್ಘ್ಯಕ್ಕರ್ಘ್ಯ ಇಳಿದು ಹೋದ, ಬೆವರಿನ ಮಜ್ಜನದಲ್ಲಿ ಮಿಂದು ನಿಂದ! 'ಹರಕೆಯ ಹಸ್ತ ಮುಂಚಾಚಿ ಜಂಗಮಮುಖದಲ್ಲಿ ಲಿಂಗಯ್ಯ ತಾನಾಗಿ ಬಂದಿದ್ದ ಬಂದ ಭಾಗ್ಯ ಕಳೆದುಕೊಂಡು ಕೆಟ್ಟ ಕೇಡಿಂಗೆ ಲೆಕ್ಕವಿಲ್ಲ.' ಹೊತ್ತಿದ ಪಶ್ಚಾತ್ತಾಪ ಅಣ್ಣನನ್ನು ಎಚ್ಚರಿಸಿತು. "ಜಂಗಮಮುಖದಲ್ಲಿ ಲಿಂಗವನರಸಿಕೋ" ಎಂಬ ಅರಿವು ಭಕ್ತಿಭಂಡಾರಿಯಲ್ಲಿ ಅಂಕುರಿಸಿತು. 'ಮರಕ್ಕೆ ಬಾಯಿ ಬೇರು, ಲಿಂಗಕ್ಕೆ ಬಾಯಿ– ಜಂಗಮ. ತಳಕ್ಕೆ ನೀರೆರೆದರೆ, ಮೇಲೆ ಪಲ್ಲವಿಸಿತ್ತು. ಜಂಗಮಪಾದಕ್ಕೆ ಭಕ್ತಿಜಲವೆರೆದಲ್ಲಿ ಲಿಂಗಯ್ಯ ಪ್ರಸನ್ನನಾಗುವನಲ್ಲಿ. ಹೊಸದರ್ಶನ ಪಡೆದ ಬಸವಣ್ಣ; ಅಗೋಚರ ಲಿಂಗವ ಗೋಚರಿಪ ಜಂಗಮದಲ್ಲಿ ಕಾಂಬ ಸಂಕಲ್ಪದಿಂದ ದಾಸೋಹವೆಂಬ ಪಸರವನಿಕ್ಕಿ ದಾಸೋಹಿಯಾದ.

## ದಾಸೋಹಿಗೆ ತೃಪ್ತಿಯೆ ಗುಣಗೌರವ

ಮೋಳಿಗೆಯ ಮಾರಯ್ಯ ಕಾಯಕನಿಷ್ಠ; ದಾಸೋಹದಲ್ಲಿ ಸಂತುಷ್ಟ. ಮಾರಯ್ಯನ ಪ್ರಸಾದಮಹಿಮೆಗೆ ಮನ ಸೋತ ಬಸವಣ್ಣ ಅವನಲ್ಲಿಗೆ ಹೋಗಿ ಆರೋಗಣೆ ಮಾಡಿ, ಪ್ರಸಾದ ಸವಿಗೆ ತಲೆದೂಗಿ, ಅರಿಯದಂತೆ ಚಿನ್ನದ ಗಟ್ಟಿಯನ್ನು ಇರಿಸಿಬಂದ. ಉಂಡ ಪ್ರಸಾದಕ್ಕೆ, ಪಡೆದ ತೃಪ್ತಿಗೆ— ಅಣ್ಣನಿಂದ ಚಿನ್ನದ ಸಮರ್ಪಣೆ. ಆದರೆ ಉಳ್ಳವನೆಂಬ ಅಹಂಕಾರವಿರಲಿಲ್ಲ ಅವನ ಕೊಡುಗೆಯಲ್ಲಿ. ಸಂಪತ್ತಿಗೆ ಮನಸೋಲುವವನಲ್ಲ ದಾಸೋಹಿ. ದಾಸೋಹಕ್ಕೆ ಸಂಪತ್ತು ಬೇಕಿಲ್ಲ. ಸತ್ಯಶುದ್ಧ ಕಾಯಕದಿಂದ ಬಂದುದಷ್ಟೇ ಸಾಕು ದಾಸೋಹಕ್ಕೆ; ದಾಸೋಹಿಗೆ :

> ಕಾರೆಯ ಸೊಪ್ಪಾದರು ಕಾಯಕದಿಂದ ಬಂದುದು
> ಲಿಂಗಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ

ಇದು ದಾಸೋಹಿ ತಳೆದ ದೃಢವಾದ ನಿಲುವು. ಅದಕ್ಕಾಗಿ ಮಾರಯ್ಯ ಅಣ್ಣನನ್ನು ಅಪಾರ್ಥವಾಗಿ ಕಲ್ಪಿಸಿದ, ಚಿನ್ನ ವೊಯ್ದು ಅಣ್ಣನಲ್ಲಿಗೆ ಎಸೆದುಬಂದ. ಶಿವನ ಮುನಿಸನ್ನು ದಕ್ಕಿಸಿಕೊಳ್ಳಬಹುದು: ಶರಣರ ಮುನಿಸನ್ನು ದಕ್ಕಿಸಿಕೊಳ್ಳಲಾಗದು. ಬಸವಣ್ಣ ಮಾರಯ್ಯನ ದಾಸೋಹಭಕ್ತಿಗೆ ಶರಣು ಹೋದ ; ಮಾರಯ್ಯನ ಮುಂದೆ ಕೈಜೋಡಿಸಿ ನಿಂದ. 'ಮುಗಿದ ಕೈಯ ಬಾಗಿದ ತಲೆಯ' ಬಸವಣ್ಣನಿಗೆ ಸದುವಿನಯವ ಹೇಳಿಕೊಡಬೇಕೆ ? ದಾಸೋಹಿಗೆ (ಮಾರಯ್ಯನಂತಹ) ತೃಪ್ತಿ ಗುಣಗೌರವವೆನಿಸುವಂತೆ ತಪ್ಪಿದ ಠಾವಿನಲ್ಲಿ ಅಣ್ಣನಂತೆ ಒಪ್ಪಿಕೊಳ್ಳುವುದೂ ಗುಣವಿಶೇಷವೆಂದೆ ಹೇಳಬೇಕು !!

## ದಾಸೋಹಿಗೆ ಜೀವಕುಲವೆಲ್ಲ ಜಂಗಮ

ಶರಣ ಬಸವೇಶ್ವರರು ತಮ್ಮ ಹೊಲಕ್ಕೆ ಬೇಲಿ ಇಕ್ಕಲಿಲ್ಲ, ಹಕ್ಕಿ ಹೊಡೆಯಲಿಲ್ಲ. ಬೆಳೆಯನ್ನು ಕೊಟ್ಟವನು ಶಿವ ; ಹಕ್ಕಿಯಲ್ಲಿ ಪ್ರಾಣಚೇತನವಾಗಿ ಅದನ್ನುಂಡು ತಣಿಯುವವ ಶಿವ ! ಅವನುಂಡ ಮೇಲೆ ಮಿಕ್ಕ ಪ್ರಸಾದ ನಮಗೆ. ಹೀಗೆ ಜಂಗಮ ದಾಸೋಹಮುಖದಲ್ಲಿ ಲಿಂಗ (ಶಿವನನ್ನು )ವನ್ನು ಕಂಡ ಶರಣರು ಪಶುಪಕ್ಷಿಯಲ್ಲಿ ಸಹ ಕಂಡರು. ಜೀವ ಕುಲವೆ ಜಂಗಮ ಅವರಿಗೆ. 'ಜಗದಗಲ ಜಂಗಮ' ಎನ್ನುವುದು ಅವರಿಗೆ ಕೇವಲ ತತ್ತ್ವವಾಗಿರದೆ, ನಿತ್ಯ ಆಚರಣೆ

ಯಾಗಿತ್ತು. ಪಶುಪಕ್ಷಿಗಳಿಗುಂಟಾದ ತೃಪ್ತಿ ಶಿವಲಿಂಗಕ್ಕೆ ತೃಪ್ತಿ. ಶಿವಲಿಂಗದ ತೃಪ್ತಿ ಶರಣರ ತೃಪ್ತಿ. ಮೂಕಪ್ರಾಣಿಗಳ ಬಗೆಗೆ ಶರಣರಲ್ಲಿ ಇದ್ದುದು ದಯಾಭಾವ ಎನ್ನುವುದಕ್ಕಿಂತ ಅದಕ್ಕೂ ಮಿಗಿಲಾದ ಶಿವಭಾವ ಎಂದು ಹೇಳುವುದೇ ಸತ್ಯ ಸಂಗತಿ. ನಿರ್ವಂಚನೆಯ ಕೃಷಿ ಕಾಯಕ. ಬಂದ ಫಲ ಜಂಗಮದಾಸೋಹಕ್ಕೆ ಸಮರ್ಪಣ ಇದು ಶರಣರ ನಿತ್ಯಜೀವನ : ತೃಪ್ತಜೀವನ ! ಜಂಗಮದಲ್ಲಿ ಕುಲಭೇದವೆಣಿಸದ ಶರಣ ನಿಜವಾದ ದಾಸೋಹಿ. ದಾಸೋಹಿ ಸಕಲ ಜೀವಾತ್ಮರ ಬಂಧು. ಕುಲಭೇದ ಸಲ್ಲದವನಿಗೆ. ಮಾಡಿದೆನೆಂಬುದು ಮನದಲ್ಲಿ ಹೊಳೆಯದೆ, ನೀಡಿದೆನೆಂಬುದು ನೆನಹಿನಲ್ಲಿ ಸುಳಿಯದೆ, ಚಿತ್ತ ಶುದ್ಧನಾಗಿ ಕಾಯಕ ಮಾಡಿದ ಶರಣಬಸವರ ದಾಸೋಹದಲ್ಲಿ ಧಾನ್ಯಲಕ್ಷ್ಮಿ ಒಲಿದುಬಂದು ತಾನಾಗಿ ನೆಲೆಯೂರಿ ನಿಂತಳು.

## ಕಾಯಕದ ನಷ್ಟ– ಜಂಗಮದಾಸೋಹಕ್ಕೆ ನಷ್ಟ

ನುಲಿಯ ಚಂದಯ್ಯ ಹಗ್ಗ ಹೊಸೆವ ಕಾಯಕದೊಂದಿಗೆ ಶಿವ ಜೀವ ಬೆಸೆಯುವ ಕಾಯಕವನ್ನು ನಡೆಸಿದ ದಾಸೋಹಿ. ಚಂದಯ್ಯ ಕಾಯಕದಲ್ಲಿ ನಿರತನಾಗಿದ್ದ. ಆಕಸ್ಮಿಕವಾಗಿ ಲಿಂಗ ಜಾರಿ ಬಿದ್ದುಹೋಯ್ತು. ಒಂದು ವೇಳೆ ಲಿಂಗವ ಕಳೆದುಕೊಳ್ಳಬಹುದು ; ಆದರೆ ಅರೆಗಳಿಗೆ ಕಾಯಕವ ಕಳೆದುಕೊಳ್ಳಲಾಗದು. ಕಾಯಕಕ್ಕೆ ಒದಗಿದ ಲೋಪ-ಜಂಗಮದಾಸೋಹಕ್ಕೆ ಒದಗುವ ಲೋಪ. ಇದು ಚಂದಯ್ಯನ ಕಾಯಕನಿಷ್ಠೆ. ಲಿಂಗಯ್ಯನನ್ನು ಎತ್ತಿಕೊಳ್ಳುವತ್ತ ಚಂದಯ್ಯನಿಗೆ ಗಮನ ಹರಿಯಲಿಲ್ಲ. ಸತ್ಯಶುದ್ಧಶರಣನನ್ನು ಲಿಂಗಯ್ಯ ಬಿಟ್ಟುಹೋಗುವನೆಲ್ಲಿ. ಲಿಂಗಯ್ಯ, ಹೇಳಿದ ಕಾಯಕ ಮಾಡಿ ಬದುಕುವ ಮನವಿದ್ದರೆ ಮಾತ್ರ ಬರಬಹುದೆಂದ ಚಂದಯ್ಯ. ಶರಣನ ಸತ್ಯಶುದ್ಧಿಗೆ ಶಿವನೂ ಒಮ್ಮೆ ಸೋಲಬೇಕಾಗುವುದು. ಒಪ್ಪಿಕೊಂಡು ಬಂದ ಲಿಂಗಯ್ಯ ಚಂದಯ್ಯನ ಕಣ್ಸನ್ನೆಯಲ್ಲಿ ಕಾಯಕ ಕೈಕೊಂಡ.

ಹೆಚ್ಚಿನ ಹೊನ್ನಿಗೆ ಹಗ್ಗವ ಮಾರಿಕೊಂಡು ಬಂದ ತಪ್ಪಿಗಾಗಿ ಲಿಂಗಯ್ಯನ ಮೇಲೆ ಚಂದಯ್ಯನಿಗೆ ಎಲ್ಲಿಲ್ಲದ ಕೋಪ. "ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ." ಚಂದಯ್ಯ ಲಿಂಗಯ್ಯನಿಗೆ ಕಾಯಕದ ತತ್ತ್ವ ಒರೆಯಬೇಕಾಯಿತು; ಬುದ್ಧಿ ಹೇಳಿ ತಿದ್ದಬೇಕಾಯಿತು. ಜಂಗಮ ಸೇವೆಗಾಗಿ ಕಾಯಕ. ದ್ರವ್ಯದ ದಾಹಕ್ಕಾಗಿ ಅಲ್ಲ ! ಮರುಮಾತನಾಡದೆ ಲಿಂಗಯ್ಯ ಹೆಚ್ಚಿನ ಹೊನ್ನನ್ನು ಹಿಂದಿರುಗಿಸಿ ಬಂದ.

ಜಂಗಮ ಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ ಗುರುಪೂಜೆ ಸಂದಿತ್ತು
ಜಂಗಮ ಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ ಲಿಂಗಪೂಜೆ ಸಂದಿತ್ತು
ಜಂಗಮ ದಾಸೋಹದಿಂದ ಸರ್ವಸಂಪದವಾಯಿತ್ತು

ಚಂದಯ್ಯನ ಆಚಾರವೆ ವಿಚಾರಧಾರೆಯಾಗಿ ಮೂಡಿದೆ ಇಲ್ಲಿ. ದಾಸೋಹಿಗೆ ಕಾಯಕವೆ ಪ್ರಾಣದುಸಿರು ; ಹೇಮದಾಸೆಯ ಮಾಡದಿರುವುದೆ ವ್ರತನೇಮ. ಕಾಯಕಫಲವ ಜಂಗಮದಾಸೋಹಕ್ಕೆ ಸಲ್ಲಿಸುವುದೆ ಕೃತಾರ್ಥಜೀವನ !

## ಭಕ್ತ ಬಡವನಲ್ಲ, ದಾಸೋಹಿ ದೀನನಲ್ಲ

"ಆಶೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ ?" ಎಂದು ಲಕ್ಕಮ್ಮ ಗಂಡನನ್ನು ನೇರವಾಗಿ ಪ್ರಶ್ನಿಸಿದಳು. ನಿತ್ಯ ನೇಮಕ್ಕಿಂತ ಅಕ್ಕಿ ಅಧಿಕವೇಕೆ ? ಅದು ಜಂಗಮಕ್ಕೆ ಸಲ್ಲದು. ಲಿಂಗಕ್ಕೆ ಸಲ್ಲದು ; ಅದು ದಾಸೋಹ ಸೇವೆಯೆನಿಸಲಾರದು. ಆಯ್ದಕ್ಕಿ ಮಾರಯ್ಯ ಮೌನಿಯಾಗಿ ಉಗುಳ ನುಂಗಿದ ; ಮಿಕ್ಕ ಅಕ್ಕಿಯನ್ನು ತಂದಲ್ಲಿಗೆ ಒಯ್ದು ಇರಿಸಿಬಂದ.

ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧನಾಗಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ
ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ

ಈ ರೀತಿ ಕೈಹಿಡಿದ ಸತಿ ಎಡಹಿದ ಪತಿಯ ಕೈಹಿಡಿದು ನಡೆಸಿ ಸಹಧರ್ಮಿಣಿಯೆನಿಸಿದಳು. ದಾಸೋಹಿಗೆ ಕಾಯಕನಿಷ್ಠೆ ಅಗತ್ಯ. ಆದರೆ ದುರಾಶೆ, ದಾಹ ಸಲ್ಲದು. ದುರಾಶೆ ಅನಾಚಾರಕ್ಕೆ ಮೂಲ : ದಾಸೋಹಕ್ಕೆ ದೂರ ! ಚಿತ್ತಶುದ್ಧನಾಗಿ ಜಂಗಮಲಿಂಗದ ಸೇವೆ ಮಾಡುವನ್ನಕ್ಕ ದಾಸೋಹಿಗೆ ಲಕ್ಷ್ಮಿ ತಾನಾಗಿ ಒಲಿದು ಬಪ್ಪಳು. ಆದುದರಿಂದ

ದಾಸೋಹಿಗೆ ಕೊರಗು ಕೊರತೆಯೆಂಬುದಿಲ್ಲ. ಅತೃಪ್ತಿ-ಅಸಮಾಧಾನವೆಂಬುದಿಲ್ಲ. ಭಕ್ತ ಬಡವನಲ್ಲ! ದಾಸೋಹಿ ದೀನನಲ್ಲ!!

## ದಾಸೋಹ ಧರ್ಮ- ವಿಶ್ವಮಾನ್ಯ ಧರ್ಮ

"ದಾಸೋಹತತ್ತ್ವದ ತಾಯಿಬೇರು ಕಾಯಕ ಶುದ್ಧಿಯಲ್ಲಿದೆ. ಕಾಯಕ ಸಿದ್ಧಿಯ ಮೂಲ— ದಾಸೋಹತತ್ತ್ವದ ಆಚರಣೆಯಲ್ಲಿದೆ. ಕಾಯಕತತ್ತ್ವ, ದಾಸೋಹತತ್ತ್ವ— ಒಂದನ್ನು ಬಿಟ್ಟು ಒಂದಿಲ್ಲ ; ಒಂದಕ್ಕೊಂದು ಪೂರಕವಾಗಿವೆ: ಪೋಷಕವಾಗಿವೆ. ಹೀಗೆ ಕಾಯಕಶುದ್ಧಿ, ಕರ್ತವ್ಯಪ್ರಜ್ಞೆ, ನಿರ್ವಂಚನೆಯ ಸಮರ್ಪಣೆ, ಜನತಾ ಜಂಗಮ ಸೇವೆ— ಕ್ಷೇಮಕರವಾದುದೆಲ್ಲವೂ ದಾಸೋಹತತ್ತ್ವದಲ್ಲಿ ಅಡಕವಾಗಿದೆ."[1]

ಆದರೆ ಈ ದಾಸೋಹತತ್ತ್ವ ಇಂದಿನ ಯುಗದ ಪರಿಸರಕ್ಕೆ, ಇಂದಿನ ಜನತೆಯ ಜಾಯಮಾನಕ್ಕೆ ಒಗ್ಗಬಹುದೆ ? ದಾಸೋಹಂಭಾವ ಇಂದಿನವರ ಮನ ಮುಟ್ಟಬಹುದೆ ? ಇಂದಿನವರ ಆಶೋತ್ತರಗಳನ್ನು ಅರಳಿಸುವಲ್ಲಿ ಅದು ಸಹಕಾರಿಯಾಗಬಹುದೆ ? ಇದನ್ನು ಪರಾಮರ್ಶಿಸಿ ನೋಡುವುದು ವಿಹಿತವಾಗಿದೆ.

ಅಂದಿನದು ಸರಳ ಸಾತ್ವಿಕಜೀವನ : ತೃಪ್ತಿಯ ಆಗರ. ಇಂದಿನದು ವಿಲಾಸಜೀವನ, ಹಲವು ಮೋಹದತ್ತ ಪರಿದಾಡುವ ಅತೃಪ್ತಿಯ ಜೀವನ. ನಿತ್ಯಸುಖದತ್ತ ಅವರ ಗಮ್ಯಗುರಿ. ಅನಿತ್ಯಸುಖದತ್ತ ಇವರ ಓಟ, ಜಲ್ಲಾಟ. ಸತ್ಯದೆಡೆಗೆ ಮುಖಮಾಲಿಸಿದ ಅವರು– ಸಂಸಾರವಿದು ಮಿಥ್ಯವೆನ್ನಲಿಲ್ಲ. ಸಂಸಾರದಲ್ಲಿಯ ಮಾದಕತೆಯನ್ನು ಅಲ್ಲಗಳೆದರೇ ಹೊರತಾಗಿ, ಸಂಸಾರವನ್ನು ಅಲ್ಲಗಳೆಯಲಿಲ್ಲ. ಅವರು ಸಂಸಾರವನ್ನು ಪ್ರೀತಿಸಿದರು; ತುಂಬ ಗೌರವಿಸಿದರು. ಅವರು ಪ್ರೀತಿಸಿದ ರೀತಿಯೇ ಬೇರೆ. ಸತ್ಯವನ್ನು ಮುಟ್ಟುವಲ್ಲಿ ಸಂಸಾರ ಅವರಿಗೆ ಮಾಧ್ಯಮವಾಗಿತ್ತು. ಸದಾಚಾರದಲ್ಲಿ ಇಹವನ್ನು ಮಹವನ್ನಾಗಿ ಮಾಡಿದ ಜಯಶೀಲರವರು : ಹುಟ್ಟನ್ನು ಎಸೆದು ದೋಣಿಯನ್ನು ಮುಳುಗಿಸಲಿಲ್ಲ. ಸೆಳೆವಿನಲ್ಲಿ ಹೋದತ್ತ ಹೋಗಲಿ ಎಂದು ಕರ್ತವ್ಯವಿಮುಖರಾಗಲಿಲ್ಲ. ಕಡೆದ ಮಜ್ಜಿಗೆಯ ಮೇಲೆ ತೇಲುವ ಬೆಣ್ಣೆಯಾದರು— ಹೊರತಾಗಿ ಮುಳುಗುವ ಜಡವಾಗಲಿಲ್ಲ.

ಸಂಸಾರವೇ ಸರ್ವಸ್ವ ಇಂದಿನವರಿಗೆ. ವಿಲಾಸವೈಭವವೇ ಪ್ರಾಣದುಸಿರು. ದಾಹದ ಮಿತಿಮೀರಿದ ಭಾರದಲ್ಲಿ ಸ್ವತಃ ಮುಳುಗಿಹೋದರೂ ಚಿಂತೆಯಿಲ್ಲ ; ಮುಳುಗಿರುವುದರಲ್ಲಿಯೇ ಇವರಿಗೊಂದು ಇವರದೇ ಆದ ಸುಖ. ಇವರು ಮುಳುಗಿ, ಮೇಲೆ ತಂದದ್ದು ಬರಿ ಶಿಂಪು, ಶಂಖ, ಜೊಂಡಾರಿಯನ್ನು. ಮುಳುಗದೆಯೆ ಅವರು ತಮ್ಮ ಜೀವನವನ್ನು ರತ್ನವನ್ನಾಗಿ ಮಾಡಿಕೊಂಡರು. ವಿಕಾರದತ್ತ ವಾಲುವ ಕರಣೇಂದ್ರಿಯವನ್ನಾಗಲಿ; ಮನವನ್ನಾಗಲಿ ಶರಣರು ದಂಡಿಸುವ ಗೋಜಿಗೆ ಹೋಗಲಿಲ್ಲ. ಆದರೆ ಅವರು ಅವುಗಳ ಓಟವನ್ನು ಸದಭಿರುಚಿಯತ್ತ, ಶಿವಮುಖದತ್ತ ವಾಲಿಸಿದರು. ಅವರ ಸಾಫಲ್ಯದ ಗುಟ್ಟು ದಾಸೋಹಂಭಾವದಲ್ಲಿದೆ : ದಾಸೋಹತತ್ತ್ವದ ಅನುಷ್ಠಾನದಲ್ಲಿದೆ.

ಅಂದಿನವರನ್ನು ಎತ್ತಿಹಿಡಿಯುವಲ್ಲಿ ಇಂದಿನವರನ್ನು ಅಲ್ಲಗಳೆಯಬೇಕೆಂಬುದು ಇದರ ಅರ್ಥವಲ್ಲ. ಹಾಗೆ ಮಾಡುವುದೂ ಸಲ್ಲ. ಇಂದಿನ ವೈಜ್ಞಾನಿಕ ಮೌಲ್ಯಗಳನ್ನು ಬದಿಗೊತ್ತಿ, ಅದು ನೀಡುವ ಸುಖಸೌಕರ್ಯಗಳಿಗೆ ಎರವಾಗಬೇಕೆಂಬುದು ಇದರ ಮಥಿತಾರ್ಥವೂ ಅಲ್ಲ. ವೈಜ್ಞಾನಿಕ ಬುದ್ಧಿಯನ್ನು ಕೊಟ್ಟವನು ಆ ಕರ್ತಾರನೇ. ವೈಜ್ಞಾನಿಕ ಸೌಕರ್ಯ ಇರುವುದು ಮಾನವಕುಲದ ಏಳಿಗೆಗಾಗಿ, ಸುಖಸಮೃದ್ಧಿಗಾಗಿ. ಅದಕ್ಕಾಗಿ ಮನುಷ್ಯರಲ್ಲ. ಅದು ನಮ್ಮನ್ನು ಆಳುವುದಲ್ಲ. ನಮ್ಮ ಸುಖಕ್ಕೆ ಅನುವಾಗುವಷ್ಟು ಅನುವಾಗುವ ರೀತಿಯಲ್ಲಿ ಅದನ್ನು ಬಳಸಿಕೊಳ್ಳುವತ್ತ ನಮ್ಮ ಗಮನ ಹರಿಯಬೇಕು. ಈ ರೀತಿಯನ್ನು ಕಲಿಸಿಕೊಡುವ ಪಾಠ ದೊರೆಯುವುದು ದಾಸೋಹತತ್ತ್ವದಲ್ಲಿ. ನಿಜವಾಗಿ ನೋಡಿದರೆ, ಅಂದಿನವರಿಗಿಂತ ಇಂದಿನವರಿಗೆ ದಾಸೋಹಂಭಾವ ಹೆಚ್ಚು ಅಗತ್ಯವಾಗಿದೆ. ಸಮಾಜವಾದ, ಸಮತಾವಾದ, ವರ್ಗರಹಿತ ಜೀವನ, ಸದುವಿನಯ, ಸದ್ವರ್ತನೆ, ಸಕಲ ಜೀವಾತ್ಮರ ಶುಭಚಿಂತನೆ— ಮುಂತಾದ ಮಾನವೀಯ ಮೌಲ್ಯಗಳನ್ನು ಅಂದಿನ ಶರಣರು ಅನುನಯದಲ್ಲಿ ಸಾಧಿಸಿದಂತೆ ಸಾಧಿಸಿದಷ್ಟು ಇಂದಿನವರು ಏಕೆ ಸಾಧಿಸುತ್ತಿಲ್ಲ ? ಯತ್ನ ನಡೆದರೂ ಯಶಸ್ಸು ಏಕೆ ಕರಗತವಾಗಿಲ್ಲ ? ಜೀವನಶುದ್ಧಿಯಿಲ್ಲದೆ. ದಾಸೋಹಂಭಾವವಿಲ್ಲದೆ. ಪ್ರಾಮಾಣಿಕ ಪ್ರಯತ್ನವಿರದೆ— ಇಂಥ ಯತ್ನಕ್ಕೆ ಅಪಜಯವೇ ಅಂತಿಮ ಪರಿಣಾಮ !

ಅಂದಿನಂತಹ ಸತ್ಪುರುಷರು ಇಂದಿನ ಜಗತ್ತಿನಲ್ಲಿ ಇಲ್ಲವೆನ್ನುವುದು ತಪ್ಪು. ದಾಸೋಹಂಭಾವ ಅಂದಿಗೆ ಮುಗಿದುಹೋಯಿತು ಎನ್ನುವುದೂ ತಪ್ಪು. ಅದು ಜೀವಂತವಾಗಿದೆ ಎನ್ನುವದಕ್ಕೆ ಅಂದಿನಿಂದ ಇಂದಿನವರೆಗೆ ಶರಣ-

1 ಗವಿದೀಪ್ತಿ : ಪೂಜ್ಯ ಶರಣಬಸವಪ್ಪ, ಪುಟ ೪೦೭

ಸತ್ಪುರುಷರು ಆಗಿಹೋಗಿರುವುದೇ ಪ್ರಮಾಣವಾಗಿದೆ. ಈಗಲೂ ಸುತ್ತೂರು ಪೀಠದ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರೂ, ಕಲುಬುರ್ಗಿಯ ಶರಣಬಸವೇಶ್ವರ ಪೀಠದ ಏಳನೆಯ ಉತ್ತರಾಧಿಕಾರಿಗಳಾದ ಪೂಜ್ಯ ದೊಡ್ಡಪ್ಪ ಅಪ್ಪ ಶರಣರೂ ಹಾಗೂ ಇನ್ನೂ ಹಲವಾರು ಶರಣ ಸತ್ಪುರುಷರೂ ಅನ್ನ-ಜ್ಞಾನ-ಅಧ್ಯಾತ್ಮದಾಸೋಹದಿಂದ ಜನತಾಜಂಗಮದ ಕ್ಷೇಮಾಭ್ಯುದಯವನ್ನು ಸಾಧಿಸುತ್ತಿರುವುದು ಆದರಣೀಯವಾಗಿದೆ. ಈ ನಿಟ್ಟಿನಲ್ಲಿ ಮದರ್ ಥೆರೆಸಾ ಅವರನ್ನು ಗೌರವದಿಂದ ಸ್ಮರಿಸಬಹುದು. ಕೈಮುಟ್ಟಿ ಮನಮುಟ್ಟಿ ರೋಗಿಗಳನ್ನು ಉಪಚರಿಸಿ, ನೊಂದ ಜೀವಿಗಳ ಕಂಬನಿಯೊರಸಿ, ಉಪೇಕ್ಷಿತರ, ನಿರ್ಲಕ್ಷಿತರ ಬಾಳಿಗೆ ಭರವಸೆಯನ್ನು ನೀಡಿ, ಬುದ್ಧಿಗೆ ವಿದ್ಯಾದಾನ ಮಾಡಿ, ಮನಸ್ಸಿಗೆ ನೆಮ್ಮದಿಯನ್ನೂಡಿ ಜನಕೋಟಿಯ ಸೇವೆ ಮಾಡುತ್ತಿರುವ ಮದರ್ ಥೆರೆಸಾ ನಿಜವಾಗಿ ನೊಂದವರ ತಾಯಿ! ಆಕೆ ಮಾಡುತ್ತಿರುವುದು ಜನತಾಜಂಗಮಸೇವೆ, ದಾಸೋಹಸೇವೆ!! ದಾಸೋಹಂಭಾವದ ಮಹಾಮಾತೆ ಆ ತಾಯಿ!!

ಅಸಮತೆ, ಅಸೂಯೆ, ದ್ವೇಷ, ಅತೃಪ್ತಿ— ಇವುಗಳಿಂದ ಮುಕ್ತಮಾಡಬಲ್ಲ, ನುಡಿಯುವಲ್ಲಿ ನಡೆಯುವಲ್ಲಿ ಕೊಡುವಲ್ಲಿ ಕೊಳ್ಳುವಲ್ಲಿ— 'ಇವ ನಮ್ಮವ'ನೆಂಬ ವಿಶ್ವಾಸ ಮೂಡಿಸಬಲ್ಲ 'ದಾಸೋಹಂಭಾವ', ವಿಶ್ವಾದ್ಯಂತ ಬೆಳೆಯುವಂತೆ ಮುಕ್ತ ಅವಕಾಶ ಕಲ್ಪಿತವಾಗಬೇಕು. ಇಂದಿನ ದುರ್ವ್ಯವಹಾರದ ಕತ್ತಲೆಯಲ್ಲಿ ಕಣ್ಣಿದ್ದೂ ಕಣ್ಣು ಕಳೆದುಕೊಂಡ ಮಾನವಕುಲಕ್ಕೆ 'ದಾಸೋಹಂಭಾವ'ದ ಬೆಳಕು ಪಡೆಯುವಲ್ಲಿ ಯಾವ ಭ್ರಾಂತಿಗೂ ಒಳಗಾಗದಿರುವುದು ಲೇಸು! ಹೊಸ ಜನಾಂಗದ ರುಚಿಯನ್ನು ರುಚಿಗೊಳಿಸಿ, ಅಭಿರುಚಿಯನ್ನು ಸದಭಿರುಚಿಯತ್ತ ವಾಲಿಸಿ, ಅದರ ಸೂಕ್ತ ಆಶೋತ್ತರಗಳನ್ನು ಸಫಲಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಯಬೇಕು. ಧರ್ಮದಲ್ಲಿ 'ದಾಸೋಹಂಭಾವ' ಅನುಸಂಧಾನಗೊಂಡಲ್ಲಿ, ಆ ಧರ್ಮ ಶ್ರೇಷ್ಠಧರ್ಮವೆನಿಸುತ್ತದೆ: ದಾಸೋಹಧರ್ಮವಾಗುತ್ತದೆ! ಹೀಗೆ ಈ ದಾಸೋಹಧರ್ಮ— ಮಾನವೀಯ ಮೌಲ್ಯಗಳಿಗಿಂತ ಮಿಗಿಲಾದ ಪರಮಾರ್ಥ ಚಿಂತನಾಂಶಗಳಿಂದ ಕೂಡಿರುವುದರಿಂದ ವಿಶ್ವಮಾನ್ಯಧರ್ಮವಾಗಿದೆ!!

"ತನ್ನ ಎಡೆಯಲ್ಲಿ ಕತ್ತೆ ಸತ್ತು ಬಿದ್ದುದನರಿಯದೆ
ಪರರೆಡೆಯಲ್ಲಿ ನೊಣವನಾರಿಸುವ ಮರುಳು ಮಾನವರಂತೆ
ತನ್ನಂಗ ಮನದ ಅವಗುಣಗಳ ತೊಲಗಿ ನೂಕಲರಿಯದೆ
ಅನ್ಯರಲ್ಲಿ ಅವಗುಣವ ಸಂಪಾದನೆಯ ಮಾಡುವ
ಕುನ್ನಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ"

—ಷಣ್ಮುಖ ಶಿವಯೋಗಿ

# ಕಾಯಕ ತತ್ತ್ವ

ಡಾ. ಎಸ್. ಆರ್. ಗುಂಜಾಳ

ಉತ್ತಂಗಿಯವರು ಲಿಂಗವಂತಧರ್ಮವನ್ನು ಕುರಿತು ಹೃದಯತುಂಬಿ ಮಾತನಾಡುತ್ತಿದ್ದರು. ಅದರಲ್ಲಿ ಬಸವಣ್ಣನವರನ್ನು ಕುರಿತು ಹೇಳುವ ಮಾತುಗಳಂತೂ ಹಸಿಯ ಗೋಡೆಯ ಮೇಲೆ ಹರಳಿಟ್ಟಂತಿರುತ್ತಿದ್ದವು.

ಹೀಗೆ ಒಂದು ದಿನ ಲಿಂಗವಂತರಲ್ಲಿ ಇಂದಿಗೂ ಕಾಣುವ 'ಕಾಯಕ'ದ ಅಯ್ಯನವರನ್ನು ಕುರಿತು ನಮ್ಮ ಚರ್ಚೆ ಸಾಗಿತ್ತು, 'ಕಾಯಕ'ದ ಮರ್ಮವನ್ನು ಅರಿಯಬೇಕೆಂದಿದ್ದ ನನಗೆ ಉತ್ತಂಗಿಯವರ ವ್ಯಾಖ್ಯಾನವನ್ನು ಕೇಳುವುದರಲ್ಲಿ ಆಸ್ಥೆಯುಂಟಾಗಿತ್ತು. ಅದಕ್ಕಾಗಿ ಕಾಯಕದ ಬಗೆಗೆ ನನ್ನಲ್ಲಿ ತೋರಿದ ಸಂದೇಹಗಳನ್ನು ಅವರಲ್ಲಿ ಅರಿಕೆ ಮಾಡಿದೆ. ಅವರು ಕೊಟ್ಟ ವಿವರಣೆಯಿಂದ ನನಗೆ ತೃಪ್ತಿಯಾಯಿತು. ಅಲ್ಲದೇ ಅವರು ಹೇಳಿದ ಅರ್ಥವಿಸ್ತಾರವನ್ನೇ ತೆಗೆದುಕೊಂಡು ನನ್ನ ಮಾತಿನ ಒಗ್ಗರಣೆ ಬೆರೆಯಿಸಿ ಕೆಲವು ಸಾರ್ವಜನಿಕ ಸಭೆಗಳಲ್ಲಿ ಉದ್ಬೋಧಕ ಭಾಷಣಗಳನ್ನು ಮಾಡಿ ಶ್ರೋತೃಗಳ 'ಶಹಬಾಶಗಿರಿ'ಗೆ ಪಾತ್ರನಾದದ್ದುಂಟು. ನನ್ನ ಭಾಷಣವನ್ನು ಕೇಳಿದ ಸಭಿಕರಲ್ಲಿ ಕೆಲವರು ನನ್ನದುರು ತದನಂತರ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದುದುಂಟು. ಆದರೆ ನನ್ನ ಭಾಷಣದ ವಿಷಯದ ಸಾಹುಕಾರರು ಉತ್ತಂಗಿಯವರೆಂದೂ, ನಾನು ಅವರ ಸಾಲಗಾರನೆಂದೂ ಅವರಿಗೆ ಹೇಳಿದೆ. ಯಾಕೆಂದರೆ ನನಗೆ ಆ ವಿಷಯದ ತಿಳುವಳಿಕೆ ಮಾಡಿಕೊಟ್ಟವರು ಉತ್ತಂಗಿಯವರು ತಾನೇ ?

'ಕಾಯಕ' ಶಬ್ದಕ್ಕೆ ಉತ್ತಂಗಿಯವರು ನೀಡಿದ ವಿಶಿಷ್ಟವಾದ ಅರ್ಥವು ವಿಚಾರವಂತರ ಹೃದಯವನ್ನು ಸೆರೆಹಿಡಿಯುವುದರಲ್ಲಿ ಸಂದೇಹವಿಲ್ಲವೆಂಬುದು ನನ್ನ ಅನುಭವಕ್ಕೆ ಬಂದ ಮಾತು. ಆದುದರಿಂದ ಉತ್ತಂಗಿಯವರು ಹೇಳಿದ 'ಕಾಯಕ'ದ ಒಳತಿರುಳನ್ನು ನಾನಿಲ್ಲಿ ನನ್ನ ಮಾತುಗಳಲ್ಲಿ ಬರೆಯುತ್ತೇನೆ. ವಿಚಾರಗಳೆಲ್ಲವೂ ಪೂಜ್ಯ ಉತ್ತಂಗಿಯವರವು.

ಸಮಾಜವನ್ನು — ಅದು ಯಾವ ದೇಶದ್ದೇ ಇರಲಿ— ತಿದ್ದಿ ತೀಡುವಲ್ಲಿ, ಮಾರ್ಗದರ್ಶನ ಮಾಡುವಲ್ಲಿ ಮುಖ್ಯವಾಗಿ ಎರಡು ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ಒಂದಕ್ಕೆ 'ಅರಮನೆ' ಎಂದೂ ಮತ್ತೊಂದಕ್ಕೆ 'ಗುರುಮನೆ' ಎಂದೂ ಕರೆಯಬಹುದು.

ಅರಮನೆ ಎಂದರೆ ಅರಸನ ಮನೆ ಅಥವಾ ಸರಕಾರ. ಜನರು ಶಾಂತಿ-ಸಮಾಧಾನದಿಂದ ಜೀವನ ನಡೆಯಿಸಬೇಕಾದುದರಿಂದ ಅವರಿಗೆ ರಾಜನಾದವನು ಸ್ವತಃ ತಾನಾಗಲೀ, ಅಥವಾ ಮಂತ್ರಿಮಂಡಳಿ ಸೇನಾಧಿಕಾರಿಗಳ ಮೂಲಕವಾಗಲೀ ಮಾರ್ಗದರ್ಶನವನ್ನೀಯುತ್ತಾನೆ ; ಸಹಾಯ ಮಾಡುತ್ತಾನೆ ; ಸಮಾಜದಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಾನೆ. ಇದಕ್ಕೆ 'ಆಡಳಿತ' 'ರಾಜ್ಯಾಡಳಿತ' ಎಂದು ಕರೆಯುತ್ತಾರೆ.

ಭಾರತದಲ್ಲಿ ಇಂದು ರಾಜನಿಲ್ಲದಿದ್ದರೂ ಪ್ರಜಾಪ್ರತಿನಿಧಿಗಳ ಸರಕಾರವು ಆಡಳಿತವನ್ನು ನಡೆಸುತ್ತದೆ. ಸರಕಾರದ ಆಡಳಿತ ಸುಗಮವಾಗಿ ಸಾಗಬೇಕಾದರೆ, ಸಮಾಜದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಬೇಕಾದರೆ ಪೋಲಿಸ ಪಡೆಯು ಅತ್ಯಂತ ಸುಭದ್ರವಾಗಿರಬೇಕು ; ಬಲಾಢ್ಯವಾಗಿರಬೇಕು. ಸರಕಾರವು ಪಾಸುಮಾಡಿದ ಯಾವುದಾದರೊಂದು ಕಾಯಿದೆಯು ಜಾರಿಯಲ್ಲಿ ಬರಬೇಕಾದರೆ ಅನೇಕ ತೊಂದರೆಗಳು ಪ್ರಾರಂಭದಲ್ಲಿ ಉಂಟಾಗುತ್ತವೆ. ಬಡವರಿಗೆ ಹಿತವಾಗಲೆಂದು ಮಾಡಿದ ಕಾನೂನನ್ನು ಎಲ್ಲಕ್ಕೂ ಮೊದಲು ಸರಕಾರದ ಕಣ್ಣಲ್ಲಿ ಮಣ್ಣೆರಚಿ ಉಲ್ಲಂಘನೆ ಮಾಡುವವರು ಶ್ರೀಮಂತರು. ಒಕ್ಕಲಿಗರಿಗೆ ಪ್ರಯೋಜನವಾಗಲೆಂದು ಮಾಡಿದ ಕಾನೂನಿನಿಂದ ವ್ಯಾಪಾರಸ್ಥರು ಲಾಭ ಪಡೆಯುತ್ತಾರೆ. ಸಮಾಜದಲ್ಲಿ ಬಹುಜನರು ಸ್ವಾರ್ಥದಿಂದ ಕೂಡಿರುವುದರಿಂದಲೂ ದುಡ್ಡು, ಆಸ್ತಿ, ಶ್ರೀಮಂತಿಕೆಯ ಮೇಲೆ ನಿಂತಿರುವುದರಿಂದಲೂ ಸರಕಾರಕ್ಕೆ ಅವರು ಒಳಗಿಂದೊಳಗೆ ವಂಚನೆಯನ್ನು ಮಾಡುತ್ತಲೂ ಜೀವಿಸುತ್ತಿರುವರು.

ಇಂತಹ ವಂಚಕರನ್ನು ದಂಡಿಸುವುದಕ್ಕೂ, ಸಮಾಜದಲ್ಲಿ ಶೋಷಣೆಯುಂಟಾಗದಂತೆ ನೋಡಿಕೊಳ್ಳುವುದಕ್ಕೂ ನ್ಯಾಯಾಲಯ, ಪೋಲೀಸ್ ಹಾಗೂ ಸೈನ್ಯಪಡೆಗಳು ಎಚ್ಚರದಿಂದ ಇರಬೇಕಾಗುತ್ತದೆ.

ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡಬೇಕೆಂದು ಹೊರಟರೆ ಕೆಲವರಾದರೂ ಸ್ವಾರ್ಥಿಗಳು ಅದನ್ನು ವಿರೋಧಿಸುವುದು ನಿಶ್ಚಿತ. ಭೂಸುಧಾರಣಾ (ಟೆನೆನ್ಸಿ) ಕಾಯಿದೆಯು ನಮ್ಮ ರಾಜ್ಯದಲ್ಲಿ ಪಾಸಾಗಿ ಅನೇಕ ವರುಷ ಗಳಾಗಿದ್ದರೂ ಯಾವ ಜಮೀನುದಾರನು ಆತ್ಮಸಂತೋಷದಿಂದ ಮುಂದು ಬಂದು ಉಳುವ ರೈತರೆಲ್ಲರಿಗೆ ಪ್ರಕ್ಕಟೆ ಯಾಗಿ ತನ್ನ ಹೊಲಗಳನ್ನು ಬಿಟ್ಟುಕೊಟ್ಟಿದ್ದಾನೆ ? ಎಷ್ಟು ಜನ ವ್ಯಾಪಾರಸ್ಥರು ಪ್ರಾಮಾಣಿಕತನ ತೋರಿಸಿ ತಮ್ಮ ಆದಾಯಕರವನ್ನು ಸರಕಾರಕ್ಕೆ ತಕ್ಕಸಮಯದಲ್ಲಿ ಸಂದಾಯ ಮಾಡುತ್ತಾರೆ ? ಜನರು ಪ್ರಾಮಾಣಿಕರೂ ನೀತಿವಂತರೂ ಆಗಬೇಕೆಂದು ಸರಕಾರವು ಸಾರ್ವಜನಿಕ ಶಾಲೆ, ಕಾಲೇಜುಗಳನ್ನು ತೆರೆದು ಶಿಕ್ಷಣವನ್ನು ಈಯುತ್ತದೆ. ಆದರೆ ಶಾಲೆ ಕಲಿತ ಎಷ್ಟು ಜನ ವಿದ್ಯಾವಂತರು ಸಮಾಜಜೀವನದಲ್ಲಿ ಪ್ರಾಮಾಣಿಕರಾಗಿ ನಡೆಯುತ್ತಿದ್ದಾರೆ ? ತಮ್ಮ ಬೇಳೆ ಬೇಯಿಸಿ ಕೊಳ್ಳುವುದಕ್ಕೆ ಅನುಕೂಲವಾದ ಸರಕಾರ ತರಬೇಕೆಂದು ವ್ಯಾಪಾರಿವರ್ಗ ಬಯಸುತಿದ್ದರೆ, ತಮ್ಮ ಐಷಾರಾಮಗಳಿಗೆ ಧಕ್ಕೆ ತರದ ಸರಕಾರಕ್ಕೆ ಅನುಮೋದನೆ ನೀಡುವವರು ಸಾಹುಕಾರ ಜಮೀನುದಾರರಾಗಿದ್ದಾರೆ. ಅರಮನೆಯು ಬಡವ ಬಲ್ಲಿದರಲ್ಲಿಯ ವ್ಯತ್ಯಾಸವನ್ನು ಕಡಿಮೆ ಮಾಡುವಲ್ಲಿ ತನ್ನ ಹೋರಾಟವನ್ನೂ ಒಂದಿಲ್ಲೊಂದು ಬಗೆಯಲ್ಲಿ ನಡೆಯಿಸಿ ಕೊಂಡು ಬಂದಿರುತ್ತದೆ. ತನ್ನ ಅಧಿಕಾರ ಬಲದಿಂದ ಏನೆಲ್ಲವನ್ನೂ ಸಾಧಿಸಬಲ್ಲೆನೆಂಬ ತತ್ವದಲ್ಲಿ ಸಂಪೂರ್ಣ ನಂಬಿಕೆಯ ನ್ನಿಟ್ಟುಕೊಂಡಿದೆ. ಆದರೆ ಅದರ ನಂಬಿಕೆಯನ್ನು ಸುಳ್ಳಾಗಿಸುವಂತೆ ಜನರು ಮೊದಲಿನಂತೆ ಪಾಪಕಾರ್ಯಗಳಲ್ಲಿ ತಲ್ಲೀನ ರಾಗಿರುವುದು ಕಂಡುಬರುತ್ತದೆ. ಇದರಿಂದ ಹೃದಯಪರಿವರ್ತನೆಯನ್ನು ಮಾಡದೆ, ಪೋಲಿಸ ಪಡೆಯ ಶಕ್ತಿಪ್ರಯೋಗ ದಿಂದ ಜನರು ಸುಸಂಸ್ಕೃತವಾಗುವುದಿಲ್ಲವೆಂದು ತಿಳಿದುಬರುತ್ತದೆ.

ಇನ್ನು, ಇತ್ತ ಗುರುಮನೆಯು ಅಂದರೆ ಧರ್ಮಗುರುಗಳು ತಮ್ಮ ಧರ್ಮಬೋಧನೆಯಿಂದ ಜನತೆಯನ್ನು ಸುಧಾರಿಸುವ ಭರದಲ್ಲಿ ತೊಡಗಿದ್ದಾರೆ. ಅವರು ತಮ್ಮ ಮಠಗಳನ್ನೇ, ಧರ್ಮಪೀಠಗಳನ್ನೇ ಕೇಂದ್ರಗಳನ್ನಾಗಿಟ್ಟು ಕೊಂಡು ನೈತಿಕ ತತ್ವೋಪದೇಶವನ್ನು ಜನತೆಗೆ ನೀಡುತ್ತಿದ್ದಾರೆ. ಸರಕಾರದ ಕಾರ್ಯ ಬುದ್ಧಿಜನ್ಯವಾದರೆ ಧರ್ಮ ಗುರುಗಳ ಕಾರ್ಯ ಹೃದಯಜನ್ಯವಾದುದು. ಸರಕಾರವು ತರ್ಕಶಾಸ್ತ್ರವನ್ನು ಆಧರಿಸಿ ಬುದ್ಧಿಯ ಬಲದಿಂದ ಜನತೆ ಯನ್ನು ತಿದ್ದಲೆಳಸಿದರೆ ಧರ್ಮಗುರುಗಳು ದೇವರು, ಪಾಪಭೀರುತ್ವ, ಸತ್ಯ, ನೀತಿ, ಪ್ರೇಮ, ತ್ಯಾಗ ಮುಂತಾದ ಹೃದಯಕ್ಕೆ ಸಂಬಂಧಿಸಿದ ಗುಣಗಳನ್ನು ಆಧರಿಸಿ ಜನತೆಯನ್ನು ತಿದ್ದಲೆಳಸುತ್ತಾರೆ. ಜನತೆಯನ್ನು ದೃಷ್ಟಿಯಲ್ಲಿರಿಸಿ ಕೊಂಡು ಹೊರಟ ಅರಮನೆ-ಗುರುಮನೆಗಳೂ ಸಹ ಸ್ವಾರ್ಥ, ಅಹಂಕಾರ, ಹಿಂಸೆ, ಮೋಸಗಳಿಗೆ ಒಳಗಾಗುವ ಸಂದರ್ಭ ಗಳೆಷ್ಟೋ ಉಂಟು. ಇದು ಅತಿರೇಕಕ್ಕೆ ಮುಟ್ಟಿದಾಗ ಅರಮನೆ ಹಾಗೂ ಗುರುಮನೆಗಳಲ್ಲಿ ಕದನ ಪ್ರಾರಂಭವಾದ ದ್ದುಂಟು. ಇಂತಹ ತಿಕ್ಕಾಟಗಳನ್ನು ಇಂಗ್ಲೆಂಡದಂತಹ ದೇಶಗಳಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ಗುರುವರ್ಗವನ್ನು ತಿರಸ್ಕರಿಸಿದ ಸರಕಾರವು ನಾಶವಾದದ್ದಕ್ಕೆ ಇತಿಹಾಸದಲ್ಲಿ ಉದಾಹರಣೆಗಳಿದ್ದರೆ, ಸರಕಾರವು ತನ್ನ ತೋಳಬಲದಿಂದ ಗುರುವರ್ಗದವರನ್ನು ಚಿತ್ರಹಿಂಸೆಗೊಳಪಡಿಸಿದುದಕ್ಕೂ ಅನೇಕ ಉದಾಹರಣೆಗಳುಂಟು. ಈ ಹಿನ್ನಲೆಯಲ್ಲಿ ಲಿಂಗಾಯತ ದಲ್ಲಿ ಪ್ರಚಾರದಲ್ಲಿರುವ 'ಕಾಯಕ' ಪದ್ಧತಿಯನ್ನು ಅವಲೋಕಿಸಿದರೆ ಅರ್ಥ ಸ್ಪಷ್ಟವಾಗುವುದು.

'ಕಾಯಕ' ಪದಕ್ಕೆ ಎರಡು ಮುಖ್ಯ ಅರ್ಥ ಕೊಡಬಹುದು. ಒಂದನೆಯದಾಗಿ 'ಕೆಲಸ', 'ವೃತ್ತಿ', 'ಉದ್ಯೋಗ', 'ದುಡಿದುಣ್ಣುವುದು' ಮುಂತಾಗಿ ಅರ್ಥಗಳನ್ನು ಹೇಳಬಹುದು. ಇಲ್ಲಿಯೂ ಸಹ ಲಿಂಗಾಯತ ಧರ್ಮತತ್ವದ ಪ್ರಕಾರ ಇನ್ನೂ ಸೂಕ್ಷ್ಮವಾದ ಅರ್ಥವನ್ನು ಕೊಡಬೇಕಾಗುತ್ತದೆ. ಲಿಂಗಾಯತನಾದವನು ಸತ್ಯಶುದ್ಧಕಾಯಕದಿಂದಲೇ ಜೀವಿಸಬೇಕೆಂಬ ಕಟ್ಟುನಿಟ್ಟಿದೆ. ಸಮಾಜಕ್ಕೆ ಅಹಿತವನ್ನುಂಟುಮಾಡುವ, ಗಳಿಕೆಗೆ ಆಸ್ಪದವನ್ನೀಯುವ ಉದ್ಯೋಗ ವನ್ನವರು ಮಾಡಕೂಡದು. ಅಂದಂದಿನ ಗಳಿಕೆ ಅಂದಂದಿನ ಜೀವನಕ್ಕೆ ಸಾಕಾದರೆ ಸರಿ. ಅಂತಹ ಉದ್ಯೋಗಕ್ಕೆ 'ಕಾಯಕ'(ಕಾಯಕಷ್ಟ)ವೆಂದು ಕರೆಯುತ್ತಾರೆ. ಅಂದರೆ ಕುಳಿತುಣ್ಣುವವರಿಗೆ ಇಲ್ಲಿ ಆಸ್ಪದವಿಲ್ಲ. ಪ್ರತಿಯೊಬ್ಬರೂ ದುಡಿಯಲೇಬೇಕಾದುದರಿಂದ ಭಿಕ್ಷೆಗೆ, ಭಿಕ್ಷುಕರಿಗೆ ಅಲ್ಲಿ ಸ್ಥಾನವಿಲ್ಲದಂತಾಯಿತು. ಅಂತೆಯೇ ಈ ಸಮಾಜವು ಸಂಪತ್ತಿ ನಿಂದ ತುಂಬಿಹೋಯಿತು. ಹೀಗೆ ಸಮಾಜವು ಸಂಪದ್ಭರಿತವಾದಾಗ ಸಂಪತ್ತಿನೊಂದಿಗೆ ಸ್ವಭಾವಿಕವಾಗಿ ದುರಾಶೆ, ದುರ್ಗುಣಗಳು ಸಮಾಜದಲ್ಲಿ ಪ್ರವೇಶ ಮಾಡುವುದಕ್ಕೆ ಆಸ್ಪದ ಉಂಟಾಗುತ್ತದೆ. ಅಂದರೆ ಜನರು ವ್ಯಸನಿಗಳೂ, ಅಲಸಿ ಗಳೂ, ತದನಂತರ ಧರ್ಮಲಂಡರೂ, ದುರಾಚಾರಿಗಳೂ ಆಗಬಹುದಾಗಿದೆ ; ಅನ್ಯಾಯಕ್ಕೆ ಎಡೆಗೊಡಬಹುದಾಗಿದೆ.

ಅನ್ಯಾಯ ಅನೀತಿಗಳಿಂದ ಸಮಾಜವನ್ನು ಸಂರಕ್ಷಿಸಿ ಚಿರಂತನಕಾಲ ಧರ್ಮವನ್ನು ಉಳಿಸಿಕೊಂಡು ಹೋಗುವ ಒಂದು ಉಪಾಯವನ್ನು ಲಿಂಗಾಯತ ಧರ್ಮದಲ್ಲಿ ಕಲ್ಪಿಸಿಕೊಡಲಾಗಿದೆ.

ಈ ಉಪಾಯಕ್ಕೆ 'ಕಾಯಕ' ಪದ್ಧತಿಯೆಂದು ಕರೆಯುತ್ತಾರೆ. ವಿರಡನೇ ಪ್ರಯೋಗದಲ್ಲಿ ಬರುವ 'ಕಾಯಕ' ಶಬ್ದದ ಅರ್ಥವನ್ನು ಇಂದಿನ ಮನ್ವಂತರಕ್ಕೆ ಹೋಲಿಸಿದರೆ 'ಸತ್ಯಾಗ್ರಹ'ವೆಂದಾಗುತ್ತದೆ. ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ 'ಸತ್ಯಾಗ್ರಹ'ವನ್ನು ಹೂಡಿ, ಅದನ್ನು ತಡೆಯುವುದು ಎಂಬ ಅರ್ಥವನ್ನು ಹೇಳಬಹುದು. ಗಾಂಧೀಜಿಯವರು 'ಸತ್ಯಾಗ್ರಹ' ಶಬ್ದಕ್ಕೆ ಕೊಟ್ಟ ಸೂಕ್ಷ್ಮಾರ್ಥವನ್ನು ಭಾರತೀಯ ಪ್ರಾಚೀನ ವಾಙ್ಮಯದಲ್ಲಿ ಕಾಣುವುದು ವಿರಳ. ಅಲ್ಲಿ ಕಂಡರೂ ಅದನ್ನು ಆಚಾರದಲ್ಲಿ, ಪ್ರಚಾರದಲ್ಲಿ ತಂದುದು ಇನ್ನೂ ಅಪರೂಪ. ಆದರೆ ಬಸವಾದಿ ಪ್ರಮಥರು 'ಕಾಯಕ' ಶಬ್ದಕ್ಕೆ ವಿಶೇಷಾರ್ಥವನ್ನು ತುಂಬಿ ಆಚಾರದಲ್ಲಿ ತಂದರು. ಆ ಕಾಯಕ ಪದ್ಧತಿಯು ಶತಶತಮಾನಗಳಿಂದ ಸಮಾಜವನ್ನು ತಿದ್ದಿ ತೀಡುತ್ತಾ ಬಂದಿದೆ. ಇಂದು ಅದಕ್ಕಿರುವ ಸೂಕ್ಷ್ಮಾರ್ಥವು ವಿಪರೀತಾರ್ಥಕ್ಕಿಟ್ಟುಕೊಂಡಿದೆ. ಆ ಮಾತು ಬೇರೆ. ಆದರೆ ಇಂದಿಗೂ ಒಂದಿಲ್ಲೊಂದು ಬಗೆಯಲ್ಲಿ 'ಕಾಯಕ' ಪದ್ಧತಿಯು ರೂಢಿಯಲ್ಲಿರುವುದನ್ನು ಸಮಾಜದಲ್ಲಿ ಕಾಣಬಹುದು. ಅದೇ ಒಂದು ಸಮಾಧಾನ. ಸಿಗುತ್ತಿರುವ ಈ ಅಲ್ಪ ಅವಶೇಷದಿಂದ ಆದರ ಇತಿಹಾಸವನ್ನು ಕಂಡುಹಿಡಿಯಬಹುದು; ಅರ್ಥವನ್ನು ಅರಿತುಕೊಳ್ಳಬಹುದು: ಪೂರ್ವಾಪರವನ್ನು ಗ್ರಹಿಸಬಹುದು.

ಭಾರತವು ಹಳ್ಳಿಗಳ ದೇಶ ತಾನೇ ? ಹಳ್ಳಿಗಳ ಉದ್ಧಾರವೇ ಭಾರತದ ಉದ್ಧಾರ. ಅದಕ್ಕಾಗಿ ಬಸವಣ್ಣನವರ ದೃಷ್ಟಿ ಹಳ್ಳಿಗರ ಉದ್ಧಾರದತ್ತ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಜನಸಾಮಾನ್ಯರ ಹಿತಾಸಕ್ತಿಯ ಪ್ರಯೋಗದ ಪ್ರಯೋಜನವನ್ನು ಚೆನ್ನಾಗಿ ಅರಿತುಕೊಳ್ಳಬೇಕಾದರೆ ಒಂದು ಚಿಕ್ಕ ಹಳ್ಳಿಯನ್ನೇ ಕೇಂದ್ರಸ್ಥಳವನ್ನಾಗಿ ಆಯ್ದುಕೊಳ್ಳಬೇಕು.

ಹಾಗೆ ಒಂದು ಹಳ್ಳಿಯನ್ನು ಆಯ್ದುಕೊಂಡೆವೆಂದು ಭಾವಿಸೋಣ. ಅಲ್ಲಿ ಬೆಳಗಿನ ನಾಲ್ಕು ಘಂಟೆಗೆ ಓಂಕಾರ ನಾದವನ್ನು ಕೇಳುತ್ತೇವೆ. ಈ ಘಂಟೆಯ ನಾದವನ್ನು ಮಾಡುವವ ಒಬ್ಬ ಜಂಗಮ ಮೂರ್ತಿ. ದಿನಾಲು ನಾಲ್ಕು ಘಂಟೆಗೆ ಎದ್ದು ಘಂಟೆ ಬಾರಿಸಿ, ಜನರನ್ನು ಎಚ್ಚರಿಸುವುದೇ ಅವನ ನಿತ್ಯದ 'ಕಾಯಕ'. ಪ್ರತಿಯೊಬ್ಬ ಹಳ್ಳಿಗರು ಸೂರ್ಯೋದಯಕ್ಕೆ ಮುಂಚೆ ಏಳಬೇಕೆಂಬುದೇ ಈ ಘಂಟಾನಿನಾದದ ಮಹೋದ್ದೇಶ.

ಹೀಗೆ ನಸುಕಿನಲ್ಲಿ ಎದ್ದು ಮುಖಮಾರ್ಜನ, ಸ್ನಾನಪೂಜಾದಿಗಳನ್ನು ತೀರಿಸಿಕೊಳ್ಳುವುದನ್ನು ರೂಢಿಸುವುದಕ್ಕೆ ಈ ಗಂಟೆ ನಾಂದಿಯಾಗುತ್ತದೆ. ದಿನನಿತ್ಯದ ಕಾರ್ಯಕ್ರಮಗಳನ್ನು ಪೂರೈಸಿಕೊಂಡು ತಮ್ಮ ತಮ್ಮ ದುಡಿಮೆಗೆ ಪ್ರತಿಯೊಬ್ಬ ಹಳ್ಳಿಗನು ತೊಡಗಬೇಕೆಂಬುದೇ ಇದರ ಮುಖ್ಯ ಉದ್ದೇಶ. ಆದರೆ ಸಮಾಜದಲ್ಲಿ ಆಲಸಿಗಳಿಗೇನೂ ಕೊರತೆಯಿರುವುದಿಲ್ಲ. ಇಂತಹವರಿಗೆ ಓಣಿಯಲ್ಲೇ ಏಕೆ? ಕಿವಿಯಲ್ಲಿ ಗಂಟೆ ಬಾರಿಸಿದರೂ ಎಚ್ಚರವಾಗುವುದಿಲ್ಲ. ಎಚ್ಚರವಾದರೂ ಹಾಸಿಗೆ ಬಿಟ್ಟು ಏಳುವುದಿಲ್ಲ. ಇಂತಹವರನ್ನು ಏಳಿಸುವ ಗೋಜಿಗೆ ಹೋಗುವುದಿಲ್ಲ, ಆ 'ಗಂಟೆ ಕಾಯಕ'ದ ಅಯ್ಯನವರು. ಸೂರ್ಯೋದಯಕ್ಕೆ ಸರಿಯಾಗಿ 'ಜಂಗಿನ ಕಾಯಕ'ದ ಅಯ್ಯನವರು ಮಠದಿಂದ ಹೊರಬೀಳುತ್ತಾರೆ. ಇವರು ತಮ್ಮ ನಿತ್ಯಕರ್ಮ, ಸ್ನಾನ, ಇಷ್ಟಲಿಂಗಪೂಜೆ ಇತ್ಯಾದಿಗಳನ್ನು ಪೂರೈಸಿಕೊಂಡು ಹೊರಟಿರುತ್ತಾರೆ. ಬಲದ ಕೈಯಲ್ಲಿ ಬೆತ್ತ (ಬಡಿಗೆ) ಹಿಡಿದು ಎಡದ ಕೈಗೆ ಜೋಳಿಗೆ ಹಾಕಿ ಜಂಗು (ಜಣ ಜಣ ನಿನಾದ ಮಾಡುವ ಗಂಟೆ) ಕಟ್ಟಿಕೊಂಡಿರುತ್ತಾರೆ. ಹಣೆಯ ಮೇಲೆ ಭಸ್ಮ, ಎದೆಯ ಮೇಲೆ ಇಷ್ಟಲಿಂಗ, ಒಡೆದು ತೋರುತ್ತದೆ. ಬಾಯಲ್ಲಿ ಬಸವಾ ಬಸವಾ, ಎಂಬ ಮಂತ್ರ ಪಠಿಸುತ್ತಿರುತ್ತಾರೆ. ಇವರು ಹಳ್ಳಿಯ ಒಂದು ಮನೆಯಲ್ಲಿ 'ಕೋರಧಾನದಲ್ಲಿ ಭಿಕ್ಷಾ' ಎಂದು ಪ್ರವೇಶಿಸುತ್ತಾರೆ. ಅವರಿಗೆ ಆ ಭಕ್ತನ ಅಡಿಗೆಮನೆಯವರೆಗೂ ಹೋಗುವುದಕ್ಕೆ ಅಭ್ಯಂತರವಿಲ್ಲ. ಅವರು ಮನೆಯನ್ನು ಪ್ರವೇಶಿಸುವ ಉದ್ದೇಶ, ಮನೆಯ ಹುಡುಗರು, ಹೆಣ್ಣುಮಕ್ಕಳು, ಹಿರಿಯರು ಎಲ್ಲರೂ ಎದ್ದು ತಮ್ಮ ಸ್ನಾನಪೂಜಾದಿ ಕಾರ್ಯಗಳಲ್ಲಿ ತೊಡಗಿರುವರೋ ಅವನ್ನೆಲ್ಲವನ್ನೂ ಪೂರೈಸಿ ಕೆಲಸಕಾರ್ಯಗಳಿಗೆ ಹೋಗಿರುವರೋ ಎಂದು ಪರಿಶೀಲಿಸುವುದಾಗಿದೆ. ಇಲ್ಲವೆ ಇನ್ನೂ ಮುಸುಕು ಹಾಕಿಕೊಂಡು ಮನೆಯ ಮೂಲೆಯಲ್ಲಿ ನಿದ್ರಿಸುತ್ತಿರುವವರನ್ನು ಬೆತ್ತದಿಂದ ತಿವಿದು ಎಬ್ಬಿಸಿ ಬುದ್ಧಿ ಹೇಳುತ್ತಾರೆ. ಭಸ್ಮ ಧರಿಸಬೇಕು ; ಲಿಂಗವನ್ನು ಪೂಜಿಸಬೇಕು ; ಎಂದೆಲ್ಲ ಉಪದೇಶಿಸಿ ಆಶೀರ್ವದಿಸುತ್ತಾರೆ. ಅವರು ಪ್ರತಿದಿನವೂ ಪ್ರತಿಯೊಂದು ಮನೆಗೂ ಹೋಗಿ ಭಕ್ತರ ಚಲನವಲನಗಳನ್ನು ನಿರೀಕ್ಷಿಸುತ್ತಾರೆ; ಬುದ್ಧಿಯ ಮಾತನ್ನು ಹೇಳುತ್ತಾರೆ. ಅವರ ಬೆಳಗಿನ ಈ ಕಾಯಕಕ್ಕೆ ಪ್ರತಿಯೊಂದು ಮನೆಯವರೂ ಒಂದು

ಮುಷ್ಟಿ ಧಾನ್ಯವನ್ನು ಪ್ರತಿಫಲವಾಗಿ ನೀಡುತ್ತಾರೆ. ಇವರಿಗೆ 'ಜೋಳದ ಅಯ್ಯ'ನವರೆಂದೂ, 'ಜಂಗಿನ ಅಯ್ಯ'ನವರೆಂದೂ ಜನರು ರೂಢಿಯಲ್ಲಿ ಕರೆಯುತ್ತಾರೆ.

'ಜಂಗಿನ ಅಯ್ಯನವರು' ಹೋದ ಒಂದೆರಡು ತಾಸುಗಳಲ್ಲಿ ಮತ್ತೊಬ್ಬ ಅಯ್ಯನವರು ಬರುತ್ತಾರೆ. ಅವರಿಗೆ ಹಳ್ಳಿಗಳಲ್ಲಿ ಹಿಟ್ಟಿನ ಅಯ್ಯನವರೆಂದು ಕರೆಯುತ್ತಾರೆ. ಜಂಗಿನ ಅಯ್ಯನವರಂತೆ ಇವರಾದರೂ ಜೆತ್ತ ಹಿಡಿದು, ಜೋಳಿಗೆ ಹಾಕಿಕೊಂಡು ಜಂಗು ಕಟ್ಟಿಕೊಂಡೇ ಬರುತ್ತಾರೆ. ಇವರು ಹತ್ತು ಗಂಟೆಯ ಹೊತ್ತಿಗೆ ಬಂದು ಭಕ್ತರ ಮನೆಯನ್ನು ಪರೀಕ್ಷಿಸುತ್ತಾರೆ. ಭಕ್ತರೆಲ್ಲರೂ ದಿನನಿತ್ಯದ ಕಾರ್ಯಗಳಲ್ಲಿ ತೊಡಗಿರುವರೋ, ಇಲ್ಲವೋ ಎಂದು ನಿರೀಕ್ಷಿಸುತ್ತಾರೆ. ಆ ಹೊತ್ತಿಗೆ ಸಹ ಏಳದೇ ಮುಸುಕು ಹಾಕಿಕೊಂಡು ಮಲಗಿದ ಆಲಸಿಗಳನ್ನು ಎಬ್ಬಿಸುವುದು, ಅವರಿಗೆ ಬುದ್ಧಿ ಹೇಳಿ ಧರ್ಮದಂತೆ ನಡೆಯಲು ಉಪದೇಶಿಸುವುದು ಇತ್ಯಾದಿ ಅವರ ಕರ್ತವ್ಯ. ಅವರ ಈ 'ಕಾಯಕ'ಕ್ಕೆ ಅಥವಾ ಸೇವೆಗೆ ಪ್ರತಿಫಲವಾಗಿ ಮನೆಯ ಹೆಣ್ಣುಮಕ್ಕಳು ಅಥವಾ ಮಕ್ಕಳು ಒಂದು ಮುಷ್ಟಿ ಹಿಟ್ಟನ್ನು ನೀಡುತ್ತಾರೆ. ಯಾಕೆಂದರೆ ಅವರು ಬಂದುದು ಅಡಿಗೆ ಮಾಡುವ ಸಮಯ.

ಗಂಟೆಯ ಅಯ್ಯನವರ ಗಂಟೆಗೆ ಕಿವಿಗೊಡದ ಜೋಳದ ಅಥವಾ ಹಿಟ್ಟಿನ ಅಯ್ಯನವರಿಗೆ ಹೆದರದ ಧರ್ಮಲಂಡರು ಒಂದಿಲ್ಲೊಂದು ಮನೆಯಲ್ಲಿ ಕಾಣಸಿಗುತ್ತಾರೆ. ಅವರು ಸೇದುವುದು, ಕುಡಿಯುವುದು, ಕಳವು ಮಾಡುವುದು, ಸುಳ್ಳು ಹೇಳುವುದು, ವಂಚಿಸುವುದು, ಇವೇ ಮುಂತಾದ ದುರ್ಗುಣಗಳ ದಾಸರಾಗಿರುವರು. ಇಂತಹ ವ್ಯಸನಿಗಳನ್ನೂ ದುರಾಚಾರಿಗಳನ್ನೂ ದಾರಿಗೆ ತರಲು ಮೇಲೆ ಹೇಳಿದ ಮೂರು ವ್ಯಕ್ತಿಗಳು ಸಾಮೋಪಾಯಗಳಿಂದ ಪ್ರಯತ್ನಿಸುವರು. ಸಾಮೋಪಾಯಕ್ಕೆ ಬಗ್ಗದ ಅವರನ್ನು ಸತ್ಯಾಗ್ರಹದಿಂದ ಮನ ಒಲಿಸುವ ಪ್ರಯತ್ನ ಮುಂದುವರೆಯುತ್ತದೆ. ಈ ಪ್ರಯತ್ನಕ್ಕೆ ಕಾಯಕ ಪದ್ಧತಿ ಎಂದು ವಿಶೇಷಾರ್ಥದಲ್ಲಿ ಹೆಸರಿಸಲಾಗಿದೆ.

ಈ ಕಾಯಕದಲ್ಲಿ ಮೂರು ವಿಧಾನಗಳಿವೆ. ಒಂದೊಂದು ವಿಧಾನವನ್ನು ಅನುಸರಿಸುವವನಿಗ ಒಂದೊಂದು ಹೆಸರಿರುತ್ತದೆ. ಅವು ಒಂದಕ್ಕಿಂತ ಒಂದು ಉಗ್ರರೂಪ ಹೊಂದುತ್ತ ಹೋಗುತ್ತವೆ. ಅವು ಕ್ರಮವಾಗಿ ಇಂತಿವೆ :

(೧) ತೆಕ್ಕೆಯ ಕಾಯಕ

(೨) ಮುಳ್ಳಾವಿಗೆಯ ಕಾಯಕ

(೩) ಶಸ್ತ್ರದ ಕಾಯಕ

**೧. ತೆಕ್ಕೆಯ ಕಾಯಕ:** ಇವನು ಪ್ರಥಮಹಂತದ ಸತ್ಯಾಗ್ರಹಿ. ಅನ್ಯಾಯದ ವಿರುದ್ಧ. ಅನೀತಿವಂತರ ವಿರುದ್ಧ ಸತ್ಯಾಗ್ರಹ ಮಾಡುವುದೇ ಇವನ ಕಾಯಕ. ಇವನು ಊರೂರು ತಿರುಗಿ ಭಕ್ತರ ಕ್ಷೇಮಸಮಾಚಾರ ವಿಚಾರಿಸಿಕೊಳ್ಳುವನು. ಹಳ್ಳಿಗೆ ಬಂದಾಗ ಹಿಟ್ಟಿನ ಇಲ್ಲವೇ, ಜೋಳದ ಅಯ್ಯನವರ ಮಠದಲ್ಲಿಯೇ ಇವನ ವಾಸ್ತವ್ಯ. ತಮ್ಮೂರ ಭಕ್ತರಲ್ಲಿ ಯಾರ್ಯಾರು ಹೇಗೆ ಹೇಗೆ ಇರುವರೆಂಬುದರ ವಿವರಣೆಯನ್ನು ಈ ಅಯ್ಯನವರು ನೀಡುವರು. ಅದರಲ್ಲಿ ಧರ್ಮಮಾರ್ಗವನ್ನು ತ್ಯಜಿಸಿ ವಾಮಮಾರ್ಗವನ್ನು ಹಿಡಿದ ಲಿಂಗವಂತರ ಹೆಸರು, ಮನೆ, ಓಣಿ ಇತ್ಯಾದಿಗಳನ್ನು ಹೇಳುವರು. 'ತೆಕ್ಕೆಯ ಕಾಯಕ'ದ ಅಯ್ಯನವರು ಆ ಧರ್ಮಲಂಡನ ಮನೆಗೆ ಸೂರ್ಯೋದಯಕ್ಕೆ ಮೊದಲು ಹೋಗಿ ಬಾಗಿಲಲ್ಲಿ ನಿಲ್ಲುವನು. ಬಸವಣ್ಣನವರ ಹಾಗೂ ಇತರ ಶರಣರ ಹೆಸರುಗಳನ್ನು ಉಗ್ಗಡಿಸುತ್ತ ನಿಲ್ಲುವನು. ಆ ಮನೆಯ ಬಾಗಿಲು ತೆಗೆದೊಡನೆಯೇ ಒಳಗೆ ಪ್ರವೇಶಮಾಡಿ ಮಧ್ಯಭಾಗದಲ್ಲಿಯ ಮುಖ್ಯ ಕಂಬಕ್ಕೆ ಎರಡು ಕೈಗಳನ್ನು ತೆಕ್ಕೆ ಹಾಯ್ದು ನಿಲ್ಲುವನು. ಧರ್ಮಲಂಡನಿಗೆ 'ಬಸವಾದಿ ಶರಣರು ಸದ್ಬುದ್ಧಿಯನ್ನು ಈಯಲೆಂದೂ, ಆತನ ಮನಸ್ಸು ಪರಿವರ್ತನೆಯಾಗುವಂತೆ ಕರುಣಿಸಲೆಂದೂ ಬಾಯ್ದೆರೆಯಾಗಿ ಪ್ರಾರ್ಥಿಸುವನು. ಧರ್ಮಲಂಡನು ತನ್ನ ನಡವಳಿಕೆಯನ್ನು ತಿದ್ದಿಕೊಳ್ಳುವುದಾಗಿ ಸ್ವಯಂಪ್ರೇರಣೆಯಿಂದ ಬಂದು ಕ್ಷಮೆ ಕೇಳುವವರೆಗೆ 'ತೆಕ್ಕೆ ಕಾಯಕ'ದ ಅಯ್ಯನವರು ತಮ್ಮ ಕಂಬದಿಂದ ವಿಚಲಿತರಾಗುವಂತಿಲ್ಲ ; ಊಟ ಮಾಡುವಂತಿಲ್ಲ; ಸ್ನಾನ ಮಾಡುವಂತಿಲ್ಲ. ದುರ್ಮಾರ್ಗಿಯು ಸದಾಚಾರ ಸಂಪನ್ನನಾಗಿ ಬಾಳುವೆನೆಂದು' ಹೇಳಿ ಕ್ಷಮೆ ಕೇಳಲಿಕ್ಕೆ ಒಂದು ದಿನ ಹಿಡಿಯಬಹುದು ; ಒಂಬತ್ತು ದಿನ ಹಿಡಿಯಬಹುದು. ಅವನು ಮನೆಯ ಬಂಧು-ಬಳಗದ ಸಮಕ್ಷಮ ಕ್ಷಮೆ ಕೇಳಿದನೋ, ಆಗಲೇ 'ತೆಕ್ಕೆ ಕಾಯಕ'ದ ಮುಕ್ತಾಯ. ಅನಂತರ ಸ್ನಾನ, ಪೂಜೆ. ಪ್ರಸಾದ. ಕೊನೆಗೆ ಹರಸಿ ಮುಂದಿನ 'ವಾಮಾಚಾರಿಯ' ಮನೆಗೆ ಪ್ರಯಾಣ. ಕ್ಷಮೆಯನ್ನು ಕೇಳಲಿಲ್ಲವೋ, ಸ್ನಾನವಿಲ್ಲ ; ಪೂಜೆಯಿಲ್ಲ; ಪ್ರಸಾದವಿಲ್ಲ. ಪ್ರಾಣಹೋಗುವವರೆಗೂ 'ತೆಕ್ಕೆ ಕಾಯಕ' ದಲ್ಲಿ ನಿರತನಾಗಿರುವನು. 'ತೆಕ್ಕೆ ಕಾಯಕ'ದಿಂದ ಅಯ್ಯನವರ ಪ್ರಾಣ ಹೋದನಂತರವೇ ಮನ ಕರಗಿ ಧರ್ಮಮಾರ್ಗ ಹಿಡಿದ ತುಂಟರನೇಕರಿದ್ದರೂ ಆಶ್ಚರ್ಯವಿಲ್ಲ.

**೨. ಮುಳ್ಳಾವಿಗೆಯ ಕಾಯಕ:** ತೆಕ್ಕೆ ಕಾಯಕದವನಿಗಿಂತ ಹೆಚ್ಚು ಕಠೋರವಾದ ಸತ್ಯಾಗ್ರಹಿ ಇವನು. ಕಬ್ಬಿಣದ ಮೊಳೆಗಳಿರುವ ಕಟ್ಟಿಗೆಯ ಎರಡು ಪಾದರಕ್ಷೆಗಳನ್ನು ಹೆಗಲಲ್ಲಿ ಹೊತ್ತು, ಬಸವಾದಿ ಶರಣರನ್ನು ಸ್ಮರಿಸುತ್ತ ಭಕ್ತರ ಉದ್ಧಾರಕ್ಕಾಗಿ ಊರೂರು ಚಲಿಸುವನೀತ. ಇವನಾದರೂ ಪ್ರತಿಯೊಂದು ಹಳ್ಳಿಯಲ್ಲಿ ಹಿಟ್ಟಿನ. ಜೋಳದ ಅಯ್ಯಗಳ ಮಠದಲ್ಲಿಯೇ ಉಳಿದುಕೊಂಡು ಭಕ್ತರ ಕ್ಷೇಮಸಮಾಚಾರವನ್ನು ವಿಚಾರಿಸುವನು. ದುರಾಚಾರಿ. ದುರ್ವ್ಯಸನಿಗಳಾರಾದರೂ ಇದ್ದರೆ ಅವರನ್ನು ತನ್ನ ಸತ್ಯಾಗ್ರಹದ ಪ್ರಭಾವದಿಂದ ತಿದ್ದುವನು. 'ತೆಕ್ಕೆ ಕಾಯಕ'ದ ಅಯ್ಯನವರಲ್ಲಿ ತನ್ನ ಜೀವನವನ್ನು ತಿದ್ದಿಕೊಳ್ಳುವುದಾಗಿ ಕ್ಷಮೆ ಬೇಡಿದ ವ್ಯಕ್ತಿಯು ಪುನಃ ದುಶ್ಚಟಕ್ಕೆ ಇಳಿದಿರುವನೆಂದು ಭಾವಿಸೋಣ. ಯಾಕೆಂದರೆ ದುಶ್ಚಟಗಳಿಗೆ ಅಂಟಿಕೊಂಡ ದುರಾಚಾರಿಗಳು ಒಮ್ಮೆಲೆ ಅವುಗಳಿಂದ ಮುಕ್ತರಾಗುವುದು ಬಹುಕಠಿಣ. ಅಲ್ಲದೇ ವಂಚನೆ ಮೋಸಗಳ ಸಾಕಾರಮೂರ್ತಿಗಳೇ ಅವರಾಗಿರುತ್ತಾರೆ. ಸಮಾಜದಲ್ಲಿ ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅತೀ ಶೀಘ್ರದಲ್ಲಿಯೆ 'ತೆಕ್ಕೆಯ ಕಾಯಕ'ದ ಅಯ್ಯನವರಲ್ಲಿ ಕ್ಷಮೆ ಬೇಡುವುದುಂಟು. ಅವರು ತನ್ನ ಮನೆಯಲ್ಲಿ ಇರುವಷ್ಟು ಸಮಯ ದುಶ್ಚಟಗಳನ್ನು ಈಡಾಡಿದ ಪರಿಶುದ್ಧ ವ್ಯಕ್ತಿಯಂತೆ ನಟನೆ ಮಾಡುವರು. ಅಯ್ಯನವರು ದೂರ ಹೋದರೋ ಪುನಃ ತನ್ನ ದುರ್ಮಾರ್ಗವನ್ನು ಅವರು ಹಿಡಿಯುವರು. ಇಂಥ ಧರ್ಮಲಂಡರ ಮನೆಗೆಯೇ ಈ 'ಮುಳ್ಳಾವಿಗೆಯ' ಕಾಯಕದ ಅಯ್ಯನವರು ಬರುವರು.

ಸೂರ್ಯೋದಯಕ್ಕೆ ಮುಂಚೆ ಧರ್ಮಲಂಡನ ಮನೆಯ ಹೊಸ್ತಿಲದ ಹೊರಗಡೆ ತನ್ನ ಮುಳ್ಳಾವಿಗೆಗಳನ್ನು ಕಾಲಲ್ಲಿ ಹಾಕಿಕೊಂಡು ನಿಲ್ಲುವನು. ಬಸವಾದಿ ಪ್ರಮಥರ ಹೆಸರುಗಳನ್ನು ಕೂಗಿ ಆ ಮನೆಯ ಪಾಪಾತ್ಮನಿಗೆ ದೇವರು ಸದ್ಬುದ್ಧಿಯನ್ನು ಈಯಲೆಂದು ಗಟ್ಟಿಧ್ವನಿಯಲ್ಲಿ ಪ್ರಾರ್ಥಿಸುವನು.

ತೆಕ್ಕೆ ಕಾಯಕದವನ ಪ್ರಾರ್ಥನೆ ಮನೆಯ ಒಳಗಡೆಯವರಿಗೆ ಕೇಳಿಸಿದರೆ ಮುಳ್ಳಾವಿಗೆಯ ಕಾಯಕದವನು ಮಾಡುವ ಪ್ರಾರ್ಥನೆಯು ಓಣಿಯ ಜನರಿಗೆ ಕೇಳುವುದು. ಕೆಲವು ಹೊತ್ತು ಮುಳ್ಳಾವಿಗೆಯ ಮೇಲೆ ನಿಲ್ಲುವುದರಿಂದ ರಕ್ತ ಅಂಗಾಲಲ್ಲಿ ಜಿನುಗಹತ್ತುತ್ತದೆ. ಪಾಪ ಮಾಡುವವನೊಬ್ಬ. ಅವನ ಸಲುವಾಗಿ ಬಾಧೆಪಡುವವನು ಇನ್ನೊಬ್ಬ. ಪಾಪಿಯು ಪ್ರಾಯಶ್ಚಿತ್ತ ಹೊಂದುವವರೆಗೆ ದೈಹಿಕ ಸಂಕಷ್ಟಗಳನ್ನು ಪಡುವವರು ಈ ಕಾಯಕದಯ್ಯಗಳು. ತಪ್ಪು ಮಾಡುವವನಿಗೆ ಶಿಕ್ಷೆಯಾಗಬೇಕೆಂದು ಜಗತ್ತಿನ ಎಲ್ಲ ದೇಶಗಳ ಕಾನೂನುಗಳೂ ಘಂಟಾಘೋಷವಾಗಿ ಹೇಳುತ್ತವೆ. ಆದರೆ ತಪ್ಪಿತಸ್ಥನ ಸಲುವಾಗಿ ಮತ್ತೊಬ್ಬನು ಶಿಕ್ಷೆ ಅನುಭವಿಸುವದು ಯಾವ ಕಾಯಿದೆಗ್ರಂಥದಲ್ಲಿ ಹೇಳಿದೆ ? ಯಾವ, ಯಾವ. ತತ್ತ್ವಶಾಸ್ತ್ರದಲ್ಲಿ ವಿವರಿಸಿದೆ ? ಯಾವ ತರ್ಕಶಾಸ್ತ್ರದಲ್ಲಿ ಹೇಳಿದೆ ? ಇದಕ್ಕೆ ಉತ್ತರ ನೀಡುವುದು ಸುಲಭಸಾಧ್ಯವಲ್ಲ.

ಹೀಗೆ ಅಂಗಾಲಲ್ಲಿ ರಕ್ತವನ್ನು ಸೋರಿಸಿಕೊಳ್ಳುತ್ತ ಪಾಪಿಗೇ ಕ್ಷಮೆಯಾಗಬೇಕೆಂಬ ಆಶೆಯಿಂದ ದೇವರಲ್ಲಿ ಮೊರೆಯಿಡುತ್ತ ನಿಂದ ಮುಳ್ಳಾವಿಗೆಯ 'ಕಾಯಕ'ದವನನ್ನು ದೃಷ್ಟಿಸಿದ ಯಾರ ಹೃದಯವಾದರೂ ಕರಗಿ ನೀರಾಗುವುದರಲ್ಲಿ ಸಂಶಯವಿಲ್ಲ. ಓಣಿಯ ಹಿರಿಕಿರಿಯರ ಹೆಂಗಸರ ಗಮನ. 'ಕಾಯಕ'ದಯ್ಯನ ಕಡೆಗೆ ಓಲುತ್ತದೆ. ಎಲ್ಲರೂ ಅವನಿಗೆ ಸಹಾನುಭೂತಿ ತೋರಲಾರಂಭಿಸುತ್ತಾರೆ. ಹೀಗೆ ಸುತ್ತಲಿನ ಜನರ ಹೃದಯವನ್ನೇ ಗೆದ್ದ ಸತ್ಯಾಗ್ರಹಿಗೆ ಕ್ರಮೇಣ ಕಾರ್ಯಸಿದ್ಧಿಯ ಚಿಹ್ನೆ ತೋರಹತ್ತುತ್ತದೆ. ಎಲ್ಲರೂ ಸತ್ಯಾಗ್ರಹಿಯ ಬಗ್ಗೆ ಸಹಾನುಭೂತಿ ತೋರಿಸುತ್ತ, ಆ ಧರ್ಮಲಂಡನಾದ ಪಾಪಿಗೆ ಛೀ, ಥೂ. ಎನ್ನುವುದಕ್ಕೆ ಪ್ರಾರಂಭಿಸುತ್ತಾರೆ. ಇತ್ತ ಪಾಪಿಯು ಸಮಾಜದಲ್ಲಿ ಗೌರವಹೀನನಾಗುವುದಲ್ಲದೇ ತನ್ನ ಸಲುವಾಗಿ ಕಷ್ಟಪಡುತ್ತಿರುವ 'ಕಾಯಕ'ದಯ್ಯನ ಬಗೆಗೆ ಮರುಕವನ್ನು ತೋರಹತ್ತುವನು. ಕೊನೆಗೆ ಪಶ್ಚಾತ್ತಾಪ ಪಟ್ಟು ಕಾಯಕದ ಅಯ್ಯನವರ ಮೊರೆಹೊಕ್ಕು ಕ್ಷಮೆಯನ್ನು ಕೇಳದೇ ಗತ್ಯಂತರವಿಲ್ಲವಾಗುತ್ತದೆ.

ಆ ಓಣಿಯ ಗುರು ಹಿರಿಯರ ಸಾಕ್ಷಿಯಾಗಿ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವುದಾಗಿಯೂ ಶುದ್ಧ ಮಾರ್ಗದಲ್ಲಿ ನಿರತನಾಗಿ, ಬಾಳುವುದಾಗಿಯೂ ಮುಳ್ಳಾವಿಗೆಯ 'ಕಾಯಕ'ದವರ ಮುಂದೆ ಒಪ್ಪಿಕೊಳ್ಳುತ್ತಾನೆ. ಆಗ ಅಯ್ಯನವರು ಸಂತೋಷಭರಿತರಾಗಿ ತಮ್ಮ ಸತ್ಯಾಗ್ರಹವನ್ನು ಮುಕ್ತಾಯ ಮಾಡುತ್ತಾರೆ. ಪಾಪದಿಂದ ಪ್ರಾಯಶ್ಚಿತ್ತ ಹೊಂದಿ ಪುನೀತನಾದ ಆ ಭಕ್ತನ ಮನೆಯಲ್ಲಿ ಸ್ನಾನ ಪೂಜಾದಿಗಳನ್ನು ಪೂರೈಸಿ ಪ್ರಸಾದವನ್ನು ಸ್ವೀಕರಿಸಿ ತಮ್ಮ ಪ್ರಯಾಣವನ್ನು ಬೆಳೆಸುವರು. 'ತೆಕ್ಕೆ' ಕಾಯಕ ಮತ್ತು 'ಮುಳ್ಳಾವಿಗೆ' ಕಾಯಕ ಇವೆರಡೇ ಅಸ್ತ್ರಗಳಿಂದ. ಸಮಾಜದ ಸ್ವಾಸ್ಥ್ಯಕ್ಕೆ ಭಂಗ ತರುವ ೧೦೦ರಲ್ಲಿ ೯೯ರಷ್ಟು ಪಾಪಿಗಳನ್ನು ಸನ್ಮಾರ್ಗಕ್ಕೆ ತರುವುದು ಸಾಧ್ಯವಿದೆ. ಆದರೆ ಬಸವಣ್ಣನವರದು ೧೦೦ಕ್ಕೆ ೧೦೦ರಷ್ಟು ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದಾಗಿದೆ; ಸ್ವರ್ಗಸುಖವನ್ನೇ ಮರ್ತ್ಯಲೋಕದಲ್ಲಿ ಸ್ಥಾಪಿಸುವುದಾಗಿದೆ ; 'ದೇವಲೋಕಮರ್ತ್ಯಲೋಕ'ಗಳಲ್ಲಿಯ ವ್ಯತ್ಯಾಸವನ್ನು ತೆಗೆದುಹಾಕುವುದಾಗಿದೆ : ಇಹಲೋಕ

ವನ್ನೇ ದೇವಲೋಕವನ್ನಾಗಿ ಪರಿವರ್ತಿಸುವುದಾಗಿದೆ. ಈ ಮಹಿಮೆ ಸಾಮಾನ್ಯವಾದುದಲ್ಲ. ಸತ್ತನಂತರವೇ ಮಾನವನ ಪ್ರಾಣ ಕೈಲಾಸಕ್ಕೊ ಪಾತಾಳಕ್ಕೊ ಹೋಗುವುದೆಂಬ ನಂಬಿಕೆಯು ಬಲವಾಗಿರುವ ಭಾರತೀಯರಲ್ಲಿ (ಹಿಂದೂಗಳಲ್ಲಿ) ಭೂಲೋಕವನ್ನೇ ಅಮರಲೋಕವನ್ನಾಗಿ ಪರಿವರ್ತಿಸುವ ಬಸವಣ್ಣನ ಕಾರ್ಯ ಸಣ್ಣದಲ್ಲ. ಅತ್ಯದ್ಭುತ! ಅದಕ್ಕಾಗಿ ಪ್ರಾಣವನ್ನು ಪಣಕ್ಕಿಟ್ಟು ಭೂಮಿಯ ಮೇಲೆ ದೇವರ ಸಾಮ್ರಾಜ್ಯವನ್ನು ನೆಲೆಗೊಳಿಸುವ ಮಹಾಸಾಹಸ ಬಸವಣ್ಣನದು. ಆದುದರಿಂದ ೧೦೦ಕ್ಕೆ ೯೯ರಷ್ಟು ಸಮಾಜ ಸುಧಾರಿಸಿದರೆ ಅವನಿಗೆ ಸಮಾಧಾನವಿಲ್ಲ. ಆ ಕೊನೆಯ ಒಂದಂಶದ ಜನರೂ ಒಳ್ಳೆಯವರಾಗಬೇಕೆಂಬುದೇ ಅವನ ಉದ್ದೇಶ.

ಮೇಲಿನ ಎರಡು ಬಗೆಯ 'ಕಾಯಕ'ಗಳಿಗೂ ಮೀರಿದ ಪಾಪಿಗಳು ವಿರಳವಾಗಿ ಸಿಗುತ್ತಾರೆ. ಆ ಎರಡೂ ಕಾಯಕಗಳಿಗೆ ಮಣಿಸಿ ನಿಂತ ಒಬ್ಬ ಪಾಪಿ ಇರುವನೆಂದು ಭಾವಿಸೋಣ. ಇವನು ಭಯಂಕರ ಪಾಪಿಯೇ ಸರಿ. ಪಾಪ ಕಾರ್ಯಗಳಿಂದ ಅವನ ಹೃದಯ ಕಪ್ಪಾಗಿ ಹೋಗಿರುತ್ತದೆ. ನ್ಯಾಯ ಅನ್ಯಾಯಗಳ ವಿವೇಕವನ್ನು ಆತ ಕಳೆದುಕೊಂಡಿರುತ್ತಾನೆ. ಪಾಪಕಾರ್ಯಗಳೇ ಅವನ ನಿತ್ಯಕರ್ಮಗಳಾಗಿರುತ್ತವೆ. ಹೀಗಾಗಿ ಅವನೊಬ್ಬ ಸಮಾಜಕಂಟಕವ್ಯಕ್ತಿಯಾಗಿ ಜೀವಿಸಿರುತ್ತಾನೆ. ಇಂತಹ ಕ್ರೂರಾತ್ಮನನ್ನು ದಾರಿಗೆ ತರುವುದೆಂತು ? ಸನ್ಮಾರ್ಗಕ್ಕೆ ಹಚ್ಚುವುದೆಂತು ?

ಮೂರನೆಯ ಮಟ್ಟದ ಕಾಯಕ ಪದ್ಧತಿಯನ್ನು ಬಸವಣ್ಣ ಜಾರಿಯಲ್ಲಿ ತಂದಿದ್ದಾನೆ. ಇದಕ್ಕೆ 'ಶಸ್ತ್ರದ ಕಾಯಕ' ವೆಂದು ಹೆಸರು. ಈ ಕಾಯಕವನ್ನು ಕೈಕೊಂಡ ಅನೇಕ ಅಯ್ಯನವರನ್ನು ಆಗಾಗ ಕನ್ನಡನಾಡಿನ ಹಳ್ಳಿಪಟ್ಟಣಗಳಲ್ಲಿ ಇನ್ನೂ ಕಾಣುತ್ತೇವೆ. ಅವರು ಕಾವಿಧಾರಿಗಳಾಗಿರುವರು. ಒಂದು ಕೈಯಲ್ಲಿ ಜಾಗಟೆ, ಮತ್ತೊಂದು ಕೈಯಲ್ಲಿ ತ್ರಿಶೂಲ ವನ್ನು ಧರಿಸಿಕೊಂಡಿರುವರು. ವೀರಗಚ್ಚೆಯನ್ನು ಹಾಕಿಕೊಂಡು ಊರ ಮಧ್ಯದಲ್ಲಿ ಪಟ್ಟಣದ, ನಾಲ್ಕಾರು ದಾರಿಗಳು ಕೂಡುವ ಕೂಟದಲ್ಲಿ ನಿಂತಿರುವ ದೃಶ್ಯ ಇಂದಿಗೂ ಹಾದಿಹೋಕರ ಗಮನ ಸೆಳೆಯುತ್ತಿರುತ್ತದೆ. ಶಸ್ತ್ರದ ಕಾಯಕದ ಅಯ್ಯನವರಲ್ಲಿ ಮುಖ್ಯವಾಗಿ ಎರಡು ಕುಡುಗೋಲುಗಳನ್ನು ಹೋಲುವ ಆಯುಧಗಳಿರುತ್ತವೆ. ಅವೆರಡಕ್ಕೆ ಒಂದು ಸೂತ್ರವಿರುತ್ತದೆ. ಸೂತ್ರಕ್ಕೊಂದು ಸರಿಕಿನ ಗಂಟು ಇದ್ದು ಹಿಂದೆ ಮುಂದೆ ಸರಿಸಾಡಲು ಬರುವಂತೆ ವ್ಯವಸ್ಥೆ ಇರುತ್ತದೆ. ಆ ದಾರ ಅಥವಾ ಸೂತ್ರ ೬೩ ಮಾರು ಅಳತೆಯದಿರುತ್ತದೆ. ಅದು ಅರವತ್ತುಮೂರು ಶರಣರ ಸ್ಮಾರಕಚಿನ್ಹೆಯಾಗಿರುತ್ತದೆ.

ಈ ಕಾಯಕದ ಅಯ್ಯನವರು ಸಮಾಜಕಂಟಕನಾಗಿ ಮೊದಲಿನ ಎರಡು 'ಕಾಯಕ'ಗಳಿಗೆ ಮಣಿಯದೆ ಜೀವಿಸಿರುವ ವ್ಯಕ್ತಿಯ ಮನೆಗೆ ಹೋಗುವರು. ಶಸ್ತ್ರಗಳಿಗೆ ಕಟ್ಟಿದ ದಾರದ ಇನ್ನೊಂದು ತುದಿಯನ್ನು ಮೊಳೆಯಿಂದ ಬಾಗಿಲಿಗೆ ತಗಲಿಸುವರು. ಕೊರಳಿಗೆ ಶಸ್ತ್ರಗಳನ್ನು ಹಾಕಿಕೊಂಡು ೬೩ ಮಾರು ದೂರದ ದಾರಿಗೆ ಹೋಗಿ ಬದಿಯಲ್ಲಿ ನಿಂತು ಆ ಅಧರ್ಮಿಯ ಅವಗುಣಗಳನ್ನು ಎತ್ತಿ ಹೇಳುವರು. ಅವನ ಕ್ಷೇಮಕ್ಕಾಗಿ ಪ್ರಾರ್ಥಿಸುವರು. ಬಸವಾದಿ ಶರಣರನ್ನೂ ೬೩ ಪುರಾತನರನ್ನೂ ಸ್ಮರಿಸುವರು. ಅವರು ಉಘ್ಘಡಿಸುವುದನ್ನು ಸಕಲರೂ ಕೇಳುವರು. ಊರ ತುಂಬೆಲ್ಲ ಸುದ್ದಿ ಹರಡುವುದು. ಸುತ್ತಮುತ್ತಲಿನ ಹಳ್ಳಿಗಳಿಗೂ ಇದು ಪಸರಿಸುವದು. ಐದು, ಏಳು, ಒಂಭತ್ತು, ಇಲ್ಲವೆ ಹನ್ನೊಂದು ದಿನಗಳೊಳಗಾಗಿ ಅಧರ್ಮಿಯು ಊರಿನ ಸಮಸ್ತ ಜನತೆಯ ಸಮಕ್ಷಮದಲ್ಲಿ ಪವಿತ್ರ ಬಾಳನ್ನು ತದನಂತರ ಅವಲಂಬಿಸುವುದಾಗಿ ಪ್ರತಿಜ್ಞೆ ಮಾಡಿ ಕ್ಷಮೆ ಕೇಳಬೇಕು. ಇಲ್ಲವಾದರೆ ಆ ಪಾಪಾತ್ಮನ ಸಲುವಾಗಿ ತನ್ನ ಶಸ್ತ್ರಗಳಿಂದ ಶಿರಚ್ಛೇದನ ಮಾಡಿಕೊಂಡು ಪ್ರಾಣಾರ್ಪಣ ಮಾಡುವುದಾಗಿ ಅಯ್ಯನವರು ಶಪಥ ಮಾಡುವರು. ಆ ಭೀಕರ ಪ್ರಸಂಗವನ್ನು ನೋಡಲು ಸುತ್ತಮುತ್ತಲಿನ ಹಳ್ಳಿಗರೂ ಸೇರುವುದರಲ್ಲೇನು ಆಶ್ಚರ್ಯ? ಪಾಪಿಷ್ಠನು ಪರಿಶುದ್ಧಹೃದಯದವನಾಗಿ ಸಾರ್ವಜನಿಕರೆದುರು ಕ್ಷಮೆ ಕೇಳದಿದ್ದರೆ ಅಯ್ಯನವರು ತಮ್ಮ ಶಸ್ತ್ರಗಳಿಂದ ತಮ್ಮ ಕೊರಳನ್ನು ಕತ್ತರಿಸಿಕೊಂಡು ಬಿಡುವುದರಲ್ಲಿ ಅನುಮಾನವಿಲ್ಲ. ಒಬ್ಬನ ತಪ್ಪಿಗೆ ಮತ್ತೊಬ್ಬನು ಪ್ರಾಣಬಿಡುವುದೆಂದರೆ ಅದೊಂದು ಅಸಾಮಾನ್ಯ ಘಟನೆಯೇ ಸರಿ. ಸಮಾಜೋನ್ನತಿಯಲ್ಲಿ ಆಸಕ್ತಿಯುಳ್ಳ ಸತ್ಯಾಗ್ರಹಿಯು ತ್ಯಾಗ, ಬಲಿದಾನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಕೆಟ್ಟದ್ದನ್ನು ಸತ್ಯಾಗ್ರಹದಿಂದ ನಿಗ್ರಹಿಸುವ ಈ 'ಕಾಯಕ' ಪದ್ಧತಿಯು ಬುದ್ಧಿಗೆ ಬಹು ವಿಚಿತ್ರವಾಗಿ ತೋರುತ್ತದೆ. ಆದರೆ ಹೃದಯಕ್ಕೆ ಇದು ಸಹಜಗುಣವಾಗಿದೆ. ದುಷ್ಟಶಕ್ತಿಯನ್ನು ಮರ್ದನ ಮಾಡಿ, ದೈವೀರಾಜ್ಯವನ್ನು ಪ್ರತಿಷ್ಠಾಪನೆ ಮಾಡಬೇಕಾದರೆ ಪ್ರಾಣತ್ಯಾಗಕ್ಕೂ ಸಿದ್ಧರಾಗಬೇಕಾಗುತ್ತದೆ. ಹೀಗೆ ಸಕಲ ಜನಸ್ತೋಮದ ಕಣ್ಣೆದುರಿನಲ್ಲಿ 'ಶಸ್ತ್ರದ ಕಾಯಕ'ದ ಅಯ್ಯನವರು ಸಾವನ್ನಪ್ಪಿದರೆ ಜನರಲ್ಲಿ ಅದ್ಭುತ ಕ್ಷೋಭೆ ಉಂಟಾಗುತ್ತದೆ. ಆ ಪಾಪಿಷ್ಠನು ಈ ಕ್ಷೋಭೆಗೆ ಒಳಗಾಗಿ ಸಮಾಜದಿಂದ ಬಹಿಷ್ಕೃತ ವ್ಯಕ್ತಿಯಾಗುವನು. ಸಮಾಜ ಜೀವಿಯಾದ ಅವನು ಏಕಾಂಗಿಯಾಗಿ ಬಾಳುವುದೇ ತೀರ ಕಠಿಣವಾಗುವುದು. ಒಬ್ಬಂಟಿಯಾಗಿ ಜೀವಿಸುವುದೆಂದರೆ

ಕಠೋರ ಶಿಕ್ಷೆಯನ್ನು ಅನುಭವಿಸಿದಂತೆಯೇ ಸರಿ. ಅದು ನರಕಯಾತನೆಗಿಂತಲೂ ಭೀಕರವಾಗಿ ಪರಿಣಮಿಸುತ್ತದೆ. ಹೀಗಾಗಿ ಅವನು ಸದಾಚಾರಕ್ಕೆ ಶರಣುಹೋಗಬೇಕಾಗುತ್ತದೆ. ಹೀಗೆ ಪ್ರೀತಿ, ಸ್ವಾರ್ಥತ್ಯಾಗ. ಸದಾಚಾರ,ಸತ್ಪ್ರವೃತ್ತಿಗಳ ತಳಹದಿಯ ಮೇಲೆ ನಿಂತ ಬಸವಣ್ಣನ ಧರ್ಮ, ಕಳೆದ ೮೦೦ ವರ್ಷಗಳಲ್ಲಿ ಉಳಿದುಬಂದಿದೆ.

ಇಂದಿನ ಪೋಲೀಸ್ ಖಾತೆಯಲ್ಲಿಯ ಹವಲ್ದಾರ, ಸಬ್ ಇನ್‌ಸ್ಪೆಕ್ಟರ್, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮುಂತಾದ ಅರಮನೆಯ ಅಧಿಕಾರಿಗಳಿಗೆ ಗುರುಮನೆಯ ಗಂಟೆಯ, ಜೋಳದ, ಹಿಟ್ಟಿನ, ತೆಕ್ಕೆಯ, ಮುಳ್ಳಾವಿಗೆಯ, ಶಸ್ತ್ರದ ಕಾಯಕಗಳ ಅಯ್ಯಗಳನ್ನು ಹೋಲಿಸಬಹುದು. ಒಂದು ಬುದ್ಧಿಯ ಆಧಾರದಮೇಲೆ, ಮುಯ್ಯಿಗೆ ಮುಯ್ಯಿ ಎಂಬರ್ಥದಲ್ಲಿ ಸಮಾಜಸುಧಾರಣೆಗೆ ಮುಂದಾದರೆ. ಮತ್ತೊಂದು ಹೃದಯದ ತಳಹದಿಯ ಮೇಲೆ ನಿಂತಿದೆಯಲ್ಲದೆ "ನಿಮ್ಮ ವೈರಿಗಳನ್ನೂ ಪ್ರೀತಿಸಿರಿ" ಎಂಬರ್ಥದಲ್ಲಿ ಸಮಾಜಸುಧಾರಣೆಗೆ ತೊಡಗಿದೆ. ದಂಡನೆಗೆ ಹೆದರಿ ಪಾಪಿಯು ಕೆಟ್ಟ ಕೆಲಸ ಮಾಡುವುದನ್ನು ತಾತ್ಪೂರ್ವಿಕವಾಗಿ ನಿಲ್ಲಿಸಬಹುದು. ಮಾನಸಾಂತರ ಹೊಂದಿ ಹೃದಯ ಪರಿವರ್ತನೆಗೊಂಡು ಪಾಪಿಯು ಸ್ವಯಂ ಸ್ಫೂರ್ತಿಯಿಂದ ಸತ್ಕಾರ್ಯಗಳಲ್ಲಿ ತೊಡಗುವನು. ಪವಿತ್ರವಾದ ಬಾಳನ್ನು ಅವಲಂಬಿಸಿ ಸುಸಂಸ್ಕೃತನಾಗಿ ಬಾಳುವನು. ಸರಕಾರದ ದಂಡನೆಯ ಅವಶ್ಯಕತೆ ಅವನಿಗೆ ಬೀಳುವುದಿಲ್ಲ.

'ಕಾಯಕ' ಪದ್ಧತಿಯಲ್ಲಿ ಅಡಗಿದ ಈ ಸೂಕ್ಷ್ಮಾರ್ಥವನ್ನು ಕ್ರೈಸ್ತಧರ್ಮದಲ್ಲಿ ಸ್ಪಷ್ಟವಾಗಿ ಅರಿಯಬಹುದು. ಕ್ರಿಸ್ತನ ಮರಣದಲ್ಲಿ ಅದು ಸ್ಫುಟವಾಗಿ ತೋರುತ್ತದೆ. ಕ್ರೈಸ್ತಧರ್ಮದ ಇತಿಹಾಸವನ್ನು ಅವಲೋಕಿಸಿದರೆ ಪಾಪಿಗಳ ಸಲುವಾಗಿ ಪ್ರಾಣತೆತ್ತ ಅಗಣಿತ ಕ್ರಿಸ್ತಭಕ್ತರ ಚರಿತ್ರೆಗಳು ಹೃದ್ಗೋಚರವಾಗುತ್ತವೆ. ಪಾಪಿಯ ಉದ್ಧಾರಕ್ಕಾಗಿ ಸ್ವಾರ್ಥತ್ಯಾಗ ಮಾಡುವ ಈ ತತ್ತ್ವ ಕ್ರೈಸ್ತಧರ್ಮ ಮತ್ತು ಲಿಂಗಾಯತ ಧರ್ಮಗಳಲ್ಲಿ ಮಾತ್ರ ತೋರುತ್ತದೆ. ಆದುದರಿಂದ ಯೇಸುಕ್ರಿಸ್ತ ಹಾಗೂ ಬಸವಣ್ಣ ಈ ಈರ್ವರು ವ್ಯಕ್ತಿಗಳು ನನ್ನ ಅಚ್ಚುಮೆಚ್ಚಿನವರಾಗಿರುವರು.

ದುರ್ದೈವದಿಂದ 'ಕಾಯಕ' ಪದ್ಧತಿಯ ನಿಜವಾದ ಅರ್ಥವು ಈಗ ಮರೆಮಾಚಿಹೋಗಿದೆ. ಮುಳ್ಳಾವಿಗೆ ಕಾಯಕದವರು, ಶಸ್ತ್ರದ ಕಾಯಕದವರು ಕರ್ನಾಟಕದ ಹಳ್ಳಿ ಪಟ್ಟಣಗಳಲ್ಲಿ ಆಗಾಗ ಕಾಣಸಿಗುತ್ತಾರೆ. ಆದರೆ ಅವರು ತಮ್ಮ ಹೊಟ್ಟೆಯಪಾಡಿಗಾಗಿ ಸ್ವಾರ್ಥ ದೃಷ್ಟಿಯನ್ನಿಟ್ಟುಕೊಂಡು ಈ 'ಕಾಯಕ'ಗಳನ್ನು ಅವಲಂಬಿಸಿರುವಂತೆ ತೋರುತ್ತದೆ. ನಮ್ಮ ನಾಡಿನ ಲಿಂಗಾಯತ ಮಠಾಧೀಶ್ವರರು ಪುನಃ ನಿಜಾರ್ಥದಲ್ಲಿ ಈ 'ಕಾಯಕ' ಪದ್ಧತಿಗಳನ್ನು ರೂಢಿಯಲ್ಲಿ ತಂದರೆ ನಾಡಿಗೆ. ದೇಶಕ್ಕೆ ಅತ್ಯಂತ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

---

ನೂಱನೋದಿ ನೂಱ ಕೇಳಿದಡೇನು
ಆಸೆ ಹಱಿಯದು, ರೋಷ ಬಿಡದು,
ಮಜ್ಜನಕ್ಕೆಱೆದು ಫಲವೇನು ?
ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ

ಬಸವಣ್ಣ.

# ಶಿವಯೋಗ

ಡಾ. ನಿಜಲಿಂಗಮ್ಮ ಕೊಪ್ಪಳ

ಭಾರತೀಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಅತ್ಯಂತ ಉಜ್ವಲ ಹಾಗೂ ಊರ್ಜಿತವಾದ ಯೋಗಶಾಸ್ತ್ರದ ಪರಂಪರೆ ಬಹು ಪುರಾತನಕಾಲದಿಂದ ಬೆಳೆದುಬಂದಿದೆ. ಭಾರತೀಯ ದರ್ಶನಗಳೆಲ್ಲ ತತ್ತ್ವಸಾಕ್ಷಾತ್ಕಾರಕ್ಕೆ ತಮ್ಮದೇ ಆದ ಸಾಧನ ಮಾರ್ಗವನ್ನು ಅನುಸರಿಸಿವೆ. ಯೋಗದರ್ಶನದ ಬಗೆಗೆ ಇಂದಿಗೂ ಲೋಕಪ್ರಿಯತೆ ಮತ್ತು ಹಿರಿಮೆ-ಗರಿಮೆಗಳು ಕಂಡುಬರುತ್ತಿವೆ.

ಮಹರ್ಷಿ ಪತಂಜಲಿ 'ಯೋಗದರ್ಶನ'ದ ಮೂಲಪುರುಷನೆಂದು ವಿಖ್ಯಾತನಾಗಿದ್ದಾನೆ. ಆದರೆ ಯೋಗದರ್ಶನದ ರೂಪರೇಷೆಗಳು ಪತಂಜಲಿಗಿಂತಲೂ ಪೂರ್ವದಲ್ಲಿದ್ದವೆಂದು ತಿಳಿದುಬರುತ್ತದೆ. ಪರಂಪರಾಗತ ತಿಳಿವಳಿಕೆಯಂತೆ ಯೋಗದರ್ಶನದ ಆದ್ಯ ಪ್ರವರ್ತಕ ಹಿರಣ್ಯಗರ್ಭನೆಂದು ಪ್ರತೀತಿ.[1] ಅಂತೆಯೇ ಪತಂಜಲಿಯು ಶಾಸ್ತ್ರೀಯವಾಗಿ ನಿಯೋಜಿಸಿದ ತನ್ನ ಯೋಗದರ್ಶನವನ್ನು 'ಯೋಗಾನುಶಾಸನ'ವೆಂದು ಕರೆದುದು ಔಚಿತ್ಯಪೂರ್ಣವಾಗಿದೆ. ಹಿರಣ್ಯಗರ್ಭ, ಪತಂಜಲಿ— ಮೊದಲಾದ ಋಷಿಗಳು ಶಿವೋಪಾಸಕರು. ಇದರಿಂದ ಪ್ರಾಚೀನಯುಗದಲ್ಲಿ ಯೋಗಶಾಸ್ತ್ರವು ಶೈವಧರ್ಮದ ಪರಿಸರದಲ್ಲಿ ರೂಪುಗೊಂಡು ಮಹಾವೃಕ್ಷವಾಗಿ ಬೆಳೆದುನಿಂತಿದೆ. ಶೈವಾಗಮ, ಪುರಾಣೋಪನಿಷತ್ತುಗಳಲ್ಲಿ ಮತ್ತು ಶಾಕ್ತ ಪಾಂಚರಾತ್ರಾಗಮಗಳಲ್ಲಿಯೂ ಯೋಗದ ಅಮೂಲ್ಯ ತತ್ತ್ವಗಳ ವಿವೇಚನೆ ಉಕ್ತವಾಗಿದೆ. ಭಗವದ್ಗೀತೆಯೂ ಯೋಗಪದಕ್ಕೆ ವ್ಯಾಪಕವಾದ ಅರ್ಥವನ್ನು ಕಲ್ಪಿಸಿ ಕರ್ಮಯೋಗ, ಭಕ್ತಿಯೋಗ,ಜ್ಞಾನಯೋಗಗಳ ತ್ರಿವೇಣೀ ಸಂಗಮವನ್ನು ಚಿತ್ರಿಸಿದೆ. ಈ ಸಾಹಿತ್ಯಕ್ಷೇತ್ರಕ್ಕಿಂತಲೂ ಪೂರ್ವದಲ್ಲಿಯೇ, ಪ್ರಾಗೈತಿಹಾಸಿಕ ಭಾರತೀಯ ಸಂಸ್ಕೃತಿಗೆ ತವರೂರೆನಿಸಿದ ಮೊಹೆಂಜೋದಾರೋ ಹರಪ್ಪಾಗಳ ಅಗೆತಗಳಲ್ಲಿ ಶೈವದರ್ಶನದ ಮೂಲರೇಖೆಗಳು ಕಂಡು ಬರುತ್ತವೆ. ಇವುಗಳಲ್ಲಿ ಬಗೆಬಗೆಯ ಆಕಾರದ ಲಿಂಗಗಳೂ[2], ಪದ್ಮಾಸನದಲ್ಲಿ ಶಿವನಂತೆ ಧ್ಯಾನಮಗ್ನನಾದ ಮಹಾಯೋಗಿಯ ಮೂರ್ತಿಗಳೂ[3] ದೊರೆತಿವೆ.

ಶೈವಧರ್ಮದ ಆಧಾರಗ್ರಂಥಗಳಾದ ಶಿವಾಗಮಗಳ ನಾಲ್ಕು ಪಾದಗಳಲ್ಲಿ ಯೋಗಪಾದವೂ ಬರುತ್ತದೆ. ಅಲ್ಲಿ ಸಾಧಕನ ಆತ್ಯಂತಿಕಸ್ಥಿತಿ ಪ್ರತಿಪಾದಿತವಾಗಿದೆ. ಅಲ್ಲದೆ ಜ್ಞಾನ ಹಾಗೂ ಯೋಗಗಳ ಪರಸ್ಪರ ಸಂಬಂಧವನ್ನೂ ಯೋಗದ ಮಹತ್ತ್ವವನ್ನೂ ನಿರೂಪಿಸಲಾಗಿದೆ.[4] ಯೋಗದ ಬಗೆಗೆ ಶಾಸ್ತ್ರೀಯವಾದ ಪ್ರಜ್ಞೆ ಜಾಗೃತವಾಗಿ ಅದೊಂದು ಪ್ರತ್ಯೇಕ ದರ್ಶನವೆಂದು ಪರಿಗಣಿತವಾದ ಮೇಲೆ ಮಂತ್ರಯೋಗ, ಹಠಯೋಗ, ಲಯಯೋಗ, ರಾಜಯೋಗ ಎಂಬ ಸೂಕ್ಷ್ಮಪ್ರಭೇದಗಳು ತಲೆದೋರುವುವು. ಶಿವಾಗಮ, ಶಿವಸಂಹಿತೆ ಮೊದಲಾದ ಶೈವಪರ ಗ್ರಂಥಗಳಲ್ಲಿ[5] ಕಂಡುಬರುವ

1 'ಹಿರಣ್ಯಗರ್ಭೋ ಯೋಗಸ್ಯ ವಕ್ತಾ ನಾನ್ಯಃ ಪುರಾತನಃ' 'ಯಾಜ್ಞವಲ್ಕ್ಯಸ್ಮೃತಿ' ॥

2 Marshall : *Mohenjohdaro and Indus Civilization*, p. 59.

3 Illustr..ted by Marshall in pl. XII, 17, p. 52.

4 ಪಾರಮೇಶ್ವರತಂತ್ರ XII, ೫೨ 'ಸರ್ವಪಾಪಹರೋ ಯೋಗೋ ವಿರಕ್ತಸ್ಯೈವ ಕಲ್ಪ್ಯತೇ । ವೈರಾಗ್ಯಾತ್ ಜಾಯತೇ ಜ್ಞಾನಂ ಜ್ಞಾನಾದ್ ಯೋಗಃ ಪ್ರವರ್ತತೇ.'

5 ಪಾರಮೇಶ್ವರತಂತ್ರವು ಅನಾದಿಶೈವ, ಆದಿಶೈವ, ಮಹಾಶೈವ, ಯೋಗಶೈವ, ವೀರಶೈವ—ಎಂಬ ಸಪ್ತವಿಧ ಶೈವ ಪ್ರಭೇದಗಳನ್ನು ನಿರೂಪಿಸುತ್ತದೆ. ಪಾರಮೇಶ್ವರ ತಂತ್ರ-I, ೧೩-೧೫.

'ವೀರಶೈವಮತಸ್ಥಸ್ಯ ಜ್ಞಾನಂ ಯೋಗೋ ಹಿ ಸಾಧನಮ್ ॥'

ವೀರಶೈವಮತವನ್ನನುಸರಿಸುವವನಿಗೆ ಜ್ಞಾನ ಮತ್ತು ಯೋಗಗಳೇ ಸಾಧನ. ಅಂದರೆ ಜ್ಞಾನಯುಕ್ತವಾದ ಯೋಗವೇ ಅಥವಾ ಶಿವಯೋಗವೇ ಸಾಧನವೆಂಬುದನ್ನು ತೋರಿಸುತ್ತದೆ— ಪಾರಮೇಶ್ವರತಂತ್ರ VII-೩೬, ೩೭.

ಯೋಗದ ವಿವರಣೆಯಿಂದ ಹಾಗೂ 'ಶಿವಯೋಗ' ಎಂಬ ಪದದ ಧಾರಾಳವಾದ ಬಳಕೆಯಿಂದ, ಶಿವಯೋಗವೆಂಬ ಇನ್ನೊಂದು ಯೋಗವಿತ್ತೆಂದೂ ವಿದಿತವಾಗುತ್ತದೆ. ಈ ಯೋಗವು ಸೇರಿಕೊಂಡು ಒಟ್ಟು ಐದು ಬಗೆಯ ಯೋಗಗಳೆಂದು ಪರಿಗಣಿಸಲಾಯಿತು.

ಕೆಲವು ಆಗಮಗಳಲ್ಲಿ ಯೋಗಶೈವನ ಲಕ್ಷಣಗಳನ್ನು ವಿವರಿಸುತ್ತಾ ಅವನು ಭಕ್ತಿ, ವೈರಾಗ್ಯ, ಅಭ್ಯಾಸ, ಧ್ಯಾನ, ಏಕಾಂತವಾಸ, ಭಿಕ್ಷಾಟನ, ಲಿಂಗಪೂಜೆ, ಸ್ಮರಣ— ಎಂಬ ಅಷ್ಟಾಂಗಗಳನ್ನು ಅನುಸರಿಸಬೇಕೆಂದು ಬೋಧಿಸಲಾಗಿದೆ.[1] ಈ ಅಷ್ಟಾಂಗಪ್ರಧಾನವಾದ ಶಿವಯೋಗವು ಶಿವನೊಡನೆ ಕೂಡಿಕೊಂಡಿರುವ ನಿಲುವನ್ನು ತಿಳಿಸುತ್ತದೆ. ಶಿವಲಾಂಛನಧಾರಿಗಳಾಗಿ ಲಿಂಗಾರ್ಚನೆಯಲ್ಲಿ ನಿರತರಾದವರಿಗೆ ಶಿವಯೋಗಿಗಳೆಂದೂ, ದಾಂಪತ್ಯಜೀವನವನ್ನು ಪಾಲಿಸುತ್ತಿದ್ದ ಶಿವಯೋಗಿಯ ಪತ್ನಿಗೆ ಶಿವಯೋಗಿನಿ ಎಂದೂ ಸಂಬೋಧಿಸಲಾಗುತ್ತಿತ್ತು.[2] ಐಹಿಕ ಹಾಗೂ ಆಮುಷ್ಮಿಕ ಫಲಪ್ರದವಾದ ಶಿವಸಾಕ್ಷಾತ್ಕಾರವನ್ನು ಪಡೆಯುವುದೇ ಆಗಮಕಾಲದ ಶಿವಯೋಗಿಗಳ ಧ್ಯೇಯವಾಗಿತ್ತು. ಜ್ಞಾನಯೋಗಗಳ ಸಿದ್ಧಿಗಾಗಿ ಅಂತರಂಗಬಹಿರಂಗಶುದ್ಧಿಯನ್ನು ಸಂಪಾದಿಸಲು ತಪ, ಕರ್ಮ, ಜಪ, ಧ್ಯಾನ, ಜ್ಞಾನವೆಂಬ ಪಂಚವಿಧ ಸಾಧನೆಯಲ್ಲಿ ಅವರು ನಿರತರಾಗುತ್ತಿದ್ದರು.[3] ಹಾಗೆಯೇ ಷಟ್ಸ್ಥಲ ಸಿದ್ಧಾಂತದ ಸಾಧನೆ ಸಿದ್ಧಿಗಳಲ್ಲಿ ಗಮನವಿರಿಸುತ್ತಿದ್ದರು. ಅವರು ಪೂಜಿಸುವ ಲಿಂಗವೇ ಇಷ್ಟಲಿಂಗವಾಯಿತು. ಅದು ಪ್ರಾಣದಷ್ಟು ಪ್ರಿಯವಾದುದರಿಂದ ಅದೇ ಪ್ರಾಣಲಿಂಗವಾಯಿತು. ಇಂಥ ಶಿವಯೋಗಿಗಳ ಆಚರಣೆ, ಜ್ಞಾನಸಾಧನೆ, ಆಧ್ಯಾತ್ಮದ ನಿಲುವಿಗನುಸರಿಸಿ ಅವರಿಗೆ ಅವಧೂತ, ಸನ್ಯಾಸಿ, ಯೋಗಿ, ಪಾಶುಪತ, ಶಿವ, ಲಿಂಗಿ, ವೀರ, ವೀರಶೈವ. ಯತಿ ಎಂಬ ಅನೇಕವಿಧವಾದ ಸಂಪ್ರದಾಯ ನಾಮಗಳೂ ನಾಡಿನಲ್ಲಿ ರೂಢವಾಗಿದ್ದವು.[4]

ಕನ್ನಡನಾಡಿನಲ್ಲಿ ಇದ್ದಂತೆ ತಮಿಳುನಾಡಿನಲ್ಲಿಯೂ ಅನೇಕ ಶಿವಯೋಗಿಗಳಿದ್ದರೆಂಬುದು. ಅಲ್ಲಿ ಪ್ರಚಲಿತವಾಗಿದ್ದ ಶೈವಸಿದ್ಧಾಂತ ಪರಂಪರೆಯ ಐತಿಹ್ಯದಿಂದ ಗೊತ್ತಾಗುತ್ತದೆ. ಆಧ್ಯಾತ್ಮಪರವಾದ ಉದ್ಗ್ರಂಥಗಳಲ್ಲಿ ಅಂದು ತಿಳುವಳಿಕೆಯಲ್ಲಿದ್ದ ಶಿವಯೋಗದ ಸ್ವರೂಪವು ವಿದಿತವಾಗುತ್ತದೆ. ಆ ನಾಡಿನ 'ತಿರುಮುಲರ್' (ಕ್ರಿ.ಶ. ೫ನೆಯ ಶತಕ) ಎಂಬ ಅನುಭಾವಿಯು ಉನ್ನತ ನಿಲುವಿನ ಶಿವಯೋಗಿ ಎಂದು ಪ್ರಖ್ಯಾತನಾಗಿ, 'ತಿರುಮಂತಿರಮ್' ಎಂಬ ತಂತ್ರಗ್ರಂಥವನ್ನು ರಚಿಸಿದನು.[5] ಈ ಗ್ರಂಥದ ಮೂರನೆಯ ಭಾಗವು ಪತಂಜಲಿ ಮಹರ್ಷಿ ನಿರೂಪಿಸಿದ ಅಷ್ಟಾಂಗ ಯೋಗಕ್ಕಿಂತ ಭಿನ್ನ ಹಾಗೂ ವಿಶಿಷ್ಟವಾದ ಯೋಗಮಾರ್ಗವನ್ನು ವಿವರಿಸುತ್ತದೆ. ಅದು ಶಿವಯೋಗವೆಂದು ಪ್ರಚುರವಾಗಿದೆ. ತಿರುಜ್ಞಾನ ಸಂಬಂಧರ್ ಎಂಬ ಇನ್ನೊಬ್ಬ ತಮಿಳುನಾಡಿನ ಅನುಭಾವಿಯು ಬಾಲ್ಯದಿಂದಲೇ ಸಿದ್ಧಶಿವಯೋಗಿಯಾಗಿದ್ದನಂತೆ.[6]

ಸಾಹಿತ್ಯಕ್ಷೇತ್ರದಲ್ಲಿಯೇ ಮೊದಲಿನದಾದ ವೈದಿಕಸಾಹಿತ್ಯದಲ್ಲಿ 'ಯೋಗ' ಎಂಬ ಶಬ್ದದ ಪ್ರಯೋಗವು ಕಂಡು ಬರುತ್ತದೆ. ಅಲ್ಲಿ ಈ ಶಬ್ದವು 'ಹೂಡು', 'ಕೂಡಿಸುವಿಕೆ', 'ಇಷ್ಟವಸ್ತುವಿನ ಪ್ರಾಪ್ತಿ', 'ಒಂದುಗೂಡಿಸು'— ಎಂಬ ಅರ್ಥವನ್ನು ಕೊಡುತ್ತದೆ.[7] ಆದರೆ ಯೋಗಶಾಸ್ತ್ರಕ್ಕೆ ಮೀಸಲಾದ ಗ್ರಂಥಗಳಲ್ಲಿ ಕಂಡುಬರುವ 'ಯೋಗ' ಪದದ ಅರ್ಥ ವೇದಗಳಲ್ಲಿಲ್ಲ. ಋಗ್ವೇದದ ಒಂದು ಸೂಕ್ತವು ಮಾತ್ರ ಏಳು ಜನ ಮುನಿಗಳ ಲಕ್ಷಣಗಳನ್ನು ವರ್ಣಿಸುತ್ತದೆ ಅಷ್ಟೆ! ಅಥರ್ವಣವೇದದ ಯಾವ ಭಾಗದಲ್ಲಿಯೂ ಯೋಗವೆಂಬ ಶಬ್ದದ ನೇರವಾದ ಉಪಯೋಗ ಕಂಡುಬರುವುದಿಲ್ಲ. ಆದರೂ ಅಲ್ಲಿ ತ್ಯಾಗಿಯ ತಪಸ್ಸಿನಿಂದ ಅಣಿಮಾದಿಸಿದ್ಧಿಗಳು ಪ್ರಾಪ್ತವಾಗುತ್ತವೆ ಎಂದು ಹೇಳಲಾಗಿದೆ. ವೇದ ಸಾಹಿತ್ಯದ ಕೊನೆಗೆ ಬರುವ ಶತಪಥಬ್ರಾಹ್ಮಣದಲ್ಲಿ[8] ಮತ್ತು ಆರಣ್ಯಕೋಪನಿಷತ್ತುಗಳಲ್ಲಿ ಯೋಗಪದದ ಸ್ಪಷ್ಟ ಉಲ್ಲೇಖವಿದೆ. ಶಿವಾಗಮಗಳಲ್ಲಿ ಅನೇಕ ಸಲ ಈ ಪದ ಕಾಣಿಸಿಕೊಂಡಿದೆ.

ಯೋಗಶಾಸ್ತ್ರದ ಮೇರೆಗೆ 'ಯೋಗ' ಎಂಬ ಪದವು 'ಯುಜ್ ಸಮಾಧೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು. ಅದು ಎರಡು ವಸ್ತುಗಳ ಸಂಯೋಗ, ಕೂಡುವಿಕೆಯನ್ನು ಸೂಚಿಸುತ್ತದೆ. ಯೋಗ ಶಬ್ದದ ನಿಷ್ಪತ್ತಿಯೇ ಸೂಚಿಸು

---

1 ಪಾರಮೇಶ್ವರತಂತ್ರ X–೫೫–೫೬.

2 ಪಾರಮೇಶ್ವರತಂತ್ರ IV–೭.

3 ಪಾರಮೇಶ್ವರತಂತ್ರ XII–೧೩, ೧೪.

4 ಪಾರಮೇಶ್ವರತಂತ್ರ X. ೬೬–೬೭.

5 Dr. V. V. Ramana Sastri : Introduction to Tirumantiram, p. 5–8.

6 V. Paranjoti : '*Saiva Siddhanta*', p. 28–30.

7 ಋಗ್ವೇದ I-೫-೩, I-೩೪-೯, III-೨೭-೧೧, IV-೨೪-೪, VII-೬೭-೮, X-೧೧೪-೯.

8 ಶತಪಥಬ್ರಾಹ್ಮಣ XIV–೭–೧–೧೧.

ವಂತೆ ಎಲ್ಲ ಯೋಗಗಳ ಆತ್ಯಂತಿಕ ಗುರಿ ಒಂದೇ ಬಗೆಯಾಗಿದೆ. ಆಂತರಿಕ ಅನುಸಂಧಾನದ ಕ್ರಮದಲ್ಲಿ ತೋರುವ ವ್ಯತ್ಯಾಸಗಳಿಂದ ಯೋಗಮಾರ್ಗದಲ್ಲಿ ಪ್ರಭೇದಗಳನ್ನು ಕಲ್ಪಿಸಲಾಗಿದೆ. ಏಕಾಕ್ಷರ, ದ್ವ್ಯಕ್ಷರ, ಪಂಚಾಕ್ಷರ, ಷಡಕ್ಷರ ಮೊದಲಾದ ಮಂತ್ರಗಳನ್ನು ಪರಿಶುದ್ಧ ವೈಖರೀವಾಣಿ ಪರಾವಾಣಿಗಳನ್ನು ಸಮನ್ವಯಗೊಳಿಸಿ ಪರಾವಾಕ್ ಸಿದ್ಧಿಯನ್ನು ಮಂತ್ರಯೋಗಿಗಳು ಸಾಧಿಸುವರು. ನಾದ-ಬಿಂದುಗಳನ್ನು ಒಂದುಗೂಡಿಸಿ ಮನ-ಮಾರುತಗಳ ಉಲುಹನ್ನು ಅಡಗಿಸಿ ನಾದಾತೀತಸ್ಥಿತಿಯನ್ನು ಲಯಯೋಗಿಗಳು ಗಳಿಸುವರು. ಪ್ರಾಣಾಪಾನಗಳನ್ನು ಅಷ್ಟಾಂಗಯೋಗಮಾರ್ಗದಿಂದ ಇಲ್ಲವೆ ಮುದ್ರಾಕರಣಂಗಳಿಂದ ತಮ್ಮ ಅಂಕಿತಕ್ಕೆ ತಂದುಕೊಂಡು ಪ್ರಾಣಶಕ್ತಿಯ ಶ್ರೇಷ್ಠ ಸಾಮರ್ಥ್ಯವನ್ನು ಹಠಯೋಗಿಗಳು ದೊರಕಿಸುವರು. ಇಡಾ-ಪಿಂಗಳಾ ನಾಡಿಗಳನ್ನು ಒಂದುಗೂಡಿಸಿ, ಸುಷುಮ್ನಾನಾಳವನ್ನು ಜಾಗ್ರತಗೊಳಿಸಿ ದೃಷ್ಟಿಸಿದ್ಧಿಯನ್ನು ಹಾಗೂ ಪರಮನಿರ್ವಾಣಪದವನ್ನು ರಾಜಯೋಗಿಗಳು ಸಂಪಾದಿಸುವರು. ಶಿವ-ಶಕ್ತಿಗಳ ಅವಿನಾಭಾವ ಸಾಮರಸ್ಯವನ್ನು ಶಿವಯೋಗಿಗಳು ಹೊಂದುವರು. ಈ ವಿವಿಧ ಮಾರ್ಗಗಳನ್ನು ಅನುಸರಿಸಿದ ಯೋಗಿಗಳಿಗೆಲ್ಲ ಶಿವನೇ ಆರಾಧ್ಯವಸ್ತು.

ಶಿವಾಗಮಗಳಲ್ಲಿ ವರ್ಣಿತವಾದ ಷಟ್‌ಸ್ಥಲ ಸಿದ್ಧಾಂತ ಹಾಗೂ ಗುರು–ಲಿಂಗ–ಜಂಗಮ–ಶಿವಯೋಗ ಮೊದಲಾದ ಪದಪ್ರಯೋಗಗಳ ಬಳಕೆಯೊಡನೆ, ೧೨ನೆಯ ಶತಮಾನದ ಶಿವಶರಣರು ತಮ್ಮದೇ ಆದ ಆಧ್ಯಾತ್ಮಪಥವನ್ನು ನಿರ್ಮಿಸಿಕೊಂಡರು. ಅವರು ಆಗಮಪದಗಳಿಗೆಲ್ಲ ಅನುಭವಾತ್ಮಕವಾದ, ವ್ಯಾಪಕವಾದ ಅರ್ಥವೈಭವವನ್ನೂ, ಹೊಸ ಆಧ್ಯಾತ್ಮಸಂಪತ್ತಿಯ ಮೆರುಗನ್ನೂ ನೀಡಿದರು. ಶಿವಶರಣರಿಗೆ ಷಟ್‌ಸ್ಥಲ ಸಿದ್ಧಾಂತವು ಸಾಧನಪಥವಾದರೆ, ಶಿವಯೋಗವು ಅಥವಾ ಲಿಂಗಾಂಗಸಾಮರಸ್ಯವು ಪರಮಸಿದ್ಧಿಯಾಯಿತು. ಇದೇ ಮಾರ್ಗ ಮುಂಬರುವ ಶಿವಯೋಗಿಗಳಿಗೆ ಅನುಭಾವಗೀತೆಗಳನ್ನು ರಚಿಸಿ ಸ್ವಾನುಭಾವ ಮತ್ತು ಆತ್ಯಂತಿಕ ಸಾಮರಸ್ಯಸುಖವನ್ನು ಬಿತ್ತರಿಸಲು ನಾಂದಿಯಾಯಿತು.

ಯೋಗಾಭ್ಯಾಸದ ದೃಷ್ಟಿಯಿಂದ, ಶೈವಗ್ರಂಥಗಳು ಪ್ರತಿಪಾದಿಸುವ ಶಿವಯೋಗದಲ್ಲಾಗಲೀ, ೧೨ನೆಯ ಶತಮಾನದ ಶಿವಶರಣರು ಸಾಧಿಸಿದ ಶಿವಯೋಗದಲ್ಲಾಗಲೀ ದೃಷ್ಟಿಸ್ಥಿರತೆಗೇ ಪ್ರಮುಖಸ್ಥಾನ. ಆದರೆ ಶೈವ-ವೀರಶೈವ-ಸಾಧನಾಮಾರ್ಗದ ಅಂತರವನ್ನು ಸೂಚಿಸುವಂಥದು ಇಷ್ಟಲಿಂಗ ಮಾತ್ರ. ಶೈವ ಶಿವಯೋಗಿ ಸ್ಥಾವರಲಿಂಗದ ಮೇಲೆ ದೃಷ್ಟಿಯನ್ನಿರಿಸಿ ತನ್ನ ಚಿತ್ತವೃತ್ತಿಯನ್ನೆಲ್ಲ ಲಯಗೊಳಿಸಿ ಸಮಾಧಿಯನ್ನು ಪಡೆಯುವನು. ವೀರಶೈವ ಶರಣನು, ಕರಸ್ಥಲದ ಲಿಂಗದಲ್ಲಿ ಅನಿಮಿಷ ದೃಷ್ಟಿಯನ್ನಿರಿಸಿ ನಿರ್ನಿಮೇಷ ಧ್ಯಾನದಿಂದ ಶಿವಶಕ್ತಿಗಳ ಅವಿನಾಭಾವಸಂಬಂಧವನ್ನು, ಅಂದರೆ ಲಿಂಗಾಂಗಸಾಮರಸ್ಯವನ್ನು ಪಡೆಯುವನು. ವೀರಶೈವ ಶಿವಯೋಗಿಗಳ ಸಾಮರಸ್ಯದ ಅನುಸಂಧಾನವನ್ನು "ಶಿವಯೋಗ ಪ್ರದೀಪಿಕೆ"ಯು ಐದು ಹಂತವಾಗಿ ವಿವರಿಸಿ, ಖಚಿತವಾದ ರೀತಿಯಲ್ಲಿ ಶಿವಯೋಗರಹಸ್ಯವನ್ನೇ ಸೂಚಿಸುತ್ತದೆ :

ಜ್ಞಾನಂ ಶಿವಮಯಂ, ಭಕ್ತಿಃ ಶೈವೀ, ಧ್ಯಾನಂ ಶಿವಾತ್ಮಕಮ್ ।
ಶೈವಂ ಮಂತ್ರಂ, ಶಿವಾರ್ಚೇತಿ ಶಿವಯೋಗೋ ಽಪಿ ಪಂಚಧಾ ॥[1]

ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವಮಂತ್ರಗಳೊಡನೆ ಕೂಡಿಕೊಂಡಿರುವ ಇಷ್ಟಲಿಂಗಪೂಜೆಯೇ ಶಿವಯೋಗದ ಮುಖ್ಯ ಸಾಧನಗುರಿ. ಶಿವಯೋಗಸಾಧನೆಯಲ್ಲಿ ಶಿವಪೂಜೆಯು ಜ್ಞಾನ, ಭಕ್ತಿ, ಧ್ಯಾನ, ಜಪಗಳನ್ನು ಗರ್ಭೀಕರಿಸಿಕೊಂಡು ನಿರಂತರವಾಗಿ ಸಾಗುತ್ತದೆ.[2] ಸುಪ್ರಭಾತ ಸಮಯದಲ್ಲಿ ಅರ್ತಿಯಿಂದ ಲಿಂಗವ ನೆನೆದರೆ ಅಪಮೃತ್ಯು ಕಾಲಕರ್ಮಂಗಳು ತಪ್ಪುವುವು; ಪರಶಿವನ ನಿರಂತರ ಸಾನ್ನಿಧ್ಯಸುಖ ದೊರಕುವುದೆಂಬುದು ಶರಣರು ಕಂಡುಂಡ ಅನುಭವ.[3]

ವೀರಶೈವಸಿದ್ಧಾಂತದ ಮೇರೆಗೆ ಅಖಂಡ ಪರಬ್ರಹ್ಮವೇ ಅಂಗ-ಲಿಂಗವೆಂದು ಎರಡಾಗುವುದು. ಜೀವಾತ್ಮನೇ ಅಂಗನೆನಿಸಿ ಭಕ್ತಿಸಂಪನ್ನನಾಗುವನು. ಪರಬ್ರಹ್ಮತತ್ತ್ವವೇ ಲಿಂಗವೆನಿಸಿ ಪರಾತ್ಪರಶಕ್ತಿಸಂಪನ್ನವಾಗುವುದು. ಸಾಧನೆಯಲ್ಲಿದ್ದ ಶುದ್ಧಾತ್ಮನಾದ ಅಂಗನ ಭಕ್ತಿ ಲಿಂಗಗತ ಶಕ್ತಿಯಲ್ಲಿ ಸಮರಸವಾಗುತ್ತ ಲಿಂಗಾಂಗಸಾಮರಸ್ಯ ಸಿದ್ಧಿಸುವುದು. ಇದೇ ಶಿವಯೋಗದ ಆತ್ಯಂತಿಕ ಗುರಿ. ಶಿವಯೋಗ ಸಾಧನೆಯಲ್ಲಿ ಪಂಚಮ ಪುರುಷಾರ್ಥವೆನಿಸಿದ ಭಕ್ತಿಭಾವನೆಯೇ

---

1 ಶಿವಯೋಗಪ್ರದೀಪಿಕೆ । ೧೫.

2 ಚನ್ನಬಸವಣ್ಣನವರ ವಚನಗಳು ೨೧೮ (ಕ.ವಿ.ವಿ. ಧಾರವಾಡ).

3 ಬಸವಣ್ಣನವರ ವಚನಗಳು ೧೭೭ (ಕ.ವಿ.ವಿ. ಧಾರವಾಡ ಪ್ರಕಟನೆ).

ಲಿಂಗಾಂಗಸಾಮರಸ್ಯಕ್ಕೆ ನಾಂದಿಯಾಗುತ್ತದೆ; ಸಾಧಕನಿಗೆ ಸಚ್ಚಿದಾನಂದನಿತ್ಯಪರಿಪೂರ್ಣಸ್ಥಿತಿಯನ್ನು ತಂದುಕೊಡು ತ್ತದೆ. ೧೨ನೆಯ ಶತಮಾನದಿಂದ ಇಂದಿನವರೆಗೆ ಅನೇಕ ಅನುಭಾವಿಗಳೂ ಶಿವಯೋಗಿಗಳೂ ಉದಿಸಿ ಬಂದು ಶಿವ ಯೋಗಪರಂಪರೆಯನ್ನು ಉಳಿಸಿಕೊಂಡಿದ್ದಾರೆ.

ವೀರಶೈವ ಶಿವಯೋಗವನ್ನುಳಿದು ಇನ್ನಿತರ ಯೋಗಗಳ ಸಾಧನಾಕ್ರಮದಲ್ಲಿ ವಿವಿಧ ಬಗೆಯ ತೊಡಕು ತೊಂದರೆ ಗಳು ಕಾಣಿಸಿಕೊಳ್ಳುತ್ತವೆ. ಅಲ್ಲಿ ವಿದಿತವಾಗಿರುವ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಮಾರ್ಗದ ಕ್ರಮಸಂಯೋಜನೆಯಲ್ಲಿ ಸಾಧಕನು ಅತ್ಯುಗ್ರವಾದ ಆಚರಣೆಗಳನ್ನು ಪಾಲಿಸಬೇಕಾಗುತ್ತದೆ. ಯಮ-ನಿಯಮಗಳತ್ತ ವಿಶೇಷ ಆಸ್ಥೆ ತೋರಿಸಿಕೊಳ್ಳದೆ ಆಸನ-ಪ್ರಾಣಾಯಾಮಗಳಲ್ಲಿ ಒಲವು ಮೂಡಿಕೊಳ್ಳಬಹುದಾಗಿದೆ. ಸುಮಾರು ೮೪ ಆಸನಗಳನ್ನು ಅಭ್ಯಸಿಸುವಲ್ಲಿ ಒಮ್ಮೊಮ್ಮೆ ಜಾಗ್ರತೆ ತಪ್ಪಿ, ಸರಿಯಾದ ಮಾರ್ಗದರ್ಶನ ಕೊರತೆಯಿಂದ, ಪ್ರಕೃತಿಯು ವಿಕೃತಿಗೊಳ್ಳಬಹುದು; ನೀರೋಗಿಯಾದವನು ರೋಗಪೀಡಿತನಾಗಬಹುದು; ಪ್ರಾಣಾಯಾಮದಿಂದ ಪ್ರಾಣವನ್ನು ನಿಯಂತ್ರಣಗೊಳಿಸುವಾಗ ಒಮ್ಮೊಮ್ಮೆ ಪ್ರಾಣಕ್ಕೆ ಅಪಾಯ ಸಂಭವಿಸಲೂ ಬಹುದು; ಕುಂಡಲಿನೀಶಕ್ತಿಯನ್ನು ಜಾಗೃತಗೊಳಿಸಿ ಷಟ್‌ಚಕ್ರಭೇದನಮಾರ್ಗವಾಗಿ ಸಹಸ್ರಾರಕ್ಕೆ ಪ್ರಾಣವನ್ನು ಏರಿಸುವಲ್ಲಿ ಸಾಧಕನು ಮನದ ಚಾಂಚಲ್ಯದಿಂದ ವ್ರತಚ್ಯುತನಾಗುವ ಸಂಭವವೂ ಉಂಟು; ಹುಚ್ಚನಾಗುವ ಪರಿ- ಸ್ಥಿತಿಯೂ ಒದಗಬಹುದು; ಹೀಗಾಗಿ ಉಳಿದ ಯೋಗಗಳು ಕಷ್ಟಸಾಧ್ಯವಾದವುಗಳು; ಯೋಗಾಧಿಕಾರಿಗಳಿಗೆ ಮಾತ್ರ ಮೀಸಲಾದವುಗಳು. ಅಂತೆಯೇ ವೀರಶೈವ ಶಿವಯೋಗಿಗಳು ಅಷ್ಟಾಂಗಗಳಲ್ಲಿಯ ಪೂರ್ವದ ಉಪಾಂಗಗಳನ್ನು ನಿತ್ಯದ ಶಿವಾನುಭವಾತ್ಮಕ ಜೀವನದಲ್ಲಿಯೇ ಮಾರ್ಪಡಿಸಿ, ಉತ್ತರಯೋಗವೆನಿಸುವ ಧ್ಯಾನ-ಧಾರಣ-ಸಮಾಧಿ— ಈ ಮೂರನ್ನು ಶಿವಯೋಗಾನುಸಂಧಾನದ ಕ್ರಮದಲ್ಲಿ ಬಳಸಿಕೊಂಡರು. ಇದರಿಂದ ಆಬಾಲವೃದ್ಧರೂ ಸುಲಭವಾಗಿ ಸಾಧಿಸಬಲ್ಲ ಯೋಗವಾಯಿತು—ಶಿವಯೋಗ. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಹೇಳುವಂತೆ:

"....ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇಂತಿವೈದನು ಬಿಟ್ಟು
ಲಿಂಗಪೂಜೆಯ ಮಾಡುವುದೀಗ ಯಮ........
.......................................
ಲಿಂಗಾರ್ಚನಾತತ್ಪರನಾಗಿ ಪಾಪಕ್ಕೆ ಭೀರುವಾಗಿಹುದೇ ನಿಯಮ....
ಸ್ವಸ್ಥಿರಚಿತ್ತನಾಗಿ ಮೂರ್ತಿಗೊಂಡು
ಲಿಂಗಾರ್ಚನೆಯ ಮಾಡುವುದೀಗ ಆಸನ........
ವಾಯುಪ್ರಾಣತ್ವವ ಕಳೆದು ಲಿಂಗಪ್ರಾಣಿಯ ಮಾಡಿ
ಹೃದಯಕಮಲ ಮಧ್ಯದಲ್ಲಿ ಪ್ರಣವವನುಚ್ಚರಿಸುತ್ತ
ಪರಶಿವಧ್ಯಾನದಲ್ಲಿ ತರಹರವಾಗಿಪ್ಪುದೀಗ ಪ್ರಾಣಾಯಾಮ........
ಸರ್ವೇಂದ್ರಿಯಂಗಳ ಸುಲಿಂಗಮುಖದಿಂದ
ಸಾವಧಾನ ಮಾಡಿಕೊಂಡಿಪ್ಪುದೀಗ ಪ್ರತ್ಯಾಹಾರ....[1]"

ಎಂಬುದು ಸಹಜ ಜೀವನವು ಶುದ್ಧ ಶಿವಯೋಗಸಾಧನೆಗೆ ತಳಹದಿಯಾಗುವುದನ್ನು ಕಾಣಬಹುದಾಗಿದೆ. ಪ್ರತಿನಿತ್ಯ ಆಚರಿಸಬೇಕಾದ ಶಿವಪೂಜೆಯು ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗಗಳನ್ನೊಳಗೊಂಡು ಶಿವ ಯೋಗವಾಗುವಂತೆ ರೂಪಿಸಲಾಗಿದೆ. ಅಂತೆಯೇ ಶಿವಯೋಗ ಲೌಕಿಕ ಪಾರಮಾರ್ಥಿಕ ಜೀವನಗಳ ನಡುವಿನ ಸೇತುವೆ ಯಾಗುತ್ತದೆ. ಚನ್ನಬಸವಣ್ಣನ ಒಂದು ವಚನದಲ್ಲಿ:

"ಮಂತ್ರಯೋಗ ಹಠಯೋಗ ಲಯಯೋಗ ಜ್ಞಾನಯೋಗ
ಇಂತೀ ಎಲ್ಲಾ ಯೋಗವನರಿದು ಮರೆದು
ಭಕ್ತಿಯೋಗದ ಮೇಲೆ ನಿಂದು, ರಾಜಯೋಗದ ಮೇಲೆ
ನಡೆವ ನುಡಿವ ಕಾಣಿರೋ![2]"

---

[1] ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳು ೩೬೪.

[2] ಚನ್ನಬಸವಣ್ಣನವರ ವಚನಗಳು, ೧೪೫೭ (ಕ.ವಿ.ವಿ. ಪ್ರಕಟನೆ).

ಇಲ್ಲಿ ಜ್ಞಾನಯೋಗವೆಂದರೆ ರಾಜಯೋಗ; ರಾಜಯೋಗವೆಂದರೆ ಶಿವಯೋಗ. ಶಿವಯೋಗಸಾಧಕನು ಎಲ್ಲ ಯೋಗಗಳ ಜ್ಞಾನವನ್ನು ಪಡೆದು ಮತ್ತೆ ಮರೆದು, ಭಕ್ತಿಯನ್ನಾಶ್ರಯಿಸಿ ಶ್ರೇಷ್ಠರಾಜಯೋಗವೆನ್ನಿಸಿದ ಶಿವಯೋಗವನ್ನು ಕಾಣಬೇಕೆನ್ನುತ್ತಾನೆ. ಪ್ರತಿಯೊಬ್ಬ ಮಾನವನಲ್ಲಿ ಸುಪ್ತವಾಗಿರುವ ಭಕ್ತಿಗೆ ಮೂಲವಾಗಿರುವ ಭಾವನಾಶಕ್ತಿ, ಕ್ರಿಯೆಗೆ ಮೂಲವಾಗಿರುವ ಕ್ರಿಯಾಶಕ್ತಿ, ಜ್ಞಾನಕ್ಕೆ ಚೈತನ್ಯಪ್ರಾಯವಾಗಿರುವ ಜ್ಞಾನಶಕ್ತಿಗಳನ್ನು ಜಾಗೃತಗೊಳಿಸಿ, ಈ ಎಲ್ಲ ಶಕ್ತಿಗಳ ಸಮತೂಕದ ವಿಕಾಸಕ್ಕೆ, ಎಲ್ಲ ಬಗೆಯ ಯೋಗಗಳ ಸಮನ್ವಯದ ವೈಭವಕ್ಕೆ ಶಿವಯೋಗದಲ್ಲಿ ಅವಕಾಶವಿದೆ. ಷಟ್‌ಸ್ಥಲಮಾರ್ಗದ ಅನುಸಂಧಾನದಿಂದ ಕ್ರಿಯಾಶುದ್ಧಿ, ಜ್ಞಾನಶುದ್ಧಿ, ಭಾವಶುದ್ಧಿಯುಂಟಾಗಿ, ಸಮ್ಯಕ್‌ಜ್ಞಾನವು ಗೋಚರಿಸಿ ಸಹಜ ಸಮಾಧಿಯನ್ನು, ಸಚ್ಚಿದಾನಂದನಿತ್ಯಪರಿಪೂರ್ಣಸ್ಥಿತಿಯನ್ನು ಸಾಧಿಸುವುದೇ ಶಿವಯೋಗದ ಆತ್ಯಂತಿಕ ಧ್ಯೇಯವಾಗಿದೆ.

ಸ್ವಯಂಭುವಾದ ಪರಶಿವಲೀಲೆಯಿಂದ ಆತ್ಮನಿಗೆ ತನುಸಂಬಂಧವಾಗಿ ಪ್ರಾಣ ಸಂಚಾರವಾಗುತ್ತದೆ. ಆತ್ಮ ಪ್ರಾಣಗಳೊಡನೆ ತಾದಾತ್ಮ್ಯಭಾವ ಸಂಭವಿಸಿ ಮನವೆಂಬ ಘಟಕ ಅಂಕುರಿಸುತ್ತದೆ.ಆತ್ಮ-ಪರಮಾತ್ಮರ ಸಾಮರಸ್ಯವನ್ನು ಸಂಪಾದಿಸಿಕೊಳ್ಳಲು ಶಿವಲೀಲೆಯಿಂದ ಉತ್ಪತ್ತಿಯಾದ ಸೃಷ್ಟಿಯೂ ಅವಶ್ಯ; ಆತ್ಮನನ್ನು ಬಳಸಿಕೊಂಡ ದೇಹವೂ ಅವಶ್ಯ.[1] ಮಾನವನ ಪ್ರಾಕೃತಿಕ ಶರೀರ, ಅಲ್ಲಿ ಸಂಚರಿಸುವ ಪ್ರಾಣ, ವ್ಯವಹರಿಸುವ ಮನ— ಇವುಗಳ ಅಸ್ವಸ್ಥ ಸ್ಥಿತಿಯೇ ಜೀವಪರಮರ ಸಮರಸಾನಂದಕ್ಕೆ ತೊಡಕಾಗಿ ನಿಂತಿದೆ— ಎಂಬುದು ಶಿವಯೋಗಿಗಳ ಅಭಿಮತ. ಮನಸ್ಸಿಗೆ ಸ್ವತಂತ್ರ ಅಸ್ತಿತ್ವವಿಲ್ಲ; ಆದರೆ ಪ್ರಾಣ, ಶರೀರಕ್ಕೆ ಮುಖ್ಯ ಆಧಾರವಾಗಿ ನಿಲ್ಲುತ್ತದೆ. ಕಾರಣ ಸಾಧನಾಕ್ರಮದಲ್ಲಿ ಪ್ರಾಣಕ್ಕೆ ಮಹತ್ವದ ಪಾತ್ರವಿದೆ. ಅನೇಕ ಕಾರಣಗಳಿಂದ ಮಾನವನ ಪ್ರಾಣ ಸುಸ್ಥಿರವಾಗಿರದೆ ತಾಳ-ಲಯವನ್ನು ಕಳೆದುಕೊಂಡಿರುತ್ತದೆ. ಇದರಿಂದ ಮನವು ಮಲಿನವಾಗಿ ಜೀವಾತ್ಮನಲ್ಲಿ ಬಗೆಬಗೆಯ ಕಾಮನೆಗಳೂ ವಾಸನಾಯುಕ್ತ ಸಂಸ್ಕಾರಗಳೂ ಮೂಡಿಕೊಳ್ಳುತ್ತವೆ. ಅರಿಷಡ್ವರ್ಗ, ಸಪ್ತವ್ಯಸನ, ಅಷ್ಟಮದಗಳು ತೋರಿ ಮಾನವನನ್ನು ಬಂಧಿಸುತ್ತವೆ. ಇದರಿಂದ ಸ್ವರೂಪವಿಸ್ಮೃತಿಯುಂಟಾಗುತ್ತದೆ. ಆದರೆ ಜೀವನಿಗೆ ಸುಕೃತದಿಂದ, ಗುರುಕೃಪೆಯಿಂದ ಇಲ್ಲವೆ ದೈವೀ ಅನುಗ್ರಹದಿಂದ ಸಮ್ಯಕ್‌ಜ್ಞಾನ ಜಾಗೃತವಾಯಿತೆಂದರೆ ಜೀವಾತ್ಮನಲ್ಲಿ ಸುಪ್ತವಾಗಿರುವ ಶಿವತತ್ತ್ವ ಎಚ್ಚರಗೊಳ್ಳುತ್ತದೆ; ತಾನು ದೇವಾಂಶನೆಂಬ ಅರಿವು ಉದಿಸುತ್ತದೆ. ಅದೇ ಭಾವನೆ ಬಲಿತು, ಪರಮಾತ್ಮನಲ್ಲಿ ವಿಲೀನವಾಗಬೇಕೆಂಬ ಅಭೀಪ್ಸೆಯುಂಟಾಗುತ್ತದೆ. ಈ ಬಗೆಯ ಜ್ಞಾನಾಗ್ನಿ ಹೊತ್ತಿ ಉರಿಯುತ್ತಿರುವಾಗಲೇ ಅವಿದ್ಯೆ ಮುಸುಕಬಾರದೆಂದು, ನಿರಂತರ ಸಾಮರಸ್ಯಸುಖ ಸಾಧ್ಯವಾಗಬೇಕೆಂದು ಜೀವಾತ್ಮನು ಹಂಬಲಿಸುತ್ತಾನೆ; ಶಿಷ್ಯತ್ವ ವಹಿಸಿ ಶ್ರೀ ಗುರುವಿನ ಪರಮಕಾರುಣ್ಯಕ್ಕೆ ಹಂಬಲಿಸುತ್ತಾನೆ.[2]

ಶಿವಯೋಗ ಸಾಧನೆಯಲ್ಲಿ ಸದ್ಗುರುವಿನ ಸ್ಥಾನ ಗುರುತರವಾದುದು. ಗುರುವು ತನ್ನ ಶಿವಯೋಗಸಾಮರ್ಥ್ಯದಿಂದ ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿರಿಸಿ ಶಿಷ್ಯನ ಸಹಸ್ರದಳ ಕಮಲದಲ್ಲಿ ಅವ್ಯಕ್ತವಾಗಿ ಅವಿತುಕೊಂಡಿರುವ ಚಿತ್‌ಕಳೆಯನ್ನು ಜಾಗೃತಗೊಳಿಸುತ್ತಾನೆ. ಆ ಶಿವಕಳೆಯನ್ನು ಭಾವಕ್ಕೆ ಭಾವಲಿಂಗವಾಗಿ, ಭಾವದಿಂದ ಮನಕ್ಕೆ ಪ್ರಾಣಲಿಂಗವಾಗಿ, ಮನದಿಂದ ದೃಷ್ಟಿಗೆ ಇಷ್ಟಲಿಂಗವಾಗಿ ಅವತರಿಸಿ ಶಿಷ್ಯನ ಕರಸ್ಥಲದಲ್ಲಿ ಇರಿಸುತ್ತಾನೆ.[3] ಕ್ರಿಯಾದೀಕ್ಷೆಯಿಂದ ದೇಹಭಾವವನ್ನು ಕಳೆದು, ಸತ್ಕ್ರಿಯಾಚಾರದ ಮೂಲಸೂತ್ರವೇ ಸಾಧಕನ ಶರೀರವೆಂದು ಅರುಹುವನು; ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯವ ಕಳೆದು ಮನಕ್ಕೆ ಘನನೆನಹನ್ನು ಸಂಬಂಧಿಸಿ ಮನವನ್ನು ನಿರ್ಮಲಗೊಳಿಸಿ ಮನವು ಲಿಂಗಕ್ಕೆ ಆಶ್ರಯವೆಂದು ಅರುಹುವನು; ಜ್ಞಾನದೀಕ್ಷೆಯಿಂದ ಪ್ರಾಣಪ್ರಪಂಚದ ಪಶುಭಾವವನ್ನು ಕಳೆದು ಅಖಂಡ ಜ್ಞಾನಲಿಂಗ ಕಳೆಯೇ ಶರಣನ ಪ್ರಾಣವೆಂದು ತಿಳಿಹೇಳುವನು; ಲಿಂಗರಹಸ್ಯವನ್ನು ಕರಗತಮಾಡಿಕೊಡುವನು. ಶಿವಯೋಗಪಥ 'ಶಕ್ತಿ ಸಂಪುಟ'ವಾಗಿದೆಯೆಂದು ಖಚಿತಪಡಿಸುವನು.[4]

ಶಿವಯೋಗಸಾಧನೆ ಇಷ್ಟಲಿಂಗದ ಮೇಲಿರಿಸಿದ ಅರೆತೆರೆದ ನೋಟದಿಂದ ಪ್ರಾರಂಭವಾಗುತ್ತದೆ. ಲಿಂಗಪೂಜೆ,

---

1 ಬಸವಣ್ಣನವರ ವಚನಗಳು: ೭೭೪ (ಕ.ವಿ.ವಿ. ಪ್ರಕಟನೆ).
'ಕೂಡಲಸಂಗನನೊಲಿಸಬಂದ ಪ್ರಸಾದಕಾಯವ ಕೆಡಿಸಲಾಗದು'

2 ಶ್ರೀ ಸಿದ್ಧರಾಮೇಶ್ವರ ವಚನಗಳು: ೧೪೬ (ಕ.ವಿ.ವಿ. ಪ್ರಕಟನೆ).

3 ಚನ್ನಬಸವಣ್ಣನವರ ವಚನಗಳು: ೬೫, ೧೧೭೬, ೧೪೬೬; ತೋಂಟದ ಸಿದ್ಧಲಿಂಗಶಿವಯೋಗಿಗಳ ವಚನಗಳು: ೧೭೩, ೩೬೪.

4 ತೋಂಟದ ಸಿದ್ಧಲಿಂಗಶಿವಯೋಗಿಗಳ ವಚನಗಳು: ೧೭೨, ಬಸವಣ್ಣನವರ ವಚನಗಳು ೮೧೪.

ಧ್ಯಾನಗಳಲ್ಲಿ ಅನಿಮಿಷದೃಷ್ಟಿಯೇ ಮೂಲಸೂತ್ರ. ಎದೆ ಕುತ್ತಿಗೆ ತಲೆಗಳನ್ನೆಲ್ಲ ನೇರವಾಗಿರಿಸಿ ಸ್ಥಿರಾಸನನಾಗಿ. ಸಿದ್ಧಾಸನ ಇಲ್ಲವೆ ಪದ್ಮಾಸನಾರೂಢನಾಗಿ[1] ಸ್ಥಿರದೃಷ್ಟಿಯುಳ್ಳವನಾಗಬೇಕು. ಆಗ ಪ್ರಾಣವಾಯುವಿನ ಸಂಚಾರವು ಸಹಜವಾಗಿ ಸುಸ್ಥಿರಗೊಳ್ಳುವುದು; ಚಂಚಲ ಮನವು ನಿಶ್ಚಲಗೊಳ್ಳುವುದು; ಸಮುದ್ರದಾಳದಂತೆ ಮನವು ಸ್ತಬ್ಧಗೊಳ್ಳುವುದು. ಆಗ ಕರಸ್ಥಲದ ಲಿಂಗವು ಮನೋವೇದ್ಯವಾಗಿ ಪ್ರಾಣಲಿಂಗ ಭಾವಲಿಂಗಗಳಾಗಿ ಸಾಧಕನಲ್ಲಿ ಆತ್ಮಶಕ್ತಿಯು ಜಾಗೃತವಾಗುವುದು; ತಾನೇ ಲಿಂಗ, ಲಿಂಗವೇ ತಾನೆಂಬ ಅಭೇದಭಾವ ಮೂಡಿಕೊಳ್ಳುವುದು.[2] ಆದರಿಂದ ಕರ್ಮಗಳೆಲ್ಲ ಲಯವಾಗಿ, ಜನನ ಮರಣಗಳ ಬಲೆ ಕಳಚಿ, ಮಾಯೆ ಮೋಹಗಳು ಹೇಳಹೆಸರಿಲ್ಲದಂತಾಗುತ್ತವೆ; ವಾಸನೆಗಳು ಭಸ್ಮೀಭೂತವಾಗುತ್ತವೆ. ಚಾಮರಸ ಕವಿ ಶಿವಯೋಗ ಸಾಧನೆಯ ನೆಲೆಕಲೆಗಳನ್ನು :

ಆಲಿನಿಂದಡೆ ಸುಳಿದು ಸೂಸುವ
ಗಾಳಿ ನಿಲುವುದು ಗಾಳಿ ನಿಲೆ ಮನ
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು ।
ಲೀಲೆಯಿಂದಾ ಬಿಂದು ನಿಂದೊಡೆ
ಕಾಲ ಕರ್ಮವ ಗೆದ್ದು ಮಾಯೆಯ
ಹೇಳಹೆಸರಿಲ್ಲೆನಿಸಬಹುದೈ ಬಸವ ಕೇಳೆಂದ ॥[3]

ಎಂದಿದ್ದಾನೆ. ಮಹದೈಪುರೀಶತಕವೂ :

ಲಿಂಗದೊಳಿಟ್ಟ ದೃಷ್ಟಿ ನಿಜದೃಷ್ಟಿಯೊಳಿರ್ದ ಮನಂ ಮನಸ್ಸಿನೊ-
ಳ್ಳಿಂಗದೆ ನಿಂದ ಭಾವಮದರೊಳ್ನೆಲೆಗೊಂಡ ಶಿವಾತ್ಮಲಿಂಗವಾ
ಲಿಂಗದೊಳಿರ್ದು ನಿತ್ಯಸುಖಿಯಾಗಿ ವಿರಾಜಿಸುವಂಗೆ ಬಾಹ್ಯಕ-
ರ್ಮಂಗಳವೇತಕಯ್ಯಾ ಪರಮಪ್ರಭುವೇ ಮಹದೈಪುರೀಶ್ವರಾ ॥[4]

ಶಿವಯೋಗದ ನೆಲೆಯನ್ನು ನಿರೂಪಿಸುತ್ತದೆ. ಶ್ರೀಗುರುವಿನ ಕೃಪೆಯಿಂದ ಚಿತ್ಕಲೆ ಜಾಗ್ರತವಾಗಿ ಲಿಂಗಾನುಸಂಧಾನದಲ್ಲಿ ತೊಡಗಿದ ಶರಣನು ತಾನೇ ಲಿಂಗವಾಗಿ ಲಿಂಗವನ್ನು ಪೂಜಿಸುವನು. 'ರುದ್ರೋ ಭೂತ್ವಾ ಯಜೇದ್-ರುದ್ರಂ ನಾರುದ್ರೋ ರುದ್ರಮರ್ಚಯೇತ್'— ಎಂದು ಆಗಮಸಾಹಿತ್ಯ ತಿಳಿಸುತ್ತದೆ. ಈ ಸ್ಥಿತಿಗೆ ಅಹಂಗ್ರಹೋಪಾಸನೆ ಎಂದೂ ಕರೆಯುವರು. ಲಿಂಗಧ್ಯಾನದಲ್ಲಿ ಕುಳಿತಿರುವ ಸ್ಥಿತಿಗೆ ಶಾಂಭವೀ ಮುದ್ರೆಯೆಂದು ಕರೆಯಲಾಗುತ್ತಿದ್ದು. ಅದು ಶಿವಾಲಯದಲ್ಲಿರುವ ಲಿಂಗದ ಆಕಾರವನ್ನೇ ತಳೆಯುತ್ತದೆ;[5] ಮಂತ್ರಾನುಸಂಧಾನದಲ್ಲಿ ತೊಡಗಿದ ಶಿವಯೋಗಿ ಮಂತ್ರಮೂರ್ತಿಯಾಗುವನು. ಈ ಸ್ಥಿತಿಯಲ್ಲಿ ಸಹಜವಾಗಿ ಮೂಲಬಂಧ, ಉಡ್ಡಿಯಾಣ, ಜಾಲಂಧರ ಬಂಧಗಳು ಸಿದ್ಧಿಸುತ್ತವೆ. ಆದರಿಂದ ಶಿವಯೋಗಿ ಉನ್ಮನದ ಹಂತವನ್ನು ಮುಟ್ಟುತ್ತಾನೆ. ಅನುಸಂಧಾನದ ಪ್ರಾರಂಭದಲ್ಲಿ ಶರಣನು ಇಷ್ಟಲಿಂಗದಲ್ಲಿ ತನ್ನ ಗುರುವನ್ನಾಗಲೀ,[6] ಪರವಸ್ತುವಿನ ಸಚ್ಚಿದಾನಂದನಿತ್ಯಪರಿಪೂರ್ಣತತ್ತ್ವಗಳನ್ನಾಗಲೀ ಇಲ್ಲವೆ ಈ ತತ್ತ್ವಗಳನ್ನು ಸಂಪಾದಿಸಿದ ಸತ್ಪುರುಷರನ್ನಾಗಲೀ,[7] ಇಲ್ಲವೆ ಪರಮಪ್ರಕಾಶವನ್ನಾಗಲೀ[8] ಧ್ಯಾನಿಸುತ್ತಾನೆ. ಅಂಗೈಯ ಲಿಂಗದಲ್ಲಿ ಕಣ್ಣುಗಳು ನೆಟ್ಟು ತನು-ಮನ-ಭಾವಗಳೆಲ್ಲ ಲಿಂಗದ ದಿವ್ಯಪ್ರಭೆಯಾಗಿ ಬೆಳಗುವ ಶಿವಯೋಗಿಯ ನಿಲುವನ್ನು ಸೊನ್ನಲಿಗೆಯ ಸಿದ್ಧರಾಮ ಶಿವಯೋಗಿ ಹೀಗೆ ಕೊಂಡಾಡಿದ್ದಾನೆ:

---

1 'ಪಶ್ಚಿಮಪದ್ಮಾಸನದಲ್ಲಿ ಕುಳ್ಳಿರ್ದು ನೆಟ್ಟೆಲುವ ಮುರಿದು ತುಟಿ ಮಿಡುಕದೆ ಅಟ್ಟೆ ಅಲ್ಲಾಡಿತ್ತಲ್ಲಾ!' ಬಸವೇಶ್ವರರ ವಚನ : ೮೧೪; ಸ್ವತಂತ್ರ ಸಿದ್ಧಲಿಂಗೇಶ್ವರ ವಚನ : ೨೭೨.

2 ಮೋಳಿಗೆ ಮಾರಯ್ಯನ ವಚನಗಳು : ೩೮೨.

3 ಪ್ರಭುಲಿಂಗಲೀಲೆ (ಚಾಮರಸ), XVIII, ೨೨.

4 ಮಹದೈಪುರೀಶತಕ ೫೩.

5 ಶಿವಾನುಭವ ಶಿವಯೋಗಿ: ಶಿವಾದ್ವೈತ ದರ್ಶನ, ಪುಟ ೪೦.

6 ಲಿಂಗಮ್ಮನ ವಚನಗಳು: ವಚನ ೩೮.

7 ಲಿಂಗಲೀಲಾವಿಲಾಸಚಾರಿತ್ರ, ವಚನ: ೨೯, ಪುಟ ೧೨೯.

8 ಚನ್ನಬಸವಣ್ಣನವರ ವಚನಗಳು, ವ. ೯೩೭, 'ಸ್ವಯಂಜ್ಯೋತಿ ಪ್ರಕಾಶದಲ್ಲಿ ಸದಾ ಸನ್ನಿಹಿತ ನಿಮ್ಮ ಶರಣ'.

ಅಂಗೈಯ ನೋಟದೊಳು ಕಂಗಳು ನಟ್ಟು,
ಕಂಗಳ ತೇಜ ಲಿಂಗದಲ್ಲಡಗಿತು
ಲಿಂಗದ ಪ್ರಭೆಯೊಳಗೆ ಅಂಗವೆಲ್ಲ ಲೀಯವಾಗಿ
ಸಂಗ-ನಿಸ್ಸಂಗವೆಂಬ ದಂದುಗ ಹಿಂಗಿದು
ಹಿಂದುಮುಂದೆಂಬ ಭಾವವಳಿದು ನಿಂದ
ನಿಜದ ನಿರಾಳದಲ್ಲಿ ಪ್ರಾಣ ಸಮರತಿಯಾಗಿಪ್ಪ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ........[1]

ಶಿವಯೋಗದಲ್ಲಿ ಮಂತ್ರಾನುಸಂಧಾನದೊಡನೆ ಇಷ್ಟ, ಪ್ರಾಣ, ಭಾವಲಿಂಗಗಳ ಆರಾಧನೆ ಅನುಸಂಧಾನಗಳು ಅವ್ಯಾಹತವಾಗಿ ಸಾಗಿ. ನಾದ-ಬಿಂದು-ಕಳೆಗಳಿಗೆ ಅತೀತವಾದ ಚೈತನ್ಯಾತ್ಮಕವಾದ ಸ್ಥಿತಿಯನ್ನು ನೆಲೆಗೊಳಿಸಿ ಇಷ್ಟಲಿಂಗ ಪೂಜೆ ಸ್ಥೂಲದೇಹದ ಮೋಹ ಕಳೆಯುವುದು : ಪ್ರಾಣಲಿಂಗದ ಪೂಜೆ ಮನವನ್ನು ಉನ್ಮನಗೊಳಿಸಿ ಸೂಕ್ಷ್ಮಶರೀರವನ್ನು ನಿರ್ಮಲಗೊಳಿಸುವುದು ; ಭಾವಲಿಂಗಾನುಸಂಧಾನ ಕರ್ಮಬೀಜವನ್ನೇ ಹುರಿಯುವುದು.[2] ಆಗ ಶಿವಯೋಗಿಗೆ ಬಹಿರಂಗದ ಪೂಜ್ಯರಾದ ಗುರು-ಲಿಂಗ-ಜಂಗಮರು ಅಂತರಂಗದಲ್ಲಿ ತೋರಿ ಅರಿವೇ ಗುರುವಾಗಿ. ಸತ್ಕ್ರಿಯೆಯೇ ಲಿಂಗವಾಗಿ, ಸುಜ್ಞಾನವೇ ಜಂಗಮವಾಗಿ ಅವೆಲ್ಲ ಸತ್-ಚಿತ್-ಆನಂದಸ್ವರೂಪವಾಗಿ ಬೆಳಗುತ್ತವೆ. ಭಕ್ತಿ-ಕ್ರಿಯಾ-ಜ್ಞಾನಗಳ ಸಂಗಮದಿಂದ ಶಿವಯೋಗಿಯು ತನ್ನ ಆತ್ಯಂತಿಕ ಸಾಮರಸ್ಯದ ಅನುಭವವನ್ನು ಪಡೆಯುತ್ತಾನೆ. ತಾನೇ ಭಕ್ತ, ತಾನೇ ಲಿಂಗ. ತಾನೇ ಜಂಗಮವಾಗಿ ತಾನೇ ಪೂಜ್ಯಪೂಜಕನಾಗುತ್ತಾನೆ. ಅಂತಃಪ್ರಕಾಶದ ಚಿದ್ಬೆಳಗಿನಿಂದ ಅಂತಃಕರಣಗಳೆಲ್ಲ ಪಾರದರ್ಶಕವಾಗಿ ಮಾರ್ಪಡುತ್ತವೆ. ಅಂಗೇಂದ್ರಿಯಗಳೆಲ್ಲ ಲಿಂಗೇಂದ್ರಿಯಗಳಾಗುತ್ತವೆ.

ಇಷ್ಟ-ಪ್ರಾಣ-ಭಾವಲಿಂಗಪೂಜೆಯಿಂದ ಶಿವಯೋಗಾನುಸಂಧಾನಿ ಪಡೆಯಬಲ್ಲ ಸಿದ್ಧಿವೃದ್ಧಿಗಳನ್ನು ಸಿದ್ಧರಾಮ ಶಿವಯೋಗಿಯು ತನ್ನ ಒಂದು ವಚನದಲ್ಲಿ ನಿವೇದಿಸಿದ್ದಾನೆ. ಇಷ್ಟಲಿಂಗಪೂಜೆ ಅಷ್ಟೈಶ್ವರ್ಯ ಕೊಡುವಂಥದು. ಭಾವ-ಲಿಂಗಪೂಜೆ ಅಖಂಡ ಚಿದೈಶ್ವರ್ಯಪ್ರದವು. ಭಾವಲಿಂಗಪೂಜೆ ನಿರ್ಭಾವ ನಿಜಾನಂದವಸ್ತುಸ್ವರೂಪವಾಗುವುದು ಎಂದಿದ್ದಾನೆ.[3] ರಾಜಯೋಗದಲ್ಲಿ ಪರಮಸಿದ್ಧಿಯನ್ನು ಗಳಿಸಿ, ಷಟ್‌ಸ್ಥಲಸಿದ್ಧಾಂತಕ್ಕೆ ಪರಿವರ್ತನೆಗೊಂಡ ಸಿದ್ಧರಾಮ-ಶಿವಯೋಗಿಯು ಆಯಾ ಚಕ್ರಗಳ ಅನುಭವವನ್ನು ಶಿವಯೋಗಾನುಭವದಲ್ಲಿ ವಿವರಿಸಿದ್ದಾನೆ. ಇನ್ನುಳಿದ ಯೋಗಗಳು ಆಯಾಸಪೂರ್ಣವಾದುವುಗಳೆಂದೂ, ಶಿವಯೋಗಸಹಜವಾದುದೆಂದೂ ಆತ ಯೋಗಸಾಧಕರಿಗೆ ಉಪದೇಶಿಸಿದ್ದಾನೆ. ಷಟ್‌ಚಕ್ರಗಳ ಅನುಸಂಧಾನದಿಂದ ಪಡೆಯಬಹುದಾದ ಕಷ್ಟಸಾಧ್ಯವಾದ ಶಕ್ತಿಸಿದ್ಧಿಗಳು ಶಿವಯೋಗಾನುಸಂಧಾನಿಗೆ ಸಹಜವಾಗಿ ಸಾಧ್ಯವಾಗುವುವೆಂಬುದನ್ನು ಪರ್ಯಾಯದಿಂದ ತಿಳಿಸುತ್ತಾನೆ. ಅವನ ಅನುಭವದಂತೆ ಆದಿಯಾದ ಪರಮಾತ್ಮತತ್ತ್ವವನ್ನು ಆಧಾರವೆಂದು ತಿಳಿಯುವುದೇ ಆಧಾರಚಕ್ರ ; ಆ ಪರತತ್ತ್ವವನ್ನು ನಿರಂತರವೂ ಕೂಡಿ ಕೊಂಡಿರುವುದೇ ಸ್ವಾಧಿಷ್ಠಾನ ; ಶುದ್ಧಜ್ಞಾನವೆಂಬ ಮಣಿಯ ಬೆಳಗಿನಲ್ಲಿರುವುದೇ ಮಣಿಪೂರಕ : ಆಸೆಯಿಲ್ಲದುದೇ ಅನಾಹತ ; ಅಲ್ಲ ಅಹುದೆಂಬುದನ್ನು ಅತಿಗಳೆದ ಸ್ಥಿತಿಯೆ ವಿಶುದ್ಧಿ : ಸರ್ವಜೀವರಲ್ಲಿ ದಯಾಮಯನಾಗಿರುವುದೇ ಆಜ್ಞೆ. ಈ ಎಲ್ಲ ದೈವೀಗುಣಗಳಿಂದ ಕೂಡಿಕೊಂಡಿರುವುದೇ ಶಿವಯೋಗ."[4]

ಇಂದ್ರಿಯಗಳ ಮುಖಾಂತರವಾಗಿ ಮಾನವನು ಅನೇಕ ಅನುಭವಗಳನ್ನು ಪಡೆವಂತೆ ಶಿವಯೋಗಿಗಳೂ, ಅನು ಭಾವಿಗಳೂ ತಮ್ಮ ಅತೀಂದ್ರಿಯಗಳ ಬಲದಿಂದ ಅನೇಕ ದಿವ್ಯಾನುಭವಗಳನ್ನು ಪಡೆಯುತ್ತಾರೆ. ಈ ದಿವ್ಯಾನುಭವಗಳು ಅಂತರಂಗದ ಚಿತ್‌ಪ್ರಭಾಚೈತನ್ಯದ ಕಿರಣಗಳು. ಸದ್ಭಕ್ತಿ. ಸತ್ಕ್ರಿಯೆ, ಸುಜ್ಞಾನದಲ್ಲಿ ಮಿಂದು ಮಡಿಯಾದ ಶಿವಯೋಗಿ ಸರ್ವಾರ್ಪಣಭಾವವುಳ್ಳವನಾಗಿ. ಪರಮಾತ್ಮನಿಗೆ ತನ್ನನ್ನು ಅರ್ಪಿಸಿ ನಿರ್ದೇಹಿಯಾಗುತ್ತಾನೆ. ಲಿಂಗಕ್ಕೆ ಅರ್ಪಿತವಾದ ಅವನ ಮನವೇ ಲಿಂಗವಾಗಿ ಮನ ಲೀಯವಾಗುತ್ತದೆ. ಭಾವ ತೃಪ್ತಿಗೆ ಅರ್ಪಿತವಾಗಿ ಭಾವ ಬಯಲಾಗುತ್ತದೆ. ಆತನ ಸ್ಥೂಲಸೂಕ್ಷ್ಮಕಾರಣಗಳು ಪರವಸ್ತುವಿನ ಉಪಕರಣವಾಗುತ್ತವೆ. ಲಿಂಗಭೋಗೋಪಭೋಗಿಯಾಗಿ. ಚಿದಾಕಾಶದಲ್ಲಿ ಉದಿಸಿದ ಚಿತ್‌ಸೂರ್ಯಪ್ರಭೆಯನ್ನು ಕಂಡು ತಾನೇ ಶಿವಮಯನಾಗುತ್ತಾನೆ— ಶಿವಯೋಗಿ. ಅಂಥ ಅನುಭವದ

1 ಶ್ರೀ ಸಿದ್ಧರಾಮೇಶ್ವರನ ವಚನಗಳು : ೧೯೪೪.
2 ಮಗ್ಗೆ ಮಾಯಿದೇವ : ಶಿವಾನುಭವಸೂತ್ರ III, ೧೩–೧೫.
3 ಶ್ರೀಸಿದ್ಧರಾಮೇಶ್ವರ ವಚನ : ೧೦೧೨.
4 ಶ್ರೀ ಸಿದ್ಧರಾಮೇಶ್ವರ ವಚನಗಳು : ೧೦೪೭.

ಆಳದಲ್ಲಿ ಅನೇಕ ದಿವ್ಯಾನುಭವಗಳು ಗೋಚರಿಸುತ್ತವೆ. 'ಮನದ ರಜದ ಮಣ್ಣ ಕಳೆದು, ದಯಾಶಾಂತಿಯ ಉದಕದಲ್ಲಿ ತೆಗೆವೆನಯ್ಯಾ, ಜಳಕವನೆ ಮಾಡಿ ಯೋಗಕಂಪವನಿಕ್ಕಿ ಹೊದೆವೆನಯ್ಯಾ'[1] ಎಂದು ಸಿದ್ಧರಾಮ ಶಿವಯೋಗಿ ತನ್ನ ಸದ್ವಾಸನೆಯ ದಿವ್ಯಾನುಭವವನ್ನು ಹೇಳಿದ್ದಾನೆ. ತೋಂಟದ ಸಿದ್ಧಲಿಂಗಶಿವಯೋಗಿಯು, 'ಜ್ಞಾನಾಗ್ನಿ ಎದ್ದು ಮೇಲಣ ಸಹಸ್ರದಳ ಕಮಲವ ತಾಗಲು ಕಮಲದೊಳಗಣ ಅಮೃತಕುಂಭ ಉಕ್ಕಿ ಸುರಿಯಲು ಆ ಅಮೃತ ಬಿಂದುವ ಸೇವಿಸಿ ನಿತ್ಯಾನಿತ್ಯವ ಗೆದ್ದು ನಿರ್ಮಲ ನಿರಾವರಣನಾದೆನು'[2] ಎಂದೂ, ಸಿದ್ಧರಾಮ ಶಿವಯೋಗಿಯು. 'ನೆತ್ತಿಯೊಳಗಣ ಸುಧೆ ಪ್ರವಾಹವಾದುದ ಕಂಡು। ಮತ್ತೆ ನಂಬಿದೆ ಗುರುವೆ ಯೋಗಿನಾಥಾ'[3] ಎಂದೂ 'ಸಾಲಿಟ್ಟು ಸುರಿತಿರ್ಪ ಹಾಲನೆ ಸವಿದುಂಡು ನೀಲಜ್ಯೋತಿಯ ದಿವ್ಯಜ್ವಾಲೆಯೊಳ್ ಬೆಳಗೆಂದು। ಬೋಧಿಸೆನ್ನನು ಗುರುವೆ' ಎಂದು ಸರ್ಪಭೂಷಣ ಶಿವಯೋಗಿಗಳೂ ಹಾಡಿದ್ದಾರೆ. ಅನುಭಾವಿಗಳು ಪರವಸ್ತುವಿನ ಸುಳುಹನ್ನು ಗುರುವಿನ ರೂಪದಲ್ಲಿ, ಸೂರ್ಯ-ಚಂದ್ರ-ತಾರಕೆ-ರತ್ನಪ್ರಭೆ-ಮುತ್ತು-ಬಾಲಚುಕ್ಕಿಗಳ ರೂಪದಲ್ಲಿ ಒಮ್ಮೊಮ್ಮೆ ಅಖಂಡ ತೇಜೋರಾಶಿಯ ರೂಪದಲ್ಲಿ ಕಂಡಿದ್ದಾರೆ. ನಿಜಗುಣಶಿವಯೋಗಿ, ಸರ್ಪಭೂಷಣಶಿವಯೋಗಿ, ಚನ್ನಸದಾಶಿವಸ್ವಾಮಿ, ಸಪ್ತಕಾವ್ಯದ ಗುರುಬಸವ ಮೊದಲಾದವರು ನಾದ-ಬಿಂದು-ಕಳೆಗಳ ದಿವ್ಯಾನುಭವಗಳನ್ನು ವರ್ಣಿಸಿದ್ದಾರೆ. ಶಿವಯೋಗ ನಿದ್ರಾಮುದ್ರೆಯಲ್ಲಿ ಕಾಣಿಸಿಕೊಳ್ಳಬಹುದಾದ ದೈವೀ ಅನುಭವಗಳು ಶಿವಯೋಗಿಗಳಿಗೆ ಅನುಭವವೇದ್ಯವಾಗಿವೆ.[4] ಚನ್ನಬಸವಣ್ಣನು ಉದಯಸೂರ್ಯನಂತೆ, ಹುಣ್ಣಿಮೆಯ ಚಂದ್ರನಂತೆ, ಸ್ಫಟಿಕದ ಸಲಾಕೆಯಂತೆ, ಮುತ್ತಿನ ಗೊಂಚಲ ದಂತೆ, ಬೆಳಕಿನ ಪುಬ್ಬುಳಿಯಂತೆ ದೈವೀ ಸುಳುಹನ್ನು ಕಂಡಿದ್ದಾನೆ.[5] ಬಸವಣ್ಣ, ಲಿಂಗಮ್ಮ, ಹಡಪದಪ್ಪಣ್ಣ, ಅಲ್ಲಮ ಪ್ರಭು ಮೊದಲಾದ ಶರಣರೆಲ್ಲರೂ ತಮ್ಮ ದಿವ್ಯಾನುಭವಗಳನ್ನು ನಿವೇದಿಸಿದ್ದಾರೆ. ಮಧುರಪ್ರೇಮದ ದೈವೀಸ್ಪರ್ಶ ವನ್ನು ಪಡೆದ ಶರಣರ ಅನುಭವ ದಿವ್ಯವಾಗಿದೆ. ಅಕ್ಕಮಹಾದೇವಿ, ನೀಲಾಂಬಿಕೆ, ಗಜೇಶಮಸಣಯ್ಯ, ಉರಿಲಿಂಗ ದೇವ ಮೊದಲಾದ ಶರಣರು ಈ ಅನುಭವದಲ್ಲಿ ಅಗ್ರಗಣ್ಯರು. 'ಶರಣ ಸತಿ ಲಿಂಗ ಪತಿ' ಭಾವದಲ್ಲಿ ವಚನಗಳನ್ನು ಹಾಡಿ ಆನಂದಪಟ್ಟಿದ್ದಾರೆ. ಉದಾ :

ಇಂಬಿನ ಚುಂಬನವೇ ಅಮೃತಾಧಾರ ; ಆಲಿಂಗನವೇ ಆಭರಣ
ಸೋಂಕೆ ಸುವಸ್ತ್ರ ; ನೋಟವೆ ಕೂಟ ; ಒಡನಾಟವೆ ಅಷ್ಟಭೋಗವೆನಗೆ
ಉರಿಲಿಂಗದೇವನ ಕೂಟ ಪರಾತ್ಪರ ವಾಙ್ಮನಕ್ಕತೀತ ;
ಪರಮಸುಖವನೇನೆಂಬೆನವ್ವ![6]

ದಶವಿಧನಾದಗಳ ಅನುಭವ, ಪ್ರಣವನಾದದ ದಿವ್ಯಾನುಭವ ಶಿವಯೋಗಿಗಳಿಗೆ ಸಹಜವಾದುವುಗಳು.[7]

ಮಹಿಮಾನ್ವಿತರಿಗೆ ಅನುಭಾವಿಗಳಿಗೆ ಶುದ್ಧಾತ್ಮರಾದ ಸಿದ್ಧರಿಗೆ— ಅವರ ಆತ್ಯಂತಿಕ ಅನುಭಾವದ ಎತ್ತರದಲ್ಲಿ ಅನೇಕ ವಿಧವಾದ ತುರೀಯ ಅವಸ್ಥೆಗಳು ಕಾಣಿಸಿಕೊಳ್ಳುವುವು. ಆತ್ಮಸಾಕ್ಷಾತ್ಕಾರ ಪಡೆದು ತ್ರಿಗುಣಗಳ ಸಮತೋಲನ ವನ್ನು ಗಳಿಸಿದ ಅವಿರಳ ಮಹಾಂತನು ಬಾಲಕನಂತೆ ತೋರುತ್ತಾನೆ. ವಿಧಿನಿಷೇಧಗಳಿಲ್ಲದೆ ಸೂಕ್ಷ್ಮಸಾತ್ವಿಕಾಹಂಕಾರ ವುಳ್ಳ ಮಹಾತ್ಮನು ಉನ್ಮತ್ತನಂತೆ ಕಾಣುತ್ತಾನೆ. ಸಾತ್ವಿಕ ರಜೋಗುಣಾಂಶದಿಂದ ಜನರಂಜನ ಲಾಂಛನವನ್ನೊಲ್ಲದೆ

---

1 ಶೂನ್ಯಸಂಪಾದನೆ III, ೧೦೯.
2 ತೋಂಟದ ಸಿದ್ಧಲಿಂಗಶಿವಯೋಗಿಯ ವಚನಗಳು : ವಚನ ೩೮೦.
3 ಶ್ರೀ ಸಿದ್ಧರಾಮೇಶ್ವರ (ಸಂಕೀರ್ಣ ತ್ರಿವಿಧಿ) ೮೪.
4 ಅಕ್ಕಮಹಾದೇವಿಯ ವಚನಗಳು : ೨೬೨, ೨೫೫, ೨೭೭

"ಅಕ್ಕಾ ಕೇಳಾ, ಅಕ್ಕಯ್ಯ ನಾನೊಂದ ಕನಸ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕೆ ಬಂದುದ ಕಂಡೆನವ್ವ
. . . . . . ಬೆಂಬತ್ತಿ ಕೈವಿಡಿದನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು".

5 ಚನ್ನಬಸವಣ್ಣನ ಮಂತ್ರಗೋಪ್ಯ : ಪದ್ಯ ೨೫ ೩೫.
6 ಉರಿಲಿಂಗದೇವನ ವಚನ : ೪೬.
7 ಸರ್ಪಭೂಷಣಶಿವಯೋಗಿ—ಕೈವಲ್ಯಕಲ್ಪವಲ್ಲರಿ : IV Song, ೮.

ವಿಹರಿಸುವ ಸತ್ಪುರುಷನು ಪಿಶಾಚಿಯಂತೆ ವರ್ತಿಸುತ್ತಾನೆ. ಸಾತ್ವಿಕದಲ್ಲಿಯ ತಮೋಗುಣಾಂಶದಿಂದ ನಿಶ್ಶಬ್ದವೇ ಬ್ರಹ್ಮನೆಂಬ ಆತ್ಮನ ಅರಿವುಂಟಾದ ಮಹಾತ್ಮನು ಮರುಳನಂತೆ, ಮೂಕನಂತೆ ಇರುತ್ತಾನೆ. ಸಕಲಾಗಮ ಮೂರ್ತಿಯಾದ ಜ್ಞಾನಿ ಪಂಡಿತನಂತೆ ತೋರುತ್ತಾನೆ. ಈ ಎಲ್ಲ ಅವಸ್ಥೆಗಳಲ್ಲಿಯೂ ಯೋಗಿಗಳು ಸ್ವಸ್ವರೂಪಾನಂದದಲ್ಲಿ ಸದಾಕಾಲವೂ ತನ್ಮಯರಾಗುವರು.[1] ಹೀಗೆ ಶಿವಯೋಗದ ಪರಮಸಿದ್ಧಾವಸ್ಥೆಯಲ್ಲಿರುವ ಅನುಭಾವಿಯ ಅಂಗಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳಾಗಿ ಸರ್ವಾಂಗಲಿಂಗಮಯನಾಗಿರುವುದು. ಬೆಳಗಿನೊಳಗಣ ಮಹಾಬೆಳಗನ್ನುಂಡು ಆತ ನಿಬ್ಬೆರಗಾಗುವನು ; ಅವನ ನುಡಿ ಪರತತ್ತ್ವವಾಗಿ, ನಡೆ ಪಾವನವಾಗಿ, ಸುಳುಹು ವಸಂತಋತುವಾಗಿ ಕಂಗೊಳಿಸುವುದು. ಬೆಳಕಿನ ಮಹಾಂಬುಧಿಯಲ್ಲಿ ಮುಳುಗಾಡುತ್ತಿದ್ದ ಶಿವಯೋಗಿಯು ಐಕ್ಯದ ಆಚೆಗಿರುವ ನಿರವಯವನ್ನು ಮುಟ್ಟಿ ನಿಸ್ಸಂಗಿಯಾಗಿರುವನು ; ನಿರಾಭಾರಿಯಾಗಿರುವನು.

---

ಚೆನ್ನಾಗಿ ಕಾದ ಕಬ್ಬಿಣದಲ್ಲಿರುವ ನೀರಿನ ಹೆಸರೂ ತಿಳಿಯದಂತೆ ನಾಶವಾಗುತ್ತದೆ. ಅದೇ ತಾವರೆ ಎಲೆಯ ಮೇಲೆ ಇದ್ದಾಗ ಮುತ್ತಿನಂತೆ ಹೊಳೆಯುತ್ತದೆ. ಅದು ಸ್ವಾತೀ ಮಳೆಯಲ್ಲಿ ಸಮುದ್ರದಲ್ಲಿರುವ ಕಪ್ಪೆಚಿಪ್ಪಿನೊಳಗೆ ಬಿದ್ದದ್ದೇ ಆದರೆ ಮುತ್ತೆ ಆಗುತ್ತದೆ. ಆದುದರಿಂದ ಪ್ರಾಯಶಃ ಅಧಮ, ಮಧ್ಯಮ ಉತ್ತಮ ಗುಣವು ಸಹವಾಸದಿಂದ ಉಂಟಾಗುತ್ತದೆ.

ನೀತಿಶತಕ

---

1 ಶ್ರೀ ಸಿದ್ಧರಾಮೇಶ್ವರ ವಚನ : ೧೧೬೯.

# ಸಮುಸಮುಚ್ಚಯ

**ಪಂಡಿತ ನಾಗಭೂಷಣಶಾಸ್ತ್ರಿ**

ಭಾರತದ ಪುಣ್ಯಭೂಮಿಯಲ್ಲಿ ಚಿರಕಾಲದಿಂದಲೂ ಅನೇಕ ಧರ್ಮ ಮತ-ಪಂಥಗಳು ನಡೆದುಬಂದಿರುವವಷ್ಟೆ. ಅವುಗಳಲ್ಲೆಲ್ಲ ಅತಿಪ್ರಾಚೀನತಮವಾದದ್ದು ಶೈವಧರ್ಮವೇ ಎಂಬಲ್ಲಿ ಯಾವ ಸಂಶೋಧಕ ಮನೀಷಿಗಳೂ ಭಿನ್ನಾಭಿಪ್ರಾಯದವರಾಗಿರುವುದಿಲ್ಲ. ಶೈವಧರ್ಮ ಆಚಾರಭೇದದಿಂದ ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂದು ನಾಲ್ಕು ಪ್ರಕಾರವಾಗಿರುವುದು. ಸೂಕ್ಷ್ಮಾಗಮದ ೭ನೆಯ ಪಟಲದಲ್ಲಿ :

ಆಚಾರಭೇದಾಚ್ಛೈವಭೇದಃ ಕಥ್ಯತೇಽಧುನಾ ।
ಸಾಮಾನ್ಯಶೈವಂ ಪ್ರಥಮಂ ಮಿಶ್ರಶೈವಂ ತತಃ ಪರಂ ।
ಶುದ್ಧಶೈವಂ ತತೋ ಜ್ಞೇಯಂ ವೀರಶೈವಂ ತತಃ ಪರಂ ॥

ಹೀಗೆ ಮೇಲೆ ಹೇಳಿದ ಶೈವಪ್ರಭೇದಗಳನ್ನು ಪ್ರತಿಪಾದಿಸಲಾಗಿದೆ.

(೧) ಸಾಮಾನ್ಯ ಶೈವ :

ಸ್ವಯಂಭುಲಿಂಗವನ್ನಾಗಲೀ ದೇವದಾನವಮಾನವರಿಂದ ಪ್ರತಿಷ್ಠಿತಲಿಂಗವನ್ನಾಗಲೀ ಭಸ್ಮರುದ್ರಾಕ್ಷ ಮುಂತಾದ ಶಿವಚಿಹ್ನಧಾರಣಪೂರ್ವಕ ಪೂಜಿಸುತ್ತ ಶಿವಕಾರ್ಯಗಳಲ್ಲಿ ತೊಡಗಿಕೊಂಡವರು ಸಾಮಾನ್ಯಶೈವರು.

(೨) ಮಿಶ್ರಶೈವ :

ಸಾಮಾನ್ಯಶೈವರಂತೆ ಶಿವಲಿಂಗಪೂಜಾಸಕ್ತರಾಗಿದ್ದರೂ ವಿಷ್ಣು, ಷಣ್ಮುಖ, ಗಣೇಶ, ಶಕ್ತಿದೇವತೆಗಳನ್ನು ಕೂಡ ಪೂಜಿಸುವವರು ಮಿಶ್ರಶೈವರು.

(೩) ಶುದ್ಧಶೈವ :

ಶಿವಲಿಂಗಪೂಜೆಯ ಹೊರತು ಮತ್ತಾವ ದೇವತೆಗಳ ಪೂಜೆಗೈಯದ ದೃಢವ್ರತ ಕೈಕೊಂಡವರು ಶುದ್ಧಶೈವರು.

(೪) ವೀರಶೈವ :

ಇತರ ಶೈವರಂತೆ ಲಿಂಗಪೂಜಕರಾಗಿದ್ದರೂ ಇವರ ಲಿಂಗ ಹಾಗೂ ಪೂಜಾದಿಗಳಲ್ಲಿ ಮಹದಂತರವಿರುವುದು. ಅಂತೆಯೇ ಶೈವದ ಹಿಂದೆ 'ವೀರ' ಎಂಬ ವಿಶೇಷಣವನ್ನು ಹಚ್ಚಿಕೊಂಡು ತನ್ನದೇ ಆದ ವೈಶಿಷ್ಟ್ಯವನ್ನು ಸರ್ವಾತ್ಮನಾ ಪಡೆದುಕೊಂಡ ವೀರಶೈವವನ್ನು ಅನುಸರಿಸಿ ನಡೆವವರು ವೀರಶೈವರು.

ಶಿವಯೋಗಿ ಶಿವಾಚಾರ್ಯರು—

ವೀಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ ॥ (ಸಿದ್ಧಾಂತಶಿಖಾಮಣಿ)

(ಲಿಂಗಾಂಗಸಾಮರಸ್ಯಾತ್ಮಕ ಪರಾವಿದ್ಯೆಯಲ್ಲಿ ವಿಶೇಷವಾಗಿ ರಮಿಸುವ ಶೈವರೇ ವೀರಶೈವರು) ಎಂದು ಉದ್ಘೋಷಿಸಿದ್ದಾರೆ. ಕೇವಲ ಭುಜಬಲಪರಾಕ್ರಮದಿಂದ ವೀರರೆಂದೆನಿಸಿಕೊಳ್ಳುವ ಲೌಕಿಕ ವೀರರಿಗಿಂತಲೂ ಸುಜ್ಞಾನ ಬಲದಿಂದ ತಮ್ಮ ತನುಕರಣಾದಿಗಳನ್ನು ಲಿಂಗಮಯ ಮಾಡಿಕೊಂಡು ಲಿಂಗಾಂಗ ವೀರರೆನಿಸಿಕೊಳ್ಳುವ ವೀರಶೈವರು ಎಂತಹ ಉಚ್ಚಮಟ್ಟದವರಾಗಿರುವರೆಂಬುದನ್ನು ಪ್ರತ್ಯೇಕ ಹೇಳುವ ಅವಶ್ಯಕತೆಯೇ ಇರುವುದಿಲ್ಲ. ಶೈವರಲ್ಲಿಯೇ ಕೆಲವರು ಮುಕ್ತಿ ಪಡೆಯಲು ನೂರು ಜನ್ಮಗಳನ್ನು, ಕೆಲವರು ಹತ್ತು ಜನ್ಮಗಳನ್ನು, ಕೆಲವರು ಮೂರು ಜನ್ಮಗಳನ್ನು ಎತ್ತಬೇಕಾಗುವುದೆಂದು ಹೇಳಿದ್ದುಂಟು. ಆದರೆ ವೀರಶೈವಧರ್ಮಾವಲಂಬಿಗಳಿಗೆ ಮಾತ್ರ ಒಂದೇ ಜನ್ಮದಲ್ಲಿ ಮುಕ್ತಿ ಸಂಭವಿಸುವುದೆಂದು ಶಿವಾಗಮ ಸಾರಿದೆ.

"ಏಕೇನ ಜನ್ಮನಾ ಮುಕ್ತಿರ್ವೀರಾಣಾಂ ತು ಮಹೇಶ್ವರಿ!"॥

ಇದರ ಮೇಲಿಂದ ವೀರಶೈವದ ವೈಶಿಷ್ಟ್ಯ ಸ್ಪಷ್ಟವಾಗಿಯೇ ಪ್ರತಿಪಾದಿಸಿದಂತಾಗಿರುವುದು.

## ವೀರಶೈವ ತಾಂತ್ರಿಕ ವೈದಿಕವು

ಧರ್ಮಗಳಲ್ಲಿ ವೈದಿಕ, ತಾಂತ್ರಿಕ, ವೈದಿಕತಾಂತ್ರಿಕ, ತಾಂತ್ರಿಕ ವೈದಿಕ ಹೀಗೆ ನಾಲ್ಕು ಪ್ರಕಾರಗಳು ಕಂಡುಬರುತ್ತವೆ.

(೧) ವೈದಿಕರು :

ಕೇವಲ ವೇದೋಕ್ತಗಳಾದ ವಿಧಿನಿಷೇಧಗಳನ್ನು ತಿಳಿದುಕೊಂಡು ಅವನ್ನು ತಮ್ಮ ಆಚರಣೆಯಲ್ಲಿ ತಂದುಕೊಳ್ಳುವವರು ವೈದಿಕರು.

(೨) ತಾಂತ್ರಿಕರು :

ತಂತ್ರವೆಂದರೆ ಆಗಮ. ಕೇವಲ ಆಗಮೋಕ್ತ ಆಚರಣೆಗಳನ್ನು ಮೈಗೂಡಿಸಿಕೊಳ್ಳಲು ತೊಡಗಿದವರು ತಾಂತ್ರಿಕರು.

(೩) ವೈದಿಕತಾಂತ್ರಿಕರು :

ವೇದೋಕ್ತ ಧರ್ಮಾಚರಣೆಗಳಲ್ಲಿ ತೊಡಗಿದವರಾಗಿದ್ದರೂ ವೇದಾವಿರುದ್ಧಗಳಾದ ಆಗಮೋಕ್ತ ಧರ್ಮಾಚರಣೆಗಳಲ್ಲಿಯೂ ಆಸಕ್ತಿವಹಿಸಿದವರು ವೈದಿಕತಾಂತ್ರಿಕರು.

(೪) ತಾಂತ್ರಿಕವೈದಿಕರು :

ಆಗಮೋಕ್ತ ಧರ್ಮಾಚರಣೆಗಳಲ್ಲಿ ಶ್ರದ್ಧೆವಹಿಸಿ ತೊಡಗಿದವರಾಗಿದ್ದರೂ ಆಗಮಾವಿರುದ್ಧ ವೈದಿಕಾಚರಣೆಗಳಲ್ಲಿಯೂ ಆಸಕ್ತಿವಹಿಸಿ ನಡೆವವರು ತಾಂತ್ರಿಕವೈದಿಕರು.

ವೀರಶೈವರು ತಾಂತ್ರಿಕವೈದಿಕವರ್ಗದಲ್ಲಿ ಸೇರಿದವರಾಗಿರುವರು. ಅಂತೆಯೇ ವೀರಶೈವವು ನಿಗಮಾಗಮ ಕಲ್ಪವೃಕ್ಷದ ಸುಮಧುರ ಪರಿಪಕ್ವ ಅಮೃತಫಲವಾಗಿರುವುದೆಂದು ಹೇಳಬಹುದಾಗಿದೆ.

## ವೀರಶೈವವು ಶಿವಧರ್ಮ

ವೀರಶೈವವು ಯಾವುದಾದರೊಂದು ಕಾಲದ ಯಾವನಾದರೊಬ್ಬ ವ್ಯಕ್ತಿವಿಶೇಷ ಬುದ್ಧಿಯಿಂದ ಜನ್ಮವೆತ್ತಿ ಬಂದದ್ದಲ್ಲ. 'ಶಿವೇನೋಕ್ತಾಃ ಶಿವಾಗಮಾಃ' ಎಂಬ ಉಕ್ತಿಗನುಸಾರ ಶಿವನಿಂದ ಉಕ್ತಗಳಾದ ಶಿವಾಗಮಗಳಲ್ಲಿಯೇ ಪ್ರತಿಪಾದಿತವಾಗಿರುವುದು. ಅಂತೆಯೇ ಈ ಧರ್ಮವು ಬೌದ್ಧಾದಿಧರ್ಮಗಳಂತೆ ಯಾವ ವ್ಯಕ್ತಿವಿಶೇಷದ ಹೆಸರನ್ನೂ ತನ್ನ ಹಿಂದೆ ಹಚ್ಚಿಕೊಳ್ಳದೆ ಕೇವಲ ಶಿವಧರ್ಮವೆಂದೇ ಹೇಳಿಸಿಕೊಳ್ಳುವುದು.

## ವೀರಶೈವವು ಜ್ಞಾನಕ್ರಿಯಾಸಮುಸಮುಚ್ಚಯಾತ್ಮಕ

ವೀರಶೈವವು ವಿಚಾರ ಹಾಗೂ ಆಚಾರ ಈ ಉಭಯವನ್ನೊಳಗೊಂಡಿರುವ ಧರ್ಮವಾಗಿದೆ. ವಿಚಾರಪರವಾದದ್ದು ಸಿದ್ಧಾಂತಭಾಗ, ಆಚಾರಪ್ರಧಾನವಾದದ್ದು ಸಾಧನಭಾಗ ಎನಿಸಿಕೊಳ್ಳುವುವು. ವಿಚಾರಶೂನ್ಯವಾದ ಆಚಾರ, ಆಚಾರಶೂನ್ಯವಾದ ವಿಚಾರ ಇವೆರಡೂ ಬೆಲೆಬಾಳದೆಂಬುದನ್ನು ತತ್ತ್ವವೇತ್ತರೆಲ್ಲರೂ ಒಪ್ಪಿಕೊಳ್ಳುವುದುಂಟು. ಇವೆರಡರಲ್ಲಿ ಪ್ರಾಣ-ಶರೀರಗಳಂತೆ ನಿಕಟಸಂಬಂಧವಿರುವುದು. ಈ ಬಗ್ಗೆ ಮಹಾನುಭಾವಿಗಳಾದ ಪ್ರಭುದೇವರು :

> ಅಂತರಂಗದ ಅರಿವಿಗೆ ಆಚಾರವೇ ಕಾಯ
> ಆಚಾರಕಾಯವಿಲ್ಲದಡೆ ಅರಿವಿಗೆ ಆಶ್ರಯವಿಲ್ಲ
> ಅರಿವು ಆಚಾರದಲ್ಲಿ ಸಮವೇಧಿಸಿದ ಲಿಂಗೈಕ್ಯನ
> ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ
> ಅರಿವಿಂಗೆ ಅಚ್ಚಾಗಿ ಆಚಾರಕ್ಕೆ ಆಳಾಗಿ ನಮ್ಮ ಗುಹೇಶ್ವರನು
> ನಿನ್ನ ವಶಕ್ಕೆ ಒಳಗಾದನು....

ಎಂದು ಜ್ಞಾನಕ್ರಿಯೆಗಳ ಸಹಯೋಗವನ್ನು ಮನೋಜ್ಞವಾಗಿ ಹೇಳಿರುವರು. ಷಟ್‌ಸ್ಥಲಜ್ಞಾನಚಕ್ರವರ್ತಿ ಚೆನ್ನಬಸವಣ್ಣನವರು—

ಕ್ರಿಯೆ ಜಡವೆಂಬರು ಜ್ಞಾನ ಅಜಡವೆಂಬರು ಅದೆಂತಯ್ಯಾ ;
ನೀತಿ ಹೇಳಿದ್ದು ಜಡವೇ ? ಕಷ್ಟವಿಲ್ಲದೆ ಮನಬಂದಂತೆ ಬೊಗಳಿ
ಭೋಗಿಸಿ ಭವಕ್ಕೆ ಹೋಗುವುದು ಅಜಡವೇ ?
ಕ್ರಿಯಾಜ್ಞಾನವೆಂಬ ಉಭಯಶಬ್ದದರ್ಥವನರಿಯದೆ
ಕಂಡಕಂಡಹಾಗೆ ಬೊಗಳುವವರನು ಏನೆಂಬೆ ಕೂಡಲಚೆನ್ನಸಂಗಮದೇವಾ

ಎಂದಿದ್ದಾರೆ. ಇಲ್ಲಿ ಕ್ರಿಯಾಜ್ಞಾನಗಳ ಬಗೆಗೆ ಸರಿಯಾದ ತಿಳಿವಳಿಕೆಯಿಲ್ಲದೆ ಮಾತು ಬಳಸುವವರಿಗೆ ಸರಿಯಾದ ಎಚ್ಚರ ಕೊಡಲಾಗಿದೆ.

ಶಿವರಹಸ್ಯಕಾರರು ಜ್ಞಾನಕ್ರಿಯೆಗಳಲ್ಲಿ ಅನ್ಯೋನ್ಯ ನಿಕಟಸಂಬಂಧವಿರುವುದೆಂಬುದನ್ನು ದೃಷ್ಟಾಂತಪುರಸ್ಸರ ಪ್ರತಿಪಾದಿಸಿರುವರು :

ನ ಕ್ರಿಯಾರಹಿತಂ ಜ್ಞಾನಂ ನ ಜ್ಞಾನರಹಿತಾ ಕ್ರಿಯಾ ।
ಅಪಶ್ಯನ್ನಂಧಕೋ ದಗ್ಧೋಽಗಚ್ಛನ್ಪಂಗುಶ್ಚ ದಹ್ಯತೇ ॥

ಶಿವಯೋಗಿಶಿವಾಚಾರ್ಯರು ಕೂಡ—

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ದ್ವಯಮಾಚರೇತ್ ॥

ಕುರುಡ–ಕುಂಟರಿದ್ದ ಮನೆಗೆ ಬೆಂಕಿ ತಗಲಿ ಸುಡಲಾರಂಭಿಸಿದಾಗ ಅಲ್ಲಿದ್ದ ಕುರುಡನಿಗೆ ಹೊರಗೆ ಹೋಗಲು ಆಗದ್ದಕ್ಕಾಗಿ ಸುಟ್ಟು ಸತ್ತುಹೋಗಬೇಕಾಗುವುದು. ಇವನಂತೆಯೇ ಕಣ್ಣಿದ್ದರೂ ಕಾಲಿಲ್ಲದ ಹೆಳವನಿಗೆ ಓಡಿಹೋಗುವುದಾಗದೆ ಅಲ್ಲಿಯೇ ಸುಟ್ಟು ಸತ್ತುಹೋಗುವುದನ್ನು ತಪ್ಪಿಸಿಕೊಳ್ಳಲಾಗದು. ಒಂದು ವೇಳೆ ಅವರಿಬ್ಬರೂ ಪರಸ್ಪರ ಸಮ್ಮಿಲಿತರಾದರೆ ಯಾವ ಹಾನಿಯೂ ಆಗಲು ಅವಕಾಶ ದೊರೆಯದು. ಹೀಗೆಯೇ ಜ್ಞಾನ-ಕರ್ಮಗಳು ಪರಸ್ಪರ ಅಗಲಿದ್ದಾಗ ಸಂಭವಿಸುವ ಅನರ್ಥವನ್ನು ಪರಸ್ಪರ ಸಮ್ಮಿಲಿತವಾದಾಗ ತಪ್ಪಿಸಿಕೊಂಡು ಪರಮಪುರುಷಾರ್ಥವೆನಿಸಿದ ಲಿಂಗಾಂಗ ಸಾಮರಸ್ಯರೂಪಸಿದ್ಧಿಯನ್ನು ಸಾಧಿಸಲು ಅನುಕೂಲವಾಗುವುದು.

ಹೀಗೆ ಅನುಭಾವಿಗಳು ಜ್ಞಾನಕ್ರಿಯೆಗಳ ಸಮ್ಮಿಲನದ ಅವಶ್ಯಕತೆಯನ್ನು ಸ್ಪಷ್ಟವಾಗಿ ಹೇಳುತ್ತ ಬಂದಿರುವರು. ಈಶಾವಾಸ್ಯೋಪನಿಷತ್ತಿನಲ್ಲಿ—

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥

ಈ ಮಂತ್ರವು ಜ್ಞಾನಕ್ರಿಯೆಗಳ ಸಮುಸಮುಚ್ಚಯವನ್ನು ಚೆನ್ನಾಗಿಯೇ ತಿಳಿಸಿಕೊಡುವುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಶರೀರರಚನೆಯ ಕಡೆಗೆ ಲಕ್ಷ್ಯಗೊಟ್ಟು ನೋಡಹತ್ತಿದರೆ ಅಲ್ಲಿರುವ ಜ್ಞಾನೇಂದ್ರಿಯ ಹಾಗೂ ಕರ್ಮೇಂದ್ರಿಯಗಳು ಪರಸ್ಪರ ಸಹಕಾರ ಮಾಡದೆ ಹೋದರೆ ಜೀವನಯಾತ್ರೆ ಕುಂಠಿತವಾಗುವುದೆಂಬುದು ತಿಳಿದುಬರುವುದಷ್ಟೆ.

ಎಲ್ಲ ಉಪನಿಷತ್ತುಗಳ ಸಾರಸರ್ವಸ್ವವೆನಿಸಿದ ಗೀತೆಯು ಕೂಡ ಜ್ಞಾನಕರ್ಮಗಳ ಅಗತ್ಯವನ್ನು ಎತ್ತಿಹಿಡಿಯುವುದಾಗಿರುವುದೆಂದು ಸುಪ್ರಸಿದ್ಧ ಪಂಡಿತರೆಲ್ಲರ ಅಭಿಪ್ರಾಯವಾಗಿದೆ. ಗೀತೆಯ ಕೊನೆಯ ಶ್ಲೋಕವನ್ನಿಷ್ಟು ಪರಾಮರ್ಶಿಸಿ ನೋಡಿದರಂತೂ ಜ್ಞಾನಕರ್ಮಗಳ ಸಮ್ಮಿಲನದ ಪ್ರಯೋಜನವೇನೆಂಬುದು ಸ್ಫುಟವಾಗುವುದು.

ಎಲ್ಲಿ ಯೋಗೇಶ್ವರ ಕೃಷ್ಣನೂ ಧನುರ್ಧಾರಿಯಾದ ಪಾರ್ಥನೂ ಕೂಡಿರುವರೋ ಅಲ್ಲಿ ಸಿರಿಯುಂಟು, ವಿಜಯವುಂಟು, ವೈಭವವುಂಟು ಹಾಗೂ ಅಚಲವಾದ ನೀತಿಯುಂಟು ಎಂಬ ಹೇಳಿಕೆಯಲ್ಲಿ ಯೋಗೇಶ್ವರ ಕೃಷ್ಣನು ಜ್ಞಾನರೂಪ, ಧನುರ್ಧಾರಿಯಾದ ಪಾರ್ಥ ಕ್ರಿಯಾರೂಪ ಎಂಬುದು ಸ್ಪಷ್ಟವಾಗಿ ತಿಳಿದುಬರುವುದು.

ಗೀತೆಯನ್ನು ಮೊದಲು ಆಲಿಸಿದ ಸಂಜಯನ ಮುಖದಿಂದ ಹೇಳಿಸಿದ ವ್ಯಾಸಮಹರ್ಷಿಯ ಸುಜ್ಞಾನಬಲ ವೆಷ್ಟೆಂಬುದು ತಿಳಿದುಬರದಿರಲಾರದು.

ಜ್ಞಾನಕ್ರಿಯೆಗಳ ಸಮಸಮುಚ್ಚಯದ ಮಹತಿಯನ್ನರಿತವರು ಅವುಗಳ ಬಗೆಗೆ ಗೌರವಾದರಗಳನ್ನಿಟ್ಟುಕೊಳ್ಳು ವಲ್ಲಿ ಯಾವ ಸಂದೇಹವೂ ಇಲ್ಲ. ಅವುಗಳ ಸದುದ್ದೇಶ ಅಲ್ಪಜ್ಞತ್ವ ಅಲ್ಪಕರ್ತೃತ್ವವನ್ನು ಹೋಗಲಾಡಿಸುವುದೇ ಆಗಿರುವುದು. ಜೀವಭಾವದ ತಮ ಸರಿದುಹೋಗಿ ದೇವಭಾವಪ್ರಕಾಶ ಪ್ರಸರಿಸಬೇಕಾದರೆ ಬೇರೆ ಉಪಾಯ ಮತ್ತೊಂದಿಲ್ಲ.

ಶಿವಾದ್ವೈತ ಸಿದ್ಧಾಂತದ ಪ್ರಕಾರ ಶಿವನ ಸಂಕೋಚಾವಸ್ಥೆಯೇ ಜೀವ. ಶಕ್ತಿಯ ಸಂಕೋಚಾವಸ್ಥೆಯೇ ಮಲ. ಶಿವನ ಸತ್ ಚಿತ್ ಆನಂದ ಇವು ಮೂರೂ ಸಂಕೋಚಗೊಂಡಾಗ ಅವೇ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ ಎಂಬ ಹೆಸರಿನ ಜೀವರಾಗುವುವು. ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಸಂಕೋಚಗೊಂಡಾಗ ಅವೇ ಕ್ರಮವಾಗಿ ಆಣವಮಲ, ಮಾಯಾಮಲ, ಕಾರ್ಮಿಕಮಲ ಎಂಬ ನಾಮ ಪಡೆಯುವುವು. ಆಗ ಆಣವಮಲಸಂಬಂಧಿಯಾದ ಜೀವನು ಪ್ರಾಜ್ಞ ಎಂಬ ಹೆಸರನ್ನು ತಾಳಿ ತನ್ನ ಸರ್ವವ್ಯಾಪಕತೆಯನ್ನು ಕಳೆದುಕೊಂಡು ಅಲ್ಪತ್ವವನ್ನು ಅನುಭವಿಸುವನು. ಮಾಯಾ ಮಲಸಂಬಂಧಿಯಾದ ಜೀವನು ತೈಜಸನೆಂಬ ಹೆಸರನ್ನು ಪಡೆದು ತನ್ನ ಸರ್ವಜ್ಞತ್ವದ ಪರಿವೆಯಿಲ್ಲದೆ ವ್ಯವಹರಿಸ ಹತ್ತುವನು. ಕಾರ್ಮಿಕಮಲಸಂಬಂಧಿಯಾದ ಜೀವನು ತನ್ನ ಸರ್ವಕರ್ತೃತ್ವದ ಮರವೆಯಿಂದ ವಿಶ್ವನೆಂಬ ಹೆಸರನ್ನು ತಾಳಿ ಅಲ್ಪಕ್ರಿಯೆಗಳಲ್ಲಿ ತೊಡಗುವನು.

ಸುಜ್ಞಾನ–ಸತ್ಕ್ರಿಯೆಗಳಿಲ್ಲದ ಜೀವನ ಅಂಧಮಯ, ದುಃಖಮಯ ಜೀವನ. ಯಾವ ವಸ್ತುವಾಗಲಿ ಅದು ಕೇವಲ ಪ್ರಾಕೃತಿಕವಾಗಿಯೇ ಉಳಿದಲ್ಲಿ ಅದರಲ್ಲಿ ಯಾವ ಕಲೆಯೂ ಕಾಣಿಸಿಕೊಳ್ಳದೇ ಅದು ಬೆಲೆಬಾಳ ದಂತಾಗುವುದು. ಅದಕ್ಕಾಗಿ ಅದು ಸಂಸ್ಕಾರ ಪಡೆಯಲೇಬೇಕಾಗುವುದು. ಜೀವಿಗಳಾದರೂ ತಮ್ಮ ಮಲದೋಷ ನಿವೃತ್ತಿಗಾಗಿ ಸದ್ಗುರು ಕೃಪೆಗೆ ಪಾತ್ರರಾಗಿ ಸಂಸ್ಕಾರ ಪಡೆದಾಗ ಅಂಗ ಎಂಬ ನಾಮಧೇಯವನ್ನು ಹೊಂದುವರು. ಅಂಗಸಂಜ್ಞಿತಜೀವಿಗಳು ಶುದ್ಧ ಜೀವಿಗಳೆನಿಸುವರು. ಅವರೇ ಲಿಂಗದಲ್ಲಿ ಒಂದಾಗುವ ಅರ್ಹತೆ ಪಡೆಯುವರು. ಅಂಗರು ಲಿಂಗದೊಡನೆ ಒಂದಾಗಲು ಜ್ಞಾನ-ಕ್ರಿಯೆಗಳೆರಡನ್ನೂ ಸಮಾಶ್ರಯ ಮಾಡಲೇಬೇಕಾಗುವುದು. ಅವುಗಳಲ್ಲಿ ಒಂದನ್ನು ಮಾತ್ರ ಅನುಸರಿಸಿದರೆ ಇಷ್ಟಸಿದ್ಧಿಯಾಗದು. ಒಟ್ಟಿನಲ್ಲಿ ಹೇಳುವುದಾದರೆ ಸ್ವಸ್ವರೂಪದ ಮರವೆಯ ಮೂಲಕ ಸಂಭವಿಸಿದ ಜೀವಭಾವವನ್ನು ಪರಿಹರಿಸಿಕೊಳ್ಳಲು ಸಾಂಸ್ಕಾರಿಕ ಪುನರ್‌ಜನ್ಮವನ್ನು ಪಡೆಯಲೇಬೇಕಾಗುವುದೆಂಬುದು ಸುನಿಶ್ಚಿತವಾಗುವುದು. ಮೊದಲು ವಿಷಯೋನ್ಮುಖವಾಗಿದ್ದ ಪ್ರವೃತ್ತಿಯು ಲಿಂಗೋನ್ಮುಖವಾಗಿ ಪರಿವರ್ತಿಸುವುದು, ಸಾಂಸ್ಕಾರಿಕ ಪುನರ್ಜನ್ಮದಿಂದ ಅಂಗಭಾವವನ್ನು ಪಡೆದಾಗ. 'ಅಂ ಗಚ್ಛತೀತಿ ಅಂಗಂ' ಎಂಬ ಯೌಗಿಕಾರ್ಥವು ಅದನ್ನೇ ಹೇಳುವುದು. ತನ್ನ ಮೂಲಸ್ವರೂಪವೆನಿಸಿದ ಲಿಂಗದೊಡನೆ ಸಮರಸಪಡೆಯಲು ತೊಡಗಿಕೊಂಡಾಗ ಕ್ರಿಯಾ-ಜ್ಞಾನ ಗಳ ಅವಶ್ಯಕತೆಯೆಷ್ಟೆಂಬುದು ಕಂಡುಬರದಿರಲಾರದು. ಮಹಾ ಅನುಭಾವವು ತಲೆದೋರುವುದು ಅವೆರಡರ ಸಮ್ಯಗ್ ಯೋಗದಿಂದಲೇ. ಜೀವನದ ಪರಮಚರಮಸಿದ್ಧಿಯೆನಿಸಿದ ಲಿಂಗಾಂಗಸಾಮರಸ್ಯವೆಂಬುದು ಮತ್ತಾವುದರಿಂದಲೂ ಸಾಧ್ಯವಾಗದೆಂದು ಅನುಭಾವಿಗಳೆಲ್ಲರೂ ಮುಕ್ತಕಂಠದಿಂದ ಹೇಳಿರುವರು.

ಕೇವಲಾದ್ವೈತಸಿದ್ಧಾಂತದಲ್ಲಿ ಕರ್ಮಜ್ಞಾನಗಳು ವಿಷಮಸಮುಚ್ಚಯರೂಪದಲ್ಲಿರುವುದೆಂದು ಪ್ರತಿಪಾದಿಸ ಲಾಗಿದೆ. ಕರ್ಮಕಾಲದಲ್ಲಿ ಜ್ಞಾನವಿಲ್ಲ. ಜ್ಞಾನಕಾಲದಲ್ಲಿ ಕರ್ಮವಿಲ್ಲವೆಂಬುದೇ ಆ ಸಿದ್ಧಾಂತದ ಆಶಯ. ಈ ಅಭಿಪ್ರಾಯವನ್ನು ಬಹುಜನ ದಾರ್ಶನಿಕರು ಒಪ್ಪಿರುವುದಿಲ್ಲ.

ಕೇವಲಾದ್ವೈತಸಿದ್ಧಾಂತದ ಪ್ರಕಾರ ಕರ್ಮದ ಫಲವೇ ಬೇರೆ, ಜ್ಞಾನದ ಫಲವೇ ಬೇರೆ. ಇದು ಶಿವಾದ್ವೈತ ದಲ್ಲಿರುವುದಿಲ್ಲ. ಕೇವಲ ಕರ್ಮದಿಂದ ಮುಕ್ತಿ ಎಂಬುದು ದ್ವೈತಿಗಳಾದ ಕರ್ಮಕಾಂಡಿಗಳದು. ಕೇವಲ ಜ್ಞಾನದಿಂದ ಮುಕ್ತಿ ಎಂಬುದು ಅದ್ವೈತಿಗಳಾದ ಜ್ಞಾನಕಾಂಡಿಗಳದು. ಶಿವಾದ್ವೈತದಲ್ಲಿ ಕ್ರಿಯಾ-ಜ್ಞಾನ ಸಮಸಮುಚ್ಚಯವೇ ಮುಕ್ತ್ಯುಪಾಯವೆಂಬುದು ಸುನಿಶ್ಚಿತವಾಗಿರುವುದು.

ಶಿವಯೋಗಿಶಿವಾಚಾರ್ಯರು—

> ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ ।
> ಫಲಾಭಿಸಂಧಿರಹಿತಂ ತಸ್ಮಾತ್ ಕರ್ಮ ನ ಸಂತ್ಯಜೇತ್ ॥ (ಸಿದ್ಧಾಂತ ಶಿಖಾಮಣಿ)

ಎನ್ನುವರು.

ಚೆನ್ನಬಸವಣ್ಣನವರು—

ಅಂತರಂಗದ ಅರಿವು ಬಹಿರಂಗದ ಕ್ರಿಯೆ ಈ ಉಭಯಸಂಮಿತ
ಒಂದಾದ ಶರಣಂಗೆ ಹಿಂಗಿತ್ತು ತನುಸೂತಕ ಹಿಂಗಿತ್ತು ಮನಸೂತಕ
ಕೂಡಲಚೆನ್ನಸಂಗಯ್ಯನಲ್ಲಿ ಸಂಗವಾದದ್ದು ಸರ್ವೇಂದ್ರಿಯ ॥

ಸಿದ್ಧರಾಮಶಿವಯೋಗಿಗಳು ಕೂಡ—

ಕ್ರಿಯಾಜ್ಞಾನವೆಂಬುದಕ್ಕೆ ಭೇದ ಅಂಶವಿಲ್ಲ ನೋಡಾ ।
'ದ್ವಂದ್ವೇನ ಭೇದಃ' ಎಂಬ ಅಥರ್ವಶಾಖೆಯದು ಸರಿಯೇ ।
ಸೂಕ್ಷ್ಮೇಂದ್ರಿಯನಿಗ್ರಹದಲ್ಲಿ ಜ್ಞಾನವೆನಿಸಿತ್ತು । 'ಜ್ಞಾನಂ ವಿನಾ ಕ್ರಿಯಾ
ನ ಭಾತಿ, ಕ್ರಿಯಾಂ ವಿನಾ ನ ಭಾತಿ ತತ್' ಎಲೈ
ಕಪಿಲಸಿದ್ಧಮಲ್ಲಿಕಾರ್ಜುನಾ
ಕ್ರಿಯೆ ಮರೆದಲ್ಲಿ ಅರಿವು ಹೀನವಾಗಿಪ್ಪುದು, ಅರಿವು
ಮರೆದಲ್ಲಿ ಕ್ರಿಯಾ ಹೀನವಾಗಿಪ್ಪುದು....
"ಕ್ರಿಯಾಜ್ಞಾನಗಳೆರಡೂ ದೀಪ-ದೀಪ್ತಿಗಳಿದ್ದಂತೆ :
ಅವೆರಡನ್ನೂ ಬಿಟ್ಟಿರಬಾರದು. ಬಿಟ್ಟಿದ್ದರೆ ಬಟ್ಟಬಯಲಾದ
ಬ್ರಹ್ಮವೂ ಬಿಟ್ಟೋಡುತ್ತದೆ"

ಎಂದಿದ್ದಾರೆ.

ಇವೇ ಮೊದಲಾದ ಅನುಭಾವಿಗಳ ಸೂಕ್ತಿಗಳು ಜ್ಞಾನಕ್ರಿಯೆಗಳ ಸಮಸಮುಚ್ಚಯವನ್ನು ಸ್ಪಷ್ಟವಾಗಿಯೇ ಪ್ರತಿಪಾದಿಸುವುವು. ಇಲ್ಲಿ ಇನ್ನೊಂದು ನೆನಪಿಡುವ ಸಂಗತಿಯೆಂದರೆ ಆಚಾರ್ಯರ ಅಭಿಪ್ರಾಯದ ಪ್ರಕಾರ "ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ" ॥ ಈ ಉಕ್ತಿಯು ಜ್ಞಾನಕ್ರಿಯೆಗಳಲ್ಲಿ ಅಂಗೀಅಂಗಭಾವವನ್ನು ಅಭಿವ್ಯಕ್ತ ಮಾಡುವುದಾಗಿರುವುದು. ಆದರೆ ಮಹಾನುಭಾವಿ ಚನ್ನಬಸವಣ್ಣನವರು ಜ್ಞಾನಕ್ರಿಯೆಗಳಲ್ಲಿ ಭೇದವನ್ನೇ ಗಣಿಸದವರಾಗಿರುವರು. "ಜ್ಞಾನವೇ ಕ್ರಿಯೆ, ಕ್ರಿಯೆಯೇ ಜ್ಞಾನ. ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಮಾಡುವುದು. ಜ್ಞಾನದ ಅಭಿವ್ಯಕ್ತಿರೂಪವೇ ಕ್ರಿಯೆ, ಕ್ರಿಯೆಯ ಅವ್ಯಕ್ತರೂಪವೇ ಜ್ಞಾನ" ಎಂಬುದೇ ಚನ್ನಬಸವಣ್ಣನವರ ಅನುಭವ.

ಜ್ಞಾನಕರ್ಮಸಮಸಮುಚ್ಚಯವಾದವನ್ನು ಶಿವಾನುಭಾವಿಗಳಷ್ಟೇ ಒಪ್ಪುವರೆಂದಲ್ಲ. ಇತರ ಕೆಲವು ದಾರ್ಶನಿಕರೂ ಒಪ್ಪಿಕೊಂಡಿರುವರು. ಚೆನ್ನಬಸವಣ್ಣನವರ ಅಭಿಪ್ರಾಯದ ಪ್ರಕಾರ ಅವೆರಡರಲ್ಲಿ ಅಭಿನ್ನತೆಯನ್ನು ಮಾತ್ರ ಯಾರೂ ಹೇಳಿಲ್ಲವೆಂದು ಕಂಡುಬರುವುದು. ಇದೊಂದು ಅನುಭಾವಿಗಳ ಅನುಭವದ ವೈಶಿಷ್ಟ್ಯವೇ ಆಗಿರುವುದು.

ಬಾಳ ಹೊಳೆಯ ಎರಡು ದಂಡೆಗಳಂತಿದ್ದವು ಪ್ರಪಂಚಪರಮಾರ್ಥಗಳು. ಅಂತಹ ನದಿಯನ್ನು ದಾಟಿಸಿ ಲಿಂಗಾಂಗಸಾಮರಸ್ಯರೂಪ ಚರಮ-ಪರಮ ತೀರವನ್ನು ಮುಟ್ಟಿಸುವ ಪರಮಸಾಧನ ಜ್ಞಾನಕ್ರಿಯೆಗಳ ಸಮಸಮುಚ್ಚಯವೆಂಬುದು ನಿರ್ಭ್ರಾಂತ ಸಿದ್ಧಾಂತವಾಗಿದೆ.

---

ಕಂಡ ಭಕ್ತರಿಗೆ ಕೈ ಮುಗಿವಾತನೆ ಭಕ್ತ
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ,
ಸದುವಿನಯೆ ಸದಾಶಿವನ ಒಲುಮೆಯಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಬಸವಣ್ಣ

# ವೀರಶೈವದಲ್ಲಿ ಮೋಕ್ಷದ ಕಲ್ಪನೆ

ಎ. ಎಂ. ಜಾಲಿಹಾಳ

ಇಂದಿನ ವೀರಶೈವರ (ಲಿಂಗಾಯತರ) ಧರ್ಮಾಚರಣೆಯಿಂದ ಅವರ ಸಿದ್ಧಾಂತಮೌಲ್ಯಗಳ ಸಮಂಜಸತೆಯ ಮಾಪನ ಮಾಡುವುದಾದರೆ ಆ ಸಿದ್ಧಾಂತದ ರೂಪರೇಖೆಗಳೇ ಒಂದು ರೀತಿಯಾಗುವವು. ಏಕೆಂದರೆ ಎಲ್ಲ ಮತಧರ್ಮಗಳಲ್ಲಿಯು ವಾಸ್ತವಿಕ ಆಚರಣೆ ಮತ್ತು ತತ್ತ್ವಆದರ್ಶಗಳ ನಡುವೆ ಮಹದಂತರವಿರುತ್ತದೆ. ಕಾರಣ ಯಾವುದೇ ಸಿದ್ಧಾಂತದ ಸಮರ್ಪಕತೆಯನ್ನು ಮತ್ತು ಸಾಮಂಜಸ್ಯವನ್ನು ಅದರ ಅನುಯಾಯಿಗಳ ಆಚರಣೆಯಿಂದ ನಿರ್ಣಯಿಸಲಾಗದು. ಸಾಮಾನ್ಯವಾಗಿ ಯಾವುದೇ ಸಂಸ್ಕೃತಿಯು. ನಾಗರಿಕತೆಯು ಅಥವಾ ಧರ್ಮದ ಸ್ವರೂಪವನ್ನು ಅದರ ತತ್ತ್ವಾದರ್ಶ, ಮೌಲ್ಯಗಳ ಆಧಾರದಿಂದ ನಿರ್ಧರಿಸಲಾಗುತ್ತದೆ. ಈ ಸಂದರ್ಭದಲ್ಲಿ ವಚನಗಳಲ್ಲಿಯು ವೀರಶೈವ ಸಿದ್ಧಾಂತ ಮತ್ತು ಮತಧರ್ಮದ ತತ್ತ್ವಗಳ ಕಲ್ಪನೆಯನ್ನು ನಿರ್ಧರಿಸುವಾಗ ನಾವು ಇನ್ನೂ ಒಂದು ಕಠಿಣತರ ಸಮಸ್ಯೆಯನ್ನೆದುರಿಸ ಬೇಕಾಗುತ್ತದೆ. ವಚನಗಳೆಂದರೆ ಶರಣರನುಭಾವ ಅಂತರಂಗದಲ್ಲಿ ತೀಕ್ಷ್ಣತೆಯನ್ನು ಹೊಂದಿ ಅನುಭವರಸವುಕ್ಕಿ ಮೂರ್ತಿವೆತ್ತ ರಸಘಟ್ಟಿಗಳು. ಅವು ತತ್ತ್ವಸಿದ್ಧಾಂತಗಳನ್ನು ವಿಶದವಾಗಿ ಹೇಳಹೊರಟಿಲ್ಲ. ಇಂದಿನ ಅರ್ಥದಲ್ಲಿ ಅವು ಪ್ರಕಟಿತ ತತ್ತ್ವಶಾಸ್ತ್ರವಲ್ಲ. ನೈಜತೆಯನ್ನು ಕೆಡಿಸುವ ಯಾವ ತತ್ತ್ವಸಿದ್ಧಾಂತ–ಸೂಕ್ಷ್ಮತೆಗಳ ಗೊಂದಲದ ಸೋಂಕೂ ಇಲ್ಲದೆ ಅಂತರಂಗದನುಭವದ ಪರಿಪಕ್ವತೆಯಿಂದ ಹೊರಹೊಮ್ಮಿ ರಸಘನಮೂರ್ತಿಗಳಾಗಿದ್ದ ಶರಣರ ವಚನಗಳು ಆಳ ಅಗಲಗಳ ಮೂಲಭಾವಗಳನ್ನು, ತತ್ತ್ವಗಳನ್ನು ಸಮಗ್ರವಾಗಿ ಗರ್ಭೀಕರಿಸಿಕೊಂಡಿರುತ್ತವೆ. ಅವುಗಳಿಗೊಂದು ಅನುಭವದ ಆಶಯವಿದೆ, ದಿವ್ಯಜ್ಞಾನವಿದೆ. ಅಂತರ್ಗತ ತರ್ಕಸಾಮಂಜಸ್ಯವಿದೆ. ಕಾರಣ, ವಚನಗಳನ್ನು ಅರ್ಥೈಸಿ ತತ್ತ್ವವನ್ನು ಹೊರಪಡಿಸುವಾಗ ತರ್ಕಸಾಮಂಜಸ್ಯವನ್ನಷ್ಟೇ ಅಲ್ಲದೆ ಸಮಗ್ರ ಅನುಭವದ ಸಾಮಂಜಸ್ಯ ಮತ್ತು ಸಮರ್ಪಕತೆಯನ್ನು ಒರೆಗಲ್ಲಾಗಿಟ್ಟುಕೊಂಡು ತತ್ತ್ವಗಳನ್ನು ಋಜುವಾತು ಪಡಿಸಬೇಕು. ಈ ಕ್ರಮದಲ್ಲಿ ಅನುಭವದ ಸರಳತೆಯನ್ನು ಕೆಡಿಸದೆ ಸಹಜ ಜ್ಞಾನವನ್ನೊಳಗೊಂಡ ವಚನಗಳಲ್ಲಿಯ ಗರ್ಭೀಕೃತವಾದ ತತ್ತ್ವಗಳನ್ನು ಹೊರಪಡಿಸುವುದು ಅಷ್ಟು ಸುಲಭವಲ್ಲ. ಯಾವುದೇ ವಚನದ ತತ್ತ್ವಾರ್ಥವನ್ನು ಶರಣರ ನುಡಿಗಡಣದ ಸಹಾಯದಿಂದಲೇ ನಿರ್ಧರಿಸಲು ಪ್ರಯತ್ನ ಮಾಡುವುದು ನಮ್ಮ ಕರ್ತವ್ಯ.

ಇಂದಿನ ಯಾವುದೇ ಜನಾಂಗದ ಜನಜೀವನದಲ್ಲಿ ಧಾರ್ಮಿಕಪ್ರಜ್ಞೆಯ ಉಸಿರು ಅತ್ಯಂತ ಕ್ಷೀಣಗತಿಗಿಳಿದಿದೆ ಎಂಬುದು ನಿರ್ವಿವಾದ ಸಂಗತಿ. ಆದರೆ ಅದು ಎಲ್ಲಿ, ಯಾವಾಗ, ಹೇಗೆ ಏಕೆ ಪುಟಿಸಿತೆಂಬುದನ್ನು ನಿರ್ಧರಿಸುವುದು ಕಷ್ಟ. ವೀರಶೈವ (ಲಿಂಗಾಯತ) ಧರ್ಮ ಈ ದುಃಸ್ಥಿತಿಗೆ ಅಪವಾದವಲ್ಲ. ಪರಕೀಯ ಕೃತಕಜೀವನಶೈಲಿಗೆ ಮಾರು ಹೋಗಿ ಭೋಗಸೌಕರ್ಯಗಳ ಸಾಧನೆಗಾಗಿ ಹಣ ಗಳಿಸಿ ಖರ್ಚು ಮಾಡುವುದಕ್ಕಾಗಿಯೇ ಸಾಯುವವರು ಬಹುಜನರು. ಯಾಂತ್ರಿಕವಾಗಿ "ಅಪ್ಪಿದರೆ ಸುಖವಿಲ್ಲ ಮೆಲಿದರೆ ರುಚಿಯಿಲ್ಲ" ಎನ್ನುವ ರೀತಿಯಲ್ಲಿ ಬದುಕಿಯೂ ಸತ್ತಂತೆ ಇರುವವರನೇಕರು. ಜೀವನದ ಆಗುಹೋಗುಗಳ ಅರಿವಿನ ಅಭಾವದಿಂದಾಗಿ ಅನ್ಯವನೆ ಹಾಡಿ ಅನ್ಯವನೆ ಹೊಗಳಿ ಜೀವನವನ್ನು ಸವೆಸಿ ವ್ಯರ್ಥ ಮಾಡುವವರು ಅಸಂಖ್ಯಾತರು. ಏಕೆ ಹುಟ್ಟಿದೆವು ? ಏಕೆ ಬದುಕುತ್ತಿದ್ದೇವೆ? ಮನುಷ್ಯಜೀವನದ ಸಾಧ್ಯತೆಗಳೇನು ? ಏಕೆ ಸಾಯುತ್ತೇವೆ ? ಎಂಬ ಅರಿವು ಇಲ್ಲದವರನ್ನು ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಬಿಡದು ಎಂದು ವಚನಕಾರರು ರೊಚ್ಚಿಗೆದ್ದಿದ್ದಾರೆ. ಭೋಗಸೌಕರ್ಯಗಳ ಸಾಧನೆ ಸಂಶೋಧನೆಗಳಲ್ಲಿ ನಿರತರಾದವರನ್ನು ಭವರೋಗಿಗಳೆಂದು ವಚನಿಸಿದ್ದಾರೆ. ಇವರೇ ಹೆಣ್ಣು—ಹೊನ್ನು—ಮಣ್ಣಿಗಾಗಿ ಸತ್ತವರು. ಸಂಸಾರ ಶರಧಿಯಲ್ಲಿ ತೇಲಿ ಮುಳುಗಿದವರು. ಇವರೇ ಹಡಿಕೆಗೆ ಮೆಚ್ಚಿದ ಸೊಣಗನಂತೆ ಅಮೃತದ ಸವಿಯನ್ನು

ಕಾಣದವರು, ತುಪ್ಪದ ಸವಿಗೆ ಅಲಗು ನೆಕ್ಕುವಂತಹವರು, ಜೀವನದ ಆಗುಹೋಗೆಂಬುದನರಿಯದೆ ಮುಂದುಗಾಣದವರು, ವಿಷಯದ ಸವಿ ತಲೆಗೇರಿ ಜೀವನದ ಗುರಿಯಾದ ಆತ್ಯಂತಿಕಸುಖವನ್ನು ಕಾಣದ ಕುರುಡರು. ಈ ಪ್ರಪಂಚಗಳಿಗೆ—ನಾವು ತಳವಿಲ್ಲದ ಬಾವಿಯಲ್ಲಿ ಬಿದ್ದಿದ್ದೇವೆ, ನಮ್ಮ ಆತ್ಮ ನಮಗೆ ಹಗೆಯಾಗಿದೆ. ನಮ್ಮನ್ನು ನಾವೇ ಕೊಂದುಕೊಳ್ಳುತ್ತಿದ್ದೇವೆ, ನಮ್ಮ ಅಧಃಪಾತ ಸಂಪೂರ್ಣವಾಗಿದೆ ಎಂಬ ಅರಿವಿನ ಸುಳಿವೂ ಇಲ್ಲದುದನ್ನು ಕಂಡು ಶರಣರು ಕಳಕಳಿಯಿಂದ ಕರಗಿ ಕೊರಗಿದ್ದಾರೆ. ಶರಣರು ಪರಮಕಾರುಣಿಕರಾಗಿ ಈ ಜಗದ ಜಂಗುಳಿಗಳನ್ನು ತುಂಬುಜೀವನದ ಸಾಧ್ಯತೆ ಧ್ಯೇಯಗಳತ್ತ ತಿರುಗಿಸಲು ತಮ್ಮ ಅನುಭವಸಂಪತ್ತಿಯನ್ನು ಹಂಚಿಕೊಳ್ಳಲು ಉತ್ಸುಕರಾಗಿ ಮನವೊಲಿಸಲು ಮುಂದೆ ಬಂದಿದ್ದಾರೆ.

"ಮುನಿಯದಿರಿ, ಮುನಿಯದಿರಿ, ನಿಮಗೊಂದು ಯುಕ್ತಿಯ ಹೇಳುವೆನು. ಅದೆಂತೆಂದೊಡೆ ನೀವೆನ್ನ ವಂಶೀಭೂತರಾದ ಕಾರಣ, ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಿಮ್ಮ ಆಸ್ತಿ ನಾಸ್ತಿ ಎನ್ನದಾಗಿ, ನಿಮ್ಮ ಹಾನಿವೃದ್ಧಿ ಎನ್ನದಾಗಿ . . ." ಹೀಗೆ ಪ್ರತಿಯೊಬ್ಬನ ಶ್ರೇಯಸ್ಸು ಉಳಿದೆಲ್ಲರ ಶ್ರೇಯಸ್ಸಿನೊಡನೆ ಎಡೆಬಿಡದ ಸಂಬಂಧ ಹೊಂದಿದೆ ಎಂದು ತೋರಿಸಿಕೊಡುವುದು ಧಾರ್ಮಿಕ ಹಂಬಲದ ಒಂದು ಘಟಕವಾಗಿದೆ ಎಂಬುದನ್ನು ಅಲ್ಲಮಪ್ರಭುಗಳು ನಿದರ್ಶನಪೂರ್ವಕವಾಗಿ ತೋರಿಸಿದ್ದಾರೆ. ಪ್ರತಿಯೊಬ್ಬನಲ್ಲಿಯೂ ಆತ್ಮಶೋಧನಾಪೂರ್ವಕವಾಗಿ ತನ್ನ ಕುಂದುಕೊರತೆಗಳನ್ನರಿತು ತನ್ನ ತನ್ನ ಭವಬಂಧನವನ್ನು ಹಿಂಗಿಸುವ, ಸಂಸಾರದಲ್ಲಿ ತೊಳಲುವುದು ನಿಲ್ಲಬೇಕೆನ್ನುವ ಮತ್ತು ತುಂಬುಜೀವನದ ಪರಿಪೂರ್ಣತೆಯ ಸಾಧನೆ ಸಾರ್ಥಕ್ಯದ ಧ್ಯೇಯಪೂರ್ಣ ಹಂಬಲ ತಲೆದೋರಿದಲ್ಲದೆ ಮಾನವನ ಪ್ರಗತಿಯು ಅಂಕುರಿಸಲಾರದು. ಮಾನವನ ಧರ್ಮಶಕ್ತಿಯೊಂದೇ ಈ ಕಾರ್ಯ ಮಾಡಬಲ್ಲದು. ಮತಧರ್ಮವು ಮಾನವಜೀವನದ ಒಂದು ಬೇರ್ಪಡಿಸಲಾಗದ ಘಟಕವೆಂಬುದು ಮಾನವಶಾಸ್ತ್ರಜ್ಞರ ಬೋಧೆಯಾಗಿದೆ. ಕಾರಣ ನಮ್ಮ ಇಂದಿನ ತರುಣರು ಅನಪೇಕ್ಷಣೀಯವಾದ, ಗೊತ್ತುಗುರಿಗಳಿಲ್ಲದ ಜೀವನ ಶೈಲಿಯಲ್ಲಿ ಉರುಳುತ್ತಿರುವುದನ್ನು ತಪ್ಪಿಸಿಕೊಂಡು ಎತ್ತರದ ಉತ್ತಮತೆಯ ಮಟ್ಟಕ್ಕೆ ಏರಲು ಯೋಗ್ಯರಾಗಬೇಕಾದರೆ ಅನುಸರಿಸಬೇಕಾದ ಏಕೈಕ ಮಾರ್ಗವೆಂದರೆ, ಧರ್ಮಪ್ರಜ್ಞೆಯನ್ನು ತಮ್ಮ ಪ್ರತಿಯೊಂದು ಚಟುವಟಿಕೆಯ ಮುಂಚೂಣಿಯಲ್ಲಿರಿಸಿಕೊಳ್ಳುವುದು. ಭವಬಂಧನ ತಪ್ಪಿಸಿ, ಜೀವನದ ಮಟ್ಟವನ್ನು ಉದ್ಧರಿಸುವ ಮತ್ತು ಹೆಚ್ಚು ಹೆಚ್ಚು ಎತ್ತರಕ್ಕೆ ಏರಿಸಬಲ್ಲ ಸಾಧ್ಯತೆ ಕೇವಲ ಧ್ಯೇಯ ಅಥವಾ ಆದರ್ಶಗಳಿಗಿದೆಯೆಂದರೆ ಏನೂ ಅತಿಶಯೋಕ್ತಿಯಲ್ಲ. ಇಂಥ ಧ್ಯೇಯ ಆದರ್ಶಗಳು ಯಾವ ಮೂಲಾಧಾರದಿಂದ ಸ್ಫುರಿಸಿ ಮಾನವನಿಗೆ ಆಕರ್ಷಣೀಯವಾಗಿ ಬರುತ್ತವೆಯೋ ಆ ಸರ್ವಮೂಲವೇ ಜಗದ ಆದಿ ಅಂತನಾದ ದೇವರು ಎಂದು ವಚನಕಾರರು ಸಾರಿ ಹೇಳುತ್ತಾರೆ. "ಎನಗೆ ನೀನೆ ಗತಿ, ಮತಿ, ಪ್ರಾಣ ಕಂಡಯ್ಯಾ" ಎಂದಿದ್ದಾರೆ ಬಸವಣ್ಣನವರು.

ಯಾವ ಮನುಷ್ಯಮಾತ್ರನೂ ತೊಳಲಾಡುವ ಧ್ಯೇಯವನ್ನು ಹೊಂದಿರುವುದಿಲ್ಲ. ತನ್ನ ಅರಿವು ಮುಂದುದೋರಿದ್ದನ್ನು ಶ್ರೇಯಸ್ಸೆಂದು ತಿಳಿದು ನಿಷ್ಠೆಯಿಂದ ಸಾಧಿಸುತ್ತಾನೆ. ಅಷ್ಟೇ ಅಲ್ಲದೆ ಯಾವನೊಬ್ಬನೂ ತನ್ನ ವಾಸ್ತವ ಸ್ಥಿತಿ ಸಮರ್ಪಕವಾಗಿದೆ ಎಂದು ಆಚರಿಸುವುದಿಲ್ಲ, ಜೀವಿಸುವುದಿಲ್ಲ. ಕಾರಣ ತಾನು ಏನಾಗಬೇಕು ಎಂಬುದರ ಕಲ್ಪನೆ ಅವರವರ ಜೀವನದ ಗುರಿ ಮತ್ತು ದೃಷ್ಟಿಕೋನಕ್ಕನುಗುಣವಾಗಿ ಇದ್ದೇ ಇರುತ್ತದೆ. ಆದರೆ ಕಾರ್ಯತಃ ನಿದರ್ಶಿಸಲಾಗುವ ವಾಸ್ತವಿಕತೆಗೇ ಮನಸೋತವರು ದಿವ್ಯಜೀವನದ ಆದರ್ಶ ಮತ್ತು ಶ್ರೇಯಸ್ಸುಗಳ ಬಗ್ಗೆ ಕುರುಡಾಗುತ್ತಾರೆ. ಮಾನವನನ್ನು ಉದ್ಧರಿಸಿ ದಿವ್ಯವಾದ ತುಂಬುಜೀವನವನ್ನು ಸಾಧ್ಯವಾಗಿಸುವ ಧಾರ್ಮಿಕ ಶಕ್ತಿಗಳಾದ ಧ್ಯೇಯಪೂರ್ಣತೆ ಹಾಗೂ ಆದರ್ಶಗಳನ್ನು ಅಣಕಿಸುತ್ತಾರೆ, ತುಚ್ಛೀಕರಿಸುತ್ತಾರೆ. ಕಾರಣ ಜೀವನದ ಬಗೆಗೆ ಕೇವಲ ವಸ್ತುನಿಷ್ಠದೃಷ್ಟಿಕೋನವನ್ನು ತಾಳಿದವರು ಇಂದ್ರಿಯಭೋಗಸೌಕರ್ಯಗಳನ್ನಷ್ಟೇ ಲಕ್ಷಿಸುತ್ತಾರೆ. ವ್ಯಾವಹಾರಿಕ ಪ್ರಯೋಜನವೊಂದೇ ಅವರ ಜೀವನದ ಗುರಿಯಾಗಿರುತ್ತದೆ. ಆದರೆ ಇಂದ್ರಿಯಗಳ ಸ್ವರೂಪವೇ ವಿಚಿತ್ರವಾದುದು. ನಾವು ಅವುಗಳನ್ನು ತೃಪ್ತಿಪಡಿಸಿದಷ್ಟೂ ಅತೃಪ್ತಿ, ಅಶಾಂತಿಗಳು ಇನ್ನಷ್ಟೂ ಹೆಚ್ಚುತ್ತವೆ. ಹೀಗೆ ಸುಖವೆಂದು ಭಾವಿಸಲ್ಪಟ್ಟ ಇಂದ್ರಿಯಭೋಗವಸ್ತುಗಳಾದ ಹೆಣ್ಣು, ಹೊನ್ನು, ಮಣ್ಣುಗಳನ್ನು ಬಿಡದೆ ಬೆಂಬತ್ತಿ ಹೋಗುವುದು ಪರಿಣಾಮದಲ್ಲಿ ದುಃಖದಲ್ಲಿ ತೊಳಲಾಡುವಂತಾಗುತ್ತದೆ. ಈ ರೀತಿಯ ಜೀವನಮಾರ್ಗವನ್ನನುಸರಿಸುವವರು ಅಸಂಖ್ಯಾತರು. ಇವರನ್ನು 'ಆಶೆ ಆಮಿಷಕ್ಕಾಗಿ ಸತ್ತವರು . . . .' ಎಂದು ಅಲ್ಲಮಪ್ರಭುಗಳು ವರ್ಣಿಸಿದ್ದಾರೆ. ಇಂಥವರು ಇಹಲೋಕದುಃಖಿಗಳು, ಪರಲೋಕದೂರರು. ಮಾನವನ ಈ ಸನ್ನಿವೇಶವನ್ನು ಪ್ರತಿನಿಧಿಸುವ ಬಸವಣ್ಣನವರ ಅನೇಕ ವಚನಗಳಿವೆ. ಸಂಸಾರ, ಹೇಯವಲ್ಲ : ಶಿವನ ಪ್ರಸಾದ.

ಚಂದ್ರಮನಂತೆಕಳೆ ಸಮಸಿತ್ತೆನಗೆ:
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು;
ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ.
ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ!
ಅಕಟಕಟಾ ಸಂಸಾರ ವೃಥಾ ಹೋಯಿತ್ತಲ್ಲಾ!
ಕರ್ತೃವೆ, ಕೂಡಲಸಂಗಮದೇವಾ!
ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ!
ಎಂದೋ ಸಂಸಾರದ ದಂದುಗ ಹಿಂಗುವುದು?
ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ?
ಎಂದೋ ಕೂಡಲಸಂಗಮದೇವಾ. ಇನ್ನೆಂದೋ?
ಪರಮಸಂತೋಷದಲ್ಲಿಹುದೆನಗೆಂದೋ?
ಇಂದಿಗೆಂತು ನಾಳಿಗೆಂತು ಎಂದು ಬೆಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ।
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ।
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ।
ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೇ।
ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ॥

ಹೀಗೆ ಜೀವನ ವ್ಯರ್ಥ ಕಳೆಯಿತಲ್ಲಾ, ಜೀವನದ ಗುರಿಯಾದ ಪರಮಸಂತೋಷ ಸಮಾಧಾನಗಳನ್ನು ಯುಕ್ತಿಪೂರ್ವಕವಾಗಿ ಸಾಧಿಸಲಿಲ್ಲವಲ್ಲಾ ಎಂಬ ಅರಿವು ಮೂಡಿ ಸಂಸಾರದ ದಂದುಗ ಹಿಂಗಿಸುವ ಪ್ರಯತ್ನವೇ ಮೋಕ್ಷ. ನಿಜವನರಿಯದವರು ಬಳಲುವರು. ಇಂಥವರ ಜೀವನ ಕೊಡನ ತುಂಬಿ ಹಾಲ ಕೆಡಹಿ ಉಡುಗಲೆತ್ನಿಸಿದಂತಿದೆ. ಜೀವನವನ್ನು ವ್ಯರ್ಥ ಮಾಡಬೇಕೆಂದು ಯಾರೂ ಬಯಸುವುದಿಲ್ಲ. ಜೀವನವನ್ನು ಸಾರ್ಥಕಗೊಳಿಸುವ ಆತ್ಯಂತಿಕ ಶ್ರೇಯಸ್ಸನ್ನು (ಲೇಸನ್ನು) ಎಲ್ಲರೂ ಬಯಸುತ್ತಾರೆ. ಆದರೆ ಅದು ಸಿಕ್ಕದಿರುವ ಕಡೆಗಳಲ್ಲಿ ಹುಡುಕಲು ಹೋಗಿ ಮನುಷ್ಯ ದುಃಖಕ್ಕೀಡಾಗುತ್ತಾನೆ. ಈ ಸಂದರ್ಭದಲ್ಲಿ ಜೀವನದ ಆಗುಹೋಗುಗಳ ಅರಿವಿನಿಂದ ಅರ್ಥಪೂರ್ಣವಾದ ಬಾಳನ್ನು ವಿಶ್ವದ ಅತ್ಯುನ್ನತ ಆದರ್ಶಕ್ಕನುಗುಣವಾಗಿ ಬಾಳಿ ಆತ್ಮಶೋಧನಾಪೂರ್ವಕವಾಗಿ ಅಂತರಂಗಶುದ್ಧಿ ಮತ್ತು ಪರಿಪೂರ್ಣತೆಯನ್ನು ಸಾಧಿಸುತ್ತ ಪಕ್ವಾನ್ನವಾಗಿ ಆತ್ಮನೈವೇದ್ಯಸಮರ್ಪಣಾಯೋಗ್ಯವಾಗುವುದೇ ಮನುಷ್ಯಜೀವನಕ್ಕೆ ಉಚಿತವಾದುದೆಂದು ವಚನಕಾರರು ಕಂಡ ದರ್ಶನ ಮತ್ತು ಮಾಡಿದ ಧಾರ್ಮಿಕಜಾಗೃತಿ. ವಚನಧರ್ಮದಲ್ಲಿ ಇದುವೇ ಜೀವನದ ಗತಿ, ಗೊತ್ತುಗುರಿ. ಶರಣರ ಈ ದರ್ಶನ ಕೆಳಗಿನ ಎರಡು ವಚನಗಳಲ್ಲಿ ವ್ಯಕ್ತವಾಗಿದೆ:

"ಮರ್ತ್ಯಲೋಕವೆಂಬುದುಕರ್ತಾರನ ಕಮ್ಮಟ.
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ.
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ, ಕೂಡಲಸಂಗಮದೇವಾ."
"ಕುಲವ ನೋಡದೆ, ಛಲವ ನೋಡದೆ, ನಿಲವ ನೋಡದೆ
ಕೂಡಿದ ಬಳಿಕ ಅಲ್ಲಿ ಹೆಚ್ಚು ಕುಂದನರಸಲುಂಟೆ?
ಮುಂದುವರಿದು ಜಂಗಮಕ್ಕೆ ನಿಮ್ಮ ಕಾರುಣ್ಯವನುಪದೇಶ ಮಾಡಿದ ಬಳಿಕ.
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ ಅಂತಿಂತೆನಬಾರದು ಕೇಳಯ್ಯಾ!
ನೀನು ನಿರಾಕಾರ ಸಾಕಾರವೆಂಬೆರಡು ಮೂರ್ತಿಯ ಧರಿಸಿರ್ದಯಾಗಿ
ಒಂದು ಜರಿದು ಒಂದು ಹಿಡಿದೆನೆಂದರೆ ಅದೆ ಕೊರತೆ,
ನೋಡಾ ಪ್ರಭುವೆ, ಕೂಡಲಸಂಗಮದೇವಾ."

ಬಸವಣ್ಣನವರ ಈ ವಚನಗಳಲ್ಲಿ ಜೀವ, ಜಗತ್ತು, ಪರಮಾತ್ಮವಸ್ತುಗಳ ತಾತ್ತ್ವಿಕಸಂಬಂಧ ಹಾಗೂ ಸ್ವರೂಪ ಮತ್ತು ಪಾತ್ರಗಳ ವಿಚಾರವು ಗರ್ಭಿತವಾಗಿದೆ. ತಾತ್ತ್ವಿಕ, ನೈತಿಕ, ಧಾರ್ಮಿಕ ವಿಚಾರಗಳ ರೂಪುರೇಷೆಗಳ ನೀಲಿ ನಕ್ಷೆಯೇ ಅಡಗಿದೆ. ಈ ವಿಚಾರಗಳ ಸಮಗ್ರ ವಿವರಣೆಯನ್ನು ಬೇರೊಂದು ಪ್ರಸಂಗದಲ್ಲಿ ಕೈಕೊಳ್ಳಬೇಕು. ಪ್ರಕೃತದಲ್ಲಿ ನಾವು ಗ್ರಹಿಸಿದ ತಾತ್ತ್ವಿಕ ತಳಹದಿಯ ಹರುಕುಮುರುಕಾದ ಸಂಕ್ಷಿಪ್ತ ವರ್ಣನೆಯಷ್ಟೇ ಸಾಧ್ಯ. ವೈವಿಧ್ಯಮಯ ಜಗತ್ತು ಮತ್ತು ಆತ್ಮರುಗಳು ರಚನಾಕಾರ್ಯಗತಿಯಲ್ಲಿರುವ ಚಟುವಟಿಕೆಯ ಸ್ವರೂಪವುಳ್ಳವುಗಳು. ಉದ್ದೇಶರಹಿತ ಚಟುವಟಿಕೆಗೆ ಅರ್ಥ

ವಿಲ್ಲ. ಚಟುವಟಿಕೆ ರೂಪಿಸಲ್ಪಡಬೇಕಾದರೆ ಉದ್ದೇಶವೆಂಬುದಿರಬೇಕು. ಉದ್ದೇಶವು ಜಂಗಮಾತ್ಮಕ ಚಟುವಟಿಕೆಯ ವಿವಿಧ ಘಟಕಗಳನ್ನು ಒಂದುಗೂಡಿಸಿ ಏಕೀಕೃತವಾದ ಅಖಂಡವಸ್ತುವನ್ನಾಗಿಸುತ್ತದೆ. ಯಾವ ಮೂಲಾಧಾರದಿಂದ ಈ ಉದ್ದೇಶಗಳು ಸ್ಫುರಿಸಿ ಕರುಣಿಸಲ್ಪಡುವುವೋ ಆ ಉದ್ದೇಶಗಳ ನಿಧಿಯನ್ನೇ ನಿರಾಕಾರ ಪರಮಾತ್ಮವೆಂದು ಕರೆಯುತ್ತಾರೆ. ಉದ್ದೇಶಗಳು ಮೂರ್ತಿವೆತ್ತು ಚಟುವಟಿಕೆಗಳಾದಾಗ ತನಗೆ ಬೇಕೆಂದು ಎತ್ತಿಕೊಂಡ ದೇವರು ಸಾಕಾರ ಪರಮಾತ್ಮ. ನಿರಾಕಾರ ಸಾಕಾರವೆಂಬೆರಡು ಮೂರ್ತಿಯ ಧರಿಸಿದವನೊಬ್ಬನೇ ಪರಮಾತ್ಮ. ಅವನು ಮುಂದುವರಿದು ಜಂಗಮಾತ್ಮಕ ಜಗದ್ವಸ್ತುಗಳಿಗೆ ಕಾರುಣ್ಯವನ್ನುಪದೇಶಮಾಡಿದ ಬಳಿಕ, ಆ ಉದ್ದೇಶಕ್ಕನುಸಾರವಾಗಿ ಅವುಗಳು ತಮ್ಮನ್ನು ರೂಪಿಸಿಕೊಳ್ಳಬೇಕು. ಹೀಗೆ ಆತ್ಮ ಜಗತ್ತು ದೇವರು ಅನ್ಯೋನ್ಯವಾಗಿವೆ. ಕಾರಣ ದೇವರು ಜಗದ್ವಸ್ತುಗಳಿಗೆ (ಉದ್ದೇಶ ಮೊದಲಾದುವುಗಳನ್ನು ದಯಪಾಲಿಸುವುದು) ಕಾರುಣ್ಯವನ್ನುಪದೇಶಮಾಡುವುದು ಒಂದು ರೀತಿಯ ಕಾರ್ಯಸಂಬಂಧ. ಉದ್ದೇಶಗಳು ಮೂರ್ತಿಗೊಂಡು ಪೂರ್ಣವಾದ ವಸ್ತುಗಳಾದಾಗ ಈ ಮೌಲ್ಯನಿಧಿಗಳು ತನಗೆ ಬೇಕೆಂದು ಎತ್ತಿಕೊಳ್ಳುವುದು ಇನ್ನೊಂದು ರೀತಿಯ ಕಾರ್ಯಸಂಬಂಧ. ಇದನ್ನೇ "ಇಲ್ಲಿ" ಸಲ್ಲುವರು "ಅಲ್ಲಿ"ಯೂ ಸಲ್ಲುವರಯ್ಯಾ ಎಂದು ವರ್ಣಿಸಿದ್ದಾರೆ. ಮನುಷ್ಯ ಈ ಶರೀರ, ದೇಶ. ಕಾಲ. ಜಗತ್ತುಗಳಲ್ಲಿ ಸಾರ್ಥಕವಾದ ಬಾಳನ್ನು ಬಾಳಬೇಕು. ಈ ಜಗತ್ತು ದೇವರ ಟಂಕಸಾಲೆ. ಈ ಟಂಕಸಾಲೆಯಲ್ಲಿ ರೂಪಿಸಲ್ಪಡುವ ವಿವಿಧ ವಸ್ತುಗಳು ಈ ಮರ್ತ್ಯಲೋಕದಲ್ಲಿ ಮೌಲ್ಯಗಳ ನಿಧಿಯಾಗಿ ಯೋಗ್ಯತೆಯನ್ನು ಸಂಪಾದಿಸುವುದೇ — ಪರಲೋಕ ಅಥವಾ ಪರಮಾತ್ಮನಲ್ಲಿ ಸಲ್ಲುವುದು. ಮೋಕ್ಷ ಪರಲೋಕವೆಂಬುದು ಇನ್ನೆಲ್ಲಿಯೋ ಇರುವ ಒಂದು ಪ್ರದೇಶವಲ್ಲ. ಹೀಗೆ ಈ ಜಗತ್ತಿನಲ್ಲಿ ಸಲ್ಲುವುದೇ ಮೋಕ್ಷವನ್ನು ಸಾಧಿಸುವುದು. ಈ ಜಗತ್ತು ಚಟುವಟಿಕೆಯ ಸ್ವರೂಪದ್ದು. ಚಟುವಟಿಕೆಯ ಅರ್ಥವೇ ಮೌಲ್ಯಸಿದ್ಧಿ. ಚಟುವಟಿಕೆ, ಮೌಲ್ಯ ಒಂದರ ಬೆನ್ನಿಗೆ ಒಂದು ಅಂಟಿಕೊಂಡಿರುತ್ತವೆ. ಅಂತೆಯೇ "ಇಲ್ಲಿ" "ಅಲ್ಲಿ"ಗಳು ಎಡೆಬಿಡದೆ ಹಾಸುಹೊಕ್ಕಾಗಿ ಬೆರೆತುಕೊಂಡಿವೆಯಾದ್ದರಿಂದ ಮೋಕ್ಷವೆಂಬುದು ಮರಣಾನಂತರ ದೊರಕುವ ವಿಷಯವಲ್ಲ. "ತತ್ವವೆಂಬುದ ನೀನೆತ್ತ ಬಲ್ಲೆಯೋ ? ಸತ್ತು ಮುಂದೆ ನೀನೇನ ಕಾಂಬೆಯೋ ?. . . . ಗುಹೇಶ್ವರನ ಕೂಡಿದ ಕೂಟ ಇಂದು ಸುಖ ಮುಂದೆ ಲೇಸು" ಎಂಬುದು ಅಲ್ಲಮಪ್ರಭುಗಳ ದಿವ್ಯತತ್ತ್ವದರ್ಶನ. ಮೌಲ್ಯಗಳು ಶಾಶ್ವತ ಸ್ವರೂಪದವು. ಇಲ್ಲಿ ಈ ದೇಶಕಾಲಗಳಲ್ಲಿ ಸಾಧಿಸಲ್ಪಟ್ಟಿದ್ದರೂ ಅವು ಕಾಲವಶವಾಗುವುದಿಲ್ಲ. ವಚನಕಾರರ ಮಾತುಗಳು ಖಂಡಿತವಾಗಿಯೂ ಒಂದು ಕಾಲದೇಶಗಳಲ್ಲಿ ಮೂಡಿಬಂದವುಗಳು. ಆದರೆ ಅವು ಮೂರ್ತೀಕರಿಸಿದ ಮೌಲ್ಯಗಳು—ಅರ್ಥಗಳು—ಭಾವಗಳು—ಅಮರ, ಶಾಶ್ವತ, ದಿವ್ಯ ಎಂಬುದು ನಮ್ಮ ಅನುಭವಕ್ಕೆ ಬಂದ ಸಂಗತಿ. ಚಟುವಟಿಕೆಯ ಮೂಲಕ ಮೌಲ್ಯಸಾಧನೆ. ಮೌಲ್ಯದಿಂದ ಚಟುವಟಿಕೆಗಳ ನಿರ್ಮಾಣ. ಹೀಗೆ "ಇಲ್ಲಿ" "ಅಲ್ಲಿ"ಗಳು ಅನ್ಯೋನ್ಯವಾಗಿವೆ. ಇಹಪರಗಳ ಬೆಸುಗೆಯಾಗಿದೆ. ಮೋಕ್ಷವೆಂಬುದು ಕಾಯಕವೇ ಕೈಲಾಸ. ಇಲ್ಲಿಯೇ ಈ ಜಗತ್ತಿನಲ್ಲಿಯೇ ಪ್ರತಿಯೊಂದು ಕ್ಷಣದ ಚಟುವಟಿಕೆಯೊಳಗೆ ರೂಪಿಸಲ್ಪಟ್ಟ ಅನುಭವರಸದ ಹನಿಗಳ ಸಮಗ್ರತೆಯೇ ಶಾಶ್ವತ ಮೌಲ್ಯಪ್ರಪಂಚ. ಬಸವಣ್ಣನವರು ಇದನ್ನೇ "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ" ಎಂದಿದ್ದಾರೆ. ಮಹಾದೇವಿಯಕ್ಕನು 'ನಿಮ್ಮ ಮಂಡೆಗೆ ಹೂವ ತಾಹೆನಲ್ಲದೆ ಹುಲ್ಲು ತಾರೆನು' ಎಂದು ವರ್ಣಿಸಿದ್ದಾಳೆ. ಹಾಗೆಯೇ ಅನುಭವ ಚಟುವಟಿಕೆಗಳಲ್ಲಿ ಮಹತಿ ಮೌಲ್ಯಗಳನ್ನು ಸಾಧಿಸದವರನ್ನು ಇಲ್ಲಿ ಸಲ್ಲದವರು ಎಂದು ಕರೆದಿದ್ದಾರೆ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಎಂದಿದ್ದಾರೆ. ಹೀಗೆ ಮೋಕ್ಷವೆಂಬುದು ಅನಾಯಾಸವಾಗಿ ಸಾಧಿಸಲ್ಪಡತಕ್ಕದ್ದಲ್ಲವಾದ್ದರಿಂದ 'ಹೇಂಗೆ ಮನ ಹಾಂಗೆ ನಿಮ್ಮ ಘನ ತಪ್ಪದು' ಎಂದು ಘೋಷಿಸಿದ್ದಾರೆ. ಕಾರಣ ಪಾಪ, ಪುಣ್ಯ, ಪರಮಸಂತೋಷ, ದೇವರನ್ನರಿಯುವುದು. ಕೂಡುವುದು ಮುಂತಾದ ಯಾವುದೇ ಮೌಲ್ಯಸಾಧನೆ ಮಾನವನ ಇಚ್ಛಾಸ್ವಾತಂತ್ರ್ಯಕ್ಕನುಗುಣವಾದ ಇಷ್ಟವನ್ನವಲಂಬಿಸಿದೆ. ಬಸವಣ್ಣನವರ ವಚನ ಹೀಗಿದೆ:

ಪುಣ್ಯ ಪಾಪವೆಂಬುವು ತಮ್ಮಿಷ್ಟ ಕಂಡಿರೇ:
'ಅಯ್ಯಾ' ಎಂದಡೆ ಸ್ವರ್ಗ ! ಎಲವೋ ಎಂದಡೆ ನರಕ !
'ದೇವಾ, ಭಕ್ತ ಜಯಾ ಜೀಯಾ' ಎಂಬ ನುಡಿಯೊಳಗೆ
ಕೈಯ ಕೈಲಾಸಮೈದುವುದೆ ಕೂಡಲಸಂಗಮದೇವಾ.
ಹೊಯ್ದರೆ ಹೊಯ್ಗಳು ಕೈಯ ಮೇಲೆ:
ಬಯ್ದಡೆ ಬಯ್ಗಳು ಕೈಯ ಮೇಲೆ।
ಹಿಂದಣ ಜನನವೇನಾದೊಡಾಗಲಿ ಕೈಯ ಇಂದಿನ ಭೋಗವು ಕೈಯ ಮೇಲೆ।
ಕೂಡಲಸಂಗಮದೇವಯ್ಯಾ, ನಿಮ್ಮ ಪೂಜಿಸಿದ ಫಲ ಕೈಯ ಮೇಲೆ।

ಬಸವಣ್ಣನವರು ಹೇಳುವಂತೆ ನಾವು ಏನನ್ನು ಮಾಡಿದರೂ ಮನುಷ್ಯನ ಹೊಣೆಗಾರಿಕೆಯ ಪಾತ್ರವನ್ನು ಹಾಗೂ ಆಯಾ ಕ್ಷಣಗಳಲ್ಲಿ ಸಾಧಿಸಲ್ಪಡುವ ಒಳ್ಳೆ (ಪುಣ್ಯ), ಕೆಟ್ಟ (ಪಾಪ), ಫಲಗಳನ್ನು ಅಲ್ಲಗಳೆಯುವಂತಿಲ್ಲ. ಇಲ್ಲಿಯವರೆಗೆ ಚಟುವಟಿಕೆ ಚಾರಿತ್ರ್ಯ ಎಂಥವೇ ಇದ್ದರೂ, ಈ ಕ್ಷಣದಿಂದ ಮುಂದಕ್ಕೆ ಮಹಾಪದವಿಯನ್ನು ಸಾಧಿಸುವ ಮನಸ್ಸು ಮಾಡಿದರೆ ಅದೇ ಸಿದ್ಧಿ ಆಗುವುದು. (ಹೇಂಗೆ ಮನ ಹಾಂಗೆ ಘನ) ಹೀಗೆ ಹುಟ್ಟಿನಿಂದ ಸಾಯುವವರೆಗೆ ಮನುಷ್ಯ ಯಾವ ರೀತಿಯಲ್ಲಿ ತನ್ನ ಜೀವನಪ್ರವಾಹದ ಚಟುವಟಿಕೆ ನಿರ್ವಹಿಸುವನೋ ಆ ರೀತಿಯಲ್ಲಿ ಒಡಗೂಡಿಸಲ್ಪಟ್ಟ ಮೌಲ್ಯಮಯ ವ್ಯಕ್ತಿತ್ವ ಅವನದಾಗುತ್ತದೆ. ವಚನಕಾರರು ಮಾನವನ ಈ ಪ್ರಗತಿಪರ ಬೆಳವಣಿಗೆ, ಪರಿಪೂರ್ಣತೆಯ ಮೋಕ್ಷವಿಧಾನವನ್ನು ಸ್ಥೂಲವಾಗಿ ಷಟ್‌ಸ್ಥಲಸಿದ್ಧಾಂತದಲ್ಲಿ ನಿರೂಪಿಸಿದ್ದಾರೆ. ನಾವು ಈ ಷಟ್‌ಸ್ಥಲಸಿದ್ಧಾಂತವನ್ನು ಮೋಕ್ಷಮಾರ್ಗದ "ಸ್ಥೂಲ" ವಿವರಣೆ ಎಂದು ಹೇಳುವುದರ ಕಾರಣವೇನೆಂದರೆ, ಪ್ರತಿಯೊಂದು ಸ್ಥಲದಲ್ಲಿ ಉಳಿದೆಲ್ಲ ಸ್ಥಲಗಳು ವಿವಿಧ ರೀತಿಗಳಲ್ಲಿ ಅಡಕವಾಗಿರುತ್ತವೆ. ಅಷ್ಟೇ ಅಲ್ಲದೆ ಮನುಷ್ಯನ ಪ್ರಗತಿಪರ ಬೆಳವಣಿಗೆ ಒಂದೇ ಸಮ ನೇರವಾಗಿರುವುದಿಲ್ಲ. ನವೀನವಾಗಿದ್ದ ಈಗಿನ ಸೃಷ್ಟ್ಯಾತ್ಮಕ ಅನುಭವವು ಹಿಂದಿನ ಎಲ್ಲ ಅನುಭವಗಳು ಒಡಗೂಡಿ ಬಲಗೊಂಡ ಏಕೀಕೃತವಾದ ಅಖಂಡ ವ್ಯಕ್ತಿತ್ವ ಹೊಂದಿರುತ್ತದೆ. ಅನುಭವವು ಯಾವುದೇ ಮಟ್ಟದಲ್ಲಿ ಅತ್ಯಂತ ಸಂಕೀರ್ಣವಾಗಿರುವುದರಿಂದ, ವಿಶೇಷ ಲಕ್ಷಣಗಳನ್ನೊಳಗೊಂಡ ಶೀಲಸ್ವಭಾವ ವರ್ಣನೆಯನ್ನು ಮಾಡುವುದು ಸುಲಭ ವಲ್ಲ. ಪ್ರಧಾನ ಗುಣಗಳ ಆಧಾರದಿಂದ ಈ ಸ್ಥಲಗಳನ್ನು ಬೇರೆ ಬೇರೆ ಹೆಸರಿನಿಂದ ನಿರ್ದೇಶಿಸಿರಲಿಕ್ಕೆ ಸಾಕು. ಈ ಷಟ್‌ಸ್ಥಲಸಿದ್ಧಾಂತದ ವಿಶದವಾದ ವಿವರಣೆಯನ್ನು ಬೇರೊಂದು ಪ್ರಸಂಗಕ್ಕೆ ಮೀಸಲಾಗಿರಿಸಬೇಕು.

ಮನುಷ್ಯಸ್ವರೂಪವು ರಚನೆಯ ಕಾರ್ಯಗತಿಯಲ್ಲಿರುವುದಾಗಿದೆ. ಇದು ಜಗತ್ತಿನ ಸ್ವರೂಪವೂ ಆಗಿದೆ. ಹುಟ್ಟುವುದು, ಬೆಳೆಯುವುದು, ಪೂರ್ಣವಾಗುವುದು (ಮರಣ ಹೊಂದುವುದು) ಮತ್ತು ಪೂರ್ಣವಾದದ್ದು ರಚನಾ ಕಾರ್ಯಗತಿಯಲ್ಲಿರುವ ಚಟುವಟಿಕೆಗಳಲ್ಲಿ ಅಂತರ್ಗತವಾಗಿ ಅರಗಿಸಲ್ಪಟ್ಟು ಮುಂದುವರಿಯುವುದು—ಇದು ಎಲ್ಲ ಅಸ್ತಿತ್ವದ ಸ್ವರೂಪವಾಗಿದೆ. ಕಾರಣ ವಚನಕಾರರು ಆತ್ಮದ ಇರವನ್ನು ಬೆಳೆ ಭೂಮಿಗೆ ಹೋಲಿಸಿದ್ದಾರೆ. ಕೃಷಿ ಕರ್ಮದ ರೂಪಕಾಲಂಕಾರ ಕೊಟ್ಟಿದ್ದಾರೆ. ಅವರ ಅನುಭವ ಉಕ್ಕೇರಿ ರೂಪಕಗಳಲ್ಲಿ ಹರಿಯುತ್ತದೆ. ಶರಣರ ವಚನ ಗಳನ್ನು ಗಮನಿಸೋಣ :

ಬೆಳೆದ ಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು ಎಚ್ಚ ಟಲೀಯದು !
ಎನ್ನವಗುಣವೆಂಬ ಕಸವ ಕಿತ್ತು, ಸಲಹಯ್ಯಾ, ಲಿಂಗ ತಂದೆ ;
ಸುಳಿದೆಗೆದು ಬೆಳೆವೆನು, ಕೂಡಲಸಂಗಮದೇವಾ.
ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು,
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವಾ ತನಗೆ ಬೇಕೆಂದು ಎತ್ತಿಕೊಂಡ.
ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ,
ಬೆಳೆದೆನು ಅಸಂಖ್ಯಾತರ ಕರುಣದೊಳಗೆ!
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ!
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದಿರೆನ್ನ!
ವಿವಾಹವ ಮಾಡಿದಿರಿ! ಸಯವಪ್ಪ ಗಂಡಂಗೆ ಕೊಟ್ಟಿರಿ,
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ!
ಬಸವಣ್ಣ ಮೆಚ್ಚಲು ಒಗತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು.
ನಿಮ್ಮ ಮಂಡೆಗೆ ಹೂವು ತಹೆನಲ್ಲದೆ ಹುಲ್ಲು ತಾರೆನು!
ಅವಧರಿಸಿ ನಿಮ್ಮಡಿಗಳೆಲ್ಲರು ; ಮರಳಿ ಬಿಜಯಂಗೈವುದು ಶರಣು ಶರಣಾರ್ಥಿ!

ತನುವ ತೋಟವ ಮಾಡಿ
ಮನವ ಗುದ್ದಲಿ ಮಾಡಿ,
ಅಗೆದು ಕಳೆದೆನಯ್ಯ ಭ್ರಾಂತಿನ ಬೇರೊಡೆದು
ಸಂಸಾರದ ಹೆಂಟೆಯ ಬಗಿದು,
ಬಿತ್ತಿದೆನಯ್ಯ ಬ್ರಹ್ಮಬೀಜವ
ಅಖಂಡಮಂಡಲವೆಂಬ ಬಾವಿ
ಪವನವೆ ರಾಟಾಳ
ಸುಷುಮ್ನನಾಳದಿಂದಲೇ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರ
ತನುವ ತೋಂಟವ ಮಾಡಿ
ಮನವ ಗುದ್ದಲಿ ಮಾಡಿ
ಅಗೆದು ಕಳೆದೆನಯ್ಯ ಭ್ರಾಂತಿನ ಬೇರೊಡೆದು
ಸಂಸಾರದ ಹೆಂಟೆಯ ಬಗಿದು
ಬಿತ್ತಿದೆನಯ್ಯ ಬ್ರಹ್ಮಬೀಜವ
ಅಖಂಡಮಂಡಲವೆಂಬ ಬಾವಿ
ಪವನವೆ ರಾಟಾಳ
ಸುಷುಮ್ನಾನಾಳದಿಂದಲೇ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರಾ.

ಹೀಗೆ ತನುಗುಣ ಮನಗುಣಗಳ ಬದಲು ತ್ಯಾಗ, ಪ್ರೀತಿ, ಭಕ್ತಿ, ವಿಶಾಲಸಿಷ್ಠೆ, ದಯೆ, ಕರುಣೆ, ಸಮತಾಭಾವ, ಸಮಗ್ರಭಾವ ಮುಂತಾದ ಅನಂತ ದೈವೀಗುಣಗಳನ್ನೊಳಗೊಂಡಂತೆ ಸೃಷ್ಟ್ಯಾತ್ಮಕವಾದ ಅಖಂಡವಾದ ಏಕೀಕರಿಸಿದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದೇ ಮೋಕ್ಷದಂದುಗವಾಗಿದೆ. ಕಾರಣ ನಿಮ್ಮೊಳಿರ್ದೊಂದು ಸಮತಾಗುಣ ಎನ್ನಲ್ಲಿ ಎಂದು ಬಂದಿರ್ಪುದೋ ಎಂಬುದೇ ಶರಣಹೃದಯದ ಹಂಬಲ. 'ಅಂಗಗುಣಂಗಳ ಬಿಟ್ಟು ಲಿಂಗಗುಣಂಗಳಾದರೆ ಅದೇ ಲಿಂಗಾಂಗಸಾಮರಸ್ಯ' ಎಂದು ಸಿದ್ಧರಾಮವಚನ. ಆದ್ದರಿಂದ ರಚನಾಕಾರ್ಯಗತಿಯಲ್ಲಿರುವ ಚಟುವಟಿಕೆಯ ಸ್ವರೂಪ ನಾದ ಮಾನವನು ಹರಿಯುತ್ತಿರುವ ನೀರಿನ ಪ್ರವಾಹದಂತೆ ತನ್ನನ್ನು ತಾನೇ ಶುದ್ಧಿಗೊಳಿಸುತ್ತ ಸಮೃದ್ಧಗೊಳಿಸುತ್ತ ತಾನು ಹೋಗಿ ಸೇರಬೇಕಾದ ಗುರಿಯನ್ನು ಹೊಂದುತ್ತಾನೆ.

ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ ?
ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ಶುದ್ಧವಲ್ಲಯ್ಯಾ ;
ಮನ ಮುಟ್ಟಿ ಪೂಜಿಸುವರೆ, ಎನ್ನ ಮನ ಶುದ್ಧವಲ್ಲವಯ್ಯಾ ;
ಭಾವ ಶುದ್ಧವಾದೊಡೆ ಕೂಡಲಸಂಗಯ್ಯನು
"ಇತ್ತ ಬಾ" ಎಂದೆತ್ತಿಕೊಳ್ಳನೇಕಯ್ಯಾ ?

ತನು, ಮನ, ಭಾವಗಳನ್ನೊಳಗೊಂಡ ಮಾನವನು ಸರ್ವಾಂಗಶುದ್ಧನಾಗಿ ಪರಮಾತ್ಮನ ಸ್ವೀಕಾರಕ್ಕೆ ಯೋಗ್ಯನಾಗುವ ಅರ್ಹತೆಯನ್ನು ಸಂಪಾದಿಸುವುದು ಮನುಷ್ಯನ ಹೊಣೆಗಾರಿಕೆ. ಮೋಕ್ಷಸಾಧನೆಯಲ್ಲಿ ಅಂಗನು ಲಿಂಗಗುಣಂಗಳನ್ನು ಬೆಳೆಸಿಕೊಂಡು ಪಕ್ವವಾದ ಹಣ್ಣಿನಂತಾಗುವುದು ತಾನು ಸಂಪಾದಿಸಬೇಕಾದ ಅರ್ಹತೆ. ಅದರೆ ಅದರಿಂದಲೇ ಅವನ ಮೋಕ್ಷ ಸಿದ್ಧಿಯಾಗುವುದಿಲ್ಲ ಎಂದು ಅಕ್ಕಮಹಾದೇವಿ ಹೇಳುತ್ತಾಳೆ:

ಅಜಿಸಿ ತೊಳಲಿದಡಿಲ್ಲ ಹರಸಿ ಬಳಲಿದಡಿಲ್ಲ
ಬಯಸಿ ಹೊಕ್ಕಡಿಲ್ಲ, ತಪಸ್ಸು ಮಾಡಿದರಿಲ್ಲ!
ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು!
ಶಿವನೊಲಿದಲ್ಲದೆ ಕೈಗೂಡದು
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು.

ಹೀಗೆ ಜಗತ್ತು ಶರಣರ ಸಂಗ ದೇವರು ಮತ್ತು ಅವನ ಕರುಣೆ ಮುಂತಾದ ತತ್ವಗಳ ಅವಶ್ಯಕತೆ ಮತ್ತು ಸುಸಂಬದ್ಧತೆ, ಸುಸಂಗವಾಗಿರುವಿಕೆಯನ್ನು ಎತ್ತಿಹಿಡಿದಿದ್ದಾರೆ. ಅನುಭವದಲ್ಲಿ ಸಂಬಂಧಗಳು ಸಂಬಂಧಿಸಲ್ಪಟ್ಟ ವಸ್ತುಗಳನ್ನು ಸಂಸಕ್ತವಾಗಿರುವಂತೆ ಮಾಡುತ್ತವೆ. ಸಂಬಂಧಗಳು ಸಂಬಂಧ ಹೊಂದುವ ವಸ್ತುಗಳ ಸ್ವರೂಪವನ್ನು ಮಾರ್ಪಡಿಸುತ್ತವೆ. 'ಕೂಡಲಸಂಗನ ಶರಣರನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ' ಎನ್ನುವಲ್ಲಿ ಬೇರೆ ಬೇರೆ ವಸ್ತುಗಳು ಸಂಬಂಧಿಸಿದಲ್ಲಿ ವಸ್ತುಸ್ವರೂಪದ ಪರಿವರ್ತನೆ ಅನಿವಾರ್ಯವೆಂಬ ಶರಣಸಿದ್ಧಾಂತವನ್ನು ಬಸವಣ್ಣನವರು ನಿರೂಪಿಸಿದ್ದಾರೆ. ಈ ತತ್ತ್ವವಿಚಾರವನ್ನು ವಿಸ್ತಾರವಾಗಿ ಇಲ್ಲಿ ಬೆಳೆಸುವುದು ನಮ್ಮ ಉದ್ದೇಶವಲ್ಲವಾದ್ದರಿಂದ ಅದನ್ನು ಬೇರೊಂದು ಗ್ರಂಥರೂಪದಲ್ಲಿ ಬರೆದು ತೋರಿಸಬೇಕು. ಭಕ್ತಿ, ಮುಕ್ತಿ ಎಂಬುದು ದೇವರ ಕರುಣವುಳ್ಳಂಗಲ್ಲದೆ ನೆಲೆಗೊಳ್ಳದು, ಸಿದ್ಧಿಸದು ಎಂದು ಶರಣರು ಹೇಳಿದ್ದಾರೆ. ಮನುಷ್ಯ ಪರಿಪೂರ್ಣತೆ ಹೊಂದಿ ಪಕ್ವವಾದ ಹಣ್ಣಾಗಿ ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ, ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ ಎಂದು ಹೇಳುವಲ್ಲಿ, ಮುಕ್ತಿ ಎಂಬ ಪದವಿಯನ್ನು ಕೊಡುವುದು ಬಿಡುವುದು ದೇವರ ಸ್ವಾತಂತ್ರ್ಯಕ್ಕೆ ಬಿಟ್ಟ ವಿಷಯ. ದೇವರು ಜಗದ ಪ್ರತಿಯೊಂದು ಚಟುವಟಿಕೆಯನ್ನು ತೂಗುವ ತ್ರಾಸಿನಲ್ಲಿ ತೂಕಮಾಡಿ ಧರ್ಮದ ಕಟ್ಟಳೆಗನುಗುಣವಾಗಿ ಅವರವರಿಗೆ ತಕ್ಕ ನರಕ, ಸ್ವರ್ಗ, ಮುಕ್ತಿ ಫಲಗಳನ್ನು ಕರುಣಿಸುವುದು ಅವನ ಸ್ವರೂಪವಾಗಿದೆ. ಬಸವಣ್ಣನವರು ಸೆಟ್ಟಿಯ ರೂಪಕ ಕೊಟ್ಟಿದ್ದಾರೆ:

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಪರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ
ಒಮ್ಮನವಾದಡೆ ಒಡನೆ ನುಡಿವನು;
ಇಮ್ಮನವಾದಡೆ ನುಡಿಯನು.
ಕಾಣೆಯ ಸೋಲ; ಅರ್ಧಗಾಣಿಯ ಗೆಲ್ಲ!
ಜಾಣ ನೋಡವಾ, ನಮ್ಮ ಕೂಡಲಸಂಗಮದೇವಾ!

ಪರಮಾತ್ಮನು ಯಾರ ಬಗ್ಗೆಯೂ ಪೂರ್ವಗೃಹೀತ ಪ್ರೀತಿದ್ವೇಷಗಳಿಂದ ವರ್ತಿಸುವುದಿಲ್ಲ. ಜಾಣ್ಮೆಯಿಂದ ತಕ್ಕದ್ದನ್ನು ತಕ್ಕಷ್ಟೇ ದಯಪಾಲಿಸುವುದು ಅವನ ಧರ್ಮಕಟ್ಟಳೆಯಾಗಿದೆ. ಜಗತ್ತು ಏನಾಗಬೇಕೆಂಬ ತನ್ನ ಸಂಕಲ್ಪಕ್ಕನುಗುಣವಾಗಿ ಯಾರು ತಮ್ಮನ್ನು ರೂಪಿಸಿಕೊಳ್ಳುವರೋ ಅವರಿಗೆ ಒಡನೆ ವಿಹಿತವಾದದ್ದನ್ನು ಕರುಣಿಸುವನು. ಅವರನ್ನು ಮುಕ್ತಿಯೋಗ್ಯರನ್ನಾಗಿ ಮಾಡಿ ಮೋಕ್ಷರಸಾನುಭವವಾದ ಲಿಂಗಾಂಗಸಾಮರಸ್ಯವನ್ನು ಜೀವಾತ್ಮರುಗಳೊಡನೆ ಸೇವಿಸುವನು. ತನ್ನ ಸಂಕಲ್ಪಕ್ಕೆ ವಿರೋಧವಾಗಿ ನಡೆದುಕೊಳ್ಳುವವರನ್ನು, ವಿಶ್ವಕ್ಕಾಗಿ ತಾನಿಟ್ಟುಕೊಂಡ ಆದರ್ಶಕ್ಕನುಗುಣವಾಗಿ ಯಾವಾಗ ಧ್ಯೇಯಪೂರ್ಣ ಸದಾಚಾರಸಂಪನ್ನರಾಗುವರೋ ಎಂದು ಕಳವಳಗೊಂಡು ತಾಳ್ಮೆಯಿಂದ ಕಾಯುತ್ತಾನೆ—ಮನವೊಲಿಸುತ್ತಾನೆ; ಮುಕ್ತಿದ್ವಾರ ಸದಾ ತೆರೆದಿಟ್ಟಿರುತ್ತಾನೆ. 'ಹೇಂಗೆ ಮನ ಹಾಂಗೆ ನಿಮ್ಮ ಘನ ತಪ್ಪದು' ಎಂಬ ಧರ್ಮಕಟ್ಟಳೆಯಂತೆ ಜೀವಾತ್ಮನ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದಿಲ್ಲ.

ಎಡದ ಕೈಯಲಿ ಹಾಲು ಬಟ್ಟಲು, ಬಲದ ಕೈಯಲಿ ಓಜುಗಟ್ಟಿಗೆ
ಆವಾಗ ಬಂದಾನೋ ನಮ್ಮಯ್ಯ ಬಡಿದು ಹಾಲು ಕುಡಿಸುವ ತಂದೆ

ಎಂದು ಬಲವಂತ ಮಾಡಿ ನನಗೆ ಒಳ್ಳೆಯದಾದ್ದನ್ನು ನೀನೇ ಮಾಡು ಎಂದು ಭಕ್ತನು ಪ್ರಾರ್ಥಿಸಿದರೂ ದೇವರು ತನ್ನ ಧರ್ಮ ಬಿಡತಕ್ಕವನಲ್ಲ. ಬಲವಂತವಾಗಿ ತನ್ನ ಗುರಿಯನ್ನು ಜೀವಾತ್ಮನ ಮೇಲೆ ಹೇರುವುದಿಲ್ಲ. ಆದರೆ ಶ್ರೇಯಸ್ಸಿನ

ದಾರಿಯತ್ತ ತಾಳ್ಮೆಯಿಂದ ಮನವೊಲಿಸುವುದನ್ನು ಮಾತ್ರ ಬಿಡುವುದಿಲ್ಲ. ಈ ಭಾವಗಳನ್ನೇ ಇಮ್ಮನವಾದರೆ ಒಡನೆ ನುಡಿಯನು ಎಂಬ ಉಕ್ತಿಯಿಂದ ಬೆಳಗಿಸಿದ್ದಾರೆ. ಹೀಗೆ ದೇವರ ಕರುಣೆಯು ಎಲ್ಲರನ್ನೂ ಉದ್ಧಾರಮಾಡುವುದಕ್ಕಾಗಿ ಮಳೆಯಂತೆ ಎಲ್ಲ ಭೂಮಿಯ ಮೇಲೆ ಬೀಳುತ್ತಿದ್ದರೂ ಅಸಂಖ್ಯಾತರು ಕೃಷಿಯನ್ನೇ ಮಾಡದ ತರಲಭೂಮಿ ಯಂತಿರುವವರಾದ್ದರಿಂದ ಮುಕ್ತಿ ಎಂಬ ಬೆಳೆಯು ಒಡನೆ ಫಲಿಸುವುದಿಲ್ಲ. ಹೇಗೆ ತನ್ನ ಊಟವನ್ನು ಬೇರೊಬ್ಬರಿಂದ ಮಾಡಿಸಲಾಗದೋ ಹಾಗೆಯೇ ತನ್ನ ಅನುಭವವನ್ನು, ಮುಕ್ತಿಯನ್ನು ದಕ್ಷನಾಗಿ ತಾನೇ ಕೃಷಿ ಮಾಡಿ ಸಾಧಿಸಬೇಕಾಗು ತ್ತದೆ. ದಿವ್ಯಜ್ಞಾನಿಗಳಾದ ಶರಣರ ಸಂಗವು ಈ ನಿಷ್ಪತ್ತಿ ಎಂಬ ಹಣ್ಣಾಗುವ ರಚನಾಕಾರ್ಯಗತಿಯನ್ನು ತ್ವರೆಗೊಳಿಸು ವುದಾದ್ದರಿಂದ ಒಂದು ನಿಮಿಷವಾದರೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ ಎಂದು ಸೆರಗೊಡ್ಡಿ ಬೇಡುತ್ತಾರೆ. ಇಂಥ ಶರಣರನುಭಾವಸಂಗಪ್ರಾಪ್ತಿಯ ಮಹತಿಯನ್ನು ಬಸವಣ್ಣನವರು ಹೀಗೆ ವರ್ಣಿಸಿದ್ದಾರೆ :

> ಅಡವಿಯಲ್ಲೊಬ್ಬ ಕಡು ನೀರಡಿಸಿ
> ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ !
> ಕುರುಡ ಕಣ್ಣ ಹಡೆದಂತೆ ;
> ಬಡವ ನಿಧಾನವ ಕಂಡಂತಾಯಿತ್ತಯ್ಯಾ !
> ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ !

ತಾನಲ್ಲದ ಅನ್ಯವು—ಶರಣರು ವಿವಿಧ ವಸ್ತುಗಳಿಂದಾದ ಜಗತ್ತು ಪರಮಾತ್ಮ—ಈ ಎಲ್ಲವೂ ಒಂದು ರೀತಿಯಲ್ಲಿ ಸೋಂಕಿ ಸಂಬಂಧಪಟ್ಟಾಗ ಮೂಲಪ್ರವೃತ್ತಿ ಭಾವನಾಪ್ರಧಾನವಾದ ಜೀವಾತ್ಮನನ್ನು ಭವಿತನದಿಂದ ಭಕ್ತಿಯತ್ತ ತಿರುಗಿಸಿ ನಿಷ್ಪತ್ತಿ ಎಂಬ ಹಣ್ಣಾಗಿಸುವ ಕಾರ್ಯಗತಿಯಲ್ಲಿ ಪ್ರಭಾವ ಬೀರಿ ಮಾರ್ಪಡಿಸಬಲ್ಲವು. ಆದರೆ ಆಚಾರ ವೆಂಬುದು ಹಾವಸೆಗಲ್ಲು ಎಂಬುದನ್ನು ಜೀವಾತ್ಮನು ಮರೆಯಕೂಡದು. ಪ್ರತಿಕ್ಷಣಕ್ಕೂ ಪತನ ಕಾಯುತ್ತಿರುತ್ತದೆ. ಅಂತೆಯೇ ಭವಬಂಧನದಿಂದ ಬಿಡುಗಡೆ ಹೊಂದಬೇಕೆನ್ನುವವನು ಅಂತರ್ಮುಖಿಯಾಗಿ ಆತ್ಮಶೋಧನಾಪೂರ್ವಕವಾಗಿ ಅಂತರಂಗಜೀವನದ ಕಾವಲು ಕಾಯುತ್ತಾನೆ. ಅಂತರಂಗದಲ್ಲಿ ನಡೆಯುವ ತುಮುಲದಲ್ಲಿ ಜಯಗಳಿಸಬೇಕೆನ್ನುತ್ತಾನೆ. ತಾನು ಮಾಡಿದ ಹೀನಂಗಳೆಲ್ಲವ ಶರಣರ, ಪರಮಾತ್ಮನ ಮುಂದೆ ಇಳುಹಿ ಬಿಚ್ಚಿಟ್ಟು ಸುಬುದ್ಧಿ ಎಂಬ ಉದಕವನೆರೆದು ಸಲಹು ಎಂದು ಮೊರೆಹೋಗುತ್ತಾನೆ. ಹೀಗೆ ಸರ್ವಾಂಗಶುದ್ಧನಾಗಿ ಭಕ್ತಿನಿಷ್ಠೆಗಳು ನೆಲೆಗೊಂಡು ಶರಣರ, ವಿಶ್ವದ, ಪರಮಾತ್ಮನ ಆದರ್ಶಗಳಿಂದ ಆಕರ್ಷಣೆಗೊಂಡು ಬೆಳೆದು ಪರಿಷ್ಕೃತ-ಸಮೃದ್ಧ ವ್ಯಕ್ತಿತ್ವದ ಪರಾಕಾಷ್ಠೆ ಮುಟ್ಟಿದಾಗ ಅಂಗನು ತನ್ನನ್ನು ಪರಮಾತ್ಮನಿಗೆ ನೈವೇದ್ಯರೂಪವಾಗಿ ಅರ್ಪಿಸುತ್ತಾನೆ. ಮುಂದಿನ ತನ್ನ ಯೋಗಕ್ಷೇಮದ ಭಾರವನ್ನು ಪರಮಾತ್ಮನಿಗೆ ಒಪ್ಪಿಸಿ ನಿಶ್ಚಿಂತನಾಗುತ್ತಾನೆ. ಜೀವದ ಜಂಜಡದಿಂದ ಬಿಡುಗಡೆ ಹೊಂದಿ ದಿವ್ಯವಾದ ಶಾಂತಿ ಸುಖ ವನ್ನನುಭವಿಸುತ್ತಾನೆ. ಇದುವೇ ಮುಕ್ತಿ.

> ಎನ್ನ ಖಾಮಕ್ಷೇಮ ನಿಮ್ಮದಯ್ಯಾ ;
> ಎನ್ನ ಹಾನಿವೃದ್ಧಿ ನಿಮ್ಮದಯ್ಯಾ ;
> ಎನ್ನ ಮಾನಾಪಮಾನ ನಿಮ್ಮದಯ್ಯಾ ;
> ಕೂಡಲಸಂಗಮದೇವಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ ?
> ........ಒಲಿದೊಮ್ಮೆ 'ಶಿವ ಶರಣೆ'ನ್ನಿರಯ್ಯಾ ಒಂದು ಸೊಲ್ಲಿಂಗೆ ಮುಕ್ತಿಸಿದ್ಧಿ !
> ಕೂಡಲಸಂಗಮದೇವ ಭಕ್ತಿಲಂಪಟನಾಗಿ.

ಈ ರೀತಿಯಲ್ಲಿ ಬಲಿತ ಭಕ್ತಿ ನಿಷ್ಠೆ ಸಮರ್ಪಣಭಾವದಿಂದಿದ್ದವನು ತನಗಂತೂ ಏನು ಬೇಕು ಬೇಡೆಂಬವುಗಳು ಇಲ್ಲ. ದೇವರೇ ನೀನು ಒಲಿದು ಕೊಟ್ಟುದೇ ನನಗೆ ಹಿತವಾದದ್ದು, ಕ್ಷೇಮವಾದದ್ದು. ಅದುವೇ ನನಗೆ ಮೋಕ್ಷ ಎಂಬ ರೀತಿ ಯಲ್ಲಿ ಪರಮಾತ್ಮಸಂಕಲ್ಪವರ್ತಿಯಾಗಿರುತ್ತಾನೆ :

> ನಿನ್ನಱಿಕೆಯ ನರಕವೇ ಮೋಕ್ಷ ಕಂಡಯ್ಯಾ !
> ನಿನ್ನಱಿಯದ ಮುಕ್ತಿಯೆ ನರಕ ಕಂಡಯ್ಯಾ !
> ನೀನೊಲ್ಲದ ಸುಖವೇ ದುಃಖ ಕಂಡಯ್ಯಾ !
> ನೀನೊಲಿದ ದುಃಖವೇ ಪರಮಸುಖ ಕಂಡಯ್ಯಾ !
> ಚೆನ್ನಮಲ್ಲಿಕಾರ್ಜುನಯ್ಯ, ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧವವೆಂದಿಪ್ಪೆನು !

ಇಂತೆಂದುದು ಆತನ ವಚನ. ನನ್ನ ಸಂಕಲ್ಪವೆಂಬುದೊಂದು ಬೇರೆ ಇಲ್ಲ. ನಿನ್ನ ಸಂಕಲ್ಪವೇ ನನ್ನ ಸಂಕಲ್ಪ, ನನ್ನ ಸಂಕಲ್ಪವೇ ನಿನ್ನ ಸಂಕಲ್ಪ. "ನನ್ನೊಳಗೆ ನೀನು, ನಿನ್ನೊಳಗೆ ನಾನು ಎಂಬ ಪರಿಯಲ್ಲಿ ಬೆರೆಸಿ ಬೇರಿಲ್ಲದಿಪ್ಪ" ಅಂಗನ ಈ ಅನುಭಾವವನ್ನೇ ಲಿಂಗೈಕ್ಯ, ಲಿಂಗಾಂಗಸಾಮರಸ್ಯ, ಸಮರತಿ, ಸಮಕಳೆ, ಪರಮ ಸಂತೋಷ, ಮಹಾ ಪದವಿ, ಸಮ್ಯಕ್ ಪದವಿ, ಮುಕ್ತಿ ಎಂಬ ಅನೇಕ ಶಬ್ದಗಳಿಂದ ವರ್ಣಿಸಿದ್ದಾರೆ.

ಈ ಸಂದರ್ಭದಲ್ಲಿ ತಾತ್ವಿಕವಾಗಿಯೂ ಅನುಭವಸಾಮಂಜಸ್ಯದೃಷ್ಟಿಯಿಂದಲೂ ಮುಕ್ತಿ ಎಂಬ ಸಮರಸಾನುಭವವಲ್ಲಿ ಆತ್ಮನ ಸ್ಥಾನಮಾನವೇನು ಎಂಬ ಒಂದು ಪ್ರಶ್ನೆ ಏಳುತ್ತದೆ. ಈ ಸಮಸ್ಯೆಯನ್ನು ನಾವು ಮೇಲೆ ವಿವರಿಸಿದ ವಚನಕಾರರ ವಿಚಾರಧಾರೆಯನ್ನು ಮುಂದುವರಿಸಿ ಚರ್ಚಿಸಿದರೆ, ಈ ಬಗ್ಗೆ ಭಂಡಾರಕರರವರ ಅಭಿಪ್ರಾಯ ಸಮಂಜಸವೂ ಸಮರ್ಥನೀಯವೂ ಆದುದೆಂದು ನಮಗೆ ತೋರುತ್ತದೆ. ಆದರೆ ಎಸ್. ಸಿ. ನಂದೀಮಠರವರು ತಮ್ಮ A Hand-book of viraśaivism ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ:

> The tendency of the vacana-śāstra literature is Advaita (monism) in the end, therefore there is no Support from it for the views of Dr. Bhandarkar who holds that—
>
> "The goal thus pointed out does not involve a perfect identity between the Supreme and individual souls, or the Shaking off of individuality and becoming a Simple soul unconscious of itself, which is the doctrine of greate non-dualistic School of Śankara.")

ವಚನಶಾಸ್ತ್ರದ ಅಂತಿಮ ಒಲವು ಅದ್ವೈತವಾಗಿದೆ. (ಏಕತ್ವವಾಗಿದೆ) ಆದ್ದರಿಂದ ಡಾ. ಭಂಡಾರಕರರು, ಎತ್ತಿಹಿಡಿಯುವ ಅಭಿಪ್ರಾಯಗಳಿಗೆ ವಚನಸಾಹಿತ್ಯದಿಂದ ಆಧಾರ ದೊರೆಯುವುದಿಲ್ಲ. ಅವರು ಸಮರ್ಥಿಸುವುದೇನೆಂದರೆ:

> "ಈ ರೀತಿಯಲ್ಲಿ ಎತ್ತಿತೋರಿಸಿದ ಗುರಿಯು ಜೀವಾತ್ಮರುಗಳ ಮತ್ತು ಪರಮಾತ್ಮನ ಸಂಪೂರ್ಣ ಒಂದಾಗುವಿಕೆಯನ್ನಾಗಲಿ ಅಥವಾ ವ್ಯಕ್ತಿತ್ವ ಉಡುಗಿಹೋಗಿ ಇಲ್ಲದಂತಾಗುವುದನ್ನಾಗಲೀ ಮತ್ತು ಶಂಕರ ಮತದ ಮಹಾನ್ ಅದ್ವೈತ ಸಿದ್ಧಾಂತವಾದ—ತನ್ನರಿವು ತನಗೇ ಇಲ್ಲದಂಥ ಅವಿಭಾಜ್ಯ ಆತ್ಮವಾಗುವುದನ್ನಾಗಲಿ ಒಳಗೊಳ್ಳುವುದಿಲ್ಲ."

ನಂದೀಮಠರವರು ಹೇಳುವಂತೆ, ವಚನಶಾಸ್ತ್ರಸಾಹಿತ್ಯವನ್ನು ಅರ್ಥಯಿಸಿದರೆ, ಬಹುಭಾಗ ವಚನಗಳು ಅರ್ಥಶೂನ್ಯವಾಗುತ್ತವೆ. ಅವರ ವಿಚಾರ, ತರ್ಕಸಮಂಜಸವಾಗಿಲ್ಲವೆಂಬುದು ೧೧೦ನೇ ಪುಟದಲ್ಲಿ ಸ್ಪಷ್ಟವಾಗುತ್ತದೆ. ಶಂಕರರ ಏಕತತ್ವವಾದ ನಿರ್ಗುಣಬ್ರಹ್ಮವೂ ವಚನಕಾರರ ಪರವಸ್ತುವೂ ಒಂದೇ ಆಗಿದ್ದರೆ ಇದರಿಂದ ಹೊರಡುವ ಅನುಮಿತಿಯೂ ಒಂದೇ ಆಗಿರಬೇಕು ಎಂಬುದು, ಯಾರಿಗಾದರೂ ಸ್ಪಷ್ಟವಾಗಬೇಕಾದ ವಿಷಯ. ಏಕತತ್ವವಾದವನ್ನೊಪ್ಪಿದರೆ ಜಗತ್ತು ಮತ್ತು ಆತ್ಮರುಗಳಿಗೆ ನಿಜವಸ್ತುವಿನ ಸ್ಥಾನಮಾನ ಕೊಡುವಂತಿಲ್ಲವೆಂದು ತತ್ವಶಾಸ್ತ್ರಜ್ಞರೆಲ್ಲರೂ ಒಪ್ಪುತ್ತಾರೆ. ಆದರೆ ನಂದೀಮಠರವರು ಮಾತ್ರ ತರ್ಕಸಮ್ಮತವಲ್ಲದ ಅಭಿಪ್ರಾಯಕ್ಕೆ ಬೆಂಬಲ ಕೊಡುತ್ತಾರೆ. ನಿಜದ ಸ್ವರೂಪವು ಏಕತತ್ವವಾದರೆ ವೈವಿಧ್ಯಮಯವಾದ ಜಗತ್ತು ನಿಜವಾಗಲು ಶಕ್ಯವಿಲ್ಲ. ಅದು ಭ್ರಾಂತಿ (illusion) ಯಾಗಬೇಕಾಗುತ್ತದೆ. ಆದರೆ ವಚನಶಾಸ್ತ್ರಸಾಹಿತ್ಯದಲ್ಲಿ ಜಗತ್ತು ನಿಜದ ಸ್ವರೂಪದ್ದು ಎಂದು ಬರೆಯುತ್ತಾರೆ. ಜಗತ್ತಿನ ನಿಜಸ್ವರೂಪವನ್ನು ನಾವು ಒಪ್ಪುವುದಾದರೆ ಏಕತತ್ವವಾದವನ್ನು ಕೈಬಿಡಬೇಕಾಗುತ್ತದೆ. ನಾವು ಈ ವಿಚಾರಸರಣಿಯನ್ನನುಸರಿಸಿ ವಚನಗಳನ್ನು ಅರ್ಥಯಿಸಿದ್ದೇವೆ. ಆತ್ಮರುಗಳೂ ನಿಜ, ವೈವಿಧ್ಯಮಯ ಜಗತ್ತೂ ನಿಜ, ಪರಮಾತ್ಮನೂ ನಿಜ. ಪ್ರತಿಯೊಂದು ತತ್ತ್ವಕ್ಕೂ ಉಳಿದ ತತ್ತ್ವಗಳ ಅವಶ್ಯಕತೆ ಇದೆ. ಸಂಬಂಧವಿದೆ. ಈ ಲೇಖನದಲ್ಲಿ ಇದು ನಮ್ಮ ಊಹಾಪ್ರತಿಜ್ಞೆಯಾಗಿದೆ. ಈ ಊಹಾಪ್ರತಿಜ್ಞೆಯ ವಿಸ್ತಾರವಾದ ವಿವರಣೆಯನ್ನು ಬೇರೊಂದು ಗ್ರಂಥದಲ್ಲಿ ನಿರೂಪಿಸಬೇಕು. ಈ ಊಹಾಪ್ರತಿಜ್ಞೆಯನ್ನು ವಚನಕಾರರ ಅನುಭವಸೂಕ್ತಿಗಳು ಸಮರ್ಥಿಸುತ್ತವೆ. ನಮ್ಮ ಅನುಭವವೂ ಋಜುವಾತು ಮಾಡುತ್ತದೆ. ಕಾರಣ ಈ ಹಿನ್ನೆಲೆಯಲ್ಲಿ ಜೀವನದ ಗುರಿಯಾದ ಸಾಮರಸ್ಯಾನುಭವದಲ್ಲಿ ಜೀವ ಜಗತ್ತುಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆಯೋ ಎಂಬ ಪ್ರಶ್ನೆಯನ್ನು ಶರಣರ ನುಡಿಗಡಣದಿಂದಲೇ ಉತ್ತರಿಸೋಣ:

ಘನಗಂಭೀರ ಮಹಾಘನದೊಳಗಿನ ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ ಮಹಾಬೆಳಗಿನೊಳಗಿದ್ದೇನೆಂಬ
ಶಬ್ದ ಮುಗ್ಧವಾದುದೇನೆಂಬೆನಯ್ಯಾ ?

.....................................................................

"ಲಿಂಗಮಧ್ಯೇ ಜಗತ್ ಸರ್ವಂ" ಎಂಬುದು ನಾನರಿಯೆನಯ್ಯಾ.
ಲಿಂಗಸೋಂಕಿನ ಸುಖದೊಳಗೆ,
ಕೂಡಲ ಸಂಗಮದೇವಯ್ಯಾ
ಅಂಬುಧಿಯಲ್ಲಿ ಬಿದ್ದ ಆಲಿಕಲ್ಲಂತೆ
ಭಿನ್ನಭಾವವರಿಯದೆ 'ಶಿವಶಿವಾ' ಎನ್ನುತ್ತಿರ್ದೆನು ನಾನು.

ಬಸವಣ್ಣನವರು ಈ ವಚನಗಳಲ್ಲಿ ಜೀವಾತ್ಮನ ವ್ಯಕ್ತಿತ್ವ ಅಳಿದು ಹೋಗುತ್ತದೆ ಎಂದು ಹೇಳುವುದಿಲ್ಲ. ಮಹಾಬೆಳಗಿನೊಳಗಿದ್ದೇನೆಂಬ ಶಬ್ದ ಮುಗ್ಧವಾಗುತ್ತದೆ ಎಂದು ಹೇಳುತ್ತಾರೆ. ಲಿಂಗದಲ್ಲಿ ಜಗತ್ತಿದೆ. ಲಿಂಗಸೋಂಕಿನ ಸುಖದೊಳಗೆ ಭಿನ್ನಭಾವವರಿಯದೆ "ಶಿವ ಶಿವಾ" ಎನ್ನುತ್ತಿರ್ದೆನು ನಾನು ಎಂದು ಶಬ್ದ ಮುಗ್ಧವಾದ ಅನುಭವವನ್ನು ಜೀವಾತ್ಮನು ಅನುಭವಿಸುತ್ತಾನೆ. ಆದರೆ ಅಳಿಯುವುದಿಲ್ಲ ಎಂದು ಹೇಳುತ್ತಾರೆ. "ಲಿಂಗವ ಪೂಜಿಸಿ ಫಲವೇನಯ್ಯ. ಸಮರತಿ-ಸಮಕಳೆ. ಸಮಸುಖವನರಿಯದನ್ನಕ್ಕ" ಎಂದು ಕೇಳುವಲ್ಲಿ ಆತ್ಮ ಪರಮಾತ್ಮರುಗಳು ಸಾಮರಸ್ಯಾನುಭೂತಿಯಲ್ಲಿ ಸಮವಾಗಿ ಪಾಲುಗೊಳ್ಳುತ್ತಾರೆ ಎಂಬುದು ಸಿದ್ಧ. ಹಾಗೆಯೇ ಅಲ್ಲಮಪ್ರಭುವೂ ಹೇಳುತ್ತಾರೆ :

ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು
ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು
ವಾಯುವಿನ ಸಂಚದ ಪರಿಮಳದ ನಿಲವಿನಂತೆ
ಲಿಂಗೈಕ್ಯನ ಸಂಬಂಧವಿದು ಗುಹೇಶ್ವರಾ

ಈ ವಚನದಲ್ಲಿ ಲಿಂಗೈಕ್ಯವು ನವೀನ ಸೃಷ್ಟ್ಯಾತ್ಮಕ ಸಮರಸಾನುಭವವಾಗಿದ್ದು ಸ್ಫಟಿಕದ ಘಟದೊಳಗಣ ಪ್ರಭೆಯ ರೂಪಕದಲ್ಲಿ ಜೀವಾತ್ಮ ಪರಮಾತ್ಮ ಏಕರೂಪರಲ್ಲವೆಂದು ಪ್ರತ್ಯೇಕಿಸಿ ತೋರಿಸುವುದರ ಜೊತೆಗೆ ಸಾಮ್ಯವನ್ನು ಹೇಳಿದ್ದಾರೆ. ವಾಯುವು ಮತ್ತು ಪರಿಮಳವೂ ತಮ್ಮ ಭಿನ್ನತೆಯನ್ನುಳಿಸಿಕೊಂಡೂ ಎಡೆಬಿಡದ ಸಂಬಂಧದಲ್ಲಿದ್ದಂತೆ ಜೀವಾತ್ಮ ಪರಮಾತ್ಮರುಗಳ ಕೂಟ. ಹೀಗೆ ವಚನಕಾರರಲ್ಲಿ ಮೋಕ್ಷವೆಂಬುದು ನವೀನವಾದ ಸಮರಸಾನುಭೂತಿಯಲ್ಲಿ ಸಮಸುಖವನ್ನನುಭವಿಸಿ ಬೆರೆಸಿ ಬೇರಿಲ್ಲದಂತಾಗುವುದು. ಮಹಾದೇವಿಯಕ್ಕ ಮೋಕ್ಷಾನುಭವಸ್ವರೂಪವನ್ನು ಕೆಳಗಿನ ವಚನಗಳಲ್ಲಿ ವರ್ಣಿಸುತ್ತಾಳೆ :

ಕೇಳವ್ವ ಕೇಳವ್ವಾ ಕೆಳದಿ, ನಾನೊಂದು ಕನಸುವ ಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಬಂದೆನ್ನ ನೆರೆದ ನೋಡವ್ವಾ
ಆತನನಪ್ಪಿಕೊಂಡು ತಳುವೆಳಗಾದೆನು.
ಚನ್ನಮಲ್ಲಿಕಾರ್ಜುನನ ಕಂಡು
ಕಣ್ಣಾ ಮುಚ್ಚಿ ತೆಱೆದು ತೆಳುವೆಳಗಾದೆನು.
ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವಾ !
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವಾ !
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವಾ !
ಚೆನ್ನಮಲ್ಲಿಕಾರ್ಜುನದೇವರ ದೇಪನ ಕೂಡುವ ಕೂಟವ
ನಾನೇನೆಂದಱಿಯದೆ ಮೆಱೆದೆ ಕಾಣವ್ವಾ !
ನಾನು ನಿನಗೊಲಿದೆ, ನೀನು ನನಗೊಲಿದೆ !
ನೀನೆನ್ನನಗಲದಿಪ್ಪೆ, ನಾ ನಿನ್ನನಗಲದಿಪ್ಪೆನಯ್ಯಾ !
ನಿನಗೆ ಎನಗೆ ಬೇಱೊಂದು ಠಾವುಂಟೆ ?
ನೀನು ಕರುಣೆಯೆಂಬುದ ಬಲ್ಲೆನು !
ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ,
ನೀನೆ ಬಲ್ಲೆ ಚೆನ್ನಮಲ್ಲಿಕಾರ್ಜುನ.

ಹೀಗೆ ವರ್ಣಿಸಲು ಕಠಿಣವಾದ ಮೋಕ್ಷಾನುಭವವನ್ನು ಸಾಮಾನ್ಯ ಜನರಿಗೆ ತಿಳಿಸುವುದಕ್ಕಾಗಿ ಅವರ ಅನುಭವಕ್ಕೆ ಬಂದ ಸತಿಪತಿಗಳು ಸಂಗಮಿಸುವುದರಿಂದುಂಟಾಗುವ ಸುಖದ ರೂಪಕಗಳನ್ನು ಕೊಟ್ಟಿದ್ದಾರೆ. ಹಾಲಿನೊಳಗೆ ಹಾಲು ಬೆರೆಸಿದಂತೆ, ನೀರಿನೊಳಗೆ ನೀರು ಬೆರೆಸಿದಂತೆ, ನದಿ ಸಮುದ್ರವ ಸೇರಿದಂತೆ, ಪತಿಯು ಸತಿಯ ಕೂಡಿದಂತೆ ಎಂದು ಅನೇಕ ರೀತಿಯಲ್ಲಿ ಮೋಕ್ಷಸುಖವನ್ನು ವರ್ಣಿಸಿದ್ದಾರೆ. ಇಂಥ ವಿಷಯಗಳಲ್ಲಿ ನಾವು ಎಷ್ಟು ತರ್ಕಬದ್ಧವಾಗಿ, ಭಾಷೆಯಲ್ಲಿ ಬರೆದು ತಿಳಿಸುವ ಪ್ರಯತ್ನ ಮಾಡಿದರೂ ಒಂದಷ್ಟು ಸ್ವಂತ ಅನುಭವವಿಲ್ಲದಿದ್ದರೆ ಆ ವಿಷಯಗಳ ನಿಜಸ್ವರೂಪ ಸಮರ್ಪಕವಾಗಿ ತಿಳಿಯಲಾರದು. ನೇರವಾದ ನಿಕಟಸಂಬಂಧದ ಅಂತರಂಗದನುಭವ ದಿವ್ಯಜ್ಞಾನದ ಜೀವಾಳ.

ಒಟ್ಟಿನಲ್ಲಿ ಜೀವನದ ಆಗುಹೋಗುಗಳನ್ನರಿಯದೆ ಬಾಯಿಗೆ ಬಂದಂತೆ ನುಡಿವವರಿಗೆ ಮೋಕ್ಷದ (ಸುಳುವೂ) ಸೋಂಕೂ ಹತ್ತದು. ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಉಂಡುದನುಣಬಂದ ಹಂದಿಯ ಬಾಳುವೆಯವರಿಗೆ ಮೋಕ್ಷ ಬಹುದೂರವಿರುತ್ತದೆ. ಜೀವನದ ಆಗುಹೋಗುಗಳನ್ನರಿಯದೆ ಸಂಸಾರ ವ್ಯಥಾ ಹೋಯಿತ್ತಲ್ಲಾ ಎಂಬ ಕೊರಗು ಮೂಡಿದಲ್ಲದೆ ಮೋಕ್ಷಾನುಭವ ಅಂಕುರಿಸದು. ಈ ಕೊರಗು ಭಕ್ತಿನಿಷ್ಠೆಯಲ್ಲಿ ಬಲಿತು ಪರಮಾತ್ಮಾಭಿಮುಖವಾದ (ಧ್ಯೇಯಪೂರ್ಣತೆ, ಆದರ್ಶಗಳ) ಅರಿವಿನ ಹಂಬಲವಾದಲ್ಲದೆ ಹುಲುಸಾದ ಮೋಕ್ಷದ ಬೆಳೆ ಫಲಿಸುವಂತಿಲ್ಲ. ಹೀಗೆ ಧ್ಯೇಯಪೂರ್ಣತೆ ಆದರ್ಶಗಳ ಅರಿವಿನ ಭಾರದಿಂದ ಪ್ರಚೋದಿಸಲ್ಪಟ್ಟು ಆತ್ಮಶೋಧನಾಪೂರ್ವಕವಾಗಿ ಹೆಚ್ಚು ಹೆಚ್ಚು ಪರಿಪೂರ್ಣಗೊಳ್ಳುತ್ತ ಸಾಧಿಸಲ್ಪಟ್ಟ ಅಂತರಂಗಜೀವನದ ಶುದ್ಧಿ ಮತ್ತು ಮೌಲ್ಯಗಳ ಕಳೆಯು ಉಕ್ಕಿ ಬಾಹ್ಯಾಚರಣೆಯಾಗಿ ವ್ಯಕ್ತಿಯ ಹಾಗೂ ಲೋಕದ ಕಲ್ಯಾಣ ಸಾಧಿಸುವುದೇ ಮೋಕ್ಷದಂದುಗದ ಮೂಲ ಸ್ವರೂಪ. ಏನನ್ನು ಮಾಡಿದರೂ ತನವುಕ್ಕೆ, ಮನ ಮೆಚ್ಚಿ, ದೇವರು ಮೆಚ್ಚಿ ಅಹುದಹುದೆನ್ನುವಂತೆ ಮಾಡುವುದೇ ಮೋಕ್ಷಹೃದಯವಾಗಿದೆ. ಇಂಥ ಜೀವನ ಗುರಿಯು ಮಾನವನ ಅಹಂಕಾರ, ಕಪಟಾಚಾರ, ಆತ್ಮವಂಚನೆ ಮುಂತಾದ ಭವಿತನದ ಗುಣಗಳನ್ನು ಗರಗಸದಂತೆ ಹೋಗುತ್ತ ಬರುತ್ತ ಕೊಯ್ಯುತ್ತದೆ. ದೈವೀಗುಣಗಳನ್ನು ಅಳವಡಿಸಿ ಬಲಿಯುವಂತೆ ಮಾಡಿ ನಿಷ್ಪತ್ತಿ ಎಂಬ ಹಣ್ಣಾಗಿ ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಳ್ಳುವಲ್ಲಿ "ಆತ್ಮನೈವೇದ್ಯವಾಯಿತ್ತು." ಜೀವನದ ಪರಮಗುರಿ ದಿವ್ಯಶಾಂತಿ ಸುಖವಾದ್ದರಿಂದ ಅಪೇಕ್ಷಿಸಬಹುದಾದದ್ದೆಲ್ಲವನ್ನೂ ಸಾಧಿಸಿದಂತಾಯಿತು.

ಈ ಜೀವನದ ಪರಮಗುರಿ ಸಾಧಿಸುವುದನ್ನು ಒಬ್ಬನು ಇತರರಿಗೆ ಭಾಷಣದಿಂದಾಗಲಿ ಬರವಣಿಗೆಯಿಂದಾಗಲಿ ತಿಳಿಸಿ ಪ್ರಕಟಪಡಿಸುವ ವಿಷಯವಲ್ಲ. ಪ್ರತಿಯೊಬ್ಬನೂ ತನ್ನ ತನ್ನ ಮೋಕ್ಷವನ್ನು ತಾನೇ ಸಾಧಿಸಬೇಕಾಗುತ್ತದೆ ಯಾಪ್ಪರಿಂದ ಬಸವಣ್ಣನವರು ಇದನ್ನು "ಕರುಳ ಕಲೆ" ಎಂದು ಕರೆದಿದ್ದಾರೆ. ಇದು ಸ್ವಂತ ಅನುಭವಕ್ಕೇ ತಿಳಿಯುವ ವಿಷಯ. ಕಾರಣ—

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ನಾಲದೇ ಅಯ್ಯಾ ?<br>
ಮಾಲೆಗಾಜಿನ ಕೇಳಿ ನನೆ ಅರಳುವದೆ ?<br>
ಆಗಮುವನಿದಿರಿಂಗೆ ತೋಱುವದು ಆಚಾರವೇ ಅಯ್ಯಾ ?<br>
ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನ್ನು,<br>
ಇದಿರಿಂಗೆ ತೋಱುವುದು ಆಚಾರವೇ ಅಯ್ಯಾ ?

ಇಂತೆಂದುದು ಬಸವವಾಣಿ. ಈ ಕರುಳ ಕಲೆಯು ಬಗ್ಗೆ ಮನಬಂದಂತೆ ಹರಟಿ ಬೀದಿ ಬೀದಿಗಳಲ್ಲಿ ಬಹಿರಂಗವಾಗಿ ಪ್ರಚಾರ ಮಾಡಿ ಜನರಲ್ಲಿ ಹರಡುವುದು ಶಕ್ಯವಿಲ್ಲವಾದ್ದರಿಂದ, ಒಂದು ವೇಳೆ ಶಕ್ಯವಿದ್ದರೂ ಹಾಗೆ ಹಾಡುವುದು ಆಚಾರವಲ್ಲವಾದ್ದರಿಂದ "ಕರುಳಕಲೆ ಪ್ರಕಟಿತವುಂಟೆ, ಕೂಡಲಸಂಗಮದೇವಾ ?" ಎಂದು ಕೇಳುತ್ತಾರೆ. ಆದ್ದರಿಂದ ಪ್ರತಿಯೊಬ್ಬನೂ "ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳಕಲೆ"ಯನ್ನುಪಯೋಗಿಸಿಕೊಂಡು ಜನ್ಮ ಸಾರ್ಥಕ ಮಾಡಿಕೊಳ್ಳುವ ಹೊಣೆಗಾರಿಕೆಯನ್ನು, ತಾನುಂಬ ಊಟದಂತೆ, ತಾನೇ ನಿರ್ವಹಿಸಬೇಕು. ಹೀಗೆ ಜೀವನು ತನ್ನ ಕರ್ತವ್ಯವನ್ನು ತಾನು ಮಾಡಿದರೆ, "ಹೇಂಗೆ ಮನ ಹಾಂಗೆ ಘನ ತಪ್ಪದು" ಎಂಬ ಒಡಂಬಡಿಕೆಯಂತೆ ಪರಮಾತ್ಮನು ತಾನು ಮಾಡಬೇಕಾದದ್ದನ್ನು ಮಾಡಿ ಜೀವನನ್ನು ತನ್ನ ಸಂಸ್ಪರ್ಶದಿಂದ ಪವಿತ್ರಗೊಳಿಸುತ್ತಾನೆ.

# ಶೂನ್ಯಸಂಪಾದನೆಯ ದಾರ್ಶನಿಕ ನೋಟ

ಡಾ. ವಿ. ಎಸ್. ಕಂಬಿ

**‘ಶೂನ್ಯಸಂಪಾದನೆ’** ಎಂಬ ಹೆಸರೇ ದಾರ್ಶನಿಕದೃಷ್ಟಿಕೋನವನ್ನು ವಿವರಿಸುವಲ್ಲಿ ಸ್ವವಿವರಣಾತ್ಮಕವಾಗಿದೆ. ಕಾರಣ **‘ಶೂನ್ಯಸಂಪಾದನೆ’** ಪದದ ವಿಶ್ಲೇಷಣೆ ಮಾಡುವುದರ ಜೊತೆ ಕೆಲವು ವಿಶಿಷ್ಟ ವಿಷಯಗಳ ಅಧ್ಯಯನವು ಈ ದೃಷ್ಟಿಯಿಂದ ಪೋಷಕವಾಗಿದೆ. ‘ದೃಷ್ಟಿಕೋನ’ವೆಂಬುದು ದಾರ್ಶನಿಕನು ತತ್ತ್ವವನ್ನು ನೋಡುವ ಹಾಗೂ ನೋಡಿದ್ದನ್ನು ತೋರುವ ವಿಶೇಷ ರೀತಿಯಾಗಿರುತ್ತದೆ. ಇದು ಋಗ್ವೇದದ ದ್ರಷ್ಟಾರನ ಮಾತಿನಲ್ಲಿ ಹೃದಯಂಗಮವಾಗಿ ವ್ಯಕ್ತವಾಗಿದೆ. ‘ಏಕಂ ಸತ್ ವಿಪ್ರಾ ಬಹುಧಾ ವದಂತಿ’। ಇದು ಸ್ಮರಣಾರ್ಹಮಂತ್ರವಾಗಿರುತ್ತದೆ. ಈ ರೀತಿ ವಿಚಾರ ಮಾಡುವಲ್ಲಿ—

(ಅ) ಕನ್ನಡ ಸಾಹಿತ್ಯದಲ್ಲಿ **‘ಶೂನ್ಯಸಂಪಾದನೆ’** ಎಂಬುದು ವಚನಶಾಸ್ತ್ರ ಕೃತಿ. ಶಿವಗಣಪ್ರಸಾದಿ ಮಹಾದೇವಯ್ಯನು ಈ ಕೃತಿಯನ್ನು ಸಂಪಾದಿಸಿದನು. ಇದೊಂದು ಕಲಾಕೃತಿ. ಎಲಿಯಾದ ರಿಘೀನೋನ ಮಾತಿನ ಅರ್ಥದಲ್ಲಿ ಈತನ ನಂತರದ ಮೂವರು (ಕೆಲವು ಪಂಡಿತರ ಅಭಿಪ್ರಾಯದಲ್ಲಿ ನಾಲ್ವರು) ಈ ಕೃತಿಯನ್ನು ಪರಿಷ್ಕರಣಗೊಳಿಸಿದರು. ಕೆಂಚವೀರಣ್ಣೊಡೆಯ, ಗುಮ್ಮಳಾಪುರದ ಸಿದ್ಧಲಿಂಗದೇವ ಹಾಗೂ ಗೂಳೂರ ಸಿದ್ಧವೀರಣ್ಣೊಡೆಯ ಎಂಬುವವರೇ ಆ ಮೂರು ಜನ ಪರಿಷ್ಕರಣಕಾರರು. ಈ ಕೃತಿಯ ಯೋಜನೆಯು "ಪ್ಲೇಟೊವಿನ ಸಂಭಾಷಣೆಗಳು" (ಡೈಲಾಗ್ ಆಫ್ ಪ್ಲೇಟೋ) ಯೋಜನೆಯ ರೀತಿಯಲ್ಲಿ ಯೋಜಿಸಲಾಗಿದೆಯೆಂದು ಆರ್. ಡಿ. ರಾನಡೆ ಮತ್ತು ಪಿ.ಜಿ. ಹಳಕಟ್ಟಿ ಅವರು ಅಭಿಪ್ರಾಯಪಡುತ್ತಾರೆ.[1] ಇಲ್ಲಿ ಬರುವ ಚರ್ಚೆಗಳು (ಸಂಪಾದನೆಗಳು) ತತ್ತ್ವಜ್ಞಾನ, ಆಚಾರ, ಸಮಸ್ತಶಾಸ್ತ್ರವಿಷಯ, ಸರ್ವಾಚಾರಸಂಪತ್ತು, ಯೋಗ, ಪ್ರಸಾದ ಮುಂತಾದವುಗಳನ್ನು ಕುರಿತು[2] ಈ ವಿಷಯಗಳನ್ನು ಸಂಪಾದನೆ (ಚರ್ಚೆ) ಮಾಡಿದವರು ಹನ್ನೆರಡನೆಯ ಶತಮಾನದ ಶಿವಶರಣರು. ಸಂಪಾದನಕಾರ ಶಿವಗಣಪ್ರಸಾದಿ ಮಹಾದೇವಯ್ಯನವರು ಆ ಚರ್ಚೆಗಳನ್ನು ಹೆಣೆಯುವಲ್ಲಿ ಶಿವಶರಣರ ವಚನಗಳನ್ನೇ ಬಳಸಿಕೊಂಡಿದ್ದಾರೆ. ಪ್ಲೇಟೊವಿನ ಗ್ರಂಥಗಳಲ್ಲಿ ಬರುವ ತತ್ತ್ವಜ್ಞಾನಗಳಲ್ಲಿ ಆತನ ಪೂರ್ವಕಾಲದ ತತ್ತ್ವಜ್ಞಾನಿಗಳಿದ್ದಾರೆ. ಇದು ಈ ಸಂದರ್ಭದಲ್ಲಿ ಚಾರಿತ್ರಿಕದೃಷ್ಟಿಯಿಂದವಲೋಕಿಸುವಲ್ಲಿ ಸಂಸ್ಮರಣೀಯ ಸಂಗತಿ.

ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಕೊನೆಯ ವಚನ (ವ. ಸಂ. ೯೫೯) ಚೆನ್ನಬಸವಣ್ಣನವರದು. ಅದರ ನಂತರ ಶಿವಗಣಪ್ರಸಾದಿ ಮಹಾದೇವಯ್ಯ ವಿರಚಿತ ಗದ್ಯ ಬರುತ್ತದೆ. ಇದು ಗ್ರಂಥ ಸಮಾಪ್ತಿ ಗದ್ಯ. ಇದು ಕೃತಿಯ ವಿಷಯಗಳ ಸಿಂಹಾವಲೋಕನವಾಗಿರುವಂತೆ ಅದರ ಮಹತಿಯನ್ನು ಎತ್ತಿ ತೋರಿಸುತ್ತದೆ. ಇದರಲ್ಲಿ ಒಂದು ಶಾಸ್ತ್ರೀಯ ಮಹತ್ವದ ವಿಚಾರವನ್ನು ವ್ಯಕ್ತಗೊಳಿಸಿದ್ದಾನೆ ಆತ. "ಅಜ್ಞಾನತಿಮಿರಾಂಜನತಂತ್ರ" ಇಲ್ಲಿ ಬರುವ **‘ತಂತ್ರ’**ವೆಂಬುದನ್ನು ‘ವಾದವಿದ್ಯೆ’ ಎಂಬರ್ಥದಲ್ಲಿ ಬಳಸಲಾಗಿದೆ. ಈ ವಿಚಾರಕ್ಕೆ ಪೋಷಕವಾಗಿದೆ, **‘ಅಜ್ಞಾನತಿಮಿರಾಂಜನ’**ವೆಂಬ ಪದಪುಂಜ. ಇದು ಆನ್ವೀಕ್ಷಿಕೀ ಅಥವಾ ವಾದವಿದ್ಯೆಯ ಗುರಿಯನ್ನು ಸ್ಪಷ್ಟವಾಗಿ ನಿವೇದಿಸುತ್ತದೆ. ‘ತಂತ್ರ’ವೆಂಬುದನ್ನು ‘ವಾದವಿದ್ಯೆ’ಯೆಂಬರ್ಥದಲ್ಲಿ ಹನ್ನೆರಡನೆಯ ಶತಮಾನದ ಪೂರ್ವದ ಹಾಗೂ ನಂತರದ ದಾರ್ಶನಿಕರು ಬಳಸಿದ್ದು ತಿಳಿದುಬರುತ್ತದೆ.[3]ಅ ಈ ಶಾಸ್ತ್ರದ ಗುರಿಯನ್ನು ಗೌತಮಮಹರ್ಷಿಯು ‘ನ್ಯಾಯಸೂತ್ರ’ದಲ್ಲಿ ಹೀಗೆ ಹೇಳುತ್ತಾರೆ :

ತತ್ತ್ವಜ್ಞಾನಾನ್ನಿಶ್ರೇಯಸಾಧಿಗಮಃ। (೧-೧--೧)

ಇದು ಶೂನ್ಯಸಂಪಾದನೆಯಲ್ಲಿಯ ಮಾತಿಗೆ ಕನ್ನಡಿಯನ್ನು ಹಿಡಿದಂತಿದೆ. ‘ತಂತ್ರ’ದ ಈ ವಿಷಯವಿಚಾರವನ್ನು ಆಸ್ತಿಕ ಮತ್ತು ನಾಸ್ತಿಕದರ್ಶನಗಳೆರಡೂ ಒಪ್ಪಿಕೊಳ್ಳುವುವು. ಸಂಪಾದನಾಕಾರನು ಇದು (ತಂತ್ರ) ಅಜ್ಞಾನನಿವಾರಕ

ವಾಗಿದೆ ಎನ್ನುವುದರಲ್ಲಿ 'ಜ್ಞಾತೃ' ಮತ್ತು 'ಜ್ಞೇಯ' ವಸ್ತುಗಳನ್ನು ಬೋಧಿಸುವುದೆಂಬುದೂ ಧ್ವನಿತವಾಗಿದೆ. **'ಸಂಪಾದನೆ'** ಎಂಬ ಪದವು ಇವೆರಡನ್ನೂ ಬೋಧಿಸುತ್ತದೆ. ಈ ಬೋಧೆ 'ತಾದಾತ್ಮ್ಯಬೋಧೆ' ಎಂಬುದನ್ನೂ ಸೂಚಿಸುತ್ತದೆ. ಇದು ಭಾರತೀಯ 'ವಾದವಿದ್ಯೆ'ಯ ಗುರಿ. ಈ ಮಾತನ್ನು ಋಗ್ವೇದವು ಒಂದು ವಿಧಿಯಂತೆ ಘೋಷಿಸುತ್ತದೆಯೆಂದು ಮ. ಮ. ಕುಪ್ಪುಸ್ವಾಮಿ ಶಾಸ್ತ್ರಿ ತಿಳಿಸುವರು :

ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಂ ೧×೧೯೧.೨. ಸಾಕ್ರೆಟೀಸನು ಸಹ 'ವಾದ' (ಡೈಯಲೆಕ್ಟಿಸ್)ದ ಗುರಿ ಮತ್ತು ಪ್ರಯೋಜನಗಳು ಜನರಲ್ಲಿಯ ಅನೇಕ ವಿಚಾರಗಳು ಮೂಢ ನಂಬುಗೆಗಳಾಗಿವೆ ಎಂಬುದನ್ನು ತೋರಿಸಿ ಜ್ಞಾನ ಕೊಡುವುದು ಎಂದು ನಂಬಿ ಆಚರಿಸಿ ತೋರಿಸಿದನು.

ವಸ್ತುಜ್ಞಾನವನ್ನೇ ಆಗಲಿ, ಜ್ಞಾನದ ಜ್ಞಾನವನ್ನೇ ಆಗಲಿ, ಇನ್ನಿತರ ಲೌಕಿಕ ವಿಷಯಗಳ ಕ್ಷೇತ್ರಗಳ ಜ್ಞಾನವನ್ನೇ ಆಗಲಿ ತೋರಿಸುವ ಒಂದು 'ತಂತ್ರ'ವಿದೆಯೆಂಬುದನ್ನು ಎಲ್ಲರೂ ಒಪ್ಪುವರು. **'ತಂತ್ರ'**ವೆಂಬ ಪದವನ್ನು ಜ್ಞಾನ, ಯುಕ್ತಿ ಹಾಗೂ ಕೌಶಲವೆಂಬರ್ಥದಲ್ಲಿ ದರ್ಶನಕಾರರು ಬಳಸುತ್ತ ಬಂದಿದ್ದಾರೆ.[3] ಅದನ್ನು ದಾರ್ಶನಿಕರು ಬೇರೆ ಬೇರೆ ಹೆಸರುಗಳಿಂದಲೂ ಕರೆದಿದ್ದಾರೆ: 'ವಾದವಿದ್ಯೆ' ಮತ್ತು 'ಡೈಯಾಲೆಕ್ಟಿಸ್' ಎಂದು ಅನುಕ್ರಮವಾಗಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯವೆಂಬ ಪ್ರಭೇದವಿಲ್ಲದೆ ಶಾಸ್ತ್ರಜ್ಞರು ಬಳಸುತ್ತಾರೆ. ಪಾಶ್ಚಿಮಾತ್ಯರಲ್ಲಿ ಇದನ್ನು ಎಲಿಯಾದ (Elia) ಝೀನೋ (Zena) ಎಂಬುವವನು ಪ್ರಾರಂಭಿಸಿದನು. ಇವನೇ ಈ ವಿದ್ಯೆಯ ಜನಕನು. ಇವನಿಗೆ ಇದೊಂದು **'ಕಲೆ.'** ಈ ಕಲೆಯು ಪ್ರಶ್ನೋತ್ತರ ರೂಪದ ಚರ್ಚೆ. ಇವನ ನಂತರ ಈ ಕಲೆಯನ್ನು ಶಕ್ತಿಯುತವಾಗಿ, ಸುಪ್ರಸಿದ್ಧವಾಗಿ, ಪರಿಣಾಮಕಾರಿಯಾಗಿ ಬಳಸಿದವನು ಸಾಕ್ರೆಟೀಸನು. **'ಸೋಫಿಸ್ಟರು'** ಇದನ್ನು ಚೆನ್ನಾಗಿ ಬಳಸಿದವರು. ಸಾಕ್ರೆಟೀಸನಿಗೆ ಗುರುಸ್ಥಾನದಲ್ಲಿ ಈ ವಿದ್ಯೆಯ ದೃಷ್ಟಿಯಿಂದ ಇವರಲ್ಲಿ ಇದು ಕೆಲವು ಸಲ **'ಜಲ್ಪ'**ದ ಮಟ್ಟಕ್ಕೂ ಇಳಿದುದುಂಟು. ಈ ಕಲೆಯಿಂದ ಸಾಕ್ರೆಟೀಸನು ಜನಮನದ ತಾಳಿಕೆಯನ್ನು ಕಳೆದನು : He called down philosophy from heaven, settled it in cities, introduced it into houses and made it necessary for inquiries to be made on life and morals, good and evil' says Cicero of Socrates (Tuse–V, 4, 10.) ಕಾರಣ ಇವನನ್ನು ಸುಜ್ಞಾನ ಹಾಗೂ ಸತ್ಯಗಳ ಹೆರಗೆಗಾರನೆಂದು ಕರೆದರು. ಈ ವಿದ್ಯೆಯನ್ನು ಯೂರೋಪ್‌ಖಂಡದಲ್ಲಿ ಮಧ್ಯಯುಗದಲ್ಲಿ ತತ್ವಜ್ಞಾನಿಗಳು ನೆರೆನಂಬಿದರು ಹಾಗೂ ಬಳಸಿಕೊಂಡರು. ಅದೇ ರೀತಿ ಕ್ರಿ.ಶ. ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ಭಾರತೀಯರೂ ಪ್ರಯೋಗಿಸಿದರು ಮತ್ತು ಅದನ್ನು ಅಭಿವೃದ್ಧಿಗೊಳಿಸಿದರು, ಹೊಸ ಸ್ವರೂಪ ಕೊಟ್ಟರು. ಈ ಎರಡು ಶತಮಾನಗಳ ಪೂರ್ವದವರಾದ ಉದಯನ, ಶಿವಾದಿತ್ಯ, ಭಾಸರ್ವಜ್ಞ, ವ್ಯೋಮಶಿವ, ಮಂಡನಮಿಶ್ರ, ಕುಮಾರಿಲ ಮತ್ತು ವಾಚಸ್ಪತಿಮಿಶ್ರ ಮುಂತಾದವರು ವಾದವಿದ್ಯೆಯಲ್ಲಿ ಮಾಡಿದ ಕೃಷಿಯ ಪರಿಣಾಮವಾಗಿ ಮಿಥಿಲೆಯ ಗಂಗೇಶ್ವರ ಇಲ್ಲವೆ ಗಂಗೇಶ ಹಾಗೂ ಕಲ್ಯಾಣದ ಬಸವೇಶ್ವರ ಅನುಕ್ರಮವಾಗಿ ಉತ್ತರ ಹಾಗೂ ದಕ್ಷಿಣ ಭಾರತಗಳಲ್ಲಿ ಭಾರತೀಯ ವಿಚಾರ ತಂತ್ರಕ್ಕೆ ಹೊಸ ತಿರುವನ್ನೇ ಕೊಟ್ಟರು. ಇವರಿಂದ ಪ್ರಾರಂಭವಾದ 'ನವ್ಯವಾದವಿದ್ಯೆ', ಭಾರತೀಯ ತಾತ್ವಿಕ ಚಿಂತನೆ ಸಾಮಾಜಿಕ—ಹಾಗೂ ಆರ್ಥಿಕ—ಹೊಸ ಸನ್ನಿವೇಶಗಳು ಮತ್ತು ಅವುಗಳಿಂದುಂಟಾದ ಚಿಂತನೆಗಳು ಈ ವಿಚಾರ ಪ್ರಣಾಲಿಯಲ್ಲಿ ಹೇಗೆ ಕ್ರಾಂತಿಯನ್ನು ಮಾಡಿದವೆಂಬುದರ ದ್ಯೋತಕವಾಗಿರುತ್ತದೆ. ಇದು ಐತಿಹಾಸಿಕ ಸತ್ಯ.

ಶಿವಶರಣರು 'ಗೋಷ್ಠಿ'ಗಳನ್ನು, 'ಅನುಭಾವ'ವನ್ನು ಕಂಡಕಂಡಲ್ಲಿ ನಿಂದನಿಂದಲ್ಲಿ ಮಾಡದೆ ಅದಕ್ಕೆ ಯೋಗ್ಯವಾದ ಪರಿಸರದಲ್ಲಿಯೇ ಮಾಡುತ್ತಿದ್ದರು.[4] ಹಾಗೆ ಮಾಡಬೇಕಾದುದು ಸಂಪಾದನಾ (ವಾದ) ವಿಧಿಯಾಗಿರುತ್ತದೆ. ವಾದ (ಸಂಪಾದನಾ) ವಿಧಿಯನ್ನು ಕುರಿತಿರುವ ಪ್ರಾಚೀನ ಋಷಿಗಳ ಗ್ರಂಥಗಳಲ್ಲಿ ಬರುವ ಅನೇಕ ವಿಧಿಗಳಲ್ಲಿ ಮೇಲಿನದೂ ಒಂದು ವಿಧಿಯಾಗಿರುತ್ತದೆ. ಗೋಷ್ಠಿಗಳು (ಪರಿಷತ್ತುಗಳು) ವೇದೋಪನಿಷತ್ತುಗಳಷ್ಟು ಪ್ರಾಚೀನ. ಇವುಗಳನ್ನು ಕರೆಯುವಲ್ಲಿ ಪರಿಸರಕ್ಕೆ ಅತ್ಯಂತ ಮಹತ್ವವನ್ನು ಕೊಡುತ್ತಿದ್ದರಷ್ಟೇ ಅಲ್ಲ ಈ ಗೋಷ್ಠಿಗಳಲ್ಲಿ ಅಂತರ್ ಗೋಷ್ಠಿಗಳನ್ನೂ ಮಾಡುತ್ತಿದ್ದರು, ವಿಷಯದ ಮಹತ್ವಕ್ಕನುಗುಣವಾಗಿ. ಈ ಸಂಗತಿಯನ್ನು **ಶತಪಥಬ್ರಾಹ್ಮಣ**ವು ಉಲ್ಲೇಖಿಸುತ್ತದೆ.[5] ಅದರ ಪ್ರಕಾರ **ಜನಕ** ಹಾಗೂ **ಯಾಜ್ಞವಲ್ಕ್ಯರು** ಒಂದು ಗೋಷ್ಠಿಯನ್ನು ಕರೆದರು. ವಿದ್ವಜ್ಜನರು ಭಾಗವಹಿಸಿದರು, ಚರ್ಚೆ ನಡೆಯಿತು. ಅವರೀರ್ವರೂ ಗೋಷ್ಠಿಯಿಂದೆದ್ದು ಒಳಗೆ ಹೋದರು. ವಿಷಯವನ್ನು ತಮ್ಮಿಬ್ಬರಲ್ಲಿಯೇ ಚರ್ಚಿಸಿ ಹೊರಬರುವ ಮೊದಲು ಅದನ್ನು ಬಹಿರಂಗಪಡಿಸಲಾಗದೆಂಬ ತಿಳುವಳಿಕೆಯನ್ನು ತಮ್ಮಲ್ಲಿ ಮಾಡಿಕೊಂಡರಂತೆ. ಚರ್ಚೆಗೆತ್ತಿಕೊಂಡ ವಿಷಯ **'ಕರ್ಮ.'** ಈ ಸಂಗತಿಯು—ಗೋಷ್ಠಿ, ಅಂತರ

ಗೋಷ್ಠಿಗಳು ವಿಷಯದ ಮಹತ್ವಕ್ಕನುಸರಿಸಿ ನಡೆಯುತ್ತಿದ್ದವೆಂದು ಸ್ಪಷ್ಟಪಡಿಸುತ್ತದೆ. ಇದರಿಂದ ಗೋಷ್ಠಿಗಳ ವಿಧಿಗಳು ಅಂದಿಗೂ ಹೊಸವಲ್ಲವೆಂಬುದು ತಿಳಿದುಬರುತ್ತದೆ. ಇದೇ ರೀತಿ ಬುದ್ಧನು ಕೂಡ ಅನೇಕ ವಿಷಯಗಳ ಚರ್ಚೆಯನ್ನು ಮಾಡುತ್ತಿದ್ದನು....''Buddha preached his phenomenological doctrines in an exoteric form to the people and his ontological doctrine in the exoteric form was reserved only for advancced or brilliant men.'' ಇದು ಅಧ್ಯಾತ್ಮವಿದ್ಯೆಯ ಲಕ್ಷಣಗಳಲ್ಲೊಂದು. ಇದರಿಂದ ಇದು ರಹಸ್ಯವಿದ್ಯೆಯೆಂಬ ಹೆಸರನ್ನು ಪಡೆದಿರುವ ಸಂಗತಿ. ಉಪನಿಷತ್ತುಗಳ ಕಾಲದಿಂದಲೂ ಪ್ರಸಿದ್ಧ. ಆಧುನಿಕ ಕಾಲದಲ್ಲಿ ಇದೇ ಲಕ್ಷಣವನ್ನು ಅಭಿವ್ಯಕ್ತಗೊಳಿಸುವ ಪದವು ಕೇಂದ್ರ (circle) ಉದಾ : **Veihna circle, Aurobiuno circle** ಎಂಬುವು ಸುಪ್ರಸಿದ್ಧ. ಗೌತಮ, ವಾತ್ಸ್ಯಾಯನ, ಪ್ರಶಸ್ತಪಾದರು ಆಸ್ತಿಕರಲ್ಲಿ, ಅದೇ ರೀತಿಯಲ್ಲಿ ನಾಸ್ತಿಕರಲ್ಲಿ ಬುದ್ಧ, ಮಹಾವೀರ, ಅಸಂಗ ಮತ್ತು ವಸುಬಂಧುಗಳು ಮುಂತಾದವರೂ ಈ ಪ್ರಾಚೀನವಿದ್ಯೆಯ ಪಾರಂಗತರು. ಇವರು ಈ ವಿದ್ಯೆಯನ್ನು ವ್ಯವಸ್ಥೆಗೊಳಿಸಿದರು ಹಾಗೂ ಅಭಿವೃದ್ಧಿಗೊಳಿಸಿದರು. ಶಿವಶರಣರು ಗೋಷ್ಠಿಯ ಬಗ್ಗೆ ಹೇಳುವಂಥ ವಿಚಾರಗಳನ್ನು ಇವರೆಲ್ಲರೂ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. 'ಉಪಾಯಹೃದಯ' ಹಾಗೂ 'ಉಪಾಯಕೌಶಲ್ಯಹೃದಯ'ಗಳಲ್ಲಿ 'ವಾದವಿಧಿ', 'ವಾದವಿದ್ಯೆ' ಎಂಬುವುಗಳಲ್ಲಿ ನೋಡಬಹುದು.[7] "ಕಂಡಕಂಡಲ್ಲಿ ನಿಂದನಿಂದಲ್ಲಿ ಗೋಷ್ಠಿಗಳನ್ನು ಮಾಡಬಾರದು" ಎಂಬ ಪ್ರಾಚೀನ ವಾದವಿಧಿಯು ತ್ರಿಕಾಲಾಬಾಧಿತವಾದ ವಿಧಿಯಾಗಿರುತ್ತದೆ. ಪ್ರಾಚೀನರಂತೆ ಶಿವಶರಣರು ಪಾಲಿಸಿದರೆಂಬ ಮಾತು ಚನ್ನಬಸವಣ್ಣನವರ ವಚನದಿಂದ ಸ್ಪಷ್ಟವಾಗುತ್ತದೆ.[5] ಇದೇ ವಚನದಲ್ಲಿ "ವಾದವಿಧಿ"ಯಂತೆಯೇ 'ಅನುಭಾವವಿಧಿ'ಯು ಮತ್ತೊಂದು ಮಾತು ಪಾಲಿಸೀಯವಾದುದು. (ಅನುಭಾವವೆಂಬ ವಾದವೇ) ಅದು "ಅಧಿಕಾರಿ" ಮತ್ತು 'ಅನಧಿಕಾರಿ' ಎಂಬ ವಿಚಾರವನ್ನು ಲಕ್ಷಿಸಬೇಕೆಂದು ಸೂಚಿಸುತ್ತದೆ. ಈ ವಿಧಿಯು ಕೂಡ ಆಸ್ತಿಕ ಮತ್ತು ನಾಸ್ತಿಕವೆಂಬ ಯಾವ ವಿಧದ ತಾರತಮ್ಯ ಹೊಂದಿಲ್ಲ. ಅದು '**ಮತಾತೀತ**' ವಿಧಿ. 'ಅಧಿಕಾರಿ' ಎಂಬುದು ಶಾಸ್ತ್ರಾಧ್ಯಯನಕ್ಕೆ ಅರ್ಹನೆಂಬ ವಿಚಾರಬೋಧಕ ಪಾರಿಭಾಷಿಕ ಪದವಾಗಿರುತ್ತದೆ. ಇದರಿಂದ ಆ ವಿಧಿಯು ಸೂಚಿಸಲ್ಪಡುವುದು. ಈ ವಿಚಾರ ಇಲ್ಲಿ ಧ್ವನಿತವಾಗಿರುವುದು.* ಅಧಿಕಾರಕ್ಕೆ ಬೇಕಾದ ಯೋಗ್ಯತೆ ಹುಟ್ಟಿನಿಂದ ಲಭ್ಯವಾಗದೆ ಅದೊಂದು ಮಾನಸಿಕ ಅವಸ್ಥೆ. ಈ ಅವಸ್ಥೆಯಿಂದ ಗುರುತಿಸುವ ಅವಶ್ಯಕತೆಯಿದ್ದು ಇದು ಉಪನಿಷತ್ತಿನಲ್ಲಿ ಬರುವ ಸತ್ಯಕಾಮನ ಪ್ರಸಂಗದಿಂದ ಉಪನಿಷದ್‌ಗಳಾದಿಯಾಗಿ ವಚನಕಾರರ ಪರ್ಯಂತ ಪರಿಪಾಲಿತವಾಗಿರುತ್ತದೆ. ಈ ವಿಧಿಗಳನ್ನು ಮೀರುವವರನ್ನು, ಶರಣರು—'ಪಾತಕರು' ಎಂಬ ಗಂಭೀರ ಆರೋಪಕ್ಕೆ ಗುರಿಯಾಗುವರೆಂಬುದನ್ನು ತಿಳಿಸುವರು. ಇವೆಲ್ಲವುಗಳಿಂದ ವಾದವಿದ್ಯೆ (ಅನ್ವೀಕ್ಷಿಕೀ ಆತ್ಮವಿದ್ಯೆ, ತಂತ್ರ, ಅನುಭಾವ)ಯ ಮಹತ್ವವು ಮನವರಿಕೆ ಆಗುತ್ತದೆ.

ಮೇಲೆ ವಿವರಿಸಿದ 'ವಾದವಿದ್ಯೆ'ಯ (**Dialectus**) ವಿಧಿಗಳ ಜೊತೆ ತತ್ವಗಳ ಬೆಳವಣಿಗೆಯೂ ಮಹತ್ವದ್ದು. ಆದರೂ 'ವಾದವಿಧಿ'ಯೇ ಸೈ. ಈ ಎಲ್ಲ ಚಾರಿತ್ರಿಕ ಬೆಳವಣಿಗೆಯು ದಾರ್ಶನಿಕ ದೃಷ್ಟಿಕೋನದ ಬೆಳವಣಿಗೆಯೇ ಆಗಿದೆ. ಹನ್ನೆರಡನೆಯ ಶತಮಾನದ ಪೂರ್ವದ ೭, ೮, ೯, ೧೦ ಹಾಗೂ ಹನ್ನೊಂದನೆಯ—ಶತಮಾನಗಳು ಸಮೃದ್ಧವಾದ ಹಾಗೂ ಸರ್ವೋತ್ಕೃಷ್ಟವಾದ ದಾರ್ಶನಿಕ ಚಟುವಟಿಕೆಗಳ ಸುವರ್ಣಯುಗವಾಗಿ ನವ್ಯ–ವಿದ್ಯೆಯ ಉಗಮಕ್ಕೆ ಹದವಾದ ಪರಿಸರವನ್ನು ನಿರ್ಮಿಸಿದವು. ಈ ಸಮೃದ್ಧ, ಪಕ್ವವಾದ 'ನವ್ಯ–ವಾದವಿದ್ಯೆ'ಯ ಸೃಷ್ಟಿಯ ಕಾರ್ಯದಲ್ಲಿ ಶಿವಶರಣರ ಕಾಣಿಕೆ ಉಂಟು. ಈ ಕಾಣಿಕೆಯನ್ನು ಕನ್ನಡಿಗರು ಕಂಡುಹಿಡಿದು ಎತ್ತಿ ತೋರಿಸುವ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ವಚನಸಾಹಿತ್ಯವು ಈ ದೃಷ್ಟಿಯಿಂದ ಅಧ್ಯಯನ ಮಾಡಬೇಕಾದ ಸಮೃದ್ಧ ಕ್ಷೇತ್ರವಾಗಿರುತ್ತದೆ. ಇಲ್ಲಿಯ ದಾರ್ಶನಿಕದೃಷ್ಟಿಕೋನವು ಈ ಚಾರಿತ್ರಿಕ ಬೆಳವಣಿಗೆಯ ಸೂಕ್ಷ್ಮಸ್ಥಿತ್ಯಂತರಗಳ ಅವಲೋಕನದ ಅವಶ್ಯಕತೆಯನ್ನು ಬಲವಾಗಿ ಪ್ರೇರೇಪಿಸುತ್ತದೆ. ಈ ಎಲ್ಲ ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ದೃಷ್ಟಿಕೋನದಿಂದ ನೋಡದಿದ್ದರೆ ಆ ಕಾಲದ ದಾರ್ಶನಿಕವಸ್ತುಸ್ಥಿತಿಯ ಅರಿವಿಲ್ಲದೆ ನೋಡಿದಂತೆ. ಇದರಿಂದ ಯಾವ ಪ್ರಯೋಜನವೂ ಆಗಲಾರದು.

'ವಾದವಿದ್ಯೆ'ಯ ವಿಚಾರದಲ್ಲಿಯ ಬೆಳವಣಿಗೆಯು ಎರಡು ಮುಖಗಳಲ್ಲಿ ನಡೆಯುವುದು. ಇದು ಚಾರಿತ್ರಿಕ ಅಂಶ. ಯಾಜ್ಞವಲ್ಕ್ಯನಾದಿಯಾಗಿ ನಾಗಾರ್ಜುನ, ಗೌಡಪಾದ, ಶಂಕರ, ಮಂಡನಮಿಶ್ರ, ಅಲ್ಲಮ, ಶ್ರೀಹರ್ಷ ಮೊದಲಾದವರಲ್ಲಿ 'ನೇತಿವಾದ' ಅಥವಾ 'ಅಭಾವವಾದ'ದ ವಿವಿಧ ಬಗೆಯ ಬೆಳವಣಿಗೆಯು ಸೃಷ್ಟಿಗೊಂಡುದು ಕಂಡು ಬರುತ್ತದೆ. ಅದೇ ರೀತಿ 'ಭಾವವಾದ' ಇಲ್ಲವೆ 'ಅಸ್ತಿವಾದ'ದ ಬೆಳವಣಿಗೆಯು ಸೃಷ್ಟಿಗೊಂಡುದು ಕಂಡುಬರುತ್ತದೆ. ಅದೇ ರೀತಿ, 'ಭಾವವಾದ' ಇಲ್ಲವೆ 'ಅಸ್ತಿವಾದ'ದ ಬೆಳವಣಿಗೆಯು 'ಏಕಂ ಸತ್' ಋಗ್ವೇದದ ಪ್ರಹ್ಲಾರನಿಂದಾದಿ

ಯಾಗಿ ಉಪನಿಷತ್ತು, ಬ್ರಹ್ಮಸೂತ್ರ, ಭರ್ತೃಪ್ರಪಂಚ, ರಾಮಾನುಜ, ಬಸವಣ್ಣ, ಮಧ್ವ, ಗಂಗೇಶೋಪಾಧ್ಯಾಯ ಮೊದಲಾದವರಲ್ಲಿ ನಾನಾರೂಪ ಧರಿಸಿ ಬೆಳೆದುಬಂದಿದೆ. ಇವೆರಡರ ಸಿದ್ಧಿ ಅನುಕ್ರಮವಾಗಿ ನಿಷ್ಪ್ರಪಂಚ, ಸಪ್ರಪಂಚ–ನಿಷ್ಪ್ರಪಂಚ-ಸಪ್ರಪಂಚ (ಭಾವಾಭಾವ), ಸಪ್ರಪಂಚವಾದಗಳಾಗಿರುತ್ತವೆ. ಒಂದಕ್ಕೊಂದು ವಿರೋಧವಾದ ಅಭಾವ ಹಾಗೂ ಭಾವವಾದಗಳ ಸಮನ್ವಯವೂ ನಡೆದಿದೆ. ಅದನ್ನು 'ಶೂನ್ಯಸಂಪಾದನೆ'ಯೆಂಬ ಪದದಲ್ಲಿ ಕಾಣುತ್ತೇವೆ. ಅದು ದಾರ್ಶನಿಕ ದೃಷ್ಟಿಕೋನದ ವಿವರವಾದ ಅರ್ಥಗ್ರಹಣಕ್ಕೆ ಸಹಾಯಕವಾಗಿದೆ. ಅದನ್ನು ಇಲ್ಲಿ ಮಾಡಿ ತಿಳಿದುಕೊಳ್ಳಬೇಕು.

'ಶೂನ್ಯಸಂಪಾದನೆ' ಎಂಬ ಪದವು ಒಂದು ಹೆಸರಾಗಿ ಗ್ರಂಥವನ್ನು ಸೂಚಿಸುವುದು, 'ವೇದ', 'ಉಪನಿಷತ್ತು' ಎಂಬ ಪದಗಳಂತೆ. 'ವೇದ' ಹಾಗೂ 'ಉಪನಿಷತ್ತು' ಎಂಬ ಪದಗಳು ಒಂದು ದೃಷ್ಟಿಯಿಂದ 'ಅರ್ಥ'(ವಸ್ತು)ವನ್ನೂ ಇನ್ನೊಂದು ದೃಷ್ಟಿಯಿಂದ 'ಪ್ರಮಾಣ'(ವಾದ)ವನ್ನೂ ಸೂಚಿಸುವುವು. ಅದೇ ರೀತಿಯಲ್ಲಿ ಶೂನ್ಯಸಂಪಾದನೆ ಎಂಬ ಪದವೂ ಕೂಡ 'ತತ್ತ್ವ'ವನ್ನೂ ಹಾಗೂ 'ಪ್ರಮಾಣ'ವನ್ನೂ ಸೂಚಿಸುತ್ತದೆ. ತತ್ತ್ವಭಾವಬೋಧಕವಾಗಿ ಅದ್ವಯವನ್ನೂ, ತತ್ತ್ವವಿವಾದವಾಗಿ ಆ ತತ್ತ್ವವಾದವನ್ನೂ ಬೋಧಿಸುವುದು : ಶೂನ್ಯವೆಂಬ ಪದವು 'ತತ್ತ್ವ'ವಾಚಕ, ಇದು ಪೂರ್ವಪದ.[8] 'ಸಂಪಾದನೆ'ಯೆಂಬುದು ಉತ್ತರಪದ. ಇದು 'ವಾದ'ವಾಚಕ. ಇದರಿಂದ ಈ ಕೃತಿಯು ವಾದಪೂರ್ವಕ (ಪ್ರಮಾಣಪೂರ್ವಕ)ವಾದ ತತ್ತ್ವಸಿದ್ಧಾಂತ ಕೃತಿ—ಎಂಬ ಅರ್ಥವಾಗುತ್ತದೆ. ಈ ನಿರ್ಣಯಕ್ಕೆ, ಗ್ರಂಥದಲ್ಲಿ ಬಳಸಿಕೊಂಡ 'ಚರ್ಚಾತ್ಮಕ ವಿಧಾನ'ವೂ ಬೆಂಬಲವಿತ್ತು ಪೋಷಣೆಯನ್ನೊದಗಿಸುವುದು. 'ತತ್ತ್ವಸಿದ್ಧಾಂತ'ವೆಂಬ ಪದವು (೧) ಸರ್ವಮೂಲಬ್ರಹ್ಮ(ತತ್ತ್ವ)ಹಸುಗೆಯನ್ನೂ, (೨) ಜ್ಞಾನ(ಪ್ರಮಾ)ಕರಣಹಸುಗೆಯನ್ನೂ ಬೋಧಿಸುತ್ತದೆ.ಎರಡನೆಯ ಅರ್ಥದಲ್ಲಿ ಶೂನ್ಯಸಂಪಾದನಾಗ್ರಂಥದಲ್ಲಿ 'ವಾದವಿದ್ಯಾ' ಇರುತ್ತವೆ. 'ವಾದವಿದ್ಯೆ'ಯೆಂದಾಗ ನಾವು ಈ ಕೃತಿಯಲ್ಲಿ ವಿದ್ಯೆಯ ಶುದ್ಧಶಾಸ್ತ್ರರೂಪದ–ತಾಂತ್ರಿಕ ವಿವರಣೆ ಇರುತ್ತದೆಯೆಂದು ತಿಳಿಯದೆ 'ವಾದವಿಧಿ' ಅಥವಾ 'ವಾದವಿದ್ಯೆ'ಯಲ್ಲಿಯ ಪ್ರಮಾಣಗಳನ್ನು ಬಳಸಿಕೊಂಡುದನ್ನು ಕಾಣುವ ಸಂಗತಿಯಿಂದ ಆ ಶಾಸ್ತ್ರಪ್ರಯೋಗ ಹಾಗೂ ಪ್ರಯೋಜನಗಳ ಸಿದ್ಧಿ ಇದೆಯೆಂದು ತಿಳಿಯಬೇಕು. 'ವಾದವಿದ್ಯೆ'ಯ ಪ್ರಮುಖ ಕಾರಣಗಳ ಉಲ್ಲೇಖವು ಈ ಕೃತಿಯಲ್ಲಿ ದೊರೆಯುತ್ತದೆ. 'ವಾದವಿದ್ಯೆ'ಯ ವಿವಿಧ 'ಕರಣ'ಗಳನ್ನು ಇಲ್ಲಿ ಬಳಸಿಕೊಂಡ ಕಾರಣ, ಕೇವಲ ಅಧ್ಯಯನಬಲದಿಂದ ಅರಿತುಕೊಳ್ಳಬೇಕು. ಈ ಅರ್ಥದಲ್ಲಿ 'ಶೂನ್ಯಸಂಪಾದನೆ'ಯು 'ವಾದವಿದ್ಯಾ' ಕೃತಿಯಾಗಿರುತ್ತದೆ. ಈ ಗ್ರಂಥದಲ್ಲಿ ಬರುವ— “ಉಂಟೆಂಬುದನ್ನು ಬಸವಣ್ಣ ಕೊಂಡ, ಇಲ್ಲೆಂಬುದನ್ನು ಅಲ್ಲಮಕೊಂಡ[10]” ಎಂಬ ಮಾತುಗಳು ಅತ್ಯಂತ ಸೂತ್ರಪ್ರಾಯವಾಗಿ ಚೆನ್ನಬಸವಣ್ಣನವರಿಂದ ಬಳಸಲ್ಪಟ್ಟಿವೆ. ಅವು ಸಮಗ್ರಭಾರತೀಯ 'ವಾದವಿದ್ಯೆ'ಯನ್ನು ಅಥವಾ 'ಪ್ರಮಾಣಶಾಸ್ತ್ರ'ವನ್ನು ಎರಡು ವರ್ಗಗಳಲ್ಲಿ ಹಂಚಿಹಾಕಿವೆ. ಈ ವರ್ಗೀಕರಣವು ಪ್ರಮಾಣಶಾಸ್ತ್ರದ ಬೆಳವಣಿಗೆಗೆ ಅನುಗುಣವಾಗಿಯೇ ಇರುತ್ತದೆಯೆಂಬುದು ಅದರ ಚರಿತ್ರೆಯ ವಿದ್ಯಾರ್ಥಿಗಳಿಗೆ ತುಂಬಾ ಪರಿಚಿತವಿಷಯ. ಅಲ್ಲಮಪ್ರಭುವಿನ ಬೇರೊಂದು ವಚನವು[11] ಭಾರತೀಯ'ಪ್ರಮಾಶಾಸ್ತ್ರ'ದ ನಾನಾ ಬಗೆಯ ವಿಧಾನಗಳ ದೃಷ್ಟಿಕೋನಗಳನ್ನು ಸೂಚಿಸುವುದೆಂಬುದು ಗಮನಾರ್ಹ ಸಂಗತಿಯಾಗಿದ್ದು ಶಿವಶರಣರು ಶ್ರೇಷ್ಠ ಅನುಭಾವಿಗಳಾಗಿ ಭಾರತೀಯ 'ಆನ್ವೀಕ್ಷಿಕೀ'ಯ ಬೆಳವಣಿಗೆಗಳ ಅರಿವುಳ್ಳವರಾಗಿದ್ದರೆಂಬ ಮಾತು ಸ್ಪಷ್ಟವಾಗುತ್ತದೆ.

'ವಾದ'ವೆಂಬುದು ಒಂದು ವಿದ್ಯೆಯೆಂಬಂತೆ ಅದು ಒಂದು 'ತತ್ತ್ವ'ವೂ ಹೌದು. ತತ್ತ್ವ (Category) ಎಂಬರ್ಥದಲ್ಲಿ ಗೌತಮಮಹರ್ಷಿಯು ಈ ಪದವನ್ನು ತನ್ನ ಪ್ರಥಮ ನ್ಯಾಯಸೂತ್ರದಲ್ಲಿ ತಿಳಿಸಿದ್ದಾನೆ. ಇದು ವೇದ (ಋವೇ. X 191.2) ದಷ್ಟು ಪುರಾತನವೆಂಬ ಮಾತನ್ನು, ಜಿಜ್ಞಾಸುಗಳಲ್ಲಿ ಒಬ್ಬರಾದ ಮ.ಮ. ಕುಪ್ಪುಸ್ವಾಮಿಶಾಸ್ತ್ರಿ ಎಂಬುವರು ತಮ್ಮ **Primer of Indian Logic** ಎಂಬ ಕೃತಿಯಲ್ಲಿ ತಿಳಿಸುತ್ತಾರೆ. 'ವಾದ'ವೆಂಬ ಪ್ರಮಾಣಶಾಸ್ತ್ರದಲ್ಲಿಯ ಪಾರಿಭಾಷಿಕ ಪದವನ್ನು 'ಆನ್ವೀಕ್ಷಿಕೀ' ಎಂಬ ಅರ್ಥದಲ್ಲಿ ಬಳಸಿದವರು ವೀರಶೈವರಿಗಿಂತಲೂ ಪೂರ್ವದಲ್ಲಿ ಬೌದ್ಧರು. ಅವರಲ್ಲಿಯ ವಾದವಿಧಿ, 'ವಾದ ಹೃದಯ', 'ವಾದವಿದ್ಯಾಕೌಶಲ್ಯ', 'ವಾದ ವಿಧಾನ ಟೀಕೆ' ಮುಂತಾದ ಕೃತಿಗಳಿಂದ ಚಿರಪರಿಚಿತವಾಗುತ್ತದೆ. ಕಾರಣ 'ವಾದ'ವೆಂಬುದು—ಹೇತು, ತರ್ಕ, ಊಹೆ, ಆನ್ವೀಕ್ಷಿಕೀ ಮುಂತಾದ ಪದಗಳಂತೆ ಪಾರಿಭಾಷಿಕಪದವಾಗಿರುತ್ತದೆ. ಬಹು ಪುರಾತನಕಾಲದಲ್ಲಿ ಹೇತುವಿದ್ಯೆಯು (Logic) ವಾದವಿದ್ಯೆಯ ಒಂದು ಭಾಗವೆಂದು ವಸುಬಂಧುವು ತಿಳಿದಿದ್ದನು : **Even for Vasubandhu logic was still a section of Vāda and in fact, all the books written by him on this topic seem to have had the title Vāda**[12] ಆದರೆ ವಚನಶಾಸ್ತ್ರಜ್ಞರು ಈ ಶಬ್ದದ ಬದಲು ಹೊಸದೊಂದು ಪದವನ್ನು ವಿಶೇಷಾರ್ಥದಲ್ಲಿ ಭಾರತದ ಆನ್ವೀಕ್ಷಿಕೀ

ಶಬ್ದಭಂಡಾರಕ್ಕೆ, ಸಾಮಾನ್ಯಾರ್ಥದಲ್ಲಿ ಪ್ರಪಂಚದ ಆನ್ವೀಕ್ಷಿಕೀಯ ಶಬ್ದಭಂಡಾರಕ್ಕೆ ಕಾಣಿಕೆಯನ್ನಾಗಿತ್ತರು. 'ಸಂಪಾದನೆ' ಎಂಬ ಪದಕ್ಕೆ ಅನೇಕಾರ್ಥಗಳು ಇದ್ದು ಅದನ್ನು 'ತಂತ್ರ'ವೆಂಬರ್ಥದಲ್ಲಿ ಬಳಸಿದ್ದು ಅದಕ್ಕೆ 'ಅಜ್ಞಾನ ತಿಮಿರಾಂಜನ'ವೆಂಬ ಪದಪುಂಜವನ್ನು ಪೂರ್ವಸಮುಚ್ಚಯ (Prefix)ದಂತೆ ಬಳಸಿ ಸ್ಪಷ್ಟತೆಯನ್ನು ಸುಸ್ಪಷ್ಟಗೊಳಿಸಿದ್ದಾರೆ. ಇದಲ್ಲದೆ 'ಸಂಪಾದನೆ' ಎಂಬ ಪದವು ಬರುವ ಸಂದರ್ಭಗಳನ್ನು ಮತ್ತು ಈ ಕೃತಿಯಲ್ಲಿ ಬಳಸಲಾದ ವಿಧಾನವು ವಿವಾದ ಅಥವಾ ವಾದರೂಪವಾಗಿರುವುದು. ಈ ರೀತಿಯ ನವೀನ ಅರ್ಥ, ಅದಕ್ಕೆ ಎಂತು ಬಂದಿತೆಂದು ಬೇರೆ ವಿವರಣೆಯ ಅವಶ್ಯಕತೆ ಕಂಡುಬರುವುದಿಲ್ಲ. ಈ ಸಂದರ್ಭದಲ್ಲಿ ಶಬ್ದಗಳಿಗೆ ಅರ್ಥಗಳು 'ಬಳಕೆ'ಯಿಂದಲೇ ಉಂಟಾಗುತ್ತವೆ ಎಂಬ ಸಿದ್ಧಾಂತವು ಅರ್ಥಪೂರ್ಣವಾಗಿದೆ.[13] ವಾದವಿದ್ಯೆಗೆ ಸಂಬಂಧಿಸಿದ ಮಾತುಗಳನ್ನು ಹಾಗೂ ಅವುಗಳ ಲಕ್ಷಣಗಳನ್ನು ತಿಳಿಸುವುದರಿಂದ ಈ ಕಾರ್ಯ ಮುಗಿದಂತಲ್ಲ. ಆದರೆ ಈ ಕಾರ್ಯದ ಪ್ರಾರಂಭಕ್ಕೆ ನಾಂದಿಯಾಗಿ ಇನ್ನೂ ವಿವರವಾದ ಮತ್ತು ಆಳವಾದ ಅಧ್ಯಯನದ ಅವಶ್ಯಕತೆಯು ಪ್ರಾಚೀನ ಮತ್ತು ಅರ್ವಾಚೀನಶಾಸ್ತ್ರಪ್ರಪಂಚದ ಹಿನ್ನೆಲೆಯಲ್ಲಿ ದಿನೇದಿನೇ ಹೆಚ್ಚುತ್ತಿದೆ. ಇಂದು ಈ ಸಾಹಿತ್ಯದ ಅಧ್ಯಯನಕ್ಕೆ ಎಂದಿಗಿಂತಲೂ ಹೆಚ್ಚಿನ ಅವಶ್ಯಕತೆ ಉಂಟಾಗಿದೆ. ಇದು ವೀರಶೈವದರ್ಶನಪ್ರೇಮಿಗಳಾದ ದರ್ಶನವಿದ್ಯಾರ್ಥಿಗಳಿಗೊಂದು ಆಹ್ವಾನವಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾರ್ಶನಿಕರ ಕಾರ್ಯದ ಅವಶ್ಯಕತೆಯಿದೆ (ಈ ನಿಟ್ಟಿನಲ್ಲಿ ಯಾವ ಕೆಲಸವನ್ನೂ ಮಾಡದೆ ಕೆಲವು ದಾರ್ಶನಿಕ ವಿದ್ಯಾರ್ಥಿಗಳು ವೀರಶೈವಶಾಸ್ತ್ರಪರಿಣತತ್ವದ ಪಟ್ಟಕ್ಕಾಗಿ ಪೈಪೋಟಿಗಿಳಿದು ನಾಗಾರ್ಜುನ ಅಥವಾ ಶ್ರೀಹರ್ಷನ ವಾದ ಹೂಡಿ ಸುಪ್ರಸಿದ್ಧಿಗಳಿಸುವ ಹವ್ಯಾಸಮಗ್ನರಾಗಿರುವ ಬದಲು ಸಂಪಾದನಾಶಾಸ್ತ್ರಕಾರ್ಯ ಕೈಕೊಂಡು ರಚನಾತ್ಮಕ ಕಾರ್ಯತತ್ಪರರಾಗಿ ಪ್ರತಿಭೆ ಮೆರೆಯಲೆಂದು ನಮ್ರ ಸೂಚನೆ ಇಲ್ಲಿ ಅವಶ್ಯವೆಂದು ಕಾಣುತ್ತದೆ).

(ಬ) ಈ ಕೃತಿಯ ಹೆಸರಿನಲ್ಲಿ 'ಶೂನ್ಯ'ವೆಂಬ ಪದವು ತಾತ್ವಿಕ ವಿಚಾರದೃಷ್ಟಿಯಿಂದ ತುಂಬಾ ಕುತೂಹಲ ಕಾರಿಯಾದುದಾಗಿದೆ. ಆದ್ದರಿಂದ ಅದು ಭಾರತೀಯದರ್ಶನದಲ್ಲಿ ಆದರಂತೆ ಪಾಶ್ಚಿಮಾತ್ಯದರ್ಶನದಲ್ಲಿ ಹೊಸದೊಂದು ಅಧ್ಯಾಯವನ್ನು ಪ್ರಾರಂಭಗೊಳಿಸಿದೆ. ಇದು 'ತತ್ವ' ಹಾಗೂ 'ತಾತ್ವಿಕ ದೃಷ್ಟಿಕೋನ'ಗಳ ನಿಕಟ ಸಂಬಂಧವನ್ನು ತೋರಿಸುತ್ತದೆ. ಇದು ಮಹತ್ವದ ವಿಷಯ. 'ಶೂನ್ಯ'ವು ದಾರ್ಶನಿಕ ಚರಿತ್ರೆಯ ಕೇಂದ್ರಬಿಂದುವಿನಂತೆ ಕೆಲಸವನ್ನು ಮಾಡಿದೆ. ಇದು ಅದರ 'ಸತ್ವಯುಕ್ತತೆ'ಯನ್ನು ಸೂಚಿಸುತ್ತದೆ. ಈ ಪದವು ತತ್ವಬೋಧೆಯನ್ನು ಮತ್ತು ತತ್ವಲಕ್ಷಣವನ್ನು ನಿರ್ಧರಿಸುವಲ್ಲಿ ವಹಿಸಿದ ಪಾತ್ರವು ತುಂಬಾ ವಿಲಕ್ಷಣಪೂರ್ಣವಾಗಿದೆ. ಅನಾತ್ಮವಾದ, ಮಾಯಾವಾದ ಹಾಗೂ ಅಭಾವವಾದಗಳಂಥ ಒಂದು ತೆರನಾದ ದಾರ್ಶನಿಕದೃಷ್ಟಿಕೋನಬೋಧಕವಾದಂಥ ದರ್ಶನಗಳ ಬೆಳವಣಿಗೆಗೆ ಇದು ಕಾರಣವಾದಂತೆ ಇನ್ನೊಂದೆಡೆಯಲ್ಲಿ ಭಾವ, ಭಾವಾಭಾವ, ಬಹುಭಾವವಾದಗಳ ದಾರ್ಶನಿಕದೃಷ್ಟಿಕೋನಬೋಧಕವಾದ ದರ್ಶನಗಳ ಬೆಳವಣಿಗೆಗೂ ಕಾರಣವಾಗಿದೆ. ಈ ರೀತಿಯ ದ್ವಿವಿಧ 'ಅಭಾವ' ಹಾಗೂ 'ಭಾವ' ದಾರ್ಶನಿಕದೃಷ್ಟಿಕೋನಗಳ ಬೆಳವಣಿಗೆಗೆ ಕಾರಣವಾಗಿರುವಂತೆ ಅದೇ ತತ್ವವು ಇವೆರಡರ ಸಮನ್ವಯಕ್ಕೂ ಕಾರಣವಾಗಿದೆಯೆಂಬುದು ಅಷ್ಟೇ ಆಶ್ಚರ್ಯಕರ ಸಂಗತಿಯಾದುದು ಗಮನಾರ್ಹವಾಗಿದೆ. ಇದು ಅತ್ಯಂತ ವಿಲಕ್ಷಣ ಬೆಳವಣಿಗೆಯೇ ಸೈ. ಇವೆಲ್ಲ ಮಾತುಗಳು ತರ್ಕಬದ್ಧವಾದ ಸಮರ್ಥನೆಯನ್ನು ಅಪೇಕ್ಷಿಸುವುವೆಂಬುದನ್ನು ಮರೆಯುವಂತಿಲ್ಲ. ಇದು ಆಗಬೇಕಾದ ಕೆಲಸ.

'ವಾದವಿದ್ಯೆ'ಯಲ್ಲಿ 'ಅನುಭಾವ'ವೆಂಬುದು ಒಂದು 'ಮಾನ'ವೆಂಬುದನ್ನು ಭಾರತೀಯ ಆಸ್ತಿಕ ಹಾಗೂ ನಾಸ್ತಿಕದರ್ಶನಗಳೆರಡೂ ಒಪ್ಪಿಕೊಳ್ಳುತ್ತವೆ. ವಚನಕಾರರಲ್ಲಿ 'ಅನುಭಾವ'ವೆಂಬ ಪದವು ಕಂಡುಬರುವಂತೆ ಬೌದ್ಧರಲ್ಲಿ, ಜೈನರಲ್ಲಿ, ಅದ್ವೈತಿಗಳಲ್ಲಿ, ಶೈವಾಗಮಗಳಲ್ಲಿ ಅನುಕ್ರಮವಾಗಿ ಪ್ರಜ್ಞಾ, ಕೇವಲಜ್ಞಾನ, ಆರ್ಷಜ್ಞಾನ, ತಾರಕಜ್ಞಾನ ಮುಂತಾದವುಗಳು ಕಂಡುಬರುತ್ತವೆ[14]. 'ಅನುಭಾವ'ವೆಂಬುದೇ ಪರವಸ್ತು.[15] ಇದೇ ಶೂನ್ಯ, ಬಯಲು, ನಿರ್ವಾಣ. ವಚನಸಾಹಿತ್ಯದಲ್ಲಿ, ಪ್ರಜ್ಞಾನವೆಂಬುದೇ ಶೂನ್ಯ,[16] ಬೌದ್ಧರಲ್ಲಿ, 'ಪ್ರಜ್ಞಾನಂ ಬ್ರಹ್ಮ' ಅದ್ವೈತಿಗಳಲ್ಲಿ. ಯೋಗಜವೇ ಕೇವಲಜ್ಞಾನವಾಗಿ ವಸ್ತುಸಾಕ್ಷಾತ್ಕಾರ[17] ಜೈನರಲ್ಲಿ. ತಾರಕಬ್ರಹ್ಮದ ಜ್ಞಾನವೇ ತಾರಕಯೋಗ ಆಗಮಗಳಲ್ಲಿ. ಇವೆಲ್ಲಾ ಪರಾವಿದ್ಯಾ ಎಂಬ ಜಾತಿಗೆ ಸೇರಿದ ಜ್ಞಾನಗಳು. ಇದು ಇನ್ನೊಂದು ಜಾತಿಯನ್ನು ಸೂಚಿಸುತ್ತದೆ. ಆ ಜಾತಿ ಪರಾವಿದ್ಯಾ ಎಂಬ ಜ್ಯೋತಿಯಿಂದ ವ್ಯತಿರಿಕ್ತವಾದುದು. ಯಾಕೆಂದರೆ ಅವೆರಡರ ಅರ್ಥಸ್ವರೂಪ ಕಂಡ ಕಾಣ್ಕೆ (Vision) ಭಿನ್ನ ಭಿನ್ನ. ಚಾರ್ವಾಕದರ್ಶನವನ್ನುಳಿದು ಉಳಿದೆಲ್ಲ ದರ್ಶನಗಳು ಈ ರೀತಿಯಲ್ಲಿ 'ವಸ್ತು' ಹಾಗೂ 'ಜ್ಞಾನ' ಇವುಗಳ ವರ್ಗೀಕರಣವನ್ನು ಸಾಮಾನ್ಯವಾಗಿ ಒಪ್ಪುತ್ತವೆ. ಶೂನ್ಯಸಂಪಾದನೆಯ ವಿಷಯದಲ್ಲಿ 'ಇದು' 'ತಾದಾತ್ಮ್ಯಾನುಭಾವ'. ಇದು ದಾರ್ಶನಿಕ ಪಾರಿಭಾಷಿಕ ಪದ.

(ಕ) ಶೂನ್ಯವೆಂಬ ಪದವು ಹಾಗೂ ಅದರ ಜ್ಞಾನವು ಬರುವ ಕೃತಿಗಳು ಬಹುಶಃ ಬೌದ್ಧರನ್ನು, ಶೈವರನ್ನು ಬಿಟ್ಟರೆ ಬೇರೆಡೆಗಳಲ್ಲಿ ಕಂಡುಬರುವುದಿಲ್ಲ. ಬೌದ್ಧರ ಪ್ರಜ್ಞಾಪಾರಮಿತ ಗ್ರಂಥಗಳು, ವೀರಶೈವರ ವಚನಶಾಸ್ತ್ರಗಳು ಶೂನ್ಯದ ಅನುಭವವನ್ನು ಹೇಳುವುವು. ನಾಗಾರ್ಜುನನು ಸಂಸ್ಕೃತದಲ್ಲಿ 'ಶೂನ್ಯಸಪ್ತತಿ' ಎಂಬುದನ್ನೂ, ತಮಿಳುನಾಡಿನಿಂದ ಓಡಿಸಾಕ್ಕೆ ವಲಸೆಹೋಗಿ ಶರ್ಮ ಎಂಬುವನು ಒರಿಯಾ ಭಾಷೆಯಲ್ಲಿ 'ಶೂನ್ಯಸಂಹಿತೆ' ಎಂಬುದನ್ನೂ ಬರೆದಿದ್ದಾನೆ. ಇವೆರಡೂ ಬೌದ್ಧಸಾಹಿತ್ಯಕೃತಿಗಳು. ಮೊದಲನೆಯದು ದಾರ್ಶನಿಕ ಕೃತಿ; ಎರಡನೆಯದು ಧಾರ್ಮಿಕ ಕೃತಿ. ಇವುಗಳ ಕಾಲ ಅನುಕ್ರಮವಾಗಿ ಕ್ರಿ.ಶ. ಒಂದನೆಯ ಹಾಗೂ ಆರನೆಯ ಶತಮಾನಗಳು. ಶೂನ್ಯಸಂಹಿತೆಯ ಮೇಲೆ 'ಶಿವಶಕ್ತಿಮತ'ದ ಪ್ರಭಾವವಿದೆಯೆಂದು ಒರಿಯಾಭಾಷಾಚರಿತ್ರಕಾರನಾದ ಪ್ರೊ. ಮಹೀಧರ ತಿಳಿಸುತ್ತಾನೆ. ಇದರಲ್ಲಿ 'ಶೂನ್ಯ'ದ ಪೂಜೆಯನ್ನು ಚಿತ್ರಿಸಿರುವುದು ಒಂದು ವೈಶಿಷ್ಟ್ಯ. ಇದೇ ಕಾಲಕ್ಕೆ ತಮಿಳುನಾಡಿನಲ್ಲಿ ತಿರುಮೂಲರ್ ಎಂಬ ಶೈವಾಗಮಾಚಾರ್ಯನು 'ತಿರುಮಂದಿರಮ್' ಎಂಬ ಒಂದು ಮಹಾಕೃತಿಯನ್ನು ರಚಿಸಿದ್ದಾನೆ. ಇದರಲ್ಲಿಯ ಸುಮಾರು ಎಪ್ಪತ್ತು ಪದ್ಯಗಳಿಗೆ 'ಶೂನ್ಯಸಂಭಾಷಣೆ' ಎಂಬ ಶೀರ್ಷಿಕೆಯು ಇದೆಯೆಂದು ಆ ಸಾಹಿತ್ಯ ಚರಿತ್ರೆಯಿಂದ ತಿಳಿದು ಬರುವುದು. ಈ ಪದ್ಯಗಳು ಇಂದ್ರಿಯಕಾರ್ಯವನ್ನು ರಹಸ್ಯ ಅಥವಾ ಬೆಡಗಿನ ಭಾಷೆಯಲ್ಲಿ ವರ್ಣಿಸುವುವೆಂದು ಪ್ರೊ. ವಿ. ಎಸ್. ಪಿ. ಮಾಣಿಕಂ, (ಮುಖ್ಯಸ್ಥರು, ತಮಿಳು ಭಾಷಾ ವಿಭಾಗ, ಅಣ್ಣಾಮಲೈ ವಿಶ್ವವಿದ್ಯಾಲಯ). ಅವರು ನನಗೆ ಬರೆದ ಒಂದು ಪತ್ರದಲ್ಲಿ ತಿಳಿಸುತ್ತಾರೆ. ಇಂದ್ರಿಯಗಳ ಕಾರ್ಯವು ಪ್ರಮಾಣಗಳ ಕಾರ್ಯ. ಏಕೆಂದರೆ ಶೈವಸಿದ್ಧಾಂತವು ಕೂಡ ಇಂದ್ರಿಯಗಳನ್ನು ಪ್ರತ್ಯಕ್ಷಪ್ರಮಾಣವೆಂದು ಗ್ರಹಿಸುತ್ತದೆ. ಈ ಇಂದ್ರಿಯ ಕಾರ್ಯಗಳನ್ನು ಕುರಿತು ಎರಡು ರೀತಿಯ ಅಭಿಪ್ರಾಯ ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಉಂಟು. ಒಂದು, ಅವುಗಳ ಕಾರ್ಯವು ಮೋಹ ಹುಟ್ಟಿಸುವುದು. ಇನ್ನೊಂದು, ಕಾರ್ಯವು "ಪ್ರಮಾ" ಹುಟ್ಟಿಸುವುದು. ಇವೆರಡೂ ದಾರ್ಶನಿಕ ಚಟುವಟಿಕೆಗಳು. ಈ ವಿಚಾರಗಳು 'ಪ್ರಮಾ'ದ ನಿಶ್ಚಯತೆಯಲ್ಲಿ ನೆರವಾಗುವುವು. ಆದ್ದರಿಂದ ಇದು ಶಾಸ್ತ್ರವಿಷಯವೇ ಸೈ. ಇನ್ನು ವಚನಶಾಸ್ತ್ರದ ಕೃತಿ ಶೂನ್ಯಸಂಪಾದನೆ. ಇದು ಕೂಡ ಒಂದು ಶೈವಪ್ರಭೇದ ಮತೀಯಕೃತಿ. ಇದರಲ್ಲಿ ಷಟ್‌ಸ್ಥಲದ ಹಸುಗೆಯನ್ನು ನಾವು ಕಾಣುತ್ತೇವೆ. ಒಟ್ಟಿನಲ್ಲಿ ಬೌದ್ಧ ಹಾಗೂ ಶೈವಪ್ರಣಾಲಿಗಳನ್ನಿವು ಪ್ರತಿಪಾದಿಸುತ್ತವೆ. ಇವೆರಡೂ ಪ್ರಣಾಲಿಗಳಿಗೆ ಮೂಲ 'ಶೂನ್ಯ'ವಾಗಿರುವುದರಿಂದ ಇವೆರಡು ದರ್ಶನಗಳಿಗೆ ಒಂದೇ ಮೂಲವಿರುವುದು ಸ್ಪಷ್ಟ. ಈ ಮೂಲವನ್ನು ಕುರಿತ 'ಹಸುಗೆ'ಯು ದರ್ಶನದ ದೃಷ್ಟಿಯಿಂದ ಹಿತಕರವಾಗಿದೆ. ಈ ಮಾತನ್ನಿಲ್ಲಿ ವಿಚಾರಿಸಿ ಸಿದ್ಧಗೊಳಿಸುವುದು ಅತ್ಯಂತ ಅವಶ್ಯವಿರುತ್ತದೆ.

ಬೌದ್ಧ ಧರ್ಮದಲ್ಲಿ ಹೀನಯಾನ ಹಾಗೂ ಮಹಾಯಾನವೆಂದು ಎರಡು ಕವಲುಗಳಾಗಿರುತ್ತವೆ. ಹೀನಯಾನದಲ್ಲಿ ವೈಭಾಷಿಕ ಮತ್ತು ಸೌತ್ರಾಂತಿಕವೆಂದು ಎರಡು ದರ್ಶನಗಳೂ, ಮಹಾಯಾನದಲ್ಲಿ ಯೋಗಾಚಾರ ಮತ್ತು ಮಾಧ್ಯಮಿಕವೆಂದು ಎರಡು ದರ್ಶನಗಳೂ ಹುಟ್ಟಿಕೊಂಡಿವೆ. ಮಾಧ್ಯಮಿಕವೆಂಬುದನ್ನು ಶೂನ್ಯವಾದ ಎಂದು ಹೆಸರಿಸಿದ್ದಾರೆ. ಈ ದರ್ಶನಗಳ ಬೆಳವಣಿಗೆಗಳು ಬುದ್ಧನ ನಂತರ ಸುಮಾರು ಮೂರುನೂರು ವರ್ಷಗಳಿಂದೀಚಿನವು. ಹಾಗಾದರೆ ಈ ದರ್ಶನಗಳ ಪೂರ್ವದಲ್ಲಿ ಬೌದ್ಧರಲ್ಲಿ 'ಶೂನ್ಯ'ವೆಂಬುದಿತ್ತೆ ? ಇದ್ದರೆ ಅದರ ಲಕ್ಷಣ ಹಾಗೂ ಸ್ಥಾನವೇನು ? ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಇವುಗಳಿಗೆ ಉತ್ತರ ಕಷ್ಟಸಾಧ್ಯವಲ್ಲ. ಈ ದರ್ಶನಗಳ ಪೂರ್ವದಲ್ಲಿದ್ದ ಬೌದ್ಧರ ಪ್ರಾಚೀನ ಗ್ರಂಥಗಳಲ್ಲಿ ಶೂನ್ಯವೆಂಬುದಿತ್ತು. ಅದು ಅನುಭಾವಗಮ್ಯತತ್ತ್ವ. ಇದರ ಆಕರ ಸಾಹಿತ್ಯ ಪ್ರಜ್ಞಾಪಾರಮಿತಗ್ರಂಥಗಳು. ವೀರಶೈವರಲ್ಲಿಯೂ ಇದೇ ರೀತಿಯ ಸಾಹಿತ್ಯ, ವಚನಸಾಹಿತ್ಯ. ಇದನ್ನು ಆಧರಿಸಿ ಬೆಳೆದ ಕೃತಿ, ಶೂನ್ಯಸಂಪಾದನೆ.

ಬುದ್ಧನು ಈ ತತ್ತ್ವದ ಸಾಕ್ಷಾತ್ಕಾರವನ್ನು ಹೊಂದಿದನೆಂಬುದು ಸ್ಪಷ್ಟವಿದೆ. ಈ ತತ್ತ್ವಬೋಧೆ ಬೌದ್ಧಿಕವಾಗಿರದೆ ಅಂತರಬೋಧೆ ಗಮ್ಯವಾಗಿರುತ್ತದೆ. ಈ ಬೋಧೆಯಾಗಲು ಅವನು ಅನೇಕ ವರ್ಷಗಳವರೆಗೆ ತಜ್ಞತಪಸ್ವಿಗಳ ಮಾರ್ಗದರ್ಶನದಲ್ಲಿ ತಪಸ್ಸನ್ನು ಮಾಡಿ ಕರಗತಮಾಡಿಕೊಂಡನು. ಈ ತಪಸ್ವಿಗಳು ಆರಾಡಕಾಲಾಮ ಮತ್ತು ಉದ್ರಕರಾಮಪುತ್ರರು. ಇವರೀರ್ವರೂ ಶೈವಯೋಗಾಚಾರ್ಯ ಜೈಗೀಷವ್ಯನ ಶಿಷ್ಯರು.[18-19] According to that, he, first in his early period of ascetic life joined the two teachers–first Ārādakālāma (p. Ālārokālāma) and then Udraka Rāmaputra (p. Uddaka Rāmaputto). Both were yoga teachers who sought to lead their pupil to higher stages of consciousness on the path of meditation–Ārādakālāma to the sphere of Nothingness (akiñcanyayātanam ; p. akiñcanyāyatanam) and Udraka Rāmaputra to the sphere beyond consciousness and

unconsciousness (naiva Samjnānāsamjnānāyātanam, p. Neva saññāsaññāyatanam)[20] ಈ ಉದ್ಧರಣೆ ವಚನದಿಂದ ಬುದ್ಧನ ಶೂನ್ಯಸಾಕ್ಷಾತ್ಕಾರವು ಯೋಗಮಾರ್ಗದಿಂದ ಆಗಿದೆಯೆಂಬುದು ಸ್ಪಷ್ಟ. ಬುದ್ಧನು ಕೊನೆಯುವರೆಗೆ ಯೋಗಿಯಾಗಿದ್ದನು. ಧ್ಯಾನಿಬುದ್ಧ ಎಂಬ ಹೆಸರು ಅವನು ಧ್ಯಾನಯೋಗಮಾರ್ಗಸ್ಥನೆಂಬು ದನ್ನು ತಿಳಿಸುವುದು. ಧ್ಯಾನಯೋಗವೆಂಬುದು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ. ಬುದ್ಧನು ತನ್ನ ಗುರು ಗಳು ಸಿದ್ಧಿಸಿಕೊಟ್ಟ ಯೋಗಸಾಕ್ಷಾತ್ಕಾರದ ಹಂತದಲ್ಲಿ ಸಂತೃಪ್ತನಾಗದೆ ಅವರೀರ್ವರಿಗಿಂತಲೂ ಹೆಚ್ಚಿನ ಪ್ರಗತಿ ಯನ್ನು ಸಾಧಿಸಲು ಸ್ವತಃ ಪ್ರಯತ್ನಪಟ್ಟನು. ಅದಕ್ಕಿಂತಲೂ ಉನ್ನತವಾದ ಸಿದ್ಧಿಯನ್ನು ಸಾಧಿಸಿ ಶ್ವೇತಾಶ್ವತರೋಪ ನಿಷತ್ತಿನಲ್ಲಿಯ ಅಂತಿಮ ಸತ್ಯದರ್ಶನದಂಥ ದರ್ಶನವನ್ನು ಕಂಡನು. ಈ ಯೋಗದ ತಂತ್ರ ಹಾಗೂ ಅದರ ಸಾಧನೆ ಯಿಂದಾಗುವ ಸಿದ್ಧಿಗಳೆರಡನ್ನೂ ಆ ಉಪನಿಷತ್ತು ವಿವರಿಸುತ್ತದೆ. ಬುದ್ಧನು ಶೈವೋಪನಿಷತ್ತೆಂದು ಪ್ರಸಿದ್ಧಿಪಡೆದ ಈ ಉಪನಿಷತ್ತಿನಿಂದ ಸ್ಫೂರ್ತಿಪಡೆದನು. ಶೈವಯೋಗಾಚಾರ್ಯರಿಂದ ಧ್ಯಾನಯೋಗವನ್ನು ಕಲಿತುಕೊಂಡನು. ಜನ್ಮತಃ ವ್ರಾತ್ಯನಾಗಿದ್ದನು ಬುದ್ಧನು, ವ್ರಾತ್ಯರೆಂದರೆ ಶೈವರೇ. ಆಧುನಿಕ ಸಂಶೋಧನೆ ಈ ಎರಡೂ ಮಾತುಗಳನ್ನು ಎತ್ತಿ ಹಿಡಿಯುತ್ತದೆ. ಶೈವಾಚಾರ್ಯರ, ವ್ರಾತ್ಯರ ಪರಿಸರದ ಸುಪ್ರಸಿದ್ಧ ಕಪಿಲವಸ್ತುವಿನ ಹತ್ತಿರದ ನಾಡಿನಲ್ಲಿ ಜನಿಸಿ ಪ್ರಬುದ್ಧ ನಾದುದು ಯೋಗವೃತ್ತಿಗೆ ಅನುಕೂಲವಾದ ಪರಿಸರವೆಂಬುದರಲ್ಲಿ ಸಂಶಯವಿಲ್ಲ. ಯೋಗವು ಶೈವರಿಂದ ರೂಪು ಗೊಂಡಿದೆ ಎಂಬುದೊಂದು ಅಭಿಪ್ರಾಯವಿರುವಂತೆ ; ರುದ್ರನೇ ಯೋಗಪ್ರತಿಪಾದಕನೆಂದು ಋಗ್ವೇದದ ಅಭಿಪ್ರಾಯ : Huer is especially inclined to seek the origins of Yoga practice among the Vrātyas whom he considers to have been—non Aryan holy men, with Rudra as chief deity and wandering habits.[21] ಇವೆಲ್ಲ ಮಾತುಗಳಿಂದ ಆತನ ಮೇಲೆ. ಅವನ ಯೋಗದ ಮೇಲೆ ಶೈವದ ಪ್ರಭಾವ ಇದೆ ಯೆಂಬುದು ಸ್ಪಷ್ಟವಾಗುತ್ತದೆ. ಶೈವಾಗಮಗಳಲ್ಲಿ ಶಿರೋವ್ರತ, ಶಿವಯೋಗ, ಅನಿಮಿಷಯೋಗ. ಷಡಂಗಯೋಗ. ತಾರಕಯೋಗ, ರಾಜಯೋಗ ಮುಂತಾದ ಹೆಸರುಗಳಿಂದ ಪ್ರಸಿದ್ಧವಾದ ಯೋಗಕ್ಕೂ, ಬೌದ್ಧ ಆಗಮಗಳಲ್ಲಿಯ ಧ್ಯಾನಯೋಗಕ್ಕೂ ಶ್ವೇತಾಶ್ವತರೋಪನಿಷತ್ತೇ ಮೂಲಗ್ರಂಥ ಅಥವಾ ಆಕರಗ್ರಂಥ.

ಶ್ವೇತಾಶ್ವತರೋಪನಿಷತ್ತಿನಲ್ಲಿಯ ಧ್ಯಾನಯೋಗವು ಪುರಾತನ ಪರಂಪರೆಯುಳ್ಳದ್ದು. ಅದರಲ್ಲಿ ಎರಡು ಪ್ರಕಾರಗಳಿವೆ. ತಂತ್ರಗಳ ಬಳಕೆಯ ಆಧಾರದಿಂದಾಗಿ ತಂತ್ರದಲ್ಲಿಯ ವಿಭಿನ್ನತೆಯು ಅದು ಬಳಸುವ ಕರಣಾವಲಂಬನೆ ಮೂಲದ್ದು. (೧) ಆತ್ಮವನ್ನು ಸಾಧನಮಾಡಿಕೊಂಡು ಆತ್ಮಸಾಕ್ಷಾತ್ಕಾರಮಾಡಿಕೊಳ್ಳುವುದೊಂದು ಪ್ರಕಾರ ಧ್ಯಾನ ಯೋಗದಲ್ಲಿ. (೨) ಮನವನ್ನು ಸಾಧನಮಾಡಿಕೊಂಡು ಆತ್ಮಸಾಕ್ಷಾತ್ಕಾರಮಾಡಿಕೊಳ್ಳುವುದಿನ್ನೊಂದು ಪ್ರಕಾರ ಧ್ಯಾನಯೋಗದಲ್ಲಿ. ಶಿವಶರಣರಲ್ಲಿ ಈ ಎರಡೂ ಪ್ರಕಾರಗಳನ್ನು ಕಾಣುತ್ತೇವೆ. ಬಹುಜನ ಶರಣರು ಎರಡನೆಯ ಪ್ರಕಾರದ ಯೋಗವಿಧಾನವನ್ನೇ ಬಳಸಿಕೊಳ್ಳುವರು. ಬುದ್ಧನು ಸಹ ಇವೆರಡರಲ್ಲಿ ಎರಡನೆಯದನ್ನೇ ಬಳಸಿ ಕೊಂಡಿದ್ದಾನೆ ಮೊದಲನೆಯ[22] ಪ್ರಕಾರವನ್ನು 'ಅ' ಎಂಬ ಸಂಕೇತದಿಂದ. ಎರಡನೆಯ ಪ್ರಕಾರವನ್ನು 'ಬ' ಎಂಬ ಸಂಕೇತದಿಂದ ಹೆಸರಿಸುವ. ಇದು ಅಧ್ಯಯನದ ಅನುಕೂಲಕ್ಕಾಗಿ. ಅದೇ ರೀತಿ 'ಬ' ತಂತ್ರದ ವಿವರವಾದ ವಿಷಯಪ್ರತಿಪಾದನೆಯು ಈ ಉಪನಿಷತ್ತಿನಲ್ಲಿ, ಕಠೋಪನಿಷತ್ತಿನಲ್ಲಿ, ಮೈತ್ರಾಯಣೀ ಉಪನಿಷತ್ತಿನಲ್ಲಿ, ತೈತ್ತಿರೀಯ ಉಪನಿಷತ್ತಿನಲ್ಲಿ ಕಂಡುಬರುತ್ತದೆ.[22] ಇಂಥದೇ ತಂತ್ರವನ್ನು ಅನಿಮಿಷಯೋಗದಲ್ಲಿ ಬಳಸಲಾಗಿದೆ. ಈ ಅನಿಮಿಷ ಯೋಗದ ನಿಶ್ಶಬ್ದಾನುಭವ, ಬ್ರಹ್ಮಾನುಭವ. ಬಯಲಾನುಭವ ಮತ್ತು ಶೂನ್ಯಾನುಭವ ಇದೇ. ಇದೇ 'ತಾದಾತ್ಮ್ಯಾನು ಭವ', 'ಅದ್ವಯಾನುಭವ' ಸ್ವತಂತ್ರಸಿದ್ಧಿಯಾಗಿದೆ. ಈ ಯೋಗವು ಋಷಭಾಚಾರ್ಯನ ಯೋಗಪರಂಪರೆಗೆ ಸೇರಿ ದ್ದೆಂದು ಶರಣರ ಅಭಿಪ್ರಾಯ. ಶಿವಪುರಾಣವೂ ಸಹ 'ತತ್ತ್ವಶಃ ನಂದೀ ಜಾನಾತಿ' ಎಂದು ಉದ್ಘೋಷಿಸುತ್ತದೆ. ಋಷಭ ಯೋಗಾಚಾರ್ಯನು ಶಿವಯೋಗಾಚಾರ್ಯರಲ್ಲಿ ಒಬ್ಬನೆಂದು ವಾಯುವೀಯಸಂಹಿತೆ ಹೇಳುವಂತೆ. ವಿವೇಕಚಿಂತಾಮಣಿ ಯಲ್ಲಿಯ ಆಗಮಪ್ರಕರಣದ ಯೋಗಪಾದದಲ್ಲಿ ನಿಜಗುಣರು ಹೇಳುತ್ತಾರೆ.

ಬೌದ್ಧಧರ್ಮದಲ್ಲಿಯ ಧ್ಯಾನಯೋಗಿಗಳು, ವಚನಶಾಸ್ತ್ರದಲ್ಲಿಯ ಅನಿಮಿಷಯೋಗಿಗಳು ಶೂನ್ಯಾನುಭವ ಹೊಂದಿದರು. ಇದು ಈ ಯೋಗದ ಪರಮಸ್ಥಿತಿಯೆಂದು ಇವೆರಡೂ ಯೋಗಾನುಭಾವಿಗಳು ಅನುಭವಿಸಿ ನಿವೇದಿಸು ತ್ತಾರೆ. ಶರಣಭಾವ, 'ದಯಾ' ಮತ್ತು ಕರುಣೆಗಳು ಈ ಯೋಗಸಾಧಕರ ಶ್ರೇಷ್ಠ ಲಕ್ಷಣಗಳೆಂಬುದಕ್ಕೆ ಇವು ಬೌದ್ಧ ರಲ್ಲಿ ಮತ್ತು ವೀರಶೈವರಲ್ಲಿ ಕಂಡುಬರುವುದೇ ಉತ್ತಮ ಸಾಕ್ಷಿ.

ಶರಣರ ಈ ಶೂನ್ಯತತ್ತ್ವದ, ಋಗ್ವೇದದ ಅಸತ್ತಿನ, ಉಪನಿಷತ್ತುಗಳ ಪರಬ್ರಹ್ಮದ, ಬೌದ್ಧರ ಶೂನ್ಯತತ್ತ್ವದ

ಲಕ್ಷಣಗಳು[29] ಒಂದೇ ಆಗಿರುವುದೆಂದು ಸ್ಥೂಲವಾಗಿ ಹೇಳಬಹುದು. ಇಂಥ ಹೇಳಿಕೆಗೆ ಆಸ್ತಿಕ ದಾರ್ಶನಿಕರ ಮತ್ತು ಹೀನಯಾನ ಬೌದ್ಧರ ಕೃತಿಗಳನ್ನು ಓದಿದವರು ಆಕ್ಷೇಪವನ್ನೆತ್ತದಿರರು. ಆದರೆ ಇವರ ವಾದವು ಹುರುಳಿಲ್ಲದುದೆಂಬುದು ಬೌದ್ಧಧರ್ಮಗ್ರಂಥಗಳಾದ ಪ್ರಜ್ಞಾಪಾರಮಿತಗಳನ್ನು, ಶೂನ್ಯವಾದದ ಕರ್ತೃವಾದ ನಾಗಾರ್ಜುನನ ಕೃತಿಗಳನ್ನು ಓದಿದರೆ ಗೊತ್ತಾಗುತ್ತದೆ. ಅನುಭಾವದ ಮೂಲದೃಷ್ಟಿಯಿಂದ ಇದು ಶೈವಸಂಸ್ಕೃತಿಸಾಧನಪ್ರಭಾವವುಳ್ಳದ್ದೆಂಬುದರಲ್ಲಿ ಸಂಶಯವಿಲ್ಲ. ಪರಾತ್ಪರತತ್ವವು ಅನುಭಾವಗಮ್ಯವೆಂದು ಸಿದ್ಧನಾಗಾರ್ಜುನನ ಶೂನ್ಯಕ್ಕೆ ಪ್ರಜ್ಞಾಪಾರಮಿತ ಕೃತಿಗಳು ಆಕರ ಗ್ರಂಥಗಳಾಗಿರುವಂತೆ 'ಶೂನ್ಯ'ತತ್ವಕ್ಕೆ ಆಕರ ಗ್ರಂಥಗಳು ಆಗಮಗಳು ಹಾಗೂ ವಚನಗಳು.

ಬೌದ್ಧರಲ್ಲಿ 'ಶೂನ್ಯತಾ' ಹಾಗೂ 'ಸಂವೃತಿ' ಎಂದು ತತ್ವದಲ್ಲಿ ವರ್ಗೀಕರಣಮಾಡಿದರೆ ವಚನಶಾಸ್ತ್ರದ ಪ್ರಕಾರ—ಆಗಮಗಳ ಪ್ರಕಾರ, ಪರಶಿವ (ಸರ್ವಶೂನ್ಯ ನಿರಾಲಂಬಸ್ಥಲ ಅದೇ ಶೂನ್ಯ ಅಥವಾ ಬಯಲು) ತತ್ವ, ಲಿಂಗ ತತ್ವ ಹಾಗೂ ಅಂಗತತ್ವಗಳೆಂದು ಈ ಶೂನ್ಯತತ್ವಜ್ಞಾನಗಳ ವರ್ಗೀಕರಣ. ಬೌದ್ಧರ ಕ್ಷಣಿಕವಾದದ ಮೇಲೆ ಶೈವರ ರುದ್ರತತ್ವದ ಸ್ವರೂಪವು ತುಂಬಾ ಪ್ರಭಾವವನ್ನು ಬೀರಿದೆ ಎಂಬುದಿಲ್ಲಿ ಗಮನಾರ್ಹ. ಇಲ್ಲಿಯವರೆಗೆ ಬೌದ್ಧಧರ್ಮದಲ್ಲಿ ಶೂನ್ಯವು ಯಾವ ರೀತಿಯಲ್ಲಿ ಒಂದು ತತ್ವವೆಂದು ಪರಿಗಣಿಸಲ್ಪಟ್ಟಿತು ಹಾಗೂ ಅದನ್ನು ನಾಗಾರ್ಜುನನು ಹೇಗೆ ಎತ್ತಿಕೊಂಡನು ಎಂಬ ವಿಚಾರ ಕುರಿತು ಆಲೋಚಿಸಿ ಅದಕ್ಕೂ ವೀರಶೈವರ ಶೂನ್ಯಕ್ಕೂ ಮೂಲವು ಹಾಗೂ ಕರಣವು ಯಾವುವೆಂಬುದನ್ನು ತಿಳಿದುಕೊಂಡೆವು. ಇದರಿಂದ ದಾರ್ಶನಿಕನ ದೃಷ್ಟಿ ತಿಳಿದುಬಂತು. ಅಂದರೆ ವಚನಶಾಸ್ತ್ರದಲ್ಲಿ, ಅದನ್ನು ಬಳಸಿಕೊಂಡು ಗ್ರಂಥಸಂಪಾದನೆ ಮಾಡಿದವನಲ್ಲಿ 'ವಾದ'ವು ಅಥವಾ 'ಆನ್ವೀಕ್ಷಿಕೀ'ಇವುಗಳೂ ಯಾವ ಸಿದ್ಧಿಗಾಗಿದೆ ಎಂಬುದೂ. ಅದೇ ರೀತಿ ಅವರು ಬಳಸಿದ ಪ್ರಮಾಣಗಳು ಎಷ್ಟೆಂಬುದೂ ದಾರ್ಶನಿಕದೃಷ್ಟಿಕೋನದ ನಿಚ್ಚಳ ಚಿತ್ರ ಸಿಕ್ಕುವುದಕ್ಕ ಕಾರಣವೆಂಬುದೂ ತಿಳಿದುಬಂತು. ಇದರ ಜೊತೆಗೆ ಶ್ರುತಿಗಳ, ಬೌದ್ಧಗ್ರಂಥಗಳ, ವಚನಾಗಮಗಳ ತಂತ್ರ ಮತ್ತು ಸ್ವತಂತ್ರ ನಿಲುವುಗಳ ಪರಿಚಯವೂ ಆಯಿತು. ಇನ್ನು ನಾಗಾರ್ಜುನನ ನಿಲುವನ್ನು ಒಂದೆರಡು ಮಾತುಗಳಿಂದ ತಿಳಿಸದಿರಲಾಗದು.

ನಾಗಾರ್ಜುನನು ತಾತ್ವಿಕ ವಿಚಾರಕ್ಕಾಗಿ ಅನುಭಾವತತ್ವವಾದ ಶೂನ್ಯವನ್ನು ಆಕರಗ್ರಂಥಗಳಿಂದೆತ್ತಿಕೊಂಡು ಲಕ್ಷಣಿಸಿದನು. ಪ್ರಮಾಣಗಳನ್ವಯವಾಗಿ ಆತನು ಈ ತತ್ವದ ವಿಶ್ಲೇಷಣೆ ಮಾಡಿದನು ಮತ್ತು ತತ್ವಗಳ ನಿರ್ಧಾರ ಮಾಡಿದನು. ವಸ್ತುಗಳು, ಅವನ ಪ್ರಕಾರ ಶೂನ್ಯತೆ ಮತ್ತು ಸಂವೃತಿ ಎಂದು ಎರಡು ಪ್ರಕಾರ. ಇದು ಜ್ಞಾನ ಸಾಧನಗಳನ್ನು ಸೂಚಿಸುತ್ತದೆ. ದಿಙ್ನಾಗನ ಪೂರ್ವದ ಬೌದ್ಧದಾರ್ಶನಿಕರು ಪ್ರತ್ಯಕ್ಷ, ಅನುಮಾನ ಹಾಗೂ ಶಬ್ದಗಳ ಜೊತೆಗೆ ಯೋಗಿ ಪ್ರತ್ಯಕ್ಷವನ್ನೂ ಒಪ್ಪಿಕೊಂಡಿದ್ದರೆಂಬ ಮಾತು ಇಲ್ಲಿ ಸ್ಮರಣಾರ್ಹ. ಶೂನ್ಯತಾತತ್ವವು ಸ್ವತಂತ್ರವಾದ ಒಂದು ತತ್ವವಿಭಾಗ. ಸಂವೃತಿ ಎಂಬುದೂ ಇನ್ನೊಂದು ತತ್ವ ವಿಭಾಗ. ಮೊದಲಿನದಕ್ಕೆ ಅನ್ವಯಿಸುವ ಮಾತುಗಳು ಎರಡನೆಯ ತತ್ವಕ್ಕೆ ಅನ್ವಯಿಸಲಾರವು. ಅದೇ ರೀತಿ ಎರಡನೆಯ ತತ್ವಕ್ಕೆ ಅನ್ವಯಿಸುವ ವಿಚಾರಗಳು ಮೊದಲನೆಯ ತತ್ವಕ್ಕೆ ಅನ್ವಯಿಸಲಾರವು. ಸಾಪೇಕ್ಷತಾವಾದ, ಅನಾತ್ಮವಾದ, ಕಾರ್ಯಕಾರಣವಾದ ಮುಂತಾದುವುಗಳು ಸಂವೃತಿ ತತ್ವಕ್ಷೇತ್ರಕ್ಕೆ ಮಾತ್ರ ಸೀಮಿತ. ಸಂವೃತಿ ತತ್ವವು ಅನೇಕ, ಕ್ಷಣಿಕವಾಗಿರುವುದು. ಅದರ ಜ್ಞಾನವೂ ಅನೇಕ ಅಥವಾ ದ್ವಂದ್ವಮಯ. ಆದರೆ ಶೂನ್ಯತತ್ವ ಅದ್ವಯ, ನಿತ್ಯ, ತಾದಾತ್ಮ್ಯಬೋಧ "Sūnyatā is prajnā, Nonduel intution, and in having This, the Tathāgata is nondifferent from the absolute Tathāgata.

ನಾಗಾರ್ಜುನನು ಶೂನ್ಯವನ್ನು ಹೀಗೆ ವರ್ಣಿಸುತ್ತಾನೆ:

(i) It is apara pratyaya i.e. It cannot be imparted by one to another. One is to realise the truth within one self (Pratyayātmavedya and not to understand it by listening to the instruction of Āryas (the perfect) who can speak of the turth only through superimposition (Samāropa).

(ii) It is śānta, ie, it has the nature of cessation, it is undisturbed by origination or destruction.

(iii) It is prapancairaprapancaitam, i.e., it is inexpressible. The first prapanca is taken as a synonym of speech (vāk), i.e., the sense of sūnyatā is not utterable by words.

(iv) It is nirvikalpa or unrealisable in concepts. Vikalpa is thought-construction and, lastly—

(v) It is anānārtha, i.e., deviod of different meanings.

Thus he points out that śūnyatā is not to be taken in the sense of nāstitva (nihilism) or abhāva (absence of something) as wrongly supposed by Hinayānists.

ವಚನಗಳಲ್ಲಿ, ಉಪನಿಷತ್ತುಗಳಲ್ಲಿ ಬರುವ ಬಯಲು ಅಥವಾ ಶೂನ್ಯವನ್ನು ಮತ್ತು ಪರಬ್ರಹ್ಮ ಅಥವಾ ಆತ್ಮವನ್ನು ಅನುಭಾವಿಗಳು ಲಕ್ಷಣಿಸುವದನ್ನವಲೋಕಿಸುವುದು ಸರಿಯಾದ ಗ್ರಹಣಕ್ಕೆ ನೆರವಾಗುವುದು.

**ಉಪನಿಷತ್ತುಗಳು**

(೧) ನೈಷಾ ತರ್ಕೇಣ ಮತಿರಾಪನೇಯಾ (ಕಠ ಉ. I. II ೭. ೯)

(೨) ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ (ಕಠ ಉ. I. II ೨೦. ೨೩)

(೩) ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ನ ಚಾಸಚ್ಛಿವ ಏವ ಕೇವಲಃ (ಶ್ವೇ ಉ. VI ೧೮)

**ಶರಣರು**

(೧) ವೇದಂಗಳಿಗಭೇದ್ಯನಾದ ಶಿವ — ಅಖಂಡೇಶ್ವರ ವಚನ

(೨) ವೇದ ವೇಧಿಸಲರಿಯದು — ಬಸವಣ್ಣ ವ. ೯೫೨

(೩) ವೇದಾತೀತ — ಬಸವಣ್ಣ ವ. ೯೫೩

(೪) ಆದಿ ಅನಾದಿ ಇಲ್ಲದಂದು....ನೀನುಲುಹಡಗಿದ್ದೆಯಲ್ಲಾ ಕಲಿದೇವಯ್ಯ (ವ.ಸಾ.ಸಂ. ಅ. ೧೮. ೬೨)

(೫) ಆದಿ ಅನಾದಿ ಒಂದಾದಂದು....ಧರೆಯಾಕಾಶ ಒಂದಾದಂದು ಗುಹೇಶ್ವರ ಲಿಂಗ ನಿರಾಳನು (ವ.ಸಾ.ಸಂ. ಪೆ. ೧೯. ೬೫)

(೬) ....ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ವಿಶ್ವಮೂರ್ತಿ, ಸ್ವಯಂಭು, (ವ.ಸಾ.ಸಂ.ಪೆ. ೨೧.೭೪)

(೭) ವಾಙ್ಮನಕ್ಕೆ ಬಾರದ ಅಪ್ರತಿಮಲಿಂಗ....ಚಿಕ್ಕಯ್ಯಪ್ರಿಯ, ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲುಮಾಣು ವ.ಸಾ.ಸಂ.ಪೆ. ೬೪೭ ವ. ೧೪೫

ಬೌದ್ಧಗ್ರಂಥ, ಉಪನಿಷತ್ತುಗಳು ಹಾಗೂ ವಚನಗಳ ಉದ್ಧರಣೆ ವಾಕ್ಯಗಳಿಂದ ತಿಳಿಯುವುದೇನೆಂದರೆ ಪರಾತ್ಪರತತ್ವದ ಲಕ್ಷಣಗಳು ಒಂದೇ; ವಸ್ತು ಒಂದೇ. ಆದರೆ ಅದಕ್ಕೂ ಪ್ರಪಂಚ ಇಲ್ಲವೆ ಸಂಪ್ರತಿಗೂ ಇರುವ ಸಂಬಂಧ ಕುರಿತು ಮಾಡುವ ವಿವರವಾದ ವಿಚಾರ ಮಾತ್ರ ಒಂದೇ ಆಗಿಲ್ಲ. ಇದರಿಂದ ವೈವಿಧ್ಯಮಯವಾದ 'ವಾದ'ಗಳು ಉಂಟಾದವು. ಈ ವಾದಗಳೇ ದೃಷ್ಟಿ ಅಥವಾ ದಿಟ್ಟಿ. ಶೂನ್ಯಸಂಪಾದನೆಯ ದೃಷ್ಟಿ ವಿಶಿಷ್ಟಪೂರ್ಣ. ಅದರ ವೈಶಿಷ್ಟ್ಯವು ಅದರ ದಿಟ್ಟಿಶಾಸ್ತ್ರವಾಗಿದೆ. ಇಲ್ಲಿ ಅದರ ದಾರ್ಶನಿಕ ದೃಷ್ಟಿಯನ್ನೂ ಸ್ಥೂಲವಾಗಿ ಅರಿಯಲು ಬೇಕಾದ ಸಾಮಗ್ರಿ, ದೃಷ್ಟಿಗೆ ಕಾರಣವಾದ ವಸ್ತು ಹಾಗೂ ದೃಷ್ಟಿ ಕಂಡ ವಸ್ತು ಇವುಗಳನ್ನೂ ವ್ಯಕ್ತಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಈ ಪ್ರಯತ್ನವು ಇಲ್ಲಿಯ 'ದೃಷ್ಟಿ'ಯ ವಿವರವಾದ ಅಧ್ಯಯನಕ್ಕೆ ಪ್ರಾಥಮಿಕ ಕಾರ್ಯ ಪ್ರೇರಣೆ.

## ಟಿಪ್ಪಣಿ

[1] Ranade R. D. : Pathway to God in Kannada Literature, Bhavans Publication, Bombay (1960) pp. 6-7

[2] ಹಳಕಟ್ಟಿ ಪಿ. ಜಿ. : ಶೂನ್ಯಸಂಪಾದನೆ, ವಿಜಾಪುರ (೧೯೩೧) ಮುನ್ನುಡಿ

[2]ಆ ಹಿರೇಮಠ ಆರ್. ಸಿ. : ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ, ಕ.ವಿ.ವಿ., ಧಾರವಾಡ (೧೯೭೦), ಸಮಾಪ್ತಿ ಗದ್ಯ

[3] Dasagupta S. N. A. : *History of Indian Philosophy*, Vol. II Cambridge Press (1932) p. 390 ತಂತ್ರವೆಂಬುದು ತರ್ಕವಿದ್ಯೆಯೆಂಬರ್ಥದಲ್ಲಿ ಬಳಸಲಾಗುವುದೆಂಬ ವಿಚಾರವನ್ನು ತಿಳಿಸುತ್ತ (i) But the difference between

tantra-yukti and ānvikṣiki is this, that, while the former refers to the laws of thought, the latter refers to technical modes of expression—ಎಂದಿದ್ದಾರೆ. ಇದೇ ಮಾತನ್ನು ಸಮರ್ಥಿಸಲು ಇನ್ನೊಂದು ಸಂಗತಿಯನ್ನು ಉದ್ಧರಿಸಬಹುದು (ii) ಆನಂದತೀರ್ಥರ ಭಾಷ್ಯದ ಮೇಲೆ ಜಯತೀರ್ಥರು ತತ್ತ್ವಪ್ರಕಾಶಿಕಾ ಎಂಬ ಭಾಷ್ಯವನ್ನು ಬರೆದರು. ಅದನ್ನು ಕುರಿತು ರಾಘವೇಂದ್ರಯತಿಗಳು ತಂತ್ರದೀಪಿಕಾ ಎಂಬ ಭಾಷ್ಯವನ್ನು ಬರೆದು ಪ್ರಸಿದ್ಧಿಗೊಳಿಸಿದರು. ಇದು ತರ್ಕಬದ್ಧ ವಿವರಣೆಯಾಗಿದ್ದು 'ತಂತ್ರ' ಶಬ್ದದ ಅರ್ಥ ಕೊಡುತ್ತದೆ. ನೋಡಿ : Dasagupta S.N. : *A History of Indian Philosophy*, Vol. IV, Cambridge Press (1940), p. 61–62

4 Kuppuswamy Shastri M. M : *Primer of Indian Logic*, K.R.S. Institute, Madras, P. VI (1963)

5 ಚಿದಾನಂದಮೂರ್ತಿ ಎಂ. : ಶೂನ್ಯಸಂಪಾದನೆಯನ್ನು ಕುರಿತು, ಮೋಹನಪ್ರಕಾಶನ, ಮೈಸೂರು (೧೯೬೨) ಪು. ೧೩೩ ಅಡಿಟಿಪ್ಪಣಿ

6 Monior Williams, *Buddha*, p. 48

7 *The Journal of the Royal Asiatic Society of Great Britan and Ireland* (1929), pp, 451–52

8 ಹಳಕಟ್ಟಿ ಪಿ. ಜಿ. ಅದೇ ಸಂ.ಗಳು VIII ; 135 ; XV 46 ; XVI 20

9 ಹಳಕಟ್ಟಿ ಪಿ. ಜಿ. : ಅದೇ XV 31

10 ಹಳಕಟ್ಟಿ ಪಿ. ಜಿ. : ಅದೇ, VIII. 2

11 ಹಳಕಟ್ಟಿ ಪಿ. ಜಿ. : ಅದೇ, XX. 91

12 The Journal of the Royal Asiatic Society of Great Britan and Ireland (1929) p. 4–82

13 1 : Keith A B. *Indian Logic and Atomism*, Oxford Press (1921), pp. 158–160

2 : Russell Bertrand : *An Inquiry into Meaning and Truth*, Pelican series (1969), pp. 23–24

14 1. Dutt. N. : Aspects of Mahayana Buddhism and its Relation to Hinayana. Luzac and Co., London (1930), p. 52

2. Jwalaprasad.: *History of Indian Epistemology*, Munsiram Manoharlal, Delhi (1958), pp 89–95

3. Kaviraj Gopinath M. M. ; *Aspects of Indian Tnought*, Burdwan University (1969) pp. 1–45

15 ಭೂಸನೂರಮಠ ಎಸ್. ಎಸ್., : ವಚನಸಾಹಿತ್ಯಸಂಗ್ರಹ, ಮೈಸೂರು ಸರಕಾರ–ವಿದ್ಯಾಭ್ಯಾಸ ಇಲಾಖೆ, ಬೆಂಗಳೂರು (೧೯೬೫) ಪೆ. ೪ : V. ೯

16 Murti T. V. R. : *The Central Philosophy of Buddhism*, George Allen and Unwin Ltd., (1955), p. 166

17 Radhakrishna S. : *Indian Philosophy*, Vol. I, George Allen and Unwin Ltd, (1940) p. 295

18 ಜೈಗೀಷವ್ಯನು ಶೈವ ಆಕರಗ್ರಂಥಗಳ ಪ್ರಕಾರ ಇಪ್ಪತ್ತೊಂದು ಜನ ಶಿವಯೋಗಾಚಾರ್ಯರಲ್ಲಿ ಏಳನೆಯವನು. ಇವನು ಯೋಗಸಿದ್ಧಿಯಿಂದ ಆಕಾಶಗಮನ ಸಿದ್ಧಿ ಪಡೆದಿದ್ದನು. ವ್ರಾತ್ಯರ ನಾಡೆಂದು ಪ್ರಸಿದ್ಧವಾದ ಮಗಧದೇಶದಲ್ಲಿ ಮಹಿಮೆಯನ್ನು ಮೆರೆದವನು. ಇದನ್ನು ಮಹಾಭಾರತವು ಚಿತ್ರಿಸುತ್ತದೆ. ಈತನು 'ಧಾರಣಶಾಸ್ತ್ರ'ವೆಂಬ ಕೃತಿಯನ್ನು ರಚಿಸಿ ಪತಂಜಲಿಗಿಂತ ಪೂರ್ವದಲ್ಲಿಯೇ ಯೋಗಶಾಸ್ತ್ರ ಗ್ರಂಥವನ್ನು ರಚಿಸಿದ್ದನು. ಬುದ್ಧನು ಇದನ್ನೂ ಅಭ್ಯಾಸ ಮಾಡಿದ್ದನು. ಈತನು ಐತಿಹಾಸಿಕ ಪುರುಷನು. ಈತನ ಯೋಗಪರಂಪರೆಗೆ ಆಕರಗ್ರಂಥ ಶ್ವೇತಾಶ್ವತರ ಉಪನಿಷತ್ತು. ಈತನ ಪರಂಪರೆಯನ್ನು ಬೌದ್ಧರು ಹಾಗೂ ಶೈವರು ಅನುಸರಿಸಿದರು. ಈ ಮಾತನ್ನು ಆಯಾ ಧರ್ಮಗ್ರಂಥಗಳು ಎತ್ತಿಹಿಡಿಯುತ್ತವೆ. Mainkar T. G. Sankyakarika of Isvarakrsna, Oriental Book Agency (1964), p. 18. ಶಿವಪುರಾಣ ಭಾ. VIII, ಶತರುದ್ರ ಸಂಹಿತೆ, ಶಿವಪುರಾಣ, ವಾಯುವೀಯಸಂಹಿತೆ XII ಉ.ಭಾ (IX, ೨–೬). ಹಾಸನದ ಪಂಡಿತ ವೆಂಕಟರಾವ್, ಮೈಸೂರು ಅರಮನೆಯ ಪ್ರಕಟಣೆ. ೧೯೪೬. Gopinath Kaviraj, Ibid. p- 145

19 Kaviraj Gopinath, *Aspects of Indian Thought*, Burndawan University, 1966, p. 145

20 Erich Frauwalier, *History of Indian Philosophy*, Vol. I, Motilal Bhanarasidass (1973) pp. 122–123

21 ಕಂಬಿ, ಎ. ಎಸ್., ವೀರಶೈವದರ್ಶನ ಮೀಮಾಂಸೆ, ಸಂ. ೧, ಕುಮಾರೇಶ ಗ್ರಂಥಮಾಲೆ ಧಾರವಾಡ (೧೯೭೩), ಉದ್ಧರಿಸಿದ್ದು ಪು. ೧೬. ಅಡಿಟಿಪ್ಪಣಿ ೩೮

---

ಸೋऽಹಂ ಎಂದಡೆ ಅಂತರಂಗದ ಗರ್ವ ;
ಶಿವೋऽಹಂ ಎಂದಡೆ ಬಹಿರಂಗದ ಅಹಂಕಾರ,
ಈ ಉಭಯವನಳಿದು ದಾಸೋऽಹಂ ಭಾವವನೆ
ಕರುಣಿಸಿ ಬದುಕಿಸಯ್ಯಾ, ಅಖಂಡೇಶ್ವರ

ಷಣ್ಮುಖ ಶಿವಯೋಗಿ

# ೧೨ನೆ ಶತಮಾನದ ಶಿವಶರಣರ ಧಾರ್ಮಿಕದೃಷ್ಟಿ

**ಕೆ. ಬಿ. ಪ್ರಭುಪ್ರಸಾದ್**

ದಯವಿಲ್ಲದ ಧರ್ಮವಾವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ....

ಕೊಲುವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ
ಕುಲವೇನೊ ಆವಂದಿರ ಕುಲವೇನೊ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು

ಈ ವಚನಗಳಲ್ಲಿ ಶರಣರ ವಿಶ್ವವಿಶಾಲವಾದ ಧಾರ್ಮಿಕದೃಷ್ಟಿ ಬಹು ಚೆನ್ನಾಗಿ ಸೂಚಿತವಾಗಿದೆ. ದಯೆ ಸರ್ವ ಭೂತಾನುಕಂಪೆ, ಸಕಲ ಜೀವಾತ್ಮರ ಲೇಸು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಬಹು ಹಿಂದಿನಿಂದ ಬಂದಂತಹ ಮಾತೇ. ಅಲ್ಲದೆ ಜಗತ್ತಿನ ಎಲ್ಲ ಧರ್ಮಗಳಿಗೂ ಸಾಮಾನ್ಯವಾದ ಭಾವನೆ ಇದು. ಇದರಂತೆ ವಚನಗಳಲ್ಲಿ ವ್ಯಕ್ತ ವಾಗುವ ಇನ್ನೂ ಹಲವಾರು ನೈತಿಕ ಹಾಗೂ ಧಾರ್ಮಿಕ ಉಪದೇಶಗಳಾದರೂ ಎಲ್ಲ ಧರ್ಮಗಳಿಗೂ ಸಾಮಾನ್ಯ ವಾದವುಗಳೇ. ಧರ್ಮದ ತತ್ತ್ವ ಮತ್ತು ಸಿದ್ಧಾಂತಗಳ ವಿಶ್ವಸಾಮಾನ್ಯವಾದ ತಿರುಳನ್ನು ಎತ್ತಿಕೊಂಡಲ್ಲಿ ಪ್ರಪಂಚದ ಪ್ರತಿಯೊಂದು ಧರ್ಮವೂ ವಿಶ್ವಧರ್ಮವಾಗಲು ಯೋಗ್ಯವಾಗುತ್ತದೆ. ಆದರೆ ಪ್ರತಿ ಧರ್ಮವೂ ತನ್ನದೇ ಆದ ಒಂದು ಜೀವನತತ್ತ್ವವನ್ನು, ಸಾಧನಾಕ್ರಮವನ್ನು, ಕಾಲದೇಶಾನುಗುಣವಾದ ಸಂಪ್ರದಾಯಗಳನ್ನು, ಸಾಮಾಜಿಕ ವ್ಯವಸ್ಥೆಯನ್ನು ಮುಂದಿಡುವಲ್ಲಿ ಮಾತ್ರ ಭೇದ ಕಾಣುತ್ತದೆ. ಶರಣರ ವೀರಶೈವಧರ್ಮವು ಈ ವಿಚಾರಗಳಲ್ಲಿ ತನ್ನ ವಿಶಿಷ್ಟವಾದ ಕಾಣಿಕೆಯನ್ನು, ಅದಷ್ಟು ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಮೌಲ್ಯಗಳಿಗೆ ಒತ್ತುಕೊಡುವುದರ ಮೂಲಕ, ಕೊಟ್ಟಿದೆ. ಕೇವಲ ವಿಶಿಷ್ಟವಾದುದು ಎಂಬ ಕಾರಣಕ್ಕಾಗಿ ಮಾತ್ರವಲ್ಲ, ತನ್ನ ವಿಶಾಲ ಮಾನವತಾದೃಷ್ಟಿ, ಆಧುನಿಕಕಾಲಕ್ಕೂ ಪ್ರಸ್ತುತವಾಗುವಂತಹ ಮತ್ತು ವೈಜ್ಞಾನಿಕದೃಷ್ಟಿಗೂ ಒಪ್ಪುವಂತಹ ವೈಚಾರಿಕ ಗುಣಗಳಿಂದಾಗಿ ಶರಣರ ಧಾರ್ಮಿಕ ದೃಷ್ಟಿ ವಿಶ್ವಮಾನ್ಯತೆಗೆ ಯೋಗ್ಯವಾಗಿದೆ.

ಕ್ರಿ.ಶ. ೧೨ನೇ ಶತಕದಷ್ಟು ಹಿಂದೆಯೇ, ಅಂದರೆ ಪಾಶ್ಚಾತ್ಯ ದೇಶಗಳಲ್ಲಿ ವೈಚಾರಿಕ ನವೋದಯ (Renaissance)ವಾಗುವುದಕ್ಕೆ ಎರಡು ಶತಮಾನಗಳ ಮುಂಚೆಯೇ, ಮಾರ್ಟಿನ್‌ಲೂಥರ್‌ನ ಧಾರ್ಮಿಕ ಸುಧಾರಣೆಗೆ (Reformation) ಮೂರು ಶತಮಾನಗಳಿಗೆ ಮುಂಚೆಯೇ, ಕನ್ನಡನಾಡಿನಲ್ಲಿ ಹೊಸ ವಿಚಾರಯುಗದ ಹೊಂಬೆಳಗನ್ನು ಶರಣರು ತಂದರು. ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡಿದರು. ಇಂದಿಗೂ ಹೊಚ್ಚ ಹೊಸ ದೆನಿಸುವಂತಹ ಪರಿಪೂರ್ಣವಾದ ಜೀವನಸಿದ್ಧಾಂತವನ್ನು ಅವರು ರೂಪಿಸಿದರು. ಪರಿಪೂರ್ಣ ವ್ಯಕ್ತಿತ್ವದ ವಿಕಾಸ ಮತ್ತು ತನ್ಮೂಲಕವಾಗಿ ಮೇಲೇರಿದ ಪರಮಸ್ಥಿತಿಯಲ್ಲಿ ಭೇದವಳಿದು ಆತ್ಮ ಪರಮಾತ್ಮನೊಂದಿಗೆ ಸಮರಸವಾಗಿ ಒಂದಾಗುವುದು ಶರಣರ ಧಾರ್ಮಿಕದೃಷ್ಟಿಯ ಗುರಿ. ವ್ಯಕ್ತಿಯ ಉದ್ಧಾರವಷ್ಟೇ ಅಲ್ಲ, ಲೌಕಿಕ ಸಾಮಾಜಿಕ ಜೀವನ ಚೊಕ್ಕವಾಗಿ ಇಡೀ ಸಮಾಜದ, ಮಾನವಕುಲದ ಹಿತವನ್ನೂ ಸಾಧಿಸಬೇಕೆಂಬ ಸಮನ್ವಯ ಮನೋಭಾವವೇ ಈ ಧಾರ್ಮಿಕದೃಷ್ಟಿಯ ವಿಶೇಷ.

ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ತಮ್ಮ ಉದಾತ್ತವಿಚಾರಗಳಿಂದ ನಡೆನುಡಿಗಳಿಂದ ಧರ್ಮದ ಪರಿಧಿಯನ್ನೇ ವಿಸ್ತರಿಸಿದರು. ಶರಣರೆಲ್ಲರ ಧಾರ್ಮಿಕ ನಿಲುವಿಗೆ ತಮ್ಮ ಅಮೂಲ್ಯವಾದ ವಚನಗಳಲ್ಲಿ ಅಭಿವ್ಯಕ್ತಿ

ಯನ್ನು ನೀಡಿದರು. ಇಹಜೀವನದ ಅತಿಸಾಧಾರಣ ಸಜ್ಜನಿಕೆಯಿಂದ ಮನಸ್ಸಿಗೆ ಬುದ್ಧಿಗೆ ನಿಲುಕದ, ಅಗೋಚರವೂ ಅಚಿಂತ್ಯವೂ ಆದ ಪರಾತ್ಪರಚೈತನ್ಯದೊಂದಿಗೆ ಸಾಮರಸ್ಯವನ್ನು ಪಡೆಯುವವರೆಗೂ ವಿಸ್ತರಿಸಿ, ಸರ್ವವ್ಯಾಪಿಯಾಗಿ ಧರ್ಮ ಜೀವನದಲ್ಲಿ ಒಂದಾಯಿತು.

ಶರಣರ ಧಾರ್ಮಿಕದೃಷ್ಟಿ ವಿಚಾರಕ್ರಾಂತಿಯಿಂದ ಮೂಡಿಬಂದುದು. ಶತಮಾನಗಳಿಂದ ಪಾಲಿಸಿಕೊಂಡು ಬಂದ ಜಾತಿ, ವರ್ಗ, ಲಿಂಗಭೇದ, ಎಲ್ಲ ಬಗೆಯ ಅದರಲ್ಲೂ ದಲಿತವರ್ಗದ ಶೋಷಣೆ, ನೂರಾರು ಅಂಧ ಸಂಪ್ರದಾಯಗಳಿಂದ ಜಡ್ಡುಗಟ್ಟಿದ ವೈದಿಕಪರಂಪರೆ—ಇವುಗಳಿಗೆ ಪ್ರವರ್ತಕವಾಗಿ, ಸ್ವತಂತ್ರ ವಿಚಾರಶೀಲತೆ, ಜಾತಿ–ವರ್ಗ–ಲಿಂಗ ಭೇದರಹಿತವಾದ, ವ್ಯಕ್ತಿಗೌರವ, ವೃತ್ತಿಗೌರವಸಹಿತವಾದ ಸರ್ವಸಮಾನತೆ, ಸಮನ್ವಯ, ಸರ್ವೋದಯ ಹಾಗೂ ಪೂರ್ಣದೃಷ್ಟಿಗಳಿಂದ ಕೂಡಿದ ಹೊಸ ಆದರ್ಶ ಸಮಾಜ ನಿರ್ಮಾಣದ ಪ್ರವರ್ತಕವಾಗಿ, ಶರಣರ ಧಾರ್ಮಿಕ ಚಳುವಳಿ ಬಂದಿತು. ಶರಣರು ಮಾನವತಾವಾದಿಗಳು ಮಾತ್ರವಲ್ಲ. ವಿಶಾಲಭಾವನೆಯಲ್ಲಿ ಇನ್ನೂ ಮುಂದೆ ಹೋಗಿ ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರು ಮಾತ್ರ ಕುಲಜರು ಎಂದು ಸಾರಿದರು.

ಶ್ರೀಸಾಮಾನ್ಯನ ಕಲ್ಯಾಣದ ಚಿಂತೆ, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯ, ಸುಲಿಗೆ, ಶೋಷಣೆಗಳನ್ನು ಕಂಡು ಉಂಟಾದ ಸಾತ್ವಿಕ ರೋಷ, ಇಡೀ ಸಮಾಜದ ಬದುಕನ್ನೇ ಕ್ರಾಂತಿಕಾರಕವಾಗಿ ಪರಿವರ್ತಿಸಿ ಹೊಸ ವ್ಯವಸ್ಥೆಯ ನಿರ್ಮಾಣವನ್ನು ಮಾಡಬೇಕೆಂಬ ಕೆಚ್ಚನ್ನು ಸಂಕಲ್ಪವನ್ನು ಶರಣರಲ್ಲಿ ಉಂಟುಮಾಡಿತು. ವಿಚಾರದಲ್ಲಿ ಮತ್ತು ಭಾಷೆಯಲ್ಲಿ ಈ ಕ್ರಾಂತಿ ಪ್ರಕಟವಾಯಿತು. ವಿದ್ವತ್ಪೂರ್ಣವಾದ ಪ್ರೌಢ ಭಾಷೆಗೆ ಬದಲು ಜನಸಾಮಾನ್ಯರ ಹೃದಯವನ್ನು ಮುಟ್ಟಿ ಮಿಡಿಯುವಂತಹ ತಿಳಿಯಾದ ಸುಲಭವಾದ ಆಡುಮಾತು ವಚನಸಾಹಿತ್ಯದಲ್ಲಿ ಬಳಕೆಯಾಯಿತು. ಶರಣರ ಸ್ವಾನುಭಾವ ಪ್ರಾಮಾಣಿಕತೆ, ಕ್ರಾಂತಿಕಾರಕ ವಿಚಾರದ ಕಾವು ಸಾಧಾರಣವಾದ ಮಾತುಗಳಿಗೆ ಅಪೂರ್ವವಾದ ಶಕ್ತಿಯನ್ನೂ ಓಜಸ್ಸನ್ನೂ ಕೊಟ್ಟವು. ಯಾವ ಭೇದವನ್ನೂ ಎಣಿಸದ ಉದ್ಧಾರಾಕಾಂಕ್ಷಿಗಳಾದ ಎಲ್ಲರಿಗೂ ಆತ್ಮವಿಕಾಸ ಸಾಧನೆಗೆ ಸಮಾನವಾದ ಅವಕಾಶವನ್ನು ಕೊಟ್ಟುದಲ್ಲದೆ ಸರ್ವರಿಗೂ ಸುಲಭವಾದ ಸಾಧನಾಕ್ರಮ, ಜೀವನ ವಿಧಾನಗಳನ್ನು ಮಾಡಿಟ್ಟು ತಾವೂ ಅದರಂತೆ ನಡೆದು ತೋರಿಸಿದರು. ಹಳೆಯ ನೂರಾರು ಮೂಢ ಸಂಪ್ರದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆದು ಖಂಡಿಸಿದರು.

ಎರಡು ಜಾಗತಿಕ ಸಮರಗಳು, ವಿಜ್ಞಾನದ ವಿಕೃತವಾದ ಬೆಳವಣಿಗೆ, ಯಂತ್ರಕೌಶಲದ ದೈತ್ಯಾಧಿಕಾರ, ಪರಸ್ಪರ ಅವಿಶ್ವಾಸ, ಶಂಕೆ—ಇವುಗಳಿಂದಾಗಿ ಆಧುನಿಕ ಜಗತ್ತು ಇಂದು ಸಂದಿಗ್ಧಸ್ಥಿತಿಯಲ್ಲಿ ತೊಳಲುತ್ತಿದೆ. ಬುದ್ಧಿಜೀವಿಗಳೂ ತಮ್ಮ ವೈಚಾರಿಕಮುಸುಕಿನ ವಿಷಯೋಪಭೋಗದ ಮತ್ತಿನಲ್ಲಿ ನಿತ್ಯಸತ್ಯವೂ ಸನಾತನವೂ ಕಲ್ಯಾಣಕಾರಕವೂ ಆದ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ತ್ರಿಶಂಕು ಸ್ಥಿತಿಯಲ್ಲಿ ಕತ್ತಲಲ್ಲಿ ತಡಕಾಡುತ್ತಿದ್ದಾರೆ. ಧರ್ಮ, ದೇವರು, ಭಕ್ತಿ, ಆಧ್ಯಾತ್ಮಿಕಸಾಧನೆ, ನೀತಿಮೌಲ್ಯಗಳು ಎಂದರೆ ಅರ್ಥವಿಲ್ಲದ ಗೊಡ್ಡುಸಂಪ್ರದಾಯಗಳು ಎಂಬ ಭಾವನೆ ಬೆಳೆದಿದೆ. ಜಾತಿ, ಧರ್ಮ ಎರಡೂ ಒಂದೇ ಎಂದೊ, ಜಾತಿ, ಧರ್ಮ ಒಂದೇ ನಾಣ್ಯದ ಎರಡು ಮುಖಗಳು ಎಂದೊ, ಜಾತಿ ಬಿಟ್ಟು ಧರ್ಮವೊಂದೇ ನಿಲ್ಲಲಾರದು ಎಂದೊ ಅನೇಕ ಬಗೆಯ ವಿಚಾರಗಳ ಗೊಂದಲವೇ ಉಂಟಾಗಿದೆ. ಇಂತಹ ಸನ್ನಿವೇಶದಲ್ಲಿ ಶರಣರ ವಿಚಾರಪೂರ್ಣವಾದ, ವಾಸ್ತವಿಕವಾದ, ಮಾನವತಾದೃಷ್ಟಿಯ ಧಾರ್ಮಿಕದೃಷ್ಟಿಯ ಅಗತ್ಯ ಎಂದಿಗಿಂತಲೂ ಹೆಚ್ಚಾಗಿದೆ.

ಪ್ರತಿಭಟನೆಯಿಂದಲೆ ಆರಂಭವಾದ ಶರಣರ ಮಹತ್ತರವಾದ ವಿಚಾರಕ್ರಾಂತಿ ಎರಡು ಪರಂಪರೆಗಳನ್ನು ನಿರಾಕರಿಸಿತು. ಒಂದು ಯಜ್ಞಯಾಗಾದಿ ಕರ್ಮ, ವರ್ಣಾಶ್ರಮಧರ್ಮಗಳಿಂದ ಕೂಡಿದ ವೈದಿಕಪರಂಪರೆ. ಕೇವಲ ಹುಟ್ಟಿನಿಂದ ಉತ್ತಮ, ನೀಚಕುಲಗಳೆಂದು ನಿರ್ಧರಿಸಿ ಬ್ರಾಹ್ಮಣಶ್ರೇಷ್ಠತೆಯನ್ನು ಸಾರುವ, ವೇದಶಾಸ್ತ್ರಪುರಾಣಗಳಲ್ಲಿ ಹೇಳಿದೆಯೆಂದು ಹಲವಾರು ಕುರುಡುನಂಬಿಕೆಗಳನ್ನೂ ಅಂಧಸಂಪ್ರದಾಯಗಳನ್ನೂ ಸೃಷ್ಟಿಸಿ, ಪೋಷಿಸಿ, ಪ್ರಚಾರ ಮಾಡುತ್ತ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವ ಪುರೋಹಿತಷಾಹಿಯ ಪರಂಪರೆ ಇದು. ಎರಡನೆಯದು ಅಂಧಶ್ರದ್ಧೆಯ, ಬಹುದೇವತೋಪಾಸನೆಯ ಮತ್ತು ಅದರಿಂದ ಜನಿಸಿದ ನೂರಾರು ಮೂಢ ಪದ್ಧತಿಗಳ ಸ್ಥಳೀಯ ಪ್ರಾದೇಶಿಕ ಪರಂಪರೆ. ಈ ಎರಡೂ ಪರಂಪರೆಗಳಲ್ಲಿ ಹಿಂಸಾಚಾರ, ಮೇಲು ಕೀಳೆಂಬ ಭಾವನೆ, ವೈಚಾರಿಕ ದೃಷ್ಟಿಮಾಂದ್ಯತೆ, ಭಾವಾವೇಶ ಒಂದಲ್ಲ ಒಂದು ರೀತಿಯಲ್ಲಿ ಇದ್ದುವು.

ಶರಣಧರ್ಮ ವರ್ಣವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸಿತು. ಹುಟ್ಟಿನಿಂದ, ವೃತ್ತಿಯಿಂದ ಉತ್ತಮ-ನೀಚ ಎಂದು ಜಾತಿ, ಕುಲಗಳನ್ನು ನಿರ್ಧರಿಸುವುದನ್ನು ವಿಚಾರಯುಕ್ತವಾಗಿ ಖಂಡಿಸಿದರು. ಶ್ರೇಷ್ಠ ಜಾತಿ ಎಂದು

ಹೇಳಿಕೊಳ್ಳುವವರಲ್ಲಿಯೂ ಎಷ್ಟೋ ಜನ ದುಷ್ಟರಿರುವುದೂ, ಹೀನ ಜಾತಿ ಎಂದು ಕಡೆಗಣಿಸಲ್ಪಟ್ಟವರಲ್ಲಿಯೂ ಎಷ್ಟೋ ಜನ ಸಜ್ಜನರು, ಮಹಾಮಹಿಮರು ಇರುವುದು ವಾಸ್ತವಲೋಕದಲ್ಲಿ ಎಲ್ಲರಿಗೂ ತಿಳಿದ ವಿಚಾರ. ಶ್ರೇಷ್ಠತೆ ಸದ್ಗುಣ-ಸದಾಚಾರಗಳ ಸಾಧನೆಯಿಂದ ಬರುವುದೇ ವಿನಹ ಹುಟ್ಟಿನಿಂದ, ವೃತ್ತಿಯಿಂದ ಅಲ್ಲ. ಪ್ರಾಮಾಣಿಕವಾದ ಎಲ್ಲ ವೃತ್ತಿಗಳೂ ಗೌರವದಲ್ಲಿ ಸಮಾನವೇ ಎಂದು ವೃತ್ತಿಗೌರವವನ್ನೂ. ಧರ್ಮವಂತರೂ ಗುಣವಂತರೂ ಆದ ಭಕ್ತರೆಲ್ಲರೂ ಸಮಾನರೇ ಎಂದು ವ್ಯಕ್ತಿಗೌರವವನ್ನೂ ಎತ್ತಿಹಿಡಿದರು,

> ಕುಲ ಎಷ್ಟು ಎಂದರೆ ಎರಡು ಕುಲ. ಅವಾವುವೆಂದರೆ
> ಭವಿ ಒಂದು ಕುಲ. ಭಕ್ತ ಒಂದು ಕುಲ

ಹೀಗೆ ಬೋಧಿಸಿದ್ದಷ್ಟೇ ಅಲ್ಲ ಬಸವಣ್ಣನವರೇ ಅದರಂತೆ ನಡೆದು ಎಲ್ಲ ಶರಣರಿಗೂ ಮೇಲ್ಪಂಕ್ತಿಯಾದರು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನು ಒಂದೇ ಎಂದು ನಂಬುವುದೆನ್ನ ಮನವು" ಎಂದು ಸಾರಿದರು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಂಬ ಅಹಂಭಾವ ಕಿಂಚಿತ್ತೂ ತಮ್ಮ ಮನಸ್ಸಿನಲ್ಲಿ ಸುಳಿದಾಗಲೊ ಅಥವಾ ಆ ಭಾವನೆ ಸುಳಿಯುವಂತೆ ಇತರರು ಇವರನ್ನು ಉತ್ತಮರೆಂದು ಗೌರವಿಸಿದಾಗಲೊ, ಸದಾಕಾಲವೂ ಬಹು ಎಚ್ಚರದಿಂದ ಆತ್ಮಪರೀಕ್ಷೆ ಮಾಡಿಕೊಳ್ಳುತ್ತಿದ್ದ ಬಸವಣ್ಣನವರು :

> ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ

ಎಂದು ತಮ್ಮ ಇಷ್ಟದೈವದಲ್ಲಿ ಮೊರೆಯಿಟ್ಟರು. "ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ" ಎಂದೂ ನುಡಿದು ಬ್ರಾಹ್ಮಣಿಕೆಯನ್ನು ಹಾಸ್ಯ ಮಾಡಿದರು.

ವೈದಿಕಪರಂಪರೆಯ ಸಂಕೇತವಾದ ದೇಗುಲ ಕಟ್ಟುವುದನ್ನೂ, ದೇಗುಲಕ್ಕೆ ಹೋಗಿ ಸ್ಥಾವರಮೂರ್ತಿಯ ಪೂಜೆ ಮಾಡುವುದನ್ನೂ ನಿಷೇಧಿಸಿದರು. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ", ದೇವಾಲಯವನ್ನು ಕಟ್ಟುವುದು ಉಳ್ಳವರ ಆಡಂಬರ, ಭಕ್ತನಿಗೆ ದೇಹವೇ ದೇವಾಲಯ ಆತ್ಮವೇ ಲಿಂಗ, ಕಲ್ಲುಮಣ್ಣಿನ ಸ್ಥಾವರ ದೇಗುಲಕ್ಕಿಂತ, ಚೈತನ್ಯದ ನಿವಾಸವಾದ ದೇಹವೆಂಬ ಜಂಗಮದೇಗುಲವೇ ಶ್ರೇಷ್ಠವಾದುದು ಎಂದು ಸಿರಿವಂತರ ಆಡಂಬರಕ್ಕೆ, ಅರ್ಚಕರ ಶೋಷಣೆಗೆ, ಈ ಎರಡನ್ನೂ ಪೋಷಿಸುವ ವೈದಿಕ ಪರಂಪರೆಗೆ ಸಿಡಿಮದ್ದನ್ನಿಟ್ಟರು. ತನ್ನ ಪರವಾಗಿ ಬೇರೆಯವರು ಪೂಜೆ ಮಾಡಬಹುದು ಎಂಬ ಮಾತೇ ಹಾಸ್ಯಾಸ್ಪದವಾದುದು. ಪೂಜೆ, ಭಕ್ತಿ ಅಂತಃಕರಣದಿಂದ ಹೊಮ್ಮಿ ನೇರವಾಗಿ ಭಗವಂತನಿಗೇ ಸೇರತಕ್ಕದ್ದು. ಅದರ ಆನಂದ ಕೇವಲ ಸ್ವಾನುಭವವೇದ್ಯವಾದುದು. ಇದರಲ್ಲಿ ಯಾರ ಮಧ್ಯಸ್ಥಿಕೆಯೂ ಬೇಕಿಲ್ಲ. ಗುರುವಾದರೂ ಕೇವಲ ಮಾರ್ಗದರ್ಶಕ. ಸಾಧನೆ-ಸಿದ್ಧಿ ಭಕ್ತನಿಗೇ ಸೇರಿದ್ದು. ಅರ್ಚನೆ, ಪೌರೋಹಿತ್ಯ ಪದ್ಧತಿ, ಜೋತಿಷ್ಯ, ರಾಹುಕಾಲ ಗುಳಿಕಕಾಲ ಎಂದು ಮುಹೂರ್ತಗಳನ್ನು ನೋಡುವುದು. ವ್ರತನೇಮಗಳನ್ನು, ಮಡಿ. ಮೈಲಿಗೆ, ಸೂತಕಗಳನ್ನು ಅರ್ಥಶೂನ್ಯವಾದರೂ ಯಾಂತ್ರಿಕವಾಗಿ ಆಚರಿಸುವುದು—ಈ ಮುಂತಾದ, ಅಜ್ಞಾನಿಜನರ ಶೋಷಣೆಗೆ ಸಾಧಕವಾದ, ಎಲ್ಲ ಪದ್ಧತಿಗಳನ್ನೂ ಭಕ್ತರಾದವರು ಬಿಟ್ಟುಬಿಡಬೇಕೆಂದು ಶರಣರು ಉಪದೇಶಿಸಿದರು. ಭಕ್ತರಲ್ಲಿ ತರ, ತಮ ಎಂದು ಪಂಗಡಗಳನ್ನು ಮಾಡಿಕೊಳ್ಳುವುದನ್ನೂ, ಸಹಭೋಜನ, ವಿವಾಹಾದಿಗಳನ್ನು ಮಾಡುವಾಗ ಮೇಲು ಕೀಳೆಂದು ಪರಿಗಣಿಸುವುದನ್ನೂ ಮಹಾಪರಾಧವೆಂದು ಕಟುವಾಗಿ ತಿಳಿಸಿದರು.

ಜಾತಿ, ಕುಲ. ಮೂಢಸಂಪ್ರದಾಯಗಳ ವಿರೋಧವಾಗಿ ದೊಡ್ಡ ಸಮರವನ್ನೇ ಹೂಡಿದ ವೀರಶೈವ ಸಮಾಜ ಕಾಲಾಂತರದಲ್ಲಿ ಮತ್ತೆ ಹತ್ತು ಹಲವು ಜಾತಿಗಳಲ್ಲಿ ತಾನೂ ಒಂದು ಜಾತಿಯಾದುದೂ, ತನ್ನೊಳಗೇ ಹಲವಾರು ಉಪ ಜಾತಿ, ಪಂಗಡಗಳನ್ನು ಮಾಡಿಕೊಂಡು ಶರಣರು ನಿಷೇಧಿಸಿದ್ದ ಎಲ್ಲ ವೈದಿಕಪದ್ಧತಿಗಳನ್ನು ಮತ್ತೆ ಅನುಸರಿಸತೊಡಗಿರುವುದೂ ಒಂದು ವಿಪರ್ಯಾಸ. ಜಾತಿ, ಮೇಲು, ಕೀಳು ಎಂಬ ಭಾವನೆ ಒಂದಲ್ಲ ಒಂದು ರೂಪದಲ್ಲಿ ಹುಟ್ಟಿಕೊಂಡು ಬೆಳೆಯುವುದು ಮನುಷ್ಯಸ್ವಭಾವದ ಸಹಜ ದೌರ್ಬಲ್ಯವೊ ಏನೊ. ಈ ದೌರ್ಬಲ್ಯದೆದುರು ವಿಚಾರ ಕುರುಡಾಗಿ ಬಿಡುವಂತೆ ಕಾಣುತ್ತೆ. ಶರಣರು ಈ ಜಾತಿ ಭೂತವನ್ನು ಬಿಡಿಸುವ ಯತ್ನದಲ್ಲಿ ಶರಣರ ಬಲಿದಾನದ ಮಹತ್ತರ ಬೆಲೆಯನ್ನೇ ತೆರಬೇಕಾಯಿತು.

ಭಕ್ತ-ಭವಿ ಎಂದು ಎರಡೇ ಕುಲಗಳು ಎಂದಾಗ ವಿಚಾರವಂತರಾದ ಆಧುನಿಕರು ಈ ಮಾತುಗಳ ಸರಿಯಾದ ಅರ್ಥವನ್ನು ಗ್ರಹಿಸಿದರೆ ಈ ವಿಭಜನೆ ಒಪ್ಪಿಗೆಯಾದೀತು. ಲಿಂಗದೀಕ್ಷೆಯನ್ನು ಪಡೆದವರು ಮಾತ್ರ ಭಕ್ತರು, ಪಡೆಯದವರೆಲ್ಲಭವಿಗಳು ಎಂದು ಶರಣರು ಅಂದಿನ ಸಂದರ್ಭಕ್ಕನುಗುಣವಾಗಿ ಹೇಳಬೇಕಾಯಿತು. ಗುಣಕ್ಕೆ, ಅಂತರಂಗ

ಶುದ್ಧಿಗೆ, ನಿಜಭಕ್ತಿಗೆ ಪ್ರಾಧಾನ್ಯವಿತ್ತ ವಿಚಾರವಾದಿಗಳಾದ ಶರಣರು ಸಂಕುಚಿತದೃಷ್ಟಿಯಿಂದ ಈ ಮಾತನ್ನು ಹೇಳಲಿಲ್ಲ. ಲಿಂಗ, ಲಿಂಗಸಂಗಿ ಎಂಬ ಮಾತುಗಳನ್ನು ಅಲ್ಲಮಪ್ರಭು ವಿವರಿಸುವಾಗ ಕೊಡುವ ವಿಶಾಲವಾದ ಅರ್ಥವನ್ನು ಗಮನಿಸಬೇಕು.

ದೇವರು, ಧರ್ಮ, ನೀತಿ ಇವುಗಳಲ್ಲಿ ನಂಬಿಕೆ, ಶ್ರದ್ಧೆ ಇರುವವರೇ ಭಕ್ತರು. ಹಾಗಿಲ್ಲದೆ ಕೇವಲ ಇಂದ್ರಿಯಾನುಭವವಷ್ಟೇ ಸತ್ಯವಾದುದು, ಪ್ರಾಪಂಚಿಕಭೋಗವೇ ಜೀವನದ ಪರಮಗುರಿ ಎಂದು ತಿಳಿದಿರುವವರೇ ಭವಿಗಳು. ಲಿಂಗದೀಕ್ಷೆ ಎಂದರೆ ಸದಾಚಾರ ಸದ್ಭಕ್ತಿಗಳಿಂದ ಭಗವಂತನ ಕೃಪೆಯನ್ನು ಪಡೆದು ಪರಬ್ರಹ್ಮದಲ್ಲಿ ಸಮರಸವಾಗುವ ಸಾಧನೆಯ ದೀಕ್ಷೆ. ಹೀಗೆ ಪಾರಮಾರ್ಥಿಕಸಾಧನಾದೀಕ್ಷೆಯನ್ನು ಪಡೆಯದವನೇ ಭವಿ. ಅಂತರಂಗಬಹಿರಂಗಶುದ್ಧರಾಗಿ ಸದಾಚಾರ ಸದ್ಭಕ್ತಿಗಳಿಂದ ಸಾಧನೆ ಮಾಡಿ ಸಕಲ ಜೀವಾತ್ಮರಿಗೂ ಲೇಸನೇ ಬಯಸುವ ಶರಣರ ಪಥದಲ್ಲಿ ನಡೆಯದವರು ಲಿಂಗಧಾರಿಗಳಾದರೂ ಭವಿಯೇ. ಹೀಗೆ ನಡೆಯುವವರು ಯಾವುದೇ ಧರ್ಮದವರಾದರೂ ಲಿಂಗಧಾರಿಗಳಾಗಿಲ್ಲದಿದ್ದರೂ ಭಕ್ತರೇ. ತಾವು ಇಷ್ಟಪಟ್ಟು ಆರಿಸಿದ ಧರ್ಮದಲ್ಲಿ ನಿಷ್ಠರಾಗಿದ್ದರೆ ಸಾಕು.

ದೇವನೊಬ್ಬ ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ

ಧರ್ಮ, ಆಧ್ಯಾತ್ಮಿಕಸಾಧನೆ ಉತ್ತಮರೆಂದು ಕರೆದುಕೊಳ್ಳುವ ಕೆಲವೇ ಜಾತಿಗಳವರ ಗುತ್ತಿಗೆಯಾಗಿದ್ದುದನ್ನು ತಪ್ಪಿಸಿ ಹಿಂದುಳಿದ ಜಾತಿಯವರಾದರೂ ನಿರ್ಮಲಾಂತಃಕರಣವುಳ್ಳ ಎಲ್ಲರಿಗೂ ಆತ್ಮವಿಕಾಸದ ಸಮಾನ ಅವಕಾಶವನ್ನು ಕಲ್ಪಿಸುವುದು ಶರಣರ ದೊಡ್ಡ ಧ್ಯೇಯವಾಗಿತ್ತು. ಹಿಂದುಳಿದವರಲ್ಲಿ ಆಳವಾಗಿ ಬೇರೂರಿದ್ದ 'ತಾವು ಕೀಳು ಜಾತಿಯವರು, ತಮ್ಮ ವೃತ್ತಿ ಹೀನವಾದುದು, ಇದು ದೈವನಿಯಾಮಕವಾದ ವ್ಯವಸ್ಥೆ' ಎಂಬ ತಪ್ಪುಭಾವನೆಯನ್ನು ತೆಗೆದುಹಾಕಿ ಉತ್ತಮಿಕೆಗೆ ಬೇಕಾದ ಸದ್ಭಕ್ತಿ, ಸಜ್ಜನಿಕೆ, ಶಿಷ್ಟಾಚಾರಗಳನ್ನು ಪಡೆಯಲು ಅಮಿತವಾದ ಆತ್ಮವಿಶ್ವಾಸವನ್ನೂ ತಿಳುವಳಿಕೆಯನ್ನೂ ತುಂಬಬೇಕಿತ್ತು. ಅವರಲ್ಲಿ ರೂಢಮೂಲವಾಗಿದ್ದ ಅಂಧಶ್ರದ್ಧೆ–ಮೂಢನಂಬಿಕೆಗಳನ್ನು ತೊಡೆದುಹಾಕಬೇಕಾಗಿತ್ತು. ಮೊದಲು ಬಹುದೇವತೋಪಾಸನೆಯನ್ನೂ, ಭೂತ, ಮಾರಿ, ಮಸಣಿಯರೆಂಬ ನೂರಾರು ಕ್ಷುದ್ರದೇವತೆಗಳ ತಾಮಸಪೂಜೆಯನ್ನೂ ಅಲ್ಲಗಳೆದರು.

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲುದೈವ, ಹಣಿಗೆ ದೈವ
ಬಿಲ್ಲನಾರಿ ದೈವ ಕಾಣಿರೊ! ಕೊಳಗ ದೈವ, ಗಿಣ್ಣಿಲು ದೈವ ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ. ದೈವನೊಬ್ಬನೇ ಕೂಡಲಸಂಗಮದೇವ

ಕುರುಡು ನಂಬಿಕೆ ಭಕ್ತಿ ಆಗಲಾರದು. ಭಕ್ತಿ ಪ್ರೀತಿ–ತಿಳುವಳಿಕೆ–ಶ್ರದ್ಧೆಗಳಿಂದಾಗಬೇಕು. ಅಂತರಂಗದ ವಿಕಾಸಕ್ಕೆ ಸಾಧನವಾಗಿರಬೇಕು. ಅರಿವಿನಾಳದಿಂದ ಉಕ್ಕದ ಭಕ್ತಿ ಕೇವಲ ಭಯದಲ್ಲಿ, ನೂರಾರು ದೇವರುಗಳ ಕಲ್ಪನೆಯಲ್ಲಿ, ಆ ದೇವರು ಹೆಚ್ಚು ಈ ದೇವರು ಹೆಚ್ಚು ಎಂದು ಭ್ರಾಂತಿಸುವ ಚಂಚಲತೆಯಲ್ಲಿ, ಬಾಹ್ಯಾಚರಣೆಗಳ ಆಡಂಬರಕ್ಕೆ ಮಾರುಹೋಗುವುದರಲ್ಲಿ ಪರ್ಯವಸಾನವಾಗುತ್ತದೆ. ಇಂತಹ ಭಕ್ತಿಭ್ರಮಿತರು ನಿಜದ ನಿಲುವನ್ನು ತಿಳಿಯದೆ ಹೋಗುತ್ತಾರೆ:

ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವನೆಂತು ಸರಿ
ಎಂಬೆನಯ್ಯ? ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯ?
ಅಂಜಿಕೊಂಡರೆ ಹೂಳುವ ದೈವವನೆಂತು ಸರಿ ಎಂಬೆನಯ್ಯ?
ಸಹಜಭಾವನಿಜೈಕ್ಯಸ್ಥಿರರೂಪನಿರ್ವಿಕಾರನಿರಂಜನಕೂಡಲಸಂಗಮದೇವನೊರ್ವನೇ
ದೇವ ಕಾಣಿರೋ

ಎಂದು ಬಸವಣ್ಣನವರು ತಿಳುವಳಿಕೆಯಿತ್ತರು.

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ!
ಉಂಬ ಜಂಗಮ ಬಂದರೆ ನಡೆಯೆಂಬರು, ಉಣ್ಣದ ಲಿಂಗಕ್ಕೆ
ಬೋನವ ಹಿಡಿಯೆಂಬರು

ಎಂಬ ವಚನ, ಪೂಜೆ ಮತ್ತು ಅಂತರಂಗದ ಭಾವ ಒಂದಾಗಿಲ್ಲದವರ ಭಕ್ತಿ ವ್ಯರ್ಥವಾದುದೆಂದೂ ಸ್ಥಾವರ ಪೂಜೆಗಿಂತ ಜಂಗಮಸೇವೆ ಸಾರ್ಥಕವಾದುದೆಂದೂ ತಿಳಿಸುತ್ತದೆ.

ದೇವರಿಗೆ ಇಂತಹ ನೈವೇದ್ಯವೇ ಆಗಬೇಕು, ಇಂತಹ ನೇಮವೇ ಆಗಬೇಕು ಮೈಮೇಲೆ ದೇವರು ಬಂದು ಕುರಿ, ಕೋಣ, ಕೋಳಿಗಳ ಬಲಿಯನ್ನು ಕೇಳಿತು, ಹರಕೆ ಸಲ್ಲಿಸುತ್ತೇನೆಂದರೆ ದೇವರು ಕೃಪೆ ಮಾಡುತ್ತಾನೆ—ಮುಂತಾಗಿ ಹೇಳುತ್ತ ಹಾಗೆ ಬಲಿ, ಹರಕೆಗಳನ್ನು ಸಲ್ಲಿಸುವ ಗಾವಿಲರನ್ನು ಕಂಡು ಬಸವಣ್ಣನವರು 'ಲೋಗರ ಬೇಡಿ ಕೊಂಡು ಉಂಬುವ ದೈವಂಗಳು ಕೆಲವು ತಾವೇನ ಕೊಡುವುವೊ ?' ಎಂದು ಕೇಳಿದರು. ಶರಣರು ಅಂಧಶ್ರದ್ಧೆಯನ್ನೆಂದೂ ಒಪ್ಪಿದವರಲ್ಲ. ಧರ್ಮದ ಹೆಸರಿನಲ್ಲಿ ಭಾವುಕರನ್ನು ಮೋಸ ಮಾಡುವ ಕಪಟಗುರುಗಳೂ ಇರುತ್ತಾರೆ. ಅವರನ್ನು ನಂಬಿಬಿಡುವುದೂ ನಿಜವಾದ ಗುರುವನ್ನು ಸಂದೇಹಿಸುವುದೂ ಎರಡೂ ಅವಿಚಾರದ ಲಕ್ಷಣ.

> ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿಯಲ್ಲದೆ ನಿಶ್ಚಯವನರಿಯಬಾರದು
> ಗುರುವಾದಡೂ ಲಿಂಗವಾದಡೂ ಜಂಗಮವಾದಡೂ ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ
> ತೂತುಕಂಬದಲ್ಲಿಯ ನೀರು. ಸೂತ್ರದ ಬೊಂಬೆ. ನಿಜನೇತ್ರ ತಪ್ಪಿದ ದೃಷ್ಟಿ

> ಭಕ್ತಿಯುಳ್ಳವ ಭಕ್ತಿಯ ಮಾಡುವಲ್ಲಿ ಗುರುವಿನಲ್ಲಿ ಗುಣವನರಸಬೇಕು
> ಲಿಂಗದಲ್ಲಿ ಲಕ್ಷಣವನರಸಬೇಕು. ಜಂಗಮದಲ್ಲಿ ವಿರಕ್ತಿಯನರಸಬೇಕು

ಎನ್ನುತ್ತಾರೆ ಶರಣರು.

ವಿಚಾರಿಸಿ ನೋಡಿದರೆ ಜಾತಿ ಬೇರೆ, ಧರ್ಮ ಬೇರೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಧರ್ಮ ಎಂಬುದು ಎಲ್ಲಕ್ಕೂ ಆಧಾರವಾದ ನೆಲ ಇದ್ದಂತೆ. ಜಾತಿಮತಗಳು .ಕಾಲ-ದೇಶಗಳ ಅಗತ್ಯಕ್ಕೆ ಅನುಕೂಲವಾಗಿ ಕಟ್ಟಿಕೊಂಡ ಮನೆಗಳಿದ್ದ ಹಾಗೆ. ಜಾತಿ ಸಂಕುಚಿತದೃಷ್ಟಿಯದು. ಶರಣರು ಇದನ್ನು ತಿರಸ್ಕರಿಸಿ ವಿಶ್ವವಿಶಾಲವಾದ ಧಾರ್ಮಿಕ ದೃಷ್ಟಿಯನ್ನು ಎತ್ತಿಹಿಡಿದರು. ಎಷ್ಟು ಮತಗಳೋ ಅಷ್ಟೂ ಭಗವತ್ಕೃಪೆಯನ್ನು ಪಡೆಯಲು ಇರುವ ಪಥಗಳು ಎಂದ ಶ್ರೀರಾಮಕೃಷ್ಣ ಪರಮಹಂಸರ ಅರ್ಥದಲ್ಲಿ ಮತವನ್ನು ಶರಣರು ಒಪ್ಪಿಕೊಂಡರು.

ಶರಣರಿಗೆ ಧಾರ್ಮಿಕತೆ ಎಂದರೆ ನಿಯಮಿತ ವೇಳೆಯಲ್ಲಿ ಮಾಡುವ ಪೂಜೆ ಪ್ರಾರ್ಥನೆಗಳೋ, ಸ್ವರ್ಗಪ್ರಾಪ್ತಿಗಾಗಿ ಮಾಡುವ ಪುಣ್ಯಕಾರ್ಯಗಳೋ,ಸಂಸಾರಕ್ಲೇಶಗಳಿಂದ ಮುಕ್ತರಾಗಲು ಕೈಕೊಳ್ಳುವ ವೈರಾಗ್ಯಸಾಧನೆಗಳೋ ಮಾತ್ರವಲ್ಲ. ಜೀವನದಲ್ಲಿ ಧಾರ್ಮಿಕತೆಯನ್ನೊಳಗೊಳ್ಳದ ಕ್ರಿಯೆ ಒಂದೂ ಇಲ್ಲ ; ಧಾರ್ಮಿಕತೆಯಿಲ್ಲದ ಜೀವನ ಸಾರ್ಥಕವಾದ ಬದುಕೇ ಅಲ್ಲ. ಧರ್ಮ ಎಂಬುದು ಪಾರಮಾರ್ಥಿಕಕ್ಕೊಂದು, ಲೌಕಿಕಕ್ಕೆ ಮತ್ತೊಂದು ಎಂದು ಎರಡಿಲ್ಲ. ಇರುವುದೊಂದೇ ಧರ್ಮ. ದೈವಭಕ್ತಿ, ಸದಾಚಾರ, ಮಾನವತೆ. ಮಂಗಲಾಕಾಂಕ್ಷೆ ಅದರ ಲಕ್ಷಣಗಳು. ಹೀಗೆಂದು ತಿಳಿದ ಶರಣರು ಅದಕ್ಕನುಗುಣವಾದ ಜೀವನವನ್ನು ನಡೆದು ತೋರಿಸಿದರು. ಜೀವನದಲ್ಲಿ ಮಾಡುವ ಪ್ರತಿಯೊಂದು ಕಾರ್ಯವೂ ಪವಿತ್ರವಾದ ಪೂಜೆ. ಅದನ್ನು ಶ್ರದ್ಧೆಯಿಂದ, ಭಗವಂತ ಮೆಚ್ಚುವ ಹಾಗೆ, ಒಲಿದು ಪ್ರಸನ್ನನಾಗುವ ಹಾಗೆ ಮಾಡುತ್ತೇನೆ ಎಂಬ ಧಾರ್ಮಿಕದೃಷ್ಟಿ ಶರಣರದು, ಸರ್ವರೂ ಅನುಸರಿಸಬೇಕಾದುದು. ಈ ದೃಷ್ಟಿಯುಳ್ಳವರಿಗೆ ಅಂತ್ಯಜ. ಹಾರುವ ಎಂಬ ಭೇದ ಕಾಣದೆ ಶಿವಭಕ್ತರೆಲ್ಲ ಒಂದೇ ಎಂಬ ಸದ್ಭಾವನೆ ಉಂಟಾಗುತ್ತದೆ. ಶಿವ ಎಂದರೆ ಒಂದು ಮತದವರ ಪರಮದೈವದ ನಾಮ-ರೂಪವಿರುವ ಮೂರ್ತಿಯಲ್ಲ. ಲೋಕದ–ವಿಶ್ವದ–ಪರಿಪೂರ್ಣವಾದ ಹಿತ. ಇಡೀ ವಿಶ್ವವನ್ನೇ ಸಂರಕ್ಷಿಸುತ್ತಿರುವ ಚೈತನ್ಯ ಅದು. ಸಗುಣವಾಗಿ—ಪರಮಶಿವ, ಪರಮಸತ್ಯ, ಪರಮಸುಂದರ, ಪರಮ ಆನಂದ ಎಂಬುದೂ: ನಿರ್ಗುಣವಾಗಿ–ಪರಬ್ರಹ್ಮ, ಪರಶಿವ, ಪರಾತ್ಪರವಸ್ತು ಎಂಬುದೂ ಅದೇ. ಇಂತಹ 'ಶಿವ' ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡು ಅದರಲ್ಲೇ ಒಂದಾಗುವ ಗುರಿ ಉಳ್ಳವನೇ ಭಕ್ತ. ಶಿವನೆಡೆಗೆ ಒಯ್ಯುವ ಪಥವನ್ನು ಎಂತಹ ಸಂದರ್ಭದಲ್ಲೂ ಬಿಡದಿರುವ ವೀರನಿಷ್ಠೆಯುಳ್ಳ ಭಕ್ತನೇ ವೀರಶೈವ.

ವೀರಶೈವದ ಪ್ರಕಾರ ದೇವರು ನಿರ್ಗುಣ ನಿರಾಕಾರನೂ ಹೌದು, ಸಗುಣಸಾಕಾರನೂ ಹೌದು. ಸೃಷ್ಟಿಯ ಸರ್ವಚೈತನ್ಯವೇ ಅವನು. ಅದರೊಳಗೆ ಸರ್ವವ್ಯಾಪಿ. ಅದನ್ನು ಮೀರಿ ಸರ್ವಸ್ವತಂತ್ರ ನಿರಂಜನ. ಎಲ್ಲಕ್ಕೂ ಮೂಲ. ಎಲ್ಲಕ್ಕೂ ಧ್ರುವ. ನಿತ್ಯ. ಆದ್ಯಂತರಹಿತ. ವಾಙ್ಮನಕ್ಕಗೋಚರ. 'ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೆ ಬೆಳಗುತಿದ್ದೆಯಲ್ಲಾ' ಎಂದು ಅಲ್ಲಮಪ್ರಭು ಉದ್ಗರಿಸುತ್ತಾನೆ. ಲೀಲೆಗಾಗಿ ಏಕ ಅನೇಕವಾಯಿತು. ಸೃಷ್ಟಿಯಾಯಿತು. ಆನಂದಸ್ವರೂಪ' ಪ್ರೇಮಸ್ವರೂಪವಾಯಿತು. ಭಕ್ತರ ಸಂತೋಷಕ್ಕಾಗಿ ನಾಮ, ರೂಪಗಳನ್ನು ಧರಿಸಿ ಸೇವೆಯನ್ನು ಸ್ವೀಕರಿಸತೊಡಗಿತು :

ಆಡಬಾರದ ಬಯಲು, ನೋಡಬಾರದ ಬಯಲು
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತಬಲ್ಲರೈ ರಾಮನಾಥ

ಇದು ವಾಙ್ಮನಕ್ಕಗೋಚರವಾದುದು.

ಕಣ್ಗೆ ಕಾಂಬಡೆ ರೂಪಲ್ಲ, ಕೈಗೆ ನಿಲುಕುವಡೆ ದೇಹಿಯಲ್ಲ,
ನಡೆದಡೆ ಗಮನಿಯಲ್ಲ, ನುಡಿದಡೆ ವಾಚಾಳನಲ್ಲ
ನಿಂದಿಸಿದವಗೆ ಹಗೆಯಲ್ಲ, ಹೊಗಳಿದವರಿಗೆ ಕೆಳೆಯಲ್ಲ
ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕುವುದೇ,
ಸಿದ್ಧರಾಮಯ್ಯ, ನೀನು ಮರುಳಾದೆಯಲ್ಲ !

ಇಂತಹ 'ನಿತ್ಯನಿರಂಜನ ಜ್ಯೋತಿರ್ಲಿಂಗ' ವಿಶ್ವರೂಪಿ, ವಿಶ್ವವ್ಯಾಪಿಯಾದರೂ ಭಕ್ತರ ಕರಸ್ಥಳದಲ್ಲಿ ಕಿರಿಯ ಲಿಂಗ ರೂಪವಾಗಿ ಚುಳುಕಾಗಿ ಕೂತಿರುವುದು ಅವನ ಅಪಾರ ಕರುಣೆಗೆ, ಭಕ್ತಪರಾಧೀನನೆಂಬ ಬಿರುದಿಗೆ ಸಾಕ್ಷಿ. ಇದರಲ್ಲಿ ಭಕ್ತಿಯ ಕಾಂತಾಕರ್ಷಣೆಯ ಪಾತ್ರವೂ ಇದೆ.

ಬಯಲ ರೂಪಮಾಡಬಲ್ಲಾತನೆ ಶರಣನು
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭವಿ

ಭಕ್ತಿಪ್ರಿಯನಾದ ದೇವರು ತನಗಿಂತ ತನ್ನ ಭಕ್ತರು ದೊಡ್ಡವರೆಂದು ತೋರಿಸುವ ಹಾಗೆ ಸದಾ ಅವರ 'ಮನದ ಕೊನೆಯ ಮೊನೆಯ ಮೇಲಡಗಿ ಕೂತಿರುವನು.'

ಉಪನಿಷತ್ಕಾರರಾದ ಮಹರ್ಷಿಗಳು ಪಡೆದ ದರ್ಶನ ಅನುಭವಗಳಿಗೆ ಸದೃಶವಾಗಿದೆ, ಈ ವಚನಗಳಲ್ಲಿ ವ್ಯಕ್ತವಾಗಿರುವ ಶರಣರ ಅನುಭವ. ಅದೇ ಸ್ವತಂತ್ರ ವಿಚಾರಶೀಲತೆ, ಅದೇ ಸತ್ಯಾನ್ವೇಷಣೆ ಹಾಗೂ ಸತ್ಯನಿಷ್ಠೆ, ಅದೇ ಸ್ವಾನುಭವಪ್ರಾಧಾನ್ಯ !

ಜೀವನದ ಪರಮಗುರಿ–ಸತ್ಯಸಾಕ್ಷಾತ್ಕಾರದ ಸಾಧನೆಗೆ ಶರಣರು ಷಟ್ಸ್ಥಲಮಾರ್ಗವನ್ನು ಹಾಕಿಕೊಟ್ಟರು. ಇದೊಂದು ಅಪೂರ್ವವಾದ ಕೊಡುಗೆ. ಸರಳವೂ ಸುಲಭವೇದ್ಯವೂ ಆದರೂ ಸಾಧಕನಲ್ಲಿ ನಿಶ್ಚಲವಾದ ಶ್ರದ್ಧೆ, ನಿರ್ಮಲವಾದ ಮನಸ್ಸು, ನಿರಂತರವಾದ ತಪಸ್ಸು, ಸದಾ ತೆರೆದಿರುವ ಎಚ್ಚರದ ಕಣ್ಣು ಇರುವುದು ಅಗತ್ಯ ಎಂಬ ಅಂಶ ಸುಲಭಸಾಧ್ಯವಲ್ಲ. ಮನೋವಿಕಾಸದ ಹಂತಗಳಿಗನುಗುಣವಾಗಿ ಇಲ್ಲಿ ಆರು ಮೆಟ್ಟಿಲುಗಳಿವೆ. ಮೊದಲ ಮೂರು ಮೆಟ್ಟಿಲು : ಭಕ್ತ, ಮಹೇಶ್ವರ, ಪ್ರಸಾದಿಸ್ಥಲಗಳು ಕರ್ಮ ಮತ್ತು ಭಕ್ತಿಪ್ರಧಾನವಾದವು. ನಾಲ್ಕು ಐದನೆಯ ಪ್ರಾಣಲಿಂಗಿ ಮತ್ತು ಶರಣ ಸ್ಥಲಗಳು ಜ್ಞಾನಪ್ರಧಾನವಾದವುಗಳು. ಭಕ್ತಿಯಲ್ಲಿ ಬಸವಣ್ಣ, ಅಕ್ಕಮಹಾದೇವಿ : ಜ್ಞಾನದಲ್ಲಿ ಚೆನ್ನಬಸವಣ್ಣ ; ಕರ್ಮಯೋಗದಲ್ಲಿ ಸಿದ್ಧರಾಮೇಶ್ವರ ; ವೈರಾಗ್ಯದಲ್ಲಿ ಅಲ್ಲಮಪ್ರಭು ಆದರ್ಶಪ್ರಾಯರಾಗಿದ್ದರು ಎಂದು ಹೇಳಿದರೂ ಅವರು ಪ್ರತಿಯೊಬ್ಬರೂ ಈ ನಾಲ್ಕೂ ಮಾರ್ಗಗಳ ಸಮನ್ವಯವನ್ನು ಸಾಧಿಸಿದವರೇ ಆಗಿದ್ದರು. ಹೀಗೆಯೇ ಷಟ್ಸ್ಥಲದ ಪ್ರತಿಯೊಂದು ಮೆಟ್ಟಿಲಲ್ಲೂ ಮತ್ತು ಎಲ್ಲ ಸ್ಥಲಗಳಲ್ಲೂ ಕರ್ಮ ಭಕ್ತಿ ಜ್ಞಾನ ವೈರಾಗ್ಯಗಳ ಸಮನ್ವಯವಿರಬೇಕೆಂಬುದನ್ನೇ ಶರಣರು ಬೋಧಿಸಿದರು. ಶರಣರ ಧರ್ಮದಲ್ಲಿ ಸಮನ್ವಯ ಒಂದು ಮುಖ್ಯ ಗುಣ. ದ್ವೈತ-ಅದ್ವೈತ-ವಿಶಿಷ್ಟಾದ್ವೈತಗಳ ಸಮನ್ವಯ; ಪ್ರವೃತ್ತಿ-ನಿವೃತ್ತಿಮಾರ್ಗಗಳ ಸಮನ್ವಯ; ಇಹ-ಪರಗಳ ಸಮನ್ವಯ. ಇನ್ನು ಆರನೆಯದಾದ ಐಕ್ಯಸ್ಥಲ ಒಂದು ಮೆಟ್ಟಿಲಲ್ಲ, ಪರಮಸ್ಥಿತಿ. ಮಾತಿಗೆ ಮೀರಿದುದು. ಕೇವಲ ಸ್ವಾನುಭವವೇದ್ಯವಾದುದು. ಸಾಧಕನ ಚೇತನ ಆ ಸ್ಥಿತಿಯನ್ನು ತಲುಪಿದ ಕೂಡಲೇ ಪರಮ ಆನಂದಾನುಭೂತಿಯಾಗಿ ಮಹಾ ಬೆಳಗಿನಂತೆ ಕಾಣುವ ಮಹಾಲಿಂಗದೊಡನೆ ಸೇರಿ ಎರಡಿಲ್ಲದ ಸಾಮರಸ್ಯವನ್ನನುಭವಿಸುತ್ತದೆ. ಅದೆಂತಹ ಅನುಭವ ಎಂದು ಹೇಳುವವರಾರು ? ಮುಂಚೆಯೇ ಹೇಳಲು ಅನುಭವವೇ ಆಗಿರುವುದಿಲ್ಲ. ಅನುಭವವಾದ ಬಳಿಕ ಹೇಳಬಹುದೆಂದರೆ ಹೇಳುವ ಸ್ಥಿತಿಯಲ್ಲೇ ಇರುವುದಿಲ್ಲ.

ಅರಿವು ಉಳಿದಿರುವವರೆಗಿನ ಅನುಭವವನ್ನು ಬಸವಣ್ಣನವರು :

ಜೇನ ಮಳೆಗಳು ಕರೆದವು
ಅಮೃತದ ಕಳೆಗಳು ಸುರಿದವು
ಕೂಡಲಸಂಗಮದೇವನೆಂಬ ಸಾಗರದೊಳೋಲಾಡುತಿರ್ದೆನಯ್ಯಾ !

ಎಂದೂ, ಕಟ್ಟಕಡೆಯ ಅರಿವಿನ ಸ್ಥಿತಿಯ ಮಾತಾಗಿ, ಲಿಂಗ ಸೋಂಕಿದ ಆ ಸುಖದಲ್ಲಿ ತನ್ನರಿವು, ಜಗದರಿವು ಕಡೆಗೆ ಲಿಂಗದರಿವೂ ಲಯವಾಗಿ :

ಅಂಬುಧಿಯೊಳಗೆ ಬಿದ್ದ ಆಲಿಕಲ್ಲಂತೆ
ಭಿನ್ನಭಾವವರಿಯದೆ ಶಿವಶಿವಾ ಎನುತಿರ್ದೆನು ನಾನು

ಎಂದೂ ಹೇಳಿದ್ದಾರೆ.

ಷಟ್ಸ್ಥಲಮಾರ್ಗವನ್ನನುಸರಿಸುವ ಸಾಧಕನಿಗೆ ಮೊಟ್ಟಮೊದಲು ಬೇಕಾದುದು ಶಿವದೀಕ್ಷೆ. ಅನನ್ಯ ಭಕ್ತಿಯಿಂದ ಇಷ್ಟಲಿಂಗದ ಪೂಜೆಯಲ್ಲಿ ತೊಡಗುವ ಭಕ್ತನಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಎಂಬ ಅಷ್ಟಾವರಣಗಳು ರಕ್ಷಾಕವಚವಾಗಿಯೂ, ಸಹಾಯಕವಾಗಿಯೂ ಇರುತ್ತವೆ. ಅಲ್ಲದೆ ಪ್ರತಿಯೊಬ್ಬ ಶಿವಭಕ್ತನೂ ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರ ಎಂಬ ಪಂಚಾಚಾರಗಳ ಶೀಲಸಂಹಿತೆಯನ್ನು ಪರಿಪಾಲಿಸಬೇಕು.

ಗುರು ಅನುಗ್ರಹಿಸಿಕೊಟ್ಟ ಇಷ್ಟಲಿಂಗವನ್ನು ಬಿಟ್ಟು ಬೇರೆ ಯಾವ ಸ್ಥಾವರಲಿಂಗವನ್ನಾಗಲೀ, ವಿಗ್ರಹವನ್ನಾಗಲೀ ಪೂಜೆ ಮಾಡಬಾರದು. ದೇಗುಲಗಳಿಗೆ ಹೋಗಬಾರದು. ಇದು ಲಿಂಗಾಚಾರ.

ಲಿಂಗಧಾರಿಗಳಾದ ಭಕ್ತರನ್ನೆಲ್ಲ ಸೋದರಪ್ರೇಮದಿಂದ ಸಮಾನವಾಗಿ ಕಾಣಬೇಕು. ಊಟ ಉಪಚಾರಗಳಲ್ಲಿ ವೈವಾಹಿಕ ಕೊಳ್ಳೊಡೆಗಳಲ್ಲಿ ವೃತ್ತಿ, ಪಂಗಡ, ಸಿರಿವಂತ, ಬಡವ ಎಂಬ ಭೇದವೆಣಿಸಬಾರದು. ಮುಖ್ಯವಾಗಿ ನಡೆ-ನುಡಿ ಒಂದಾಗಿರಬೇಕು. ಇದು ಶಿವಾಚಾರ.

ಸ್ವತಂತ್ರವಾಗಿ ಜೀವನ ನಡೆಸುವುದಕ್ಕೂ, ದಾಸೋಹ ಮಾಡುವುದಕ್ಕೂ ಪ್ರತಿಯೊಬ್ಬರೂ ಕಾಯಕವನ್ನು ಮಾಡಬೇಕು. ಯಾವ ವೃತ್ತಿಯೂ ಕೀಳಲ್ಲ. ಯಾರೂ ಸೋಮಾರಿಯಾಗಿ ಕಾಲ ಕಳೆಯಕೂಡದು. ಇದು ಸದಾಚಾರ.

ಶರಣರು ಕಾಯಕದ ಮಹತ್ವವನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಕಾಯಕ ಎಂಬ ಮಾತು ವಿಶೇಷವಾದ ಅರ್ಥದಿಂದ ಗರ್ಭಿತವಾದುದು. ವೀರಶೈವಪರಿಭಾಷೆಯ ಒಂದು ಪದವೇ ಆಗಿದೆ. ಅದರಲ್ಲಿ ದೇಹಶ್ರಮ, ತ್ರಿಕರಣಶುದ್ಧಿ, ಧಾರ್ಮಿಕಬುದ್ಧಿ, ವೃತ್ತಿಗೌರವ, ದೈವಭಕ್ತಿ, ತ್ಯಾಗ, ಸೇವೆ, ಸಮತಾವಾದ ಎಲ್ಲ ಅಡಗಿವೆ. ಇದೂ ಭಗವಂತನ ಪೂಜೆ ಎಂಬಷ್ಟು ಶ್ರದ್ಧಾಭಕ್ತಿಗಳಿಂದ ಪ್ರಾಮಾಣಿಕವಾಗಿ ದುಡಿದು ಕೈಕೊಂಡ ವೃತ್ತಿಯನ್ನು ನಡೆಸುವುದೇ ಕಾಯಕ. ಅದು ಪರಮಪವಿತ್ರವಾದುದು. ಗುರುಲಿಂಗಜಂಗಮಕ್ಕಿಂತ ಶ್ರೇಷ್ಠವಾದುದು. ಆದ್ದರಿಂದ ಗುರುವಾದರೂ ಲಿಂಗವಾದರೂ ಜಂಗಮವಾದರೂ ಕಾಯಕ ಮಾಡಲೇಬೇಕು. ಕೇವಲ ಹೊಟ್ಟೆಪಾಡಿಗಾಗಿ ದುಡಿಯುವುದು ಕಾಯಕವಲ್ಲ. ಸರಳವಾದ ಸಂಸಾರ ಜೀವನಕ್ಕೆ ಆಗಿ ಮಿಕ್ಕಿದ್ದು ಗುರುಲಿಂಗಜಂಗಮಸೇವೆಗೆ (ದಾಸೋಹಕ್ಕೆ) ದುಡಿದು ಸಂಪಾದಿಸಿದ ಹಣ ವಿನಿಯೋಗವಾದರೇ ಕಾಯಕ ಸಾರ್ಥಕವಾದಂತೆ. ಯಾರೋ ದುಡಿದು ಕೂಡಿಟ್ಟ ಹಣವಾಗಲಿ, ಲಾಭದಾಸೆ ದುರಾಸೆಗಳಿಂದ ಮೋಸ ಮಾಡಿ ಸಂಪಾದಿಸಿದ ಹಣವಾಗಲೀ ಕಾಯಕದ ಹಣ ಆಗಲಾರದು.

ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತವಲ್ಲದೆ
ದುರಾಸೆಯಿಂದ ಬಂದುದು ಅನರ್ಪಿತ
ಹಾಗದ ಕಾಯಕವ ಮಾಡಿಕೊಂಡು ಹಣವಡ್ಡವ ತಾ ಎಂಬಲ್ಲಿ
ಸತ್ಯಕಾಯಕ ಉಂಟೇ ?

ಕಾಸಿನಷ್ಟು ಕೆಲಸ ಮಾಡಿ ರೂಪಾಯಿ ಸಂಪಾದನೆ ಮಾಡುವುದು ಸತ್ಯಕಾಯಕವಲ್ಲ.

ಇನ್ನು ಭೃತ್ಯಾಚಾರ ಎಂಬುದು 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ'

ಎಂಬ ವಿನಯಭಾವದಿಂದ ಮಾಡುವ ಸಮಾಜಸೇವೆ. ಸಮಾಜದ ಹಿತದಲ್ಲಿ ವ್ಯಕ್ತಿಯ ಹಿತ ವಿಲೀನವಾಗಬೇಕು. ಸ್ವಾರ್ಥಲಯ ಆಗಬೇಕು.

ಶಿವಭಕ್ತರ ಮತ್ತು ಧರ್ಮದ ರಕ್ಷಣೆಗಾಗಿ ಅಂದರೆ ಸ್ವಧರ್ಮ ಮತ್ತು ಸ್ವದೇಶಗಳ ರಕ್ಷಣೆಗಾಗಿ ಪ್ರಾಣತ್ಯಾಗವನ್ನಾದರೂ ಮಾಡಲು ಸಿದ್ಧರಾಗಿರಬೇಕು. ಗಣ ಅಥವಾ ಸಮಾಜದ (ರಾಷ್ಟ್ರದ) ರಕ್ಷಣೆ ಅದೂ ಗಂಡಾಂತರ ಸಮಯದಲ್ಲಿ ವ್ಯಕ್ತಿಯ ಅತಿ ದೊಡ್ಡ ಕರ್ತವ್ಯ. ಪವಿತ್ರವಾದ ಕರ್ತವ್ಯ. ಇದು ಗಣಾಚಾರ.

ವ್ಯಕ್ತಿ–ಸಮಾಜ, ಲೌಕಿಕಜೀವನ–ಪಾರಮಾರ್ಥಿಕ ಜೀವನ ಇವು ಎಲ್ಲವನ್ನೂ ಅನ್ಯೋನ್ಯವಾಗಿ ಸಂಬಂಧಿಸಿ ಪರಸ್ಪರ ಪೂರಕವಾಗಿರುವ ಹಾಗೆ, ಒಂದೇ ಗುರಿಸಾಧನೆಗೆ ಜೋಡಿಸಲ್ಪಟ್ಟ ಯಂತ್ರೋಪಕರಣದ ಹಾಗೆ ಒಂದೇ ಧಾರ್ಮಿಕಚೈತನ್ಯದಿಂದ ಒಂದುಗೂಡಿಸಿರುವುದು ಶರಣರ ವೈಶಿಷ್ಟ್ಯ.

ಶರಣರಿಗೆ ನಡೆ-ನುಡಿ ಎರಡೂ ಚೆನ್ನಾಗಿರಬೇಕು, ಒಂದಾಗಿರಬೇಕು. ಬಾಯಲ್ಲಿ ಬೆಲ್ಲದ ಮಾತು ಹೃದಯದಲ್ಲಿ ಕತ್ತರಿ ಇದ್ದರೆ ನಡೆ ಚೆನ್ನಾಗುವುದಿಲ್ಲ. ನಡೆ ಚೆನ್ನಾಗಿರಬೇಕು. ಅದರಂತೆ ನುಡಿಯೂ ಚೆನ್ನಾಗಿರಬೇಕು.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು

ಮಾತು ಸೂಕ್ತವಾಗಿರಬೇಕು. ಆಯ್ದ ಮುತ್ತುಗಳಂತಿರಬೇಕು. ಸುಂದರವಾದ ಹಾರದಂತೆ ಸುಸಂಬದ್ಧವಾಗಿರಬೇಕು. ಕುಟಿಲವಾಗಿರದೆ ಹೃದಯದಿಂದ ಬಂದ ನೇರವಾದ ಮಾತಾಗಿರಬೇಕು. ತೋರಿಕೆಯ ಅರ್ಥ ಒಳ ಅರ್ಥ ಎಂದು ಎರಡೆರಡಾಗಿ ಕಾಣದಂತೆ ಪಾರದರ್ಶಕವಾಗಿರಬೇಕು. ಅರ್ಥದ ಸ್ವಯಂಪ್ರಕಾಶಿತ ಬೆಳಕಿನಿಂದ ಬೆಳಗುತ್ತಿರಬೇಕು. ದೇವರು ಮೆಚ್ಚುವ ಹಾಗಿರಬೇಕು. ಇಷ್ಟೆಲ್ಲವನ್ನೂ ಸಾಧಿಸಿದರೂ ಮಾತಿಗೆ ನಿಜವಾದ ಬೆಲೆ ಬರುವುದು ನುಡಿದಂತೆ ನಡೆದಾಗ ಮಾತ್ರ. 'ನುಡಿಯೊಳಗಾಗಿ ನಡೆಯದಿದ್ದರೆ' ಮಾತಿನ ಇಷ್ಟೆಲ್ಲ ಸೌಂದರ್ಯ, ಗುಣ, ಸಾಮರ್ಥ್ಯಗಳೂ ವ್ಯರ್ಥ.

ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗ ಘಟಸರ್ಪ

ಶರಣರದು ಮೊದಲು ಆಚರಣೆ, ನಂತರ ಬೋಧನೆ. ಈ ಎಲ್ಲ ತತ್ವಸಿದ್ಧಾಂತಗಳನ್ನೂ ಯಾವುದೋ ಗುಹೆಯಲ್ಲೋ ಏಕಾಂತದಲ್ಲೋ ಕುಳಿತು ಕೇವಲ ಆಲೋಚನೆ ಮಾಡಿ ಗ್ರಂಥರೂಪದಲ್ಲಿ ಬರೆದಿಡಲಿಲ್ಲ.

ಬೆಟ್ಟದ ಮೇಲೆ, ಸಮುದ್ರದ ತಡಿಯಲ್ಲಿ, ಸಂತೆಯೊಳಗೆ ಮನೆಯ ಮಾಡಿಯೂ ತೆರೆಕೊಬ್ಬಿ ಶಿರದುದ್ದವಾದ ಸಂಸಾರಸಾಗರದಲ್ಲಿ ಬಿದ್ದೂ, ಬೆಂಬಿಡದೆ ಕಾಡುವ ಸಂಸಾರದ ದಂದುಗಗಳ ನಡುವೆಯೇ ಇದ್ದೂ ಅಂಜದೆ ಅಳುಕದೆ, ಸಮಾಧಾನಿಗಳಾಗಿದ್ದು, ಪರಶಿವನನ್ನು ಮರೆಯದೆ ನಡೆಸಿದ ತಮ್ಮ ಆಧ್ಯಾತ್ಮಿಕಸಾಧನೆಯ ಕಾಲದಲ್ಲಿ ಮಾಡಿದ ವಿಚಾರಮಥನವನ್ನೂ, ಅನುಭವದಲ್ಲಿ ಕಂಡ ಸತ್ಯವನ್ನೂ, ಭಕ್ತಸ್ಥಲದಿಂದ ಐಕ್ಯಸ್ಥಲದವರೆಗಿನ ಲಕ್ಷಣ–ಅನುಭವಗಳನ್ನೂ, ವ್ಯಕ್ತಿ ಹಾಗೂ ಸಮಾಜದ ಅಭಿನ್ನವಾದ ಹಿತಸಾಧನೆಗೆ ಅಗತ್ಯವಾದ ನೀತಿಸಂಹಿತೆಯನ್ನೂ ವಚನಗಳಲ್ಲಿ ಆಪ್ತವಾಕ್ಯದ ಹಾಗೆ ಬರೆದಿಟ್ಟರು. ಸಾಮಾನ್ಯರೂ ಅನುಷ್ಠಾನ ಮಾಡಬಹುದಾದ ಸರಳವಾದ ಜೀವನಕ್ರಮವನ್ನು ತಮ್ಮ ಬದುಕಿನ ಮೇಲ್ಪಂಕ್ತಿ ಹಾಕಿ ತೋರಿಸಿಕೊಟ್ಟರು.

ಜಗತ್ತು ನಶ್ವರವಾದುದು, ಜೀವನ ಕ್ಷಣಿಕವಾದುದು, ಸಂಸಾರವೆಂಬುದೊಂದು ಗಾಳಿಯ ಸೊಡರು ಎಂದು ತಿಳಿದರೂ ಸಂಸಾರ ಹೇಯವಾದುದು, ಜಗತ್ತು ಮಾಯೆ ಎಂದು ತಿರಸ್ಕರಿಸಲಿಲ್ಲ. ಸಂಸಾರ ಹೇಯವಾಗಿರುವುದಕ್ಕೆ ಕಾರಣ ನಮ್ಮ ಸ್ವಾರ್ಥ, ದುರಾಸೆ, ಅರಿಷಡ್ವರ್ಗಗಳು ಆಡಿಸಿದಂತೆ ಕುಣಿಯುವ ಗುಲಾಮತನ. ಹೆಣ್ಣು, ಹೊನ್ನು ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ. ರೋಗದ ಮೂಲಕಾರಣವನ್ನು ಪತ್ತೆಮಾಡಿ ತಕ್ಕ ಚಿಕಿತ್ಸೆ ಮಾಡಬೇಕೇ ವಿನಹ ದೇಹವನ್ನೇ ತ್ಯಜಿಸುವುದಲ್ಲ. ಜಗತ್ತು ಮಿಥ್ಯೆ ಎಂದು ಕರ್ತವ್ಯ, ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದಲ್ಲ. ಭಕ್ತಿ, ಧಾರ್ಮಿಕತೆ ಎಂದರೆ ಪಲಾಯನವಾದವಲ್ಲ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ವಿವಿಧ ಸಂಸ್ಕಾರಗಳಲ್ಲಿ ಪರಿಷ್ಕರಿಸಲ್ಪಟ್ಟು ಚೊಕ್ಕವಾದ ಗುಣ ಪಡೆದು, ನಿತ್ಯಸತ್ಯ, ಪೂರ್ಣದೃಷ್ಟಿಗಳಿಂದ ಕೂಡಿದ ಧಾರ್ಮಿಕಮುದ್ರೆಯನ್ನೊತ್ತಿಸಿಕೊಂಡು ಇಲ್ಲಿಯೂ ಸಂದು ಅಲ್ಲಿಯೂ ಸಲ್ಲುವ ಸಾಚಾ ನಾಣ್ಯ ಆಗಲೆಂದೇ ಭಗವಂತ ನಮ್ಮನ್ನು ಈ ಕಮ್ಮಟಕ್ಕೆ ಕಳಿಸಿದ್ದಾನೆ. ಅಲ್ಲಿ ಸಲ್ಲುವುದಕ್ಕೆ

ಯಾವ ಯಾವ ಸಾಚಾತನ ಇರಬೇಕೋ ಅದನ್ನು ಮೊದಲು ಇಲ್ಲಿಯೇ ಪಡೆಯಬೇಕು. ಇಹಕ್ಕೊಂದು ನಡೆ ಪರಕ್ಕೊಂದು ನಡೆ ಎಂಬುದು ಆತ್ಮವಂಚನೆ.

ಪಾರಮಾರ್ಥಿಕ ಜೀವನ, ಧಾರ್ಮಿಕತೆ ಅಗೋಚರವಾದ ಮಾನಸಿಕ ಭೂಮಿಕೆಗೆ ಸಂಬಂಧಿಸಿದ್ದಾದ್ದರಿಂದ ಬಹು ಸುಲಭವಾಗಿ ಕಪಟದ ಮುಸುಕಾಗಬಹುದು. ಆತ್ಮಾನಂದ ಇಂದ್ರಿಯಾತೀತವೇ ಆದರೂ ಅದರ ಅನುಭವದ ಸತ್ಪರಿಣಾಮ ಶರಣನ ಮುಖದಲ್ಲಿ, ಜೀವನದ ದಿನನಿತ್ಯದ ನಡೆನುಡಿಗಳಲ್ಲಿ ಸ್ಪಷ್ಟವಾಗಿ ಕಾಣಬೇಕು.

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು
ಭಕ್ತದೇಹಿಕ ದೇವ ಅನಿಮಿಷನಾಗಿ ಕೂಡಲಸಂಗಮದೇವ
ಭಕ್ತನ ನುಡಿಯ ನಡುವೆ ರಾಶಿಯಾಗಿರ್ಪನು

ಸರ್ವದಾ ಪ್ರಸನ್ನವಾಗಿರುವ ಮುಖ, ಸಂತುಷ್ಟವಾಗಿರುವವನ ನಡೆ, ನುಡಿ ಎಲ್ಲರಲ್ಲಿಯೂ ನಿರ್ಮತ್ಸರವಾದ ಪ್ರೀತಿಯಿಂದ ನಡೆದುಕೊಳ್ಳುವ ಸ್ವಭಾವ ಸಹಜವಾಗಿ ಕಾಣದಿದ್ದಲ್ಲಿ ಧಾರ್ಮಿಕತೆ ಕೇವಲ ಸೋಗು ಎಂದೇ ಅರ್ಥ.

ಬ್ರಹ್ಮದ ಮಾತಾಡಿ ಕನ್ನೆಯರ ಕಾಲದೆಸೆಯಲ್ಲಿ ಕುಳಿತಲ್ಲಿ
ಪರಬೊಮ್ಮದ ಮಾತು ಅಲ್ಲಿ ನಿಂದಿತ್ತೆಂದನಂಬಿಗರಚೌಡಯ್ಯ

ಭಕ್ತಿ, ಧಾರ್ಮಿಕತೆ ಕೇವಲ ಶಾಸ್ತ್ರಜ್ಞಾನದಿಂದ, ವೇದವೇದಾಂತ ತರ್ಕಮೀಮಾಂಸೆಗಳಲ್ಲಿ ಪಾರಂಗತನಾಗುವುದರಿಂದ, ಅರವತ್ತುನಾಲ್ಕು ವಿದ್ಯೆಗಳನ್ನು ಕರಗತಮಾಡಿಕೊಳ್ಳುವುದರಿಂದ ಬರುವುದಿಲ್ಲ. ಪಂಡಿತನೆನಿಸಬಹುದೇ ಹೊರತು ಲಿಂಗವಂತನೆನಿಸುವುದಿಲ್ಲ.

ನೂರನೋದಿ ನೂರ ಕೇಳಿದರೇನು ? ಆಸೆ ಹರಿಯದು
ರೋಷ ಬಿಡದು, ಮಜ್ಜನಕ್ಕೆರೆದು ಫಲವೇನು ?
ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ

ಶಾಸ್ತ್ರಜ್ಞಾನದಿಂದ ಕಲಿತ ಅದ್ವೈತ ಬರಿಯ ಮಾತಿನ ಅದ್ವೈತವಾಗುತ್ತದೆ. ಭಕ್ತಿಯನ್ನೂ ಸತ್ಯವನ್ನೂ ಅಂತಹವರು ಅರಿಯರು.

ಶಬ್ದ ಸಂಭ್ರಮದಲ್ಲಿ ಹಿಂದುಗಾಣರು ಮುಂದುಗಾಣರು
ತಮ್ಮ ತಾವರಿಯರು

ಪುರಾಣಕಲ್ಪಿತವಾದ ಸ್ವರ್ಗ, ನರಕ, ದೇವಲೋಕ, ಮರ್ತ್ಯಲೋಕ ಬೇರೆ ಎಲ್ಲೊ ಇಲ್ಲ. ಎಲ್ಲ ಇಲ್ಲೇ ಇದೇ ಬದುಕಿನಲ್ಲೇ ಇವೆ. 'ಅಯ್ಯಾ ಎಂದೊಡೆ ಸ್ವರ್ಗ. ಎಲವೋ ಎಂದೊಡೆ ನರಕ. ದೇವಾ ಭಕ್ತಜಯಾ ಜೀಯಾ' ಎಂಬ ನುಡಿಯೊಳಗೆ ಕೈಲಾಸವೇ ಇರುವುದು. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಅದೂ ಅಲ್ಲದೆ ಸ್ವರ್ಗಪ್ರಾಪ್ತಿಯೇ ಸಾಧನೆಯ ಪರಮಫಲ ಆಗಲಾರದು.

ಅನ್ನವನಿಕ್ಕಿ ನನ್ನಿನಿಯ ನುಡಿದು ಅರವಂಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ ಶಿವನ ನಿಜವು ಸಾಧ್ಯವಾಗದು
ಗುಹೇಶ್ವರನನರಿದ ಶರಣಂಗೆ ಆವ ಫಲವೂ ಇಲ್ಲ

ಜಪ-ತಪ, ವ್ರತ-ನಿಯಮ, ಕಾಯದಂಡನೆಗಳಿಂದಲೂ ಪರಮಾತ್ಮನ ದರ್ಶನವಾಗುವುದಿಲ್ಲ.ನಿಜಾನಂದ ದೊರಕುವುದಿಲ್ಲ.

ಮಣಿಯನೆಣಿಸಿ ಕಾಲವ ಕಳೆಯಬೇಡ
ಕಣೆಯ ಪೂಜಿಸಿ ಕಾಲವ ಕಳೆಯಬೇಡ
ಕ್ಷಣವಾದಡೆಯೂ ಆಗಲಿ ನಿಜದ ನೆನಹೇ ಸಾಕು

ಹೀಗೆಯೇ ಅರ್ಥವಿಲ್ಲದ ಆಚಾರ, ಸಂಪ್ರದಾಯುಗಳೂ ವ್ಯರ್ಥ ಕಾಲಹರಣ :

ನೀರ ಕಂಡಲ್ಲಿ ಮುಳುಗುವರಯ್ಯ. ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವನೊಣಗುವ ಮರನ ನೆಚ್ಚಿದವರು ನಿಮ್ಮನೆತ್ತ
ಬಲ್ಲರು ಕೂಡಲಸಂಗಮದೇವ

ಕಾಯದಂಡನೆಯೂ ನಿಷ್ಪ್ರಯೋಜಕ :

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ ?
ಅಘೋರ ತಪವ ಮಾಡಿದೊಡೇನು ? ಅಂತರಂಗ
ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯ ಕೂಡಲಸಂಗಮದೇವ ?

ದೇಹವೇ ದೇಗುಲ ಮನವೇ ಲಿಂಗ ಆಗಿ ಹೃದಯ ತುಂಬಿಬಂದ ಸಹಜ ಭಕ್ತಿಗೆ ದೇವರು ಒಲಿವನಲ್ಲದೆ, ಮನವಿಲ್ಲದ ನೂರು ಬಾಹ್ಯಾಚರಣೆಗಳಿಂದಲ್ಲ. ಬಾಹ್ಯದಲ್ಲಿ ಲಿಂಗಧಾರಿಯಾದ ಮಾತ್ರಕ್ಕೆ ಭಕ್ತಿ ಸಿದ್ಧಿಸುವುದಿಲ್ಲ. ಸದಾಚಾರ ಸದ್ಭಕ್ತಿ ಇಲ್ಲದವರು ಲಿಂಗಧಾರಿಯಾಗಿರುವುದೇ ಕಪಟತನ.

ತನು ಶುದ್ಧವಿಲ್ಲ ಎಂಬಾತ ಅಂಗದ ಮೇಲೆ ಲಿಂಗವ ಧರಿಸಲಾಗದು
ಮನ ಶುದ್ಧವಿಲ್ಲ ಎಂಬಾತ ಲಿಂಗವ ಹಿಡಿದು ಪೂಜೆಯ ಮಾಡಲಾಗದು
ಪ್ರಾಣ ಮಲಿನವು ಎಂಬ ಪಶುಗಳಿಗೆ ಪ್ರಾಣಲಿಂಗವೆಲ್ಲಿಯದೊ ?

ದಿಟವನ್ನೆ ನುಡಿಯುವುದು, ನುಡಿದಂತೆ ನಡೆಯುವುದು. ಪರಧನ ಪರಸ್ತ್ರೀಗೆ ಆಸೆಪಡದಿರುವುದು. ಪರಹಿಂಸೆ ಮಾಡದಿರುವುದು. ಆಡಂಬರವಿಲ್ಲದಿರುವುದು. ಧನ-ಯೌವನ-ಅಧಿಕಾರ-ಸ್ಥಾನಗಳಿಂದ ಅಹಂಕಾರಪಡದಿರುವುದು. ಇಂದಿಂಗೆ ನಾಳಿಂಗೆ ಎಂದು ತನ್ನೊಡಲಿಗೆ ಕುದಿಯದಿರುವುದು. ಇವು ಭಕ್ತನ ಲೌಕಿಕ ಲಕ್ಷಣಗಳು. ಅಲ್ಲದೆ,

ಭಕ್ತನು ಶಾಂತನಾಗಿರಬೇಕು. ಭೂತ ಹಿತವಚನವ ನುಡಿಯಬೇಕು
ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು. ಸಕಲ ಇಂದ್ರಿಯಗಳು
ತನ್ನ ವಶಗತವಾಗಿರಬೇಕು. ಭಕ್ತನು ತಾನು ತಾನಾಗಿರಬೇಕು

ಇವು ಭಕ್ತನ ಪಾರಮಾರ್ಥಿಕ ಲಕ್ಷಣಗಳು.

ಲೋಕದಲ್ಲಿ ಈ ಎಲ್ಲ ಲಕ್ಷಣಗಳನ್ನುಳ್ಳ ಭಕ್ತರು ಕಡಿಮೆ. ಲಕ್ಷಕ್ಕೊಬ್ಬ ಭಕ್ತ. ಕೋಟಿಗೊಬ್ಬ ಶರಣ ಲಿಂಗವಂತರ ಮನೆಯಲ್ಲಿ ಹುಟ್ಟಿದರೇನು ? ಹೆಸರಿಗೆ ಭಕ್ತ, ಹೆಸರಿಗೆ ಶರಣ

ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು
ಕಂಗಳಿಚ್ಛೆಗೆ ಪರವಧುವ ನೆರೆವರು
ಲಿಂಗಲಾಂಛನಧಾರಿಯಾದಲ್ಲಿ ಫಲವೇನು ?

ಶರಣರು ನಿತ್ಯದ ಸಾಮಾಜಿಕ ಬದುಕಿನಲ್ಲಿ ನಯವಿನಯಸೌಜನ್ಯಗಳಿಂದ ಕೂಡಿದ ಶಿಷ್ಟಾಚಾರವನ್ನು ಅನುಸರಿಸುತ್ತ ಎಲ್ಲ ಭಕ್ತರೂ ಹಾಗೆ ನಡೆದುಕೊಳ್ಳಬೇಕೆಂದು ಪ್ರೀತಿಯಿಂದ ವಿನಂತಿಸಿದರು. ಅದು ಕೇವಲ ಸಾಮಾಜಿಕ ರೀತಿಯಾದರೆ ಬಾಯುಪಚಾರವೋ ಭಾವರಹಿತವಾದ ಯಾಂತ್ರಿಕ ನಡವಳಿಕೆಯೋ ಆದೀತೆಂದು ಶಿಷ್ಟಾಚಾರದ ಧಾರ್ಮಿಕ ಮಹತ್ವವನ್ನು ಒತ್ತಿ ಹೇಳಿದರು.

ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ
ಮೃದುವಚನವೇ ಸಕಲ ಜಪ, ತಪ, ಸದಾಶಿವನೊಲುಮೆ.
'ಕೂಡಲಸಂಗಯ್ಯನಂತೊಲ್ಲದೊಲ್ಲನಯ್ಯಾ'

ಎಂದರು. ಆದರೆ ಅದು ಕೇವಲ ತೋರಿಕೆಯ ಸೌಜನ್ಯವಾಗಬಾರದು.

ಒಳಗೆ ಕುಟಿಲ ಹೊರಗೆ ವಿನಯವಾನಿ ಭಕ್ತರೆನಿಸಿಕೊಂಬುವರ ಒಲ್ಲನೊಲ್ಲನಯ್ಯಾ
ಲಿಂಗವು, ಅವರು ಸತ್‌ಪಥಕ್ಕೆ ಸಲ್ಲರು ಸಲ್ಲರಯ್ಯಾ.
ಒಳಹೊರಗೊಂದಾಗದವರಿಗೆ ಅಳಿಯಾಸೆದೋರಿ ಬಿಸಾಡುವನವರ
ಜಗದೀಶ ಕೂಡಲಸಂಗಮದೇವ

ಏತ ತಲೆವಾಗಿದರೇನು ಗುರು ಭಕ್ತನಾಗಬಲ್ಲುದೆ ?
ಇಕ್ಕುಳ ಕೈಮುಗಿದರೇನು ಭೃತ್ಯಾಚಾರಿಯಾಗಬಲ್ಲುದೆ ?
ಗಿಳಿಯೋದಿದರೇನು ಲಿಂಗವೇದಿಯಾಗಬಲ್ಲುದೆ ?

ನೇಮಸ್ಥ, ಶೀಲವಂತ, ಭಾಷೆವಂತ ಎಂದು ಹೇಳಿಕೊಂಡು ಶುದ್ಧವಿಲ್ಲದ ಡಾಂಭಿಕರ ಬಗ್ಗೆ ಆಷಾಢಭೂತಿಗಳ ಬಗ್ಗೆ ತುಂಬ ಎಚ್ಚರಿಕೆಯಿಂದಿರಬೇಕು. ಅವರ ಠಕ್ಕುಧಾರ್ಮಿಕತೆಗೆ ಮೋಸಹೋಗಬಾರದೆಂದು ಪದೇ ಪದೇ ಹೇಳುತ್ತಾರೆ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ

ಮುಂತಾಗಿ ಕಾಮಿನೀ-ಕಾಂಚನಗಳ ಮೋಹವನ್ನು ತೊರೆಯುವ, ಸ್ವಧರ್ಮದಲ್ಲಿ ನಿಷ್ಠೆ ಇರಿಸುವ ಇಂತಹ ಛಲ ಮಾತ್ರ ಶಿವಭಕ್ತನಿಗೆ ಇರಬೇಕು ಎಂಬ ಸೂಚನೆಯನ್ನಿತ್ತರು.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಅನ್ಯರಿಗೆ ಅಸಹ್ಯಪಡಬೇಡ ಇದೇ ಅಂತರಂಗಶುದ್ಧಿ
ಇದೇ ಬಹಿರಂಗಶುದ್ಧಿ. ಇದೇ ನಮ್ಮ ಕೂಡಲಸಂಗಮನನೊಲಿಸುವ ಪರಿ

ಎಂದು ಅತ್ಯಂತ ಸರಳವಾದ ಮಾತುಗಳಲ್ಲಿ ಎಲ್ಲ ಗಹನವಾದ ನೀತಿತತ್ವಗಳನ್ನೂ ಸಾಮಾನ್ಯ ಜನತೆಗೆ ಸುಲಭಗ್ರಾಹ್ಯವಾಗುವ ರೀತಿಯಲ್ಲಿ ಹೇಳಿದ್ದಾರೆ.

ಭಾವಶುದ್ಧಿ, ನಿರಹಂಕಾರ, ಸೌಜನ್ಯಶೀಲ ನಡವಳಿಕೆ, ಪ್ರಾಮಾಣಿಕವಾದ ಲೋಭರಹಿತವಾದ ದುಡಿಮೆ, ಸಮಷ್ಟಿಯ ಹಿತಕ್ಕಾಗಿ ತ್ಯಾಗ, ನಿಸ್ವಾರ್ಥವಾದ ಸೇವೆ, ಧರ್ಮನಿಷ್ಠೆ, ಗುರುಲಿಂಗಜಂಗಮರೂಪಿಯಾದ ಶಿವನಲ್ಲಿ ಸರ್ವಸಮರ್ಪಣಭಾವ—ಇವು ಶರಣರ ಧಾರ್ಮಿಕಸೂತ್ರಗಳು.

ವ್ಯಕ್ತಿಯ ಉದ್ಧಾರ—ಸಮಾಜದ ಕಲ್ಯಾಣ, ಮಿತವರಿತ ಸಂಯಮಶೀಲ ಐಹಿಕಭೋಗ—ಜೇನಮಳೆ ಅಮೃತ ಕಳೆ ಕರೆವ ಪರಮ ಶಿವಾನುಭಾವ ಎರಡನ್ನೂ ಸಾಧಿಸುತ್ತದೆ ಶರಣರ ಧಾರ್ಮಿಕದೃಷ್ಟಿ.

---

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ,
ಅವು ಜಗಕಿಕ್ಕಿದ ವಿಧಿ, ನಿನ್ನೊಡವೆಯೆಂಬುದು ಗುರುಲಿಂಗ ಜಂಗಮಕ್ಕೆ
ದಾಸೋಹ ಮಾಡುವ ಜ್ಞಾನರತ್ನ,
ಅಂತಪ್ಪ ದಿವ್ಯರತ್ನವ ಕೆಡಗೊಡದೆ,
ಆ ರತ್ನವ ನೀನಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು
ಸಿರಿವಂತರಾರು ಇಲ್ಲ ಕಾಣಾ ಎಲೆ ಮನವೆ

ಅಲ್ಲಮಪ್ರಭು



ಜಗದ್ಗುರು ಶ್ರೀ ಶಿವರಾತ್ರೀಶ್ವರ ಬಾಲಜಗತ್, ರಾಮಾನುಜ ರಸ್ತೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಾಚ್ಯ ಪ್ರಾಥಮಿಕ ಶಾಲೆ ಮತ್ತು ಶಿಶುವಿಹಾರ, ಜಯನಗರ, ಬೆಂಗಳೂರು–41.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಬಾಲಜಗತ್, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು.



ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲೆ, ಸರಸ್ವತೀಪುರಂ, ಮೈಸೂರು–9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲೆ, ಸುತ್ತೂರು, ನಂಜನಗೂಡು ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲೆ, ಚಾಮರಾಜನಗರ.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಕೃತ ಪಾಠಶಾಲೆ ಮತ್ತು ಹಿಂದಿ ವಿದ್ಯಾಲಯ, ಜಯನಗರ, ಬೆಂಗಳೂರು–41



ಜಗದ್ಗುರು ಶ್ರೀ ಶಿವರಾತ್ರೀಶ್ವರ ಗುರುಕುಲ (ಮಠಾಧಿಪತಿಗಳ ಶಿಕ್ಷಣ ಕೇಂದ್ರ), ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾನಿಲಯ (ಮೆಯಿನ್ ಬಿಲ್ಡಿಂಗ್) ವಾಣೀ ವಿಲಾಸ ರಸ್ತೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮೆಸಿ ಕಾಲೇಜು ವಿದ್ಯಾರ್ಥಿ ನಿಲಯ, ಲಕ್ಷ್ಮೀಪುರಂ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಫಾರ್ಮೆಸಿ ಕಾಲೇಜು ವಿದ್ಯಾರ್ಥಿ ನಿಲಯ, ಊಟಿ, ತಮಿಳುನಾಡು.




ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತಿನಿರತ ಮಹಿಳೆಯರ ನಿಲಯ, ಸರಸ್ವತೀಪುರಂ, ಮೈಸೂರು–9.



ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿ ನಿಲಯ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ, ಸುತ್ತೂರು, ನಂಜನಗೂಡು ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ, ಚಾಮರಾಜನಗರ.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ, ಯಳಂದೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ, ಸುತ್ತೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಅಂಗವಿಕಲ ವಿದ್ಯಾರ್ಥಿನಿಲಯ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿಕ್ಷಕಿಯರ ನಿಲಯ ಸರಸ್ವತೀಪುರಂ, ಮೈಸೂರು–9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಕ್ಕಳ ನಿಲಯ, ಸರಸ್ವತೀಪುರಂ, ಮೈಸೂರು–9.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ ಬಂಡಳ್ಳಿ, ಕೊಳ್ಳೇಗಾಲ ತಾಲ್ಲೂಕು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ, ಕೃಷ್ಣರಾಜನಗರ.



ಜಗದ್ಗುರು ಶ್ರೀ ಶಿವರಾತ್ರೀಶ್ವರ ತಾಂತ್ರಿಕ ವಿದ್ಯಾರ್ಥಿನಿಯರ ನಿಲಯ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ರಾಮಾನುಜ ರಸ್ತೆ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಬಳಕೆದಾರರ ಸಹಕಾರ ಸಂಘ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಎಂಟರ್‌ಪ್ರೈಸಸ್, ಚಾವಡಿ ಬೀದಿ, ಮೈಸೂರು–4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಉದ್ದೇಶಿತ ಆಸ್ಪತ್ರೆ ಕಟ್ಟಡ, ಹಳೇ ಬನ್ನೀಮಂಟಪ, ಮೈಸೂರು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠ, ರಾಮಾನುಜ ರಸ್ತೆ, ಮೈಸೂರು-4.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಶ್ರಮ, ಉದಕಮಂಡಲ, ನೀಲಗಿರಿ, ತಮಿಳುನಾಡು.



ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–4.

# ವೀರಶೈವ ಹಾಗೂ ಇತರ ದರ್ಶನಗಳ ತೌಲನಿಕ ಅಧ್ಯಯನ

# ಬೌದ್ಧ ಮತ್ತು ವೀರಶೈವ

ಶ್ರೀ. ನಿ.ಪ್ರ.ಸ್ವ. ಇಮ್ಮಡಿ ಶಿವಬಸವಸ್ವಾಮಿಗಳು

ನಮ್ಮ ದೇಶವು ಅನೇಕ ಮತ-ದರ್ಶನಗಳ ತಾಣ. ವಿವಿಧ ಮತ, ಪಂಥಗಳಲ್ಲಿ ವೈವಿಧ್ಯ, ವೈಶಿಷ್ಟ್ಯ ಕಂಡುಬಂದರೂ ಅವೆಲ್ಲದರ ಮುಖ್ಯ ಗುರಿ ಮಾನವನ ಬದುಕನ್ನು ಪರಿಶುದ್ಧಿಗೊಳಿಸಿ ಉದಾತ್ತತೆಯ ಕಡೆಗೆ ಕೊಂಡೊಯ್ಯುವುದು. ಇಷ್ಟೇ ಅಲ್ಲದೆ ತಾತ್ವಿಕವಾಗಿ ಈ ದೃಶ್ಯವಾದ ವಿಶ್ವದ ಹಿನ್ನೆಲೆಯಲ್ಲಿ ಅಡಗಿರುವ ಪರಮಸತ್ಯವನ್ನು ಅರಿತುಕೊಳ್ಳುವುದು. ಹೀಗೆ ಅರಿತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಂಥ ಮಹಾನುಭಾವರು ತಾವು ನಿಂತ ನಿಲವನ್ನು, ಏರಿದ ಎತ್ತರವನ್ನು ಉಳಿದ ಮನುಕುಲವೂ ಪಡೆಯಲಿ ಎಂಬ ಅಭೀಪ್ಸೆಯಿಂದ ಬೋಧಿಸಿದ, ಆಚರಿಸಿದ ಮಾರ್ಗಗಳೇ ಕಾಲಕ್ರಮದಲ್ಲಿ ವಿವಿಧ ಮತಗಳಾಗಿ ರೂಪುಗೊಂಡವು ಎಂಬುದು ಐತಿಹಾಸಿಕ ಸತ್ಯ.

ಹೀಗೆ ದಿವ್ಯಾನುಭವವನ್ನು ಪಡೆದ ಲೋಕೋತ್ತರ ಚೇತನಗಳು ಕಾಲ, ದೇಶ ಮತ್ತು ವ್ಯಕ್ತಿಗಳಿಗನುಸಾರವಾಗಿ ಅರುಹಿದ ಮಾರ್ಗಗಳು ಮೇಲ್ನೋಟಕ್ಕೆ ವಿರುದ್ಧವಾದವು, ಅತ್ಯಂತ ವಿಭಿನ್ನವಾದವು ಎಂದು ತೋರಿದರೂ ಅವುಗಳಲ್ಲೆಲ್ಲಾ ಅನೇಕ ಸಾಮ್ಯಗಳನ್ನು ಗುರುತಿಸಬಹುದು. ಇಷ್ಟೇ ಅಲ್ಲದೆ ಅವುಗಳ ಗುರಿ ಒಂದೇ—ಅದೆಂದರೆ ದುಃಖದಿಂದ ವಿಮೋಚನೆ. ಭಾರತೀಯ ದರ್ಶನಗಳೆಲ್ಲವೂ ಈ ವಿಚಾರದಲ್ಲಿ ಒಮ್ಮತವಾಗಿವೆ. ಚಾರ್ವಾಕದರ್ಶನವನ್ನು ಇದಕ್ಕೆ ಅಪವಾದ ಎನ್ನಬಹುದು. ಜೀವನದಲ್ಲಿ ಒದಗಿಬರುವ ಕ್ಲೇಶಕಾರ್ಪಣ್ಯಗಳನ್ನು ಪರಿಹರಿಸಿಕೊಳ್ಳುವ, ಅದರಿಂದ ಸಂಪೂರ್ಣ ಮುಕ್ತವಾಗುವ ಮಾರ್ಗವನ್ನು ಪ್ರತಿಯೊಂದು ಮತವೂ ತನ್ನದೇ ಆದ ರೀತಿಯಲ್ಲಿ ನಿರೂಪಿಸಲು ಪ್ರಯತ್ನಿಸುತ್ತದೆ. "ಶ್ರೇಷ್ಠರು ಸಮಾನವಾಗಿ ಆಲೋಚಿಸುತ್ತಾರೆ" ಎಂಬ ಒಂದು ಮಾತಿದೆ ಆಂಗ್ಲಭಾಷೆಯಲ್ಲಿ. ಅಂತೆಯೇ ಜಗತ್ತಿನ ಶ್ರೇಷ್ಠವ್ಯಕ್ತಿಗಳ ಜೀವನ ವಿಧಾನವನ್ನೂ ಅವರ ಬೋಧನೆಯನ್ನೂ ಪರಿಶೀಲಿಸಿದರೆ ಅವರೆಲ್ಲರ ಜೀವನಾದರ್ಶಗಳು, ಮೌಲ್ಯಗಳು, ನಡೆನುಡಿಗಳು ಸಮಾನವಾಗಿರುವುದನ್ನು ಸುಲಭವಾಗಿ ಗುರುತಿಸಬಹುದು.

ಧಾರ್ಮಿಕವಾಗಿ, ಸಾಮಾಜಿಕವಾಗಿ, ನೈತಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಇರುವ ಸಾದೃಶ್ಯವೈದೃಶ್ಯಗಳ ಚಿಂತನೆಯ ಇರುವಿಕೆಯನ್ನು ವೀರಶೈವ ಹಾಗೂ ಬೌದ್ಧಮತದಲ್ಲಿ ತೋರಿಸಲು ಪ್ರಸ್ತುತ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

## ೧

ಬಸವಾದಿಪ್ರಮಥರು ಅವತರಿಸಿದ ಕಾಲದ ಹಿನ್ನೆಲೆ ಹಾಗೂ ಬುದ್ಧನು ಅವತರಿಸಿದ ಕಾಲದ ಹಿನ್ನೆಲೆಯು ಒಂದೇ ಆಗಿರುವುದನ್ನು ಆ ಕಾಲದ ಸ್ಥಿತಿಗತಿಗಳನ್ನು ಪರಿಶೀಲಿಸುವುದರಿಂದ ಮನಗಾಣಬಹುದು.

ಬುದ್ಧನ ಆಗಮನಕ್ಕೆ ಮುನ್ನ ವೈದಿಕಧರ್ಮದ ಜ್ಞಾನಮಾರ್ಗವು ಶಿಥಿಲವಾಗಿ ಕರ್ಮಮಾರ್ಗವು ತಲೆಯೆತ್ತಿತ್ತು. ಬಾಹ್ಯದ ವಿಧಿವಿಧಾನಗಳನ್ನು ಅಕ್ಷರಶಃ ಯಾಂತ್ರಿಕವಾಗಿ ಪಾಲಿಸುವುದೇ ಪರಮಧರ್ಮವಾಗಿತ್ತು. ಕ್ರಿಯೆಯ ಹಿನ್ನೆಲೆಯಲ್ಲಿ ಇರುವ ಪರಿಶುದ್ಧಭಾವನೆಗೆ ಬದಲಾಗಿ ಕ್ರಿಯೆಗಳನ್ನು ನೆರವೇರಿಸುವುದೇ ಬದುಕಿನ ಪರಮಗುರಿ ಎಂಬುದಾಗಿತ್ತು. ವೇದಮಂತ್ರಗಳೆಲ್ಲವೂ ಕ್ರಿಯೆಯಲ್ಲಿಯೇ ವಿನಿಯೋಗವಾಗಬೇಕು, ಕ್ರಿಯಾರಹಿತವಾದ ವೇದಮಂತ್ರಗಳು ಅರ್ಥಹೀನ ಎಂಬ ಭಾವನೆಯು ಬೇರೂರಿದ್ದ ಕಾಲ ಅದು. ನೈತಿಕ ಪರಿಶುದ್ಧತೆಗೆ ಬದಲಾಗಿ ಕರ್ಮ ಮಾಡುವುದೇ ಪರಮಧ್ಯೇಯವಾಗಿತ್ತು. ವೇದಗಳೆಲ್ಲದರ ಪರಮಗುರಿ ಯಜ್ಞಯಾಗಾದಿಗಳೇ ಹೊರತು ಬೇರೇನೂ ಅಲ್ಲ. ಅಂತಃಶುದ್ಧಿ, ಇಂದ್ರಿಯಸಂಯಮ, ಮಾನವೀಯತೆ, ಅಹಿಂಸೆ ಇವುಗಳಿಗೆ ಜೀವನದಲ್ಲಿ ಸಾಕಷ್ಟು ಪ್ರಾಧಾನ್ಯವಿಲ್ಲದೆ ಕೇವಲ ವೇದಾಧ್ಯಯನವನ್ನು ಮಾಡಿ ಅದನ್ನು ವಿವಿಧ ಯಜ್ಞಯಾಗಾದಿಗಳಲ್ಲಿ ವಿನಿಯೋಗಿಸುವುದೇ ಜೀವನದ ಆದರ್ಶ ಮತ್ತು ಧರ್ಮ ಎಂಬ ಕಾಲವಾಗಿತ್ತು. ಇಂತಹ ಮನೋಭಾವವನ್ನು ತೀವ್ರವಾಗಿ ವಿರೋಧಿಸುವ ಅಭಿಪ್ರಾಯಗಳನ್ನು

ಉಪನಿಷತ್ತುಗಳಲ್ಲಿ ಕಾಣಬಹುದು. ಕೇವಲ ಕರ್ಮದ ವಿಷಯದಲ್ಲಿ ಕಟುವಾದ ನಿಂದೆಯು ಮುಂಡಕೋಪನಿಷತ್ತಿನಲ್ಲಿದೆ. ಅಲ್ಲಿ 'ಯಜ್ಞ'ವನ್ನು ತೂತುಬಿದ್ದ ಅದೃಢವಾದ ದೋಣಿಗಳಿಗೆ ಹೋಲಿಸಿದೆ. 'ಜರಾಮೃತ್ಯುಗಳಿಗೊಳಗಾದ ಮೂಢರು ಅವುಗಳನ್ನು ಶ್ರೇಯಸ್ಸಿನ ಮಾರ್ಗವೆಂದು ನಂಬಿದ್ದಾರೆ' (೧–೨–೭). ಆತ್ಮಸ್ವರೂಪವನ್ನು ಅರಿಯುವುದನ್ನು ಬಿಟ್ಟು ಬೇರೆ ದೇವತೆಗಳನ್ನು ಉಪಾಸಿಸುವವರನ್ನು ದೇವತೆಗಳ ಪಶುವೆಂದು ಬೃಹದಾರಣ್ಯಕವು ಹೇಳುತ್ತದೆ (೧–೪–೧೦). ಹೀಗೆ ಅನೇಕ ವರ್ಷಗಳ ಕಾಲ ನಡೆಯುವ ಅಶ್ವಮೇಧದಿಂದ ಹಿಡಿದು ವಿಕೃತವಾದ ನರಮೇಧ ಮುಂತಾದ ಯಜ್ಞಯಾಗಾದಿಗಳು ವಿವಿಧರೂಪದಲ್ಲಿ ಬೆಳೆದು, ಉಪಾಸನೆಯಲ್ಲಿರುವ ಒಳಸತ್ವದ ಪಾಲನೆಗಿಂತ ನಿಯಮಗಳ ಅಕ್ಷರಶಃ ಪಾಲನೆ ಅಧಿಕವಾಗಿ ಕರ್ಮಗಳ ಜಟಿಲಜಾಲದಲ್ಲಿ ಸಿಕ್ಕಿಕೊಂಡು ಅಶಾಂತಿಯನ್ನು ಅನುಭವಿಸುತ್ತಿದ್ದ ಸಮಾಜದ ಮಧ್ಯದಲ್ಲಿ ಬುದ್ಧ ಉದಯಿಸಿದ. ಯಜ್ಞದ ವಿಶಾಲವಾದ ಹಾಗೂ ತಾತ್ವಿಕವಾದ ಅರ್ಥ ಮರೆಯಾಗಿ ಸಂಕೀರ್ಣವಾದ ಬದುಕು ಮೀಸಲಾಗಿದ್ದ ಕಾಲದಲ್ಲಿ ಬುದ್ಧನ ಯಜ್ಞಯಾಗಾದಿಗಳ ನಿಷೇಧದ ಪೂರ್ಣಾಭಿಪ್ರಾಯವನ್ನು ಮನಗಾಣಬೇಕು.

ಯಜ್ಞಯಾಗಾದಿಗಳಲ್ಲಿ ಅವಶ್ಯವಾಗಿ ಅರ್ಪಿಸುತ್ತಿದ್ದ ಪ್ರಾಣಿವಧೆಯನ್ನು ಕಂಡು ಮರುಗಿದ ಬುದ್ಧನು ಧರ್ಮದ ಹೆಸರಿನಲ್ಲಿ ಜೀವಿಗಳನ್ನು ಹತ್ಯೆಮಾಡುವುದು ಯೋಗ್ಯವಲ್ಲ ಎಂದು ವಿರೋಧಿಸಿದ. ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ. ಮನುಷ್ಯನಿಗೆ ಅದನ್ನು ಕಿತ್ತುಕೊಳ್ಳುವ ಅಧಿಕಾರವಿಲ್ಲ. ಕ್ರೂರಮೃಗಗಳನ್ನು ಬಲಿಕೊಡುವುದಕ್ಕೆ ಬದಲಾಗಿ ಮಾನವೋಪಯೋಗಿಯಾದ ಸೌಮ್ಯಪ್ರಾಣಿಗಳನ್ನು ಅರ್ಪಿಸುವುದು ಆಶ್ಚರ್ಯಕರವಾದ ವಿಷಯವಾಗಿತ್ತು. ಐಹಿಕ ಬದುಕನ್ನು ಹಸನಾಗಿರಿಸಿಕೊಳ್ಳುವುದನ್ನು ವಿವೇಚಿಸದೆ, ಸ್ವರ್ಗದಲ್ಲಿ ಸುಖ ಸಿಗುತ್ತದೆಂಬ ಬಯಕೆಯಿಂದ ಪ್ರಾಣಿಗಳನ್ನು ಹಿಂಸಿಸುವುದು ಘೋರ ಅಪರಾಧವಷ್ಟೇ ಅಲ್ಲ, ಧರ್ಮದ ಮರ್ಮವನ್ನರಿಯದ ಅಜ್ಞಾನದಿಂದುಂಟಾದ ಪ್ರಕ್ರಿಯೆಗಳು ಅವು ಎಂದು ಸಾರಿದ ಬುದ್ಧ. ಯಜ್ಞದಲ್ಲಿ ಮಾಡಿದ ಹಿಂಸೆ, ಹಿಂಸೆಯಲ್ಲ ಎಂಬುದನ್ನು ಮಾನ್ಯಮಾಡುವುದಿಲ್ಲ. ಅಷ್ಟೇ ಅಲ್ಲದೆ ಹೀಗೆ ಅರ್ಪಿತವಾದ ಪ್ರಾಣಿಗಳು ಮರುಜನ್ಮದಲ್ಲಿ ಉತ್ತಮಸ್ಥಿತಿಯನ್ನು ಪಡೆಯುತ್ತವೆ ಎಂಬ ವಾದವನ್ನು ಮುಂದೊಡ್ಡುವುದನ್ನೂ ಅಂಗೀಕರಿಸುವುದಿಲ್ಲ. ಹಿಂಸೆಗೆ ಆಸ್ಪದವೀಯುವ ಯಾವುದೇ ವಿಧವಾದ ಯಜ್ಞವನ್ನೂ ಕಟುವಾಗಿ ವಿರೋಧಿಸುತ್ತಾನೆ. ಆದರೆ ಪ್ರಾಣಿಗಳ ಹತ್ಯೆಯಿಲ್ಲದ ಸಮುದಾಯದ ಅಭ್ಯುದಯಕ್ಕೋಸ್ಕರ ಮಾಡುವ ಯಜ್ಞವನ್ನು ಆತನು ವಿರೋಧಿಸದಿರುವುದು ಗಮನಾರ್ಹವಾದ ವಿಷಯ.[1]

ಈ ಧರ್ಮದ ಸಾರವೆಂದರೆ ಬುದ್ಧನು ಅರುಹಿದ "ನಾಲ್ಕು ಆರ್ಯಸತ್ಯ"ಗಳು. ಆರ್ಯರು ಎಂದರೆ ಚಂದ್ರಕೀರ್ತಿಯ ಅಭಿಪ್ರಾಯದಂತೆ, ವಿದ್ವಜ್ಜನರು ಇವರೇ ಇದರ ತಳವನ್ನೂ ಕಾಣಬಲ್ಲರು. ಈ ಪ್ರಪಂಚದಲ್ಲಿ ಪಾಮರರೇ ಅಧಿಕವಾಗಿ ಹುಟ್ಟುತ್ತಾರೆ, ದುಃಖವನ್ನೂ ಅನುಭವಿಸುತ್ತಾರೆ. ಅವರಿಗೆ ಈ ಸತ್ಯದ ಅರಿವಾಗುವುದಿಲ್ಲ. ಹತ್ತಿಯ ಸಣ್ಣ ಎಳೆ ಅಂಗೈ ಮೇಲಿದ್ದಾಗ ಯಾವ ನೋವೂ ಆಗುವುದಿಲ್ಲ. ಆದರೆ ಅದೇ ಕಣ್ಣಿಗೆ ಸೇರಿದಾಗ ವೇದನೆಯನ್ನುಂಟುಮಾಡುತ್ತದೆ. ಪಾಮರರು ಅಂಗೈಯಂತೆ, ಸುಸಂಸ್ಕೃತರು ನಯನದಂತೆ.[2] ಇಂತಹ ಆರ್ಯರ ಹೃದಯದಲ್ಲಿ ಈ ಪ್ರಪಂಚದಲ್ಲಿ ಅಂತರ್ಗತವಾಗಿರುವ ದುಃಖದ ಅರಿವಾಗುತ್ತದೆ.

ಆ ನಾಲ್ಕು ಆರ್ಯಸತ್ಯಗಳು ಹೀಗಿವೆ:

೧. ಜೀವನವು ಸಂಪೂರ್ಣ ದುಃಖಮಯವಾಗಿದೆ. ಜನನದಿಂದ ಮರಣದವರೆಗಿರುವ ಜೀವನಯಾತ್ರೆಯಲ್ಲಿ ಶರೀರಕ್ಕೆ ಸಂಬಂಧಿಸಿದ ರೋಗರುಜಿನಗಳು, ಅಪ್ರಿಯವಸ್ತುಗಳ ಸಮಾಗಮ, ಪ್ರಿಯವಸ್ತುಗಳ ವಿಯೋಗ, ಇಷ್ಟಾರ್ಥ ಈಡೇರದಿರುವಿಕೆ, ಅನಿಚ್ಛಿತಾರ್ಥವನ್ನು ಅನುಭವಿಸುವುದು, ವೃದ್ಧಾವಸ್ಥೆ ಇನ್ನೂ ಮುಂತಾದ ಅನೇಕ ದುಃಖಗಳನ್ನೂ ಅನುಭವಿಸುತ್ತಾನೆ. ಈ ಪ್ರಪಂಚ ಒಂದು ಉರಿಯುತ್ತಿರುವ ಮನೆಯಂತೆ; ಆನಂದದಿಂದ ಮಲಗಿರಲು ಹೇಗೆ ಸಾಧ್ಯ ಎಂದು ಪ್ರಶ್ನಿಸುತ್ತಾನೆ ಬುದ್ಧ.[3] ಮನುಷ್ಯನು ತನ್ನ ಮನಸ್ಸಿಗೆ ಪ್ರಿಯವಾದ ವಸ್ತುಗಳನ್ನು ಎಷ್ಟೆಷ್ಟು ಪ್ರೀತಿಸುವನೋ

---

1 Ananda K. Coomaraswamy: *Gotama the Buddha*, p. 161

2 ಊರ್ಣಾಪಕ್ಷ್ಮ ಯಥೈವ ಕರತಲಸಂಸ್ಥಂ ನ ವಿದ್ಯತೇ ಪುಂಭಿಃ ।
ಅಕ್ಷಿಗತಂ ತದೇವ ಹಿ ಜನಯತ್ಯರತಿಂ ಚ ಪೀಡಾಂ ಚ ॥
ಕರತಲಸದೃಶೋ ಬಾಲೋ ನ ವೇತ್ತಿ ಸಂಸಾರದುಃಖತಾಪಕ್ಷ್ಮ ।
ಅಕ್ಷಿಸದೃಶಸ್ತು ವಿದ್ವಾನ್ ತೇನೈವೋದ್ವಿಜತೇ ಗಾಢಮ್ ॥ (ಮಾಧ್ಯಮಿಕಕಾರಿಕಾವೃತ್ತಿ, ಪು. ೪೭೬)

3 ಕೋ ನು ಹಾಸೋ ಕಿಮಾನಂದೋ ನಿತ್ಯಂ ಪ್ರಜ್ವಲಿತೇ ಸತಿ । (ಧಮ್ಮಪದ, ೧೪೬)

ಅಷ್ಟಷ್ಟೂ ದುಃಖದ ಮೊಳೆಗಳು ಹೃದಯದಲ್ಲಿ ನಾಟುತ್ತವೆ.[1] ವಿವೇಕಿಗಳು ಎಲ್ಲವನ್ನೂ ದುಃಖವೆಂದು ತಿಳಿಯುತ್ತಾರೆ ಎಂದು ಯೋಗಸೂತ್ರದಲ್ಲಿದೆ.[2]

೨. ದುಃಖಸಮುದಯವೇ ಎರಡನೆಯ ಆರ್ಯಸತ್ಯ. ಸಮುದಯ ಎಂದರೆ ಕಾರಣ ಎಂದರ್ಥ. ಜಗತ್ತಿನಲ್ಲಿ ಯಾವುದೇ ಕಾರ್ಯವು ಕಾರಣವಿಲ್ಲದೆ ಉತ್ಪತ್ತಿಯಾಗುವುದಿಲ್ಲ. ನಾವು ಅನುಭವಿಸುವ ದುಃಖಕ್ಕೆ ಕಾರಣವೊಂದು ಅವಶ್ಯ ಇರಲೇಬೇಕು. ಇದಕ್ಕೆ ಪ್ರಧಾನಕಾರಣ ತೃಷ್ಣೆ. ಇದರಿಂದ ಜೀವಿಯು ಮತ್ತೆ ಮತ್ತೆ ಜನ್ಮವೆತ್ತುತ್ತಾನೆ. ವಿಷಯಾಭಿಲಾಷೆಯ ದಾಹವನ್ನು ತಣಿಸಲು ಪ್ರಯತ್ನಿಸುವವನು ದುಃಖದಿಂದ ವಿಮೋಚಿತನಾಗಲಾರ. ಮಾನವ ಆಸೆಯೆಂಬ ಬಲೆಯನ್ನು ತಾನೇ ನೆಯ್ದು ಅದರಲ್ಲಿ ಬಂಧಿತನಾಗಿರುತ್ತಾನೆ. (ಧಮ್ಮಪದ ೩೪೭). ಈ ತೃಷ್ಣೆಯು ನಾನಾ ವಿಧವಾಗಿರುತ್ತದೆ. ಇದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಿಕೊಳ್ಳಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

೩. ದುಃಖನಿರೋಧವೇ ಮೂರನೇ ಆರ್ಯಸತ್ಯ. ನಿರೋಧ ಎಂದರೆ ನಾಶ ಅಥವಾ ತ್ಯಾಗ. ದುಃಖವನ್ನು ಕೊನೆಗಾಣಿಸಿಕೊಳ್ಳಲು ಸಾಧ್ಯ ಎಂಬುದನ್ನು ಇದು ತಿಳಿಸುತ್ತದೆ. ಕಾರ್ಯ-ಕಾರಣನಿಯಮವನ್ನು ಬುದ್ಧಮತವು ಪ್ರಬಲವಾಗಿ ಪ್ರತಿಪಾದಿಸುತ್ತದೆ. ದುಃಖವಿರುವುದಾದರೆ, ಅದಕ್ಕೊಂದು ಕಾರಣವಿರಲೇಬೇಕು. ಇಂಥ ಕಾರಣವನ್ನು ನಾಶಮಾಡಿದರೆ ದುಃಖವು ತಾನಾಗಿಯೇ ನಾಶವಾಗುತ್ತದೆ. ಆದ್ದರಿಂದ ದುಃಖನಿರೋಧವೆಂದರೆ 'ನಿರ್ವಾಣ'. ಇಂತಹ 'ನಿರ್ವಾಣ'ವನ್ನು ಪಡೆದ ವ್ಯಕ್ತಿಯ ಸ್ಥಿತಿಯನ್ನು, ಬಿರುಗಾಳಿಗೆ ಜಗ್ಗದ ದೃಢವಾಗಿ ನಿಂತಿರುವ ಪರ್ವತಕ್ಕೆ ಹೋಲಿಸಿದೆ. ರೂಪ, ರಸಾದಿ ವಿಷಯಗಳಿಗೆ ಅವನು ವಿಚಲಿತನಾಗುವುದಿಲ್ಲ (ಅಂಗುತ್ತರನಿಕಾಯ ೩.೫೨).

೪. ದುಃಖವನ್ನು ನಿರ್ಮೂಲಗೊಳಿಸುವ ಮಾರ್ಗವೇ ನಾಲ್ಕನೇ ಆರ್ಯಸತ್ಯ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯ ಗುರಿಯೂ ನಿರ್ವಾಣವೇ. ಇದನ್ನು ಪಡೆಯಬಹುದಾದ ಮಾರ್ಗಕ್ಕೆ ಅಷ್ಟಾಂಗಮಾರ್ಗವೆಂದು ಹೆಸರು. ಇದು ಬುದ್ಧಮತದ ಆಚಾರ ಮೀಮಾಂಸೆ. ಪ್ರಜ್ಞೆ, ಶೀಲ ಮತ್ತು ಸಮಾಧಿ ಇವೇ ಮುಖ್ಯ ಸಾಧನಗಳು. ಈ ಮೂರರ ವಿಕಾಸವೇ ಅಷ್ಟಾಂಗಮಾರ್ಗ. ಶುಭ ಹಾಗೂ ಅಶುಭಕಾರ್ಯಗಳು ಯಾವುವು ಎಂಬುದನ್ನು ಸರಿಯಾಗಿ ಅರಿಯುವುದೇ ಸಮ್ಯಕ್‌ದೃಷ್ಟಿ. ಇದನ್ನು ಅವಲಂಬಿಸಿಕೊಂಡಿರುವುದೇ ಸಮ್ಯಕ್‌ಸಂಕಲ್ಪ. ಅಂದರೆ ಸರಿಯಾದ ನಿರ್ಣಯ. ಇವೆರಡೂ ಪ್ರಜ್ಞೆಗೆ ಸೇರಿವೆ. ಸಮ್ಯಕ್‌ವಚನ, ಸಮ್ಯಕ್‌ಕರ್ಮ, ಸಮ್ಯಕ್‌ಆಜೀವ ಈ ಮೂರೂ ಶೀಲಕ್ಕೆ ಸಂಬಂಧಿಸಿದವು. ಆಜೀವ ಎಂದರೆ ಶುದ್ಧವಾದ ಕೆಲಸವನ್ನು ಮಾಡಿ ಬದುಕುವುದು. ಸಮ್ಯಕ್‌ವ್ಯಾಯಾಮ—ಶುಭ ಕೆಲಸಗಳನ್ನು ಮಾಡಲು ಸತತವಾಗಿ ಪ್ರಯತ್ನಿಸುವುದು. ದೇಹದ ನಶ್ವರ ಸ್ವರೂಪವನ್ನೂ ಸುಖದುಃಖಗಳ ಸಾರಾಸಾರವಿವೇಕವನ್ನೂ ಮೇಲಿಂದ ಮೇಲೆ ಮನನ ಮಾಡುವುದೇ ಸಮ್ಯಕ್‌ಸ್ಮೃತಿ. ಚಿತ್ತದ ಏಕಾಗ್ರತೆಯ ಮೂಲಕ ಧ್ಯಾನದಲ್ಲಿ ನಿಲ್ಲುವುದೇ ಸಮ್ಯಕ್‌ಸಮಾಧಿ. ಇವುಗಳ ಮೂಲಕ 'ಭವಚಕ್ರ'ವನ್ನು ದಾಟಬಹುದು. ಈ ಮಾರ್ಗವನ್ನು ಅನುಸರಿಸಲು ಸತತ ಪ್ರಯತ್ನಶೀಲನಾಗಬೇಕು. ಇದು ಕೇವಲ ಅರಿಯುವ ವಿಷಯವಲ್ಲ. ಆಚರಿಸುವ ವಿಷಯ. ಯಾರ ಉಪದೇಶವೂ ಸ್ವಪ್ರಯತ್ನಕ್ಕಿಂತ ಮಿಗಿಲಾಗದು (ಧಮ್ಮಪದ, ೨೦-೪).

ಚಾರ್ವಾಕಮತವೊಂದನ್ನುಳಿದು ಉಳಿದ ಎಲ್ಲ ವೈದಿಕ-ಅವೈದಿಕ ಮತಗಳು ಈ ಸಂಸಾರವು ದುಃಖಮಯ ಎಂಬುದನ್ನು ಮಾನ್ಯಮಾಡಿವೆ. ವೀರಶೈವಮತವೂ ಇದಕ್ಕೆ ಹೊರತೇನಲ್ಲ. ಪುರುಷಾರ್ಥಗಳಲ್ಲೊಂದಾದ ಮೋಕ್ಷದ ಕಲ್ಪನೆಯೇ ಸಾಂಸಾರಿಕದುಃಖದಿಂದ ಬಿಡುಗಡೆ ಹೊಂದುವುದನ್ನು ನಿರೂಪಿಸುತ್ತದೆ. ಮೋಕ್ಷ ಭಾವಾತ್ಮಕವಾಗಿರಲಿ ಅಥವಾ ಅಭಾವಾತ್ಮಕವಾಗಿರಲಿ ಅಲ್ಲಿ ಯಾವ ವಿಧವಾದ ದುಃಖಲೇಶಕ್ಕೂ ಅವಕಾಶವಿಲ್ಲವೆಂಬುದಂತೂ ದಾರ್ಶನಿಕರೆಲ್ಲರಿಗೂ ಸಮ್ಮತವಾದ ವಿಷಯ. ಮೋಕ್ಷಪದವೇ ಈ ಅರ್ಥವ್ಯಾಪ್ತಿಯನ್ನುಳ್ಳದ್ದು. ಬಂಧಿತನಾಗಿರುವ ವ್ಯಕ್ತಿಗೆ ಮೋಕ್ಷವೇ ಹೊರತು, ಬಂಧನಕ್ಕೆ ಈಡಾಗದವನಿಗಲ್ಲ. ಈ ದೃಷ್ಟಿಯಿಂದ ಸಂಸಾರ ಅಥವಾ ಪ್ರಪಂಚ ಬಂಧವೆನಿಸುತ್ತದೆ. ಪರಮಾತ್ಮನ ಸಾಕ್ಷಾತ್ಕಾರವೇ ಜೀವಿತದ ಪರಮಗುರಿ. ಅದು ಗಮ್ಯಸ್ಥಾನ ಎಂದು ಭಾವಿಸಿ ಅದನ್ನು

---

1 ಯಾವತಃ ಕುರುತೇ ಜಂತುಃ ಸಂಬಂಧಾನ್ ಮನಸಃ ಪ್ರಿಯಾನ್ ।
ತಾವತೋಽಸ್ಯ ನಿಖನ್ಯಂತೇ ಹೃದಯೇ ಶೋಕಶಂಕವಃ ॥ (ವಿಷ್ಣುಪುರಾಣ, ೧-೧೭-೬೦)

2 ಯೋ.ಸೂ. ೨.೫. ವ್ಯಾಸಭಾಷ್ಯದಲ್ಲಿ ಹೀಗಿದೆ: ಹೇಗೆ ವೈದ್ಯಶಾಸ್ತ್ರದಲ್ಲಿ ರೋಗ, ರೋಗಹೇತು, ಆರೋಗ್ಯ ಮತ್ತು ಔಷಧಿ ಎಂಬ ನಾಲ್ಕು ಅಂಶಗಳಿವೆಯೋ ಅದೇ ರೀತಿ ಯೋಗಶಾಸ್ತ್ರದಲ್ಲೂ ನಾಲ್ಕು ಅಂಶಗಳಿವೆ: ಸಂಸಾರ, ಸಂಸಾರಹೇತು, ಮೋಕ್ಷ ಮತ್ತು ಮೋಕ್ಷೋಪಾಯ.

ಪಡೆಯಲು ಉದ್ಯುಕ್ತನಾದ ಮಾನವನಿಗೆ ಈ ಸಂಸಾರವು ದುಃಖಮಯವಾಗಿ ತೋರುತ್ತದೆ. ಪೂರ್ಣತೆಯ ಮಜಲನ್ನು ಮುಟ್ಟಿದ ವ್ಯಕ್ತಿಗೆ ಪ್ರಪಂಚವೆಲ್ಲವೂ ಶಿವಮಯವೇ ಆದರೂ ಸಾಧಕನ ದೃಷ್ಟಿಯಿಂದ ಇದು ದುಃಖಮಯವೇ. ಈ ಸಂಸಾರವು ಸಂಪೂರ್ಣಸುಖದ ಆಗರವಾಗಿದ್ದ ಪಕ್ಷದಲ್ಲಿ ಮನುಷ್ಯನು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಅಥವಾ ಮೋಕ್ಷವನ್ನು ಪಡೆಯುವ ಪ್ರಯತ್ನವನ್ನೇ ಕೈಬಿಡಬೇಕಾಗುತ್ತದೆ. ಭವವಿಮೋಚನೆಯ ಹಂಬಲವನ್ನೂ ತೊರೆಯಬೇಕಾಗುತ್ತದೆ. ಆಗ ಕಾಮಕ್ರೋಧಾದಿಗಳು ಅರಿಷಡ್ವರ್ಗಗಳಾಗಲಾರವು. ಮನುಷ್ಯನ ಸಹಜಪ್ರವೃತ್ತಿಗಳ ನಿಯಂತ್ರಣ ಅನಗತ್ಯವಾಗುವುದಲ್ಲದೆ ಅವುಗಳನ್ನೂ ಉದಾತ್ತತೆಯತ್ತ ಒಯ್ಯಬೇಕೆಂಬ ಪ್ರವೃತ್ತಿಯೇ ಅರ್ಥಹೀನವೆನಿಸುತ್ತದೆ. ದುಃಖದಿಂದ ಸಂಪೂರ್ಣ ಬಿಡುಗಡೆ ಹೊಂದಬೇಕಾದರೆ ಸತ್ಯಸ್ವರೂಪವನ್ನು ಅರಿತಾಗ ಅಥವಾ ಭಕ್ತಿ ಪಂಥಗಳು ಹೇಳುವಂತೆ, ಪರಮಾತ್ಮನನ್ನು ಅರಿತಾಗ ಎಂಬುದನ್ನು ಉಪನಿಷತ್ತು ಸಮರ್ಥಿಸುತ್ತದೆ.[1] ತಾನು ಇರುವ ಸ್ಥಿತಿ ದುಃಖ ಎಂದು ಅರಿವಾಗದಿರುವವರೆಗೂ ಮತ್ತೊಂದು ಆನಂದದ ಅನ್ವೇಷಣೆಗೆ ಯಾವ ವ್ಯಕ್ತಿಯೂ ಪ್ರಯತ್ನಿಸುವುದಿಲ್ಲ. ಪರಮಸತ್ಯವನ್ನು ಕಾಣಬೇಕೆಂಬ ತೀವ್ರ ಹಂಬಲವಿರುವ ಸಾಧಕನ ಪ್ರಾಥಮಿಕಸ್ಥಿತಿಯಲ್ಲಿ ಸಂಸಾರವು ಹೇಯವಾಗಿಯೇ ತೋರುತ್ತದೆ. ಜನನ-ಮರಣದ ಚಕ್ರದಿಂದ ವಿಮುಕ್ತನಾಗಲು ಹಾತೊರೆಯುತ್ತಾನೆ. ಶರಣರ ವಚನಗಳಲ್ಲಿ ಈ ವಿಷಯವು ನಿರೂಪಿತವಾಗಿರುವುದನ್ನು ಕಾಣಬಹುದು. ವಚನಗಳನ್ನು ಸ್ಥಳಗಳಾಗಿ ವಿಂಗಡಿಸಿರುವಲ್ಲಿ 'ಸಂಸಾರಹೇಯಸ್ಥಲ' ಎಂದು ಹೆಸರಿತ್ತಿರುವುದು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಅಲ್ಲದೆ ಅಲ್ಪಸ್ವಲ್ಪ ಸುಖವು ಅನುಭವಕ್ಕೆ ಬಂದರೂ ಅದು ಸ್ಥಿರವಲ್ಲ. ಪ್ರಾಪಂಚಿಕ ವಸ್ತುಗಳಿಂದ ಲಭಿಸಬಹುದಾದ ಯಾವುದೇ ಸುಖವು ಕ್ಷಣಿಕ ಎಂಬಲ್ಲಿ ಬೌದ್ಧಮತದ ಸಾದೃಶ್ಯವನ್ನು ಸ್ಪಷ್ಟವಾಗಿ ಗುರುತಿಸಬಹುದು. ಸಂಸಾರವನ್ನು ಅಪಾರವಾದ ಸಾಗರಕ್ಕೆ ಹೋಲಿಸಿ ಅದನ್ನು ದಾಟುವ ಬಗೆ ಹೇಗೆ ಎಂದು ವ್ಯಾಕುಲದಿಂದ ಭಗವಂತನ ಮೊರೆಹೊಕ್ಕಿರುವುದನ್ನು ವಚನಗಳಲ್ಲಿ ಕಾಣಬಹುದು. 'ಸಂಸಾರಸಾಗರದೊಳಗೆ ಬಿದ್ದೆ ನೋಡಾ ನಾನು, ಸಂಸಾರ ನಿಸ್ಸಾರವೆಂದು ತೋರಿದ ನೆನಗೆ ಗುರು' ಎಂದೂ 'ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯಾ' ಎಂದೂ ಅಕ್ಕಮಹಾದೇವಿಯು ಹಂಬಲಿಸುತ್ತಾಳೆ. ಸಂಸಾರವೆಂಬುದು ಒಂದು ವಿಷಪೂರಿತ ಸರ್ಪದಂತೆ, ಅದರ ನೆರಳಿನಲ್ಲಿ ಬದುಕುವವನು ಯಾವಾಗ ಅದರ ಕಡಿತಕ್ಕೆ ತುತ್ತಾಗಬಹುದೋ ! ಎನ್ನುತ್ತಾರೆ ಬಸವಣ್ಣನವರು. ಅವರ ವಚನ ಇಂತಿದೆ :

ಕಪ್ಪೆ ಸರ್ಪನ ನೆಳಲಲಿಪ್ಪಂತೆನಗಾಯಿತಯ್ಯಾ
ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ!
ಕರ್ತುವೇ ಕೂಡಲಸಂಗಮದೇವಾ, ಇವ ತಪ್ಪಿಸಿ
ಎನ್ನುವ ರಕ್ಷಿಸಯ್ಯಾ

ಮತ್ತೊಂದೆಡೆ ಸಂಸಾರವೊಂದು ಬಲೆಯಂತೆ, ಈ ಬಲೆಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಬೇಕೆನ್ನುತ್ತಾರೆ. ಸಂಸಾರದ ದಂದುಗ ಹಿಂಗುವುದು ಎಂದಿಗೆ ? ತುಪ್ಪದ ಸವಿಗೆ ಅಲಗು ನೆಕ್ಕುವ ನಾಯಿಯಂತೆ ಬಾಳುವೆಯಾಗಿದೆ ಈ ಸಂಸಾರದ ಸ್ಥಿತಿ. ಈ ಪ್ರಪಂಚದಲ್ಲಿ ಮನುಷ್ಯನ ಸ್ಥಿತಿ ನೀರ್ಗುಳ್ಳೆಯಂತೆ. ಅದನ್ನು ಎಷ್ಟೇ ಬಲಿಷ್ಠವಾದ ಕಬ್ಬಿಣದ ಕಟ್ಟಿನಿಂದ ಬಂಧಿಸಿ ಸುರಕ್ಷಿತವ ಮಾಡುವ ಪ್ರಯತ್ನವೆಲ್ಲವೂ ನಿಷ್ಫಲ ಎಂದು ಸಂಸಾರದ ಅಸಾರತೆಯನ್ನು ವ್ಯಕ್ತಪಡಿಸುತ್ತಾರೆ. ಇನ್ನೊಂದೆಡೆ ಈ ಸಂಸಾರವು 'ಗಾಳಿ ಬೀಸುತ್ತಿರುವಾಗ ಬಯಲಿನಲ್ಲಿ ಹಚ್ಚಿಟ್ಟ ಸೊಡರಿನಂತೆ' ಎಂದಿದ್ದಾರೆ. ಅಲ್ಲಮಪ್ರಭುಗಳು 'ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ' ಎಂದಿದ್ದಾರೆ. ಸಂಸಾರದ ಸಾರವೆಷ್ಟು ಎಂಬುದನ್ನು ಚಿತ್ರಿಸುವ ವಚನವೊಂದು ಹೀಗಿದೆ :

ಬಟ್ಟೆಗೊಂಡು ಹೋಗುತ್ತಿಪ್ಪ ಮನುಜನೊಬ್ಬ
ಹುಲಿ, ಕಾಡುಗಿಚ್ಚು, ರಕ್ಕಸಿ, ಕಾಡಾನೆಗಳು ನಾಲ್ಕುದೆಸೆಯಟ್ಟುತ್ತ ಬರೆ
ಕಂಡು ಭರದಿಂದ ಹೋಗದೆಸೆಯಿಲ್ಲದೆ ಬಾವಿಯ ಕಂಡು,
ತಲೆಯನೂರಿ ಬೀಳುವಲ್ಲಿ, ಹಾವ ಕಂಡು ಇಲಿ ಕಡಿದ ಬಳ್ಳಿಯ

---

1 ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥ (ಶ್ವೇತ, ೬–೨೦)

ಹಿಡಿದು ನಿಲೆ, ಜೇನಹುಳುಗಳು ಮೈಯನೂರುವಾಗ
ಮೂಗಿನ ತುದಿಯಲ್ಲಿ ಒಂದು ಹನಿ ಮಧುಬಿಂದು ಬೀಳೆ
ಆ ಮಧುವ ಕಂಡು ಹಿರಿದಪ್ಪ ದುಃಖವನೆಲ್ಲಾ ಸೈರಿಸಿ
ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ
ಈ ಸಂಸಾರಸುಖ, ವಿಚಾರಿಸಿ ನೋಡಿದರೆ ದುಃಖದಾಗರ,
ಇದನರಿತು ಸಕಲವಿಷಯಂಗಳಲ್ಲಿ ಸುಖವಿಂತುಂಟೆಂದು
ನಿರ್ವಿಷಯನಾಗಿ ನಿಂದ ನಿಲುವು ಚೆನ್ನಲಿಗೆ ಚೆನ್ನರಾಮ

'ಸಂಸಾರ'ವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಗಳೇ ಶಾಖೆಗಳು, ಪಂಚಕ್ಲೇಶಗಳೇ ಫಲಗಳು, ಪಂಚವಿಷಯಂಗಳೇ ರಸ, ಈ ಫಲವ ಬಯಸಿ ಮೆದ್ದವರೆಲ್ಲಾ ಜನನಮರಣಚಕ್ರಕ್ಕೆ ಸಿಕ್ಕಿ ನುಜ್ಜುಗುಜ್ಜಾಗುತ್ತಾರೆ. ಅಂತಹ ಫಲವನ್ನು ಮಾನವನು ಬಯಸಬಾರದೆಂದು ಸ್ವತಂತ್ರಸಿದ್ಧಲಿಂಗೇಶ್ವರರು ಎಚ್ಚರಿಸುತ್ತಾರೆ. ಶರಣ ಶರಣೆಯರ ಇಂತಹ ನೂರಾರು ವಚನಗಳಲ್ಲಿ ಈ ಪ್ರಪಂಚದ ಅಸ್ಥಿರತೆ ಹಾಗೂ, ಇದನ್ನು ನಂಬಿದವನು ಅಧಿಕ ದುಃಖವನ್ನೇ ಅನುಭವಿಸುತ್ತಾನೆ ಎಂಬಂಶವು ವಿವರಿಸಲ್ಪಟ್ಟಿರುವುದನ್ನು ನೋಡಬಹುದು.

ಹೀಗೆ ಸಂಸಾರದ ಅಸಾರತೆಯನ್ನು ವಿವರಿಸಿದ್ದರೂ ವೀರಶೈವಧರ್ಮವು ವ್ಯಕ್ತಿಯನ್ನು ನಿರಾಶಾವಾದದಲ್ಲಿಯೇ ನಿಲ್ಲಿಸದೆ, ದುಃಖದಿಂದ ವಿಮುಕ್ತಿಹೊಂದಿ, ಅಪರಿಮಿತವಾದ ಆನಂದದ ನೆಲೆಯತ್ತ ಹೋಗಲು ಪ್ರೇರೇಪಿಸುತ್ತದೆ. ಅಂತಹ ಆನಂದದ ಕ್ಷೇತ್ರವನ್ನು ತಲುಪುವ 'ಲಿಂಗಾಂಗಸಾಮರಸ್ಯ'ದ ಮಾರ್ಗವನ್ನು ಅದು ಸೂಚಿಸುತ್ತದೆ. ಜೀವಾತ್ಮನು ಭಕ್ತಿ–ಕರ್ಮ–ಜ್ಞಾನಗಳ ಸಮನ್ವಯದ ಮೂಲಕ ಷಟ್‌ಸ್ಥಲಸೋಪಾನವನ್ನೇರಿ, ತನ್ನೊಳಗಿರುವ 'ಮಹಾಘನವನ್ನು' ಅನುಭಾವಿಸಿದ ಬಳಿಕ, ಅದರ ವಿಕಾಸವೇ ವಿಶ್ವವೆಂದು ತಿಳಿದು 'ಸರ್ವವೂ ಶಿವಮಯ'ವೆಂದು ಪರಿಭಾವಿಸುವ ಹಂತವನ್ನೇರುತ್ತಾನೆ. ಬಸವಾದಿ ಶರಣರು ತಮ್ಮ ಸಾಧನೆಯ ಮೂಲಕ ಇಂತಹ ಔನ್ನತ್ಯದ ನಿಲುವನ್ನು ಇಹಜೀವನದಲ್ಲಿಯೇ ತಲುಪಿ ನುಡಿದಿರುವ ವಚನಗಳು ಮಾನವನಿಗೆ ಆತ್ಮಪ್ರತ್ಯಯವನ್ನು ಮೂಡಿಸುತ್ತವೆ.

## ೨

ವೀರಶೈವಧರ್ಮವೂ ಬೌದ್ಧಧರ್ಮದಂತೆಯೇ ಯಜ್ಞಯಾಗಾದಿಗಳನ್ನು ನಿಷೇಧಿಸುತ್ತದೆ. ಈ ನಿರಾಕರಣೆಯ ಹಿನ್ನೆಲೆಯಲ್ಲಿರುವ ಮೂಲಭಾವನೆ ಜೀವಿಗಳ ಅಹಿಂಸೆಯೇ ಹೊರತು ಮತ್ತೇನಲ್ಲ. ಮೀಮಾಂಸಾಮತವು 'ಯಾಗಾದಿರೇವ ಧರ್ಮಃ'-ಯಾಗಾದಿಗಳನ್ನು ಆಚರಿಸುವುದೇ ಧರ್ಮ ಎಂದು ನಂಬಿದರೆ, ಈ ಧರ್ಮದ ಅನುಭಾವಿಗಳಾದ ಬಸವಣ್ಣನವರು, ಷಣ್ಮುಖಶಿವಯೋಗಿಗಳು, ಉರಿಲಿಂಗಪೆದ್ದಿಗಳು 'ದಯವೇ ಧರ್ಮದ ಮೂಲ', 'ದಯವಿರಬೇಕು ಸಕಲ ಪ್ರಾಣಿಗಳಲ್ಲಿ','ಕೊಲದಿರ್ಪುದೇ ಧರ್ಮ' ಎಂದು ಸಾರಿದ್ದಾರೆ. 'ಬ್ರಹ್ಮ ಹಿ ಯಜ್ಞಃ' (ಶತ.ಬ್ರಾ. ೩–೧–೪–೧೫) 'ಪುರುಷೋ ವಾವ ಯಜ್ಞಃ'—ಮುಂತಾದದ್ದರಲ್ಲಿದ್ದ ಶ್ರೇಷ್ಠವಾದ ಅರ್ಥವೂ, ಗೀತೆಯು ಪ್ರತಿಪಾದಿಸುವ ದ್ರವ್ಯಯಜ್ಞ, ತಪೋಯಜ್ಞ, ಜ್ಞಾನಯಜ್ಞ, ಯೋಗಯಜ್ಞ ಮುಂತಾದ ವಿಶಾಲವಾದ ಅರ್ಥವೂ ಮರೆಯಾಗಿ ಮತ್ತೊಮ್ಮೆ ೧೨ನೇ ಶತಮಾನದಲ್ಲಿ ಸಂಕುಚಿತಾರ್ಥವನ್ನು ಪಡೆದಿದ್ದಿರಬಹುದು ಎಂದು ತೋರುತ್ತದೆ. ಇದಕ್ಕೋಸ್ಕರ ಬಸವಣ್ಣನವರು ಇಂತಹ ಕರ್ಮಕಾಂಡವನ್ನು ಕಟುವಾಗಿ ಟೀಕಿಸಿದ್ದಾರೆ. ವೇದವೂ ಘನವಾದದ್ದಲ್ಲ, ಏಕೆಂದರೆ ಅದು ಪ್ರಾಣಿವಧೆಯನ್ನು ಹೇಳುತ್ತದೆ. ದಯೆ, ಭಕ್ತಿ ಇವುಗಳಿಲ್ಲದ ಕರ್ಮಾಚರಣೆ ಶುಷ್ಕ ಎನ್ನುತ್ತಾರೆ. ಬುದ್ಧನಂತೆಯೇ ದಯಾರ್ದ್ರಹೃದಯವುಳ್ಳ ಬಸವಣ್ಣನವರು ಯಜ್ಞದಲ್ಲಿ ವಧಿಸಲ್ಪಡುವ ಹೋತವನ್ನು ನೀನು ಪರಮಾತ್ಮನಲ್ಲಿ ಮೊರೆ ಇಡು, ವೇದವನೋದಿದವರ ಮುಂದೆ, ಶಾಸ್ತ್ರವನೋದಿದವರ ಮುಂದೆ ಕಂಬನಿ ಸುರಿಸು, ನಿನ್ನ ಕೊಲೆಗೆ ಕಾರಣರಾದವರನ್ನು ಪರಮಾತ್ಮನು ಶಿಕ್ಷಿಸದೆ ಬಿಡಲಾರ ಎಂದು ಕೇಳಿಕೊಳ್ಳುತ್ತಾರೆ.

ವಚನಶಾಸ್ತ್ರದಲ್ಲಿ ಅಲ್ಲಲ್ಲಿ ಕಂಡುಬರುವ, ಭಕ್ತಿನಿರ್ಭರತೆಯಿಂದುಂಟಾದ ವೇದನಿಂದೆ, ಬ್ರಾಹ್ಮಣಗ್ರಂಥಗಳಲ್ಲಿ ನಿರೂಪಿತವಾಗಿರುವ ಯಜ್ಞಯಾಗಾದಿಗಳ ಮೂಲದಲ್ಲಿರುವ ಹಿಂಸೆಯನ್ನು ಕುರಿತಾದದ್ದೇ ಹೊರತು ಸಮಸ್ತ ವೇದವಾಙ್ಮಯವನ್ನಲ್ಲ. ಅದ್ವೈತ ಹಾಗೂ ಸಾಂಖ್ಯಮತದಂತೆ ಉಪನಿಷತ್ತಿನ ಜ್ಞಾನಮಾರ್ಗವನ್ನೂ ಈ ದರ್ಶನ ಅಂಗೀಕರಿಸುತ್ತದೆಯೇ ಹೊರತು ಮೀಮಾಂಸಕಮತವು ಒಪ್ಪುವ ಕೇವಲ ಕರ್ಮಮಾರ್ಗವನ್ನಲ್ಲ. ಭಕ್ತಿಜ್ಞಾನಗಳಿಲ್ಲದ ಕೇವಲ ಕರ್ಮಠತನವನ್ನು ಪ್ರತಿಪಾದಿಸುವ ವೇದಭಾಗವನ್ನು ಶಿವಶರಣರು ಅತಿಯಾಗಿ ಖಂಡಿಸುತ್ತಾರೆ.

ಶಿವಾಗಮಗಳನ್ನು ಒಪ್ಪುವವರು ವೇದವನ್ನು ಅನಿವಾರ್ಯವಾಗಿ ಮಾನ್ಯ ಮಾಡಬೇಕಾಗುತ್ತದೆ. ವಚನಕಾರರು ಅನೇಕ ಕಡೆ ವೇದಾಗಮಗಳ ಮಹತಿಯನ್ನು ತಿಳಿಸಿರುವುದನ್ನು ಕಾಣಬಹುದು.

ಉರಿಲಿಂಗಪೆದ್ದಿಗಳು ಹೀಗೆ ಹೇಳಿದ್ದಾರೆ:

> ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ,
> ಅಥರ್ವವೇದಂಗಳೆಂಬ ನಾಲ್ಕು ಶಾಖೆಗಳು, ವೇದಾಂಗಗಳೆಂಬ ಉಪ
> ಶಾಖೆಗಳು, ಶಾಸ್ತ್ರಂಗಳೆಂಬ ಅಂಕುರಪಲ್ಲವಗಳು, ಪುರಾಣಗಳೆಂಬ
> ಪುಷ್ಪಗಳು, ಆಗಮಗಳೆಂಬ ಕಾಯಿ ಬಲಿದು, ಶ್ರೀಪಂಚಾಕ್ಷರಿ
> ಯೆಂಬ ಮಧುರಸ ಹಣ್ಣುಗಳು ಅಗಣಿತ ಫಲವನು ಅನಂತ
> ಕಾಲ ಭೋಗಿಸಲು ಮತ್ತು ಜಿಹ್ವೆಯೊಳಗೆ ಬಂದಿರಲು ಭೋಗಿಸಿ
> ಸುಖಿಯಹುದಲ್ಲದೆ, ಇತರ ವಿದ್ಯೆಗಳೆಂಬ ಸಸಿಯು ಸಾಕಿ
> ಸಲಹಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

ಶರಣರ ಮಾತುಗಳಲ್ಲಿ ಅಲ್ಲಲ್ಲಿ ತೋರುವ ವೇದನಿಂದೆಯ ತುಣುಕು ಮಾತುಗಳನ್ನು ಗಮನಿಸಿ ಇದೂ ಜೈನ, ಬೌದ್ಧ ಮತಗಳಂತೆಯೇ ಸಮಗ್ರವೇದವಾಙ್ಮಯವನ್ನೇ ತಿರಸ್ಕರಿಸುತ್ತದೆ ಎಂಬ ಅಭಿಪ್ರಾಯ ಸಾಧುವಲ್ಲ. ಅವು ಆಯಾ ದೇಶ, ಕಾಲ, ವ್ಯಕ್ತಿಗಳನ್ನು ಕುರಿತು ಬಂದಿರಬಹುದಾದ ಮಾತುಗಳೆಂಬುದನ್ನು ಅರಿಯಬೇಕು. ಹಾಗಲ್ಲದಿದ್ದರೆ ವೇದ, ಉಪನಿಷತ್ತು ಗೀತೆಯಲ್ಲೂ ವೇದನಿಂದೆಯನ್ನು ಕಾಣಬಹುದು. ಅಂದಮಾತ್ರಕ್ಕೆ ಅವು ವೇದವಿರೋಧಿಗಳೆಂದೇನಲ್ಲ. ಈ ವಿಶ್ವಕ್ಕೆ ಆಧಾರವಾಗಿರುವ ನಿತ್ಯವಾದ ಪರಮತತ್ವವನ್ನು ಅನುಭಾವಿಸದಿದ್ದ ಮೇಲೆ ಋಗ್ವೇದ, ಯಜುರ್ವೇದ, ಸಾಮವೇದದ ಪಠನದಿಂದೇನು ?[1] ಬ್ರಹ್ಮವಿದರು ವಿದ್ಯೆಯನ್ನು ಪರಾ ಮತ್ತು ಅಪರಾ ಎಂದು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಮುಂತಾದವು ಅಪರಾವಿದ್ಯೆಗೆ ಸೇರಿದವು. ಪರಾವಿದ್ಯೆಯೆಂದರೆ ಬ್ರಹ್ಮನನ್ನು ಅರಿಯುವ ವಿದ್ಯೆ, ಅದೇ ಶ್ರೇಷ್ಠವೆಂದು ಮುಂಡಕೋಪನಿಷತ್ತು ಸಾರಿದೆ. (ಮುಂ, ೧-೧-೪, ೫) ವೇದ ಮುಂತಾದ ಅನೇಕ ವಿದ್ಯೆ ಕಲಿತಿದ್ದರೂ ದುಃಖಿತನಾಗಿದ್ದೇನೆ ಎನ್ನುತ್ತಾನೆ ನಾರದ ಛಾಂದೋಗ್ಯದಲ್ಲಿ (ಛಾ, ೭-೧-೩).

ತ್ರಿಗುಣಾತ್ಮಕವಾದ ವೇದವನ್ನು ಮೀರಿ ನಿಲ್ಲು ಎಂದು ಕೃಷ್ಣನು ಅರ್ಜುನನಿಗೆ ಉಪದೇಶವಿತ್ತಿದ್ದಾನೆ.[2] ಬ್ರಹ್ಮಜ್ಞಾನವಿಲ್ಲದ ಕೇವಲ ವೇದಾಧ್ಯಯನದಿಂದೇನು ಫಲ ? ಶಾಸ್ತ್ರದಿಂದೇನು ? ಎಂದು ಶಂಕರರೂ ಹೇಳಿದ್ದಾರೆ.[3] ಅಂದಮಾತ್ರಕ್ಕೆ ಅವರು ಸಂಪೂರ್ಣ ವೇದವನ್ನು ನಿರಾಕರಿಸಿದ್ದಾರೆಂದಭಿಪ್ರಾಯವೇ ? ಯಾವುದನ್ನು ಅರಿಯದ ಮುನ್ನ ಎಲ್ಲವನ್ನು ಅರಿತೂ ಪ್ರಯೋಜನವಿಲ್ಲವೋ ಯಾವುದನ್ನು ಅರಿತ ಬಳಿಕ ಎಲ್ಲವನ್ನು ಅರಿತಂತಾಗುವುದೋ ಹಾಗೂ ಅರಿಯಬೇಕಾದ ಪ್ರಯೋಜನವಿಲ್ಲವೋ ಅಂತಹುದನ್ನು ಅರಿಯಲು ಪ್ರಯತ್ನಿಸಬೇಕು ಎನ್ನುವುದೇ ಭಾರತೀಯ ತತ್ವಜ್ಞಾನಿಗಳ ಆದರ್ಶ. ಇಂತಹುದನ್ನು ಸಾಕ್ಷಾತ್ಕರಿಸಿಕೊಂಡ ಅಲ್ಲಮಪ್ರಭುಗಳ ಒಂದು ನುಡಿ ಹೀಗಿದೆ :

> ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ
> ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ
> ಸರ್ವಕಾರಣ ಲಿಂಗವೆಂದುದಾಗಿ, ಲಿಂಗವನೆ ಅರಿದೆ
> ಅರಿದರಿದು ಲಿಂಗಸಂಗವನೆ ಮಾಡುವೆ
> ಸಂಗಸುಖದೊಳೋಲಾಡುವೆ ಗುಹೇಶ್ವರ

ಜೀವನದ ಗುರಿ ಏನು ಎಂಬುದನ್ನು ಇಲ್ಲಿ ನಿರ್ದೇಶಿಸಿದ್ದಾರೆ. ವೀರಶೈವವು ಬಳಸುವ ಲಿಂಗಪದ ಉಪನಿಷತ್ತಿನಲ್ಲಿ ಪ್ರತಿಪಾದಿಸಿರುವ ಬ್ರಹ್ಮಪದಕ್ಕೆ ಸಂವಾದಿಯಾದದ್ದು. ಅದು ವಿಶ್ವಚೈತನ್ಯ, ಒಡಲೊಳಗೆ ಅಡಗಿರುವ 'ಮಹಾಘನ'.

---

[1] ಋಚೋ ಅಕ್ಷರೇ ಪರಮೇ ವ್ಯೋಮನ್, ಯಸ್ಮಿನ್ ದೇವಾ ಅಧಿವಿಶ್ವೇ ನಿಷೇದುಃ, ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತ ಇತಿ ನ ಹ ವಾ ಏತಸ್ಯರ್ಚಾ ನ ಯಜುಷಾ ನ ಸಾಮ್ನಾऽರ್ಥೋऽಸ್ತಿ
(ತೈ.ಬ್ರಾ. ೩-೧೦-೭)

[2] ತ್ರೈಗುಣ್ಯವಿಷಯಾ ವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ (ಗೀತೆ, ೨-೪೫)

[3] ಅಜ್ಞಾನ ಸರ್ಪದಷ್ಟಸ್ಯ ಬ್ರಹ್ಮಜ್ಞಾನೌಷಧಿಂ ವಿನಾ ।
ಕಿಮು ವೇದೈಶ್ಚ ಶಾಸ್ತ್ರೈಶ್ಚ ಕಿಮು ಮಂತ್ರೈಃ ಕಿಮೌಷಧೈಃ ॥ (ವಿ.ಚೂ. ೬೩)

ಬೌದ್ಧಮತದಂತೆಯೇ ವೀರಶೈವಮತವೂ ವರ್ಣಾಶ್ರಮವನ್ನು ಮಾನ್ಯಮಾಡುವುದಿಲ್ಲ. ಅನುಭಾವಿಗಳು ತಮ್ಮ ಅಂತರಂಗದ ಪ್ರೇರಣೆಯಿಂದಲೋ ಅಥವಾ ಕಾರುಣ್ಯದೃಷ್ಟಿಯಿಂದಲೋ ಸಮಾಜದಲ್ಲಿನ ಓರೆಕೋರೆಗಳನ್ನು ಅಂಕುಡೊಂಕುಗಳನ್ನು ಸುಧಾರಿಸಲು ಉಜ್ಜುಗಿಸುತ್ತಾರೆ. ಇಂತಹ ಪ್ರಯತ್ನದಲ್ಲಿ ಅವರು ಬದುಕಿದ ಸಮಾಜದ ಸಾಮಯಿಕ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಹೀಗೆ ಪರಿಹರಿಸುವ ಪ್ರಯತ್ನ ಏನುಂಟೋ ಅದು ಅವರ ಜೀವನದ ಪರಮಗುರಿಯಲ್ಲ. ಅದು ಆನುಷಂಗಿಕ ಕ್ರಿಯೆಯೆಂಬುದನ್ನು ಮನಗಾಣದೆ ಹೋದರೆ ಪ್ರತಿಯೊಬ್ಬ ವ್ಯಕ್ತಿಯೂ ಸುಧಾರಣೆಯ ಹೆಸರಿನಲ್ಲಿ ತಾನು ಕಂಡದ್ದೇ ಸತ್ಯವೆಂದು ಘೋಷಿಸುತ್ತಾ ತನ್ನ ಮನಬಂದಂತೆ ಸ್ವೇಚ್ಛಾಚಾರಿಯಾಗಿ ವರ್ತಿಸಬಹುದಾದ ಸಾಧ್ಯತೆ ಇದ್ದೇ ಇದೆ. ಬಹಿರಂಗಜೀವನದ ಸುಧಾರಣೆಯೇ ಮನುಷ್ಯನ ಚರಮಗುರಿಯಾಗುವುದಲ್ಲದೆ ಅಂತರಂಗದ ಸುಧಾರಣೆಗೆ ಗಮನ ತಪ್ಪಿಹೋಗುತ್ತದೆ. ಯಾವುದೇ ಸುಧಾರಣೆಯಾದರೂ ಸಾಮಯಿಕವಾದದ್ದು. ಸಮಸ್ಯೆಗಳಲ್ಲಿ ಕೆಲವು ಶತಶತಮಾನಗಳ ತನಕ ಇರಬಹುದಾದಂಥವು. ಕೆಲವು ಅಲ್ಪಕಾಲ ಇರತಕ್ಕವು. ನಮ್ಮ ದೇಶದಲ್ಲಿ ದೀರ್ಘಕಾಲ ಇರಬಹುದು ಎನಿಸಿದ್ದ ಸಾಮಾಜಿಕ ಸಮಸ್ಯೆಗಳಲ್ಲೊಂದಾದ ವರ್ಣಾಶ್ರಮ ಪದ್ಧತಿಯನ್ನು ಬುದ್ಧನು ಕಟುವಾಗಿ ವಿರೋಧಿಸಿದನು. ಆಧ್ಯಾತ್ಮದೊಡನೆ ಈ ಪದ್ಧತಿಯ ಸಂಬಂಧ ಕಲ್ಪಿಸಿದ್ದಂತೂ ನಮ್ಮ ದೇಶದ ಇತಿಹಾಸದ ದೊಡ್ಡ ಕಳಂಕ. ಉತ್ತಮವಾದ ಸಂಸ್ಕಾರಗಳು ಆನುವಂಶಿಕವಾಗಿ ಹರಿದುಬರುತ್ತವೆ ಎಂಬುದು ಖಚಿತವಾಗಿ ವೈಜ್ಞಾನಿಕವಾಗಿ ನಿರ್ಧರಿಸಲ್ಪಡಬೇಕಾಗಿದೆ. ಕೆಲವೊಮ್ಮೆ ಆಕಸ್ಮಿಕ ಸತ್ಯವಾಗಬಹುದಾದುದನ್ನು ನಿಯಮೇನ ಸಂಭವಿಸುತ್ತದೆ ಎಂದು ದೃಢವಾಗಿ ಹೇಳಲು ಸಾಧ್ಯವಿಲ್ಲ. ಅಲ್ಲದೆ ಇದರಿಂದ ಆನುವಂಶಿಕವಾದ ವೃತ್ತಿಯನ್ನು ಮಾಡಬೇಕಾಗುತ್ತದೆ. ಉಳಿದ ವೃತ್ತಿಗಳನ್ನು ಆಶ್ರಯಿಸುವಂತಿಲ್ಲ. ಬೇರೆ ಕಾರ್ಯವನ್ನು ಮಾಡಲು ಅಸಾಧಾರಣ ಸಾಮರ್ಥ್ಯವಿದ್ದರೂ ಮಾಡುವಂತಾಗದೆ ಪ್ರತಿಭೆಯನ್ನು ಕುಂಠಿತಗೊಳಿಸಿದಂತಾಗುವುದಲ್ಲದೆ ಸಾಮಾಜಿಕ ಅಭ್ಯುದಯವು ಸಾಧಿತವಾಗುವುದಿಲ್ಲ.

ಮಾನವಸಮಾಜದಲ್ಲಿ ಮೇಲು-ಕೀಳು ಬುದ್ಧಿಕೃತವಾದದ್ದೇ ಹೊರತು ವಾಸ್ತವಿಕವಲ್ಲ. ಸಾಮಾಜಿಕಕ್ಷೇತ್ರದಲ್ಲಷ್ಟೇ ಅಲ್ಲದೆ ಆಧ್ಯಾತ್ಮಿಕಕ್ಷೇತ್ರದಲ್ಲೂ ಹುಟ್ಟಿನಿಂದಲೇ ಅರ್ಹತೆಯನ್ನು ನಿರ್ಣಯಿಸುವುದನ್ನು ಬುದ್ಧ ಪ್ರಬಲವಾಗಿ ವಿರೋಧಿಸಿದ. ಸಮಾಜ ಸಂಕುಚಿತವಾಗಿದ್ದಾಗ ಆನುವಂಶಿಕವಾಗಿ ವೃತ್ತಿವ್ಯವಸ್ಥೆ ಏರ್ಪಟ್ಟಿದ್ದ ಕಾಲದಲ್ಲಿ ನಿರ್ಮಿತವಾದ ನಿಯಮ ಸಮಾಜ ವಿಸ್ತೃತವಾದಂತೆಲ್ಲಾ ಪರಿವರ್ತನೆ ಹೊಂದುವುದು ಅನಿವಾರ್ಯವಾಯಿತು. ಆತ್ಮನಿಗೆ ಯಾವ ಜಾತಿಯೂ ಇಲ್ಲ. ಅದು ಸ್ತ್ರೀಯಲ್ಲ, ಪುರುಷನಲ್ಲ, ಅದು ನಪುಂಸಕವಲ್ಲ, ಯಾವ ಯಾವ ಶರೀರವನ್ನು ಧರಿಸುತ್ತದೆಯೋ ಅದರೊಡನೆ ಬೆರೆಯುತ್ತದೆ ಎಂದು ಉಪನಿಷತ್ತು ಘೋಷಿಸುತ್ತದೆ.[1] ಆದ್ದರಿಂದ ವ್ಯಕ್ತಿ ಗುಣದಿಂದ ಶ್ರೇಷ್ಠನೇ ಹೊರತು ಹುಟ್ಟಿನಿಂದಲ್ಲ ಎಂಬುದನ್ನು ಬುದ್ಧಮತವು ಒಪ್ಪಿದೆ. 'ಜಟೆಯಿಂದಾಗಲಿ. ಗೋತ್ರದಿಂದಾಗಲಿ, ಜನ್ಮದಿಂದಾಗಲಿ ಬ್ರಾಹ್ಮಣನಾಗುವುದಿಲ್ಲ. ಯಾವನಲ್ಲಿ ಸತ್ಯವಿದೆಯೋ ಮತ್ತು ಧರ್ಮವಿದೆಯೋ ಅವನು ಸುಖಿ. ಅವನೇ ಬ್ರಾಹ್ಮಣ. ಯಾವನು ಸರ್ವಬಂಧಗಳನ್ನೂ ಕತ್ತರಿಸಿ ಧೀರನಾಗಿದ್ದಾನೋ ಆಸೆಗಳನ್ನು ತ್ಯಜಿಸಿದ್ದಾನೋ ಅವನೇ ಬ್ರಾಹ್ಮಣ. ಕೇವಲ ಬ್ರಾಹ್ಮಣಮಾತೆಯಿಂದ ಜನಿಸಿದ ಮಾತ್ರದಿಂದಲೇ ಬ್ರಾಹ್ಮಣನಾಗುವುದಿಲ್ಲ'.[2] ಹುಟ್ಟಿನಿಂದ ಯಾವನೂ ಬ್ರಾಹ್ಮಣನಾಗುವುದಿಲ್ಲ ಮತ್ತು ಶೂದ್ರನಾಗುವುದಿಲ್ಲ. ತನ್ನ ನಡತೆಯಿಂದ ಬ್ರಾಹ್ಮಣನಾಗುತ್ತಾನೆ ಹಾಗೂ ಶೂದ್ರನಾಗುತ್ತಾನೆ.[3]

ಮಹಾಭಾರತದಲ್ಲಿ ವರ್ಣವ್ಯವಸ್ಥೆಯ ಬಗೆಗೆ ಭಾರದ್ವಾಜ ಹಾಗೂ ಭೃಗುಮಹರ್ಷಿಯ ಸಂವಾದ ಹೀಗಿದೆ :

ಸತ್ವಗುಣ, ರಜೋಗುಣ, ರಜಸ್ತಮೋಮಿಶ್ರ ಮತ್ತು ತಮೋಗುಣ ಈ ನಾಲ್ಕು ವರ್ಣಗಳಿಂದ ವರ್ಣಭೇದವನ್ನು ಒಪ್ಪುವುದಾದರೆ ಎಲ್ಲ ವರ್ಣದವರಲ್ಲಿಯೂ ವರ್ಣಸಂಕರ ತೋರುತ್ತದೆ. ಕಾಮ, ಕ್ರೋಧ. ಲೋಭ, ಶೋಕ, ಭಯ. ಚಿಂತೆ, ಹಸಿವು. ಶ್ರಮ ಮುಂತಾದವು ಎಲ್ಲರಲ್ಲಿಯೂ ಇರುತ್ತವೆ. ಹೀಗಿದ್ದರೂ ವರ್ಣಭೇದ ಏಕೆ ಉಂಟಾಗುತ್ತದೆ ? ನಮ್ಮೆಲ್ಲರಿಗೂ ಶರೀರದಲ್ಲಿ ಬೆವರು, ಮಲ, ಮೂತ್ರ, ಕಫ ಮತ್ತು ರಕ್ತ ಇರುವುದು ಸಮಾನ. ಮತ್ತೆ ವರ್ಣಭೇದ ಏಕೆ ?

---

[1] ನೈವ ಸ್ತ್ರೀ ನ ಪುಮಾನೇಷಃ ನ ಚೈವಾಯಂ ನಪುಂಸಕಃ ।
ಯದ್ಯತ್ ಶರೀರಮಾದತ್ತೇ ತೇನ ತೇನ ಸ ಯುಜ್ಯತೇ ॥ (ಶ್ವೇತ, ೫–೧೦)

[2] ಧಮ್ಮಪದ : ೩೬೩, ೩೯೬

[3] Sacred Book of the East Series Vol. X ಸುತ್ತನಿಪಾತ ; ವಸಲಸುತ್ತ ೧೩೫

ರಾಜನೇ! ಬ್ರಾಹ್ಮಣತ್ವಕ್ಕೆ ಕಾರಣ ಜಾತಿಯಲ್ಲ, ಕುಲವಲ್ಲ, ವೇದಾಧ್ಯಯನವಲ್ಲ. ನಡತೆಯೇ ಅದಕ್ಕೆ ಮುಖ್ಯ ಕಾರಣ. ದುಷ್ಟನಾದ, ಆಚಾರವಿಲ್ಲದವನ ಕುಲದಿಂದೇನು ? ಸುವಾಸನೆಯುಳ್ಳ ಕುಸುಮಗಳಲ್ಲಿ ಕ್ರಿಮಿಗಳು ಹುಟ್ಟು ವುದಿಲ್ಲವೇ ? ಅಧಿಕವಾಗಿ ನಡತೆ ಇಲ್ಲದಿದ್ದರೆ ಅದು ಕೇವಲ ನಟನೆಯಂತಾಗುತ್ತದೆ. ಯಾವನು ಗುಣವಂತನೋ ಅವನೇ ವೇದಜ್ಞ. ತಲೆಯೋಡಿನಲ್ಲಿಟ್ಟ ನೀರು, ತಿತ್ತಿಯಲ್ಲಿಟ್ಟ ಹಾಲು ಹೇಗೆ ದೂಷಿತವಾಗುತ್ತವೋ ಅಂತೆಯೇ ನಡತೆಯಿಲ್ಲದ ವೇದಾಧ್ಯಯನ ನಿಷ್ಫಲವಾಗುತ್ತದೆ. ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ್ದರೂ ದುಷ್ಟನಾಗಿದ್ದರೆ ಶೂದ್ರನಿ ಗಿಂತಲೂ ಕಡೆ. ಆದ್ದರಿಂದ ಬ್ರಾಹ್ಮಣನೆನಿಸಿಕೊಳ್ಳಲು ನಡತೆಯೇ ಮುಖ್ಯ ಕಾರಣ.[1]

ಜಿನಸೇನನ ಶಿಷ್ಯ ಗುಣಭದ್ರನ ಉತ್ತರಪುರಾಣದಲ್ಲಿ ಹೀಗಿದೆ : 'ಗೋವು ಕುದುರೆ ಇವುಗಳಲ್ಲಿ ಕಂಡುಬರುವ ಜಾತಿಭೇದದಂತೆ ಮನುಷ್ಯರಲ್ಲಿ ತೋರುವುದಿಲ್ಲ. ಏಕೆಂದರೆ ಅವರೆಲ್ಲರ ಆಕೃತಿಯೊಂದೇ ಆಗಿದೆ.[2] ಈ ಮಾತು ಮನನಾರ್ಹ.

ವೀರಶೈವಧರ್ಮವೂ ಜನನದಿಂದಾಗಲಿ ವೃತ್ತಿಯಿಂದಾಗಲಿ ಶ್ರೇಷ್ಠ ಕನಿಷ್ಠ ಎಂಬ ಭಾವನೆಯನ್ನು ತೀವ್ರ ವಾಗಿ ವಿರೋಧಿಸುತ್ತದೆ. 'ಈ ಮಾನವರಲ್ಲಿ ಜ್ಯೇಷ್ಠರಾರೂ ಇಲ್ಲ, ಕನಿಷ್ಠರಾರೂ ಇಲ್ಲ, ಇವರೆಲ್ಲರೂ ಪರಸ್ಪರ ಸೋದರರು. ಸೌಭಾಗ್ಯಸಾಧನೆಗಾಗಿ ಮುಂದೆ ಮುಂದೆ ನಡೆಯುವವರಾಗಿದ್ದಾರೆ' ಎಂದು ಋಗ್ವೇದದಲ್ಲಿ ಸಾರಿದೆ.[3] ಮಾನವನ ಮಹತ್ವಕ್ಕೆ ಚಾರಿತ್ರ್ಯವೇ ಮಾನದಂಡವಾಗಬೇಕು. 'ಕೊಲುವವನು ಮಾದಿಗ, ಹೊಲಸು ತಿಂಬುವವನು ಹೊಲೆಯ, ಲಿಂಗಭಕ್ತನೇ ಕುಲಜನು' ಎನ್ನುತ್ತಾರೆ ಬಸವಣ್ಣನವರು. ಅವರ ದೃಷ್ಟಿಯಲ್ಲಿ ಮಾನವ ಸಮಾಜದಲ್ಲಿ ಎರಡೇ ವರ್ಗ—ಪರಮಾತ್ಮನ ಅಸ್ತಿತ್ವದಲ್ಲಿ ವಿಶ್ವಾಸವುಳ್ಳವರು ಮತ್ತು ನಂಬದವರು. ಇದನ್ನೇ ಭಕ್ತಕುಲ ಹಾಗೂ ಭವಿಕುಲ ಎಂದು ಕರೆದರು. ಭಾವಶುದ್ಧಿಯಿಂದ ಭಕ್ತಿ ನೆಲೆಗೊಂಡ ಭಕ್ತರೆಲ್ಲಾ ಒಂದೇ ಕುಲಕ್ಕೆ ಸೇರಿದವರು. ದೈವದ ಒಲುಮೆಗೆ ಕುಲ ಮುಖ್ಯವಲ್ಲ, ಸಾಧನೆ ಮುಖ್ಯ. ಸಾಮಾನ್ಯ ಕುಲದಲ್ಲಿ ಹುಟ್ಟಿದ ವ್ಯಕ್ತಿಗಳು ಹೇಗೆ ಅತ್ಯುನ್ನತ ಸ್ಥಿತಿ ಯನ್ನು ತಲುಪಿ ಆದರ್ಶ ವ್ಯಕ್ತಿಗಳಾದರು ಎಂಬುದನ್ನು ಶರಣನೊಬ್ಬ ಈ ರೀತಿ ತಿಳಿಸಿದ್ದಾನೆ:

> ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ
> ಕುಲವೇ ಡೋಹರನ ? ಕುಲವೇ ಮಾದಾರನ ? ಕುಲವೇ ದುರ್ವಾಸನ ?
> ಕುಲವೇ ವ್ಯಾಸನ ? ಕುಲವೇ ವಾಲ್ಮೀಕನ ? ಕುಲವೇ ಕೌಂಡಿಲ್ಯನ ?
> ಕುಲವ ನೋಳ್ಪಡೆ ಹುರುಳಿಲ್ಲ, ಅವರ ನಡೆ ನೋಳ್ಪಡೆ ನಡೆಯುವವರು
> ತ್ರಿಲೋಕದಲ್ಲಿಲ್ಲ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನ

ಆತ್ಮಸಾಕ್ಷಾತ್ಕಾರಕ್ಕೆ ಜಾತಿಯು ಪ್ರತಿಬಂಧಕವಾಗಲಾರದು ಎಂದು ಘೋಷಿಸಿರುವುದಲ್ಲದೆ, ಅದನ್ನು ಸಾಧಿಸು ವುದಕ್ಕೋಸ್ಕರ ಸಮಾನತೆ, ಭ್ರಾತೃತ್ವಗಳ ಸಂಕೇತವಾಗಿ, ಸಾಮಾಜಿಕವಾದ ಸುಭದ್ರತೆಗಾಗಿ, ತನ್ನೊಳಗಿನ ಬೆಳಗಿನ ಪ್ರತೀಕವಾಗಿ ಇವೆಲ್ಲಕ್ಕಿಂತ ಮಿಗಿಲಾಗಿ–ಅರುಹನ್ನು ಗಳಿಸುವ ಕುರುಹಾಗಿ ಲಿಂಗದೀಕ್ಷೆಯನ್ನು ಮಾಡಿದುದು ವೀರಶೈವ ಧರ್ಮದ ವೈಶಿಷ್ಟ್ಯ.

## ೩

ನೀತಿಗೂ ಧರ್ಮಕ್ಕೂ ನಿಕಟಸಂಬಂಧವಿದೆ. ಅವು ಒಂದೇ ನಾಣ್ಯದ ಎರಡು ಮುಖಗಳಂತೆ. ಧರ್ಮದ ಯಾವ ಸಂಬಂಧವೂ ಇಲ್ಲದ ನೀತಿಶಾಸ್ತ್ರ ಅಸಾಧ್ಯ. ಪರಿಣಾಮವೇ ನೀತಿಯ ಧರ್ಮ. ನೀತಿಯು ನಿಂತಿರುವುದು—ಮನುಷ್ಯನು ವಿಶ್ವದೊಡನೆ ಬೆಳೆಸಿಕೊಳ್ಳುವ ಸಂಬಂಧದ ಮೇಲೆ. ಬೌದ್ಧ ಹಾಗೂ ವೀರಶೈವಧರ್ಮವು ನೈತಿಕ ಪರಿಶುದ್ಧಿಗೆ ಪ್ರಾಧಾನ್ಯ ಕೊಟ್ಟಿವೆ. ಅವೆರಡೂ ಬೋಧಿಸುವ ನೈತಿಕ ವಿಷಯಗಳಲ್ಲಿ ಅನೇಕ ಸಾಮ್ಯವನ್ನು ಗುರುತಿಸಬಹುದು. ಸಾಮಾನ್ಯವಾಗಿ ಮನುಷ್ಯನಿಗೆ ಸಂಬಂಧಿಸಿದ ಎಲ್ಲ ಮತ-ಪಂಥಗಳೂ ಒಮ್ಮತದಿಂದಿವೆ.

---

[1] ಮಹಾಭಾರತ : ಶಾಂ.ಪ. ಅಧ್ಯಾಯ ೧೮೮ ;

[2] ನಾಸ್ತಿ ಜಾತಿಕೃತೋ ಭೇದಃ ಮನುಷ್ಯಾಣಾಂ ಗವಾಶ್ವವತ್ ।
ಆಕೃತಿಗ್ರಹಣಾತ್ತಸ್ಮಾದನ್ಯಥಾ ಪರಿಕಲ್ಪ್ಯತೇ ॥

[3] ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಂಭ್ರಾತರೋ ವಾವೃಧುಃ ಸೌಭಗಾಯ (ಋ, ೫–೬೦–೫)

ಆಸೆಯೇ ಭವದ ಬೀಜ, ತೃಷ್ಣೆಯೇ ಮಾನವನ ಸಕಲ ದುಃಖಗಳಿಗೂ ಮೂಲಕಾರಣ. 'ಬೇರುಸಹಿತ ಕೀಳದಿರುವ ಗಿಡವು ಹೇಗೆ ಮತ್ತೆ ಮತ್ತೆ ಚಿಗುರುವುದೋ, ಅದೇ ರೀತಿ ತೃಷ್ಣೆಯ ಬೇರನ್ನು ಕೀಳದಿದ್ದರೆ ದುಃಖವು ಮತ್ತೆ ಮತ್ತೆ ಹಿಂತಿರುಗಿ ಬರುತ್ತದೆ' (ಧಮ್ಮಪದ ೩೩೮). 'ಸಮುದ್ರದಂತೆ ಕಾಮ, ಕಾಮಕ್ಕೆ ಕೊನೆಯಿಲ್ಲ' (ತೈ.ಬ್ರಾ. ೨-೨-೫-೬) ಎಂದು ವೇದ ಹೇಳುತ್ತದೆ. ಆದ್ದರಿಂದ ಆಸೆಯನ್ನು ಸಂಪೂರ್ಣವಾಗಿ ತ್ಯಜಿಸಿದವನು ಸುಖಿಯಾಗಿರಬಲ್ಲ ಎಂದು ಬುದ್ಧಮತವು ಸಾರುತ್ತದೆ. ಶಿವಶರಣರೂ ಇದನ್ನು ತ್ಯಜಿಸುವಂತೆ ಕರೆ ನೀಡಿದ್ದಾರೆ. 'ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ' ಎಂದು ಅಲ್ಲಮ ಪ್ರಭುಗಳೂ, 'ಆಸೆಯಾಮಿಷ ತಾಮಸದಿಂದ ಭವಬಂಧನವಾದುದನರಿಯಾ', 'ಆಸೆಗೆ ಹುಟ್ಟಿದ ಪ್ರಾಣಿ ಆಸೆಯನು ಕಲಿತು ಪುಣ್ಯಪದವಿಯ ಬಯಸಿದರೆ ಭವಮಾಲೆಯ ಬರವು ತಪ್ಪದು' ಎಂದು ಆಸೆಯಿಂದಾಗುವ ಅನರ್ಥವನ್ನು ಬಸವಣ್ಣನವರೂ ತಿಳಿಸಿದ್ದಾರೆ. 'ತೆರಣಿಯ ಹುಳು ತಾನೇ ಗೂಡನ್ನು ನಿರ್ಮಿಸಿ ಅದರಲ್ಲಿ ಬಂಧಿತವಾಗುವಂತೆ' ಆಸೆಯ ಬಲೆಯನ್ನು ನೇಯ್ದು ಅದರಲ್ಲಿ ಮಾನವ ಬಂಧಿತನಾಗುತ್ತಾನೆ. ಮಾನವೀಯತೆಯಿಲ್ಲದ ಕ್ರಿಯೆಗಳನ್ನು ಆಚರಿಸುವುದಕ್ಕಿಂತ ಅಂತರಂಗದ ಶುದ್ಧಿಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುವುದು ಅತ್ಯಾವಶ್ಯಕ. ದೈವತ್ವಕ್ಕೆ ಮಾನವತೆಯೇ ಪ್ರಥಮ ಸೋಪಾನ. 'ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ ಘಾತವ ಮಾಡಿ ಗಂಗೆಯ ಮುಳುಗಿದರೆ ಆಗುವುದೇನಯ್ಯಾ' ಎನ್ನುತ್ತಾರೆ. ಆಸೆಯನ್ನು ಬಿಡಬೇಕೆಂದು ಬುದ್ಧಮತವು ಬೋಧಿಸುತ್ತದೆ. ಆದರೆ ಶರಣಧರ್ಮವು ಅದಕ್ಕೆ ಪ್ರಕೃತಿಯ ವಿಕಾರವಾದ ಮನಸ್ಸೇ ಮೂಲವಾದದ್ದರಿಂದ ಇಂತಹ ಮನಸ್ಸನ್ನು ಉನ್ನತ ಧ್ಯೇಯಗಳತ್ತ ತಿರುಗಿಸಿ ಅದನ್ನೂ ಉದಾತ್ತೀಕರಿಸಬೇಕೆಂದು ಬೋಧಿಸುತ್ತದೆ. ದಯೆ, ಅಹಿಂಸೆ, ಸತ್ಯವಚನ, ನಡೆನುಡಿಗಳ ಹೊಂದಾಣಿಕೆ ಮುಂತಾದ ನೀತಿಯ ಮುಖಗಳು ಎಲ್ಲ ಧರ್ಮಗಳಲ್ಲೂ ಇರುವಂತೆ ಇಲ್ಲೂ ಸಮಾನವಾದ ಅಂಶಗಳೇ.

೪

ಭಾರತೀಯ ತತ್ತ್ವಶಾಸ್ತ್ರದಲ್ಲಿ ಶೂನ್ಯತತ್ತ್ವವು ಅತ್ಯಂತ ಮಹತ್ವದ ವಿಷಯ. ಅರ್ಥಗರ್ಭಿತವಾದ, ಗಂಭೀರವಾದ, ಗಹನವಾದ ಈ ಪದವನ್ನು ಅತ್ಯಂತ ವ್ಯಾಪಕವಾಗಿ ಬಳಸಿದವರೆಂದರೆ ಬೌದ್ಧರು. ಅವರಲ್ಲೂ ಇದಕ್ಕೆ ವಿಶಿಷ್ಟವಾದ ತಾತ್ತ್ವಿಕಾರ್ಥದ ಸುದೃಢವಾದ ನೆಲೆಕಟ್ಟನ್ನು ಒದಗಿಸಿಕೊಟ್ಟು ಒಂದು ಸುವ್ಯವಸ್ಥಿತವಾದ ವಿನೂತನ ಆಯಾಮವನ್ನು ಕಲ್ಪಿಸಿದವನು, ಕ್ರಿ.ಶ. ಎರಡನೇ ಶತಮಾನದಲ್ಲಿದ್ದ ನಾಗಾರ್ಜುನ. ಈತನು ಬರೆದಿರುವ 'ಮಾಧ್ಯಮಿಕಕಾರಿಕೆ'ಯಲ್ಲಿ ಶೂನ್ಯಸಿದ್ಧಾಂತವನ್ನು ತರ್ಕದ ಆಧಾರದಿಂದ ಸಮರ್ಥಿಸಿ ಮಂಡಿಸಿದ್ದಾನೆ. ಇದನ್ನು ಆರ್ಯದೇವ, ಶಾಂತಿದೇವ, ಚಂದ್ರಕೀರ್ತಿ, ಬುದ್ಧಪಾಲಿತ ಮುಂತಾದವರು ತಮ್ಮ ವಿವರಣೆಯ ಮೂಲಕ ಇನ್ನಷ್ಟು ಸಮರ್ಥರೀತಿಯಿಂದ ಬೆಳಗಿಸಿದರು. ಈ ಸಿದ್ಧಾಂತವನ್ನು ಪ್ರತಿಪಾದಿಸಿದವರಿಗೆ ಮಾಧ್ಯಮಿಕರು ಎಂದು ಮತ್ತೊಂದು ಹೆಸರು. ಬುದ್ಧನು ನಿರೂಪಿಸಿದ 'ಮಧ್ಯಮಮಾರ್ಗ'ದ ಅನುಯಾಯಿಗಳಾದ ಕಾರಣ ಈ ಹೆಸರು ಬಂದಿದೆ. ಬುದ್ಧನು ನೈತಿಕ ಜೀವನದಲ್ಲಿ ಎರಡು ಅತಿರೇಕಗಳನ್ನೂ—ಸಂಪೂರ್ಣ ಶರೀರ ಶೋಷಣೆಯನ್ನು ಮತ್ತು ಸಂಪೂರ್ಣ ಭೋಗದಲ್ಲಿ ಮುಳುಗಿರುವಿಕೆಯನ್ನು ಖಂಡಿಸಿ, ಮಧ್ಯಮಮಾರ್ಗವನ್ನವಲಂಬಿಸಲು ಉಪದೇಶವನ್ನಿತ್ತ. ತಾತ್ತ್ವಿಕಕ್ಷೇತ್ರದಲ್ಲೂ ಸಹ ವಸ್ತುವು ಸ್ಥಿರ ಎಂಬ ಶಾಶ್ವತವಾದವನ್ನಾಗಲೀ, ಯಾವುದೂ ಇಲ್ಲ ಎಂಬ ವಿಚ್ಛೇದವನ್ನಾಗಲಿ, ಅಂಗೀಕರಿಸದೆ ಮಧ್ಯಮಮಾರ್ಗವನ್ನು ಅನುಸರಿಸುವಂತೆ ಕರೆ ನೀಡಿದ. ಶರೀರಕ್ಕಿಂತ ಸಂಪೂರ್ಣ ಭಿನ್ನವಾದ, ನಿತ್ಯವಾದ, ಸ್ಥಿರವಾದ ಆತ್ಮವಿದೆ ಎಂಬುದೇ 'ಶಾಶ್ವತ ದೃಷ್ಟಿ'. ಶರೀರಕ್ಕಿಂತ ಆತ್ಮವು ಭಿನ್ನವಲ್ಲ ಎಂದು ಭಾವಿಸಿ, ಶರೀರವು ನಾಶವಾದೊಡನೆ ಆತ್ಮವು ನಾಶವಾಗುವುದು ಎಂಬುದೇ 'ಉಚ್ಛೇದ ದೃಷ್ಟಿ.'[1] ಈ ಎರಡು ದೃಷ್ಟಿಗಳನ್ನೂ ತ್ಯಜಿಸಬೇಕು. ಮಹಾಯಾನಪಂಥದ ಮೊದಲಿನ ಕೃತಿಗಳಲ್ಲೊಂದಾದ 'ರತ್ನಕೂಟ'ವು (ಕಾಶ್ಯಪ ಪರಿವರ್ತ) ಸ್ಪಷ್ಟವಾಗಿ ಆತ್ಮ ಹಾಗೂ ನೈರಾತ್ಮ್ಯವಾದ ಈ ಎರಡು ನಿಲುವನ್ನೂ ಹೇಳಿ, ಮಧ್ಯಮಮಾರ್ಗವು ಇವೆರಡನ್ನು ಮೀರಿ ನಿಲ್ಲುತ್ತದೆ ಎಂದು ನಿರೂಪಿಸುತ್ತದೆ.[2] ಹೀಗೆ ಬುದ್ಧನು

---

[1] ಬಲದೇವ ಉಪಾಧ್ಯಾಯ: ಬೌದ್ಧದರ್ಶನ ಮೀಮಾಂಸಾ; ಪು. ೬೩

[2] ಆತ್ಮೇತಿ, ಕಾಶ್ಯಪ, ಅಯಂ ಏಕೋ ಅಂತಃ ನೈರಾತ್ಮ್ಯಂ ಇತ್ಯಯಂ ದ್ವಿತೀಯೋಽಂತ ಯದಾತ್ಮನೈರಾತ್ಮ್ಯಯೋ-ರ್ಮಧ್ಯಂ ತದರೂಪ್ಯಂ ಅನಿದರ್ಶನಂ...ಇಯಮುಚ್ಯತೇ, ಕಾಶ್ಯಪ, ಮಧ್ಯಮಾ ಪ್ರತಿಪತ್ ಧರ್ಮಾಣಾಂ ಭೂತಪ್ರತ್ಯವೇಕ್ಷಾ (ಕಾಶ್ಯಪಪರಿವರ್ತ, ಪು. ೭೨)

ಉಪದೇಶಿಸಿದ ಮಧ್ಯಮಮಾರ್ಗದ ನೈತಿಕತತ್ತ್ವವನ್ನು ಬುನಾದಿಯನ್ನಾಗಿಟ್ಟುಕೊಂಡು ಮಾಧ್ಯಮಿಕರು ತಾತ್ತ್ವಿಕವಾಗಿ ಶೂನ್ಯಸಿದ್ಧಾಂತದ ದೃಢವಾದ ಮಹಾಸೌಧವನ್ನು ನಿರ್ಮಿಸಿದರು. ಇವರ ದೃಷ್ಟಿಯಲ್ಲಿ ವಸ್ತು ಸತ್ತಲ್ಲ ಅಸತ್ತಲ್ಲ, ಇದಕ್ಕೆ ಬದಲಾಗಿ ಅದರ ಸ್ವರೂಪ ಇವೆರಡರ ಮಧ್ಯಬಿಂದುವಿನಲ್ಲಿ ನಿರ್ಣೀತವಾಗುತ್ತದೆ.[1]

ಈ ಶೂನ್ಯತತ್ತ್ವದ ಬೀಜವನ್ನು ವಿಶ್ವದಲ್ಲೇ ಅತ್ಯಂತ ಪ್ರಾಚೀನ ವಾಙ್ಮಯವಾದ ವೇದದಲ್ಲಿ ಗುರುತಿಸಬಹುದು. ಋಗ್ವೇದದ ನಾಸದೀಯಸೂಕ್ತದಲ್ಲಿ ಇದರ ಮೂಲವನ್ನು ಕಂಡುಕೊಳ್ಳಬಹುದು. 'ಪ್ರಾರಂಭದಲ್ಲಿ ಸತ್ ಇರಲಿಲ್ಲ, ಅಸತ್ ಇರಲಿಲ್ಲ. ಭೂಮಿ ಇರಲಿಲ್ಲ, ಅಂತರಿಕ್ಷವಿರಲಿಲ್ಲ, ಜೀವನವಿರಲಿಲ್ಲ, ಮೃತ್ಯುವು ಇರಲಿಲ್ಲ, ಹಗಲಿರಲಿಲ್ಲ, ರಾತ್ರಿಯಿರಲಿಲ್ಲ ; ಅದು ಸತ್ಯದ ಸತ್ಯ. ಅದು ಪ್ರಕಾಶವಲ್ಲ, ಅಂಧಕಾರವಲ್ಲ, ಈ ಸೃಷ್ಟಿ ಯಾವಾಗ ಆಯಿತು, ಏಕಾಯಿತು, ಹೇಗಾಯಿತು ಎಂಬುದನ್ನು ತಿಳಿಯುವವನು ಯಾವನು ? ಹೇಳುವವನು ಯಾವನು ?' ಎಂದು ವಿಶ್ವದ ಮೂಲತತ್ತ್ವವನ್ನು ವರ್ಣಿಸಿದೆ.[2] ಮೊದಲು ಅಸತ್ ಇತ್ತು ಅನಂತರ ಅದರಿಂದ ಸತ್ ಹುಟ್ಟಿತು ಎಂದು ಉಪನಿಷತ್ತು ಹೇಳುತ್ತದೆ.[3] ಹೀಗೆ ಮೂಲತತ್ತ್ವವನ್ನೂ ನಿಷೇಧಾತ್ಮಕ ಮಾತಿನಿಂದ ನಿರೂಪಿಸಿರುವ ರೀತಿ ಇದು.

ವಿಶ್ವಸೃಷ್ಟಿಯ ಮೂಲದಲ್ಲಿ ಏನಿತ್ತು ಎಂಬುದರ ಬಗೆಗೆ ಉಪನಿಷತ್ತುಗಳಲ್ಲಿ ಎರಡು ಪ್ರಧಾನ ವಿಚಾರಧಾರೆಗಳಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು ನಿಷೇಧಾತ್ಮಕ, ಮತ್ತೊಂದು ವಿಧಾಯಕ. ಪರಮತತ್ತ್ವವಾದ ಬ್ರಹ್ಮದ ಸ್ವರೂಪವನ್ನು ನಿಷೇಧವಾಕ್ಯಗಳ ಮೂಲಕ ವರ್ಣಿಸಿರುವುದನ್ನು ನೋಡಬಹುದು. ಅದು ಸ್ಥೂಲವಲ್ಲ, ಅಣುವಲ್ಲ, ಹ್ರಸ್ವವಲ್ಲ, ದೀರ್ಘವಲ್ಲ, ಛಾಯೆಯಲ್ಲ, ನೆರಳಲ್ಲ, ಕಾಯವಲ್ಲ, ಅಕಾಯವಲ್ಲ....' (ಬೃ. ೩.೮.೮.), 'ವಾಣಿ ಮತ್ತು ಮನಸ್ಸು ಈ ತತ್ತ್ವವನ್ನು ಸ್ಪರ್ಶಿಸಲಾರದೆ ಹಿಂತಿರುಗಿ ಬರುತ್ತವೆ' (ತೈ ೨-೪-೧), 'ಯಾವನು ನಾನು ಬ್ರಹ್ಮನನ್ನು ಅರಿತಿರುವೆನು ಎನ್ನುತ್ತಾನೋ ಅವನು ವಾಸ್ತವವಾಗಿ ಬ್ರಹ್ಮನನ್ನು ಅರಿತಿರಲಾರ. ಯಾವನು ನಾನು ಬ್ರಹ್ಮನನ್ನು ಅರಿಯಲಾಗಲಿಲ್ಲ ಎನ್ನುತ್ತಾನೋ ಅವನು ವಾಸ್ತವವಾಗಿ ಬ್ರಹ್ಮನನ್ನು ಅರಿತಿದ್ದಾನೆ' (ಕೇನ, ೨.೩), ಬ್ರಹ್ಮನನ್ನು ವಿಶುದ್ಧವಾದ ನಿರ್ವಿಕಲ್ಪಜ್ಞಾನದ ಮೂಲಕ ಸಾಕ್ಷಾತ್ಕರಿಸಿಕೊಳ್ಳಬಹುದು. 'ಅದು ಅತರ್ಕ್ಯ, ಅಚಿಂತ್ಯ, ಅಗ್ರಾಹ್ಯ, ಅವ್ಯಪದೇಶ್ಯ ಮತ್ತು ನಿಷ್ಪ್ರಪಂಚ' (ಮಾಂಡೂಕ್ಯ, ೭). ಆದ್ದರಿಂದ 'ವಿದ್ವಾಂಸನು ವ್ಯರ್ಥವಾದ ಶಬ್ದಾಡಂಬರದಲ್ಲಿ ಬೀಳಬಾರದು' (ಬೃ. ೪.೪.೨೧). ತತ್ತ್ವವು ಅನಿರ್ವಚನೀಯಸ್ವರೂಪವೇ ಹೊರತು ಅಭಾವಾತ್ಮಕವಲ್ಲ ಎಂಬ ಈ ನೇತಿಮಾರ್ಗವೇ ಬ್ರಹ್ಮಾದ್ವೈತಿಗಳ ನಿಲವು.

ಪರಮತತ್ತ್ವವಾದ ಬ್ರಹ್ಮದ ಸ್ವರೂಪವನ್ನು 'ಅದು ಸತ್ಯ, ಜ್ಞಾನ ಮತ್ತು ಅನಂತ ; ಅದು ಆನಂದಸ್ವರೂಪ' ಮುಂತಾದ ವಿಶೇಷಣಗಳಿಂದ ಪ್ರತಿಪಾದಿಸುವ ಸವಿಶೇಷಾದ್ವೈತದ ಮತ್ತೊಂದು ವಿಚಾರಧಾರೆಯನ್ನೂ ಉಪನಿಷತ್ತಿನಲ್ಲಿ ಕಾಣಬಹುದು.

ಮಾಹಾಯಾನಿಕ ಬೌದ್ಧರು ಬಳಸಿರುವ ಶೂನ್ಯಪದದ ಅರ್ಥವ್ಯಾಪ್ತಿಯನ್ನು ಗ್ರಹಿಸಿದಾಗ, ಅವರು ನಿರೂಪಿಸುವ ಶೂನ್ಯಾದ್ವೈತವು ನಿರ್ವಿಶೇಷಬ್ರಹ್ಮವನ್ನು ಪ್ರತಿಪಾದಿಸುವ ಬ್ರಹ್ಮಾದ್ವೈತದ ಮತ್ತೊಂದು ಮುಖವೆಂಬುದನ್ನು ಮನಗಾಣಬಹುದು. ಶ್ರುತಿಯ ಸಹಾಯವಿಲ್ಲದೆ ಶೂನ್ಯವನ್ನು ಸ್ಥಾಪಿಸುವುದೊಂದೇ ಇವೆರಡರ ಪ್ರಮುಖ ಅಂತರವೆಂದು ಭಾಸವಾಗುತ್ತದೆ. ಸರ್ವವಿಷಯಗಳಿಗೂ ವೇದವೇ ಪರಮಪ್ರಮಾಣವೆಂದು ಸಾಧಿಸುವ ಕುಮಾರಿಲಭಟ್ಟರಂತೂ ಬೌದ್ಧರು ಪ್ರತಿಪಾದಿಸುವ ವಸ್ತುಕ್ಷಣಿಕವಾದ, ನೈರಾತ್ಮ್ಯವಾದ ಇವುಗಳಿಗೂ ಉಪನಿಷತ್ತೇ ಮೂಲ ಎಂದಿರುವುದು ಗಮನಾರ್ಹವಾದ ವಿಷಯ.[4]

ಬುದ್ಧನ ನಿರ್ಯಾಣವಾದ ಅನತಿಕಾಲದಲ್ಲೇ ಆತನ ಉಪದೇಶವನ್ನು ಕ್ರಮಬದ್ಧಗೊಳಿಸಿ ರಚಿತವಾದ ತ್ರಿಪಿಟಕ ಸಾಹಿತ್ಯದಿಂದ ಪ್ರಾರಂಭವಾಗಿ ಕ್ರಿ.ಶ. ೮ನೇ ಶತಮಾನದವರೆಗೂ ಸಮೃದ್ಧವಾಗಿ ಬೆಳೆದು ಉಚ್ಚಾಗ್ರಯಸ್ಥಿತಿಯನ್ನು ಮುಟ್ಟಿರುವುದನ್ನು ಬೌದ್ಧಸಾಹಿತ್ಯಚರಿತ್ರೆಯ ಅಧ್ಯಯನದಿಂದ ಮನಗಾಣಬಹುದು. ಈ ಸಹಸ್ರ ವರ್ಷಗಳಿಗೂ ಮೀರಿದ ಸುದೀರ್ಘ ಅವಧಿಯಲ್ಲಿ ಬೌದ್ಧರಲ್ಲೇ ಬುದ್ಧನು ಉಪದೇಶಿಸಿದ ತತ್ತ್ವದ ಬಗೆಗೆ ಭಿನ್ನಾಭಿಪ್ರಾಯ

---

1 ಅಸ್ತೀತಿ ನಾಸ್ತೀತಿ ಉಭೇಽಪಿ ಅಂತಾ ಶುದ್ಧೀ ಅಶುದ್ಧೀತಿ ಉಭೇಽಪಿ ಅಂತಾ ।
ತಸ್ಮಾದುಭೇಽಂತ ವಿವರ್ಜಯಿತ್ವಾ ಮಧ್ಯೇ ಹಿ ಸ್ಥಾನಂ ಪ್ರಕರೋತಿ ಪಂಡಿತಃ ॥ (ಸಮಾಧಿರಾಜಸೂತ್ರ, ೯.೨೭)

2 ಋಗ್ವೇದ, ೧೦.೧೯೨

3 ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ. (ತೈ, ಉ. ೨.೭)

4 ವಿಜ್ಞಾನಮಾತ್ರಕ್ಷಣಭಂಗನೈರಾತ್ಮ್ಯವಾದಾನಾಮಪಿ ಉಪನಿಷತ್ಪ್ರಭವತ್ವಂ ವಿಷಯೇಷ್ವಾತ್ಯಂತಿಕರಾಗಂ ವಿನಿವರ್ತಯಿತು-
ಮಿತ್ಯುಪಪನ್ನಂ ಸರ್ವೇಷಾಂ ಪ್ರಾಮಾಣ್ಯಮ್ । ತಂತ್ರವಾರ್ತಿಕ

ಉಂಟಾಗಿ, ಅನೇಕ ಪಂಥಗಳಾದವು. ಅವುಗಳಲ್ಲಿ ಪ್ರಧಾನವಾಗಿ ಹೀನಯಾನ, ಮಹಾಯಾನ ಎಂಬ ಎರಡು ಕವಲು ಗಳುಂಟಾದುವು. ಇವೆರಡರಲ್ಲೀ ಬುದ್ಧನು ಬೋಧಿಸಿದ ಶೂನ್ಯತತ್ತ್ವ ಹಾಗೂ ನಿರ್ವಾಣಸ್ವರೂಪದ ಬಗೆಗೆ ಮತ ಭೇದವಿದೆ.

ಇಷ್ಟೇ ಅಲ್ಲದೆ ಅಸಂಗ, ವಸುಬಂಧು ನಿರೂಪಿಸಿದ ಯೋಗಾಚಾರಮತದ ವಿಜ್ಞಾನವಾದಕ್ಕೂ ದಿಙ್ನಾಗ, ಧರ್ಮ ಕೀರ್ತಿ, ಶಾಂತರಕ್ಷಿತ ಹಾಗೂ ಕಮಲಶೀಲರು ಪ್ರತಿಪಾದಿಸಿದ ವಿಜ್ಞಾನವಾದಕ್ಕೂ ಸಾಕಷ್ಟು ವ್ಯತ್ಯಾಸವಿದೆಯೆಂದು ಅನೇಕ ಆಧುನಿಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶಂಕರಾಚಾರ್ಯರು ಉಲ್ಲೇಖಿಸಿ ಖಂಡಿಸಿರುವುದು ದಿಙ್ನಾಗ, ಧರ್ಮಕೀರ್ತಿ ಮುಂತಾದವರು ಹೇಳಿರುವ ಸ್ವತಂತ್ರವಿಜ್ಞಾನವಾದವನ್ನೇ ಹೊರತು ಅಶ್ವಘೋಷ, ಅಸಂಗ,ವಸುಬಂಧು ಪ್ರತಿಪಾದಿಸಿರುವ ವಾಸ್ತವವಾದ ವಿಜ್ಞಾನವಾದವಲ್ಲ. ಅವರು ದಿಙ್ನಾಗ ಹಾಗೂ ಧರ್ಮಕೀರ್ತಿಗಳ ಕೃತಿಗಳಿಂದ ಉಲ್ಲೇಖಿಸಿರುತ್ತಾರೆಯೇ ಹೊರತು ಲಂಕಾವತಾರಸೂತ್ರ, ಅಸಂಗ, ವಸುಬಂಧುಗಳ ಕೃತಿಗಳಿಂದ ಉದಾಹರಿಸಿಲ್ಲ.[1] ಹೀಗೆ ಅನೇಕ ಕವಲುಗಳಾಗಿ ಒಡೆದಿರುವ ಬೌದ್ಧದರ್ಶನದಲ್ಲಿನ ಯಾವ ಶಾಖೆಯನ್ನು ಅವರು ನಿರಾಕರಿಸಿದ್ದಾರೆ ಎಂಬುದು ಮಹತ್ವದ ವಿಷಯ. ಜೈನರು ಹಾಗೂ ವೇದಪ್ರಾಮಾಣ್ಯವಾದಿಗಳೆಲ್ಲ ಒಕ್ಕೊರಲಿನಿಂದ ಮಹಾಯಾನಪಂಥವು ಪ್ರತಿಪಾದಿಸಿರುವ ಶೂನ್ಯತತ್ತ್ವವನ್ನು ಅದು ನಿಷೇಧಾತ್ಮಕವಾದದ್ದು ಎಂದೇ ಗ್ರಹಿಸಿ ಖಂಡಿಸಿದ್ದಾರೆ. ಅವರಿಗೆ ಬುದ್ಧನು ಬೋಧಿಸಿದ ತ್ರಿಪಿಟಕಗಳ ಪರಿಚಯವಿತ್ತೇ ಎಂಬುದರ ಬಗೆಗೆ ಆಧುನಿಕ ವಿದ್ವಾಂಸರು ಸಂಶಯ ತಳೆದಿದ್ದಾರೆ. ಶೂನ್ಯ ತತ್ತ್ವದ ನೈಜಸ್ವರೂಪವನ್ನು ಅರಿಯಬೇಕಾದರೆ ಅದನ್ನು ವಿರೋಧಿಸುವವರು ನಿರೂಪಿಸುವ ಕೃತಿಗಳಿಗೆ ಗಮನವೀಯದೆ ಬೌದ್ಧರ ಮೂಲಗ್ರಂಥಗಳನ್ನೇ ಆಶ್ರಯಿಸುವುದು ಸೂಕ್ತವಾದುದು. ಏಕೆಂದರೆ ವಿರೋಧಿಗಳು ಅದನ್ನು ಸಂಪೂರ್ಣ ವಿರೂಪಗೊಳಿಸಿ ಅಪವ್ಯಾಖ್ಯಾನಗೈದಿರಲು ಸಾಧ್ಯ. ಇಂಥ ನಿದರ್ಶನಗಳಿಲ್ಲದೆ ಇಲ್ಲ. ಇಷ್ಟೇ ಅಲ್ಲದೆ ಸ್ವಮತಾನುಯಾಯಿ ಗಳೇ ತಮ್ಮ ಮೂಲಿಗರ ಆಶಯವನ್ನು ಸಂಪೂರ್ಣವಾಗಿ ಅರಿಯಲಾಗದೆ ಭಿನ್ನಭಿನ್ನ ರೀತಿಯಲ್ಲಿ ವಿವರಿಸಿರುವುದನ್ನೂ ಕಾಣಬಹುದು. ಅದ್ವೈತದರ್ಶನದಲ್ಲಿ, ಅವಿದ್ಯಾಸ್ವರೂಪಕ್ಕೆ ಸಂಬಂಧಿಸಿದಂತೆ ಭಾಮತೀಕಾರ ಹಾಗೂ ವಿವರಣಕಾರರ ನಿಲುವುಗಳಲ್ಲಿರುವ ಭೇದವೇ ಇದಕ್ಕೆ ಸ್ಪಷ್ಟ ನಿದರ್ಶನ. ವ್ಯಾಖ್ಯಾನಕಾರರು ಕಾಲಾನುಗುಣವಾಗಿ, ತಮ್ಮ ತಮ್ಮ ಮತ ಪ್ರಕ್ರಿಯೆಗನುಸಾರವಾಗಿ ಹೇಗೆ ವಿಭಿನ್ನ ವಿವರಣೆ ನೀಡಬಹುದೆಂಬುದನ್ನು ಬಾದರಾಯಣರಚಿತ ಬ್ರಹ್ಮಸೂತ್ರ ಗಳಿಗಿರುವ ವಿವಿಧಭಾಷ್ಯಗಳಿಂದ ಅರಿಯಬಹುದು.

ಬೌದ್ಧರು ನಿರೂಪಿಸಿದ ಶೂನ್ಯತತ್ತ್ವದ ವಿಚಾರದಲ್ಲೂ ವಿವಿಧ ಅಭಿಪ್ರಾಯಗಳಿವೆ. ಅದು ಪ್ರಜ್ಞಾಪಾರಮಿತ ಮುಂತಾದ ಮಾಹಾಯನಸೂತ್ರಗ್ರಂಥಗಳಲ್ಲಿ ಸಂಕ್ಷೇಪವಾಗಿ ನಿರೂಪಿತವಾಗಿದೆ. ಹೀಗೆ ಪ್ರಾರಂಭವಾಗಿ, ನಾಗಾರ್ಜುನ ನಿಂದ ನಿಶಿತವಾದ ತರ್ಕದ ಆಧಾರದ ಮೇಲೆ ಸುವ್ಯವಸ್ಥಿತವಾಗಿ ಸಾಧಿತವಾದ ಭಾವ-ಅಭಾವಗಳಿಗೆ ಮೀರಿದ ಶೂನ್ಯ ತತ್ತ್ವವು ಚಂದ್ರಕೀರ್ತಿ, ಅಸಂಗ, ವಸುಬಂಧು, ದಿಙ್ನಾಗ, ಧರ್ಮಕೀರ್ತಿ, ಕಮಲಶೀಲರವರೆಗೆ ವಿವಿಧ ರೀತಿಯ ವಿವರಣೆ ಗಳಿಗೆ ಒಳಪಟ್ಟಿರುವುದನ್ನು ಬೌದ್ಧದಾರ್ಶನಿಕ ಇತಿಹಾಸದಿಂದ ಅರಿಯಬಹುದು. ಶ್ರೇಷ್ಠವೂ, ಗಹನವೂ, ಗಂಭೀರವೂ ಆದ ತತ್ತ್ವವೊಂದು ಅನುಭಾವದ ನೆಲೆಯನ್ನು ಉಲ್ಲಂಘಿಸಿ ಬುದ್ಧಿಯ ಕಕ್ಷೆಯನ್ನು ಸೇರಿದಾಗ ಎಷ್ಟು ವಿರೂಪಗೊಳ್ಳ ಬಹುದೆಂಬುದಕ್ಕೆ ಶೂನ್ಯತತ್ತ್ವವೊಂದು ಭಾರತೀಯ ತತ್ತ್ವಶಾಸ್ತ್ರದಲ್ಲಿ ಜ್ವಲಂತ ನಿದರ್ಶನ. ಈ ತತ್ತ್ವವು ಶಂಕರರ ಕಾಲಕ್ಕೆ ಅಭಾವರೂಪದಲ್ಲಿ ಅಂದರೆ ಯಾವ ಅಸ್ತಿತ್ವವೂ ಇಲ್ಲದ್ದು ಎಂಬರ್ಥದಲ್ಲಿ ಪರ್ಯವಸಾನಗೊಂಡಿತ್ತು ಎಂಬುದನ್ನು ಅವರ ಭಾಷ್ಯದಿಂದ ತಿಳಿಯಬಹುದು. ಅವರು ಅದನ್ನು ಸಂಪೂರ್ಣ ಅಸತ್ ಎಂಬ ಅರ್ಥದಲ್ಲೇ ತಿಳಿಸಿರುವುದಲ್ಲದೆ ಅದು ವಾದಕ್ಕೂ ಅನರ್ಹ ಎಂದು ಸಾರಿರುವುದು ವಿಚಾರಣೀಯ ಅಂಶ.[2] ಅವರ ಅಭಿಪ್ರಾಯದಲ್ಲಿ ಶೂನ್ಯವು ಒಂದು ತತ್ತ್ವವೇ ಅಲ್ಲ. ಅದು ಸಕಲ ಅಸ್ತಿತ್ವದ ನಿಷೇಧ. ಮೊಲದ ಕೊಂಬಿನಂತೆ ಅಭಾವಾತ್ಮಕವಾದುದು. ಆದರೆ ಮಾಧ್ಯಮಿಕ ಆಚಾರ್ಯರ ಮೌಲಿಕಗ್ರಂಥಗಳನ್ನು ಪರಿಶೀಲಿಸಿದರೆ ಇದಕ್ಕೆ ಅಭಾವ ಅಥವಾ ಇಲ್ಲದ್ದು ಎಂಬ ಅರ್ಥ ಸಿದ್ಧವಾಗು ವುದಿಲ್ಲ ಎಂದು ತಿಳಿದುಬರುತ್ತದೆ. ನಾಗಾರ್ಜುನನು ತನ್ನ ಶ್ರೇಷ್ಠ ಕೃತಿಯಾದ ಮಾಧ್ಯಮಿಕಕಾರಿಕೆಯಲ್ಲಿ ತತ್ತ್ವದ ಸ್ವರೂಪವನ್ನು ಹೀಗೆ ನಿರೂಪಿಸಿದ್ದಾನೆ.[3] ಅದು ಅಪರಪ್ರತ್ಯಯ ಅಂದರೆ ಅದನ್ನು ಒಬ್ಬನು ಮತ್ತೊಬ್ಬರಿಗೆ

---

1 Dr. Chandradhara Sharma : *A Critical Survey of Indian philosophy*, p. 254

2 ನ ಹ್ಯಯಂ ಪ್ರಮಾಣಪ್ರತಿಷಿದ್ಧೋ ಲೋಕವ್ಯವಹಾರೋ, ಅನ್ಯತ್ತತ್ತ್ವಮನಧಿಗಮ್ಯ ಶಕ್ಯತೇಽಪಹ್ನೋತುಮ್ ।
...ಶೂನ್ಯವಾದಿಪಕ್ಷಸ್ತು ಸರ್ವಪ್ರಮಾಣ ಪ್ರತಿಷೇಧೇತಿ ತನ್ನಿರಾಕರಣಾಯ ನಾದರಃ ಕ್ರಿಯತೇ (ಶಾಂ. ಭಾ. ೨.೨.೩೧)

3 ಅಪರಪ್ರತ್ಯಯಂ ಶಾಂತಂ ಪ್ರಪಂಚೈರಪ್ರಪಂಚಿತಮ್ । ನಿರ್ವಿಕಲ್ಪಂ ಅನಾನಾರ್ಥಂ ಏತತ್ತತ್ತ್ವಸ್ಯ ಲಕ್ಷಣಮ್ ॥
(ಮಾ. ಕಾ. ೧೮.೯)

ಉಪದೇಶಿಸಲು ಸಾಧ್ಯವಿಲ್ಲ. ಅದು ಶಾಂತವಾದದ್ದು. ಪ್ರಪಂಚದ ಎಂದರೆ ಶಬ್ದದ ಮೂಲಕ ಅದನ್ನು ಪ್ರಕಟಿಸಲಾಗುವುದಿಲ್ಲ.[1] ಮಾತಿಗೆ ಮೀರಿದ್ದು ಅದು. ಆದ್ದರಿಂದಲೇ ಅದು ಅನಕ್ಷರತತ್ತ್ವ ಎನಿಸಿಕೊಳ್ಳುತ್ತದೆ. ಅದು ನಿರ್ವಿಕಲ್ಪ ಅಂದರೆ ಚಿತ್ತದ ವ್ಯಾಪಾರಕ್ಕೆ ಒಳಗಾಗದ್ದು. ಪರಮಾರ್ಥಸತ್ಯವು ಜ್ಞಾನಗಮ್ಯವಲ್ಲ. ಆದ್ದರಿಂದ ಅದನ್ನು ಹೇಳುವುದು ಹೇಗೆ ಸಾಧ್ಯ ?[2] ಅದು ಅನಾನಾರ್ಥ-ನಾನಾರ್ಥಗಳನ್ನು ಮೀರಿದ್ದು.

ಯಾವುದೇ ವಸ್ತುವಿನ ಸ್ವರೂಪವನ್ನು ನಾಲ್ಕು ಕೋಟಿಗಳ ಮೂಲಕ ಹೇಳಬಹುದು. ಇದೆ, ಇಲ್ಲ, ಇದೆ ಮತ್ತು ಇಲ್ಲ, ಇದೆ ಎನ್ನಲಾಗದು ಇಲ್ಲ ಎನ್ನಲಾಗದು. ಈ ರೀತಿಯ ನಿರೂಪಣೆಗೆ ಪ್ರಾಪಂಚಿಕ ವಸ್ತುಗಳು ಸಿಲುಕುತ್ತವೆ. ಆದರೆ ಪರಮಾರ್ಥವು ಮೇಲಿನ ನಾಲ್ಕು ಸಿಲುವುಗಳಿಗೆ ಮೀರಿದ್ದು. ಅದು ನಿರ್ವಿಶೇಷವಸ್ತು, ಅದೇ ತತ್ತ್ವ.[3]

ಇಂತಹ ಶೂನ್ಯತತ್ತ್ವವು ಅನಿರ್ವಚನೀಯದ ಸೂಚನೆಯನ್ನು ತೋರಿಸುತ್ತದೆ. ಇದು ಕೇವಲ ಅಭಾವಸ್ವರೂಪವಲ್ಲ. ಏಕೆಂದರೆ ಅಭಾವಜ್ಞಾನವು ಭಾವವಸ್ತುವನ್ನಪೇಕ್ಷಿಸುತ್ತದೆ. ಶೂನ್ಯವು ಮೊಲದ ಕೊಂಬಿನಂತೆ, ಬಂಜೆಯ ಮಗನಂತೆ, ಮರೀಚಿಕೆಯಂತೆ ಸಂಪೂರ್ಣ ಅಸದ್ವಸ್ತುವಲ್ಲ. ಶೂನ್ಯವನ್ನು ಸಂಪೂರ್ಣ ಅಭಾವವೆಂದು ಆರೋಪಿಸಿ, ಶೂನ್ಯತತ್ತ್ವದ ಪ್ರಯೋಜನವನ್ನು ಅರಿಯದೆ, ಮಾತಿನ ಜಾಲವನ್ನು ಬೆಳೆಸುತ್ತಿದ್ದೀರಿ ಎಂದು ಚಂದ್ರಕೀರ್ತಿಯು ಶೂನ್ಯವಿರೋಧಿಗಳನ್ನು ಕುರಿತು ಹೇಳಿದ್ದಾನೆ.[4] ಶೂನ್ಯವಾದಿಯು ನಾಸ್ತಿಕನಲ್ಲ. ನಾಸ್ತಿಕನಾದರೋ ಪ್ರತಿಯೊಂದು ವಸ್ತುವನ್ನೂ ವಾದ ಎನ್ನುತ್ತಾನೆ. ಶೂನ್ಯವಾದಿಯು ಪ್ರತಿಯೊಂದು ವಸ್ತುವನ್ನೂ ವಸ್ತುದೃಷ್ಟಿಯಿಂದ ಮಿಥ್ಯೆ ಎನ್ನುತ್ತಾನೆ. ಆದರೆ ಶೂನ್ಯವಾದಿಗೂ, ನಾಸ್ತಿಕನಿಗೂ ತುಲನೆ ಮಾಡಬಾರದು.[5] ಉಪನಿಷತ್ತಿನಲ್ಲಿ ಬ್ರಹ್ಮನನ್ನು ನಿಷೇಧವಾಕ್ಯಗಳಿಂದ ವರ್ಣಿಸಿರುವಂತೆ ನಾಗಾರ್ಜುನನು ಶೂನ್ಯದ ಸ್ವರೂಪವನ್ನು ನಿಷೇಧಾತ್ಮಕವಾಗಿಯೇ ತಿಳಿಸಿದ್ದಾನೆ. ಪಾರಮಾರ್ಥಿಕ ದೃಷ್ಟಿಯಿಂದ ಅದಕ್ಕೆ ನಾಶವಿಲ್ಲ, ಉತ್ಪತ್ತಿ ಇಲ್ಲ. ಅದು ಅನಿತ್ಯವಲ್ಲ, ನಿತ್ಯವಲ್ಲ, ಒಂದಲ್ಲ, ಅನೇಕವಲ್ಲ. ಅದಕ್ಕೆ ಆಗಮನವಿಲ್ಲ, ನಿರ್ಗಮನವಿಲ್ಲ. ಅದು ಪ್ರಪಂಚೋಪಶಮ, ಶಿವ ಅಂದರೆ ಮಂಗಳಕರ.[6] ಕೇವಲ ತರ್ಕದಿಂದ ಅದನ್ನು ತಿಳಿಯಲು ಅಸಾಧ್ಯ. ತಾರ್ಕಿಕರು ನಾಯಿಗಳಂತೆ ಪರಸ್ಪರ ಕಲಹ ಮಾಡುತ್ತಾರೆ. ಶೂನ್ಯದ ಸಾಕ್ಷಾತ್ಕಾರ ವಿಶುದ್ಧಪ್ರಜ್ಞೆಯಿಂದ ಮಾತ್ರ ಗೋಚರಿಸುತ್ತದೆ. ಕೇವಲತರ್ಕ, ಭ್ರಮೆ.[7] ವೇದವನ್ನು ಮಾನ್ಯಮಾಡದಿರುವುದರಿಂದ ಬುದ್ಧಮತವನ್ನು ವೈದಿಕಪಂಥಗಳು ನಾಸ್ತಿಕವೆಂದೇ ಪರಿಗಣಿಸಿವೆ. ಆದರೆ ಶೂನ್ಯವಾದಿಯು ನಿಷ್ಠ ಅದ್ವಯವಾದಿಯೇ ಹೊರತು ನಾಸ್ತಿಕನಲ್ಲ. ನಾಗಾರ್ಜುನನು ತನ್ನ 'ರತ್ನಾವಳಿ'ಯಲ್ಲಿ ನಾಸ್ತಿಕನಿಗೂ ಆಸ್ತಿಕನಿಗೂ ಇರುವ ಭೇದವನ್ನು ಹೀಗೆ ತಿಳಿಸಿದ್ದಾನೆ: 'ನಾಸ್ತಿಕನು ದುರ್ಗತಿಯನ್ನು ಹೊಂದಿದರೆ ಆಸ್ತಿಕನು ಸುಗತಿಯನ್ನು ಪಡೆಯುತ್ತಾನೆ. ಆದರೆ ಯಥಾರ್ಥಜ್ಞಾನನಿಷ್ಠನಾದ, ಅದ್ವಯತತ್ತ್ವವನ್ನು ನಂಬಿರುವ ಶೂನ್ಯವಾದಿಯೇ ಮೋಕ್ಷವನ್ನು ಪಡೆಯುವನು.'[8] ಚಂದ್ರಕೀರ್ತಿಯ ಅಭಿಪ್ರಾಯದಲ್ಲಿ ಶೂನ್ಯತೆ ಎಂದರೆ ನಾಸ್ತಿಕ್ಯವಲ್ಲ. ಅದು ಸತ್ ಮತ್ತು ಅಸತ್ ಎರಡನ್ನೂ ನಿರಾಕರಿಸಿ ನಿರ್ವಾಣ

---

1 ಪ್ರಪಂಚೋ ಹಿ ವಾಕ್ ಪ್ರಪಂಚೇತಿ ಅರ್ಥಾನ್ ಇತಿ ಕೃತ್ವಾ ವಾಗ್ಭಿರವ್ಯಾಹೃತಮಿತ್ಯರ್ಥಃ । (ಮಾಕಾ.ವೃತ್ತಿ. ಪು. ೩೭೩)

2 ಪರಮಾರ್ಥಸತ್ಯಂ ಕತಮತ್ ಯತ್ರ ಜ್ಞಾನಸ್ಯಾಪ್ಯಪ್ರಚಾರಃ ? ಕಃ ಪುನರ್ವಾದೋಽಕ್ಷರಾಣಾಮಿತಿ.
(ಮಾಕಾ.ವೃತ್ತಿ. ಪು. ೩೭೪)

3 ನ ಸತ್ ನಾಸತ್ ನ ಸದಸತ್ ನ ಚಾಪ್ಯನುಭಯಾತ್ಮಕಮ್ ।
ಚತುಷ್ಕೋಟಿವಿನಿರ್ಮುಕ್ತಂ ತತ್ತ್ವಂ ಮಾಧ್ಯಮಿಕಾ ವಿದುಃ ॥ (ಮಾ.ಕಾ. ೧.೭)

4 ಭವಾನ್ ತು ನಾಸ್ತಿತ್ವಂ ಶೂನ್ಯತಾರ್ಥಂ ಪರಿಕಲ್ಪಯನ್ ಪ್ರಪಂಚಜಾಲಮೇವ ಸಂವರ್ಧಯಮಾನೋ ನ ಶೂನ್ಯತಾಯಾಂ ಪ್ರಯೋಜನಂ ವೇತ್ತಿ, ಏವಂ ಪ್ರತೀತ್ಯಸಮುತ್ಪಾದಶಬ್ದಸ್ಯ ಯೋಽರ್ಥಃ ಶೂನ್ಯತಾಶಬ್ದಸ್ಯಾರ್ಥಃ. ಅಭಾವಶಬ್ದಾರ್ಥಂ ಚ ಶೂನ್ಯತಾರ್ಥಂ ಇತ್ಯಧ್ಯಾರೋಪ್ಯ ಭವಾನಸ್ಮಾನುಪಾಲಭತೇ. (ಮಾ.ಕಾ. ವೃತ್ತಿ, ಪು. ೪೯೧)

5 ನಾಸ್ತಿಕಾಸ್ತು ಅಪವಾದಂ ಕುರ್ವಂತಿ . ಸಂವೃತ್ಯಾ ಮಾಧ್ಯಮಿಕೈರಸ್ತಿತ್ವೇನಾಭ್ಯುಪಗಮಾತ್ ನ ತುಲ್ಯತಾ
(ಮಾ.ಕಾ. ವೃತ್ತಿ, ಪು. ೩೫೧)

6 ಅನಿರೋಧಮನುತ್ಪಾದಮನುಚ್ಛೇದಮಶಾಶ್ವತಂ ।
ಅನೇಕಾರ್ಥಮನಾನಾರ್ಥಮನಾಗಮಮನಿರ್ಗಮಮ್ ॥
ಯಃ ಪ್ರತೀತ್ಯಸಮುತ್ಪಾದಂ ಪ್ರಪಂಚೋಪಶಮಂ ಶಿವಂ ।
ದೇಶಯಾಮಾಸ ಸಂಬುದ್ಧಃ ತಂ ವಂದೇ ವದತಾಂ ವರಮ್ ॥ (ಮಾ.ಕಾ., ೧-೧)

7 ಶ್ವಭೂತಾಃ ಕುತಾರ್ಕಿಕಾಃ,...ತತ್ತ್ವಂ ನ ಪಶ್ಯಂತಿ ತಾರ್ಕಿಕಾಸ್ತರ್ಕವಿಭ್ರಮಾತ್ । (ಲಂಕಾ. ೧೬೭)

8 ನಾಸ್ತಿಕೋ ದುರ್ಗತಿಂ ಯಾತಿ ಸುಗತಿಂ ಯಾತಿ ಚಾಸ್ತಿಕಃ ।
ಯಥಾಭೂತಪರಿಜ್ಞಾನಾನ್ಮೋಕ್ಷಮದ್ವಯನಿಶ್ರಿತಃ ॥ (ರತ್ನಾವಲಿ. ೧-೫೭)

ಪೆಂಬ ಪುರವೆಡೆಗೆ ಒಯ್ಯುವ ಅದ್ವಯಮಾರ್ಗ. ಇದು ಕರ್ಮವನ್ನಾಗಲಿ, ಅಥವಾ ಕರ್ತೃವಿಗೆ ಅದರ ಫಲವನ್ನಾಗಲಿ ಮಾನ್ಯ ಮಾಡದೆ ಇರುವುದಿಲ್ಲ. ಇಂತಹ ಸಂಸಾರವನ್ನು ಅಭಾವ ಎಂದೊಪ್ಪುವುದಿಲ್ಲ, ಆದರೆ ಅದನ್ನು ನಿಃಸ್ವಭಾವ ಎನ್ನುತ್ತಾರೆ.[1] ಶೂನ್ಯವು ಪರಮಾರ್ಥತತ್ತ್ವ. ಪರಮಾರ್ಥವೆಂದರೆ ಅಸಂಗನ ಪ್ರಕಾರ, ಮಹಾಯಾನಸೂತ್ರಾಲಂಕಾರ ದಲ್ಲಿ ಹೇಳಿರುವಂತೆ, ಉತ್ಪತ್ತಿ-ಹಾನಿ-ವೃದ್ಧಿ ಗಳಿಲ್ಲದ್ದು. ಅದು ಕೇವಲ ಸತ್ ಅಲ್ಲ, ಕೇವಲ ಅಸತ್ತಲ್ಲ, ಶುದ್ಧಿ-ಅಶುದ್ಧಿ ಗಳಿಲ್ಲದ್ದು.[2] ಅದು ಸಂಕಲ್ಪ-ವಿಕಲ್ಪಗಳನ್ನು ಮೀರಿದ್ದು. ಆ ತತ್ತ್ವವು ಉಪದೇಶಕ್ಕೆ ನಿಲುಕದ್ದು, ಸ್ವಾನುಭವಗಮ್ಯ. ಅದರಲ್ಲಿ ಲೌಕಿಕಧರ್ಮಗಳು ಆರೋಪಿತವಾಗಿರುತ್ತವೆ. ಅವನ್ನು ನಿವಾರಿಸಿದಾಗ ಶೂನ್ಯವು ಗೋಚರವಾಗುತ್ತದೆ.[3] ನಿಷ್ಪ್ರಪಂಚವಾದ ಬ್ರಹ್ಮನಲ್ಲಿ ಜಗತ್ತು ಆರೋಪಿತವಾಗಿದೆ ಎಂದು ಪ್ರತಿಪಾದಿಸುವ ಅದ್ವೈತವೇದಾಂತದ ಬೀಜವನ್ನು ಇಲ್ಲಿ ಗುರುತಿಸಬಹುದು.

ಮಾಧ್ಯಮಿಕನು ಸಂಪೂರ್ಣ ವಿನಾಶವಾದಿಯಲ್ಲ. ಶೂನ್ಯವನ್ನು ಹೀಗೆಯೇ ಇದೆ ಎಂದು ನಿರ್ಧರಿಸುವ ಸರ್ವ ಪ್ರಯತ್ನಗಳನ್ನೂ, ವಿಶೇಷಣಗಳನ್ನೂ ವಿರೋಧಿಸುತ್ತಾನೆ. ಅದು ಎಲ್ಲ ವಸ್ತುಗಳ ಸತ್ಯ. ಹಾಗಾದರೆ ಅಧ್ಯಾರೋಪದ ಮೂಲಕ ಅದನ್ನು ಅರಿಯಬಹುದು ಎಂಬುದು ಹೇಗೆ ? ಎಂಬ ಆಕ್ಷೇಪಕ್ಕೆ ಚಂದ್ರಕೀರ್ತಿಯು ಹೀಗೆ ಉತ್ತರಿಸುತ್ತಾನೆ : ಅದು ತಥತಾ–ಹೇಗಿದೆಯೋ ಹಾಗೆ, ಯಾವ ವಿಕಾರಕ್ಕೂ ಒಳಗಾಗದೆ ಇರುವುದು. ಅದು ಕ್ರಿಯಾಜನ್ಯವಲ್ಲ, ಅದು ವಿಶ್ವವ್ಯಾಪಕ.[4] ಆಧುನಿಕ ವಿದ್ವಾಂಸರೊಬ್ಬರು ಹೇಳುವಂತೆ ಶೂನ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅನೇಕರು ಗೊಂದಲಕ್ಕೊಳಗಾಗಿದ್ದಾರೆ. ಪರಮತತ್ತ್ವದ ಬಗೆಗೆ ಯಾವುದೇ ಒಂದು ದೃಷ್ಟಿ ಉಚಿತವಲ್ಲ ಎಂಬುದನ್ನು ಪರಮ ತತ್ತ್ವವು ಇಲ್ಲವೇ ಇಲ್ಲ ಎಂಬ ಅಭಿಪ್ರಾಯದೊಡನೆ ಸಮೀಕರಿಸಬಾರದು.[5] ಶೂನ್ಯವನ್ನು ಅರಿತವನಿಗೆ ಭಯವಿಲ್ಲ. ಅವನು ದುಃಖದಿಂದ ದೂರನಾಗಿರುತ್ತಾನೆ.[6] ಆತ್ಮ ತತ್ತ್ವವನ್ನು ಅರಿತವನಿಗೆ ದುಃಖವಿಲ್ಲ, ಭಯವಿಲ್ಲ ಎಂದು ಉಪನಿಷತ್ತು ಸಾರುತ್ತದೆ.[7]

ಮಾಧ್ಯಮಿಕರ ದೃಷ್ಟಿಯಲ್ಲಿ ಸತ್ಯವು ಎರಡು ವಿಧ—ಸಂವೃತಿ ಮತ್ತು ಪರಮಾರ್ಥ. ಉಪದೇಶವು ಈ ಎರಡೂ ಸತ್ಯವನ್ನಾಶ್ರಯಿಸಿದೆ. ತತ್ತ್ವವನ್ನು ತಿಳಿಯಬೇಕಾದರೆ ಈ ಎರಡು ಸತ್ಯಗಳಿಗೂ ಇರುವ ಅಂತರವನ್ನು ಅರಿಯಬೇಕು. ಇಲ್ಲವಾದರೆ ಗಹನವಾದ ಅದು ಅರ್ಥವಾಗಲಾರದು.[8] ಸಂವೃತಿ ಎಂದರೆ ಅವಿದ್ಯೆ. ಇದು ಸತ್ಯವಾದದ್ದನ್ನು ಮರೆ.

---

1 ನ ವಯಂ ನಾಸ್ತಿಕಾಃ, ಅಸ್ತಿತ್ವನಾಸ್ತಿತ್ವದ್ವಯನಿರಾಸೇನ ತು ವಯಂ ನಿರ್ವಾಣಪುರಪಥಗಾಮಿನಮದ್ವಯಪಥಂ ವಿದ್ಯೋತಯಾಮಃ. ನ ಚ ಕರ್ಮಕರ್ತೃಫಲಾದಿಕಂ ನಾಸ್ತೀತಿ ಬ್ರೂಮಃ. ಕಿಂ ತರ್ಹಿ? ನಿಃಸ್ವಭಾವಮೇತದಿತಿ ವ್ಯವಸ್ಥಾಪಯಾಮಃ. (ಮಾ. ಕಾ. ವೃತ್ತಿ. ಪುಟ ೩೨೬)

2 ನ ಸನ್ ನ ಚಾಸನ್ ನ ತಥಾ ನ ಚಾನ್ಯಥಾ ನ ಜಾಯತೇ ವ್ಯೇತಿ ನ ಚಾವಹೀಯತೇ ।
ನ ವರ್ಧತೇ ನಾಪಿ ವಿಶುಧ್ಯತೇ ಪುನರ್ವಿಶುಧ್ಯತೇ ತತ್ ಪರಮಾರ್ಥಲಕ್ಷಣಮ್ ॥ (ಮಹಾಯಾನ ಸೂತ್ರಾಲಂಕಾರ ೬-೧)

3 ಅನಕ್ಷರಸ್ಯ ತತ್ತ್ವಸ್ಯ ಶ್ರುತಿಃ ಕಾ ದೇಶನಾ ಚ ಕಾ ।
ಶ್ರೂಯತೇ ದೇಶ್ಯತೇ ಚಾಪಿ ಸಮಾರೋಪಾದನಕ್ಷರಃ ॥ (ಮಾ. ಕಾ. ವೃತ್ತಿ, ಪುಟ ೨೬೪)

4 ಯದಿ ಖಲು ತದಧ್ಯಾರೋಪಾತ್ ಭವದ್ಭಿರಸ್ತೀತ್ಯುಚ್ಯತೇ ಕೀದೃಶಂ ತತ್? ಯಾ ಸಾ ಧರ್ಮಾಣಾಂ ಧರ್ಮತಾ ನಾಮ ಸೈವ ತತ್ಸ್ವರೂಪಮ್ ; ಅಥ ಕೇಯಂ ಧರ್ಮಾಣಾಂ ಧರ್ಮತಾ ? ಧರ್ಮಾಣಾಂ ಸ್ವಭಾವಃ ಪ್ರಕೃತಿಃ ; ಕಾ ಚೇಯಮ್ ಪ್ರಕೃತಿಃ? ಯೇಯಂ ಶೂನ್ಯತಾ ; ಕೇಯಂ ಶೂನ್ಯತಾ? ನೈಃಸ್ವಾಭಾವ್ಯಮ್ ; ಕಿಮಿದಂ ನೈಃಸ್ವಾಭಾವ್ಯಮ್ ? ತಥತಾ ; ಕೇಯಂ ತಥತಾ ? ತಥಭಾವೋಽವಿಕಾರಿತ್ವಮ್ ; ಸದೈವ ಸ್ಥಾಯಿತಾ, ಸರ್ವದಾ ಅನುತ್ಪಾದ ಏವ, ಪದನಿರಪೇಕ್ಷತ್ವಾತ್. ಅಕೃತ್ರಿಮತ್ವಾತ್ ಸ್ವಭಾವ ಇತ್ಯುಚ್ಯತೇ । (ಮಾ. ಕಾ. ವೃತ್ತಿ. ಪುಟ ೨೬೪-೨೬೫)

5 It is a confusion to regard the '*No views of the real*' attitude of the Mādhyamika as a '*No reality view.*' The confusion lies in taking no determination as negitive determination.
Dr. T. R. V. Murthy : *The central philosophy of Buddhism*, P. 234

6 ಶೂನ್ಯತಾ ದುಃಖಶಮನೀ ತತಃ ಕಿಂ ಜಾಯತೇ ಭಯಮ್ । (ಬೋಧಿಚರ್ಯಾವತಾರ, ೯-೫೬)

7 ಮತ್ವಾ ಧೀರೋ ನ ಶೋಚತಿ (ಕಠ ೧-೨-೨೧) ತರತಿ ಶೋಕಮಾತ್ಮವಿತ್ (ಛಾಂ. ೧-೧)

8 ದ್ವೇ ಸತ್ಯೇ ಸಮುಪಾಶ್ರಿತ್ಯ ಬುದ್ಧಾನಾಂ ಧರ್ಮದೇಶನಾ ।
ಲೋಕಸಂವೃತಿಸತ್ಯಂ ಚ ಸತ್ಯಂ ಚ ಪರಮಾರ್ಥತಃ ॥
ಯೇಽನಯೋರ್ನ ವಿಜಾನಂತಿ ವಿಭಾಗಂ ಸತ್ಯಯೋರ್ದ್ವಯೋಃ ।
ತೇ ತತ್ವಂ ನ ವಿಜಾನಂತಿ ಗಂಭೀರಂ ಬುದ್ಧಶಾಸನೇ ॥ (ಮಾ. ಕಾ., ೨೪-೮, ೯)

ಮಾಡಿ ಆವರಣವನ್ನುಂಟುಮಾಡುತ್ತದೆ.[1] ಅದ್ವೈತಮತವು ಬ್ರಹ್ಮನ ಬಗೆಗೆ ಹೇಳುವ ಆವರಣಶಕ್ತಿಗೆ ಇದು ಸದೃಶವಾದುದು ಎನ್ನಬಹುದು. ಇದು ಕೇವಲ ವ್ಯವಹಾರಕ್ಕೆ ಮಾತ್ರ ಅನ್ವಯಿಸುವಂಥದು. ವಿಷಯವನ್ನು ಸರಿಯಾಗಿ ಅರಿಯುವುದೇ ಸಮ್ಯಗ್‌ದೃಷ್ಟಿ. ಅದೇ 'ತತ್ತ್ವ', ಇದಕ್ಕೆ ವಿರುದ್ಧವಾದದ್ದೇ ಸಂವೃತಿಸತ್ಯ.[2]

ವಸ್ತುವಿನ ಅಕೃತ್ರಿಮಸ್ವರೂಪವೇ ಪರಮಾರ್ಥ. ಸಂವೃತಿಯಿಂದ (ಅಜ್ಞಾನ) ಉದ್ಭವಿಸುವ ಸಮಸ್ತ ಕ್ಲೇಶಗಳನ್ನೂ ಇದು ಪರಿಹರಿಸುತ್ತದೆ. ವ್ಯವಹಾರದ ಎಲ್ಲೆಯನ್ನು ಮೀರಿದ ಸತ್ಯವಿದು. ಯಾವ ವಿಶೇಷಣವೂ ಅದಕ್ಕೆ ಅನ್ವಯಿಸದು. ಯಾವುದೇ ವ್ಯಾವಹಾರಿಕ ಅನುಭವವನ್ನು ನಾವು ಯಾವುದಾದರೂ ಒಂದು ಪದದ ಮೂಲಕ ವ್ಯಕ್ತಪಡಿಸುತ್ತೇವೆ. ಆದರೆ ಆ ಪರಮಾರ್ಥಸತ್ಯ ಶಬ್ದ–ಅರ್ಥಗಳ ಸೀಮೆಯನ್ನು ದಾಟಿರುತ್ತದೆ.[3] ತತ್ತ್ವವು ಬುದ್ಧಿಗೆ ಅಗೋಚರ. ಬುದ್ಧಿಗೆ ಗೋಚರವಾದದ್ದೆಲ್ಲವೂ ಸಂವೃತಿಯಾಗುತ್ತದೆ. ಇದನ್ನು ಸ್ಫುರಣಾತ್ಮಕಜ್ಞಾನ (Intution) ಎನ್ನಬಹುದು.[4] ಆರ್ಯರು ಈ ಶ್ರೇಷ್ಠಸತ್ಯವನ್ನು ತಮ್ಮೊಳಗೆ ಅರಿತು ಅನುಭವಿಸಬಲ್ಲರು. ಆದ್ದರಿಂದ ಈ ವಿಷಯದಲ್ಲಿ ಬೇರೆ ಪ್ರಮಾಣವಿಲ್ಲ. ಅದು ಪ್ರಮಾಣಾತೀತ.[5] ಅಲ್ಲಿ ಮಾತಿಗೆ ಅವಕಾಶವಿಲ್ಲ, ಬುದ್ಧಿಗೆ ಎಡೆ ಇಲ್ಲ. ಅದು ಶಾಂತಸ್ವರೂಪ. ಮಾತಿಗೆ ಮೀರಿದ್ದು.[6] ಈ ಪರಮಾರ್ಥವನ್ನು ಅರಿಯದವನು ನಿರ್ವಾಣಪದವಿಯನ್ನು ಹೊಂದಲಾರ.[7]

ಈ ಮೇಲಿನ ವಿವರಣೆಯನ್ನೊಳಗೊಂಡ ಶೂನ್ಯತತ್ತ್ವವು—ವ್ಯವಹಾರಪ್ರಪಂಚದಲ್ಲಿ ಹೇಳುವ ದೇಶ-ಕಾಲ-ಶಬ್ದ ಇವುಗಳ ಪರಿಧಿಯೊಳಗೆ ಸಿಲುಕಿರುವ 'ಇದೆ' ಎಂಬ ಭಾವವನ್ನಾಗಲಿ ಅಥವಾ ಮೊಲಕ್ಕೆ ಕೊಂಬಿಲ್ಲ ಎಂಬಲ್ಲಿ ತೋರುವ 'ಇಲ್ಲ' ಎಂಬ ಭಾವವನ್ನಾಗಲಿ ಮೀರಿದ್ದು ಎಂಬ ಅಂಶವು ತಿಳಿದುಬರುತ್ತದೆ. ಇಂತಹ ಗಹನವಾದ ತತ್ತ್ವವನ್ನು ಪ್ರತಿಪಾದಿಸುವಾಗ ಅದು ಅಭಾವಜ್ಞಾನದ ಅಂಚನ್ನೇ ತಲುಪಿದರೆ ಆಶ್ಚರ್ಯವೇನಲ್ಲ. 'ಶ್ರುತಿ'ಗಳ ಆಧಾರದ ಮೇಲೆ ನೇತಿಮಾರ್ಗದ ಮೂಲಕ ಪ್ರತಿಪಾದಿಸಿದ ಪರಮಾರ್ಥಸತ್ಯವಾದ ಬ್ರಹ್ಮತತ್ತ್ವವನ್ನು ಅನೇಕರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ದಡ್ಡರಿಗೆ ಅದು ಅಸತ್ತೆಂದೇ ಭಾಸವಾಗುತ್ತದೆ ಎಂದು ಶಂಕರರೂ ಹೇಳುತ್ತಾರೆ.[8]

ಶೂನ್ಯತತ್ತ್ವವನ್ನು ನಿರೂಪಿಸುವಾಗ ಬಳಸಿರುವ ಪ್ರಪಂಚೋಪಶಮ, ಅನಭಿಲಪ್ಯ, ಅವ್ಯಾಕೃತ, ಶಾಂತ, ಶಿವ, ಅದ್ವಯ, ಅವ್ಯಯ, ನಿಷ್ಪ್ರಪಂಚ, ಅನಿರ್ವಾಚ್ಯ, ಅಜರ ಮುಂತಾದ ಪದಗಳನ್ನು ಉಪನಿಷತ್ತು ಪ್ರತಿಪಾದಿಸುವ ಬ್ರಹ್ಮದ ನಿರೂಪಣೆಯಲ್ಲಿಯೂ ಕಾಣಬಹುದು.[9] ಗೌಡಪಾದರು ರಚಿಸಿರುವ ಮಾಂಡೂಕ್ಯಕಾರಿಕೆಯ ಮೇಲೆ ಮಾಧ್ಯಮಿಕಕಾರಿಕೆಯ ಪ್ರಭಾವವು ಸ್ಪಷ್ಟವಾಗಿದೆ. ಯೋಗವಾಸಿಷ್ಠಕಾರನು ಪ್ರತಿಪಾದಿಸಿರುವ ಬ್ರಹ್ಮತತ್ತ್ವವೂ ಮಾಧ್ಯಮಿಕರ ಶೂನ್ಯತತ್ತ್ವಕ್ಕೆ ಸಂವಾದಿಯಾಗಿದೆ. ಇದರ ಪ್ರಕಾರ ಬ್ರಹ್ಮವು ಸತ್ ಅಲ್ಲ, ಅಸತ್ ಅಲ್ಲ : ಇದೆ ಎಂದಲ್ಲ, ಇಲ್ಲ ಎಂದಲ್ಲ : ಚೇತನವಲ್ಲ–ಜಡವಲ್ಲ ; ಒಂದಲ್ಲ–ಅನೇಕವಲ್ಲ ; ಮಾತು–ಮನಸ್ಸುಗಳಿಗೆ ಮೀರಿದ ಅದು ಶೂನ್ಯಕ್ಕಿಂತ

---

1 ಸಮಂತಾತ್ ಆವರಣಂ ಹಿ ಸಂವೃತಿಃ, ಅಜ್ಞಾನಂ ಹಿ ಸಮಂತಾತ್ ಸರ್ವಪದಾರ್ಥತತ್ತ್ವಾಚ್ಛಾದನಾತ್ ಸಂವೃತಿರಿತ್ಯುಚ್ಯತೇ । (ಮಾ.ಕಾ.ವೃತ್ತಿ, ಪು. ೪೯೨)

2 ಸಮ್ಯಗ್ದೃಶಾಂ ಯೋ ವಿಷಯಃ ಸ ತತ್ತ್ವಂ ।
ಮೃಷಾದೃಶಾಂ ಸಂವೃತಿಸತ್ಯಮುಕ್ತಮ್ ॥ (ಮಾಧ್ಯಮಿಕಾವತಾರ, ೬-೨೩)

3 ಪರಮ ಉತ್ತಮೋಽರ್ಥಃ ಪರಮಾರ್ಥಃ, ಅಕೃತ್ರಿಮಂ ವಸ್ತುರೂಪಮ್, ಸರ್ವಧರ್ಮಾಣಾಂ ನಿಃಸ್ವಭಾವತಾ ಪರಮಾರ್ಥಸತ್ಯಂ ಸರ್ವವ್ಯವಹಾರಸಮತಿಕ್ರಾಂತಂ ನಿರ್ವಿಶೇಷಂ ಅಸಮುತ್ಪನ್ನಂ ಅನಿರುದ್ಧಂ, ಅಭಿಧೇಯಾನಭಿಧಾನಂ, ಜ್ಞೇಯಜ್ಞಾನವಿಗತಮ್ (ಬೋಧಿಚರ್ಯಾವತಾರಪಂಜಿಕಾ, ಪುಟ ೩೫೪, ೩೬೬)

4 ಬುದ್ಧೇರಗೋಚರಸ್ತತ್ತ್ವಂ ಬುದ್ಧಿಃ ಸಂವೃತಿರುಚ್ಯತೇ। (ಬೋಧಿಚರ್ಯಾವತಾರ ೯।೨)

5 ತದೇತದಾರ್ಯಾಣಾಮೇವ ಸ್ವಸಂವಿದಿತಸ್ವಭಾವತಯಾ ಪ್ರತ್ಯಾತ್ಮವೇದ್ಯಂ, ಅತಸ್ತದೇವಾತ್ರ ಪ್ರಮಾಣಮ್ (ಬೋ ಪಂಜಿಕಾ; ಪುಟ ೪೬೭)

6 ಕುತಸ್ತತ್ರ ಪರಮಾರ್ಥೇ ವಾಚಾಂ ಪ್ರವೃತ್ತಿಃ, ಕುತೋ ವಾ ಜ್ಞಾನಸ್ಯ ? ನ ಹಿ ಪರಮಾರ್ಥಃ ಅಪರಪ್ರತ್ಯಯಃ, ಶಾಂತಃ, ಪ್ರತ್ಯಾತ್ಮವೇದ್ಯ ಆರ್ಯಾಣಾಂ ಪ್ರಪಂಚಾತೀತಃ। (ಮಾ.ಕಾ. ವೃತ್ತಿ, ಪುಟ ೪೯೩)

7 ಪರಮಾರ್ಥಮನಾಗಮ್ಯ ನಿರ್ವಾಣಂ ನಾಧಿಗಚ್ಛತಿ। (ಮಾ.ಕಾ. ೨೪-೧೦)

8 ದಿಗ್ದೇಶಗುಣಗತಿಫಲಭೇದಶೂನ್ಯಂ ಹಿ ಪರಮಾರ್ಥಸತ್ ಅದ್ವಯಂ ಬ್ರಹ್ಮ ಮಂದಬುದ್ಧೀನಾಂ ಅಸದಿವ ಪ್ರತಿಭಾತಿ। (ಛಾಂ. ಭಾಷ್ಯ, ೮.೧)

9 ಮಾಂಡೂಕ್ಯ ೭

ಮಿಗಿಲಾದದ್ದು, ಆನಂದಸ್ವರೂಪ.[1] ಶೂನ್ಯತತ್ವಪ್ರತಿಪಾದನೆಯ ಮುಖ್ಯಗುರಿ ಎಂದರೆ ಅದರ ಮೂಲಕ ನಾನು ನನ್ನದು ಎಂಬುದಳಿದು ರಾಗದ್ವೇಷಾದಿಗಳು ನಿವೃತ್ತಿಯಾಗಿ ಜನನ-ಮರಣರೂಪವಾದ ಭವಚಕ್ರದಿಂದ ವಿಮೋಚನೆ. ಇದರಿಂದ ಪರಮಶಾಂತಿ. ಅಸ್ತಿ-ನಾಸ್ತಿಗಳಿಗೆ ಮೀರಿದ ಬೌದ್ಧರ ಶೂನ್ಯಸ್ವರೂಪವನ್ನು, ಕಳೆದ ಶತಮಾನದಲ್ಲಿ ಆತ್ಮ ಸಾಕ್ಷಾತ್ಕಾರಮಾಡಿಕೊಂಡಿದ್ದ ಶ್ರೀ ರಾಮಕೃಷ್ಣಪರಮಹಂಸರ ಈ ಮಾತುಗಳೊಡನೆ ತುಲನೆ ಮಾಡಬಹುದು : "ಆತ್ಮಸಾಕ್ಷಾತ್ಕಾರ ಅಸ್ತಿ ನಾಸ್ತಿ ಇವುಗಳ ಆಚೆ ಇರುವುದು. ಈ ಅಸ್ತಿ ನಾಸ್ತಿಗಳು ಪ್ರಕೃತಿಯ ಆವಿರ್ಭಾವಗಳು. ಸತ್ಯ ಇವೆರಡನ್ನೂ ಮೀರಿರುವುದು. ಕಾಲಿಗೆ ಮುಳ್ಳು ಚುಚ್ಚಿದಾಗ ಆ ಮುಳ್ಳನ್ನು ತೆಗೆಯಲು ಮತ್ತೊಂದು ಮುಳ್ಳನ್ನು ಉಪಯೋಗಿಸಿ ಹೊರತೆಗೆದನಂತರ ಎರಡನ್ನೂ ಬಿಸಾಡುವಂತೆ ಅಜ್ಞಾನದ ಮುಳ್ಳನ್ನು ತೆಗೆಯಲು ಸುಜ್ಞಾನದ ಮುಳ್ಳನ್ನು ಉಪಯೋಗಿಸಬೇಕು. ಬ್ರಹ್ಮ, ಜ್ಞಾನ ಮತ್ತು ಅಜ್ಞಾನದ ಆಚೆಯಿರುವನು. ಜ್ಞಾನ-ಅಜ್ಞಾನವೆಂಬ ಎರಡು ಮುಳ್ಳನ್ನೂ ಆಚೆ ಎಸೆದ ಮೇಲೆ, ಉಳಿಯುವುದೇನು ಎಂದು ಅವರನ್ನು ಪ್ರಶ್ನಿಸಿದಾಗ ಬೆಣ್ಣೆಯ ರುಚಿ ಏನು ಎಂದು ಯಾರಾದರೂ ಕೇಳಿದರೆ ಅವನಿಗೆ ಚೆನ್ನಾಗಿ ತಿಳಿಯುವಂತೆ ಮಾಡಲು ಸಾಧ್ಯವೇ? ಹೆಚ್ಚು ಎಂದರೆ ಬೆಣ್ಣೆ ಬೆಣ್ಣೆಯಂತಿದೆ ಎನ್ನಬಹುದು ಅಷ್ಟೇ" ಎಂದುತ್ತರಿಸುತ್ತಾರೆ.

ಬೌದ್ಧರ ಪ್ರಕಾರ ಜೀವನದ ಪರಮಗುರಿ ನಿರ್ವಾಣವನ್ನು ಪಡೆಯುವುದು. ಶೂನ್ಯತತ್ವದ ಅರಿವಿನಿಂದ ಜೀವನ ದೃಷ್ಟಿ ಬದಲಾಗಿ ತನ್ಮೂಲಕ ಶ್ರೇಷ್ಠಸ್ಥಿತಿಯನ್ನು ಅನುಭವಿಸುವುದೇ ನಿರ್ವಾಣ. ಈ ನಿರ್ವಾಣಸ್ವರೂಪದ ಬಗೆಗೂ ಹೀನಯಾನ ಹಾಗೂ ಮಹಾಯಾನ ಪಂಥಗಳಲ್ಲಿ ಭಿನ್ನಾಭಿಪ್ರಾಯವಿದೆ. ಹೀನಯಾನವು ಅದನ್ನು ದುಃಖಾಭಾವರೂಪ ವೆಂದು ಹೇಳಿದರೆ, ಮಹಾಯಾನವು ಅದು ಆನಂದಸ್ವರೂಪವೆಂದು ನಿರೂಪಿಸುತ್ತದೆ.[2] ಹೀನಯಾನದ ನಿರ್ವಾಣವು ನೈಯಾಯಿಕರ ದುಃಖಧ್ವಂಸರೂಪವಾದ ಮೋಕ್ಷದ ಕಲ್ಪನೆಯನ್ನು ಹೋಲುತ್ತದೆ. ನಾಗಾರ್ಜುನನ ಅಭಿಪ್ರಾಯ ದಂತೆ ನಿರ್ವಾಣವೆಂದರೆ ಉತ್ಪತ್ತಿ ಮತ್ತು ವಿನಾಶವಿಲ್ಲದ್ದು. ಅದನ್ನು ಭೌತಿಕವಸ್ತುಗಳಂತೆ ಪಡೆಯುವುದಕ್ಕಾಗುವುದಿಲ್ಲ.[3] ಕರ್ಮಕ್ಲೇಶಗಳು ಸಂಪೂರ್ಣ ಕ್ಷಯವಾದ ಸ್ಥಿತಿ ಅದು. ಅದರಿಂದ ಮರುಜನ್ಮವಿಲ್ಲ.[4] ಆಚಾರ್ಯಬುದ್ಧಘೋಷನ ಪ್ರಕಾರ ವಿಶುದ್ಧಿ ಮತ್ತು ನಿರ್ವಾಣ ಎರಡೂ ಒಂದೇ.[5] ನಿರ್ವಾಣವು ಪರಮಸುಖವೆಂದು ಧಮ್ಮಪದವು ಘೋಷಿಸು ತ್ತದೆ.[6] ಸಮ್ಯಕ್‌ದರ್ಶನದಿಂದ ಅಭಿವ್ಯಕ್ತವಾಗುವ ನಿರ್ವಾಣವು ಅಮಾನುಷೀ ರತಿ.[7] ವಿಮುಕ್ತಿಗೂ ನಿರ್ವಾಣಕ್ಕೂ ಭೇದವಿಲ್ಲ. ಈ ಸ್ಥಿತಿಯಲ್ಲಿ ಬುದ್ಧನೇ ಹೇಳುವಂತೆ 'ಅದು ಒಂದು ಆಯತನ. ಅಲ್ಲಿ ಪೃಥ್ವಿ, ಜಲ, ತೇಜಸ್ಸು, ವಾಯು, ಆಕಾಶವಿಲ್ಲ. ಇಹಲೋಕವಿಲ್ಲ, ಪರಲೋಕವಿಲ್ಲ, ಚಂದ್ರ ಸೂರ್ಯರಿಲ್ಲ. ಅಲ್ಲಿ ಸುಖದುಃಖಗಳಿಗೂ ವಿರಾಮ.'[8]

ಈ ಸ್ಥಿತಿಯನ್ನು ಕೆಲವೆಡೆ ಬೌದ್ಧಕೃತಿಗಳು ಭಾವಾತ್ಮಕವಾಗಿಯೇ ವರ್ಣಿಸಿವೆ. ದುಃಖವಿಲ್ಲದ, ಪರಿವರ್ತನೆ ಇಲ್ಲದ, ಸಂಸ್ಕೃತವಲ್ಲದ, ಸತ್ಯವಾದ, ಅಜರವಾದ, ಅಮರವಾದ, ಧ್ರುವವಾಗಿರುವ, ಶಾಂತವಾದ, ಶಿವಸ್ವರೂಪವಾದ,

---

[1] ನ ಚೇತನೋ ನ ಚ ಜಡೋ ನ ಚೈವಾಸನ್ನ ಸನ್ಮಯಃ ।
ನಾಹಂ ನಾನ್ಯೋ ನ ಚೈವೇಕೋ ನಾನೇಕೋ ನಾಪ್ಯನೇಕವಾನ್ ॥ ೫.೭೨.೪೧
ನ ಚ ನಾಸ್ತೀತಿ ವಕ್ತುಂ ವಿದ್ಯತೇ ಚಿದ್ವಪುರ್ಯದಾ ।
ನ ಚೈವಾಸ್ತೀತಿ ತದ್ವಕ್ತುಂ ಯುಕ್ತಂ ಶಾಂತಾಮಲಂ ತದಾ ॥ ೫.೫೩.೯
ನ ಸನ್ನಾಸನ್ನ ಮಧ್ಯಾಂತಂ ನ ಸರ್ವಂ ಸರ್ವಮೇವ ಚ ।
ಮನೋ ವಾಚಾಭಿರಗ್ರಾಹ್ಯಂ ಶೂನ್ಯಾತ್ ಶೂನ್ಯಂ ಸುಖಾತ್ಮಕಮ್ ॥ ೬.೧೪.೮

[2] ಬಲದೇವ ಉಪಾಧ್ಯಾಯ : (ಬೌದ್ಧದರ್ಶನಮೀಮಾಂಸಾ, ಪು. ೧೫೩)

[3] ಅಪ್ರಹೀಣಮಸಂಪ್ರಾಪ್ತಂ ಅನುಚ್ಛಿನ್ನಮಶಾಶ್ವತಮ್ ।
ಅನಿರುದ್ಧಂ ಅನುತ್ಪನ್ನಂ ಏತತ್ ನಿರ್ವಾಣಮುಚ್ಯತೇ ॥ (ಮಾ.ಕಾ.ವೃತ್ತಿ, ಪು. ೫೨೧)

[4] ಕರ್ಮಕ್ಲೇಶಕ್ಷಯಾತ್‌ಮೋಕ್ಷಃ (ಮಾ.ಕಾ., ೧೮.೫)
ಸರ್ವಕಲ್ಪನಾ ಕ್ಷಯರೂಪಮೇವ ನಿರ್ವಾಣಮ್ (ಮಾ.ಕಾ.ವೃತ್ತಿ, ಪುಟ ೫೨೪)

[5] ವಿಸುದ್ಧೀತಿ ಸಬ್ಬಮಲರಹಿತಂ ಅತ್ಯಂತಪರಿಸುದ್ಧಮ್ ನಿಬ್ಬಾನಂ ವೇದಿತಬ್ಬಮ್ (ವಿಸುದ್ಧಿಮಗ್ಗ, ೧.೫)

[6] ಧ.ಪದ. ೧೫.೮

[7] ಅಮಾನುಸೀ ರತೀ ಹೋತಿ ಸಮ್ಮಧಮ್ಮಂ ವಿಪಸ್ಸತೋ (ಧ.ಪ. ೨೦.೧೪)

[8] ಅತ್ಥಿ ಭಿಕ್ಕವೇ ತದಾಯತನಂ, ಯತ್ಥ ನೇವ ಪಠವೀ ನ, ಆಪೋ ನ, ತೇಜೋ ನ, ವಾಯೋ ನ, ಆಕಾಸಂ ಚಾಯತನಂ ವಿಞಾಣಾನಂ ಚಾಯತನಂ ನ...ನಾಯಂ ಲೋಕೋ ನ ಪರಲೋಕೋ ಉಭೋ ಚಂದಿಮ ಸುರಿಯಾ . ತಂ ಸ ಸೇವಂತೋ ದುಃಖಸ್ಸಾತಿ (ಉದಾನ: ಪಾಟಲಗಾಮಿಯವಗ್ಗೊ)

ಕ್ಷೇಮವಿರುವ, ಹುಟ್ಟಿಲ್ಲದ, ಆನಂದರೂಪವಾದ ಅದು ಜೀವನದ ಗುರಿ.[1] ನಿರ್ವಾಣವು ಸಾಕ್ಷಾತ್ಕರಿಸಿಕೊಳ್ಳುವ ವಸ್ತುವೇ ವಿನಃ ಅದು ಉತ್ಪತ್ತಿಯಾಗುವ ವಸ್ತುವಲ್ಲ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗ ಇದೆ, ಸೃಷ್ಟಿಸುವ ಮಾರ್ಗವಿಲ್ಲ ; ಇದಕ್ಕೆ ಕಾರಣವಿಷ್ಟೆ. ಅದು ಭೂತ-ಭವಿಷ್ಯತ್-ವರ್ತಮಾನಗಳಿಗೆ ಮೀರಿದ್ದು. ಇಂದ್ರಿಯಾತೀತವಾದರೂ ಅನುಭವೈಕವೇದ್ಯ. ಆದರೆ ಅದು ಅವ್ಯಾಕೃತಸ್ಥಿತಿ. 'ಮಿಲಿಂದಪ್ರಶ್ನ'ದ ಕರ್ತೃವಾದ ನಾಗಾರ್ಜುನನು ನಿರ್ವಾಣಸ್ವರೂಪವನ್ನು ಸ್ಪಷ್ಟವಾದ ಮಾತುಗಳಿಂದ ವರ್ಣಿಸಿದ್ದಾನೆ. 'ನಿರ್ವಾಣದಲ್ಲಿ ದುಃಖಲೇಶವೂ ಇರುವುದಿಲ್ಲ, ಅದು ಆನಂದಸ್ವರೂಪ ಮತ್ತು ಅನುಪಮ. ಸಮುದ್ರದಂತೆ ಅನಂತ, ಅಪಾರ'. ಅನುಪಮವಾದ ಸ್ಥಿತಿಯನ್ನು ಉಪಮೆಯಿಂದ ತಿಳಿಸುವುದು ಹೇಗೆ ಎಂಬ ಸಂಶಯವೇಳಬಹುದು. ಅವರ ಉತ್ತರವಿಷ್ಟೆ. ವ್ಯವಹಾರವನ್ನು ಆಶ್ರಯಿಸದೆ ಪರಮಾರ್ಥಸತ್ಯವನ್ನು ತಿಳಿಸಲು ಸಾಧ್ಯವಿಲ್ಲ. ವ್ಯವಹಾರಸತ್ಯ ಉಪಾಯ. ಪರಮಾರ್ಥಸತ್ಯ ಉಪೇಯ.[2] ಆದ್ದರಿಂದ ನಿರ್ವಾಣದ ಸ್ಥಿತಿಯನ್ನು ಸಾಮಾನ್ಯರಿಗೆ ಅರ್ಥಮಾಡಿಸಿಕೊಡಲು ನಾಗಾರ್ಜುನನು ಕೆಲವು ಉಪಮಾನಗಳನ್ನು ನೀಡಿದ್ದಾನೆ. ಅವರಲ್ಲಿ ಕಮಲದ ಒಂದು ಗುಣ, ಜಲದ ಎರಡು ಗುಣ, ಔಷಧಿಯ ಮೂರು ಗುಣ, ಕಡಲಿನ ನಾಲ್ಕು ಗುಣ, ಆಹಾರದ ಐದು ಗುಣ. ಆಕಾಶದ ಹತ್ತು ಗುಣ, ಪರುಷಮಣಿಯ ಮೂರು ಗುಣ ಹಾಗೂ ಚಂದನದ ಮೂರು ಗುಣಗಳಿವೆ.[3] ನಿರ್ವಾಣದ ಸ್ವರೂಪವನ್ನು ತಿಳಿಸಲು ದೀಪವು ನಂದಿಹೋಗುವ ಸಾಮ್ಯವನ್ನು ನೀಡಿದ್ದಾರೆ. ಅಶ್ವಘೋಷನು ಇದನ್ನು ಬಹಳ ಮಾರ್ಮಿಕವಾಗಿ ತಿಳಿಸಿದ್ದಾನೆ : 'ನಂದಿದ ದೀಪ ಪೃಥ್ವಿಯಲ್ಲಿ ಸೇರುವುದಿಲ್ಲ, ಅಂತರಿಕ್ಷವಲ್ಲಲ್ಲ. ಆದರೆ ಎಣ್ಣೆ ತೀರಿದ ಬಳಿಕ ಅದು ಶಾಂತಿಯನ್ನು ಹೊಂದುತ್ತದೆ. ಅದೇ ರೀತಿ ಕ್ಲೇಶಕ್ಷಯವಾದವನು ಶಾಂತಿಯನ್ನು ಪಡೆಯುತ್ತಾನೆ.'[4]

ಈ ಸಾದೃಶ್ಯವು ವ್ಯಕ್ತಿತ್ವದ ಸಂಪೂರ್ಣನಾಶದ ಭಾವನೆಯನ್ನು ಸೂಚಿಸುತ್ತದೆ. ದೀಪವು ಆರಿಹೋಗುವುದೆಂದರೆ ವಾಸನೆಗಳು, ಕ್ಲೇಶಗಳು ಅಳಿದುಹೋಗಿ ಭವಬೀಜಕ್ಕೆ ಕಾರಣವಾಗಿರುವ ಸರ್ವಸಂಸ್ಕಾರಗಳೂ ನಷ್ಟವಾಗಿ ಜನ್ಮಾಂತರಕ್ಕೆ ಎಡೆಕೊಡದಿರುವ ಸ್ಥಿತಿ ಎಂದು ಮಹಾಯಾನಪಂಥದವರು ಗ್ರಹಿಸುತ್ತಾರೆ. ಅದ್ವೈತಮತವು ಪ್ರತಿಪಾದಿಸುವ ತ್ರಿಪುಟೀಲಯದಂತೆ, ಮಾಧ್ಯಮಿಕಮತವು ಒಪ್ಪಿರುವ ನಿರ್ವಾಣದಲ್ಲಿ ಜ್ಞಾತೃಜ್ಞೇಯ, ವಿಧಿನಿಷೇಧ ಎಂಬ ದ್ವೈತಭಾವವು ಇಲ್ಲ. ಪ್ರತಿಯೊಬ್ಬ ಮಾನವನೂ ಅಷ್ಟಾಂಗಮಾರ್ಗವನ್ನು ಅನುಸರಿಸುವುದರ ಮೂಲಕ ಈ ಸ್ಥಿತಿಯನ್ನು ಮುಟ್ಟಬಹುದು ಎಂದು ಬೋಧಿಸಿದುದೇ ಅಲ್ಲದೆ ಅದನ್ನು ಮಾತಿನ ಮೂಲಕ ವರ್ಣಿಸಲು ಬುದ್ಧ ನಿರಾಕರಿಸಿದ. ಗಹನವಾದ ಅನುಪಮವಾದ ತತ್ತ್ವವನ್ನು ಕುರಿತು ಬುದ್ಧನು ಮೌನವನ್ನು ಅವಲಂಬಿಸಿದಂತೆಯೇ ಬ್ರಹ್ಮನ ವಿಷಯದಲ್ಲಿಯೂ ಮೌನವೇ ಅದನ್ನು ತಿಳಿಸುವ ಪ್ರಬಲ ಹಾಗೂ ಶ್ರೇಷ್ಠ ಮಾಧ್ಯಮ ಎಂಬುದನ್ನು ಅನೇಕ ಅನುಭಾವಿಗಳು ತಿಳಿಸಿದ್ದಾರೆ. ಶಂಕರರು ಬ್ರಹ್ಮಸೂತ್ರಭಾಷ್ಯದಲ್ಲಿ ಒಂದು ಘಟನೆಯನ್ನು ನಿರೂಪಿಸಿದ್ದಾರೆ: ಬಾಷ್ಕಲಿಯು ಬಾಧ್ವನುಷಿಯ ಸಮೀಪಕ್ಕೆ ಹೋಗಿ ಬ್ರಹ್ಮನ ಸ್ವರೂಪವೇನೆಂದು ಪ್ರಶ್ನಿಸಿದ. ಅದಕ್ಕೆ ಅವರು ಉತ್ತರಿಸಲಿಲ್ಲ. ಎರಡನೆಯ ಬಾರಿ, ಮೂರನೆಯ ಬಾರಿ ಪ್ರಶ್ನಿಸಿದರೂ ಉತ್ತರಿಸಲಿಲ್ಲ. ಅನಂತರ ಬಾಧ್ವರೇ ಹೇಳಿದರು. "ನಾನಾಗಲೇ ಅದಕ್ಕೆ ಉತ್ತರಿಸಿದ್ದೇನೆ. ನೀನು ಅದನ್ನು ಅರಿಯಲಿಲ್ಲ; ಆತ್ಮ ಉಪಶಾಂತ."[5] ಈ ಮೌನ ಅಜ್ಞಾನಕೃತವಾದುದಲ್ಲ. ರಾಮಕೃಷ್ಣರು ಹೇಳುವಂತೆ, "ಎಲ್ಲವೂ ಉಚ್ಛಿಷ್ಟವಾಗಿ ಹೋಗಿದೆ. ವೇದ, ಪುರಾಣ, ತಂತ್ರ, ಷಡ್‌ದರ್ಶನ ಎಲ್ಲಾ. ಇವೆಲ್ಲಾ ಬಾಯಿಂದ ಹೊರಹೊಮ್ಮಿರುವುದರಿಂದ. ನಾಲಗೆಯು ಉಚ್ಚರಿಸಿರುವುದರಿಂದ ಉಚ್ಛಿಷ್ಟವಾಗಿವೆ. ಆದರೆ ಕೇವಲ

---

1 ಅಸಂಖತಂ ಚ ಓ ಭಿಕ್ಖವೇ ದೇಸಸ್ಸಾಮಿ. ಅಸಂಖತಗಾಮಿಂ ಚ ಮಗ್ಗಂ...ಅನಾಸದಂ ಚ...ಸಚ್ಚಂ ಪರಂ ನಿಪುಣಂ, ಅಜರಂ, ಧ್ರುವಂ, ಶಾಂತಂ, ಅಮತಂ, ಪನೀತಂ, ಶಿವಂ, ಖೇಮಂ, ಅಭೂತಂ, ಅಂತರಧಮ್ಮ...ನಿಬ್ಬಾನಂ ದೀಪಂ ವಾಕ್ಕಾಂ ಶರಣಂ...ಸಂಯುಕ್ತ ನಿಕಾಯ (*Pali Text Society*, Vol. IV p. 368)

2 ಉಪಾಯಭೂತಂ ವ್ಯವಹಾರಸತ್ಯಂ, ಉಪೇಯಭೂತಂ ಪರಮಾರ್ಥಸತ್ಯಂ । (ಬೋ. ಪಂಜಿಕಾ : ಪುಟ ೩೭೨)

3 ವಿವರಗಳಿಗೆ ನೋಡಿ : ನಾಗಾರ್ಜುನ: (ಮಿಲಿಂದಪ್ರಶ್ನ, Jra. T. W. Rhys Davids pp. 180-205)

4 ದೀಪೋ ಯಥಾ ನಿರ್ವೃತಿಮಭ್ಯುಪೇತೋ ನೈವಾವನಿಂ ಗಚ್ಛತಿ ನಾಂತರಿಕ್ಷಂ ।
ದಿಶಂ ನ ಕಾಂಚಿತ್ ವಿದಿಶಂ ನ ಕಾಂಚಿತ್, ಸ್ನೇಹಕ್ಷಯಾತ್ ಕೇವಲಮೇತಿ ಶಾಂತಿಂ ।
ತಥಾಕೃತೀ ನಿರ್ವೃತಿಮಭ್ಯುಪೇತೋ ನೈವಾವನಿಂ ಗಚ್ಛತಿ ನಾಂತರಿಕ್ಷಂ
ದಿಶಂ ನ ಕಾಂಚಿತ್ ವಿದಿಶಂ ನ ಕಾಂಚಿತ್ ಕ್ಲೇಶಕ್ಷಯಾತ್ ಕೇವಲಮೇತಿ ಶಾಂತಿಮ್ ॥ (ಸೌಂದರನಂದ, ೧೬, ೨೮-೨೯)

5 ಶಾಂ.ಭಾ. (೩-೨-೧೭)

ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಇದುವರೆಗೆ ಯಾರೂ ವರ್ಣನೆ ಮಾಡಿಲ್ಲ."[1] ನಿರ್ವಾಣವನ್ನು ಬೌದ್ಧರ ಪ್ರಕಾರ ಈ ಇಹಜೀವನದಲ್ಲಿ ಪಡೆಯಬಹುದು. ಇದು ವೇದಾಂತಿಗಳ ಜೀವನ್ಮುಕ್ತಿಯಂತೆ. ವೈದಿಕಮತಗಳು ಪ್ರತಿಪಾದಿಸುವ ಬ್ರಹ್ಮಸಾಕ್ಷಾತ್ಕಾರವಾದವನ ನಿಲುವು, ಜೀವನದೃಷ್ಟಿ ಏನುಂಟೋ ಅವೆಲ್ಲವನ್ನೂ ನಿರ್ವಾಣವನ್ನು ಹೊಂದಿದವನ ಜೀವನದಲ್ಲ ಕಾಣಬಹುದು. ರಾಗದ್ವೇಷಗಳಿಲ್ಲದರ ಸಮದೃಷ್ಟಿ, ಸುಖದುಃಖ ಮುಂತಾದ ದ್ವಂದ್ವಗಳಿಗೆ ಪಕ್ಕಾಗದ ಅಚಲತೆ, ಪ್ರಶಾಂತತೆ, ಕಾರುಣ್ಯ ಇವೆಲ್ಲವೂ ನಿರ್ವಾಣ ಪದವಿಯನ್ನೂ ಪಡೆದವರಲ್ಲಿ ಅಳವಟ್ಟಿರುತ್ತವೆ.[2] ಭಗವದ್ಗೀತೆಯಲ್ಲಿ ಪ್ರತಿಪಾದಿಸಿರುವ ಸ್ಥಿತಪ್ರಜ್ಞನಲಕ್ಷಣಗಳೊಡನೆ ಸಾಮ್ಯವನ್ನು ಕಾಣಬಹುದು.

ಬೌದ್ಧ ತತ್ವಶಾಸ್ತ್ರದ ಸಹಸ್ರ ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಪ್ರಾರಂಭದಲ್ಲಿದ್ದ ಶೂನ್ಯದ ಅರ್ಥವು ವಿರೂಪಗೊಂಡು ಅಂತಿಮವಾಗಿ ಅಭಾವದಲ್ಲ ಪರ್ಯವಸಾನಗೊಂಡನಂತರ ಆಧ್ಯಾತ್ಮಿಕಕ್ಷೇತ್ರದಲ್ಲಿ ಪರಮಸತ್ಯದ ನಿರೂಪಣೆಗೆ ಶೂನ್ಯಪದವನ್ನು ಬಳಸಲು ವೈದಿಕಪಂಥದವರೆಲ್ಲರೂ ಹಿಂಜರಿದಂತೆ ಭಾಸವಾಗುತ್ತದೆ. ಶೂನ್ಯ, ನಿರ್ವಾಣ ಮುಂತಾದ ಪದಗಳು ಅಲ್ಲಲ್ಲಿ ಪ್ರಯುಕ್ತವಾಗಿದ್ದರೂ ಅವನ್ನು ಬೇರೆ ಅರ್ಥದಲ್ಲಿ ಗ್ರಹಿಸಿರುವುದನ್ನು ಕಾಣಬಹುದು. ವಿಷ್ಣುಸಹಸ್ರನಾಮದ ಭಾಷ್ಯದಲ್ಲಿ ಬರುವ ಶೂನ್ಯಪದಕ್ಕೆ ಶಂಕರರು ಶೂನ್ಯದಂತೆ ಶೂನ್ಯ ಎಂದಷ್ಟೇ ಅಸ್ಪಷ್ಟವಾಗಿ ವ್ಯಾಖ್ಯಾನಿಸಿದರೆ,[3] ದ್ವೈತಿಗಳಾದ ರಾಘವೇಂದ್ರಸೂರಿಗಳು ನಿರ್ವಾಣಪದವು ಬ್ರಹ್ಮನು ಅಶರೀರಿ ಎಂಬುದನ್ನೂ ಅವನಲ್ಲಿ ರಾಗದ್ವೇಷಾದಿಗಳು ಇಲ್ಲವೆಂಬುದನ್ನೂ ಸೂಚಿಸುತ್ತದೆ ಎನ್ನುತ್ತಾರೆ.[4] ಗೀತೆಯಲ್ಲಿ ನಿರ್ವಾಣಪದವನ್ನು ಬ್ರಹ್ಮನ ಜೊತೆಯಲ್ಲೇ ಬಳಸಿದೆ.[5]

ಸಗುಣಬ್ರಹ್ಮವಾದಿಗಳಾದ ರಾಮಾನುಜರು ಅದನ್ನು ಸಾಮಾನ್ಯ ಅರ್ಥವಾದ ಸುಖಪರ್ಯಾಯವಾಗಿ ವ್ಯಾಖ್ಯಾನಿಸಿದರೆ, ನಿರ್ಗುಣಬ್ರಹ್ಮವಾದಿಗಳಾದ ಶಂಕರರು ಅದಕ್ಕೆ ನಿರ್ವೃತಿ ಅಂದರೆ ಮೋಕ್ಷ ಎಂದೇ ಅರ್ಥೈಸಿದ್ದಾರೆ. ಆದರೆ ಶಂಕರರೇ ಮುಂಡಕೋಪನಿಷತ್ತಿನ ಭಾಷ್ಯದಲ್ಲಿ ಒಂದೆಡೆ—ಬದುಕಿದ್ದಾಗಲೇ ಜ್ಞಾನಿಗಳು ಬ್ರಹ್ಮಭಾವವನ್ನು ಹೊಂದಿ, ನಂದಿದ ದೀಪದಂತೆ ಭಿನ್ನವಾದ ಘಟಾಕಾಶದಂತೆ ನಿವೃತ್ತಿಹೊಂದುತ್ತಾರೆ—ಎಂದು ನಿರ್ವಾಣಪದಕ್ಕೆ 'ನಂದಿದ' ಎಂದೇ ಹೇಳಿದ್ದಾರೆ.[6] ಕಾಶ್ಮೀರ ಶೈವಸಿದ್ಧಾಂತದ ಪ್ರಮುಖ ನಿರೂಪಕರಲ್ಲೊಬ್ಬರಾದ ಕ್ಷೇಮರಾಜರು ತಮ್ಮ ಪ್ರತ್ಯಭಿಜ್ಞಾಹೃದಯದಲ್ಲಿ ಶಿವಸೂತ್ರಕ್ಕೆ ವಿವರಣೆ ನೀಡುತ್ತ ಶೂನ್ಯವನ್ನು ಶಿವನ ಪರ್ಯಾಯನಾಮವನ್ನಾಗಿ ಬಳಸಿರುವುದು ಗಮನಾರ್ಹವಾದುದು.[7] ತಮಿಳು ಶೈವಸಿದ್ಧಾಂತದ ಸಮಯಾಚಾರ್ಯರಲ್ಲೊಬ್ಬರಾದ ತಿರುಮೂಲರ್ ಅವರು ತಮ್ಮ 'ತಿರುಮಂತ್ರ' ಎಂಬ ಕೃತಿಯಲ್ಲಿ ಶೂನ್ಯವನ್ನು ಅಧ್ಯಾತ್ಮದ ಗುರಿ ಹಾಗೂ ಅತ್ಯುನ್ನತ ಸ್ಥಿತಿ ಎಂದಿದ್ದಾರೆ.[8] ಹೀಗೆ ಅಲ್ಲಲ್ಲಿ ಶೂನ್ಯ ಹಾಗೂ ನಿರ್ವಾಣಪದವನ್ನು ಬಳಸಿದ್ದರೂ, ಬ್ರಹ್ಮಶಬ್ದಕ್ಕೂ ಮಿಗಿಲಾದ ಅರ್ಥವನ್ನು ಕೊಡುವ, ಉಪನಿಷತ್ತಿನಲ್ಲಿ ಪ್ರತಿಪಾದಿತವಾದ ಆತ್ಮಶಬ್ದಕ್ಕೆ ಸಂವಾದಿಯಾಗಿ ಶೂನ್ಯಪದವನ್ನು, ಅಧ್ಯಾತ್ಮದ ಉನ್ನತ ನಿಲವನ್ನು

---

1 ರಾಮಕೃಷ್ಣ ವಚನವೇದ, ಭಾಗ ೧, ಪುಟ ೨೭

2 ನ ಶೂನ್ಯತಾವಾದೀ ಲೋಕಧರ್ಮೈಃ ಸಂಹ್ರಿಯತೇ ನ ಸ ಲಾಭೇನ ಸಂಹೃಷ್ಯತಿ. ಅಲಾಭೇನ ವಾ ವಿಮನಾ ಭವತಿ. ಯಶಸಾ ನ ವಿಸ್ಮಯತೇ. ಅಯಶಸಾ ನ ಸಂಕುಚತಿ ನಿಂದಯಾ ನ ವಿಲೀಯತೇ ಪ್ರಶಂಸಯಾ ನಾನುನೀಯತೇ. ಸುಖೇನ ನ ರಜ್ಯತೇ. ದುಃಖೇನ ನ ವಿರಜ್ಯತೇ ಯೋ ಹಿ ಏವಂ ಲೋಕಧರ್ಮೈಃ ನ ಸಂಹ್ರಿಯತೇ ಸ ಶೂನ್ಯತಾಂ ಜಾನಾತಿ. ತಥಾ ಶೂನ್ಯವಾದಿನೋ ನ ಕ್ವಚಿದನುರಾಗೋ ನ ವಿರಾಗಃ ॥

V. S. Bhattacharya: "*The central conception of Buddhism*" p. 80

3 ವಿ.ಸ.ಭಾ: ಶೂನ್ಯಮಿವ ಶೂನ್ಯಂ;

4 ನಿರ್ವಾಣಂ–ನಿರ್ಗತಂ ವಾಣಂ=ಶರೀರಂ ಯಸ್ಮಾತ್ ತಂ ಅಶರೀರಂ ಬ್ರಹ್ಮ; 'ಏತದ್ವಾಣಮವಷ್ಟಭ್ಯೇ'ತ್ಯಾದೌ ವಾಣಶಬ್ದಸ್ಯ ಶರೀರೇ ಪ್ರಯೋಗಾತ್

5 ಗೀತೆ (೨-೭೨), (೫-೨೪, ೨೫, ೨೬)

6 ಪರಾಮೃತಾಃ–ಜೀವಂತ ಏವ ಬ್ರಹ್ಮಭೂತಾಃ, ಪರಾಮೃತಾಃ ಸಂತಃ; ಪರಿಮುಚ್ಯಂತಿ=ಪರಿ–ಸಮಂತಾತ್ ಪ್ರದೀಪನಿರ್ವಾಣವತ್, ಭಿನ್ನಘಟಾಕಾಶವಚ್ಚ ನಿವೃತ್ತಿಮುಪಯಾಂತಿ (ಮುಂಡಕ೩–೨–೬)

7 ಶ್ರೀಪರಮಶಿವಃ ವಿಶ್ವಂ ಅವಬಿಭಾಸಯಿಷುಃ ಶಿವಪರ್ಯಾಯಶೂನ್ಯಾತಿಶೂನ್ಯಾತ್ಮಕತಯಾ ಪ್ರಕಾಶಾಭೇದೇನ ಪ್ರಕಾಶಮಾನತಯಾ ಸ್ಫುರತಿ

8 C. V. Narayana Iyer: *Origin and early history of Saivism in south India*, p. 236. University of Madras, 1974

ತಿಳಿಸುವ ಸಮರ್ಥ ಮಾಧ್ಯಮವನ್ನಾಗಿ, ಅತ್ಯಂತ ವ್ಯಾಪಕವಾಗಿ ಬಳಸಿದವರು ವೀರಶೈವರು. ಅಂತೆಯೇ ಮೋಕ್ಷಕ್ಕೆ ಪರ್ಯಾಯವಾದ ಅತ್ಯಂತ ಅರ್ಥಗರ್ಭಿತವಾದ 'ಬಯಲು' ಎಂಬುದನ್ನು ತಾತ್ತ್ವಿಕಕ್ಷೇತ್ರದಲ್ಲಿ ಪ್ರಯೋಗಿಸಿದರು.

ವೈಷ್ಣವಮತದ ಕವಿಗಳೂ ಈ ಶೂನ್ಯ ಪದವನ್ನು ಬಳಸಿರುವುದು ಅಚ್ಚರಿಯ ಸಂಗತಿ. ಕ್ರಿ.ಶ. ೧೩ನೇ ಶತಮಾನದಲ್ಲಿದ್ದ ವಂಗದೇಶದ ರಮಾಯಿಪಂಡಿತನು ತನ್ನ ಶೂನ್ಯಪುರಾಣದಲ್ಲಿ ನಿರಾಕಾರನಾದ ಶೂನ್ಯಮೂರ್ತಿಯನ್ನು ಹೀಗೆ ಸ್ತುತಿಸಿದ್ದಾನೆ. "ಆದಿಮಧ್ಯಾಂತವಿಲ್ಲ, ಕರ-ಚರಣಗಳಿಲ್ಲ, ನಾದವಿಲ್ಲ, ರೂಪ-ಆಕಾರಗಳಿಲ್ಲ, ಹುಟ್ಟು-ಸಾವುಗಳಿಲ್ಲ, ಯೋಗಿಗಳ ಜ್ಞಾನಕ್ಕೆ ಮಾತ್ರ ಗೋಚರ, ಎಲ್ಲ ಲೋಕಕ್ಕೂ ಅಧಿಪತಿ, ಭಕ್ತರ ಇಷ್ಟಾರ್ಥ ಈಡೇರಿಸುವವ, ದೇವ-ಮಾನವರಿಗೆ ವರವನ್ನು ನೀಡುವವ—ಇಂತಹ ಶೂನ್ಯಮೂರ್ತಿಯನ್ನು ಧ್ಯಾನಿಸಬೇಕು."[1] ಉತ್ಕಲಪ್ರಾಂತದ ವೈಷ್ಣವಸಾಹಿತ್ಯದಲ್ಲೂ ಈ ಪದವನ್ನು ಆಧ್ಯಾತ್ಮದ ಅತ್ಯುನ್ನತಸ್ಥಿತಿಯನ್ನಾಗಿ ಬಳಸಿರುವುದನ್ನು ಕಾಣಬಹುದು. ಶ್ರೀಕೃಷ್ಣನ ಯಶಸ್ಸನ್ನು ಗಾನಮಾಡಿ ಪ್ರೇಮ-ಭಕ್ತಿಯನ್ನು ದರ್ಶಿಸಿ, ಧಾರ್ಮಿಕ ಉತ್ಸಾಹವನ್ನು ವೃದ್ಧಿಗೊಳಿಸಿದ ಪ್ರಮುಖ ವೈಷ್ಣವ ಕವಿಗಳೆಂದರೆ ಅಚ್ಯುತಾನಂದದಾಸ, ಬಲರಾಮದಾಸ, ಜಗನ್ನಾಥದಾಸ, ಅನಂತದಾಸ ಮತ್ತು ಯಶೋವಂತದಾಸರು. ಬಲರಾಮದಾಸನು ರಚಿಸಿದ 'ವಿರಾಟ್‌ಗೀತೆ'ಯಲ್ಲಿ ಅರ್ಜುನನ ಬಾಯಿಂದ ಈ ರೀತಿ ನುಡಿಸಿದ್ದಾನೆ—'ನಿನಗೆ ರೂಪವಿಲ್ಲ, ಆಕಾರವಿಲ್ಲ, ನಿನಗೆ ಮೂರ್ತದೇಹಗಳಿಲ್ಲ, ದೇಹಧಾರಿಯಾಗಿದ್ದರೂ ನಿನ್ನನ್ನು ಶೂನ್ಯರೂಪನನ್ನಾಗಿ ಭಾವಿಸುತ್ತೇನೆ. ಬ್ರಹ್ಮನು ಶೂನ್ಯದಲ್ಲಿರುತ್ತಾನೆ. ಶೂನ್ಯಾಕಾಶವೇ ನಿನ್ನ ರೂಪ, ಶೂನ್ಯವೇ ನಿನ್ನ ಶರೀರ'. ಹೀಗಿರುವಾಗ ನಿನಗೆ ದೈತ್ಯಾರಿ ಎಂಬ ಹೆಸರು ಹೇಗೆ ಬಂದಿತು ?' ಇದಕ್ಕೆ ಹೀಗೆ ಕೃಷ್ಣನು ಉತ್ತರಿಸುತ್ತಾನೆ—"ಶೂನ್ಯವೇ ನನ್ನ ನಿವಾಸ, ಈ ರೂಪವನ್ನು ನಾನು ತ್ಯಾಗಮಾಡಿದ ಮೇಲೆ ಶೂನ್ಯದಲ್ಲೇ ಲಯವಾಗುತ್ತೇನೆ. ಅದೇ ನನ್ನ ವಾಸ್ತವಿಕವಾದ ಹೆಸರು. ಈ ಹೆಸರು ನನಗೆ ಹೇಗೆ ಎಲ್ಲಿಂದ ಬಂತು ಎಂಬುದನ್ನು ನೋಡಿ ನನಗೂ ಸಂದೇಹ ಉಂಟಾಗುತ್ತಿದೆ."[2] ಇದೇ ಕಾಲದ ಮತ್ತೊಬ್ಬ ವೈಷ್ಣವಸಂತನಾದ ಅಚ್ಯುತಾನಂದದಾಸನ 'ಶೂನ್ಯಸಂಹಿತೆ'ಯಲ್ಲಿ ಶೂನ್ಯಪುರುಷನು ಹೇಗೆ ಜೀವಾತ್ಮನ ರೂಪದಲ್ಲಿ ಸ್ವಯಂ ಬಂಧಿತನಾಗಿದ್ದಾನೆ ಮತ್ತು ಹೇಗೆ ಆತನು ಆಳುತ್ತಾನೆ ಎಂಬುದನ್ನು ವಿವರಿಸಿದೆ. "ಅವನನ್ನು ಇಪ್ಪತ್ತೈದು ತತ್ತ್ವಗಳು ಸ್ಪರ್ಶಿಸಲಾರವು, ಶೂನ್ಯಪುರುಷನು ಶೂನ್ಯಪುರದಲ್ಲಿ ಇರುತ್ತಾನೆ. ಶೂನ್ಯಭಜನೆಯಿಂದ ನಿರಾಕಾರವನ್ನು ಧ್ಯಾನಿಸುತ್ತಾನೆ."[3] ಮತ್ತೊಬ್ಬ ವೈಷ್ಣವಸಂತನಾದ ಚೈತನ್ಯದಾಸನು ತನ್ನ ವಿಷ್ಣುಗರ್ಭಕೃತಿಯಲ್ಲಿ ಹೀಗೆ ತಿಳಿಸುತ್ತಾನೆ: "ಶೂನ್ಯವೇ ಅವನ ರೂಪ ಶೂನ್ಯದೊಡನೆ ಏಕಾಕಾರವಾಗಿ ಎಲ್ಲೆಡೆಯೂ ವ್ಯಾಪಿಸಿದ್ದಾನೆ ; ಶೂನ್ಯ ಅವನ ಮನೆ ; ಶೂನ್ಯದಲ್ಲಿಯೇ ಇದ್ದು ಶೂನ್ಯದಲ್ಲಿಯೇ ವಿಹರಿಸುತ್ತಾನೆ."[4]

ಈ ವಿಶ್ವಕ್ಕೆ ಮೂಲಕಾರಣ ಯಾವುದು ಎಂಬುದು ಭಾರತೀಯ ತತ್ತ್ವಶಾಸ್ತ್ರದ ಪ್ರಮುಖ ಸಮಸ್ಯೆಗಳಲ್ಲೊಂದು. ಪ್ರತಿಯೊಂದು ದರ್ಶನವೂ ತನ್ನದೇ ಆದ ರೀತಿಯಲ್ಲಿ ಇದನ್ನು ಬಿಡಿಸಲು ಪ್ರಯತ್ನಿಸಿದೆ : ಚಾರ್ವಾಕರಂತೆ ಆಕಸ್ಮಿಕ

---

1 ಶೂನ್ಯಪುರಾಣ, ೧೯೦೯, ಪ್ರಕಾಶನ : ವಂಗೀಯಸಾಹಿತ್ಯಪರಿಷತ್
ಯಸ್ಯಾಂತೋಽನಾದಿಮಧ್ಯೋ ನ ಚ ಕರಚರಣೌ ನಾಸ್ತಿ ಕಾಯೋ ನ ನಾದಃ
ನಾಕಾರೋ ನೈವ ರೂಪಂ ನ ಚ ಭಯಮರಣೇ ನಾಸ್ತಿ ಜನ್ಮಾಪಿ ಯಸ್ಯ ।
ಯೋಗೀಂದ್ರೈರ್ಜ್ಞಾನಗಮ್ಯಂ ಸಕಲದಲಗತಂ ಸರ್ವಲೋಕೈಕನಾಥಂ
ಭಕ್ತಾನಾಂ ಕಾಮಪೂರಂ ಸುರವರನರದಂ ಚಿಂತಯೇತ್ ಶೂನ್ಯಮೂರ್ತಿಮ್ ॥

2 ತೋಹರ ರೂಪ ರೇಖ ನಾಹೀ ಶೂನ್ಯಪುರುಷ ಶೂನ್ಯ ದೇಹಿ ।
ಮೋ ಇಲೇ ಶೂನ್ಯ ತೋರ ದೇಹೀ, ಅವಾರ ನಾಮ ಥಿವ ಕಾಹೀ ॥
ಶೂನ್ಯರೇ ಬ್ರಹ್ಮ ನಿವಾ ಥಾಹಿ ಸೆ ಠಾರೇ ನಾಬ ಥಿಬ ರಹಿ ।
ತೋರ ಶೂನ್ಯ ರೂಪ ಶೂನ್ಯದೇಹ ಕಿನಾ ದೈತ್ಯಾರಿ ನಾಮ ವ್ಯೂಹ ॥
ಮೋಹರ ಶೂನ್ಯರೇ ವಿಶ್ರಾಮ ಸೇ ಠಾರೇ ಕಹು ಅಚ್ಛಿ ನಾಮ ।
ಮೋತೋ ಸಂದೇಹ ಲಗಿಲಾ ಶಾಂಹುತೋ ನಾಮ ಜಾತ ಹೇಲಾ ॥ (ವಿರಾಟ್‌ಗೀತೆ)

3 ಶೂನ್ಯ ಪುರೇ ಶೂನ್ಯ ಪುರುಷ ರಹೆ, ಶೂನ್ಯ ಭಜನ ನಿರಾಕಾರ ಧ್ಯಾಯೇ । (ಶೂನ್ಯಸಂಹಿತೆ)
ದ್ವಾವಿಂಶ ಅಕ್ಷರೇ ಪರೇ ಸೃಜನ ಶೂನ್ಯ ಪುರುಷ ನಿರಾಕಾರ ಧ್ಯಾನ ॥

4 ಶೂನ್ಯ ಸಂಗತೇ ಸೇ ಶೂನ್ಯ ಶೂನ್ಯ ಶೂನ್ಯ ರೂಪೀ
ಶೂನ್ಯ ಸಂಗತೇ ಸೇ ಮಿಶಿ ಅದಿ ಸಕಲ ಸ್ಥಾನ ವ್ಯಾಪೀ
ಶೂನ್ಯ ಹಿಟ ತಾಹಾರ ಅಟಣ ನಿಜಘರೆ ।
ಶೂನ್ಯರೇ ಥಾಇಸೆ ಶೂನ್ಯೇ ಕರಣ ವಿಹಾರ ॥ (ವಿಷ್ಣುಗರ್ಭ)

ವಾದವನ್ನಾಗಲೀ, ಸ್ವಭಾವವಾದವನ್ನಾಗಲೀ ಒಪ್ಪದೆ ವೇದದ ಆಧಾರದ ಮೇಲೆ ಕಾರ್ಯಕಾರಣಗಳನ್ನವಲಂಬಿಸಿ ವೈದಿಕಮತಗಳಲ್ಲಿ ಅದ್ವೈತವು ಉಪಾಧಿವಿಶಿಷ್ಟನಾದ ಬ್ರಹ್ಮನೇ ಜಗತ್ತಿಗೆ ಕಾರಣನೆಂದೂ ದ್ವೈತ-ವಿಶಿಷ್ಟಾದ್ವೈತಿಗಳು ವಿಷ್ಣುಸ್ವರೂಪನಾದ ಸಗುಣಬ್ರಹ್ಮನೇ ಕಾರಣನೆಂದೂ,ಶೈವರು ಶಿವನೆಂದೂ, ಸಾಂಖ್ಯರು ಪ್ರಕೃತಿಯೆಂದೂ ಒಪ್ಪಿದ್ದಾರೆ. ವೀರಶೈವದರ್ಶನವು ಅದನ್ನು ಶೂನ್ಯ, ಶೂನ್ಯಲಿಂಗ, ನಿಶ್ಶೂನ್ಯ, ಮಹಾಶೂನ್ಯ, ಮಹಾಘನ, ನಿಷ್ಕಲ ಲಿಂಗ, ಬಯಲು, ಪೂರ್ಣ ಮುಂತಾದ ಶಬ್ದಗಳಿಂದ ಕರೆದಿದೆ. ವಿಶ್ವೋತ್ಪತ್ತಿಯನ್ನು ತಿಳಿಸುವ ಅಲ್ಲಮಪ್ರಭುವಿನ ವಚನ ಇಂತಿದೆ :

ವಾರಿ ಬಲಿದು ವಾರಿ ಕಲ್ಲಾದಂತೆ
ಶೂನ್ಯವೇ ಸ್ವಯಂಭುವಾಗಿತ್ತು
ಆ ಸ್ವಯಂಭುಲಿಂಗದಿಂದಾಯಿತ್ತು ಮೂರ್ತಿವತ್ತು
ಆ ಮೂರ್ತಿಯಿಂದಾಯಿತ್ತು ವಿಶ್ವೋತ್ಪತ್ತಿ....

ಈ ಬಯಲು ಅಥವಾ ಶೂನ್ಯ, ಚರಾಚರಸೃಷ್ಟಿಯ ಮೂಲವಸ್ತು. ಇದರಿಂದಲೇ ಸಮಸ್ತಲೋಕವು ಹೊರಹೊಮ್ಮಿದೆ. ವ್ಯಕ್ತವಾದ ಈ ಪ್ರಪಂಚದ ಹಿಂದೆ ಇರುವ ಅವ್ಯಕ್ತಸ್ಥಿತಿಯೇ ಶೂನ್ಯ. ಇದನ್ನು ಶರಣರ ಪರಿಭಾಷೆಯಲ್ಲೇ ಹೇಳುವುದಾದರೆ ಇದು ಸರ್ವಶೂನ್ಯನಿರಾಲಂಬಸ್ಥಲ. ಅಲ್ಲಿ ಪೃಥ್ವಿಯಿಲ್ಲ, ಆಕಾಶವಿಲ್ಲ. ಹುಟ್ಟು, ಬೆಳವಣಿಗೆ, ನಾಶ ಇವಾವುವೂ ಇಲ್ಲ. ನಾನು-ನೀನು ಎಂಬ ಭೇದಕ್ಕೆ ಇಂಬಿಲ್ಲ. ಸತ್ವರಜಸ್ತಮೋಗುಣಗಳಿಲ್ಲ. ಪ್ರಕೃತಿ, ಮಹತ್ತು, ಮಾಯೆ, ಜ್ಞಾನ, ಅಜ್ಞಾನ, ರೂಪು, ನಿರೂಪು, ಕಾಮ, ನಿಃಕಾಮ, ಅರಿವು, ಮರೆವು ಇವೇನೂ ಇಲ್ಲದಂದು ಅದೇ ಆಗಿತ್ತು ಎಂದು ತೋಂಟದ ಸಿದ್ಧಲಿಂಗಯತಿಗಳು ನಿರೂಪಿಸುತ್ತಾರೆ.[1] ಇಲ್ಲಿ ಶೂನ್ಯವೆಂದರೆ ಮೊಲದ ಕೊಂಬಿನಂತೆ, ಗಗನಕುಸುಮದಂತೆ ಇಲ್ಲದ್ದು ಎಂದರ್ಥವಲ್ಲ. ನಾಮರೂಪಗಳು ವ್ಯಕ್ತವಾಗದಿರುವ ಸ್ಥಿತಿ ಅದು. 'ಅಖಂಡಾದ್ವಯ, ಅನಿರ್ವಾಚ್ಯ' ನಿತ್ಯನಿರವಯವ ಪರಿಪೂರ್ಣವಾದದ್ದು ಅದು. ಅದಕ್ಕಿಂತ ಬೇರೆಯಾದ ಯಾವ ತತ್ವಗಳೂ ಇನ್ನಿಲ್ಲ. ಎಲ್ಲದಕ್ಕೂ ಆಶ್ರಯವಾಗಿದ್ದು ತಾನು ಮತ್ತೊಂದನ್ನು ಆಶ್ರಯಿಸದೇ ಇರುವಂಥದು. ಅಲ್ಲಿ ಪೃಥಿವೀ ಮುಂತಾದ ಪಂಚಭೂತಗಳು, ಗ್ರಹಗಳು, ತಾರೆಗಳು, ದೇವ-ಮನುಷ್ಯರಾರೂ ಇಲ್ಲ.[2] ಅಲ್ಲಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಮುಂತಾದ ಯಾವ ದೇವತೆಗಳೂ ಇಲ್ಲ. ವಿಶ್ವೋತ್ಪತ್ತಿಗೆ ಕಾರಣವಾದ ಶಿವಶಕ್ತಿಗಳೂ ಇಲ್ಲ. ಏನೇನೂ ಇಲ್ಲದ ಆದರೂ ಎಲ್ಲವನ್ನೊಳಗೊಂಡ ಪರಿಪೂರ್ಣವಾದ ತತ್ವಾತೀತಸ್ಥಿತಿ ಅದು. ಶೂನ್ಯದ ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ನಿರೂಪಿಸುವ ತೋಂಟದ ಸಿದ್ಧಲಿಂಗಶಿವಯೋಗಿಗಳ ಈ ಕೆಳಗಿನ ವಚನವನ್ನು ಮನನ ಮಾಡಬಹುದು :

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವನೆಂಬ ಪಂಚಾಧಿದೇವತೆಗಳಿಲ್ಲದಂದು
ಈ ಪಂಚೈವರ ಲಯಗಮನಂಗಳಿಗೆ ಕಾರಣವಾದ ಶಿವಶಕ್ತಿಗಳಿಲ್ಲದಂದು
ಈ ಶಿವಶಕ್ತಿಗೆ ಕಾರಣವಾದ ಸತ್ತು-ಚಿತ್ತು-ಆನಂದ-ನಿತ್ಯ
ಪರಿಪೂರ್ಣವೆಂಬ ನಿಃಕಲತತ್ವವಿಲ್ಲದಂದು ನೀನು ಶೂನ್ಯವಾಗಿರ್ದೆಯಯ್ಯಾ
ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ

ಶೂನ್ಯಸ್ವರೂಪವನ್ನು ನಿರೂಪಿಸುವ ಅವರ ಮತ್ತೊಂದು ವಚನ ಹೀಗಿದೆ :

ಆದಿ-ಅನಾದಿಗಳಿಲ್ಲದಂದು
ನಾದ-ಬಿಂದು-ಕಳೆ ಮೊಳೆದೋರದಂದು
ದೇಹ-ದೇಹಿಗಳುತ್ಪತ್ತಿಯಾಗದಂದು
ಜೀವಾತ್ಮಪರಮಾತ್ಮರೆಂಬವರಿಲ್ಲದಂದು
ಸಕಲಚರಾಚರಗಳ ಸುಳುಹಿಲ್ಲದಂದು
ಇವೇನು ಏನೂ ಇಲ್ಲದಂದು
ನೀನು ಶೂನ್ಯನಾಗಿದ್ದೆಯಯ್ಯಾ
ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ ।

---

[1] ಷಟ್‌ಸ್ಥಲಜ್ಞಾನಸಾರಾಮೃತ : ಸಂ. ಡಾ. ಆರ್. ಸಿ. ಹಿರೇಮಠ, ಪುಟ ೭

[2] ನ ಪೃಥ್ವ್ಯಾದೀನಿ ಭೂತಾನಿ ನ ಗ್ರಹಾ ನೈವ ತಾರಕಾಃ
ನ ದೇವಾ ನ ಮನುಷ್ಯಾಶ್ಚ ನ ತಿರ್ಯಂಚೋ ನ ಚಾಪರೇ ॥ (ಸಿ. ಶಿಖಾಮಣಿ ೨೦.೬೩)

ಉಪನಿಷತ್ತಿನಲ್ಲಿ ಆತ್ಮವನ್ನು ವರ್ಣಿಸಲು ಬಳಸಿರುವ, ಪರಸ್ಪರ ವಿರುದ್ಧವೆಂದು ತೋರುವ ಭಾಷೆಯಂತೆಯೇ ಶರಣರೂ ಸಹ ಶೂನ್ಯವನ್ನು ವರ್ಣಿಸಿದ್ದಾರೆ. ಅದು ರೂಪಲ್ಲ-ನಿರೂಪಲ್ಲ, ಸಾವಯುವವಲ್ಲ-ನಿರವಯುವವಲ್ಲ, ನಾಮನಲ್ಲ-ನಿರ್ನಾಮನಲ್ಲ, ಸಕಲನಲ್ಲ-ನಿಷ್ಕಲನಲ್ಲ ; (ಪ.ಜ್ಞಾ.ಸಾ. ಪುಟ ೧೪) ಅಲ್ಲಿ ಚಿತ್ತ-ಬುದ್ಧಿ-ಅಹಂಕಾರವಿಲ್ಲ, ಮನ-ಜ್ಞಾನ-ಭಾವಂಗಳಿಲ್ಲ ; ಜ್ಞಾತೃ-ಜ್ಞಾನ-ಜ್ಞೇಯಂಗಳಿಲ್ಲ ; ಅದು ಅಖಂಡ, ಪರಿಪೂರ್ಣ, ಅದ್ವಯ ತತ್ವ. ಅಲ್ಲಿ ಸಾಧ್ಯ-ಸಾಧಕರಿಲ್ಲ,ಪೂಜ್ಯ-ಪೂಜಕರಿಲ್ಲ, ದೇವ-ಭಕ್ತನಿಲ್ಲ, ಉಪಾಸ್ಯ-ಉಪಾಸಕನಿಲ್ಲ, ಅಂಗಸ್ಥಲ-ಲಿಂಗಸ್ಥಲವಿಲ್ಲ, ಜೀವಾತ್ಮ-ಪರಮಾತ್ಮರಿಲ್ಲ, ದ್ವೈತ-ಅದ್ವೈತವಿಲ್ಲ. ಭಾವಾತೀತ-ಜ್ಞಾನಾತೀತ ಸ್ಥಿತಿ ಅದು. ಇಂತಹ ಮೂಲತತ್ವವನ್ನೇ ಶೂನ್ಯ ಎಂದು ಕರೆದಿದ್ದಾರೆ. ಅತ್ಯಂತ ಸೂಕ್ಷ್ಮವಾದ, ಗಹನವಾದ, ದುರ್ಜ್ಞೇಯವಾದ, ಅನುಭವೈಕವೇದ್ಯವಾದ ಶೂನ್ಯವನ್ನು ವರ್ಣಿಸಲು—ಆಕಾರವಿಲ್ಲದ, ವಿಕಾರವನ್ನು ಹೊಂದದ, ನಿತ್ಯವಾದ, ಎಲ್ಲೆ ಇಲ್ಲದ ಆಕಾಶದ ಉಪಮೆಯನ್ನು ನೀಡಿದ್ದಾರೆ.[1]. ಮನುಷ್ಯನ ಬುದ್ಧಿಗೆ ಗೋಚರವಾಗುವ ಅತ್ಯಂತ ಸೂಕ್ಷ್ಮವಾದ ಆದರೆ ವಿವರಿಸಲಾಗದ ಹಾಗೂ ಆತ್ಮಕ್ಕೆ ಬಹು ಸಮೀಪದ ನಿದರ್ಶನವೆಂದರೆ ಇದೊಂದೇ.

ಬೌದ್ಧರ ಶೂನ್ಯತತ್ವಕ್ಕೂ ವೀರಶೈವರ ಶೂನ್ಯತತ್ವಕ್ಕೂ ಇರುವ ಸ್ಪಷ್ಟ ಅಂತರ ಶೂನ್ಯಕ್ಕೂ ಜಗತ್ತಿಗೂ ಇರುವ ಸಂಬಂಧವನ್ನವಲಂಬಿಸಿದೆ. ಅವರ ದೃಷ್ಟಿಯಲ್ಲಿ ಶೂನ್ಯವೊಂದೇ ಪಾರಮಾರ್ಥಿಕ ಸತ್ಯ, ಉಳಿದುದೆಲ್ಲವೂ ಆರೋಪಿತ ಅಥವಾ ಕಲ್ಪಿತಸತ್ಯ. ವ್ಯವಹಾರವು ಸ್ವಪ್ನದಂತೆ, ಗಂಧರ್ವನಗರಿಯಂತೆ ಮಿಥ್ಯೆ. ಶೂನ್ಯವನ್ನು ಪಾರಮಾರ್ಥಿಕ ಸತ್ಯ, ಅದು ಜೀವನದ ಗುರಿ ಎಂದೊಪ್ಪಿದರೂ ಅದರಿಂದ ವಿಶ್ವಸೃಷ್ಟಿಯಾಗುತ್ತದೆ ಎಂಬ ಅಂಶವನ್ನಾಗಲೀ ಅಥವಾ ವಿಶ್ವದ ಪದಾರ್ಥಗಳೊಡನೆ ಅದು ಅಂತರ್ಗತವಾಗಿದೆ ಎಂಬುದನ್ನಾಗಲೀ ಅವರು ಮಾನ್ಯಮಾಡುವುದಿಲ್ಲ. ವೀರಶೈವ ದರ್ಶನದಲ್ಲಿ ನಿಷ್ಕಲವಾದ ಶೂನ್ಯವೇ ಸೃಷ್ಟ್ಯುನ್ಮುಖವಾದಾಗ ಮೂವತ್ತಾರು ತತ್ತ್ವಗಳ ರೂಪದಲ್ಲಿ ವಿಕಾಸ ಹೊಂದುತ್ತದೆ. ಅಲ್ಲಮಪ್ರಭುಗಳು ಅದನ್ನು ಹೀಗೆ ನಿರೂಪಿಸಿದ್ದಾರೆ:

ಪ್ರಥಮದಲ್ಲಿ ವಸ್ತು ಏನೂ ಏನೂ ಇಲ್ಲದಂದು ಮಹಾಘನಶೂನ್ಯಬ್ರಹ್ಮವಾಗಿದ್ದಿತ್ತು
ಅಂತಿರ್ದ ಪರಬ್ರಹ್ಮವಸ್ತು ತಾನೆ ತನ್ನ ದಿವ್ಯಾನಂದಲೀಲಾಸ್ವಭಾವದಿಂದಾದುದು ಆತ್ಮತತ್ವವೆಂಬಂಗಸ್ಥಲ
ಅಂತಾದ ಜೀವಾತ್ಮನೆಂಬ ಅಂಗಸ್ಥಲಕ್ಕೆ ಸೇರಿದ ತತ್ವಗಳಿಪ್ಪತ್ತೈದು.
ಅವಾವುವಯ್ಯ ಎಂದೊಡೆ........ತನ್ನೊಳಗೆ ಸಮರಸತ್ವವನೆಯ್ದಿಸಲೋಸುಗ ಭಕ್ತಿತದರ್ಥವಾಗಿ
ಆ ಮಹಾಘನಪರಾತ್ಪರವಪ್ಪ ದಿವ್ಯಲಿಂಗವು ಹನ್ನೊಂದು ತತ್ವವಾಯಿತ್ತು....
ಇಂತೀ ಉಭಯ ತತ್ವ ಮುವ್ವತ್ತಾರೂ ಏಕಾರ್ಥವಾಗಿ ಸರ್ವಶೂನ್ಯವನೆಯ್ದಿದ ಪರಿಕ್ರಮದ
ನಿರ್ಣಯದ ಬೆಡಗು ತತ್ವಮಸ್ಯಾದಿ ವಾಕ್ಯಾರ್ಥಂಗಳಲ್ಲಿ ಕಾಣಲಾಯಿತ್ತು.
ಅದೆಂತೆಂದಡೆ : ತತ್ಪದವೇ ಲಿಂಗ, ತ್ವಂ ಪದವೇ ಅಂಗ, ಈ ಎರಡರ ಐಕ್ಯವೇ ಅಸಿ ಎಂದುದಾಗಿ
ಇಂತು ಸಕಲನಾಗಬಲ್ಲ, ಸಕಲ-ನಿಃಕಲನಾಗಬಲ್ಲ, ಸಕಲ ನಿಃಕಲಾತೀತನಾಗಿ ಏನೂ ಏನೂ ಇಲ್ಲದ
ಮಹಾಘನ ಶೂನ್ಯಬ್ರಹ್ಮವಾಗಿ ಇರಬಲ್ಲನಯ್ಯಾ ನಮ್ಮ ಗುಹೇಶ್ವರ ಲಿಂಗವು

ಆದ್ದರಿಂದ ಶೂನ್ಯದ ವಿಕಾಸವೇ ವಿಶ್ವ. ಸಚರಾಚರವಸ್ತುಗಳೆಲ್ಲ ಶೂನ್ಯದ ಮಧ್ಯದ ಅವಸ್ಥೆ. ಶೂನ್ಯದಿಂದ ಪ್ರಾರಂಭವಾದ ಜೀವನ ಶೂನ್ಯದಲ್ಲಿಯೇ ಅಂತ್ಯವಾಗಬೇಕು.

ಅಂದರೆ ಪೂರ್ಣತೆಯಿಂದ ಉಗಮವಾಗಿ ಹೇಗೋ ಚ್ಯುತಿಹೊಂದಿದ ಜೀವನ ಮತ್ತೆ ಪರಿಪೂರ್ಣತೆಯನ್ನು ಪಡೆಯಬೇಕು. ವಿಕಾಸದ ವಿವಿಧ ಹಂತಗಳಲ್ಲಿ ಗುರಿಮುಟ್ಟಲು ಮುಂದುವರಿಯಬೇಕಾದ ಜೀವನದ ಯಾತ್ರೆಯನ್ನು ಪರಿಮಿತ ಅರ್ಥದಲ್ಲಿ ಶೂನ್ಯವೆಂದೇ ಕರೆದಿದ್ದಾರೆ[2]. ಶ್ರೇಷ್ಠ ಅನುಭಾವಿಯಾದ ಹಡಪದ ಅಪ್ಪಣ್ಣನವರು ಈ ಅಂಶವನ್ನು ಹೀಗೆ ತಿಳಿಸಿದ್ದಾರೆ:

ಬಯಲಿನಿಂದಲೆ ಹುಟ್ಟಿ ಬಯಲಿಂದಲೆ ಬೆಳೆದು
ಬಯಲಮೃತವನೆ ಉಂಡು, ಬಯಲನೆ ಉಟ್ಟು

---

1 ನಿರ್ವಿಕಾರಂ ನಿರಾಕಾರಂ ನಿತ್ಯಂ ಸೀಮಾವಿವರ್ಜಿತಂ
ವ್ಯೋಮವತ್ ಪರಮಂ ಬ್ರಹ್ಮ ನಿರ್ವಿಕಲ್ಪತಯಾ ಸ್ಥಿತಮ್ ॥ (ಸಿ. ಶಿಖಾಮಣಿ ೨೦–೫೪)
ಬ್ರ.ಸೂತ್ರ : ಆಕಾಶಸ್ತಲ್ಲಿಂಗಾತ್ (೧–೧–೨೨) ಯದೇಷ ಆಕಾಶ ಆನಂದೋ ನ ಸ್ಯಾತ್ (ತೈ. ೨–೭)

2 ಆದಾವಂತೇ ಚ ಮಧ್ಯೇ ಚ ಶೂನ್ಯಂ ಸರ್ವತ್ರ ಸರ್ವದಾ
ದ್ವಿತೀಯೇನ ಪದಾರ್ಥೇನ ಶೂನ್ಯಂ ಶೂನ್ಯಂ ವಿಭಾವ್ಯತೇ ॥ (ಸಿ. ಶಿಖಾಮಣಿ ೨೦-೨೦)

ಬಯಲನೆ ತೊಟ್ಟು, ಬಯಲು ಬಯಲೊಳಗೆ ಬೆರೆದ ಭೇದವ
ಈ ಭವಿತನದೊಳಗೆ ಇಪ್ಪ ಭವಭಾರಿಗಳೆತ್ತ ಬಲ್ಲರು ?

ವಿಕಾಸ ಎಂಬ ಮಾತನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಒಂದು ನಿದರ್ಶನದಿಂದ ಇದನ್ನು ವಿವರಿಸ ಬಹುದು. ಬೀಜದಲ್ಲಿ ವೃಕ್ಷದ ಅಂಗಗಳಾದ ಚಿಗುರು, ಎಲೆ, ಕಾಂಡ, ಕೊಂಬೆ, ಹೂವು, ಕಾಯಿ, ಹಣ್ಣು ಎಲ್ಲವೂ ಅವ್ಯಕ್ತವಾಗಿ ಅಡಗಿರುತ್ತವೆ. ಈ ಅವ್ಯಕ್ತವಾದ ಸ್ಥಿತಿಯನ್ನು ಒಂದು ದೃಷ್ಟಿಯಿಂದ ಅಭಾವವೆಂದೇ ಹೇಳಬಹುದು. ಏಕೆಂದರೆ ಕೊಂಬೆ, ಹೂವು, ಕಾಯಿ, ಹಣ್ಣುಗಳಿಂದಾಗುವ ಪ್ರಯೋಜನ ಬೀಜದಿಂದಾಗುವುದಿಲ್ಲ ಮತ್ತು ಅವು ಗೋಚರವಾಗುವುದಿಲ್ಲ. ಇಷ್ಟು ಮಾತ್ರದಿಂದಲೇ ಸಂಪೂರ್ಣ ಅಭಾವವೆಂದೂ ಹೇಳಲು ಸಾಧ್ಯವಿಲ್ಲ. ಏಕೆಂದರೆ ಆ ಬೀಜದಲ್ಲಿ ಇವೆಲ್ಲವೂ ಸೂಕ್ಷ್ಮವಾಗಿ ಅಡಗಿಲ್ಲದಿದ್ದರೆ ಅವು ವ್ಯಕ್ತವಾಗುವ ಪರಿ ಹೇಗೆ? ಆದ್ದರಿಂದ ಅವೆಲ್ಲವೂ ಭಾವಾತ್ಮಕವಾಗಿ ಇರುತ್ತವೆ ಎನ್ನಬೇಕಾಗುತ್ತದೆ. ಹೀಗೆ ಬೀಜದಲ್ಲಿ ಭಾವ-ಅಭಾವ ಎರಡರ ಸ್ಥಿತಿಯನ್ನೂ ನಿರೂಪಿಸ ಬಹುದು. ಬೀಜರೂಪದಿಂದ ಸತ್ ಆಗಿ, ಅದರ ವಿಕಾಸದ ವಿವಿಧ ಹಂತಗಳ ದೃಷ್ಟಿಯಿಂದ ಅಸತ್ತಾಗಿಯೂ ಇರುತ್ತದೆ. ಬೀಜದಿಂದ ಹೊರಹೊಮ್ಮಿದ ವೃಕ್ಷದ ಬೆಳವಣಿಗೆಯ ಗುರಿ ಮತ್ತೆ ಬೀಜದ ಅವಸ್ಥೆಯನ್ನು ಹೊಂದುವುದೇ ಆಗಿರುತ್ತದೆ. ಮಧ್ಯದ ವಿಕಾಸಾವಸ್ಥೆಯನ್ನು ಮಾತ್ರ ಗಮನಿಸಿದವರಿಗೆ, ಅದಕ್ಕೆ ಮೂಲವಾದ ಬೀಜದ ಅರಿವಾಗಲಿ ಅಥವಾ ಆ ವಿಕಾಸದ ಹಿಂದಿರುವ ಗುರಿಯ ಅರಿವಾಗಲೀ ಆಗಲಾರದು. ಸಮುದ್ರದಿಂದ ಆವಿಯಾದ ನೀರು ಮೇಘವಾಗಿ ಮಳೆಯಾಗಿ ನದೀರೂಪದಲ್ಲಿ ಹರಿದು ಮತ್ತೆ ಕಡಲನ್ನೇ ಸೇರುವಂತೆ, ಜೀವಿ ಗಳು ವಿಶ್ವಾಂತರ್ಗತವಾದ ಹಾಗೂ ವಿಶ್ವಾತೀತವಾದ ಶೂನ್ಯದ ಒಡಲನ್ನೇ ಸೇರಬೇಕು ಎಂಬುದು ಶರಣರ ಸಿದ್ಧಾಂತ. ಇದನ್ನೇ ಶೂನ್ಯಸಂಪಾದನೆ ಎಂದು ಕರೆದರು ಶರಣರು. ಅಲ್ಲಮಪ್ರಭುಗಳ ಅರ್ಥಗರ್ಭಿತವಾದ ಈ ಮಾತು ಅದನ್ನು ನಿರ್ದೇಶಿಸುತ್ತದೆ :

ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ !
ಬಯಲ ಜೀವನ, ಬಯಲ ಭಾವನೆ
ಬಯಲು ಬಯಲಾಗಿ ಬಯಲಾಯಿತ್ತಯ್ಯಾ !
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ

ಈ ವಚನ ಈಶಾವಾಸ್ಯೋಪನಿಷತ್ತಿನ 'ಪೂರ್ಣಮದಃ ಪೂರ್ಣಮಿದಂ' ಎಂಬ ಮಂತ್ರದ ಪ್ರತಿಬಿಂಬದಂತಿರುವುದನ್ನು ಕಾಣಬಹುದು. ಎಲ್ಲ ಶರಣರೂ ಇಂತಹ ಪರಿಪೂರ್ಣತೆಯ ಪರ್ಯಾಯವೆನಿಸಿದ ಶೂನ್ಯದ ನಿಲವನ್ನು ಅನುಭಾವದಿಂದ ಅರಿತಿರುವುದನ್ನು ಅವರ ಅನೇಕ ವಚನಗಳಲ್ಲಿ ಕಾಣಬಹುದು. ಇಂಥಹ ಔನ್ನತ್ಯದ ಸ್ಥಿತಿಯನ್ನೇರಿದ ಶರಣನು ಒಳಗೆ-ಹೊರಗೆ ಶೂನ್ಯವನ್ನೇ ಕಾಣುವುದಲ್ಲದೆ, ಅವನಲ್ಲಿ ನೆನೆವ ಮನಸ್ಸು, ಭಾವಿಸಿಕೊಳ್ಳುವ ಭಾವ, ಇವಕ್ಕೆ ಆಧಾರವಾಗಿರುವ 'ನಾನು' ಎಂಬ ಭಾವನೆ-ಎಲ್ಲವೂ ಕರಗಿಹೋಗುತ್ತದೆ-ಆಗ ಅಜ್ಞಾನವು ಅಳಿದು ಸುಜ್ಞಾನವು ಅಂಕುರಿಸುತ್ತದೆ. ಅಂತ್ಯ ದಲ್ಲಿ ತನಗೆ ಜ್ಞಾನೋದಯವಾಗಿದೆ ಎಂಬ ಭಾವವೂ ಅಳಿಯುತ್ತದೆ-ಆಗ ನಿರಾಳಸ್ಥಿತಿ. ಈ ರೀತಿಯ ಶೂನ್ಯದ ವಿರಾಟ್ ಕಲ್ಪನೆಯನ್ನು ಸಿದ್ಧಲಿಂಗಶಿವಯೋಗಿಗಳ ವಚನದಲ್ಲಿ ಹೀಗೆ ನಿರೂಪಿಸಲಾಗಿದೆ :

ಒಳಗೆ ನೋಡಿದರೆ ಒಳಗೆ ಬಯಲು
ಹೊರಗೆ ನೋಡಿದರೆ ಹೊರಗೆ ಬಯಲು
ನೆನೆದಿಹನೆಂದರೆ ಮನ ಬಯಲು
ನೆನೆಸಿಕೊಂಡಿಹೆನೆಂದರೆ ನೀವಿಲ್ಲವಾಗಿ
ನಾನೂ ಬಯಲು ನೀನೂ ಬಯಲು ನೋಡಾ !
ಭಾವಿಸಿಕೊಂಬ ವಸ್ತುವಿಲ್ಲವಾಗಿ ಭಾವ ಬಯಲೆಂದೆನು ಕಾಣಾ.
ಮರಹು ನಷ್ಟವಾಗಿ ಅರುಹು ಶೂನ್ಯವಾಯಿತ್ತು ನೋಡಾ
ಅರುಹು ಶೂನ್ಯವಾದುದೇ ಅಖಂಡ ನಿರಾಳ ನೋಡಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ

ಶೂನ್ಯಾದ್ವೈತವನ್ನು ಮಾನ್ಯಮಾಡಿದ ಬೌದ್ಧಮತವು ವೈವಿಧ್ಯಮಯವಾದ ಈ ಜಗತ್ತಿನ ನಿರಸನವನ್ನು ಪ್ರತಿಪಾದಿಸಿದರೆ ಭೇದಾಭೇದ ಸಿದ್ಧಾಂತವನ್ನು ಮಾನ್ಯಮಾಡಿದ ವೀರಶೈವದರ್ಶನವು ಜಗತ್ತು ಶೂನ್ಯದಲ್ಲಿ ಅಂತರ್ಗತವಾಗಿರುವುದನ್ನು ಪ್ರತಿಪಾದಿಸುತ್ತದೆ. ಈ ದರ್ಶನದ ಸಾರವೆಂದರೆ ವ್ಯವಹಾರಸ್ಥಿತಿಯಲ್ಲಿ ಭೇದ, ಪಾರಮಾರ್ಥಿಕಸ್ಥಿತಿಯಲ್ಲಿ ಅಭೇದ. ಈ ಎರಡು ಭೇದವನ್ನೂ ಅಂಗೀಕರಿಸಿದ ಮಾತ್ರಕ್ಕೆ ಅದ್ವೈತಮತದಂತೆ ಭೇದವು ಮಿಥ್ಯೆಯಲ್ಲ. ಭೇದ ಹಾಗೂ ಅಭೇದ ಎರಡೂ ಸತ್ಯವೇ. ಒಟ್ಟಿನಲ್ಲಿ ಈ ದರ್ಶನವು ಸಾಂತದಿಂದ ಅನಂತವನ್ನು. ಸತ್ಯದಿಂದ ಪರಮಸತ್ಯವನ್ನು, ಅಲ್ಪತೆಯಿಂದ ಭೂಮವನ್ನು, ಅಪರಿಪೂರ್ಣತೆಯಿಂದ ಪರಿಪೂರ್ಣತೆಯನ್ನು ತಲಪಲು ಮಾರ್ಗದರ್ಶನ ಮಾಡಿಸುತ್ತದೆ.

ಬೌದ್ಧಮತವು ತಾನು ಪ್ರತಿಪಾದಿಸುವ ಶೂನ್ಯಸ್ಥಿತಿಯನ್ನು ತಲಪಲು ಕೇವಲ ನಿರಾಕಾರಮಾರ್ಗವನ್ನವಲಂಬಿಸಿದೆ. ವೀರಶೈವಮತವಾದರೋ ಆನಂದಮಯವಾದ ಶೂನ್ಯದ ನಿಲವನ್ನೇರಲು ನಿರಾಕಾರ-ಸಾಕಾರಮಾರ್ಗವನ್ನು ತನ್ನ ಸಾಧನೆಯಲ್ಲಿ ಅಳವಡಿಸಿಕೊಂಡಿದೆ. 'ತಿಳಿದುಪ್ಪ ಎರೆದುಪ್ಪವಾದಂತೆ' ನಿರಾಕಾರವಾದ ಶೂನ್ಯವೇ ಸಾಕಾರವಾಗಿ ಪರಿಣಮಿಸುತ್ತದೆ. ಆದರೆ ಇಲ್ಲಿ ಸಾಕಾರಕಲ್ಪನೆ ಶೂನ್ಯದ ಕಲ್ಪನೆಗನುಸಾರವಾಗಿ ಬಯಲಿನ ಸಂಕೇತದಿಂದಲೇ ಅನುಸಂಧಾನ ಮಾಡುವಂಥಹುದು. ಶೂನ್ಯಲಿಂಗವೇ ಮೂರ್ತಿಗೊಂಡು ಬಯಲಿನ ಕುರುಹಾಗಿ ಇಷ್ಟಲಿಂಗವಾಗಿ ರೂಪುಗೊಂಡು, ಅದರ ಅನುಸಂಧಾನ ಮೂಲಕವಾಗಿ ಮತ್ತೆ ಬಯಲಿನ ಹಂತಕ್ಕೆ ಸಾಧಕನನ್ನು ಏರಿಸಿ ಆನಂದಾನುಭೂತಿಯನ್ನುಂಟುಮಾಡಿಸುತ್ತದೆ. ಬೌದ್ಧಿಕವಲ್ಲದ, ಶಾಸ್ತ್ರಾತೀತವಾದ ಇಂತಹ ಅನುಭಾವವನ್ನು ಪ್ರತಿಯೊಬ್ಬ ಮನುಷ್ಯನೂ ಪಡೆಯಬಹುದು. ಇದನ್ನು ಪಡೆಯುವ ಸುಲಭ ಸರಳ ಸಾಧನವೆಂದರೆ 'ಇಷ್ಟಲಿಂಗ' ಎಂಬುದು ವೀರಶೈವಧರ್ಮವು ತೋರಿಸಿದ ವಿನೂತನ ಪಥ. ಇಷ್ಟಲಿಂಗವು ನಿರವಯವ-ಸಾಕಾರ ರೂಪವುಳ್ಳದ್ದು. ಸ್ವಸ್ವರೂಪವನ್ನು ದರ್ಶಿಸಲು ಸಾಧನವಾಗಿರುವ ಚಿದ್ದರ್ಪಣ ಇದು. ಈ 'ಇಷ್ಟಲಿಂಗ'ವು ವೈಯಕ್ತಿಕ ಉಪಾಸನೆಯ ಅಂಗವಷ್ಟೇ ಆಗದೆ, ಸಾಮಾಜಿಕ ಅಂತರವನ್ನು ನಿವಾರಿಸುವ 'ಸಾಧನಮಾಲ್ಯ'ವೂ ಆಯಿತು. ಈ ಉಪಾಸನಾಪದ್ಧತಿಯಲ್ಲಿ ಯೋಗವನ್ನು ಅಳವಡಿಸಿಕೊಂಡುದು ಮತ್ತೊಂದು ವೈಶಿಷ್ಟ್ಯ. ಇಂತಹ ಯಾವುದೇ ವಿಧವಾದ ಉಪಾಸನೆಗೂ ಬೌದ್ಧಧರ್ಮದಲ್ಲಿ ಅವಕಾಶವಿಲ್ಲ.

ವೀರಶೈವಧರ್ಮದಲ್ಲಿ ಸಾಕಾರ-ನಿರಾಕಾರ ಎರಡೂ ಸತ್ಯವೇ. ಅದ್ವೈತಮತದಂತೆ ಸಾಕಾರಮಾರ್ಗವು ಮಂದಮತಿಗಳಿಗೋಸ್ಕರ ನಿರ್ಮಿತವಾದದ್ದಲ್ಲ. ಆಕಾರ-ನಿರಾಕಾರಗಳ ಹಿಂದಿರುವ ದೃಷ್ಟಿ ಏನೆಂಬುದನ್ನು ಅಲ್ಲಮಪ್ರಭುಗಳ ಈ ವಚನ ತಿಳಿಸುತ್ತದೆ :

ಆಕಾರ ನಿರಾಕಾರವೆಂಬೆರಡೂ ನಾನೆ ದಿಟ! ದಿಟ ತಪ್ಪದು ಹೇಳಾ !
ಆಕಾರಕ್ಕೆ ಭಾವವೆ ಪ್ರಾಣ, ನಿರಾಕಾರಕ್ಕೆ ಮಹಾಜ್ಞಾನವೆ ಪ್ರಾಣ.
ಇಂತೀ ಉಭಯ ಕುಳಕ್ಕೆ ಇದು ಲಕ್ಷಣ ಕೇಳಾ! ಎರಡರೊಳಗೆ
ಆವ ಮುಖದಲ್ಲಿ ಇಪ್ಪಾತನು ಆ ಮುಖದಲ್ಲಿ ಶುದ್ಧವಾಗದನ್ನಕ್ಕರ
ಗುಹೇಶ್ವರ ಲಿಂಗಕ್ಕೆ ದೂರ ಕೇಳಾ

ಬಸವಣ್ಣನವರು ಬಹುಮಾರ್ಮಿಕವಾಗಿ 'ನಿರಾಕಾರಕ್ಕೆ ಜ್ಞಾನವೇ ವಾಹನ'ವೆನ್ನುತ್ತಾರೆ. ಆದರೆ ಇಂತಹ ಎತ್ತರದ ನಿಲವನ್ನು ಏರಬೇಕಾದರೆ ಸಾಕಾರವೇ ಸರಿಯಾದ ಪಥ. 'ಸಾಕಾರವಿಡಿದರ್ಚನೆ ಪೂಜನೆಯ ಮಾಡುವುದಲ್ಲದೆ ನಿರಾಕಾರವ ನಂಬಲಾಗದು' ಎಂದು ಉರಿಲಿಂಗಪೆದ್ದಿಗಳು ತಿಳಿಸಿದ್ದಾರೆ. ಸಾಕಾರವೇ ಸತ್ಯವೆಂಬ ದ್ವೈತಮಾರ್ಗವನ್ನಾಗಲಿ, ನಿರಾಕಾರತತ್ತ್ವವೊಂದೇ ಸತ್ಯವೆಂಬ ಅದ್ವೈತದ ಮಾರ್ಗವನ್ನಾಗಲಿ ಈ ದರ್ಶನ ಬೋಧಿಸುವುದಿಲ್ಲ. ಸಾಕಾರವೆಂಬ ನಿಚ್ಚಣಿಕೆಯಿಂದ ನಿರಾಕಾರವನ್ನೇರುವ ಸಮನ್ವಯಪಥ. ಇಷ್ಟಲಿಂಗ ಸಾಕಾರವೂ ಅಲ್ಲ ನಿರಾಕಾರವೂ ಅಲ್ಲ. 'ಸಾಕಾರವೆಂಬೆನೆ ನಿರಾಕಾರವಾಗಿದೆ. ನಿರಾಕಾರವೆಂಬೆನೆ ಸಾಕಾರವಾಗಿದೆ' ಎಂದು ಅದರ ಸ್ವರೂಪವನ್ನು ಶರಣರೊಬ್ಬರು ವರ್ಣಿಸಿದ್ದಾರೆ. ಉಪನಿಷತ್ತಿನಲ್ಲಿ ಉಕ್ತವಾಗಿರುವ ದಹರೋಪಾಸನೆಯ ಸಂಕೇತ ಇದು. ಆಕಾರ-ನಿರಾಕಾರಗಳ ಸ್ವರೂಪ ಏನೆಂಬುದನ್ನು ಈ ವಚನ ತೋರಿಸುತ್ತದೆ :

ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು
ಒಂದು ಆಹ್ವಾನ, ಒಂದು ವಿಸರ್ಜನ
ಒಂದು ವ್ಯಾಕುಳ, ಒಂದು ನಿರಾಕುಳ
ಉಭಯಕುಳರಹಿತ ಗುಹೇಶ್ವರ, ನಿಮ್ಮ ಶರಣ ನಿಶ್ಚಿಂತನು

ಪ್ರತಿಯೊಂದು ವಿಷಯವನ್ನೂ ಬುದ್ಧಿಯ ಒರೆಗಲ್ಲಿಗೆ ಹಚ್ಚಿ, ಪರೀಕ್ಷಿಸಿ ಸ್ವತಃ ಸತ್ಯವೇನೆಂದು ಕಂಡುಕೊಳ್ಳುವ ಶುದ್ಧ ಜ್ಞಾನಮಾರ್ಗವನ್ನು ಬೌದ್ಧಮತವು ಬೋಧಿಸಿ ಉಪಾಸನಾಮಾರ್ಗವನ್ನು ನಿರಾಕರಿಸಿತು. ವೀರಶೈವಧರ್ಮವು ಇಷ್ಟಲಿಂಗೋಪಾಸನೆಯ ಮೂಲಕ ಜ್ಞಾನ-ಆನಂದಗಳ ಅತ್ಯುನ್ನತಸ್ಥಿತಿಯನ್ನು ಮುಟ್ಟುತ್ತದೆ. ಇದು ಕೇವಲ ವಿಚಾರಕ್ಕೇ (Reason) ಬೆಲೆ ಕೊಡದೆ ಅನುಭಾವವನ್ನೂ (Revelation) ತನ್ನ ಅನುಭವದಲ್ಲಿ ಅಳವಡಿಸಿಕೊಂಡು ಜ್ಞಾನ-ಕ್ರಿಯೆಗಳ ಸಮನ್ವಯಮಾರ್ಗವನ್ನು ನಿರ್ದೇಶಿಸುತ್ತದೆ. ಈ ಮಾರ್ಗದಲ್ಲಿ ಮುಂದುವರಿದು ಅನುಭಾವದ ಸಂಪತ್ತನ್ನು ಅರಿತ ಶ್ರೀಗುರುವು 'ಶಕ್ತಿಪಾತ'ದ ಮೂಲಕ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸುಪ್ತವಾಗಿರುವ ಚಿತ್ಕಲೆಯನ್ನು ಅಭಿವ್ಯಕ್ತಗೊಳಿಸಿ ದೇಹ, ಮನ, ಭಾವಗಳಲ್ಲಿ ನೆಲೆಗೊಳ್ಳುವಂತೆ ಮಾಡಿ, ಹೆಚ್ಚಿನ ಸಾಧನೆಯ ಮೂಲಕ ಸ್ವಸ್ವರೂಪವನ್ನು ಕಂಡುಕೊಳ್ಳಲು ಮಾರ್ಗದರ್ಶನ ಮಾಡಿಸುತ್ತಾನೆ. ಇಂತಹ ಗುರುವಿನ ಅವಶ್ಯಕತೆಯನ್ನು ಬೌದ್ಧಮತವು ತನ್ನ ಸಾಧನೆಯಲ್ಲಿ ತಿಳಿಸುವುದಿಲ್ಲ.

ಇಷ್ಟಲಿಂಗೋಪಾಸನೆಯ ಮೂಲಕ ಪರಿಪೂರ್ಣರೂಪಾದ ಶೂನ್ಯವನ್ನು ತನ್ನಲ್ಲಳವಡಿಸಿಕೊಂಡ ಶರಣನ ನಿಲವು ಅರಿವು, ಮರಹು, ಕುರುಹುಗಳನ್ನು ಮೀರಿದ್ದು. ಅಲ್ಲಮಪ್ರಭುಗಳು ಅದನ್ನು ಹೀಗೆ ತಿಳಿಸಿದ್ದಾರೆ:

> ಅರಿದೆನೆಂಬುದು ತಾ ಬಯಲು
> ಅರಿಯೆನೆಂಬುದು ತಾ ಬಯಲು
> ಅರಿವಿನ ಕುರುಹಿನ ಮರಹಿನೊಳಗೆ
> ಗುಹೇಶ್ವರನೆಂಬುದು ತಾ ಬಯಲು

ಇದು ಕೇವಲ ಸ್ವಾನುಭೂತಿಗೆ ನಿಲುಕುವ ಸ್ಥಿತಿ. ಮಾತು ಮನಂಗಳಿಗೆ ಅಲ್ಲಿ ಎಡೆ ಇಲ್ಲ. ಆ ನಿಲವಿನಲ್ಲಿ ನಾನು-ನೀನು, ಸ್ವ-ಪರ, ಅರಿವು-ಮರವು, ಒಳಗು-ಹೊರಗು ಎಂಬ ಭಿನ್ನಭಾವಕ್ಕವಕಾಶವಿಲ್ಲವೆಂಬುದನ್ನು ಜ್ಞಾನಸಿಧಿ ಚನ್ನಬಸವಣ್ಣನವರು ಹೀಗೆ ನಿರೂಪಿಸಿದ್ದಾರೆ :

> ಆನೆಂಬುದಿಲ್ಲ, ನೀನೆಂಬುದಿಲ್ಲ,
> ಸ್ವಯವೆಂಬುದಿಲ್ಲ, ಪರವೆಂಬುದಿಲ್ಲ.
> ಅರಿವೆಂಬುದಿಲ್ಲ, ಮರಹಿಂಬುದಿಲ್ಲ.
> ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ.
> ಕೂಡಲ ಚನ್ನಸಂಗಯ್ಯ ಶಬ್ದ ಮುನ್ನಿಲ್ಲ

ಶೂನ್ಯಸ್ಥಿತಿಯನ್ನು ಮುಟ್ಟಿದವನಲ್ಲಿ ತನು, ಮನ, ನೆನಪು, ಭಾವ, ಜ್ಞಾನಗಳು ನಷ್ಟವಾಗುತ್ತವೆ. ಇಲ್ಲಿ ನಾಶವೆಂದರೆ ತನ್ನ ಮೂಲದಲ್ಲಿ ಅಡಗಿಹೋಗುವ ಸ್ಥಿತಿ. ಶರಣರ ಪರಿಭಾಷೆಯಲ್ಲಿ ಕಾರಣದಲ್ಲಿ-ಕಾರ್ಯದ ಅಂತರ್ಗತವಾಗುವಿಕೆಯೇ ನಾಶ. ಶರಣ ಮಡಿವಾಳ ಮಾಚಿದೇವರ ವಚನ ಇಂತಿದೆ :

> ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ
> ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು
> ಆ ನಷ್ಟದೊಳಗೆ ನೀನು ನಷ್ಟವಾದೆ
> ಕಲಿದೇವರ ದೇವನೆಂಬ ನುಡಿ 'ನಿಶ್ಶಬ್ದಂ ಬ್ರಹ್ಮ ಉಚ್ಯತೇ'

ಚೆನ್ನಸದಾಶಿವಯೋಗಿಗಳು ತಮ್ಮ ಶಿವಯೋಗಪ್ರದೀಪಿಕೆಯಲ್ಲಿ ತತ್ವವು ನಿಶ್ಶಬ್ದ (ಶಿ. ಪ್ರದೀ. ೨-೪೮) ಎನ್ನುತ್ತಾರೆ. ಇದು ಆನಂದದ ಅತ್ಯುನ್ನತಸ್ಥಿತಿ. ಪರಮಾರ್ಥವಾದ ಶೂನ್ಯವನ್ನು ಬಣ್ಣಿಸಲು ಅನುಭಾವಿಗಳಾದ ಶರಣರು ಕೊಡುವ ದೃಷ್ಟಾಂತಗಳಂತೂ ಮನಸ್ಸಿಗೆ ನೇರವಾಗಿ ನಾಟುವಂತಹವು-ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ, ಉರಿಯೊಳಡಗಿದ ಕರ್ಪೂರದಂತೆ, ಶಿಶು ಕಂಡ ಕನಸಿನಂತೆ, ಗಾಳಿಯೊಳು ಸುಳಿಗಾಳಿ ಬೆರೆತಂತೆ, ನಭದೊಳೆಸೆದ ತಟಿಲ್ಲತೆ ನಭದೊಳು ಪೊಳೆದಡಗಿದಂತೆ—ಎನ್ನುತ್ತಾರೆ. ಇದನ್ನು ವಿವರಿಸಲು ಮಾತು ಉಚಿತ ಮಾಧ್ಯಮವಲ್ಲ ಎಂಬುದನ್ನು ಪ್ರತಿಯೊಬ್ಬ ಶರಣನೂ ಒತ್ತಿ ಹೇಳಿದ್ದಾನೆ. ಈ ಸ್ಥಿತಿಯಲ್ಲಿ ದುಃಖವಿಲ್ಲ, ಕ್ಲೇಶವಿಲ್ಲ : ಏಕೆಂದರೆ ಅವಕ್ಕೆಲ್ಲಾ ಆಶ್ರಯವಾಗಿರುವ ನಾನು-ನನ್ನದು ಎಂಬ ಭಾವವೇ ಅಳಿದು ವಿಶ್ವವೇ ನಾನು, ವಿಶ್ವವೇ ನನ್ನದು ಎಂಬ ಭೂಮಭಾವ ಅಳವಡುತ್ತದೆ. ಇಂತಹ ಅನುಭಾವವನ್ನು ಇಹಜೀವನದಲ್ಲಿಯೇ ಪಡೆಯಬಹುದು. ಹಾಗೆ ಪಡೆದಾಗ ಮಾತ್ರ ವ್ಯಕ್ತಿಗೆ ಪುನರ್ಜನ್ಮವಿಲ್ಲ.

# ವೀರಶೈವಧರ್ಮ ಮತ್ತು ಜೈನಧರ್ಮ: ಒಂದು ಸಮೀಕ್ಷೆ

**ಡಾ. ಎಂ. ಡಿ. ವಸಂತರಾಜ್**

ಶೈವಧರ್ಮಪಂಥವು ಭಾರತದೇಶದ ಅಗ್ರಗಣ್ಯ ಧರ್ಮಪಂಥಗಳಲ್ಲಿ ಒಂದು. ಇದಕ್ಕೆ ಚರಿತ್ರೆಯಲ್ಲಿ ಬಹುಪುರಾತನವೆಂಬ ಮಾನ್ಯತೆಯಿದೆ. ಕಾಲಕಾಲಕ್ಕೆ ಹೊಮ್ಮಿದ ನವ್ಯತೆಯ ಶಕ್ತಿಯೊಡನೆ ಶಾಖೆಶಾಖೆಗಳಾಗಿ ಹರಡಿ ಭಕ್ತರಿಗೆ, ಶರಣರಿಗೆ, ಪಂಡಿತರಿಗೆ, ಪಾಮರರಿಗೆ ಸಚ್ಚಿದಾನಂದಮಯ ಶಿವಸ್ವರೂಪದ ಸಾಕ್ಷಾತ್ಕಾರವಿತ್ತಿದೆ ; ಶಿವೈಕ್ಯತೆಯನ್ನಿತ್ತಿದೆ. ಶೈವ ಪಂಥದ ಇಂತಹ ಶಾಖೆಗಳಲ್ಲಿ ಒಂದು, ವೀರಶೈವಧರ್ಮಪಂಥ. ಪರಾತ್ಪರ ಶಿವಸ್ವರೂಪದರ್ಶನದ ಅಪೇಕ್ಷೆಯಿಂದ ಈ ವೀರಶೈವಧರ್ಮಪಂಥವು ಪ್ರಾಚೀನದಲ್ಲಿ ಪ್ರಾಚೀನ ; ಸಾಧನೆಯ ಮಾರ್ಗದ ದೃಷ್ಟಿಯಿಂದ ಪ್ರಾಚೀನವಾದ ಪಾತ್ರ ಮತ್ತು ಅದರಲ್ಲಿ ಹರಿಯುವ ನೂತನ ನೀರಿನಂತೆ ಪ್ರಾಚೀನತೆ ನವ್ಯತೆಗಳ ಏಕಧಾರೆಯಾಗಿದೆ. ಭಾರತದೇಶದ ಅನೇಕ ಸ್ವತಂತ್ರ ಧರ್ಮಪಂಥಗಳಲ್ಲಿ ಜೈನಧರ್ಮವೂ ಒಂದು. ಇದರ ಚರಿತ್ರೆಯನ್ನು ಗುರುತಿಸುವಲ್ಲಿ ಮೊದಮೊದಲಿಗೆ ಇದು ಬೌದ್ಧಧರ್ಮದ ಒಂದು ಶಾಖೆ ಮಾತ್ರವೆಂದು ಘೋಷಣೆ ಮಾಡಲಾಗಿದ್ದಿತು. ಆದರೆ ಅನಂತರದ ಸಂಶೋಧನೆಯ ಫಲಿತಾಂಶವಾಗಿ ಭಾರತದೇಶದ ಪ್ರಾಚೀನ ಧರ್ಮಪಂಥಗಳಲ್ಲಿ ಇದೂ ಒಂದು ಎಂದು ಅನೇಕ ವಿದ್ವಾಂಸರು ಘೋಷಿಸಿದ್ದಾರೆ. ಹೀಗೆ ಬಹುಪ್ರಾಚೀನಕಾಲದಿಂದ ಬದುಕಿ ಉಳಿದು ಬಂದಿರುವ ಈ ಧರ್ಮಪಂಥಗಳು ತಮ್ಮದೇ ಆದ ಸ್ವತಂತ್ರನಿಲುವು ಉಳ್ಳವಾಗಿದ್ದೂ ಅನೇಕ ಅಂಶಗಳಲ್ಲಿ ಬಹುನಿಕಟವರ್ತಿಯಾದ ಸಾಮ್ಯತೆ ಅಥವಾ ಸಾದೃಶ್ಯತೆಯುಳ್ಳವಾಗಿವೆ.

**ಶಿವ:** ವೀರಶೈವಧರ್ಮದ ಏಕೈಕ ಪರಮಾರಾಧ್ಯ ದೇವಾಧಿದೇವನೆಂದರೆ 'ಶಿವ.' ದಾರ್ಶನಿಕಚಿಂತನೆಯನ್ನು ಸಾರದ ಪರಾತ್ಪರ ವಸ್ತು.[1] ಸಮಸ್ತಲೋಕವೂ ಈ ಪರಮೇಶ್ವರನನ್ನು ಆಧಾರವಾಗಿ ಹೊಂದಿದೆ; ಈ ವಿಶ್ವಾತ್ಮನಿಂದ ಬೇರೆಯಾದ ಲೋಕವಿಲ್ಲ; ಆದರೆ ಲೋಕದ ಮೇರೆಯಿಂದಾಚೆಗೆ ಇರುವುದೆಂದರೆ ಈ ಪರಾತ್ಪರ ಪರಮಶಿವ ಮಹಾದೇವನೊಬ್ಬನೇ. ಭಕ್ತಿಭಂಡಾರಿ ಬಸವಣ್ಣನವರ ಪರಮಾಗಮ-ಪರಮಶ್ರುತಿರೂಪದ ಹೃದಯಂಗಮ ವಚನಗಳಲ್ಲಿ ಈ ಮಹಾದೇವನು—

> ಸ್ವಾಮಿ ನೀನು, ಶಾಶ್ವತ ನೀನು ;
> ಎತ್ತದೆ ಬಿರಿದ ಜಗವೆಲ್ಲರಿಯಲು ಮಹಾದೇವ, ಮಹಾದೇವ ;
> ಇಲ್ಲಿಂದ ಮೇಲೆ ಶಬ್ದವಿಲ್ಲ, ಪಶುಪತಿ ಜಗಕ್ಕೆ ಏಕೋದೇವ,
> ಸ್ವರ್ಗಮರ್ತ್ಯಪಾತಾಳದೊಳಗೊಬ್ಬನೇ ದೇವ-ಕೂಡಲಸಂಗಮದೇವ.
>
> ಎತ್ತೆತ್ತ ನೋಡಿದಡತ್ತತ್ತ ನೀನೆ ದೇವ ; ಸಕಲವಿಸ್ತಾರದ ರೂಹು ನೀನೆ ದೇವ ;
> ವಿಶ್ವತಶ್ಚಕ್ಷು ನೀನೆ ದೇವ ; ವಿಶ್ವತೋಮುಖ ನೀನೆ ದೇವ ;
> ವಿಶ್ವತೋಬಾಹು ನೀನೆ ದೇವ ; ವಿಶ್ವತೋ ಪಾದ ನೀನೆ ದೇವ—
> ಕೂಡಲಸಂಗಮದೇವ
>
> ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
> ಪಾತಾಳದಿಂದವತ್ತತ್ತ ನಿಮ್ಮ ಶ್ರೀಚರಣ ; ಬ್ರಹ್ಮಾಂಡದಿಂದವತ್ತತ್ತ ನಿಮ್ಮ ಶ್ರೀಮಕುಟ
> ಅಗಮ್ಯ ಅಪ್ರಮಾಣ ಅಗೋಚರ ಅಪ್ರತಿಮಲಿಂಗವೇ
> ಕೂಡಲಸಂಗಮದೇವಯ್ಯ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ

---

[1] ಈಶ್ವರನು ಒಬ್ಬನೇ ಒಬ್ಬನು ಎಂದು ವೀರಶೈವಧರ್ಮವು ಸಾರುವುದು. ಇವನೇ ಶಿವನು ಪರಾತ್ಪರವಸ್ತು (ದಿ ಸುಪ್ರೀಂ ಬೀಇಂಗ್) ಡಾ. ಎಸ್. ಸಿ. ನಂದಿಮಠ್ ಅವರ 'ಎ ಹ್ಯಾಂಡ್ ಬುಕ್ ಆಫ್ ವೀರಶೈವಿಜಂ', ಪು. ೧೦೦

ಜೀವದ ಮೂಲ ಪರಾತ್ಪರವಸ್ತು—ಪರಮಶಿವ, 'ಯತ್ರ ಜೀವಸ್ತತ್ರ ಶಿವಃ' ಎಂಬುದು ಪರಮಾಗಮವಚನ. ಅವಿದ್ಯೆ-ಮಾಯೆಯಿಂದ ಬಿಡುಗಡೆ ಪಡೆದ ಜೀವನು ಪರಾತ್ಪರದಲ್ಲಿ-ಬಯಲಲ್ಲಿ ಬಯಲಾಗುವವನು, ಶಿವೈಕ್ಯನಾಗುವವನು, ಲಿಂಗೈಕ್ಯನಾಗುವವನು. ಜೈನಧರ್ಮಪಂಥದಲ್ಲಿ ವೀರಶೈವಧರ್ಮಪಂಥದ ಈ ಶಿವಪಾರಮ್ಯವಿಲ್ಲವೆಂಬುದು ನಿಜವಾದರೂ 'ಶಿವ'ಪದದ ಬಗ್ಗೆ ಅಪಾರ ಭಕ್ತಿಯಿದೆ; ಪೂಜ್ಯತೆಯಿದೆ. ಇಲ್ಲಿ 'ಶಿವ'ಪದಕ್ಕೆ ಮುಕ್ತಿ, ಮೋಕ್ಷ, ನಿರ್ವಾಣ ಎಂಬ ಅರ್ಥವಿದೆ. ಬಹುಪ್ರಾಚೀನಕಾಲದಿಂದಲೂ ಜೈನಧರ್ಮದ ಭಕ್ತಿಪಾಠಗಳಲ್ಲಿ ಒಂದಾಗಿ ಉಳಿದು ಬಂದಿರುವ ಪಂಚ ಗುರುಭಕ್ತಿಯಲ್ಲಿ ಎರಡನೆಯದಾದ ಮುಂದಿನ ಸಿದ್ಧಭಕ್ತಿಯನ್ನು ಇಲ್ಲಿ ಗಮನಿಸಬಹುದು—

ಜೇಹಿಂ ಝಾಣಗ್ಗಿ ಬಾಣೇಹಿಂ ಅಇದಡ್ಡಯಂ
ಜಮ್ಮ ಜರಮರಣಣಯರತ್ತಯಂ ದಡ್ಡಯಂ।
ಜೇಹಿಂ ಪತ್ತಂ ಸಿವಂ ಸಾಸಯಂ ಠಾಣಯಂ
ತೇ ಮಹಂ ದಿಂತು ಸಿದ್ಧಾ ವರಂ ಣಾಣಯಂ॥

ಅತಿದೃಢವಾದ ಜನ್ಮ-ಜರಾ-ಮರಣವೆಂಬ ನಗರತ್ರಯವು ಯಾರಿಂದ ಧ್ಯಾನಾಗ್ನಿಬಾಣಗಳ ಮೂಲಕ ಸುಡಲ್ಪಟ್ಟಿತೋ ಯಾರಿಂದ ಶಾಶ್ವತ ಶಿವ (ಮೋಕ್ಷ)ಸ್ಥಾನವು ಹೊಂದಲ್ಪಟ್ಟಿರುವುದೋ ಆ ಸಿದ್ಧರು ನನಗೆ ಉತ್ತಮವಾದ ಜ್ಞಾನವನ್ನು ಕೊಡಲಿ.

ಶಿವನನ್ನು ಕುರಿತ ಅನೇಕ ಪೌರಾಣಿಕಕಥನಗಳು ಜೈನಧರ್ಮಪಂಥದ ಆದಿತೀರ್ಥಂಕರ-ವೃಷಭನಾಥನ ಪೌರಾಣಿಕ ಕಥನಾಂಶಗಳೊಡನೆ ಸಾದೃಶ್ಯತೆಯುಳ್ಳವಾಗಿವೆ; ಕೈಲಾಸವು ಶಿವಧಾಮ–ವೃಷಭನಾಥನು ಅರ್ಹಂತನಾಗಿ ಶಿವಪದ ಎಂದರೆ ಮುಕ್ತಿಪದ ಪ್ರಾಪ್ತಿಯ ಧರ್ಮವನ್ನು ಬೋಧನೆ ಮಾಡಿದುದು ಕೈಲಾಸದಲ್ಲಿ, ಇದನ್ನೇ 'ಭಕ್ತಾಮರ ಸ್ತೋತ್ರ'ಕಾರ 'ಮಾನತುಂಗ'ರು ಮುಂದಿನ ಸ್ತುತಿಪದ್ಯನಲ್ಲಿ ಸೂಚಿಸಿದ್ದಾರೆ:

ತ್ವಾಮಾಮನಂತಿ ಮುನಯಃ ಪರಮಂ ಪುಮಾಂಸ-
ಮಾದಿತ್ಯವರ್ಣಮಮಲಂ ತಮಸಃ ಪರಸ್ತಾತ್।
ತ್ವಾಮೇವ ಸಮ್ಯಗುಪಲಭ್ಯ ಜಯಂತಿ ಮೃತ್ಯುಂ
ನಾನ್ಯಃ ಶಿವಃ ಶಿವಪದಸ್ಯ ಮುನೀಂದ್ರ! ಪಂಥಾಃ॥

ವೃಷಭನಾಥನು ಶಿವಪದವಿ–ಮುಕ್ತಿಪದವಿಯನ್ನು ಪಡೆದುದು ಕೈಲಾಸಪರ್ವತದಿಂದ: ಮಾಘಮಾಸ-ಕೃಷ್ಣಪಕ್ಷ-ಚತುರ್ದಶಿಯಂದು ವೃಷಭನಾಥನು ಶಿವಪದವಿ–ಮುಕ್ತಿಪದವಿ ಪಡೆದನಾಗಿ ಈ ದಿನವನ್ನು 'ಶಿವರಾತ್ರಿ' ಎಂಬ ಹೆಸರಿನ ಪರ್ವದಿನವಾಗಿ ಆಚರಿಸಲಾಗುತ್ತಿದೆ. ಶಿವರಾತ್ರಿಯು ಶೈವಧರ್ಮೀಯರಿಗೆ ಪವಿತ್ರ ಪರ್ವದಿನವಾಗಿರುವುದೆಂಬುದು ಲೋಕಪ್ರಸಿದ್ಧ ಸಂಗತಿ. ವೃಷಭನಾಥನನ್ನು, ಶಿವ ಎಂಬ ಹೆಸರಿನಿಂದ ಮತ್ತು ಶಿವನಿಗೆ ಸಲ್ಲುವ ಇತರ ಹೆಸರುಗಳಿಂದ ಸ್ತುತಿಸುವ ರೂಢಿಯು ಪ್ರಾಚೀನಕಾಲದಿಂದಲೂ ಉಳಿದು ಬಂದಿದೆ.

ತ್ರೈಲೋಕ್ಯನಿರ್ಜಯಾವಾಪ್ತದುರ್ದರ್ಪಮತಿದುರ್ಜಯಮ್।
ಮೃತ್ಯುರಾಜಂ ವಿಜಿತ್ಯಾಸೀಜ್ಜಿನ ಮೃತ್ಯುಂಜಯೋ ಭವಾನ್ ॥ ೭೦॥

ವಿಧುತಾಶೇಷಸಂಸಾರಬಂಧನೋ ಭವ್ಯಬಾಂಧವಃ।
ತ್ರಿಪುರಾರಿಸ್ತ್ವಮೀಶಾಸಿ ಜನ್ಮಮೃತ್ಯುಜರಾಂತಕೃತ್ ॥ ೭೧॥

ತ್ರಿಕಾಲವಿಷಯಾಶೇಷತತ್ತ್ವಭೇದಾತ್ತ್ರಿಧೋತ್ಥಿತಮ್।
ಕೇವಲಾಖ್ಯಂ ದಧಚ್ಚಕ್ಷುಸ್ತ್ರಿಣೇತ್ರೋಽಸಿ ತ್ವಮೀಶಿತಃ ॥ ೭೨॥

ತ್ವಾಮಂತಕಾಂತಕಂ ಪ್ರಾಹುರ್ಮೋಹಾಂಧಾಸುರಮರ್ದನಾತ್।
ಅರ್ಧಂ ತೇ ನಾರಯೋ ಯಸ್ಮಾದರ್ಧನಾರೀಶ್ವರೋಽಸ್ಯತಃ[1] ॥ ೭೩॥

ಶಿವಃ ಶಿವಪದಾಧ್ಯಾಸಾದ್ದುರಿತಾರಿಹರೋ ಹರಃ।
ಶಂಕರಃ ಕೃತಶಂ ಲೋಕೇ ಶಂಭವಸ್ತ್ವಂ ಭವನ್ಸುಖೇ ॥ ೭೪॥ (ಪೂರ್ವಪುರಾಣ, ಪರ್ವ ೨೫)

1 ಕರ್ಮಗಳು ಎಂಟು, ಇವು ಆತ್ಮನಿಗೆ ಶತ್ರುಗಳಂತಿರುವುವು; ಇವುಗಳಲ್ಲಿ ನಾಲ್ಕು ಕರ್ಮಗಳು ಆತ್ಮನ ಗುಣಗಳನ್ನು ಘಾತಮಾಡುವಂತಹವುಗಳು. ಅರ್ಹಂತಾವಸ್ಥೆಗೆ ಬರುವ ಮುನ್ನ ಈ ನಾಲ್ಕು ಕರ್ಮಗಳನ್ನು ನಾಶಮಾಡಲಾಗಿರುತ್ತದೆ. ಈ ಅರ್ಥದ ಅನ್ವಯದಿಂದ (ಅರ್ಧ + ನ + ಅರಿ + ಈಶ್ವರ) 'ಅರ್ಧನಾರೀಶ್ವರ' ಎಂಬ ಹೆಸರಿನ ಸಾರ್ಥಕತೆಯನ್ನು ಹೇಳಿದೆ.

ಈ ಪ್ರಕಾರವಾಗಿ 'ಶಿವ' ಪದವು ಮುಕ್ತಿ ಎಂಬರ್ಥದಿಂದ ಮಂಗಲಗಳಲ್ಲಿ ಮಂಗಲವಾದುದಾಗಿ ಮತ್ತು ವೃಷಭತೀರ್ಥಂಕರನಿಗೆ ಅನ್ವಿತವಾಗಿ ಪರಮಾರಾಧ್ಯದೇವತ್ವದ ಭಾವವುಳ್ಳದ್ದಾಗಿ ಜೈನಧರ್ಮಪಂಥದಲ್ಲಿ ಪರಮಪೂಜ್ಯ ಅರ್ಥದೊಡನೆ ಬಳಕೆಯಲ್ಲಿದೆ.

ಅಷ್ಟಾವರಣಗಳು ವೀರಶೈವಧರ್ಮಪಂಥದ ಧಾರ್ಮಿಕಲಕ್ಷಣ ಮತ್ತು ಅವಶ್ಯ ಅಂಗಗಳಾಗಿವೆ. ಇಲ್ಲಿ 'ಆವರಣ' ಎಂಬುದು 'ರಕ್ಷಣೆ'ಯ ಅರ್ಥದಲ್ಲಿ ಪ್ರಯುಕ್ತವಾಗಿದೆ. ಜೈನಧರ್ಮಪಂಥದಲ್ಲಿ ಆತ್ಮನ ಸ್ವಾಭಾವಿಕಗುಣಗಳ ವಿಕಾಸಕ್ಕೆ ತಡೆಯಾಗಿರುವ ಎಂಟು ಕರ್ಮಗಳ ಆವರಣವನ್ನು ಹೇಳಿದೆ. ಹೀಗೆ ಅರ್ಥದ ಅಪೇಕ್ಷೆಯಿಂದ ಈ ಎರಡು ಧರ್ಮಪಂಥಗಳಲ್ಲಿ 'ಆವರಣ' ಪದವು ಪರಸ್ಪರ ವಿರುದ್ಧಾರ್ಥದಲ್ಲಿ ಪ್ರಯುಕ್ತವಾಗಿದೆ. ಇಷ್ಟಾದರೂ ವೀರಶೈವಧರ್ಮಪಂಥದ ಅಷ್ಟಾವರಣಗಳಲ್ಲಿ ಕೆಲವು ಜೈನಧರ್ಮಪಂಥದ ಧಾರ್ಮಿಕವಿಚಾರಗಳೊಡನೆ ಸಾದೃಶ್ಯತೆ ಹೊಂದಿವೆ.

**ಗುರು** : ಗುರುವಿಗೆ ವೀರಶೈವಧರ್ಮಪಂಥದಲ್ಲಿ ಪರಮಪೂಜ್ಯ ಸ್ಥಾನವಿದೆ. ಶಿವೈಕ್ಯತೆಯ ಮಾರ್ಗದರ್ಶನ ಕೊಡುವ ಗುರುವು ಶಿವನಷ್ಟೇ ಅಲ್ಲ, ಶಿವನಿಗಿಂತಲೂ ಹೆಚ್ಚು ಪೂಜ್ಯನಾಗಿದ್ದಾನೆ[1]—ಜೈನಧರ್ಮಪಂಥದಲ್ಲಿ ಪರಮಾರಾಧ್ಯರೆನಿಸಿದ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧು ಎಂಬ ಪಂಚಪರಮೇಷ್ಠಿಗಳನ್ನು ಪ್ರಾಚೀನಕಾಲದಿಂದಲೂ 'ಪಂಚಗುರು'ಗಳೆಂದು ಸ್ತುತಿಸಿದೆ. ಪಂಚಗುರುಭಕ್ತಿಪಾಠವು ಬಹುಪ್ರಾಚೀನವಾದುದು. ಮುಕ್ತಿಸಾಧನೆಯು ಜೈನಧರ್ಮದ ಪರಮೋದ್ದೇಶ; ಈ ಸಾಧನೆಯಲ್ಲಿ, ಮುಕ್ತಿ ಪಡೆದು ಪರಮಾತ್ಮಸ್ವರೂಪನಾಗಿರುವ ಸಿದ್ಧಪರಮೇಷ್ಠಿಯು ಆದರ್ಶವಾಗಿರುವುದರಿಂದ ಸಾಧಕನಿಗೆ ಪರಮಗುರುವಾಗಿದ್ದಾನೆ. ಹೀಗೆಯೇ ಆಧ್ಯಾತ್ಮಿಕ ಅರ್ಥದಿಂದ ಇತರ ಪರಮೇಷ್ಠಿಗಳು ಸಾಧಕನಿಗೆ ಪರಮಗುರುಸ್ವರೂಪರಾಗಿದ್ದಾರೆ ಮತ್ತು ಪರಮಪೂಜ್ಯರಾಗಿದ್ದಾರೆ. ಆದ್ದರಿಂದ ಗುರುವನ್ನು ಕುರಿತ ಪೂಜ್ಯಭಾವದಲ್ಲಿ ಈ ಎರಡು ಧರ್ಮಪಂಥಗಳಲ್ಲಿಯೂ ಬಹುಪಾದ ಸಾಮ್ಯವಿದೆ.

**ಲಿಂಗ** : 'ಲಿಂಗ' ಪದವು ಅನೇಕ ಅರ್ಥಗಳಲ್ಲಿ ಪ್ರಯುಕ್ತವಾಗಿದೆ. ಲೌಕಿಕವಾಗಿ ಈ ಪದವು 'ವಿಶಿಷ್ಟ ಚಿಹ್ನೆ' ಎಂಬರ್ಥದಲ್ಲಿ ಹೆಚ್ಚು ಬಳಕೆಯಲ್ಲಿದೆ. ಆದರೆ ಪಾರಮಾರ್ಥಿಕವಾಗಿ ಬಹು ಗಹನವಾದ ಅರ್ಥವುಳ್ಳದ್ದಾಗಿದೆ. ವೀರಶೈವ ತತ್ತ್ವದಲ್ಲಿ, ದರ್ಶನದಲ್ಲಿ ಇದು ಸ್ವಯಂ ಪರಶಿವನ ಮೂರ್ತಸ್ವರೂಪವಾಗಿದೆ. ವೀರಶೈವ ಧಾರ್ಮಿಕಜೀವನದಲ್ಲಿ ಲಿಂಗವಿಲ್ಲದ ಕ್ಷಣವಿಲ್ಲ; 'ಲಿಂಗವಂತ' ಎಂಬ ಹೆಸರು ಸರ್ವಪ್ರಕಾರದಿಂದಲೂ ಈ ಧರ್ಮೀಯರಲ್ಲಿ ಸಾರ್ಥಕತೆ ಹೊಂದಿದೆ. ಭಕ್ತಿಭಂಡಾರಿ ಬಸವಣ್ಣನವರು ಲಿಂಗದ ಈ ಮಹತ್ತ್ವವನ್ನು ಮನಮುಟ್ಟುವಂತೆ ಹೇಳಿದ್ದಾರೆ.

> ಪ್ರಾಣಲಿಂಗಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತವಾಗಿ ನಡೆವ ಪರಿಯೆಂತೋ ?
> ಲಿಂಗವಿರಹಿತವಾಗಿ ನುಡಿವ ಪರಿಯೆಂತೊ ? ಪಂಚೇಂದ್ರಿಯ ಸುಖವನು
> ಲಿಂಗವಿರಹಿತವಾಗಿ ಭುಂಜಿಸಲಾಗದು ; ಅಂಗವಿರಹಿತವಾಗಿ ಉಗುಳ
> ನುಂಗಲಾಗದು ; ಇಂತೆಂದು ಕೂಡಲಸಂಗನ ವಚನ[2]

ಜೈನಧರ್ಮಪಂಥದಲ್ಲಿ 'ಲಿಂಗ'ಪದವು ವೀರಶೈವಧರ್ಮದಲ್ಲಿ ಕಂಡುಬರುವಷ್ಟು ಮಹೋನ್ನತ ಅರ್ಥವ್ಯಾಪ್ತಿ ಹೊಂದಿಲ್ಲವೆಂಬುದು ನಿಜ. ಆದರೆ ಭವನಿವಾರಣೆಗೆ, ಎಂದರೆ ಮುಕ್ತಿಗೆ ಕಾರಣವಾದ ನಿರ್ಗ್ರಂಥಮುನಿಯ ಬಹಿರಂಗದ ಮತ್ತು ಅಂತರಂಗದ, ಆಚಾರ ಧರ್ಮವನ್ನು 'ಲಿಂಗ'ವೆಂದು ಹೇಳಿದೆ.[3] ಆದ್ದರಿಂದ ಧಾರ್ಮಿಕ ಮಹತ್ತ್ವದ ಈ ಅರ್ಥ ದೃಷ್ಟಿಯಿಂದ 'ಲಿಂಗ' ಪದದ ಬಗ್ಗೆ ಈ ಧರ್ಮಪಂಥದಲ್ಲಿ ಇರುವ ಪೂಜ್ಯಭಾವನೆಯನ್ನು ಗುರುತಿಸಬಹುದು. ಇದಲ್ಲದೆ ಮತ್ತೂ ಒಂದು ದೃಷ್ಟಿಯಿಂದ 'ಲಿಂಗ'ಪದವು ಜೈನಧರ್ಮೀಯರಿಗೆ ಪೂಜ್ಯವಾಗಿದೆ.

ಆದಿತೀರ್ಥಂಕರನಾದ ವೃಷಭನಾಥನು ಕೈಲಾಸಪರ್ವತದಲ್ಲಿ ಕರ್ಮಗಳನ್ನು ನಿರ್ಮೂಲಮಾಡಿ ನಿರ್ವಾಣ ಹೊಂದಿ

---

1 ಡಾ. ಎಸ್. ಸಿ. ನಂದಿಮಠ್ ಅವರ 'ಎ ಹ್ಯಾಂಡ್ ಬುಕ್ ಆಫ್ ವೀರಶೈವಿಜಮ್' ಪು. ೫೪

2 ಡಾ. ಎಲ್. ಬಸವರಾಜು ಎಂ.ಎ ಡಿಲಿಟ್. ಸಂಪಾದಿತ—'ಬಸವೇಶ್ವರ ವಚನಸಂಗ್ರಹ', ೪೩೫

3 ಜಧಜಾದರೂವಜಾದಂ ಉಪ್ಪಾಡಿದಕೇಸಮಂಸುಗಂ ಸುದ್ಧಂ ।
ರಹಿದಂ ಹಿಂಸಾದೀದೋ ಅಪ್ಪಡಿಕಮ್ಮಂ ಹವದಿ ಲಿಂಗಂ ॥ ೫ ॥
ಮುಚ್ಛಾರಂಭವಿಮುಕ್ಕಂ ಜುತ್ತಂ ಉವಜೋಗಜೋಗಸುದ್ಧೀಹಿಂ ।
ಲಿಂಗಂ ಣ ಪರಾವೇಕ್ಖಂ ಅಪುಣಬ್ಭವಕಾರಣಂ ಜೇಣ್ಹಂ ॥ ೬ ॥
ಕುಂದಕುಂದಾಚಾರ್ಯ–ಪ್ರವಚನಸಾರ, ಅಧಿಕಾರ ೩

ದನು. ಆದ್ದರಿಂದ ಈ ಕೈಲಾಸಪರ್ವತವು ಪರಮಪೂಜ್ಯ ನಿರ್ವಾಣಕ್ಷೇತ್ರವಾಯಿತು. ವೃಷಭನಾಥನ ಜ್ಯೇಷ್ಠಪುತ್ರನಾದ ಭರತಚಕ್ರವರ್ತಿಯು ಕೈಲಾಸಪರ್ವತದ ಪ್ರತೀಕವಾಗಿ ಅದರ ಆಕಾರವನ್ನು ಹೋಲುವ ಗಂಟೆಗಳನ್ನು ಮಾಡಿಸಿ ಜಿನಾಯತನಗಳಲ್ಲಿ ತೂಗುಹಾಕಿಸಿದನು, ಕೈಲಾಸಪರ್ವತದ ಆಕಾರದಲ್ಲಿ ಕಿರೀಟವನ್ನು ಮಾಡಿಸಿ ಶಿರೋಧಾರ್ಯವಾಗಿಸಿದನು. ಈ ರೀತಿಯಿಂದ ಜೈನಧರ್ಮಪಂಥದಲ್ಲಿ ಆಚರಣೆಯಲ್ಲಿರುವ ನಿರ್ವಾಣಕ್ಷೇತ್ರ–ಕೈಲಾಸಪರ್ವತ ಚೈತ್ಯಪೂಜೆಯು ಶೈವಧರ್ಮಪಂಥದ ಲಿಂಗಪೂಜೆಯೊಡನೆ ಸಾದೃಶ್ಯತೆಯುಳ್ಳದ್ದಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[1]

**ಜಂಗಮ** : ನಮ್ಮ ಭಾರತದೇಶದ ಜನಜೀವನದಲ್ಲಿ ಸಾಧುಸಂತರಿಗೆ ಬಹು ಗೌರವದ ಸ್ಥಾನವಿದೆ. ವೀರಶೈವಧರ್ಮಪಂಥದ ಸಾಧುಸಂತರೆಂದರೆ ಜಂಗಮರು ; ಇವರಿಗೆ ಪರಮಪೂಜ್ಯಸ್ಥಾನವಿದೆ ; ಈ ಪೂಜ್ಯಭಾವನೆಯ ಔನ್ನತ್ಯವೇನು ಎಂಬುದು ಬಸವಣ್ಣನವರ ಮುಂದಿನ ವಚನಗಳಿಂದ ವ್ಯಕ್ತವಾಗುತ್ತದೆ :

> ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೇ
> ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ ಸ್ಥಾವರ ಜಂಗಮ ಒಂದೆಂದು ಕೂಡಲಸಂಗನ ವಚನ
> ಗುರು ಮುನಿದರೆ ಒಂದು ದಿನ ತಾಳುವೆ, ಲಿಂಗ ಮುನಿದರೆ ದಿನವರೆ ತಾಳುವೆ,
> ಜಂಗಮ ಮುನಿದರೆ ಕ್ಷಣಮಾತ್ರವ ತಾಳಿದೆನಾದರೆ ಎನ್ನ ಪ್ರಾಣದ ಹೋಕು ಕೂಡಲಸಂಗಮದೇವ[2]

ಜೈನಧರ್ಮಪಂಥದಲ್ಲಿ ನಿರ್ಗ್ರಂಥಮುನಿಯ ಬಹಿರಂಗ ಮತ್ತು ಅಂತರಂಗಶುದ್ಧ ಆಚಾರಧರ್ಮವನ್ನು 'ಲಿಂಗ'ವೆಂದು ಹೆಸರಿಸಿದೆ. ಈ ಆಚಾರಧರ್ಮ ಬೇರೆಯಲ್ಲ ಮತ್ತು ಇದನ್ನು ಪಾಲನೆ ಮಾಡುವ ನಿರ್ಗ್ರಂಥಮುನಿ ಬೇರೆಯಲ್ಲ. ಆದ್ದರಿಂದ ಮುಕ್ತಿಸಾಧಕವಾದ ಧರ್ಮಕ್ಕೆ ಸಲ್ಲುವಷ್ಟೇ ಪೂಜ್ಯಭಾವನೆಯು ಆ ಧರ್ಮದ ಮೂರ್ತಸ್ವರೂಪನಾಗಿರುವ ನಿರ್ಗ್ರಂಥಮುನಿಗೂ ಸಲ್ಲುತ್ತದೆ. ವೀರಶೈವಧರ್ಮದಲ್ಲಿ 'ಜಂಗಮವೇ ಲಿಂಗ'ವೆಂದಂತೆ 'ಜಂಗಮಪ್ರಾಪ್ಯಾಯನವಾದರೆ ಲಿಂಗ ಸಂತುಷ್ಟಿ' ಎಂದಂತೆ ಜೈನಧರ್ಮದಲ್ಲಿ ನಿರ್ಗ್ರಂಥಮುನಿಗೆ ಸಲ್ಲುವ ಪೂಜ್ಯತೆಯು ಮುಕ್ತಿಸಾಧಕವಾದ ಧರ್ಮಕ್ಕೇ ಸಲ್ಲುವುದು. ಈ ಪ್ರಕಾರದಿಂದ, ಬಾಹ್ಯಲಕ್ಷಣಗಳನ್ನು ಗಣನೆಗೆ ತಂದುಕೊಳ್ಳದೆ ಆಂತರಂಗಿಕ ಅಥವಾ ಪಾರಮಾರ್ಥಿಕದೃಷ್ಟಿಯಿಂದ ಪರಿಗಣನೆ ಮಾಡಿದಲ್ಲಿ ವೀರಶೈವಧರ್ಮದ ಜಂಗಮ ಮತ್ತು ಜೈನಧರ್ಮದ ನಿರ್ಗ್ರಂಥಮುನಿಯ ಮಧ್ಯೆ, ಸಾಮ್ಯವಲ್ಲದಿದ್ದರೂ, ಸಾದೃಶ್ಯತೆಯಿದೆ. ಜಂಗಮನು ಸಂಗರಹಿತನು, ದೇಹಮಮತ್ವರಹಿತನು, ಪರಾಶ್ರಯದೂರನು, ಸರ್ವದಾಸಂಚಾರಶೀಲನು, ಧರ್ಮೋಪದೇಶಕನು.[3] ಜಂಗಮನ ಈ ಲಕ್ಷಣಗಳು ನಿರ್ಗ್ರಂಥಮುನಿಯ ಲಕ್ಷಣಗಳೊಡನೆ ನಿಕಟಸಾದೃಶ್ಯತೆಯುಳ್ಳವಾಗಿವೆ.

**ಪಾದೋದಕ:** ಸಾಧುಸಂತರನ್ನು ಪಿತೃಗಳನ್ನು ಗುರುಹಿರಿಯರನ್ನು ಪೂಜ್ಯಭಾವದಿಂದ ಗೌರವದಿಂದ ಕಾಣುವುದು ಎಲ್ಲ ಧರ್ಮಪಂಥಗಳಲ್ಲಿಯೂ ಕಂಡುಬರುವ ಸಾಧಾರಣ ಸಂಗತಿ. ಇದು 'ಅಹಂ' ಪ್ರವೃತ್ತಿಯ ಮದವನ್ನು ಅಂಕಿತದಲ್ಲಿರಿಸುವ ವಿನಯಾಚಾರ. ವೀರಶೈವಧರ್ಮದ ಪಾದೋದಕದ ಮೂಲೋದ್ದೇಶವೂ ಇದೇ ಆಗಿದೆ. ಗುರು-ಲಿಂಗ-ಜಂಗಮರ ಕಿಂಕರ ತಾನೆಂಬ ಭಾವಸಿದ್ಧಿಗೆ ಈ ಪಾದೋದಕ ಸಹಾಯವಾಗಿದೆ. ಇದರಿಂದ ತ್ರಿಕರಣಶುದ್ಧಿ ಕೈಗೂಡುತ್ತದೆ. ಜೈನಧರ್ಮದ ಆಚಾರದಲ್ಲಿ 'ಪಾದೋದಕ'ದ ಬಗ್ಗೆ ಗೌರವವಿಲ್ಲವೆಂದಿಲ್ಲ ; ಆದರೆ ಇದು ಆಚಾರವೊಂದರ ಅಂಗವಾಗಿದೆಯೇ ಹೊರತಾಗಿ ವೀರಶೈವಧರ್ಮದಲ್ಲಿ ಕಂಡುಬರುವಂತಹ ವಿಶಿಷ್ಟವಾದ ಮಹತ್ತ್ವದ ಸ್ಥಾನ ಪಡೆದಿಲ್ಲ. ಶ್ರಾವಕನ (ಗೃಹಸ್ಥನ) ಆಚಾರಧರ್ಮದಲ್ಲಿ ನಿರ್ಗ್ರಂಥಮುನಿಗಳಿಗೆ ಆಹಾರದಾನ ಕೊಡಬೇಕಾದುದು ಒಂದು ಕರ್ತವ್ಯವಾಗಿದೆ. ಆಹಾರಕ್ಕಾಗಿ ಚರ್ಯೆ ಬಂದ ಮುನಿಯನ್ನು ಗೌರವದಿಂದ, ಭಕ್ತಿಯಿಂದ ಮನೆಯೊಳಗೆ ಕರೆದೊಯ್ದು ಉಚ್ಚಾಸನದಲ್ಲಿ ಕುಳ್ಳಿರಿಸಿ ಬಿಸಿನೀರಿನಿಂದ ಪಾದಪ್ರಕ್ಷಾಳನೆ ಮಾಡಬೇಕು ; ಆ ಮೇಲೆ ಅರ್ಚನೆ ಮಾಡಿ ಆಹಾರ ಕೊಡಬೇಕು. ಪಾದಪ್ರಕ್ಷಾಳನೆ ಮಾಡಿದ ನೀರು, ಪಾದೋದಕ. ಇದನ್ನು ವಿನಯಪೂರ್ವಕ ಶ್ರಾವಕರು ನೆತ್ತಿಯ ಮೇಲೆ ಚಿಮುಕಿಸಿಕೊಳ್ಳುವರು. ಈ ರೀತಿಯಿಂದ ವೀರಶೈವಧರ್ಮದ 'ಪಾದೋದಕ'ದೊಡನೆ ಸಾದೃಶ್ಯವುಳ್ಳ ಆಚಾರವು ಜೈನಧರ್ಮೀಯರಲ್ಲಿರುವುದನ್ನು ಗುರುತಿಸಬಹುದು.

**ಪ್ರಸಾದ:** 'ಲಿಂಗವ ಮೆಚ್ಚಿ ಜಂಗಮಪ್ರಸಾದವ ಕೊಂಬವರ ನೋಡಿ ನಗುವವರ ಕುಂಭೀಪಾಕ—ನಾಯಕ

---

[1] 'ದಿ ವಾಯ್ಸ್ ಆಫ್ ಅಹಿಂಸಾ' ತೀರ್ಥಂಕರ ಋಷಭದೇವ ಸ್ಪೆಷಲ್ ನಂ. ವಾಲ್ಯೂಂ ೭ ; ೧೯೫೭, ಪು. ೧೬೭

[2] ಪೂ.ಸೂ. ಗ್ರಂಥ ೧೨೫ ಮತ್ತು ೪೪೯

[3] ಪೂ.ಸೂ. 'ಎ ಹ್ಯಾಂಡ್ ಬುಕ್ ಆಫ್ ವೀರಶೈವಿಜಂ' ; ಪು. ೫೪

ನರಕದಲ್ಲಿಕ್ಕುವ ಕೂಡಲಸಂಗಮದೇವ'; 'ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ?' 'ನಂಬಿದರೆ ಪ್ರಸಾದ ನಂಬದಿದ್ದರೆ ವಿಷವು'[1]—ಈ ವಚನಗಳಿಂದ ವೀರಶೈವಧರ್ಮದಲ್ಲಿ ಪ್ರಸಾದಕ್ಕಿರುವ ಮಹತ್ತ್ವವನ್ನು ತಿಳಿಯಬಹುದು. ಧಾರ್ಮಿಕ ಆಚಾರಸಂಬಂಧಿಯಾಗಿ ಇತರ ಧರ್ಮಗಳಲ್ಲಿಯೂ ಈ ಪದಪ್ರಯೋಗವಿಲ್ಲದಿಲ್ಲ. ಆದರೆ ಈ ಧರ್ಮಗಳಲ್ಲಿ ವೀರಶೈವ ಧರ್ಮದಲ್ಲಿ ಕಂಡುಬರುವಷ್ಟು ಮಹತ್ತ್ವವು ಇದಕ್ಕೆ ಇಲ್ಲದಿರಬಹುದು. ಜೈನಧರ್ಮದಲ್ಲಿ ಶ್ರಾವಕನಿಗೆ ವಿಹಿತವಾಗಿರುವ ಷಟ್ಕರ್ಮಗಳಲ್ಲಿ, ಒಂದು ಜಿನಪೂಜೆ. ಜಿನಬಿಂಬಕ್ಕೆ ಅಭಿಷೇಕಿಸುವ ಗಂಧೋದಕವನ್ನು ಪೂಜೆಯ ಕೊನೆಯಲ್ಲಿ ಪ್ರಸಾದ ವೆಂದು ತಲೆಯ ಮೇಲೆ ಚಿಮುಕಿಸಿಕೊಳ್ಳುವ ರೂಢಿಯಿದೆ. ಇದಲ್ಲದೆ ನಿರ್ಗ್ರಂಥಮುನಿಗಳಿಗೆ ಆಹಾರದಾನವಿತ್ತಬಳಿಕ ಆ ಮನೆಯಲ್ಲಿ ಉಳಿಯುವ ಆಹಾರಪದಾರ್ಥವು ಭುಕ್ತಶೇಷವೆಂಬ ಪ್ರಸಾದವೆನಿಸುವುದು. ಆದರೆ ಇದು ಎಂಜಲಲ್ಲ. ಮುನಿಯ ಆಹಾರವಾದ ಬಳಿಕ ಆ ಮನೆಯಲ್ಲಿ ಮಿಕ್ಕಿರುವ ಈ ಪ್ರಸಾದವನ್ನು ಎಲ್ಲರೂ ಹಂಚಿಕೊಂಡು ಭುಂಜಿಸು ವರು. ಹೀಗೆ 'ಪ್ರಸಾದ'ವು ಧಾರ್ಮಿಕ ಆಚಾರದ ಅಂಗವಾಗಿ ಜೈನಧರ್ಮದಲ್ಲಿಯೂ ಗೌರವದ ಸ್ಥಾನ ಪಡೆದಿದೆ.

**ವಿಭೂತಿ :** ಇದರ ಸಾಧಾರಣ ಅರ್ಥ ಐಶ್ವರ್ಯ ಎಂದು. ಆದರೆ ಧಾರ್ಮಿಕಪರಿಭಾಷೆಯಲ್ಲಿ ಇದಕ್ಕೆ ಪವಿತ್ರ ಭಸ್ಮ ಎಂಬ ಅರ್ಥವಿದೆ. ವಿಭೂತಿಧಾರಣೆಯು ಶೈವಧರ್ಮೀಯರ ವೈಶಿಷ್ಟ್ಯ. ಅದರಲ್ಲಿಯೂ, ವೀರಶೈವಧರ್ಮ ಪಂಥದಲ್ಲಿ ಇದು 'ಭವಪರಿಹಾರಕ ದುರಿತಸಂಕುಲನಿವಾರಕ'ವೆಂದು ಬಹು ಮಹತ್ತ್ವ ಪಡೆದಿದೆ. ಜೈನಧರ್ಮದಲ್ಲಿ ನಿತ್ಯವೂ ವಿಭೂತಿಧಾರಣೆಯ ಪದ್ಧತಿಯಿಲ್ಲವಾದರೂ ವಿಭೂತಿಯನ್ನು ಪವಿತ್ರವೆಂದು ಪೂಜ್ಯಭಾವದಿಂದ ಕಾಣುವುದಿದೆ. 'ವೀರಶೈವಧರ್ಮದಲ್ಲಿ ಪರಮೇಶ್ವರನು ಧರಿಸಿದ ವಿಭೂತಿಯಾದುದರಿಂದ ಅವನ ಸಂಬಂಧದಿಂದ ಅದು ಪರಮಪಾವನ; ಕಾಮನನ್ನು ದಹಿಸಿ ಪರಮೇಶ್ವರನು ಭಸ್ಮಲೇಪನ ಮಾಡಿಕೊಂಡನು. ಆದುದರಿಂದ ವಿಭೂತಿಧಾರಣವು ಕಾಮಾದಿ ಅರಿಷಡ್ವರ್ಗವನ್ನು ದಹಿಸಿದುದಕ್ಕೆ ಗುರುತು' ಎಂದು ವಿಭೂತಿಧಾರಣೆಯ ಉದ್ದೇಶವನ್ನು ಹೇಳಿದೆ.[2] ಇದರೊಡನೆ ಸದೃಶತರವೆನ್ನಬಹುದಾದ ಹೇಳಿಕೆಯನ್ನು ಜೈನಧರ್ಮದ ಪುರಾಣದಲ್ಲಿ ಕಾಣಬಹುದು. ಆದಿತೀರ್ಥಂಕರ ನಾದ ವೃಷಭನಾಥನು ಕೈಲಾಸಪರ್ವತದಲ್ಲಿ ಎಲ್ಲ ಕರ್ಮಗಳನ್ನೂ ನಿರ್ಮೂಲಗೊಳಿಸಿ ನಿರ್ವಾಣಹೊಂದಿದನು. ಆಗ ಅವನ ಶರೀರಾವಶೇಷವನ್ನು ದೇವಮಾನವರೆಲ್ಲರೂ ಸೇರಿ ದಹನ ಮಾಡಿದರು. 'ಅನಂತರ ಪಂಚಕಲ್ಯಾಣಭಾಗಿಯಾದ ಆ ಭಗವಂತನ ಶರೀರದ ಭಸ್ಮವನ್ನು ತೆಗೆದುಕೊಂಡು, ನಾವೂ ಇವನಂತೆಯೇ ಪಂಚಕಲ್ಯಾಣಭಾಗಿಗಳಾಗುವೆವು ಎಂದು ತಮ್ಮ ಲಲಾಟದಲ್ಲಿ, ಭುಜದ್ವಯದಲ್ಲಿ, ಕಂಠದಲ್ಲಿ, ವಕ್ಷಸ್ಥಲದಲ್ಲಿ ಭಕ್ತಿಯಿಂದ ಸಂಸ್ಪರ್ಶ ಮಾಡಿಕೊಂಡರು"[3]–ಈ ರೀತಿಯದಾದ ಭಸ್ಮಸಂಸ್ಪರ್ಶದಲ್ಲಿ ಕಂಡುಬರುವ ಪೂಜ್ಯಭಾವವು ವೀರಶೈವಧರ್ಮದಲ್ಲಿ 'ವಿಭೂತಿ'ಗಿರುವ ಪೂಜ್ಯ ಭಾವದೊಡನೆ ನಿಕಟವಾದ ಸಾದೃಶ್ಯತೆ ಹೊಂದಿದೆಯೆಂಬುದು ಸ್ವಯಂ ಸ್ಪಷ್ಟವಾಗುವುದು.

**ರುದ್ರಾಕ್ಷಿ :** ರುದ್ರಾಕ್ಷಿಯ ಉಪಯೋಗವೂ ಶೈವಮತಧರ್ಮದ ವೈಶಿಷ್ಟ್ಯ. ಇದರ ಉಪಯೋಗವಾಗಲೀ, ಇದನ್ನು ಹೋಲುವಂತಹ ಯಾವುದೇ ಸಂಕಲ್ಪವಾಗಲೀ ಜೈನಧರ್ಮದಲ್ಲಿ ಇರುವಂತೆ ಕಂಡುಬರುವುದಿಲ್ಲ.

**ಮಂತ್ರ :** ಮಂತ್ರದ ಹಿರಿಮೆ ಮತ್ತು ಲಕ್ಷಣಗಳನ್ನು ಹೇಳುವಲ್ಲಿ ವೀರಶೈವ ಮತ್ತು ಜೈನಧರ್ಮಗಳ ಮಧ್ಯೆ ವಿಶೇಷ ಸಾದೃಶ್ಯತೆಯನ್ನು ಕಾಣಬಹುದು. ವೀರಶೈವಧರ್ಮದಲ್ಲಿ "ನಮಃ ಶಿವಾಯ" ಎಂಬುದು ಪಂಚಾಕ್ಷರೀ ಮಂತ್ರ. 'ಓಂ ನಮಃ ಶಿವಾಯ' ಎಂಬುದು ಷಡಕ್ಷರ ಮಂತ್ರ. 'ಸರ್ವೇ ವರ್ಣಾಃ ಶಿವಾತ್ಮಕಾಃ' ಎಂದು ಹೇಳಿದೆ. ಆದರೂ ಪಂಚಾಕ್ಷರೀಮಂತ್ರವು ಮಂತ್ರರಾಜವೆನಿಸಿದೆ. ಜೈನಧರ್ಮದಲ್ಲಿ ಪಂಚನಮಸ್ಕಾರಮಂತ್ರವು ಸರ್ವೋತ್ಕೃಷ್ಟ ಮಂತ್ರವಾಗಿದೆ[4]. ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳೆಂಬ ಪಂಚಪರಮೇಷ್ಠಿಗಳ ನಮಸ್ಕಾರಾತ್ಮಕವಾದ ಮಂತ್ರವೇ ಪಂಚನಮಸ್ಕಾರಮಂತ್ರವು. ಈ ಪಂಚಪರಮೇಷ್ಠಿಗಳ ಹೆಸರುಗಳ ಮೊದಲ ಅಕ್ಷರಗಳಿಂದಾದ 'ಅ ಸಿ ಆ ಉ ಸಾ' ಎಂಬ ಮಂತ್ರವು ಪಂಚಾಕ್ಷರೀಮಂತ್ರವಾಗಿದೆ. 'ಓಂ ಣಮೋ ಸಿದ್ಧಾಣಂ ಅಥವಾ 'ಅರ್ಹದ್ಭ್ಯೋ ನಮೋಸ್ತು' ಎಂಬುದು ಷಡಕ್ಷರೀಮಂತ್ರ. ಇವಲ್ಲದೆ ಹೀಗೆಯೇ ಒಂದು, ಎರಡು, ನಾಲ್ಕು,

---

1 ಪೂ.ಸೂ. ಗ್ರಂಥ—೪೨೧, ೪೨೪

2 ಎಂ. ಆರ್. ಶ್ರೀನಿವಾಸಮೂರ್ತಿ ಅವರ 'ವಚನಧರ್ಮಸಾರ', ಪು. ೧೧೦.೯

3 'ಪೂರ್ವಪುರಾಣ' ಪರ್ವ–೪೭, ಪದ್ಯ ಸಂಖ್ಯೆ ೩೩೮–೩೫೦

4 ಏಸೋ ಪಂಚಣಮುಕ್ಕಾರೋ ಸವ್ವಪಾವಪ್ಪಣಾಸಣೋ।
ಮಂಗಲಾಣಂ ಚ ಸವ್ವೇಸಿಂ ಪಢಮಂ ಹವಇ ಮಂಗಲಂ ॥

ಹದಿನಾರು ಮತ್ತು ಮುವ್ವತ್ತೈದು ಅಕ್ಷರಗಳ ಮಂತ್ರಗಳನ್ನು ಹೇಳಿದೆ. ಓಂಕಾರವು—ಅ(ಅರಹಂತ) + ಅ (ಅಶರೀರ—ಸಿದ್ಧ) + ಆ (ಆಚಾರ್ಯ) + ಉ (ಉಪಾಧ್ಯಾಯ) + ಮ್ (ಮುನಿ) ಎಂದು ಪಂಚಪರಮೇಷ್ಠಿ ವಾಚಕವಾಗಿದೆಯೆಂದು ಹೇಳಿದೆ.[1] ಈ ಪಂಚನಮಸ್ಕಾರಮಂತ್ರಸ್ವರೂಪವನ್ನು ತಿಳಿದು ಧ್ಯಾನಮಾಡುವ ಯೋಗಿಯು ಪ್ರಪಂಚದ ಸರ್ವಶ್ರೇಷ್ಠಸಂಪತ್ತಿಯನ್ನು ಹೊಂದುವನು ಮತ್ತು ಮುಕ್ತಿಯನ್ನು ಹೊಂದುವನು.[2] ಈ ರೀತಿಯಾಗಿ ಮಂತ್ರದ ಮಹತ್ತ್ವವನ್ನು ಕುರಿತು ವೀರಶೈವ ಮತ್ತು ಜೈನಧರ್ಮಗಳಲ್ಲಿ ಪರಸ್ಪರ ಸಾದೃಶ್ಯತೆಯಿರುವುದನ್ನು ಗುರುತಿಸಬಹುದು.

**ಸಿದ್ಧಾಂತ :** ಆತ್ಮನು ಪ್ರಾಪಂಚಿಕವಾದ ಸಮಸ್ತ ದುಃಖಕ್ಲೇಶಗಳಿಂದ ಬಿಡುಗಡೆಹೊಂದಿ ಸ್ವಸ್ವರೂಪವನ್ನು ಪಡೆಯುವ ಬಗೆಯ ನಿರೂಪಣೆಯು ಸಾಧಾರಣವಾಗಿ ಎಲ್ಲ ಭಾರತೀಯ ಸಿದ್ಧಾಂತಗಳ ಮೂಲ ಉದ್ದೇಶವಾಗಿದೆ. ಈ ನಿರೂಪಣೆಯಲ್ಲಿ ಆತ್ಮ ಮತ್ತು ಅದರ ಸಂಬಂಧ ಹೊಂದಿರುವ ಪ್ರಪಂಚದ ಸ್ವರೂಪವಿವರಣೆಯು ಅವಶ್ಯ ಅಂಗವಾಗಿರುತ್ತದೆ. ಸಾಧಾರಣವಾಗಿ ಎಲ್ಲ ಸಿದ್ಧಾಂತಗಳ ಉದ್ದೇಶ ಒಂದೇ ಆಗಿದ್ದರೂ ವಸ್ತುಸ್ವರೂಪವನ್ನು ಹೇಳುವಲ್ಲಿ ಹಾಗೂ ಸಾಧನೆಯ ಮಾರ್ಗದರ್ಶನದಲ್ಲಿ ಈ ಸಿದ್ಧಾಂತಗಳು ತಮ್ಮದೇ ಆದ ಸ್ವತಂತ್ರ ಲಕ್ಷಣವುಳ್ಳವಾಗಿವೆ. ಇದರಂತೆ. ವೀರಶೈವಧರ್ಮದ ದಾರ್ಶನಿಕಚಿಂತನೆಯಾದ ಷಟ್‌ಸ್ಥಲ ಸಿದ್ಧಾಂತ ಮತ್ತು ಜೈನಧರ್ಮದ ದಾರ್ಶನಿಕಚಿಂತನೆಗಳೂ ತಮ್ಮದೇ ಆದ ಸ್ವತಂತ್ರ ಲಕ್ಷಣವುಳ್ಳವಾಗಿವೆ. ಆತ್ಮನ ಲಕ್ಷಣವನ್ನು ಹೇಳುವಲ್ಲಿ ಪ್ರಪಂಚದ ಸ್ವರೂಪವನ್ನು ಹೇಳುವಲ್ಲಿ ಈ ಎರಡು ದರ್ಶನಗಳ ಮಧ್ಯೆ ಅಂತಹ ಹೇಳಬಹುದಾದ ಸಾದೃಶ್ಯತೆಯಿಲ್ಲ. ಆದರೆ ಮೋಕ್ಷಸಾಧನೆಯತ್ತ ನಡೆದ ಸಾಧಕನ ನಿಲುವುಗಳನ್ನು ಹೇಳುವಲ್ಲಿ ಕಂಡುಬರುವ ಸಾದೃಶ್ಯತೆಯನ್ನು ಮಾತ್ರ ಇಲ್ಲಿ ಗುರುತಿಸಲಾಗುವುದು.

ನಿವೃತ್ತಿಲಕ್ಷಣದಿಂದ ಷಟ್‌ಸ್ಥಲಗಳಲ್ಲಿ ಒಂದನೆಯದು ಭಕ್ತಸ್ಥಲ–'ಭಕ್ತನು ಶಿವನಲ್ಲಿ ಅವಿಚಲಿತವಾದ ಭಕ್ತಿಯುಳ್ಳವನಾಗಿರಬೇಕು, ಶಿವಲಾಂಛನವ ಕಂಡಲ್ಲಿ ವಂದನೆಗೈಯ್ಯಬೇಕು, ಸದಾಚಾರದಲ್ಲಿ ನಡೆಯಬೇಕು, ಲಿಂಗಜಂಗಮವ ಒಂದೇ ಭಾವದಲ್ಲಿ ಕಂಡು ಭೃತ್ಯಾಚಾರಯುಕ್ತನಾಗಿರಬೇಕು' ಭಕ್ತನು ಹೇಗೆ ಶಿವನಲ್ಲಿ ಅವಿಚಲಿತವಾದ ಭಕ್ತಿಯುಳ್ಳವನಾಗಿರಬೇಕೆಂಬುದನ್ನು ಬಸವಣ್ಣನವರು ಮಾರ್ಮಿಕವಾಗಿ ಮನದಟ್ಟಾಗುವಂತೆ ಹೇಳಿದ್ದಾರೆ :

ಭಕ್ತರ ಕಂಡರೆ ಬೋಳಪ್ಪಿರಯ್ಯ, ಸವಣರ ಕಂಡರೆ
ಬತ್ತಲೆಯಪ್ಪಿರಯ್ಯ, ಹಾರುವರ ಕಂಡರೆ ಪರಿನಾಮವೆಂಬಿರಯ್ಯ
ಅವರವರ ಕಂಡರೆ ಅವರವರವರಂತೆ ಸೂಳೆಗೆ ಹುಟ್ಟಿದವರ
ತೋರದಿರಯ್ಯ ಕೂಡಲಸಂಗಯ್ಯನ ಪೂಜಿಸಿ ಅನ್ಯ
ದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳ
ನಾನೇನೆಂಬೆನಯ್ಯ (ಪೂ. ಸೂ. ಗ್ರಂಥ ೬೫)

ಈ ಭಕ್ತಿ ಜೈನಧರ್ಮದ ಸಮ್ಯಕ್ತ್ವದೊಡನೆ ಸಾದೃಶ್ಯತೆಯುಳ್ಳದ್ದಾಗಿದೆ. ಜಿನೋಪದಿಷ್ಟವಾದ ಧರ್ಮಮಾರ್ಗದಲ್ಲಿ ಅಚಲವಾದ ಶ್ರದ್ಧೆಯಿರುವುದು ಸಮ್ಯಕ್ತ್ವ. ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳು ಕೂಡಿ ಮೋಕ್ಷಮಾರ್ಗವಾಗಿದೆ. ಸಮ್ಯಕ್ತ್ವಹೀನವಾದ ಜ್ಞಾನಚಾರಿತ್ರಗಳು ಮೋಕ್ಷಸಾಧಕವಾಗಲಾರವು. ಆದ್ದರಿಂದ ಮೋಕ್ಷಸಾಧನೆಯಲ್ಲಿ ಸಮ್ಯಕ್ತ್ವಕ್ಕೆ ಆದ್ಯಸ್ಥಾನವಿದೆ. ಸಂಸಾರಾವಸ್ಥೆ ಅಥವಾ ಕರ್ಮಬದ್ಧ ಅವಸ್ಥೆಯಲ್ಲಿರುವ ಆತ್ಮನ ಸ್ಥಿತಿಯನ್ನು ಹದಿನಾಲ್ಕು ಗುಣಸ್ಥಾನಗಳಲ್ಲಿ ನಿರೂಪಿಸಿದೆ. ಈ ಗುಣಸ್ಥಾನಗಳಲ್ಲಿ ನಾಲ್ಕನೆಯದು ಅವಿರತಸಮ್ಯಕ್ತ್ವಸ್ಥಾನ. ಆತ್ಮನು ಈ ಸ್ಥಾನದಲ್ಲಿ ಸಮ್ಯಕ್ತ್ವವುಳ್ಳವನಾಗಿರುತ್ತಾನೆ : ಆದರೆ ಇಂದ್ರಿಯಸ್ವಾಮ್ಯದ ಶಕ್ತಿಯುಳ್ಳವನಾಗಿರುವುದಿಲ್ಲವಾದ್ದರಿಂದ ವ್ರತಪರಿಪಾಲಕನಾಗಿರುವುದಿಲ್ಲ. ಇಷ್ಟಾದರೂ ಮುಕ್ತಿಮಾರ್ಗದಲ್ಲಿ ಇದು ಮೊದಲನೆಯ ಹಂತವಾಗಿರುವುದು. ಈ ಹಂತದಿಂದ ಆತ್ಮನು ಮುಕ್ತಿಪಥದಲ್ಲಿ ಮೇಲೇರುವನು. ಈ ಗುಣಸ್ಥಾನ ಮತ್ತು ಷಟ್‌ಸ್ಥಲಗಳಲ್ಲಿ ಒಂದನೆಯದಾದ ಭಕ್ತಸ್ಥಲವು ಪರಸ್ಪರ ಸಾದೃಶ್ಯತೆ ಹೊಂದಿವೆ. ಷಟ್‌ಸ್ಥಲಗಳಲ್ಲಿ ಎರಡನೆಯದು ಮಾಹೇಶ್ವರಸ್ಥಲ. 'ಮಾಹೇಶ್ವರನೆಂತೆಂಬೆನಯ್ಯ ಪರಸ್ತ್ರೀ ಪರರರ್ಥದಾಸೆ ಬಿಡದನ್ನಕ್ಕ' ಎಂದಿದ್ದಾರೆ ಬಸವಣ್ಣನವರು. ಭಕ್ತಸ್ಥಲದ ಭಕ್ತಿ ಸದ್‌ಭಕ್ತಿಯಾಗಿ, ದೃಢಪಟ್ಟು ನಿಷ್ಠಾಭಕ್ತಿಯಾಗಿ ಪರಿಣಮಿಸುತ್ತದೆ. ಇದರಿಂದ ವೀರವ್ರತಿಯಾಗಿ

---

1 ಅರಹಂತಾ ಅಸರೀರಾ ಆಇರಿಯಾ ತಹ ಉವಜ್ಝಾಯಾ ಮುಣಿಣೋ ।
ಪಢಮಕ್ಖರಣಿಪ್ಪಣ್ಣೋ ಓಂಕಾರೋ ಪಂಚಪರಮೇಟ್ಠೀ ॥

2 'ಪೂರ್ವಪುರಾಣ' ಪರ್ವ. ೨೧. ಪದ್ಯ. ೩೩೧–೩೩೮

ಪ್ರಾಣ ಹೋದರೂ ವ್ರತವನ್ನು ಬಿಡದಾಗುತ್ತಾನೆ. ಈ ಮೆಟ್ಟಲೇ ಮಾಹೇಶ್ವರಸ್ಥಲ—ಇದು ಗುಣಸ್ಥಾನಗಳಲ್ಲಿ ಐದನೆಯದಾದ ದೇಶವಿರತ ಗುಣಸ್ಥಾನದೊಡನೆ ಸಾಮ್ಯವುಳ್ಳದ್ದಾಗಿದೆ. ನಾಲ್ಕನೇ ಗುಣಸ್ಥಾನ ಮತ್ತು ಅಲ್ಲಿಂದ ಮುಂದಿನ ಎಲ್ಲ ಗುಣಸ್ಥಾನಗಳಲ್ಲಿಯೂ ಸಮ್ಯಕ್ತ್ವವು ಅವಶ್ಯವಾಗಿ ಇದ್ದೇ ಇರುವುದು. ದೇಶವಿರತಗುಣಸ್ಥಾನದಾರಭ್ಯ ಇಂದ್ರಿಯಸ್ವಾಮ್ಯದ, ಅಂತರಂಗಶುದ್ಧಿಸಹಿತವಾದ ವ್ರತಪರಿಪಾಲನೆಯು ಸತ್ತ್ವಪೂರ್ಣವಾಗಿ ವೃದ್ಧಿಹೊಂದುವುದು. ಐದನೆಯದಾದ ದೇಶವಿರತಗುಣಸ್ಥಾನವು ಶ್ರಾವಕ-ಗೃಹಸ್ಥನ ನೆಲೆಯಾಗಿದೆ. ಅನೃತ, ಅನಾಚಾರ, ಪರಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ—ಇವೆಲ್ಲವುಗಳ ತ್ಯಾಗದ ವ್ರತವು ಮಾಹೇಶ್ವರಸ್ಥಲ ಮತ್ತು ದೇಶವಿರತಗುಣಸ್ಥಾನಗಳಲ್ಲಿ ಕಂಡು ಬರುವ ಸಮಾನ ಅಂಶಗಳಾಗಿವೆ. ಆರನೆಯ ಗುಣಸ್ಥಾನ ಪ್ರಮತ್ತವಿರತ, ಶ್ರಾವಕನ ನೆಲೆಯಿಂದ ಮೇಲಿನದು. ನಿರ್ಗ್ರಂಥಮುನಿಯಾಗಿ ಸರ್ವಸಂಗಪರಿತ್ಯಾಗಿಯಾಗಿರುತ್ತಾನೆ. ಇಲ್ಲಿ ಇಂದ್ರಿಯಸ್ವಾಮ್ಯವು ಪೂರ್ಣವಾಗಿರುವುದು. ಆತ್ಮನ ಅಧಃಪ್ರವೃತ್ತಿಗೆ ಕಾರಣವಾಗಿರುವ ಕ್ರೋಧಮಾನಮಾಯಾಲೋಭಗಳು ಅತ್ಯಂತ ಕ್ಷೀಣತರವಾಗಿರುವುದ ರಿಂದ ಪ್ರಶಾಂತಭಾವದ ಸಿದ್ಧಿಯಾಗಿರುವುದು. ವಿರಕ್ತಜಂಗಮನಲ್ಲಿ ಸಾಧಿತವಿರುವ ಪ್ರಸಾದಿಸ್ಥಲವು ಆರನೆಯ ವಿರತ ಗುಣಸ್ಥಾನದೊಡನೆ ಸ್ಥೂಲ ಸಾದೃಶ್ಯತೆಯನ್ನು ಹೊಂದಿದೆ. ಆರನೇ ಗುಣಸ್ಥಾನದಿಂದ ಹನ್ನೆರಡನೇ ಗುಣಸ್ಥಾನದ ವರೆಗೆ ಆತ್ಮನು ಶುದ್ಧಭಾವಸಾಧನೆಯ ಮೂಲಕ ತನ್ನ ಸ್ವಾಭಾವಿಕಗುಣಗಳ ವಿಕಾಸಕ್ಕೆ ತಡೆಯಾಗಿರುವ ಘಾತಿಕರ್ಮ ಗಳನ್ನು ನಿರ್ಮೂಲಗೊಳಿಸುತ್ತಾನೆ. ಹದಿಮೂರನೆಯ ಗುಣಸ್ಥಾನವು ಆತ್ಮನ ಸಹಜಗುಣಗಳೆಲ್ಲವೂ ವಿಕಾಸ ಹೊಂದಿರುವ ಅರಹಂತಾವಸ್ಥೆಯಾಗಿರುತ್ತದೆ. ಇದು ಇತರ ದರ್ಶನಗಳಲ್ಲಿ ಕಂಡುಬರುವ ಜೀವನ್ಮುಕ್ತಾವಸ್ಥೆಗೆ ಸದೃಶ ವಾದುದೆಂದು ಹೇಳಬಹುದು. ಮುಂದಿನದಾದ ಹದಿನಾಲ್ಕನೆಯ ಗುಣಸ್ಥಾನವು ನಿರ್ವಾಣಪಡೆಯಲಿರುವ ಅಂತಿಮ ಕ್ಷಣದ ಸ್ಥಿತಿ. ಷಟ್‌ಸ್ಥಲಗಳಲ್ಲಿ ನಾಲ್ಕನೆಯ ಮತ್ತು ಐದನೆಯವಾದ ಪ್ರಾಣಲಿಂಗಿ ಮತ್ತು ಶರಣಸ್ಥಲಗಳೊಡನೆ ಯಾವ ಒಂದು ಗುಣಸ್ಥಾನವನ್ನಾಗಲೀ ಹೋಲಿಸಲಾಗುವುದಿಲ್ಲವೆಂಬುದು ಸತ್ಯ. ಆದರೆ ಮುಕ್ತಿಪಥದಲ್ಲಿ ಆಗುವ ಆತ್ಮನ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದಲ್ಲಿ ಈ ಸ್ಥಲಗಳು ಆರನೇ ಗುಣಸ್ಥಾನದಿಂದ ಹನ್ನೆರಡನೇ ಗುಣಸ್ಥಾನಗಳ ಪರ್ಯಂತ ಆತ್ಮನಲ್ಲಿ ಆಗುವ ಶುದ್ಧತೆಯ ಸಿದ್ಧಿಯೊಡನೆ ಸ್ಥೂಲವಾಗಿ ಹೋಲಿಕೆಯುಳ್ಳವಾಗಿವೆ ಯೆಂದು ಹೇಳಬಹುದು. ಐಕ್ಯಸ್ಥಲದ ಜೀವನ್ಮುಕ್ತಾವಸ್ಥೆಯು ಹದಿಮೂರನೇ ಗುಣಸ್ಥಾನದೊಡನೆ ಹೋಲಿಕೆಯುಳ್ಳ ದ್ದಾಗಿದೆ. ಕ್ಷುತ್, ಪಿಪಾಸೆ, ಶೋಕ, ಮೋಹ, ಮದ, ಮತ್ಸರಗಳಿಲ್ಲವಾಗಿರುತ್ತವೆಯೆಂಬುದು ಇಲ್ಲಿನ ಸಮಾನ ಲಕ್ಷಣ ವಾಗಿದೆ. ದೇಹಾವಸಾನದ ಬಳಿಕ ಲಿಂಗೈಕ್ಯ, ಶಿವೈಕ್ಯ, ಪರಾತ್ಪರದಲ್ಲಿ ಅಂತರ್ಭಾವ ಹೊಂದುವುದು, ಬಯಲಾಗುವುದು, ಜೈನಧರ್ಮದ ನಿರ್ವಾಣಪ್ರಾಪ್ತಿಯೊಡನೆ ಸಾದೃಶ್ಯತೆಯುಳ್ಳದ್ದಾಗಿದೆ. ಈ ಪ್ರಕಾರವಾಗಿ ವೀರಶೈವಧರ್ಮ ಮತ್ತು ಜೈನಧರ್ಮಪಂಥಗಳ ಮಧ್ಯೆ ಇರುವ ಭೇದದಲ್ಲಿಯೂ ನಿಕಟವರ್ತಿಯಾದ ಅನೇಕ ಸಾಮ್ಯಾಂಶಗಳನ್ನು ಗುರುತಿಸ ಬಹುದು. 'ಶಿವ'ವೆಂಬುದು ಎರಡು ಪಂಥಗಳಿಗೂ ಪರಮಪೂಜ್ಯವಾಗಿದೆ.

ತ್ವಯೋಪದರ್ಶಿತಂ ಮಾರ್ಗಮುಪಾಸ್ಯ ಶಿವಮೀಪ್ಸತಃ ।
ತ್ವಾಂ ದೇವಮಿತ್ಯುಪಾಸೀನಾನ್ ಪ್ರಸೀದಾನುಗೃಹಾಣ ನಃ ॥

---

ಸೂಜಿಕಲ್ಲು ಕಬ್ಬಿಣಕ್ಕೆ ಹೇಳುವುದೆ : "ನನ್ನ ಹತ್ತಿರಕ್ಕೆ ಬಾ" ಎಂದು ? ಅದು ಹಾಗೇನೂ ಮಾಡಬೇಕಾಗಿಲ್ಲ. ಕಬ್ಬಿಣ ತಾನಾಗಿಯೇ ಸೂಜಿಗಲ್ಲಿನ ಆಕರ್ಷಣ ದಿಂದ ಅದರ ಕಡೆ ಹಾರಿ ಬರುತ್ತದೆ.

ರಾಮಕೃಷ್ಣಪರಮಹಂಸರು

# ಜೈನಯೋಗ ಮತ್ತು ಶಿವಯೋಗ

**ಆಂಗ್ಲ ಮೂಲ : ಡಾ. ಟಿ. ಜಿ. ಕಲಘಟಗಿ**
**ಅನುವಾದ : ಟಿ. ವಿ. ಪದ್ಮಾವತಿ**

ಆತ್ಮಸಿದ್ಧಿಗಾಗಿ ಪುರಾತನ ಭಾರತೀಯ ತತ್ವಶಾಸ್ತ್ರಜ್ಞರು ಒಂದು ವಿಜ್ಞಾನವನ್ನೇ ರೂಪಿಸಿ ಬೆಳೆಸಿದ್ದಾರೆ. ಅದೇ 'ಯೋಗ.' ನೈತಿಕ ಮತ್ತು ದೈಹಿಕ ಹದ್ದುಬಸ್ತು, ಆಧ್ಯಾತ್ಮಿಕ ಏಳ್ಗೆಗೆ ಅತ್ಯಾವಶ್ಯವೆಂದು ಪತಂಜಲಿ ತನ್ನ 'ಯೋಗ ಸೂತ್ರ'ದಲ್ಲಿ ನಿರ್ದೇಶಿಸಿದ್ದಾನೆ. ಪತಂಜಲಿಯ ಈ ಮೂಲಭೂತ ತತ್ವ ಮತ್ತು ಆಚರಣೆಯಲ್ಲಿ ಜೈನರಿಗೆ ಅಪಾರ ನಂಬಿಕೆ, ಆದರ. ಜೈನ ಪ್ರಸಿದ್ಧ ಬರಹಗಾರ ಹರಿಭದ್ರನು ತನ್ನ ಕೃತಿಗಳಲ್ಲಿ ಯೋಗದ ತುಲನಾತ್ಮಕ ಅಧ್ಯಯನ ನಡೆಸಿದ್ದಾನೆ. ಶುಭಚಂದ್ರನ 'ಜ್ಞಾನಾರ್ಣವ', ಹೇಮಚಂದ್ರನ 'ಯೋಗಶಾಸ್ತ್ರ'—ಈ ದಿಸೆಯಲ್ಲಿ ಉತ್ಕೃಷ್ಟವಾದ. ಅತ್ಯಮೂಲ್ಯವಾದ ಕೊಡುಗೆಗಳಾಗಿವೆ.

ಯೋಗ ಎಂಬ ಪದಕ್ಕೆ ಋಗ್ವೇದದಲ್ಲಿ 'ಸಂಪರ್ಕವನ್ನುಂಟುಮಾಡುವಂಥದು' ಎಂಬರ್ಥವಿದೆ. ಅದೇ ಅಥರ್ವವೇದದಲ್ಲಿ ಇದನ್ನು 'ಸಂನ್ಯಾಸಾಚರಣೆಯಿಂದ ಅಲೌಕಿಕಶಕ್ತಿ ಹೊಂದುವುದು' ಎಂದು ಹೇಳಲಾಗಿದೆ.[1] ಕ್ರಮೇಣ ಇದನ್ನು 'ಅಶ್ವಬಂಧ' ಎಂಬ ಅರ್ಥದಲ್ಲಿ ಬಳಸಲಾಯಿತು. ಇಂದ್ರಿಯಗಳು ಕಡಿವಾಣವಿಲ್ಲದ ಕುದುರೆಗಳೆಂದೂ, ಯೋಗ ಅವನ್ನು ನಿಯಂತ್ರಿಸುವ ಶಕ್ತಿ ಎಂದೂ ಹೋಲಿಸಲಾಯಿತು.[2] ಆದರೆ ಜೈನಸಾಹಿತ್ಯದಲ್ಲಿ ಹರಿಭದ್ರನು ಯೋಗವು ಮಾನವನನ್ನು ಮುಕ್ತಿಯತ್ತ ಕರೆದೊಯ್ಯುವಂಥದು[3] ಎಂದು ನಿರೂಪಿಸಿದ್ದಾನೆ. ಯೋಗಕ್ಕಿಂತ ಧ್ಯಾನ ಮತ್ತು ಸಮಾಧಿ ಎಂಬ ಪದಗಳು ಹೆಚ್ಚು ರೂಢಿಯಲ್ಲಿರುವಂಥವು. ಸಂಪೂರ್ಣ ಯೋಗಪ್ರಕ್ರಿಯೆಯಲ್ಲಿ ಧ್ಯಾನದ ಸರಿಯಾದ ಸ್ಥಾನವನ್ನು ನಾವು ಕಾಣುವುದು ಪತಂಜಲಿಯ 'ಯೋಗಸೂತ್ರ'ದಲ್ಲಿ ಮಾತ್ರ.[4]ಪತಂಜಲಿ ಪ್ರಾಯಃ ಯೋಗಶಾಲೆಯನ್ನೇನೂ ಪ್ರಾರಂಭಿಸಲಿಲ್ಲ. ಆದರೆ ಹಲವಾರು ಭಿನ್ನ ಆಚರಣೆಗಳ ವಿಧಿವಿಧಾನಗಳನ್ನು, ಯೋಗದ ವಿವಿಧ ಕಲ್ಪನೆಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾನೆ.[5] ಈಗ ನಾವು ಕಾಣುತ್ತಿರುವ ಯೋಗವನ್ನು ಆತ್ಮಸಾಕ್ಷಾತ್ಕಾರದ ಪ್ರಬುದ್ಧ ವಿಜ್ಞಾನ ಎಂದು ಪರಿಗಣಿಸಬಹುದಾಗಿದೆ.

ಯೋಗತತ್ತ್ವೋಪನಿಷತ್ತು ಯೋಗದ ನಾಲ್ಕು ಬಗೆಗಳನ್ನು ಹೆಸರಿಸಿದೆ : ೧. ಹಠಯೋಗ : ಇದರ ಪ್ರಮುಖ ಗುರಿ ದೈಹಿಕ ಚಟುವಟಿಕೆಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವುದು. ೨. ಮಂತ್ರಯೋಗ : ಇದರ ಮುಖ್ಯ ಉದ್ದೇಶ ಒಂದು ಬಗೆಯ ಗುಪ್ತಮಂತ್ರಗಳಿಂದ ಕಾಯಿಲೆ ಗುಣಪಡಿಸುವುದು. ೩. ಲಯಯೋಗ : ಇದು ಮಾನವ ಜೀವಿಯ ಭೌತ ವಿಶ್ಲೇಷಣೆಯನ್ನು ಧರಿಸಿದುದು. ಇದರ ಉದ್ದೇಶ ಮಂತ್ರದ ಮೂಲಕ ಪ್ರತಿಮೆಯ ಮೇಲೆ ಏಕಾಗ್ರತೆಯ ಪ್ರಭಾವವನ್ನು ಕೇಂದ್ರೀಕರಿಸುವುದು. ೪. ರಾಜಯೋಗ : ಇದು ಪಾತಂಜಲಯೋಗ. ಇದರ ಅಭೀಪ್ಸೆ ಉನ್ನತವಾದುದು. ದೈಹಿಕ ನಿಯಂತ್ರಣದಿಂದ ಆಧ್ಯಾತ್ಮಿಕ ಪರಮಾನಂದವನ್ನು ಹೊಂದುವುದು ಪತಂಜಲಿಯ ಯೋಗದ ಒಂದು ಭಾಗ. ಎಸ್. ಎನ್. ದಾಸಗುಪ್ತರ ಪ್ರಕಾರ ಯೋಗದ ಆಚರಣೆಗಳು ಶೈವ ಮತ್ತು ಶಾಕ್ತ ಪಂಥಗಳ ಧರ್ಮಗಳಿಗನುಗುಣವಾಗಿ ಬೆಳೆದು ಬಂದಂಥವು.

ನೈತಿಕ ಅಂಕೆ, ಆತ್ಮಸಾಕ್ಷಾತ್ಕಾರವನ್ನು ಹೊಂದಲು ನೆರವಾಗುವ ಯೋಗಾಚರಣೆಯ ಆವಶ್ಯಕ ಸ್ಥಿತಿ. ಇದರ

---

1 *Atharvaveda*

2 *Katha up.* III 4 Mairt. up 2

3 *Haribhadra–Yogavimsika*

4 Tatia (Nathumal) : *Studies in Jaina philosophy*. P. 262

5 S. N. Dasgupta : *History of Indian Philosophy*. Vol I. p. 229

ಉದ್ದೇಶ ಕರ್ಮಬಂಧದಿಂದ ಬಿಡುಗಡೆ ಹೊಂದುವುದು. 'ಯೋಗಸೂತ್ರ'ದಲ್ಲಿ ಯಮ ಮತ್ತು ನಿಯಮಗಳ ಯೋಗದ ನೈಜಸಜ್ಜುಗಳು (ಸಿದ್ಧತೆಗಳು) ಎಂದು ಹೇಳಲಾಗಿದೆ. ಈ ನೈಜಸಜ್ಜುಗಳಿಲ್ಲದೆ ಯೋಗದ ಆಚರಣೆ ಸಿದ್ಧಿಸದು.

ಯೋಗದ ೧. ಸ್ಥಾನ, ೨. ಊರ್ಣ, ೩. ಅರ್ಥ, ೪. ಆಲಂಭನ—ಈ ಮೊದಲಾದ ಆಚರಣಾ ವಿಧಾನಗಳಿಗೆ ಹರಿಭದ್ರನು ಪ್ರಾಶಸ್ತ್ಯ ಕೊಟ್ಟಿದ್ದಾನೆ.[1]

ಯೋಗಾಚರಣೆಯಿಂದ ಹಂತಾನುಹಂತವಾಗಿ ಆತ್ಮಸಾಕ್ಷಾತ್ಕಾರ ಗಟ್ಟಿಗೊಂಡಂತೆ ಕ್ರಮವಾಗಿ ಸಮೀಚೀನ ದೃಷ್ಟಿಯೂ ಬೆಳೆಯುತ್ತಾ ಹೋಗುತ್ತದೆ. ಈ ಅನುಕ್ರಮ ಬೆಳವಣಿಗೆಯನ್ನು ಎಂಟು ಹಂತಗಳಾಗಿ ವಿಂಗಡಿಸಲಾಗಿದೆ : ಮಿತ್ರಾ, ತಾರಾ, ಬಲಾ, ದೀಪ್ರಾ, ಸ್ಥಿರಾ, ಕಾಂತಾ, ಪ್ರಭಾ ಮತ್ತು ಪರಾ. ಈ ಎಂಟು ದೃಷ್ಟಿಗಳನ್ನು ಪತಂಜಲಿಯ ಯೋಗದ ಅಷ್ಟಾಂಗಗಳೊಡನೆ ಹೋಲಿಸಲಾಗಿದೆ.[2] ಈ ದೃಷ್ಟಿಗಳು ಉಚ್ಚ್ರಾಯ ಹೊಂದಿದಂತೆಲ್ಲಾ ಸತ್ಯದ ಬೆಳಕು ಸ್ಪಷ್ಟವಾಗುತ್ತಾ ಹೋಗಿ ಕಡೆಗೆ ಪರಿಪೂರ್ಣಜ್ಞಾನದ ಸಮಾಧಿಸ್ಥಿತಿಯನ್ನು ತಲುಪಬಹುದು.

ಪ್ರೀತಿ, ಭಕ್ತಿ, ಆಗಮ, ಅಸಂಗಗಳು ಯೋಗಾಭ್ಯಾಸಕ್ಕೆ ಚಾಲನೆ ಕೊಡುತ್ತವೆ. ಆದರೆ ಯೋಗಾಭ್ಯಾಸದಲ್ಲಿ ತೊಡಕುಗಳಿವೆ ಎಂಬ ಅರಿವು ಹರಿಭದ್ರನದು. ಯೋಗಾಭ್ಯಾಸ ಸಾಧನೆಗೆ ತೊಡಗುವ ಮೊದಲು ಕೆಲವು ದೈಹಿಕ ಮತ್ತು ಮಾನಸಿಕ ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾನೆ. ಸಾಮಾನ್ಯ ಮಾನವನ ಮನಸ್ಸು ಹಲವಾರು ದೋಷಗಳಿಂದ ಕೂಡಿರುತ್ತದೆ. ಅಂತಹ ಎಂಟು ದೋಷಗಳನ್ನು ಹರಿಭದ್ರ ಹೇಳಿದ್ದಾನೆ: ೧. ಖೇದ **(inertia),** ೨. ಉದ್ವೇಗ **(anxiety),** ೩. ಕ್ಷೇಪ **(unsteadiness),** ೪. ಉತ್ಥಾನ **(distraction),** ೫. ಭ್ರಾಂತಿ **(loss of memory),** ೬. ಅನ್ಯಮುದ **(attraction for what is not desirable),** ೭. ರುಕ್ **(mental disturbance)** ಮತ್ತು ೮. ಸಂಗ **(attachment).**[3] ಹೀಗಾಗಿ ಯೋಗಾಭ್ಯಾಸಕ್ಕೆ ತೊಡಗುವ ವ್ಯಕ್ತಿ ಸಾಮಾನ್ಯ ಮಾನವನಿಗಿಂತ ವಿಭಿನ್ನವಾದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕಾಗುತ್ತದೆ. ಒಮ್ಮೊಮ್ಮೆ ಈ ಸಾಮರ್ಥ್ಯಗಳ ಗಳಿಕೆಯಿಂದ ಅಂತಿಮ ಗುರಿಯೇ ಮಸುಕಾಗಿ ದಾರಿತಪ್ಪುವ ಸಾಧ್ಯತೆ ಇದೆ. ಮಾನವ ಚಿತ್ತ 'ಅರೆಗಲ್ಲು' **(millstone)** ಇದ್ದಹಾಗೆ. ಅದಕ್ಕೆ ಗೋಧಿ ಹಾಕಿದರೆ ಅರೆದು ಹಿಟ್ಟು ಮಾಡುತ್ತದೆ. ಏನೂ ಹಾಕದಿದ್ದರೆ ತನ್ನನ್ನು ತಾನೇ ಅರೆದುಕೊಂಡು ನಾಶವಾಗುವತನಕ ತಿರುಗುತ್ತಲೇ ಇರುತ್ತದೆ. ಇದು ಯೋಗದ ನಂಬಿಕೆ.[4]

ಯೋಗದ ಆಚರಣೆಯನ್ನು ಪತಂಜಲಿಯ ಎಂಟು ತತ್ತ್ವಗಳ ಬೆಳಕಿನಲ್ಲಿ ಅಧ್ಯಯನ ಮಾಡಿದ ಮೇಲೆ, ವೀರಶೈವ ತತ್ತ್ವಜ್ಞರು ಪ್ರಚುರಪಡಿಸಿರುವ ಶಿವಯೋಗ ಮತ್ತು ಜೈನಯೋಗಗಳ ಬಗೆಗೆ ತುಲನೆ ಮಾಡಬಹುದು. ಈ ತುಲನೆಯ ಉದ್ದೇಶ ಆತ್ಮಸಾಕ್ಷಾತ್ಕಾರದ ದಾರಿಯ ಸಂಕ್ಷಿಪ್ತ ಚಿತ್ರಣವನ್ನು ಕೊಡುವುದೇ ಅಲ್ಲದೆ ಅನೇಕಾಂತದ ಚೈತನ್ಯ ಈ ತತ್ತ್ವದ ಅಳವಡಿಕೆಗೆ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎಂಬುದನ್ನು ತಿಳಿಯಲು ಸಹಕಾರಿಯಾಗಿದೆ.

ನಾಗರೀಕತೆಯು ಪ್ರಗತಿಯಾದಂತೆಲ್ಲಾ, ಚಿಂತನೆ ಮತ್ತು ಕ್ರಿಯೆಗಳ ಅಭಿವ್ಯಕ್ತಿಯಲ್ಲಿ ಬದಲಾವಣೆಗಳು ಮಂದ ಗತಿಯಲ್ಲಿ ಆಗುತ್ತಾ ಬಂದವು. ನಾಗರೀಕತೆಯ ಆರಂಭದ ಅವಸ್ಥೆಗಳಲ್ಲಿ ಜೀವನ ಸರಳವಾಗಿತ್ತು. ಕೆಲವೇ ವ್ಯಕ್ತಿಗಳ ನಡುವೆ ಸೀಮಿತಗೊಂಡಿತ್ತು. ಪರಿಸರ ಚಿಕ್ಕದಾಗಿದ್ದು ವಸ್ತುವ್ಯವಸ್ಥೆ ಅಲ್ಪವಾಗಿತ್ತು. ಬಾಹ್ಯಜಗತ್ತಿನಿಂದ ಮನಸ್ಸನ್ನು ಹಿಂತೆಗೆದುಕೊಳ್ಳುವಲ್ಲಿಯೇ ಸ್ವಾಭಿವ್ಯಕ್ತಿ ಪರಿಮಿತವಾಗಿತ್ತು. ಯೋಗವು ಮನಶ್ಶಾಂತಿಯನ್ನು ಗಳಿಸುವ ಸಾಧನವಾಗಿತ್ತು. ಆದರೆ ಬಾಹ್ಯಜಗತ್ತಿನ ಬಗೆಗೆ ಆಸಕ್ತಿ ಬೆಳೆದಂತೆಲ್ಲಾ, ಜೀವನ ಸಂಕೀರ್ಣವಾಗುತ್ತಾ ಬಂದು, ಮಾನವರು ಭೋಗಜೀವನದ ಚಟುವಟಿಕೆಗಳಲ್ಲಿ ಬೇರುಬಿಟ್ಟು ಮೈಮರೆತರು. ಸಮಸ್ಯೆಗಳು ಸ್ವಲ್ಪವಿದ್ದು ಜೀವನ ಸುಗಮ ಹಾಗೂ ಸರಳವಾಗಿದ್ದ, ನಾಗರೀಕತೆಯ ಮೊದಲ ಹಂತಗಳಲ್ಲಿ ಸಾಧ್ಯವಾದ ದೈಹಿಕ ಹಾಗೂ ಮಾನಸಿಕ ಸ್ಥಿರತೆಯನ್ನು ಅಷ್ಟೇ ಪ್ರಮಾಣದಲ್ಲಿ ಕಾಯ್ದುಕೊಳ್ಳಲು ಮುಂದೆ ಬಹಳಷ್ಟು ಜನರಿಗೆ ಸಾಧ್ಯವಾಗಲಿಲ್ಲ. ಇಂಥ ಸಂಕೀರ್ಣ ಸಮಾಜದಲ್ಲಿ ಜೀವಿಸುತ್ತಿದ್ದ ವ್ಯಕ್ತಿ ಮತ್ತು ಆ ಸಮಾಜದ ರಚನೆಗನುಗುಣವಾಗಿ, ಆತ್ಮಸಾಕ್ಷಾತ್ಕಾರದಲ್ಲಿ ಹೊಸ ಹೊಸ ಮಾರ್ಗಗಳನ್ನು ಅನುಸರಿಸಲಾಯಿತು. ಈ ಮಾರ್ಗಗಳು ಭಕ್ತಿಯೋಗಪ್ರಧಾನವಾಗಿದ್ದು ಆತ್ಮಸಿದ್ಧಿಗೆ ಹೊಸ ಸಾಧನವಾದವು. ಉನ್ನತಿಯನ್ನು ಹೊಂದುವಲ್ಲಿ ಭಕ್ತಿಮಾರ್ಗವು ಪಾವಿತ್ರ್ಯ ಮತ್ತು ಪ್ರೀತಿಯ ಸಾಧನವಾಗಿ ಅಸ್ತಿತ್ವಗೊಂಡದ್ದು ಆತ್ಮದ ಬೆಳವಣಿಗೆಯಲ್ಲಿ ಒಂದು ಪ್ರಮುಖ ಹಂತ. ವೀರಶೈವ ಸಂನ್ಯಾಸಿಗಳು ಈ ಭಕ್ತಿಯೋಗವನ್ನು ಶಿವಯೋಗ

1 *Yogaviṁsikā* of Haribadra 1–2, Sodasaka Prakarana XIII–4

2 *Yogadṛṣṭisamuccaya* of Haribhadra 3–9

3 *Ṣodasaka Prakarana* of Haribhadra X, 9

4 Radhakrishnan (S) : *Indian Philosophy*, Vol II, p. 362

ದೊಡನೆ ಸಮನಿಸಿಕೊಂಡು ಉಪದೇಶಿಸಿದರು. ಶಿವಯೋಗದ ಮತ್ತೊಂದು ತತ್ವ 'ಶಕ್ತಿಸಿದ್ಧಾಂತ.' ಯೋಗವು ತನ್ನ ಮೂಲವನ್ನು ೧. ಹಿರಣ್ಯಗರ್ಭ ಮತ್ತು ೨. ರುದ್ರನಲ್ಲಿ ಹೊಂದಿರಲೇಬೇಕೆಂಬುದು ಕೆಲವರ ಅಭಿಪ್ರಾಯ. ಮೊದಲನೆಯದು ಅರಿವಿನ ಮೇಲೆ ಹತೋಟಿಯುಳ್ಳದ್ದಾದರೆ ಎರಡನೆಯದು ಅರಿವು ಮತ್ತು ಸಂಕಲ್ಪಗಳೆರಡನ್ನು ವ್ಯಾಪಿಸಿರುವಂಥದು. ಹಿರಣ್ಯಗರ್ಭಯೋಗವನ್ನು ಪಾತಂಜಲಯೋಗದಲ್ಲೂ, ರುದ್ರಯೋಗವನ್ನು ಶೈವಾಗಮಗಳಲ್ಲಿಯೂ ಹೇಳಲಾಗಿದೆ. ಎಲ್ಲಿ ಮೊದಲನೆಯದು ಮುಕ್ತಾಯಗೊಳ್ಳುತ್ತದೆಯೋ ಅಲ್ಲಿ ಆರಂಭವಾಗುತ್ತದೆ ಎರಡನೆಯದು.[1]

ಜೀವನ್ಮುಕ್ತನಾಗುವುದು ವೀರಶೈವನ ಪರಮಗುರಿ. ವಾಸ್ತವವಾಗಿ, ಇದು ಲಿಂಗಾಂಗಸಂಯೋಗ. ಇದನ್ನೇ ಐಕ್ಯ ಎನ್ನುವುದು. ಈ ಗುರಿಯು ಸಿದ್ಧಿ ಆತ್ಮವು ಶರಣಾಗಿ ಪರಮಾತ್ಮನಲ್ಲಿ ಲೀನವಾದಾಗ. ಇದೇ ಶಿವತ್ವ. ಇಲ್ಲಿನ ಗುರಿ ಜೀವಿ ತನ್ನ ಅಸ್ತಿತ್ವವನ್ನು ವಿಸರ್ಜಿಸುವುದಾಗಲಿ ಮೀರುವುದಾಗಲಿ ಅಲ್ಲ. ಬದಲಾಗಿ ಮಾನವತೆಯನ್ನು ದೈವತ್ವಕ್ಕೇರಿಸುವುದು ಮತ್ತು ವಿಷಯಪ್ರವೃತ್ತಿಯನ್ನು ಆಧ್ಯಾತ್ಮದತ್ತ ಒಲ್ಯೈಸುವುದು.[2] ಹೀಗೆ ಈ ಧ್ಯೇಯಸಾಧನೆಗಿರುವ ಮಾರ್ಗ ಎಂದರೆ, ಮಾನವ ಸಿದ್ಧಿ ಮತ್ತು ಉನ್ನತ ಭಕ್ತಿ. ಶಿವಯೋಗವೆಂಬ ವಿಶೇಷಯೋಗದ ಮೂಲಕ ಇದನ್ನು ಪಡೆಯಬಹುದು.

ಯೋಗವನ್ನು ಸಾಧನೆಯ ಜೊತೆಗೆ ಗುರುತಿಸಬಹುದು. ಹಲವಾರು ಸಂಪ್ರದಾಯಗಳ ವಿವಿಧ ಚಿಂತನೆಯ ಪ್ರಕಾರ ಯೋಗದ ಅನೇಕ ರೂಪಗಳನ್ನು ಕಂಡುಕೊಳ್ಳಲಾಗಿದೆ. ಯೋಗದ ಅನೇಕ ಬಗೆ ಮತ್ತವುಗಳ ಸಾಮರ್ಥ್ಯ ಮತ್ತು ಪರಿಣಾಮಗಳನ್ನು ವೀರಶೈವ ದಾರ್ಶನಿಕರು ತಮ್ಮದೇ ಆದ ರೀತಿಯಲ್ಲಿ ಪ್ರಚುರಪಡಿಸಿದ್ದಾರೆ. "ಶರಣತ್ವ" ಮತ್ತು "ಭಕ್ತಿ"ಯ ಜೊತೆಗೆ ಅವಶ್ಯಕ "ಶಕ್ತಿ"ಯನ್ನು ಆಧರಿಸಿ ರೂಪುಗೊಂಡಿರುವ ಶಿವಯೋಗವು ಆತ್ಮಸಾಕ್ಷಾತ್ಕಾರಕ್ಕೆ ಅನುವಾಗುವ ಅನೇಕ ವಿಶಿಷ್ಟ ಗುಣಗಳನ್ನು ಹೊಂದಿದೆ. ಶಿಸ್ತು ಮತ್ತು ಭಕ್ತಿಯ ಸಂಯೋಜನೆಗೆ ಇದು ಹೆಚ್ಚು ಒತ್ತುಕೊಟ್ಟಿದೆ. ಸರ್ಪಭೂಷಣ ಶಿವಯೋಗಿಯ 'ಕೈವಲ್ಯಕಲ್ಪವಲ್ಲರೀ' ಎಂಬ ಕಾವ್ಯದಲ್ಲಿ ಯೋಗದ ನಾಲ್ಕು ಬಗೆಗಳು ಮತ್ತು ಅವುಗಳ ಅಂತರ್ಗತದೋಷಗಳ ವಿವರಣೆ ಇವೆ.[3]

ದೈಹಿಕ ಮತ್ತು ಮಾನಸಿಕ ಕ್ರಿಯೆಗಳನ್ನು ನಿಯಂತ್ರಿಸುವ ಮೂಲಕ ಅಸಾಮಾನ್ಯ ಶಕ್ತಿಗಳನ್ನು ಹೊಂದುವಲ್ಲಿ ಸಮರ್ಥವಾಗಿರುವುದು "ಹಠಯೋಗ." ಇದು ಆಧ್ಯಾತ್ಮಿಕ ಮುನ್ನಡೆಯತ್ತ ಕೊಂಡೊಯ್ಯುವುದಿಲ್ಲ. ಅಲ್ಲಮಪ್ರಭು ಗೋರಕ್ಷನಿಗೆ ಉಪದೇಶಿಸುತ್ತಾ ಅವನು ಮಾನಸಿಕ ಹಾಗೂ ದೈಹಿಕವಾಗಿ ನಡೆಸುತ್ತಿದ್ದ ದೊಂಬರಾಟದ ಅದ್ಭುತಗಳನ್ನು ಕೈಬಿಡುವಂತೆ ಪ್ರೇರೇಪಿಸುತ್ತಾನೆ. ಈ ಚಟುವಟಿಕೆಗಳು ಮಾನವನನ್ನು ಬೆರಗುಗೊಳಿಸಬಲ್ಲವೇ ಹೊರತು, ಪಾರಮಾರ್ಥಿಕ ದಾರಿಯಲ್ಲಿ ಕರೆದೊಯ್ಯಲಾರವು. ಕುರುಡನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಹೇಗೆ ಕಾಣಲಾರನೋ ಹಾಗೆಯೇ ಹಠಯೋಗಸಾಧಕರ ಮರುಳುತನವನ್ನು ಅವರಿಗೆ ಅರಿವು ಮಾಡಿಕೊಡುವುದೂ ಕಷ್ಟಸಾಧ್ಯ.[4] ಮಂತ್ರಯೋಗಾರಾಧಕರ ಬಗೆಗೂ ಇದನ್ನೇ ಹೇಳದೆ ವಿಧಿಯಿಲ್ಲ. ಓಂ ನಮಃಶಿವಾಯ, ಮುಂತಾದ ಮಂತ್ರಗಳನ್ನು ಪಠಿಸುವ ಮಂತ್ರಯೋಗಸಾಧಕರು ದಿನದ ವಿಶಿಷ್ಟ ಸಮಯಗಳಲ್ಲಿ ಆಸನಗಳನ್ನಭ್ಯಸಿಸುತ್ತಾರೆ. ಈ ಬಗೆಯ ಸಾಧನೆ ಅವರ ಮನಸ್ಸಿನಲ್ಲಿ ಒಂದು ತರದ ಯಾಂತ್ರಿಕ ಬೆಳವಣಿಗೆಯನ್ನುಂಟುಮಾಡುವುದೇ ಹೊರತು ಪರಮಗುರಿಯಾದ ಚಿನ್ಮಯ ಮುನ್ನಡೆಯನ್ನಲ್ಲ.[5] ಲಯಯೋಗ ಸಾಧಕರು ದೇವರ ಅಥವಾ ಯಾವುದೇ ವಸ್ತುವಿನ ಪ್ರತಿಮೆಯ ಮೇಲೆ 'ಇಡಾ', 'ಪಿಂಗಳಾ' ಮತ್ತು 'ನಾಡೀ'[6] ಮುಂತಾದ ಭೌತಿಕ ಪ್ರಕ್ರಿಯೆಗಳಿಂದ ತಮ್ಮ ಮನಸ್ಸನ್ನು ಕೇಂದ್ರೀಕರಿಸುತ್ತಾರೆ. ಈ ರೀತಿಯ ಮನಃಕೇಂದ್ರೀಕರಣ ಜೈನರ ಅರ್ಥಧ್ಯಾನವನ್ನು ಹೋಲುತ್ತದೆ. ಈ ಬಗೆಯ ಯೋಗ

---

[1] *Viraśaiva*, A Quarterly Journal of all India Viraśaiva Mahāsabhā, Dharwar Vol II, No 7. Dec 1961. Artical by Shree Kumaraswamy of Navakalyāna Matha, Dharwar.

[2] Shree Kumaraswamy, Navakalyana matha, Dhrrwar, *Viraśaiva philosophy and Mysticism*, p. 52

[3] Sri Sarpabhusana Sivayogi : *Kaivalyakalpavallari-III, Yogaprasthāna*

[4] *Prabhulingalile* of Cāmarasa, Edited by Basavanal, *Goraksaṇagati*, 19–stanza 20. (Kannada) *tannanariyada mandamatigoḷiginnu peraranthastavembudu Kaṇṇakanoda Kuruda Kannadividida teradante....*

[5] *Prabhulingalile*, gati 19. Stanza 20

[6] *Jhanajyōti*, Edited by shri Santalingaswamy and prof, B.C. Javali (1963) p. 24. Yoga and Śiva-yoga. (Kannada) Also refer to śivayoga pradipike of Shri Channa Sadaśiva Yōgindra with commentary Viraśaiva grantha prakaśika, No. 9 (1913) p. 14

ಸಾಧನೆ ಕೂಡ ಆತ್ಮಸಿದ್ಧಿಗೆ ನೆರವಾಗುವುದಿಲ್ಲ. ಈ ವಿಧಾನದಿಂದ ಮೋಕ್ಷಸಾಧನೆ ದುರ್ಲಭ.[1] ಕಾಡಿನಲ್ಲಿ ದೇಹ ದಂಡನೆಗೆ ತೊಡಗಿದ್ದ ಕೆಲವು ಸಂನ್ಯಾಸಿಗಳನ್ನು ಅಲ್ಲಮಪ್ರಭು ಎಚ್ಚರಿಸಿ ಈ ಬಗೆಯ ಸಾಧನೆಗಳಿಂದ ದೂರವಿರುವಂತೆ ತಿಳಿಹೇಳಿದ್ದಾನೆ.[2]

ಪತಂಜಲಿಯ ಯೋಗವನ್ನು ರಾಜಯೋಗವೆಂದು ಪರಿಗಣಿಸಲಾಗಿದೆ. ಇದರಲ್ಲಿ, ಆತ್ಮಸಿದ್ಧಿ ಹೊಂದುವುದು ಚಿತ್ತದ ಬಾಹ್ಯಸಂಬಂಧಿ ಬಳಕೆಯಿಂದಲ್ಲ. ಬದಲಾಗಿ ಅದರ ಕ್ರಿಯೆಗಳನ್ನು ಅದುಮಿಹಿಡಿಯುವುದರಿಂದ. ಈ ಧ್ಯೇಯ ಸಾಧನೆಯ ಮಾರ್ಗದ ಅಡ್ಡಿ ಆತಂಕಗಳನ್ನು ತೊಡೆದುಹಾಕಲು, ಮನಸ್ಸಿನ ಎಲ್ಲಾ ಸ್ತರಗಳನ್ನು ಮತ್ತು ಘಟನೆಗಳನ್ನು ಬಿಗಿಹಿಡಿಯಬೇಕಾಗುತ್ತದೆ. ಪತಂಜಲಿಯಿಂದ ಪ್ರತಿಪಾದಿಸಲ್ಪಟ್ಟಿರುವ ಎಂಟು ಬಗೆಯ ಯೋಗಗಳಲ್ಲೆಲ್ಲಾ ಪರಮ ಗುರಿಯಾದ 'ಸಮಾಧಿ'ಯನ್ನು ಹೊಂದಲು ಅವಶ್ಯವಾದ ವಿಧಾನಗಳ ನಿರೂಪಣೆಯಿದೆ. ಇವುಗಳೆಲ್ಲ ಮನೋನಿಗ್ರಹದ ವಿಜ್ಞಾನ ಹಂತಗಳಾಗಿ ಬೆಳೆದಿವೆ. ಮಾನವನಿಗೆ ದೇಹಾರೋಗ್ಯವೊಂದೇ ಪ್ರಮುಖವಲ್ಲದಿದ್ದರೂ, ಇದೂ ಆವಶ್ಯಕ ಸ್ಥಿತಿಗಳಲ್ಲಿ ಒಂದು ಎಂಬ ನಿಲುವಿನ ಬಗೆಗೆ ಪತಂಜಲಿಯ ಯೋಗದಲ್ಲಿಯೇ ಅಂತೆಯೇ ಜೈನರಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಇದೊಂದು ಗುರಿಯನ್ನು ಮುಟ್ಟಲಿರುವ ಸಾಧನ ಎಂದೇ ನಾವದನ್ನು ಪರಿಗಣಿಸಬೇಕಾಗಿದೆ. ಚಿನ್ಮಯ ಶಕ್ತಿಯಾದ ದೈವಕ್ಕೆ ಶರಣಾಗುವುದನ್ನು ಕೂಡ ಚಿತ್ತೈಕಾಗ್ರತೆಯ ಒಂದು ಉಪಯುಕ್ತ ಮೆಟ್ಟಿಲು ಎಂದು ತಿಳಿಯಬೇಕೇ ವಿನಃ, ಅದನ್ನೇ ಅಂತ್ಯವೆಂದಲ್ಲ. ದೇವರೆಂಬ ಆದರ್ಶರೂಪ ಕೂಡ ಪತಂಜಲಿಗೆ ಒಂದು ಉಪಯುಕ್ತ ಕಲ್ಪನೆ.[3]

ರಾಜಯೋಗ ಹಲವಾರು ಧ್ಯೇಯಧೋರಣೆಗಳನ್ನು ಹೊಂದಿದ್ದರೂ, ಶಿವಯೋಗ ಇದುವರೆಗೂ ಪ್ರಸ್ತಾಪಿಸಿದ ನಾಲ್ಕು ಯೋಗಗಳಿಗಿಂತ ಭಿನ್ನವಾದುದು. ಶಿವಯೋಗದ ಮೂಲತತ್ವಗಳಿವು :

(೧) ದೇವರ ಅಸ್ತಿತ್ವದಲ್ಲಿ ನಂಬಿಕೆ ಮತ್ತು ಲಿಂಗಾಂಗಸಂಯೋಗ (ಐಕ್ಯ)ವೇ ಜೀವನದ ಪರಮಗುರಿ ಎಂಬ ಧ್ಯೇಯ.

(೨) ಭಗವಂತನಲ್ಲಿ ಶರಣಾಗುವುದು ಮತ್ತು ಭಕ್ತಿ ಮುಕ್ತಿಯ ಮಾರ್ಗಗಳು.

(೩) ಭಕ್ತನನ್ನು ಯಶಸ್ವಿಯಾಗಿ ಗುರಿ ತಲುಪಿಸುವುದು ಶಕ್ತಿ. ಆಗಲೇ ತಿಳಿಸಿರುವಂತೆ, ಶಿವಯೋಗ, ಭಕ್ತಿ ಮತ್ತು ಮಾನವನ ಸಂಕಲ್ಪಪೂರ್ವಕ ಯತ್ನದಿಂದ ಆತ್ಮಸಿದ್ಧಿ ಪಡೆಯುವಂಥದು.

(೪) ಪತಂಜಲಿಯ ಅಷ್ಟಾಂಗಯೋಗವನ್ನು ಕೂಡ ಅವಶ್ಯವಿದ್ದಷ್ಟು ಉಪಯೋಗಿಸಿಕೊಳ್ಳಲಾಗಿದೆ. ಕೊನೆಯ ಉದ್ದೇಶ ಐಕ್ಯಸ್ಥಲ. ಇದೇ ಭಕ್ತ ಹೊಂದಬೇಕಾದ ಆದರ್ಶ. ಇದನ್ನು ಹೊಂದಲು ಸಾಕಷ್ಟು ದೈಹಿಕ ಮತ್ತು ಮಾನಸಿಕ ಪರಿಶ್ರಮ ಅವಶ್ಯ.

ಹೀಗೆ, ಶಿವಯೋಗದ ಮೊದಲ ತತ್ವ ದೇವರ ಅಸ್ತಿತ್ವದಲ್ಲಿ ನಂಬಿಕೆಯುಳ್ಳದ್ದಾದರೆ, ಅದರ ಅಂತ್ಯಾದರ್ಶ ದೇವರಲ್ಲಿ ಐಕ್ಯವಾಗುವಂಥದು. ಪತಂಜಲಿಯ ಯೋಗದಲ್ಲಿ ಅಭಿವ್ಯಕ್ತವಾಗಿರುವ ಅಂತ್ಯೋದ್ದೇಶ ಪ್ರಕೃತಿಯ **(matter)** ಬಂಧನದಿಂದ ಪುರುಷನನ್ನು **(self)** ಬಿಡುಗಡೆ ಮಾಡುವುದು. ದೇವರೆಂಬ ಕಲ್ಪನೆ 'ಸಾಂಖ್ಯ'ರ ಅಖಂಡ ಭಾಗವೇನೂ ಅಲ್ಲ. ಅಂತೆಯೇ ಯೋಗಸಿದ್ಧಾಂತದಲ್ಲಿ ಕೂಡ. ದೇವರ ಮೇಲಿನ ಭಕ್ತಿ ಮತ್ತು ಅವನಲ್ಲಿ ಶರಣಾಗುವುದು ಶಿವಯೋಗದ ಸಮಗ್ರ ಘಟಕಾಂಶ. ಹೀಗಿದ್ದೂ ಶರಣಾಗುವುದಕ್ಕೋಸ್ಕರ ಸ್ವತಃ ನಾಶವಾಗಿ ಆತ್ಮಾಹುತಿ ಗೊಳ್ಳಬೇಕಾದುದಿಲ್ಲ. ಈ ಬಗೆಯ ಶರಣಾಗುವುದರಲ್ಲಿ ಮೊದಮೊದಲು ಶರೀರತ್ಯಾಗ, ದೇಹಾವೃತಿ ಆಗಿರುವುದುಂಟು. ಬೇಡರ ಕಣ್ಣಪ್ಪನ ಕಥೆ ಆರಂಭಕಾಲದ ಭಕ್ತಿ ಸಾಹಿತ್ಯದ ಈ ಬಗೆಯ ಶರಣತೆಗೆ ಸಾಕ್ಷಿಯಾಗಿದೆ. ಶಿವಯೋಗ ಈ ಬಗೆಯ ಅಭಿವ್ಯಕ್ತಿಗಳನ್ನು ಅನುಮತಿಸುವುದಿಲ್ಲ. ಅಲ್ಲಮಪ್ರಭು ಗೊಗ್ಗಯ್ಯನಿಗೆ ಮಾರ್ಗದರ್ಶನ ಮಾಡುತ್ತಾ 'ಪ್ರಸಾದ'ವು ಸರಿಯಾದ ಮಾರ್ಗವೆಂದೂ 'ಆಹುತಿ' ತಪ್ಪುದಾರಿಯೆಂದೂ ಬೋಧಿಸಿದ್ದಾನೆ. ಇದರಿಂದಾಗಿ ವೀರಶೈವರಲ್ಲಿ ಕೂಡ ಅಹಿಂಸೆಯೆಂಬ ಮೂಲತತ್ವಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ ಎಂಬುದು ತಿಳಿದುಬರುತ್ತದೆ. ದೈವಕ್ಕೆ ಶರಣಾಗುವುದರಿಂದ ಅಹಮಿಕೆಗಳು ಬಯಲಾಗುತ್ತವೆ. ಬಸವೇಶ್ವರನು ಅಲ್ಲಮನಿಗೆ ತೋರಿದ ನಮ್ರತೆಯಲ್ಲಿ ಇವನ್ನು ಗುರುತಿಸಬಹುದು.[4]

---

1 *Kaivalya Kalpavallari* of Sarpabhūsana Sivayogi 12, Yoga Prati-Pādana-Sthala-pallavi.

2 *Prabhulingalile :* Allamaprabhu, gati 20-32, adopted in the prose edition by prof. B. C. Javali and Mallabadi (1962)

3 Refer to *Prabhulingalile* Ed : S. S. Basavanal 1956 II, pp. 131-136 for defailes description.

4 *Prabhulingalile :* Ed. S. S. Basavanal 1956

ಶಿವಯೋಗದಲ್ಲಿ 'ಸಂಕಲ್ಪಶಕ್ತಿ' ಆಧ್ಯಾತ್ಮಿಕ ಮುನ್ನಡೆ ಮತ್ತು ಮೋಕ್ಷಸಾಧನೆಗೆ ಅತ್ಯವಶ್ಯವಾದುದು. ಇದರಲ್ಲಿ ದೈಹಿಕ ಮತ್ತು ಮಾನಸಿಕ ಸಾಧನೆಗಳನ್ನು ನಿರಾಕರಿಸಲಿಲ್ಲ. ಬದಲಾಗಿ ಅವನ್ನು ಪರಿವರ್ತಿಸಿ ಅತೀತವಾಗಿಸಲಾಗಿದೆ. ಚಿತ್‌ಶಕ್ತಿಯಿಂದ ದೈಹಿಕ ಮತ್ತು ಮಾನಸಿಕವಾಗಿ ಪವಿತ್ರಗೊಳಿಸಿ ದೈವೀಕರಿಸಲಾಗಿದೆ. ಪೀಯೂಷಗ್ರಂಥಿಯ ಮೂಲಕ ಸಂಕಲ್ಪಶಕ್ತಿಯನ್ನು ಅಭಿವ್ಯಕ್ತಿಸಲಾಗಿದೆ. ಈ ಪೀಯೂಷಗ್ರಂಥಿಯ ಸಮಗ್ರ ಬಲಾಭಿವ್ಯಕ್ತಿಯು ಭಕ್ತನು ಪರಮಾತ್ಮನಲ್ಲಿ ಐಕ್ಯವಾಗಲು ಬೇಕಾಗುವ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸಂಪೂರ್ಣತ್ವವನ್ನು ಉಂಟುಮಾಡುತ್ತದೆ.[1] ಶ್ರೀ ಅರವಿಂದರ ಸಮಗ್ರಯೋಗದಲ್ಲಿಯೂ ಆತ್ಮಸಿದ್ಧಿಕಾರ್ಯದಲ್ಲಿ ಸಂಕಲ್ಪಶಕ್ತಿಯ ಆವಶ್ಯಕತೆಯನ್ನು ಒತ್ತಿ ಹೇಳಲಾಗಿದೆ. ಸಮಗ್ರಯೋಗದಲ್ಲೆಂತೋ ಅಂತೆಯೇ ಶಿವಯೋಗದಲ್ಲೂ ದೈಹಿಕ ಮತ್ತು ಮಾನಸಿಕ ಸಾಧನೆಗಳನ್ನು ತಿರಸ್ಕರಿಸಿಲ್ಲ. ಆತ್ಮಪಾವಿತ್ರ್ಯಗಳಿಕೆಗೋಸ್ಕರ ಪತಂಜಲಿಯ ಅಷ್ಟಾಂಗಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಸಾಧ್ಯವಾದ ರಾಜಯೋಗದ ಎಂಟು ಸ್ತರಗಳು ಮತ್ತು ಅವುಗಳ ಕಠಿಣ ವಿಧಾನಗಳನ್ನೆಲ್ಲಾ ಅನುಸರಿಸುವ ಅಗತ್ಯವಿಲ್ಲ. ದೇವರಲ್ಲಿ ಲೀನವಾಗಬೇಕೆಂಬ ಆದರ್ಶಮಾರ್ಗವನ್ನು ಅವು ಬೇರೆಡೆಗೆ ತಿರುಗಿಸಿಯಾವು. ಬೇಕಾಗಿರುವುದು, ಸಾಮಾನ್ಯ ಮನುಷ್ಯ ತನ್ನ ಕುಟುಂಬದೊಂದಿಗೆ ಅನುಸರಿಸುವಂಥ ಸರಳರೂಪದ ಯೋಗ. ಈ ಬಗೆಯ ಸಾಧನೆ ತ್ರಾಟಕದ ಮೂಲಕ ಮನಸ್ಸನ್ನು ಕೇಂದ್ರೀಕರಿಸುವುದರಿಂದ ಮತ್ತು ಇಷ್ಟಲಿಂಗಪೂಜಾಕರ್ಮದಿಂದ ಸಾಧ್ಯ.[2]

ಶಿವಯೋಗದ ಗುಣಲಕ್ಷಣಗಳನ್ನು 'ಶಿವಯೋಗದರ್ಪಣ'ದಲ್ಲಿ ವಿವರಿಸಲಾಗಿದೆ. ಶಿವಯೋಗದ ನಾಲ್ಕು ರೂಪಗಳನ್ನು ಇಲ್ಲಿ ಹೆಸರಿಸಲಾಗಿದೆ : (೧) ಶಿವಜ್ಞಾನ, (೨) ಶಿವಧ್ಯಾನ, (೩) ಶಿವಪೂಜಾ (೪) ಶಿವವ್ರತ ಮತ್ತು ಶಿವಾಚಾರ. ನೈಜಪೂಜೆ ಮತ್ತು ಮನೋನಿಗ್ರಹವನ್ನುಳ್ಳ 'ಸಮ್ಯಕ್‌ನಾದಾನುಸಂಧಾನ'ವನ್ನು ಆಚರಿಸುವುದರ ಮೂಲಕ ಶಿವಯೋಗವನ್ನು ಪಡೆಯುವುದು ಸಾಧ್ಯ. ನಾದದಲ್ಲಿ ಪಂಚರೂಪಗಳಿವೆ. 'ಓಂ' ಎಂಬ ಸಂಜ್ಞೆ ತುಂಬ ವಿಶಿಷ್ಟವಾದುದು. ಶಾಂಭವೀಮುದ್ರಾಮೂಲಕವಾದ ಯೋಗ ಶಿವಯೋಗದ ಒಂದು ವಿಶಿಷ್ಟ ಹಂತ. ಈ ಗ್ರಂಥದಲ್ಲಿ ವಿಶ್ಲೇಷಣೆಗೊಂಡಿರುವ ಶಿವಯೋಗಾಚರಣೆಯ ವಿವರಣೆ ಸದ್ಯಕ್ಕಿಲ್ಲಿ ಅಪ್ರಕೃತ.

ಒಟ್ಟಿನಲ್ಲಿ, ಶಿವಯೋಗದ ಪ್ರಾಮುಖ್ಯತೆ ಸಾಕ್ಷಾತ್ ಶಿವನಿಗೆ ಮಾತ್ರವೇ ಗೊತ್ತು ಉಳಿದವರಿಗಲ್ಲ ಎಂದು ಹೇಳಲಾಗಿದೆ. ಈ ಯೋಗ ಭವ್ಯ ಅನುಭವವೊಂದನ್ನು ದೊರಕಿಸಿಕೊಡುತ್ತದೆ.[3] ಹೀಗಾಗಿ ಇದಕ್ಕೆ 'ಶಿವಾನುಭವಯೋಗ' ಎಂಬ ಇನ್ನೊಂದು ಹೆಸರೂ ಉಂಟು. ಈ ನಿಟ್ಟಿನಲ್ಲಿ ಪತಂಜಲಿಯಿಂದ ನಿರೂಪಿತಯೋಗಕ್ಕೂ ಶಿವಯೋಗಕ್ಕೂ ಕೆಲವು ಸಾಮ್ಯತೆ ಇದೆ ಎಂದರೆ ತಪ್ಪಾಗಲಾರದು. ಏಕೆಂದರೆ ಯೋಗದ ಪ್ರಾರಂಭ ಪಟ್ಟಗಳನ್ನು ಎರಡೂ ಒಪ್ಪುತ್ತವೆ. ಆದರೆ ಮಾನವನಿಗೆ ಮೋಕ್ಷಸಾಧನಾವಕಾಶವನ್ನು ದೊರಕಿಸಿಕೊಟ್ಟಿರುವುದರಿಂದ ಶಿವಯೋಗವನ್ನು ಪತಂಜಲಿಯೋಗದ ಒಂದು ಸುಧಾರಿತ ರೂಪ ಎನ್ನಬಹುದೇನೋ. ಇದು ಯೋಗದ ಅತ್ಯುನ್ನತ ಆಧ್ಯಾತ್ಮಾನುಭವಕ್ಕೆ ಹೆಚ್ಚಿನ ಪ್ರಾಮುಖ್ಯತೆ ಮತ್ತು ಒಲವನ್ನು ತೋರಿಸಿದೆ.[4]

ಜೈನಯೋಗ ಮತ್ತು ಶಿವಯೋಗ ಎರಡರ ಗುರಿಯೂ ಪರಿಪೂರ್ಣತೆಯತ್ತಲೇ ಎಂಬುದು ಇದುವರೆಗಿನ ವಿಶ್ಲೇಷಣಾಂಶ. ಪ್ರಾಯೋಗಿಕ ಹಾಗೂ ಆಗಂತುಕ ಜೀವನದಿಂದ ಬಿಡುಗಡೆಹೊಂದುವುದು ಮತ್ತು ಪರಿಪೂರ್ಣತ್ವವನ್ನು ಸಂಪಾದಿಸುವ ವಿರುದ್ಧ ಮತ್ತು ಪರವಾದ ಎರಡು ಘಟಕಾಂಶಗಳೇ ಅಂತಿಮಗುರಿಯಾದ ಆತ್ಮಸಾಕ್ಷಾತ್ಕಾರದಲ್ಲಿರುವಂಥವು.

ಜೈನರ ರೀತಿ ವೈಯಕ್ತಿಕವಾದದ್ದು; ಪರುಷವಾದದ್ದು. ದೈಹಿಕ ಮತ್ತು ಮಾನಸಿಕ ಅನುಷಂಗಗಳನ್ನು, ಉನ್ನತಿಯನ್ನು ಸಾಧಿಸುವಲ್ಲಿ ಅವಶ್ಯ ಕಂಡರೆ ಉಪಯೋಗಿಸಿಕೊಳ್ಳಬಹುದು ಇಲ್ಲವೆ ಬಿಡಬಹುದು : ನದಿಯನ್ನು ದಾಟಲು ದೋಣಿಯನ್ನು ಉಪಯೋಗಿಸುವುದು ಅವಶ್ಯ ಹಾಗೂ ಅನಿವಾರ್ಯ. ಆದರೆ ದಡ ತಲುಪಿದ ಮೇಲೂ ಮರುಕ ತೋರಿ ದೋಣಿಯನ್ನು ಜೊತೆಯಲ್ಲಿ ಕೊಂಡೊಯ್ಯುವುದು ಸಾಧುವೇ. ಆದುದರಿಂದ ಜೈನರು ಮೋಕ್ಷ ಸಂಪಾದಿಸು

---

[1] *Viraśaiva :* Quarterly (Kannada) Vol II, No. 7, article by shee Kumaraswamy of Navakalyana matha.

[2] Ibid, Also refer to artical by prof. Vṛsabhēndraswamy of Karnataka university in Vol II. No. 6. prof. Vrsabhendraswamy has suggested a new interpretation of the word 'garagasa' as canalising the breadth through the throat to the centre of the brain.

[3] *Prabhulingalile*, p. 200

[4] *Ṣaṇmukha Sivayogi :* As quoted in Jñānajyoti : 'na bhedah Sivayogasya rajayogasya tattvatah.'

ವಲ್ಲಿ ದೇಹವನ್ನು ನಿಗ್ರಹಿಸಲಿಲ್ಲ, ತಿರಸ್ಕರಿಸಲಿಲ್ಲ ಎಂಬುದೇ ಸರಿಯಾದ ವಿಶ್ಲೇಷಣೆ. ಅವರಿಗೆ ಯೋಗಕ್ಕೆ ಚಿತ್ತವೃತ್ತಿ ನಿರೋಧ ಎಷ್ಟು ಅಗತ್ಯವೋ ದೇಹ ಮತ್ತದರ ಸಂರಕ್ಷಣೆ ಅಷ್ಟೇ ಅಗತ್ಯ.

ವೀರಶೈವನ ಏಕೈಕ ಧ್ಯೇಯ ಪರಮಾತ್ಮನಲ್ಲಿ ಐಕ್ಯನಾಗುವುದು. ದೇವರಲ್ಲಿ ನಂಬಿಕೆ ಮತ್ತು ಅವನಿಗೆ ಶರಣಾಗುವುದೇ ಶಿವಯೋಗದ ಮೂಲತತ್ವಗಳು. ಆದರೆ ಜೈನರು ದೇವರೆಂಬ ಕಲ್ಪನೆಯನ್ನು ನಂಬರು. ದೈವಾನುಗ್ರಹಕ್ಕೆ ಅವರಲ್ಲಿ ಬೆಲೆಯಿಲ್ಲ. ಪ್ರತಿಯೊಂದು ಆತ್ಮವೂ ದೇವಾಂಶವನ್ನುಳ್ಳದ್ದು. ಅವುಗಳ ಏಳುಬೀಳಿಗೆ ಅವುಗಳ ಕ್ರಿಯೆಯೇ ಕಾರಣ ಎಂಬುದವರ ನಂಬಿಕೆ.

ವ್ಯಕ್ತಿಯ ಮೋಕ್ಷಕ್ಕೆ ಸಂಬಂಧಿಸಿದ ಆಧ್ಯಾತ್ಮ ವಿಚಾರ ಈ ಎರಡು ಧರ್ಮಗಳಲ್ಲಿ ವೈದೃಶ್ಯವಾಗಿದೆ. ವೀರಶೈವ, ಪರಮಾತ್ಮನಲ್ಲಿ 'ಐಕ್ಯ'ವಾಗುವುದೇ ಪರಮಗುರಿ ಎಂದು ನಂಬಿದರೆ, ಜೈನ, ಪ್ರತಿಯೊಂದು ಆತ್ಮವೂ ದೈವೀಯ ವ್ಯಕ್ತಿತ್ವವುಳ್ಳದ್ದೆಂದೇ ಭಾವಿಸುತ್ತಾನೆ. ಪ್ರಾಯಶಃ ಈ ಭಾವನೆಯೇ ಜೈನರು ಅಷ್ಟಾಂಗಯೋಗದ ವಿಧಾನಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದಕ್ಕೆ ಕಾರಣವಿರಬಹುದು.

ಚಾರ್ವಾಕರನ್ನುಳಿದಂತೆ ಉಳಿದ ಎಲ್ಲ ಭಾರತೀಯ ತತ್ವಶಾಸ್ತ್ರಜ್ಞರ ಪ್ರಕಾರ ಮಾನವಜೀವಿಯ ಕಡೆಯಾಸೆ ಇಹದ ಭೋಗಬಂಧನದಿಂದ ಬಿಡುಗಡೆಹೊಂದಿ ಮೋಕ್ಷ ಸಂಪಾದಿಸುವುದೇ ಆಗಿದೆ. ಮೋಕ್ಷ, ಒಂದು ಆದರ್ಶ. ಅದನ್ನು ಪಡೆಯುವುದು ಕಷ್ಟ. ಕೆಲವರು ಅದನ್ನು ಪಡೆದಿದ್ದಾರೆ. ಹೀಗೆ ಮೋಕ್ಷವನ್ನು ಪಡೆದ ವ್ಯಕ್ತಿಯ ಹಿಂದಿದ್ದ ಸಾಮಾಜಿಕ ರಚನೆ ಮತ್ತು ಅದರ ಬೆಳಕಿನಲ್ಲಿ ಆ ವ್ಯಕ್ತಿ ಬೆಳೆದ ಬಗೆ ಅವಗಾಹನೀಯ. ಆದುದರಿಂದ, ಈ ಹಿನ್ನೆಲೆಯನ್ನರಿಯದೆ ಒಂದು ಬಗೆಯ ಯೋಗವನ್ನು ಇನ್ನೊಂದರೊಡನೆ ತುಲನೆ ಮಾಡುವುದು ದೋಷಪೂರ್ಣಕಾರ್ಯ. ಈ ಸಮಸ್ಯೆಯನ್ನು ಜೀವನದ ಯಥಾದೃಷ್ಟಿಯಿಂದ ಪರಿಶೀಲಿಸಬೇಕು. ಇದಕ್ಕಿಂತ ಹೆಚ್ಚಾಗಿ, ಯೋಗವನ್ನು ಅನುಸರಿಸದ ಹೊರತು ಅದರ ತುಲನಾತ್ಮಕ ವೈಶಿಷ್ಟ್ಯಗಳನ್ನು ತಿಳಿಯುವುದಾಗಲಿ, ವಿಶ್ಲೇಷಿಸುವುದಾಗಲಿ ಕಷ್ಟಸಾಧ್ಯ.[1]

---

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ ॥

ಸಿದ್ಧಾಂತ ಶಿಖಾಮಣಿ

* * *

ಅಭಿವಾದನಸೀಲಿಸ್ಸ ನಿಚ್ಚಂ ವದ್ಧಾಪಚಾಯಿನೋ ।
ಚತ್ತಾರೋ ಧಮ್ಮಾ ವಡ್ಢಂತಿ ಆಯು ವಣ್ಣೋ ಸುಖಂ ಬಲಂ ॥
ಯೋ ಚ ವಸ್ಸಸತಂ ಜೀವೇ ಅಪಸ್ಸಂ ಧಮ್ಮಮುತ್ತಮಂ
ಏಕಾಹಂ ಜೀವಿತಂ ಸೇಯ್ಯೋ ಪಸ್ಸತೋ ಧರ್ಮಮುತ್ತಮಂ ॥

'ಧಮ್ಮಪದ'

---

1 *Ṣaṇmukha Sivayogi*: Akhaṇḍēśvara Vacana: Ratnākaravarni emphasises the impossibility of understanding yoga without living it.

# ವೀರಶೈವಧರ್ಮ ಮತ್ತು ಕಾಶ್ಮೀರಶೈವಧರ್ಮ

**ಆಂಗ್ಲ ಮೂಲ : ಜೆ. ರುದ್ರಪ್ಪ**
**ಅನುವಾದ : ಪ್ರಧಾನ ಗುರುದತ್ತ**

**ಪೀಠಿಕೆ**

ಶೈವಧರ್ಮ ಜಗತ್ತಿನ ಅತ್ಯಂತ ಪ್ರಾಚೀನ ಜೀವಂತಧರ್ಮಗಳಲ್ಲಿ ಒಂದು. ಲಿಂಗದ ರೂಪದಲ್ಲಿ ಶಿವನ ಆರಾಧನೆಯೊಂದಿಗೆ ಅದನ್ನು ಸಮೀಕರಿಸಲಾಗಿದೆ. ಆರ್ಯಪೂರ್ವವೆಂದು ಪರಿಗಣಿಸಲಾಗಿರುವ ಸಿಂಧೂ ಕಣಿವೆಯ ನಾಗರಿಕತೆಯಷ್ಟು ಮೊದಲಿಗೇ ಶೈವಪಂಥ ಹಾಗೂ ಲಿಂಗೋಪಾಸನೆ ಅಸ್ತಿತ್ವದಲ್ಲಿತ್ತು ಎಂಬುದನ್ನು ಹರಪ್ಪ ಮತ್ತು ಮೊಹೆಂಜದಾರೊ ಉತ್ಖನನಗಳಲ್ಲಿ ದೊರೆತಿರುವ ಅವಶೇಷಗಳು ತೋರಿಸಿಕೊಟ್ಟಿವೆ. ಅದರ ಪ್ರಾಚೀನತೆ ಮತ್ತು ಪ್ರಭಾವ-ವ್ಯಾಪ್ತಿಯ ವಿಚಾರ ಮಾತ್ರವಲ್ಲದೆ, ಪ್ರಬಲ ತತ್ವಶಾಸ್ತ್ರವನ್ನು ಹೊಂದಿದ್ದ ಮಹಾಧರ್ಮವಾಗಿ, ಜೀವಂತ ಧರ್ಮವಾಗಿ ಭಾರತದಲ್ಲಿ ಶೈವಧರ್ಮ ಪ್ರಚುರವಾಗಿತ್ತೆಂಬುದು ನಮಗೆ ಚೆನ್ನಾಗಿ ತಿಳಿದಿದೆ. ಭಾರತದಲ್ಲಿದ್ದ ಜೀವಂತ ಧರ್ಮವಾಗಿ ಶೈವಧರ್ಮವನ್ನೇ ಸ್ಥೂಲವಾಗಿ ಮೂರು ಬಗೆಗಳಲ್ಲಿ ವರ್ಗೀಕರಿಸಬಹುದು: ಉತ್ತರದಲ್ಲಿ ಪ್ರಚುರವಾಗಿದ್ದ ಕಾಶ್ಮೀರಶೈವಧರ್ಮ, ದಕ್ಖನ್, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಪ್ರಚುರವಾಗಿದ್ದ ವೀರಶೈವ ಧರ್ಮ ಹಾಗೂ ತಮಿಳುನಾಡಿನಲ್ಲಿ ಪ್ರಚುರವಾಗಿದ್ದ ಶೈವಸಿದ್ಧಾಂತ—ಇವೇ ಆ ಮೂರು ಬಗೆಗಳು. ಈ ಮೂರು ಶಾಖೆಗಳಲ್ಲಿ ಕೆಲವೊಂದು ತತ್ತ್ವ ಮತ್ತು ಆಚರಣೆಗಳಿಗೆ ಸಂಬಂಧಿಸಿದಂತೆ ಆಂತರಿಕವಾಗಿ ವ್ಯತ್ಯಾಸಗಳು ಕಂಡುಬರುತ್ತವೆಯಾದರೂ, ಈ ಮೂರೂ ಶಾಖೆಗಳಲ್ಲಿ ಕೆಲವೊಂದು ಮೂಲಭೂತ ತತ್ತ್ವಗಳು ಕಾರ್ಯಶೀಲವಾಗಿರುವುದನ್ನು ನಾವು ಕಾಣುತ್ತೇವೆ. ಶೈವಾಗಮಗಳ ಹಾಗೂ ಉದಾತ್ತಚೇತನಗಳ ಅಥವಾ ವಿದ್ವಾಂಸರ ತರ್ಕ ಮತ್ತು ಒಳ ಅರಿವಿನ ಅನುಭವಗಳ ನೆಲೆಗಟ್ಟಿನ ಮೇಲೆ ಅವುಗಳನ್ನು ಸ್ಥಾಪಿಸಲಾಗಿದೆ.

ಕಾಶ್ಮೀರಶೈವಧರ್ಮ ಮತ್ತು ವೀರಶೈವಧರ್ಮಗಳ ಅಧ್ಯಾತ್ಮಶಾಸ್ತ್ರ ಅಭಿನ್ನವಾಗಿದೆಯಾದರೂ, ಸಮರ್ಥ ವಿದ್ವಾಂಸರು ಮುಂದಿರಿಸಿರುವ ವ್ಯಾಖ್ಯೆ ಕೆಲವೊಂದು ನಿರ್ಣಾಯಕಾಂಶಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನವಾಗಿರುವುದನ್ನು ನಾವು ಕಾಣುತ್ತೇವೆ.

ವೀರಶೈವಧರ್ಮವನ್ನು ಶಿವಾದ್ವೈತವೆಂದು ಕರೆಯಲಾಗಿದೆ. ಶಿವನೇ ಪರಮಸತ್ಯವೆಂದೂ, ಎಲ್ಲವನ್ನೂ ಒಳಗೊಳ್ಳುವ ವಿಶ್ವಚೇತನವೆಂದೂ, ಭೌತಿಕ ಪ್ರಪಂಚದಲ್ಲಿ ನಾವು ಕಾಣುವ ಎಲ್ಲ ನಾನಾತ್ವವೆಲ್ಲ ನಿಗೂಢರೂಪದಲ್ಲಿ ಅವನಲ್ಲಿ ಅಡಗಿದೆಯೆಂದೂ, ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನಿಂದಲೇ ಈ ನಾನಾತ್ವವೆಲ್ಲ ಬುಗ್ಗೆಯೊಡೆದು ಬರುತ್ತದೆಂದೂ, ಈ ನಿಗೂಢ ನಾನಾತ್ವ ಬಹಿರಂಗಗೊಂಡಾಗಲೂ ಅಥವಾ ಸೂಕ್ಷ್ಮವಾದುದು ಸ್ಥೂಲವಾಗಿ ಪರಿಣಮಿಸಿದಾಗಲೂ ಅವನಿಂದ ಹೊರತಾದುದಾಗಿ ಅಥವಾ ಪ್ರತ್ಯೇಕವಾಗಿ ಉಳಿಯುವುದಿಲ್ಲವೆಂದೂ ಭಾವಿಸಿರುವುದೇ ಇದಕ್ಕೆ ಕಾರಣ. ಅದನ್ನು 'ಸರ್ವಶ್ರುತಿಸಾರ ಮತ'ವೆಂದು ಕರೆಯಲಾಗಿದೆ. ದ್ವೈತ ಹಾಗೂ ಅದ್ವೈತ ದೃಷ್ಟಿಕೋನಗಳ ಬೆಳಕಿನಲ್ಲಿ ಶ್ರುತಿಗಳಲ್ಲಿ ಕಂಡುಬರುವ ಮೇಲುಮೇಲಿನ ತದ್ವಿರುದ್ಧವಾದ ಹೇಳಿಕೆಗಳ ವಿಷಯದಲ್ಲಿ ಸುಸಂಗತವಾದ ಹಾಗೂ ಸಾಮರಸ್ಯಪೂರ್ಣವಾದ ವ್ಯಾಖ್ಯಾನವನ್ನು ಅದು ಇರಿಸಿಕೊಂಡುಬಂದಿರುವುದೇ ಇದಕ್ಕೆ ಕಾರಣ. ಒಂದು ದೃಷ್ಟಿಯಲ್ಲಿ ಎಲ್ಲವೂ ಒಂದಾಗಿದ್ದರೆ, ಇನ್ನೊಂದು ದೃಷ್ಟಿಯಲ್ಲಿ ನಾನಾತ್ವವಾಗಿರುತ್ತದೆ ಎಂಬುದನ್ನು ಅದು ಎತ್ತಿ ತೋರಿಸುತ್ತದೆ. ಅನುಭವಾತ್ಮಕ ಹಂತದಲ್ಲಿ ಜೀವ ಶಿವನಿಂದ ಬೇರೆಯಾಗಿದ್ದರೂ, ಮುಕ್ತಿಯನ್ನು ಪಡೆದಾಗ ಅದು ಶಿವನೊಂದಿಗೆ ಒಂದಾಗುತ್ತದೆ—ಮೈದಾನದಲ್ಲಿ ಹರಿಯುತ್ತಿರುವಾಗ ನದಿ ಸಾಗರದಿಂದ ಬೇರೆಯಾಗಿರುವಂತೆ ಕಂಡರೂ. ಸಾಗರವನ್ನು ಸೇರಿದಾಗ ಅದರೊಡನೆ ಹೇಗೆ ಒಂದಾಗಿಬಿಡುತ್ತದೆಯೋ ಹಾಗೆ. ಬೀಜ ಒಂದೇ ; ಆದರೆ ಅದರಿಂದ

ಮೂಡಿ ಬರುವ ಎಲೆಗಳು, ಕೊಂಬೆಗಳು, ಹೂವುಗಳು, ಹಣ್ಣುಗಳು ಅನೇಕವಾಗಿರುತ್ತವೆ. ಆದ್ದರಿಂದ ದ್ವೈತಾದ್ವೈತವಾದವೊಂದೇ ಯುಕ್ತಿಯುಕ್ತವಾದ ತತ್ತ್ವಶಾಸ್ತ್ರವೆಂದು ಅದು ಒತ್ತಿ ಹೇಳುತ್ತದೆ.

ಕಾಶ್ಮೀರಶೈವಧರ್ಮವನ್ನು ತ್ರಿಕವೆಂದು ಕರೆಯಲಾಗಿದೆ. ಪರಶಿವನೊಬ್ಬನೇ ಪರಮಸತ್ಯವೆಂಬುದು ನಿಜವಾದರೂ, ಅದು ಪರಾ, ಪರಾಪರಾ ಹಾಗೂ ಅಪರಾ ಎಂಬ ಸತ್ಯದ ಮೂರು ಮುಖಗಳನ್ನು ಕುರಿತು ಚರ್ಚಿಸುವುದೇ ಇದಕ್ಕೆ ಕಾರಣ. ಪರತತ್ತ್ವಕ್ಕೆ ಎರಡು ಮುಖಗಳುಂಟು : ಪರಾಪರ ಮತ್ತು ಅಪರ. ಈ ವೈಚಾರಿಕ ಪಂಥದಲ್ಲಿ, ಪರಮಸತ್ಯದ ಮೂರು ಮುಖಗಳಾದ ಅಭೇದ, ಭೇದಾಭೇದ ಮತ್ತು ಅಭೇದಗಳ ನಡುವೆ ಒಂದು ಬಗೆಯ ಸಾಮಂಜಸ್ಯ ಕಂಡುಬರುತ್ತದೆ.

## ಪ್ರತ್ಯಭಿಜ್ಞ

ಕಾಶ್ಮೀರಶೈವಧರ್ಮದ ಪ್ರಮುಖ ಭಾವನೆ ಇದು : ಜೀವ ಪ್ರಭುವಾದ ಪರಮಶಿವನಲ್ಲದೆ ಬೇರೆಯಲ್ಲ ; ಆದರೆ, ಆತನ ಶಕ್ತಿ ಅಲ್ಲಿ ಸೀಮಿತಗೊಂಡಿರುತ್ತದೆ. ಜೀವಾತ್ಮ ತನ್ನ ಸಹಜಸ್ಥಿತಿಯನ್ನು ಅಂದರೆ, ಪರಮಾನಂದಮಯವಾಗಿರುವ 'ಶಿವತತ್ತ್ವ'ವನ್ನು ಅಥವಾ ಪರಿಶುದ್ಧಪ್ರಜ್ಞೆಯನ್ನು—ಕಂಡುಕೊಂಡು, ಅರ್ಥಮಾಡಿಕೊಂಡು, ಅನುಭವಿಸುವಂತೆ ಮಾಡುವುದೇ ಈ ದರ್ಶನದ ಗುರಿ. ಜೀವಾತ್ಮ ಅನುಭವಿಸುವ ಪರಿಕಲ್ಪನೆಗಳು ಮತ್ತು ಕಾಣ್ಕೆಗಳು 'ಅವನಿ'ಂದ ಭಿನ್ನವಾದುವಲ್ಲ ; ಏಕೆಂದರೆ 'ಅವನ'ದು ವಿಶ್ವಪ್ರಜ್ಞೆಯ ಒಂದು ಮುಖ. ಹೀಗಾಗಿ, ಭೌತಿಕವಾದ ಅಥವಾ ಆತ್ಮಿಕವಾದ ಎಲ್ಲ ಸಂಜ್ಞಾನವೂ ಅರಿವೇ ಆಗಿ ಪರಿಣಮಿಸುತ್ತದೆ. ತನ್ನ ಸಹಜಸ್ವಭಾವದಿಂದಾಗಿಯೇ ಜೀವಾತ್ಮ ಸರ್ವಜ್ಞನಾಗಬಲ್ಲ ; ಆದರೆ, ಈ ಹಾದಿಯಲ್ಲಿ ಕೆಲವೊಂದು ಎಡರು-ತೊಡರುಗಳಿವೆ ; ಈ ಎಡರು-ತೊಡರುಗಳನ್ನು ತೊಡೆದುಹಾಕಬೇಕು. ಈ ದರ್ಶನದಲ್ಲಿ ನಿರೂಪಿತವಾಗಿರುವ ಅರಿವಿನ ತತ್ತ್ವ ಶ್ರುತಿಗಳ ಸಮ್ಯಕ್‌ಜ್ಞಾನ, ಗುರೂಪದೇಶ ಹಾಗೂ ವ್ಯಕ್ತಿಗತವಾದ ಪ್ರಯತ್ನ ಮತ್ತು ಆಚರಣೆಗಳ ಮೂಲಕ ಎಡರು-ತೊಡರುಗಳನ್ನು ತೊಡೆದುಹಾಕುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಮಾನವನಿಗೆ ನೆರವಾಗುತ್ತದೆ.

ಕಾಶ್ಮೀರಶೈವಧರ್ಮದ ಮುಖ್ಯ ಪ್ರಕರಣಗಳು ಇವು : ಈಶ್ವರ, ಜಗತ್ತು, ಆತ್ಮ, ಬಂಧನ ಮತ್ತು ಮುಕ್ತಿ. ಪರದೈವವನ್ನು 'ಪರಸಂವಿತ್', 'ಚಿತ್' ಅಥವಾ 'ಪರಮಶಿವ' ಎಂದು ಕರೆಯಲಾಗಿದೆ. ಅವನು 'ಅನುತ್ತರ'—ಅಂದರೆ, ಅವನಿಂದ ಆಚೆಗೆ ಏನೂ ಇಲ್ಲ. ಅವನು ಕಾಲ, ದೇಶ ಮತ್ತು ಕಾರ್ಯಕಾರಣಗಳಿಗೆ ಅತೀತನಾದವನು. ಅವನು ನಿರ್ಬಂಧು ; ಅವನು ಪರಮಾನಂದಸ್ವರೂಪಿ—'ಪರಿಪೂರ್ಣಾನಂದಘನ.' ಅವನು ಪ್ರಕಾಶ-ವಿಮರ್ಶಮಯ. ಸಂಕಲ್ಪಮಾತ್ರದಿಂದಲೇ ಅವನು ಅನೇಕ ರೂಪಗಳಲ್ಲಿ ಮೈದಳೆಯಬಲ್ಲ. 'ವಿಮರ್ಶ' ಎಂದರೆ ಒಳ ಕಾಣ್ಕೆ. ಪರಿಪೂರ್ಣ ಅಭಿನ್ನತೆಯೊಂದಿಗೆ ಅವನು ತನ್ನನ್ನು ಜಗತ್ತನ್ನೂ ಕಾಣಬಲ್ಲ. ಅವನ ಪ್ರಮುಖ ವಿಶೇಷಣಗಳು, ಶಕ್ತಿಗಳು ಅಥವಾ ಗುಣಗಳು ಐದು. ಅವು ಯಾವುವೆಂದರೆ : ಚಿತ್, ಆನಂದ, ಇಚ್ಛೆ, ಜ್ಞಾನ ಮತ್ತು ಕ್ರಿಯೆ. ಇವು ಪರಮಶಿವನ ಅತೀಂದ್ರಿಯ ಸ್ತರದಲ್ಲಿ, ಪ್ರಶಾಂತಸಾಗರದಲ್ಲಿನ ಜಲದಂತೆ, ಸುಪ್ತಸ್ಥಿತಿಯಲ್ಲಿರುತ್ತವೆ. ಜಗತ್ತನ್ನು ಸೃಷ್ಟಿಸಬೇಕೆಂದು ಶಿವ ಇಚ್ಛಿಸಿದಾಗ, ಈ ಶಕ್ತಿಗಳು ಕ್ರಿಯಾತ್ಮಕರೂಪ ತಾಳುತ್ತವೆ. ಐದು ಶಕ್ತಿಗಳಲ್ಲಿ ಮೂರು—ಅಂದರೆ, ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳು—ಅನೇಕ ರೂಪಗಳಲ್ಲಿ ಮೈದೋರುತ್ತವೆ : ಆದರೆ, ಸೃಷ್ಟಿಗೊಂಡ ಜಗತ್ತಿನಲ್ಲಿ ಅವುಗಳ ವ್ಯಾಪ್ತಿ ಸೀಮಿತವಾಗಿರುತ್ತದೆ. ಹೀಗಾಗಿ, ಇಡೀ ಜಗತ್ತು ಪರಮಪ್ರಭುವಾದ ಪರಶಿವನಿಂದ ಭಿನ್ನವಲ್ಲದ ಶಕ್ತಿಗಳ ಮೈದೋರುವಿಕೆಯೇ ಆಗಿರುತ್ತದೆ. ಪರಮಶಿವನ ಸ್ವರೂಪಗಳು ಎರಡು : ಅತೀಂದ್ರಿಯ ಮತ್ತು ಸರ್ವಾಂತರ್ಯಾಮಿ, ಅತೀಂದ್ರಿಯಸ್ವರೂಪದಲ್ಲಿ ಈ ಐದು ಶಕ್ತಿಗಳೂ ಅಗೋಚರಸ್ಥಿತಿಯಲ್ಲಿರುತ್ತದೆ. ಸರ್ವಾಂತರ್ಯಾಮಿಯಾಗಿರುವಾಗಲೂ ಪ್ರಭುವಾದ ಪರಮಶಿವ ಸರ್ವಜ್ಞನೂ, ಸರ್ವಶಕ್ತನೂ, ಸರ್ವತ್ರಗೋಚರನೂ ಆಗಿರುತ್ತಾನೆ.

ಪ್ರಭು ಪರಮೇಶ್ವರ ತನ್ನ ಮುಕ್ತಸಂಕಲ್ಪದಿಂದ ಹಾಗೂ ಲೀಲೆಯಿಂದ ಈ ಜಗತ್ತನ್ನು ಸೃಷ್ಟಿಸಿದ. ತನ್ನ ಅತೀಂದ್ರಿಯ ಹಾಗೂ ಸರ್ವಾಂತರ್ಯಾಮಿಸ್ವರೂಪಗಳೆರಡರಲ್ಲಿಯೂ ಅವನೇ ಪರಮಸತ್ಯವಾಗಿರುತ್ತಾನೆ. ಆದ್ದರಿಂದ ಆ ಪ್ರಭುವಿನ ವ್ಯಕ್ತಸ್ವರೂಪವೇ ಆಗಿರುವ ಈ ಜಗತ್ತು ಪರಮಸತ್ಯವಾದುದು. ಜಗತ್ತು ಆತನಿಂದ ಭಿನ್ನವೂ ಅಲ್ಲ. ಅಂತೆಯೇ, ಪರಶಿವನು ತನ್ನನ್ನು ಎರಡು ರೂಪಗಳಲ್ಲಿ—ಅಂದರೆ, ಗ್ರಾಹಕ ಮತ್ತು ಗ್ರಾಹ್ಯರೂಪಗಳಲ್ಲಿ—ವ್ಯಕ್ತಪಡಿಸುತ್ತಾನೆ. ಜೀವನೇ ಗ್ರಾಹಕ. ವಿಶ್ವ ಅಥವಾ ಈ ಬಾಹ್ಯಜಗತ್ತೇ ಗ್ರಾಹ್ಯ. ಗ್ರಾಹಕ ಅಥವಾ ಜೀವ ಪರಮಾತ್ಮನಿಂದ ಭಿನ್ನವಾದುದಲ್ಲ. ಆದರೆ ಅದಕ್ಕಿರುವ ಶಕ್ತಿಗಳು ಸೀಮಿತವಾದುವು.

ಕಾಶ್ಮೀರಶೈವಧರ್ಮವನ್ನು ಪ್ರತ್ಯಭಿಜ್ಞಾದರ್ಶನವೆಂದು ಸಾಮಾನ್ಯವಾಗಿ ಕರೆಯಲಾಗಿದೆ. ವಿಶ್ವಪ್ರಕ್ರಿಯೆ ವ್ಯಕ್ತಗೊಳ್ಳುವುದನ್ನು—ಅಂದರೆ ಸೃಷ್ಟಿಪ್ರಕ್ರಿಯೆಯನ್ನು—ವಿವರಿಸುವ ಸಂದರ್ಭದಲ್ಲಿ ಅದು ಬೌದ್ಧದರ್ಶನದ 'ಅನಿತ್ಯವಾದ'ವನ್ನೂ, ಕೇವಲಾದ್ವೈತಗಳ 'ಮಾಯಾವಾದ'ವನ್ನೂ ತಿರಸ್ಕರಿಸುತ್ತದೆ ; ಶಕ್ತಿಪಂಥದ ಶಿವ-ಶಕ್ತಿ ಸಿದ್ಧಾಂತದ ವಿಶಿಷ್ಟ ಹಾಗೂ ಕಾರ್ಯಸಾಧ್ಯ ಲಕ್ಷಣಗಳನ್ನು ಒಪ್ಪಿಕೊಳ್ಳುತ್ತದೆ ; ಸಾಂಖ್ಯದರ್ಶನದ ಇಪ್ಪತ್ತೈದು ತತ್ವಗಳನ್ನು ಅಳವಡಿಸಿಕೊಳ್ಳುತ್ತದೆ ಹಾಗೂ ಹನ್ನೊಂದು ಸೂಕ್ಷ್ಮತತ್ತ್ವಗಳನ್ನು ಸೇರಿಸಿಕೊಳ್ಳುತ್ತದೆ. 'ವಾಕ್'ನ ಅಭಿವ್ಯಕ್ತಿಯ ಕೊನೆಯಸ್ತರವೆಂದು ಹೇಳಲಾಗಿರುವ 'ಪಶ್ಯಂತಿ'ಯಲ್ಲಿ ನಿಲ್ಲುವ ಭರ್ತೃಹರಿಯ ಶಬ್ದಾದ್ವೈತ ಸಿದ್ಧಾಂತ ಅಥವಾ ಶಬ್ದಬ್ರಹ್ಮ ಸಿದ್ಧಾಂತ ಸಿಂಧುವಾದುದಲ್ಲವೆಂದೂ, ಪರತತ್ವ ಅಥವಾ ಐಕ್ಯೈಕಸತ್ಯ ವ್ಯಕ್ತಗೊಳ್ಳುವ ಸಂದರ್ಭದಲ್ಲಿ 'ಪರಾವಾಕ್ಕಿ'ನ ನಾಲ್ಕು ಮುಖಗಳಾದ 'ಪರಾ'. 'ಪಶ್ಯಂತೀ', 'ಮಧ್ಯಮಾ' ಮತ್ತು 'ವೈಖರೀ' ಎಂಬ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆಂದೂ ತೋರಿಸಿಕೊಟ್ಟಿದೆ.

'ಪ್ರತ್ಯಭಿಜ್ಞಾ' ಎಂದರೆ ಗುರುತಿಸುವುದು ಅಥವಾ ಕಂಡುಕೊಳ್ಳುವುದು ಎಂದು ಅರ್ಥ. ಅದು ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಗುರುತಿಸದೆ ಇರುವಂಥ ವಸ್ತುವಿನ ಬಗೆಗಿನ ಸಂಜ್ಞಾನ. ಪ್ರತ್ಯಭಿಜ್ಞೆ ಜೀವಾತ್ಮನು ವಿಶ್ವಾತ್ಮನಾದ ಪರಮಶಿವನಿಂದ ಅಭಿನ್ನನೆಂಬ ಸಂಗತಿಯ ಅರಿವಿನತ್ತ ವ್ಯಕ್ತಿಯನ್ನು ಕೊಂಡೊಯ್ಯುತ್ತದೆ. ಪ್ರಭುವಾದ ಪರಮಶಿವನು ತನ್ನ 'ಸ್ವಾತಂತ್ರ್ಯಶಕ್ತಿ'ಯಿಂದ ಪಶುಭಾವದ—ಅಂದರೆ ಜೀವದ—ಸೀಮಿತ ರೂಪವನ್ನು ಪಡೆದುಕೊಂಡಿರುತ್ತಾನೆ. ಇದರ ಪರಿಣಾಮವಾಗಿ, 'ಮಾಯಾವಿಮೋಹಿನೀಶಕ್ತಿ'ಯಿಂದಾಗಿ ಜೀವ ತನ್ನ ನಿಜಸ್ವರೂಪದ ಅರಿವನ್ನು ಕಳೆದುಕೊಳ್ಳುತ್ತದೆ. ಹೀಗಾಗಿ, ತನ್ನ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಜೀವ ಸೀಮಿತಗಳಿಗೆ ಒಳಪಟ್ಟಿರುತ್ತದೆ. 'ದೃಕ್‌ಕ್ರಿಯಾಶಕ್ತಿ'ಯನ್ನು ಪಡೆಯಲು ನೆರವಾಗುವ ಧ್ಯಾನ ಮತ್ತು ಚಿಂತನೆಗಳ ಮೂಲಕ ಅಥವಾ ಅಂತರ್ನಿಹಿತವಾಗಿರುವ ವಿಕಾಸಶೀಲ ಶಕ್ತಿಗಳ ಆವಿರ್ಭಾವದ ಮೂಲಕ ತನ್ನಲ್ಲಿ ಮೊದಲೇ ಸುಪ್ತವಾಗಿರುವ ಪರಮಸತ್ಯಸ್ವರೂಪವನ್ನು ಕಂಡುಕೊಳ್ಳಲು ಸಾಧಕನಾಗಿರುವ ಜೀವನಿಗೆ ಪ್ರತ್ಯಭಿಜ್ಞೆ ನೆರವಾಗುತ್ತದೆ. ಈ ಬಗೆಯ ಜ್ಞಾನದ ಉದ್ದೇಶ ಸತ್ಯವನ್ನು ಆವರಿಸಿಕೊಂಡಿರುವ ತೆರೆಯನ್ನು ಸರಿಸುವುದು ಹಾಗೂ ಒಳಗೆ ಅಡಗಿರುವುದನ್ನು ಹೊರಗೆಳೆಯುವುದು. ಹೀಗೆ ಮಾಡುವುದರ ಮೂಲಕ ಆತ್ಮಜ್ಞಾನ ಸಾಧ್ಯವಾಗುತ್ತದೆ. ಶಾಸ್ತ್ರಗಳ ಸಮರ್ಪಕ ಅರಿವಿನಿಂದ, ಗುರುವಿನ ಉಪದೇಶದಿಂದ ಹಾಗೂ ವೈಯಕ್ತಿಕ ಪ್ರಯತ್ನ ಮತ್ತು ಆಚರಣೆಗಳಿಂದ ಇದನ್ನು ಸಾಧಿಸಬಹುದು.

### ಆಭಾಸವಾದ

'ಶಿವತತ್ತ್ವ'ವೇ ವಿಶ್ವಕ್ಕೆ ಆಧಾರಭೂತವಾಗಿರುವ ತತ್ತ್ವ, ಸದಾ ಬದಲಾಗುತ್ತಿರುವ ಸ್ವರೂಪದ ಈ ಜಗತ್ತು ಆ ಪರತತ್ತ್ವದ ವ್ಯಕ್ತರೂಪವೇ. ಕಾಣಿಸುವಂಥದೆಲ್ಲ, ಕಲ್ಪನೆಗೆ ಅಥವಾ ಪ್ರತ್ಯಕ್ಷಕ್ಕೆ ಎಡೆಗೊಡುವಂಥದೆಲ್ಲ, ಬಾಹ್ಯೇಂದ್ರಿಯಗಳ ಅಥವಾ ಒಳಮನಸ್ಸಿನ ವ್ಯಾಪ್ತಿಗೆ ಒಳಪಡುವಂಥದೆಲ್ಲ, ನಮ್ಮ ಅರಿವಿಗೆ ಬಂದಿರುವಂಥದೆಲ್ಲ, ಯಾವುದೇ ರೂಪದಲ್ಲಿ ಅಸ್ತಿತ್ವದಲ್ಲಿದೆಯೆಂದು ಹೇಳಬಹುದಾಗಿರುವಂಥದೆಲ್ಲ—ಅದು ಜ್ಞಾನದ ವಸ್ತು, ಲಕ್ಷ್ಯ ಅಥವಾ ಮಾಧ್ಯಮವಾಗಿರಲಿ—ಆಭಾಸವೇ.

### ಈಶ್ವರಪ್ರತ್ಯಭಿಜ್ಞಾ

ಅಸ್ತಿತ್ವ ಮತ್ತು ವಿಭೂತಿಗಳ ನಡುವೆ ಸ್ಪಷ್ಟವಾಗಿಯೇ ವ್ಯತ್ಯಾಸವಿದೆ. ನಮ್ಮ ಪ್ರತ್ಯಕ್ಷಜ್ಞಾನ ವಸ್ತುರೂಪಗಳಲ್ಲಿನ ವೈವಿಧ್ಯಗಳಿಗೆ ಮಾತ್ರ ಸೀಮಿತಗೊಂಡಿದೆ. ರೂಪಗಳು ಕಾಣಿಸಿಕೊಳ್ಳಬಹುದು ಹಾಗೂ ಮಾಯವಾಗಬಹುದು. ಆದರೆ, ಅಸ್ತಿತ್ವ—ಅಂದರೆ, ಆಧಾರಪ್ರಾಯವಾಗಿರುವ ತತ್ತ್ವ—ಯಾವಾಗಲೂ ಅಪರಿವರ್ತನೀಯವಾದುದು ಶಾಶ್ವತವಾದುದು. ಹಾಗೂ ಸ್ವಯಂಭುವಾದುದು.

### ವೀರಶೈವಧರ್ಮ

ವೀರಶೈವಧರ್ಮದ ಕೇಂದ್ರಭಾವನೆಯೆಂದರೆ ಶಿವ ಮತ್ತು ಶಕ್ತಿಗಳ ಅವಿನಾಭಾವಸಂಬಂಧ ಅಥವಾ ಸಮವಾಯಸಂಬಂಧ. ಆದಿಯಲ್ಲಿ ಇದ್ದುದು ಶಿವನೊಬ್ಬನೇ. ಚರಾಚರಗಳನ್ನೊಳಗೊಂಡಿರುವ ಈ ವೈವಿಧ್ಯಮಯ ಪ್ರಪಂಚ ಸೂಕ್ಷ್ಮಚಿದ್ವಿಶಿಷ್ಟರೂಪದಲ್ಲಿ ಆತನಿಂದ ಸಂಪೂರ್ಣವಾಗಿ ಅಭಿನ್ನವೆಂಬಂತೆ ಆತನಲ್ಲಿಯೇ ಅಸ್ತಿತ್ವದಲ್ಲಿತ್ತು. ಕರ್ಮಸಾಹಚರ್ಯದ ವಿವಿಧ ಬಗೆಗಳಿಗೆ ಅನುಗುಣವಾಗಿ ಆತನು ಜೀವಿಗಳನ್ನು ಪ್ರತ್ಯೇಕಿಸಿದ : ಅನೇಕ ರೂಪಗಳಲ್ಲಿ ಜಗತ್ತು ಮೈದಳೆಯುವಂತೆಯೂ ಮಾಡಿದ. ಕರ್ಮನಿಯಮವನ್ನು ಪರಿಪಾಲಿಸುವ ಮೂಲಕ ಜೀವಿಗಳು ಎಲ್ಲ

ದೋಷಗಳಿಂದ ಮುಕ್ತರಾಗಲಿ, ಅಂತಿಮವಾಗಿ ದೈವಕೃಪೆಯಿಂದ ಅತೀಂದ್ರಿಯದ ನೆಲೆಗೆ ಹಿಂದಿರುಗಲಿ ಹಾಗೂ ತನ್ನೊಡನೆ ಒಂದಾಗಲಿ ಎಂಬ ದೃಷ್ಟಿಯಿಂದ ಹೀಗೆ ಮಾಡಿದೆ.

## ಭೇದಾಭೇದವಾದ

ಬ್ರಹ್ಮ ಮತ್ತು ಜಗತ್ತುಗಳ ನಡುವಣ ಸಂಬಂಧ ಭಿನ್ನತೆಯಲ್ಲೂ ಅಭಿನ್ನತೆ ಇರುವುದೇ ಆಗಿದೆ. ಪರತತ್ತ್ವ ಎಂಬುದು ಅನೇಕತ್ವದಲ್ಲಿ ಕಾಣುವ ಏಕತೆಯೇ ಆಗಿರುತ್ತದೆ. ಏಕತೆ ಮತ್ತು ಅನೇಕತೆಗಳೆರಡೂ ಸಮಾನವಾಗಿಯೇ ಸತ್ಯವೂ, ಶಾಶ್ವತವೂ ಆಗಿರುತ್ತವೆ. ಏಕೆಂದರೆ ಅದು ಬ್ರಹ್ಮನ ಶಕ್ತಿಯಲ್ಲಿ ಸದಾ ವಿಭವರೂಪದಲ್ಲಿ ಇದ್ದೇ ಇರುತ್ತದೆ. ಏಕತೆ ಮತ್ತು ಅನೇಕತೆಗಳೆರಡೂ ಒಂದೇ ತತ್ವದ ಎರಡು ಹಂತಗಳು—ಅವ್ಯಕ್ತಸ್ಥಿತಿಯಲ್ಲಿ ಏಕತೆಯಂತೆಯೂ, ವ್ಯಕ್ತ ಅಥವಾ ಕಾರ್ಯಾತ್ಮಕಸ್ಥಿತಿಯಲ್ಲಿ ಅನೇಕತೆಯಂತೆಯೂ ಇರುವ ಎರಡು ಹಂತಗಳು—ಎಂಬುದು ಶ್ರೀಪತಿಪಂಡಿತನ ಅಭಿಪ್ರಾಯ. ಜೀವ ಮತ್ತು ಶಿವ ಅಥವಾ ಬ್ರಹ್ಮ ಇವರ ನಡುವೆ ಇರುವ ವ್ಯತ್ಯಾಸವೇನೆಂದರೆ ಜೀವ ಉಪಾಸಕನಾಗಿದ್ದು ಸೀಮಿತ ಜ್ಞಾನವನ್ನು ಪಡೆದಿದ್ದರೆ ಬ್ರಹ್ಮ ಉಪಾಸ್ಯವಸ್ತುವೇ ಆಗಿರುವುದು.

## ಶಿವಶಕ್ತಿ

ಕಾಶ್ಮೀರಶೈವಧರ್ಮದ ಪ್ರಕಾರ ಪ್ರಭುವಿನ ಇಚ್ಛೆ ಅಥವಾ ಸಂಕಲ್ಪದ ಸರ್ವೋಚ್ಚತೆಯೇ ಎಲ್ಲ ಸೃಷ್ಟಿಗೂ ಕಾರಣ. ತನ್ನಲ್ಲಿ ನಿಹಿತವಾಗಿರುವ ವಿಮರ್ಶಶಕ್ತಿಯಿಂದ ಮಹೇಶ್ವರ ಸೃಷ್ಟಿ ಸ್ಥಿತಿ ಮತ್ತು ಸಂಹಾರ ಕಾರ್ಯಗಳನ್ನು ನೆರವೇರಿಸುತ್ತಾನೆ. ಅವನು ಜ್ಞಾನ ಮತ್ತು ಆನಂದಗಳ ಆಗರ ಹಾಗೂ ಸರ್ವವ್ಯಾಪಿ, ಅವನು ಸಂಕಲ್ಪದ ಅನಿರ್ಬಂಧಿತ ಪ್ರವಾಹಸ್ವರೂಪಿ ಹಾಗೂ ಸಂಜ್ಞಾನ ಮತ್ತು ಕ್ರಿಯಾತ್ಮಕತೆಯ ಸ್ವಪ್ರೇರಿತಪ್ರವಾಹಸ್ವರೂಪಿ.

ಶಕ್ತಿಯ ವೈವಿಧ್ಯಮಯ ಮುಖಗಳಲ್ಲಿ ಪ್ರಾಣಶಕ್ತಿಯೂ ಒಂದು. ಇದು ಅಭಿಪ್ರೇರಣಾತ್ಮಕವಾದ ಹಾಗೂ ಪೋಷಕಸ್ವರೂಪದ ಶಕ್ತಿ. ಈ ಕ್ರಿಯಾಶೀಲ ಪ್ರಾಣಶಕ್ತಿಯಿಂದಲೇ ಪರಮಶಿವನ ಅಂತರ್ಯಾಮಿತ್ವ ವಿಶ್ವವನ್ನು ಪೋಷಿಸುತ್ತದೆ ಹಾಗೂ ನಿಯಂತ್ರಿಸುತ್ತದೆ. ಈ ಶಕ್ತಿ ಇಲ್ಲವಾದಲ್ಲಿ ಯಾವುದೇ ವಲಯದಲ್ಲಾಗಲೀ ಜೀವ ವಿನಾಶ ಮುಖಿಯೇ ಆಗುತ್ತದೆ. ಪ್ರಾಣಾಯಾಮ, ಧಾರಣ ಮತ್ತು ಧ್ಯಾನಗಳಂಥ ಭೌತಿಕ ಮತ್ತು ಮಾನಸಿಕ ಚಟುವಟಿಕೆಗಳಿಗೂ ಪ್ರಾಣಶಕ್ತಿಗೂ ನಂಟುಗಂಟುಗಳುಂಟು. ಭೌತಿಕ ಶರೀರದ ಸ್ವೈಚ್ಛಿಕ ಮತ್ತು ಅನೈಚ್ಛಿಕ ಚಲನವಲನಗಳನ್ನು ಈ ಪ್ರಾಣಶಕ್ತಿಯೇ ನಿಯಂತ್ರಿಸುತ್ತದೆ. ಇದೊಂದು ಮನೋ-ಭೌತಿಕ ಶಕ್ತಿ. ಜೀವಾತ್ಮನ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಚಟುವಟಿಕೆಗಳಿಗೆಲ್ಲ ಈ ಪ್ರಾಣಶಕ್ತಿಯೇ ಆಧಾರವಾಗಿದೆ. "ಸರ್ವಂ ಪ್ರಾಣೇ ಪ್ರತಿಷ್ಠಿತಾ" ಎನ್ನುವ ಮಾತಿನಲ್ಲಿ ಇದನ್ನು ಸೂಚಿಸಲಾಗಿದೆ.

ವೀರಶೈವಧರ್ಮದ ಪ್ರಕಾರ ಪ್ರಭುವಿನ ಶಕ್ತಿ ಎರಡು ರೂಪಗಳಲ್ಲಿ ಅಭಿವ್ಯಕ್ತಗೊಂಡಿದೆ. 'ಮಹಾಮಾಯಾ' ಅಥವಾ 'ಊರ್ಧ್ವಮಾಯಾ' ಮತ್ತು 'ಅಧೋಮಾಯಾ' ಎಂಬುವೇ ಆ ಎರಡು ರೂಪಗಳು. ಮಹಾಮಾಯೆ ಇಂದ್ರಿಯಗೋಚರವಾದ ವಿಶ್ವದ ರೂಪದಲ್ಲಿ ಆವಿರ್ಭವಿಸುತ್ತದೆ. ಅದು ಪ್ರಜ್ಞೆಯ ನೆಲೆಯಲ್ಲಿ ಅಥವಾ ಉಪಸ್ತರದಲ್ಲಿ ಯಾವುದೇ ಬಗೆಯ ಭ್ರಮೆಯನ್ನೂ ಉಂಟುಮಾಡುವುದಿಲ್ಲ. ಜೀವಾತ್ಮನ ನೈಜಸ್ವರೂಪವನ್ನು ಮರೆಮಾಚುವುದು ಹಾಗೂ ಕೆಳಸ್ತರದ ಸೃಷ್ಟಿಯಲ್ಲಿ ಪ್ರಭುವಿನ ಪಂಚಶಕ್ತಿಗಳನ್ನು ಸೀಮಿತಗೊಳಿಸುವುದು ಅಧೋಮಾಯೆಯೇ. ಈ ಕೆಳಸ್ತರದ ಸೃಷ್ಟಿ ೩೦ ತತ್ತ್ವಗಳನ್ನೊಳಗೊಂಡಿರುತ್ತದೆ. ಶೈವದರ್ಶನಕ್ಕನುಗುಣವಾಗಿ ಈ ಜಗತ್ತು ೩೬ ತತ್ತ್ವಗಳನ್ನೊಳಗೊಂಡಿರುತ್ತದೆಂಬುದನ್ನು ಗಮನಿಸಬಹುದಾಗಿದೆ. ಇಲ್ಲಿ ಬಳಸಲಾಗಿರುವ ಮಾಯಾತತ್ತ್ವವನ್ನು, ಅದ್ವೈತಿಗಳು ವರ್ಣಿಸುವಂತೆ, ಮಿಥ್ಯೆ ಎಂಬುದಾಗಿ ಪರಿಭಾವಿಸಬಾರದು. ಜಗತ್ತಿನ ಸೃಷ್ಟಿಗೆ ಕಾರಣೀಭೂತವಾದ ನಡುವಣಶಕ್ತಿ ಹಾಗೂ ಆತ್ಮಗಳ ಇಬ್ಬಗೆಗೆ ಕಾರಣವಾದ ಶಕ್ತಿ ಎಂದು ಅದನ್ನು ಪರಿಭಾವಿಸಬಹುದು.

ಪರಿವರ್ತನಾತೀತನಾಗಿರುವ ಶಿವ ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ: 'ಲಿಂಗ' ಅಥವಾ ಪರಿಶುದ್ಧ ಚೈತನ್ಯ ಹಾಗೂ 'ಅಂಗ' ಅಥವಾ ಜೀವಾತ್ಮ. ಪರಮಪ್ರಭುವಾದ ಶಿವನು ಬ್ರಹ್ಮ ಮತ್ತು ಜೀವ ಎಂಬ ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುವಂತೆಯೇ, ಆತನ 'ಶಕ್ತಿ'ಯೂ ಎರಡು ರೂಪಗಳಲ್ಲಿ ಮೈದೋರುತ್ತದೆ. 'ಶಕ್ತಿ'ಯನ್ನು ಮಹೇಶ್ವರಿ ಎಂದು ಕರೆಯಲಾಗಿದೆ. ಅದರ ಒಂದು ರೂಪ ಲಿಂಗದೊಡನೆಯೂ, ಇನ್ನೊಂದು ರೂಪ ಜೀವದೊಡನೆಯೂ ಸಂಬದ್ಧವಾಗಿರುತ್ತದೆಂದು ಭಾವಿಸಬಹುದಾಗಿದೆ. ವೀರಶೈವದರ್ಶನದ ಪ್ರಕಾರ 'ಶಕ್ತಿ' ಮತ್ತು 'ಭಕ್ತಿ' ಎಂಬುವು ವಿಭಿನ್ನ ಕ್ರಿಯಾತ್ಮಕವಲಯಗಳ ಎರಡು ಬಗೆಗಳು. ಶಕ್ತಿಯು ಪ್ರವೃತ್ತಿಸ್ವರೂಪವಾದುದು, ಭಕ್ತಿಯು

ನಿವೃತ್ತಿಸ್ವರೂಪವಾದುದು. ಶಿವನ ಅಂತಶ್ಶಕ್ತಿಯೇ ವಿಶ್ವದ ಸಮಸ್ತ ಸೃಷ್ಟಿಗೂ ಸಂಪೂರ್ಣವಾಗಿ ಕಾರಣೀಭೂತವಾಗಿದೆ. ಜೀವಾತ್ಮನಲ್ಲಿ ಕ್ರಿಯಾಶೀಲವಾಗಿರುವ ಹಾಗೂ ಅವನನ್ನು ಆತ್ಯಂತಿಕ ಮುಕ್ತಿಯತ್ತ ಕೊಂಡೊಯ್ಯುವ ಇದೇ ಶಕ್ತಿಯನ್ನು ಭಕ್ತಿ ಎನ್ನಲಾಗಿದೆ. ಹಿಮ್ಮುಖ ಚಲನೆಯಲ್ಲಿ ಅದು ಮುಕ್ತಿದಾಯಕವಾಗಿದೆ. ವಾಸ್ತವವಾಗಿ ಶಕ್ತಿ ಮತ್ತು ಭಕ್ತಿಗಳ ನಡುವೆ ಯಾವುದೇ ಭೇದವೂ ಇಲ್ಲ.

**ಜೀವಾತ್ಮ :** ಬ್ರಹ್ಮಾಂಡದ ಆವಿರ್ಭಾವವನ್ನು ವಿವರಿಸುವ ಸಲುವಾಗಿ ಕಾಶ್ಮೀರಶೈವದರ್ಶನ ೩೬ ತತ್ತ್ವಗಳನ್ನು ಮುಂದಿರಿಸುತ್ತದೆ. ಈ ಮೂಲಕ ಅದು ಪ್ರಕೃತಿಯ ಅತ್ಯಂತ ಪರಿಪೂರ್ಣ ವಿಶ್ಲೇಷಣೆಯನ್ನೂ ಮುಂದಿರಿಸುತ್ತದೆ. ಬ್ರಹ್ಮಾಂಡವನ್ನು ೩೬ ತತ್ತ್ವಗಳಾಗಿ ವಿಭಜಿಸಲಾಗಿದೆ; ಅಂತೆಯೇ ಪಿಂಡಾಂಡವನ್ನು ಕೂಡ. ಇವುಗಳನ್ನು ಪರಿಶುದ್ಧ ತತ್ತ್ವ ಮತ್ತು ಅಪರಿಶುದ್ಧ ತತ್ತ್ವಗಳೆಂದು ಎರಡು ಬಗೆಗಳಲ್ಲಿ ವರ್ಗೀಕರಿಸಲಾಗಿದೆ. ಪರಿಶುದ್ಧ ತತ್ತ್ವವನ್ನು ಶಿವ, ಶಕ್ತಿ, ಸದಾಶಿವ, ಈಶ್ವರ ಮತ್ತು ಶುದ್ಧವಿದ್ಯಾ ಎಂದು ಐದು ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ಐದು ತತ್ತ್ವಗಳಲ್ಲಿ ಮೊದಲಿನ ಎರಡು—ಅಂದರೆ, ಶಿವ ಮತ್ತು ಶಕ್ತಿ—ಮಾಯೆಯಿಂದ ಹಿಡಿದು ಈ ಲೋಕದವರೆಗಿನ ಸಮಸ್ತ ವಸ್ತುಗಳ ಪುನರ್‌ವಿಭಜನೆಗೆ ಕಾರಣವಾಗುವ ನಿಗೂಢ ಮೂಲಗಳೇ ಆಗಿರುತ್ತವೆಯಾದರೂ, ಅವು ಸ್ವತಃ ಯಾವುದೇ ದ್ವೈತ ಪರಿವರ್ತನೆಗೆ ಒಳಗಾಗುವುದಿಲ್ಲ. ಸದಾಶಿವ, ಈಶ್ವರ ಮತ್ತು ಶುದ್ಧವಿದ್ಯೆ—ಇವೆಲ್ಲ ಸೂಕ್ಷ್ಮಸ್ತರಗಳಾಗಿದ್ದು, ಈ ಸ್ತರಗಳಲ್ಲಿ ಪ್ರಜ್ಞೆಯ ಮಟ್ಟದಲ್ಲಿ ದ್ವೈತತ್ವ ಕಾಣಿಸಿಕೊಳ್ಳುತ್ತದೆ.

ಮಾಯೆಯಿಂದ ಹಿಡಿದು ಈ ಲೋಕದವರೆಗಿನ ೩೧ ತತ್ತ್ವಗಳನ್ನು ಅಪರಿಶುದ್ಧ ತತ್ತ್ವ ಒಳಗೊಂಡಿದೆ. ಈ ಸ್ತರದಲ್ಲಿ ದ್ವೈತತ್ವ ಚೆನ್ನಾಗಿ ಎದ್ದು ಕಾಣುತ್ತದೆ. ಈ ಅಪರಿಶುದ್ಧ ತತ್ತ್ವದ ಎಲ್ಲ ಸ್ತರಗಳಲ್ಲಿಯೂ ಮಾಯೆ ಕ್ರಿಯಾಶೀಲವಾಗಿರುವುದನ್ನು ನಾವು ಕಾಣುತ್ತೇವೆ. ಸಂಪೂರ್ಣ ಕೆಳವರ್ಗದ ಸೃಷ್ಟಿಗೆ ಮಾಯೆಯೇ ಮೂಲಭೂತ ಕಾರಣ. ಮಾಯೆ ಜೀವಾತ್ಮನ ನಿಜವಾದ ಸ್ವರೂಪವನ್ನು ಮರೆಮಾಚುತ್ತದೆ, ಶಕ್ತಿಯನ್ನು ಸೀಮಿತಗೊಳಿಸುತ್ತದೆ, ಭೇದಕ್ಕೆ ಹಾಗೂ ನಾನಾತ್ವಕ್ಕೆ ಕಾರಣವಾಗುತ್ತದೆ. ಪರಮಪ್ರಭುವಾದ ಪರಮಶಿವನ ಸೃಷ್ಟಿಯೇ ಆಗಿರುವುದರಿಂದ ಮಾಯೆ ಸತ್ಯವಾದುದು. ಪರಮಾತ್ಮನ ಸೃಜನಾತ್ಮಕ ಮುಖದ ಅತ್ಯಂತ ವಿಶಿಷ್ಟಶಕ್ತಿಯೇ ಮಾಯೆ. ಅದು ಭಿನ್ನತೆಯನ್ನು ತೋರುತ್ತದೆ ಹಾಗೂ ಅದು ಮರೆಮಾಚುವ ಶಕ್ತಿಯೂ ಹೌದು. ಅದು ನಮ್ಮ ಇಂದ್ರಿಯಗಳ ಗ್ರಹಿಕೆಗೆ ಹೊರತಾಗಿರುವಂಥದು. ಪರಮಾತ್ಮನ ಒಂದು ಮುಖವಾಗಿ ಅದು ನಿತ್ಯಶಕ್ತಿಯೂ ಹೌದು.

ಮಾಯೆಯ ಮೊದಲ ಸೃಷ್ಟಿಗಳೆಂದರೆ 'ಪಂಚ ಕಂಚುಕ'ಗಳು. ಅಥವಾ ಜೀವಾತ್ಮನ ಮೇಲೆ ಕವಿದುಕೊಳ್ಳುವ ಐದು ಆವರಣಗಳು. ಇವು ಪರಮಾತ್ಮನ ಪಂಚಶಕ್ತಿಗಳ ಸೀಮಿತಶಕ್ತಿರೂಪಗಳಲ್ಲದೆ ಬೇರೇನೂ ಅಲ್ಲ. ಚಿತ್, ಆನಂದ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂಬ ಈ ಐದು ಪರಮಾತ್ಮನ ಪಂಚಶಕ್ತಿಗಳು.

ಪರಿಶುದ್ಧಸ್ಥಿತಿಯಲ್ಲಿ ಸರ್ವಜ್ಞತ್ವ, ಸರ್ವಕರ್ತೃತ್ವ, ಸರ್ವವ್ಯಾಪಕತ್ವ, ನಿತ್ಯತ್ವ ಮತ್ತು ಪರಿಪೂರ್ಣತ್ವದ ಶಕ್ತಿಗಳು ವಿದ್ಯಾ (ಸೀಮಿತ ಚೇತನ), ಕಲಾ (ಸೀಮಿತ ಸೃಷ್ಟಿ), ನಿಯತಿ (ನಿಯಂತ್ರಣ ಅಥವಾ ನಿರ್ಬಂಧ), ಕಾಲ (ಸೀಮಿತ ಅವಧಿ) ಮತ್ತು ರಾಗ (ಸೀಮಿತ ಅಭಿರುಚಿ)ಗಳೆಂಬ ಸೀಮಿತಶಕ್ತಿಗಳಾಗಿ ಕಾಣಿಸಿಕೊಳ್ಳುತ್ತವೆ. ಈ ಸೀಮಿತಗಳು ವ್ಯಕ್ತಿನಿಷ್ಠಸ್ವರೂಪದವಾಗಿದ್ದು, ಸಾಮೂಹಿಕವಾಗಿ ಅವನ್ನು 'ಪಂಚಕಂಚು'ಕಗಳು ಅಥವಾ ಪುರುಷ ಪಂಚಾವರಣಗಳು ಎಂದು ಕರೆಯಲಾಗಿದೆ. ಆಣವ, ಮಾಯಾ ಮತ್ತು ಕರ್ಮ ಮಲಗಳೆಂಬ ಅಶುದ್ಧಿಗಳೊಂದಿಗೆ ಒಡನಾಟವೇರ್ಪಡುವ ಹಾಗೂ ಪಂಚಕಂಚುಕಗಳಿಂದ ಆವೃತನಾಗಿರುವ ಜೀವಾತ್ಮನನ್ನು 'ಪುರುಷ'ನೆಂದು ಕರೆಯಲಾಗಿದೆ.

ಶೈವಾದ್ವೈತ ಅಥವಾ ಕಾಶ್ಮೀರದ ಪ್ರತ್ಯಭಿಜ್ಞದರ್ಶನಕ್ಕೂ ಹಾಗೂ ವೀರಶೈವಧರ್ಮದ ಶಕ್ತಿವಿಶಿಷ್ಟಾದ್ವೈತ ದರ್ಶನಕ್ಕೂ ಮುಖ್ಯ ತತ್ತ್ವಗಳಲ್ಲಿ ಅಂಥ ವ್ಯತ್ಯಾಸವೇನೂ ಇಲ್ಲ. ಈ ಎರಡೂ ದರ್ಶನಗಳ ಮುಖ್ಯತತ್ತ್ವಗಳಲ್ಲಿ ಸಾಮ್ಯವನ್ನು ತೋರುವಂಥ ಸ್ಪಷ್ಟ ಹಾಗೂ ಅಸಂದಿಗ್ಧ ಉಲ್ಲೇಖಗಳಿವೆ. ಸತ್ಯದ ಬಗೆಗಿನ ಪರಿಕಲ್ಪನೆ, ಶಿವಶಕ್ತಿ ಸಿದ್ಧಾಂತ, ದೃಗ್ಗೋಚರವಾಗಿರುವ ಈ ಜಗತ್ತಿನ ಆವಿರ್ಭಾವ, ಶಿವನಿಂದ ಈ ಲೋಕದವರೆಗಿನ ೩೬ ತತ್ತ್ವಗಳು, ಮಲತ್ರಯಗಳು ಹಾಗೂ ಜೀವಾತ್ಮನನ್ನು ಆವರಿಸಿಕೊಂಡಿರುವ ಪಂಚಕಂಚುಕಗಳು, ಮೋಕ್ಷಕ್ಕೆ ಅನಿವಾರ್ಯ ಅಂಶವಾಗಿರುವ ದೈವಕೃಪೆ ಅಥವಾ ಶಿವಾನುಗ್ರಹ—ಇವು ಈ ಎರಡು ದರ್ಶನಗಳಲ್ಲಿ ಸಾಮ್ಯವನ್ನು ಎತ್ತಿತೋರುವ ಕೆಲವು ಅಂಶಗಳು. ಆದರೆ, ಸಾಧನೆಯ ಮಾರ್ಗಗಳ ವಿಚಾರದಲ್ಲಿ ಇವು ಕೆಲವು ಅಂಶಗಳಲ್ಲಿ ವಿಭಿನ್ನತೆಯನ್ನು ತೋರುತ್ತವೆ.

**ಬಂಧನ :** ಅಜ್ಞಾನವೇ ಬಂಧನಕ್ಕೆ ಕಾರಣ ಹಾಗೂ ಜ್ಞಾನವೊಂದೇ ಮುಕ್ತಿಯ ಸಾಧನ ಎಂಬುದು

ಭಾರತೀಯ ತತ್ತ್ವಶಾಸ್ತ್ರದ ಎಲ್ಲ ದರ್ಶನಗಳಲ್ಲಿ ನಾವು ಕಾಣುವ ಸಾಮಾನ್ಯ ನಂಬಿಕೆ. ಕಾಶ್ಮೀರಶೈವದರ್ಶನದ ಪ್ರಕಾರ ಅಜ್ಞಾನವೆಂದರೆ ಜ್ಞಾನದ ಸಂಪೂರ್ಣ ಅಭಾವ ಎಂದು ಅರ್ಥವಲ್ಲ. ಅದರ ಅರ್ಥ ಅಪರಿಪೂರ್ಣಜ್ಞಾನ ಎಂಬುದಾಗಿ ಭಾವಿಸಬೇಕು.

ಕಾಶ್ಮೀರಶೈವದರ್ಶನ ಹಾಗೂ ವೀರಶೈವದರ್ಶನ—ಈ ಎರಡೂ ದರ್ಶನ ಅಥವಾ ಚಿಂತನ ಪಂಥಗಳ ಪ್ರಕಾರ ವಿಶ್ವಪ್ರಜ್ಞೆಯನ್ನು ಸೀಮಿತಾಂಶಕ್ಕೆ ನಿರ್ಬಂಧಿಸುವ ಅಂದರೆ ಅಣುವಿಗೆ ಪರಿಮಿತಗೊಳಿಸುವ—ಮೊಟ್ಟ ಮೊದಲ ಮೂಲಭೂತ ನಿಯಂತ್ರಕ ಉಪಾಧಿ ಎಂದರೆ ಆಣವಮಲ. ಇದು ಪರಮಪ್ರಭುವಿನ ಇಚ್ಛಾಶಕ್ತಿಯ ಪರಿಣಾಮ. ಇದು ಅಂತರ್ನಿಹಿತವಾಗಿರುವ ಅಜ್ಞಾನ. ಮುಂದಿನದು ಮಾಯೀಯಮಲ—ಇದು ಇನ್ನೊಂದು ನಿರ್ಬಂಧಕ ಉಪಾಧಿ. ಇದೇ ಜೀವಾತ್ಮನಲ್ಲಿ ಭೇದಪ್ರಜ್ಞೆ ಮೂಡಲು ಕಾರಣವಾಗುತ್ತದೆ. ಇದು ಜ್ಞಾನಶಕ್ತಿಯ ನಿಯಮನದ ಪರಿಣಾಮ. ಇದಕ್ಕೆ ತೀರ ಹತ್ತಿರವಾಗಿರುವ ಮತ್ತೊಂದು ಅಪರಿಶುದ್ಧತೆಯೆಂದರೆ ಕರ್ಮಮಲ ಅಥವಾ ಕಾರ್ಮಿಕಮಲ. ಇದು ಲೌಕಿಕ ಕರ್ತವ್ಯಗಳ ನಿರ್ವಹಣೆ ಮತ್ತು ಅವುಗಳ ಪರಿಣಾಮಗಳ ಫಲ. ಜೀವಾತ್ಮನನ್ನು ಆಣವಮಲ, ಮಾಯೀಯಮಲ ಮತ್ತು ಕಾರ್ಮಿಕಮಲಗಳೆಂಬ ಈ ಮೂರು ಅಪರಿಶುದ್ಧತೆಗಳು ಆವರಿಸಿಕೊಂಡಿರುತ್ತವೆ. ಕಾರ್ಯಕಾರಣಸಂಬಂಧದಿಂದಾಗಿ ಈ ಮೂರು ಮಲಗಳೂ ಪರಸ್ಪರ ಸಂಬದ್ಧವಾಗಿರುವಂಥವೆಂದು ಹೇಳಲಾಗಿದೆಯಾದರೂ, ಅವು ಒಂದಾದ ಮೇಲೆ ಒಂದು ಬರುವಂಥವೆಂದೇನೂ ಹೇಳಲಾಗಿಲ್ಲ. ಈ ಮೂರು ಬಗೆಯ ಅಪರಿಶುದ್ಧತೆ ಅಥವಾ ಮಲಗಳಿಂದಾಗಿ ಜೀವಾತ್ಮ ಬಂಧನಕ್ಕೆ ಒಳಗಾಗುತ್ತಾನೆ.

**ಉಪಾಯಗಳು :** ಜೀವಾತ್ಮ ವಾಸ್ತವವಾಗಿ ವಿಶ್ವಾತ್ಮನೊಂದಿಗೆ ಅಭಿನ್ನನಾಗಿದ್ದರೂ, ಆಣವ, ಮಾಯೀಯ ಮತ್ತು ಕಾರ್ಮಿಕಮಲಗಳೆಂಬ ಮೂರು ಬಗೆಯ ನಿರ್ಬಂಧಗಳಿಂದಾಗಿ, ಆ ರೀತಿ ಕಾಣಿಸಿಕೊಳ್ಳುವುದಿಲ್ಲ. ಈ ಮಲಗಳು ಅವನ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳನ್ನು ಸುತ್ತುವರಿದು ನಿಲ್ಲುತ್ತವೆ. ಸರಿಯಾದ ಬಾಹ್ಯ ಮತ್ತು ಆಂತರಿಕ ಉಪಗಮನ ವಿಧಾನಗಳಿಂದ ಪರಿಪೂರ್ಣ ಆನಂದ, ಜ್ಞಾನ ಮತ್ತು ಕರ್ತೃತ್ವಗಳನ್ನು ಸಾಧಿಸಬಹುದಾಗಿದೆ. ಈ ಸೀಮಿತಗಳಿಂದ ಅಥವಾ ಮಲಗಳಿಂದ ಬಿಡುಗಡೆ ಅಥವಾ ಮುಕ್ತಿಯನ್ನು ಸಾಧಿಸುವ ಸಲುವಾಗಿ, ಸಾಧಕನ ಸಾಮರ್ಥ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ದಿವ್ಯಜ್ಞಾನಿಗಳು ಹಲವಾರು ಮಾರ್ಗೋಪಾಯಗಳನ್ನು ಸೂಚಿಸಿದ್ದಾರೆ. ಇವನ್ನೇ 'ಉಪಾಯ'ಗಳೆಂದು ಹೇಳಲಾಗಿದೆ. ಕ್ರಮೇಣ ಪಾಶವೀವೃತ್ತಿಯನ್ನು ಮೆಟ್ಟಿ ನಿಲ್ಲುವುದು, ಉದಾತ್ತ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಹಾಗೂ ಅಂತಿಮವಾಗಿ ಆ ಸರ್ವವ್ಯಾಪಿಯೂ, ಜೀವಾತ್ಮನಲ್ಲಿ ನೆಲೆಗೊಂಡಿರುವುದೂ, ವಿಶ್ವವ್ಯಾಪಿಯಾಗಿರುವಂಥದೂ, ಅತೀಂದ್ರಿಯಸ್ಥಿತಿಯಲ್ಲಿ ಜೀವಾತ್ಮ ಮತ್ತು ವಿಶ್ವಾತ್ಮಗಳನ್ನು ಭರಿಸುವಂಥದೂ ಆದ ದಿವ್ಯಚೇತನದೊಂದಿಗೆ ಏಕೀಭವಿಸುವುದು—ಈ ಎಲ್ಲ ಉಪಾಯಗಳ ಗುರಿ. ಚೈತನ್ಯದ ಅಥವಾ ಆತ್ಮದ ಪ್ರಕಾಶಕ್ಕೆ ಅಡ್ಡಿಯಾಗಿರುವ ಈ ಮೂರು ಮಲಗಳನ್ನು ನಿವಾರಿಸುವುದೇ ಈ ಉಪಾಯಗಳ ಗುರಿ. ವಸುಗುಪ್ತ ಕಂಡುಕೊಂಡ ಹಾಗೂ ಪ್ರಚುರಪಡಿಸಿದ 'ಶಿವಸೂತ್ರ'ಗಳಲ್ಲಿ ಸೂಚಿತವಾಗಿರುವ ಉಪಾಯಗಳು ಇವು : ಶಾಂಭವೋಪಾಯ, ಶಾಕ್ತೋಪಾಯ ಮತ್ತು ಆಣವೋಪಾಯ.

**ಶಕ್ತಿಪಾತ :** ಶೈವಧರ್ಮದ ಎಲ್ಲ ದರ್ಶನಗಳಲ್ಲಿ ಎದ್ದುಕಾಣುವ ಒಂದು ವಿಶಿಷ್ಟ ಅಂಶವೆಂದರೆ 'ಶಕ್ತಿಪಾತ.' ಇದನ್ನು ದೈವಾನುಗ್ರಹವೆಂದು ಕರೆಯಲಾಗಿದೆ. ಈ ವಿಮೋಚನಾತ್ಮಕ ಕೃಪೆ ಪರಮಪ್ರಭುವಾದ ಪರಶಿವನ ಐದು ಪ್ರಮುಖ ಕಾರ್ಯಗಳಲ್ಲಿ ಒಂದು. ವ್ಯಕ್ತಿಯ ಬೌದ್ಧಿಕ ಅಥವಾ ಆಧ್ಯಾತ್ಮಿಕ ಜ್ಞಾನಸಾಧನೆ ಏನೇ ಆಗಿರಲಿ, ಪ್ರಭುವಿನ ಅನುಗ್ರಹ ದೊರೆಯದ ಹೊರತು, ಆತ್ಮಸಾಕ್ಷಾತ್ಕಾರ ಸಾಧ್ಯವಾಗುತ್ತದೆಂಬ ಭರವಸೆಯೇನೂ ಇಲ್ಲ. ಶಿವಾನುಗ್ರಹವೆಂಬುದು ಚಂಚಲಚಿತ್ತದ ಪರಿಣಾಮವೇನೂ ಅಲ್ಲ. ಅದನ್ನು ನೈತಿಕ ಹಾಗೂ ಆಧ್ಯಾತ್ಮಿಕ ಶಿಸ್ತಿನಿಂದಲೇ ಸಾಧಿಸಬೇಕಾಗುತ್ತದೆ.

ಸಾಧಕನ ಮೇಲೆ ಆದ ಶಿವಾನುಗ್ರಹದ ಸ್ವರೂಪದ ಆಧಾರದ ಮೇಲೆ ಸ್ಥೂಲವಾಗಿ ಜೀವಾತ್ಮನ ಆಧ್ಯಾತ್ಮಿಕ ವಿಕಾಸ ಅಥವಾ ಪರಿವರ್ತನೆಯ ಸ್ವರೂಪವನ್ನು ಈ ಕೆಳಗೆ ಕಾಣಿಸಿರುವಂತೆ ಅಂದಾಜು ಮಾಡಬಹುದು ಅಥವಾ ವಿವರಿಸಬಹುದು :

೧. ರುದ್ರನ ಬಗೆಗಿನ ಅವಿಚಲಿತ ಶ್ರದ್ಧೆ ಅಥವಾ ಭಕ್ತಿ

೨. ಮಂತ್ರಸಿದ್ಧಿ

೩. ತತ್ತ್ವ ಸಾಕ್ಷಾತ್ಕಾರ

೪. ಇಷ್ಟಸಿದ್ಧಿ
೫. ಜ್ಞಾನಾವಿರ್ಭಾವ (ಅಭಿನವಗುಪ್ತ)

**ಸಪ್ತಪ್ರಮಾತೃಗಳು :** ಚೇತನವಿಕಾಸದ ಪ್ರಕ್ರಿಯೆಯಲ್ಲಿ ಕಾಶ್ಮೀರಶೈವರು ಚೇತನದ ವಿವಿಧಸ್ತರಗಳನ್ನು ಏಳು ವರ್ಗಗಳಾಗಿ ವರ್ಗೀಕರಿಸಿದ್ದಾರೆ. ಪ್ರಭುವಾದ ಪರಮಶಿವನೇ ಪರಿಶುದ್ಧಚೇತನ. ತನ್ನ ವಿಶ್ವವ್ಯಾಪಿ ಸ್ವರೂಪದಲ್ಲಿ ಪರಮಶಿವನೇ ಜೀವಾತ್ಮನಾಗಿದ್ದು, ಏಳು ಹಂತಗಳಲ್ಲಿ ಶಿವ, ಮಂತ್ರ ಮಹೇಶ್ವರ, ಮಂತ್ರೇಶ್ವರ, ಮಂತ್ರ, ವಿಜ್ಞಾನಕಲ, ಪ್ರಳಯಕಲ ಮತ್ತು ಸಕಲಕಲ ಎಂದು ನಿರೂಪಿತವಾಗಿರುವ ಪರಿಮಿತಚೇತನವನ್ನು ಹೊಂದಿರುತ್ತಾನೆ. ಮೊದಲ ಪ್ರಮಾತೃವಾದ ಶಿವನು ಅವಿಭಕ್ತವಾದ ಚೇತನದ ಸ್ಥಿತಿಯನ್ನು ಉಳಿಸಿಕೊಂಡಿರುತ್ತಾನೆ. ಶಿವನಲ್ಲಿ ಮೊದಲ ಸ್ಪಂದ ಉಂಟಾದ ಶಕ್ತಿಗಳು ಆವಿರ್ಭವಿಸುತ್ತವೆ. ಈ ಅನುಕ್ರಮದಲ್ಲಿ ಎರಡನೆಯದಾದ ಶಕ್ತಿತತ್ತ್ವ ಎಲ್ಲ ಸೃಷ್ಟಿಯ ಮೂಲವಾಗಿರುತ್ತದೆ. ಮೂರನೆಯ ವರ್ಗಕ್ಕೆ ಸೇರಿದ ಸದಾಶಿವತತ್ತ್ವದಿಂದಾಗಿ ಗ್ರಾಹಕ ಮತ್ತು ಗ್ರಾಹ್ಯಗಳ ನಡುವಣ ವ್ಯತ್ಯಾಸ ಆರಂಭಗೊಳ್ಳುತ್ತದೆ. ಇಲ್ಲಿ ಗ್ರಾಹಕನನ್ನು ಮಂತ್ರಮಹೇಶ್ವರನೆಂದು ಕರೆಯಲಾಗುತ್ತದೆ. ಮುಂದೆ ಅನುಕ್ರಮವಾಗಿ ಈಶ್ವರತತ್ತ್ವದಲ್ಲಿ ಮಂತ್ರೇಶ್ವರ ಹಾಗೂ ಶುದ್ಧವಿದ್ಯಾತತ್ತ್ವದಲ್ಲಿ ಮಂತ್ರಪ್ರಮಾತೃಗಳು ಕಾಣಬರುತ್ತಾರೆ. ಮಂತ್ರಮಹೇಶ್ವರ, ಮಂತ್ರೇಶ್ವರ ಹಾಗೂ ಮಂತ್ರಪ್ರಮಾತೃಗಳಾಗಿರುವ ಜೀವಾತ್ಮರು ಸರ್ವಜ್ಞರಾಗಿದ್ದು, ಮಲತ್ರಯಗಳಿಂದ ಮುಕ್ತರಾಗಿರುತ್ತಾರೆ. ಆದರೆ ಸಮಗ್ರಚೇತನದ ಬಗೆಗಿನ ಅವರ ಅನುಭವಗಳು ಭಿನ್ನವಾಗಿರುತ್ತವೆ. ಕರ್ತೃ ಮತ್ತು ಕರ್ಮಗಳಿಗೆ ಸಂಬಂಧಿಸಿದಂತೆ ಈ ಮೂರು ಸ್ತರಗಳಲ್ಲಿನ ವ್ಯತ್ಯಾಸ ಪ್ರಜ್ಞೆಯ ಮಟ್ಟದಲ್ಲಿಯೇ ಇರುತ್ತದೆ.

ಶುದ್ಧವಿದ್ಯಾತತ್ತ್ವ ಮತ್ತು ಮಾಯಾತತ್ತ್ವಗಳ ತರುವಾಯ ಬರುವುದು ವಿಜ್ಞಾನಕಲ ಎಂಬ ಪ್ರಮಾತೃ. ಈತನು ಮಾಯೀಯಮಲ ಮತ್ತು ಕಾರ್ಮಿಕಮಲಗಳಿಂದ ಮುಕ್ತನಾಗಿದ್ದರೂ, ಆಣವಮಲದ ಅವಶೇಷ ಇದ್ದೇ ಇರುತ್ತದೆ. ಈತನಿಗೆ ಜ್ಞಾನ ಮತ್ತು ಇಚ್ಛೆ ಲಭ್ಯವಾಗಿದ್ದರೂ, ಕರ್ಮಲಾಭವಾಗಿರುವುದಿಲ್ಲ. ಈತನು ಸರ್ವಜ್ಞನಾಗಿರುತ್ತಾನೆ ಹಾಗೂ ಇಡೀ ವಿಶ್ವ ಈತನಿಗೆ ಒಂದೇ ಒಂದು ವಸ್ತುವಾಗಿರುತ್ತದೆ.

ಜೀವಾತ್ಮ ಮಾಯೆ, ಕಂಚುಕ ಮತ್ತು ಅಂತಃಕರಣಗಳಿಂದ ಆವೃತನಾಗಿದ್ದಾಗ, ಅವನನ್ನು ಪ್ರಳಯಕಾಲ ಪ್ರಮಾತೃವೆನ್ನುತ್ತಾರೆ. ಅವನಿಗೆ ಭೌತಿಕಶರೀರವಾಗಲೀ, ಸೂಕ್ಷ್ಮಶರೀರೇಂದ್ರಿಯಗಳಾಗಲೀ ಇರುವುದಿಲ್ಲ. ಪಂಚಕಂಚುಕಗಳಿಂದ ಹಾಗೂ ಪಂಚತನ್ಮಾತ್ರಗಳು, ಮನಸ್ಸು, ಅಹಂಕಾರ ಮತ್ತು ಬುದ್ಧಿಯನ್ನೊಳಗೊಂಡ ಸೂಕ್ಷ್ಮಕಾಯವಾದ ಪುರ್ಯಷ್ಟಕದಿಂದ ಅವನ ದೃಷ್ಟಿ ನಿರ್ಬಂಧಿತವಾಗಿರುತ್ತದೆ ಅಥವಾ ಪರಿಸೀಮಿತವಾಗಿರುತ್ತದೆ.

ಪುರ್ಯಷ್ಟಕಯುಕ್ತನಾದ ಜೀವಾತ್ಮ ಭೌತಿಕಶರೀರ ಮತ್ತು ಸಂವೇದನೇಂದ್ರಿಯಗಳ ಸಾಹಚರ್ಯವನ್ನು ಪಡೆದಾಗ 'ಸಕಲ'ನೆಂಬ ಪ್ರಮಾತೃವೆನ್ನಿಸಿಕೊಳ್ಳುತ್ತಾನೆ. ಅವನು ಮಲತ್ರಯಗಳಿಂದ ಬದ್ಧನಾಗಿರುತ್ತಾನೆ. ಆಣವ ಎಂಬುದು ಮೊದಲ ಮಲ. ಇದು ಅಂತಸ್ಥವಾದ ಅಜ್ಞಾನವಾಗಿದ್ದು, ಇಚ್ಛಾಶಕ್ತಿಯ ನಿರ್ಬಂಧತ್ವದ ಪರಿಣಾಮವಾಗಿರುತ್ತದೆ. ಮಾಯಾಂಗಮಲ ಎಂಬುದು ಸಾಮಾನ್ಯಪ್ರಜ್ಞೆಯ ಶಕ್ತಿಯ ನಿರ್ಬಂಧವಾಗಿರುತ್ತದೆ. ಮೂರನೆಯ ಬಗೆಯ ಮಲವೇ ಕರ್ಮಮಲ ಅಥವಾ ಕಾರ್ಮಿಕಮಲ. ಹೀಗಾಗಿ, ಸಕಲನೆಂಬ ಪ್ರಮಾತೃ ಮಲತ್ರಯಗಳಿಂದ ಬದ್ಧನಾಗಿರುತ್ತಾನೆ ಹಾಗೂ ಸುಖ-ದುಃಖ, ಹುಟ್ಟು-ಸಾವುಗಳಂಥ ದ್ವಂದ್ವಗಳಿಗೂ ಒಳಗಾಗಿರುತ್ತಾನೆ. ಹೀಗೆ ಬಂಧನದ ಪರಂಪರೆ ಪೂರ್ಣಗೊಳ್ಳುತ್ತದೆ. ಬಂಧನದ ಈ ಸ್ತರದಲ್ಲಿಯೂ ಜೀವಾತ್ಮನು ಸರ್ವಾನಂದದಾಯಿಯಾದ ಶಿವತ್ವದ ವಿಭವವನ್ನು ಹೊಂದಿಯೇ ಇರುತ್ತಾನೆ. ವೈಯಕ್ತಿಕ ಪ್ರಯತ್ನದಿಂದ ತನ್ನ ಪ್ರಜ್ಞಾವಲಯವನ್ನು ವಿಸ್ತರಿಸಲು ಹಾಗೂ ಅಂತಿಮವಾಗಿ ಶಿವತ್ವದ ಸರ್ವೋಚ್ಚ ನೆಲೆಯನ್ನು ತಲುಪಲು ಸಮರ್ಥನಾಗಿರುತ್ತಾನೆ.

**ಷಟ್‌ಸ್ಥಲ :** ವೀರಶೈವರ ಷಟ್‌ಸ್ಥಲ ಸಿದ್ಧಾಂತ ಹೀಗಿದೆ: ಲಿಂಗ ಮತ್ತು ಅಂಗಗಳೆಂಬ ಎರಡು ಮುಖಗಳಲ್ಲಿ ಮೈದೋರುವ ದಿವ್ಯತ್ವದ ಆರು ನೆಲೆಗಳೇ ಷಟ್-ಸ್ಥಲಗಳು. ಅರವಿಂದಾಶ್ರಮದ ಶ್ರೀ ಎಂ. ಪಿ. ಪಂಡಿತ್ ಅವರು ಈ ಕೆಳಕಂಡ ಮಾತುಗಳಲ್ಲಿ ಈ ಸಿದ್ಧಾಂತವನ್ನು ಚೊಕ್ಕವಾಗಿ ಸಂಗ್ರಹಿಸಿದ್ದಾರೆ: "ಪರತತ್ತ್ವವನ್ನು ಸಾಕಾರ ಹಾಗೂ ನಿರಾಕಾರ ರೂಪಗಳೆರಡರಲ್ಲಿಯೂ ಪರಿಭಾವಿಸಬಹುದು. ಆ ಕಟ್ಟಕಡೆಯದೇ ಸ್ಥಲ ('ಸ್ಥ' ಎಂದರೆ 'ಮೂಲ', 'ಲ' ಎಂದರೆ 'ಗುರಿ.'). ಸೃಷ್ಟಿಯ ಆದಿಯಲ್ಲಿದ್ದ ಆ ದಿವ್ಯತತ್ತ್ವವನ್ನೇ 'ಶಿವ'ನೆಂದು ಕರೆಯಲಾಗಿದೆ. ಆತನಲ್ಲಿ ಅಂತಸ್ಥವಾಗಿರುವ ಚೈತನ್ಯವೊಂದಿದ್ದು ಅದನ್ನು 'ವಿಮರ್ಶ ಶಕ್ತಿ' ಎನ್ನಲಾಗಿದೆ. ಇದು ಸ್ವಯಂಭೂತ್ವದ ಹಾಗೂ

ಸ್ವವಿಕಾಸದ ಸ್ಥಿತಿ. ಮೊದಲ ಸ್ಥಿತಿಯಲ್ಲಿ ಆ ಪರತತ್ವ ಅವ್ಯಕ್ತವಾಗಿರುತ್ತದೆ; ಎರಡನೆಯದರಲ್ಲಿ ಅದು ವ್ಯಕ್ತವಾಗಿರುತ್ತದೆ. ತನ್ನ ಶಕ್ತಿಯ ವಿಲಾಸಕ್ಕನುಗುಣವಾಗಿ ಪರಶಿವ ನಿರಾಕಾರಿಯಾಗಿ ಅಥವಾ ಸಾಕಾರಿಯಾಗಿ ಇರುತ್ತಾನೆ. ಅದು ಅವನ 'ಲೀಲೆ.' ಸ್ಥಲರೂಪಿಯಾದ ಶಿವನು ತನ್ನ ಲೀಲಾವಿನೋದದಲ್ಲಿ ಇಬ್ಬಗೆಯಾಗುತ್ತಾನೆ—ಲಿಂಗ ಮತ್ತು ಅಂಗವಾಗಿ; ಶಿವ ಮತ್ತು ಜೀವವಾಗಿ. ಅವಿಭಾಜ್ಯವಾಗಿರುವ 'ಶಕ್ತಿ'ಯು ಲಿಂಗಕ್ಕೆ ಸಂಬಂಧಿಸಿದಂತೆ 'ಕಲೆ'ಯಾಗಿಯೂ, ಅಂಗಕ್ಕೆ ಸಂಬಂಧಿಸಿದಂತೆ 'ಭಕ್ತಿ'ಯಾಗಿಯೂ ವ್ಯವಹೃತವಾಗುತ್ತದೆ. ಇಲ್ಲಿ ಭಕ್ತಿ ಎಂದರೆ ಆತ್ಮಸಮರ್ಪಣೆಯ ಹಾಗೂ ಉಪಾಸನೆಯ ಮನೋಭಾವ ಎಂದು ಅರ್ಥ.

ಲಿಂಗರೂಪಿಯಾದ ಶಿವ ಅಥವಾ 'ಸಕಲಾತ್ಮಕ'ನಾದ ಶಿವನೇ ಇಷ್ಟಲಿಂಗ. ಜೀವಾತ್ಮನು ಜಾಗ್ರತಾವಸ್ಥೆಯಲ್ಲಿ ಸ್ಥೂಲರೂಪದಲ್ಲಿ ಇದನ್ನು ಸಾಧಿಸಬಹುದು. ಇದೇ ತ್ಯಾಗಾಂಗ. ಈ ಇಷ್ಟಲಿಂಗ ಮತ್ತೆ ಎರಡು ರೂಪಗಳಲ್ಲಿ ತನ್ನನ್ನು ಪೂರ್ಪಡಿಸಿಕೊಳ್ಳುತ್ತದೆ: ಒಂದನೆಯದು ಆಚಾರಲಿಂಗ; ಇದರಲ್ಲಿ ತ್ಯಾಗಾಂಗ ಭಕ್ತಿಯನ್ನು ಬೆಳೆಸಿಕೊಳ್ಳುತ್ತದೆ ಹಾಗೂ ಭಕ್ತಸ್ಥಲವಾಗಿ ಪರಿಣಮಿಸುತ್ತದೆ. ಎರಡನೆಯದು ಗುರುಲಿಂಗ; ಇದರಲ್ಲಿ ತ್ಯಾಗಾಂಗದ ಭಕ್ತಿ ಬಲವತ್ತರವಾಗಿರುತ್ತದೆ ಹಾಗೂ ಅದು ಮಹೇಶಸ್ಥಲವಾಗಿ ಪರಿಣಮಿಸುತ್ತದೆ.

ಸಕಲ ಹಾಗೂ ನಿಷ್ಕಲರೂಪಿಯಾದ ಶಿವನೇ ಪ್ರಾಣಲಿಂಗ. ಜೀವಾತ್ಮನು ಸ್ವಪ್ನಸ್ಥಿತಿಯಲ್ಲಿ, ಭೋಗಾಂಗದ ಸೂಕ್ಷ್ಮರೂಪದಲ್ಲಿ ಇದನ್ನು ಸಾಧಿಸಬಹುದು. ಪ್ರಾಣಲಿಂಗವೂ ಎರಡು ರೂಪಗಳಲ್ಲಿ ತನ್ನನ್ನು ಮೂರ್ಪಡಿಸಿಕೊಳ್ಳುತ್ತದೆ: ಒಂದನೆಯದು ಶಿವಲಿಂಗ; ಎರಡನೆಯದು ಚರಲಿಂಗ. ಮೊದಲನೆಯದರಲ್ಲಿ, ಭೋಗಾಂಗ ವಿಶಿಷ್ಟರೀತಿಯಲ್ಲಿ ತನ್ನ ದೃಷ್ಟಿಯನ್ನು ಕೇಂದ್ರೀಕರಿಸುತ್ತದೆ ಹಾಗೂ ಅದು ಪ್ರಸಾದಿಸ್ಥಲವಾಗಿ ಪರಿಣಮಿಸುತ್ತದೆ. ಚರಲಿಂಗದೊಂದಿಗೆ ಭೋಗಾಂಗ ಅನುಭವಿಕವಾಗಿ ಏಕೀಭವಿಸಿದಾಗ ಅದು ಪ್ರಾಣಲಿಂಗವೇ ಆಗಿ ಪರಿಣಮಿಸುತ್ತದೆ.

ನಿಷ್ಕಲರೂಪಿಯಾದ ಶಿವನೇ ಭಾವಲಿಂಗ. ಜೀವಾತ್ಮನು ಕಾರಣಿಕರೂಪವಾದ ಯೋಗಾಂಗದಲ್ಲಿ, ಆಳವಾದ ನಿದ್ರೆಯ ಸ್ಥಿತಿಯಲ್ಲಿ ಇದನ್ನು ಸಾಧಿಸಬಹುದು. ಭಾವಲಿಂಗವೂ ಎರಡು ರೂಪಗಳಲ್ಲಿ ತನ್ನನ್ನು ಮೂರ್ಪಡಿಸಿಕೊಳ್ಳುತ್ತದೆ: ಪ್ರಸಾದಲಿಂಗ ಮತ್ತು ಮಹಾಲಿಂಗ. ಪ್ರಸಾದಲಿಂಗವನ್ನು ಕುರಿತು ಧ್ಯಾನಮಾಡುವುದರಿಂದ, ಯೋಗಾಂಗ ಆನಂದದಾಯಕವಾದ 'ಶರಣಸ್ಥಲ'ದಲ್ಲಿ ನೆಲೆಗೊಳ್ಳುತ್ತದೆ. ಮಹಾಲಿಂಗದೊಡನೆ ತಾದಾತ್ಮ್ಯವನ್ನು ಸಾಧಿಸುವುದರ ಮೂಲಕ ಯೋಗಾಂಗ ಐಕ್ಯಸ್ಥಿತಿಯನ್ನು ಸಾಧಿಸುತ್ತದೆ. ಇದೇ 'ಐಕ್ಯಸ್ಥಲ.'

ಹೀಗೆ ದಿವ್ಯಸತ್ಯ ಸಕಲ ಹಾಗೂ ನಿಷ್ಕಲರೂಪಗಳೆರಡರ ಸಂಭಾವ್ಯತೆಯನ್ನೂ ಒಪ್ಪಿಕೊಳ್ಳುತ್ತದೆ. ಶಿವ, ಶಕ್ತಿ, ಸದಾಶಿವ, ಈಶ್ವರ, ಸದ್ವಿದ್ಯಾ, ಮಾಯಾ, (ಕಲಾ, ನಿಯತಿ, ರಾಗ, ವಿದ್ಯಾ ಮತ್ತು ಕಾಲಗಳನ್ನು ಒಳಗೊಂಡ) ಪಂಚಕಂಚುಕಗಳು, ಪುರುಷ, ಪ್ರಕೃತಿ, ಮಹತ್, ಅಹಂಕಾರ, ಪಂಚತನ್ಮಾತ್ರಗಳು, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮತ್ತು ಪಂಚಭೂತಗಳೆಂಬ ೩೬ ತತ್ವಗಳ ಅಭಿವ್ಯಕ್ತಿಯ ಮೂಲಕ ಬ್ರಹ್ಮಾಂಡದ ವಿಕಾಸ ನಡೆಯುತ್ತದೆ. ತನ್ನ ಶಕ್ತಿ ಅರಳಿ ನಿಂತಾಗ ಶಿವ ಸರ್ವವ್ಯಾಪಿಯಾದ ಈ ೩೬ ತತ್ವಗಳಲ್ಲಿಯೂ ಮೆರೆಯುತ್ತಾನೆ. ಅವನು ಈ ಎಲ್ಲ ತತ್ತ್ವಗಳನ್ನೂ ಪ್ರವೇಶಿಸುತ್ತಾನೆ. ಇಷ್ಟಾಗಿಯೂ ತಾನು ಹಿಂದೆಂದಿನಿಂದಲೂ ಇದ್ದ, ಮುಂದೆ ಎಂದೆಂದೂ ಇರುವಂಥ ತನ್ನ ಆದ್ಯಸ್ಥಿತಿಯಲ್ಲಿಯೇ ಇರುತ್ತಾನೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ, ಈ ಸೃಷ್ಟಿ ಆ ದಿವ್ಯಸತ್ಯದ ಆತ್ಮರೂಪಣವೇ ಆಗಿರುತ್ತದೆ. ಅಭಿವ್ಯಕ್ತಿಯ ಪ್ರತಿಯೊಂದು ಸ್ತರದಲ್ಲಿಯೂ ತತ್ವತಃ ಸೃಷ್ಟಿಕರ್ತನಿಗೂ ಸೃಷ್ಟಿಗೂ, ಲಿಂಗ ಮತ್ತು ಅಂಗಕ್ಕೂ ನಡುವೆ ಒಂದು ಅನನ್ಯತೆ ಇದ್ದೇ ಇರುತ್ತದೆ. ಪ್ರತಿಯೊಂದು ಸ್ತರದಲ್ಲಿಯೂ ಈ ಐಕ್ಯದ ಮನವರಿಕೆಯಾಗಬೇಕೆಂಬುದೇ ಈ ಸಾಧನೆಯ ಉದ್ದೇಶ. ಹೀಗಾದಲ್ಲಿ, ಶಿವ ಮತ್ತು ಜೀವರ ನಡುವಣ ಅನನ್ಯತೆಯ ವಿಷಯದಲ್ಲಿ ಸಂಪೂರ್ಣಸಾಮರಸ್ಯವನ್ನು ಸಾಧಿಸಿದಂತಾಗುತ್ತದೆ." ೩೬ ತತ್ವಗಳ ಅಭಿವ್ಯಕ್ತಿಯನ್ನು ಕ್ರಮಶಃ ೫, ೬ ಮತ್ತು ೨೫ ತತ್ವಗಳನ್ನೊಳಗೊಂಡಿರುವ ಚಿತ್, ಚಿತ್-ಅಚಿತ್ ಮತ್ತು ಅಚಿತ್ ಎಂಬ ಮೂರು ವರ್ಗಗಳಲ್ಲಿ ಅಥವಾ ೧೧ ಲಿಂಗತತ್ವಗಳನ್ನು ಮತ್ತು ೨೫ ಲಿಂಗತತ್ವಗಳನ್ನು ಒಳಗೊಂಡಿರುವ ಎರಡು ವರ್ಗಗಳಲ್ಲಿ ಸಮೂಹೀಕರಿಸಬಹುದು.

**ಅಷ್ಟಾವರಣ :** ಪಾರಮಾರ್ಥಿಕತೆಯನ್ನು ಹಾಗೂ ಪರಮಪ್ರಭುವಿನೊಡನೆ ಆತ್ಯಂತಿಕ ಐಕ್ಯವನ್ನು ಸಾಧಿಸಲು ಎಂಟು ನೆರವುಗಳು ಲಭ್ಯವಾಗುತ್ತವೆ. ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ ಮತ್ತು ಮಂತ್ರ—ಇವೇ ಆ ಎಂಟು ನೆರವುಗಳು. ಶಿವಜ್ಞಾನದ ಬಗೆಗೆ ದೀಕ್ಷೆಯನ್ನು ಕೊಡುವ ಹಾಗೂ ದೀಕ್ಷಾನಂತರದಲ್ಲಿ ಶಿವನ ಭಕ್ತಿ ಮತ್ತು ಉಪಾಸನೆಯ ವಿಷಯದಲ್ಲಿ ಮಾರ್ಗದರ್ಶನ ಮಾಡುವ ವ್ಯಕ್ತಿಯೇ ಗುರು. ಲಿಂಗವೇ

ಶಿವ. ಪರಿಪೂರ್ಣತೆಯನ್ನು ಸಾಧಿಸಿರುವ ಜೀವಾತ್ಮನೇ ಜಂಗಮ. ಮುಕ್ತಿಸಾಧಕನು ಈ ಮೂವರ ಮುಂದೆ ತನ್ನ ಸರ್ವಸ್ವವನ್ನೂ ಸಮರ್ಪಿಸಬೇಕು. ಹಾಗೂ ದೈವಕೃಪೆಯನ್ನು ಪಡೆಯುವ ಹಾಗೂ ಶಿವನೊಡನೆ ಐಕ್ಯವನ್ನು ಸಾಧಿಸುವ ಸಲುವಾಗಿ ಇವರನ್ನು ಪೂಜಿಸಬೇಕು. ಇವೇ ದಿವ್ಯತತ್ತ್ವದ ಮೂರು ಮುಖಗಳು. ಈ ಮೇಲಿನ ವಿವರಣೆಗೆ ತಕ್ಕಂತಿರುವ ಗುರು ಮತ್ತು ಜಂಗಮರು ಉಪಾಸನೆಗೆ ದೊರೆಯದೆ ಹೋದಲ್ಲಿ, ಲಿಂಗದಲ್ಲಿಯೇ ಗುರು ಮತ್ತು ಜಂಗಮರನ್ನು ಆವಾಹಿಸಿ ಲಿಂಗವನ್ನೇ ಪೂಜಿಸಬೇಕು.

"ಏಕಮೂರ್ತಿಸ್ತ್ರಯೋಭಾಗಾಃ ಗುರುರ್ಲಿಂಗಂ ತು ಜಂಗಮಮ್"

ಅಂದರೆ, ಗುರು, ಲಿಂಗ ಮತ್ತು ಜಂಗಮವೆಂಬ ಮೂರೂ ಅಂಶಗಳನ್ನೊಳಗೊಂಡಿರುವ ಒಂದು ಮೂರ್ತಿಯೆಂದರೆ ಲಿಂಗ.

ಆಧ್ಯಾತ್ಮಿಕ ಮುನ್ನಡೆಯನ್ನು ಸಾಧಿಸುವ ಸಲುವಾಗಿ ಭಕ್ತ ಎಂಟು ನಿಯಮಗಳನ್ನು ಪಾಲಿಸಬೇಕು. ಅವು ಯಾವುವೆಂದರೆ: (೧) ಗುರುವಿಗೆ ವಿಧೇಯನಾಗಿರುವುದು; (೨) ನಿತ್ಯಲಿಂಗೋಪಾಸನೆ: (೩) ಜಂಗಮರನ್ನು ಆದರಿಸುವುದು: (೪) ಭಸ್ಮಧಾರಣೆ—ಹಣೆಯ ಮೇಲೆ ಹಾಗೂ ಶರೀರದ ಇತರ ಅಂಗಾಂಗಗಳ ಮೇಲೆ; (೫) ರುದ್ರಾಕ್ಷಿಮಾಲೆಯನ್ನು ಧರಿಸುವುದು; (೬) ಗುರು ಅಥವಾ ಜಂಗಮರ ಪಾದಪೂಜೆ ಮತ್ತು ಪ್ರಕ್ಷಾಳನ ಮಾಡಿದ ಅಥವಾ ಲಿಂಗಕ್ಕೆ ಅಭಿಷೇಕವನ್ನು ಮಾಡಿದ ನೀರನ್ನು ಅಂದರೆ ಕ್ರಮಶಃ ಪಾದೋದಕ ಮತ್ತು ಅಭಿಷೇಕೋದಕಗಳನ್ನು ಕುಡಿಯುವುದು: (೭) ಪ್ರಸಾದ ಸ್ವೀಕಾರ—ಅಂದರೆ ಲಿಂಗಕ್ಕೆ ಅಥವಾ ಗುರುವಿಗೆ ಅಥವಾ ಜಂಗಮರಿಗೆ ಅರ್ಪಿಸಿದ ಬಳಿಕ ಅಡುಗೆಯ ಪಾತ್ರೆಯಲ್ಲಿ ಉಳಿದುಳಿದ ಅಥವಾ ಗುರು ಅಥವಾ ಜಂಗಮರು ಸ್ಪರ್ಶಿಸಿ ಆಶೀರ್ವದಿಸಿರುವ ಹಣ್ಣು ಅಥವಾ ಆಹಾರವನ್ನು ಸ್ವೀಕರಿಸುವುದು: (೮) ಮಂತ್ರೋಚ್ಚಾರಣೆ—ಅಂದರೆ ದೈವಧ್ಯಾನದ ಅಂಗವಾಗಿ "ಓಂ ನಮಃ ಶಿವಾಯ" ಎಂಬುದಾಗಿ ಪುನರುಚ್ಚರಿಸುತ್ತ ಹೋಗುವ ಷಡಕ್ಷರ ಮಂತ್ರ. ಇದು ಶಿವನ ಪರಿಕಲ್ಪನೆಯನ್ನು ಹಾಗೂ ಮಂಗಳದಾಯಕನಾದ ಆ ದೈವದ ಪರಿಪೂರ್ಣಾಕೃತಿಯನ್ನು ನಮ್ಮ ಕಣ್ಮುಂದೆ ಮೂಡಿಸುವ ಶಬ್ದಚಿತ್ರವನ್ನೊಳಗೊಂಡಿರುವ ಸೂತ್ರಪ್ರಾಯವಾದ ಮಾತು. ಇದು ವೀರಶೈವರ ನಿತ್ಯ ಆಚರಣೆ.

**ಸಾಧನೆ:** ಅತೀಂದ್ರಿಯ ಸತ್ಯವನ್ನು ಕುರಿತಂಥ ಚಿಂತನ ಮತ್ತು ಧ್ಯಾನಗಳಂಥ ಆಧ್ಯಾತ್ಮಿಕ ಉನ್ನತಿಯ ಧ್ಯೇಯೋದ್ದೇಶವನ್ನುಳ್ಳ ಧಾರ್ಮಿಕ ಆಚರಣೆಗಳು ಬಹುತೇಕವಾಗಿ ಎಲ್ಲ ಸಾಧನೆಗಳಿಗೂ ಸಾಮಾನ್ಯವಾಗಿರುವ ಸಂಗತಿಗಳು. ಆದರೆ, ಶಿಷ್ಟ ಧಾರ್ಮಿಕ ಆಚರಣೆಗಳೊಂದಿಗೆ ನಡೆಸಲಾಗುವ ಲಿಂಗಪೂಜೆ ವೀರಶೈವಧರ್ಮದ ವಿಶಿಷ್ಟ ಲಕ್ಷಣ. ಷಟ್-ಸ್ಥಲ ಸಿದ್ಧಾಂತ ಈ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿರುವ ಅತೀಂದ್ರಿಯಸತ್ಯದ ಆರು ಮುಖಗಳ ಬಗೆಗಿನ ಪ್ರಜ್ಞಾಪೂರ್ವಕ ನಿಲುವು. ಸತತಚಿಂತನೆ ಮತ್ತು ಧ್ಯಾನಗಳಿಂದ ಕೂಡಿದ ಈ ಪರಿಕಲ್ಪನಾತ್ಮಕ ದೃಢೀಕರಣ. ಏರುಪೇರುಗಳನ್ನೊಳಗೊಂಡಿರುವ ಪ್ರಾಪಂಚಿಕ ಜೀವನದಲ್ಲಿ ಸಾಧಕ ಅಧ್ಯಾತ್ಮಮುಖಿಯಾಗಿ ಮುನ್ನಡೆಯನ್ನು ಸಾಧಿಸಲು ಸಾಧಕನಿಗೆ ನೆರವಾಗುತ್ತದೆ. ಭೌತಿಕ ಪ್ರಪಂಚದಿಂದ ಆಧ್ಯಾತ್ಮಿಕ ಪ್ರಪಂಚದತ್ತ ತನ್ನ ಮನಸ್ಸನ್ನು ಹರಿಯಗೊಡುವಂತೆ ಅರ್ಹನಾದ ಶಿಷ್ಯನಿಗೆ ಗುರು ದೀಕ್ಷೆಯನ್ನು ಕೊಡುತ್ತಾನೆ ಹಾಗೂ ಆ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡುತ್ತಾನೆ. ಸಾಮಾನ್ಯವಾಗಿ ಅದೃಢವೂ, ಚಂಚಲವೂ, ಅಧೋಮುಖಿಯೂ ಆದ ಮನಃಪ್ರವೃತ್ತಿಯ ದೌರ್ಬಲ್ಯಗಳನ್ನು ತಡೆಹಿಡಿಯುವ ಸಲುವಾಗಿ ಸಾಧಕನಿಗೆ ಸಾಂಕೇತಿಕವಾದ ಲಿಂಗವನ್ನು ಕೊಡಲಾಗುತ್ತದೆ. ಇದರ ಜೊತೆಗೆ ತನ್ನ ಎಲ್ಲ ಚಲನವಲನಗಳಲ್ಲಿ ಹಾಗೂ ಚಟುವಟಿಕೆಗಳಲ್ಲಿ ಆ ದಿವ್ಯತತ್ತ್ವದ ಬಗ್ಗೆ ಎಚ್ಚರದಿಂದಿರುವಂತೆಯೂ ಸೂಚನೆ ಕೊಡಲಾಗುತ್ತದೆ. ಈ ಆಧ್ಯಾತ್ಮಿಕ ಆಚರಣೆಗಳ ದಿಕ್ಕಿನಲ್ಲಿ ಕೈಗೊಳ್ಳುವ ಅವನ ಪ್ರಜ್ಞಾಪೂರ್ವಕ ಪ್ರಯತ್ನಗಳು ಹಲವಾರು ಹಂತಗಳಲ್ಲಿ ಮಲತ್ರಯಗಳ ಯವನಿಕೆಗಳನ್ನು ಬದಿಗೆ ಸರಿಸುತ್ತ ನಡೆಯುತ್ತವೆ. ಆತ್ಮಪ್ರಕಾಶತ್ವ ಸಾಧಿತವಾಗುವವರೆಗೆ ಸತತವಾಗಿ ಆಧ್ಯಾತ್ಮಿಕ, ಸಂಪ್ರದಾಯಬದ್ಧ ಲಿಂಗೋಪಾಸನೆ ಅಗತ್ಯವೆಂದು ಒತ್ತಿ ಹೇಳಲಾಗಿದೆ.

**ಶಿವಯೋಗ:** ಶಿವನೊಂದಿಗೆ, ಪರಮಸತ್ಯದೊಂದಿಗೆ ಐಕ್ಯವನ್ನು ಸಾಧಿಸುವ ಯೌಗಿಕ ಪ್ರಕ್ರಿಯೆಯೇ ಶಿವಯೋಗ. ಚಿಂತನ–ಧ್ಯಾನಗಳ ಮೂಲಕ ಆಂತರಿಕವಾಗಿ ಅಥವಾ ಮಾನಸಿಕವಾಗಿ ಪ್ರಭುವನ್ನು ಪೂಜಿಸುವುದೇ ನಿಜವಾದ ಪೂಜೆ ಅಥವಾ ಉಪಾಸನೆ. ಆದರೆ, ಅದು ಬೆಳೆಯುವುದು ಮತ್ತು ವಿಕಾಸಗೊಳ್ಳುವುದು ಭೌತಿಕ ಕಾರ್ಯಾಚರಣೆಗಳೊಂದಿಗೆ ನಡೆಸುವ ಬಾಹ್ಯ ಉಪಾಸನೆಯ ಮೂಲಕವೇ. ಆದ್ದರಿಂದಲೇ 'ಶಿವಯೋಗ ಪ್ರದೀಪಿಕಾ' ಹೀಗೆಂದು ಹೇಳುತ್ತದೆ: "ಆಂತರಿಕ ಉಪಾಸನೆಯ ವಿಕಾಸದತ್ತ ಮುನ್ನಡೆಯುವ ಕ್ರಿಯಾಮಾರ್ಗರೂಪದ ಉಪಾಸನೆ ಆರಾಧಕರಿಗೆ ಆನಂದವನ್ನು ತಂದುಕೊಡುತ್ತದೆ."

ಶಿವೋಪಾಸನೆ ಮತ್ತು ಶಿವಧ್ಯಾನಕ್ಕೆ, ಶಿವನ ಪ್ರತೀಕವಾದ ಲಿಂಗವನ್ನು ದೇಹದ ಮೇಲೆ ಧರಿಸುವುದು ಅಗತ್ಯವಾಗುತ್ತದೆ. ದೇಹದ ಮೇಲೆ ಲಿಂಗವನ್ನು ಧರಿಸಲು ಸಾಧಕನ ದೀಕ್ಷೆಯನ್ನು ಕೈಗೊಳ್ಳಬೇಕಾಗುತ್ತದೆ. ಇದೊಂದು ಮುಖ್ಯ ಆಚರಣೆ. ಆತ್ಮವನ್ನು ದೇಹದಲ್ಲಿ ಬಂಧಿಸಿ ಇಡುವ ಶೃಂಖಲೆಗಳನ್ನು ಕಿತ್ತೊಗೆಯಲು ಸಾಧಕನಿಗೆ ಸಾಧನವೊಂದನ್ನು ಒದಗಿಸುವುದು ಇದರ ಉದ್ದೇಶ. ಗುರು ಪೂರ್ಣಜ್ಞಾನವನ್ನು ದಾನಮಾಡುತ್ತಾನೆ ಹಾಗೂ ಸಾಧನಾಮಾರ್ಗದ ಕೇಂದ್ರಸತ್ಯವನ್ನು ತೋರಿಸಿಕೊಡುತ್ತಾನೆ. ತನ್ನ ಪ್ರಜ್ಞಾಶಕ್ತಿಯ ಒಂದು ಭಾಗವನ್ನೂ ಅವನು ಸಾಧಕನಿಗೆ ಸಂವಹನಿಸುತ್ತಾನೆ. ಇದೇ ಸಾಧನಾಶಕ್ತಿ. ಇದು ಗುರುವಿನ ತಪಸ್ಸಿನಿಂದ ಜೀವಂತವಾಗಿರುತ್ತದೆ. ಒಮ್ಮೆ ಅದು ಶಿಷ್ಯನ ಕಾಯವನ್ನು ಪ್ರವೇಶಿಸಿತೆಂದರೆ, ಅದು ಶಿಷ್ಯನ ಸಾಧನೆಗೆ ಓಂಕಾರವನ್ನು ಹಾಡುತ್ತದೆ ; ಅವನನ್ನು ತನ್ನ ಅಧೀನಕ್ಕೊಳಪಡಿಸಿಕೊಳ್ಳುತ್ತದೆ ; ಹಾಗೂ ಅವನನ್ನು ಮುಂದೆ ಮುಂದೆ ಕೊಂಡೊಯ್ಯುತ್ತದೆ. ದೀಕ್ಷೆಯನ್ನು ಪಡೆಯಬೇಕಾದರೆ ಶಿಷ್ಯನಲ್ಲಿ ಶ್ರದ್ಧೆ, ಭಕ್ತಿ, ವಿವೇಚನೆ, ಕೃತಜ್ಞತೆ ಮತ್ತು ಉತ್ಸಾಹ ಇರಬೇಕಾಗುತ್ತದೆ. ಪವಿತ್ರೀಕರಣದ ಉದ್ದೇಶವನ್ನುಳ್ಳ ದೀಕ್ಷೆಯಲ್ಲೂ ಮೂರು ಬಗೆಗಳುಂಟು: ವೇಧಾ, ಮಂತ್ರ ಮತ್ತು ಕ್ರಿಯಾ. ಇವು ಕ್ರಮಶಃ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗದ ಜೊತೆಗೂಡಿ ಸಾಗುವ ದೀಕ್ಷೆಗಳು. ಮಾನಸಿಕ ಶಿಸ್ತು ಮತ್ತು ಸಂಸ್ಕೃತಿಯನ್ನು ತಂದುಕೊಡುವ—ಅಂದರೆ ಮಲತ್ರಯಗಳಾದ ಆಣವ, ಮಾಯೀಯ ಮತ್ತು ಕಾರ್ಮಿಕಮಲಗಳನ್ನು ನಾಶಪಡಿಸುವ ವಿಧಾನವೇ ದೀಕ್ಷೆ.

ಮೇಲೆ ಹೇಳಿದ ಮೂರು ಲಿಂಗಗಳ ಲಕ್ಷಣಗಳನ್ನು ನಿಜಗುಣ ಶಿವಯೋಗಿಗಳು ಈ ಕೆಳಗೆ ಕಾಣಿಸಿರುವಂತೆ ಸ್ಪಷ್ಟವಾಗಿ ನಿರೂಪಿಸಿದ್ದಾರೆ :

**ಇಷ್ಟಲಿಂಗ :** ಇಷ್ಟಲಿಂಗ ವ್ಯಕ್ತಿಯು 'ಚಿತ್ಕಲೆ'ಯೇ. ಇದು ಪರಿಶುದ್ಧ ಚೇತನದಿಂದ ಅಭಿನ್ನವಾದುದು. ಲಿಂಗ ತನಗೆ ತಾನೇ ಆಧಾರವಾಗಿರುವಂಥದು—"ತನಗೆ ತಾನಾಧಾರವಾಗಿರ್ಪ...." ಲಿಂಗ ಅಂದರೆ 'ಆಧಾರಸತ್ಯ' ಅಂದರೆ, ತನ್ನ ಅಸ್ತಿತ್ವಕ್ಕೆ ಅದು ಬೇರೆ ಯಾವುದನ್ನೂ ಅವಲಂಬಿಸುವುದಿಲ್ಲ ; ಹಾಗೂ ತನ್ನ 'ವಿಮರ್ಶಶಕ್ತಿ'ಯಿಂದಾಗಿ ಅದು ತನ್ನನ್ನು ತಾನು ಸೃಜಿಸಬಲ್ಲದು.

**ಪ್ರಾಣಲಿಂಗ :** ಪ್ರಾಣಲಿಂಗ ಎಂಬುದು ಅನುಭಾವಿಕಲಿಂಗ. ಅದು 'ಅನಾಹತನಾದ'ದಿಂದ ಅಭಿನ್ನವಾದುದು. ಅದು ಎಲ್ಲ ಬಗೆಯ ವಿವಿಧ 'ಚಕ್ರ'ಗಳನ್ನು ವ್ಯಾಪಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಇಡೀ ಶರೀರವನ್ನೇ ವ್ಯಾಪಿಸಿಕೊಳ್ಳುತ್ತದೆ. ಅದು ದೇಹದ ರಂಧ್ರಗಳ ಮೂಲಕ ಬೆಳಗುತ್ತದೆ. ಅದು ಪ್ರಕಾಶರೂಪವಾದುದು. ಅದು ಒಳಗಿನ ಸಾಮರಸ್ಯದ ಪ್ರತೀಕವಾಗಿರುವಂಥದು.

**ಭಾವಲಿಂಗ :** ಭಾವಲಿಂಗ ಎಂಬುದು ಮೂಲಕಾರಣ ; ಅಂದರೆ 'ಕಾರಣ', 'ಕಾರ್ಯ' ಮತ್ತು 'ಕರ್ಮ'ಗಳೆಲ್ಲ ಪರಮಕಾರಣದ ಅಭಿವ್ಯಕ್ತಿಗಳು. ಇದು ಕಾರಣತ್ವದ ಸ್ವರೂಪ. ಎಲ್ಲ ಅಸ್ತಿತ್ವದ ಸರ್ವಸಾಕ್ಷಿ. ಅದು ಎಣೆಯಿಲ್ಲದಂಥ ಪರಿಶುದ್ಧ ಆನಂದ. ಅದು ಮೌಲೀಭೂತ ಕಾರಣ. ಅದು ಸಾಕ್ಷಿಸ್ವರೂಪದ್ದು ಹಾಗೂ ಅಂತಿಮವಾಗಿ ದಿವ್ಯಪದಪ್ರದವಾದುದು.

ಶಿವಯೋಗದ ಐದು ಮೂಲಾಂಶಗಳು ಇವು: ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ ಮತ್ತು ಶಿವಾಚರಣ. ಕೊನೆಯದು ಅತ್ಯಗತ್ಯವಾದ ಅಂಶವಾಗಿದ್ದು, ಉಳಿದ ನಾಲ್ಕೂ ಅಂಶಗಳು ಅದರಲ್ಲಿ ಅಡಕವಾಗಿವೆ. ಶಿವಪೂಜೆ ಮಂತ್ರಯೋಗ, ಲಯಯೋಗ, ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗಗಳನ್ನು ಒಳಗೊಂಡಿದೆ.

**ಮುಕ್ತಿ :** ಬಂಧನದಲ್ಲಿರುವ ಜೀವಾತ್ಮನನ್ನು 'ಪಶು' ಎಂದು ಕರೆಯಲಾಗಿದೆ. ಜೀವಾತ್ಮನು ಅನಾದಿಯಾದ ಆಣವ, ಮಾಯೀಯ ಮತ್ತು ಕಾರ್ಮಿಕ ಮಲಗಳನ್ನು ಹೊಂದಿರುತ್ತಾನೆ. ಈ ಮೂರು ಬಂಧನಗಳಿಂದ ಶಾಶ್ವತವಾದ ವಿಮೋಚನೆಯನ್ನು ಪಡೆಯುವುದು ಹಾಗೂ ಅನಂತರದಲ್ಲಿ ಶಿವನ ಅನುಗ್ರಹದ ಮೂಲಕ ಶಿವನಲ್ಲಿ ಐಕ್ಯವಾಗುವುದು ಮುಕ್ತಿಯ ಮುಖ್ಯಾಂಶಗಳು. ಮುಕ್ತಿಮಾರ್ಗ ಸೃಷ್ಟಿಮಾರ್ಗಕ್ಕೆ ತದ್ವಿರುದ್ಧವಾಗಿರುವಂಥದು. ಮುಕ್ತಿದಾಯಕವಾದ ಜ್ಞಾನ ಕೇವಲ ಬೌದ್ಧಿಕ, ಜಾಗೃತಿಮಾತ್ರವಾಗಿರದೆ, ಮೂಲಭೂತ ಐಕ್ಯದ ಬಗೆಗಿನ ಆಧ್ಯಾತ್ಮಿಕ ಸ್ಫೂರ್ತಿಯಾಗಿರುತ್ತದೆ. ದೇವನನ್ನು ಎರಡು ಬಗೆಯಲ್ಲಿ—ಅಂದರೆ, ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ—ಪೂಜಿಸುವುದರ ಮೂಲಕ ಇದನ್ನು ಸಾಧಿಸಬಹುದು. ಇದಕ್ಕೆ ದೇವರ ಪ್ರತೀಕವಾದ ಲಿಂಗವನ್ನು ಪೂಜಿಸುವುದು ಅಗತ್ಯವಾಗುತ್ತದೆ. ಭಕ್ತಿಯ ಮಾರ್ಗ ಉಪಾಸ್ಯದೇವನ ಗುಣಗಳೊಂದಿಗೆ ಸಾಮ್ಯವನ್ನು ಸಾಧಿಸಿಕೊಳ್ಳುವತ್ತ ಸಾಧಕನನ್ನು ಕೊಂಡೊಯ್ಯುತ್ತದೆ. ಪರಮಶಿವನೊಡನೆ ಆತ್ಯಂತಿಕ ಐಕ್ಯವನ್ನು ಹೊಂದಿದ ಆತ್ಮದ ವಿಶಿಷ್ಟ ಲಕ್ಷಣವೆಂದರೆ ಜ್ಞೇಯಪ್ರಾಧಾನ್ಯತೆಯ ಬಗೆಗಿನ

ಅರಿವು ಸಂಪೂರ್ಣವಾಗಿ ಇಲ್ಲದಂತಾಗುವುದು. ಇದು ಬ್ರಹ್ಮಜ್ಞಾನವಲ್ಲದೆ ಬೇರೇನೂ ಅಲ್ಲ. ಧಾರ್ಮಿಕ ಕರ್ತವ್ಯಗಳನ್ನು ನೆರವೇರಿಸುವುದರ ಹಾಗೂ ಅವುಗಳ ಫಲಾಫಲಗಳನ್ನು ದೇವರಿಗೆ ಅರ್ಪಿಸಿಬಿಡುವುದರ ಮೂಲಕ ಮನಸ್ಸು ಪರಿಶುದ್ಧವಾಗುತ್ತದೆಂದೂ, ಹಾಗೂ ಭಗವದ್ಭಕ್ತಿಯು ಮೂಲಕ ದೈವಾನುಗ್ರಹ ಲಭ್ಯವಾಗುತ್ತದೆಂದೂ, ಅಂಥ ಅನುಗ್ರಹ ಮಾತ್ರವೇ ಮುಕ್ತಿಯನ್ನು ತಂದುಕೊಡಬಲ್ಲುದೆಂದೂ ಶ್ರೀಪತಿಪಂಡಿತ ಒತ್ತಿ ಹೇಳಿದ್ದಾನೆ.

ಸಾಧನೆಯ ಮೂಲಕ ಚೇತನವಿಕಾಸ ಸಾಧಿತವಾಗುವುದಕ್ಕೆ ಸಂಬಂಧಿಸಿದಂತೆ ವೀರಶೈವಧರ್ಮ ಷಟ್-ಸ್ಥಲದ ಸಾಕ್ಷಾತ್ಕಾರದ ವಿಚಾರವನ್ನು ಒತ್ತಿ ಹೇಳಿದರೆ, ಅತೀಂದ್ರಿಯಸತ್ಯದ ಅಭಿಜ್ಞಾನವೇ ಜೀವಾತ್ಮನ ಅಂತಿಮಗುರಿಯೆಂದು ಕಾಶ್ಮೀರಶೈವದರ್ಶನ ಸಾರುತ್ತದೆ.

**ಲಿಂಗಾಂಗಸಾಮರಸ್ಯ :** ಲಿಂಗಾಂಗಸಾಮರಸ್ಯವೇ ಶಿವ ಮತ್ತು ಜೀವರ ಐಕ್ಯ ಅಥವಾ ಅಭಿನ್ನತೆಯಾಗಿರುತ್ತದೆ. 'ಲಿಂಗಾಂಗಸಾಮರಸ್ಯ' ಎಂಬುದು ಪಾರಿಭಾಷಿಕ ಹೇಳಿಕೆ. ಸಾಂತವಾದ 'ಅಂಗ' ಮತ್ತು ವಿಶ್ವಾತ್ಮನ—ಅಂದರೆ 'ಲಿಂಗ'ದ ಐಕ್ಯವನ್ನು ಭಕ್ತಿಮಾರ್ಗವನ್ನು ಅನುಸರಿಸುವುದರ ಮೂಲಕ ಸಾಧಿಸಬಹುದು. ಭಕ್ತಿ ಅನೇಕ ರೂಪಗಳಲ್ಲಿ ಕಾಣಿಸಿಕೊಳ್ಳಬಹುದು: 'ಶ್ರದ್ಧಾ', 'ನೈಷ್ಠಿಕ', 'ಅವಧಾನ', 'ಅನುಭಾವ', 'ಆನಂದ' ಮತ್ತು 'ಸಮರಸ'—ಇವೆಲ್ಲ ಅದರ ವಿವಿಧರೂಪಗಳು. ಆಧ್ಯಾತ್ಮಿಕ ಅನುಶಾಸನದ ಪ್ರಮುಖ ಚಾಲಕಶಕ್ತಿಯೆಂದರೆ ಶ್ರದ್ಧಾಭಕ್ತಿಯೇ. ಅದು ಸರಳವಾದ ಹೃತ್ಪೂರ್ವಕ ಶ್ರದ್ಧೆಯಿಂದ 'ನೈಷ್ಠಿಕ' ಅಥವಾ ಭಗವಂತನ ಬಗೆಗಿನ ನಿಷ್ಠಾಪೂರ್ಣ ಭಕ್ತಿಯತ್ತ ಸಾಗುತ್ತದೆ. ಇದಕ್ಕಿಂತ ಎತ್ತರದ ಮೆಟ್ಟಲಿನದು ಅವಧಾನಭಕ್ತಿ. ಭಕ್ತಿಯ ಹಂತದಲ್ಲಿನ ಆತ್ಮಪ್ರಜ್ಞೆ ಇದು. ಇವು ಮೂರೂ ಷಟ್‌ಸ್ಥಲಿ ಭಕ್ತಿವಿಧಾನದ ಮೊದಲ ವರ್ಗದಲ್ಲಿ ಬರುತ್ತವೆ. ಇನ್ನೊಂದು ವರ್ಗದಲ್ಲಿ, ಭಕ್ತಿಯು ಅಂಶಿಕವಾಗಿ ದಿವ್ಯ ಜೀವನದ ಅನುಭವವನ್ನು ತಂದುಕೊಡುವ ಶಕ್ತಿಯನ್ನು ವಿಕಾಸಪಡಿಸುವುದರಿಂದ, ಅದನ್ನು ಅನುಭಾವವೆಂದು ಕರೆಯಲಾಗಿದೆ. ಇದು ದಿವ್ಯಶಕ್ತಿಯ ಅನುಭವದ ಆರಂಭದ ಸ್ಥಿತಿ. ಮುಂದೆ ಇದು 'ಆನಂದಭಕ್ತಿ'ಯಾಗಿ ವಿಕಾಸವನ್ನು ಹೊಂದುತ್ತದೆ ಹಾಗೂ ಅಲ್ಲಿ ದಿವ್ಯಜೀವನದ ನಿಜವಾದ ಆನಂದವೂ ಲಭ್ಯವಾಗುತ್ತದೆ. ಕೊನೆಗೆ, ಅದು ದಿವ್ಯಶಕ್ತಿಯೊಂದಿಗೆ ಒಂದಾಗುವ ದಿವ್ಯಜೀವನದ ಪೂರ್ಣ ಹಾಗೂ ಶಾಶ್ವತ ಅನುಭವದ ಹಂತಕ್ಕೆ ಏರುತ್ತದೆ. ಇದೇ ಸಮರಸ ಭಕ್ತಿ. ಈ ಆರು ವರ್ಗೀಕೃತ ಶ್ರೇಣಿಗಳಲ್ಲಿನ ಭಕ್ತರನ್ನು ಕ್ರಮವಾಗಿ ಭಕ್ತ, ಮಹೇಶ. ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂದು ಕರೆಯಲಾಗಿದೆ.

**ಕೊನೆಯ ಮಾತು :** ಭಾರತದ ತತ್ತ್ವಶಾಸ್ತ್ರಗಳ ವಿಶಿಷ್ಟ ಲಕ್ಷಣಗಳನ್ನು ಕಾಶ್ಮೀರಶೈವದರ್ಶನವೂ ಒಳಗೊಂಡಿದೆ. ಯೋಗದ ಮನೋವೈಜ್ಞಾನಿಕ ಆಚರಣೆಗಳನ್ನು. ಮೀಮಾಂಸಕರ ಅಖ್ಯಾತಿಯನ್ನು—ಅಂದರೆ, ಸ್ವಂತ ಇಚ್ಛೆಯಿಂದ ತನ್ನ ಶಕ್ತಿಗಳನ್ನು ತಾನೇ ಪರಿಮಿತಗೊಳಿಸುವುದನ್ನು—ಉಪನಿಷತ್ತುಗಳ ಅದ್ವೈತವಾದವನ್ನು, ನ್ಯಾಯ ವೈಶೇಷಿಕದ ಫಲಪ್ರಮಾಣವಾದ ಮತ್ತು ಯಥಾರ್ಥವಾದವನ್ನು ಮತ್ತು ಸಾಂಖ್ಯದ ಇಪ್ಪತ್ತೈದು ತತ್ತ್ವಗಳನ್ನು ನಾವು ಇಲ್ಲಿ ಕಾಣುತ್ತೇವೆ. ಪರತತ್ತ್ವದ ವಿಶೇಷಣಗಳನ್ನು ಒಪ್ಪಿಕೊಳ್ಳುವ ವಿಶಿಷ್ಟಾದ್ವೈತವಾದದ ಅನುಮಿತತ್ತ್ವವನ್ನು ನಾವಿಲ್ಲಿ ಕಾಣುತ್ತೇವೆ. ಕೊನೆಯದಾಗಿ, ಈ ಅನಂತವಿಶ್ವದ ಜ್ಞೇಯಪ್ರಧಾನ ಮತ್ತು ಜ್ಞಾತೃಪ್ರಧಾನ ಪರಮಸತ್ಯವನ್ನು ಅಂಗೀಕರಿಸುವುದರ ಮೂಲಕ, ಅಸ್ತಿತ್ವ ಅಥವಾ ಇರುವಿಕೆ ಮತ್ತು ವಿಭೂತಿ ಅಥವಾ ಆಗುವಿಕೆಗಳ ನಡುವೆ ಹಾಗೂ ಏಕ ಮತ್ತು ಅನೇಕಗಳ ನಡುವೆ ಕಾಣಬರುವ ವಿರುದ್ಧನಿಲುವುಗಳನ್ನು ಸಮರಸಗೊಳಿಸುತ್ತದೆ. ಪರಿಪೂರ್ಣ ಜ್ಞಾನ ಮತ್ತು ವಿವೇಕಗಳನ್ನು ಆರ್ಜಿಸಿ ಹಾಗೂ ಆತ್ಮೀಕರಿಸಿಕೊಳ್ಳಬಯಸುವ ಸಾಧಕನಿಗೆ ತನ್ನ ಮನೋವೃತ್ತಿ ಹಾಗೂ ಸಾಮರ್ಥ್ಯಗಳಿಗೆ ಅನುಗುಣವಾದ ಆಚರಣೆಗಳನ್ನು ಆಯ್ದುಕೊಳ್ಳುವ ವ್ಯಾಪಕ ಸ್ವಾತಂತ್ರ್ಯವಿದೆ. ಶಾಸ್ತ್ರಗತ ಜ್ಞಾನದೊಂದಿಗೆ ಆಂತರಿಕ ಅನುಭವವನ್ನು ಹೋಲಿಸಿ ನೋಡುವ ಮೂಲಕ ಆತ್ಮವಿಶ್ಲೇಷಣೆ ಮಾಡಿಕೊಳ್ಳಲು ಹಾಗೂ ತನ್ನ ಅನುಭವಗಳನ್ನು ಪ್ರತ್ಯೇಕೀಕರಿಸಿಕೊಂಡು ಪರೀಕ್ಷಿಸಿಕೊಳ್ಳಲು ಮತ್ತು ತನ್ನ ಸ್ಥಿತಿ ಹಾಗೂ ಹಂತಗಳನ್ನು ತಾಳೆನೋಡಿಕೊಳ್ಳಲು ಅವನಿಗೆ ವ್ಯಾಪಕವಾದ ಅವಕಾಶವಿದೆ.

ವೀರಶೈವದರ್ಶನ ಯಥಾರ್ಥವಾದಿ, ಸ್ವೇಚ್ಛಿಕವಾದಿ ಹಾಗೂ ಅನುಭಾವವಾದಿ ಪ್ರವೃತ್ತಿಗಳ ಸಂಶ್ಲೇಷಣೆಯೇ ಆಗಿದೆ. ವೀರಶೈವದರ್ಶನದ ಶಕ್ತಿವಿಶಿಷ್ಟಾದ್ವೈತವು ಕಾಶ್ಮೀರಶೈವದರ್ಶನದ ಆತ್ಮವಿಮರ್ಶೆಯ ಮುಖ್ಯ ತತ್ತ್ವಗಳನ್ನು ಆಧರಿಸಿಕೊಂಡಿದೆಯಾದರೂ ವಿಶಿಷ್ಟ ಯುಗ ಮತ್ತು ಪರಿಸರದಿಂದ ಮೂಡುವ ವಿಶಿಷ್ಟ ಲಕ್ಷಣಗಳನ್ನು ಮೈಗೂಡಿಸಿಕೊಂಡು ಜನತೆಯ ಉದ್ದೇಶ ಮತ್ತು ಮನೋವೃತ್ತಿಗಳಿಗನುಗುಣವಾದ ಅಭಿವಿನ್ಯಾಸವನ್ನು ಪಡೆದುಕೊಂಡು ಹಲವಾರು ರೀತಿಗಳಲ್ಲಿ ಅದನ್ನು ಬದಲಾಯಿಸಿಕೊಂಡಿದೆ. ಷಟ್-ಸ್ಥಲ, ಅಷ್ಟಾವರಣ ಮತ್ತು ಶಿವಯೋಗ ಇವರ ವಿಶಿಷ್ಟ

ಲಕ್ಷಣಗಳಾಗಿವೆ. ೧೨ನೆಯ ಶತಮಾನದಲ್ಲಿ ಒಂದು ಧಾರ್ಮಿಕ ಚಳವಳಿಯೇ ಕಾಣಿಸಿಕೊಂಡಿತು. ಶ್ರೀ ಬಸವೇಶ್ವರರು ಅನುಭಾವಿಸಂತರ ಮಹಾಸಭೆಯಾದ 'ಅನುಭವಮಂಟಪ'ವನ್ನು ಆರಂಭಿಸಿದರು. ಮಹಾ ಧಾರ್ಮಿಕ ವ್ಯಕ್ತಿತ್ವಗಳ ಸರಣಿಯನ್ನೇ ಹೊಂದಿದ್ದ ಆ ಒಕ್ಕೂಟ ಧರ್ಮ ಮತ್ತು ಸಮಾಜಗಳಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿತು. ಮೂಢನಂಬಿಕೆಗಳನ್ನು ಖಂಡಿಸಲಾಯಿತು. ಸಾಮಾಜಿಕ ಸಮಾನತೆಯನ್ನು ಎತ್ತಿಹಿಡಿಯಲಾಯಿತು. ಪೂಜೆ-ಉಪಾಸನೆಗಳಲ್ಲಿ ಸ್ತ್ರೀಯರಿಗೂ ಪುರುಷರೊಂದಿಗೆ ಸಮಾನ ಅಧಿಕಾರಗಳನ್ನು ಕೊಡಲಾಯಿತು. ಜನಜೀವನಕ್ಕೆ ಹೊಸ ಜೀವನ ಮೌಲ್ಯಗಳನ್ನು ತುಂಬಲಾಯಿತು. ಶೈವದರ್ಶನದ ಇತರ ಸಿದ್ಧಾಂತಗಳ ವಿಶಿಷ್ಟ ಲಕ್ಷಣಗಳನ್ನು ಅಳವಡಿಸಿಕೊಳ್ಳುವ ಮೂಲಕ ಹಾಗೂ ಹೊಸ ನೀತಿಸಂಹಿತೆಯನ್ನು ಹಾಗೂ ಆಧ್ಯಾತ್ಮಿಕ ಆಚರಣೆಯ ವಿಧಾನವನ್ನು ರೂಪಿಸುವ ಮೂಲಕ ಅಂದು ಅಸ್ತಿತ್ವದಲ್ಲಿದ್ದ ವೀರಶೈವಧರ್ಮವನ್ನು ಪುನಶ್ಚೇತನಗೊಳಿಸಲಾಯಿತು. ಒಟ್ಟಿನಲ್ಲಿ, ಧರ್ಮ ಎಂಬುದು ಒಂದು ಜೀವನವಿಧಾನವೆಂಬುದನ್ನು ಹಾಗೂ ಧಾರ್ಮಿಕ ಜೀವನಕ್ಕೆ ಪರಿಶುದ್ಧೀಕರಣ ಅಗತ್ಯವೆಂಬುದನ್ನು ಶಿವಶರಣರು ನಿದರ್ಶಿಸಿದರು.

---

ಅನುಗತಸಕಲಾರ್ಥೇ ಶೈವತಂತ್ರೈಃ ಸಮಸ್ತೈಃ
ಪ್ರಕಟಿತಶಿವಬೋಧಾದ್ವೈತಭಾವ ಪ್ರಸಾದೇ ।
ವಿದಧತು ಮತಿಮಸ್ಮಿನ್ ವೀರಶೈವಾ ವಿಶಿಷ್ಟಾಃ
ಪಶುಪತಿಮತಸಾರೇ ಪಂಡಿತಶ್ಲಾಘನೀಯೇ ॥

ಸಿದ್ಧಾಂತ ಶಿಖಾಮಣಿ

* * *

ಕರದೊಳ್ತಾಳ್ದ ನಿಜೇಷ್ಟಲಿಂಗದೆ ಮನಂ ಪಂಚಾಕ್ಷರಂ ವಕ್ತ್ರದೊಳ್
ಕೊರಲೊಳ್ತಾಳ್ದ ಶಿವಾಕ್ಷಮಾಲೆ ಭಸಿತಾಲೇಪಂ ಲಲಾಟಾಗ್ರದೊಳ್
ಗುರುಪಾದಾಂಬುಜ ಸೇವೆ ಕಾಯದೊಳೊಡಂಬಟ್ಟಿರ್ಪ ಭಕ್ತಂಗದಾ
ರ್ಸರಿ ನೀನಾತನಧೀನನಲ್ತೆ ಸತತಂ ಶ್ರೀಶೈಲಜಾವಲ್ಲಭಾ ॥

ಮಹಾಕವಿ ಷಡಕ್ಷರದೇವ

ಶಿವಮಾತ್ಮನಿ ಪಶ್ಯಂತಿ ಪ್ರತಿಮಾಸು ನ ಯೋಗಿನಃ ।
ಅಜ್ಞಾನಾಂ ಭಾವನಾರ್ಥಾಯ ಪ್ರತಿಮಾಃ ಪರಿಕಲ್ಪಿತಾಃ ॥

ಜಾಬಾಲದರ್ಶನೋಪನಿಷತ್

# ಅದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ

ಡಾ. ಎ. ಎಲ್. ಶಿವರುದ್ರಪ್ಪ

## ೧. ಭಾರತೀಯದರ್ಶನದ ಮೂಲ

ಭಾರತೀಯದರ್ಶನ ತುಂಬಾ ಸನಾತನವಾದದ್ದು ಎಂಬ ಮಾತು ಪ್ರಚಲಿತವಿದೆಯಷ್ಟೆ. ಇದು ಸನಾತನವೂ ಅಹುದು ಮತ್ತು ಚಿರನೂತನವೂ ನಿಜ. ಇದರ ಸನಾತನತೆ ಮತ್ತು ವಿನೂತನತೆ ಅಡಗಿರುವುದು ಇದು ತಾನು ವಿವರಿಸಲು ಹೊರಟಿರುವ ಸಮಸ್ಯೆಗಳ ಸ್ವರೂಪದಲ್ಲಿ. ಪಾಶ್ಚಿಮಾತ್ಯದಾರ್ಶನಿಕರೇ ನಿರ್ಣಯಿಸಿರುವಂತೆ ಕ್ರಿಸ್ತಪೂರ್ವ ೨೫೦೦ ವರ್ಷಗಳಿಗಿಂತಲೂ ಮೊದಲೇ ಭಾರತದ ಸಂತಶ್ರೇಷ್ಠರಾದ ಉಪನಿಷತ್‌ಕಾರರು ಜಗತ್ತಿನ ಸತ್ಯತೆಯನ್ನು ಕುರಿತು ಮೂಲಭೂತವಾದ ಕೆಲವು ಸಮಸ್ಯೆಗಳನ್ನು ಎತ್ತಿ, ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಯತ್ನಿಸಿದರು. ನಾವು ಬದುಕುತ್ತಿರುವ ಈ ವಿಶ್ವದ ನೈಜಸ್ವರೂಪ ಏನು? ಇದಕ್ಕೆ ಆದಿ ಅಂತ್ಯ ಎಂಬುದೇನಾದರೂ ಇದೆಯೇ ಎಂದು ಅವರು ಮೊಟ್ಟಮೊದಲಿಗೆ ಪ್ರಶ್ನಿಸಿದರು. ಅಂತೆಯೇ ಅವರು, ಚೇತನಸ್ವರೂಪಿಯಾದ ಮಾನವನ ಮೂಲ ಸತ್ವ ಏನು? ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯಸ್ವರೂಪಿಯಾದ ಈ ಮಾನವನಲ್ಲಿ ಅತ್ಯಂತ ನಿತ್ಯವಾದ ಶಾಶ್ವತ ಸತ್ಯ ಯಾವುದು ಎಂಬುದನ್ನು ಮೊಟ್ಟಮೊದಲಿಗೆ ಪ್ರಶ್ನಿಸಿದ ಮಹನೀಯರೂ ಇವರೇ. ಇಷ್ಟೇ ಅಲ್ಲದೆ, ಇಷ್ಟೊಂದು ವೈವಿಧ್ಯಮಯ ಹಾಗೂ ಚಲನಾತ್ಮಕವಾದ ಈ ವಿಶ್ವ ಕೇವಲ ಒಂದು ಆಕಸ್ಮಿಕವೇ ಅಥವಾ ಈ ವಿಶ್ವದ ರಚನೆಗೆ ಕಾರಣವಾದ, ಕಾಣದಕೈ ಅಂದರೆ ದೈವಶಕ್ತಿ ಬೇರೊಂದಿದೆಯೇ ಎಂಬುದನ್ನು ಕುರಿತು ಸಹ ಆಲೋಚಿಸಿದವರು ಇವರು.

ಉಪನಿಷತ್‌ಕಾರರು ಕೇಳಿದ ಈ ಮೂರು ಪ್ರಶ್ನೆಗಳ ಕಾರಣದಿಂದಾಗಿಯೇ ಭಾರತೀಯದರ್ಶನ ಸನಾತನ ಎಂದೆನಿಸಿದ್ದು. ಪ್ರಜ್ಞಾವಂತನಾದ ಮಾನವನಿಗೆ ಈ ಪ್ರಶ್ನೆಗಳು ಸದಾ ಕಣ್ಣುಮುಂದೆ ಬರುತ್ತವೆ. ಆ ಕಾರಣದಿಂದಲೇ ಇವು ಚಿರನೂತನವಾದ ಸಮಸ್ಯೆಗಳು ಎಂದೆನಿಸುವುದು. ಈ ಸಮಸ್ಯೆಗಳಿಗೆ ಪರಿಹಾರವಾಗಿ, ನಮ್ಮ ಮುಂದೆ ಕಾಣುವ ಚಲನಾತ್ಮಕವಾದ ಈ ಜಗತ್ತು ನಶ್ವರ, ಆದಿ ಅಂತ್ಯವುಳ್ಳದು, ಇದಕ್ಕೆ ಕಾರಣವಾಗಿ ಆದಿಅಂತ್ಯರಹಿತವೂ ಸರ್ವವ್ಯಾಪಿಯೂ ಆದ ಬ್ರಹ್ಮತತ್ತ್ವ ಎಂಬುದೊಂದಿದೆ ಎಂಬುದನ್ನು ಕಂಡುಕೊಂಡರು. ಇದರ ಜೊತೆಗೆ ಮುಪ್ಪು, ಸಾವು ಮತ್ತು ರೋಗರುಜಿನಗಳಿಗೆ ಅಧೀನವಾದ ಮಾನವಶರೀರದ ಹಿಂದೆ, ಚೇತನಾತ್ಮಕವಾದ ನಿತ್ಯ ಹಾಗೂ ಅಮರವಾದ ಆತ್ಮತತ್ತ್ವ ಒಂದಿದೆ ಎಂಬುದನ್ನು ಅನ್ವೇಷಿಸಿ ಅದನ್ನು ಸಾಕ್ಷಾತ್ಕರಿಸಿಕೊಂಡ ಕೀರ್ತಿ ಉಪನಿಷತ್‌ಕಾರರಿಗೆ ಸಲ್ಲುತ್ತದೆ. ಕೊನೆಗೆ, ಬ್ರಹ್ಮ ಹಾಗೂ ಆತ್ಮತತ್ತ್ವಗಳು ಬೇರಲ್ಲ, ಅವು ಮೂಲತಃ ಒಂದೇ ಸತ್ಯದ ವಿಭಿನ್ನ ಆವಿಷ್ಕಾರವಷ್ಟೇ ಎಂಬುದನ್ನು ಮನಗಂಡು, ಅದನ್ನು ಉಪನಿಷತ್ತಿನ ಸಾರರೂಪದಲ್ಲಿ ಬೋಧಿಸಿದವರು ಇವರು. ಆ ಕಾರಣದಿಂದಲೇ, ಅಹಂಬ್ರಹ್ಮಾಸ್ಮಿ ತತ್ವಂಅಸಿ, ಸೋಹಮಸ್ಮಿ ಮುಂತಾದ ಉಪನಿಷತ್ ವಾಕ್ಯಗಳನ್ನು ಮಹಾವಾಕ್ಯಗಳು ಎಂದು ಪರಿಗಣಿಸಲಾಗಿದೆ.

ಉಪನಿಷತ್ತಿನ ಈ ಸಿದ್ಧಾಂತವನ್ನೇ ಮುಂದೆ ಬಂದ ಆಚಾರ್ಯರೆಲ್ಲರೂ ತಮ್ಮದೇ ಆದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ಪ್ರಸ್ಥಾನತ್ರಯಗಳಲ್ಲಿ ಬಹುಮುಖ್ಯವಾದ ಉಪನಿಷತ್ತುಗಳನ್ನೇ ಆಧಾರವಾಗಿಟ್ಟುಕೊಂಡು ತಾವು ಪ್ರತಿಪಾದಿಸಿದ ಸಿದ್ಧಾಂತವನ್ನು ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾಗಿ ಹೆಸರಿಸಿದ್ದಾರೆ. ಅವರು ಪ್ರತಿಪಾದಿಸಿರುವ ಈ ಸಿದ್ಧಾಂತಗಳ ನಡುವೆ ಮೂಲಭೂತವಾದ ಸಾಮ್ಯವಿದ್ದರೂ, ಸ್ಥೂಲದಲ್ಲಿ ಕೆಲವು ವ್ಯತ್ಯಾಸಗಳು ಕಾಣಬರುತ್ತವೆ. ಆತ್ಮ, ಬ್ರಹ್ಮ ಮತ್ತು ವಿಶ್ವದ ಅಸ್ತಿತ್ವವನ್ನು ಇವರೆಲ್ಲರೂ ಒಪ್ಪುತ್ತಾರಾದರೂ, ಅವು

ಗಳ ನಡುವಿನ ಸಂಬಂಧ ಮತ್ತು ಅವುಗಳ ಸತ್ಯತೆಯನ್ನು ವಿವರಿಸುವ ರೀತಿಯಲ್ಲಿ ಈ ವಿವಿಧ ದರ್ಶನಗಳ ನಡುವೆ ವ್ಯತ್ಯಾಸ ಕಾಣುತ್ತದೆ.

## ೨. ಅದ್ವೈತದ ಸ್ವರೂಪ

ಜೀವ, ಜಗತ್ತು ಮತ್ತು ದೇವ ಈ ಮೂರರ ಸಂಬಂಧವನ್ನು ವಿವರಿಸುವಾಗ ಆಚಾರ್ಯ ಶಂಕರರು, ಅದ್ವೈತದ ನಿಲುವನ್ನು ತಳೆದರು. 'ಅದ್ವೈತ' ಎಂದರೆ 'ಎರಡೂ ಸಹ ಅಲ್ಲ' ಅಂದರೆ ಮೂರಂತೂ ಅಲ್ಲವೇ ಅಲ್ಲ. ಈ ಮೂರರಲ್ಲಿ ನಿಜವಾದ ಸತ್ಯ ಒಂದೇ, ಬ್ರಹ್ಮ ಮಾತ್ರವೇ ಸತ್ಯ. ಜೀವವೆಂಬುದು ಕೇವಲ ಅವಿದ್ಯೆಯಿಂದ ಕಾಣುವ ರೂಪಭೇದ. ಜಗತ್ತೆಂಬುದು ಕೇವಲ ಮಾಯೆ ಬರೆದ ಒಂದು ಮಧುರ ಚಿತ್ರ. ಅದು ಒಂದು ರೀತಿಯ ಸ್ವಪ್ನಪ್ರಜ್ಞೆ ಇದ್ದಂತೆ. ನಿಜವಾಗಿ ಜಾಗ್ರತಗೊಂಡಾಗ, ಅಜ್ಞಾನದ ಜಡತೆ ನೀಗಿದಾಗ, ಬ್ರಹ್ಮವೊಂದೇ ಸತ್ಯ ಎಂಬ ಸುಜ್ಞಾನ ಅರಿವಾಗುತ್ತದೆ. ಅದ್ವೈತ ಸಿದ್ಧಾಂತದ ಪ್ರಕಾರ ನಿತ್ಯ ಹಾಗೂ ಅಖಂಡವಾದ ನಿರ್ಗುಣಬ್ರಹ್ಮವು ಮಾಯೆಯಿಂದಾಗಿ ಸಖಂಡ ಹಾಗೂ ಸಗುಣದಂತೆ ಕಾಣುತ್ತದೆ. ಮೂಲತಃ ಬ್ರಹ್ಮನೇ ಜೀವರೂಪಿಯಾಗಿ ವ್ಯವಹರಿಸಿದರೂ ಸಹ ಜೀವನದಲ್ಲಿ ಕಾಣುವ ಬಾಹುಳ್ಯತೆ, ವೈವಿಧ್ಯತೆ, ರೂಪಭೇದ, ಗುಣಭೇದ ಇವಾವೂ ಅವನಿಗೆ ಸೇರಿದವುಗಳಲ್ಲ. ಒಬ್ಬನೇ ಸೂರ್ಯನು ಮಾಧ್ಯಮಗಳ ವೈವಿಧ್ಯದಿಂದಾಗಿ, ವಿಭಿನ್ನ ಪಾತ್ರಗಳಲ್ಲಿ ವಿಭಿನ್ನ ರೂಪದಿಂದ ಪ್ರತಿಬಿಂಬಿಸುವಂತೆ, ಶರೀರ ಬುದ್ಧಿ ಮನಸ್ಸು ಮೊದಲಾದ ಭಿನ್ನರೀತಿಯ ಮಾಧ್ಯಮಗಳಿಂದಾಗಿ ಆತ್ಮಸ್ವರೂಪಿಯಾದ ಬ್ರಹ್ಮನು ಭಿನ್ನಗೊಂಡಂತೆ ಕಾಣುತ್ತಾನೆ. ಮೂಲತಃ ಬ್ರಹ್ಮನು ಅಥವಾ ಆತ್ಮನು ಸಚ್ಚಿದಾನಂದಸ್ವರೂಪಿಯಾಗಿದ್ದು ಜೀವಿಯಲ್ಲಿ ಕಾಣುವ ಸುಖ ದುಃಖಾದಿ ದ್ವಂದ್ವದಿಂದ ನಿತ್ಯಮುಕ್ತನಾಗಿರುತ್ತಾನೆ. ಆದರೆ ಮಾಯೆಯ ಮೂಲಕ ನೋಡಿದಾಗ ಮಾತ್ರ ಜೀವ ಮತ್ತು ಜಗತ್ತಿನ ಭಾವ ಮೂಡುತ್ತದೆ. ಮಾಯೆ ಮಾಯವಾದಾಗ, ಅಂದರೆ ಮುಕ್ತಾವಸ್ಥೆಯನ್ನು ಪಡೆದವನಿಗೆ ಉಳಿಯುವ ಸತ್ಯ ಒಂದೇ—ಅದೇ ಅದ್ವೈತವಾದ ಪರಬ್ರಹ್ಮ ಅಥವಾ ನಿರ್ಗುಣಬ್ರಹ್ಮ. 'ಬ್ರಹ್ಮ ಸತ್ಯಂ ಜಗನ್ ಮಿಥ್ಯಾ' ಎನ್ನುವ ಅದ್ವೈತವಾದದ ತಿರುಳು ಇದು.

ಮಾಯೆಯ ಮೂಲಕ ವಿಶ್ವದ ಸತ್ಯತೆಯನ್ನು ನೋಡಿದಾಗ ನಮಗೆ ದೊರೆಯುವ ಅರಿವನ್ನು ವ್ಯಾವಹಾರಿಕ ಸತ್ಯ ಎಂತಲೂ, ಮಾಯಾರಹಿತನಾಗಿ ಜೀವನ್ಮುಕ್ತನ ಸ್ಥಿತಿಯಲ್ಲಿ ದೊರೆಯುವ ವಿಶ್ವದ ಪ್ರಜ್ಞೆಯನ್ನು ಪಾರಮಾರ್ಥಿಕ ಸತ್ಯ ಎಂತಲೂ, ಅದ್ವೈತದಲ್ಲಿ ಗುರುತಿಸಲಾಗಿದೆ. ಜೀವನ್ಮುಕ್ತಸ್ಥಿತಿ ದೊರೆತಾಗ ವಿಶ್ವದ ಅಸ್ತಿತ್ವ ತಾನಾಗಿಯೇ ನೀಗಿ ಹೋಗುತ್ತದೆ. ವೈವಿಧ್ಯತೆ, ಬಾಹುಳ್ಯತೆ, ಸುಖದುಃಖಾದಿ ಮಾನಸಿಕ ಪ್ರಕ್ರಿಯೆಗಳೆಲ್ಲಾ ಮಾಯವಾಗುತ್ತವೆ. ಈ ಪ್ರಕ್ರಿಯೆಗಳೆಲ್ಲಾ ಮಾಯವಾಗುವುದೇ, ಅಂದರೆ, ಇಲ್ಲದಂತಾಗುವುದೇ, ನಿಜವಾದ ಅದ್ವೈತಸ್ಥಿತಿ. ನಿಜವಾಗಿಯೂ, ಬಹು ಆಳವಾಗಿ ವಿಶ್ಲೇಷಿಸಿ ನೋಡಿದಾಗ, ಶಂಕರರ ಈ ಮಾಯೆಯ ಕಲ್ಪನೆ ಬಹಳ ವಿಶಿಷ್ಟವಾದದ್ದು. ಅದ್ವೈತದ ತಿರುಳು ಅಡಗಿರುವುದು ಈ ಒಂದು ಕಲ್ಪನೆಯಲ್ಲಿ. ಇದನ್ನು ಅತ್ಯಂತ ಸರಳಗೊಳಿಸಿ ಹೇಳುವುದಾದರೆ, ಜೀವಜಗತ್ತಿಗೆ ಮೂಲ ಮಾಯೆ, ಬ್ರಹ್ಮನು ಎಂದೂ ಅಖಂಡನೆ. ಮಾಯೆಯಾದರೋ ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿದ ನಿತ್ಯಸತ್ಯವೇನಲ್ಲ. ನಿಜವಾಗಿ ನೋಡಿದರೆ, ಅದು ಕೇವಲ ಇಲ್ಲದ್ದು, ಅದು ಇದ್ದಂತೆ ತೋರಿ ಕೊನೆಗೆ ಇಲ್ಲದಂತಾಗುವಂತಹುದು. ಇಷ್ಟೊಂದು ಕ್ಲಿಷ್ಟತರವಾದ ಈ ಮಾಯೆ ಸ್ವರೂಪವೇನೆಂಬುದನ್ನು ನಮಗೆ ಮನದಟ್ಟಾಗುವಂತೆ ವಿವರಿಸಲೋಸುಗ ಅದ್ವೈತ ಸಿದ್ಧಾಂತವು ನಾನಾರೀತಿಯ ಉಪಮಾನಗಳು ಮತ್ತು ಸಾಹಿತ್ಯಿಕ ಪ್ರತಿಮೆಗಳನ್ನು ಹೇರಳವಾಗಿ ಬಳಸುತ್ತದೆ. ರಜ್ಜು ಸರ್ಪಭ್ರಾಂತಿ, ಶುಕ್ತಿರಜತಭ್ರಾಂತಿ ಈ ಮೊದಲಾದ ಉಪಮೆಗಳ ಉದ್ದೇಶ ಈ ಅಂಶವನ್ನು ಚೆನ್ನಾಗಿ ಮನವರಿಕೆಮಾಡಿಕೊಡಬೇಕೆಂಬುದೇ. ಹಗ್ಗವನ್ನು ಕಂಡು ಹಾವೆಂದು ಭ್ರಮಿಸಿ ಓಡುವವನಂತೆ, ಬ್ರಹ್ಮವನ್ನರಿಯದ ನಾವು, ವಿಶ್ವವನ್ನೇ ಸತ್ಯವೆಂದು ತಿಳಿದು ಈ ಭವಸಾಗರದಲ್ಲಿ ತೊಳಲುತ್ತಿದ್ದೇವೆ. ವಿಶ್ವದ ಅಸ್ತಿತ್ವವನ್ನು ನಂಬಿ ಕೀರ್ತಿ ಪೂಜಾಲಾಭದಿಂದ ನಡೆಯುವ ನಮ್ಮ ಈ ಜಗದ್ವ್ಯಾಪಾರವನ್ನು ವ್ಯಾವಹಾರಿಕ ಸತ್ಯ ಎಂದು ಅದ್ವೈತ ಸಿದ್ಧಾಂತದಲ್ಲಿ ಗುರುತಿಸಲಾಗಿದೆ. ಪಾರಮಾರ್ಥಿಕ ಸತ್ಯದ ಅರಿವು ನಮಗಾಗುವವರೆಗೂ ನಮಗೆ ಈ ಜಗತ್ತಿನ ಅಸ್ತಿತ್ವದ ವಿಚಾರದಲ್ಲಿ ಯಾವ ಸಂಶಯವೂ ಮೂಡುವುದಿಲ್ಲ. ಒಂದು ರೀತಿಯಲ್ಲಿ ಮಾಯೆಯ ಸಂತಾನವೆನಿಸಿದ ಜೀವ ಮತ್ತು ಜಗತ್ತಿನ ಪ್ರಜ್ಞೆ ಪೂರ್ಣವಾಗಿ ಸಂದಿಹೋದಾಗ, ಅದ್ವೈತಬ್ರಹ್ಮದ ಪ್ರಜ್ಞೆಯೊಂದೇ ಕೊನೆಗುಳಿಯುವಂತಹುದು. ಆ ಸ್ಥಿತಿಯನ್ನು ಮುಟ್ಟಿದವನೇ ಜೀವನ್ಮುಕ್ತ. ಅದ್ವೈತಾನುಭವಕ್ಕೆ ಜೀವನ್ಮುಕ್ತನೊಬ್ಬನೇ ನಿಜವಾದ ಸಾಕ್ಷಿ. ಮೊದಲಿನಿಂದ

ಕೊನೆಯುವರೆಗೂ ಇರುವ ಸತ್ಯ ಒಂದೇ, ಅದೇ ಬ್ರಹ್ಮಸತ್ಯ. ಅದಕ್ಕೆ ಹೊರತಾದದ್ದೆಲ್ಲ ತೋರಿಕೆಯ ಸತ್ಯ ಅಷ್ಟೆ. ಆದ್ದರಿಂದಲೇ ಇದು ಅದ್ವೈತ ಸಿದ್ಧಾಂತ.

ಅದ್ವೈತ ದರ್ಶನದಲ್ಲಿ ಬರುವ ಮಾಯೆಯ ವಸ್ತುಸ್ಥಿತಿಯನ್ನು ಒಪ್ಪಿದ್ದೇ ಆದರೆ, ಇನ್ನು ಆ ದರ್ಶನದಲ್ಲಿ ಬರುವ ಈಶ್ವರ, ಜೀವನ್ಮುಕ್ತ, ವಿದೇಹಮುಕ್ತ ಈ ಮುಂತಾದ ಪ್ರಕ್ರಿಯೆಗಳನ್ನು ಒಪ್ಪುವುದು ಅನಿವಾರ್ಯವಾಗುತ್ತದೆ. ಇಲ್ಲದ ಮಾಯೆ, ಇದ್ದಂತಾಗಿ, ಆಮೇಲೆ ಇಲ್ಲದಂತಾಗುತ್ತದೆ ಎಂಬ ಈ ಮಾಯೆಯ ವಿವರಣೆ ಬಹುರೀತಿಯ ವಿವಾದಕ್ಕೆ ಕಾರಣವಾಗಿದೆ. ಮಾಯೆಯೆಂಬುದು ಅದ್ವೈತದಪ್ರಕಾರ ಬ್ರಹ್ಮದ ಪರಿಣಾಮವೂ ಅಲ್ಲ, ಅಥವಾ ಬ್ರಹ್ಮದ ಗುಣವೂ ಅಲ್ಲ. ಆ ಕಾರಣದಿಂದಲೇ ಅದ್ವೈತದ ಪ್ರಕಾರ ಬ್ರಹ್ಮ ನಿರ್ಗುಣನೆನಿಸಿರುವುದು. ಮಾಯೆಯು ಬ್ರಹ್ಮನಂತೆ ಆದಿ ಅಂತ್ಯರಹಿತವಾಗಿದ್ದು ನಿತ್ಯವಸ್ತುವಾಗಿದ್ದರೆ. ಆಗ ಅದು ಬ್ರಹ್ಮನಿಗೆ ಸರಿಸಾಟಿಯಾಗಿ ನಿಂತು ದ್ವೈತತತ್ವವೆನಿಸುತ್ತಿದ್ದಿತು. ಆ ರೀತಿಯ ದ್ವೈತಕ್ಕೆಡಗೊಡದೆ, ಬ್ರಹ್ಮನ ನಿರ್ಗುಣತ್ವವನ್ನು ಕಾಪಾಡಿಕೊಂಡು ಬಂದಿರುವುದೇ ಅದ್ವೈತ ಸಿದ್ಧಾಂತದ ಒಂದು ವೈಶಿಷ್ಟ್ಯತೆ. ಬಹುಸೂಕ್ಷ್ಮತರವಾದ ಈ ಮಾಯಾವಾದವು ಆಚಾರ್ಯ ಶಂಕರರ ಬುದ್ಧಿಮತ್ತೆಗೊಂದು ಸಾಕ್ಷಿ.

## ೩. ಶಕ್ತಿವಿಶಿಷ್ಟಾದ್ವೈತ

ಆಚಾರ್ಯತ್ರಯರಿಂದ ನಿರೂಪಿತವಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತಗಳಲ್ಲಿ ಕಾಣಸಿಗದ ಒಂದು ಹೊಸ ಸೈದ್ಧಾಂತಿಕ ನಿಲುವು ಶಕ್ತಿವಿಶಿಷ್ಟಾದ್ವೈತದಲ್ಲಿ ಕಾಣುತ್ತದೆ ಎಂಬ ಕಾರಣದಿಂದಲೇ ಶಕ್ತಿವಿಶಿಷ್ಟಾದ್ವೈತವು ಸ್ವತಂತ್ರವಾದ ಒಂದು ದಾರ್ಶನಿಕ ಸ್ತರವನ್ನು ಮುಟ್ಟಿನಿಂತಿದೆ. ಈ ಅಂಶವು ನಮಗೆ ಮನವರಿಕೆಯಾಗಬೇಕಾದರೆ, ಉಳಿದ ದರ್ಶನಗಳೊಂದಿಗೆ ಈ ದರ್ಶನವನ್ನೂ ತುಲನಾತ್ಮಕವಾಗಿ ಪರಿಶೀಲಿಸುವುದು ಯುಕ್ತವೆನಿಸುತ್ತದೆ. ಈ ನಾಲ್ಕು ದರ್ಶನಗಳೂ ವಿವರಿಸಬೇಕಾದ ಮೂಲತತ್ವಗಳು ಒಂದೇ ರೀತಿ ಇದ್ದು, ಜೀವ, ಜಗತ್ತು ಮತ್ತು ಬ್ರಹ್ಮ ಈ ಮೂರು ಮೂಲತತ್ತ್ವಗಳ ರಹಸ್ಯವನ್ನು ಬಿಡಿಸುವಲ್ಲಿ ಈ ನಾಲ್ಕು ದರ್ಶನಗಳು ತಮ್ಮ ತಮ್ಮ ವೈಶಿಷ್ಟ್ಯತೆಯನ್ನು ತಾವು ಕಾಪಾಡಿಕೊಂಡು ಬಂದಿವೆ ಎಂಬುದನ್ನು ಭಾರತೀಯದರ್ಶನವನ್ನು ಚೆನ್ನಾಗಿ ಬಲ್ಲವರೆಲ್ಲರೂ ಮನಗಾಣದೆ ಇರಲಾರರು.

ಅದ್ವೈತದರ್ಶನದ ಪ್ರಕಾರ, ಮಾಯೆಯಿಂದಾಗಿ ಬ್ರಹ್ಮನು ಜೀವ ಮತ್ತು ಜಗತ್ತಿನಂತೆ ಕಂಡನೇ ಹೊರತು, ಅವನು ಎಂದೂ ಜೀವ ಅಥವಾ ಜಗತ್ತಾಗಿರಲಿಲ್ಲ. ಆದ್ದರಿಂದ ಈ ದರ್ಶನದಪ್ರಕಾರ, ಮಾಯೆಯ ನಿರಸನವೇ ಮೋಕ್ಷ. ಮರೆತದ್ದನ್ನು ಸ್ಮರಿಸುವುದೇ ಜ್ಞಾನ. ತಾನು ತನ್ನ ಕೊರಳಿನಲ್ಲಿ ಸದಾ ಧರಿಸಿದ್ದ ಕಂಠಾಭರಣವನ್ನು ಮರೆತು ಪುನಃ ಸ್ಮರಿಸಿ ಮುಟ್ಟಿನೋಡಿ ಅನುಭವಿಸುವಂತೆ. ದ್ವೈತಸಿದ್ಧಾಂತದಲ್ಲಿ ಜೀವ ಮತ್ತು ಜಗತ್ತು ನಾರಾಯಣನಿಂದ ಭಿನ್ನವಿದ್ದು, ತಾವು ಅಸ್ವತಂತ್ರವಾದ್ದರಿಂದ ಸ್ವತಂತ್ರನಾದ ನಾರಾಯಣನನ್ನು ಅವಲಂಬಿಸಿ ಇರುವಂತಹವು. ಪಂಚಭೇದಗಳ ಚೌಕಟ್ಟಿನಲ್ಲಿ ನಿರೂಪಿತವಾಗಿರುವ ಈ ಸಿದ್ಧಾಂತದಪ್ರಕಾರ ಜೀವ, ಜಗತ್ತು ಯಾವ ಸ್ಥಿತಿಯಲ್ಲಿಯೂ ನಾರಾಯಣನೊಂದಿಗೆ ಒಕ್ಯಗೊಳ್ಳುವಂತಿಲ್ಲ. ಪರಾವಲಂಬಿಯಾದದ್ದು ಸ್ವಾವಲಂಬಿಯಾದದ್ದನ್ನು ಆಶ್ರಯಿಸಿ ಬಾಳಬೇಕು ಎಂಬ ತತ್ವದ ಆಧಾರದ ಮೇಲೆ ಈ ತ್ರಿಪುಟಿಯ ಸಂಬಂಧವನ್ನು ದ್ವೈತಸಿದ್ಧಾತವು ನಿರೂಪಿಸಿದೆ.

ಇನ್ನು, ವಿಶಿಷ್ಟಾದ್ವೈತದ ಪ್ರಕಾರ ಜೀವ. ಜಗತ್ತು ಮತ್ತು ದೇವ ಇವುಗಳ ನಡುವಿನ ಸಂಬಂಧ, ಗುಣ ಮತ್ತು ಗುಣಿ, ವಿಶೇಷಣ ಮತ್ತು ವಿಶಿಷ್ಟ—ಈ ನೆಲೆಗಟ್ಟಿನ ಮೇಲೆ ನಿರೂಪಿತವಾಗಿದೆ. ಗುಣ ಅಥವಾ ವಿಶೇಷಣವು ವಿಶಿಷ್ಟದೊಂದಿಗೆ ಪೂರ್ಣವಾಗಿ ಬೆರೆತು ಐಕ್ಯಗೊಳ್ಳುವುದು ಅಸಂಭವ ಎನ್ನುವುದು ಈ ಸಿದ್ಧಾಂತದ ವಾದ. ಜೀವನು ನಾರಾಯಣನ ಒಂದು ಗುಣವಿಶೇಷವಾದ್ದರಿಂದ ಜೀವನು ನಾರಾಯಣನೊಂದಿಗೆ ಐಕ್ಯಗೊಳ್ಳಲಾರನು. ವಿಶೇಷಣ ಮತ್ತು ವಿಶಿಷ್ಟ ಇವುಗಳ ನಡುವೆ ಸಾಮೀಪ್ಯ ಸಾಧ್ಯ, ಸಾರೂಪ್ಯವೂ ಇರಬಲ್ಲದು ; ಅವುಗಳ ನಡುವಿನ ಐಕ್ಯತೆಯ ಪರಾಕಾಷ್ಠೆ ಎಂದರೆ ಸಾಯುಜ್ಯ ಪದವಿ ಮಾತ್ರ. ಈ ಸ್ಥಿತಿಯನ್ನು ದಾಟಿ ಮುಂದೆ ಹೋಗುವುದು ವಿಶಿಷ್ಟಾದ್ವೈತದ ಪ್ರಕಾರ, ಪ್ರಪತ್ತಿಯಲ್ಲಿ ಶ್ರದ್ಧೆಯುಳ್ಳ ಜೀವಿಗೆ ಎಂದಿಗೂ ಸಾಧ್ಯವಿಲ್ಲ. ಸಾಯುಜ್ಯವನ್ನು ಮೀರಿ ಹೋಗುವುದು ಜೀವಿಯ ಕಿಂಕರತ್ವಕ್ಕೊಂದು ಅಪಚಾರ, ಅದು ಒಂದು ರೀತಿಯಲ್ಲಿ ಆಕ್ರಮಣ. ಆದ್ದರಿಂದಲೇ ಲೋಕಸಂಗ್ರಹದ ಗೊಡವೆ ಜೀವಿಗೆ ಬೇಡ ಎಂಬುದು ಈ ಸಿದ್ಧಾಂತದ ಒಂದು ವಿಧಿ. ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಉಪನಿಷತ್ತಿನ ಮಹಾವಾಕ್ಯಗಳೆನಿಸಿದ 'ಅಹಂಬ್ರಹ್ಮಾಸ್ಮಿ' 'ಸೋಹಮಸ್ಮಿ' 'ತತ್ವಮಸಿ' ಈ ಮಾತುಗಳನ್ನು ರಾಮಾನುಜರು ಅರ್ಥೈಸುವ ರೀತಿಯೇ ಬೇರೆ. "ಗುಲಾಬಿ ಕೆಂಪಾಗಿದೆ" ಎಂದಮಾತ್ರಕ್ಕೆ ಗುಲಾಬಿ ಮತ್ತು ಕೆಂಪು ಎರಡೂ ಒಂದೇ ಎಂದಂತಾಗು

ವುದಿಲ್ಲ. ಆ ವಾಕ್ಯದ ನಿಜವಾದ ಅರ್ಥವೇನೆಂದರೆ ಗುಲಾಬಿ ಹೂ ಕೆಂಪು ಬಣ್ಣವನ್ನು ಹೊಂದಿದೆ ಎಂದಷ್ಟೆ. ಅದೇ ರೀತಿ 'ನಾನು ಬ್ರಹ್ಮನಾಗಿದ್ದೇನೆ' ಎಂದರೆ ಆತ್ಮಸ್ವರೂಪಿಯಾದ ನಾನು ಬ್ರಹ್ಮನೊಂದಿಗೆ ರೂಪಸಾಮ್ಯ ಮತ್ತು ಗುಣ ಸಾಮ್ಯವನ್ನು ಹೊಂದಿದ್ದೇನಾದ್ದರಿಂದ ನಾನು ಬ್ರಹ್ಮನ ಸಾಯುಜ್ಯವನ್ನು ಪಡೆಯಲು ಶಕ್ತನಾಗಿದ್ದೇನೆ ಎಂಬುದು ಇದರ ಅರ್ಥ.

ಶಕ್ತಿವಿಶಿಷ್ಟಾದ್ವೈತದಪ್ರಕಾರ ಪರಶಿವನು ಸದಾ ಶಕ್ತಿಯುತನಾಗಿರುವಂತಹವನು. ಈ ಕಾರಣದಿಂದ ಇವನು ಸಗುಣನೇ ಆಗುತ್ತಾನೆ. ಆದರೆ ಇವನ ಈ ಶಕ್ತಿ ಸದಾ ಜಾಗ್ರತವಾಗಿಯೇ ಇರಬೇಕೆಂದಿಲ್ಲ. ತನ್ನ ಈ ಶಕ್ತಿಯನ್ನು ತಾನು ಮರೆತು ಇಲ್ಲವೇ ಸುಪ್ತಗೊಳಿಸಿ ಇರುವಂತಹ ಸ್ಥಿತಿಯೂ ಇವನಿಗೆ ಸಾಧ್ಯ. ಶಕ್ತಿಯ ವಿಕಾಸವೇ ಸೃಷ್ಟಿ, ಅದರ ಸಂಕೋಚವೇ ಲಯ. ಪರಶಿವನೇ ಜಗತ್ತಿನ ಸೃಷ್ಟಿಕರ್ತ, ಅಂತೆಯೇ ಅದರ ಲಯಕರ್ತನೂ ಅಹುದು. ವಿಶ್ವದ ಐಶ್ವರ್ಯಕ್ಕೆಲ್ಲಾ ಇವನೇ ಒಡೆಯನಾದ್ದರಿಂದ ಇವನು ಈಶ್ವರನೂ ಅಹುದು. ತನ್ನ ಈ ಐಶ್ವರ್ಯದ ಪ್ರಜ್ಞೆ ಪರಶಿವನಲ್ಲಿ ಮೂಡಿದೊಡನೆಯೇ ಅವನ ಶಕ್ತಿಯ ಆವಿರ್ಭಾವ ಮೊದಲಾಗುತ್ತದೆ. ವಿಶ್ವದ ಸೃಷ್ಟಿಗೆ ಅದೇ ನಾಂದಿ. ನಟರಾಜನ ಆ ಲಯಬದ್ಧ ನೃತ್ಯ ಸೃಷ್ಟಿ ಸ್ಥಿತಿ ವಿನಾಶದ ಸಾಂಕೇತಿಕ ನಿರೂಪಣೆಯಷ್ಟೆ. ಲಯಬದ್ಧತೆಯೇ ವಿಶ್ವದ ಮೂಲಧರ್ಮ. ಶಕ್ತಿಯು ಪರಶಿವನಲ್ಲಿ ಸುಪ್ತಗೊಂಡಿರುವಂತಹ ಒಂದು ಸ್ಥಿತಿಯಲ್ಲಿ, ಶಿವನ ಶಕ್ತಿ ಇದ್ದೂ ಇಲ್ಲದಂತಿರುತ್ತದೆ. ಆ ಸ್ಥಿತಿಯಲ್ಲಿಯೂ ಶಿವನು ಸಗುಣನೇ, ಆದರೆ ಅವನು ಆಗ ನಿರ್ಗುಣನಂತೆ ಕಾಣುತ್ತಾನಷ್ಟೆ.

ಅದ್ವೈತದಲ್ಲಿ ಕಾಣುವ ಮಾಯೆಗೂ ಶಕ್ತಿವಿಶಿಷ್ಟಾದ್ವೈತದ ಶಕ್ತಿಗೂ ಯಾವ ರೀತಿಯ ಹೋಲಿಕೆಯೂ ಇರಲಾರದು. ಮಾಯೆ ಪರಬ್ರಹ್ಮದ ಗುಣವಲ್ಲವಾದ್ದರಿಂದ, ಅದ್ವೈತದಲ್ಲಿನ ಪರಬ್ರಹ್ಮ ನಿರ್ಗುಣನೆಂದೆನಿಸಬಲ್ಲನು. ಆದರೆ ಜೀವ ಮತ್ತು ಜಗತ್ತಿನ ಕಲ್ಪನೆಗೆ ಮಾಯೆಯೇ ಕಾರಣವಾದ್ದರಿಂದ ಶಂಕರರ ಸಿದ್ಧಾಂತದಲ್ಲಿ ಮಾಯೆಗೆ ಮಹತ್ವದ ಸ್ಥಾನವೇನೋ ಇದೆ. ಈ ಮಾಯೆಯ ಉಗಮ ಮತ್ತು ಅದರ ವಿನಾಶ ಒಂದು ರೀತಿಯಲ್ಲಿ ನಿಗೂಢವಾಗಿಯೇ ಉಳಿಯುತ್ತದೆ. ಪರಬ್ರಹ್ಮನಂತೆ ನಿತ್ಯ ಹಾಗೂ ಸಚ್ಚಿದಾನಂದಸ್ವರೂಪಿಯಲ್ಲದ, ಹಾಗೂ ಅವನೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದದ ಈ ಮಾಯೆ ಪರಬ್ರಹ್ಮವನ್ನು ಆಚ್ಛಾದಿಸಲು ಶಕ್ತವಾಗುತ್ತದೆ ಎಂಬುದು ಅದ್ವೈತಸಿದ್ಧಾಂತದಲ್ಲಿ ಕಾಣುವ ಒಂದು ಜಟಿಲವಾದ ಸಮಸ್ಯೆ. ಶಕ್ತಿಯನ್ನು ಪರಶಿವನ ಒಂದು ವಿಶೇಷಣ ಎಂದು ಗುರುತಿಸಿದ ಶಕ್ತಿವಿಶಿಷ್ಟಾದ್ವೈತದಲ್ಲಿ ಈ ಸಮಸ್ಯೆ ಇಲ್ಲವಾದರೂ ಜಡ ಹಾಗೂ ಚೇತನಾತ್ಮಕವಾದ ಈ ವಿಶ್ವವೆಲ್ಲವೂ ಪರಶಿವನ ಶಕ್ತಿಯಿಂದಲೇ ಆವಿರ್ಭವಿಸಿ ಬಂದಿದೆ ಎಂಬುದು ಮತ್ತೊಂದು ರೀತಿಯ ತೊಡಕಿಗೆ ಕಾರಣವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ವೀರಶೈವ ಸಿದ್ಧಾಂತದಲ್ಲಿ ಕಾಣುವ ಶಕ್ತಿ ಅದ್ವೈತದರ್ಶನದಲ್ಲಿ ಬರುವ ಮಾಯೆಯಂತೆ ಅನಿತ್ಯವಾದದ್ದಲ್ಲ, ಹಾಗಾಗಿ ಪರಶಿವನು ನಿರ್ಗುಣನೂ ಅಲ್ಲ.

ಶಕ್ತಿವಿಶಿಷ್ಟಾದ್ವೈತದ ಈ ಹಿನ್ನೆಲೆಯಲ್ಲಿ ನಾವು ಈ ಜಗತ್ತನ್ನು ನೋಡಿದಾಗ ಈ ವಿಶ್ವದ ನೈಜಸ್ವರೂಪವೇ ಬೇರೊಂದು ರೀತಿಯಲ್ಲಿ ನಮಗೆ ಕಾಣುತ್ತದೆ. ವೀರಶೈವ ಸಿದ್ಧಾಂತದ ಪ್ರಕಾರ ಜಗತ್ತು ಅನಿತ್ಯವಾದದ್ದಲ್ಲ ಹಾಗೂ ಅದು ತಾನು ತೋರುವಷ್ಟು ಜಡಸ್ವರೂಪಿಯೂ ಅಲ್ಲ. ಭಗವಂತನ ಲೀಲೆಯ ಒಂದು ಪ್ರಸಂಗ ಈ ಜಗತ್ತು. ಇಲ್ಲಿ ಕಾಣುವ ಜೀವಿಗಳು ಪರಶಿವನ ಅಂಶಮಾತ್ರರು. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಅದು ಒಂದು ಕಾರ್ಯಾಗಾರ. ಈ ಟಂಕಶಾಲೆಯಲ್ಲಿ ರೂಪಗೊಂಡ ಜೀವಿಗಳು ಈ ವಿಶ್ವವ್ಯಾಪಾರದಲ್ಲಿ ಚೆನ್ನಾಗಿ ಚಲಾವಣೆಯಾಗಬೇಕು. ಈ ಜಗದ್ವ್ಯಾಪಾರದಲ್ಲಿ ಮಾನವನು ಪೂರ್ಣವಾಗಿ ಪಾಲ್ಗೊಂಡು ಇದರ ಶ್ರೇಷ್ಠತೆಯೊಂದಿಗೆ ಸ್ಪಂದಿಸಬೇಕೆಂಬುದೇ ಸೃಷ್ಟಿಯ ಉದ್ದೇಶ. ಆ ಕಾರಣದಿಂದಲೇ ಕೇವಲ ವೈರಾಗ್ಯದ ಹೆಸರಿನಲ್ಲಿ ಬದುಕಿನಿಂದ ವಿಮುಖವಾಗುವುದು ಶಕ್ತಿ ವಿಶಿಷ್ಟಾದ್ವೈತಕ್ಕೆ ಸಮ್ಮತವಲ್ಲ. ಜಗತ್ತು ಪರಶಿವನ ಒಂದು ಲೀಲೆ ಎಂದಾದ ಮೇಲೆ, ಈ ಲೀಲೆಯಲ್ಲಿ ಪಾಲ್ಗೊಳ್ಳುವಾಗ ನಾವು ಮೈಮರೆಯುವುದು ಒಂದು ರೀತಿಯಲ್ಲಿ ಸಹಜವೇ ಸರಿ. ಏಕೆಂದರೆ, ಲೀಲೆ, ಅದೆಂತದೇ ಇರಲಿ, ಅದು ನಮ್ಮನ್ನು ತನ್ಮಯಗೊಳಿಸಿ ಮೈಮರೆಸುತ್ತದೆ. ಈ ಮರೆವಿನಿಂದ ಎಚ್ಚೆತ್ತು ಅರಿವಿನತ್ತ ಸಾಗಬೇಕೆಂಬುದೇ ಶಿವಶರಣರ ಬೋಧನೆ. ಅರಿತರೆ ಶರಣ ಮರೆತರೆ ಮಾನವ ಎಂಬುದು ಆ ಬೋಧನೆಯ ಸಾರ.

## ೪. ಪರಿಸಮಾಪ್ತಿ

ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಈ ಹಿನ್ನೆಲೆಯಲ್ಲಿ ನೋಡಿದಾಗ ಹನ್ನೆರಡನೇ ಶತಮಾನದಲ್ಲಿ ಆಗಿಹೋದ ಶಿವಶರಣರ ಸಾಧನೆ ಮತ್ತು ಬೋಧನೆಗಳು ಅದೆಷ್ಟು ಅರ್ಥಪೂರ್ಣವಾದವುಗಳು ಎಂಬುದು ನಮಗೆ ಮನವರಿಕೆ

ಯಾಗುತ್ತದೆ. ಪರಶಿವನ ಆವಿರ್ಭಾವದಿಂದಾದ ಈ ವಿಶ್ವದ ಸತ್ಯತೆಯನ್ನು ಶರಣರು ಗುರುತಿಸಿದ್ದ ಕಾರಣ, ಅವರು ಮಾನವಸಮಾಜದಲ್ಲಿ ಕಂಡುಬಂದ ಅನೇಕ ದೋಷಗಳ ವಿರುದ್ಧವಾಗಿ ಕ್ರಾಂತಿಕಾರಕವಾಗಿ ಹೋರಾಡಿದರು. ಸಾಮಾಜಿಕ ಅಸಮಾನತೆಗೆ ಕಾರಣವಾದ ಜಾತಿವಾದ, ಅಸ್ಪೃಶ್ಯತೆ, ಸ್ತ್ರೀಪುರುಷರ ಅಸಮಾನತೆ, ಕಾಯಕಕ್ಕೆ ಸಂದ ಅಗೌರವ. ಈ ಮುಂತಾದ ಅರ್ಥರಹಿತ ಆಚರಣೆಗಳು ಧರ್ಮಸಮ್ಮತವಲ್ಲ ಎಂಬುದನ್ನು ಶಿವಶರಣರು ಬಹುಬೇಗ ಕಂಡುಕೊಂಡರು. ಅಣುರೇಣು ತೃಣಕಾಷ್ಠದಲ್ಲಿಯೂ, ಪರಶಿವನ ಸರ್ವವ್ಯಾಪಿತ್ವವನ್ನು ಗುರುತಿಸಿದ ಈ ಶಿವಶರಣರು ಶಿವಾನುಭವಿಗಳೂ ಆದರು. ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೂ ಹಂತಹಂತವಾಗಿ ತಮ್ಮ ಧಾರ್ಮಿಕ ಬದುಕನ್ನು ವಿಕಸಿತಗೊಳಿಸಿದ ಈ ಶರಣರು ಐಕ್ಯಸ್ಥಲದಲ್ಲಿ ನಿಂತು ಶಿವಾನುಭವಿಯಾದವನು ಜಗತ್ತಿನಲ್ಲಿ ಹೇಗೆ ವ್ಯವಹರಿಸುತ್ತಾನೆಂಬುದನ್ನು ತಮ್ಮ ಜೀವನದ ನಿದರ್ಶನದಿಂದಲೇ ತೋರಿಸಿಕೊಟ್ಟರು. ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳು ಈ ಶರಣರ ದೃಷ್ಟಿಯಲ್ಲಿ ಕೇವಲ ಸಿದ್ಧಾಂತದ ಪ್ರಕಾರಗಳಾಗಿ ಉಳಿಯಲಿಲ್ಲ. ಅವು ಶರಣರ ಜೀವನಕ್ರಮದಲ್ಲಿ ಮೈಗೂಡಿ ಬಂದು ಧಾರ್ಮಿಕಜೀವನದ ಕ್ರಿಯಾಸಾಧನಗಳಾಗಿವೆ. ಶಿವಯೋಗಕ್ಕೆ ಇವು ಮೈಲಿಗಲ್ಲುಗಳಾಗಿ ನಿಂತಿವೆ. ಬಸವಾದಿ ಶರಣರ ಅನುಷ್ಠಾನದಿಂದಾಗಿ ಶಿವಯೋಗವು ಅನುಭಾವಯೋಗ(Mystic experience)ವಾಗಿ ಪ್ರಯೋಗಗೊಂಡಿದೆ.

---

ಕಿಮಿಹ ಬಹುಭಿರುಕ್ತೈರ್ಮಂತ್ರಮೇಸಂ ಮಹಾತ್ಮಾ
ಪ್ರಣವಸಹಿತಮಾದೌ ಯಸ್ತು ಪಂಚಾಕ್ಷರಾಖ್ಯಂ ।
ಜಪತಿ ಪರಮಭಕ್ತ್ಯಾ ಪೂಜಯನ್ ದೇವದೇವಂ
ಸ ಗತದುರಿತ ಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ॥

ಸಿದ್ಧಾಂತ ಶಿಖಾಮಣಿ

* * *

ಶಿವ ನಿನ್ನಂಘ್ರಿಯನಾವನೊರ್ಮೆ ನೆನೆವಂ ಸದ್ಭಕ್ತಿಯಿಂದಾತನಂ
ದಿವಿಜರ್ಕಳ್ ನೆನೆವರ್ ತ್ವದಂಘ್ರಿಗೆರಪಂ ತಾನಾವನಾತಂಗೆ ಯೋ
ಗಿವರರ್ ತಾವೆರಪರ್ಭವನ್ನುತಿಯ ನಾವಂ ಮಾಳ್ಪನಾ ಧನ್ಯನಂ
ಸವಿನಾತಿಂ ನುತಿಗೈವುದಾಗಮಚಯಂ ಶ್ರೀಶೈಲಜಾವಲ್ಲಭಾ ॥

ಮಹಾಕವಿ ಷಡಕ್ಷರದೇವ

ಏತತ್‌ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್ ।
ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್ ॥

ಶ್ವೇತಾಶ್ವತರೋಪನಿಷತ್

# ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ

ಪ್ರೊ|| ಎಸ್. ಎಸ್. ರಾಘವಾಚಾರ್

೧

ತತ್ತ್ವಶಾಸ್ತ್ರ ಬಹಳ ಪುರಾತನವಾದುದು : ಅದು ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ಮಾನವ ತನ್ನ ಸುತ್ತಮುತ್ತ ಆವರಿಸಿರುವ ನಿಗೂಢ ವಿಶ್ವವನ್ನು ನೋಡಿ ಚಕಿತನಾಗಿದ್ದಾನೆ. ಈ ವಿಶ್ವಕ್ಕೆ ಒಂದು ಮೂಲವಿರಬೇಕು ; ಹಾಗಾದರೆ ಆ ಮೂಲ ಯಾವುದು ? ಎಂಬುದರ ಬಗ್ಗೆ ಆತನಿಗೆ ಇರುವ ತಾತ್ವಿಕ ಜಿಜ್ಞಾಸೆ ಮಾನವ ಸಹಜವಾದುದು. ಬಾಹ್ಯ ವಿಶ್ವದ ಮಾತು ಹೀಗಾದರೆ. ಇನ್ನು ಆ ಚೌಕಟ್ಟಿನಲ್ಲಿ ಸುಖಭೋಗ ದುಃಖಾದಿಗಳನ್ನು ಅನುಭವಿಸಿ. ಸಂಸಾರದ ಜಂಜಾಟದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ 'ನಾನು' ಯಾರು ? 'ನಾನು' ಎಲ್ಲಿಂದ ಬಂದೆ ? 'ನನ್ನ' ಗುರಿ ಯಾವುದು ? ಎಂಬ ಆಂತರಿಕ ರೂಢಮೂಲ ಸಮಸ್ಯೆ ಸಂದೇಹಗಳಿಗೆ ಮಾನವ ಉತ್ತರಗಳನ್ನು ಕಂಡುಹಿಡಿಯಲು ತತ್ತ್ವಶಾಸ್ತ್ರದ ಮೊರೆ ಹೊಕ್ಕಿದ್ದಾನೆ. ಈ ಸಮಸ್ಯೆ ಸಂದೇಹಗಳನ್ನು ಉತ್ತರಿಸಲು ದ್ವೈತ, ವಿಶಿಷ್ಟಾದ್ವೈತ. ಅದ್ವೈತ, ದ್ವೈತಾದ್ವೈತ, ಶಕ್ತಿವಿಶಿಷ್ಟಾದ್ವೈತ, ಶುದ್ಧ ಅದ್ವೈತ ಮುಂತಾದ ಪ್ರಮುಖ ಶಾಖೆಗಳು ಹೊರಟಿವೆ.

೨

ವಿಶಿಷ್ಟಾದ್ವೈತ ದರ್ಶನದ ಪ್ರಧಾನ ಆಚಾರ್ಯರು ಶ್ರೀ ರಾಮಾನುಜರು. ವಿಶಿಷ್ಟಾದ್ವೈತದರ್ಶನವನ್ನು 'ಉಭಯ ವೇದಾಂತ' ಎಂದೂ ಕರೆಯುತ್ತಾರೆ. ಏಕೆಂದರೆ ಈ ದರ್ಶನದ ಮೂಲಾಂಶಗಳಿಗೆ ಆಧಾರವಾಗಿ ಎರಡು ಮೂಲಗಳನ್ನು ರಾಮಾನುಜರು ಉಪಯೋಗಿಸಿಕೊಂಡಿದ್ದಾರೆ. ಒಂದು, ಸಂಸ್ಕೃತ ಮೂಲವಾದ 'ಪ್ರಸ್ಥಾನತ್ರಯ' : ಮತ್ತೊಂದು ಭಗವದ್ಭಕ್ತರಾದ ಆಳ್ವಾರರುಗಳ ಭಗವದ್ ಉನ್ಮಾದದ ಉಪದೇಶಾಮೃತ. ಆಳ್ವಾರರುಗಳ ಈ ದಿವ್ಯೋಪದೇಶ ತಮಿಳು ಭಾಷೆಯಲ್ಲಿದೆ.

ಶಕ್ತಿವಿಶಿಷ್ಟಾದ್ವೈತದರ್ಶನದಲ್ಲೂ ಎರಡು ವಿಧದ ಆಧಾರಗಳಿಗೆ ಮಾನ್ಯತೆ ನೀಡಲಾಗಿದೆ. ಶಕ್ತಿವಿಶಿಷ್ಟಾದ್ವೈತ ದರ್ಶನಕ್ಕೆ ವೈದಿಕ ಆಧಾರ ಶ್ರೀಪತಿ ಪಂಡಿತರು ಬಾದರಾಯಣರ ಬ್ರಹ್ಮಸೂತ್ರಗಳ ಮೇಲೆ ಬರೆದಿರುವ ಶ್ರೀಕರಭಾಷ್ಯವಾಗಿದೆ. ಇದಲ್ಲದೆ, ಇದಕ್ಕಿಂತ ಪುರಾತನವಾದ ಶ್ರೀ ಶಿವಯೋಗಿ ಶಿವಾಚಾರ್ಯರ 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತದರ್ಶನದ ಮೂಲಾಂಶಗಳನ್ನು ಬಹಳ ಚೆನ್ನಾಗಿ ಮನೋಜ್ಞವಾಗುವಂತೆ ವಿಶದಪಡಿಸಲಾಗಿದೆ. ಶಕ್ತಿವಿಶಿಷ್ಟಾದ್ವೈತದರ್ಶನಕ್ಕೆ ಮೂಲ ಆಚಾರ್ಯರು ಒಬ್ಬರಲ್ಲ ; ಅನೇಕ ಮಹಾಮಹಿಮರು. ಆದರೂ ಶಕ್ತಿವಿಶಿಷ್ಟಾದ್ವೈತದರ್ಶನ ಕ್ರಮಬದ್ಧವಾಗಿ, ಕ್ರಾಂತಿಕಾರಕವಾಗಿ ರೂಪುಗೊಂಡುದು ೧೨ನೇ ಶತಮಾನದ ಶಿವಶರಣರ ಕೈಯಲ್ಲಿ ; ಮುಖ್ಯತಃ ಬಸವಣ್ಣನವರ ಮುಂದಾಳುತ್ವದಲ್ಲಿ. ಶ್ರೀಪತಿ ಪಂಡಿತರ ಸಂಸ್ಕೃತ ಮೂಲದ ಜೊತೆಗೆ ಪೂರಕವಾಗಿ ನಿಂತ ಮತ್ತೊಂದು ಮೂಲ ಅನುಭಾವಿ ಶಿವಶರಣರ ವಚನಾಮೃತ, ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲು. ೨೮ ಶೈವಾಗಮ ಹಾಗೂ ಉಪಾಗಮಗಳಲ್ಲೂ ಶಕ್ತಿವಿಶಿಷ್ಟಾದ್ವೈತದ ಮೂಲಾಂಶಗಳನ್ನು ಕಾಣಬಹುದು. ಹೀಗೆ ಎರಡೂ ದರ್ಶನಗಳು—ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ—ವೇದ ಮತ್ತು ಆಗಮಗಳಿಗೆ ಗೌರವವನ್ನು ತೋರಿವೆ. ಹಾಗೆಯೇ ಯಾವ ವೇದೋಪನಿಷತ್ತುಗಳ ಜ್ಞಾನವನ್ನು ಅರಿಯದ, ಆದರೆ ತಮ್ಮ ನಿಸ್ವಾರ್ಥ ಸೇವಾ ಬುದ್ಧಿಯಿಂದ ಪರಮಾತ್ಮನಲ್ಲಿ ಅನನ್ಯಭಕ್ತಿಯನ್ನು ಹೊಂದಿ, ಜೀವನದ ಸಾರಸರ್ವಸ್ವವೆಲ್ಲಾ ಪರಮಾತ್ಮನಿಗೆ ಶರಣು ಹೋಗುವುದರಲ್ಲಿ ಅಡಗಿದೆ ಎಂದು ಪ್ರಪಂಚದ ಉನ್ನತಿಗೆ ಒಂದು ದೆಸೆಯನ್ನು ತೋರಿಸಿದ ಆಳ್ವಾರರುಗಳನ್ನು ವಿಶಿಷ್ಟಾದ್ವೈತದರ್ಶನ ಬಹಳವಾಗಿ ಗೌರವಿಸಿ ಕೊಂಡಾಡಿದರೆ, ಶಕ್ತಿವಿಶಿಷ್ಟಾದ್ವೈತದರ್ಶನ ಜಾತಿ ಕುಲ ಭೇದಗಳನ್ನು ಬದಿಗೊತ್ತಿ, ತಮ್ಮ ಸ್ವಂತ ಅನುಭವದಿಂದ ಪರಮಾತ್ಮನ ಸಾಯುಜ್ಯವನ್ನು ಕಾಯಕದಿಂದ ಪಡೆದು ಧನ್ಯರಾಗಬೇಕು

ಎಂದು ಪ್ರಪಂಚಕ್ಕೆ ಬೋಧಿಸಿದ ಶಿವಶರಣರಿಗೆ ತುಂಬು ಹೃದಯದಿಂದ ಎಲ್ಲಿಲ್ಲದ ಗೌರವಪ್ರೀತ್ಯಾದರಗಳನ್ನು ತೋರಿಸುತ್ತದೆ. ಜನರೆಲ್ಲರಲ್ಲೂ ಅಂತರ್ಯಾಮಿಯಾಗಿರುವ ಈಶ್ವರನ ಕೃಪೆಗೆ ಪಾತ್ರರಾಗಿ ಜೀವನದ ಗುರಿಯನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬುದು ಈ ಎರಡು ದರ್ಶನಗಳಿಗೂ ಸಮಾನವಾಗಿರುವ ಅಂಶ. ಈ ಎರಡೂ ದರ್ಶನಗಳು ಜನಸಾಮಾನ್ಯರಲ್ಲಿ ನವಜಾಗೃತಿಯನ್ನುಂಟುಮಾಡಿ, ಸಮಾಜದಲ್ಲಿ ಆಳವಾಗಿ ಬೇರೂರಿದ್ದ ವರ್ಣಧರ್ಮದ ಔಚಿತ್ಯವನ್ನು ಅತ್ಯಂತ ಪ್ರಬಲವಾಗಿ ಪ್ರಶ್ನಿಸಿದುವು. ವರ್ಣಧರ್ಮ ಸಮಾಜದಲ್ಲಿ ದುರ್ಬಲ ಹಾಗೂ ಸಡಿಲವಾಗಲು ಈ ಎರಡೂ ದರ್ಶನಗಳು ಜನರ ಮೇಲೆ ಬೀರಿದ ಪ್ರಭಾವ ಅಸ್ವಾದ್ಯದೃಶವಾದುದು.

ಈ ಎರಡೂ ದರ್ಶನಗಳ ತಾತ್ತ್ವಿಕ ಅಂಶಗಳನ್ನು ಈಗ ವಿಶದಪಡಿಸೋಣ.

ವಿಶಿಷ್ಟಾದ್ವೈತದರ್ಶನದ ಸಾರವನ್ನು ಹೀಗೆ ಸಂಗ್ರಹಿಸಬಹುದು: ಸತ್ಯ ಅಥವಾ ಬ್ರಹ್ಮಕ್ಕೆ ಚಿತ್ ಮತ್ತು ಅಚಿತ್ ಎಂಬ ವಿಶೇಷಣಗಳಿವೆ. ಅಂದರೆ ಅದು ಚಿತ್ ಮತ್ತು ಅಚಿತ್ ಅಂಶಗಳ ವಿಶಿಷ್ಟ. ಇಲ್ಲಿ ಬ್ರಹ್ಮ ಅಥವಾ ಸತ್ಯವನ್ನು ನಾರಾಯಣ ಎಂದು ಕರೆಯಲಾಗಿದೆ. ಚಿತ್‌ಗೆ ಇನ್ನೊಂದು ಹೆಸರೇ ಜೀವ. ಅಚಿತ್ ಜಡ ಪ್ರಪಂಚ. ಇಲ್ಲಿ ಜೀವ ಹಾಗೂ ಪ್ರಪಂಚಗಳು ನಾರಾಯಣನ ಇರುವಿಕೆಯಷ್ಟೇ ಸತ್ಯ. ಅದ್ವೈತದರ್ಶನ ಹೇಳುವಂತೆ ಅವು ಮಿಥ್ಯೆಯಲ್ಲ. ಜೀವ ಮತ್ತು ಪ್ರಪಂಚ ಎರಡೂ ವಿಭಿನ್ನ ಸತ್ಯಗಳು. ಆದರೆ ಅವು ಬ್ರಹ್ಮ (ಅಥವಾ ನಾರಾಯಣ)ನೊಡನೆ ಒಟ್ಟಿಗೆ ಸೇರಿಸಲ್ಪಟ್ಟಿವೆ. ನಾರಾಯಣ ಹಾಗೂ ಜೀವರ ನಡುವಿನ ಸಂಬಂಧ ಮತ್ತು ನಾರಾಯಣ ಹಾಗೂ ಪ್ರಪಂಚದ ನಡುವಿನ ಸಂಬಂಧ ಅತ್ಯಂತ ನಿಕಟವಾದುದು, ಬೇರ್ಪಡಿಸಲು ಅಸಾಧ್ಯವಾದುದು. ಬೇರ್ಪಡಿಸಲಾರದ ಅತ್ಯಂತ ಆತ್ಮೀಯ ಸಂಬಂಧವನ್ನು ವಿಶಿಷ್ಟಾದ್ವೈತದರ್ಶನ "ಅಪೃಥಕ್ ಸಿದ್ಧಿ" ಎಂದು ಕರೆಯುತ್ತದೆ. ಹೀಗೆ ಈ ದರ್ಶನದಲ್ಲಿ ನಾರಾಯಣನೂ ಸತ್ಯ, ಜೀವನೂ ಸತ್ಯ, ಪ್ರಪಂಚವೂ ಸತ್ಯ. ಆದರೆ ಜೀವ ಮತ್ತು ಪ್ರಪಂಚಗಳು ನಾರಾಯಣನ ಅಧೀನರು. ನಾರಾಯಣ ಅವರನ್ನು ನಿಯಂತ್ರಿಸುತ್ತಾನೆ. ನಾರಾಯಣ ನಿಯಾಮಕ: ಜೀವ ಮತ್ತು ಪ್ರಪಂಚಗಳು ನಿಯಾಮ್ಯ. ನಾರಾಯಣ ಒಡೆಯ ಅಥವಾ ಶೇಷಿ; ಜೀವ ಮತ್ತು ಪ್ರಪಂಚಗಳು ನಾರಾಯಣನ ದಾಸರು ಅಥವಾ ಶೇಷರು. ಆದುದರಿಂದಲೇ ನಾರಾಯಣ ಹಾಗೂ ಜೀವ-ಪ್ರಪಂಚದ ನಡುವಿನ ಸಂಬಂಧವನ್ನು ಶೇಷಿ-ಶೇಷ ಸಂಬಂಧ ಎಂದೂ ಕರೆಯುತ್ತಾರೆ. ಈ ದರ್ಶನದ ಸಾರ ಇನ್ನೂ ಚೆನ್ನಾಗಿ ಮನದಟ್ಟಾಗಲು ರಾಮಾನುಜರು ಶರೀರಿ ಶರೀರ ಭಾವವನ್ನು ಉಪಯೋಗಿಸಿಕೊಂಡಿದ್ದಾರೆ. ಶರೀರಿ ಅಥವಾ ಆತ್ಮ ಮತ್ತು ದೇಹಗಳ ನಡುವಿನ ಸಂಬಂಧ ಬೇರ್ಪಡಿಸಲಾರದ್ದು. ಜೀವಂತ ದೇಹ ಆತ್ಮನ ಮುಖಾಂತರವೇ ಪ್ರಕಟಗೊಳ್ಳುತ್ತದೆ. ಈ ದರ್ಶನದಲ್ಲಿ ನಾರಾಯಣನೇ ಆತ್ಮನು; ಜೀವ ಮತ್ತು ಪ್ರಪಂಚಗಳು ಆತನ ದೇಹ. ಹೀಗೆ ನಾರಾಯಣ ಮತ್ತು ಜೀವ, ಹಾಗೂ ನಾರಾಯಣ ಮತ್ತು ಪ್ರಪಂಚ ಇವುಗಳ ನಡುವೆ ಇರುವ ಸಂಬಂಧವು ಅತ್ಯಂತ ಆತ್ಮೀಯವೂ, ನಿಕಟವೂ ಆಗಿದ್ದು ಬೇರ್ಪಡಿಸಲು ಅಸಾಧ್ಯವಾದುದು.

ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಪರಮಸತ್ಯವನ್ನು ಪರಮಶಿವ ಎಂಬ ಹೆಸರಿನಿಂದ ಕರೆಯಲಾಗಿದೆ. ಪರಮಶಿವನನ್ನು 'ಲಿಂಗ' ಅಥವಾ 'ಸ್ಥಲ' ಎಂದೂ ಕರೆಯುತ್ತಾರೆ. ಪರಮಶಿವ ಯಾವಾಗಲೂ ಶಕ್ತಿಯೊಡಗೂಡಿರುತ್ತಾನೆ; ಶಕ್ತಿ ಅವನ ವಿಶೇಷಣ. ಆದುದರಿಂದಲೇ ಈ ದರ್ಶನವನ್ನು 'ಶಕ್ತಿವಿಶಿಷ್ಟಾದ್ವೈತ' ಎಂದು ಕರೆದಿದೆ.

ಪರಮಶಿವನಿಗೆ ಸ್ವಸ್ಥ ಅಥವಾ ಕೇವಲಾವಸ್ಥೆ ಮತ್ತು ಲೀಲಾವಸ್ಥೆ ಎಂಬ ಎರಡು ಬಗೆಯ ಅವಸ್ಥೆಗಳಿವೆ. ಸ್ವಸ್ಥಾವಸ್ಥೆಯಲ್ಲಿ ಪರಮಶಿವ ತನ್ನ ವಿಶೇಷಣವಾದ ಶಕ್ತಿಯೊಡಗೂಡಿ. ವಿಚಲಿತನಾಗದೆ, ನಿರ್ಲಿಪ್ತನಾಗಿ ನಿರಂತರ ಶಾಂತಿಯಿಂದ ಕೂಡಿರುತ್ತಾನೆ. ಇದನ್ನು 'ವಿಮರ್ಶ' ಎಂದು ಕರೆಯಲಾಗಿದೆ. ಪರಮಶಿವ ತನ್ನ ಸ್ವೇಚ್ಛೆಯಿಂದ ತಾನೇ ಜೀವಿಯಾಗಿ, ಪ್ರಪಂಚವಾಗಿ, ಪೂಜ್ಯ-ಪೂಜಕ ಸಂಬಂಧವನ್ನು ಹೊಂದಲು ಅಪೇಕ್ಷಿಸುತ್ತಾನೆ. ಆಗ ಶಕ್ತಿಯೊಡಗೂಡಿದ ಪರಮಶಿವ ಕ್ಷುಭಿತಗೊಂಡು ಪ್ರಪಂಚದ ೩೬ ತತ್ತ್ವಗಳಾಗಿ ರೂಪಾಂತರ ಹೊಂದುತ್ತಾನೆ. ಶಿವ, ಸದಾಶಿವ, ಈಶ್ವರ, ಶಕ್ತಿ, ಶುದ್ಧವಿದ್ಯಾ, ಮಾಯಾ, ಕಲಾ, ರಾಗ, ವಿದ್ಯಾ, ಕಾಲ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್, ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥವೀ—ಇವೇ ಆ ಮೂವತ್ತಾರು ತತ್ತ್ವಗಳು. ಈ ಅವಸ್ಥೆಯನ್ನು ಲೀಲಾವಸ್ಥೆ ಎಂದು ಕರೆಯುತ್ತಾರೆ. ಈ ಅವಸ್ಥೆ ಪರಮಶಿವನ ಸ್ವೇಚ್ಛೆಯಿಂದ ತನ್ನ ಲೀಲಾವಿಲಾಸಕ್ಕಾಗಿ ಮಾಡಿಕೊಂಡಿದ್ದೆಂಬುದು ಈ ದರ್ಶನದ ಬಹು ಮುಖ್ಯವಾದ ಅಂಶ.

ಈ ಮೂವತ್ತಾರು ತತ್ತ್ವಗಳಲ್ಲಿ ಶಿವ 'ಸ್ಥಿತಿ'ಯನ್ನು ಪಾಲಿಸುವವನು. ಜೀವಿಯ ಮೇಲೆ ಅನುಗ್ರಹವನ್ನು

ದನುಪಾಲಿಸುವವನು. ಸದಾಶಿವ ಇಚ್ಛಾಬಲದ ಪ್ರತೀಕನಾಗಿದ್ದಾನೆ; ಅವನು ಲಯಕಾರ. ಈಶ್ವರತತ್ತ್ವದಲ್ಲಿ ಜ್ಞಾನ ಶಕ್ತಿಯ ಪ್ರಾಬಲ್ಯ ಇದೆ. ಶುದ್ಧವಿದ್ಯಾ ತತ್ವದಲ್ಲಿ ಕ್ರಿಯಾಶಕ್ತಿಯ ಪ್ರಾಬಲ್ಯವಿದೆ, ಅದರ ಕ್ರಿಯೆ ಸೃಷ್ಟಿ. ಶಕ್ತಿ ಮಾಯಾರೂಪವಾಗಿ ಜೀವಿಯ ತಿರೋಧಾನ ಅಥವಾ ಆವರಣ ಕ್ರಿಯೆಯನ್ನು ಮಾಡುತ್ತದೆ. ಜೀವ ಸ್ವತಃ ಪರಮ ಶಿವನ ಅಂಶವಾದರೂ. ಈ ಮಾಯೆಯ ಪ್ರಭಾವದಿಂದ ಅದನ್ನು ಅರಿಯದೇ ಇರುತ್ತಾನೆ. ಕಲಾತತ್ತ್ವ ಜೀವಿಯನ್ನು ಭಾಗಶಃ ಆವರಿಸಿರುವ ಮಲವನ್ನು ಅನಾವರಣ ಮಾಡಲುಪಕ್ರಮಿಸುತ್ತದೆ. ಅದು ಮುಂದೆ ವಿದ್ಯಾ ಮತ್ತು ರಾಗವಾಗಿ ಪರಿಣಮಿಸುತ್ತದೆ. ಮಾಯಾ, ಕಲಾ, ರಾಗ, ವಿದ್ಯಾ, ಕಾಲ, ನಿಯತಿ ಈ ಐದು ತತ್ವಗಳನ್ನು 'ಪಂಚಕಂಚುಕಗಳು' ಎಂದು ಕರೆಯುತ್ತಾರೆ. ಇವು ಪುರುಷನಿಗೆ ವ್ಯಕ್ತಿತ್ವವನ್ನು ಒದಗಿಸುವ ಅಂಶಗಳಾಗಿವೆ. ಇನ್ನು ಉಳಿದ ಇಪ್ಪತ್ತು ನಾಲ್ಕು ತತ್ತ್ವಗಳು ಸಾಂಖ್ಯದರ್ಶನದಲ್ಲಿರುವಂತೆಯೇ ನಿರೂಪಿತವಾಗಿವೆ.

೩

ವಿಶಿಷ್ಟಾದ್ವೈತದರ್ಶನದ ನಾರಾಯಣ ಶಕ್ತಿವಿಶಿಷ್ಟಾದ್ವೈತದರ್ಶನದ ಪರಮಶಿವನನ್ನು ಒಂದು ವಿಧದಲ್ಲಿ ಹೋಲುತ್ತಾನೆಂದು ಹೇಳಬಹುದು. ಏಕೆಂದರೆ ಎರಡೂ ದರ್ಶನಗಳಲ್ಲಿ ಪರಬ್ರಹ್ಮ (ನಾರಾಯಣ ಅಥವಾ ಪರಮ ಶಿವ) ಸವಿಶೇಷ ಬ್ರಹ್ಮ. ವಿಶಿಷ್ಟಾದ್ವೈತದರ್ಶನದಲ್ಲಿ ಪರಬ್ರಹ್ಮಕ್ಕೆ ಜೀವ ಮತ್ತು ಜಗತ್ ಎಂಬ ಎರಡು ವಿಶೇಷಣ ಗಳಿದ್ದರೆ, ಶಕ್ತಿವಿಶಿಷ್ಟಾದ್ವೈತದಲ್ಲಿ ಶಕ್ತಿ ಎಂಬ ಒಂದೇ ವಿಶೇಷಣವಿದೆ. ವಿಶಿಷ್ಟಾದ್ವೈತದರ್ಶನದ ನಾರಾಯಣ ನಿರ್ಗುಣನಲ್ಲ. ಅವನು ಸಗುಣೇಶ; ಅನಂತ ಕಲ್ಯಾಣಗುಣ ಪರಿಪೂರ್ಣ, ದಯಾಮಯ, ಸರ್ವಜ್ಞ, ಸರ್ವಶಕ್ತ, ಸರ್ವಾಂತರ್ಯಾಮಿ, ತ್ರಿಲೋಕಸುಂದರ, ಬಂಧು, ಕಾರುಣ್ಯಮೂರ್ತಿ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಪರಮಶಿವ ಸಗುಣೇಶ. ಅವನು ಸರ್ವಜ್ಞ, ಸರ್ವಾಂತರ್ಯಾಮಿ, ಸೃಷ್ಟಿಸ್ಥಿತಿ ಲಯಗಳು ಆತನ ಶಕ್ತಿಗಳು. ವಿಶಿಷ್ಟಾದ್ವೈತದರ್ಶನ ದಲ್ಲಿರುವಂತೆ ಇಲ್ಲಿಯೂ ಸಹ ಶಿವ ಮತ್ತು ಶಕ್ತಿಯರ ಸಂಬಂಧ ಅತ್ಯಂತ ಆತ್ಮೀಯವಾದುದು, ಬೇರ್ಪಡಿಸಲಸಾಧ್ಯ ವಾದುದು. ಶಕ್ತಿಯೊಡನಿಲ್ಲದ ಪರಮಶಿವನನ್ನಾಗಲೀ ಪರಮಶಿವನಿಲ್ಲದ ಶಕ್ತಿಯನ್ನಾಗಲಿ ಊಹಿಸಲೂ ಈ ದರ್ಶನದಲ್ಲಿ ಅವಕಾಶವಿಲ್ಲ. ಶಕ್ತಿಯೊಡಗೂಡಿದ ಪರಮಶಿವ ಸಚ್ಚಿದಾನಂದಸ್ವರೂಪನು.

ಆದರೆ ಜೀವಿಯ ಸ್ವರೂಪದ ವಿಷಯದಲ್ಲಿ ಈ ಎರಡೂ ದರ್ಶನಗಳಲ್ಲಿ ಕೆಲವು ವೈದೃಶ್ಯಗಳನ್ನು ನಾವು ಗುರುತಿಸಬಹುದು. ಪರಮಶಿವನೇ ಸ್ವಾತಂತ್ರ್ಯದಿಂದ ತನ್ನ ಲೀಲಾವಿಲಾಸಕ್ಕೋಸ್ಕರ ಜೀವಿಯಾಗುತ್ತಾನೆ. ವಾಸ್ತವಿಕನಾದ ಪರಮಶಿವನ ಸ್ವಾಭಾವಿಕ ಅವಸ್ಥೆಯೇ ಜೀವ ಎಂಬ ಶಕ್ತಿವಿಶಿಷ್ಟಾದ್ವೈತದರ್ಶನದ ಪ್ರತಿಪಾದನೆಯನ್ನು ವಿಶಿಷ್ಟಾದ್ವೈತದರ್ಶನ ಎಳ್ಳಷ್ಟೂ ಒಪ್ಪುವುದಿಲ್ಲ. ಜೀವಿಯ ಸ್ವರೂಪದ ಬಗ್ಗೆ ವಿಶಿಷ್ಟಾದ್ವೈತದರ್ಶನದ ನಿಲುವು ಶಕ್ತಿವಿಶಿಷ್ಟಾದ್ವೈತದರ್ಶನದಿಂದ ಭಿನ್ನವಾಗಿರುವುದಷ್ಟೇ ಅಲ್ಲದೆ ಆ ದರ್ಶನಕ್ಕೆ ವಿಶೇಷವುಳ್ಳದ್ದೂ ಆಗಿದೆ. ವಿಶಿಷ್ಟಾದ್ವೈತದರ್ಶನವು ನಾರಾಯಣನೇ (ಪರಬ್ರಹ್ಮವೇ) ಜೀವನಾಗಿದ್ದಾನೆ ಅಥವಾ ಜೀವನಾಗಿ ರೂಪಾಂತರ ಹೊಂದಿದ್ದಾನೆ ಎಂಬುದನ್ನು ಪ್ರತಿಪಾದಿಸುವುದಿಲ್ಲ. ಜೀವ ನಾರಾಯಣನಿಗಿಂತ ಭಿನ್ನನಾದ. ಆದರೆ ನಾರಾಯಣನನ್ನು ಬಿಟ್ಟಿರಲಾರದ ಸೇವಕ ಹಾಗೂ ದಾಸ. ಜೀವರು ವಿಶಿಷ್ಟಾದ್ವೈತದರ್ಶನದಲ್ಲಿ ನಿತ್ಯರಾಗಿದ್ದಾರೆ. ತಮ್ಮ ತಮ್ಮ ಕರ್ಮಫಲಕ್ಕನುಗುಣವಾಗಿ ಸಂಸಾರದಲ್ಲಿ ಸುಖಭೋಗ ದುಃಖಾದಿಗಳನ್ನು ಅನುಭವಿಸುತ್ತಾ ಇರುವ ಜೀವಿಗಳು ನಾರಾಯಣನಿಗಿಂತ ಭಿನ್ನರಾಗಿದ್ದು ಮೋಕ್ಷಕ್ಕಾಗಿ ಆತನ ಅನುಗ್ರಹವನ್ನೇ ಅವಲಂಬಿಸಿರುತ್ತಾರೆ.

ಜಗತ್‌ಸ್ವರೂಪದ ಬಗ್ಗೆಯೂ ಎರಡೂ ದರ್ಶನಗಳಲ್ಲಿ ಸಾದೃಶ್ಯಗಳ ಜೊತೆಗೆ ವೈದೃಶ್ಯಗಳನ್ನು ಕಾಣಬಹುದು. ಎರಡೂ ದರ್ಶನಗಳು ಪ್ರಪಂಚದ ಸತ್ಯತ್ವವನ್ನು ತೆರೆದ ಮನಸ್ಸಿನಿಂದ ಒಪ್ಪಿವೆ. ಅದ್ವೈತದರ್ಶನ ಹೇಳುವಂತೆ ಈ ಜಗತ್ತು ಮಾಯೆಯಲ್ಲ. ಅದು ನಾರಾಯಣನಷ್ಟೇ ಅಥವಾ ಪರಮಶಿವನಷ್ಟೇ ಸತ್ಯವಾದುದೆಂದು ಎರಡು ದರ್ಶನ ಗಳೂ ಸಾರುತ್ತವೆ. ಪರಮಶಿವನ ಪರಿಣಾಮವೇ ಜಗತ್ತಾದುದರಿಂದ ಅಲ್ಲಿಯೂ ಚಿದಂಶವಿದೆ, ಶಕ್ತಿಯಿದೆ ಎಂದು ಶಕ್ತಿವಿಶಿಷ್ಟಾದ್ವೈತ ಸಾರಿದರೆ, ವಿಶಿಷ್ಟಾದ್ವೈತದರ್ಶನ ಜಗತ್ತು ನಾರಾಯಣನ ಒಂದು ವಿಶೇಷಣವೆಂದೂ, ನಾರಾಯಣನ ರೂಪಾಂತರವಲ್ಲವೆಂದೂ, ನಾರಾಯಣನಿಗಿಂತ ಭಿನ್ನವಾದ ಆದರೆ ಆತನನ್ನು ಬಿಟ್ಟಿರಲಾರದ ಹಾಗೂ ಆತನ ನಿಯಂತ್ರಣಕ್ಕೊಳಗಾದ ಸತ್ವರಜಸ್ ತಮೋಗುಣಗಳನ್ನು ಹೊಂದಿರುವಂಥಾದ್ದೆಂದೂ ಸಾರುತ್ತದೆ.

ಎರಡೂ ದರ್ಶನಗಳಲ್ಲಿ ಜೀವಿ ಅಣುಸ್ವರೂಪನು. ವಿಶಿಷ್ಟಾದ್ವೈತದರ್ಶನದಲ್ಲಿ ಜೀವಿ ತನ್ನ ನಿರಂತರ ಗುಣ ವಿಶೇಷವಾದ ಧರ್ಮಭೂತಜ್ಞಾನದಿಂದ ಪ್ರಪಂಚಜ್ಞಾನವನ್ನು ಹೊಂದುತ್ತಾನೆ. ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ

ಜೀವನನ್ನು ಅಂಗನೆಂದು ಕರೆಯಲಾಗಿದೆ. ಅಂಗ ಪರಮಶಿವ ಅಥವಾ ಲಿಂಗದ ಕೈಂಕರ್ಯವನ್ನು ಮಾಡಿಕೊಂಡು, ತನ್ನ ಸಹಜಸ್ವಭಾವವಾದ, ಆದರೆ ಅಂಗಸ್ಥಿತಿಯಲ್ಲಿ ಮಲತ್ರಯಗಳಿಂದ ಮುಚ್ಚಿಹೋಗಿರುವ, ಸಚ್ಚಿದಾನಂದ ಸ್ವರೂಪವನ್ನು ಪುನಃ ಪಡೆಯಲು ಕಾತುರನಾಗಿರುತ್ತಾನೆ.

ಎರಡೂ ದರ್ಶನಗಳಲ್ಲಿ ನಾರಾಯಣ ಮತ್ತು ಪರಮಶಿವ ಜಗತ್ತಿನ ಉಪಾದಾನ ಹಾಗೂ ನಿಮಿತ್ತಕಾರಣರಾಗಿದ್ದಾರೆ. ಶಕ್ತಿವಿಶಿಷ್ಟಾದ್ವೈತ ಈ ಪ್ರಪಂಚ ಶಕ್ತಿವಿಶಿಷ್ಟ ಪರಮಶಿವನ ಪರಿಣಾಮ ಎಂದೂ, ಪರಮಶಿವ ರೂಪಾಂತರಹೊಂದಿದರೂ ತನ್ನ ಸ್ವರೂಪದಲ್ಲಿ ಶುದ್ಧನೇ ಆಗಿರುತ್ತಾನೆ, ಕಳಂಕನಾಗುವುದಿಲ್ಲ ಎಂದೂ 'ಅವಿಕೃತ ಪರಿಣಾಮವಾದ'ವನ್ನು ಪ್ರತಿಪಾದಿಸಿದರೆ, ವಿಶಿಷ್ಟಾದ್ವೈತದರ್ಶನ ಪ್ರಕೃತಿಯು ಪರದೇವತೆಯಾದ ಲಕ್ಷ್ಮೀದೇವಿಯ ಸಲಹೆಗಳ ಮೇರೆಗೆ ಪ್ರಕೃತಿ ಪ್ರಪಂಚವಾಗಿ ಪರಿಣಾಮ ಹೊಂದುತ್ತದೆ ಎಂದು ಸಾರುತ್ತದೆ.

ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಎರಡು ದರ್ಶನಗಳೂ ಮೂಲತಃ ಈಶ್ವರವಾದದ ದರ್ಶನಗಳು. ಇವುಗಳಲ್ಲಿ ಪ್ರತಿಪಾದಿತವಾಗಿರುವ ಭಗವತ್ ತತ್ತ್ವಗಳು ತಮ್ಮವೇ ಆದ ಲೋಕಗಳನ್ನು (ನಾರಾಯಣ ವೈಕುಂಠವನ್ನೂ, ಪರಮಶಿವ ಕೈಲಾಸವನ್ನೂ) ಹೊಂದಿದ್ದಾರೆ. ಪ್ರಪಂಚದ ಸೃಷ್ಟಿಕಾರ್ಯದಲ್ಲಿ ನಾರಾಯಣನಿಗೆ ಲಕ್ಷ್ಮೀದೇವಿ ಸಹಕರಿಸಿದರೆ, ಪರಮಶಿವನಿಗೆ ಶಕ್ತಿ ಅಥವಾ ಉಮಾದೇವಿ ಸೃಷ್ಟಿಕಾರ್ಯದಲ್ಲಿ ಸಹಕರಿಸುತ್ತಾಳೆ.

೪

ಈಗ ಮೋಕ್ಷಸ್ವರೂಪ, ಮೋಕ್ಷಸಾಧನಗಳ ಬಗ್ಗೆ ಎರಡೂ ದರ್ಶನಗಳ ನಿಲುವನ್ನು ಸ್ಪಷ್ಟಪಡಿಸೋಣ. ಮೋಕ್ಷ ಎಂದರೆ ಸಂಸಾರದ ಜಂಜಾಟದಿಂದ ಹುಟ್ಟುಸಾವುಗಳ ನಿರಂತರ ಚಕ್ರದಿಂದ ಹೊರಬಂದು ನಿತ್ಯಸುಖವನ್ನು ಅನುಭವಿಸುವುದು—ಇದು ಸಾಮಾನ್ಯವಾದ ಅರ್ಥ. ವಿಶಿಷ್ಟಾದ್ವೈತದರ್ಶನದಲ್ಲಿ ಮೋಕ್ಷ ಎಂದರೆ ನಾರಾಯಣನ ಲೋಕವಾದ ವೈಕುಂಠವನ್ನು ಒಳಹೊಕ್ಕು ನಾರಾಯಣನ ಕೈಂಕರ್ಯವನ್ನು ಮಾಡಿಕೊಂಡು ಆತನ ದಾಸಾನುದಾಸನಾಗಿ ಆತನ ಇಚ್ಛೆಗೆ ವಿರೋಧವಾಗಿ ನಡೆಯದಂತೆ ಎಚ್ಚರ ವಹಿಸಿ, ಆತನ ಸುಖಸಂತೋಷಗಳೇ ತನ್ನ ಸುಖಸಂತೋಷ ಎಂದು ತಿಳಿದು ಸರ್ವಜ್ಞನೂ ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆದ ಆತನಲ್ಲಿ ಅನನ್ಯ ಶರಣಾಗತನಾಗಿ, ನಿರಂತರವೂ ಆತನ ಪ್ರೇಮಮಯ ಕೃಪಾಕಟಾಕ್ಷಕ್ಕೊಳಗಾಗಿ ಆತನ ಆಜ್ಞೆಗಳನ್ನು ಶಿರಸಾವಹಿಸಲು ತುದಿಗಾಲಿನಲ್ಲಿ ನಿಂತು ನಿತ್ಯಾನಂದರೂಪವಾದ ನಾರಾಯಣನ ಅನುಭವದಲ್ಲಿ ಮಗ್ನನಾಗುವುದು. ಅಂದರೆ ಜೀವ ಮೋಕ್ಷಸ್ಥಿತಿಯಲ್ಲಿ ಭಗವದನುಭವವನ್ನು ಹೊಂದಿ, ಭಗವತ್ಪ್ರೀತಿಯಲ್ಲಿ ತಲ್ಲೀನನಾಗಿ ಭಗವತ್ ಕೈಂಕರ್ಯಕ್ಕೆ ತನ್ನನ್ನೇ ಮೀಸಲು ಮಾಡಿಕೊಳ್ಳುತ್ತಾನೆ. ವಿಶಿಷ್ಟಾದ್ವೈತದರ್ಶನದಲ್ಲಿ ಜೀವ ಮೋಕ್ಷಸ್ಥಿತಿಯಲ್ಲಿ ನಾರಾಯಣನೊಡನೆ ಐಕ್ಯನಾಗುವುದಿಲ್ಲ. ನಾರಾಯಣನಿಗೆ ಅತಿ ಸಮೀಪನಾಗಿ, ತನ್ನ ತನವನ್ನು ಉಳಿಸಿಕೊಂಡು 'ತಾನು ಆನಂದವನ್ನು ಅನುಭವಿಸುತ್ತಿದ್ದೇನೆ', 'ತಾನು ನಾರಾಯಣನೇ ಅಲ್ಲ ; ಆತನ ಚರಣದಾಸ, ಭೃತ್ಯ, ಪರಮಸೇವಕ' ಎಂಬ ತಿಳುವನ್ನು ಹೊಂದಿರುತ್ತಾನೆ. ಹೀಗೆ ವ್ಯವಹಾರಾವಸ್ಥೆಯಲ್ಲಿದ್ದ ನಾರಾಯಣ—ಜೀವರ ಭೇದ ಮುಕ್ತಿ ಅವಸ್ಥೆಯಲ್ಲೂ ಮುಂದುವರಿಯುತ್ತದೆ. ದೇಹಪಾತವಾದ ಮೇಲೇ ಜೀವಿಗೆ ಮುಕ್ತಿ ಲಭಿಸುತ್ತದೆ ಎಂದು ಈ ದರ್ಶನ ಸಾರುತ್ತದೆ. ಇದನ್ನೇ ವಿದೇಹ ಮುಕ್ತಿ ಎನ್ನುವರು. ಅಂದರೆ ವಿಶಿಷ್ಟಾದ್ವೈತದರ್ಶನದಲ್ಲಿ ಮೋಕ್ಷ ಎಂಬುದು ನಾರಾಯಣ ಜೀವಿಗೆ ಅನುಗ್ರಹಿಸುವ ನಿತ್ಯನಿರಂತರ ಆನಂದಾವಸ್ಥೆ. ಜೀವಿ ಮುಕ್ತಿಯನ್ನು ಪಡೆಯಲು ನಾರಾಯಣನ ಅನುಗ್ರಹ ಮತ್ತು ಪ್ರಸಾದ ಅತ್ಯಗತ್ಯ ; ನಾರಾಯಣನ ಅನುಗ್ರಹವಿಲ್ಲದೆ ಜೀವಿ ಮುಕ್ತಿ ಪಡೆಯಲಾರ. ಈ ಅನುಗ್ರಹವನ್ನು ಸಂಪಾದಿಸಲು ಜೀವಿ ವಿಶಿಷ್ಟಾದ್ವೈತದರ್ಶನದಲ್ಲಿ ನಿಯಮ ಮಾಡಿರುವ ಮಾರ್ಗವನ್ನು ಅನುಸರಿಸಬೇಕು.

ವಿಶಿಷ್ಟಾದ್ವೈತದರ್ಶನದ ಆ ಮಾರ್ಗವೇ ಕರ್ಮ, ಜ್ಞಾನ, ಭಕ್ತಿ ಮತ್ತು ಪ್ರಪತ್ತಿ. ಶಾಸ್ತ್ರವಿಹಿತವಾದ ಕರ್ಮಗಳನ್ನು ಆಚರಿಸಿ, ನಿಷಿದ್ಧಕರ್ಮಗಳನ್ನು ನಿರ್ದಯವಾಗಿ ವರ್ಜಿಸುವುದು, ನಿತ್ಯನೈಮಿತ್ತಿಕಕರ್ಮಗಳನ್ನು ಚಾಚೂತಪ್ಪದೆ ಅನುಸರಿಸುವುದೇ ಕರ್ಮ. ಹೀಗೆ ಮಾಡುವುದರಿಂದ ದೇಹ ಮನಸ್ಸುಗಳು ಶುದ್ಧವಾಗಿ. ಜ್ಞಾನವನ್ನು ಸಂಪಾದಿಸುವ ಆಕಾಂಕ್ಷೆಯು ಜೀವಿಯಲ್ಲಿ ತ್ವರಿತಗೊಳ್ಳುವುದು. ಜೀವ ಪ್ರಪಂಚದಲ್ಲಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಯಾವ ಫಲಾಪೇಕ್ಷೆ ಇಲ್ಲದೆ ಭಗವತ್ ಸೇವೆ ಎಂಬ ಭಾವದಿಂದ ಮಾಡುವುದೇ ಕರ್ಮಯೋಗ. ಕರ್ಮಯೋಗದ ಮುಂದಿನ ಸೋಪಾನವೇ ಜ್ಞಾನಯೋಗ. ಇಲ್ಲಿ ಜೀವ ತನ್ನ ಸ್ವರೂಪವನ್ನು ಉಪನಿಷತ್ತುಗಳ ಅಧ್ಯಯನದಿಂದಲೂ, ಗುರುವನ್ನು ಮೊರೆಹೋಗುವುದರಿಂದಲೂ ಅರಿಯುತ್ತಾನೆ. ಪರಮಾತ್ಮನ ಪ್ರೇಮಮಯ ವ್ಯಕ್ತಿತ್ವವನ್ನು

ಕುರಿತು, ಅದನ್ನು ನೆನೆನೆನೆದು (ಧ್ರುವಾನುಸ್ಮೃತಿ) ಪ್ರೇಮಾನಂದಸಾಗರದಲ್ಲಿ ಮುಳುಗುವುದೇ ಭಕ್ತಿ ಎನಿಸುವುದು. ವಿಶಿಷ್ಟಾದ್ವೈತದರ್ಶನದಲ್ಲಿ ಭಕ್ತಿಗೆ ವಿಶಿಷ್ಟವಾದ ಸ್ಥಾನವನ್ನು ಕೊಡಲಾಗಿದೆ. ಭಕ್ತಿಯ ಅತ್ಯುನ್ನತ ಸ್ಥಿತಿಯೇ ಪ್ರಪತ್ತಿ ಎನಿಸುವುದು. ಆದರೂ ಈ ದರ್ಶನದಲ್ಲಿ ಪ್ರಪತ್ತಿಮಾರ್ಗವನ್ನು ದೈವಸಾಕ್ಷಾತ್ಕಾರಕ್ಕೆ ಇರುವ ಸ್ವತಂತ್ರವಾದ ಮಾರ್ಗ ವೆಂದೇ ಪರಿಗಣಿಸಲಾಗಿದೆ. ಜೀವ ಪೂರ್ಣಶಾಸ್ತ್ರಜ್ಞಾನ ಇಲ್ಲದಿದ್ದರೂ, ಸ್ವಾರ್ಥತ್ಯಾಗದ ಮೂಲಕ ಪರಮಾತ್ಮನಾದ ನಾರಾಯಣನಲ್ಲಿ ಅನನ್ಯ ಶರಣು ಹೋಗುತ್ತಾನೆ. ತನು, ಮನ, ಧನ ಎಲ್ಲವನ್ನೂ ಯಾವ ನಿಬಂಧನೆಯನ್ನೂ ಒಡ್ಡದೇ ನಾರಾಯಣನಿಗೆ ಸಮರ್ಪಿಸುತ್ತಾನೆ. ನಾರಾಯಣನೇ ಗತಿ, ಅವನೇ ಪರ. ಆತನ ಆಜ್ಞೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಚಲಿಸದು, ಆತನೇಮೋಕ್ಷದಾತ, ಆತನನ್ನು ಒಲಿಸಿಕೊಳ್ಳುವ ಒಂದೇ ಒಂದು ಮಾರ್ಗವೆಂದರೆ ತನ್ನನ್ನೆ ಆತನಿಗೆ ಪ್ರೀತಿ ಯಿಂದ, ಅನನ್ಯ ಭಕ್ತಿಯಿಂದಸಮರ್ಪಿಸುವುದು. ಪ್ರಪತ್ತಿಮಾರ್ಗವನ್ನು ಅನುಸರಿಸಲು ಜಾತಿ, ಮತ, ಕುಲಗಳ ಕಟ್ಟು ಪಾಡುಗಳಿಲ್ಲ. ವಿಶಿಷ್ಟಾದ್ವೈತದ ಈ ಪ್ರಪತ್ತಿ ತತ್ವದ ಪ್ರತಿಪಾದನೆ ಜನಸಾಮಾನ್ಯರ ಶ್ರೇಯೋಭಿವೃದ್ಧಿಗೆ ನಾಂದಿ ಯಾಯಿತು.

ಶಕ್ತಿವಿಶಿಷ್ಟಾದ್ವೈತ ವೇದಾಂತದ ಪ್ರಕಾರ ಜೀವನು ಮೂಲತಃ ಪರಮಶಿವನ ಅಂಶನಾದರೂ, ಮಾಯಾಶಕ್ತಿಯ ಆವರಣದಿಂದ ತನ್ನ ಸತ್ಯಸ್ವರೂಪದ ಅರಿವಿಲ್ಲದೆ ಅಜ್ಞಾನದಿಂದ ಸಂಸಾರದಲ್ಲಿ ತೊಳಲಾಡುತ್ತಿರುತ್ತಾನೆ. ತನ್ನ ಸತ್ಯ ಸ್ವರೂಪವನ್ನು ಅರಿತು ಶಿವಾನಂದವನ್ನು ಅನುಭವಿಸುವುದೇ ಮುಕ್ತಿ ಅಥವಾ ಮೋಕ್ಷ. ಬೇರೆ ಮಾತುಗಳಲ್ಲಿ ಹೇಳುವು ದಾದರೆ ಜೀವನು ತನ್ನ ನೈಜಸ್ವರೂಪವನ್ನು (ಸಚ್ಚಿದಾನಂದ) ಸಾಕ್ಷಾತ್ಕರಿಸಿಕೊಳ್ಳುವುದೇ ಮೋಕ್ಷ. ಜೀವನು ಪರಮ ಶಿವನಾದ ಲಿಂಗನ ಅಂಗ. ಅಂಗ ತನ್ನ ಮೂಲವಾದ ಲಿಂಗದಲ್ಲಿ ಲೀನಗೊಳ್ಳುವುದೇ ಮೋಕ್ಷ. ಇದನ್ನೇ ಲಿಂಗಾಂಗ ಸಾಮರಸ್ಯವೆಂದು ಕರೆಯುವುದು. ಈ ದರ್ಶನದ ಪ್ರಕಾರ ಮೋಕ್ಷವು ವ್ಯಕ್ತಿಯು ಬದುಕಿರುವಾಗಲೇ ಸಾಕ್ಷಾತ್ಕರಿಸಿ ಕೊಳ್ಳಬಹುದಾದ ಆದರ್ಶ. ಇಲ್ಲಿಯೇ ಮತ್ತು ಈಗಲೇ ಮುಕ್ತಿ ಸಾಧ್ಯವೆಂಬುದು ಇದರ ಮಹತ್ವಪೂರ್ಣ ಸಿದ್ಧಾಂತ. ಮಾಯಾಶಕ್ತಿಯಿಂದ ಆವೃತನಾಗಿರುವ ಜೀವನಿಗೆ ತನ್ನ ಸತ್ಯಸ್ವರೂಪವನ್ನು ಅರಿಯಲು ಅಂತರಾಳದಲ್ಲಿ ನೆಲೆಸಿರುವ ಈಶ್ವರನೇ ಪ್ರೇರಕ. ಈ ಪ್ರೇರಣೆಯಿಂದ ಜೀವನು ತನ್ನ ಅಹಂಭಾವವನ್ನು ಕ್ರಮೇಣ ಹೋಗಲಾಡಿಸಿಕೊಂಡು, ಬುದ್ಧಿ, ಮನ ಮತ್ತು ದೇಹವೆಲ್ಲವೂ ಶಿವನೇ ಎಂಬ ಭಾವವನ್ನು ಬೆಳೆಸಿಕೊಳ್ಳುತ್ತಾನೆ. ಹೀಗೆ ಅವನಲ್ಲಿ ಶಿವಭಾವ ಮೂಡಿದಂತೆಲ್ಲಾ ಶಿವನ ಅನುಗ್ರಹವೂ ಹೆಚ್ಚಾಗಿ ಉಂಟಾಗುತ್ತದೆ. ತತ್ಪರಿಣಾಮವಾಗಿ, ಮಾಯಾಶಕ್ತಿಯ ಪ್ರಭಾವ ಕ್ಷೀಣಿಸುತ್ತದೆ. ಆದುದರಿಂದ, ಈ ದರ್ಶನದಲ್ಲಿ ಶಿವನ ಅನುಗ್ರಹಕ್ಕೆ 'ಶಕ್ತಿಪಾತ' ಎಂದು ಕರೆಯುತ್ತಾರೆ. ಇದರಿಂದ ಜೀವನ ಮನ, ಬುದ್ಧಿ, ಹೃದಯಗಳು ಶುದ್ಧಗೊಂಡು, ಶಿವನ ಉಪಾಸನೆಯಲ್ಲಿ ತೊಡಗುತ್ತಾನೆ; ಭಕ್ತನೆನಿಸುತ್ತಾನೆ. ಶಕ್ತಿಯು ಶಿವಾಂಶನಾದ ಜೀವನನ್ನು ಸಂಸಾರದ ಜಂಜಾಟಕ್ಕೆ ಸಿಲುಕಿಸಿದರೆ, ಭಕ್ತಿ ಅವನನ್ನು ಶಿವನ ಕಡೆಗೆ ಕೊಂಡೊಯ್ಯುತ್ತದೆ. ಶಕ್ತಿಯು ಪರಮಶಿವನಿಗೆ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಸಾಧನವಾಗಿರುವಂತೆ, ಅದೇ ಶಕ್ತಿಯು ಅವನು ಜೀವಾವಸ್ಥೆಯಲ್ಲಿರುವಾಗ ಮೋಚಕವಾದ ಭಕ್ತಿಯಾಗುತ್ತದೆ. ವಿಶಿಷ್ಟಾದ್ವೈತದರ್ಶನವು ಮುಕ್ತಿಯು ವ್ಯಕ್ತಿಯ ಜೀವಿತಕಾಲದಲ್ಲಿಯೇ ಸಾಧ್ಯವಿಲ್ಲವೆಂಬ ದೃಷ್ಟಿಯನ್ನು ಹೊಂದಿದೆ. ಎರಡೂ ದರ್ಶನಗಳಲ್ಲಿ ಭಗವಂತನ ಅನುಗ್ರಹ ಅಥವಾ ಪ್ರಸಾದಕ್ಕೆ ಪ್ರಾಶಸ್ತ್ಯವನ್ನು ಕೊಡಲಾಗಿದೆ. ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ಮೋಕ್ಷಸ್ಥಿತಿಯಲ್ಲಿ ಜೀವನು ಪರಮಶಿವನಲ್ಲಿ ಲೀನಗೊಳ್ಳುತ್ತಾನೆ ಅಥವಾ ಐಕ್ಯಹೊಂದುತ್ತಾನೆ. ಅಂದರೆ ಲಿಂಗಾಂಗ ಸಾಮರಸ್ಯ ಉಂಟಾಗುತ್ತದೆ. ಅಂಗನಿಗೂ ಲಿಂಗನಿಗೂ ಪರಸ್ಪರ ಭೇದವಿರುವುದಿಲ್ಲ; ತಾದಾತ್ಮ್ಯ ಉಂಟಾಗುತ್ತದೆ; ದ್ವಂದ್ವ ಇಲ್ಲವಾಗುತ್ತದೆ. ಆದರೆ ವಿಶಿಷ್ಟಾದ್ವೈತ ವೇದಾಂತದಲ್ಲಿ ಮೋಕ್ಷಸ್ಥಿತಿಯಲ್ಲಿಯೂ ಜೀವನು ಈಶ್ವರನಿಂದ ಬೇರೆಯಾಗಿಯೇ ಇರುತ್ತಾನೆ. ಹಾಗೆ ಇದ್ದು ಆನಂದವನ್ನು ಅನುಭವಿಸುತ್ತಾನೆ. ಜೀವ ಈಶ್ವರರ ದ್ವಂದ್ವ ಮತ್ತು ಭೇದ ಆ ಅತ್ಯುನ್ನತ ಸ್ಥಿತಿಯಲ್ಲಿಯೂ ಮುಂದುವರಿಯುತ್ತದೆ.

ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ಜ್ಞಾನ ಕ್ರಿಯೆಗಳೆರಡನ್ನೂ ಒಳಗೊಂಡಿರುವ ಭಕ್ತಿಯೇ ಮುಕ್ತಿಯ ಸಾಧನೆಗೆ ಅಗತ್ಯವಾದ ಉಪಾಯವೆಂದು ವಿವರಿಸಲ್ಪಟ್ಟಿದೆ. ಸತ್ಯಸ್ವರೂಪದ ಜ್ಞಾನವೂ, ಅದನ್ನು ಸಾಕ್ಷಾತ್ಕರಿಸಿ ಕೊಳ್ಳಲು ಸೂಕ್ತವಾದ ಕ್ರಿಯಾಚರಣೆಯೂ ಸಾಧನಮಾರ್ಗವಾಗಿದೆ. ಈ ಸಾಧನಮಾರ್ಗವನ್ನು ಷಟ್ಸ್ಥಲಸಿದ್ಧಾಂತ ವೆಂದು ಕರೆಯುತ್ತಾರೆ. ಇದು ಶಕ್ತಿವಿಶಿಷ್ಟಾದ್ವೈತದ ವಿಶಿಷ್ಟ ಕೊಡುಗೆಯಾಗಿದೆ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಇವೇ ಆ ಆರು ಸ್ಥಲಗಳು. ಇವನ್ನು ಇಲ್ಲಿ ಸ್ಥೂಲವಾಗಿ ವಿವರಿಸಬಹುದು:

**ಭಕ್ತಸ್ಥಲ:** ಇದು ಅಂಗನ ಮೊದಲನೆಯ ಅವಸ್ಥೆ. ಇಲ್ಲಿ ಭಕ್ತಿಯು ಶ್ರದ್ಧಾಭಕ್ತಿ ಎನಿಸುವುದು. ಅಜ್ಞಾನ

ದಿಂದ ಅಲ್ಪ ವಿಷಯಗಳ ಭೋಗದಲ್ಲಿ ತೊಡಗಿರುವ ಆಶೆಯನ್ನು ಮಹಾವಿಷಯನಾದ ಪರಮಶಿವನೆಡೆಗೆ ತಿರುಗಿಸಿದರೆ ಶ್ರದ್ಧಾಭಕ್ತಿ ಎನಿಸುವುದು. 'ಹೊನ್ನು ಹೆಣ್ಣು ಮಣ್ಣುಗಳ ಮೇಲಿನ ಆಶೆ ಮಾಯೆಯಲ್ಲ. ಮನದ ಮುಂದಣ ಆಶೆಯೇ ಮಾಯೆ' ಎಂದು ಅನುಭಾವಿಗಳು ಹೇಳುತ್ತಾರೆ. ಶ್ರದ್ಧಾಭಕ್ತಿಯು ಮಲತ್ರಯಗಳ ಪ್ರಭಾವವನ್ನು ನಿಯಂತ್ರಿಸಲು ಸಹಕಾರಿಯಾಗುತ್ತದೆ. ಇದು ಶಿವನ ವರಪ್ರಸಾದವೇ ಆಗಿರುವುದು. ಲಿಂಗದಲ್ಲಿ ಭಕ್ತಿಯನ್ನು ಬೆಳೆಸಿಕೊಳ್ಳಲು ಅಂಗನು ಗುರುವಿನಿಂದ ದೀಕ್ಷೆ ಪಡೆದ ಸಮಯದಲ್ಲಿ ಧರಿಸುವ ಇಷ್ಟಲಿಂಗವು ಸಹಾಯ ಮಾಡುವುದು. ಇದರಿಂದ ಅವನು ಭಕ್ತನೆನಿಸುವನು. ಲಿಂಗದ ಅರ್ಚನೆ, ಲಿಂಗಕ್ಕೆ ಅರ್ಪಣ, ಲಿಂಗದ ಅನುಭವ, ಲಿಂಗದ ಸೇವೆಗಾಗಿ ಕಾಯಕ ಇವೇ ಭಕ್ತನ ನಡೆನುಡಿಗಳು. ಅಹಂಭಾವವನ್ನು ತೊರೆದು ಶುದ್ಧ ಚಿತ್ತ ಮತ್ತು ಸದ್ವರ್ತನೆ ಸೌಶೀಲ್ಯಗಳಿಂದ ಶಿವನ ಸೇವೆಯನ್ನು ಕೈಗೊಳ್ಳಬೇಕು. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ. ನೀಡಿದೆನೆನ್ನದಿರಾ ಜಂಗಮಕ್ಕೆ' ಎಂದು ಬಸವಣ್ಣನವರು ಭಕ್ತನಿಗೆ ಎಚ್ಚರಿಸಿದ್ದಾರೆ. ಭಕ್ತನು ತನ್ನದೆಂಬ ಅಭಿಮಾನವನ್ನೂ, ಕೋಪತಾಪಗಳನ್ನೂ, ರಾಗದ್ವೇಷಗಳನ್ನೂ ತೊರೆದು ಎಲ್ಲವೂ ಶಿವಮಯವೆಂದು ಭಾವಿಸಿ, ಶಿವಾನುಭಾವಕ್ಕೆ ಹಾತೊರೆಯುತ್ತಿರಬೇಕು. ಇದೇ ಶ್ರದ್ಧಾಭಕ್ತಿ. 'ಆಶೆ ಎಂಬುದು ಅರಸನಿಗಲ್ಲದೆ ಶಿವಭಕ್ತನಿಗೆ ಸಲ್ಲುವುದೇ ? ರೋಷವೆಂಬುದು ಯಮದೂತನಿಗಲ್ಲದೆ ಅಜಾತನಿಗೆ ಸಲ್ಲುವುದೇ ?' ಎಂದು ಶಿವಾನುಭಾವಿಗಳು ಕೇಳುತ್ತಾರೆ. ನುಡಿಯಲ್ಲಿ ಕರ್ಕಶವಿಲ್ಲದೆ ನಡೆಯಲ್ಲಿ ಆಡಂಬರವಿಲ್ಲದ, ಸತ್ಯ ಸದಾಚಾರಗಳಲ್ಲಿ ನಿರತನಾದ ಭಕ್ತನು ಶಿವನ ಪ್ರೇಮಕ್ಕೆ ಪಾತ್ರನಾಗಿ ಶಿವಪಥದಲ್ಲಿ ಮುಂದುವರಿಯುವನು.

**ಮಾಹೇಶ್ವರಸ್ಥಲ :** ಭಕ್ತನ ಶ್ರದ್ಧಾಭಕ್ತಿ ವಿಕಾಸಗೊಂಡು ನಿಶ್ಚಲವಾಗಿ ಸ್ಥಿರಗೊಳ್ಳುವುದರಿಂದ ನಿಷ್ಠೆಯಾಗಿ ನಿಷ್ಠಾಭಕ್ತಿ ಎನಿಸುವುದು. ಶಿವನ ಪ್ರೇಮವು ಭಕ್ತನನ್ನು ಭಕ್ತಿಪಥದಲ್ಲಿ ನಡೆಯುವಂತೆ ಮಾಡುವುದರಿಂದ ಶಿವನೇ ಭಕ್ತನ ಶ್ರದ್ಧಾಭಕ್ತಿಯನ್ನು ದೃಢವೂ ನಿಶ್ಚಲವೂ ಆಗುವಂತೆ ಮಾಡುವನು. ಭಕ್ತನು ನಿಷ್ಠಾಭಕ್ತಿಯಿಂದ ಮಾಹೇಶ್ವರನೆನಿಸುವನು. ಅಂದರೆ, ಸರ್ವೇಶ್ವರನಾದ ಮಹೇಶ್ವರನಿಗೆ ಹತ್ತಿರದ ಬಂಧು, ಅಚ್ಚುಮೆಚ್ಚಿನವನು ಎಂದರ್ಥ.

**ಪ್ರಸಾದಿಸ್ಥಲ :** ನಿಷ್ಠಾಭಕ್ತಿಯಿಂದ ಮನಸ್ಸು ವಿಕಸಿತಗೊಂಡು ಶಿವಮಯವಾಗತೊಡಗಿ ಅವಧಾನ ಭಕ್ತಿ ಎನಿಸುವುದು. ಈ ಸ್ಥಿತಿ ಪ್ರಸಾದಿ ಸ್ಥಿತಿ ಎನಿಸಿರುವುದು. ಅವಧಾನವೆಂದರೆ ಎಚ್ಚರಿಕೆ. ಈ ಸ್ಥಿತಿಯಲ್ಲಿ ಭಕ್ತನು ಬಹಳ ಎಚ್ಚರಿಕೆಯಿಂದ ಇದ್ದು ಶಿವನಿಗೆ ಅರ್ಪಿಸಿದವುಗಳನ್ನೇ ಶಿವಪ್ರಸಾದಗಳೆಂದು ಭಾವಿಸಿ ಭೋಗಿಸುವನು. ಆದುದರಿಂದ ಪ್ರಸಾದಿಗೆ 'ಲಿಂಗಭೋಗೋಪಭೋಗಿ' ಎಂದು ಅನುಭಾವಿಗಳು ಹೇಳುತ್ತಾರೆ. ಅಂಗನು ತನಗಾಗಿ ಏನನ್ನೂ ಮಾಡಲನುವಾಗುವುದಿಲ್ಲ; ಆದರೆ ಎಲ್ಲವನ್ನೂ ಲಿಂಗದೇವನಿಗಾಗಿ ಮಾಡುತ್ತ ಅವನ ಪ್ರಸಾದಕ್ಕೆ ಪಾತ್ರನಾಗುವನು.

**ಪ್ರಾಣಲಿಂಗಿಸ್ಥಲ :** ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಿತಿಗಳಲ್ಲಿ ಅಂಗನು ಲಿಂಗದೇವನ ನಿರಂತರ ಸೇವೆಯಲ್ಲಿ ನಿರತನಾಗಿದ್ದು ಕರ್ಮಯೋಗವನ್ನು ಭಕ್ತಿಯಿಂದ ಆಚರಿಸಿದ್ದುದರಿಂದ ಸಾಕಷ್ಟು ಶುದ್ಧ ಹೃದಯನಾಗಿ ಪ್ರಾಣಲಿಂಗಿ ಎನಿಸಿ, ತನ್ನ ಅಂತರಂಗದಲ್ಲಿ ನಿರ್ಲಿಪ್ತನಾಗಿ ನೆಲೆಸಿರುವ ಚೈತನ್ಯಶಕ್ತಿಯ ಅನುಭವವನ್ನು ಪಡೆದು, ಹೊರಗೂ ಅದನ್ನೇ ಅನುಭವಿಸಲಾರಂಭಿಸುವನು. ಅವನ ಭಕ್ತಿಯು ಅನುಭಾವಭಕ್ತಿಯೆನಿಸುವುದು. ಇಲ್ಲಿಯವರೆಗೆ ಬಾಹ್ಯಪೂಜೆಯನ್ನು ಯಾವ ಲಿಂಗದೇವನಿಗೆ ಅರ್ಪಿಸುತ್ತಿದ್ದನೋ ಅವನನ್ನು ಈ ಸ್ಥಿತಿಯಲ್ಲಿ ತನ್ನ ಅಂತರಂಗದಲ್ಲಿಯೇ ಅನುಸಂಧಾನ ಮಾಡುವ ಚಿತ್ತಸ್ಥಿತಿಗೆ ಈ ಸ್ಥಲದಲ್ಲಿ ಏರಿರುತ್ತಾನೆ. ಈ ಸ್ಥಿತಿಯಲ್ಲಿ ಅವನು ಶಿವಲಿಂಗವನ್ನು ಅರ್ಚಿಸುವಾಗ ಮಾತ್ರವಲ್ಲದೆ, ಎಲ್ಲಾ ಕಾಲಗಳಲ್ಲೂ ಶಿವನ ಪ್ರಕಾಶವನ್ನೇ ಅನುಭವಿಸುವನು.

**ಶರಣಸ್ಥಲ :** ಪ್ರಾಣಲಿಂಗಿಯು ಶಿವಪ್ರಕಾಶದ ಅನುಭವದಿಂದ ಭೇದವನ್ನು ಹೋಗಲಾಡಿಸಿಕೊಂಡಿರುವುದರಿಂದ, ಶರಣಸ್ಥಿತಿಯಲ್ಲಿ ಆನಂದವನ್ನು ಅನುಭವಿಸುತ್ತಾನೆ. ಶರಣನು ಆನಂದಭಕ್ತಿಯಿಂದ ತನ್ನನ್ನು ಲಿಂಗನಿಗೆ ಸಮರ್ಪಿಸಿಕೊಂಡು ಶಿವಾನಂದವನ್ನು ಅನುಭವಿಸುತ್ತ ಅದರಲ್ಲಿಯೇ ಮಗ್ನನಾಗುತ್ತಾನೆ. ಈ ರೀತಿಯ ಶರಣಾಗತಿಯನ್ನೇ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿ 'ಪ್ರಪತ್ತಿ' ಎಂದು ಕರೆಯುವುದು. ಶರಣನು ಸತಿ–ಪತಿಭಾವದಿಂದ ಶಿವಾನಂದವನ್ನು ಅನುಭವಿಸುವನು. ಇಲ್ಲಿ ನಾನು ನೀನು ಎಂಬ ಭೇದ ಮಾತ್ರ ಉಳಿದಿರುತ್ತದೆ ; ದೇಹ. ಪ್ರಪಂಚಗಳಿಂದುಂಟಾದ ಭೇದ ಇರುವುದಿಲ್ಲ. ನಾನು ಪೂಜಕ ನೀನು ಪೂಜ್ಯನೆಂಬ ಭೇದಭಾವವೂ ಶಿವಾನುಭವದ ಆನಂದದಲ್ಲಿ ಲಯಹೊಂದುವ ಪಕ್ವಸ್ಥಿತಿಗೆ ಬಂದಿರುತ್ತದೆ. ಅಂಗನು ಲಿಂಗದೊಡನೆ ಆನಂದವನ್ನು ಅನುಭವಿಸುತ್ತ ಪೂಜ್ಯ ಪೂಜಕರೆಂಬ ಭೇದಭಾವವನ್ನು ಕಳೆದುಕೊಂಡಿದ್ದರೂ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡಿರುವನು.

**ಐಕ್ಯಸ್ಥಲ :** ಅಂಗನು ಲಿಂಗದೇವನಿಗೆ ಹೊರಗಿನ ಪದಾರ್ಥಗಳೆಲ್ಲವನ್ನೂ ಅರ್ಪಿಸಿ ಪ್ರಸಾದವಾಗಿಸಿಕೊಂಡು

ಭೋಗಿಸಿರುವುದರಿಂದ ಇನ್ನುಳಿದ, ತನ್ನೊಳಗಿನದೇ ಆದ ತೃಪ್ತಿಯೆಂಬ ಪದಾರ್ಥವನ್ನು ಸಮರಸ ಭಕ್ತಿಯಿಂದ ತನ್ನ ಅಂತರಂಗದಲ್ಲೇ ನೆಲೆಸಿರುವ ಮಹಾಲಿಂಗಕ್ಕೆ ಅರ್ಪಿಸಿ, ಆ ತೃಪ್ತಿಪ್ರಸಾದವನ್ನು ತಾನೂ ಭೋಗಿಸುತ್ತ ಮಹಾಲಿಂಗದಲ್ಲಿ ಏಕೀಭೂತನಾಗಿ 'ಐಕ್ಯ'ನೆನಿಸುವನು. 'ನೀನೆನ್ನೆ, ನಾನೆನ್ನೆ, ಲಿಂಗವೆನ್ನೆ, ಲಿಂಗೈಕ್ಯವೆನ್ನೆ' ಎಂದು ವಚನಕಾರರು ಈ ಅವಸ್ಥೆಯನ್ನು ತಿಳಿಸಿದ್ದಾರೆ. ಈ ಸ್ಥಿತಿಯಲ್ಲಿ ನೀನೆಂಬ ಶಿವಭಾವವೂ, ನಾನೆಂಬ ಜೀವಭಾವವೂ, ಐಕ್ಯನಾದೆನೆಂಬ ಹೇಳುವಿಕೆಯೂ ಪ್ರತ್ಯೇಕವಾಗಿರುವುದಿಲ್ಲ. ಲಿಂಗದಲ್ಲಿ ಲೀನನಾದ ಅಂಗನು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವನು. ಹೀಗೆ ಸಮರಸ ಭಕ್ತಿಯಿಂದ ಅಂಗನು ಲಿಂಗದೊಡನೆ ಐಕ್ಯಹೊಂದುವುದಕ್ಕೆ 'ಲಿಂಗಾಂಗಸಾಮರಸ್ಯ'ವೆಂದು ಹೆಸರು.

ಶಿವನಿಗೆ ತಾನು ದಾಸನೆಂದು ಭಾವಿಸಿ (ದಾಸೋऽಹಂ ಭಾವ), ಭಕ್ತಸ್ಥಲದಿಂದ ಶಿವಪಥವನ್ನು ಆರಂಭಿಸಿ ಶರಣಸ್ಥಿತಿಗೆ ಬರುವ ವೇಳೆಗೆ ದಾಸಭಾವವನ್ನು ಕ್ರಮೇಣ ಕಳೆದುಕೊಂಡು, ಶಿವಭಾವದಲ್ಲಿ (ಶಿವೋऽಹಂ ಭಾವ) ಅಂಗನು ನೆಲೆಯಾಗಿ ನಿಲ್ಲುವನು. 'ಐಕ್ಯ'ಸ್ಥಿತಿಯಲ್ಲಿ ಸಮರಸವಾಗಿ ಲೀನಗೊಂಡು ಶಿವನೇ ಆಗುತ್ತಾನೆ. ಭಕ್ತಿಪಥದ ಪ್ರಾರಂಭದಲ್ಲಿದ್ದ ಭೇದವು ಅಂತ್ಯದಲ್ಲಿ ಇಲ್ಲವಾಗುತ್ತದೆಂದರೆ ತಾರ್ಕಿಕವಾಗಿ ಅಸಮಂಜಸ ಹಾಗೂ ಅಸಂಬದ್ಧವೆನಿಸಿದರೂ, ನೈಸರ್ಗಿಕವಾಗಿ ಜಗದ್ವ್ಯಾಪಾರಾವಸ್ಥೆಯಲ್ಲಿ ವ್ಯವಹರಿಸಬೇಕಾದ ಜೀವನಿಗೆ ಅದು ಸಹಜ ಮತ್ತು ಸ್ವಾಭಾವಿಕವೆನಿಸುತ್ತದೆ. ತುಪ್ಪವು ಹಾಲಿನಲ್ಲಿದ್ದರೂ ನಾವು ಹಾಲನ್ನು ತುಪ್ಪವೆನ್ನುವುದಿಲ್ಲ. ಹಾಗೆಯೇ, ಶಿವನು ಜೀವನಲ್ಲಿದ್ದರೂ ಅವನನ್ನು ಶಿವನೆನ್ನಲಾಗುವುದಿಲ್ಲ. ಹಾಲಿನಿಂದ ತುಪ್ಪವನ್ನು ಹೊರತೆಗೆದಮೇಲೆ ಅದನ್ನು ತುಪ್ಪವೆಂದು ಹೇಳುವ ಹಾಗೆ ಜೀವನು ತನ್ನ ಶಿವರೂಪವನ್ನು ಹೊಂದಿದಮೇಲೆ ಅವನೇ ಶಿವನಾಗುತ್ತಾನೆ.

ಈ ಷಟ್ಸ್ಥಲಮಾರ್ಗವನ್ನು ಸಮಗ್ರವಾಗಿ ಪರಿಶೀಲಿಸಿದರೆ ಕೆಲವು ಮೂಲ ತತ್ತ್ವಗಳು ಸ್ಫುಟಗೊಳ್ಳುತ್ತವೆ. ಇದು ಮೊದಲಿನಿಂದ ಕೊನೆಯವರೆಗೂ ಅಂಗವು ಲಿಂಗವನ್ನು ಅನ್ವೇಷಣೆ ಮಾಡುವ ಸಾಧನವಾದುದರಿಂದ ಇದನ್ನು ಭಕ್ತಿಪಂಥವೆಂದು ಹೇಳಬೇಕು. ಆದರೆ ಈ ಪಂಥದಲ್ಲಿ ಪ್ರಾರಂಭದ ಸ್ಥಲಗಳು ಕ್ರಿಯಾಪ್ರಧಾನವಾಗಿರುತ್ತವೆ. ಕೊನೆಯ ಸ್ಥಲಗಳು ಅಂತರ್ಮುಖವಾಗಿ ಜ್ಞಾನಪ್ರಧಾನವಾಗಿರುತ್ತವೆ. ಆದರೆ ಈ ಕ್ರಿಯಾ ಮತ್ತು ಜ್ಞಾನ ಎರಡು ದೆಸೆಯಲ್ಲಿಯೂ ಅನುಸ್ಯೂತವಾಗಿ ಒಂದೇ ಒಂದು ಭಕ್ತಿಪ್ರವಾಹ ಮುಂದುವರಿಯುತ್ತದೆ. ಮತ್ತೊಂದು ಮುಖ್ಯ ಅಂಶವೇನೆಂದರೆ ಪ್ರಾರಂಭಾವಸ್ಥೆಯಲ್ಲಿ ಶಿವ ಜೀವರ ದ್ವೈತವನ್ನು ಅಂಗೀಕರಿಸಿದರೂ, ತನ್ಮೂಲಕವೇ ಪ್ರಗತಿಯನ್ನು ಸಾಧಿಸಿದರೂ, ಪರ್ಯಾವಸಾನದಲ್ಲಿ ಅಂದರೆ ಶರಣ ಮತ್ತು ಐಕ್ಯಸ್ಥಲಗಳಲ್ಲಿ ಅದ್ವೈತನಿಷ್ಠೆ ಸ್ಫುಟವಾಗಿ ಕಾಣುತ್ತದೆ. ಹೀಗೆ ಷಟ್ಸ್ಥಲಸಿದ್ಧಾಂತದಲ್ಲಿ ಕರ್ಮ-ಜ್ಞಾನಗಳ ಸಮನ್ವಯವೂ, ಭಕ್ತಿ-ಕರ್ಮ ಮತ್ತು ಭಕ್ತಿ-ಜ್ಞಾನಗಳ ಸಮನ್ವಯವೂ, ಹಾಗೆಯೇ ದ್ವೈತ-ಅದ್ವೈತ ಇವುಗಳ ಸಮನ್ವಯವೂ ಸಾಧಿಸಲ್ಪಟ್ಟಿವೆ. ಆದುದರಿಂದ ಇದನ್ನು 'ಸಾಮರಸ್ಯ' ಮಾರ್ಗವೆಂದು ಹೇಳುವುದು ಅತ್ಯಂತ ಉಚಿತವಾಗಿದೆ.

ಅಂಗನ ಷಟ್ಸ್ಥಲೋಪಾಸನೆಗೆ ಅನೇಕ ಅಡಚಣೆಗಳು ಇರುತ್ತವೆ. ಅವುಗಳನ್ನು ನಿವಾರಿಸಿ, ಭಕ್ತಿಯಾಚರಣೆಯನ್ನು ಅಧಿಕಗೊಳಿಸಲು ಎಂಟು ಆವರಣಗಳು ಅವನಿಗೆ ರಕ್ಷಾಕವಚಗಳಾಗಿರುವುವು. ಇವನ್ನು 'ಅಷ್ಟಾವರಣ'ಗಳು ಎಂದು ಕರೆಯುತ್ತಾರೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ ಮತ್ತು ಮಂತ್ರ—ಇವೇ ಎಂಟು ಆವರಣಗಳು. ಅಂಗನಿಗೆ ಷಟ್ಸ್ಥಲಾಚರಣೆಗೆ ಉಪಯುಕ್ತವಾಗುವಂತೆ ಐದು ಆಚಾರಗಳನ್ನು ಹೇಳಲಾಗಿದೆ. ಇವುಗಳನ್ನು 'ಪಂಚಾಚಾರ'ವೆಂದು ಕರೆಯುತ್ತಾರೆ. ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರ—ಇವೇ ಆ ಐದು ಆಚಾರಗಳು.

ಷಟ್ಸ್ಥಲ ಸಿದ್ಧಾಂತವು ವರ್ಣ-ಜಾತಿಗಳ ಭೇದವಿಲ್ಲದೆ ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುತ್ತದೆ. ಈ ಸಿದ್ಧಾಂತದ ಮತ್ತೊಂದು ವೈಶಿಷ್ಟ್ಯವೇನೆಂದರೆ ಇದು ಕಾಯಕವನ್ನು ವಿಶೇಷವಾಗಿ ಒತ್ತಿ ಹೇಳುತ್ತದೆ. 'ಕಾಯಕ'ವೆಂದರೆ ಮೂಲತಃ 'ದೇಹಕ್ಕೆ ಸಂಬಂಧಿಸಿದ್ದು' ಎಂದು ಅರ್ಥ. ಪ್ರತಿಯೊಬ್ಬ ವ್ಯಕ್ತಿಯೂ ದೈಹಿಕ ಶ್ರಮವನ್ನು ಒಳಗೊಂಡಿರುವ ವೃತ್ತಿಯೊಂದನ್ನು ಅವಲಂಬಿಸಲೇಬೇಕು. ತಾನು ಶ್ರಮಪಡದೆ ಇತರರ ಶ್ರಮವನ್ನು ಅವಲಂಬಿಸಬಾರದು. ವೃತ್ತಿಗಳಲ್ಲಿ ಮೇಲು-ಕೀಳು ಎಂಬ ಭೇದವಿಲ್ಲವೆಂದು ಸಾರಿದ ಕಾಯಕತತ್ತ್ವವು ವೃತ್ತಿಗೌರವವನ್ನೂ, ತನ್ಮೂಲಕ ವ್ಯಕ್ತಿಗೌರವವನ್ನೂ ಸ್ಥಾಪಿಸುತ್ತದೆ; ಮಾನವನ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಎತ್ತಿಹಿಡಿಯುತ್ತದೆ. ವ್ಯಕ್ತಿಯು ತಾನು ಅನುಸರಿಸಿರುವ ಯಾವುದೇ ವೃತ್ತಿ ತನ್ನ ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ಒಂದು ಭಾಗವೆಂದು ಭಾವಿಸಬೇಕು. ಈ ದೃಷ್ಟಿಯಿಂದಲೇ ಬಸವಣ್ಣನವರು 'ಕಾಯಕವೇ ಕೈಲಾಸ'ವೆಂದಿದ್ದಾರೆ.

ಷಟ್ಸ್ಥಲಸಿದ್ಧಾಂತದ ಸಾರ್ವಜನಿಕ ವ್ಯಾಪಕತೆ ಮತ್ತು ಅದರಲ್ಲಿನ ಕಾಯಕತತ್ತ್ವ ಇವು ವರ್ಣಧರ್ಮದ ಆಧಾರ

ಮತ್ತು ಔಚಿತ್ಯವನ್ನು ಪ್ರಬಲವಾಗಿ ಪ್ರಶ್ನಿಸಿದುವು. ವರ್ಣಧರ್ಮವು ಅಸಮಾನತೆಯನ್ನು ಉಂಟುಮಾಡಿತ್ತು ; ವಿವಿಧ ವರ್ಣಗಳಿಗೆ ವೃತ್ತಿಗಳನ್ನು ಗೊತ್ತುಮಾಡಿ ಅದರಲ್ಲಿ ಮೇಲು-ಕೀಳು, ಉಚ್ಚ-ನೀಚ ಭಾವವನ್ನು ಸಮ್ಮತಿಸಿತ್ತು : ಅಸ್ಪೃಶ್ಯತೆಯ ಆಚರಣೆಯು ಜೀವನಕ್ರಮದ ಒಂದು ಭಾಗವೇ ಆಗಿತ್ತು. ಈ ಸಾಮಾಜಿಕ ಕೆಡಕುಗಳನ್ನು ನಿರ್ಮೂಲನ ಮಾಡಲು ಕಾಯಕತತ್ತ್ವ ಕ್ರಾಂತಿಕಾರಕವಾಗಿ ಪರಿಣಮಿಸಿತು. ವಿಶಿಷ್ಟಾದ್ವೈತದ ಶ್ರೀವೈಷ್ಣವ ಪಂಥದಲ್ಲೂ ಭಕ್ತಿ ಮತ್ತು ಪ್ರಪತ್ತಿಗಳ ಮೂಲಕ ವರ್ಣವ್ಯವಸ್ಥೆಯ ಕಟ್ಟನ್ನು ಸಡಿಲಪಡಿಸಿದ್ದರೂ, ವೀರಶೈವರು ಈ ಮಾರ್ಗದಲ್ಲಿ ಸಾಧಿಸಿದ ಪ್ರಗತಿಯನ್ನು ಅದು ಮುಟ್ಟಲಿಲ್ಲ. ಮಾನವ ಸಮಾನತೆಯ ತೀವ್ರತೆ ಇಲ್ಲಿ ಅಧಿಕವಾಗಿದೆ.

---

ಇಷ್ಟಲಿಂಗಮಿತಿ ಪ್ರೋಕ್ತಮಾಚಾರ್ಯೈರ್ಲಿಂಗ ಪೂಜಕೈಃ ।
ಇಷ್ಟಮರ್ಥಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ ॥

ಶಿವಾನುಭವಸೂತ್ರ

* * *

ಆಚಾರವೆಂಬ ಭಿತ್ತಿಯ ಮೇಲೆ ವಿಚಾರವೆಂಬ ಚಿತ್ರವ ಚಿತ್ರಿಸಿ
ಜ್ಞಾನವೆಂಬ ಕಳೆಯ ನೆಲೆಗೊಳಿಸಿ
ಅನುಭಾವವೆಂಬ ಮಂಟಪದಲ್ಲಿ ಶರಣ ಕುಳ್ಳಿರ್ದು
ನೆತ್ತಿಯ ನಯನವ ತೆಱೆದು ನೋಡಲು ಆಚಾರ ವಿಚಾರದೊಳಡಗಿತ್ತು,
ವಿಚಾರ ಸುವಿಚಾರದೊಳಡಗಿತ್ತು, ಸುವಿಚಾರ ಸುಜ್ಞಾನದೊಳಡಗಿತ್ತು,

ಸುಜ್ಞಾನ ಮಹಾನುಭಾವದೊಳಡಗಿತ್ತು,
ಮಹಾನುಭಾವ ಶರಣನೊಳಡಗಿತ್ತು,
ಶರಣನಿರ್ದು ತನ್ನ ತಾ ಆಚಾರವ ನುಂಗಿ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಸ್ವತಂತ್ರ ಸಿದ್ಧಲಿಂಗೇಶ್ವರರು

# ದ್ವೈತ ಮತ್ತು ವೀರಶೈವ ಸಿದ್ಧಾಂತದಲ್ಲಿನ ತಾತ್ವಿಕ ಸಮಾನತೆ

**ಪರಮಪೂಜ್ಯ ಶ್ರೀ ಶ್ರೀ ೧೦೮ ವಿಶ್ವೇಶತೀರ್ಥ ಶ್ರೀಪಾದಂಗಳವರು**

ನಮ್ಮ ದೇಶದಲ್ಲಿ ಅನೇಕ ಮತಸಂಪ್ರದಾಯಗಳಿವೆ. ಇವುಗಳಲ್ಲಿ ತೀವ್ರ ಭಿನ್ನತೆಗಳೂ ಇವೆ. ತಾತ್ವಿಕ ವಿಷಯಗಳಲ್ಲಿ ಈ ಮತಗಳಲ್ಲಿರುವ ವ್ಯತ್ಯಾಸವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಆಯಾಯ ಮತದ ಅನುಯಾಯಿಗಳು ಪರಸ್ಪರವಾಗಿ ದೂರಸರಿದು ಪ್ರತ್ಯೇಕತೆಯ ಭಾವನೆಯನ್ನು ಬೆಳೆಸಿಕೊಳ್ಳುವ ಬದಲು ಆಯಾಯ ಮತಗಳಲ್ಲಿರುವ ಸಮಾನವಾದ ಅಂಶಗಳ ಕಡೆಗೆ ಏಕೆ ಗಮನವನ್ನು ಹರಿಸಬಾರದು ? ಇದರಿಂದ ಇಬ್ಬರೂ ಸಮೀಪ ಬಂದು ಪರಸ್ಪರ ಸಹಕಾರದಿಂದ ವರ್ತಿಸಬಹುದಾದ ಅನೇಕ ಸಂಗತಿಗಳನ್ನು ಗುರುತಿಸಿಕೊಳ್ಳಲು ಅನುಕೂಲವಾಗುವುದು. ಎಲ್ಲಾ ಮತಗಳಿಗೆ ಸಮಾನವಾದ ಸಾಮಾನ್ಯ ಅಂಶಗಳು ಸಾಕಷ್ಟಿವೆ. ಅದರಂತೆ ಬೇರೆಬೇರೆ ಮತಗಳಲ್ಲಿ ವಿಶಿಷ್ಟವಾದ ಕೆಲವು ಪ್ರತ್ಯೇಕ ಸಮಾನತೆಗಳೂ ಇವೆ. ಇವೆಲ್ಲವನ್ನೂ ಪರಿಶೀಲಿಸುವಾಗ ಎಲ್ಲ ಮತಗಳೂ ನಮಗೆ ತೀರ ಹತ್ತಿರವೆಂಬ ಭಾವನೆಯು ಬೆಳೆಯಲು ಅವಕಾಶವಾಗುವುದು. ಸಮಾಜದಲ್ಲಿ ಮೈತ್ರಿಯ ಸಾಮರಸ್ಯಗಳು ಬೆಳೆಯಲು ಇಂತಹ ವಿಚಾರಸರಣಿಯು ಅತ್ಯಾವಶ್ಯಕವಾಗಿರುತ್ತದೆ.

ತಾತ್ವಿಕ ಕ್ಷೇತ್ರದಲ್ಲಿ ಒಂದು ರೀತಿಯ ಉಗ್ರವಾದ ವಿಚಾರಸರಣಿಯನ್ನು ನಾವು ನೋಡಬಹುದು. ಬೇರೆ ಮತಗಳಲ್ಲಿ ನಿರೂಪಿತವಾದ ವಿಷಯವು ಎಷ್ಟೇ ಸಮರ್ಪಕವಾಗಿದ್ದರೂ ನಾವದನ್ನು ಸ್ವೀಕರಿಸಬಾರದೆಂಬ ಸಂಕುಚಿತದೃಷ್ಟಿಯನ್ನು ಕೆಲವರು ತೋರಿದ್ದಾರೆ.

ಮೀಮಾಂಸಕರು ಬೌದ್ಧಮತವನ್ನು ಖಂಡಿಸುವ ಆತುರದಲ್ಲಿ ಬೌದ್ಧರು ಪ್ರತಿಪಾದಿಸಿದ ಅಹಿಂಸೆಯೂ ಸ್ವೀಕಾರಾರ್ಹವಲ್ಲವೆಂದು ಹೇಳಿದ್ದುಂಟು. ಹಸುವಿನ ಹಾಲು ಪವಿತ್ರವಾಗಿದ್ದರೂ, ನಾಯಿಯ ಚರ್ಮದ ಚೀಲದಲ್ಲಿ ಧರಿಸಿದ ಹಸುವಿನ ಹಾಲನ್ನು ನಾವು ತ್ಯಜಿಸುವಂತೆ, ಬೌದ್ಧರು ಹೇಳಿದ ಅಹಿಂಸೆಯನ್ನು ನಾವು ಸ್ವೀಕರಿಸಬಾರದೆಂದು ಅವರು ಪ್ರತಿಪಾದಿಸಿದ್ದಾರೆ. ಇದು ಅತಿರೇಕದ ವಿಚಾರಸರಣಿಯಾಗಿದ್ದರೆ, ಇದಕ್ಕಿಂತ ಬೇರೆಯಾದ ರೀತಿಯನ್ನು ಶ್ರೀ ಮಧ್ವಾಚಾರ್ಯರು ತೋರಿದ್ದಾರೆ.

"ಶಿವಶಾಸ್ತ್ರೇऽಪಿ ತದ್‌ಗ್ರಾಹ್ಯಂ ಭಗವತ್‌ಶಾಸ್ತ್ರಯೋಗಿಯತ್" "ಶೈವಶಾಸ್ತ್ರದಲ್ಲಿಯೂ ನಮ್ಮ ತತ್ವಜ್ಞಾನಕ್ಕೆ ಅನುಕೂಲವಾದ ಸಂಗತಿಗಳಿದ್ದರೆ ಅವುಗಳನ್ನು ಪರಿಗ್ರಹಿಸಬೇಕು." ಇಂತಹ ಉದಾರಭಾವನೆಯಿಂದಲೇ ಎಲ್ಲಾ ಮತಗಳಲ್ಲಿ ಪರಸ್ಪರ ಹೊಂದಾಣಿಕೆಯ ಮನೋಭಾವವು ಬೆಳೆದು ಏಕತೆಯನ್ನು ಬಲಗೊಳಿಸಲು ಸಾಧ್ಯವಾಗುವುದು.

ಶ್ರೀ ಮಧ್ವಾಚಾರ್ಯರ ವೈಷ್ಣವ ಸಿದ್ಧಾಂತವೂ ವೀರಶೈವ ಸಿದ್ಧಾಂತವೂ ತೀರ ಪರಸ್ಪರ ವಿರೋಧಿ ವಿಚಾರಧಾರೆಗಳನ್ನು ಒಳಗೊಂಡಿವೆಯೆಂದು ಸಾಮಾನ್ಯವಾಗಿ ನಮಗೆ ತೋರಬಹುದು. ಒಂದು ವಿಷ್ಣುವಿನ ಸರ್ವೋತ್ತಮತ್ವವನ್ನು ಸಮರ್ಥಿಸುತ್ತಿದ್ದರೆ. ಇನ್ನೊಂದು ಶಿವನ ಪಾರಮ್ಯವನ್ನು ಪ್ರತಿಪಾದಿಸುತ್ತದೆ. ಉತ್ತರ ದಕ್ಷಿಣ ಧ್ರುವಗಳಂತೆ ಈ ಶೈವ ವೈಷ್ಣವ ಮತಗಳಿಗೆ ಪರಸ್ಪರ ಹೊಂದಾಣಿಕೆಯೇ ಇರಲಾರದೆಂದು ನಾವು ಭಾವಿಸುತ್ತೇವೆ. ಆದರೆ ಈ ಎರಡೂ ಮತಗಳಲ್ಲಿ ಸಮಾನವಾದ ಅಂಶಗಳು ಸಾಕಷ್ಟು ಇವೆಯೆಂಬುದನ್ನು ನಾವು ಅರಿತುಕೊಳ್ಳಬೇಕು.

ಜಗತ್ತಿನ ಅಸ್ತಿತ್ವ ವಿಷಯದಲ್ಲಿನ ಸಮಾನತೆಯು ಪ್ರಧಾನವಾಗಿ ಎದ್ದುಕಾಣುವ ಅಂಶವಾಗಿದೆ. ಬೌದ್ಧ ಹಾಗೂ ಅದ್ವೈತಮತದಲ್ಲಿ ಪ್ರತ್ಯಕ್ಷ ಗೋಚರವಾದ ಈ ಜಗತ್ತು ಕಾಲ್ಪನಿಕವೆಂದು ನಿರೂಪಿಸಲಾಗಿದ್ದರೆ, ಮಧ್ವರ ದ್ವೈತಮತದಲ್ಲಿ ಮತ್ತು ವೀರಶೈವಮತದಲ್ಲಿ ಜಗತ್ತು ಸತ್ಯವೆಂದು ಪ್ರತಿಪಾದಿಸಲ್ಪಟ್ಟಿದೆ. ಅನುಭವವನ್ನು ಅಲ್ಲಗಳೆದು ಜಗತ್ತಿನ ನಿರಾಕರಣೆಗೆ ತೊಡಗಬಾರದು, ಸತ್ಯವಾದ ಜಗತ್ತನ್ನು ಸಾಧನಾಭೂಮಿಯೆಂದು ಭಾವಿಸಿ ಕರ್ತವ್ಯದಲ್ಲಿ ಪ್ರವೃತ್ತರಾಗಬೇಕೆಂದು ಎರಡೂ ಮತಗಳ ವಿಚಾರಸರಣಿಯಾಗಿದೆ. ಜೀವನದಲ್ಲಿ ನಾವು ನಡೆಸುವ ವೃತ್ತಿ, ಉದ್ಯೋಗ

ಗಳು ಭಗವಂತನ ಪೂಜೆಯೆಂದು ವೀರಶೈವ ಸಂಪ್ರದಾಯದಲ್ಲಿ ಭಾವಿಸಲಾಗಿದೆ. "ಕಾಯಕವೇ ಕೈಲಾಸ"ವೆಂಬ ಸುಪ್ರಸಿದ್ಧ ಘೋಷಣೆಯನ್ನು ಎಲ್ಲರೂ ಕೇಳಿದ್ದಾರೆ. ಶ್ರೀಮಧ್ವಾಚಾರ್ಯರೂ "ಸ್ವವಿಹಿತ ವೃತ್ತ್ಯಾ ಭಗವದಾರಾಧನ ಮೇವ ಪರಮೋ ಧರ್ಮಃ" ಎಂದು ನಮ್ಮ ಜೀವನದ ವೃತ್ತಿಯೂ ಭಗವಂತನ ಪೂಜೆಯೇ ಆಗಿದೆ. ನಮ್ಮ ಜೀವನದ ಬೇರೆಬೇರೆ ಕರ್ತವ್ಯ ಉದ್ಯೋಗಗಳಿಂದ ಭಕ್ತಿಯಿಂದ ಭಗವಂತನನ್ನು ಆರಾಧಿಸುವುದೇ ಪರಮಧರ್ಮವೆನಿಸಿದೆ ಎಂದು ಘೋಷಿಸಿದ್ದಾರೆ. ಆದ್ದರಿಂದ ಈ ಜಗತ್ತನ್ನೂ ಜೀವನವನ್ನೂ ಅಸತ್ಯವೆಂದು ತಿರಸ್ಕರಿಸದೆ, ಅವುಗಳನ್ನು ಸ್ವಾಗತಿಸಿ ನಿಷ್ಠೆಯಿಂದ ನಮ್ಮ ಕರ್ತವ್ಯವನ್ನು ನೆರವೇರಿಸಬೇಕೆಂಬ ಮಹತ್ವದ ವಿಷಯದಲ್ಲಿ ಈ ಎರಡೂ ಮತಗಳಿಗೆ ಪೂರ್ಣ ಸಹಮತಿ ಇದೆ.

ಸರ್ವೋತ್ತಮನಾದ ದೇವತೆಯು ವಿಷ್ಣು ಅಥವಾ ಶಿವನೆಂಬ ಬಗ್ಗೆ ಎರಡೂ ಮತಗಳಲ್ಲಿ ವಿವಾದ ಸುಪ್ರಸಿದ್ಧ. ಆದರೂ ಸರ್ವೋತ್ತಮನಾದ ದೇವರು ಒಬ್ಬನೇ ಆಗಿದ್ದು ಅವನನ್ನು ನಾನಾ ಹೆಸರುಗಳಿಂದ ಕರೆಯಬಹುದೆಂಬುದನ್ನು ಎರಡೂ ಮತಗಳು ಒಪ್ಪಿವೆ. ಮಧ್ವಾಚಾರ್ಯರಂತೂ ದೇವರಿಗೆ ಅನಂತ ಆಕಾರಗಳಿವೆ. ಎಲ್ಲ ಶಬ್ದಗಳಿಂದಲೂ ಅವನು ಪ್ರತಿಪಾದ್ಯನೆಂದು ಅವರು ನಿರೂಪಿಸಿದ್ದಾರೆ. ಬೇರೆಬೇರೆ ಪಾತ್ರೆಗಳಲ್ಲಿರುವ ನೀರು ಅದೇ ರೀತಿ ಆಕಾರವನ್ನು ತಾಳುವಂತೆ ಎಲ್ಲ ವಸ್ತುಗಳ ಅಂತರ್ಯಾಮಿಯಾಗಿರುವ ಭಗವಂತನೂ ಆ ವಸ್ತುಗಳಲ್ಲಿ ಅದೇ ರೀತಿ ಚಿನ್ಮಯ ಆಕಾರವಲ್ಲಿದ್ದು ಆ ವಸ್ತುಗಳ ಅಸ್ತಿತ್ವ ಪ್ರವೃತ್ತಿಗೆ ಕಾರಣನಾಗಿರುವನೆಂದು ಮಧ್ವಾಚಾರ್ಯರ ಅಭಿಪ್ರಾಯವಾಗಿದೆ. ಹೀಗಾಗಿ ಪರಮಾತ್ಮನು ಎಲ್ಲ ರೀತಿಯ ಆಕಾರಗಳನ್ನು ಪಡೆದಿರುವುದರಿಂದ ಮತ್ತು ಎಲ್ಲ ಶಬ್ದಗಳಿಂದ ಪ್ರತಿಪಾದ್ಯನಾಗಿರುವುದರಿಂದ ದೇವರ ಹೆಸರು ಮತ್ತು ಆಕಾರಗಳ ಬಗ್ಗೆ ಹೆಚ್ಚಿನ ಗೊಂದಲಕ್ಕೆ ಅವಕಾಶವಿಲ್ಲ. ಆದ್ದರಿಂದ ದೇವರ ಹೆಸರು ಮತ್ತು ಆಕಾರಗಳ ಬಗ್ಗೆ ದ್ವೈತ ಮತ್ತು ವೀರಶೈವ ಮತಗಳಿಗಿರುವ ಭಿನ್ನಾಭಿಪ್ರಾಯಕ್ಕೆ ನಾವು ವಿಶೇಷ ಮಹತ್ವ ಕೊಡಬೇಕಾಗಿಲ್ಲ.

ಜೀವ ಪರಮಾತ್ಮರಲ್ಲಿ ಅಂಗೀಕರಿಸಿದ ಅದ್ವೈತವೇ ವೀರಶೈವ ಮತದಲ್ಲಿ ದ್ವೈತವಾದಕ್ಕೆ ವಿರೋಧಿಯೆಂದು ಹೇಳಬಹುದು. ಆದರೆ ಈ ವಿಷಯದಲ್ಲಿ ಶಂಕರಾಚಾರ್ಯರ ಅದ್ವೈತಕ್ಕಿಂತ ವೀರಶೈವ ಮತವು ಮಧ್ವಮತಕ್ಕೆ ಸಮೀಪದಲ್ಲಿದೆ. ಈ ಜಗತ್ತಿನಲ್ಲಿ ಜೀವ-ಪರಮಾತ್ಮರಲ್ಲಿ ತೋರುವ ಭಿನ್ನತೆ, ವ್ಯತ್ಯಾಸಗಳು, ಕೇವಲ ಕಾಲ್ಪನಿಕವಾಗಿದ್ದು ಸಂಸಾರದ ದಶೆಯಲ್ಲೂ ವಾಸ್ತವವಾದ ಅದ್ವೈತವೇ ಇದೆಯೆಂಬ ಶಂಕರಾಚಾರ್ಯರ ಪ್ರತಿಪಾದನೆಯನ್ನು ವೀರಶೈವರು ಒಪ್ಪುವುದಿಲ್ಲ. ಸಂಸಾರದಶೆಯಲ್ಲಿರುವ ಭಿನ್ನತೆಯು, ವಾಸ್ತವವೂ ಸತ್ಯವೂ, ಸ್ವಾಭಾವಿಕವೂ ಆಗಿದೆ. ಮುಕ್ತಿಯಲ್ಲಿ ಮಾತ್ರ ಜೀವ-ಪರಮಾತ್ಮರಲ್ಲಿ ಅಭೇದವುಂಟಾಗುವುದು. ಸಂಸಾರದಶೆಯಲ್ಲಿ ಜೀವಶಿವರೊಳಗೆ ಭೇದವೇ ಇದೆ. ಈಗ ಅಭೇದೋಪಾಸನೆಗೆ ಅವಕಾಶವೇ ಇಲ್ಲವೆಂದು ವೀರಶೈವ ಮತದ ವಿಚಾರವಾಗಿದೆ. ಆದ್ದರಿಂದಲೇ "ಸೋಹಂ" ಎನ್ನದೆ "ದಾಸೋಹಂ" ಎನ್ನಬೇಕೆಂದು ಶ್ರೀ ಬಸವಣ್ಣನವರು ತಮ್ಮ ವಚನದಲ್ಲಿ ಸಾರಿದ್ದಾರೆ. ಅಂತೂ ಸಂಸಾರದಶೆಯಲ್ಲಿ ಭಕ್ತಿ, ದ್ವೈತಭಾವ, ಜಗತ್ತಿನ ಅಸ್ತಿತ್ವ, ಕರ್ತವ್ಯದ ಆವಶ್ಯಕತೆ ಮೊದಲಾದ ಅನೇಕ ವಿಷಯಗಳಲ್ಲಿ ಈ ಎರಡೂ ಮತಗಳಿಗೂ ಏಕಾಭಿಪ್ರಾಯವೇ ಇದೆಯೆಂದು ಈ ಎರಡೂ ಮತಗಳನ್ನು ಪರಿಶೀಲಿಸುವಾಗ ವಿಶದವಾಗುವುದು.

ಒಂದು ವಸ್ತುವು ಇನ್ನೊಂದು ಪದಾರ್ಥದಿಂದ ಕೆಲವು ಸಮಯ ಮಾತ್ರ ಭಿನ್ನವಾಗಿದ್ದು, ಅನಂತರ ಅದರೊಂದಿಗೆ ಐಕ್ಯವಾಗುವುದು ಎಲ್ಲಿಯೂ ಕಂಡಿಲ್ಲ. ಬೇರೆಬೇರೆಯಾದ ವಸ್ತುಗಳು ಒಟ್ಟು ಸೇರಬಹುದು. ಮಿಶ್ರಣ ಸಮ್ಮೇಲನಗಳನ್ನು ಹೊಂದಬಹುದು. ಪೂರ್ತಿ ಐಕ್ಯವು ಶಕ್ಯವಿಲ್ಲವಾದ್ದರಿಂದ ಸಂಸಾರದಲ್ಲಿ ಭಿನ್ನರಾಗಿರುವ ಜೀವ ಪರಮಾತ್ಮರು ಮುಕ್ತಿಯಲ್ಲಿ ಐಕ್ಯವನ್ನು ಹೊಂದಲಾರರು. ಸಾಯುಜ್ಯ ಅಥವಾ ಸಾಮೀಪ್ಯವನ್ನು ಮಾತ್ರ ಪಡೆಯಬಲ್ಲರೆಂದು ಮಧ್ವಮತದ ವಿಚಾರವಾಗಿದೆ. ಮುಕ್ತಿಯಲ್ಲಿರುವ ಜೀವಾತ್ಮ ಪರಮಾತ್ಮರ ಸಾಮರಸ್ಯದ ವಿಷಯದಲ್ಲಿ ಮಾತ್ರ ಸ್ವಲ್ಪ ಭಿನ್ನಾಭಿಪ್ರಾಯ ಇದೆಯಲ್ಲದೆ, ಸಂಸಾರದ ಸ್ಥಿತಿಯಲ್ಲಿ ಅಂತಹ ಯಾವ ವಿರೋಧಗಳೂ ಈ ಎರಡೂ ಮತಗಳಲ್ಲಿ ಕಂಡುಬರುವುದಿಲ್ಲ. ಮತ್ತೂ ಹೆಚ್ಚಿನ ಸಾಮರಸ್ಯವನ್ನೇ ನಾವು ಕಾಣಬಹುದಾಗಿದೆ. ಇದನ್ನು ಮನಗಂಡು ಈ ಎರಡೂ ಮತಾನುಯಾಯಿಗಳು ಸಮಾನ ವಿಷಯಗಳಲ್ಲಿ ಪರಸ್ಪರ ಸಹಕಾರ ಪ್ರೇಮ ವಿಶ್ವಾಸಗಳಿಂದ ಕಾರ್ಯಪ್ರವೃತ್ತರಾಗಬೇಕೆಂದು ನಮ್ಮ ಅಪೇಕ್ಷೆಯಾಗಿದೆ.

# ವೀರಶೈವ ಸಿದ್ಧಾಂತ ಮತ್ತು ಮಾಧ್ವ ಸಿದ್ಧಾಂತ

**ಪ್ರೊ. ಕೆ. ಎಂ. ಕೃಷ್ಣರಾವ್**

ಚಿಂತನ ಮಂಥನಗಳಿಗೆ ಸಿದ್ಧವಾದುದಕ್ಕೆ ಸಿದ್ಧಾಂತ ಎನ್ನಬೇಕು. ಈ ಅರ್ಥದ ಪ್ರಕಾರ ಸಿದ್ಧಾಂತ ಒಂದೇ ಇರಬೇಕು. ಹಲವು ಸಿದ್ಧಾಂತಗಳಿಗೆ ಅವಕಾಶವೇ ಸಾಧ್ಯವಿಲ್ಲ. ಆದರೆ ಲೋಕದಲ್ಲಿ ಒಂದೇ ತತ್ತ್ವದರ್ಶನ ಇಲ್ಲ; ಅನೇಕ ಇವೆ. ಆದ್ದರಿಂದ ಅವುಗಳನ್ನು ದರ್ಶನ ಎಂಬ ಹೆಸರಿನಿಂದ ಕರೆಯುವುದು ಸೂಕ್ತವೆಂದೆನಿಸುತ್ತದೆ. ರೂಢಿಯಲ್ಲಿ ಸಿದ್ಧಾಂತ ಎಂಬ ಮಾತು ಬಳಕೆಗೆ ಬಂದಿದೆ.

ದರ್ಶನ ಎಂದರೇನು ಎಂಬುದನ್ನು ಮೊದಲು ಪರಿಶೀಲಿಸಬೇಕಾಗಿದೆ. ಈ ಪ್ರಪಂಚದಲ್ಲಿ ವಾಸಿಸುವ ಬದುಕುವ ನಮಗೆ ಪ್ರಪಂಚ ಅಷ್ಟೋ ಇಷ್ಟೋ ಕಾಣುತ್ತದೆ. ಅದರಲ್ಲಿ ನಾವಿದ್ದೇವೆ ಎಂಬುದೂ ನಮಗೆ ಗೊತ್ತಾಗುತ್ತದೆ. ಅನುಭವದ ಸಹಾಯದಿಂದ ಹುಟ್ಟಿದವರು ಸಾಯುತ್ತಾರೆ ಎಂಬ (ಸತ್ಯ) ತತ್ತ್ವವೂ ತಿಳಿದಿದೆ. ಆದರೆ ತಿಳಿಯದಿರುವ ಅಂಶಗಳು ಸಾಕಷ್ಟಿವೆ.

ಈ ಪ್ರಪಂಚ ಎಂಬುದು ಹೇಗೆ ಉದಯವಾಯಿತು? ತಾನಾಗಿಯೇ ಆವಿರ್ಭಾವವಾಯಿತೆ? ಯಾರಾದರೂ ಇದನ್ನು ಸೃಷ್ಟಿಮಾಡಿದರೆ? ಹಾಗೆ ಸೃಷ್ಟಿಸಿದ್ದರೆ ಅವರು ಯಾರು? ನಾವೇಕೆ ಇಲ್ಲಿದ್ದೇವೆ? ನಮ್ಮನ್ನು ಇಲ್ಲಿಗೆ ಯಾರಾದರೂ ಕಳುಹಿದರೆ? ನಾವೇ ಬಂದೆವೆ? ಕಳುಹಿಸಿದ್ದರೆ, ಹಾಗೆ ಕಳಿಸಿದವರು ಯಾರು? ಏಕೆ ಕಳಿಸಿದರು? ಇಲ್ಲಿ ನಾವು ಸುಖದುಃಖಗಳನ್ನು ಅನುಭವಿಸುತ್ತಿದ್ದೇವೆ. ಸುಖ ಎಲ್ಲರಿಗೂ ಬೇಕು; ಆದರೆ ಎಲ್ಲರಿಗೂ ಅದು ದೊರಕಲಾರದು. ಸ್ವಲ್ಪ ಸಿಕ್ಕಿದರೆ ಹೆಚ್ಚು ಬೇಕು; ಅದು ಹೆಚ್ಚಾಗಿ ದೊರೆಯದು. ಸುಖದೊಂದಿಗೇ ದುಃಖವೂ ಒತ್ತರಿಸಿ ಬರುವುದು. ದುಃಖ ಯಾರಿಗೂ ಬೇಡ; ಆದರೆ ಅದು ಯಾರನ್ನೂ ಬಿಡುವುದಿಲ್ಲ. ಇದೇ ಅಲ್ಲವೇ ಪ್ರಪಂಚ? ಇದಕ್ಕೆ ಕಾರಣ ವೇನು? ಪ್ರಪಂಚದಲ್ಲಿ ಸ್ಪಷ್ಟವಾಗಿ ಕಾಣುವ ವ್ಯತ್ಯಾಸ ತಾರತಮ್ಯಗಳಿಗೆ ಕಾರಣವೇನು? ಅವುಗಳಿಗೆ ಕಾರಣರು ಯಾರು? ಈ ಪ್ರಪಂಚದಲ್ಲಿ ಹುಟ್ಟುವುದಕ್ಕೆ ಮೊದಲು ನಾವೆಲ್ಲಿದ್ದೆವು? ಏನಾಗಿದ್ದೆವು? ಮರಣದ ಅನಂತರ ನಾವು ಹೋಗುವುದು ಎಲ್ಲಿಗೆ? ಮರಣ ಏಕೆ ಬರುತ್ತದೆ? ಈ ವಿಶ್ವದ ಕಾರ್ಯ ನಡೆಯುವುದು ಯಾರಿಂದ? ಅದರ ವ್ಯವಸ್ಥೆಯ ಮರ್ಮವೇನು? ಇತ್ಯಾದಿ ಇತ್ಯಾದಿ ನೂರಾರು ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ. ಅವುಗಳಿಗೆ ಉತ್ತರ ಕೊಡುವುದು ಸಾಮಾನ್ಯರಿಂದ ಸಾಧ್ಯವೇ ಅಲ್ಲ.

ಆದರೆ ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡಲು ಮೇಧಾವಿಗಳು ಪ್ರಯತ್ನಪಟ್ಟಿದ್ದಾರೆ. ಅವರೂ ಮೂಲಭೂತ ಆಕರಗ್ರಂಥಗಳ ಸಹಾಯವನ್ನು ಪಡೆದೇ ಉತ್ತರ ಹೇಳಿದ್ದಾರೆ. ಆದರೆ ಈ ಉತ್ತರಗಳಲ್ಲಿ ಏಕಾಭಿಪ್ರಾಯವಿಲ್ಲ, ಭಿನ್ನಾಭಿಪ್ರಾಯಗಳು ಬಂದಿವೆ. ಅವರವರ ಸಂಪ್ರದಾಯಗಳನ್ನು ಅವರವರ ಅನುಯಾಯಿಗಳು ಅನುಸರಿಸುವುದು ವಾಡಿಕೆಯಾಗಿದೆ. ತಮ್ಮದೇ ಶ್ರೇಷ್ಠ ತತ್ತ್ವ ಎಂದೂ ಅವರುಗಳು ಹೇಳುತ್ತಾರೆ.

ಈ ಅನೇಕಾನೇಕ ಪ್ರಶ್ನೆಗಳ ವಿಮರ್ಶನ ಮತ್ತು ತೀರ್ಮಾನಗಳಿಗೆ ದರ್ಶನ ಎನ್ನುವರು. ಅವರವರು ಕಂಡಂತೆ ಅವರು ಪ್ರತಿಪಾದಿಸಿರುವರು.

ಇಲ್ಲಿಯೂ ವಿಚಾರಕ್ಕೆ ಅವಕಾಶವಿರುವಂತಾಯಿತು. ಎಲ್ಲ ನಡೆಸುವವನು ವಿಷ್ಣು ಎಂದು ಕೆಲವರೂ, ಶಿವ ಎಂದು ಮತ್ತೆ ಕೆಲವರೂ ಹೇಳಿದರು. ವಿಷ್ಣುವನ್ನೇ ಪರಬ್ರಹ್ಮನೆಂದು ತಿಳಿದು ಆರಾಧಿಸುವವರು ವೈಷ್ಣವರೆನಿಸಿದರು. ಶಿವನೇ ಪರಬ್ರಹ್ಮನೆಂದು ತಿಳಿದವರು ಶೈವರೆನಿಸಿದರು. ವಿಷ್ಣು-ಶಿವ ಇವರ ಸುತ್ತ ಇರುವ ವಿಚಾರಗಳು ಆಯಾ ದರ್ಶನಗಳು. ಭರತಖಂಡದ ದರ್ಶನಗಳಲ್ಲಿ ಹೀಗೆ ವೈಷ್ಣವ ಶೈವ ದರ್ಶನಗಳು ಪ್ರಮುಖವಾಗಿವೆ.

ಭಾರತೀಯ ತಾತ್ತ್ವಿಕ ಸಂಪ್ರದಾಯಗಳನ್ನು ದರ್ಶನ ಮತ್ತು ಮತ ಎಂದು ಎರಡು ಭಾಗ ಮಾಡಬಹುದು.

ದರ್ಶನ ತರ್ಕಪ್ರಧಾನ; ಮತ ಭಾವನಾಪ್ರಧಾನ. ಆಸ್ತಿಕದರ್ಶನ ಮತಗಳಿಗೆ ವೇದಗಳೇ ಮೂಲ ಎಂದು ಹೇಳುವರು.

ವೀರಶೈವ ಮತ್ತು ಮಾಧ್ವದರ್ಶನಗಳೆರಡೂ ಕರ್ಣಾಟಕ ನೆಲದಲ್ಲೇ ಹುಟ್ಟಿ ಬೆಳೆದವುಗಳು. ಒಂದು ಶೈವ ಮತ್ತೊಂದು ವೈಷ್ಣವ. ಇವೆರಡೂ ದರ್ಶನಗಳ ಪರಸ್ಪರ ಸ್ವರೂಪಗಳನ್ನು ಕುರಿತು ವಿಚಾರ ಮಾಡಲು ಈ ಲೇಖನಕ್ಕೆ ತೊಡಗಿರುವುದಾಗಿದೆ.

ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ವೀರಶೈವ ದರ್ಶನಕ್ಕೆ-ಮತಕ್ಕೆ ಹೊಸರೂಪವನ್ನು ಕೊಟ್ಟರು. ಈ ಕಾರ್ಯವನ್ನು ಮಾಡಿದವರಲ್ಲಿ ಪ್ರಮುಖರು ಅಲ್ಲಮಪ್ರಭು ಮತ್ತು ಬಸವೇಶ್ವರರು.

ವೀರಶೈವಮತದ ತತ್ತ್ವಗಳಲ್ಲಿ ಮುಖ್ಯವಾದುವನ್ನು ಹೀಗೆ ಸಂಗ್ರಹಿಸಬಹುದು.

ದೇವರು ಒಬ್ಬನೇ—ಶಿವ. ಈ ಶಿವ ವಿಶ್ವವನ್ನು ರಚಿಸಿ ವಿಶ್ವಮಯ ತಾನಾದನು. ಈ ಪರಶಿವನೇ ಪರಬ್ರಹ್ಮ. ಇವನು ಸರ್ವಾಂತರ್ಯಾಮಿ. ಪರಶಿವ-ಪರಬ್ರಹ್ಮ ಶಕ್ತಿವಿಶಿಷ್ಟನಾದ್ದರಿಂದ ಜೀವಜಗತ್ತುಗಳ ಉದಯ ಎಂಬ ವೀರಶೈವ ನಿಲವಿಗೆ ನಾಸದೀಯ ಸೂಕ್ತ ಆಧಾರ ಎನ್ನಲಾಗಿದೆ. ಜೀವಜಗತ್ತುಗಳು ಪರಶಿವಬ್ರಹ್ಮದ ಅಂಶಗಳು. ಅಂಶ ಎಂದರೆ ಅಂಶಿಯಲ್ಲಿ ಕೊರೆದು ತೆಗೆದು ಬೇರೆ ಮಾಡಿದ ತುಂಡಲ್ಲ. ಎಲೆ ಹೂ ಕಾಯಿಗಳು ಮರದ ಅಂಶವಾಗಿರುವಂತೆ ಘಟಾಕಾಶವು ಮಹಾಕಾಶದ ಅಂಶವಾಗಿರುವಂತೆ ಎಂದು ಹೇಳಿದೆ. ಈ ಪರಶಿವ ಸಾಕಾರನೂ ಅಹುದು; ನಿರಾಕಾರನೂ ಅಹುದು. ಅವನನ್ನು ಇಷ್ಟಪ್ರಾಣಭಾವಲಿಂಗರೂಪದಿಂದ ಆರಾಧಿಸಬೇಕು. ಶಿವ_ಶಕ್ತಿ ಎಂಬ ಎರಡು ಮೂಲವಸ್ತುಗಳೇ ಸೃಷ್ಟಿಸ್ಥಿತಿಲಯಗಳಿಗೆ ಕಾರಣ. ಹಿಂಸಾತ್ಮಕವಾದ ಯಜ್ಞಯಾಗಗಳನ್ನು ತ್ಯಜಿಸಬೇಕು. ಸರ್ವಜೀವರಿಗೂ ಲೇಸನೇ ಬಯಸಬೇಕು. ಅಹಿಂಸೆಯನ್ನು ಪಾಲಿಸಬೇಕು, ವರ್ಣ ಆಶ್ರಮ ಜಾತಿ ಸ್ಪೃಶ್ಯ ಅಸ್ಪೃಶ್ಯಭೇದವನ್ನೆಣಿಸಬಾರದು.

ಶಿವನನ್ನು ನಂಬುವವರು ಶರಣರು; ಮೋಕ್ಷಕ್ಕೆ ಸ್ತ್ರೀಪುರುಷರಿಬ್ಬರೂ ಸಮಾನ ಅಧಿಕಾರಿಗಳು. ಅಷ್ಟಾವರಣ ಪಂಚಾಚಾರ ಷಟ್‌ಸ್ಥಲಗಳನ್ನು ಅರಿತು ಅದರಂತೆ ಆಚರಿಸಬೇಕು. ಕರ್ಮ ಜ್ಞಾನ ಭಕ್ತಿಗಳು ಮೋಕ್ಷೋಪಾಯಗಳು.

ಸ್ಥಾವರಕ್ಕಿಂತ ಜಂಗಮ ಶ್ರೇಷ್ಠ; ಜಂಗಮನೇ ಜಗದೀಶ್ವರ. ಶಿವದೀಕ್ಷೆ ಪಡೆದವರೆಲ್ಲರೂ ವೀರಶೈವರು—ಸಮಾನರು. ವೇದಗಳನ್ನು ಆದರಿಸಿದರೂ ಅವುಗಳಲ್ಲಿನ ಕರ್ಮಕಾಂಡವನ್ನು ಪರಿತ್ಯಾಗ ಮಾಡಬೇಕು. ಶಿವ ಮತ್ತು ಶಿವಶರಣರಲ್ಲಿ ಅಭೇದ, ತ್ರಿವಿಧ ದಾಸೋಹಗಳನ್ನು ಆಚರಿಸಬೇಕು. ಕಾಯಕವೇ ಕೈಲಾಸ ಎಂದು ತಿಳಿದು ತಮ್ಮ ತಮ್ಮ ಕರ್ತವ್ಯಗಳನ್ನು ಹೃತ್ಪೂರ್ವಕವಾಗಿ ಮಾಡಬೇಕು.

ಸರ್ವಕ್ಕೂ ಮೂಲಕರ್ತೃ ಪರಮಶಿವ; ಅವನೇ ಪತಿ; ಬದ್ಧಜೀವರು ಪಶುಗಳು. ಈ ಬದ್ಧಜೀವ ಯಾವುದರಿಂದ ಪರಿವೃತವಾಗಿದೆಯೋ ಅದೇ ಪಾಶ ಎನಿಸಿಕೊಳ್ಳುವುದು. ಪರಮಶಿವ(ಪತಿ) ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತ. ಅವನು ಆ ಸ್ಥಿತಿಯಲ್ಲಿ ವಿಶ್ವಾತೀತ; ಚಿದಾನಂದ ಘನ; ಪರಿಪೂರ್ಣ; ಸ್ವಯಂಪ್ರಕಾಶ; ಅನ್ಯ ಸಹಾಯವಿಲ್ಲದೆ ತಾನೇ ಆನಂದವನ್ನು ಪಡೆಯತಕ್ಕವನು (ಪಡೆಯುವ ಶಕ್ತಿಯುಳ್ಳವನು); ಸ್ವತಂತ್ರನು; ಸರ್ವಶಕ್ತನು; ಸಚ್ಚಿದಾನಂದಸ್ವರೂಪಿಯು. ಶಿವನನ್ನು ಬಿಟ್ಟು ಬೇರೆ ಯಾವುದೂ ಇಲ್ಲ. ಆ ಶಿವ ವಿಶ್ವಮಯ. ಶಿವನಿಗೂ ಶಿವಸಂಬಂಧಿಯಾದ ಶಕ್ತಿಗೂ ಅಭೇದ. ಶಿವ ಶಕ್ತಿ ಜಗತ್ತು ಮೂರೂ ಸತ್ಯವೆ. ಶಿವ ಅಘಟಿತ ಶಕ್ತಿಯುಳ್ಳವನು. ಆದ್ದರಿಂದ ಚೇತನಾಚೇತನವನ್ನು ನಿರ್ಮಿಸುವುದರಲ್ಲಿ ಆಶ್ಚರ್ಯವಿಲ್ಲ. ಜೀವ ಚಿದ್ರೂಪಿಯಾಗಿದ್ದರೂ, ಅನಾದಿಕಾಲದಿಂದಲೂ ಮಾಯಾಶಕ್ತಿಯಿಂದ ಬಂಧಿತ. ಶಿವನ ಚಿಚ್ಛಕ್ತಿ, ಆನಂದಶಕ್ತಿ, ಇಚ್ಛಾಜ್ಞಾನಕ್ರಿಯಾಶಕ್ತಿತ್ರಯಗಳು ಜೀವಾತ್ಮನಲ್ಲಿ ಸಂಕೋಚ ಹೊಂದಿ ಅಲ್ಪಪ್ರಮಾಣದಲ್ಲಿ ವ್ಯವಹರಿಸುತ್ತವೆ. ಈ ಶಕ್ತಿಸಂಕೋಚವೇ ಮೂರು ಮಲಗಳಾಗಿ ಪರಿಣಮಿಸುತ್ತವೆ.

ಜೀವಾತ್ಮನು ವಸ್ತುತಃ ಶಿವನೇ ಆಗಿದ್ದರೂ ಶಕ್ತಿಸಂಕೋಚದಿಂದ ಜನನ ಮರಣಗಳಿಂದ ಕೂಡಿಕೊಂಡು ಸಂಸಾರಿಯಾದನು; ಶಕ್ತಿವಿಕಾಸದಿಂದ ತನ್ನ ನಿಜರೂಪವನ್ನು ಪಡೆದು ಶಿವನೇ ಆಗುವನು.

ತತ್ ಎಂದರೆ that—ಅದು ಎಂದರ್ಥ. ತತ್ತ್ವ ಎಂದರೆ ಅದರ ನಿಜಸ್ವರೂಪ. ವಿಶ್ವವೆಂಬುದು ೩೬ ತತ್ತ್ವಗಳಿಂದ ಕೂಡಿಕೊಂಡಿದೆ. ಅವುಗಳಲ್ಲಿ ಮೊದಲನೆಯದು ಶಿವತತ್ತ್ವ. ಅದರಲ್ಲಿ ಉಳಿದ ಮೂವತ್ತೈದು ತತ್ತ್ವಗಳು ಸೇರಿಕೊಂಡಿವೆ. ವ್ಯಕ್ತಿ ಪಿಂಡಾಂಡವಾದರೆ ವಿಶ್ವವೇ ಬ್ರಹ್ಮಾಂಡ. ಈ ಬ್ರಹ್ಮಾಂಡದ ಅಂಶಗಳೆಲ್ಲಾ ಪಿಂಡಾಂಡದಲ್ಲಿ ಸೂಕ್ಷ್ಮರೂಪದಿಂದ ಇವೆ. ವಿಶ್ವದ ಸೃಷ್ಟಿಸ್ಥಿತಿಲಯಗಳು ಈ ಮೂವತ್ತಾರು ತತ್ತ್ವಗಳಿಂದ ನಡೆಯುತ್ತಿವೆ.

ಶಿವನ ಕರ್ತೃತ್ವ ಸರ್ವಜ್ಞತ್ವ ಪೂರ್ಣತ್ವ ನಿತ್ಯತ್ವ ವ್ಯಾಪಕತ್ವ ಶಕ್ತಿಗಳು ಸಂಕೋಚವಾಗಿ ಪಂಚಕಂಚುಕಗಳಾಗುತ್ತವೆ.

ಪ್ರಕೃತಿ ಎಂದರೆ ಪುರುಷನಿಗೆ ಸತ್ತ್ವ–ರಜ–ತಮಸ್ಸುಗಳ ಪ್ರಭಾವದಿಂದ ಕೂಡಿದ ಇಂದ್ರಿಯ ಮತ್ತು ಅಂತಃಕರಣಗಳನ್ನು ಒದಗಿಸುವ ವಸ್ತು. ಪ್ರಕೃತಿಯ ಕೆಳಗೆ ಮಹತತ್ತ್ವ ಅಹಂಕಾರ ತತ್ತ್ವಗಳಿವೆ. ಅಹಂಕಾರತತ್ತ್ವದಿಂದ ಹುಟ್ಟುವುದು ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚತನ್ಮಾತ್ರೆಗಳು ಮತ್ತು ಪಂಚಭೂತಗಳು.

ಜಿಜ್ಞಾಸುವಾದವನು ಈ ತತ್ತ್ವಗಳ ವಿಮರ್ಶೆಯಿಂದ, ಈ ಎಲ್ಲ ಕಾರ್ಯ ನಡೆಯುತ್ತದೆ ಎಂದು ತಿಳಿಯುತ್ತಾನೆ. ತತ್ತ್ವವಿಮರ್ಶೆಯಿಂದ ಶಾಂತಿ ಜ್ಞಾನ ವಿಕಾಸ ಆಗುತ್ತದೆ.

ಈ ಜ್ಞಾನವಿಕಾಸದಿಂದ ಮೋಕ್ಷ, ಅಜ್ಞಾನದಿಂದ ಬಂಧ. ಅಜ್ಞಾನ ಆವರಿಸುವುದು ಜೀವಾತ್ಮನ ಶಕ್ತಿಸಂಕೋಚದಿಂದಲೇ, ಜೀವಿಗಳ ಸುಖ–ದುಃಖ ಎಲ್ಲ ಪರಮಶಿವನ ಸ್ವಾತಂತ್ರ್ಯಶಕ್ತಿಯಿಂದಲೇ ;

ದೀಕ್ಷೆ ಯೋಗ ಜಪ ಧ್ಯಾನಗಳು ಜ್ಞಾನವಿಕಾಸಕ್ಕೆ ಕಾರಣವಾಗುವ ಕರ್ಮಗಳು. ದಾನ ಇತ್ಯಾದಿಗಳು ಇಹ–ಪರ ಅಭ್ಯುದಯಕ್ಕೆ ಕಾರಣವಾದ ಕಾಮ್ಯಕರ್ಮಗಳು.

ಶಿವಾನುಗ್ರಹದಿಂದ ಪಾಶ ಕತ್ತರಿಸುವುದು ; ಅನುಸಂಧಾನದಿಂದ ಪರಿಷ್ಕೃತವಾಗಬೇಕು. ಆಗ ಚಿತ್ ತತ್ತ್ವ ವಿಕಾಸವಾಗುತ್ತದೆ. ಸ್ವಪ್ರಯತ್ನದಿಂದ ಶಾಸ್ತ್ರವನ್ನು ತಿಳಿದು ಸಾಧನೆ ಮಾಡಿದರೆ ಪರಮಶಿವನ ಅನುಗ್ರಹ ಆಗುತ್ತದೆ. ಗುರೂಪದೇಶವೆಂಬುದು ಇಲ್ಲಿ ಅಗತ್ಯ. ಶಾಸ್ತ್ರಜ್ಞಾನ ಗುರೂಪದೇಶ ಸಾಧನೆಗಳಿಂದ ಸಿದ್ಧಿ ದೊರೆಯುವುದು. ಗುರುಕಾರುಣ್ಯ ಅಥವಾ ಶಿವಾನುಗ್ರಹವಿಲ್ಲದೆ ಮಲತ್ರಯಕ್ಷಯವಾಗಲೀ ಶಿವಜ್ಞಾನವಾಗಲೀ ದೊರೆಯಲಾರದು.

ಸರ್ವಜೀವರೂ ಶಿವಸ್ವರೂಪಗಳೇ. ಶಿವತ್ವ ಜೀವನಲ್ಲಿ ಸಿದ್ಧವಾಗಿದ್ದರೂ ಅದು ಅವ್ಯಕ್ತ. ಮಲತ್ರಯ ನಿವೃತ್ತಿಯೇ ಪರಮಪುರುಷಾರ್ಥ. ಇದೇ ಪರಶಿವತ್ವಪ್ರಾಪ್ತಿ—ಇದೇ ಲಿಂಗಾಂಗಸಾಮರಸ್ಯ.

ವೀರಶೈವರಲ್ಲಿ ಶಿವದೀಕ್ಷೆಯಿಂದಲೇ ಲಿಂಗಪೂಜೆ ಪ್ರಾರಂಭ. ಲಿಂಗಧಾರಣೆಯೇ ಶಿವದೀಕ್ಷೆಯ ಬಾಹ್ಯಚಿಹ್ನೆ.

ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಮಾರ್ಗಗಳ ಅನುಷ್ಠಾನದಿಂದ ಶಿವತತ್ತ್ವವನ್ನು ಸಾಧಿಸಬೇಕು. ಇಲ್ಲಿ ಭಕ್ತಿಗೂ ಪ್ರಾಮುಖ್ಯವುಂಟು. ಶಿವನ ಸ್ವಪ್ರಕಾಶರೂಪ ಶಕ್ತಿಯೇ ದೇಹಗತವಾಗಿ ಭಕ್ತಿ ಎನ್ನಿಸಿಕೊಳ್ಳುತ್ತದೆ. ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ—ಎಂದು ಭಕ್ತಿ ಆರು ವಿಧ. ಭಕ್ತಿಮಾರ್ಗದ ಅನುಸರಣೆಯಿಂದ ಕ್ರಮವಾಗಿ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಎಂಬ ಆಧ್ಯಾತ್ಮಿಕ ಸ್ಥಾನಗಳನ್ನು ಭಕ್ತ ಹೊಂದುತ್ತಾನೆ.

ಶಿವದೀಕ್ಷೆ–ಶಿವಪೂಜೆ—ಶಿವಧ್ಯಾನಗಳ ಮೂಲಕ ಭವದ ಭ್ರಾಂತಿಯನ್ನು ನೀಗಿಕೊಂಡು ಶಿವನೇ ಆಗುವನು. ಲಿಂಗಸ್ವರೂಪವನ್ನು ಪಡೆಯುವುದು ಶಿವನಲ್ಲಿ ಸಾಮರಸ್ಯಸುಖವನ್ನು ಹೊಂದುವುದೇ ಗುರಿ. ಅದಕ್ಕೇ ಎಲ್ಲ ಪ್ರಯತ್ನ.

**ಮಾಧ್ವಸಿದ್ಧಾಂತ** : ಮಾಧ್ವಸಿದ್ಧಾಂತ ಎಂದು ಲೋಕದಲ್ಲಿ ಪ್ರಸಿದ್ಧವಾಗಿರುವ ದರ್ಶನಕ್ಕೆ ಪ್ರತಿಪಾದಕರು ಇಟ್ಟ ಹೆಸರು ತತ್ತ್ವವಾದ. ದ್ವೈತದರ್ಶನ ಎಂದು ಇದನ್ನು ಕರೆಯುವರು. ಈ ತತ್ತ್ವದ ಪ್ರತಿಪಾದಕರು ಪೂರ್ಣಪ್ರಜ್ಞರು–ಆನಂದತೀರ್ಥರು–ಮಧ್ವಾಚಾರ್ಯರು ಎಂಬ ಮೂರು ಹೆಸರುಗಳಿಂದ ಪ್ರಸಿದ್ಧರು.

ಇವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಬಳಿ ಇರುವ ಪಾಜಕ ಎಂಬ ಹಳ್ಳಿಯಲ್ಲಿ ೧೨ನೆಯ ಶತಮಾನದ ಅಂತ್ಯದಲ್ಲಿ ಅವತಾರಮಾಡಿ, ಬಾಲ್ಯದಲ್ಲಿಯೇ ಸನ್ಯಾಸ ಸ್ವೀಕರಿಸಿ ೧೩ನೆಯ ಶತಮಾನದಲ್ಲಿ ತಮ್ಮದೇ ಆದ ಒಂದು ಹೊಸ ಸಿದ್ಧಾಂತವನ್ನು ಸ್ಥಾಪಿಸಿದರು.

ಜೀವರಿಗೂ ಪರಮಾತ್ಮನಿಗೂ ಪಾರಮಾರ್ಥಿಕವಾದ ಭೇದವನ್ನು ಇಹ–ಪರಗಳಲ್ಲಿ (ಮೋಕ್ಷದಲ್ಲೂ ಸಹ) ಸ್ಥಾಪಿಸಿರುವ ಕಾರಣ ಈ ಸಿದ್ಧಾಂತಕ್ಕೆ 'ದ್ವೈತ' ಎಂಬ ಹೆಸರು ಪ್ರಸಿದ್ಧವಾಗಿದೆ.

ಶ್ರೀಮದಾನಂದತೀರ್ಥರು ಪ್ರತಿಪಾದಿಸಿದ ತತ್ತ್ವಗಳಿಗೆಲ್ಲಾ ತಳಹದಿಯಾದ ಪ್ರಮಾಣ ಯಾವುದರಲ್ಲಿ ಮೊದಲು ಮಾನವ ಜ್ಞಾನಭಂಡಾರ ರೂಪುಗೊಂಡಿತೋ ಅಂತಹ ವೇದಗಳು. ಆ ವೇದಗಳು ಅಪೌರುಷೇಯ ಎಂದು ಸಾಧಿಸಿ ತೋರಿಸಿ, ವೇದವಿರುದ್ಧವಲ್ಲದ ಪೌರುಷೇಯ ಗ್ರಂಥಗಳು ಎಂದರೆ ಪುರಾಣ ಇತಿಹಾಸ ಮೊದಲಾದ ಗ್ರಂಥಗಳನ್ನೂ ಪ್ರಮಾಣವಾಗಿ ಸ್ವೀಕರಿಸಿ ತಮ್ಮ ವಾದವನ್ನು ಮಂಡಿಸಿದರು. ಪ್ರತ್ಯಕ್ಷ ಅನುಮಾನ ಆಗಮ ಎಂಬ ಮೂರು ಪ್ರಮಾಣಗಳನ್ನು ಅನುಸರಿಸಿ ಅವುಗಳಿಂದ ಸಿದ್ಧವಾಗುವುದೆಲ್ಲ ತತ್ತ್ವ ಎಂದು ಪ್ರಮಾಣಗಳಿಂದ ಪರೀಕ್ಷಿಸಿ ತಮ್ಮ ಪ್ರಮೇಯಗಳನ್ನು ಅವರು ಪ್ರತಿಪಾದಿಸಿದರು.

ಶ್ರೀಮನ್ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ತ್ವಗಳನ್ನು ಹೀಗೆ ಸಂಗ್ರಹಿಸಬಹುದು.

ಶ್ರೀಹರಿ (ಶ್ರೀಮನ್ನಾರಾಯಣ-ಮಹಾವಿಷ್ಣು) ಸರ್ವೋತ್ತಮ: ಜಗತ್ತು ಸತ್ಯ (ಸುಳ್ಳು-ಮಿಥ್ಯೆ ಅಲ್ಲ): ಚೇತನ ಅಚೇತನ ಮತ್ತು ಈಶ (ಶ್ರೀಹರಿ) ಇವರಿಗಿರುವ ಭೇದವು ಸತ್ಯ. ಸರ್ವಚೇತನರೂ(ಜೀವರು) ಶ್ರೀಹರಿಗೆ ಅಧೀನರು—ಅವನ ಕಿಂಕರರು (ದಾಸರು), ಜೀವರಲ್ಲಿ ಪರಸ್ಪರ ತಾರತಮ್ಯವುಂಟು. ಜೀವ ಜಡ ಮತ್ತು ಈಶರಲ್ಲಿ ಪಂಚವಿಧ ಭೇದಗಳುಂಟು—ಜೀವ-ಜೀವ; ಜೀವ-ಜಡ; ಜೀವ-ಈಶ; ಜಡ-ಜಡ ಮತ್ತು ಜಡ-ಈಶ.

ಸಾಧನೆಯ ತರುವಾಯ ಬಿಂಬಾಪರೋಕ್ಷಜ್ಞಾನವುಂಟಾಗಿ ಅನಂತರ ಅವನಿಗೆ ಮೋಕ್ಷ. ಮೋಕ್ಷ ಎಂದರೆ ಜೀವನಿಗೆ ಆಗುವ ಸ್ವರೂಪಾನಂದದ ಆವಿರ್ಭಾವ. ಈ ಮುಕ್ತಿಸಾಧನೆಗೆ ನಿರ್ಮಲವಾದ ಭಕ್ತಿಯೇ ಮುಖ್ಯಸಾಧನ. ಪ್ರತ್ಯಕ್ಷ ಅನುಮಾನ ಮತ್ತು ಆಗಮ ಎಂದು ಮೂರು ಪ್ರಮಾಣಗಳುಂಟು. ಸಕಲ ವೇದಗಳಿಂದಲೇ ಶ್ರೀಹರಿ ಪ್ರತಿಪಾದ್ಯನು.

ಶ್ರೀಹರಿಗೆ ಅಷ್ಟಕರ್ತೃತ್ವಶಕ್ತಿಯಿದೆ—ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನ ಅಜ್ಞಾನ ಬಂಧ ಮತ್ತು ಮೋಕ್ಷ. ಈ ಜಗತ್ತನ್ನು ಸೃಷ್ಟಿಸಿ ಪಾಲಿಸಿ ಲಯಗೈಯುವವನು ಅವನೇ. ಜೀವ ಜಗನ್ನಿಯಾಮಕನಾದ ಹರಿಯನ್ನು ಭಕ್ತಿಯಿಂದ ಸೇವಿಸಿ ಅರ್ಚಿಸಿ ಆರಾಧಿಸಿ ಅವನ ಪ್ರಸನ್ನತೆಯನ್ನು ಪಡೆದು ಅವನ ಸಾಕ್ಷಾತ್ಕಾರವನ್ನು ಹೊಂದಿದರೆ (ಬಿಂಬಾಪರೋಕ್ಷಸಾಧನೆ ಮಾಡಿಕೊಂಡರೆ) ಮುಕ್ತಿಯೆಂಬುದು ಸಿದ್ಧವಾದಂತೆಯೇ. ಮೋಕ್ಷವೆಂಬುದು ನಾಲ್ಕುತೆರ—ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಮತ್ತು ಸಾಯುಜ್ಯ ಎಂದು. ಈ ಎಲ್ಲ ತೆರನ ಮುಕ್ತಸ್ಥಿತಿಯಲ್ಲೂ ಜೀವ ಶ್ರೀಹರಿಯಿಂದ ಭಿನ್ನನೂ, ಅವನಿಗೆ ಅಧೀನನೂ ಆಗಿರುತ್ತಾನೆ.

ಶ್ರೀಹರಿಯೇ ಪರಬ್ರಹ್ಮ. ಅವನು ಪೂರ್ಣಾನಂದ, ಸರ್ವತಂತ್ರಸ್ವತಂತ್ರ, ಸರ್ವಜ್ಞ, ಸರ್ವಶಕ್ತ, ಸಕಲಕಲ್ಯಾಣಗುಣಪರಿಪೂರ್ಣ, ದೋಷದೂರ, ಪ್ರಣವಪ್ರತಿಪಾದ್ಯ, ಅಪ್ರಾಕೃತ ಆನಂದದೇಹಿ, ಸತ್ವಾದಿಪ್ರಾಕೃತಗುಣತ್ರಯರಹಿತ, ಕರ್ಮಬಂಧವಿದೂರ, ಭವದೂರ, ಅವ್ಯಕ್ತ, ಅಚಿಂತ್ಯ, ಸರ್ವತ್ರವ್ಯಾಪ್ತ, ಅಪಾರ ಕರುಣಾಶಾಲಿ, ಭಕ್ತವಾತ್ಸಲ್ಯಮೂರ್ತಿ, ಅನಂತಗುಣಶಾಲಿ. ಅವನಿಗೆ ಸಮರೂ ಅಧಿಕರೂ ಯಾರೂ ಇಲ್ಲ.

ಜೀವರಾದರೋ ಇದಕ್ಕೆಲ್ಲ ವ್ಯತಿರಿಕ್ತ. ಅವರು ಅಶಕ್ತರು, ಅಲ್ಪಜ್ಞರು, ದುಃಖಿಗಳು, ನಿರ್ವಿಣ್ಣರು, ತ್ರಿಗುಣಬದ್ಧರು, ದೋಷಪೂರ್ಣರು, ಹರಿಯ ಅಧೀನರು, ಅಸ್ವತಂತ್ರರು. ಇಂತಹ ಜೀವಸಂಖ್ಯೆ ಅನಂತ. ಅವರು ತಾರತಮ್ಯೋಪೇತರಾಗಿದ್ದಾರೆ. (ಪರಮಾಣು ಪ್ರದೇಶೇಷು ಅನಂತಾಃ ಪ್ರಾಣಿರಾಶಯಃ-ತತ್ತ್ವನಿರ್ಣಯ)

ಭರತಖಂಡದ ವಿವಿಧ ಧರ್ಮಪ್ರತಿಪಾದಕರು ಅವರವರ ದರ್ಶನದಂತೆ ತಮ್ಮ ತಮ್ಮ ಮೋಕ್ಷದ ಸ್ವರೂಪ ಲಕ್ಷಣಗಳನ್ನು ವಿವರಿಸಿದ್ದಾರೆ.

ಚಾರ್ವಾಕರು ಇಹಜೀವನದಲ್ಲಿ ಪಡೆಯುವ ಇಂದ್ರಿಯವಿಷಯಜನ್ಯಸುಖವೇ ಮೋಕ್ಷ ಎಂದರು. ಬೌದ್ಧರು ನಿರ್ಮಲವಾದ ಜ್ಞಾನವೇ ಮೋಕ್ಷ ಎಂದರು. ಗುಣಗಳನ್ನೆಲ್ಲಾ ಕಳೆದುಕೊಳ್ಳುವುದೇ ಮುಕ್ತಿ ಎಂದರು ವೈಶೇಷಿಕರು. ಕರ್ಮನಿಷ್ಠಮೀಮಾಂಸಕರ ಪ್ರಕಾರ ಸ್ವರ್ಗಭೋಗವೇ ಮೋಕ್ಷ. ಭ್ರಾಂತಿಗೆ ಮೂಲವಾದ ಅವಿದ್ಯಾನಾಶದಿಂದ ಬ್ರಹ್ಮತ್ವವನ್ನು ಪಡೆಯುವುದೇ ಅದ್ವೈತಿಗಳ ಮೋಕ್ಷ. ಸತತ ಊರ್ಧ್ವಗಮನವೇ ಜೈನರ ಮೋಕ್ಷ.

ಕೇವಲ ದುಃಖದಿಂದ ಬಿಡುಗಡೆಯಾದರೆ ಮಾತ್ರ ಮೋಕ್ಷವಾಗಲಾರದು. ದುಃಖಮಿಶ್ರವಿಲ್ಲದ ಶಾಶ್ವತವಾದ ಸುಖಾನುಭವವೇ ಮೋಕ್ಷ ಎಂದರು ಶ್ರೀ ಆನಂದತೀರ್ಥರು. ತೈತ್ತಿರೀಯ ಛಾಂದೋಗ್ಯ ಕಠ ಅಥರ್ವ ಬೃಹದಾರಣ್ಯಕ ಉಪನಿಷತ್ತುಗಳಲ್ಲಿ ಇಂತಹ ಮುಕ್ತಿಯನ್ನು (ಮುಕ್ತಿರ್ನೈಜಸುಖಾನುಭೂತಿಃ) ಕುರಿತು ಹೇಳಲಾಗಿದೆ ಎಂದು ಶ್ರೀ ಮಧ್ವಾಚಾರ್ಯರು ಹೇಳಿದ್ದಾರೆ. ಮುಕ್ತರು ಮುಕ್ತಲೋಕದಲ್ಲಿ ದಿವ್ಯಶರೀರಗಳಿಂದ ಸುಖಾನುಭವ ಮಾಡುವರು. 'ನಚ ಪುನರಾವರ್ತತೇ' ಅವರು ಮತ್ತೆ ಇಲ್ಲಿಗೆ ಹಿಂತಿರುಗುವುದಿಲ್ಲ ಎಂದೂ ಹೇಳಿದ್ದಾರೆ. ಇದು ಸಾತ್ವಿಕರ ಮುಕ್ತಿಯಾದರೆ, ರಾಜಸ ತಾಮಸರಿಗೂ ಸಾಂತಾನಿಕಲೋಕ ಅಂಧಂ ತಮಸ್ಸುಗಳೆಂಬ ಸ್ಥಳಗಳುಂಟು ಎಂದೂ ಹೇಳಿದ್ದಾರೆ.

ಸಾತ್ವಿಕಜೀವರಿಗಾಗುವ ಶಾಶ್ವತನೈಜಸುಖದ ಮುಕ್ತಿಗೆ ಮುಖ್ಯಕಾರಣ ಅಮಲವಾದ ಭಕ್ತಿ. ಭಕ್ತಿಯ ನಿರ್ವಚನವನ್ನು ಆಚಾರ್ಯರು ಮಾಡಿ ತೋರಿಸಿದ್ದಾರೆ.

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥

ಎಂದಿದ್ದಾರೆ. ಭಕ್ತಿ ಎಂದರೆ ಕುರುಡು ನಂಬಿಕೆ–ಪ್ರೀತಿಯಲ್ಲ. ಪರಮಾತ್ಮನ ಮಹಿಮೆಯ ಜ್ಞಾನವನ್ನು ಹೊಂದಿ ದೃಢವಾಗಿ ನಂಬಿ ಸರ್ವವಸ್ತುಗಳ ಮೇಲೆ–ಸರ್ವರ ಮೇಲೆ ಇರುವ ಪ್ರೀತಿಗಿಂತ ಅಧಿಕವಾದ, ಎಂತಹ ಆಪತ್ಕಾಲ ಬಂದರೂ ಅಲುಗಾಡದ ನಿರ್ಭರಸ್ನೇಹವೇ ಭಕ್ತಿ ಎನಿಸುತ್ತದೆ. ಕರ್ಮಬಂಧಪರಿಹಾರಕನಾದ ಪರಮಾತ್ಮನ ಅತ್ಯರ್ಥ ಪ್ರಸಾದಕ್ಕೆ ಇಂತಹ ಶುದ್ಧವಾದ ದೃಢವಾದ ನಿರ್ಮಲವಾದ ಭಕ್ತಿಯೇ ಕಾರಣ–ಸಾಧನ ಎಂದಿದ್ದಾರೆ. ಈ ಭಕ್ತಿಯಲ್ಲಿ ಜ್ಞಾನವೂ ಸೇರಿಕೊಂಡಿದೆ.

ತತ್ತ್ವಜ್ಞಾನ ಪಡೆಯುವುದಕ್ಕೆ ವೈರಾಗ್ಯಸಹಿತವಾದ ಶಾಸ್ತ್ರ ಶ್ರವಣ ಮನನ ಧ್ಯಾನಗಳು ಮುಖ್ಯಸಾಧನ. ಆದರೆ ಕೇವಲ ತತ್ತ್ವಜ್ಞಾನವೊಂದೇ ಮೋಕ್ಷಕ್ಕೆ ಸಾಧನವಲ್ಲ ಎಂದು ಶ್ರೀ ಮಧ್ವಾಚಾರ್ಯರ ಅಭಿಪ್ರಾಯ. ಭಗವಂತನ ಅನುಗ್ರಹವೇ ಮುಖ್ಯ "ಯಮೇವೈಷ ವೃಣುತೇ ತೇನ ಲಭ್ಯಃ" ಎಂದಿದೆ ಉಪನಿಷತ್ತಿನಲ್ಲಿ. ಯಾರನ್ನು ಭಗವಂತನು ಅನುಗ್ರಹಿಸುವನೋ ಅವನಿಂದಲೇ ತಾನು ಲಭ್ಯನು. "ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ। ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ॥" ಸರ್ವಪ್ರಕಾರದಿಂದಲೂ ಭಗವಂತನನ್ನೇ ಮೊರೆಹೋಗು. ಆತನ ಅನುಗ್ರಹ ಪ್ರಸಾದಗಳಿಂದಲೇ ಶಾಶ್ವತ ಶಾಂತಿಸುಖ (ಮೋಕ್ಷ) ಹೊಂದುವೆ ಎಂಬ ಗೀತಾವಾಕ್ಯವನ್ನು ಆಚಾರ್ಯರು ಉದಾಹರಿಸಿದ್ದಾರೆ.

ಹೀಗೆ ಈ ಸಿದ್ಧಾಂತದಲ್ಲಿ ಕರ್ಮ, ಜ್ಞಾನ, ವೈರಾಗ್ಯ, ಭಕ್ತಿಗಳ ಶಾಸ್ತ್ರಸಮ್ಮತ ಸಮನ್ವಯವನ್ನು ಕಾಣ ಬಹುದು.

ನಾವು ಮಾಡುವ ಸರ್ವಕರ್ಮಗಳೂ ಶ್ರೀಹರಿಗೆ ಪ್ರೀತಿಯಾಗಲಿ ಎಂದು ಶ್ರೀಹರಿಗೆ ಸರ್ವಕರ್ಮಸಮರ್ಪಣೆ ಮಾಡಬೇಕು ಎಂದು ಹೇಳಲಾಗಿದೆ.

> ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ ಹರಿಪಾದವಿನಮ್ರಧಿಯಾ ಸತತಮ್ ।
> ಹರಿರೇವ ಪರೋ ಹರಿರೇವ ಗುರುಃ ಹರಿರೇವ ಜಗತ್ಪಿತೃಮಾತೃಗತಿಃ ॥
> ತದಲಂ ಬಹುಲೋಕವಿಚಿಂತನಯಾ ಪ್ರಣವಂ ಕುರು ಮಾನಸಮೀಶಪದೇ ॥

ನಿಯತವಾದ ಕರ್ಮವನ್ನು ಫಲಾಪೇಕ್ಷೆಯಿಲ್ಲದೆ ಮಾಡು. ಕರ್ಮಕ್ಕೆ ಫಲವಾಗಿ ಬಂದುದನ್ನು ಅನುಭವಿಸು ಹರಿಚರಣ ಗಳಲ್ಲಿ ಅಚಲವಾದ ಭಕ್ತಿಯಿರಲಿ. ಹರಿಯೇ ಸರ್ವೋತ್ತಮ. ಹರಿಯೇ ಗುರು–ಹರಿಯೇ ತಾಯಿತಂದೆ ಸದ್ಗತಿದಾಯಕ. ಲೋಕಾಸಕ್ತಿಯನ್ನು ಬಿಟ್ಟು ಮನಸ್ಸನ್ನು ಹರಿಪಾದದಲ್ಲಿಟ್ಟು ಬದುಕಿ ಸಾಧನೆಮಾಡಿ ಅವನ ಅನುಗ್ರಹ-ಪ್ರಸನ್ನತೆಗಳನ್ನು ಗಳಿಸಿ ಅದರ ಮೂಲಕ ಮುಕ್ತಿಯನ್ನು ಹೊಂದು.

ಶ್ರೀಹರಿ ವೈಷಮ್ಯನೈರ್ಘೃಣ್ಯವಿದೂರ. ಅವನಿಗೆ ಯಾರ ಮೇಲೂ ದ್ವೇಷವಿಲ್ಲ. ಜೀವರು ಮೂಲತಃ ತ್ರಿಗು ಣಾತ್ಮಕರು. ಸಾತ್ವಿಕ ರಾಜಸ ತಾಮಸ ಎಂಬ ಗುಣಗಳು ಅವರ ಮೂಲಸ್ವಭಾವದಲ್ಲೇ ಇವೆ. ಅದಕ್ಕನುಗುಣವಾಗಿ ಅವರ ಕರ್ಮಗಳು ಜರುಗುತ್ತವೆ. ಕರ್ಮಗಳಿಗನುಗುಣವಾಗಿ ಫಲವೂ ಬರುತ್ತದೆ.

ಬೆಳಕು ಹಾಯಿಸಿದಾಗ ವಜ್ರ ಹವಳ ಕರಿಮಣಿಗಳು ತಮ್ಮ ತಮ್ಮ ಬಣ್ಣವನ್ನೇ ಪ್ರಕಾಶಿಸುತ್ತವೆ. ಬೆಳಕಿನಲ್ಲಿ ದೋಷವಿಲ್ಲ. ತಾಮಸರು ಸದಾ ಅಯೋಗ್ಯ ಆಲೋಚನೆ ಕಾರ್ಯಗಳಲ್ಲೇ ಪ್ರವೃತ್ತರಾಗಿರುವುದರಿಂದ ಅವರಿಗೆ ಅದಕ್ಕೆ ತಕ್ಕ ಫಲವೇ ಬರುತ್ತದೆ. ಅದು ಸ್ವಾಭಾವಿಕವಾಗಿಯೇ ಇದೆ. ಅದರಲ್ಲಿ ಪರಮಾತ್ಮನ ಪಕ್ಷಪಾತವಿಲ್ಲ. ದೈತ್ಯಸ್ವಭಾವ ಸಾತ್ವಿಕವನ್ನೆಂದಿಗೂ ಮೆಚ್ಚಲಾರದು. ದುರ್ಯೋಧನ ಜರಾಸಂಧ ಕಾಲನೇಮಿ ಕಂಸ ಹಿರಣ್ಯಕಶಿಪು ಶಿಶುಪಾಲಾದಿಗಳ ಕಥೆಯೇ ಇದಕ್ಕೆ ಸ್ಪಷ್ಟ ಉದಾಹರಣೆ. "ಅಂಧಂ, ತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ" ಎಂದು ಈಶಾವಾಸ್ಯ ಉಪನಿಷತ್ತಿನಲ್ಲೇ ಹೇಳಿದೆ.

ಪರಮಾತ್ಮನ ಸೃಷ್ಟಿಕಾರ್ಯವೂ ಸಹ ಈ ತ್ರಿವಿಧ ಜೀವರನ್ನು ಅವರವರ ಸ್ವಭಾವಕ್ಕನುಗುಣವಾಗಿ ಪ್ರೇರಿಸಿ ಕರ್ಮ ಮಾಡಿಸಿ ತಕ್ಕ ಫಲವಿತರಣೆ ಮಾಡುವುದಕ್ಕೇ ಎಂದು ಮಾಧ್ವಸಿದ್ಧಾಂತ ಹೇಳುತ್ತದೆ.

ಈ ಎರಡೂ ದರ್ಶನಗಳನ್ನು ಹೋಲಿಸಿ ನೋಡಿದರೆ ಮೂಲತಃ ಇವು ಭಿನ್ನವಾದುವೇ ಎಂದೆನಿಸುವುದರಲ್ಲಿ ಸಂದೇಹವಿಲ್ಲ. ವಿವರಗಳನ್ನು ನೋಡಿದಾಗ ಕೆಲವು ಸಾದೃಶ್ಯ-ಸಾಮ್ಯಗಳೂ ಕಾಣುತ್ತವೆ.

ವೀರಶೈವ ವೇದಗಳ ಕೆಲ ಭಾಗಗಳನ್ನು ಮಾತ್ರ ಆಧರಿಸಿದರೆ ಮಾಧ್ವದರ್ಶನ ಸೌಧನಿರ್ಮಾಣವದು ಪೂರ್ಣ ವಾಗಿ ವೇದಗಳನ್ನೇ ತಳಹದಿಯನ್ನಾಗಿ ಉಳ್ಳುದಾಗಿದೆ. ಎರಡೂ ಸಿದ್ಧಾಂತಗಳು ಪ್ರಪಂಚ ಸತ್ಯ ಎಂದು ಅಂಗೀಕರಿಸಿ

ಸಾಧನೆ, ಆ ಸಾಧನೆಗೆ ಭಕ್ತಿ ಅಗತ್ಯ ಎಂದೂ ಹೇಳಿವೆ. ಒಂದು ಶಿವಪಾರಮ್ಯವನ್ನು ಹೇಳಿದರೆ ಮತ್ತೊಂದು ವಿಷ್ಣು ಪಾರಮ್ಯವನ್ನು ಪ್ರತಿಪಾದಿಸಿದೆ. ಇಬ್ಬರೂ ಏಕದೈವವಾದಿಗಳೆ. ವೀರಶೈವರ ಶಿವ ಸಾಕಾರನೂ ಅಹುದು ನಿರಾಕಾರನೂ ಅಹುದಾದರೆ, ಮಾಧ್ವರ ನಾರಾಯಣ ಸಾಕಾರ ಸುಂದರತಮ ಸರ್ವಕಲ್ಯಾಣಗುಣಪರಿಪೂರ್ಣದೋಷಗಂಧವಿಧೂರ ; ಅವನು ಅವ್ಯಕ್ತನೂ ಅಹುದು.

ಪರವಸ್ತುವಾದ ಪರಮಶಿವನೇ ವೀರಶೈವರ ಪ್ರಕಾರ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದರೆ, ಮಾಧ್ವರ ಪ್ರಕಾರ ಸರ್ವೋತ್ತಮನಾದ ವಿಷ್ಣುವೇ ಅಚಿಂತ್ಯಾದ್ಭುತ ಅಘಟನಾಘಟನ ಸಾಮರ್ಥ್ಯವುಳ್ಳ ಅಷ್ಟಕರ್ತೃತ್ವ ಶಕ್ತಿಯುಳ್ಳ ಪರಮಪ್ರಭು. ಅವನಿಂದಲೇ ಸೃಷ್ಟಿಸ್ಥಿತಿಲಯ ಎಲ್ಲಾ.

ಹಿಂಸಾತ್ಮಕ ಯಜ್ಞಯಾಗಗಳನ್ನು ತ್ಯಜಿಸಬೇಕೆಂದು ಇಬ್ಬರೂ ಅಂಗೀಕರಿಸಿದ್ದಾರೆ.

ವರ್ಣಾಶ್ರಮಧರ್ಮ ಪರಿಪಾಲಿಸಬೇಡ ಎಂದು ಒಬ್ಬರು, ಬೇಕು ಎಂದು ಮತ್ತೊಬ್ಬರು ಹೇಳುತ್ತಾರೆ. ಅವರು ಷಟ್‌ಸ್ಥಲಗಳನ್ನು ಷಡ್ವಿಧ ಭಕ್ತಿಗಳನ್ನು ಹೇಳಿದರೆ ಮಾಧ್ವರು ನವವಿಧ ಭಕ್ತಿಗಳನ್ನು ಹೇಳುತ್ತಾರೆ. ಕರ್ಮ ಜ್ಞಾನ ಭಕ್ತಿಗಳು ಮೋಕ್ಷಕ್ಕೆ ಸಾಧಕವೆಂದು ಇಬ್ಬರೂ ಒಪ್ಪುತ್ತಾರೆ.

ಮಾಧ್ವರ ಪ್ರಕಾರ ಭಕ್ತರು ಜ್ಞಾನಿಗಳು ಶ್ರೇಷ್ಠರೇ ಆದರೂ ಪೂಜ್ಯರಾದರೂ ಅವರೇ ದೇವರಲ್ಲ. ಅವರ ಅಂತ ರ್ಯಾಮಿಯಾಗಿದ್ದು ಸರ್ವವ್ಯಾಪಾರಗಳನ್ನು ನಡೆಸುವವನು ದೇವರು. ವೀರಶೈವರ ಪ್ರಕಾರ ಸ್ಥಾವರಕ್ಕಿಂತ ಜಂಗಮ ಶ್ರೇಷ್ಠ–ಜಂಗಮನು ಜಗದೀಶ್ವರ. ಶಿವದೀಕ್ಷೆ ಪಡೆದವರೆಲ್ಲ ಸಮಾನರು ವೀರಶೈವರಲ್ಲಿ. ಆದರೆ ಮಾಧ್ವರಲ್ಲಿ ವೈಷ್ಣವದೀಕ್ಷೆ ಉಳ್ಳವರೆಲ್ಲ ಸಮಾನರಲ್ಲ. ಅವರ ಭಕ್ತಿಜ್ಞಾನ ಸಾಧನಗಳಲ್ಲಿ ವ್ಯತ್ಯಾಸ ಉಂಟೇ ಉಂಟು.

ವೀರಶೈವರಲ್ಲಿ ಎಲ್ಲಕ್ಕೂ ಮೂಲಕರ್ತೃ ಪರಶಿವನಾದರೆ, ಮಾಧ್ವರಲ್ಲಿ ಸರ್ವಕ್ಕೂ ಸ್ವಾಮಿ ವಿಷ್ಣು ; ಅವನೇ ಎಲ್ಲಕ್ಕೂ ಕಾರಣನಾದವನು. ಅವನಿಲ್ಲದೆ ಏನೂ ನಡೆಯಲಾರದು–'ತೇನ ವಿನಾ ತೃಣಮಪಿ ನ ಚಲತಿ.'

ವೀರಶೈವರ ಶಿವ ಪರಿಪೂರ್ಣ, ಸ್ವಯಂಪ್ರಕಾಶವುಳ್ಳವ ; ಸ್ವತಂತ್ರ, ಅನ್ಯರ ನೆರವಿಲ್ಲದೆ ಆನಂದ ಪಡೆಯಬಲ್ಲವ. ಮಾಧ್ವರ ವಿಷ್ಣುವೂ ಪರಿಪೂರ್ಣ ಸರ್ವತಂತ್ರಸ್ವತಂತ್ರ ಸ್ವಯಂಪ್ರಕಾಶವುಳ್ಳವ ; ಆನಂದಮೂರ್ತಿ, ಅವನ ಆನಂದಕ್ಕೆ ಅನ್ಯರ ನೆರವು ಬೇಡ. ಅಷ್ಟೇ ಅಲ್ಲ ಅವನ ಆನಂದಕ್ಕೂ, ಉಳಿದವರ ಆನಂದಕ್ಕೂ ವ್ಯತ್ಯಾಸವೇ ಉಂಟು ; ಸರ್ವಶಕ್ತ, ಸರ್ವಜ್ಞ.

ವೀರಶೈವರ ಶಿವನೂ ಸರ್ವಶಕ್ತ, ಶಿವನಿಗೂ ಶಿವಶಕ್ತಿಗೂ ಅಭೇದ, ಶಿವ ಶಕ್ತಿ ಜಗತ್ತುಗಳು ಸತ್ಯ. ಅಘಟನಾ ಘಟನ ಶಕ್ತಿ ಉಳ್ಳವನಾದ್ದರಿಂದ ಚೇತನಾಚೇತನರನ್ನು ನಿರ್ಮಿಸುವುದರಲ್ಲಿ ಆಶ್ಚರ್ಯವಿಲ್ಲ. ಮಾಧ್ವರ ಪ್ರಕಾರ ವಿಷ್ಣುವಿಗೂ ಅವನ ಅಂಗಾಂಗಗಳಿಗೂ ಅವನ ಅವತಾರಗಳಿಗೂ ಭೇದವಿಲ್ಲ. ಅವನು ಸ್ವಗತ ಭೇದವಿವರ್ಜಿತ. ಅವನ ಒಂದೊಂದು ಅವಯವವೂ ಪೂರ್ಣವೇ-ಸರ್ವಶಕ್ತವೇ ಅಹುದು. ವಿಷ್ಣುವು ಅಘಟನಾಘಟನಶಕ್ತನಾದರೂ ಸತ್ಯಸಂಕಲ್ಪ –ಶಿಸ್ತಿನ ಮೂರ್ತಿ : ಚೇತನರನ್ನು ಅವನು ಸೃಷ್ಟಿಸುವುದಿಲ್ಲ. ಮಾಧ್ವಸಿದ್ಧಾಂತದ ಪ್ರಕಾರ ಜೀವರು, ಅನಾದಿ, ಅವಿನಾಶಿ 'ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ' ಎಂದು ಭಗವದ್ಗೀತೆ ಹೇಳಿದೆ. ಆದರೆ ಈ ಜೀವ ಸಾಧನೆಗಾಗಿ ಭೌತದೇಹವನ್ನು ಪಡೆಯುತ್ತಾನೆ. ಅದನ್ನು ಅವನಿಗೆ ಕೊಡುವುದಕ್ಕೆ ಸೃಷ್ಟಿ ಎಂದು ಹೆಸರು. ಆ ದೇಹದ ಮೂಲಕವೇ ಸಾಧನೆಯಾಗಬೇಕು. ಅದನ್ನು ಕೊಡುವವನು ಪರಮಾತ್ಮ.

ವೀರಶೈವರ ಪ್ರಕಾರ ಜೀವ ಚಿದ್ರೂಪಿಯಾದರೂ ಮಲತ್ರಯದಿಂದ ಬಂಧಿತ. ಜೀವಾತ್ಮ ವಸ್ತುಶಃ ಶಿವಸ್ವ ರೂಪಿಯೇ ಆದರೂ ಶಕ್ತಿಸಂಕೋಚದಿಂದ ಜನನಮರಣವುಳ್ಳ ಸಂಸಾರಿಯಾದನು. ಶಕ್ತಿವಿಕಾಸದಿಂದ ತನ್ನ ನಿಜರೂಪ ವನ್ನು ಪಡೆದು ಶಿವನೇ ಆಗುತ್ತಾನೆ.

ಮಾಧ್ವರ ಪ್ರಕಾರ ಜೀವ ಚಿದಾನಂದಸ್ವರೂಪವುಳ್ಳವನೇ ಆದರೂ ಅವನ ಚಿದಾನಂದಸ್ವರೂಪಕ್ಕೂ ಶ್ರೀಹರಿಯ ಸ್ವರೂಪಕ್ಕೂ ತುಂಬ ವ್ಯತ್ಯಾಸವುಂಟು. ಜೀವ ಶ್ರೀಹರಿಯ ಪ್ರತಿಬಿಂಬಸ್ವರೂಪಿ : ಅವನ ಅಧೀನ ಯಾವಾಗಲೂ ವಿಮುಕ್ತಿಯಲ್ಲೂ ಕೂಡ. ಜೀವರ ಸ್ವರೂಪ ದೇಹದ ಮೇಲೆ ಅನಿರುದ್ಧಶರೀರ ಅಂಗಶರೀರಗಳಿವೆ. ಈ ಅಂಗಶರೀರ ವಲ್ಲಿ ಅನಾದಿಕರ್ಮದ ಗಂಟಿದೆ. ಸೃಷ್ಟಿಗೆ ಬರುವಾಗ ಅವನ ಕರ್ಮ ಇದನ್ನನುಸರಿಸಿ ಪ್ರಾರಂಭವಾಗುತ್ತದೆ. ಜೀವರು ತ್ರಿವಿಧಗುಣವುಳ್ಳವರು. ಸತ್ವ ರಜ ತಮ ಎಂಬ ಮೂರು ಗುಣಗಳು ಸ್ವಾಭಾವಿಕವಾದುವು, ಬದಲಾಯಿಸುವಂತಿಲ್ಲ. ಇದನ್ನನುಸರಿಸಿಯೇ ಪರಮಾತ್ಮ ಅವರವರ ಕರ್ಮಗಳನ್ನು ಮಾಡಿಸಿ ಅವುಗಳಿಗೆ ತಕ್ಕ ಫಲವನ್ನೂ ನೀಡಿ ಗತಿಯನ್ನೂ ದಯಗೈಯುವನು. ಅನೇಕಾನೇಕ ಜನ್ಮಗಳನ್ನೆತ್ತಿ ಸಾಧನೆಮಾಡಿದ ತರುವಾಯ ಮೂಲಸ್ವರೂಪಗುಣವನ್ನನುಸರಿಸಿ

ಅವರವರಿಗೆ ಸಲ್ಲಬೇಕಾದ ಸ್ಥಾನಗಳನ್ನು ಪರಮಾತ್ಮ ಅವರವರಿಗೆ ಕೇವಲ ನಿಷ್ಪಕ್ಷಪಾತದಿಂದ ನೀಡುತ್ತಾನೆ.

ವೀರಶೈವರ ಪ್ರಕಾರ ವ್ಯಕ್ತಿ ಪಿಂಡಾಂಡ, ವಿಶ್ವ ಬ್ರಹ್ಮಾಂಡ. ಬ್ರಹ್ಮಾಂಡದ ಅಂಶಗಳೆಲ್ಲ ಸೂಕ್ಷ್ಮವಾಗಿ ಪಿಂಡಾಂಡದಲ್ಲಿವೆ. ಮಾಯೆ ಪರಮಾತ್ಮನಿಗಧೀನವಾಗಿದೆ. ಇದೇ ಅಜ್ಞಾನಕ್ಕೆ ಕಾರಣ. ಅಜ್ಞಾನದಿಂದ ಬಂಧ, ಜ್ಞಾನದಿಂದ ಮೋಕ್ಷ (ಬಿಡುಗಡೆ) ಜೀವರ ಸುಖದುಃಖಗಳೆಲ್ಲ ಪರಶಿವನ ಸ್ವಾತಂತ್ರ್ಯಶಕ್ತಿಯಿಂದಲೇ ನಡೆಯುತ್ತವೆ. ಶಿವಾನುಗ್ರಹ ಗುರುಕಾರುಣ್ಯ ಇಲ್ಲದೆ ಕರ್ಮಕ್ಷಯ, ಶಿವಜ್ಞಾನ ಇಲ್ಲ. ಸರ್ವಜೀವರೂ ಶಿವಸ್ವರೂಪಿಗಳೇ. ಶಿವತ್ವವೆಂಬುದು ಜೀವನಲ್ಲಿ ಸಿದ್ಧವಾಗಿದ್ದರೂ ಅವ್ಯಕ್ತ.

ಮಾಧ್ವಸಿದ್ಧಾಂತದ ಪ್ರಕಾರ ಪಿಂಡಾಂಡ ಎಂದರೆ ಈ ಭೌತಶರೀರ (ಪಂಚಭೂತಗಳಿಂದ ನಿರ್ಮಿತವಾದುದು). ಅದರೊಳಗೆ ವಿಶ್ವರೂಪಿ ಪರಬ್ರಹ್ಮನಾದ ಮಹಾವಿಷ್ಣುವೇ ಅಂತರ್ಯಾಮಿಯಾಗಿ ಅನೇಕ ರೂಪಗಳಿಂದ ಇದ್ದು ಜೀವನ ದೇಹದ ಅವಯವಗಳಲ್ಲೆಲ್ಲಾ ಓತಪ್ರೋತವಾಗಿ ತುಂಬಿಕೊಂಡಿದ್ದು ಕಾರ್ಯ ನಡೆಯುವಂತೆ ಮಾಡುತ್ತಾನೆ. ಮಾಧ್ವರ ಪ್ರಕಾರ ಮಾಯೆ ಎಂದರೆ ಪರಮಾತ್ಮನ ಇಚ್ಛೆ. ಜೀವಾಚ್ಛಾದಿತ ಪರಮಾಚ್ಛಾದಿತ ಎಂಬ ಎರಡು ತೆರೆಗಳನ್ನು ಜೀವನಿಗೆ ಹಾಕಿ ಅಜ್ಞಾನವನ್ನುಂಟುಮಾಡುವವನೂ ಅವನೇ. ಯೋಗ್ಯತಾನುಸಾರ ಸುಖದುಃಖ ಬಂಧಮೋಕ್ಷ ಎಲ್ಲ ಕೊಡುವವನೂ ಶ್ರೀಹರಿಯೇ. ಆದರೆ ಈ ಶ್ರೀಹರಿ ಸರ್ವಶಕ್ತನಾದ್ದರಿಂದ ಮಾಯೆ ಅವನನ್ನು ಮುಸುಕಲಾರದು. ಶ್ರೀಹರಿಯ ನಿತ್ಯಪತ್ನಿ ಮಹಾಲಕ್ಷ್ಮೀದೇವಿಯ ಒಂದು ಹೆಸರು ಮಾಯೆ. ಶ್ರೀ ಭೂ ದುರ್ಗಾ ಎಂಬ ಹೆಸರುಗಳುಳ್ಳ ಈಕೆ ಸಾತ್ವಿಕ ರಾಜಸ ತಾಮಸಗಳಿಗೆ ಕ್ರಮವಾಗಿ ಅಭಿಮಾನಿಯಾಗಿ ಆಯಾ ಜೀವರಿಗೆ ಆಯಾ ಗುಣಗಳಿಗನುಸಾರವಾಗಿ ಕಾರ್ಯಮಾಡಿಸಿ ಫಲಬರುವಂತೆ ಮಾಡುವಳು–ಪತಿಯ ಆಜ್ಞಾನುಸಾರ.

ಶ್ರೀಹರಿಯ ಸರ್ವೋತ್ತಮತ್ವವನ್ನು ಗುಣಗಳನ್ನು ಇತರ ಅವನ ಪರಿವಾರದೇವತೆಗಳ ಗುಣ ಸ್ಥಾನಕಾರ್ಯಗಳನ್ನು ಅರಿತು ಉಪಾಸನೆಮಾಡಿದರೆ ಶ್ರೀಹರಿಯ ಅನುಗ್ರಹವಾಗುವುದು. ಅವನ ಅನುಗ್ರಹವಿಲ್ಲದೆ ಯಾವುದೂ ಸಾಧ್ಯವಾಗುವುದಿಲ್ಲ. "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ"—ಕರ್ಮಕ್ಕನುಗುಣವಾಗಿ ಸುಖದುಃಖ ರೂಪಫಲವನ್ನು ಕೊಡುವವನು ಶ್ರೀಹರಿಯೇ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಕರ್ಮ ಜಡ, ಅದೇ ಫಲವನ್ನು ಕೊಡಲಾರದು. ಕರ್ಮದ ರೀತಿಯನ್ನು ನೋಡಿ ತಕ್ಕ ಫಲವನ್ನು ಕೊಡುವವನು ಸರ್ವಜ್ಞನಾದ ಸರ್ವಶಕ್ತನಾದ ಶ್ರೀಹರಿಯೇ. ಆದ್ದರಿಂದಲೇ ಕರ್ಮವನ್ನು ಮಾಡಿ ಇದಕ್ಕೆ ಇಷ್ಟೇ ಫಲ ಎಂದು ನಾವೇ ತೀರ್ಮಾನ ಮಾಡಿಕೊಳ್ಳುವಂತಿಲ್ಲ. ಆ ಅಧಿಕಾರವೇ ಜೀವರಿಗಿರುವುದಿಲ್ಲ ಎಂದು ಭಗವದ್ಗೀತೆಯ ವಾಕ್ಯ ಹೇಳುತ್ತದೆ.

ಹೀಗೆ ಈ ಎರಡೂ ಸಿದ್ಧಾಂತಗಳಲ್ಲಿ ಸಾಮ್ಯ ವೈಷಮ್ಯ ಅಥವಾ ಸಾದೃಶ್ಯ ವೈದೃಶ್ಯಗಳೆರಡೂ ಉಂಟು ಎಂಬುದು ಈ ಸಮೀಕ್ಷೆಯಿಂದ ತಿಳಿಯಬಹುದಾಗಿದೆ.

ವೀರಶೈವಸಿದ್ಧಾಂತದ ಪ್ರಮೇಯಗಳನ್ನು ಕನ್ನಡದಲ್ಲಿ ವಚನ ಎಂಬ ನವಸಾಹಿತ್ಯಪ್ರಕಾರದ ಮೂಲಕ ಅಲ್ಲಮಪ್ರಭು ಬಸವೇಶ್ವರ ಚನ್ನಬಸವಣ್ಣ, ಸಿದ್ಧರಾಮ ಅಕ್ಕಮಹಾದೇವಿ ಮೊದಲಾದ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿ ಪ್ರತಿಪಾದಿಸಿದರು.

ಹದಿಮೂರನೆಯ ಶತಮಾನದಲ್ಲಿ ಶ್ರೀ ಮಧ್ವಾನಂದತೀರ್ಥರು ತಮ್ಮ ಹೊಸ ಸಿದ್ಧಾಂತವನ್ನು ೩೭ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿ ಪ್ರತಿಪಾದಿಸಿದರು. ಅವರ ಶಿಷ್ಯರೂ ಅನುಯಾಯಿಗಳೂ ಅವರ ಗ್ರಂಥಗಳಿಗೆ ಟೀಕೆ ಟಿಪ್ಪಣಿಗಳನ್ನು ರಚಿಸಿ ಪ್ರಸಾರಮಾಡಿದರು. ೧೫–೧೬ನೆಯ ಶತಮಾನಗಳಲ್ಲಿ ಶ್ರೀಪಾದರಾಜರು ವ್ಯಾಸರಾಜರು ವಾದಿರಾಜರು ವಿಜಯೀಂದ್ರರು ಪುರಂದರದಾಸರು ಕನಕದಾಸರು, ೧೭–೧೮ನೇ ಶತಮಾನಗಳಲ್ಲಿ ವಿಜಯದಾಸರು ಗೋಪಾಲದಾಸರು ಜಗನ್ನಾಥದಾಸರೇ ಮೊದಲಾದ ಅನೇಕ ಹರಿದಾಸರು ಕನ್ನಡದಲ್ಲಿ ಸಂಕೀರ್ತನಸಾಹಿತ್ಯವನ್ನು ರಚಿಸಿ ಮಾಧ್ವಸಿದ್ಧಾಂತದ ಪ್ರಮೇಯಗಳನ್ನು ಹಾಡಿ ಪ್ರಚಾರಪಡಿಸಿದರು.

# ವೀರಶೈವದರ್ಶನ ಹಾಗೂ ಶ್ರೀ ಅರವಿಂದದರ್ಶನ

**ಕೋ. ಚನ್ನಬಸಪ್ಪ**

## ಸಮಸ್ಯೆ

ಶುದ್ಧೋದನನ ಮಗ ಸಿದ್ಧಾರ್ಥ ಸಿಂಹಾಸನವನ್ನು ಅಲಂಕರಿಸಿದರೆ ಚಕ್ರವರ್ತಿಯಾಗುವನೆಂದೂ. ಒಂದು ವೇಳೆ ಸಿಂಹಾಸನಾರೋಹಣಮಾಡದಿದ್ದರೆ ಮಹಾಸನ್ಯಾಸಿಯಾಗುವನೆಂದೂ ಜ್ಯೋತಿಷಿಗಳು ಭವಿಷ್ಯ ನುಡಿದರು. ಚಕ್ರವರ್ತಿಯಾಗಲೆಂದು ಬಯಸಿದ ಶುದ್ಧೋದನ, ತನ್ನ ಮಗನನ್ನು ರೋಗ ಜರಾಮರಣಗಳ ಸುಳಿವೂ ಹತ್ತದ ಏಕಾಂತದಲ್ಲಿ ಶೃಂಗಾರ ಸುಖಭೋಗಾದಿಗಳಲ್ಲೇ ತಣಿಯುವಂತೆ ಮಾಡಿದನು. ಹೀಗೆ ದುಃಖದ ಸೋಂಕೇ ಇಲ್ಲದಂತೆ ಇಂದ್ರವೈಭವದ ಭೋಗಭಾಗ್ಯಗಳ ಮಧ್ಯದಲ್ಲೇ ಅವನು ಬಾಳುವ ಏರ್ಪಾಟಾಯಿತು. ಆದರೆ ಅರಸುಕುಮಾರ—ಮುಪ್ಪು, ರೋಗ. ಮರಣಗಳನ್ನು ಒಂದೇ ಒಂದು ಬಾರಿ ಕಂಡು ರಾಜ್ಯವನ್ನೇ ತ್ಯಾಗಮಾಡಿದ. ಕೈಹಿಡಿದ ಮಡದಿಯನ್ನೇ ಕೈಬಿಟ್ಟ. ಹೊಸತಾಗಿ ಹುಟ್ಟಿದ ಮಗನನ್ನೇ ಕಡೆಗಣಿಸಿ ಹೊರಟುಬಿಟ್ಟ.

ಚಕ್ರವರ್ತಿಯಾಗಿ ಬಾಳುವುದನ್ನು ಬಿಟ್ಟ ಸಿದ್ಧಾರ್ಥ, ಭಿಕ್ಷಾವೃತ್ತಿಯನ್ನು ಅವಲಂಬಿಸಿ "ಕಾಡುಪಾಲಾದ." ಸಾಧಾರಣವಾಗಿ ಲೋಕದ ದೃಷ್ಟಿಯಲ್ಲಿ ಯಾವುದು ಸುಖವೋ. ಅದನ್ನು ಕೈಬಿಟ್ಟು ಕಷ್ಟದ ಅಡವಿಯನ್ನು ಹೊಕ್ಕ.

ಸಿದ್ಧಾರ್ಥನ ವರ್ತನೆಗೆ ಏನು ಕಾರಣ ?

ಅಷ್ಟು ದೂರದವರಲ್ಲದ ನಮ್ಮ ಬಸವಣ್ಣನವರನ್ನೇ ತೆಗೆದುಕೊಳ್ಳಬಹುದು. ಬಸವಣ್ಣನವರು ಬಿಜ್ಜಳ ಅರಸನ ಪ್ರಧಾನಾಮಾತ್ಯರಾಗಿದ್ದರು. ಕಲ್ಯಾಣದ ಭಂಡಾರವೇ ಬಸವಣ್ಣನವರ ಕೈಯಲ್ಲಿತ್ತು. ಇಚ್ಛೆಯನರಿತು ನಡೆಯುವ ಇಬ್ಬರು ಮಡದಿಯರಿದ್ದರು. ಅವರಿಗೆ ವಿದ್ವತ್ತಿನ ಪ್ರತಿಭೆಯಿತ್ತು. ಪ್ರಖ್ಯಾತಿಯಿತ್ತು. ಲೋಕಗೌರವವಿತ್ತು. ಆದರೂ

> ಅಯ್ಯಾ, ಅಯ್ಯಾ, ಎಂದು ಕರೆಯುತ್ತಲಿದ್ದೇನೆ.
> ಅಯ್ಯಾ ಅಯ್ಯಾ ಎಂದೊಱಲುತ್ತಿದ್ದೇನೆ.
> ಓ ಎನ್ನಲಾಗದೇ ಅಯ್ಯಾ ?
> ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ.
> ಮೌನವೇ ಕೂಡಲ ಸಂಗಮದೇವ.

ಎಂದು ಎದೆಬಿರಿಯುವಂತೆ ಕೇಳುವವರ ಕರುಳು ಕತ್ತರಿಸುವಂತೆ. ಮಹಾವಿಪತ್ತು ಬಂದೊದಗಿದ ಆರ್ತನಂತೆ 'ಹೋ' —ಎಂದು ಗೋಳಿಡುತ್ತಾರೆ. ಈ ವಚನವನ್ನು ಒಮ್ಮೆ ಭಾವಪೂರ್ಣವಾಗಿ ಆರ್ತಧ್ವನಿಯಿಂದ ಹಾಡಿದಾಗ ಒಬ್ಬರು ಕೇಳಿಯೂ ಬಿಟ್ಟರು.

"ಪಾಪ ಅವರಿಗೇನಾಗಿತ್ತು ? ಹಾಗೇಕೆ ಒರಲುತ್ತಿದ್ದರು ? ಏನು ವಿಪತ್ತು ಬಂದಿತ್ತು ? ಎಂಬುದಾಗಿ.

ಹೌದು ಏನು ವಿಪತ್ತು ಬಂದಿತ್ತು ? ಹೊಟ್ಟೆಗಾಗಿ, ಬಟ್ಟೆಗಾಗಿ ಮಡದಿಗಾಗಿ. ಮಕ್ಕಳಿಗಾಗಿ. ಧನಕನಕ ವಸ್ತು. ವಾಹನ ಪ್ರಾಪ್ತಿಗಾಗಿ, ಕೊನೆಗೆ ಕೀರ್ತಿಗಾಗಿ ಹಾತೊರೆಯುವುದೇ "ಸ್ವಾಭಾವಿಕ"ವಾಗಿರುವ ಈ ಲೋಕದಲ್ಲಿ ಕಣ್ಣಿಗೆ ಕಾಣದ, ಕೈಗೆ ತಾಕದ ಏನೋ ಒಂದನ್ನು ಬೆನ್ನುಹತ್ತಿ ಹೀಗೆ ಬಸವಣ್ಣನಂತೆ ಅಳುವುದನ್ನು ಕೇಳಿದಾಗ ಆಶ್ಚರ್ಯವಾಗುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರ ದೇವಾಲಯದಲ್ಲಿದ್ದಾಗ ದುಃಖಿತರಾಗಿ ಕಣ್ಣೀರು ಸುರಿಸುತ್ತ "ಮತ್ತೊಂದು ದಿನವು ಕಳೆದುಹೋಯಿತು. ತಾಯೀ, ನಾನಿನ್ನೂ ನಿನ್ನನ್ನು ಕಾಣಲಿಲ್ಲ" ಎಂದು ಮೊರೆಯಿಡುತ್ತಿದ್ದರು.

ಒಂದೊಂದು ದಿನ ದುಃಖೋತ್ಕರ್ಷದಿಂದ ಮೋರೆಯನ್ನು ನೆಲಕ್ಕೆ ತೀಡುತ್ತಿದ್ದರು. ಜನರು ಒಳಗೆ ಬಂದು ಅಳುವ ತರುಣನನ್ನು ಕಂಡು "ಅಯ್ಯೋ ಪಾಪ, ಏನಾಗಿದೆ ಹುಡುಗನಿಗೆ ? ನಿಜವಾಗಿಯೂ ಅವನಮ್ಮ ತೀರಿಕೊಂಡಳೇ ? ಅಥವಾ ಹೊಟ್ಟೆಗಿಟ್ಟೆ ಬೇನೆಯೋ ? ಅವನು ಗೋಳಾಡುವುದನ್ನು ನೋಡಿದರೆ, ನಮಗೂ ಎದೆ ಬೇಯುತ್ತದೆ ಎನ್ನುತ್ತಿದ್ದರು.

ಬುದ್ಧ, ಬಸವ, ರಾಮಕೃಷ್ಣರು ಏಕೆ ಹೀಗೆ ಗೋಳಾಡಿದರು ? ಅವರಿಗೆ ಬಂದಿದ್ದ ವಿಪತ್ತೇನು ? ಹೊಟ್ಟೆ ಬಟ್ಟೆಯ ಚಿಂತೆ ಒಂದೂ ಇದ್ದವರಲ್ಲ. ರಾಜರು, ಮಂತ್ರಿಗಳು ಆಗಿ ಸುಖವಾಗಿರಬಹುದಾಗಿದ್ದ ಈ ಮಹಾನು ಭಾವರು ಹೀಗೇಕೆ ಮೊರೆಯಿಟ್ಟರು. ಹೀಗೇಕೆ ಕಣ್ಣೀರು ಸುರಿಸಿದರು ?

ನಾವು ಯಾವುದನ್ನು ಸುಖ ಸಂತೋಷ ಎಂದು ಭ್ರಮಿಸಿದ್ದೇವೆಯೋ ಅದು ಅವರ ದೃಷ್ಟಿಯಲ್ಲಿ ಕಷ್ಟ, ದುಃಖವಾಗಿತ್ತು. ನಮಗೆ ಯಾವುದು 'ಸತ್ಯ' 'ಶಾಶ್ವತ'ವಾಗಿ ತೋರುವುದೋ ಅದು ಅವರ ದೃಷ್ಟಿಯಲ್ಲಿ ಕೇವಲ ಅಸತ್ಯ, ಅಶಾಶ್ವತವಾಗಿತ್ತು. ನಾವು ಯಾವುದನ್ನು ಸುಖವೆಂದು ಭ್ರಮಿಸಿ ಚಳಿಗಾಲದಲ್ಲಿ ಮುದುಡಿ ಮುದುಡಿ ಕಂಬಳಿ ಹೊದೆಯುವಂತೆ, ಹೊದ್ದುಕೊಳ್ಳುತ್ತಿದ್ದೇವೋ ಅದನ್ನು ಅವರು ಘೋರಸರ್ಪದ ವಿಷವೆಂಬಷ್ಟು ಭೀತಿಯಿಂದ ದೂರ ಸರಿದು ಹಾರಿನಿಂತರು.

ಹಾಗಾದರೆ ಅವರು ಸುಖವೆಂದು, ಶಾಶ್ವತವೆಂದು ಸತ್ಯವೆಂದು ಬೆನ್ನುಹತ್ತಿದ 'ಅದು' ಯಾವುದು ? ನಿಜ ವಾಗಿಯೂ ಅವರು ಬೆನ್ನುಹತ್ತಿದ ಅದೇ ನಿಜವೋ ? ಅಥವಾ ನಾವು ಈಗ ಕೈಯಿಂದ ಮುಟ್ಟಿ, ಕಣ್ಣಿನಿಂದ ನೋಡಿ ಇಂದ್ರಿಯಗಳಿಂದ ಅನುಭವಿಸುತ್ತಿರುವ 'ಇದೇ' ನಿಜವೋ ? 'ಅದೇ' ನಿಜವಾಗಿದ್ದ ಪಕ್ಷದಲ್ಲಿ 'ಇದೇನು' ಮತ್ತೆ ? ಇದರಿಂದ ಪಾರಾಗುವ ಪರಿಯಾವುದು ? 'ಅದ'ಕ್ಕೂ 'ಇದ'ಕ್ಕೂ ಇರುವ ಸಂಬಂಧವೇನು ?

ಈ ಸಮಸ್ಯೆ ಮಾನವಜನ್ಮ ಉದಿಸಿದಾಗಿನಿಂದಲೂ ಕಾಲಕಾಲಕ್ಕೆ, ಲೋಕದ ಎಲ್ಲ ಜನಾಂಗದ, ದ್ರಷ್ಟಾರರ, ದಾರ್ಶನಿಕರ, ಮಹರ್ಷಿಗಳ, ಯೋಗಿಗಳ, ತತ್ವಜ್ಞಾನಿಗಳ ಮುಂದೆ ಬಂದಿದೆ. ಭಾರತದಲ್ಲಿ ವೇದ ಉಪನಿಷತ್ತುಗಳ ಕಾಲದಿಂದ ಹಿಡಿದು ಇಲ್ಲಿಯವರೆಗೆ, ಈಗಲೂ ಅಲ್ಲಲ್ಲಿ ಬೆಳಗುವ ದಿವ್ಯಜೀವಿಗಳು ಈ ಸಮಸ್ಯೆಗೆ ಪರಿಹಾರವನ್ನು ತಮ ತಮಗೆ ತೋರಿದ ರೀತಿಯಲ್ಲಿ 'ತೋರಿಸಿ'ದ್ದಾರೆ ಕಂಡರಿಸಿದ್ದಾರೆ. ಮಾನವಜನ್ಮದ ಈ ಮೂಲಸಮಸ್ಯೆಗೆ ಆಯಾ ಕಾಲದ ದಾರ್ಶನಿಕರು ಕಾಣ್ಕೆಯನ್ನು ಕಂಡವರು ಕೊಟ್ಟ ಉತ್ತರವೇ, ಪರಿಹಾರವೇ ಅಷ್ಟು ದರ್ಶನಗಳಾಗಿ ನಿಂತಿವೆ.

## ಪರಿಹಾರ ಮಾರ್ಗ

ಎಲ್ಲ ದಾರ್ಶನಿಕರೂ—ಮಾನವನ ಮೂಲ ಸಮಸ್ಯೆಯನ್ನು ಕಂಡವರು ಮತ್ತು ಅದಕ್ಕೆ ಪರಿಹಾರವನ್ನು ಕಂಡು ಹಿಡಿದವರು—ಒಂದು ಮೂಲ ಸತ್ಯವನ್ನು ಒಪ್ಪಿಕೊಂಡೇ ಮುಂದುವರಿಯುತ್ತಾರೆ. ಜೀವನಿಗೆ ಈ ಜಗತ್ತಿನಲ್ಲಿ ಈಗ ಇರುವಂತೆ ಇದ್ದರೆ ಸುಖವಿಲ್ಲ. ದುಃಖ, ರೋಗ, ಮುಪ್ಪು, ಸಾವು, ಜನನ, ಮರಣಗಳ ಬಾಧೆಯಿಂದ, ಉಪಾಧಿ ಗಳಿಂದ ಜೀವ ಬಂಧಿತವಾಗಿದೆ. ಸಂಕಟಕ್ಕೆ ಗುರಿಯಾಗಿದೆ. ಹೀಗೆ ಉಪಾಧಿಗಳಿಗೆ ಬಂಧನಕ್ಕೆ ಗುರಿಯಾದ ಈ ಜೀವ ನನ್ನು ಪಾರುಮಾಡುವ, ಬಿಡುಗಡೆ ಮಾಡುವ, ಮುಕ್ತಮಾಡುವ ದಾರಿಯನ್ನು ಕಂಡವರೇ ದಾರ್ಶನಿಕರು. ಹಾಗಾದರೆ ಈ 'ಜೀವ' ಹೇಗೆ ಬಂತು ? ಇದಕ್ಕೆ ಈ ದುಃಖ ಏಕೆ ಒದಗಿತು ? ಜೀವ ಶಿವನಿಂದ ಭಿನ್ನವಾದುದೇ ? ಈ ಭಿನ್ನತೆಗೆ ಕಾರಣ ಏನು ? ಎಂದು ವೇದೋಪನಿಷತ್ತುಗಳ ದಾರ್ಶನಿಕರು ಕಂಡರು. "ಹೋರಾಟವಿಕ್ಕಿಸಲು ಬೇರಾದೆಯಲ್ಲವೇ ? ಬೇರುಂಟೆ ಧರೆಯೊಳಗೆ ಎಲೆ ದೇವನೆ ?" ಎಂದು ಹಾಡಿದ ದಾರ್ಶನಿಕ ಕವಿಯು ಅದೇ ಸತ್ಯವನ್ನು ಸಾರಿದ್ದಾನೆ.

ಭಿನ್ನತಯೇ ಭಿನ್ನತೆಗೆ ಕಾರಣವಾದರೆ ಆ ಭಿನ್ನತಯೇ ಆಗದಂತೆ ನೋಡಿಕೊಳ್ಳಬೇಕು. ಇಲ್ಲವೇ ಭಿನ್ನತೆ ಅನಿವಾರ್ಯವಾಗಿ ಆಗಲೇಬೇಕಾದರೆ, ಆ ಭಿನ್ನತ್ವದಿಂದ ಅಥವಾ ಬಹುತ್ವದಿಂದ ಏಕತ್ವವನ್ನು, ಐಕ್ಯತೆಯನ್ನು, ಯೋಗವನ್ನು ಸಾಧಿಸಬೇಕು. ಇವೆರಡೇ ದಾರಿ. ಈ ಜೀವ ಇಷ್ಟು ಸಂಕಟಪಡುವಂಥ ಭಿನ್ನತೆಯನ್ನು ಯಾರಿಂದ ಎಲ್ಲಿಂದ ಪಡೆಯುತ್ತದೆ ? ಶಿವನಿಂದ ಜೀವ ಬೇರೆಯಾಯಿತು. ಹಾಗೆ "ಗರ್ಭದಿಂದ ಅರ್ಭಕನು ಉದಿಸಿದಂತೆ" ಶಿವನಿಂದ ಬೇರೆಯಾದ ಜೀವ ಆ ಹುಟ್ಟಿದ ಮಗುವಿನಂತೆ ನಾನಾ ಸಂಕಟಗಳನ್ನು, ದುಃಖಗಳನ್ನು, ಕ್ಲೇಶಗಳನ್ನು, ಕಷ್ಟಗಳನ್ನು ಅನುಭವಿಸುತ್ತದೆ. ಹಾಗೆ ಬೇರೆಯಾಗದೆ ಇರುವುದಕ್ಕೆ ಸಾಧ್ಯವಿಲ್ಲವೆ ? ಹುಟ್ಟಿದರೆ ತಾನೆ ಈ ದುಃಖ ? ಹುಟ್ಟದಿರುವುದೇ ಇವಕ್ಕೆ ದಿವ್ಯೌಷಧವಲ್ಲವೆ ?

ಆದರೆ ಹುಟ್ಟದೆ ಇರುವುದಕ್ಕೆ ಸಾಧ್ಯವಿಲ್ಲ. ಹುಟ್ಟುವುದೂ ಬಿಡುವುದೂ ಜೀವನ ಕೈಯ್ಯಲ್ಲಿಲ್ಲ. ಜೀವದ ಅಂಕೆಯಲ್ಲಿದ್ದು ಶಿವ ನಡೆಯುವುದಿಲ್ಲ. ಶಿವ ತನ್ನ ಲೀಲೆಯಲ್ಲಿ ಅನಂತಸೃಷ್ಟಿಯಲ್ಲಿ ತೊಡಗಿದ್ದಾನೆ. ಸೃಷ್ಟಿಯೇ ಆಗಕೂಡದೆಂಬುದು ಆಗದ ಮಾತು. ಜೀವಕ್ಕೆ ಹುಟ್ಟು ಅನಿವಾರ್ಯವಾಗಿಯೂ ಗಂಟುಬಿದ್ದ ಉಪಾಧಿ. ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಉಳಿದಿರುವ ಇನ್ನೊಂದು ದಾರಿ ಎಂದರೆ—ಜೀವನೇ ಶಿವನಾಗಬೇಕು. ಐಕ್ಯನಾಗಬೇಕು. ಅವನೊಡನೆ ಒಂದಾಗಿ 'ಕೂಡ'ಬೇಕು. ಯೋಗಿಯಾಗಬೇಕು. ಇದೊಂದೇ ಶರಣು, ಅನ್ಯಥಾ ದಾರಿಯೇ ಇಲ್ಲ. ಜೀವ ಶಿವನೊಡನೆ ಒಂದಾಗಬೇಕು. (ಪ್ರಕೃತಿ ಪುರುಷನೊಡನೆ ಐಕ್ಯವಾಗಬೇಕು ಎಂಬ ಕಾಣ್ಕೆಯನ್ನು ಉಪನಿಷತ್ತಿನ ದಾರ್ಶನಿಕರು ಒಂದೇ ಮರದಲ್ಲಿ ಕುಳಿತ ಎರಡು ಹಕ್ಕಿಗಳ ದಾರ್ಶನಿಕ ಕಥೆಯಲ್ಲಿ ಪ್ರತಿಮಾರೂಪದಿಂದ ನಿರೂಪಿಸಿದ್ದಾರೆ.)

ಹೀಗೆ ಜೀವದ ದುಃಖವನ್ನು ನಿವಾರಣೆ ಮಾಡಲು ಮಾನವಕೋಟಿ ಮಾಡಿದ ಅನ್ಯಾದೃಶವಾದ ಅಗೋಚರವಾದ ಘೋರಸಂಗ್ರಾಮವೇ ಅನೇಕ ದರ್ಶನಗಳಲ್ಲಿ, ಮತಗಳಲ್ಲಿ ಪರಿಣಾಮಗೊಂಡಿತ್ತು. ಬುದ್ಧದೇವ ಹೇಳಿದ—(ಅಂದರೆ "ದುಃಖ, ದುಃಖಸಮುದಾಯ, ದುಃಖಮಾರ್ಗ, ದುಃಖನಿರೋಧಗಳೆಂಬ ಚತುಸ್ಸತ್ಯಗಳನ್ನು ಧ್ಯಾನಿಸಿರಿ" ಎಂದು). ಶಂಕರಾಚಾರ್ಯರು ಹೇಳಿದರು—"ಈ ಮಾಯೆಯಿಂದ ಮುಕ್ತರಾಗಿ" ಎಂದು. ಮಾಧ್ವರು ಹೇಳಿದರು—"ವಿಷ್ಣುವನ್ನು ಭಕ್ತಿಯಿಂದ ಪೂಜಿಸಿ ಅವನ ಅನುಗ್ರಹದಿಂದ ವೈಕುಂಠವಾಸಿಗಳಾಗಿ" ಎಂದು. ವೀರಶೈವದಾರ್ಶನಿಕರು ಹೇಳಿದರು--"ಲಿಂಗಾಂಗಸಾಮರಸ್ಯ ಪಡೆಯಿರಿ" ಎಂದು.

ಜೀವನಿಗೆ ಬಂದೊದಗಿದ ಸಮಸ್ಯೆಯನ್ನು ಕಂಡರು, ಆ ಸಮಸ್ಯೆಗೆ ಒಂದು ಪರಿಹಾರವನ್ನೂ ಕಂಡರು. ಸಮ್ಮ ಸಮಸ್ಯೆ : ದುಃಖ ಪರಿಹಾರ : ಶಿವಜೀವದ ಐಕ್ಯ ಆದರೆ ಇದನ್ನು ಸಾಧಿಸುವ ದಾರಿ ಯಾವುದು ? ಈ ಸಮಸ್ಯೆಗೆ ಪರಿಹಾರವನ್ನು ಕಾಣಬಯಸಿದ ಆ ದಾರ್ಶನಿಕರು ಶಿವನೆಂದರೇನು ? ಜೀವ ಎಂದರೇನು ? ಪ್ರಕೃತಿ ಎಂದರೇನು ? ಪುರುಷ ಎಂದರೇನು ? ಜೀವಕ್ಕೆ ಉಪಾಧಿಗಳು ಹೇಗೆ ಉಂಟಾದುವು ? ಆ ಉಪಾಧಿಗಳನ್ನು ಹೇಗೆ ಉತ್ತರಿಸಬೇಕು—ಎಂಬ ಮುಂತಾದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡರು. ಅನಂತವಾದ ಬ್ರಹ್ಮ, ಅಥವಾ ಶಿವನಿಂದ ಪ್ರತ್ಯೇಕವಾಗಿ ಜೀವ ಸಾಂತತೆಯನ್ನು ಪಡೆದು ಮಮಕಾರ ಅಹಂಕಾರವನ್ನು ಆರೋಪಿಸಿಕೊಳ್ಳುತ್ತದೆ. ಅಹಂಕಾರ ಮಮಕಾರಗಳಿಂದ ಸುಖದುಃಖ ಮಾನಾಪಮಾನ ಎಂಬ ದ್ವಂದ್ವಗಳಿಗೆ ಸಿಕ್ಕು ಜೀವ ಜಜ್ಜಿಹೋಗುತ್ತದೆ. ಆದಕಾರಣ ಅಹಂಕಾರವನ್ನು ಅಳಿಯುವುದೇ ದಾರಿ ಎಂದು ಕೆಲವು ದಾರ್ಶನಿಕರು ಹೇಳುತ್ತಾರೆ.

ಈ ಗುರಿಯನ್ನು ಮುಟ್ಟಲು ಉಪಾಧಿಗಳನ್ನು ಉತ್ತರಿಸಲು ದಾರ್ಶನಿಕರು ಉಪಾಯಗಳನ್ನು ಕಂಡುಕೊಂಡರು. ಹಠಯೋಗ, ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಮುಂತಾದ ಎಷ್ಟೆಷ್ಟೋ ಯೋಗಗಳು ಹುಟ್ಟಿದವು. ಹಾಗೆಯೇ ವೀರಶೈವದಾರ್ಶನಿಕರಿಂದ ಶಿವಯೋಗ ಅಥವಾ ಶಿವದರ್ಶನ, ಮೃಡದರ್ಶನ, ವೀರಶೈವದರ್ಶನ, ಅಥವಾ ಶಕ್ತಿವಿಶಿಷ್ಟಾದ್ವೈತದರ್ಶನವೂ ಹುಟ್ಟಿತು. ಶ್ರೀ ಅರವಿಂದರಿಂದ ಪೂರ್ಣಯೋಗವೂ ಪ್ರಯೋಗದಲ್ಲಿ ಬಂತು. ಇಲ್ಲಿ ನಾವು 'ಶಿವಯೋಗ' ಮತ್ತು 'ಪೂರ್ಣಯೋಗ'ಗಳ ಸ್ಥೂಲ ಪರಿಚಯವನ್ನು ಮಾತ್ರ ಮಾಡಿಕೊಳ್ಳಲು ಪ್ರಯತ್ನಿಸೋಣ. ಅದಕ್ಕೆ ಹಿನ್ನೆಲೆಯಾಗಿ ವೀರಶೈವಶರಣಸಂಪ್ರದಾಯಕ್ಕಿಂತ ಪೂರ್ವದಲ್ಲಿ, ಅದರ ನಂತರ ಪ್ರಚಾರದಲ್ಲಿದ್ದ ಆಚಾರ್ಯತ್ರಯರ ದರ್ಶನದ ಅತಿಸ್ಥೂಲ—ಕೇವಲ ರೂಪರೇಷೆಯನ್ನು ಮಾತ್ರ ನಿರೂಪಿಸುವುದು ಅಗತ್ಯವೆಂದು ತೋರುತ್ತದೆ.

ಸೃಷ್ಟಿಯಾಗುವುದಕ್ಕಿಂತ ಮೊದಲು ಕೇವಲ ಬ್ರಹ್ಮನು ತಾನೇ ತಾನಾಗಿ ಯಾವ ಉಪಾಧಿಯೂ, ಕರ್ಮವೂ ನಿಷ್ಕಳವೂ, ಅಗೋಚರವೂ, ಅವ್ಯಕ್ತವೂ, ವಾಙ್ಮನೋತೀತವೂ ಆಗಿತ್ತು. ಅದು ಅಖಂಡವಾಗಿತ್ತು. ಏಕೆಂದರೆ ಹಾಗೆ ಏಕವೂ ಅಖಂಡವೂ ಆನಂದಮಯವೂ ಇದ್ದದ್ದು. 'ಅರ್ಭಕಂ ಗರ್ಭದಿಂ ಯೋನಿಮುಖದಿಂದ ಇಳಿದವೋಲ್, ಜೇಡನಿಂದ ಜೇಡನಬಲೆ ಆದಂತೆ ಸೃಷ್ಟಿಯಾಯಿತು. ಜಗತ್ತು ಮತ್ತು ಜೀವ ಈಶ್ವರನಿಂದ ಸೃಷ್ಟಿಯಾದವು. ಆಗ ಅನಂತವಾದದ್ದು ಸಾಂತವಾಯಿತು. ಕೇವಲ ಆನಂದಮಯವಾದದ್ದು ಕ್ಲೇಶದಿಂದ ಕೂಡಿತು. ಆ ಕ್ಲೇಶವನ್ನು ಪರಿಹರಿಸುವ ಮಾರ್ಗ ಮತ್ತೆ ಜೀವ ಈಶ್ವರನಾಗಬೇಕು, ಇದು ಆಚಾರ್ಯತ್ರಯರೆಲ್ಲರಿಗೂ ಸಮಾನವಾದ ದರ್ಶನ. ಇದರಲ್ಲಿ ಯಾವ ಗಣನೀಯ ಭಿನ್ನಾಭಿಪ್ರಾಯವೂ ಇಲ್ಲ.

ಹಾಗಾದರೆ ಇನ್ನು ಮುಂದಿನ ಹೆಜ್ಜೆ ಜಗತ್ತಿಗೂ, ಜೀವಕ್ಕೂ ಇರುವ, ಇರಬೇಕಾದ ಸಂಬಂಧವೇನು ? ಜೀವ, ಈಶ್ವರನಿಗೂ ಇರುವ ಸಂಬಂಧವೇನು ? ಈ ಪ್ರಶ್ನೆಗಳು ಕೇವಲ ಬುದ್ಧಿ ತಣಿಯುವುದಕ್ಕಾಗಿ, ಮಾನಸಿಕ ಉಲ್ಲಾಸಕ್ಕಾಗಿ, ಬೌದ್ಧಿಕ ಕಸರತ್ತಿನ ಪ್ರದರ್ಶನ—ಪ್ರತಿಷ್ಠೆಗಾಗಿ ಉದ್ಭವಿಸಿದವುಗಳಲ್ಲ. ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕಂಡುಕೊಳ್ಳುವುದರಿಂದ, ಈ ಜೀವನಿಗೆ ಬಡಿದುಕೊಂಡ 'ಗ್ರಹ'ವನ್ನು ಬಿಡಿಸಲು ಸಾಧ್ಯವಾಗುತ್ತದೆ.

ಆದ್ದರಿಂದಲೇ ಆಚಾರ್ಯತ್ರಯರು ಜಗತ್ತಿಗೂ ಜೀವನಿಗೂ ಇರುವ ಸಂಬಂಧವೇನು ? ಜೀವ ಈಶ್ವರನಾಗಲು, ಈಶ್ವರ ಲಾಭವಾಗಲು ಹೇಗೆ ಸಾಧ್ಯ ಎಂಬ ಸಮಸ್ಯೆಗಳಿಗೆ ಪರಿಹಾರ ಹುಡುಕಲೇಬೇಕಾಯಿತು.

## ಅದ್ವೈತ-ದ್ವೈತ-ವಿಶಿಷ್ಟಾದ್ವೈತ

'ಸರ್ವಂ ಖಲ್ವಿದಂ ಬ್ರಹ್ಮ, ಈಶಾವಾಸ್ಯಮಿದಂ ಸರ್ವಂ', ಎಂಬುದು ಮೂಲಸತ್ಯ. ಇರುವುದೆಲ್ಲವೂ ಬ್ರಹ್ಮನೇ ಆದರೆ, ಆ ಬ್ರಹ್ಮನಿಗಿಂತ ಕೇವಲ ಬೇರೆಯಾಗಿ ತೋರುವ, ತದ್ವಿರುದ್ಧ ಗುಣಗಳಿಂದ ಕೂಡಿದ ಈ ಸೃಷ್ಟಿ, ಪ್ರಕೃತಿ ಆ ಬ್ರಹ್ಮನೆಂಬುದು ಹೇಗೆ ತರ್ಕಬದ್ಧವಾದೀತು ? ಬುದ್ಧಿ ಮೆಚ್ಚೀತು ? ಆದಕಾರಣ ಶ್ರೀಶಂಕರಾಚಾರ್ಯರು ಹೇಳಿದರು 'ಈ ಜಗತ್ತು ಮಿಥ್ಯಾ ಬ್ರಹ್ಮನೇ ಸತ್ಯ' ಈ ಸೃಷ್ಟಿ ಎಂಬುದು ಕೇವಲ ಮಾಯೆ. ಈ ಜೀವಕ್ಕೆ ಅಜ್ಞಾನ ಆವರಿಸಿರುವುದರಿಂದ ಇದು ಸಾಂತತೆಯನ್ನು ಪಡೆದಂತೆ ತೋರುತ್ತದೆ. ಇದೂ—ಜೀವವೂ ಕೂಡ ಬ್ರಹ್ಮವೇ. ಆದರೆ ಅಜ್ಞಾನದ ಪೊರೆ ಮುಚ್ಚಿರುವುದರಿಂದ ಈ ಜಗತ್ತೂ ಜೀವವೂ ಸತ್ಯವೆಂದು ಮೋಸವಾಗುತ್ತದೆ. ಆ ಮಾಯೆ ಹರಿದರೆ, ಅಜ್ಞಾನ ನಿವೃತ್ತಿಯಾದರೆ ರಜ್ಜುಸರ್ಪನ್ಯಾಯದಂತೆ ಜಗನ್ಮಿಥ್ಯಾ ಎಂಬುದು ಹೊಳೆಯುತ್ತದೆ. ಆ ಅಜ್ಞಾನಾಂಧಕಾರವು ಹರಿದರೆ ಆತ್ಮಜ್ಞಾನದ ಜ್ಯೋತಿಯು ಬೆಳಗುವುದು. ಆಗ 'ಶಿವೋಽಹಂ' 'ನಾನೇ ಶಿವ'ನಾಗಿ ಹೋಗುವೆನು. ಇದು ಅದ್ವೈತದರ್ಶನದ ಸ್ಥೂಲರೂಪರೇಷೆ.

ಇದಕ್ಕೆ ವಿರುದ್ಧವಾದ ದರ್ಶನ ; ದ್ವೈತಸಿದ್ಧಾಂತ. ಈಶ್ವರನಿಂದಲೇ ಈ ಜಗತ್ತು, ಈ ಜೀವ ಸೃಷ್ಟಿಯಾಗಿರುವುದು ಸತ್ಯ. ಆದ್ದರಿಂದ ಈ ಸೃಷ್ಟಿಯೂ ಈಶ್ವರನಷ್ಟೇ ಸತ್ಯ. ಜೀವನೆಂದಿಗೂ ಬ್ರಹ್ಮನಾಗಲಾರ: ಜಗತ್ತು ಬ್ರಹ್ಮನಿಂದಲೇ ಆದರೂ ಅದು ಬ್ರಹ್ಮಸ್ವರೂಪಿಯಲ್ಲ. ಜೀವ ಎಂದೆಂದಿಗೂ ಜೀವನೇ : ಜಗತ್ತು ಎಂದೆಂದಿಗೂ ಜಗತ್ತೇ : ಭೇದ ಭೇದವೇ. ಭೇದವಲ್ಲಿ ಅಭೇದವನ್ನು ಕಾಣುವುದು ಸಾಧ್ಯವಿಲ್ಲ, ಜೀವ ಜೀವರುಗಳಿಗೂ ಭೇದ. ಆದ್ದರಿಂದ ಒಂದು ಜೀವಕ್ಕೂ ಮತ್ತೊಂದು ಜೀವಕ್ಕೂ ಭೇದವಿದ್ದೇ ಇರುತ್ತದೆ. ಒಟ್ಟು ಬ್ರಹ್ಮನಿಗೂ ಜೀವನಿಗೂ ಭೇದ, ಜೀವನಿಗೂ ಜಗತ್ತಿಗೂ ಭೇದ, ಜಗತ್ತಿಗೂ ಬ್ರಹ್ಮನಿಗೂ ಭೇದ. ದಾಸೋಽಹಂಭಾವದಿಂದ ಸೇವಿಸುವುದು ಜೀವದ ಪರಮಚರಿತಾರ್ಥತೆ. ಅದ್ವೈತಿಗಳು 'ಶಿವೋಽಹಂ, 'ಅಹಂ ಬ್ರಹ್ಮಾಸ್ಮಿ' ಎಂಬುದನ್ನು ದ್ವೈತಿಗಳು ಸುತರಾಂ ಒಪ್ಪುವುದಿಲ್ಲ. ಹೆಚ್ಚೆಂದರೆ ಸಾಲೋಕ್ಯ, ಸಾಮೀಪ್ಯ ಪ್ರಾಪ್ತಿಯಾದೀತೇ ಹೊರತು, ಸಾರೂಪ್ಯ, ಸಾಯುಜ್ಯ ಜೀವದ ಅಧಿಕಾರವಲ್ಲ. ಆ ಸಾಲೋಕ್ಯ, ಸಾಮೀಪ್ಯ ಲಭ್ಯವಾದ ಮೇಲೆ ಅಲ್ಲಿ ಜೀವ, ದಾಸೋಽಹಂ ಭೇದಭಾವದಿಂದ ಈಶ್ವರ ಸೇವೆಯಲ್ಲಿ ಚಿರಂತನವಾಗಿ ತೊಡಗಿರುವುದೇ ಜೀವದ ಗಮ್ಯ—ಎಂಬುದು ದ್ವೈತದರ್ಶನ. ಹಾಗೆ ಈಶ್ವರ ಲಾಭವಾದಮೇಲೆ ಅದೇ ಭೇದಭಾವದಿಂದ ಈ ಜಗತ್ತಿನಲ್ಲಿ ಇದ್ದೂ ಇಲ್ಲದಂತೆ ಬಾಳುವುದೇ ಜೀವದ ಸಾರ್ಥಕತೆ. ಇದು ದ್ವೈತದರ್ಶನದ ಸಾರ.

ರಾಮಾನುಜರ ವಿಶಿಷ್ಟಾದ್ವೈತದರ್ಶನ ; ಶಂಕರರ ಅದ್ವೈತದರ್ಶನದಂತೆ ಬ್ರಹ್ಮನೇ ಈ ಜಗತ್ತಿನ ಕಾರಣ: ಜಗತ್ತು ಬ್ರಹ್ಮನಿರ್ಮಿತ ಫಲ ಎಂದು ಒಪ್ಪುತ್ತದೆ. ಆದರೆ ರಾಮಾನುಜರು ಶಂಕರರಂತೆ ಜಗತ್ತು ಮಾಯೆ ಅಥವಾ ಮಿಥ್ಯೆ ಎಂದು ಭಾವಿಸುವುದಿಲ್ಲ. ಬ್ರಹ್ಮನೇ ಈ ಜಗತ್ತಿನಲ್ಲಿ ಸರ್ವಾಧಿವಾಸ. ಬ್ರಹ್ಮನ ಸ್ಥೂಲಶರೀರವೇ ಈ ಜಗತ್ತು. ಈ ಜೀವವು ಬ್ರಹ್ಮದ ಸೂಕ್ಷ್ಮಶರೀರ. ಹೀಗೆ ಜಗತ್ತಿಗೂ ಜೀವಕ್ಕೂ ಬ್ರಹ್ಮವು ಆಧಾರವೂ, ಭರ್ತೃವೂ ಆಗಿದೆ "ಚಿದಚಿದ್ವ್ಯಾಪಕತಯಾ, ಧಾರಕತಯಾ, ನಿಯಂತೃತಯಾ, ಶೇಷಿತಯಾ ಚ" ಆದರೂ ಆ ಬ್ರಹ್ಮ "ನಿಖಿಲ ಹೇಯ ಪ್ರತ್ಯನೀಕತಯಾ" ಎಂದಾದ್ದರಿಂದ ಬ್ರಹ್ಮ ಜೀವ-ಜಗತ್ತುಗಳಿಗಿಂತ ಭಿನ್ನ. ಅವುಗಳಲ್ಲಿ ಸದಾ ಭೇದವಿದ್ದೇ ಇದೆ. ಇಲ್ಲಿ ರಾಮಾನುಜರು, ಮಾಧ್ವರ ದ್ವಂದ್ವಮತವನ್ನು ಒಪ್ಪುತ್ತಾರೆ. ಜೀವ ಪ್ರಪತ್ತಿಮಾರ್ಗದಿಂದ ಪರಮಪದ ಅಥವಾ ವೈಕುಂಠವನ್ನು ಪಡೆದ ಮೇಲೆ ಪ್ರಪನ್ನನಾಗಿ ಭಗವಂತನ ಸಾನ್ನಿಧ್ಯವನ್ನು ಪಡೆದು, ಸಾರೂಪ್ಯಹೊಂದಿ ಕೊನೆಗೆ ಆನಂದವನ್ನು ಅನುಭವಿಸುತ್ತದೆ. ಆಗ ಭಾಗವಹಿಸಿದ್ದ ನೆಲವೇ ವೈಕುಂಠ. ಅವನಿದ್ದಲ್ಲಿಯೇ ಭಗವಂತ ನೆಲೆಸುತ್ತಾನೆ. ಪ್ರಪನ್ನ ಸತ್ಯಕೈಂಕರ್ಯದಿಂದ ಬದುಕುತ್ತಾನೆ. ಅದೇ ಅವನ ಮೋಕ್ಷ.

ಹೀಗೆ ಆಚಾರ್ಯತ್ರಯರ ದರ್ಶನ ಮೂಲದಲ್ಲಿ ಒಂದೇ ಸತ್ಯದಿಂದ ಹೊರಟರೂ, ಕೊನೆಯಲ್ಲಿ ಭಿನ್ನ ಭಿನ್ನ ಸಿದ್ಧಾಂತಕ್ಕೆ ಬಂದಿದೆ. ಶ್ರೀಶಂಕರರು ಜಗನ್ಮಿಥ್ಯಾತತ್ವವನ್ನು ಅವಲಂಬಿಸಿದ್ದರಿಂದ ಇಹಲೋಕತುಚ್ಛೀಕಾರವನ್ನು ಅನಿವಾರ್ಯವಾಗಿ ಮಾಡಲೇಬೇಕಾಯಿತು. ಜಗತ್ತು ಎಂದರೆ ಕೇವಲ ಮಾಯೆ. ಅವಿದ್ಯೆಯಲ್ಲಿ ತೊಳಲಾಡುವ ಪರಿಭ್ರಮಣ. ಇವುಗಳನ್ನು ಎಷ್ಟು ಬೇಗನೆ ತೊರೆದರೆ ಅಷ್ಟು ಶ್ರೇಯಸ್ಕರ ಎಂದು ಹೇಳಲೇಬೇಕಾಯಿತು. ಒಂದು

ಬಗೆಯ ಉಗ್ರವಾದ ತ್ಯಾಗವನ್ನು ಅವಶ್ಯವಾದುದಕ್ಕಿಂತಲೂ ಹೆಚ್ಚು ತ್ಯಾಗವನ್ನು ಅವರು ಪ್ರತಿಪಾದಿಸಿದರು. ಆದ್ದರಿಂದ ಈ ದೇಹ ಎಂದರೆ ಅವರು ಅಷ್ಟೇನೂ ಮಹತ್ವ ಕೊಡಲಿಲ್ಲ.

## ವೀರಶೈವದರ್ಶನ ಅಥವಾ ಶಿವಯೋಗ

ಆದರೆ ವೀರಶೈವದರ್ಶನವು ಈ ಮೂರೂ ದರ್ಶನಗಳಿಗಿಂತ ಭಿನ್ನವಾಗಿದೆ. ವೀರಶೈವದರ್ಶನದ ಪ್ರಕಾರ ಪ್ರತಿಯೊಬ್ಬನೂ ಲಿಂಗದಲ್ಲೇ ಹುಟ್ಟಿ, ಲಿಂಗದಲ್ಲೇ ಬೆಳೆದು ಕೊನೆಗೆ ಲಿಂಗದಲ್ಲಿ ಲೀನವಾಗುವನು. ಅಂಗ ಲಿಂಗಗಳು ಸಾಮರಸ್ಯ ಹೊಂದುವುದೇ ಅದರ ಗುರಿ. ಈ ಗುರಿಯನ್ನು ಸಾಧಿಸಬೇಕಾದರೆ ಮಾನವಶರೀರವೇ ಪ್ರಯೋಗಶಾಲೆ. ಪರಮಾತ್ಮನೆಂಬ ಭೂಮಿಯ ಮೇಲೆ, ಐಹಿಕಜೀವವೆಂಬ ಮರವು ಬೆಳೆಯುವುದು. ಈ ಮರದಲ್ಲಿ ಹುಟ್ಟಿದ ಜೀವಾತ್ಮನು ಕಾಯಿ ಹೇಗೆ ವೃಕ್ಷದ ಬೇರುಗಳ ದ್ವಾರಾ ಭೂಮಿಯ ಸತ್ವವನ್ನು ಸ್ವೀಕರಿಸಿ, ಪಕ್ವವಾಗಿ ಮರದಿಂದ ಬಿದ್ದು ಮತ್ತೆ ಭೂಮಿಯಲ್ಲಿ ಸೇರಿಹೋಗುವುದೋ, ಹಾಗೆಯೇ ಜೀವಾತ್ಮನು ಐಹಿಕ ಜನ್ಮದ ಅನುಭವದಿಂದ ನಿಜತ್ವದ ಅರುಹನ್ನು ಪಡೆದು ಪರಿಪಕ್ವವಾಗಿ ಶಿವನನ್ನು ಸೇರುವನು. ಆದಕಾರಣ ಸಂಸಾರವು ಬಂಧನವಲ್ಲ. ಜೀವಕ್ಕೆ ಅನುಭವದ ಮೂಲಕ ಆಧ್ಯಾತ್ಮಿಕ ಶಕ್ತಿಯನ್ನಿತ್ತು ಪರಮಾತ್ಮನನ್ನು ಸೇರುವಂತೆ ಮಾಡುವ ಸಾಧನಪ್ರಕ್ರಿಯೆಯು ಇದನ್ನೇ ಶಕ್ತಿವಿಶಿಷ್ಟಾದ್ವೈತದರ್ಶನ ಎಂದು ಕರೆದಿರುವುದು.

ಹಿಂದೆ ವಿವರಿಸಿದ ಆಚಾರ್ಯತ್ರಯರ ದರ್ಶನಗಳಿಗೂ ಈ ಶಿವದರ್ಶನಕ್ಕೂ ಎದ್ದುಕಾಣುವ ವ್ಯತ್ಯಾಸವನ್ನು ಗಮನಿಸಬಹುದು. ಒಂದು ಮೂಲವಸ್ತುವಿನಿಂದಲೇ ಜೀವ ಮತ್ತು ಜಗತ್ತು ಸೃಷ್ಟಿಯಾಗಿದೆ. ಅವುಗಳಲ್ಲಿರುವ ಸಂಬಂಧವೇನು ? ಜೀವ. ಜಗತ್ತು ಮಿಥ್ಯೆಯೆಂದು, ಮಾಯೆಯೆಂದು ವೀರಶೈವದರ್ಶನ ಅಲ್ಲಗಳೆಯುವುದಿಲ್ಲ. ಇಹ ಲೋಕವನ್ನು ತುಚ್ಛೀಕಾರ ಮಾಡುವುದಿಲ್ಲ. ಮೂಲವಸ್ತುವಿನಿಂದ ಜಗತ್ತಾಗಿದೆ. ಜಗತ್ತಿನಲ್ಲಿ ಜೀವ-(ಅಂಗ)— ಆಗಿದೆ. ಜಡದಿಂದಲೇ ಜೀವವುದಿಸಿದೆ. ಜೀವಕ್ಕೆ ಜಡವೇ ಆಧಾರ. ಜೀವವುದಿಸಿದ ಮೇಲೆ ಜಡದ ಕೆಲಸವೇನೂ ಇಲ್ಲವೆಂದು ಅದನ್ನು ತಿರಸ್ಕರಿಸುವುದಿಲ್ಲ. ಮರಕ್ಕೆ ಭೂಮಿ ಹೇಗೆ ಆಧಾರವೋ ಅದೇ ಭೂಮಿಯಿಂದಲೇ ತನಗೆ ಬೇಕಾದ ಸಾರವನ್ನು, ಪುಷ್ಟಿಯನ್ನು ಬೇರುಗಳಿಂದ ಹೀರಿಕೊಳ್ಳುವುದೋ ಹಾಗೆಯೇ, ಈ ಅಂಗವೂ ಕೂಡ ಜಗತ್ತಿನ ಆಧಾರದ ಮೇಲೆ ನಿಂತಿದೆ. ಆದರಿಂದ ಆತ್ಮಸಂಸ್ಕಾರದ ಪುಷ್ಟಿಯನ್ನು ಪಡೆಯುತ್ತದೆ. ಆದಕಾರಣ ತಾನು ನಿಂತ ಆಧಾರವನ್ನೇ ಅಲ್ಲಗಳೆಯುವಂಥ ಮತಿಭ್ರಮೆಯನ್ನು ವೀರಶೈವದರ್ಶನ ಒಪ್ಪುವುದಿಲ್ಲ. ಏಕೆಂದರೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂದ ಮೇಲೆ ಬ್ರಹ್ಮನ ಅಂಶವಾದ ಜೀವ ಮತ್ತು ಜಗತ್ತು ಮಿಥ್ಯೆ ಹೇಗಾದೀತು ? ಬ್ರಹ್ಮ ಸತ್ಯವಾದರೆ ಅದರ ಒಂದಂಶವಾದ ಜೀವ-ಜಗತ್ತೂ ಸತ್ಯವೇ 'ಆದ್ದರಿಂದಲೇ ಮರ್ತ್ಯಲೋಕ. ಸ್ವರ್ಗಲೋಕವೆಂಬುದು ಬೇರಿಲ್ಲ ಕಾಣಿರೋ' ಎಂದು ಶರಣರು ಸಾರಿದರು. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂದರು. ಎನ್ನ ದೇಹವೇ ದೇಗುಲ: ಕಾಲೇ ಕಂಬ ; ಶಿರವೇ ಹೊನ್ನ ಕಳಶವಯ್ಯ ಎಂದರು. ಈ ನಿಲುವು ಬುದ್ಧಿಗೂ ಒಪ್ಪಿಗೆಯಾಗುತ್ತದೆ. ತರ್ಕದ ಒರೆಗಲ್ಲಿಗೂ ನಿಲ್ಲುತ್ತದೆ. ಈ ಜಗತ್ತೂ ಜೀವವೂ ಶಿವನಷ್ಟೇ ಶಿವನಂತೆಯೇ ಸತ್ಯ. ಆದರೆ ಜೀವಕ್ಕೆ ಅವಿದ್ಯೆಯ ದ್ವಾರಾ ಅಹಂಕಾರ ಕವಿದಿದೆ. ತನ್ನತನವನ್ನೇ ಮರೆತಿದೆ. ಅದಕ್ಕೆ ಸ್ವಸ್ವರೂಪದರ್ಶನವಾಗಬೇಕು. ಕುರಿಸಿಂಹ ನಿಜಸಿಂಹನಾಗ ಬೇಕಾಗಿದೆ. ಉಪನಿಷತ್ತಿನ ಕಥೆಯ ಎರಡು ಗಿಳಿಗಳಂತೆ ಸಂಸಾರ ವೃಕ್ಷದ ಸಿಹಿಕಹಿ ಫಲಗಳನ್ನುಂಡು, ಮೇಲಕ್ಕೂ ಕೆಳಕ್ಕೂ ಹರಿದಾಡಿ ಕೊನೆಗೆ ಅವನೇ ನಾನು ಎಂಬ ಸತ್ಯ ಹೊಳೆಯುವುದು. ಲಿಂಗಾಂಗಸಾಮರಸ್ಯವಾಗುವುದು. 'ಸಾಯುಜ್ಯ'ವನ್ನು ಪಡೆಯುವುದು.

ಈ ಲಿಂಗಾಂಗಸಾಮರಸ್ಯವಾಗುವ ಬಗೆ ಹೇಗೆ ? ಕುರಿಸಿಂಹನಾದ ಜೀವವನ್ನು ಎಳೆದುಕೊಂಡು ಹೋಗಿ, ಹರಿವ ತಿಳಿನೀರಿನಲ್ಲಿ ನೀನೂ ನನ್ನಂತೆಯೇ ಇದ್ದಿಯೇ, ನೋಡು ಎಂದು ತೋರಿಸುವ ನಿಜಸಿಂಹ ಒಂದು ಬೇಕು. ಅವನೇ ಗುರು. ಆ ಗುರುವಾದರೂ ಸುಮ್ಮನೆ ಬರುವುದಿಲ್ಲ. ಜೀವಾತ್ಮ ಅಯ್ಯಾ ! ಅಯ್ಯಾ ! ಎಂದು ಕರೆಯಬೇಕು ; ಒರಲಬೇಕು. ಈ ಹಾರೈಕೆ ಬಲವಾದರೆ, ಪ್ರಬಲವಾದರೆ ಗುರುವಿನ ಕರುಣೆ ತಪ್ಪದೆ ದೊರೆಯುತ್ತದೆ. ಗುರು ದೊರೆತ ಮೇಲೆ ಇನ್ನು ಸುಗತಿ ದೂರವಿಲ್ಲ. ಜೀವ ಹಾರೈಸದೆ ಇದ್ದರೆ ಶಿವನ ಹರಕೆ ತಾನಾಗಿಯೇ ಮೈಮೇಲೆ ಬಿದ್ದು ಜೀವನ ಉದ್ಧಾರಮಾಡುವುದಿಲ್ಲ. ಜೀವನ ಹಾರೈಕೆ ಊರ್ಧ್ವಮುಖವಾಗಿ ಇದ್ದರೆ ಲಿಂಗಾಂಗಸಾಮರಸ್ಯ ಆಗಿಯೇ ತೀರುವುದು. ಆಗ ಈ ಭೂಮಿಯಲ್ಲೇ ಸ್ವರ್ಗಸ್ಥಾಪನೆ ಆಗುವುದು.

ವೀರಶೈವದರ್ಶನರೀತ್ಯಾ ಮುಕ್ತಿಯನ್ನು ಅರಸಿಕೊಂಡು ಗಿರಿಗಹ್ವರಗಳನ್ನು ಸೇರುವುದು ಸಾಧನಾಕ್ರಮವಲ್ಲ.

ಈ ಪ್ರಪಂಚವನ್ನು ಬಿಟ್ಟು ಮತ್ತೆಲ್ಲಿಗಾದರೂ ಓಡಿಹೋಗುವುದು ದಾರಿಯಲ್ಲ. 'ಓಡುವಾತ ಲೆಂಕನಲ್ಲ' ಎಂದು ಅದಕ್ಕೇ ಶರಣರು ಹೇಳಿದುದು. ನಮ್ಮನ್ನು ದಾರಿತಪ್ಪಿಸಲು ಪ್ರಯತ್ನಿಸುವ ಈ ಪ್ರಕೃತಿಯೊಡನೆ ಹೋರಾಡಿ ನಮಗೆ ನುಣುಚಿಕೊಂಡು ಹೋಗಲು ಪ್ರಯತ್ನಿಸುವ ಶಿವನೊಡನೆ ವೀರನಂತೆ ಹೋರಾಡಿ, ಈ ಪ್ರಕೃತಿಯನ್ನು ಈಶ್ವರ ಮಯವನ್ನಾಗಿ ಮಾಡುವ ವೀರಸಾಹಸ. ಶಕ್ತಿಪ್ರಧಾನವಾದ ಸಾಧನೆ ಶಿವಯೋಗದ ವೈಶಿಷ್ಟ್ಯ. ಆದ್ದರಿಂದಲೇ ಅಂಥ ಸಾಧಕನನ್ನು 'ವೀರಶೈವ' ಎಂದು ಕರೆದರು. ಈ ಸೃಷ್ಟಿ, ಸಂಸಾರ ಕಷ್ಟಮಯವಾದುದು, ದುಃಖಮಯವಾದುದು ಎಂದು ಇಲ್ಲಿಂದ ಬೆನ್ನಿಕ್ಕಿ ಓಡಿಹೋಗುವುದು ಈ ಯೋಗದ ಲಕ್ಷಣವಲ್ಲ. ತಮಃಪ್ರವೃತ್ತಿಯೊಡನೆ ವೀರಗಾಸೆಹಾಕಿ, ಕಾಳಗತೊಟ್ಟು ಅದನ್ನು ನಿಗ್ರಹಿಸಿ ಈಶ್ವರನನ್ನೇ ಹಿಡಿದಪ್ಪುವುದು. ಇದನ್ನೇ ಅಕ್ಕಮಹಾದೇವಿ 'ಕಾಮನ ಗೆಲಿದೆನಯ್ಯ ಬಸವಣ್ಣ ನಿಮ್ಮ ದಯದಿಂದ. ಸೋಮಧರನ ಹಿಡಿ ತಪ್ಪೆನಯ್ಯಾ ಬಸವಣ್ಣ ನಿಮ್ಮ ದಯದಿಂದ. ನಾಮದಲ್ಲಿ ಹೆಣ್ಣು ರೂಪಲ್ಲದೆ ಭಾವಿಸಲು ಗಂಡು ರೂಪು ನೋಡಾ'....ಎಂದು ಸರಳವಾಗಿ, ಸುಂದರವಾಗಿ, ನಿರೂಪಿಸಿದ್ದಾಳೆ. ವೀರಶೈವ ದರ್ಶನದ ವೈಶಿಷ್ಟ್ಯ ಇದು.

ವೀರಶೈವನು ಶಿವದರ್ಶನ ಮಾಡಿಕೊಂಡ ಮೇಲೆ ಈ ಲೋಕದೊಡನೆ ಇಟ್ಟುಕೊಳ್ಳುವ ಸಂಬಂಧವೇನು? ಲಿಂಗಾಂಗಸಾಮರಸ್ಯ ಆದಮೇಲೆ ಅವನು ಹೇಗಿರುವನು? ಬೌದ್ಧದರ್ಶನ, ಅದ್ವೈತದರ್ಶನದ ಪ್ರಕಾರ ನಿರ್ವಾಣ ಹೊಂದಿದ ಸಾಧಕ, ಸಮಾಧಿಯನ್ನು ಪಡೆದ ಜೀವಾತ್ಮ ಮತ್ತೆ ಇಹಲೋಕಕ್ಕೆ ಇಳಿದು ಬರುವುದಿಲ್ಲ. ಉಳಿದ ದರ್ಶನ ಗಳಲ್ಲಿ—ಕ್ರೈಸ್ತಧರ್ಮದಲ್ಲೂ ಕೂಡ—ಮುಕ್ತಾತ್ಮರಾದ ಮೇಲೆ ಭುವಿಗೆ ಇಳಿದು ಬಂದು ಇಲ್ಲಿಯೇ ನೆಲೆಸುವದಲ್ಲ. ಆದರೆ ವೀರಶೈವದರ್ಶನದಲ್ಲಿ ಭಕ್ತ-ಸಾಧಕನಾಗಿ ಸಿದ್ಧಿಹೊಂದಿ ಅನುಭವಿಸಿದ ಈಶ್ವರ ಸಾಕ್ಷಾತ್ಕಾರವನ್ನು ಉಂಡ ಉಪವಾಸಿಯಂತೆ ಬದುಕಿ, ಅನ್ಯರೂ ಸ್ವಸ್ವರೂಪ ಹೊಂದಲು ಸಹಾಯವೆಸಗುತ್ತಾನೆ.

ಇಂಥ ಯೋಗದ ಸಿದ್ಧಿಗೆ ಪಥವೇನು? ಕ್ರಮವೇನು? ಹಿಂದಿನವರಂತೆ, ಹಠಯೋಗ, ರಾಜಯೋಗ. ಭಕ್ತಿ, ಕರ್ಮ, ಜ್ಞಾನ ಯಾವುದೊಂದೇ ಯೋಗದಿಂದ ಈ ಲಿಂಗಾಂಗಸಾಮರಸ್ಯ ಪೂರ್ಣವಾಗುವುದಿಲ್ಲ. ಹಠಯೋಗದ ಮೂಲಕ ಗೋರಕ್ಷನಂತೆ ಬರಿ ವಜ್ರಕಾಯ ಸಂಪಾದನೆ ನಿರರ್ಥಕವೆಂದು ತೋರಿಸಿಕೊಟ್ಟುದಲ್ಲದೆ ಭಕ್ತಿಯೋಗದ ಬಸವಣ್ಣ, ಕರ್ಮಯೋಗದ ಸಿದ್ಧರಾಮೇಶ್ವರ, ಜ್ಞಾನಯೋಗದ ಚೆನ್ನಬಸವಣ್ಣ ಮತ್ತು ಅಲ್ಲಮಪ್ರಭುಗಳ ಜೀವನ ಗಳು ಒಂದನ್ನೊಂದು ಪೂರಕ ಮತ್ತು ಪೋಷಕ ಎಂಬುದನ್ನು ಎತ್ತಿ ತೋರಿಸಿವೆ. ಹಾಗೆಯೇ ಯಾವ ಲಿಂಗಭೇದವೂ ಇಲ್ಲದೆ ಸ್ತ್ರೀಪುರುಷರಿಗೆ ಸಮಾನಸ್ಥಾನವನ್ನು ಕಲ್ಪಿಸಿದೆ ವೀರಶೈವದರ್ಶನ. ಬಹುಶಃ ಬಸವಣ್ಣ ವೀರಶೈವದರ್ಶನದ ಅತ್ಯಂತ ಶ್ರೇಷ್ಠ ನಿದರ್ಶನ ಎನ್ನಬಹುದು.

### "ಶ್ರೀ ಅರವಿಂದ ದರ್ಶನ"

ಇದುವರೆಗೂ ಯಾವ ಸತ್ಯವನ್ನು ವಿವಿಧ ಪ್ರಾಚೀನ ದಾರ್ಶನಿಕರು ಕಂಡಿದ್ದರೋ, ಆ ಸತ್ಯಕ್ಕೆ ತರ್ಕಬದ್ಧವಾದ ವಿವರಣೆ, ಬುದ್ಧಿ ತಣಿಯುವಂಥ ವಾದಸರಣಿಯನ್ನು ಕೊಟ್ಟು ಶ್ರೀ ಅರವಿಂದರು ಇನ್ನೂ ಮುಂದಕ್ಕೆ ಹೋಗಿ ಪೂರ್ಣ ಯೋಗದರ್ಶನವನ್ನು ಕಂಡಿದ್ದಾರೆ. 'ಈಶಾವಾಸ್ಯಮಿದಂ ಸರ್ವಂ' 'ಸರ್ವಂ ಖಲ್ವಿದಂ ಬ್ರಹ್ಮ' 'ಈಶ್ವರಃ ಸರ್ವ ಭೂತೇಷು'—ಎಂಬ ಉಪನಿಷತ್ ವಾಣಿಗೆ ತಾರ್ಕಿಕವಾದ ವಿವರಣೆಯನ್ನು ಕೊಟ್ಟಿದ್ದಾರೆ. ಎಲ್ಲ ದಾರ್ಶನಿಕರ ಮೂಗನ್ನು ಹಿಡಿದು ನಿಲ್ಲಿಸಿದ ಸಮಸ್ಯೆ ಆಗಿರುವುದೆಲ್ಲವೂ ಬ್ರಹ್ಮವೇ. ಆದರೆ, ಈ ಜಗತ್ತು, ಜೀವ, ಈಶ್ವರನಿಗಿಂತ ಅಷ್ಟೇಕೆ ಬೇರೆಯಾಗಿ ತೋರುತ್ತವೆ? ಸೃಷ್ಟಿಯೂ ಚೈತನ್ಯದಿಂದಲೇ ಆಗಿದ್ದರೆ, ಈ ಜಡವೇಕೆ ಹೀಗೆ ಸತ್ತಂತೆ, ಬಿದ್ದಿದೆ? ಪ್ರಜ್ಞಾಶೂನ್ಯವಾಗಿದೆ? ಸರ್ವಜ್ಞನಾದ ಬ್ರಹ್ಮನಿಂದಲೇ ಆದ ಈ ಜಗತ್ತು, ಜೀವಗಳು ಇಷ್ಟೇಕೆ ಅಜ್ಞಾನಿ ಗಳಾಗಿವೆ? ಶುದ್ಧ ಚೈತನ್ಯವಾದುದರಿಂದಲೇ ಬಂದ ಈ ಜಗತ್ತು ಇಷ್ಟೇಕೆ ಜಡವಾಗಿದೆ?

ಶ್ರೀ ಅರವಿಂದರು ಈ ಪ್ರಶ್ನೆಗಳಿಗೆ ಧೀರವಾದ ಉತ್ತರ ಕೊಡುತ್ತಾರೆ. ನಾವು ಯಾವುದನ್ನು ಜಡವೆಂದು, ಅಚೇತನವೆಂದು, ಕೇವಲ ತಮಸ್ಸೆಂದು ಕರೆಯುತ್ತೇವೆಯೋ ಅದೆಲ್ಲವೂ ಚೇತನವೇ ಎಂದು ಸಾರುತ್ತಾರೆ. ಜಡವೆಂದು ತೋರುವುದೆಲ್ಲ ಚೇತನವೇ. ಈ ಜಡವೆಂದು ಕಾಣುವುದರಲ್ಲಿ ಚೇತನ ಸುಪ್ತವಾಗಿ ಸಂವೃತ್ತವಾಗಿ (Involved) ಮಲಗಿ ನಿದ್ರಿಸುತ್ತಿದೆ. ಅದು ಜಾಗ್ರತವಾಗಿ ವಿವೃತ (Evolve) ಆಗಬೇಕು. ನಮಗೆ ಬೇಡವಾದರೂ ಜಡ ಎಚ್ಚತ್ತು ಚೇತನವಾಗಲೇಬೇಕು. ಏಕೆಂದರೆ ಅದು ಕೇವಲ ಚೈತನ್ಯವೇ. ಈ ಮಾತು ವಿಜ್ಞಾನ (Science)ಕ್ಕೂ ಒಪ್ಪಿಗೆ ಯಾಗಿದೆ. ಜಡ-ಚೇತನ ಎಂಬ ಭೇದವೇ ಅಳಿದುಹೋಗಿದೆ. ಜಡವನ್ನು ವಿಶ್ಲೇಷಣೆ ಮಾಡಿ ಮಾಡಿ, ಕೊನೆಗೆ ಜಡ

(Matter) ಎಂಬುದೇಯಿಲ್ಲ. ಎಲ್ಲವೂ ಚೇತನ (Energy) ಎಂದೇ ವೈಜ್ಞಾನಿಕರು ಒಪ್ಪಿಕೊಂಡಿದ್ದಾರೆ. ಇತ್ತೀಚಿಗೆ ರಷ್ಯನ್ ವಿಜ್ಞಾನಿಗಳು ಕಲ್ಲು–ಮಣ್ಣಿನಿಂದ ಜೀವಾಣುಗಳನ್ನು ಸೃಷ್ಟಿಸುವ ಕ್ರಮವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವುದು ಜಗತ್‌ಪ್ರಸಿದ್ಧವಾಗಿದೆ.

ಎಂದಮೇಲೆ ಅನಿವಾರ್ಯವಾಗಿಯೂ, ಅಗತ್ಯವಾಗಿಯೂ ಈ ಜಗತ್ತನ್ನು ನಾವು ಎಷ್ಟುಮಾತ್ರಕ್ಕೂ ತಿರಸ್ಕಾರ ಮಾಡಲೇಕೂಡದು. ಈ ಜಗತ್ತೆಂಬುದೆಲ್ಲ ಶಿವನ ಆಡುಂಬೊಲ. (creation is the play ground of the divine). ಒಂದು ಜಾಗೃತವಾಗಿದೆ, ಇನ್ನೊಂದು ಸುಪ್ತವಾಗಿದೆ. ಎಂದಮೇಲೆ ಇಹಲೋಕ ತುಚ್ಛೀಕಾರಕ್ಕೂ ಮಾಯಾವಾದಕ್ಕೂ ಶ್ರೀ ಅರವಿಂದದರ್ಶನದಲ್ಲಿ ಎಳ್ಳಷ್ಟೂ ಸ್ಥಾನವಿಲ್ಲ. ಹಾಗೆಯೇ ಈ ದೇಹವೆಂಬುದು ಪವಿತ್ರ ಸಾಧನ. ಜೀವ ಶಿವನಾಗಲು ಬೇಕಾದ ಪವಿತ್ರ ಪ್ರಯೋಗಶಾಲೆ ಈ ದೇಹ ಎಂದಿದ್ದಾರೆ ಶ್ರೀ ಅರವಿಂದರು. ಶಿವಯೋಗವೂ ಇದೇ ಸತ್ಯವನ್ನು ಸಾರುವುದಾಗಿ ಹಿಂದೆ ಸೂಚಿಸಲಾಗಿದೆ. ಈ ದೃಷ್ಟಿಯಲ್ಲಿ ಇವೆರಡು ದರ್ಶನಗಳಿಗೂ ಯಾವ ವ್ಯತ್ಯಾಸವೂ ಇಲ್ಲ.

ಶುದ್ಧ ಚೈತನ್ಯವಾದದ್ದು, ಕೇವಲ ಬ್ರಹ್ಮವಾದದ್ದು, ಸರ್ವಜ್ಞವೂ, ಸರ್ವಶಕ್ತವೂ ಆನಂದಮಯವೂ ಆದದ್ದು ಅಜ್ಞಾನಿಯಾಗಿ ಅಶಕ್ತವಾಗಿ, ದುಃಖಿಯಾಗಿ ಏಕೆ ಜನಿಸುತ್ತದೆ ? ಅಜ್ಞಾನದ ಹುಟ್ಟು ಹೇಗಾಯಿತು ? ಶ್ರೀ ಶಂಕರಾಚಾರ್ಯರು ಅಜ್ಞಾನವು ಪರಮಜ್ಞಾನಿಯಾದ ಬ್ರಹ್ಮನಿಂದ ಅದುದಲ್ಲ ಎಂದು ಹೇಳಿದರು. ಕ್ರೈಸ್ತದಾರ್ಶನಿಕರು ಅದು 'ಸೇಟನ್' 'ಸೈತಾನ್' ಎಂದು ಹೆಸರಿಟ್ಟರು. ಈಶ್ವರನೇ ಅಜ್ಞಾನಿಯಾಗಿ ಬಿದ್ದನೆಂದು ಹೇಳಿದ್ದರೆ, ಅವನ ಪ್ರಭುತನಕ್ಕೆ ಹಾನಿಯನ್ನು ಘಾಸಿಯನ್ನು ಉಂಟುಮಾಡಿದಂತೆ ಆದೀತೆಂದು ಅಂಜಿ, ಅಜ್ಞಾನ ಬ್ರಹ್ಮಶಕ್ತಿಯಲ್ಲ— ಎಂದು ಹೇಳಿದರು. ಆದರೆ ಶ್ರೀ ಅರವಿಂದರು ಈ ಅಜ್ಞಾನವೆಂಬುದೂ ಬ್ರಹ್ಮವೇ ಎಂದು ಸಾರಿದರು. ಅದು ಹೇಗೆ ? ಎಂದರೆ ಶ್ರೀ ಅರವಿಂದರು ಈ ರೀತಿ ವಿವರಿಸುತ್ತಾರೆ: ಒಬ್ಬಾತ ಬಹು ದೊಡ್ಡ ಗಣಿತಶಾಸ್ತ್ರಜ್ಞನಿರಬಹುದು : ತತ್ವಜ್ಞಾನಿಯಾಗಿರಬಹುದು ; ವಿಜ್ಞಾನಿಯಿರಬಹುದು ; ಇತಿಹಾಸಕಾರನಿರಬಹುದು ; ಆ ವ್ಯಕ್ತಿ ವಿಜ್ಞಾನದ ಪ್ರಯೋಗಶಾಲೆಯಲ್ಲಿ ತನ್ನ ಉಪಕರಣಗಳೊಡನೆ ತೊಡಗಿದಾಗ ಅವನ ಗಣಿತ, ತತ್ವಜ್ಞಾನ, ಇತಿಹಾಸವೆಲ್ಲ ಅವನಿಂದ ಸಂಪೂರ್ಣ ಮರೆತುಹೋಗಿರುತ್ತದೆ. ಅವನು ಪ್ರಯೋಗಶಾಲೆಯಲ್ಲಿರುವಾಗ ಗಣಿತ, ತತ್ವಜ್ಞಾನ, ಇತಿಹಾಸವನ್ನು ಎಷ್ಟೆಷ್ಟು ಮರೆತರೆ, ಅವನ ವಿಜ್ಞಾನ ಸಂಶೋಧನೆ, ಪ್ರಯೋಗ ಅಷ್ಟಷ್ಟೂ ಯಶಸ್ವಿಯಾಗುತ್ತದೆ. ಹಾಗೆಯೇ ಕೇವಲ ಬ್ರಹ್ಮನು ಜಡವಾಗಿ ಉದಿಸುವಾಗ ತನ್ನೆಲ್ಲ ಇತರ ಶಕ್ತಿಯನ್ನು ಮರೆತುಬಿಡುತ್ತಾನೆ. ಆದರಿಂದ ಅವನು ಇತರ ವಿಚಾರಗಳ ಬಗ್ಗೆ ಆಗ ಅಜ್ಞಾನಿಯೇ ! ಆದರೆ ಪ್ರಯೋಗಶಾಲೆಯಿಂದ ಹೊರಗೆ ಬಂದ ಕೂಡಲೆ ಅವನ ಗಣಿತಜ್ಞಾನ, ತತ್ವಶಾಸ್ತ್ರ ಪ್ರತಿಭೆ, ಇತಿಹಾಸದ ಪಾಂಡಿತ್ಯ ಕರೆದಾಗ ಹೊರಗೆ ಬರುತ್ತದೆ. ಹಾಗೆಯೇ ಈ ಬ್ರಹ್ಮಲೀಲೆಯು ಕೂಡ. ಬ್ರಹ್ಮ ಜಡವಾದಾಗ ತನ್ನ ಇತರ ಗುಣಗಳನ್ನು ಮರೆತಿರುತ್ತದೆ. ಅದು ಅವನ ಲೀಲೆ.

ಹಾಗಾದರೆ ಈ ತನುಮನಪ್ರಾಣಗಳಿಗೆ ಇರುವ ಸಂಬಂಧವೇನು ? ಜೀವಕ್ಕೆ ಜಡ ಆಧಾರ : ಮನಸ್ಸಿಗೆ ಜೀವ ಮತ್ತು ಜಡ ಎರಡೂ ಆಧಾರ. ಜಡದಲ್ಲಿ ಜೀವ ಉದಿಸಿದಾಗ ಜೀವ ಜಡವನ್ನು ಒದ್ದು ದೂರ ತಳ್ಳಲಿಲ್ಲ. ಜಡದ ಆಧಾರದ ಮೇಲೆ ಜೀವ ನಿಂತಿದೆ. ಜಡ ಮತ್ತು ಜೀವದ ಮೇಲೆ ಮನಸ್ಸು ನಿಂತಿದೆ. ಸೃಷ್ಟಿ ಇಲ್ಲಿಗೇ ನಿಲ್ಲುವುದಿಲ್ಲ. ಸೃಷ್ಟಿಯಲ್ಲಿ ಮೂರು ಹೆಜ್ಜೆಗಳಿವೆ ಎಂದು ಉಪನಿಷತ್‌ನಲ್ಲಿ ಹೇಳಿರುವುದು ಇವೇ ಹೆಜ್ಜೆಗಳನ್ನೇ. ಒಂದು, ಜಡದ ಉಗಮ : ಎರಡು, ಜೀವದ ಉದಯ : ಮೂರು, ಮನದ ಅವತರಣಿಕೆ : ಜಡದಲ್ಲಿ ಜೀವ ಸುಪ್ತವಾಗಿ ಇತ್ತು. ಜೀವದಲ್ಲಿ ಮನಸ್ಸು ನಿದ್ರಿಸುತ್ತಿತ್ತು. ಏನೂ ಇಲ್ಲದ್ದರಿಂದ ಯಾವುದೂ ಸೃಷ್ಟಿಯಾಗದು. ಈಗ ಮನಸ್ಸಿನಿಂದ ಅತಿಮನಸ್ಸು (supermind) ಅನಿವಾರ್ಯವಾಗಿ ವಿಕಾಸವಾಗಿಯೇ ಆಗುತ್ತದೆ. ಅದಕ್ಕೆ ಬೇರೆ ದಾರಿಯೇ ಇಲ್ಲ. ಆ ವಿಕಸನಕ್ಕೆ ಚಾಲನೆಯನ್ನು, ತ್ವರಿತವೇಗವನ್ನು ಕೊಡುವುದೇ ಶ್ರೀ ಅರವಿಂದದರ್ಶನದ ಪರಮಗಮ್ಯ. ಯೋಗದ ಉದ್ದೇಶ.

ಶ್ರೀ ಅರವಿಂದದರ್ಶನವು ರೂಪಗೊಳ್ಳುವುದಕ್ಕಿಂತ ಮೊದಲು : ಸ್ವರ್ಗ ಸ್ವರ್ಗವೇ : ಮರ್ತ್ಯ ಮರ್ತ್ಯವೇ. ಎರಡೂ ಎಂದಿಗೂ ಒಂದಾಗವು (Heaven is Heaven ; Earth is Earth ; never shall the twin meet) ಎಂಬ ಭ್ರಾಂತಿ ಕವಿದಿತ್ತು. ವೀರಶೈವದರ್ಶನ ಇಂಥ ಭ್ರಾಂತಿಜನ್ಯ ಭಾವನೆಗಳಿಗೆ ಎಡೆಕೊಡಲಿಲ್ಲ. ಆದರೆ ಶ್ರೀ ಅರವಿಂದದರ್ಶನದ ಪ್ರಕಾರ ಭೂಮಿಯ ಮೇಲೆ ಸ್ವರ್ಗವನ್ನು ಇಲ್ಲಿಯೇ ಇಂದೇ ಈಗಲೇ (here and now) ಸ್ಥಾಪಿಸುವುದೇ ಪರಮಗುರಿ. ಯಾವುದು ತಾನಾಗಿಯೇ ವಿಕಸನ, ಪರಿಣಾಮ (Evolution) ಕ್ರಮದಿಂದ ಪೂರ್ಣತ್ವವನ್ನು, ಸಿದ್ಧಿಯನ್ನು ಪಡೆದೇತೀರುವುದೋ ಅದಕ್ಕೆ ಕ್ರಾಂತಿಮಾರ್ಗದಿಂದ (Revolutionery) ಅತಿವೇಗವನ್ನು.

ಚಾಲನೆಯನ್ನು ಕೊಟ್ಟು 'ಭುವಿ'ಯಲ್ಲಿ 'ವಿಭು'ವನ್ನು ಅವತರಿಸಲೇಬೇಕು : ನೆಲೆಗೊಳಿಸಬೇಕು. ಲಿಂಗಾಂಗಸಾಮರಸ್ಯವು ಆಗಿಯೇ ಆಗುವುದು. ಅದಕ್ಕೆ ಹೊರತೆಂಬುದೇ ಇಲ್ಲ. ಜೀವ ಈಶ್ವರನಲ್ಲಿ ಆಗಿಹೋಗಿ ಅಲ್ಲಿ ಜೀವ ನಿಷ್ಕ್ರಿಯ (static)ನಾಗುವುದಿಲ್ಲ. ತದ್ವಿರುದ್ಧವಾಗಿ ಜೀವದ ಹಾರೈಕೆ (Aspiration) ಭಗವಂತನ ಹರಕೆ (grace)ಯಾಗಿ, ಭಗವಂತನೇ ಭೂಮಿಗಿಳಿದು ಬಂದು ಇದನ್ನು ಚಿನ್ಮಯವನ್ನಾಗಿ ಮಾಡುತ್ತಾನೆ. ಯಾವುದು ಇದುವರೆಗೆ ಜಡ, ಅಚೇತನ. ಮೃಣ್ಮಯವಾಗಿತ್ತೋ—ಅದು ಶಿವ-ಜೀವರ ಸಂಗಮವಾದ ಮೇಲೆ ಚಿನ್ಮಯವಾಗುತ್ತದೆ. ಇದೇ ಅದಾಗುತ್ತದೆ. ಅದೇ ಇಲ್ಲಿ ಆವಿರ್ಭವಿಸುತ್ತದೆ. ಆಗ ಜೀವ ಅಮೃತತ್ವದ ವಲಸೆಗಾರ (colonist of Immortality) ನಾಗಿಯೇ ಉಳಿಯದೇ ಅವನೂ ಅಮೃತಪುತ್ರನೇ ಆಗಿಹೋಗುವನು. ಅಂಥವನಿಗೆ ಜರಾಮರಣಗಳ ಭೀತಿಯೇ ಇರುವುದಿಲ್ಲ.

ಶ್ರೀ ಅರವಿಂದರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ, ಇದುವರೆಗೆ ಮಾನಸಿಕವಾಗಿ, ಆಧ್ಯಾತ್ಮಿಕವಾಗಿ ಅಮೃತತ್ವವನ್ನು ಕಂಡವರಿದ್ದಾರೆ. ಅವರು ಆಗೊಮ್ಮೆ ಈಗೊಮ್ಮೆ ಒಬ್ಬೊಬ್ಬರಾಗಿ ಬಂದು ಬಾಳನ್ನು ಜಗತ್ತನ್ನು ಬೆಳಗಿದ್ದಾರೆ. ಆದರೆ, ಈ ಸರ್ವ ಅಂಗಾಂಗಗಳನ್ನು (ಆಧಾರವನ್ನು) ದಿವ್ಯತ್ವಕ್ಕೆ ಏರಿಸಬಲ್ಲವರನ್ನು ನಾವು ಕಾಣುವುದು ಅತಿವಿರಳ. ಈ ದೇಹವನ್ನೂ ಅಮೃತತ್ವಕ್ಕೆ ಶಾಶ್ವತ ಸ್ಥಿತಿಗೆ ತರಬಹುದು. ಇದಕ್ಕೆ ಮುಪ್ಪು, ರೋಗ, ಮರಣಗಳ ಬಾಧೆಯನು ತಪ್ಪಿಸಬಹುದು. ಹಾಗೆಯೇ ಯಾವ ಬ್ರಾಹ್ಮೀಸ್ಥಿತಿ ಕೇವಲ ಆಗೊಮ್ಮೆ ಈಗೊಮ್ಮೆ ಯಾರೋ ಒಬ್ಬಿಬ್ಬರು ವಿಭೂತಿಗಳಲ್ಲಿ ಮಾತ್ರ ಮೈದೋರುತ್ತಿದೆಯೋ ಅದು ಸಾರ್ವತ್ರಿಕವಾಗಿ ಲೋಕದ ಎಲ್ಲ ಜೀವರ ಸ್ಥಿತಿಯಲ್ಲಿಯೂ ಆಗಬೇಕೆಂಬುದೇ ಶ್ರೀ ಅರವಿಂದದರ್ಶನ. ಈಗ ಒಬ್ಬಿಬ್ಬರಲ್ಲಿ ಆಗೊಮ್ಮೆ ಈಗೊಮ್ಮೆ ಎಲ್ಲೋ ಒಂದು ಕಡೆ ಅತಿ ವಿರಳವಾಗಿ ಆವಿರ್ಭವಿಸುವ ಅತಿಮನಸ್ಸು, ಬ್ರಾಹ್ಮೀಸ್ಥಿತಿ, ಎಲ್ಲರಲ್ಲೂ ಆವಿರ್ಭವಿಸಲು ಶಕ್ಯ ಎಂಬುದನ್ನು ಶ್ರೀ ಅರವಿಂದರು ಬುದ್ಧಿ ಮೆಚ್ಚುವಂತೆ ಎತ್ತಿ ತೋರಿಸಿದ್ದಾರೆ. ಒಂದು ಕುಟುಂಬದಲ್ಲಿ ಉಂಟಾದ ಪರಿವರ್ತನೆ ಒಂದು ಸಮಾಜದ ಮೇಲೂ ಆಗಿಯೇ ಆಗುತ್ತದೆ. ಆ ಸಮಾಜದಲ್ಲಿ ಆದದ್ದು ಈ ಜನಾಂಗದಲ್ಲಿಯೂ ಆಗಲೇಬೇಕು. ಒಂದು ಜನಾಂಗದಲ್ಲಿ ಆದ ಬದಲಾವಣೆ ಇಡೀ ಲೋಕಕ್ಕೆ ಯಾಕೆ ಆಗಲಾರದು ? ಆಗಬಾರದು ? ಶ್ರೀ ಅರವಿಂದರು ಕಂಡ ಈ ಕಾಣ್ಕೆ ಸಿದ್ಧಿಸಲು ಅನುಸರಿಸಬೇಕಾದ ಮಾರ್ಗ ಯಾವುದು ? ಕ್ರಮ ಏನು ? ಆ ಮಾರ್ಗವನ್ನು ಅವರು 'ಪೂರ್ಣಯೋಗ' (Integral yoga) ಎಂದು ಕರೆದಿದ್ದಾರೆ. ಅದರ ಸಂಪೂರ್ಣ ವಿವರಣೆ ಅವರ ಉದ್ಗ್ರಂಥ "Synthesis of Yoga"—ಅವರ "Life Divine" ಗ್ರಂಥಕ್ಕೆ ಒಂದೇ ಸ್ಥಾನ ಕೆಳಗಿರುವ ಗ್ರಂಥದಲ್ಲಿ ಸಿಕ್ಕುತ್ತದೆ. ಹಠಯೋಗ ಒಂದೆ ದೇಹಶುದ್ಧಿಗಾಗಿ. ಶುಚಿಗಾಗಿ. ಸಿದ್ಧಿಗಾಗಿಯೇ ಪ್ರಯತ್ನಪಟ್ಟಿತು. ರಾಜಯೋಗ. ಪ್ರಾಣಮಯ ಮಟ್ಟದಲ್ಲಿ ಸಾಧನೆಯನ್ನು ಮುಂದುವರಿಸಿತು. ಕರ್ಮ. ಭಕ್ತಿ, ಜ್ಞಾನಯೋಗಗಳು ಸಾಧನೆಯ ಒಂದೊಂದು ಮುಖವನ್ನು ಒತ್ತಿ ಹೇಳಿದವು ; ಎತ್ತಿಹಿಡಿದವು. ಶರಣಮಾರ್ಗದಲ್ಲೂ 'ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯಾ ?' ಎಂದು ಕೇಳಿದಾಗ. ಕೇವಲ ದೇಹದಂಡನೆಯಿಂದ ಸಾಕ್ಷಾತ್ಕಾರ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು. ಸಾಧನೆ. ಹಾರೈಕೆಯ ರೂಪವನ್ನು ಧರಿಸಬೇಕಾದರೆ, ಮನೋಮಯ ವಿಜ್ಞಾನಮಯ ಭೂಮಿಕೆಗಳಲ್ಲಿ ನಡೆಯಬೇಕು. ಹಾಗೂ ಭಕ್ತನಾಗಿ. ಜ್ಞಾನಿಯಾಗಿ ಪಡೆದ ಅತಿಮನಸ್ಸಿನಿಂದ, ಸಮರ್ಪಣಬುದ್ಧಿಯಿಂದ ಈ ಇಹಜೀವನದಲ್ಲಿ ಕರ್ಮಯೋಗಿಯಾಗಿರಬೇಕು. ಆದಕಾರಣ ಇದು ಯಾವುದಾದರೊಂದು ಬಗೆಯ ಯೋಗವಲ್ಲ. ಇದು ಪೂರ್ಣಯೋಗ. ಇದಕ್ಕೂ ಶಿವಶರಣರ ಶಿವಯೋಗಕ್ಕೂ ನಿಕಟಸಂಬಂಧವಿರುವುದನ್ನು ನಾವು ಗಮನಿಸಬಹುದು.

ಕೊನೆಯದಾಗಿ ಶ್ರೀ ಅರವಿಂದರ ದರ್ಶನದಲ್ಲಿ ವೀರಶೈವದರ್ಶನದಲ್ಲಿ ಪ್ರಾಧಾನ್ಯವಾದ ಶಕ್ತಿಗೆ ಯಾವ ಸ್ಥಾನವಿದೆ ಎಂಬುದನ್ನು ಅವರ ಮಾತಿನಿಂದಲೇ ವಿವರಿಸೋಣ :

"Is it love, enthusiasm, Bhakti that is wanting? These are ingrained in the Indian Culture, but in the absence Of Shakti we can not concentrate, we can not direct, we can not ever preserve it. Bhakti is the leaping frame, Shakti is the Fuel. If the fuel scanty how long can the fire endure?

ಶ್ರೀ ಅರವಿಂದರ ಈ ದರ್ಶನ ಮತ್ತು ವೀರಶೈವದರ್ಶನ ಎರಡನ್ನೂ ತುಲನಾತ್ಮಕವಾಗಿ ಪರಿಶೀಲಿಸಿದರೆ ಅವುಗಳಲ್ಲಿರುವ ಸಾಮ್ಯಗಳು ಎದ್ದು ಕಾಣುತ್ತವೆ. ಅರವಿಂದದರ್ಶನದಂತೆ ವೀರಶೈವದರ್ಶನವೂ ಜಗನ್ಮಿಥ್ಯಾವಾದವನ್ನು ಒಪ್ಪುವುದಿಲ್ಲ. ಬ್ರಹ್ಮವೂ ಸತ್ಯ, ಜಗತ್ತೂ ಸತ್ಯ. ಜಗತ್ತನ್ನು ತುಚ್ಛೀಕರಿಸಿ. ಜೀವನದಿಂದ ವಿಮುಖರಾಗುವುದು

ಜೀವದ ಸಂಕಟಕ್ಕೆ ಪರಿಹಾರಮಾರ್ಗವಲ್ಲ ಎಂಬುದು ಎರಡು ದರ್ಶನಕ್ಕೂ ಸಮಾನ ಲಕ್ಷಣ. ಪಲಾಯನ ಮಾರ್ಗ ಪರಿಹಾರಮಾರ್ಗವಲ್ಲ. ಜೀವ ಎಂದೆಂದಿಗೂ ಶಿವನಿಂದ ಬೇರೆಯಾಗಿಯೇ ಇರಬೇಕಾಗಿಲ್ಲ. ಎಂದೆಂದಿಗೂ ಯಾವಾಗಲೂ ಭೇದವನ್ನೇ ಸಮರ್ಥಿಸುವ ದ್ವೈತಸಿದ್ಧಾಂತವನ್ನು ಶಿವಯೋಗ ಒಪ್ಪದು. ಜೀವ ಸಾಧನೆಯಿಂದ ಶಿವನಾಗುವುದು. ಶಿವಜೀವರ ಸಾಮರಸ್ಯ-ಲಿಂಗಾಂಗಸಾಮರಸ್ಯವೇ ಜೀವನದ ಪರಮಚರಿತಾರ್ಥತೆ. ಅದಕ್ಕೆ ಮಾರ್ಗ ಯಾವುದು? ಯಾವುದಾದರೂ ಒಂದೇ ಒಂದು ಯೋಗದಿಂದ ಈ ಆತ್ಮೋಪಲಬ್ಧಿ ಸಾಧ್ಯವಿಲ್ಲ. ಇದು ಅರವಿಂದದರ್ಶನದ ಸಾರ. ಭಕ್ತಿ, ಜ್ಞಾನ, ಕರ್ಮ, ರಾಜಯೋಗಗಳೆಲ್ಲವೂ ಒಂದಕ್ಕೊಂದು ಪೂರಕ. ತನ್ಮಾರ್ಗಾನುಸರಣೆಯಿಂದ ಆಧಾರದ ಸಮಗ್ರ ಪರಿವರ್ತನೆ ಅಥವಾ ರೂಪಾಂತರ ಉಂಟಾಗಬೇಕು. ತನುಮನಪ್ರಾಣಗಳೆಲ್ಲ ಪರಿವರ್ತನೆ ಹೊಂದಬೇಕು. ಹೀಗೆ ಪುನರ್ಜನ್ಮ ಪಡೆದು ಈ ಮರ್ತ್ಯದಲ್ಲಿಯೇ ಅಮೃತಪುತ್ರರಾಗಿ ಬಾಳಬೇಕು. ಈ ಗುರಿಯನ್ನೂ ಶಿವಯೋಗ ಮನ್ನಿಸುತ್ತದೆ. ಭಕ್ತಿ, ಜ್ಞಾನ, ಕರ್ಮಯೋಗಗಳನ್ನು ಅಳವಡಿಸಿಕೊಂಡ ಪೂರ್ಣಯೋಗವೇ ಸಾಧನೋಪಾಯ. ಅದನ್ನೇ ಶಿವಯೋಗವು ಕಾಯಕಯೋಗವೆಂದು ಕರೆದಿದೆ. ಇಲ್ಲಿಯೂ ಆವೆರಡರಲ್ಲಿ ಬಹು ಸಾಮ್ಯ ಕಂಡುಬರುತ್ತದೆ.

ಹೀಗೆ ಪೂರ್ಣಯೋಗಪಥವಿಡಿದು ಸಮಗ್ರವಾಗಿ ಪರಿಪೂರ್ಣ ರೂಪಾಂತರಹೊಂದಿದ ಮೇಲೆ ಜೀವನು ವಿಜ್ಞಾನಘನಪುರುಷನಾಗಿ ಜಗತ್ತಿನಲ್ಲಿ ಜೀವಿಸುತ್ತಾನೆ. ತನ್ನಂತೆಯೇ ಇತರರನ್ನು ಮಾಡಿಕೊಳ್ಳುತ್ತಾನೆ. ವಿಜ್ಞಾನ ಘನಪುರುಷರ ಸಂತತಿಯೇ ಇಲ್ಲಿ ಬೆಳೆಯುತ್ತದೆ. ಇದೇ ಆಗ ಸ್ವರ್ಗ, ವೈಕುಂಠ, ಕೈಲಾಸ....ಎನ್ನಿಸುತ್ತದೆ. ಇದುವರೆಗೆ ಮಾನವಕುಲ ಹುಟ್ಟಿದಂದಿನಿಂದ, ಭೂಮಿಯ ಮೇಲೆ ಯಾವ ಸ್ವರ್ಗ ಸ್ಥಾಪನೆ ಮಾಡಬೇಕೆಂದು ಸಕಲ ದಾರ್ಶನಿಕರು, ಆಚಾರ್ಯರು, ಸಂತರು, ಋಷಿಗಳು ಪ್ರಯತ್ನಿಸಿದರೋ ಆ ಸ್ವರ್ಗ ಇಲ್ಲಿಯೇ ಸ್ಥಾಪನೆಯಾಗುವುದು—ಇದು ಶ್ರೀ ಅರವಿಂದರ ಭೂಕೈಲಾಸದ ವರ್ಣನೆ. ಅಂತೂ ಬಹುಮಟ್ಟಿಗೆ ಇವೆರಡರಲ್ಲಿ ಸಾಮ್ಯಗಳಿರುವುದು ಕಂಡುಬರುತ್ತದೆ.

---

ಶಕ್ತಿರಪ್ರತಿಮಾ ಸಾಕ್ಷಾಚ್ಛಿವೇನ ಸಹಧರ್ಮಿಣೀ ।
ಸಾಕ್ಷಿಣೀ ಸತ್ಯಸಂಪೂರ್ಣಾ ನಿರ್ವಿಕಲ್ಪಾ ಮಹೇಶ್ವರೀ ॥

ಶಿವಾನುಭವಸೂತ್ರ

ಇಂಗಡಲೊಳಿಂಪು ಬೆಳದಿಂಗಳೊಳು ತಂಪು, ಕುಸು ।
ಮಂಗಳೊಳು ಕಂಪು ಬೆರೆದಂತೆ ಪರಮನೊಳು
ಪಿಂಗದಗಸುತೆಗೆ ನತನಪ್ಪೆಂ ॥

ನಿಜಗುಣ ಶಿವಯೋಗಿ

---

1 ಶ್ರೀ ಕೊ. ಚೆನ್ನಬಸಪ್ಪನವರಿಂದ ಸಂಪಾದಿಸಲ್ಪಟ್ಟ 'ರಕ್ಷಾಶತಕಂ' ಗ್ರಂಥಕ್ಕೆ ಶ್ರೀ ಟಿ. ಎಚ್. ಎಂ. ಸದಾಶಿವಯ್ಯನವರು ಬರೆದ ಮುನ್ನುಡಿ ಪುಟ ೧೭ (ಪ್ರಥಮ ಮುದ್ರಣ).

# ಇಸ್ಲಾಂಧರ್ಮ ಮತ್ತು ವೀರಶೈವಧರ್ಮ

**ಡಾ. ಏಜಾಸುದ್ದೀನ್**

ಅರಬ್ಬೀ ಭಾಷೆಯ ಶಬ್ದವಾದ "ಇಸ್ಲಾಂ" ಎಂಬ ಪದಕ್ಕೆ "ಭಗವಂತನಿಗೆ ವಿಧೇಯನಾಗಿರುವಿಕೆ ಹಾಗೂ ಅವನಿಗೆ ಅಧೀನನಾಗಿರುವಿಕೆ" ಎಂಬ ಅರ್ಥ ಉಂಟು. ಅಂದಮೇಲೆ ಭಗವಂತನಿಗೆ ಅಧೀನರೂ ವಿಧೇಯರೂ ಆದ ಎಲ್ಲರೂ ಮುಸ್ಲಿಮರು. ವೀರಶೈವಧರ್ಮವೂ ಸಹ ತನ್ನ ಅನುಯಾಯಿಗಳನ್ನು ಶರಣರೆಂದು ಕರೆಯುತ್ತದೆ. ಸೃಷ್ಟಿಕರ್ತನಾದ ಪರಶಿವನಿಗೆ ಪರಿಪೂರ್ಣವಾಗಿ ತಲೆಬಾಗುವುದೇ ಶರಣತ್ವ. ಈ ದೃಷ್ಟಿಯಿಂದ ನೋಡಿದರೆ ಮುಸ್ಲಿಮ್ ಶಬ್ದ ಹಾಗೂ ಶರಣ ಶಬ್ದಗಳಲ್ಲಿರುವ ಸಾಮ್ಯತೆ ನಮಗೆ ಕಂಡುಬರುತ್ತದೆ. ಇಸ್ಲಾಮ್ ಧರ್ಮ ಭಗವಂತನ ಸಾರ್ವಭೌಮತೆಯನ್ನು ನಂಬುವ ಹಾಗೆ ಸೃಷ್ಟಿಯ ಪ್ರತಿಯೊಂದು ವಸ್ತುವಿನಲ್ಲಿಯೂ ಇರತಕ್ಕ ಅಧೀನತೆಯನ್ನೂ ನಂಬುತ್ತದೆ. ಉದಾಹರಣೆಗೆ ಪ್ರಖರನೂ, ಪ್ರಕಾಶಮಯನೂ ಆದ ಸೂರ್ಯ, ಪ್ರಶಾಂತನಾದ ಚಂದ್ರ, ಮಿನುಗುತ್ತಿರುವ ತಾರೆ, ಶೀತೋಷ್ಣಗಳನ್ನೂ ವೇಗವನ್ನೂ ಪಡೆದ ಗಾಳಿ, ಕಾರ್ಮೋಡಗಳಲ್ಲಿ ಸುಪ್ತವಾಗಿರುವ ಗುಡುಗು ಮಿಂಚು, ಸಸ್ಯಾಧಾರಿ ಮಳೆ, ಭೂಗರ್ಭದಿಂದ ಹೊರಬರುವ ಸಸ್ಯ, ಆಕಾಶದಲ್ಲಿ ಹಾರಾಡುವ ಪಕ್ಷಿ, ಎತ್ತರದ ಪರ್ವತ, ಗಂಭೀರ ಸಾಗರ, ಪ್ರವಹಿಸುವ ನದೀ-ನದಗಳೆಲ್ಲ ಅವನಿಂದ ಸೃಷ್ಟಿ ಪಡೆದಂಥವುಗಳು. ಇವೆಲ್ಲವುಗಳ ಅಸ್ತಿತ್ವಕ್ಕಾಗಿ ಭಗವಂತನು ಕೆಲವು ವಿಶಿಷ್ಟ ನಿಯಮಗಳನ್ನು ನಿರ್ದಿಷ್ಟಪಡಿಸಿದ್ದು, ಆ ನಿಯಮಗಳನ್ನು ಅವು ಯಾವಾಗಲೂ ಉಲ್ಲಂಘಿಸಿಲ್ಲ. ಹಾಗೆ ನೋಡಿದರೆ, ಅಖಿಲಬ್ರಹ್ಮಾಂಡದೊಳಗಿನ ಎಲ್ಲಾ ಚರಾಚರವಸ್ತುಗಳೂ ಸೃಷ್ಟಿಕರ್ತನ ಆಜ್ಞೆಗೆ ಒಳಪಟ್ಟಿವೆ, ಪರಶಿವನ ಶರಣನ್ನು ಸ್ವೀಕರಿಸಿವೆ.

ಸೂರ್ಯನು ಮೂಡುವುದಕ್ಕಾಗಿ ಹಾಗೂ ಮುಳುಗುವುದಕ್ಕಾಗಿ ಒಂದು ಕ್ರಮ ಹಾಗೂ ವೇಳೆಯನ್ನು ಅವನೇ ನಿರ್ದಿಷ್ಟಪಡಿಸಿದ್ದಾನೆ. ಗಾಳಿ ಬೀಸುವುದಕ್ಕೂ ಒಂದು ನಿಯಮವಿದ್ದು, ಅದನ್ನು ಮೀರಿ ನಡೆಯಲು ಗಾಳಿಗೆ ಸಾಧ್ಯವಿಲ್ಲ. ಮಳೆಯಾಗುವುದಕ್ಕೂ ಒಂದು ವ್ಯವಸ್ಥೆ ಇದ್ದು, ಈ ವ್ಯವಸ್ಥೆಯನ್ನು ಧಿಕ್ಕರಿಸುವ ಸಾಮರ್ಥ್ಯ ಯಾರಲ್ಲಿಯೂ ಇಲ್ಲ. ಈ ರೀತಿ ಜಗತ್ತಿನೊಳಗಿನ ಎಲ್ಲ ವಸ್ತುಗಳ ಚಲನ-ವಲನ ಹಾಗೂ ಆಗು-ಹೋಗುಗಳಿಗೆಲ್ಲ ನಿರ್ದಿಷ್ಟ ಕ್ರಮಗಳಿದ್ದು, ಅವುಗಳ ಮೇರೆಗೆ ಇವು ಹುಟ್ಟುತ್ತವೆ, ಬೆಳೆಯುತ್ತವೆ ಹಾಗೂ ಬಾಳುತ್ತವೆ. ತಮ್ಮನ್ನು ನಿರ್ಮಿಸಿದ ಸೃಷ್ಟಿಕರ್ತನು ನಿರ್ದಿಷ್ಟಪಡಿಸಿದ ಕ್ರಮಕ್ಕೆ ವ್ಯತಿರಿಕ್ತವಾಗಿ ನಡೆಯುವುದು ಅವಕ್ಕೆ ಸಾಧ್ಯವಿಲ್ಲ. ಈ ರೀತಿಯಲ್ಲಿ ಅಖಿಲವಿಶ್ವವೇ ಭಗವಂತನ ವ್ಯವಸ್ಥೆಗೊಳಪಟ್ಟಿದೆ. ಇವನ ಶರಣನ್ನು ಇಸ್ಲಾಂಧರ್ಮ ಹಾಗೂ ವೀರಶೈವಧರ್ಮ ಸ್ವೀಕರಿಸಿವೆ.

ಈ ಎರಡೂ ಧರ್ಮಗಳು ಆಸ್ತಿಕಧರ್ಮಗಳು, ಒಬ್ಬ ಭಗವಂತನಲ್ಲಿ ನಂಬಿಕೆ ಇಡುವಂತಹವು. ಎರಡೂ ಕಡೆಯೂ ಭಗವಂತನ ನಿರಾಕಾರತ್ವವೇ ಮೂಲಸಿದ್ಧಾಂತ. ಭಗವಂತನು ಒಬ್ಬನೇ, ವಿಶ್ವದ ಯಾವ ವಸ್ತುವೂ, ವ್ಯಕ್ತಿಯೂ ಅವನಂತಿರುವುದಾಗಲೀ, ಅವನ ಗುಣಧರ್ಮಗಳನ್ನು ಪಡೆದಿರುವುದಾಗಲೀ ಇಲ್ಲ: ಹಾಗೆ ಆಗುವುದು ಸಾಧ್ಯವೂ ಇಲ್ಲ. ಪವಿತ್ರ ಖುರಾನಿನ ೧೧೨ನೇ ಅಧ್ಯಾಯದಲ್ಲಿ ಭಗವಂತನ ಲಕ್ಷಣಗಳ ವರ್ಣನೆ ಬರುತ್ತದೆ :

> ತಿಳಿಸಿಬಿಡಿ—ಅಲ್ಲಾಹ್‌ನು ಒಬ್ಬನೇ,
> ಅವನು ನಿರಾಧಾರನೂ ಸರ್ವಾಧಾರನೂ ಆಗಿರುತ್ತಾನೆ.
> ಅವನು ಯಾರಿಗೂ ಜನ್ಮ ಕೊಟ್ಟಿಲ್ಲ, ಯಾರಿಂದಲೂ ಜನ್ಮ ಪಡೆದಿಲ್ಲ,
> ಅವನ ಸರಿಸಮಾನರು ಯಾರೂ ಇಲ್ಲ.

ಶೈವಸಿದ್ಧಾಂತವೂ ಸಹ ಪರಶಿವನ ಲಕ್ಷಣಗಳನ್ನು ಇದೇ ರೀತಿಯಲ್ಲಿ ಬಣ್ಣಿಸಿದೆ :—"ಪರಶಿವನು ಸರ್ವಸ್ವತಂತ್ರನು, ಸರ್ವಕ್ಕೂ ಕಾರಣನು. ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತವಾಗಿರುವ ಸ್ಥಿತಿಯಲ್ಲಿ ವಿಶ್ವೋತ್ತೀರ್ಣನೆನಿಸಿಕೊಳ್ಳು

ತ್ತಾನೆ. ಹಾಗೆಯೇ ಚರಾಚರಾತ್ಮಕ ಪ್ರಪಂಚಕ್ಕೆ ಸರ್ವವಿಧಕಾರಣನಾಗಿ ವಿಶ್ವಮಯನಾಗಿದ್ದಾನೆ. ಚಿದಾನಂದ ಘನವಾಗಿ ಪರಿಪೂರ್ಣನಾಗಿರುತ್ತಾನೆ. ತನ್ನ ಶಕ್ತಿಪ್ರಸಾರದಿಂದ ವಿಶ್ವವನ್ನು ಸೃಷ್ಟಿಸುವನು. "ಸ್ವಶಕ್ತಿಪ್ರಚಯೋಽಸ್ಯ ವಿಶ್ವಂ", "ಸ್ವೇಚ್ಛಯಾ ಸ್ವಭಿತ್ತೌ ವಿಶ್ವಮುನ್ಮೀಲಯತಿ." ಪರಶಿವನಿಗೆ ಚಿತ್ ಆನಂದ ಇಚ್ಛಾ, ಜ್ಞಾನ ಕ್ರಿಯಾಶಕ್ತಿಗಳು ನಿತ್ಯವಾಗಿರುತ್ತವೆ. ಪರಶಿವನು ತನ್ನ ಪಂಚಶಕ್ತಿಗಳಿಂದ ಯಾವಾಗಲೂ ಪಂಚ-ಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪಂಚಕೃತ್ಯಗಳು—ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹ. ಇಲ್ಲಿ ಸೃಷ್ಟಿ ಅಂದರೆ ವಿಶ್ವಸೃಷ್ಟಿ. ಸ್ಥಿತಿ ಅಂದರೆ ಮಾಡಿದ ಸ್ಥಿತಿಯನ್ನು ಕಾಪಾಡುವುದು, ಸಂಹಾರ ಅಂದರೆ ತನ್ನಲ್ಲಿಯೇ ಲಯ ಮಾಡಿಕೊಳ್ಳುವುದು, ತಿರೋಧಾನ ಅಂದರೆ ಚಿತ್ತಿನಲ್ಲಿ ಅಖಂಡವಾಗಿ ಶೇಖರಿಸಿದ್ದನ್ನು ಪುನಃ ಭೇದರೂಪವಾಗಿ ಪ್ರಕಾಶಪಡಿಸುವ ಸ್ಥಿತಿಯಲ್ಲಿಟ್ಟಿರುವುದು. ಅನುಗ್ರಹವೆಂದರೆ ಸಂಸ್ಕಾರರೂಪದಲ್ಲಿಲ್ಲದೆ ಚಿತ್ತಿನಲ್ಲಿ ಸಂಪೂರ್ಣವಾಗಿ ಲಯವಾಗುವುದು—ಹೀಗೆ ಐದು ಶಕ್ತಿಗಳಿಂದಲೂ ಐದು ಕೃತ್ಯಗಳಿಂದಲೂ ವಿಶ್ವಾತ್ಮಕನಾಗಿಯೂ ಅನುತ್ತರವಿಶ್ವಮಯನಾಗಿಯೂ ಸ್ವತಂತ್ರನಾಗಿಯೂ ಪರಿಪೂರ್ಣನಾಗಿಯೂ ಪರಶಿವನಿದ್ದಾನೆ."

ಶೈವಮತದಲ್ಲಿ ವಿಶಿಷ್ಟವಾದ ಸ್ಥಾನ ಪಡೆದಿರುವ ವೇದಾಂತದ ಒಂದು ಪ್ರಧಾನ ಸಂಪ್ರದಾಯವನ್ನು ವೀರಶೈವ ಅಥವಾ ಶಕ್ತಿವಿಶಿಷ್ಟಾದ್ವೈತವೆಂದು ಕರೆಯುತ್ತಾರೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ಪ್ರಾತಃ ಸ್ಮರಣೀಯರಾದ ಅಲ್ಲಮ, ಬಸವ, ಚನ್ನಬಸವ, ಸಿದ್ಧರಾಮಾದಿಗಳು ಈ ಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡಿದರು. ಕರ್ನಾಟಕದ ಈ ಶರಣರ ಸಾಧನೆ ವಿಶ್ವದ ಇತಿಹಾಸದಲ್ಲಿ ಒಂದು ಸುವರ್ಣಸಂಪುಟವಾಗಿ ಉಳಿದಿದೆ.

ಭಗವಂತನು ಮೊಟ್ಟಮೊದಲು 'ಆದಮ್'ರವರನ್ನು ಸೃಷ್ಟಿಸಿದನು.[1] ಇವರೇ ಭಗವಂತನ ಕಡೆಯಿಂದ ಬಂದ ಪ್ರಥಮ ಪ್ರವಾದಿಗಳು. ಜಗತ್ತಿನಲ್ಲಿದ್ದ ವಸ್ತುಗಳನ್ನೆಲ್ಲ ಹೇಗೆ ಉಪಯೋಗಿಸಬೇಕೆಂಬುದನ್ನೂ ಹಾಗೂ ಯಾವ ಕಾರ್ಯ ಮಾಡಬೇಕೆಂಬುದನ್ನೂ ಭಗವಂತನು ಅವರಿಗೆ ತಿಳಿಸಿಕೊಟ್ಟಿದ್ದ. ಮನುಷ್ಯನು ಸಾಮಾನ್ಯವಾಗಿ ತನ್ನ ಬುದ್ಧಿಯಿಂದ ತಿಳಿಯಲಾಗದ ಹಲವಾರು ವಿಷಯಗಳ ಜ್ಞಾನ ಇವರಿಗಿತ್ತು. ಮನುಷ್ಯಜೀವನವು ಕೇವಲ ಲೌಕಿಕಜೀವನದೊಂದಿಗೆ ಪರ್ಯವಸಾನ ಹೊಂದದೆ, ಮೃತಪಟ್ಟನಂತರ ಮನುಷ್ಯನು ಮಗುದೊಮ್ಮೆ ಜೀವಂತನಾಗಲಿರುವನೆಂಬುದನ್ನೂ, ಪಾಪಕ್ಕಾಗಿ ಶಿಕ್ಷೆಯನ್ನೂ, ಪುಣ್ಯಕ್ಕಾಗಿ ಪ್ರತಿಫಲವನ್ನೂ ಪಡೆಯಬೇಕಾಗುವುದೆಂಬ ಶಾಶ್ವತ ಸತ್ಯವನ್ನೂ ಅವರು ಬಲ್ಲವರಾಗಿದ್ದರು. ಒಟ್ಟಿನಲ್ಲಿ, ಮನುಷ್ಯನು ಭಗವಂತನಿಗೆ ಹೇಗೆ ವಿಧೇಯನಾಗಬಲ್ಲನೆಂಬುದನ್ನು ಅವರು ಅರಿತಿದ್ದರಷ್ಟೇ ಅಲ್ಲ, ಅದೇ ರೀತಿಯಲ್ಲಿ ನಡೆಯುತ್ತಿದ್ದರು. ಅಂತೆಯೇ ಅವರು ಮೊದಲು ಮುಸ್ಲಿಮರಾಗಿದ್ದರು, 'ಇಸ್ಲಾಂ' ಅವರ ಧರ್ಮವಾಗಿತ್ತು.

ಹಜರತ್ ಆದಮ್‌ರವರು ಇದೇ ಇಸ್ಲಾಮ್‌ಧರ್ಮವನ್ನು ತಮ್ಮ ಮಕ್ಕಳಿಗೆ ತಿಳಿಸಿಕೊಟ್ಟರಲ್ಲದೆ, ಈ ಧರ್ಮವನ್ನು ಸರಿಯಾಗಿ ಅನುಸರಿಸುವಂತೆ ನೋಡಿಕೊಂಡರು. ಇದೇ ಧರ್ಮ ಅವರ ವಂಶಪಾರಂಪರ್ಯವಾಗಿ ಬೆಳೆದುಕೊಂಡು ಬಂದಿತು. ಆದರೆ ಸಮಯ ಕಳೆದಹಾಗೆಲ್ಲಾ, ಶತಮಾನಗಳು ಗತಿಸಿಹೋದಂತೆಲ್ಲ ಧರ್ಮದ ಕಲ್ಪನೆ ಕ್ಷಯಿಸುತ್ತಾ ಬಂದಿತು ಮತ್ತು ಭಗವಂತನ ಈ ಧರ್ಮದ ಹಲವಾರು ವಿಷಯಗಳನ್ನು ಮರೆತುಬಿಡುವಂಥ ಪರಿಸ್ಥಿತಿ ಪ್ರಾಪ್ತವಾಯಿತು.

ಇಂಥ ಪರಿಸ್ಥಿತಿ ಬಂದಾಗಲೆಲ್ಲ, ಮರೆತುಹೋದ ಧರ್ಮವನ್ನು ಪುನಃ ನೆನಪಿಸಲು ಭಗವಂತನು ಮತ್ತೆಮತ್ತೆ ತನ್ನ ಪ್ರವಾದಿ ಹಾಗೂ ಸಂದೇಶವಾಹಕರನ್ನು ಕಳುಹಿಸುತ್ತಲೇ ಬಂದನು.[2] ಸಮಯ ಕಳೆದಹಾಗೆಲ್ಲ ಸಂದೇಶವಾಹಕರಾದ ಹಜರತ್ ಆದಮ್‌ರವರ ಸಂತಾನ ಬಹುವಾಗಿ ಬೆಳೆದು ಜಗತ್ತಿನ ಹಲವಾರು ಭಾಗಗಳಲ್ಲಿ ವಾಸವಾಗಿತ್ತಲ್ಲದೆ, ಭಿನ್ನಭಿನ್ನ ಮತಪಂಥಗಳಲ್ಲಿ ಹಂಚಿಹೋಗಿತ್ತು. ಹೀಗಾಗಿ ಧರ್ಮದ ಪುನರುತ್ಥಾನಕ್ಕಾಗಿ ಭಗವಂತನು ಹಲವಾರು ಪ್ರವಾದಿಗಳನ್ನು

---

[1] ಭಗವಂತ ಸೃಷ್ಟಿಸಿದ ಈ ಆದಿಪುರುಷ ಹಾಗೂ ಸ್ತ್ರೀಯನ್ನು ಇಸ್ಲಾಂಧರ್ಮ 'ಆದಮ್' ಮತ್ತು 'ಹವ್ವಾ' ಎಂದು ಕರೆಯುತ್ತದೆ. ಇವರನ್ನೇ ಕ್ರೈಸ್ತಧರ್ಮ 'ಆದಮ್' ಮತ್ತು 'ಈವ್' ಎಂದು ಹೆಸರಿಸುತ್ತದೆ. ಜೊರಾಸ್ಟ್ರರ ಧರ್ಮ 'ಮಾಶಾ' ಮತ್ತು 'ಮಾಶೋಯೀ' ಎಂದು ಕರೆಯುತ್ತದೆ. ಹಿಂದೂಧರ್ಮದಲ್ಲಿಯೂ ಸಹ ಈ ಆದಿಪುರುಷನನ್ನು 'ಮನು' (ಮನ್ವಂತರದ ಪ್ರವರ್ತಕ)ವೆಂದು ಪರಿಗಣಿಸಲಾಗಿದೆ. ಗ್ರೀಕ್ ಪುರಾಣಗಳಲ್ಲಿ 'ಮಾಯಿನೋಸ್' ಮತ್ತು ಈಜಿಪ್ಟ್ ಸಂಸ್ಕೃತಿಯಲ್ಲಿ 'ಮ್ಯೂನ್ಯಸಿಯಸ್' ಎಂದು ಬರುವ ವಿವರಣೆ ಈ ಆದಮ್‌ರವರ ವೃತ್ತಾಂತವನ್ನು ತಿಳಿಸುತ್ತದೆ.

[2] ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥ (ಭಗವದ್ಗೀತೆ–೪ನೇ ಅಧ್ಯಾಯ ೭ನೇ ಶ್ಲೋಕ)

ಅರಬಸ್ತಾನ, ಇರಾನ್ ದೇಶ, ಸಿರಿಯಾ, ಭಾರತ, ಚೀನ ಮೊದಲಾದ ಭೂಭಾಗಗಳಲ್ಲಿ ಕಳುಹಿಸಿಕೊಟ್ಟನು.[1] ಈ ಎಲ್ಲಾ ಪ್ರವಾದಿಗಳು ತಮ್ಮ ಕಾಲದ ಹಾಗೂ ತಾವು ಅವತೀರ್ಣಗೊಂಡ ಭೂಭಾಗದ ಜನತೆಗೆ ಭಗವದ್ಧರ್ಮವಾದ ಇಸ್ಲಾಮಿನ ಬೋಧನೆ ಕೊಟ್ಟರು. ನಮ್ಮನ್ನು ಸೃಷ್ಟಿಸಿದ ಹಾಗೂ ಈ ಸೃಷ್ಟಿಯ ಏಕೈಕ ಒಡೆಯನಾದ ಭಗವಂತನ ಪ್ರಾರ್ಥನೆಯ ಹಾಗೂ ಶರಣಿನ ಪಾಠ ಹೇಳುತ್ತಿದ್ದರು. ಮರಣಾನಂತರದ ಜೀವನದ ನೆನಪು ಕೊಡುತ್ತಾ ಭಗವಂತನ ಪ್ರೀತಿಗಾಗಿ ಬಾಳುವ ರೀತಿಯನ್ನು ಬೋಧಿಸುತ್ತಿದ್ದರು. ಈ ಎಲ್ಲಾ ಪ್ರವಾದಿ ಮತ್ತು ಸಂದೇಶವಾಹಕರನ್ನು ಅನುಸರಿಸುವವರು ಹಾಗೂ ಅವರು ತೋರಿಸಿದ ಸನ್ಮಾರ್ಗದಲ್ಲಿ ಜೀವನ ಸಾಗಿಸುವವರು ಮುಸಲ್ಮಾನರೇ ಆಗಿದ್ದರು. ಪ್ರವಾದಿಗಳಾದ ಹಜ್ರತ್ ನೋಹ್, ಇಬ್ರಾಹೀಂ, ಹೂದ, ಸಾಲಿಹ, ಇಸ್ಮಾಯಿಲ್, ಇಸ್ಹಾಕ್, ಯೂಸೂಫ್, ಮೂಸಾ ಮೊದಲಾದವರುಗಳನ್ನು ಭಗವಂತನ ಪ್ರಮುಖ ಪ್ರವಾದಿಗಳೆಂದು ಪರಿಗಣಿಸಲಾಗಿದೆ. ಇವರೆಲ್ಲರ ವಿಷಯ ಪವಿತ್ರ ಕುರಾನಿನಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಇವರಲ್ಲದೆ ಇನ್ನೂ ಅನೇಕ ಪ್ರವಾದಿಗಳು ಕಾಲಕಾಲಕ್ಕೆ ಹುಟ್ಟಿಬಂದಿದ್ದಾರೆ. ಇವರೆಲ್ಲರನ್ನೂ ಮುಸಲ್ಮಾನರು ತಮ್ಮ ಪ್ರವಾದಿಗಳೆಂದು ಪರಿಗಣಿಸುತ್ತಾರೆ ಹಾಗೂ ಗೌರವಿಸುತ್ತಾರೆ. ಇವರು ಬೋಧಿಸಿದ ಧರ್ಮವನ್ನು ಭಗವದ್ಧರ್ಮವೆಂದು ಮನ್ನಿಸಿ, ಇವರ ಅನುಯಾಯಿಗಳನ್ನು ಮುಸ್ಲಿಮರೆಂದು ಭಾವಿಸುತ್ತಾರೆ.

ಕೊನೆಗೆ ಭಗವಂತನು ತನ್ನ ಅಂತಿಮ ಪ್ರವಾದಿಗಳಾದ ಹಜ್ರತ್ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವಸಲ್ಲಂ) ರವರನ್ನು ಸುಮಾರು ೧೪೦೦ ವರ್ಷಗಳ ಹಿಂದೆ ಅರಬ್ ದೇಶದಲ್ಲಿ ಕಳುಹಿಸಿಕೊಟ್ಟನು. ಇವರ ಜನನದ ಕಾಲಕ್ಕೆ ಮನುಷ್ಯಕುಲ ಸಾಕಷ್ಟು ಬೆಳೆದು ಪ್ರಬುದ್ಧವಾಗಿತ್ತು. ಅಂತೆಯೇ ಇಡೀ ಮಾನವಕೋಟಿಗೆ ಮಾರ್ಗದರ್ಶನ ಮಾಡಿಕೊಡಲು ಸಮಯ ಪರಿಪಕ್ವವಾಗಿತ್ತು. ಭಗವಂತನು ತನ್ನ ಈ ಬಯಕೆಯನ್ನು ಪೂರೈಸಲು ಪ್ರವಾದಿ ಮುಹಮ್ಮದ್ (ಸ.ಅ.ಸ.) ಅವರನ್ನು ಕಳುಹಿಸಿಕೊಟ್ಟನು. ಭಗವಂತನ ಈ ಅಮೋಘ ಕಾಣಿಕೆಯು ಒಂದು ಪರಿಪೂರ್ಣ ಧರ್ಮವಾಗಿದ್ದು, ಪವಿತ್ರ ಕುರಾನ್‌ನ, [ಭಗವಂತನು ಪ್ರವಾದಿ ಮುಹಮ್ಮದ್] (ಸ.ಅ.ಸ.) ಅವರ ಮೇಲೆ ಅವತೀರ್ಣಗೊಳಿಸಿದ ದೈವೀಗ್ರಂಥ] ಹದೀಸಿನ, (ಪ್ರವಾದಿಗಳ ಉಪದೇಶಾಮೃತ) ಹಾಗೂ ಅವರ ಪವಿತ್ರ ಜೀವನದ ರೂಪದಲ್ಲಿ ಉಪಲಭ್ಯವಿದೆ. ಇದು ಅನಾದಿಕಾಲದಿಂದಿದ್ದ ಆದಮ್‌ರವರಿಂದ ಮುಹಮ್ಮದ್ (ಸ.ಅ.ಸ.) ಅವರ ತನಕ ಎಲ್ಲಾ ಪ್ರವಾದಿಗಳು ಬೋಧಿಸಿ, ಪಾಲಿಸಿದ ಇಸ್ಲಾಮ್‌ಧರ್ಮವೇ ಆಗಿತ್ತು.

ಮನುಷ್ಯನ ಸಂಪೂರ್ಣಜೀವನ ಆರಾಧನೆಯಾಗಬೇಕೆಂಬುದೇ ಈ ಎರಡೂ ಧರ್ಮಗಳ ಮೂಲಸಿದ್ಧಾಂತ. ತಾನು ಭಗವಂತನ ದಾಸ ಹಾಗೂ ಶರಣನೆಂಬುದನ್ನು ಅರಿತ ಮೇಲೆ ಭಗವಂತನಿಗೆ ಭಕ್ತಿ ಸಲ್ಲಿಸುವುದು ಇವನ ಕರ್ತವ್ಯವಾಗಿ ಹೋಗುತ್ತದೆ. ಇದಕ್ಕೆ ನೈತಿಕ ಕಟ್ಟುಪಾಡುಗಳು ಅಗತ್ಯ. ನೀತಿಯು ಸಮಾಜಜೀವಿಯಾದ ಮಾನವನಿಗೆ ಇತರ ಮಾನವರೊಡನೆ ಹೇಗೆ ಬಾಳಬೇಕೆಂಬುದನ್ನು ಸೂಚಿಸುವುದು. ತಾತ್ವಿಕಸಿದ್ಧಾಂತವು ಜೀವನವನ್ನು ವಿಚಾರಕ್ಕೊಳಪಡಿಸಿದರೆ, ನೈತಿಕವಿಚಾರವು ಆತನನ್ನು ಆಚಾರಕ್ಕೊಳಪಡಿಸುವುದು. ಮಾನವನು ನೀತಿಬಾಹಿರನಾದರೆ ಧರ್ಮಕ್ಕೆ ಅನರ್ಹನು, ಸಮಾಜಕ್ಕೆ ಅಹಿತನು. ಭಗವಂತನನ್ನೊಲಿಸಲು ನೀತಿಯೇ ನೆಲೆಗಟ್ಟು. ಆಚಾರವೆಂದರೆ ಸದ್ವೃತ್ತಿ, ಸುಸ್ವಭಾವ. ಇದನ್ನೇ ಇಸ್ಲಾಮ್‌ಧರ್ಮ 'ಅಮಲೆ-ಸಾಲಿಹ' ಎಂದು ಕರೆಯುತ್ತದೆ. ಧರ್ಮಕ್ಕೆ ಆಚಾರ ಮುಖ್ಯವಾದುದು. ನಡೆನುಡಿಗಳನ್ನು ಪರಿಶುದ್ಧಗೊಳಿಸುವುದೇ ಆಚಾರದ ಗುರಿ.

ಆಚಾರವನರಿಯದೆ ಭವವಳಿಯದೆ
ಕೋಪ ಮುರಿಯದೆ ತಾಪವುಡುಗದೆ
ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ
ನಾನು ಮರುಗುವೆ ಕಾಣ ಗುಹೇಶ್ವರ

---

Mankind were one community, and Allah sent (unto them) Prophets as bearers of good tidings and as warners, and revealed therewith the Scripture with the truth that it might Judge between mankind concerning that wherein, they differed. And only those unto whom (the scripture) was given differed concerning it, after clear proofs had come unto them, through hatred one of another. And Allah by his will guided those who believe unto the truth of that concerning which they differed. Allah guideth whom He will unto a straight path.

*Holy Quran*—Surah-II, Ayath 213

[1] Verily we sent before thee (Muhammad) Messengers to their own folk. They brought them clear proofs (of Allah's Sovereignty).

*Holy Quran*—Surah-30, Ayath 47

ಈ ರೀತಿ ಧರ್ಮಕ್ಕೆ ಆಚಾರವೇ ಮುಖ್ಯ. ಅದರಂತೇ ವೀರಶೈವಧರ್ಮಕ್ಕೆ ಪಂಚಾಚಾರಗಳು ವಿಧಿಸಲ್ಪಟ್ಟಿವೆ. ಇಸ್ಲಾಮ್‌ಧರ್ಮದಲ್ಲಿಯೂ ಪಂಚಾಚಾರಗಳಿವೆ : (೧) ಭಗವಂತನನ್ನು ಹೊರತುಪಡಿಸಿ ಮತ್ಯಾರೂ ಆರಾಧ್ಯರಲ್ಲವೆಂಬುದನ್ನು ಒಪ್ಪುವುದು ಹಾಗೂ ಪ್ರವಾದಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿವಸಲ್ಲಂ) ಅವರನ್ನು ಭಗವಂತನ ದಾಸರು ಮತ್ತು ಸಂದೇಶವಾಹಕರೆಂದು ಒಪ್ಪುವುದು. (೨) ಐದು ಹೊತ್ತಿನ ನಮಾಜು (ಪ್ರಾರ್ಥನೆ)ಯನ್ನು ಸ್ಥಿರಪಡಿಸುವುದು. (೩) 'ಜಕಾತ್'[1] ಕೊಡುವುದು. (೪) ಹಜ್ ಯಾತ್ರೆ ಮಾಡುವುದು. (೫) ರಂಜಾನ್ ತಿಂಗಳಲ್ಲಿ ಉಪವಾಸ ವ್ರತವನ್ನು ಆಚರಿಸುವುದು. ಇದಲ್ಲದೆ ಎರಡೂ ಧರ್ಮಗಳು ಸತ್ಯ, ಸದಾಚಾರ, ಪ್ರಾಮಾಣಿಕತೆ ಹಾಗೂ ನಂಬಿಕೆ, ಲಜ್ಜಾಭಾವ ಹಾಗೂ ಸೌಜನ್ಯ, ಕ್ಷಮೆ, ನಮ್ರತೆ, ಮಧುರ ನುಡಿ ಇತ್ಯಾದಿಗಳನ್ನು ತನ್ನ ಭಕ್ತರಲ್ಲಿ ನೋಡಬಯಸುತ್ತವೆ. ಮೋಕ್ಷ ಅಥವಾ ಆಖಿರತ್‌ನ[2] ದೃಢನಂಬಿಕೆ ಈ ಧರ್ಮಗಳ ಬುನಾದಿಯಾಗಿದೆ.

ಎರಡೂ ಧರ್ಮಗಳು ಮಾನವನ ಶಾಂತಿಯುತ ಸಹಬಾಳ್ವೆಗೆ ಪ್ರೇರೇಪಿಸುತ್ತವೆ: ಅವನನ್ನು ಉನ್ನತ ವಿಚಾರದಲ್ಲೂ, ಉತ್ತಮ ವಿಹಾರದಲ್ಲೂ ಲೀನನನ್ನಾಗಿ ಮಾಡಲು ಮಾರ್ಗದರ್ಶಿಯಾಗುತ್ತವೆ. ವಿಶ್ವಧರ್ಮಕ್ಕಿರಬೇಕಾದ ಎಲ್ಲಾ ಅರ್ಹತೆ ಹಾಗೂ ಲಕ್ಷಣಗಳು ವೀರಶೈವಧರ್ಮ ಹಾಗೂ ಇಸ್ಲಾಮ್ ಧರ್ಮಕ್ಕಿವೆ.

---

ಪಂಚೇಂದ್ರಿಯಸ್ಯ ದೇಹಸ್ಯ ಬುದ್ಧೇಶ್ಚ ಮನಸಸ್ತಥಾ ।
ದ್ರವ್ಯದೇಶಕ್ರಿಯಾಣಾಂಚ ಶುದ್ಧಿರಾಚಾರ ಇಷ್ಯತೇ ॥

ಭವಸಂತರಣೋಪನಿಷತ್

* * *

ನಾವಿರತೋ ದುಶ್ಚರಿತಾತ್ ನಾಶಾಂತೋ ನಾಸಮಾಹಿತಃ ।
ನಾಶಾಂತಮನಸೋವಾಪಿ ಪ್ರಜ್ಞಾನೇನೈನಮಾಪ್ನುಯಾತ್ ॥

ಕಠೋಪನಿಷತ್

---

[1] ಜಕಾತ್ ಎಂಬುದು ಇಸ್ಲಾಂಧರ್ಮಶಾಸ್ತ್ರವು ನಿಶ್ಚಯಗೊಳಿಸಿರುವ ಮೇರೆಗೆ ಸಂಪತ್ತು ಹಾಗೂ ಎಲ್ಲ ರೀತಿಯ ವ್ಯಾಪಾರ ಹಾಗೂ ಉದ್ಯೋಗದ ಗಳಿಕೆಯ ಮೇಲೆ ಪ್ರತಿವರ್ಷ ನೂರಕ್ಕೆ ಶೇಕಡ $2\frac{1}{2}$ಯಂತೆ ಕೊಡಬೇಕಾದ ಕಡ್ಡಾಯ ದಾನ. ಕೃಷಿ ಉತ್ಪಾದನೆಗಳ ಮೇಲೆ ನೂರಕ್ಕೆ ೫ರಿಂದ ೧೦ರ ವರೆಗೂ, ಖನಿಜೋತ್ಪತ್ತಿಗಳ ಮೇಲೆ ನೂರಕ್ಕೆ ೨೦ ಜಕಾತ್ ಕೊಡಬೇಕಾದುದು ಪ್ರತಿ ಮುಸ್ಲಿಮನ ಕರ್ತವ್ಯ.

[2] ಮನುಷ್ಯ ಲೌಕಿಕಜೀವನ ನಡೆಸಿ ಮರಣಹೊಂದಿದ ಮೇಲೆ ಭಗವಂತನ ಹತ್ತಿರ ಆಗುವ ಅವನ ಪಾಪಪುಣ್ಯದ ನಿರ್ಣಯ ಹಾಗೂ ಸ್ವರ್ಗ ನರಕಗಳ ಪ್ರಾಪ್ತಿಯನ್ನೇ ಇಸ್ಲಾಂಧರ್ಮ ಆಖಿರತ್ ಎಂದು ಪರಿಗಣಿಸುತ್ತದೆ.

# ಸೂಫಿ ಮತ್ತು ವೀರಶೈವ

ಡಾ. ಬಿ. ನಂ. ಚಂದ್ರಯ್ಯ

ವೈಯಕ್ತಿಕ ಸಾಧನೆಯಿಂದ ವ್ಯಕ್ತಿಯ ಶೀಲ-ಚಾರಿತ್ರ್ಯಗಳನ್ನು ಸಂಸ್ಕರಿಸಿ ಆತ್ಮಬಲವನ್ನು ಸಂಪಾದಿಸಿಕೊಂಡು ಪ್ರೇಮಮಾರ್ಗವನ್ನು ಹಿಡಿದು ಮನುಕುಲೋದ್ಧಾರದಲ್ಲಿ ತೊಡಗಿದ ಅನುಭಾವಿಕ ಪಂಥಗಳಲ್ಲಿ ಸೂಫಿಮತವೂ ಒಂದು. ವಿದೇಶ ಹಾಗೂ ವಿದೇಶೀಯ ವಾತಾವರಣದಲ್ಲಿ ಹುಟ್ಟಿ ಬೆಳೆದರೂ ತನ್ನ ವಿಲಕ್ಷಣ ಹಾಗೂ ವಿಶೇಷ ಗುಣಗಳಿಂದಾಗಿ ಇತರ ದೇಶಗಳ ಧಾರ್ಮಿಕಜೀವನದೊಂದಿಗೆ ಬೆರೆತು, ಆ ಧರ್ಮಗಳ ಅಂಗವಾದದ್ದು ಸೂಫಿಮತದ ವಿಶೇಷ. ತನ್ನ ಉದಾರಗುಣಗಳಿಗೆ ಪ್ರಸಿದ್ಧವಾಗಿರುವ ಭಾರತ ಅದನ್ನು ಸ್ವೀಕರಿಸುವುದರಲ್ಲಿ ಹಿಂದೆಗೆಯಲಿಲ್ಲ. ಸದಾ ಶಸ್ತ್ರಬಲದಿಂದಲೇ ವಿಜಯವನ್ನು ಸಾಧಿಸುತ್ತ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟ ಇಸ್ಲಾಂಧರ್ಮವಲ್ಲಿಯೇ, ಪ್ರೇಮಮಾರ್ಗದಿಂದ ಮಾನವ ಹೃದಯವನ್ನು ಗೆದ್ದು ತನ್ನ ಆತ್ಮಬಲದಿಂದ ಪೀಡಿತರ ಹೃದಯದಲ್ಲಿ ಪ್ರೇಮ-ಶಾಂತಿಯನ್ನು ಸ್ಥಾಪಿಸಿ, ಅವರ ಮನಸ್ಸನ್ನು ಸಮಾಧಾನಪಡಿಸಿ. ಮುಕ್ತಿಮಾರ್ಗವನ್ನು ತೋರಿದ, ಅದೇ ಇಸ್ಲಾಂಧರ್ಮದಿಂದ ಸಿಡಿದು ಮತ್ತೊಂದು ಮಾರ್ಗ ಅಥವಾ ಪಂಥ ಮುಂದುವರಿದಿದ್ದು ಆಶ್ಚರ್ಯ. ತನ್ನ ಪ್ರೇಮ ಸಂದೇಶವನ್ನು ಮಾನವರ ಹೃದಯಕ್ಕೆ ಮುಟ್ಟಿಸಿ ಸಫಲವಾಯಿತು ಸೂಫಿ ಮತ.

'ಆತ್ಮವತ್ ಸರ್ವಭೂತೇಷು', 'ವಸುಧೈವ ಕುಟುಂಬಕಮ್' ಎಂಬ ವಿಶ್ವವಿಶಾಲವಾದ ಉದಾರ ನೀತಿ, ಧರ್ಮಗಳನ್ನು ಪಾಲಿಸುತ್ತ ಬಂದ ಭಾರತೀಯರಿಗೆ ಈ ಧರ್ಮವನ್ನು ಸ್ವೀಕರಿಸುವಲ್ಲಿ ಯಾವ ತೊಂದರೆಯೂ ಕಾಣಲಿಲ್ಲ, ತಡವಾಗಲಿಲ್ಲ. ಆದುದರಿಂದ ಈ ಮತವನ್ನು ಸ್ವೀಕರಿಸಿ ಪಾಲಿಸುವುದಷ್ಟೇ ಅಲ್ಲ, ಪೈಗಂಬರನನ್ನು ಪೂಜಿಸುವ ಮಟ್ಟಕ್ಕೂ ಇವರು ಹೋದರು. ಕೇವಲ ಅಸ್ತ್ರಬಲದಿಂದ ಮನುಷ್ಯನನ್ನು ಗೆಲ್ಲುವ ಗೆಲವು ಗೆಲವಲ್ಲ, ಆತ್ಮಬಲ, ಆಧ್ಯಾತ್ಮಬಲದಿಂದ ಸಾಧಿಸುವ ಜಯ ಶಾಶ್ವತಜಯವೆಂದು ಬಗೆದ ಜನರು ತಮ್ಮ ದೇಶದಿಂದಾಚೆಗೆ ದಕ್ಷಿಣ-ಪೂರ್ವ ರಾಷ್ಟ್ರಗಳು, ಮಧ್ಯ ಏಷ್ಯಾ, ಪೂರ್ವ ಇರಾನ್ ಮುಂತಾದ ದೇಶಗಳಲ್ಲಿ ತಮ್ಮ ಸಂಸ್ಕೃತಿಸಂಬಂಧವನ್ನು ಸ್ಥಾಪಿಸಿಕೊಂಡರು, ಅಲ್ಲಿನ ಜನಜೀವನವನ್ನು ಸ್ವೀಕರಿಸಿದರು.

ಆತ್ಮಪರಮಾತ್ಮರ ಮಧ್ಯೆ ಸಾಕಷ್ಟು ಗೊಂದಲವುಂಟಾಗಿದ್ದು, ಕರ್ಮಕಾಂಡ ಹಾಗೂ ಚಮತ್ಕಾರಗಳ ಪ್ರದರ್ಶನ ಅಧಿಕವಾಗಿದ್ದಾಗ ಏನು ಮಾಡಬೇಕೆಂದು ತೋಚದೆ ಕಂಗೆಟ್ಟು ಜನ ಸ್ತಬ್ಧವಾಗಿದ್ದ ಕಾಲದಲ್ಲಿ ಸೂಫಿ ಮತದ ಉದಯವಾಯಿತು. ಇಂಥ ಸಂದರ್ಭದಲ್ಲಿ ಭಾರತವು ಜನಮನದಲ್ಲಿ ಪ್ರೇಮಸಂದೇಶವನ್ನು ಬಿತ್ತಿ ದೇವರ ಬಗ್ಗೆ ಆಸ್ಥೆ, ಶ್ರದ್ಧೆ, ಭಕ್ತಿ ಮೂಡುವಂತೆ ಪ್ರಚೋದಿಸಿತು. ಸಂಪರ್ಕಸಾಧನಗಳ ತೊಂದರೆಯಿದ್ದರೂ ಜನರು ತಮ್ಮ ಸುತ್ತಮುತ್ತಲ ಜನರಲ್ಲಿ, ದೂರ ದೇಶದ ಜನಮನದಲ್ಲಿ ಪ್ರೇಮಸಂದೇಶವನ್ನು ಬಿತ್ತುವ ಪ್ರಯತ್ನ ಮಾಡಿದರು. ಇದರಿಂದಾಗಿ ಅನ್ಯರಿಗೆ ಬೋಧಿಸುವ ಸಂದರ್ಭದಲ್ಲಿ ಅನ್ಯರಿಂದ ಕೇಳುವ ತಾಳ್ಮೆಯನ್ನೂ ಪಡೆದುಕೊಂಡರು. ಚೀನಾ, ದಕ್ಷಿಣ-ಪೂರ್ವರಾಷ್ಟ್ರಗಳೊಂದಿಗೆ ಸಂಪರ್ಕ ಬೆಳೆಸಿದರು. ಇದರಿಂದಾಗಿ ಭಾರತವು ಸಂಸ್ಕೃತಿಯ ಕೇಂದ್ರವಾಯಿತು. ಅದೇ ಸಂದರ್ಭದಲ್ಲಿ ಮುಸ್ಲಿಮ್ ದಾರ್ಶನಿಕರು, ಕವಿಗಳು, ಧರ್ಮೋಪದೇಶಕರು ಅತ್ಯಂತ ಪ್ರಬಲರಾಗಿ ಪೂರ್ವ ಇರಾನಿನಲ್ಲಿ ಪ್ರಭಾವ ಬೀರಿ ತಮ್ಮ ವರ್ಚಸ್ಸನ್ನು ಸ್ಥಾಪಿಸಿಕೊಂಡಿದ್ದರು. ಭಾರತೀಯರ ಮೇಲೂ ಅವರ ಪ್ರಭಾವವುಂಟಾಯಿತು. ಆಗ ಶಿಕ್ಷಿತ ಸಮುದಾಯ ಪಾರ್ಸಿ ಭಾಷೆಯನ್ನು ಕಲಿತು ಅಲ್ಲಿನ ಧರ್ಮವನ್ನು ಅರಿತುಕೊಂಡಿತು.

ಸಾಮಾನ್ಯವಾಗಿ ಇಸ್ಲಾಂಧರ್ಮೀಯರು ತಮ್ಮ ಧರ್ಮಾನುಯಾಯಿಗಳನ್ನು ಅತ್ಯಂತ ಪ್ರಬಲವಾಗಿ ಪ್ರೀತಿಸುತ್ತಾರೆ; ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ, ಹತ್ತಿರದ ಅನ್ಯಧರ್ಮೀಯನಿಗಿಂತ ದೂರದ ತನ್ನ ಧರ್ಮೀಯ

ನನ್ನು ಹೆಚ್ಚು ಪ್ರೀತಿಸುತ್ತಾರೆ, ನಂಬುತ್ತಾರೆ. ಇದು ಸಂಸ್ಕಾರದಿಂದ ಬಂದದ್ದು. ಆದರೆ ಅವರ ಈ ಪ್ರವೃತ್ತಿ. ಅವರು ಅನ್ಯಧರ್ಮೀಯರೊಂದಿಗೆ ಸಂಬಂಧ ಬೆಳೆಸುವುದರಲ್ಲಿ ಅಡ್ಡಿಯೇನಾಗಲಿಲ್ಲ.

ಹಜರತ್ ಮುಹಮ್ಮದನ ಉಪದೇಶದಲ್ಲಿ ಎರಡು ಪಕ್ಷಗಳಿದ್ದುವೆಂದು ಹೇಳುತ್ತಾರೆ: (೧) ಕುರಾನನ್ನು ಅನುಸರಿಸುತ್ತಿದ್ದ ಪಕ್ಷ, (೨) ಅವರ ಹೃದಯ ಪಕ್ಷ. ಕುರಾನಿನದು 'ಇಲ್ಮೇ ಸಫೀನ್' ಅಂದರೆ ಬುದ್ಧಿಪಕ್ಷ ; ಎರಡನೆಯದು 'ಇಲ್ಮೇ ಸೀನ' ಅಂದರೆ ಹೃದಯ ಪಕ್ಷ. ಕುರಾನಿನ ಶಿಕ್ಷಾ-ದೀಕ್ಷಾಕಾರ್ಯಗಳು ಉಲೇಮಾನರ ಮೂಲಕ ನಡೆದರೆ, ಎರಡನೆಯದು ವಿರಕ್ತಸೂಫಿಗಳ ರಹಸ್ಯವಾದೀ ಉಪದೇಶಗಳಿಂದ ನಡೆಯುತ್ತಿತ್ತು. ಸೂಫಿ ಮತ ತನ್ನ ಆರಂಭದ ಕಾಲದಲ್ಲಿ ಸಾಂಸಾರಿಕ ಸುಖಭೋಗಗಳಿಂದ ವಿರಕ್ತಿ ಮತ್ತು ಅಲ್ಲಾ ಹಾಗೂ ಅವನ ತೀರ್ಮಾನಗಳಿಂದ ಭಯಭೀತರಾಗಿರುವುದಕ್ಕೆ ಪ್ರಸಿದ್ಧವಾಗಿತ್ತು. ಅಂದಿನಿಂದಲೇ ಈ ಮತ ಸತ್ಯ ಹಾಗೂ ಮೋಕ್ಷದ ಮಾರ್ಗವನ್ನು ತೋರಿಸತೊಡಗಿತ್ತು. ಹಜರತ್ ಮುಹಮ್ಮದರ ದೇಹಾಂತವಾದ ಮೂರು ಶತಮಾನಗಳ ನಂತರ ಸರ್ವಾತ್ಮವಾದ ಮತ್ತು ಆದರ್ಶವಾದ ಸೂಫೀಧರ್ಮದ ಆದರ್ಶಗಳಾದುವು. ಜಾಮಿಯ ಪ್ರಕಾರ ಶೇಖ್‌ಅಬೂಹಾಶಿಂಕೋಫಿ (ಮೃತ್ಯು ಕ್ರಿ.ಶ. ೭೬೭) ಪ್ರಥಮ ಸೂಫಿ ಎಂದು ಪ್ರಸಿದ್ಧನಾಗಿದ್ದಾನೆ.

**ಸೂಫಿಮತ :** ದೇವರಿಗಾಗಿ ಕೆಲಸ ಮಾಡುವುದು, ದೇವರ ಹೆಸರಿನಲ್ಲಿ ಸರ್ವಸ್ವವನ್ನೂ ತ್ಯಾಗಮಾಡುವುದು. ಸಾಂಸಾರಿಕ ವೈಭವ-ವಿಲಾಸ ಹಾಗೂ ಕೆಟ್ಟ ಕೆಲಸಗಳಿಂದ ವಿಮುಖರಾಗಿರುವುದು, ಸುಖಕ್ಕೆ ತಿಲಾಂಜಲಿ ಬಿಡುವುದು, ಮನುಷ್ಯನ ಆಕಾಂಕ್ಷೆಗಳ ಸಾಮಾನ್ಯ ಸಾಧನವಾದ ಹಣ ಹಾಗೂ ಅಧಿಕಾರದಿಂದ ದೂರವಿರುವುದು, ಸಾಮಾಜಿಕ ಜೀವನವನ್ನು ಬಿಟ್ಟು ದೇವಪೂಜೆಯಲ್ಲಿ ನಿರತನಾಗಿರುವುದು ಮುಂತಾದವು ಸೂಫಿಮತದ ಪ್ರಮುಖವಾದ ಮೂಲಸಿದ್ಧಾಂತಗಳು. ಇವು ಪ್ರಾಚೀನಕಾಲದಲ್ಲಿ ಪ್ರಚಾರದಲ್ಲಿದ್ದುವು. ಆ ಕಾಲಕ್ಕೆ ಈ ಮತ ಕೇವಲ ವಿರಕ್ತ-ಸನ್ಯಾಸಿಗಳ ಒಂದು ಸಮುದಾಯಮಾತ್ರವಾಗಿತ್ತು.

ವಿರಕ್ತಿಯ ಹಿನ್ನೆಲೆ ಏನೇ ಇರಲಿ, ಒಂದು ಕಾರಣವಂತೂ ಸ್ಪಷ್ಟ—ಮೊದಲ ನಾಲ್ಕು ಜನ ಖಲೀಫರ ಆಡಳಿತ ಕಾಲದ ಸ್ಥಿತಿ ಅತ್ಯಂತ ದಾರುಣವಾಗಿತ್ತು, ಭೀತಿಯನ್ನು ಹುಟ್ಟಿಸುತ್ತಿತ್ತು. ಉಮಯ್ಯಾರ್‌ಗಳು ಈ ಖಲೀಫರ ಆತಂಕಕಾರಿ ಆಡಳಿತದಿಂದ ಬೇಸತ್ತು, ಅನೇಕ ಸಾತ್ವಿಕಪ್ರಕೃತಿಯ ಮುಸಲ್ಮಾನರು ಆತ್ಮಶಾಂತಿಗಾಗಿ ಸಾಂಸಾರಿಕ ಜಂಜಾಟದಿಂದ ದೂರಾಗಿ ಏಕಾಂತಜೀವನವನ್ನು ಕಳೆಯಲು ಇಷ್ಟಪಟ್ಟರು.

ಇಂಥ ಸನ್ಯಾಸಿಗಳಲ್ಲಿ ಬಸ್ರಾದ ಹಸನ್ (ಕ್ರಿ.ಶ. ೭೨೮)ನ ಹೆಸರು ವಿಶೇಷ ಉಲ್ಲೇಖನೀಯವಾದುದು. ಹಿಜರಿಶಕೆಯ ಮೊದಲ ಶತಾಬ್ದಿಯ ಕೊನೆಯ ಹೊತ್ತಿಗೆ ಈ ಏಕಾಂತವಾಸಿಗಳಿಂದಲೇ ಒಂದು ಗುಂಪು ಬೇರೆಯಾಗಿ ಏಕಾಂತಧ್ಯಾನ ಹಾಗೂ ಈ ಏಕಾಂತಧ್ಯಾನದ ಮೂಲಕ ದೈವೀಪ್ರೇರಣೆ (ಇಲ್‌ಹಾಮ್) ಹಾಗೂ ಭಾವೋನ್ಮಾದ (ಹಾಲ್) ಸ್ಥಿತಿಯವರೆಗೆ ಮುಂದುವರಿದರು. ಇಂಥ ಅವಸ್ಥೆಯಲ್ಲಿ ಈ ಸನ್ಯಾಸಿಗಳಿಂದುಂಟಾದ ವೈಭವತ್ಯಾಗ ಹಾಗೂ ದಾರಿದ್ರ್ಯಗ್ರಹಣವನ್ನು ಫಲಪ್ರದವೆಂದು ಭಾವಿಸದೆ, ಈಶ್ವರಭಕ್ತಿಯ ಬಗ್ಗೆ ಆತ್ಮನಿರಪೇಕ್ಷಭಕ್ತಿಯ ಅಭಿವ್ಯಕ್ತಿಯೆಂದು ಭಾವಿಸಲಾಗಿತ್ತು. ಹೀಗೆ ಆರಂಭಕಾಲದ ಸನ್ಯಾಸಿಗಳ ತ್ಯಾಗ ಫಲದ ಭೌತಿಕಾರ್ಥದಲ್ಲಿ ಪರಿವರ್ತನೆಯುಂಟಾಯಿತು.

ಅನಂತರಕಾಲದ ಸೂಫಿ ಸನ್ಯಾಸಿಗಳಿಗೆ ದಾರಿದ್ರ್ಯದ ಆದರ್ಶವು ಧನಾಭಾವವಾಗದೆ ಅದರ ಮೂಲಬಯಕೆಯನ್ನೇ ಇಲ್ಲದಾಗಿಸುವುದು ಆದರ್ಶವಾಯಿತು. ಈ ಸ್ಥಿತಿಯನ್ನು ಕ್ರೈಸ್ತ ಹಾಗೂ ಭಾರತೀಯ ಸಂತರ ಸ್ಥಿತಿಯೊಂದಿಗೆ ಹೋಲಿಸಬಹುದು. 'ಖಾಲಿ ಹಾಥ್ ಖಾಲಿ ಗಾತ್' (ಬರಿಗೈ ಬರಿಮೈ) ಎಂಬ ನಾಣ್ಣುಡಿ ಪ್ರಸಿದ್ಧವಾಯಿತು. ಇಂಥ ಸನ್ಯಾಸಿ ಸೂಫಿಗಳಲ್ಲಿ ಇಬ್ರಾಹಿಂ ಅದಮ್ (ಮರಣ ಕ್ರಿ.ಶ. ೭೮೩) ಪ್ರಮುಖರಾಗಿದ್ದರು. ಕ್ರಮೇಣ ಸೂಫಿ ಮತ ರಹಸ್ಯವಾದದ ಕಡೆಗೆ ವಾಲಿತು. ಇದಕ್ಕೆ ಮೊದಲು ಅದು ಕುರಾನಿನ ಮಂತ್ರ(೮, ೧೭)ಗಳು ಹಾಗೂ ಪರಂಪರೆಯನ್ನು ಅವಲಂಬಿಸಿತ್ತು. ಹಿಜರಿಶಕೆಯ ಎರಡನೆಯ ಶತಮಾನದಿಂದ ಇವರು ಸೂಫಿಗಳೆಂದು ಪ್ರಸಿದ್ಧರಾದರು.

ಸೂಫಿಮತ ಈಶ್ವರಜ್ಯೋತಿಯ ಪ್ರಾಪ್ತಿಗಾಗಿ ಪ್ರೇಮಭಾವದಿಂದ ಹೊರಟಿತು. ಈ ಪ್ರೇಮಭಾವದಿಂದಾಗಿ ಪೂರ್ವ-ಪಶ್ಚಿಮ ಭೇದ ಅಳಿದುಹೋಯಿತು. ೮–೧೫ನೇ ಶತಮಾನಗಳ ಅವಧಿಯಲ್ಲಿ ಇಡೀ ಪ್ರಪಂಚದಲ್ಲಿಯೇ ರಹಸ್ಯವಾದೀ ಪ್ರವೃತ್ತಿಯು ವಿಕಾಸವಾಯಿತು. ಭಾರತದ ಕಬೀರ ಮುಂತಾದವರಲ್ಲಿ, ಇರಾನಿನ ಜಲಾಲುದ್ದೀನ್ ರೂಮಿ, ಯೂರೋಪಿನ ಕ್ರೈಸ್ತಸಂತರು ಇವರೆಲ್ಲರ ಹೃದಯದಲ್ಲೂ ಒಂದೇ ಭಾವಧಾರೆ ಪ್ರವಹಿಸುತ್ತಿತ್ತು.

**ಪರಿಸ್ಥಿತಿ :** ಮುಹಮ್ಮದ್ ಪೈಗಂಬರರ ಮೃತ್ಯುವಿಗೆ ನೂರು ವರ್ಷ ಮೊದಲು ಇಸ್ಲಾಂನಲ್ಲಿ ಸನ್ಯಾಸ ಮತ್ತು ತಪೋನಿಷ್ಠ ಜೀವನ, ವಾಡಿಕೆಯಲ್ಲಿರಲಿಲ್ಲ. ಆದರೆ ಕುರಾನಿನಲ್ಲಿ ಪಾಪ ಹಾಗೂ ತೀರ್ಮಾನದ ದಿನದ ಭಯ ಮತ್ತು

ಆತಂಕದ ಪ್ರಸಂಗದ ಬಗ್ಗೆ ಹೇಳಿರುವ ಮಾತು ಪ್ರಾಯಃ ಮೇಲೆ ಹೇಳಿರುವ ಭಾವನೆಯ ಉದ್ರೇಕಕ್ಕೆ ಮೊದಲ ಕಾರಣ. ಯಹೂದಿ ಹಾಗೂ ಕ್ರೈಸ್ತಧರ್ಮ ಗುರುಗಳಲ್ಲಿ ಪ್ರಚಾರದಲ್ಲಿದ್ದ 'ನಫ್ಸ್‌ಕುಶಿ'ಯ ಬಗ್ಗೆ ಮುಹಮ್ಮದ್ ತನ್ನ ಅನುಯಾಯಿಗಳನ್ನು ಎಚ್ಚರಿಸಿದ್ದ. ಪ್ರಾಚೀನಕಾಲದ ಮುಸಲ್ಮಾನರು ಸೂಫಿಗಳನ್ನು 'ಅಲ್‌ಸಅಬಾ' ಹಾಗೂ 'ಅಲ್‌ತಬಿಉನ್' ಎಂದು ಭಾವಿಸಿದ್ದರು. ಅನಂತರ ಅವರನ್ನು ಸತ್ಯ ಹಾಗೂ ಮೋಕ್ಷದ ಸಾಧಕರೆಂದು ಭಾವಿಸಲಾಯಿತು.

ಸೂಫಿಮತವು ಉದ್ಭವವಾದ ಕಾಲದಲ್ಲಿ ಮಧ್ಯಏಷ್ಯಾದಲ್ಲಿ ಬೌದ್ಧಧರ್ಮದ ದಂತಕಥೆಗಳು ಹಾಗೂ ರೂಢಿ-ಸಂಪ್ರದಾಯಗಳು ಪ್ರಚಾರದಲ್ಲಿದ್ದವು. ಇಂಥ ಪರಿಸ್ಥಿತಿಯಲ್ಲಿ ಸೂಫಿಮತದ ಮೇಲೆ ಇವುಗಳ ಪ್ರಭಾವವುಂಟಾಗುವುದು ಅನಿವಾರ್ಯವಾಗಿತ್ತು. ಕೆಲವರು ಭಾರತೀಯ ವೇದಾಂತದಲ್ಲಿ ಇದರ ಮೂಲವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ಏಕೆಂದರೆ ಇದರ ಕೆಲವು ವಿಷಯಗಳು ಭಾರತೀಯ ಚಿಂತನಧಾರೆಯೊಂದಿಗೆ ಸಂಬಂಧ ಪಡೆದಿರುವಂತೆ ಕಾಣುತ್ತದೆ. ಆದುದರಿಂದ ಇದರ ಪ್ರಕಾರ ಒಂದಲ್ಲ ಒಂದು ಏಕಸೂತ್ರ ಇರಲೇಬೇಕು. ಇದನ್ನು ಸಮರ್ಥಿಸಲು ೭ನೇ ಶತಮಾನದಲ್ಲಿ ನೌಶೇರ್‌ವಾನನ ಕಾಲದಲ್ಲಿ ನಡೆದ ತರ್ಕವೊಂದನ್ನು ಮುಂದೊಡ್ಡುತ್ತಾರೆ. ಆದರೆ ಸದ್ಯಕ್ಕೆ ತಿಳಿದಿರುವಮಟ್ಟಿಗೆ ಇರಾನಿನ ಧಾರ್ಮಿಕ ಹಾಗೂ ಸಾಮಾಜಿಕಜೀವನದ ಮೇಲೆ ಭಾರತದ ಯಾವ ವಿಶೇಷ ಪ್ರಭಾವವೂ ಉಂಟಾಗಿಲ್ಲ. ಇರಾನಿನ ತನಕ ಭಾರತದ ಸಂಸ್ಕೃತಿಯು ವಿಸ್ತರಿಸಿತ್ತೇ ವಿನಾ ಅದರ ಪ್ರಭಾವ ಉಂಟಾಗಿರಲಿಲ್ಲ. ಅಲ್‌ಬೆರೂನಿಗಿಂತ ಮುಂಚೆ ಇರಾನಿನವರಿಗೆ ಭಾರತದ ಬಗ್ಗೆ ಹೆಚ್ಚು ತಿಳಿದೇ ಇರಲಿಲ್ಲ. ಇಷ್ಟು ಹೊತ್ತಿಗೆ ಸೂಫಿಮತ ತನ್ನ ಆರಂಭದ ಅವಸ್ಥೆಯನ್ನು ದಾಟಿಬಿಟ್ಟಿತ್ತು. ಆದುದರಿಂದ ಇದು ಭಾರತೀಯ ವೇದಾಂತದಿಂದ ಪ್ರಭಾವಿತವಾಗಿತ್ತು ಎಂಬ ವಾದ ಆಧಾರರಹಿತವೆನಿಸುತ್ತದೆ. ಒಂದು ವೇಳೆ ಇದರ ಪ್ರಭಾವವಾಗಿದ್ದಿದ್ದರೆ, ಅದು ಭಾರತೀಯ ಸೂಫಿಮತದ ಮೇಲೆ ಎಂದು ಹೇಳಬಹುದು. ಇದರ ಬದಲು ಸೂಫಿಮತವೇ ಮಧ್ಯಕಾಲೀನ ಭಕ್ತಿ ಆಂದೋಳನಕ್ಕೆ ಹೆಚ್ಚು ಪ್ರೇರಣೆಯನ್ನು ನೀಡಿತು ಎಂದು ಹೇಳಬಹುದು.

ಸೂಫಿಮತವು ಸಾಸಾನಿಯರ ಕಾಲದಿಂದಿತ್ತು ಎಂದು ಕೆಲವರು ಹೇಳುತ್ತಾರೆ. ಆದರೆ ಈ ಅಭಿಪ್ರಾಯಕ್ಕೆ ಬಲವಾದ ಯಾವ ಆಧಾರಗಳೂ ಕಂಡುಬರುವುದಿಲ್ಲ. ಮುಹೀ ಉದ್ದೀನ್-ಇಬ್ನ್-ಅರಬೀ ಮತ್ತು ಇಬ್ನ್-ಉಲ್-ಫರೀದ್‌ರಂಥ ಕೆಲವರು ಅರಬ್ಬೀ ಸೂಫಿಗಳು ಇರಾನಿನ ಇರಾಕಿ ಮತ್ತು ಜಾಮಿಯಂಥ ಸೂಫಿಗಳನ್ನು ಹೆಚ್ಚು ಪ್ರಭಾವಿತರನ್ನಾಗಿ ಮಾಡಿದ್ದಾರೆ. ಬ್ರೌನ್‌ನಂತೆಯೇ ನಿಕಲ್‌ಸನ್ ಕೂಡ ಮನುಷ್ಯನ ಬುದ್ಧಿಯ ಸಹಜವಾದ ಇಚ್ಛೆಯ ಅಭಿವ್ಯಕ್ತಿಯೇ ಇದಕ್ಕೆ ಕಾರಣ ಎಂದು ಒಪ್ಪಿದ್ದಾನೆ. ಇದೇ ಎಲ್ಲ ದೇಶಗಳಲ್ಲಿಯೂ ವ್ಯಾಪ್ತವಾಗಿದೆ.

ಮುಸ್ಲಿಮ್ ವಿಚಾರವಾದಿಗಳು ೯ನೇ ಶತಮಾನದಿಂದಲೇ ಹೊಸ ಪ್ಲೇಟೋ ವಿಚಾರಧಾರೆಯನ್ನು ಅರಿತಿದ್ದರು ಮತ್ತು ಅರಿಸ್ಟಾಟಲನ ಕೃತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅಧ್ಯಯನ ಮಾಡುತ್ತಿದ್ದರು. ಆದುದರಿಂದ ಆರಂಭದಲ್ಲಿ ಆತ್ಮ-ಪರಮಾತ್ಮರ ಮಿಲನದ ಮನುಷ್ಯನ ಇಚ್ಛೆಯೇ ಸೂಫಿಮತದ ಅಸ್ತಿತ್ವಕ್ಕೆ ಪ್ರೇರಣೆಯನ್ನು ನೀಡಿರಬಹುದು. ಆದರೆ ಮುಂದೆ ಇವರದೇ ಆದ ಒಂದು ಸ್ವತಂತ್ರ ಪದ್ಧತಿಯುಂಟಾಗಿರಬಹುದು. ಇದರ ಮೂಲದಲ್ಲಿ ಪ್ಲೇಟೋ ಹಾಗೂ ಇತರರ ವಿಚಾರಧಾರೆಗಳ ಕೊಡುಗೆಯೂ ಇರಬಹುದು. ಅರಬ್ಬರು ಸಿರಿಯಾದೇಶದ ಮೇಲೆ ಆಕ್ರಮಣ ಮಾಡಿದ್ದ ಕಾಲದಲ್ಲಿ ಸಿರಿಯಾ ಜನರ ಮೂಲಕ ಪ್ಲಾಟಿನಸ್‌ನ ವಿಚಾರಗಳ ಅಧ್ಯಯನವನ್ನೂ ಮಾಡಲಾಗುತ್ತಿತ್ತು.

೮ನೇ ಶತಕದ ಅಂತ್ಯದಲ್ಲಿ, ಪರಿವರ್ತನಕಾಲದಲ್ಲಿ ಸೂಫಿಮತದಲ್ಲಿ ಹೊಸ ಲಕ್ಷಣಗಳು ಕಾಣಿಸತೊಡಗಿದವು. ಬರುಬರುತ್ತ ಸನ್ಯಾಸ ಹಾಗೂ ಏಕಾಂತಮೌನಾಲಂಬನದ ಸ್ಥಾನವನ್ನು ಬ್ರಹ್ಮವಾದಿ ಮತ್ತು ನಾಸ್ತಿಕ ವಿಚಾರಧಾರೆಗಳು ಆಕ್ರಮಿಸಲಾರಂಭಿಸಿದವು. ನಿಕಲ್‌ಸನ್ ಪ್ರಕಾರ ಹಾರೂಂ ರಶೀದನ ಸಮಕಾಲೀನನಾದ ಮಾರೂಫ಼ುಲ್ ಕರ್ಖೀ ಇಂಥ ಸೂಫಿಗಳಲ್ಲಿ ಒಬ್ಬನಾಗಿ ಪರಿಗಣಿತನಾಗುತ್ತಾನೆ. ಗ್ರೀಸ್‌ನ ವಿಚಾರವಾದಿಗಳ ಕೃತಿಗಳ ಅನುವಾದ, ಅನುಶೀಲನ ಹಾಗೂ ಅಧ್ಯಯನ ಮಾಡುತ್ತಿದ್ದ ಈ ದಿನಗಳಲ್ಲಿ ಇಸ್ಲಾಮಿನ ಮೇಲೆ ಹೆಲೆನಿಕ್ ಸಂಸ್ಕೃತಿಯ ಪ್ರಭಾವವಿತ್ತು. ಅದರ ಫಲವಾಗಿ ಇಸ್ಲಾಂ ಮೂಲಕ ಸೂಫಿಮತದ ಮೇಲೆ ಹೊರಗಿನ ವಿಷಯಗಳ ಪ್ರಭಾವವೂ ಉಂಟಾಗುತ್ತಿತ್ತು. ಇದರೊಳಕ್ಕೆ ತೌಬಾ, ಭಾವೋನ್ಮಾದ ಹಾಗೂ ನಾಸ್ತಿಕ ಮತಗಳ ವಿಚಾರಗಳನ್ನು ಪ್ರವೇಶಮಾಡಿಸುವ ಶ್ರೇಯಸ್ಸು ಧುನನೂನ್ ಮಿಸ್ರಿಗೆ ಸಲ್ಲಬೇಕು. ಬಾಯಜೀದಿಯ ಅನುಯಾಯೀ ಸೂಫಿಗಳಲ್ಲಿ ಪೃಥಕ್ಕರಣದ ಪ್ರವೃತ್ತಿ ಜಾಗೃತವಾಯಿತು ಮತ್ತು ಅವರು ಸರ್ವಾತ್ಮವಾದ ಸಿದ್ಧಾಂತದ ಪೋಷಕರಾದರು. ಬಾಯಜೀದನ ಗುರು, ಸಿಂಧ್‌ನ ಅಬೂ

ಅಲಿ. ಸನಾತನಿ ಸೂಫಿಗಳು ಇವರನ್ನು ಕಾಫಿರರೆಂದು ಕರೆಯುತ್ತಿದ್ದರು. ಇವರು ತಮ್ಮನ್ನು ಖುದಾನಿಂದ ಅಭಿನ್ನರೆಂದು ಭಾವಿಸಿಕೊಂಡಿದ್ದರು ಮತ್ತು ತಮ್ಮನ್ನು ಪೂಜಿಸಬೇಕೆಂಬ ಸಲಹೆಯನ್ನು ಕೊಡುತ್ತಿದ್ದರು. ಈ ಸಂಪ್ರದಾಯದಲ್ಲಿ ಎಲ್ಲರಿಗಿಂತ ಪ್ರಸಿದ್ಧನಾದವನು ಹುಸೇನ್ ಮಂಸೂರ್. ಇವರನ್ನು ಹಲ್ಲಾಜ್ ಎಂದು ಕರೆಯುವ ಪರಂಪರೆಯಿದೆ. ಹುಸೇನ್ ಇರಾನಿನವನು. ಮಂಸೂರ್ ಅವನ ತಂದೆಯ ಹೆಸರು. ಹಲ್ಲಾಜ್‌ನನ್ನು ಕೆಲವರು ಪ್ರಚ್ಛನ್ನಕ್ರೈಸ್ತನೆಂದು ಕರೆಯುತ್ತಾರೆ. ಏಕೆಂದರೆ ಅವನು ಕ್ರಿಸ್ತನನ್ನು ಅಲ್‌ಹಕ್ ಅಂದರೆ ಈಶ್ವರನ ನಿಜವಾದ ಪ್ರತಿನಿಧಿ ಎಂದಿದ್ದಾನೆ. ಅವನ ಪ್ರಕಾರ ಮುಹಮ್ಮದ್–ಪೈಗಂಬರರಲ್ಲಿ ಶ್ರೇಷ್ಠನಾದರೆ, ಕ್ರಿಸ್ತ–ಸಂತರಲ್ಲಿ ಶ್ರೇಷ್ಠ. ಅವನ 'ಅನಲ್‌ಹಕ್' ಸಿದ್ಧಾಂತ, ವಿಶೇಷ ಉಲ್ಲೇಖನಾರ್ಹ. ಸಿರಿಯಾ ವಿಚಾರಧಾರೆಯಲ್ಲಿ ದೈವೀ ಹಾಗೂ ಮಾನವೀ ಪ್ರಕೃತಿಯನ್ನು ಅಭಿವ್ಯಕ್ತಗೊಳಿಸಲು ಬಳಸಿರುವ ಶಬ್ದಗಳು ಹಲ್ಲಾಜನು ಬಳಸಿರುವ 'ಲಾಹೂತ್' ಮತ್ತು 'ನಾಸೂತ್' ಶಬ್ದಗಳಿಂದ ಪ್ರಕಟವಾಗುವ ಭಾವಗಳ ಶಬ್ದಗಳೇ ಆಗಿವೆ.

**ಪುನರಾವರ್ತನೆ:** ಆದರೆ ಇಮಾಮ್ ಅಲ್-ಗಜಾಲಿಯ ಹೊತ್ತಿಗೆ ಸೂಫಿಮತದ ಸ್ಥಿತಿ ಮತ್ತೆ ಸುದೃಢವಾಯಿತು ಮತ್ತು ಇಸ್ಲಾಂಧರ್ಮದಲ್ಲಿ ಇದಕ್ಕೆ ಒಂದು ನಿಶ್ಚಿತ ಸ್ಥಾನ ದೊರೆಯಿತು. ಗಜಾಲಿಗೆ 'ಹುಜ್ಜತುಲ್ ಇಸ್ಲಾಂ' ಅಂದರೆ 'ಇಸ್ಲಾಂ ರಕ್ಷಕ' ಎಂಬ ಬಿರುದು ಬಂದಿತು. ಅವನು ಖುದಾ ಮತ್ತು ಅವನ ತೀರ್ಮಾನದ ಭಯ ಶಾಶ್ವತ ನಿಶ್ಚಿತ ಎಂಬುದರ ಅನುಭವ ಪಡೆದ. ಅವನು ಅನುಭಾವಕ್ಕೆ ಹೆಚ್ಚು ಹೆಚ್ಚು ಮಹತ್ವ ಕೊಟ್ಟ: ದರ್ಶನ ಮತ್ತು ಕಲ್ಪನೆಗೆ ಗೌಣಸ್ಥಾನ ಕೊಟ್ಟ. ಈ ರೀತಿಯ ಅವನ ಈ ಮಾರ್ಗ ನೈಜತತ್ವವೆನಿಸಿತು. ಇದರಿಂದಾಗಿ ಇವನು ತನ್ನ ಯುಗದ ವಿಚಾರವಾದದ ಪ್ರತೀಕವಾದ. ಇವನು ಸನಾತನ ಇಸ್ಲಾಂಧರ್ಮಕ್ಕನುಗುಣವಾಗಿ ಸೂಫಿಮತದ ವ್ಯಾಖ್ಯಾನ ಮಾಡಿದ. ಆಚಾರಕ್ಕೆ ಸಂಬಂಧಿಸಿದಂತೆ ಗಜಾಲಿ ಕ್ರೈಸ್ತಧರ್ಮದೊಂದಿಗೆ ಹೆಚ್ಚು ಸಮಾನತೆಗಳನ್ನು ಹೊಂದಿದ್ದಾನೆ. ಅವನಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪಕ್ಷ ಪ್ರಬಲವಾಗಿದೆ. ಇಷ್ಟೆಲ್ಲ ಇದ್ದರೂ ಅವನ 'ತೌಹೀದ್' (ಏಕೇಶ್ವರವಾದ) ಸಿದ್ಧಾಂತದಲ್ಲಿ ಕೆಲವು ನ್ಯೂನತೆಗಳಿವೆ.

೧೧–೧೩ನೇ ಶತಮಾನಗಳ ಅವಧಿ ಮುಸ್ಲಿಮರ ಪುನರುತ್ಥಾನಕಾಲವಾಗಿತ್ತು. ಆಗ ಪ್ರಾಯಃ ಜ್ಞಾನ-ವಿಜ್ಞಾನದ ಎಲ್ಲ ಕ್ಷೇತ್ರಗಳಲ್ಲಿಯೂ ಪುನರ್ವಿಚಾರ ಹಾಗೂ ನವನಿರ್ಮಾಣದ ಕಾರ್ಯ ಜಾರಿಯಲ್ಲಿತ್ತು. ಇದರ ಒಂದು ಪರಿಣಾಮ ಕಲೆ ಮತ್ತು ಸಾಹಿತ್ಯಕ್ಷೇತ್ರಗಳಲ್ಲಿ ಕಂಡುಬಂದಿತು. ಈ ಕಾರಣದಿಂದಾಗಿ ಸೂಫಿಮತದ ದೃಷ್ಟಿಯಿಂದ ಇದು ಕ್ಲಾಸಿಕ್ ಯುಗವೆಂದು ಪ್ರಸಿದ್ಧವಾಯಿತು. ಈ ಕಾಲದಲ್ಲಿಯೇ ಫರೀದುದ್ದೀನ್ ಅತ್ತಾರ್. ಜಲಾಲುದ್ದೀನ್ ರೂಮಿ. ಶೇಖ್‌ಸಾದಿ ಈ ಮೂರು ಜನ ರಹಸ್ಯವಾದಿ ಕವಿಗಳು ಇರಾನಿನಲ್ಲಿ ಉದ್ಭವಿಸಿದರು. ಮುಸಲ್ಮಾನ್ ಪ್ರಪಂಚದಮೇಲೆ ಈ ಮೂವರ ಕೃತಿಗಳ ವ್ಯಾಪಕವಾದ ಪ್ರಭಾವ ಉಂಟಾಯಿತು.

ಸೂಫಿಮತದ ವಿಕಾಸದ ಅಂತಿಮಘಟ್ಟ ಹಫೀಜ್ ಮತ್ತು ಜಾಮಿ ಇವರೊಂದಿಗೆ ಪೂರ್ಣಗೊಳ್ಳುತ್ತದೆ. ಮಹಮೂದ್ ಶಾಬಿಸ್ತ್ರಿಯ 'ಗುಲ್‌ಶನೇ ರಾಜ್' ಇದೇ ಕಾಲದ್ದು. ಇದು ವಾಸ್ತವವಾಗಿ ಸೂಫಿಮತದ ಪಾರಿಭಾಷಿಕ ಶಬ್ದಗಳ ಪ್ರಶ್ನೋತ್ತರ ರೂಪದಲ್ಲಿರುವ ಸಾರಾಂಶಮಾತ್ರವಾಗಿದೆ.

ಬಹಳ ಹಿಂದಿನಿಂದಲೂ ಹೊಸ ಹೊಸ ತತ್ತ್ವ ಹಾಗೂ ಸಂಶೋಧನೆಗಳು ಪ್ರವೇಶವನ್ನು ಪಡೆಯುತ್ತಿದ್ದವು ಎಂಬುದನ್ನು ಗಮನಿಸಲಾಗಿದೆ. ವ್ಯಾಪಕವಾದ ಪ್ರಚಾರ ಹಾಗೂ ಪ್ರಸಾರ ಇದಕ್ಕೆ ಕಾರಣ. ಇದರ ಮೂಲದಲ್ಲಿ ಭ್ರಾತೃತ್ವಭಾವ ಕೆಲಸ ಮಾಡುತ್ತಿತ್ತು. ಇದರ ಫಲವಾಗಿ ಹೊಸ ಹೊಸ ಸಂಪ್ರದಾಯಗಳು ಅಸ್ತಿತ್ವಕ್ಕೆ ಬರುತ್ತಿದ್ದವು. ೧೨ನೇ ಶತಮಾನದ ಹೊತ್ತಿಗೆ ಇವುಗಳ ಒಂದು ಸುಸಂಘಟಿತರೂಪ ಕಂಡುಬರುತ್ತದೆ. ಆರಂಭಕಾಲದಲ್ಲಿ ತ್ಯಾಗ ಹಾಗೂ ವೈರಾಗ್ಯಜೀವನವನ್ನು ಅವಲಂಬಿಸಿದ್ದ ಸೂಫಿಗಳ ಸುತ್ತಮುತ್ತ ಭಕ್ತರ ಗುಂಪು ಕೂಡುತ್ತಿತ್ತು. ಇಂಥ ಜನ ಶೇಖ್ (ಗುರು) ಎಂಬ ಹೆಸರಿನಿಂದ ಪ್ರಸಿದ್ಧರಾದರು. ಭಕ್ತರಲ್ಲಿ ಪರಸ್ಪರ ಭ್ರಾತೃಭಾವ ಬೆಳೆಯತೊಡಗಿತು. ಅವರ ತಮ್ಮದೇ ಆದ ಒಂದು ಮಂಡಲಿ ಸ್ಥಾಪಿತವಾಯಿತು. ಅಲ್-ಜುನೈದ್ ಇಂಥ ಒಬ್ಬ ಮಹಾತ್ಮ. ಕ್ರಮೇಣ ಅವರಿಗಾಗಿ ವಿಶ್ರಾಮಧಾಮಗಳು ಸಿದ್ಧವಾದವು. ಇವೇ ಮುಂದೆ 'ಖಾನ್‌ಕಾಹ್' (ಮುಸಲ್ಮಾನ ಗುರುಗಳ ಮಠ) ರೂಪವನ್ನು ಪಡೆದವು. ೮–೯ನೇ ಶತಮಾನಗಳ ಈ ಮಠಗಳು ದಮಿಶ್ಕಸ್ ಮತ್ತು ಖುರಾಸಾನ್‌ಗಳಲ್ಲಿ ದೊರೆತಿವೆ. ಇವುಗಳನ್ನು ಚಳಿಗಾಲದಲ್ಲಿ ಹೆಚ್ಚು ಉಪಯೋಗಿಸುತ್ತಿದ್ದರು. ಪರಿವ್ರಾಜಕ ಸಮುದಾಯ ಕೆಲವು ಕಾಲದನಂತರ ಅತ್ತರೀಕ್ ಅಥವಾ ಖಾನ್‌ವಾದ್ ಎನಿಸಿಕೊಂಡು ಪ್ರಸಿದ್ಧವಾಯಿತು. ಇವರು ಪರಿವಾರದೊಂದಿಗೆ ಇರುತ್ತಿದ್ದರು. ಇಂಥದೇ ಪರಿವಾರ ಮುಂದುವರಿದು

ಸಾಂಪ್ರದಾಯಿಕರೂಪವನ್ನು ತಾಳಿತು. ಇವರನ್ನು ಗುರು ಅಥವಾ ಮುರ್ಶಿದ್ ರೂಪದಲ್ಲಿ ಸಂಸ್ಥಾಪಕರೆಂದು ಕರೆಯಲಾಗುತ್ತಿತ್ತು.

**ಉತ್ತರಾಧಿಕಾರಿ :** ಕುರಾನಿನಲ್ಲಿ ಸೂಫಿಮತದ ಅಸ್ತಿತ್ವದ ಬಗ್ಗೆ ಸಂಕೇತಗಳು ದೊರೆಯುವುದರಿಂದ ಇಸ್ಲಾಂ ಮತ್ತು ಸೂಫಿಮತಗಳ ಪ್ರಾಚೀನತೆಯ ಬಗ್ಗೆ ಯಾವ ಸಂಶಯವೂ ಉಳಿಯುವುದಿಲ್ಲ. ಈ ಸಂದರ್ಭದಲ್ಲಿ ಹಜರತ್ ಮುಹಮ್ಮದರ ಹೆಸರನ್ನೂ ತೆಗೆದುಕೊಳ್ಳಲಾಗುತ್ತದೆ. ಇವರ ನಂತರ ಅಲೀ ಅವರ ಹೆಸರು ಸರ್ವಪ್ರಥಮ. ಆದರೂ ಪ್ರಚಲಿತವಿದ್ದ ಸುಮಾರು ೨೭೫ ಸಂಪ್ರದಾಯಗಳಲ್ಲಿ ಬಿಸ್ತಾಮಿಯಾ, ಲಖ್ವಾತಿಯಾ ಮತ್ತು ನಕ್‌ಶ್‌ಬಂದಿಯಾ ಈ ಮೂರು ಸಂಪ್ರದಾಯದವರು ಅಬೂಬಕರ್‌ಗೆ ಸರ್ವಪ್ರಥಮಸ್ಥಾನವನ್ನು ಕೊಡುತ್ತಾರೆ. ಇವರಲ್ಲಿ ನಕ್‌ಶ್‌ಬಂದಿಯಾದವರು ಮಾತ್ರ ಭಾರತೀಯರಿಗೆ ಪರಿಚಿತರಾಗಿದ್ದಾರೆ. ಇಷ್ಟಾದರೂ ಈ ಸಂಪ್ರದಾಯದವರು ಅಲೀಯೊಂದಿಗೆ ತಮ್ಮ ಸಂಬಂಧವಿರುವುದಾಗಿ ಹೇಳಿಕೊಳ್ಳುತ್ತಾರೆ. ಹೀಗಾಗಿ ಅಲೀಗೆ ದೊರೆತಿರುವ ಸ್ಥಾನ ಮತ್ತಾರಿಗೂ ದೊರೆತಿಲ್ಲ. ಆದರೆ ಸುನ್ನೀ ಮುಸಲ್ಮಾನರು ಅಲೀಗೆ ನಾಲ್ಕನೇ ಸ್ಥಾನ ಕೊಡುತ್ತಾರೆ. ಇವನಿಗೆ ಮೊದಲು ಅಬೂಬಕರ್, ಉಮರ್ ಮತ್ತು ಉಸ್ಮಾನ್ ಈ ಮೂವರು ಖಲೀಫರಿಗೆ ಮಹತ್ವದ ಸ್ಥಾನವನ್ನು ಕೊಡುತ್ತಾರೆ. ಅಲೀಉಲ್ ಹುಜ್ವಿರೀ ಮತ್ತು ಜುನೈದರು ಅಲೀಯ ಭೂರಿಪ್ರಶಂಸೆ ಮಾಡುತ್ತಾರೆ. ಅಲೀನಂತರ ಬಸ್ರಾದ ಹಸನ್‌ನ ಹೆಸರು ಪ್ರಸಿದ್ಧವಾಗಿದೆ. ಇವರ ೭೦ ಮಂದಿ ಶಿಷ್ಯರಲ್ಲಿ ನಾಲ್ವರು ಅವರ ಮೃತ್ಯುವಿನ ನಂತರ ಫೀರ್(ಧರ್ಮಗುರು)ಗಳಾಗಿ ನೇಮಿಸಲ್ಪಡುತ್ತಾರೆ. ಇವರ ಹೆಸರಿನ ಬಗ್ಗೆ ಸೂಫೀಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಇದರಿಂದ ಹಸನ್‌ನ ಮಹತ್ವದ ವಿಷಯದಲ್ಲಿ ಯಾವ ಅಂತರವೂ ಕಂಡುಬರುವುದಿಲ್ಲ. ಅವರು ಕಾದಿರಿಯಾ, ಚಿಶ್ತಿಯಾ ಹಾಗೂ ಸುಹ್ರಾವರ್ದಿಯಾ ಈ ಮೂರು ಸಂಪ್ರದಾಯಗಳವರಿಗೆ ಧರ್ಮಗುರುಗಳೆಂದು ಭಾವಿಸಲ್ಪಡುತ್ತಾರೆ. ಅವರ ತಾಯಿ ಮುಹಮ್ಮದ್ ಪೈಗಂಬರರ ಒಬ್ಬ ಪತ್ನಿಯ ದಾಸಿಯಾಗಿದ್ದರು ಮತ್ತು ಅವರು ಸ್ವಯಂ ಬಸ್ರಾ ನಿವಾಸಿನಿ ರಾಬಿಯಾ ಸಮಕಾಲೀನರಾಗಿದ್ದರು. ಮುಂದೆ ಇವರ ಇಬ್ಬರು ಶಿಷ್ಯರು—ಖ್ವಾಜಾ ಅಬ್ದುಲ್ ವಾಹಿದ್ ಜೈದ್ ಮತ್ತು ಹಬೀಬುಲ್ ಅಜ್ಮೀ ಎರಡು ಭಿನ್ನ ಸಂಪ್ರದಾಯಗಳ ಮುಖ್ಯರಾಗುತ್ತಾರೆ. ಇವುಗಳಲ್ಲಿ ಜೈದಿಯಾ ಸಂಪ್ರದಾಯದಲ್ಲಿ ನಾಲ್ಕು ಉಪವಿಭಾಗಗಳುಂಟಾದವು—(೧) ಇಯಾದಿಯಾ, (೨) ಅಧಮಿಯಾ, (೩) ಹುಬಯರಿಯಾ, (೪) ಚಿಶ್ತಿಯಾ. ಇದೇ ರೀತಿ ಹಬೀಬಿಯಾ ಸಂಪ್ರದಾಯದಲ್ಲಿ ಎಂಟು ಉಪವಿಭಾಗಗಳಾದವು: ಕರಿರ್ವಯಾ, ಸಕಾತಿಯಾ, ತಯಫುರಿಯಾ, ಜುನೈದಿಯಾ, ಗಾಜರೂನಿಯಾ. ತರತವಸಿಯಾ, ಸುಹ್ರವರ್ದಿಯಾ ಮತ್ತು ಫಿರ್‌ದೌಸಿಯಾ ಅಥವಾ ಕುಬರ್‌ವಿಯಾ.

**ಭಾರತದಲ್ಲಿ ಸೂಫಿಮತ**: ಆಗ ಅಖಂಡಭಾರತ ಅಸ್ತಿತ್ವದಲ್ಲಿದ್ದುದರಿಂದ ಜಲಮಾರ್ಗ, ಸ್ಥಲಮಾರ್ಗ ಹಾಗೂ ಖೈಬರ್‌ಪಾಸ್ ಕಣಿವೆ ಈ ಮೂರು ಮಾರ್ಗಗಳಿಂದ ಮುಸಲ್ಮಾನರು ಭಾರತವನ್ನು ಪ್ರವೇಶಿಸಬಹುದಾಗಿತ್ತು. ಈ ಮಾರ್ಗಗಳಿಂದಲೇ ಸೂಫಿಗಳು. ದರವೇಶಿ (ಭಿಕ್ಷುಕರು)ಗಳು ಭಾರತಕ್ಕೆ ಬಂದಿರಬಹುದು. ಉಪಲಬ್ಧ ಚಾರಿತ್ರಿಕ ಆಧಾರಗಳಿಂದ ಪ್ರಪ್ರಥಮವಾಗಿ ಮುಸಲ್ಮಾನರು ಅರಬ್ಬೀವ್ಯಾಪಾರಿಗಳ ಜೊತೆಯಲ್ಲಿ ಮಲಬಾರಿಗೆ ಬಂದಿದ್ದರು ಎಂದು ಹೇಳಲಾಗುತ್ತದೆ. ಮತ್ತೊಂದು ಪರಿವ್ರಾಜಕರು ಹಾಗೂ ಮಹಾತ್ಮರ ಗುಂಪೂ ಇಲ್ಲಿಗೆ ಬಂದಿದ್ದಿರಬಹುದು. ಹೀಗೆ ಇಲ್ಲಿಗೆ ಬಂದ ಮಹಾತ್ಮರಲ್ಲಿ ತಮೀಮ್ ಅನ್ಸಾರಿ ಒಬ್ಬನೆಂದೂ, ಅವನ ಸಮಾಧಿ ಮೈಲಾಪುರದಲ್ಲಿದೆಯೆಂದೂ ಹೇಳುತ್ತಾರೆ. ನಬೀ ಸಂಗಾತಿಗಳಲ್ಲಿ ಇವರೂ ಒಬ್ಬರೆಂದು ಭಾವಿಸುತ್ತಾರೆ. ಆ ಕಾಲದಲ್ಲಿ ಪ್ರಾಯಃ ಚೀನಾದಿಂದ ಲಂಕಾದವರೆಗೆ ಇವರ ಪ್ರಚಾರಕಾರ್ಯ ನಡೆಯುತ್ತಿದ್ದಂತೆ ಕಾಣುತ್ತದೆ. ಅಲ್ಲಿ ಈ ಪ್ರಚಾರಕರ ಸಮಾಧಿಗಳು ಕಾಣಸಿಗುತ್ತವೆ. ಇಬ್ನ್‌ಬತೂತ ಲಂಕಾದಲ್ಲಿ ಇಂಥ ಅನೇಕ ಸಮಾಧಿಗಳನ್ನು ಕಂಡಿರುವುದಾಗಿ ಹೇಳಿಕೊಂಡಿದ್ದಾನೆ. ಇದಕ್ಕಿಂತ ಮೊದಲೇ ಭಾರತದೊಂದಿಗೆ ಇವರ ಸಂಪರ್ಕವುಂಟಾಗಿದ್ದರೂ ಮಹಮ್ಮದ್‌ಬಿನ್‌ಕಾಸಿಮ್‌ನ ಸಿಂಧ್ ಮೇಲಿನ ಆಕ್ರಮಣಕ್ಕೆ ಮೊದಲು ಇಲ್ಲಿ ಮುಸಲ್ಮಾನರ ಬಸ್ತಿಗಳು ಇದ್ದುವು ಎಂಬುದಕ್ಕೆ ಯಾವ ಆಧಾರವೂ ಸಿಗುವುದಿಲ್ಲ. ಮುಹಮ್ಮದ್‌ನ ಮೃತ್ಯುವಿನ ೩೦ ವರ್ಷಗಳನಂತರ ಕಂಕಡದಲ್ಲಿ ಮುಆವಿಯಾ ಭಾರಿ ಸೈನ್ಯವನ್ನು ಸಂಗ್ರಹಿಸಿಟ್ಟಿದ್ದ. ಅಲ್ಲಿಂದ ಮುಸಲ್ಮಾನರು ಭಾರತದ ಬಾಗಿಲವರೆಗೆ ಬಂದಿದ್ದರು. ಖೈಬರ್‌ಪಾಸ್ ಮೂಲಕ ತುರ್ಕಿ, ಮಂಗೋಲ್ ಮತ್ತು ಆಫ್‌ಘಾನಿ ಸೇನೆಗಳು ಭಾರತವನ್ನು ಪ್ರವೇಶಿಸಿದವು. ಇವರ ಜೊತೆಯಲ್ಲಿಯೇ ಮುಸಲ್ಮಾನ್ ಸನ್ಯಾಸಿಗಳು. ದರವೇಶಿಗಳು ಭಾರತಕ್ಕೆ ಬಂದರು. ಈರೀತಿ ಮುಸ್ಲಿಮ್ ವಂಶ ಭಾರತದಲ್ಲಿ ಸ್ಥಾಯಿಯಾಗಿ ನೆಲೆಗೊಳ್ಳುವುದಕ್ಕೆ ಮೊದಲಿನಿಂದಲೇ ಭಾರತಕ್ಕೆ ಇಸ್ಲಾಂಧರ್ಮದ ಪರಿಚಯವಾಗಿತ್ತು. ಈ ಹೊಸ ಸಂಪರ್ಕದ ಫಲವಾಗಿ ಹಿಂದೂಧರ್ಮದಲ್ಲಿಯೂ ಹೊಸ ವರ್ಗ. ಹೊಸ ಸಂಪ್ರದಾಯಗಳು ಸೃಷ್ಟಿಯಾದವು. ಡಾ॥ ಟಿಟನಸ್ಸನು ಹೀಗೆ

ಸೃಷ್ಟಿಯಾದ ಹನ್ನೊಂದು ಸಂಪ್ರದಾಯಗಳನ್ನು ಗುರುತಿಸಿದ್ದಾನೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ವರ್ಗಗಳು, ಸಂಪ್ರದಾಯಗಳು ಅಸ್ತಿತ್ವಕ್ಕೆ ಬಂದವು. ಪೀರ್‌ಜಾದಾ, ಭಜ್ಜೂಪಂಥ, ಹುಸೈನ್ ಬ್ರಾಹ್ಮಣ್ ಮುಂತಾದವು ಇಂಥ ಸಂಪ್ರದಾಯಗಳಲ್ಲಿ ಕೆಲವು. ಮಹಮ್ಮದ್ ಗಸ್ನವಿಯ ಮುನ್ನೂರು ವರ್ಷಗಳನಂತರ ಲಾಹೋರಿನ ಸೂಫಿಸಂತ ಶೇಖ್ ಇಸ್ಮಾಯಿಲ್ಲನ ಹೆಸರು ಪ್ರಮುಖವಾದುದು. ಇವನು ಭಾರತದ ಸರ್ವಪ್ರಥಮ ಸೂಫಿ ಎಂದು ತಿಳಿಯಲಾಗಿದೆ. ಬಾಬಾರತನ್‌ನ ಹೆಸರನ್ನು ಇಂಥ ಹಿಂದೂ ಮಹಾತ್ಮರ ಸಾಲಿನಲ್ಲಿ ಪರಿಗಣಿಸಲಾಗುತ್ತದೆ. ಇವರು ಮುಹಮ್ಮದರನ್ನು ಭೇಟಿಮಾಡಿದ್ದರು ಮತ್ತು ಎರಡುಬಾರಿ ಮಕ್ಕಾಯಾತ್ರೆಯನ್ನು ಮಾಡಿದ್ದರು. ಬೀಬೀತನ್ನೂರ್ ಕೂಡ ಇಂಥವರಲ್ಲಿ ಪ್ರಸಿದ್ಧಳಾದ ದಾಸಿ ಮಹಿಳೆ. ಲಾಹೋರಿನಲ್ಲಿ ಇವಳ ಸಮಾಧಿ ಇದೆ. ಪಾಕ್‌ದಾಮನ್ ತೀರ್ಥದ ಇತರ ಮಹಿಳೆಯರ ಹೆಸರುಗಳು ಈರೀತಿ ಇವೆ: (೧) ಬೀಬೀರುಕಿಯಾ ಅಥವಾ ಬೀಬೀಹಾಜ್ ಇವಳು ಅಲೀ ಅವರ ಮಗಳೆಂದು ಹೇಳಲಾಗುತ್ತದೆ. (೨) ಬೀಬೀಹೂರ್. (೩) ಬೀಬೀನೂರ್, (೪) ಬೀಬೀಗೌಹರ್. (೫) ಬೀಬೀತಾಜ್. (೬) ಬೀಬೀ ಶಾಹ್‌ಬಾಜ್ ಇವರ ಸಮಾಧಿಗಳೂ ಅಲ್ಲಿಯೇ ಇವೆ. ಇವರಲ್ಲಿ ಹೆಚ್ಚುಮಂದಿ ಶಾಹೀ ವಂಶದವರೇ. ಅಲೀ ಅವರ ರಕ್ತಸಂಬಂಧಿಗಳೊಂದಿಗೇ ಇವರ ಮದುವೆಯಾಗಿತ್ತು. ಇವರಲ್ಲಿ ಬೀಬೀತನ್ನೂರ್ ಈ ಆರು ಜನರ ಮನೆಯಲ್ಲಿ ಕೆಲಸಕ್ಕಿದ್ದಳು. ಇವರ ಬಗ್ಗೆ ಅನೇಕ ದಂತ ಕಥೆಗಳು ಪ್ರಚಲಿತವಾಗಿವೆ. ಈ ಸ್ಮಶಾನವನ್ನು ನಿರ್ಮಿಸುವಲ್ಲಿ ಮಹಮ್ಮದ್ ಗಸ್ನವೀ ಹಾಗೂ ಅಕ್ಬರ್ ಕೈವಾಡವಿದೆ.

**ಪ್ರಸಾರ**: ಬಾಬಾಖಾಕೀ ಪೂರ್ವಾಶ್ರಮದಲ್ಲಿ ಹಿಂದೂ ರಾಜಕುಮಾರರಾಗಿದ್ದರು. ಇವರು ಬೀಬೀತಾಜ್ ಅವಳಿಂದ ಪ್ರಭಾವಿತರಾಗಿ ಇಸ್ಲಾಂಧರ್ಮವನ್ನು ಸ್ವೀಕರಿಸಿದರು. ಆಗ ಅವರ ಹೆಸರು ಅಬ್ದುಲ್ಲ. ಅವರ ಮೃತ್ಯು ಕ್ರಿ.ಶ. ೭೧೯-೨೦ರಲ್ಲಿ ಆಯಿತು. ಪಾಕ್‌ದಾಮನ್‌ನಲ್ಲಿಯೇ ಇವರ ಸಮಾಧಿಯನ್ನು ನಿರ್ಮಿಸಲಾಗಿದೆ. ಹನ್ನೊಂದನೇ ಶ.ದ ಸೂಫಿಸಂತರಲ್ಲಿ ಸಯ್ಯದ್‌ಸಾಲಾರ್ ಮಸೂದ್‌ಗಾಜಿ ಮಿಯಾ ಹೆಚ್ಚು ಪ್ರಸಿದ್ಧ. ಇವರನ್ನು ಜನರು ಹೆಚ್ಚಾಗಿ ಬಾಲೆಮಿಯಾ ಎಂದು ಕರೆಯುತ್ತಿದ್ದರು. ಉತ್ತರಪ್ರದೇಶದ ಬಹರಾಇಜ್ ಜಿಲ್ಲೆಯಲ್ಲಿ ಇವರ ಸಮಾಧಿ ಇದೆ. ಇವರ ತಾಯಿ ಮುಹಮ್ಮದ್ ಗಸ್ನವಿಯ ಸೋದರಿ ಎಂದು ಹೇಳುತ್ತಾರೆ. ಇವರು ತಮ್ಮ ತಾರುಣ್ಯಾವಸ್ಥೆಯಲ್ಲಿಯೇ ಸುಲ್ತಾನರಾಗಿದ್ದ ತಮ್ಮ ಚಿಕ್ಕಪ್ಪನೊಂದಿಗೆ ಭಾರತದ ಮೇಲೆ ಆಕ್ರಮಣ ಮಾಡುವುದರಲ್ಲಿ ಸಹಾಯಕರಾಗಿದ್ದರು. ಇದಲ್ಲದೆ ಸ್ವತಂತ್ರವಾಗಿಯೇ ಭಾರತದ ಮೇಲೆ ಅನೇಕಬಾರಿ ಮುತ್ತಿಗೆಹಾಕಿದ್ದರು. ಕೊನೆಗೆ ೧೪-೬-೧೦೩೩ರಲ್ಲಿ ಯುದ್ಧ ಮಾಡುತ್ತಾ ಮಾಡುತ್ತಾ ಹುತಾತ್ಮರಾದರು. ಇವರ ಸಮಾಧಿಯ ಮೇಲೆ ಪ್ರತಿವರ್ಷ 'ಉರ್ಸ್' (ನಿರ್ವಾಣ ತಿಥಿ) ಆಚರಿಸುತ್ತಾರೆ. ಇದನ್ನು ದೇಶದ ಇತರ ಭಾಗಗಳಲ್ಲಿಯೂ ಆಚರಿಸುತ್ತಾರೆ. ಇವರ ಅನುಯಾಯಿಗಳು 'ಡಫಾಲಿ ಫಕೀರ್' ಎಂದು ಪ್ರಸಿದ್ಧರಾಗಿದ್ದಾರೆ. ಪೂರ್ವ ಬಂಗಾಳದಲ್ಲಿ 'ಗಾಜಿಮಿಯಾ ಕಾಥಾನ್' ಮಾಡುವ ಪದ್ಧತಿ ಇದೆ. ಅಫ್‌ಘಾನೀಸ್ತಾನದ ನಿವಾಸಿ ಅಲೀ ಉಲ್ ಹುಜ್ವೀರಿ ಇವರ ಸಮಕಾಲೀನರು. ಇವರು ದಾತಾಗಂಜ್ ಬಕ್ಷ್ ಎಂದು ಹೆಚ್ಚು ಪ್ರಸಿದ್ಧರಾಗಿದ್ದಾರೆ. ಇವರ ಅನೇಕ ರಚನೆಗಳಲ್ಲಿ 'ಕಶ್ಫುಲ್ ಮಹಜುಬ್' ಹೆಚ್ಚು ಮಹತ್ವದ ಗ್ರಂಥ. ಇವರು ಜುನ್ನೈದನ ಮತವನ್ನು ಸಮರ್ಥಿಸಿದ್ದಾರೆ. ಇವರಿಗೆ ಆಡಂಬರ ಇಷ್ಟವಾಗಿರಲಿಲ್ಲ. ಬ್ರಹ್ಮಚರ್ಯಪಾಲನೆಗೆ ಹೆಚ್ಚು ಒತ್ತುಕೊಡುತ್ತಿದ್ದರು. ಇದರಿಂದಾಗಿ ಇವರು ಅವಿವಾಹಿತರಾಗಿಯೇ ಉಳಿದರು. ಇವರು ಸಿಂಧ್‌ನಿಂದ ಕ್ಯಾಸ್ಪಿಯನ್ ಸಮುದ್ರ ಹಾಗೂ ಸಿರಿಯಾದಿಂದ ತುರ್ಕಿಸ್ತಾನದವರೆಗೆ ಸಂಚಾರಮಾಡಿ, ಅಲ್ಲಿನ ಸೂಫಿ ಮಹಾತ್ಮರನ್ನು ಭೇಟಿ ಮಾಡಿ ಅವರೊಂದಿಗೆ ವಿಚಾರವಿನಿಮಯ ಮಾಡಿಕೊಂಡಿದ್ದರು. ೧೦೬೩ ಅಥವಾ ೧೦೭೧ರಲ್ಲಿ ಲಾಹೋರಿನಲ್ಲಿ ಮರಣಹೊಂದಿದರು. ಐನೂರು ವರ್ಷಗಳನಂತರ ಖ್ವಾಜಾ ಮುಇನುದ್ದೀನ್ ಮೂಲಕ ಇವರನ್ನು 'ದಾತಾಗಂಜ್ ಬಕ್ಷ್' ಎಂದು ಕರೆಯುವ ಸಂಪ್ರದಾಯ ಬೆಳೆಯಿತು. ಇವರ ನಂತರ ಸೈಯ್ಯದ್ ಅಹಮದ್ ಸುಲ್ತಾನ್ ಸಾಖೀ ಸರ್‌ವರ್ ಹೆಸರು ಬರುತ್ತದೆ. ಇವರನ್ನು ಜನ ಹೆಚ್ಚಾಗಿ ಲಾಖೀದಾತಾ ಎಂದು ಕರೆಯುತ್ತಾರೆ. ಇವರ ಹಿಂದೂ-ಮುಸಲ್ಮಾನ್ ಶಿಷ್ಯರು ಸುಲ್ತಾನಿಗಳೆಂದು ಪ್ರಸಿದ್ಧರಾಗಿದ್ದಾರೆ.

೧೧೮೨ರಲ್ಲಿ ಮುಲ್ತಾನಿನ ಬಳಿ ಶಾಹ್‌ಕೋಟ್‌ನಲ್ಲಿ ಇವರು ಮರಣಹೊಂದಿದರು. ಇವರ ಶಿಷ್ಯರು ಜಲಂಧರ್ ಹಾಗೂ ಪಂಜಾಬಿನಲ್ಲಿ ಹೆಚ್ಚಾಗಿದ್ದಾರೆ. ಹಾಡುತ್ತಾ ವಾದ್ಯ ನುಡಿಸುತ್ತಾ ಅಲೆದಾಡುತ್ತಾ ಇವರು ತಮ್ಮ ಮತ ಪ್ರಚಾರ ಮಾಡುತ್ತಾರೆ.

ಖ್ವಾಜಾ ಮುಇನುದ್ದೀನ್, ಕುತುಬುದ್ದೀನ್ ಬಖ್ತಿಯಾರ್‌ಕಾಕೀ, ಶಿಯಾಬುದ್ದೀನ್ ಸುಹ್ರವರ್ದೀ, ಇರಾಕೀ, ಶೇಖ್ ಸದರುದ್ದೀನ್, ಅಬುಲ್ ಫತಹ್ ರುಕನುದ್ದೀನ್, ದೂಮ್‌ಲಾಲ್ ಶಹ್‌ಬಾಜ್ ಕಲಂದರ್. ಸಯ್ಯದ್

ಜಲಾಲ್ ಬುಖಾರಿ ಮುಂತಾದ ಸೂಫಿಸಂತರು ಮುಲ್ತಾನ್. ದಿಲ್ಲಿ, ಸಿಂಧ್ ಮುಂತಾದ ಪ್ರಾಂತಗಳಲ್ಲಿ ಸೂಫಿಮತ ಪ್ರಚಾರ ಮಾಡಿದರು. ಗುಜರಾತ್‌ಪ್ರಾಂತವೂ ಸೂಫೀಸಂತರ ಕೇಂದ್ರವಾಗಿತ್ತು. ಪಾಟನ್. ಬ್ರೋಚ್. ಖಂಭಾತ್ ಮುಂತಾದವು ಪ್ರಮುಖ ಕೇಂದ್ರಗಳಾಗಿದ್ದವು. ಈ ಸ್ಥಳಗಳಲ್ಲಿ ಇಸ್ಮಾಇಲಿಯಾ ಮತ್ತು ಕರಾಮಾತಿಯಾ ಮುಂತಾದ ಕೆಲವು ಸಂಪ್ರದಾಯಗಳು ಪ್ರಚಾರದಲ್ಲಿದ್ದವು. ಇವುಗಳ ವಿರುದ್ಧವಾಗಿ ಅಲ್ಲಾವುದ್ದೀನ್ ಖಿಲ್ಜಿ ಕಠಿಣ ಕ್ರಮಗಳನ್ನು ತೆಗೆದುಕೊಂಡನೆಂದು ಹೇಳುತ್ತಾರೆ. ರಜಿಯಾ ಕಾಲದಲ್ಲಿ ದೆಹಲಿಯವರೆಗೆ ಇವರು ತಲೆನೋವಾಗಿದ್ದರು. ಕೊನೆಗೆ ಬಹಳ ಶ್ರಮಪಟ್ಟು ಇವರನ್ನು ನಿವಾರಿಸಿಕೊಳ್ಳಬೇಕಾಯಿತು. ಯೆಮನ್‌ನಲ್ಲಿದ್ದ ಫಾತಿಮಾ ಶಾಖೆ ಸ್ಥಳೀಯ ನಿವಾಸಿಗಳನ್ನು ಪರಿವರ್ತಿಸಿ ತನ್ನ ಧರ್ಮಕ್ಕೆ ಸೇರಿಸಿಕೊಂಡಿತು. ಕೊನೆಗೆ ಇದು ಎರಡು ಭಾಗಗಳಾಗಿ ಒಡೆದು ಒಂದು ಭಾಗ ಭಾರತದಲ್ಲಿ ನೆಲೆಸಿತು. ಇವರ ಪ್ರಚಾರಕರಲ್ಲೊಬ್ಬರಾದ ಸಯ್ಯದ್ ಜಲಾಲುದ್ದೀನ್ ಸೂರ್ಖ್‌ಪೋಶರ ಸಮಕಾಲೀನರಾದ ಶೇಖ್ ಸದರುದ್ದೀನ್ ಅವರು ಬ್ರಹ್ಮ. ವಿಷ್ಣು ಮತ್ತು ಶಿವ ಈ ತ್ರಿಮೂರ್ತಿಗಳನ್ನು ಸಮನ್ವಯಗೊಳಿಸಿ ಸಮನ್ವಯವಾದೀ ಮತವನ್ನು ಪ್ರಚಾರಮಾಡಿದರು. ಇಸ್ಲಾಂಧರ್ಮದ ನಬೀಪಂಥದಿಂದ ಇದನ್ನು ಅಭಿನ್ನ ಎಂದು ಸಾರಿದರು. ಇವರ ಈ ಪ್ರಭಾವ ಹಿಂದೂಗಳನ್ನು ಏಕತ್ರ ಸೇರಿಸಲು ಬಹಳ ಸಹಾಯಕವಾಯಿತು.

ಬಾತಿನಿಯಾ ಸಂಪ್ರದಾಯದ ಅನುಯಾಯಿಗಳು ಹಾಗೂ ಪ್ರಚಾರಕರು ಉತ್ತರದಿಂದ ದಕ್ಷಿಣಭಾರತದವರೆಗೆ ವ್ಯಾಪಿಸಿದ್ದಾರೆ. ದಕ್ಷಿಣದ ಮುಸ್ಲಿಂ ಸಂತರಲ್ಲಿ ತಿರುಚಿನಾಪಲ್ಲಿಯ ಸಯ್ಯದ್ ಮುಜಹರ್‌ವಲೀ, ಸಯ್ಯದ್ ಇಬ್ರಾಹಿಂ ಶಾಹೀದ್, ಬಾಬಾ ಫಕ್ರುದ್ದೀನ್, ಶೇಖ್‌ಮುಂತ್‌ಬಖಾಬುದ್ದೀನ್, ಜಾರೀಜರ್‌ಬಕ್ಶ್ ಮತ್ತು ಬಂದಾನವಾಜ್ ಗೆಸೂದರಾಜ್-ಇವರಿಗೆ ಮುಹಮ್ಮದ್ ಅಲ್ ಹುಸೈನೀ ಎಂಬ ಹೆಸರೂ ಇತ್ತು—ಮುಂತಾದ ಹೆಸರುಗಳು ಉಲ್ಲೇಖನೀಯವಾದವು.

ಬಂಗಾಲದಲ್ಲಿ ಕುತ್ಬುದ್ದೀನ್ ಬಕ್ತಿಯಾರ್ ಕಾಕೀ ಶಿಷ್ಯ ಶೇಖ್ ಜಲಾಲುದ್ದೀನ್ ತಬ್ರೇಜ್ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಮಮ್‌ಲೂಕ್ ವಂಶದವರೆಗೆ ಅನೇಕ ಸೂಫಿ ಮಠಗಳು ಸ್ಥಾಪಿತವಾಗಿದ್ದು ಅವು ಆಧ್ಯಾತ್ಮಿಕ ಸಂಪರ್ಕದ ಕೇಂದ್ರಗಳಾಗಿದ್ದುವು. ಬಂಗಾಳದಲ್ಲಿ ಸೂಫಿಮತ ಪ್ರಚಾರಕರಲ್ಲಿ ಉತ್ತರಪ್ರದೇಶದ ಜೌನಪುರ ಕೇಂದ್ರದ ಅನುಯಾಯಿಗಳು ಅಧಿಕವಾಗಿದ್ದರೆಂದು ಹೇಳಲಾಗುತ್ತದೆ.

ಭಾರತೀಯ ಆಚಾರ-ವಿಚಾರಗಳ ಮೇಲೆ ಸೂಫಿಮತದ ಪ್ರಭಾವ ಬಿದ್ದಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ನೂರಾರು ವರ್ಷಗಳ ಕಾಲ ನಿಕಟಸಂಪರ್ಕದಲ್ಲಿದ್ದು ಅದರ ಪ್ರಭಾವವುಂಟಾಗಲಿಲ್ಲ ಎಂದು ಹೇಳಿದರೆ ಆಶ್ಚರ್ಯವಾಗುತ್ತದೆ. ಕಬೀರದಾಸನ ಮೇಲೆ ಇದರ ಪ್ರಭಾವ ಉಂಟಾಗಿದೆ ಎಂಬುದಿರಲಿ ಸಿಖ್ ಗುರುಗಳ ಮೇಲಂತೂ ಇದರ ಆಳವಾದ ಪ್ರಭಾವವುಂಟಾಗಿದೆ. ಸಿಖ್ಖರ ಆದಿಗ್ರಂಥದಲ್ಲಿ ಶೇಖ್‌ಫರೀದನ ನೂರಕ್ಕಿಂತ ಹೆಚ್ಚು ವಚನಗಳನ್ನು ಸೇರಿಸುವ ಕಾರ್ಯದಲ್ಲಿ ನಿರತನಾಗಿದ್ದ ಪಾಕ್‌ಪತ್ತನದ ಶೇಖ್‌ಬ್ರಹ್ಮ ವಾಸ್ತವವಾಗಿ ಗುರುನಾನಕರ ಸ್ನೇಹಿತರಾಗಿದ್ದರು. ಲಾಹೋರಿನ ಪೀರ್ ಮಿಯಾ ಮೀರ್ ಕೂಡ ಗುರು ಅರ್ಜುನದೇವರ ಪರಮಮಿತ್ರರಾಗಿದ್ದರು. ಅಮೃತಸರದಲ್ಲಿರುವ ಸ್ವರ್ಣಮಂದಿರದ ಮುಖ್ಯಭಾಗದ ಶಿಲಾನ್ಯಾಸವನ್ನು ಇವರೇ ತಮ್ಮ ಅಮೃತಹಸ್ತದಿಂದ ನೆರವೇರಿಸಿದ್ದರೆಂದು ಹೇಳುತ್ತಾರೆ. ಮಾಲ್ಕಂ ಮತ್ತು ಪಿನ್ಸೆಪ್ ಪ್ರಕಾರ ನಾನಕ್ ಮತ್ತು ಅರ್ಜುನ್‌ದೇವ್ ಇಬ್ಬರ ಮೇಲೂ ಸೂಫಿಮತದ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ.

ಹದಿನಾರನೆಯ ಶತಮಾನದಲ್ಲಿ ಯೂರೋಪಿನಲ್ಲಿ ಉಂಟಾದ ನವಚೈತನ್ಯ ಹಾಗೂ ಜಾಗೃತಿಯ ಪ್ರಭಾವ ಇಸ್ಲಾಂದೇಶಗಳ ಮೇಲೆ ಉಂಟಾಯಿತು. ಇದರಿಂದಾಗಿ ಈ ದೇಶಗಳ ಸ್ಥಿತಿ ಅತ್ಯಂತ ಕ್ಷೀಣವಾಯಿತು. ಹದಿನೇಳನೇ ಶತಮಾನದ ಕೊನೆಯ ಹೊತ್ತಿಗೆ ಇಡೀ ಏಷ್ಯಾ ಇದರ ಪ್ರಭಾವಕ್ಕೊಳಗಾಗಿ ಶ್ರೀಹೀನವಾಯಿತು. ಪಶ್ಚಿಮ ರಾಷ್ಟ್ರಗಳ ಪ್ರಭಾವ ದಿನದಿಂದ ದಿನಕ್ಕೆ ಅಧಿಕವಾಗತೊಡಗಿತು. ಯೂರೋಪಿಯನ್ನರ ಸೈನಿಕಶಕ್ತಿ, ಕೂಟನೀತಿ ಮತ್ತು ಔದ್ಯೋಗಿಕ ಬೆಳವಣಿಗೆ ಯಾವುದಕ್ಕೂ ಸಾಟಿಯಿಲ್ಲದಂತೆ ಬೆಳೆಯಿತು. ಸೂಫಿಮತವೂ ಇದರ ಪ್ರಭಾವದಿಂದ ಬೇರೆಯಾಗಿ ಉಳಿಯಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಮೊದಲಿನ ದೃಷ್ಟಿಕೋನ ಸಂಪೂರ್ಣವಾಗಿ ಬದಲಾಯಿತು. ಹಳೆಯ ಮೌಲ್ಯಗಳ ಸ್ಥಾನವನ್ನು ನೂತನ ಮೌಲ್ಯಗಳು ಆಕ್ರಮಿಸಿದವು. ಹಳೆಯ ಸಂಪ್ರದಾಯದ ಮೌಲ್ಯಗಳನ್ನು, ಧರ್ಮ-ನೀತಿಗಳನ್ನು ಮುರಿಯುವುದಿರಲಿ, ಅವುಗಳ ಅವಹೇಳನವೂ ಆರಂಭವಾಯಿತು. ತುರ್ಕಿಸ್ತಾನದ ಮುಸ್ತಫಾ ಕಮಾಲ್‌ಪಾಶಾ ಹಳೆಯ ಸಂಪ್ರದಾಯಗಳ ಮೂಲವನ್ನೇ ಕೆದಕುವುದರಲ್ಲಿ ಹಿಂಜರಿಯಲಿಲ್ಲ. ಇದರಿಂದಾಗಿ ಜನರ ಉಚ್ಛೃಂಖಲ ಪ್ರವೃತ್ತಿ ಬೆಳೆಯಲಾರಂಭಿಸಿತು. ಭಾರತವೂ ಇದರಿಂದ ಹೊರತಾಗಲಿಲ್ಲ.

ಸೂಫಿಮತ ಯಾವ ಶಾಸ್ತ್ರ-ನಿಯಮಗಳನ್ನೂ ರೂಪಿಸಿಕೊಂಡು ಸಿದ್ಧ ಪಾಡ ವ್ಯವಸ್ಥೆಯಲ್ಲ. ಆತ್ಮಾನುಶಾಸನ ದಿಂದ ತನ್ನನ್ನು ಸಂಯಮನಗೊಳಿಸಿಕೊಂಡ ಒಂದು ನೈತಿಕ ವ್ಯವಸ್ಥೆ. ಈಶ್ವರನನ್ನು ಹುಡುಕಿಕೊಂಡು ಸತ್ಯಾರ್ಥಿ ಯಾಗಿ ಹೊರಟ ಸೂಫಿ ತನ್ನನ್ನು 'ಸಾಲಿಕ್' (ಸಾಧಕ) ಎಂದು ಕರೆದುಕೊಳ್ಳುತ್ತಾನೆ. ಅವನು ಒಂದು 'ತರೀಕತ್' (ಪಥ)ದಲ್ಲಿ ನಿಧಾನವಾಗಿ ಸಾಗುತ್ತಾ (ಮಕಾಮಾತ್) ಸೋಪಾನಗಳನ್ನೇರುತ್ತಾ ತನ್ನ ಗುರಿಯಾದ ಈಶ್ವರನನ್ನು ಮುಟ್ಟುವತನಕ, ಅವನಲ್ಲಿ ಲೀನವಾಗುವ (ಫನಾ-ಫಿಲ್-ಹಕ್) ತನಕ ಮುಂದುವರಿಯುತ್ತಾನೆ. ಸೂಫಿಮತದ ಅತ್ಯಂತ ಪ್ರಾಚೀನ ಗ್ರಂಥ 'ಕಿತಾಬ್-ಅಲ್-ಲುಮಾ'ದಲ್ಲಿ ಈ ಸಾಧಕನ ವಿವರವಾದ ವರ್ಣನೆ ದೊರೆಯುತ್ತದೆ. ಅವನ ಸಾಧನಾ ಮಾರ್ಗದಲ್ಲಿ ಈ ಗ್ರಂಥದ ಪ್ರಕಾರ ಏಳು ಅವಸ್ಥೆಗಳನ್ನು ಕಾಣಬಹುದು. ಇವುಗಳಲ್ಲಿ ಮೊದಲನೆಯದನ್ನು ಬಿಟ್ಟು ಉಳಿದ ಆರು ಸೋಪಾನಗಳು ಅಥವಾ ಸ್ಥಲಗಳು ಒಂದಾದಮೇಲೆ ಒಂದರಂತೆ ಅನುಕ್ರಮವಾಗಿ ಸಾಧಕನ ಸಿದ್ಧಿಯ ಪರಿಣಾಮವನ್ನು ಸೂಚಿಸುತ್ತವೆ. (೧) ಪಶ್ಚಾತ್ತಾಪ, (೨) ಸಂಯಮ, (೩) ವಿರಾಗ, (೪) ದೈನ್ಯ, (೫) ಧೈರ್ಯ, (೬) ಖುದಾನಲ್ಲಿ ವಿಶ್ವಾಸ ಅಥವಾ ನಂಬಿಕೆ ಮತ್ತು (೭) ಸಂತೋಷ—ಈ ಏಳು ಸೋಪಾನಗಳು ಸೂಫಿಯ ಯೌಗಿಕ ಹಾಗೂ ನೈತಿಕ ಅನುಶಾಸನದ ಅಂಗಗಳು ಮತ್ತು ಇವುಗಳ ಭೇದವನ್ನು 'ಅವಸ್ಥೆ'ಗಳಿಂದ ಬಹಳ ಎಚ್ಚರಿಕೆ ಯಿಂದ ತಿಳಿದುಕೊಳ್ಳಬೇಕು. ಸ್ಥಲಪ್ರಾಪ್ತಿ ಹಾಗೂ ಅವುಗಳ ಪೂರ್ಣಜ್ಞಾನ ಸ್ವಯಂ ತನ್ನ ಪ್ರಯತ್ನದಿಂದ ಸಾಧ್ಯ ವಾಗಿರುವುದರಿಂದ, ಅವಸ್ಥೆಗಳು ಆಧ್ಯಾತ್ಮಿಕಭಾವನೆಗಳು ಹಾಗೂ ಪ್ರಕೃತಿಗಳಾಗಿರುತ್ತವೆ. ಅವುಗಳ ಮೇಲೆ ಮನುಷ್ಯನ ಯಾವ ನಿಯಂತ್ರಣವೂ ಇರುವುದಿಲ್ಲ.

"ಅವು ಪರಮಾತ್ಮನಿಂದ ಮನುಷ್ಯನ ಹೃದಯದಲ್ಲಿ ಅವತರಿಸುತ್ತವೆ ಮತ್ತು ಮನುಷ್ಯ ಅವುಗಳು ಬರುವುದನ್ನೂ ತಡೆಯಲಾರ, ಹೋಗುವುದನ್ನೂ ತಡೆಯಲಾರ."

ಸಾಧಕ ಎಲ್ಲಿನವರೆಗೆ ಎಲ್ಲ ಸೋಪಾನಗಳನ್ನೂ (ಮಕಾಮಾತ್)ದಾಟುವುದಿಲ್ಲವೋ, ಒಂದೊಂದನ್ನೂ ದಾಟುವುದಕ್ಕೆ ಮುಂಚೆ ಅವುಗಳಲ್ಲಿ ಪರಿಣತಿಯನ್ನು ಪಡೆಯುವುದಿಲ್ಲವೋ, ಹಾಗೂ ಒಂದೊಂದೂ ಅವಸ್ಥೆಯನ್ನು ದಾಟುವಲ್ಲಿ ಪರಮಾತ್ಮ ಅವನಿಗೆ ಯಾವ ಯಾವ ಅವಸ್ಥೆಗಳನ್ನು ನೀಡುವ ಕೃಪೆ ಮಾಡಿದ್ದಾನೆ ಎಂಬುದರ ಅನುಭವವಾಗು ವುದಿಲ್ಲವೋ ಅಲ್ಲಿನವರೆಗೆ ಸೂಫಿಯ ಸಾಧನಮಾರ್ಗ ಪೂರ್ಣಗೊಳ್ಳುವುದಿಲ್ಲ. ಇಂಥ ಅನುಭವವಾದಾಗ ಮಾತ್ರ ಸೂಫಿಗಳು ಹೇಳುವ, 'ಮಾರ್‌ಫತ್' (ಬ್ರಹ್ಮಜ್ಞಾನ) ಹಾಗೂ 'ಹಕೀಕತ್' ಸತ್ಯದ ಉನ್ನತ ನೆಲೆಯಲ್ಲಿ ಸಾಧಕನ ಚೇತನ ಚಿರಸ್ಥಾಯಿಯಾಗಿ ನಿಲ್ಲುತ್ತದೆ. ಈ ಸ್ತರದಲ್ಲಿ 'ತಾಲಿಬ್' (ಅನ್ವೇಷಕ ಅಥವಾ ಸಾಧಕ) 'ಆರಿಫ್' (ಜ್ಞಾನಿ) ಆಗುತ್ತಾನೆ ಮತ್ತು ಆಗ ಅವನಿಗೆ ಜ್ಞಾನ, ಜ್ಞಾತೃ ಮತ್ತು ಜ್ಞೇಯ ಈ ಮೂರೂ ಒಂದೇ ಎಂಬ ಅರಿವುಂಟಾಗುತ್ತದೆ.

ತನ್ನ ಪಾಪಗಳ ಬಗ್ಗೆ ಅತ್ಯಂತ ವಿನಯ ಹಾಗೂ ಪಶ್ಚಾತ್ತಾಪಪೂರ್ವಕವಾಗಿ ವಿಚಾರಮಾಡುವುದೇ ಆಧ್ಯಾತ್ಮಜನಿತ ಅಭಿನಯದ ಪರಮೌಷಧಿ. ಪರಮಾತ್ಮನನ್ನು ಬಿಟ್ಟು ಉಳಿದ ಎಲ್ಲ ವಸ್ತುಗಳನ್ನೂ ಮರೆತು ಬಿಡುವುದೇ ನಿಜವಾದ ಪಶ್ಚಾತ್ತಾಪ. ಆದುದರಿಂದ "ಇಲ್ಲಿಗೆ ಪ್ರವೇಶ ಮಾಡುವವರೇ! ಸಂಪೂರ್ಣವಾಗಿ ತನ್ನತನ ವನ್ನು ಪರಿತ್ಯಾಗ ಮಾಡಿ ಇಲ್ಲಿಗೆ ಬನ್ನಿ"—ಎಂದು ಪಶ್ಚಾತ್ತಾಪದ ಮುಖ್ಯದ್ವಾರದಲ್ಲಿ ಬರೆಯಲ್ಪಟ್ಟಿದೆ. ಸರ್ವಸಮರ್ಪಣಭಾವದಿಂದ ಸಂನ್ಯಾಸವನ್ನು ಸ್ವೀಕರಿಸುವ ಸಾಧಕನನ್ನು ಮೂರು ವರ್ಷಗಳಕಾಲ ಆಧ್ಯಾತ್ಮಿಕ ಅನುಶಾಸನದಲ್ಲಿರಿಸುತ್ತಾರೆ. ಮೊದಲ ವರ್ಷ ಜನಸಾಮಾನ್ಯರ ಸೇವೆಯಲ್ಲಿ, ಎರಡನೆಯ ವರ್ಷ ಪರಮಾತ್ಮನ ಸೇವೆಯಲ್ಲಿ ನಿರತನಾಗಿದ್ದು ಮೂರನೆಯ ವರ್ಷ ತನ್ನ ಹೃದಯವನ್ನು ಜಾಗೃತಗೊಳಿಸಿಕೊಳ್ಳಬೇಕಾಗುತ್ತದೆ. ಹೀಗೆ ಕೊನೆಗೆ ಈಶ್ವರಭಕ್ತಿಗಾಗಿ ಈಶ್ವರೋಪಾಸನೆಯನ್ನು ಮಾಡುವ ಶಿಷ್ಯನನ್ನು ಸಾಧಕನನ್ನಾಗಿ ಸ್ವೀಕರಿಸಿದಮೇಲೆ ಅತ ಮುರಕ್ಕಾತ್ (ತೇಪೆಹಾಕಿದ ಬಟ್ಟೆ)ಅನ್ನು ಧರಿಸುತ್ತಾನೆ. ಸಾಧನಾಮಾರ್ಗದಲ್ಲಿ ಮುಂದುವರಿಯುತ್ತಾನೆ. ದಾಸೋಹಂಭಾವದಿಂದ ಸಾಧನೆಯಲ್ಲಿ ತೊಡಗುತ್ತಾನೆ. ನಫ್ಸ್‌ಕುಶೀ ಅಂದರೆ ಇಂದ್ರಿಯ ದಮನಮಾಡುತ್ತ ಚಲಿಸಿ ದಂತೆಲ್ಲ ಅದರ ಅವಗುಣಗಳಾದ ಅಜ್ಞಾನ, ಅಭಿಮಾನ, ಈರ್ಷ್ಯೆ, ಅನುದಾರತೆ ಮುಂತಾದವು ಕ್ಷೀಣಿಸುತ್ತಹೋದಂತೆಲ್ಲ ತವಕ್ಕುಲ್ ಅಂದರೆ ಪರಮಾತ್ಮನಲ್ಲಿ ನಂಬಿಕೆ ದೃಢವಾಗುತ್ತ ಹೋಗುತ್ತದೆ. ಇದರಿಂದಾಗಿ ದೇವನೊಬ್ಬ, ಅವನೊಬ್ಬನೇ ಪರಮಾತ್ಮ, ಈ ಪರಮಾತ್ಮನಲ್ಲಿ ಅಮಿತವಾದ ವಿಶ್ವಾಸ ಈ ಮೂರು ಭಾವಗಳು ಬಲಿಯುತ್ತವೆ. ಇಲ್ಲಿಂದ ಮುಂದೆ ಈಶ್ವರನ ಜಿಕ್ರ್ ಅಂದರೆ ಜಪ ಮಾಡುತ್ತಿರುತ್ತಾನೆ. ಜೊತೆಗೆ 'ಮುರಾಕಬತ್' ಅಂದರೆ ಧ್ಯಾನ ಅಥವಾ ಮನನ ಮಾಡುತ್ತಾನೆ. ಅಂದರೆ ಏಕಾಗ್ರಚಿತ್ತದಿಂದ ಈಶ್ವರನ ಉಪಾಸನೆ ಮಾಡುತ್ತ ಈಶ್ವರನ ದರ್ಶನ ಪಡೆಯುತ್ತಿದ್ದೇನೆ ಎಂಬಂತೆ ತನ್ನಲ್ಲಿಯೇ ಈಶ್ವರನನ್ನು ಕಾಣತೊಡಗುತ್ತಾನೆ. ಅನುಕ್ರಮವಾಗಿ ಸಾಧನಾಮಾರ್ಗದಲ್ಲಿ ಚಲಿಸುವ ಸೂಫಿ

ಸಾಧಕ-ವಚನಕಾರರು ಚಲಿಸಿ ಶೂನ್ಯಸಂಪಾದನೆ ಮಾಡಿಕೊಂಡಂತೆ—ಎಲ್ಲ ಸ್ಥಲಗಳನ್ನೂ ಒಂದೊಂದಾಗಿ ಏರಿ ಈಶ್ವರ ನಲ್ಲಿ ಐಕ್ಯನಾಗಿ ಶೂನ್ಯಸಂಪಾದನೆಯನ್ನು ಮಾಡಿಕೊಳ್ಳುತ್ತಾನೆ. ಈಶ್ವರ ಜ್ಯೋತಿಯಲ್ಲಿ ಒಂದಾಗಿ ಜ್ಯೋತಿಯು ಬೆಳಗಿ ಜ್ಯೋತಿ ತಾನೇ ಆಗುತ್ತಾನೆ ಎಂಬುದನ್ನು ಸೂಫಿಗಳಲ್ಲಿ ಕಾಣಬಹುದು. ವಿಸ್ತಾರಭಯದಿಂದ ಅವರ ಅನುಭಾವದ ನುಡಿಗಳನ್ನು ಕೊಡದೆ ಇಷ್ಟಕ್ಕೇ ಇದನ್ನು ನಿಲ್ಲಿಸುತ್ತೇನೆ. ಬೇರೊಂದು ಪುಸ್ತಿಕೆಯಲ್ಲಿ ಇವುಗಳ ವಿವರಗಳನ್ನು ಕೊಟ್ಟಿದ್ದೇನೆ.

೧೦೫೦ರಲ್ಲಿ ಮರಣಹೊಂದಿದ ಶೀರಾಜ್‌ನ ದರವೇಶ್ 'ಬಾಬಾ ಕೂಹೀ'ಯ ಒಂದು ಅನುಭವ ವಚನದ ಒಂದು ಭಾಗದ ಅನುವಾದವನ್ನು ಇಲ್ಲಿ ಕೊಡುತ್ತೇನೆ—

ಸಂತೆಯಲ್ಲಿ ಮಠದಲ್ಲಿ ನಾನು ಕೇವಲ ಪರಮಾತ್ಮನನ್ನು ಕಂಡೆ
ಬೆಟ್ಟದ ಮೇಲೆ, ಕಣಿವೆಯಲ್ಲಿ ನಾನು ಕೇವಲ ಪರಮಾತ್ಮನನ್ನು ಕಂಡೆ ॥
ಕಷ್ಟದಲ್ಲಿ ಅವನನ್ನು ಅಧಿಕವಾಗಿ ನನ್ನ ಪಕ್ಕದಲ್ಲಿಯೇ ಕಂಡೆ
ಸ್ನೇಹದಲ್ಲಿ ಸೌಭಾಗ್ಯದಲ್ಲಿ ನಾನು ಕೇವಲ ಪರಮಾತ್ಮನನ್ನು ಕಂಡೆ ॥
ಪ್ರಾರ್ಥನೆ ಮತ್ತು ವ್ರತಗಳಲ್ಲಿ, ಸ್ತುತಿ ಮತ್ತು ಚಿಂತನೆಯಲ್ಲಿ
ಪೈಗಂಬರನ ಧರ್ಮದಲ್ಲಿ ನಾನು ಕೇವಲ ಪರಮಾತ್ಮನನ್ನು ಕಂಡೆ ॥
ದೇಹವಿಲ್ಲ ಮತ್ತು ಆತ್ಮವಿಲ್ಲ, ಘಟನೆಯಿಲ್ಲ ಪದಾರ್ಥವಿಲ್ಲ,
ಗುಣವಿಲ್ಲ ಕಾರಣವಿಲ್ಲ, ನಾನು ಕೇವಲ ಪರಮಾತ್ಮನನ್ನು ಕಂಡೆ ॥
ಕಣ್ಣು ತೆರೆದು ಅವನ ಮುಖದ ಬೆಳಕಿನಲ್ಲಿ ನನ್ನ ಸುತ್ತ ನೋಡಿದೆ
ಎಲ್ಲ ಕಡೆಯಲ್ಲೂ ನನ್ನ ಕಣ್ಣಿಗೆ ಪರಮಾತ್ಮನೇ ಕಾಣಿಸಿದ ॥
ಮೇಣದ ಬತ್ತಿಯಂತೆ ಅವನ ಪ್ರಕಾಶಾಗ್ನಿಯಲ್ಲಿ ಕರಗುತ್ತಿದ್ದೆ ;
ಹೊರಗಡೆಗೆ ಚಾಚುತ್ತಿದ್ದ ಉರಿಯಲ್ಲಿ ನಾನು ಕೇವಲ ಪರಮಾತ್ಮನನ್ನು ಕಂಡೆ ॥
ನನ್ನ ಕಣ್ಣುಗಳಿಂದ ನನ್ನನ್ನು ಸ್ಪಷ್ಟವಾಗಿ ಕಂಡೆ
ಆದರೆ ನಾನು ಪರಮಾತ್ಮನ ಕಣ್ಣುಗಳಿಂದ ನೋಡಿದಾಗ ನಾನು ಕೇವಲ ಪರಮಾತ್ಮನನ್ನು ಕಂಡೆ ॥
ನಾನು ಶೂನ್ಯದಲ್ಲಿ ಸೇರಿಹೋದೆ ಮತ್ತು ವಿಲೀನವಾಗಿಹೋದೆ
ಮತ್ತು ನೋಡು, ನನಗೆ ಅನಂತಜೀವನ ಸಿಕ್ಕಿತು, ಏಕೆಂದರೆ ನಾನು ಕೇವಲ ಪರಮಾತ್ಮನನ್ನು ಕಂಡೆ ॥

ವೀರಶೈವದ ಪ್ರಕಾರ ಸರ್ವಶೂನ್ಯನಿರಾಲಂಬವೆನಿಸಿದ ಅನಿರ್ವಾಚ್ಯಪರವಸ್ತುವೇ ಲೀಲೆಗೆಂದು ನೆನೆದೊಡನೆ ಶಕ್ತಿಸಂಕ್ಷೋಭೆಯಾಗಿ ಚಿತ್ತು, ನಾದ, ಬಿಂದುಃಕಲೆಗಳು ಜನಿಸಿ ಚಿತ್ತಿನೊಡನೆ ಕೂಡಿ, ಚಿನ್ನಾದ, ಚಿದ್ಬಿಂದು, ಚಿತ್ಕಲೆ ಯಾಗಿ ಮೂಲಚಿತ್ತು ಈ ಮೂರರೊಂದಿಗೆ ಬೆರೆತು ಮಹಾಲಿಂಗವಾಯಿತು—ಈ ಮಹಾಲಿಂಗವೇ ಪರಬ್ರಹ್ಮ. ಅಖಂಡ ಪರಂಜ್ಯೋತಿರ್ಮಯವಾದ ಮಹಾಲಿಂಗವು ತನ್ನ ಲೀಲಾಸ್ವತಂತ್ರತೆಯಿಂದ ತನ್ನ ತಾನರ್ಚಿಸಿ ಪೂಜಿಸಿ ಕೊಳ್ಳುವ ಒಂದು ಲೀಲಾವಿಲಾಸದಿಂದ ತನ್ನ ಅಖಂಡ ಚಿಚ್ಛಕ್ತಿಯ ಸಹಸ್ರಾಂಶದೊಳಗೊಂದು ಅಂಶವನ್ನು ಬೇರೆ ಮಾಡಿತು. ಅದೇ ಆತ್ಮವಾಯಿತು. ಅಗ್ನಿಯಿಂದ ಅಗ್ನ್ಯಂಶಗಳಾದ ಕಿಡಿಗಳು ಆವಿರ್ಭವಿಸುವಂತೆ ಪರಬ್ರಹ್ಮದಿಂದ ತದಂಶಭೂತರಾದ ಅನಂತಾನಂತ ಆತ್ಮರು ಆವಿರ್ಭವಿಸುತ್ತಾರೆ. ಮಹಾಲಿಂಗದ ಜ್ಯೋತಿಯಿಂದ ಉದ್ಭವಿಸಿದ ಕಿಡಿಗಳು ಆತ್ಮಗಳಾದರೆ ಆ ಮಹಾಲಿಂಗದ ಪಂಚಮುಖಗಳಲ್ಲಿ ಉದ್ಭವಿಸಿದ ಸಾದಾಖ್ಯಗಳಿಂದ ಮೈದೋರಿದ ತತ್ತ್ವಗಳು ಆತ್ಮ ಗಳಿಗೆ ದೇಹವಾಗುತ್ತವೆ. ಅಂದರೆ ದೇಹವನ್ನು ಧರಿಸಿ ದೇಹಿಯಾದ ಜೀವಾತ್ಮನಲ್ಲಿ ಮಹಾಲಿಂಗದ ಅಂಶಗಳೇ ಅಡಗಿವೆ. ಈ ಆತ್ಮನನ್ನು ವಿಷಯಸುಖಕ್ಕೆಳೆತರುವ ಪಂಚವಿಂಶತಿ ತತ್ತ್ವಗಳು ಮಾಯೆಯಿಂದ ಜನಿಸುತ್ತವೆ. ಪಂಚವಿಂಶತಿ ತತ್ತ್ವಾತ್ಮಕವಾದ ದೇಹದೇಹಿಗಳಾದ ಸಂಸಾರ ಸ್ಥಲವಾಗುತ್ತದೆ. ಇಲ್ಲಿಂದ ಮುಂದೆ ಸಂಸಾರಚಕ್ರದಲ್ಲಿ ಸಿಲುಕಿದ ಜೀವ ಮತ್ತೆ ತನ್ನ ಸ್ವಸ್ವರೂಪಜ್ಞಾನವನ್ನು ಪಡೆಯಲು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳಲ್ಲಿ ಚಲಿಸಿ ಆ ಮಹಾಲಿಂಗದಲ್ಲಿ ಐಕ್ಯವಾಗುತ್ತದೆ. ಇದನ್ನೇ ಬಯಲು, ನಿಬ್ಬಯಲು, ಶೂನ್ಯ ಮುಂತಾಗಿ ಕರೆಯುತ್ತಾರೆ.

ಇದನ್ನೇ ಬೇರೊಂದು ರೀತಿಯಲ್ಲಿ ಹೇಳುತ್ತಾರೆ. ಪರವಸ್ತುವು ಪ್ರಥಮದಲ್ಲಿ ಭಾವಲಿಂಗ, ಪ್ರಾಣಲಿಂಗ, ಇಷ್ಟ ಲಿಂಗವೆಂದು ಮೂರು ತೆರನಾಯಿತು. ಇದೇ ಮುಂದುವರಿದು ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ,

ಗುರುಲಿಂಗ ಮತ್ತು ಆಚಾರಲಿಂಗವೆಂದು ಆರು ಲಿಂಗಗಳಾದವು. ಅನಂತರ ಶಕ್ತಿಯು ಆರು ಮುಖಗಳಿಂದ ಆರು ಅಂಗಗಳಾದವು. ಹೀಗೆ ಪರವಸ್ತುವು ಮೊದಲು ಆರು ಲಿಂಗಗಳಾಗಿ ಅನಂತರ ಆರು ಅಂಗಗಳಲ್ಲಿ ನೆಲಸಿ ರೂಪುಗೊಳ್ಳುವುದನ್ನು ಪ್ರವೃತ್ತಿ ಎಂದು ಕರೆಯುತ್ತಾರೆ.

ಇದೇ ರೀತಿ ಐಕ್ಯ. ಶರಣ, ಪ್ರಾಣಲಿಂಗ, ಪ್ರಸಾದ, ಮಹೇಶ್ವರ ಮತ್ತು ಭಕ್ತ ಎಂದು ಆರು ಅಂಗಸ್ಥಲಗಳಿವೆ. ಈ ಅಂಗಗಳೇ ಲಿಂಗನಲ್ಲಿ ಕೂಡಿಹೋಗುವುದನ್ನು ನಿವೃತ್ತಿ ಎಂದು ಕರೆಯುತ್ತಾರೆ. ಹೀಗೆ ಲೋಕದಲ್ಲಿ ಪ್ರವೃತ್ತವಾದ ಲಿಂಗವೇ ಅಂಗರೂಪಿನಲ್ಲಿದ್ದು ಪುನಃ ಲಿಂಗದತ್ತ ನಡೆದು ನಿವೃತ್ತಿಯಾಗುವುದು ಅಂದರೆ ಅಂಗ ಲಿಂಗದಲ್ಲಿ ಸೇರುವುದೇ ಲಿಂಗಾಂಗಸಾಮರಸ್ಯ. ಇದೇ ಷಟ್ಸ್ಥಲದ ರಹಸ್ಯ. ಇದೇ ವೀರಶೈವ ತತ್ತ್ವ.

ಸೂಫಿಮತವು ಪ್ರಕಾಶಪ್ರಾಪ್ತಿ ಮತ್ತು ಆಹ್ಲಾದ. ಮಾರಿಫತ್ (ಜ್ಞಾನ), ದೈವೀಪ್ರೇಮ. ಮಿಲನಾವಸ್ಥೆಯವರೆಗೆ ಅನೇಕ ಹಂತಗಳನ್ನು ದಾಟಿ ಅಲ್ಲಾ ಅಥವಾ ಈಶ್ವರನಲ್ಲಿ ಲೀನವಾಗುವ ಸಿದ್ಧಾಂತವನ್ನು ಹೇಳುತ್ತದೆ. ವೀರಶೈವರಂತೆಯೇ ಷಟ್ಸ್ಥಲಗಳನ್ನು ಸಾಧಿಸಿ ಮಿಲನಾವಸ್ಥೆಯನ್ನೂ ಅನುಭವಿಸುತ್ತಾರೆ. ಸೂಫಿಗಳೂ ಇಂದ್ರಿಯಸಂಯಮ. ಶುದ್ಧ ಆಚಾರ, ಶರಣಸತಿಲಿಂಗಪತಿಭಾವಗಳನ್ನು ಅನುಷ್ಠಾನದಲ್ಲಿ ತರುತ್ತಾರೆ. ಇವರ ವಚನಗಳನ್ನು ಗಮನಿಸಿದಾಗ ಅನುಭಾವದ ಏಕತೆಯನ್ನು ಗಮನಿಸಬಹುದು.

---

ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿಶ್ರಿತಾಃ ।
ಅಥ ಮರ್ತ್ಯೋ ಅಮೃತಃ ಭವತಿ ಅತ್ರ ಬ್ರಹ್ಮ ಸಮಶ್ನುತೇ ॥

ಕಠೋಪನಿಷತ್

* * *

ತಂ ಜೀವಂ ಹೃದ್ದಲಾಗ್ರೇಷು ವಿಚಾರ್ಯ ವಿಮಲಾತ್ಮನಿ ।
ಶಂಭುಂ ಪ್ರಾಣಾನ್ವಿತಂ ಲಿಂಗಂ ಗುರುದೀಕ್ಷಾಸಮನ್ವಿತಂ ॥
ಚಂದ್ರಕಾಂತೇ ಯಥಾತೋಯಂ ಸೂರ್ಯಕಾಂತೇ ಯಥಾನಲಂ ।
ಬೀಜೇ ಯಥಾಂಕುರಂ ವೃಕ್ಷೇ ಯಥಾ ಬೀಜಂ ತಥಾತ್ಮನಿ ॥
ಮತ್ವಾ ಮಾಂ ಲೋಕಲೋಕಜ್ಞಂ ವೇದಮೂರ್ಧ್ನಿ ಪ್ರತಿಷ್ಠಿತಂ ।
ಯಷ್ಟುರೇತ್ಸತತಂ ಲೋಕೇ ಸ ಪುಮಾನ್ ಪುರುಷರ್ಷಭಃ ॥

ವೀರಾಗಮ

# ವೀರಶೈವಧರ್ಮ ಮತ್ತು ಶೈವಸಿದ್ಧಾಂತ

ಆಂಗ್ಲ ಮೂಲ : ಡಾ. ಎಚ್.ಪಿ. ಮಲ್ಲೇದೇವರು
ಅನುವಾದ : ಬಿ. ಎಸ್. ಪರ್ವತರಾಜು

ಶೈವಧರ್ಮವು ಭಾರತದ ಪ್ರಾಚೀನಧರ್ಮಗಳಲ್ಲೊಂದಾಗಿದೆ. ಶೈವಸಿದ್ಧಾಂತದ ಉಗಮದ ಬಗೆಗೆ ನಿರ್ದಿಷ್ಟವಾದ ಕಾಲವನ್ನು ಗುರುತಿಸುವುದು ಸುಲಭಸಾಧ್ಯವಲ್ಲ. ಹರಪ್ಪ ಮತ್ತು ಮೊಹೆಂಜೋದಾರೋವಿನ ಉತ್ಖನನಗಳು ಸಿಂಧೂ ಕಣಿವೆಯಲ್ಲಿ ವಾಸಿಸುತ್ತಿದ್ದ ಜನರ ನಾಗರೀಕತೆಯು ಉನ್ನತ ಮಟ್ಟದಲ್ಲಿದ್ದುದರ ಬಗೆಗೆ ಹೆಚ್ಚಿನ ಬೆಳಕನ್ನು ಚೆಲ್ಲುವುದಷ್ಟೇ ಅಲ್ಲದೆ, ಶೈವಧರ್ಮವು ಅಂದಿನ ಜನಾಂಗದ ಧರ್ಮವಾಗಿತ್ತೆಂಬುದನ್ನು ಖಚಿತಪಡಿಸುತ್ತದೆ. ಆರ್ಯರು ಭಾರತಕ್ಕೆ ವಲಸೆ ಬರುವುದಕ್ಕಿಂತಲೂ ಮುನ್ನವೇ ಈ ದೇಶದಲ್ಲಿ ಶೈವಧರ್ಮವು ಅಸ್ತಿತ್ವದಲ್ಲಿತ್ತು. ಮ್ಯಾಕ್‌ನಿಕಾಲರ ಅಭಿಪ್ರಾಯದಂತೆ, 'ಶಿವನು ಮೂಲನಿವಾಸಿಗಳ ದೇವನಾಗಿದ್ದ.'[1] 'ಶೈವಧರ್ಮದ ವ್ಯಾಪಕತೆ ಹಾಗೂ ಪ್ರಭಾವವು ಭಾರತದಲ್ಲಷ್ಟೇ ಅಲ್ಲದೆ ಭಾರತದ ಸುತ್ತಮುತ್ತಣ ದ್ವೀಪಗಳಿಗೂ ಏಷ್ಯಾ ಮೊದಲಾದ ಪ್ರದೇಶಗಳಿಗೂ ಹಬ್ಬಿತ್ತೆಂದು'[2] ಪ್ರೊ॥ ಕೆ. ಎ. ನೀಲಕಂಠಶಾಸ್ತ್ರಿಗಳು ಉಲ್ಲೇಖಿಸಿರುವುದು ಯುಕ್ತವಾಗಿದೆ.

ಋಗ್ವೇದ[3], ಯಜುರ್ವೇದ[4], ಅಥರ್ವವೇದ[5]ಗಳಲ್ಲಿಯೂ, 'ಶಿವ'ನ ಸಂಬಂಧವಾದ ಉಲ್ಲೇಖ ಕಂಡುಬರುತ್ತದೆ. ಶ್ವೇತಾಶ್ವತರ[6] ಹಾಗೂ ಇನ್ನೂ ಕೆಲವು ಉಪನಿಷತ್ತುಗಳು ಶಿವನ ಹಿರಿಮೆಯನ್ನು ವಿವರಿಸುತ್ತವೆ. ಮೆಗಸ್ತನೀಸನು ಶಿವನ ಆರಾಧನೆಯನ್ನು ಉಲ್ಲೇಖಿಸುತ್ತಾನೆ.[7] ಪತಂಜಲಿ ಮಹರ್ಷಿಯು ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುವ ಶಿವಭಾಗವತರ ಹಾಗೂ ಪರಿವ್ರಾಜಕರ ವಿಷಯವನ್ನು ತಿಳಿಸುತ್ತಾನೆ. ಅಮೂಲ್ಯವಾದ ಲೋಹಗಳಿಂದ ಮಾಡಲ್ಪಟ್ಟ ಶಿವ ಮತ್ತು ಸ್ಕಂದರ ಮೂರ್ತಿಗಳ ಬಗೆಗೆ ಮಹರ್ಷಿ ಪತಂಜಲಿಯು ಪ್ರಸ್ತಾಪಿಸಿದ್ದಾನೆ. ಈ ಎಲ್ಲ ಅಂಶಗಳಿಂದ ಶಿವನು ಪೂಜ್ಯನಾಗಿದ್ದನೆಂದೂ ಅವನ ಅರ್ಚನೆಯು ನಡೆಯುತ್ತಿತ್ತೆಂದೂ ವ್ಯಕ್ತವಾಗುತ್ತದೆ. ಈಶ್ವರ, ಮಹೇಶ್ವರ, ವಿಶ್ವೇಶ್ವರ ಮುಂತಾದ ವಿಶೇಷಣಗಳಿಂದ ಶಿವನ ಶ್ರೇಷ್ಠತ್ವವನ್ನು ಪ್ರಶಂಸಿಸುವ ಉಕ್ತಿಗಳು ಹೇರಳವಾಗಿ ಮಹಾಭಾರತದಲ್ಲಿವೆ.[8] ಭಸ್ಮ-ರುದ್ರಾಕ್ಷಿಗಳನ್ನು ಧರಿಸಿದ ಸನ್ಯಾಸಿಗಳ ವಿಷಯವನ್ನು ಮಹಾಭಾರತವು ಉಲ್ಲೇಖಿಸುತ್ತದೆ. ಈ ಎಲ್ಲ ಅಂಶಗಳಿಂದ ಶೈವಧರ್ಮವು ಅತ್ಯಂತ ಪ್ರಾಚೀನವಾದ ಹಾಗೂ ಅತ್ಯಧಿಕವಾಗಿ ಆಚರಿಸಲ್ಪಡುತ್ತಿದ್ದ ಧರ್ಮಗಳಲ್ಲೊಂದಾಗಿದ್ದುದಲ್ಲದೆ ಅಂದಿನ ಜನರ ಜೀವನವನ್ನು ರೂಪಿಸುವಲ್ಲಿ ವಿಶಿಷ್ಟವಾದ ಪ್ರಭಾವವನ್ನು ಬೀರಿತ್ತೆಂಬುದು ಗಮನಾರ್ಹ ವಿಷಯ. ಭಾರತದಲ್ಲಿ ಈಗಲೂ ಈ ಧರ್ಮದ ಅನೇಕ ಅನುಯಾಯಿಗಳಿದ್ದಾರೆ.

ಶೈವಧರ್ಮವು ಕರ್ನಾಟಕದ ವೀರಶೈವ, ತಮಿಳುನಾಡಿನ ಶೈವಸಿದ್ಧಾಂತ, ಕಾಶ್ಮೀರದ ಶಿವಾದ್ವೈತ (ತ್ರಿಕ

1 Macnicol, *Indian Theism*, p. 161, Oxford University Press, 1915

2 *The Cultural Heritage of India*, Vol. II, p. 16. Pub. by Ramakrishna Centenary Committee, Calcutta.

3 ಋಗ್ವೇದ, I. 8.8 ; I. 16.9 ; II. 33 ; X. 92.9 ; X. 136

4 ಯಜುರ್ವೇದ ತೈತ್ತಿರೀಯಸಂಹಿತಾ, IV. 5.1 ; VI. 2.3. ಯಜುರ್ವೇದ ವಾಜಸನೇಯಸಂಹಿತಾ, XVI. XXXIX

5 ಅಥರ್ವವೇದ, IV. 28.1 ; VI. 1.9 ; XI. 2.10 ; XIII. 4.28 ; XV. 5.1

6 ಅಣೋರಣೀಯಾನ್ಮಹತೋ ಮಹೀಯಾನಾತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತಮಕ್ರತುಂ ಪಶ್ಯತಿ ವೀತಶೋಕೋ ಧಾತುಃ ಪ್ರಸಾದಾನ್ಮಹಿಮಾನಮೀಶಮ್ ॥ ಶ್ವೇ.ಉ. III. ೨೦

7 Elliot : *Hinduism and Buddhism*, II ; pp. 137–8

8 ಮಹಾಭಾರತ, VIII. 436 ; X. 252 ; XII. 4498

ಸಿದ್ಧಾಂತ), ಗುಜರಾತಿನ ಪಾಶುಪತ, ಬಂಗಾಳದ ಶೈವಧರ್ಮ ಮೊದಲಾದ ಅನೇಕ ಧರ್ಮಗಳ ಉಗಮಕ್ಕೆ ಕಾರಣವಾಯಿತು.

ಪ್ರಸ್ತುತ ಲೇಖನದಲ್ಲಿ, ವೀರಶೈವಧರ್ಮದ (ಶಕ್ತಿವಿಶಿಷ್ಟಾದ್ವೈತಸಿದ್ಧಾಂತ) ಮತ್ತು ಶೈವಸಿದ್ಧಾಂತದ ಪ್ರಮುಖಲಕ್ಷಣಗಳನ್ನು ತೌಲನಿಕವಾಗಿ ಸೂಚಿಸಲು ಪ್ರಯತ್ನಿಸಲಾಗಿದೆ.

## ವೀರಶೈವಧರ್ಮ ಮತ್ತು ಶೈವಸಿದ್ಧಾಂತದ ಮೂಲಗಳು

ಶೈವಧರ್ಮದ ಎಲ್ಲ ಶಾಖೆಗಳಿಗೂ ಶೈವಾಗಮಗಳೇ ಪ್ರಧಾನವಾಗಿ ಆಧಾರಗ್ರಂಥಗಳು. ಶೈವಾಗಮಗಳನ್ನು ಆಧರಿಸಿದ ವಿವಿಧ ಪಂಥಗಳು ಭಿನ್ನವೇನಲ್ಲ. ಅವು ಸತ್ಯದ ಸಾಕ್ಷಾತ್ಕಾರದತ್ತ ಹಲವು ಪ್ರಯತ್ನಗಳನ್ನು ಸೂಚಿಸುತ್ತವೆ.

ಇಪ್ಪತ್ತೆಂಟು ಶೈವಾಗಮಗಳು[9] ಮತ್ತು ಇನ್ನೂರಿಪ್ಪತ್ತೈದು ಉಪಾಗಮಗಳು,[10] ಅಲ್ಲಮಪ್ರಭು, ಚನ್ನಬಸವಣ್ಣ, ಬಸವಣ್ಣ, ಸಿದ್ಧರಾಮ, ಮಹಾದೇವಿಯಕ್ಕ, ಲಿಂಗಮ್ಮ ಮುಂತಾದ ಅನುಭಾವಿಗಳ ವಚನಗಳು ಹಾಗೂ ಶಿವಾಗ್ರಯೋಗಿ ಶಿವಾಚಾರ್ಯ, ನೀಲಕಂಠ ಶಿವಾಚಾರ್ಯ, ಮಗ್ಗೆಯ ಮಾಯಿದೇವ, ಮರಿತೋಂಟದಾರ್ಯ ಮುಂತಾದವರ ಕೃತಿಗಳು ವೀರಶೈವಧರ್ಮಕ್ಕೆ ಅತ್ಯಮೂಲ್ಯವಾದ ಆಧಾರಗ್ರಂಥಗಳೆಂದು ಹೇಳಬಹುದು.

ಇಪ್ಪತ್ತೆಂಟು ಆಗಮಗಳು ಮತ್ತು ಉಪಾಗಮಗಳು,[11] ನಾಯನ್ಮಾರೈಗಳು ಮೇಯ್ಕಂಡಶಾಸ್ತ್ರಗಳು (೧೪) ಹಾಗೂ ತಿರುಮುರೈ (೧೨) ಎಂದು ಕರೆಯಲ್ಪಡುವ ತಮಿಳು ಸಂತರ ಭಕ್ತಿಪ್ರಧಾನವಾದ ವಚನಗಳು ಶೈವಸಿದ್ಧಾಂತಕ್ಕೆ ಆಧಾರಗ್ರಂಥಗಳಾಗಿವೆ.

## ಪರಾತ್ಪರವಸ್ತು (ದೇವರು)

ಪರಾತ್ಪರವಸ್ತುವನ್ನು ವೀರಶೈವಧರ್ಮವು 'ಲಿಂಗ'ವೆಂದೂ[12]; ಶೈವಸಿದ್ಧಾಂತವು 'ಪತಿ'[13] ಎಂದೂ ಪರಿಗಣಿಸಿವೆ.

'ಲೀ' ಮತ್ತು 'ಗಮ್' ಎಂಬೆರಡು ಧಾತುಗಳಿಂದ 'ಲಿಂಗ' ಶಬ್ದವು ನಿಷ್ಪನ್ನವಾಗಿದೆ. 'ಗಮ್' ಧಾತುವಿಗೆ 'ಗಮನ', 'ಸೇರು', 'ಉದ್ಭವಿಸುವಿಕೆ' ಎಂಬರ್ಥಗಳಿವೆ. ಅಂದರೆ ಯಾವುದರಿಂದ ಸೃಷ್ಟಿಯು ಆರಂಭವಾಗಿದೆಯೋ ಅರ್ಥಾತ್ ಯಾವುದು ಸೃಷ್ಟಿಗೆ ಮೂಲಕಾರಣವಾಗಿದೆಯೋ ಅದು. 'ಲೀ' ಧಾತುವಿಗೆ 'ಲೀನವಾಗುವಿಕೆ' (ಐಕ್ಯವಾಗುವಿಕೆ) ಎಂಬರ್ಥವಿದೆ. ಅಂದರೆ ಯಾವುದರಲ್ಲಿ ಎಲ್ಲ ವಸ್ತುಗಳೂ ಅಂತ್ಯದಲ್ಲಿ ಲೀನವಾಗುತ್ತವೋ ಅದು.[14] ಬೇರೆ ಮಾತಿನಿಂದ ಹೇಳುವುದಾದರೆ ಲಿಂಗವು ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಮೂಲಕಾರಣ. ವೀರಶೈವಧರ್ಮದಲ್ಲಿ ಪರಾತ್ಪರ

---

[9] ಕಾಮಿಕ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಹಸ್ರ, ಅಂಶುಮಾನ್, ಸುಪ್ರಭೇದ, ವಿಜಯ, ನಿಶ್ವಾಸ, ಸ್ವಾಯಂಭುವ, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಸರ್ವೋತ್ತರ, ಪಾರಮೇಶ್ವರ, ಕಿರಣ ಮತ್ತು ವಾತುಲ.

[10] ಇನ್ನೂರೈದಕ್ಕೂ ಮಿಗಿಲಾಗಿ ಉಪಾಗಮಗಳಿವೆ. ವೀರಶೈವದಾರ್ಶನಿಕ ಗ್ರಂಥಗಳಲ್ಲಿ ಶಿವಧರ್ಮೋತ್ತರ, ವಿಜಯಭೈರವೀ, ವಾತುಲೋತ್ತರ, ನಿಶ್ವಾಸಕಾರಿಕಾ ಮೊದಲಾದ ಉಪಾಗಮಗಳು ಹಲವೆಡೆ ಉಲ್ಲೇಖಿಸಲ್ಪಟ್ಟಿವೆ.

[11] ಶೈವಸಿದ್ಧಾಂತವನ್ನು ನಿರೂಪಿಸಲು ತಮಿಳು ಗ್ರಂಥಗಳಲ್ಲಿ, ಉಪಾಗಮಗಳಾದ ಮೃಗೇಂದ್ರಾಗಮ ಮತ್ತು ಪೌಷ್ಕರಾಗಮಗಳ ಉಲ್ಲೇಖಗಳು ಹೆಚ್ಚಾಗಿ ಕಂಡುಬರುತ್ತವೆ.

[12] ಲಿಂಗವೆಂಬುದು ಸರ್ವಕಾರಣ ನಿರ್ಮಲ
ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ
ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಕಾರಣ
ಲಿಂಗವೆಂಬುದು ಸರ್ವತತ್ವ ಪುರಾಣ ಚೈತನ್ಯ
ಲಿಂಗವೆಂಬುದು ಜನ್ಮವಾರಿಧಿಯ ದಾಂಟಿಸುವ ಬೈತ್ರವು
ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯಲಿಂಗವು
ಇಂತೀ ಲಿಂಗದ ಮರ್ಮವನರಿದವನೆ ಅರಿದವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

[13] ಲಯಭೋಗಾಧಿಕಾರಾತ್ಮಾ ವ್ಯಾಪಾರತ್ರಯಲಕ್ಷಿತಃ ।
ಸ್ವಭಾವಾದಚ್ಯುತಃ ಶಕ್ತಃ ಪದಾರ್ಥಃ ಪತಿಸಂಜ್ಞಿತಃ ॥
ಪೌಷ್ಕರಾಗಮ Manuscript No. R. 13663, Govt. Oriental Library, Madras

[14] ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ವವಿಶಾರದೈಃ ॥
ಶಿವಾನುಭವಸೂತ್ರ, ಅ. III, ಶ್ಲೋ. ೩. ಪ್ರ: ಮುರುಘಾಮಠ, ಧಾರವಾಡ, ೧೯೫೫

ವಸ್ತುವನ್ನು ಬಯಲು, ಸ್ಥಲ, ಶೂನ್ಯ, ನಿಷ್ಕಲಲಿಂಗ ಎಂದು ಕರೆಯಲಾಗಿದೆ. ಲಿಂಗವು ಅನುಭವಕ್ಕೆ ಮಾತ್ರ ವೇದ್ಯವಾಗಿ ಶಬ್ದಕ್ಕತೀತವಾದುದರಿಂದ "ಬಯಲು"[15] ಎಂದು ಶರಣರು ಹೇಳಿದ್ದಾರೆ. ಇದು ಅನಿರ್ವಚನೀಯವೆನಿಸಿದ ಪರಬ್ರಹ್ಮನನ್ನು ವರ್ಣಿಸುವ ಉಪನಿಷದ್ದ್ರಷ್ಟಾರರ 'ನೇತಿ ನೇತಿ'[16] ಉಕ್ತಿಗೆ ಸರಿಸಮನಾಗಿದೆ.

ವೀರಶೈವ ಪರಿಭಾಷೆಯಲ್ಲಿ 'ಸ್ಥಲ'ವೆಂದರೆ ಪರಬ್ರಹ್ಮ.[17] ಎಲ್ಲಾ ಭೌತಿಕವಸ್ತುಗಳ ಅಸ್ತಿತ್ವಕ್ಕೆ ಹಾಗೂ ವಿಕಾಸಕ್ಕೆ ಇದು ಮೂಲ; ಇದರಲ್ಲಿಯೇ ಎಲ್ಲ ವಸ್ತುಗಳೂ ಅಂತಿಮವಾಗಿ ಅಡಗುತ್ತವೆ.[18] ಮಾನಸಿಕವಾಗಿ ಇದೊಂದು ಹಂತ. ಆದ್ದರಿಂದಲೇ ಸತ್ಯಾನ್ವೇಷಣೆಯಲ್ಲಿ ಪ್ರವೃತ್ತನಾದ ವ್ಯಕ್ತಿಯ ಅಧ್ಯಾತ್ಮ ಪ್ರಗತಿಯನ್ನು ಸ್ಥಲವು ಸೂಚಿಸುತ್ತದೆ. ಪರಬ್ರಹ್ಮನನ್ನು 'ಶೂನ್ಯ'ವೆಂದೂ ಕರೆದಿದ್ದಾರೆ. ಏಕೆಂದರೆ ಅದು ವಿಧಿ ಮತ್ತು ನಿಷೇಧರೂಪವಾದ ವಿಶೇಷಣಗಳಿಗತೀತವಾದುದು.[19] ವೀರಶೈವ ಅನುಭಾವಿಗಳು ಪ್ರತಿಪಾದಿಸುವ ಶೂನ್ಯವು ಕೇವಲ ಅಭಾವವಲ್ಲ. ಅದು ಉಪನಿಷತ್ತಿನ 'ಪರಬ್ರಹ್ಮ'[20] ಶಬ್ದಕ್ಕೆ ಸಮಾನವಾದುದು.

'ಪತಿ' ಶಬ್ದವು ರಕ್ಷಕ, ಒಡೆಯ, ಪ್ರಭು ಎಂಬರ್ಥವನ್ನು ಕೊಡುವ 'ಪಾ' ಧಾತುವಿನಿಂದ ನಿಷ್ಪನ್ನವಾಗಿದೆ. ದೇವತೆಗಳನ್ನೊಳಗೊಂಡು ಎಲ್ಲ ಜೀವಿಗಳೂ ಪ್ರಪಂಚದ ಪರಿವರ್ತನೆಗೆ ಒಳಗಾಗುವವರೇ. ಶಿವನು ಮಾತ್ರ ಇದಕ್ಕತೀತ. ಸರ್ವರಿಗೂ ಆತನು ಪ್ರಭುವಾದುದರಿಂದ ಅವನನ್ನು "ಚಂದ್ರಜ್ಞಾನಾಗಮ"ವು[21] 'ಪತಿ' ಎಂದೂ; ಆತನು ಪರಿಶುದ್ಧ ಮತ್ತು ಸಚ್ಚಿದಾನಂದಸ್ವರೂಪನಾದುದರಿಂದ "ವಾತುಳಾಗಮ"ವು[22] ಆತನನ್ನು 'ಶಿವ'ನೆಂದೂ; ಅವನು ಜನನ-ಮರಣವೆಂಬ ಚಕ್ರದಿಂದ ಬಿಡುಗಡೆ ಮಾಡುವವನಾದುದರಿಂದ ಆತನನ್ನು "ಮತಂಗಪಾರಮೇಶ್ವರಾಗಮ"ವು[23] 'ಹರ'ನೆಂದೂ ಕರೆದಿವೆ. ಸೃಷ್ಟಿ. ಸ್ಥಿತಿ. ಸಂಹಾರ (ಲಯ), ತಿರೋಧಾನ ಮತ್ತು ಅನುಗ್ರಹ ಈ ಕಾರ್ಯಗಳನ್ನು ಶಿವನೇ ನಿರ್ವಹಿಸುವನು.[24]

---

15 ಏನೆಂದೆನಲಿಲ್ಲ, ನುಡಿದು ಹೇಳಲಿಕ್ಕಿಲ್ಲ, ನಿಜದಲ್ಲಿರ್ದ ಬೆರಗು ಕುರುಹ ಅರಿವುದೇ?
ಅದು ತನ್ನಲ್ಲಿ ತಾನಿಲ್ಲ. ಏನೆಂದೆನಲಿಲ್ಲದ ಬಯಲು ಅಲ್ಲಿ ಏನನೂ ಅರಸಲಿಲ್ಲ. ಇದಿರಿಲ್ಲ.
ತಾನಿಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ.
ವಚನಶಾಸ್ತ್ರ, ಭಾ. I, ಪೂರ್ವಾರ್ಧ, ಪು. ೭, ವ. ೧. ಸಂ: ಡಾ. ಪಿ. ಜಿ. ಹಳಕಟ್ಟಿ, ಬಿಜಾಪುರ, ೧೯೩೧

16 ಕಸ್ಮಿನ್ನು ತ್ವಂ ಚಾತ್ಮಾ ಚ ಪ್ರತಿಷ್ಠಿತೌ ಸ್ಥ ಇತಿ ಪ್ರಾಣ ಇತಿ ಕಸ್ಮಿನ್ನು ಪ್ರಾಣಃ ಪ್ರತಿಷ್ಠಿತ ಇತ್ಯಪಾನ ಇತಿ ಕಸ್ಮಿನ್ನಪಾನಃ ಪ್ರತಿಷ್ಠಿತ ಇತಿ......ಸಮಾನ ಇತಿ ಸ ಏಷ ನೇತಿನೇತ್ಯಾತ್ಮಾಽಗೃಹ್ಯೋ ನ ಹಿ ಗೃಹ್ಯತೇಽಶೀರ್ಯೋ ನ ಹಿ ಶೀರ್ಯತೇಽಸಂಗೋ ..ಲೋಕಾ ಅಷ್ಟೌ ದೇವಾ ಅಷ್ಟೌ ಪುರುಷಾಃ ಸ ಯಸ್ತಾನ್ಪುರುಷಾನ್ನಿರುಹ್ಯ...ಪರಿನೋಷಿಹೋಽಸ್ಥೀನ್ಯಪಜಪ್ನುರಸ್ಯನ್ಮನ್ಯಮಾನಾಃ ॥ ಬೃ.ಉ. III. ೯.೨೬

17 ಏಕಮೇವ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಂ।
ಶಿವತತ್ವಂ ಶಿವಾಚಾರ್ಯಾಃ ಸ್ಥಲಮಿತ್ಯಾಹುರಾದರಾತ್॥
ಕೈವಲ್ಯಸಾರ, ಪು. ೩, ಶ್ಲೋ. ೧೩. ಪ್ರ: ಆರ್. ಬಿ. ವಾರದ, ಮಲ್ಲಪ್ಪ ಸೊಲ್ಲಾಪುರ, ೧೯೦೭

18 ಯತ್ರಾದೌ ಸ್ಥೀಯತೇ ವಿಶ್ವಂ ಪ್ರಾಕೃತಂ ಪೌರುಷಂ ಯತಃ।
ಲೀಯತೇ ಪುನರಂತೇ ಚ ಸ್ಥಲಂ ತತ್ಪ್ರೋಚ್ಯತೇ ತತಃ॥ ಶಿವಾನುಭವಸೂತ್ರ, ಅ. II, ಶ್ಲೋ. ೪.

19 ಅಯ್ಯಾ, ನಿರವಯ ಶೂನ್ಯಲಿಂಗ, ಮೂರ್ತಿಯ ನಿಲುಕಡೆ ಎಂತೆಂದೊಡೆ, ಸಾಕಾರನಲ್ಲ–ನಿರಾಕಾರನಲ್ಲ ನೋಡಾ. ನಿರವಯ ಶೂನ್ಯಲಿಂಗ ಮೂರ್ತಿ ಆದಿಯಲ್ಲ–ಅನಾದಿಯಲ್ಲ, ಇಹದವನಲ್ಲ–ಪರದವನಲ್ಲ, ಸುಖದವನಲ್ಲ–ದುಃಖದವನಲ್ಲ. ನಿರವಯ ಶೂನ್ಯಲಿಂಗ ಮೂರ್ತಿ ಪುಣ್ಯ-ಪಾಪದವನಲ್ಲ. ಕರ್ತೃ–ಭೃತ್ಯನಲ್ಲ, ಕಾರಣ–ಕಾರ್ಯನಲ್ಲ, ಧರ್ಮಿ–ಕರ್ಮಿಯಲ್ಲ, ಪೂಜ್ಯ–ಪೂಜಕನಲ್ಲ. ಇಂತು ಉಭಯವಳಿದು ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು.
ವಚನಶಾಸ್ತ್ರಸಾರ, ಭಾ. I, ಪೂರ್ವಾರ್ಧ, ಎರಡನೇ ಆವೃತ್ತಿ, ಸಂ: ಡಾ. ಪಿ. ಜಿ. ಹಳಕಟ್ಟಿ, ಬಿಜಾಪುರ, ೧೯೩೧

20 ನೋಡಿ: ಶೂನ್ಯಸಂಪಾದನೆ, ಭಾಗ I, ಪೀ. ಪು. viii, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೫

21 ಬ್ರಹ್ಮಾದ್ಯಾ ಸ್ಥಾವರಾಂತಾಶ್ಚ ದೇವದೇವಸ್ಯ ಶೂಲಿನಃ।
ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ॥
ತೇಷಾಂ ಪತಿತ್ವಾದ್ವಿಶ್ವೇಶಃ ಶಿವಃ ಪಶುಪತಿಃ ಸ್ಮೃತಃ॥
ಚಂದ್ರಜ್ಞಾನಾಗಮ, ಕ್ರಿಯಾಪಾದ, ಪಟಲ I, ಶ್ಲೋ. ೧೦–೧೧, ಸಂ: ಕಾಶೀನಾಥಶಾಸ್ತ್ರೀ, ಮೈಸೂರು, ೧೯೪೨

22 ಶುದ್ಧತ್ವಾಚ್ಛಿವಮುದ್ದಿಷ್ಟಮ್—ವಾತುಲಶುದ್ಧಾಖ್ಯ I. 20

23 ಹರಣಂ ಹಾನಿರುದ್ದಿಷ್ಟಾ ಭೋಗೇಷ್ವಭಿರತಾತ್ಮನಾಮ್।
ಪುದ್ಗಲಾನಾಂ ಶನೈರ್ಗತ್ವಾ ಲಿಂಗಂ ಸಂಹೃತ್ಯ ವೇಗತಃ॥
ಮತಂಗಪಾರಮೇಶ್ವರಾಗಮ, ವಿದ್ಯಾಪಾದ–ಪತಿಪಟಲ, ಶ್ಲೋ. ೩೩

24 ಮೃಗೇಂದ್ರಾಗಮ, ವಿದ್ಯಾಪಾದ, ಪರಮೋಕ್ಷನಿರಾಸಪ್ರಕರಣ, ಶ್ಲೋ. ೩

ಈ ಎರಡು ಧರ್ಮಗಳಲ್ಲಿಯೂ ಪರಾತ್ಪರವಸ್ತುವಿಗೆ ಸಂಬಂಧಿಸಿದ ಸಮಾನ ಲಕ್ಷಣಗಳು ಇಂತಿವೆ:

ದೇವನು (ಲಿಂಗ, ಪತಿ) ಅಂತರ್ಯಾಮಿ (ವಿಶ್ವಾಂತರ್ಗತ) ಮತ್ತು ವಿಶ್ವೋತ್ತೀರ್ಣ.[25] ನಿತ್ಯ, ಸರ್ವಜ್ಞ, ಸಚ್ಚಿದಾನಂದಸ್ವರೂಪಿ ಮತ್ತು ಪರಿಪೂರ್ಣ.[26] ಅವನು ಅಣುವಿಗಿಂತಲೂ ಅಣು.[27] ಮಹತ್ತಿಗಿಂತ ಮಹತ್ತು.[28] ಸಕಲ ಮಂಗಳಗುಣಗಳ ಧಾಮ. ಅವನು ಸರ್ವವ್ಯಾಪಿ, ಸರ್ವೋತ್ತೀರ್ಣ ಹಾಗೂ ಅಗೋಚರ.[29] ಅಂತೆಯೇ ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ.[30]

## ಸೃಷ್ಟಿ

ಶೈವಸಿದ್ಧಾಂತವು, ಪತಿ (ದೇವರು), ಪಶು (ಆತ್ಮ) ಮತ್ತು ಪಾಶ (ಬಂಧನ) ಎಂಬ ಮೂರು ತತ್ವಗಳನ್ನು ಅಂಗೀಕರಿಸುತ್ತದೆ. ಈ ಮೂರು ತತ್ವಗಳೂ ಸತ್ಯ.

ಅಸಂಖ್ಯಾತ ಬದ್ಧಜೀವಿಗಳ ವಿಮೋಚನೆಯೇ ಸೃಷ್ಟಿಯ ಮೂಲಗುರಿ. ಆದ್ದರಿಂದ ದಯಾಮಯನಾದ ಪರಶಿವನು ಬದ್ಧ ಜೀವಿಗಳ ಭವಬಂಧನದ ಬಿಡುಗಡೆಗಾಗಿ ಈ ಜಗತ್ತನ್ನು ತನ್ನ ಕಾರುಣ್ಯದ ಮೂಲಕ ಸೃಷ್ಟಿಸಿರುವನು.

ಪರಮಾತ್ಮನು ಮಾಯೆಯಿಂದ ತನ್ನ ಶಕ್ತಿಯ ಮೂಲಕವಾಗಿ ಲೋಕವನ್ನು ಸೃಜಿಸಿದ. ಕುಂಬಾರನು ಮಡಿಕೆಯನ್ನು ಮಾಡುವ ಸಾದೃಶ್ಯದಿಂದ ಇದನ್ನು ಸ್ಪಷ್ಟಪಡಿಸಲಾಗಿದೆ. ಸೃಷ್ಟಿಯ ಕ್ರಮವನ್ನು ಅರಿತುಕೊಳ್ಳಲು ಈ ಸಾದೃಶ್ಯ ಸಹಕಾರಿಯಾಗಿದೆ. ಹೀಗೆ ಶೈವಸಿದ್ಧಾಂತವು, ಪ್ರಪಂಚಕ್ಕೆ ಶಿವನನ್ನು ನಿಮಿತ್ತಕಾರಣವನ್ನಾಗಿಯೂ, ಶಿವನ ಶಕ್ತಿಯನ್ನು ಸಹಕಾರಿಕಾರಣವನ್ನಾಗಿಯೂ, ಮಾಯೆಯನ್ನು ಉಪಾದಾನಕಾರಣವನ್ನಾಗಿಯೂ ಅಂಗೀಕರಿಸಿದೆ.[31]

ಸೃಷ್ಟಿಯ ಆರಂಭದಲ್ಲಿ ಮಾಯೆಯು ಶುದ್ಧಮಾಯೆಯೆನಿಸಿಕೊಳ್ಳುತ್ತದೆ ಮತ್ತು ಶಿವನು ತನ್ನ ಶಕ್ತಿಯ ಮೂಲಕ ಪ್ರವರ್ತಿಸುತ್ತಾ ನಾದ, ಬಿಂದು, ಸಾದಾಖ್ಯ, ಮಾಹೇಶ್ವರಿ ಮತ್ತು ಶುದ್ಧವಿದ್ಯೆಗಳನ್ನು ಸೃಜಿಸುತ್ತಾನೆ. ಇವುಗಳನ್ನು ಶಿವತತ್ವವೆನ್ನುತ್ತಾರೆ. ಮಾಯೆಯನ್ನು ಅದರ ಸೂಕ್ಷ್ಮಸ್ಥಿತಿಯಲ್ಲಿ ಅಶುದ್ಧಮಾಯೆಯೆಂದು ಕರೆದಿದೆ. ಅಶುದ್ಧವಾದುದರಿಂದ ಶಿವನು ಅಲ್ಲಿ ಪ್ರವರ್ತಿಸುವುದಿಲ್ಲ. ಸದಾಶಿವನು ಅಶುದ್ಧಮಾಯೆಯಿಂದ ಕಾಲ, ನಿಯತಿ ಮತ್ತು ಕಲೆಗಳ ಉತ್ಪತ್ತಿಗೆ ಕಾರಣನಾಗುವನು. ಕೊನೆಯಲ್ಲಿ ಉತ್ಪನ್ನವಾದ ಕಲೆಯಿಂದ ವಿದ್ಯಾ ಮತ್ತು ರಾಗಗಳನ್ನು ಸೃಷ್ಟಿಸುತ್ತಾನೆ.[32] ಇವುಗಳನ್ನೇ ಪಂಚಕಂಚುಕ (ಪಂಚಕೋಶ)ಗಳೆನ್ನುವರು. ಈ ಕೋಶಗಳಿಂದ ಪರಿವೃತವಾದ ಆತ್ಮವು ಪುರುಷತತ್ವ ಎನಿಸಿಕೊಳ್ಳುತ್ತದೆ.

---

25 ವ್ಯಾಪ್ಯ ಕೃತ್ಸ್ನಂ ಸ್ಥಿತೋ ಲೋಕಾನನಂತಾದಿಶಿವಾಂತಕಾನ್
ಏಕಾಂತಾವಸ್ಥಿತೋ ಹ್ಯೇಷಃ ಶಿವಶಕ್ತಿಸಮನ್ವಿತಃ ॥ ನಿಶ್ವಾಸಕಾರಿಕಾ (ಹಸ್ತಪ್ರತಿ, ಪು. ೫೬೨), ಪಾಂಡಿಚೆರಿ

26 ಅಸ್ತಿ ಕಶ್ಚಿತ್ಸ್ವತಃ ಸಿದ್ಧಃ ಸಚ್ಚಿದಾನಂದಲಕ್ಷಣಃ ।
ನಿತ್ಯೋ ನಿರಂಜನಃ ಶುದ್ಧೋ ನಿರ್ಮಲೋ ನಿರುಪಪ್ಲವಃ—ಸೂಕ್ಷ್ಮಾಗಮ

27 ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತು . . . . ವಚನಧರ್ಮಸಾರ, ಪು. ೨೯, ವ. ೨೭

28 ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಾದೂರ್ಧ್ವಂ ಪರಾತ್ಪರಂ ।
ವ್ಯೋಮಾತೀತಂ ಚ ಸೂಕ್ಷ್ಮಂ ಹಿ ನಿತ್ಯಂ ಕಾರಣಕಾರಣಂ ॥
ವಾತುಲಾಗಮ, (Mss). Govt. Oriental Library, Madras.

29 ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ!
ಅಗಮ್ಯ ಅಗೋಚರ ಅಪ್ರತಿಮ ಲಿಂಗವೇ, ಕೂಡಲ ಸಂಗಮದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ!!
ಬಸವಣ್ಣನವರ ಷಟ್‌ಸ್ಥಳದ ವಚನಗಳು, ಪು. ೭೯೮, ವ. ೬. ಸಂ: ಬಸವನಾಳ ಶಿವಲಿಂಗಪ್ಪ, ಧಾರವಾಡ, ೧೯೫೪

30 ಜಲದೊಳಗಣ ಸೂರ್ಯಸಂತಿರ್ಪನಯ್ಯಾ ಶಿವನು, ಲೋಕಾದಿ ಲೋಕಂಗಳೊಳಗಿರ್ದರೇನು ಜಗದ ಪುಣ್ಯಪಾಪ, ಸ್ವರ್ಗನರಕ, ಬಂಧದೋಷಕ್ಕೊಳಗಾದಾತನೇ ಅಲ್ಲ......ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ, ವಿಶ್ವಾಧಿಪತಿಯಾಗಿರಲೂ ಬಲ್ಲ
ಸಂ. ಡಾ. ಪಿ. ಜಿ. ಹಳಕಟ್ಟಿ: ವಚನಶಾಸ್ತ್ರಸಾರ, ಭಾ. I, ಪೂರ್ವಾರ್ಧ, ಪು. ೨೩, ದ್ವಿ.ಆ., ಬಿಜಾಪುರ, ೧೯೩೧

31 ಶಿವಜ್ಞಾನಸಿದ್ಧಿಯರ್, Book III, ಅಧಿಕರಣ I, ಶ್ಲೋ. ೧೮

32 V. Paranjothi: *Saiva-Siddhānta*, p. 68, Second Edn., Luzac & Co., London, 1954

ಮಾಯೆಯು ತನ್ನ ಸ್ಥೂಲರೂಪದಲ್ಲಿ ಪ್ರಕೃತಿಮಾಯೆಯೆನಿಸುವುದು ಮತ್ತು ರುದ್ರನು ಇದರ ಮೇಲೆ ಪ್ರಭಾವ ಬೀರುತ್ತಾನೆ. ಪ್ರಕೃತಿಯಿಂದ ಅವ್ಯಕ್ತಸ್ಥಿತಿಯಲ್ಲಿರುವ ಚಿತ್ತ ಮತ್ತು ಬುದ್ಧಿ ಇವೆರಡು ಉನ್ನತವಾಗುತ್ತವೆ. ಬುದ್ಧಿಯಿಂದ ಅಹಂಕಾರವು ಹುಟ್ಟುತ್ತದೆ. ಈ ತತ್ವವೇ ಮೂರು (ಸತ್ವ, ರಜಸ್, ತಮೋ) ಗುಣಗಳಾಧಿಕ್ಯದಿಂದ ಕ್ರಮವಾಗಿ ತೈಜಸ, ವೈಕೃತ ಮತ್ತು ಭೂತಾದಿಯೆಂದು ಕರೆಯಲ್ಪಟ್ಟಿದೆ. ಮನಸ್ಸು ಮತ್ತು ಜ್ಞಾನೇಂದ್ರಿಯಗಳು ತೈಜಸಾಹಂಕಾರದಿಂದಲೂ, ಕರ್ಮೇಂದ್ರಿಯಗಳು ವೈಕೃತಾಹಂಕಾರದಿಂದಲೂ ಮತ್ತು ಸೂಕ್ಷ್ಮವಾದ ತನ್ಮಾತ್ರಗಳು ಹಾಗೂ ಮಹಾಭೂತಗಳು ಭೂತಾದಿ ಅಹಂಕಾರದಿಂದಲೂ ಉತ್ಪತ್ತಿಯಾಗಿವೆ.

ಇದೇ ವಿಕಾಸದ ಕ್ರಮ ಮತ್ತು ಉಪಸಂಹಾರವು ಕೊನೆಯಿಂದ ಆರಂಭವಾಗುವುದು. ಈ ಮೂವತ್ತಾರು ತತ್ವಗಳೂ ಪ್ರಳಯಕಾಲದಲ್ಲಿ ತಮ್ಮ ತಮ್ಮ ಕಾರಣಗಳಲ್ಲಿ ವಿಲೀನವಾಗುತ್ತವೆ.

ಆದಿಯಲ್ಲಿ ಅಗಮ್ಯವೂ, ಅದ್ವಿತೀಯವೂ, ಸಚ್ಚಿದಾನಂದಸ್ವರೂಪವೂ ಆದ ನಿಷ್ಕಲಲಿಂಗವೆಂಬುದಿತ್ತು.[33] ಅದು ಅವಿನಾಭಾವಸಂಬಂಧದಿಂದ ಶಕ್ತಿಯೊಡನೆ ಒಡವೆರೆದು ಒಂದಾಗಿತ್ತು.[34] ಚಂದ್ರನಲ್ಲಿ ಬೆಳದಿಂಗಳಿರುವಂತೆ, ಪುಷ್ಪದಲ್ಲಿ ಪರಿಮಳವಿರುವಂತೆ, ಆ ಶಕ್ತಿಯು ಅವಿನಾಭಾವ[35] ಸಂಬಂಧದಿಂದ ಕೂಡಿದ್ದಿತು. ಅದಕ್ಕೆ ಚಿಚ್ಛಕ್ತಿ ಎಂದೂ ಹೆಸರು. ಹೀಗೆ ಶಿವ ಮತ್ತು ಶಕ್ತಿಯ ಮಧ್ಯದ ಈ ಅವಿನಾಭಾವಸಂಬಂಧವು ಸಾಧಿತವಾಗುತ್ತದೆ.[36] ಚನ್ನಬಸವಣ್ಣನವರು ತಮ್ಮ 'ಕರಣಹಸಿಗೆ'ಯಲ್ಲಿ ಸೃಷ್ಟಿಯ ವಿಕಾಸವನ್ನು ಬೇರೆ ರೀತಿ ಹೇಳಿದ್ದಾರೆ.[37]

ಶಿವ, ಶಕ್ತಿ, ಸದಾಶಿವ, ಈಶ್ವರ ಮತ್ತು ಸದ್ವಿದ್ಯಾ ಎಂಬುದೇ ಮೊದಲಿನ ಐದು ತತ್ವಗಳು. ಇವುಗಳನ್ನೇ ಶಿವತತ್ವ ಅಥವಾ ಚಿತ್ತತ್ವವೆಂದು ಕರೆದಿದ್ದಾರೆ. ಶಿವತತ್ವದಲ್ಲಿ ಚಿಚ್ಛಕ್ತಿಯು ಪ್ರಧಾನವಾಗಿರುತ್ತದೆ. ಅಲೌಕಿಕವಾದ ಈ ಶಕ್ತಿಯೇ ಪರಾಶಕ್ತಿಯೊಡಗೂಡಿದ ಪ್ರಸಾದಲಿಂಗ. ಆದಿಶಕ್ತಿಯು ಪ್ರಧಾನವಾಗಿರುವ ಶಕ್ತಿಯೇ ಚರಲಿಂಗ, ಮೂರನೆಯ ವರ್ಗವೇ ಸದಾಶಿವ ತತ್ವ. ಅಲ್ಲಿ ಇಚ್ಛಾಶಕ್ತಿಯು ಪ್ರಧಾನವಾಗುತ್ತದೆ. ಇದು ಶಿವಲಿಂಗ. ಜ್ಞಾನವು ಪ್ರಧಾನವಾಗಿರುವ ಈಶ್ವರನೇ ನಾಲ್ಕನೆಯ ತತ್ವ. ಇದು ಜ್ಞಾನಶಕ್ತಿಯುಳ್ಳ ಗುರುಲಿಂಗ. ಕ್ರಿಯಾಶಕ್ತಿಯು ಪ್ರಧಾನವಾಗಿ ತೋರುತ್ತಿರುವ ಸದ್ವಿದ್ಯೆಯೇ ಐದನೆಯ ತತ್ವ. ಇದೇ ಕ್ರಿಯಾಶಕ್ತಿ[38]ಯುಳ್ಳ ಆಚಾರಲಿಂಗ.

ಮುಂದಿನ ಗುಂಪು ಮಾಯಾ, ಕಾಲ, ನಿಯತಿ, ರಾಗ, ವಿದ್ಯಾ, ಕಲಾ ಮತ್ತು ಪುರುಷತತ್ವದಿಂದ ಕೂಡಿದೆ. ಇದನ್ನೇ ಚಿದಚಿತ್‌ತತ್ವವೆಂದೂ ಶುದ್ಧಾಶುದ್ಧ ತತ್ವಗಳೆಂದೂ ಹೇಳಿದ್ದಾರೆ.

ವೀರಶೈವದರ್ಶನದಂತೆ, ಕಲಾಶಕ್ತಿಯು ಮಾಯೆಯೆಂದು ತೋರಿ ಅವಿದ್ಯೆ ಎನಿಸುತ್ತದೆ. ಇದು ಶಿವ ಮತ್ತು ಜೀವನನ್ನು[39] ಪ್ರತ್ಯೇಕಿಸುತ್ತದೆ. ಸಿದ್ಧಾಂತಶಿಖಾಮಣಿಯು[40] ಇದನ್ನೇ ಒತ್ತಿ ಹೇಳುತ್ತದೆ. ಪರಮಾತ್ಮನ ನಿತ್ಯತ್ವ,

---

33 ಶೂನ್ಯಸಂಪಾದನೆ, ಸಂಪುಟ I, ಪು. ೪೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೫

34 ವಿಮರ್ಶಾಖ್ಯಾ ಪರಾಶಕ್ತಿಃ ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ॥
ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥

ಸಿದ್ಧಾಂತಶಿಖಾಮಣಿ, ಅ. XX, ಶ್ಲೋ. ೩೫–೩೭

35 ಲಿಂಗಂ ಶೈವಮಿದಂ ಸಾಕ್ಷಾತ್ ಶಿವಶಕ್ತ್ಯುಭಯಾತ್ಮಕಂ

ಸೂಕ್ಷ್ಮಾಗಮ, ಪಟಲ VI, ಶ್ಲೋ. ೭

36 ನ ಶಿವೇನ ವಿನಾ ಶಕ್ತಿಃ ನ ಶಕ್ತಿರಹಿತಃ ಶಿವಃ ।
ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ ॥

ವೀರಶೈವಾನಂದ ಚಂದ್ರಿಕಾ


37 Dr. S. C. Nandimath : ನೋಡಿ: *A Hand Book of Viraśaivism*, ಪು. ೧೨೭–೨೮

38 H. H. Kumaraswamiji : *Mirror of Viraśaivism*, pp. 86–87,

39 Dr. S. C. Nandimath, *A Handbook of Viraśaivism*, p. 127

40 ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ।
ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ॥

ಸಿದ್ಧಾಂತಶಿಖಾಮಣಿ, ಸಂ : ಕರಿಬಸವಶಾಸ್ತ್ರಿ ; ಅ. V, ಶ್ಲೋ. ೩೫


ಮಾಯಾ
ಶಿವತತ್ವಗಳು
ಶುದ್ಧಮಾಯಾ
ಶುದ್ಧಾಶುದ್ಧ ತತ್ವ
ಅಶುದ್ಧಮಾಯಾ (ಅಶುದ್ಧ ತತ್ವ)
ಪ್ರಕೃತಿಮಾಯಾ (ಮತ್ತು ಗುಣಗಳು)
ನಾದ
ಕಾಲ
ನಿಯತಿ
ಕಲಾ
ಚಿತ್ತ
ಬುದ್ಧಿ
ಬಿಂದು
(ಪಂಚ
ಕಂಚುಕಗಳು)
ಅಹಂಕಾರ
ಸಾದಾಖ್ಯ
ವಿದ್ಯಾ
ರಾಗ
ಶಿವಕಾರಣ
ರುದ್ರಕಾರಣ
ಮಹೇಶ್ವರಿ
ಸದಾಶಿವ
ಕಾರಣ
ಶುದ್ಧವಿದ್ಯಾ
ಪು
ರು
ಷ
ತ
ತ್ವ
ತೈಜಸ (ಸಾತ್ವಿಕ)
ವೈಕೃತ (ರಾಜಸ)
ಭೂತಾದಿ (ತಾಮಸ)
ಜ್ಞಾನೇಂದ್ರಿಯಗಳು
(ಐದು ಜ್ಞಾನದ ಇಂದ್ರಿಯಗಳು)
ಕರ್ಮೇಂದ್ರಿಯಗಳು
(ಐದು ಕರ್ಮದ ಇಂದ್ರಿಯಗಳು)
ತನ್ಮಾತ್ರಗಳು
ಮತ್ತು ಗುಣಗಳು
(ಮನಸ್ಸು)
ಚಕ್ಷು
ಶ್ರೋತ್ರ
ನಾಸಿಕ
ರಸನಾ
ತ್ವಕ್
ವಾಕ್
ಪಾಣಿ
ಪಾದ
ಪಾಯು
ಉಪಸ್ಥ
ಶಬ್ದ
ಸ್ಪರ್ಶ
ರೂಪ
ರಸ
ಗಂಧ
ಆಕಾಶ
ವಾಯು
ತೇಜಸ್
ಅಪ್
ಪೃಥ್ವಿ

ವ್ಯಾಪಕತ್ವ, ಪೂರ್ಣತ್ವ, ಸರ್ವಜ್ಞತ್ವ, ಸರ್ವಕರ್ತೃತ್ವಗಳು ಸಂಕೋಚಗೊಂಡು ಕಾಲ, ನಿಯತಿ, ರಾಗ, ವಿದ್ಯೆ ಮತ್ತು ಕಲೆಗಳಾಗುತ್ತವೆ—ಹಾಗೂ ಶಿವನು ಪರಿಚ್ಛಿನ್ನನಾಗುತ್ತಾನೆ.

ಪುರುಷತತ್ತ್ವದಿಂದ ಪ್ರಾರಂಭವಾದ ಸೃಷ್ಟಿಯ ಕ್ರಮವನ್ನು ತಮ್ಮ 'ಕರಣಹಸಿಗೆ'ಯಲ್ಲಿ ಚನ್ನಬಸವಣ್ಣನವರು[41] ಬೇರೆ ರೀತಿಯಲ್ಲಿ ಹೇಳಿದ್ದಾರೆ. ಅದು ತೈತ್ತಿರೀಯೋಪನಿಷತ್ತಿನಲ್ಲಿ[42] ಹೇಳಿರುವುದಕ್ಕೆ ಸಮಾನವಾಗಿದೆ.

ಪ್ರಕೃತಿಯಿಂದ ಪೃಥ್ವಿಯವರೆಗೆ ಇರುವ ಮುಂದಿನ ಇಪ್ಪತ್ತಾಲ್ಕು ತತ್ವಗಳನ್ನೂ ಕೆಳಗೆ ತೋರಿಸಿದೆ. ಅವುಗಳನ್ನು ಅಶುದ್ಧ ಅಥವಾ ಅಚಿತ್‌ತತ್ವಗಳೆಂದೂ ಹೇಳಿದೆ.

ನಿಷ್ಕಲ-ಶಿವ (ಸರ್ವಶೂನ್ಯ-ನಿರಾಲಂಬ)
|
ಮಹಾಲಿಂಗ
|
ಶಿವ — ಶಕ್ತಿ (ವಿಮರ್ಶ)

ಶಕ್ತಿ (ವಿಮರ್ಶ)
|
ಸಾದಾಖ್ಯ ಅಥವಾ ಸದಾಶಿವ
|
ಈಶ್ವರ
|
ಸದ್ವಿದ್ಯಾ ಅಥವಾ ಶುದ್ಧವಿದ್ಯಾ
} ಶುದ್ಧ ಅಥವಾ ಚಿತ್ ತತ್ತ್ವಗಳು

ಮಾಯಾ, ಕಾಲ, ನಿಯತಿ, ಕಲಾ, ವಿದ್ಯಾ, ರಾಗ ಮತ್ತು ಪುರುಷ } ಶುದ್ಧಾಶುದ್ಧ ಅಥವಾ ಚಿದಚಿತ್ ತತ್ವಗಳು.

ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಚಕ್ಷು, ಶ್ರೋತ್ರ, ನಾಸಿಕ, ರಸನಾ, ತ್ವಕ್, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಅಪ್, ಪೃಥ್ವೀ. } ಅಶುದ್ಧ ಅಥವಾ ಅಚಿತ್ ತತ್ವಗಳು

ಈ ಹಿಂದೆಯೇ ತಿಳಿಸಿರುವಂತೆ, ಶೈವಸಿದ್ಧಾಂತವು ಪ್ರಪಂಚದ ಸೃಷ್ಟಿಗೆ ಮೂರು ಕಾರಣಗಳನ್ನು ಅಂಗೀಕರಿಸುತ್ತದೆ. ಅವು ಯಾವುವೆಂದರೆ: ನಿಮಿತ್ತಕಾರಣನಾದ ಪರಮಾತ್ಮ, ಸಹಕಾರಿಕಾರಣವಾದ ಆತನ ಶಕ್ತಿ ಮತ್ತು ಉಪಾದಾನಕಾರಣವಾದ ಆತನ ಮಾಯೆ. ಆದರೆ ವೀರಶೈವವು, ನಿಮಿತ್ತ ಮತ್ತು ಉಪಾದಾನ ಕಾರಣಗಳನ್ನು ಮಾತ್ರ ಒಪ್ಪುತ್ತದೆ. ಶಿವನು ತನ್ನ ವಿಮರ್ಶಶಕ್ತಿಯಿಂದ[43] ವಿಶ್ವವನ್ನು ಸೃಷ್ಟಿಸುತ್ತಾನೆ. ಹೀಗೆ ಶಿವನು ನಿಮಿತ್ತಕಾರಣ ಮತ್ತು ಉಪಾದಾನಕಾರಣ ಎರಡೂ ಆಗುತ್ತಾನೆ.[44] ಮುಂಡಕೋಪನಿಷತ್ತಿನಲ್ಲಿಯೂ[45] ಇದೇ ಅಭಿಪ್ರಾಯವು ವ್ಯಕ್ತವಾಗಿದೆ. ಯಾವ ರೀತಿ, ಜೇಡರ ಹುಳುವು ತನ್ನ ಬಲೆಯನ್ನು ತಾನೇ ನೇಯುವುದೋ ಹಾಗೆಯೇ ದೇವನು ಈ ಲೋಕವನ್ನೂ ತಾನೇ ಸೃಷ್ಟಿಸಿರುವನು. ಹೇಗೆ ಅಲೆಗಳು ಮತ್ತು ಆಭರಣಗಳು ಕ್ರಮವಾಗಿ ಅವುಗಳ ಮೂಲಸ್ವರೂಪವಾದ ಸಮುದ್ರ ಮತ್ತು ಸುವರ್ಣಕ್ಕಿಂತ ಭಿನ್ನವಲ್ಲವೋ ಅಂತೆಯೇ ವಿಶ್ವವು ಪರಶಿವನಿಗಿಂತ

41 ಸಂ. ಡಾ. ಆರ್. ಸಿ. ಹಿರೇಮಠ್ : ಚನ್ನಬಸವಣ್ಣನವರ ವಚನಗಳು, ಪು. ೬೪೯–೬೭೬, ಧಾರವಾಡ, ೧೯೬೫

42 ಓಂ ಬ್ರಹ್ಮವಿದಾಪ್ನೋತಿ ಪರಮ್ ॥ ತದೇಷಾಽಭ್ಯುಕ್ತಾ ॥ ಸತ್ಯಂ ಜ್ಞಾನಮನಂತಂ ಬ್ರಹ್ಮ ॥ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ॥ ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತೇತಿ ॥ ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ॥ ಆಕಾಶಾದ್ವಾಯುಃ ॥ ವಾಯೋರಗ್ನಿಃ ॥ ಅಗ್ನೇರಾಪಃ ॥ ಅದ್ಭ್ಯಃ ಪೃಥಿವೀ ॥ ಪೃಥಿವ್ಯಾ ಓಷಧಯಃ ॥ ಓಷಧಿಭ್ಯೋಽನ್ನಂ ॥ ಅನ್ನಾತ್ಪುರುಷಃ ॥ ಸ ವಾ ಏಷ ಪುರುಷೋಽನ್ನರಸಮಯಃ... ತೈ.ಉ. ವಲ್ಲಿ. II, ಮಂ. ೧

43 ವಿಮರ್ಶಾಖ್ಯಾ ಪರಾ ಶಕ್ತಿಃ ವಿಶ್ವವೈಚಿತ್ರ್ಯಕಾರಿಣೀ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್ ॥
ಅಂತಃಕರಣರೂಪೇಣ ಜಗದಂಕುರರೂಪತಃ ।
ಯಸ್ಮಿನ್ ವಿಭಾತಿ ಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ ॥ ಸಿದ್ಧಾಂತಶಿಖಾಮಣಿ, ಅ. XX, ಶ್ಲೋ. ೩೫–೩೬

44 ತಸ್ಮಾದ್ ಅಭಿನ್ನನಿಮಿತ್ತೋಪಾದಾನಕಾರಣತ್ವಂ ನ ತು ಏಕಕಾರಣತ್ವಮ್, ಶ್ರೀಕರಭಾಷ್ಯ, ಪು. ೩೦

45 ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ। ಮುಂಡಕೋಪನಿಷತ್ I. ೧.೭

ಭಿನ್ನವೆಂಬಂತೆ ಕಂಡುಬಂದರೂ, ಅದು ಆತನಿಂದ ಭಿನ್ನವಲ್ಲ. ಶಿವನ ಶಕ್ತಿಯು[46] ಪರಿಣಾಮವಾಗಿ ರೂಪುಗೊಂಡ ಜಗತ್ತು ಶಿವನಿಂದನ್ಯವಾಗಲಾರದು. ಆದುದರಿಂದಲೇ ಜಗತ್ತು ಸತ್ಯ—ಎಂದು ಪ್ರತಿಪಾದಿಸಲಾಗಿದೆ.

ಡಾ. ದಾಸಗುಪ್ತರು[47] ಈ ತೆರನಾದ ಅಭಿಪ್ರಾಯವನ್ನೇ ವ್ಯಕ್ತಮಾಡಿರುವರು. ವೀರಶೈವಧರ್ಮವು ಜಗತ್ತಿನ ವಿಕಾಸದ ಬಗೆಗೆ ಅವಿಕೃತ ಪರಿಣಾಮವನ್ನು ಅಂಗೀಕರಿಸುತ್ತದೆ. ಶೈವಸಿದ್ಧಾಂತವಾದರೋ ಪ್ರಕೃತಿಪರಿಣಾಮವನ್ನು ಅಂಗೀಕರಿಸುತ್ತದೆ. ಇತರ ದಾರ್ಶನಿಕರಾದ ಸಾಂಖ್ಯರು, ವೈಶೇಷಿಕರು, ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ಜಗದ್ವಿಕಾಸವನ್ನು ಕ್ರಮವಾಗಿ ಸತ್ಕಾರ್ಯವಾದ, ಆರಂಭವಾದ, ವಿವರ್ತವಾದ ಮತ್ತು ಪರಿಣಾಮವಾದಗಳ ಮೂಲಕ ಪ್ರತಿಪಾದಿಸಿದ್ದಾರೆ.

## ಆತ್ಮಸ್ವರೂಪ

ಶೈವಸಿದ್ಧಾಂತದ ರೀತ್ಯಾ, ಆತ್ಮರು ನಿತ್ಯರು. ದೇವನಿಗಿಂತ ಭಿನ್ನರು. ಸಹಜವಾಗಿಯೇ ಆತ್ಮರು ಅನಂತರು, ಸರ್ವವ್ಯಾಪಕರು ಮತ್ತು ಸರ್ವಜ್ಞರು. ಆದರೆ ಮಲತ್ರಯಗಳೊಡನೆ ಸಂಬಂಧವಿರುವುದರಿಂದ ಆ ಜೀವಾತ್ಮರು ಸಂಕುಚಿತವಾಗಿಯೂ, ಪರಿಚ್ಛಿನ್ನವಾಗಿಯೂ ಆಗುತ್ತಾರೆ. ಶಿವಜ್ಞಾನಸಿದ್ಧಿಯಾರ್ ಅವರು ಜೀವಾತ್ಮನ ಸ್ವಭಾವವನ್ನು ಈ ರೀತಿ ವರ್ಣಿಸುತ್ತಾರೆ: ಜೀವಾತ್ಮನು ಅಚಿತ್‌ಪದಾರ್ಥದಂತಲ್ಲದೆ ಅರೂಪ ಮತ್ತು ವಿಭುವಾಗಿರುತ್ತಾನೆ. ಇವನ ವ್ಯಾಪಕತ್ವವು ತಾತ್ಕಾಲಿಕವಾಗಿ ತಾನು ನೆಲೆಸಿರುವ ವಸ್ತುವನ್ನೊಳಗೊಂಡಿರುತ್ತದೆ. ಅವನ ನಿತ್ಯತ್ವ, ಬುದ್ಧಿ ಮತ್ತು ಶಕ್ತಿಯು ಆಣವಮಲವೆಂಬ ಪಾಶದಿಂದ ಶಾಶ್ವತವಾಗಿ ಮರೆಯಾಗಿದೆ. ಆದ್ದರಿಂದಲೇ ಇವನನ್ನು ಪಶುವೆಂದು[48] ಕರೆಯಲಾಗಿದೆ. ಆಣವ, ಕರ್ಮ ಮತ್ತು ಮಾಯಾ ಎಂಬ ಮಲತ್ರಯವು ಆತ್ಮನನ್ನು ಬಂಧಿಸುತ್ತದೆ. ಮಲದಿಂದ ಬಂಧಿತನಾದ ಆತ್ಮನನ್ನು ಪಶು[49]ವೆಂದು ಕರೆದಿದ್ದಾರೆ. ಆತ್ಮರನ್ನು ಸಕಲ, ಪ್ರಳಯಾಕಲ ಮತ್ತು ವಿಜ್ಞಾನಕಲ[50] ಎಂದು ಮೂರು ವಿಧವಾಗಿ ವರ್ಗೀಕರಿಸಿದ್ದಾರೆ.

ಸಕಲನಾದ ಆತ್ಮನು ಮಲತ್ರಯ (ಆಣವ, ಕರ್ಮ, ಮಾಯಾ)ಗಳಿಂದ ಬಂಧಿತನಾಗಿರುತ್ತಾನೆ. ಪ್ರಳಯಾಕಲನಾದ ಆತ್ಮನಾದರೋ, ಆಣವ ಮತ್ತು ಕರ್ಮ ಎಂಬೆರಡು ಮಲಗಳಿಂದಲೂ, ವಿಜ್ಞಾನಕಲನಾದ ಆತ್ಮನು ಕೇವಲ ಆಣವಮಲದಿಂದಲೂ ಕೂಡಿರುತ್ತಾನೆ.[51]

ವೀರಶೈವಧರ್ಮಕ್ಕನುಗುಣವಾಗಿ ಜೀವಾತ್ಮರು ವಾಸ್ತವವಾಗಿ ಪವಿತ್ರರೂ, ನಿತ್ಯರೂ. ಸರ್ವಜ್ಞರೂ ಆಗಿ ಶಿವನ[52] ಸ್ವರೂಪವನ್ನೇ ಹೊಂದಿರುತ್ತಾರೆ. ಯಾವ ರೀತಿ ಬೆಂಕಿಯ ಕಿಡಿಗಳು ಬೆಂಕಿಗಿಂತ ಬೇರೆಯಲ್ಲವೋ[53] ಹಾಗೆಯೇ

---

[46] ಆತ್ಮಶಕ್ತಿ ವಿಕಾಸೇನ ಶಿವಃ ಸರ್ವಾತ್ಮನಾ ಸ್ಥಿತಃ।

ಸಿದ್ಧಾಂತಶಿಖಾಮಣಿ, ಅ. ೧೦ ಶ್ಲೋ. ೬೮–೬೯

[47] S. N. Dasgupta : *History of Indian Philosophy*, Vol. III, p. 5

[48] Translated by J. M. Nallaswami Pillai : *'Sivajñāna Siddhiyar'* Sūtra IV, Adhyāya, II. 20, pp. 205–206

[49] ಪಶುಪಶುತ್ವ ಸಂಯೋಗಾತ್, Dr. A. V. Devasenapati : *S'aiva Siddhānta*, p. 69, Published by Madras University, 1966

[50] ಪಶವಸ್ತ್ರಿವಿಧಾ ಜ್ಞೇಯಾಃ ಸಕಲಃ ಪ್ರಳಯಾಕಲಃ।
ವಿಜ್ಞಾನಕಲ ಇತ್ಯೇಷಾಂ ಶೃಣುಧ್ವಂ ಲಕ್ಷಣಂ ಕ್ರಮಾತ್ ॥

ಪೌಷ್ಕರಾಗಮ–ಪಶುಪಟಲ, ಶ್ಲೋ. ೨

[51] ಮಾಯಾಕರ್ಮ ಮಲೈರ್ಯುಕ್ತಃ ಸಕಲಸ್ತತ ಉಚ್ಯತೇ।
ಮಲಕರ್ಮಯುತೋ ವಿಪ್ರಾಃ! ಪ್ರಳಯಾಕಲ ಇಷ್ಯತೇ ॥
ಮಲೇನ ರುದ್ಧಚೈತನ್ಯೋ ನ ಮುಕ್ತ ಇತಿ ಕಥ್ಯತೇ।
ದ್ವಿಧ್ಯಾಪ್ಯಯಂ ಸಮಾಖ್ಯಾತೋ ವಿಪ್ರಾ ವಿಜ್ಞಾನಕೇವಲಃ।

*Siddhānta Sūtra Vṛtti*, p. 30, Bulletin of Govt. Oriental Manuscript Library, Madras, Vol. XVI, No. I, 1963

[52] ಆತ್ಮಾಯಂ ಕೇವಲಃ ಶುದ್ಧಃ ಶಿವಸ್ಯಾಂಶಃ ಸದಾಮಲಃ।
ನಿತ್ಯೋ ನಿರಂಜನಃ ಶಾಂತಃ ತಸ್ಮಾದಾತ್ಮಾ ಸ್ವಯಂ ಶಿವಃ ॥

ಶಿವಾನುಭವಸೂತ್ರ, ಅಧಿಕರಣ V, ಶ್ಲೋ. ೩

[53] ಯಥಾಗ್ನೇಃ ಕ್ಷುದ್ರಾಃ ವಿಸ್ಫುಲಿಂಗಾ ವ್ಯುಚ್ಚರಂತಿ ಏವಂ ಏತಸ್ಮಾದಾತ್ಮನಃ ಸರ್ವೇ ಪ್ರಾಣಾ ವ್ಯುಚ್ಚರಂತಿ

ಬೃ.ಉ., IV. ೧೨೦

ಆತ್ಮರು ಪರಶಿವನಿಗಿಂತ ಬೇರೆಯಲ್ಲ. ಆದರೆ ಶಿವನ ಲೀಲೆಯಿಂದಲೇ ಇಚ್ಛಾ, ಕ್ರಿಯಾ, ಜ್ಞಾನಶಕ್ತಿಗಳು ಸಂಕುಚಿಸಿ, ಇವುಗಳಿಂದ ಪರಿಚ್ಛಿನ್ನವಾದ ಆತ್ಮನು ಜೀವಾತ್ಮನಾಗುತ್ತಾನೆ.

ಶೈವಸಿದ್ಧಾಂತದ ರೀತ್ಯಾ ಆತ್ಮರು ನಿತ್ಯರೆಂದು ಪರಿಗಣಿಸಲ್ಪಡುತ್ತಾರೆ ಮತ್ತು ಜೀವಾತ್ಮರು ಶಿವನಿಗಿಂತ ಬೇರೆಯಾಗಿದ್ದಾರೆ. ಆದರೆ ವೀರಶೈವಧರ್ಮದ ದೃಷ್ಟಿಯಲ್ಲಿ ಪರಮಾತ್ಮ ಒಬ್ಬನೇ ಸತ್ಯ, ಶಾಶ್ವತ. ಬೆಂಕಿಯ ಕಿಡಿಗಳು ಹೇಗೆ ಬೆಂಕಿಗಿಂತ ಬೇರೆಯಲ್ಲವೋ ಹಾಗೆಯೇ ಜೀವಾತ್ಮರು ಪರಮಾತ್ಮನಿಂದ ಬೇರೆಯಲ್ಲ.

## ಪಾಶಸ್ವರೂಪ

ಶೈವಸಿದ್ಧಾಂತವು ಪಾಶವನ್ನೂ ನಿತ್ಯತತ್ವವೆಂದು ಅಂಗೀಕರಿಸಿದೆ. ಶಿವನ ಆನಂದದ ಅನುಭವಕ್ಕೆ ಈ ಪಾಶವೇ ತೊಡಕು.[54] ಆಣವ, ಕರ್ಮ ಮತ್ತು ಮಾಯಾ ಇವೇ ಮಲತ್ರಯಗಳು ಅಥವಾ ಪಾಶಗಳು.

ಆಣವಮಲವು ಜೀವಾತ್ಮರ ಮೊದಲನೆಯ ಬಂಧನ. ಆಣವವು ಆತ್ಮದ ಜ್ಞಾನ, ಇಚ್ಛಾ, ಕ್ರಿಯಾಶಕ್ತಿಗಳನ್ನು ಕುಂಠಿತಗೊಳಿಸುತ್ತದೆ.

ಕರ್ಮಮಲವು ಜೀವಾತ್ಮರ ಕರ್ಮಗಳಿಂದ ಬಂಧನವನ್ನುಂಟುಮಾಡುತ್ತದೆ. ಈ ಮಲವು ತಮ್ಮ ತಮ್ಮ ಕರ್ಮಾನುಸಾರವಾಗಿ ಸುಖ ಮತ್ತು ದುಃಖವನ್ನನುಭವಿಸುವ ಪ್ರತ್ಯೇಕ ಜೀವಾತ್ಮರೊಡನೆ ಸಂಬಂಧ ಹೊಂದಿದೆ.

ಮಾಯಾಮಲವು ಈ ವಿಶ್ವದ ಉಪಾದಾನಕಾರಣ[55] ಈ ಮಾಯೆಯ ಕಾರಣದಿಂದಲೇ ಜೀವಾತ್ಮರು ಶರೀರವನ್ನೂ, ಪ್ರಪಂಚವನ್ನೂ, ಭೋಗ್ಯವಸ್ತುಗಳನ್ನೂ ಹೊಂದಿದ್ದಾರೆ. ಈ ಮಲತ್ರಯವು ಅನಾದಿಯಾಗಿದ್ದು ಜೀವಾತ್ಮನ ಬಂಧನಕ್ಕೆ ಕಾರಣವಾಗುತ್ತದೆ.

ವೀರಶೈವಧರ್ಮವೂ, ಆಣವ, ಕರ್ಮ ಮತ್ತು ಮಾಯಾ ಎಂಬ ಮಲತ್ರಯವನ್ನು ಒಪ್ಪಿದೆ. ಶಿವನೇ ತನ್ನ ಲೀಲೆಗಳಿಂದ ತನ್ನ ಶಕ್ತಿಯನ್ನು ಸಂಕುಚಿತಗೊಳಿಸಿ ಜೀವಾತ್ಮನೆನಿಸುವನು.

ಸಂಕುಚಿತಗೊಳಿಸಿದ ಶಿವನ ಇಚ್ಛಾಶಕ್ತಿಯೇ[56] ಆಣವಮಲ. ಹಾಗೂ ಅದರ ಪರಿಣಾಮವಾಗಿ ಅನಂತವಾದ ಆತ್ಮನು ಪರಿಚ್ಛಿನ್ನವಾಗುವುದು. ಶಿವನ ಜ್ಞಾನಶಕ್ತಿಯು ಸಂಕುಚಿತವಾಗಿ ಮಾಯಾಮಲವಾಗುತ್ತದೆ. ಇದರ ಪರಿಣಾಮವಾಗಿ ಜೀವಾತ್ಮನ ಸರ್ವಜ್ಞತ್ವವು, ಕಿಂಚಿದ್‌ಜ್ಞತ್ವವನ್ನು ಪಡೆಯುತ್ತದೆ. ಶಿವನ ಕ್ರಿಯಾಶಕ್ತಿಯು ಸೀಮಿತವಾಗಿ ಕರ್ಮಮಲವೆನಿಸುವುದು. ಜೀವಾತ್ಮನ ಇಚ್ಛಾಶಕ್ತಿಯೇ ಸಂಕುಚಿತಗೊಳಿಸಲ್ಪಟ್ಟು, ತನ್ನ ಕರ್ಮಾನುಗುಣವಾಗಿ ಫಲವನ್ನನುಭವಿಸುತ್ತದೆ.

ಹೀಗೆ ಶೈವಸಿದ್ಧಾಂತದ ರೀತ್ಯಾ ಪಾಶವು ನಿತ್ಯತತ್ವವಾಗಿದೆ. ಆದರೆ ವೀರಶೈವಧರ್ಮದಲ್ಲಿ ಶಿವನ ಲೀಲೆಯಿಂದಲೇ ಪಾಶವು ಅಸ್ತಿತ್ವವನ್ನು ಹೊಂದುತ್ತದೆ.

## ಶೈವಸಿದ್ಧಾಂತದ ಪ್ರಕಾರ ಸಾಕ್ಷಾತ್ಕಾರದ ಸಾಧನಗಳು

ಬಂಧಿತವಾಗಿರುವ ಜೀವಾತ್ಮರಿಗೋಸ್ಕರ ದಯಾಮಯನಾದ ಶಿವನು ಈ ಪ್ರಪಂಚವನ್ನು ಸೃಷ್ಟಿಸಿರುವನು. ಶಿವನೇ ಗುರುಸ್ವರೂಪನಾಗಿ ಜೀವಾತ್ಮನಿಗೆ ಪರಮಾನಂದವನ್ನು ಪಡೆಯಲು ಸಹಾಯ ಮಾಡುತ್ತಾನೆ. ಅಧ್ಯಾತ್ಮ ಮಾರ್ಗದಲ್ಲಿ ಜೀವಾತ್ಮವನ್ನು ಕರೆದೊಯ್ಯಲು ಗುರುವು ದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಜೀವಾತ್ಮನನ್ನು ಚರ್ಯಾ ಪಥದೆಡೆಗೆ ಒಯ್ಯಲು ಪ್ರಾರಂಭದಲ್ಲಿ ಸಮಯದೀಕ್ಷೆಯನ್ನು ಅನುಗ್ರಹಿಸಲಾಗುವುದು. ಜೀವಾತ್ಮರ ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಗತಿಗನುಸಾರವಾಗಿ ಬೇರೆ ಬೇರೆ ದೀಕ್ಷೆಗಳು ವಿಧಿಸಲ್ಪಡುತ್ತವೆ.

ಜೀವಾತ್ಮರ ವಿಮೋಚನೆಯು ಚರ್ಯಾ, ಕ್ರಿಯಾ, ಯೋಗ ಮತ್ತು ಜ್ಞಾನವೆಂಬ ನಾಲ್ಕು ಮಾರ್ಗಗಳ

---

54 ಪಾಶತ್ವಂ ನಾಮ ಶಿವಾನಂದಾಭಿವ್ಯಕ್ತಿ ವಿರೋಧಿತ್ವಂ

ಶೈವಪರಿಭಾಷಾ, ಅ. IV, ಪು. ೭೩, Published by Oriental Research Institute, Mysore

55 ಪ್ರಾದುರ್ಭೂತಂ ಜಗತ್ ಕೃತ್ಸ್ನಂ ಮಾಯಾತಸ್ಸಚರಾಚರಮ್ ।
ಜಗತಃ ಕಾರಣಂ ಮಾಯಾ ಮಾಯಾಯಾಃ ಕಾರಣಂ ಮುನೇ ॥

ಮತಂಗಪಾರಮೇಶ್ವರಾಗಮ, ವಿದ್ಯಾಪಾದ, ಮಾಯಾಪಟಲ, ಶ್ಲೋ. ೧೨೦

56 ತಸ್ಮಾದಪ್ರತಿಹತಸ್ವಾತಂತ್ರ್ಯರೂಪೇಚ್ಛಾಶಕ್ತಿಃ . . . . ಮಾಯಾಕರ್ಮಮಲಮುಚ್ಯತೇ

ಶಿವಾದ್ವೈತದರ್ಪಣ, ಪು. ೩೫. Quoted by Prof. Sakhare, p. 463

ಮೂಲಕ ನೆರವೇರುತ್ತದೆ. ಚರ್ಯೆಯಲ್ಲಿ ಪ್ರತ್ಯೇಕಜೀವಿಯೂ ಪರಮಾತ್ಮನ ಸೇವಕನಂತೆ ವರ್ತಿಸುತ್ತಾನೆ. ಅವನು ದೇವರಿಗೆ ಸೇವೆ ಸಲ್ಲಿಸುವನು. ಇದನ್ನು ದಾಸಮಾರ್ಗವೆಂದೂ ಕರೆದಿದ್ದಾರೆ. ಸಂತ ತಿರುಮೂಲರು ಈ ಮಾರ್ಗಾವಲಂಬಿಗಳು.

ಜೀವಾತ್ಮನು ತನ್ನ ಮುಂದಣ ಯಾತ್ರೆಯಲ್ಲಿ ಮುಂದುವರಿದು ಭೂತಶುದ್ಧಿ. ಆತ್ಮಶುದ್ಧಿ, ದ್ರವ್ಯಶುದ್ಧಿ. ಮಂತ್ರಶುದ್ಧಿ ಮತ್ತು ಲಿಂಗಶುದ್ಧಿ ಎಂಬ ಐದು ಶುದ್ಧಿಗಳನ್ನೂ ನೆರವೇರಿಸುತ್ತಾನೆ. ಈ ಕ್ರಿಯೆಯಲ್ಲಿ ಜೀವಾತ್ಮನು ಶಿವನ ಸಮೀಪನಾಗುವನಲ್ಲದೆ, ತಾನು ಶಿವನ ಪುತ್ರನೆನಿಸಿಕೊಳ್ಳುತ್ತಾನೆ. ಇದು "ಸತ್ಪುತ್ರಮಾರ್ಗ" ಸಂತ ತಿರುಜ್ಞಾನಸಂಬಂಧರ್ ಇವರು ಈ ಮಾರ್ಗದ ಪ್ರತಿನಿಧಿ.

ಯೋಗಮಾರ್ಗದಲ್ಲಿ ಭಕ್ತನು ತಾನು ಪರಮಾತ್ಮನ ಪ್ರೀತಿಯ ಗೆಳೆಯನೆಂದು ಪರಿಭಾವಿಸಿ ದೇವರನ್ನು ಧ್ಯಾನಿಸುತ್ತಾನೆ. ಆದ್ದರಿಂದ ಇದನ್ನು "ಸಖ್ಯಮಾರ್ಗ"ವೆಂದು ಕರೆದಿದ್ದಾರೆ. ಸಂತ ಸುಂದರಮೂರ್ತಿಯು ಈ ಮಾರ್ಗದ ಅನುಯಾಯಿ.

ಚರ್ಯಾ, ಕ್ರಿಯಾ ಮತ್ತು ಯೋಗಮಾರ್ಗಗಳು ಜೀವಾತ್ಮನನ್ನು ಪದ್ಮಮುಕ್ತಿಯೆಡೆಗೆ ಒಯ್ಯುತ್ತವೆ.

ಈ ಮೂರು ಮಾರ್ಗ (ಪಂಥ)ಗಳು ಜೀವಾತ್ಮನನ್ನು ಜ್ಞಾನಮಾರ್ಗಕ್ಕೊಯ್ಯುವುವು. ಇಲ್ಲಿ ಜ್ಞಾನವು ಪರಮಾತ್ಮನ ನೈಜಮಾರ್ಗಕ್ಕಿಂತ ಬೇರೆಯಲ್ಲ. ಇಲ್ಲಿ ಜೀವಾತ್ಮನು ಆತನ ಆನಂದವನ್ನನುಭವಿಸುವನಲ್ಲದೆ, ಶಿವನ ಸಾಕ್ಷಾತ್ಕಾರವನ್ನೂ ಪಡೆಯುತ್ತಾನೆ. ಸಂತಮಾಣಿಕ್ಯವಾಚಕರು ಈ ಮಾರ್ಗದ ಪ್ರತಿನಿಧಿ.

## ವೀರಶೈವಧರ್ಮದಲ್ಲಿ ಮೋಕ್ಷಸಾಧನಗಳು

ವ್ಯಕ್ತಿಯನ್ನು ಆಧ್ಯಾತ್ಮಿಕಪಥದತ್ತ ಒಯ್ಯಲು ದೀಕ್ಷೆ ನೆರವು ನೀಡುತ್ತದೆ. ಕರ್ಮ, ಮಾಯಾ ಮತ್ತು ಆಣವ ಈ ಮಲತ್ರಯವನ್ನು ನಿವಾರಿಸಲು ಗುರುವು ಕ್ರಿಯಾ. ಮಂತ್ರ ಮತ್ತು ವೇದಾದೀಕ್ಷೆಗಳ ಮೂಲಕ ವ್ಯಕ್ತಿಗೆ ಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವನ್ನು ನೀಡುವನು. ಯಾವುದೇ ಜಾತಿ, ಮತ, ಲಿಂಗಗಳ ಭೇದವಿಲ್ಲದೆ ಎಲ್ಲರಿಗೂ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ನೀಡುವುದು ವೀರಶೈವಮತದ ವೈಶಿಷ್ಟ್ಯ. ಗುರುವಿನಿಂದ ದೀಕ್ಷೆಯನ್ನು ಹೊಂದಿದ ಶಿಷ್ಯನು, ತನ್ನ ಇಷ್ಟಲಿಂಗವನ್ನು ಮಾತ್ರ ಪೂಜಿಸಬೇಕು. ದೇವಾಲಯಗಳಿಗೆ ಹೋಗುವ ಅವಶ್ಯಕತೆಯಿಲ್ಲ.[57] ಮತ್ತು ಮೂಢನಂಬಿಕೆಗಳನ್ನು ತ್ಯಜಿಸಬೇಕು.[58] ಗುರುವು. ಆಯಾ ವ್ಯಕ್ತಿಯ ಸಾಧನೆಗನುಗುಣವಾಗಿ ದೀಕ್ಷಾಗುರು, ಶಿಕ್ಷಾಗುರು ಮತ್ತು ಮೋಕ್ಷಗುರುವಾಗಿ ವ್ಯಕ್ತಿಯ ಆಧ್ಯಾತ್ಮಪ್ರಗತಿಗೆ ನೆರವಾಗುವನು.

ವೀರಶೈವವು ಭಕ್ತಿ, ಜ್ಞಾನ, ಕ್ರಿಯೆ ಇವುಗಳಿಗೆ ಸಮಾನವಾದ ಪ್ರಾಮುಖ್ಯವನ್ನು ನೀಡುತ್ತದೆ. ಈ ಮೂರರ ಪರಿಪೂರ್ಣಸಂಬಂಧವು ಪರಮಾತ್ಮನೊಡನೆ ಐಕ್ಯವನ್ನು ಪಡೆಯಲು ಹಾಗೂ ಆಧ್ಯಾತ್ಮಿಕ ಪ್ರಗತಿಯನ್ನು ಜಾಗ್ರತೆ ಸಾಧಿಸಲು ಸಹಾಯವೆಸಗುತ್ತದೆ. ಈ ಧರ್ಮವು ಪ್ರಪಂಚವು ಸತ್ಯವೆಂದು ಪರಿಗಣಿಸಿರುವುದರಿಂದ ಮೋಕ್ಷವನ್ನು ಪಡೆಯಲು ಯಾವನೂ ಪ್ರಪಂಚವನ್ನು ಅಲ್ಲಗಳೆಯಬೇಕಾಗಿಲ್ಲ. ಸ್ಥೂಲ. ಸೂಕ್ಷ್ಮ ಮತ್ತು ಕಾರಣಶರೀರಗಳಲ್ಲಿ ತ್ರಿವಿಧಲಿಂಗಗಳನ್ನೂ, ಷಡಿಂದ್ರಿಯಗಳಲ್ಲಿ ಷಡ್‌ಲಿಂಗಗಳನ್ನೂ ಜಾಗೃತಗೊಳಿಸುವುದರ ಮೂಲಕ ವ್ಯಕ್ತಿಯನ್ನು ಪವಿತ್ರಗೊಳಿಸಲಾಗುವುದು.[59] ಅರ್ಚನೆ ಮತ್ತು ಅರ್ಪಣೆ ಈ ಸಾಧನಗಳಿಂದ ಪ್ರಪಂಚದ ಪಡಿಪದಾರ್ಥಗಳ

---

57 ಕಲ್ಲ ಮನೆಯ ಮಾಡಿ, ಕಲ್ಲದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ
ಹೋದರೋ? ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ ಗುಹೇಶ್ವರಾ ||
ದೇಹದೊಳಗೆ ದೇವಾಲಯವಿದ್ದು, ಮತ್ತೆ ಬೇರೆ ದೇವಾಲಯವೇಕೆ
ಎರಡಕ್ಕೆ ಹೇಳಲಿಲ್ಲಯ್ಯಾ! ಗುಹೇಶ್ವರ, ನೀನು ಕಲ್ಲಾದರೆ ನಾನೇನಪ್ಪೆನು
ಅಲ್ಲಮನ ವಚನಚಂದ್ರಿಕೆ, ಸಂ: ಡಾ. ಎಲ್. ಬಸವರಾಜು, ಪು. ೫೦, ವ. ೨೧೨, ೨೧೩, ಮೈಸೂರು, ೧೯೬೦

58 ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ,
ಕೊಳಗ ದೈವ, ಗಿಣ್ಣಲು ದೈವ, ಕಾಣಿರೋ !
ದೈವ ದೈವವೆಂದು ಕಾಲಿಡಲಿಂಬಿಲ್ಲ !!
ದೈವನೊಬ್ಬನೆ ಕೂಡಲಸಂಗಮದೇವ
ಬಸವಣ್ಣನವರ ಷಟ್‌ಸ್ಥಲದ ವಚನಗಳು, ಸಂ : ಪ್ರೊ. ಎಸ್. ಎಸ್. ಬಸವನಾಳ್, ಪು. ೧೪೮, ವ. ೫೬೩, ಧಾರವಾಡ, ೧೯೬೨

ನ್ಯೂನತೆಯು ನಿವಾರಿಸಲ್ಪಟ್ಟು ಸಾಧಕನು ಅವುಗಳನ್ನು ಪ್ರಸಾದರೂಪದಿಂದ ಲಿಂಗಭೋಗೋಪಭೋಗಿಯಾಗಿ ಸೇವಿಸುವುದರಿಂದ ಭವಬಂಧನಕ್ಕತೀತನಾಗುವನು.[60]

ಈ ಭವಸಾಗರವನ್ನು ದಾಟಲು ಆವರಣವು ಸಹಾಯುವೆಸಗುತ್ತದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಹಾಮಂತ್ರ ಇವೇ ಅಷ್ಟ ಆವರಣಗಳು.

ಸಮರ್ಥಗುರುವಿನ ಉಪದೇಶಕ್ಕನುಸಾರವಾಗಿ ಆಚರಿಸುವುದು, ಲಿಂಗವನ್ನು ನಿಷ್ಠೆಯಿಂದ ಅರ್ಚಿಸುವುದು, ಭಕ್ತರ ಉದ್ಧಾರಕ್ಕಾಗಿ ಸಂಚರಿಸುವ ಮಹಾಜ್ಞಾನಿಯಾದ ಜಂಗಮನಿಗೆ ಶರಣಾಗತನಾಗುವಿಕೆ, ರುದ್ರಾಕ್ಷಿಧಾರಣೆ, ಭಸ್ಮ ಧಾರಣೆ, ಪಾದೋದಕಸ್ವೀಕಾರ, ಪಡಿಪದಾರ್ಥಗಳನ್ನು ಲಿಂಗಕ್ಕರ್ಪಿಸಿ ಅವನ್ನು ಪ್ರಸಾದರೂಪವಾಗಿ ಸ್ವೀಕರಿಸುವುದು, ಪರಮಾತ್ಮಸ್ವರೂಪವಾದ ಮಹಾಮಂತ್ರದ ಪುರಶ್ಚರಣೆ—ಈ ಎಂಟು ಸಾಧನಗಳು, ಸಾಧಕನು ಸತ್ಯಾನ್ವೇಷಣೆಯಲ್ಲಿ ಪ್ರಗತಿಪಡೆಯಲು ಸಕ್ರಿಯವಾಗಿ ಹೆಚ್ಚು ಹೆಚ್ಚು ಸಹಾಯವೆಸಗುವುವು. ಇದನ್ನೇ ಪಾರಿಭಾಷಿಕವಾಗಿ 'ಅಷ್ಟಾವರಣ' ವೆಂದು ಕರೆದಿದ್ದಾರೆ.

ಆಧ್ಯಾತ್ಮಿಕ ಸಾಧನೆಯ ಪ್ರಾರಂಭದಲ್ಲಿ ಪೂಜ್ಯ-ಪೂಜಕ[61] (ದೇವ-ಭಕ್ತ, ಉಪಾಸ್ಯ-ಉಪಾಸಕ) ಎಂಬ ಭೇದವಿದೆ. ನಿರಂತರ ಪ್ರಯತ್ನದಿಂದ ಭಕ್ತನು ಲಿಂಗದೊಡನೆ ಸಮರಸವನ್ನು ಸಾಧಿಸಿದಂತೆಲ್ಲಾ ಈ ಭೇದವು ಅಳಿಯುತ್ತದೆ. ಈ ಸಾಧನಾಕ್ರಮವನ್ನು ಷಟ್ಸ್ಥಲಗಳನ್ನಾಗಿ ವಿಭಾಗಿಸಿ, ಅವುಗಳನ್ನೇ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಅಭಿಧಾನದಿಂದ ಕರೆಯಲಾಗಿದೆ.

ಗುರು ಕರುಣಿಸಿದ ಇಷ್ಟಲಿಂಗವನ್ನು ಭಕ್ತನು ಭಕ್ತಿಯಿಂದ ಅರ್ಚಿಸುತ್ತ, ಪವಿತ್ರವಾದ ಮತ್ತು ಉದಾತ್ತವಾದ ಜೀವನವನ್ನು ಕಾಯಕನಿಷ್ಠನಾಗಿ ನಡೆಸಬೇಕು. ಈ ಹಂತದಲ್ಲಿನ ಭಕ್ತಿಯನ್ನು 'ಶ್ರದ್ಧಾಭಕ್ತಿ'ಯೆಂದು ಕರೆಯಲಾಗಿದೆ. ಬಸವಣ್ಣನವರನ್ನು ಐಕ್ಯಸ್ಥಲದ ಪ್ರತಿನಿಧಿಯೆಂದು ಉಲ್ಲೇಖಿಸಲಾಗಿದೆ.[62] ಆದರೆ ಬಸವಣ್ಣನವರು ಐಕ್ಯಸ್ಥಲದ ಸ್ಥಿತಿಗೆ ಏರಿದ್ದರೂ ಲೋಕಕಲ್ಯಾಣಕ್ಕಾಗಿ ಭಕ್ತಸ್ಥಲದಲ್ಲಿ ನಿಂತು ಸಕಲಜೀವಾವಳಿಯ ಲೇಸಿಗಾಗಿ ಅವಿಶ್ರಾಂತರಾಗಿ ಶ್ರಮಿಸಿದರೆಂಬುದನ್ನು ಮರೆಯಲಾಗದು.

ಅನಂತರ ಭಕ್ತನು ಇಷ್ಟಲಿಂಗದಲ್ಲಿ ಸ್ಥಿರವಾದ ಮತ್ತು ವಿಚಲಿತವಾಗದ ಭಕ್ತಿಯನ್ನು ನೆಲೆಗೊಳಿಸಬೇಕು. ಕ್ರಮೇಣ ವಿಕಾಸಗೊಂಡ ಈ ಹಂತದ ಭಕ್ತಿಯೇ 'ನಿಷ್ಠಾಭಕ್ತಿ'. ಮಡಿವಾಳ ಮಾಚಿದೇವರು ಈ ಸ್ಥಲದ ನಿರೂಪಕರು.

ಭಕ್ತನು ಹೀಗೆ ಆಧ್ಯಾತ್ಮಿಕಪಥದಲ್ಲಿ ಮುಂದುವರೆದಂತೆಲ್ಲಾ ಪ್ರಪಂಚ ಹಾಗೂ ಪ್ರಕೃತಿಯ ಅಶುದ್ಧತೆಯನ್ನು ಅರಿತು, ವಿಚಲಿತವಾಗದ 'ಅವಧಾನಭಕ್ತಿ'ಯಿಂದ ಕಾಯಕನಿಷ್ಠನಾಗಿ ಲಿಂಗವನ್ನರ್ಚಿಸುತ್ತ ಮುನ್ನಡೆಯುವನು. ಈ ಸ್ಥಲವನ್ನು 'ಪ್ರಸಾದಿಸ್ಥಲ'ವೆಂದು ಕರೆಯಲಾಗಿದೆ. ಚನ್ನಬಸವಣ್ಣನವರು ಈ ಸ್ಥಲದ ಪ್ರತಿನಿಧಿ.

ಬಾಹ್ಯವಸ್ತುಗಳಿಂದ ಭಕ್ತನು ತನ್ನ ಮನಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹಿಸುತ್ತಾ ಲಿಂಗವನ್ನರ್ಚಿಸುತ್ತ ಜೀವಾತ್ಮನು ಲಿಂಗರೂಪಿಯಾದ ವಿಶ್ವಾತ್ಮನಿಗಿಂತ ಭಿನ್ನವಲ್ಲವೆಂಬುದನ್ನರಿಯುತ್ತಾನೆ. ಈ ಹಂತದ ಭಕ್ತಿಯನ್ನು 'ಅನುಭಾವ'ಭಕ್ತಿಯೆಂದೂ. 'ಪ್ರಾಣಲಿಂಗಿ'ಸ್ಥಲವೆಂದೂ ಕರೆಯಲಾಗಿದೆ. ಈ ಸ್ಥಲದ ಪ್ರತಿನಿಧಿ–ಚಂದಯ್ಯ.

---

60 ಅರ್ಚನಾರ್ಪಣಸಾಪೇಕ್ಷಾ ವರ್ತತೇ ದ್ರವ್ಯಶುದ್ಧಯೇ ।
ಅರ್ಚನಾದ್ದ್ರವ್ಯಶುದ್ಧಿಸ್ಸ್ಯಾತ್ ಪ್ರಸಾದಸ್ತದನಂತರಮ್ ॥
'ವಿಶೇಷಾರ್ಥಪ್ರಕಾಶಿಕೆ'

61 ಪ್ರೊ. ಎಸ್. ಎಸ್. ಭೂಸನೂರುಮಠ್: ಶೂನ್ಯಸಂಪಾದನೆ, ಪು. ೩ ೧೯೫೮

62 ಮಿಶ್ರಸ್ತೋತ್ರದ ವಚನಗಳು, ಸಂ. ಚನ್ನಂಜೀದೇವರು, ವ. ೭೯

ಭಕ್ತಿಸ್ಥಲ ಬಸವಣ್ಣಂಗಾಯಿತ್ತು
ಮಹೇಶ್ವರಸ್ಥಲ ಮಡಿವಾಳಯ್ಯಂಗಾಯಿತ್ತು
ಪ್ರಸಾದಿಸ್ಥಲ ಚೆನ್ನಬಸವಣ್ಣಂಗಾಯಿತ್ತು
ಪ್ರಾಣಲಿಂಗಿಸ್ಥಲ ಚೆಂದಯ್ಯಂಗಾಯಿತ್ತು
ಶರಣಸ್ಥಲ ಘಟ್ಟಿವಾಳಯ್ಯಂಗಾಯಿತ್ತು
ಐಕ್ಯಸ್ಥಲ ಅಜಗಣ್ಣಂಗಾಯಿತ್ತು

ಮಿಶ್ರಸ್ತೋತ್ರದ ವಚನ, ಚನ್ನಂಜೀದೇವರು, ಪು. ೩೯, ವ. ೭೯

ಅನಂತರ ಮುನ್ನಡೆದ ಸಾಧಕನು ಲಿಂಗವನ್ನರ್ಚಿಸುತ್ತಾ, ಪ್ರಸಾದಲಿಂಗನಿಷ್ಠನಾಗಿ ತನ್ನ ಆತ್ಮದ ದಿವ್ಯ ಹೊಳಹನ್ನು ಅನುಭವಿಸುತ್ತಾನೆ. ಈ ಗರಿಗೊಂಡ ಭಕ್ತಿಯನ್ನು 'ಆನಂದಭಕ್ತಿ'ಯೆಂದೂ, ಈ ಸ್ಥಲವನ್ನು ಶರಣಸ್ಥಲವೆಂದೂ ಕರೆದಿದ್ದಾರೆ. ಘಟ್ಟಿವಾಳಯ್ಯನವರು ಈ ಸ್ಥಲದ ಪ್ರತಿನಿಧಿ.

ಅಂತಿಮ ಹಂತದಲ್ಲಿ ಅಂಗ ಮತ್ತು ಲಿಂಗಗಳಿಗಿದ್ದ ಅಲ್ಪಭೇದವೂ ಇಲ್ಲದಂತಾಗುತ್ತದೆ. ಅಂಗ-ಲಿಂಗ ಭೇದ ಅಳಿಯುತ್ತದೆ. ಯಾವ ರೀತಿ ನದಿಯು ನದಿಯೊಡನೆ ಬೆರೆಯುವುದೋ ಅಂತೆಯೇ ಪರಿಶುದ್ಧವಾದ ಅಂಗವು ದೇವ (ಲಿಂಗ)ನಲ್ಲಿ ಒಡವೆರೆಯುತ್ತದೆ.[63] ಈ ಸಮರಸಪ್ರಜ್ಞೆ ಅಥವಾ ತಾದಾತ್ಮ್ಯಸ್ಥಿತಿಯನ್ನು ಐಕ್ಯಸ್ಥಲವೆಂದೂ, ಈ ಹಂತದಲ್ಲಿನ ಭಕ್ತಿಯನ್ನು 'ಸಮರಸ' ಭಕ್ತಿಯೆಂದೂ ಕರೆದಿದ್ದಾರೆ. ಅಜಗಣ್ಣನವರು ಈ ಸ್ಥಲದ ಪ್ರತಿನಿಧಿ.

ಹೀಗೆ ವೀರಶೈವಧರ್ಮವು ಭಕ್ತಿ, ಜ್ಞಾನ ಮತ್ತು ಕ್ರಿಯೆಗಳಿಗೆ ಸಮಪ್ರಾಧಾನ್ಯವನ್ನು ಕೊಡುತ್ತದೆ. ಮೋಕ್ಷವನ್ನು ಪಡೆಯಲು ಸರ್ವರೂ ಅರ್ಹರು. ಮೋಕ್ಷಕ್ಕಾಗಿ ಜಗತ್ತನ್ನು ತ್ಯಜಿಸಬೇಕಾಗಿಲ್ಲ ಎಂಬುದನ್ನು ಒತ್ತಿಹೇಳಿ, ಪ್ರತಿಯೊಂದು ಹಂತದಲ್ಲಿ ಪರಿಶುದ್ಧವಾದ ಮತ್ತು ಪವಿತ್ರವಾದ ಕಾಯಕನಿಷ್ಠ ಜೀವನವನ್ನು ನಡೆಸಲು ಪ್ರತಿಪಾದಿಸುತ್ತದೆ. ಯಾವ ಜಾತಿ, ಮತ, ಭೇದಗಳನ್ನೆಣಿಸದೆ ಸಾಮಾಜಿಕ ಸಮಾನತೆಯನ್ನೂ, ಆಧ್ಯಾತ್ಮಿಕ ಸ್ವಾತಂತ್ರ್ಯವನ್ನೂ ಪ್ರತಿಯೊಬ್ಬರಿಗೂ ನೀಡುತ್ತದೆ. ಕಾಯಕದ ಹಿರಿಮೆಗರಿಮೆಗಳನ್ನು ಸುಸ್ಪಷ್ಟವಾಗಿ ಪ್ರತಿಪಾದಿಸಿ, ಗುರುವೂ ಸಹ ತನ್ನ ಆಹಾರವನ್ನು ಕಾಯಕದಿಂದಲೇ ಸಂಪಾದಿಸಿಕೊಳ್ಳಬೇಕೆಂಬುದನ್ನು ಒತ್ತಿಹೇಳುತ್ತದೆ. ವ್ಯಕ್ತಿಯ ಸಂಪೂರ್ಣ ಮತ್ತು ಸರ್ವಾಂಗೀಣ ಅಭ್ಯುದಯವೇ ವೀರಶೈವದ ಗುರಿ. ಈ ಕಾರಣದಿಂದಲೇ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳನ್ನು ಇಲ್ಲಿ ಯುಕ್ತವಾಗಿ ಸಮಾವೇಶಗೊಳಿಸಿದೆ. ಮಾನವನು ಉದಾತ್ತ ಹಾಗೂ ಯೋಗ್ಯಜೀವನವನ್ನು ನಡೆಸಲು ಈ ಐದು ನೀತಿಸಂಹಿತೆಗಳು (ಪಂಚಾಚಾರಗಳು) ಸಹಾಯವೆಸಗುತ್ತವೆ. ವ್ಯಕ್ತಿಯ ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ಮುನ್ನಡೆಯಲು ಈ ಅಷ್ಟಾವರಣಗಳು ಸಕ್ರಿಯವಾಗಿ ಸಹಾಯವೆಸಗುತ್ತವೆ. ಪರಮಾತ್ಮನೊಡನೆ ಪರಿಪೂರ್ಣತೆಯನ್ನು ಹೊಂದುವುದಕ್ಕೋಸ್ಕರ ಮಾಡುವ ಆಧ್ಯಾತ್ಮಬೆಳವಣಿಗೆಯಲ್ಲಿನ ವ್ಯಕ್ತಿಯ ಪ್ರಯತ್ನಗಳನ್ನೂ, ವಿವಿಧ ಹಂತಗಳ ವಿಕಾಸವನ್ನೂ ಈ ಷಟ್‌ಸ್ಥಲವು ಮನೋಜ್ಞವಾಗಿ ಸೂಚಿಸುತ್ತದೆ. ಮಾನವರಲ್ಲಿ ಸ್ನೇಹಸೌಹಾರ್ದಗಳನ್ನು ನೆಲೆಗೊಳಿಸಿ, ನೈತಿಕವಾಗಿ, ಸಾಮಾಜಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಅವರನ್ನೂ ಸಮುನ್ನತಿಗೊಯ್ಯುವುದೇ ವೀರಶೈವಧರ್ಮದ ಹೆಗ್ಗುರಿ.

---

[63] ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವರಿಯದನ್ನಕ್ಕ ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲ ಸಂಗಮದೇವರ ಪೂಜಿಸಿ
ನದಿಯೊಳಗೆ ನದಿಯ ಬೆರೆಸಿದಂತಾಗದನ್ನಕ್ಕ ॥
ಸಂ. ಪ್ರೊ. ಎಸ್. ಎಸ್. ಬಸವನಾಳ್, ಬಸವಣ್ಣನವರ ಷಟ್‌ಸ್ಥಲದ ವಚನಗಳು, ಪು. ೨೪೯, ವ. ೯೨೯, ಧಾರವಾಡ, ೧೯೬೨

# ವೀರಶೈವ ಮತ್ತು ಹೆಗೆಲ್‌ನ ದರ್ಶನಗಳು

ಡಾ. ಡಿ. ಎಲ್. ಪಾಟೀಲ್

ಪೂರ್ವ ಮತ್ತು ಪಶ್ಚಿಮ ಜಗತ್ತುಗಳು ಭೌಗೋಳಿಕವಾಗಿಯಾದರೂ ತೀರ ಹತ್ತಿರಕ್ಕೆ ಪರಸ್ಪರ ಬರುತ್ತಿರುವ ಇಂದಿನ ಸಂಕ್ರಮಣಕಾಲದಲ್ಲಿ ಪೂರ್ವ ಮತ್ತು ಪಶ್ಚಿಮ ಸಾಂಸ್ಕೃತಿಕ ಸಂಪ್ರದಾಯಗಳ ತೌಲನಿಕ ಅಧ್ಯಯನ ಬಿರುಸಿನಿಂದ ನಡೆಯುತ್ತಿದೆ. ಎಲ್ಲಾ ದೃಷ್ಟಿಯಿಂದಲೂ ಪಶ್ಚಿಮದ ಸಾಂಸ್ಕೃತಿಕ ಸಂಪ್ರದಾಯವೇ ಸರಿ ಮತ್ತು ಶ್ರೇಷ್ಠ ಎನ್ನುವ ಇತ್ತೀಚಿಗಿತ್ತೀಚಿನ ಪಾಶ್ಚಾತ್ಯರ ಉಚ್ಚ ಅರಿವು ಮತ್ತು ಪೌರ್ವಾತ್ಯಸಂಸ್ಕೃತಿಯ ಬಗೆಗಿದ್ದ ಅಜ್ಞಾನ ಕ್ರಮೇಣ ಮಾಯ ವಾಗುತ್ತಿರುವುದರಿಂದ ಪೂರ್ವ ಮತ್ತು ಪಶ್ಚಿಮಗಳ ಸಾಂಸ್ಕೃತಿಕ ಸಮನ್ವಯವನ್ನು ಸಾಧಿಸುವತ್ತ ಪ್ರಥಮ ಹೆಜ್ಜೆ ಇಟ್ಟಹಾಗೆ ಕಾಣಿಸುತ್ತದೆ.

ಪೌರ್ವಾತ್ಯ ಸಂಸ್ಕೃತಿಯನ್ನು ರೂಪಿಸಿದ ಕೆಲವೇ ಕೆಲವು ದೇಶಗಳಲ್ಲಿ ಭಾರತವು ಅಗ್ರಸ್ಥಾನವನ್ನು ಪಡೆಯುತ್ತದೆ. ಭಾರತೀಯ ಸಂಸ್ಕೃತಿಯಲ್ಲಿಯ ಅನೇಕ ಅಂಶಗಳಲ್ಲಿ ಭಾರತೀಯ ತತ್ವಜ್ಞಾನಕ್ಕೇ ಪ್ರಥಮಸ್ಥಾನ. ಏಕೆಂದರೆ ಭಾರತೀಯ ಸಂಸ್ಕೃತಿಯ ಉಳಿದ ಅಂಶಗಳನ್ನು ನಿರ್ದೇಶಿಸಿ ರೂಪಿಸಿದ್ದು ಭಾರತೀಯ ತತ್ವಜ್ಞಾನ. ತತ್ವಜ್ಞಾನದ ಬಗ್ಗೆ ಈ ದೇಶ ದಲ್ಲಿ ನಡೆದಷ್ಟು ಚಿಂತನ, ಸಂಶೋಧನೆ, ಜಿಜ್ಞಾಸೆ ಮತ್ತು ಸಾಧನೆ ಬೇರೆ ಯಾವ ದೇಶದಲ್ಲೂ ನಡೆದಿಲ್ಲ. ಆದ್ದರಿಂದಲೇ ಬೇರೆ ಯಾವ ಸಂಸ್ಕೃತಿಯಲ್ಲೂ ಇಲ್ಲದ ಮನ್ನಣೆ ಮತ್ತು ಮಹತ್ವ ತತ್ವಜ್ಞಾನಕ್ಕೆ ಈ ದೇಶದಲ್ಲಿ ಸಿಕ್ಕಿದೆ. ಪರಮಾತ್ಮ ಅಥವಾ ಈಶ್ವರ, ಜೀವ ಅಥವಾ ಜೀವಾತ್ಮ, ಭೌತಿಕಪ್ರಪಂಚ ಅಥವಾ ಜಗತ್ತು ಈ ಮೂರು ಮೂಲಭೂತ ಅಸ್ತಿತ್ವ ಗಳ ಸ್ವರೂಪದ ಬಗ್ಗೆ ಮತ್ತು ಆಧ್ಯಾತ್ಮಿಕಸಂಬಂಧದ ಬಗ್ಗೆ ಭಾರತೀಯದರ್ಶನದಲ್ಲಿ ನಡೆದಷ್ಟು ವೈವಿಧ್ಯಮಯ ವಾದ ಜಿಜ್ಞಾಸೆ ಬೇರೆ ಯಾವ ದರ್ಶನಸಂಪ್ರದಾಯದಲ್ಲಿಯೂ ಸಿಕ್ಕುವುದಿಲ್ಲ ಮತ್ತು ಈ ಸಮಸ್ಯೆಯ ಬಗ್ಗೆಯ ಜಿಜ್ಞಾಸೆ ಭಾರತೀಯದರ್ಶನದಲ್ಲಿ ಅರ್ಥಪೂರ್ಣವಾಗಿ ಕಾಣಿಸುವಷ್ಟು ಬೇರೆಲ್ಲಿಯೂ ಕಾಣುವುದಿಲ್ಲ.

ವೀರಶೈವದರ್ಶನ ಅಥವಾ ಧರ್ಮವನ್ನು ಪಾಶ್ಚಾತ್ಯದರ್ಶನ ಅಥವಾ ದರ್ಶನಗಳೊಂದಿಗೆ ಹೋಲಿಸುವಾಗ ಮೇಲೆ ನಮೂದಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾದುದು ಅವಶ್ಯ. ಏಕೆಂದರೆ ವೀರಶೈವದರ್ಶನ ಭಾರತೀಯದರ್ಶನಸಂಪ್ರದಾಯದ ಸಾಮಾನ್ಯ ಅಂಶಗಳನ್ನೊಳಗೊಂಡ, ಆದರೂ ತನ್ನದೇ ಎನ್ನಬಹುದಾದ ದಾರ್ಶನಿಕ ವೈಶಿಷ್ಟ್ಯವನ್ನು ಪಡೆದುಕೊಂಡ ಭಾರತೀಯದರ್ಶನ. ಒಂದು ಸಂಸ್ಕೃತಿಯ ಒಡಲಿನಲ್ಲಿ ಹುಟ್ಟಿ ರೂಪಿತ ವಾದ ಒಂದು ದರ್ಶನವನ್ನು ಇನ್ನೊಂದು ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದುಬಂದ ದರ್ಶನದೊಂದಿಗೆ ಹೋಲಿಸುವುದು ಸ್ವಲ್ಪ ಅಪಾಯಕರ. ಇದರಿಂದ ಎರಡೂ ದರ್ಶನಗಳೂ ಅಸಂಗತವಾಗಿ ಕಾಣಬಹುದು. ಭಾರತೀಯದರ್ಶನಗಳನ್ನು ಪಾಶ್ಚಾತ್ಯದರ್ಶನಗಳೊಂದಿಗೆ ಹೋಲಿಸುವುದು ತಪ್ಪಲ್ಲವಾದರೂ ಅಜಾಗರೂಕ ಮತ್ತು ವಿಪರೀತ ಹೋಲಿಕೆ ಎರಡೂ ದರ್ಶನಗಳ ಮಹತ್ವ ಮತ್ತು ವೈಶಿಷ್ಟ್ಯಕ್ಕೆ ಹಾನಿಯನ್ನುಂಟುಮಾಡಬಹುದು. ಭಾರತೀಯ ದರ್ಶನಸಂಪ್ರದಾಯಕ್ಕೂ ಮತ್ತು ಪಾಶ್ಚಾತ್ಯದರ್ಶನಸಂಪ್ರದಾಯಕ್ಕೂ ಮೂಲಭೂತ ಭೇದಗಳಿರುವುದರಿಂದ ಒಂದನ್ನು ಇನ್ನೊಂದರೊಂದಿಗೆ ಹೋಲಿಸುವಾಗ ಎಚ್ಚರವಾಗಿರಬೇಕಾದುದು ಅವಶ್ಯ. ಈ ಪ್ರಬಂಧದ ಮಟ್ಟಿಗೆ ಹೇಳುವುದಾದರೆ ವೀರಶೈವದರ್ಶನ ವನ್ನು ಪಾಶ್ಚಾತ್ಯಸಂಪ್ರದಾಯದ ಒಂದು ನಿರ್ದಿಷ್ಟ ದರ್ಶನದೊಂದಿಗೆ ಹೋಲಿಸಿದ್ದು ಕೇವಲ ಒಂದು ಒಳ್ಳೆಯ ಊಹೆಯ (Good hypothesis) ರೂಪದಲ್ಲಿ ಮಾತ್ರ. ಹೀಗೆ ಮಾಡುವುದರಿಂದ ವೀರಶೈವದರ್ಶನ ಒಂದು ಪರಕೀಯ ದರ್ಶನದ ದೃಷ್ಟಿಕೋನದಿಂದ ಪರಾಮರ್ಶಿಸಿದಾಗ ಯಾವ ಹೊಸ ಆಯಾಮಗಳನ್ನು ಪ್ರಕಟಿಸುತ್ತದೆಂಬುದರ ಪರಿಚಯ ವಾಗುತ್ತದೆ. ಇದೊಂದು ಪರಾಮರ್ಶಿಸಿ ಒಪ್ಪಿಕೊಳ್ಳಬಹುದಾದಊಹೆ ಮಾತ್ರ ಎಂದು ವಾಚಕರು ಈ ಪ್ರಬಂಧವನ್ನು ಓದಿದರೆ ಸಾಕು ಮತ್ತು ಒಂದು ವೇಳೆ ಓದುಗರಿಗೆ ವೀರಶೈವದರ್ಶನದ ಬಗ್ಗೆ ಒಂದು ಹೊಸ ದೃಷ್ಟಿಕೋನ ಹುಟ್ಟಿಕೊಳ್ಳ

ಬಹುದಾದರೆ ನನ್ನ ಈಗಿನ ಪ್ರಯತ್ನ ಸಾರ್ಥಕ ಎಂದುಕೊಳ್ಳುತ್ತೇನೆ.

ವೀರಶೈವದರ್ಶನವನ್ನು ಸಮಗ್ರಪಾಶ್ಚಾತ್ಯದರ್ಶನದೊಂದಿಗೆ ಹೋಲಿಸುವುದು ಸುಲಭದ ಕೆಲಸವಲ್ಲ ಮತ್ತು ಸರಿಯಾದದ್ದಲ್ಲ. ಏಕೆಂದರೆ ಪಾಶ್ಚಾತ್ಯದರ್ಶನ ಭಾರತೀಯದರ್ಶನದಂತೆಯೇ ಅತ್ಯಂತ ಸಂಕೀರ್ಣತೆಯಿಂದ ಕೂಡಿದ ದರ್ಶನ. ಒಂದು ದೃಷ್ಟಿಯಿಂದ ಭಾರತೀಯದರ್ಶನಕ್ಕಿಂತಲೂ ಸಂಕೀರ್ಣ ಎಂದು ಹೇಳಬಹುದು. ಆಧುನಿಕ ಪಾಶ್ಚಾತ್ಯ ದರ್ಶನರೂಪಗಳಂತೂ ಆಧುನಿಕ ವಿಜ್ಞಾನದ ಬೆಳವಣಿಗೆಗಳನ್ನು ಅಕ್ಷರಶಃ ಅನುಸರಿಸಿಕೊಂಡು ಹೋಗಿ ರೂಪಿತವಾದ ವಿಶ್ವದರ್ಶನಗಳು. ಆದ್ದರಿಂದ ಪೀಠಿಕಾರೂಪದಲ್ಲಿ ಕೆಲವು ವಾಸ್ತವಿಕ ಮಾತುಗಳನ್ನು ಪಾಶ್ಚಾತ್ಯ ಮತ್ತು ವೀರಶೈವ ದರ್ಶನಗಳ ಬಗ್ಗೆ ಹೇಳಿ, ಆಧುನಿಕ ಪಾಶ್ಚಾತ್ಯದರ್ಶನಗಳಲ್ಲಿ ಬಹಳ ಪ್ರಸಿದ್ಧವಾದ ಹೆಗೆಲ್‌ನ ವಿಶ್ವದರ್ಶನದೊಂದಿಗೆ ವೀರಶೈವದರ್ಶನದ ವಿಶ್ವದರ್ಶನವನ್ನು ಹೋಲಿಸಿ ವಿವೇಚಿಸುವುದಕ್ಕೆ ಮಾತ್ರ ಈ ಪ್ರಬಂಧ ಸೀಮಿತವಾಗಿದೆ.

## ಪಾಶ್ಚಾತ್ಯದರ್ಶನ ಮತ್ತು ಹೆಗೆಲ್‌ನ ದರ್ಶನ

ಪಾಶ್ಚಾತ್ಯ ದಾರ್ಶನಿಕರನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮೆಟಾಫಿಜಿಕ್ಸ್ ಅಥವಾ ಸತ್ತಾಶಾಸ್ತ್ರಕ್ಕೆ ಹೆಚ್ಚು ಗಮನಹರಿಸಿ ಪರಮಸತ್ತಾದ ಸ್ವರೂಪಲಕ್ಷಣಗಳನ್ನು ಅನ್ವೇಷಣೆ ಮಾಡುವವರದು ಒಂದು ಪ್ರಕಾರ. ಇದರಲ್ಲಿ ಪ್ಲೇಟೋ, ಸಾಕ್ರೆಟಿಸ್, ಅರಿಸ್ಟಾಟಲ್, ಪ್ಲೊಟೈನಸ್, ಸ್ಪಿನೋಜಾ, ಲೈಬ್ನಿಜ್, ಹೆಗೆಲ್ ಮುಂತಾದವರು ಸೇರುತ್ತಾರೆ. ಇದಕ್ಕೆ ವಿರುದ್ಧವಾಗಿ ಜ್ಞಾನಮೀಮಾಂಸೆ ಅಥವಾ ಪ್ರಮಾಣಶಾಸ್ತ್ರಕ್ಕೇ ಹೆಚ್ಚು ಗಮನಹರಿಸಿ ಜ್ಞಾನದ ಸ್ವರೂಪ, ಪ್ರಮಾದ (Truth) ಪ್ರಮಾಣಗಳು, ಜ್ಞಾನ ಮತ್ತು ಅದರ ಮಧ್ಯೆ ಇರುವ ತಾರ್ಕಿಕಸಂಬಂಧ ಇತ್ಯಾದಿ—ಜ್ಞಾನಕ್ಕೇ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಚಿಂತನೆಮಾಡುವವರು ಎರಡನೆಯ ಪ್ರಕಾರಕ್ಕೆ ಸೇರುತ್ತಾರೆ. ಇದರಲ್ಲಿ ಸೋಫಿಸ್ಟರು, ಗ್ರೀಕ್‌ಸಂದೇಹವಾದಿಗಳು, ಡೇಕಾರ್ಟ, ಲಾಕ್, ಹ್ಯೂಮ್, ಕ್ಯಾಂಟ್ ಮುಂತಾದವರು ಸೇರುತ್ತಾರೆ. ಇದರ ಅರ್ಥ ಮೊದಲನೆಯ ಗುಂಪಿಗೆ ಸೇರಿದವರು ಜ್ಞಾನಮೀಮಾಂಸೆ ಮಾಡಿಲ್ಲ ಎಂದಲ್ಲ, ಅಥವಾ ಎರಡನೆಯ ಗುಂಪಿಗೆ ಸೇರಿದವರು ಸತ್ತಾಶಾಸ್ತ್ರವನ್ನು ಸಂಪೂರ್ಣ ತಿರಸ್ಕರಿಸಿದ್ದಾರೆ ಎಂದಲ್ಲ.[1] ಉದಾಹರಣೆಗೆ ಪ್ಲೇಟೋ ಅಥವಾ ಹೆಗೆಲ್‌ನಂಥವರು ಜ್ಞಾನಮೀಮಾಂಸೆ ಮತ್ತು ಸತ್ತಾಶಾಸ್ತ್ರಗಳೆರಡನ್ನೂ ಕುರಿತು ಆಳವಾದ ಚಿಂತನೆ ಮಾಡಿದ್ದಾರೆ. ಅವರ ಜ್ಞಾನಮೀಮಾಂಸೆಗಳೇ ಅವರು ರೂಪಿಸಿದ ಸತ್ತಾಶಾಸ್ತ್ರಕ್ಕೆ ಅಡಿಪಾಯಗಳಾಗುತ್ತವೆ.

ಪಾಶ್ಚಾತ್ಯದರ್ಶನದ ಇತಿಹಾಸ ಬಹಳ ಪ್ರಾಚೀನವಾದುದಷ್ಟೇ ಅಲ್ಲದೆ ಅತ್ಯಂತ ವೈವಿಧ್ಯಮಯವೂ ಮತ್ತು ಶ್ರೀಮಂತವೂ ಆಗಿದೆ. ಪ್ರಾಚೀನ ಗ್ರೀಕ್ ತತ್ತ್ವಶಾಸ್ತ್ರದಿಂದ ಹಿಡಿದು ಇಪ್ಪತ್ತನೆಯ ಅನೇಕ ಶ್ರೇಷ್ಠ ತತ್ತ್ವಜ್ಞಾನಿಗಳ ವರೆಗೆ ಪಾಶ್ಚಾತ್ಯದೇಶಗಳಲ್ಲಿ ತತ್ತ್ವಾನ್ವೇಷಣೆ ಬಹಳ ವ್ಯವಸ್ಥಿತವಾಗಿ, ಆಳವಾಗಿ, ಸಮಗ್ರವಾಗಿ, ವೀರ್ಯವತ್ತಾಗಿ ಮತ್ತು ಅವ್ಯಾಹತವಾಗಿ ನಡೆದಿದೆ. ಅಷ್ಟು ವ್ಯಾಪಕವಾಗಿ ನಡೆದ ತತ್ತ್ವಜಿಜ್ಞಾಸೆಯ ಕೆಲವು ನಿದರ್ಶನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಹೆಗೆಲ್‌ನ ವಿಶ್ವದರ್ಶನಕ್ಕೆ ಬರುವುದಷ್ಟೇ ಸಾಧ್ಯ.

ಸಾಕ್ರೆಟೀಸನಿಗಿಂತ ಪ್ರಾಚೀನಕಾಲದಲ್ಲಿದ್ದ ಗ್ರೀಕ್ ತತ್ತ್ವಜ್ಞಾನಿಗಳು ವಿಶ್ವದ ಮೂಲ ಮತ್ತು ಉಗಮ ಈ ಮುಖ್ಯ ಸಮಸ್ಯೆಯನ್ನು ಕುರಿತು ಚಿಂತಿಸಿದರು. ಇಷ್ಟು ಅನಂತವಾದ ಮತ್ತು ವೈವಿಧ್ಯಮಯವಾದ ವಿಶ್ವದ ಅನೇಕ ವಸ್ತುಗಳಿಗೆ ನಿಜವಾದ ಮೂಲಪದಾರ್ಥ ಯಾವುದು ? ಎನ್ನುವ ಪ್ರಶ್ನೆಯೇ ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿಗಳ ತತ್ತ್ವಾನ್ವೇಷಣೆಗೆ ಮುಖ್ಯಪ್ರೇರಕವಾಗಿತ್ತು. ಅವರು ಮನುಷ್ಯನ ಅಸ್ತಿತ್ವ, ಆಂತರ್ಯ ಮತ್ತು ಅವನ ಹುಟ್ಟು, ಸಾವು ಅಥವಾ ಹಣೆಬರಹ (ಡೆಸ್ಟಿನಿ)ಗಳ ಬಗ್ಗೆ ಚಿಂತಿಸಲಿಲ್ಲ. ಆಧುನಿಕ ವಿಜ್ಞಾನಿಗಳಂತೆ ತಮ್ಮ ಸ್ವಂತದ ಅಸ್ತಿತ್ವದ ಬಗ್ಗೆ ನಿರ್ಲಿಪ್ತರಾಗಿದ್ದು ವಿಶ್ವದ ಹುಟ್ಟಿನ ರಹಸ್ಯದ ಬಗ್ಗೆ ಚಿಂತನೆ ಮಾಡಿದರು. ಅವರ ಈ ಪ್ರಯತ್ನದಿಂದ ಒಂದೊಂದು ಬಗೆಯ ಉತ್ತರ ವಿಶ್ವದ ಮೂಲದ ಬಗ್ಗೆ ದೊರೆಯಿತು. ಒಬ್ಬ ತತ್ತ್ವಜ್ಞಾನಿ ನೀರೇ ವಿಶ್ವದ ಎಲ್ಲಾ ಪದಾರ್ಥಗಳಿಗೂ ಮೂಲಭೂತ ಉಗಮ ಎಂದರೆ, ಇನ್ನೊಬ್ಬ ಗಾಳಿ ಎಂದ, ಮತ್ತೊಬ್ಬ ಬೆಂಕಿ ಎಂದ, ಮಗುದೊಬ್ಬ (ಪೈಥಾಗರಸ್) ಸಂಖ್ಯೆಯೇ ಎಲ್ಲಾ ವಸ್ತುಗಳ ಸತ್ವ ಎಂದ. ಹೀಗೆ ಸಾಕ್ರೆಟೀಸನಿಗಿಂತ ಹಿಂದೆ ಇದ್ದ ಪ್ರಾಚೀನ ಗ್ರೀಕ್ ದಾರ್ಶನಿಕರು ಬ್ರಹ್ಮಾಂಡದ ಉಗಮದ ರಹಸ್ಯವನ್ನು ತಿಳಿಯಲು ತಮ್ಮ ಚಿಂತನೆಯನ್ನು ವ್ಯಯಮಾಡಿದರು.

ಆದರೆ ಗ್ರೀಸ್‌ದೇಶದ ಅನೇಕ ಪಟ್ಟಣರಾಜ್ಯಗಳಲ್ಲಿ ಪ್ರವರ್ಧಮಾನಕ್ಕೆ ಬಂದ ಸೋಫಿಸ್ಟರ ಅವರ ಸಮಕಾಲೀನನಾದ ಸಾಕ್ರೆಟೀಸನ ಕಾಲದಿಂದ ಅಂದರೆ ಕ್ರಿ. ಪೂ. ಐದನೆಯ ಶತಮಾನದ ಆದಿಯಿಂದ ಗ್ರೀಕ್ ತತ್ತ್ವಜ್ಞಾನ

[1] ಡೇವಿಡ್ ಹ್ಯೂಮ್‌ನು ಮಾತ್ರ ಮೆಟಾಫಿಜಿಕ್ಸ್ ಅಥವಾ ಸತ್ತಾಶಾಸ್ತ್ರವನ್ನು ಪೂರ್ಣವಾಗಿ ತಿರಸ್ಕರಿಸಿದ್ದಾನೆ.

ಮತ್ತು ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಒಂದು ನೂತನ ದಾರ್ಶನಿಕ ಯುಗ ಪ್ರಾರಂಭವಾಗುತ್ತದೆ. ತತ್ವಜಿಜ್ಞಾಸೆ ಒಂದು ಹೊಸತಿರುವನ್ನು ಪಡೆದು ಕೇವಲ ಭೌತಿಕ ವಿಶ್ವದ ರಹಸ್ಯಗಳನ್ನು ಕುರಿತು ಚಿಂತಿಸುವುದರ ಬದಲು ಮಾನವನ ಸತ್ವ-ಅಸ್ತಿತ್ವ, ಅವನ ದೇಹಾತ್ಮಸಂಬಂಧ, ಸಾವು-ಅಮರತ್ವ, ಅವನ ಹಣೆಬರಹ, ಅವನು ಬದುಕುವ ಸಮಾಜ ಮತ್ತು ರಾಜ್ಯ, ಅವನು ಬದುಕಬೇಕಾದ ರೀತಿ ಮತ್ತು ಅವನ ಮೌಲ್ಯಗಳನ್ನು ಕುರಿತ ತೀವ್ರ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಇಂಥ ಜಿಜ್ಞಾಸೆಗೆ ಮೂಲಭೂತ ಪ್ರೇರಕರು ಸಾಕ್ರೆಟೀಸ್ ಮತ್ತು ಅವನ ಸಮಕಾಲೀನರಾದ ಸೋಫಿಸ್ಟರು. ಸಾಕ್ರೆಟೀಸನು ಸಾರ್ವತ್ರಿಕ ಮೌಲ್ಯಗಳು ವಸ್ತುನಿಷ್ಠ (ಆಬ್ಜೆಕ್ಟಿವ್) ಎಂದು ವಾದಿಸಿದರೆ ಸೋಫಿಸ್ಟರು ಅವು ವ್ಯಕ್ತಿನಿಷ್ಠ (ಸಬ್ಜೆಕ್ಟಿವ್) ಎಂದರು. ಸೋಫಿಸ್ಟರ ವಾದ—"ಮಾನವನೇ ಎಲ್ಲಾ ವಸ್ತುಗಳ ಮಾಪಕ" ಎನ್ನುವ ಪ್ರೊಟ್ಯಾಗರಸ್‌ನ ಪ್ರಸಿದ್ಧ ವಾಕ್ಯದಲ್ಲಿ ಅಭಿವ್ಯಕ್ತವಾದರೆ, ಸಾಕ್ರೆಟೀಸನವಾದ—"ಜ್ಞಾನವೇ ಆತ್ಮೋದ್ಧಾರ ಅಥವಾ ಸದ್ಗುಣವಾಗಿದೆ" (Knowledge is virtue) ಎನ್ನುವ ವಾಕ್ಯದಲ್ಲಿ ಅಭಿವ್ಯಕ್ತವಾಗುತ್ತದೆ.

ಪ್ಲೇಟೋ ಮತ್ತು ಅರಿಸ್ಟಾಟಲ್‌ರನ್ನು ಸಮಗ್ರ ಪಾಶ್ಚಾತ್ಯದರ್ಶನಸಂಪ್ರದಾಯದ ಎರಡು ಸ್ತಂಭಗಳೆಂದು ತಿಳಿಯಬಹುದು. ಪ್ರತಿಯೊಬ್ಬ ವ್ಯಕ್ತಿ ಪ್ಲೇಟೋಪಂಥಿಯಾಗಿರುತ್ತಾನೆ. ಇಲ್ಲವೇ ಅರಿಸ್ಟಾಟಲ್‌ಪಂಥಿಯಾಗಿರುತ್ತಾನೆ ಎಂಬ ಪ್ರತೀತಿ ಇದೆ. ಇದರಿಂದ ಪಾಶ್ಚಾತ್ಯ ತತ್ವಜ್ಞಾನಸಂಪ್ರದಾಯದಲ್ಲಿ ಈ ಇಬ್ಬರು ಪ್ರಸಿದ್ಧ ಗುರುಶಿಷ್ಯರ ಮಹತ್ವವನ್ನು ಅರಿಯಬಹುದು. ವಿಶ್ವದಲ್ಲಿ ಶಾಶ್ವತವಾದ ಆಧ್ಯಾತ್ಮಿಕ ಸತ್ವವುಳ್ಳ ಸತ್ಯಗಳು ಅಸ್ತಿತ್ವದಲ್ಲಿವೆ ಎನ್ನುವುದರ ಬಗ್ಗೆ ಪ್ಲೇಟೋ ಮತ್ತು ಅರಿಸ್ಟಾಟಲ್‌ರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಪ್ಲೇಟೋ ಆ ಆಧ್ಯಾತ್ಮಿಕ ಶಾಶ್ವತ ಸತ್ಯಗಳು ಪಂಚೇಂದ್ರಿಯ ಗ್ರಾಹ್ಯ ವ್ಯಾವಹಾರಿಕ ಜಗತ್ತಿನಿಂದ ಪೂರ್ತಿ ಪ್ರತ್ಯೇಕವಾದ ಸ್ಥಳದಲ್ಲಿ ಅಸ್ತಿತ್ವದಲ್ಲಿವೆ ಎಂದರೆ, (ಇದಕ್ಕೆ ಕಾರಣ ವ್ಯಾವಹಾರಿಕ ಜಗತ್ತು ಪ್ಲೇಟೋನ ದೃಷ್ಟಿಯಲ್ಲಿ ಶಾಶ್ವತ ಅಸ್ತಿತ್ವವಲ್ಲ) ಅರಿಸ್ಟಾಟಲ್ ತನ್ನ ಗುರುವಿನ ಈ ತಾತ್ವಿಕ ನಿಲುವನ್ನು ತಿರಸ್ಕರಿಸಿ ಶಾಶ್ವತ ಆಧ್ಯಾತ್ಮಿಕ ಸತ್ಯಗಳು ವ್ಯಾವಹಾರಿಕ ಜಗತ್ತಿನ ವ್ಯಕ್ತಿನಿಷ್ಠ ವಸ್ತುಗಳಲ್ಲಿಯೇ ನೆಲಸಿರಬೇಕೆಂದು ಅಭಿಪ್ರಾಯಪಡುತ್ತಾನೆ. ಪ್ಲೇಟೋ ಕಂಡ ಪರಮಸತ್ಯ ಶುಭ ಅಥವಾ ಪರಶಿವವಾದರೆ (The good), ಅರಿಸ್ಟಾಟಲ್‌ನ ಪರಮಸತ್ಯ ಅಚಲವಾಗಿದ್ದೂ ಪ್ರಪಂಚವನ್ನು ಚಲಿಸುವ ಹಾಗೆ ಮಾಡುವ ಈಶ್ವರನು. ನಿಜವಾದ 'ಪೂರ್ಣ'ದ ದರ್ಶನ ಪ್ಲೇಟೋ ಮತ್ತು ಅರಿಸ್ಟಾಟಲ್‌ರಲ್ಲಿ ಒಂದೊಂದು ಬಗೆಯಾಗಿ ನಿರೂಪಿತವಾಗಿದೆ.

ಅರಿಸ್ಟಾಟಲ್‌ನ ತರುವಾಯ ಬಂದ ಗ್ರೀಕ್ ತತ್ವಜ್ಞಾನ ಮನುಷ್ಯಜೀವಿಯ ಸುಖಸಂತೋಷ, ಮನಶ್ಶಾಂತಿ, ಜೀವನದಲ್ಲಿ ಸಾಮರಸ್ಯ ಇತ್ಯಾದಿ ಮುಖ್ಯವಾಗಿ ಆಧ್ಯಾತ್ಮಿಕತೆಗಿಂತ ನೈತಿಕಬದ್ಧ ನಡವಳಿಕೆಗಳ ಸಮಸ್ಯೆಗಳಲ್ಲಿ ಕೇಂದ್ರೀಕೃತವಾಗುತ್ತದೆ. ಸ್ಟೋಯಿಕ್ಸ್, ಎಪಿಕ್ಯೂರಿಯನ್ಸ್, ಸ್ಕೆಪ್ಟಿಕ್ಸ್, ಸಿನಿಕ್ಸ್ ಇತ್ಯಾದಿ ತಾತ್ವಿಕ ಪಂಥಗಳು ಗ್ರೀಕ್ ರಾಜ್ಯ ಪಟ್ಟಣ (City States)ಗಳಲ್ಲಿದ್ದ ಸಾಮಾಜಿಕ, ನೈತಿಕ ಮತ್ತು ರಾಜಕೀಯ ಅರಾಜಕತೆಗಳಿಂದ ತತ್ತರಿಸಿಹೋದ ವ್ಯಕ್ತಿಗಳಿಗೆ ಸಂತೋಷ, ಸಮಾಧಾನಗಳನ್ನು ಪೂರೈಸುವ ಕರ್ತವ್ಯ ನಿರ್ವಹಿಸಲು ಹುಟ್ಟಿಕೊಂಡ ಪಂಥಗಳು ಎನ್ನಬಹುದು.

ಅಲ್ಲಿಂದ ಮುಂದೆ ಪ್ಲೇಟೋನಿಂದ ಪ್ರಭಾವಿತನಾದ ಪ್ಲೋಟೈನಸ್‌ನ (Neo-platonism) ಸಿದ್ಧಾಂತ ಬಿಟ್ಟರೆ ನಮಗೆ ಅಂಧಕಾರಯುಗವೆಂದು ಕರೆಯಲ್ಪಡುವ ಮಧ್ಯಯುಗವು ಹೆಚ್ಚುಕಡಿಮೆ ಕ್ರೈಸ್ತಧರ್ಮದ ಪ್ರಭಾವಕ್ಕೆ ಒಳಪಟ್ಟಿತ್ತು. ಸೇಂಟ್‌ಥಾಮಸ್ ಅಕ್ವೈನಸ್ ಎಂಬ ಪ್ರಸಿದ್ಧ ಕ್ರೈಸ್ತಧರ್ಮಕ್ಕೆ ಸೇರಿದ ತತ್ವಜ್ಞಾನಿಯನ್ನು ಬಿಟ್ಟರೆ ನಮೂದಿಸಬೇಕಾದಂಥ ಶ್ರೇಷ್ಠ ತತ್ವಜ್ಞಾನಿಗಳು ಮಧ್ಯಯುಗದಲ್ಲಿ ಪಾಶ್ಚಾತ್ಯತತ್ವಜ್ಞಾನಸಂಪ್ರದಾಯದಲ್ಲಿ ಸಿಕ್ಕುವುದಿಲ್ಲ. ಸೇಂಟ್‌ಥಾಮಸ್ ಅಕ್ವೈನಸ್‌ನು ತರ್ಕದ ಮಹತ್ವವನ್ನು ತಿರಸ್ಕರಿಸದೆ ಅದು ಮತಧರ್ಮದ ಸೇವಕನಾಗಿದ್ದು ಮತಧರ್ಮದಿಂದ ಪ್ರಕಾಶಿತವಾದ (Revealed) ಆಧ್ಯಾತ್ಮಿಕ ಸತ್ಯಗಳೂ ತರ್ಕದ ನಿಯಮಗಳಿಗೆ ವಿರುದ್ಧವಾಗಿಲ್ಲವೆಂಬುದನ್ನು ಸಾಧಿಸಬೇಕೆಂದು ಅಭಿಪ್ರಾಯಪಡುತ್ತಾನೆ. ತರ್ಕವನ್ನು ಅವಲಂಬಿಸಿದ ಅರಿಸ್ಟಾಟಲ್‌ನ ವಿಚಾರಗಳನ್ನು ಸೇಂಟ್‌ಥಾಮಸ್ ಅಕ್ವೈನಸ್‌ನು ಕ್ರೈಸ್ತಧರ್ಮದ ಥಿಯಲಾಜಿಕಲ್ ಸಿದ್ಧಾಂತಗಳೊಂದಿಗೆ ಸಮನ್ವಯಿಸಲು ಪ್ರಯತ್ನಿಸಿದ್ದಾನೆ.

ಯುರೋಪಿನಲ್ಲಿ ಮಧ್ಯಯುಗ ಕಳೆದು ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಆಧುನಿಕ ಯುಗ ಪ್ರಾರಂಭವಾಗುತ್ತದೆ. ಈ ಯುಗದ ಮುಖ್ಯ ಮೌಲ್ಯಗಳು—ವ್ಯಕ್ತಿಸ್ವಾತಂತ್ರ್ಯ, ಇಂದ್ರಿಯಾನುಭವ ಅಥವಾ ಅವಲೋಕನ ವಿಧಾನ ಮತ್ತು ತರ್ಕ (ರೀಸನ್)ಗಳ ವೈಜ್ಞಾನಿಕ ಮಹತ್ವ. ಎಲ್ಲಾ ಪ್ರಕಾರದ ಜ್ಞಾನಕ್ಕೆ ಇಂದ್ರಿ

ಯಾನುಭವ ಮತ್ತು ತರ್ಕ ಪ್ರಮಾಣಗಳು ಎನ್ನುವುದು ಕ್ರಾಂತಿಕಾರೀ ಧೋರಣೆ. ಏಕೆಂದರೆ ಇಂತಹ ಮನೋಭಾವನೆಯು ಮೊದಲ ಹೆಜ್ಜೆ ಮತಧರ್ಮಗಳ ಪ್ರಾಮಾಣ್ಯದ ತಿರಸ್ಕಾರ. ಈ ಮನೋಭಾವನೆಯಿಂದಾಗಿ ಆಧುನಿಕ ತತ್ವಜ್ಞಾನಿಗಳಿಗೆ ವಿಶ್ವದ ಬಗ್ಗೆ ನೂತನ ಸತ್ಯಗಳನ್ನು ಕಂಡುಹಿಡಿಯಲು ಪ್ರೇರಣೆ ಮತ್ತು ಈಶ್ವರನ ಅಸ್ತಿತ್ವ ಮತ್ತು ಸ್ವರೂಪಗಳ ಬಗ್ಗೆ ಸ್ವತಂತ್ರವಾದ ಆಲೋಚನೆ ಸಾಧ್ಯವಾಯಿತು.

ಫ್ರೆಂಚ್ ತತ್ವಜ್ಞಾನಿ ಡೇಕಾರ್ಟ ಮತ್ತು ಇಂಗ್ಲೀಷ್ ತತ್ವಜ್ಞಾನಿ ಫ್ರಾನ್ಸಿಸ್‌ಬೇಕನ್ ಇವರು ಹಳೆಯ ಸಂಶೋಧನಾ ವಿಧಾನಗಳನ್ನು ಕೈಬಿಟ್ಟು ನೂತನ ವಿಧಾನಗಳನ್ನು ರೂಪಿಸಿ ಹೊಸ ವಿಚಾರ ಪದ್ಧತಿಗೆ ನಾಂದಿ ಹಾಡಿದರು. ಡೇಕಾರ್ಟನ Discourse on Meethod ಮತ್ತು ಫ್ರಾನ್ಸಿಸ್ ಬೇಕನ್‌ನ ಇಂಡಕ್ಟಿವ್ (ಅನುಗಮನ) ತರ್ಕ ಪದ್ಧತಿಗಳು ಯುರೋಪಿನಲ್ಲಿ ವೈಚಾರಿಕ ಕ್ರಾಂತಿಗಳಿಗೆ ದಾರಿಮಾಡಿಕೊಟ್ಟವು. ಡೇಕಾರ್ಟನ ಎರಡು ಸ್ವತಂತ್ರ ದ್ರವ್ಯಗಳ ಸಿದ್ಧಾಂತ, ಸ್ಪಿನೋಜಾನ ಒಂದೇ ದ್ರವ್ಯದ ಸಿದ್ಧಾಂತ, ಲೈಬ್ನಿಜ್‌ನ ಅನೇಕ ಸ್ವತಂತ್ರ ದ್ರವ್ಯಗಳ ಸಿದ್ಧಾಂತ ಇಂಗ್ಲಿಷ್ ತತ್ವಜ್ಞಾನಿಗಳಾದ ಲಾಕ್, ಬಾರ್ಕಲಿ ಮತ್ತು ಹ್ಯೂಮ್ ಇವರ ಇಂದ್ರಿಯಾನುಭವನಿಷ್ಠ ಜ್ಞಾನ ಮೀಮಾಂಸೆ ಮತ್ತು ಪದಾರ್ಥಸಿದ್ಧಾಂತಗಳು ಆಧುನಿಕ ಯುರೋಪಿನ ದಾರ್ಶನಿಕ ಪ್ರಪಂಚದ ಮಹತ್ವದ ತಾತ್ವಿಕ ಕೊಡುಗೆಗಳು. ಆಧುನಿಕ ಪಾಶ್ಚಾತ್ಯತತ್ವಜ್ಞಾನ. ಹೆಗೆಲ್‌ನ ಬರುವಿಕೆಯವರೆಗೆ ಆಧುನಿಕ ವಿಜ್ಞಾನದ ಮಾದರಿಯಲ್ಲಿಯೇ ಮತ್ತು ಅದರ ನೆರಳಿನಲ್ಲಿಯೇ ಬೆಳೆದು ಬಂದಿತು ಎಂದರೆ ತಪ್ಪಾಗಲಾರದು. ಆಧುನಿಕ ವಿಜ್ಞಾನದ ವಿಧಾನ ಮತ್ತು ಸಿದ್ಧಾಂತಗಳಿಂದ ಆಧುನಿಕ ತತ್ವಜ್ಞಾನ ಮತ್ತು ಸಮಕಾಲೀನ ತತ್ವಶಾಸ್ತ್ರರೂಪಗಳು ಪ್ರಭಾವಿತವಾಗಿವೆ. ಈ ಸಾಮಾನ್ಯ ಅಂಶಕ್ಕೆ ಹೆಗೆಲ್‌ನು ಒಂದು ಅಪವಾದ ಎಂದು ಹೇಳಬಹುದು. ಆಧುನಿಕ ವಿಜ್ಞಾನದ ವಿಧಾನ ಮತ್ತು ಸಿದ್ಧಾಂತಗಳನ್ನು ಕೈಬಿಟ್ಟು ಪೂರ್ಣ ಸ್ವತಂತ್ರವಾಗಿ ಚಿಂತನೆ ಮಾಡಿ ಒಂದು ನೂತನ ವಿಶ್ವದರ್ಶನ ಮಾಡಿಸಿದ ಶ್ರೇಷ್ಠ ತತ್ವಜ್ಞಾನಿ ಹೆಗೆಲ್. ಕ್ಯಾಂಟ್‌ನಂಥ ತತ್ವಜ್ಞಾನಿಗೂ ವಿಜ್ಞಾನದಿಂದ ದೂರ ಇದ್ದು ತತ್ವಜ್ಞಾನ ರಚಿಸಲು ಸಾಧ್ಯವಾಗಲಿಲ್ಲ ಎನ್ನುವುದನ್ನು ಗಮನಿಸಿದರೆ ಹೆಗೆಲ್‌ನ ತತ್ವಜ್ಞಾನದ ಮಹತ್ವದ ಅರಿವಾಗುತ್ತದೆ. ಈ ದಿಸೆಯಲ್ಲಿ ಹೆಗೆಲ್‌ನನ್ನು ಹೋಲುವವರು ಸಮಕಾಲೀನ ಪಾಶ್ಚಾತ್ಯ ಅಸ್ತಿತ್ವವಾದಿಗಳು. ಸಮಕಾಲೀನ ಅಂದರೆ ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ತತ್ವಜ್ಞಾನವು ಹೆಗೆಲ್‌ನ ತತ್ವಜ್ಞಾನದ ಕಟುವಿಮರ್ಶೆ ಇಲ್ಲವೇ ಅನುಕರಣೆ ಎನ್ನಬಹುದು.

## ಹೆಗೆಲ್‌ನ ತತ್ವಜ್ಞಾನದ ಮುಖ್ಯಾಂಶಗಳು

ಹೆಗೆಲ್‌ತತ್ವಜ್ಞಾನಿಗೆ ಪಾಶ್ಚಾತ್ಯತತ್ವಶಾಸ್ತ್ರಸಂಪ್ರದಾಯದಲ್ಲಿ ಬಹಳ ವಿಶಿಷ್ಟ ಸ್ಥಾನವಿದೆ. ಅವನನ್ನು ಅತಿಯಾಗಿ ಮೆಚ್ಚುವವರಿದ್ದಷ್ಟೇ, ಖಂಡಿಸುವವರೂ ಇದ್ದಾರೆ. ಜರ್ಮನ್ ದೇಶದ ರ್‍ಯಾಷನಲ್ ಮತ್ತು ಚಿತ್‌ಪ್ರಧಾನ ಸಂಪ್ರದಾಯ (Idealistic Tradition)ಕ್ಕೆ ಹೆಗೆಲ್ ಸೇರಿದವನಾದರೂ ಅವನು ಮಂಡಿಸಿದ ತಾತ್ವಿಕ ವಿಚಾರಗಳು ಮತ್ತು ರಚಿಸಿದ ವ್ಯವಸ್ಥಿತ ತತ್ವಜ್ಞಾನ ಜಗತ್ತು ಅವನನ್ನು ವಿಶ್ವದಲ್ಲಿಯೇ ವಿಶಿಷ್ಟ ಬಗೆಯ ತತ್ವಜ್ಞಾನಿಯನ್ನಾಗಿ ಮಾಡಿದೆ. ಡೈಲೆಕ್ಟಿಕಲ್ ವಿಧಾನವನ್ನು ವಿಶಿಷ್ಟರೀತಿಯಲ್ಲಿ ತನ್ನ ತತ್ವಜ್ಞಾನ ಸೌಧ ಕಟ್ಟಲು ಬಳಸಿ, ಆ ವಿಧಾನವನ್ನು ರೂಪಿಸಿದ ಶ್ರೇಯಸ್ಸು ಹೆಗೆಲ್‌ಗೆ ಸೇರುತ್ತದೆ. ಜರ್ಮನ್ ದೇಶದ ಇತರ ಶ್ರೇಷ್ಠ ತತ್ವಜ್ಞಾನಿಗಳಾದ ಕ್ಯಾಂಟ್. ಶೆಲ್ಲಿಂಗ್, ಫಿಶ್ಜೆ ಮುಂತಾದ ಚಿತ್‌ಪ್ರಧಾನವಾದಿಗಳ ಪ್ರಭಾವವನ್ನು ಅರಗಿಸಿಕೊಂಡು, ಅವರ ಕೆಲವು ವಿಚಾರಗಳನ್ನು ತನ್ನ ತತ್ವಜ್ಞಾನದಲ್ಲಿ ಉಳಿಸಿಕೊಂಡು, ಕೆಲವನ್ನು ತಿರಸ್ಕರಿಸಿ ತಾನೇ ರೂಪಿಸಿದ ಡೈಲೆಕ್ಟಿಕಲ್ ವಿಧಾನದಿಂದ ಹೆಗೆಲ್‌ನು ಒಂದು ಅದ್ಭುತ ತತ್ವಜ್ಞಾನ ನಿರ್ಮಿಸಿದ್ದಾನೆ. ಅವನ ತತ್ವಜ್ಞಾನದ ಮುಖ್ಯ ಸ್ತಂಭಗಳು ಎರಡು: ಒಂದು ಅವನ ಡೈಲೆಕ್ಟಿಕಲ್ ವಿಧಾನ ಮತ್ತು ಇನ್ನೊಂದು ಆ ವಿಧಾನದಿಂದ ತಾರ್ಕಿಕವಾಗಿ ಅಭಿವ್ಯಕ್ತವಾದ ಅವನ ಪರಿಪೂರ್ಣ ಚಿದಾತ್ಮಕವಾದ (Absolute Idealism). ಹೆಗೆಲ್‌ನ ಈ ಎರಡು ಮುಖ್ಯ ಸ್ತಂಭಗಳನ್ನು ನಿರ್ಮಿಸಿದ ಎರಡು ಗ್ರಂಥಗಳೆಂದರೆ (೧) ತರ್ಕದ ಶಾಸ್ತ್ರ (Science of logic) ಮತ್ತು (೨) ಚಿತ್‌ನ ಸ್ವರೂಪವಿಜ್ಞಾನ (Phenomenology of Mind).

## ಹೆಗೆಲ್‌ನ ಡೈಲೆಕ್ಟಿಕಲ್ ವಿಧಾನದ ಸ್ವರೂಪ

ಹೆಗೆಲ್‌ನ ಡೈಲೆಕ್ಟಿಕಲ್ ವಿಧಾನವು ಸಾಮಾನ್ಯ ತರ್ಕಶಾಸ್ತ್ರದ ನಿಯಮಗಳನ್ನು ಅತೀತಗೊಳಿಸಿ (Transend) ಸತ್ಯದ ಸಮನ್ವಯ ಅಥವಾ ಸಾಂಗತ್ಯವನ್ನು ಸಾಧಿಸುವ ಒಂದು ವೈಚಾರಿಕ ಅಥವಾ ರ್‍ಯಾಷನಲ್ ಕ್ರಮ. ಸಾಮಾನ್ಯ

ತರ್ಕಶಾಸ್ತ್ರದ ನಿಯಮಗಳು ವಿಚಾರಕ್ಕೆ ಮಾತ್ರ ಅನ್ವಯಿಸುವ ಅಥವಾ ಅನ್ವಯವಾಗುವಂಥವು. ಆದರೆ ಹೆಗೆಲ್ ದರ್ಶಿಸಿದ ಮತ್ತು ರಚಿಸಿದ ಡೈಲೆಕ್ಟಿಕಲ್ ವಿಧಾನ. ವಿಚಾರ ಮತ್ತು ಸತ್ತಾಗಳೆರಡಕ್ಕೂ (Thought and Reality) ನೇರವಾಗಿ ಅನ್ವಯಿಸುವ ಮತ್ತು ಅನ್ವಯಿಸಬೇಕಾದ ಒಂದು ತಾತ್ವಿಕ ವಿಧಾನ. ಅರಿಸ್ಟಾಟಲ್‌ನ ವಿಚಾರದ ನಾಲ್ಕು ನಿಯಮಗಳಲ್ಲಿ ಒಂದಾದ ವಿರೋಧಾತ್ಮಕ ನಿಯಮ (Law of contradiction)ದ ಮಿತಿ ಮತ್ತು ಭಾಗಶಃ ಸತ್ಯವನ್ನು ತೋರಿಸಿ ವಿಚಾರ ಮತ್ತು ಅದರ ವಿಷಯಗಳೆರಡೂ ಹೇಗೆ ಡೈಲೆಕ್ಟಿಕಲ್ ಕ್ರಮಕ್ಕೆ ಬದ್ಧವಾಗಿವೆ ಎಂಬುದನ್ನು ಪ್ರದರ್ಶಿಸುವುದು ಹೆಗೆಲ್‌ನ ಡೈಲೆಕ್ಟಿಕ್‌ನ ಗುರಿ.

ಈ ವಿನೂತನ ದಾರ್ಶನಿಕ ವಿಧಾನದಲ್ಲಿ ಮೂರು ಸ್ತರಗಳಿವೆ. ಮೂರರಲ್ಲಿ ಮೊದಲಿನ ಎರಡು ಸ್ತರಗಳು ಒಂದಕ್ಕೆ ಒಂದು ವಿರೋಧಾತ್ಮಕವಾಗಿದ್ದು, ಮೂರನೆಯ ಸ್ತರದಲ್ಲಿ ಅವು ತಮ್ಮ ವಿರೋಧಾತ್ಮಕತೆಯನ್ನು ನೀಗಿಸಿಕೊಂಡುಒಂದು ಹೊಸ ಸಮನ್ವಯಕ್ಕೆ ಕಾರಣವಾಗುತ್ತವೆ. ಈ ಮೂರು ಸ್ತರಗಳಿಗೆ ಹೆಗೆಲ್‌ನು ಥೀಸಿಸ್ (Thesis), ಆಂಟಿಥೀಸಿಸ್ (Anti thesis) ಮತ್ತು ಸಿಂಥೆಸಿಸ್ (Synthesis) ಎಂದು ಕರೆದಿದ್ದಾನೆ. ಈ ಮೂರು ಸ್ತರಗಳು ಸತ್ತಾ ಮತ್ತು ಚಿತ್‌ಗಳೆರಡರ ಸ್ವರೂಪವನ್ನೂ ಪ್ರದರ್ಶಿಸುತ್ತವೆ. ಒಂದು ಉದಾಹರಣೆ ತೆಗೆದುಕೊಂಡು ಡೈಲೆಕ್ಟಿಕಲ್ ವಿಧಾನ ವಿವರಿಸುವುದಾದರೆ ಪ್ರಾರಂಭದ ಸ್ತರ ಸತ್ (Being) ಆಗಿದ್ದರೆ, ಎರಡನೆಯ ಸ್ತರ ಅದರ ವಿರೋಧಾತ್ಮಕವಾದ ಅಸತ್ (Non-Being) ಅಥವಾ ಶೂನ್ಯವಾಗಿರುತ್ತದೆ. ಇವೆರಡರ ಸಮನ್ವಯ (Synthesis) ಆಗುವಿಕೆ (Becoming) ಯಾಗಿರುತ್ತದೆ. ಹೆಗೆಲ್‌ನ ಪ್ರಕಾರ ಸಮನ್ವಯವು ಅಥವಾ ಮೂರನೆಯ ಸ್ತರವು ಮೊದಲಿನ ವಿರೋಧಾತ್ಮಕಗಳಾದ ಎರಡೂ ಸ್ತರಗಳಿಗಿಂತ ಹೆಚ್ಚು ಪೂರ್ಣವೂ ಹೆಚ್ಚು ಮೂರ್ತವೂ ಆಗಿರುತ್ತದೆ. ಏಕೆಂದರೆ ಮೂರನೆಯ ಸ್ತರವು ಮೊದಲಿನ ಎರಡೂ ಸ್ತರಗಳ ಲಕ್ಷಣಗಳನ್ನು ಉಳಿಸಿಕೊಂಡು ಅದಕ್ಕಿಂತಲೂ ಉನ್ನತ ಸತ್ತಾ ಸೃಷ್ಟಿಗೆ ಕಾರಣವಾಗುತ್ತದೆ.

ಮೊದಲಿನ ಎರಡು ಸ್ತರಗಳು ಹೇಗೆ ವಿರೋಧಾತ್ಮಕವಾಗುತ್ತವೆಂಬುದನ್ನು ನೋಡೋಣ. ಹೆಗೆಲ್‌ನ ಪ್ರಕಾರ ಸತ್ ಅಥವಾ ಇರವು (Being) ಡೈಲೆಕ್ಟಿಕಲ್ ಕ್ರಮದಲ್ಲಿ ಮೊಟ್ಟಮೊದಲ ಹಂತ. ಡೈಲೆಕ್ಟಿಕಲ್ ಕ್ರಮದಲ್ಲಿ ಇರವು ಅತ್ಯಂತ ಪೂರ್ವದ ಹಂತವಾದ್ದರಿಂದ ಅದು ಯಾವ ರೀತಿಯಲ್ಲಿಯೂ ಗುಣಾತ್ಮಕತೆಯನ್ನು ಪಡೆಯದೆ ಅನಿರ್ದಿಷ್ಟ (Indefinite)ವಾಗಿರುತ್ತದೆ. ಅಂದರೆ ಪೂರ್ಣಶುದ್ಧವಾದ ನಿರ್ಗುಣವಾಗಿರುವುದರಿಂದ ಅದು ಇದೆಯೆಂದರೂ ಒಂದೇ, ಇಲ್ಲ ಎಂದರೂ ಒಂದೇ.[1] ಆದ್ದರಿಂದ ಅದನ್ನು (Being) ಅಸತ್ ಅಥವಾ ಇಲ್ಲದಿರವು (Non-Being) ಎಂದೂ ತಿಳಿಯಬಹುದು. ಆದರೆ ಇದು ನಮ್ಮ ಮನಸ್ಸಿನ ಪರಿಗಣನೆ ಅಷ್ಟೇ ಅಲ್ಲ. ಏಕೆಂದರೆ ಹೆಗೆಲ್‌ನ ಪ್ರಕಾರ ಡೈಲೆಕ್ಟಿಕಲ್ ವಿಧಾನ ಯೋಚಿಸುವ ಮನಸ್ಸಿನ ತರ್ಕಕ್ಕೂ ಮತ್ತು ಅದರ ವಿಷಯಗಳೆರಡಕ್ಕೂ ಅನ್ವಯವಾಗುತ್ತದೆ. ಸತ್ ಅಸತ್ ಆಗುವುದೇ ಡೈಲೆಕ್ಟಿಕಲ್ ವಿಧಾನದ ಮುಖ್ಯ ಲಕ್ಷಣ. ಡೈಲೆಕ್ಟಿಕಲ್ ಕ್ರಮ (Process) ಒಂದು ವಸ್ತುವಿನಲ್ಲಿ ಅದಕ್ಕೆ ವಿರುದ್ಧವಾದುದನ್ನು ಸೃಷ್ಟಿಸುವುದಷ್ಟೇ ಅಲ್ಲ. ಆ ವಿರೋಧಾತ್ಮಕಗಳನ್ನು ಸಂಯೋಜಿಸಿ ಒಂದು ನೂತನ ಸತ್ತಾ (Reality)ವನ್ನು ಸೃಷ್ಟಿಸುವುದೇ ಆಗಿದೆ. ನೂತನ ಸತ್ತಾಸೃಷ್ಟಿ ಡೈಲೆಕ್ಟಿಕಲ್ ಚಲನೆಯಿಂದಾಗುವುದರಿಂದ ಮೂರನೆಯ ಹಂತಕ್ಕೆ ಆಗುವಿಕೆ (Becoming) ಎಂದು ಕರೆಯಲಾಗಿದೆ. ಹೀಗೆ Being, Non-Being ಮತ್ತು Becoming (ಇರವು, ಇಲ್ಲದಿರವು ಮತ್ತು ಆಗುವಿಕೆ) ಇವು ಮೂರೂ ಡೈಲೆಕ್ಟಿಕಲ್ ವಿಧಾನದ ಮೂರು ಮೂಲಭೂತ ಹಂತಗಳು ಅಥವಾ ಕ್ಷಣಗಳು. ಡೈಲೆಕ್ಟಿಕಲ್‌ನ ಈ ಚಟುವಟಿಕೆಯಿಂದಾಗಿ ಅಮೂರ್ತವಾದ ವಿರೋಧಾತ್ಮಕವಾದ ಮೊದಲ ಎರಡು ಹಂತಗಳು ಮೂರನೆಯ ಅವೆರಡನ್ನೂ ಸಂಯೋಜಿಸಿದ ಹಂತದಲ್ಲಿ ಮೂರ್ತಸ್ವರೂಪ ಪಡೆಯುವುವು. ಆದರೆ ಈ ಮೂರನೆಯ ಹಂತವೂ ಅಪೂರ್ಣವಾದ್ದರಿಂದ ಮತ್ತೆ ತನ್ನಲ್ಲಿಯೇ ಹೊಸ ವಿರೋಧಾತ್ಮಕಕ್ಕೆ ಕಾರಣವಾಗುತ್ತದೆ. ಡೈಲೆಕ್ಟಿಕಲ್ ಚಲನೆ ಪರಿಪೂರ್ಣ, ಸಂಪೂರ್ಣ ಮೂರ್ತಸತ್ತಾದ (Absolute) ಕೊನೆಯ ಹಂತವನ್ನು ಮುಟ್ಟುವವರೆಗೆ ಅವ್ಯಾಹತವಾಗಿ ಸಾಗುತ್ತದೆ.

## ನಿರುಪಾಧಿಕ ಚಿತ್ ಮತ್ತು ನಿರುಪಾಧಿಕಸತ್ತಾ (Absolute Idea and Absolute Reality)

ಹೆಗೆಲ್‌ನ ತತ್ವಜ್ಞಾನದಲ್ಲಿ ಚಿತ್(Idea)ಗೆ ಬಹಳ ಮಹತ್ವವಿದೆ. ಏಕೆಂದರೆ ಚಿತ್‌ನಿಂದಲೇ ಡೈಲೆಕ್ಟಿಕಲ್

---

1 ಈ ಸಂದರ್ಭದಲ್ಲಿ ಪ್ರಭುದೇವರ ಈ ವಚನ ನೆನಪಿಗೆ ಬರುತ್ತದೆ. "ಅದಿ ಅನಾದಿ ಇಲ್ಲದಂದು . . . . ಗುಹೇಶ್ವರನೊಬ್ಬನೇ ಇದ್ದೆಯುಲ್ಲ, ಇಲ್ಲದ್ದಂತೆ."

ವಿಧಾನದ ಮುಖಾಂತರ ಪ್ರಕೃತಿ, ಇತಿಹಾಸ, ಕಲೆ, ತತ್ತ್ವಜ್ಞಾನ, ಮತಧರ್ಮ ಮತ್ತು ಕೊನೆಯಲ್ಲಿ ಅತ್ಯಂತ ಪರಿಪೂರ್ಣ, ಮೂರ್ತ, ಚೈತನ್ಯಾತ್ಮಕ ಸತ್ತಾ (Spiritual Reality) ವಾಸ್ತವವಾಗುತ್ತದೆ. ಚಿತ್ ಡೈಲೆಕ್ಟಿಕಲ್ ಅರ್ಥದಲ್ಲಿ ತಾರ್ಕಿಕಸ್ವರೂಪದ್ದಾದ್ದರಿಂದ ಅದರ ಬೆಳವಣಿಗೆ ಅಥವಾ ಡೈಲೆಕ್ಟಿಕಲ್ ವಿಕಾಸ ಸುಸಂಬದ್ಧವಾಗಿದ್ದು ಅಲ್ಲಿ ವ್ಯವಸ್ಥಿತ ವಿಚಾರದ (Reason) ಅಭಿವ್ಯಕ್ತಿಯನ್ನು ಕಾಣಬಹುದು. ಆದ್ದರಿಂದ ಹೆಗೆಲ್‌ಗೆ ಸತ್ತಾ ಎಂದರೆ ತಾರ್ಕಿಕ ವಿಚಾರವೇ. "ಸತ್ತಾವು ವಿಚಾರಾತ್ಮಕವಾಗಿದೆ" (Real is rational) ಎನ್ನುವುದು ಹೆಗೆಲ್‌ನ ಪ್ರಸಿದ್ಧ ತಾತ್ತ್ವಿಕ ಸಿದ್ಧಾಂತ ಅಥವಾ ಸೂತ್ರ.

ನಿರುಪಾಧಿಕ ಚಿತ್, ತನ್ನಲ್ಲಿರುವ ಎಲ್ಲ ಸಾಧ್ಯತೆಗಳನ್ನೂ ವಾಸ್ತವಿಕವಾಗದ ಶಕ್ತಿರೂಪದಲ್ಲಿ ಅಡಗಿಸಿಕೊಂಡಿರುತ್ತದೆ. ಇಂಥ ಚಿತ್ ಅನ್ನು ಹೆಗೆಲ್ ಈಶ್ವರ ಎಂದಿದ್ದಾನೆ. ಈಶ್ವರ ಎಂದರೆ ಶಕ್ತ್ಯಾತ್ಮಕ (Potential) ವಿಶ್ವವಿಕಾಸದ ಎಲ್ಲಾ ಸಾಧ್ಯತೆಗಳ ಕಾಲಾತೀತಸಮಷ್ಟಿ. ಚೈತನ್ಯವೆಂದರೆ, ಇಂಥ ಈಶ್ವರನ ಗುಪ್ತಶಕ್ತಿಯ ಪೂರ್ಣ ವಿಕಾಸ. ಹೆಗೆಲ್‌ನ ಪ್ರಕಾರ ಜಗತ್ತು ಅನಾದಿ ಅನಂತ ಅಥವಾ ನಿತ್ಯಸೃಷ್ಟಿ. ದೈವಿಕಚೈತನ್ಯದ ಸತ್ ಅಭಿವ್ಯಕ್ತಿಯಲ್ಲಿರುತ್ತದೆ. ಈಶ್ವರನು ಜೀವಂತ ಚಲನಾತ್ಮಕ ಜಗತ್ತಿನ ಕಾರಣಕರ್ತ. ಅವನು ಜಗತ್ತಿನಲ್ಲಿ ಅಭಿವ್ಯಕ್ತಿಸುತ್ತಾನೆ. ಜಗತ್ತು, ನಿಸರ್ಗ, ಇತಿಹಾಸಗಳು ಈಶ್ವರನು ಸ್ವಪ್ರಜ್ಞೆಯನ್ನು (Self consciousness) ಮುಟ್ಟುವಾಗಿನ ಅವಶ್ಯಕ ವಿಕಾಸದ ಹಂತಗಳು. ಹೆಗೆಲ್‌ನಲ್ಲಿ ವಿಕಾಸ ತಾರ್ಕಿಕವಾಗಿದ್ದು ಕಾಲಬದ್ಧವಲ್ಲ. ಒಟ್ಟಿನಲ್ಲಿ ಹೇಳಬಹುದಾದರೆ ಹೆಗೆಲ್‌ನ ತತ್ತ್ವಜ್ಞಾನ ಡೈಲೆಕ್ಟಿಕಲ್ ವಿಧಾನಕ್ಕೆ ಬದ್ಧವಾಗಿದ್ದು, ಸ್ವಪ್ರಜ್ಞೆಯ ಅಭಿವ್ಯಕ್ತಿ ಅಥವಾ ಅತ್ಯಂತ ಪರಿಪೂರ್ಣಮೂರ್ತಸತ್ತಾ ಅಥವಾ ಚೈತನ್ಯದ (Geist) ವಿಕಾಸವನ್ನು ಡೈಲೆಕ್ಟಿಕಲ್ ವಿಧಾನದ ಮುಖಾಂತರ ಪ್ರದರ್ಶಿಸುವ ದರ್ಶನ.

## ವೀರಶೈವದರ್ಶನ ಮತ್ತು ಹೆಗೆಲ್‌ನ ದರ್ಶನ

ಶೈವ ಧಾರ್ಮಿಕ ಮತ್ತು ದಾರ್ಶನಿಕಸಂಪ್ರದಾಯಕ್ಕೆ ಸೇರಿದ ವೀರಶೈವದಲ್ಲಿ ತತ್ತ್ವ, ದರ್ಶನ ಮತ್ತು ಧರ್ಮಗಳಿಗೆ ಶಿವನು ಕೇಂದ್ರಬಿಂದು. ಅಂದರೆ ಶಿವನನ್ನು ಬಿಟ್ಟು ತತ್ತ್ವವಿಲ್ಲ, ದರ್ಶನವಿಲ್ಲ ಮತ್ತು ಧರ್ಮವಿಲ್ಲ. ಆದರೆ ತತ್ತ್ವ, ದರ್ಶನ ಮತ್ತು ಧರ್ಮ ಶಿವನಿಗಲ್ಲ. ಆದ್ದರಿಂದ ಶಿವದರ್ಶನ, ಶಿವತತ್ತ್ವ ಮತ್ತು ಶಿವಧರ್ಮಗಳನ್ನು ದರ್ಶಿಸುವ, ಆರಾಧಿಸುವ ಮತ್ತು ಆಚರಿಸುವ ಶಿವಭಕ್ತರೂ ಇರಬೇಕು. ಶಿವಭಕ್ತರು ಶಿವದಲ್ಲಿ (ಲಿಂಗ) ಐಕ್ಯರಾಗುವವರೆಗೆ ಅವರ ಕಾರ್ಯಾಚರಣೆ ಮತ್ತು ಅನುಭವಕ್ಕೆ ಕ್ಷೇತ್ರವಾಗುವ ಜಗತ್ತು ಇರಬೇಕು. ಹೀಗೆ ಶಿವ, ಶಿವಭಕ್ತ ಮತ್ತು ಪ್ರಪಂಚ ಇವು ಮೂರೂ ವೀರಶೈವದರ್ಶನದಲ್ಲಿ ಮುಖ್ಯ ತತ್ತ್ವಗಳು.

ವೀರಶೈವವು ಶೈವವಷ್ಟೇ ಅಲ್ಲ, "ವೀರಶೈವ." ವೀರ ಎನ್ನುವ ಪದದ ಮೂಲ ಮತ್ತು ಅದರ ಅರ್ಥದ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದಾದರೂ "ವೀರ" ಪದವು ಉಳಿದ ಶೈವದರ್ಶನಗಳಲ್ಲಿ ಕಾಣದ ಹೆಗೆಲ್ ಪ್ರತಿಪಾದಿಸಿರುವ ಸತ್ ಮತ್ತು ಚಿತ್‌ತತ್ತ್ವಗಳ ಡೈಲೆಕ್ಟಿಕಲ್ ಸ್ವರೂಪವನ್ನು ಸೂಚಿಸುತ್ತದೆ—ಎನಿಸುತ್ತದೆ. ಶಕ್ತಿತತ್ತ್ವ ಎಲ್ಲಾ ಶೈವಸಿದ್ಧಾಂತಗಳಿಗೂ ಸಮಾನವಾದದ್ದು. ಆದರೆ ವೀರಶೈವದಲ್ಲಿ ಮಾತ್ರ ಶಕ್ತಿತತ್ತ್ವವು ಡೈಲೆಕ್ಟಿಕಲ್ ಸ್ವರೂಪದ್ದಾಗಿದೆ.[1] ಶಿವತತ್ತ್ವವೂ ಡೈಲೆಕ್ಟಿಕಲ್ ಚಲನೆಗೆ ಒಳಗಾಗಿದೆ. ಆದ್ದರಿಂದ "ವೀರ" ಈ ಪದವು ಶಿವನ, ಅವನ ಶಕ್ತಿಯ ಮತ್ತು ಅವನಿಂದ ಹೊರಬಂದ ತತ್ತ್ವಗಳೆಲ್ಲದರ ಡೈಲೆಕ್ಟಿಕಲ್ ಸ್ವರೂಪವನ್ನು ಸೂಚಿಸುತ್ತದೆ. ಈ ದೃಷ್ಟಿಕೋನವನ್ನು ಸಂಕ್ಷಿಪ್ತವಾಗಿ ಮಂಡಿಸುವುದೇ ಈಗಿನ ಪ್ರಬಂಧದ ಉದ್ದೇಶವಾಗಿದೆ.

## ವೀರಶೈವದರ್ಶನದ ಮುಖ್ಯಸ್ವರೂಪ

(ಅ) **ವಿಮರ್ಶಾಶಕ್ತಿ ಸಿದ್ಧಾಂತ** (The Doctrine of Dialectical Potentialism): ವೀರಶೈವ ದರ್ಶನವು ಅನೇಕ ಅಂಶಗಳಲ್ಲಿ ಶಂಕರರ ಅದ್ವೈತವನ್ನು ಹೋಲುತ್ತದೆ. ಸತ್ ಅಥವಾ ಶುದ್ಧಸತ್ವವು (ಶಿವ) ಉಪನಿಷತ್ತುಗಳು ಬೋಧಿಸುವ ಬ್ರಹ್ಮನನ್ನು ಹೋಲುತ್ತದೆ. ಶಿವವು ಶಂಕರರ ಬ್ರಹ್ಮನಂತೆ ಸಚ್ಚಿದಾನಂದ ಅಥವಾ ಚಿದಾನಂದಸ್ವರೂಪ. ಶಿವನು ತನ್ನಲ್ಲಿ ಅಡಗಿದ ಶಕ್ತಿಯಿಂದಾಗಿ ಜಗತ್‌ಸೃಷ್ಟಿಗೆ ಕಾರಣನಾದರೂ ಮತ್ತು ಜಗತ್ತಿನಲ್ಲಿ ವಾಸವಾಗಿದ್ದರೂ, ಪಾರಮಾರ್ಥಿಕನಾಗಿದ್ದಾನೆ. ವೀರಶೈವದರ್ಶನವು ಬೋಧಿಸುವ ಮುಖ್ಯ ಶುದ್ಧ ದಾರ್ಶನಿಕ ತತ್ತ್ವ

---

[1] ಈ ಸಂದರ್ಭದಲ್ಲಿ ಶರಣ ಹಾವಿನಹಾಳ ಕಲ್ಲಯ್ಯನ ಅನುಭಾವ ಉಕ್ತಿ ನೋಡಿ: "ನಿಮ್ಮ ನೆನಹೇ ನಿಮಗೆ ಶಕ್ತಿಯಾಯಿತಲ್ಲ."

ಗಳಿಗೆಲ್ಲ ಉಪನಿಷತ್ತುಗಳಲ್ಲಿ ಆಧಾರ ಅಥವಾ ಪ್ರಾಮಾಣ್ಯ ಕಂಡುಹಿಡಿಯಬಹುದು. ಅಲ್ಲಮಪ್ರಭುವಿನ ವಚನಗಳಂತೂ ಭಗವದ್‌ಗೀತೆಯಂತೆ ಉಪನಿಷತ್‌ದರ್ಶನದ ಶಿವಗೀತೆಯಾಗಿವೆ. ಉಪನಿಷತ್ತುಗಳು ಬೋಧಿಸುವ ಮುಖ್ಯ ವೇದಾಂತಸತ್ಯಗಳಾದ "ಸತ್ ಒಂದೇ ಆದಿಯಲ್ಲಿ ಇದ್ದದ್ದು" (ಸದೇವ ಸೋಮ್ಯ ಇದಂ ಅಗ್ರ ಆಸೀತ್), (ಅಹಂ ಬ್ರಹ್ಮಾಸ್ಮಿ), (ಶಿವೋऽಹಂ), (ತತ್ ತ್ವಂ ಅಸಿ) "ಯಾವುದರಿಂದ ಈ ಜಗತ್ತು ಹೊರಬರುತ್ತದೋ, ಯಾವುದರಲ್ಲಿ ಈ ಜಗತ್ತು ಜೀವಿಸುತ್ತದೆಯೋ, ಯಾವುದರಲ್ಲಿ ಈ ಜಗತ್ತು ಪುನಃ ಐಕ್ಯವಾಗುತ್ತದೆಯೋ ಅದೇ ಬ್ರಹ್ಮ ಎಂದು ತಿಳಿ" ಮುಂತಾದ ಉಪನಿಷತ್ ಮಹಾವಾಕ್ಯಗಳಿಗೆ ಸಮಾನವಾದ ಬೋಧನೆಗಳು ವೀರಶೈವದರ್ಶನದಲ್ಲಿ ಸಿಗುತ್ತವೆ. ಶಕ್ತಿತತ್ತ್ವವೂ ಉಪನಿಷತ್ತುಗಳ ಬೋಧನೆಗೆ ಅಪವಾದವಲ್ಲ.

ಶಂಕರರ ಅದ್ವೈತಕ್ಕೂ ಮತ್ತು ವೀರಶೈವದರ್ಶನಕ್ಕೂ ದಾರ್ಶನಿಕವಾಗಿ ಒಂದು ಮಹತ್ವದ ಭೇದವಿದೆ. ಅದೆಂದರೆ ವೀರಶೈವದರ್ಶನಕ್ಕೆ ಜಗತ್ತು ಅದ್ವೈತದಲ್ಲಿಯಂತೆ ಮಿಥ್ಯೆ ಅಥವಾ ಮಾಯೆಯಲ್ಲ. ಆದ್ದರಿಂದ ವೀರಶೈವದರ್ಶನವು ದ್ವೈತವಿಶಿಷ್ಟಾದ್ವೈತಗಳಂತೆ ಒಂದು ವಾಸ್ತವಿಕದರ್ಶನ (Realistic philosophy). ಶಿವತತ್ವದ ಪಾರಮಾರ್ಥಿಕತೆ ಮತ್ತು ಜೀವ ಜಗತ್ತುಗಳ ವಾಸ್ತವಿಕತೆಗಳ (ಈ ಭೇದ ಮಾಯೆಯಲ್ಲ, ಡೈಲೆಕ್ಟಿಕಲ್ ಸತ್ಯ) ಸಾಮರಸ್ಯ (ಅಂಗಲಿಂಗಸಾಮರಸ್ಯ)ವೇ ಷಟ್‌ಸ್ಥಲ ಸಿದ್ಧಾಂತದ ತಿರುಳು ಮತ್ತು ಗುರಿ.

ಶಿವ ಮತ್ತು ಶಕ್ತಿತತ್ವಗಳು ಪಾರಮಾರ್ಥಿಕವಾಗಿ ಒಂದೇ ಆದರೂ ಮೇಲೆ ಹೇಳಿದ ಡೈಲೆಕ್ಟಿಕಲ್ ಗತಿಯ ದೃಷ್ಟಿಯಿಂದ ಪರಸ್ಪರ ವಿರೋಧಾತ್ಮಕಗಳೆಂದು ಹೇಳಬಹುದು. ಶಿವನಲ್ಲಿ ಗುಪ್ತವಾಗಿ ಅಥವಾ ಸಾಧ್ಯತೆಯಾಗಿ (Potential) ಅಡಗಿದ ಶಕ್ತಿಯು ವಾಸ್ತವವಾಗ (actual)ತೊಡಗಿದಾಗ ಶಿವ ಮತ್ತು ಅವನ ಶಕ್ತಿ (ವಾಸ್ತವಿಕ ಶಕ್ತಿ)ಗಳಲ್ಲಿ ವಿರೋಧ ಹುಟ್ಟಿ ಜಗತ್‌ಸೃಷ್ಟಿಗೆ ಶಿವಶಕ್ತಿಗಳೆರಡೂ ಕಾರಣವಾಗುತ್ತವೆ. ಪರ ಅಥವಾ ಪಾರಮಾರ್ಥಿಕವಾದದ್ದು ಅಪರ ಅಥವಾ ವ್ಯಾವಹಾರಿಕತೆಯ ಸೃಷ್ಟಿಯತ್ತ ತಿರುಗುವುದಕ್ಕೆ ಡೈಲೆಕ್ಟಿಕಲ್ ಗತಿಯೇ ಕಾರಣ ಎನ್ನಬೇಕಾಗುತ್ತದೆ. ಆದ್ದರಿಂದ ಶಿವನು ಸದಾ ಡೈಲೆಕ್ಟಿಕಲ್ ಸಾಧ್ಯಾತ್ಮಕ (ಸದಾಶಿವ ?) (Potential). ಶಿವನ ಈ ವಿಶಿಷ್ಟ ಸ್ವರೂಪವೇ ಅವನ ಎಲ್ಲ ಆಟ ವಿರಾಟಗಳಿಗೆ ಕಾರಣ. ಅದೇ ಅವನಲ್ಲಿರುವ ವೀರ್ಯತೆ. ಆದ್ದರಿಂದ ಶಿವ ವೀರಶೈವ. ಅದರ ದರ್ಶನವೇ ವೀರಶೈವದರ್ಶನ. ಕಾರ್ಲ್‌ಮಾರ್ಕ್ಸನ ಸಿದ್ಧಾಂತವನ್ನು 'ಡೈಲೆಕ್ಟಿಕಲ್ ಮೆಟಿರಿಯಾಲಿಸಂ' ಎನ್ನುವ ವಾಡಿಕೆಯಿದೆ. ಅದನ್ನು ಅನುಸರಿಸಿ ಹೇಳಬಹುದಾದರೆ ವೀರಶೈವದರ್ಶನವನ್ನು 'ಡೈಲೆಕ್ಟಿಕಲ್ ಪೊಟೆನ್ಷಿಯಾಲಿಸಂ' (Dilectical potentialism) ಎನ್ನಬಹುದು. ಆದ್ದರಿಂದ ತಾತ್ವಿಕದೃಷ್ಟಿಯಿಂದ, ವೀರಶೈವವನ್ನು ವಿಮರ್ಶಾಶಕ್ತಿ ತತ್ವಸಿದ್ಧಾಂತ ಎನ್ನಬಹುದು. ಈ ವರ್ಣನೆ ಶಕ್ತಿವಿಶಿಷ್ಟಸಿದ್ಧಾಂತ ವರ್ಣನೆಗಿಂತ ವೀರಶೈವದರ್ಶನಕ್ಕೆ ಹೆಚ್ಚು ಸಮಂಜಸ ಎನಿಸುತ್ತದೆ. ಶಿವಶಕ್ತಿಯ ವಿಮರ್ಶಾತ್ಮಕತೆಯೇ ಅದರ ವೈಶಿಷ್ಟ್ಯ. ಅಂದರೆ ಶಿವಶಕ್ತಿ ಡೈಲೆಕ್ಟಿಕಲ್ (ವೀರ) ಸ್ವರೂಪದ್ದು ಎನ್ನುವುದು ಮುಖ್ಯ.

ಈ ವಿವರಣೆ ಮೇಲುನೋಟಕ್ಕೆ ವೀರಶೈವದರ್ಶನಕ್ಕೆ ದೂರ ಅಥವಾ ಅಸಂಗತ ಎಂದು ತೋರಬಹುದಾದರೂ, ವೀರಶೈವದರ್ಶನವನ್ನು ಸೈದ್ಧಾಂತಿಕವಾಗಿ ಮತ್ತು ಅನುಭಾವಿಕವಾಗಿ ವಿವರಿಸುವ ಸಾಹಿತ್ಯವನ್ನು ಅಭ್ಯಸಿಸಿದಾಗ ವೀರಶೈವದರ್ಶನದಲ್ಲಿ ಅದರ ಡೈಲೆಕ್ಟಿಕಲ್ ಸ್ವರೂಪ ನಿರೂಪಿಸುವ ಪದಗಳು, ವಾಕ್ಯಗಳು, ಉಕ್ತಿಗಳು, ವಿವರಣೆಗಳು ಕೂಡಲೇ ಗಮನಕ್ಕೆ ಬರುತ್ತವೆ. ಹೆಗೆಲ್‌ದರ್ಶನವನ್ನು ಅಭ್ಯಾಸಮಾಡಿದವರಿಗಂತೂ ಈ ಅಂಶ ಇನ್ನೂ ಸ್ಪಷ್ಟವಾಗಿ ಅರಿವಿಗೆ ಬರುತ್ತದೆ. ಈ ನಮ್ಮ ನಿಲುವಿಗೆ ನಿದರ್ಶನವಾಗಿ ಕೆಳಗಿನ ಪದ, ವಾಕ್ಯ, ಉಕ್ತಿಗಳನ್ನು ನೋಡಬೇಕು.

ಮೊದಲಿಗೆ ಷಟ್‌ಸ್ಥಲದ ಗುರಿ, ರಚನೆಗಳನ್ನು ಗಮನಿಸಿ. ಅಲ್ಲಿ ಮುಖ್ಯವಾದ ಭಕ್ತಸ್ಥಲ (ಅಂಗ) ಮತ್ತು ಐಕ್ಯಸ್ಥಲ (ಲಿಂಗ)ಗಳು ಸಾಧನೆಯ ಮೊದಲ ಹಂತದಲ್ಲಿ ವಿರೋಧಾತ್ಮಕಗಳು. ಅವುಗಳಲ್ಲಿರುವ ಡೈಲೆಕ್ಟಿಕಲ್ ವಿರೋಧ ವಾಸ್ತವಿಕವಲ್ಲ ಎಂದರೆ ಷಟ್‌ಸ್ಥಲಸಾಧನೆಯ ನಿಜವಾದ ಮಹತ್ವವೇ ಇಲ್ಲವಾಗುತ್ತದೆ. ಭಕ್ತಸ್ಥಲ ಮತ್ತು ಐಕ್ಯಸ್ಥಲಗಳ (ಮಧ್ಯದ ನಾಲ್ಕು ಹಂತಗಳ ಮುಖಾಂತರ) ಸಾಮರಸ್ಯಸಿದ್ಧಿ ಪಾರಮಾರ್ಥಿಕವಾಗಿ, ವ್ಯಾವಹಾರಿಕವಾಗಿ ಮತ್ತು ತಾತ್ವಿಕವಾಗಿ ಸತ್ಯವಾದದ್ದು, ವಾಸ್ತವವಾದದ್ದು. ಐಕ್ಯಸ್ಥಲವನ್ನು ಮುಟ್ಟಲು ಭಕ್ತನು ನಡೆಸುವ ವೀರಸಾಧನೆ ಭ್ರಮೆಯಲ್ಲ. ಅದು ಸತ್ಯವಾದ ಆಧ್ಯಾತ್ಮಿಕ ಹೋರಾಟ. ಐಕ್ಯಸ್ಥಲದಲ್ಲಿರುವ ಲಿಂಗವೇ (ಶಿವ) ಭಕ್ತಸ್ಥಲದಲ್ಲಿಯೂ ಇದೆಯಾದರೂ ಅಂಗವು (ಭಕ್ತ) ಲಿಂಗವಾಗಬಹುದು ಎನ್ನುವ ಸಾಧ್ಯತೆಯ ರೂಪದಲ್ಲಿಯೇ ಹೊರತು ವಾಸ್ತವಿಕವಾಗಿ ಅಲ್ಲ. ಏಕೆಂದರೆ ವೀರಶೈವದರ್ಶನದಲ್ಲಿ ಸೃಷ್ಟಿ, ಸ್ಥಿತಿ ಮತ್ತು ಲಯಗಳು ಸತ್ಯಘಟನೆಗಳು. ಅದ್ವೈತದಲ್ಲಿಯಂತೆ ಮಿಥ್ಯೆ ಅಥವಾ ವಿವರ್ತಗಳಲ್ಲ. ಈ ದೃಷ್ಟಿಯಿಂದ ಭಕ್ತಸ್ಥಲ ಐಕ್ಯಸ್ಥಲಗಳು ಹೆಗೆಲ್‌ನ ಡೈಲೆಕ್ಟಿಕಲ್ ವಿಧಾನದ ಪಾರಿ

ಭಾಷಿಕ ಪದಗಳನ್ನು ಬಳಸಿ ಹೇಳಬಹುದಾದರೆ ಥೀಸೀಸ್ ಮತ್ತು ಆಂಟಿ-ಥೀಸಿಸ್‌ಗಳು. ಆದರೆ ಭಕ್ತಸ್ಥಲ ಕೊನೆಯಲ್ಲಿ ವಾಸ್ತವವಾಗಿ ಐಕ್ಯಸ್ಥಲ ಮುಟ್ಟಿದಾಗ ಥೀಸೀಸ್ ಮತ್ತು ಆಂಟಿಥೀಸೀಸ್‌ಗಳಾದ ಅವು ಸಿಂಥೆಸಿಸ್ ಆಗಿ ಅಂಗ-ಲಿಂಗ ಸಾಮರಸ್ಯ ಉಂಟಾಗುತ್ತದೆ.

ಶಿವನ ಶಕ್ತಿ ಸೃಷ್ಟ್ಯಭಿಮುಖವಾಗುವುದನ್ನು ವೀರಶೈವ ಸಾಹಿತ್ಯದಲ್ಲಿ 'ಪ್ರವೃತ್ತಿ' ಎಂದು ಕರೆಯಲಾಗಿದೆ ಮತ್ತು ಸೃಷ್ಟಿ ಅಥವಾ ವ್ಯಾವಹಾರಿಕಪ್ರಪಂಚ ಶಿವಾಭಿಮುಖವಾಗುವುದನ್ನು 'ನಿವೃತ್ತಿ' ಎಂದು ಕರೆಯಲಾಗಿದೆ. ಪ್ರವೃತ್ತಿ ವಿಮರ್ಶಾತ್ಮಕವಾಗಿ ಮತ್ತು ಸೃಜನಾತ್ಮಕವಾಗಿ ಕಾರ್ಯೋನ್ಮುಖವಾಗಿರುವುದಷ್ಟೇ ಅಲ್ಲದೆ, ತನ್ನಲ್ಲಿಯೇ ನಿವೃತ್ತಿಪರ ಬೀಜವನ್ನು ಒಳಗೊಂಡಿರುತ್ತದೆ. ಪ್ರವೃತ್ತಿ ನಿವೃತ್ತಿ ದ್ವಂದ್ವಗಳ ಹಿಂದೆ ಪ್ರೇರಕವಾಗಿ ಶಿವನ ಸಂಕಲ್ಪಶಕ್ತಿ ಕೆಲಸಮಾಡುತ್ತಿರುತ್ತದೆ. ಈ ಸಂಕಲ್ಪಶಕ್ತಿಯನ್ನೇ ವಿಮರ್ಶಾಶಕ್ತಿ ಎಂದು ಕರೆಯಬಹುದು.[1] ಶಿವನ ಈ ವಿಮರ್ಶಾಶಕ್ತಿಯ (Dialectical Potency) ದ್ವಂದ್ವಾತ್ಮಕತೆ ಮತ್ತು ಸೃಜನಾತ್ಮಕತೆಯನ್ನು ವೀರಶೈವಧರ್ಮದ ಎಲ್ಲ ತತ್ತ್ವಜ್ಞಾನಿಗಳು ಮತ್ತು ಅನುಭಾವಿಗಳು ಕಂಡುಕೊಂಡಿದ್ದಾರೆ ಮತ್ತು ಅದರ ನಿವೃತ್ತಿ ಪಥದಲ್ಲಿ ಕಾಣುವ ಸಾಮರಸ್ಯವನ್ನೂ ತಿಳಿದುಕೊಂಡಿದ್ದಾರೆ ಮತ್ತು ಸ್ವತಃ ಸಾಧಿಸಿ ತೋರಿಸಿದ್ದಾರೆ. ಶಿವಶಕ್ತಿಯ ವಿಮರ್ಶಾಶಕ್ತಿರೂಪ ಅತ್ಯಂತ ಸ್ಪಷ್ಟವಾಗಿ ಕಾಣುವುದು ಶಕ್ತಿ-ಭಕ್ತಿಗಳ ವಿರುದ್ಧ ಚಲನೆಯಲ್ಲಿ.[2]

(ಬ) **ಶಕ್ತಿ-ಭಕ್ತಿ** ("ಪ್ರವೃತ್ತೌ ಶಕ್ತಿರಾಖ್ಯಾತಾ, ನಿವೃತ್ತೌ ಭಕ್ತಿರುಚ್ಯತೇ") ವೀರಶೈವದರ್ಶನದ ಡೈಲೆಕ್ಟಿಕಲ್ ಸ್ವರೂಪವನ್ನು ಶಕ್ತಿ ಭಕ್ತಿಗಳು ಅಭಿವ್ಯಕ್ತಿಸಿದಷ್ಟು ಬೇರೆ ಯಾವುವೂ ಅಭಿವ್ಯಕ್ತಿಸುವುದಿಲ್ಲ. ಶಕ್ತಿ-ಭಕ್ತಿ-ವಿರಕ್ತಿ ಒಂದು ತ್ರಯ (Triad) ಆಗಬಹುದು. ಅಥವಾ ಚಿತ್‌ಶಕ್ತಿ-ಜ್ಞಾನಶಕ್ತಿ-ಕ್ರಿಯಾಶಕ್ತಿಯೂ ಒಂದು ತ್ರಯಾತ್ಮಕ ಆಗಬಹುದು. ಶಿವನಿಂದ ಬೇರ್ಪಡಿಸಲಾಗದ ಶಿವಶಕ್ತಿಯೇ ಸುಪ್ತವಾಗಿ ತನ್ನಲ್ಲಡಗಿರುವ 'ವಿಮರ್ಶಾಚಲನಾತ್ಮಕತೆಯಿಂದಾಗಿ (Dialectical movement) ಸೃಷ್ಟಿಕಾರ್ಯದತ್ತ ಪ್ರವಹಿಸಿ ಬ್ರಹ್ಮಾಂಡ-ಪಿಂಡಾಂಡಗಳನ್ನು ಸೃಜಿಸುವುದು.[3] ಆದರೆ ಯಾವುದರಿಂದ ಈ ಪ್ರಪಂಚ, ಜೀವರು ಅಭಿವ್ಯಕ್ತಿಸಲ್ಪಟ್ಟು ಹೊರಬಂದಿದ್ದಾರೋ, ಅದಕ್ಕೇ (ಶಿವತತ್ತ್ವ) ಪುನಃ ಹೋಗಿ ಸೇರಿಕೊಳ್ಳುವುದು ಸಹಜವಾದ್ದರಿಂದ ಶಿವಶಕ್ತಿಯ ಪ್ರವೃತ್ತತೆಯು ನಿವೃತ್ತತೆಯಾಗಿ (ಭಕ್ತಿ) ಪರಿವರ್ತನೆಯಾಗುವುದು ಅವಶ್ಯವಾಗುತ್ತದೆ. ಈ ಆಧ್ಯಾತ್ಮಿಕವಾಗಿ ಅವಶ್ಯವಾದ ಮತ್ತು ಮಹತ್ತ್ವವಾದ ಹಿಮ್ಮುಖ (Reverse) ಚಲನೆಯ ಹಂತಗಳೇ ಷಟ್‌ಸ್ಥಲಗಳು. ಒಂದೊಂದು ಹಂತದಲ್ಲಿ ಶಿವನ ವಿಮರ್ಶಾಚಲನಶಕ್ತಿ (Dialectically moveing power) ಹೇಗೆ ಭಕ್ತಿಶಕ್ತಿಯಾಗಿ ಪರಿವರ್ತನೆಯಾಗುತ್ತಾ ಹಿಂದಿನ ಹಂತಕ್ಕಿಂತ ಆಧ್ಯಾತ್ಮಿಕವಾಗಿ ಹೆಚ್ಚು ಪರಿಪೂರ್ಣವೂ ಮತ್ತು ಮೂರ್ತವೂ ಆಗುತ್ತ ಕೊನೆಯ ಅಂದರೆ ಐಕ್ಯಸ್ಥಲದಲ್ಲಿ ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಮುಟ್ಟಿ ಮತ್ತೆ ಶಿವನ ಅವಿಭಾಜ್ಯ ಅಂಗವೇ ಆಗಿ ಹೇಗೆ ಲಿಂಗೈಕ್ಯವಾಗುತ್ತದೆಂಬುದರ ವಿವರಣೆಯೇ ಷಟ್‌ಸ್ಥಲ ಸಿದ್ಧಾಂತದ ತಿರುಳು ಎನಿಸುತ್ತದೆ.[4] ಶಿವಶಕ್ತಿಯ ಮುಮ್ಮುಖ ಪ್ರವೃತ್ತತೆಗಿಂತ ಆ ಶಕ್ತಿಯ ಹಿಮ್ಮುಖ ಗತಿಯೇ ಅಥವಾ ಚಲನೆಯೇ ಆಧ್ಯಾತ್ಮಿಕವಾಗಿ ಹೆಚ್ಚು ಮಹತ್ತ್ವದ್ದಾದ್ದರಿಂದ ಮತ್ತು ಅದನ್ನು ಷಟ್‌ಸ್ಥಲ ಸಿದ್ಧಾಂತವು ವಿಮರ್ಶಾತ್ಮಕವಾಗಿ ಮತ್ತು ಅನುಭಾವಿಕವಾಗಿ ಪ್ರದರ್ಶಿಸುವುದರಿಂದ ಷಟ್‌ಸ್ಥಲ ಸಿದ್ಧಾಂತವೇ ವೀರಶೈವದರ್ಶನದ ಹೃದಯ ಅಥವಾ ಕೇಂದ್ರಬೋಧನೆಯೆಂದು ತಿಳಿಯುವುದು ಯೋಗ್ಯವಾಗಿದೆ. ಶಿವಶಕ್ತಿಯ ಪ್ರವೃತ್ತಿ ಮತ್ತು ನಿವೃತ್ತಿ (ಭಕ್ತಿ)ಗತಿಗಳು ಡೈಲೆಕ್ಟಿಕಲ್ ಸ್ವರೂಪದವುಗಳಾಗಿವೆ ಎಂಬುದಕ್ಕೆ ಎರಡೇ ಎರಡು ಉಕ್ತಿಗಳನ್ನು ಉದಾಹರಿಸಿದರೆ ಸಾಕು. ಒಂದು ಮಗ್ಗೆಯ ಮಾಯಿದೇವರ ಶಿವಾನುಭವಸೂತ್ರಗಳಿಂದ ತೆಗೆದುಕೊಂಡದ್ದು ಹೀಗಿದೆ—

---

[1] It is Shiva's (God's) will power not reason as in Hegel or J. P. Sartre, which is really dialecttcal.

[2] ಎಲ್ಲಾ ಶಕ್ತಿಗಳೂ ದ್ವಂದ್ವಾತ್ಮಕವೆಂದು ತೋರುತ್ತದೆ. ಉದಾ: ವಿದ್ಯುತ್‌ಶಕ್ತಿಯು ಪಾಜಿಟಿವ್-ನೆಗೆಟಿವ್ ಆಗಿದೆ.

[3] ಅದ್ವೈತವಾದದ ಮಾಯಾ ಸಿದ್ಧಾಂತವನ್ನು ತಿರಸ್ಕರಿಸಿದ ವೀರಶೈವದರ್ಶನವು ಇತ್ತೀಚೆಗೆ ಪ್ರಬಲವಾಗಿ ಅರವಿಂದರಿಂದ ಪ್ರತಿಪಾದಿತವಾಗಿರುವ ಲೀಲಾವಾದವನ್ನೂ ತಿರಸ್ಕರಿಸಬೇಕಾದುದು ಅವಶ್ಯ. ಶರಣರ ವಚನಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಲೀಲಾವಾದವು ವೀರಶೈವದರ್ಶನದ ಮೂಲಭೂತ ಶಕ್ತಿವಿಮರ್ಶಾಸಿದ್ಧಾಂತಕ್ಕೆ ಹೊರತಾದುದಾಗಿದೆ.

[4] ಸೃಷ್ಟ್ಯಭಿಮುಖವಾದ ಪರಶಿವನ ಶಕ್ತಿಯು ಸೃಷ್ಟಿಯ ಪ್ರತಿ ಹಂತದಲ್ಲಿಯೂ ತನ್ನ ಮೂಲ ಪೂರ್ಣಮೂರ್ತತೆಯನ್ನು ಕಳೆದುಕೊಂಡು ಅಂಗಸ್ಥಲದ ಹಂತದಲ್ಲಿ ಅಮೂರ್ತವಾಗಿರುತ್ತದೆ. ಶಿವಶಕ್ತಿಯು ತನ್ನ ಮೂಲಸ್ಥಲವಾದ ಪರಶಿವನಲ್ಲಿ ಐಕ್ಯಹೊಂದಲು ಭಕ್ತಿಯಾಗಿ ರೂಪಾಂತರಹೊಂದಿ ಷಟ್‌ಸ್ಥಲಮಾರ್ಗದ ಪ್ರತಿ ಹಂತದಲ್ಲಿಯೂ ಹೆಚ್ಚು ಹೆಚ್ಚು ಮೂರ್ತವಾಗುತ್ತ ಐಕ್ಯಸ್ಥಲದಲ್ಲಿ ಪೂರ್ತಿ ಮೂರ್ತವಾಗುತ್ತದೆ. ಭಕ್ತಿಯ ಪರಾಕಾಷ್ಠೆಯೇ ಲಿಂಗಸ್ಥಲ ಅಥವಾ ನಿಃಕಲ ಪರಶಿವ.

ಸ್ವಶಕ್ತಿಕ್ಷೋಭಮಾತ್ರೇಣ ಸ್ಥಲಂ ತದ್ ದ್ವಿವಿಧಂ ಭವೇತ್ ।
ಏಕಂ ಲಿಂಗಸ್ಥಲಂ ಪ್ರೋಕ್ತಮನ್ಯದಂಗಸ್ಥಲಂ ಸ್ಮೃತಂ ॥

'ಸ್ವಶಕ್ತಿಕ್ಷೋಭೆಯೇ' ಶಿವಶಕ್ತಿಯು ಡೈಲೆಕ್ಟಿಕಲ್ (ವಿಮರ್ಶಾಶಕ್ತಿ) ಪ್ರವೃತ್ತತೆಗೆ ಅಥವಾ ಚಲನೆಗೆ ಕಾರಣ. ಆ ಶಕ್ತಿಯ ನಿವೃತ್ತತೆಯೇ ಭಕ್ತಿ. ವೀರಶೈವದರ್ಶನದ ವಿದ್ವಾಂಸರು ಈ ನನ್ನ ವಿವರಣೆಯನ್ನು ಒಪ್ಪುತ್ತಾರೋ ಇಲ್ಲವೋ. ಆದರೆ ನನಗೆ ತೋರುವ ಮಟ್ಟಿಗೆ ವೀರಶೈವದರ್ಶನ ಹೆಗೆಲ್ ಪ್ರತಿಪಾದಿಸುವ ಡೈಲೆಕ್ಟಿಕಲ್ ವಿಧಾನವನ್ನು ಒಳಗೊಂಡಿದೆ ಎನಿಸುತ್ತದೆ. ಶಿವಶಕ್ತಿಯ ಪ್ರವೃತ್ತಿಗತಿಗಿಂತ ನಿವೃತ್ತಿಗತಿ ಹೆಚ್ಚು ಮುಖ್ಯವಾದ್ದರಿಂದ ಷಟ್‌ಸ್ಥಲ ಸಿದ್ಧಾಂತವನ್ನು ಹಿಮ್ಮುಖ (Reverse) ಡೈಲೆಕ್ಟಿಕಲ್ ಸಾಧನಮಾರ್ಗವೆನ್ನಬಹುದು.

ಹೆಗೆಲ್‌ನ ದರ್ಶನ ಮತ್ತು ವೀರಶೈವದರ್ಶನಗಳಲ್ಲಿ ಶಕ್ತಿಯ ಡೈಲೆಕ್ಟಿಕಲ್ ದೃಷ್ಟಿಕೋನದಿಂದ ಸಾಮ್ಯವಿರುವುದಾದರೂ ಎರಡೂ ದರ್ಶನಗಳಲ್ಲಿ ಅನೇಕ ಮೂಲಭೂತ ಭೇದಗಳೂ ಇವೆ. ಸಾಮ್ಯಗಳಲ್ಲಿ ಡೈಲೆಕ್ಟಿಕಲ್ ದೃಷ್ಟಿಕೋನದ ಜೊತೆಗೆ ಇನ್ನೊಂದು ಮುಖ್ಯ ಸಾಮ್ಯವೆಂದರೆ ಎರಡೂ ದರ್ಶನಗಳಲ್ಲಿ ಚಿತ್ ಮತ್ತು ಸತ್(Thought and Reality) ಗಳ ನಿರಂತರ ಸಮನ್ವಯತೆಯನ್ನು ತೋರಿಸುವ ದರ್ಶನಾತ್ಮಕರಚನೆ (Philosophical Structure). ಎಲ್ಲಾ ಅದ್ವೈತ ದರ್ಶನಗಳಲ್ಲಿ ಚಿತ್ ಮತ್ತು ಸತ್‌ಗಳು ಒಂದೇ (Identical) ಎಂದು ಸಾಮಾನ್ಯವಾಗಿ ಪ್ರತಿಪಾದಿತವಾದರೂ, ತೋರಿಕೆಗೆ ಮಾತ್ರವಲ್ಲದೆ ವಾಸ್ತವಿಕವಾಗಿಯೂ ಭಿನ್ನಸ್ವರೂಪದವುಗಳಾಗಿ ಕಾಣುವ ಎರಡು ವಿರುದ್ಧ ತತ್ತ್ವಗಳು ಹೇಗೆ ಒಂದೇ ಆಗಿವೆ ಎಂಬುದನ್ನು ದಾರ್ಶನಿಕವಾಗಿ ಪ್ರದರ್ಶಿಸುವುದು ಬಹಳ ಮಹತ್ವದ್ದು. ಈ ಕಠಿಣ ತಾತ್ವಿಕ ಕೆಲಸವನ್ನು ಹೆಗೆಲ್ ಮತ್ತು ವೀರಶೈವದರ್ಶನಗಳು ಮಾಡಿವೆ ಎನಿಸುತ್ತದೆ.

ಹೆಗೆಲ್ ತನ್ನ ಡೈಲೆಕ್ಟಿಕಲ್ ವಿಧಾನ ಮತ್ತು ಪ್ರಜ್ಞೆಯ ಸ್ವರೂಪಜ್ಞಾನದ ಸಂಶೋಧನೆಗಳಲ್ಲಿ ಚಿತ್ ಮತ್ತು ಸತ್‌ಗಳ ಮೂಲಭೂತ ಡೈಲೆಕ್ಟಿಕಲ್ ಏಕತೆಯನ್ನು ಪ್ರದರ್ಶಿಸಲು ಪ್ರಯತ್ನಿಸಿದ್ದಾನೆ. ವಿಶ್ವದ ನಾನಾ ಪ್ರಕಾರದ ಅಭಿವ್ಯಕ್ತಿಗಳೆಲ್ಲ ಮೂಲಭೂತ ಚಿತ್‌ನ ಡೈಲೆಕ್ಟಿಕಲ್ ವಿಕಾಸವೆಂದು ತಿಳಿಯುವುದೇ ಹೆಗೆಲ್‌ದರ್ಶನದ ಕೇಂದ್ರ ಬೋಧನೆ. ಹಿಂದೆ ಹೇಳಿದಂತೆ ಹೆಗೆಲ್‌ನ ಈ ದಾರ್ಶನಿಕ ಸಂಶೋಧನೆ "ಸತ್ ಚಿತ್ ಅಥವಾ ವಿಚಾರವೇ ಆಗಿದೆ" (Real is rational) ಎನ್ನುವ ಅವನ ಜಗತ್ಪ್ರಸಿದ್ಧ ಉಕ್ತಿಯಲ್ಲಿ ಪರಿಸಮಾಪ್ತಿಯಾಗುತ್ತದೆ. ಆದ್ದರಿಂದಲೇ ಅವನ ದರ್ಶನಕ್ಕೆ ನಿರುಪಾಧಿಕಪೂರ್ಣಚಿದಾತ್ಮವಾದವೆಂದು ಹೆಸರಿಸಲಾಗಿದೆ (Absolute Idealism).

ವೀರಶೈವದರ್ಶನದಲ್ಲಿಯೂ ಸತ್-ಚಿತ್‌ಗಳ ಏಕತೆಯನ್ನು ವಿಮರ್ಶಾತ್ಮಕವಾಗಿ ಪ್ರದರ್ಶಿಸುವ ಪ್ರಯತ್ನ ಕಾಣುತ್ತದೆ. ಮೊದಲ ನೋಟಕ್ಕೆ ಇದು ನಿಗೂಢವೆಂದು ಮತ್ತು ಅಸಂಬದ್ಧ ಎಂದು ಕಾಣಬಹುದಾದರೂ ಅಂಥ ಏಕತೆಯನ್ನು ಅನುಭಾವದಲ್ಲಿ ಕಂಡುಕೊಂಡ ವಚನಕಾರರು ಅದರ ಸತ್ಯಕ್ಕೆ ಸಾಕ್ಷಿಯಾಗಿದ್ದಾರೆ. ಮೇಲೆ ಹೇಳಿದ ಸತ್-ಚಿತ್‌ಗಳ ಏಕತೆ ಶಿವನ ವಿಮರ್ಶಾಶಕ್ತಿಯ ಕಾರ್ಯಾಚರಣೆಯ ಫಲವೆಂದು ಹೇಳಬಹುದು. ಷಟ್‌ಸ್ಥಲಸಿದ್ಧಾಂತದ ದಾರ್ಶನಿಕರಚನೆ(Metaphysical Structure)ಯನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿದಾಗ ಅಂಥ ಏಕತೆಯ ದರ್ಶನವಾಗುತ್ತದೆ.

ಸೃಷ್ಟ್ಯಭಿಮುಖವಾಗಿ ಅಥವಾ ಮುಮ್ಮುಖವಾಗಿ ಚಲಿಸುವ ಶಿವನ ವಿಮರ್ಶಾಶಕ್ತಿಯಿಂದ ಸೃಷ್ಟಿರಚನೆಯಾದ ಮೇಲೆ, ಅದೇ ವಿಮರ್ಶಾಶಕ್ತಿ ತೀವ್ರಭಕ್ತಿಯಾಗಿ ರೂಪಾಂತರಹೊಂದಿ ತನ್ನ ಮೂಲಸ್ಥಲವಾದ ನಿಃಕಲ ಪರಶಿವನಲ್ಲಿ ಮತ್ತೆ ಐಕ್ಯಹೊಂದಲು ಹಿಮ್ಮುಖವಾಗಿ ನಿವೃತ್ತಿ ಮಾರ್ಗಹಿಡಿಯುತ್ತದೆ. ಸೃಷ್ಟಿಯು ಇಳಿಕೆಯ ಅಥವಾ ಅವತರಣ ಕ್ರಮವಾದರೆ ನಿವೃತ್ತಿ ಏರಿಕೆಯ ಅಥವಾ ಆರೋಹಣಕ್ರಮವಾಗುತ್ತದೆ. ಷಟ್‌ಸ್ಥಲಸಿದ್ಧಾಂತ ಶಕ್ತಿ-ಭಕ್ತಿಗಳ ಭೇದಮತ್ತು ಸಾಮರಸ್ಯಗಳನ್ನು ಪ್ರತಿ ಹಂತದಲ್ಲೂ ಪ್ರದರ್ಶಿಸುತ್ತದಲ್ಲದೆ, ಸತ್-ಚಿತ್‌ಗಳ ಸಮನ್ವಯವನ್ನೂ ಪ್ರದರ್ಶಿಸುತ್ತದೆ. ಲಿಂಗಸ್ಥಲಗಳೆಲ್ಲ ಪರಶಿವನ ಚಿದ್ರೂಪ(Forms of self-consciousness)ಗಳೆಂದು ತಿಳಿಯಬಹುದು. ಅಂಗಸ್ಥಲಗಳೆಲ್ಲ ಅವನ ಸದ್‌ರೂಪ( Forms of Being or Reality)ಗಳೆನ್ನಬಹುದು. ಪರಶಿವನ ಈ ಎರಡೂ ರೂಪಗಳ ಸಮನ್ವಯವನ್ನು ಕೆಳಗಿನಂತೆ ನಿರೂಪಿಸಬಹುದು : (ಪುಟ ೯೪೫ ನೋಡಿ)

ಹೆಗೆಲ್‌ನ ತತ್ತ್ವಜ್ಞಾನವು ವೀರಶೈವ ದರ್ಶನದಂತೆ ಚಿತ್ ಮತ್ತು ಸತ್‌ಗಳ ಸಾಮರಸ್ಯ ಮತ್ತು ಏಕತೆಯನ್ನು ಅವೆರಡರ ಭಿನ್ನ ಭಿನ್ನ ಅಭಿವ್ಯಕ್ತಿಗಳ ಪ್ರತಿ ಹಂತದಲ್ಲೂ ಬೋಧಿಸುತ್ತದೆ. ಆದರೆ ಹೆಗೆಲ್‌ನ ದರ್ಶನ ಬೇರೆ ಪಾಶ್ಚಾತ್ಯ ದರ್ಶನಗಳಂತೆ ಶುದ್ಧ ತಾರ್ಕಿಕ ತಳಹದಿಯ ಮೇಲೆ ನಿಂತ ದರ್ಶನಸೌಧ. ತಾರ್ಕಿಕ ತಳಹದಿ ಅಥವಾ ವ್ಯವಸ್ಥೆ ಗಟ್ಟಿಯಾಗಿಲ್ಲ ಅಥವಾ ದೋಷ(Inconsistent)ಯುಕ್ತವಾಗಿದೆಯೆಂದು ಸಿದ್ಧವಾದರೆ ಅಂಥ ದರ್ಶನಸೌಧವು ಮರಳ

| ಲಿಂಗಸ್ಥಲದ ಆರು ಚಿದ್ರೂಪಗಳು | ←→ | ಸ್ಥಲಗಳು | | ಅಂಗಸ್ಥಲದ ಆರು ಸದ್ರೂಪಗಳು |
|---|---|---|---|---|
| ೧. ಕ್ರಿಯಾಶಕ್ತಿ | → | ಭಕ್ತಸ್ಥಲ | ← | ಶ್ರದ್ಧಾಭಕ್ತಿ |
| ೨. ಜ್ಞಾನಶಕ್ತಿ | → | ಮಾಹೇಶ್ವರ | ← | ನೈಷ್ಠಿಕಾಭಕ್ತಿ |
| ೩. ಇಚ್ಛಾಶಕ್ತಿ | → | ಪ್ರಾಣಲಿಂಗಿ | ← | ಅವಧಾನಭಕ್ತಿ |
| ೪. ಆದಿಶಕ್ತಿ | → | ಪ್ರಸಾದಿ | ← | ಅನುಭಾವಭಕ್ತಿ |
| ೫. ಪರಾಶಕ್ತಿ | → | ಶರಣ | ← | ಆನಂದಭಕ್ತಿ |
| ೬. ಚಿತ್‌ಶಕ್ತಿ | → | ಐಕ್ಯ (ನಿಃಕಲ ಪರಶಿವ) | ← | ಸಮರಸಭಕ್ತಿ |

ಮೇಲೆ ಕಟ್ಟಿದ ಮನೆಯಂತಾಗುತ್ತದೆ. ಕೇವಲ ತಾರ್ಕಿಕತೆಯ ತಳಹದಿಯ ಮೇಲೆ ನಿರ್ಮಾಣವಾದ ಒಂದು ವಿಶ್ವದರ್ಶನ ಕೇವಲ ಬೌದ್ಧಿಕವಾಗಿ ಅನುಭವಕ್ಕೆ ದೂರವಾಗಿ ಶುಷ್ಕವಾಗುವ ಅಪಾಯವಿದ್ದೇ ಇದೆ. ಹೆಗೆಲ್‌ನ ದರ್ಶನ ಕೇವಲ ಬೌದ್ಧಿಕ ಅಥವಾ ವೈಚಾರಿಕ (Rational) ಎಂಬ ಆರೋಪವನ್ನು ಅವನ ಕಾಲದವರಿಂದ ಹಿಡಿದು, ಇಪ್ಪತ್ತನೆಯ ಶತಮಾನದ ಉಪಯುಕ್ತತಾವಾದಿಗಳು (Pragmatists—ವಿಲಿಯಮ್ ಜೇಮ್ಸ್, ಜಾನ್‌ಡ್ಯೂಯಿ ಮುಂತಾದವರು) ಮತ್ತು ಅಸ್ತಿತ್ವವಾದಿಗಳು (Existentialists—ಜೀನ್, ಪಾಲ್-ಸಾರ್ತ್ರೆ, ಕೀರ್ಕೆಗಾರ್ಡ ಮುಂತಾದವರು) ಮಾಡುತ್ತಲೇ ಬಂದಿದ್ದಾರೆ. ಅಸ್ತಿತ್ವವಾದಿ ಕೀರ್ಕೆಗಾರ್ಡನಂತೂ ತನ್ನ ದರ್ಶನದ ಪ್ರಾರಂಭಬಿಂದುವಾಗಿ (Point of departure) ಹೆಗೆಲ್‌ದರ್ಶನವನ್ನು ಮಾಡಿಕೊಂಡಿದ್ದಾನೆ.

ಕೇವಲ ಬೌದ್ಧಿಕವಾಗುವ ಅಪಾಯ ಸಾಮಾನ್ಯವಾಗಿ ಭಾರತೀಯದರ್ಶನಗಳಿಗೆ ಇಲ್ಲದಿರುವಂತೆ ವೀರಶೈವ ದರ್ಶನಕ್ಕೂ ಇಲ್ಲ. ವೀರಶೈವದರ್ಶನದಲ್ಲಿ ಬೌದ್ಧಿಕತೆಗಿಂತ ಅಥವಾ ತಾರ್ಕಿಕತೆಗಿಂತ ಅನುಭಾವಕ್ಕೇ ಹೆಚ್ಚಿನ ಸ್ಥಾನ ವಿರುವುದರಿಂದ ಸಿದ್ಧಾಂತಶಿಖಾಮಣಿಯಲ್ಲಿ ಕೇವಲ ಸೈದ್ಧಾಂತಿಕ ಎಂದು ತೋರುವ ವೀರಶೈವ ತತ್ತ್ವಗಳು ವಚನ ಕಾರರ ಅನುಭಾವದರ್ಶನಗಳಲ್ಲಿ (Metaphysical Visions) ಆಧ್ಯಾತ್ಮಿಕವಾಗಿ ನೈಜ(authentic)ವಾಗಿ ತೋರುತ್ತವೆ. ತನ್ನಲ್ಲಿರುವ ಅನುಭಾವಸಮೃದ್ಧಿಯಿಂದಾಗಿ ವೀರಶೈವಧರ್ಮ ಆಧ್ಯಾತ್ಮಿಕವಾಗಿ ವೈಶಿಷ್ಟ್ಯದಿಂದ ಕೂಡಿದೆ.

ಎರಡನೆಯದಾಗಿ ಹೆಗೆಲ್‌ನ ಡೈಲೆಕ್ಟಿಕಲ್ ವಿಧಾನವು ಒಬ್ಬ ತತ್ತ್ವಜ್ಞಾನಿಯ ತಾರ್ಕಿಕ ವಿಧಾನ. ಡೈಲೆಕ್ಟಿಕಲ್ ಭೌತಿಕ ವಿಶ್ವ ಮತ್ತು ಚಿತ್‌ಗಳೆರಡರ ವಿಕಾಸದ ಸಹಜ ಮತ್ತು ವಾಸ್ತವಸ್ವರೂಪವೆಂದು ಹೆಗೆಲ್ ಹೇಳಿದರೂ ಆ ವಿಧಾನ ಹೊರಗಿನಿಂದ ಪ್ರಕೃತಿ ಮತ್ತು ಚಿತ್‌ಗಳ ಮೇಲೆ ಆರೋಪಿಸಿದ ಒಂದು ಕೃತ್ರಿಮ ತಾರ್ಕಿಕ ವ್ಯವಸ್ಥೆ (Logical System) ಎಂಬ ಅನಿಸಿಕೆಗೆ ಅವಕಾಶವಿದೆ. ಆದರೆ ವೀರಶೈವದರ್ಶನದಲ್ಲಿ ಡೈಲೆಕ್ಟಿಕ್ ಅಥವಾ ವಿಮರ್ಶಾ ಶಕ್ತಿಯು ಪರಶಿವನ ಅವಿಭಾಜ್ಯ ಅಂಗವಾಗಿದ್ದು ವೀರಶೈವದರ್ಶನದ ಅಂತರ್ಯಕ್ಕೆ ಸೇರಿದ ಒಂದು ಆಧ್ಯಾತ್ಮಿಕ ಚಲನೆಯಾಗಿದೆ.

ಇನ್ನು ಹೆಗೆಲ್‌ನದರ್ಶನವು ವೀರಶೈವದರ್ಶನದಲ್ಲಿ ಕಾಣದ ಕೆಲವು ಲಕ್ಷಣಗಳನ್ನು ಹೊಂದಿದೆ. ಈ ಅಂಶಗಳ ಉಲ್ಲೇಖ ಪರೋಕ್ಷವಾಗಿ ವೀರಶೈವದರ್ಶನದ ದಾರ್ಶನಿಕ ಅಥವಾ ತಾರ್ಕಿಕ ಮಿತಿಗಳನ್ನು ತಿಳಿಸುತ್ತದೆ. ಹೆಗೆಲ್‌ನ ದರ್ಶನ ಪಾಶ್ಚಾತ್ಯದರ್ಶನಸಂಪ್ರದಾಯಕ್ಕೆ ಸೇರಿದ ಮತ್ತು ಆ ದರ್ಶನಸಂಪ್ರದಾಯದ ಮೂಲಭೂತ ತಾತ್ವಿಕತೆಗೆ ಪೂರ್ಣ ಹೊಂದಿಕೊಂಡ ದರ್ಶನವಾದ್ದರಿಂದ ಆ ದರ್ಶನಸಂಪ್ರದಾಯದ ಮುಖ್ಯ ತಾತ್ವಿಕ ಆಶಯಗಳಿಗೆ ಹೊರತಾದುದಲ್ಲ. ಇದರ ಜೊತೆಗೆ ಹೆಗೆಲ್ ಜರ್ಮನ್ ತತ್ವಜ್ಞಾನಿಯಾದ್ದರಿಂದ ಜರ್ಮನ್ ತತ್ವಜ್ಞಾನದ ಮುಖ್ಯ ಲಕ್ಷಣಗಳನ್ನೂ ಅವನ ದರ್ಶನ ರೂಢಿಸಿಕೊಂಡಿದೆ. ಗ್ರೀಕ್ ತತ್ತ್ವಶಾಸ್ತ್ರದ ಕಾಲದಿಂದಲೂ ಪಾಶ್ಚಾತ್ಯದರ್ಶನ ಅನುಭಾವಕ್ಕಿಂತ ತಾರ್ಕಿಕತೆಗೆ ಹೆಚ್ಚು ಒಲವು ತೋರಿಸಿದೆ. ತಾವು ನಿರ್ಮಿಸಿದ ವಿಶ್ವದರ್ಶನ(World Views)ಗಳು ತಾತ್ವಿಕವಾಗಿ ಮತ್ತು ತಾರ್ಕಿಕವಾಗಿ ಪೂರ್ಣಸಾಂಗತ್ಯವನ್ನು ಹೊಂದಿರಬೇಕೆಂಬುದು ಪ್ಲೇಟೋವಿನಿಂದ ಇಪ್ಪತ್ತನೆಯ ಶತಮಾನದ ಎ. ಎನ್. ವೈಟ್ ಹೆಡ್‌ವರೆಗಿನ ಎಲ್ಲಾ ದೊಡ್ಡ ತತ್ತ್ವಜ್ಞಾನಿಗಳ ದಾರ್ಶನಿಕ ಗುರಿಯಾಗಿತ್ತು. ಸಾಕ್ರೆಟಿಸ್‌ನಂಥ ಬದುಕಿಗೆ ಹತ್ತಿರವಾದ ತತ್ತ್ವಜ್ಞಾನಿಯೂ ಸಹ ತನ್ನ ಅಮೂಲ್ಯ ಸಮಯವನ್ನು ಅಥೆನ್ಸ್‌ನಗರದ ಪೇಟೆಯಲ್ಲಿ ಕೇವಲ ಬೌದ್ಧಿಕ ಎಂದು ತೋರುವ ಜಿಜ್ಞಾಸೆಯಲ್ಲಿ ಮತ್ತು ಸಂಭಾಷಣೆಗಳಲ್ಲಿ ಇತರರೊಂದಿಗೆ ಕಳೆಯುತ್ತಿದ್ದನೆಂದರೆ ಪಾಶ್ಚಾತ್ಯ ತತ್ವಜ್ಞಾನಿಗಳ ಒಲವು ಅನುಭಾವಕ್ಕಿಂತ ಬೌದ್ಧಿಕ ಜಿಜ್ಞಾಸೆಯ ಕಡೆಗೇ ಇತ್ತೆಂಬುದು ಸ್ಪಷ್ಟವಾಗುತ್ತದೆ.

ಹೆಗೆಲ್ ತನ್ನ ದರ್ಶನವು ತಾರ್ಕಿಕವಾಗಿ ಅತ್ಯಂತ ಹೆಚ್ಚಿನ ಸಾಂಗತ್ಯ ಪಡೆದಿರಬೇಕೆಂದು ಆಶಿಸಿದ ತತ್ತ್ವಜ್ಞಾನಿ. ತಾನು ಪ್ರತಿಪಾದಿಸಿದ ಎಲ್ಲಾ ತತ್ವಗಳೂ ಸಿದ್ಧವಾಗಬೇಕೆಂದುಕೊಂಡವನು. ಒಂದು ನೂತನ ವಿಧಾನವನ್ನು ರೂಪಿ

ಸಿದವನು. ವಿಶ್ವದರ್ಶನ ಆ ವಿಧಾನಕ್ಕನುಗುಣವಾಗಿರಬೇಕು. ಇದರಿಂದಾಗಿ ಅವನ ದರ್ಶನಸೌಧಕ್ಕೆ ಕೆಲವು ಬೌದ್ಧಿಕ ಆಯಾಮಗಳುಂಟು. ತನ್ನ ವಿಶ್ವದರ್ಶನದ ವಿವಿಧ ಆಯಾಮಗಳು ತಾನು ರೂಪಿಸಿದ ಡೈಲೆಕ್ಟಿಕಲ್ ವಿಧಾನದ ಸಹಜ ತಾರ್ಕಿಕ ಸಿದ್ಧಾಂತಗಳೆಂದು ತೋರುವ ಹಾಗೆ ಅವನು ಪ್ರಯತ್ನಿಸಿರುವುದರಿಂದ ಅವನ ದರ್ಶನಕ್ಕೆ ಒಂದು ಅಭೂತ ಪೂರ್ವ ಶೋಭೆ ಬಂದಿದೆ. ಆದರೆ ಈ ರೀತಿಯ ಪ್ರಯತ್ನವೇ ಅವನ ದರ್ಶನದ ಅಸಂಬದ್ಧತೆಯೂ ಆಗಬಹುದು.

ಎರಡನೆಯದಾಗಿ ಪಾಶ್ಚಾತ್ಯ ತತ್ವಜ್ಞಾನಿಗಳು ಅದರಲ್ಲೂ ಆಧುನಿಕ ಪಾಶ್ಚಾತ್ಯ ತತ್ವಜ್ಞಾನಿಗಳು ಥಿಯಾಲಜಿಯನ್ನು ದೂರವಿರಿಸಿ ವೈಜ್ಞಾನಿಕತೆ ಮತ್ತು ವೈಚಾರಿಕತೆಗೇ ಹೆಚ್ಚಿನ ಮಹತ್ವಕೊಟ್ಟಿರುವುದರಿಂದ ಅವರ ದರ್ಶನಗಳಲ್ಲಿ ವೈಚಾರಿಕತೆ ಸತ್ಯಕ್ಕೆ ಆಧಾರವಾಗಿದೆ. ಪಾಶ್ಚಾತ್ಯ ತತ್ವಜ್ಞಾನಿಗಳು ಇತ್ತೀಚೆಗಿತ್ತೀಚಿನವರೆಗೂ ತಾವೆಂದೂ ವಿಜ್ಞಾನಿಗಳಿಗಿಂತ ವಿಶ್ವವನ್ನು ತಿಳಿದುಕೊಳ್ಳುವುದರಲ್ಲಿ ಕಡಮೆಯುವರೆಂದು ಭಾವಿಸಿರಲಿಲ್ಲ. ಶುದ್ಧ ಬೌದ್ಧಿಕತೆಯಿಂದಲೇ **(Reason)** ವಿಶ್ವದ ರಹಸ್ಯಗಳನ್ನು ತಿಳಿದುಕೊಳ್ಳಬಹುದೆಂದು ಭಾವಿಸಿದ ಮಹತ್ವದ ತತ್ವಜ್ಞಾನಿಗಳ ಪೈಕಿ ಹೆಗೆಲ್ ಒಬ್ಬನು. ಆದ್ದರಿಂದ ಬೌದ್ಧಿಕತೆಯ ಮುಖ್ಯ ಸಾಧನವಾದ ತರ್ಕವನ್ನು ಅರಿಸ್ಟಾಟಲ್‌ನ ಕಾಲದಿಂದಲೂ ಹೆಚ್ಚು ಹೆಚ್ಚು ಹರಿತವಾದುದನ್ನಾಗಿ ಮಾಡುತ್ತಲೇ ಬಂದಿದ್ದಾರೆ.[1] ಈ ಕಾರಣಗಳ ದೃಷ್ಟಿಕೋನದಿಂದ ಪಾಶ್ಚಾತ್ಯದರ್ಶನಗಳನ್ನು ಅಭ್ಯಾಸ ಮಾಡಿದಾಗ ಅನುಭವಕ್ಕೆ ಅವು ದೂರ ಎಂದು ಅನಿಸಿದರೂ ವೈಚಾರಿಕವಾಗಿ ಹತ್ತಿರ ಮತ್ತು ಸಹಜ ಎಂದು ತೋರುತ್ತವೆ. ಅನೇಕ ಭಾರತೀಯ ದರ್ಶನಗಳು ಪಾಶ್ಚಾತ್ಯದರ್ಶನಗಳ ವೈಚಾರಿಕತೆಯನ್ನು ರೂಢಿಸಿಕೊಂಡಿಲ್ಲ.

ವೀರಶೈವದರ್ಶನವೂ ಮೇಲಿನ ಅಭಿಪ್ರಾಯಗಳಿಗೆ ಹೊರತಾಗಿಲ್ಲ ಎನಿಸುತ್ತದೆ. ನನಗೆ ತಿಳಿದಮಟ್ಟಿಗೆ ಯಾವ ಶೈವದರ್ಶನವೂ ಆಳವಾದ ತಾರ್ಕಿಕ ವಿಶ್ಲೇಷಣೆಗೆ ಒಳಪಡದಿರುವುದರಿಂದ ತಾರ್ಕಿಕ ದೃಷ್ಟಿಕೋನದಿಂದ ಆ ದರ್ಶನಗಳ ರಚನೆ ಯಾವ ಮಟ್ಟದ್ದೆಂಬುದು ಸ್ಪಷ್ಟವಾಗಿಲ್ಲ. ಇದರ ಅರ್ಥ ವೀರಶೈವದರ್ಶನ ತಾರ್ಕಿಕವಾಗಿಲ್ಲ ಎಂದಲ್ಲ. ಅದರ ತಾರ್ಕಿಕತೆಯನ್ನು ಹೆಚ್ಚು ಪ್ರಕಟಗೊಳಿಸಬೇಕಾದ ಅವಶ್ಯಕತೆಯಿದೆ.

---

ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ಘೃತ?
ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ?
ಇದು ಕಾರಣ, ನಮ್ಮ ಗುಹೇಶ್ವರ ಲಿಂಗವ ತನ್ನೊಳರಿದೆನೆಂಬ ಮಹಾಂತಂಗಲ್ಲದೆ
ಸತ್ಕ್ರಿಯಾಚರಣೆಯೇ ಸಾಧನ ಕಾಣಿಭೋ!

ಅಲ್ಲಮಪ್ರಭು

---

1 ಈ ದಿಶೆಯಲ್ಲಿಯ ತರ್ಕದ ಇತ್ತೀಚಿನ ಅಭಿವ್ಯಕ್ತಿಯೆಂದರೆ ಬರ್ಟ್ರ್ಯಾಂಡ್ ರಸಲ್, ಎ. ಎನ್. ವೈಟ್‌ಹೆಡ್, ಬೂಲೆ, ಕ್ವೈನ್, ಕಾರ್ನಾಪ್, ವಿಟ್‌ಗೆನ್ ಸ್ಟೈನ್ ಮತ್ತು ಫ್ರೀಗೆ ಇವರಿಂದ ರಚಿಸಲ್ಪಟ್ಟ ಸಿಂಬಾಲಿಕ್ ಅಥವಾ ಮ್ಯಾಥ್‌ಮ್ಯಾಟಿಕಲ್ ಲಾಜಿಕ್.

# ಪ್ರಕೀರ್ಣಕ

# ತೋಂಟದ ಸಿದ್ಧಲಿಂಗೇಶ್ವರ

**ಎನ್. ಬಸವಾರಾಧ್ಯ**

ವೀರಶೈವವಚನವಾಙ್ಮಯದಲ್ಲಿ ಎರಡು ಪ್ರಮುಖ ಘಟ್ಟಗಳನ್ನು ನಾವು ಕಾಣಬಹುದಾಗಿದೆ. ಬಸವೇಶ್ವರರ ಕಾಲದ ವಚನಪ್ರಕಾರ ಮೊದಲನೆಯ ಘಟ್ಟವಾದರೆ, ತೋಂಟದ ಸಿದ್ಧಲಿಂಗೇಶ್ವರರ ಕಾಲದ್ದು ಎರಡನೆಯ ಘಟ್ಟ. ಸುಮಾರು ನಾಲ್ಕು ಶತಮಾನಗಳ ಕಾಲ ಸ್ಥಗಿತವಾಗಿದ್ದ ಈ ಸಾಹಿತ್ಯಪ್ರಕಾರ ಸಿದ್ಧಲಿಂಗೇಶ್ವರರ ಕಾಲದಲ್ಲಿ ಮತ್ತೊಮ್ಮೆ ಜಾಗೃತಗೊಂಡಿತು. ಧಾರ್ಮಿಕವಾಗಿಯೂ ಮಹತ್ತರವಾದ ಪ್ರಗತಿಯನ್ನು ಸಾಧಿಸಿತು. ಕಲ್ಯಾಣದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ಕ್ರಾಂತಿ ಆ ಪ್ರಮಾಣದಲ್ಲಿ ಅಲ್ಲದಿದ್ದರೂ ಸಾಕಷ್ಟು ಪರಿಣಾಮಕಾರಿಯಾಗಿ ಸಿದ್ಧಲಿಂಗೇಶ್ವರರ ಕಾಲದಲ್ಲಿ ನಡೆಯಿತು. ವಚನಸಾಹಿತ್ಯರಚನೆ ಅಷ್ಟಾಗಿ ಆಗದಿದ್ದರೂ ಅವುಗಳ ವಿಂಗಡಣೆ, ಪರಿಷ್ಕರಣೆ, ಸಂಶೋಧನೆ ಮತ್ತು ಸಂಪಾದನಕಾರ್ಯಗಳು ಸುವ್ಯವಸ್ಥಿತವಾಗಿ ನಡೆದುದನ್ನು ನಾವು ಕಾಣಬಹುದು. ತೋಂಟದ ಸಿದ್ಧಲಿಂಗೇಶ್ವರರು ವೀರಶೈವಧರ್ಮದ ಪ್ರಸಾರಕ್ಕಾಗಿ ಅಸಂಖ್ಯಾತ ಶಿಷ್ಯರೊಂದಿಗೆ ಆಸೇತುಹಿಮಾಚಲ ಪರ್ಯಟನವನ್ನು ಕೈಗೊಂಡದ್ದನ್ನು ಅನೇಕ ದಾಖಲೆಗಳಿಂದ ಗುರುತಿಸಬಹುದಾಗಿದೆ. ಸಿದ್ಧಲಿಂಗೇಶ್ವರರ ಪ್ರಭಾವ ಜನತೆಯಲ್ಲಿ ಸಾಕಷ್ಟು ಪರಿಣಾಮವನ್ನುಂಟುಮಾಡಿತು. ಸಿದ್ಧಲಿಂಗೇಶ್ವರರು ಯೋಗಿಗಳು. ವಚನಕಾರರು, ಧರ್ಮಪ್ರವರ್ತಕರು. ಅವರ 'ಷಟ್ಸ್ಥಲಜ್ಞಾನಸಾರಾಮೃತ' ಏಳುನೂರಕ್ಕೂ ಮಿಕ್ಕಿನ ವಚನಗಳನ್ನು ಒಳಗೊಂಡು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಇವರ ಗುರುಪರಂಪರೆ ಎಷ್ಟು ಪ್ರಮುಖವಾದುದೋ ಅಂತೆಯೇ ಇವರ ಶಿಷ್ಯಪರಂಪರೆಯೂ ಪ್ರಮುಖವಾದುದು. ಗುರುಪರಂಪರೆ ಇಂತಿದೆ: "ಅನಾದಿಗಣೇಶ್ವರನ ಶಿಷ್ಯ ಆದಿಗಣೇಶ್ವರ. ಆದಿಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ. ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ. ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರ. ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರ. ಆತ್ಮಗಣೇಶ್ವರನ ಶಿಷ್ಯರು ಅಧ್ಯಾತ್ಮಗಣೇಶ್ವರ. ಅಧ್ಯಾತ್ಮಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ. ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವಪ್ರಭುದೇವರು. ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು. ಆದಿಲಿಂಗದೇವರ ಶಿಷ್ಯರು ಚನ್ನವೀರೇಶ್ವರದೇವರು. ಚನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿಯ ಗೋಸಲದೇವರು. ಹರದನಹಳ್ಳಿಯ ಗೋಸಲದೇವರ ಶಿಷ್ಯರು ಶಂಕರದೇವರು. ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು. ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು. ಚೆನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾನಯ್ಯ."

ಸಿದ್ಧಲಿಂಗೇಶ್ವರರ ಶಿಷ್ಯಪರಂಪರೆಯಲ್ಲಿ ಕಂಬಳಿದೇವ, ಸಿದ್ಧನಂಜೇಶ, ಚೆನ್ನದೇವರು, ಗುಮ್ಮಳಾಪುರದ ಸಿದ್ಧಲಿಂಗಯತಿ, ಸಿದ್ಧವೀರಣ್ಣೊಡೆಯ, ಘನಲಿಂಗಿದೇವ, ಲಂಬಕರ್ಣದೇವರು, ಶಾಂತಮಲ್ಲಿಕಾರ್ಜುನ, ಸಪ್ಪೆಯಾರ್ಯ, ಬೋಳಬಸವೇಶ್ವರ, ಸ್ವತಂತ್ರಸಿದ್ಧಲಿಂಗೇಶ್ವರ—ಇವರು ಮುಖ್ಯರಾದವರು. ಇಂತಹ ಗುರುಶಿಷ್ಯಪರಂಪರೆಯನ್ನು ಹೊಂದಿದ್ದ ಸಿದ್ಧಲಿಂಗೇಶ್ವರರು ಅದ್ಭುತಕಾರ್ಯಗಳನ್ನು ಮಾಡಿ ಅಮರರಾಗಿದ್ದಾರೆ.

ವೀರಶೈವವಾಙ್ಮಯದಲ್ಲಿ ತೋಂಟದ ಸಿದ್ಧಲಿಂಗೇಶ್ವರರ ಹೆಸರು ಅತ್ಯಂತ ಪ್ರಮುಖವಾದುದು. ಇವರನ್ನು ಕುರಿತು ಶಾಂತೇಶನು 'ಸಿದ್ಧೇಶ್ವರಪುರಾಣ'ವನ್ನೂ, ವಿರಕ್ತತೋಂಟದಾರ್ಯನು 'ಸಿದ್ಧೇಶ್ವರಪುರಾಣ'ವನ್ನೂ, ಚೆನ್ನವೀರ ಜಂಗಮದೇವನು 'ಷಟ್ಸ್ಥಲವಲ್ಲಭ'ವನ್ನೂ, ಹೇರಂಬ ಕವಿ 'ಸಿದ್ಧಲಿಂಗೇಶ್ವರ ಸಾಂಗತ್ಯ'ವನ್ನೂ ಬರೆದಿದ್ದಾರೆ. ಇವೇ ಅಲ್ಲದೆ ವಿರೂಪಾಕ್ಷಪಂಡಿತನ 'ಚೆನ್ನಬಸವಪುರಾಣ' ಸಿದ್ಧನಂಜೇಶನ 'ಗುರುರಾಜಚಾರಿತ್ರ' ಮೊದಲಾದ ಕಾವ್ಯಗಳಲ್ಲೂ ಈತನ ಕಥೆ ಕಂಡುಬರುತ್ತದೆ.

ಲೋಕಕಲ್ಯಾಣಾರ್ಥವಾಗಿ ಭೂಮಿಗೆ ಅವತರಿಸಿದ ಅಯೋನಿಜರಾದ ಸಿದ್ಧಲಿಂಗೇಶ್ವರರ ಕಥೆ ಎಲ್ಲ ಕಾವ್

ಪುರಾಣಗಳಲ್ಲೂ ಏಕಪ್ರಕಾರವಾಗಿದೆ. ನಿರಂಜನ ಗಣಾಧೀಶ್ವರರ ಅಪರಾವತಾರರಾದ ಸಿದ್ಧಲಿಂಗೇಶ್ವರರ ಸಂಕ್ಷಿಪ್ತ ಜೀವನ ಚರಿತ್ರೆ ಇದು :

ಕೈಲಾಸದಲ್ಲಿ ಪರಶಿವನ ಆಸ್ಥಾನದಲ್ಲಿ ಸಕಲ ದೇವಾದಿದೇವತೆಗಳೂ ಅಲ್ಲಮಪ್ರಭು, ನಿರಂಜನಗಣಾಧೀಶ್ವರರೂ ಮಂಡಿಸಿದ್ದರು. ಆ ಸಮಯದಲ್ಲಿ ನಾರದನ ಪ್ರವೇಶವಾಗುವುದು. ಭೂಲೋಕದಲ್ಲಿ ಧರ್ಮ ಖಿಲವಾಗಿ ದುಷ್ಟರು ಹೆಚ್ಚಿಹೋಗಿ ಅನೀತಿ ತಾಂಡವವಾಡುತ್ತಿರುವುದನ್ನು ನಾರದ ಪರಶಿವನಿಗೆ ಬಿನ್ನೈಸಿಕೊಂಡ. ಅದನ್ನು ಕೇಳಿದ ಪರಶಿವ ಧರಣಿಯ ಕಂಟಕರನ್ನು ಸದೆಬಡಿದು ಧರ್ಮವನ್ನು ಉದ್ಧರಿಸುವುದಕ್ಕಾಗಿ ಭೂಲೋಕದಲ್ಲಿ ಅವತರಿಸುವಂತೆ ನಿರಂಜನ ಗಣಾಧೀಶನಿಗೆ ಆಣತಿಯನ್ನಿತ್ತನು.

ಕಾವೇರಿತೀರದಲ್ಲಿದ್ದ ಹರದನಹಳ್ಳಿಯಲ್ಲಿ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆ ಎಂಬ ದಂಪತಿಗಳು ಪುತ್ರ ಸಂತಾನಾರ್ಥವಾಗಿ ಪರಶಿವನನ್ನು ಕುರಿತು ತಪಸ್ಸು ಮಾಡುತ್ತಿದ್ದರು. ಅವರ ತಪಸ್ಸಿಗೆ ಮೆಚ್ಚಿದ ಪರಶಿವನು ಯೋಗಾನಂದಮೂರ್ತಿಯಾದ ಬಾಲಕನನ್ನು ಅವರಿಗೆ ಕರುಣಿಸಿದನು. ಬಾಲಕನನ್ನು ಕಂಡು ಆಶ್ಚರ್ಯಚಕಿತರಾದ ಆ ದಂಪತಿಗಳು ಅವನನ್ನು ಎತ್ತಿಕೊಂಡು ಪುರಾಭಿಮುಖರಾದರು.

ದಾರಿಯಲ್ಲಿ ಒಂದು ಮದ್ದಾನೆ ಎದುರಾಗಿ ಅವರಿಗೆ ನಮಸ್ಕರಿಸಿತು. ಆ ಆನೆಯನ್ನು ಅಟ್ಟಿಸಿಕೊಂಡು ಒಂದು ಸಿಂಹವೂ ಅಲ್ಲಿಗೆ ಬಂದಿತು. ಆನೆಸಿಂಹಗಳನ್ನು ಕಂಡು ಹೆದರಿದ ಆ ದಂಪತಿಗಳು ಪರಶಿವನನ್ನು ಧ್ಯಾನಿಸಿದರು. ಬಾಲಕನಾದ ಸಿದ್ಧಲಿಂಗನ ತೇಜಃಪುಂಜ, ಬಾಣಗಳ ರೂಪದಲ್ಲಿ ಹೊರಟು ಸಿಂಹದೊಡನೆ ಹೋರಾಡಿತು. ಸಿಂಹ ಪ್ರಾಣವನ್ನು ಬಿಟ್ಟು ಕಿನ್ನರರೂಪವನ್ನು ಹೊಂದಿತು. ಆನೆಯೂ ಕಿನ್ನರಿಯ ರೂಪವನ್ನು ತಾಳಿತು. ಆ ಕಿನ್ನರ ದಂಪತಿಗಳು ಯೋಗಿಭೂಷಣನಿಗೆ ನಮಸ್ಕರಿಸಿ ತಮ್ಮ ಶಾಪದ ವೃತ್ತಾಂತವನ್ನು ತಿಳಿಸಿ ಹೊರಟುಹೋದರು.

ಸಿದ್ಧಲಿಂಗನನ್ನು ಮಲ್ಲಿಕಾರ್ಜುನ ಜ್ಞಾನಾಂಬೆಯರು ಮನೆಗೆ ಕರೆತಂದರು. ತೊಟ್ಟಿಲಶಾಸ್ತ್ರವನ್ನು ಮಾಡಿ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಜೋಗುಳವನ್ನು ಹಾಡಿದರು. ಹೀಗಿರಲು ಸಿದ್ಧಲಿಂಗನನ್ನು ಕೊಲ್ಲಲು ಕಲಿಯ ಆದೇಶದಿಂದ ಮಹಿಷಾಸುರ ಅಲ್ಲಿಗೆ ಬಂದನು. ಸಿದ್ಧಲಿಂಗನ ದೇಹದಿಂದ ಅವತರಿಸಿದ ಮಾರಿ ಆ ಮಹಿಷಾಸುರನನ್ನು ಸಂಹರಿಸಿತು. ಆಮೇಲೆ ಇದ್ದಕ್ಕಿದ್ದಂತೆ ಸಿದ್ಧಲಿಂಗ ರಚ್ಚೆ ಹಿಡಿದನು. ಪರಿಪರಿಯಾಗಿ ಉಪಚಾರ ಮಾಡಲು ಆತನು ನಿದ್ರೆಹೋದನು. ಇದಾದ ಮೇಲೆ ಸಿದ್ಧಲಿಂಗ ಸರ್ಪಶಯನನಾದನು. ಅದನ್ನು ನೋಡಿದ ತಂದೆತಾಯಿಗಳು ಭಯಭೀತರಾದರು. ಸರ್ಪದಿಂದ ಮುಕ್ತನಾದ ಸಿದ್ಧಲಿಂಗ ಭೂಮಿಗೆ ಕರ್ತನಾಗುವನು ಎಂದು ನೆರೆದಿದ್ದ ಜನ ಆಡಿಕೊಳ್ಳುತ್ತಿದ್ದರು. ಅಷ್ಟರಲ್ಲೇ ಸರ್ಪ ಕಣ್ಮರೆಯಾಯಿತು. ಜ್ಞಾನಾಂಬೆ ಒಮ್ಮೆ ಸಿದ್ಧಲಿಂಗನಿಗೆ ಮೊಲೆಯುಣ್ಣಿಸುತ್ತಿದ್ದಾಗ ಸಿದ್ಧಲಿಂಗ ಮೊಲೆಯನ್ನು ಕಚ್ಚಿದನು. ಆಗ ಜ್ಞಾನಾಂಬೆ ಸಿದ್ಧಲಿಂಗನನ್ನು ಗದ್ದರಿಸಿದಳು. ಸಿಟ್ಟುಗೊಂಡ ಸಿದ್ಧಲಿಂಗ ತಾಯಿಯ ಹಾರಕ್ಕೆ ಕೈಯನ್ನು ಹಾಕಿ ಎಳೆದನು. ಹಾರ ಕಿತ್ತು ಮುತ್ತುಗಳೆಲ್ಲಾ ಉದುರಿದವು. ಆ ಮುತ್ತುಗಳನ್ನು ಆರಿಸಿಕೊಂಡು ಸಿದ್ಧಲಿಂಗ ಅವನ್ನು ಬಾಯಲ್ಲಿಟ್ಟುಕೊಂಡನು. ಜ್ಞಾನಾಂಬೆ ಸಿದ್ಧಲಿಂಗನ ಬಾಯನ್ನು ತೆರೆಸಿ ನೋಡಿದಾಗ ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರ ತೊಡೆಯ ಮೇಲೆ ನಲಿದಾಡುತ್ತಿದ್ದ ಸಿದ್ಧಲಿಂಗನನ್ನು ಕಂಡು ಆಶ್ಚರ್ಯಚಕಿತಳಾದಳು.

ಒಂದು ಸಲ ಜ್ಞಾನಾಂಬೆ ಸಿದ್ಧಲಿಂಗನನ್ನು ಮಡಿಲಲ್ಲಿ ಕೂರಿಸಿಕೊಂಡು ಆಕಾಶದಲ್ಲಿದ್ದ ಚಂದ್ರನನ್ನು ತೋರಿಸಿ ಕರೆದಳು. ಸಿದ್ಧಲಿಂಗನೂ ಅದರಂತೆಯೇ ಮಾಡಿದ. ಆಕಾಶದಲ್ಲಿದ್ದ ಚಂದ್ರ ಚೆಂಡಿನಂತೆ ಬಂದು ಸಿದ್ಧಲಿಂಗನ ಕೈಸೇರಿದನು. ಅದನ್ನು ಕಂಡ ಜ್ಞಾನಾಂಬೆ ಮೂರ್ಛೆಹೋದಳು. ಸಿದ್ಧಲಿಂಗ ತಾಯಿಯನ್ನು ಉಪಚರಿಸಿ ಸಮಾಧಾನಪಡಿಸಿದ. ಮತ್ತೊಮ್ಮೆ ಜಂಗಮಾರಾಧನೆಯ ಸಂದರ್ಭದಲ್ಲಿ ಸಿದ್ಧಲಿಂಗ ಪೂಜೆಗೆ ಮೊದಲೇ ಅಡುಗೆಯ ಮನೆಯನ್ನು ಹೊಕ್ಕು ಮಾಡಿದ್ದ ಅಡುಗೆಯನ್ನೆಲ್ಲ ಎಂಜಲು ಮಾಡಿದನು. ಅದನ್ನು ಕಂಡು ತಾಯಿ ಸಿದ್ಧಲಿಂಗನ ಮೇಲೆ ಕೋಪಿಸಿಕೊಂಡಳು. ಅಲ್ಲಿ ನೆರೆದಿದ್ದ ಜಂಗಮರೂ ಸಿದ್ಧಲಿಂಗನನ್ನು ಗದರಿಸಿದರು. ಆಗ ಸಿದ್ಧಲಿಂಗ ಮನೆಯಿಂದ ಹೊರಕ್ಕೆ ಓಡಿಹೋದನು. ಆ ಕೂಡಲೇ ಜಂಗಮರ ಕೈಯಲ್ಲಿದ್ದ ಲಿಂಗಗಳೆಲ್ಲ ಮಾಯವಾದುವು. ಇದಕ್ಕೆ ಸಿದ್ಧಲಿಂಗನೇ ಕಾರಣವೆಂದು ಅವನನ್ನು ಹುಡುಕಿಕೊಂಡು ಹೊರಟರು. ಆ ಊರಿನಲ್ಲಿದ್ದ ಹುಡುಗರೆಲ್ಲ ಸಿದ್ಧಲಿಂಗನಂತೆಯೇ ಕಂಡುಬಂದರು. ಸಿದ್ಧಲಿಂಗನ ಆ ವಿಶ್ವರೂಪವನ್ನು ಕಂಡು ತಾವು ಮಾಡಿದ ಅಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟು ಸಿದ್ಧಲಿಂಗನಿಗೆ ಶರಣಾಗತರಾಗಿ ಮೊರೆಯಿಟ್ಟರು. ಆಗ ಅವರ ಲಿಂಗಗಳೆಲ್ಲ ಮತ್ತೆ ಅವರ ಕೈಸೇರಿದುವು. ಅವರೆಲ್ಲರೂ ಸಿದ್ಧಲಿಂಗನಿಗೆ ಮೊದಲು ಎಡೆಮಾಡಿ ಉಳಿದದ್ದನ್ನು ತಾವೆಲ್ಲ ಪ್ರಸಾದವಾಗಿ ಸ್ವೀಕರಿಸಿ ಹೊರಟುಹೋದರು.

ಸಿದ್ಧಲಿಂಗನಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಆತನ ತಂದೆತಾಯಿಗಳು ಉಪಾಧ್ಯಾಯರನ್ನು ಗೊತ್ತುಪಡಿಸಿ ಅವರಲ್ಲಿಗೆ ಕಳಿಸಿಕೊಟ್ಟರು. ಉಪಾಧ್ಯಾಯರು ಬೋಧಿಸುತ್ತಿದ್ದ ವಿದ್ಯೆಯಿಂದ ಏನೂ ಪ್ರಯೋಜನವಿಲ್ಲವೆಂದು ಸಿದ್ಧಲಿಂಗ ವಿದ್ಯಾರ್ಥಿಗಳಿಗೆಲ್ಲ ತಿಳಿಸಿದನು. ಅದರಂತೆ ಅವರೆಲ್ಲ ವಿವೇಕವಂತರಾಗಿ ಸುಜ್ಞಾನವೆಂಬ ವಿದ್ಯೆಯನ್ನು ಕಲಿತು ಕೊಂಡರು.

ಒಂದು ಬಾರಿ ಯಾರೋ ಕೆಲವರು ಸಿದ್ಧಲಿಂಗನ ಮನೆಗೆ ಬಂದರು. ಆತನನ್ನು ಕುರಿತು "ನಿಮ್ಮ ತಂದೆತಾಯಿ ಗಳು ಮನೆಯಲ್ಲಿ ಇಲ್ಲವೇ" ಎಂದು ಕೇಳಿದರು. ಅದಕ್ಕೆ ಸಿದ್ಧಲಿಂಗ "ಅವರು ಹೊಲೆಗೇರಿಗೆ ಹೋಗಿದ್ದಾರೆ" ಎಂದು ಹೇಳಿಕಳಿಸಿದನು. ಅದನ್ನು ಕೇಳಿಸಿಕೊಂಡ ತಂದೆತಾಯಿಗಳು ಆಕ್ಷೇಪಿಸಿದಾಗ ಸಿದ್ಧಲಿಂಗ "ನೀವು ಮನೆಯಲ್ಲೇ ಇದ್ದು ಶಿವಪೂಜೆ ಮಾಡುತ್ತಿದ್ದರೂ ನಿಮ್ಮ ಮನಸ್ಸು ಮಾತ್ರ ಹೊಲೆಗೇರಿಯಲ್ಲಿದ್ದುದರಿಂದ ನಾನು ಆ ರೀತಿ ಹೇಳಿದೆ" ಎಂದನು. ತಂದೆತಾಯಿಗಳು ಸುಮ್ಮನಾದರು. ತನ್ನನ್ನು ಗುರುವಿನ ಮಠದಲ್ಲಿ ಬಿಟ್ಟುಬಿಡಬೇಕೆಂದು ತಂದೆತಾಯಿ ಗಳನ್ನು ಅವನು ಕೇಳಿಕೊಂಡನು. ಸಿದ್ಧಲಿಂಗನ ಮಾಹಾತ್ಮ್ಯವನ್ನು ಅರಿತ ತಂದೆತಾಯಿಗಳು ಹಾಗೆಯೇ ಮಾಡಿದರು.

ಹರದನಹಳ್ಳಿಯ ಮಠವನ್ನು ಸೇರಿದ ಸಿದ್ಧಲಿಂಗನಿಗೆ ಅಲ್ಲಿಯ ಗುರುಗಳು ದೀಕ್ಷೆಯನ್ನು ಕೊಟ್ಟರು. ಸಿದ್ಧಲಿಂಗ ಪ್ರತಿನಿತ್ಯ ವಿವಿಧ ಪತ್ರಪುಷ್ಪಗಳನ್ನು ತಿರಿದು ತಂದು ದೇವರ ಪೂಜೆಯನ್ನು ಅತ್ಯಂತ ಭಕ್ತಿಭಾವದಿಂದ ಮಾಡುತ್ತಿ ದ್ದನು. ಸಿದ್ಧಲಿಂಗನು ಮಾಡುತ್ತಿದ್ದ ಮಹತ್ಕಾರ್ಯಗಳಿಗೆಲ್ಲ ಚಂಡಿ, ಪ್ರಚಂಡಿ ಎಂಬ ಭೂತಗಳೇ ಪ್ರೇರಕವೆಂದು ಜನ ಮಾತಾಡಿಕೊಳ್ಳುತ್ತಿದ್ದರು. ಈ ಚಂಡಿ, ಪ್ರಚಂಡಿ ಭೂತಗಳು ಕೈಲಾಸದಲ್ಲಿ ದ್ವಾರಪಾಲಕರಾಗಿದ್ದವರು. ಸಿದ್ಧಲಿಂಗನ ಸೇವೆಗಾಗಿ ಭೂತಗಳ ರೂಪದಲ್ಲಿ ಬಂದು ಬೆಂಗಾವಲಾಗಿದ್ದರು. ಸಿದ್ಧಲಿಂಗನು ಮಾಡುತ್ತಿದ್ದ ಅದ್ಭುತಕಾರ್ಯ ಗಳನ್ನೆಲ್ಲ ಆತನ ಗುರುಗಳು ಕಂಡುಕೊಂಡರು. ಆತನ ಮಹಿಮೆಯನ್ನು ಅರಿತುಕೊಂಡ ಗುರುಗಳು ಆ ಮಠದಲ್ಲಿದ್ದ ಶಿವಲಿಂಗ ಮತ್ತು ಶಿಲಾವೃಷಭನ ಪೂಜೆಯನ್ನು ಮಾಡಿಕೊಂಡಿರುವಂತೆ ಆತನಿಗೆ ತಿಳಿಸಿದರು. ಸಿದ್ಧಲಿಂಗನು ಗುರುಗಳ ಆಜ್ಞೆಯನ್ನು ಪರಿಪಾಲಿಸುತ್ತ, ನೀಡಿದ ನೈವೇದ್ಯವನ್ನೆಲ್ಲಾ ಶಿಲಾವೃಷಭನೇ ತಿನ್ನುವಂತೆ ಮಾಡಿ ತನ್ನ ಮಹಿಮೆಯನ್ನು ಪ್ರದರ್ಶಿಸಿದನು.

ಸ್ವಲ್ಪಕಾಲದ ಮೇಲೆ ಸಿದ್ಧಲಿಂಗ ಚರಮೂರ್ತಿಯಾಗಿ ಹರದನಹಳ್ಳಿಯಿಂದ ಹೊರಟನು. ಆತನ ಗುರುವೂ ಸಹ ಜೊತೆಯಲ್ಲಿಯೇ ಹೊರಟರು. ಅಲ್ಲದೆ ಸಾವಿರಾರು ಜನ ಭಕ್ತರು ಆತನನ್ನು ಕೂಡಿಕೊಂಡರು. ದೇಶಪರ್ಯಟನ ವನ್ನು ಕೈಕೊಳ್ಳುವ ಮುನ್ನ ಸಿದ್ಧಲಿಂಗ ತಂದೆತಾಯಿಗಳ ಬಳಿಗೆ ಬಂದು ಅವರಿಗೆ ನಮಿಸಿ ಅವರ ಆಶೀರ್ವಾದವನ್ನು ಪಡೆದು ತಿಗುಳ ದೇಶಾಭಿಮುಖವಾಗಿ ಹೊರಟನು. ದಾರಿಯಲ್ಲಿ ಸಿಕ್ಕಿದ ಬೆಟ್ಟದಾವರೆಯ ತುದಿಗೊಂಬಿನಲ್ಲಿದ್ದ ಹೂವುಗಳು ಕೈಗೆ ಎಟುಕುವಂತೆ ಒಂದು ಪವಾಡವನ್ನು ಮಾಡಿದನು. ಹಾಗೆಯೇ ಅಲ್ಲಿದ್ದ ಎರಡು ಜೇಡಗಳು ಸಿದ್ಧ ಲಿಂಗನಿಂದ ಶಾಪವಿಮುಕ್ತವಾದವು. ಅಲ್ಲಿಂದ ತಿರುವಣ್ಣಾಮಲೆಯನ್ನು ಸೇರಿದನು. ಆ ಊರಿನಲ್ಲಿದ್ದ ಅರುಣಾ ಚಲೇಶ್ವರ ದೇವಾಲಯಕ್ಕೆ ಹೋದಾಗ ಅರುಣಾಚಲೇಶ್ವರನೇ ಪ್ರತ್ಯಕ್ಷನಾಗಿ ಸಿದ್ಧಲಿಂಗನಿಗೆ ಪಂಚತಾವಡವನ್ನು ಕೊಟ್ಟನು. ಅದನ್ನು ಕಂಡ ಆ ಊರಿನ ರಾಜನೂ ಪ್ರಜೆಗಳೂ ಸಿದ್ಧಲಿಂಗನ ಮಹಿಮೆಯನ್ನು ಕೊಂಡಾಡಿದರು.

ಸಿದ್ಧಲಿಂಗ ಕಾವೇರಿನದಿಯ ತೀರದಲ್ಲಿ ಬೀಡುಬಿಟ್ಟಿದ್ದನು. ಶಿವಭಕ್ತೆಯೊಬ್ಬಳು ಸಿದ್ಧಲಿಂಗನಿಗೆ ಎಡೆಯನ್ನು ತರುತ್ತಿದ್ದಾಗ ಒಂದು ಆನೆ ಆಕೆಗೆ ಎದುರಾಯಿತು. ಅದನ್ನರಿತ ಸಿದ್ಧಲಿಂಗ ಆನೆಯನ್ನು ಶಾಂತಗೊಳಿಸಿ ಅದರ ಮೇಲೆ ಶಿವಭಕ್ತೆಯನ್ನು ಕೂರಿಸಿ ತಾನೂ ಸವಾರಿ ಮಾಡಿದನು. ಕಾವೇರಿ ನದಿ ಇಬ್ಭಾಗವಾಗಿ ಅವರಿಗೆ ದಾರಿ ಮಾಡಿಕೊಟ್ಟಿತು. ಶಿವಭಕ್ತೆ ತಂದಿದ್ದ ಪ್ರಸಾದವನ್ನು ತನ್ನ ಸಹಚರರಿಗೆಲ್ಲ ಹಂಚಿ ತೃಪ್ತಿಪಡಿಸಿದನು. ಆಮೇಲೆ ಹುಲ್ಲುನೀರನ್ನು ಬಿಟ್ಟಿದ್ದ ಗೂಳಿಯೊಂದನ್ನು ಮುಟ್ಟಿ ಅದು ಆಹಾರ ಸೇವಿಸುವಂತೆ ಮಾಡಿ ಪವಾಡವನ್ನು ಮೆರೆದನು. ಅಲ್ಲಿಂದ ಸಿದ್ಧಲಿಂಗ ದ್ರಾವಿಡದೇಶದ ಮಹಮ್ಮಳೇಶ್ವರನ ದೇವಾಲಯಕ್ಕೆ ಬಂದನು. ಆಗ ಕುಷ್ಠರೋಗಪೀಡಿತಳಾದವಳೊಬ್ಬಳು ಬಂದು ತನ್ನ ಜನ್ಮಾಂತರದ ಕಥೆಯನ್ನು ಸಿದ್ಧಲಿಂಗನಿಗೆ ಹೇಳುವಳು. ಅದನ್ನು ಕೇಳಿದ ಸಿದ್ಧಲಿಂಗ ಆಕೆಯನ್ನು ಅನುಗ್ರಹಿಸಲು ಆಕೆಗೆ ಅಂಟಿದ್ದ ಬ್ರಹ್ಮಹತ್ಯಾದೋಷನಿವಾರಣೆಯಾಗುವುದು. ಸಿದ್ಧಲಿಂಗ ಮಹಮ್ಮಳೇಶ್ವರನ ಮೇಲೆ ಆಸೀನನಾದನು. ಅದನ್ನು ಕಂಡ ಜನ ಆ ಊರಿನ ರಾಜನಾದ ಕಲರಾಜಚಂದ್ರನಿಗೆ ದೂರು ಹೇಳಿದರು. ರಾಜನು ಅಲ್ಲಿಗೆ ಹೋಗಿ ನೋಡು ವಷ್ಟರಲ್ಲಿ ಆ ದೇವಾಲಯವೇ ಅದೃಶ್ಯವಾಗಿತ್ತು. ಅರುಣಾಚಲದಲ್ಲಿ ನಡೆದ ಪಂಚತಾವಡದ ಪ್ರಸಂಗವನ್ನು ಕೇಳಿ ತಿಳಿದುಕೊಂಡಿದ್ದ ಆ ರಾಜ ಸಿದ್ಧಲಿಂಗನ ಕ್ಷಮೆಯನ್ನು ಯಾಚಿಸಿದನು. ಕೂಡಲೇ ಅದೃಶ್ಯವಾಗಿದ್ದ ದೇವಾಲಯ ಗೋಚರವಾಯಿತು. ಅಲ್ಲಿಂದ ಮುಂದಕ್ಕೆ ಸಿದ್ಧಲಿಂಗ ತನ್ನ ಅನುಚರರೊಡನೆ ಶ್ರೀರಂಗ ಕುಂಭಕರ್ಣ ಮೊದಲಾದ

ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ರಾಮೇಶ್ವರವನ್ನು ತಲಪಿದನು. ಆ ರಾಮೇಶ್ವರ ಲಿಂಗದ ಮಹಿಮೆಯನ್ನು ಎಲ್ಲರಿಗೂ ವಿವರಿಸಿ ತಿಳಿಸಿದನು. ತರುವಾಯ ಮಲಯಾಳಕ್ಕೆ ಪ್ರಯಾಣವನ್ನು ಬೆಳಸಿದನು. ಆ ದೇಶದ ಜನ ಮಂತ್ರ ತಂತ್ರಗಳಲ್ಲಿ ನಿಪುಣರೆಂಬುದನ್ನು ಅರಿತನು. ಸಿದ್ಧಲಿಂಗನ ಕೆಲವು ಅನುಚರರು ಅಲ್ಲಿದ್ದ ಹೂವು ಹಣ್ಣುಗಳನ್ನು ಕೀಳಲು ತೊಡಗಿದಾಗ ಅವರ ಕೈಗಳೆಲ್ಲಾ ಮರಗಿಡಗಳಲ್ಲೇ ಅಂಟಿಕೊಂಡವು. ಇದನ್ನೆಲ್ಲಾ ಅರಿತ ಶಾಕ್ತೇಯರಾಜ ಒಂದು ಹೆಬ್ಭೂತವನ್ನು ಸಿದ್ಧಲಿಂಗನ ಪರಿವಾರದ ಮೇಲೆ ಬಿಟ್ಟನು. ಸಿದ್ಧಲಿಂಗನ ಸೇವಕರಾದ ಚಂಡಿ, ಪ್ರಚಂಡಿಯರು ಆ ಹೆಬ್ಭೂತವನ್ನು ಕೊಂದು ರಾಜನನ್ನು ಸೆರೆಹಿಡಿದರು. ಆ ರಾಜ ಸಿದ್ಧಲಿಂಗನಿಗೆ ಶರಣಾಗತನಾದನು. ಸಿದ್ಧಲಿಂಗ ಅಲ್ಲಿಂದ ಪ್ರಯಾಣಮಾಡಿ ಸ್ತ್ರೀಮಲಯಾಳಕ್ಕೆ ಹೋದನು. ಅಲ್ಲಿಯ ಸ್ತ್ರೀಯರ ಆಟ ಸಿದ್ಧಲಿಂಗನ ಮುಂದೆ ಏನೂ ನಡೆಯಲಿಲ್ಲ. ಆದರೆ ಅಲ್ಲಿಯ ಸ್ತ್ರೀಯರೇ ನಾನಾ ವಿಧವಾದ ರೋಗಗಳಿಗೆ ಗುರಿಯಾದರು. ಇದನ್ನರಿತ ಆ ಊರಿನ ರಾಣಿ ಸಿದ್ಧಲಿಂಗನನ್ನು ಬರಮಾಡಿಕೊಂಡು ಸತ್ಕರಿಸಲಾಗಿ ಅಲ್ಲಿಯ ಸ್ತ್ರೀಯರ ರೋಗಗಳೆಲ್ಲ ಪರಿಹಾರವಾದುವು. ಅದಾದ ಮೇಲೆ ಸಿದ್ಧಲಿಂಗ ಕೊಡಗು, ಕೊಂಕಣ, ಮಲಯಾಳ, ಸುಬ್ರಹ್ಮಣ್ಯ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿದನು. ಉಡುಪಿಯ ಕೃಷ್ಣ, ಕೊಲ್ಲೂರು ಮೂಕಾಂಬೆ ಇವರ ದರ್ಶನವನ್ನು ಮಾಡಿಕೊಂಡು ಬರುತ್ತಿದ್ದಾಗ ದಾರಿಯಲ್ಲಿ ಒಂದು ಕಾಡು ಸಿಕ್ಕಿತು. ರಾತ್ರಿ ಕಾಡಿನಲ್ಲಿ ಹೋಗುತ್ತಿದ್ದ ಸಿದ್ಧಲಿಂಗನ ಪರಿವಾರವನ್ನು ಆ ಕಾಡಿನಲ್ಲಿದ್ದ ಇರುಳನೆಂಬ ದರೋಡೆಕಾರ ಹಾಗೂ ಆತನ ಸಂಗಡಿಗರು ಅಡ್ಡಗಟ್ಟಿದರು. ಆಗ ಆ ದರೋಡೆಕಾರರ ಕಣ್ಣುಗಳೆಲ್ಲ ಇಂಗಿಹೋದವು. ಅದನ್ನು ಕಂಡ ಆ ದರೋಡೆಕಾರರ ಹೆಂಡತಿಯರು ಕಣ್ಣೀರಿಡುತ್ತ ಬಂದು ಸಿದ್ಧಲಿಂಗನಿಗೆ ಶರಣಾಗತರಾಗಿ ಕಾಣಿಕೆಯನ್ನೊಪ್ಪಿಸಿದರು. ಸಿದ್ಧಲಿಂಗ ಅವರಿಗೆಲ್ಲ ಮತ್ತೆ ದೃಷ್ಟಿ ಬರುವಂತೆ ಮಾಡಿದನು. ಶೀಲವಂತನೆಂಬವನು ಸಿದ್ಧಲಿಂಗನ ಭಕ್ತನಾಗಿದ್ದನು. ಒಮ್ಮೆ ಚಾರ್ವಾಕರು ಅವನ ಮನೆಗೆ ಬೆಂಕಿಯನ್ನಿಟ್ಟರು. ಸಿದ್ಧಲಿಂಗನ ಮಹಿಮೆಯಿಂದ ಶೀಲವಂತನಿಗೆ ಏನೂ ತೊಂದರೆಯಾಗಲಿಲ್ಲ. ಆದರೆ ಚಾರ್ವಾಕರ ಮನೆಗಳೆಲ್ಲ ಸುಟ್ಟು ಬೂದಿಯಾದವು. ಆ ಚಾರ್ವಾಕರು ಸಿದ್ಧಲಿಂಗನಿಗೆ ಶರಣಾಗತರಾದರು. ಸಿದ್ಧಲಿಂಗ ಅವರನ್ನು ಆಶೀರ್ವದಿಸಿ ಕಳುಹಿಸಿದನು.

ವಿಕ್ರಮರಾಜನ ಹೆಂಡತಿ ಸಿದ್ಧಲಿಂಗನ ಪಾದಗಳಿಗೆರಗಿ ಸಂತಾನಭಿಕ್ಷೆಯನ್ನು ಬೇಡಿದಳು. ಅದಕ್ಕೆ ಸಿದ್ಧಲಿಂಗ ಜಂಗಮರ ಪಾದೋದಕವನ್ನು ಕೊಂಡರೆ ಸಂತಾನಪ್ರಾಪ್ತಿಯಾಗುವುದೆಂದು ಹೇಳಿದನು. ಈ ಸಂಗತಿಯನ್ನು ತಿಳಿದ ಧೂರ್ತನೊಬ್ಬನು ಗೇಲಿಮಾಡಿದನು. ಅವನ ಬಾಯಲ್ಲಿ ಹುಳುಗಳು ಸುರಿದವು. ಪಶ್ಚಾತ್ತಾಪಪಟ್ಟ ಅವನು ಜಂಗಮರ ಪಾದೋದಕವನ್ನು ಸ್ವೀಕರಿಸಿದ ಕೂಡಲೇ ಅವನ ಬಾಯಲ್ಲಿ ಹುಳುಗಳು ಸುರಿಯುವುದು ನಿಂತಿತು. ಸಿದ್ಧಲಿಂಗ ಮ್ಲೇಚ್ಛರ ರಾಜ್ಯಕ್ಕೆ ಬಂದನು. ಅಲ್ಲಿ ಕಳ್ಳನೊಬ್ಬನನ್ನು ಶೂಲಕ್ಕೆ ಏರಿಸುತ್ತಿದ್ದರು. ಆ ಕಳ್ಳನಿಗೆ ಸಿದ್ಧಲಿಂಗನ ದರ್ಶನವಾಗುವುದು. ಆಗ ಇದ್ದಕ್ಕಿದ್ದಂತೆ ಆ ಶೂಲದ ಮರ ಚಿಗುರುವುದು. ಈ ಆಶ್ಚರ್ಯವನ್ನು ಕಂಡ ಮ್ಲೇಚ್ಛರು ಸಿದ್ಧಲಿಂಗನೇ ಇದಕ್ಕೆ ಕಾರಣವೆಂದು ಅವನ ಮೇಲೆ ಧಾಳಿ ಮಾಡಿದರು. ಸಿದ್ಧಲಿಂಗನ ಸೇವಕರಾದ ಚಂಡಿ, ಪ್ರಚಂಡಿಯರು ಆ ಮ್ಲೇಚ್ಛರ ದಂಡನ್ನೆಲ್ಲಾ ಧ್ವಂಸ ಮಾಡಿದರು. ಕೊನೆಗೆ ಆ ಮ್ಲೇಚ್ಛರಾಜ ಸಿದ್ಧಲಿಂಗನಿಗೆ ಶರಣಾಗತನಾದನು. ಸಿದ್ಧಲಿಂಗ ಆತನಿಗೆ ಪ್ರಾಣದಾನ ಮಾಡಿದನು.

ಸಿದ್ಧಲಿಂಗ ಅಲ್ಲಿಂದ ಗಂಗಾತೀರಕ್ಕೆ ಬಂದನು. ಗಂಗಾದೇವಿ ನಿಜರೂಪದಿಂದ ಸಿದ್ಧಲಿಂಗನಿಗೆ ಕಾಣಿಸಿಕೊಂಡಳು. ಸಿದ್ಧಲಿಂಗ ತನ್ನ ಸಹಚರರಿಗೆ ಗಂಗಾದೇವಿ ದೇವಲೋಕದಿಂದ ಭೂಲೋಕಕ್ಕೆ ಬಂದ ಪ್ರಸಂಗವನ್ನೂ ಕೇತಾರೇಶ್ವರನ ಕಥೆಯನ್ನೂ ಗೌರಿಯ ಜನನ ದಕ್ಷಯಾಗಧ್ವಂಸದ ವೃತ್ತಾಂತವನ್ನೂ ವಿವರಿಸಿದನು. ಅದಾದ ಮೇಲೆ ಗೊಲ್ಲನೊಬ್ಬನು ಬಂದು ತನಗೆ ಒದಗಿರುವ ಆಪತ್ತಿನಿಂದ ಕಾಪಾಡುವಂತೆ ಸಿದ್ಧಲಿಂಗನಿಗೆ ಮೊರೆಯಿಟ್ಟನು. ಸಿದ್ಧಲಿಂಗ ಆ ಗೊಲ್ಲನ ಗೋವುಗಳನ್ನು ಹುಲಿಯಿಂದ ರಕ್ಷಿಸಿದನು. ಅವನ ಭಕ್ತಿಗೆ ಮೆಚ್ಚಿ ಹನ್ನೆರಡು ವರುಷ ಅವನ ಗೋವುಗಳನ್ನು ಕಾದನು. ಆಮೇಲೆ ಸಿದ್ಧಲಿಂಗ ಕೇತಾರಕ್ಕೆ ಹೋಗಿ ಅಲ್ಲಿಂದ ಹಿಂತಿರುಗಿ ಗಂಗೆ ಗೋದಾವರೀ ನದಿಗಳನ್ನು ದಾಟಿ ವಿಜಯನಗರಕ್ಕೆ ಬಂದನು. ಅಲ್ಲಿ ಸೋಮವಾರದ ಬಸಮ್ಮ ಎಂಬಾಕೆಯ ಸತ್ಕಾರವನ್ನು ಸ್ವೀಕರಿಸಿ ಶರಣರ ಪಾದೋದಕವೇ ಶ್ರೇಷ್ಠ ಎಂಬುದನ್ನು ಒಂದು ಪವಾಡದ ಮೂಲಕ ಪ್ರದರ್ಶಿಸಿದನು. ಒಬ್ಬ ಚಾರ್ವಾಕ ಇದನ್ನು ಅಲ್ಲಗಳೆದನು. ಸಿದ್ಧಲಿಂಗ ಅವನ ಮೇಲೆ ವಜ್ರದ ದುಂಬಿಗಳನ್ನು ಬಿಟ್ಟನು. ಅದರಿಂದ ಘಾಸಿಗೊಂಡ ಚಾರ್ವಾಕನಿಗೆ ಜ್ಞಾನೋದಯವಾಯಿತು.

ಆಂಧ್ರದೇಶದ ನೀರುಗಂಟಿಯೊಬ್ಬನು ತುಂಬಿದ ಕೆರೆಯ ತೂಬನ್ನು ಕಾಣದೆ ಪರಿತಪಿಸಿ ಸಿದ್ಧಲಿಂಗನ ನಾಮಸ್ಮರಣೆಯನ್ನು ಮಾಡಿದನು. ಸಿದ್ಧಲಿಂಗ ಅವನಿಗೆ ಮಾರ್ಗದೋರಿದನು. ಆಮೇಲೆ ಅವನಿಗೆ ಲಿಂಗಧಾರಣೆ ಮಾಡಿಸಿದನು. ಹಂಪೆ, ಶ್ರೀಶೈಲ, ಅಹೋಬಲ, ಕಾಳಹಸ್ತಿ, ಶೇಷಾದ್ರಿಕ್ಷೇತ್ರಗಳನ್ನು ನೋಡಿಕೊಂಡು ಹಂಪೆಗೆ ಬಂದನು.

ವಿರೂಪಾಕ್ಷನ ದರ್ಶನವನ್ನು ಮಾಡಿದನು. ಅಲ್ಲಿಂದ ಪ್ರಯಾಣ ಬೆಳಸಿದಾಗ ದಾರಿಯಲ್ಲಿಯ ಒಂದು ಪ್ರದೇಶದಲ್ಲಿ ತೀವ್ರವಾದ ಬರ ಪ್ರಾಪ್ತವಾಗಿತ್ತು. ಅಲ್ಲಿಯ ಜನ ಸಿದ್ಧಲಿಂಗನಿಗೆ ಮೊರೆಯಿಟ್ಟರು. ಈ ಬರ ಬರಲು ಕಾರಣನಾದ ಕಲಿಪುರುಷನ ಮೇಲೆ ಸಿದ್ಧಲಿಂಗ ಭೂತಗಳನ್ನು ಬಿಟ್ಟನು. ಅವು ಅವನನ್ನು ಹೊಡೆದೋಡಿಸಿದವು. ದೇಶವೆಲ್ಲ ಸುಭಿಕ್ಷವಾಯಿತು. ಬರವನ್ನು ನಿವಾರಿಸಿದ ಸಿದ್ಧಲಿಂಗನ ಹೆಸರಿನಲ್ಲಿ ಆ ಪ್ರದೇಶದ ಜನ ಇಂದಿಗೂ ಹಡಿಗೆ ಜಾತ್ರೆಯನ್ನು ಮಾಡುತ್ತಿದ್ದಾರೆ.

ಕಣಿಯ ಕಲ್ಲೂರಿನ ಕೆರೆಯಲ್ಲಿ ನೀರು ತರಲು ಹೋದ ಒಬ್ಬ ಹೆಂಗಸಿನ ಕೊಡ ಕೈಜಾರಿ ಮಧ್ಯದ ಕೆರೆಗೆ ಹೋಯಿತು. ದಿಕ್ಕುಗಾಣದ ಆಕೆ ಸಿದ್ಧಲಿಂಗನ ಧ್ಯಾನ ಮಾಡಿದಳು. ಆ ಕೊಡ ಮತ್ತೆ ಆಕೆಯ ಕೈ ಸೇರಿತು. ಇನ್ನೊಬ್ಬಾಕೆ ನೀರು ತರುತ್ತಿದ್ದಾಗ ಕೊಡ ಜಾರಿ ಕೆಳಗೆ ಬೀಳುವಷ್ಟರಲ್ಲಿ ಸಿದ್ಧಲಿಂಗನ ಮೇಲೆ ಆಣೆಯಿಟ್ಟಳು. ಕೊಡ ನೆಲಕ್ಕೆ ಬಿದ್ದರೂ ಒಡೆಯಲಿಲ್ಲ. ಈ ಪವಾಡಗಳನ್ನು ಕೇಳಿದ ಕಣಿಯ ಕಲ್ಲೂರಿನವನೊಬ್ಬ ಇವನ್ನು ಅಲ್ಲಗಳೆದನು. ಕೂಡಲೇ ಅವನ ಬಾಯಿ ಸೊಟ್ಟಗಾಯಿತು. ಅದನ್ನರಿತ ರಾಜ ತನ್ನ ಪ್ರಜೆಯೊಬ್ಬನು ಮಾಡಿದ ಅವಿವೇಕಕ್ಕಾಗಿ ಸಿದ್ಧಲಿಂಗನಿಗೆ ಮೊರೆಯಿಟ್ಟನು. ಎಲ್ಲವೂ ಸರಿಹೋಯಿತು.

ಸಿದ್ಧಲಿಂಗ ಸಹಚರರೊಡನೆ ಕ್ಯಾತಸಂದ್ರಕ್ಕೆ ಬಂದನು. ಅಲ್ಲಿ ಒಂದೆಡೆಯಿದ್ದ ದೊಡ್ಡ ಕಲ್ಲುಬಂಡೆಯನ್ನು ಕಂಡ ಸಿದ್ಧಲಿಂಗನ ಅನುಚರರು 'ಇಲ್ಲಿ ನೀರು ಸಿಕ್ಕರೆ ಸ್ನಾನ ಮಾಡಬಹುದು' ಎಂದರು. ಅದನ್ನು ಕೇಳಿಸಿಕೊಂಡ ಸಿದ್ಧಲಿಂಗ ತನ್ನ ಪಾದವನ್ನು ಆ ಬಂಡೆಗೆ ಒತ್ತಲಾಗಿ ಅಲ್ಲಿ ತೀರ್ಥ ಉದ್ಭವಿಸಿತು. ಅದೇ ಸಿದ್ಧಗಂಗಾಕ್ಷೇತ್ರವೆಂದು ಪ್ರಸಿದ್ಧಿಗೆ ಬಂದಿತು. ತಿಗಳ ದೇಶದಿಂದ ಬಂದಿದ್ದ ವೀರಣ್ಣಾರ್ಯನು ಸಿದ್ಧಗಂಗೆಯಲ್ಲಿ ಸ್ನಾನಮಾಡಿ ತನಗೆ ಬಂದಿದ್ದ ವಿಷ ರೋಗವನ್ನು ಕಳೆದುಕೊಂಡನು.

ಸಿದ್ಧಲಿಂಗ ಮತ್ತೆ ಕೆಲವು ಪವಾಡಗಳನ್ನು ಮೆರೆದನು. ತಮಿಳುದೇಶದ ವೀರಣಾರ್ಯನಿಗೆ ಕನ್ನಡ ಭಾಷೆ ಬರುವಂತೆ ಮಾಡಿದ್ದು ; ಮುಗ್ಧ ಬಾಲೆಯೊಬ್ಬಳು ತಂದ ಹಾಲನ್ನು ಕಲ್ಯಾಣದ ಕಲ್ಲುಬಸವ ಕುಡಿಯುವಂತೆ ಮಾಡಿದ್ದು ; ಹಾಗಲವಾಡಿಯ ಮುದಿಯ ಭೂಪಾಲನಿಗೆ ಅಷ್ಟೈಶ್ವರ್ಯಪ್ರಾಪ್ತಿಯಾಗುವಂತೆ ಮಾಡಿ ಅವನಿಂದ ಸೇವೆಯನ್ನು ಕೈಕೊಂಡದ್ದು ; ಕುಣಿಗಲ್ಲಿನಲ್ಲಿ ಲಿಂಗಣ್ಣೊಡೆಯನೆಂಬುವನು ತರಿಸಿದ ಎರಡುಸಾವಿರ ಎಳನೀರುಗಳನ್ನು ಭೂತಗಳು ಕುಡಿಯುವಂತೆ ಮಾಡಿದ್ದು ; ಅದೇ ಲಿಂಗಣ್ಣೊಡೆಯ ಸಿದ್ಧಲಿಂಗನಲ್ಲಿ ಕ್ಷಮೆ ಬೇಡಿದಾಗ ಅವನ ಆದೇಶದಿಂದ ಹನ್ನೆರಡು ಖಂಡುಗ ಅಕ್ಕಿಯ ಅನ್ನ ಮಾಡಿಸಿ ಭೂತಗಳನ್ನು ತೃಪ್ತಿಪಡಿಸಿದ್ದು ; ಲಿಂಗಣ್ಣೊಡೆಯನ ಸ್ತಂಭ ರೋಗವನ್ನು ನಿವಾರಣೆ ಮಾಡಿದ್ದು ; ಹುಲಿಯೂರುದುರ್ಗದ ಬಳಿ ಕಲ್ಲುಬಂಡೆಯನ್ನು ಒಡೆದು ತೀರ್ಥವನ್ನು ಬರಿಸಿ ಸಿದ್ಧಗಂಗೆಯನ್ನು ನಿರ್ಮಿಸಿದ್ದು—ಇವೇ ಮೊದಲಾದುವು ಪ್ರಮುಖವಾದುವು. ಸಿದ್ಧಲಿಂಗ ಸತ್ತವರನ್ನು ಬದುಕಿಸಿದ ವಾರ್ತೆಯನ್ನು ಕೇಳಿ ಚಾರ್ವಾಕರು ಕುಚೋದ್ಯಕ್ಕಾಗಿ ಜೀವಂತನಾಗಿದ್ದವನನ್ನು ಸತ್ತವನಂತೆ ಮಲಗಿಸಿ ತರುತ್ತಿದ್ದರು. ಅವನು ವಾಸ್ತವವಾಗಿ ಸತ್ತುಹೋಗಿದ್ದುದನ್ನು ಕಂಡ ಚಾರ್ವಾಕರು ಸಿದ್ಧಲಿಂಗನ ಮೊರೆ ಹೊಕ್ಕರು. ಕನಿಕರಗೊಂಡ ಸಿದ್ಧಲಿಂಗ ಅವನಿಗೆ ಪ್ರಾಣದಾನ ಮಾಡಿದನು.

ಸಿದ್ಧಲಿಂಗ ತನ್ನ ಪರಿವಾರಸಮೇತ ಹೊಳಲುಗುಂದದ ಮಾಯಿದೇವಿ ಗುಡಿಗೆ ಬಂದಾಗ ಅಲ್ಲಿದ್ದ ಶಿಲಾಪ್ರತಿಮೆ ನಿಜರೂಪದಿಂದ ಬಂದು ಸಿದ್ಧಲಿಂಗನ ಪರಿವಾರಕ್ಕೆಲ್ಲಾ ಮೃಷ್ಟಾನ್ನಭೋಜನವನ್ನು ಮಾಡಿಸಿತು. ಆಮೇಲೆ ಸಿದ್ಧಲಿಂಗ ಹರದನಹಳ್ಳಿಯಿಂದ ಶಿವಗಂಗೆಗೆ ಬಂದನು. ಅಲ್ಲಿದ್ದ ಘಟಸರ್ಪಕ್ಕೆ ಒಳಗೇ ಇರುವಂತೆ ಆಜ್ಞಾಪಿಸಿ ಕಗ್ಗೆರೆಗೆ ಬಂದು ಆ ಊರಿನ ಉಪವನದಲ್ಲಿ ಬೀಡು ಬಿಟ್ಟನು. ಆ ಊರಿನ ನಂಬಿಯಣ್ಣನೆಂಬುವನು ಸಿದ್ಧಲಿಂಗನಿಗೆ ತನ್ನ ಮನೆಗೆ ಬರುವಂತೆ ಆಹ್ವಾನಿಸಿದನು. ಧ್ಯಾನಾರೂಢನಾಗಿದ್ದ ಸಿದ್ಧಲಿಂಗ ಮತ್ತೊಮ್ಮೆ ಬರುವಂತೆ ಆತನಿಗೆ ತಿಳಿಸಿದನು. ಅಷ್ಟರಲ್ಲಿ ಆ ಊರಿನ ಮೇಲೆ ತುರುಕರ ದಾಳಿಯಾಯಿತು. ಜನರೆಲ್ಲ ದಿಕ್ಕಾಪಾಲಾಗಿ ಓಡಿಹೋದರು. ಆದರೆ ಸಿದ್ಧಲಿಂಗ ಹನ್ನೆರಡು ವರ್ಷಗಳ ಕಾಲ ಅಲ್ಲಿಯೇ ತಪಸ್ಸಿನಲ್ಲಿ ನಿರತನಾಗಿದ್ದನು. ಆತನ ಮೇಲೆಲ್ಲಾ ಹುತ್ತ ಬೆಳೆಯಿತು. ಹೀಗಿರುವಲ್ಲಿ ನಂಬಿಯಣ್ಣಸೆಟ್ಟಿಯ ಮನೆಯ ಒಂದು ಹಸು ಪ್ರತಿನಿತ್ಯ ಹುತ್ತಕ್ಕೆ ಹಾಲು ಕರೆದು ಬರುತ್ತಿದ್ದುದನ್ನು ಗೋಪಾಲಕ ನೋಡಿ ನಂಬಿಯಣ್ಣಸೆಟ್ಟಿಗೆ ತಿಳಿಸಿದನು. ಆತನು ಅಲ್ಲಿಗೆ ಬಂದು ಸ್ವಾಮಿಯ ದರ್ಶನ ಮಾಡಿ ಸ್ತುತಿಸಿದಾಗ ಸಿದ್ಧಲಿಂಗ ಆತನಿಗೆ ವಿಶ್ವರೂಪವನ್ನು ತೋರಿಸಿದನು. ಹುತ್ತದಿಂದ ಸಿದ್ಧಲಿಂಗ ಹೊರಕ್ಕೆ ಬಂದು ಭಕ್ತರಿಗೆಲ್ಲ ದರ್ಶನವನ್ನಿತ್ತನು. ಭಕ್ತರು ಸಲ್ಲಿಸಿದ ಪೂಜೆ ಪುನಸ್ಕಾರಗಳನ್ನು ಸ್ವೀಕರಿಸಿ ಕದಂಬನದೀ ತೀರದಲ್ಲಿದ್ದ ಎಡೆಯೂರನ್ನು ತಲುಪಿದನು. ಆ ಊರಿನ ಜನ ಸಿದ್ಧಲಿಂಗನನ್ನು ಕರೆದುಕೊಂಡು ಹೋಗಿ ಕಗ್ಗೆರೆಯಲ್ಲಿದ್ದ ಚಿಟ್ಟಿಗ

ದೇವರ ಮಠದಲ್ಲಿ ಬಿಡಾರ ಮಾಡಿಸಿದರು. ಅದೇ ಮಠದಲ್ಲಿ ಬೋಳಬಸವನಿಗೆ ಚರಪಟ್ಟವನ್ನು ಕಟ್ಟಿದರು. ಸಿದ್ಧಲಿಂಗ ಆ ಊರಿನ ಗವಿಮಠದಲ್ಲಿ ನಿರ್ವಿಕಲ್ಪಸಮಾಧಿಯಲ್ಲಿ ಕುಳಿತನು.

ಸಿದ್ಧಲಿಂಗನ ಸಂಕ್ಷಿಪ್ತ ಜೀವನಚರಿತ್ರೆಯನ್ನು ಸ್ಥೂಲವಾಗಿ ಸಮೀಕ್ಷಿಸಿದಾಗ, ಆತನು ಮೆರೆದ ಅಸಂಖ್ಯಾತ ಪವಾಡಗಳ ಒಂದು ಸ್ಪಷ್ಟ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಈ ಪವಾಡಗಳು ಆತನ ಮಹಿಮೆಯನ್ನು ಸಾರುವುದಕ್ಕಾಗಿ ಹುಟ್ಟಿಕೊಂಡವು ಎಂಬುದು ನಿರ್ವಿವಾದ. ಇಂದಿನ ವಿಜ್ಞಾನಯುಗದಲ್ಲಿ ಈ ಪವಾಡಗಳು ಅಸಂಗತಗಳಾಗಿ ಕಂಡು ಬರುತ್ತವೆ. ಇಲ್ಲಿ ನಾವು ಗಮನಿಸಬೇಕಾದ ಅಂಶವಿಷ್ಟೆ. ಸಿದ್ಧಲಿಂಗೇಶ್ವರರ ಅಸಾಧಾರಣ ಮಹಿಮೆಯನ್ನು ಪ್ರದರ್ಶಿಸು ವುದಕ್ಕಾಗಿ ಅವರ ಭಕ್ತರಿಂದ ಸೃಷ್ಟಿಗೊಂಡ ಪ್ರಸಂಗಗಳು, ಘಟನೆಗಳು ಎಂದು ಮಾತ್ರ ನಾವು ಭಾವಿಸಬಹುದಾಗಿದೆ. ಸಿದ್ಧಲಿಂಗೇಶ್ವರರ ವ್ಯಕ್ತಿತ್ವ ತುಂಬ ಹಿರಿದಾದುದು ಎಂಬ ಬಗೆಗೆ ಎರಡು ಮಾತಿಲ್ಲ. ಅವರ ಹಿರಿಮೆಗರಿಮೆಗಳನ್ನು ಪ್ರದರ್ಶಿಸುವುದಕ್ಕೆ ಪವಾಡಗಳು ಸಮರ್ಥ ಮಾಧ್ಯಮಗಳಾಗಿವೆ. ಇವನ್ನು ಸಂಪೂರ್ಣವಾಗಿ ಸುಳ್ಳೆಂದು ತಿರಸ್ಕರಿಸು ವಂತೆಯೂ ಇಲ್ಲ, ಸತ್ಯಸ್ಯ ಸತ್ಯವೆಂದು ಭಾವಿಸುವಂತೆಯೂ ಇಲ್ಲ. ಒಟ್ಟಿನಲ್ಲಿ ಜನತೆಯ ಮೇಲೆ ವಿಶೇಷ ಪ್ರಭಾವ ವನ್ನು ಬೀರುವುದರಲ್ಲಿ ಈ ಪವಾಡಗಳ ಪಾತ್ರ ಹಿರಿದಾದುದು ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಸುಮಾರು ಐದು ಶತಮಾನಗಳ ಹಿಂದೆ ಬದುಕಿ ಬಾಳಿ ಲೋಕಕಲ್ಯಾಣಕ್ಕಾಗಿ ಮಹತ್ಕಾರ್ಯಗಳನ್ನು ಸಾಧಿಸಿದ ಸಿದ್ಧಲಿಂಗನ ಜೀವನಚರಿತ್ರೆ ನಾಡಿನಲ್ಲಿ ಇನ್ನೂ ಹಚ್ಚಹಸುರಾಗಿದೆ. ಅವರು ನೆಲಸಿದ್ದ ಎಡೆಯೂರು ಇಂದು ಒಂದು ಪುಣ್ಯಕ್ಷೇತ್ರವಾಗಿ ಕಂಗೊಳಿಸುತ್ತಿದೆ. ಈ ಕ್ಷೇತ್ರಕ್ಕೆ ಎಲ್ಲ ವರ್ಗದ ಎಲ್ಲ ಧರ್ಮದ ಜನರೂ ಸಹಸ್ರಾರು ಸಂಖ್ಯೆಯಲ್ಲಿ ಬಂದು ತಮ್ಮ ಭಕ್ತಿನಿಷ್ಠೆಯನ್ನು ತೋರಿ ಕಾಣಿಕೆಗಳನ್ನು ಅರ್ಪಿಸಿ ಪುನೀತರಾಗುತ್ತಿದ್ದಾರೆ. ನಾಡಿನಾದ್ಯಂತ ಸಿದ್ಧಲಿಂಗೇಶ್ವರರ ಗುಡಿಗೋಪುರಗಳು ನಿರ್ಮಾಣವಾಗಿವೆ. ಭಕ್ತರಿಗೆ ಮುಕ್ತಿಪ್ರದಾಯಕವಾಗಿವೆ.

ಸಿದ್ಧಲಿಂಗೇಶ್ವರರು ಒಬ್ಬ ಶ್ರೇಷ್ಠ ವಚನಕಾರರೆನಿಸಿಕೊಂಡಿದ್ದಾರೆ. ಹನ್ನೆರಡನೆಯ ಶತಮಾನದ ವಚನಕಾರರ ಪ್ರಭಾವ ಇವರ ಮೇಲೆ ಸಾಕಷ್ಟಾಗಿದೆ. ಅವರ ಈ ವಚನಗಳು ಇದನ್ನೇ ಸಾರುತ್ತಿವೆ :

ಬಸವಣ್ಣನ ಪ್ರಸಾದದಿಂದ ಭಕ್ತಿಜ್ಞಾನವೈರಾಗ್ಯಸಂಪನ್ನನಾದೆನಯ್ಯ
ಚನ್ನಬಸವಣ್ಣನ ಪ್ರಸಾದದಿಂದ ಷಡುಸ್ಥಲಜ್ಞಾನಸಂಪನ್ನನಾದೆನಯ್ಯ
ಪ್ರಭುದೇವರ ಪ್ರಸಾದದಿಂದ ಪರಮಶಿವತತ್ವಸ್ವರೂಪವೆ ಎನ್ನ ಸ್ವರೂಪವೆಂದು
ಅರಿದು ಸಮಸ್ತಸಂಸಾರಪ್ರಪಂಚ ಕೊಡಹಿದೆನು ನೋಡಾ
ನೀಲಲೋಚನಮ್ಮನ ಪ್ರಸಾದದಿಂದ ನಿಜಲಿಂಗೈಕ್ಯನಾದೆನಯ್ಯ
ಮಹಾದೇವಿಯಕ್ಕಗಳ ಪ್ರಸಾದದಿಂದ ಸುತ್ತಿದ
ಮಾಯಾಪಾಶವ ಹರಿದು ನಿರ್ಮಾಯನಾಗಿ ನಿರ್ವಾಣಪದದಲ್ಲಿ ನಿಂದೆನಯ್ಯ
ಸಿದ್ಧರಾಮಯ್ಯನ ಪ್ರಸಾದದಿಂದ ಶುದ್ಧಶಿವತತ್ವವ ಪಡೆದೆನಯ್ಯ
ಮೋಳಿಗೆಯಮಾರಿತಂದೆಗಳ ಪ್ರಸಾದದಿಂದ ಕಾಯದ
ಕಳವಳವನು ಅಳಿದು ಕರ್ಮನಿರ್ಮಲನಾದಿವೀರಮಹೇಶ್ವರನಾದೆನು ನೋಡಾ
..............................................................
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ ॥

ಬಸವಣ್ಣನವರ ಪ್ರಭಾವ ಸಿದ್ಧಲಿಂಗೇಶ್ವರರ ಮೇಲೆ ವಿಶೇಷವಾಗಿ ಆಗಿದ್ದಿತು. ಇವರ ಅನೇಕ ವಚನಗಳು ಬಸವಣ್ಣ ನವರ ವಚನಗಳನ್ನು ಮತ್ತೊಮ್ಮೆ ನೆನಪಿಗೆ ತರುತ್ತವೆ. ಈ ಎರಡು ವಚನಗಳು ಇದಕ್ಕೆ ನಿದರ್ಶನವಾಗಿವೆ:

ಎನ್ನ ಮನಸ್ಸು ಹೊನ್ನು ಹೆಣ್ಣು ಮಣ್ಣ ನೆನೆನೆನೆದು ಭ್ರಮೆಗೊಂಡು ನಿಮ್ಮ
ನೆನೆಯಲೊಲ್ಲದು ನೋಡಾ
ಎನ್ನ ಕಾಯ ನಿಮ್ಮ ಮುಟ್ಟದೆ ಸಂಸಾರಕರ್ಮವನೆ ಮಾಡುತಿರ್ಪುದು ನೋಡಾ
ಎನ್ನ ಪ್ರಾಣ ನಿಮ್ಮ ಮುಟ್ಟದೆ ಪ್ರಪಂಚಿನೊಳಗೆ ಮುಳುಗುತಿಪ್ಪುದು ನೋಡಾ
..............................................................
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ

ಕಾಮದಿಂದ ಕರಗಿದೆನಯ್ಯ ಕ್ರೋಧದಿಂದ ಕೊರಗಿದೆನಯ್ಯ
ಲೋಭಮೋಹಂಗಳಿಂದ ಅತಿ ನೊಂದೆನಯ್ಯ
ಮದಮತ್ಸರಂಗಳಿಂದ ಮತಿಮಂದನಾಗಿದ್ದೆನಯ್ಯ
ಇದು ಕಾರಣ ಎನ್ನ ಕಾಮಾದಿಷಡ್ವರ್ಗಂಗಳಂ ಕಳೆದು
ಅಹಂಕಾರ ಮಮಕಾರಂಗಳಂ ಮಾಣಿಸಿ ನಿರಹಂಕಾರಿ ಎಂದೆನಿಸಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ ॥

ಪ್ರಭುದೇವರ ಒಂದು ವಚನವನ್ನು ಪ್ರತಿಬಿಂಬಿಸುತ್ತಿದೆ, ಸಿದ್ಧಲಿಂಗೇಶ್ವರರ ಈ ವಚನ :

ಕಾಯವೆಂಬ ಕೆರೆಗೆ ತನುವೆಂಬ ಏರಿ ಮನವೆಂಬ ಕಟ್ಟೆಯ ಕಟ್ಟಿ ದೃಢವೆಂಬ ತೂಬನು ಇಕ್ಕಬೇಕಯ್ಯ
ಆನಂದವೆಂಬ ಜಲವ ತುಂಬಿ ಸ್ವಾನುಭವವೆಂಬ ಸೋಪಾನವ ಹೂಡಬೇಕಯ್ಯ
ಆ ಕೆರೆಯ ಏರಿಯ ಮೇಲೆ ಆಚಾರವೆಂಬ ವೃಕ್ಷವ ಬೆಳೆಯಿಸಿ ಅರುಹೆಂಬ ಹೂವನ್ನು
ಅದ್ವೈತವೆಂಬ ಹಸ್ತದಿಂದ ಕೊಯಿದು ಅನುಪಮಲಿಂಗಕ್ಕೆ ಪೂಜಿಸಬಲ್ಲರೆ ಲಿಂಗಾರ್ಚಕರೆಂಬೆ ॥*
ಸದ್ರೂಪವೇ ಸಂಗನ ಬಸವಣ್ಣ ನೋಡಾ
ಚಿದ್ರೂಪವೇ ಚನ್ನಬಸವಣ್ಣ ನೋಡಾ
ಇದು ಕಾರಣ ಸದ್ರೂಪನಾದ ಬಸವಣ್ಣನೇ ಗುರು
ಚಿದ್ರೂಪನಾದ ಚೆನ್ನಬಸವಣ್ಣನೇ ಲಿಂಗ
ಆನಂದಸ್ವರೂಪನಾದ ಪ್ರಭುದೇವರೇ ಜಂಗಮ ನೋಡಾ
ನಿತ್ಯನಿರಂಜನಪರತತ್ವ ತಾನೆ ಮೂರು ತೆರನಾಯಿತ್ತು ನೋಡಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ॥

ಬಸವ ಮೊದಲಾದ ಪ್ರಮಥರೆಲ್ಲರೂ ಪ್ರಸಾದವ ಎನ್ನಲ್ಲಿ ಸಂಬಂಧಿಸಿ
ನಿನ್ನ ಕೃಪಾಪ್ರಸಾದವ ಎನ್ನಲ್ಲಿ ಮೂರ್ತಿಗೊಳಿಸಿ
ಇನ್ನಾವುದಕ್ಕೂ ಅಂಜವೇಡಾ ಎಂದು
ನೀನು ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ ಮರ್ತ್ಯಕ್ಕೆ ಕಳುಹಿದಿರಿಯಾಗಿ
ಕಳುಹಿದ ಭೇದವ ಶಿವಜ್ಞಾನೋದಯದಿಂದ ಅರಿದು
ಸಿದ್ಧಲಿಂಗನೆಂಬ ನಾಮ ಎನಗೆ ನಿನ್ನಿಂದ ಬಂದಿತೆಂಬುದ
ಅರಿದೆನು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ ॥

ಸಿದ್ಧಲಿಂಗೇಶ್ವರರು ಷಟ್ಸ್ಥಲಜ್ಞಾನಸಾರಾಮೃತವನ್ನು ತಮ್ಮ ವಚನಗಳ ಮೂಲಕ ಜನತೆಗೆ ಪಾನ ಮಾಡಿಸಿದ್ದಾರೆ. ಸಾಹಿತ್ಯದೃಷ್ಟಿಯಿಂದಲೂ ಇವರ ವಚನಗಳು ಮಹತ್ವಪೂರ್ಣವಾಗಿವೆ. ಈ ವಚನವನ್ನು ನೋಡಿ :

ಸುಧೆಯೊಳಗೆ ವಿಷವುಂಟೆ ಮಧುರದೊಳಗೆ ಕಹಿಯುಂಟೆ
ದಿನಮಣಿಯೊಳಗೆ ಕಪ್ಪುಂಟೆ ಬೆಳುದಿಂಗಳೊಳಗೆ ಕಿಚ್ಚುಂಟೆ
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೇ
ಮಹಾಜ್ಞಾನಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮಂಗೆ ಸಂಕಲ್ಪಭ್ರಮೆಯುಂಟೆ
ಅದೇತರವಿಶ್ವಾಸ ಸುಡು ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ॥ ೫ ॥

ವೀರಶೈವಧರ್ಮದ ಸಮಗ್ರದರ್ಶನವನ್ನು ಸಿದ್ಧಲಿಂಗೇಶ್ವರರ ವಚನಗಳು ಮಾಡಿಕೊಡುತ್ತವೆ. ಈ ಧರ್ಮದ ಸಾರ ಸರ್ವಸ್ವವನ್ನು ಸಾರುವಂತಿದೆ ಈ ವಚನ :

ಸೂರ್ಯನ ಬೆಳಗಿಂಗೆ ಕೊಳ್ಳಿಯ ಬೆಳಗ ಹಿಡಿಯಲುಂಟೇ ಮರುಳೆ
ತನ್ನ ಮುಖವ ತಾ ಬಲ್ಲವಂಗೆ ಕನ್ನಡಿಯ ಹಿಡಿದು ನೋಡಲುಂಟೆ ಹೇಳಾ
ತನ್ನ ಸುಳುಹಿನ ಸೂಕ್ಷ್ಮವ ತಾನರಿದ ಸ್ವಯಜ್ಞಾನಿಗೆ ಇನ್ನಾವ ಆಗಮದ ಬೋಧೆ ಏಕೆ ಹೇಳಾ
ಆಗಮಶಿಕ್ಷೆ ಎಂಬುದು ಲೋಗರಿಗಲ್ಲದೆ ಆದಿಯಲ್ಲಿ ಶಿವಬೀಜವಾದ ಮಹಾಮಹಿಮರಿಗುಂಟೇ

* ಈ ಲೇಖನದ ಕಡೆಯಲ್ಲಿ ಕೊಟ್ಟಿರುವ ಶಾಸನವನ್ನು ನೋಡಿ.

ಸ್ವಾನುಭಾವಜ್ಞಾನವೆಲ್ಲರಿಗೂ ಇಲ್ಲವಲ್ಲಾ ಇಲ್ಲದಿರೆ ಮಾಣಲಿ ಅದಕ್ಕೇನೂ ಕೊರತೆಯಿಲ್ಲ
ಮತಾಂತರ ಶಾಸ್ತ್ರಾಗಮಂಗಳ ಮುಟ್ಟಲಾಗದು ಅದೇನು ಕಾರಣವೆಂದಡೆ ಅವರಂಗದಮೇಲೆ
ಗುರುಲಿಂಗ ಜಂಗಮ ಪಾದೋದಕ ಪ್ರಸಾದವಿಲ್ಲದ ಕಾರಣ ಅಂತಪ್ಪ ಆಗಮಂಗಳಲ್ಲಿ
ಜಂಗಮಪ್ರಸಾದವ ಲಿಂಗಕ್ಕೆ ಕೊಟ್ಟುಕೊಳಬೇಕೆಂಬ ಪ್ರಮಾಣವ ಹೇಳಲಾಗಿ
ಛೀ ಅವೆಲ್ಲಿಯ ಆಗಮ ಇವು ಅಂಗಲಿಂಗಸಂಬಂಧಿಗಳಿಗೆ ಮತವೇ ಅಲ್ಲ
ಸದ್ಗುರುವಿನ ವಚನ ಪ್ರಮಾಣವೇ ಅಲ್ಲ. ಗುರುವಚನ ಪ್ರಮಾಣವಲ್ಲದ ಮಾರ್ಗವ ಹಿಡಿದು
ಆಚರಿಸುವವರೆಲ್ಲಾ ಗುರುದ್ರೋಹಿಗಳು ಎಲೇ ಶಿವನೇ ನೀ ಸಾಕ್ಷಿಯಾಗಿ ಅಂಗಲಿಂಗ
ಸಂಬಂಧಿಗಳಿಗೆ ಪರಮವೀರಶೈವಾಗಮವೇ ಪ್ರಮಾಣ. ಪುರಾತನರ ಮಹಾವಾಕ್ಯವೆ
ಪ್ರಮಾಣ ಉಳಿದುವೆಲ್ಲ ಹುಸಿ ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ॥ ೫೭ ॥

ಸಿದ್ಧಲಿಂಗೇಶ್ವರರು ವಚನಕಾರರಾಗಿ ಪ್ರಾಚೀನ ವಚನಕಾರರಿಗಿಂತ ವಿಶಿಷ್ಟವಾಗಿ ಪವಾಡಪುರುಷರಾಗಿ ತಮ್ಮ ಪ್ರಭಾವವನ್ನು ಜನತೆಯ ಮೇಲೆ ಬೀರಿದ್ದಾರೆ. ಜನತೆಯ ದೃಷ್ಟಿಯಲ್ಲಿ ಸಿದ್ಧಲಿಂಗೇಶ್ವರರು ಕೇವಲ ವಚನಕಾರರಷ್ಟೇ ಅಲ್ಲ, ಯತಿಗಳು ಮಾತ್ರವಲ್ಲ, ದೈವತ್ವಕ್ಕೇರಿದ ಅವತಾರಪುರುಷರು. ಅವರ ಒಂದು ವಚನ ಇದಕ್ಕೆ ಸಾಕ್ಷೀಭೂತವಾಗಿದೆ:

ಸಮಸ್ತಲೋಕಾದಿಲೋಕಂಗಳಿಲ್ಲದಂದು
ಅನಾದಿ ಪರಶಿವ ನೀನೊಬ್ಬನೇ ಇದ್ದಿಯಯ್ಯ
ಆ ನಿರಾಕಾರ ಪರವಸ್ತುವಿನಿಂದ ನಾನು ಉದಯವಾಗಿ
ಮಾಯಾರಂಜನೆ ಹುಟ್ಟದ ಮುನ್ನ ನಿರಂಜನನೆಂಬ ಗಣೇಶ್ವರನಾಗಿರ್ದೆನು
ಜ್ಞಾನಾಜ್ಞಾನಗಳಿಲ್ಲದಂದು ಜ್ಞಾನಾನಂದನೆಂಬ ಗಣೇಶ್ವರನಾಗಿರ್ದೆನು
ಈ ಶರೀರವಿಲ್ಲದಂದು ನಿರ್ಮಲನೆಂಬ ಗಣೇಶ್ವರನಾಗಿರ್ದೆನು
ಬಸವ ಮೊದಲಾದ ಪ್ರಮಥರೆಲ್ಲರ ಪ್ರಸಾದವನು ಎನ್ನಲ್ಲಿ ಸಂಬಂಧಿಸಿ
ನಿನ್ನ ಕೃಪಾಪ್ರಸಾದವೆನ್ನಲ್ಲಿ ಮೂರ್ತಗೊಳಿಸಿ ಇನ್ನಾವುದಕ್ಕೂ ಅಂಜಬೇಡವೆಂದು
ನೀನು ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ ಮರ್ತ್ಯಕ್ಕೆ ಕಳುಹಿದಿರಿಯಾಗಿ
ಕಳುಹಿದ ಭೇದವ ಶಿವಜ್ಞಾನದಿಂದ ಅರಿದು ಸಿದ್ಧಲಿಂಗನೆಂಬ ನಾಮವೆನಗೆ
ನಿನ್ನಿಂದ ಬಂದಿತ್ತೆಂಬುದನರಿದೆನು ಕಾಣಾ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ॥

## ಯಡೆಯೂರು ಸಿದ್ಧಲಿಂಗೇಶ್ವರಸ್ವಾಮಿ ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟ ಕಲ್ಲು

ಕೊಡಗಿಹಳಿಯದೇವರು ತಾವು ಪಡದ ಮಠದ ಭೂಮಿಯಲಿ ತೋಂಟದಸ್ವಾಮಿಗೆ ತಮ್ಮ ಭಕ್ತಿಯಿಂದಾ ಕಟ್ಟಿಸಿ ಕೊಟ ಮಠಯಿ ಮಹಸಿದ್ಧೇಶ್ವರನ ಅತಿಶಯವೆಂತೆಂದಡೆ ಶ್ರೀಮತು ಸಚಿದಾನಂದ ನಿತ್ಯಪರಿಪೂರ್ಣವನ್ನುಳ್ಳ ಅನಾದಿ ಭಕ್ತ ಆ ಭಕ್ತನ ಹೃದಯದಲ್ಲಿ ಜಂಗಮ ಜಂಗಮದ ಮಕುಟದಲ್ಲಿ ಶೂನ್ಯಲಿಂಗ ಆ ಲಿಂಗದಲ್ಲಿ ಚಿದಂಬರ ಶಿವಶಕ್ತಿ ಪಂಚಶಕ್ತಿ ಪಂಚನಾದ ಪಂಚಬ್ರಹ್ಮ ಈಶ್ವರಾಷ್ಟಕ ಮಹೇಶ್ವರ ಪಂಚವಿಂಶತಿರುದ್ರರೇಕಾದಶತ್ರಯವಯ.... ಹಿರಣ್ಯಗರ್ಭ ವಿರಾಟಮೂರ್ತಿ ಯಿಂತೀ ಎಂಭತೊಂದು ಮೂರ್ತಿಯೆ ಅಂಗವಾಗಿರ್ಪಾತನೆ ಅನಾದಿಭಕ್ತನು ಆ ಭಕ್ತನ ಪ್ರಾಣ ಕಲಾಚೈತನ್ಯಸ್ವರೂಪೇ ತೋಂಟದ ಸಿದ್ಧಲಿಂಗೇಶ್ವರನು ಆ ಸಿದ್ಧಲಿಂಗೇಶ್ವರನ ಮೂರ್ತಿಕ್ರಮವೆಂತೆಂದಡೆ ಪ್ರಣವವೆ ಶಿರಸುನಮಸಾರಾವೇ ಭುಜಶಿಕುರವೇ ದೇಹವಯಷ್ಕಾರವೇ ಪಾದ ಅನಂತ ಕೋಟಿಬ್ರಹ್ಮಾಂಡಗಳೇ ಮಕುಟ ಸಮಸ್ತಲೋಕಾದಿಲೋಕಂಗಳೇ ದೇಹದ ಜಳವಳಯ ಆಕಾಶವೇ ಮುಖ ದಶದಿಕ್ಕುಗಳೇ ತೋಳು ಚಂದ್ರಸೂರ್ಯಾದಿಗಳೇ ನಯನ ಪಾತಾಳವೇ ಹೆದೆ ಮೇಘಂಗಳೇ ಜಟಾಬಂಧ ಆ ಜಟಾಬಂಧದಲ್ಲಿ ಶೂನ್ಯಲಿಂಗ ವೇದಪುರಾಣಂಗಳೇ ತ್ರಿನಕ್ಷತ್ರಂಗಳೇ ಪುಷ್ಪ ಚಂದ್ರಪ್ರಕಾಶವೇ ವಿಭೂತಿ ಅಷ್ಟಕುಲಪರ್ವತಂಗಳೇ ರುದ್ರಾಕ್ಷಿ ಸಪ್ತಸಮುದ್ರಂಗಳೇ ಕಮಂಡಲ ಭುವನ ಸೃಷ್ಟಿಯೆ ಕಂತೆ ದಿವಾ ರಾತ್ರೆಗಳೇ ಮಠ ಷಡುರುತುಗಳೇ ಷಡುಸ್ಥಲ ಮಹಾಶೇಷನೇ ಕಟಿಸೂತ್ರ ಪರಿಪೂರ್ಣಜ್ಞಾನವೇ ಪಂಚಮುದ್ರೆ ತ್ರಿಕಾಲಜ್ಞಾನವೇ ಮಹದೈಶ್ವರ್ಯ ಮಹಾಮೇರುವೆ ದಂಡ ಸದ್ಗುಣವೆ ಕರ್ಪರ ಕುಲವೆ ಶಿವಕುಲ ಯಿಂತಪ್ಪ ಅನಾದಿಜಂಗಮವೆ ಜಗಹಿತಾರ್ಥವಾಗಿ ಚರಿಸಿದ ಕ್ರಮವೆಂತೆಂದರೆ ಜ್ಞಾನಕ್ರಿಯಾ ಸ್ವರೂಪನು ಸರ್ವಾಂಗಲಿಂಗಿ ಷಟ್ಸ್ಥಲಜ್ಞಾನಿ ಸರ್ವಾಚಾರ ಸಂಪನ್ನ ಪಾದೋದಕಪ್ರಸಾದ ಪ್ರತಿಷ್ಠಾಚಾರ್ಯರು ಅಷ್ಟಾವರಣಾಲಂಕರಣ ದ್ವೈತಾದ್ವೈತ ತಿಮಿರ ಮಾರ್ತಂಡನುಂ ಯಿಂತಪ್ಪ ದಿವ್ಯ ಶಿವಯೋಗಿ

ಸಿವಲಿಂಗೇಶ್ವರಂಗೆ ಸಮ್ಯಜ್ಞಾನೋದಯವಾಗಿ ಸಂಸಾರ ಹೇಹಮಂ ಮಾಡಿ ಶರಣು ಹೊಕ್ಕ ಶಿಷ್ಯಜನಗಳ ನಾಮ ಪರಿಕ್ರಮಂಗಳೆಂತೆಂದಡೆ ಸಪ್ಪೆದೇವರು ಉಪ್ಪಿನಹಳ್ಳಿಯ ಸಾಮಿ ಸಿದ್ದೇದೇವರು ನಂಜೇದೇವರು ಬೋಳಬಸವರಾಜ ದೇವರು ಗುಂಮಳಾಪುರದ ಸಿದ್ಧಲಿಂಗದೇವರು ಪಟಣದೇವರು ರೇವಣಸಿದ್ದೇದೇವರು ಶೀಲವಂತದೇವರು ಚಿಟ್ಟಿಗ ದೇವರು ಯಿಂತೆ ಯಿವರು ಮುಖ್ಯವಾದ ಭಕ್ತಿಮಾಹೇಶ್ವರರ್ಗೆ ಷಡುಸ್ಥಲಜ್ಞಾನ ಲಿಂಗಾಂಗ ಸಂಮಂಧ ಸಮರಸ ಏಕಾರ್ಥಮಂ ಬೋಧಿಸಿ ಮುಕ್ತರಂ ಮಾಡಿ ಷಡುಸ್ಥಲ ಏಕಾರ್ಥವಾಗಿ ಮಾಡುವ ಕ್ರಿಗಳೆಲ್ಲ ನಿಷ್ಪತಿಯಾಗಿ ಯೆಡೆಯೂರಲ್ಲಿ ತಮಗೆ ಕಟ್ಟಿಸಿದ ಮಟದಲ್ಲಿ ಶಿವಯೋಗ ಸಮಾಧಿಸಂಥರಾದರು ತೋಂಟದ ಸ್ವಾಮಿಯ ಪಾದ ಪದ್ಮಾರಾಧಕರಾದಾ[ದ] ನಿವಾಸ ನಿವಾಸಿಗಳಾದ ಚೆಂನರಾಯವಡೆಯರು ಚೆಂನರಾಯವಡೆಯರ ಮಕ್ಕಳು ಲಿಂಗಪ್ಪ ವಡೆಯರು ಲಿಂಗಪ್ಪವಡೆಯರ ಮಕ್ಕಳು ಪಾದೋದಕಪ್ರಸಾದ ಸಂಪನ್ನರಾದ ಚೆನ್ನವೀರಪ್ಪವಡೆಯರು ಚೆನ್ನವೀರಪ್ಪ ವಡೆಯರ ಸತಿ ಪರ್ವತಮ್ಮ ದಂಪತಿಗಳು ತಮ್ಮ ಭಕ್ತಿಯಿಂದ ತೋಂಟದಸ್ವಾಮಿಗೆ ಕಲ್ಲಮಟವ ಕಟ್ಟಬೇಕೆಂದು ಚಿಟ್ಟಿಗದೇವರಿಗೆ ಪದಾರ್ಥಮಂ ನಮಸ್ಕಾರಮಂ ಮಾಡಲಾಗಿ ಭಕ್ತಿ ಪದಾರ್ಥಮಂ ಕೈಕೊಂಡು ಯೆಡೆಯೂರಿಗೆ ಬಿಜಯಂಗೆಯಿದು ತೋಂಟದಸ್ವಾಮಿಗೆ ಕಲ್ಲಮಟವನು ಯೆಂಟು ಜಡೆಯ ಬಗೆಯ ಹಿರಿಯರು ಚಿಟ್ಟಿಗದೇವರು ಕಟ್ಟಿಸಿದರು ಯಡೆಯೂರು ಸ್ಥಲದಲ್ಲಿ ಅದು ಕೊಡಗಿ ಮಾನ್ಯ ನಿತ್ಯಾ ಬಂದ ಕಾಣಿಕೆ ಸೀಮೆ ಮೇಲೆ ತಂದ ನಂದದೀಪದ ಕಾಣಿಕೆ ಯಿಷ್ಟು ಯಿ ಮಟದ ಹಿರೀರು ಪಚೆ ಕಂತೆಯ ಚೆನಮಲ್ಲಿಕಾರ್ಜುನದೇವರದು ಯೆಂಟು ಜಡೆಯ ಬಗೆಯ ಹಿರೀರು ಚಿಟ್ಟಿಗದೇವರು ಪಡದ ಪುರವರ್ಗವು ಸಹ ಮುಕದಲ್ಲಿ ಬಂದ ಕಾಣಿಕೆ ತೋಂಟದಸ್ವಾಮಿಯ ದಾಸೋಹದ ದ್ರವ್ಯ ಯಿ ಮಟದಲ್ಲಿ ತೋಂಟದಸ್ವಾಮಿಯ ದಾಸೋಹವನು ಚಿಟ್ಟಿಗದೇವರು ಯಿಡ್ಸಿದ ಅ....ದಲಿ ವಡೆಯರು ಭಕ್ತರು ವಪ್ಪಿದ ಸತ್ಪುರುಷರು ಯಿ ದಾಸೋಹವನು ಮಾಡುವರು ಯಿ ದ್ರವ್ಯ ತೋಂಟಸ್ವಾಮಿಯ ದಾಸೋಹಕ್ಕೆ ಸಲುವದು ಅರಿಗವರ್ಗ ಪಾ

(ಇನ್ನೊಂದು ಪಂಕ್ತಿ ಭೂಮಿಯಲ್ಲಿ ಸೇರಿದೆ.)

ಎಪಿಗ್ರಾಫಿಯಾ ಕರ್ನಾಟಿಕ, Vol. XII
ಕುಣಿಕಲ್ ತಾಲೂಕು ; ಯೆಡೆಯೂರು
ಶಾಸನ ಕಾಲ. ಸು. 1480 A.D.

---

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನಬಂದುದನು ಬಯಸಿ ಬೇಯುತ್ತಿದ್ದೇನಯ್ಯ
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋಱಾ ಚೆನ್ನಮಲ್ಲಿಕಾರ್ಜುನ

ಅಕ್ಕಮಹಾದೇವಿ

# ಚಿದ್ಘನಲಿಂಗದ ಚಿದ್ಬೆಳಗು

**ಎಸ್. ನಂಜುಂಡಯ್ಯ**

"ಮಹಾತ್ಮರಂ ನೆನೆವುದೇ ಘನಮುಕ್ತಿಪದಂ ಶಿವಾಧವಾ"

ವಿಶ್ವಸಾಹಿತ್ಯದಲ್ಲಿ ವಿಶಿಷ್ಟಸ್ಥಾನವನ್ನು ದೊರಕಿಸಿಕೊಟ್ಟು ಕನ್ನಡಕ್ಕೆ ಕೋಡನ್ನು ಮೂಡಿಸಿದ ವಚನಸಾಹಿತ್ಯದ ಸುದೀರ್ಘ ಇತಿಹಾಸವನ್ನು ಅಧ್ಯಯನ ಮಾಡುವುದೇ ಒಂದು ಅನುಪಮ ರಸಯಾತ್ರೆ. ಆ ರಸಯಾತ್ರೆಯಲ್ಲಿ ಮುನ್ನಡೆವ ರಸಿಕಹೃದಯನಿಗೆ ದಿವ್ಯಜ್ಯೋತಿಯ ದರ್ಶನವಾಗಿ ಇಲ್ಲಿ ಸಂದು ಅಲ್ಲಿಯೂ ಸಲ್ಲುವ ಬೆಳ್ಳಂಬೆಳಗಿನ ಹಾದಿಯೊಂದು ತನಗೆತಾನೇ ನಿಚ್ಚಳವಾಗಿ ದೃಗ್ಗೋಚರವಾಗುವುದು. ಪರಮಸಿದ್ಧಿಯ ಸಚ್ಚಿದಾನಂದಾನುಭವ ಸುಲಭಸಾಧ್ಯವಾಗುವುದು. ಹಾಲಿನ ಹೆದ್ದೊರೆಯಾಗಿ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆತೆರೆಗಳಿಂದ ತುಂಬಿ ಪ್ರವಹಿಸುತ್ತ ಅಧರಕ್ಕೆ ಕಹಿ-ಉದರಕ್ಕೆ ಸಿಹಿಯಾಗಿ, ಕುಡಿದವರ ಕಡುಬಾಯಾರಿಕೆಯನ್ನು ನೀಗಿಸಿ ಭವದ ಬೇರನ್ನು ಕಡಿದು ಮೃಡತ್ವಕ್ಕೇರಿಸುವ ಮೃಡಶರಣರನುಡಿಗಡಣದ ಇತಿಹಾಸವು ಕನ್ನಡಸಾಹಿತ್ಯಚರಿತ್ರೆಯಲ್ಲಿ ಒಂದು ಹೊಸಯುಗವನ್ನೇ ಪ್ರಾರಂಭಿಸಿತು. ಪಾಂಡಿತ್ಯಪ್ರಧಾನಸಾಹಿತ್ಯದ ಚಂಪೂಯುಗವು ಕಳೆದು ಅನುಭವಪ್ರಧಾನಸಾಹಿತ್ಯದ ಸ್ವಾತಂತ್ರ್ಯಯುಗವು ಆರಂಭವಾಯಿತು. ನಾಡಿನ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ದೃಷ್ಟಿಯಿಂದ ಹಿಂದೆಂದೂ ಕಂಡರಿಯದ ಅತ್ಯದ್ಭುತ ಕ್ರಾಂತಿಯನ್ನುಂಟುಮಾಡಿ ನಿತ್ಯನೂತನವಾದ ಬದಲಾವಣೆಗಳನ್ನು ತಂದು ಹೊಚ್ಚಹೊಸ ವಾತಾವರಣವನ್ನು ನಿರ್ಮಿಸಿತು. ಉಚ್ಚವರ್ಣದವರಿಂದ ನೀಚರೆಂದು ಕಡೆಗಣಿಸಲ್ಪಟ್ಟು ನೆಲಕಚ್ಚಿ ನಿಸ್ತೇಜರಾಗಿ ಬಿದ್ದಿದ್ದವರು, ಪತಿತರಾಗಿ ಪಾಮರರೆನಿಸಿದ್ದ ಶ್ರೀಸಾಮಾನ್ಯರು ಒಮ್ಮಿಂದೊಮ್ಮೆಗೆ ಮೊಳಗಿದ ಈ ಹೊಸಕ್ರಾಂತಿಯ ಕಹಳಾರವಕ್ಕೆ ಉತ್ತೇಜಿತರಾಗಿ ಮೇಲೆದ್ದು ನಿಂತರು. ತಮ್ಮನ್ನು ಭದ್ರವಾಗಿ ಬಿಗಿದಿದ್ದ ದಾಸ್ಯದ ಬಂಧನಗಳನ್ನು ಮುರಿದೊಗೆದು ಮುಗಿಲುದ್ದ ಬೆಳೆದು ನಿಂತರು, ಕಾಯಕದ ಕಡುಗಲಿಗಳಾಗಿ ಕೈವಲ್ಯದ ಕಡುಸುಖವನ್ನು ಇಹದಲ್ಲಿಯೇ ಕಂಡುಂಡು ಸುಖಿಸಿದರು. ಆಧ್ಯಾತ್ಮಸಾಧನೆಯ ಹೊಂಬೆಳಗಿನ ಹಾದಿಯಲ್ಲಿ ಹಂತಹಂತವಾಗಿ ಮೇಲೇರಿ ನಿಂತು ನಿತ್ಯಸತ್ಯದ ದಿವ್ಯಾನುಭವಗಳನ್ನು ಆಣಿಮುತ್ತಿನಂತಹ ತಮ್ಮ ವಚನಗಳಲ್ಲಿ ಕಂಡರಿಸಿದರು. ಅವು ಸಾಹಿತ್ಯದಲ್ಲಿ ಒಂದು ವಿಶೇಷ ಪ್ರಕಾರವಾಗಿ ಪ್ರಜ್ವಲಿಸುತ್ತ ಸಾಹಿತ್ಯಚರಿತ್ರೆಯಲ್ಲಿ ವಿಶಿಷ್ಟಸ್ಥಾನವನ್ನು ಪಡೆದುಕೊಂಡಿವೆ. ಪಾಂಡಿತ್ಯಪ್ರದರ್ಶನದ ಬೂಟಾಟಿಕೆಯ ಡೊಂಬರಾಟಗಳಾಗದೆ, ಅನುಭಾವದ ರುಚಿಕಟ್ಟಾದ ರಸದೂಟಗಳಾಗಿ ಈ ವಚನಗಳು ಶಿವಾನುಭಾವಿಗಳ ಅಂತರಂಗದ ಅಕ್ಷಯಪಾತ್ರೆಯಿಂದ ಎಂದೆಂದಿಗೂ ಕ್ಷಯಿಸದ ರಸಪಾಕವಾಗಿ ರಾಶಿರಾಶಿಯೋಪಾದಿಯಲ್ಲಿ ಹೊರಹೊಮ್ಮಿ ಬಂದು 'ತವನಿಧಿ'ಯೆಂಬುದಾಗಿ ಹೆಸರುಗಳಿಸಿ ಪ್ರಸಿದ್ಧಿಪಡೆದಿವೆ. ನೂರಾರು ಮಂದಿ ಶಿವಶರಣ-ಶರಣೆಯರು ವಚನಸಾಹಿತ್ಯವನ್ನು ವಿಪುಲವಾಗಿ ವಿರಚಿಸಿ ಕನ್ನಡದ ಕಣಜವನ್ನು ತುಂಬಿ ಶ್ರೀಮಂತಗೊಳಿಸಿರುವುದು ನಮಗೆ ಇಂದು ತಿಳಿದುಬರುತ್ತಿದೆ. ಅಪಾರವಾಗಿ ರಚನೆಗೊಂಡು ಬೆಳೆದು ನಿಂತಿರುವ ಈ ವಚನಸಾಹಿತ್ಯದ ವಿಸ್ತಾರ, ವೈವಿಧ್ಯ, ವೈಭವ, ವೈಶಿಷ್ಟ್ಯಗಳನ್ನು ಪರಾಮರ್ಶಿಸಿದ ವಿದ್ವಜ್ಜನರು ಚಾರಿತ್ರಿಕದೃಷ್ಟಿಯ ಅಭ್ಯಾಸದ ಸೌಲಭ್ಯಕ್ಕಾಗಿ ವಚನಸಾಹಿತ್ಯದ ಸುದೀರ್ಘ ಇತಿಹಾಸವನ್ನು ಬಸವಪೂರ್ವಯುಗ, ಬಸವಯುಗ, ಬಸವೋತ್ತರಯುಗ ಎಂದು ವರ್ಗೀಕರಣ ಮಾಡಿರುವುದು ವೈಶಿಷ್ಟ್ಯಪೂರ್ಣವಾಗಿದೆ.

ಹನ್ನೆರಡನೆಯ ಶತಮಾನದ ಚಿರಸ್ಮರಣೀಯ ಪರ್ವಕಾಲದಲ್ಲಿ ವಚನಸಾಹಿತ್ಯವು ಹೀಗೆ ಪ್ರೋಜ್ಜ್ವಲವಾಗಿ ಪ್ರಕಾಶಕ್ಕೆ ಬರಲು ಬಸವಾದಿಪ್ರಮಥರು ಕಾರಣರಾಗಿದ್ದಾರೆ. ಈ ವಚನವಾಙ್ಮಯ ಗುಡಿಗೆ 'ಜಂಗಮಮೂರ್ತಿ'ಯಾದ ಜಗಜ್ಜ್ಯೋತಿ ಬಸವೇಶ್ವರರ ದಿವ್ಯಶಕ್ತಿಯ ಪ್ರಭಾವ–ಮಾರ್ಗದರ್ಶನಗಳಿಂದ ಅಗಣಿತ ಶಿವಶರಣರು ಅಸಂಖ್ಯಾತ ವಚನಗಳನ್ನು ರಚಿಸಿದ್ದಾರೆ. ಅಲ್ಲಮಪ್ರಭು, ಚನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಮಡಿವಾಳ

ಮಾಚಿದೇವ ಮೊದಲಾದ ಮಹಾನುಭಾವರು ಬಸವಯುಗವನ್ನು ಪ್ರತಿನಿಧಿಸುವ ಪ್ರಮುಖ ವಚನಕಾರರಾಗಿದ್ದಾರೆ. ಕಲ್ಯಾಣವನ್ನು ಲೋಕಕಲ್ಯಾಣದ ತಮ್ಮ ಎಲ್ಲ ಚಟುವಟಿಕೆಗಳ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಅನುಭವ ಮಂಟಪದ ಮೂಲಕ ಶಿವಾನುಭವದ ಅಮೃತರಸಗಂಗೆಯನ್ನು ನಾಡಿನೆಲ್ಲೆಡೆ ಹರಿಯಿಸಿ ಆಧ್ಯಾತ್ಮಿಕಪ್ರಜ್ಞೆಯಿಂದ ಜನರು ಸ್ವತಂತ್ರವಾಗಿ ಮುಕ್ತವಾತಾವರಣದಲ್ಲಿ ಬದುಕಿ ಬಾಳಲು ಈ ಮಹಾಂತದಾರ್ಶನಿಕರು ಮಹತ್ಪ್ರೇರಣೆಯನ್ನು ನೀಡಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಸೌಹಾರ್ದ, ಸದ್ಭಕ್ತಿ, ಸತ್ಕ್ರಿಯೆ, ಸುಜ್ಞಾನ, ಸದಾಚಾರ, ಸುವಿಚಾರಗಳನ್ನು ತಮ್ಮ ನಡೆ-ನುಡಿಗಳಲ್ಲಿ ಬಿತ್ತರಿಸಿ. ತೋರಿ, ಧರ್ಮದ ನಿಜಾಚರಣೆಯನ್ನು ಜನತೆಗೆ ಮನಗಾಣಿಸಿ ಸಮಾಜದ ಸರ್ವತೋಮುಖ ಪ್ರಗತಿಗಾಗಿ ಅದ್ಭುತ ಕ್ರಾಂತಿಯನ್ನೆಸಗಿರುತ್ತಾರೆ. ಕಲ್ಯಾಣದ ಶಿವಶರಣರ ಸಮಗ್ರಸಾಧನೆ-ಸಿದ್ಧಿಗಳನ್ನೆಲ್ಲ ಸಾರಸಂಗ್ರಹಗೊಳಿಸಿ ತಮ್ಮದೊಂದು ಸುಂದರ ವಚನದಲ್ಲಿ ಚನ್ನಬಸವಣ್ಣನವರು ತುಂಬಿಕೊಟ್ಟಿದ್ದಾರೆ :

ಪಾತಾಳದಗ್ಗವಣಿಯ ನೇಣಿಲ್ಲದೆ ತೆಗೆಯಬಹುದೆ.
ಸೋಪಾನದ ಬಲದಿಂದಲ್ಲದೆ ?
ಶಬ್ದಸೋಪಾನದ ಬಲದಿಂದ ನಿಶ್ಶಬ್ದಸೋಪಾನವ ಕಟ್ಟಿ,
ನಡೆಸಿದವರು ನಮ್ಮ ಪುರಾತನರು ;
ದೇವಲೋಕಕ್ಕೆ ಬಟ್ಟೆ ಕಾಣಿರೊ !
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿಟ್ಟರು
ಕೂಡಲಚನ್ನಸಂಗಯ್ಯಾ, ನಮ್ಮ ಶರಣರು[1]

ಮಾನವನ ಎದೆಯಾಳದಲ್ಲಿ ನೆಲೆನಿಂತಿರುವ ಅನಾದ್ಯನಂತವಾದ ಸಚ್ಚಿದಾನಂದದ ಅಗ್ಗವಣಿಯನ್ನು ಸ್ವಾನುಭಾವದ ಗೀತಮಾತುಗಳ ನೇಣಿನಿಂದ, ಶಬ್ದಸೋಪಾನಗಳ ಬಲದಿಂದ ಹೊರಕ್ಕೆ ತೆಗೆದುತಂದು ಅದನ್ನು ಧರೆಯಮೇಲಿನವರಿಗೆ ದಣಿಯಲೆರೆದು ಭವಾನಲದಗ್ಧಜೀವಿಗಳ ಹೃತ್ತಾಪ-ಸಂತಾಪಗಳನ್ನು ಪರಿಹರಿಸಿರುತ್ತಾರೆ. ಅಭವಲೋಕಕ್ಕೆ ಸುಲಭ ಮಾರ್ಗವನ್ನು ಸಿದ್ಧಪಡಿಸಿ ಕೊಟ್ಟಿರುತ್ತಾರೆ. ಮನದಮೈಲಿಗೆಯನ್ನು, ಕಣ್ಣಿನ ಕಾಳಿಕೆಯನ್ನು ಕಳೆದೊಗೆದು ಹೊಚ್ಚ ಹೊಸ ಬೆಳಕನ್ನು ನೀಡಿರುತ್ತಾರೆ. ವಚನಜ್ಯೋತಿಯನ್ನು ಬೆಳಗಿಸುವುದರ ಮೂಲಕ ಸಮಸ್ತ ಕತ್ತಲೆಯ ಮುಸುಕವ ಕಳೆದು 'ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗ ಕೂಡಿದ ಕೂಟ'ದ ಮಹೋನ್ನತ ನೋಟವನ್ನು ಲೋಕಕ್ಕೆ ತಂದುಕೊಟ್ಟು ಬಸವಯುಗವನ್ನು ಲೋಕದಲ್ಲಿ ಅಸಮವೆನಿಸಿದ್ದಾರೆ. ಈ ವಚನಸಾಹಿತ್ಯದ ಮಹತ್ವವನ್ನು ಅರಿತುಕೊಳ್ಳಲಾರದ ಇಂದಿನ ಧೋರಣೆಯನ್ನು ಕುರಿತು "ಅದೊಂದು (ವಚನಸಾಹಿತ್ಯ) ಧಾರ್ಮಿಕಸಾಹಿತ್ಯವೆಂಬ ಮುದ್ರೆಯನ್ನೊತ್ತಿ ಪರಿಮಿತಿಯ ವಲಯಕ್ಕೆ ತಳ್ಳುವುದಾಗಲೀ ಅಲ್ಲಿರುವ ಮೂಲಭೂತ ಮೌಲ್ಯಗಳನ್ನು ಕೆಲಸಕ್ಕೆ ಬಾರದ ಸಂಗತಿಗಳೆಂಬ ವೈಚಾರಿಕಭ್ರಮೆಯ ಅವಿಚಾರದಿಂದ ವಚನಗಳ ರೂಪವನ್ನಷ್ಟೇ ಹಿಡಿದು ಎಳೆದಾಡುವುದಾಗಲೀ ಅಥವಾ ಸಾಹಿತ್ಯಪ್ರಜ್ಞೆ ಅವರಿಗೆ ಇರಲಿಲ್ಲವೆಂದು ಅವುಗಳ ಸಾಹಿತ್ಯಕಮಹತ್ವವನ್ನು ಅಲ್ಲಗಳೆಯುವ ಅಪ್ರಜ್ಞೆಯಾಗಲೀ— ನಮ್ಮ ಪರಿಮಿತಿಗೆ ಕನ್ನಡಿಯಾಗಬಲ್ಲುವೇ ಹೊರತು ಅವುಗಳ ಮಹತ್ವವನ್ನು ಮುಸುಕಿಸಲಾರವು"[2] ಎಂಬುದಾಗಿ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು ಹೇಳಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಕಲ್ಯಾಣದ ಕ್ರಾಂತಿಯ ದುಷ್ಪರಿಣಾಮದಿಂದ ಕೆಲವು ಕಾಲ ಗುಪ್ತವಾಗಿ ಕಣ್ಣಿಗೆ ಬೀಳದೆ ಹೋಗಿದ್ದ ಈ ವಚನ ವಾಙ್ಮಯವು ಆ ಬಳಿಕ ಮೂರು ಶತಮಾನಗಳ ತರುವಾಯ ವಿಜಯನಗರದ ವೈಭವದ ಕಾಲದಲ್ಲಿ ಮತ್ತೊಮ್ಮೆ ತನ್ನ ವೈಜಯಂತಿಯನ್ನು ವಿಯದ್‌ಗಾಮಿಯಾಗಿ ಹಾರಿಸಿದುದನ್ನು ಕಾಣಬಹುದು. ವಿಜಯನಗರದ ಪ್ರೌಢದೇವರಾಯನ ಕಾಲ (೧೪೨೯-೪೭)ದಲ್ಲಿ ನೂರೊಂದು ವಿರಕ್ತರು ಉದಯಿಸಿ ವಚನಸಾಹಿತ್ಯದ ಪುನರುಜ್ಜೀವನಕ್ಕೆ ತೊಡಗಿದರು. ಅಲ್ಲಲ್ಲಿ ಚದುರಿ ಚೆಲ್ಲಾಪಿಲ್ಲಿಯಾಗಿದ್ದ ವಚನಗಳನ್ನು ಆಯ್ದು ಸಂರಕ್ಷಿಸಿ ಅವುಗಳ ಸಂಗ್ರಹ, ಸಂಕಲನ, ವ್ಯಾಖ್ಯಾನ. ಟೀಕು-ಟಿಪ್ಪಣಿಗಳನ್ನು ಬರೆಯುವ ಹೊಸ ಹೊಸ ಸಂಪ್ರದಾಯಗಳನ್ನು ಹುರುಪಿನಿಂದ ಪ್ರಾರಂಭಿಸಿದರು. ಮಹಾಲಿಂಗದೇವ, ಜಕ್ಕಣಾರ್ಯ, ಕಲ್ಲಮಠದ ಪ್ರಭುದೇವ, ಗುಬ್ಬಿಯ ಮಲ್ಲಣ್ಣ ಇವರೇ ಮೊದಲಾದ ಮಹಾನುಭಾವರು

---

[1] ಚನ್ನಬಸವಣ್ಣನವರ ವಚನಗಳು : ವಚನ ೬೮೭, ಸಂ. ಡಾ. ಆರ್. ಸಿ. ಹಿರೇಮಠ, ಕ.ವಿ.ವಿ., ಧಾರವಾಡ
[2] ವಚನಸಾಹಿತ್ಯ: ವೈಚಾರಿಕ ಅಧ್ಯಯನ; ಪುಟ ೧೩೬, ಕ.ವಿ.ವಿ., ಧಾರವಾಡ

ವಚನಗಳನ್ನು ಸ್ಥಲಕಟ್ಟಿಗೆ ಅನುಸಾರವಾಗಿ ಸಂಕಲನ ಮಾಡಿ ಅವುಗಳಿಗೆ ಟೀಕೆ, ಟಿಪ್ಪಣಿಗಳನ್ನು ಬರೆದು ಮುಂದಿನ ವಚನಕಾರರಿಗೆ ವಚನವಾಙ್ಮಯಕ್ಷೇತ್ರದಲ್ಲಿ ಉತ್ತಮ ಬೆಳೆಯನ್ನು ತೆಗೆಯಲು ನೆಲವನ್ನು ಹದಗೊಳಿಸಿದರು. ವಚನ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ವಿಜಯನಗರದ ವಿರಕ್ತರ ಈ ಸಾಧನೆಯು ಸಾಮಾನ್ಯವಾದುದೇನಲ್ಲ ಎನ್ನ ಬಹುದು. ಅಂತೆಯೇ ನೂರೊಂದು ವಿರಕ್ತರ ಬೆನ್ನಹಿಂದೆಯೇ ಬಂದ ಏಳುನೂರೊಂದು ವಿರಕ್ತರಿಗೆ ಮುಂದೆ ವಚನ ಸಾಹಿತ್ಯವನ್ನು ಬೆಳೆಸಲು ಅನುಕೂಲವಾಯಿತು. ಅವರೆಲ್ಲರಿಗೂ ಹಿರಿಯ ಗುರುವಾಗಿ ಆ ಯುಗದ ಕೇಂದ್ರಶಕ್ತಿಯಾಗಿ ಷಟ್‌ಸ್ಥಲವನ್ನು ಆಚರಿಸಿ ಅರುಹಿದ ಮಹಾಂತದೇಶಿಕರಾಗಿ ಮೆರೆದವರು, ಜಗದ್ಗುರು ತೋಂಟದ ಶ್ರೀ ಸಿದ್ಧಲಿಂಗೇಶ್ವರ ಮಹಾಶಿವಯೋಗಿಗಳು. (ಕ್ರಿ.ಶ. ಸು. ೧೫೪೦) ಅವರು ಬಸವೋತ್ತರಯುಗದ ಪ್ರಮುಖರಾದ ಶ್ರೇಷ್ಠ ವಚನ ಕಾರರೆಂದು ಪ್ರಸಿದ್ಧರಾಗಿ ವೀರಶೈವಧರ್ಮವನ್ನು ಉದ್ಧರಿಸಿದರು. "ಶಿಥಿಲವಾಗುತ್ತಿರುವ ಷಟ್‌ಸ್ಥಲಸಿದ್ಧಾಂತಕ್ಕೆ ಪುನರುಜ್ಜೀವನವಷ್ಟೇ ಅಲ್ಲ, ಪುನರ್ನಿರ್ಮಾಣದ ಆವಶ್ಯಕತೆಯಿದ್ದುದನ್ನು ಅರಿತು ಏಳುನೂರಾಒಂದು ವಿರಕ್ತರ ಸಂಕೇತವೆನ್ನಿಸುವ ತಮ್ಮ ಏಳುನೂರಾಒಂದು ವಚನರಚನೆಯ ಮುಖಾಂತರ ಬಸವಯುಗದ ವಚನರಚನಾಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದರು."[3]

ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಶಿಷ್ಯಸಂಪತ್ತು ಅಪಾರವಾಗಿತ್ತು, ಅಗಣಿತವಾಗಿತ್ತು, ಅವರ ಗುರು ಮಹತಿಯ ದ್ಯೋತಕವಾಗಿತ್ತು. "ಪ್ರಾಯಶಃ ಸಾರಸ್ವತಪ್ರಪಂಚದಲ್ಲಿ ಇಂತಹ ಉಜ್ಜ್ವಲವಾದ ಶಿಷ್ಯಪರಂಪರೆಯನ್ನು ಪಡೆದ ಸಾಹಿತ್ಯಗುರು ಬೇರೊಬ್ಬರಿರಲಿಕ್ಕಿಲ್ಲವೆನಿಸುತ್ತದೆ."[4] ಇವರೆಲ್ಲರೂ ವಚನಗಳನ್ನು ಬರೆದರೆಂಬುದಕ್ಕೆ ಈಗ ಯಾವ ಆಧಾರಗಳೂ ಉಪಲಬ್ಧವಾಗಿಲ್ಲ. ಶ್ರೀಗುರುಗಳ ಪ್ರೇರಣೆ, ಪ್ರಭಾವಗಳಿಂದ ಬರೆದಿದ್ದರೂ ಬರೆದಿರಬಹುದೆಂದು ಊಹಿಸಲವಕಾಶವಿದೆ. ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಅಸಂಖ್ಯ ಶಿಷ್ಯಸ್ತೋಮದ ಮೇಲೆ ಅಪಾರ ವರ್ಚಸ್ಸನ್ನು ಬೀರಿ ಮುಂದಿನ ವಚನಕಾರರೆಲ್ಲರನ್ನು ತಮ್ಮ ವಚನಗಳಿಂದ ಪ್ರಭಾವಿತರನ್ನಾಗಿ ಮಾಡಿ ತಮ್ಮ ಅನುಪಮ ಸಾಧನೆ-ಸಿದ್ಧಿಗಳಿಂದ ಕನ್ನಡ ವಚನಸಾಹಿತ್ಯದಲ್ಲಿ 'ಸಿದ್ಧಲಿಂಗಯುಗ'ವನ್ನು ಸೃಷ್ಟಿಸಿ ಕನ್ನಡ ಸಾರಸ್ವತಲೋಕದಲ್ಲಿ ಅವಿಸ್ಮರಣೀಯರಾಗಿದ್ದಾರೆ.

ಪರಮಗುರು ತೋಂಟದ ಶ್ರೀ ಸಿದ್ಧಲಿಂಗೇಶ್ವರರ ನೇರಸಾನ್ನಿಧ್ಯದಲ್ಲಿ ಸತತ ಧೀರಸಾಧನೆಗಲಿತು ಸಾರಶಿವ ಯೋಗಸಿದ್ಧಿಯನ್ನು ಪಡೆದು ಅವರ ಪರಮಶಿಷ್ಯರಲ್ಲಿ ಅಗ್ರೇಸರರಾಗಿದ್ದು, ಸಿದ್ಧಲಿಂಗಯುಗದಲ್ಲಿ ಮೇಲೆದ್ದು ಕಾಣುವ ಬಹು ದೊಡ್ಡದೊಂದು ಹೆಸರು ಶ್ರೀ ಘನಲಿಂಗ ಶಿವಯೋಗಿಗಳು. (ಕ್ರಿ.ಶ. ಸು. ೧೫೬೦). ತಮ್ಮ ಗುರು ವರ್ಯರ ಉಜ್ಜ್ವಲ ಪರಂಪರೆಯನ್ನು ಪರಮೋಜ್ಜ್ವಲಗೊಳಿಸುವಲ್ಲಿ ನೆರವಾದ ಇವರು ಆ ಯುಗದ ಅತ್ಯಂತ ಶ್ರೇಷ್ಠ ಹಾಗೂ ಸಮರ್ಥ ವಚನಕಾರರು. ಇವರ ಕಾರ್ಯಕ್ಷೇತ್ರವಾದ ಸುತ್ತೂರು ಮತ್ತು ತೋಂಟದ ಸಿದ್ಧಲಿಂಗರ ಹರದನ ಹಳ್ಳಿಗಳು ಬಹಳ ಸಮೀಪದ ಸ್ಥಳಗಳಾಗಿದ್ದುದರಿಂದ ಇವರು ಆಗಾಗ ಕೂಡಿರಬೇಕೆನ್ನುವುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ಅಲ್ಲದೆ ತುಮಕೂರಿನಲ್ಲಿ ತೋಂಟದ ಸಿದ್ಧಲಿಂಗೇಶ್ವರರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಭಕ್ತಸ್ತೋಮವು ವಿಶೇಷ ಭಕ್ತಿ ವಿಜೃಂಭಣೆಗಳಿಂದ ಬೀದಿಬೀದಿಗಳಲ್ಲಿ ಮೆರೆಸಿದಾಗ ಆ ಉತ್ಸವದಲ್ಲಿ ಭಾಗವಹಿಸಿದ್ದ ಹಲವು ಮಹನೀಯರಲ್ಲಿ—

ಉರೆ ಕೃಷ್ಣಕಂಬಳಿವ ಪೊದೆದು, ಉತ್ತಮಾಂಗವಂ
ನೆರೆ ಮುಂಡಿತಂಗೆಯ್ದು, ಕರತಳದ ಲಿಂಗದೊಳ್
ಬೆರಗುವಡೆದು, ಇತರೇತರವನರಿಯದಿರ್ಪ ನಿಶ್ಚಳವಿರತನ್,
ತೊರೆದು ದೇಹೋಪಾಧಿಯಂ, ವರ್ಗವಾರಕ್ಕೆ
ಹೆರಸಾರ್ದು, ಸುಜ್ಞಾನಮಾರ್ಗದೊಳು ನಿಂದು, ಗುಣ
ಕರಿಗೊಂಡ[5] ........................................

ಘನಲಿಂಗ ಶಿವಯೋಗಿಗಳೂ ಒಬ್ಬರಾಗಿದ್ದರೆಂದು ಮರಿತೋಂಟದಾರ್ಯ ವಿರಚಿತ 'ಸಿದ್ಧೇಶ್ವರಪುರಾಣ'ದಿಂದ ತಿಳಿದು ಬರುತ್ತದೆ. ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಸೇವೆಯಲ್ಲಿ ನಿಂತ ಪ್ರಮುಖರನ್ನು ತಿಳಿಸುವ ಸಂದರ್ಭದಲ್ಲಿ, ವಿರೂಪಾಕ್ಷಪಂಡಿತನು ತನ್ನ 'ಚನ್ನಬಸವಪುರಾಣ'ದಲ್ಲಿ—

3 'ಬಸವಾನಂತರ ಯುಗದ ವಚನಸಾಹಿತ್ಯ' : ಎಂ. ಜಿ. ಬಿರಾದಾರ—ಬಸವ ಜರ್ನಲ್ ೨-೨, ಪು. ೪೬

4 'ಷಟ್‌ಸ್ಥಲಜ್ಞಾನಸಾರಾಮೃತ' : ಪ್ರಸ್ತಾವನೆ, ಪುಟ ೮೫, ಸಂ. ಡಾ. ಆರ್. ಸಿ. ಹಿರೇಮಠ

5 'ಸಿದ್ಧೇಶ್ವರಪುರಾಣ' : ೧೫-೪೬

ಸಿದ್ಧಮಲ್ಲೇಶ್ವರಂ ಗುಮ್ಮಳಾಪುರದ ವರ
ಸಿದ್ಧಲಿಂಗೇಶ್ವರಂ ಯೆಡತೊರೆಯಪುರದ ಗುರು
ಸಿದ್ಧವೀರಣ್ಣೊಡೆಯರೆಸೆವ ಘನಲಿಂಗದೇವರ್ ಚಿಕ್ಕಮಲ್ಲೇಶನು ॥[6]

ಎಂಬುದಾಗಿ ಘನಲಿಂಗಶಿವಾಚಾರ್ಯರನ್ನೂ ಹೊಗಳಿ ಹಾಡಿದ್ದಾನೆ. ಇದರಿಂದ ಘನಲಿಂಗ ಶಿವಯೋಗಿಗಳು ತೋಂಟದ ಸಿದ್ಧಲಿಂಗೇಶ್ವರರಿಗೆ ಎಷ್ಟು ಅಚ್ಚುಮೆಚ್ಚಿನವರಾಗಿದ್ದರು ಮತ್ತು ಅಂದಿನ ಸಮಾಜದಲ್ಲಿ ಅದೆಷ್ಟು ಪೂಜ್ಯತಮ ವ್ಯಕ್ತಿಗಳಾಗಿದ್ದರು ಎಂಬುದೆಲ್ಲ ವಿದಿತವಾಗದಿರದು. ತೋಂಟದ ಸಿದ್ಧಲಿಂಗರ ಸಮಕಾಲದಲ್ಲಿ ಸ್ವತಂತ್ರವಾಗಿ ವಚನಗಳನ್ನು ರಚಿಸಿ ವಚನಸಾಹಿತ್ಯಭಂಡಾರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಕೊಟ್ಟು ಕಲ್ಯಾಣದ ಬಸವಾದಿ ಶರಣರ ವಚನಸಂಪ್ರದಾಯಕ್ಕೆ ಸಮರ್ಥ ಚಾಲನೆಯನ್ನಿತ್ತುದು ಮಾತ್ರವಲ್ಲದೆ ಅಂದಿನ ಸಮಾಜೋದ್ಧಾರ, ಧರ್ಮಪ್ರಸಾರಕಾರ್ಯಗಳಲ್ಲಿಯೂ ನೇರವಾಗಿ ಭಾಗವಹಿಸಿದ್ದರು. ಹನ್ನೆರಡನೆಯ ಶತಮಾನದ ಬಸವಕಲ್ಯಾಣದ ಆದರ್ಶವನ್ನು ಹದಿನೈದು-ಹದಿನಾರನೆಯ ಶತಮಾನದ ವಿಜಯಕಲ್ಯಾಣದ ವೀರವಿರಕ್ತರು ವಿಶೇಷರೀತಿಯಲ್ಲಿ ನಾಡಿನಲ್ಲೆಲ್ಲ ಪ್ರಚಾರಮಾಡಲು ನಿಂತಾಗ ಅದಕ್ಕೆ ಬೆಂಬಲವಿತ್ತು ಆ ಆದರ್ಶ, ಸಂದೇಶಗಳನ್ನು ಕರ್ನಾಟಕದ ದಕ್ಷಿಣದ ಕೊನೆಯಾದ ಸುತ್ತೂರು ಸುಕ್ಷೇತ್ರದಲ್ಲಿ ನಿಂತು ಘನಲಿಂಗ ಶಿವಯೋಗಿಗಳು ಆ ಕಾಲಕ್ಕೆ, ಆ ಸುತ್ತುಮುತ್ತಿಗೆ ಘನವಾದ ರೀತಿಯಲ್ಲಿ ಸಾರಿ, ಬಿತ್ತರಿಸಿದರು. ಸಾಧಕಜೀವಿಗಳ ಆಧ್ಯಾತ್ಮದ ಹಸಿವು-ತೃಷೆಗಳನ್ನು ಹಿಂಗಿಸಿದರು. ಲಿಂಗಾನುಸಂಧಾನ ವಿಧಾನವನ್ನು, ಮಾಡಿ-ನೋಡಿ-ಕೂಡುವ ಹವಣನ್ನು, ಕ್ರಿಯಾರಂಗದಲ್ಲಿ ಬಳಸಿ ಆನಂದಿಸುವ ಶಿವಯೋಗದ ಮರ್ಮವನ್ನು ತಮ್ಮ ವಚನಜ್ಯೋತಿರ್ಲಿಂಗಗಳಲ್ಲಿ ಸ್ವಯಂಪ್ರಕಾಶಗೊಳಿಸಿ ಅಂದಿನ ಅಜ್ಞಾನತಿಮಿರವನ್ನು ಪರಿಹರಿಸಿದ ಅಪೂರ್ವ ಬಗೆಯು—ಅವರ ವಚನಗಳಲ್ಲಿ ಬಗೆಬಗೆಯಾಗಿ ಮೂಡಿಬಂದಿದೆ. ಅವರ ವಚನಗಳು ಆ ಕಾಲಕ್ಕೆ, ಆ ಸುತ್ತುಮುತ್ತಿಗೆ ಮಾತ್ರವಲ್ಲ ; ಅಂದಿಗೂ ಇಂದಿಗೂ ಮುಂದೆಂದಿಗೂ ಸರ್ವಕಾಲ—ಸರ್ವದೇಶಕ್ಕೂ ದಾರಿದೀಪಗಳಾಗಿ ನಿಲ್ಲತಕ್ಕವು, ಅನ್ವಯಿಸತಕ್ಕವು, ಅಗತ್ಯ ಬೇಕಾಗತಕ್ಕವು ಎಂಬುದು ಅವುಗಳ ಅಧ್ಯಯನದಿಂದ ಸುವೇದ್ಯವಾಗುತ್ತದೆ.

ಸುತ್ತೂರು ಶ್ರೀ ವೀರಸಿಂಹಾಸನ ಜಗದ್ಗುರುಪೀಠದ ಗುರುಪರಂಪರೆಯಲ್ಲಿ ಪರಮಪಾವನಮೂರ್ತಿಗಳಾಗಿ ತೊಳಗಿಬೆಳಗಿದ ಜಗದ್ಗುರು ಸಾರ್ವಭೌಮರು ತಮ್ಮ ದಿವ್ಯತಪಶ್ಶಕ್ತಿಯಿಂದ ವೀರಸಿಂಹಾಸನದ ಸೇವಾಕ್ಷೇತ್ರವನ್ನು ವಿಸ್ತರಿಸಿ ಜಗತ್ಕಲ್ಯಾಣವನ್ನೆಸಗುತ್ತ ಬಂದಿರುವುದು ಜಗದ್ವಿಖ್ಯಾತವಾದುದಾಗಿದೆ. ಸಹಸ್ರಾರು ಸಂವತ್ಸರಗಳ ಸುದೀರ್ಘವೂ ಪ್ರಕಾಶಮಯವೂ ಆದ ಇತಿಹಾಸವನ್ನು ಹೊಂದಿರುವ ಸುತ್ತೂರು ಸುಕ್ಷೇತ್ರದ ಪೀಠಾಧಿಪತಿಗಳು ಒಬ್ಬೊಬ್ಬರೂ ಮಹಿಮಾಪುರುಷರಾಗಿ ನಾಡಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕಜಾಗೃತಿಗೆ ಪ್ರೇರಕ-ಪೋಷಕಶಕ್ತಿಗಳಾಗಿ ಪ್ರಭಾವ ಬೀರಿ ಸುಪ್ರಸಿದ್ಧರಾಗಿದ್ದಾರೆ. ಅವರ ಅತ್ಯದ್ಭುತವಾದ ಶಿವಯೋಗಮಹಿಮೆಗೂ ಅವರು ನೆರವೇರಿಸಿಕೊಂಡು ಬಂದ ಸಮಾಜಸುಧಾರಣ–ಧರ್ಮಪ್ರಸಾರಣಕಾರ್ಯಗಳಿಗೂ ಮಾರುಹೋದ ನಾಡಿನ ಅಂದಿನ ಪ್ರಸಿದ್ಧ ರಾಜಮನೆತನಗಳ ರಾಜಾಧಿರಾಜರುಗಳು ಮೇಲಿಂದಮೇಲೆ ವಿಶೇಷವಾದ ದಾನ-ದತ್ತಿಗಳನ್ನಿತ್ತು ಅರಮನೆಯ ಗುರುಭಕ್ತಿಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಆ ಜಗದ್ಗುರುಪರಂಪರೆಯಲ್ಲಿ ಅಪಾರಮಹಿಮಾಪೂರ್ಣಚಾರಿತ್ರ್ಯವುಳ್ಳ ವಿದ್ವನ್ಮಣಿಗಳಾಗಿ ಪ್ರಕಾಶಿಸಿದ ಘನಲಿಂಗಶಿವಯೋಗಿಗಳು ಪೀಠದ ಹನ್ನೊಂದನೆಯ ಅಧಿಪತಿಗಳಾಗಿ ಅದ್ವಿತೀಯ ಕೀರ್ತಿಯನ್ನು ಹೊಂದಿದ್ದಾರೆ. ಕನ್ನಡ ವಚನವಾಙ್ಮಯಕ್ಕೆ ಚಿರಂತನವಾದ ಚಿದ್ಘನ ಕೊಡುಗೆಯನ್ನು ಸಲ್ಲಿಸುವುದರ ಮೂಲಕ ಸುತ್ತೂರು ಜಗದ್ಗುರುಪೀಠದ ಹೆಸರು ಸಾಹಿತ್ಯಚರಿತ್ರೆಯಲ್ಲಿಯೂ ಚಿರಸ್ಥಾಯಿಯಾಗಿ ನಿಲ್ಲುವಂತೆ ಮಾಡಿದ್ದಾರೆ. ಅವರು ನೀಡಿದ ಈ ಅಮೋಘ ಕೊಡುಗೆಯಿಂದ ಸುತ್ತೂರು ಜಗದ್ಗುರು ಮಹಾಸಂಸ್ಥಾನದ ಕೀರ್ತಿಯು ಮುಗಿಲೆಗೇರಿತು, ವಚನಕಾರರಾಗಿ ಘನತೆವೆತ್ತ ಘನಲಿಂಗಶಿವಯೋಗಿಗಳವರನ್ನು ಪೀಠಾಧಿಪತಿಗಳನ್ನಾಗಿ ಪಡೆದು ಅದು ಹೆಮ್ಮೆಪಡುವಂತಾಯಿತು ಎಂದು ಹೇಳಬಹುದು.

ಘನಲಿಂಗಶಿವಯೋಗಿಗಳು ತಮ್ಮ ಪೂರ್ವಾಪರಗಳನ್ನು, ತಾವು ಸುತ್ತೂರಿನ ಪೀಠಾಧಿಪತಿಗಳಾಗಿದ್ದ ಮತ್ತು ತೋಂಟದ ಸಿದ್ಧಲಿಂಗೇಶ್ವರರ ಅಂತರಂಗದ ಶಿಷ್ಯರಾಗಿದ್ದ ಸಂಗತಿಗಳನ್ನು ಸುಸ್ಪಷ್ಟವಾಗಿ ತಮ್ಮ ವಚನಗಳಲ್ಲಿ ಹೇಳಿಕೊಂಡಿದ್ದಾರೆ. ಆ ವಚನಖಂಡಗಳನ್ನು ಪರಿಶೀಲಿಸಿದಾಗ ಅವರ ಅಖಂಡಸಾಧನೆಯು ಯಾವ ಪಥದಲ್ಲಿ ಸಾಗಿಬಂದಿತು, ಯಾವ ಸಿದ್ಧಿಯ ಶಿಖರವನ್ನೇರಿ ನಿಂತಿತು ಎಂಬುದು ಗೋಚರವಾಗದಿರದು.

---

6 'ಚನ್ನಬಸವಪುರಾಣ': ೬೩-೪೭

"ಇಂತಪ್ಪ ಷಟ್ಸ್ಥಲಬ್ರಹ್ಮವೆನಿಸುವ ತೋಂಟದ ಸಿದ್ಧಲಿಂಗಪ್ರಭುವಿನ ಕರುಣಮಂ ಪಡೆದು ಘನಲಿಂಗದೇವರು ತಮ್ಮ ಸ್ವಯಲಿಂಗಾನುಭಾವದಿಂದ ಹಾಡಿದ ವಚನ"[7] ಎಂದು ತಾವು ಲಿಂಗಾನುಭಾವದಿಂದ ವಚನರಚನೆಗೆ ತೊಡಗಲು ಸ್ಫೂರ್ತಿಯ ಸೆಲೆಯಾಗಿದ್ದ ತಮ್ಮ ಗುರುವರ್ಯ ಷಟ್ಸ್ಥಲಬ್ರಹ್ಮ, 'ತೋಂಟದ ಅಲ್ಲಮನೆಂಬ ಪರಬ್ರಹ್ಮ, ಶ್ರೀ ಸಿದ್ಧಲಿಂಗಪ್ರಭುಗಳ ಕಾರುಣ್ಯವನ್ನು ಕೊಂಡಾಡಿದ್ದಾರೆ. ಶರಣಸತಿಯಾದ ಶಿವಯೋಗಿಗಳನ್ನು "ಎಲೆ ತಂಗಿ, ಶರಣ ಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ. ನಿನ್ನ ಪೂರ್ವಾಪರ ಪಾವುದಮ್ಮ?"[8] ಎಂದು ಯಾರಾದರೂ ಕೇಳಿದಾಗ ಅವರು ನೀಡುವ ಉತ್ತರ ಹೀಗಿದೆ:

ಸುತ್ತೂರುಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯದೇವರು,
ಆ ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು ಕೂಗಲೂರು ನಂಜಯ್ಯದೇವರು,
ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು!
ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು
ಆ ತೋಂಟದಾರ್ಯನು ತನ್ನ ಕೃಪೆಯೆಂಬ ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಸ್ವರೂಪತತ್ವಾರ್ಥವೆಂಬ
ಪಾಲುತುಪ್ಪವಂ ಸದಾ ದಣಿಯಲೆರೆದು ಅಕ್ಕರಿಂದ ರಕ್ಷಣೆಯಂ ಮಾಡಿ
"ಘನಲಿಂಗಿ"ಯೆಂಬ ನಾಮಕರಣಮಂ ಕೊಟ್ಟು ಪ್ರಾಯಸಮರ್ಥೆಯಂ ಮಾಡಿ
ಸತ್ಯ-ಸದಾಚಾರ-ಜ್ಞಾನ-ಕ್ರೀಗಳೆಂಬ ದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣದ ನಿರಿವಿಡಿದುಡಿಸಿ ಅರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ[9]

ಎಂದು ಸುತ್ತೂರು ಶ್ರೀ ವೀರಸಿಂಹಾಸನದ ತಮ್ಮ ಗುರುಪರಂಪರೆಯನ್ನೂ ತೋಂಟದಾರ್ಯರಲ್ಲಿ ತಾವು ಪ್ರಮಥ ಗಣಂಗಳ ವಚನಶಾಸ್ತ್ರತತ್ತ್ವಾನುಭವಪಾರಂಗತರಾದುದನ್ನೂ ಹೇಳಿಕೊಂಡಿದ್ದಾರೆ. "ಈ ಕಾರಣದಿಂದ ಘನಲಿಂಗ ದೇವರಿಗೆ ಬಸವಾದಿಪ್ರಮಥರ ವಚನಶಾಸ್ತ್ರಜ್ಞಾನಾನುಭವ ತೋಂಟದ ಸಿದ್ಧಲಿಂಗೇಶ್ವರರ ಗರಡಿಯಲ್ಲೇ ಆದ ಬಳಿಕ ಇವರ ಜ್ಞಾನಾನುಭವದ ಬಗೆಗೆ ಹೇಳುವುದಿನ್ನೇನಿದೆ?"[10] ಅಲ್ಲದೆ ತಮ್ಮ ವಚನಗಳ ಹಲವೆಡೆಗಳಲ್ಲಿ ಆದ್ಯರನ್ನು ಹೆಸರಿಸುತ್ತ ಘನಲಿಂಗಶಿವಾಚಾರ್ಯರು ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಘಟ್ಟಿವಾಳಯ್ಯ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ನೀಲಾಂಬಿಕೆ ಮೊದಲಾದ ಶರಣರನ್ನು ಭಕ್ತಿಯಿಂದ ನೆನೆದಿದ್ದಾರೆ.

ನಿಮ್ಮಂ ಸೆರಗೊಡ್ಡಿ ಬೇಡಿಕೊಂಬೆನಯ್ಯ,
ಭಕ್ತಿಗೆ ಭಂಡಾರವಾಗಿಪ್ಪ ಸಂಗನ ಬಸವಣ್ಣ,
ಎನಗೆ ಹಾಗತೂಕ ಭಕ್ತಿಯ ಕೊಡಯ್ಯ,
ಪ್ರಸಾದವೆ ಚಿತ್ಪಿಂಡಸ್ವರೂಪವಾದ ಚೆನ್ನಬಸವಣ್ಣ
ಎನಗೆ ಹಾಗತೂಕ ಜ್ಞಾನವ ಕೊಡಯ್ಯ.
ಮಾಯಾಕೋಲಾಹಲನಪ್ಪ ಅಲ್ಲಮಪ್ರಭುವೆ,
ಎನಗೆ ಹಾಗತೂಕ ವೈರಾಗ್ಯವ ಕೊಡಯ್ಯ,
ಬೆಟ್ಟದ ಗುಂಡ ತಂದು ಇಷ್ಟಲಿಂಗದಲ್ಲಿ ಐಕ್ಯವ ಮಾಡಿದ ಘಟ್ಟಿವಾಳಲಿಂಗವೆ,

---

7 ಘ.ದೇ.ವ. ೧—ಸಂ. ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು

8 ಘ.ದೇ.ವ. ೩

9 ಘ.ದೇ.ವ. ೩

10 'ಬಸವಾನಂತರಯುಗದ ವಚನಕಾರರು'—ಚನ್ನಪ್ಪ ಎರೇಸೀಮೆ: ಬಸವ ಜರ್ನಲ್ ೨-೨, ಪುಟ ೮೧

ಎನಗೆ ಹಾಗತೂಕ ಲಿಂಗವ ಕೊಡಯ್ಯ.
ಈ ನಾಲ್ಕು ಹಾಗ ಕೂಡಿದಲ್ಲಿಯೆ ಮನಲಿಂಗದಲ್ಲಿ ಒಂದು ಹಣಮಪ್ಪುದು[11]

ಎಂದು ಎಲ್ಲ ಶರಣರ ನೆನೆದು ಸೆರಗೊಡ್ಡಿ ಬೇಡಿಕೊಂಡು ಭಕ್ತಿಜ್ಞಾನವೈರಾಗ್ಯಗಳನ್ನು ತನುಮನದಲ್ಲಿ ತುಂಬಿಕೊಂಡಿದ್ದಾರೆ.

'ಬಸವಾದಿಪ್ರಮಥರ ಪಡಿಗ-ಪಾದರಕ್ಷೆಯುಂ ಹಿಡಿವುದಕ್ಕೆ ಯೋಗ್ಯನಾದೆನಯ್ಯ', 'ಇಂತಪ್ಪ ಶಿವಶರಣರ ಮನೆಯ ಬಾಗಿಲ ಕಾವ ಶುನಕನ ಮಾಡಿ ಎನ್ನ ನೀ ನಿಲಿಸಯ್ಯ', 'ನುಡಿ-ನಡೆ ಎರಡಾಗದಂತೆ ನಡೆಸಯ್ಯ'—ಎಂದು ಮುಂತಾಗಿ ಕಿಂಕರತ್ವವನ್ನು ಕಾಂಕ್ಷಿಸುತ್ತ ಶಂಕರತ್ವಕ್ಕೇರಿ ವಿನಯಧುರಂಧರರಾಗಿ ಮೆರೆದಿದ್ದಾರೆ. ಇವರ ಈ ನುಡಿಗಳಲ್ಲೆಲ್ಲ ಬಸವಣ್ಣನವರ ವಚನಗಳ ಪಡಿದನಿಯನ್ನು ಕಾಣಬಹುದು. ಕಠಿಣವಾದ ಸಾಧನೆಯನ್ನು ಕೈಕೊಂಡು ಆಚರಿಸಿ 'ಮಹಾಗುರು ಸಿದ್ಧೇಶ್ವರ ಪ್ರಭುವಿನ ಚರಣಮಂ ಕರಸ್ಥಲದಲ್ಲಿ ಹಿಡಿದು ಪೂಜೆಯಂ ಮಾಡಲೊಡನೆ ತನುವೇ ಪಂಚಬ್ರಹ್ಮ, ಪ್ರಾಣವೇ ಪರಬ್ರಹ್ಮವಾಯಿತು. ಪ್ರವೃತ್ತಿಯ ಬಟ್ಟೆ ಹುಲ್ಲು ಹುಟ್ಟಿತು. ನಿವೃತ್ತಿಯ ಬಟ್ಟೆ ನಿರ್ಮಲವಾಯಿತು. ಉಯ್ಯಾಲೆಯ ಮಣೆ ನೆಲೆಗೆ ನಿಂದಂತೆ'[12] ನಿಜದಲ್ಲಿ ನಿಂತರು. ನಿಶ್ಶಬ್ದ, ನಿರಾಲಂಬ, ನಿರಂಜನ, ನಿಶ್ಶೂನ್ಯರಾಗಿ ಬೆಳಗಿದರು; ಬೆಳಗಿನ ಬೆಳಗು ಮಹಾಬೆಳಗು ಆದರು.

ತೋಂಟದ ಶ್ರೀ ಸಿದ್ಧಲಿಂಗೇಶ್ವರರ ದಿವ್ಯಾನುಗ್ರಹದಿಂದ ಶ್ರೇಷ್ಠಮಟ್ಟದ ವಚನಸಾಹಿತ್ಯವನ್ನು ಸೃಷ್ಟಿಸಿ ಸ್ವತಂತ್ರ ವಚನಕಾರರೆನಿಸಿ ಆ ದಾರಿಯಲ್ಲಿ ಮುಂದಡಿಯಿಟ್ಟ ಘನಲಿಂಗಶಿವಯೋಗಿಗಳವರ ಅರವತ್ತುಮೂರು ವಚನಗಳು ಮಾತ್ರ ಸದ್ಯದಲ್ಲಿ ಉಪಲಬ್ಧವಿದ್ದು ವಚನಸಾಹಿತ್ಯಾಭ್ಯಾಸಿಗಳ ಹೃದಯವನ್ನಾಕರ್ಷಿಸಿ ಆ ಯುಗದಲ್ಲಿ ಪ್ರಮುಖವಾಗಿ ಪರಿಗಣಿಸಲೇಬೇಕಾದ ಉತ್ತಮ ಕೃತಿಗಳಾಗಿವೆ. 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಎಂಬ ಮನಮೋಹಕವಾದ ಅರ್ಥಪೂರ್ಣ ಅಂಕಿತವನ್ನೊಳಗೊಂಡಿರುವ ಅವರ ಅರವತ್ತುಮೂರು ವಚನಗಳನ್ನು ಅರವತ್ತುಮೂರು ಪುರಾತನರ ಪುಣ್ಯಸ್ಮರಣೆಯ ಸಂಕೇತವೆನ್ನಬಹುದೇನೋ! "ಈತನ ವಚನಗಳನ್ನು ಎಳಮಲೆ ಗುರುಶಾಂತದೇವ, ಸಂಪಾದನೆಯ ಸಿದ್ಧವೀರಣಾರ್ಯರು ತಮ್ಮ ವಚನಸಂಕಲನಗಳಲ್ಲಿ ಉದಾಹರಿಸಿರುವರು."[13] ಅವುಗಳ ಆಧಾರದಿಂದ ಘನಲಿಂಗಶಿವಯೋಗಿಗಳ ಘನತೆವೆತ್ತ ವ್ಯಕ್ತಿತ್ವವನ್ನೂ ಅಂದಿನ ಕಾಲದ ಸಮಾಜದ ಸುಂದರ ಚಿತ್ರವನ್ನೂ ನಾವು ಅರಿಯಬಹುದು. ಅವರ ವಚನಗಳಲ್ಲಿ ವಿಶಿಷ್ಟರೀತಿಯಲ್ಲಿ ಹೊರಹೊಮ್ಮಿ ಬಂದಿರುವ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಸೈದ್ಧಾಂತಿಕ ಮೌಲ್ಯಗಳನ್ನು ಮನಗಂಡು ಮನವಾರೆ ಮೆಚ್ಚಬಹುದು, ಸವಿದು ಹೃದಯಾರೆ ಆನಂದಿಸಬಹುದು. "ಘನಲಿಂಗದೇವರು ಬರೆದುದು ಕಡಿಮೆ; ಬಿಂಬಿಸುವುದು ಜಾಸ್ತಿ. ಭಾವುಕತೆಗಿಂತ ಬೌದ್ಧಿಕತೆ ಅಧಿಕವಾಗಿ, ಸಂಪ್ರದಾಯದ ವಚನಗಳಿಂದ ಸಾಕಷ್ಟು ಭಿನ್ನವಾದ ಅಭಿವ್ಯಕ್ತಿ ಇವರದಾಗಿದೆ. ನೀತಿ, ವಿಡಂಬನೆ, ಸಮಾಜವಿಮರ್ಶೆ, ಆತ್ಮಶೋಧನೆ, ಆಚಾರಮಹತಿಯಿಂದಾಗಿ ಇವರ ವಚನಗಳು ಆಸಕ್ತಿಪೂರ್ಣವಾಗಿವೆ"[14] ಎಂಬ ಅಭಿಪ್ರಾಯವನ್ನು ಒಪ್ಪಬಹುದು.

## ಸಾಮಾಜಿಕ-ಸಾಂಸ್ಕೃತಿಕ ಬೆಳಗು

ತಮ್ಮ ಸುತ್ತಮುತ್ತಲಿನ ಸಮಾಜದ ಸುಧಾರಣೆಗೆ ಸ್ಥಿರಸಂಕಲ್ಪ ತೊಟ್ಟು ಸಿದ್ಧ-ಪ್ರಸಿದ್ಧರಾಗಿ ಬಂದ ವಚನಕಾರರು ಸಮಕಾಲೀನ ಸಮಾಜದ ಹುಳುಕು-ಕೊಳಕುಗಳನ್ನು ತೊಳೆದು ಸಂಸ್ಕರಿಸುವ, ಸಮಾಜಕ್ಕೆ ಎಚ್ಚರಿಕೆಯನ್ನಿತ್ತು ಗುರಿಯೆಡೆಗೆ ಎಚ್ಚರಿಸುವ, ನಿಜೈಕ್ಯದ ನಿಚ್ಚಳಮಾರ್ಗದಲ್ಲಿ ಸಮಾಜವನ್ನು ಮುನ್ನಡೆಸುವ ಮಹತ್ಕಾರ್ಯದಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಂಡು ಸತತವಾಗಿ ಶ್ರಮಿಸಿದರು. ಅವರು ಸಮಾಜಕ್ಕೆ ನೀಡಿದ ಮಾರ್ಗದರ್ಶನ, ತೋರಿದ ಬೆಳಕು, ಬೀರಿದ ಸಂದೇಶಗಳು ಅವರ ಅಮರವಾಣಿಗಳಲ್ಲಿ ಜ್ವಲಂತವಾಗಿ ಬೆಳಗುತ್ತ ಸರ್ವಕಾಲಕ್ಕೂ ದಾರಿದೀಪಗಳಾಗಿ ಉಳಿದು ಬಂದಿರುತ್ತವೆ. ಅವರ ನುಡಿಮುತ್ತುಗಳಲ್ಲಿ ತುಂಬಿ ತುಳುಕುತ್ತ ಹೊರಸೂಸುತ್ತಿರುವ ಪ್ರಬೋಧ

11 ಘ.ದೇ.ವ. ೨

12 ಘ.ದೇ.ವ. ೪೫

13 ವೀರಶೈವಸಾಹಿತ್ಯಸಮೀಕ್ಷೆ—ಸಂ: ಸದಾನಂದ ಕನವಳ್ಳಿ, ಚನ್ನಪ್ಪ ಕೆರಿಮನಿ, ಲಕ್ಷ್ಮೇಶ್ವರ ಪು. ೨೪೩–೧೬ನೆಯ ಶತಮಾನ; ಎಸ್. ಶಿವಣ್ಣ

14 'ಬಸವಾನಂತರಯುಗದ ವಚನಸಾಹಿತ್ಯ'—ಎಂ. ಜಿ. ಬಿರಾದಾರ: ಬಸವ ಜರ್ನಲ್ ೨–೨ ಪು. ೫೮

ಪ್ರಭೆಯು ಜನತೆಯ ಹೃತ್ಕುಮುದಗಳನ್ನರಳಿಸಿ ತಮಸ್ತಿಮಿರವನ್ನು ಹೊಡೆದೋಡಿಸುತ್ತದೆ. ಸುಪ್ರಬುದ್ಧರೂ ಸಂಸಿದ್ಧರೂ ಆದ ಅವರು ಈ ಲೋಕದ ಸಂಸಾರಬದ್ಧರನ್ನು ಅನುಗ್ರಹಿಸಿ ಉದ್ಧರಿಸಿದ ಉತ್ತಮೋತ್ತಮ ಸುಸಂಸ್ಕೃತಿಯ ಸುಂದರಚಿತ್ರಗಳು ಅವರ ಸೂಳ್ನುಡಿಗಳಲ್ಲಿ ಸುವ್ಯಕ್ತವಾಗಿ ಬಂದಿವೆ. ಅವುಗಳನ್ನು ಮನನಮಾಡಿ ಅನುಷ್ಠಾನವಲ್ಲಿ ತಂದಾಗ ಮಾನವಜೀವನ ವಿಕಸಿತಗೊಂಡು ಸುಂದರವಾಗಿ ರೂಪಿತವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಅಂತಹ ಸುಪ್ರಬೋಧ ಪ್ರತಿಭೆಯಿಂದ ಪ್ರರೂಢರಾದ ಘನಲಿಂಗಶಿವಯೋಗಿಗಳವರ ಲಿಂಗನುಡಿಗಳಲ್ಲಿ ಈ ಲೋಕದ ಜೀವನರಂಗವನ್ನು ಸರಿಪಡಿಸಿ ಬೆಳಗುವ ಹೊಳಹು ಮತ್ತು ಹೊರಹೊಮ್ಮಿ ಬಂದಿರುವ ಚೆಲುವು ಎಲ್ಲರ ಮನವನ್ನೂ ಸೆಳೆಯುತ್ತವೆ. ಅವರು ಸಮಾಜದ ಸ್ಥಿತಿಗತಿಗಳ ಬಗೆಗೆ ಪ್ರಬೋಧಿಸಿರುವ ಬೋಧನೆಗಳಲ್ಲಿ ಮಾನವಸಮಾಜಕ್ಕೆ ಅತ್ಯಾವಶ್ಯಕವಾದ ಹಾಗೂ ಬದುಕಿಗೆ ಹೊಸದೊಂದು ಮೆರುಗನ್ನು ತಂದುಕೊಡುವ ಒಂದು ಸುಸಂಸ್ಕೃತಿಯ ಸಾಂಸ್ಕೃತಿಕ ಸೌಂದರ್ಯವು ಅತ್ಯಂತ ಮನೋಜ್ಞವಾಗಿ ಮೂಡಿಬಂದಿರುವುದನ್ನು ನೋಡಬಹುದಾಗಿದೆ. ಅವರ ವಚನಗಳ ಸಮಗ್ರವಿವೇಚನೆ. ವಿಶ್ಲೇಷಣೆ ಮಾಡುವುದು ಈ ಚಿಕ್ಕ ಲೇಖನದಲ್ಲಿ ಕಷ್ಟಸಾಧ್ಯ. ಕರಿಯು ಕನ್ನಡಿಯಲ್ಲಡಗುವಂತೆ ಇಲ್ಲಿ ಕೆಲವೇ ಗಮನಾರ್ಹ ವಚನಗಳನ್ನು ಗಮನದಲ್ಲಿಟ್ಟುಕೊಂಡು ವಿವೇಚಿಸಲಾಗಿದೆ.

ಮಹಾನುಭಾವರ ನಡೆ-ನುಡಿಗಳು ಮಾಯಾಮೋಹದಲ್ಲಿ ಮುಳುಗಿರುವ ಮರ್ತ್ಯಜೀವಿಗಳಿಗೆ ಸುಲಭದಲ್ಲಿ ರುಚಿಸುವುದಿಲ್ಲವೆಂಬುದು ಸುಸಂವೇದ್ಯವಾದುದು. ಅಧೋಮುಖಿಯಾಗಿ ಜಾರಿಬೀಳುತ್ತಿರುವ ಜೀವ, ಆ ರೀತಿ ಜಾರುವುದರಲ್ಲಿಯೇ ಒಂದು ವಿಧವಾದ ಸುಖ-ಸಂತೋಷಗಳನ್ನು ಕಾಣುತ್ತದೆಯೇ ಹೊರತು ತಾನು ಮೇಲೇರಿ ಹೋಗಿ ನಿತ್ಯ-ಶಾಶ್ವತ-ಗಂಭೀರಸುಖದೊಳಿರಲು ಮನಸ್ಸು ಮಾಡದು. ಆದರೆ ಸಕಲ ಜೀವಾವಳಿಗೆ ಲೇಸನೇ ಬಯಸಿ ಲೇಸನೇ ಗೈಯುತ್ತಿರುವ ಶರಣರು ಹೀಗೆ ಅಧಃಪತನದಲ್ಲಿರುವ ಜೀವಿಯನ್ನು ಕೈಹಿಡಿದು ಮೇಲೆ ಕರೆದೊಯ್ಯುವ ಪವಿತ್ರ ಕೈಂಕರ್ಯವನ್ನು ಕೈಕೊಂಡಿದ್ದರೆ ಅದಕ್ಕೆ ಎಲ್ಲ ಕಡೆಗಳಿಂದ ಮೆಚ್ಚಿಕೆಗಿಂತಲೂ ಪ್ರತಿರೋಧವೇ ಹೆಚ್ಚು ಕಂಡುಬರುತ್ತದೆ. ಹೀಗಿದ್ದರೂ ಸಮಾಜಸುಧಾರಣೆಗೆ ಕಂಕಣಬದ್ಧರಾಗಿ ನಿಂತ ಮಹಾನುಭಾವರು ಇದಾವುದಕ್ಕೂ ಅಂಜದೆ ಅಳುಕದೆ 'ಖಂಡಿತವಾದಿ ಲೋಕವಿರೋಧಿ' ಎಂಬಂತೆ ತಾವು ಕಂಡ ಅಸಂಗತಗಳನ್ನೆಲ್ಲ ಖಂಡತುಂಡವಾಗಿ ಖಂಡಿಸಿ ನುಡಿದಿದ್ದಾರೆ. ಆ ನುಡಿಗಳಲ್ಲಿ ಒಂದು ಬಗೆಯ ವಿನೂತನ ಚೆಲುವು ಎದ್ದುಕಾಣುತ್ತದೆ. ಅರಿವು ಎಚ್ಚೆತ್ತವರಿಗೆ ಅವರ ಮಾತುಗಳು ಅಮೃತಪ್ರಾಯ, ಅರಿವು ಹೋಗಿ ಮರೆವು ಮುಸುಕಿದವರಿಗೆ ಅವು ಮೃತ್ಯುಪ್ರಾಯ ಎನ್ನಬಹುದು. ಆದುದರಿಂದ ಸಮಾಜದ ಓರೆಕೋರೆಗಳನ್ನು ತಿದ್ದಿ ಸರಿಪಡಿಸುವಾಗ ಘನಲಿಂಗದೇವರು ಮಾನವ ಜೀವನಪರಿಶುದ್ಧಿಗೆ, ಪರಿಪೂರ್ಣತೆಗೆ ಆವಶ್ಯಕವಾದ ಶ್ರೇಷ್ಠಗುಣಗಳನ್ನು ತಮ್ಮ ವಚನಗಳಲ್ಲಿ ರೂಪಿಸಿದ್ದಾರೆ. ಸಮಾಜವನ್ನು ನಂದನವನ್ನಾಗಿ ಮಾಡಬೇಕೆಂಬ ಉದಾತ್ತಭಾವ, ಮರ್ತ್ಯಕ್ಕೆ ಮಹವ ತರಬೇಕೆಂಬ ಮಹೋದ್ದೇಶ ಅವರ ವಚನಗಳಲ್ಲಿ ಹಾಸುಹೊಕ್ಕಾಗಿವೆ. ಅವರ ವಚನಗಳು ಅನುಭವದ ಗುಡಿಯಲ್ಲಿ. ಅನುಭಾವದ ಮುಡಿಯಲ್ಲಿ ನಿಂತು ನಿರಂತರವೂ ಮಿರುಗುವ ಜ್ಞಾನದ ಕಿಡಿಗಳು, ಜ್ಯೋತಿಯ ಕುಡಿಗಳಾಗಿವೆ. ಜನಜೀವನದಲ್ಲಿ ಭಕ್ತಿಯ ಬೀಜಗಳನ್ನು ಬಿತ್ತಿ, ಮುಕ್ತಿಯ ಫಲಗಳನ್ನಿತ್ತು ವೀರಶೈವಮತ-ಧರ್ಮ–ತತ್ತ್ವಗಳಲ್ಲಿ ಅವು ಅದ್ಭುತವಾದ ಅರಿವನ್ನುಂಟುಮಾಡಿದವು. ಅವು ಒಬ್ಬೊಬ್ಬರ ಪಾಲಿಗೆ ಒಂದೊಂದು ರೀತಿಯಲ್ಲಿ ಪರಿಣಮಿಸಿದವು ಎಂದು ಹೇಳಿರುವುದು ತುಂಬ ಸೊಗಸಿನಿಂದ ಕೂಡಿದೆ.

ಶಿವಜ್ಞಾನೋದಯವಾದ ಲಿಂಗಾಂಗಿಗಳಿಗೆ
ಎನ್ನ ನುಡಿ ಮೃಗಂದೆಯಂ ತುರಿಸಿದಂತೆ
ಹಾಲುಸಕ್ಕರೆಯನುಂಡಂತೆ ಸವಿದೋರುತ್ತದೆ.
ವೇಷಧಾರಿ ವಿಶ್ವಾಸಘಾತುಕರಿಗೆ
ಎನ್ನ ನುಡಿ ಅಲಗಿನ ಮೊನೆಯಂತೆ ಇರಿಯುತ್ತದೆಯಯ್ಯ[15]

ಘನಲಿಂಗರ ವಚನಗಳು ಶಿವಜ್ಞಾನಿಗಳ ಪಾಲಿಗೆ ಮೈಗಂದೆಯನ್ನು ತುರಿಸಿದಂತೆ, ಹಾಲುಸಕ್ಕರೆಯನುಂಡಂತೆ; ವೇಷಧಾರಿಗಳಿಗೆ ಖಡ್ಗಧಾರೆಯಂತೆ ಎಂದು ಹೇಳಿರುವುದು ಒಂದು ದೃಷ್ಟಿಯಲ್ಲಿ ಅವರ ವಿಚಾರಧಾರೆಗೆ. ಅವರ ವಚನಪ್ರಪಂಚಕ್ಕೆ ಅನ್ವಯಿಸುವಂತಹ ವಿಮರ್ಶೆಯ ವಿಶಿಷ್ಟ ನುಡಿಯಾಗಿದೆ.

---

15 ಘ.ದೇ.ವ. ೨೩

ಸಮಾಜ ಸುಸ್ಥಿರಗೊಂಡು ಜನಜೀವನ ಸುಖಮಯವಾಗಿ ಸಾಗಬೇಕಾದರೆ ಮೊದಲು ವ್ಯಕ್ತಿಯ ನಡೆ-ನುಡಿಗಳು ಒಂದಾಗಬೇಕು, ಉತ್ತಮವಾಗಬೇಕು. ಆ ನಡೆ-ನುಡಿಗಳಲ್ಲಿ ಸಾಮರಸ್ಯ, ಸಾಮಂಜಸ್ಯ ಮುಖ್ಯವಾಗಿ ಇರಬೇಕು. ಆಡುವುದು ಒಂದು, ಮಾಡುವುದು ಮತ್ತೊಂದು ಆದರೆ ಆ ವ್ಯಕ್ತಿಗೆ ಗೌರವ ಸಿಗುವುದಿಲ್ಲ. ಅವನು ಸುಸಂಸ್ಕೃತನೆನಿಸ ಲಾರನು. ಅವನಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಇರದು. ನುಡಿಯಲ್ಲಿ ಜಾಣರಾಗಿ, ನಡೆಯಲ್ಲಿ ಕೋಣ ರಾಗಿರುವವರೇ ಎಲ್ಲ ಕಾಲದಲ್ಲೂ ಅತ್ಯಧಿಕಸಂಖ್ಯೆಯಲ್ಲಿ ಸಿಕ್ಕುತ್ತಾರೆ. 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ಘಟಸರ್ಪವಯ್ಯ' ಎಂದು ಬಸವಣ್ಣನವರೂ ಹೇಳಿದ್ದಾರೆ. ನುಡಿಯಲ್ಲಿ ಪುರಾತನರು, ನಡೆಯಲ್ಲಿ ಕಿರಾತರು ಆಗಿ, ಶಿವಶರಣರ ಸೊಳ್ನುಡಿಗಳನ್ನು ರಾಗವಾಗಿ ಹಾಡಿಕೊಂಡು ವಿರಾಗಿಗಳಂತೆ ಓಡಾಡುತ್ತ ಹೊಟ್ಟೆ ಹೊರೆದು ಕೊಳ್ಳುತ್ತಿರುವ, ತಾವು ಸಾಧು-ಸತ್ಪುರುಷರು ಎಂಬ ಸೋಗನ್ನು ಹಾಕಿಕೊಂಡು ಸ್ವಾರ್ಥವನ್ನು ಸಾಧಿಸಿಕೊಳ್ಳು ತ್ತಿರುವ ಸಮಾಜಘಾತಕರನ್ನು ತಮ್ಮ ನುಡಿಚಾಟಿಯಿಂದ ಬಲವಾಗಿ ಹೊಡೆದೆಬ್ಬಿಸಿದ್ದಾರೆ:

> ಆದ್ಯರ ವಚನವೆಂಬುದು ಸಂತೆಯ ಮಾತೆ? ಪುಂಡರ ಪುರಾಣವೆ?
> ಲೋಕದ ಜನರ ಮೆಚ್ಚಿಸುವ ಬೀದಿಯ ಮಾತೆ?
> ಶಿವ ಶಿವ ನೀವು ಶಿವಶರಣರ ಕೂಡಾಡಿ ವಚನಂಗಳ ಕಲಿತು
> ಆ ವಚನಂಗಳ ನಿಮ್ಮ ಊಟದ ವೆಚ್ಚಕ್ಕೆ ಈಡುಮಾಡಿಕೊಂಡಿರಲ್ಲದೆ
> ಮುಂದಣ ಮುಕ್ತಿಯ ಪದವ ಕಾಣದೇ ಹೋದಿರಲ್ಲಾ?![16]

ಆದ್ಯರ ವಚನಗಳನ್ನು ಅಂದಂದಿನ ಊಟದ ವೆಚ್ಚಕ್ಕೆ ಬಳಸಿಕೊಂಡು ಮುಕ್ತಿಮಾರ್ಗವನ್ನು ಕಾಣದೆ ತಮ್ಮ ಉಕ್ತಿ ಚಾತುರ್ಯದಿಂದಲೇ ಕಾಲಕಳೆಯುವ ಕೇವಲ ಭುಕ್ತಿಸಾಧಕರನ್ನು ಬಯಲಿಗೆಳೆದು ಅವರ ಗುಟ್ಟನ್ನು ಬಯಲು ಮಾಡಿ ದ್ದಾರೆ.

ಬರಿಯ ಬೂಟಾಟಿಕೆಯ ವೇಷಧಾರಿಗಳಾದ ಗುರು-ವಿರಕ್ತರು ತಮ್ಮ ಹೊರಗಿನ ವೇಷ-ಭೂಷಣಗಳ ಜರ್ಬಿನಿಂದ ಸಮಾಜವನ್ನು ಸುಲಿದು ಶೋಷಣೆಗೈಯುತ್ತಿರುವ ಭಯಂಕರತೆಯನ್ನು ಕಂಡಾಗ ಘನಲಿಂಗ ಶಿವಯೋಗಿಗಳ ವಾಣಿ ಬರಸಿಡಿಲಿನಂತೆ ಎರಗುತ್ತದೆ:

> ಕಾಯಕಕ್ಕಾರದೆ ಜೀವಗಳ್ಳನಾಗಿ ಮಂಡೆಯ ಬೋಳಿಸಿಕೊಂಡು
> ಕಂಡಕಂಡವರ ಮನೆಯಲ್ಲಿ ಉಂಡು
> ಕುಂಡೆಯ ಬೆಳಸಿಕೊಂಡಿಪ್ಪಾತ ಆತುಮಸುಖಿಯಯ್ಯ.
> ನಾತಿನ ಮಾಲೆಯನುಳಿದು ಕಾಯದ ಕಳವಳವನಳಿದು
> ಲೋಕದ ವ್ಯವಹಾರವ ನೂಂಕಿ
> ಅಂಬಿಲ–ಅಮೃತವ ಸರಿಯೆಂದು ಕಂಡು
> ಏಕಾಂಗಿಯಾಗಿ ತನುವ ದಂಡಿಸಿ ಗಿರಿಗಹ್ವರದಲ್ಲಿದ್ದರೆ ವಿರಕ್ತನೆ? ಅಲ್ಲ.
> ಅದೇನು ಕಾರಣವೆಂದರೆ–
> ತಾಯಿಯ ಗರ್ಭದಲ್ಲಿ ಶಿಶುವು ಇಕ್ಕಿದ ಕುಕ್ಕುಟಾಸನವ ತೆಗೆಯದು
> ಶೀತ–ಉಷ್ಣವೆಂದೆನ್ನದು, ಉಪಾಧಿಕೆಯನರಿಯದು
> ಮುಚ್ಚಿದ ಕಣ್ಣು, ಮುಗಿದ ಕೈಯಾಗಿ ಉಗ್ರತಪಸ್ಸಿನಲ್ಲಿಪ್ಪುದು.
> ಅದಕ್ಕೆ ಮುಕ್ತಿಯಾದರೆ ಇವನಿಗೆ ಮುಕ್ತಿಯುಂಟು.
> ಬರಿಯ ವೈರಾಗ್ಯ ಭವಕ್ಕೆ ಬೀಜವಯ್ಯ.[17]

ಗುರು–ವಿರಕ್ತರಾದರೂ ಕಾಯಕನಿರತರಾಗಿರಬೇಕು. ಸಮಾಜದ ಒಳಿತಿಗಾಗಿ ತನು-ಮನಗಳನ್ನು ಸವೆಸಬೇಕು. ಹಾಗೆ ಮಾಡದೆ ಗಿರಿಗಹ್ವರಗಳಲ್ಲಿದ್ದುಕೊಂಡು ತಪಸ್ಸನ್ನು ಮಾಡುತ್ತೇವೆ ಎಂಬುವವರ ಸಾಧನೆಯ ಪೊಳ್ಳುತನವನ್ನು ಇಲ್ಲಿ ವಿಡಂಬಿಸಿ ನುಡಿದಿದ್ದಾರೆ. ತಾಯಿಯ ಗರ್ಭದಲ್ಲಿರುವ ಶಿಶುವು ಕೂಡ ಒಂದು ರೀತಿಯಲ್ಲಿ ಉಗ್ರತಪಸ್ಸಿನಲ್ಲಿರುತ್ತದೆ ಯಲ್ಲವೆ? 'ಅದಕ್ಕೆ ಮುಕ್ತಿಯಾದರೆ ಇವನಿಗೆ ಮುಕ್ತಿಯುಂಟು'—ಎಂದು ಕಟಕಿಯಾಡಿದ್ದಾರೆ. ಹಾಗಾದರೆ ನಿಜವಾದ

---

[16] ಘ.ದೇ.ವ. ೨೩

[17] ಘ.ದೇ.ವ. ೧೯

ವಿರಕ್ತನು ಯಾರು? ಎಂಬ ಪ್ರಶ್ನೆಗೆ ಘನಲಿಂಗಶಿವಯೋಗಿಗಳು ಕೊಡುವ ಉತ್ತರ ಅವರ ಘನವೈರಾಗ್ಯದೆತ್ತರದ ದರ್ಶನವೈಭವಕ್ಕೆ ಹಿಡಿದ ನುಡಿಗನ್ನಡಿಯಾಗಿದೆ:

ಇನ್ನು ನಿಜವಿರಕ್ತಿಯ ಪರಿ ಯಾವುದೆಂದರೆ
ತ್ರಿವಿಧಪದಾರ್ಥದಲ್ಲಿ ಮನವಿಲ್ಲದೆ ಬರಿಯ ಬಣ್ಣದ ನುಡಿಗೆ ಹಣ್ಣಾಗದೆ
ಅಂಗಭೋಗವ ನೂಂಕಿ, ಲಿಂಗಭೋಗವ ಕೈಕೊಂಡು
ಆತ್ಮತೇಜವನಲಂಕರಿಸದೆ ಅಸುವಿಂಗೆ ಭಿಕ್ಷವ ನೆಲೆಮಾಡಿ
ಸದಾಕಾಲದಲ್ಲಿ ಮಂತ್ರಮಾಲೆಯಂ ಮನದಲ್ಲಿ ಕೂಡಿ
ಆದಿ-ಮಧ್ಯ-ಅವಸಾನಮಂ ತಿಳಿದು
ನಿರ್ಮಲಚಿತ್ತನಾಗಿ, ಏಕಾಂತವಾಸಿಯಾಗಿ
ನವಚಕ್ರಂಗಳಲ್ಲಿ ನವಬ್ರಹ್ಮಂಗಳ ಮೂರ್ತಿಗೊಳಿಸಿ
ಕಾಯದ ಕಣ್ಣಿಂದ ಕರತಲಾಮಲಕವ ನೋಡುವಂತೆ
ಮನದ ಕಣ್ಣಿಂದ ನವಬ್ರಹ್ಮಸ್ವರೂಪವ ಮನದಣಿವಂತೆ ನೋಡಿ
ಸುಚಿತ್ತವೇ ಮೊದಲು ನಿರವಯವೆ ಕಡೆಯಾದ ನವಹಸ್ತಂಗಳಿಂದ
ಭಾವಪುಷ್ಪಂಗಳಲ್ಲಿ ಪೂಜೆಯಂ ಮಾಡಿ ಮನದಣಿವಂತೆ
ಸುಚಿತ್ತಗುರುವನಪ್ಪಿ, ಸುಬುದ್ಧಿಲಿಂಗವನಪ್ಪಿ,
ನಿರಹಂಕಾರಜಂಗಮುವನಪ್ಪಿ, ಸುಮನಪ್ರಸಾದವನಪ್ಪಿ,
ಸುಜ್ಞಾನಪಾದೋದಕವನಪ್ಪಿದ ಲಿಂಗಾಂಗಿಯೀಗ ವಿರಕ್ತನು.
ಇಂತಪ್ಪವಿರಕ್ತಿಕೆಯೆಂಬ ಪ್ರಸನ್ನತ್ವಪ್ರಸಾದಮಂ
ಎನಗೆ ಕರುಣಿಪುದಯ್ಯ,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ[18]

ಎಂದು ನಿಜವಿರಕ್ತಿಯ ಪರಿಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದ್ದಾರೆ. ವಿರಾಗಿಯಾದವನು ಯಾವುದನ್ನು ಸಂಪೂರ್ಣ ತ್ಯಜಿಸಬೇಕು, ಮತ್ತೆ ಯಾವುದನ್ನು ತಪ್ಪದೆ ಅಪ್ಪಬೇಕು ಎಂಬುದನ್ನು ಮನಂಬುಗುವಂತೆ ವಿವರಿಸಿದ್ದಾರೆ. ವಚನಶಾಸ್ತ್ರಾದಿಗಳನ್ನು ಓದುವುದರಿಂದ ವಿರಕ್ತಿಯನ್ನು ಗಳಿಸುವೆವು ಎಂಬ ಭ್ರಾಂತಿ ಮತ್ತು ಈ ತೋರಿಕೆಯ ವಿರಕ್ತಿಗಳನ್ನು ಹೀಗಳೆಯುತ್ತ ಮಾಯೆಗೆ ಅಧೀನರಾದ ಅಂತಹ ವ್ಯಕ್ತಿಗಳ ಬೂಟಾಟಿಕೆಯನ್ನು ವ್ಯಂಗ್ಯವಾಗಿ ಟೀಕಿಸಿ ನುಡಿದಿದ್ದಾರೆ. ಮಾಯೆಯ ಹಾವಳಿಗೆ ಒಳಗಾದ ಮರುಳರಿಗೆ ವೈರಾಗ್ಯ ಲಭಿಸದು ಎಂದು ಘೋಷಿಸಿದ್ದಾರೆ:

ಕರಣಹಸುಗೆಯ ನೋಡುವಣ್ಣಗಳ ಕಾಲ ಹಿಡಿದೆಳೆಯಿತು ಮಾಯೆ!
ಮಿಶ್ರಾರ್ಪಣಗಳ ನೋಡುವಣ್ಣಗಳ ಮೀಸೆಯ ಹಿಡಿದುಯ್ಯಲೆಯನಾಡಿತು ಮಾಯೆ!
..............................................................................
ಮಂತ್ರಗೋಪ್ಯವನೋದುವಣ್ಣಗಳ
ಕುಟಿಲವೆಣ್ಣಿನ ಕುಮಂತ್ರಕ್ಕೆ ಸಿಕ್ಕಿಸಿ ಕಾಡಿತು ಮಾಯೆ!
ಬರಿಯ ವೈರಾಗ್ಯವ ಮಾಡುವಣ್ಣಗಳ
ಸ್ತ್ರೀಯರ ಮುಡಿಯ ಸಿಂಗರಿಸುವಂತೆ ಮಾಡಿತು ಮಾಯೆ!
.......................................................
ಇದು ಕಾರಣ
ಇಚ್ಚೆಯ ನುಡಿದು ಕುಚ್ಚಿತನಾಗಿ ಬರಿ ವಿರಕ್ತನಂತೆ ಹೊಟ್ಟೆಯ ಹೊರೆದು
ಹೊನ್ನು-ಹೆಣ್ಣು-ಮಣ್ಣು ದೊರೆತಲ್ಲಿ ಹಿಡಿದಿಹ
ಕರ್ಮಿಯೆಂಬ ಕಾಳುಮೂಳರಿಗೆಲ್ಲಿಯದೋ ವಿರಕ್ತಿ?[19]

ಎಂದು ವಿವರಿಸುತ್ತ ಹೊನ್ನು, ಹೆಣ್ಣು, ಮಣ್ಣುಗಳ ಮೋಹಕ್ಕೆ ತುತ್ತಾದವರಿಗೆ ವೈರಾಗ್ಯ ಅಂಕುರಿಸದು ಎಂಬುದನ್ನು ಹೃದಯಂಗಮವಾಗಿ ಹೇಳಿದ್ದಾರೆ. ಮನುಷ್ಯನು ತಾನು ಅನುಭವಿಸುವ ಅಲ್ಪಸುಖವನ್ನೇ ಸ್ವರ್ಗಸುಖವೆಂದು ಭಾವಿಸುವ ಭ್ರಮೆಯನ್ನು ಬಣ್ಣಿಸಿರುವ ರೀತಿ ತುಂಬ ಸೊಗಸಾಗಿದೆ.

---

[18] ಘ.ದೇ.ವ, ೧೯

[19] ಘ.ದೇ.ವ, ೬೧

ಓಡು ಒಡಕು, ಹುರುಳಿ ಪೋಟಿ
ಹುರಿವಾಕೆಯ ಕೈ ಸೊತ್ತು, ಕಣ್ಣು ಕುರುಡು
ಮೆಲುವಾತ ಬೋಡ ಮೂಕೊರೆಗೆ:
ಇಂತಿವರು ತಮ್ಮ ಭೋಗಕ್ಕೆ ಸುರಪತಿಯ ಭೋಗವ ಜರಿವ
ನರಕುರಿಗಳ ನಾನೇನೆಂಬೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ[20]

"ಹುರಿಯುವ ಹೆಂಚು ಒಡೆದಿದೆ; ಹುರುಳಿಯೂ ಹುಳಿತಿದೆ; ಹುರಿಯುವ ಹೆಂಗಸಿನ ಕೈ ಸೊಟ್ಟು; ಜೊತೆಗೆ ಕುರುಡಿ ಬೇರೆ. ತಿನ್ನುವವನಿಗೆ ಹಲ್ಲಿಲ್ಲ, ಮೂಕ—ಇಂಥವರು ತಮ್ಮ 'ಭೋಗ'ವನ್ನು ಹೇಳಿಕೊಂಡು ಇಂದ್ರನ ಭೋಗವನ್ನು ಜರಿಯುತ್ತಾರೆ. 'ನರಕುರಿ'ಗಳೆಲ್ಲ ಹೀಗೆಯೇ! ತಮ್ಮ ಭೋಗದ ಭ್ರಮೆಯಲ್ಲೇ ಬದುಕುತ್ತಿದ್ದಾರೆ! ಹೇಳಿರುವ ರೀತಿ ಸ್ವಾರಸ್ಯವಾಗಿದೆ, ಅನುಮಾನವಿಲ್ಲ.

ಹನ್ನೆರಡನೆಯ ಶತಮಾನದ ವಚನಕಾರರಾಗಿದ್ದರೆ, ಅಂತಹ ಬಡತನವನ್ನು ಬಹುಶಃ ಗೌರವದಿಂದ ಕಾಣುತ್ತಿದ್ದರು. ಇದ್ದುದರಲ್ಲೇ ತೃಪ್ತಿಯನ್ನು ಕಾಣುವ ಪ್ರವೃತ್ತಿಯನ್ನು ಮೆಚ್ಚುತ್ತಿದ್ದರು, ಉದಾತ್ತೀಕರಿಸುತ್ತಿದ್ದರು. ಸಮಾಜದ ಧಾರ್ಮಿಕ ಉದ್ಧಾರವೇ ಮುಖ್ಯವಾಗಿದ್ದ ಹದಿನಾರನೆಯ ಶತಮಾನದ ವಚನಕಾರರಿಗೂ ಹಿಂದಿನವರಿಗೂ ಇರುವ ವ್ಯತ್ಯಾಸ ಎದ್ದು ಕಾಣುತ್ತದೆ.[21]"

ಇಂತಹ ಪರಿಣಾಮಕಾರಿಯಾದ ದೃಷ್ಟಾಂತಗಳನ್ನಿತ್ತು ತೀಕ್ಷ್ಣತರವಾದ ಕಟುನುಡಿಗಳಲ್ಲಿ ಸಮಕಾಲೀನ ಸಮಾಜದ ಲೋಪದೋಷಗಳನ್ನು ಮನಸ್ಸಿಗೆ ನಾಟುವಂತೆ ಟೀಕಿಸಿ, ಎಲ್ಲರ ಮನ ಮುಟ್ಟುವಂತೆ ಮಾರ್ಗದರ್ಶನ ಮಾಡಿ ಸಮಾಜೋದ್ಧಾರಕರೆನಿಸಿದ ಘನಲಿಂಗಚಕ್ರವರ್ತಿಗಳ ಲೋಕಕಾರುಣ್ಯ ಮಹೋನ್ನತವಾಗಿದೆ, ಅವರ ಆ ಕಟುನುಡಿಗಳ ಹಿಂದೆ ಸಮಾಜದ ಯೋಗಕ್ಷೇಮದ ಬಗೆಗೆ ಎಂತಹ ಕಳಕಳಿ ಸದಾ ಪುಟಿಯುತ್ತಿದೆ ಎಂಬುದನ್ನು ಮನಗಂಡು ಮೆಚ್ಚಬಹುದಾಗಿದೆ.

ಕಪಿಯ ಕೈಯ್ಯ ಕನ್ನಡಿಯಂತೆ ಕುಣಿದರೆ ಕುಣಿದು,
ಏಡಿಸಿದರೆ ಏಡಿಸಿ, ಹಲ್ಲು ಕಿರಿದರೆ ಹಲ್ಲು ಕಿರಿದು
ಮನವಾಡಿದಂತೆ ನೀನಾಡಬೇಡ,
ಮನವಾಡಿದಂತೆ ಆಡಿದವಂಗೆ ಭಕ್ತಿಯೆಲ್ಲಿಯದು ?
ಜ್ಞಾನವೆಲ್ಲಿಯದು ? ವೈರಾಗ್ಯವೆಲ್ಲಿಯದು ?
ವಿರಕ್ತಿಯೆಲ್ಲಿಯದು ? ಮುಕ್ತಿಯೆಲ್ಲಿಯದಯ್ಯ ?[22]

—"ಎಂಬ ಅವರ ಮಾತು ದಾರಿದೀಪದಂತಿದೆ ನಮಗೆ!"[23]

## ಸಾಹಿತ್ಯಕ ಬೆಳಗು

ಮಾನವನು ಮರ್ತ್ಯದ ಮೇಲೆ ಮಹಾತ್ಮನಾಗಿ ಬಾಳಿ ಬದುಕಿ ತನ್ನ ಪರಮಗುರಿಯಾದ ಮಹಾದೇವತ್ವಕ್ಕೇರುವ ದಿಸೆಯಲ್ಲಿ ಅವನ ಮನದ ಕಾಳಿಕೆಯು ಕಳೆಯಲೆಂದು ವಚನಜ್ಯೋತಿಯನ್ನು ಹಚ್ಚಿಟ್ಟ ಶರಣರು ತಾವು ಕಂಡುಂಡ ದಿವ್ಯಾನುಭವಗಳನ್ನು ಅತ್ಯಂತ ರಮಣೀಯವಾದ ನುಡಿಗಳಲ್ಲಿ ಲೋಕಕ್ಕೆ ಹಿಡಿದು ಕೊಟ್ಟಿದ್ದಾರೆ. ಜನಸಾಮಾನ್ಯರ ಸಾಮಾಜಿಕಜೀವನವನ್ನು ಹಸನುಗೊಳಿಸುವುದನ್ನೇ ತಮ್ಮ ಜೀವನದ ಹೆಗ್ಗುರಿಯನ್ನಾಗಿ ಹೊಂದಿದ್ದ ಅವರು ತಾವು ಹೇಳುವ ಹೊಸ ವಿಚಾರಗಳು ಸಾಮಾನ್ಯಜನರಿಗೂ ಮನಮುಟ್ಟುವಂತಿರಬೇಕೆಂಬ ದೃಷ್ಟಿಯುಳ್ಳವರಾಗಿದ್ದರು. ಅವರಿಗೆ ಪಂಡಿತವರ್ಗವನ್ನು ಮೆಚ್ಚಿಸಬೇಕೆಂಬ ಕಾಂಕ್ಷೆಯಂತೂ ಇರಲಿಲ್ಲ. ದೀನದಲಿತರೇ, ಪತಿತ ಪಾಮರರೇ ಅವರ ಕಣ್ಣಮುಂದೆ ಸದಾಕಾಲ ಇದ್ದವರು. ಅಂಥವರ ಏಳಿಗೆಗೆ ಮಹಾ ಮಾರ್ಗವೊಂದನ್ನು ತೋರುವ

---

[20] ಘ.ದೇ.ವ, ೨೭

[21] ಡಾ. ಎಂ. ಚಿದಾನಂದಮೂರ್ತಿ : 'ವಚನಸಾಹಿತ್ಯ', ಪು. ೨೩೫.

[22] ಘ.ದೇ.ವ. ೭

[23] ಡಾ. ಸಿದ್ಧಯ್ಯ ಪುರಾಣಿಕ : 'ಘನತೆವೆತ್ತ ಘನಲಿಂಗದೇವ'—ಶರಣಚರಿತಾಮೃತ : ಪು. ೬೪೪.

ಮಹತ್ಸಂಕಲ್ಪ ಅವರಿಗೆ ಎಲ್ಲಕ್ಕಿಂತ ಅಮೂಲ್ಯವಾದುದು ಆಗಿತ್ತು. ಅದಕ್ಕಾಗಿ ತಾವು ಜಗತ್ತಿಗೆ ಕೊಡಲು ಹೊರಟಿರುವ ತಮ್ಮ ಹೊಸ ಆಲೋಚನೆಗಳು ಸಮಾಜದ ಎಲ್ಲ ಸ್ತರಗಳಿಗೂ ತಲುಪುವಂತಾಗಲು ಅವರು ಭಾಷೆಯನ್ನು ಮೊದಲು ಪಳಗಿಸಿ ಹದಗೊಳಿಸಿದರು. ಆದುದರಿಂದ ಜನಸಾಮಾನ್ಯರ ದಿನಬಳಕೆಯ ಭಾಷೆಯನ್ನೇ ದಿಟ್ಟತನದಿಂದ ಬಳಸಿ ಕನ್ನಡಕ್ಕೆ ಹೊಸ ಚೆಲುವು-ಹೊಸ ಕಾಂತಿಗಳನ್ನು, ತುಷ್ಟಿ-ಪುಷ್ಟಿ-ದೃಷ್ಟಿಗಳನ್ನು ತಂದುಕೊಟ್ಟರು. ಅದರಿಂದ ಅವರ ಮಾತುಗಳಲ್ಲಿ ಒಂದು ವಿಧವಾದ ಹರಿತ-ಮೊರೆತಗಳು, ಸೌಂದರ್ಯ-ಸೌಕುಮಾರ್ಯಗಳು, ಮಾರ್ದವ-ಮಾಧುರ್ಯಗಳು ಪರಿಣಾಮಕಾರಿಯಾಗಿ ತುಂಬಿಕೊಂಡು ಬಂದು ಎಲ್ಲರ ಎದೆಯುಗೂಡನ್ನು ತಾಗಿ ಎಚ್ಚರಿಸಿದುವು.

ಬಸವಯುಗದ ವಚನಗಳಲ್ಲಿ ಎಲ್ಲರ ಮನ ಸೆಳೆಯುವಂತೆ ಕಾಣುವ ಅಸದೃಶ ಕಾವ್ಯಸೌಂದರ್ಯ ಆ ಬಳಿಕ ಅನೇಕ ವರ್ಷಗಳ ತರುವಾಯ ಬಂದ ಸಿದ್ಧಲಿಂಗಯುಗದ ವಚನಗಳಲ್ಲಿ ಕಾಣುವುದು ಬಹಳ ವಿರಳವೆಂದೇ ಹೇಳಬೇಕು. ಅದಕ್ಕೆ ಕಾರಣ, ಬಸವಯುಗದಲ್ಲಿ ಎಲ್ಲೆಲ್ಲೂ ಕಂಡುಬಂದ ಹೊಸ ಸ್ಫೂರ್ತಿಯ ಸ್ಪಂದನ, ನೂತನ ಕ್ರಾಂತಿಯ ಆಕ್ರಂದನ, ನವಸಮಾಜದ ನಿರ್ಮಾಣ ಈ ಮುಂತಾದ ರಸಾವೇಶಗಳು ತಾಕಲಾಡಿದುದರಿಂದ ಹೊರಹೊಮ್ಮಿದ ಆ ರಸನುಡಿಗಳಲ್ಲಿ ಕಾವ್ಯದ ಹೊಸ ಮಿಂಚು-ಗುಡುಗುಗಳನ್ನು ಪ್ರತಿಕ್ಷಣ-ಕ್ಷಣದಲ್ಲೂ ಕಾಣಬಹುದು. ಆದರೆ ಮುಂದೆ ಬಂದ ಸಿದ್ಧಲಿಂಗಯುಗದಲ್ಲಿ ಇಂತಹ ಕ್ಷುಬ್ಧ ವಾತಾವರಣವೇನೂ ಇರಲಿಲ್ಲ. ಆವಾಗ ಏನಿದ್ದರೂ ಬಸವಾದಿ ಪ್ರಮಥರಿಂದ ಚೈತನ್ಯ ಪಡೆದು ಅವರು ಜನತೆಯ ಹೃದಯಭೂಮಿಯಲ್ಲಿ ಬಿತ್ತಿಹೋಗಿದ್ದ ಧರ್ಮದ ಗಟ್ಟಿಕಾಳುಗಳು ಅಷ್ಟಾಗಿ ಹುಟ್ಟದೆ ಹುಸಿಯಾಗುವಂತಹ ಹೊತ್ತಿನಲ್ಲಿ ಹುಟ್ಟಿಬಂದು, ಸಡಿಲಗೊಳ್ಳುತ್ತಿದ್ದ ಧರ್ಮದ ವಿಧಿ-ವಿಧಾನಗಳನ್ನು ಮತ್ತೊಮ್ಮೆ ಧರೆಯ ಮೇಲೆ ಬಿತ್ತರಿಸುತ್ತ ಧರ್ಮವನ್ನು ಸುಸ್ಥಿರವಾಗಿ ನಿಲ್ಲಿಸುವುದರ ಕಡೆಗೇ ಹೆಚ್ಚಿನ ಗಮನ ಹರಿಯಬೇಕಾಗಿತ್ತು. ಆದುದರಿಂದ ಸಿದ್ಧಲಿಂಗಯುಗದ ವಚನಗಳಲ್ಲಿ ಕಾವ್ಯದ ಕಾವು ಹೆಚ್ಚು ಕಾಣದೆ ಸಿದ್ಧಾಂತದ ನಿರೂಪಣೆಯು ಮಿತಿಯಿಲ್ಲದೆ ಅತಿಯಾದ ಲಕ್ಷಣಗಳೇ ಹೆಚ್ಚು ಎಂದರೆ ಅವೇನು ಅತಿಶಯೋಕ್ತಿಯಾಗಲಾರದು. ಅದಕ್ಕೋಸುಗ ಅವರ ವಚನಗಳು ಸಾಮಾನ್ಯವಾಗಿ ಸುದೀರ್ಘವಾದವುಗಳಾಗಿ ಹರಿತವಾದ ಮಾತುಗಳಲ್ಲಿ ಧರ್ಮಬೋಧೆಯನ್ನು ಪ್ರತಿಪಾದಿಸತಕ್ಕವುಗಳಾಗಿವೆ. ಸಾರಸಂಗ್ರಹವಾಗಿ, ಸಹಜಸುಂದರವಾಗಿ ಹೇಳುವುದನ್ನು ಬಿಟ್ಟು ನೀರು-ನೀರಾಗಿ ವಿವರ-ವಿವರವಾಗಿ ತಾವು ಹೇಳಬೇಕೆಂದಿರುವುದನ್ನು ಸುಮ್ಮನೆ ವಿಸ್ತರಿಸಿರುವುದರಿಂದ ಅಂದಿನ ವಚನಗಳಲ್ಲಿ ತನಿ-ಬನಿಗಳು, ಸೌಂದರ್ಯ-ರಸಮಾಧುರ್ಯಗಳು ಹೇರಳವಾಗಿ ಕಾಣುವುದಿಲ್ಲ. ಆದುದರಿಂದ ಸಿದ್ಧಲಿಂಗಯುಗದ ಘನಲಿಂಗ ಶಿವಯೋಗಿಗಳವರ ವಚನಗಳು ಇದಕ್ಕೆ ಹೊರತಾಗಿಲ್ಲ. ಆದರೂ ಅಲ್ಲಲ್ಲಿ ಸಾಹಿತ್ಯದ ಸವಿಗಂಪು ಹೊರಸೂಸುತ್ತ ಕಾವ್ಯದ ಮಿಂಚು ಆಗಾಗ್ಗೆ ಮಿಂಚುತ್ತ ಹೃದಯವನ್ನು ಸೆಳೆಯುವ ಹೃದಯಂಗಮ ನಿರೂಪಣೆ ಅವರಲ್ಲಿ ಇಲ್ಲದೆ ಹೋಗಿಲ್ಲ!

ಸಾಧಕನಾದವನಿಗೆ ತನ್ನ ಸಾಧನಾವಸ್ಥೆಯಲ್ಲಿ ಸಹಜವಾಗಿ ಒದಗುವ ಆಸೆ-ನಿರಾಸೆ, ನೋವು-ನಲಿವು, ಸೋಲು-ಗೆಲವು ಈ ದ್ವಂದ್ವಗಳ ಸಂಘರ್ಷಣೆಗಳನ್ನು ಘನಲಿಂಗಶಿವಯೋಗಿಗಳು ವರ್ಣಿಸಿರುವುದು ಮನಂಬುಗುವಂತಿದೆ :

ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ,
ಹಂದಿಯ ತಂದು ಅಂದಣವನೇರಿಸಿದಂತೆ,
ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ ?"[24]

ಶ್ರೀಗುರುವು ಒಲಿದುಕೊಟ್ಟ ಶಿವಲಾಂಛನವನ್ನು ತಾವು ಹೊತ್ತಿದ್ದರೂ ಮರ್ತ್ಯದ ಸೆಳೆತ ಬಲವತ್ತರವಾಗಿದ್ದು ತನ್ನತ್ತ ಸೆಳೆಯುತ್ತಿರುವ ಅಂತರಂಗದ ತೊಳಲಾಟವನ್ನು ಹೇಳಿರುವ ರೀತಿ ಚಿತ್ತಾಕರ್ಷಕವಾಗಿದೆ. ಅಷ್ಟೇ ಅಲ್ಲದೆ,

ಎನಗೆ ವಿರಕ್ತಿಯೆಂಬ ಲಾಂಛನವಂ ಕೊಟ್ಟುದು
ಕೋಪದ ಕಾರಣವಲ್ಲದೆ ಕೃಪೆಯಲ್ಲವಯ್ಯ.
ಅದೇನು ಕಾರಣವೆಂದರೆ—
ಬಟ್ಟೆಯಬಡಿದ ಕಳ್ಳಬಂಟನ ಭೂಪಾಲರು ಬೇಹನಿಕ್ಕಿ ಹಿಡಿತರಿಸಿ
ನಾಳೆ ಶೂಲಕ್ಕೆ ತೆಗೆಸುವರೆ—ಇಂದು
ಕಳ್ಳಬಂಟಂಗೆ ಪುನುಗು—ಜವಾಜಿಯ ಲೇಪಿಸಿ
ಹೂವಿನ ದಂಡೆಯ ಕೊರಳು-ಮಂಡೆ-ಉರದೊಳಗೆ ಅಡ್ಡಹಾಕಿ

[24] ಘ.ದೇ.ವ. ೫

ಹಾಲು-ತುಪ್ಪ-ಹಣ್ಣುಗಳ ಉಣಕೊಟ್ಟು ಅಡಿಗಡಿಗೆ ಅಡಕಲೆಯ ಮೆಲಕೊಟ್ಟು
ಹೀರವೃಂದದ ಹಲಗೆ-ಕಹಳೆಯಿಂ
ಅವನ ಮುಂದೆ ಸಂಭ್ರಮಿಸುವ ಬರಿಯುಪಚಾರದಂತೆ
ನಾನು ಮಾಡಿದ ಸರ್ವದ್ರೋಹಕೆ ನಿನ್ನ ಮನ ನೊಂದು
ಎನ್ನಂ ಎಕ್ಕಲ ನರಕಕ್ಕೆ ನೂಂಕುವುದಕೋಸ್ಕರ ಕೊಟ್ಟ
ಸಟೆಯುಪಚಾರಕ್ಕಾದ ಲಾಂಛನವಲ್ಲದೆ
ದಿಟದೊಲವಲ್ಲವಯ್ಯ ದೇವ.[25]

ಎಂಬ ಅರ್ಥಗರ್ಭಿತವಾದ ದೃಷ್ಟಾಂತವನ್ನಿತ್ತು ವಿರಕ್ತಾಶ್ರಮವು ಬರಿಯ ಮೋಜಿನದಲ್ಲ, ತಮಗೆ ಅದೊಂದು ಉಗ್ರ ಶಿಕ್ಷೆ—'ಬಟ್ಟೆಯ ಬಡಿದ ಕಳ್ಳಬಂಟನಿಗೆ' ಭೂಪಾಲರು ಕೊಟ್ಟ ಗಲ್ಲುಶಿಕ್ಷೆಯಂತೆ—ಎಂದು ರುಪ್ರರಮಣೀಯವಾಗಿ ವರ್ಣಿಸಿದ್ದಾರೆ.

ಅವರ ವಚನಗಳಲ್ಲಿ ಉತ್ಕಟವಾದ ಆರ್ತತೆ ಇದೆ, ಪ್ರಭಾವಿಯಾದ ವಾಣಿಯಿದೆ, ಪೂರ್ವದ ಅನುಕರಣವನ್ನು ಮೀರಿದ ಸ್ವತಂತ್ರ ಕಲ್ಪನಾಶಕ್ತಿಯಿದೆ.

ಕಪಿ ಕಳ್ಳ ಕುಡಿದು, ಕಡಲ ದಾಂಟುವೆನೆಂದು
ಲಂಘಿಸಿ, ನಡುನೀರಿನಲ್ಲಿ ಬಿದ್ದು,
ಮೀನು-ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನ ಬಾಳು.[26]

ಲೌಕಿಕ ಬಂಧನಗಳಿಗೆ ಬಲಿಬಿದ್ದು ಕಾಲ-ಕಾಮರ ಕಾಲ್ತುಳಿತಕ್ಕೆ ಸಿಕ್ಕಿ 'ಒರ್ವರಿಗೆ ಹುಟ್ಟಿ ಮತ್ತೊರ್ವರಿಗೆ ಅಪ್ಪಾ' ಎಂಬ ನಾಣ್ಣುಡಿಯಂತೆ ಯಾರು ಯಾರನ್ನೋ ತಂದೆ-ತಾಯಿ, ಬಂಧು-ಬಳಗವೆಂದು ಭಾವಿಸಿ ದೇವದೇವನನ್ನು ಮರೆತ ಜೀವಿಯ ಆರ್ತನಾದ, ಸ್ವವಿಮರ್ಶೆಗಳು ಈ ಮೇಲಿನ ಮಾತುಗಳಲ್ಲಿ ಮೊಳಗುತ್ತಿವೆ.

ಏನೆಂಬೆನೇನೆಂಬೆನಯ್ಯ ಮತಿಗೆಟ್ಟು ಮಾನವಲೋಕಕ್ಕೆ ಬಂದೆ
ಬಂದ ಬರವಿನಲ್ಲಿಯೆ ಭವವೆಂಬ ಭೂಪತಿ ಎನ್ನ ಸೆರೆವಿಡಿದು
ಕಾಲ-ಕಾಮರ ವಶಕ್ಕೆ ಕೊಟ್ಟನಯ್ಯ,
ಕಾಲಂಗೆ ಕಾಯವ ದಂಡವ ತೆತ್ತುದು ಲೆಕ್ಕವಿಲ್ಲ
ಮನಸಿಜಂಗೆ ಮನವ ದಂಡವ ತೆತ್ತುದು ಲೆಕ್ಕವಿಲ್ಲ[27]

ಮಾಯಾ-ಮೃತ್ಯುಗಳ ಉಪಟಳಕ್ಕೆ ಒಳಗಾಗಿ ಭವಸಾಗರದಲ್ಲಿ ಸುತ್ತುತ್ತ ಮೊರೆಯಿಡುತ್ತಿರುವ ಜೀವಾತ್ಮನ ಚಿತ್ರ ರಮ್ಯರೂಪಕದ ಮೂಲಕ ಪ್ರಭಾವಯುತವಾಗಿ ಇಲ್ಲಿ ಮೂಡಿಬಂದಿದೆ.

ಭವರಾಟಾಳದಲ್ಲಿ ಬಿಡುವಿಲ್ಲದೆ ಭ್ರಮಿಸುತ್ತಿದ್ದ ಜೀವಿಗೆ ಆಕಸ್ಮಿಕವಾಗಿ ಪ್ರಾಪ್ತವಾದ ಮಾನವಜನ್ಮದ ಪ್ರಾಪ್ತಿಯನ್ನು, ಅದರ ಹಿರಿಮೆಯನ್ನು ಕುರಿತು ಹೇಳುವಾಗ ಘನಲಿಂಗಶಿವಯೋಗಿಗಳು ಕೊಡುವ ದೃಷ್ಟಾಂತ ಒಂದು ಪ್ರಸಿದ್ಧ ಜನಜನಿತವಾದ ಗಾದೆಯ ಮಾತು. ಅದನ್ನು ಔಚಿತ್ಯವರಿತು ಬಳಸಿರುವುದರಿಂದ ವಚನಕ್ಕೊಂದು ವಿಶೇಷ ಸೌಂದರ್ಯ ತುಂಬಿ ಬಂದಿದೆ.

ದೇವ, ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ
ಮರ್ತ್ಯಲೋಕಕ್ಕೆ ಬಂದು ಮಾನವಜನ್ಮವ ಕಂಡೆ ![28]

ಕೂಲಿ-ಕಂಬಳಕ್ಕೆ ಹೋಗಿದ್ದ ಕಡುಬಡವನಿಗೆ ಕನಕದ ಕೊಡ ಕಂಡಂತೆ, ಮರ್ತ್ಯಸಂಸಾರದಲ್ಲಿ ತಿರ್ರನೆ ತಿರಿಯುತ್ತಿದ್ದ ಜೀವಿಗೆ ಇದ್ದಕ್ಕಿದ್ದಂತೆ ಮಾನವಜನ್ಮ ದೊರೆತುದು ಅಕ್ಷಯನಿಧಿ ಸಿಕ್ಕಿದಂತೆ ಎಂಬುದನ್ನು ನಿರೂಪಿಸಿರುವುದು ಸಾಹಿತ್ಯ ಸೌಂದರ್ಯಕ್ಕೆ ಒಂದು ಸೊಗಸಾದ ನಿದರ್ಶನವಾಗಿದೆ.

---

25 ಘ.ದೇ.ವ. ೫
26 ಘ.ದೇ.ವ. ೪
27 ಘ.ದೇ.ವ. ೨
28 ಘ.ದೇ.ವ. ೧೨

ನಿನ್ನ ನೆನೆನೆನೆದು ನನ್ನ ಮನ ಬೀಗಿ ಬೆಳೆದು
ತಳಿರಾಗಿ ಹೂಮಿಡಿಗೊಂಬುದಯ್ಯ ![29]

.........................................
ಪುಷ್ಪಪರಿಮಳದಂತೆ, ನಾ-ನೀನುಭಯವಿಲ್ಲದಂತೆ
ಕೂಡೆನ್ನ ಪ್ರಾಣೇಶನೇ ![30]

.........................................
ಎನ್ನೊಳಗೆ ನೀನು ನನೆಯೊಳಗಣ ಪರಿಮಳದಂತೆ ಹುದುಗಿಪ್ಪೆ[31]

ಇಂತಹ ಹಲವಾರು ಕಡೆಗಳಲ್ಲಿ ಬಸವಣ್ಣನವರ ವಚನಗಳ ಛಾಯೆಯನ್ನು ಗುರುತಿಸಬಹುದು. ಉತ್ತಮ ಭಾವಗೀತೆಗಳಂತೆ ಮೂಡಿಬಂದಿರುವ ಇಂತಹ ವಚನಗಳಲ್ಲಿ ಘನಲಿಂಗಶಿವಯೋಗಿಗಳ ಕವಿಹೃದಯವನ್ನು ಮನಗಾಣಬಹುದು.

'ನಿತ್ಯವಾಗಿಪ್ಪ ಪರಮಾತ್ಮನು ಅನಿತ್ಯವಾಗಿಪ್ಪ ದೇಹದೊಡನಾಡಿ ಜೀವನಾಗಿ' ಹೋಗುತ್ತಿರುವುದನ್ನು ಸುಂದರ ರೂಪಕವನ್ನಿತ್ತು ನಿರೂಪಿಸಿರುವ ಬಗೆ ಅರ್ಥಪೂರ್ಣವಾಗಿ ಬಂದಿದೆ. ಕಾಯ-ಜೀವದ ಈ ಹೊಲಿಗೆಯನ್ನು, ನಿತ್ಯ-ಅನಿತ್ಯದ ಸಂದರಿಯಬಾರದ ಈ ಬೆಸುಗೆಯನ್ನು ಪರಮಾತ್ಮನು ತನಗೆ ತಾನೇ ಮಾಡಿಕೊಂಡನೆಂದೂ ಅದನ್ನು ಬಿಚ್ಚಿ ಬೇರೆಮಾಡುವ ಪರಿಯನ್ನೂ ಇಲ್ಲಿ ವಿವರಿಸಿರುವುದು ತುಂಬ ಚೆನ್ನಾಗಿದೆ.

ಆತ್ಮನು ಭೋಗವೆಂಬ ಸೂಜಿಯಂ ಪಿಡಿದು
ಆ ಸೂಜಿಗೆ ಮೂರೊಂದು ಕರಣ
ಎರಡು ಮೂರು ಇಂದ್ರಿಯಂಗಳೆಂಬ ನವಸೂತ್ರವನೇರಿಸಿ
ತನುಮನದಂಚ ಸೇರುವೆಯಂ ಮಾಡಿ
ಕಂತವಾರಮಂ ಕಟ್ಟಿ,
ಸಂದರಿಯಬಾರದಂತೆ ಅದು ತನಗೆ ತಾನೇ ಹೊಲುಕೊಂಡಿತ್ತು.
ಇವ ಬಿಚ್ಚಿ ಬೇರೆಮಾಡುವ ಪರಿ ಯಾವುದಯ್ಯ ?
ಭೋಗವೆಂಬ ಸೂಜಿಯಂ ಮುರಿದು
ನಾಲ್ಕು ಕರಣ, ಐದಿಂದ್ರಿಯವೆಂಬ
ಒಂಬತ್ತು ದಾರಮಂ ತುಂಡುತುಂಡಿಗೆ ಹರಿಯಲೊಡನೆ
ತನು ಪ್ರಕೃತಿಯಂ ಕೂಡಿತ್ತು
ಪ್ರಾಣ ಪರಬ್ರಹ್ಮವಂ ಕೂಡಿತ್ತು ಕಾಣಾ !
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.[32]

ಭದ್ರವಾದ ಈ ಹೊಲಿಗೆಯು ಬಿಚ್ಚಿ ಕಾಯ-ಜೀವಗಳು ಬೇರೆಯಾಗಿ ಈ ಜೀವನು ಆ ದೇವನೊಡನೆ ಬೆರೆಯುವಂತಾಗಬೇಕಾದರೆ ಮೊದಲು ಭೋಗವೆಂಬ ಸೂಜಿಯನ್ನು ಮುರಿದುಹಾಕಬೇಕು. ಅನಂತರ ಕರಣ-ಇಂದ್ರಿಯಗಳೆಂಬ ದಾರಗಳನ್ನು ತುಂಡುತುಂಡಾಗಿ ಹರಿದು ಬಿಸಾಡಬೇಕು. ಆಗ ಈ ಭೌತಿಕದೇಹ ಪ್ರಕೃತಿಯಲ್ಲಿ ಸೇರಿಹೋಗುತ್ತದೆ. ಆ ಪ್ರಾಣ ಪರಬ್ರಹ್ಮದಲ್ಲಿ ಕೂಡಿ ನಿತ್ಯಸುಖವನ್ನನುಭವಿಸುತ್ತದೆ.

ಮಲ-ಮಾಯಾ-ಕರ್ಮಗಳು ಆತ್ಮನಿಗೆ ಅಂಟುವುದಿಲ್ಲ. ಆದರೆ ಕೆಲವರು ಅಜ್ಞಾನಿಗಳು ಉಂಟೆಂದು ಹೇಳುತ್ತಿರುವರು. ಅಂಥವರಿಗೆ ಉತ್ತರವನ್ನು ಕೊಡುತ್ತ

ಕಾಮಧೇನುವಿನ ಗರ್ಭದಲ್ಲಿ ಕತ್ತೆಯಮರಿ ಹುಟ್ಟುವುದೆ ?
ಕಲ್ಪವೃಕ್ಷದಲ್ಲಿ ಕಾಗೆಮೋರೆಯ ಹಣ್ಣು ಬೆಳೆವುದೆ ?
ಪರುಷದ ಗಿರಿಯಲ್ಲಿ ಕಬ್ಬುನ ಮೊಳೆದೋರುವುದೆ ?[33]

---

29 ಘ.ದೇ.ವ. ೧
30 ಘ.ದೇ.ವ. ೧
31 ಘ.ದೇ.ವ. ೮
32 ಘ.ದೇ.ವ. ೧೪
33 ಘ.ದೇ.ವ. ೧೫

ಎಂದು ಕೇಳಿದ್ದಾರೆ. ಹಾಗೆ ಹೇಳುವವರು ತಮ್ಮ ದೇಹದ ಮೇಲೆ ಧರಿಸಿಕೊಂಡಿರುವುದು ಒಂದು ಒಡ್ಡಗಲ್ಲ ಮುರುಕಲ್ಲದೆ ಲಿಂಗವಲ್ಲ. ಆತ್ಮನು ಅನಾದಿಮಲಾವರಣನೆಂದು ಹೇಳುವ ಪಕ್ಷದಲ್ಲಿ ಅಂಗದ ಮೇಲೆ ಕಂಗೊಳಿಸುವ ಲಿಂಗನು ತನಗೆ ನೀಡುವ ಆತ್ಮಭೋಗವನ್ನು ಅನುಭವಿಸುವುದಾದರೂ ಹೇಗೆ ?

ಇಕ್ಕುವಾಕೆ ಮೂಗು ಮುಚ್ಚಿಕೊಂಡು ಇಕ್ಕಿದ ಬಳಿಕ
ಉಂಬಾತ ಹೇಗುಂಬನಯ್ಯ ?
ಆತ್ಮನು ಅನಾದಿಮಲಾವರಣನೆಂದು ನೀನೇ ಉಸುರುತ್ತಿರ್ದ ಬಳಿಕ
ನಿನ್ನಂಗದ ಮೇಲಕ್ಕೆ ಬರುವ ಲಿಂಗಕ್ಕೆ ಮೂಗಿಲ್ಲವೆ ?[34]

ಆದುದರಿಂದ ಅನಂತಕೋಟಿ ಮಿಂಚುಗಳ ಪ್ರಭೆಯನ್ನೊಳಕೊಂಡ ಪರಶಿವತತ್ತ್ವದಲ್ಲಿ ಉದಯವಾದ ಆತ್ಮನು ನಿತ್ಯ ಪರಿಶುದ್ಧನು ಎಂಬುದನ್ನು ನಿರೂಪಿಸುವಾಗ ನೀಡಿರುವ ದೃಷ್ಟಾಂತ ಅತ್ಯಂತ ಶಕ್ತಿಯುತವಾಗಿದೆ.

"ತಮ್ಮಿರವ ತಾವರಿಯದೆ" ಶರಣರ ಸಾಧನ-ಸಿದ್ಧಿಗಳ ಬಗೆಗೆ ಲಘುವಾಗಿ 'ಮಾತನಾಡುವ ಹೊಟ್ಟೆಯಕಿಚ್ಚಿನ ಬಾಯಬಡುಕರ ಬಗೆಯನ್ನು ಬಣ್ಣಿಸುವಾಗ ಅವರು ಕೊಡುವ ಹೋಲಿಕೆಗಳು ಪುಂಖಾನುಪುಂಖವಾಗಿ ಸಿಡಿದು ಬಂದೆರಗಿ ಆ ಬಾಯಬಡುಕರನ್ನು ಬಡಿದು ಬಾಯಿ ಮುಚ್ಚಿಸುತ್ತವೆ.

ಆನೆ ಮದವೆದ್ದು ಸೋಮವೀಥಿಯ ಸೂರೆಮಾಡಿತೆಂದು
ಆಡು ಮದವೆದ್ದು ಬೇಡಗೇರಿಗೆ ಹೋಗಿ ಕೊರಳ ಮುರಿಸಿಕೊಂಬಂತೆ !
ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು
ಇಂದಿನ ಕಾಲದ ಕಪಿ ಹಳ್ಳವ ದಾಂಟಿದಂತೆ !
ಅರ್ತಿಯಿಂದ ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು
ತೊತ್ತು ತಿಪ್ಪೆಯನೇರಿದಂತೆ !
ರಾಜಕುಮಾರ ತೇಜಿಯನೇರಿದನೆಂದು
ರಜಕನ ಕುವರ ಕುನ್ನಿಯನೇರಿದಂತೆ !
ಬಲಮುರಿಯ ಶಂಖ ಧಿಗಿಲುಭುಗಿಲೆಂದು ಝುಂಕರಿಸಿತೆಂದು
ಕೆರೆಯೊಳಗಣ ಗುಳ್ಳೆ ಕೀಚುಕೀಚೆಂದಂತೆ !
ತಮ್ಮಿರವ ತಾವರಿಯದೆ
ಬಾಳುವ ಕಾಲದಲ್ಲಿ ಮರಣದ ಮದ್ದ ಕೂಂಬ
ಈ ಖೂಳಮಾನವರ ಎನಗೊಮ್ಮೆ ತೋರದಿರಯ್ಯ[35]

"ಮಹಾಶರಣರನ್ನು ವ್ಯರ್ಥ ಟೀಕಿಸಬಾರದು. ಸಾಮರ್ಥ್ಯವಿದ್ದರೆ ಅವರಂತೆ ಆಗಬೇಕು. ಕೇವಲ ದೊಡ್ಡವರೆಂದು ನಟಿಸಿದರೆ ಕೆಲಸವಾಗದು ಎಂದು ಹೇಳುವ ಸಂದರ್ಭದಲ್ಲಿ ಕೊಟ್ಟ ರೂಪಕಗಳ ಸಾಲು ಬಳ್ಳಿ ಸಮರ್ಪಕವಿರುವುದು."[36]

ಆನೆಯ ಬೇರೆ ಬೇರೆ ಅಂಗಗಳನ್ನು ಮುಟ್ಟಿದ ಕುರುಡರು—

ಆನೆ ಕೊಳಗದಾಕಾರವೆಂದ ಕಾಲ ಮುಟ್ಟಿದಾತ !
ಆನೆ ಒನಕೆಯಾಕಾರವೆಂದ ಸೊಂಡಿಲ ಮುಟ್ಟಿದಾತ !
ಆನೆ ಹರವಿಯಾಕಾರವೆಂದ ಕುಂಭಸ್ಥಳವ ಮುಟ್ಟಿದಾತ !
ಆನೆ ಮೊರದಾಕಾರವೆಂದ ಕಿವಿಯ ಮುಟ್ಟಿದಾತ !
ಆನೆ ರಜಪೂರಿಗೆಯಾಕಾರವೆಂದ ಬಾಲವ ಮುಟ್ಟಿದಾತ !
ಇಂತಿವರೆಲ್ಲರೂ ಆನೆಯ ನೆಲೆಯನರಿಯದೆ
ತಮ್ಮೊಳಗೆ ತಾವು ಕೊಂಡಾಡುತಿಪ್ಪರು !
ಆನೆಯ ನೆಲೆಯ ಆನೆಯನೇರುವ ಪಟ್ಟದರಸು ಬಲ್ಲನಲ್ಲದೆ
ಹುಟ್ಟುಕುರುಡರೇನು ಬಲ್ಲರಯ್ಯ ?[37]

---

34 ಘ.ದೇ.ವ. ೧೫

35 ಘ.ದೇ.ವ. ೨೫

36 ವಚನಶಾಸ್ತ್ರರಹಸ್ಯ—ಪುಟ ೨೩೪ : ರಂ.ರಾ. ದಿವಾಕರ

37 ಘ.ದೇ.ವ. ೪೧

ಹೀಗೆಂದು ಆನೆಯನ್ನು ಬಗೆಬಗೆಯಾಗಿ ವರ್ಣಿಸಿದಂತೆ ನಿಜಾಚರಣೆಯ ನಿಜಸ್ವರೂಪವನ್ನು ನಿಜೈಕ್ಯನು ಬಲ್ಲನಲ್ಲದೆ ಅಜ್ಞಾನಿ ಬಾಯಿಬಡಕರು ಅವರೆತ್ತಬಲ್ಲರು ಎಂಬುದನ್ನು ನಿರೂಪಿಸಿರುವ ಬಗೆ, ಬಗೆದುಂಬಿ ನಿಲ್ಲುತ್ತದೆ.

ಮುಕ್ತಿಯ ಪಥಕ್ಕೆ ಕ್ರಿಯೆ ಸಾಧನ—ಎಂದು ವಿವರಿಸುತ್ತ. ಹೀಗೆಂದಿದ್ದಾರೆ :

ಕ್ರೀಯೆಂಬ ಬೀಜದಲ್ಲಿ ಸಮ್ಯಜ್ಞಾನವೆಂಬ ವೃಕ್ಷ ಪಲ್ಲವಿಸಿತು
ಆ ವೃಕ್ಷ ಭಕ್ತಿಯೆಂಬ ಹೂವಾಯಿತು
ಆ ಹೂವು ಲಿಂಗನಿಷ್ಠೆಯೆಂಬ ಕಾಯಾಯಿತು
ಆ ಕಾಯಿ ಮುಕ್ತಿಯೆಂಬ ಹಣ್ಣಾಯಿತು
ಆ ಹಣ್ಣಿನ ಅಮೃತಸಾರಮಂ ನಾನು ದಣಿಯಲುಂಡು
ಬಸವಾದಿಪ್ರಮಥರ ಪಡಿಗ-ಪಾದರಕ್ಷೆಯಂ
ಹಿಡಿವುದಕ್ಕೆ ಯೋಗ್ಯನಾದೆನಯ್ಯ[38]

ಈ ವಚನವು ಬಸವಣ್ಣನವರ "ಭಕ್ತಿಯೆಂಬ ಪೃಥ್ವಿಯ ಮೇಲೆ...." ಎಂಬ ವಚನವನ್ನು ತಟ್ಟನೆ ನಮ್ಮ ಸ್ಮರಣೆಗೆ ತಂದು ಕಲ್ಯಾಣದ ಶರಣರ ಗಾಢವೂ ಗೂಢವೂ ಆದ ಪ್ರಭಾವವನ್ನು ಪರಿಸ್ಫುಟವಾಗಿ ಪ್ರಕಾಶಪಡಿಸುವುದಾಗಿದೆ.

ಕಪಿಯು ಕೈಯ್ಯ ಕನ್ನಡಿಯಂತೆ ಕುಣಿದರೆ ಕುಣಿದು,
ಎಡಿಸಿದರೆ ಎಡಿಸಿ, ಹಲ್ಲುಕಿರಿದರೆ ಹಲ್ಲುಕಿರಿದು
ಮನವಾಡಿದಂತೆ ನೀನಾಡಬೇಡ.[39]

ಎಂಬ ಈ ಪ್ರಸಿದ್ಧವಾದ ಪ್ರತಿಮೆಯನ್ನೊಡ್ಡಿ ಪ್ರಪಂಚದಲ್ಲಿಂದು ನಾವು ಕಾಣುತ್ತಿರುವ ಎಲ್ಲ ರೀತಿಯ ಪ್ರಕ್ಷುಬ್ಧತೆಯ ಪರಿಹಾರಕ್ಕೆ ಸಾರಸಂದೇಶರೂಪವಾದ ಜ್ಞಾನಪ್ರಸಾದವನ್ನಿತ್ತು ಮಾನವನ ಸುಖ-ಶಾಂತಿ-ನೆಮ್ಮದಿಗಳಿಗೆ ಎಂದೆಂದಿಗೂ ಸವೆಯದ ಅಮೃತಾಹಾರವನ್ನಿತ್ತು ತೃಪ್ತಿಯನ್ನು ತಂದ ಅವರ ಅಮೃತವಾಣಿಗಳಲ್ಲಿ ಕಾವ್ಯಸೌಂದರ್ಯ ವಿಶೇಷವಾಗಿ ವ್ಯಕ್ತಗೊಂಡಿಲ್ಲವೆನ್ನಬಹುದು. ಆದರೂ ಅವರ ಕವಿಹೃದಯದ ಕಿಂಚಿತ್‌ದರ್ಶನ ಅಲ್ಲಲ್ಲಿ ಮಿಂಚಿನಂತೆ ಹೊಳೆದು ನಮಗೆ ಗೋಚರಿಸದಿರದು. ಜೊತೆಗೆ ಸಮಾಜವನ್ನು ಸರಿಪಡಿಸುವುದರಲ್ಲಿಯೇ ಗುರಿಯಿಟ್ಟಿದ್ದ ಅವರು ತಮ್ಮ ಹೃದಯಾನುಭವದ ಬೆಡಗನ್ನು—

ಆರು ಬಣ್ಣದ, ಹದಿನೈದು ದೇಹದ ಕೋಡಗ
ಒಂದು ರತ್ನವ ಮೆಟ್ಟಿಕೊಂಡು, ಒಂದು ರತ್ನವ ಹಿಡಿದುಕೊಂಡು
ಮತ್ತೊಂದು ರತ್ನವ ಮರೆ ಮಾಡಿಕೊಂಡು
ಮೇರುಪರ್ವತದ ಶಿಖರವನೇರಿತು ನೋಡಾ ![40]

ಎಂಬ ಇಂತಹ ಕೆಲವಾರು ಬೆಡಗಿನ ವಚನಗಳಲ್ಲಿಯೇ ನಿರೂಪಿಸಿ, 'ಬೆಡಗಿನ ವಚನಸಾಹಿತ್ಯ' ವಿಭಾಗಕ್ಕೂ ಬೆಲೆಯುಳ್ಳ ಕಾಣಿಕೆಯನ್ನೇ ಸಲ್ಲಿಸಿ ಕೀರ್ತಿತರಾಗಿದ್ದಾರೆ. ಒಟ್ಟಿನಲ್ಲಿ ಸಾಹಿತ್ಯಸೌಂದರ್ಯದ ಸವಿ-ಛವಿಗಳು ಅವರ ವಚನಗಳಲ್ಲಿ ಅಷ್ಟಾಗಿ ಕಾಣದಿದ್ದರೂ ಘನಲಿಂಗಶಿವಯೋಗಿಗಳವರು ವಚನಸಾಹಿತ್ಯಕ್ಕೆ ಅಮೂಲ್ಯವಾದ ಅನರ್ಘ್ಯವಚನಗಳ ವಿಶೇಷ ಕೊಡುಗೆಯನ್ನಿತ್ತು ಸಿದ್ಧಲಿಂಗಯುಗದಲ್ಲಿ ಎದ್ದುಕಾಣುವ ಪ್ರಸಿದ್ಧ ವಚನಕಾರರಾಗಿ ಮೆರೆದಿದ್ದಾರೆ.

## ಸೈದ್ಧಾಂತಿಕ ಬೆಳಗು

ವೀರಶೈವ ಸಿದ್ಧಾಂತದ ಮುಖ್ಯ ತಿರುಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ; ಶರಣಸತಿ-ಲಿಂಗ ಪತಿಭಾವ ; ಲಿಂಗಾಂಗಸಾಮರಸ್ಯ ಇವೇ ಮೊದಲಾದ ಹಲವು ತತ್ತ್ವಗಳು ವಚನಕಾರರ ಕೃತಿಗಳಲ್ಲಿ ಮಹೋನ್ನತವಾಗಿ ಪ್ರತಿಪಾದಿತವಾಗಿವೆ. ಹದಿನೈದು-ಹದಿನಾರನೆಯ ಶತಮಾನದ ಸಿದ್ಧಲಿಂಗಯುಗದ ವಚನಗಳಲ್ಲಿ ಅಂದು ಶಿಥಿಲವಾಗು

---

38 ಘ.ದೇ.ವ. ೨೧

39 ಘ.ದೇ.ವ. ೭

40 ಘ.ದೇ.ವ. ೯

ತ್ರಿದ್ದ ವೀರಶೈವವನ್ನು ಮತ್ತೊಮ್ಮೆ ಸುಸ್ಥಿರವಾಗಿ ನೆಲೆನಿಲ್ಲಿಸುವ ಪ್ರಯತ್ನಗಳು ನಡೆದುದನ್ನು ಕಾಣಬಹುದು. ಆದುದರಿಂದಲೇ ಅಂದಿನ ವಚನಕಾರರ ಗುರಿಯೆಲ್ಲವೂ ಷಟ್‌ಸ್ಥಲಸಿದ್ಧಾಂತದ ನಿರೂಪಣೆಯು ಕಡೆಗೇ ಇದ್ದು ಅವರ ವಿವರವಾದ ವಿವರಣೆಗಳಿಗೆ ಅವರ ಸುದೀರ್ಘವಾದ ವಚನಗಳು ಮೀಸಲಾಗಿರುವುದನ್ನು ಅರಿಯಬಹುದು. ಅಂತೆಯೇ ಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಶರಣಧರ್ಮದ ರೂಪು-ರೇಷೆಗಳು ಸ್ಥೂಲವಾಗಿಯಾದರೂ ಹೃದಯಂಗಮವಾಗಿ ನಿರೂಪಣಗೊಂಡಿರುವುದನ್ನು ಇಲ್ಲಿ ಮನಗಾಣಬಹುದು. "ಇವನ ವಚನಗಳು ದೊಡ್ಡವಿದ್ದರೂ ಅವುಗಳ ಭಾಷೆಯು ಉಚ್ಚತರದ್ದಿರುತ್ತದೆ. ಅವನು ತನ್ನ ವಿಚಾರಗಳನ್ನು ಬಹಳ ಪ್ರೌಢರೀತಿಯಲ್ಲಿ ವಿಸ್ತರಿಸಿದ್ದಾನೆ. ಇವುಗಳಲ್ಲಿ ಷಟ್‌ಸ್ಥಲಶಾಸ್ತ್ರದ ಮುಖ್ಯ ಮರ್ಮಗಳು ಸಂಕ್ಷೇಪವಾಗಿಯೂ ವಿಶದವಾಗಿಯೂ ವಿವರಿಸಲ್ಪಟ್ಟಿರುತ್ತವೆ. ಇವನು ಮಾಡಿದ ಈ ಗ್ರಂಥಕ್ಕೆ ವಚನವಾಙ್ಮಯದಲ್ಲಿ ಒಂದು ಉಚ್ಚಸ್ಥಾನವನ್ನು ಕೊಡಬಹುದು"[41] ಎಂಬುದಾಗಿ ವಚನಶಾಸ್ತ್ರಪಿತಾಮಹ ಡಾ. ಫ. ಗು. ಹಳಕಟ್ಟಿಯವರು ಹೇಳಿದ್ದಾರೆ.

ಸಮಸ್ತಲೋಕಾದಿಲೋಕಗಳಿಗೆಲ್ಲ ತಾನೇ ಆಧಾರವಾಗಿ, ಬೇರೆ ತನಗೊಂದು ಯಾವುದೂ ಆಧಾರವಿಲ್ಲವಾಗಿ ತಾನೇತಾನಾಗಿದ್ದ ಪರಬ್ರಹ್ಮದ ಸ್ವರೂಪವನ್ನು ವರ್ಣನೆಮಾಡುತ್ತ

ಆದಿ-ಅನಾದಿಯಿಂದತ್ತಣ ದೂರದಲ್ಲಿ
ಭಾವಕ್ಕೆ ನಿರ್ಭಾವಕ್ಕೆ ಬಾರದಿರ್ದ ನಿಷ್ಕಳಂಕ ಪರಬ್ರಹ್ಮ

ಎಂದು ವರ್ಣಿಸಿದ್ದಾರೆ. ಅಂತಹ ನಿಷ್ಕಳಂಕ ಪರಬ್ರಹ್ಮಸ್ವರೂಪವು ತಾನೇ ಆಗಿ ಪರಿಣಮಿಸುವುದು ಜೀವಿಯ ಪರಮ-ಚರಮಗುರಿಯಾಗಿದೆ. ಆದಕ್ಕಾಗಿ ಜೀವನು ಮೊದಲು ಶ್ರೀಗುರುವಿನ ಕರುಣೆಗೆ ಒಳಗಾಗಿ ತನ್ನ ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ಧರಿಸಿಕೊಂಡು ಲಿಂಗಭೋಗೋಪಭೋಗಿಯಾಗಿ ತನ್ನ ನಿರಂತರ ಸಾಧನೆಯಿಂದ ತನ್ನಿಂದ ತಾ ತಿಳಿದು ತಾನೇ ಆದ ಪರಮಸಿದ್ಧಿಯನ್ನೈದಬೇಕಾಗಿದೆ.

ಆಚಾರಲಿಂಗಸ್ವರೂಪವಾದ ಘ್ರಾಣ
ಗುರುಲಿಂಗಸ್ವರೂಪವಾದ ಜಿಹ್ವೆ
ಶಿವಲಿಂಗಸ್ವರೂಪವಾದ ನೇತ್ರ
ಜಂಗಮಲಿಂಗಸ್ವರೂಪವಾದ ತ್ವಕ್ಕು
ಪ್ರಸಾದಲಿಂಗಸ್ವರೂಪವಾದ ಶ್ರೋತ್ರ
ಮಹಾಲಿಂಗಸ್ವರೂಪವಾದ ಪ್ರಾಣ
ಪಂಚಬ್ರಹ್ಮಸ್ವರೂಪವಾದ ತನು
ಇಂತಿವೆಲ್ಲವು ಕೂಡಿ ಪರಬ್ರಹ್ಮಸ್ವರೂಪ ತಾನೆಯಾಗಿ[42]

ಮರ್ತ್ಯಕ್ಕಿಳಿದುಬಂದಿರುವ ಜೀವನು 'ಆನೆಯು ರೂಪತಾಳಿ ಕೇರಿಯ ನುಸುಳುವ ಹಂದಿಯಂತೆ' ಸಂಸಾರದ ವಿಷಯವಾಸನೆಗಳಿಗೆ ಹಾತೊರೆಯುತ್ತ ನೊಂದು ಬೆಂದು ಉರಿದುಹೋಗುತ್ತಿರುವ ದಾರುಣಚಿತ್ರವನ್ನು ಘನಲಿಂಗಶಿವಯೋಗಿಗಳು ದೃಷ್ಟಾಂತದ ಮೂಲಕ ದೃಢಪಡಿಸಿರುವರು. ತಮ್ಮ ಕರ-ಚರಣ-ಪ್ರಾಣಗಳು, ತಮ್ಮ ಮನ-ಇಂದ್ರಿಯಗಳು ಷಟ್‌ಸ್ಥಲಮಾರ್ಗದಲ್ಲಿ—ಅಕ್ಕಮಹಾದೇವಿಯವರು ಹೋದ ದಾರಿಯಲ್ಲಿ ನಡೆಯುವುವಲ್ಲದೆ ಕಿರುದಾರಿಯಲ್ಲಿ ಎಂದಿಗೂ ನಡೆಯವು ಎಂದು ಹೇಳಿಕೊಂಡಿರುವುದು ಹೃದಯಸ್ಪರ್ಶಿಯಾಗಿ ಬಂದಿದೆ :

ಎನ್ನ ಪಾದ ಷಟ್‌ಸ್ಥಲಕ್ಕೆ ಒಪ್ಪವಿಟ್ಟಲ್ಲದೆ ಅಡಿಯಿಡದು,
ಎನ್ನ ಹಸ್ತ ಷಟ್‌ಸ್ಥಲಪತಿಯನಲ್ಲದೆ ಪೂಜೆಯ ಮಾಡದು
ಎನ್ನ ಘ್ರಾಣ ಮೊದಲು ಶ್ರೋತ್ರ ಕಡೆಯಾದ ಪಂಚೇಂದ್ರಿಯಂಗಳು
ಷಟ್‌ಸ್ಥಲವನಲ್ಲದೆ ಆಚರಿಸವು
ಎನ್ನ ಮನ ಷಟ್‌ಸ್ಥಲದ ಷಡ್ವಿಧಲಿಂಗಂಗಳ ಮೇಲಲ್ಲದೆ
ಹರುಷಂಗೊಂಡು ಹರಿದಾಡದು,

---

41 ಘನಲಿಂಗನ ವಚನಗಳು—ಪ್ರಸ್ತಾವನೆ : ಶಿವಾನುಭವಗ್ರಂಥಮಾಲಾ, ಸಂ. ೧೩
42 ಘ.ದೇ.ವ. ೬

ಎನ್ನ ಪ್ರಾಣ ಷಟ್‌ಸ್ಥಲಕ್ಕೆ ಸಲೆಸಂದ
ಅಕ್ಕಮಹಾದೇವಿಯರು ಹೋದ ಬಟ್ಟೆಯಲ್ಲಿ ನಡೆಯುವುದಲ್ಲದೆ
ಕಿರುಬಟ್ಟೆಯಲ್ಲಿ ನಡೆಯದು.
ಇಂತಿವೆಲ್ಲವು ಷಟ್‌ಸ್ಥಲವನಪ್ಪಿ ಅವಗ್ರಹಿಸಿದ
ನೀಲಾಂಬಿಕೆಯಮ್ಮನವರ ಗರ್ಭದಲ್ಲಿ ಉದಯವಾದ
ಮೋಹದ ಕಂದನಾದ ಕಾರಣ
ಎನಗೆ ಷಟ್‌ಸ್ಥಲಮಾರ್ಗದ ವಿರತಿ ನೆಲೆಗೊಂಡು ನಿಂದಿತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ[43]

ಜೀವಾತ್ಮನನ್ನು ಇಹದಲ್ಲಿ ತಾಪತ್ರಯಗಳಿಗೆ ಒಳಗುಮಾಡಿ ಘೋರಸಂತಾಪಕ್ಕೀಡುಮಾಡುವ ಕರ್ಮತ್ರಯಗಳಾದ ಸಂಚಿತ, ಪ್ರಾರಬ್ಧ, ಆಗಾಮಿಗಳನ್ನು ಸುಟ್ಟುರುಹಬೇಕಾದರೆ ಹೊನ್ನು, ಹೆಣ್ಣು, ಮಣ್ಣುಗಳನ್ನು ಬಿಟ್ಟು ಕಳೆಯಬೇಕು. ಈ ಕರ್ಮತ್ರಯಗಳ ನಾಶದಿಂದ ಸೃಷ್ಟಿ, ಸ್ಥಿತಿ. ಲಯಗಳನ್ನು ದಾಟಿ ಜೀವಾತ್ಮನು ಶಾಶ್ವತ ನೆಲೆಗೇರಬಹುದು ಎಂಬುದನ್ನು ಕುರಿತು

ಸಂಚಿತಕರ್ಮ ನಾಸ್ತಿಯಾದಲ್ಲಿಯೇ
ಬ್ರಹ್ಮನ ಸೃಷ್ಟಿಯೆಂಬ ಸೆರೆಮನೆ ಹಾಳಾಯಿತು
ಪ್ರಾರಬ್ಧ ನಾಸ್ತಿಯಾದಲ್ಲಿಯೇ
ವಿಷ್ಣುವಿನ ಸ್ಥಿತಿಯೆಂಬ ಸಂಕೋಲೆ ತಡೆಗಡಿಯಿತು
ಆಗಾಮಿಕರ್ಮ ನಾಸ್ತಿಯಾದಲ್ಲಿಯೇ
ರುದ್ರನ ಸಂಹಾರವೆಂಬ ಪ್ರಳಯಾಗ್ನಿ ಕೆಟ್ಟಿತು[44]

ಎಂದು ವಿವರಿಸಿರುವರು.

ಭಕ್ತಿ-ಜ್ಞಾನ-ವೈರಾಗ್ಯಗಳು ಎಂದರೆ ಏನು ? ಅವುಗಳ ಸ್ವರೂಪ—ಆಚರಣೆಗಳ ವಿಧಾನವೇನು ? ತಮ್ಮ ಸಾಧಕ ಜೀವನದಲ್ಲಿ ಅವುಗಳನ್ನು ತಾವು ಅಳವಡಿಸಿಕೊಂಡ ಬಗೆ ಹೇಗೆ ? ಎಂಬುದನ್ನು ಸರಳಸುಂದರವಾಗಿ ಬಣ್ಣಿಸಿರುವ ಬಗೆ ಹೀಗಿದೆ :

ಗುರು-ಲಿಂಗ-ಜಂಗಮ-ತೀರ್ಥ-ಪ್ರಸಾದ
ಇಂತೀ ಪಂಚಾಚಾರವೇ ಪಂಚಬ್ರಹ್ಮವೆಂದು
ಭಯಭಕ್ತಿಯಿಂದ ನಮಿಸಿ ಅಂಗೀಕರಿಸುವುದೇ ಎನ್ನ ಭಕ್ತಿ
ಪೂರ್ವಾಶ್ರಯ, ಬಂಧುಭ್ರಮೆ, ಆತ್ಮತೇಜ, ಲೋಕದ ನಚ್ಚುಮಚ್ಚು
ಇಂತಿವ ಸುಟ್ಟು, ಮಲತ್ರಯಂಗಳ ಹಿಟ್ಟುಗುಟ್ಟಿ
ತೂರಿಬಿಡುವುದೇ ಎನ್ನ ಜ್ಞಾನ
ಕ್ಷುತ್ತು ಮೈದೋರಿ ಭಿಕ್ಷಕ್ಕೆ ಹೋದಲ್ಲಿ
ಭಾಂಡವ ತೊಳೆದ ದ್ರವ್ಯಪದಾರ್ಥಮಂ ತರಲೊಡನೆ
ಹರುಷದಿಂದ ಲಿಂಗಾರ್ಪಿತವ ಮಾಡಿ ಸಾಕೆಂದ ಬಳಿಕ
ಮತ್ತೊಂದು ಗೃಹವನಾಶೆ ಮಾಡಿ ಹೋದೆನಾದರೆ
ಎನ್ನ ವೈರಾಗ್ಯಕ್ಕೆ ಕುಂದು ನೋಡಾ.[45]

ಇಂತಹ ಭಕ್ತಿ-ಜ್ಞಾನ-ವೈರಾಗ್ಯಗಳನ್ನು ತನ್ನ ಆಚರಣೆಯಲ್ಲಿ ತೋರಿದ ಸಾಧಕನು 'ಅಂಗಭೋಗ ಅನರ್ಪಿತ, ಲಿಂಗ ಭೋಗ ಪ್ರಸಾದ' ಎಂದು ಆಚರಿಸಿ ಅಂಗಭೋಗಿಯಾಗದೆ ಲಿಂಗಭೋಗೋಪಭೋಗಿಯಾಗಿ ಪ್ರಸಾದಿಸ್ಥಲಕ್ಕೇರಿ ನಿಲ್ಲುತ್ತಾನೆ.

ಶರಣಸ್ಥಲವನ್ನು ಏರಿದ ಘನಲಿಂಗಶಿವಯೋಗಿಗಳು ಶರಣಸ್ಥಲದ ಸ್ವರೂಪವನ್ನು ವಿವರಿಸುತ್ತ ಸುಲಭ ರೂಪದಲ್ಲಿ ಸೂತ್ರೀಕರಿಸಿರುವುದು ಸುಲಭಗ್ರಾಹ್ಯವಾದುದಾಗಿದೆ.

---

43 ಘ.ದೇ.ವ. ೩೫

44 ಘ.ದೇ.ವ. ೩೯

45 ಘ.ದೇ.ವ. ೧೭

ಉರಿ ಕರ್ಪೂರವ ಹಿಡಿದಂತೆ
ಹಿಡಿದ ವ್ರತನೇಮಂಗಳ ಬಿಡದಿಪ್ಪುದೀಗ ಶರಣಸ್ಥಲದ ಮತವಯ್ಯ[46]
.......................................................................
ಕಡಿದು ಕಂಡರಿಸಿ ಒಪ್ಪವಿಟ್ಟ
ರತ್ನದ ಪುತ್ಥಳಿಯ ಪ್ರಕಾಶದಂತ ನಿಜಗುಂದದಿಪ್ಪುದೀಗ ಶರಣಸ್ಥಲ.[47]

ಹೀಗೆಂದು ನಿರೂಪಿಸುತ್ತ ಶರಣರ ಮನೋಮಧ್ಯದಲ್ಲಿ ಆ ಶಿವನಿಪ್ಪನು ; ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ, ಮಹಾ ಶೇಷನಲ್ಲಿ ಮಾಣಿಕ್ಯ, ಆನೆಯ ಕುಂಭಸ್ಥಲದಲ್ಲಿ ಮುತ್ತು ಇರುವಂತೆ—ಎಂಬುದಾಗಿ ವಿವರಿಸಿದ್ದಾರೆ.

ಜೀವಾತ್ಮನು ವೈರಾಗ್ಯದ ತುಟ್ಟತುದಿಯನ್ನು ಮುಟ್ಟಿದ್ದರೂ ಐಕ್ಯಸ್ಥಲಕ್ಕೇರಿ ನಿಂತಿದ್ದರೂ ಲಿಂಗಾಂಗ-ಸಮರಸ-ಸುಖದಲ್ಲಿದ್ದರೂ ಕ್ರಿಯೆಯನ್ನು ಬಿಡಕೂಡದೆಂದು ಕಟ್ಟುನಿಟ್ಟಾಗಿ ಹೇಳಿರುವುದು ವೀರಶೈವಸಿದ್ಧಾಂತದ ಮಹೋನ್ನತ ನಿಲುವನ್ನು ನಿರೂಪಿಸುವುದಾಗಿದೆ.

ಬಸವರಾಜದೇವರು ಉತ್ತುಂಗಲಿಂಗದಲ್ಲಿ ಐಕ್ಯವಾಗುವನ್ನಬರ
ಶಿವಲಿಂಗಪೂಜೆಯಂ ಬಿಟ್ಟನೆ ? ಜಪ-ತಪ-ನಿತ್ಯನೇಮಂಗಳಂ ಬಿಟ್ಟನೆ ?
ಲಿಂಗಕ್ಕೆ ಕೊಟ್ಟು ಕೊಂಬ ಅರ್ಪಿತಾವಧಾನಂಗಳಂ ಬಿಟ್ಟನೆ ?
ತೀರ್ಥಪ್ರಸಾದದಲ್ಲಿ ಒಯ್ಯಾರಮಂ ಬಿಟ್ಟನೆ ?
ಮಾಡಿ ನೀಡುವ ದಾಸೋಹಮಂ ಬಿಟ್ಟನೆ ?
ಗುರುಲಿಂಗಜಂಗಮವ ಕಂಡು ಪೊಡಮಡುವುದಂ ಬಿಟ್ಟನೆ ?
.......................................................................
ಐಕ್ಯವಾಗುವನ್ನಬರ ಕ್ರೀಯೊಳಗೊಂಡ ಶರಣಂಗೆ ನಿಜಮುಕ್ತಿಯುಲ್ಲದೆ
ಐಕ್ಯವಾಗುವುದಕ್ಕೆ ಮುನ್ನವೇ ಕ್ರೀಯುಳಿದ ಶರಣನು
ಸಾಯುಜ್ಯಪದಸ್ಥನಪ್ಪನಲ್ಲದೆ
ಹರನಲ್ಲಿ ಸಮರಸವಿಲ್ಲವೆಂದೆನಯ್ಯ[48]

"ಈ ವಚನದಲ್ಲಿ ಸಾರ್ವಕಾಲಿಕವೂ ಸಾರ್ವಜನಿಕವೂ ಸರ್ವವ್ಯಾಪಕವೂ ಆದಂತಹ ವೈರಾಗ್ಯದ ನಿರೂಪಣೆಯನ್ನಿತ್ತಿದ್ದಾರೆ. ವೈರಾಗ್ಯದ ತುಟ್ಟತುದಿಯನ್ನು ಮುಟ್ಟಿದ ಶರಣನು ನಿತ್ಯಕ್ರಿಯೆಯಲ್ಲಿ ನಿರತನಾಗಿರಬಹುದು. ಲೌಕಿಕ ಪಾರಮಾರ್ಥಿಕ ಕ್ಷೇತ್ರಗಳಲ್ಲಿ ಕರ್ತವ್ಯನಿರತನಾಗಿ ಬಸವಣ್ಣನವರಂತೆ ನಿಜವೈರಾಗ್ಯಮೂರ್ತಿಯಾಗಿರಬಹುದು. ವೈರಾಗ್ಯವೆಂದರೆ ಊರಬಿಟ್ಟು ಸಂಸಾರದ ಹಂಗು ತೊರೆದು ಕೌಪೀನಧಾರಿಯಾಗಿರಬೇಕೆಂಬ ಮನೋಭಾವನೆಯಿದ್ದ ಅಂಥಾಭಿಮಾನಿಗಳಿಗೆ ನಿಜವಿರಕ್ತಿಯ ಸ್ತುತ್ಯದರ್ಶನವನ್ನು ನಮಗಿತ್ತಿದ್ದಾರೆ."[49]

ಲಿಂಗಾಂಗಸಂಬಂಧದ ಭೇದವನರಿಯದೆ ನಾವು ಲಿಂಗಾಂಗಸಂಬಂಧಿಗಳೆಂದು ಹೇಳಿಕೊಂಡು ಓಡಾಡುವ ಕ್ರಿಯಾಭ್ರಾಂತಜೀವರುಗಳಿಗೆ ಇಷ್ಟ-ಪ್ರಾಣ-ಭಾವಲಿಂಗಗಳ ಪೂಜಾವಿಧಾನ ಹೇಗೆ ಎಂಬುದನ್ನು ಹೇಳಿರುವುದು ಮುಂದಿನ ವಚನದಲ್ಲಿ ಮನೋಜ್ಞವಾಗಿ ಬಂದಿದೆ :

ಹೊರಗಣ ಹೂವನ್ನೆ ತಂದು
ಸ್ಥೂಲತನುವಿನ ಮೇಲಿಪ್ಪ ಆಚಾರಲಿಂಗಮಂ ಪೂಜೆಮಾಡಿ
ತನುವ ಸಮರ್ಪಿಸಿ ಬೇಡಿಕೊಂಡು
ಹೊರಗಣ ಹೊನ್ನು-ಹೆಣ್ಣು-ಮಣ್ಣು ಷಟ್ಕರ್ಮಂಗಳ
ಬಿಟ್ಟುದೇ ಇಷ್ಟಲಿಂಗಪೂಜೆ.
ಒಳಗಣ ಹೂವನ್ನೆ ತಂದು
ಸೂಕ್ಷ್ಮತನುವಿನ ಮೇಲಿಪ್ಪ ಜಂಗಮಲಿಂಗಮಂ ಪೂಜೆಮಾಡಿ

---

46 ಘ.ದೇ.ವ. ೪೦

47 ಘ.ದೇ.ವ. ೨೧

48 ಘ.ದೇ.ವ. ೨೨

49 'ಘನಲಿಂಗದೇವರ ವೈರಾಗ್ಯದರ್ಶನ'—'ಪ್ರಸಾದ' ತ್ರೈಮಾಸಿಕ ೧-೪. ಪು. ೭೦. ಹೆಚ್ ಗಂಗಾಧರನ್

ಮನವ ಸಮರ್ಪಿಸಿ ಉಪಾವಸ್ಥೆಯಂ ಮಾಡಿ
ಒಳಗಣ ಅಂತಃಕರಣಂಗಳಂ ಸುಟ್ಟುದೇ ಪ್ರಾಣಲಿಂಗಪೂಜೆ
ಮನೋಮಧ್ಯದೊಳಿಪ್ಪ ಭಾವಪುಷ್ಪವನ್ನೆ ತಂದು
ಕಾರಣತನುವಿನ ಮೇಲಿಪ್ಪ ತೃಪ್ತಿಲಿಂಗಮಂ ಪೂಜೆಮಾಡಿ
ಸಂತೋಷಮಂ ಸಮರ್ಪಿಸಿ ದೈನ್ಯಂಬಟ್ಟು
ಜ್ಞಾನ-ಕ್ರಿಯೆಗಳಳಿದುದೇ ಭಾವಲಿಂಗಪೂಜೆ
ಈ ಪ್ರಕಾರದ ಲಿಂಗಾಂಗಸಾಧಕತ್ವಮಂ
ಶಿವರಾತ್ರಿಯ ಸಂಕಣ್ಣಂಗೊಲಿದಂತೆ ಎನಗೊಲಿದು-ಕರುಣಿಸಯ್ಯ[50]

ಹುಟ್ಟು-ಸಾವುಗಳ ಪರಿಭ್ರಮಣದಿಂದ ಪಾರಾಗಿ ಜೀವಾತ್ಮನು ನೀರು ನೀರ ಬೆರೆದಂತೆ, ಕ್ಷೀರ ಕ್ಷೀರವ ಕೂಡಿದಂತೆ, ಬಯಲು ಬಯಲ ಸೇರಿದಂತೆ ನಿಜದ ನೆಲೆಯನ್ನು ನೇರವಾಗಿ ತಲುಪಬೇಕು. ಆಗ ಆ ಪರಬ್ರಹ್ಮವನೊಡಗೂಡಿ ಆ ಪರ ಬ್ರಹ್ಮವೆ ತಾನೆಯಾಗಿ 'ತನ್ನ ತಾ ತಿಳಿದಮೇಲೆ ಇನ್ನೇನಿನ್ನೇನೋ ?'—ಅಂತಹ ಪರಮಾನುಭವವನ್ನು ಕುರಿತು 'ಉಯ್ಯಾಲೆಯ ಮಣೆ ನೆಲೆಗೆ ನಿಂದಂತೆ ಆದೆನಯ್ಯ' ಎಂಬುದಾಗಿ ಸುಂದರ ಮನೋಹರವಾದ ದೃಷ್ಟಾಂತವನ್ನಿತ್ತು ಅರುಹಿದ್ದಾರೆ.

## ಸತಿ-ಪತಿ ಭಾವ

ಘನಲಿಂಗಶಿವಯೋಗಿಗಳ ವಚನಗಳಲ್ಲಿ ಸರ್ವಾಕರ್ಷಣೀಯವಾದ ಪ್ರಧಾನಾಂಶವೆಂದರೆ ಅವರ ಹಲವಾರು ವಚನಗಳಲ್ಲಿ ಮೂಡಿಬಂದಿರುವ ಸತಿ-ಪತಿಭಾವದ ಮನಮೋಹಕ ಸೌಂದರ್ಯದ, ಸಾಧಕಜೀವನದ ರಮ್ಯಚಿತ್ರಣ ಎಂದೇ ಹೇಳಬಹುದಾಗಿದೆ. ಸತಿ-ಪತಿಭಾವದಲ್ಲಿ ಜೀವಾತ್ಮ-ಪರಮಾತ್ಮರ ಅನುಸಂಧಾನವನ್ನು ಲೌಕಿಕ ಜಗತ್ತಿನ ಹೆಣ್ಣು-ಗಂಡುಗಳ ಸಾಮರಸ್ಯಪೂರ್ಣ ಪ್ರೇಮಾನುಸಂಧಾನದೊಂದಿಗೆ ಹೋಲಿಸಲಾಗಿದೆ. ಕನ್ನಡದಲ್ಲಿ ಈ ವಿಶಿಷ್ಟ ಪ್ರಕಾರದ ಮಧುರಭಾವವನ್ನು ವಚನಕಾರರ ವಚನಗಳಲ್ಲಿ ನಾವು ನೋಡಬಹುದು. ಶರಣನು ತನ್ನನ್ನೇ ಸತಿಯೆಂದೂ ಲಿಂಗವನ್ನು ಪತಿಯೆಂದೂ ಭಾವಿಸಿ ಲೌಕಿಕದ ನೆಲೆಯಲ್ಲಿ ಸತಿ-ಪತಿಗಳು ಪ್ರೇಮಾಭಿವ್ಯಕ್ತಿ ಮಾಡುವ ರೀತಿಯಲ್ಲೇ ಭಕ್ತಿಯ ಅನುಸಂಧಾನ ಮಾಡುವನು. ಅದನ್ನೇ 'ಶರಣಸತಿ-ಲಿಂಗಪತಿ' ಎಂದು ವಚನಗಳಲ್ಲಿ ಕರೆಯಲಾಗಿದೆ...ಸತಿ-ಪತಿಭಾವದ ಕಲ್ಪನೆ ನಮ್ಮ ವಚನಕಾರರದ್ದಲ್ಲ. ಅದು ತಮಿಳುನಾಡಿನ ನಾಯನಾರರ ಭಕ್ತಿಗೀತೆಗಳಲ್ಲಿ (ತೇವಾರಂಗಳಲ್ಲಿ) ಕಾಣಿಸಿಕೊಂಡಿದ್ದು ಬಹುಶಃ ಅವರಿಂದ ಪ್ರೇರಣೆ ಪಡೆದ ನಮ್ಮ ವಚನಕಾರರು ಆ ರೀತಿಯ ರಚನೆಗಳನ್ನು ಮಾಡಿದಂತಿದೆ....ಮಹಾದೇವಿಯಕ್ಕ ಚೆನ್ನಮಲ್ಲಿಕಾರ್ಜುನನನ್ನು ತನ್ನ ಪತಿಯಾಗಿ ಭಾವಿಸಿ ಅನುಸಂಧಾನ ನಡೆಸಿದ ಶ್ರೇಷ್ಠ ವಚನಕಾರ್ತಿ. ಅವಳು ಹೆಣ್ಣಾಗಿ ಚೆನ್ನಮಲ್ಲಿಕಾರ್ಜುನನನ್ನು ಪತಿಯಾಗಿ ಭಾವಿಸಿದಳು. ಇದು ಲೋಕರೂಢಿಗೆ ಸಹಜ. ಗಂಡು ತನ್ನನ್ನು ಹೆಣ್ಣಾಗಿ ಭಾವಿಸಿ ಲಿಂಗಾನುಸಂಧಾನ ನಡೆಸುವುದು ಲೋಕರೂಢಿಗೆ ವಿರುದ್ಧ. ಆದ್ದರಿಂದಲೇ ಪುರುಷರ ಸತಿ-ಪತಿಭಾವದ ವಚನಗಳಿಗೆ ಹೆಚ್ಚಿನ ಮಹತ್ವ. ಪುರುಷರ ವಚನಗಳಲ್ಲಿನ ಸಮರ್ಪಣಭಾವ ಉಜ್ಜ್ವಲವಾಗಿದೆ. ತಮ್ಮನ್ನು ಸತಿಯಾಗಿ ಭಾವಿಸಿ ಇವರು ನಡೆಸುವ ಪರಿಚರ್ಯೆ, ಪ್ರಕಟಿಸುವ ತನ್ನಿಷ್ಠೆ, ಅಭಿವ್ಯಕ್ತಗೊಳಿಸುವ ಶೃಂಗಾರಭಾವಗಳು ಅತ್ಯಾಶ್ಚರ್ಯಕರವೂ ಅನ್ಯಾದೃಶವೂ ಆಗಿವೆ....ಕನ್ನಡಕ್ಕೆ ಸತಿ-ಪತಿಭಾವದ ಕಲ್ಪನೆಯು ಎರವಲಾಗಿ ಬಂದಿದ್ದರೂ ವಚನಕಾರರು ಅದನ್ನೇ 'ಶರಣಸತಿ-ಲಿಂಗಪತಿ' ಎಂದು ಕರೆದು ತಮ್ಮ ಪ್ರತಿಭೆಯ ಮೂಸೆಯಲ್ಲಿ ಅದು ಇನ್ನಷ್ಟು ಕಳೆಗೊಳ್ಳುವಂತೆ ಮಾಡಿರುವರು."[51] ಹಾಗೆ ಕಳೆಕಟ್ಟಿಸಿದವರಲ್ಲಿ ಮಹಾದೇವಿಯಕ್ಕಗಳು, ಸಿದ್ಧರಾಮ ಶಿವಯೋಗಿಗಳು, ಉರಿಲಿಂಗದೇವಗಳು, ಗಜೇಶ ಮಸಣಯ್ಯಗಳು, ಘನಲಿಂಗ ಶಿವಯೋಗಿಗಳು ಮುಖ್ಯರು ಎನ್ನಬಹುದು. ಘನಲಿಂಗ ಶಿವಯೋಗಿಗಳ ವಚನಗಳಲ್ಲಿ ಈ ಸತಿ-ಪತಿಭಾವವು ವಿಶಿಷ್ಟರೀತಿಯಲ್ಲಿ ಮೂಡಿ ಬಂದಿರುವುದನ್ನು ಈ ಸಂದರ್ಭದಲ್ಲಿ ಪರಿಚಯ ಮಾಡಿಕೊಳ್ಳಬಹುದು.

ಎಲೆ ತಂಗಿ,
ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ—

50 ಘ.ದೇ.ವ. ೫೧

51 'ವಚನಗಳಲ್ಲಿ ಸತಿ-ಪತಿಭಾವ'—ಡಾ. ಎಸ್. ವಿದ್ಯಾಶಂಕರ: ಬಸವಪಥ: ಸಂ. ೩-ಸಂ. ೯

ಹಿಂದು ಪ್ರಾರಂಭದಲ್ಲಿಯೇ ಬರುವ ವಚನದಲ್ಲಿನ ಅವರ ಈ ಉದ್ಘೋಷಣೆ ಅವರ ವಚನಗಳ ಉದ್ದಕ್ಕೂ ಅನುರಣಿತವಾಗಿರುವುದನ್ನು ಆಕರ್ಣಿಸಿದಾಗ ಮೈನವಿರೇಳುತ್ತದೆ. ಅವರು ತಮ್ಮ ವಚನಗಳಿಗೆ ಇಟ್ಟಿರುವ ಅಂಕಿತವೇ—ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ—ಅರ್ಥಪೂರ್ಣ, ಭಾವಪೂರ್ಣ, ಮನಮೋಹಕ ಆಗಿದೆ; ಸತಿ-ಪತಿಭಾವದ ಸುಂದರ ಸುಮಧುರ ಧ್ವನಿದ್ಯೋತಕವಾಗಿದೆ. ತಾವು ಒಲಿದಿರುವ ಪತಿದೇವನು ಬರಿಯ ಅರಸಿಕನಾದ ಚೆನ್ನಮಲ್ಲಿಕಾರ್ಜುನನಲ್ಲ; ಆತನು ಬಲು ರಸಿಕನಾದ ಚೆಲುವ ಚೆನ್ನಿಗ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ಘನಲಿಂಗಿಗಳ ಕಡುಮೋಹಕ್ಕೊಳಗಾದ, ಅಷ್ಟೇ ಅಲ್ಲ-ಘನಲಿಂಗಿಗಳು ಘನವಾಗಿ ಮೋಹಿಸಿದ ಚೆನ್ನಮಲ್ಲಿಕಾರ್ಜುನ ಅವನು. ಹೀಗೆ ತಮ್ಮ ವಚನಾಂಕಿತದಲ್ಲಿಯೇ ಸತಿ-ಪತಿಭಾವದ ಸೌಂದರ್ಯವನ್ನೆಲ್ಲ ಅರ್ಥವತ್ತಾಗಿ ತುಂಬಿ ತಮ್ಮ ನಡೆ-ನುಡಿಗಳುದ್ದಕ್ಕೂ ಅದು ಹೊಗರುದೋರುವಂತೆ ಬಿಂಬಿಸಿ ಹೊರಸೂಸಿದ್ದಾರೆ. ತಮ್ಮ ಹುಟ್ಟಿನೊಂದಿಗೇ ಶರಣಸತಿ-ಲಿಂಗಪತಿಭಾವ ಮೈದಳೆದು ತಾವು ಶರಣವೆಣ್ಣಾಗಿ ಹುಟ್ಟಿಬಂದುದನ್ನು ಗಟ್ಟಿಯಾಗಿ ಇಲ್ಲಿ ಸ್ಪಷ್ಟಪಡಿಸಿದ್ದಾರೆ.

### ಶರಣಸತಿಯ ಹುಟ್ಟು-ಹರಯಗಳು

ಈ ಜನ್ಮದಲ್ಲಿ ಪಿಂಡೋತ್ಪತ್ತಿಯಲ್ಲಿಯೇ
ಶರಣ-ಸತಿ ಲಿಂಗ-ಪತಿಯೆಂಬ ಜ್ಞಾನ ತಲೆದೋರಿ
ಶರಣವೆಣ್ಣಾಗಿ ಹುಟ್ಟಿದೆನಯ್ಯ
ಎನಗೆ ನಿನ್ನ ಬಯಕೆಯೆಂಬ ಸಿಂಗಾರದ ಸಿರಿಮುಡಿಯಾಯಿತು.
ಎನಗೆ ನಿನ್ನ ನೋಡುವೆನೆಂಬ ಮುಗುಳ್ಮೊಲೆ ಮೂಡಿದವು.
ಎನಗೆ ನಿನ್ನೊಳು ನುಡಿಯಬೇಕೆಂಬ
ಉರವಣೆಯ ಸಂಪದದ ಜವ್ವನ ಕುಡಿವರಿಯಿತ್ತು.
ಎನಗೆ ನಿನ್ನನೊಲಿಸಬೇಕೆಂಬ
ಸಂಭ್ರಮದ ಕಾಂಚೀದಾಮ-ಕಟಿಸೂತ್ರ-ಕೇಯೂರ ನಿಡುಗೊಂಡಯವೆಂಬಾಭರಣ
ಅನುಲೇಪನ-ವಸ್ತ್ರಂಗಳೆನಗೆ ಅಲಂಕಾರವಾಯಿತ್ತು.[52]

ಹೀಗೆ ನಾನಾವಿಧವಾಗಿ ಪರಮಾತ್ಮ ಪತಿದೇವನ ಒಲುಮೆಗಾಗಿ ಪರಿಪರಿಯಾಗಿ ಜೀವತುಡಿಯುತ್ತಾ ಪ್ರಾರ್ಥಿಸಿರುವುದು ಚಿತ್ತಾಕರ್ಷಕವಾಗಿದೆ. ಅಕ್ಕಮಹಾದೇವಿಯು ತನ್ನ ಸಕ್ಕರೆಯ ನುಡಿಯೊಂದರಲ್ಲಿ "ಹುಟ್ಟಿದೆನು ಶ್ರೀಗುರುವಿನ ಹಸ್ತದಲಿ, ಬೆಳೆದೆನು ಅಸಂಖ್ಯಾತರ ಕರುಣದೊಳಗೆ...." ಎಂಬುದಾಗಿ ತನ್ನ ಜನನ-ಬಾಲ್ಯ-ಯೌವನ-ವಿವಾಹಗಳನ್ನು ಹೇಳಿಕೊಂಡಿರುವಂತೆ ಘನಲಿಂಗ ಶಿವಯೋಗಿಗಳೂ ಹೇಳಿಕೊಂಡಿರುತ್ತಾರೆ:

ಎನ್ನ ಹೃದಯಕಮಲದೆಂಟುಮಂಟಪದ
ಚತುಷ್ಪತ್ರಿಕಾಮಧ್ಯದ ಪದ್ಮಪೀಠದಲ್ಲಿ
ಎನ್ನ ತಂದೆ ಸುಸ್ಥಿರನಾಗಿ
ಎನಗೆ,
ಷಟ್‌ಸ್ಥಲಮಾರ್ಗ-ಪುರಾತನರವಚನಾನುಭಾವ-ಭಕ್ತಿ-ಜ್ಞಾನ-ವೈರಾಗ್ಯವೆಂಬ
ಜೇನು-ಸಕ್ಕರೆ ಪರಮಾಮೃತವ ದಣಿಯಲುಣಿಸಿದನಯ್ಯ.
ಆ ಜೇನು-ಸಕ್ಕರೆ ಪರಮಾಮೃತವ ದಣಿಯಲುಣಲೊಡನೆ
ಎನ್ನ ಬಾಲತ್ವ ಕೆಟ್ಟು, ಯೌವನಂ ಬೆಳೆದು, ಬೆಡಗು ಕುಡಿವರಿದು
ಮೀಟು ಜವ್ವನೆಯಾದೆನಯ್ಯ ನಾನು.[53]

### ವಿವಾಹ ವಿರಹಗಳು

ಮೀಟುಜವ್ವನದ ಈ ಶರಣಸತಿಯು ಲಿಂಗಪತಿಯನ್ನು ವರಿಸಲು ಬಹುವಿಧದಿಂದ ಸಿಂಗರಗೊಂಡು ಹಸೆಗೆ ನಿಂದಾಗ ಅವಳ ಶೃಂಗಾರವೈಭವ—ವಿವಾಹದ ವಿಜೃಂಭಣೆಗಳ ಶಬ್ದಚಿತ್ರಗಳು ಚೇತೋಹಾರಿಯಾಗಿ ಚಿತ್ರಣಗೊಂಡಿವೆ; ಪುಟಪುಟಗಳಲ್ಲಿಯೂ ಹಾಯ್ದುಬಂದು ಬಣ್ಣಬಣ್ಣದ ಕಾರಂಜಿಯಂತೆ ಪುಟಿಯುತ್ತಿವೆ.

52 ಘ.ದೇ.ವ. ೧

53 ಘ.ದೇ.ವ. ೪೬

ಎನಗೆ ನಿಜಮೋಕ್ಷವೆಂಬ ಮನ್ಮಥವಿಕಾರವು
ಎನ್ನನಂಡಲೆದು ಆಳ್ದು, ನಿಂದಲ್ಲಿ ನಿಲಲೀಸದಯ್ಯ
ಅನಂತಕೋಟಿ ಸೋಮ-ಸೂರ್ಯಪ್ರಕಾಶವನುಳ್ಳ ಪರಂಜ್ಯೋತಿಲಿಂಗವೆ,
ನಿನ್ನ ಕೃಪೆಯೆಂಬ ಶುಭಲಗ್ನದಲ್ಲಿ ಎನಗೆ ಶಿವಾನಂದಭಕ್ತಿಯೆಂಬ ತಾಲಿಬಂದಿಯ ಕಟ್ಟು,
ಸುಮಂತ್ರವಲ್ಲದೆ ಕುಮಂತ್ರವ ನುಡಿಯೆನೆಂಬ ಕಂಠಮಾಲೆಯಂ ಧರಿಸು,
ಅರ್ಪಿತವಲ್ಲದೆ ಅನರ್ಪಿತವ ಪರಿಮಳಿಸೆನೆಂಬ ಮೌಕ್ತಿಕದ ಕಟ್ಟಾಣಿಮೂಗುತಿಯನಿಕ್ಕು,
ಸುಶಬ್ದವಲ್ಲದೆ ಅಪಶಬ್ದವ ಕೇಳೆನೆಂಬ ರತ್ನದ ಕರ್ಣಾಭರಣಂಗಳಂ ತೊಡಿಸು,
ಶರಣತ್ವವನಲ್ಲದೆ ಜೀವತ್ವವನೊಲ್ಲೆನೆಂಬ ತ್ರಿಪುಂಡ್ರಮಂ ಧರಿಸು,
ಕ್ರೀಯಲ್ಲದೆ ನಿಷ್ಕ್ರೀಯ ಮಾಡೆನೆಂಬ ಮೌಕ್ತಿಕದ ಬಟ್ಟನಿಕ್ಕು,
ನಿಮ್ಮವರಿಗಲ್ಲದೆ ಅನ್ಯರಿಗೆರೆಗೆನೆಂಬ ಕನಕಲತೆಯ ಬಾಸಿಂಗಮಂ ಕಟ್ಟು,
ಸಮ್ಯಜ್ಞಾನವಲ್ಲದೆ ಅಜ್ಞಾನವ ಹೊದ್ದೆನೆಂಬ ನವ್ಯದುಕೂಲವನುಡಿಸು,
ಲಿಂಗಾಣತಿಯಿಂದ ಬಂದುದನಲ್ಲದೆ ಅಂಗಗತಿಯಿಂ ಬಂದುದಂ ಮುಟ್ಟೆನೆಂಬ
ರತ್ನದ ಕಂಕಣವಂ ಕಟ್ಟು,
ಶರಣಸಂಗವಲ್ಲದೆ ಪರಸಂಗಮಂ ಮಾಡೆನೆಂಬ ಪರಿಮಳವಂ ಲೇಪಿಸು,
ಶಿವಪದವಲ್ಲದೆ ಚತುರ್ವಿಧ ಪದಂಗಳ ಬಯಸೆನೆಂಬ ಹಾಲುತುಪ್ಪಮಂ ಕುಡಿಸು,
ಪ್ರಸಾದವಲ್ಲದೆ ಭಿನ್ನರುಚಿಯಂ ನೆನೆಯೆನೆಂಬ ತಾಂಬೂಲವನಿತ್ತು ಸಿಂಗರಂಗೈದು
ನಿನ್ನ ಕರುಣಪ್ರಸಾದವೆಂಬ ವಸಂತಚಪ್ಪರದಲ್ಲಿ
ಪ್ರಮಥಗಣಂಗಳ ಮಧ್ಯದಲ್ಲಿ ಎನ್ನ ಮದುವೆಯಾಗಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.[54]

ಇಂತಹ ರೀತಿಯಲ್ಲಿ ಅಲಂಕಾರಗೊಂಡು, ಮೂಲೋಕದ ಚೆಲುವ ಚೆನ್ನಮಲ್ಲಿಕಾರ್ಜುನನನ್ನು ಕೈಹಿಡಿಯುವ ಉತ್ಕಟೇಚ್ಛೆಯಿಂದ 'ಕಾಸೆಯನಳಿದು ಸೀರೆಯನುಟ್ಟು ಗಂಡುಹೆಣ್ಣಾಗಿ ನಿನಗೆ ವಧುವಾದೆನಯ್ಯ' ಎಂದು ತಾವು ಶರಣಸತಿಯಾದುದನ್ನೂ ತಮ್ಮ ಅಂತರಂಗದ ಭಾವನೆಗಳ ಸೂಕ್ಷ್ಮಚಿತ್ರಗಳನ್ನೂ ಇಲ್ಲಿ ಬಣ್ಣಿಸಿದ್ದಾರೆ.

ಶ್ರೀಗುರುಜಂಗಮ ತಿಂಥಿಣಿಯ ಹಾಗೂ ಸದ್ಭಕ್ತಗಣಂಗಳ ಮಧ್ಯದಲ್ಲಿ ಶ್ರೀಗುರುವಿನ ಆಧ್ಯಾತ್ಮಿಕ ಪೌರೋಹಿತ್ಯದ ಅನುಪಮಶಕ್ತಿಯ ಬಲದಿಂದ ಲಿಂಗಪತಿಯನ್ನು ಬಹು ಸುಲಭದಲ್ಲಿ ಪಡೆದ ಶರಣಸತಿ ಶಿರೋಮಣಿಯು ತನ್ನ ಗಂಡನೊಡನೆ ಗರತಿಯಾಗಿ, ಸದ್ಗೃಹಿಣಿಯಾಗಿ, ಅನುಕೂಲೆಯಾದ ಸತಿಯಾಗಿ ಸರಿಹೊಂದಿಕೊಂಡು ಸಂತೋಷ-ಸಂಭ್ರಮಗಳಿಂದ ಸಂಸಾರ ಮಾಡುವ ಸವಿಗನಸುಗಳ ಹರ್ಷೋತ್ಕರ್ಷ ಹಾಗೂ ಪತಿಯ ಮೇಲಿನ ವ್ಯಾಮೋಹ-ಭಕ್ತಿಯ ಆವೇಶಗಳನ್ನು ಹೃದಯಂಗಮವಾಗಿ ವ್ಯಕ್ತಪಡಿಸಿದ್ದಾರೆ :

ಎನ್ನ ಗಂಡನ ಮನೆಯೊಡವೆಯನೆನ್ನ ಉಗುರುಕಣ್ಣನಲೆತ್ತಿ
ಒಗತನವ ಮಾಡುವೆನು.
ಎಮ್ಮಕ್ಕನ ಕೈಯಿಂದ ಎನ್ನ ಗಂಡನ ಹೆಂಡತಿಯೆನಿಸಿಕೊಂಬೆನು
ಎನ್ನ ಗಂಡ ಆಳಲಿ ಆಳದೆ ಹೋಗಲಿ
ಪತಿಭಕ್ತಿಯ ಬಿಡೆ ಕಣಾ ![55]

ಇಲ್ಲಿ ಕಾಣುವ ಶರಣಸತಿಯ ಪತಿಭಕ್ತಿ ಅಸಾಧಾರಣವಾದುದು, ಅನ್ಯಾದೃಶವಾದುದು. ಲಿಂಗಪತಿಯ ಕೈಹಿಡಿದು ಪತಿಗೃಹಕ್ಕೆ ತೆರಳಿದ ಹೆಣ್ಣು ತನ್ನ ಗಂಡನ ಮನೆಯಲ್ಲಿ ಒಂದು ಹುಲ್ಲುಕಡ್ಡಿಯೂ ಹಾಳಾಗದಂತೆ ಮೈಯೆಲ್ಲ ಕಣ್ಣಾಗಿ ಜೋಪಾನಗೈಯ್ಯುವ, ಗಂಡನ ಹೆಜ್ಜೆಗೆ ಹೆಜ್ಜೆ ಹಾಕುವ, ಗಂಡನು ಆಳಲಿ ಆಳದೆ ಬಿಡಲಿ ಪತಿಭಕ್ತಿಯನ್ನು ಬಿಡದೆ ಹಿಡಿಯುವ ದೃಢವ್ರತ ಈ ಶರಣಸತಿಯದೆಂದು ತಿಳಿದಾಗ ಆಧ್ಯಾತ್ಮಿಕ ಸಂಸಾರದ ಆದರ್ಶವೆಂತಹುದೆಂಬುದು ಇಲ್ಲಿ ಚೆನ್ನಾಗಿ ವೇದ್ಯವಾಗುತ್ತದೆ.

ನಲ್ಲನ ಅಗಲಿಕೆ, ಅದರಿಂದಾದ ವಿರಹ-ನೋವುಗಳು ತಮ್ಮನ್ನು ಅಸಹನೀಯವಾದ ಸ್ಥಿತಿಗೆ ತಂದಿರುವುದನ್ನೂ ನಲ್ಲನೊಡನೆ ಕೂಡುವುದಕ್ಕಾಗಿ ತಹತಹಪಡುತ್ತಿರುವುದನ್ನೂ ಇಲ್ಲಿ ಅರ್ಥಪೂರ್ಣವಾಗಿ ಹೇಳಿರುವುದು ಸೊಗಸಾಗಿದೆ :

---

54 ಘ.ದೇ.ವ. ೪೬

55 ಘ.ದೇ.ವ. ೬೦

ಭಕ್ತಿಯೆಂಬ ವಿರಹಾಗ್ನಿ ಎನ್ನ ಹೃದಯಕಮಲದಲ್ಲಿ ಬೆಳೆದು
ಬೀದಿವರಿದು
ನಿಂತಲ್ಲಿ ನಿಲಲೀಸದಯ್ಯ, ಕುಳಿತಲ್ಲಿ ಕುಳ್ಳಿರಲೀಸದಯ್ಯ
ಮನ ನಿಂದಲ್ಲಿ ಮನೋಹರವಪ್ಪುದಯ್ಯ
ಅಂಗ-ಮನ-ಪ್ರಾಣ-ನೇತ್ರ-ಚಿತ್ತಂಗಳೊಳು
ಪಂಚಮುಖವೆಂಬ ಪಂಚಬಾಣಂಗಳು ನೆಟ್ಟವಯ್ಯ
ನಾನು ಧರೆಯೊಳುಳಿವುದರಿದು
ಪ್ರೇಮದಿಂ ಬಂದು, ಕಣ್ದುಂಬಿ ನೋಡಿ
ಮನವೊಲಿದು ಮಾತಾಡಿ, ಕರುಣದಿಂ ಕೈವಿಡಿದು
ಅಕ್ಕರಿಂದಾಲಿಂಗಿಸಿ, ದಿಟ್ಟಿಸಿ, ಬೊಟ್ಟಾಡಿ
ಲಲ್ಲೆವಾತಿಂ ಗಲ್ಲವ ಪಿಡಿದು
ಪುಷ್ಪಪರಿಮಳದಂತೆ, ನಾ-ನೀನುಭಯವಿಲ್ಲದಂತೆ
ಕೂಡೆನ್ನ ಪ್ರಾಣೇಶನೇ ![56]

—ಹೀಗೆ ನಾನಾ ವಿಧವಾಗಿ, ಪರಮಾತ್ಮನ ಒಲುಮೆಗಾಗಿ ವಿರಹತಾಪದಿಂದ ಜೀವ ತುಡಿಯುತ್ತಿರುವುದನ್ನು ತೋಡಿಕೊಂಡಿರುವುದು ಜೀವಂತವಾಗಿ ಮೂಡಿಬಂದಿದೆ. "ಆ ವಚನಗಳಲ್ಲಿನ ಭಾವತೀವ್ರತೆ ನಮ್ಮ ಮನಸ್ಸನ್ನು ಮುಟ್ಟಿ ಕ್ರಮಕ್ರಮವಾಗಿ ಆವರಿಸುತ್ತಾ ಹೋಗುತ್ತದೆ."[57]

## ಲಿಂಗದಾಂಪತ್ಯ-ನಿಶ್ಚಲ ಪಾತಿವ್ರತ್ಯಗಳು

ನಲ್ಲನೊಡನೆ ಕೂಡಿ ಲಲ್ಲೆವಾತಿನಿಂದ ನಕ್ಕುನಗಿಸಿ ನಲಿಯುತ್ತ ಬಾಳುವುದು ನಲ್ಲೆಯಾದವಳಿಗೆ ಎಲ್ಲಿಲ್ಲದ ಸುಖವನ್ನು ನೀಡುತ್ತದೆಂಬುದು ನಿಸ್ಸಂದೇಹವಾದುದು. ಸಂಸಾರದಲ್ಲಿ ಸತಿಯಾದವಳು ಪತಿಯ ಗಳಿಕೆ-ಅಗ್ಗಳಿಕೆಗಳನ್ನು ಗಮನಿಸಿ ತನ್ನ ಸಂಸಾರವನ್ನು ಸರಿತೂಗಿಸಿಕೊಂಡು, ತಾನು ಸರಳಸಾಧಾರಣಜೀವನಕ್ಕೆ ಹೊಂದಿಕೊಂಡು ಹೋಗಬೇಕಾದುದು ಇಂದಿಗೂ ಅತಿಮುಖ್ಯವಾದುದು. 'ಗಂಜೀಯ ಕುಡಿದರೂ ಗಂಡನ ಮನಿ ಲೇಸು' ಎಂದು ಜನಪದ ಗೀತೆ ಎಚ್ಚರಿಸಿರುವಂತೆ 'ಬೆಲ್ಲಗೂಳಿಗಾಸೆಮಾಡಿ, ನೆರೆಮನೆಗೆ ಹೋಗುವ ಬಲ್ಲಾಳಗಿತ್ತಿಗೆ ಪತಿಭಕ್ತಿ ಅಳವಡುವುದೆ ಅಯ್ಯ ?' ಎಂದು ಎಚ್ಚರಿಸುವ ಈ ಶರಣಸತಿಯ ನಿಶ್ಚಲ ಪಾತಿವ್ರತ್ಯ, ಜೀವನಾದರ್ಶಗಳು ಮೆಚ್ಚುವಂತಹುಗಳಾಗಿವೆ. ಅವುಗಳನ್ನು ಅವರ ನುಡಿಗಳಲ್ಲಿಯೇ ಆಲಿಸಿ ಸಾಧ್ಯವಿದ್ದಷ್ಟನ್ನು ಎಲ್ಲರೂ ತಮ್ಮ ನಿತ್ಯಜೀವನದಲ್ಲಿ ಪರಿಪಾಲಿಸಬಹುದಾಗಿದೆ.

ಗಂಡನಿಕ್ಕಿದ ಪಡಿಯನುಂಡು ಮನೆಗಡೆಯದಿಪ್ಪವಳು ಪತಿವ್ರತೆಯಲ್ಲದೆ
ಗಂಡನಿಕ್ಕಿದ ಪಡಿಯನೊಲ್ಲದೆ
ಬೆಲ್ಲಗೂಳಿಗಾಸೆಮಾಡಿ, ನೆರೆಮನೆಗೆ ಹೋಗುವ ಬಲ್ಲಾಳಗಿತ್ತಿಗೆ
ಪತಿಭಕ್ತಿ ಅಳವಡುವುದೆ ಅಯ್ಯ ?
ಲಿಂಗಾಣತಿಯಿಂದ ಬಂದ ಪದಾರ್ಥವ
ಕೈಕೊಂಡಾತ ಶರಣಸತಿ ಲಿಂಗಪತಿಯಲ್ಲದೆ
ಲಿಂಗಾಣತಿಯಿಂದ ಬಂದ ಪದಾರ್ಥವ
ಸಟಗೆ ಉಂಡುಕೊಂಡಂತೆ ಮಾಡಿ ಸಾಕೆಂದು ನೂಕಿ, ಅಂಗದಿಚ್ಛೆಗೆ ಹರಿದು
ಮತ್ತೊಂದು ಮನೆಗೆ ಆಸೆಮಾಡಿ ಹೋಗುವ ಜೀವಗಳ್ಳರಿಗೆ
ಶರಣ-ಸತಿ ಲಿಂಗ-ಪತಿಭಾವ ಅಳವಡುವುದೆ ಅಯ್ಯ ?[58]

ಪತಿದೇವ ಪರಮಾತ್ಮನಿಂದ ತನಗೆ ಪ್ರಾಪ್ತವಾದುದನ್ನೇ ಮಹಾಪ್ರಸಾದವೆಂದು ಸಂತೋಷದಿಂದ ಸ್ವೀಕರಿಸಿ ಅವ

---

56 ಘ.ದೇ.ವ. ೧

57 ವಚನಗಳಲ್ಲಿ ಸತಿ-ಪತಿಭಾವ—ಡಾ. ಎಸ್. ವಿದ್ಯಾಶಂಕರ: ಬಸವಪಥ: ೩-೯. ಪು. ೭೦

58 ಘ.ದೇ.ವ. ೧೭

ನೊಡನೆ ಉಂಡು ಸುಖಿಸಿ ಆನಂದಿಸುವುದೇ ಶರಣಸತಿಯು ಲಿಂಗದಾಂಪತ್ಯದ ಹಿರಿಮೆಯು ರಹಸ್ಯಾತಿರಹಸ್ಯವೆಂದು ವಿವರಿಸಿರುವ ಬಗೆ ನಮ್ಮೆಲ್ಲರ ಬಗೆದುಂಬಿ ನಿಲ್ಲುವಂತಿದೆ.

## ಸತಿ-ಪತಿಗಳ ಸಾಮರಸ್ಯ—ಪುಷ್ಪಪರಿಮಳದಂತೆ ಬೆರೆದ ಸ್ವಾರಸ್ಯಗಳು

ಶರಣಸತಿಯು ಲಿಂಗಾಣತಿಯಿಂದ ಬಂದ ಪದಾರ್ಥವನ್ನು ಕೈಕೊಂಡು ಲಿಂಗಪತಿಗೆ ಅನುಕೂಲೆಯಾದ ಸತಿಯಾಗಿ ಸಂಸಾರವನ್ನು ನಡೆಸಿ. ಬಸವಾದಿಪ್ರಮಥರು ಮೆಚ್ಚುವಂತೆ ಜಗತನವನ್ನು ಮಾಡಿ. ಬಿಚ್ಚಿ ಬೇರಾಗದಂತೆ ನಲ್ಲನೊಡನೆ ಕೂಡಿ 'ಪುಷ್ಪಪರಿಮಳದಂತೆ'. 'ಶಿಖಿಕರ್ಪುರನ್ಯಾಯ'ದಂತೆ ಸಮರಸದಲ್ಲಿ ಬೆರೆತು ತಾನೇತಾನಾಗುವ—'ಘನಲಿಂಗ ತಾನೆಯಾದ'—ಘನಮಹೋನ್ನತ ಸಿದ್ಧಿಯನ್ನು ಘನಲಿಂಗಶಿವಯೋಗಿಗಳು ಸತಿ-ಪತಿಭಾವದ ತಮ್ಮ ವಚನಗಳಲ್ಲಿ ಅಮೋಘವಾಗಿ. ಅರ್ಥಪೂರ್ಣವಾಗಿ ವಿವರಿಸಿರುವುದು ಅತ್ಯಂತ ಸುಂದರವಾಗಿ ಬಂದಿದೆ.

ಇಂತಪ್ಪ ಘನಕ್ಕೆ ಘನವಾದ ಮಹಾಲಿಂಗವಂ
ಶರಣಂ ನಿಟ್ಟಿಸಿ ಕಟ್ಟಕ್ಕರಿಂ ನೋಡಿ
ಮನಂ ನಲಿದು. ಆನಂದಾಶ್ರುಜಲಂ ಸುರಿದು
ಪುಳಕಂಗಳುಣ್ಮೆ, ರೋಮಾಂಚನಂ ಗುಡಿಗಟ್ಟೆ
ಪ್ರಣವದ ನುಡಿ ತಡೆಬಡಿಸಿ, ನಡೆ ದಟ್ಟಡಿಸುವ ಕಾಲದಲ್ಲಿ
ಕರ್ಪುರದ ಪುತ್ಥಳಿ ಬಂದು ಉರಿಯ ಪುತ್ಥಳಿಯನಾಲಂಗಿಸಿದಂತೆ
ಶರಣಂ ಬಂದು. ಆ ಘನಲಿಂಗಮಂ ಅಮರ್ದಪ್ಪಿ
ಪುಷ್ಪಪರಿಮಳದಂತೆ ಏಕವಾಗಿ ಘನಲಿಂಗ ತಾನೆಯಾದ[59]

ಹೀಗೆ ಸುಖದ ಸುಗ್ಗಿಯಲ್ಲಿ ಚಿದ್ಘನಲಿಂಗದೊಡನೆ ಹಿಗ್ಗಿನಿಂದ ಬಾಳಿ ಸತಿ-ಪತಿಭಾವದ ಸಮರಸಜೀವನದ ಸ್ವರೂಪ-ಸಾಮರಸ್ಯಗಳನ್ನು ಜಗತ್ತಿಗೆಲ್ಲ ತಮ್ಮ ನೇರವಾದ, ಸರಳವಾದ ಆದರೆ ಅನುಭವವಿಶಿಷ್ಟವಾದ ಅಮೃತವಾಣಿಗಳಿಂದ ಹೃದಯಂಗಮವಾಗಿ ಹೇಳಿ ಕರ್ಪುರದ ಪುತ್ಥಳಿಯು ಉರಿಯ ಪುತ್ಥಳಿಯನ್ನು ಆಲಿಂಗಿಸಿದಂತೆ ಆ ಘನಲಿಂಗವನ್ನು ಅಮರ್ದಪ್ಪಿಕೊಂಡು ಪುಷ್ಪಪರಿಮಳದಂತೆ ಏಕವಾಗಿ ಘನಲಿಂಗವೆ ತಾನೆಯಾದ ಘನಲಿಂಗಶಿವಯೋಗಿಗಳಿಗೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಗಮನಾರ್ಹವಾದ ಒಂದು ವಿಶಿಷ್ಟಸ್ಥಾನ ಮೀಸಲಾಗಿದೆ. ಚರಕುಲ ಚಕ್ರವರ್ತಿಗಳಾದ 'ಶ್ರೀ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭು'ವಿನ ಚರಣಸೇವೆಯಿಂದಾಗಿ ಘನಲಿಂಗಶಿವಯೋಗಿಶಿವಾಚಾರ್ಯರ "ಪ್ರಾಣವೇ ಪರಬ್ರಹ್ಮವಾಯಿತು, ಪ್ರವೃತ್ತಿಯ ಬಟ್ಟೆ ಹುಲ್ಲುಹುಟ್ಟಿತು, ನಿವೃತ್ತಿಯ ಬಟ್ಟೆ ನಿರ್ಮಲವಾಯಿತು. ಉಯ್ಯಾಲೆಯು ಮಣೆ ನೆಲೆಗೆ ನಿಂದಂತೆ"[60] ಅವರು ನಿಜದ ನೆಲೆಯಲ್ಲಿ ನೆಲೆನಿಂತರು. ಘನತೆವೆತ್ತ ಘನಲಿಂಗದ ಬೆಳಗಾಗಿ ಘನಲಿಂಗದಲ್ಲಿ ಘನವಾಗಿ ಬೆರೆತು ಬೆಳಗಿಂಗೆ ಬೆಳಗು ಮಹಾಬೆಳಗಾಗಿ ಬೆಳಗಿದರು !

ಘಂಟೆಯನು ಪಿಡಿದೋರ್ವ ಟೆಂಟೆಣಿಸಲು ನಾದ
ಮುಂಟಲ್ಲದುಳಿದು—ತಾನಾಗಿಯೇ ನುಡಿಯುವ
ಮಂಟೆ ಶ್ರೀಗುರುವೆ ಕೃಪೆಯಾಗು[61]

---

ರೋಗಿಗೆ ಹಾಲು ಸಿಹಿಯಪ್ಪುದೆ ? ಗಂಗೆಗೆ ರವಿ ಲೇಸಪ್ಪುದೆ ?
ಚೋರಂಗೆ ಬೆಳಗು ಗುಣವಪ್ಪುದೆ ? ಭವಸಾಗರದ ಸಮುಯದಲ್ಲಿದ್ದವರು
ನಿರ್ಭಾವದ ಭಾವವನೆತ್ತ ಬಲ್ಲರು ?
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ !

ಘಟ್ಟಿವಾಳಯ್ಯ

---

59 ಘ.ದೇ.ವ. ೪೫
60 ಘ.ದೇ.ವ. ೪೫
61 ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ—೧೧

# ಸ್ವತಂತ್ರಸಿದ್ಧಲಿಂಗೇಶ್ವರರು

**ಜೆ. ಎಸ್. ಪರಶಿವಮೂರ್ತಿ**

ಇವರು ಮೈಸೂರುಜಿಲ್ಲೆಯ ಚಾಮರಾಜನಗರದ ಸಮೀಪದಲ್ಲಿರುವ ಹರದನ ಹಳ್ಳಿಯವರು—ಹಿಂದಿನ ಹೆಸರು ವಾಣಿಜ್ಯಪುರ. ಇವರ ಕಾರ್ಯ ಮತ್ತು ಮೋಕ್ಷಕ್ಷೇತ್ರ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಗೆ ಸಮೀಪದಲ್ಲಿರುವ ಪ್ರಶಾಂತ ಗಜರಾಜಗಿರಿ. ಇವರು ಷಟ್‌ಸ್ಥಲಚಕ್ರವರ್ತಿಗಳೂ ಶಿವಯೋಗಸಿದ್ಧರೂ ಆದ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರ ಪರಮಶಿಷ್ಯರೆಂದು ಪ್ರಸಿದ್ಧರಾಗಿದ್ದಾರೆ.

ಕರ್ನಾಟಕದ ಬಹುಮಂದಿ ದಾರ್ಶನಿಕರು, ಸಿದ್ಧಸಾಧಕರು, ಪ್ರಖ್ಯಾತ ಪ್ರಾಚೀನ ಕವಿಗಳು ಮುಂತಾದವರು ತಮ್ಮ ಸ್ವಂತ ಸಂಗತಿಗಳನ್ನು ಹೇಳಿಕೊಳ್ಳಹೋಗಿಲ್ಲ. ದೈವತೃಪ್ತಿಗಾಗಿ, ದಾಸೋಹಂಭಾವದಿಂದ ಕೆಲವರು, ಆತ್ಮಪ್ರೀತಿಗಾಗಿ, ಆರಾಧ್ಯದೈವದ ಪ್ರೀತಿಗಾಗಿ, ಲೋಕಹಿತಕ್ಕಾಗಿ ತಮ್ಮ ಜೀವನ ನಡೆಸಿದರು—ಸಿದ್ಧಿಸಾಧನೆಗಳನ್ನು ಹೊಂದಿದರು, ಕಾವ್ಯಗಳನ್ನು ರಚಿಸಿದರು. ಎಲ್ಲವೂ ಅಗೋಚರಶಕ್ತಿಯ ಬೆಂಬಲದಿಂದ ತಾನು ಬೊಂಬೆಯಾಗಿ ಸೂತ್ರವನ್ನಾಡಿಸುವ ಸೂತ್ರದಾರನ ಎಳೆತ-ಸೆಳೆತಗಳಿಗೆ ನಟಿಸುತ್ತ ಅವನಪ್ಪಣೆಯಂತೆ ನಡೆದ ಕಾರಣದಿಂದಾಗಿ ಆತ್ಮಚರಿತ್ರೆಗಾಗಲಿ, ಸ್ತುತಿಗಾಗಲಿ ಇಲ್ಲಿ ಅವಕಾಶವೇ ಇಲ್ಲ.

ಶರಣರೆಲ್ಲರ ಜೀವನಚರಿತ್ರೆ ಮಂಜುಮುಸುಕಿದ ಪರ್ವತದಂತಿದೆ. ಶರಣರಾರೂ ತಮ್ಮ ಜೀವನಚರಿತ್ರೆಯನ್ನು ತಾವೇ ಹೇಳಿಕೊಂಡಿಲ್ಲ. ಆಧ್ಯಾತ್ಮಯಾತ್ರಿಗಳಾದ ಇವರ ಜೀವನಚರಿತೆ ರಹಸ್ಯಪೂರ್ಣವಾಗಿದೆ. ಇವರ ಇರವು 'ಲೋಕಕ್ಕೆ ತಾ ಮರುಳು, ತನಗೆ ಲೋಕ ಮರುಳು' ಎಂಬಂತೆ, 'ಮುಗಿಲ ಮರೆಯ ಮಿಂಚಿನಂತೆ, ಒಡಲ ಮರೆಯ ಆತ್ಮನಂತೆ, ನೆಲದ ಮರೆಯ ನಿಧಾನದಂತೆ' ಇವರ ನಿಲುವು.

ಶರಣರ ಜೀವನಚರಿತೆಯನ್ನು ಅವರ ಸಮಕಾಲೀನ ಅಥವಾ ಅನಂತರದ ಶರಣರ ವಚನಗಳಿಂದ ಅಥವಾ ಕವಿಗಳ ಕಾವ್ಯಗಳಿಂದ ಅಥವಾ ಕರ್ಣಾಕರ್ಣಿಯಾಗಿ ಬಂದ ಶರಣರ ಕುರಿತಾದ ಜಾನಪದ ಕಥೆ—ನಂಬಿಕೆಗಳಿಂದ ಹೆಕ್ಕಿಕೊಳ್ಳಬೇಕಾಗುತ್ತದೆ. ಹಲವು ಶರಣರ ಜೀವನಚರಿತೆಗಳನ್ನು ಹರಿಹರ ರಾಘವಾಂಕರು ರಗಳೆ ಮತ್ತು ಚರಿತೆಗಳಾಗಿ ರಚಿಸಿದ್ದಾರೆ. ಹಲವೊಮ್ಮೆ ಅಂಥಾ ಶರಣರ ವಚನಗಳಲ್ಲಿಯೂ ಬೆಳ್ಳಿಯ ಗೆರೆಯಂತೆ ಅವರ ಜೀವನಚರಿತೆಯೂ ಅಡಕವಾಗಿರುತ್ತದೆ. ಇದು ಆತ್ಮಶೋಧನೆಗಾಗಿ ಆಡಿದ ವಚನಗಳು. ಬಹುಮಂದಿ ಶರಣರ ಚರಿತೆಯನ್ನು ರಚಿಸಿದ ಹರಿಹರನ ಜೀವನಚರಿತೆಯೇ ನಮಗಿನ್ನೂ ಅಗೋಚರವಾಗಿದೆ.

ಸ್ವತಂತ್ರಸಿದ್ಧಲಿಂಗೇಶ್ವರರ ಜೀವನಚರಿತ್ರೆಯೂ ಹೀಗೆಯೇ. ಅವರ ಸಾಧನಕ್ಷೇತ್ರ ಗಜರಾಜಗಿರಿ ಮಂಜಿನಲ್ಲಿ ಮುಚ್ಚಿಹೋಗಿದೆ. ಶರಣರು ಹುಟ್ಟಿ, ತಪಗೈದು, ಸಂಚರಿಸಿ ನೆಲೆನಿಂತ ಸ್ಥಳಗಳ ಸುತ್ತಮುತ್ತಣ ಪ್ರದೇಶಗಳಲ್ಲಿನ ಜನ ಮನದಲ್ಲಿ ಕರ್ಣಾಕರ್ಣಿಯಾಗಿ ನೆಲೆನಿಂತಿರುವ ಸಂಗತಿಗಳನ್ನು ಆಧರಿಸಿಕೊಂಡು ತಿಳಿಯಬೇಕಾಗಿದೆ.

ಮೈಸೂರು ಜಿಲ್ಲೆಯ ವಾಣಿಜ್ಯಪುರವನ್ನು ದಟ್ಟಡವಿಯಲ್ಲಿ ಬಣಜಿಗರು ತಮ್ಮ ಕೃತಜ್ಞತೆ ವ್ಯಕ್ತಪಡಿಸಲು ದಿವ್ಯಲಿಂಗೇಶ ಗುಡಿ ಕಟ್ಟಿಸಿ, ಪಟ್ಟಣ ನಿರ್ಮಿಸುತ್ತಾರೆ. ಸಮಯಾಚಾರಕ್ಕೆ ಅವರೇ ಮಠ ಒಂದನ್ನು ನಿರ್ಮಿಸಿ ಅನಾದಿಗಣೇಶ್ವರನೆಂಬ ಚರಮೂರ್ತಿಯನ್ನು ಮಠಾಧಿಪತಿಯಾಗಿ ನೇಮಿಸುತ್ತಾರೆ.

ಈ ಅನಾದಿಗಣೇಶ್ವರರಿಂದ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಗುರುಪರಂಪರೆ ಆರಂಭವಾಗುತ್ತದೆ. ವಾಣಿಜ್ಯಪುರವಾಸಿಗಳೂ, ಪರಮತೇಜೋಮೂರ್ತಿಗಳೂ, ಲಿಂಗಾಂಗಸಾಮರಸ್ಯಾನುಭಾವಿಗಳೂ, ಭಕ್ತವತ್ಸಲರೂ ಆದ ಗೋಸಲ ಚೆನ್ನಬಸವದೇಶಿಕರ ಕರಕಮಲಸಂಜಾತರು—ಶ್ರೀ ತೋಂಟದ ಸಿದ್ಧಲಿಂಗೇಶ್ವರರು. ಜಡತಾ—ನಿದ್ರಾ—ಮುದ್ರಿತ ಜಗತ್ತನ್ನು ಜಾಗೃತಗೊಳಿಸಿ ವೀರಶೈವಧರ್ಮದ ಹಿರಿಮೆಯನ್ನು ಪ್ರತಿಪಾದಿಸಿ, ದ್ವಿತೀಯ ಅಲ್ಲಮಪ್ರಭು

ವೆಂದು ವಿಖ್ಯಾತರಾದವರು ಶ್ರೀ ತೋಂಟದ ಸಿದ್ಧಲಿಂಗೇಶ್ವರರು. ಇಂತಹ ತೋಂಟದ ಸಿದ್ಧಲಿಂಗಶಿವಯೋಗಿಗಳ ಶಿಷ್ಯರಾಗುವ ಭಾಗ್ಯ ಪಡೆದವರು ಸ್ವತಂತ್ರಸಿದ್ಧಲಿಂಗೇಶ್ವರರು.

ಶ್ರೀ ಸ್ವತಂತ್ರಸಿದ್ಧಲಿಂಗೇಶ್ವರರು ಏಕಾಂತಪ್ರಿಯರೂ, ಶಿವಯೋಗಸಾಧಕರೂ ಆಗಿ ಶಿವಯೋಗಸಾಧನೆಗೈಯುತ್ತ ನಾಡಿನಲ್ಲೆಲ್ಲ ಸಂಚರಿಸುತ್ತ ಅಂತರಂಗಿಕ ಅಲೌಕಿಕ ಪ್ರಕಾಶದೊಡನೆ ಬೆಳೆದರು. ಎಲ್ಲ ಯೋಗಗಳ ಬಗೆಗೂ ಯೋಗಿಗಳ ಮನಂಬುಗುವಂತೆ ಸ್ವತಂತ್ರಸಿದ್ಧಲಿಂಗೇಶ್ವರರು ಪ್ರಾಣಲಿಂಗಿಸ್ಥಲದ ವಚನಗಳನ್ನು ಪ್ರಮಾಣಪೂರ್ವಕವಾಗಿ ಹೇಳಿರುವುದರಿಂದ ಅವರು ಎಲ್ಲ ಯೋಗಗಳನ್ನು ಅರಿದು ಆಚರಿಸಿ ಸಿದ್ಧರಾಗಿದ್ದಾರೆಂಬುದು ವ್ಯಕ್ತವಾಗುವುದು.

ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯಪರಂಪರೆಯಲ್ಲಿ "ಸಿದ್ಧಲಿಂಗೇಶ್ವರ" "ದೊಡ್ಡ ಸಿದ್ಧಲಿಂಗೇಶ್ವರ" "ಗುಮ್ಮಳಾಪುರದ ವರಸಿದ್ಧಲಿಂಗೇಶ್ವರ" ಎಂಬ ಅಭಿಧಾನಹೊಂದಿದ ಮೂವರು ವಿರತರು ಬರುತ್ತಾರೆ. ಇವರಲ್ಲಿ ಗುಮ್ಮಳಾಪುರದ ವರಸಿದ್ಧಲಿಂಗೇಶ್ವರರನ್ನು ಬಿಟ್ಟರೆ ಉಳಿದಿಬ್ಬರೂ ಒಬ್ಬರೇ ಆಗಿರುವುದು ಸಾಧ್ಯವೆಂದೂ, ವಿರತ ತೋಂಟದಾರ್ಯರ 'ಗುರು ದೊಡ್ಡಸಿದ್ದೇಶ'. ಶ್ರೀ ಚನ್ನದೇವರ 'ಶ್ರೀ ಗುರುಸಿದ್ಧಲಿಂಗಯತಿವರ್ಯ', ವಿರೂಪಾಕ್ಷ ಪಂಡಿತನ 'ದೊಡ್ಡ ಸಿದ್ಧಲಿಂಗೇಶ್ವರ'—ಈ ಮೂವರೂ ಒಬ್ಬರೇ ಎಂದೂ, ಅವರೇ ಸ್ವತಂತ್ರಸಿದ್ಧಲಿಂಗೇಶ್ವರರೆಂದೂ ಡಾ. ಎಚ್. ಪಿ. ಮಲ್ಲೇದೇವರು ಅಭಿಪ್ರಾಯಪಡುತ್ತಾರೆ.

ಏಳನೂರೊಂದು ಜನ ವಿರತರು ಕರ್ನಾಟಕದ ಮೂಲೆಮೂಲೆ ಸುತ್ತಿ ವಚನಸಂಗ್ರಹ, ಶರಣಧರ್ಮಪ್ರಸಾರಣ ಕಾರ್ಯವನ್ನು ನಿರ್ವಹಿಸಿದರು. ಇವರ ಸಂಚಲನ ಇಡೀ ದಕ್ಷಿಣ ಭಾರತವನ್ನೇ ವ್ಯಾಪಿಸಿತ್ತು. ಇಂದಿಗೂ ಮೈಸೂರು ಜಿಲ್ಲೆಯೊಂದರಲ್ಲೇ ನೂರಕ್ಕೂ ಹೆಚ್ಚು ಮಠಗಳಿರುವುದು ಅಂದಿನ ವಾಸ್ತವತೆಗೆ ಹಿಡಿದ ಕನ್ನಡಿ. ಸ್ವತಂತ್ರಸಿದ್ಧಲಿಂಗೇಶ್ವರರ ಹುಟ್ಟೂರು, ತಪೋವನ. ಸಾಧನಕ್ಷೇತ್ರಗಳೂ ಈ ಪ್ರದೇಶದಲ್ಲಿಯೇ ಬರುತ್ತವೆ. ಈ ಏಳನೂರೊಂದು ಜನ ವಿರತರಲ್ಲಿ ಸ್ವತಂತ್ರಸಿದ್ಧಲಿಂಗೇಶ್ವರರೂ ಒಬ್ಬರು. ಇವರು ತಮ್ಮ ಗುರುವಿನಂತೆ ಮಹಾನುಭಾವಿಗಳು, ಸಂಕಲ್ಪ ಶಕ್ತಿಸಂಪನ್ನರು, ಷಟ್‌ಸ್ಥಲಚಕ್ರವರ್ತಿಗಳು. ಏಕಾಂತಪ್ರಿಯರಾದ ಇವರು ಸರ್ವದಾ ಶಿವಯೋಗಮಗ್ನರಾಗಬೇಕೆಂದೂ ನಂಬಿದ ಭಕ್ತರನ್ನುದ್ಧರಿಸಬೇಕೆಂದೂ ಸಂಕಲ್ಪಿಸಿ ವಿರತರ ಗುಂಪನ್ನು ಬಿಟ್ಟು, ಏಕಾಂಗಿಯಾಗಿ ಸಂಚರಿಸುತ್ತ ಪ್ರಶಾಂತ ಪ್ರದೇಶ ಗಜರಾಜಗಿರಿಯ ಕಡೆ ಪಾದಯಾತ್ರೆ ಬೆಳೆಸಿದರು.

> ಸಮತೆಯೆಂಬ ಕಂತೆಯ ಧರಿಸಿ
> ಕ್ಷಮೆಯೆಂಬ ಭಸ್ಮಧಾರಣವನಳವಡಿಸಿ
> ಸರ್ವಜೀವದಯಾಪರವೆಂಬ ಕಮಂಡಲವ ತಳೆದುಕೊಂಡು
> ಸುಜ್ಞಾನವೆಂಬ ದಂಡವ ಹಿಡಿದು
> ವೈರಾಗ್ಯವೆಂಬ ಭಿಕ್ಷಾಪಾತ್ರೆ ಸಹಿತ, ಭಕ್ತಿಭಿಕ್ಷವ ಬೇಡಬಂದನಯ್ಯಾ
> ಕಾಯದ ಕಳವಳವ ಕಳೆದು, ಜೀವನೋಪಾಯವಿಲ್ಲದೆ ಸುಳಿವನಯ್ಯಾ
> ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ, ಭಕ್ತಿ ಕಾರಣವಾಗಿ

ಮಹಾ ಶಿವಯೋಗಿಗಳಾದ ಇವರು ಗಜರಾಜಗಿರಿಗೆ ಬರುವ ಮುನ್ನವೇ ತಪೋಬಲದಿಂದ ಯೋಗಸಿದ್ಧಿಯನ್ನೂ, ತ್ರಿಕಾಲಜ್ಞಾನವನ್ನೂ ಸಂಪಾದಿಸಿಕೊಂಡಿದ್ದರು. ಶಿವಯೋಗಸಂಧಾನ ಮಾಡುತ್ತ ಲೋಕೋತ್ತರ ವ್ಯಕ್ತಿತ್ವ ಪಡೆದರು. ಗುರುಕಾರುಣ್ಯದಿಂದ ವಿವಿಧ ಯೋಗಾನುಷ್ಠಾನವಿಧಾನ, ಅನುಭವ ವಿದ್ಯೆಯ ರಹಸ್ಯವನ್ನು ತಿಳಿದರು. ಇದು ಅವರ ವಚನಗಳಿಂದಲೇ ತಿಳಿದುಬರುತ್ತದೆ.

ನಿಗ್ರಹಾನುಗ್ರಹಸಮರ್ಥರಾದ ಸ್ವತಂತ್ರಸಿದ್ಧಲಿಂಗೇಶ್ವರರು ಹಲವು ಪವಾಡಗಳನ್ನು ಮೆರೆದಿದ್ದಾರೆ. ಕಟ್ಲೆಪಳ್ಳಿ ಏಡೆಯೂರಪ್ಪ ದಂಪತಿಗಳು ಸಂತಾನಭಿಕ್ಷೆ ಪಡೆದ ಕೃತಜ್ಞತೆಯ ಕುರುಹಾಗಿ ಶ್ರೀಗಳವರಿಗೆ ಮಾಡಿಸಿಕೊಟ್ಟಿರುವ ರತ್ನಕಿರೀಟವನ್ನು ಈಗಲೂ ಪೂಜೋತ್ಸವಕಾಲಗಳಲ್ಲಿ ಧರಿಸುತ್ತಿದ್ದಾರೆ. ಮೋಕ್ಷಕಾಲದವರೆಗೂ ಗಜರಾಜಗಿರಿಯಲ್ಲೇ ಇದ್ದು ಶಿವಯೋಗಸಿದ್ಧರಾಗಿ, ಶಿವಯೋಗಾನುಸಂಧಾನ ಮಾಡುತ್ತ ಲೋಕೋತ್ತರ ವ್ಯಕ್ತಿತ್ವ ಪಡೆದು, ನಿರಾಳ ಲಿಂಗದ ಅರ್ಚನೆ ಮಾಡುತ್ತ ಆ ನಿರಾಳ ಲಿಂಗಸ್ವರೂಪರೇ ತಾವಾಗುತ್ತಾರೆ.

> ನೀರ ನೀರ ಕೂಡಿ, ಕ್ಷೀರ ಕ್ಷೀರವ ಕೂಡಿ, ಅಗ್ನಿ ಅಗ್ನಿಯ ಕೂಡಿದಂತೆ
> ತನ್ನೊಳಗೆ ಶಿವನು, ಶಿವನೊಳಗೆ ತಾನು ಅಡಗಿ, ಏಕವಾದ ಮತ್ತೆ
> ತಾ ಶಿವನಾದೆನೆಂಬ ಅಹಂಭಾವವಿಲ್ಲ ನೋಡಯ್ಯ

ಮೈಸೂರನ್ನು ಆಳಿದ ಟಿಪ್ಪುಸುಲ್ತಾನ್, ಸ್ವತಂತ್ರಸಿದ್ಧಲಿಂಗೇಶ್ವರರ ಸಮಾಧಿಗೆ ಒಪ್ಪುವಂತಹ ಗದ್ದುಗೆ, ಅದಕ್ಕೆ ಅರ್ಹವಾದ ಆವಾರ ಅದರೊಳಗೆ ಕಲ್ಲುಮಠವನ್ನು ನಿರ್ಮಿಸಿದ್ದಾನೆ. ಸಮಾಧಿ ಎದುರಿನ ಜೀವನದಿಗೆ ಸೋಪಾನಗಳನ್ನು ಮಾಡಿಸಿದ್ದಾನೆ. ಶ್ರೀ ಗದ್ದುಗೆಗೆ ಟೀಪು ದಾನವಾಗಿ ನೀಡಿದ ಭೂಮಿಯಲ್ಲಿ ಈಗಲೂ ೯೦ ಎಕರೆ ಶ್ರೀಮಠದ ಸ್ವಾಧೀನದಲ್ಲಿದೆ. ಸ್ವತಂತ್ರಸಿದ್ಧಲಿಂಗೇಶ್ವರರ ಸಮಾಧಿ ಜಾಗೃತಸ್ಥಾನವಾಗಿ ಭಕ್ತಕೋಟಿಯನ್ನು ಅವಿಚ್ಛಿನ್ನವಾಗಿ ಆಕರ್ಷಿಸುತ್ತ, ಅವರವರ ಬಯಕೆಗಳನ್ನು ಪೂರೈಸುತ್ತ ಇಂದಿಗೂ ಭಕ್ತರ ಭಕ್ತಿಯನ್ನು ಉದ್ದೀಪನಗೊಳಿಸುತ್ತಿದೆ. ಸರ್ವಧರ್ಮಸಮನ್ವಯದ ಪ್ರತೀಕವಾಗಿ ಯಾವ ಜಾತಿಭೇದವೂ ಇಲ್ಲದೆ ಎಲ್ಲ ವರ್ಗದ ಜನರೂ ಶ್ರೀಮಠಕ್ಕೆ ನಡೆದುಕೊಳ್ಳುತ್ತಾರೆ. ಮಂಡ್ಯ, ಮೈಸೂರು ಮತ್ತು ಹಾಸನಜಿಲ್ಲೆಗಳಲ್ಲಿ ಅಪಾರ ಶಿಷ್ಯಸಂಪತ್ತನ್ನು ಶ್ರೀಮಠ ಪಡೆದುಕೊಂಡಿದೆ. ಪ್ರತಿ ವರ್ಷ ಮಾಘಮಾಸದಲ್ಲಿ ಬಹು ದೊಡ್ಡ ಜಾತ್ರೆ ವಿಜೃಂಭಣೆಯಿಂದ ಜರುಗುತ್ತದೆ.

ಶ್ರೀ ಸ್ವತಂತ್ರಸಿದ್ಧಲಿಂಗೇಶ್ವರರ ಜನ್ಮಸ್ಥಳ, ತಂದೆ—ತಾಯಿ, ಬಾಲ್ಯ ಎಲ್ಲವೂ ಅಗೋಚರ. ಅಂತೆಯೇ ಅವರ ಕಾಲವನ್ನೂ ಹಲವು ಗ್ರಂಥಗಳ ಆಧಾರದಿಂದ ನಿರ್ಧರಿಸಬೇಕಾಗುತ್ತದೆ.

'ಚನ್ನಬಸವ ಪುರಾಣ'ವು ಏಳನೂರೊಂದು ವಿರತರಲ್ಲಿ ಪ್ರಮುಖರಾದವರ ಹೆಸರು ಹೇಳುತ್ತ—

ಸಿದ್ಧಲಿಂಗೇಶ್ವರಂ ಕಂಬಳಾದೇವರಾ
ಸಿದ್ಧನಂಜೇಶ್ವರಂ ಚೆನ್ನಾದೇವರ್ ದೊಡ್ಡ
ಸಿದ್ಧಲಿಂಗೇಶ್ವರಂ ಕಂಕಣದ ದೇವರು ಲಂಬಕರ್ಣದ ದೇವರು
. . . . . . . . . . . . . . . . . . . . . . . . . . . .
ಇಂತಿವರ್ ಮೊದಲಾದ ವಿರತರೇಳ್ನೂರ್ವರುಂ
ಸಂತತಂಗೂಡಿ ಷಟ್ಸ್ಥಲಮಾರ್ಗಮಂ ಧರೆಯೋ
ಳಂತರಿಸದಂತೆ ನೆಲೆಗೊಳಿಸುತ್ತ ಪೂಜೆಗೊಳುತಿರದೆ ನಿಜಮುಕ್ತರಹರು

ತೋಂಟದ ಸಿದ್ಧಲಿಂಗೇಶ್ವರರು ಕ್ರಿ.ಶ. ೧೫೦೦ರ ಮೊದಲೇ ಇದ್ದರೆಂದು ನಿಸ್ಸಂಶಯವಾಗಿ ಹೇಳಬಹುದಾದ್ದರಿಂದ ಸ್ವತಂತ್ರಸಿದ್ಧಲಿಂಗೇಶ್ವರರು ಇವರ ಶಿಷ್ಯರೂ ಸಮಕಾಲೀನರೂ ಎಂಬುದು ನಿಸ್ಸಂಶಯ. ಹೀಗಿರುವುದರಿಂದ ಇವರ ಕಾಲ ೧೫ನೆಯ ಶತಮಾನದ ಉತ್ತರಾರ್ಧ ಹಾಗೂ ೧೬ನೆಯ ಶತಮಾನದ ಆದಿಯೆಂದು ನಿರ್ಣಯಿಸಬಹುದೆಂದು ಡಾ. ಮಲ್ಲೇದೇವರು ನಿರ್ಧಾರಕ್ಕೆ ಬಂದಿದ್ದಾರೆ.

## ಶ್ರೀ ಸ್ವತಂತ್ರಸಿದ್ಧಲಿಂಗೇಶ್ವರರ ಕೃತಿಗಳು

ವಚನಗಳು : 'ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ಅಂಕಿತ', 'ಮುಕ್ತ್ಯಂಗನಾ ಕಂಠಮಾಲೆ' ಮತ್ತು 'ಜಂಗಮರಗಳೆ'
ದೊರೆತಿರುವ ಸಂಖ್ಯೆ : ೪೩೦

**ಕೃತಿ ಪರಿಚಯ :** 'ಮುಕ್ತ್ಯಂಗನಾ ಕಂಠಮಾಲೆ' ಇದಕ್ಕೆ ವ್ಯಾಖ್ಯಾನ ಬರೆದಿರುವ ಅನುಭಾವಿ ಚೆನ್ನದೇವರು ಶ್ರೀ ಸ್ವತಂತ್ರಸಿದ್ಧಲಿಂಗೇಶ್ವರರ ಸಮಕಾಲೀನರು; ಅವರಂತೆಯೇ ಇವರೂ ವಿರತರು ಎಂಬುದನ್ನು ಚೆನ್ನಬಸವ ಪುರಾಣದಿಂದ ತಿಳಿಯಬಹುದಾಗಿದೆ. ಸ್ವತಂತ್ರಸಿದ್ಧಲಿಂಗೇಶ್ವರರು ತಮ್ಮ ವಚನಗಳಿಂದ "ತಮ್ಮ ವಂಶೀಭೂತರಾದ ಶರಣಗಣಂಗಳು ಅರಿದಾಚರಿಸಿ ನಿತ್ಯಸುಖಿಗಳಾಗಲೆಂದು ತಮ್ಮ ನಿಜಾನುಭವದ ವಚನಾಮೃತಶರಧಿಯೊಳಗನರ್ಘ್ಯವಾದ ರತ್ನಂಗಳನೆ ತೆಗೆದು ಸರಂಗೊಳಿಸಿ, ಮುಕ್ತ್ಯಂಗನಾಕಂಠಮಾಲೆ ಎನಲೊಪ್ಪುವ ಪೆಸರಿಟ್ಟನು"—ಇವುಗಳಲ್ಲಿ ಅತ್ಯಂತ ಗೋಪ್ಯವಾದ ವಚನಗಳನ್ನು ತೆಗೆದು ಮುಮುಕ್ಷುಜನಂಗಳ ಹೃದಯಾಂತರಾಳವನೆ ತೊಳಗಿ ಬೆಳಗಲೆಂದು ಕನ್ನಡಿಸಿ ಹೇಳುವೆನೆಂದು ಶ್ರೀ ಚೆನ್ನದೇವರು ವ್ಯಾಖ್ಯಾನ ಬರೆದಿದ್ದಾರೆ. ಸ್ವತಂತ್ರಸಿದ್ಧಲಿಂಗೇಶ್ವರರ ರಹಸ್ಯಾರ್ಥ ವಚನಗಳನ್ನು ಪಾಂಡಿತ್ಯಪೂರ್ಣವಾಗಿ, ಅನುಭವಯುಕ್ತವಾಗಿ, ಅತಿ ಸೂಕ್ಷ್ಮವಾಗಿ ಸರಳ–ಸುಲಭಗೊಳಿಸುವಲ್ಲಿ ಶ್ರೀ ಚೆನ್ನದೇವರು ಸಫಲರಾಗಿದ್ದಾರೆ.

**ಜಂಗಮರಗಳೆ :** ಇದು ಜಂಗಮದ ಮಹೋನ್ನತ ನಿಲವು ಹಾಗೂ ಹಿರಿಮೆಯನ್ನು ಪ್ರತಿಪಾದಿಸುವ ರಗಳೆ : ವೀರಶೈವಧರ್ಮದಲ್ಲಿ ಗುರು, ಲಿಂಗ ಮತ್ತು ಜಂಗಮಗಳು ಒಂದೇ ಪರವಸ್ತುವಿನ ಮೂರು ಮುಖಗಳು. ಜಂಗಮ–ಸದ್ರೂಪ, ಚಿದ್ರೂಪ ಮತ್ತು ಆನಂದರೂಪ. ಶಿವನ ಸಾಕಾರರೂಪನಾದ ಜಂಗಮನು ಶಿವನೇ ಎಂಬುದಾಗಿ ಅಂತರಂಗ ಅವಿರಳಜ್ಞಾನದಿಂದರಿತ ಸ್ವತಂತ್ರ. ಅವನ ದಿವ್ಯದೃಷ್ಟಿಗೆ ಗೋಚರಿಸಿದ ನಿಜಜಂಗಮವು ನಾಮರೂಪಕ್ರಿಯಾದೂರ.

ಆದಿಮಧ್ಯಾಂತವರ್ಜಿತ, ನಾದಬಿಂದುಕಳಾತೀತ, ವರವೇದಶಾಸ್ತ್ರಂಗಳಿಗೂ ತಿಳಿಯದವ, ನಿರ್ಲೇಪ, ನಿತ್ಯ, ನಿರ್ಮಲ, ನಿರಘ, ನಿಶ್ಚಿಂತ.

ಶಿವ ಜಂಗಮ ಒಂದೇ ಎಂದು ಭಾವಿಸಿ ಅಭೇದವನ್ನು ಸ್ವತಂತ್ರಸಿದ್ಧಲಿಂಗೇಶ್ವರರು ನಿರೂಪಿಸಿದರು.

ಲಿಂಗಾರ್ಚನೆಯ ಮಾಡುವೆನಯ್ಯಾ,
ಜಂಗಮವೆನ್ನ ಮಠಕ್ಕೆ ಬರಬೇಕೆಂದು
ಆ ಜಂಗಮವೆನ್ನ ಮಠಕ್ಕೆ ಬಂದರೆ
ಲಿಂಗಾರ್ಚನೆಯ ಮಾಡದು ಜಂಗಮಾರ್ಚನೆಯ ಮಾಡುವೆನು
ಅದೇನು ಕಾರಣವೆಂದರೆ ಆ ಲಿಂಗದಲ್ಲಿ ಪದ ಉಂಟು, ಫಲ ಉಂಟು, ಭಾವ ಉಂಟು
ಆ ಜಂಗಮದಲ್ಲಿ ಪದಂ ನಾಸ್ತಿ, ಫಲಂ ನಾಸ್ತಿ, ಭವಂ ನಾಸ್ತಿಯಾದ ಕಾರಣ

ಜಂಗಮದ ಮಹೋನ್ನತ ಹಿರಿಮೆಯನ್ನು ತಾತ್ವಿಕವಾಗಿ ಪ್ರತಿಪಾದಿಸುವುದೇ ಈ ರಗಳೆಯ ಮುಖ್ಯ ಗುರಿ.

**ವಚನಗಳು :** ಇವರ ೪೩೦ ವಚನಗಳು ಈಗ ದೊರೆತಿವೆ.

ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು ಪ್ರಧಾನವಾಗಿ ಷಟ್‌ಸ್ಥಲಸಿದ್ಧಾಂತವನ್ನೇ ಪ್ರತಿಪಾದಿಸುತ್ತವೆ. ಷಟ್‌ಸ್ಥಲದ ಹೆಸರು ಬರುತ್ತಿದ್ದಂತೆಯೇ ವೀರಶೈವರ ಮನಸ್ಸಿನಲ್ಲಿ ಮೂಡಿಬರುವ ಮೂರ್ತಿ, ಚನ್ನಬಸವಣ್ಣನವರದು. ಭಾರತೀಯ ತತ್ವಜ್ಞಾನ ಮತ್ತು ಧರ್ಮಗಳಿಗೆ ಷಟ್‌ಸ್ಥಲಸಿದ್ಧಾಂತ ವೀರಶೈವರ ವಿಶಿಷ್ಟ ಕೊಡುಗೆಯಾಗಿದೆ. ಈ ಷಟ್‌ಸ್ಥಲದ ಇತಿಹಾಸವನ್ನು ಇಲ್ಲಿ ಸ್ಥೂಲವಾಗಿ ನೋಡಬಹುದು. ಷಟ್‌ಸ್ಥಲ ಸಿದ್ಧಾಂತವೆಂದರೇನು ?

ತತ್ವಪ್ರಧಾನವಾದ ಸಿದ್ಧಾಂತ ಮತ್ತು ಆಚಾರಪ್ರಧಾನವಾದ ಧರ್ಮ ಈ ಎರಡೂ ಸಮರಸವಾಗಿ ಇಲ್ಲಿ ಅಲ್ಲಿ ಸಲ್ಲುವ ಪರಿಪೂರ್ಣ ಜೀವನ ಎಂತಿರಬೇಕೆಂಬುದನ್ನು ಷಟ್‌ಸ್ಥಲ ಸಿದ್ಧಾಂತವು ವಿಶಿಷ್ಟರೀತಿಯಿಂದ ತಿಳಿಸುವುದು.

ಕ್ರಿಯೆ–ಜ್ಞಾನ–ಭಕ್ತಿ ಇವುಗಳು ಮುಪ್ಪುರಿಗೊಂಡು ಸಾಧಕನು ಸಿದ್ಧಿಯನ್ನು ಹೊಂದಲು ಅನುವಾಗಿರುವುದನ್ನು ಈ ಸಿದ್ಧಾಂತದಲ್ಲಿ ಕಾಣಬಹುದು. ಪ್ರಪಂಚವನ್ನು ನಶ್ವರವೆಂದು ಬಗೆದು, ಪದಾರ್ಥಗಳನ್ನು ಹೇಯವೆಂದು ತಿರಸ್ಕರಿಸಿ, ಕಠಿಣತರವಾದ ಜೀವನವನ್ನು ಅಸಿಧಾರಾವ್ರತದಂತೆ ನಡೆಸುವುದಕ್ಕಿಂತ ಪಡಿಪದಾರ್ಥಗಳ ಪದಾರ್ಥಭಾವವನ್ನು ನಿವಾರಿಸಿ, ಅವುಗಳನ್ನು ಪ್ರಸಾದರೂಪವನ್ನಾಗಿ ಮಾರ್ಪಡಿಸಿಕೊಂಡು, ಇಂದ್ರಿಯಗಳಲ್ಲಿಯ ಅವಗುಣಗಳನ್ನು ಬಯಲುಮಾಡಿ, ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ನೆಲೆಗೊಳಿಸಿ, ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ತನುಗಳಲ್ಲಿ ಹುದುಗಿ ಭವಕ್ಕೆ ಕಾರಣವಾದ ಕಾರ್ಮಿಕ, ಮಾಯಾ, ಆಣವ ಎಂಬ ಮೂರು ಮಲಗಳನ್ನು ನಿವಾರಿಸಿ, ಇಷ್ಟ, ಪ್ರಾಣ, ಭಾವಲಿಂಗಗಳನ್ನು ನೆಲೆಗೊಳಿಸಿ, ಶ್ರೇಯ ಪ್ರೇಯಗಳ ಸಮನ್ವಯವನ್ನು ಸಾಧಿಸಿ, ನಿವೃತ್ತಿಪರವಾದ ಭಕ್ತಿಯನ್ನು ಆಶ್ರಯಿಸಿ, ಸತ್ಯಶುದ್ಧಕಾಯಕ ಮಾಡುತ್ತ, ಲಿಂಗಭೋಗೋಪಭೋಗಿಯಾಗಿ, ಅರ್ಚನ, ಅರ್ಪಣ, ಅನುಸಂಧಾನ ಮೊದಲಾದುವುಗಳ ನೆರವಿನಿಂದ, ಕುತ್ತು ಮೊದಲಾದ ಷಡೂರ್ಮಿಗಳ, 'ಅಸ್ತಿ' ಮೊದಲಾದ ಷಡ್ಭಾವ ವಿಕಾರಂಗಳು. 'ಅನ್ನಮಯ' ಮೊದಲಾದ ಪಂಚಕೋಶಗಳ ಅವಗುಣಗಳನ್ನು ಕೆಡಿಸಿ, ಲಿಂಗಮಯವನ್ನಾಗಿ ಪರಿವರ್ತಿಸುತ್ತ ಕೊನೆಗೆ ಪರಿಪೂರ್ಣಲಿಂಗವಾಗುವ ಮಾರ್ಗವೇ ಷಟ್‌ಸ್ಥಲಮಾರ್ಗ. ಇಲ್ಲಿ ಪಡಿಪದಾರ್ಥಗಳ ಮತ್ತು ಜೀವನದ ಉದಾತ್ತೀಕರಣವನ್ನು ಕಾಣಬಹುದು. ಸೃಷ್ಟಿಯನ್ನು ಶಿವಮಯವನ್ನಾಗಿ ಕಾಣುವ ದೃಷ್ಟಿ, ಸೃಷ್ಟಿಯನ್ನು ಶಿವಮಯವನ್ನಾಗಿ ಮಾರ್ಪಡಿಸುವ ಶಕ್ತಿ-ಷಟ್‌ಸ್ಥಲಸಾಧಕನಿಗಿರುವುದು. ಸಕಲ ಮಾನವರಿಗೆ ಸುಲಭವಾಗಿ ಅನುಷ್ಠಾನಯೋಗ್ಯವಾದ ಷಟ್‌ಸ್ಥಲಮಾರ್ಗವು ಮರ್ತ್ಯವನ್ನೇ ಮಹವನ್ನಾಗಿ ಮಾರ್ಪಡಿಸುವುದು.

ವಿಶ್ವಧರ್ಮಕ್ಕೆ ವಿಶಿಷ್ಟ ಕೊಡುಗೆಯೆನಿಸಿರುವ ಈ ಷಟ್‌ಸ್ಥಲ ಸಿದ್ಧಾಂತದ ಬೇರುಗಳು ಆಗಮಗಳಲ್ಲಿಯೇ ಕಂಡುಬರುತ್ತವೆ. ಪ್ರಥಮಾಗಮವೆನಿಸಿದ 'ಕಾಮಿಕ'ದಲ್ಲಿ ವೀರಶೈವಕ್ರಮದ ವಿಷಯ ಉಲ್ಲೇಖಿತವಾಗಿದೆ. ವಾತುಲ, ವೀರ, ಚಂದ್ರಜ್ಞಾನ, ಮತಂಗ, ಪಾರಮೇಶ್ವರ ಮೊದಲಾದ ಆಗಮಗಳು ಷಟ್‌ಸ್ಥಲತತ್ತ್ವವಿವರಣೆಯ ದೃಷ್ಟಿಯಿಂದ ಬಹು ಮಹತ್ವವಾದವುಗಳು.

ಪಾರಮೇಶ್ವರತಂತ್ರದಲ್ಲಿ ಷಟ್‌ಸ್ಥಲದ ಅಧಿಕಾರಿ ಯಾರು ? ಎಂಬುದನ್ನು ಹೀಗೆ ತಿಳಿಸಲಾಗಿದೆ :

ಶಿವಭಕ್ತಿವಿಹೀನಾಯ ದುರಾಚಾರ ರತಾಯ ಚ ।
ನಾಸ್ತಿಕಾಯ ನ ದುಷ್ಟಾಯ ವಕ್ತವ್ಯಃ ಷಟ್‌ಸ್ಥಲಕ್ರಮಃ ॥

ಷಟ್‌ಸ್ಥಲಕ್ಕೆ ಅಧಿಕಾರಿಯಾಗಬೇಕಾದರೆ ಶಿವಭಕ್ತಿಯೇ ಮೂಲವೆಂದು ಹೇಳಲಾಗಿದೆ. 'ಪಾರಮೇಶ್ವರಾಗಮ'ವು ಶಿವಭಕ್ತಿಹೀನರಿಗೆ ಷಟ್‌ಸ್ಥಲ ಹೇಳಕೂಡದೆಂದು ಪ್ರತಿಷ್ಠಾಪಿಸುತ್ತದೆ. ಈ ಷಡ್ವಿಧವೂ ಪರಮಾತ್ಮನ ಸ್ವರೂಪವೆಂಬುದು ಅಲ್ಲಿ ಉಕ್ತವಾಗಿದೆ.

> ಅಹಮೇವ ಜಗತ್‌ಸೃಷ್ಟ್ವಾ ಪುನರ್ಮಯ್ಯೇವ ಲೀಯತೇ ।
> ಅಹಮೇವ ಸ್ಥಲಂ ವಿದ್ಧಿ ಷಡ್ವಿಧಂ ಮಮ ರೂಪಕಂ ॥

ಪೃಥ್ವಿ, ಜಲ, ಅಗ್ನಿ, ವಾಯು, ವ್ಯೋಮ, ಸಾಕ್ಷಿತತ್ವಗಳು ಕ್ರಮವಾಗಿ ಭಕ್ತ, ಮಹೇಶ್ವರ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳ ಲಕ್ಷಣಗಳಿಂದ ಕೂಡಿವೆ.

> ಸರ್ವಜ್ಞತಾ ತೃಪ್ತಿರನಾದಿಬೋಧಃ
> ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ ।
> ಅನಂತಶಕ್ತಿಶ್ಚ ವಿಭೋರ್ನಿಧಿಜ್ಞಾ ।
> ಷಡಾಹುರಂಗಾನ್ಯಥ:ಷಟ್‌ಸ್ಥಲಾನಿ ॥

ಇಲ್ಲಿ ಪರಶಿವನ ಸರ್ವಜ್ಞತ್ವವೇ ಭಕ್ತ, ಆತನ ತೃಪ್ತಿಯೇ ಮಹೇಶ್ವರ, ಆತನ ನಿರಂಕುಶವಾದ ಬೋಧೆಯೇ ಪ್ರಸಾದಿ, ಆತನ ಸ್ವಾತಂತ್ರ್ಯವೇ ಪ್ರಾಣಲಿಂಗಿ, ಆತನ ಅಲುಪ್ತಶಕ್ತಿಯೇ ಶರಣ, ಆತನ ಊರ್ಧ್ವವಾದ ಅನಂತಶಕ್ತಿಯೇ ಐಕ್ಯ ಎಂದು ಹೇಳಲಾಗಿದೆ.

ಆಗಮೋಕ್ತ ವೀರಶೈವ ಮತ್ತು ಷಟ್‌ಸ್ಥಲಸಿದ್ಧಾಂತಗಳನ್ನು ಅದರಲ್ಲಿ ಅಡಕವಾಗಿದ್ದ ವೈದಿಕಪ್ರಭಾವದಿಂದ ವಿವಿಧ ವೀರಶೈವ ಶಾಖೆಗಳಿಂದ, ಬಾಹ್ಯಾಚಾರ, ಸ್ಥಾವರಪೂಜೆಗಳಿಂದ ವಿಮುಕ್ತಿಗೊಳಿಸಿ, ವೈಜ್ಞಾನಿಕವಾಗಿ ಆಧುನಿಕ ಮನಶ್ಶಾಸ್ತ್ರವೂ ಸಮ್ಮತಿಸುವ ರೀತಿಯಲ್ಲಿ ಷಟ್‌ಸ್ಥಲಸಿದ್ಧಾಂತವನ್ನು ಪುನರ್‌ಸಂಸ್ಥಾಪಿಸಿದವರು ಚೆನ್ನಬಸವಣ್ಣನವರು. ಇವರನ್ನು ಈ ಸಿದ್ಧಾಂತಸಂಸ್ಥಾಪಕರೆಂದೇ ಭಾವಿಸುತ್ತಾರೆ. ಚೆನ್ನಬಸವಣ್ಣನವರು ಷಟ್‌ಸ್ಥಲಸಿದ್ಧಾಂತ ಸಂಸ್ಥಾಪಕರಲ್ಲ. ಈ ಸಿದ್ಧಾಂತವನ್ನು ನಿರ್ಣಯಿಸಿದವರು—ಅಂದರೆ ಇಲ್ಲದುದನ್ನು ಹೊಸದಾಗಿ ಸೃಷ್ಟಿಸಿದರೆಂದು ಅರ್ಥವಲ್ಲ. ಇದ್ದುದನ್ನೇ ಸಂಸ್ಕಾರಗೊಳಿಸಿ, ಹೊಸ ಅರ್ಥವನ್ನು ಸಂಕಲ್ಪಿಸಿ ಅದನ್ನು ಜೀವನದಲ್ಲಿಯೂ ಸಮಾಜದಲ್ಲಿಯೂ ಅಳವಡಿಸಿದರು.

ಭಕ್ತಶ್ರೇಷ್ಠ ಬಸವಣ್ಣನಿಗೂ ಚೆನ್ನಬಸವಣ್ಣನಿಗೂ ಈ ಸಿದ್ಧಾಂತದ ಬಗೆಗೆ ಭಿನ್ನಾಭಿಪ್ರಾಯ ಇರುವುದನ್ನು ಈ ಕೆಳಗಿನ ವಚನಗಳು ಸ್ಪಷ್ಟಪಡಿಸುತ್ತವೆ.

> ಮೆಲ್ಲಮೆಲ್ಲನೆ ಭಕ್ತನಪ್ಪೆ
> ಮೆಲ್ಲಮೆಲ್ಲನೆ ಮಹೇಶ್ವರನಪ್ಪೆ
> ಮೆಲ್ಲಮೆಲ್ಲನೆ ಪ್ರಸಾದಿಯಪ್ಪೆ
> ಮೆಲ್ಲಮೆಲ್ಲನೆ ಪ್ರಾಣಲಿಂಗಿಯಪ್ಪೆ
> ಮೆಲ್ಲಮೆಲ್ಲನೆ ಶರಣನಪ್ಪೆ
> ಮೆಲ್ಲಮೆಲ್ಲನೆ ಐಕ್ಯನಪ್ಪೆ

ಎಂದು ಬಸವಣ್ಣನವರು ಒಂದೊಂದು ಹಂತವನ್ನೂ ಮೆಲ್ಲಮೆಲ್ಲನೆ ಹತ್ತಿ ಐಕ್ಯ ಸಾಧಿಸಬೇಕೆಂದು ಅಭಿಪ್ರಾಯಪಟ್ಟರೆ, ಚೆನ್ನಬಸವಣ್ಣನವರು

> ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ
> ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ
> ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು ನಿಮ್ಮ ಶರಣರು
> ತಾವೇನು ಮರುಜೀವಣಿಯ ಕೊಂಡರೆ ?
> ಅಮೃತಸೇವನೆಯ ಮಾಡಿದರೆ ?
> ಆವಸ್ಥಲದಲ್ಲಿ ನಿಂದರೂ ಆ ಸ್ಥಲದಲ್ಲಿ ಷಡುಸ್ಥಲವಡಗದಿರ್ದಡೆ
> ಆ ಭಕ್ತನ ಬಾಯಲ್ಲಿ ಹುಡಿಮಣ್ಣು ಹುಯ್ಯುದ್ದು ಹೋಗನೆ . . . .

ಎನ್ನುತ್ತಾರೆ. "ಒಂದೊಂದು ಇಂದ್ರಿಯವನ್ನೇ ಶುದ್ಧೀಕರಣ ಮಾಡುತ್ತ ಸ್ಥಲದಿಂದ ಸ್ಥಲಕ್ಕೆ ಏರುತ್ತ ಹೊರಟರೆ ಒಂದು ಜನ್ಮದ ಅವಧಿಯಲ್ಲಿ ಸರ್ವೇಂದ್ರಿಯಗಳನ್ನೂ ಲಿಂಗವಾಗಿ ಮಾಡುವ ಕಾರ್ಯ ಮುಗಿಯಲಾರದು. ನಾವೇನೂ ಚಿರಂಜೀವಿಗಳಲ್ಲ, ಅಮೃತಸೇವನೆ ಮಾಡಿಲ್ಲ. ಮರುಜೀವಣಿಯು ಕೊಂಡಿಲ್ಲ. ಮೋಕ್ಷ ಸಂಪಾದನೆಗೆ ಇದೇ ಜೀವನ ಕಡೆಯಾಗಬೇಕು. ಆದುದರಿಂದ ಆವ ಸ್ಥಲದಲ್ಲಿ ನಿಂದರೂ ಆ ಸ್ಥಲದಲ್ಲಿ ಷಡುಸ್ಥಲವಡಗಬೇಕು" ಎಂಬುದಾಗಿ ಚನ್ನಬಸವಣ್ಣನವರು ಬಸವಣ್ಣನವರಿಗೆ ಸಮ ಸಮುಚ್ಚಯಾತ್ಮಕವಾದ ಷಟ್‌ಸ್ಥಲದ ರಹಸ್ಯ ತಿಳಿಸುತ್ತಾರೆ.

ಷಟ್‌ಸ್ಥಲವು ಮಾನಸಿಕವಾಗಿ ಪರಮಾತ್ಮನನ್ನು ಸಂಧಾನಮಾಡುವ ಮಹಾ ಮಾರ್ಗ. ಇಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಪಡೆಯುವ ಮೋಕ್ಷವೆಂಬುದೇ ಇಲ್ಲ. ಆತ್ಮನು ದೇಹವನ್ನು ಬಿಟ್ಟು ಹೋಗುವುದೇ ಮೋಕ್ಷವೆಂದು ಕೆಲವರ ಮತ. ಆದರೆ, ಷಟ್‌ಸ್ಥಲದಲ್ಲಿ ಆತ್ಮನು ದೇಹಸಹಿತನಾಗಿಯೇ ಪ್ರಸಾದಕಾಯನಾಗುತ್ತಾನೆ. ಹೀಗೆ ಕಾಯವನ್ನು ಪ್ರಸಾದಕಾಯವನ್ನಾಗಿ ಮಾಡುವಲ್ಲಿ ಇಂದ್ರಿಯಗಳು ವಿಷಯವ್ಯಾಮೋಹವನ್ನು ಬಿಟ್ಟು ಲಿಂಗಪಥವನ್ನು ಹಿಡಿಯುತ್ತವೆ. ಆಂತರಿಕವಾದ ಈ ಮಾರ್ಪಾಟು ಷಟ್‌ಸ್ಥಲದ ಉದ್ದೇಶ. ಲೀಲೆಗೆಂದು ಎರಡಾದ ಲಿಂಗವು ಅಂಗನಿಗಾಗಿಯೇ ಮತ್ತೆ ಲಿಂಗವಾಗಿ ಬಂದಿತು. ಬಂದು, ಲಿಂಗನ ಸ್ಥೂಲ, ಸೂಕ್ಷ್ಮಕಾರಣ, ತನುವಿಡಿದು ಇಷ್ಟ, ಪ್ರಾಣ, ಭಾವವೆಂದು ಮೂರಾಯಿತು. ಷಡಿಂದ್ರಿಯಗಳ ಅನುವಿಡಿದು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರು ಬಗೆಯಾಗಿ ನಾಸಿಕ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಆತ್ಮ ಈ ಷಡಿಂದ್ರಿಯಗಳಲ್ಲಿ ನೆಲೆಗೊಂಡಿತು. ಅಂಗದ ಕ್ರಿಯೆಗಳು, ಲಿಂಗದ ಕ್ರಿಯೆಗಳಾಗಬೇಕು, ಪದಾರ್ಥ ಪ್ರಸಾದವಾಗಬೇಕು ಎಂಬುದೇ ಷಟ್‌ಸ್ಥಲದ ಉದ್ದೇಶ.

ಷಟ್‌ಸ್ಥಲಸಾಧನೆಯಲ್ಲಿ ಪ್ರತಿಯೊಬ್ಬ ಸಾಧಕನೂ ಭಕ್ತಸ್ಥಲದಿಂದಲೇ ಪ್ರಾರಂಭಿಸಬೇಕೆಂಬುದು ಚನ್ನಬಸವಣ್ಣನವರ ಅಭಿಪ್ರಾಯವಲ್ಲ. ಸಾಧಕರ ಪ್ರಕೃತಿ ಭಿನ್ನವಾಗಿರಬಹುದು. ಸ್ವಭಾವತಃ ನಿಷ್ಠೆಯನ್ನು ಪಡೆದ ಸಾಧಕನು ತನ್ನ ಸಹಜದ ನಿಷ್ಠೆಯ ಸ್ಥಿತಿಯನ್ನು ಬಿಟ್ಟು ಅದರ ಹಿಂದಿನ ಶ್ರದ್ಧೆಯತ್ತ ಸಾಗುವುದೇಕೆ ? ನಿಷ್ಠೆಯಿಂದಲೇ ಆರಂಭಿಸಿ ಅದರಲ್ಲಿಯೇ ಭಕ್ತಾದಿ ಷಟ್‌ಸ್ಥಲಗಳನ್ನು ಸಾಧಿಸಲು ಬರುವುದೆಂಬುದನ್ನು ಇವರು ಅರಿದು ಆಚರಿಸಿ ತೋರಿಸಿದರು. ಇದು ಚನ್ನಬಸವಣ್ಣನವರ ನೂತನ ದರ್ಶನವೆಂದು ತೋರುತ್ತದೆ.

೧೨ನೆಯ ಶತಮಾನದ ಕ್ರಾಂತಿಯ ತರುವಾಯ ೧೫ನೆಯ ಶತಮಾನದಲ್ಲಿ ೧೦೧ ಜನ ವಿರಕ್ತರು ಕೂಡಿ ಮತ್ತೊಂದು ವಿಚಾರಕ್ರಾಂತಿಯಾಯಿತು. ಹಲವು ಸಿದ್ಧಾಂತಗಳ ಪುನರ್ ನವೀಕರಣವಾಗಿ ವೀರಶೈವಧರ್ಮ ಮತ್ತೆ ಚೇತರಿಸಿತು. ಬಸವಾದಿ ಶರಣರ ವಚನಗಳು ಸೈದ್ಧಾಂತಿಕವಾಗಿ ಸಂಶೋಧಿಸಲ್ಪಟ್ಟು, ಒಪ್ಪಗೊಂಡುವು. ವಿಜಯನಗರದ ಪ್ರೌಢದೇವರಾಯ, ಧರ್ಮಾಭಿಮಾನಿಯಾಗಿ ಈ ವಿಚಾರಕ್ರಾಂತಿಗೆ ಆಶ್ರಯವನ್ನಿತ್ತ. ಈ ನೂರೊಂದು ಜನ ವಿರಕ್ತರ ಸ್ವಲ್ಪ ಕಾಲಾನಂತರವೇ ವೀರಶೈವದಲ್ಲಿ ಸ್ವಲ್ಪ ಶೈಥಿಲ್ಯವುಂಟಾದಂತೆ ತೋರುತ್ತದೆ. ಆಗ ಏಳನೂರೊಂದು ಜನ ವಿರತರು ಉದಯವಾಗಿ ಷಡುಸ್ಥಲವನ್ನುದ್ಧರಿಸಿದರೆಂದು ಚನ್ನಬಸವಪುರಾಣದಿಂದ ತಿಳಿದು ಬರುತ್ತದೆ.

ಈ ಏಳನೂರೊಂದು ವಿರತರಿಗೆ ಅಗ್ರಗಣ್ಯರು, ಮಾರ್ಗದರ್ಶಕರು, ಗುರುಸ್ವರೂಪರು ತೋಂಟದ ಸಿದ್ಧಲಿಂಗ ಶಿವಯೋಗಿಗಳು. ಚನ್ನಬಸವಣ್ಣನವರ ತರುವಾಯ ಷಟ್‌ಸ್ಥಲಸಿದ್ಧಾಂತವನ್ನು ವೈಜ್ಞಾನಿಕವಾಗಿ ಅರಿತು, ನಡೆದು ತೋರಿದ ಶಿವಯೋಗಿಗಳು ಇವರು. ವೀರಶೈವದರ್ಶನದ ವಿಚಾರವನ್ನು ಬಹು ಸೂಕ್ಷ್ಮವಾಗಿ ಅವಲೋಕನ ಮಾಡಿದವರಲ್ಲಿ ಇವರೇ ಅಗ್ರಗಣ್ಯರು. ಇವರ "ಷಟ್‌ಸ್ಥಲಜ್ಞಾನಪಾರಾಮೃತವಚನ"ಗಳಲ್ಲಿ ವೀರಶೈವದರ್ಶನದ ಮಹತ್ವದ ಅಂಶಗಳು ವಿವರವಾಗಿ ಬರುತ್ತವೆ.

ಷಟ್‌ಸ್ಥಲಸಿದ್ಧಾಂತದಲ್ಲಿ ಇವರ ಮತ್ತು ಚೆನ್ನಬಸವಣ್ಣನವರ ಅಭಿಪ್ರಾಯ ಒಂದೇ ಆಗಿರುವುದನ್ನು ಈ ಕೆಳಗಿನ ವಚನದಿಂದ ಕಾಣಬಹುದು.

ಪ್ರಥಮದಲ್ಲಿ ಭಕ್ತನಾದೆನೆಂಬರು
ದ್ವಿತೀಯದಲ್ಲಿ ಮಹೇಶ್ವರನಾದೆನೆಂಬರು
ತೃತೀಯದಲ್ಲಿ ಪ್ರಸಾದಿಯಾದೆನೆಂಬರು
ನಾಲ್ಕನೆಯಲ್ಲಿ ಪ್ರಾಣಲಿಂಗಿಯಾದೆನೆಂಬರು

ಐದನೆಯಲ್ಲಿ ಶರಣನಾದೆನೆಂಬರು
ಆರನೆಯಲ್ಲಿ ಐಕ್ಯನಾದೆನೆಂಬರು
ಈಆಱುಸ್ಥಲ ಮೀರಿ ನಿರವಯನೆಯ್ದಿಹೆನೆಂಬರು
ಇದು ಖಂಡಿತ ಷಟ್ಸ್ಥಲಬ್ರಹ್ಮಜ್ಞಾನದನಿರ್ಣಯವಲ್ಲ
ಆವಾವ ಸ್ಥಲವನಂಗಂಗೊಂಡರೂ ಆ ಸ್ಥಲದಲ್ಲಿ
ಷಡ್ವಿಧಲಿಂಗವಲ್ಲಿ ಬೆರಸಿ ಬೇರಿಲ್ಲದಿರಬಲ್ಲರೆ ಸದ್ಭಕ್ತನೆಂಬೆನಯ್ಯಾ
ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ

ಸಿದ್ಧಲಿಂಗ ಶಿವಯೋಗಿಗಳೂ ಕೂಡ ಕ್ರಮಸಮುಚ್ಚಯವನ್ನು ಖಂಡಿಸಿ ಸಮಸಮುಚ್ಚಯವನ್ನು ಎತ್ತಿಹಿಡಿದಿದ್ದಾರೆ.

ಇದೇ ಪರಂಪರೆಯಲ್ಲಿ ಬಂದವರು ಸ್ವತಂತ್ರಸಿದ್ಧಲಿಂಗೇಶ್ವರರು. ಮಹಾನುಭಾವಿಗಳಾದ ಇವರು ಗುರುವಿನಂತೆಯೇ ಷಟ್‌ಸ್ಥಲಸಿದ್ಧಾಂತವನ್ನು ಅರಿತು, ನಡೆದವರು. ಅವರ ಕೆಲವು ವಚನಗಳಲ್ಲಿ ಅವರ ದರ್ಶನ, ಮಹತ್ತನ್ನು ಹೇಳುವಾಗ ಆಯ್ದ ಸರಳ ಮಾತುಗಳ ಮಾಧ್ಯಮ, ಪೂರ್ಣವಾಗಿ ವ್ಯಕ್ತವಾಗುತ್ತದೆ.

ದೇಹವೆಂಬುದೊಂದು ನಡುಮನೆಗೆ
ಕಾಲುಗಳೆರಡು ಕಂಬ ಕಂಡಯ್ಯಾ
ಬೆನ್ನೆಲುಬೆಮ್ಮರ ಎಲುಗಳು
ನರದ ಕಟ್ಟು ಚರ್ಮದ ಹೊದಿಕೆ
ಒಂದು ಮಠಕ್ಕೆ ಒಂಬತ್ತು ಬಾಗಿಲು
ಆವಾರಿಯಾಗೆ ಹೋಹ ಬಾಹರಿಗೆ ಲೆಕ್ಕವಿಲ್ಲ
ಒಡೆಯರಿಲ್ಲದ ಮನೆಯಂತೆ, ಆವಾಗ ಕೆಡುವದೆಂದರಿಯಬಾರದು
ಬಿಡು ಮನೆಯಾಸೆಯ ಬೇಗ ವಿರಕ್ತನಾಗು ಮರುಳೆ
ಪಡೆವೆ ಮುಂದೆ ಮುಕ್ತಿಯ

ಮಾನವರನ್ನು ಮುತ್ತಿದ ಮಾಯೆಯನ್ನು ಕುರಿತು

ತರಗೆಲೆಯ ಮೆದ್ದು ತಪವಿದ್ದರೂ ಬಿಡದು ಮಾಯೆ
ಗಾಳಿಯನಾಹಾರವ ಕೊಂಡು ಗುಹೆಯ ಹೊಕ್ಕಡೆಯೂ ಬಿಡದು ಮಾಯೆ

ಕಾಲನ ಹಿಡಿತದಿಂದ ಯಾರೂ ತಪ್ಪಿಸಿಕೊಳ್ಳಲಾರರು ಎನ್ನುವಾಗ

ಜಗದಗಲದ ಮಾಯಾಜಾಲವ ಹಿಡಿದು
ಕಾಲನೆಂಬ ಜಾಲಗಾರ ಜಾಲವ ಬೀಸಿದ ನೋಡಯ್ಯಾ
ಆ ಜಾಲಕ್ಕೆ ಹೊರಗಾದವರನೊಬ್ಬರನೂ ಕಾಣೆ
ಬಲ್ಲಬಲ್ಲಿದರೆಂಬವರೆಲ್ಲರ ಬಲೆಯ ಕಲ್ಲಿಯೊಳಗೆ ತುಂಬಿದ ಕಾಲ
ಆ ಕಾಲನ ಬಲೆಯೊಳಗೆ ಸಿಕ್ಕಿ ಬೇಳುವೆಗೊಳ್ಳುತ್ತಿದೆ ಜಗವೆಲ್ಲಾ

ಅಜ್ಞಾನ, ಮಱಹು, ಕತ್ತಲೆಗಳು ಜಗದ ಜೀವಿಗಳ ದುಃಖಕ್ಕೆ ಮೂಲ :

ಈ ಅಜ್ಞಾನ ತೊಳಲಿಸಿ ಬಳಲಿಸುತ್ತ
ಮಾಡಬಾರದ ಕರ್ಮವ ಮಾಡಿಸಿ
ಬಾರದ ಭವದಲ್ಲಿ ಬರಿಸಿ ಉಣ್ಣದ ಅಪೇಯವ ಉಣಿಸಿ
ಕುಡಿಸಿ ಕಾಣದ ದುಃಖವ ಕಾಣಿಸಿ
ನಾಯ ಸಾವ ನೀಡುವುದು

ಯೋಗದಂತಹ ಜಟಿಲ ವಿಷಯವನ್ನು ಹೇಳುವಾಗಲೂ ಸರಳಸುಂದರವಾಗಿ ಹೇಳುತ್ತಾರೆ.

ಯೋಗತಾಣವನಱಿದು ಯೋಗಿಸಿದೆನೆಂಬ ಯೋಗಿಗಳಿಗೆ
ಯೋಗದ ಕ್ರಮವ ಹೇಳಿಹೆವು ಕೇಳಿರಯ್ಯಾ
ಸುಷುಮ್ನೆಯ ನಾಲ್ದೆಸೆಯಲ್ಲಿ ಆತ್ಮಕಲೆ ವಿದ್ಯಾಕಲೆ ನಾದಕಲೆ ಬಿಂದು ಕಲೆಗಳನರಿಯಬೇಕು
ಆ ಕಲೆ ನಾಲ್ಕು ಸುತ್ತಿ ಅಗ್ನಿಕಲೆಗಳ ಹತ್ತನರಿವುದು
ಪಿಂಗಳೆಯಲ್ಲಿ ಭಾನುಕಲೆಯ ಹನ್ನೆರಡನರಿವುದು
ಇಡೆಯಲ್ಲಿ ಚಂದ್ರಕಲೆಗಳು ಹದಿನಾಱು ಕ್ಷಯವೃದ್ಧಿಯಾಗಿ ನಡೆವುದನಱಿವುದು
ಈ ಮೂವತ್ತೆಂಟು ಕಲೆಗಳ ಕೂಡಿದ ಚಂದ್ರಸೂರ್ಯಾಗ್ನಿಗಳ ಮಧ್ಯದಲ್ಲಿ
ತತ್ತ್ವ ಮೂಱು ಕೂಡ ಬೆಳಗುವ ಪರಂಜ್ಯೋತಿಲಿಂಗವನರಿದು ಯೋಗಿಸಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬಳಿಕ ಕೂಡುವುದು ಕಾಣಿರಣ್ಣಾ !

ಸ್ವತಂತ್ರಸಿದ್ಧಲಿಂಗೇಶ್ವರರು "ಆ ಮಹಾಗಣಂಗಳ ಮಹಾನುಭಾವ ಸಂಪಾದನೆಯನಱಿದು" ಎಂದು ಹೇಳುವಲ್ಲಿ ತಮ್ಮ ಪೂರ್ವದ ಶಿವಶರಣರೆಲ್ಲರ ವಚನಗಳನ್ನೆಲ್ಲ ಅವಲೋಕಿಸಿ, ಅಭ್ಯಸಿಸಿ, ಅವುಗಳ ಸಾರವನ್ನೆಲ್ಲ ಅಳವಡಿಸಿಕೊಂಡು ಅವುಗಳ ಪ್ರಭಾವವನ್ನು ಪರಿಣಾಮವನ್ನು ತಮ್ಮ ಜೀವನಾಚರಣೆಯ ಮೇಲೆ ಮಾಡಿಕೊಂಡು ಹೇಳಿದ ಅವರ ವಚನಗಳು ಹಿಂದಿನವುಗಳ ಅನುಕರಣೆಯಾಗದೆ ಅವರ ಸ್ವಾನುಭಾವ ವೈಶಿಷ್ಟ್ಯದಿಂದ ಕೂಡಿ ಸುಲಲಿತ ಶೈಲಿಯಲ್ಲಿ ಕಳೆವೆತ್ತು ಉಜ್ಜ್ವಲವಾಗಿರುವುದನ್ನು ಕಾಣಬಹುದಾಗಿದೆ. ವಚನ ವಾಙ್ಮಯ—ತತ್ತ್ವ, ಧರ್ಮ ಮತ್ತು ಸಾಹಿತ್ಯಗಳ ತ್ರಿವೇಣಿ ಸಂಗಮ. ಕಾಲ, ದೇಶ, ಭಾಷೆ ಇವುಗಳ ಇತಿಮಿತಿಗಳೊಳಗಾಗದೆ, ಕಾಲಾತೀತವಾಗಿ, ನಿತ್ಯ ಸತ್ಯವಾಗಿರುವುದನ್ನು ಆದ್ಯರ ವಚನ ಮತ್ತು ಸ್ವತಂತ್ರಸಿದ್ಧಲಿಂಗೇಶ್ವರರ ವಚನಗಳಿಂದ ಅರಿಯಬಹುದು.

## ಗ್ರಂಥಋಣ

೧. ಸಂ : ಡಾ. ಎಚ್. ಪಿ. ಮಲ್ಲೇದೇವರು : 'ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು'
೨. ಡಾ. ಆರ್. ಸಿ. ಹಿರೇಮಠ : 'ಷಟ್‌ಸ್ಥಲಪ್ರಭೆ'

---

ನಾನೆಂಬಹಂಕಾರ ತಲೆದೋರಿದಲ್ಲಿ ಆಟಮಟ
ಕುಟಿಲವೆಂಬ ಬಿರುಗಾಳಿ ಹುಟ್ಟಿತ್ತು
ಆ ಬಿರುಗಾಳಿ ಹುಟ್ಟಲೊಡನೆ ನಾ ಬಲ್ಲೆ
ಬಲ್ಲಿದರೆಂಬ ಅದು ಹಿರಿಯರೆಲ್ಲರು
ತಾಮಸಕ್ಕೊಳಗಾಗಿ ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರ

ಅಲ್ಲಮಪ್ರಭು

# ಕನ್ನಡ ವ್ಯಾಕರಣಕ್ಷೇತ್ರಕ್ಕೆ ವೀರಶೈವರ ಕೊಡುಗೆ

ಡಾ. ವಿ. ಶಿವಾನಂದ

ದರ್ಶನ, ಕಾವ್ಯ, ಛಂದಸ್ಸು, ಅಲಂಕಾರ ಮುಂತಾದ ಕ್ಷೇತ್ರಗಳಲ್ಲಿ ಒಂದೊಂದು ಮತ-ಸಿದ್ಧಾಂತದವರು ಬೀರಿದ ಪ್ರಭಾವ ಇವೆಲ್ಲಕ್ಕೂ ಮುಖ್ಯ ಮಾಧ್ಯಮವಾದ ಭಾಷೆ—ವ್ಯಾಕರಣಪ್ರಪಂಚದಲ್ಲೂ ಸಹ ಅಷ್ಟೇ ಗಮನಾರ್ಹವೆನ್ನಿಸಿದೆ. ಹಿಂದೆ ಅನೇಕರು ಶಿವನನ್ನು ಸ್ತುತಿಸಿ ಅವನ ವರಪ್ರದಾನದಿಂದ ವ್ಯಾಕರಣ ರಚಿಸಿದ್ದಾರೆ. ಇದು ಪುರಾಣದ ಮಾತೆನ್ನಿಸಬಹುದು. ಆದರೆ ಒಬ್ಬೊಬ್ಬರು ಒಂದೊಂದು ದೈವದಲ್ಲಿಟ್ಟ ಶ್ರದ್ಧೆ-ನಂಬುಗೆಗಳು ಅಪೂರ್ವ ಸ್ಫೂರ್ತಿಸೆಲೆಯಾಗಿ ಒದಗಿಬಂದು,ಅವರ ಪಾಂಡಿತ್ಯ-ಪ್ರತಿಭೆಯನ್ನು ಉಜ್ಜ್ವಲಗೊಳಿಸುತ್ತವೆ. ಸಂಸ್ಕೃತದ ಮಹಾಮುನಿತ್ರಯರಲ್ಲಿ ಒಬ್ಬನಾದ ಪಾಣಿನಿ ತನ್ನ 'ಅಷ್ಟಾಧ್ಯಾಯಿ'ಯಲ್ಲಿ ಬರೆದ ಹದಿನಾಲ್ಕು ಪ್ರತ್ಯಾಹಾರಸೂತ್ರಗಳು ಶಿವನನ್ನು ಧ್ಯಾನಿಸಿ ಪಡೆದವು. ಸಂಸ್ಕೃತವ್ಯಾಕರಣಸಂಪ್ರದಾಯಗಳಿಗೆಲ್ಲ ಇವನ 'ಅಷ್ಟಾಧ್ಯಾಯಿ'ಯೇ ಈಗಲೂ ಆದಿ ಮತ್ತು ಅಗ್ರಗಣ್ಯ ಕೃತಿ. ಶೈವ ಮತಸಂಪ್ರದಾಯದಲ್ಲಿ ಬರೆದ ವ್ಯಾಕರಣಗಳಲ್ಲಿ ಪಂಚಾನನಕೃತ 'ಪ್ರಬೋಧಪ್ರಕಾಶ'ವು ಮುಖ್ಯ. ಪ್ರಾಚೀನ ಕರ್ನಾಟಕದಲ್ಲಿ ಖ್ಯಾತಿವೆತ್ತ ಶೈವಶಾಖೆಯ ಕೋಡೀಮಠವು 'ಸಾಂಗ ಋಗ್‌ಯಜುಸ್ಸಾಮಾಥರ್ವವೇದ ಸ್ವಾಧ್ಯಾಯ'ಗಳೊಡನೆ 'ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನಗಳ ಅಗ್ರಪೀಠವಾಗಿತ್ತೆಂದು ಶಿಕಾರಿಪುರದ ಶಾಸನ ವರ್ಣಿಸುತ್ತದೆ (*Ep. Car*. Sk No. 102). ಕನ್ನಡದಲ್ಲಿ ಕಾತಂತ್ರವ್ಯಾಕರಣಸಂಪ್ರದಾಯದಲ್ಲಿ ಬೆಳೆದುಬಂದ 'ಶಬ್ದಮಣಿದರ್ಪಣ' ಗ್ರಂಥವನ್ನು ಬರೆದ ಕೇಶಿರಾಜ, ಖಚಿತವಾಗಿ ಯಾವ ಮತದವನೆಂಬ ನಿರ್ಣಯ ಇನ್ನೂ ಸಾಧ್ಯವಾಗಿಲ್ಲವಾದರೂ ಅವನ ಗ್ರಂಥಕ್ಕೆ ಅನ್ವಯ, ವ್ಯಾಖ್ಯಾನ, ಟೀಕೆಗಳನ್ನು ಅನುಗೊಳಿಸಿದವರು ವೀರಶೈವಪಂಡಿತರು. ಕಾತಂತ್ರವ್ಯಾಕರಣಪರಂಪರೆಯೊಂದಲ್ಲದೆ, ಮಧ್ಯಯುಗದಲ್ಲಿ ಉತ್ತರ ಭಾರತದಲ್ಲಿ ಹೆಚ್ಚು ಪ್ರಚುರವಾದ 'ಸಾರಸ್ವತ ಸಂಪ್ರದಾಯ'ದ ಪ್ರಭಾವವೂ ಸಹ ಇಲ್ಲಿ ಲೆಕ್ಕಿಸಬಹುದಾಗಿದೆ. ಕ್ರಿ.ಶ. ೧೫೦೦ರಲ್ಲಿದ್ದ ಓರ್ವ 'ಚೆನ್ನವೀರ' ಎಂಬ ವೀರಶೈವ ಪಂಡಿತನು 'ಸಾರಸ್ವತ ವ್ಯಾಕರಣ'ಕ್ಕೆ 'ಶಬ್ದಮಣಿ' ಹೆಸರಿನಲ್ಲಿ ಟೀಕೆ ಬರೆದಿರುವ ಸಂಗತಿಯನ್ನು ಕ.ಚ.ಕಾರರು ಉಲ್ಲೇಖಿಸಿದ್ದಾರೆ.[1] ಇದರಿಂದ ಸ್ಪಷ್ಟವಾಗುವ ವಿಚಾರವಿಷ್ಟು. ಕನ್ನಡದಲ್ಲಿ ಹಿಂದೆ ವ್ಯಾಕರಣ ಗ್ರಂಥಗಳನ್ನು ವೀರಶೈವೇತರರು ಬರೆದಿದ್ದರೂ ಸಹ, ವೀರಶೈವರು ಮತಭೇದವಿಲ್ಲದಂತೆ ಅವನ್ನೋದಿ ವ್ಯಾಖ್ಯಾನಿಸಿರುವಲ್ಲಿ ಅವರ ಕನ್ನಡಭಾಷಾಪ್ರೇಮದ ವೈಶಾಲ್ಯವು ನಮಗೆ ವ್ಯಕ್ತವಾಗುತ್ತದೆ. ಇಲ್ಲಿ ಇನ್ನೂ ಮಹತ್ವದ ಸಂಗತಿಯೆಂದರೆ ಈ ವ್ಯಾಖ್ಯಾನಕಾರರು ಹಾಗೂ ಟೀಕೆಯ ನಿರ್ಮಾತೃಗಳು 'ಶಬ್ದಮಣಿದರ್ಪಣ' ಅಮೂಲ್ಯ ವ್ಯಾಕರಣಕ್ಕೆ ಹಿನ್ನೆಲೆಯಾಗಿ ಬೆಳೆದುಬಂದ ಪ್ರಾಚೀನ ವ್ಯಾಕರಣಸಂಪ್ರದಾಯಗಳೆಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿ, ಕನ್ನಡ ಭಾಷೆಗೆ ಸ್ವೀಕಾರಾರ್ಹವಾದ ಲಕ್ಷಣಗಳಾವುವು? ಎಂಬುದರ ಸಮೀಚೀನವಾದ ಶೋಧನೆಗೆ ತೊಡಗಿದ್ದು. ಎಷ್ಟೋ ಸಂದರ್ಭಗಳಲ್ಲಿ 'ದರ್ಪಣ'ದಲ್ಲಿ ಕಾಣುವ ವ್ಯತಿರಿಕ್ತ ವಿಚಾರಗಳನ್ನು ಇವರು ಅಲ್ಲಗಳೆದು, ಆ ಗ್ರಂಥದ ವಿಚಾರಗಳಿಗಿಂತ ಹೆಚ್ಚಾಗಿ ಅದರ ಹಿಂದೆ ಬೆಳೆದುಬಂದ ವ್ಯಾಕರಣಸಂಪ್ರದಾಯಗಳ ಬಗೆಗೆ ಉಲ್ಲೇಖಿಸಿರುವುದು ಮತ್ತು ಆ ನಿಟ್ಟಿನಲ್ಲೇ ತಮ್ಮ ವ್ಯಾಖ್ಯಾನ, ವಿಮರ್ಶೆಯನ್ನು ಮಾಡಿರುವುದು ಕನ್ನಡ ಭಾಷೆಯ ವಿಷಯದಲ್ಲಿ ಅವರು ತಾಳಿದ ದೃಷ್ಟಿ ಯಾವುದೆಂಬುದನ್ನು ಸ್ಪಷ್ಟಪಡಿಸುತ್ತದೆ. ಲಿಂಗಣಾರಾಧ್ಯನು ಶಬ್ದಮಣಿದರ್ಪಣದ ಅನ್ವಯ ವೃತ್ತಿಯಲ್ಲಿ ಆ ಗ್ರಂಥವು 'ಕಾಲಾಪಕವ್ಯಾಕರಣ' ಮಾರ್ಗವನ್ನನುಸರಿಸಿ ಬರೆದ ಗ್ರಂಥ ಎಂದು ಹೇಳುತ್ತಾನೆ. ನಿಟ್ಟೂರ ನಂಜಯ್ಯನು 'ದರ್ಪಣ' ಗ್ರಂಥದ ಕೆಲವೊಂದು ಪ್ರಯೋಗಗಳಿಗೆ ತರುವಾಯದ ಶಬ್ದಾನುಶಾಸನಕಾರನ ಉದಾಹರಣೆಗಳನ್ನೊದಗಿಸುತ್ತಾನೆ. ಇದರಿಂದ ವೀರಶೈವ ಪಂಡಿತರು ಕೇವಲ ತಾವು ಬರೆದ ಯಾವುದೋ ಒಂದು ವ್ಯಾಕರಣ ಗ್ರಂಥದ ಟೀಕೆ—ವ್ಯಾಖ್ಯಾನ

1 ಕ.ಚ.ಭಾ. ೨

ಗಳಿಂದ ಮಾತ್ರ ತೃಪ್ತರಾಗದೆ ಸಮಗ್ರ ಕನ್ನಡ ಭಾಷೆ ಮತ್ತು ಅದರ ವ್ಯಾಕರಣ ತತ್ತ್ವಗಳನ್ನು ಆಳವಾಗಿ ಅಭ್ಯಸಿಸಿ ಎಲ್ಲ ಕಾಲದ ಭಾಷೆಗೂ ಸರ್ವಮಾನ್ಯವಾಗುವ ನಿಯಮಗಳ ನೆಲೆಗಟ್ಟನ್ನು ಸ್ಥಾಪಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ. ಇದನ್ನು ಹಿಂದೆ ವೀರಶೈವಪಂಡಿತರ ಹೊರತಾಗಿ ಮತ್ತಾರೂ ಕನ್ನಡದಲ್ಲಿ ಕೈಗೆತ್ತಿಕೊಂಡಿಲ್ಲವೆಂಬುದು, ಅವರು ಈ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯ ಮಹತ್ವವನ್ನು ಪ್ರಕಟಿಸುತ್ತದೆ. ಇಲ್ಲಿ ವ್ಯಾಕರಣಕ್ಷೇತ್ರಕ್ಕೆ ವೀರಶೈವರು ಸಲ್ಲಿಸಿದ ಸೇವೆಯನ್ನು ಕುರಿತು ಹೇಳಿದೆ. ಇವರನ್ನು ಪ್ರಾಚೀನರು ಮತ್ತು ಆಧುನಿಕರು ಎಂದು ಎರಡು ಗುಂಪು ಮಾಡಿಕೊಂಡಿದೆ.

## ಪ್ರಾಚೀನರು

### ನಿಟ್ಟೂರು ನಂಜಯ್ಯ

ಕ್ರಿ.ಶ. ೧೬೦೦ಳಕ್ಕೆ ತುಸು ಈಚೆಗೆ ಇದ್ದಿರಬಹುದಾದ ನಿಟ್ಟೂರು ನಂಜಯ್ಯ ಕೇಶಿರಾಜನ ಶಬ್ದಮಣಿದರ್ಪಣ ಸೂತ್ರಗಳಿಗೆ 'ಪದಚ್ಛೇದ', 'ಅನ್ವಯ' ಹಾಗೂ 'ಟೀಕೆ'ಯನ್ನು ರಚಿಸಿ ಅತಿ ಕ್ಲಿಷ್ಟವಾದ ಅದರ ಅಭ್ಯಾಸವನ್ನು ಸರಳಗೊಳಿಸಿದ್ದಾನೆ. ಇವನ ಪ್ರತಿಪದಾರ್ಥಟೀಕೆಯಿಂದ ನಮಗೆ 'ದರ್ಪಣ'ದ ಮೂಲಪಾಠವನ್ನೂ ಕೂಡ ಎಷ್ಟೋ ವೇಳೆ ತಿಳಿಯಲು ಸಾಧ್ಯವಾಗಿದೆ.[1] ಕೇವಲ 'ಟೀಕೆ' ಮಾತ್ರವಲ್ಲದೆ ಅಲ್ಲಲ್ಲಿ ತನ್ನ ಸ್ವತಂತ್ರವಾದ 'ವಿಚಾರ'ಗಳನ್ನು ಸಹ ಹೇಳಿರುವುದು, ಇವನ ಪಾಂಡಿತ್ಯ ಮತ್ತು ಬಹುಶ್ರುತತ್ವದ ದ್ಯೋತಕವಾಗಿದೆ.'ಶಬ್ದಂನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳ್' ಎಂದು ಕೇಶಿರಾಜ ಹೇಳಿರುವುದಕ್ಕೆ 'ಶಬ್ದಾನುವಿದ್ಧಮೇವೇದಂ ಜಗತ್ಸರ್ವಂ ಚರಾಚರಂ' ಎಂಬ ಆಗಮೋಕ್ತ ಪ್ರಮಾಣವನ್ನು ಉದ್ಧರಿಸುವಲ್ಲಿ ಇವನ ಸಂಸ್ಕೃತಭಾಷಾಪಾಂಡಿತ್ಯವು ಸಹ ತಿಳಿಯುತ್ತದೆ. ಈಚೆಗೆ ಹಿಂದಿನ ವ್ಯಾಖ್ಯಾನಕಾರರನ್ನು ಒಂದಿಲ್ಲೊಂದು ದೃಷ್ಟಿಯಿಂದ ಹಿಂದಕ್ಕೆ ತಳ್ಳಿ ಆಧುನಿಕ ವಿಚಾರಗಳನ್ನು ಪ್ರಕಟಿಸುವ ಆವೇಶ ಅಲ್ಲಲ್ಲಿ ಕಾಣುತ್ತದೆ. ಪಾಂಡಿತ್ಯವು ಹಿಂದಿನದಾಗಿದ್ದು ನಿರ್ದುಷ್ಟವಾಗಿದ್ದರೆ ಅದು ಎಲ್ಲ ಕಾಲಕ್ಕೂ ಗ್ರಾಹ್ಯ. ಪಾಂಡಿತ್ಯ ಇಂದಿನದಾಗಿದ್ದರೂ ಹುರುಳಿಲ್ಲವಾಗಿದ್ದರೆ ಅದು ಯಾವ ಕಾಲಕ್ಕೂ ಅಸ್ವೀಕೃತ. ನಿಟ್ಟೂರು ನಂಜಯ್ಯನ ಬಗೆಗೆ ಆಧುನಿಕ ಲೇಖಕರಾದ ಮಾನ್ಯ ಎಂ. ವಿ. ಸೀತಾರಾಮಯ್ಯನವರು ತಮ್ಮ ಇತ್ತೀಚಿನ 'ಪ್ರಾಚೀನ ಕನ್ನಡ ವ್ಯಾಕರಣಗಳು' ಗ್ರಂಥದಲ್ಲಿ (ಪು. ೭೬) "'ಶಬ್ದವೆಂಬ ದ್ರವ್ಯಂ'[2] ಎಂಬ ನಿಟ್ಟೂರು ನಂಜಯ್ಯನ ವಿಗ್ರಹವಾಕ್ಯವನ್ನವಲಂಬಿಸಿ ಕೆಲವರು ದಾರಿ ತಪ್ಪಿದ್ದಾರೆ" ಎಂಬುದಾಗಿ ಉಲ್ಲೇಖಿಸಿದ್ದಾರೆ. ಕೇಶಿರಾಜನ ದರ್ಪಣದಲ್ಲಿ ಅವನ ಸೂತ್ರಗಳಿಗೆ ತಾನೇ ಬರೆದ ವೃತ್ತಿಯಲ್ಲೂ ಸಹ ಕೇಶಿರಾಜ 'ಶಬ್ದವೆಂಬ ದ್ರವ್ಯ'ವೆಂದೇ ವಿಗ್ರಹಿಸಿರುವಾಗ ಇಲ್ಲಿ ನಂಜಯ್ಯನ ವಿಗ್ರಹ ತಪ್ಪೇ ಅಥವಾ ಕೇಶೀರಾಜನೇ ತಪ್ಪು ವಿಗ್ರಹಿಸಿದ್ದಾನೆಯೆ ? ನಿಜಕ್ಕೂ ಕೇಶಿರಾಜನ ಈ ಪ್ರಕ್ಷಿಪ್ತ ಹೇಳಿಕೆಗೆ ನಂಜಯ್ಯನೇ ತನ್ನ ಪ್ರತ್ಯೇಕವಾದ 'ವಿಚಾರ'ದಲ್ಲಿ ಸಮರ್ಪಕವಾದ ಪರಿಹಾರ ಒದಗಿಸಿದ್ದಾನೆ. ಇಲ್ಲಿನ ಪಾಠಸಮಸ್ಯೆಗಳು 'ಶಬ್ದದ್ರವ್ಯ' ಮತ್ತು 'ಶಬ್ದವೆಂಬ ದ್ರವ್ಯ' ಎಂದು ಎರಡನ್ನೂ ಕುರಿತಿದೆ. 'ಶಬ್ದವೆಂಬ ದ್ರವ್ಯ' ಎಂಬ ಎರಡನೆಯ ವಿಗ್ರಹ ತಪ್ಪು. ಏಕೆಂದರೆ ಶಬ್ದವೇ ದ್ರವ್ಯರೂಪಾದ ಮೇಲೆ ಮತ್ತೆ ಅದರಿಂದ ಹುಟ್ಟುವುದೂ ಶಬ್ದವೇ ಎನ್ನುವುದು ಹಾಸ್ಯಾಸ್ಪದ. ಆದರೆ ನಂಜಯ್ಯನು ತನ್ನ 'ವಿಚಾರ'ದಲ್ಲಿ ಬೀರುವ ಬೆಳಕು ಇಲ್ಲಿ ಮಹತ್ವದ್ದಾಗಿದೆ.

"ಶಬ್ದದ್ರವ್ಯಮೆಂದೊಡೆ ಘಟಕ್ಕೆ ಮೃತ್ತಿಕೆಯೆಂತಂತೆ ಅಕ್ಷರಾತ್ಮಕವಾದ ಶಬ್ದಂಗಳು ಪುಟ್ಟುವದರ್ಕೆ ಉಪಾದಾನ ಕಾರಣವಸ್ತುವೆಂದಱಿವುದು." (ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇೞ್ದಪರ್ ಎಂಬ ಸಮಸ್ಯೆ ಇಲ್ಲಿ ಅಪ್ರಸ್ತುತ) ಇಲ್ಲಿ ನಂಜಯ್ಯನು 'ಶಬ್ದದ್ರವ್ಯ'ವು ಅಕ್ಷರಾತ್ಮಕವಾದ ಶಬ್ದಗಳು ಹುಟ್ಟುವುದಕ್ಕೆ ಉಪಾದಾನಕಾರಣ ವಸ್ತು ಎಂದಿರುವಲ್ಲಿ ಅವನಿಗೆ 'ಶಬ್ದದ್ರವ್ಯ' ಬೇರೆ. ಅದು ನಾದಕ್ಕೆ (Sound) ಮೂಲ. ಅಕ್ಷರಾತ್ಮಕವಾದ ಶಬ್ದಗಳು ಎಂದರೆ ಪದಗಳು (Word) ಆ ಮೂಲ ಶಬ್ದ ಅಥವಾ ನಾದದ ಕಾರ್ಯಗಳು ಎಂದಿರುವಲ್ಲಿ ಇವೆರಡರ ಸ್ಪಷ್ಟ ಅಂತರ ತಿಳಿದೇ ಅದಕ್ಕೆ ತನ್ನ ವಿಚಾರವನ್ನು ಪ್ರತ್ಯೇಕವಾಗಿ ಹೇಳಿದ್ದಾನೆ. ಮಾನ್ಯ ಲೇಖಕರು ಅವನ 'ವಿಚಾರ'ವನ್ನು ಇಲ್ಲಿ ಉದ್ಧರಿ

---

1 ನಿಟ್ಟೂರುನಂಜಯ್ಯನ ಟೀಕಾಸಮೇತವಾದ ದರ್ಪಣಗ್ರಂಥದ ಮೊದಲ ಮುಖ್ಯ ಸಂಪಾದನೆ ಮತ್ತು ಪ್ರಕಟಣೆಗಳು. ಜೆ. ಗ್ಯಾರೆಟ್ (೧೮೬೮). ಎಫ್. ಕಿಟೆಲ್ (೧೮೭೨) ಕ.ಸಾ.ಪ. (೧೯೨೦). ಡಿ.ಎಲ್.ಎನ್. (೧೯೫೯). ನಂಜಯ್ಯನ ಟೀಕೆಯೊಡಗೂಡಿದ ತಾಳೆಗರಿ, ಕಾಗದಪ್ರತಿಗಳು ವೀರಶೈವ ಮಠಮಾನ್ಯಗಳಲ್ಲಿ ಈಗಲೂ ದೊರೆಯುತ್ತಿರುವುದು ಅವನ ಗ್ರಂಥದ ಜನಪ್ರಿಯತೆಯನ್ನು ಹೇಳುತ್ತದೆ.

2 ಅನುಕೂಲಪವನನಿಂಜೀ । ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ । ಗಿನವೊಲ್ ಶಬ್ದದ್ರವ್ಯಂ । ಜನಿಯಿಸುಗುಂ ಶ್ವೇತಮುದಱ ಕಾರ್ಯಂ ಶಬ್ದಂ ॥

ಸಿದ್ದರೆ ಚೆನ್ನಾಗಿತ್ತು.[1] ಇಲ್ಲಿನ ಶಬ್ದದ್ರವ್ಯವು ನಾಭಿಮೂಲದಲ್ಲಿಂದ 'ಅನುಕೂಲಪವನ' 'ಜೀವನಿಷ್ಟದಿಂ' ಹೊರಟು ಅಕ್ಷರಾತ್ಮಕವಾದ ಶಬ್ದಗಳಾಗಿ ರಚನೆಗೊಳ್ಳುತ್ತದೆಯೆಂದಾಗಿ ಅಷ್ಟು ಓಂದೆಯೇ ಕೇಶಿರಾಜ ಮತ್ತು ನಂಜಣಾರ್ಯರು ಭಾರತೀಯ ಪರಂಪರೆಯಲ್ಲಿ ಮಾಡಿರುವ ವಿಚಾರ ಆಧುನಿಕರು ಭಾಷಾವಿಜ್ಞಾನದಲ್ಲಿ ಹೇಳುವ 'ಧ್ವನ್ಯುತ್ಪಾದನಶಾಸ್ತ್ರ'ಕ್ಕೆ **(Articulatory Phonetics)** ಹತ್ತಿರವಾಗಿರುವುದು ಕುತೂಹಲಜನ್ಯವಿಷಯವಾಗಿದೆ.

ನಂಜಯ್ಯ, ಶಬ್ದಮಣಿದರ್ಪಣಕ್ಕೆ ಟೀಕೆ ಬರೆಯುವಲ್ಲಿ ತನ್ನವೇ ಆದ 'ವಿಚಾರ'ಗಳನ್ನು ಅಲ್ಲಲ್ಲಿ ಹೇಳಿರುವುದನ್ನಿಲ್ಲಿ ಶೇಖರಿಸಿದೆ. ಇವು ಕೇಶಿರಾಜನು ಪೂರ್ತಿ ಹೇಳದೆ ಬಿಟ್ಟಿರುವ, ಹೇಳಿದ್ದರೂ ಪ್ರಯೋಗಕೊಡದಿರುವ, ಪ್ರಯೋಗವಿದ್ದರೂ ಅಸಮರ್ಪಕವಾಗಿರುವ ಮುಂತಾದ ಎಷ್ಟೋ ಸಂಗತಿಗಳನ್ನೊಳಗೊಂಡುದರಿಂದ ದರ್ಪಣದ ಓದಿನಲ್ಲಿ ಇವನ 'ವಿಚಾರ'ಗಳನ್ನು ತಿಳಿದಿರುವುದು ಅತ್ಯವಶ್ಯವೆನಿಸುತ್ತದೆ. ವ್ಯಾಕರಣ 'ಪರಿಭಾಷೆ'ಯ ಪದಗಳ ವಿವರಣೆಯ ದೃಷ್ಟಿಯಿಂದಲೂ ನಂಜಯ್ಯ ಇಲ್ಲಿ ಬೆಳಕು ಚೆಲ್ಲಿದ್ದಾನೆ.

೧. 'ಕುಳ'ಮೆಂದೊಡೆ ಕನ್ನಡ ಶಬ್ದದಲ್ಲಿ ಇರ್ದ 'ಳ'ಕಾರಂ 'ಕ್ಷಳ'ಮೆಂದೊಡೆ ಸಂಸ್ಕೃತ ಶಬ್ದದಲ್ಲಿ 'ಲಳಯೋರಭೇದಃ' ಎಂದು ಉಂಟಾಗಿ ಲ/ಳಕಾರಂಗಳ್ಗೆ ಭೇದಮಿಲ್ಲೆಂದಱಿವುದು.

೨. 'ವರ್ಣಸಂಜ್ಞೆ' ಎಂದರೆ ಅವರ್ಣಂ ಇವರ್ಣಂ ಎಂಬಂತೆ. 'ವರ್ಣಗ್ರಹಣೇ ಸವರ್ಣಗ್ರಹಣಂ ಕಾರಗ್ರಹಣೇ ಕೇವಲಗ್ರಹಣಮಿತಿ ವಿವೇಕಃ.

೩. 'ಸಂಧ್ಯಕ್ಷರ'ಗಳೆಂದೊಡೆ ಸಂಸ್ಕೃತ ವ್ಯವಹಾರದಲ್ಲಿ ಸಂಧಿಯಾದಕ್ಷರಂಗಳು.

೪. ಬಿಂದು, ವಿಸರ್ಗಗಳು, ಸ್ವರಾಂಗ ಮತ್ತು ವ್ಯಂಜನಾಂಗಗಳು. 'ಮೋಽನುಸ್ವಾರಃ ಸ್ರೋವಿಸರ್ಗಃ' ಎಂಬ ಸೂತ್ರ ಉಂಟು.

೫. ವರ್ಗದ್ವಿತೀಯ ಚತುರ್ಥಾಕ್ಷರಂಗಳು 'ಮಹಾಪ್ರಾಣಂ'ಗಳಾದಲ್ಲಿ ವರ್ಗದೊಂದನೆಯ–ಮೂರನೆಯ ವರ್ಣಗಳು 'ಅಲ್ಪಪ್ರಾಣಂ'ಗಳೆಂದಱಿವುದು.

೬. 'ಅನುನಾಸಿಕ'ಮೆಂದೊಡೆ ಮುಖನಾಸಿಕದೊಡನೆ ಉಚ್ಚರಿಪುದು.

೭. 'ಆದೇಶ'ಮೆಂದೊಡೆ ಮೊದಲಿರ್ದುದಂ ತೊಲಗಿಸಿ ಬರ್ಪುದು.

೮. 'ಉಪಧೆ'ಮೆಂದೊಡೆ ವ್ಯಾಕರಣಂಗಳಲ್ಲಿ 'ಅಲೋಽಂತ್ಯಾತ್ ಪೂರ್ವ ಉಪಧಾ ಅಂತ್ಯಾದ್ ವರ್ಣಾತ್ ಪೂರ್ವ ಉಪಧಾ' ಎಂದು ವಾಜಸನೇಯಿ ಪ್ರಾತಿಶಾಖ್ಯದೊಳುಂಟು (I. ೩೫,) (ಪಾಣಿನಿ I. ೧) ಎಂಬ ಸೂತ್ರದಿಂ 'ಅಂತ್ಯದತ್ತಣಿಂ' ಮೊದಲ ವರ್ಣ ಉಪಧೆಯೆಂದಱಿ.

೯. ಪ್ರಕೃತಿ ಪ್ರತ್ಯಯಂಗಳು ಕೂಡುವುದು ಪದಮಧ್ಯಸಂಧಿ. ಪದಂಗಳೆರಡು ಕೂಡುವಲ್ಲಿ ಮೊದಲ ಪದದ ಕಡೆಯೊಳಪ್ಪುದು ಪದಾಂತ್ಯಸಂಧಿ (ಕೇಶಿರಾಜನು ಕೊಟ್ಟಿರುವ ಸಂಧಿಯ ಲಕ್ಷಣ ಹೆಚ್ಚು ಅಸ್ಪಷ್ಟವಾಗಿರುವುದಕ್ಕೆ ಈ ವಿವರಣೆ).

೧೦. ಓಷ್ಠ್ಯ ಮತ್ತು ಕಂಠೋಷ್ಠ್ಯಗಳಾದ ಉ ಊ, ಒ ಓ ಔಗಳಲ್ಲದೆಯುಂ 'ಆ'ಕಾರಕ್ಕೆ ಓಷ್ಠ್ಯಸ್ವರಂ ಪರಮಾಗೆ ವತ್ವಸಂಧಿ 'ಸ್ವರೇ ಪರೇ ಆಕಾರಸ್ಯ ವಗ್ಭವತಿ' (ಶಬ್ದಾನುಶಾಸನ. ಪಾದ ೧, ಸೂ. ೩೮). ಕೇಶಿರಾಜ ಇದನ್ನು ಹೇಳಲಿಲ್ಲ (ಉದಾ: ಆವುದಕ, ಆವೂರು).

೧೧. ಸಂಸ್ಕೃತ ಭಾವವಚನಗಳಿಗೆ 'ಇಸು' ಪ್ರತ್ಯಯೀಕರಣ.

೧೨. ಸಂಸ್ಕೃತ ವ್ಯಂಜನಾಂತಲಿಂಗಗಳನ್ನು ಭಟ್ಟಾಕಳಂಕನ ಸೂತ್ರೋದಾಹರಣೆಗಳ ಉದ್ಧರಣೆಯಿಂದ ಕ್ರಮಪ್ರಾಪ್ತವಾಗಿ ಹೇಳಿರುವುದು.

೧೩. ಇಂ/ಇಂದಂ/ಇಂದೆ ಎಂಬೀ ತೃ. ವಿ. ಯ. ರೂಪಿಂಗೆ ವಿಕಲ್ಪದಿಂದ 'ಎ' ಬರುವುದು ಅಕಾರಾಂತ ನಪುಂಸಕಲಿಂಗದಲ್ಲಿ ಎಂದು ಕೇಶಿರಾಜ ಹೇಳಿದ್ದಾನೆ. ಆದರೆ 'ಅಕಾರಾಂತಮಲ್ಲದಲ್ಲಿಯೂ ನಪುಂಸಕಲಿಂಗವಲ್ಲದ ಕಡೆಯಲ್ಲೂ ಬರಬಹುದೆಂದು ನಂಜಯ್ಯ ತಿಳಿಸುತ್ತಾನೆ. ಉದಾ : ಅಕಾರಾಂತಮಲ್ಲದಲ್ಲಿ→ಪಣ್ಗಳನಟ್ಟಿಯೆ ಮೆಲ್ದು (ಚಂ.ಪ್ರ.ಪು. III—೧೫). ನಪುಂಸಕವಲ್ಲದಲ್ಲಿ→ಪೊನ್ನನಿನಟ್ಟಿಯೆ ಪುರಾಣಚೂಡಾಮಣಿಯುಂ ಮುನ್ನಿಂ ಪೇಱಿಸಿದಂತೆ (ಅ.ತೀ.ಪು. I. ೭೮).

---

[1] ನಿಟ್ಟೂರು ನಂಜಯ್ಯನ ಈ ವಿಚಾರವನ್ನು ಗಮನಿಸಿದರೆ ಡಾ|| ಎಚ್. ಎಸ್. ಬಿಳಿಗಿರಿ ಅವರು ಕೇಶಿರಾಜನು 'ಅದರ ಕಾರ್ಯದಿಂ ಶಬ್ದಂ' ಎಂಬುದನ್ನು ಪಾದಪೂರಣಕ್ಕೆ ಪ್ರಯೋಗಿಸಿದ್ದಾನೆಂದು ಖಂಡಿತ ಹೇಳುತ್ತಿರಲಿಲ್ಲ. ನೋಡಿ : ಆಲೋಕ.

೧೪. ಭೂತಕಾಲದ ತೃತೀಯ ಪುರುಷ ಏಕವಚನದ ನಪುಂಸಕಲಿಂಗದಲ್ಲಿ 'ಉದು' ಮತ್ತು ಬಹುವಚನದಲ್ಲಿ 'ಉವು' ಎಂದಿಷ್ಟೇ ಕೇಶಿರಾಜ ಹೇಳಿದರೆ ಭೂತಕಾಲದ ಕ್ರಿಯಾರೂಪಗಳನ್ನು ಕೊಟ್ಟು ಈ ಪ್ರತ್ಯಯ ಎಲ್ಲಿ ನಿತ್ಯ ಎಲ್ಲಿ ಬಹುಳ, ವಿಕಲ್ಪ ಮತ್ತು ಶೂನ್ಯ ಎಂಬೀ ಪರಿಸರಗಳನ್ನು ಕೊಡುವಲ್ಲಿ ನಂಜಯ್ಯನ ಟೀಕೆ ವರ್ಣನಾತ್ಮಕವ್ಯಾಕರಣದ ತತ್ವಗಳನ್ನು ಪ್ರತಿಪಾದಿಸುವಂತಿದೆ. ಇಲ್ಲಿ ಅವನು ಹೇಳುವ ಪರಿಸರಗಳು ಕೆಳಗಿನಂತಿವೆ :

i. ಈ, ಓ, ಕಾ, ಕೀ ಮುಂತಾದ ಏಕಾಕ್ಷರಗಳ ಧಾತುಗಳಲ್ಲಿ 'ದ' ನಿತ್ಯ.

ಉದಾ : ಈ + ದ್ + ಉದು = ಈದುದು, ಈದುವು
ಕಾ + ದ್ + ಉದು = ಕಾದುದು, ಕಾದುವು.

ii. ವರ್ಗತೃತೀಯಕ್ಕೆ ಪ್ರಥಮತ್ವ ಬರುವಲ್ಲಿ 'ದ' ನಿತ್ಯ.

ಉದಾ : ನಗು + ದ = ನಕ್ಕ—ನಕ್ಕುದು
ಬಿಡು + ದ = ಬಿಟ್ಟ—ಬಿಟ್ಟುದು.

iii. ವ್ಯಂಜನಾಂತಧಾತುಗಳಲ್ಲಿ 'ದ' ಬಹುಳ.

ಉದಾ : ಬರ್ + ದ = ಬಂದ—ಬಂದುದು

iv. ಸರ್ವಧಾತುಗಳಲ್ಲಿ ಹಾಗೂ 'ಅತ್ತು' ಎಂಬ ನ.ಲಿಂ. ಪ್ರತ್ಯಯ ಸೇರುವಲ್ಲಿ 'ದ' ನಿತ್ಯ.

ಉದಾ : ಪಸರಿಸು + ದ + ಅತ್ತು = ಪಸರಿಸಿದತ್ತು.

v. ಇಕಾರಾಂತಧಾತುಗಳಲ್ಲಿ ವಿಕಲ್ಪ.

ಉದಾ : ಬಿರಿ + ದ + ಇತು = ಬಿರಿದಿತು. }
ಬಿರಿ + ಇತು = ಬಿರಿಯಿತು. }

vi. ಏಕಾರಾಂತದಲ್ಲಿ 'ದ' ಲೋಪ.

ಉದಾ : ಕರೆ + ಇತು = ಕರೆಯಿತು.
ನಡೆ + ಇತು = ನಡೆಯಿತು.

(೧೫) ಮಧ್ಯಮಪುರುಷ ಏಕವಚನದ ವಿಧ್ಯರ್ಥವು ಸಹಜವಾಗಿ ಧಾತು ಎಂದಿಷ್ಟೇ ಕೇಶಿರಾಜ ಹೇಳಿದ್ದಾನೆಂದೂ ಆ ವಿಧ್ಯರ್ಥದ ಉತ್ತಮಪುರುಷ ಏಕವಚನದ ರೂಪವನ್ನು ಅವನು ಕೊಟ್ಟಿಲ್ಲವೆಂದೂ ತಿಳಿಸಿ ನಂಜಯ್ಯ ಶಬ್ದಾನುಶಾಸನದ ಸೂತ್ರಪ್ರಮಾಣಗಳ ಬಲದಿಂದ ಅದನ್ನು ಪೂರ್ತಿಗೊಳಿಸುತ್ತಾನೆ. ಉದಾ : ಮಾಡು. (ಧಾ)

| | | | | |
|---|---|---|---|---|
| iii. | ಪ್ರ.ಪು. | → | ಅವಂ ಮಾಡುಗೆ. | ಅವರ್ ಮಾಡುಗೆ |
| ii. | ಮ.ಪು.[1] | → | ನೀಂ ಮಾಡು. | ನೀವೆಲ್ಲರ್ ಮಾಡುವುದು/ಮಾಡಿಂ |
| i. | ಉ.ಪು. | → | ಆಂ ಮಾಡುವೆಂ. | ಆವೆಲ್ಲರ್ ಮಾಡುವಂ |

(೧೬) 'ಪ್ರತಿಪಾದ್ಯಂ ಉತ್ವಂ ಇತ್ವಂ ಪೂರ್ವಕಾಲಕ್ರಿಯೆಗೆ' ಎಂದು ಕೇಶಿರಾಜ ಅಷ್ಟೇ ಹೇಳಿದ್ದರೆ, ನಂಜಣಾರ್ಯ ಅವಕ್ಕೆ ಪರಿಸರವನ್ನು ಹೇಳಿ ಅದನ್ನೊಂದು ವಾಕ್ಯದ ಉದಾಹರಣೆಯಿಂದ ಸ್ಪಷ್ಟಪಡಿಸುತ್ತಾನೆ :

ನ್ಯೂನಭೂತ ಕಾಲಕ್ರಿಯೆ
—[ಉತ್ವ] ಈ, ಓ, ಕಾ, ತೀ ಮುಂತಾದ ಏಕಾಕ್ಷರ ಧಾತುಗಳಲ್ಲಿ
ಉದಾ : ಈ → ಈಯುತ್ತ
—[ಇತ್ವ] ಉಕಾರಾಂತ ಧಾತುಗಳಲ್ಲಿ ಉದಾ : ನಚ್ಚು → ನಚ್ಚಿ
—[ಉ/ಇ] ವ್ಯಂಜನಾಂತರಗಳಲ್ಲಿ

ಮೇಲಿನದನ್ನು ವಾಕ್ಯಮಟ್ಟದಲ್ಲಿ ರೂಪಾಂತರ ಪದ್ಧತಿಯಿಂದ ಹೇಳಿರುವ ನಂಜಯ್ಯನ ವಿಚಾರ ಹೊಸತು[2] ಇದೊಂದು ಸಂಕೀರ್ಣವಾಕ್ಯ.

---

1 ಇದು ಪರಂಪರೆಯ ವ್ಯಾಕರಣಗಳಲ್ಲಿ ಹೀಗಿದ್ದರೂ ಇಂಗ್ಲೀಷಿನ Ist, 2nd ಮತ್ತು 3rd person ಎಂಬ ಕ್ರಮವನ್ನು ಅನುಸರಿಸಿ ಇವನ್ನು ಅನುಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಪುರುಷಗಳೆಂದೂ ಹೇಳಬಹುದಾಗಿದೆ.

2 ವಾಕ್ಯವಿಜ್ಞಾನದಲ್ಲಿ ರೂಪಾಂತರ ವ್ಯಾಕರಣಗಳ (Transformational Grammar) ಸಂಖ್ಯೆ ಈಗ ಹೆಚ್ಚುತ್ತಿದೆ.

ವಾಕ್ಯಸ್ತರ ೧ → | ಬಂದಂ ಪೋದಂ |

ಸ್ತರ ೨ → | ಪೋದಂ ಬಂದಂ |

ಸ್ತರ ೩ | ಪೋಗಿ ಬಂದಂ | | ಬಂದು ಪೋದಂ |

೧೭ ಕೇಶಿರಾಜನು ಭೂತಕಾಲಪ್ರತ್ಯಯ ಸೇರುವಾಗ ಸಂಧಿಪ್ರಕ್ರಿಯೆ ಕಾರಣಾಂತರಗಳಿಂದ ಯಾವ ಯಾವ ಧಾತುಗಳಿಗೆ ಯಾವ ಭೂತಪ್ರತ್ಯಯ ಸೇರುವುದೆಂಬ ವಿಚಾರವನ್ನು ಅಸ್ತವ್ಯಸ್ತವಾಗಿ ಹೇಳಿದ್ದಾನೆ. ನಂಜಯ್ಯನು ಅವಕ್ಕೊಂದು ವ್ಯವಸ್ಥೆಯನ್ನು ನೆಲೆಗೊಳಿಸಿದ್ದಾನೆ. ಅವನು ಹೇಳಿರುವ ಧಾತುಕ್ರಮವನ್ನಿಲ್ಲಿ ಹೀಗೆ ಕೊಡಬಹುದಾಗಿದೆ.

ಮಿೞ್, ತರ್, ಬರ್, ಕೊಳ್, ಸಲ್ } + ನ್ದ
ನಿಲ್ —'ನ್ದ' (ವಿಕಲ್ಪ)

ತಲ್, ಸಾಲ್, ಕೊನರ್, ತಳಿರ್, ಅಱ್, ಕೀಱ್, ಮೊಳೆ, ಅೞ್, ಬಾ, ಓ } + ತ

ಇಸು, ಬಿಸು, ಗಿೞು, ಕಿೞು, ತಿೞು, ಕಿಡು } ಪದಾದಿ ಇ > ಎ— + ದ

ಉಗು, ಪುಗು, ಕುಡು, ತುಡು } ಪದಾದಿ ಉ > ಒ— + ದ

| ಧಾತು | | ರೂಪ |
|---|---|---|
| ಪುಗು | | ಪೊಕ್ಕಂ |
| ನಗು, ಉಗು, ಮಿಗು | —ಗ್/ತ್ + ದ → | ನಕ್ಕಂ, ಒಕ್ಕಂ, ಮಿಕಂ |
| ತುಡು, ಬಿಡು, ಒಡಂಬಡು | —ಡ್/ಟ್ + ದ → | ತೊಟ್ಟಂ, ಬಿಟ್ಟಂ, ಒಡಂಬಟ್ಟಂ |
| ಮುದು | —ದ್/ತ್ + ದ → | ಮುತ್ತಂ |
| ಇಸು, ಬಿಸು, ಪಸು | —ಸ್/ಚ್ + ದ → | ಎಚ್ಚಂ, ಬೆಚ್ಚಂ, ಪಚ್ಚಂ |

ಮೇಲಿನ ಅಂಶಗಳಿಂದ ನಂಜಯ್ಯನ ಟೀಕೆ ಕೇವಲ ಕೇಶಿರಾಜನ ಸೂತ್ರಗಳಿಗೆ ಪ್ರತಿಪದವ ಅರ್ಥ ಬರೆಯುವ ಉದ್ದೇಶವನ್ನು ಮಾತ್ರ ಹೊಂದಿರದೆ ಅಲ್ಲಿನ ವ್ಯಾಕರಣ ವಿಚಾರಗಳನ್ನು ಶಾಸ್ತ್ರೀಯವಾಗಿ ಹೇಳುವ ವ್ಯಾಖ್ಯಾನಕಾರನ ದೃಷ್ಟಿಯನ್ನೂ ಮೇಳವಿಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಇದರಿಂದಾಗಿ ಅದು ಇಂದಿನ ಪಂಡಿತರಿಗೆ ಅಲ್ಲಿನ ಸೂತ್ರಗಳನ್ನು ಅರ್ಥೈಸುವುದಕ್ಕೂ, ಅಲ್ಲದೆ ಹಳಗನ್ನಡ ವ್ಯಾಕರಣದ ಮಹತ್ವದ ವಿಚಾರಗಳನ್ನು ತಿಳಿಯುವುದಕ್ಕೂ ಉತ್ತಮ ಪ್ರವೇಶಿಕೆಯಾಗಿದೆ.

**ಲಿಂಗಣಾರಾಧ್ಯ**

'ಸೂತ್ರಾನ್ವಯರತ್ನಮಾಲೆ' ಎಂಬ ಹೆಸರಿನಲ್ಲಿ ಕೇಶಿರಾಜನ ಶಬ್ದಮಣಿದರ್ಪಣಕ್ಕೆ ವಿದ್ವತ್ಪೂರ್ಣವಾದ ವ್ಯಾಖ್ಯಾನ ಬರೆದ ಲಿಂಗಣಾರಾಧ್ಯ ಕ್ರಿ.ಶ. ೧೭೦೦ರಲ್ಲಿದ್ದಿರಬೇಕೆಂದು ತಿಳಿಯುತ್ತದೆ. ಮದ್ರಾಸ್ ಸರಕಾರದ ಪ್ರಾಚ್ಯ ಗ್ರಂಥಭಂಡಾರದಲ್ಲಿ ದೊರೆತ ಏಕೈಕ ಅಮೂಲ್ಯ ತಾಳೆಗರಿಯೊಂದನ್ನು ಆಧರಿಸಿ ಎ. ವೆಂಕಟರಾವ್ ಹಾಗೂ ಪಂಡಿತ್ ಎಚ್. ಶೇಷ ಅಯ್ಯಂಗಾರ್ ಅವರು ಕ್ರಿ.ಶ. ೧೯೩೮ರಲ್ಲಿ ಇದನ್ನು ಪ್ರಕಟಿಸಿದ ಮೇಲೆ 'ಲಿಂಗಣಾರಾಧ್ಯ'ನ ಕೊಡುಗೆಯ ಮಹತ್ವ ಕನ್ನಡಲೋಕಕ್ಕೆ ಚಿರಪರಿಚಿತ.[1] 'ಇದು ಸಂಸ್ಕೃತ-ಕರ್ಣಾಟಕೋಭಯಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯವಿರಚಿತಮಪ್ಪ ಸೂತ್ರಾನ್ವಯರತ್ನಮಾಲೆ' ಎನ್ನುವುದರಿಂದ ಇವನು ಆರಾಧ್ಯ ಪಂಗಡದ

[1] ಈ ಗ್ರಂಥ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪುನರ್ಮುದ್ರಣಗೊಂಡಿದೆ. ಸಂ. ಡಾ. ಎ. ಶಂಕರ ಕೆದಿಲಾಯ, ೧೯೭೩.

ವೀರಶೈವನೆಂದೂ, ಉಭಯಭಾಷಾವಿಶಾರದನೆಂದೂ ಇವನು ದರ್ಪಣದ ಸೂತ್ರಗಳಿಗೆ 'ಅನ್ವಯ ಕ್ರಮ'ದಲ್ಲಿ ವೃತ್ತಿ ಬರೆದಿರುವುದಾಗಿಯೂ ಸ್ಪಷ್ಟವಾಗುತ್ತದೆ. ವ್ಯಾಕರಣಜಗತ್ತಿಗೆ ಲಿಂಗಣಾರಾಧ್ಯನ ಕೊಡುಗೆಯ ವಿಶೇಷವನ್ನು ಕುರಿತು ಆ ಗ್ರಂಥಕ್ಕೆ ಅಪೂರ್ಣವಾಗಿ ಬರೆದಿರುವ 'ಅವತರಣಿಕೆ'ಯಲ್ಲಿ ಪಂಡಿತ ಎಚ್. ಚೆನ್ನಕೇಶವ ಅಯ್ಯಂಗಾರ್ ಅವರು ಹೇಳುತ್ತಾರೆ: 'ಇಲ್ಲಿ ಕೇಶಿರಾಜನ ವೃತ್ತಿಗೆ ಬದಲು ಲಿಂಗಣಾರಾಧ್ಯನ ವೃತ್ತಿಯನ್ನು ಕೊಟ್ಟಿದೆ. ಸೂತ್ರಕಾರನ ವೃತ್ತಿಗೆ ಬದಲಾಗಿ ತನ್ನದೇ ಆದ ಬೇರೆ ವೃತ್ತಿಯನ್ನು ದಿಟ್ಟತನದಿಂದ ಬರೆದ ಲಿಂಗಣಾರಾಧ್ಯನ ವ್ಯಾಖ್ಯಾನದಲ್ಲಿ ವಿಶೇಷಗುಣ ವೇನಿರಬಹುದೆಂಬುದನ್ನು ಕುತೂಹಲಪರರಾದ ವಾಚಕರು ಈ ಮುದ್ರಣದಿಂದ ಅರಿಯಬಹುದು (ಅವತರಣಿಕೆ, ಪು. ೧), ಅವರೇ ಮುಂದುವರೆದು, ಲಿಂಗಣಾರಾಧ್ಯನು 'ಕೇಶಿರಾಜನು ಕೊಟ್ಟಿರುವ ಉದಾಹರಣೆಗಳಲ್ಲಿ ಕೆಲವನ್ನು ಬಿಟ್ಟಿರುವನು. ಕೆಲವನ್ನು ಹೆಚ್ಚಾಗಿ ಕೊಟ್ಟಿರುವನು. ಕೆಲವನ್ನು ಮಾರ್ಪಡಿಸಿರುವನು' ಎಂದಿರುವಲ್ಲಿ ಇವನ ಸ್ವೋಪಜ್ಞತೆ ಹಾಗೂ ಶಾಸ್ತ್ರಪಾಂಡಿತ್ಯಗಳ ಪರಿಚಯವಾಗುತ್ತದೆ. ನಿದರ್ಶನಕ್ಕೆ ಕೆಲವು:

i. **ಸೂತ್ರಗಳಿಗೆ ಹೆಚ್ಚಿನ ವಿವರಣೆ:** ಕೇಶಿರಾಜನು 'ಅಕ್ಕರಮುದಯಿಪ ತಾಣಮಾದುವೀ ಪೇಟ್ದಿಂಟುಂ' ಎಂದಿಷ್ಟೇ ಹೇಳಿದ್ದರೆ, 'ಪಾಠಕ್ರಮಾದರ್ಥಕ್ರಮೋ ಬಲೀಯಾನ್' ಎಂದು 'ಅನ್ವಯಮಂ ಪೇಟ್ವೆಂ' ಎನ್ನುತ್ತ ಯಾವ ಯಾವ ವರ್ಣಗಳಿಗೆ ಯಾವುದು ಸ್ಥಾನ, ಕರಣ ಎಂಬುದನ್ನು ಸಮಗ್ರವಾಗಿ ಇವನು ಪಟ್ಟಿ ಕೊಡುತ್ತಾನೆ.[1]

ii. **ಉಚಿತ ಪಾಠಾಂತರಗಳ ಪೂರೈಕೆ:**

ಪದನೆರಡುಂ ಮೇಣ್ **ಪಲವುಂ**
**ಪದಾರ್ಥನುಂ** ಬಯಸುತಿರೆ ಬಹುವ್ರೀಹಿ ॥

ಎಂಬ ಕೇಶಿರಾಜನ ಬಹುವ್ರೀಹಿಸಮಾಸದ ಲಕ್ಷಣದಲ್ಲಿ 'ಪಲವುಂ ಪದಾರ್ಥಕ್ಕೆ' ಅನ್ಯಪದಾರ್ಥವೆಂಬ ತಾತ್ಪರ್ಯಾರ್ಥ ಮಾಡುವ ಕ್ಲೇಶವೊದಗುವುದನ್ನು ಲಿಂಗಣಾರಾಧ್ಯ ತಪ್ಪಿಸಿ ಇದನ್ನು ಕೆಳಗಿನಂತೆ ಉಚಿತಪಾಠಾಂತರದಿಂದ ಸರಿ ಗೊಳಿಸುತ್ತಾನೆ.

ಪದನೆರಡುಂ ಮೇಣ್ **ಪರ**
**ಪದಾರ್ಥವುಂ** ಬಯಸುತಿರೆ ಬಹುವ್ರೀಹಿ ॥

ಅದೇರೀತಿ ಕೇಶಿರಾಜನು ಬರೆದಿರುವ ಕಂದ ಸೂತ್ರಗಳಲ್ಲಿನ ಪ್ರಾಸದ ದೋಷವನ್ನು ನಿವಾರಿಸುತ್ತಾನೆ.

ಅಶುದ್ಧಪಾಠ—ಅಕ್ಕುಂ ಲೋಪಂ ನಾಲ್ಕೆ
ದಿರ್ಕ್ಕಂತ್ಯಕ್ಕಾಚಿಜಾದಿಯೊಳ್ ಹ್ರಸ್ವಂ ತಾ ॥
ಶುದ್ಧಪಾಠ — ತೋರ್ಕುಂ ಲೋಪಂ ನಾಲ್ಕ
ಯ್ದರ್ಕಂತ್ಯಕ್ಕಾಚಿಜಾದಿಯೊಳ್ ಹ್ರಸ್ವಂ ತಾ ॥

iii. **ತಪ್ಪು ಪ್ರಯೋಗಗಳ ಖಂಡನೆ:** "'ಚತ್ವಾರ್ ಶಬ್ದಮಂ ಪಾಣಿನ್ಯಾಚಾರ್ಯರ್' 'ಚತುರ್' ಶಬ್ದಮೆಂದು ಪೇಟ್ದಪರ್ ಅಂತೆನಲಾಗದು.[2] ಪಾಣಿನೀಯ ಪದ್ಧತಿಯಿಂ ಕವಿ ಕೇಶಿರಾಜಂ ಪೇಟ್ದನೆಂತೆಂದೊಡೆ ಅದಲ್ತು 'ಶಬ್ದಮಣಿ ದರ್ಪಣಮುಂ ಕಾಲಾಪಕವ್ಯಾಕರಣಮಾರ್ಗದಿಂ ಪೇಟ್ದನಾಗಿ', ಆ ಶಾಖೆಯ ಪ್ರಕ್ರಿಯಾಗ್ರಂಥಗಳಲ್ಲಿ 'ರೇಫಾಂತ ಚತ್ವಾರ್ ಶಬ್ದಃ' ಎಂದಿರುವುದನ್ನು ಸಾಧಾರವಾಗಿ ಕೊಡುತ್ತಾನೆ."

ಕನ್ನಡ ವರ್ಣಮಾಲೆ, ಮುಂತಾದ ವಿಷಯಗಳಲ್ಲಿ ಕೇಶಿರಾಜನು ಕಾಲಾಪಕವ್ಯಾಕರಣಪದ್ಧತಿಯನ್ನೇ ಅನುಸರಿ ಸಿದ್ದನ್ನು ಆ ಪರಂಪರೆಯ ಸೂತ್ರಗಳಿಂದ ಲಿಂಗಣಾರಾಧ್ಯ ಸಮರ್ಥಿಸುತ್ತಾನೆ. ಉದಾ:

'ಚತುರ್ದಶಾಪ್ಪೌ ಸ್ವರಾಃ, ದಶ ಸಮಾನಾಃತೇಷಾಂ ದ್ವೌದ್ವಾವನ್ಯೋನ್ಯಸ್ಯ ಸವರ್ಣೌ ಪೂರ್ವೋ ಹ್ರಸ್ವಃ, ಪರೋ ದೀರ್ಘಃ, ಅವರ್ಣವರ್ಜೋ ನಾಮಿ ಎಂಬ ಕಾಲಾಪಕವ್ಯಾಕರಣಸೂತ್ರಂಗಳಂ ಮನದೊಳಿರಿಸಿ ಕವಿಕೇಶವಂ ಪೇಟ್ದಂ (ನಾ. ಪು. ಸೂ. ೮೪).

iv. **ಪೂರ್ವದ ವ್ಯಾಖ್ಯಾನಕಾರರ ದೋಷನಿರ್ಮುಕ್ತಿ:** 'ಶಬ್ದಮಣಿದರ್ಪಣ'ಕ್ಕೆ ಬೇರೊಬ್ಬನು ಮಾಡಿದ ಒಂದು

---

1 ಇದು ಆಧುನಿಕ ಭಾಷಾವಿಜ್ಞಾನಿಗಳು ಕೊಡುವ **'ಸರ್ವಸಮಾವೇಶಿತ ಅಭಿರಚನೆ'** (Over all Pattern)**ಯಂತಿದೆ.** ಆದರೆ ಇಲ್ಲಿ ಲಿಂಗಣಾರಾಧ್ಯ ಸ್ವರ ಮತ್ತು ವ್ಯಂಜನಗಳನ್ನು ಒಟ್ಟಿಗೇ ಹೇಳಿರುವ ಕ್ರಮ ಹಳೆಯದು.

2 'ಚತುರೋ ವಾ ಶಬ್ದಸ್ಯೋತಂ' ಪಾ. ಸೂ. ೨೬-೨-೪೧.

ವ್ಯಾಖ್ಯಾನ ಕುರಿತಾಡುತ್ತ 'ಕಂ....ಸಪ್ಪ ತಾಂ ಮಾಡಿದ ಶಬ್ದಮಣಿದರ್ಪಣದೊಳ್...ಸರೇಫಮಿಂದಿರಾಗೆ ದೋಷಮಿಲ್ಲ ಮೆಂದು' ಹೇಳಿದ್ದನ್ನು 'ಅದು ಪೊಲ್ಲ' ಸೂತ್ರಕಾರನಾದ ಕವಿಕೇಶವಂ ತಾಂ ಮಾಡಿದ ಶಬ್ದಮಣಿ ವೃತ್ತಿಯೊಳ್ ಸಂಧಿ ದೋಷಮಕ್ಕುಮೆಂದು ತಾಂ ಬರೆದಂ' ಎಂದು ಲಿಂಗಣಾರಾಧ್ಯ ತಿಳಿಸಿ ಪೂರ್ವದ ವ್ಯಾಖ್ಯಾನಗಳಲ್ಲಿ ಉಂಟಾಗುತ್ತಿದ್ದ ಪ್ರಮಾದಗಳನ್ನು ನಿವಾರಿಸುತ್ತಾನೆ ಲಿಂಗಣಾರಾಧ್ಯ. ಇದರಿಂದ ತಾನು ಬರೆದಿರುವ 'ಅನ್ವಯವೃತ್ತಿಗೆ' ಪೂರ್ವ ಸಾಮಗ್ರಿಯಾಗಿ ಕೇಶಿರಾಜನೇ ಬರೆದ 'ಅರ್ಥವೃತ್ತಿ'ಯನ್ನೂ ಬೇರೊಬ್ಬರು ಮಾಡಿದ 'ವ್ಯಾಖ್ಯಾನ'ವನ್ನೂ ಪ್ರತ್ಯಕ್ಷ ಕಣ್ಣಾಡಿಸಿ ಅಲ್ಲಿನ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿರುವುದರಿಂದ ಅವನ 'ಅನ್ವಯವೃತ್ತಿ' ಅತ್ಯಂತ ಅಧಿಕೃತವಾಗಿ ನಮಗೆ ದೊರೆಯುವಂತಾಗಿದೆ.

v. **ಹೊಸ ಪ್ರತಿಯ ಹೊಸ ವ್ಯಾಖ್ಯಾನದ ಮೇಲೆ ಲಿಂಗಣಾರಾಧ್ಯ ಚೆಲ್ಲುವ ಬೆಳಕು :** ವ್ಯಾಖ್ಯಾನಕಾರನ ಹೆಸರು ಗೊತ್ತಿರದ ಹಾಗೂ ಕಾಲ ತಿಳಿಯದ ಒಂದು 'ಹೊಸ ಪ್ರತಿ'ಯ ಸಂಗತಿಯನ್ನು ಹಿಂದೆ ವಿದ್ವಾಂಸರಾದ ಡಿ. ಕೆ. ಭೀಮಸೇನರಾಯರು ಪ್ರಸ್ತಾಪಿಸಿದ್ದು ಆ ಏಕೈಕ ಪ್ರತಿಯ ಗೌರವದ ಹೆಚ್ಚಳಿಕೆಯನ್ನು ಹೊಗಳಿದ್ದರು[1] ಮತ್ತು ಅದು ದರ್ಪಣ ವ್ಯಾಖ್ಯಾನಗಳನ್ನು ಕುರಿತ ಅತ್ಯಂತ ಪ್ರಾಚೀನ ಕೃತಿ. ಕ್ರಿ.ಶ. ೧೪೭೩ರಷ್ಟು ಹಿಂದಿನದು ಎಂದಿದ್ದರು. ಆದರೆ ಡಿ. ಎಲ್. ನರಸಿಂಹಾಚಾರ್ಯರು ತಮ್ಮ ದರ್ಪಣಗ್ರಂಥದ ಸಂಪಾದನೆಗೆ ಆಧರಿಸಿದ ಹಸ್ತ ಪ್ರತಿಗಳ ಮೇಲಿಂದ ಇವನ ಕಾಲ ಭಟ್ಟಾಕಳಂಕನಿಗಿಂತ ಈಚಿನದು ಎಂದು ನಿರ್ಣಯಿಸಿದ್ದಾರೆ. 'ದಕ್ಷಿಣೋತ್ತರ ಮಾರ್ಗ'ದ ವಿಷಯವನ್ನು ಶಬ್ದಾನುಶಾಸನದಿಂದ ಸ್ವೀಕರಿಸಿದ್ದರೆ ಗಮಕಸಮಾಸದಲ್ಲಿ 'ಪಿರಿಯ ಗುರುಗಳೆಂಬಂತೆ ಗುಣ ವಚನದೊಳಱಿವುದು' ಎಂದು ಈ ಹೊಸ ವ್ಯಾಖ್ಯಾನಕಾರ ಹೇಳಿರುವ ಮಾತು ಲಿಂಗಣಾರಾಧ್ಯನ ವೃತ್ತಿಯಲ್ಲೂ ಇದೆ. ಅಲ್ಲದೆ ಲಿಂಗಣಾರಾಧ್ಯನ ಹಲವಾರು ಸೂತ್ರವೃತ್ತಿಗಳನ್ನು ಹೊಸ ಪ್ರತಿಯ ಸೂತ್ರವೃತ್ತಿಗಳೂ ಹೋಲುವುದರಿಂದ ಇವನು ಲಿಂಗಣಾರಾಧ್ಯನಿಗಿಂತ ಈಚಿನವನೇಕಾಗಿರಬಾರದು? ಇಲ್ಲಿ ಡಿ.ಎಲ್.ಎನ್. ಆಚಾರ್ಯರು ತಾವು ಸಂಪಾದನೆಗೆ ಉಪಯೋಗಿಸಿದ ಹಸ್ತಪ್ರತಿಗಳಲ್ಲಿ 'ಕ' ಪಾಠವೂ (ಇದು ಶ್ರವಣಬೆಳುಗೊಳ ಜೈನಮಠಕ್ಕೆ ಸಂಬಂಧಿಸಿದ ಒಂದು ಪ್ರತಿ) ಒಂದು. ಈ ಬಗ್ಗೆ ಅವರು 'ಕ' ಪ್ರತಿಯ ಮೂಲಮಾತೃಕೆಯೊಂದರಿಂದ ಹೊಸಪ್ರತಿಯ ವ್ಯಾಖ್ಯಾನಕಾರನೂ ಲಿಂಗ ಣಾರಾಧ್ಯನ ಪ್ರಯೋಗಪದ್ಯವನ್ನೂ, ವಿವರಣವಾಕ್ಯವನ್ನೂ ತೆಗೆದುಕೊಂಡಂತೆ ಕಾಣುತ್ತದೆ. ಒಟ್ಟಿನಲ್ಲಿ ಹೊಸಪ್ರತಿಯ ವ್ಯಾಖ್ಯಾನಕಾರನ ಕಾಲ ೧೭ನೆಯ ಶತಮಾನವೆಂದಿಟ್ಟುಕೊಳ್ಳಬಹುದು ಎನ್ನುತ್ತಾರೆ.[2] ಆದರೆ ಇಲ್ಲಿ ಲಿಂಗಣಾರಾಧ್ಯನೇ ಮೊದಲಿದ್ದಿರಲು ಸಾಧ್ಯ. ಅವನಿಂದಲೂ ಭಟ್ಟಾಕಳಂಕನಿಂದಲೂ ವಿಷಯವನ್ನು ಸಂಗ್ರಹಿಸಿರುವ ಸಂಗತಿ ಸ್ಪಷ್ಟವಿರು ವಾಗ, ಹೊಸಪ್ರತಿಯ ಹೊಸವ್ಯಾಖ್ಯಾನ ಕೂಡ ಲಿಂಗಣಾರಾಧ್ಯನ ಪ್ರಭಾವದೀಪ್ತಿಯನ್ನು ಹೊಂದಿದ ಕೃತಿಯೆಂಬುದ ರಲ್ಲಿ ಸಂದೇಹವಿರಲಾರದು. ಇದರಿಂದ 'ಕನ್ನಡ ವ್ಯಾಕರಣಕ್ಕೊಡೆಯನೋರ್ವನೆ ಕೇಶಿರಾಜನಾವಗಂ' ಎಂದು ಖ್ಯಾತಿ ವೆತ್ತ ಅವನ ಶಬ್ದಮಣಿದರ್ಪಣಗ್ರಂಥವನ್ನು ವೀರಶೈವಪಂಡಿತರಲ್ಲಿ ನಿಟ್ಟೂರು ನಂಜಯ್ಯ ಮತ್ತು ಲಿಂಗಣಾರಾಧ್ಯರು ಕರತಲಾಮಲಕ ಮಾಡಿಕೊಂಡಿದ್ದಲ್ಲದೆ ಕನ್ನಡಭಾಷೆಯ ದೃಷ್ಟಿಯಿಂದ ಅದರ ಅಧ್ಯಯನವನ್ನು ಸಾರ್ವಕಾಲಿಕಗೊಳಿಸಿ ಅದಕ್ಕೂ ಹಿಂದಿನ ಕನ್ನಡವ್ಯಾಕರಣಪರಂಪರೆಯ ತತ್ವಗಳನ್ನು ನೆಲೆಗೊಳಿಸಿ ತಮ್ಮ ಹಿಂದಿನ, ಮುಂದಿನ ವ್ಯಾಖ್ಯಾನ ಕಾರರಿಗೆ ಮಾರ್ಗವೇತ್ತರಾಗಿ ಬಾಳಿದರೆಂಬುದು ಸ್ಪಷ್ಟವಾಗುತ್ತದೆ.

## ಆಧುನಿಕರು

೧೯ ಹಾಗೂ ೨೦ನೆಯ ಶತಮಾನದಲ್ಲಿ ವ್ಯಾಕರಣ-ಭಾಷಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ವಿದ್ವಾಂಸರ, ಲೇಖಕರ ಹಾಗೂ ಆಲೋಚಕರ ಬಗೆಗೆ ಇಲ್ಲಿ ಹೇಳಿದೆ.

ಕಳೆದ ಶತಮಾನದಲ್ಲಿ ಕೀರ್ತಿವೆತ್ತ ಇಬ್ಬರು ವೀರಶೈವಪಂಡಿತರ ನಾಮೋಲ್ಲೇಖ ಇಲ್ಲಿ ಅತ್ಯವಶ್ಯ. (೧) ಶಾಂತ ವೀರರಾಚಿದೇವ ಕಿತ್ತೂರ (ಕ್ರಿ.ಶ. ೧೮೨೦–೧೮೮೫). (೨) ಬೇಗೂರು ಮಲ್ಲಪ್ಪ ಅಥವಾ ವ್ಯಾಕರಣದ ಬಿ. ಮಲ್ಲಪ್ಪ (ಕ್ರಿ.ಶ. ೧೮೩೫–೧೯೦೭). ಶಾಂತವೀರರಾಚಿದೇವ ಕಿತ್ತೂರ ಉತ್ತರ ಕರ್ನಾಟಕದಲ್ಲಿ ಖ್ಯಾತಿವೆತ್ತ ಪಂಡಿತ. "ಕಿಟೆಲ್ ಮತ್ತು ಫ್ಲೀಟ್ ಅವರಿಗೆ ಕೆಲಕಾಲ ಗುರುವಾಗಿದ್ದು ಅವರಲ್ಲಿ ಕನ್ನಡಪ್ರೇಮವನ್ನು ತುಂಬಿದ

---

[1] 'ಶಬ್ದಮಣಿದರ್ಪಣದ ಪಾಠಾಂತರಗಳು' ಕ.ಸಂ.ಸಂ. ಧಾರವಾಡ; ೧೯೫೧. ದಿ. ಭೀಮಸೇನರಾಯರ ಆಶಯದ ಹೊಸಪ್ರತಿಯ ಸಂಪಾದನೆ ಮತ್ತು ಪ್ರಕಟಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ನೆರವೇರಿಸಿದೆ. ಶ.ಮು.ದ. ೧೯೭೭.

[2] ಶ.ಮು.ದ. ಸಂ. ಡಿ.ಎಲ್.ಎನ್.

ವ್ಯಕ್ತಿ."[1] ವ್ಯಾಕರಣದ ಬಿ. ಮಲ್ಲಪ್ಪನವರು ಜನಪ್ರಿಯರಾದದ್ದು ಮೈಸೂರು ಸಂಸ್ಥಾನದಲ್ಲಿ. ಅಂದು ಮಾಧ್ಯಮಿಕ ಶಾಲಾ ಮಕ್ಕಳಿಗೆಂದು ಬರೆದ 'ಶಬ್ದಾದರ್ಶ'ವೆಂಬ ವ್ಯಾಕರಣ, ಸರಳತೆಯಿಂದಲೂ ದೋಷವಿಮುಕ್ತವಾದ ಸೂತ್ರ ಸಂಗ್ರಹದಿಂದಲೂ ಹೆಚ್ಚು ಪ್ರಸಿದ್ಧವಾಯಿತಷ್ಟೇ ಅಲ್ಲ, ಇವರ ಭಾಷಾಪಾಂಡಿತ್ಯ ಅಂದು ಕನ್ನಡಕ್ಕೆ ಸೇವೆ ಸಲ್ಲಿಸಲು ಮೊದಲಾಗಿದ್ದ ಕಿಟ್ಟೆಲ್ ಹಾಗೂ ರೈಸ್ ಅವರಿಗೆ ಮೆಚ್ಚುಗೆಯದಾಯಿತು. ಅವರಲ್ಲಿದ್ದ ಕನ್ನಡಭಾಷೆಯ ಬಗೆಗಿನ ಎಷ್ಟೋ ಸಂದೇಹಗಳನ್ನು ಮಲ್ಲಪ್ಪನವರು ನಿವಾರಿಸಿ ಅವರ ಸಂಶೋಧನಕಾರ್ಯಕ್ಕೆ ಪ್ರೋತ್ಸಾಹವಿತ್ತರೆಂದು ಗೊತ್ತಾಗುತ್ತದೆ. ಮಲ್ಲಪ್ಪನವರು 'ರಾಜಶೇಖರವಿಳಾಸ' ಕಾವ್ಯಾವಲೋಕನದ ಅರ್ಥಾಲಂಕಾರಪ್ರಕರಣ ಹಾಗೂ ನಾಗವರ್ಮನ ಕಾದಂಬರಿಗಳ ಪರಿಷ್ಕರಣವನ್ನೂ ಮಾಡಿದರು. 'ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆ' ಹಾಗೂ ಮಹಾರಾಜಾಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ಕನ್ನಡವಾಙ್ಮಯಕ್ಕೆ ಕೊಟ್ಟ ಅವರ ಕೊಡುಗೆ ಚಿರಸ್ಮರಣೀಯವಾದುದು.

೨೦ನೆಯ ಶತಮಾನದ ವ್ಯಾಕರಣಕ್ಷೇತ್ರದ ವೀರಶೈವ ವಿದ್ವಾಂಸರನ್ನು (೧) ಪ್ರಾಚೀನವ್ಯಾಕರಣಸಂಪಾದಕರು. (೨) ಪ್ರಾಚೀನವ್ಯಾಕರಣವ್ಯಾಖ್ಯಾತರು (೩) ಸ್ವತಂತ್ರ ಗ್ರಂಥನಿರ್ಮಾತೃಗಳು ಹಾಗೂ (೪) ಲೇಖಕರು ಎಂದಾಗಿ ವಿಭಾಗಿಸಿದೆ. ಪ್ರಾಚೀನಗ್ರಂಥಸಂಪಾದನಕ್ಷೇತ್ರದಲ್ಲಿ ಲಿಂ॥ ಶಿ. ಶಿ. ಬಸವನಾಳರು ಪ್ರಾತಃಸ್ಮರಣೀಯರಾಗುತ್ತಾರೆ. ಕುಂಡಲಗಿರಿಯಾಚಾರ್ಯನ ಕನ್ನಡ ಟೀಕೆಯುಳ್ಳ ಭಟ್ಟಾಕಳಂಕನ ಶಬ್ದಾನುಶಾಸನ ವ್ಯಾಕರಣಗ್ರಂಥವನ್ನು ಇವರು ಅತ್ಯಂತ ದಕ್ಷತೆಯಿಂದ ಸಂಪಾದಿಸಿ ಪ್ರಕಟಿಸಿದರು (ಕ್ರಿ.ಶ. ೧೯೪೧). ಬಸವನಾಳರು ಆಂಗ್ಲ, ಸಂಸ್ಕೃತ ಹಾಗೂ ಕನ್ನಡವಲ್ಲಿ ಆಳವಾದ ಪಾಂಡಿತ್ಯ ಹಾಗೂ ಶಾಸ್ತ್ರೀಯ ದೃಷ್ಟಿಯುಳ್ಳವರು. ಶಬ್ದಾನುಶಾಸನಕ್ಕೆ ಅವರು ಬರೆದ ಪ್ರಸ್ತಾವನೆ ಕನ್ನಡ ವ್ಯಾಕರಣತತ್ತ್ವಗಳನ್ನು ತಿಳಿಯದವರಿಗೆ ತುಂಬ ಪ್ರಯೋಜಕವಾಗಿದೆ. ಕೇಶಿರಾಜನ ತರುವಾಯದಲ್ಲಿ ಅವನ ದರ್ಪಣಕ್ಕಿಂತ ಹೆಚ್ಚು ವಿಶಾಲತತ್ತ್ವಗಳ ಮೇಲೆ ಕನ್ನಡಭಾಷೆಯ ವ್ಯಾಕರಣವನ್ನು ರಚಿಸಿದ ಕೀರ್ತಿ ಭಟ್ಟಾಕಳಂಕನದು. ಅದರ ಮಹತ್ವವನ್ನು ಬಸವನಾಳರು ಚೆನ್ನಾಗಿ ಗ್ರಹಿಸಿದ್ದರು. ಹಳಗನ್ನಡ ವ್ಯಾಕರಣ ಕ್ಷೇತ್ರದಲ್ಲಿ ಹಾಗೂ 'ಕನ್ನಡದ ಅಸಾಧಾರಣ ಲಕ್ಷಣ'ಗಳನ್ನು ಎತ್ತಿ ಹೇಳುವಲ್ಲಿ ಎಷ್ಟೇ ಉಕ್ಕಿನ ಕಡಲೆಯಂತಿದ್ದರೂ ಕೇಶಿರಾಜನ ಶಬ್ದಮಣಿದರ್ಪಣದ ಜನಪ್ರಿಯತೆ ಸಂಸ್ಕೃತದಲ್ಲಿರುವ ಭಟ್ಟಾಕಳಂಕನ ಶಬ್ದಾನುಶಾಸನಕ್ಕಿಲ್ಲವಾದುದರಿಂದ ಅದಕ್ಕೆ ಹಿಂದಿನ ವೀರಶೈವಪಂಡಿತರು ಟೀಕೆ, ಅನ್ವಯ, ವ್ಯಾಖ್ಯಾನವನ್ನು ಪೂರೈಸಿದಂತೆ ಈಗಲೂ ಹಲಕೆಲವು ವೀರಶೈವಪಂಡಿತರು ಅದರ ಅಧ್ಯಯನವನ್ನು ಮುಂದುವರೆಸಿದರು. ಈ ಮಾಲಿಕೆಯಲ್ಲಿ ಡಾ॥ ಜೆ. ಎಸ್. ಕುಳ್ಳಿ ಆಧುನಿಕ ಭಾಷಾವಿಜ್ಞಾನದ ತಳಹದಿಯ ಮೇಲೆ ಕೇಶಿರಾಜನ ಶಬ್ದಮಣಿದರ್ಪಣ ಗ್ರಂಥದ ವಿಶ್ಲೇಷಣೆ ಮಾಡಿದ್ದಾರೆ.[2] ಇದು ಅವರ Ph.d. ಮಹಾ ಪ್ರಬಂಧ. **Phonology, Sandhi, Morphology, Syntax, Apabhramsa (Barrowing)** ಎಂಬ ವಿಭಜನೆಯಲ್ಲಿ ಇಲ್ಲಿನ ವಿಷಯವಿಶ್ಲೇಷಣೆಯಿದೆ. ಡಾ॥ ಕುಳ್ಳಿ ಅವರ ಭಾಷಾವಿಜ್ಞಾನದ ಅಧ್ಯಯನದ ಸ್ಫೂರ್ತಿಕೇಂದ್ರ ಅಣ್ಣಾಮಲೈ ವಿಶ್ವವಿದ್ಯಾಲಯ. ಅಲ್ಲಿನ ಖ್ಯಾತಿವೆತ್ತ ಭಾಷಾಪಂಡಿತರಾದ ಡಾ॥ ಕೆ. ಕುಶಾಲಪ್ಪಗೌಡ, ಡಾ॥ ಅಗಸ್ತ್ಯಲಿಂಗಮ್ ಮುಂತಾದವರ ನಿಶಿತಮತಿಯಲ್ಲಿ ತರಬೇತುಹೊಂದಿ ಆಧುನಿಕ ಭಾಷಾವಿಜ್ಞಾನದ ವಾಙ್ಮಯಕ್ಕೆ ವಿಶಿಷ್ಟ ಸೇವೆ ಸಲ್ಲಿಸುತ್ತಿದ್ದಾರೆ. ಇವರ 'ವರ್ಣನಾತ್ಮಕ ಭಾಷಾವಿಜ್ಞಾನ','ಐತಿಹಾಸಿಕ ಭಾಷಾವಿಜ್ಞಾನ', 'ಭಾಷಾಸೌಧ' ಕೃತಿಗಳು ಕನ್ನಡಕ್ಕೆ ಭಾಷಾವಿಜ್ಞಾನದ ಕೊರತೆಯನ್ನು ನೀಗಿಸುವಲ್ಲಿ ಆಕರಗ್ರಂಥಗಳಾಗುತ್ತವೆ. 'ದರ್ಪಣ'ದ ಮೇಲಿನ ಇನ್ನೊಂದು ವ್ಯಾಖ್ಯಾನಕೃತಿ ಇದೇ ಲೇಖಕನು ಬರೆದಿರುವ 'ಶಬ್ದಮಣಿದರ್ಪಣವಿಳಾಸ' (ಕ್ರಿ.ಶ. ೧೯೭೨). ಇದರಲ್ಲಿ ಪಾಂಡಿತ್ಯದ ಕ್ಲೇಶವಿಲ್ಲ. ಕೇಶಿರಾಜನು ಹೇಳಿರುವ ಎಂಟೂ ಪ್ರಕರಣಗಳಿಗೆ ನೇರವಾದ ಗದ್ಯಾನುವಾದವಿದೆ. ಶಂಭುಲಿಂಗಪ್ಪನವರ 'ಶಬ್ದಮಣಿದರ್ಪಣದ ಸೂತ್ರಸಾರ' (೧೯೭೬) ನಾಮಪ್ರಕರಣದವರೆಗಿನ ಪರ್ಯಾಲೋಚನೆಯನ್ನೊಳಗೊಂಡಿದೆ. 'ದರ್ಪಣ' ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ ಅಗ್ರಗಣ್ಯರು ಅನೇಕರು. ಆದರೆ ಅದನ್ನು ಸಂಗ್ರಹಿಸಿ ಪ್ರಕಟಿಸುವಲ್ಲಿ ಮುಂದಾದವರು ಡಾ॥ ಎಂ. ಎಂ. ಕಲಬುರ್ಗಿ. ಇದರಲ್ಲಿ ಸೂತ್ರಸಂಖ್ಯೆ ಇರುವತ್ತೆಯೋ ಇದ್ದು, ತುಂಬ ವಿಸ್ತೃತವಾದ ಹಾಗೂ ಪುನರಾವರ್ತನೆಗೊಳ್ಳುವ ಪ್ರಯೋಗಸಂಖ್ಯೆಯನ್ನು ಕಡಮೆ ಮಾಡಿ 'ಶಬ್ದಮಣಿದರ್ಪಣಸಂಗ್ರಹ'ವನ್ನು ಪ್ರಕಟಿಸಿದ್ದಾರೆ (೧೯೭೫). 'ಸೂತ್ರಕ್ಕೆ ತಕ್ಕಷ್ಟು ವೃತ್ತಿ ವೃತ್ತಿಗೆ ತಕ್ಕಷ್ಟು ಪ್ರಯೋಗ' ಎಂಬುದು ಇವರ ಇಲ್ಲಿನ ಸಂಪಾದನೆಯ ಧೋರಣೆಯಾಗಿದೆ. ಎಚ್. ದೇವೀರಪ್ಪನವರು ಕರ್ನಾಟಕ ಭಾಷಾಭೂಷಣದ ಸಂಪಾದನೆ ಮಾಡಿದ್ದಾರೆ.

ಭಾಷೆ-ವ್ಯಾಕರಣದ ಸ್ವತಂತ್ರ ಗ್ರಂಥಗಳ ನಿರ್ಮಾಣಕ್ಷೇತ್ರದಲ್ಲಿ ಕನ್ನಡನಾಡಿನಲ್ಲಿ ಮಾತ್ರವಲ್ಲದೆ, ಅಂತಾರಾಷ್ಟ್ರೀಯ

1 ಹೊಸಗನ್ನಡ ಅರುಣೋದಯ : ಪು. ೩೦. ಡಾ॥ ಶ್ರೀನಿವಾಸ ಹಾವನೂರ.

2 Kesiraja's *Shabdamanidarpana*, Pub : K.O.D

ಮಟ್ಟದಲ್ಲೂ ಮೆಚ್ಚುಗೆಗಳಿಸಿದ ಇಬ್ಬರು ವಿದ್ವಾಂಸರೆಂದರೆ ಡಾ॥ ಆರ್. ಸಿ. ಹಿರೇಮಠ ಹಾಗೂ ಡಾ॥ ಎಂ. ಚಿದಾನಂದ ಮೂರ್ತಿಗಳು. 'ನ್ಯೂಯಾರ್ಕಿನ' ರಾಕ್‌ಫೆಲ್ಲರ್ ಸಂಸ್ಥೆಯ ಪೆಲೊಶಿಪ್ ಪಡೆದು ಡಾ॥ ಹಿರೇಮಠರು ಅಮೇರಿಕೆಗೆ ತೆರಳಿ 'ಆಧುನಿಕ ವರ್ಣನಾತ್ಮಕಭಾಷಾವಿಜ್ಞಾನ'ದ ಕ್ಷೇತ್ರದಲ್ಲಿ ವಿಶೇಷ ತರಬೇತಿ ಹೊಂದಿದರು. ಹೆನ್ರಿ. ಎಚ್ ಗ್ಲೀಪನ್ ಇವರಿಗೆ ಧ್ವನಿ-ಧ್ವನಿಮಾ ಅಧ್ಯಯನದಲ್ಲಿ ಹೆಚ್ಚಿನ ಜ್ಞಾನಸಂಪಾದನೆಗೆ ಅಲ್ಲಿ ನೆರವಾದರು. ಡಾ॥ ಹಿರೇಮಠ ಅವರ **'Structure of Kannada'** (೧೯೬೧) ಧಾರವಾಡ ಬೆಳಗಾಂ ಬಿಜಾಪುರ ಜಿಲ್ಲೆಗಳ ಸಮಕಾಲೀನ ಆಡುಮಾತಿನ ಸಾಮಗ್ರಿಯ 'ಹಿನ್ನೆಲೆ'ಯಲ್ಲಿ ಬರೆದ ಉಪಭಾಷಾ ವ್ಯಾಕರಣ. ಈ ಮಾದರಿಯ ವರ್ಣನಾತ್ಮಕ ಭಾಷಾ ವಿಶ್ಲೇಷಣೆಯನ್ನೊಳಗೊಂಡ ಕೃತಿ ದ್ರಾವಿಡಭಾಷೆಗಳಲ್ಲೇ ವಿಶಿಷ್ಟ ಕನ್ನಡಕ್ಕಂತೂ ಮೊದಲ ಕೊಡುಗೆ ಎನ್ನಿಸಿದೆ.[1] 'ಭಾಷಾವಿಜ್ಞಾನದ ಮೂಲತತ್ತ್ವಗಳು' (೧೯೭೧) ಡಾ॥ ಎಂ. ಚಿದಾನಂದಮೂರ್ತಿಗಳ ನಿರ್ದುಷ್ಟ ಬರವಣಿಗೆ ಹಾಗೂ ಭಾಷೆಯ ಆಧುನಿಕ ವ್ಯಾಸಂಗ ಪರಿಶ್ರಮದಲ್ಲಿ ಅವರು ಪಡೆದಿರುವ ಪಾಂಡಿತ್ಯವನ್ನು ಅತ್ಯಂತ ಸಕ್ರಮವಾಗಿ, ಸರಳವಾಗಿ ಪ್ರತಿಪಾದಿಸುವ ಶ್ರೇಷ್ಠ ಕೃತಿ. 'ಭಾಷಾವಿಜ್ಞಾನ'ವನ್ನು ಕಲಿಯಲು ಹೊರಟ ಕನ್ನಡ ವಿದ್ಯಾರ್ಥಿಗಳಿಗೆ ಪ್ರಾಯಶಃ ಅದರಷ್ಟು ಉತ್ತಮ ಗ್ರಂಥವೆನ್ನಿಸುವ ಇನ್ನೊಂದು ಕೃತಿ ಕನ್ನಡದಲ್ಲಿ ರಚನೆಗೊಂಡಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಕ್ರಿ.ಶ. ೧೯೬೫ರ ಈಚೆಗೆ ಕೆಲವೊಂದು ಸಾಂಪ್ರದಾಯಿಕ ವ್ಯಾಕರಣಗಳೂ ಭಾಷಾವಿಜ್ಞಾನದ ನೆಲಗಟ್ಟಿನ ಮೇಲೆ ಬರೆದ ಕೆಲವು ಕೃತಿಗಳೂ ಹೊರಬಂದಿವೆ. ಬಿ. ಬಿ. ಪಾಟೀಲರ 'ವ್ಯಾಕರಣಲೋಕ', ಡಾ॥ ಎಂ. ಎಂ. ಕಲಬುರ್ಗಿ ಅವರ 'ಪ್ರತಿಬಿಂಬ', ಸಿ. ಓಂಕಾರಪ್ಪ ಅವರ 'ಕುಮಾರವ್ಯಾಸ ಭಾರತದ ಭಾಷಾಧ್ಯಯನ' ಸಂಗಮೇಶ ಸವದತ್ತಿಮಠರ 'ದ್ರಾವಿಡಭಾಷಾ ವ್ಯಾಸಂಗ' ಹಾಗೂ 'ಕನ್ನಡ ಭಾಷಾವ್ಯಾಸಂಗ' ಎಚ್. ಸಿದ್ಧಲಿಂಗಯ್ಯನವರ ಕನ್ನಡ ವ್ಯಾಕರಣ ಗ್ರಂಥಗಳು ಇಲ್ಲಿ ಉಲ್ಲೇಖನಾರ್ಹ.

ಕನ್ನಡ ವ್ಯಾಕರಣದಲ್ಲಿನ ಗಹನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳನ್ನು ಬರೆದ ವೀರಶೈವ ಪಂಡಿತರಲ್ಲಿ ಡಾ॥ ಎಂ. ಎಂ. ಕಲಬುರ್ಗಿ, ಡಾ॥ ಎಂ. ಚಿದಾನಂದಮೂರ್ತಿಗಳು ಅಗ್ರಮಾನ್ಯರಾಗುತ್ತಾರೆ. ಡಿ.ಎಲ್.ಎನ್. ಹಾಗೂ ತೀ.ನಂ.ಶ್ರೀ ಅವರಂತಹ ಪಂಡಿತ ದಿಗ್ಗಜರ ಗರಡಿಯಲ್ಲಿ ಪಳಗಿ ಶಾಸ್ತ್ರೀಯ ಪ್ರಜ್ಞೆಯನ್ನೂ ಸಂಶೋಧನ ಶೈಲಿಯನ್ನೂ ಮೈಗೂಡಿಸಿಕೊಂಡ ಡಾ॥ ಚಿದಾನಂದಮೂರ್ತಿಗಳು ಅನೇಕ ಹೊಸ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. 'ಕನ್ನಡ ವ್ಯಾಕರಣಕಾರರು ಮತ್ತು ಸ್ವೀಕರಣ ವಿಚಾರ (ಸಂ. ತ., II ೧೯೭೦) 'ಗೋದಾವರಿ ತೀರದ ಕನ್ನಡ' 'ಲಂಬಾಣಿಭಾಷೆ' ಇವು ಇವರ ವಿಶಿಷ್ಟಕೊಡುಗೆ ಎನ್ನಿಸಿದೆ. ಉತ್ತರ ಕರ್ನಾಟಕದಲ್ಲಿ ಪಾಂಡಿತ್ಯವನ್ನು ಘೋಷಿಸಿಕೊಂಡು ಬಂದ ಪರಂಪರೆಯ ಲೇಖಕರಲ್ಲಿ ಶ್ರೀ ಬಸವನಾಳ, ಡಾ॥ ಆರ್. ಸಿ. ಹಿರೇಮಠ ಹಾಗೂ ಎಸ್. ಎಸ್. ಮಾಳವಾಡ ಅವರ ತರುವಾಯದಲ್ಲಿ ಡಾ॥ ಕಲಬುರ್ಗಿ ಅವರ ಹೆಸರು ಸೇರುತ್ತದೆ. ಡಿ.ಎಲ್.ಎನ್. ಆಚಾರ್ಯರು ಸಂಪಾದಿಸಿದ 'ಶಬ್ದಮಣಿದರ್ಪಣ'ದ ಪಾಠ, ಪಾಠಾಂತರ. ವೃತ್ತಿ, ಅನ್ವಯಗಳ ಬಗೆಗೆ ಸಮಸ್ಯೆಗಳನ್ನೆತ್ತಿ ತಾತ್ಕಾಲಿಕ ಲೇಖನಗಳನ್ನು 'ದರ್ಪಣಾಲೋಕನ' ಮಾಲಿಕೆಯಲ್ಲಿ ಬರೆದು ತಾರುಣ್ಯದಲ್ಲಿಯೇ ಕನ್ನಡ ವಿದ್ವತ್ಪ್ರಪಂಚದಲ್ಲಿ ಕಣ್ಣುಕುಕ್ಕಿಸುವ ವ್ಯಕ್ತಿತ್ವವನ್ನು ಡಾ॥ ಕಲಬುರ್ಗಿ ಸಂಪಾದಿಸಿದರು. ದರ್ಪಣದ 'ಅರ್ಥವೃತ್ತಿ, ಅನ್ವಯವೃತ್ತಿ' 'ಕ್ಷಳಸೂತ್ರ ಸಮುಚ್ಚಯಗಳು' ಕುರಿತ ಇವರ ಹಲವಾರು ಲೇಖನಗಳು ಕರ್ನಾಟಕ ಭಾರತಿ, **J.K.U.** ಗಳಲ್ಲಿ ಪ್ರಕಟವಾದುವು. ವ್ಯಾಕರಣಕ್ಷೇತ್ರ ಶುದ್ಧಶಾಸ್ತ್ರವಾದುದರಿಂದ ಶುಷ್ಕವೆನ್ನಿಸುವುದು ನಿಜ. ಆದರೆ ಭಾಷೆಯ ಮುನ್ನಡೆಗೆ ಆ ಕಾಲದ ಭಾಷೆಯ ಸ್ವರೂಪವನ್ನು ತಿಳಿಯುವುದಕ್ಕೆ ವ್ಯಾಕರಣಗ್ರಂಥಗಳು ಬೆಳಕಾಗುತ್ತವೆ. ಈ ಕ್ಷೇತ್ರದಲ್ಲಿ ಆಧುನಿಕ ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ಮಾಡಬೇಕಾದ ಕಾರ್ಯ ವಿಪುಲವಾಗಿದೆ. ವಿಸ್ತಾರಭಯದಿಂದ ಒಂದೊಂದು ನಿಟ್ಟಿನಲ್ಲಿ ದುಡಿಯುತ್ತಿರುವ ಎಲ್ಲರ ಹೆಸರುಗಳನ್ನು ಇಲ್ಲಿ ಹೇಳಲು ಶಕ್ಯವಿಲ್ಲವಾದರೂ ಹಲವಾರು ವೀರಶೈವಪಂಡಿತರ ನಾಮೋಲ್ಲೇಖವನ್ನು ನಾವು 'ಕನ್ನಡ ಭಾಷಾಸಾಹಿತ್ಯ ಲೇಖನಸೂಚಿ'[2] ಹಾಗೂ 'ಸಾಹಿತ್ರವಾರ್ಷಿಕ ಸಂಪುಟಗಳಲ್ಲಿ ಬರುವ ವಿಮರ್ಶೆ, 'ಸಾದರ ಸ್ವೀಕಾರ'ಗಳಿಂದ ತಿಳಿಯಬಹುದಾಗಿದೆ.

---

[1] ವಿಲಿಯಂ ಬ್ರೈಟ್‌ನು ಬರೆದ *An Outline of Colloquial Kannada* ಬೆಂಗಳೂರು ಸುತ್ತ-ಮುತ್ತಲಿನ ಬ್ರಾಹ್ಮಣರಾಡುವ ಭಾಷೆಗೆ ಮಾತ್ರ ಸಂಬಂಧಿಸಿದ ಸಾಮೂಹಿಕ ಉಪಭಾಷಾ ಕೃತಿ. ಆದರೆ ಡಾ॥ ಹಿರೇಮಠರು ಪ್ರಾದೇಶಿಕ ಉಪಭಾಷೆಗಳ ತೌಲನಿಕ ಕ್ಷೇತ್ರದಲ್ಲಿ ಮುಖ್ಯರಾಗುತ್ತಾರೆ.

[2] ಇವು ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆಗಳು.

# ವೀರಶೈವಮಠಗಳ ಕಾರ್ಯಕ್ಷೇತ್ರ

**ಡಾ. ಹೆಚ್. ಎಂ. ಸದಾಶಿವಯ್ಯ**

ವೀರಶೈವಮಠಗಳು ಸಮಾಜದ ಅವಿಭಾಜ್ಯ ಭಾಗಗಳಾಗಿ, ಸಮಾಜದ ಸದಸ್ಯರೊಡನೆ ವಿವಿಧ ಸಂಬಂಧಗಳನ್ನು ಹೊಂದಿದ್ದುವು. ಸಾಮಾಜಿಕಜೀವನವು ವಿಕಾಸವಾಗುತ್ತಾ ಹೋದಂತೆ ವೀರಶೈವ ಮಠಗಳ ಕಾರ್ಯಕ್ಷೇತ್ರವು ಬೆಳೆಯುತ್ತಾ ಹೋಯಿತು. ವೀರಶೈವ ಮಠಗಳು ಇಂದಿಗೂ ಸಹ ಸಮಾಜದಲ್ಲಿ ವಹಿಸುತ್ತಿರುವ ಪ್ರಮುಖ ಪಾತ್ರವು ಸರ್ವವಿದಿತವಾಗಿದೆ. ಜೀವನವು ಸರಳವಿದ್ದಾಗ, ವೀರಶೈವ ಮಠಗಳ ಕಾರ್ಯಕ್ಷೇತ್ರವು ಬಹುತೇಕವಾಗಿ ಧಾರ್ಮಿಕ ವಿಷಯಗಳಿಗೆ ಸೀಮಿತವಾಗಿತ್ತು. ಸ್ವಯಂಪೂರ್ಣ ಸಮಾಜವು ಸರಳವಾದ ಜೀವನವಿದ್ದಾಗ ಮಾತ್ರ ಸಾಧ್ಯ. ಜನರ ಬಯಕೆಗಳು ಹೆಚ್ಚಿದಂತೆ. ಲೌಕಿಕ ಜೀವನದ ಅಗತ್ಯಗಳು ಬೆಳೆದಂತೆ, ಸಾಮಾಜಿಕ ಜೀವನವು ಸಂಕೀರ್ಣವಾಯಿತು. ಹೀಗೆ ಸಾಮಾಜಿಕ ಜೀವನವು ಸರಳತೆಯಿಂದ ಸಂಕೀರ್ಣತೆಗೆ ವಿಕಾಸವಾದಂತೆ, ವೀರಶೈವಮಠಗಳ ಕಾರ್ಯಕ್ಷೇತ್ರದ ವಿಕಾಸವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಣುತ್ತೇವೆ.

ವೀರಶೈವ ಮಠಗಳ ಕಾರ್ಯಗಳನ್ನು ನಿರೂಪಿಸುವ ಮೊದಲು ಅವುಗಳ ಪಾರಂಪರ್ಯದ ವಿಚಾರವಾಗಿ ಕೆಲವು ವಿಷಯಗಳನ್ನು ಗ್ರಹಿಸುವುದು ಅಗತ್ಯ. ವೀರಶೈವಮಠಗಳ ಪಾರಂಪರ್ಯವು, ಹಿಂದೂ ದೇಶದಲ್ಲಿ ವಿವಿಧ ಧರ್ಮಗಳಲ್ಲಿದ್ದ ಮಠಗಳ ವ್ಯವಸ್ಥೆಗೆ ಸಂಬಂಧವನ್ನು ಹೊಂದಿದೆ. ಮಠಗಳು ಸಂನ್ಯಾಸಿಗಳ ವಾಸಸ್ಥಳಗಳಾಗಿದ್ದವು. ಮಠಗಳ ಉಗಮವನ್ನು ಪರಿಶೀಲಿಸಿದರೆ ಮಠಕ್ಕೂ ಅಧ್ಯಾತ್ಮಯೋಗ ಮತ್ತು ವೈರಾಗ್ಯಗಳಿಗೆ ಇರುವ ನಿಕಟಸಂಬಂಧವು ಕಾಣಬರುತ್ತದೆ. ಮಠಗಳನ್ನು ಆಂಗ್ಲ ಭಾಷೆಯಲ್ಲಿ "ಮೊನೆಸ್ಟರಿಸ್" (Monasteries) ಎಂದು ಕರೆಯುತ್ತಾರೆ. ಇಂಗ್ಲಿಷ್ ಶಬ್ದದ ಮೂಲವಾದ ಗ್ರೀಕ್ ಶಬ್ದವನ್ನು ಪರಿಶೀಲಿಸಿದರೆ, ಇದರ ಅರ್ಥ ಏಕಾಂತತೆ ಅಥವಾ ವಿವಿಕ್ತತೆ. ಪ್ರಪಂಚ ಬಂಧನಗಳಿಂದ ಹೊರತಾಗಿ, ಏಕಾಗ್ರಚಿತ್ತದಿಂದ ಧ್ಯಾನದಲ್ಲಿ ನಿರತವಾಗಲು ಏಕಾಂತತೆಯು ಅಗತ್ಯವೆಂಬ ಭಾವನೆ ಎಲ್ಲಾ ಧರ್ಮಗಳಲ್ಲಿಯೂ ಮೂಡಿಬಂದಿದೆ. ಮಠದಲ್ಲಿರುವ ಯತಿಗಳು ಪ್ರಾಪಂಚಿಕ ಜೀವನದಿಂದ ಹೊರಗಿದ್ದರೂ, ಸಂನ್ಯಾಸಿಗಳ ಸಾಮಾಜಿಕ ಸಂಬಂಧಗಳಿದ್ದುವೆಂಬುದನ್ನು ಮರೆಯಬಾರದು. ಸಂನ್ಯಾಸಿಗಳೂ ಒಟ್ಟಿಗೆ ಇರಬೇಕಾದುದರಿಂದ ಅವರಿಗೆ ಅಗತ್ಯವಾಗಿ ಇರಬೇಕಾದ ಗುಣವು ಸಹನೆ.

ಪ್ರಾಪಂಚಿಕ ಬಂಧನಗಳು ಧಾರ್ಮಿಕ ಜೀವನಕ್ಕೆ, ಆಧ್ಯಾತ್ಮಿಕ ಅನುಭವಕ್ಕೆ ಅಡಚಣೆಯನ್ನುಂಟುಮಾಡುತ್ತವೆಂಬ ಭಾವನೆಯು ಪ್ರಪಂಚದ ಎಲ್ಲಾ ಧರ್ಮಗಳ ಅನುಯಾಯಿಗಳಲ್ಲಿದ್ದುದು ಗೋಚರವಾಗುತ್ತದೆ. ಇದರ ಅತಿರೇಕವೇ ಶರೀರಕ್ಕೆ ಆದಷ್ಟು ಹಿಂಸೆಯನ್ನು ಕೊಟ್ಟಷ್ಟೂ ಪರಮಾತ್ಮನ ಸಾನ್ನಿಧ್ಯವನ್ನು ಸೇರಬಹುದೆಂಬ ಭಾವನೆಗೆ ಎಡೆಕೊಟ್ಟಿತು. ಬುದ್ಧನೂ ಸಹ ಅನೇಕ ವರ್ಷಗಳು ಶರೀರವನ್ನು ಅಲಕ್ಷಿಸಿ ಅದಕ್ಕೆ ಹಿಂಸೆಯಾಗುವ ರೀತಿಯಲ್ಲಿ ವರ್ತಿಸಿದನು. ಆದರೆ ಕಾಲಕ್ರಮೇಣ ಅದು ನಿಷ್ಪ್ರಯೋಜನವೆಂಬ ಅರಿವು ಬಂದಿತು. ಬೌದ್ಧಮತದಲ್ಲಿ ಶರೀರವನ್ನು ಸ್ವಚ್ಛವಾಗಿ ಆರೋಗ್ಯವಾಗಿಡಬೇಕೆಂಬ ಭಾವನೆಯಿದೆ. "ಬೆಳಕನ್ನು ಕೊಡುವ ದೀಪವನ್ನು ಸ್ವಚ್ಛವಾಗಿಟ್ಟರಲ್ಲವೇ, ನಮಗೆ ಪ್ರಕಾಶಮಾನವಾದ ಬೆಳಕು ಬರುವುದು. ಶರೀರವನ್ನು ಆರೋಗ್ಯವಾಗಿಟ್ಟುಕೊಳ್ಳುವುದು ಆದ್ಯಕರ್ತವ್ಯ. ಜ್ಞಾನವನ್ನೀಯುವ ದೀವಿಗೆಯನ್ನು ಸ್ವಚ್ಛವಾಗಿಡದಿದ್ದರೆ ಮನಸ್ಸು ಮತ್ತು ಬುದ್ಧಿ ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗದು." ವೀರಶೈವಧರ್ಮದಲ್ಲಿ ಕಾಯಕಕ್ಕೆ ಇರುವ ಮಹತ್ವದ ಸ್ಥಾನವನ್ನು ಇಲ್ಲಿ ಸ್ಮರಿಸಬಹುದು. ಸಂನ್ಯಾಸಿಗೂ ಸಹ ಕಾಯಕದ ಅಗತ್ಯವಿದೆ. 'ಕಾಯಕ' ಶಬ್ದವೇ ಸೂಚಿಸುವಂತೆ, ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ರೀತಿಯ ಶರೀರದ ಕಾರ್ಯದ ಅವಶ್ಯಕತೆ ಇದೆ. ಆಗಲೇ ಆತನ ವ್ಯಕ್ತಿತ್ವ ಉತ್ತಮವಾಗುತ್ತದೆ.

ಅತ್ಯಂತ ಪುರಾತನ ಕಾಲದಲ್ಲಿ ಹಿಂದೂಸಮಾಜದಲ್ಲಿ ಆಶ್ರಮಗಳಿದ್ದವು. ವಿದ್ಯಾರ್ಥಿಗಳು ಗುರುಗಳನ್ನು ಹುಡುಕಿ

ಕೊಂಡು ಈ ಆಶ್ರಮಗಳಿಗೆ ಹೋಗುತ್ತಿದ್ದರು. ಈ ಆಶ್ರಮಗಳಲ್ಲಿ ಗುರುಗಳು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಇರುತ್ತಿದ್ದರು. ಸನ್ಯಾಸಿಗಳು ಸಂಚಾರದಲ್ಲಿ ತೊಡಗಿರುತ್ತಿದ್ದರು. ಅವರು ಜನರಿಗೆ ಪ್ರಾಸಂಗಿಕವಾಗಿ ಸಾಮಾನ್ಯವಾದ ಧಾರ್ಮಿಕ ನೈತಿಕತತ್ತ್ವಗಳನ್ನು ತಿಳಿಯಹೇಳುತ್ತಿದ್ದರು. ಸಂನ್ಯಾಸಿಗಳಿಗೆ ಒಂದು ಗೊತ್ತಾದ ವಾಸಸ್ಥಳವಿರಲಿಲ್ಲ. ಆದುದರಿಂದ ಸಂನ್ಯಾಸಿಗಳು ಸಾಮೂಹಿಕವಾಗಿ ವಾಸಿಸುತ್ತಿದ್ದ ಮಠಗಳಿರಲಿಲ್ಲ.

ಬೌದ್ಧಧರ್ಮದಲ್ಲಿ ಮಠಗಳ ಪ್ರಾಮುಖ್ಯತೆಯು ವಿಶೇಷವಾಗಿ ಕಾಣಬರುತ್ತದೆ. ಸಂನ್ಯಾಸಿಗಳು ಒಟ್ಟಿಗೆ ವಾಸ ಮಾಡುವುದರಿಂದ ಅವರ ಜೀವನದ ರೀತಿನೀತಿಗಳನ್ನು ಕುರಿತು ನಾನಾರೀತಿಯ ನೈತಿಕ ನಿಯಮಗಳು ರೂಪಿತವಾದವು. ವಿದ್ಯಾಭ್ಯಾಸಕ್ಕೆ ಹೆಚ್ಚು ಆದ್ಯತೆಯನ್ನು ಕೊಡಲಾಯಿತು. ವಿದ್ಯಾಭ್ಯಾಸವು ಕೇವಲ ಧಾರ್ಮಿಕ ವಿಷಯಗಳಿಗೆ ಸೀಮಿತವಾಗದೆ ಲೌಕಿಕಜೀವನಕ್ಕೆ ಬೇಕಾಗುವ ಸಾಧನೆಗಳನ್ನು ಒದಗಿಸುವ ಅನುಕೂಲತೆಗಳನ್ನು ತಕ್ಕಮಟ್ಟಿಗೆ ಕಲ್ಪಿಸಿತು. ಭಿಕ್ಷುವಾದವನಿಗೆ ಜಾತಿಯಿಲ್ಲ. ಎಲ್ಲರೂ ಒಂದೇ. ಇದೇ ಭಾವನೆಯನ್ನು ವೀರಶೈವಧರ್ಮದಲ್ಲಿಯೂ ಕಾಣುತ್ತೇವೆ. ಒಬ್ಬ ವ್ಯಕ್ತಿಯು ಯಾವ ಜಾತಿಗೆ ಸೇರಿದವನಾಗಿದ್ದರೂ, ಲಿಂಗಧಾರಣೆಯಾದನಂತರ ಆತನಿಗೆ ಜಾತಿಯಿಲ್ಲ. ವೀರಶೈವ ಮಠಗಳು ವಿದ್ಯಾಪೀಠಗಳಾಗಿ ಧಾರ್ಮಿಕ ಮತ್ತು ಲೌಕಿಕ ವಿದ್ಯೆಗಳನ್ನು ಬೋಧಿಸುವ ಕೇಂದ್ರಗಳಾದವು. ಹೀಗೆ ಹಲವು ವಿಷಯಗಳಲ್ಲಿ ವೀರಶೈವ ಮಠಗಳು ಬೌದ್ಧವಿಹಾರಗಳಿಂದ ಸ್ಫೂರ್ತಿಯನ್ನು ಪಡೆದುದು ಸ್ಪಷ್ಟವಾಗಿ ಗೋಚರಿಸುತ್ತದೆ. ಬೌದ್ಧವಿಹಾರಗಳ ಅಧ್ಯಯನದಲ್ಲಿ ಮತ್ತೊಂದು ವಿಚಾರವು ಸ್ಫುಟವಾಗಿ ಕಾಣಬರುತ್ತದೆ. ಬೌದ್ಧಭಿಕ್ಷುಗಳಿಗೆ ಯಾವ ವಿಧವಾದ ಆಸ್ತಿಯನ್ನು ಹೊಂದಲೂ ಅವಕಾಶವಿಲ್ಲ. ಆತನಿಗೆ ಬೇಕಾದುದೆಲ್ಲವೂ ಆತನಲ್ಲಿಯೇ ಇರುತ್ತದೆ. "ಈತನಿಗೆ ಬೇಕಾದ ಆಹಾರ ಆತನ ಶರೀರದಲ್ಲಿಯೇ ಇರುತ್ತದೆ. ಆತನು ತೊಟ್ಟಿರುವ ಉಡುಪಿನಿಂದ ಆತನು ತೃಪ್ತಿ ಹೊಂದುತ್ತಾನೆ." ಆದರೆ ವ್ಯಕ್ತಿಯ ಮೇಲಿರುವ ನಿರ್ಬಂಧಗಳು ಸಂಘಕ್ಕೆ ಅನ್ವಯಿಸುವುದಿಲ್ಲ, ಸಾರ್ವಜನಿಕವಿಹಾರದ ಐಶ್ವರ್ಯದ ಮೇಲೆ ಯಾವ ಮಿತಿಯೂ ಇಲ್ಲ. ವೀರಶೈವ ಮಠಗಳ ವ್ಯವಸ್ಥೆಯಲ್ಲಿಯೂ ನಾವು ಈ ತತ್ತ್ವವನ್ನು ಕಾಣುತ್ತೇವೆ. ವೈಯಕ್ತಿಕವಾಗಿ ಮಠದ ಸ್ವಾಮಿಗೆ ಆಸ್ತಿಯ ಮೇಲೆ ಯಾವ ಹಕ್ಕೂ ಇರಲಿಲ್ಲ. ಆದರೆ ಮಠದ ಸಂಪತ್ತನ್ನು ಸಾರ್ವಜನಿಕ ಹಿತಕ್ಕಾಗಿ ಉಪಯೋಗಿಸುವ ಉದ್ದೇಶದಿಂದ ಆತನು ಮಠದ ಸಂಪತ್ತಿನ ಒಡೆಯನಾಗಿದ್ದನು. ಆತನು ಒಂದು ರೀತಿಯಲ್ಲಿ ಸಮಾಜದ ಆಸ್ತಿಯ ನ್ಯಾಸಧಾರಿ. ಬೌದ್ಧಮತವು ಜನತೆಯ ಲೌಕಿಕ ಜೀವನಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಗೃಹಜೀವನವು ಅಶುದ್ಧವೆಂಬುದಾಗಿ ಪರಿಗಣಿಸಲ್ಪಟ್ಟಿತ್ತು. ಆದುದರಿಂದ ಸ್ವಾತಂತ್ರ್ಯ ಲಭಿಸಬೇಕಾದರೆ ಒಬ್ಬ ವ್ಯಕ್ತಿಯು ತನ್ನ ಮನೆಯನ್ನು ಬಿಡಬೇಕಿತ್ತು. ಎ. ಎಸ್. ಗೆಡನ್ನರ ಪ್ರಕಾರ, ಈ ನ್ಯೂನತೆಯೇ ಇಂಡಿಯಾ ದೇಶದಲ್ಲಿ ಬೌದ್ಧಧರ್ಮವು ಕ್ಷೀಣಿಸಲು ಪ್ರಮುಖ ಕಾರಣಗಳಲ್ಲೊಂದಾಗಿತ್ತು.

ಎಂಟನೆಯ ಶತಮಾನದ ಕೊನೆಯವರೆಗೂ ಜೈನಬೌದ್ಧಸಂನ್ಯಾಸಿಗಳಲ್ಲದೆ ಕಾಲಾಮುಖರು. ಕಾಪಾಲಿಕರು, ಪಾಶುಪತರು ಮೊದಲಾದ ವಿವಿಧ ಪಂಥಗಳಿಗೆ ಸೇರಿದ ಸಂನ್ಯಾಸಿಗಳಿದ್ದರು. ಕಾಪಾಲಿಕರೂ ಪಾಶುಪತರೂ ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಕಾಲಾಮುಖರು ದೇವಸ್ಥಾನಗಳಲ್ಲಿಯೂ ಮಠಗಳಲ್ಲಿಯೂ ವಾಸಿಸುತ್ತಿದ್ದರು. ಆದರೆ ಮಠಗಳ ಅಗತ್ಯವನ್ನು ಗ್ರಹಿಸಿ, ಇಂಡಿಯಾ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಯಶಸ್ಸು ಶ್ರೀ ಶಂಕರಾಚಾರ್ಯರಿಗೆ ಹೋಗುತ್ತದೆ. ಹಿಂದೂಧರ್ಮದ ಹೆಸರಿನಲ್ಲಿ ಕಾಣಿಸಿಕೊಂಡಿದ್ದ ಕೆಟ್ಟ ಪದ್ಧತಿಗಳನ್ನು ನಿವಾರಿಸುವುದಲ್ಲದೆ ಹಿಂದೂಧರ್ಮದ ತತ್ತ್ವಗಳನ್ನು ಜನರಿಗೆ ತಿಳಿಸಲು ಅನೇಕ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು. ದ್ವಾರಕ, ಪೂರಿ, ಬದರಿ, ಶೃಂಗೇರಿ, ಹರಿದ್ವಾರ, ವೃಂದಾವನ, ಪ್ರಯಾಗ, ಕಾಶಿ ಮೊದಲಾದ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು. ಮಠದ ಮುಖ್ಯಸ್ಥನನ್ನು ಸ್ವಾಮಿ ಅಥವಾ ಮಹಂತ ಎಂದು ಕರೆಯುತ್ತಿದ್ದರು. ಜೋಗೇಂದ್ರ ಚಂದ್ರಘೋಷರು ತಿಳಿಸಿರುವಂತೆ "ಬೌದ್ಧಧರ್ಮದ ಮಾದರಿಯ ಮೇಲೆ ಮಠಗಳು ಸ್ಥಾಪಿತವಾದವು. ಇಲ್ಲಿ ವೇದಾಂತ ತತ್ತ್ವಗಳ ಅಧ್ಯಯನವು ಪ್ರಶಾಂತ ವಾತಾವರಣದಲ್ಲಿ ಜರುಗುತ್ತಿತ್ತು." ಇಂಡಿಯಾದೇಶದ ಮಧ್ಯಮ ಯುಗದಲ್ಲಿ ದೇವಸ್ಥಾನಗಳೂ ಮಠಗಳೂ ಜ್ಞಾನಪ್ರಸಾರದ ಕೇಂದ್ರಗಳಾಗಿದ್ದವು. ತಮಿಳುನಾಡಿನ ಅನೇಕ ದೇವಸ್ಥಾನಗಳು ಚೋಳ ರಾಜರಿಂದ ಪುರಸ್ಕೃತವಾಗಿದ್ದು ವಿದ್ಯಾಕೇಂದ್ರಗಳಾಗಿದ್ದವು. ವಿದ್ಯೆಯೆಲ್ಲವೂ ಬಹುತೇಕವಾಗಿ ಧಾರ್ಮಿಕ ವಿಚಾರಗಳಿಗೇ ಸೀಮಿತವಾಗಿತ್ತು. ಮಠಗಳ ಕಾರ್ಯಗಳು ಪ್ರಮುಖವಾಗಿ ಎರಡು. ಮೊದಲನೆಯದಾಗಿ, ಪರಂಪರಾಗತವಾಗಿ ಬಂದ ಹಿಂದೂಧರ್ಮದ ವಿವಿಧ ಉದ್ಗ್ರಂಥಗಳ ಅಧ್ಯಯನ. ಎರಡನೆಯದಾಗಿ ಹಿಂದೂಧರ್ಮದ ತತ್ತ್ವಗಳ ವ್ಯವಸ್ಥಿತ ಪ್ರಚಾರ. ಇವಲ್ಲದೆ ಮಠಕ್ಕೆ ಬಂದ ಅತಿಥಿಗಳನ್ನು ಸತ್ಕರಿಸುವ ಸಂಪ್ರದಾಯವೂ ಕಾಣಬರುತ್ತದೆ.

ಚಾರಿತ್ರಿಕ ದೃಷ್ಟಿಯಿಂದ ಹನ್ನೆರಡನೆಯ ಶತಮಾನದಿಂದ ವೀರಶೈವ ಮಠಗಳ ಪ್ರಾಧಾನ್ಯತೆಯು ಸ್ಪಷ್ಟವಾಗಿ

ಗೋಚರಿಸುತ್ತದೆ. ನಮ್ಮ ದೇಶದ ಮಠಗಳ ಪರಂಪರಾನುಗತವಾಗಿ ಬಂದ ಕಾರ್ಯಗಳ ನಿರ್ವಹಣೆಯಲ್ಲಿ ನವಚೇತನ ವನ್ನು ವೀರಶೈವ ಮಠಗಳ ಕಾರ್ಯಕ್ಷೇತ್ರದಲ್ಲಿ ಕಾಣುತ್ತೇವೆ. ಧರ್ಮದ ವಿಷಯದ ಅಧ್ಯಯನದಲ್ಲಿ ವಿದ್ವತ್ಪೂರ್ಣ ಗೋಷ್ಠಿಗಳು ನಡೆದು ಒಂದು ಸ್ಪಷ್ಟವಾದ ರೀತಿಯಲ್ಲಿ ಸಾಮಾನ್ಯ ಜನರಿಗೆ ತಿಳಿಯುವಂತೆ, ಸರಳರೀತಿಯಿಂದ ಜನರು ಮಾತನಾಡುವ ಭಾಷೆಯಲ್ಲಿ ತತ್ತ್ವಗಳನ್ನು ನಿರೂಪಿಸಿದ ಕೀರ್ತಿಯು ವೀರಶೈವ ಮಠಗಳಿಗೆ ಸೇರಿತು. ಬಸವಣ್ಣನವರ ಸ್ಫೂರ್ತಿಯಿಂದ ಕಲ್ಯಾಣದಲ್ಲಿ ಅನುಭವಮಂಟಪವು ಈ ಮಹತ್ಕಾರ್ಯಕ್ಕೆ ಅಂಕುರವಾಯಿತು. ಅನುಭವಮಂಟಪದಲ್ಲಿ ಧಾರ್ಮಿಕ ಚರ್ಚೆಗಳು ಮಹಾಜ್ಞಾನಿಗಳಾದ ಅಲ್ಲಮಪ್ರಭುವಿನ ನಿರ್ದೇಶನದಲ್ಲಿ ಜರುಗುತ್ತಿದ್ದವು. ಜನಸಾಮಾನ್ಯರ ಭಾಷೆಯಲ್ಲಿ ಜರುಗುತ್ತಿದ್ದ ಈ ಚರ್ಚೆಗಳು ಪಂಡಿತರಿಗೆ ಮಾತ್ರ ಸೀಮಿತವಾಗದೆ, ಜನಸಾಮಾನ್ಯರೂ ಅದನ್ನು ವೀಕ್ಷಿಸುವ ಅಪೂರ್ವ ಅವಕಾಶವಿತ್ತು. ಡಾ. ಕೆ. ಆರ್. ಶ್ರೀನಿವಾಸ ಐಯ್ಯಂಗಾರರ ಬರವಣಿಗೆಗಳಲ್ಲಿ ಈ ಅಭಿಪ್ರಾಯಕ್ಕೆ ಸೂಕ್ತ ಸಮರ್ಥನೆ ಇರುತ್ತದೆ. "ಬಸವಣ್ಣನವರು ಕಲ್ಯಾಣದಲ್ಲಿ ಅನುಭವಮಂಟಪವನ್ನು ಸ್ಥಾಪಿಸಿದರು. ಅದು ಒಂದು ಧಾರ್ಮಿಕ ಪ್ರೌಢವಿದ್ಯಾಸಂಸ್ಥೆ. ವೀರಶೈವಧರ್ಮದ ಅನುಯಾಯಿಗಳು ತಮ್ಮ ಅನುಭವವನ್ನು ತಿಳಿಸಿ, ಅದರ ವಿಚಾರ ವಾಗಿ ಚರ್ಚಿಸುವ ಧಾರ್ಮಿಕನಿರೂಪಣೆಯ ಕೇಂದ್ರವಾಯಿತು. ಈ ಪ್ರೌಢಪಾಂಡಿತ್ಯಸಂಸ್ಥೆಯ ಅಧ್ಯಕ್ಷರಾದ ಅಲ್ಲಮ ಪ್ರಭು ವೀರಶೈವ ಸಂತರಲ್ಲಿ ಆಧ್ಯಾತ್ಮಿಕ ವಿಚಾರಗಳಲ್ಲಿ ಪಾಂಡಿತ್ಯವನ್ನು ಗಳಿಸಿದ ಮಹಾತಪಸ್ವಿಯಾಗಿದ್ದರು." ಸಿದ್ಧವೀರಣಾರ್ಯರ 'ಪ್ರಭುದೇವರ ಶೂನ್ಯಸಂಪಾದನೆ' ಎಂಬ ಗ್ರಂಥದಲ್ಲಿ ಅನುಭವಮಂಟಪದಲ್ಲಿ ನಡೆಯು ತ್ತಿದ್ದ ಚರ್ಚೆಗಳು ಸ್ಫುಟವಾಗಿ ಚಿತ್ರಿತವಾಗಿವೆ. ಈ ವಿಧವಾದ ಧಾರ್ಮಿಕವಿಚಾರಗೋಷ್ಠಿಗಳು ಬಹಳ ವರುಷಗಳಿಂದಲೂ ವೀರಶೈವ ಮಠಗಳಲ್ಲಿ ನಡೆದುಬಂದಿವೆ. ಈ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಜ್ಞಾಪಿಸಿಕೊಳ್ಳಬಹುದು. ನಾವಾಗಲೇ ತಿಳಿಸಿದಂತೆ ವೀರಶೈವ ಮಠಗಳು ದೇಶಕಾಲಸಂದರ್ಭಗಳಿಗೆ ಅನುಸಾರವಾಗಿ ತಮ್ಮ ಕಾರ್ಯಕ್ಷೇತ್ರದಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಂಡಿರುತ್ತವೆ. ಈ ಪ್ರವೃತ್ತಿಯನ್ನು ಇಂದು ನಾವು ವೀರಶೈವ ಮಠಗಳ ಧಾರ್ಮಿಕ ವಿಚಾರದ ಚರ್ಚೆಗಳಲ್ಲಿ ಕಾಣಬಹುದು. ಇಂದು ಧಾರ್ಮಿಕ ಚರ್ಚೆಗಳು ಕೇವಲ ವೀರಶೈವಧರ್ಮದ ತತ್ತ್ವಗಳಿಗೆ ಸೀಮಿತವಾಗದೆ. ವಿವಿಧ ಧರ್ಮಗಳ ವಿಚಾರವಾಗಿ ವಿಚಾರಚಿಂತನೆಯನ್ನು ಕಾಣಬಹುದು. ಇಂದು ಶಿವಾನುಭವ ಸಮ್ಮೇಳನಗಳನ್ನಲ್ಲದೆ ಸರ್ವಧರ್ಮಸಮ್ಮೇಳನಗಳನ್ನೂ ನಡೆಸುವ ನೀತಿಯನ್ನು ಸಿದ್ಧಗಂಗಾ ಮತ್ತು ಸುತ್ತೂರು ಮಠಗಳ ಕಾರ್ಯಾಚರಣೆಗಳಲ್ಲಿ ಕಾಣುತ್ತಿದ್ದೇವೆ.

ಮಠಗಳಿಗೂ ವಿದ್ಯಾಪ್ರಸಾರಕ್ಕೂ ನಿಕಟವಾದ ಸಂಬಂಧವಿದೆ. ಈ ದೃಷ್ಟಿಯಿಂದಲೇ ಅಮರಸಿಂಹನು, ಮಠಗಳು ವಿದ್ಯಾರ್ಥಿಗಳ ವಾಸಸ್ಥಳವೆಂದು ವ್ಯಾಖ್ಯೆ ಮಾಡಿದನು. ವೀರಶೈವ ಮಠಗಳ ಚರಿತ್ರೆಯನ್ನು ಅವಲೋಕಿಸಿದರೆ, ವಿದ್ಯಾ ಪ್ರಸಾರಕ್ಕೂ ಮಠಗಳಿಗೂ ಇರುವ ಸಂಬಂಧವು ಸ್ಫುಟವಾಗಿ ಕಾಣುತ್ತದೆ. ವೀರಶೈವ ಮಠಗಳು ಮೊದಲು ಧರ್ಮ ಪ್ರಸಾರದಲ್ಲಿ ನಿರತವಾಗಿದ್ದವು. ಕಾಲಕ್ರಮೇಣ ಲೌಕಿಕ ವಿದ್ಯಾಭ್ಯಾಸಕ್ಕೆ ಉತ್ತೇಜನವನ್ನು ಕೊಡಲುಪಕ್ರಮಿಸಿದವು. ಬೌದ್ಧ ಮತದ ಚರಿತ್ರೆಯಿಂದ ವಿದಿತವಾದ ವಿಚಾರವು ವೀರಶೈವ ಮಠಾಧಿಪತಿಗಳಿಗೆ ಮನವರಿಕೆಯಾಗಿದ್ದಿತು. ಆದುದ ರಿಂದ ಅವರು ಲೌಕಿಕಜೀವನದ ಉತ್ಕೃಷ್ಟತೆಗೆ ಗಮನಕೊಟ್ಟರು. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ; ಎಂಬ ತತ್ತ್ವ ವನ್ನು ಮರೆಯದೆ, ಲೌಕಿಕ ಪಾರಮಾರ್ಥಿಕ ಜೀವನಗಳಿಗೆ ಸಾಮರಸ್ಯವನ್ನು ಕಲ್ಪಿಸಲು ನಿರಂತರವಾಗಿ ಶ್ರಮಿಸಿದರು. ಜನಜೀವನವು ಸಂಕೀರ್ಣವಾದಂತೆ, ಜನರ ಆಶೋತ್ತರಗಳು ಅಭಿವೃದ್ಧಿಯಾದಂತೆ ಮಠಗಳ ಕಾರ್ಯಕ್ಷೇತ್ರದ ವೈಶಾಲ್ಯವು ವಿಕಾಸಗೊಂಡಿತು.

ತಾತ್ತ್ವಿಕವಾಗಿ ಕಾಯಕಸಿದ್ಧಾಂತವು ಲೌಕಿಕ ಪಾರಮಾರ್ಥಿಕ ತತ್ತ್ವಗಳನ್ನು ಸಮ್ಮಿಳನವಾಗುವಂತೆ ಮಾಡಿ, ಲೌಕಿಕ ಜೀವನದ ಅಗತ್ಯಗಳಿಗೆ ಮನ್ನಣೆ ಕೊಟ್ಟು ಆ ಕಾರ್ಯಗಳಲ್ಲಿ ನಿರತರಾಗುವುದು ಧಾರ್ಮಿಕಜೀವನದ ಮುಖ್ಯ ಅಂಶ ವೆಂದು ತಿಳಿಯಪಡಿಸಿದರು. ಇದರಿಂದಲೇ ವೀರಶೈವಧರ್ಮದಲ್ಲಿ ಸರ್ವವಿಧವಾದ ಕಾರ್ಯಗಳಿಗೂ ಮನ್ನಣೆ ದೊರೆತಿದೆ. ದುಡಿಮೆಯ ಗೌರವ (Dignity of Labour) ಸಿದ್ಧಾಂತಕ್ಕೆ ಧಾರ್ಮಿಕ ಹಿನ್ನೆಲೆಯನ್ನು ಕೊಟ್ಟ ಕೀರ್ತಿಯು ವೀರಶೈವಧರ್ಮಕ್ಕೆ ಸೇರುತ್ತದೆ. ಕೆಲಸಗಳೆಲ್ಲವೂ ದೈವಿಕವಾದುವೆಂಬುದೇ ಕಾಯಕತತ್ತ್ವದ ತಿರುಳು. ಮಠಗಳು ಸಮಾಜದ ಹಿತಕ್ಕೆ ಅಗತ್ಯವಾದ ವಿವಿಧ ಬಗೆಯ ವಿದ್ಯಾಕೇಂದ್ರಗಳಾದವು. ಪ್ರತಿಯೊಬ್ಬ ವ್ಯಕ್ತಿಗೂ ಬೇಕಾಗುವ, ಓದುವುದು ಬರೆಯುವುದನ್ನು ಕಲಿಸುವುದಲ್ಲದೆ, ಯಾವುದಾದರೂ ಒಂದು ವೃತ್ತಿಯನ್ನು ಕಲಿಸಲು ಮಠಗಳು ಸಹಾಯ ಮಾಡುತ್ತಿದ್ದವು. ಎಲ್ಲ ವೃತ್ತಿಗಳಿಗೂ ಗೌರವಸ್ಥಾನವಿದ್ದಿತು, ಮಠಗಳಲ್ಲಿ ಹೇಳಿಕೊಡುತ್ತಿದ್ದ ಕೆಲವು ಮುಖ್ಯ ವೃತ್ತಿಗಳನ್ನು ಗಮನಿಸಿದರೆ ಈ ವಿಚಾರವು ಸ್ಪಷ್ಟಪಡುತ್ತದೆ. ಮಠಗಳಲ್ಲಿ ಹೇಳಿಕೊಡುತ್ತಿದ್ದ ಕೆಲವು

ಮುಖ್ಯ ವೃತ್ತಿಗಳು ಹೀಗಿವೆ: ನೂಲು ತೆಗೆಯುವುದು, ಬಟ್ಟೆಯನ್ನು ನೇಯುವುದು, ವ್ಯವಸಾಯ, ಮರಗೆಲಸ, ಮಡಕೆ ಕುಡಿಕೆಗಳನ್ನು ತಯಾರಿಸುವುದು, ಬಣ್ಣಹಾಕುವುದು, ಕಾಗದವನ್ನು ತಯಾರಿಸುವುದು, ಬಟ್ಟೆಯನ್ನು ಹೊಲೆಯುವುದು, ಬುಟ್ಟಿಗಳನ್ನು ಹೆಣೆಯುವುದು, ಚರ್ಮವನ್ನು ಹದಗೊಳಿಸುವುದು, ಪಾದರಕ್ಷೆಗಳ ತಯಾರಿಕೆ.

ವಿದ್ಯಾಪ್ರಸಾರದ ದೃಷ್ಟಿಯಿಂದ ಮಠಗಳನ್ನು ಮೂರು ಭಾಗಗಳಾಗಿ ವಿಂಗಡಿಸಿರುವುದು ಕಾಣುತ್ತದೆ ಎಂಬುದಾಗಿ ಡಾ. ಗದ್ದಿಗೆಮಠ್‌ರವರು ತಿಳಿಸುತ್ತಾರೆ. ಇವುಗಳು ವಿರಕ್ತಮಠಗಳು, ಓದಿಸುವ ಮಠಗಳು ಮತ್ತು ಸಾಲಿಮಠಗಳು. ವಿರಕ್ತಮಠಗಳು ಅನುಭವಮಂಟಪದ ಪಾರಂಪರ್ಯದಲ್ಲಿ, ವೀರಶೈವಧರ್ಮದ ತಾತ್ತ್ವಿಕವಿಚಾರಗಳನ್ನು ಜನರಿಗೆ ತಿಳಿಯಪಡಿಸುತ್ತಿದ್ದವು. ಈ ಮಠಗಳು ಹಲವು ಸಾರಿ ವಿದ್ವಾಂಸರ ವಿಚಾರಗೋಷ್ಠಿಗಳಾಗುತ್ತಿದ್ದವು. ಓದಿಸುವ ಮಠಗಳು ಅವುಗಳ ಹೆಸರೇ ಸೂಚಿಸುವಂತೆ, ಓದುವುದು ಬರೆಯುವುದು ಮೊದಲಾದುವುಗಳನ್ನು ಬೋಧಿಸುವ ಶಾಲೆಗಳಾಗಿದ್ದವು. ಸಾಲಿಮಠಗಳು ವೃತ್ತಿಶಿಕ್ಷಣ ಶಾಲೆಗಳಾಗಿದ್ದವು. ಓದಿಸುವ ಮಠಗಳು ಕಾಲಕ್ರಮೇಣ ಸಂಸ್ಕೃತ ಪಾಠಶಾಲೆಗಳಾದವು. ವೀರಶೈವ ದಾರ್ಶನಿಕರು ಸಂಸ್ಕೃತದ ಹಿರಿಮೆಯನ್ನು ಅರಿತು, ಅದರ ಅಧ್ಯಯನವನ್ನು ಕಾರ್ಯರೂಪಕ್ಕೆ ತಂದರು. ಇದರ ಫಲಿತಾಂಶವಾಗಿ ಅನೇಕ ಓದಿಸುವ ಮಠಗಳು ಕಾಲಕ್ರಮೇಣ ಸಂಸ್ಕೃತದ ಪಾಠಶಾಲೆಗಳಾಗಿ ಪರಿವರ್ತನೆಗೊಂಡವು. ೧೯ನೆಯ ಶತಮಾನದ ಅಂತ್ಯಭಾಗದಲ್ಲಿ ಮತ್ತು ೨೦ನೆಯ ಶತಮಾನದ ಆದಿಯಲ್ಲಿ ಹಲವು ಓದಿಸುವ ಮಠಗಳು ಸಂಸ್ಕೃತ ಪಾಠಶಾಲೆಗಳಾದ ವಿಚಾರವು ತಿಳಿದುಬರುತ್ತದೆ. ಹುಬ್ಬಳ್ಳಿ, ಜಮಖಂಡಿ, ಅಬ್ಬಿಗೇರಿ, ಸಿದ್ಧಗಂಗಾ ಮತ್ತು ಸುತ್ತೂರು ಇವುಗಳಲ್ಲಿರುವ ಮಠಗಳು ಸಂಸ್ಕೃತ ಪಾಠಶಾಲೆಗಳನ್ನು ಹೊಂದಿರುವುದು ಗಮನಾರ್ಹವಾದ ವಿಚಾರ. ಇದರಿಂದ ಮಠಗಳು ಕನ್ನಡ ಅಭ್ಯಾಸವನ್ನು ಅಲಕ್ಷಿಸಿವೆಯೆಂದಲ್ಲ: ಕನ್ನಡವನ್ನು ಕಲಿಯಲು ಸರ್ಕಾರವೇ ಅನೇಕ ಶಾಲೆಗಳನ್ನು ಪ್ರಾರಂಭಿಸಿದ್ದರಿಂದ ಮಠಗಳು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನಕೊಡಲುಪಕ್ರಮಿಸಿದವು.

ಇಂದಿಗೂ ಸಹ ಕೆಲವು ಮಠಗಳಲ್ಲಿ ವೃತ್ತಿಶಿಕ್ಷಣವನ್ನು ಕೊಡುತ್ತಿರುವ ಕುರುಹುಗಳು ಕಾಣಬರುತ್ತವೆ. ಅನೇಕ ಮಠಗಳಲ್ಲಿ ಕೈಮಗ್ಗದ ಉಪಕರಣಗಳು ಕಾಣಬರುತ್ತವೆ.

ವೀರಶೈವ ಮಠಗಳಲ್ಲಿ ನೂರೊಂದು ಕಾಯಕಗಳು ಬೋಧಿಸಲ್ಪಡುತ್ತಿದ್ದವೆಂಬ ಸಂಪ್ರದಾಯವಿದೆ. ವ್ಯವಸಾಯಕ್ಕೆ ಸಂಬಂಧಿಸಿದಂತೆ ಹಲವಾರು ವೃತ್ತಿಗಳ ಶಿಕ್ಷಣವು ವೀರಶೈವ ಮಠಗಳಲ್ಲಿ ದೊರಕುತ್ತಿತ್ತು. "ಕೃಷಿಜ್ಞಾನ ಪ್ರದೀಪಿಕೆ" ಎಂಬ ತಾಳೆಗರಿಯ ಗ್ರಂಥವು ಈ ವಿಚಾರವನ್ನು ಸಮರ್ಥಿಸುತ್ತದೆ. ಸಾಲಿಮಠಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿದ್ದುದು ತಿಳಿದುಬರುತ್ತದೆ.

ಆಧುನಿಕ ಜೀವನದ ಅಗತ್ಯಗಳಿಗೆ ಅನುಸಾರವಾಗಿ, ಜೀವನದ ಮಟ್ಟವು ಹೆಚ್ಚಿದಂತೆ, ಜನರ ಬೇಡಿಕೆಗಳ ಸಂಖ್ಯೆ ಮತ್ತು ವೈವಿಧ್ಯಗಳು ಬೆಳೆಯುತ್ತಾಬಂದವು. ವಿಶ್ವವಿದ್ಯಾನಿಲಯದ ಶಿಕ್ಷಣ ಮತ್ತು ತಾಂತ್ರಿಕ ಪ್ರೌಢಶಿಕ್ಷಣಗಳು ಇಂದಿನ ಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ಪ್ರವೃತ್ತಿಯನ್ನು ಅರಿತು, ವೀರಶೈವ ಮಠಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಬಂದಿವೆ. ಪ್ರೌಢಶಾಲೆಗಳು, ಕಾಲೇಜುಗಳು, ತಾಂತ್ರಿಕ ವಿದ್ಯಾಭ್ಯಾಸ ಸಂಸ್ಥೆಗಳು, ಎಂಜಿನಿಯರಿಂಗ್ ಕಾಲೇಜುಗಳು, ಸ್ತ್ರೀಶಿಕ್ಷಣ ಸಂಸ್ಥೆಗಳು, ಇವೇ ಮೊದಲಾದ ವಿವಿಧ ರೀತಿಯ ವಿದ್ಯಾಸಂಸ್ಥೆಗಳು ಮಠಗಳ ಉತ್ತೇಜನ ಮತ್ತು ಸಹಾಯಗಳಿಂದ ಸ್ಥಾಪಿತವಾಗಿವೆ. ಸುತ್ತೂರು ಮಠ ಮತ್ತು ಸಿದ್ಧಗಂಗಾಮಠಗಳು ಈ ವಿಚಾರಕ್ಕೆ ಉತ್ತಮ ನಿದರ್ಶನಗಳು. ಆಧುನಿಕತೆಯನ್ನು ವೀರಶೈವ ಮಠಗಳು ಹಳಿದಿಲ್ಲ. ಪಾರಂಪರ್ಯಕ್ಕೇ ಮೊಂಡುತನದಿಂದ ಅಂಟಿಕೊಂಡಿಲ್ಲ. ಆಧುನೀಕರಣದ ವೈಶಿಷ್ಟ್ಯಗಳನ್ನು ಗ್ರಹಿಸಿ, ಸಮಾಜದ ವಿವಿಧ ಸಂಸ್ಥೆಗಳ ಅನುಕೂಲತೆಗಳನ್ನು ಪರಿಗಣಿಸಿ, ಬದಲಾವಣೆಗಳನ್ನು ಆಹ್ವಾನಿಸಿವೆ.

ವೀರಶೈವಧರ್ಮವು ಲೌಕಿಕ ಮತ್ತು ಪಾರಮಾರ್ಥಿಕ ಜೀವನಗಳಿಗೆ ಪ್ರತ್ಯೇಕತೆಯನ್ನು ಪ್ರತಿಪಾದಿಸುವುದಿಲ್ಲ. ಅವುಗಳ ಸಾಮರಸ್ಯವನ್ನು ಒತ್ತಿಹೇಳುತ್ತದೆ. ಆದುದರಿಂದ ಮಠಗಳು ಭಕ್ತರ ಲೌಕಿಕಜೀವನದ ಮೇಲೆ ಒಂದು ರೀತಿಯ ಸಾಮಾಜಿಕ ನಿಯಂತ್ರಣವನ್ನು ಇಟ್ಟುಕೊಂಡಿವೆ. ಕಾಯಕದ ಸ್ವಾಮಿಗಳ ಕಾರ್ಯವು ಈ ವಿಧವಾದ ಅನೌಪಚಾರಿಕ ಸಾಮಾಜಿಕ ನಿಯಂತ್ರಣವನ್ನು ಸ್ಥಾಪಿಸಲು ಸಹಾಯಕವಾಗಿತ್ತು. ಘಂಟೆಕಾಯಕದ ಸ್ವಾಮಿ, ಮುಳ್ಳಾವಿಗೆ ಕಾಯಕದ ಸ್ವಾಮಿ, ಗದ್ದಿಗೆಕಾಯಕದ ಸ್ವಾಮಿ ಮೊದಲಾದವರು ಸತ್ಯಾಗ್ರಹದ ತತ್ತ್ವದ ರೀತಿಯಲ್ಲಿ ಸ್ವಯಂಕ್ಲೇಶವನ್ನು (ಕಷ್ಟವನ್ನು) ತಂದುಕೊಂಡು ತಪ್ಪುಮಾಡಿದವರ ಹೃದಯವನ್ನು ಪರಿವರ್ತಿಸಿ, ಅವರನ್ನು ಸರಿ

ಯಾದ ದಾರಿಯಲ್ಲಿ ಹೋಗುವಂತೆ ಮಾಡುತ್ತಿದ್ದರು. ಗಾಂಧೀಜಿಯವರ ನೇತೃತ್ವದಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಟ್ಟ 'ಸತ್ಯಾಗ್ರಹ' ತತ್ತ್ವವು ೧೨ ಮತ್ತು ೧೩ನೇ ಶತಮಾನದಲ್ಲಿ ವೀರಶೈವ ಮಠಾಧಿಪತಿಗಳು ಉಪಯೋಗಿಸುತ್ತಿದ್ದ ಸಾಮಾನ್ಯ ಸಾಧನವಾಗಿತ್ತು. ಹೃದಯಪರಿವರ್ತನೆಯೇ ಅದರ ಗುರಿ. ಶತ್ರುತ್ವಭಾವನೆಗೆ ಎಡೆ ಇಲ್ಲ. ತಪ್ಪನ್ನು ತಿದ್ದಿಕೊಂಡನಂತರ ಅಲ್ಲಿ ಉಳಿಯುವುದು ಕೃತಜ್ಞತೆ, ಸ್ನೇಹ, ಸೌಹಾರ್ದತೆ. ಎಲ್ಲರೂ ಕೂಡಿ ಊಟಮಾಡುವುದು ಈ ಸಂಬಂಧದ ಚಿಹ್ನೆ. ಹೀಗೆ ವೀರಶೈವ ಮಠಗಳು ಭಕ್ತರ ಸಾಮಾಜಿಕ ಜೀವನದ ಮೇಲೆ ಪರಿಣಾಮಕಾರಿಯಾದ ನಿಯಂತ್ರಣವನ್ನಿಟ್ಟುಕೊಂಡಿದ್ದುದು ಸ್ಪಷ್ಟವಾಗಿ ಗೋಚರಿಸುತ್ತದೆ. ಜನರ ಲೋಪದೋಷಗಳನ್ನು ತಿದ್ದುವುದು ಮಾತ್ರವಲ್ಲದೆ, ಜನರಿಗೆ ತೊಂದರೆಯೊದಗಿದಾಗ, ಧನಸಹಾಯ ಮಾಡುತ್ತಿದ್ದುದು ಕಾಣಬರುತ್ತದೆ. ಬರಗಾಲ ಬಂದಾಗ, ಮಳೆ ಇಲ್ಲದೆ ಬೆಳೆ ನಷ್ಟವಾದಾಗ ಮಠದ ಕಣಜದಿಂದ ಧಾನ್ಯವನ್ನು ಭಕ್ತರಿಗೆ ಕೊಡುತ್ತಿದ್ದುದಕ್ಕೆ ಇಂದಿಗೂ ಅನೇಕ ನಿದರ್ಶನಗಳಿವೆ. ಈ ಸಹಾಯವು ಕೇವಲ ವೀರಶೈವಧರ್ಮದ ಅನುಯಾಯಿಗಳಿಗೆ ಮಾತ್ರ ಸೀಮಿತವಾದುದಾಗಿರಲಿಲ್ಲ. ಇದಲ್ಲದೆ ಜನರಲ್ಲಿ ಪರಸ್ಪರ ವಿರಸ ಉಂಟಾದಾಗ ಅದನ್ನು ಸರಿಪಡಿಸಲು ಉಭಯ ಗುಂಪಿನವರೂ ಮಠಾಧ್ಯಕ್ಷರಲ್ಲಿಗೆ ಹೋಗುತ್ತಿದ್ದುದು ಗ್ರಾಮೀಣ ಪ್ರದೇಶದಲ್ಲಿ ಸರ್ವವಿದಿತವಾದ ವಿಚಾರ. ಕರ್ನಾಟಕದ ಯಾವ ಭಾಗವನ್ನು ಅವಲೋಕಿಸಿದರೂ, ಅಲ್ಲಿರುವಷ್ಟು ವೀರಶೈವಮಠಗಳು ಇನ್ನೆಲ್ಲಿಯೂ ಉಳಿದ ಯಾವ ಧರ್ಮಗಳಲ್ಲಿಯೂ ಕಾಣಲಾರೆವು. ಮಠಗಳಿರುವ ಊರುಗಳಲ್ಲಿ ಕೇವಲ ವೀರಶೈವರಲ್ಲದೆ, ಉಳಿದ ಧರ್ಮಗಳ ಅನುಯಾಯಿಗಳೂ ಮಠಾಧಿಪತಿಗಳ ಸಹಾಯವನ್ನು ಪಡೆಯುತ್ತಾರೆ. ವೀರಶೈವರು ಮಾತ್ರವಲ್ಲದೆ ಉಳಿದ ಕೋಮಿನವರೂ ಸಹ ತಮ್ಮ ವ್ಯವಹಾರಗಳಲ್ಲಿ ಉಂಟಾಗುವ ವೈಮನಸ್ಸಿನ ಪರಿಹಾರಕ್ಕೆ ವೀರಶೈವ ಮಠಾಧಿಪತಿಗಳ ಹತ್ತಿರ ಹೋಗುತ್ತಿರುತ್ತಾರೆ. ಚಿತ್ರದುರ್ಗದ ಮುರುಘಾಮಠ, ಸಿದ್ದಗಂಗಾಮಠ ಮತ್ತು ಸುತ್ತೂರು ಮಠಗಳಲ್ಲಿ ಇಂದಿಗೂ ವಿವಿಧ ಕೋಮಿನವರ ವ್ಯವಹಾರಗಳನ್ನು ತೀರ್ಮಾನಿಸುವ ಪದ್ಧತಿಯು ಕಾಣಬರುತ್ತದೆ. ಈ ವ್ಯವಹಾರಸಂಖ್ಯೆಗಳನ್ನು ಪರಿಗಣಿಸಿದರೆ, ವೀರಶೈವರ ವ್ಯವಹಾರಗಳು ಕಡಿಮೆ. ಇದರಿಂದ ಒಂದು ವಿಚಾರವು ಸ್ಪಷ್ಟವಾಗುತ್ತದೆ. ಸ್ವಾರ್ಥಚಿಂತನೆ ಇಲ್ಲದೆ ನಿಷ್ಪಕ್ಷಪಾತ ಮನೋವೃತ್ತಿಯನ್ನುಳ್ಳ ಸರ್ವರ ಹಿತಚಿಂತನಮಾಡುವ ನಿರ್ಲಿಪ್ತಮನೋಭಾವದ ವ್ಯಕ್ತಿಯನ್ನು ಎಲ್ಲರೂ ಗೌರವಿಸುತ್ತಾರೆ. ಆದುದರಿಂದಲೇ ಮಠಗಳಿಗೆ ಸ್ವಾಮಿಗಳನ್ನು ನೇಮಿಸುವಾಗ ಆದಷ್ಟು ಎಚ್ಚರಿಕೆಯನ್ನು ವಹಿಸಿ ಜ್ಞಾನಿಗಳಾದವರನ್ನು ನೇಮಿಸಲಾಗುತ್ತಿತ್ತು. ಮಠಾಧ್ಯಕ್ಷನ ನಿರ್ಮಲ ವ್ಯಕ್ತಿತ್ವವೇ, ಇಂದಿನವರೆಗೂ ಸರ್ವತೋಮುಖವಾಗಿ ಬೆಳೆದು ಬಂದಿರುವ ಮಠಗಳ ಯಶಸ್ವೀಕಾರ್ಯನಿರ್ವಹಣೆಗೆ ಸಾಕ್ಷಿ.

ಒಟ್ಟಿನಲ್ಲಿ ಹೇಳುವುದಾದರೆ, ವೀರಶೈವಧರ್ಮದಲ್ಲಿ ಮಠಗಳ ವ್ಯವಸ್ಥೆಯು ಮಹತ್ವಪೂರ್ಣವಾದುದು. ಜನಜೀವನದ ಸಮಸ್ತಭಾಗಗಳ ಮೇಲೂ ವಿವಿಧ ರೀತಿಯಲ್ಲಿ ಮಠಗಳು ತಮ್ಮ ಪ್ರಭಾವವನ್ನು ಬೀರುತ್ತಾ ಬಂದಿವೆ. ಕಾಲದೇಶಗಳು ಬದಲಾಯಿಸಿದಂತೆ, ಮಠಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾ ಬಂದು, ಜನರ ಔನ್ನತ್ಯದ ಕಡೆಗೆ ದೃಷ್ಟಿಯಿಟ್ಟು ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿವೆ. ಆದುದರಿಂದಲೇ ಇಂದೂ ಸಹ ಅವು ಜನಜೀವನದ ಮೇಲೆ ಉನ್ನತ ನೈತಿಕ ಪ್ರಭಾವವನ್ನು ಹೊಂದಿವೆ.

## ಆಧಾರಗ್ರಂಥಗಳು


1. S. S. Basavanal and K. R. Srinivasa Iyangar : *The Musings of Basava*
2. Ghuerye G. S. : *Indian Sadhus.*
3. E. O. James : *The Nature and Function of Priesthood.*
4. Jogendra Chandra Ghosh : *The Law of Hindu Endowments and Religious Institutions.*
5. Louis Renow : *Religions of Ancient India.*
6. J. C. Oman : *The Mystics, Ascetics and Saints of India.*
7. James Hasthings (Ed.) : *Encyclopaedia of Religion and Ethics,* Vol. III and Vol. VII.
8. Durga Bhagavat : *Origin of Indian Monasticism.*
9. Dr. B. C. Gaddigemath : "The Kayaka system of Education" in the Book '*Studies in Education and Culture*'.

# ವಿದ್ಯಾಕ್ಷೇತ್ರಕ್ಕೆ ವೀರಶೈವ ಮಠಗಳ ಕೊಡುಗೆ

ಡಾ. ಜಿ. ಶಿವರುದ್ರಪ್ಪ

ಪ್ರಪಂಚದ ಯಾವುದೇ ಭಾಗದಲ್ಲಿಯಾಗಲಿ ವಿದ್ಯಾಕ್ಷೇತ್ರದ ಅಭಿವೃದ್ಧಿಯ ಚರಿತ್ರೆಯು ಮೂಲತಃ ವಿವಿಧ ಧಾರ್ಮಿಕ ಶಕ್ತಿಗಳ ಹಾಗೂ ಲೌಕಿಕಶಕ್ತಿಗಳ ನಡುವಿನ ಹೋರಾಟವಾಗಿದೆ. ಪ್ರಾಚೀನ ಗ್ರೀಸ್ ಮತ್ತು ರೋಮ್‌ಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆಗೂ ಪುರಾತನ ಹಾಗೂ ಮಧ್ಯಯುಗಗಳಲ್ಲಿ ಶಿಕ್ಷಣವು ಮೂಲತಃ ಧರ್ಮಗುರುಗಳಿಗೆ ಸಂಬಂಧಿಸಿದ ವಿಷಯವಾಗಿತ್ತು. ಯುರೋಪಿನಲ್ಲಿ ಉದ್ಭವಿಸಿದ ನವೋದಯ ಹಾಗೂ ತಿದ್ದುಪಾಡಿನ ಕಾಲದಿಂದಲೂ, ಫ್ರೆಂಚ್ ಕ್ರಾಂತಿಯ ಫಲವಾಗಿ ರೂಪುಗೊಂಡ ಪ್ರಜಾಸತ್ತಾತ್ಮಕ ಶಕ್ತಿಗಳ ಅಭಿವೃದ್ಧಿಯ ಪರಿಣಾಮವಾಗಿಯೂ ಶಿಕ್ಷಣದ ಮೇಲಿನ ಧಾರ್ಮಿಕ ನಿಯಂತ್ರಣವು ಸಡಿಲಗೊಳ್ಳುತ್ತಹೋಯಿತು. ಜಿಜ್ಞಾಸುಬುದ್ಧಿ, ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನಗಳ ಬೆಳವಣಿಗೆಯೇ ಇದಕ್ಕೆ ಕಾರಣ. ಶಿಕ್ಷಣದ ಮೇಲೆ ಸರಕಾರದ ನಿಯಂತ್ರಣ ಹೆಚ್ಚುತ್ತ ಶಿಕ್ಷಣವು ಲೌಕಿಕ ಸ್ವರೂಪವನ್ನು ತಾಳುತ್ತ ನಡೆಯಿತು. ಈ ಸಂಘರ್ಷವು ಇನ್ನೂ ಕೊನೆಗೊಂಡಿರದಿದ್ದರೂ ವಿದ್ಯಾಕ್ಷೇತ್ರದಲ್ಲಿಯ ಧಾರ್ಮಿಕ ಪ್ರಾಬಲ್ಯವು ಮಾಯವಾಗಿದೆ. ಇದೆಲ್ಲವನ್ನೂ ನೋಡಿದಾಗ ಉನ್ನತ ವಿಚಾರಗಳು ಪವಾಡಗಳಿಂದ ಧರ್ಮದ ಮೂಲಕ ವಿಜ್ಞಾನಕ್ಕೆ ಹರಿದುಬಂದಿವೆ—"The movement of higher thought has been from magic through religion to Science"—ಎಂಬ ಫ್ರೆಝರರ ಪ್ರಸಿದ್ಧ ಹೇಳಿಕೆಯ ಸತ್ಯಾಂಶವು ಮನದಟ್ಟಾಗುತ್ತದೆ. ಭಾರತದಲ್ಲಿಯ ವಿದ್ಯಾಕ್ಷೇತ್ರದ ಚರಿತ್ರೆಯೂ ಈ ಸಾರ್ವತ್ರಿಕ ಒಲವಿಗೆ ಹೊರತಾಗಿಲ್ಲ.

ಭಾರತೀಯ ಸಂಸ್ಕೃತಿಯ ಮೂಲವು ಪುರಾತನ ಕಾಲದಲ್ಲಿ ವಿಶಿಷ್ಟವಾಗಿತ್ತು. ಮಾನವನ ಎಲ್ಲ ಚಟುವಟಿಕೆಗಳೂ ಧರ್ಮದ ನಿರ್ದೇಶನದಲ್ಲಿ ನಡೆಯುತ್ತಿದ್ದವು. ರಾಜನೀತಿಯೂ ಸಹ ಧರ್ಮಕ್ಕೆ ಅಡಿಯಾಳಾಗಿತ್ತು. ಧರ್ಮವನ್ನು ಮೀರಿ ಶಿಕ್ಷಣವೆಂಬುದೇ ಇರಲಿಲ್ಲ. ಆಧ್ಯಾತ್ಮಿಕ ಹಾಗೂ ನೈತಿಕ ಶಿಕ್ಷಣವು ಮಾತ್ರ ನಿಜವಾದ ಶಿಕ್ಷಣವೆಂದು ಪರಿಗಣಿಸಲ್ಪಟ್ಟು ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಗುರುಗಳಿಗೆ ಸೇರಿದ ವಿಷಯವಾಗಿತ್ತು. ಹಿಂದೂ ಸಂಸ್ಕೃತಿಯು ಪುರಾತನ ಕಾಲದಿಂದಲೂ ಅನೇಕ ಧರ್ಮ-ಸಂಸ್ಕೃತಿಗಳನ್ನು ತನ್ನಲ್ಲಿ ಸಮಾವೇಶಗೊಳಿಸಿಕೊಳ್ಳುತ್ತಬಂದಿದೆ. ಗ್ರೀಕರು, ಪಾರ್ಥಿಯಾನರು, ಶಕರು, ಕುಶಾನರು, ಹೂಣರಂಥ ವಿದೇಶಿ ಆಕ್ರಮಣಕಾರರು ಸಹ ಬರಬರುತ್ತ ವಿಶಾಲವಾದ ಹಿಂದೂ ಸಮಾಜದಲ್ಲಿ ವಿಲೀನಗೊಂಡರು. ಇದನ್ನೇ ಇತಿಹಾಸಕಾರರಾದ ಆರ್. ಸಿ. ಮಜುಮದಾರರು ಬೇರೆ ಬೇರೆ ಸಂಸ್ಕೃತಿ-ಧರ್ಮಗಳನ್ನು ಸಮಾವೇಶಗೊಳಿಸಿಕೊಂಡು ಅರಗಿಸಿಕೊಳ್ಳುವ ಶಕ್ತಿಯು ಭಾರತೀಯ ಆರ್ಯಸಂಸ್ಕೃತಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ ಎಂದು ಹೇಳಿದ್ದಾರೆ. ಪ್ರಾಚೀನ ಹಿಂದೂ ಸಮಾಜದ ಉದಾರತೆಗೆ ಇದು ನಿದರ್ಶನ. ಆದರೆ ಮಧ್ಯಯುಗದ ಕಾಲಕ್ಕೆ, ಕಾಣಿಸಿಕೊಂಡ ಸಂಕುಚಿತ ಮನೋವೃತ್ತಿಯು ಹಿಂದೂ ಸಮಾಜಕ್ಕೆ ವಿಘಾತಕವಾಗಿ ಪರಿಣಮಿಸಿತು. ಇದಕ್ಕೆ ಹಿಂದೂ ಸಮಾಜದ ವರ್ಣಭೇದ ನೀತಿಯೇ ಬಹುಮಟ್ಟಿಗೆ ಕಾರಣವೆನ್ನಬಹುದು. ನಿಮ್ನವರ್ಗಗಳ ಜನರಿಗೂ ಯಾವುದೇ ವರ್ಗದ ಸ್ತ್ರೀಯರಿಗೂ ಧಾರ್ಮಿಕ ವಿಧಿಗಳಲ್ಲಿ ಪಾಲುಗೊಳ್ಳುವ ಅಧಿಕಾರವಿರಲಿಲ್ಲ. ಹಿಂದೂ ಸಮಾಜದ ನಾಲ್ಕು ವರ್ಣಗಳಲ್ಲಿ ಒಂದಾದ ಬ್ರಾಹ್ಮಣ ವರ್ಗದವರು ತಮ್ಮ ಆಧ್ಯಾತ್ಮಿಕ ಜ್ಞಾನ ಹಾಗೂ ಬೌದ್ಧಿಕ ಬಲದಿಂದ ಶಿಕ್ಷಣವು ಜನಸಾಮಾನ್ಯರ ಸೊತ್ತಾಗಲು ಬಿಡಲಿಲ್ಲ. ಧಾರ್ಮಿಕ ಅನುಷ್ಠಾನಗಳು ಬಾಹ್ಯಾಡಂಬರದ ರೂಪವನ್ನು ತಳೆದವು.

ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲಿ ಕ್ರಿ.ಪೂ. ೬ನೆಯ ಶತಮಾನವನ್ನು ಒಂದು ಮಹತ್ವಪೂರ್ಣ ಮೈಲುಗಲ್ಲೆಂದು ಪರಿಗಣಿಸಬಹುದು.[1] ಉಪನಿಷತ್ತುಗಳು ಚಿಂತನಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಿದ್ದರಿಂದ ಸನಾತನ ವೈದಿಕ

---

[1] R. C. Majumdar: *Ancient India*, 1960, p. 160.

ಧರ್ಮವು ಒಂದು ಸಜೀವಶಕ್ತಿಯಾಗಿ ಉಳಿಯಲಿಲ್ಲ. ಆಗ ಅಸ್ತಿತ್ವದಲ್ಲಿದ್ದ ಧಾರ್ಮಿಕಸ್ಥಿತಿಯಿಂದ ಅತೃಪ್ತಿಗೊಂಡು ಜೀವನದ ದುಃಖ–ವಿಷಮತೆಗಳನ್ನು ಕುರಿತು ಚಿಂತನೆಮಾಡಿ ಅವುಗಳನ್ನು ನಿವಾರಿಸಲು ಬಿಡುಗಡೆಯ ಹೊಸ ಮಾರ್ಗಗಳನ್ನು ಹುಡುಕುವ ತೀವ್ರ ಲವಲವಿಕೆಯೂ ಚಿರಂತನ ಸತ್ಯಶೋಧನೆಯ ಪ್ರಾಮಾಣಿಕ ಪ್ರಯತ್ನಗಳೂ ಕಾಣಿಸಿಕೊಂಡವು. ಹೊಸ ವಿಚಾರ, ಆಧ್ಯಾತ್ಮಿಕ ತತ್ತ್ವಗಳ ಹೊಸ ಕ್ಷೇತ್ರಗಳು ಉದಿಸಿಬಂದು ಹಲವಾರು ಧಾರ್ಮಿಕ ಪಂಗಡಗಳು ಸ್ಥಾಪಿತವಾದವು. ಈ ಅವಧಿಯಲ್ಲಿ ರೂಪುಗೊಂಡ ಧಾರ್ಮಿಕ ಪಂಗಡಗಳಲ್ಲಿ ಬೌದ್ಧ ಹಾಗೂ ಜೈನಧರ್ಮಗಳು ಮಹತ್ವದವು. ಈ ಎರಡು ಧಾರ್ಮಿಕ ಕ್ರಾಂತಿಗಳನ್ನು ಬಿ. ಎನ್. ದಾಸಗುಪ್ತ ಹೀಗೆ ವರ್ಣಿಸುತ್ತಾರೆ— 'ವೈದಿಕ ವರ್ಣಾಶ್ರಮಧರ್ಮದಲ್ಲಿ ಹುದುಗಿದ ದಾಸ್ಯದ ಬಂಧನದಿಂದ ಜನತೆಯನ್ನು ಮುಕ್ತಗೊಳಿಸಲು ಬೌದ್ಧ ಹಾಗೂ ಜೈನಧರ್ಮಗಳು ಪ್ರಬಲಶಕ್ತಿಗಳಾಗಿ ಒಡಮೂಡಿದ್ದು ಅಚ್ಚರಿಯಲ್ಲ.' ಬುದ್ಧನು ಜನಸಾಮಾನ್ಯರಿಗಾಗಿ ಬಾಹ್ಯ ವಿಧಾನಗಳ ಪರೆಯನ್ನು ಹರಿದೊಗೆದು ಮನುಷ್ಯನ ಅಂತರಂಗದ ಸದ್ಗುಣಗಳನ್ನು ಅರಳಿಸುವಂಥ ಜೀವನದ ನಿಜವಾದ ಸಾರವನ್ನೊಳಗೊಂಡ ಒಂದು ಧರ್ಮವನ್ನು ರೂಪಿಸಿದ. ಈ ಹೊಸ ಧರ್ಮವು ಅನೇಕ ಶತಮಾನಗಳವರೆಗೆ ಒಂದು ಪ್ರಬಲಶಕ್ತಿಯಾಗಿ ನಡೆದುಕೊಂಡು ಬಂದಿತು. ಕರ್ನಾಟಕದ ಹಲವು ಭಾಗಗಳಲ್ಲಿ ಬೌದ್ಧಧರ್ಮವು ಪಸರಿಸಿತು. ಜೈನಧರ್ಮಕ್ಕೆ ಕರ್ನಾಟಕದಲ್ಲಿ ಹೆಚ್ಚಿನ ಅನುಕೂಲತೆ ದೊರೆಯಿತು.

ಕ್ರಿ.ಶ. ೭ನೇ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರು ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸಿದರು. ದೇಶದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ ಧರ್ಮಪ್ರಸಾರಕಾರ್ಯವನ್ನು ಪ್ರಚುರಗೊಳಿಸಿದರು. ಕಾಲಗತಿಸಿದಂತೆ ಕ್ರಿ.ಶ. ೮ನೇ ಶತಕದಲ್ಲಿ ಆದ ಅರಬರು, ಘೋರಿ, ಘಜನಿ ಅರಸರ ದಾಳಿಗಳ ಪರಿಣಾಮ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಫಲಸ್ವರೂಪವಾಗಿ ಧರ್ಮದ ಬಾಹ್ಯಾಚರಣೆಗೆ ಮಹತ್ವ ಬಂದು ಆಧ್ಯಾತ್ಮಿಕ ಪಕ್ಷ ಮಸಕಾಯಿತು. ಜನರಲ್ಲಿ ಅಂಧಶ್ರದ್ಧೆ ಬೆಳೆದು ಸಮಾಜವು ನಿಂತ ನೀರಾಯಿತು. ಬೌದ್ಧ ಜೈನಧರ್ಮಗಳು ಅವನತಿಹೊಂದಿದವು. ಬೌದ್ಧಧರ್ಮವು ಏಕೇಶ್ವರವಾದಿಯಾಗಿರದೆ ನಿರೀಶ್ವರವಾದಿಯಾಗಿದ್ದುದೇ ಅದರ ಅವನತಿಗೆ ಕಾರಣ. ಕಾಲ, ಕಾಪಾಲಿಕ, ಗಾಣಾಪತ್ಯ, ಸೌರ ಮುಂತಾದ ಹಲವಾರು ಚಿಕ್ಕ-ಪುಟ್ಟ ತಾಂತ್ರಿಕ ಪಂಥಗಳು ಮೈದಾಳಿದವು. ಇವುಗಳ ಅನುಯಾಯಿಗಳು ಧರ್ಮದ ಹೆಸರಿನಲ್ಲಿ ಮದ್ಯ-ಮಾಂಸ-ವ್ಯಭಿಚಾರಗಳಲ್ಲಿ ತೊಡಗಿದರು. ಕಾಳಾಮುಖರೆಂಬ ಲಕುಲೀಶಪಾಶುಪತ ಪಂಥವು ಅಸ್ತಿತ್ವದಲ್ಲಿದ್ದರೂ ತನ್ನ ಮೂಲ ಧ್ಯೇಯೋದ್ದೇಶಗಳನ್ನು ಮರೆತು ದೇವಾಲಯನಿರ್ಮಾಣ ಮೂರ್ತಿಪೂಜೆ ಇವುಗಳಿಗೇ ಸೀಮಿತವಾಯಿತು. ವಜ್ರಯಾನರೂಪದಲ್ಲಿ ಬೌದ್ಧಧರ್ಮವು ಉಳಿದಿದ್ದರೂ ಅದರ ಅನುಯಾಯಿಗಳು ಅಲ್ಪಸಂಖ್ಯಾತರಾದರು. ಜೈನಧರ್ಮವು ಪ್ರಬಲವಾಗಿದ್ದರೂ ತನ್ನ ಮಹತ್ವವನ್ನು ಕಳೆದುಕೊಳ್ಳತೊಡಗಿತ್ತು. ವೈದಿಕ ಬ್ರಾಹ್ಮಣಧರ್ಮವು ಮಾತ್ರ ಪ್ರಭಾವಶಾಲಿಯಾಗಿ ವರ್ಣಾಶ್ರಮಧರ್ಮದ ದುಷ್ಪರಿಣಾಮಗಳು ಅನಿವಾರ್ಯವಾದವು. ಜನ್ಮದ ಆಕಸ್ಮಿಕತೆಯೇ ಮೇಲು-ಕೀಳಿನ ಅಳತೆಗೋಲಾಯಿತು.[2] ಶ್ರಮವಿಭಾಗತತ್ವದ ಮೇಲೆ ರೂಪುಗೊಂಡ ವರ್ಣಗಳು ಬರಬರುತ್ತ ಸಂಕುಚಿತ ಪ್ರವೃತ್ತಿಯನ್ನು ತಳೆದು ಹಲವಾರು ಉಪಜಾತಿಗಳಾಗಿ ಅಸ್ಪೃಶ್ಯವರ್ಗವು ಅಸ್ತಿತ್ವದಲ್ಲಿ ಬಂದಿತು. ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಾಗ ಜನ್ಮದಿಂದ ಸಾಧಿಸಿದ ಮೇಲು-ಕೀಳಿನ ವಿಚಾರವೇ ಅಳತೆಗೋಲಾಗಿ ಸ್ತ್ರೀಯರಿಗೆ ಪುರುಷರ ಜೊತೆಗೆ ಸಮಾನ ಹಕ್ಕುಬಾಧ್ಯತೆಗಳು ನಿರಾಕರಿಸಲ್ಪಟ್ಟವು.[3] ಮಾನವಜನಾಂಗವನ್ನು ಉದ್ಧರಿಸಲು ಹುಟ್ಟಿದ ಧರ್ಮಗಳು ಅದನ್ನು ನಾಶಪಡಿಸುವ ಭಯವನ್ನು ಬಿತ್ತಿದವು. ಧರ್ಮದ ಹೆಸರಿನಲ್ಲಿ ಅನ್ಯಾಯ, ವಂಚನೆ, ಸುಲಿಗೆಗಳು ತಾಂಡವವಾಡತೊಡಗಿದವು. ಸಮಾಜವು ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸುವಲ್ಲಿ ಅಸಮರ್ಥವಾಯಿತು.[4]

ಇಂಥ ಸನ್ನಿವೇಶದಲ್ಲಿ ಧರ್ಮಕ್ಕೆ ಹೊಸ ತಿರುವು ಕೊಟ್ಟು ಜನಸಾಮಾನ್ಯರ ಆತ್ಮಿಕ ತೃಷೆಯನ್ನು ತಣಿಸುವ ಶಕ್ತಿಯೊಂದರ ಅವಶ್ಯಕತೆಯುಂಟಾದ ಕಾಲದಲ್ಲಿ ಶ್ರೀ ಬಸವೇಶ್ವರರು ವೀರಶೈವಧರ್ಮವನ್ನು ಸಂಘಟಿಸಿದರು. ಅವರ ಧರ್ಮವು ಕೆಲವೇ ಜನರ ಸೊತ್ತಾಗಿರದೆ ಸಾರ್ವಜನಿಕವಾಗಿ ಮುಕ್ತವಾಯಿತು. ವಿಚಾರ ಹಾಗೂ ಆಚಾರಗಳ ಐಕ್ಯತೆಯನ್ನು ಸಾಧಿಸಬಲ್ಲ ಧರ್ಮವೊಂದು ಮಾತ್ರ ಮಾನವಕುಲವನ್ನು ರಕ್ಷಿಸಬಲ್ಲುದೆಂಬುದನ್ನು ಅವರು ಕಂಡುಕೊಂಡರು.

---

2 M. Chidananda Murthy : *Sri Basaveswara.*

3 Dr. P. B. Desai : *Basaveswara and His Times,* Kannada Reaserch Institute, Karnataka University, Dharwar, 1968, p. 118.

4 M. S. Sunkapur : *Basaveswara, A Social Reformer,* Eight Centeuary Commemoration Volume, 1967, Govt. of Mysore, p. 133.

ವಿಚಾರಸ್ವಾತಂತ್ರ್ಯ ಹಾಗೂ ವೃತ್ತಿಗೌರವ ಇವೆರಡೂ ವೀರಶೈವಧರ್ಮದ ವಿಶಿಷ್ಟ ಲಕ್ಷಣಗಳಾಗಿವೆ. ಅಂದಿನ ಅವಶ್ಯಕತೆಗಳೂ ಇವೇ ಆಗಿದ್ದವು, ಇಂದಿಗೂ ಇವುಗಳ ಅವಶ್ಯಕತೆ ಹೇರಳವಾಗಿದೆ. ಸ್ವತಂತ್ರ ವಿಚಾರಶೀಲತೆ ಹಾಗೂ ಕ್ರಿಯಾಶೀಲತೆಯ ಅಭಾವವೇ ಭಾರತೀಯರ ಹಿಂದುಳಿಯುವಿಕೆಗೆ ಕಾರಣವೆಂದು ಕೆಲವು ವಿಮರ್ಶಕರು ಆರೋಪಿಸಿದ್ದಾರೆ.[5] ಜೀವನವನ್ನು ಕುರಿತು ಬಸವೇಶ್ವರರ ದೃಷ್ಟಿಕೋನವು ಉದಾರವೂ, ಪ್ರಜಾಸತ್ತಾತ್ಮಕವೂ, ಅತ್ಯಂತ ಮಾನವೀಯವೂ ಆಗಿತ್ತು. ಈ ಅಂಶಗಳೇ ವೀರಶೈವ ಶಿಕ್ಷಣಕ್ರಮದ ತಳಹದಿಯಾಗಿರುವುದನ್ನು ನಾವು ಕಾಣುತ್ತೇವೆ. 'ಅನುಭವ ಮಂಟಪ'ದ ಸ್ಥಾಪನೆಯು ಶ್ರೀ ಬಸವೇಶ್ವರರ ಅಮೂಲ್ಯವಾದ ಕೊಡುಗೆ. ಈ ಧಾರ್ಮಿಕ ಸಂಸ್ಥೆಯಲ್ಲಿ ಧರ್ಮದ ತಾತ್ವಿಕ ಹಾಗೂ ವ್ಯಾವಹಾರಿಕ ಪಕ್ಷಗಳ ಚರ್ಚೆಯಾಗಿ ಹೊಸ ಸಮಾಜವೊಂದನ್ನು ರೂಪಿಸುವ ಯಶಸ್ವಿ ಪ್ರಯತ್ನ ನಡೆಯಿತು. ಬಸವೇಶ್ವರರಿಂದ ಹೊರಹೊಮ್ಮಿದ ಹೊಸ ಬೆಳಕನ್ನು ಎಲ್ಲೆಡೆಗೆ ಪಸರಿಸುವ ಕಾರ್ಯವನ್ನು ಕೈಕೊಳ್ಳುವುದಕ್ಕಾಗಿ ಅನೇಕ ಮಠಗಳು ರೂಪುಗೊಂಡವು. ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಯೋಗಗಳು ನಡೆದವು. ಸಂಸ್ಕೃತದ ಹಿಡಿತದಿಂದ ಕನ್ನಡ ಭಾಷೆಯನ್ನು ಮುಕ್ತಗೊಳಿಸುವ ಪ್ರಯತ್ನಗಳು ನಡೆದವು. ಆಧ್ಯಾತ್ಮಿಕ ಶಿಕ್ಷಣದಲ್ಲಿ ಪಾಲುಗೊಳ್ಳುವುದರಿಂದ ವಂಚಿತರಾದ ಜನಸಾಮಾನ್ಯರನ್ನು ಆಧ್ಯಾತ್ಮಿಕ ಅನುಭವದತ್ತ ಕರೆದೊಯ್ಯುವ ಪ್ರಯತ್ನ ನಡೆಯಿತು. ಮಾತೃಭಾಷೆಯ ಮೂಲಕ ಉಚ್ಚ ಶಿಕ್ಷಣವನ್ನು ಒದಗಿಸುವ ಉಪಕ್ರಮಕ್ಕೆ ಮೊದಲಾಯಿತು. ಈ ಹೊಸ ಹೆಜ್ಜೆಗಳಿಂದಾಗಿ ಜನಪ್ರಿಯವಾಗಿ ಬೆಳೆದುಬಂದ ವೀರಶೈವಧರ್ಮವು ಇಂದು ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಒಂದು ಪ್ರಮುಖ ಧರ್ಮವಾಗಿ ತತ್ವಶಾಸ್ತ್ರ, ಸಾಹಿತ್ಯ, ಸಮಾಜಸುಧಾರಣೆ, ವಾಣಿಜ್ಯ-ವ್ಯಾಪಾರ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ತನ್ನದೇ ಆದ ಸಾಧನೆಗಳನ್ನು ಹೊಂದಿದ ಶ್ರೇಯಸ್ಸಿಗೆ ಪಾತ್ರವಾಗಿದೆ. ಈ ಪ್ರಬಂಧದಲ್ಲಿ ವೀರಶೈವ ಮಠಗಳ ಪಾರುಪತ್ಯದ ಮೂಲಕ ವಿದ್ಯಾಕ್ಷೇತ್ರಕ್ಕೆ ಸಂದ ಅಪಾರ ಕೊಡುಗೆಯನ್ನು ಎತ್ತಿ ತೋರಿಸಲು ಉದ್ದೇಶಿಸಲಾಗಿದೆ. ಕಳೆದ ಎಂಟು ಶತಮಾನಗಳಿಂದ ವೀರಶೈವ ಮಠಾಧಿಪತಿಗಳು ಧಾರ್ಮಿಕ ಜ್ಞಾನಪೀಠಗಳೂ ಲೌಕಿಕ ವಿದ್ಯಾಕೇಂದ್ರಗಳೂ ಆದ ಮಠಗಳ ಮೂಲಕ ಅಮೂಲ್ಯ ಸೇವೆ ಸಲ್ಲಿಸಿದರು. ಕರ್ನಾಟಕದ ಮೂಲೆಮೂಲೆಗಳಲ್ಲಿ ಇಂಥ ಒಂದು ಮಠವಿತ್ತು. ಬಹಳಷ್ಟು ಇಂದಿಗೂ ಅಸ್ತಿತ್ವದಲ್ಲಿವೆ. ಧಾರ್ಮಿಕ ಸ್ವರೂಪವಿದ್ದರೂ ಈ ಮಠಗಳು ಲೌಕಿಕ ಹಾಗೂ ಪಾರಮಾರ್ಥಿಕ ವಿದ್ಯೆಯ ಅಭಿವೃದ್ಧಿಗೆ ಬಹಳಷ್ಟು ಕೊಡುಗೆ ಸಲ್ಲಿಸಿವೆ. ಆಧುನಿಕ ಕಾಲದವರೆಗೂ ಈ ಸಂಸ್ಥೆಗಳು ವಿದ್ಯಾಪ್ರಸಾರದ ಕಾರ್ಯದಲ್ಲಿಯೂ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಅಭಿವೃದ್ಧಿಪಡಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತ ಬಂದಿವೆ. ಇಂದು ನೂರಾರು ವೀರಶೈವ ಮಠಗಳು ವಿದ್ಯಾಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗಿ ಸಾಮಾನ್ಯ ಹಾಗೂ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ವವಿದಿತವಾಗಿದೆ.

**ಮಠಗಳ ಉದಯ :** ಆಧ್ಯಾತ್ಮಿಕ ಜೀವನದ ಕೇಂದ್ರಸ್ಥಾನ ಎಂಬ ಅರ್ಥವನ್ನು ಹೊಂದಿ ಮಠ ಎಂಬ ಪದವು ಬಳಕೆಯಲ್ಲಿ ಬಂದಿದೆ. ಆತ್ಮಜ್ಞಾನಸಾಧಕರಾದ ತಪಸ್ವಿಗಳ ಆಶ್ರಮವಾಗಿ ಆಧ್ಯಾತ್ಮಿಕ ವಿದ್ಯಾಕೇಂದ್ರ ಎಂಬ ಕಲ್ಪನೆಯನ್ನು ಮಠವು ಕೊಡುತ್ತದೆ. ಮಠವೆಂದರೆ ಧರ್ಮಛತ್ರ ಇಲ್ಲವೆ ಪರೋಪಕಾರದ ಒಂದು ನಿವಾಸ ಎಂದು ಅಮರಕೋಶವು ಹೇಳುತ್ತದೆ. ಮ್ಯಾಕ್‌ಡೊನೆಲ್‌ರ ಸಂಸ್ಕೃತ ಶಬ್ದಕೋಶವು ಮಠವೆಂದರೆ ತಪಸ್ವಿಯ ಇಲ್ಲವೆ ವಿದ್ಯಾರ್ಥಿಯ ಗುಡಿಸಲು, ಒಂದು ವಿದ್ಯಾಸಂಸ್ಥೆ ಎಂದು ಹೇಳುತ್ತದೆ. ಆಪ್ಟೆಯವರ ಸಂಸ್ಕೃತ ಶಬ್ದಕೋಶವೂ ಇದೇ ರೀತಿಯಾಗಿ ಮಠದ ವ್ಯಾಖ್ಯೆಯನ್ನು ಹೇಳುತ್ತದೆ. ಯಾವುದೇ ದೃಷ್ಟಿಯಲ್ಲಿ ನೋಡಿದರೂ ಮಠವೆಂದರೆ ಆಧ್ಯಾತ್ಮಿಕ ವಿದ್ಯಾಗುರುವಿನ ನಿವಾಸವಾಗಿದ್ದು ವಿದ್ಯಾದಾನದ ಕೇಂದ್ರ ಎಂಬ ವಿಷಯವು ಸ್ಪಷ್ಟವಾಗುತ್ತದೆ. ಇಂಥ ಸಂಸ್ಥೆಗಳು ಒಂದು ಕಾಲಕ್ಕೆ ಸಾರ್ವತ್ರಿಕವಾಗಿದ್ದು ಬರಬರುತ್ತ ಧಾರ್ಮಿಕ ವಿದ್ಯಾಕೇಂದ್ರಗಳಾಗಿ ಪರಿವರ್ತಿತವಾದವು. ಕಾನೂನಿನ ವ್ಯವಹಾರದಲ್ಲಿ ಮಠವೆಂದರೆ ಆತ್ಮವಿದ್ಯೆಯಲ್ಲಿ ಸಾಧನೆಯನ್ನು ಗಳಿಸಿದ ಒಬ್ಬ ಮಹಾವ್ಯಕ್ತಿಯ ಹಿರಿತನದಲ್ಲಿ ನಡೆಯುವ ಒಂದು ಧಾರ್ಮಿಕ ಸಂಸ್ಥೆ, ಒಂದು ವಿಶಿಷ್ಟ ಪಂಗಡಕ್ಕೆ ಸೇರಿದ ನೈಷ್ಠಿಕರ ಅನುಕೂಲಕ್ಕಾಗಿ ಸ್ಥಾಪಿತವಾದುದು. ಇವರು ಅಂಥ ಮಠದ ಅಧಿಪತಿಯ ಶಿಷ್ಯರಾಗಿ ಆಧ್ಯಾತ್ಮಿಕ ವಿದ್ಯೆಯ ಜಿಜ್ಞಾಸುಗಳಾಗಿರುತ್ತಾರೆ.[6]

ಭಾರತೀಯ ಸಂಸ್ಕೃತಿಯ ಆರಂಭಕಾಲದಿಂದಲೂ ಇಂಥ ಸಂಸ್ಥೆಗಳು ಅಸ್ತಿತ್ವದಲ್ಲಿದ್ದುಕೊಂಡು ಬಂದಿವೆ.

---

[5] G. S. Halappa : *Sri Basaveswara and Free Thinking*, Eight Centeuary Commemoration Volume, Govt. of Mysore, 1967, p. 110, 111

[6] B. K. Mukerjee : *The Hindu Law of Religion and Charitable, Trust*, p. 120.

ವೇದಕಾಲದಲ್ಲಿ ಯಾತ್ರಿಕರಿಗಾಗಿ ಧರ್ಮಛತ್ರದ ಮಾದರಿಯ ನಿವಾಸಸ್ಥಳಗಳಿದ್ದ ಉಲ್ಲೇಖಗಳು ದೊರೆಯುತ್ತವೆ.[7] ಆದರೆ ಆಧ್ಯಾತ್ಮಿಕ ವಿದ್ಯಾಕೇಂದ್ರಗಳ ರೂಪದಲ್ಲಿ ಸುಸಂಘಟಿತವಾದ ಇಂಥ ಧಾರ್ಮಿಕ ಸಂಸ್ಥೆಗಳ ಅಸ್ತಿತ್ವದ ಸೂಚನೆ ದೊರೆಯುವುದಿಲ್ಲ.

ಬೌದ್ಧಧರ್ಮದ ಉದಯದ ಕಾಲದಲ್ಲಿ ಇಂಥ ಸಂಸ್ಥೆಗಳು ಅಸ್ತಿತ್ವದಲ್ಲಿ ಬಂದುವೆಂದು ತಿಳಿದುಬರುತ್ತದೆ. ಭಾರತದಲ್ಲಿ ಆಧ್ಯಾತ್ಮಿಕ ವಿದ್ಯಾಕೇಂದ್ರಗಳ ಬೆಳವಣಿಗೆಯು ಬೌದ್ಧಧರ್ಮದ ಪ್ರಭಾವದ ಒಂದು ಮಹತ್ವಪೂರ್ಣ ಅಂಶ ಎಂದು ಹೇಳಬಹುದಾಗಿದೆ.[8] ಬೌದ್ಧಭಿಕ್ಷುಗಳ ಸಮೂಹಕ್ಕೆ ಸಂಘ ಎಂಬ ಪದವು ಬಳಕೆಯಲ್ಲಿ ಬಂದು 'ತ್ರಿರತ್ನ' ಬುದ್ಧ-ಧರ್ಮ-ಸಂಘಗಳಲ್ಲಿ ಒಂದಾಗಿತ್ತು. ಇಂಥ ಬೌದ್ಧ ಸಂಸ್ಥೆಗೆ ವಿಹಾರ ಎಂಬ ಸಂಜ್ಞೆಯೂ ಬಳಕೆಯಲ್ಲಿ ಬಂದು ಭಿಕ್ಷುಗಳ ನಿವಾಸವಷ್ಟೇ ಅಲ್ಲದೇ ಒಂದು ದೇವಾಲಯ ಎಂಬ ಅರ್ಥವನ್ನೂ ಅದು ಹೊಂದಿತು.

ಕ್ರಿ.ಶ. ೮ನೆಯ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರ ಕಾಲವನ್ನು ಇಂಥ ಆಧ್ಯಾತ್ಮಿಕ ಸಂಸ್ಥೆಗಳ ಬೆಳವಣಿಗೆಯ ಎರಡನೆಯ ಘಟ್ಟವೆಂದು ಹೇಳಬಹುದು. ಇಂಥ ಆಧ್ಯಾತ್ಮಿಕ ಸಂಸ್ಥೆಗಳನ್ನು ಹಿಂದೂಧರ್ಮಕ್ಕೆ ಪ್ರಥಮವಾಗಿ ಅಳವಡಿಸಿದವರು ಹಿಂದೂಧರ್ಮದ ಪುನರುದ್ಧಾರಕರಾದ ಶ್ರೀ ಶಂಕರಾಚಾರ್ಯರೇ ಆಗಿದ್ದರು. ಇಂದು ನಾವು ಅರಿತಿರುವ ಹಿಂದೂ ಮಠಗಳನ್ನು, ಪ್ರಥಮವಾಗಿ ರೂಪಿಸಿದವರು ಇವರೇ ಎಂಬುದು ತಿಳಿದುಬರುತ್ತದೆ. ಶ್ರೀ ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿದರು—ಶೃಂಗೇರಿ, ಕಂಚಿ, ಬದ್ರಿನಾಥ, ಪುರಿ ಹಾಗೂ ದ್ವಾರಕಾ.

ಭಾರತೀಯ ಹಿಂದೂಧರ್ಮದಲ್ಲಿ ಎರಡು ಸ್ಪಷ್ಟವಾದ ಸಮಾಂತರ ಪ್ರವಾಹಗಳನ್ನು ಕಾಣುತ್ತೇವೆ—ವೈದಿಕ ಸಂಪ್ರದಾಯ, ಆಗಮಿಕ ಸಂಪ್ರದಾಯ. ವೈದಿಕ ತತ್ವಶಾಸ್ತ್ರಕ್ಕೆ ವೇದಾಂತವೆಂದೂ, ಆಗಮಿಕ ತತ್ವಶಾಸ್ತ್ರಕ್ಕೆ ಸಿದ್ಧಾಂತವೆಂದೂ ಸಂಜ್ಞೆ. ಹರಪ್ಪಾ ಅವಶೇಷಗಳು ಆಗಮಿಕ ಸಂಸ್ಕೃತಿಯನ್ನು ಹೋಲುವ ವೇದಪೂರ್ವದ ಸಂಪ್ರದಾಯವನ್ನು ಸೂಚಿಸುತ್ತವೆ. ಕಾಳಿದಾಸ-ಭಾರವಿಗಳಂಥ ಮಹಾಕವಿಗಳೂ ಶೈವಾಗಮಗಳನ್ನು ಉಲ್ಲೇಖಿಸುತ್ತಾರೆ.[9] ಕಾಳಿದಾಸನ ಕಾಲವು ಕ್ರಿ.ಶ. ೧ನೆಯ ಶತಕವೆಂದು ಒಪ್ಪಲಾಗಿದೆ. ಸ್ಕಂದಪುರಾಣ, ಸೂತಸಂಹಿತಾ, ಬ್ರಹ್ಮಗೀತಾ, ವಿನಯಸಂಹಿತಾ ಹಾಗೂ ಭಗವದ್ಗೀತೆಗಳಂಥ ವಿವಿಧ ಪ್ರಾಚೀನ ಗ್ರಂಥಗಳಲ್ಲಿಯೂ ಆಗಮಗಳನ್ನು ಉಲ್ಲೇಖಿಸಲಾಗಿದೆ. ಉಪನಿಷತ್ತು ಹಾಗೂ ಬ್ರಹ್ಮಸೂತ್ರಗಳಲ್ಲಿಯೂ ಆಗಮಿಕ ಸಿದ್ಧಾಂತಗಳ ಸುಳುವನ್ನು ಶ್ರೀ ಎಸ್. ಡಿ. ಪಾವಟೆ ಗುರುತಿಸಿದ್ದಾರೆ.[10]

ಇದೆಲ್ಲವನ್ನೂ ಗಮನಿಸಿದಾಗ ಭಾರತೀಯ ಜನಜೀವನದ ಮೇಲೆ ಆಗಮ ಸಾಹಿತ್ಯದ ಪ್ರಭಾವವು ಶಂಕರಾಚಾರ್ಯರ ಪ್ರಭಾವಕ್ಕಿಂತ ಪೂರ್ವದ್ದೆಂದು ತಿಳಿದುಬರುತ್ತದೆ. ಗುರುಪೀಠ ಹಾಗೂ ಮಠಗಳ ಅಸ್ತಿತ್ವವನ್ನು ಆಗಮಗಳು ವಿಪುಲವಾಗಿ ಎತ್ತಿ ತೋರಿಸುತ್ತವೆ. ಮಹಾಭಾರತಕ್ಕಿಂತ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದ ಈ ಆಗಮಗಳು ಪಂಚಾಚಾರ್ಯರ ಆಚಾರ್ಯಪೀಠಗಳ ಸುದೀರ್ಘ ವಿವರಗಳನ್ನು ಕೊಡುತ್ತವೆ—ರಂಭಾಪುರಿಯ ರೇಣುಕಾಚಾರ್ಯ (ಮೈಸೂರು), ಉಜ್ಜಯಿನಿಯ ದಾರುಕಾಚಾರ್ಯ, ಹಿಮವತ್ಕೇದಾರದ ಏಕೋರಾಮಾಚಾರ್ಯ, ಶ್ರೀಶೈಲದ ಪಂಡಿತಾರಾಧ್ಯ (ಆಂಧ್ರಪ್ರದೇಶ) ಹಾಗೂ ಕಾಶಿಯ ವಿಶ್ವಾರಾಧ್ಯ (ಉತ್ತರಪ್ರದೇಶ). ಈ ಪಂಚಾಚಾರ್ಯರು ಸ್ಥಾಪಿಸಿದ ಐದು ಆಧ್ಯಾತ್ಮಿಕ ಪೀಠಗಳು ಊರ್ಜಿತವಾಗಿವೆ. ಉಪಲಬ್ಧವಾದ ಸಾಹಿತ್ಯದ ಆಧಾರದಿಂದ ಈ ಐದು ಆಚಾರ್ಯರು ಐತಿಹಾಸಿಕ ವ್ಯಕ್ತಿಗಳೇ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಹೀಗಿರುವಲ್ಲಿ ಶಂಕರಾಚಾರ್ಯರಿಗಿಂತ ಪೂರ್ವದಲ್ಲಿಯೇ ಪಂಚಾಚಾರ್ಯಪೀಠಗಳ ಸ್ಥಾಪನೆಯಾಗಿರುವಾಗ ಶಂಕರಾಚಾರ್ಯರು ಹಿಂದೂ ಆಧ್ಯಾತ್ಮಿಕ ವಿದ್ಯಾಪೀಠಗಳ ಆದ್ಯಪ್ರವರ್ತಕರಲ್ಲ ಎಂಬುದು ತಿಳಿದುಬರುತ್ತದೆ.

ಆಧುನಿಕ ಕಾಲದಲ್ಲಿ ಮಠವೆಂದರೆ ಒಂದು ಧಾರ್ಮಿಕ ಸಂಸ್ಥೆಯಾಗಿದೆ. ಧಾರ್ಮಿಕಶಿಕ್ಷಣ, ಧಾರ್ಮಿಕಚಟುವಟಿಕೆಗಳಿಗೆ ಮಾತ್ರ ಅದು ಸೀಮಿತವಾಗಿದೆ. ಆದರೆ ಮಧ್ಯಕಾಲದಲ್ಲಿ ಮಠದ ವ್ಯಾಪ್ತಿ ವಿಶಾಲವಾಗಿದ್ದು ಯಾವುದಾದರೊಂದು ದೇವಾಲಯಕ್ಕೆ ಹೊಂದಿಕೊಂಡು ಧರ್ಮ, ಸಂಸ್ಕೃತಿ ಹಾಗೂ ಶಿಕ್ಷಣದ ಕೇಂದ್ರವಾಗಿತ್ತು. ಮಠವೆಂದರೆ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆ[11] ಎಂಬುದು ಸಾಮಾನ್ಯವಾಗಿತ್ತು. ಇಂದಿಗೂ ನಾವು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ

7 Wilson's : *Rigveda*, Volume 2, p. 151.

8 *Mannual of Buddhism*, p. 24.

9 ಕಾಳಿದಾಸ : ರಘುವಂಶ 10-20, ಭಾರವಿ : ಕಿರಾತಾರ್ಜುನೀಯ, 5-22.

10 S. D. Pavate : *Veerashaiva Philosophy of Shaivagamas.*

11 Dr. Saircar : *Epigraphical Glossary*, p. 201.

ಮಠಕ್ಕೆ ಕಳಿಸುವುದಾಗಿ ಮಾತಾಡುತ್ತೇವೆ. ಇಲ್ಲಿ 'ಮಠ' ಎಂಬುದು 'ಶಾಲೆ' ಎಂಬುದರ ಪರ್ಯಾಯವಾಚಿಯಾಗಿದೆ.

ಕ್ರಿ.ಶ. ೬ನೆಯ ಶತಕದಿಂದಲೇ ಶಿಕ್ಷಣಕ್ಷೇತ್ರದಲ್ಲಿ ಕಾಣಿಸಿಕೊಂಡ ಮಠಗಳು ಕ್ರಿ.ಶ. ೧೦ರಿಂದ ಕ್ರಿ.ಶ. ೧೩ನೇ ಶತಕದ ಅವಧಿಯಲ್ಲಿ ಕಾಳಾಮುಖಶೈವಮತದ ಉಚ್ಛ್ರಾಯಕಾಲದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದವು. ಜೈನ ಧರ್ಮಕ್ಕೆ ಸೇರಿದ ಮಠಗಳೂ ಈ ಕಾಲಾವಧಿಯಲ್ಲಿ ಇದ್ದವು. ಇವುಗಳಿಗೆ ರಾಜಾಶ್ರಯವೂ ಇದ್ದ ಉಲ್ಲೇಖಗಳಿವೆ. ಕದಂಬ ಅರಸು ಬೊಪ್ಪದೇವನು ಜೈನಮಠವೊಂದರ ನಿರ್ವಹಣೆಗಾಗಿ ಭೂಮಿ ದಾನಮಾಡಿದನೆಂಬುದಾಗಿ ಶಿಕಾರಿಪುರ ತಾಲ್ಲೂಕಿನ ಚಿಕ್ಕಮಾಗಡಿಯ ದಾಖಲೆಯಿಂದ ತಿಳಿದುಬರುತ್ತದೆ.[12] ಈ ಮಠಗಳ ಅಧಿಪತಿಗಳು ಮಹಾವಿದ್ವಾಂಸರಾಗಿರುತ್ತಿದ್ದರು. ಚಿಕ್ಕಮಾಗಡಿಯ ಶಿಲಾಲಿಪಿಯಿಂದ ಬಾಂಧವಪುರದ ದೇವಾಲಯಕ್ಕೆ ಸೇರಿದ ಮಠದ ಅಧಿಪತಿಯಾದ ಆಚಾರ್ಯ ಭಾನುಕೀರ್ತಿ ಸಿದ್ಧಾಂತಿಯು ಘನವಿದ್ವಾಂಸನಾಗಿದ್ದನೆಂಬುದು ತಿಳಿದುಬರುತ್ತದೆ.[13] ರಾಜಮನೆತನದವರೂ ಧನಿಕರೂ ಉಳಿದ ಸಾರ್ವಜನಿಕರೂ ಈ ಮಠಗಳ ನಿರ್ವಹಣೆಗಾಗಿ ಉದಾರ ಸಹಾಯ ಸಲ್ಲಿಸುತ್ತಿದ್ದರು. ಕ್ರಿ.ಶ. ೧೦೧೮ರಲ್ಲಿ ಚಾಲುಕ್ಯ ಇಮ್ಮಡಿ ಜಯಸಿಂಹನು ಬಳ್ಳಿಗಾವೆಯ ದೇವಾಲಯಕ್ಕೆ ಸೇರಿದ ಮಠಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಭೋಜನ ಇತ್ಯಾದಿಗಾಗಿ ಭೂದಾನ ಮಾಡಿದ್ದನು.[14] ಚಾಲುಕ್ಯ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಒಂದು ಲಿಪಿಯಿಂದಲೂ ಇಂಥ ಒಂದು ನಿದರ್ಶನ ದೊರೆಯುತ್ತದೆ. ಲಕುಲೇಶ್ವರಪಂಡಿತನ ಮಠದ ಅಧ್ಯಾಪಕರಿಗಾಗಿ ಹಾಗೂ ವಿದ್ಯಾರ್ಥಿಗಳಿಗಾಗಿ ಈತನು ಕೊಟಿಗನೂರುಹಳ್ಳಿಯನ್ನು ದಾನ ಮಾಡಿದ್ದನು.[15] ರವಿಯಣಭಟ್ಟನೆಂಬ ದಂಡನಾಯಕನು ಯೆವೂರಿನಲ್ಲಿ ಒಂದು ಮಠವನ್ನು ಕಟ್ಟಿಸಿದನು. ವಿದ್ಯಾರ್ಥಿಗಳ, ಅಧ್ಯಾಪಕರ ಊಟೋಪಚಾರಕ್ಕಾಗಿ ಆತನು ಸಹಾಯವನ್ನೂ ಸಲ್ಲಿಸಿದ್ದನು.[16] ಶಿವಮೊಗ್ಗಾ ಜಿಲ್ಲೆಯ ಜಂಬೂರಿನ ಶಿಲಾಲೇಖವು ಈ ವಿಷಯದಲ್ಲಿ ಕುತೂಹಲಕಾರಿಯಾದ ವಿವರಗಳನ್ನು ಕೊಡುತ್ತದೆ. '....ತಮ್ಮ ಮಠದ ಮಾಣಿಗಳ್ಗೆ ಉಪ್ಪು—ಎಣ್ಣೆಗೆ ಗದ್ಯಾಣಂ ಪದಿನಾರು ಕಪ್ಪಡಕ್ಕೆ ಗದ್ಯಾಣಂ ಪನ್ನೆರಡು....ಉಪ್ಪಿನಕಾಯ್ಗೆ ಗದ್ಯಾಣ ಎರಡು ಅಂತೂ ಗದ್ಯಾಣ' ಮರಸನಹಳ್ಳಿಯ ಶಾಸನವೊಂದರಲ್ಲಿಯೂ ಇಂಥ ದಾನದ ವಿವರ ದೊರೆಯುತ್ತಿದ್ದು ಈ ಶಾಸನದಲ್ಲಿ ಆ ಮಠವು ಒಂದು ವಿದ್ಯಾಶಾಲೆ, ಶಿಕ್ಷಣ ಸಂಸ್ಥೆ ಎಂದು ವರ್ಣಿಸಲಾಗಿದೆ.[17]

ಮಠದಲ್ಲಿ ವಿದ್ಯಾರ್ಥಿಗಳಿಗೆ ಊಟ–ವಸತಿಯನ್ನು ಒದಗಿಸಲಾಗುತ್ತಿತ್ತು. ಅಧ್ಯಾಪಕರಿಗಾಗಿ ಪ್ರತ್ಯೇಕ ಅನುದಾನಗಳನ್ನು ಕೊಡಲಾಗುತ್ತಿತ್ತು. ಸೂಡಿಯ ಕ್ರಿ.ಶ. ೧೦೬೦ರ, ಲಕ್ಷ್ಮೇಶ್ವರದ ೧೧೬೨ರ ಹಾಗೂ ಕಲಚೂರಿ ಬಿಜ್ಜಳನಿಗೆ ಸೇರಿದ ಮನಗೋಳಿಯ ಕ್ರಿ.ಶ. ೧೧೬೮ರ ಶಾಸನಗಳಿಂದ ಈ ಅಂಶಕ್ಕೆ ಪುಷ್ಟಿ ದೊರೆಯುತ್ತದೆ. ಮಠಗಳಲ್ಲಿ ಎರಡು ಪ್ರಕಾರದ ವಿದ್ಯಾರ್ಥಿಗಳಿರುತ್ತಿದ್ದರು– ತಪೋನಿರತ ವಿದ್ಯಾರ್ಥಿಗಳು, ಸಾಮಾನ್ಯ ವಿದ್ಯಾರ್ಥಿಗಳು. ಇವರನ್ನು ವಿದ್ಯಾರ್ಥಿ ತಪೋಧನರು ಹಾಗೂ ಮಾಣಿಗಳು ಎಂದು ಹೆಸರಿಸಲಾಗಿದೆ.[18]

ಸಾಮಾನ್ಯವಾಗಿ ಮಠಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಕೆಲವು ಮಠಗಳು ಉಚ್ಚ ಶಿಕ್ಷಣ ಕೇಂದ್ರಗಳೂ ಆಗಿದ್ದವು. ಶಿಕ್ಷಣಕ್ಕೆ ಸಂಬಂಧಿಸಿ ಮಠಗಳಿಗೆ ಹೊಂದಿಕೊಂಡ 'ಅಕ್ಷರಖಂಡಿಕಾ' ಎಂಬ ಪದದ ಉಲ್ಲೇಖ ದೊರೆಯುತ್ತದೆ. ಮೂಲಾಕ್ಷರಗಳನ್ನು ಕಲಿಯುವ ಈ ಹೆಜ್ಜೆಯೇ ವಿದ್ಯಾಭ್ಯಾಸಕ್ರಮದ ಮೊದಲ ಹಂತ. 'ಕನ್ನಡ ಉಪಾಧ್ಯಾಯ' ಎಂಬ ಪದದ ಉಲ್ಲೇಖವೂ ದೊರೆಯುತ್ತದೆ. ಇವೆಲ್ಲವೂ ಪ್ರಾಥಮಿಕ ಶಿಕ್ಷಣವನ್ನು ಸೂಚಿಸುತ್ತವೆ. ಪುರಿಗೆರೆಯ ರಾಮೇಶ್ವರ ದೇವಾಲಯಕ್ಕೆ ಹೊಂದಿಕೊಂಡ ಮಠದಲ್ಲಿ 'ಕುಮಾರವ್ಯಾಕರಣ'ವನ್ನು ಕಲಿಸುತ್ತಿದ್ದುದು ಕಂಡುಬರುತ್ತದೆ.[19] ಉಚ್ಚ ಶಿಕ್ಷಣ ಕೇಂದ್ರಗಳಾದ ಮಠಗಳಲ್ಲಿ ಪಾಣಿನೀಯ ವ್ಯಾಕರಣ, ಷಡ್ದರ್ಶನ, ಪುರಾಣ, ಧರ್ಮಶಾಸ್ತ್ರ, ಕಾವ್ಯ, ನಾಟಕ ಇತ್ಯಾದಿಯನ್ನು ಕಲಿಸುತ್ತಿದ್ದರು.

ಮಠಗಳಲ್ಲಿ ಅಧ್ಯಾಪನ ಕೈಗೊಂಡ ಗುರುಗಳ ಸ್ಥಾನಮಾನ ಉಚ್ಚವಾಗಿದ್ದವು. ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾದ ಇವರು ನಿಷ್ಠಜೀವನ ನಡೆಸುತ್ತಿದ್ದರು. ಶಿಕಾರಿಪುರದ ಶಾಸನವು ಬಳ್ಳಿಗಾವೆ ಮಠದ ಗುರುವನ್ನು ಬಹುವಾಗಿ

---

12 *Epigraphica Karnatica* VII, S. K. 197.
13 Ibid. p. 197.
14 *South Indian Inscriptions* IX, No. 80 (1018 A.D.).
15 Ibid. No. 135 (1071 A.D.).
16 *Epigraphica Indica* XII, p. 290.
17 *South Indian Inscriptions* XX, No, 40
18 Annual Report on *South Indian Epigraphy*, 33-34, B.K. 114
19 Op.cit No. 83

ಹೊಗಳುತ್ತದೆ. ವಿದ್ಯಾರ್ಥಿಗಳು ತಪೋನಿಷ್ಠೆ, ಕಠೋರಧರ್ಮಾಚರಣೆ ಹಾಗೂ ಚಾರಿತ್ರ್ಯಶುದ್ಧಿಗಾಗಿ ಹೆಸರುವಾಸಿಯಾಗಿದ್ದರು. ಬ್ರಹ್ಮಚರ್ಯವನ್ನು ಕಠೋರವಾಗಿ ಪಾಲಿಸಲಾರದವರನ್ನು ಮಠದಿಂದ ಹೊರಹಾಕಲಾಗುತ್ತಿತ್ತು.[20] ಮಠವು ಒಂದು ನೈಷ್ಠಿಕಸ್ಥಾನವಾಗಿತ್ತು. ನೈಷ್ಠಿಕರಾದ ತಪಸ್ವಿಗಳಿಗೆ ಸಮಾಜದಲ್ಲಿ ಹೆಚ್ಚಿನ ಹೊಣೆಗಾರಿಕೆ ಇದ್ದು ಜನರ ಮೇಲೆ ಪ್ರಭಾವ ಬೀರಬಲ್ಲವರಾಗಿ ಅನೇಕ ಸಂಗತಿಗಳಲ್ಲಿ ಜನತೆಗೆ ಉಪದೇಶಮಾಡಬಲ್ಲವರಾಗಿದ್ದರು. ಈ ಮಾತುಗಳಿಂದ ಮಠಗಳು ಜನಸಾಮಾನ್ಯರಿಂದ ದೂರವಾಗಿರದೆ ನಿತ್ಯಜೀವನದ ಸಮಸ್ಯೆಗಳಿಗೆ ಸಂವೇದನಾಶೀಲವಾಗಿದ್ದವೆಂಬ ಮಾತು ಸ್ಪಷ್ಟವಾಗುತ್ತದೆ. ಶಿಕ್ಷಣವು ಜೀವನಕ್ಕೆ ನೇರವಾಗಿ ಸಂಬಂಧಿಸಿತ್ತು.

ಕೇದಾರೇಶ್ವರ ದೇವಾಲಯದ 'ಕೋಡಿಯ ಮಠವು' ಕ್ರಿ.ಶ. ಹನ್ನೊಂದು-ಹನ್ನೆರಡನೆಯ ಶತಕಗಳಲ್ಲಿ ಪ್ರಸಿದ್ಧವಾದ ಧಾರ್ಮಿಕ ಸಂಸ್ಥೆಯಾಗಿತ್ತು ; ಶೈಕ್ಷಣಿಕ ಹಾಗೂ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಜನಪ್ರಿಯವಾಗಿತ್ತು. ಈ ಮಠವು ಸ್ಥಾಪಿತವಾದದ್ದು ಶಿವಮೊಗ್ಗಾ ಜಿಲ್ಲೆಯ ಬಳ್ಳಿಗಾವೆಯಲ್ಲಿ. ಇಲ್ಲಿ ಇನ್ನೂ ನಾಲ್ಕು ಮಠಗಳಿದ್ದವು— ಹಿರಿಯ ಮಠ, ಪಂಚಲಿಂಗ ಮಠ, ತ್ರಿಪುರಾಂತಕ ಮಠ, ನಾಲ್ಕನೆಯದರ ಹೆಸರು ತಿಳಿದುಬರುವುದಿಲ್ಲ. ಕೋಡಿಯ ಮಠವು ಕಾಳಾಮುಖರಿಗೆ ಸೇರಿದ್ದೆಂದು ಶಾಸನಗಳಿಂದ ತಿಳಿಯುತ್ತದೆ. ಈ ಮಠದ ಸ್ಥಾಪನೆಯು ಕ್ರಿ.ಶ. ೧೦೭೩ರಲ್ಲಿ ಆಗಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[21] ತಾವರೆಗೆರೆ ಎಂಬ ಕೆರೆಯ ದಂಡೆಯ ಮೇಲೆ ಸ್ಥಾಪಿತವಾದ ಈ ಮಠಕ್ಕೆ ಆ ಕೆರೆಯ ಒಂದು ದೊಡ್ಡ ಕೋಡಿಯಿಂದಾಗಿ 'ಕೋಡಿಯ ಮಠ' ಎಂಬ ಹೆಸರು ಬಂದಿರಬೇಕೆಂದೂ ಊಹಿಸಲಾಗುತ್ತದೆ. ಈ ಸ್ಥಾನವನ್ನು ವಿಧವಿಧವಾಗಿ ವರ್ಣಿಸುವ ಶಾಸನಗಳು ಇದನ್ನು ಸರಸ್ವತಿಯ ನಿವಾಸ ಎಂದೂ ಹೇಳುತ್ತವೆ. ಈ ಮಠದಲ್ಲಿ ಶಿವನ ಪೂಜೆ ನಡೆಯುತ್ತಿತ್ತು. ಈ ಮಠವು ವಿದ್ಯಾಕೇಂದ್ರವಾಗಿತ್ತು. ವಿದ್ಯಾರ್ಥಿಗಳ ಸಂಖ್ಯೆ, ಅಧ್ಯಾಪಕರ ಸಂಖ್ಯೆ ಇವುಗಳ ವಿಷಯವಾಗಿ ಹೆಚ್ಚಿನ ವಿವರಗಳು ದೊರೆಯದಿದ್ದರೂ ಇಲ್ಲಿ ಬೋಧಿಸಲ್ಪಡುತ್ತಿದ್ದ ವಿಷಯಗಳ ಉಲ್ಲೇಖವಿದೆ. ವಿದ್ಯಾಭಿವೃದ್ಧಿಗಾಗಿ ಅನುದಾನಗಳನ್ನು ಉಲ್ಲೇಖಿಸಲಾಗಿದೆ. ನಾಲ್ಕು ವೇದಗಳು, ವೇದಾಂಗಗಳು, ಷಡ್ದರ್ಶನ, ಹದಿನೆಂಟು ಪುರಾಣಗಳು, ಕಾವ್ಯ, ನಾಟಕ ಹಾಗೂ ಉಳಿದ ವಿವಿಧ ವಿಜ್ಞಾನಗಳ ಅಧ್ಯಾಪನವು ಇಲ್ಲಿ ನಡೆಯುತ್ತಿತ್ತು.[22] ಈ ಮಠಕ್ಕೆ ಉದಾರವಾಗಿ ಅನುದಾನಗಳನ್ನು ದಯಪಾಲಿಸಲಾಗಿತ್ತು.

## ಕ್ರಿ.ಶ. ೧೨ನೆಯ ಶತಕ. ಕರ್ನಾಟಕದಲ್ಲಿ ಶಿಕ್ಷಣ ಪದ್ಧತಿಗಳು

ಕ್ರಿ.ಶ. ೧೨ನೆಯ ಶತಕದಲ್ಲಿ ಶ್ರೀ ಬಸವೇಶ್ವರರ ನೇತೃತ್ವದಲ್ಲಿ ರೂಪುಗೊಂಡ ವೀರಶೈವ ಆಂದೋಲನಕ್ಕಿಂತ ಪೂರ್ವದಲ್ಲಿ ಕರ್ನಾಟಕದಲ್ಲಿ ಬ್ರಾಹ್ಮಣ, ಬೌದ್ಧ ಹಾಗೂ ಜೈನಧರ್ಮಗಳು ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಮುಖವಾಗಿದ್ದವು. ಈ ಮೂರೂ ಪಂಥಗಳು ವಿದ್ಯಾಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ವಿಶ್ಲೇಷಣೆಯು ಇಲ್ಲಿ ಅವಶ್ಯಕವಾಗಿದೆ.

## ಬ್ರಾಹ್ಮಣ ಶಿಕ್ಷಣ ಸಂಸ್ಥೆಗಳ ಕೊಡುಗೆ

ಪ್ರಾಚೀನ ಕರ್ನಾಟಕದಲ್ಲಿ ಬ್ರಾಹ್ಮಣ ಧರ್ಮದ ಪಾರುಪತ್ಯದಲ್ಲಿ ನಾಲ್ಕು ಪ್ರಕಾರದ ವಿದ್ಯಾಸಂಸ್ಥೆಗಳು ಕಾರ್ಯ ಮಾಡುತ್ತಿದ್ದವು— ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ದೇವಸ್ಥಾನ.[23] ವಿದ್ಯಾಭಿವೃದ್ಧಿಯು ಅಗ್ರಹಾರಗಳ ಪ್ರಮುಖ ಕಾರ್ಯವಾಗಿ ಅವು ವಿದ್ಯಾಕೇಂದ್ರಗಳಾಗಿದ್ದವು. ಅಗ್ರಹಾರ ನಿವಾಸಿಗಳಾದ ಬ್ರಾಹ್ಮಣರು ವಿವಿಧ ಶಾಸ್ತ್ರಗಳ ಉಚ್ಚ ಅಧ್ಯಯನ-ಅಧ್ಯಾಪನದಲ್ಲಿ ತೊಡಗಿರುತ್ತಿದ್ದರು. ಕನ್ನಡ, ಸಂಸ್ಕೃತ ಮುಂತಾದ ಅನೇಕ ಭಾಷೆಗಳಲ್ಲಿ ಪಾರಂಗತರಾದ ಅವರು ವಿದ್ಯಾಧರರೆನಿಸಿಕೊಂಡಿದ್ದರೆಂಬುದು ಶಾಸನಗಳಿಂದ ತಿಳಿಯುತ್ತದೆ. ಅಂತೆಯೇ ಅಗ್ರಹಾರಗಳಿಗೆ ವಿದ್ಯಾನಿಧಿಗಳೆಂಬ ಸಂಜ್ಞೆ ಬಂದಿತ್ತು. ಮೈಸೂರು ಜಿಲ್ಲೆಯ ಸೋಮನಾಥಪುರದ ಕ್ರಿ.ಶ. ೧೨೭೮ರ ಶಾಸನವೊಂದು 'ಮಹಾಗ್ರಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರಂ' ಎಂದು ವರ್ಣಿಸುತ್ತದೆ. ಅಗ್ರಹಾರಗಳು ಬೌದ್ಧಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು.

---

20 *Epigraphica Indica*, p. 290.

21 ಎಸ್. ಎಸ್. ಮಾಳವಾಡ : 'ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ', ಪು. 144.

22 *Epigraphica Karnatica*, VII. SK. 100 (1129 A.D.)

23 *Epigraphica Karnatica*.

ವಿದ್ಯಾಪಾರಂಗತರಾದ ಬ್ರಾಹ್ಮಣರ ನಿವಾಸವೇ ಬ್ರಹ್ಮಪುರಿ ; ಎಂದು ಡಾ. ಮೊರಿಸ್ ಬ್ರಹ್ಮಪುರಿಯ ವ್ಯಾಖ್ಯೆ ಕೊಡುತ್ತಾರೆ.[24] ಬೆಳಗಾಂ ಜಿಲ್ಲೆಯ ಸೌಂದತ್ತಿ ತಾಲ್ಲೋಕಿನ ಮುನುವಳ್ಳಿಯಲ್ಲಿ ಇಂಥ ಒಂದು ಬ್ರಹ್ಮಪುರಿ ಇತ್ತೆಂಬ ಅಂಶವು ಅಲ್ಲಿನ ಕ್ರಿ.ಶ. ೧೨೨೨ರ ಶಾಸನದಿಂದ ತಿಳಿದುಬರುತ್ತದೆ. ಈ ಬ್ರಹ್ಮಪುರಿಗಳಲ್ಲಿ ಅಧ್ಯಾಪನ-ಅಧ್ಯಯನಗಳಲ್ಲಿ ತೊಡಗಿದ ಅಧ್ಯಾಪಕರು— ವಿದ್ಯಾರ್ಥಿಗಳ ನಿರ್ವಾಹಕ್ಕಾಗಿ ಉದಾರ ಭೂದಾನ ಧನದಾನಗಳನ್ನಿತ್ತ ಉಲ್ಲೇಖಗಳು ದೊರೆಯುತ್ತವೆ.

ಘಟಿಕಾಸ್ಥಾನವು ಸುದೀರ್ಘ ಪುರಾತನತೆಯನ್ನು ಹೊಂದಿದ ಶಿಕ್ಷಣ ಸಂಸ್ಥೆ ಎಂಬುದಕ್ಕೆ ಶಾಸನಗಳ ಆಧಾರಗಳಿವೆ. ಕರ್ನಾಟಕದ ಕದಂಬ ವಂಶದ ಮೂಲಪುರುಷನಾದ ಮಯೂರವರ್ಮನು ವೇದಾಧ್ಯಯನಕ್ಕಾಗಿ ಘಟಿಕಾಸ್ಥಾನಕ್ಕೆ ಹೋಗಿದ್ದನೆಂಬುದು ತಿಳಿದುಬರುತ್ತದೆ. ಪಲ್ಲವರ ಆರಂಭಕಾಲಕ್ಕೆ ಘಟಿಕಾಸ್ಥಾನಗಳು ಬಹುಶ್ರುತವಾಗಿದ್ದವು. ವಿದ್ಯಾಕೇಂದ್ರಗಳಾದ ಈ ಸಂಸ್ಥೆಗಳಲ್ಲಿ ವೇದ, ಧರ್ಮಶಾಸ್ತ್ರ, ಮೀಮಾಂಸಾಶಾಸ್ತ್ರ, ನ್ಯಾಸ, ಮುಂತಾದವುಗಳ ಅಧ್ಯಾಪನ ನಡೆಯುತ್ತಿತ್ತು. ಘಟಿಕಾಸ್ಥಾನಗಳ ಬ್ರಾಹ್ಮಣರಿಗೆ 'ಮಹಾಜನ' ಎಂಬ ಸಂಜ್ಞೆಯೂ ಇತ್ತು. ಗುಲ್ಬರ್ಗಾ ಜಿಲ್ಲೆಯ ಚಿತಾಪುರದ ಬಳಿಯ ನಾಗಿಗ್ರಾಮದಲ್ಲಿದ್ದ ಘಟಿಕಾಸ್ಥಾನವು ಕ್ರಿ.ಶ. ೧೧ನೇ ಶತಕದಲ್ಲಿ ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿ ಪ್ರಸಿದ್ಧವಾಗಿತ್ತು. ಕ್ರಿ.ಶ. ೧೦೫೮ರಿಂದ ದೊರೆಯುವ ಇಲ್ಲಿನ ಶಾಸನಗಳು ಈ ಅಂಶವನ್ನು ಎತ್ತಿ ಹೇಳುತ್ತವೆ. ಇಲ್ಲಿ ೨೫೨ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು. ಆರು ಜನ ಅಧ್ಯಾಪಕರಿದ್ದರು. ಬೇರೆಬೇರೆ ವಿಷಯಗಳ ಅಧ್ಯಾಪಕರಿಗೆ ಬೇರೆಬೇರೆಯಾಗಿ ಭೂ ಅನುದಾನಗಳನ್ನು ಕೊಡಮಾಡಲಾಗಿತ್ತು. ವಿದ್ಯಾರ್ಥಿಗಳ ಊಟೋಪಚಾರಕ್ಕಾಗಿಯೂ ಅನುದಾನಗಳಿದ್ದವು.

ಈ ಸಂಸ್ಥೆಯಲ್ಲಿ ಒಂದು ಸುಸಜ್ಜಿತವಾದ ಗ್ರಂಥಭಂಡಾರವೂ ಇತ್ತು. ಅಲ್ಲಿ ಆರು ಜನ ಗ್ರಂಥಪಾಲರಿದ್ದರೆಂದು ಶಾಸನದಿಂದ ತಿಳಿದುಬರುತ್ತದೆ. ನಾಲ್ಕುನೂರು ಜನ ವಿದ್ಯಾರ್ಥಿಗಳಿದ್ದ ರಾಮೇಶ್ವರ ದೇವಾಲಯದ ಇನ್ನೊಂದು ಘಟಿಕಾಸ್ಥಾನವನ್ನೂ ಇಲ್ಲಿನ ಶಾಸನಗಳು ಉಲ್ಲೇಖಿಸುತ್ತವೆ.

**ದೇವಸ್ಥಾನಗಳು :** ದೇವಸ್ಥಾನಗಳು ಚಾರಿತ್ರ್ಯಶುದ್ಧಿಯುಳ್ಳ ತಪೋನಿಷ್ಠ ಋಷಿಗಳ ಅಧ್ಯಾಪನ ಕೇಂದ್ರಗಳಾಗಿದ್ದವು. ಕೆಲವು ದೇವಸ್ಥಾನಗಳು ಪ್ರಾಥಮಿಕ ವಿದ್ಯಾಕೇಂದ್ರಗಳಾಗಿದ್ದು ಇನ್ನುಕೆಲವು ಉಚ್ಚ ಶಿಕ್ಷಣ ಸಂಸ್ಥೆಗಳಾಗಿದ್ದವು.[25] ಕ್ರಿ.ಶ. ಏಳನೆಯ ಶತಕದ ಮಂಗಲೇಶನಿಗೆ ಸೇರಿದ ಶಾಸನವೊಂದರಲ್ಲಿ ಮುಕ್ತೇಶ್ವರವೆಂಬ ಇಂಥ ಒಂದು ದೇವಸ್ಥಾನವನ್ನು ಹೇಳಲಾಗಿದೆ. ತಾಳಗುಂದದ ಪ್ರಾಣೇಶ್ವರ ದೇವಾಲಯವು ಉಚ್ಚ ವಿದ್ಯಾಸಂಸ್ಥೆಯಾಗಿತ್ತೆಂಬುದೂ ತಿಳಿಯುತ್ತದೆ. ಮೂಲಾಕ್ಷರ ಹಾಗೂ ಕನ್ನಡ ಭಾಷೆ ಕಲಿಸುವ ಉಪಾಧ್ಯಾಯರೂ ಪ್ರತ್ಯೇಕವಾಗಿ ಅಲ್ಲಿದ್ದರು. ಆರು ಜನ ಅಧ್ಯಾಪಕರ ಮಾರ್ಗದರ್ಶನದಲ್ಲಿ ಒಟ್ಟು ೪೮ ವಿದ್ಯಾರ್ಥಿಗಳಿದ್ದುದು ತಿಳಿದುಬರುತ್ತದೆ. ಈ ದೇವಾಲಯಗಳ ಅಧ್ಯಕ್ಷನಿಗೆ ಸ್ಥಾನಿಕನೆಂಬ ಸಂಜ್ಞೆ. ಇಬ್ಬರು ಸ್ಥಾನಿಕರಿದ್ದರೆ ಮೇಲೊಬ್ಬ ಸ್ಥಾನಪತಿ ಇರುತ್ತಿದ್ದ. ಧಾರ್ಮಿಕರಾದ ಜನರೆಲ್ಲ ಇಂಥ ದೇವಾಲಯಗಳ ಮೂಲಕವೇ ತಮ್ಮ ಸರ್ವಾಂಗೀಣ ಉನ್ನತಿಯನ್ನು ಹೊಂದುತ್ತಿದ್ದರು. ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು ಈ ದೇವಸ್ಥಾನಗಳಿಗೆ ಸೇರಿರುತ್ತಿದ್ದು ದೇವಸ್ಥಾನಗಳು ವಿದ್ಯಾದಾನದ ಪ್ರಥಮ ಸಂಸ್ಥೆಗಳಾಗಿದ್ದುದು ತಿಳಿದುಬರುತ್ತದೆ.

## ಬ್ರಾಹ್ಮಣ ಶಿಕ್ಷಣಕ್ರಮದ ವೈಶಿಷ್ಟ್ಯ

ಪ್ರಾಥಮಿಕದಿಂದ ಉಚ್ಚವ್ಯಾಸಂಗದ ವರೆಗಿನ ವಿದ್ಯಾಸಂಸ್ಥೆಗಳ ಕ್ರಮಬದ್ಧ ಆಡಳಿತಾತ್ಮಕ ರಚನೆಯನ್ನು ಇಲ್ಲಿ ಕಾಣುತ್ತೇವೆ. ವೇದ–ಉಪನಿಷತ್ತು ಶಾಸ್ತ್ರಗಳಲ್ಲಿ ಅಧ್ಯಾಪಕರು ಅಗಾಧ ಪಾಂಡಿತ್ಯವುಳ್ಳವರಾಗಿರುತ್ತಿದ್ದರು. ಆಳರಸರು ಹಾಗೂ ಜನಸಾಮಾನ್ಯರ ಅನುದಾನಗಳ ನೆರವಿನಿಂದ ಎಲ್ಲ ಹಂತಗಳಲ್ಲಿಯೂ ವಿದ್ಯಾದಾನ ಉಚಿತವಾಗಿತ್ತು. ವಿದ್ಯಾಭ್ಯಾಸಕ್ಕಾಗಿ ಎರಡು ಪೀಠಗಳ ರಚನೆಯಾಗಿದ್ದು ಒಂದರಲ್ಲಿ ದಾರ್ಶನಿಕ ಚಿಂತನೆಯೂ, ಇನ್ನೊಂದರಲ್ಲಿ ಕಾನೂನು ಹಾಗೂ ಸಾಹಿತ್ಯದ ಅಧ್ಯಯನವೂ ಕೈಗೊಳ್ಳಲ್ಪಡುತ್ತಿದ್ದುವು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಕನ್ನಡವೂ, ಉಚ್ಚ ವ್ಯಾಸಂಗದಲ್ಲಿ ಸಂಸ್ಕೃತವೂ ಬೋಧಭಾಷೆಯಾಗಿದ್ದವು. ಅಂಗವಿಕಲ ವಿದ್ಯಾರ್ಥಿಗಳಿಗಾಗಿ ಉಚಿತವಾದ ಊಟದ ಸೌಕರ್ಯವನ್ನೂ ಒದಗಿಸಲಾಗುತ್ತಿತ್ತು. ಅಧ್ಯಾಪಕರ ಮಟ್ಟ– ಯೋಗ್ಯತೆಗಳಿಗನುಸಾರವಾಗಿ ಬೇರೆಬೇರೆ ವೇತನಪದ್ಧತಿಗಳಿದ್ದವು.

---

[24] *Kadambakula*, p. 299.

[25] *Epigraphica Indica*, Dg. 79.

ವಿದ್ಯಾರ್ಥಿಗಳು ಕಠೋರವಾದ ಶಿಸ್ತಿನ ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು. ಯಾವುದಾದರೆಂದು ಶಾಸ್ತ್ರ–ವಿಜ್ಞಾನದ ಆಳವಾದ ಅಧ್ಯಯನಕ್ಕೆ ಅವಕಾಶವಿತ್ತು.

ಈ ಬ್ರಾಹ್ಮಣಶಿಕ್ಷಣಸಂಸ್ಥೆಗಳಿಗೆ ಸಮಾಜದ ಉಚ್ಚವರ್ಗದವರಾದ ಬ್ರಾಹ್ಮಣರಿಗೆ ಮಾತ್ರ ಪ್ರವೇಶವಿತ್ತು. ಇದರಿಂದ ಶಿಕ್ಷಣವು ಕೆಲವೇ ಜನರ ಸೊತ್ತಾಗುತ್ತ ನಡೆಯಿತು. ಸ್ತ್ರೀಯರಿಗೆ ಶಿಕ್ಷಣದ ಲಾಭ ದೊರೆಯದೇ ಹೋಯಿತು. ಸಮಾಜದ ಬಹುಸಂಖ್ಯಾತ ಜನರು ಶಿಕ್ಷಣದಿಂದ ವಂಚಿತರಾದರು.

**ಬೌದ್ಧ ವಿದ್ಯಾಭ್ಯಾಸಕ್ರಮ :** ಕ್ರಿ.ಪೂ. ೩ನೆಯ ಶತಕದಿಂದಲೇ ಕರ್ನಾಟಕದಲ್ಲಿ ಬೌದ್ಧಧರ್ಮದ ಪ್ರಭಾವವು ಕಾಣಿಸಿಕೊಳ್ಳತೊಡಗಿತು. ಅಶೋಕನ ಆಳ್ವಿಕೆಯ ೧೮ನೆಯ ವರ್ಷದಲ್ಲಿ ಥೆರಾರಕ್ಷಿತನೆಂಬ ಒಬ್ಬ ಭಿಕ್ಷುವು ಬನವಾಸಿಗೆ ಬಂದು ಬೌದ್ಧಧಾರ್ಮಿಕ ಹಾಗೂ ವಿದ್ಯಾಸಂಸ್ಥೆಗಳನ್ನುಸ್ಥಾಪಿಸಿದನು.[26] ಕ್ರಿ.ಶ.೭ನೆಯ ಶತಕದಲ್ಲಿ ಬನವಾಸಿಗೆ ಭೇಟಿಕೊಟ್ಟ ಹ್ಯುಯೆನ್‌ತ್ಸಾಂಗನು ಬನವಾಸಿಯಲ್ಲಿ ಹಾಗೂ ಅದರ ಸುತ್ತಮುತ್ತಲೂ ಅನೇಕ ಬೌದ್ಧವಿಹಾರಗಳನ್ನು ಕಂಡನು.[27] ಬೌದ್ಧವಿಹಾರಗಳು ವಿದ್ಯಾಕೇಂದ್ರಗಳಾಗಿದ್ದವು. ಶೈಕ್ಷಣಿಕ ಅಧಿವೇಶನವು ಮಳೆಗಾಲದಲ್ಲಿ ಆರಂಭವಾಗುತ್ತಿತ್ತು. ವಿಹಾರಗಳಲ್ಲಿ ವಾಸಿಸುವ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ನಿರ್ವಾಹಕ್ಕಾಗಿ ಆಳರಸರಿಂದ ಅನುದಾನಗಳು ಕೊಡ-ಮಾಡಲ್ಪಟ್ಟಿರುತ್ತಿದ್ದವು. ಬೌದ್ಧಭಿಕ್ಷುಗಳು ಉಚ್ಚ ನೈತಿಕ ಚಾರಿತ್ರ್ಯವನ್ನು ಕಾಯ್ದುಕೊಂಡವರು. ಬೌದ್ಧಭಿಕ್ಷುಗಳು ತಮ್ಮ ಧರ್ಮವನ್ನು ಶ್ರೀಸಾಮಾನ್ಯನ ಭಾಷೆಯಲ್ಲಿ ಬೋಧಿಸಿದ್ದರಿಂದ ಪ್ರಾದೇಶಿಕ ಭಾಷೆಗಳು ಬೋಧಭಾಷೆಯ ಸ್ಥಾನಕ್ಕೇರತೊಡಗಿದವು. ಉಚ್ಚಶಿಕ್ಷಣವು ಸಂಸ್ಕೃತದಲ್ಲಿಯೂ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿಯೂ ನಡೆಯುತ್ತಿದ್ದವೆಂದು ಪ್ರೊ. ಜಿ. ಎಸ್. ದೀಕ್ಷಿತ ನಿರ್ಣಯಿಸುತ್ತಾರೆ. ಪ್ರಾಥಮಿಕ ಶಿಕ್ಷಣಕ್ಕೆ 'ಕರ್ನಾಟಕ ಶಿಕ್ಷೆ', 'ಬಾಲಶಿಕ್ಷೆ' ಇಲ್ಲವೇ 'ಕರ್ನಾಟಕ ಬಾಲಶಿಕ್ಷೆ' ಎಂದೂ, ಶಿಕ್ಷಕನಿಗೆ 'ಕರ್ನಾಟಕ ಪಂಡಿತ'ನೆಂದೂ ಸಂಜ್ಞೆಗಳಿದ್ದವು.[28] ಕರ್ನಾಟಕದ ವಿದ್ಯಾಭ್ಯಾಸ ಕ್ರಮವು ಬೌದ್ಧಶಿಕ್ಷಣಕ್ರಮ ಹಾಗೂ ಪಠ್ಯಕ್ರಮಗಳಿಂದ ಕೆಲಮಟ್ಟಿಗೆ ಪ್ರಭಾವಿತವಾಗಿರಬೇಕು. ಕರ್ನಾಟಕದಲ್ಲಿ ಬೌದ್ಧ ವಿಹಾರಗಳ ವಿದ್ಯಾಭ್ಯಾಸಕ್ರಮವು ಬ್ರಾಹ್ಮಣ ಶಿಕ್ಷಣಕ್ರಮವನ್ನೇ ಹೋಲುತ್ತದೆ.[29] ಹ್ಯುಯೆತ್‌ತ್ಸಾಂಗನು ಬೌದ್ಧ ವಿದ್ಯಾಭ್ಯಾಸವನ್ನು ಕುರಿತು ಹೀಗೆ ಹೇಳುತ್ತಾನೆ— 'ಆರಂಭದಲ್ಲಿ ಅವರು ಹನ್ನೆರಡು ಪ್ರಕರಣಗಳನ್ನು ಅನುಸರಿಸುತ್ತಾರೆ : ಮಕ್ಕಳು ಏಳು ವರ್ಷದವರಿದ್ದಾಗ ವ್ಯಾಕರಣ, ಕುಶಲಕೈಗಾರಿಕೆ, ವೈದ್ಯಕೀಯ, ತರ್ಕ, ಮನೋವಿಜ್ಞಾನಗಳ ಪರಿಚಯ ಮಾಡಿಕೊಡಲಾಗುತ್ತದೆ.'

ವಿದ್ಯಾಕೇಂದ್ರಗಳಿಗೆ ಪ್ರವೇಶ ಕೊಡುವಾಗ ವಿದ್ಯಾಸಂಸ್ಥೆಯ ದ್ವಾರಪಾಲಕನು ಅಭ್ಯರ್ಥಿಯನ್ನು ಪ್ರಶ್ನೆಗಳ ಮೂಲಕ ಪರೀಕ್ಷಿಸಿ ಒಳಗೆ ಬಿಡುತ್ತಿದ್ದ. ಬೌದ್ಧಸಂಘದ ಸಭೆಯಲ್ಲಿ ಅಭ್ಯರ್ಥಿಯು ವಿದ್ಯಾಭ್ಯಾಸ ಹೊಂದುವ ತನ್ನ ಇಚ್ಛೆಯನ್ನು ಖಚಿತಪಡಿಸಬೇಕಾಗುತ್ತಿತ್ತು. ಅಧ್ಯಾಪಕರು–ವಿದ್ಯಾರ್ಥಿಗಳ ಸಂಬಂಧವು ತಂದೆ–ಮಕ್ಕಳ ಸಂಬಂಧದಂತೆ ಮಧುರವಾಗಿರುತ್ತಿತ್ತು. ಸಂಸ್ಕೃತ ಹಾಗೂ ಪಾಲಿಭಾಷೆಗಳ ಜ್ಞಾನ ಅವಶ್ಯಕವಾಗಿತ್ತು. ಪ್ರಧಾನ ಭಿಕ್ಷುವು ವಿದ್ಯಾರ್ಥಿಗಳ ಅವಶ್ಯಕತೆಗಳ ಮೇಲ್ವಿಚಾರಣೆ ಮಾಡುತ್ತಿದ್ದನು. ಎಲ್ಲರಿಗೂ ಸಾಮಾನ್ಯವಾದ ಒಂದು ಭೋಜನಶಾಲೆ ಇರುತ್ತಿದ್ದು ಧನಿಕರ ಮಕ್ಕಳು ಅವುಗಳ ಕೆಲವೊಂದು ವೆಚ್ಚವನ್ನು ನೋಡಿಕೊಳ್ಳುತ್ತಿದ್ದರು. ಅಧ್ಯಾಪಕರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನವನ್ನು ಕೊಡುತ್ತಿದ್ದರು. ವಿಜ್ಞಾನದ ಪ್ರಾಧ್ಯಾಪಕನೊಬ್ಬ ೫೦೦ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದ ; ಸಾಹಿತ್ಯ ವಿದ್ಯಾಪತಿ ಬಿರುದಿನ ಗುಣಚಂಡಿಯ ಮಾರ್ಗದರ್ಶನದಲ್ಲಿ ೩೦೦ ವಿದ್ಯಾರ್ಥಿಗಳಿದ್ದರೆಂದು ಎಸ್. ವಿ. ಜೇವೂರ ಉಲ್ಲೇಖಿಸುತ್ತಾರೆ. ಈ ಪ್ರಸಿದ್ಧ ಅಧ್ಯಾಪಕರಿಗೆ ಕೆಲವು ಸಹಾಯಕರಿದ್ದಿರಬೇಕು ; ಒಬ್ಬ ಅಧ್ಯಾಪಕನ ಕೆಳಗೆ ಕೆಲವೇ ವಿದ್ಯಾರ್ಥಿಗಳಿರಬೇಕೆಂದು ಡಾ. ಎ. ಎಸ್. ಅಲ್ಟೇಕರ ಅಭಿಪ್ರಾಯಪಡುತ್ತಾರೆ.[30] ಶಿವಮೊಗ್ಗಾ ಜಿಲ್ಲೆಯ ಬೆಳ್ಳಿಗಾವೆಯ ವಿಹಾರದಲ್ಲಿ ಕ್ರಿ.ಶ. ೧೨ನೆಯ ಶತಕದ ವರೆಗೂ ಬೌದ್ಧಧರ್ಮವು ಒಂದು ಅಧ್ಯಯದ ವಿಷಯವಾಗಿ ಮುಂದುವರಿದಿತ್ತು.

ಸಾಕ್ಷರತಾಪ್ರಸಾರದ ಪ್ರಯತ್ನವು ವಿದ್ಯಾಕ್ಷೇತ್ರಕ್ಕೆ ಬೌದ್ಧಶಿಕ್ಷಣಕ್ರಮದ ವಿಶಿಷ್ಟ ಕೊಡುಗೆಯಾಗಿದೆ. ಆಧುನಿಕ ಯುಗದಲ್ಲಿಯೂ ಬೌದ್ಧಧರ್ಮ ಪ್ರಧಾನವಾದ ಬರ್ಮಾ ಮೊದಲಾದ ದೇಶಗಳಲ್ಲಿ ಸಾಕ್ಷರತೆಯ ಪ್ರಮಾಣವು

---

26 Prof. G. S. Dixit : 'Education of Science', *Karnataka Through The Ages.*

27 S. V. Jevoor : *History of Education in Karnataka.*

28 *Karnataka Through The Ages*, p. 345.

29 S. V. Jevoor : *History of Education in Karnataka*, p. 24.

30 *Life of Huinstang*, p. 112.

ಸಾಕಷ್ಟು ದೊಡ್ಡದಿದೆ. ಹಿಂದಿನ ದಿನಗಳಲ್ಲಿಯೂ ಬೌದ್ಧಭಿಕ್ಷುಗಳು ಹೋದಲ್ಲೆಲ್ಲಾ ಸಾಕ್ಷರತಾಪ್ರಸಾರಕ್ಕಾಗಿ ಶ್ರಮಿಸಿರಬೇಕೆಂಬುದನ್ನು ಊಹಿಸಬಹುದಾಗಿದೆ.[31]

**ಜೈನ ವಿದ್ಯಾಭ್ಯಾಸಕ್ರಮ :** ಕರ್ನಾಟಕದಲ್ಲಿ ಜೈನರ ಇತಿಹಾಸವು ಕ್ರಿ.ಪೂ. ೨೯೭ರಿಂದ ಆರಂಭವಾಯಿತು. ಚಂದ್ರಗುಪ್ತಮೌರ್ಯ ಹಾಗೂ ಭದ್ರಬಾಹು ಶ್ರವಣಬೆಳಗೊಳಕ್ಕೆ ಬಂದರು. ಅಶೋಕನ ಮೊಮ್ಮಗ ಸಂಪ್ರತಿಯೂ ಕರ್ನಾಟಕಕ್ಕೆ ಜೈನಧರ್ಮೋಪದೇಶಕರನ್ನು ಕಳಿಸಿರಬಹುದಾಗಿದೆ. ಅಂದಿನಿಂದ ವಿಜಯನಗರದ ಪತನದವರೆಗೂ ಜೈನರು ಕರ್ನಾಟಕದ ಸಾಮಾಜಿಕ ಜೀವನದಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಜನಸಾಮಾನ್ಯರ ಭಾಷೆಯಲ್ಲಿಯೇ ಧರ್ಮತತ್ವದ ಪ್ರಸಾರವನ್ನು ಜೈನರು ಕೈಕೊಂಡರು. ತೀರ್ಥಂಕರರ ಜೀವನಚರಿತ್ರೆಗಳ ಅಧ್ಯಯನವು ಪಠ್ಯಕ್ರಮದಲ್ಲಿ ಒಂದು ಪ್ರಮುಖ ಅಂಗವಾಗಿತ್ತು. ಉಚ್ಚ ವ್ಯಾಸಂಗಕ್ಕೆ ಸಂಸ್ಕೃತಭಾಷೆಯ ಅಧ್ಯಯನ ಆವಶ್ಯಕವಾಗಿತ್ತು. ಸಂಸ್ಕೃತ ಹಾಗೂ ಉಳಿದ ಭಾಷೆಗಳ ಮೂಲಕ ಜೈನಪಂಡಿತರು ಎಲ್ಲ ಧರ್ಮಗಳ ಅಧ್ಯಯನವನ್ನು ಮಾಡಿ ತಾರ್ಕಿಕ ವಾದ-ವಿವಾದ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದರು.[32] ಬಸದಿ, ಚೈತ್ಯಾಲಯ ಹಾಗೂ ದೇವಾಲಯಗಳು ವಿದ್ಯಾಕೇಂದ್ರಗಳಾಗಿರುವುದರ ಜೊತೆಗೆ ಜೈನರು ತಮ್ಮ ಮನೆಗಳಲ್ಲಿಯೂ ಅಧ್ಯಾಪನಕಾರ್ಯವನ್ನು ಕೈಕೊಂಡು ತಮ್ಮದೇ ಆದ ಪದ್ಧತಿಯನ್ನು ಅನುಸರಿಸಿದ್ದರು. ಉದಯದೇವಪಂಡಿತನು ಪೂಜ್ಯಪಾದನ ಗೃಹಛಾತ್ರನಾಗಿದ್ದನು.[33] ಇದು ವಿದ್ಯಾಕ್ಷೇತ್ರಕ್ಕೆ ಜೈನ ಕೊಡುಗೆಯ ವಿಶಿಷ್ಟಲಕ್ಷಣವಾಗಿದೆ.

ಜ್ಞಾನದ ವಿವಿಧ ಶಾಖೆಗಳಿಗೆ ಜೈನರದು ವಿಶಿಷ್ಟ ಕೊಡುಗೆ. ಗಣಿತ, ವೈದ್ಯ, ಶಿಲ್ಪ, ಜೀವಶಾಸ್ತ್ರ ಇತ್ಯಾದಿಗಳಲ್ಲಿ ಬಹಳಷ್ಟು ಕೃಷಿ ಮಾಡಿದರು. ಕ್ರಿ.ಶ. ೧೧೨೦ರಲ್ಲಿ ಇದ್ದ ರಾಜಾದಿತ್ಯನು ಗಣಿತಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ರಚಿಸಿದನು. ಕನ್ನಡದಲ್ಲಿ ಇಂಥ ವಿಷಯದ ಮೇಲೆ ಬರೆದ ಮೊದಲನೆಯ ಗ್ರಂಥಕರ್ತನು ಇವನೇ. ಕ್ರಿ.ಶ. ೬೦೦ರ ಪೂಜ್ಯಪಾದನೆಂಬ ವಿದ್ವಾಂಸನು ವೈದ್ಯಶಾಸ್ತ್ರದಲ್ಲಿ ಪ್ರಥಮ ಗ್ರಂಥಕರ್ತನು. ಅಹಿಂಸಾತತ್ವಕ್ಕೆ ಜೈನರು ಕೊಡುವ ಮಹತ್ವವೇ ವೈದ್ಯಕೀಯದಲ್ಲಿ ಅವರು ಹೆಚ್ಚಿನ ಕೆಲಸ ಮಾಡಲು ಕಾರಣವಾಗಿರಬೇಕು. ಚಾವುಂಡರಾಯನ 'ಲೋಕೋಪಕಾರ' ಗ್ರಂಥವು ಒಂದು ಜ್ಞಾನಕೋಶ ಮಾದರಿಯದಾಗಿದೆ. ಇದರಲ್ಲಿ ಔಷಧೋಪಚಾರ, ವಾಸ್ತುಶಿಲ್ಪ, ಜೀವಶಾಸ್ತ್ರ ಇತ್ಯಾದಿಗಳನ್ನು ಕುರಿತು ಹೇಳಲಾಗಿದ್ದು ಎಷ್ಟೋ ಅಂಶಗಳು ಇಂದಿಗೂ ಉಪಯುಕ್ತವಾಗಿವೆ. 'ಮಾನಸೋಲ್ಲಾಸ'ವು ಜೈನರ ಇನ್ನೊಂದು ಅಮೂಲ್ಯ ಕೊಡುಗೆ. ಆರನೆ ವಿಕ್ರಮಾದಿತ್ಯನ ಮಗ ಇಮ್ಮಡಿ ಸೋಮೇಶ್ವರನು ಇದರ ಕರ್ತೃ. ಇದರಲ್ಲಿ ಪಶುವೈದ್ಯ, ವಾಸ್ತುಶಿಲ್ಪ, ವರ್ಣಕೌಶಲ, ಪೀಠೋಪಕರಣ ಹಾಗೂ ವಾಹನಗಳ ವಿಷಯವಾಗಿ ಹೇಳಲಾಗಿದೆ.[34]

ಈ ಎಲ್ಲಾ ಅಂಶಗಳು ಕರ್ನಾಟಕದಲ್ಲಿ ಜ್ಞಾನಾಭಿವೃದ್ಧಿಗೆ ಜೈನರ ಕೊಡುಗೆ ಅಪಾರವಾಗಿದೆ ; ಎಂಬುದನ್ನು ಎತ್ತಿತೋರಿಸುತ್ತವೆ. ಜ್ಞಾನದ ಹಲವು ಕ್ಷೇತ್ರಗಳಲ್ಲಿ ಜೈನರು ಆದ್ಯಪ್ರವರ್ತಕರಷ್ಟೇ ಅಲ್ಲ ; ಘನತೆವೆತ್ತವರೂ ಆಗಿದ್ದರೆಂಬುದು ತಿಳಿದುಬರುತ್ತದೆ,

**ವಿದ್ಯಾಕ್ಷೇತ್ರಕ್ಕೆ ವೀರಶೈವ ಮಠಗಳ ಕೊಡುಗೆ :** ಕ್ರಿ.ಶ. ೧೨ನೆಯ ಶತಕದಲ್ಲಿ ವೀರಶೈವ ಆಂದೋಲನದೊಡನೆ ವಿದ್ಯಾಕ್ಷೇತ್ರದಲ್ಲಿ ಕ್ರಾಂತಿಕಾರಕ ಪರಿವರ್ತನೆಗಳು ಕಾಣಿಸಿಕೊಂಡವು. ವ್ಯಕ್ತಿತ್ವವು ರೂಪುಗೊಳ್ಳುವಲ್ಲಿ ವಿದ್ಯಾಸಂಸ್ಥೆಯ ಹಿರಿಯ ಪಾತ್ರವನ್ನು ಬಸವೇಶ್ವರರು ಗುರುತಿಸಿದರು. ಕುಟುಂಬವೇ ಸಾಮಾಜಿಕ ಜೀವನದ ಪ್ರಥಮ ಘಟಕ. ಮನೆಯ ತರುವಾಯ ಮಠ ಅಥವಾ ವಿದ್ಯಾಶಾಲೆಯೇ ವ್ಯಕ್ತಿಯ ಸರ್ವಾಂಗೀಣ ಉನ್ನತಿಯನ್ನು ರೂಪಿಸುವ ಸಂಸ್ಥೆ. ವ್ಯಕ್ತಿಯ ಭವಿಷ್ಯವು ಮನೆ ಹಾಗೂ ವಿದ್ಯಾಶಾಲೆಗಳಿಂದಲೇ ನಿರ್ಧರಿತವಾಗುವುದು. ಪರಿಸರದ ಜೊತೆಗೆ ವ್ಯಕ್ತಿಯ ಸಂಪರ್ಕ-ಸಂಬಂಧವನ್ನೇ ನಿಜವಾದ ಶಿಕ್ಷಣವು ಅವಲಂಬಿಸಿರುತ್ತದೆ. ಶಿಕ್ಷಣವು ಮನುಷ್ಯನನ್ನು ಸ್ವಾವಲಂಬಿಯಾಗಿ ಮಾಡಬೇಕು. ಬಸವೇಶ್ವರರು ತಮ್ಮ ಅನುಯಾಯಿಗಳನ್ನು ಯಾವುದಾದರೊಂದು ಉಪಯುಕ್ತ ಕಾಯಕ ಕೈಕೊಳ್ಳಲು ಪ್ರೇರೇಪಿಸಿ ಸ್ವಾವಲಂಬನೆಯತ್ತ ಕರೆದೊಯ್ದರು. ಇದರಿಂದ ವೈಯಕ್ತಿಕ ಉನ್ನತಿಯ ಜೊತೆಗೆ ಸಮಾಜಕ್ಕೂ ವ್ಯಕ್ತಿ ತನ್ನ ಸೇವೆ ಸಲ್ಲಿಸಲು ಸಾಧ್ಯವಾಯಿತು. 'ಸಮಾಜಸೇವೆಗಾಗಿ ಶಿಕ್ಷಣ' ಎಂದು ನಾವು ಆಧುನಿಕ ಯುಗದಲ್ಲಿ ಹೇಳುವ ವಿಚಾರದ ಬೀಜವನ್ನು ಬಸವೇಶ್ವರರು ಆಗಲೇ ಬಿತ್ತಿದ್ದರು. ವೃತ್ತಿಸ್ವಾತಂತ್ರ್ಯ, ಆರ್ಥಿಕ

[31] G. S. Dixit : *Karnataka Through The Ages*, p. 240.
[32] S. V. Jevoor : *A History of Education in Karnataka*, p. 29.
[33] G. S. Dixit : *Karnataka Through The Ages*, pp. 356-57.
[34] G. S. Dixit : *Karnataka Through The Ages*, pp. 358-359.

ಸ್ವಾತಂತ್ರ್ಯಗಳು ಸಮಾಜದ ಸ್ವಾಸ್ಥ್ಯಕ್ಕೆ ಪೋಷಕ ಅಂಶಗಳಾಗಿ ಆಧ್ಯಾತ್ಮಿಕ ಉನ್ನತಿಗೆ ಹೇಗೆ ಕಾರಣವಾಗಬಲ್ಲ ವೆಂಬುದಕ್ಕೆ ವೀರಶೈವ ಆಂದೋಲನವು ಒಂದು ನಿದರ್ಶನವಾಗಿದೆ. ಇವೆಲ್ಲಕ್ಕೂ ತಳಹದಿಯಾದುದು ಸ್ವತಂತ್ರ ಮುಕ್ತ ವಿಚಾರಶಕ್ತಿ. ಇಂದಿನ ಪ್ರಜಾತಾಂತ್ರಿಕ, ವೈಜ್ಞಾನಿಕಯುಗದ ಶಿಕ್ಷಣದ ಮೂಲಧ್ಯೇಯೋದ್ದೇಶಗಳಲ್ಲಿ ಮುಕ್ತ ವಿಚಾರಶಕ್ತಿಯ ಪ್ರಚೋದನೆಯು ಪ್ರಮುಖವಾದುದೆಂಬುದು ಸರ್ವವಿದಿತ. ಬಸವೇಶ್ವರರು ಭಾವಿ ಜನಾಂಗಕ್ಕೆ ಈ ಸ್ವತಂತ್ರ ವಿಚಾರಶಕ್ತಿಯ ಪೋಷಣೆಯ ಸಂಪ್ರದಾಯವನ್ನು ಬಳುವಳಿಯಾಗಿ ಕೊಟ್ಟರು. ಜಾತಿ-ಮತ-ವೃತ್ತಿ-ಲಿಂಗ–ಭೇದಗಳ ಸೋಂಕಿಲ್ಲದ ಸಮಾನತೆಯ ಕಲ್ಪನೆ ಅವರ ಇನ್ನೊಂದು ಪ್ರಮುಖ ಕೊಡುಗೆ. ತಾವು ರೂಪಿಸಿದ ಸಮಾಜದ ರಕ್ಷಣೆಗಾಗಿ ಬಸವೇಶ್ವರರು ಕರ್ನಾಟಕದ ಹಳ್ಳಿಹಳ್ಳಿಗೂ ಮಠಗಳನ್ನು ಸ್ಥಾಪಿಸಿದರು.

**ಮಠಗಳ ಸ್ವರೂಪ** : ಶಿಕ್ಷಣಪ್ರಸಾರಕಾರ್ಯಕ್ಕಾಗಿ ಮೂರು ಪ್ರಕಾರದ ಮಠಗಳನ್ನು ಸಂಘಟಿಸಲಾಯಿತು. ಸಾಲಿಮಠ, ಓದಿಸುಮಠ ಹಾಗೂ ವಿರಕ್ತಮಠ. ವೀರಶೈವ ಶರಣರ ಪಾರುಪತ್ಯದಲ್ಲಿ ಈ ಮಠಗಳು ಧರ್ಮ, ಶಿಕ್ಷಣ, ಸಾಹಿತ್ಯ ಹಾಗೂ ಸಂಸ್ಕೃತಿಯ ಕೇಂದ್ರಗಳಾಗಿ ಹಲವಾರು ಶತಮಾನಗಳವರೆಗೆ ನಾಡಿಗೆ ಸೇವೆ ಸಲ್ಲಿಸಿದವು. ಕ್ರಿ.ಶ. ೧೨ ನೆಯ ಶತಕದಲ್ಲಿ ಆಗಲೇ ಊರ್ಜಿತದಲ್ಲಿದ್ದ ಶಿಕ್ಷಣ ಸಂಸ್ಥೆಗಳಿಂದ ಪ್ರಭಾವಿತರಾದ ಶಿವಶರಣರು ತಮ್ಮವೇ ಆದ ಮಠಗಳನ್ನು ಸಂಘಟಿಸಿದರು. ಗುರುವೊಬ್ಬನ ಹಿರಿತನದಲ್ಲಿ ಮಠಗಳು ಹೀಗೆ ಸಂಘಟಿತವಾದುದು ಈ ಅವಧಿಯಲ್ಲಿಯೇ. ಇವು ದೇವಾಲಯಕ್ಕೆ ಹೊಂದಿಕೊಂಡಿದ್ದವು ; ಇಲ್ಲವೇ ಈ ಮಠಗಳಿಗೆ ದೇವಾಲಯಗಳನ್ನು ಜೋಡಿಸಲಾಗಿರುತ್ತಿತ್ತು.

**ಸಾಲಿಮಠ** : ಈ ಮಠಗಳು ಆಧುನಿಕ ಮೂಲಶಿಕ್ಷಣ ಶಾಲೆ (Basic School)ಗಳನ್ನು ಹೋಲುತ್ತಿದ್ದವು. ಗಾಂಧೀಜಿಯವರ ವಾರ್ಧಾ ಶಿಕ್ಷಣ ಪದ್ಧತಿಯ ಪ್ರತಿರೂಪವನ್ನು ಇಲ್ಲಿ ಗುರುತಿಸಬಹುದು.[35] ಓದು, ಬರಹ, ಗಣಿತ ಹಾಗೂ ಲೆಕ್ಕಾಚಾರಗಳಲ್ಲದೇ ಕಡ್ಡಾಯವಾಗಿ ಯಾವುದಾದರೊಂದು ಕೈಗಾರಿಕೆಯನ್ನು ಕಲಿಸಲಾಗುತ್ತಿತ್ತು. ನೂಲುವುದು, ನೇಯುವುದು, ಕೃಷಿ ವ್ಯವಸಾಯಗಳು ಮುಖ್ಯ ಕಾಯಕಗಳಾಗಿದ್ದು ಪ್ರಥಮಚಿಕಿತ್ಸೆಯ ಮಾದರಿಯ ವೈದ್ಯಕೀಯ ಜ್ಞಾನವನ್ನೂ ಕೊಡಲಾಗುತ್ತಿತ್ತು.[36] ಸಾಲಿಮಠಗಳು ಕೈಗಾರಿಕಾ ಶಾಲೆಗಳಾಗಿದ್ದವು.

**ಓದಿಸು ಮಠ** : ಇಲ್ಲಿ ಯಾವುದೇ ಕೈಗಾರಿಕೆಯನ್ನು ಕಲಿಸದೇ ಓದುವುದು, ಬರೆಯುವುದನ್ನು ಕಲಿಸಲಾಗುತ್ತಿತ್ತು. ಸಾಲಿಮಠಗಳಲ್ಲಿ ಅಧ್ಯಯನವನ್ನು ಮುಗಿಸಿದ ಎಷ್ಟೋ ವಿದ್ಯಾರ್ಥಿಗಳು ಈ ಮಠಗಳಿಗೆ ಸೇರುತ್ತಿದ್ದರು. ಇಲ್ಲಿ ಸಾಹಿತ್ಯ ಹಾಗೂ ಇತರ ವಿಷಯಗಳನ್ನು ಕಲಿಯುತ್ತಿದ್ದರು. ಸಂಸ್ಕೃತದ ಅಧ್ಯಯನಕ್ಕೂ ಇಲ್ಲಿ ತಕ್ಕ ಸ್ಥಾನವಿತ್ತು. ಈ ಓದಿಸು ಮಠಗಳು ಕ್ರಿ.ಶ. ೧೯ನೆ ಶತಕದ ಕೊನೆಗೆ ವೀರಶೈವ ಸಂಸ್ಕೃತ ಪಾಠಶಾಲೆಗಳಾಗಿ ಪರಿವರ್ತಿತವಾದುವು. ಈಗ ಈ ಓದಿಸು ಮಠಗಳಿಗೆ 'ಉದಸಿ ಮಠ' ಎನ್ನುತ್ತಾರೆ. ಹಳ್ಳಿಗಳಲ್ಲಿಯ ಎಷ್ಟೋ ಹಿರೆಮಠಗಳು ಓದಿಸು ಮಠಗಳಾಗಿ ಕಾರ್ಯ ಮಾಡಿದವು.

**ವಿರಕ್ತ ಮಠಗಳು** : ಈ ಮಠಗಳು ಉಚ್ಚಶಿಕ್ಷಣಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿದ್ದವು. ಧರ್ಮಸಮ್ಮೇಲನಗಳು, ವಿವಿಧ ವಿಷಯಗಳ ಮೇಲೆ ವಿಚಾರಗೋಷ್ಠಿಗಳು ಮತ್ತು ಉಪನ್ಯಾಸಶಿಬಿರಗಳು ವಿರಕ್ತಮಠಗಳ ಆಶ್ರಯದಲ್ಲಿ ನಡೆಯುತ್ತಿದ್ದವು. ಬಸವೇಶ್ವರರು ಕಲ್ಯಾಣದಲ್ಲಿ ಸ್ಥಾಪಿಸಿದ ಅನುಭವಮಂಟಪದ ಮಾದರಿಯಲ್ಲಿ ವಿರಕ್ತಮಠಗಳು ಕಾರ್ಯ ಮಾಡುತ್ತಿದ್ದವು. ಸಾಲಿಮಠ, ಓದಿಸು ಮಠಗಳಲ್ಲಿ ಅಧ್ಯಯನವನ್ನು ಮುಗಿಸಿ ವಿದ್ಯಾರ್ಥಿಗಳು ಉಚ್ಚ ವ್ಯಾಸಂಗಕ್ಕಾಗಿ ವಿರಕ್ತಮಠಗಳಿಗೆ ಹೋಗುತ್ತಿದ್ದರು. ಇಂದಿನ ಸ್ನಾತಕೋತ್ತರ ವಿದ್ಯಾಕೇಂದ್ರಗಳನ್ನು ಇವು ಹೋಲುತ್ತಿದ್ದವು. ಸಮಾಜಕ್ಕೆ ಉಪಯುಕ್ತವಾದ ಒಂದುಸೂರಾ ಒಂದು 'ಕಾಯಕ' ಇಲ್ಲವೇ ವೃತ್ತಿಗಳನ್ನು ಇಲ್ಲಿ ಕಲಿಸಲಾಗುತ್ತಿತ್ತೆಂದು ಹೇಳಲಾಗುತ್ತದೆ.[37]

ಸಮಾಜ ಸೇವಕರಾದ ಶಿವಶರಣರು ಹಳ್ಳಿಹಳ್ಳಿಗಳಲ್ಲಿ ವಾಸಿಸಿ ಮಕ್ಕಳಿಗೆ ಓದು–ಬರಹ ಹಾಗೂ ವೃತ್ತಿ ಶಿಕ್ಷಣವನ್ನು ಕೊಡುತ್ತಿದ್ದರು. ವಿದ್ಯಾರ್ಥಿ—ಅಧ್ಯಾಪಕರ ನಡುವೆ ಮಧುರಬಾಂಧವ್ಯವಿತ್ತೆಂಬುದಕ್ಕೆ ವಚನ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳಿವೆ. ಬೇರೆಬೇರೆ ಪ್ರಕಾರದ ಮಠಗಳ ಉಲ್ಲೇಖವೂ ವಚನಗಳಲ್ಲಿದೆ. ಕಲ್ಯಾಣದಲ್ಲಿ ಬಗೆಬಗೆಯ ಅಸಂಖ್ಯ ಮಠಗಳಿದ್ದವೆಂದು ಹೇಳಲಾಗಿದೆ. ೨,೮೫,೭೭೦ ದಾಸೋಹ ಮಠಗಳು, ೧೦,೦೦೦ ನಿತ್ಯನೇಮಿಗಳ ಮಠಗಳು,

---

35 G. S. Gadgimath : *Kayaka System of Educations Studies in Education and Culture*, pp. 256–259.

36 G. S. Dixit : *Karnataka Through The Ages*, p. 356.

37 G. S. Gadgimath : *Ibid*, p. 261.

೧೫,೦೦೦ ವ್ರತಸ್ಥರ ಮಠಗಳು, ೧೨,೦೦೦ ಅಚ್ಚಪ್ರಸಾದಿಗಳ ಮಠಗಳು ಹಾಗೂ ೧೦೬೩ ಶೀಲಸಂಪನ್ನರ ಮಠಗಳೂ ಇದ್ದವು.[38] ಹರಿಹರಕವಿಯ 'ಅಕ್ಕಮಹಾದೇವಿ ರಗಳೆ'ಯಲ್ಲಿ ಕಲುಮಠ, ಹುಲುಮಠಗಳನ್ನು ಹೇಳಲಾಗಿದೆ. ಹುಲ ಮಠದ ಧರ್ಮಗುರುಗಳು ರಾಜಗುರುಗಳಾಗಿ ಹೆಚ್ಚಿನ ಗೌರವಕ್ಕೆ ಪಾತ್ರರಾಗಿದ್ದರು.

**ವಿದ್ಯಾಕೇಂದ್ರಗಳಾದ ಕೆಲವು ಮಠಗಳು :** ಶೈವಮತದ ಶಾಖೆಯಾದ ಕಾಳಾಮುಖಪಂಥವು ಕ್ರಿ.ಶ. ೧೧-೧೨ ನೆಯ ಶತಕಗಳಲ್ಲಿ ಊರ್ಜಿತಸ್ಥಿತಿಯಲ್ಲಿತ್ತು. ಕಾಳಾಮುಖರ ಅಧೀನದಲ್ಲಿ ಹಲವಾರು ಮಠಗಳೂ ದೇವಾಲಯಗಳೂ ಇದ್ದವು. ಕಾಳಾಮುಖರು ರಾಜಗುರುಗಳೆನಿಸಿದ್ದರು. ಬೆಳಗಾಮಿ, ಕುಪ್ಪಟೂರ, ಮುಳಗುಂದ, ಹುನಗೊಳ, ಅಬ್ಬಟೂರು, ದೇವನಗೇರಿ, ಕಿರುವಾಡೆ, ಕಬ್ಬಿನಶಿರಿವೂರು ಮುಂತಾದ ಸ್ಥಳಗಳಲ್ಲಿ ಈ ಕಾಳಾಮುಖರ ಮಠಗಳು ವಿದ್ಯಾಕೇಂದ್ರಗಳಾಗಿದ್ದವು. ಗದಗ, ಇಂಗಳೇಶ್ವರ, ವಿಜಯಪುರ, ಮುತ್ತಗಿ, ಬಾಗೇವಾಡಿಗಳಲ್ಲಿಯ ಮಠಗಳೂ ಇವರ ಅಧೀನದಲ್ಲಿದ್ದವು. ಮೈಸೂರು, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿಯೂ ಇಂಥ ಮಠಗಳಿದ್ದವು. ಕ್ರಿ.ಶ. ೧೨ನೆಯ ಶತಕದಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿಯು ಅಗ್ರಹಾರಗಳ ಮುಕುಟಮಣಿಯಾಗಿ ವಿದ್ವನ್ಮಣಿಗಳ ಕೇಂದ್ರವಾಗಿತ್ತು.[39] ಕೂಡಲಸಂಗಮವು 'ಚಕ್ರವರ್ತಿಗಳ ಆದ್ಯ ಬ್ರಹ್ಮಪುರಿ'ಯಾಗಿತ್ತು. ಸಂಗಮದ ಮಹಾಜನರು ಸಂಗಮೇಶ್ವರನ ಭಕ್ತರಾಗಿದ್ದರು. ಶ್ರೀ ಬಸವೇಶ್ವರರು ಇಂಥ ವಿದ್ಯಾಕೇಂದ್ರದಲ್ಲಿ ಹನ್ನೆರಡು ವರ್ಷಕಾಲ ವ್ಯಾಸಂಗ ಮಾಡಿದ್ದರು. ಬಿಜಾಪುರದ ನಿಕಟವರ್ತಿಯಾಗಿ ಮುತ್ತಗಿಯೂ ಮತ್ತೊಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಉಚ್ಚ ವಿದ್ಯಾಕೇಂದ್ರಗಳನ್ನೊಳಗೊಂಡ ಇಂಥ ಪರಿಸರದಲ್ಲಿ ಬಸವೇಶ್ವರರು ಹುಟ್ಟಿ ಬೆಳೆದರು. ಈ ಮಠಗಳ ಪಾರುಪತ್ಯಗಾರರಾದ ಕಾಳಾಮುಖರು ಶಿಕ್ಷಣತಜ್ಞರಾಗಿದ್ದರು.

ಕ್ರಿ.ಶ. ೧೧–೧೨ನೆಯ ಶತಕದಲ್ಲಿ ಮೂಡಿ ಬಂದ ವೀರಶೈವ ಆಂದೋಲನವು ಶಿಕ್ಷಣಕ್ಕೆ ಹೊಸ ತಿರುವು ಕೊಟ್ಟಿತು. ಬಹಳಷ್ಟು ಮಠಗಳೂ ದೇವಾಲಯಗಳೂ ವಿಶೇಷವಾಗಿ ಉತ್ತರ ಕರ್ನಾಟಕ ಮತ್ತು ಉಳಿದ ಭಾಗಗಳಲ್ಲಿ, ವೀರಶೈವರಿಗೆ ಹಸ್ತಾಂತರ ಹೊಂದಿದಂತೆ ಕಾಣುತ್ತದೆ.[40] ಬಸವೇಶ್ವರರಿಗಿಂತ ಪೂರ್ವದಲ್ಲಿ ಶಿಕ್ಷಣ ಸಂಸ್ಥೆಯನ್ನು ಪ್ರತ್ಯೇಕಿಸುವಷ್ಟು ಮಠಗಳು ಸ್ವತಂತ್ರವಾಗಿರಲಿಲ್ಲವೆಂದು ತೋರುತ್ತದೆ. ಬಸವೇಶ್ವರರ ಕಾಲದಲ್ಲಿಯೇ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಪ್ರತ್ಯೇಕ ಅಸ್ತಿತ್ವವನ್ನು ಪಡೆದುವು.

**ಸಂಘಟನೆ ಹಾಗೂ ಆಡಳಿತ :** ಶ್ರೀಸಾಮಾನ್ಯನನ್ನು ವಿದ್ಯಾವಂತನನ್ನಾಗಿ ಮಾಡುವ ದೃಷ್ಟಿಯಿಂದ ಮಠಗಳನ್ನು ಸಂಘಟಿಸಲಾಯಿತು. ಬೌದ್ಧ, ಬ್ರಾಹ್ಮಣ, ಜೈನಧರ್ಮಗಳು ಭಾರತೀಯ ಸಮಾಜದ ಬೌದ್ಧಿಕ–ನೈತಿಕ ಮುಖಗಳನ್ನು ಫಲವತ್ತಾಗಿಸಿದ್ದವು. ಅವರು ತಾತ್ವಿಕವಾಗಿ ಬಹಳಷ್ಟು ಕಾರ್ಯ ಮಾಡಿದ್ದರು. ಆದರೆ ಆ ಆದರ್ಶಗಳನ್ನು ವ್ಯವಹಾರಕ್ಕೆ ಅಳವಡಿಸುವಲ್ಲಿ ಜನಸಾಮಾನ್ಯರಿಗೆ ಸಹಾಯ ಮಾಡುವಲ್ಲಿ ಬಹಳಷ್ಟು ಕೆಲಸ ಮಾಡಲಿಲ್ಲ. ವೀರಶೈವ ಮಠಗಳು 'ಜ್ಞಾನವೇ ಕ್ರಿಯೆ, ಕ್ರಿಯೆಯೇ ಜ್ಞಾನ' ಎಂಬ ಲೌಕಿಕ ಸಿದ್ಧಾಂತದ ಆಧಾರದ ಮೇಲೆ ರೂಪುಗೊಂಡವು. ಕ್ರಿಯಾ ಮೂಲಕ ಜ್ಞಾನವೇ ನಿಜವಾದ ಜ್ಞಾನ ; ಇದೇ ವೀರಶೈವ ಮಠಗಳ ರಚನೆಯ ತಳಹದಿಯಾಗಿತ್ತು.

ಅಲ್ಲಿಯವರೆಗೆ ಶಿಕ್ಷಣವು ಸಮಾಜದ ಕೆಲವೇ ಸುದೈವಿಗಳ ಸೊತ್ತಾಗಿತ್ತು. ವೀರಶೈವಮಠಗಳು ಮತ, ಪಂಥ, ವೃತ್ತಿ, ಸ್ಥಾನ, ಲಿಂಗ, ಯಾವ ಭೇದವೂ ಇಲ್ಲದೇ ಶಿಕ್ಷಣಕ್ಕೆ ಎಲ್ಲರಿಗೂ ಪ್ರವೇಶ ಕೊಡುವ ಪ್ರಜಾಸತ್ತಾತ್ಮಕ ಸಿದ್ಧಾಂತವನ್ನು ವ್ಯವಹಾರಕ್ಕೆ ತರುವ ಉದ್ದೇಶದಿಂದ ರೂಪಿತವಾದುವು. ಸ್ತ್ರೀಯರಿಗೆ ಸಮಾನ ಶೈಕ್ಷಣಿಕ ಅವಕಾಶ ವೀರಶೈವ ಮಠಗಳ ವಿಶಿಷ್ಟ ಕೊಡುಗೆಯಾಗಿದೆ.

ಮುಕ್ತವಿಚಾರ ಹಾಗೂ ಕ್ರಿಯಾಸ್ವಾತಂತ್ರ್ಯ ಈ ಸಂಘಟನೆಯ ಇನ್ನೊಂದು ಮಹತ್ವದ ಅಂಶ. ಶ್ರಮಗೌರವದ ತತ್ವವನ್ನು ರಕ್ತಗತಗೊಳಿಸುವುದು ಈ ಮಠಗಳ ಪ್ರಾಮಾಣಿಕ ಗುರಿಯಾಗಿತ್ತು. ದೈಹಿಕಶ್ರಮವನ್ನೊಳಗೊಂಡ ಯಾವ ಕಾರ್ಯವೂ ಪವಿತ್ರವೆಂದು ಪರಿಗಣಿಸಲಾಯಿತು. ಇದು ಈ ನಾಡಿನ ಅರ್ಥವ್ಯವಸ್ಥೆಯ ಚರಿತ್ರೆಯಲ್ಲಿ ಒಂದು ಹೊಸ ತಳಹದಿಯಾಯಿತು. ಜನಸಾಮಾನ್ಯರ ಭಾಷೆಯನ್ನೇ ಬೋಧಭಾಷೆಯಾಗಿ ಸ್ವೀಕರಿಸಿದ್ದು ಈ ಸಂಘಟನೆಯ ಮಹತ್ವಪೂರ್ಣ ವೈಶಿಷ್ಟ್ಯ.

---

38 ಚನ್ನಬಸವಣ್ಣನ ವಚನ, ಪು. 357 ; ಸಂ : ಆರ್. ಸಿ. ಹಿರೇಮಠ 1965.

39 *South Indian Inscription*, vol. XV No. 113. p. 144.

40 G. S. Dixit : 'Social and Religions Conditions of Karnatak before Basaveshvara', *Basaveshvara Eighth Centenary Commemoratian Volume*, p. 123.

ಮನುಷ್ಯನ ನೈಸರ್ಗಿಕ ಬೆಳವಣಿಗೆಯ ಮಾನಸಶಾಸ್ತ್ರೀಯ ಸಿದ್ಧಾಂತದ ಮೇಲೆಯೇ ವೀರಶೈವಮಠಗಳ ಸಂಘಟನೆಯಾಗಿತ್ತೆಂಬುದನ್ನು ಸುಲಭವಾಗಿ ಊಹಿಸಬಹುದಾಗಿದೆ. ವಿದ್ಯಾಕ್ಷೇತ್ರದಲ್ಲಿ ಮೂಡಿದ ಇಂದಿನ ೨೦ನೆಯ ಶತಕದ ಅತ್ಯಾಧುನಿಕ ವಿಚಾರಗಳನ್ನು ಶ್ರೀ ಬಸವೇಶ್ವರರು ಎಂಟುನೂರು ವರ್ಷಗಳ ಹಿಂದೆಯೇ ರೂಪಿಸಿದ್ದರು.

**ಮಠಗಳಲ್ಲಿಯ ಪಠ್ಯಕ್ರಮ :** ಮಠಗಳಲ್ಲಿ ಕಲಿಸುತ್ತಿದ್ದ ವಿಷಯಗಳ ಬಗ್ಗೆ ನಿಶ್ಚಿತವಾಗಿ ಹೇಳಲು ಆಧಾರಗಳಿಲ್ಲ. ಸಾಮಾನ್ಯವಾಗಿ ಮಠಗಳಲ್ಲಿ ಪ್ರಾಥಮಿಕ ಶಿಕ್ಷಣವೂ ಅಗ್ರಹಾರಗಳಲ್ಲಿ ಉಚ್ಚ ವ್ಯಾಸಂಗವೂ ನಡೆಯುತ್ತಿದ್ದವು. ಉಪಲಬ್ಧವಿರುವ ದಾಖಲೆಗಳು ಮಠಗಳಲ್ಲಿ ಕಲಿಸುತ್ತಿದ್ದ ವಿಷಯಗಳು ಇಲ್ಲವೇ ಬೋಧನಾಪದ್ಧತಿಗಳ ಮೇಲೆ ಹೆಚ್ಚಿನ ಬೆಳಕು ಬೀರುವುದಿಲ್ಲ. ಸಾಮಾನ್ಯವಾಗಿ ಮಕ್ಕಳು ಐದನೇ ವಯಸ್ಸಿಗೆ ಮಠಕ್ಕೆ ಸೇರಿ ಮೂಲಾಕ್ಷರ ಕಲಿಯುತ್ತಿದ್ದರು. ಪುರಿಗೆರೆಯ ರಾಮೇಶ್ವರ ದೇವಾಲಯಕ್ಕೆ ಸೇರಿದ ಮಠದಲ್ಲಿ ಕನ್ನಡ ವ್ಯಾಕರಣವನ್ನು ಕಲಿಸಲಾಗುತ್ತಿತ್ತೆಂದು ಹೇಳಲಾಗಿದೆ.[41] ಕ್ರಿ.ಶ. ೧೩ನೆಯ ಶತಕದ ಪೂರ್ವದಲ್ಲಿದ್ದ ವಿದ್ಯಾಭ್ಯಾಸಕ್ರಮವನ್ನು ಕುರಿತು ಡಾ. ಎ. ಎಸ್. ಅಲ್ತೆಕರ ಹೀಗೆ ಹೇಳುತ್ತಾರೆ— "ಜನಸಾಮಾನ್ಯರನ್ನು ಸಂಸ್ಕೃತ ಪಂಡಿತರನ್ನಾಗಿಸುವ ಉದ್ದೇಶವಿರಲಿಲ್ಲ. ಪ್ರಾದೇಶಿಕ ಭಾಷಾಶಿಕ್ಷಣದ ಮೂಲಕ ನಿತ್ಯ ಜೀವನವನ್ನು ಸಮರ್ಥವಾಗಿ ಸಾಗಿಸಲು ಅವರನ್ನು ಶಕ್ತರನ್ನಾಗಿ ಮಾಡುವುದೇ ಧ್ಯೇಯೋದ್ದೇಶವಾಗಿತ್ತು. ಓದು, ಬರಹ, ವ್ಯಾವಹಾರಿಕ ಗಣಿತ, ಲೆಕ್ಕಾಚಾರ, ಪ್ರಾದೇಶಿಕ ಭಾಷೆಗಳ ಒಳ್ಳೆಯ ಜ್ಞಾನ, ಕೆಲವು ಸಂಸ್ಕೃತ ಶ್ಲೋಕಗಳ ಉಚ್ಚಾರಣೆ ಹಾಗೂ ಮಹಾಕಾವ್ಯಗಳ ಮೂಲಕ ನೈತಿಕ ಶಿಕ್ಷಣ ಇವು ಕ್ರಿ.ಶ. ೧೨೦೦ರ ಸುಮಾರಿನ ಪ್ರಾದೇಶಿಕ ಭಾಷಾ ಶಿಕ್ಷಣದ ಪಠ್ಯಕ್ರಮದಲ್ಲಿ ಒಳಗೊಂಡಿದ್ದವು."[42]

ಅಧ್ಯಾಪಕರು-ವಿದ್ಯಾರ್ಥಿಗಳಲ್ಲಿ ಪರಸ್ಪರ ಸರಿಯಾದ ತಿಳಿವಳಿಕೆ ಇರುತ್ತಿತ್ತು. ಗುರುವಿಗೆ ಉನ್ನತ ಗೌರವವಿತ್ತು. ಆತ್ಮಸಾಕ್ಷಾತ್ಕಾರದ ಪ್ರಥಮ ಅವಶ್ಯಕತೆಯೇ ಗುರು. ಇತ್ತೀಚಿನವರೆಗೂ ವೀರಶೈವ ಧರ್ಮಗುರುಗಳು ನಡೆಸುತ್ತಿದ್ದ ಪಾಠಶಾಲೆಗಳು ಯಾವುದಾದರೊಂದು ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತಿದ್ದವು. ಅಧ್ಯಾಪಕರಿಗೆ ಅಯ್ಯನವರು ಎಂಬ ಸಂಜ್ಞೆ ಇತ್ತು.

ಮಠಗಳಲ್ಲಿ ವಿದ್ಯಾರ್ಥಿಗಳಿಗೆ ಕಠೋರ ಅನುಶಾಸನವನ್ನು ವಿಧಿಸಲಾಗುತ್ತಿತ್ತು. ಅವರು ನಿಷ್ಠಬ್ರಹ್ಮಚಾರಿಗಳಾಗಿ ಪರಿಶ್ರಮದಿಂದ ಅಧ್ಯಯನ ಮಾಡಬೇಕಾಗುತ್ತಿತ್ತು.

**ಧನಸಹಾಯ :** ವಿದ್ಯಾಕೇಂದ್ರಗಳಾದ ಈ ಮಠಗಳಿಗೆ ಆಳರಸರು, ಅಧಿಕಾರಿಗಳು, ಜನಸಾಮಾನ್ಯರಿಂದ ಉದಾರ ಧನಸಹಾಯ ದೊರೆಯುತ್ತಿತ್ತೆಂಬುದು ಶಾಸನಗಳಿಂದ ತಿಳಿದುಬರುತ್ತದೆ, ಮಠಗಳಿಗಾಗಿ ಒಂದೊಂದು ಹಳ್ಳಿಯನ್ನೇ ಅನುದಾನವಾಗಿ ಕೊಡುತ್ತಿದ್ದ ಉಲ್ಲೇಖಗಳಿವೆ.[43]

**ವಿಜಯನಗರದ ಕಾಲದಲ್ಲಿ ವೀರಶೈವಮಠಗಳು :** ಕ್ರಿ.ಶ. ೧೨ನೆಯ ಶತಕದಲ್ಲಿ ಸಂಘಟಿಸಲ್ಪಟ್ಟ ವೀರಶೈವ ಮಠಗಳು ವಿದ್ಯಾಕ್ಷೇತ್ರದಲ್ಲಿ ಧ್ಯೇಯನಿಷ್ಠವಾಗಿ ಕಾರ್ಯ ಮಾಡಿದವೆಂಬುದನ್ನು ಅರಿತಿದ್ದೇವೆ. ಆದರೆ ಮುಂದಿನ ಎರಡು ಶತಕಗಳಲ್ಲಿ ಇವುಗಳ ಕಾರ್ಯಕ್ಕೆ ಆಘಾತವುಂಟಾಯಿತು. ವೀರಶೈವ ಆಂದೋಲನದ ಕೇಂದ್ರವಾದ ಕಲ್ಯಾಣ ಪ್ರದೇಶವು ಮುಸಲ್ಮಾನ ದಾಳಿಗಾರರ ಕೈವಶವಾಗಿ ಕ್ರಿ.ಶ. ೧೪ನೆಯ ಶತಕದಲ್ಲಿ ಬಹಮನಿರಾಜ್ಯದ ಸ್ಥಾಪನೆಯೇ ಇದಕ್ಕೆ ಕಾರಣ.[44] ಉತ್ತರದ ಮುಸಲ್ಮಾನರ ದಾಳಿಗಳಿಂದಾಗಿ ೧೩-೧೪ನೆಯ ಶತಕದಲ್ಲಿ ದಕ್ಷಿಣದಲ್ಲಿಯ ಎಲ್ಲ ಸಾಮಾಜಿಕ ಸಂಸ್ಥೆಗಳೂ ಮುಗ್ಗರಿಸಿದವು.[45] ಕ್ರಿ.ಶ. ೧೨೯೪ರಲ್ಲಿ ಅಲ್ಲಾಉದ್ದೀನ್ ಖಿಲ್ಜಿಯಿಂದ ದೇವಗಿರಿಯ ಮೇಲೆ ದಾಳಿ, ಕ್ರಿ.ಶ. ೧೩೧೦ ಮಹಮ್ಮದತುಘಲಕನು ದ್ವಾರಸಮುದ್ರವನ್ನು ಹಾಳುಗೆಡವಿದ್ದು ಹಿಂದೂಧರ್ಮ—ಸಂಸ್ಕೃತಿಗಳಿಗೆ ವಜ್ರಾಘಾತವೇ ಸರಿ. ಧರ್ಮದ ಆಶ್ರಯದಲ್ಲಿ ಬೆಳೆದು ಬಂದ ವಿದ್ಯಾಕೇಂದ್ರಗಳು ಮುಗ್ಗರಿಸಿದ್ದು ಸ್ವಾಭಾವಿಕವೇ. ಅಂದಿನ ಹೃದಯ ವಿದ್ರಾವಕ ಸ್ಥಿತಿಯನ್ನು ಕ್ರಿ.ಶ. ೧೩೭೨ರ ಗಂಗಾದೇವಿಯು ತನ್ನ 'ಮಧುರಾವಿಜಯ' ಅಥವಾ 'ವೀರಕಂಪಣರಾಯ ಚರಿತ' ಕಾವ್ಯದಲ್ಲಿ ಸ್ಪಷ್ಟವಾಗಿ ಚಿತ್ರಿಸಿದ್ದಾಳೆ : ಯಾಗಧೂಮದಿಂದಲೂ ವೇದ-ಶಾಸ್ತ್ರಧ್ವನಿಗಳಿಂದಲೂ ತುಂಬಿದ ವಿದ್ಯಾಕೇಂದ್ರಗಳಲ್ಲಿ ಮಹಮ್ಮದೀಯರು ಸುಡುವ ಮಾಂಸದ ವಾಸನೆ, ಒರಟು ಕೂಗಾಟಗಳೂ ತಾಂಡವವಾಡುತ್ತಿವೆ.

---

41 *South Indian Inscription*, xx, No. 40.
42 *Education In Ancient India*, p. 184.
43 *Epigraphia Karnatika*, SK. 96, 102, vii SK. 105.
44 G. S. Dixit : *Karnataka Through The Ages*, p. 591.
45 S. V. Jevoor : *History of Education in Karnataka*, p. 92.

ಉತ್ತರದ ಮಹಮ್ಮದೀಯರ ದಾಳಿಗಳಿಂದ ಹಿಂದೂಧರ್ಮ–ಸಂಸ್ಕೃತಿಯನ್ನು ರಕ್ಷಿಸುವ ಏಕಮೇವ ಉದ್ದೇಶದಿಂದ ದಕ್ಷಿಣದಲ್ಲಿ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಯಿತು. ವಿಜಯನಗರದ ಅರಸರು ಹಿಂದೂ ಶಿಕ್ಷಣ, ಸಾಹಿತ್ಯ, ಕಲಾಕೇಂದ್ರಗಳ ಅಭಿವೃದ್ಧಿಗಾಗಿ ವಿಶೇಷ ಗಮನ ಕೊಟ್ಟುದು ಸಮಯದ ಅವಶ್ಯಕತೆಯೇ ಆಗಿತ್ತು. ಎಲ್ಲಾ ಧಾರ್ಮಿಕ ಮತ-ಪಂಥಗಳಿಗೂ ರಕ್ಷಣೆ ಕೊಡುವುದು ವಿಜಯನಗರದ ಅರಸರ ಸಾಮಾನ್ಯ ನೀತಿಯಾಗಿತ್ತು. ಸ್ವತಃ ವಿದ್ಯಾವಂತರಾಗಿದ್ದುದರಿಂದ ವಿಜಯನಗರದ ಅರಸರು ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸಿ ಶಿಕ್ಷಣ ಪ್ರಸಾರಕ್ಕೆ ನೆರವು ನೀಡಿದರು.[46] ಸಾಹಿತ್ಯ–ಕಲೆಗಳು ವೈಭವದ ಉನ್ನತ ಶಿಖರವನ್ನು ಮುಟ್ಟಿದವು. ಈ ಯುಗದ ಕನ್ನಡ ಸಾಹಿತ್ಯಕ್ಕೆ ವೀರಶೈವರ ಕೊಡುಗೆ ಅಮೂಲ್ಯವಾಗಿದೆ.

ಅಂದಿನ ವೀರಶೈವ ಮಠಗಳ ಸ್ಥಿತಿಗತಿಗಳನ್ನು ಅರಿಯಲು ಆ ಅವಧಿಯಲ್ಲಿ ಉದ್ಭವಿಸಿದ ವೀರಶೈವಸಾಹಿತ್ಯದ ಇಣುಕು ನೋಟ ಅವಶ್ಯಕವಾಗಿದೆ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಯಾವುದೇ ವಿಷಯವು ಧರ್ಮ–ಸಾಹಿತ್ಯಗಳಿಗೆ ನಿಕಟವಾಗಿ ಹೊಂದಿಕೊಂಡಿತ್ತು. ಕ್ರಿ.ಶ. ೧೪ನೆಯ ಶತಕದಲ್ಲಿ ಕಲ್ಯಾಣದ ಅವನತಿಯ ನಂತರ ವೀರಶೈವರು ಕರ್ನಾಟಕದ ಇತರ ಭಾಗಗಳಿಗೆ ವಲಸೆ ಹೋದರು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗಲು ಅಲ್ಲಿ ಆಶ್ರಯ ಪಡೆದರು. ವೀರಶೈವ ಆಂದೋಲನಕ್ಕೆ ಮತ್ತೆ ಚಾಲನೆ ದೊರೆಯಿತು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಪರಿಣಾಮವಾಗಿ ಮೂಡಿಬಂದ ಹಿಂದೂಧರ್ಮದ ಪುನರುಜ್ಜೀವನವು ವೀರಶೈವ ವೈಚಾರಿಕರ ಮೇಲೂ ಪ್ರಭಾವ ಬೀರಿತು. ಈ ವೇಳೆಗೆ ಕರ್ನಾಟಕದಲ್ಲಿ ವೀರಶೈವರು ಬಹುಮತ ಪಂಗಡವಾಗಿ ಬೆಳೆದು ಬಂದಿದ್ದರು.[47] ಪೂರ್ವದ ಧಾರ್ಮಿಕ ಸಾಹಿತ್ಯದ ಸಂಗ್ರಹ ಹಾಗೂ ರಕ್ಷಣೆಗೆ ಪ್ರಯತ್ನಗಳಾದವು. ವಿವಿಧ ಗ್ರಂಥಗಳಿಗೆ ವ್ಯಾಖ್ಯೆಗಳು ಬರೆಯಲ್ಪಟ್ಟವು.

ಸಂಗಮ ವಂಶದ ಕೆಲವು ಅರಸರು ಶೈವಮತದ ಕಡೆಗೆ ಒಲವುಳ್ಳವರಿದ್ದರು. ಪ್ರೌಢದೇವರಾಯನು (ಕ್ರಿ.ಶ. ೧೪೧೯–೪೪) ವೀರಶೈವಧರ್ಮವನ್ನು ಸ್ವೀಕರಿಸಿದನೆಂದು ಹೇಳಲಾಗುತ್ತದೆ. ಈ ಪ್ರೌಢದೇವರಾಯನ ಆಳಿಕೆಯಲ್ಲಿ ವೀರಶೈವಧರ್ಮವು ವಿಪುಲವಾಗಿ ಆಶ್ರಯವನ್ನು ಪಡೆಯಿತು.[48] ಜಕ್ಕಣಾರ್ಯ ಹಾಗೂ ಲಕ್ಕಣದಂಡೇಶರೆಂಬ ಇಬ್ಬರು ವೀರಶೈವ ಗ್ರಂಥಕರ್ತರು ಪ್ರೌಢದೇವರಾಯನಲ್ಲಿ ದಳಪತಿಗಳಾಗಿದ್ದರು. ನೂರೊಂದು ವಿರಕ್ತರೆಂದು ಪ್ರಸಿದ್ಧರಾದ ಶಿವಶರಣರಿದ್ದುದು ಈತನ ಕಾಲದಲ್ಲಿಯೇ. ಚಾಮರಸನಂಥ ವೀರಶೈವಕವಿಗಳೂ ಈ ಅವಧಿಯಲ್ಲಿ ಬಾಳಿದವರು. ಭೀಮಕವಿಯ (ಕ್ರಿ.ಶ. ೧೩೬೯) ಬಸವಪುರಾಣವು ಈ ಯುಗದ ಕೊಡುಗೆ. ಲಕ್ಕಣದಂಡೇಶನ 'ಶಿವತತ್ವಚಿಂತಾಮಣಿ' (೧೪೨೮), ಗುಬ್ಬಿಯ ಮಲ್ಲಣಾರ್ಯನ 'ವೀರಶೈವಾಮೃತಪುರಾಣ' ಮುಂತಾದ ಕೃತಿರತ್ನಗಳು ಈ ಅವಧಿಯಲ್ಲಿಯೇ ರೂಪುಗೊಂಡುವು.

ವೀರಶೈವರ ವಿಶಿಷ್ಟ ಕೊಡುಗೆಯಾದ ವಚನ ಸಾಹಿತ್ಯವೂ ವಿಜಯನಗರದ ಕಾಲದಲ್ಲಿ ಪುನರುಜ್ಜೀವನಗೊಂಡಿತು. ಈ ಅವಧಿಯಲ್ಲಿ ಕೆಲವರು ಹೊಸ ರಚನೆ ಮಾಡಿದರು. ಪೂರ್ವದ ವಚನಸಾಹಿತ್ಯಸಂಗ್ರಹಕಾರ್ಯವನ್ನು ಹಲವರು ಮಾಡಿದರು. ತೋಂಟದ ಸಿದ್ಧಲಿಂಗಯತಿ ವಚನ ಸಾಹಿತ್ಯಕ್ಕೆ ತಮ್ಮ ವಿಶಿಷ್ಟ ಕೊಡುಗೆ ನೀಡಿದರು. 'ಶೂನ್ಯಸಂಪಾದನೆ' ಪೂರ್ವದ ವಚನ ಸಾಹಿತ್ಯದ ಕ್ರಮಬದ್ಧ ಹಾಗೂ ವ್ಯಾಖ್ಯೆನೀಡಲ್ಪಟ್ಟ ಕೃತಿರತ್ನ. ನಿಜಗುಣ ಶಿವಯೋಗಿ ಈ ಯುಗದ ಶ್ರೇಷ್ಠ ಲೇಖಕರಲ್ಲೊಬ್ಬರು. ಸಂಸ್ಕೃತ–ಕನ್ನಡ ಎರಡರಲ್ಲೂ ನಿಷ್ಣಾತರಾದ ನಿಜಗುಣರು ಒಬ್ಬ ಪ್ರಥಮ ದರ್ಜೆಯ ಶಿಕ್ಷಕರೂ ಆಗಿದ್ದು ಜನಸಾಮಾನ್ಯರಲ್ಲಿ ವಿದ್ಯಾಜಾಗೃತಿಗಾಗಿ ಶ್ರಮಿಸಿದವರು. ಅವರ ಪ್ರಮುಖ ಕೃತಿಗಳಾದ 'ಪರಮಾನುಭವಬೋಧೆ' ಹಾಗೂ 'ವಿವೇಕಚಿಂತಾಮಣಿ'ಗಳು ಶೈಕ್ಷಣಿಕ ವಿಚಾರಗಳನ್ನು ಒಳಗೊಂಡಿವೆ. ಶಿಕ್ಷಕರಲ್ಲಿ ಬೇರೆಬೇರೆ ಪ್ರಕಾರ, ಆದರ್ಶ ವಿದ್ಯಾರ್ಥಿಯ ಲಕ್ಷಣಗಳು, ಕಲಿಸುವ ತಂತ್ರಗಳು, ಕಲಿಯುವಿಕೆಯ ಮೆಟ್ಟಲುಗಳು ಮುಂತಾದವುಗಳನ್ನು ಅವರು ಉಲ್ಲೇಖಿಸುತ್ತಾರೆ. ನಿಜಗುಣರು ಸಹ ಶಿಕ್ಷಣ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತಾರೆ. ನೈತಿಕ ಶಿಕ್ಷಣ, ಧಾರ್ಮಿಕ ಶಿಕ್ಷಣ, ಆಧ್ಯಾತ್ಮಿಕ ಶಿಕ್ಷಣ, ದೈಹಿಕ ಶಿಕ್ಷಣವನ್ನು ಕುರಿತು ಅವರು ಚಿಂತನೆ ಮಾಡಿದ್ದಾರೆ. ನಿಜಗುಣಶಿವಯೋಗಿಗಳು ತಮ್ಮಷ್ಟಕ್ಕೇ ಒಂದು ಪ್ರಭಾವಶಾಲಿ ಸಂಸ್ಥೆಯಾಗಿದ್ದರು. ಅವರ ಸುತ್ತಲೂ ಅಸಂಖ್ಯ ಶಿಷ್ಯರು ಒಟ್ಟಾಗಿದ್ದರು. ವಿಜಯನಗರದ ಸ್ಥಾಪನೆಯ ನಂತರ ವೀರಶೈವಕಾರ್ಯಚಟುವಟಿಕೆಗಳ ಎರಡು ಕೇಂದ್ರಗಳನ್ನು ಕಾಣುತ್ತೇವೆ. ಒಂದು ವಿದ್ಯಾನಗರ (ವಿಜಯನಗರ)ದಲ್ಲಿಯೇ ಜಕ್ಕಣಾರ್ಯ ಹಾಗೂ ಲಕ್ಕಣದಂಡೇಶರಂಥ ದಂಡನಾಯಕರ

46 G. S. Dixit : *Karnataka Through The Ages*, p. 609
47 S. V. Jevoor : *History of Education In Karnataka*, p. 138
48 G. S. Dixit : *Karnataka Through The Ages*, p. 591

ಪೋಷಣೆಯಲ್ಲಿ ; ಇನ್ನೊಂದು ನಾಗಿನಿ ತೀರದ ಕುಣಿಗಲ್ ಬಳಿ ತೋಂಟದ ಸಿದ್ಧಲಿಂಗಯತಿಗಳ ಆಧ್ಯಾತ್ಮಿಕ ಮಾರ್ಗದರ್ಶನದಲ್ಲಿ.[49]

**ವಿಜಯನಗರ ಕಾಲದಲ್ಲಿ ವೀರಶೈವ ಮಠಗಳ ಹಿರಿಮೆ:** ಒಂದು ನಾಡು ಶಾಂತಿ–ಸಮೃದ್ಧಿಗಳಲ್ಲಿದ್ದರೆ ಶಿಕ್ಷಣವು ಊರ್ಜಿತದಲ್ಲಿರುತ್ತದೆ. ವಿಜಯನಗರದ ಸಮರ್ಥ ಆಡಳಿತದ ಕಾಲದಲ್ಲಿ ಸಾಹಿತ್ಯ–ಕಲೆಗಳಂತೆ ವಿದ್ಯಾಕ್ಷೇತ್ರದಲ್ಲಿಯೂ ಅಭಿವೃದ್ಧಿಯಾಯಿತು. ಶಿಕ್ಷಣವು ಆಳರಸರ ಹೊಣೆಗಾರಿಕೆಯಾಗಿರದೆ ವಿವಿಧ ಮತ–ಪಂಥಗಳು ತಮ್ಮದೇ ಆದ ರೀತಿಯಲ್ಲಿ ಶಿಕ್ಷಣಸಂಸ್ಥೆಗಳನ್ನು ನಡೆಸಿಕೊಂಡು ಬಂದವು. ಇದರಲ್ಲಿ ಆಳರಸರು ಬಹಳಷ್ಟು ಹಸ್ತಕ್ಷೇಪ ಮಾಡುತ್ತಿರಲಿಲ್ಲ.[50] ಆಳರಸರು ಈ ವಿದ್ಯಾಸಂಸ್ಥೆಗಳಿಗೆ ಆಶ್ರಯ ಕೊಡುತ್ತಿದ್ದರು, ಕರ್ನಾಟಕದಲ್ಲಿ ತಕ್ಷಶಿಲಾ, ನಲಂದ, ವಲಭಿಯಂಥ ವಿಶ್ವವಿದ್ಯಾಲಯ ಕೇಂದ್ರಗಳಿಲ್ಲದಿದ್ದರೂ ಸಾಹಿತ್ಯ, ಕಲೆ, ಧರ್ಮಗಳ ಕ್ಷೇತ್ರಗಳಲ್ಲಿ ನೂರಾರು ಮೇಧಾವಿಗಳನ್ನು ನಿರ್ಮಿಸಿದ ವಿದ್ಯಾಸಂಸ್ಥೆಗಳು ನಾಡಿನ ತುಂಬೆಲ್ಲ ಪಸರಿಸಿದ್ದವು. ಇದು ಜಗತ್ತಿನ ಯಾವುದೇ ದೇಶಕ್ಕೆ ಅನುಕರಣೀಯ.[51] ಉಳಿದ ಮತ–ಪಂಥಗಳಂತೆ ವೀರಶೈವರಿಗೆ ದೊಡ್ಡದೊಡ್ಡ ದೇವಸ್ಥಾನಗಳಿರಲಿಲ್ಲ. ಮಠವೇ ಅವರ ಶೈಕ್ಷಣಿಕ–ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಮಠಗಳು ಹೆಚ್ಚಾಗಿ ಹಳ್ಳಿಗಳಲ್ಲಿದ್ದವು. ವೀರಶೈವ ಧರ್ಮಗುರುಗಳು ಹಳ್ಳಿಯ ಜನತೆಯಲ್ಲಿ ವಿದ್ಯಾಪ್ರಸಾರದ ಕಾರ್ಯವನ್ನು ಕೈಗೊಂಡರು.

**ಮಠಗಳಲ್ಲಿ ಬೋಧನಾಕ್ರಮ:** ಪ್ರಾಥಮಿಕವಾಗಿ ಓದು–ಬರಹ, ಗಣಿತವನ್ನು ಕಲಿಸಲಾಗುತ್ತಿತ್ತು. ಇದಕ್ಕೆ 'ಬಾಲಬೋಧೆ'[52] ಎಂದು ಹೆಸರು. ಮಕ್ಕಳು ಉಸುಕಿನ ಮೇಲೆ ಮೂಲಾಕ್ಷರ ಹಾಗೂ ಅಂಕೆಗಳನ್ನು ಬರೆಯಲು ಕಲಿಯುತ್ತಿದ್ದರು. ನಂತರ ಗುಣಾಕಾರ, ಅಪೂರ್ಣಾಂಕ, ಹಣ–ತೂಕ–ಅಳತೆಯ ಕೋಷ್ಟಕ ಕಲಿಯುತ್ತಿದ್ದರು. ಕಲಿತದ್ದನ್ನು ಪುನರುಚ್ಚಾರದ ಮೂಲಕ ಕಂಠಪಾಠ ಮಾಡಿ ಮತ್ತೆ ಬರೆಯುತ್ತಿದ್ದರು. ಕಲಿಯುವ ಈ ಸರಳ ವಿಧಾನವನ್ನು ಕ್ರಿ.ಶ. ೧೬೨೩ರಲ್ಲಿ ಭಾರತಕ್ಕೆ ಭೇಟಿಕೊಟ್ಟ ಪಿಟ್ರೊವೇಲಾ ತುಂಬಾ ಮೆಚ್ಚಿಕೊಂಡಿದ್ದಾನೆ. ಕಾಗದ-ಶಾಯಿ ಇತ್ಯಾದಿಗಳನ್ನು ಹಾಳುಮಾಡದೇ ಕಲಿಯುವ ಈ ವಿಧಾನ ನಿಜವಾಗಿಯೂ ಸುಲಭವಾದುದು.[53] ಈ 'ಧೂಳಾಕ್ಷರ' ವಿಧಾನವನ್ನು ಚಿಕ್ಕನಂಜೇಶನ 'ರಾಘವಾಂಕ ಚರಿತೆ'ಯಲ್ಲಿ ಉಲ್ಲೇಖಿಸಲಾಗಿದೆ.[54] ಧೂಳಾಕ್ಷರಾಧ್ಯಯನದ ನಂತರ ಕಾಗದದ ಮೇಲೆ ಬರೆಯುವುದು, ಓದುವುದು, ಗಣಿತ ಕಲಿಯುತ್ತಿದ್ದುದು, ಸೋಮೇಶ್ವರಶತಕ. ಪಂಚತಂತ್ರ, ಜೈಮಿನಿಭಾರತದಂಥ ಗ್ರಂಥಗಳನ್ನು ಬೋಧಿಸಲಾಗುತ್ತಿತ್ತು. ಮಕ್ಕಳು ಚಿಕ್ಕವರಿದ್ದಾಗಲೇ ನೀತಿಪಾಠಗಳನ್ನೂ ಅವರ ಅಭಿರುಚಿಗೆ ತಕ್ಕ ವಿಷಯಗಳನ್ನೂ ಕಲಿಸಲಾಗುತ್ತಿತ್ತು.[55]

ವಿದ್ಯಾನಂದನು (ಕ್ರಿ.ಶ. ೧೫೫೩) ಹೇಳುವ-ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ನಡೆಯಬೇಕಾದರೆ ಅಧ್ಯಾಪಕರ ಆರ್ಥಿಕ ಸ್ಥಿತಿ ಚೆನ್ನಾಗಿರಬೇಕು– ಎಂಬ ಮಾತನ್ನು ಗಮನಿಸಿದರೆ ಆಗಲೂ ಅಧ್ಯಾಪಕರ ಆರ್ಥಿಕ ಮಟ್ಟ ಸಮಾಧಾನಕರವಿರಲಿಲ್ಲವೆಂದು ತೋರುತ್ತದೆ.[56]

ಮಠಗಳಲ್ಲಿ ವಾಸಿಸುತ್ತಿದ್ದ ಗುರುಗಳು ವಿವಿಧ ಶಾಸ್ತ್ರಗಳಲ್ಲಿ ಪಾರಂಗತರಾಗಿ ಕೆಲವರು ಸಂಸ್ಕೃತ–ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯವುಳ್ಳವರಾಗಿರುತ್ತಿದ್ದರು. ಇವರು ಹಳ್ಳಿಹಳ್ಳಿಗೆ ಹೋಗಿ ಭಕ್ತರ ಮನೆಗಳಲ್ಲಿ ಮಕ್ಕಳನ್ನು ಪರೀಕ್ಷಿಸಿ ಒಳ್ಳೆಯ ಪುಸ್ತಕಗಳನ್ನು ಓದಲು ಹೇಳುತ್ತಿದ್ದರು. ವಚನಸಾಹಿತ್ಯಕ್ಕೆ ಹೆಚ್ಚಿನ ಚಲಾವಣೆಯನ್ನು ಕೊಟ್ಟರು. ಈ ವಿಧಾನವು ಕರ್ನಾಟಕದ ಅಸಂಖ್ಯಾತ ಹಳ್ಳಿಗಳ ಜನರಿಗೆ ಅಪಾರ ಸೇವೆ ಸಲ್ಲಿಸಿತು. ವೀರಶೈವಧರ್ಮ ಗುರುಗಳು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹೊಣೆಗಾರಿಕೆ ಹೊಂದಿದವರಾಗಿದ್ದರು. ಮಕ್ಕಳಿಗೆ ವಿವಿಧ ವಿಷಯಗಳನ್ನು ಬೋಧಿಸುತ್ತಿದ್ದರು. ಓದು, ಬರಹ, ಲೆಕ್ಕಪತ್ರ ಹಾಗೂ ಇತರ ಉಪಯುಕ್ತ ಜ್ಞಾನವನ್ನು ಕೊಡುವುದಲ್ಲದೇ

---

49 D.L. Narasimhachar : 'Kannada Literature in Vijayanagara' *Vijayanagara Sixth Centuary Volume*, p. 355

50 T. V. Mahalingam : *Administration of Social Life Under Vijayanagara*, p. 348.

51 A. P. Karamarkar : *Cultural History of Karnataka*, p. 113.

52 R. V. Perulekar : *Survey of Indigenous...Education in the Province of Bombay* (1820-30), p. 7.

53 Travels of Pietropellavalle, II, pp. 227-28.

54 ಸಂ. ಸ. ಸ. ಮಾಳವಾಡ: ಸಂಧಿ II, ಪದ್ಯ 53.

55 *South Indian Inscriptions*, IV, No. 267, p. 62.

56 'ಕರ್ನಾಟಕ ಕವಿಚರಿತೆ' ಸಂಪುಟ II, ಪುಟ 312.

ರಾಜಶೇಖರವಿಳಾಸ, ಜೈಮಿನಿ, ಚನ್ನಬಸವಪುರಾಣಗಳಂಥ ಗ್ರಂಥಗಳ ಬೋಧನೆಯ ಮೂಲಕ ಪ್ರೌಢ ಸಾಹಿತ್ಯದ ಅಭಿರುಚಿಯನ್ನು ಹುಟ್ಟಿಸುತ್ತಿದ್ದರು. ಶರಣರ ವಚನಗಳು, ರಗಳೆ, ಪುರಾಣಗಳು, ಕಾವ್ಯಗಳನ್ನೂ ಕಲಿಸಲಾಗುತ್ತಿತ್ತು.[57] ಷಟ್‌ಸ್ಥಲ, ಶೂನ್ಯಸಂಪಾದನೆ, ವಿವೇಕಚಿಂತಾಮಣಿಯಂಥ ಶ್ರೇಷ್ಠ ಸಾಹಿತ್ಯದ ಮೂಲಕ ಧಾರ್ಮಿಕ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಮಕ್ಕಳು ವ್ಯಾಕರಣ ಹಾಗೂ ಕಾವ್ಯಶಾಸ್ತ್ರದ ಜ್ಞಾನವನ್ನೂ ಪಡೆಯುತ್ತಿದ್ದರು. ವೀರಶೈವ ಮಠಗಳು ಜನಪ್ರಿಯ ವಿದ್ಯಾಭ್ಯಾಸಕ್ರಮದ ಮೂಲಕ ಸಾಕ್ಷರತಾಪ್ರಸಾರ ಕೈಕೊಂಡವು.

**ಧನಸಹಾಯ–ಅನುದಾನಗಳು :** ವೀರಶೈವ ಮಠಗಳಿಗೆ ಪಾಲಕರು–ಸಾರ್ವಜನಿಕರಿಂದ ಧನಸಹಾಯ ದೊರೆಯುತ್ತಿತ್ತೆಂದು ತೋರುತ್ತದೆ. ಧರ್ಮ ಹಾಗೂ ಶಿಕ್ಷಣದ ಸಲುವಾಗಿ ಆಳರಸರೂ ಮಠಗಳಿಗೆ ಸಹಾಯ ಸಲ್ಲಿಸುತ್ತಿದ್ದರು. ಅಗ್ರಹಾರಗಳಿಗೆ ನೀಡಿದಂತೆ ಮಠಗಳಿಗೆ ಅನುದಾನ ನೀಡಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳು ಉಪಲಬ್ಧವಿಲ್ಲ. ಅಂದಿನ ಸಾಮಾಜಿಕ ಸ್ಥಿತಿಯನ್ನೂ ಜನರ ವಿದ್ಯಾಪಕ್ಷಪಾತವನ್ನೂ ನೋಡಿದಾಗ ವೀರಶೈವ ಮಠಗಳೂ ಜನರ ಉದಾರ ಸಹಾಯದಿಂದಲೇ ನಡೆಯುತ್ತಿದ್ದಿರಬಹುದೆಂದು ಊಹಿಸಬಹುದು. ಮಠಗಳ ವಿದ್ಯಾಭ್ಯಾಸಕ್ರಮದ ಮೌಲ್ಯಮಾಪನದ ವಿಷಯವಾಗಿ ದಾಖಲೆಗಳಿಲ್ಲ. ಅವಶ್ಯಕವೆನಿಸಿದಾಗ ವಿದ್ಯಾರ್ಥಿಯನ್ನು ಬಹಿರಂಗವಾಗಿ ಪರೀಕ್ಷಿಸುವ ವಿಧಾನವಿತ್ತು. ವೀರಶೈವ ಮಠಗಳ ಅಧ್ಯಾಪಕರ ಬುದ್ಧಿಮತ್ತೆಯನ್ನು ಹೀಗೆ ಪರೀಕ್ಷಿಸಲಾಗುತ್ತಿತ್ತು. ಶಿಕ್ಷಕರು ಸದ್ಗುಣಗಳಾಗಿ ಗೌರವಸ್ಥರಾಗಿರುತ್ತಿದ್ದರು. ಶಿಕ್ಷಕ-ವಿದ್ಯಾರ್ಥಿಯ ಸಂಬಂಧ ನಿಕಟವೂ ಮಧುರವೂ ಆಗಿರುತ್ತಿತ್ತು. ಈ ಆದರ್ಶಬಾಂಧವ್ಯವು ಮಠಗಳ ವಿಶಿಷ್ಟ ಲಕ್ಷಣಗಳಲ್ಲೊಂದು. ವರ್ಗಗಳಲ್ಲಿ ವಿದ್ಯಾರ್ಥಿನಾಯಕ ಪದ್ಧತಿ ಇತ್ತೆಂದು ಪಿಟ್ರೊಪೆಲಾವೆಲ ವರ್ಣಿಸುತ್ತಾನೆ. ಮೇಧಾವಿ ವಿದ್ಯಾರ್ಥಿಯು ಶಿಕ್ಷಕನಿಗೆ ಕಲಿಸುವ ಕೆಲಸದಲ್ಲಿ ಸಹಾಯ ಮಾಡುತ್ತಾನೆ. ಈ ವಿಧಾನವು ಪಾಶ್ಚಾತ್ಯಬೋಧನಶಾಸ್ತ್ರಕ್ಕೆ ಭಾರತದ ಕೊಡುಗೆಗಳಲ್ಲೊಂದು.[58]

ವಿಜಯನಗರದ ಅರಸರ ಕಾಲದಲ್ಲಿ ಹಿಂದೆ ಹೇಳಿದಂತೆ ವಿಜಯನಗರವೇ ಒಂದು ಪ್ರಭಾವಶಾಲಿ ವಿದ್ಯಾಕೇಂದ್ರವಾಗಿ ವೀರಶೈವಮಠಗಳನ್ನು ಹೊಂದಿತ್ತು. ತೋಂಟದ ಸಿದ್ಧಲಿಂಗಯತಿಗಳು ೭೦೧ ವಿರಕ್ತರ ಮುಕುಟಮಣಿಯಾಗಿ ಕಗ್ಗೆರೆಯ ಸಮೀಪದಲ್ಲಿ ವಿದ್ಯಾಕೇಂದ್ರವಾದರು. ಇದರಿಂದಾಗಿ ಕಗ್ಗೆರೆ, ಮಂಗಳೆ, ಸಿದ್ಧಗಂಗಾ, ಮಾದೇಶ್ವರಬೆಟ್ಟ ಮುಂತಾದವು ಧಾರ್ಮಿಕ–ಶೈಕ್ಷಣಿಕ ಕೇಂದ್ರಗಳಾದವು. ಸುತ್ತೂರು ಹಾಗೂ ಶ್ರೀಶೈಲ ಮಠಗಳಿಗೆ ಆಳರಸರ ವಿಶೇಷ ಪೋಷಣೆ ದೊರೆಯಿತು. ಶ್ರೀಶೈಲಪೀಠಾಚಾರ್ಯರಲ್ಲಿ ವಿಜಯನಗರದ ಅರಸರಿಗೆ ವಿಶೇಷ ಗೌರವವಿತ್ತೆಂದು ತಿಳಿದು ಬರುತ್ತದೆ. ಈ ಮಠಗಳು ಧರ್ಮ ಹಾಗೂ ವಿದ್ಯಾಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿವೆ.

ವಿಜಯನಗರದ ಅರಸರ ಕಾಲದಲ್ಲಿ ನಾಡಿನ ಮೂಲೆಮೂಲೆಗಳಲ್ಲಿ ಹರಡಿದ್ದ ಚಿಕ್ಕ–ದೊಡ್ಡ ವೀರಶೈವ ಮಠಗಳು ಜನಸಾಮಾನ್ಯರಲ್ಲಿ ವಿದ್ಯಾಪ್ರಸಾರ ಮಾಡಿದವು; ಕರ್ನಾಟಕದ ಹಳ್ಳಿಹಳ್ಳಿಯಲ್ಲಿ ವಿದ್ಯಾಭ್ಯಾಸ ಜೀವಂತವಾಗಿ ಉಳಿಯಲು ಈ ಮಠಗಳೇ ಕಾರಣ ಎಂದು ಹೇಳಬಹುದಾಗಿದೆ.

**ಕೆಳದಿ ಅರಸರ ಕಾಲದಲ್ಲಿ ವೀರಶೈವ ಮಠಗಳು :** ವಿಜಯನಗರದ ತರುವಾಯ ಕರ್ನಾಟಕದಲ್ಲಿ ಕೆಳದಿ ರಾಜ್ಯವು ಪ್ರಬಲಶಕ್ತಿಯಾಯಿತು. ವಿಜಯನಗರದ ಕಾಲದಲ್ಲಿಯೇ ಅಂದರೆ ಕ್ರಿ.ಶ. ೧೫ನೆಯ ಶತಕದ ಕೊನೆಗೆ ಕೆಳದಿ ರಾಜ್ಯದ ಸ್ಥಾಪನೆಯಾಗಿತ್ತು. ೧೮ನೆಯ ಶತಕದ ಕೊನೆಯವರೆಗೆ ಕೆಳದಿ ರಾಜ್ಯವು ಊರ್ಜಿತದಲ್ಲಿತ್ತು. ವೀರಶೈವ ಮಠಗಳ ಉನ್ನತಿಯ ದೃಷ್ಟಿಯಲ್ಲಿ ಕೆಳದಿ ಅರಸರ ಆಳಿಕೆಯು ಮಹತ್ವಪೂರ್ಣವಾಗಿದೆ. ಇದಕ್ಕೆ ಎರಡು ಕಾರಣಗಳುಂಟು. ಕೆಳದಿ ರಾಜ್ಯವನ್ನು ಆಳಿದ ಎಲ್ಲ ರಾಜ–ರಾಣಿಯರೂ ವೀರಶೈವರಾಗಿದ್ದರು ಮತ್ತು ಕೆಳದಿ ಅರಸರು ಸಾಹಿತ್ಯ ಹಾಗೂ ಶಿಕ್ಷಣಕ್ಕೆ ಉದಾರ ಆಶ್ರಯ ನೀಡಿದರು. ಹದಿನೆಂಟು ಜನ ಪ್ರಮುಖ ಆಳರಸರ ಹೆಸರುಗಳನ್ನು ಡಾ. ಜಿ. ಎಸ್. ದೀಕ್ಷಿತ್ ಉಲ್ಲೇಖಿಸುತ್ತಾರೆ. ಕೆಳದಿ, ಇಕ್ಕೇರಿ, ಬಿದನೂರುಗಳು ಇವರ ರಾಜಧಾನಿಗಳಾಗಿದ್ದವು. ಮಡಿಕೇರಿಯಿಂದ ಗೋವೆಯವರೆಗೆ ಇವರ ರಾಜ್ಯದ ವಿಸ್ತಾರವಿತ್ತು.

ಈ ಅವಧಿಯಲ್ಲಿಯ ಧರ್ಮದ ಹಾಗೂ ಸಾಹಿತ್ಯದ ಸ್ವರೂಪವನ್ನು ಪರೀಕ್ಷಿಸುವುದು ವೀರಶೈವ ಮಠಗಳು ಹಾಗೂ ಅವುಗಳ ಶೈಕ್ಷಣಿಕ ಚಟುವಟಿಕೆಗಳನ್ನರಿಯಲು ಸಹಾಯಕವಾಗುವುದು. ಸರ್ವಧರ್ಮಸಹಿಷ್ಣುಗಳಾದ ಕೆಳದಿ ನಾಯಕರು ಎಲ್ಲ ಮತ-ಪಂಥಗಳಿಗೂ ಆಶ್ರಯ ನೀಡಿದರು. ಶೃಂಗೇರಿಯ ಅದ್ವೈತಮಠವೂ, ಉಡುಪಿಯ ದ್ವೈತ ಮಠವೂ ಆಳರಸರ ಆಶ್ರಯ ಪಡೆದವು; ಕ್ರಿಶ್ಚಿಯನ್ನರನ್ನೂ ಮುಸ್ಲಿಮರನ್ನೂ ಉದಾರವಾಗಿ ಕಂಡರು.

---

57 ಬಿ. ಶಿವಮೂರ್ತಿಶಾಸ್ತ್ರೀ : 'ಶಿವಾನುಭವ', ಸಂಪುಟ 12, ಪುಟ 395–96.

58 R. V. Parulekar : *Ibid*, p. 31.

ಕೆಳದಿ ಅರಸರು ವೀರಶೈವಸಂಸ್ಥೆಗಳಿಗೆ ಗಟ್ಟಿಮುಟ್ಟಾದ ತಳಹದಿಯ ಮೇಲೆ ಮನ್ನಣೆ ನೀಡಲು ಪ್ರಯತ್ನಿಸಿದರು. ಈ ಅವಧಿಯಲ್ಲಿ ಮೂಡಿಬಂದ ವೀರಶೈವ ಸಾಹಿತ್ಯವು ಪ್ರೌಢವಾಗಿತ್ತು. ಆಳರಸರಲ್ಲಿ ಕೆಲವರು ಸ್ವತಃ ಕವಿಗಳಾಗಿದ್ದರು. ಕವಿಗಳಿಗೆ ಆಶ್ರಯ ಕೊಟ್ಟರು; ಅವರ ಹಿತರಕ್ಷಣೆಗಾಗಿ ಗಮನ ಕೊಟ್ಟರು. ಈ ಅವಧಿಯ ಕವಿಗಳು, ದಾರ್ಶನಿಕರು, ಮಠಗಳು ನೀಡಿದ ಕೊಡುಗೆ ಬಹು ಅಮೂಲ್ಯವಾಗಿದೆ. ಮಠಗಳು–ಧರ್ಮ, ಸಾಹಿತ್ಯ, ವಿದ್ಯಾಕೇಂದ್ರಗಳಾಗಿದ್ದವು. ವೀರಶೈವ ಮಠಗಳ ನಿರ್ಮಾಣದಲ್ಲಿ ಕೆಳದಿ ಅರಸರು ಅಭಿರುಚಿಯುಳ್ಳವರಾಗಿದ್ದರೆಂಬುದಕ್ಕೆ ಶಾಸನಗಳಲ್ಲಿ ನಿದರ್ಶನಗಳಿವೆ. ವಿದ್ಯಾಭಿವೃದ್ಧಿಗಾಗಿ ಅವರು ಉದಾರವಾಗಿ ದಾನ ಮಾಡಿದರು. ರಾಜಮಾತೆಯರೂ, ರಾಣಿಯರೂ, ರಾಜಪರಿವಾರದವರೂ ಮಠಗಳನ್ನು ಕಟ್ಟಿಸಿದರು.

ಕೆಳದಿ ಅರಸರ ಕಾಲದಲ್ಲಿದ್ದ ವೀರಶೈವ ಮಠಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು– ವಿರಕ್ತ ಮಠಗಳು, ವಶೀಕೃತ ಮಠಗಳು, ಮಹತ್ತಿನ ಮಠಗಳು ಹಾಗೂ ಇತರ ಮಠಗಳು.[59] ವಿರಕ್ತಮಠಗಳ ಹಾಗೂ ವಶೀಕೃತ ಮಠಗಳ ಸಂಖ್ಯೆ ಹೆಚ್ಚಾಗಿರಲಿಲ್ಲ. ಮಹತ್ತಿನ ಮಠಗಳೂ ಇತರ ಮಠಗಳೂ ಕೆಳದಿರಾಜ್ಯದ ತುಂಬೆಲ್ಲ ಪಸರಿಸಿದ್ದವು. ಮಹತ್ತಿನ ಮಠಗಳ ಪಾತ್ರವೂ ಹಿರಿದಾಗಿತ್ತು. ಮಠಗಳು ಬಹುಮುಖ ಕಾರ್ಯಚಟುವಟಿಕೆಯಲ್ಲಿ ತೊಡಗಿರುತ್ತಿದ್ದವು. ದೇವೋಪಾಸನೆ, ವಿದ್ಯಾಭ್ಯಾಸ, ಸಾಮಾಜಿಕ–ಸಾಂಸ್ಕೃತಿಕ ಜೀವನದ ಕೇಂದ್ರಗಳಾಗಿದ್ದವು. ಮಠಾಧಿಪತಿಗಳಿಗೆ ಮಹಾಮೇತಸ್ ಎಂಬ ಸಂಸ್ಥೆ ಇತ್ತು. ಇವರು ರಾಜಗುರುಗಳ ಸ್ಥಾನಮಾನಗಳನ್ನು ಹೊಂದಿದ್ದರು. ಮಠಾಧಿಪತಿಗಳ ಸ್ಥಾನಕ್ಕೆ ಬರುವ ಅಭ್ಯರ್ಥಿ ವಿಶಿಷ್ಟ ಗುಣಗಳನ್ನು ಹೊಂದಿರಬೇಕಾಗಿತ್ತು. ಅವನು—

(೧) ಕಲಹಪ್ರಿಯನಾಗಿರಕೂಡದು; (೨) ಆದರ ಸತ್ಕಾರದವನಾಗಿರಬೇಕು; (೩) ನಂಬಿಕೆಗೆ ಅರ್ಹನಾಗಿರಬೇಕು; (೪) ಹಾಗೂ ಯೋಗ್ಯ ಶಿಸ್ತಿನವನಾಗಿರಬೇಕು. ಬಾರಕೂರು, ಕೆರೆಕೊಪ್ಪ ಹಾಗೂ ಹೊಸಂಗಡಿ ಶಾಸನಗಳಲ್ಲಿ ಈ ವಿವರಗಳನ್ನು ಕಾಣುತ್ತೇವೆ.

ಕೆಳದಿ ಅರಸರ ಕಾಲದಲ್ಲಿಯೂ ವೀರಶೈವ ಮಠಗಳು ವಿದ್ಯಾಕೇಂದ್ರಗಳಾಗಿ ಸೇವೆ ಸಲ್ಲಿಸಿದವು. ಧಾರ್ಮಿಕ ಹಾಗೂ ಲೌಕಿಕ ವಿದ್ಯಾಪ್ರಸಾರಕ್ಕಾಗಿ ಶ್ರಮಿಸಿದವು. ಗ್ರಾಮಾಂತರ ಪ್ರದೇಶಗಳ ಪ್ರಾಥಮಿಕ ಶಿಕ್ಷಣವು ಇವುಗಳ ಹೊಣೆಗಾರಿಕೆಯಾಗಿತ್ತು. ಮಠಗಳು ಉಚ್ಚ ವಿದ್ಯಾಕೇಂದ್ರಗಳೂ ಆಗಿ ಬೆಳೆದುಬಂದವು. ಈ ಮಠಗಳಲ್ಲಿ ಷಡ್ದರ್ಶನಗಳ ಅಧ್ಯಯನ ನಡೆಯುತ್ತಿತ್ತೆಂದು ತಿಳಿದುಬರುತ್ತದೆ.[60] ವೀರಶೈವಪುರಾಣಗಳನ್ನು ಕಲಿಸಲಾಗುತ್ತಿತ್ತು. ಕಾವ್ಯ, ನಾಟಕ, ಧರ್ಮಶಾಸ್ತ್ರಗಳ ಅಧ್ಯಾಪನಕೇಂದ್ರಗಳಾಗಿ ಮಠಗಳು ಕಾರ್ಯ ಮಾಡಿದವು. ಆಳರಸರು ಇಂಥ ಚಟುವಟಿಕೆಗಳಿಗೆ ಉದಾರ ಆಶ್ರಯ ನೀಡಿದರು. ವಿದ್ಯಾರ್ಥಿಗಳು ಕನ್ನಡ-ಸಂಸ್ಕೃತ ಎರಡೂ ಭಾಷೆಗಳನ್ನು ಕಲಿಯುತ್ತಿದ್ದರು. ಅಧ್ಯಾಪಕರ ವ್ಯಕ್ತಿತ್ವದಿಂದ ಮಠಗಳ ಸ್ಥಾನಮಾನ ನಿರ್ಧರಿತವಾಗುತ್ತಿತ್ತು. ಅಧ್ಯಾಪಕರು ಸಮಾಧಾನಕರವಾಗಿ ಸೇವೆ ಸಲ್ಲಿಸುವಂತೆ ಜನತೆಯೂ ಆಳರಸರೂ ಧನಸಹಾಯ ನೀಡುತ್ತಿದ್ದರು. ಕ್ರಿ.ಶ. ೧೭೦೯ ಜೂನ್ ೧೮ ತಾಮ್ರಶಾಸನದಲ್ಲಿ ಅಧ್ಯಾಪಕ ನೋರ್ವನಿಗಾಗಿ ಭೂ ಅನುದಾನ ಮಾಡಿದ ವಿವರವಿದೆ.[61] ಕೆಲವು ಮಠಗಳಲ್ಲಿ ವಾಚನಾಲಯಗಳೂ ಇದ್ದವು.[62] ಈ ಅವಧಿಯಲ್ಲಿ ಊರ್ಜಿತದಲ್ಲಿದ್ದ ಶಿಕ್ಷಣಕ್ರಮದಲ್ಲಿ ಆಳರಸರ ಹಸ್ತಕ್ಷೇಪವಿರಲಿಲ್ಲ. ಸರಕಾರದ ಪರವಾಗಿ ಜನರಿಗಾಗಿ ವಿದ್ಯಾಶಾಲೆಗಳೂ ಇರಲಿಲ್ಲ.[63] ವೀರಶೈವ ಮಠಗಳು ಸ್ವತಂತ್ರವಾಗಿ ವಿದ್ಯಾಪ್ರಸಾರಕಾರ್ಯ ಕೈಕೊಂಡಿದ್ದವು.

## ಕ್ರಿ.ಶ. ೧೯, ೨೦ನೆಯ ಶತಕಗಳು
## ವಿದ್ಯಾಕ್ಷೇತ್ರಕ್ಕೆ ವೀರಶೈವ ಮಠಗಳ ಕೊಡುಗೆ

ಕ್ರಿ.ಶ. ೧೭೫೭ರಲ್ಲಿ ನಡೆದ ಪ್ಲಾಸಿ ಯುದ್ಧದಿಂದ ಭಾರತದ ರಾಜಕೀಯ ಇತಿಹಾಸದಲ್ಲಿ ಇಂಗ್ಲೀಷ್ ಯುಗವು ಆರಂಭವಾಯಿತು. ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಜೊತೆಗೆ ಭಾರತದ ಉಳಿದ ಭಾಗಗಳಲ್ಲಿಯಂತೆ ಕರ್ನಾಟಕದಲ್ಲಿಯೂ ವಿದ್ಯಾಕ್ಷೇತ್ರದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಕಾರ್ಯಚಟುವಟಿಕೆಗಳನ್ನಾರಂಭಿಸಿದರು. ಈ ಮಿಷನರಿಗಳು ಸ್ಥಾಪಿಸಿದ ವಿದ್ಯಾಶಾಲೆಗಳಿಗೆ ಸರಕಾರದ ಧನಸಹಾಯ ದೊರೆಯುತ್ತಿತ್ತು. ಮೈಸೂರಿನಲ್ಲಿ ಮುಮ್ಮಡಿ

59 Keladinrupavijaya, Canto 10, Stanzas 15–17, K. N. Chitnis Veerashaiva Mattas in Keladi.
60 *Mysore Archeaological Report*, 1943, No. 37
61 *Annual Report on South Indian Epigraphy*, 1936-37, C.P. No. 3
62 *Archaeological Surve of India*, 1936-37, p. 108
63 K. D. Swaminathan : *Nayakas of Ikkeri*, p. 165

ಕೃಷ್ಣರಾಜ ಒಡೆಯರ್‌ರ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೮೩೩ರಲ್ಲಿ ಇಂಗ್ಲೀಷ್ ಶಾಲೆಯೊಂದು ಸ್ಥಾಪಿತವಾಯಿತು. ಕರ್ನಾಟಕದ ಉಳಿದ ಭಾಗಗಳಲ್ಲಿಯೂ ಇಂಗ್ಲೀಷ್ ಶಾಲೆಗಳು ಕಾಣಿಸಿಕೊಂಡವು.

ದೇಶೀ ಶಾಲೆಗಳೂ ಸಮಾಂತರವಾಗಿ ಮುಂದುವರಿದವು. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ವೈದಿಕ ಪಾಠಶಾಲೆಗಳಿದ್ದವು. ಪರಂಪರಾಗತ ಶಾಲೆಗಳೂ ಇದ್ದು ಅವುಗಳಲ್ಲಿ ವೀರಶೈವ ಅಧ್ಯಾಪಕರು ಸೇವೆ ಸಲ್ಲಿಸುತ್ತಿದ್ದರು. ಕ್ರಿ.ಶ. ೧೯ನೇ ಶತಕದ ಕೊನೆಯವರೆಗೆ ಈ ಶಾಲೆಗಳು ಪ್ರಾಥಮಿಕ ಶಿಕ್ಷಣಕ್ಷೇತ್ರದಲ್ಲಿ ಕಾರ್ಯ ಮಾಡಿದವು. ಈ ವೇಳೆಗೆ ಭಾರತದ ಉಳಿದ ಭಾಗಗಳಂತೆ ಕರ್ನಾಟಕವೂ ಪಾಶ್ಚಿಮಾತ್ಯ ಅದರಲ್ಲಿಯೂ ಇಂಗ್ಲೆಂಡಿನ ವಿಚಾರಧಾರೆ ಹಾಗೂ ಸಂಸ್ಕೃತಿಯ ನಿಕಟಸಂಪರ್ಕದಲ್ಲಿ ಬಂದಿತ್ತು. ಬ್ರಿಟಿಷ್‌ಸರಕಾರವು ಪ್ರಾದೇಶಿಕಭಾಷೆಗಳ ಅಧ್ಯಯನವನ್ನು ಪ್ರೋತ್ಸಾಹಿಸಲಿಲ್ಲ. ಈ ಅವಧಿಯಲ್ಲಿ ದೇಶೀಶಾಲೆಗಳ ಮೂಲಕ ಕನ್ನಡ ಭಾಷೆಯನ್ನು ಬೋಧಿಸುವ ದಿಟ್ಟ ಉಪಕ್ರಮವನ್ನು ಕಾಯ್ದುಕೊಂಡು ಬಂದ ಕೀರ್ತಿ ವೀರಶೈವ ಮಠಗಳಿಗೆ ಸಲ್ಲುತ್ತದೆ. ಈ ಶಾಲೆಗಳ ಅಧ್ಯಾಪಕರು ಶಿಕ್ಷಣ ಕ್ಷೇತ್ರಕ್ಕೆ ನಿಷ್ಠರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದರು.

ಮೈಸೂರು ಅರಸರ ಆಳ್ವಿಗೆ ನೇರವಾಗಿ ಒಳಪಟ್ಟ ಕಾರಣದಿಂದ ಕರ್ನಾಟಕವು ಆಧುನಿಕ ಶಿಕ್ಷಣ ಪದ್ಧತಿಯ ಸಿದ್ಧಾಂತಗಳನ್ನೂ ಅನುಷ್ಠಾನಗಳನ್ನೂ ಜಾರಿಗೊಳಿಸುವಲ್ಲಿ ಮುಂದಗತಿಯನ್ನು ತೋರಿಸಿತು. ಬಾಸೆಲ್ ಮಿಷನ್ ದಂಥ ಕ್ರಿಶ್ಚಿಯನ್ ಮಿಷನರಿಗಳೇ ಕರ್ನಾಟಕದಲ್ಲಿಯೂ ಆಧುನಿಕಶಿಕ್ಷಣಕ್ರಮದ ಮಹತ್ವವನ್ನು ಮನಗಂಡು ವಿದ್ಯಾ ಸಂಸ್ಥೆಗಳನ್ನು ಆರಂಭಿಸಿದರು. ಖಾಸಗಿ ಶಿಕ್ಷಣ ಸಂಸ್ಥೆಗಳೂ ರೂಪುಗೊಂಡವು. ಆದರೆ ಇವುಗಳಿಗೆ ಸರಕಾರದ ಸಹಾಯ-ಪ್ರೋತ್ಸಾಹಗಳು ದೊರೆಯಲಿಲ್ಲ. ಶತಮಾನಗಳ ಜಾಡ್ಯದಿಂದ ಜನತೆಯೂ ಎಚ್ಚೆತ್ತಿರಲಿಲ್ಲ. ಹೀಗಾಗಿ ಖಾಸಗಿ ವಿದ್ಯಾಸಂಸ್ಥೆಗಳನ್ನು ನಡೆಸುವುದು ದುಸ್ತರವಾಯಿತು. ಅಷ್ಟಿಷ್ಟು ದೇಣಿಗೆಗಳಿಂದ ಏನೂ ಆಗುವಂತಿರಲಿಲ್ಲ. ಇಡೀ ಸಮಾಜದ ಬೆಂಬಲದ ಆವಶ್ಯಕತೆ ಅವುಗಳಿಗಿತ್ತು.

ಉಳಿದ ಸನಾತನ ಮಠಾಧಿಪತಿಗಳೂ ಈ ಕಡೆಗೆ ಗಮನ ಕೊಡಲಿಲ್ಲ. ಆಧುನಿಕಶಿಕ್ಷಣಕ್ರಮದ ಮಹತ್ವವನ್ನು ಮೊಟ್ಟಮೊದಲು ಅರಿತವರು ವೀರಶೈವ ಮಠಾಧಿಪತಿಗಳೇ ಎಂಬುದು ನಿರ್ವಿವಾದ. ಅವರು ೨೦ನೆಯ ಶತಕದ ಅವಶ್ಯಕತೆಗಳಿಗನುಸಾರವಾಗಿ ತಮ್ಮ ವಿಚಾರಧಾರೆಯನ್ನು ಬದಲಿಸಿ ಜಾತ್ಯತೀತವಾಗಿ ಶಿಕ್ಷಣಪ್ರಸಾರಕಾರ್ಯ ಕೈಕೊಳ್ಳುವ ಧ್ಯೇಯವನ್ನು ಇಟ್ಟುಕೊಂಡರು. ಧರ್ಮಗುರುಗಳು ವಿದ್ಯಾಪ್ರಸಾರಕಾರ್ಯಕ್ಕೆ ತೊಡಗಲು ಶಿಕ್ಷಣ ಸಂಸ್ಥೆಗಳ ಸ್ಥಾನಮಾನಗಳು ಹೆಚ್ಚಿ ಉದಾರ ದೇಣಿಗೆಗಳನ್ನು ಸಲ್ಲಿಸಲು ಜನತೆ ಮುಂದಾಯಿತು. ವಿದ್ಯಾಸಂಸ್ಥೆಗಳು ಸ್ಥಿರವಾಗಿ ನಿಂತು ಕಾರ್ಯಮಾಡುವಂತಾಯಿತು. ಇಂದು ನೂರಾರು ವೀರಶೈವ ವಿದ್ಯಾಸಂಸ್ಥೆಗಳು ಶಿಕ್ಷಣದ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಲಿವೆ. ಉಚಿತ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿವೆ. ಬಡ ಹಾಗೂ ಮೇಧಾವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತಲಿವೆ. ಹೀಗೆ ಇಂಗ್ಲೀಷ್ ವಿದ್ಯಾಭ್ಯಾಸಕ್ರಮವು ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದ ಅವಧಿಯಲ್ಲಿಯೇ ಪ್ರಗತಿಶೀಲ ವೀರಶೈವ ಮಠಗಳು ಆ ವಿದ್ಯಾಭ್ಯಾಸಕ್ರಮದ ಸತ್ವವನ್ನು ಸ್ವೀಕರಿಸಿ ತಮ್ಮ ವಿದ್ಯಾಸಂಸ್ಥೆಗಳಲ್ಲಿ ಅಳವಡಿಸಿಕೊಂಡವು.

ಇಂದು ಕನ್ನಡ ನಾಡಿನಲ್ಲಿ ಬಹುಸಂಖ್ಯ ವೀರಶೈವ ಮಠಗಳೂ, ಸಂಘಗಳೂ ವಿದ್ಯಾಪ್ರಸಾರಕಾರ್ಯದಲ್ಲಿ ಭರದಿಂದ ಸೇವೆ ಸಲ್ಲಿಸುತ್ತಿವೆ. ನೂರಾರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಲಿವೆ. ಅವೆಲ್ಲವುಗಳನ್ನೂ ಇಲ್ಲಿ ವಿವರಿಸುವುದು ಸಾಧ್ಯವಿಲ್ಲ. ಅವುಗಳಲ್ಲಿ ಪ್ರಮುಖವಾದ ಮಾದರಿಗಾಗಿ ಕೆಲವು ವೀರಶೈವ ಸಂಘಗಳು ಹಾಗೂ ಮಠಗಳನ್ನು ಮಾತ್ರ ಉಲ್ಲೇಖಿಸಬಹುದಾಗಿದೆ. ಕರ್ನಾಟಕ ಲಿಬರಲ್ ಎಜುಕೇಶನ್ ಸೊಸೈಟಿ, ಬೆಳಗಾವಿ; ಬಾಗಲಕೋಟೆ ವಿದ್ಯಾವರ್ಧಕ ಸಂಘ, ಬಾಗಲಕೋಟೆ; ಬಿಜಾಪುರ ಲಿಂಗಾಯಿತ ಡಿಸ್ಟ್ರಿಕ್ಟ್ ಎಜುಕೇಷನ್ ಅಸೋಸಿಯೇಷನ್, ಬಿಜಾಪುರ; ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ—ಇವು ಪ್ರಮುಖ ಸಂಘಗಳಾಗಿವೆ.

ಇಂದು ವಿದ್ಯಾಕ್ಷೇತ್ರದಲ್ಲಿ ಮಹತ್ವಪೂರ್ಣ ಕಾರ್ಯ ನಿರ್ವಹಿಸುತ್ತಿರುವ ಪ್ರಮುಖ ವೀರಶೈವಮಠಗಳೆಂದರೆ—ಶ್ರೀ ಸುತ್ತೂರು ಮಠ, ಸುತ್ತೂರು; ಶ್ರೀ ಸಿದ್ಧಗಂಗಾ ಮಠ, ತುಮಕೂರು; ಶ್ರೀ ಸಿರಿಗೆರೆ ಮಠ, ಸಿರಿಗೆರೆ; ಶ್ರೀ ಶರಣ ಬಸವೇಶ್ವರ ಸಂಸ್ಥಾನ, ಗುಲ್ಬರ್ಗಾ; ಶ್ರೀ ಮೂರುಸಾವಿರ ಮಠ, ಹುಬ್ಬಳ್ಳಿ ಹಾಗೂ ಶ್ರೀ ಮುರುಘಾ ಮಠ, ಧಾರವಾಡ. ಅಲ್ಲದೇ ಕರ್ನಾಟಕದ ಬಹುಭಾಗಗಳಲ್ಲಿ ನೆಲೆಸಿರುವ ವೀರಶೈವ ಮಠಗಳು ಸ್ಥಳೀಯವಾಗಿ ವಿದ್ಯಾಸಂಸ್ಥೆಗಳನ್ನು ನಡೆಸುವುದಲ್ಲದೆ ಮಠಾಧಿಪತಿಗಳು ಸಾರ್ವಜನಿಕ ವಿದ್ಯಾಸಂಸ್ಥೆಗಳಿಗೆ ಉದಾರವಾಗಿ ಸಹಾಯ ಸಲ್ಲಿಸುತ್ತಿದ್ದಾರೆ.

ವೀರಶೈವಸಂಘಗಳು ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿವೆ. ಶಿಶುವಿಹಾರಗಳು,

ಪ್ರಾಥಮಿಕಶಾಲೆ, ಮಾಧ್ಯಮಿಕಶಾಲೆ, ಕಾಲೇಜುಗಳು, ಸಂಸ್ಕೃತ ಪಾಠಶಾಲೆ, ಇಂಜಿನಿಯರಿಂಗ್—ಮೆಡಿಕಲ್ ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಶಿಕ್ಷಕರ ತರಬೇತಿ ಕಾಲೇಜುಗಳು, ವಾಣಿಜ್ಯ ಕಾಲೇಜು, ಲಾ ಕಾಲೇಜು, ಮಹಿಳೆಯರಿಗಾಗಿ ಶಾಲೆ-ಕಾಲೇಜುಗಳು ಮುಂತಾದವುಗಳನ್ನು ನಡೆಸುವುದಲ್ಲದೇ ವಿದ್ಯಾರ್ಥಿವಸತಿಗೃಹಗಳು, ವಿದ್ಯಾರ್ಥಿವೇತನಗಳು ಮುಂತಾದ ಸೌಲಭ್ಯಗಳನ್ನು ಅಪಾರವಾಗಿ ಒದಗಿಸುತ್ತಲಿವೆ.

ಸದ್ಯಕ್ಕೆ ವೀರಶೈವ ಮಠಗಳೂ ವಿದ್ಯಾಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆ ಮಹತ್ವಪೂರ್ಣವಾಗಿದೆ. ಈ ಮಠಾಧಿಪತಿಗಳು ಸಮಾಜದ ಬಡ ಹಾಗೂ ಹಿಂದುಳಿದ ವರ್ಗಗಳಲ್ಲಿ ವಿದ್ಯಾಪ್ರಸಾರಕಾರ್ಯಕ್ಕೆ ಹೆಚ್ಚಿನ ಗಮನವನ್ನು ಕೊಡುತ್ತಿರುವುದು ಕಂಡುಬರುತ್ತದೆ. ವಿದ್ಯಾರ್ಥಿ ವಸತಿಗೃಹದಲ್ಲಿ ಮತಪಂಥಗಳ ನಿರ್ಬಂಧವಿಲ್ಲದೇ ಪ್ರವೇಶ ಕೊಡುತ್ತಿರುವುದು ವೀರಶೈವಮಠಗಳ ವೈಶಿಷ್ಟ್ಯ. ಆಧುನಿಕ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದರ ಜೊತೆಗೆ ಭಾರತೀಯ ಸಂಸ್ಕೃತಿ—ಧರ್ಮಗಳ ರಕ್ಷಣೆಗಾಗಿ ಸಂಸ್ಕೃತ ಶಾಲೆ–ಕಾಲೇಜುಗಳನ್ನೂ ವೀರಶೈವ ಮಠಗಳೇ ನಡೆಸುತ್ತಿವೆ. ಉಚ್ಚ ಶಿಕ್ಷಣದ ಸೌಲಭ್ಯಗಳು ಜನಸಾಮಾನ್ಯರಿಗೆ ನಿಲುಕುವಂತೆ ಮಾಡಿದ್ದು ವೀರಶೈವ ಮಠಗಳೇ. ಸಮಾಜದ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡಲು ವೀರಶೈವ ಮಠಗಳು ಅಕ್ಕನ ಬಳಗಗಳಂಥ ಸಾಂಸ್ಕೃತಿಕ ಸಂಘಗಳನ್ನು ಸಂಘಟಿಸಿವೆ. ಮಹಿಳೆಯರಿಗಾಗಿ ಪ್ರತ್ಯೇಕ ವಿದ್ಯಾಸಂಸ್ಥೆಗಳನ್ನೂ ನಡೆಸುತ್ತಲಿವೆ. ಧಾರ್ಮಿಕ ಹಾಗೂ ಸೃಜನಾತ್ಮಕ ಸಾಹಿತ್ಯ ಪ್ರಕಾಶನ ಕಾರ್ಯವನ್ನೂ ಕೈಕೊಂಡು ಕನ್ನಡ-ಭಾಷೆ ಸಾಹಿತ್ಯಗಳ ಸತ್ವವರ್ಧನೆಗೆ ವೀರಶೈವ ಮಠಗಳು ಶ್ರಮಿಸುತ್ತಲಿವೆ.

**ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠ :** ಇಂದು ಕರ್ನಾಟಕದ ವಿದ್ಯಾಕ್ಷೇತ್ರದಲ್ಲಿ ಬಹುಮುಖಸೇವೆ ಸಲ್ಲಿಸುತ್ತಿರುವ ಪ್ರಮುಖ ವೀರಶೈವಮಠಗಳಲ್ಲಿ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠವೂ ಒಂದು. ಮೈಸೂರು ಜಿಲ್ಲೆಯಲ್ಲಿ ನಂಜನಗೂಡು—ಟಿ. ನರಸೀಪುರ ಮಾರ್ಗದಲ್ಲಿ ನಂಜನಗೂಡಿನಿಂದ ೯ ಮೈಲುಗಳ ದೂರದಲ್ಲಿ ಸುತ್ತೂರಿದೆ. ಕರ್ನಾಟಕದಲ್ಲಿ ಐತಿಹಾಸಿಕ ಮಹತ್ವವುಳ್ಳ ಸ್ಥಳಗಳಲ್ಲಿ ಸುತ್ತೂರು ಒಂದಾಗಿದ್ದು ಬಹು ಪ್ರಾಚೀನ ಚರಿತ್ರೆಯನ್ನು ಹೊಂದಿದೆ.

ಕ್ರಿ.ಶ. ೯ನೇ ಶತಕದಿಂದ ೧೩ನೇ ಶತಕದವರೆಗೆ ಆಳಿದ ಚೋಳರಾಜ್ಯವು ತನ್ನ ವೈಭವ ಹಾಗೂ ಜ್ಞಾನಪ್ರಸಾರ ಇತ್ಯಾದಿಗೆ ಪ್ರಸಿದ್ಧವಾದುದು. ನಾಡಿನ ಜನತೆಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಉನ್ನತಿ ಪಡೆಯಲು ಚೋಳರ ಆಳ್ವಿಕೆ ಒಂದು ಸುವರ್ಣಾವಕಾಶವನ್ನು ಕಲ್ಪಿಸಿತ್ತು. ಆಳರಸರು ಅನೇಕ ದೇವಸ್ಥಾನಗಳನ್ನೂ ಧಾರ್ಮಿಕ ಸಂಸ್ಥೆಗಳನ್ನೂ ಸ್ಥಾಪಿಸಿದರು. ಚೋಳವಂಶದ ಅರಸರು ಶ್ರೀ ಸುತ್ತೂರು ಮಠದ ಮೂಲಕ ಜ್ಞಾನಪ್ರಸಾರಕಾರ್ಯ ಕೈಕೊಂಡರು.

ಸುತ್ತೂರಿನ ಶ್ರೀ ವೀರಸಿಂಹಾಸನ ಮಠವು ಕ್ರಿ.ಶ. ೧೧ನೆಯ ಶತಮಾನದಲ್ಲಿ ಆದಿಗುರು ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರ ಆಶೀರ್ವಾದದಿಂದ ಸ್ಥಾಪಿತವಾಯಿತು. ಸನಾತನ ಸಂಪ್ರದಾಯಗಳ ಸಾಂಸ್ಕೃತಿಕ ತಳಹದಿಯ ಮೇಲೆ ಸಮಾಜಸುಧಾರಣೆಯ ಮಹತ್ತರಕಾರ್ಯವನ್ನು ಈ ಮಠವು ಕೈಕೊಂಡಿದೆ.

ಕ್ರಿ.ಶ. ೧೯ನೆಯ ಶತಕದವರೆಗೆ ಸುತ್ತೂರು ವೀರಸಿಂಹಾಸನ ಮಠವು ಧಾರ್ಮಿಕ ಉನ್ನತಿಯ ಪ್ರಗತಿಗಾಗಿ ಹೆಚ್ಚಿನ ಗಮನವನ್ನು ಕೊಡುತ್ತ ಬಂದಿತ್ತು. ಕ್ರಿ.ಶ. ೨೦ನೆಯ ಶತಕದ ಆರಂಭಕಾಲವು ಈ ಮಠದ ಚರಿತ್ರೆಯಲ್ಲಿ ಯುಗಪ್ರವರ್ತಕ ಅವಧಿ. ವೀರಸಿಂಹಾಸನಾಧೀಶ್ವರ ಶ್ರೀ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಹಾಗೂ ಅವರ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರು ಜನಸಾಮಾನ್ಯರಲ್ಲಿ ಶಿಕ್ಷಣಪ್ರಸಾರದ ಅವಶ್ಯಕತೆಯನ್ನು ಮನಗಂಡರು. ತಮ್ಮ ಶಿಷ್ಯಸಮಾಜದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಮಟ್ಟವನ್ನು ಸುಧಾರಿಸುವುದಕ್ಕಾಗಿ ವಿವಿಧ ಬಗೆಯ ವಿದ್ಯಾಸಂಸ್ಥೆಗಳನ್ನು ಮಠದ ಕೃಪಾಛತ್ರದಲ್ಲಿ ಅವರು ಆರಂಭಿಸಿದರು. ಪ್ರಾಚೀನ ಭಾರತೀಯ ಸಾಹಿತ್ಯದ ಅಧ್ಯಯನ ಮಾಡಲು ಶಿಷ್ಯಸಮಾಜ ಉತ್ಸುಕರಾಗಿರುವುದನ್ನು ಗಮನಿಸಿ ಶ್ರೀ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಎಲ್ಲ ಸಮಾಜದ ಜನರಿಗೂ ಸಂಸ್ಕೃತ ಭಾಷೆಯನ್ನು ಕಲಿಯುವ ಅವಕಾಶವನ್ನು ಕಲ್ಪಿಸುವುದಕ್ಕಾಗಿ ಬಹುವಾಗಿ ಶ್ರಮಿಸಿದರು.ಕ್ಯಾತನಹಳ್ಳಿಯ ಸಾಹುಕಾರ್ ಸಿದ್ಧಲಿಂಗಯ್ಯನವರ ಉದಾರ ಧನಸಹಾಯದಿಂದ ವಾಣಿವಿಲಾಸ ರಸ್ತೆ ಮೈಸೂರಿನಲ್ಲಿ ಕ್ರಿ.ಶ. ೧೯೩೩ರಲ್ಲಿ 'ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆ'ಯನ್ನು ಸುತ್ತೂರು ಮಠದ ಆಶ್ರಯದಲ್ಲಿ ಸ್ಥಾಪಿಸಲಾಯಿತು. ಅದಕ್ಕೆ ಹೊಂದಿಕೊಂಡು ಒಂದು ಉಚಿತ ವಿದ್ಯಾರ್ಥಿ ವಸತಿಗೃಹವನ್ನೂ ಆರಂಭಿಸಲಾಯಿತು. ವಿದ್ಯಾಪ್ರಸಾರಕಾರ್ಯದಲ್ಲಿ ಶ್ರೀ ಸುತ್ತೂರು

ಮಠವು ಇಟ್ಟ ಮೊದಲ ಹೆಜ್ಜೆ ಈ ಸಂಸ್ಕೃತ ಪಾಠಶಾಲೆ. ನಲವತ್ತು ವಿದ್ಯಾರ್ಥಿಗಳಿಗೆ ಅವಕಾಶಕೊಡುವಷ್ಟು ಅನುಕೂಲ ಹೊಂದಿ ಆರಂಭವಾದ ಈ ಪಾಠಶಾಲೆಯಲ್ಲಿ ಇಂದು ಸುಮಾರು ೩೦೦ ವಿದ್ಯಾರ್ಥಿಗಳಿಗೆ ಸಂಸ್ಕೃತ ಭಾಷೆಯ ಮೂಲಕ ಉಚ್ಚ ವ್ಯಾಸಂಗಕ್ಕಾಗಿ ಅವಕಾಶವಿದೆ. ಈ ಪಾಠಶಾಲೆಯಲ್ಲಿ ವ್ಯಾಸಂಗ ಮಾಡಿದ ಅನೇಕರು ಇಂದು ದೇಶದ ವಿವಿಧ ಭಾಗಗಳಲ್ಲಿ ಉಚ್ಚ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮೈಸೂರು ನಗರದಲ್ಲಿ ನಂತರ ರೂಪುಗೊಂಡ ವಿವಿಧ ವೀರಶೈವ ಸಾಂಸ್ಕೃತಿಕ ಧಾರ್ಮಿಕ ಸಂಘ ಸಂಸ್ಥೆಗಳಿಗೆ ಈ ಸಂಸ್ಕೃತ ಪಾಠಶಾಲೆಯೇ ಸ್ಫೂರ್ತಿ ನೀಡಿತು.

ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು, ಗ್ರಾಮಾಂತರ ಪ್ರದೇಶಗಳ ಜನತೆಗೆ ಆಧುನಿಕ ರೀತಿಯಲ್ಲಿ ಶಿಕ್ಷಣ ಕೊಡದ ಹೊರತು ನಮ್ಮ ದೇಶದ ಪ್ರಗತಿಯಾಗದೆಂದು ಯೋಚಿಸಿದರು. ಈ ವಿಚಾರಧಾರೆಯ ಫಲಸ್ವರೂಪವಾಗಿ ಕ್ರಿ.ಶ. ೧೯೪೦ರಲ್ಲಿ ಮೈಸೂರು ನಗರದಲ್ಲಿ 'ಶ್ರೀ ಜಗದ್ಗುರು ಶಿವರಾತ್ರೀಶ್ವರ ಉಚಿತ ವಿದ್ಯಾರ್ಥಿ ವಸತಿನಿಲಯ' ಸ್ಥಾಪಿಸಲ್ಪಟ್ಟು ಗ್ರಾಮಾಂತರ ಪ್ರದೇಶಗಳಿಂದ ವಿದ್ಯಾಭ್ಯಾಸಕ್ಕೆ ಬರುವವರಿಗೆ ಊಟ ವಸತಿಗಳ ಅನುಕೂಲ ಕಲ್ಪಿಸಿಕೊಟ್ಟಿತು. ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾದ ಈ ವಸತಿಗೃಹದಲ್ಲಿ ನಂತರ ಮತಭೇದವಿಲ್ಲದೆ ಹರಿಜನರು-ಬ್ರಾಹ್ಮಣರು ಸೇರಿದಂತೆ ಎಲ್ಲ ವರ್ಗದವರಿಗೂ ಪ್ರವೇಶ ಕೊಡುವ ಪ್ರಗತಿಪರ ಉಪಕ್ರಮವು ಆರಂಭವಾಯಿತು. ಹತ್ತು ವಿದ್ಯಾರ್ಥಿಗಳಿಗೆ ಪ್ರವೇಶಕೊಡುವುದರಿಂದ ಆರಂಭವಾದ ಈ ವಸತಿಗೃಹದಲ್ಲಿ ಇಂದು ೫೦೦ ವಿದ್ಯಾರ್ಥಿಗಳಿಗೆ ಅವಕಾಶವಿದೆ.

ಗ್ರಾಮಾಂತರ ವಿದ್ಯಾರ್ಥಿಗಳು ಹೆಚ್ಚುತ್ತಿರುವ ಅವಶ್ಯಕತೆಯನ್ನು ಲಕ್ಷಿಸಿ ಕ್ರಿ.ಶ. ೧೯೫೫ರಲ್ಲಿ ಮೈಸೂರಿನಲ್ಲಿ 'ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯ'ವು ರೂಪುಗೊಂಡಿತು. ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ದೃಷ್ಟಿಕೋನಕ್ಕೆ ಹೊಸ ತಿರುವು ಕೊಡುವ ಉತ್ಸಾಹದಿಂದ ಸುತ್ತೂರು ಮಠದ ಆಶ್ರಯದಲ್ಲಿ ಕ್ರಿ.ಶ. ೧೯೫೯-೬೦ರಲ್ಲಿ ಮೈಸೂರಿನಲ್ಲಿರುವ ಗಾಂಧೀನಗರ ವಿಭಾಗದಲ್ಲಿ ಶ್ರೀ ಶಿವರಾತ್ರೀಶ್ವರ ದಲಿತವರ್ಗಗಳ ವಸತಿಗೃಹವನ್ನು ಆರಂಭಿಸಲಾಯಿತು.

ಸುತ್ತೂರು ವೀರಸಿಂಹಾಸನ ಮಠದ ಶಾಖಾಮಠಗಳ ಮಠಾಧಿಪತಿಗಳ ತರಬೇತಿಯ ಅವಶ್ಯಕತೆಯನ್ನು ಪೂರೈಸುವುದಕ್ಕಾಗಿ ಶಾಸ್ತ್ರಾಭ್ಯಾಸ, ಯೋಗಸಾಧನೆಗಳಿಗೆ ಅವಕಾಶವೀಯುವ 'ಗುರುಕುಲ' ಎಂಬ ಸಂಸ್ಥೆಯನ್ನು ಕ್ರಿ.ಶ. ೧೯೫೦ರಲ್ಲಿ ರೂಪಿಸಲಾಯಿತು. ಪೂರ್ವಪರಂಪರೆಯ ಆಶ್ರಮಗಳ ಮಾದರಿಯಲ್ಲಿ ಇದು ಕಾರ್ಯ ಮಾಡುತ್ತಿದೆ.

ವಿದ್ಯಾರ್ಥಿನಿಲಯ, ವಸತಿಗೃಹಗಳನ್ನು ಮಾತ್ರ ಒದಗಿಸುವುದರಿಂದ ತೃಪ್ತರಾಗದೆ ಈ ಮಠದ ಅಧಿಪತಿಗಳು ಶಾಲೆ-ಕಾಲೇಜುಗಳನ್ನು ಆರಂಭಿಸಿ ವಿದ್ಯಾಪ್ರಸಾರಕಾರ್ಯವನ್ನು ನೇರವಾಗಿ ಕೈಗೆತ್ತಿಕೊಂಡರು. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವಿವಿಧ ಬಗೆಯ ವಿದ್ಯಾಸಂಸ್ಥೆಗಳು ಇಂದು ಕಾರ್ಯಮಾಡುತ್ತಿವೆ. ಶಿಶುವಿಹಾರ, ಪ್ರಾಥಮಿಕಶಾಲೆ, ಮಾಧ್ಯಮಿಕಶಾಲೆ, ಪ್ರೌಢಶಾಲೆ, ಉಚ್ಚ ಪ್ರೌಢಶಾಲೆ, ಕಾಲೇಜು. ಶಿಕ್ಷಕರ ತರಬೇತಿ ಕಾಲೇಜು, ಮೂಲ ಶಿಕ್ಷಣ ತರಬೇತಿ-ಕಾಲೇಜು, ಮಹಿಳೆಯರಿಗಾಗಿ ಪ್ರತ್ಯೇಕ ಶಾಲೆ-ಕಾಲೇಜುಗಳು, ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯಗಳು, ಸಂಸ್ಕೃತಪಾಠಶಾಲೆ, ವಸತಿಗೃಹ, ವಾಚನಾಲಯ ಮುಂತಾದ ಸಂಸ್ಥೆಗಳು, ಕಲಾಮಂಟಪ, ಗ್ರಂಥಪ್ರಕಾಶನ, ಸಾಂಸ್ಕೃತಿಕ ಸಂಘ ಮುಂತಾದ ಸುಮಾರು ಅರವತ್ತರಷ್ಟು ಸಂಸ್ಥೆಗಳು ಇಂದು ಶ್ರೀ ಸುತ್ತೂರು ಮಠದ ಆಶ್ರಯದಲ್ಲಿ ವಿದ್ಯಾಕ್ಷೇತ್ರಕ್ಕೆ ಹಾಗೂ ದೇಶದ ಅಭ್ಯುದಯಕ್ಕೆ ಬಹುಮುಖ ಸೇವೆ ಸಲ್ಲಿಸುತ್ತಲಿವೆ. ಇವುಗಳಲ್ಲಿ ಅರ್ಧದಷ್ಟು ವಿದ್ಯಾಸಂಸ್ಥೆಗಳು ಗ್ರಾಮಾಂತರಪ್ರದೇಶದಲ್ಲಿ ನೆಲೆಸಿರುವುದು ಗಮನಾರ್ಹವಾದ ಸಂಗತಿ. ಮೈಸೂರು, ಬೆಂಗಳೂರು. ಚಾಮರಾಜನಗರ, ಟಿ. ನರಸೀಪುರ, ಯಳಂದೂರು, ಸರಗೂರು, ಕೆ. ಆರ್. ನಗರ, ಹುಲ್ಲಹಳ್ಳಿ, ಸುತ್ತೂರು. ರಾಮಾಪುರ, ತೆರಕಣಾಂಬಿ, ದೊಡ್ಡಕಾಡನಹಳ್ಳಿ ಮುಂತಾದ ಸ್ಥಳಗಳಲ್ಲಿ ಸುತ್ತೂರು ವೀರಸಿಂಹಾಸನ ಮಠದ ವಿವಿಧ ಸಂಸ್ಥೆಗಳು ಕಾರ್ಯಪ್ರವೃತ್ತವಾಗಿವೆ. ಈ ವಿವಿಧ ವಿದ್ಯಾಸಂಸ್ಥೆಗಳನ್ನು ಸೂಕ್ತ ಆಡಳಿತಕ್ಕಾಗಿ 'ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ' ಎಂಬ ಹೆಸರಿನಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆಯ ಆಶ್ರಯದಲ್ಲಿ ನಡೆಸಲಾಗುತ್ತಿದೆ. ಸುತ್ತೂರು ಮಠಾಧೀಶರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದು ಆರುಜನ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯನ್ನು ಅದು ಹೊಂದಿದೆ.

ಶ್ರೀ ಸುತ್ತೂರು ಮಠದಂತೆ ಕರ್ನಾಟಕದಲ್ಲಿ ಇಂದು ಅನೇಕ ಪ್ರಮುಖ ವೀರಶೈವ ಮಠಗಳು ಅನೇಕ ವಿದ್ಯಾಸಂಸ್ಥೆಗಳ ಮೂಲಕ ವಿದ್ಯಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಯನ್ನು ಸಲ್ಲಿಸುತ್ತಲಿವೆ.

**ವೀರಶೈವ ವಿದ್ಯಾಭ್ಯಾಸಕ್ರಮದ ವಿಶಿಷ್ಟ ಲಕ್ಷಣಗಳು :** ಮಾನವರೆಲ್ಲರೂ ಸಮಾನರೆಂಬ ತತ್ತ್ವದಲ್ಲಿ ವೀರಶೈವ ಧರ್ಮವು ಅಚಲವಾದ ನಂಬುಗೆಯನ್ನು ಹೊಂದಿರುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯಬೇಕೆಂಬುದು ವೀರಶೈವಧರ್ಮದ ಪ್ರಮುಖ ಧ್ಯೇಯ. ಅಂತೆಯೇ ವಿದ್ಯಾಕ್ಷೇತ್ರದಲ್ಲಿಯೂ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯಬೇಕೆಂಬುದು ಅದರ ವಿಶ್ವಾಸ. 'ಸರ್ವರಿಗಾಗಿ ಶಿಕ್ಷಣ' ಎಂಬುದು ಇಂದಿನ ಪ್ರಜಾತಂತ್ರಸಮಾಜದ ಘೋಷಣೆಯಾಗಿದೆ. ಇಂದು ಪಾಶ್ಚಾತ್ಯ ದೇಶಗಳಲ್ಲಿ "ವಿದ್ಯಾಭ್ಯಾಸದ ಸೌಲಭ್ಯಗಳನ್ನು ಎಲ್ಲ ಜನರಿಗೂ ಮುಟ್ಟಿಸುವುದು ಶಿಕ್ಷಣಕ್ಷೇತ್ರದಲ್ಲಿ ಎದ್ದುಕಾಣುವ ಅಂಶವಾಗಿ, ಚರಿತ್ರೆಯಲ್ಲಿ ಹಿಂದೆಂದೂ ಇದನ್ನು ಸಾಧಿಸಲಾಗಿಲ್ಲ. ಪಾಶ್ಚಾತ್ಯ ದೇಶಗಳಲ್ಲಾಗಲೀ, ಪೌರ್ವಾತ್ಯ ಕಮ್ಯುನಿಸ್ಟ್ ದೇಶಗಳಲ್ಲಾಗಲೀ ಎಲ್ಲರಿಗಾಗಿ ಶಿಕ್ಷಣ ಎಂಬುದೇ ಕಾರ್ಯಗತವಾಗುತ್ತಲಿದೆ."[64] ಎರಡನೆಯ ಜಾಗತಿಕ ಯುದ್ಧದನಂತರ ಶೈಕ್ಷಣಿಕ ಸೌಲಭ್ಯಗಳನ್ನು ಎಲ್ಲರಿಗೂ ಒದಗಿಸುವ ತಳಹದಿಯ ಮೇಲೆ ವಿದ್ಯಾಭ್ಯಾಸಕ್ರಮದಲ್ಲಿ ಮೂಲಭೂತ ಪರಿವರ್ತನೆಗಳನ್ನು ಮಾಡಲು ಎಲ್ಲ ದೇಶಗಳಲ್ಲಿಯೂ ಬೇಡಿಕೆಯುಂಟಾಯಿತು. 'ಎಲ್ಲರಿಗಾಗಿ ಶಿಕ್ಷಣ' ಎಂಬ ಈ ಆಧುನಿಕ ಸಿದ್ಧಾಂತದ ಉಗಮವನ್ನು ವೀರಶೈವ ವಿದ್ಯಾಭ್ಯಾಸಕ್ರಮದಲ್ಲಿ ಸುಲಭವಾಗಿ ಗುರುತಿಸಬಹುದಾಗಿದೆ. ವೀರಶೈವ ಶಿಕ್ಷಣಕ್ರಮವು ಕ್ರಿ.ಶ. ೧೨ನೆಯ ಶತಕದಿಂದಲೇ ಪ್ರಗತಿಶೀಲವಾಗಿದೆ ಎಂಬುದಕ್ಕೆ ಇದೊಂದು ಮಹತ್ವಪೂರ್ಣ ನಿದರ್ಶನವಾಗಿದೆ.

ಎಲ್ಲ ಭಾರತೀಯ ಶೈಕ್ಷಣಿಕ ಸಂಪ್ರದಾಯಗಳ ರೀತಿಯಲ್ಲಿ ವೀರಶೈವ ಶಿಕ್ಷಣಕ್ರಮದಲ್ಲಿ ಗುರುವಿಗೆ ಗೌರವದ ಸ್ಥಾನವಿದೆ. ಗುರುವಿನ ಅನುಗ್ರಹವಿಲ್ಲದೆ ಅಧ್ಯಾತ್ಮಶಿಕ್ಷಣದ ಮೂಲಕ ದೊರೆಯಬೇಕಾದ ಆತ್ಮಸಾಕ್ಷಾತ್ಕಾರ ಸಿದ್ಧಿಸದು. ವಿದ್ಯಾಭ್ಯಾಸ ಸಾಧನೆಗೆ ಇಂದ್ರಿಯನಿಗ್ರಹವೂ ಧ್ಯೇಯನಿಷ್ಠತೆಯೂ ಅವಶ್ಯಕ. ವೀರಶೈವಧರ್ಮವು ಉಪದೇಶಿಸುವ ಇಷ್ಟಲಿಂಗಪೂಜೆಯು ಈ ಎರಡನ್ನೂ ಸಾಧಿಸಲು ಅವಕಾಶ ಕಲ್ಪಿಸುತ್ತದೆ.

**'ಚಾರಿತ್ರ್ಯಕ್ಕಾಗಿ ಶಿಕ್ಷಣ'** ಎಂಬುದು ದೇಶ-ಕಾಲನಿರಪೇಕ್ಷವಾದ ಒಂದು ದೃಢವಾದ ಧ್ಯೇಯೋದ್ದೇಶವಾಗಿದೆ. ನಿಜವಾದ ಅರ್ಥದಲ್ಲಿ ಶಿಕ್ಷಣವೆಂಬುದು ಪ್ರೇಮ, ಪಾವಿತ್ರ್ಯ, ವಿಶ್ವಬಂಧುತ್ವ, ಜ್ಞಾನ, ನಿರ್ಮಲಪ್ರಜ್ಞೆ ಮುಂತಾದ ಜೀವನದ ಸದ್ಗುಣಗಳನ್ನು ವರ್ಧಿಸುತ್ತದೆ. ವೀರಶೈವ ವಿದ್ಯಾಕ್ರಮವು ತನ್ನ 'ಜಂಗಮ'[65] ಭಾವನೆಯ ಮೂಲಕ ಈ ಸದ್ಗುಣಗಳ ಪೋಷಣೆಗೆ ಅವಕಾಶವೀಯುತ್ತದೆ.

**'ಸಂಘಜೀವನಕ್ಕಾಗಿ ಶಿಕ್ಷಣ'** ಎಂಬುದು ವೀರಶೈವ ವಿದ್ಯಾಕ್ರಮದ ಇನ್ನೊಂದು ಮಹತ್ವದ ಲಕ್ಷಣ. ಪಾಶ್ಚಾತ್ಯ ಶಿಕ್ಷಣವೇತ್ತರು ಇದೀಗ ೨೦ನೆಯ ಶತಕದಲ್ಲಿ ಮಾತ್ರ 'ಸಮಾಜಸೇವೆಗಾಗಿ ಶಿಕ್ಷಣ' ಎಂಬುದನ್ನು ವಿಚಾರಿಸಿದ್ದಾರೆ. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ ಸರ್ ಟಿ. ಪಿ. ನನ್‌ರವರ ಉತ್ತರಾಧಿಕಾರಿ ಸರ್ ಫ್ರೆಡ್‌ಕ್ಲಾರ್ಕ್‌ರವರು ಶಿಕ್ಷಣದ ವಿಷಯವಾಗಿ ಪ್ರಾಥಮಿಕವಾಗಿ ಸಮಾಜಸೇವಾಪದಗಳಲ್ಲಿಯೇ ವಿಚಾರಮಾಡುತ್ತಾರೆ. ಲಾಕ್‌ರಿಂದ ನನ್‌ರವರೆಗಿನ ಎಲ್ಲ ಇಂಗ್ಲೀಷ್ ಶಿಕ್ಷಣವೇತ್ತರೂ ವ್ಯಕ್ತಿತ್ವದ ವಿಕಾಸವೇ ಶಿಕ್ಷಣದ ಗುರಿ ಎಂಬ ಸಿದ್ಧಾಂತವನ್ನು ಹೊಂದಿದವರಾಗಿದ್ದು, ಸಮಾಜಸೇವೆಯ ಬಗ್ಗೆ ಈಗ ಮಾತ್ರ ಇಂಗ್ಲೆಂಡಿನಲ್ಲಿ ಶಿಕ್ಷಣಪ್ರಜ್ಞೆ ಮೂಡಿದೆ. 'ಸಮಾಜಸೇವೆಗಾಗಿ ಶಿಕ್ಷಣ' ಎಂಬುದನ್ನು ಬಸವೇಶ್ವರರು ಕ್ರಿ.ಶ. ೧೨ನೆಯ ಶತಕದಷ್ಟು ಪೂರ್ವದಲ್ಲಿಯೇ ಯೋಚಿಸಿದರು. ಇದು ಶೈಕ್ಷಣಿಕ ಸಿದ್ಧಾಂತಕ್ಕೆ ವೀರಶೈವ ವಿದ್ಯಾಭ್ಯಾಸಕ್ರಮದ ವಿಶಿಷ್ಟ ಕೊಡುಗೆ. 'ಭೃತ್ಯಾಚಾರ'ವು[66] ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ಸಮಾಜದ ಸೇವಕನೆಂದು ತಿಳಿಯಬೇಕೆಂದು ವಿಧಿಸುತ್ತದೆ. ವೀರಶೈವ ಮಠಗಳಲ್ಲಿಯ ಸಹಜೀವನ, ಸಹಭೋಜನ, ಪ್ರಸಾದವಿತರಣ ಮುಂತಾದವುಗಳು ವ್ಯಕ್ತಿಯನ್ನು ಸಾಂಘಿಕ ಜೀವನಕ್ಕಾಗಿ, ಸಾಮಾಜಿಕ ಐಕ್ಯಕ್ಕಾಗಿ ಸಿದ್ಧಗೊಳಿಸುವ ಕೆಲವು ಸಾಧನಗಳಾಗಿವೆ. ಆಧುನಿಕ ಶೈಕ್ಷಣಿಕ ಭಾವನೆಯಾದ 'ಪೌರತ್ವಕ್ಕಾಗಿ ಶಿಕ್ಷಣ' ಎಂಬುದಕ್ಕೆ ಇದು ಚೆನ್ನಾಗಿ ಹೊಂದಿಕೊಳ್ಳುತ್ತದೆ.

---

64 T. L. Jarman : *Land Marks in the History of Education*, II Edition, John Murray, London, 1963, p. 307

65 ವೀರಶೈವದಾರ್ಶನಿಕಸಿದ್ಧಾಂತದಲ್ಲಿ ಸಾಧಕನಾದ ಮುಮುಕ್ಷುವನ್ನು ಸಾಂಸಾರಿಕ ಮಾಯೆಯ ಅಡ್ಡಿ-ಆತಂಕಗಳಿಂದ ರಕ್ಷಿಸಲು ವಿಧಿಸಲಾದ ಅಷ್ಟಾವರಣಗಳು—ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ, ಮಂತ್ರ.

66 ವೀರಶೈವದಾರ್ಶನಿಕಸಿದ್ಧಾಂತದಲ್ಲಿ ಸಾಧಕನಿಗೆ ವಿಧಿಸಲಾದ ಐದು ಆಚಾರಸಂಹಿತೆ—'ಪಂಚಾಚಾರ'ಗಳು : ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ, ಗಣಾಚಾರ.

ವೀರಶೈವಧರ್ಮವು ಪ್ರತಿಪಾದಿಸುವ 'ಷಟ್‌ಸ್ಥಲಸಿದ್ಧಾಂತ'[67]ದಲ್ಲಿ ಶೈಕ್ಷಣಿಕ ಸಿದ್ಧಾಂತಗಳು ಧ್ವನಿತವಾಗುತ್ತವೆ. 'ಭಕ್ತಸ್ಥಲ'ದಲ್ಲಿ ವ್ಯಕ್ತಿಯು ಮಾಡಬೇಕಾದ ಕಾರ್ಯದಲ್ಲಿ ದೃಢವಾದ ಹಾಗೂ ಪ್ರಾಮಾಣಿಕ ಭಕ್ತಿಯನ್ನು ಹೊಂದುವ ತರಬೇತಿಯ ದೀಕ್ಷೆಯನ್ನು ಪಡೆಯುತ್ತಾನೆ. ಇದರಿಂದ ವ್ಯಕ್ತಿಯು ಸ್ಫುಟವಾದ ಧ್ಯೇಯೋದ್ದೇಶಗಳ ಕಡೆಗೆ ನಡೆಯುವ ಸಾಮರ್ಥ್ಯ ಪಡೆಯುತ್ತಾನೆ. ಪರಮಾತ್ಮನಲ್ಲಿ ಆತನ ದೃಢವಾದ ನಂಬುಗೆಯು ಆತನಲ್ಲಿ ಒಳ್ಳೆಯದು-ಕೆಟ್ಟದ್ದು, ಸರಿಯಾದುದು-ತಪ್ಪಾದುದು, ದಿಟವಾದುದು-ಸಟೆಯಾದುದು ಇವುಗಳ ವಿಷಯವಾಗಿ ವಿವೇಕಪ್ರಜ್ಞೆಯನ್ನು ಮೂಡಿಸುತ್ತದೆ. ವಿದ್ಯಾರ್ಜನೆಗೆ ಈ ವಿವೇಕಪ್ರಜ್ಞೆ ಅನಿವಾರ್ಯ ಅವಶ್ಯಕತೆ. ಭಕ್ತಸ್ಥಲದಲ್ಲಿ ವಿಧಿಸಲಾದ ಕಠೋರ ಆಚಾರಗಳು ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ವರ್ಧಿಸಲು ಸಹಾಯಕವಾಗುತ್ತವೆ.

ದೈಹಿಕ, ಮಾನಸಿಕ, ಆಧ್ಯಾತ್ಮಿಕ ಉನ್ನತಿಯು ಶಿಕ್ಷಣದ ಗುರಿಯೆಂದಿಟ್ಟುಕೊಳ್ಳುವುದಾದರೆ 'ಮಹೇಶಸ್ಥಲ'ವು ಇದಕ್ಕೆ ಅವಕಾಶ ಕಲ್ಪಿಸುತ್ತದೆ. ಈ ಸ್ಥಳದಲ್ಲಿ ಶರೀರ, ಮನಸ್ಸು, ಆತ್ಮಗಳ ಶುದ್ಧೀಕರಣವನ್ನು ಸಾಧಿಸಲಾಗುತ್ತದೆ.

'ಪ್ರಸಾದಿಸ್ಥಲ'ದಲ್ಲಿ ವ್ಯಕ್ತಿಯ ರಾಗ-ವಿರಾಗಗಳ ಉದಾತ್ತೀಕರಣವಾಗುತ್ತದೆ. ಬೌದ್ಧಿಕ ಸಾಮರ್ಥ್ಯಗಳು ಬೆಳಕಿಗೆ ಬರುತ್ತವೆ. ಕಾಯಕದ ಮೂಲಕ ರಚನಾತ್ಮಕ ವಿಚಾರಶಕ್ತಿಯ ವರ್ಧನೆಯಾಗುತ್ತದೆ. ನಿಷ್ಕ್ರಿಯತೆಯಿಂದುಂಟಾಗುವ ಜಾಡ್ಯ ನಿವಾರಣೆಯು ಶಿಕ್ಷಣದ ಗುರಿಯೆನ್ನುವುದಾದರೆ ಪ್ರಸಾದಿಸ್ಥಲದಲ್ಲಿ ಇದನ್ನು ಸಾಧಿಸಲು ಅನುವಿದೆ.

'ಪ್ರಾಣಲಿಂಗಿ'ಸ್ಥಲದಲ್ಲಿ 'ಜ್ಞಾನ' ಹಾಗೂ 'ಕ್ರಿಯೆ'ಗಳ ಸಮನ್ವಯವಿದೆ. ಶಿಕ್ಷಣದಲ್ಲಿ ಇವುಗಳಲ್ಲಿ ಒಂದಿಲ್ಲದೇ ಇನ್ನೊಂದಕ್ಕೆ ಅರ್ಥವೇ ಇಲ್ಲ. ಪಂಚಾಚಾರಗಳು ಭಕ್ತಿ, ಜ್ಞಾನ ಹಾಗೂ ಕ್ರಿಯೆಗಳ ಸಮನ್ವಯವನ್ನು ಪೋಷಿಸುತ್ತವೆ. ವಿಚಾರ ಹಾಗೂ ಕ್ರಿಯೆಗಳು ಒಂದಕ್ಕೊಂದು ಹೊಂದಿಕೊಂಡಿರಬೇಕಾದುದು ಅವಶ್ಯಕವಾಗಿದೆ.

**ಕಾಯಕ ವಿದ್ಯಾಭ್ಯಾಸಕ್ರಮ :** ಅರಿಸ್ಟಾಟಲ್ 'ದೃಢವಾದ ಶರೀರದಲ್ಲಿ ದೃಢವಾದ ಮನಸ್ಸನ್ನು ಸಾಧಿಸುವುದು ಶಿಕ್ಷಣದ ಗುರಿ' ಎಂಬ ಆದರ್ಶವನ್ನು ಹೊಂದಿದ್ದ. ಪೆಸ್ಟಾಲಜಿಯ ದೃಷ್ಟಿಯಲ್ಲಿ ಶಿಕ್ಷಣವೆಂದರೆ ವೈಯಕ್ತಿಕ ಬೆಳವಣಿಗೆ. ಪರಿಪೂರ್ಣತೆ, ಚಾರಿತ್ರ್ಯಸಂವರ್ಧನೆ ಹಾಗೂ ಜನ್ಮಜಾತ ಶಕ್ತಿಗಳ ಅನಾವರಣಗಳೇ ಶಿಕ್ಷಣದ ಧ್ಯೇಯೋದ್ದೇಶಗಳೆಂದು ಫ್ರೊಬೆಲ್‌ನ ವಿಚಾರ.[68] ಕ್ರಿ.ಶ. ೧೯ನೆಯ ಶತಕದ ಪೂರ್ವದಲ್ಲಿ ಪ್ರಪಂಚದಲ್ಲಿ ಯಾವುದೇ ಶಿಕ್ಷಣವೇತ್ತರೂ ವೃತ್ತಿಗಾಗಿ ಶಿಕ್ಷಣ ಎಂಬ ಮುಖವನ್ನು ಕುರಿತು ವಿಚಾರಿಸಲೇ ಇಲ್ಲ. ೨೦ನೆಯ ಶತಕದಲ್ಲಿ ಗಾಂಧೀಜಿ ಈ ದಿಶೆಯಲ್ಲಿ ಚಿಂತಿಸಿದರು. ಎಂಟುನೂರು ವರ್ಷಗಳ ಹಿಂದೆಯೇ ಬಸವೇಶ್ವರರು ಜೀವನಾವಶ್ಯಕ ತತ್ವಗಳನ್ನೊಳಗೊಂಡ ಶಿಕ್ಷಣಕ್ರಮವನ್ನು ಊಹಿಸಿದರು. ಇಂದು ನಾವು 'ಉದ್ಯೋಗೋನ್ಮುಖ ಶಿಕ್ಷಣ' ಹಾಗೂ 'ಜೀವನೋನ್ಮುಖ ಶಿಕ್ಷಣ'ಗಳನ್ನು ಕುರಿತು ಚಿಂತಿಸುತ್ತಿದ್ದೇವೆ. ಈ ದಿಶೆಯಲ್ಲಿ ಆದ್ಯಪ್ರವರ್ತಕ ಕಾರ್ಯವನ್ನು ಮಾಡಿದ ಕೀರ್ತಿ ವೀರಶೈವ ಶಿಕ್ಷಣಕ್ರಮಕ್ಕೆ ಸಲ್ಲುತ್ತದೆ. ಶಿಕ್ಷಣದ ಈ ಧ್ಯೇಯವನ್ನು ಪೂರೈಸಲು ಬಸವೇಶ್ವರರು 'ಕಾಯಕ' ಭಾವನೆಯನ್ನು ರೂಪಿಸಿದರು.

'ಕಾಯಕ' ಎಂದರೆ ದೈಹಿಕ ಶ್ರಮ, ಇಲ್ಲವೇ ದೇಹದಿಂದ ಮಾಡುವ ಕೆಲಸ. ಕಾಯ ಎಂದರೆ ದೇಹ; ಕಾಯಕ ಎಂದರೆ ದೇಹದಿಂದ ಮಾಡುವ ಕಾರ್ಯ. ಬಸವೇಶ್ವರರೂ ಉಳಿದ ಅಸಂಖ್ಯ ಶಿವಶರಣರೂ ಬೋಧಿಸಿದ ವಿಶಾಲಾರ್ಥದಲ್ಲಿ—ಕಾಯಕವೆಂದರೆ ವೃತ್ತಿ, ಉದ್ಯೋಗ, ಶ್ರಮ, ಕೆಲಸ, ಕರ್ತವ್ಯಕ್ರಮ ಇಲ್ಲವೆ ಜೀವನನಿರ್ವಾಹಕ್ಕೆ ಸಾಧನವಾದ ಯಾವುದಾದರೊಂದು ಹಿತಕರವಾದ ಉದ್ಯೋಗ. ಕಾಯಕವು ತನ್ನ ಕರ್ತವ್ಯ ಇಲ್ಲವೇ ಧರ್ಮವನ್ನು ನಿರ್ವಹಿಸಲು ವ್ಯಕ್ತಿಗೆ ಒಂದು ಅತ್ಯುತ್ತಮ ಸಾಧನವೂ ಹೌದು. ಕ್ರಿ.ಶ. ೨೦ನೆಯ ಶತಕದಲ್ಲಿ ಜಾನ್‌ಡ್ಯೂಯಿ ರೂಪಿಸಿದ ಶಿಕ್ಷಣದಲ್ಲಿ ಲೌಕಿಕ ತತ್ವಜ್ಞಾನಕ್ಕೆ ಕಾಯಕ ಪದ್ಧತಿಯು ಹೊಂದಿಕೊಳ್ಳುವುದು ಸೋಜಿಗದ ಸಂಗತಿ. ವಿದ್ಯಾಶಾಲೆಯು ಸಮಾಜದ ಲಘುರೂಪವಾಗುವಂತೆ ಅದರ ಕಾರ್ಯಚಟುವಟಿಕೆಗಳನ್ನು ಬದಲಿಸಬೇಕೆಂಬುದು ಡ್ಯೂಯಿಯವರ ಇಚ್ಛೆ. ಕೇವಲ ಜ್ಞಾನಸಂಗ್ರಹವು ಶಿಕ್ಷಣದ ಗುರಿಯಲ್ಲ; ಸಾಮಾಜಿಕ ದಕ್ಷತೆಯು ಶಿಕ್ಷಣದ ಧ್ಯೇಯ. ಸಮಾಜದ ಒಂದು ಸಂಸ್ಥೆಯಾದ ಶಾಲೆಯ ಚಟುವಟಿಕೆಗಳಲ್ಲಿ ವ್ಯಕ್ತಿಯು ಭಾಗವಹಿಸುವುದರ ಮೂಲಕ ಈ ಸಾಮಾಜಿಕ ದಕ್ಷತೆಯು ಉತ್ಪಾದಿಸಲ್ಪಡುವಂಥದ್ದಾಗಬೇಕು. ಆದ್ದರಿಂದ ಶಿಕ್ಷಣವೆಂದರೆ ಕಲಿಯುವಿಕೆ ಮಾತ್ರವಲ್ಲ; ಆಟ, ರಚನಾತ್ಮಕ ಚಟುವಟಿಕೆ ಸಾಧನ-ಸಲಕರಣೆಗಳನ್ನು ಬಳಸುವುದು, ನಿಸರ್ಗದೊಡನೆ ಸಂಪರ್ಕ ಹೊಂದುವುದು, ಅಭಿವ್ಯಕ್ತಿ ಹಾಗೂ ಚಟುವಟಿಕೆಗೆ ಇವು

---

67 ಮುಮುಕ್ಷುವು ಕ್ರಮಿಸಬೇಕಾದ ಸಾಧನೆಯ ಷಟ್‌ಸ್ಥಲಗಳು : ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ.

68 John Locke: 'Some Thoughts Concerning Education', Quoted by Luella Cole: A History of Education, Socrates to Montessori; Holt, Richard and Winston, NewYork, F e. 1961, p. 620.

ಗಳನ್ನೂ ಒಳಗೊಳ್ಳುತ್ತದೆ. ಶಾಲೆಯು, ಮಕ್ಕಳು ಕೇಳುತ್ತ ಕೂಡುವ ಸ್ಥಳವಾಗದೆ ಕೆಲಸ ಮಾಡುವ ತಾಣವಾಗಬೇಕು. ಮಕ್ಕಳು ಜೀವನವನ್ನು ಪ್ರತ್ಯಕ್ಷವಾಗಿ ಅನುಭವಿಸಿ ಜೀವನದ ವಿಷಯವಾಗಿ ಕಲಿಯಬೇಕು. ಪ್ರತ್ಯಕ್ಷ ಅಧ್ಯಯನದ ಮೂಲಕ ಅವರು ಸಾಮಾಜಿಕ ಸಂಸ್ಥೆಗಳು ಹಾಗೂ ಔದ್ಯೋಗಿಕ ವಿಧಾನಗಳನ್ನು ಅರಿತುಕೊಳ್ಳಬೇಕು. ಕ್ರಿಯಾಮೂಲಕವಾದ ಜ್ಞಾನವೇ ನಿಜವಾದ ಜ್ಞಾನ. ಕಂಠಪಾಠವು ಜ್ಞಾನಾರ್ಜನೆಗೆ ಸಾಧನವಲ್ಲ. ಕಾಯಕಪದ್ಧತಿಯ ಶಿಕ್ಷಣ ಕ್ರಮವು ಪುಸ್ತಕೀಯ ಜ್ಞಾನವನ್ನು ಪ್ರೋತ್ಸಾಹಿಸುವುದಿಲ್ಲ. ವ್ಯಕ್ತಿಯು ಸ್ವತಃ ಬೆವರು ಸುರಿಸಿ ಸ್ವಾವಲಂಬಿಯಾಗಿ ಜೀವಿಸುವ ಸಾಮರ್ಥ್ಯ ಹಾಗೂ ಒಲವುಗಳನ್ನು ಪೋಷಿಸುವುದೇ ಕಾಯಕದ ಗುರಿ.

**ಕಾಯಕ ಹಾಗೂ ಶ್ರಮಗೌರವ :** ಪ್ರತಿಯೊಬ್ಬ ವ್ಯಕ್ತಿಯೂ ಉಪಯುಕ್ತ ಹಾಗೂ ಸಮಾಜದ ಸ್ವಾಸ್ಥ್ಯಕ್ಕೆ ಅನುಕೂಲವಾದ ವೃತ್ತಿಯೊಂದನ್ನು ಅನುಸರಿಸಬೇಕೆಂದು ಬಸವೇಶ್ವರರು ಎಚ್ಚರಿಸಿ ಸ್ವಾವಲಂಬನೆಯನ್ನು ಪುರಸ್ಕರಿಸಿದರು. ಚಿಕ್ಕವರು-ದೊಡ್ಡವರು, ಬಡವರು-ಸಿರಿವಂತರು, ಸ್ತ್ರೀಯರು-ಪುರುಷರು ಯಾರೇ ಇರಲಿ, ನಿರುದ್ಯೋಗಿಯಾಗಿರಕೂಡದೆಂಬುದು ಅವರ ಉಚ್ಚ ಆದರ್ಶವಾಗಿತ್ತು. ದೈಹಿಕ ಶ್ರಮವನ್ನೊಳಗೊಂಡ ಉದ್ಯೋಗಕ್ಕೆ ಅವರು ಮಹತ್ವ ಕೊಟ್ಟು ಯಾವ ಕೆಲಸವೂ ಕೀಳಲ್ಲವೆಂಬ ಭಾವನೆಯನ್ನು ಜನರಲ್ಲಿ ತುಂಬಿದರು. ತನ್ಮೂಲಕ ಸಮಾಜಸೇವೆಯೂ ಸಾಧಿಸುವದು. ಇದರಿಂದ ಸಮಾಜದ ಅರ್ಥವ್ಯವಸ್ಥೆಗೂ ಒಂದು ಹೊಸ ಚಾಲನೆ ದೊರೆತು ಆಧ್ಯಾತ್ಮಿಕ ಜೀವನದ ಸ್ವಾಸ್ಥ್ಯವೂ ಸುರಕ್ಷಿತವಾಗಲು ಅನುಕೂಲವಾಯಿತು.

ಸ್ವತಃ ಬಸವೇಶ್ವರರು ಬಿಜ್ಜಳನಲ್ಲಿ ಮಂತ್ರಿಸ್ಥಾನದ ಕಾಯಕವನ್ನು ಕೈಕೊಂಡು ಜನತೆಗೆ ಕಾಯಕ ಸಿದ್ಧಾಂತವನ್ನು ಬೋಧಿಸಿದರು. ಸಂಸಾರಿಯಾಗಿದ್ದುಕೊಂಡು ಆತ್ಮೋನ್ನತಿ-ಸಮಾಜೋನ್ನತಿಗಾಗಿ ಶ್ರಮಿಸಬೇಕೆಂದು ಸ್ವ-ನಿದರ್ಶನದ ಮೂಲಕ ಅವರು ಬೋಧಿಸಿದರು, ಧರ್ಮದ ಹೆಸರಿನಲ್ಲಿ ಪರೋಪಜೀವಿಯಾಗುವುದನ್ನು ಕಾಯಕ ಪದ್ಧತಿಯು ಬಲವಾಗಿ ವಿರೋಧಿಸಿತು. ಸನ್ಯಾಸವನ್ನು ಅಥವಾ ಸಂಸಾರವಿಮುಖತೆಯನ್ನು ವಿರೋಧಿಸುವಷ್ಟೇ ಬಲವಾಗಿ ಭಿಕ್ಷೆಬೇಡುವುದನ್ನೂ ಪರಾವಲಂಬನೆಯನ್ನೂ ಅದು ವಿರೋಧಿಸುತ್ತದೆ.

ಕಾಯಕವು ಭೌತಿಕ ದೃಷ್ಟಿಕೋಣ ಮಾತ್ರವಲ್ಲ, ಕಾಯಕ ಸಿದ್ಧಾಂತದಂತೆ ಮನುಷ್ಯನು ದೈಹಿಕಶ್ರಮವನ್ನು ಆಧ್ಯಾತ್ಮಿಕ ಜೀವನದ ಅನುಸರಣೆಯತ್ತ ಉದಾತ್ತೀಕರಿಸಬೇಕು. ಕಾರ್ಲಾಯಿಲರು 'ಶ್ರಮವೇ ಪೂಜೆ' (ವರ್ಕ್ ಈಸ್ ವರ್ಶಿಪ್) ಎಂದರೆ ಶರಣನೊಬ್ಬ 'ಕಾಯಕವೇ ಕೈಲಾಸ' ಎನ್ನುತ್ತಾನೆ. ಕಾಯಕವು ಲಾಭಬಡುಕತನವನ್ನು ವಿರೋಧಿಸಿ ಧನಸಂಗ್ರಹ ಪ್ರವೃತ್ತಿಯನ್ನು ಮೊಟಕುಗೊಳಿಸುತ್ತದೆ. ಕಾಯಕವು ದಾಸೋಹರೀತಿಯಲ್ಲಿ ನಡೆಯಬೇಕು. ದಾಸೋಹವೆಂದರೆ ಅವಶ್ಯಕವಾದ ಪರಸೇವೆ. ಪರರಿಗಾಗಿ ಬದುಕು ಎಂಬುದೇ ಇದರ ತಳಹದಿ. ವಿನೋಬಾ ಭಾವೆಯವರಂಥ ಮುಖಂಡರು ಇಂದು ಬಯಸುತ್ತಿರುವ 'ಸರ್ವೋದಯ'ಕ್ಕೆ ಕಾಯಕಸಿದ್ಧಾಂತವು ತಳಹದಿಯಾಗುತ್ತದೆ. ಸುಖೀರಾಜ್ಯದ ಕನಸು ಕಾಯಕಸಿದ್ಧಾಂತದ ಮೂಲಕ ಮಾತ್ರ ನನಸಾಗಬಲ್ಲದು.

## ಕಾಯಕ ವಿದ್ಯಾಭ್ಯಾಸಕ್ರಮದ ತತ್ವಗಳು

೧. ಪಠ್ಯಕ್ರಮವು ಮೂಲಾಕ್ಷರಗಳಿಂದ ಆರಂಭವಾಗುತ್ತಿತ್ತು.

೨. ಮಠಗಳು ಈ ಶಿಕ್ಷಣವನ್ನು ನಿರ್ವಹಿಸುವ ಸಂಸ್ಥೆಗಳಾಗಿದ್ದವು.

೩. ಮಾತೃಭಾಷೆಯು ಶಿಕ್ಷಣದ ಮಾಧ್ಯಮವಾಯಿತು.

೪. ಕೈಗಾರಿಕೆಯೊಂದರ ಮೂಲಕ ಕಲಿಯುವ ವಿಧಾನವನ್ನು ಸ್ವೀಕರಿಸಲಾಯಿತು. ಇದು ಗಾಂಧೀಜಿಯವರ ವಾರ್ಧಾಶಿಕ್ಷಣಪದ್ಧತಿಯನ್ನು ಪೂರ್ಣವಾಗಿ ಹೋಲುತ್ತದೆ.

೫. ಲಿಂಗಭೇದವನ್ನು ತೊಡೆದುಹಾಕಿ ಪುರುಷರಿಗೆ ಸಮನಾಗಿ ಸ್ತ್ರೀಯರಿಗೂ ಶಿಕ್ಷಣಸೌಲಭ್ಯ ಒದಗಿಸಲಾಯಿತು.

೬. ಕೈಗಾರಿಕೆಗಳ ಮೂಲಕ ಜೀವನ ಹಾಗೂ ಧರ್ಮದ ಅವಶ್ಯಕ ತತ್ವಗಳನ್ನು ಬೋಧಿಸಲಾಗುತ್ತಿತ್ತು.

೭. ಕಾಯಕ ಪದ್ಧತಿಯ ಶಿಕ್ಷಣವು ಉತ್ಪಾದಕವೂ ರಚನಾತ್ಮಕವೂ ಆಗಿತ್ತು.

೮. ನೂಲುವುದು, ನೇಯುವುದು, ಬಡಗಿತನ, ಕಮ್ಮಾರಿಕೆ, ಮಡಕೆಗಳನ್ನು ಮಾಡುವುದು, ಕಸೂತಿಕೆಲಸ, ಬಣ್ಣ ಹಾಕುವುದು, ಮುದ್ರಿಸುವುದು ಮುಂತಾದುವುಗಳು ಪ್ರಮುಖ ಕಾರ್ಯಗಳಾಗಿದ್ದವು.

**ನೈತಿಕ ಶಿಕ್ಷಣ :** ಇಂದಿನ ಯುವಜನಾಂಗದಲ್ಲಿ ಕಂಡುಬರುವ ಅಶಾಂತಿ-ಅತೃಪ್ತಿಗಳಿಗೆಲ್ಲ ನಮ್ಮ ಇಂದಿನ ಶಿಕ್ಷಣ ಕ್ರಮದಲ್ಲಿ ನೈತಿಕ ಮೌಲ್ಯಗಳಿಗೆ ಸೂಕ್ತ ಅವಕಾಶವಿಲ್ಲದ್ದೇ ಕಾರಣವಾಗಿದೆ. ಮನುಷ್ಯನ ಸಮಗ್ರ ವ್ಯಕ್ತಿತ್ವದ

ವಿಕಾಸವೇ ಶಿಕ್ಷಣದ ಗುರಿ ಎಂದು ಒಂದು ಕಡೆಗೆ ಹೇಳುತ್ತ ನಾವು ನೈತಿಕ ಶಿಕ್ಷಣದ ಅಪರಿಮಿತ ಮಹತ್ವವನ್ನು ಅಲಕ್ಷಿಸಿದ್ದೇವೆ. ಪ್ರಾಯೋಗಿಕ ಉಪಯುಕ್ತತೆಯನ್ನೊಳಗೊಂಡ ಶಿಕ್ಷಣಕ್ರಮವನ್ನು ರೂಪಿಸುವ ಭರದಲ್ಲಿ ನೈತಿಕ ಮೌಲ್ಯಗಳು ಮರೆತುಹೋಗುತ್ತಲಿವೆ. ಇದು ಅತ್ಯಂತ ಅಪಾಯಕಾರಿ.

ಈ ದಿಶೆಯಲ್ಲಿ ವೀರಶೈವ ಶಿಕ್ಷಣಕ್ರಮವು ತನ್ನ ಮಹತ್ವಪೂರ್ಣ ಕೊಡುಗೆಯನ್ನು ಸಲ್ಲಿಸಿದೆ. ವೃತ್ತಿಪರ ಶಿಕ್ಷಣವು ನೈತಿಕ ಹಾಗೂ ಸೌಂದರ್ಯಾನುಭೂತಿಯ ಅಂಶಗಳನ್ನೊಳಗೊಂಡಿತ್ತು. ಪದವಿಗಳನ್ನು ಪಡೆದು ಯಾವುದೋ ಒಂದು ಉದ್ಯೋಗವನ್ನು ಯಾವುದೋ ರೀತಿಯಲ್ಲಿ ಕೈಕೊಂಡು ಜೀವಿಸುವುದು ಇಂದಿನ ಶಿಕ್ಷಣದ ಗುರಿಯಾಗಿ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಸೇವಾಭಾವನೆ, ಕರ್ತವ್ಯನಿಷ್ಠೆ, ಶ್ರಮಗೌರವ, ಪರರನ್ನು ಗೌರವದಿಂದ ಕಾಣುವುದು, ಶುದ್ಧ ಜೀವನ ನಡೆಸುವುದು ಮುಂತಾದ ಸಾಮಾಜಿಕ ಮೌಲ್ಯಗಳನ್ನು ಯುವಜನಾಂಗದಲ್ಲಿ ವರ್ಧಿಸಲು ಇಂದಿನ ಶಿಕ್ಷಣಕ್ರಮವು ಅಶಕ್ತವಾಗಿದೆ. ಕಾಯಕಪದ್ಧತಿಯ ಶಿಕ್ಷಣವು ಮುಂದುವರಿದುಕೊಂಡು ಬಂದಿದ್ದರೆ ಇಂದಿನ ಎಷ್ಟೋ ಸಮಸ್ಯೆಗಳು ಇರುತ್ತಲೇ ಇರಲಿಲ್ಲವೆನಿಸುತ್ತದೆ. ಇಂದು ದುರ್ದೈವದಿಂದ ಎಷ್ಟೋ ವೀರಶೈವ ಧರ್ಮದ ಅನುಯಾಯಿಗಳೇ ನೈತಿಕಮೌಲ್ಯಗಳನ್ನಲಕ್ಷಿಸಿ ಸ್ವಾರ್ಥಸಾಧನೆ, ಅನ್ಯರ ಹಿತವನ್ನು ನಿರ್ಲಕ್ಷಿಸಿ ಧನಸಂಗ್ರಹ ಮಾಡುವುದು ಮುಂತಾದವುಗಳನ್ನನುಸರಿಸಿ ದಯೆ, ಕರುಣೆ, ಚಾರಿತ್ರಿಕಪಾವಿತ್ರ್ಯ, ಬಂಧುತ್ವಭಾವನೆಗಳನ್ನು ದೂರ ತಳ್ಳಿರುವುದು ಕಂಡುಬರುತ್ತದೆ. ಇದು ಬಸವೇಶ್ವರರ ಬೋಧನೆಗಳಿಗೆ ವಿರೋಧಿಯಾದುದೆಂಬುದನ್ನು ಅರಿಯಬೇಕು. ಇಂದು ಕೆಲವು ಮಠಾಧಿಪತಿಗಳೂ ಸಂಕುಚಿತ ಮನೋವೃತ್ತಿಯನ್ನು ತಾಳಿ, ವೀರಶೈವ ಸಮಾಜದಲ್ಲಿಯೇ ಪ್ರತ್ಯೇಕತಾಭಾವನೆಯನ್ನು ಬೀರಿ ಶಿಷ್ಯರನ್ನೂ ತಪ್ಪುದಾರಿಗೆಳೆಯುತ್ತಿರುವುದು ಕಾಣುತ್ತದೆ. ಇದು ಅನಿಯಂತ್ರಿತವಾದರೆ ಮತ್ತೆ ಸಮಾಜದಲ್ಲಿ ಮೇಲುಕೀಳುಭಾವನೆ ಹಾಗೂ ಪಕ್ಷ-ಪಂಗಡಗಳು ಜನ್ಮತಾಳುವ ಭಯವಿಲ್ಲದೆ ಇಲ್ಲ. ಸಮಾಜದಲ್ಲಿ ಭಾವನಾತ್ಮಕ ಐಕ್ಯ ಹಾಗೂ ಅಖಂಡತೆಯ ಭಾವನೆಗಳನ್ನು ಕಾಯ್ದುಕೊಳ್ಳುವ ಪ್ರಯತ್ನವನ್ನು ಜಾಗ್ರತೆಯಾಗಿ ಸಮಾಜದ ಮುಖಂಡರು ಕೈಗೆತ್ತಿಕೊಳ್ಳಬೇಕಾದ ಸಮಯವೊದಗಿದೆ.

**ಅನೌಪಚಾರಿಕ ಶಿಕ್ಷಣಕ್ರಮ :** ಜನಸಾಮಾನ್ಯರಲ್ಲಿ ವಿದ್ಯಾಪ್ರಸಾರಕ್ಕಾಗಿ ಶ್ರೀ ಬಸವೇಶ್ವರರು ತಮ್ಮ ಕಾಲದಲ್ಲಿಯೇ ಅನುಭವ ಮಂಟಪದಂಥ ಅನೌಪಚಾರಿಕ ವಿದ್ಯಾಸಂಸ್ಥೆಯನ್ನು ಸಂಘಟಿಸಿದರೆಂದು ಈ ಮೊದಲೇ ಹೇಳಲಾಗಿದೆ. ವೀರಶೈವ ಮಠಗಳು ಈ ಪರಂಪರೆಯನ್ನು ಪ್ರವಚನ, ಕೀರ್ತನ ಮುಂತಾದವುಗಳ ಮೂಲಕ ಕಾಯ್ದುಕೊಂಡು ಬಂದವು. ಇವುಗಳ ಮೂಲಕ ಜನಸಾಮಾನ್ಯರಿಗೆ ನೈತಿಕ ಹಾಗೂ ಸಾಮಾಜಿಕ ಶಿಕ್ಷಣವನ್ನು ಕೊಡಲಾಗುತ್ತದೆ. ಇಂದಿಗೂ ವೀರಶೈವ ಮಠಗಳು ಇಂಥ ಚಟುವಟಿಕೆಗಳನ್ನು ನಡೆಸುತ್ತಲಿವೆ. ಸಾಂಪ್ರದಾಯಿಕ ವಿದ್ಯಾ-ಭ್ಯಾಸಂಗಕ್ರಮವನ್ನು ಕಾಯ್ದುಕೊಳ್ಳಲು ವೀರಶೈವ ಮಠಗಳು ಸಂಸ್ಕೃತ ಭಾಷಾಧ್ಯಯನಕ್ಕೂ ಸೂಕ್ತ ಪ್ರೋತ್ಸಾಹ ಕೊಡುತ್ತಲಿವೆ. ಪ್ರಾದೇಶಿಕ ಭಾಷೆಯ ಬೆಳವಣಿಗೆಗೆ ವೀರಶೈವ ಮಠಗಳ ಕೊಡುಗೆ ವಿಶಿಷ್ಟವಾಗಿದೆ. ಕನ್ನಡ ಭಾಷೆಯನ್ನು ರಕ್ಷಿಸಿ ಪೋಷಿಸಿದ್ದು ವೀರಶೈವ ಶಿಕ್ಷಣಕ್ರಮವೇ ಎಂಬುದು ನಿರ್ವಿವಾದ.

**ಕೆಲವು ಕುಂದುಕೊರತೆಗಳು :** ಆಧುನಿಕ ಕಾಲಕ್ಕೆ ತಕ್ಕ ಅನೇಕ ಅಂಶಗಳು ವೀರಶೈವ ಶಿಕ್ಷಣಕ್ರಮದಲ್ಲಿ ಕಂಡು ಬಂದರೂ ಕೆಲವೊಂದು ಕುಂದುಕೊರತೆಗಳನ್ನು ಎತ್ತಿಹೇಳಬಹುದಾಗಿದೆ.

೧. ವೀರಶೈವ ಶಿಕ್ಷಣಕ್ರಮವು ತನ್ನದೇ ಆದ ಉಚ್ಚ ವ್ಯಾಸಂಗಕ್ರಮವನ್ನು ರೂಪಿಸಲಿಲ್ಲ.

೨. ಪೂರ್ವಪ್ರಾಥಮಿಕ ಶಿಕ್ಷಣಯೋಜನೆಯನ್ನು ಅದು ಊಹಿಸಲಿಲ್ಲ.

೩. ರಚನಾತ್ಮಕ ಸಾಹಿತ್ಯದಲ್ಲಿ ಸಾಕಷ್ಟು ಕೃಷಿಮಾಡಿದರೂ ವೀರಶೈವ ಶಿಕ್ಷಣಕ್ರಮವು ತಕ್ಕಷ್ಟು ಪ್ರಮಾಣದಲ್ಲಿ ಉಳಿದ ಉಪಯುಕ್ತ ವಿಜ್ಞಾನಗಳಲ್ಲಿ ಗ್ರಂಥರಚನೆಗೆ ಅವಕಾಶ ಮಾಡಿಕೊಡಲಿಲ್ಲ.

೪. ಬಹುತರವಾಗಿ ವೀರಶೈವ ಶಿಕ್ಷಣಕ್ರಮವು ವೃತ್ತಿಪ್ರಧಾನತೆಗೆ ಮಹತ್ವಕೊಟ್ಟುದು ಇದಕ್ಕೆ ಕಾರಣವಾಗಿರಬಹುದು.

ಅದೇನೇ ಇದ್ದರೂ ಕ್ರಿ.ಶ. ೧೨ನೆಯ ಶತಕದಿಂದ ಇಲ್ಲಿಯವರೆಗೆ ವೀರಶೈವ ಮಠಗಳು ವಿದ್ಯಾಕ್ಷೇತ್ರಕ್ಕೆ ವಿಶಿಷ್ಟ ರೀತಿಯಲ್ಲಿ ಅವ್ಯಾಹತವಾಗಿ ಸೇವೆ ಸಲ್ಲಿಸುತ್ತ ಬಂದಿವೆ. ಇಂದಿಗೆ ಕರ್ನಾಟಕದಲ್ಲಿ ವೀರಶೈವ ಮಠಗಳು ಹಾಗೂ ಸಂಘಸಂಸ್ಥೆಗಳ ಆಧಿಪತ್ಯದಲ್ಲಿ ನಡೆಯುವ ವಿದ್ಯಾಸಂಸ್ಥೆಗಳೇ ಬಹುಸಂಖ್ಯವಾಗಿವೆ. ಆರಂಭಕಾಲದ ಶುದ್ಧ ಧಾರ್ಮಿಕ ಸ್ವರೂಪದ ಶಿಕ್ಷಣಕ್ರಮದಿಂದ ಅವು ಇಂದಿನ ಅವಶ್ಯಕತೆಯಾದ ಜಾತ್ಯತೀತ ಲೌಕಿಕ ವಿದ್ಯಾಭ್ಯಾಸಕ್ರಮದವರೆಗೆ ನಡೆದುಬಂದಿವೆ.

# ಶರಣರು ಮತ್ತು ಕಲೆಗಳು

ಎಂ. ಎ. ನೀಲಾಂಬಿಕಾ

ಮಾನವ ತನ್ನ ಮನದ ಭಾವನೆಗಳನ್ನು ಹಲವು ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ. ಕೆಲವರು ನುಡಿಯ ರೂಪದಲ್ಲಿ ಕೃತಿಗಳನ್ನು ರಚಿಸಿ, ಕೆಲವರು ರೇಖೆ ಮತ್ತು ವರ್ಣದ ಮೂಲಕ ಚಿತ್ರಗಳ ರೂಪದಲ್ಲಿ, ಕೆಲವರು ಮಣ್ಣಿನ ವಸ್ತುಗಳ ಮತ್ತು ಲೋಹದ ಮೇಲೆ ಚಿತ್ರಗಳನ್ನು ಬರೆಯುವುದರ ಮೂಲಕ ವ್ಯಕ್ತಪಡಿಸಿರುವುದನ್ನು ನಾವೆಲ್ಲರೂ ತಿಳಿದಿದ್ದೇವೆ. ಇವುಗಳೆಲ್ಲವೂ ಒಂದೊಂದು ಕಲೆಯೆನಿಸಿ ಶ್ರೇಷ್ಠತೆಯನ್ನು ಪಡೆದಿವೆ.

'ಕಲೆ ಜೀವನದ ಶೃಂಗಾರ, ಸಂಸ್ಕೃತಿಯ ಬಂಗಾರ'. ಈ ಕಲೆಯ ಬೆಳವಣಿಗೆ ಒಂದು ರಾಷ್ಟ್ರದ ಅಳಿವು ಉಳಿವನ್ನೂ ಸಹ ಅವಲಂಬಿಸಿರುತ್ತದೆ. ಕಲೆ ಇಂದು ರೂಪಿತವಾದುದಲ್ಲ, ಪ್ರಾಚೀನವಾದುದು. ದೇವತೆಗಳೂ ಸಹ ಈ ಕಲೆಗೆ ಮಾರುಹೋಗಿದ್ದರು. ಶಿವ, ತಾಂಡವನೃತ್ಯವನ್ನಾಡಿ ನಟರಾಜನೆನಿಸಿ, ಕಲೆಗೆ ಆರಾಧ್ಯದೈವನಾದನೆಂಬುದು ಇದಕ್ಕೆ ನಿದರ್ಶನವಾಗಿದೆ. ನಂದಿ ಷಣ್ಮುಖರ ಮದ್ದಳೆ, ಶಾರದೆ ನಾರದರ ವೀಣೆ, ಭೃಂಗಿಯ ನೃತ್ಯ ಇವುಗಳು ಪುರಾಣಪ್ರಸಿದ್ಧ ವಾಗಿವೆ. ಈ ಕಲೆಯು ಅಂದಿನಿಂದ ಇಂದಿನವರೆವಿಗೂ ಬೆಳೆದುಬಂದಿರುವುದನ್ನು ಕಾಣುತ್ತೇವೆ. ಇಲ್ಲಿ ನಾನು ಹೇಳ ಹೊರಟಿರುವುದು ೧೨ನೇ ಶತಮಾನದಲ್ಲಿ ಶಿವಶರಣರು ಯಾವ ಯಾವ ಕಲೆಗಳನ್ನು ಅನುಸರಿಸಿ ಶಿವನನ್ನು ಮೆಚ್ಚಿಸಿ ಬಯಲಿನಲ್ಲಿ ಬಯಲಾದರು ಎಂಬುದನ್ನು ಮಾತ್ರ.

ಕಲ್ಯಾಣಕ್ಕೆ ಕಾಲಿಟ್ಟ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೂ ಕಾಯಕವನ್ನನುಸರಿಸಲೇಬೇಕಿತ್ತು. ಬಸವಣ್ಣ ನವರು 'ಕಾಯಕವೇ ಕೈಲಾಸ' ಎಂದು ಸಾರಿ ಜನರೆಲ್ಲರ ಮನಸ್ಸನ್ನು ಕಾಯಕದತ್ತ ತಿರುಗಿಸಿದರು. ಪರಿಣಾಮವಾಗಿ ಒಂದು ಕಾಲದಲ್ಲಿ ಕೀಳಾಗಿ ಕಾಣುತ್ತಿದ್ದ ವೃತ್ತಿಗಳೆಲ್ಲವೂ ಕಾಯಕವೆನಿಸಿ, ಪರಮಾತ್ಮನನ್ನು ಕಾಣಲು ಸಾಧನವಾದವು. ವೇದಗಳಲ್ಲಿ ಉಕ್ತವಾದ ವೀಣಾ, ಕರ್ಕರೀ, ದುಂದುಭಿ ಮುಂತಾದ ವಾದ್ಯಗಳನ್ನು ನುಡಿಸುವ ಕಾಯಕವನ್ನು ಅನು ಸರಿಸಿದುದಲ್ಲದೆ ಇನ್ನೂ ಅನೇಕ ಕಲೆಗಳನ್ನು ಅನುಸರಿಸಿ, ಉಳಿಸಿ ಬೆಳೆಸಿದರು. ಕಲೆಗಳನ್ನು ಕಾಯಕದ ನೆಲೆಗೇರಿಸಿ ಶಿವನಿಗೆ ಪ್ರಿಯರಾದರು. ಸಕಲೇಶಮಾದರಸನ ವೀಣೆ, ಕಕ್ಕಯ್ಯನ ಕಂಕರೀ, ಬ್ರಹ್ಮಯ್ಯನ ಕಿನ್ನರಿ, ಚೌಡಯ್ಯನ ಬಹು ರೂಪ, ಬ್ರಹ್ಮಯ್ಯನ ಕಲಕೇತವೇಷ, ಘಟ್ಟಿವಾಳಯ್ಯನ ಮದ್ದಳೆ ಇವೇ ಮುಂತಾದುವು ಅವರ ಕಾಯಕಗಳಾಗಿದ್ದು ಅವರ ಹೆಸರಿನೊಡನೆ ಬೆರೆತುಬಂದವು. ಉದಾಹರಣೆಗೆ—ಕಂಕರೀ ಕಕ್ಕಯ್ಯ, ರಾಗದ ಸಂಕಣ್ಣ, ಕಿನ್ನರಿ ಬೊಮ್ಮಯ್ಯ, ಬಹುರೂಪಿ ಚೌಡಯ್ಯ ಇತ್ಯಾದಿ.

ಸಂಗೀತ, ಕಲೆಗಳಲ್ಲೆಲ್ಲ ಪ್ರಾಚೀನವಾದುದು ಮತ್ತು ಪ್ರಮುಖವಾದುದು. ಇದಕ್ಕೆ ನಿದರ್ಶನ ಸಾಮವೇದ. ಸಂಗೀತವನ್ನು ಅಧ್ಯಾತ್ಮದ ನೆಲೆಗೇರಿಸಿದ್ದವರಲ್ಲಿ ಹರಿದಾಸರೂ ವಚನಕಾರರೂ ಪ್ರಮುಖರಾಗಿದ್ದಾರೆ. ಸಂಗೀತ ಮತ್ತು ಭಕ್ತಿ ಇವೆರಡನ್ನೂ ಮಿಳನಗೊಳಿಸಿದ ಕೀರ್ತಿ ಇವರಿಗೆ ಸೇರಿದ್ದು. ಶರಣರ ವಚನಗಳು ಒಂದೊಂದೂ ಸಂಗೀತಾತ್ಮಕ ವಾಗಿವೆ ಎಂಬುದನ್ನು—ಡಾ. ಎಲ್. ಬಸವರಾಜುರವರು ತಮ್ಮ ಕೃತಿ 'ಶಿವದಾಸ ಗೀತಾಂಜಲಿ'ಯಲ್ಲಿ ಒಂದೊಂದು ವಚನವನ್ನೂ ಹಾಡಲು ಅನುಕೂಲವಾಗುವಂತೆ "ರಾಗ"ಗಳನ್ನು ಸಂಯೋಜಿಸಿ—ತೋರಿಸಿದ್ದಾರೆ. ಉದಾಹರಣೆಗೆ—

ರಚನೆ—ಅಲ್ಲಮಪ್ರಭು ರಾಗ—ರಾಮಕ್ರಿಯಾ

ನುಡಿಯಲಾಗದಿನ್ನು, ನುಡಿಯಲಾಗದಿನ್ನು
ನುಡಿಯಲಾಗದಿನ್ನು, ಜಡಮರ್ತ್ಯರೊಡನೆ । ಪಲ್ಲವಿ ।
ಗಗನಾಕಾರದ ಮಂಟಪದೊಳಗೆ
ಹೊಗಲುಪಾಯವಿಲ್ಲೆಂದುದು ಘನ

ಕಂಗ[ಳ]ಲಿಂಗ ಕರಸ್ಥಲ ಜಂಗಮ
ಬಂದ ಸಂಬಂಧವನಱಿಯರಾಗಿ।೧।....

ಶರಣರಿಗೆ ಸಂಗೀತ ಕಲೆಯು ಕರತಲಾಮಲಕವಾಗಿತ್ತು. ಅವರ ವಚನಗಳನ್ನು ನೋಡಿದಾಗ ಅವರಿಗಿದ್ದ ರಾಗದ ಕಲ್ಪನೆ ತಿಳಿಯುತ್ತದೆ.

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸರಾಗವ ಹಾಡಯ್ಯ....

ಬಸವಣ್ಣನವರ ಈ ವಚನದಲ್ಲಿ ತಮ್ಮ ದೇಹವನ್ನು ದಂಡಿಗೆಯನ್ನಾಗಿ ರೂಪಿಸಿ ೩೨ ರಾಗಗಳಿಂದ ಹಾಡುವೆ ಎಂದು ಹೇಳಿದ್ದಾರೆ. ಹರಿಹರನು ಲಿಂಗಾರ್ಚನೆಯ ರಗಳೆಯಲ್ಲಿ 'ಲಲಿತ, ಬಂಗಾಳ, ಮಲಹರಿ, ವರಾಳಿ, ದೇಶಿ, ಗುಜ್ಜರಿ, ದೇಶಾಕ್ಷಿ, ಗೌಳ' ಮುಂತಾದ 'ಬತ್ತೀಸರಾಗ'ಗಳಲ್ಲಿ ಕೆಲವೊಂದನ್ನು ಹೇಳುತ್ತಾನೆ.

ರಾಗದ ಸಂಕಣ್ಣ ವಿವಿಧ ರಾಗಗಳ ಮೂಲಕ ಹಾಡುವ ಕಾಯಕವನ್ನು ಕೈಗೊಂಡಿದ್ದ. ಈತನಿಗೆ ಈ ಕಲೆ ಹುಟ್ಟಿನಿಂದಲೇ ಮೈಗೂಡಿತ್ತು. ಪ್ರತಿದಿನವೂ ಶಿವಾಲಯಕ್ಕೆ ಹೋಗಿ ಭಕ್ತಿಯಿಂದ ಭಾವಪರವಶನಾಗಿ ಹಾಡುವುದು ಇವನ ದಿನಚರಿ. ಈತನ ರಾಗಮಾಧುರ್ಯಕ್ಕೆ ಮಾರುಹೋದ ಕಲ್ಯಾಣಿಚಾಲುಕ್ಯರ ದೊರೆ ವಿಕ್ರಮಾಂಕನು ಈತನನ್ನು ತನ್ನ ಆಸ್ಥಾನವಿದ್ವಾಂಸನನ್ನಾಗಿ ಮಾಡಿದ್ದಲ್ಲದೆ ದಿನಂಪ್ರತಿ ೧೨ ವರಹಗಳನ್ನು ಕೊಡುತ್ತಿರುತ್ತಾನೆ. ಆ ಹಣದಿಂದಲೇ ಸಂಕಣ್ಣ, ಗುರುಲಿಂಗಜಂಗಮರನ್ನು ಸತ್ಕರಿಸುತ್ತಿದ್ದುದು. ಒಮ್ಮೆ ಸಂಕಣ್ಣನಿಗೂ ಮತ್ತು ಗೌಳದೇಶದ ಗಾಯಕನಿಗೂ ಸ್ಪರ್ಧೆ ನಡೆಯುತ್ತದೆ. ಭಕ್ತಿಯಿಂದ ಭಾವಪರವಶನಾಗಿ ಹಾಡಿದ ಸಂಕಣ್ಣ ಸ್ಪರ್ಧೆಯಲ್ಲಿ ಗೆದ್ದು ದೊರೆಯಿಂದ 'ರಾಗರಸಾಂಕ' ಎಂಬ ಬಿರುದನ್ನು ಪಡೆಯುತ್ತಾನೆ.

ಬಹುರೂಪಿ ಚೌಡಯ್ಯನಿಗೆ ರಾಮಪ್ರಿಯರಾಗವೆಂದರೆ ಬಹಳ ಅಚ್ಚುಮೆಚ್ಚು. ಇನ್ನೊಬ್ಬ ಶರಣ ಗಜೇಶ ಮಸಣಯ್ಯನಿಗೆ ದೇಶಾಕ್ಷಿರಾಗವೆಂದರೆ ಬಹಳ ಪ್ರಿಯವಾದುದು. 'ದೇಶಾಕ್ಷಿರಾಗವಿಲ್ಲದ ಸಂಗೀತ ಉಪ್ಪಿಲ್ಲದ ಊಟದಂತೆ ರುಚಿಸುವುದಿಲ್ಲ' ಎನ್ನುತ್ತಾನೆ. ಶರಣೆ ವೀರದೇವಮ್ಮ ಭಕ್ತರಿಗೆ ವಚನಗಳನ್ನು ಹೇಳಿಕೊಡುವ ಕಾಯಕವನ್ನೇ ಕೈಗೊಂಡಿದ್ದು 'ಉಗ್ಗಡಿಸುವ ಕನ್ನೆ ವೀರಾದೇವಿ' ಎಂಬ ಕೀರ್ತಿಗೆ ಪಾತ್ರಳಾದಳು.

ಶರಣರು ವಾದ್ಯಗಳನ್ನು ನುಡಿಸುವ ಕಾಯಕವನ್ನೂ ಹೊಂದಿದ್ದರು. ಇವರು ಅನುಸರಿಸಿದ ಕಲೆಗಳು ಭಕ್ತಿಪೂರಕವಾಗಿದ್ದು ಉನ್ನತಿಯನ್ನು ಪಡೆದಿದ್ದವು. ಸಕಲೇಶಮಾದರಸನು ವೀಣೆಯನ್ನು ನುಡಿಸುವ ಕಾಯಕದಲ್ಲಿ ನಿರತನಾಗಿದ್ದ. ಈತ 'ಲಿಂಗಪೂಜೆಯು ಮಾಡಿದ ಬಳಿಕ ಲಿಂಗಕ್ಕೆ ವೀಣೆಯಿಂದ ಮೂವತ್ತೆರಡು ರಾಗದಿಂ ಅಱುವತ್ತನಾಲ್ಕು ಗೀತ ಎಂಬತ್ತೆಂಟು ಪ್ರಬಂಧ, ನೂಱೊಂದು ತಾಳಂ' ಇವೇ ಮೊದಲಾದ ಅನೇಕ ರಾಗಗಳನ್ನು ವೀಣೆಯಿಂದ ಲಿಂಗಕ್ಕೆ ಕೇಳಿಸಿ ಪೂಜಿಸುತ್ತಿದ್ದನೆಂಬ ವಿಷಯ 'ಭೈರವೇಶ್ವರ ಕಥಾಮಣಿಸೂತ್ರರತ್ನಾಕರ'ದಲ್ಲಿ ಉಕ್ತವಾಗಿದೆ. ಹಿಂದೆ ಈತ ರಾಜನಾಗಿದ್ದು ಕ್ಷಣಿಕವಾದ ಈ ಅಷ್ಟವೈಭವಗಳನ್ನು ಧಿಕ್ಕರಿಸಿ ಶಾಶ್ವತವಾದ ಸುಖವನ್ನು ಪಡೆಯಲು ಕಲಾಸಕ್ತನಾದವನು. ಇಂದುಮೌಳಿಯನ್ನು ಭಜಿಸಲು,

ತಾಳಗಮುರುನಾಟ ಶಂಕರಾಭರಣಂ ಬ೮
ಗಾಳಂ ಗುರ್ಜರಿ ತೋಡಿವ
ರಾಳರೆ ಕಲ್ಯಾಣಿ ದೇಶಿ ಕನ್ನಡರಾಗಂ-
-ಮಾಳವ ಮಾಶ್ರೀರಾಗಂ

ಇವೇ ಮುಂತಾದ ರಾಗಗಳ ಮೂಲಕ, ವೀಣೆಯನ್ನು ನುಡಿಸಿ, ಪುರಾರಿ ಈ ಸರಂ ಕೇಳ್ದು ಮೆಚ್ಚುವಂತೆ ಮಾಡುತ್ತಾನೆ.

ಕಿನ್ನರಿಯ ಬಾರಿಸುತ ಕಿನ್ನರಿಯ ರಾಗದಲಿ ನನ್ನಿಯಲಿ ಶಿವಲೀಲೆಯನ್ನು ಹಾಡುತ್ತಿರುವ ಶರಣನೇ ಕಿನ್ನರಿ ಬೊಮ್ಮಯ್ಯ.

ಕಿನ್ನರಿಯ ಬೊಮ್ಮಯ್ಯ ಬಾರಿಸಲು
ಕುನ್ನಿ ಪಸು ಮರೆತು ಕಿವಿಗೊಟ್ಟು ಕಲ್ಯಾಣ
ಚೆನ್ನಾತು ಲೋಕ ಚೆಲುವಾತು

ಜಾನಪದ ಕವಿಗಳ ನುಡಿ ಆಲಿಸುತ್ತಿದ್ದಂತೆ ತ್ರಿಪುರಾಂತಕೇಶ್ವರದೇವಾಲಯದಲ್ಲಿ ಕಿನ್ನರಿಯ ದನಿ ಕೇಳಿಬಂತೇನೋ ಎನಿಸುತ್ತದೆ. ಈತನ ಈ ಕಿನ್ನರಿಯ ದನಿಗೆ ಶಿವನೇ ಮಾರುಹೋಗಿದ್ದ.

ಶಿವ ಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವಬೋಧೆ ಜನಕೆ ಮಾಡುತಲಿ ಬೊಮ್ಮಯ್ಯ
ಭವಿಗಳಿಗೆ ಊದಿ ಶಿವಮಂತ್ರ

ಕಿನ್ನರಿಯನ್ನು ನುಡಿಸುವುದರ ಮೂಲಕ ಜನರಿಗೆ ಶಿವಾನುಭವವನ್ನು ಹೇಳುತ್ತಿದ್ದ ಬೊಮ್ಮಯ್ಯ ಕಿನ್ನರಿ ನುಡಿಸುವುದರಲ್ಲಿ ಪ್ರಮುಖನಾಗಿದ್ದನು.

ಮತ್ತೊಬ್ಬ ಶರಣ ಢಕ್ಕೆಯ ಮಾರಯ್ಯ. ಈತ ಬೇವಿನಸೊಪ್ಪನ್ನು ಕಟ್ಟಿಕೊಂಡು ತಲೆಯಮೇಲೆ ಮಾರಿಯನ್ನು ಹೊತ್ತುಕೊಂಡು ಶಿವಶರಣರ ಮನೆಗಳಿಗೆ ಬರುವ ಕಾಯಕವನ್ನು ಹೊಂದಿದ್ದನು. ಈತನ ಮಾರಿ, ಜ್ಞಾನದ ಸಂಕೇತ. ಢಕ್ಕೆ ಜನತೆಯನ್ನು ಸೇರಿಸಲು ಬಳಸುತ್ತಿದ್ದ ಸಾಧನವಾದರೂ ಅದಕ್ಕೆ ಅಧ್ಯಾತ್ಮದ ನೆಲಗಟ್ಟನ್ನು ಕೊಟ್ಟಿದ್ದನು. 'ಅಹಂಕಾರವೆಂಬ ಆತ್ಮಫಲದ ಮಾರಿಯನ್ನು ಹೊತ್ತುಕೊಂಡು ಉಲುಹೆಂಬ ಢಕ್ಕೆಯನ್ನು ಹಿಡಿದು, ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಲಿದ್ದೇನೆ. ಢಕ್ಕೆಯ ದನಿ ಬಿಡಿಸಾ' ಎಂದು ಹೇಳುತ್ತಾ ಕಾಲವೆಂಬ ಮಾರಿಯನ್ನು ಎಲ್ಲರೂ ಗೆಲ್ಲಬೇಕೆಂದು ಸಾರುತ್ತಾನೆ.

ಕಂಕರೀ ಎಂಬುದು ಚೌಡಿಕೆಯಂಥ ವಾದ್ಯ. ಕಕ್ಕಯ್ಯನೆಂಬ ಶರಣ ಕಂಕರಿಯನ್ನು ಬಾರಿಸಿಕೊಂಡು ಕುಣಿದು ಶರಣರ ತತ್ತ್ವವನ್ನು ಜನರ ಮನದಲ್ಲಿ ಬಿತ್ತುವ ಕಾಯಕವನ್ನು ಹೊಂದಿದ್ದವನು. ಒಮ್ಮೆ ಶಿವನು ಇವನನ್ನು ಪರೀಕ್ಷಿಸಲು ಕಂಕರಿಯ ದನಿಗೆ ತಕ್ಕಂತೆ ಕುಣಿಯುತೊಡಗುತ್ತಾನೆ. ಜನರು ಕಂಕರಿಯ ನುಡಿಸುವುದಕ್ಕೆ ಕಕ್ಕಯ್ಯ ಸೋತಾನೋ ಕುಣಿವುದಕೆ ಈ ಮರುಳು ರೂಪದ ಜಂಗಮ ಸೋತಾನೋ ಎಂದು ನೋಡುತ್ತಿರಲು ಮೂರು ದಿನಗಳವರೆಗೂ ಸತತವಾಗಿ ಕಂಕರಿಯ ದನಿಗನುಗುಣವಾಗಿ ಕುಣಿಯುತ್ತಾನೆ. ಆದರೆ ಶಿವನ ನೃತ್ಯ ನಿಂತರೂ ಕಂಕರಿಯ ದನಿ ನಿಲ್ಲಲಿಲ್ಲ. ಕಥೆ ಏನೇ ಇರಲಿ, ಇಲ್ಲಿ ಕಕ್ಕಯ್ಯನ ಕಲಾಪ್ರೌಢಿಮೆ ವ್ಯಕ್ತವಾಗಿದೆ.

ನೃತ್ಯ, ಕಲೆಗಳಲ್ಲಿ ಒಂದು. ಇದನ್ನು ಸದಾ ಕಾಯಕವನ್ನಾಗಿ ಅನುಸರಿಸಿದ್ದರು ಶರಣರು. ಇವರಲ್ಲಿ ಘಟ್ಟಿವಾಳಯ್ಯ, ಬಹುರೂಪಿ ಚೌಡಯ್ಯ ಇವರೇ ಮುಂತಾದವರು ಪ್ರಮುಖರು.

ಘಟ್ಟಿವಾಳಯ್ಯನ ಹಿಂದಣ ಹೆಸರು ಮುದ್ದಣನೆಂದು. ಈತ ಮದ್ದಳೆ ನುಡಿಸುತ್ತ ಶಿವಾನುಭವವನ್ನು ಹೇಳುತ್ತ ಗುರುಲಿಂಗಜಂಗಮರ ಸೇವೆ ಮಾಡುತ್ತಿದ್ದ. ಈತನ ಜೀವನದಲ್ಲಿ ನಡೆದ ಘಟನೆ ಇವನ ಮನವನ್ನು ಪರಿವರ್ತಿಸಿತು.

ಹೊನ್ನು ಹೆಣ್ಣು ಮಣ್ಣು ತನ್ನದೆಂಬುವ ಮೂರ್ಖ
ಹೊನ್ನು ಭೂಪಾಲರಿಗೆ ಹೆಣ್ಣೊಲಿದ ಕಾಮುಕಗೆ
ಮಣ್ಣು ಬಲವಂತಗಲ್ಲದೆ ಬರಿಯ ಭ್ರಾಂತಿಯೆಲ್ಲ

ಎಂದು ಸಾರುತ್ತ ತನ್ನ ಸಂಸಾರವನ್ನು ತ್ಯಜಿಸಿ ವಿಶ್ವಕುಟುಂಬಿಯಾಗಿ ಮದ್ದಳೆಯನ್ನು ಹಿಡಿದು ಕಲ್ಯಾಣಕ್ಕೆ ಬಂದು, ಹಿಂದೆ ಅನುಸರಿಸಿದ 'ನೃತ್ಯ' ಕಲೆಯನ್ನು ಬಿಟ್ಟು ಮದ್ದಳೆ ನುಡಿಸುವ ಕಾಯಕವನ್ನು ಅನುಸರಿಸುತ್ತಾನೆ. 'ಕಣಕಣಿಸಿ ಕರಡಿಗಳು ಝಣಝಣಿಸಿ ತಾಳಗಳು ಘಣಘಣ ಧಿತ್ತಮತ್ತಲೆಯ ಕಿವಿಯೊಳಗೆ'— ಕುಂಬಾರ ಗುಂಡಯ್ಯನ ನೃತ್ಯದ ಸವಿಯನ್ನೇ ಸವಿಯುತ್ತಿದ್ದಂತೆ ಧಿಮ್ಮಯ್ಯ ಧಿತ್ತಯ್ಯ ದಮ್ಮಡಿಯು ಧುಮ್ಮೆಂದು ಧಿಮ್ಮ ಕಣಕಣಿಸಿ ಕುಣಿತದೊಳು ಝುಮ್ಮೆನ್ನುವಂತೆ ಚೌಡಯ್ಯನ ನೃತ್ಯದ ಇಂಚರ ಕೇಳಿಬರುತ್ತದೆ. ಚೌಡಯ್ಯನಿಗೆ ಚಿಕ್ಕಂದಿನಿಂದಲೂ ಸಂಗೀತ, ನೃತ್ಯದಲ್ಲಿ ಆಸಕ್ತಿ. ಅಂತೆಯೇ ಆತ ಬೆಳೆದ ಮೇಲೆ ಬಹುರೂಪ ಧರಿಸಿ ಜನರನ್ನು ಸಂತೋಷಪಡಿಸುವ ಕಾಯಕದಲ್ಲಿ ನಿಷ್ಣಾತನಾದ. ಅನಂತರ ಬಸವಣ್ಣನ ಮಹಿಮೆಯನ್ನು ಕೇಳಿ ಕಲ್ಯಾಣಕ್ಕೆ ಬಂದು–ಚಿತ್ರವಿಚಿತ್ರವಾದ ಬಹುರೂಪವನಾಡಿ ವಿದ್ಯೆಯ ತೋರಿ ಭಕ್ತರಲಿ ಕಾಯಕವ ತಂದು–ಜಂಗಮಾರ್ಚನೆ ಮಾಡುತ್ತಿರುತ್ತಾನೆ. ಒಟ್ಟಿನಲ್ಲಿ ಈತನಿಗೆ ಈ ಕಲೆ

ಹುಟ್ಟಿನೊಡನೆ ಮೈಗೂಡಿಕೊಂಡು ಬಂದಿತ್ತು. 'ಹೆಸರಿಲ್ಲದ ಜವನಿಕೆಯ ಮರೆಯಲ್ಲಿ ಬಂದು ಅಸುವಿನ ಬಹುರೂಪಮಂ ತೊಟ್ಟು' ಪಶುಪತಿಯ ಅವತಾರವನ್ನಾಡುತ್ತಿರುತ್ತಾನೆ.

ಇವನಂತೆ ಕಲಕೇತವೆಂಬ ಕಲೆಯಲ್ಲಿ ಪ್ರಸಿದ್ಧನಾಗಿದ್ದವ ಬ್ರಹ್ಮಯ್ಯನೆಂಬ ಶರಣ. ಆತ ಹಣೆಯಲ್ಲಿ ಭಸ್ಮ ಧರಿಸಿ ಕಿವಿಯಲ್ಲಿ ಕೆಂದಳಿರನಳವಡಿಸಿಕೊಂಡು ಕಾಗಿನಕಪ್ಪಡವುಟ್ಟು ಒಂದು ಕಾಲಲಿ ಗೆಜ್ಜೆಯನು ಬಿಗಿದು ತಗರಿನ ಬಲಿದ ಕೊಂಬನ್ನು ಎಡದ ಕೈಯಲ್ಲಿ ಹಿಡಿದು 'ಅಳವಡಿಪ ಕಲಕೇತವೇಷಂದಳೆದು ಶಿವಭಕ್ತಿನಿವಾಸಗಳಿಗೆ ಗಮನಿಸಿ ತನ್ನ ಮೋಜಿನಿಯನಂತು ಮುಖುಕಿಸುತ ಜನರನ್ನು ನಗಿಸಿ ಕೋಡಗದಾಟವಾಡುವ ಭೃಂಗಿಯಂತೆ, ನೃತ್ಯವಾಡುತ್ತಾನೆ. ಈ ಕಲೆಯನ್ನು ನೋಡಿ ಸಂತೋಷಗೊಂಡು ಜನರು ಕೊಟ್ಟಷ್ಟನ್ನು ತೆಗೆದುಕೊಂಡು ಗುರುಲಿಂಗಜಂಗಮರ ಸೇವೆ ಮಾಡುತ್ತಿರುತ್ತಾನೆ.

ಹೀಗೆ ೧೨ನೇ ಶತಮಾನದಲ್ಲಿ ಪ್ರತಿ ಶರಣ-ಶರಣೆಯೂ ಒಂದೊಂದು ಕಾಯಕವನ್ನನುಸರಿಸಿ ಉನ್ನತಿಗೇರಿದ್ದರು. ಅಲ್ಲದೆ ಕಲೆಯನ್ನು ಉಳಿಸಿ ಬೆಳೆಸಿದರು. ನಿಕೃಷ್ಟವೆನಿಸಿದ್ದ ಕಲೆಗಳೂ ಸಹ ದೈವವನ್ನು ಕಾಣುವ ಮಾರ್ಗಗಳಾದುವು. ಆದರೆ ಈ ಕಾಯಕವನ್ನನುಸರಿಸಿದ್ದ ಅವರ ಗುರಿ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಕಾಯಕ ಅದಕ್ಕೆ ಒಂದು ಮಾರ್ಗ.

---

ವಾಯುಗುಣವ ಸರ್ಪಬಲ್ಲುದು, ಮಧುರಗುಣವ ಇರುವೆ ಬಲ್ಲುದು
ಗೋತ್ರದ ಗುಣವ ಕಾಗೆ ಬಲ್ಲುದು, ವೇಳೆಯ ಗುಣವ ಕೋಳಿ ಬಲ್ಲುದು
ಇದು ಕಾರಣ ಮನುಜಜನ್ಮದಲ್ಲಿ ಬಂದು ಶಿವಜ್ಞಾನವನರಿಯದಿದ್ದರೆ,
ಆ ಕಾಗೆ ಕೋಳಿಗಳಿಂದ ಕರಕಷ್ಟ ಕಾಣಾ ಕಲಿದೇವರ ದೇವಾ

ಮಡಿವಾಳಮಾಚಿದೇವ

* * *

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆ ಇಲ್ಲದ ನುಡಿ ಅರಿವಿಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ ಶೃಂಗಾರ,
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಅಮಳೇಶ್ವರಲಿಂಗವ ಮುಟ್ಟದ ಭಕ್ತಿ

ಆಯ್ದಕ್ಕಿ ಮಾರಯ್ಯ

# ಕರ್ನಾಟಕದ ಚಿತ್ರಕಲೆ

ಪಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕದ ಚಿತ್ರಕಲೆಯ ಇತಿಹಾಸದ ಪ್ರಾರಂಭ ಶಿಲಾಯುಗದಿಂದಲೇ ಎಂದು ತಿಳಿದುಬರುತ್ತದೆ. ಕರ್ನಾಟಕದ ಚಿತ್ರಕಲೆಯು ಈಗ ಉಳಿದುಬಂದಿರುವ ಬಗ್ಗೆ, ಕರ್ನಾಟಕದ ಉತ್ತರ ಭಾಗದ ಹಲವು ಕಡೆ ನೋಡಲು ಸಿಗುವ ಗವಿಚಿತ್ರಗಳು ಬಹು ಪ್ರಾಚೀನವಾದವುಗಳು. ಈ ಶಿಲಾಯುಗದ (ಕ್ರಿ.ಪೂ. ೨೫೦೦–೧೦೦೦) ಜನ ಗುಡ್ಡಗಳಲ್ಲೋ ಗವಿಗಳಲ್ಲೋ ಇಳಿಜಾರುಬಂಡೆಗಳ ಬುಡದಲ್ಲೋ ನೆಲಸಲಾರಂಭಿಸಿದರು. ಹಾಗೆ ನೆಲಸಿದ ಪ್ರಾಗೈತಿಹಾಸಿಕಮಾನವ ಚಿತ್ರಗಳನ್ನು ರಚಿಸುವ ಪ್ರವೃತ್ತಿಯುಳ್ಳವನಾಗಿದ್ದನೆಂಬುದು ಅವನು ರಚಿಸಿ ಬಿಟ್ಟುಹೋದ ಚಿತ್ರಗಳಿಂದ ವ್ಯಕ್ತವಾಗುತ್ತದೆ. ನಮ್ಮ ಪ್ರಾಚ್ಯಶೋಧಕರ ಶ್ರಮದಿಂದಾಗಿ ಪ್ರತ್ಯಕ್ಷಪ್ರಮಾಣದ ಚಿತ್ರಗಳನ್ನು ಇಂದಿಗೂ ಅನೇಕ ಗುಹೆಗಳ ಭಿತ್ತಿಗಳಲ್ಲಿ ಕಾಣಬಹುದು.

ಬಾಗಿದ ಬಂಡೆಗಳ ಕೆಳಗೆ ಕೆಮ್ಮಣ್ಣಿನ ರೇಖಾಚಿತ್ರಗಳನ್ನು ಕಾಣಬಹುದು. ಜಿಂಕೆ, ಗೂಳಿ, ಮಾನವರ ಚಿತ್ರಗಳನ್ನು ಹೆಚ್ಚಾಗಿ ಅಲ್ಲಿ ಗಮನಿಸಬಹುದು. ಈ ಚಿತ್ರಗಳಲ್ಲಿ ಸಮತೋಲನ ಶಕ್ತಿ ಇಲ್ಲದುದು ಸ್ಪಷ್ಟವಿದ್ದರೂ ಅವು ಅಸುಂದರವಾದರೂ (crude) ಚರಿತ್ರೆಯ ಬೆಳವಣಿಗೆಯಲ್ಲಿ ಮುಖ್ಯವಾದುವುಗಳು. ಈ ಬಗೆಯ ಚಿತ್ರಗಳು ಬಳ್ಳಾರಿ, ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಹೇರಳವಾಗಿ ಕಂಡುಬಂದಿವೆ. ಇಲ್ಲಿರುವ ಚಿತ್ರಗಳೆಲ್ಲಾ ಗೀರುಚಿತ್ರಗಳು. ಮಾನವರ ಇಲ್ಲವೇ ಪ್ರಾಣಿಗಳ ಆಕಾರಗಳನ್ನು ಮಾತ್ರ ಸಾಂಕೇತಿಕವಾಗಿ ಬಣ್ಣದ ರೇಖೆಗಳಲ್ಲಿ ತೋರಿಸಿ—ಕಣ್ಣು ಮೂಗುಗಳನ್ನು ಬಿಡಿಸದೆ ಉಳಿದೆಲ್ಲಾ ಚಪ್ಪಟೆಯಾಗಿ ವರ್ಣ ತುಂಬಿರುವುದೇ ಇವುಗಳ ವೈಖರಿ. ಬೆಣಕಲ್ ತೆಕ್ಕಲಕೋಟೆ, ಸಂಗನಕಲ್ಲು, ತಾವರೆಗೇರಿ, ಗೊಂಬಿಗುಡ್ಡ, ವಾಲದಿಬ್ಬ, ಸಿಡಿಲಗುಂಡಿ—ಮುಂತಾದ ಕಡೆ ಈಗಲೂ ಅಳಿದುಳಿದು ಬಂದಿರುವ ಚಿತ್ರಗಳು ಆದಿಮಾನವನ ಕಲಾಸಕ್ತಿಯನ್ನು ಸೂಚಿಸುತ್ತವೆ. ಇಲ್ಲಿ ಬಹುಮಟ್ಟಿಗೆ ಕೈ ಕೈ ಹಿಡಿದು ನೃತ್ಯದಲ್ಲಿರುವ ಇಲ್ಲವೇ ಬೇಟೆಯಲ್ಲಿ ತೊಡಗಿರುವ ಮಾನವಾಕೃತಿಗಳನ್ನು ಗಮನಿಸಬಹುದು.

ಈ ಬಗೆಯ ಚಿತ್ರಕಲೆ ನೂತನ ಶಿಲಾಯುಗದಿಂದ ಮುಂದುವರಿದು ಬೃಹತ್‌ಶಿಲಾಯುಗದವರೆಗೂ ಬೆಳೆದು ಬಂದಿದೆ. ಬೃಹತ್‌ಶಿಲಾಸಮಾಧಿಗಳ ಬಳಿ ಇರುವ ಭಿತ್ತಿಚಿತ್ರಗಳಲ್ಲಿ ಕುದುರೆ ಸವಾರಿಯಲ್ಲಿರುವ ಬೇಟೆಗಾರರು ಕತ್ತಿ, ಈಟಿ, ಬಿಲ್ಲು-ಬಾಣಗಳನ್ನು ಹೊಂದಿರುತ್ತಾರೆ. ಕುದುರೆಯ ಮೇಲೆ ಕೂತು ಹುಲಿ ಬೇಟೆಯಾಡುವುದು, ಕೈ ಕೈ ಹಿಡಿದು ಬೇಟೆಯಲ್ಲಿ ತೊಡಗಿರುವುದು ಮುಂತಾದ ಚಿತ್ರಗಳು ಹಿರೇಬೆನಕಲ್ಲಿನ ಚಾಚುಬಂಡೆಗಳಲ್ಲಿವೆ. ಬಲಿಚಕ್ರ ಎಂಬಲ್ಲಿ ಕುದುರೆ ಸವಾರನ ಚಿತ್ರವಿದೆ. ಇದು ಸೊಗಸಾದ ಚಿತ್ರ. ಈ ಎಲ್ಲ ಚಿತ್ರಗಳೂ ಸುಂದರವೂ ಸತ್ತ್ವಪೂರ್ಣವೂ ಆಗಿವೆ.

ಆದಿಮಾನವ. ಗವಿಗಳಲ್ಲಿ ವಾಸಿಸಲಾರಂಭಿಸಿ ಗುಡಿಸಲು ಕಟ್ಟಿಕೊಂಡು ಮಡಕೆಕುಡಿಕೆಗಳನ್ನು ರಚಿಸುವಂತಾಗಿ ಒಂದೆಡೆ ನಿಲ್ಲುವಂತಾದಾಗ ಕಲೆಯ ಕಡೆ ಗಮನ ಹರಿಸಿರಬಹುದು. ಈ ಆದಿಮಾನವರಿಗೆ ಚಿತ್ರಕಲೆಯಲ್ಲಿ ಅಭಿರುಚಿ ಇತ್ತು ಎಂಬುದು. ಅವರು ರೂಪಿಸಿ ಬಿಟ್ಟುಹೋದ ಮಣ್ಣಿನ ಪಾತ್ರೆಗಳಿಂದ ವ್ಯಕ್ತವಾಗುತ್ತದೆ. ಮಾಸಲುಕೆಂಪು ವರ್ಣದ ಪಾತ್ರೆಗಳ ಮೇಲೆ ನೇರಳೆ ಇಲ್ಲವೆ ಕಪ್ಪನೆ ಬಣ್ಣದ ದಪ್ಪಗೆರೆಯ ಚಿತ್ರಗಳಿವೆ. ಇಂಥ ಸಚಿತ್ರ ಮಡಕೆಗಳು ಉತ್ತರ ಕರ್ನಾಟಕದ ಭಾಗಗಳಲ್ಲಿ ಹೆಚ್ಚಾಗಿ ದೊರೆತಿವೆ. ಹೊಳಪಿನ ಮಡಕೆಗಳ ಮೇಲೆ ಬಿಳಿಬಣ್ಣದ ರೇಖೆಗಳನ್ನು ಅಡ್ಡಾದಿಡ್ಡಿಯಾಗಿ ಅಲೆಅಲೆಯಾಗಿ ಚಿಕ್ಕ ಹಾಗೂ ದಪ್ಪ ಚುಕ್ಕೆಗಳಿಂದ ಪುಷ್ಪಗಳ ವಿವಿಧ ಆಕಾರಗಳನ್ನು ಚಿತ್ರಿಸಿ ಕೆಂಪಿನ ಲೇಪನ ಬಳಿದಿರುವುದು ಕಂಡುಬರುತ್ತದೆ. ಇಂಥವು ಚಂದ್ರವಳ್ಳಿ, ಮಾಸ್ಕಿ, ಹೆಮ್ಮಿಗೆ, ಹೆರಕಲ್ಲು, ಬ್ರಹ್ಮಗಿರಿ, ಮಾಧವಪುರ, ಬೆಂಗಳೂರು, ವಡಗಾಂವ ಮುಂತಾದ ಕಡೆ ದೊರೆಯುತ್ತವೆ. ಇವುಗಳಲ್ಲಿನ ರೇಖೆಗಳೂ ಗವಿಗಳಲ್ಲಿ ಕಾಣುವ ಕೆಮ್ಮಣ್ಣಿನ ಬಣ್ಣದ ಚಿತ್ರಗಳೂ ಉಳಿದು ಬೆಳೆದು ಬಂದು ಮುಂದಿನ ಜನಾಂಗದವರು ತಮ್ಮ ಮನೆಗಳ

ಗೋಡೆಗಳ ಮೇಲೆ ಕೆಮ್ಮಣ್ಣಿನಲ್ಲಿ ಇಲ್ಲವೆ ಸುಣ್ಣದಲ್ಲಿ ಚಿತ್ರಗಳನ್ನು ಬಿಡಿಸುವುದು ಅನಂತರ ರಂಗವಲ್ಲಿಗಳನ್ನು ಹಾಕುವುದು ಇವುಗಳಲ್ಲಿ ರೂಢಿಯಾದಂತೆ ತೋರುತ್ತದೆ.

ಇನ್ನು ಯುಗಯುಗಗಳಲ್ಲಿ ಚಿತ್ರಕಲೆ ಬೆಳೆದು ಬಂದುದಕ್ಕೆ ನಮ್ಮಲ್ಲಿ ಸಾಕಷ್ಟು ಸಾಹಿತ್ಯಿಕ ಆಧಾರಗಳೂ ಇವೆ. ನಮ್ಮ ಚಿತ್ರಕಲೆ ಬಹು ಪ್ರಾಚೀನವಾದದ್ದು. ಈ ಬಗ್ಗೆ ಪುರಾಣ, ಕಾವ್ಯ, ಶಾಸ್ತ್ರಗಳಲ್ಲಿ ಅನೇಕ ಉಲ್ಲೇಖಗಳಿವೆ. "ಚಿತ್ರಶಾಲೆ", "ಚಿತ್ರಗೃಹಗಳು"—ಬಹಳ ಹಿಂದೆಯೇ ಇದ್ದವೆಂಬುದು ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ವ್ಯಕ್ತವಾಗಿವೆ. ಭಾಸನ ನಾಟಕಗಳಲ್ಲಿ "ಚಿತ್ರಕರ್ಮ"ದ ಪ್ರಸ್ತಾಪ ಅನೇಕಬಾರಿ ಬಂದಿದೆ. ಹಿಂದಿನಿಂದಲೂ ಕಲಾಕೋವಿದರಿಗೆ ರಾಜಾಶ್ರಯವಿದ್ದಿತು. ಅವರು ಅಂದಿನ ಪ್ರಮುಖ ಘಟನೆಗಳನ್ನು ಚಿತ್ರಗಳಲ್ಲಿ ರೂಪಿಸುತ್ತಾ ಬಂದರು. ಅರಮನೆ, ಗುರುಮನೆ, ದೇವಾಲಯಗಳ ಭಿತ್ತಿಗಳು ಚಿತ್ರಮಯವಾದುವು. ಭಾಸನ ಕಾಲದಲ್ಲಿ ವರ್ಣಶಿಲ್ಪಿಗಳಿಗೆ ಒಳ್ಳೆಯ ಪ್ರೋತ್ಸಾಹ ಇದ್ದಿರಬೇಕು ಎಂಬುದು ಅವನ ಕೃತಿಗಳಿಂದಲೇ ವ್ಯಕ್ತವಾಗುತ್ತದೆ.

ಭಾಸನಂತೆ ಕಾಳಿದಾಸನ ಕೃತಿಗಳಲ್ಲೂ ಅವನ ಕಾಲದಲ್ಲಿ ಚಿತ್ರಕಲೆಗೆ ಒಳ್ಳೆಯ ಪ್ರಾಶಸ್ತ್ಯವಿದ್ದಿತು ಎಂಬುದು ತಿಳಿದುಬಂದಿದೆ. ಕಾಳಿದಾಸನ ಕಾವ್ಯಗಳಲ್ಲಿ ಅರಮನೆಗಳ—ಮನೆಗಳ ಒಳಾಂಗಣಗಳಲ್ಲಿನ ಭಿತ್ತಿಚಿತ್ರಗಳ ಬಗ್ಗೆ ಮತ್ತು ರಾಜಾಶ್ರಯದ ಚಿತ್ರಶಾಲೆಗಳಲ್ಲಿನ ಸೊಗಸಾದ ನಿಸರ್ಗಚಿತ್ರಗಳ ವಿವಿಧ ವರ್ಣಗಳ ಬಗ್ಗೆ ರೋಚಕವಾದ ವರ್ಣನೆಗಳಿವೆ. ಅಲ್ಲದೆ ತೂಲಿಕಾ, ವರ್ತಿಕಾ, ಶಲಾಕಾ, ಲಂಬಕೂರ್ಚ, ಚಿತ್ರಫಲಕ, ವರ್ಣ, ರಾಗ, ವರ್ತಿಕಾ, ಕರಂಡ—ಮುಂತಾದ ಚಿತ್ರರಚನಾ ಸಾಮಗ್ರಿಗಳ ಉಲ್ಲೇಖವೂ ಇದೆ.

ಕನ್ನಡದ ಆದಿಕವಿ ಪಂಪನ (ಕ್ರಿ.ಶ. ೯೪೧) ಕೃತಿಗಳಲ್ಲೂ ಚಿತ್ರಕಲೆಯ ಪ್ರಸ್ತಾಪದ ಒಂದೆರಡು ಸಂದರ್ಭಗಳಿವೆ. ರಾಮಚಂದ್ರಪುರಾಣದಲ್ಲಿ ನಾರದನು ಸೀತೆಯ ರೂಪಚಿತ್ರವನ್ನು ಚಿತ್ರಿಸಿದ ವರ್ಣನೆಯೂ ಬರುತ್ತದೆ. ಆ ಕಾಲದಲ್ಲಿ 'ಭಿತ್ತಿ' ಹಾಗೂ 'ಫಲಕ'ಗಳ ಮೇಲೆ ಅಲ್ಲದೆ "ದುಕೂಲಪಟ"ದ (ಬಟ್ಟೆ) ಮೇಲೂ ಅಪೂರ್ವ ಚಿತ್ರ ರಚಿಸಲಾಗುತ್ತಿತ್ತು. 'ಭರತೇಶ ವೈಭವ'ದಲ್ಲಿ ರತ್ನಾಕರವರ್ಣಿಯು (ಕ್ರಿ.ಶ. ೧೫೫೭) ನಾಟ್ಯಶಾಲೆಯ ಭಿತ್ತಿಚಿತ್ರಗಳನ್ನು ವರ್ಣಿಸಿದ್ದಾನೆ. ನಗರನಿರ್ಮಾಣದ ಬಗ್ಗೆ ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲೂ, ಚೈತ್ಯ ಹಾಗೂ ಚಿತ್ರಶಾಲೆಗಳ ಬಗ್ಗೆ ಬೌದ್ಧ 'ತ್ರಿಪಿಟಕಾ'ದಿ ಗ್ರಂಥಗಳಲ್ಲೂ, ಚಿತ್ರಕಲೆಯ ಆರು ಅಂಗಗಳ ಪ್ರಸ್ತಾಪ ವಾತ್ಸ್ಯಾಯನನ 'ಕಾಮಸೂತ್ರ'ದಲ್ಲೂ ಬರುತ್ತದೆ.

ಭೋಜನ 'ಸಮರಾಂಗಣಸೂತ್ರಧಾರ', 'ಶುಕ್ರನೀತಿ', ರತ್ನಾಕರನ 'ಹರವಿಜಯ', ವಿದ್ಯಾರಣ್ಯರ 'ಪಂಚದಶೀ', ಮುಂತಾದ ಗ್ರಂಥಗಳಲ್ಲಿ ಚಿತ್ರಲೇಖನ (Painting) ಪ್ರಕಾರಗಳ ವರ್ಣನೆಗಳಿವೆ. ವೇದಯುಗದಲ್ಲಿ ಯಜ್ಞೋಪಕರಣಗಳಾದ ಕುಂಭ, ವೇದಿ, ಯೂಪ ಮುಂತಾದುವುಗಳ ಲೇಪನದಿಂದಲೂ ಮಾತೃಕಾಪೂಜೆಯಿಂದಲೂ ಚಿತ್ರಕಲೆಯು ಬೆಳೆದುಬಂದಿತೆನ್ನಬಹುದು. ವಿಷ್ಣುಧರ್ಮೋತ್ತರ ಪುರಾಣ(ಭಾಗ–೧) ಚಿತ್ರಕಲೆಯ ಲಕ್ಷಣಗಳನ್ನು ತಿಳಿಸುತ್ತದೆ. ದೇವತೆಗಳ, ಮಾನವರ ರೂಪಚಿತ್ರಣದ ಬಗ್ಗೆ ಅಲ್ಲಿ ಅನೇಕ ವಿವರಗಳಿವೆ. ಅಲ್ಲದೆ ಈ ಗ್ರಂಥ ವರ್ಣಗಳ ತೂಲಿಕೆಗಳ ತಯಾರಿಕೆಯನ್ನೂ ಭಿತ್ತಿಸಿದ್ಧತೆಯನ್ನೂ, ಚಿತ್ರ ರಚಿಸುವ ವಿಧಾನವನ್ನೂ ತಿಳಿಸುವ ಉತ್ತಮ ಗ್ರಂಥ.

ಕನ್ನಡನಾಡಿನಲ್ಲಿ ಚಿತ್ರಕಲೆಯು ಬೆಳೆದುಬಂದ ಕುರುಹು ಕ್ರಿ.ಪೂ. ೨ನೆಯ ಶತಮಾನದಿಂದಲೇ ಕಾಣುತ್ತದೆ. "ಅಜಂತ"ದ ಭಿತ್ತಿಚಿತ್ರಗಳು ಕ್ರಿ.ಪೂ. ೨ನೆಯ ಶತಮಾನದಿಂದಲೇ ಆರಂಭವಾಗಿ ಏಳನೇ ಶತಮಾನದ ತನಕ ಬೆಳೆದು ಬಂದವು. ಅಜಂತದ ಚಿತ್ರಗಳನ್ನು ಬರೆಸಿದ ಚಾಲುಕ್ಯವಂಶದೀಪಕರನ್ನು ಕನ್ನಡಿಗರು ಎಂದೆಂದೂ ಮರೆಯುವಂತಿಲ್ಲ. ಅಜಂತದ ಗುಹೆಗಳಲ್ಲಿನ ಗೋಡೆ, ಕಂಬ, ಉಪ್ಪರಿಗೆ, ಒಳಭಾಗಗಳಲ್ಲಿನ ಭಿತ್ತಿಚಿತ್ರಗಳು ಆಗಿನ ಕಾಲದ ಬೌದ್ಧಸಂನ್ಯಾಸಿಗಳು ಮತ್ತು ಅರಸರು ತಮ್ಮ ಧರ್ಮಪ್ರಚಾರಕ್ಕಾಗಿ ಉಪಯೋಗಿಸಿದ ಮುಖ್ಯ ಸಾಧನಗಳಾಗಿವೆ. ಆಗಿನ ಚಿತ್ರಕಾರರು ಗುಹೆಗಳ ಕಲ್ಲಿನ ಭಿತ್ತಿಗಳ ಮೇಲೆ ಪಾವಲಿಯಷ್ಟು ದಪ್ಪವಾದ ಸುಣ್ಣದ ಗಚ್ಚನ್ನು ನಯ ಮಾಡಿ ಈ ಗಚ್ಚು ನೀರಿನಲ್ಲಿ ನೆನೆದಿರುವಾಗ ಅದರ ಮೇಲೆ ಕುಂಚದಿಂದ ಸ್ವದೇಶಿ ಕೆಂಪುವರ್ಣದಲ್ಲಿ ಸುತ್ತುಗೆರೆಗಳನ್ನು ಹಾಕಿ ತರುವಾಯ ಚಿತ್ರದ ಆಯಾಭಾಗಕ್ಕೆ ಜಲವರ್ಣಗಳನ್ನು ಬಳಸುತ್ತಿದ್ದರು. ಅಲ್ಲಿನ ಚಿತ್ರಗಳಲ್ಲಿ ಭಾವ, ಭಂಗಿ, ಮುದ್ರೆಗಳು, ಹಸ್ತಗಳು, ಕೇಶಾಲಂಕರಣ, ಉಡಿಗೆ, ತೊಡಿಗೆ, ಆಭರಣ, ಗಿಡ, ಮರ, ಬಳ್ಳಿ, ಹೂ, ಹಣ್ಣು; ಹಂಸ, ಹಕ್ಕಿಗಳು, ಹಾವು, ಹುಲ್ಲೆಗಳು—ಇತ್ಯಾದಿ ಮಾನವದೃಷ್ಟಿಗೆ ದೊರಕುವ–ಊಹೆಗೆ ತೋರುವ ಎಲ್ಲಾ ಜೀವರಾಶಿಗಳೂ ರಮ್ಯವಾಗಿ ಚಿತ್ರಿತವಾಗಿವೆ. ಇವುಗಳಲ್ಲಿ ಸ್ವಭಾವಸುಂದರತೆ, ರಸಭಾವಗಳು ಸ್ಪಷ್ಟವಾಗಿ ವ್ಯಕ್ತವಾಗುವುವು. ಪ್ರಕೃತಿದತ್ತವಾದ ಸಾಮ್ಯಸಂಯೋಜನೆಗಳನ್ನು ಈ ಚಿತ್ರಗಳಲ್ಲಿ ಕಾಣಬಹುದು. ಪ್ರತಿ ವ್ಯಕ್ತಿಯ ಚಿತ್ರವೂ ಲಾಲಿತ್ಯ, ಸೌಂದರ್ಯ, ಭಾವಪೂರ್ಣತೆ

ಗಳಿಂದ ಕೂಡಿದೆ. ಅಜಂತದ ಚಿತ್ರಗಾರರು ತಮ್ಮ ಚಿತ್ರರಚನಾಸಂವಿಧಾನದಲ್ಲಿ ಆಂತರಿಕ ಭಾವನಾಲೋಲರಾಗಿ ಪರಮಾರ್ಥಸಾಧನೆಯ ಕಡೆಗೆ ಸಾಗಿದ್ದಾರೆ. ಅವರು ರಚಿಸಿರುವ ಚಿತ್ರಗಳು, ಅವರ ಕುಂಚದಿಂದಾದ ಕಾವ್ಯಗಳು, ಅವರ ಕೀರ್ತಿ ವಿಶ್ವಕೀರ್ತಿ. ಈ ಚಿತ್ರಗಳ ರೂಪರೇಖಾವಿನ್ಯಾಸ, ಬಣ್ಣ, ನಿಲುವು, ಒಲವುಗಳು ಯಾರ ಹೃದಯವನ್ನಾದರೂ ಸೆರೆ ಹಿಡಿಯದಿರವು. ಈ ಚಿತ್ರಗಳಲ್ಲಿನ ಸಾಮ್ಯ, ಪ್ರಸನ್ನತೆ, ಜೀವಂತತೆ, ಸಾಮರಸ್ಯಗಳನ್ನೂ ಕರಚರಣವಿನ್ಯಾಸವನ್ನೂ ಶರೀರಭಂಗಿಗಳನ್ನೂ ಮುಖಮುದ್ರೆಗಳನ್ನೂ ಈಕ್ಷಿಸಿದರೆ ಆ ಚಿತ್ರಕಾರರ ಕುಂಚಕುಶಲತೆ ಅಜರಾಮರವಾದುದು ಗೋಚರವಾಗುತ್ತದೆ. ಅಲ್ಲಿ ಬಳಸಲಾಗಿರುವ ದೇಶೀಯವರ್ಣಗಳು ಮನಸ್ಸನ್ನು ಎಂದಿಗೂ ಕಲಕುವುದಿಲ್ಲ. ಇಂದಿಗೂ ವರ್ಣಗಳ ಶಕ್ತಿ ಕುಂದದೆ ಕುಗ್ಗಿಲ್ಲದೆ ಆ ವರ್ಣಗಳ ವೈಖರಿ ತಿಳಿಯಲಾಗದ ಮರ್ಮಕಥೆಯಾಗಿದೆ.

'ಪರಮೇಶ್ವರ' ಎಂಬ ಬಿರುದನ್ನು ಪಡೆದ ಕನ್ನಡಿಗನಾದ ಚಾಲುಕ್ಯವಂಶದ ಎರಡನೇ ಪುಲಿಕೇಶಿಯ ಕಾಲದಲ್ಲಿ ಇರಾಣದ ರಾಯಭಾರಿಗಳು ಇವನ ಒಡ್ಡೋಲಗಕ್ಕೆ ಬಂದಿದ್ದರೆಂಬುದು ಈ ಭಿತ್ತಿಚಿತ್ರಗಳಿಂದ ವ್ಯಕ್ತವಾಗುತ್ತದೆ. ಪುಲಿಕೇಶಿಯ ಚಿತ್ರ ನಮಗೆ ಇಲ್ಲಿ ದೊರೆತಿದೆ. ನಮ್ಮ ದುರ್ದೈವದಿಂದಾಗಿ ಈ ಚಿತ್ರದಲ್ಲಿ ಪುಲಿಕೇಶಿಯ ಮುಖವನ್ನು ಕೆಡಿಸಲಾಗಿದೆ. ಇಲ್ಲಿಯ ಮತ್ತೊಂದು ಗುಹೆಯಲ್ಲಿ ರಾಜವಿಲಾಸ ಎಂಬ ನೌಕೆಯ ಚಿತ್ರವಿದ್ದು ಅದರಲ್ಲಿಯ ವ್ಯಕ್ತಿಚಿತ್ರ ಪುಲಿಕೇಶಿಯದೇ ಎಂದು ಹೇಳಲಾಗಿದೆ. ಕನ್ನಡಿಗರ ಚಿತ್ರಕಲೆಯ ಕೀರ್ತಿಯನ್ನು ದಶದಿಕ್ಕುಗಳಿಗೂ ಪ್ರಸರಿಸುವಂತೆ ಮಾಡಿದ ಈ ಚಾಲುಕ್ಯರು ಕೆಲವುಕಾಲ ಇತಿಹಾಸದಿಂದ ಮರೆಯಾದರೂ ಅವರ ಕಲಾಕೀರ್ತಿಯ ವೈಭವ ಅಮರವಾದುದು. ವರ್ಣದ ಇಂಥ ಸುಂದರ ಭಿತ್ತಿಚಿತ್ರಗಳು ಧಾರ್ಮಿಕದರ್ಶನಕೇಂದ್ರವಾದ ಎರಡನೇ ಬಾದಾಮಿ ಗುಹೆಗಳಲ್ಲೂ ಇವೆ. ಇಲ್ಲಿಯ ವೈಷ್ಣವ ಗುಹೆಯನ್ನು ೨ನೇ ಪುಲಿಕೇಶಿಯ ಚಿಕ್ಕಪ್ಪನಾದ ಮಂಗಲೇಶನೆಂಬುವನು ೫ನೇ ಶತಕದಲ್ಲಿ ಕೊರೆಸಿದನು. ಇಲ್ಲಿಯೂ ಅಜಂತದ ಚಿತ್ರಕಲೆಯ ವೈಶಿಷ್ಟ್ಯವನ್ನೇ ಕಾಣಬಹುದು. ೬ನೇ ಶತಮಾನಕ್ಕೆ ಸೇರಿದ ಚಿತ್ರಕಲೆ ಬಾದಾಮಿಯಲ್ಲಿ ಕಂಡುಬರುತ್ತದೆ. ಬಾದಾಮಿಯ ಚಾಳುಕ್ಯ ಅರಸರು ಚಿತ್ರಕಲೆಗೆ ಕೊಟ್ಟ ಪ್ರೋತ್ಸಾಹ ಮರೆಯುವಂತಹದ್ದಲ್ಲ. ಮೊದಲನೆಯ ಗುಹೆಯ ಭಿತ್ತಿ ಇಮ್ಮಡಿ ಪುಲಿಕೇಶಿಯ ಚಿತ್ರದಿಂದ ಕೂಡಿದೆ. ಮೂರನೆಯ ಗುಹೆಯಲ್ಲೂ ಭಿತ್ತಿಚಿತ್ರಗಳಿವೆ. ಇವು ಅಜಂತದ ಚಿತ್ರಗಳ ಪದ್ಧತಿಗೆ ಸೇರಿದವು. ರಾಜನ ಒಡ್ಡೋಲಗದ ಚಿತ್ರಗಳಲ್ಲಿ ರಾಜನ ಪಕ್ಕದಲ್ಲಿ ರಾಣಿ ಕುಳಿತಿರುವಂತೆ, ವಾದ್ಯಗಾರರ, ಪರಿವಾರದವರ, ಆಸ್ಥಾನಿಕರ ನಡುವೆ ನರ್ತಕಿಯರು ಇರುವಂತೆ ಚಿತ್ರಿಸಿರುವ ಸಂಯೋಜನಚಿತ್ರ ಮೋಹಕವಾಗಿದೆ. ಆದರೆ ಇದರ ಬಣ್ಣ ಕಳೆದುಹೋಗಿ ಅಸ್ಪಷ್ಟವಾಗಿ ಕಾಣುತ್ತಿದೆ. ಕೀರ್ತಿವರ್ಮನ ಮತ್ತು ಅವನ ರಾಣಿಯರು ಇರುವ ಮತ್ತೊಂದು ಚಿತ್ರ ಅಲ್ಲಿದೆ. ಈ ಚಿತ್ರಗಳನ್ನು ರಚಿಸಿದ ಕಲಾಕಾರರ ಕಲಾಸಾಧನೆ-ಸಿದ್ಧಿ ಯಾರಾದರೂ ಮೆಚ್ಚುವಂತಹದ್ದು.

ಸಾಹಿತ್ಯದಲ್ಲಿ, ಶಾಸನಗಳಲ್ಲಿ ಚಿತ್ರಕಾರರ ಬಗ್ಗೆ ವಿವರಗಳು ಕಂಡುಬರುತ್ತವೆ. ೬ನೇ ಶತಮಾನದ ನಂತರ ಶಿಲಾದೇವಾಲಯಗಳಲ್ಲಿ ಮೂರ್ತಿಶಿಲ್ಪಕ್ಕೆ ಪ್ರಾಧಾನ್ಯ ಬಂದು ವರ್ಣಚಿತ್ರಕಲೆಗೆ ಅವಕಾಶ ಇಲ್ಲದಂತಾಗಿರಬಹುದು. ಅದರ ಬದಲು ಇಟ್ಟಿಗೆ ಮರಗಳಿಂದ ನಿರ್ಮಿಸಿದ ಅರಮನೆ ಗುರುಮನೆಗಳಲ್ಲಿ ಇಂಥ ಚಿತ್ರಗಳನ್ನು ರಚಿಸುತ್ತಾ ಬಂದಿರಬೇಕು. ಹೊಯ್ಸಳರ ಕಾಲದ ದೇಗುಲಗಳಲ್ಲಿ ಒಳಚಾವಣಿಯಲ್ಲಿ ರೇಖಾಚಿತ್ರಗಳು ಉಳಿದುಬಂದಿವೆ. ವಿಷ್ಣುವರ್ಧನನ ಕಾಲದಲ್ಲಿನ ಶ್ರವಣಬೆಳಗೊಳದ ಶಾಂತಿನಾಥನ ಬಸದಿಯ ಭಿತ್ತಿಗಳು ಹಾಗೂ ಚಾವಣಿಗಳು ಚಿತ್ರಗಳಿಂದ ಕೂಡಿದ್ದ ಕುರುಹುಗಳು ಕಾಣಬರುತ್ತವೆ.

ವಿಜಯನಗರದ ರಾಜರ ಕಾಲದ ವರ್ಣಚಿತ್ರಕಲೆ ಅತ್ಯಂತ ಹಿರಿಮೆಯನ್ನು ಸಾಧಿಸಿದೆ. ಕಲ್ಲಿನ ದೇವಾಲಯಗಳ ಚಾವಣಿಗಳಲ್ಲಿ ಚಿತ್ರಗಳನ್ನು ಗಮನಿಸಬಹುದು. ಹಂಪೆಯ ವಿರೂಪಾಕ್ಷದೇವಾಲಯದ ಮುಂದೆ ಕೃಷ್ಣದೇವರಾಯ ಕಟ್ಟಿಸಿದ ರಂಗಮಂಟಪದ ಚಾವಣಿ ಹಾಗೂ ತೊಲೆಗಳ ಮೇಲೆ ಹಲವಾರು ವರ್ಣಚಿತ್ರಗಳನ್ನು ಕಾಣಬಹುದಾಗಿದೆ. ಇಲ್ಲಿ ಗಿರಿಜಾಕಲ್ಯಾಣ ಮೊದಲಾದ ಶಿವಲೀಲೆಗಳೂ, ತ್ರಿಪುರಾಸುರಸಂಹಾರ, ಅರ್ಜುನನ ಮತ್ಸ್ಯಭೇದ, ವಿಷ್ಣುವಿನ ದಶಾವತಾರ ಮುಂತಾದವೂ ಇವೆ. ಈಚೆಗೆ ಈ ಚಿತ್ರಗಳನ್ನು ಬಣ್ಣಕೊಟ್ಟು ತಿದ್ದಿಸಲಾಗಿದೆ. ಇದರಿಂದಾಗಿ ಮೂಲ ವರ್ಣಗಳ ಸೊಬಗಿಗೆ ಅನ್ಯಾಯ ಮಾಡಿದಂತಾಗಿದೆ. ಇದೇ ಕಾಲದ ಚಿತ್ರಗಳು ಆನೆಗೊಂದಿಯಲ್ಲಿ ಮಂಟಪವೊಂದರ ಚಾವಣಿಯಲ್ಲಿವೆ. ಆದರೆ ಅವು ಅಸ್ಪಷ್ಟವಾಗಿವೆ. ಇದೇ ಕಾಲಕ್ಕೆ ಸೇರುವ ಚಿತ್ರಗಳು ಆಂಧ್ರಪ್ರದೇಶಕ್ಕೆ ಸೇರಿರುವ ಹಿಂದೂಪುರಕ್ಕೆ ಸಮೀಪದಲ್ಲಿರುವ ಲೇಪಾಕ್ಷಿಯಲ್ಲಿವೆ. ವಿಜಯನಗರದ ಪೆನುಗೊಂಡದಲ್ಲಿದ್ದ ವಿರುಪಣ್ಣನೆಂಬ ಭಂಡಾರಿಯು ತನ್ನ ಅಭಿಮಾನದೇವರಾದ ವೀರಭದ್ರಸ್ವಾಮಿಯ ಗುಡಿಯನ್ನು ಲೇಪಾಕ್ಷಿ ಎಂಬ ಗ್ರಾಮದಲ್ಲಿ ಕಲಾತ್ಮಕವಾಗಿ ಕಟ್ಟಿಸಿದನು. ವಿಜಯನಗರದ ಕಾಲದ ಶಿಲ್ಪ ಹಾಗೂ ಚಿತ್ರಕಲೆ ಇಲ್ಲಿ ಉನ್ನತಿಯನ್ನು ಮುಟ್ಟಿದೆ.

ಶಿಲ್ಪಕಲೆಗೆ ಕೊಟ್ಟ ಪ್ರಾಶಸ್ತ್ಯವನ್ನು ವಿರುಪಣ್ಣ ಇಲ್ಲಿ ಚಿತ್ರಕಲೆಗೂ ನೀಡಿದ್ದಾನೆ. ಲೇಪಾಕ್ಷಿ ಅಜಂತದ ಕಲೆಗೆ ಸರಿಮಿಗಿಲಾದುದು. ದೇವಾಲಯದ ಚಾವಣಿಗಳಲ್ಲಿ ಚಿತ್ರಗಳು ಮಸಕಾಗಿದ್ದವು. ಈ ಚಿತ್ರಗಳನ್ನು ಈಚೆಗೆ ಸರ್ಕಾರದವರು ಸ್ವಚ್ಛಗೊಳಿಸಿ ಸ್ಪಷ್ಟವಾಗಿ ಕಾಣುವಂತೆ ಮಾಡಿದ್ದಾರೆ. ಆಗಿನ ವರ್ಣಚಿತ್ರಗಳು ಇನ್ನೂ ಹೊಚ್ಚಹೊಸದಾಗಿ ತೋರುತ್ತಿವೆ. ಒಂದೊಂದು ಚಿತ್ರವೂ ಒಂದೊಂದು ವೈಶಿಷ್ಟ್ಯದಿಂದ ಕೂಡಿ ತಮ್ಮದೇ ಆದ ಸೊಬಗನ್ನು ಬೀರುತ್ತಿವೆ. ಹದಿನಾರು ಸ್ತಂಭಗಳ ಮೂಲಾಂಕಣದ ಚಾವಣಿ ೧೮'-೨೦'ಗಳ ಬೃಹದಾಕಾರದ ವೀರಭದ್ರಸ್ವಾಮಿಯ ಚಿತ್ರ ಯಾರನ್ನಾದರೂ ಬೆರಗುಗೊಳಿಸದಿರದು.

ಶ್ರೀರಾಮಚಂದ್ರನ ದೇವಾಲಯದ ದಶಾವತಾರದ ಚಿತ್ರಗಳನ್ನು ಬಹು ರಮ್ಯವಾಗಿ ಬಿಡಿಸಲಾಗಿದೆ. ಅಗಸ್ತ್ಯರು ತಪಸ್ಸುಮಾಡಿದ್ದರೆಂದು ನಿರ್ದೇಶಿಸಲಾದ ದೇವಾಲಯದ ಮೂಲೆಯ ಕತ್ತಲು ಕೋಣೆಯ ಛಾವಣಿಯಲ್ಲೂ ವಿವಿಧ ಕೃತಿಗಳನ್ನು, ಪಲ್ಲವಗಳನ್ನು ಕಾಣಬಹುದು. ದೇವಾಲಯದ ಹೊರಾಂಗಣದ ಛಾವಣಿಯಲ್ಲೂ ಸ್ಕಾಂದಪುರಾಣದಲ್ಲಿನ ಶಿವಲೀಲಾವಿನೋದವನ್ನು ಮೋಹಕವಾಗಿ ಚಿತ್ರಿಸಲಾಗಿದೆ.

ಇಲ್ಲಿನ ಚಿತ್ರಗಳಲ್ಲಿ ಕೆಲವು ಗಮನಾರ್ಹ ವೈಚಿತ್ರ್ಯಗಳನ್ನು ಕಾಣಬಹುದಾಗಿದೆ. ಎಲ್ಲ ಮಾನವಾಕೃತಿಗಳಲ್ಲೂ ಮುಖ ಓರೆಯಾಗಿರಲಿ ನೇರವಾಗಿರಲಿ ಎರಡು ಕಣ್ಣುಗಳನ್ನು ಚಿತ್ರಿಸಿರುವ ಬಗೆಯನ್ನು ಇಲ್ಲಿ ಮಾತ್ರ ಕಾಣಬಹುದು. ಎಲ್ಲಾ ಪುರುಷರ ಚಿತ್ರಗಳಲ್ಲೂ ಮೀಸೆಯ ಅಂಚನ್ನು ಕೆಳಮುಖವಾಗಿ ಬಿಡಿಸಿದ್ದರೆ—ವೀರಭದ್ರನ ಮೀಸೆಯನ್ನು ಮಾತ್ರ ಮೇಲುಮುಖವಾಗಿ ಬಿಡಿಸಲಾಗಿದೆ. ಪ್ರತಿ ಸ್ತ್ರೀಚಿತ್ರದ ವಸ್ತ್ರಾಭರಣಸೌಂದರ್ಯ, ವರ್ಣವೈಖರಿ, ಕುಸುರಿನ ಕಲೆ ಮೋಹಕವಾಗಿವೆ. ಅಲ್ಲಿ ಕಾಣುವ ಚಿತ್ತಾಕರ್ಷಕಸೌಂದರ್ಯ—ನಾಲ್ಕುನೂರು ವರ್ಷಗಳ ಹಿಂದಿನ ಕಲೆ—ತನ್ನ ಚಿತ್ರಕಲೆಯ ಹಿರಿಮೆಯನ್ನು ಸಾರುವಂತಿದೆ.

ಲೇಪಾಕ್ಷಿಯ ಚಿತ್ರಗಳ ರಚನೆಯಲ್ಲಿ ಕಲಾವಿದರು ಅತ್ಯಂತ ಕೌಶಲ್ಯವನ್ನು ಮೆರೆದಿದ್ದಾರೆ. ವಿಶಿಷ್ಟ ಕಲ್ಪನಾಶಕ್ತಿಯನ್ನು ತೋರಿದ್ದಾರೆ. ಪರಂಪರಾಗತವಾಗಿ ಬಂದ ನಮ್ಮ ಸಂಪ್ರದಾಯಗಳಲ್ಲಿ ಅರಿತು ನುರಿತ ಅದ್ಭುತ ಕಲೆಯನ್ನು ಸೃಷ್ಟಿಸಿದ್ದಾರೆ. ಈ ಚಿತ್ರಗಳೆಲ್ಲಾ ಕಲ್ಲಿನ ಮೇಲೆ ಕಟುವಾಗಿ ಮೆತ್ತಿರುವ ನಯವಾದ ಗಾರೆಯ ಮೇಲೆ ರಚಿತವಾಗಿದೆ. ಸೂಕ್ಷ್ಮಕಣಗಳಿಂದ ಕೂಡಿದ ಮೂರು ಪೊರೆಗಳು ವ್ಯಕ್ತವಾಗುತ್ತವೆ. ಚಿತ್ರಕ್ಕೂ ಒಳಗಿನ ಬಿಳಿಯ ಲೇಪನಕ್ಕೂ ನಡುವೆ ಮೊದಲ ಪೊರೆ ಬರುತ್ತದೆ. ಎರಡನೇ ಪೊರೆ ಆ ಬಿಳಿಯ ಲೇಪನಕ್ಕೂ ಮತ್ತು ಸಾಮಾನ್ಯಮಿಶ್ರಣದ ನಡುವೆ ಇದೆ. ಈ ಎರಡು ಲೇಪನಗಳ ಹಿಂದೆ ಸಮವಾದ ಸುಣ್ಣದ ಲೇಪನವನ್ನು ಕೊಡಲಾಗಿದೆ. ಭಿತ್ತಿಸಿದ್ಧತೆಗೆ ಹೀಗೆ ಉತ್ತಮ ಲಕ್ಷಣವನ್ನು ನೀಡಿ ಅನಂತರ ಚಿತ್ರದ ರಚನೆಯನ್ನು ಮಾಡಿದ್ದಾರೆ. ವರ್ಣಗಳ ವೈಖರಿಯೂ ಕುಂಚಗಳ ಸೂಕ್ಷ್ಮತೆಯೂ ಗಮನಾರ್ಹವಾದುವು. ಮೂಲವರ್ಣಗಳಾದ ಬಿಳುಪು, ಹಳದಿ, ಕೆಂಪು, ನೀಲಿ—ಇವುಗಳ ಪರಸ್ಪರ ಮಿಶ್ರಣದಿಂದ ನಾನಾವರ್ಣಗಳನ್ನು ಕಲಾವಿದರು ಪಡೆದುಕೊಂಡಿದ್ದಾರೆ. ೧೬ನೆಯ ಶತಮಾನದ ಗ್ರಂಥವಾದ 'ಶಿಲ್ಪರತ್ನ'ದಲ್ಲಿ ಬರುವ ಎಲ್ಲಾ ಲಕ್ಷಣಗಳೂ ಈ ಕಲಾಪ್ರಪಂಚದಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ನೂರಾರು ವರ್ಷಗಳಿಂದ ಅಚ್ಚಳಿಯದ ಈ ವರ್ಣಗಳ ರಹಸ್ಯ ಅಚ್ಚರಿಯನ್ನುಂಟುಮಾಡುತ್ತವೆ. ವರ್ಣಮಿಶ್ರಣದಲ್ಲಿ ನಮ್ಮ ಹಿರಿಯರು ಎಷ್ಟೋ ಪ್ರಯೋಗಗಳನ್ನು ಆಗಲೇ ನಡೆಸಿಹೋಗಿದ್ದಾರೆ. ಅವುಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಲು ಸರಿಯಾದ ಸಂಶೋಧನೆ ಅಗತ್ಯವಾಗಿದೆ.

ಲೇಪಾಕ್ಷಿಯ ಕಲಾವೈಭವವನ್ನು ನೋಡಿ ಕನ್ನಡಿಗರು ಹೆಮ್ಮೆ ಪಡಬೇಕು. ಇಂಥ ಅಪೂರ್ವ ಕಲೆಯನ್ನು ಸೃಜಿಸಲು ಪ್ರೇರಕಶಕ್ತಿಯಾದ ಕನ್ನಡದ ವಿರುಪಣ್ಣನ ಕಲಾಪ್ರೇಮ ಅತಿದೊಡ್ಡದು. ಶಿಲ್ಪ ಹಾಗೂ ಚಿತ್ರಕಲೆಗಳ ಒಂದು ಅಪೂರ್ವ ಸಂಗಮವನ್ನು ನಾವು ಇಲ್ಲಿ ಮಾತ್ರ ಕಾಣುವೆವು. ಈ ಕಲಾವೈಭವ ಇದುವರೆಗೂ ಉಳಿದುಬಂದಿರುವುದು ನಮ್ಮ ಪುಣ್ಯವಿಶೇಷ. ಇದೇ ಕಾಲದ್ದೆನ್ನಬಹುದಾದ ಚಿತ್ರದುರ್ಗದ ಆಕಳಿಸ್ವಾಮಿಯ ಗುಹೆಯ ವರ್ಣಚಿತ್ರಗಳನ್ನು ನೆನೆಯಬಹುದು.

ವಿಜಯನಗರದ ಕಾಲದ ನಂತರ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟವರು ಮೈಸೂರು ಅರಸರು. ಇವರ ಕಾಲದಲ್ಲಿ ಅನೇಕ ದೇವಾಲಯಗಳು ಮತ್ತು ಕಟ್ಟಡಗಳಲ್ಲಿ ಭಿತ್ತಿಚಿತ್ರಗಳ ರಚನೆಯಾಗಿದೆ.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿತವಾದ ಶ್ರವಣಬೆಳಗೊಳದ ಕಲ್ಯಾಣಿಯ ಮಂಟಪದಲ್ಲಿ ಆ ಕಾಲದ ಚಿತ್ರಗಳಿಂದ ಕೂಡಿದ ಕುರುಹುಗಳು ಮಾತ್ರ ಕಾಣಸಿಗುತ್ತವೆ. ಎಡೆಯೂರಿನ ತೋಂಟದ ಸಿದ್ಧಲಿಂಗೇಶ್ವರ ದೇವಸ್ಥಾನದ ಮುಖಮಂಟಪದಲ್ಲಿ ಪಂಚವಿಂಶತಿಲೀಲಾಮೂರ್ತಿಗಳೂ, ಸಿದ್ಧಲಿಂಗಯತಿಯ ಜೀವಿತಕ್ಕೆ ಸೇರಿದ

ಚಿತ್ರಗಳೂ ಇವೆ. ಬೆಳಕವಾಡಿಯ ಮಂಟೇಸ್ವಾಮಿ ಮಠದ ಹಜಾರದಲ್ಲಿ ರಾಮಾಯಣ ಮತ್ತು ಶಿವಲೀಲೆಗಳ ಚಿತ್ರಗಳಿವೆ. ಗುಬ್ಬಿಯ ಮೈಲಪ್ಪನ ಗುಡಿಯ ಮುಖಮಂಟಪದಲ್ಲಿಯೂ ಶಿವನ ಪಂಚವಿಂಶತಿಲೀಲಾಮೂರ್ತಿಗಳ ಸುಂದರ ಚಿತ್ರಗಳಿವೆ.

ಟಿಪ್ಪುವಿನ ಕಾಲದಲ್ಲಿ ಕಟ್ಟಿದ ಶ್ರೀರಂಗಪಟ್ಟಣದ ದರಿಯಾದೌಲತ್‌ನಲ್ಲಿ ಭಿತ್ತಿಚಿತ್ರಗಳು ಇಂದಿಗೂ ಆ ಕಾಲದ ಚಿತ್ರಕಲೆಯ ಹೆಗ್ಗುರುತನ್ನು ಸಾರುತ್ತಿವೆ. ಹೈದರಾಲಿ ಪಶ್ಚಿಮ ಸಮುದ್ರತೀರದ ಮಂಗಳೂರು ಮುಂತಾದ ಪ್ರಾಂತಗಳನ್ನು ಜಯಿಸಿದ ಮೇಲೆ ಪಶ್ಚಿಮ ಸಮುದ್ರದಲ್ಲಿರುವ 'ಲಕ್ಷದ್ವೀಪ' ಎಂಬ ದ್ವೀಪಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಪೆರಂಬಾಕು ಬಳಿ ಯುದ್ಧದಲ್ಲಿ ಬ್ರಿಟಿಷ್ ಸೈನ್ಯವನ್ನು ಹೈದರಾಲಿ ಸೋಲಿಸಿ ಅಲ್ಲಿಂದ ಮದರಾಸಿನವರೆಗೂ ಹೋಗಿ ಅಲ್ಲಿಯೂ ವಿಜಯ ಸ್ಥಾಪಿಸಿದ. ಹೀಗೆ ಮಂಗಳೂರಿನವರೆಗೂ ರಾಜ್ಯ ವಿಸ್ತರಿಸಿದ್ದು ಹೈದರಾಲಿಗೆ ಅಪರಿಮಿತ ಸಂತೋಷವನ್ನು ತಂದಿತು. ಹೀಗೆ ದೊಡ್ಡ ನವಾಬನ ದೌಲತ್ತು ಸಮುದ್ರದ ಮೇಲೆಲ್ಲಾ ಪ್ರಸರಿಸಿದ ಸಂತೋಷಕ್ಕಾಗಿ ಅವರ ಜ್ಞಾಪಕಾರ್ಥವಾಗಿ ಸುಲ್ತಾನನು ಈ ಮಹಲನ್ನು ಕಟ್ಟಿಸಿ ಇದಕ್ಕೆ 'ದರಿಯಾದೌಲತ್' ಎಂದರೆ 'ಸಮುದ್ರದ ಮೇಲಿನ ರಾಜ್ಯ'ವೆಂದು ಹೆಸರಿಟ್ಟ. ಇದರ ಸುತ್ತಲೂ ರಮ್ಯ ಉದ್ಯಾನವನ್ನು ನಿರ್ಮಿಸಿ ಬಂಗಾರದೊಡ್ಡಿ ನಾಲೆಯಿಂದ ನೀರು ಬರುವಂತೆ ಮಾಡಿದ. ಇಸ್ಲಾಂ ವಾಸ್ತುಕಲೆಯ ಈ ಮಹಲಿನಲ್ಲಿ ಸುಲ್ತಾನನು ಬೇಸಿಗೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು. ಈ ಅರಮನೆಯನ್ನು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಇದರ ಸುತ್ತಲೂ ನೀಳವಾದ ಕಲಾತ್ಮಕವಾದ ಕಂಬಗಳಿಂದ ಕೂಡಿದ ಕೈಸಾಲೆ ಇದೆ. ಮೇಲಕ್ಕೆ ಹತ್ತಿ ಹೋಗುವುದಕ್ಕೂ ಹಂತಗಳಿವೆ. ಕೆಳಗಡೆ ವಿಶಾಲವಾದ ದರ್ಬಾರು ನಡೆಸುವ ಸಭಾಂಗಣವಿದೆ. ಇಲ್ಲಿನ ಗೋಡೆಗಳ ಮೇಲೆ ಆಗಿನಕಾಲದ ಪ್ರಮುಖ ಘಟನೆಗಳನ್ನೂ ಯುದ್ಧಗಳನ್ನೂ ಸಮಕಾಲೀನ ರಾಜ–ಪಾಳೆಯಗಾರರನ್ನೂ ಸೂಚಿಸುವ ವರ್ಣಚಿತ್ರಗಳನ್ನು ಬರೆಸಲಾಗಿದೆ.

ಒಳಗಿನ ಗೋಡೆಗಳ ಕಂಬಗಳ ಚಾವಣಿಗಳ ಕೆಳಭಾಗದಲ್ಲಿ ಎಲ್ಲೂ ಖಾಲಿಜಾಗ ಬಿಡದೆ ಅಲ್ಲೆಲ್ಲಾ ವಿವಿಧ ವರ್ಣದಿಂದಲೂ ಚಿನ್ನದ ಮುಲಾಮಿನಿಂದಲೂ ರಚಿತವಾದ ಚಿತ್ರಗಳಿವೆ. ಇಲ್ಲಿ ಚಿತ್ರಿಸಿರುವ ಪ್ರತಿಯೊಂದು ಎಲೆ, ಬಳ್ಳಿ, ಹೂ, ಮೃಗ, ಪಕ್ಷಿಯೂ ನಿಸರ್ಗಸಹಜವಾಗಿದೆ. ಗಾಳಿಗೂ ಬಿಸಿಲಿನ ತಾಪಕ್ಕೂ ಅಳಿಸಿಹೋದ ಇವುಗಳ ಕೆಲವು ಭಾಗಗಳನ್ನು ೧೯೨೦ರಲ್ಲಿ ಮತ್ತೆ ಸರಿಪಡಿಸುವ ಕೆಲಸ ಆರಂಭವಾಯಿತು. ಈ ಭಿತ್ತಿಚಿತ್ರಗಳನ್ನು ೧೭೭೧ರ ಸುಮಾರಿನಲ್ಲಿ ಬಿಡಿಸಿರಬಹುದೆಂದು ತಿಳಿದುಬರುತ್ತದೆ.

ಇಲ್ಲಿಯ ಚಿತ್ರಗಳಲ್ಲಿನ ವರ್ಣಗಳು ಈಗಲೂ ತಮ್ಮ ಹೊಳಪನ್ನು ಕಳೆದುಕೊಳ್ಳದೆ ಬಹುಜನರ ಗಮನವನ್ನು ಸೆಳೆಯುತ್ತಿವೆ. ಸಂಶೋಧಕ ಬೆಂಜಮಿನ್ ಹ್ಯಾನಿ ಪರೀಕ್ಷೆ ನಡೆಸಿ ಈ ವರ್ಣಗಳನ್ನು ಹೇಗೆ ತಯಾರಿಸಿಕೊಳ್ಳಲಾಯಿತು ಎಂಬುದರ ಬಗ್ಗೆ ಅನೇಕ ವಿವರಗಳನ್ನು ಕೊಟ್ಟಿದ್ದಾನೆ.

ಇಲ್ಲಿನ ಭಿತ್ತಿಚಿತ್ರಗಳು ವೈಶಿಷ್ಟ್ಯಪೂರ್ಣವಾದವು. ಅವುಗಳಲ್ಲಿ ಅಂದಿನ ಕಾಲದ ಜನಜೀವನವನ್ನು ಪ್ರತಿಬಿಂಬಿಸುವ ನಡೆನುಡಿಗಳು, ಉಡಿಗೆತೊಡಿಗೆಗಳು, ಅಲಂಕಾರಪದ್ಧತಿಗಳು, ಆಭರಣಗಳು, ಆಯುಧ ಸಾಮಗ್ರಿಗಳು ಚಿತ್ರಕಾರರ ಕುಂಚದಿಂದ ಸುಂದರವಾಗಿ ಹೊರಹೊಮ್ಮಿವೆ.

ಈ ಚಿತ್ರಗಳಲ್ಲಿನ ಮಾನವರ ಅಂಗಾಂಗಗಳೂ ಹಾವ-ಭಾವ-ಭಂಗಿಗಳೂ ಸ್ವಾಭಾವಿಕವಾಗಿವೆ. ಕಲಾವಿದರ ಚಿತ್ರಶೈಲಿ, ವರ್ಣಗಳ ಜೋಡಣೆ ಎಲ್ಲವೂ ವಿಶ್ವದ ಚಿತ್ರಕಾರರನ್ನು ಸೋಜಿಗಪಡಿಸುತ್ತಿವೆ. ಕರ್ನಾಟಕ ಚಿತ್ರಕಾರರ ಈ ಕಲೆಗಾರಿಕೆಯ ಮೇಲೆ ಪಾಶ್ಚಿಮಾತ್ಯ ಚಿತ್ರಕಲೆಯ ಪ್ರಭಾವ ಬಿದ್ದಂತೆ ಭಾಸವಾಗುತ್ತದೆ.

ಇಲ್ಲಿಯ ಪಶ್ಚಿಮ ದಿಕ್ಕಿನ ಭಿತ್ತಿಯ ಚಿತ್ರಗಳಲ್ಲಿ ಅಂದಿನ ಯುದ್ಧಗಳ ಸನ್ನಿವೇಶಗಳನ್ನು ರೂಪಿಸಲಾಗಿದೆ. ಹೈದರಾಲಿ, ಹೈದರಾಬಾದ್‌ನಿಜಾಮರ ಜೊತೆ ಬ್ರಿಟಿಷರನ್ನು ಎದುರಿಸಿದ ಚಿತ್ರಣ ಅಪೂರ್ವವಾದುದು. ಮಿತ್ರನಾದ ನಿಜಾಮನು ಮತ್ತೆ ಬ್ರಿಟಿಷರ ಕಡೆಗೆ ಹೋದದ್ದರಿಂದ ಟಿಪ್ಪುವಿಗೆ ಅಸಮಾಧಾನವೂ, ಕೋಪವೂ ಬಂದಿತು. ಅದರ ಸಂಕೇತವಾಗಿ ಒಂದು ಚಿತ್ರವನ್ನೇ ಬರೆಸಿದ. ನಿಜಾಮನ ಸೈನ್ಯದ ದಂಡನಾಯಕನು ಕುದುರೆಯ ಮೇಲೆ ಕುಳಿತಿರುವಂತೆ ಚಿತ್ರಿಸಿ ಅವನ ಕೆಳಗೆ ಹಸು ಮತ್ತು ಹಂದಿಗಳನ್ನು ಚಿತ್ರಿಸಲಾಗಿದೆ. ನಿಜಾಮನ ಸೈನ್ಯ ಹಸುವಿನಂತೆ ಬಂದು ಹಂದಿಯಂತೆ ಬ್ರಿಟಿಷರ ಕಡೆ ಸೇರಿಕೊಂಡಿತು ಎಂಬುದರ ಸಂಕೇತವಾಗಿ ಟಿಪ್ಪು ಹೀಗೆ ಚಿತ್ರ ಬರೆಯಿಸಿದನಂತೆ.

ಮತ್ತೊಂದು ಯುದ್ಧದ ಚಿತ್ರದಲ್ಲಿ ಹೈದರಾಲಿ ಆನೆಯ ಮೇಲಿರುವ ಅಂಬಾರಿಯಲ್ಲಿ ಕುಳಿತು ಸವಾರಿ ಮಾಡುವಂತೆ ರಚಿಸಲಾಗಿದೆ. ಅವನ ಹಿಂದೆ ಐದು ಆನೆಗಳ ಸೈನ್ಯದಳವಿದೆ. ಅವನ ಮುಂದೆ ಕತ್ತಿಹಿಡಿದ ಕುದುರೆಸವಾರರು

ಬಟ್ಟೆ, ಶಿರಸ್ತ್ರಾಣ, ಉದ್ದನೆ ಕೋಟು, ಷರಾಯಿ ಮತ್ತು ಮೆಟ್ಟುಗಳನ್ನು ಧರಿಸಿದ್ದಾರೆ. ಕಾಲಾಳುಗಳು ಜೋಡುಪಟ್ಟಿ ರುಮಾಲು ಮತ್ತು ಕರವಸ್ತ್ರಗಳನ್ನು ಧರಿಸಿದಂತೆ ಚಿತ್ರಿಸಲಾಗಿದೆ.

ಈ ಚಿತ್ರದ ಪಕ್ಕದಲ್ಲಿ ಹೈದರಾಬಾದ್‌ನಿಜಾಮ ಕುದುರೆಯ ಮೇಲಿರುವಂತೆ, ಅವನ ಹಿಂಭಾಗದಲ್ಲಿ ಆನೆ ಸಾಲು, ಮುಂದೆ ಕಾಲಾಳುಗಳೂ ಇರುವಂತೆ ಚಿತ್ರಿಸಲಾಗಿದೆ. ಇದು ಎರಡನೇ ಮೈಸೂರು ಯುದ್ಧವನ್ನು ಸೂಚಿಸುವ ಚಿತ್ರವಾಗಿದೆ. ಇಲ್ಲಿ ಟಿಪ್ಪು ಕುದುರೆಯ ಮೇಲೆ ಕುಳಿತಿದ್ದಾನೆ. ಅವನ ಜೊತೆ ವಿಶ್ವಾಸಘಾತಕನಾದ ಕಾರ್ಯದರ್ಶಿ ಮೀರ್‌ಸಾದಕ್ ಮಾತಾಡುತ್ತಿರುವಂತಿದೆ. ಕಾಲಾಳುಗಳು ಹಿಂದುಗಡೆಯಲ್ಲಿಯೂ ಉಕ್ಕಿನ ಕವಚದಲ್ಲಿರುವ ಕುದುರೆ ಸೈನ್ಯವು ಮುಂದುಗಡೆಯೂ ಹುಲಿಪಟ್ಟೆಯ ಧ್ವಜವನ್ನು ಹಿಡಿದು ಸಾಗುವ ಮೂರು ಆನೆ ಮತ್ತು ಎರಡು ಒಂಟೆಗಳ ಸೈನಿಕರೂ ಇಲ್ಲಿದ್ದಾರೆ. ಧ್ವಜವನ್ನು ಹಿಡಿದು ಫ್ರೆಂಚ್ ಕುದುರೆ ಸೈನ್ಯವು ಲಾಲಿಯ ನಿರ್ದೇಶನದಲ್ಲಿ ಮುನ್ನಡೆವಂತೆ ಕಾಣಿಸಲಾಗಿದೆ.

ಇಲ್ಲಿಯ ಮತ್ತೊಂದು ಅಪೂರ್ವ ಭಿತ್ತಿಚಿತ್ರ ಕಾಂಜೀವರಂ ಬಳಿ ನಡೆದ ಯುದ್ಧದಲ್ಲಿ ಮೈಸೂರಿಗೆ ಜಯವಾಗುವ ಸನ್ನಿವೇಶದ್ದು. ಗಜಾರೋಹಿಗಳಾಗಿ ಹೈದರ್ ಮತ್ತು ಟಿಪ್ಪು ಇವರಿಬ್ಬರೂ ತಮ್ಮ ಪಡೆಗಳನ್ನು ನಿರ್ದೇಶಿಸುತ್ತಿರುವಂತೆ ಚಿತ್ರಿಸಲಾಗಿದೆ. ಮೈಸೂರಿನ ಕುದುರೆಸವಾರ ಸೈನಿಕರು ಬ್ರಿಟಿಷ್ ಸೈನ್ಯವನ್ನು ಮುಂದೆ ಹಾಗೂ ಹಿಂದೆ ಎರಡೂ ಕಡೆಗಳಿಂದ ಮುತ್ತಿದ್ದಾರೆ. ಫ್ರೆಂಚ್ ಫಿರಂಗಿದಳದವರೂ ಹಾಗೂ ಕಂಚಿನ ಟೋಪಿ, ರುಮಾಲು, ವಜ್ರಕವಚ, ಇಜಾರ ಧರಿಸಿರುವ ಮೈಸೂರು ಸೈನ್ಯದ ದಂಡನಾಯಕರೂ ಯುದ್ಧದಲ್ಲಿ ಪರಿಣಾಮಕಾರಿಯಾಗಿ ಪಾತ್ರ ನಿರ್ವಹಿಸುತ್ತಿದ್ದಾರೆ. ಕೆಂದಕೋಟು ಧರಿಸಿದ ಇಂಗ್ಲಿಷ್ ಸೈನಿಕರು ತಮ್ಮ ಮದ್ದುಗುಂಡುಗಳನ್ನು ಹಾಗೂ ತಮ್ಮ ಮುಖ್ಯಸ್ಥ ಕರ್ನಲ್ ಬೇಲಿಯನ್ನು ರಕ್ಷಿಸಲು ವ್ಯೂಹ ರಚಿಸಿರುವುದನ್ನು ಸೊಗಸಾಗಿ ಚಿತ್ರಿಸಲಾಗಿದೆ. ಬೇಲಿಯು ಚಿಂತಾಗ್ರಸ್ತನಾಗಿ ಕೈಬೆರಳುಗಳನ್ನು ತುಟಿಯ ಮೇಲಿರಿಸಿಕೊಂಡು ಮುಚ್ಚು ಬಂಡಿ(ಮೇನೆ)ಯಲ್ಲಿ ಕುಳಿತಿದ್ದಾನೆ. ಇಲ್ಲಿ ಕೈಗೆ ಕೈಕೊಟ್ಟು ಯುದ್ಧಕ್ಕೆ ತೊಡಗಿರುವ ದೃಶ್ಯ ಮನೋಜ್ಞವಾದುದು.

ದರಿಯಾದೌಲತ್ ಅರಮನೆಯ ಪೂರ್ವದಿಕ್ಕಿನ ಭಿತ್ತಿಯಲ್ಲಿ ಅನೇಕ ರಾಜರ, ನವಾಬರ, ಪಾಳೆಯಗಾರರ ಚಿತ್ರಗಳನ್ನು ಚಿತ್ರಿಸಲಾಗಿದೆ. ಚಿತ್ತೂರಿನ ಹಿಂದೂರಾಣಿ, ಮೊಹಮದ್ ಆಲಿ, ಬಾಲಾಜಿ ಮತ್ತು ಅವನ ರಾಣಿ, ತಂಜಾವೂರಿನ ರಾಜ, ಕೊಡಗಿನ ವೀರರಾಜ, ಔಂಧ್ ಸಾಮಂತರು, ಆರ್ಕಾಟ್-ಕಡಪಾ ನವಾಬರು, ಪೇಶ್ವೆ ಮನೆತನದ ೨ನೇ ಬಾಲಾಜಿ, ಮುಮ್ಮಡಿ ಕೃಷ್ಣರಾಜ ಒಡೆಯರು (ಅನಂತರ ಚಿತ್ರಿಸಿದ ಚಿತ್ರವೆನ್ನಲಾಗುತ್ತದೆ), ಚಿತ್ರದುರ್ಗದ ಮದಕರಿ ನಾಯಕ, ಕಿತ್ತೂರು ರಾಣಿ ಚೆನ್ನಮ್ಮ ಮುಂತಾದವರ ಚಿತ್ರಗಳು ಇವುಗಳಲ್ಲಿ ಮುಖ್ಯವಾದವು. ನವಾಬರು ಮುನಿದರೆ ಅದನ್ನು ಚಿತ್ರದಲ್ಲಿ ಮೂಡುವಂತೆ ಮಾಡುತ್ತಿದ್ದರು. ಇದಕ್ಕೆ ಒಂದು ಉದಾಹರಣೆಯಾಗಿ ಮದರಾಸಿನಲ್ಲಿ ನಡೆದ ಯುದ್ಧದ ಸನ್ನಿವೇಶ ನೆನಪಿಗೆ ಬರುತ್ತದೆ. ಇದೇ ಸಂದರ್ಭದಲ್ಲಿ ಹೈದರಾಲಿ ಮದರಾಸಿನಲ್ಲಿ ಬ್ರಿಟಿಷರೊಡನೆ ಕರಾರು ಮಾಡಿಕೊಂಡ ಬಗ್ಗೆ ಒಂದು ಅಣಕ ಚಿತ್ರವನ್ನು ಮದರಾಸಿನ ಕೋಟೆಯ ಬಾಗಿಲಲ್ಲಿ ಚಿತ್ರಿಸಿದ್ದ. ಮದರಾಸು ಗೌರ್ನರ್ ಡ್ಯೂಪ್ಲೆ ಮತ್ತು ಅವನ ಕಡೆಯವರೆಲ್ಲಾ ಒಂದು ಕಡೆ ನಡುಗುತ್ತಿರುವಂತೆಯೂ, ಸೇನಾಧಿಕಾರಿ ಸ್ಮಿತ್ ಕರಾರುಪತ್ರವನ್ನು ಒಂದು ಕೈಲಿ ಹಿಡಿದಿರುವಂತೆಯೂ ಮತ್ತೊಂದು ಕೈಯಲ್ಲಿ ಕತ್ತಿಯನ್ನು ಮುರಿದುಹಾಕುತ್ತಿರುವಂತೆಯೂ ಚಿತ್ರಿಸಲಾಗಿತ್ತು. ಆದರೆ ಈ ಚಿತ್ರ ಈಗ ಇಲ್ಲವಾಗಿದೆ. ಅಂದಿನ ಮಾರ್ಕ್‌ವಿಲ್ಕ್ ಈ ಸಂಗತಿಯನ್ನು ಬರೆದು ತಿಳಿಸದಿದ್ದರೆ ನಮಗೆ ಇದು ಗೊತ್ತಾಗುತ್ತಲೇ ಇರಲಿಲ್ಲ.

ದರಿಯಾದೌಲತ್ ಅರಮನೆ ಹೀಗೆ ಒಂದು ಕಲಾಸಂಗ್ರಹಾಲಯವೂ ಆಗಿದೆ. ೧೯೫೯ರಲ್ಲಿ ಇದನ್ನು ನ್ಯಾಷನಲ್ ಮಾನ್ಯುಮೆಂಟ್ ಎಂದು ಸಾರಲಾಯಿತು. ಹೈದರ್ ಹಾಗೂ ಟಿಪ್ಪುವಿಗೆ ಸೇರಿದ ವರ್ಣಚಿತ್ರಗಳು, ಛಾಯಾಚಿತ್ರಗಳು, ಲಿಥೋ (ಕಲ್ಲಚ್ಚು) ಚಿತ್ರಗಳು ಮತ್ತು ಅವರು ಬಳಸುತ್ತಿದ್ದ ವಸ್ತು ಬಟ್ಟೆಬರೆಗಳನ್ನು ಮೇಲುಮಹಡಿಯಲ್ಲಿ ಜೋಡಿಸಲಾಗಿದೆ.

ಇಲ್ಲಿ ಪ್ರದರ್ಶಿಸಿರುವ ಚಿತ್ರಗಳಲ್ಲಿ ಹುಲಿಯೂರುದುರ್ಗ, ಸಾವನದುರ್ಗ, ರಾಮಗಿರಿ, ತಲಕವಾಡಿ, ಕೃಷ್ಣಗಿರಿ, ಹೊಸೂರುದುರ್ಗ, ನಂದೀದುರ್ಗ, ಓರಿದುರ್ಗ ಮುಂತಾದುವುಗಳ ನಿಸರ್ಗದ ಸೊಬಗನ್ನು ಕಾಣಬಹುದಾಗಿದೆ. ಅಲ್ಲದೆ ಬೆಂಗಳೂರಿನ ಉತ್ತರದ್ವಾರ, ಟಿಪ್ಪುವಿನ ಬೆಂಗಳೂರು ಅರಮನೆ, ಅಂದಿನ ಬೆಂಗಳೂರು, ಬೆಂಗಳೂರಿನ ದಿಲ್ಲಿ ದ್ವಾರದ ಚಿತ್ರಗಳೂ ಮನೋಜ್ಞವಾಗಿವೆ. ಇಷ್ಟೇ ಅಲ್ಲದೆ ಹೈದರಾಲಿ, ಟಿಪ್ಪುವಿನ ಕೊನೆ ಪ್ರಯತ್ನ ಹಾಗೂ ಪತನ,

ಶ್ರೀರಂಗಪಟ್ಟಣದ ಮುತ್ತಿಗೆ, ಟಿಪ್ಪುವಿನ ಇಬ್ಬರು ಮಕ್ಕಳನ್ನು ಬ್ರಿಟಿಷರ ವಶಕ್ಕೆ ಒಪ್ಪಿಸುತ್ತಿರುವುದು ಮುಂತಾದ ಲಿಥೋ ಚಿತ್ರಗಳು ಅಂದಿನ ಪರಿಸರವನ್ನು ಸೂಚಿಸುತ್ತವೆ.

ಬೃಹದಾಕಾರವಾದ ಟಿಪ್ಪುವಿನ ತೈಲವರ್ಣದ ಭಾವಚಿತ್ರ ಪಾಶ್ಚಾತ್ಯ ಕಲಾಶೈಲಿಯಲ್ಲಿದ್ದು ಬಹು ಆಕರ್ಷಕ ವಾಗಿದೆ. ೧೪"-೧೮" ಅಳತೆಯ ೧೬ ರೇಖಾಚಿತ್ರಗಳಿವೆ. ಇವುಗಳಲ್ಲಿ ಟಿಪ್ಪುಕಾಲದ ಕೋಟೆಗಳ ರಕ್ಷಣಾನಾಯಕ ಗುಲಾಮ್ ಆಲಿಖಾನ್, ಮುಮ್ಮಡಿ ಕೃಷ್ಣರಾಜ ಒಡೆಯರ್, ತಾತ ನಂಜರಾಜ, ಟಿಪ್ಪುವಿನ ಹಿರಿಯ ಕಂಚುಕಿ (ದ್ವಾರ ಪಾಲಕ) ಫಿರೋಜ್ ನೂಟ್ ಮತ್ತು ಈತನ ವಕೀಲ ಆಲಿ ರಝಾಖಾನ್, ಧಾರವಾಡ ಕೋಟೆಯ ಸೈನ್ಯಾಧಿಕಾರಿ ಬದ್ರೂಸ್ ಜಮಾನ್‌ಖಾನ್, ಟಿಪ್ಪುವಿನ ಮಿತ್ರ ರಾಜಾಖಾನ್ ಮತ್ತು ಇವನ ದಿವಾನ ಗುಲಾಮ್ ಅಲಿಖಾನ್, ಇವರಲ್ಲದೆ ಟಿಪ್ಪುವಿನ ಏಳು ಜನ ಗಂಡುಮಕ್ಕಳ ಚಿತ್ರಗಳನ್ನೂ ಇಲ್ಲಿ ಪ್ರದರ್ಶಿಸಲಾಗಿದೆ.

ದರಿಯಾದೌಲತ್ ಅರಮನೆ ಕಲಾಕೃತಿಗಳ ಆಗರವಾಗಿದ್ದು, ಇಂದಿಗೂ ಟಿಪ್ಪುವಿನ ಕಲಾಪ್ರಿಯತೆಯನ್ನು ಮೆಚ್ಚುವಂತಿದೆ. ಕಟ್ಟಡದ ಭಾಗಗಳನ್ನೆಲ್ಲಾ ಮುಚ್ಚುವಂತೆ ಬಹು ವಿಶಾಲವಾಗಿ ಚಿತ್ರಿಸಿರುವುದನ್ನು ಕನ್ನಡನಾಡಿನಲ್ಲಿ ಮತ್ತೆಲ್ಲೂ ಕಾಣಲಾರೆವು. ಬೆಂಗಳೂರಿನ ಟಿಪ್ಪು ಅರಮನೆಯಲ್ಲೂ ಚಿತ್ರಗಳಿದ್ದ ಗುರುತುಗಳಿವೆ. ಇದೇ ಕಾಲಕ್ಕೆ ಬಹುಶಃ ಸೇರಿರಬಹುದಾದ ಸೀಬಿಯ ನರಸಿಂಹಸ್ವಾಮಿ ದೇವಾಲಯದ ಮುಖಮಂಟಪ ಮತ್ತು ಮಹಾದ್ವಾರಗಳ ಅಂಕಣ ಗಳಲ್ಲಿರುವ ವರ್ಣಚಿತ್ರಗಳು ಮೋಹಕವಾದವು. ಶಿವಲೀಲೆಗಳು, ವಿಷ್ಣುವಿನ ದಶಾವತಾರಗಳು, ರಾಮಾಯಣ ಮಹಾ ಭಾರತದ ಕೆಲವು ಮುಖ್ಯ ಘಟನೆಗಳು, ವಿಶ್ವರೂಪದರ್ಶನ ಮೊದಲಾದುವು ಮುಖಮಂಟಪದಲ್ಲೂ ನರಸಿಂಹ ಚೆಂಚುಲಕ್ಷ್ಮಿಯರ ಕಥೆ, ಗೋವರ್ಧನೋದ್ಧರಣಗಳು ಮಹಾದ್ವಾರದಲ್ಲೂ ಇವೆ. ಇವುಗಳ ಜೊತೆಗೆ ಟಿಪ್ಪುವಿನ, ಅವನ ಕಾಲದಲ್ಲಿದ್ದ ಮಹಮದೀಯ ಹಾಗೂ ಹಿಂದೂ ಗಣ್ಯರ ಚಿತ್ರಗಳನ್ನು, ಸೈನ್ಯಗಳನ್ನು ಒಂದೆಡೆ ಚಿತ್ರಿಸಲಾಗಿದೆ.

ಕರ್ನಾಟಕದ ಉಳಿದ ಭಾಗಗಳಲ್ಲಿ ಶ್ರೀಮಂತ ರಾಜವಾಡೆಗಳಲ್ಲಿ ಚಿತ್ರಗಳನ್ನು ಬರೆಸುತ್ತಿದ್ದುದು ಕಾಣಬರುತ್ತದೆ. ಅಥಣಿಯ ವೀರಶೈವಮಠ, ನಿಪ್ಪಾಣಿಯ ರಾಜವಾಡೆ ಮತ್ತು ಕರವಾಡೆ, ನರಗುಂದದ ಕೋಟೆಯೊಳಗಿನ ವೆಂಕಟೇಶ್ವರ ಗುಡಿ ಹಾಗೂ ಅರಮನೆ, ಕೊಡಗಿನ ಕೋಟೆಯೊಳಗಿನ ರಾಜನ ಅರಮನೆ ಇವುಗಳಲ್ಲಿ ಕೆಲವು ರೀತಿಯ ಭಿತ್ತಿಚಿತ್ರಗಳು ಅರೆಬರೆಯಾಗಿ ಉಳಿದಿರುವುದು ಕಂಡುಬರುತ್ತದೆ.

ಮೈಸೂರು ಅರಸರ ಕಾಲದಲ್ಲಿ ವರ್ಣಕಲೆಗೆ ಹೆಚ್ಚು ಪ್ರೋತ್ಸಾಹ ಹಾಗೂ ಪುರಸ್ಕಾರ ದೊರೆತಿವೆ. ಇಂಥ ಪ್ರೋತ್ಸಾಹಕರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಮುಖರು. ಟಿಪ್ಪುವಿನಕಾಲದ ಚಿತ್ರಣ ರೀತಿ ಇವರ ಕಾಲದಲ್ಲಿ ಮುಂದುವರಿಯಿತೆನ್ನಬಹುದು. ಮುಮ್ಮಡಿಯವರು ತಮ್ಮ ಪಿತೃಗಳಾದ ಚಾಮರಾಜ ಒಡೆಯರ ಹೆಸರಿನಲ್ಲಿ ಚಾಮರಾಜ ನಗರದಲ್ಲಿ ೧೮೮೦ರಲ್ಲಿ ಕಟ್ಟಿಸಿದ ಚಾಮರಾಜೇಶ್ವರ ಗುಡಿಯ ಜನ್ಮಮಂಟಪದ ಅನೇಕ ಭಿತ್ತಿಚಿತ್ರಗಳು ಇವರ ಉನ್ನತ ಕಲಾದೃಷ್ಟಿಯನ್ನು ಸಾರುತ್ತವೆ. ಇವು ಹದಿನೆಂಟನೇ ಶತಮಾನದವು. ಮೈಸೂರಿನ ವೆಂಕಟರಮಣಸ್ವಾಮಿ ದೇವಾಲಯ ದಲ್ಲಿ ಪೌರಾಣಿಕ ಚಿತ್ರಗಳೂ, ಪ್ರಕೃತಿ ಚಿತ್ರಗಳೂ, ಅಂದಿನ ಕೆಲವು ರಾಜರುಗಳು, ಪೂರ್ಣಯ್ಯ, ಸುಬ್ಬರಾಯದಾಸ ಮುಂತಾದವರ ರೂಪಚಿತ್ರಗಳೂ ಇವೆ. ತಲಕಾಡಿನ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ಶೈವಚಿತ್ರಗಳಿಂದ ತುಂಬಿದ ಚಿತ್ರಮಂಟಪವೂ ಇದೆ. ಇದೇ ಕಾಲದ ಶ್ರವಣಬೆಳಗೊಳದ ಜೈನಮಠದಲ್ಲಿ ಜೈನರ ಚಕ್ರವರ್ತಿಗಳ ಜೀವನವನ್ನು ಚಿತ್ರಿಸುವ ಭಿತ್ತಿಚಿತ್ರಗಳು ಇವೆ. ತೀರ್ಥಂಕರರು, ಪಾರ್ಶ್ವನಾಥನ ಸಮವಸರಣ, ಯಕ್ಷ ಯಕ್ಷಿಯರು ಪಂಚಪರಮೇಷ್ಠಿಗಳು. ಭರತಚಕ್ರವರ್ತಿಯ ಜೀವನ ಚಿತ್ರ ಮುಂತಾದವು ಅಪರೂಪವಾದವುಗಳು. ಇಲ್ಲಿ ಕಾನನದ ನಿಸರ್ಗ ದೃಶ್ಯ ಸೊಗಸಾಗಿ ಮೂಡಿಬಂದಿದೆ. ಇಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ರೂಪಚಿತ್ರ ನೋಡುವುದೊಂದು ಹೆಮ್ಮೆಯ ಸಂಗತಿ.

ಮೈಸೂರು ಪ್ರಭುಗಳ ಕಲಾಪ್ರೇಮದಿಂದ ಉಳಿದಿರುವ ಕನ್ನಡದ ಅಪೂರ್ವ ಕಲಾಕೃತಿಗಳಲ್ಲಿ "ಶ್ರೀತತ್ತ್ವನಿಧಿ" ಎಂಬ ಬೃಹತ್‌ಗ್ರಂಥವೂ ಒಂದು. ಇದರಲ್ಲಿ ಸಾವಿರಾರು ವರ್ಣರಂಜಿತ ಚಿತ್ರಗಳಿವೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರು ಧ್ಯಾನಶ್ಲೋಕಗಳಿಗೆ ಅನುಸಾರವಾಗಿ ಸುಂದರ ಚಿತ್ರಗಳನ್ನು ಬರೆದು 'ಶ್ರೀತತ್ತ್ವನಿಧಿ' ಎಂದು ಸಚಿತ್ರಗೊಳಿ ಸಿದ ಕಲಾಕೋವಿದರು ಮುಮ್ಮಡಿಯವರೇ ಎಂದಿದೆ. ಇಂಥ ಪ್ರತಿಗಳು ಎರಡಿವೆ. ಚಿತ್ರಕಾರರು ಮುಮ್ಮಡಿಯವ ರಾಗಿರಲಿಕ್ಕಿಲ್ಲವೆಂದು ಅನಿಸುತ್ತದೆ. ಆದರೆ ಆ ಸಚಿತ್ರ ಅಪೂರ್ವ ಗ್ರಂಥರಚನಾಪ್ರೋತ್ಸಾಹಕ್ಕಾಗಿ ಆ ಪ್ರಭುಗಳ ಕಲಾಭಿರುಚಿಗೆ ಕನ್ನಡಿಗರು ಋಣಿಗಳಾಗಿರಬೇಕು.

'ಶ್ರೀ ತತ್ತ್ವನಿಧಿ' ಗ್ರಂಥಗಳಲ್ಲಿ ಸಾಹಿತ್ಯದ ಜೊತೆಗೆ ಚಿತ್ರಗಳನ್ನು ಬಹು ಜಾಣ್ಮೆಯಿಂದ ಚಿತ್ರಿಸಲಾಗಿದೆ.

ಒಂದು ಸಾವಿರದ ನೂರರವತ್ತು ಪುಟಗಳ ಹೆಬ್ಬೊತ್ತಿಗೆ ಇದು. ಇಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ. ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ, ಕೌತುಕನಿಧಿ ಎಂದು ಒಂಬತ್ತು ದಳಗಳಿವೆ. ಶಕ್ತಿನಿಧಿಯಲ್ಲಿ ಶ್ರೀ ಚಾಮುಂಡೇಶ್ವರಿಯ ಸುವರ್ಣರಂಜಿತ ಚಿತ್ರ ಸೊಗಸಾಗಿದೆ. ವಿಷ್ಣುನಿಧಿಯಲ್ಲಿ ವಿರಾಟ್ಪುರುಷನ ಧ್ಯಾನ ಮತ್ತು ಸ್ವರೂಪಕ್ಕೆ ಪ್ರಥಮಸ್ಥಾನ, ವಿಷ್ಣುದೇವರಿಗೆ ಸಂಬಂಧಪಟ್ಟ ಚಿತ್ರಗಳೇ ಇಲ್ಲಿ ಹೆಚ್ಚು. ಅಷ್ಟಮುಖ ಗಂಡಭೇರುಂಡ, ಗೃಹಸಿಂಹ, ಶೇಷಶಾಯಿ, ತಾರಕರಾಮ,ಪಟ್ಟಾಭಿರಾಮ, ದಶಾವತಾರ, ಅಲ್ಲದೆ ಮುದ್ದುಬಾಲಕೃಷ್ಣ,ವೇಣುಗೋಪಾಲ, ವಟಪತ್ರಶಾಯಿ, ಮುಕುಂದ, ಈ ಎಲ್ಲರನ್ನೂ ಸಹಜವಾದ ರೂಪ, ವೇಷ, ಭೂಷಣ, ಮುಖಮುದ್ರೆಯಿಂದ ಚಿತ್ರಿಸ ಲಾಗಿದೆ. ೧೨೨ ಸುವರ್ಣರಂಜಿತ ಚಿತ್ರಗಳಿವೆ—ಈ ವಿಷ್ಣುನಿಧಿಯಲ್ಲಿ, ಶಿವನಿಧಿಯಲ್ಲಿ ಕೈಲಾಸಮೂರ್ತಿಯ ವಿವಿಧ ಭಂಗಿಗಳು, ಗಣೇಶ್ವರನ ಕೆಲವು ನಾಮರೂಪಗಳು ಕುಮಾರಸ್ವಾಮಿ, ವೀರಭದ್ರ, ಅಘೋರ ವೀರಭದ್ರ—ಇವೇ ಮೊದಲಾದ ಶಿವಸಂಬಂಧ ಚಿತ್ರಗಳೂ ಇವೆ. ಕೊನೆಯಲ್ಲಿ ವಿಶ್ವೇಶ್ವರನ ಚಿತ್ರವೂ ಇದೆ. ಒಟ್ಟು ೧೯೫ ಚಿತ್ರಗಳು ಶಿವನಿಧಿಯಲ್ಲಿವೆ. ಬ್ರಹ್ಮನಿಧಿಯಲ್ಲಿ ಬ್ರಹ್ಮಲೋಕದ ಚಿತ್ರಗಳು ಹೆಚ್ಚಾಗಿವೆ. ಚತುರ್ಮುಖ ಬ್ರಹ್ಮನ ಸ್ವರೂಪದ ಚಿತ್ರ, ಸರಸ್ವತಿ-ಬ್ರಹ್ಮರು, ಸಪ್ತಋಷಿಗಳು, ಅಷ್ಟನದಿಗಳು, ಚತುರ್ದಶಲೋಕಗಳು ಮತ್ತು ಇಂದ್ರರು, ಅಷ್ಟವಸು ಗಳು, ಸಪ್ತಮಾರುತರು, ಅಷ್ಟದಿಕ್ಕುಗಳ ಪಾಲಕರು, ಗಜನಾಗಗಳು, ವೇದಗಳ ಸ್ವರೂಪ ಮತ್ತು ಅಭಿಮಾನಿದೇವತೆ ಗಳು, ವೇದವೇದಾಂಗಶಾಸ್ತ್ರ, ಧರ್ಮಪೌರಾಣಿಗಳ ಸ್ವರೂಪ ಮತ್ತು ದೇವತೆಗಳ ಬಗೆಬಗೆಯ ಆಯುಧೋಪಕರಣಗಳ ಹೆಸರು ಮತ್ತು ಚಿತ್ರ. ಇಷ್ಟೇ ಅಲ್ಲದೆ ಸಂಗೀತದ ಸಪ್ತಸ್ವರಗಳು ಮತ್ತು ಮೂವತ್ತಾರು ರಾಗಗಳ ಲಕ್ಷಣ ಮತ್ತು ಬಣ್ಣನೆಯ, ಧ್ರುವಾದಿ ಸಪ್ತತಾಳಗಳ ಸ್ವರೂಪದ ಚಿತ್ರಗಳು ಅಮೋಘವಾದುವು. 'ಗ್ರಹನಿಧಿ'ಯು ಜ್ಯೋತಿಶ್ಶಾಸ್ತ್ರದ ನಿಘಂಟುವಿದ್ದಂತಿದೆ. ಕಾಲಪುರುಷ, ಯುಗಗಳು ಮನ್ವಂತರಗಳು, ಅರುವತ್ತುವರುಷಗಳು, ಅಯನ, ಋತು, ಮಾಸ, ಪಕ್ಷ, ತಿಥಿ, ವಾರ, ಗ್ರಹ, ರಾಶಿ, ನಕ್ಷತ್ರ ಪ್ರತಿಯೊಂದಕ್ಕೂ ಸ್ವರೂಪಚಿತ್ರ ಮತ್ತು ಅಭಿಮಾನದೇವತೆಯ ಚಿತ್ರಗಳು ; ಜೊತೆಗೆ ಮೃಗಪಕ್ಷಿ ಜಲಜಂತು, ಕ್ರಿಮಿಕೀಟಾದಿ ಜೀವಗಳು ಮತ್ತು ಅವುಗಳ ಹೆಸರುಗಳಿವೆ. ಈ ಭಾಗದಲ್ಲಿ ಒಟ್ಟು ೯೫೦ ಚಿತ್ರಗಳಿವೆ. ಬರೀ ರೇಖಾಚಿತ್ರಗಳ 'ವೈಷ್ಣವನಿಧಿ'ಯಲ್ಲಿ ೨೬ ಭಾಷ್ಯಕಾರರು ಮತ್ತು ಆಳ್ವಾರುಗಳು ಇದ್ದಾರೆ. 'ಶೈವನಿಧಿ'ಯಲ್ಲಿ ಲಿಂಗಗಳ, ಯೋಗಾಸನಗಳ ೨೨೯ ಚಿತ್ರಗಳಿವೆ. 'ಆಗಮನಿಧಿ'ಯಲ್ಲಿ ೫೨೯ ಚಿತ್ರಗಳೂ 'ಕೌತುಕನಿಧಿ' ಯಲ್ಲಿ ೪೮ ಚತುರಂಗವೂ ಇವೆ.

ಒಟ್ಟು ೧೮೮೮ ವರ್ಣರಂಜಿತ ಚಿತ್ರಗಳೂ ೪೫೮ ರೇಖಾಚಿತ್ರಗಳೂ ಅಪೂರ್ವವೆನಿಸಿವೆ. ಇಲ್ಲಿನ ಚಿತ್ರಗಳ ಹಿನ್ನೆಲೆ ಯಲ್ಲಿ ಬಳಸಿರುವ ಹಾಳತ ಬಣ್ಣ, ವರ್ಣಗಳ ಸಮ್ಮಿಳ್ವ, ತೆಳುವರ್ಣ, ದಪ್ಪವರ್ಣಗಳ ಬಳಕೆ ರೇಖಾವಿನ್ಯಾಸ ಮೆಚ್ಚು ವಂತಹವು. ಇಂಥ ಚಿತ್ರಗಳ ನಿಧಿಗ್ರಂಥಗಳು ಎರಡಿವೆ. ಒಂದು ಅರಮನೆಯಲ್ಲೂ ಮತ್ತೊಂದು ಮೈಸೂರು ವಿಶ್ವ ವಿದ್ಯಾನಿಲಯದ ಪ್ರಾಚ್ಯಸಂಶೋಧನಾಲಯದಲ್ಲೂ ಇವೆ. ಈ ಕೃತಿಗಳು ಕನ್ನಡಿಗರ ಕಲಾರತ್ನಗಳಾಗಿ ಉಳಿದು ಕಲಾವಿದರ ಜಾಣ್ಮೆಯನ್ನೂ ರಾಜರ ಕಲಾದೃಷ್ಟಿಯನ್ನೂ ಸಾರುತ್ತಿವೆ.

೧೮೬೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಜಗನ್ಮೋಹನ ಅರಮನೆಯನ್ನು ಕಟ್ಟಿಸಲು ಮೊದಲು ಮಾಡಿದರು. ೧೮೭೫ರ ವೇಳೆಗೆ ಅದು ಚಿತ್ರಶಾಲೆಯಾಗಿ ಪರಿವರ್ತನೆಗೊಂಡಿತು. ಈ ಕಲಾಸಂಗ್ರಹಾಲಯ ದಲ್ಲಿ ಕೆಲವು ಭಿತ್ತಿಚಿತ್ರಗಳಿವೆ. ೧೮ನೇ ಶತಮಾನದ ಕಲಾವಿದರು ಬರೆದ ಭಿತ್ತಿಚಿತ್ರಗಳಲ್ಲಿ ಮುಮ್ಮಡಿಯವರ ವಂಶ ವೃಕ್ಷ, ಮೈಸೂರು ಅರಸರ ವಂಶಾವಳಿಯನ್ನು ತೋರುವ ಸಂತಾನಾಂಬುಜ, ರಾಜರು ಆನೆಗಳನ್ನು ಕಟ್ಟಿರುವ ರಥದಲ್ಲಿ ಜಂಬೂಸವಾರಿ ಹೊರಟಿರುವ ಚಿತ್ರಗಳು ಸೊಗಸಾಗಿವೆ. ಇಷ್ಟೇ ಅಲ್ಲದೆ ಕೊತ್ತಗಾಲ ಕಿತ್ತೂರುಗಳಲ್ಲಿ ಮುಮ್ಮಡಿ ಯವರು ಮೆರೆದ ಹುಲಿಶಿಕಾರಿ, ಕೆಂಪನಂಜಯ್ಯನೆಂಬ ಪಟ್ಟದಾನೆಯನ್ನು ಚಾಮರಾಜನಗರದ ಕಾಡಿನಲ್ಲಿ ಹಿಡಿದು ತಂದ ದೃಶ್ಯ ಇವೂ ಇಲ್ಲಿವೆ. ಪ್ರಸನ್ನಪಾರ್ವತಿ, ದುರದುಂಡಿ, ಸರ್ವಮಂಗಳ, ಜಗದಂಬ, ಪುಟ್ಟಚಾಮುಂಡಿ, ವರ ಚಾಮುಂಡಿ, ಚೆಲುವೆ, ಚಾಮುಂಡಿಯರೆಂಬ ಪಟ್ಟದ ಹಸುಗಳು ; ವಿಜಯ ಎಂಬ ಪಟ್ಟದ ಕುದುರೆ ; ಸರ್ವಚಿತ್ತರಂಜಿನಿ, ಸರ್ವಾಂಗಸುಂದರಿ ಎಂಬ ಮೋಹಕ ಕನ್ಯೆಯರು ಚಿತ್ರಿತರಾಗಿದ್ದಾರೆ. ಮತ್ತೊಂದು ಭಿತ್ತಿಯಲ್ಲಿ ಮುಮ್ಮಡಿಯವರ ಸಮಕಾಲೀನ ನವಾಬರ ಭಕಿಗಳ, ಪರಿವಾರದವರ ರೂಪಚಿತ್ರಗಳನ್ನು ಚಿತ್ರಿಸಲಾಗಿದೆ. ಮುಮ್ಮಡಿಯವರ ನೋಟ, ಚದುರಂಗದಾಟ ಮುಂತಾದವನ್ನು ಬಹುಸೊಗಸಾಗಿ ಬಿಡಿಸಲಾಗಿದೆ. ೧೮೨೯ರಲ್ಲಿ ಶಿಕಾರಿಪುರದ ತಿಪ್ಪಯ್ಯ ಬರೆದ ಭೀಷ್ಮಾರ್ಜುನರ ಯುದ್ಧದ ಸುಂದರ ರೇಖಾಚಿತ್ರವೂ ಇಲ್ಲಿದೆ. ಈ ಅರಸರ ಕಾಲದಲ್ಲಿ ವೀರಣ್ಣ, ಯಲ್ಲಪ್ಪ, ಬಸಣ್ಣ ಮುಂತಾದ ಕಲಾವಿದರಿದ್ದರೆಂದು ವ್ಯಕ್ತವಾಗುತ್ತದೆ.

ಚಾಮರಾಜ ಒಡೆಯರ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೂ ಪ್ರಾಚೀನ ಸಂಪ್ರದಾಯದ ವರ್ಣಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆತಿದೆ. ಈ ಅರಸರ ಕಾಲದಲ್ಲಿ ಬೆಳೆದ ಮೈಸೂರು ದೇಶೀಯರ ಶೈಲಿಯ ಅನೇಕ ಅಪೂರ್ವ ಚಿತ್ರಪಟಗಳು ಮನೆಮನೆಗಳಲ್ಲೂ, ರಾಮಮಂದಿರಗಳಲ್ಲೂ, ಅರಮನೆ ಗುರುಮನೆಗಳಲ್ಲೂ ದೊರೆಯುತ್ತವೆ. ಈ ಕಲಾಸಂಪ್ರದಾಯವನ್ನು ಇನ್ನೂ ಉಳಿಸಿಕೊಂಡು ಬಂದಿರುವ ಕಲಾವಿದರು ಎಲ್ಲೋ ಅಪರೂಪವಾಗಿ ದೊರೆಯುತ್ತಾರೆ. ಕಾಗದದ ಮೇಲೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜಮಹಾರಾಜರ ರೂಪಚಿತ್ರಗಳನ್ನೂ ದೇವದೇವತೆಗಳ ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಸಂಯೋಜನಾ ಚಿತ್ರಗಳನ್ನು ರಚಿಸುವುದು ಈ ಸಂಪ್ರದಾಯದಲ್ಲಿ ವಿಶೇಷ. ಸುವರ್ಣಲೇಪನದ ಹಾಗೂ ದೇಶೀಯ ಮೂಲವರ್ಣಗಳ ಉಪಯೋಗ ಕಾಣುತ್ತದೆ. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿಕೊಂಡು ಅನಂತರ ವರ್ಣಗಳನ್ನು ಹಾಕಿ, ಅಲಂಕಾರವೈಖರಿ ತರುವೆಡೆಗಳಲ್ಲೆಲ್ಲಾ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು, ಅದರ ಮೇಲೆ ವಜ್ರದ ಅಂಟನ್ನು ಸವರಿ, ಅದರ ಮೇಲೆ ಚಿನ್ನದ ರೇಖೆಯನ್ನು ಲೇಪಿಸುವುದು ; ಬೂಟ ಕುಸುರಿನ ಕೆಲಸಮಾಡುವಾಗ ವಿವಿಧ ವರ್ಣಗಳನ್ನು ಬಳಸಿ ಆಯಾ ಭಾಗಗಳಿಗೆ ಸುವರ್ಣರೇಖುವಿನ ಲೇಪನಮಾಡುವುದು—ಇಲ್ಲಿಯ ತಂತ್ರ. ಕೃತಿಗಳು, ಪೂಜಾಚಿತ್ರಗಳಾದುದರಿಂದ ಚಿತ್ರಕಾರರ ಹೆಸರು ಇವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ.

ಭಾರತ ಪಾಶ್ಚಿಮಾತ್ಯರ ಆಳ್ವಿಕೆಗೆ ವಶವಾದಮೇಲೆ ಭಾರತೀಯಪದ್ಧತಿಯ ಚಿತ್ರಕಲೆಗೆ ಅಪಾರ ಪೆಟ್ಟುಬಿದ್ದಿತು. ಅವರ ದೃಷ್ಟಿಕೋನದ ನೆಳಲಲ್ಲಿ ಮುಂಬಯಿ, ಕಲ್ಕತ್ತ, ಮದರಾಸು, ಮೈಸೂರು ಮುಂತಾದ ಕಡೆ ಕಲಾಶಾಲೆಗಳು ತಲೆ ಎತ್ತಿಕೊಂಡವು. ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರಕಲಾಸಂಪ್ರದಾಯದ ಚಿತ್ರಕಾರರೂ ಬೆಳೆದುಬಂದರು. ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆ ಸಾವಿರಾರು ಚಿತ್ರಕಾರರನ್ನು ಬೆಳಕಿಗೆ ತಂದಿತು. ಇದರಲ್ಲಿ ಕನ್ನಡಿಗರದು ಸಿಂಹಪಾಲು. ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಕರ್ನಾಟಕದಲ್ಲೂ ಕಾಣಿಸಿಕೊಳ್ಳಲಾರಂಭಿಸಿತು.

೧೯೨೦ನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಚಿತ್ರಕಲಾರಂಗದಲ್ಲಿ ಬೆಳೆದ ಅನೇಕ ಸಂಪ್ರದಾಯಗಳನ್ನು ಅನುಸರಿಸುವ ಅವೇ ತಂತ್ರಗಳನ್ನು ಉಪಯೋಗಿಸಿ ದೇಶೀವಸ್ತುಗಳನ್ನು ಪ್ರತಿಪಾದಿಸುವ ಪಂಥಗಳೂ ಕರ್ನಾಟಕದಲ್ಲಿ ಕಾಣಿಸಿಕೊಂಡಿವೆ. ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ಈ ಆಧುನಿಕಯುಗ ಸಂಕೀರ್ಣತೆಯ ಕಾಲ. ಪಾಶ್ಚಿಮಾತ್ಯರಲ್ಲಿ ಬೆಳೆದ ವೈವಿಧ್ಯಮಯವಾದ ಚಿತ್ರರಚನಾತಂತ್ರಗಳು, ತತ್ಸಂಬಂಧದ ಅನೇಕ ರೀತಿಯ ಹಿನ್ನೆಲೆಯ ವಸ್ತುಗಳು ಮತ್ತು ಕೃತಕವರ್ಣಗಳು—ಇವುಗಳನ್ನು ಬಳಸುವುದು ಈ ಕಾಲದಲ್ಲಿ ಕಂಡುಬಂದ ಮುಖ್ಯ ಬದಲಾವಣೆ. ಪ್ರಾಚೀನ ಚಿತ್ರಕಲೆ ಹೆಚ್ಚುಮಟ್ಟಿಗೆ ಧಾರ್ಮಿಕವಸ್ತುಗಳನ್ನು ಅಭಿವ್ಯಕ್ತಗೊಳಿಸುತ್ತಿದ್ದರೆ ಈ ಕಾಲದಲ್ಲಿ ಅನೇಕ ಲೌಕಿಕಸನ್ನಿವೇಶಗಳನ್ನು ಮತ್ತು ಭಾವನೆಗಳನ್ನು ರೂಪಿಸುವುದು ಮತ್ತೊಂದು ಪ್ರಮುಖ ವ್ಯತ್ಯಾಸ. ೧೮ನೇ ಶತಮಾನದಿಂದ ಸುಮಾರು ನಾಲ್ಕು ಶತಮಾನಗಳ ಕಾಲ ಚಿತ್ರಕಲೆಯ ಪ್ರಗತಿ ನಿಂತುಹೋಯಿತು. ೧೮೪೪ರಲ್ಲಿ ಮೇಜರ್‌ಗಿಲ್, ೧೮೭೫ರಲ್ಲಿ ಗ್ರಿಫಿತ್ಸ್, ೧೯೦೯ರಲ್ಲಿ ಲೇಡಿ ಹೆರಿಂಗ್ಹ್ಯಾಮ್ ಅವರು ಚಿತ್ರಕಾರರ ತಂಡದೊಂದಿಗೆ ಅಜಂತಾಗೆ ಹೋಗಿ ಕೃತಿಗಳ ನಕಲು ಮಾಡುವುದರಿಂದ ಮತ್ತೆ ಕರ್ನಾಟಕ ಚಿತ್ರಕಲೆ ತಲೆ ಎತ್ತುವಂತಾಯಿತು. ನಿವೇದಿತ ಭಾರತೀಯ ಚಿತ್ರಕಲೆಗೆ ಹೊಸ ದೃಷ್ಟಿಕೊಟ್ಟವರಲ್ಲಿ ಪ್ರಥಮರು. ೧೮೯೬ರಲ್ಲಿ ಕಲ್ಕತ್ತೆಯ ಕಲಾಶಾಲೆ ಪ್ರಾರಂಭವಾಗಿ ಇ. ಬಿ. ಹ್ಯಾವೆಲ್‌ರು ನಮ್ಮ ಚಿತ್ರಗಾರರ ಅನುಕರಣ ಮನೋವೃತ್ತಿಯನ್ನು ಖಂಡಿಸಿ ಇವರಿಗೆ ನಮ್ಮ ಪರಂಪರೆಗೆ ದರ್ಶನ ಮಾಡಿಸಿಕೊಟ್ಟರು. ಅವರ ನೆರವಿನಿಂದ ಅವನೀಂದ್ರನಾಥ ಠಾಕೂರರು ನೂತನ ಸಂಪ್ರದಾಯವನ್ನು ಪ್ರಾರಂಭಿಸಿದರು. ಇವರ ಶಿಷ್ಯ ನಂದಲಾಲ ಮುಂತಾದವರು ನಮ್ಮ ಚಿತ್ರಕಲೆಗೆ ನಾವೀನ್ಯವನ್ನು ಬೆಳೆಸಿಕೊಟ್ಟರು. ನಂತರ ಅದು ಜನಪದ ಕಲೆಯನ್ನು ಮೈಗೂಡಿಸಿಕೊಂಡು ಬೆಳೆಯಿತು. ಈ ಅನುಕರಣಗಳ ಜೊತೆಗೆ ಬಂಗಾಳದಲ್ಲಿ ಅವನೀಂದ್ರನಾಥ ಠಾಕೂರ್ ಮೊದಲಾದವರಿಂದ ನಿರ್ಮಿತವಾದ ದೇಶೀಪ್ರತಿಕ್ರಿಯೆಯ ಧಾಟಿ ಕರ್ನಾಟಕದಲ್ಲೂ ಕಾಣಿಸಿಕೊಂಡಿತು. ಈ ವಿವಿಧ ಧಾಟಿಗಳಲ್ಲಿ ಚಿತ್ರರಚನೆ ಮಾಡಿರುವ ಮತ್ತು ಮಾಡುತ್ತಿರುವ ಕಲಾಕಾರರು ಕರ್ನಾಟಕದ ಕಲಾಸಂಪತ್ತನ್ನು ಸುಪುಷ್ಟಗೊಳಿಸಿದ್ದಾರೆ. ದಿ॥ ಕೆ. ವೆಂಕಟಪ್ಪನವರು ಕರ್ನಾಟಕದಲ್ಲಿ ಏಕೆ ಭಾರತದಲ್ಲಿಯೇ ಅಗ್ರಗಣ್ಯಸ್ಥಾನ ಪಡೆದರು. ಕೆ.ಕೆ. ಹೆಬ್ಬಾರರು ಕ್ರಮಬದ್ಧವಾದ ಸಂಪ್ರದಾಯಕಲೆಯಲ್ಲಿ ಅಭ್ಯಾಸ ಮಾಡಿದವರಾದರೂ ಕ್ರಮೇಣ ತಮ್ಮ ಕಲೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆಯುತ್ತಾಬಂದಿದ್ದು ಹೊಸ ಸಂಪ್ರದಾಯದ ಪ್ರಮುಖರಲ್ಲಿ ಒಬ್ಬರೆಂದು ಖ್ಯಾತಿಗಳಿಸಿದ್ದಾರೆ. ಭಾರತೀಯ ವಸ್ತುನಿಷ್ಠೆ ಇವರ ಕೃತಿಗಳಲ್ಲಿ ಎದ್ದುತೋರುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ಚಿತ್ರಕಲೆ ಮತ್ತಷ್ಟು ಬೆಳೆಯಿತು. ಇವರ ಕಾಲದಲ್ಲಿ ಕೇರಳದ

ಪ್ರಖ್ಯಾತ ಕಲಾವಿದ ರಾಜಾರವಿವರ್ಮರು ಮೈಸೂರು ಅರಮನೆಯ ಆಶ್ರಯದಲ್ಲಿದ್ದು ಕೆಲವು ತೈಲಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಇವು ಜಗನ್ಮೋಹನ ಚಿತ್ರಶಾಲೆ(ಈಗ ಜಯಚಾಮರಾಜೇಂದ್ರ ಚಿತ್ರಶಾಲೆ)ಯಲ್ಲಿವೆ. ಈ ಎಲ್ಲ ಕೃತಿಗಳೂ ಶುದ್ಧ ಪಾಶ್ಚಾತ್ಯ ತಂತ್ರದಲ್ಲಿವೆ. ವೆಂಕಟಪ್ಪ, ಕೇಶವಯ್ಯ, ಅಜೀಜ್, ಎಸ್. ನಂಜುಂಡಸ್ವಾಮಿ, ಸಿದ್ಧಲಿಂಗ ಸ್ವಾಮಿ, ಮೊದಲಾದವರಿಂದ ಅನೇಕ ಚಿತ್ರಗಳನ್ನು ನಾಲ್ವಡಿಯವರು ಪ್ರೋತ್ಸಾಹಿಸಿದರು. ಅರಮನೆಯ ಕಲ್ಯಾಣ ಮಂಟಪದಲ್ಲಿರುವ ರಾಜರ ದಸರಾ ಮೆರವಣಿಗೆಯ ಬೃಹದಾಕಾರದ ತೈಲವರ್ಣ ಚಿತ್ರಣಗಳನ್ನು ಪಾಶ್ಚಿಮಾತ್ಯ ಶೈಲಿಯಲ್ಲಿ ನಂಜುಂಡಸ್ವಾಮಿ, ನಾಗರಾಜು, ಸುಬ್ರಹ್ಮಣ್ಯರಾಜು, ಎಸ್. ಆರ್. ಅಯ್ಯಂಗಾರ್ ಮತ್ತು ಶಂಕರರಾಜು ಮುಂತಾದ ಕಲಾವಿದರಿಂದ ರಚಿಸಲು ಪ್ರೋತ್ಸಾಹವಿತ್ತರು—ಇವರ ಕಾಲದಲ್ಲಿ ಮೈಸೂರು ದಸರಾವಸ್ತುಪ್ರದರ್ಶನಕ್ಕೆ ಬರುವ ಕಲಾಕೃತಿಗಳಲ್ಲಿ ಉತ್ತಮವೆಂದು ತೋರುವ ಚಿತ್ರಗಳನ್ನು ಕೊಂಡು ಜಗನ್ಮೋಹನ ಚಿತ್ರಶಾಲೆಗೆ ಸೇರಿಸುತ್ತಾ ಬಂದರು. ಈ ಪ್ರಭುಗಳ ಕಾಲದಲ್ಲಿ ಕನ್ನಡನಾಡಿನ ಕಲಾಪ್ರೋತ್ಸಾಹದ ಸಲುವಾಗಿ ಮೈಸೂರಿನಲ್ಲಿ ೧೯೧೩ರಲ್ಲಿ ಚಾಮರಾಜ ಒಡೆಯರ ಸವಿನೆನಪಿನಲ್ಲಿ ಒಂದು ಕಲಾಶಾಲೆಯನ್ನು ತೆರೆಯಲಾಯಿತು. ಕಲಾಶಾಲೆಯ ಕಟ್ಟಡದ ಶಂಕುಸ್ಥಾಪನೆಯನ್ನು ಜಾರ್ಜ್ ಚಕ್ರವರ್ತಿಗಳು ನೆರವೇರಿಸಿದರು. ಈ ಕಲಾಶಾಲೆ ಎಸ್. ನಂಜುಂಡಸ್ವಾಮಿ, ಕೆ. ವೆಂಕಟಪ್ಪ, ಎಸ್. ಎನ್. ಸ್ವಾಮಿ, ಕೆ. ಕೆ. ಹೆಬ್ಬಾರ್ ಹೀಗೆ ಅನೇಕಾನೇಕ ವರ್ಣಶಿಲ್ಪಿಗಳನ್ನು ನೀಡಿದೆ. ಕನ್ನಡನಾಡಿನ ಅನೇಕ ಖಾಸಗಿ ಕಲಾಶಾಲೆಗಳಲ್ಲಿ ಮತ್ತು ಸರ್ಕಾರಿ ವಿದ್ಯಾಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡಲಾಗುತ್ತಿದೆ. ಇಲ್ಲಿ ಕರ್ನಾಟಕ ಚಿತ್ರಕಲಾ ಪದ್ಧತಿಯಲ್ಲಿ ಕಲಿಸುವಂತಾಗಬೇಕು.

ಪಾಶ್ಚಾತ್ಯ ಸಂಪ್ರದಾಯ ಸಂಪರ್ಕದಿಂದ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಆದರೆ ಕರ್ನಾಟಕದ ಶೈಲಿಯ ಪ್ರಗತಿ ಮಾತ್ರ ನಿಂತಂತೆ ಕಾಣುತ್ತಿರುವುದು ಶೋಚನೀಯ ಸಂಗತಿ. ಇತ್ತ ಕಲಾವಿದರು, ಸಾರ್ವಜನಿಕರು, ಹಾಗೂ ಸರ್ಕಾರ ಗಮನ ನೀಡುವುದು ಅಗತ್ಯವಿದೆ.

---

ಶಿವನೇ ದೈವ, ಶಿವಭಕ್ತನೇ ಕುಲಜ, ಷಡಕ್ಷರವೇ ಮಂತ್ರ
ಕೊಲ್ಲದಿರ್ಪುದೇ ಧರ್ಮ,
ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ನೇಮ,
ಆಶೆ ಇಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ
ವಂಚನೆ ಇಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ
ಇದು ಸತ್ಯ, ಶಿವಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಉರಿಲಿಂಗಪೆದ್ದಿ

* * *

ಹಣತೆಯೂ ಇದೆ, ಬತ್ತಿಯೂ ಇದೆ
ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ ?
ಗುರುವಿದೆ, ಲಿಂಗವಿದೆ, ಶಿಷ್ಯನ
ಸುಜ್ಞಾನವಂಕುರಿಸದನ್ನಕ್ಕರ ಭಕ್ತಿಯೆಲ್ಲಿಯದೋ ?
ಸೋಹವೆಂಬುದ ಕೇಳಿ, ದಾಸೋಹವ ಮಾಡದಿದ್ದರೆ, ಅತಿಗಳೆದೆನು ಗೋಹೇಶ್ವರಾ

ಅಲ್ಲಮಪ್ರಭು

# ವೀರಶೈವ ಸಂಸ್ಕೃತ ಗ್ರಂಥಗಳಿಗೆ ಕನ್ನಡ ಟೀಕೆಗಳು

ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

ಸಂಸ್ಕೃತ ಮೂಲದ ಆಶಯವು ಸ್ಪಷ್ಟವಾಗಿ ಅವಗತವಾಗದಿದ್ದಾಗ ಕನ್ನಡಿಗರಿಗೆ ಕನ್ನಡ ಟೀಕೆಯು ಅಗತ್ಯವಿರುತ್ತದೆ. ಕಾಲಕಾಲಕ್ಕೆ ಬದಲಾವಣೆಯಾಗುತ್ತಿರುವುದು ಜೀವಂತಭಾಷೆಯ ಲಕ್ಷಣ. ಒಂದಾನೊಂದು ಕಾಲದಲ್ಲಿ ಭಾರತದಲ್ಲಿ ಸಂಸ್ಕೃತವು ಜನಸಾಮಾನ್ಯರ ಆಡುಭಾಷೆಯಾಗಿದ್ದುದನ್ನು ಪಾಣಿನಿಯ ಉಲ್ಲೇಖಗಳು ಸ್ಪಷ್ಟಪಡಿಸುತ್ತವೆ. ಆತ ತನ್ನ ಅಷ್ಟಾಧ್ಯಾಯಿಯಲ್ಲಿ ಒಂದೇ ಶಬ್ದವನ್ನು ಬೇರೆ ಬೇರೆ ಪ್ರಾಂತದ ಜನ ಬೇರೆ ಬೇರೆ ಅರ್ಥಗಳಲ್ಲಿ ಬಳಸುತ್ತಿದ್ದರೆಂದು ಉದಾಹರಿಸಿದ್ದಾನೆ. ಸಂಸ್ಕೃತ ನಾಟಕಗಳಲ್ಲಿ ಸಮಾಜದ ಮೇಲ್ಮಟ್ಟದ ಪಾತ್ರಗಳು ಸಂಸ್ಕೃತವನ್ನು ಬಳಸಿದರೆ ಕೆಳಮಟ್ಟದವರು ಪ್ರಾಕೃತ(ದೇಶಭಾಷೆ)ವನ್ನು ಬಳಸುತ್ತಿದ್ದುದೂ ಇದಕ್ಕೆ ನಿದರ್ಶನ.

ಇನ್ನು ಅತ್ಯಂತ ಪುರಾತನ ಕಾಲದವುಗಳೆಂದು ತಿಳಿದುಬಂದಿರುವ ವೇದ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳ ಭಾಷೆ ಜನಸಾಮಾನ್ಯಕ್ಕೆ ಎಟುಕದಿದ್ದಾಗ ವೇದಾಂಗಗಳು ಹುಟ್ಟಿಕೊಂಡವು. ಶಿಕ್ಷಾ-ವ್ಯಾಕರಣ-ಛಂದಸ್ಸು-ನಿರುಕ್ತ-ಜ್ಯೋತಿಷ ಮತ್ತು ಕಲ್ಪಗಳು ವೇದಾದಿಗಳ ಅರ್ಥವನ್ನು ಅರಿಯುವುದಕ್ಕಾಗಿಯೇ ಹೊರಟಿವೆ.

ಮುಂದೆ ಬಂದ "ಸೂತ್ರಯುಗ"ದಲ್ಲಿ ವೇದೋಪನಿಷತ್ತುಗಳಲ್ಲಿರುವ ಸಾರವನ್ನು ಸಂಗ್ರಹಿಸಿ ಅವನ್ನು ನೆನಪಿನಲ್ಲಿಡುವ ಸೌಕರ್ಯಕ್ಕಾಗಿ ಸೂತ್ರರಚನೆಯು ಪ್ರಾರಂಭವಾಯಿತು. ಸೂತ್ರಯುಗದ ಆದ್ಯಪ್ರವರ್ತಕ ಪಾಣಿನಿ (ಕ್ರಿ.ಪೂ. ೭೦೦) ಯೆಂದು ಅಭಿಪ್ರಾಯಪಡಲಾಗಿದೆ. "ಅಲ್ಪಾಕ್ಷರವೂ ಅಸಂದಿಗ್ಧವೂ ನಿರ್ದುಷ್ಟ ಹಾಗೂ ಸಾರವತ್ತೂ ಆಗಿರುವುದಲ್ಲದೆ ಬಹುಮುಖವಾದ ಅರ್ಥವುಳ್ಳದ್ದೇ ಸೂತ್ರ"[1] ಎಂದು ಹೇಳಲಾಗಿದೆ.

ಸೂತ್ರದ ಭಾಷೆಯೂ ತಿಳಿಯಲು ಕಷ್ಟವೆನಿಸಿದಾಗ "ಭಾಷ್ಯಯುಗವು" ಉದಯಿಸಿತು. ಈ ಭಾಷ್ಯ ಪರಂಪರೆಗೂ ವೈಯಾಕರಣರೇ ಮೊದಲಿಗರು. ಈ ದಿಸೆಯಲ್ಲಿ ಪಾಣಿನಿ-ಕಾತ್ಯಾಯನ-ವರರುಚಿ-ಪತಂಜಲಿಗಳು ಪ್ರವರ್ತಕರು. ಇವರು ಕ್ರಮವಾಗಿ ಸೂತ್ರ, ವಾರ್ತಿಕ, ವಾಕ್ಯ ಮತ್ತು ಭಾಷ್ಯಗಳನ್ನು ರಚಿಸಿದವರು. ಇದರಂತೆ ಶಾಸ್ತ್ರಗಳಲ್ಲಿಯೂ ಕೂಡ ಸೂತ್ರಭಾಷ್ಯ ಮತ್ತು ವ್ಯಾಖ್ಯಾನ (ಟೀಕೆ-ಟಿಪ್ಪಣಿ)ಗಳ ಪರಂಪರೆ ಬೆಳೆದಿದೆ. ಭಾಷ್ಯಕಾರರ ಗುರಿ ಹೀಗಿದೆ: ಸೂತ್ರದಲ್ಲಿನ ಪದವನ್ನು ಅವಲಂಬಿಸಿ, ಸೂತ್ರಕ್ಕೆ ಅನುಗುಣವಾದ ವಾಕ್ಯಗಳಿಂದ, ಅದಕ್ಕೆ ತಮ್ಮ ವಿವರಣವನ್ನೂ ಸೇರಿಸಿ ಸೂತ್ರದ ಆಶಯವನ್ನು ಬೋಧಿಸುವುದೇ ಭಾಷ್ಯದ ಉದ್ದೇಶ.[2]

ಇದರಂತೆ ಬಾದರಾಯಣರ ವೇದಾಂತ ಸೂತ್ರಗಳಿಗೆ ಶಂಕರ-ರಾಮಾನುಜ-ಆನಂದತೀರ್ಥರ ಭಾಷ್ಯಗಳಿರುವಂತೆ ವೀರಶೈವ ಆಚಾರ್ಯರಾದ ನೀಲಕಂಠ, ಶ್ರೀಕಂಠ, ಶ್ರೀಪತಿ ಮುಂತಾದವರ ಭಾಷ್ಯಗಳಿವೆ. ಈ ದಿಸೆಯಲ್ಲಿ ವೀರಶೈವ ದಾರ್ಶನಿಕ ಹಾಗೂ ಸಾಹಿತ್ಯಿಕ ಗ್ರಂಥಗಳು ಕೂಡ ಮೊದಮೊದಲು ಸಂಸ್ಕೃತದಲ್ಲಿಯೇ ಬಳಕೆಯಲ್ಲಿದ್ದು, ಮುಂದೆ ಜನಸಾಮಾನ್ಯರಲ್ಲಿ ಜಾಗೃತಿಯನ್ನು ಉಂಟುಮಾಡುವ ಸಲುವಾಗಿ ಕನ್ನಡನಾಡಿನಲ್ಲಿ ಮೂಲ ಸಂಸ್ಕೃತ ಗ್ರಂಥಗಳನ್ನು ಕನ್ನಡಿಸುವ ಅಥವಾ ಅವುಗಳಿಗೆ ಟೀಕೆ ಬರೆಯುವ ಪರಿಪಾಟಿ ಬೆಳೆದಂತೆ ತೋರುತ್ತದೆ.

ವೇದೋಪನಿಷತ್ತುಗಳನ್ನು ಅರಗಿಸಿಕೊಂಡು ಸ್ಫೂರ್ತಿ ಪಡೆದ ಬಸವಾದಿ ಶಿವಶರಣರು ತಮ್ಮ ಅನುಭಾವದ ಆಳದಿಂದ ಹೊಮ್ಮಿಬಂದ ಭಾವನೆಗಳನ್ನು ಕನ್ನಡದಲ್ಲಿ ಹಾಡಿ, ವಚನಶಾಸ್ತ್ರಕ್ಕೆ ಪೀಠಿಕೆ ಹಾಕಿದರು. ಮುಂದೆ ಅದು

---

1 ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

2 ಸೂತ್ರಸ್ಥಂ ಪದಮಾದಾಯ ವಾಕ್ಯೈಃ ಸೂತ್ರಾನುಸಾರಿಭಿಃ ।
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯವಿದೋ ವಿದುಃ ॥

ಕನ್ನಡ ಮೌಲಿಕ ಸಾಹಿತ್ಯವೆನಿಸಿ ವಿಖ್ಯಾತವಾಯಿತು. ಕನ್ನಡನಾಡಿನಲ್ಲಿ ಮೊಳೆತ ಈ ವಚನಸಾಹಿತ್ಯ-ಕುಸುಮವು ಹಿಂದಿನ ಆರಣ್ಯಕೋಪನಿಷತ್ತಿನ ಯುಗವನ್ನು ನೆನಪಿಸುವಷ್ಟು ಹುಲುಸಾಗಿ ಬೆಳೆದು ಅರಳಿ, ತನ್ನ ಸೌರಭವನ್ನು ಬೀರಿತು. ಮುಂದೆ ಬಂದ ವಿದ್ವಾಂಸರು ಸಂಸ್ಕೃತದಲ್ಲಿದ್ದ ದಾರ್ಶನಿಕ ಹಾಗೂ ಸಾಹಿತ್ಯಿಕ ಮುಂತಾದ ಹಲವಾರು ವಿಭಾಗಗಳ ಗ್ರಂಥಗಳಿಗೆ ಕನ್ನಡ ಟೀಕೆಗಳನ್ನು ಬರೆದು ಜನಸಾಮಾನ್ಯರಿಗೆ ಸಂಸ್ಕೃತ ಮೂಲಗ್ರಂಥಗಳ ಆಶಯವನ್ನು ಬೋಧಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರಕಟವಾಗಿವೆ; ಮತ್ತೆ ಕೆಲವು ಓಲೆ ಹಾಗೂ ಹಸ್ತಪ್ರತಿಗಳಲ್ಲಿ ಇನ್ನೂ ಅಡಗಿವೆ. ಸಾಧ್ಯ ಪಾದಮಟ್ಟಿಗೆ ಇಲ್ಲಿ ಅಂಥ ಕೆಲವು ಟೀಕೆಗಳ ಸ್ಥೂಲಪರಿಚಯವನ್ನು ಮಾಡಿಕೊಡುವ ಪ್ರಯತ್ನ ನಡೆದಿದೆ.

ವೀರಶೈವ ಸಂಸ್ಕೃತ ಗ್ರಂಥಗಳಿಗೆ ಕನ್ನಡದಲ್ಲಿ ಟೀಕೆ ಬರೆಯುವ ಪರಿಪಾಟಿ ಆರಂಭವಾದದ್ದು ಕ್ರಿ.ಶ. ಸುಮಾರು ೧೪-೧೫ನೆಯ ಶತಮಾನಗಳಿಂದ. ಅದೂ ಪ್ರಾಯಃ ಮುಗ್ಗಿಮಾಯಿದೇವರ ಕಾಲದಿಂದ ಎಂದು ತೋರುತ್ತದೆ. ಮಾಯಿದೇವರ "ಏಕೋತ್ತರ ಶತಸ್ಥಲ"ವು ಮುಪ್ಪೊದಲಿಗೆ ಕನ್ನಡದಲ್ಲಿ ಬಂದಂತೆ ಕಾಣುತ್ತದೆ. ಅದರ ಪೀಠಿಕೆಯಲ್ಲಿ ಮಾಯಿದೇವಾಚಾರ್ಯರು "ದೇವಸಭೆಯೊಳಗೆ ದೇವರದೇವನೊಲಿದು ಗಿರಿಜಾವನಿತೆಗೆ ಒರೆವ ಏಕೋತ್ತರ ಶತಸ್ಥಲವನ್ನು ಭೂಮಿಯಲ್ಲಿ ಬಸವೇಶ್ವರನು ಸದ್ಭಕ್ತಜನಕೆ ಬೋಧಿಸಿದ. . . ." ಎಂದು ಹೇಳಿರುವುದರಿಂದ ಈ ಅಂಶ ಸ್ಪಷ್ಟವಾಗುತ್ತದೆ. ಏಕೆಂದರೆ ದೇವಸಭೆಯಲ್ಲಿ ಬೋಧಿಸಿದ್ದು ಪ್ರಾಯಃ ದೇವಭಾಷೆಯಲ್ಲಿರಬೇಕು; ಅಂದರೆ ಗೀರ್ವಾಣ (ಸಂಸ್ಕೃತ) ಭಾಷೆ. ಅದನ್ನು ಭೂಮಿಯಲ್ಲಿ ಬಸವೇಶ್ವರನು ಸದ್ಭಕ್ತಜನಕ್ಕೆ ಬೋಧಿಸಿದ್ದು ಕನ್ನಡದಲ್ಲಿ.

ಮುಗ್ಗಿಮಾಯಿದೇವರು ತಾವು ಸಂಸ್ಕೃತದಲ್ಲಿ ರಚಿಸಿರುವ 'ಶಿವಾನುಭವಸೂತ್ರ ಮತ್ತು ವಿಶೇಷಾರ್ಥಪ್ರಕಾಶಿಕೆ'ಗಳಲ್ಲಿ ಪ್ರತಿಪಾದಿಸಿರುವ "ಏಕೋತ್ತರಶತಸ್ಥಲ"ಕ್ಕೆ (ವೀರಶೈವ ಸಿದ್ಧಾಂತ) ಮೂಲ ಶಿವಾಗಮಗಳು. ಅದನ್ನು ಅವರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಅವರು ಹೇಳುವಂತೆ "ವಾತುಲೋತ್ತರತಂತ್ರದ ತಂತ್ರೋತ್ತರ ಪ್ರದೀಪ" ಎಂಬ ಭಾಗದಿಂದ ಅದನ್ನು ಉದ್ಧರಿಸಿರುವುದಾಗಿ ತಿಳಿದುಬಂದಿದೆ. ಇದಕ್ಕೂ ಮುಂಚಿನದೆನಿಸಿರುವ ಶಿವಯೋಗಿಶಿವಾಚಾರ್ಯರ 'ಸಿದ್ಧಾಂತಶಿಖಾಮಣಿ'ಗೂ ಸಹ ಶಿವಾಗಮಗಳೇ ಮೂಲ.

ಅದರಲ್ಲಿ ಆಚಾರ್ಯ ರೇಣುಕರು ಅಗಸ್ತ್ಯಮಹರ್ಷಿಗೆ "ಏಕೋತ್ತರ ಶತಸ್ಥಲ"ವನ್ನು ಉಪದೇಶಿಸಿರುವುದು ಸುಪ್ರಸಿದ್ಧ. ಅಲ್ಲಿ ಹೇಳಿರುವಂತೆ— ಶಿವಾಗಮಗಳು ಒಟ್ಟು ಇರುವುದು ಕಾಮಿಕವು ಮೊದಲು ವಾತುಲವು ಕಡೆಯಾಗಿ ಇಪ್ಪತ್ತೆಂಟು. ಅವುಗಳಿಗೆ 'ಸಿದ್ಧಾಂತಾಗಮ' ಎಂಬ ಹೆಸರಿದೆ. ಅವುಗಳ ಉತ್ತರಭಾಗದಲ್ಲಿ ವೀರಶೈವ ಸಿದ್ಧಾಂತವು ಉಕ್ತವಾಗಿದೆ.[3] ಅದೇ ಏಕೋತ್ತರಶತಸ್ಥಲ.

ಎಂದರೆ ಏಕೋತ್ತರ ಶತಸ್ಥಲಕ್ಕೆ ಮೂಲ ಶಿವಾಗಮಗಳು. ಅವು ಸಂಸ್ಕೃತದಲ್ಲಿವೆ. ಆದ್ದರಿಂದ ಮುಗ್ಗಿಮಾಯಿದೇವರು ಕನ್ನಡಿಸಿರುವ 'ಏಕೋತ್ತರ ಶತಸ್ಥಲ'ದ ಮೂಲವೂ ಕೂಡ ಸಂಸ್ಕೃತದಲ್ಲಿರುವ ಶಿವಾಗಮಗಳೆಂದೇ ಸ್ಪಷ್ಟವಾಗುತ್ತದೆ. ಅದು ಸಂಸ್ಕೃತ ಏಕೋತ್ತರಶತಸ್ಥಲಕ್ಕೆ ಕನ್ನಡದಲ್ಲಿ ಬರೆದಿರುವ ಟೀಕೆ ಎಂಬುದು ಸ್ಪಷ್ಟ. ಇನ್ನು ವೇದ, ಶಿವಾಗಮ ಮುಂತಾದ ಸಂಸ್ಕೃತ ಗ್ರಂಥಗಳಿಗೆ ಕಾಲಕಾಲಕ್ಕೆ ಬರೆದಿರುವ ಟೀಕೆಗಳ ಪರಿಚಯವನ್ನು ಸ್ಥೂಲವಾಗಿ ಕೊಡಲಾಗುತ್ತದೆ.

**ಶೈವಾಗಮಗಳಿಗೆ ಕನ್ನಡ ಟೀಕೆಗಳು :** ಶೈವಾಗಮ ಟೀಕೆಗಳಲ್ಲಿ 'ವೀರಾಗಮ'ದ ಉತ್ತರಭಾಗಕ್ಕೆ ಬರೆದಿರುವ ಟೀಕೆ ಪ್ರೌಢವಾಗಿದೆ. ಅದನ್ನು ಬರೆದವರು ತಮ್ಮ ಪ್ರವರವನ್ನು ಹೀಗೆ ಹೇಳಿಕೊಂಡಿದ್ದಾರೆ :

"ಇತಿ ಶ್ರೀಯಾಗಂಟಿ-ಶರಭಲಿಂಗ-ಪ್ರಸಾದಿನೋ ಯಜುಃಶಾಖಾಧ್ಯಾಯಿನಃ ಸದಾಶಿವವಾಮದೇವ-ಮುಖೋದ್ಭೂತ-ಗಜಕರ್ಣಗೋತ್ರಸ್ಯ, ವೀರಾಗಮೋತ್ತರಭಾಗ-ದ್ವಾದಶಸಹಸ್ರಗ್ರಂಥ-ವೀರಮಾಹೇಶ್ವರತಂತ್ರಸೂತ್ರಸ್ಯ, ಶಿವಲೆಂಕಮಂಚಣಪಂಡಿತಾರಾಧ್ಯಪ್ರವರಸ್ಯ ಸಂಗನಗುರುಲಿಂಗ-ನಂದ್ಯಂಬಾ-ಕುಮಾರಸ್ಯ ಕಂಥಾಸಂತಾನಬ್ಯಣ್ಣ-ಗುರುಕರುಣಖ್ಯಾತಸ್ಯ, ಸಹ್ಯಾದ್ರಿ-ಕಟಕಸ್ಯ, ಕೆಳದಿಪುರಸ್ಯ, ಷಡ್‌ದೇಶಪವಿತ್ರಸ್ಯ, ಕುಂಟಪುರಸ್ಯ, ಕಾಶೀಕಾಂಡ ಚನ್ನವೀರದೇವಸ್ಯಕೃತ ವೀರಾಗಮೋತ್ತರ ಭಾಗ . . . ವೀರಮಾಹೇಶ್ವರತಂತ್ರಸ್ಯ ಕರ್ನಾಟಕಟೀಕಾಯಾಂ ತತ್ತ್ವವರ್ಣನಂ ನಾಮ ಪ್ರಥಮಪಟಲ . . ." ಈ ವೀರಾಗಮ ಟೀಕೆಯಲ್ಲಿ ಆದಿಚತುರಾಚಾರ್ಯರ ಮತ್ತೆ ಬೇರೆ ನಾಲ್ಕು ತಂತ್ರಗಳ ಉಲ್ಲೇಖವಿದೆ. ಆ ಪದ್ಯವು ಹೀಗಿದೆ—

---

[3] ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಂ ॥ (ಸಿ.ಶಿ.ಪರಿ. ೫)

ಉಪದೇಶಂ ಆಗಮೋಕ್ತಂ ಕುರ್ವಂತಿ ವಸುಧಾತಳೇ ।
ತೇ ಏತೇ ಗುರವಃ ಸರ್ವೇ ಕೈಲಾಸಸ್ಥ-ಗಣೇಶ್ವರಾಃ ॥ ೬೭೧ ॥

ಎಂಬ ಪದ್ಯದ ಟೀಕೆಯಲ್ಲಿ— ಕೈಲಾಸಸ್ಥ-ರಜತಾದ್ರಿಯೊಳಿರ್ದ, ಗಣೇಶ್ವರಾಃ-ಪ್ರಮಥರ ಹಿರಿಯರಾದ ಗುರವಃ— ರೇಣುಕ, ದಾರುಕ, ಘಂಟಾಕರ್ಣ, ಗಜಕರ್ಣರೆಂಬ ಆರಾಧ್ಯರು ; ಆಗಮೋಕ್ತಂ– ಕಾಮಿಕಾದಿವಾತುಳಾಂತಮಾದ ಶಿವಾಗಮದ, ಉಪದೇಶಂ– ರೇಣುಕಾಗಸ್ತ್ಯಸಂವಾದದ "ರೇಣುಕತಂತ್ರ"ಮಂ, ದಾರುಕ-ದಧೀಚಿ ಸಂವಾದದ "ದಾರುಕತಂತ್ರ"ಮಂ, ಘಂಟಾಕರ್ಣೋಪಮನ್ಯು ಸಂವಾದದ "ಘಂಟಾಕರ್ಣತಂತ್ರ"ಮಂ, ಗಜಕರ್ಣ-ದೇವಲ ಸಂವಾದದ "ಗಜಕರ್ಣತಂತ್ರಮಂ" ಕುರ್ವಂತಿ– ಮಾಡಿದಪರು ಎಂದು ಹೇಳಿರುವುದರಿಂದ ರೇಣುಕತಂತ್ರ, ದಾರುಕತಂತ್ರ, ಘಂಟಾಕರ್ಣತಂತ್ರ ಮತ್ತು ಗಜಕರ್ಣತಂತ್ರಗಳೆಂಬ ಉಪಾಗಮ ವಿಭಾಗಗಳೂ ಇದ್ದಂತೆ ತಿಳಿದುಬರುತ್ತದೆ. ಇವುಗಳಲ್ಲಿ ಸಿದ್ಧಾಂತಶಿಖಾಮಣಿಯು ರೇಣುಕಾಗಸ್ತ್ಯಸಂವಾದರೂಪವಾದ 'ರೇಣುಕತಂತ್ರ'ವನ್ನು ಆಧರಿಸಿದೆ : ಎಂದು ಬೇರೆ ಹೇಳಬೇಕಾಗಿಲ್ಲ. ಇದರಂತೆ ಈ ವೀರಾಗಮದ ಮುನ್ಮುಂದೆ ಬರುವ "ಶಿವಯೋಗಿಗಳು-ಶಿವಾಗಮಿಕರು, ವೀರಾಗಮದ ವೀರಭದ್ರ, ವೀರಭದ್ರನ ಗುರುಪರಂಪರೆ, ವೀರಾಗಮದಲ್ಲಿ ಇಷ್ಟಲಿಂಗದ ವಿಚಾರ, ಏಕೋತ್ತರಶತಸ್ಥಲ ಮುಂತಾದ ಗಹನವಿಚಾರಗಳು ಉಕ್ತವಾಗಿವೆ.

ವೀರಶೈವವನ್ನು ಪ್ರತಿಪಾದಿಸುವ ೨೮ ಶೈವಾಗಮಗಳಲ್ಲಿ ಎಲ್ಲವೂ ನಮಗೆ ಸಿಕ್ಕಿಲ್ಲ. ಸಿಕ್ಕಿರುವುದು ಕೂಡ ಸಂಪೂರ್ಣವಾಗಿ ದೊರೆತಿಲ್ಲ. ಕೆಲವು ಆಗಮಗಳಲ್ಲಿ ಕೆಲವು ಪಾದಗಳು ಮಾತ್ರ ದೊರೆತಿವೆ. ಉದಾಹರಣೆಗೆ ಸ್ವಾಯಂಭುವ ಮತ್ತು ಸುಪ್ರಭೇದ ಆಗಮಗಳ ಅಷ್ಟಮ ಪಟಲಗಳಿಗೆ ಬೆಂಗಳೂರಿನ ಶ್ರೀ ನಂ.ಶಾ. ಶಿವಪ್ಪಶಾಸ್ತ್ರಿಗಳು ಕನ್ನಡದಲ್ಲಿ ಟಿಪ್ಪಣಿ ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಪಂಚವೋತ್ಪತ್ತಿ, ಪಂಚಾಚಾರ್ಯೋತ್ಪತ್ತಿ ಮುಂತಾದ ವಿಚಾರ ಬಂದಿದೆ.

**ಸುಪ್ರಭೇದಾಗಮದೊಳಗಣ ಪಂಚಾಚಾರ್ಯ ವಂಶಾವಳಿ** (ಕನ್ನಡ ಟೀಕೆ) ಎಂಬುದಾಗಿ ಒಂದು ಪ್ರತಿಯಿದೆ. ಇದು ತಂಜಾವೂರು ಕೃಷ್ಣಸ್ವಾಮಿ ಶೆಟ್ಟರಿಗಾಗಿ ಮದರಾಸಿನ ಶಾರದ ಮುದ್ರಾಕ್ಷರ ಶಾಲೆಯಲ್ಲಿ ೧೮೯೦ರಲ್ಲಿ ಕನ್ನಡ ಟೀಕಾಸಹಿತ ಪ್ರಕಟವಾಗಿದೆ.

**ವಾತುಲ ಶುದ್ಧಾಖ್ಯ ತಂತ್ರಟೀಕೆ** (ಹತ್ತು ಪಟಲ) ಕರ್ತೃ–ಅಮರಗುಂಡಮಲ್ಲಿಕಾರ್ಜುನ.

**ಪಾರಮೇಶ್ವರಪ್ರಭೆ** ಮತ್ತು **ಸೂಕ್ಷ್ಮತಂತ್ರಸಾರ** ಎಂಬ ಎರಡು ಆಗಮಗಳನ್ನು ಡಾ॥ ಜ.ಚ.ನಿ. ಅವರು ಕನ್ನಡಿಸಿ ಪ್ರಕಟಿಸಿದ್ದಾರೆ.

**ವೇದಪರಿಚಯ** (ಪೂರ್ವಭಾಗ) (ಕನ್ನಡದಲ್ಲಿ) : ವೇದಮಂತ್ರಗಳಿಗೆ ವೀರಶೈವ ಆಚಾರ್ಯರು ಭಾಷ್ಯಗಳನ್ನು ಬರೆದಿರುವರೆಂಬ ವಿಚಾರವು ಹಿಂದೆ ಉಕ್ತವಾಗಿದೆ. ಅವುಗಳಿಗೆ ಕನ್ನಡ ಟೀಕೆಗಳನ್ನು ಬರೆದಿರುವುದು ವಿರಳ, ಆದರೂ ಹಿಂದೆ ಹೇಳಿದ ನೀಲಕಂಠ, ಶ್ರೀಕಂಠ, ಮತ್ತು ಶ್ರೀಪತಿಪಂಡಿತ ಮುಂತಾದ ಆಚಾರ್ಯರು ಬರೆದಿರುವ ಭಾಷ್ಯಗಳಲ್ಲಿರುವ ಅನೇಕ ವೇದೋಪನಿಷತ್ ಮಂತ್ರಗಳಿಗೆ ವೀರಶೈವ ಸಿದ್ಧಾಂತ ಪರವಾಗಿ ಬರೆದಿರುವ ಕನ್ನಡ ಟೀಕೆಗಳನ್ನು ವಿದ್ಯಾವಾಚಸ್ಪತಿ ಶ್ರೀ ಶಂಭುಲಿಂಗ ಶಿವಾಚಾರ್ಯರು (ಬಿಜಾಪುರ) ಇವರು ಬರೆದಿರುವ (೧೯೩೮) ವೇದಪರಿಚಯ (ಪೂರ್ವಭಾಗ)ವು ಮುಖ್ಯವಾಗಿದೆ.

ಇದರಲ್ಲಿ ಮೂರು ಉಲ್ಲಾಸಗಳಿವೆ. ಮೊದಲ ಉಲ್ಲಾಸದಲ್ಲಿ ಧರ್ಮದ ಸ್ವರೂಪ, ವೇದದ ಅಪೌರುಷೇಯತ್ವ ಈಶ್ವರಾಸ್ತಿತ್ವ, ಈಶ್ವರಸ್ವರೂಪ ಮುಂತಾದ ವಿಷಯಗಳು, ಎರಡರಲ್ಲಿ— ವೇದ, ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಮುಂತಾದವುಗಳ ಸ್ವರೂಪಗಳು ನಿರೂಪಿತವಾಗಿವೆ. ಮೂರರಲ್ಲಿ— ವೇದಾಂಗ, ಪುರಾಣ, ನ್ಯಾಯ, ಮೀಮಾಂಸೆ, ಧರ್ಮಶಾಸ್ತ್ರ ಮತ್ತು ವೀರಶೈವವು ವೇದಪ್ರಾಮಾಣ್ಯವನ್ನು ಒಪ್ಪಿದೆ ಮುಂತಾಗಿ ಸಮರ್ಥಿಸಲಾಗಿದೆ.

**ಭಾಸ್ಕರಭಟ್ಟಕೃತ ಯಜುರ್ವೇದಭಾಷ್ಯಕ್ಕೆ ಕನ್ನಡ ಟೀಕೆ:** ಇದನ್ನು ಬರೆದವರು ಗುರುನಂಜ (ಸು.೧೫೦೦) ಇವರಿಗೆ "ಸ್ಮೃತಿ-ಪುರಾಣ-ಶಾಸ್ತ್ರ-ದರ್ಶನ, ನಿರಂಜನಸಿದ್ಧ" ಎಂಬ ಬಿರುದಿದೆ. ಈತನ ಗುರು ಸಿದ್ಧಲಿಂಗ. ಅವರು ನಾಸಾಪುರ (ಮೂಗೂರು) ಮಠನಿವಾಸಿಗಳು. ಟೀಕೆ ಪ್ರೌಢವಾಗಿದೆ. ಇದಕ್ಕೆ 'ರುದ್ರಭಾಷ್ಯ' ಎಂಬ ಹೆಸರಿದೆ, ಇವರು ಉಮಾಸ್ತೋತ್ರ ಷಟ್ಪದಿ ಮತ್ತು ತ್ರಿಪುರಸ್ತೋತ್ರಗಳನ್ನು ಬರೆದಿರುವುದರಿಂದ ಈ ನಾಸಾಪುರವು ಮೈಸೂರು ಜಿಲ್ಲೆಯ ಮೂಗೂರು ಎಂಬುದು ಸ್ಪಷ್ಟ. ಏಕೆಂದರೆ ತ್ರಿಪುರಸುಂದರೀ (ತಿಬ್ಬಾದೇವಿ) ನೆಲೆಸಿರುವ ಪ್ರಸಿದ್ಧ ಕ್ಷೇತ್ರ ಇದು. (ಲಿಂಗವಂತ ಕವಿಗಳು, ಪು. ೬೫).

**ಉಪನಿಷತ್ತುಗಳಿಗೆ ಕನ್ನಡ ಟೀಕೆ:** ಉಪನಿಷತ್ತುಗಳ ಮೇಲೆ ಪ್ರಾಚೀನ ಆಚಾರ್ಯರು ಬರೆದ ಭಾಷ್ಯಗಳನ್ನಾಗಲಿ, ಅವುಗಳಿಗೆ ಕನ್ನಡ ಟೀಕೆಗಳನ್ನಾಗಲೀ ಬರೆದಿರುವುದು ಕಂಡುಬರುವುದಿಲ್ಲ. ಕ್ರಿ.ಶ. ಸು. ೧೭೯೦ರಲ್ಲಿ ಬಸವ (ವೃಷಭ) ಪಂಡಿತಾರಾಧ್ಯರು ಸಂಸ್ಕೃತದಲ್ಲಿ 'ತೈತ್ತಿರೀಯೋಪನಿಷತ್ತು' ಮತ್ತು 'ಪುರುಷಸೂಕ್ತಗಳಿಗೆ ಭಾಷ್ಯ'ವನ್ನು ಬರೆದಿದ್ದಾರೆ. ಇವರು ತಮ್ಮ ಭಾಷ್ಯದ ಕಡೆಯಲ್ಲಿ ತಮ್ಮನ್ನು "ಇತಿ ಶ್ರೀಮದ್ವೇದಾಗಮೋಭಯವೇದಾಂತ-ಸಿದ್ಧಾಂತ ವೀರಶೈವಪ್ರಕಾಶಕ ಭಗವತ್ ಶ್ರೀಪತಿ ಪಂಡಿತಾರಾಧ್ಯ ವಂಶಸಂಭೂತರಾದ ಲಿಂಗಾರಾಧ್ಯ ಪುತ್ರ ಬಸವ ಪಂಡಿತಾರಾಧ್ಯ ಕೃತಿಷು ತೈತ್ತಿರೀಯಕ ಭೃಗುವಲ್ಲೀ ಭಾಷ್ಯಂ ಸಮಾಪ್ತಂ" ಎಂದು ವಿಶ್ಲೇಷಿಸಿಕೊಂಡಿದ್ದಾರೆ.

ಮೈಸೂರಿನ ಹೊಸಮಠದ ಅಧ್ಯಕ್ಷರಾದ ಶಿವಪೂಜಾ ಶಿವಲಿಂಗದೇಶಿಕೇಂದ್ರರು (೧೮೦೦) ವೇದೋಪನಿಷತ್ತುಗಳಲ್ಲಿ ಬರುವ ವೀರಶೈವ ಸಿದ್ಧಾಂತ ಪ್ರತಿಪಾದಕವಾದ ಮಂತ್ರಗಳಿಗೆ ಕನ್ನಡದಲ್ಲಿ ಅರ್ಥವನ್ನು ಬರೆದು 'ಶ್ರುತಿಸಾರ ಭಾಷ್ಯ' ಎಂದು ಪ್ರಸಿದ್ಧಪಡಿಸಿದ್ದಾರೆ. ಶ್ರುತಿಸಾರಭಾಷ್ಯದ ಕಡೆಯಲ್ಲಿ "ಶ್ರೀಮತ್ ಷಟ್‌ಸ್ಥಲ .... ಶಾಂತವೀರ ದೇಶಿಕೇಂದ್ರಸಮಾಗತ .... ಶ್ರೀಮತ್ಪರಮ ಶಿವಕೃಪಾಸಮಾಸಾದಿತ ವೇದ-ವೇದಾಂತಾಗಮ ಕರ್ತೃ-ವ್ಯಾಕರಣ ಮುಖನಿಖಿಲವಿದ್ಯಾವಿಶಾರದೇನ ಮೈಸೂರು ಪುರವಿರಾಜಮಾನ ಪ್ರತ್ಯಗ್ರಮಠಾಧ್ಯಕ್ಷೇಣ ಶ್ರೀಮತ್ ಶಿವಪೂಜಾ ಶಿವಲಿಂಗಯೋಗೀಂದ್ರೇಣ ವಿರಚಿತಂ" ಎಂದು ಹೇಳಿಕೊಂಡಿದ್ದಾರೆ.

ಚೌಡದಾನಪುರದ 'ವೇದತೀರ್ಥ'ಸ್ವಾಮಿ ವಿರೂಪಾಕ್ಷ ಒಡೆಯರು (ಸು. ೧೯೦೦–೧೯೩೫) ಬರೆದಿರುವ

(i) ತತ್ತ್ವಬೋಧ.
(ii) ಲಿಂಗಾಂಗ ಧರ್ಮಪ್ರಕಾಶ.
(iii) ತುಲನಾತ್ಮಕ ತತ್ತ್ವವಿಷಯ ಮುಂತಾದ ಗ್ರಂಥಗಳು ಇನ್ನೂ ಕನ್ನಡಕ್ಕೆ ತರ್ಜುಮೆಯಾಗಿಲ್ಲ.

೧೯ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಪಂಡಿತಪ್ರಕಾಂಡ ಲಿಂ॥ ಉಮಚಗಿ ಶಂಕರ ಶಾಸ್ತ್ರಿಗಳು ಬರೆದ 'ಈಶಾವಾಸ್ಯೋಪನಿಷತ್ ಶಾಂಕರೀವ್ಯಾಖ್ಯೆ' ಮತ್ತು 'ಕೇನೋಪನಿಷತ್ ಶಾಂಕರೀವ್ಯಾಖ್ಯೆ'. 'ಸಿದ್ಧಾಂತಶಿಖೋಪನಿಷತ್ ವೀರಶೈವಭಾಷ್ಯ'ಗಳಿಗೆ ಆಸ್ಥಾನ ಮಹಾವಿದ್ವಾನ್, ಪಂಡಿತರತ್ನಂ ಲಿಂ॥ ಸಿರಸಿ ಗುರುಶಾಂತಶಾಸ್ತ್ರಿಗಳು ರಚಿಸಿರುವ ಕನ್ನಡ ಟೀಕೆಗಳು ಪ್ರಸಿದ್ಧವಾಗಿವೆ. ಇನ್ನು ಅದೇ ಶಾಸ್ತ್ರಿಗಳವರ 'ಮುಂಡಕೋಪನಿಷತ್ ವೀರಶೈವ ಭಾಷ್ಯ'ಕ್ಕೆ ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು (೧೯೬೧) ಕನ್ನಡ ಟೀಕೆ ಬರೆದು ಪ್ರಕಾಶಪಡಿಸಿದ್ದಾರೆ. ಈ ಮಹನೀಯರು 'ಈಶಾವಾಸ್ಯೋಪನಿಷತ್ ಭಾಷ್ಯ'ವನ್ನು ಸಂಸ್ಕೃತ ಲಿಪಿಯಲ್ಲಿ ಮುದ್ರಿಸಿ, ಅದಕ್ಕೂ ಕನ್ನಡ ಟೀಕೆ ಬರೆದಿದ್ದಾರೆ (೧೯೩೫).

**ಕೈವಲ್ಯೋಪನಿಷತ್ ಸದಾಶಿವಭಾಷ್ಯ:** ಇದರ ಕರ್ತೃಗಳು ಸಖರಾಯಪಟ್ಟಣದ ಶ್ರೀ ಹಾಲುಸ್ವಾಮಿ ಮಠಾಧ್ಯಕ್ಷ ಷ॥ ಬ್ರ॥ ಶ್ರೀ ಪಟ್ಟದ ಲಿಂ॥ ಸದಾಶಿವ ಶಿವಾಚಾರ್ಯಸ್ವಾಮಿಗಳು. ಈ ಉಪನಿಷತ್ತಿಗೆ ಶ್ರೀ ಎಂ. ಜಿ. ನಂಜುಂಡಾರಾಧ್ಯರ ಕನ್ನಡ ಟೀಕೆಯಿದೆ. ಮೇಲೆ ಕಂಡ ಉಪನಿಷತ್ ಭಾಷ್ಯಗಳಲ್ಲಿ ಲಿಂ॥ ಉಮಚಗಿ ಶಂಕರಶಾಸ್ತ್ರಿಗಳವರ ಭಾಷ್ಯಗಳು ಮಹತ್ವಸ್ಥಾನ ಪಡೆದಿವೆ. ಅವುಗಳಲ್ಲಿ ಆಳವಾದ ಅನುಭವ, ಪರಿಪಕ್ವವಾದ ಅವರ ದಾರ್ಶನಿಕಶೈಲಿ, ವೇದ-ವೇದಾಂತಾಗಮ ಉಪನಿಷತ್ತುಗಳಲ್ಲಿ ಅವರಿಗಿದ್ದ ಪಾಂಡಿತ್ಯವು ಅಭಿವ್ಯಕ್ತವಾಗಿದೆ. ಮಂತ್ರಗಳನ್ನು ಸ್ವಸಿದ್ಧಾಂತಕ್ಕೆ ಅನುಗುಣವಾಗಿ ನಯನಮಾಡುವಲ್ಲಿ ಅವರಿಗಿದ್ದ ಪ್ರತ್ಯುತ್ಪನ್ನಮತಿಗೆ ಈ ಭಾಷ್ಯಗಳು ಒರೆಗಲ್ಲಿನಂತಿವೆ.

ಮೈಸೂರು ಮುಖ್ಯನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ವಿದ್ಯಾವಾಚಸ್ಪತಿ ಲಿಂ॥ ಟಿ. ಎನ್. ಮಲ್ಲಪ್ಪನವರು ಬರೆದಿರುವ 'ಕೇನೋಪನಿಷತ್ತು', 'ಮುಂಡಕೋಪನಿಷತ್ತು', 'ಕಠೋಪನಿಷತ್ತು', 'ಈಶಾವಾಸ್ಯೋಪನಿಷತ್ತು' ಮತ್ತು 'ಮಾಂಡೂಕ್ಯೋಪನಿಷತ್ತು'. 'ಶ್ವೇತಾಶ್ವತರೋಪನಿಷತ್ತು'ಗಳ ವಿವರಣಗಳು ಕನ್ನಡದಲ್ಲಿಯೇ ಇವೆ. ಶ್ರೀಯುತರು ಇವುಗಳಿಗೆ ತ್ರಿಮತಾಚಾರ್ಯರ ಭಾಷ್ಯಗಳಿಂದ ಕೂಡಿದ ವಿವರಣವನ್ನು ಕೊಟ್ಟಿದ್ದಾರೆ. ಅಲ್ಲಲ್ಲಿ ವೀರಶೈವಸಿದ್ಧಾಂತ ಪರವಾಗಿ ಮಂತ್ರಗಳನ್ನು ವ್ಯಾಖ್ಯಾನಿಸಿದ್ದಾರೆ. ಮೇಲಾಗಿ ಇವರು ಬಾದರಾಯಣರ 'ಬ್ರಹ್ಮಸೂತ್ರ'ಗಳಿಗೆ ಐದು ಮಂದಿ ಮತಾಚಾರ್ಯರ ಭಾಷ್ಯಗಳ ಸಾರಾಂಶವನ್ನು ಸಂಗ್ರಹಿಸಿ ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು 'ಶ್ವೇತಾಶ್ವತರೋಪನಿಷತ್ತಿ'ಗೆ ಸಂಸ್ಕೃತ ಮತ್ತು ಕನ್ನಡಗಳಲ್ಲಿ ಟೀಕೆ ಬರೆದು ಪ್ರಕಟಿಸಿದ್ದಾರೆ.

## ಪುರುಷಸೂಕ್ತ ಭಾಷ್ಯಗಳು ಮತ್ತು ಅದರ ಕನ್ನಡ ಟೀಕೆಗಳು

"ಪುರುಷಸೂಕ್ತ"ಕ್ಕೆ ಬಸವಪಂಡಿತರು ಟೀಕೆಯನ್ನು ಬರೆದ ತರುವಾಯ ಅದನ್ನು ಅನೇಕರು ಕನ್ನಡದಲ್ಲಿ ವ್ಯಾಖ್ಯಾನಿಸಿದ್ದಾರೆ. ಅವರಲ್ಲಿ ಮೈಸೂರಿನ ಚರಮೂರ್ತಿ ಷ॥ ಬ್ರಂ॥ ಶ್ರೀ ಬಸವಲಿಂಗ ಸ್ವಾಮಿಗಳು. ಬಳ್ಳಾರಿಯ ಶ್ರೀ ಸಿ. ವ. ಚನ್ನಬಸವೇಶ್ವರ ಮತ್ತು ಶ್ರೀ ಎಂ. ಜಿ. ನಂಜುಂಡಾರಾಧ್ಯರು ಮುಖ್ಯರು. ಶ್ರೀ ಸಿ. ವ. ಚನ್ನಬಸವೇಶ್ವರರ 'ಪುರುಷಸೂಕ್ತ ಭಾಷ್ಯ'ದ ಕನ್ನಡ ಟೀಕೆಯನ್ನು ಹಾಲ್ವಿ ಶ್ರೀಮಚ್ಚರಣಗಿರಿ ಬೃಹನ್ಮಠದ ಶ್ರೀಗಳು ಪ್ರಕಾಶಪಡಿಸಿದ್ದಾರೆ (೧೯೫೯). ಶ್ರೀ ನಂಜುಂಡಾರಾಧ್ಯರು ಪ್ರಕಟಿಸಿರುವ 'ವೈದಿಕ ಷಟ್‌ಸ್ಥಲ ಶಿವಪೂಜಾವಿಧಿ'ಯಲ್ಲಿ 'ಪುರುಷಸೂಕ್ತ'ಕ್ಕೆ ಕನ್ನಡ ಟೀಕೆಯಿದೆ. ಇನ್ನೂ ಕಾಶೀಕಾಂಡ ಚನ್ನವೀರದೇವನು 'ಕಾಶಕೃತ್ಸ್ನವ್ಯಾಕರಣ, ಸಾರಸ್ವತ ವ್ಯಾಕರಣ, ಶ್ರೀರುದ್ರನಮಕ-ಚಮಕ ಮತ್ತು ವೀರಮಾಹೇಶ್ವರತಂತ್ರ'ಗಳಿಗೆ ಕನ್ನಡ ಟೀಕೆ ಬರೆದಿರುವುದಾಗಿ ತಿಳಿದು ಬಂದಿದೆ.

## ನಮಕ-ಚಮಕ ಸಹಿತ ಶಿವಪೂಜಾ ವಿಧಿಗಳಿಗೆ ಕನ್ನಡ ಟೀಕೆಗಳು

ಸೋಸಲೆ ರೇವಣಾರಾಧ್ಯರು (೧೬೨೩) ಶ್ರೀರುದ್ರ ನಮಕ-ಚಮಕಗಳಿಗೆ ಕನ್ನಡದಲ್ಲಿ ಟೀಕೆ ಬರೆದು ಪ್ರಕಟಿಸಿರುವ 'ಶಾಂತಮೂರ್ತಿ ಪ್ರಕಾಶಿಕಾ' ಎಂಬ ಗ್ರಂಥವು ಸುಪ್ರಸಿದ್ಧ. ಅನಂತರ ಕೆಲವರು ವಿದ್ವಾಂಸರು ಶ್ರೀರುದ್ರನಮಕ-ಚಮಕಗಳಿಗೆ ಕನ್ನಡ ವ್ಯಾಖ್ಯೆ ಬರೆದಿದ್ದಾರೆ. ಇವುಗಳಲ್ಲಿ ಶ್ರೀ ಎಂ. ಜಿ. ನಂಜುಂಡಾರಾಧ್ಯರ ಎಲ್ಲ ವೇದಮಂತ್ರಗಳಿಗೂ ಕನ್ನಡ ಟೀಕೆಯಿರುವ "ಷಟ್‌ಸ್ಥಲವೈದಿಕಶಿವಪೂಜಾವಿಧಿ" ಮುಖ್ಯವೆನಿಸಿದೆ.

## ಭಗವದ್ಗೀತಾಭಾಷ್ಯ ಮತ್ತು ಅದರ ಕನ್ನಡ ಟೀಕೆಗಳು

ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು ಭಗವದ್ಗೀತೆಗೆ ಸಂಸ್ಕೃತ ಮತ್ತು ಕನ್ನಡಗಳಲ್ಲಿ ಟೀಕೆ ಬರೆದಿದ್ದಾರೆ (೧೯೬೫). ಇದು ಚಿತ್ರದುರ್ಗದ ಬೃಹನ್ಮಠದಿಂದ ಪ್ರಕಟವಾಗಿದೆ. ಶ್ರೀ ಎಂ. ಜಿ. ನಂಜುಂಡಾರಾಧ್ಯರು ಭಗವದ್ಗೀತೆಯ ಮೇಲೆ "ಗೀತೆ, ಅಂತರ್ವಾಣಿ ಮತ್ತು ಗೀತೆಯ ಅಂತರ್ವಾಣಿ" ಎಂಬ ಕನ್ನಡ ಟೀಕೆ ಬರೆದಿದ್ದಾರೆ. ಇದರಲ್ಲಿ ಗೀತೆಯ ಮೂಲ, ಶೈವಾಗಮ ಮತ್ತು ಭಗವದ್ಗೀತೆಗಳಿಗೆ ಇರುವ ಶ್ಲೋಕಗಳ ಹೋಲಿಕೆ ಮತ್ತು ಶ್ಲೋಕಾನುಕ್ರಮಣಿಕೆಗಳ ಅನುಬಂಧಗಳಿವೆ. ಈ ಗ್ರಂಥಕ್ಕೆ ಸಂತ ವಿನೋಬಾ ಅವರ ಆಶೀರ್ವಚನವಿದೆ. ೧೯೫೮ರಲ್ಲಿ ಇದು ಪ್ರಕಟಗೊಂಡಿದೆ. ಇದರ ಹಿಂದಿ ಭಾಷಾಂತರವು ಇನ್ನು ಪ್ರಕಟವಾಗಿಲ್ಲ.

## ಶಿವಗೀತೆ, ಸಿದ್ಧಾಂತ ಶಿಖಾಮಣಿ ಇತ್ಯಾದಿ ಕನ್ನಡ ಟೀಕಾ

ಆಸ್ಥಾನ ವಿದ್ವಾನ್ ಶ್ರೀ ಎಚ್. ಗಂಗಾಧರಶಾಸ್ತ್ರಿಗಳು ಶಿವಗೀತೆಗೆ ಕನ್ನಡ ಟೀಕೆ ಬರೆದಿದ್ದಾರೆ. ಇದು ಶ್ರೀಜಯಚಾಮರಾಜೇಂದ್ರ ಗ್ರಂಥಮಾಲೆಯಲ್ಲಿ ಪ್ರಕಟಗೊಂಡಿದೆ (೧೯೫೦)."ಗುರುಗೀತೆ" (ಕನ್ನಡ ಟೀಕೆ) ಪಂಚಾಚಾರ್ಯ ಪ್ರಭಾ ಸಂ॥ ಪಂ॥ ಶ್ರೀ ಮಹಾದೇವಯ್ಯನವರು ಇದರ ಪ್ರಕಾಶಕರು. "ಸಿದ್ಧಾಂತಶಿಖಾಮಣಿ" (ಕನ್ನಡ ಟೀಕೆ) ವೀರಶೈವ ಸಿದ್ಧಾಂತಪ್ರತಿಪಾದಕವಾದ ಪ್ರಕರಣ ಗ್ರಂಥಗಳಲ್ಲಿ "ಸಿದ್ಧಾಂತಶಿಖಾಮಣಿ"ಗೆ ಅಗ್ರಮಾನ್ಯತೆಯಿದೆ. ಅದರಲ್ಲಿ "ಏಕೋತ್ತರಶತ(೧೦೧)ಸ್ಥಲ"ದ ವಿಸ್ತಾರವಾದ ವಿವರಣೆ ಇದೆ. ಬ್ರಹ್ಮಸೂತ್ರಗಳಲ್ಲಿ ಬಾದರಾಯಣರು ಬ್ರಹ್ಮತತ್ತ್ವದಿಂದ ಆರಂಭಿಸಿ, ಜೀವ ಮತ್ತು ಜಗತ್ತುಗಳಿಗೆ ಇರುವ ಬ್ರಹ್ಮಸಂಬಂಧವನ್ನು ಕುರಿತು ವಿಚಾರ ಮಾಡಿದ್ದಾರೆ. ಆದರೆ ಸಿದ್ಧಾಂತಶಿಖಾಮಣಿಯಲ್ಲಿ ಮೊದಲನೆಯ 'ಪಿಂಡಸ್ಥಲ'ದಲ್ಲಿ ಜೀವತತ್ತ್ವದಿಂದ ಆರಂಭಿಸಿ, ಜೀವನು ಗುರುಮುಖದಿಂದ ಶಿವದೀಕ್ಷೆ ಪಡೆದು ಜಗತ್ತನ್ನು ಬೆಳಗಿ, ಕಡೆಗೆ ಬ್ರಹ್ಮ(ಶಿವ)ನಲ್ಲಿ ಅವಿರಳಸಾಮರಸ್ಯವನ್ನು ಪಡೆದು ನಿತ್ಯಸುಖಿಯಾಗುವ ವೈಶಿಷ್ಟ್ಯವನ್ನು ಸಾಧಿಸಿದೆ. ಆದ್ದರಿಂದಲೇ ಇದು 'ಬ್ರಹ್ಮಮೀಮಾಂಸೆ'ಗೆ ಬದಲಾಗಿ 'ಜೀವನಸಿದ್ಧಾಂತ' ಅಥವಾ 'ಜೀವಮೀಮಾಂಸೆ' ಎನಿಸಿದೆ. ಇದು ಮಣಿಕಾರನ ಪ್ರತ್ಯಗ್ರ ವಿಚಾರಸರಣಿಯ ಕೃತಿ. ಇದು ಪಿಂಡಸ್ಥಲದಿಂದ ಆರಂಭವಾಗಿ "ಜ್ಞಾನಶೂನ್ಯ" ಸ್ಥಲದಲ್ಲಿ ಮುಕ್ತಾಯಗೊಂಡಿದೆ. ಇದರಲ್ಲಿ 'ಚರಮಶರೀರಿ' ಎನಿಸಿದ ಸುಸಂಸ್ಕೃತ, ಪರಿಪಕ್ವವಾದ ಜೀವನು ಶಿವನಾಗುವ ಕ್ರಮವಿಕಾಸವನ್ನು ಸೂಚಿಸುವ ೧೦೧ ಸ್ಥಲಗಳ ವಿವರಣವಿದೆ.

ಸಿದ್ಧಾಂತಶಿಖಾಮಣಿಯ ಕರ್ತೃ ಶಿವಯೋಗಿ ಶಿವಾಚಾರ್ಯರು. ಇವರ ಕಾಲದ ಬಗ್ಗೆ ಅಭಿಪ್ರಾಯಭೇದಗಳಿವೆ. ಬಿಜಾಪುರ ಜಿಲ್ಲೆ, ಇಂಡಿ ತಾಲೂಕಿನಲ್ಲಿರುವ ಸಾಲುಹಟ್ಟಿ ಎಂಬಲ್ಲಿ ಹಿಂದೆ (ಕ್ರಿ.ಶ. ಸು. ೬೦೦–೮೦೦) ವರೆಗೆ

ಪ್ರಸಿದ್ಧವಾಗಿದ್ದ ಬಾದಾಮಿಯ ಇಮ್ಮಡಿ ಪುಲಿಕೇಶಿ ಸ್ಥಾಪಿಸಿದ್ದ ವಿಶ್ವವಿದ್ಯಾನಿಲಯದಲ್ಲಿ ಅವರು (ಶಿವಯೋಗಿ ಶಿವಾಚಾರ್ಯರು) ಪ್ರಾಚಾರ್ಯರಾಗಿದ್ದರು ಎಂಬ ಐತಿಹ್ಯವಿದೆ.[4] ಅನಂತರ ಕ್ರಿ.ಶ. ಸು. ೧೦೬೦ರಲ್ಲಿದ್ದರೆಂದು ತಿಳಿದು ಬಂದಿರುವ ಶ್ರೀಪತಿ ಪಂಡಿತರ ಶ್ರೀಕರಭಾಷ್ಯ[5]ದಲ್ಲಿ ಸಿದ್ಧಾಂತಶಿಖಾಮಣಿಯ ಶ್ಲೋಕಗಳನ್ನು ಉದಾಹರಿಸಿರುವುದ ರಿಂದ ಸಿದ್ಧಾಂತಶಿಖಾಮಣಿಯ ಕಾಲ ಕ್ರಿ.ಶ. ಸು. ೮೦೦ರಿಂದ ೧೩೦೦ ಎಂದು ಸ್ಥೂಲವಾಗಿ ಇಟ್ಟುಕೊಳ್ಳಬಹುದು.

ಕವಿವಂಶ–ಶಿವಯೋಗಿ, ಮಗ–ಮುದ್ದದೇವ,[6] ಮಗ ಸಿದ್ಧನಾಥ, ಅವರ ಮಗನೇ ಶಿವಯೋಗಿ ಶಿವಾಚಾರ್ಯ.

ಸಿದ್ಧಾಂತಶಿಖಾಮಣಿಯ ಮೊದಲ ನಾಲ್ಕು ಪರಿಚ್ಛೇದಗಳಲ್ಲಿ ಶಿವ-ಶಕ್ತಿಯರ ಸ್ತುತಿ, ಕವಿಯ ವಂಶವರ್ಣನ, ರೇಣುಕಾಚಾರ್ಯರ ಅವತಾರ ಮತ್ತು ಅಗಸ್ತ್ಯಸಮಾಗಮಗಳು ಉಕ್ತವಾಗಿವೆ. ಐದರಿಂದ ಇಪ್ಪತ್ತು ಪರಿಚ್ಛೇದಗಳಲ್ಲಿ ಪಿಂಡಾದಿ-ಜ್ಞಾನಶೂನ್ಯಾಂತವಾದ ನೂರೊಂದು ಸ್ಥಲಗಳು ಉಕ್ತವಾಗಿವೆ. ಕಡೆಯ ಪರಿಚ್ಛೇದದಲ್ಲಿ ವಿಭೀಷಣನ ಪ್ರಾರ್ಥನೆಯಂತೆ ರೇಣುಕರು ಮೂರುಕೋಟಿ ಶಿವಲಿಂಗಪ್ರತಿಷ್ಠೆ ಮಾಡಿದ್ದು ಮತ್ತು ಅವರ ಲಿಂಗೈಕ್ಯಗಳು ವಿವರಿಸ ಲ್ಪಟ್ಟಿವೆ.

ಈ ಮಹಾಗ್ರಂಥಕ್ಕೆ ಶ್ರೀ ಮರಿತೋಂಟದಾರ್ಯರು (ಕ್ರಿ.ಶ. ೧೬೮೦) ಸಂಸ್ಕೃತದಲ್ಲಿಯೂ ಸೋಸಲೆ ರೇವಣಾ ರಾಧ್ಯರು (ಕ್ರಿ.ಶ. ಸು. ೧೬೨೩) ಕನ್ನಡದಲ್ಲಿಯೂ ಟೀಕೆಗಳನ್ನು ಬರೆದಿದ್ದಾರೆ. ರೇವಣಾರಾಧ್ಯರ ಕನ್ನಡಟೀಕೆ ಅಮುದ್ರಿತ. ಲಿಂ॥ ಪಿ, ಆರ್. ಕರಿಬಸವಶಾಸ್ತ್ರಿಗಳು ಸಂಸ್ಕೃತ ವ್ಯಾಖ್ಯಾಸಹಿತ ಸಿದ್ಧಾಂತಶಿಖಾಮಣಿಯನ್ನು ಸಂಪಾದಿಸಿ (೧೮೮೦) ಕನ್ನಡ ಲಿಪಿಯಲ್ಲಿ ಪ್ರಕಟಿಸಿದರು. ಲಿಂ॥ ಎನ್. ಆರ್. ಕರಿಬಸವಶಾಸ್ತ್ರಿಗಳು ಈ ಗ್ರಂಥಕ್ಕೆ ಕನ್ನಡದಲ್ಲಿ ತಾತ್ಪರ್ಯವನ್ನು ಬರೆದು (೧೯೨೧) ಪ್ರಕಟಿಸಿದರು. ಇವೆರಡೂ ಶ್ರೀ ಮರಿತೋಂಟದಾರ್ಯರ ಸಂಸ್ಕೃತ ವ್ಯಾಖ್ಯಾನ ವನ್ನು ಆಧರಿಸಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಕನ್ನಡ ಟೀಕೆಯ ತರುವಾಯ ಸಂಸ್ಕೃತ ಟೀಕೆ ಬಂದದ್ದು. ಸೋಸಲೆ ರೇವಣಾರಾಧ್ಯರು ತಮ್ಮ ಟೀಕೆಯ ಕಡೆಯಲ್ಲಿ "ಇತಿ ಶ್ರೀಮದ್ವಿವಿಧವೇದಶಿರಃ ಶಿವಾಗಮ ಪುರಾಣ ಪ್ರಭೃತಿಪ್ರಭೂತ ವಿದ್ಯಾಪ್ರತಿಪಾದಿತ ಶ್ರೀ ಶಿವಾದ್ವೈತಸನ್ಮಾರ್ಗ ಪ್ರಸಿದ್ಧ ವೀರಶೈವ ಷಟ್‌ಸ್ಥಲ ಶಿವ ಯೋಗ ಸ್ಥಾಪನಾಚಾರ್ಯವರ್ಯ ಶ್ರೀ ಸೋಸಲೆ ರೇವಣಾರಾಧ್ಯದೇಶಿಕ ಸಾರ್ವಭೌಮ ಪಾಣಿಪದ್ಮಸಂಭವೇನ, ತದಾತ್ಮಜ ರೇವಣಸಿದ್ಧೇಶ್ವರಾತ್ಮಜೇನ ರೇವಣಾರಾಧ್ಯನಾಮ್ನಾ ಆಚಾರ್ಯೇಣ ವಿರಚಿತಾಯಾಂ ಶ್ರೀ ವೀರಶೈವ ಧರ್ಮ ನಿರ್ಣಯೇ ರೇಣುಕಾಗಸ್ತ್ಯಸಂವಾದ ಸಿದ್ಧಾಂತಶಿಖಾಮಣಿ ಟೀಕಾಯಾಂ ಸಿದ್ಧಾರ್ಥಸಂಬೋಧಿನ್ಯಾಖ್ಯಾಯಾಂ ಅನುಕ್ರಮಪ್ರಸಂಗೋ ನಾಮ ಪ್ರಥಮಃ ಪರಿಚ್ಛೇದಃ" ಎಂದು ಹೇಳಿಕೊಂಡಿದ್ದಾರೆ. ಇದರಲ್ಲಿ ಒಟ್ಟು ೧೪೯೪ ಶ್ಲೋಕ ಗಳಿವೆ. ರೇವಣಾರಾಧ್ಯರ ಹಸ್ತಪ್ರತಿಯು

> ಯಃ ಸೋಮೇಶ್ವರಲಿಂಗಭೂಃ ತ್ರಿಜಗತಾಂ ಯಂ ದೇಶಿಕೇಂದ್ರಂ ವಿದುಃ।
> ಯೇನಾ . . . ಕುಂಭಸಂಭವ ಮುನಿರ್ಯಸ್ಮೈ ನಮಸ್ಕುರ್ಮಹೇ ॥
> ಯಸ್ಮಾದ್ದೀವ್ಯತಿ ವೀರಶೈವಸಮಯೋ ಯಸ್ಯಾ(?)ಮೃತಂ ಪೂಜಯಾ।
> ಯಸ್ಮಿಂಲಿಂಗ ನಿಜೈಕ್ಯತಾತಮವಸದ್ ಶ್ರೀ ರೇಣುಕಾಚಾರ್ಯಮಾಂ ॥

ಎಂದು ಸಪ್ತವಿಭಕ್ತಿಕ ಶ್ಲೋಕದಿಂದ ಆರಂಭವಾಗುತ್ತದೆ. ಕಡೆಯಲ್ಲಿ:

> ಇತ್ಯುಕ್ತೇ ಗಣನಾಯಕೇನ ಸಹಸಾ ಲಿಂಗಾತ್ ತತಃ ಶಾಂಕರಾತ್।
> ವತ್ಸಾಗಚ್ಛ ಮಹಾನುಭಾವ ಭವತೋ ಭಕ್ತ್ಯಾ ಪ್ರಸನ್ನೋಽಸ್ಮ್ಯಹಂ।
> ದಿವ್ಯೋ ದುಂದುಭಯೋ ನನಾದ ಗಗನೇ ಪುಷ್ಪಂ ವವರ್ಷುರ್ಗಣಾಃ ॥

ಎಂಬಲ್ಲಿಗೆ ಮಾತೃಕೆ ಮುಗಿದಿದೆ.

ಈಚೆಗೆ ಷ॥ ಬ್ರ॥ ಶ್ರೀ ಡಾ. ಚಂದ್ರಶೇಖರಶರ್ಮಾ. ಹಿರೇಮಠ (ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅನುಸಂಧಾತರಾಗಿರುವ) ಇವರು "ಸಿದ್ಧಾಂತಶಿಖಾಮಣಿ ಸಮುಯಸಮೀಕ್ಷಾ" ಎಂಬುದನ್ನು ಪ್ರಕಟಿಸಿ, ಸಿದ್ಧಾಂತಶಿಖಾಮಣಿಯ ಕಾಲದ ಬಗ್ಗೆ ವಿಚಾರ ಮಾಡಿದ್ದಾರೆ.

---

4 ಸಿದ್ಧಾಂತಶಿಖಾಮಣಿಯ ಸೌಂದರ್ಯದರ್ಶನ, ಡಾ. ಜ. ಚ. ನಿ. ವಿರಚಿತ (೧೯೭೩), ಮೊದಲಂದ (ಪು. ೧೧–೧೨).

5 ಶ್ರೀಕರಭಾಷ್ಯಭೂಮಿಕೆ (ಪು. ೧೧೮–೧೧೯), ಮೈಸೂರು ವಿಶ್ವವಿದ್ಯಾನಿಲಯ ಪ್ರಕಟನೆ, ೧೯೭೭.

6 ಈ ಮುದ್ದದೇವನು ರೇವಣಸಿದ್ಧೇಶ್ವರನ (ಕ್ರಿ.ಶ. ಸು. ೧೧೦೦) ದೃಷ್ಟಿಗರ್ಭಸಂಭವ ಸಿದ್ಧರಾಮೇಶ್ವರನ ವಂಶೀಯ ನೆಂಬುದಕ್ಕೆ ಸರಿಯಾದ ಆಧಾರಗಳಿಲ್ಲ. 'ಮಣಿಕಾಂತಿ' (ಡಾ. ಜ.ಚ.ನಿ.) ಮೊದಲ್ನುಡಿ (ಪು. ೧೬–೨೦) ಮುಂತಾದ ವಿದ್ವಾಂಸರ ಉಲ್ಲೇಖಗಳು ಗಮನಾರ್ಹ.

## ಜೀವನ ಸಿದ್ಧಾಂತ

ಡಾ. ಜ. ಚ. ನಿ. ಅವರು ಸಿದ್ಧಾಂತಶಿಖಾಮಣಿಯ ಮೇಲೆ ಬರೆದಿರುವ ಸು. ೪೦೦೦ ಪುಟಗಳ ಆರು ಸಂಪುಟಗಳ ಮೇರುಕೃತಿ ಕನ್ನಡಕ್ಕೆ ಭೂಷಣಪ್ರಾಯವಾಗಿದೆ. ಈ ದಿಸೆಯಲ್ಲಿ ಈ ಪೂಜ್ಯರು "ಮಣಿಕಾಂತಿ" (ಸಿದ್ಧಾಂತ ಶಿಖಾಮಣಿಯ ಗದ್ಯಾನುವಾದ) ೧೯೫೧, "ಮಣಿಮುಕುರ" (ಸರಳರಗಳೆಯ ಪದ್ಯಾನುವಾದ) ೧೯೫೬, "ಮಣಿವಚನ" ಗಳು (ಕನ್ನಡ ವಚನರೂಪ) ೧೯೭೭, "ಸಿದ್ಧಾಂತಶಿಖಾಮಣಿಯ ಸೌಂದರ್ಯದರ್ಶನ" (೧೯೬೬) ಮುಂತಾಗಿ ಅನೇಕ ಗ್ರಂಥಗಳನ್ನು ಬರೆದು ಮಣಿಯ ಬೆಳಗನ್ನು, ಅದರ ಸಾರಸೌರಭವನ್ನು ಹೊಸದಾಗಿಸಿದ್ದಾರೆ. ಈ ಗ್ರಂಥಗಳ ಮೇಲೆ ಬಂದಿರುವ ವಿಮರ್ಶಗ್ರಂಥಗಳಲ್ಲಿ 'ಜೀವನಸಿದ್ಧಿ' ಮತ್ತು 'ಮಣಿಮುಕುರ ಪ್ರಭೆ'ಗಳು ಮುಖ್ಯವಾಗಿವೆ. ಇವು ಅನೇಕ ವಿದ್ವಾಂಸರ ವಿಚಾರಪರಿಪ್ಲುತ ವಿಚಾರವನ್ನು ಚರ್ಚಿಸಿವೆ.

## ಸಿದ್ಧಾಂತಶಿಖಾಮಣಿ (ಕನ್ನಡ ಟೀಕೆ)

ಟೀಕಾಕಾರರು ಸೋಸಲೆ ರೇವಣಾರಾಧ್ಯರು (೧೬೨೩). "ಸಿದ್ಧಾಂತಶಿಖಾಮಣಿ"ಯ ಕನ್ನಡ ಟೀಕೆ: ಕರ್ತೃ ಉಜ್ಜಿನೀಶ (ಸು. ೧೫೫೦) ಎಂಬುವರು (ಲಿಂಗವಂತ ಕವಿಗಳು, ಪು. ೭೩). "ಏಕೋತ್ತರ ಶತಸ್ಥಲ" (ಕನ್ನಡದಲ್ಲಿ): ಈ ಹಿಂದೆ ಹೇಳಿರುವಂತೆ ಸಿದ್ಧಾಂತಶಿಖಾಮಣಿಯಲ್ಲಿ ಉಕ್ತವಾಗಿರುವ ನೂರೊಂದು ಸ್ಥಲಗಳನ್ನು ಮಗ್ಗೆಮಾಯಿ ದೇವರು (೧೪೩೦) ಕನ್ನಡದಲ್ಲಿ ರಚಿಸಿದ್ದಾರೆ. ಇದು ವಾರ್ಧಿಕ ಷಟ್ಪದಿಯಲ್ಲಿದೆ.

೧೯೫೯ರಲ್ಲಿ ಪ್ರಕಟವಾದ ಲಿಂ॥ ಎಂ. ಎಲ್. ನಾಗಣ್ಣನವರ ಸಿದ್ಧಾಂತಶಿಖಾಮಣಿ ಕನ್ನಡ ಅರ್ಥಸಹಿತ (ಎರಡು ಸಂಪುಟಗಳು). ಸಂಸ್ಕೃತ ವ್ಯಾಖ್ಯಾನವು ೧೯೬೧ರಲ್ಲಿ ಪ್ರಕಟವಾಗಿದೆ. ಗದುಗಿನ ಶ್ರೀ ಶಿವಾನಂದಸ್ವಾಮಿಗಳ ಶಿಷ್ಯರಾದ ವೇದಾಂತಕೇಸರಿ ಶ್ರೀ ಮಲ್ಲಿಕಾರ್ಜುನಸ್ವಾಮಿಗಳವರ "ಸಿದ್ಧಾಂತಶಿಖಾಮಣಿ ಪ್ರವಚನ"ವು ಅವಲೋಕನೀಯ ಗ್ರಂಥ. ಇದರಲ್ಲೂ ಸಿದ್ಧಾಂತಶಿಖಾಮಣಿಯ ಮೂಲ, ಅನ್ವಯಾರ್ಥ ಮತ್ತು ಭಾಷ್ಯಗಳು ಸಂಕಲಿತವಾಗಿವೆಯಲ್ಲದೆ ತುಲನಾತ್ಮಕ ದೃಷ್ಟಿಯಿಂದ ಸಿದ್ಧಾಂತಶಿಖಾಮಣಿಯನ್ನು ವಿವೇಚಿಸಲಾಗಿದೆ, ೧೯೦೫ರಲ್ಲಿ ಸೊಲ್ಲಾಪುರದ ಶ್ರೀವಾರದ ಗ್ರಂಥಮಾಲೆಯಲ್ಲಿ ಸಿದ್ಧಾಂತಶಿಖಾಮಣಿಯು ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳ ಮರಾಠಾ ಅನುವಾದದೊಂದಿಗೆ ಪ್ರಕಟವಾಗಿದೆ. ಈಚೆಗೆ ೧೯೬೫ರಲ್ಲಿ "ಜಗದ್ಗುರು ರೇಣುಕಗೀತಾ" ಇಂಗ್ಲಿಷ್-(ಡಾ. ಎಂ. ಶಿವಕುಮಾರಸ್ವಾಮಿ) ಮತ್ತು ೧೯೭೨ರಲ್ಲಿ ಡಾ. ಪುಟ್ಟರಾಜ ಗವಾಯಿಗಳ ಸಿದ್ಧಾಂತಶಿಖಾಮಣಿಯ ಹಿಂದಿ ಭಾಷಾಂತರಗಳು ಬಂದಿವೆ.

"ಏಕೋತ್ತರ ಶತಸ್ಥಲ" (ಕನ್ನಡ), ಮಹಲಿಂಗದೇವ (ಸು. ೧೪೨೫), "ಏಕೋತ್ತರ ಶತಸ್ಥಲ" ಜಕ್ಕಣಾರ್ಯ (೧೪೨೫), "ಏಕೋತ್ತರ ಶತಸ್ಥಲ" ಗಿರೀಂದ್ರ ಟೀಕೆ (ಸು. ೧೪೩೦).

**ಗಣಭಾಷಿತ ರತ್ನಮಾಲೆ:** ಗುಬ್ಬಿಮಲ್ಲಣ್ಣ (ಸು. ೧೪೭೫) ಮುಂತಾದ ಗ್ರಂಥಗಳು ಸಂಸ್ಕೃತ ಸಿದ್ಧಾಂತ ಶಿಖಾಮಣಿಯ ೧೦೧ ಸ್ಥಲಗಳಮೇಲೆ ರಚಿಸಿದ ಕನ್ನಡ ಟೀಕೆಗಳೇ ಆಗಿವೆ.

**ಅನಾದಿ ವೀರಶೈವಾಚಾರ ಸಂಗ್ರಹ** (ಕನ್ನಡ ಟೀಕೆ, ಹಸ್ತಪ್ರತಿ): ಕರ್ತೃ-ಸಂಪಾದನೆ ಸಿದ್ಧವೀರಣಾರ್ಯ (ಸು. ೧೬೦೦). ಈತ ಮೊದಲು ಸಂಸ್ಕೃತದಲ್ಲಿ ಈ ಗ್ರಂಥವನ್ನು ಬರೆದು ಅದಕ್ಕೆ ತಾನೇ ಕನ್ನಡ ಟೀಕೆಯನ್ನು ಬರೆದಿದ್ದಾನೆ. ಇದರ ಸಂಸ್ಕೃತ ಮೂಲವು ಮರಾಠಿ ಟೀಕೆಯೊಡನೆ ಸೊಲ್ಲಾಪುರದ ವಾರದ ಗ್ರಂಥಮಾಲೆಯಲ್ಲಿ ಮುದ್ರಿತವಾಗಿದೆ. ಮೈಸೂರು ಪ್ರಾಚ್ಯ ವಿದ್ಯಾಸಂಶೋಧನ ಸಂಸ್ಥೆಯಲ್ಲಿ (A. 332, I & II) ಇದರ ಎರಡು ಹಸ್ತಪ್ರತಿಗಳಿವೆ. ಇದರಲ್ಲಿ ೨೮ ಪ್ರಕರಣಗಳೂ ೧೮೫೦ ಶ್ಲೋಕಗಳೂ ಇವೆ. ಇದರ ಪ್ರಕರಣಗಳು—

| | | |
|---|---|---|
| ೧. ಪೀಠಿಕಾಸ್ಥಲ | ೧೦. ಪಿಂಡಜ್ಞಾನಸ್ಥಲ | ೧೯. ಭಸ್ಮಮಾಹಾತ್ಮ್ಯಸ್ಥಲ |
| ೨. ಅನಾದಿ ಭಕ್ತಸ್ಥಲ | ೧೧. ಸಂಹಾರಹೇಯಸ್ಥಲ | ೨೦. ರುದ್ರಾಕ್ಷಮಾಹಾತ್ಮ್ಯಸ್ಥಲ |
| ೩. ಅನಾದಿ ಜಂಗಮಸ್ಥಲ | ೧೨. ಗುರುಕಾರುಣ್ಯಸ್ಥಲ | ೨೧. ಪಂಚಾಕ್ಷರೀ ಮಾಹಾತ್ಮ್ಯಸ್ಥಲ |
| ೪. ಶೂನ್ಯಲಿಂಗಸ್ಥಲ | ೧೩. ಲಿಂಗಧಾರಣಸ್ಥಲ | ೨೨. ಭಕ್ತಸ್ಥಲ |
| ೫. ನಿಷ್ಕಲ ಲಿಂಗಸ್ವರೂಪಸ್ಥಲ | ೧೪. ಗುರುಮಾಹಾತ್ಮ್ಯಸ್ಥಲ | ೨೩. ಮಾಹೇಶ್ವರಸ್ಥಲ |
| ೬. ಮಹಾಲಿಂಗಸ್ಥಲ | ೧೫. ಲಿಂಗಮಾಹಾತ್ಮ್ಯಸ್ಥಲ | ೨೪. ಪ್ರಸಾದಿಸ್ಥಲ |
| ೭. ಪ್ರಣವಲಿಂಗಸ್ಥಲ | ೧೬. ಜಂಗಮಮಾಹಾತ್ಮ್ಯಸ್ಥಲ | ೨೫. ಪ್ರಾಣಲಿಂಗಿಸ್ಥಲ |
| ೮. ವಿಶ್ವೋತ್ಪತ್ತಿಸ್ಥಲ | ೧೭. ಪ್ರಸಾದಮಾಹಾತ್ಮ್ಯಸ್ಥಲ | ೨೬. ಶರಣಸ್ಥಲ |
| ೯. ಪಿಂಡಸ್ಥಲ | ೧೮. ಪಾದೋದಕಮಾಹಾತ್ಮ್ಯಸ್ಥಲ | ೨೭. ಐಕ್ಯಸ್ಥಲ |

ಮಾದರಿಗಾಗಿ ಒಂದು ಉದಾಹರಣೆ—

> ಓಂ ನಮಃ ಶ್ರೀವೃಷೇಂದ್ರಾಯಾನಾದಿ ಭಕ್ತಸ್ವರೂಪಿಣೇ ।
> ಶಿವಾಷ್ಟಾವರಣಾಂಗಾಯ ಷಟ್‌ಸ್ಥಲಾಧ್ವಪ್ರವರ್ತಿನೇ ॥ ೧ ॥

ಟೀಕು—ಅನಾದಿ ಭಕ್ತಸ್ವರೂಪಿಣೇ–ಅನಾದಿ ಭಕ್ತಾಕೃತಿಯುಳ್ಳ, ಶಿವಾಷ್ಟಾವರಣಾಯ–ಶಿವಯುಕ್ತವಾದ ವಿಭೂತ್ಯಾದ್ಯಷ್ಟಾವರಣಂಗಳೇ ಅವಯವಂಗಳಾಗುಳ್ಳ, ಷಟ್‌ಸ್ಥಲಾಧ್ವಪ್ರವರ್ತಿನೇ– ಭಕ್ತಾದಿ ಷಟ್‌ಸ್ಥಲಮಾರ್ಗದಲ್ಲಿ ಪ್ರವೃತ್ತಿಯುಳ್ಳ, ಶ್ರೀವೃಷೇಂದ್ರಾಯ– ಶ್ರೀ–ಐಶ್ವರ್ಯೋಪಲಕ್ಷಿತನಾದ, ವೃಷೇಂದ್ರಾಯ– ವೃಷಭೇಶ್ವರಂಗೋಸುಗ, ಓಂ ನಮಃ–ಪ್ರಣವಸಹಿತವಾದ ನಮಸ್ಕಾರವು.

ವೇದ-ಉಪನಿಷತ್ತು ಆಗಮಪುರಾಣಾದಿಗಳ ಆಧಾರದಮೇಲೆ ವಿಷಯನಿರೂಪಣ ಮಾಡಲಾಗಿದೆ. ಕಡೆಯಲ್ಲಿ— "ಇತಿ ಶ್ರೀ ವೀರಶೈವ ಷಟ್‌ಸ್ಥಲಮಾರ್ಗಸ್ಥಾಪನಾಗ್ರಗಣ್ಯ ಶ್ರೀಸಂಪಾದನೆ ಸಿದ್ಧವೀರಾಖ್ಯ ಶಿವಯೋಗೀಂದ್ರ ವಿರಚಿತೇ ಅನಾದಿವೀರಶೈವಸಾರಸಂಗ್ರಹೇ . . . ." ಎಂಬ ಗದ್ಯವಿದೆ.

### ಅನುಭವಸೂತ್ರ ಮತ್ತು ವಿಶೇಷಾರ್ಥ ಪ್ರಕಾಶಿಕೆ (ಕನ್ನಡ ಟೀಕೆಗಳು)

ಈ ಎರಡು ಗ್ರಂಥಗಳು ಸಂಸ್ಕೃತದಲ್ಲಿವೆ. ಮಗ್ಗೆಮಾಯಿದೇವರು (೧೪೩೦) ರಚಿಸಿರುವ ಈ ಗ್ರಂಥಗಳಿಗೆ ಆಸ್ಥಾನವಿದ್ವಾನ್, ಕಳಾಪ್ರಪೂರ್ಣ ಲಿಂ॥ ವೈ. ನಾಗೇಶಶಾಸ್ತ್ರಿಗಳು ಕನ್ನಡದಲ್ಲಿ ಟೀಕೆ ಬರೆದಿದ್ದಾರೆ. ಇವು ಧಾರವಾಡದ ಶ್ರೀ ಬಾಲಲೀಲಾಮಹಾಂತ ಶಿವಯೋಗಿಗಳ ಗ್ರಂಥಮಾಲೆಯಲ್ಲಿ ಪ್ರಕಟವಾಗಿವೆ (೧೯೫೦, ೧೯೬೧). "ವಿಶೇಷಾರ್ಥ ಪ್ರಕಾಶಿಕೆ"ಗೆ ಉಜ್ಜನೀಶ (ಸು. ೧೫೦೦) ಎಂಬುವರು ಕನ್ನಡದಲ್ಲಿ ಟೀಕೆ ಬರೆದಿರುವುದಾಗಿ ತಿಳಿದುಬಂದಿದೆ (ಲಿಂಗವಂತ ಕವಿಗಳು, ಪು. ೭೩).

**ಅನುಭವಸೂತ್ರದ ಟೀಕಾ:** ಚನ್ನಮಲ್ಲಿಕಾರ್ಜುನದೇವ ; ಕಾಲ(?) ಗೊತ್ತಿಲ್ಲ (ನಂ. ೫೪, ಐ.ಕೆ.ಎಸ್.).

> ಶಮಿತವಿನಮದಾರ್ತಿಂ ಷಟ್‌ಸ್ಥಲೇ ಬ್ರಹ್ಮಮೂರ್ತಿಂ ।
> ಪ್ರವಿದಿತ ಗುರು ಪಾರಂಪರ್ಯವಿದ್ಯಾಬ್ಧಿಪಾರಂ ॥
> ವಿಮಲಚರಿತಪುಣ್ಯಂ ವೀರಶೈವಾಗ್ರಗಣ್ಯಂ ।
> ಪ್ರಣಮ ಗುರುವರೇಣ್ಯಂ ಪರ್ವತೇಂದ್ರಂ ಶರಣ್ಯಂ ॥

ಟೀಕು–ಶಮಿತವಿನಮದಾರ್ತಿಂ– ಶಾಂತಿಯನೆಯ್ದಿಸಲ್ಪಟ್ಟವರಾದ, ವಿನಮತ್– ನಮಸ್ಕಾರಮಾಡುವರುಗಳ, ಆರ್ತಿಂ– ದುಃಖವುಳ್ಳಾತನಾಗಿ. ಷಟ್. . . . ಬ್ರಹ್ಮಮೂರ್ತಿಂ– ಷಟ್‌ಸ್ಥಲವೆಂಬ ಬ್ರಹ್ಮ- ಶಿವತತ್ತ್ವದ ಮೂರ್ತಿಯಾದ . . . ." ಮುಂತಾಗಿ ವ್ಯಾಖ್ಯೆ ಮುಂದುವರೆದಿದೆ. ಅಂತ್ಯ "ಇತ್ಯನುಭವಸೂತ್ರೇ . . . . ಇತ್ಯಾರಾಧ್ಯಪ್ರಿಯಚನ್ನಮಲ್ಲಿಕಾರ್ಜುನ ದೇವನಾಮ್ನಾ ಕೃತಾಯಾಂ . . . ." ಎಂದು ಮುಗಿದಿದೆ.

ಅನುಭವಸೂತ್ರ ಮತ್ತು ವಿಶೇಷಾರ್ಥಪ್ರಕಾಶಿಕೆಗಳಲ್ಲಿ ಮೊದಲನೆಯದು ಅನುಭವಸೂತ್ರ. ಅದರಲ್ಲಿ ಪಾರಂಪರ್ಯ ಕ್ರಮ, ಸ್ಥಲನಿರ್ಣಯ, ಲಿಂಗಸ್ಥಲ, ಅಂಗಸ್ಥಲ. ಲಿಂಗಾಂಗಸಂಯೋಗ, ಸರ್ವಾಂಗಲಿಂಗಸಾಹಿತ್ಯ, ಅರ್ಪಣಸದ್ಭಾವ ಮತ್ತು ಕ್ರಿಯಾವಿಶ್ರಾಂತಿ ಎಂಬ ಎಂಟು ಅಧಿಕರಣಗಳಿವೆ. ಅದರಂತೆ ವಿಶೇಷಾರ್ಥಪ್ರಕಾಶಿಕೆಯಲ್ಲಿ— ಬ್ರಹ್ಮೋಪದೇಶ, ಷಟ್‌ಸ್ಥಲಬ್ರಹ್ಮಪೂಜಾ, ಪ್ರಸಾದಸದ್ಭಾವ, ಷಟ್‌ಸ್ಥಲಬ್ರಹ್ಮಪುರಶ್ಚರಣ ಮತ್ತು ದೇಹಾವಸಾನ ಎಂಬ ಐದು ಪ್ರಕರಣಗಳಿವೆ. ಕನ್ನಡ ಟೀಕೆಯಲ್ಲಿ ವಿಶೇಷ ವಿವರಣಗಳನ್ನು ಕೊಟ್ಟು ಸಮರ್ಥಿಸಲಾಗಿದೆ. ಮಾಯಿದೇವಪ್ರಭುಗಳು ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿದ್ದುದಾಗಿ ತಿಳಿದುಬಂದಿದೆ.

### ಶತಕತ್ರಯ ಕನ್ನಡ ಟೀಕೆ

ಮಾಯಿದೇವಪ್ರಭುಗಳು ಸಂಸ್ಕೃತದಲ್ಲಿ ತಾವು ಬರೆದ ಭಕ್ತಿ-ಜ್ಞಾನ-ವೈರಾಗ್ಯ ಎಂಬ ಮೂರು ಶತಕಗಳಿಗೆ ಸ್ವಯಂ ಅವರೇ ಕನ್ನಡದಲ್ಲಿ ವೃತ್ತಛಂದಸ್ಸಿನಲ್ಲಿ "ಶತಕತ್ರಯ" ಎಂಬ ಹೆಸರಿನಿಂದ ಭಾಷಾಂತರಿಸಿದ್ದಾರೆ. ಇವು ಕ್ರಮವಾಗಿ 'ಶಿವಾಧವಶತಕ', 'ಶಿವಾವಲ್ಲಭಶತಕ' ಮತ್ತು 'ಮಹದೈಪುರೀಶ್ವರ ಶತಕ'ಗಳೆಂದು ಪ್ರಸಿದ್ಧವಾಗಿವೆ. ಈ ಶತಕಗಳನ್ನು ಅಧಿಕರಿಸಿ, ಡಾ. ಜ.ಚ.ನಿ. ಅವರು "ಶತಕತ್ರಯ ಪ್ರವಚನ" ಎಂಬ ಬೃಹತ್ ವ್ಯಾಖ್ಯಾನವನ್ನು ಮತ್ತು (ಸರಳ ತಾತ್ಪರ್ಯಸಹಿತ) ಸಂಕ್ಷಿಪ್ತ ಕೈಪಿಡಿಯನ್ನು ಬರೆದಿದ್ದಾರೆ.

**ಶತಕತ್ರಯು ಟೀಕೆ:** ಈ ಗ್ರಂಥಕ್ಕೆ ತೋಂಟದ ಸಿದ್ಧಲಿಂಗದೇಶಿಕ (ವಿರಕ್ತ ತೋಂಟದಾರ್ಯ, ಸು. ೧೫೬೦) ಕೃತ ಕನ್ನಡ ಟೀಕೆಯಿದೆ. ಇದು ೧೯೨೫ರಲ್ಲಿ ಮೈಸೂರು ಸ್ಟಾರ್ ಪ್ರೆಸ್ಸಿನಲ್ಲಿ ಲಿಂ॥ ಎನ್. ಆರ್. ಕರಿಬಸವಶಾಸ್ತ್ರಿಗಳಿಂದ ಪರಿಷ್ಕರಿಸಿ ಮುದ್ರಿತವಾಗಿದೆ.

**ಶಿವಾದ್ವೈತಮಂಜರಿ** (ಕನ್ನಡ ಟೀಕಾಸಹಿತ)

ವೀರಶೈವಸಿದ್ಧಾಂತವನ್ನು ಸ್ಫುಟವಾಗಿ ತಿಳಿಸುವ ಪ್ರಕರಣ ಗ್ರಂಥಗಳಲ್ಲಿ ದಾರ್ಶನಿಕಶೈಲಿಯ "ಶಿವಾದ್ವೈತ ಮಂಜರಿ" ಮುಖ್ಯವಾದದ್ದು. ಕರ್ತೃ—ಸ್ವಪ್ರಭಾನಂದ ಶಿವಾಚಾರ್ಯರು. ನಾಥಾನಂದರ ಶಿಷ್ಯರು. ಇವರು ಕಾಶ್ಮೀರ ನಿವಾಸಿಗಳಿರಬಹುದೆಂದು ಊಹಿಸಲಾಗಿದೆ. ಏಕೆಂದರೆ ಕಾಶ್ಮೀರ ಶೈವಸಿದ್ಧಾಂತಕ್ಕೆ ಸಂಬಂಧಿಸಿದ ಸೋಮಾನಂದನ ಶಿವದೃಷ್ಟಿ, ಶಿವಸೂತ್ರ, ಶಿವಸೂತ್ರವಾರ್ತಿಕಾ,ಸ್ಪಂದಕಾರಿಕಾ,ತ್ರಿಂಶಿಕಾಶಾಸ್ತ್ರ, ಚಿದ್ಗಗನಚಂದ್ರಿಕಾ ಮತ್ತು ಪ್ರತ್ಯಭಿಜ್ಞಾ ಹೃದಯಗಳನ್ನು ಇದು ಅಧಿಕರಿಸಿರುವುದು ಕಂಡುಬರುತ್ತದೆ. ಈ ಗ್ರಂಥದಲ್ಲಿ ಅದ್ವೈತನಿರೂಪಣ (೧ನೇ ಪ್ರಕರಣ) ಅದ್ವೈತನಿರಾಸ (೨ನೇ ಪ್ರಕರಣ) ಮತ್ತು ಶಿವಾದ್ವೈತ ಪ್ರತಿಪಾದನ (೩ನೇ ಪ್ರಕರಣ) ಎಂಬ ಮೂರು ಪ್ರಕರಣಗಳಿವೆ. ಈ ಗ್ರಂಥವನ್ನು ಮೈಸೂರಿನ ಲಿಂ॥ ಪಿ. ಆರ್. ಕರಿಬಸವಶಾಸ್ತ್ರಿಗಳು ಕನ್ನಡ ಲಿಪಿಯಲ್ಲಿಯೂ. ತರುವಾಯ ಸೊಲ್ಲಾಪುರದ ವಾರದಗ್ರಂಥಮಾಲೆಯಲ್ಲಿ ಸಂಸ್ಕೃತ ಲಿಪಿಯಲ್ಲಿಯೂ ಮುದ್ರಿಸಲಾಗಿದೆ. ಈ ಗ್ರಂಥಕ್ಕೆ ವಿಸ್ತಾರವಾದ ಕನ್ನಡ ಟೀಕೆಯನ್ನು ದೇವಶಿಖಾಮಣಿ ರಾಮಾನುಜಾಚಾರ್ಯರಿಂದ ಬರೆಯಿಸಿ (೧೯೫೪), ಲಿಂ॥ ಕಾಶೀನಾಥಶಾಸ್ತ್ರಿಗಳು ಪ್ರಕಟಿಸಿದ್ದಾರೆ.

**ಶ್ರೀಕರಭಾಷ್ಯ ಕನ್ನಡ ಟೀಕೆ**

ಭಾಷ್ಯಕರ್ತೃ—ಶ್ರೀಪತಿ ಪಂಡಿತಾರಾಧ್ಯರು. ಕಾಲ ಕ್ರಿ.ಶ. ಸು. ೧೦೬೦. ನಿವಾಸ– ಬೆಜವಾಡ ಶ್ರೀ ಮಲ್ಲೇಶ್ವರ ದೇವಾಲಯ. ಶ್ರೀಶೈಲದ ಏಕೋರಾಮ ಎಂಬ ಅಭಿಧಾನದ ವಿರೂಪಾಕ್ಷದೇಶಿಕೇಂದ್ರರು (೧೦೫೦) ದೀಕ್ಷಾಗುರು. ವಾರಾಣಸಿಯಲ್ಲಿ ವಾದಜಿತರಾದ ಶ್ರೀಪತಿಪಂಡಿತರು ವಿರೂಪಾಕ್ಷದೇಶಿಕರಿಂದ ಶಿವದೀಕ್ಷೆ ಪಡೆದರು, ಎಂದು ಪಲ್ಲಕವಿ ತನ್ನ ಶ್ರೀಶೈಲ ಪಂಡಿತಾರಾಧ್ಯಚರಿತೆಯಲ್ಲಿ ಉಲ್ಲೇಖಿಸಿದ್ದಾನೆ.[7] ಈ ಗ್ರಂಥವನ್ನು ಮೊದಲು ಸಿಕಂದ್ರಾಬಾದ್(೧೮೯೩) ನಲ್ಲಿ ತೆಲುಗು ಲಿಪಿಯಲ್ಲಿ ಲಕ್ಷ್ಮೀವಿಲಾಸ ಮುದ್ರಾಕ್ಷರ ಶಾಲೆಯಲ್ಲಿ ಅಪೂರ್ಣವಾಗಿ ಮುದ್ರಿಸಲಾಯಿತು- ಪಂಡಿತ ಸ್ವಾಮಿ ಎಂಬುವರ ಸಂಪಾದಕತ್ವದಲ್ಲಿ. ಆದರೆ ಅಲ್ಲಿ ಮೊದಲ ಅಧ್ಯಾಯದ ಒಂದು ಪಾದ ಮಾತ್ರ ಅಚ್ಚಾಯಿತು. ಅನಂತರ ಬೆಂಗಳೂರು ಪ್ರೆಸ್ಸಿನಲ್ಲಿ ೧೯೩೬ರಲ್ಲಿ ದಿ. ಸಿ. ಹಯವದನರಾಯರ ಸಂಪಾದಕತ್ವದಲ್ಲಿ ಎರಡು ಸಂಪುಟಗಳಲ್ಲಿ ಮುದ್ರಿತವಾಯಿತು. ಇವುಗಳ ಒಂದನೆಯ ಸಂಪುಟವು ಇಂಗ್ಲೀಷಿನ ಉಪೋದ್ಘಾತ, ಎರಡನೆಯ ಸಂಪುಟವು ಭಾಷ್ಯದ ಮೂಲವನ್ನು ಒಳಗೊಂಡಿದೆ. ಮೈಸೂರಿನ ಪಂಚಾಚಾರ್ಯ ಪ್ರೆಸ್ಸಿನಲ್ಲಿ ಲಿಂ॥ ಕಾಶೀನಾಥಶಾಸ್ತ್ರಿಗಳ ಸಂಪಾದಕತ್ವದಲ್ಲಿ ಶ್ರೀಕರಭಾಷ್ಯ ಚತುಸ್ಸೂತ್ರಿಯು (ಮೂಲಮಾತ್ರ) ಅಚ್ಚಾಗಿದೆ (೧೯೩೮). ಇದೇ ಚತುಸ್ಸೂತ್ರಿಯು ವಾರಾಣಸಿಯಲ್ಲಿ ಶ್ರೀ ಚಿದರೇಮಠ ವೀರಭದ್ರಶರ್ಮರ ಸಂಪಾದಕತ್ವದಲ್ಲಿ ಸಂಸ್ಕೃತ ಲಿಪಿಯಲ್ಲಿ ಮತ್ತೆ ೧೯೫೬ರಲ್ಲಿ ಅಚ್ಚಾಯಿತು. ಈ ಮಹಾಗ್ರಂಥಕ್ಕೆ ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು ಕನ್ನಡದಲ್ಲಿ ಟೀಕೆಯನ್ನು ಬರೆದು ಮೂಲಸಹಿತ ಕನ್ನಡ ಲಿಪಿಯಲ್ಲಿ (೧೯೬೨) ಎರಡು ಸಂಪುಟಗಳಲ್ಲಿ ಪ್ರಕಟಿಸಿದರು. ಆದರೆ ಇದರಲ್ಲಿ ಮೂಲದ ಅನೇಕ ಕಡೆ ತಿದ್ದಲಾಗಿದೆ. ಅನಂತರ ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಸಂಪಾದಿಸಿದ ಲಿಂ॥ ಉಮಚಗಿ ಶಂಕರಶಾಸ್ತ್ರಿಗಳು ಕನ್ನಡದಲ್ಲಿ ಟೀಕಿಸಿದ್ದ ಶ್ರೀಕರಭಾಷ್ಯ ಚತುಸ್ಸೂತ್ರಿಯನ್ನು (೧೯೬೮) ಜಪದಕಟ್ಟೆ ಮಠಾಧ್ಯಕ್ಷ ವಿದ್ವಾನ್ ಬ್ರಂ॥ ಶ್ರೀ ಶಿವಪ್ರಕಾಶಸ್ವಾಮಿಗಳು ಪ್ರಕಟಿಸಿದರು. ಈಚೆಗೆ ಮೈಸೂರಿನ ಶ್ರೀಮನ್ಮಹಾರಾಜ ಕಾಲೇಜಿನ ವೇದಾಂತಪ್ರಾಧ್ಯಾಪಕ ಶ್ರೀ ಎಂ. ಜಿ. ನಂಜುಂಡಾರಾಧ್ಯರ ಸಂಪಾದಕತ್ವದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶ್ರೀಕರ ಭಾಷ್ಯವು ಎರಡು ಬೃಹತ್ ಸಂಪುಟಗಳಲ್ಲಿ ಹೊರಬಂದಿದೆ (೧೯೭೭–೭೯). ಈ ಗ್ರಂಥಕ್ಕೆ ಶ್ರೀಯುತರು ಸಂಸ್ಕೃತದಲ್ಲಿ ೨೦೦ ಪುಟಗಳ ಪೀಠಿಕೆ ಬರೆದು ಕವಿ, ಕಾಲ, ದೇಶ ಮುಂತಾದವುಗಳ ಬಗೆಗೆ ಶ್ರೀಕರಭಾಷ್ಯದಮೇಲೆ ಇದುವರೆಗೆ ಎದ್ದಿದ್ದ ಪ್ರಾಯಃ ಎಲ್ಲಾ ಆಕ್ಷೇಪಗಳಮೇಲೆ ವಿಚಾರಪರಿಪ್ಲುತವಾದ ವಿವರಣಗಳನ್ನು ಕೊಟ್ಟಿದ್ದಾರೆ. ಈ ಪೀಠಿಕೆಯನ್ನು ಕನ್ನಡಿಸಿ, ಶ್ರೀಯುತರು "ಶ್ರೀಕರಭಾಷ್ಯಪ್ರಶಸ್ತಿ" ಎಂಬ ಹೆಸರಿನಿಂದ (೧೯೮೧) ವಿದ್ವಾಂಸರ ಸದಭಿಪ್ರಾಯಗಳೊಂದಿಗೆ ಪ್ರಕಟಿಸಿದ್ದಾರೆ.

---

[7] ಶ್ರೀಕರಭಾಷ್ಯ ಪೀಠಿಕೆ (ಪು. ೧೩೩), ಮೈಸೂರು ವಿಶ್ವವಿದ್ಯಾನಿಲಯ ಪ್ರಕಟನೆ, ಭಾಗ I, ೧೯೭೭

## ಕ್ರಿಯಾಸಾರ ಕನ್ನಡ ಟೀಕೆ

ವೀರಶೈವಸಿದ್ಧಾಂತ ಮತ್ತು ಧರ್ಮಗ್ರಂಥಗಳಲ್ಲಿ ನೀಲಕಂಠ ಶಿವಾಚಾರ್ಯ ವಿರಚಿತ ಕ್ರಿಯಾಸಾರವು ಅತಿ ಮುಖ್ಯ ಗ್ರಂಥ. ಇದರ ಮೊದಲ ನಾಲ್ಕು ಉಪದೇಶಗಳು ಬಾದರಾಯಣರ ಬ್ರಹ್ಮಸೂತ್ರಭಾಷ್ಯದ ನಾಲ್ಕು ಅಧ್ಯಾಯಗಳಿಗೆ ಬರೆದ ಕಾರಿಕಾರೂಪವಾದ ವೀರಶೈವಭಾಷ್ಯ. ಉಳಿದ ಉಪದೇಶಗಳಲ್ಲಿ ವೀರಶೈವಧಾರ್ಮಿಕ ಕ್ರಿಯಾ ಕಲಾಪಗಳನ್ನು ವಿಸ್ತಾರವಾಗಿ ಬಣ್ಣಿಸಿದೆ. ಶ್ರೀ ನೀಲಕಂಠ ಶಿವಾಚಾರ್ಯರ ತಾಯಿ ಚನ್ನಮ್ಮ, ತಂದೆ ಮಲ್ಲಯ್ಯ ದೇವ. ಮೈಸೂರು ಓರಿಯಂಟಲ್ ಲೈಬ್ರರಿಯ ಆಶ್ರಯದಲ್ಲಿ ಈ ಗ್ರಂಥವು ಮೂರು ಸಂಪುಟಗಳಲ್ಲಿ (೧೯೫೪, ೫೭–೫೮) ಹೊರಬಂದಿದೆ. ಈ ಗ್ರಂಥಕ್ಕೆ ಕನ್ನಡ ಟೀಕೆಯನ್ನು ಬರೆದವರು ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು. ಶ್ರೀಯುತ ಆರಾಧ್ಯರು ಸಂಸ್ಕೃತದಲ್ಲಿ ಬರೆದಿರುವ "ಶಕ್ತಿವಿಶಿಷ್ಟಾದ್ವೈತ ದರ್ಶನಂ" (ಸಂಸ್ಕೃತ) ಎಂಬ ಗ್ರಂಥವನ್ನು (೧೯೭೧) ತಾವೇ ಕನ್ನಡದಲ್ಲಿ ಅನುವಾದಿಸಿ ೧೯೭೫ರಲ್ಲಿ ಪ್ರಕಟಿಸಿದ್ದಾರೆ.

## ಲಿಂಗಧಾರಣಚಂದ್ರಿಕೆ (ಕನ್ನಡ ಭಾಷಾಂತರ)

ವೀರಶೈವಧರ್ಮದ ವಾದ ಗ್ರಂಥಗಳಲ್ಲಿ ನಂದಿಕೇಶ್ವರಶಿವಾಚಾರ್ಯ (೧೭೦೦) ವಿರಚಿತ ಲಿಂಗಧಾರಣಚಂದ್ರಿಕೆ ಮುಖ್ಯವಾದದ್ದು. ನಂದಿಕೇಶ್ವರಶಿವಾಚಾರ್ಯರ ಗುರು ಮಲ್ಲೇಶ್ವರ ಎಂಬುವರು, ಲಿಂಗಧಾರಣವು ವೇದ, ಶಾಸ್ತ್ರ, ಪುರಾಣಾದಿಗಳಲ್ಲೆಲ್ಲ ಪ್ರತಿಪಾದಿತವಾಗಿದೆ. ಆದರೆ ಅವುಗಳನ್ನು ಪರಿಶೀಲಿಸದೆ ಅನೇಕ ಪಂಡಿತಂಮನ್ಯರು (ದಡ್ಡ ಪಂಡಿತರು) ಲಿಂಗಧಾರಣವು ಅವೈದಿಕವೆಂದು ನಿಂದಿಸುತ್ತಿದ್ದಾರೆ. ಅವರಿಗೆ ತಕ್ಕ ಸಮಾಧಾನವು ಪ್ರಮಾಣಬದ್ಧವಾಗಿ ಶಾಸ್ತ್ರಮರ್ಯಾದೆಯಿಂದ ಇಲ್ಲಿ ಪ್ರತಿಪಾದಿಸಲಾಗಿದೆ. ಈ ಗ್ರಂಥಕ್ಕೆ ವಾರಾಣಸಿಯ ಪಂ॥ ಶಿವಕುಮಾರಮಿಶ್ರರು 'ಶರತ್' ಎಂಬ ಪ್ರೌಢವಾದ ವ್ಯಾಖ್ಯಾನ ಬರೆದಿದ್ದಾರೆ. ಅದು ಕಾಶಿಯ ಜಂಗಮವಾಡಿಮಠದ ಆಶ್ರಯದಲ್ಲಿ ೧೯೦೫ರಲ್ಲಿ ಪ್ರಕಟವಾಗಿದೆ. ಇದರ ಮೂಲವನ್ನು ಮೊದಲು ಮುದ್ರಿಸಿದವರು ಮೈಸೂರಿನ ಯಜಮಾನ್ ಲಿಂ॥ ವೀರಸಂಗಪ್ಪನವರು, ಲಿಂ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದಿತವಾಗಿ ಅದು ಹೊರಬಂದಿತು.

ಈ ಮಹಾಗ್ರಂಥಕ್ಕೆ ಸರಳಕನ್ನಡದಲ್ಲಿ ಭಾಷಾಂತರವನ್ನು ಮಾಡಿದ ಕೀರ್ತಿ ಪಂಡಿತರತ್ನಂ ಲಿಂ॥ ಸಿರಸಿ ಗುರು ಶಾಂತಶಾಸ್ತ್ರಿಗಳಿಗೆ ಮೀಸಲು (೧೯೫೧). ಮುಡಿಗುಂಡಂ ಲಿಂ॥ ಮಾದಪ್ಪನವರ ಔದಾರ್ಯದಿಂದ ಇದು ಪ್ರಕಟವಾಗಿದೆ. ಬೆಳಗಾವಿಯ ಲಿಂಗರಾಜ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಲಿಂ॥ ಎಂ. ಆರ್. ಸಾಖರೆ ಅವರು ಈ ಗ್ರಂಥವನ್ನು ಮೂಲಸಹಿತ ಇಂಗ್ಲಿಷಿನಲ್ಲಿ ಭಾಷಾಂತರಿಸಿ, ಅದಕ್ಕೆ ಸುಮಾರು ೬೮೨ ಪುಟಗಳಷ್ಟು ಭೂಮಿಕೆ ಬರೆದು ಪ್ರಕಟಿಸಿದ್ದಾರೆ. ಪ್ರಾಯಃ ಇದು ೧೯೪೨ರಲ್ಲಿ ಮುದ್ರಿತವಾಗಿರಬಹುದು. ಏಕೆಂದರೆ ಅದರ ಮೇಲೆ ದಿ॥ ಎಂ. ಆರ್. ಶ್ರೀನಿವಾಸಮೂರ್ತಿಯವರು ಬರೆದ ವಿಮರ್ಶೆ ೧೯೪೩ರ ಪ್ರಬುದ್ಧಕರ್ನಾಟಕದಲ್ಲಿ (ಸಂ. ೨೪, ಸಂ.೩) ಪ್ರಕಟವಾಗಿದೆ.

## ವೀರಶೈವಾನಂದಚಂದ್ರಿಕೆ (ಕನ್ನಡ ಭಾಷಾಂತರ)

ವೀರಶೈವಾನಂದಚಂದ್ರಿಕೆ ಎಂಬ ಸಂಸ್ಕೃತ ಗ್ರಂಥದ ಕರ್ತೃ ಶ್ರೀ ಮರಿತೋಂಟದಾರ್ಯರು (೧೭೪೦–೫೫). ಇವರು ಕೆಳದಿರಾಜ್ಯದ ಅಧಿಪತಿ ಬಸಪ್ಪನಾಯಕನ ಆಸ್ಥಾನದಲ್ಲಿದ್ದು ಅಲ್ಲಿ ಮಹಾಪಂಡಿತರಾಗಿದ್ದ ಮೌನಪ್ಪ ಎಂಬುವರ ಸಹಾಯದಿಂದ ಈ ಗ್ರಂಥವನ್ನು ರಚಿಸಿರುವಂತೆ ತಿಳಿದುಬಂದಿದೆ. ಇದರಲ್ಲಿ ೨೪ ಪ್ರಕರಣಗಳಿವೆ. ಪ್ರಾರಂಭದಲ್ಲಿ ಬ್ರಹ್ಮಸೂತ್ರದ ಚತುಸ್ಸೂತ್ರಿಗೆ ವೀರಶೈವ ಪರವಾದ ವ್ಯಾಖ್ಯಾನವಿದೆ. ಮುಂದಿನ ಒಂಬತ್ತು ಪ್ರಕರಣಗಳಲ್ಲಿ ಕ್ರಮವಾಗಿ ವೀರಶೈವ ಅಷ್ಟಾವರಣಗಳನ್ನು ಸಪ್ರಮಾಣವಾಗಿ ಸಮರ್ಥಿಸಲಾಗಿದೆ. ಮುಂದೆ ಚಾರ್ವಾಕ-ಜೈನ-ಬೌದ್ಧ-ಮೀಮಾಂಸಕ ಕಾಪಿಲ (ಸಾಂಖ್ಯ)-ಶಾಕ್ತ-ತರ್ಕ-ಯೋಗ-ಮಾಧ್ವ-ರಾಮಾನುಜೀಯ-ಶ್ರೀಕಂಠ ಮತ್ತು ಶಾಂಕರ ದರ್ಶನಗಳನ್ನು ನಿರಾಕರಿಸಿ, ಕಡೆಯಲ್ಲಿ ವೀರಶೈವದರ್ಶನದ ಪ್ರಾಶಸ್ತ್ಯವನ್ನು ಪ್ರತಿಪಾದಿಸಲಾಗಿದೆ.

ಇದು ದಾರ್ಶನಿಕ ಶೈಲಿಯಲ್ಲಿದೆ. ಇದನ್ನು ಸಂಸ್ಕೃತ ಲಿಪಿಯಲ್ಲಿ ಮೊದಲು ಪ್ರಕಟಿಸಿದವರು ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರುಗಳು. ದರ್ಶನವಿಶಾರದ ಶ್ರೀ ಗುರುಲಿಂಗದೇವರು ಸಂಪಾದಕರು. ೧೯೩೬ರಲ್ಲಿ ಮುದ್ರಿತ. ಈ ಮಹಾಗ್ರಂಥಕ್ಕೆ ಮೈಸೂರಿನ ಪಂಡಿತರತ್ನಂ ಲಿಂ॥ ಸಿರಸಿ ಗುರುಶಾಂತಶಾಸ್ತ್ರಿಗಳು ಸರಳಕನ್ನಡ ಭಾಷಾಂತರವನ್ನು ಮಾಡಿದ್ದಾರೆ. ಬೆಂಗಳೂರಿನ ಬೇಲಿಮಠದ ಲಿಂ॥ ಚರಮೂರ್ತಿ ಸಿದ್ಧಲಿಂಗಸ್ವಾಮಿಗಳು (೧೯೬೦) ಪ್ರಕಾಶಕರು. ಇದಕ್ಕೆ ವಿದ್ವತ್ಪೂರ್ಣವಾದ ಶಾಸ್ತ್ರಿಗಳ ಪೀಠಿಕೆಯಿದೆ.

**ಶಿವಾಧಿಕ್ಯರತ್ನಾವಳಿ** (ಕನ್ನಡ ಟೀಕು) : ಮಹಾಕವಿ ಷಡಕ್ಷರಿಯಿಂದ ರಚಿತವಾದ ಶಿವಾಧಿಕ್ಯರತ್ನಾವಳಿಯು ಸ್ತೋತ್ರಸಾಹಿತ್ಯ ಪ್ರಕಾರಕ್ಕೆ ಸೇರಿದ್ದು. ಪರಮೇಶ್ವರನ ಸರ್ವೋತ್ಕೃಷ್ಟತೆಯನ್ನು ಸುಂದರವಾಗಿ ಪ್ರತಿಪಾದಿಸಿರುವ ಈ ಗ್ರಂಥವನ್ನು ಮಹಾಂತಶಿವಯೋಗಿಗಳ ಕನ್ನಡ ಟೀಕೆಯೊಡನೆ ಮೊದಲು ಪ್ರಕಟಿಸಿ, ಅನಂತರ ವಿಶೇಷವಿಷಯ ಗಳನ್ನು ಸೇರಿಸಿ ಮತ್ತೆ ಮುದ್ರಿಸಿದವರು ಮೈಸೂರು ಹೊಸಮಠದ ಅಧ್ಯಕ್ಷ ಲಿಂ॥ ಶ್ರೀ ಬಸವಲಿಂಗಸ್ವಾಮಿಗಳು (೧೯೨೫). ಇದರಲ್ಲಿ ೧೧೧ ಸಂಸ್ಕೃತ ಪದ್ಯಗಳಿವೆ. ಪ್ರತಿಯೊಂದು ಪದ್ಯಕ್ಕೂ ಅಲ್ಲಲ್ಲಿ ಪೂರ್ವಕತೆಗಳನ್ನೂ ಕೊಡಲಾಗಿದೆ. ಟೀಕೆ ಸರಳವಾಗಿದೆ.

**ಕಾಶ್ಮೀರ ಶೈವದರ್ಶನ** (ಕನ್ನಡದಲ್ಲಿ) : ಕಾಶ್ಮೀರ ಶೈವದರ್ಶನವನ್ನು ಚೆನ್ನಾಗಿ ಅಭ್ಯಾಸಮಾಡಿ. ಆ ದರ್ಶನದ ಮೇಲೆ ಕನ್ನಡದಲ್ಲಿ ಪ್ರಬಂಧವೊಂದನ್ನು ಬರೆದು ಡಾಕ್ಟರೇಟ್ ಪದವಿಯನ್ನು ಕಾಶ್ಮೀರ ವಿಶ್ವವಿದ್ಯಾಲಯದಿಂದ ಪಡೆದು. ಗೌರವಿಸಲ್ಪಟ್ಟ ಲಿಂ॥ ಜೆ. ರುದ್ರಪ್ಪನವರು ಅನೇಕ ಕಾಶ್ಮೀರ ಶೈವಗ್ರಂಥಗಳಿಗೆ ಕನ್ನಡ ಟೀಕೆಯನ್ನು ಬರೆ ದಿದ್ದಾರೆ.

**ಕ್ಷೇಮರಾಜ ವಿರಚಿತ ಪ್ರತ್ಯಭಿಜ್ಞಾಹೃದಯ :** ಕನ್ನಡ ಭಾವಾನುವಾದ, ಲಿಂ॥ ಜೆ. ರುದ್ರಪ್ಪನವರು ಮೈಸೂರು ಉಚ್ಚನ್ಯಾಯಾಲಯದಲ್ಲಿ ಕುಲಸಚಿವರಾಗಿದ್ದವರು. ಅವರು ಈ ಗ್ರಂಥದಲ್ಲಿ ಕಾಶ್ಮೀರ ಶಿವಾದ್ವೈತದ ಪೂರ್ವೇತಿಹಾಸ, ತ್ರಿಕಶಾಸ್ತ್ರ, ಸ್ಪಂದಶಾಸ್ತ್ರ, ಪ್ರತ್ಯಭಿಜ್ಞಾಶಾಸ್ತ್ರ, ಚಿತ್‌ಸ್ವರೂಪ, ಆಭಾಸವಾದ ಮುಂತಾದ ವಿಷಯ ಗಳನ್ನು ತಮ್ಮ ಉಪೋದ್ಘಾತದಲ್ಲಿ ವಿವರಿಸಿದ್ದಾರೆ ಮತ್ತು ಪ್ರತ್ಯಭಿಜ್ಞಾಹೃದಯಕಾರಿಕೆಗಳಿಗೆ ಸರಳಕನ್ನಡ ಟೀಕೆ ಬರೆದಿದ್ದಾರೆ (೧೯೫೩).

**ಶಿವಸೂತ್ರಗಳು** (೧೯೫೮) : ಕಾಶ್ಮೀರ ಶೈವದರ್ಶನ ಮತ್ತು ಸಾಧನಾಭ್ಯಾಸಗಳನ್ನು ಕುರಿತು ವಿಸ್ತಾರವಾಗಿ ಕನ್ನಡದಲ್ಲಿ ವ್ಯಾಖ್ಯಾನಿಸಲಾಗಿದೆ (ಮುನ್ನುಡಿ). ಇದರಲ್ಲಿ ಬರುವ ಶಾಂಭವೋಪಾಯ, ಶಾಕ್ತೋಪಾಯ, ಆಣವೋ ಪಾಯ, ಪ್ರತಿಪಾದಕಸೂತ್ರಗಳಿಗೆ ವಿಸ್ತಾರವಾದ ವಿವರಣಗಳನ್ನು ಕೊಡಲಾಗಿದೆ. ಪಾರಿಭಾಷಿಕ ಪದಕೋಶಗಳಿಂದ ಇದು ಓದುಗರಿಗೆ ತುಂಬಾ ಉಪಯುಕ್ತವಾಗಿದೆ.

**ವೀರಶೈವ ಸಿದ್ಧಾಂತಸುಧಾಕರ** (ಕನ್ನಡ) : ಪಂಡಿತಪ್ರಕಾಂಡರಾದ ಉಮಚಗಿ ಶಂಕರಶಾಸ್ತ್ರಿಗಳು ಈ ಗ್ರಂಥದಲ್ಲಿ ಬ್ರಹ್ಮಾದ್ವೈತ ಮತ್ತು ಶಿವಾದ್ವೈತಗಳಿಗೆ ಇರುವ ಅಂತರವನ್ನು ಶಾಸ್ತ್ರಮರ್ಯಾದೆಯಿಂದ ತೋರಿಸಿ ಕೊಟ್ಟಿದ್ದಾರೆ (೧೯೨೩).

**ವೀರಶೈವಾನ್ವಯಚಂದ್ರಿಕಾ** (ಕನ್ನಡ ಟೀಕಾ) : ಕರ್ತೃ—ಆರಾಧ್ಯ ವೀರೇಶ್ವರಶಾಸ್ತ್ರಿ (೧೮೭೦) ಉರುಫ್ ಹುಚ್ಚುವೀರಶಾಸ್ತ್ರಿ ಎಂಬುವರು. ಕಳೆದ ೧೮೮೧ರ ಸುಮಾರಿನಲ್ಲಿ ಮೈಸೂರು ಸರ್ಕಾರದವರು ಸೆನ್‌ಸಸ್‌ನಲ್ಲಿ ವೀರಶೈವವನ್ನು ಶೂದ್ರವರ್ಗದಲ್ಲಿ ಸೇರಿಸಿದಾಗ ವೀರಶೈವವು ವೇದಾಗಮೋಪನಿಷತ್ ಪ್ರತಿಪಾದಿತವಾದ ಅಪ್ರಾಕೃತ-ಅತಿವರ್ಣಾಶ್ರಮ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕವಾದದ್ದು ಎಂದು ಸಿದ್ಧಮಾಡಿರುವ ಗ್ರಂಥಗಳಲ್ಲಿ ಇದೂ ಒಂದು. ಯಜಮಾನ್ ವೀರಸಂಗಪ್ಪನವರು ಈ ದಿಸೆಯಲ್ಲಿ ಬಹುವಾಗಿ ಶ್ರಮಿಸಿದವರು. ಇದರ ಮೂಲ ಸಂಸ್ಕೃತ ಭಾಷೆಯಲ್ಲಿದೆ. ಅದಕ್ಕೆ ಸರಳ ಕನ್ನಡದಲ್ಲಿ ಅನುವಾದ ಮಾಡಲಾಗಿದೆ (೧೮೯೦).

**ಶಿವಸಿದ್ಧಾಂತಚಂದ್ರಿಕಾ** (ಕನ್ನಡ ಟೀಕು) : ಪೂವಲ್ಲಿ (ಹೂಲಿ) ಜ॥ ಸಿದ್ಧನಂಜೇಶಶಿವಾಚಾರ್ಯರು ರಚಿಸಿದ ಚೋಳಚಿದ್ಘನ ಸಂವಾದರೂಪವಾದ ಗ್ರಂಥ. 'ಚಂದ್ರಿಕೆ'ಯ ತತ್ತ್ವಾರ್ಥವನ್ನು ಶ್ರೀ ನೀಲಕಂಠಶಿವಾಚಾರ್ಯರು (ಹೂಲಿ) ಕನ್ನಡ ಟೀಕೆಯಲ್ಲಿ ವಿವರಿಸಿದ್ದಾರೆ. ಇದರಲ್ಲಿ ನಾಲ್ಕು ಪರಿಚ್ಛೇದಗಳೂ ೪೯ ಕಾರಿಕೆಗಳೂ ಇವೆ. ಚೋಳನ ಅಧ್ಯಾತ್ಮವಿಷಯಕ ಪ್ರಶ್ನೆಗಳಿಗೆ ಚಿದ್ಘನಶಿವಾಚಾರ್ಯರು ನೀಡಿದ ಸಪ್ರಮಾಣವಾದ ಉತ್ತರಗಳು ಇಲ್ಲಿಯ ವೈಶಿಷ್ಟ್ಯ.

**ಪರಮಾತ್ಮ ಪ್ರಕಾಶಿಕೆ ಮತ್ತು ಸ್ವಸ್ವರೂಪ ಪ್ರಕಾಶಿಕೆ** (ಕನ್ನಡ ಟೀಕು) : ಸೋಸಲೆ ರೇವಣಾರಾಧ್ಯ (೧೬೨೩)ರು ರಚಿಸಿರುವ ಈ ಗ್ರಂಥಗಳ ಮೊದಲ ಗ್ರಂಥದಲ್ಲಿ ಮೂರು ಪ್ರಕರಣಗಳಿವೆ. (೧) ಉಪದೇಶ ಮತ್ತು ದೀಕ್ಷಾಪ್ರಕಾರಗಳ ವಿವರಣ, (೨) ಬ್ರಹ್ಮಾಂಡ-ಪಿಂಡ-ಅಂತಃಕರಣ ವಿಚಾರ ಮತ್ತು (೩) ಸ್ವಸ್ವರೂಪ ವಿಚಾರ. ಎರಡ ನೆಯ ಸ್ವಸ್ವರೂಪ ಪ್ರಕಾಶಿಕೆಯಲ್ಲಿ ಐದು ಪ್ರಕರಣಗಳಿವೆ. (೧) ಕ್ರಿಯಾಪಾದೋಕ್ತ ಶಿವದೀಕ್ಷಾಕ್ರಮ, (೨) ಅಂಗ-ಲಿಂಗ ಷಟ್‌ಸ್ಥಲ ವಿಚಾರ (ಚರ್ಯಾಪಾದ), (೩) ಯೋಗಪಾದೋಕ್ತ ಪಂಚವಿಧ ಯೋಗಗಳು, (೪) ಜ್ಞಾನಪಾದ ವಿಷಯಕ ಸ್ವಸ್ವರೂಪ ನಿರೂಪಣ ಮತ್ತು (೫) ಪಾಶವಿಮೋಚನ ಎಂಬುವು ಉಕ್ತವಾಗಿವೆ.

ಈ ಗ್ರಂಥಗಳನ್ನು ಮೈಸೂರು ಹೊಸಮಠದ ಚರಮೂರ್ತಿ ಲಿಂ॥ ಬಸವಲಿಂಗಸ್ವಾಮಿಗಳು ಪರಿಶೋಧಿಸಿ

ಪ್ರಕಟಿಸಿದ್ದಾರೆ. ಇದು ಗುರು-ಶಿಷ್ಯ ಸಂವಾದರೂಪವಾಗಿದೆ. ಗ್ರಂಥಗಳ ಕಡೆಯಲ್ಲಿ "ಇತಿಶ್ರೀ ಸೋಸಲೆ ರೇವಣಾರ್ಯ ವಿರಚಿತಾಯಾಂ ಸ್ವಸ್ವರೂಪ ಪ್ರಕಾಶಿಕಾಯಾಂ ಚತುಷ್ಪಾದವಿಷಯ, ಚತುಷ್ಪಾಶವಿಮೋಚನ ವಿಚಾರಃ ಪಂಚಮೋಪ ದೇಶಃ ಸ್ವಸ್ವರೂಪಪ್ರಕಾಶಿಕಾ ಸಮಾಪ್ತಾ.

**ಶಿವಾಧಿಕ್ಯ ಶಿಖಾಮಣಿ** (ಕನ್ನಡ): ಇದು ಚೋಳರೇಣುಕಸಂವಾದರೂಪ, ಸೋಸಲೆ ರೇವಣಾರಾಧ್ಯ ವಿರಚಿತ. ಬೆಂಗಳೂರು ಜಿಲ್ಲೆಗೆ ಸೇರಿದ, ಮುದಗೆರೆ ಅರಸ ರಘುವಪ್ಪನಾಯಕನಿಗೆ ಮಾಡಿದ ಉಪದೇಶ ಇದು. ಈತನ ಕಾಲ ೧೬೨೩. ಹಿಂದೆ ಶ್ರೀ ರೇವಣಸಿದ್ಧೇಶ್ವರನು ಕಂಚಿಯರಾಜ ವಿಜಯೇಂದ್ರ ಚೋಳನನ್ನು ವಾದದಲ್ಲಿ ಜೈಸಿ, ಶಿವಾಧಿಕ್ಯವನ್ನು ಸ್ಥಾಪಿಸಿದ ವಿಚಾರ ಈ ಗ್ರಂಥದ ವಿಷಯ. ಸುತ್ತೂರು ವೀರಸಿಂಹಾಸನ ಮಠದ ಗುರು ನಂಜಾರ್ಯರ ಶಿಷ್ಯ ಚನ್ನಬಸವಸ್ವಾಮಿಯವರ ಪ್ರೇರಣೆಯಂತೆ ಈ ಗ್ರಂಥಕ್ಕೆ ಕನ್ನಡ ಟೀಕೆ ಬರೆದುದಾಗಿ ಉಲ್ಲೇಖಿಸ ಲಾಗಿದೆ. ೧೯೫೯ರಲ್ಲಿ ಇದು ಪ್ರಕಟಿತವಾಗಿದೆ.

**ವೇದಾಂತಸಾರ ವೀರಶೈವ ಚಿಂತಾಮಣಿ** (ಸಟೀಕ) : ನಿಟ್ಟೂರು ನಂಜಣಾರ್ಯರು ಸಂಸ್ಕೃತದಲ್ಲಿ (ಸು. ೧೭೨೫) ರಚಿಸಿದ ಈ ಗ್ರಂಥಕ್ಕೆ ಉದ್ದಾನ ಸಿದ್ಧಲಿಂಗದೇವನು (ಸು. ೧೭೫೦) ಕನ್ನಡದಲ್ಲಿ ಟೀಕೆ ಬರೆದಿದ್ದಾನೆ.

**ಪಂಚಬ್ರಹ್ಮೋದಯಭಾಷ್ಯ** (ಸಟೀಕೆ) : ಕರ್ತೃ— ಸಾಸಲ ಚಿಕ್ಕಣಾರಾಧ್ಯ (ಸು. ೧೫೦೦). ಈತ ಅಮರ ಗುಂಡ ಮಲ್ಲಿಕಾರ್ಜುನ ವಂಶೀಯನಾದ ಶಾಂತಲಿಂಗನ ಮಗ. ಪಂಚಬ್ರಹ್ಮೋದಯಭಾಷ್ಯ ಕನ್ನಡ ಗ್ರಂಥ. ಇದರಲ್ಲಿ ಒಂಬತ್ತು ಅಧ್ಯಾಯಗಳಿವೆ. ಇದನ್ನು "ಅಥರ್ವಣವೇದ ಮಂತ್ರಭಾಷ್ಯ" ಎಂದು ಹೇಳಿದೆ. ಕಡೆಯಲ್ಲಿ ಪಂಚಾಚಾರ್ಯರು ಅವರ ಸಂತತಿಯವರು ರಚಿಸಿದ ಗ್ರಂಥಗಳು ಉಕ್ತವಾಗಿವೆ. ಇದರಲ್ಲಿ ಶ್ರೀಪತಿ ಪಂಡಿತನು ಒಂದು ಭಾಷ್ಯವನ್ನು ಬರೆದ ಉಲ್ಲೇಖವಿದೆ (ಕ.ಕವಿಚರಿತೆ II, ಪು. ೭೮).

**ವೀರಮಾಹೇಶ್ವರಾಚಾರಸಂಗ್ರಹ** (ಸಟೀಕೆ): ಕವಿ—ಶ್ರೀಧರಾಂಕ (ಸು. ೧೫೦೦). ಈತ ನೀಲಕಂಠ ನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರಸಂಗ್ರಹ'ಕ್ಕೆ ಕನ್ನಡ ಟೀಕೆ ಬರೆದಿದ್ದಾನೆ.

**ಶ್ರೀಗುರು ಶಿವಾತ್ಮಗಣೇಶ್ವರಪುರಾಣ** (ಕನ್ನಡ ಭಾಷಾಂತರ) : ವೃಷಭನೇಮಿಪುರದ ಚನ್ನಬಸವ ಕವಿ (ಸು. ೧೬೦೦). ಈತ ಮೇಲೆ ಕಂಡ ಪುರಾಣವನ್ನು ಬರೆದಿದ್ದಾನೆ. ಪಂಪಾಕ್ಷೇತ್ರದ ಹತ್ತಿರ ವೃಷಭನೇಮಿಪುರದ ಶಿವಲಿಂಗಾನಂದ ಕರಿವೀರಾತ್ಮಜನಾದ ರುದ್ರಯ್ಯನ ಮಗ ವೇ॥ ಚನ್ನಬಸವ ಕವಿ ಎಂದು ಹೇಳಲಾಗಿದೆ. ಇದು ಮೈಸೂರಿನ ಲಿಂ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದಿತವಾಗಿದೆ. ಶಿ. ಶಿ. ಬಸವಲಿಂಗಶಾಸ್ತ್ರಿಗಳಿಂದ ಭಾಷಾಂತರಿ ಸಲ್ಪಟ್ಟು ೧೯೨೮ರಲ್ಲಿ ಪ್ರಕಟವಾಗಿದೆ.

**ವೀರಶೈವಪ್ರದೀಪಿಕೆ** (ಕನ್ನಡ ಟೀಕೆ) : ಲಿಂ॥ ಪಿ. ಆರ್. ಕರಿಬಸವಶಾಸ್ತ್ರಿ ಸಂಪಾದಿತ. ಇದರಲ್ಲಿ ೧೪ ಪ್ರಕರಣ ಗಳಿವೆ. ಅನುಕ್ರಮವಾಗಿ ಪೀಠಿಕಾಪ್ರಕರಣ, ಭಕ್ತಸ್ಥಲ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳು. ಅಷ್ಟಾವರಣ, ಲಿಂಗಲಕ್ಷಣ, ಜಂಗಮಲಕ್ಷಣ, ಭಸ್ಮಧಾರಣ, ರುದ್ರಾಕ್ಷಧಾರಣ, ಪಂಚಾಕ್ಷರೀಮಂತ್ರಸ್ಥಲ, ಪಾದೋದಕ ಲಕ್ಷಣ, ಶಿವಪ್ರಸಾದ ಲಕ್ಷಣ, ವೇದಾಗಮೈಕಾರ್ಥಪ್ರತಿಪಾದನ ಸತ್ಪಾತ್ರದಾನಗಳು ಇದರ ಮುಖ್ಯ ವಿಷಯಗಳು. ಕಡೆಯಲ್ಲಿ "ಶ್ರೀಮತ್ಪರಮ-ಶಿವಪ್ರಸಾದಾಸಾದಿತ-ನಿರ್ಮಲಜ್ಞಾನವೈಭವನಾದ ತೋಂಟದ ಸಿದ್ಧೇಶ್ವರ-ನೆಂಬಾಚಾರ್ಯನಿಂ, ಸಂಗ್ರಹಿಸಲ್ಪಟ್ಟ ವೀರಶೈವಪ್ರದೀಪಿಕೆ ಸಂಪೂರ್ಣ" ಎಂದಿದೆ.

**ದಶಗ್ರಂಥಿ (ಶಿವಜ್ಞಾನಪ್ರದೀಪಿಕೆ)** (ಕನ್ನಡ ಟೀಕೆ) : ಕರ್ತೃ— ವಿಶ್ವನಾಥಾಚಾರ್ಯ. ಈತನ ಮಗ ವೀರ ಣಾರಾಧ್ಯ (೧೬೫೦). ಈತ ತನ್ನ ತಂದೆ ಬರೆದಿದ್ದ 'ದಶಗ್ರಂಥಿ'ಗೆ ಕನ್ನಡ ವ್ಯಾಖ್ಯೆಯನ್ನು ಮಾಡಿ, ಅದಕ್ಕೆ 'ಶಿವಜ್ಞಾನ ಪ್ರದೀಪಿಕೆ' ಎಂದು ಹೆಸರಿಸಿದ್ದಾನೆ. ಇದು ಲಿಂ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಸಂಪಾದಿತವಾಗಿ ಪ್ರಕಟವಾಗಿದೆ.

**ಶಿವಯೋಗಪ್ರದೀಪಿಕೆ (೧೭೦೦)** (ಕನ್ನಡ ಟೀಕೆ) : ಚನ್ನಸದಾಶಿವಯೋಗಿವಿರಚಿತ ಶಿವಯೋಗಪ್ರದೀಪಿಕೆಗೆ ಕನ್ನಡ ಟೀಕೆಯನ್ನು ಬರೆದವರು ಬಸವಾರಾಧ್ಯ ಎಂಬುವರು. ಇವರು ವೀರಶೈವಮಾರ್ಗಸ್ಥಾಪನಾಚಾರ್ಯ ಎಂದು ತಮ್ಮನ್ನು ವಿಶೇಷಿಸಿಕೊಂಡಿದ್ದಾರೆ. ಟೀಕೆಯ ಕಡೆಯಲ್ಲಿ "ಶ್ರೀಮದ್ವೇದವೇದಾಂತಾಗಮ ಪುರಾಣಸ್ಮೃತೀತಿಹಾಸ ಪ್ರತಿಪಾದಿತ ಶ್ರೀವೀರಶೈವಮಾರ್ಗಸ್ಥಾಪನಾಚಾರ್ಯ ಶ್ರೀ ಬಸವಾರಾಧ್ಯವಿರಚಿತ ಕರ್ಣಾಟಕ ಟೀಕಾ ಸಮಾಪ್ತಾ" ಎಂದಿದೆ.

**ಪರವಾದಿಗಜಾಂಕುಶತಾರಾವಳಿ** (ಸಟೀಕೆ) : ಕರ್ತೃ—ನೀಲಕಂಠಾರಾಧ್ಯ (೧೫೦೦).

ಯಸ್ಯಾಜ್ಞಯಾ ಜಗತ್‌ಸ್ರಷ್ಟಾ ವಿರಿಂಚಿಃ ಪಾಲಕೋ ಹರಿಃ ।
ಸಂಹರ್ತಾಕಾಲರುದ್ರಾಖ್ಯಃ ತಂ ನಮಾಮಿ ಪಿನಾಕಿನಂ ॥

ಎಂದು ಆರಂಭವಾಗುವ ಈ ಕೃತಿಯನ್ನು ಸಕಲ ವೇದಶಾಸ್ತ್ರೋಪನಿಷದರ್ಥಮಂ ಗರ್ಭೀಕರಿಸಿ. ಜೈನಚಾರ್ವಾಕ ಮಾಯಾವಾದಿ ವೈಷ್ಣವರೆಂಬ ಮದಗಜಕ್ಕೆ ಅಂಕುಶವಾಗಿ ರಚಿಸಿದಂತೆ ಕವಿ ಹೇಳುತ್ತಾನೆ.

**ವೀರಶೈವ ಚಿಂತಾಮಣಿ** (ಶ್ಲೋಕ-ಟೀಕು) : ಉದ್ಭಾನ ಸಿದ್ಧಲಿಂಗದೇಶಿಕ (?) ಅಕ್ಷರಾಚಾರ್ಯನಾದಂಥ ಉದ್ಭಾನ ಸಿದ್ಧಲಿಂಗದೇವರು ಸೇರಿಸಿದ 'ವೀರಶೈವ ಚಿಂತಾಮಣಿ' ಆದಿಯಲ್ಲಿ—

ಜಯ ಬಸವರಾಜಃ ಸೌಭ್ಯಲ್ಮನೈರ್ಮಲ್ಯ ಪೂಜಃ ॥

ಎಂಬ ಪದ್ಯವಿದೆ. ಈ ಪದ್ಯವು ಪಾಲ್ಕುರಿಕೆಸೋಮನಾಥ ಭಾಷ್ಯ ಮತ್ತು ಮಾಚಿದೇವ ಮನೋವಿಲಾಸ ಗ್ರಂಥಗಳ ಆದಿಯಲ್ಲಿಯೂ ಇದೆ.

ದಗ್ಧಂ ಪೂರ್ವವದೀಶ್ವರೇಣ ನ ಕೃತಂ (?) ಸದ್ಯೋಽಖಿಲಂಯೇನ ಯಾ ।
ದಗ್ಧಂ ಬಿಜ್ಜಳ ಸಿಂಹವಿಷ್ಟರಮಹೋ ಸದ್ಯಃ ಕೃತಂ ಪೂರ್ವವತ್ ।
ಶ್ರೀಯೋಜಂಗಮ . . . . . . . . . ತಾಶ್ಚ . . . . . . . . ।
ಸೋಽಯಂ ಶ್ರೀ ಬಸವಾಹ್ವಯಃ ಪ್ರಬುಧರಾಟ್ ಪಾಯಾತ್ ದ್ವಿತೀಯಃ ಶಿವಃ ॥

ಇದಕ್ಕೂ ಕನ್ನಡ ಟೀಕೆಯಿದೆ.

**ವೀರಶೈವಾಚಾರ ಸುಧಾವಾರ್ಧಿ** (ಶ್ಲೋಕ-ಟೀಕೆ) : ಕರ್ತೃ—ಬಸವಲಿಂಗ (?) ಕಡೆಯಲ್ಲಿ

ತಸ್ಮಾತ್ ಸರ್ವಂ ಪರಿತ್ಯಜ್ಯ ವೀರಮಾಹೇಶ್ವರಂ ಜನಂ ।
ಪೂಜಯೇದಾದರಾದ್ಯಸ್ತು ಸ ಸಮ್ಯಕ್‌ಜ್ಞಾನವಾನ್ ಭವೇತ್ ॥

**ಟೀಕಾ—ಅದು ಕಾರಣದತ್ತಣಿಂದ, ಯಾವ ಆವಾತನು, ಸರ್ವಬ್ರಹ್ಮಭಿನ್ನಾದೆಲ್ಲವನು, ಪರಿತ್ಯಜ್ಯ ಬಿಟ್ಟು, ವೀರ ಮಾಹೇಶ್ವರಂ ಜನಂ–ಆ ಜನವನ್ನು ಆದರಾತ್–ಪ್ರೀತಿಯತ್ತಣಿಂದ. ಪೂಜಯೇತ್–ಪೂಜಿಸಬೇಕು. ಸ–ಆತನು, ಸಮ್ಯಕ್‌ಜ್ಞಾನವಾನ್‌ಭವೇತ್–ಆದವನು.**

ವಿಷಯ—ವೀರಶೈವ ಮತತತ್ತ್ವ ಪ್ರತಿಪಾದನೆ.

**ತತ್ತ್ವಪ್ರಕಾಶಿಕಾ** (ಕನ್ನಡ ಟೀಕೆ) : ಭೋಜದೇವಕೃತ 'ತತ್ತ್ವಪ್ರಕಾಶ'ಕ್ಕೆ ಸಂಸ್ಕೃತದಲ್ಲಿ ಅಘೋರಶಿವಾ ಚಾರ್ಯ ಮತ್ತು ಕುಮಾರ ಎಂಬುವರು ಬರೆದ ವ್ಯಾಖ್ಯಾನಗಳಿವೆ. ಕನ್ನಡದಲ್ಲಿ ಪರ್ವತೇಶ್ವರ ಎಂಬುವರು ಬರೆದ ಟೀಕೆಯಿದೆ. ಇದನ್ನು ಲಿಂ॥ ಎನ್. ಆರ್. ಕರಿಬಸವಶಾಸ್ತ್ರಿಗಳು ಸಂಪಾದಿಸಿ ತಮ್ಮ ವೀರಶೈವ ಗ್ರಂಥಪ್ರಕಾಶಿಕೆಯಲ್ಲಿ (೧೯೦೮) ಪ್ರಕಟಿಸಿದ್ದಾರೆ. ಪ್ರಕೃತ ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಮೇಲೆ ಕಂಡ ಎಲ್ಲ ವ್ಯಾಖ್ಯಾನಗಳನ್ನು ಅಧಿಕರಿಸಿ ಇದಕ್ಕೆ 'ಶೈವದರ್ಶನ ಇತಿಹಾಸ' ಎಂಬ ಪೀಠಿಕೆ ಬರೆದು ಪ್ರಕಟಿಸಿದ್ದಾರೆ (೧೯೭೪). ಮೂಲದಲ್ಲಿನ ಕಾರಿಕೆಗಳಿಗೆ ಸರಳ ಕನ್ನಡದಲ್ಲಿ ವ್ಯಾಖ್ಯಾನ ಬರೆಯಲಾಗಿದೆ. ಕಾರಿಕೆಗಳ ವರ್ಣಾನುಕ್ರಮಣಿಕೆ, ವ್ಯಾಖ್ಯಾನಗತ ಪ್ರಮಾಣಶ್ರುತಿ ಮತ್ತು ಶ್ಲೋಕಗಳ ಅನುಕ್ರಮಣಿಕೆ ಮತ್ತು ಪಾರಿಭಾಷಿಕಶಬ್ದಕೋಶಗಳೊಡನೆ ಇದು ಪ್ರಕಟವಾಗಿದೆ.

**ಜ್ಞಾನಶತಕ** (ಕನ್ನಡ ಟೀಕೆ) : ಶ್ರೀ ಸರ್ಪಭೂಷಣಶಿವಯೋಗಿ ವಿರಚಿತ ಜ್ಞಾನಶತಕವು ಅದ್ವೈತ ಪರ ವಾಗಿದೆ. ಅದಕ್ಕೆ ಹಿಂದೆ ಶ್ರೀ ಶಂಕರಾನಂದಸ್ವಾಮಿಗಳು 'ಸುಬೋಧ' ಎಂಬ ಕನ್ನಡ ವ್ಯಾಖ್ಯೆ ಬರೆದಿದ್ದರು (೧೯೫೭). ಮತ್ತೆ ಬೆಂಗಳೂರು ಸರ್ಪಭೂಷಣ ಮಠದ ಅಧ್ಯಕ್ಷರಾದ ನಿ॥ ಪ್ರ॥ ಶಿವಕುಮಾರಸ್ವಾಮಿಯವರ ಆದೇಶದಂತೆ ಆಸ್ಥಾನವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯರು ಕನ್ನಡ ಪ್ರತಿಪದಾರ್ಥತಾತ್ಪರ್ಯಗಳನ್ನು ಬರೆದು, ಶ್ಲೋಕಾನು ಕ್ರಮಣಿಕೆ. ವೇದಾಂತಪದ ಪರಿಭಾಷೆ. ಅದ್ವೈತ-ಶಿವಾದ್ವೈತಗಳಿಗಿರುವ ಅಂತರಗಳೊಡನೆ ಪ್ರಕಟಿಸಿದ್ದಾರೆ. ಜ್ಞಾನ ಶತಕಸಾರ ಮತ್ತು ಸಮೀಕ್ಷೆಗಳು ಇದಕ್ಕೆ ಸೇರ್ಪಡೆಯಾಗಿವೆ, ಮೂಲವನ್ನು ಸಂಸ್ಕೃತ ಲಿಪಿಯಲ್ಲಿ ಕೊಡಲಾಗಿದೆ. (೧೯೭೮).

**ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ** (ಕನ್ನಡ ಟೀಕೆ) : ಪಾಲ್ಕುರಿಕೆ ಸೋಮನಾರಾಧ್ಯರು (೧೩೦೦) ತೆಲುಗಿನಲ್ಲಿ ದ್ವಿಪದ ಛಂದಸ್ಸಿನಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚಾರಿತ್ರವನ್ನು ಬರೆದಿದ್ದಾರೆ. ಅದನ್ನು ಗುರುರಾಜ ಕವಿ (೧೫೦೦) ಸಂಸ್ಕೃತದಲ್ಲಿ ಭಾಷಾಂತರಿಸಿದ್ದಾರೆ. ಲಿಂ॥ ಪಂ॥ ಎನ್. ಆರ್. ಕರಿಬಸವಶಾಸ್ತ್ರಿಗಳು ಈ ಮಹಾಗ್ರಂಥಕ್ಕೆ

'ಭಾವಮಂಜರಿ' ಎಂಬ ಕನ್ನಡ ಟೀಕೆಯನ್ನು ಬರೆದು ೧೯೦೮ರಲ್ಲಿ ಪ್ರಕಟಿಸಿದರು. ಇದರ ಎರಡನೆಯ ಭಾಗವು ೧೯೨೧ರಲ್ಲಿ ಪ್ರಕಟವಾಯಿತು.

**ಸರ್ವದರ್ಶನಸಂಗ್ರಹ** (ಕನ್ನಡ ಟೀಕೆ) : ಮಾಧವಾಚಾರ್ಯ ವಿರಚಿತ ಸರ್ವದರ್ಶನಸಂಗ್ರಹವು ಸಂಸ್ಕೃತ ದಾರ್ಶನಿಕಗ್ರಂಥ. ಇದರಲ್ಲಿ ಚಾರ್ವಾಕ, ಬೌದ್ಧ, ಆರ್ಹತ, ರಾಮಾನುಜ, ಪೂರ್ಣಪ್ರಜ್ಞ, ನಕುಲೀಶ, ಪಾಶುಪತ, ಶೈವ, ಪ್ರತ್ಯಭಿಜ್ಞಾ, ರಸೇಶ್ವರ, ಔಲೂಕ್ಯ, ಅಕ್ಷಪಾದ, ಜೈಮಿನಿ, ಪಾಣಿನಿ, ಸಾಂಖ್ಯ, ಪಾತಂಜಲ, ಶಾಂಕರದರ್ಶನಗಳು ನಿರೂಪಿತವಾಗಿವೆ. ಸರ್ವದರ್ಶನಸಂಗ್ರಹವನ್ನು ಮೊದಲು ಕನ್ನಡದಲ್ಲಿ ಭಾಷಾಂತರಿಸಿದವರು ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಅಲಂಕಾರ ಪ್ರಾಧ್ಯಾಪಕರಾಗಿದ್ದ ದಿ॥ ವಿದ್ವಾನ್ ವಿಷ್ಣುಮೂರ್ತಿಭಟ್ಟರು. ತರುವಾಯ ಮೈಸೂರು ಕುಂದೂರು ಮಠಾಧ್ಯಕ್ಷರಾದ ವಿದ್ವಾನ್ ಇಮ್ಮಡಿ ಶಿವಬಸವಸ್ವಾಮಿಗಳು ಎಂ.ಎ. ಇವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದಾರೆ. ಇವರ ಸರ್ವದರ್ಶನಸಂಗ್ರಹದ ಕನ್ನಡ ಭಾಷಾಂತರವನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದೆ. ಎಲ್ಲ ದೃಷ್ಟಿಯಿಂದಲೂ ಈ ಭಾಷಾಂತರ ವಿದ್ವಾಂಸರಿಂದ ಪ್ರಶಂಸಿಸಲ್ಪಟ್ಟಿದೆ.

**ಶಿವಸ್ತವನಮಂಜರಿ** (ಕನ್ನಡ ಟೀಕೆ) : ಮಹಾಕವಿ ಷಡಕ್ಷರಿ ವಿರಚಿತ ಶಿವಸ್ತವನಮಂಜರಿಯಲ್ಲಿ ೧೧೧ ವೃತ್ತಗಳಿವೆ. ಇದಕ್ಕೆ ಕನ್ನಡ ಟೀಕು ಬರೆಯಿಸಿ ಪ್ರಕಟಿಸಿದವರು ದಾವಣಗೆರೆಯ ಲಿಂ॥ ನಿಶಾನಿಮಠದ ಶಾಂತವೀರಾರ್ಯರು. ೧೯೨೪ರಲ್ಲಿ ಇದು ಪ್ರಕಟವಾಗಿದೆ. ಮತ್ತು "ಶಿವಮಹಿಮಾಶತಕ, ಗುರುಸ್ತೋತ್ರ"ಗಳಿಗೆ ಚನ್ನಮಲ್ಲಿಕಾರ್ಜುನನು (ಸು. ೧೫೬೦) ಕನ್ನಡದಲ್ಲಿ ಟೀಕೆ ಬರೆದಿದ್ದಾನೆ. ಈತ ವಿದ್ವತ್‌ಕವಿ, 'ಪರಿಹೃತ ಪರಮತ' ಎಂಬ ಬಿರುದಿದೆ. ವೇ.ನಂ. ಶಿವಪ್ಪಶಾಸ್ತ್ರಿಗಳಿಂದ ಪರಿಷ್ಕೃತವಾಗಿ 'ಭಾವಪ್ರಕಾಶ' ಎಂಬ ಕನ್ನಡ ವ್ಯಾಖ್ಯೆಯೊಡನೆ ಇದು ಪ್ರಕಾಶಿತವಾಗಿದೆ.

**ಶಿವಮಹಿಮ್ನ ಸ್ತೋತ್ರ** (ಗುರುದೇವ ವಿರಚಿತ ಕನ್ನಡ ಟೀಕೆ) : 'ಮಲುಹಣಸ್ತೋತ್ರ', 'ಮಲಯುರಾಜಸ್ತೋತ್ರ', 'ಅನಾಮಯ ಸ್ತೋತ್ರ', 'ಭೃಂಗಿಸ್ತವ' ಮತ್ತು 'ಹಲಾಯುಧ ಸ್ತೋತ್ರ' ಇವುಗಳಿಗೆ ಕನ್ನಡ ವ್ಯಾಖ್ಯಾನವನ್ನು 'ಗುರುದೇವ' (೧೬೫೦) ಎಂಬ ವಿದ್ವಾಂಸರೇ ಬರೆದಿದ್ದಾರೆ. ಈತ ತಾನು ಸಂಸ್ಕೃತದಲ್ಲಿ ಬರೆದಿರುವ 'ವೀರಶೈವಾಚಾರ ಪ್ರದೀಪಿಕೆ'ಯಲ್ಲಿ ತನ್ನ ಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ : "ಕೋಟಿಪಲ್ಲಾರಾಧ್ಯನ ವಂಶದಲ್ಲಿ ಪಳನೆಯ ತಲೆ ಗುರುಲಿಂಗದೇವ, ಅವನ ಮಗ ಗುರುದೇವ ಎಂದು, 'ವೀರಭದ್ರೋದಾಹರಣ ಗದ್ಯ', 'ಶಿವಮಾನಸ ಸ್ತೋತ್ರ' ಮತ್ತು 'ನೀಲಾಂಬಿಕಾ ಸ್ತೋತ್ರ'ಗಳೂ ಕೂಡ ಶಿವಸ್ತವನಮಂಜರಿಯಲ್ಲಿ ಸೇರ್ಪಡೆಯಾಗಿವೆ.

**ಸಂಸ್ಕೃತಸ್ತವನಮಂಜರಿ** (ಸಟೀಕಾ) : ಅಭಿನವಕಾಳಿದಾಸ ಬಸವಪ್ಪಶಾಸ್ತ್ರಿಗಳು (೧೮೪೦) ಸಂಸ್ಕೃತದಲ್ಲಿ ಬರೆದ ಐದು ಸ್ತೋತ್ರಗಳು ಈ ಮಂಜರಿಯಲ್ಲಿವೆ. (೧) ತ್ರಿಷಷ್ಟಿಪುರಾತನಸ್ತವ, (೨) ಶಿವಾಷ್ಟಕ, (೩) ಶಿವಭಕ್ತಿಸುಧಾತರಂಗಿಣಿ, (೪) ಅಂಬಾಷೋಡಶಮಂಜರಿ ಮತ್ತು (೫) ಆರ್ಯಾಶತಕಗಳು ಇದರಲ್ಲಿ ಸೇರ್ಪಡೆಯಾಗಿವೆ. ಇವುಗಳಲ್ಲಿ ಮೊದಲ ನಾಲ್ಕು ಸ್ತೋತ್ರಗಳಿಗೆ ಶ್ರೀ ಎಂ. ಜಿ. ನಂಜುಂಡಾರಾಧ್ಯರ ಕನ್ನಡ ಟೀಕೆಯಿದೆ.

**ಬಸವರಾಜಸ್ತವ** (ಕನ್ನಡ ಟೀಕಾ) : ಷಡಕ್ಷರದೇವಕೃತ ಬಸವರಾಜಸ್ತವಕ್ಕೆ ಶಿವಯೋಗಮಂದಿರದಲ್ಲಿದ್ದ ಶ್ರೀ ಸದಾಶಿವ ಶಿವಾಚಾರ್ಯ ಪಟ್ಟಾಧ್ಯಕ್ಷರು ಕನ್ನಡ ಟೀಕೆ ಬರೆದಿದ್ದಾರೆ (೧೯೩೧).

**ಶಿವಸ್ತವಶಿರೋಮಣಿ** (ಕನ್ನಡ ಟೀಕಾ) : ಮೈಸೂರು ಹೊಸಮಠದ ಚರಮೂರ್ತಿ ಬಸವಲಿಂಗಸ್ವಾಮಿಗಳು ವೇದವೇದಾಂತ ಸಮ್ಮತವಾದ ಇದರಲ್ಲಿರುವ ೫೫ ಶ್ಲೋಕಗಳಿಗೆ ಕನ್ನಡ ಟೀಕೆ ಬರೆದಿದ್ದಾರೆ.

**ಲಿಂಗಧಾರಣ** (ಶ್ಲೋಕ-ಟೀಕು) : ಅಂತ್ಯ

> ಏತತ್ಪ್ರಾಣಮಯಂ ಲಿಂಗಂ ಯಾವಜ್ಜೀವಂ ಸಮರ್ಚಯ।
> ಏತನ್ನಿಷ್ಠೇ ತವಪ್ರಾಣಾನ್ ಪರಿತ್ಯಜ್ಯ ಮಹಾಮತೇ॥

ಟೀಕಾ—"ಭೋಮಹಾಮತೇ– ಬುದ್ಧಿವಂತನಾದ ಎಲೈ ಕುಮಾರನೆ . . . . . ." ವಿಷಯ : ಲಿಂಗ ಧರಿಸುವ ವಿಚಾರ (ಅಸಮಗ್ರ).

**ಅನಾದಿ ವೀರಶೈವಸಂಗ್ರಹ** (ಶ್ಲೋಕ-ಟೀಕು) : ಶಾಂತಮಲ್ಲಣಾರ್ಯ(?) ವಿಷಯ—ವೀರಶೈವ ಷಟ್‌ಸ್ಥಲ ಸಿದ್ಧಾಂತ. ಇದು ಕಡೆಯಲ್ಲಿ ;

> ಶ್ರೀಮದ್ವೀರಮಾಹೇಶ್ವರಾಚಾರ್ಯವರ್ಯ ವೀರಶೈವ ಷಟ್‌ಸ್ಥಲಮಾರ್ಗಸ್ಥಾಪನಾಗ್ರಗಣ್ಯ
> ಶಾಂತಮಲ್ಲಣಾಖ್ಯ ಶಿವಯೋಗೀಂದ್ರ ವಿರಚಿತ ಅನಾದಿ ವೀರಶೈವ ಸಂಗ್ರಹೇ . . . .

ಎಂದು ಮುಗಿದಿದೆ.

**ಶೈವಸಂಜೀವಿನಿ** (ಶ್ಲೋಕ-ಟೀಕೆ) : ತೋಂಟದ ಸಿದ್ಧಲಿಂಗದೇವ(?) ಪ್ರಾರಂಭ—

ಶ್ರೀಮತ್-ಷಟ್‌ಸ್ಥಲನಿಷ್ಠಯೋಗಿ-ಹೃದಯಧ್ಯೇಯಂ ನಿಜಾನಂದಕಂ ।
ವ್ಯೋಮಾತೀತಮಖಂಡ ನಿತ್ಯಸುಖಸಚ್ಚಿದ್ರೂಪಮೇಕಂ ಪರಂ ।
ನಿರ್ದ್ವಂದ್ವಂ ನಿರವದ್ಯಮೋಮಿತಿ ಲಸನ್ಮಂತ್ರಾತ್ಮಕಂ ನಿಷ್ಕಳಂ ।
ಜ್ಯೋತಿರ್ಮಾತ್ರ ನಿರಂಜನಾಹ್ವಯಮಹಾಲಿಂಗಂ ಜಗದ್ರಕ್ಷತು ॥
ಇತಿ ಪರಮಶಿವಯೋಗಿರಾಟ್ಪರಿವ್ರಾಜಕಾಚಾರ್ಯ । ಶ್ರೀಮತ್ತೋಂಟದ ಸಿದ್ಧಲಿಂಗ ಶಿವಯೋಗೀಂದ್ರ ವಿರಚಿತೇ ।
ಶ್ರೀಶೈವಸಂಜೀವನೇ ಕ್ರಿಯಾಶೈವವಿಚಾರೇ ವೀರಶೈವಸ್ವರ್ಣಯೇ ನಿರಾಭಾರಿಶೈವಂ ನಾಮ ದಶಮಪರಿಚ್ಛೇದಃ ॥

ಎಂದು ಮುಗಿಯುತ್ತದೆ.

**ಷಟ್ಪ್ರಕಾರಸಂಗ್ರಹ** (ಶ್ಲೋಕ-ಟೀಕೆ) : ಆದಿ—

ಆರಾಧ್ಯಾತ್ಸರ್ವೋತ್ಕೃಷ್ಟಮಸಂಖ್ಯಾತಾರಾಧ್ಯ ವರ್ತನಾತೀತಂ (?)
ಘನಗುರು ಶಾಂತವೃಷಭಮಾರಾಧ್ಯವರ್ಣ್ಯಮಖಿಂ (?)
ಪರಿಪೂರ್ಣ . . . . . . ಭಾಷಕೋ . . . . . . (?)

ಟೀಕು—ಆರಾಧ್ಯಾತ್–ಗುರುಗಳಾದವರೂ, ಸರ್ವಂ–ಸಮಸ್ತರಾಗಿ, ಉತ್ಕೃಷ್ಟಂ–ವೆಗ್ಗಳವಾದವರಾಗಿ, ಅಸಂಖ್ಯಾತಂ–ಲೆಕ್ಕಿಸಲ್ಪಡದವರಾದ . . . ಉನ್ನತ–ಅಧಿಕವಾದಂತ, ಭೂಷಾ–ಕರ್ಣಾಭರಣವಾಗಿ. ವ್ಯಾಖ್ಯಾನಂ–ಸಂಸ್ಕೃತ ವ್ಯಾಖ್ಯಾನ ವಚನಂಗಳಿಂದ, ರಚಿತೇ–ಒಪ್ಪುವುದಾಗಿ, ಅಧುನಾ–ಈಗಳೂ, ಮಯಾ–ಎನ್ನಿಂದ, ಕ್ರಿಯತೇ–ಮಾಡಲ್ಪಡುತ್ತಿದ್ದುದು ಅಂತ್ಯ—ಜುಗಜುಗಮಡಿವಲ್ಲಿ ಬ್ರಹ್ಮಾಂಡಂಗಳಳಿವಲ್ಲಿ ಲಿಂಗವೆಂದರಿದವರಾರೋ, ಶಿವಶಿವಾ ಎಂದೊದಗಿದ ಮಾಯಾವಾದಿಗಳು ದೇವನೆಂದರಿದವರಾರೋ. ಶಿವಶಿವಾ ಅಗ್ನಿತೃಣದೊಳಡಗಿ ಲೀಯವಾದಂತೆ ಗೊಹೇಶ್ವರ ನಿಮ್ಮ ಶರಣ ನಿರವು. ಶಿವಲಿಂಗೈಕ್ಯಸ್ಥಲ ಸಮಾಪ್ತ.

**ಮಾಚಿದೇವ ಮನೋವಿಲಾಸ** (ಸಟೀಕು) : ಆನಂದಬಸವಲಿಂಗಯೋಗಿ (೧೫೦೦). ಆದಿ—

ಶ್ರೀಗುರು ಬಸವಲಿಂಗಾಯ ನಮಃ
ಜಯತಿ ಬಸವರಾಜ . . . ಶ್ರೀವೃಷಾಧೀಶಮೂರ್ತಿಃ

ಟೀಕಾ—ಸ್ಥೌಲ್ಯ–ಪೂಜಾ–ಬಾಹ್ಯಾಭ್ಯಂತರ ಸಂಬಂಧವಾದ ಶಿವಪೂಜೆಯುಳ್ಳಾತನಾದ, ಪ್ರಥಮಗಣ–ವೀರಕ–ವೀರಭದ್ರಾದಿ ಪ್ರಮಥಗಣಂಗಳ. ಸಮಾಜಃ-ಸಮೂಹವನುಳ್ಳಾತನಾದ, ಪ್ರೋಲ್ಲಸತ್–ಮಿಗಿಲಾಗಿವೊಪ್ಪುತ್ತಿರ್ದ, ಭಕ್ತಿ–ಶಿವಭಕ್ತಿಯು, ನೈಜಂ–ಸ್ವಭಾವವುಳ್ಳಾತನಾದ, ಪ್ರಹೃತ–ಕೆಡಿಸಲ್ಪಟ್ಟ, ವಿನಮತ್–ನಮಸ್ಕರಿಸುತ್ತಿರ್ದವರ, ಆರ್ತಿಃ–ಸಂಸಾರ ಪೀಡೆಯುಳ್ಳಾತನಾದ, ಸ್ವಯತ್–ಒಪ್ಪುತ್ತಿರ್ದ, ಆಮ್ನಾಯ–ಶಿವಭಕ್ತಿ ಸಂಪ್ರದಾಯದಲ್ಲಿ, ಪೂರ್ತಿಃ–ತುಂಬಿರ್ದಾತನಾದ. ಸ್ಥಿತ–ನಿಶ್ಚಲವಾದ. ದಿಕ್–ದಿಕ್ಕುಗಳಲ್ಲಿ, ಅಮಿತ–ಹವಣಿಸಲ್ಪಡದ. ಕೀರ್ತಿಃ–ಯಶಸ್ಸುಳ್ಳಾತನಾದ, ಶ್ರೀ–ಐಶ್ವರ್ಯೋಪಲಕ್ಷಿತನಾದ. ವೃಷಾಧೀಶ–ವೃಷಭೇಶ್ವರನು, ಮೂರ್ತಿಃ–ಮೂರ್ತಿಯಾದ, ಬಸವರಾಜಃ–ಬಸವರಾಜನು, ಜಯತಿ–ಸರ್ವೋತ್ಕೃಷ್ಟನಾಗಲಿ. ವಿಷಯ—ವೀರಶೈವ ಆಚಾರಗಳನ್ನು ನಿರೂಪಿಸುವ ಟೀಕಿನ ಗ್ರಂಥ. ಕಡೆಯಲ್ಲಿ "ಇತಿಶ್ರೀ ವೇದವೇದಾಂತ ವೀರಶೈವಾಚಾರಸಾರೋದ್ಧಾರೇ ಶ್ರೀಮದಾನಂದ ಬಸವಲಿಂಗ ಶಿವಯೋಗಿ ವಿರಚಿತ ಶಿವಾಧಿಕ್ಯಕಥನೇ ಮಾಚಿದೇವಮನೋವಿಲಾಸೇ . . . . ಅಂತ್ಯೇಷ್ಟಿಕ್ರಮಃ . . . ."

**ಶಿವಜ್ಞಾನಬೋಧೆ** (ಶ್ಲೋಕ-ಟೀಕೆ)

ಪುರಾನಂದಿನಾಥಾಖ್ಯ ಗಣಾಯ ಈಶ್ವರೇಣೋಕ್ತಜ್ಞಾನಾಗಮೇ ।
ಶಿವಜ್ಞಾನಬೋಧಾಚಾರ್ಯೇಣ ಜ್ಞಾನಪಾದೇ ಸಂಕ್ಷಿಪ್ಯಸಾರಣೇ ।
(?) . . . . . . . . ಶಿವಜ್ಞಾನಬೋಧಕಂ ಕೃತಂ ॥

ಟೀಕಾ—ಪುರಾ–ಪೂರ್ವದಲ್ಲಿ, ನಂದಿನಾಥಾಖ್ಯ–ನಂದಿನಾಥನೆಂಬ ಹೆಸರನುಳ್ಳಂಥ, ಗಣಾಯ–ಗಣೇಶ್ವರಂಗೋಸ್ಕರ ಈಶ್ವರೇಣ–ಪರಮೇಶ್ವರನಿಂದ. ವಿಷಯ—ವೀರಶೈವವೇದಾಂತ.

**ಶಿವಕವಚ** (ಕನ್ನಡ ಟೀಕೆ) : ಕಡೆಯಲ್ಲಿ "ಈ ಪ್ರಕಾರವಾಗಿ ವೃಷಭಯೋಗೀಶ್ವರನು . . . ." ಇತಿ ಸ್ಕಾಂದ ಪುರಾಣೇ ಬ್ರಹ್ಮೋತ್ತರಖಂಡೇ ಋಷಭಯೋಗಿ-ಭದ್ರಾಯುರಾಜಸಂವಾದೇ ಶಿವಕವಚಾಖ್ಯ ಸ್ತೋತ್ರಂ ಸಂಪೂರ್ಣಂ.

**ಪರಮರಹಸ್ಯಂ** (ಶ್ಲೋಕ-ಟೀಕೆ) : ಆದಿ—

ಕೈಲಾಸಶಿಖರೇ ರಮ್ಯೇ ಭಕ್ತಿಸಂಧಾನನಾಯಕಂ ।
ಪ್ರಣಮ್ಯ ಪಾರ್ವತೀ ಭಕ್ತ್ಯಾ ಶಂಕರಂ ಪರಿಪೃಚ್ಛತಿ ॥

ಟೀಕಾ—ಅತ್ಯಂತ ರಮಣೀಯನಾಗಿರುತ್ತಿದ್ದಂಥಾ, ಕೈಲಾಸಪರ್ವತಶಿಖರದಲ್ಲಿ ಭಕ್ತಿಸಂಧಾನಕ್ಕೆ ಒಡೆಯನಾಗುತ್ತಂ ಇದ್ದಂಥಾ ಪರಮೇಶ್ವರನನ್ನು ಪಾರ್ವತೀದೇವಿ ಭಕ್ತಿಯಿಂದ ನಮಸ್ಕಾರಮಾಡಿ ಬೆಸಗೊಳುತಂ ಇದ್ದಳು, ಅಂತ್ಯ—

ಸದ್ಯೋಜಾತಸ್ತಥಾ ಭೂಮಿಃ ವಾಮದೇವಸ್ತಥಾ ಜಲಂ ।
ಅಘೋರಮಗ್ನಿರಿತ್ಯುಕ್ತಂ ತತ್ಪುರುಷಂ ವಾಯುರುಚ್ಯತೇ ।
ಈಶಾನಂ ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ॥

ವಿಷಯ—ವೀರಶೈವಸಿದ್ಧಾಂತ.

**ಗುರುಶಿಷ್ಯ ಸಂಬೋಧೆ** (ಕ.ಟೀಕುಸಹಿತ) : ರೇಣುಕಾಚಾರ್ಯ (?)

ಅಥಾಗಸ್ತ್ಯವಚಃ ಶ್ರುತ್ವಾ ರೇಣುಕೋ ಗಣನಾಯಕಃ ।
ಧ್ಯಾತ್ವಾ ಕ್ಷಣಂ ಮಹಾದೇವಂ ಸಾಂಬಮಾಹ ಸಮಾಹಿತಃ ॥

ಟೀಕಾ—ಅಥ-ಅನಂತರದಲ್ಲಿ, ಗಣನಾಯಕಃ–ಗಣೇಶ್ವರನಾದಂಥ. ರೇಣುಕಃ– ರೇವಣಸಿದ್ಧನು, ಕ್ಷಣಂ– ಒಂದು ಕ್ಷಣವು, ಸಮಾಹಿತಃ– ಸಮಾಧಾನವುಳ್ಳವನಾಗಿ, ಸಾಂಬಂ– ಪಾರ್ವತೀದೇವಿಯರು ಸಹಿತವಾದ, ಮಹಾದೇವಂ– ಶಿವನನ್ನು, ಧ್ಯಾತ್ವಾ– ಧ್ಯಾನಮಾಡಿ, ಆಹ –ನಿರೂಪಿಸಿದನು. ಇದು ಪ್ರಾಯಃ ಸಿದ್ಧಾಂತಶಿಖಾಮಣಿಯ ಬೋಧನಾ ವಿಷಯವನ್ನೊಳಗೊಂಡಿದೆ.

**ಅಥರ್ವಣವೇದಸಾರ** (ಸಟೀಕಾ) : ಕರ್ತೃ-ಕಾಲಗಳು ತಿಳಿದುಬಂದಿಲ್ಲ.

**ಅಷ್ಟಾವರಣವಿವೇಕ** (ಸಟೀಕಾ) : ಕಾಲ-ಕರ್ತೃ (?)

**ಅಮೃತೇಶ್ವರಭಾಷ್ಯ ಅಥವಾ ಅಮೃತೇಶ್ವರಕೃತ:** ಕಾಲ (?) ಇದರ ಕಡೆಯಲ್ಲಿ—ಇತಿ ಶ್ರೀಮದಮೃತೇಶ್ವರಭಾಷ್ಯೇ ಶ್ರೀಮದ್ವೀರಶೈವಸಿದ್ಧಾಂತೇ ಪಂಚಮಕಾಂಡೇ ಸದ್ಭಕ್ತಮಾಹಾತ್ಮ್ಯ–ಷಟ್‌ಸ್ಥಲನಿರೂಪಣಂ ನಾಮ . . . ."

**ಸೋಮನಾಥಭಾಷ್ಯ** (ಶ್ಲೋಕ-ಸಟೀಕು) : ಪಾಲ್ಕುರಿಕೆ ಸೋಮನಾರಾಧ್ಯ (೧೩೦೦)

ಪಾಲ್ಕುರಿಕೆ ಸೋಮನಾಥಾರ್ಯಸ್ತ್ವೇಷು ಭಾಷ್ಯಮುವಾಚ ಯಃ ।
ತದ್ವತ್-ವೇದಾರ್ಥಮಾಖ್ಯಾತಂ ನ ಭೂತೋ ನ ಭವಿಷ್ಯತಿ ॥
ಮನೋಹರೇಣ ಶ್ರೀಕಂಠ-ಭಕ್ತಿಜ್ಞಾನವಶವರ್ತಿನಾ ।
ತಚ್ಛ್ರೀಬಸವರಾಜೀಯಮಾಂಧ್ರದೇಶೀಯಮುಚ್ಯತೇ ॥

ಇಲ್ಲಿಯ "ಜಯತು ಬಸವರಾಜ" ಎಂಬ ಪದ್ಯವು ಮಾಚಿದೇವಮನೋವಿಲಾಸದ ಪ್ರಾರಂಭದಲ್ಲಿಯೂ ಇದೆ, ಕಡೆಯಲ್ಲಿ "ಉಗ್ರಃ– ಉಗ್ರನಹ, ಮಹಾನಿತಿ– ಮಹಾದೇವನೆಂದು. ಪಠಂತಿ– ಓದುತ್ತಿಹರೆಂದು. ಷಡ್ವಿಂಶತಿಪ್ರಕರಣಾನಿ– ಇಪ್ಪತ್ತಾರು ಪ್ರಕರಣಂಗಳು, ಪ್ರದರ್ಶಿತಾನಿ– ತೋರಲ್ಪಟ್ಟವು. "ಇತಿಶ್ರೀ ವೀರಮಾಹೇಶ್ವರ . . . . ಬಸವರಾಜೀಯ– ಸೋಮನಾಥಭಾಷ್ಯೇ ಮನೋಹರೀಯಶ್ರೀಮತ್‌ಭಾಷಾ . . . . ರುದ್ರಶಬ್ದನಿರ್ವಚನ– ಪಶುಪತಿ ಶಬ್ದನಿರ್ವಚನ– ಮಹಾದೇವ ಶಬ್ದನಿರ್ವಚನಂ . . . . ಸಂಪೂರ್ಣಂ" ವೀರಶೈವಸಿದ್ಧಾಂತ ಪ್ರತಿಪಾದನೆ.

**ಶಿವಯೋಗಚಿಂತಾಮಣಿ** (ಶ್ಲೋಕ-ಟೀಕೆ): ಕಂಥೆಯ ಸಿದ್ಧಲಿಂಗಶಿವಯೋಗಿ (?) ಅಂತ್ಯಟೀಕಾ–ಭೋವತ್ಸ- ಎಲೆ ಪುತ್ರನೆ, ಏಕೆ ಈ ಶಿವಭಕ್ತರುಗಳು, ಗಣನಾಯಕಾ– ಗಣನಾಯಕರೆಂದೆನಿಸಿ . . . . ನೃಣಾಂ- ಮನುಷ್ಯರುಗಳಿಗೆ, ಪಂಚಮುದ್ರಾಂ– ವಿಭೂತಿಯ ಘುಂಟಿಕೆ. ಕಂಥೆ, ಕಮಂಡಲು . . . . ಗಳೆಂಬ ಪಂಚಮುದ್ರೆಗಳನು, ದಧಂತೇ ಧರಿಸುತ್ತಿದ್ದಹಂತಾ . . . . ಅಂತೇ–ಕಡೆಯಲ್ಲಿ, ಮಾಂ– ನನ್ನನ್ನು. ಸಮೇಷ್ಯಂತಿ–ಎಯ್ದುವರು.

ವಿಷಯ— ವೀರಶೈವ ಶಿವಯೋಗ ವಿಚಾರ.

**ಸತ್ಕ್ರಿಯಾಜ್ಞಾನಸಾರಾಮೃತ** (ಶ್ಲೋಕ-ಟೀಕೆ): ಗುರುಸ್ತೋತ್ರದಿಂದ ಪ್ರಾರಂಭ. ಟೀಕಾ–ಭವಹರಣಂ- ಸಂಸಾರವ ಸಂಹರಿಸುತ್ತಿದ್ದ ಶರಣ ಹೃದಯಾಭರಣವಾಗಿರ್ದ, ಆತ್ಮಸುಖಕರಣಂ–ಆತ್ಮಸುಖ . . . . ಮಾಡುವ, ಮರಣಭಯಾತ್–ಮರಣಭೀತಿಯ ದೆಸೆಯಿಂದ. ಉತ್ತರಣಂ–ದಾಂಟಿಸುತ್ತಿರ್ದ. ಪರುಣಾಕಿರಣವರಣಂ–ಹೊಸತಾದ

ರಕ್ತವರ್ಣದ ಕಿರಣಗಳಿಂದ, ಮುಸುಕಿದ, ಗುರುಚರಣಂ-ಗುರುಚರಣವನು, ಅಹಂ-ನಾನು, ಯೀಳೆ-ಸ್ತೋತ್ರ ಮಾಡುತ್ತಲಿರ್ದೆನು. ವಿಷಯ—ವೀರಶೈವ ಆಚಾರ-ವಿಚಾರಗಳು.

**ವೀರಶೈವ ತತ್ತ್ವಪ್ರಕಾಶ** (ಶ್ಲೋಕ-ಟೀಕೆ) : ವೀರಶೈವ ತತ್ತ್ವಪ್ರಕಾಶ ಪ್ರಾರಂಭ—

ಓಂ ಅಥರ್ವಣೇ ಭಕ್ತಿ ಸಾಕ್ಷಾತ್ ವೃಷಸ್ಥಲ ಮಾತ್ರಂ ಬ್ರಹ್ಮಣೇ ಸ್ಥಿತಮಿತಿ . . . . ವೃಷಾಹ್ವಯಃ

ಟೀಕಾ— ಭಕ್ತಿಃಸಾಕ್ಷಾತ್ ಎಂಬುದಾದಿಯಾಗಿ,ಭಕ್ತಿಃ- ಭಕ್ತಿಯು,ಸಾಕ್ಷಾತ್- ಪ್ರತ್ಯಕ್ಷವಾಗಿ, ವೃಷಸ್ಥಲಂ- ಬಸವೇಶ್ವರ ನಲ್ಲಿರುವುದು . . . . ಆ ಬಸವೇಶ್ವರನಲ್ಲಿಯೇ ಮಾಡಲ್ಪತಕ್ಕುದೆಂದು ಅಥರ್ವಣಶ್ರುತಿಯ ತಾತ್ಪರ್ಯ.

ವಿಷಯ—ವೀರಶೈವದರ್ಶನ ವಿಚಾರ.

**ಭಕ್ತಾಧಿಕ್ಯ ಶತಕ** (ಶ್ಲೋಕ-ಟೀಕೆ) : ಷಡಕ್ಷರದೇವ (೧೬೫೫)

ಶ್ರೀನಂದೀಶ್ವರ-ಭೃಂಗಿ-ವೀರ-ವೃಷಭಃ ಸ್ಕಂದಾಸ್ತಥಾಶೈಲಜಾ- ।
ಸ್ಫೂರ್ಜದ್ದಾರುಕ-ರೇಣುಕಾದಿಕ-ಗಣಾದ್ಯಾನಂದಕುಂಭೋದ್ಭವೇ ।
ಪೂರ್ಣಾನಂದ-ಭೃಂಗೋಪಮುಸ್ಯಕಣಭುಕ್ ಭ್ರಾಜದ್ದಧೀಚ್ಯಾದಯೋ ।
ಜೀಯಾತ್ ಸುಸ್ಫುಟವೀರಶೈವನಿಯತಾಃ ಪ್ರಾಂಚಃ ಪರಂ ಪಂಡಿತಾಃ ॥

ವಿಷಯ—ಶಿವಭಕ್ತರ ಹಿರಿಮೆ.

**ಭೃಂಗಿಸ್ತವ ಟೀಕಾ** (ಸಟೀಕಾ) : ಗುರುದೇವ (೧೩೫೦) ಆದಿ—

ದೇವಂ ಗಿರಿಜಾಧವಂ ವಿಭುಃ ವಿಶ್ವಾತ್ಮಕಂ । ಭಕ್ತಜನಾರ್ತಿ ಭಂಜನಂ
ಚಂದ್ರಾರ್ಧ ಮೌಲಿಂ ಕರುಣಾಕರಂ । ಪರಂ ವಿಮುಕ್ತಿದಂ ಕಾಮಜಿತಂ ಹರಂ ॥

ಅಂತ್ಯ—ಇತಿ ಶ್ರೀಮದ್ವೇದಾಗಮೋಪನಿಷತ್‌ಪುರಾಣೋಕ್ತ ಮಾರ್ಗಪ್ರವರ್ತನಪ್ರವೀಣಪಂಡಿತಾರಾಧ್ಯ ದೇವಾ ನಾಮಾಚಾರ್ಯವರ್ಯಾತನುಭವ ಗುರುಲಿಂಗದೇವ- ನಾಮಧೇಯ ದೇಶಿಕೇಂದ್ರ- ಪ್ರಲೋಭೋದ್ಭೂತ ಗುರುದೇ ವಾಖ್ಯೇನ ಕರ್ನಾಟಕ- ಭಾಷಾಕೃತಾ ಭೃಂಗಿಸ್ತವಟೀಕಾ ಪರಿಸಮಾಪ್ತಾ.

**ಅಷ್ಟವಿಧಾರ್ಚನ** (ಶ್ಲೋಕ-ಟೀಕೆ) : ಬೋಳಬಸವರಾಜದೇವರು (?) ಆದಿ—

ಜಲಗಂಧಾಕ್ಷತೈಃ ಪುಷ್ಪೈಃ ಧೂಪದೀಪೈಸ್ತಥೈವ ಚ ।
ನೈವೇದ್ಯರಸತಾಂಬೂಲೈಃ ಭವೇದಷ್ಟವಿಧಾರ್ಚನಂ ॥

ಟೀಕಾ—ಉದಕದಿಂದ, ಗಂಧಂಗಳಿಂದೆ, ಅಕ್ಷತೆಗಳಿಂದೆ, ಪುಷ್ಪಗಳಿಂದೆ, ಧೂಪಂಗಳಿಂದೆ, ದೀಪಂಗಳಿಂದೆ, ನೈವೇದ್ಯಂ ಗಳಿಂದೆ, ವೀಳ್ಯಂಗಳಿಂದವು ಎಂಟು ಬಗೆಯಾದ ಪೂಜೆಯು ಅಹುದು. ವಿಷಯ—ಅಷ್ಟವಿಧಾರ್ಚನಕ್ರಮ.

**ಸಿದ್ಧಲಿಂಗವಿಜಯ ಮಹಾಕಾವ್ಯಂ :** ಕನ್ನಡ ಭಾವಾರ್ಥಬೋಧಿನೀ ಸಹಿತ. ಪಗಡದಿನ್ನಿ ಬೃಹನ್ಮಠಾ ಧ್ಯಕ್ಷರಾದ ಲಿಂ॥ ಬಸವರಾಜಶಾಸ್ತ್ರಿಗಳವರು ಸಂಸ್ಕೃತದಲ್ಲಿ ಬರೆದಿರುವ ಈ ಮಹಾಕಾವ್ಯಕ್ಕೆ ಅವರದೇ ಆದ ಕನ್ನಡ ಟೀಕೆಯಿದೆ (೧೯೭೧). ಇದರಲ್ಲಿ ವಿವಿಧ ಛಂದಸ್ಸಿನ (ಪರಿಶಿಷ್ಟವೂ ಸೇರಿ) ೨೭ ಸರ್ಗಗಳಿವೆ.

**ಅಲಂಕಾರಶಾಸ್ತ್ರ** (ಕನ್ನಡ ಟೀಕುಗಳು)

**ಕನ್ನಡಕುವಲಯಾನಂದ** (ಕನ್ನಡ ಟೀಕೆ) : ಬರೆದವನು ತೊರಗಲೆಸೀಮೆಯ ಅರಸನಾದ ಜಾಯಗೊಂಡ. ಈತನ ವಂಶಸ್ಥರು ಬೆಳವಲ ಎರೆನಾಡಿಗೆ ದೊರೆಗಳಾಗಿದ್ದರು. ಇವರು (ಕ್ರಿ.ಶ. ೧೫೬೫) ಪ್ರಭುತ್ವ ನಡೆಸಿದ್ದಾರೆ. ವಿಜಾಪುರದ ಬಾದಶಹರ ಸರದಾರನಾಗಿದ್ದ ಈತ ಆದಿಲ್‌ಶಹನಿಂದ ತೊರಗಲೆಸೀಮೆಯನ್ನು ಜಹಗೀರಾಗಿ ಪಡೆದಿದ್ದ. ಶಿರಸಿಂಗಿ, ನವಿಲುಗುಂದಗಳನ್ನು ವಾಸಸ್ಥಾನವಾಗಿ ಮಾಡಿಕೊಂಡು ಸ್ವಭುಜಬಲದಿಂದ ರಾಜ್ಯವನ್ನು ವಿಸ್ತರಿಸಿ, ವಿಜಾಪುರದ ಸುಲ್ತಾನರ ಮಹಾಸಾಮಂತನಾಗಿ ೧೯೯೦ರಲ್ಲಿ ಶಿವಾಧೀನನಾದ.

ಈ ವಂಶದಲ್ಲಿ ೧೭೧೬ರಲ್ಲಿ ಮೃತನಾದ ಲಿಂಗಭೂವರನ ಮಗ ಜಾಯಗೊಂಡ ೧೭೧೬ರಲ್ಲಿ ಜನಿಸಿದ. ಹಿರಿಯ ತಾಯಿ ಚನ್ನಾಂಬೆ. ಈಕೆ ಎಂಟು ವರ್ಷ ರಾಜಪ್ರತಿನಿಧಿಯಾಗಿ ಆಳಿದಳು. ಅನಂತರ ಜಾಯಗೊಂಡ ಅರಸನಾದ. ಈತನೇ ಕುವಲಯಾನಂದ ಕರ್ತೃ. ೧೭೩೪-೧೭೮೬ರವರೆಗೆ ರಾಜ್ಯವಾಳಿದ. ಕನ್ನಡ ಕುವಲಯಾನಂದಕ್ಕೆ ಮೂಲ ಅಪ್ಪಯ್ಯದೀಕ್ಷಿತರ ಸಂಸ್ಕೃತ ಕುವಲಯಾನಂದ. ಮೂಲದಲ್ಲಿರುವ ಸಂಸ್ಕೃತ ಪದ್ಯಗಳಿಗೆ ಕನ್ನಡ ಷಟ್ಪದಿಗಳನ್ನು ಜೋಡಿ ಸಿರುವುದು ಈ ಗ್ರಂಥದ ವೈಶಿಷ್ಟ್ಯ. ಲಿಂ॥ ಡಾ. ಎಸ್. ಸಿ. ನಂದಿಮಠ ಅವರು ವಿಸ್ತಾರವಾದ ಪೂರ್ವಪೀಠಿಕೆ

ಯೊಡನೆ ಇದನ್ನು (೧೯೭೦) ಪ್ರಕಟಿಸಿದ್ದಾರೆ. ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು ಸಂಸ್ಕೃತ ಕುವಲಯಾನಂದವನ್ನು ಕನ್ನಡಕ್ಕೆ ಅನುವಾದಿಸಿ ೧೯೬೭ರಲ್ಲಿ ಪ್ರಕಟಿಸಿದ್ದಾರೆ. ಕನ್ನಡ 'ಸಾಹಿತ್ಯದರ್ಪಣ'ವನ್ನೂ ಈ ಮಹಾಶಯರು ಅನುವಾದ ಮಾಡಿದ್ದಾರೆ.

**ನೈಷಧೀಯಸಾರ:** ಮಹಾಕವಿ ಶ್ರೀಹರ್ಷ ಕವಿಯ ಸಂಸ್ಕೃತ ಮಹಾಕಾವ್ಯ ನೈಷಧೀಯ, "ನೈಷಧಂ ವಿದ್ವದೌಷಧಂ" ಎಂಬ ಉಕ್ತಿಯಂತೆ ಪ್ರೌಢಬಂಧದಿಂದ ಕೂಡಿದ ಈ ಕಾವ್ಯವನ್ನು ಲಿಂ॥ ಕೋಡಿಕೊಪ್ಪದ ಬಸವರಾಜ ಶಾಸ್ತ್ರಿಗಳು ಒಪ್ಪವಾಗಿ ಕನ್ನಡ ಗದ್ಯದಲ್ಲಿ ಅನುವಾದ ಮಾಡಿದ್ದಾರೆ (೧೯೩೯). ಎರಡು ಸಂಪುಟಗಳಿವೆ. ಇದಲ್ಲದೆ ಈ ಶಾಸ್ತ್ರಿಗಳು 'ರಘುವಂಶ', 'ಶಿಶುಪಾಲವಧಸತ್ವ' ಎಂಬ ಕಾವ್ಯಗಳನ್ನು ಸಹ ಕನ್ನಡಿಸಿದ್ದಾರೆ.

'ಕನ್ನಡ ರಘುವಂಶ' (ವಾರ್ಧಕಷಟ್ಪದಿ) ಮತ್ತು 'ಕರ್ಣಾಟಕ ಕುಮಾರಸಂಭವ' (ಕಂದಪದ್ಯ) ಎಂಬ ಎರಡು ಕಾವ್ಯಗಳನ್ನು ಕನ್ನಡ ಛಂದಸ್ಸಿನಲ್ಲಿ ಕನ್ನಡಿಸಿರುವವರು ಸರ್ವದರ್ಶನತೀರ್ಥ ಲಿಂ॥ ವೈ. ನಾಗೇಶಶಾಸ್ತ್ರಿಗಳು. ಈ ಮಾಲೆಯಲ್ಲಿ ಶ್ರೀ ಎಂ. ಜಿ. ನಂಜುಂಡಾರಾಧ್ಯರ 'ಸಿರಿಗನ್ನಡ ಶಿಶುಪಾಲವಧ' (ಮಧುರಛಂದಸ್ಸಿನ ಕಾವ್ಯ), 'ಕನ್ನಡ ಕಿರಾತಾರ್ಜುನೀಯ' (ಮಧುರಛಂದಸ್ಸು, ಅಪ್ರಕಟಿತ) ಮತ್ತು 'ಕನ್ನಡ ರಘುವಂಶ'ಗಳೂ ಸೇರತಕ್ಕವಾಗಿವೆ.

ಲಿಂ॥ ಬಸವಪ್ಪಶಾಸ್ತ್ರಿಗಳು ಕನ್ನಡಿಸಿರುವ ಈ ಕೆಳಕಂಡ ಕೃತಿಗಳು ಕನ್ನಡಲೋಕದಲ್ಲಿ ಜನಪ್ರಿಯವಾಗಿವೆ. 'ಕರ್ಣಾಟಕ ಶಾಕುಂತಲನಾಟಕಂ', 'ಕನ್ನಡ ವಿಕ್ರಮೋರ್ವಶೀಯಂ', 'ಕನ್ನಡ ಉತ್ತರರಾಮಚರಿತಂ', 'ಕನ್ನಡ ರತ್ನಾವಳಿ', 'ಚಂಡಕೌಶಿಕ' ಮತ್ತು 'ಕನ್ನಡ ಭರ್ತೃಹರಿ ಶತಕತ್ರಯ' ಮುಂತಾದುವನ್ನು ಶ್ರೀ ಎಂ. ಜಿ. ನಂಜುಂಡಾರಾಧ್ಯರು 'ಬಸವಪ್ಪಶಾಸ್ತ್ರಿಗಳ ಸಮಗ್ರ ಕೃತಿಗಳು' ಎಂಬ ಬೃಹತ್ ಗ್ರಂಥದಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ (೧೯೭೭).

**ನ್ಯಾಸಭುಜಸ್ತಂಭನ ಮುಕ್ತಿ** (ಕನ್ನಡ ಟೀಕೆ): ಕವಿಶೇಖರ ಶ್ರೀ ಎಚ್. ವಿ. ನಾರಾಯಣಶಾಸ್ತ್ರಿಗಳು ಈ ಗ್ರಂಥವನ್ನು ಕನ್ನಡಿಸಿ ಪ್ರಬೋಧ ಪುಸ್ತಕಮಾಲೆಯಲ್ಲಿ ಪ್ರಕಟಿಸಿದ್ದಾರೆ (೧೯೫೪).

**ಕನ್ನಡ ಬಸವೇಶವಿಜಯ** (ಚಿ. ಶಂಕರಾರಾಧ್ಯ ವಿರಚಿತ): ಇದನ್ನು ಲಿಂ॥ ಎನ್. ಆರ್. ಕರಿಬಸವ ಶಾಸ್ತ್ರಿಗಳು "ಭಾವಪ್ರಕಾಶ" ಎಂಬ ಕನ್ನಡ ಟೀಕೆಯೊಂದಿಗೆ ಗದ್ಯರೂಪವಾಗಿ ಪ್ರಕಟಿಸಿದ್ದಾರೆ (೧೮೯೪). ಇದರ ಮೂಲದಲ್ಲಿ ೪೩೬ ಅಧ್ಯಾಯಗಳೂ ೪೭೧೫ ಪದ್ಯಗಳೂ ಇವೆ. ಕಡೆಯಲ್ಲಿ—"ಇತ್ಯಸಂಖ್ಯಾತಮಾಹೇಶ್ವರ ದಿವ್ಯ ಪಾದಪದ್ಮಸೌರಭ ಭ್ರಮರಾಯಮಾಣಸ್ಯ ನಿರ್ಮಲಶಂಭುಪ್ರಸಾದೋಪಭೋಗಸಂಗತ, ಸುಖಜಲಧಿ ನಿಮಗ್ನ ಸ್ವಾಂತಸ್ಯ, ಪ್ರಮಥಕಶ್ಮಂಕರಾರಾಧ್ಯಸ್ಯಕೃತೌ ಬಸವಪುರಾಣೇ ಬಸವರಾಜೀಯೇ . . . ." ಎಂಬ ಗದ್ಯವಿದೆ.

ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರೂ ಸ್ನಾತಕೋತ್ತರ ಸಂಸ್ಕೃತವಿಭಾಗದ ವರಿಷ್ಠರೂ ಆದ ಡಾ. ಎಚ್. ಪಿ. ಮಲ್ಲೇದೇವರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವನ್ನು ಪಡೆದು 'ಶೈವಾಗಮ'ಗಳ ಸಂಕಲನ, ಪರಿಷ್ಕರಣ, ಸಂಶೋಧನ ಕಾರ್ಯವನ್ನು ಇತರ ವಿದ್ವಾಂಸರೊಡಗೂಡಿ ಮಾಡುತ್ತಿದ್ದಾರೆ. 'ವಾತುಳ ಶುದ್ಧಾಗಮ'ದ ಎರಡು ಸಂಪುಟಗಳು ಸಂಸ್ಕೃತ ವ್ಯಾಖ್ಯಾನದೊಡನೆ ಅಚ್ಚಾಗುತ್ತಿವೆ. 'ವಾತುಳ ಶುದ್ಧಾಗಮ'ವು ಕನ್ನಡ ಅನುವಾದದೊಡನೆ ಅಚ್ಚಾಗುತ್ತಿದೆ. 'ವೀರಾಗಮ'ದ ಎರಡು ಸಂಪುಟಗಳು ಮುದ್ರಣಕ್ಕೆ ಸಿದ್ಧವಾಗುತ್ತಿವೆ.

ಹೀಗೆ ವೀರಶೈವ ಸಂಸ್ಕೃತ ಗ್ರಂಥಗಳಿಗೆ ವಿದ್ವಾಂಸರು ಹಿಂದಿನಿಂದಲೂ ಕನ್ನಡ ಟೀಕೆ, ಟಿಪ್ಪಣಿಗಳನ್ನು ಬರೆದು ಆಯಾ ಗ್ರಂಥಗಳ ಸಾರವನ್ನು ಕನ್ನಡಿಗರಿಗೆ ಬಡಿಸಿ ಕೃತಕೃತ್ಯರಾಗಿದ್ದಾರೆ. ಅನೇಕ ಪುಸ್ತಕಭಂಡಾರಗಳಲ್ಲಿ ಇನ್ನೂ ಮುದ್ರಣದ ಭಾಗ್ಯವನ್ನು ಕಾಣದೆ ಇರುವ ಹಸ್ತಪ್ರತಿಗಳು ಅನೇಕವಿವೆ. ವೀರಶೈವ ವಿದ್ವಾಂಸರು, ಸಮಾಜಬಾಂಧವರು ಮತ್ತು ಅನೇಕ ಮಠಾಧಿಪತಿಗಳು ಈ ದಿಸೆಯಲ್ಲಿ ಮಾಡುವ ಕೆಲಸ ಹೇರಳವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಇತರ ಸಂಘಸಂಸ್ಥೆಗಳು ಈ ದಿಸೆಯಲ್ಲಿ ಶ್ರಮಿಸುತ್ತಿವೆ. ಅವರಿಗೆ ವೀರಶೈವ ಸಮಾಜ ಆಭಾರಿಯಾಗಿದೆ. ವೀರಶೈವದಂತಹ ಒಂದು ಬೃಹತ್ ಸಮಾಜದ ಆಶ್ರಯದಲ್ಲಿ ಒಂದು "ವೀರಶೈವ ಕೇಂದ್ರ ಗ್ರಂಥಭಂಡಾರ"ವಿಲ್ಲದಿರುವುದು ಒಂದು ದೊಡ್ಡ ಕಳಂಕ. ವೀರಶೈವ ಮಹಾಸಭೆ ಮತ್ತು ಬೆಂಗಳೂರಿನ ಬಸವಭವನಗಳು ಈ ದಿಸೆಯಲ್ಲಿ ಸೂಕ್ತಚರ್ಯೆಯನ್ನು ತೆಗೆದುಕೊಂಡು ಕೃತಕೃತ್ಯವಾಗಲೆಂದು ಆಶಿಸುತ್ತೇನೆ.

---

# ಆಂಧ್ರಸಾಹಿತ್ಯದ ಶೈವದರ್ಶನ

ಡಾ. ಬಾಡಾಲ ರಾಮಯ್ಯ

ಅನಾದಿಕಾಲದಿಂದ ಭರತಖಂಡದಲ್ಲಿ ಶೈವಮತ ಪ್ರಚಲಿತವಾಗಿತ್ತು. ವೇದಗಳನ್ನು ವಿಭಾಗಿಸಿದ ಬಾದರಾಯಣರು ಪಾಶುಪತವನ್ನು ಬಿಡದೆ ಸ್ಮರಿಸಿದರು. ಆಚಾರ್ಯ ಶಂಕರರು ಪಂಚಾಯತನಪೂಜೆಯಲ್ಲಿ ಶಿವನಿಗೆ ತಕ್ಕ ಸ್ಥಾನವನ್ನು ಕೊಟ್ಟರು. ಈ ಗೌರವಕ್ಕಿಂತ ನೈಸರ್ಗಿಕವಾಗಿ ಭರತಖಂಡ ಕನ್ಯಾಕುಮಾರಿಯಿಂದ ಗೌರೀಶಂಕರ ಶಿಖರದ ಪರ್ಯಂತ ಶಿವ-ಶಕ್ತ್ಯಾತ್ಮಕ-ಪ್ರಭಾವದಿಂದ ಪವಿತ್ರವಾಗಿದೆ. ಆದರೆ ಸಾರಭೂತವಾದ ಶಕ್ತಿವಿಶಿಷ್ಟಾತ್ಮಕ ಶಿವಾನುಭವ ಕೆಲವರಲ್ಲಿ ಮಾತ್ರ ಗುಡ್ಡ ಬೆಟ್ಟಗಳಲ್ಲಿಯೋ, ಕಾಡುಗೂಡುಗಳಲ್ಲಿಯೋ, ಗುಡಿಗೋಪುರಗಳಲ್ಲಿಯೋ ಅಲ್ಲಲ್ಲಿ ಮಿಂಚಾಗಿ ಮೆರೆಯುತ್ತಿತ್ತು. ಕಾಲ ಕರ್ಮಸಂಯೋಗದಿಂದ ಹನ್ನೆರಡನೇ ಶತಮಾನದಲ್ಲಿ ಈ ಶಿವಾನುಭವ ನಮ್ಮ ನಾಡಿನಲ್ಲಿ ಬಸವಾದಿ ಶಿವಶರಣರ ಪ್ರಭಾವದಿಂದ ಉಜ್ಜ್ವಲಗೊಂಡಿತು. ಅದರ ಪ್ರಭಾವ ಅಕ್ಕಪಕ್ಕದಲ್ಲಿರುವ ಜನರ ಮೇಲೆ ಆಯಿತು. ಕನ್ನಡದ ಗಡಿನಾಡಿನಲ್ಲಿರುವ ಆಂಧ್ರರ ಮೇಲೆ ಬೀರಿದ ಶರಣರ ಪ್ರಭಾವ ಸಿದ್ಧಾಂತರೂಪವನ್ನು ಪಡೆಯಿತು.

ಆಂಧ್ರ, ತೆಲುಗು, ತೆನುಗು ಈ ಮೂರೂ ಪರ್ಯಾಯಪದಗಳು. ಅತ್ಯಂತ ಪ್ರಾಚೀನವಾದ ಆಂಧ್ರ ಶಬ್ದ ಐತರೇಯ ಬ್ರಾಹ್ಮಣದಲ್ಲಿ ಕಂಡುಬರುತ್ತದೆ. ವಿಶ್ವಾಮಿತ್ರನಿಂದ ಬಹಿಷ್ಕೃತರಾದ ಅವನ ಸಂತತಿ ಆಂಧ್ರ, ಶಬರ, ಪುಳಿಂದ ಮುಂತಾದ ಆಟವಿಕರಲ್ಲಿ ಸೇರಿಹೋದರಂತೆ. ಸರ್ವತಂತ್ರಸ್ವತಂತ್ರವಾಗಿ ಬಾಳುವ ಜಾತಿ ಆಂಧ್ರರದೆಂದು ತಿಳಿಯುತ್ತದೆ. ದಿಗ್ವಾಚಿಯಾದ ತೆನುಗು ಜೇನುತುಪ್ಪದಂತೆ ಮಧುರವಾಗಿತ್ತೆಂದು ಶಾಸ್ತ್ರಜ್ಞರ ಮತ. ತೆಲುಗರನ್ನು ಕುರಿತು ಅನ್ಯರು ಹೇಳಿದ ಈ ಆಂಧ್ರ ತೆನುಗುಗಳನ್ನು ಬಿಟ್ಟು ಈ ನಾಡಿನ ಜನರೇ ತಮ್ಮ ನಾಡನ್ನು ಕುರಿತು ತಾವೇ ತಿರುಲಿಂಗವೆಂದು ಹೇಳಿದಂತೆ ಕಂಡುಬರುತ್ತದೆ. ಬೌದ್ಧಗ್ರಂಥಗಳಲ್ಲಿ, ಪ್ರಾಕೃತಭಾಷೆಯಲ್ಲಿ ತಿರುಲಿಂಗ (ತ್ರಿಲಿಂಗ) ಶಬ್ದ ವಿದೆಯೆಂದು ಟಾಲಮಿ, ತಾರಾನಾಥರು ಚಾರಿತ್ರಿಕ ಆಧಾರಗಳನ್ನು ತೋರಿಸಿದರು. ಇಂದ್ರವರ್ಮದತ್ತವಾದ ಪುರ್ಲಿ ತಾಮ್ರಶಾಸನದಲ್ಲಿ 'ತಿರುಲಿಂಗವಾಸ್ತವ್ಯಾಯ' ಎಂಬ ಶಬ್ದ ಬರುತ್ತದೆ. ತ್ರಿಲಿಂಗ ತ್ರಿಕಲಿಂಗಗಳಿಂದ ತೆಲುಗು ಶಬ್ದ ನಿಷ್ಪನ್ನವಾಯಿತೆಂದು ಕೆಲವರ ಅಭಿಪ್ರಾಯ. ತಿರುಲಿಂಗ ಸಂಸ್ಕೃತೀಕರಣದಿಂದ ತ್ರಿಲಿಂಗವಾಗಿ ಅದೇ ತಿಲಿಂಗ, ತೆಲುಂಗು, ತೆಲುಗು ಆಗಿರಬಹುದು. ತಿರುಲಿಂಗ ಅಂದರೇ ಕಲ್ಯಾಣಾತ್ಮಕವಾದ ಲಿಂಗವೆಂದು ಭಾವನೆ. ಅಂದರೆ ಈ ನಾಡೆಲ್ಲಾ ಶಿವಮಯವಾಗಿರಬಹುದು. ತಿರುಲಿಂಗವೇ ಸಂಸ್ಕೃತೀಕರಣದಿಂದ ತ್ರಿಲಿಂಗವಾಯಿತು. ನಂತರ ಕಾಲದಲ್ಲಿ ತ್ರಿಲಿಂಗದಲ್ಲಿರುವ ಈ "ತ್ರಿ" ಸಂಖ್ಯಾವಾಚಕವಾಯಿತು. ನನ್ನಯ್ಯನ ಅನಂತರ ಬಂದ ತೆಲುಗು ಸಂಸ್ಕೃತ ಕವಿಗಳು ಸಂಖ್ಯಾವಾಚಕವಾದ ಈ ತ್ರಿಲಿಂಗ ಶಬ್ದವನ್ನೇ ಬಳಸಿ ಪ್ರಸಿದ್ಧವಾದ ಮೂರು ಶಿವಲಿಂಗಗಳಿಂದ ಕೂಡಿದ ನಾಡೇ ತ್ರಿಲಿಂಗವೆಂದು ಭಾವಿಸಿದರು. ಕಾಕತೀಯ ಪ್ರತಾಪರುದ್ರನ ಕಾಲದಲ್ಲಿದ್ದ ವಿದ್ಯಾನಾಥ ತನ್ನ ನಾಟಕದಲ್ಲಿ ಹೀಗೆ ಹೇಳಿದ್ದಾನೆ:

> ಯದ್ದೇಶಸ್ತ್ರಿಭಿರೇಷು ಯಾತಿ ಮಹತೀಂ ಖ್ಯಾತಿಂ ತ್ರಿಲಿಂಗಾಖ್ಯಯಾ
> ಯೇಷಾಂ ಕಾಕತಿರಾಜಕೀರ್ತಿವಿಭವೈಃ ಕೈಲಾಸಶೈಲಾಃ ಕೃತಾಃ ।
> ತೇ ದೇವಾಃ ಪ್ರಸರತ್ಪ್ರಸಾದಮಧುರಶ್ರೀಶೈಲಕಾಳೇಶ್ವರ-
> ದ್ರಾಕ್ಷಾರಾಮನಿವಾಸಿನಃ ಪ್ರತಿದಿನಂ ತ್ವಚ್ಛ್ರೇಯಸೇ ಜಾಗ್ರತಃ ॥

ಕಾಕತೀಯ ರಾಜನ ಕೀರ್ತಿವೈಭವ ಕೈಲಾಸಪರ್ವತವಾಗಿ ಆ ಮಹಾದೇವನ ಪ್ರಸಾದಮಧುರಿಮಗಳೇ ಶ್ರೀಶೈಲ, ಕಾಳೇಶ್ವರ, ದ್ರಾಕ್ಷಾರಾಮಗಳಿಂದ ಅನುದಿನ ಶ್ರೇಯಸ್ಸನ್ನು ನೀಡುವ ತ್ರಿಲಿಂಗಾಖ್ಯವಾಯಿತೆಂದು ವರ್ಣಿಸಿದನು. ಈ ಶ್ಲೋಕ ಅಂದಿನ ಪ್ರತಾಪರುದ್ರನ ಆಡಳಿತದಲ್ಲಿದ್ದ ರಾಜ್ಯವನ್ನು— ಇಂದಿನ ವಿಶಾಲಾಂಧ್ರವನ್ನು ಸೂಚಿಸುತ್ತದೆ. ವಿಶಾಲಾಂಧ್ರದಲ್ಲಿ ಮೂರು ವಿಭಾಗಗಳಿವೆ. ಒಂದು ರಾಯಲಸೀಮ, ಇಲ್ಲಿ ಶ್ರೀಶೈಲ ಪ್ರಸಿದ್ಧವಾದ ಪುಣ್ಯಕ್ಷೇತ್ರವಿದೆ.

ಎರಡನೆಯದು ತೆಲಂಗಾಣ ಮಂಥನ ಜಿಲ್ಲೆಯಲ್ಲಿರುವ ಕಾಳೇಶ್ವರ. ಮೂರನೆಯದು ತೀರಪ್ರಾಂತವಾದ ಗೋದಾವರೀ ಮಂಡಲದ ದ್ರಾಕ್ಷಾರಾಮ. ಈ ಮೂರು ಪ್ರಸಿದ್ಧ ಶೈವಕ್ಷೇತ್ರಗಳಿಂದ ಈ ನಾಡು ತ್ರಿಲಿಂಗಾಖ್ಯವಾಯಿತು. ವೀರಶೈವ ದರ್ಶನದಲ್ಲಿ ಗುರು-ಲಿಂಗ-ಜಂಗಮರು ಪ್ರಧಾನರು. ಈ ಮೂವರು ಒಂದೇ ಶಿವನ ಅಂಶ. ದ್ರಾಕ್ಷಾರಾಮ ಗುರುಲಿಂಗ ವಾಗಿ, ಕಾಳೇಶ್ವರ ಮಹಾಲಿಂಗವಾಗಿ, ಶ್ರೀಶೈಲ ಜಂಗಮಲಿಂಗವಾಗಿ ತ್ರಿಲಿಂಗದೇಶ ಶಿವಾತ್ಮಕವಾಯಿತೆಂದು ಹೇಳ ಬಹುದು. ತ್ರಿಲಿಂಗದಿಂದ ಬಂದ ಶಬ್ದವೇ ತೆಲುಗು.

ತೆಲುಗುದೇಶದಲ್ಲಿ ಆಡುವ ಮಾತು ಶಿವಮಯವಾದ ತೆನುಗು. ಜೇನುತುಪ್ಪದಂತೆ ಮಧುರವಾದ ತೆಲುಗು ನಾದಮಯವಾಗಿದೆ. ದ್ರಾವಿಡ ಭಾಷೆಗಳಲ್ಲಿ ತೆಲುಗು ಅಜಂತಭಾಷೆ. ಭಾಷಾಶಾಸ್ತ್ರಜ್ಞರೆಲ್ಲ ಅಂಗೀಕರಿಸಿದ ಸತ್ಯವಿದು. ಅಜಂತವಾಗಿರುವ ಕಾರಣದಿಂದ ನಾದಮಯವಾಗಿ ತೆನುಗು ಶಬ್ದಗಳು ವಿಶ್ವಾಂತರಾಳದಲ್ಲಿ ಅತ್ಯಂತ ಶೀಘ್ರವಾಗಿ ವ್ಯಾಪಿಸುವ ಶಕ್ತಿಯನ್ನು ಜನ್ಮತಃ ಪಡೆದಿವೆ. ಶಿವನ ಢಮರುಕದಿಂದ ಅಕ್ಷರಸಮಾಮ್ನಾಯ ಹುಟ್ಟಿತು. ಈ ಸಮಾಮ್ನಾಯ ಎರಡು ಭಾಗಗಳಿಂದ ಕೂಡಿದೆ. ಅಜ್ಝಲ್ವಿಭಾಗ ಅಚ್ ಅಥವಾ ಸ್ವರಗಳಿಂದ ಒಂದು ವಿಭಾಗ, ಹಲ್ ಅಥವಾ ವ್ಯಂಜನಗಳಿಂದ ಎರಡನೇ ವಿಭಾಗ. ಸ್ವರಗಳ ಸಹಾಯವಿಲ್ಲದೆ ವ್ಯಂಜನಾಕ್ಷರಗಳನ್ನು ಉಚ್ಚರಿಸಲಾಗು ವುದಿಲ್ಲ. ಈ ಕಾರಣಗಳಿಂದ ಸ್ವರಗಳಿಗೆ ಪ್ರಾಣವೆಂದು ಹೆಸರು. ಪ್ರಾಣಪ್ರಕೃತಿಯುಳ್ಳ ಸ್ವರಗಳು ಶಿವಾತ್ಮಕವೆಂದು ಮಂತ್ರಶಾಸ್ತ್ರಜ್ಞರ ಮತ. ಸ್ವರಾಂತವಾದ ಕಾರಣದಿಂದ ಅವ್ಯಕ್ತವಾದ ಮಾಧುರ್ಯವನ್ನು ಪಡೆದ ತೆಲುಗು ಶಿವಾತ್ಮಕ ವಾಯಿತೆಂದು ಹೇಳಬಹುದು. ಪಾಲ್ಕುರಿಕೆ ಸೋಮನಾಥನು ತನ್ನ ಬಸವಪುರಾಣದಲ್ಲಿ, "ತೆಲುಗು ಮಾಟಲನಂಗ ವಲದು ವೇದಮುಲ, ಕೊಲದಿಯಗಾ ಜೂಡುಡಿಲ"ನು ಎಂದನು. ತೆಲುಗು ಮಾತುಗಳನ್ನು ವೇದಗಳಾಗಿ ನೋಡ ಬೇಕೆಂದನು. ಪ್ರಸಿದ್ಧನಾದ ಶ್ರೀನಾಥನು ತನ್ನ ಕವಿತ್ವವನ್ನು ಭೀಮೇಶ್ವರಪುರಾಣದಲ್ಲಿ ಹೀಗೆಂದನು :

ಪ್ರೌಢಿ ಪರಿಕಿಂಪ ಸಂಸ್ಕೃತ ಭಾಷಯಂಡ್ರು
ಕುಲುಕು ನುಡಿಕಾರಮುನ ಆಂಧ್ರಭಾಷಯಂಡ್ರು
ಎವ್ವರೇಮನುಕುನ್ನ ನಾಕೇಮಿ ಕೊರತ ?
ನಾ ಕವಿತ್ವಮ್ಮು ನಿಜಮು ಕರ್ನಾಟಭಾಷ

ಕೆಲವರು ನನ್ನ ಪ್ರೌಢಸಾಹಿತ್ಯವನ್ನು ಕಂಡು ನನ್ನದು ಸಂಸ್ಕೃತ ಭಾಷೆಯೆಂದರು. ಹಲವರು ಜಾಣ್ನುಡಿಯ ಸೊಗಸನ್ನು ತಿಳಿದು ಆಂಧ್ರಭಾಷೆಯೆಂದರು. ಯಾರು ಏನೇ ಹೇಳಲಿ ನನಗೆ ಕೊರತೆಯಿಲ್ಲ. ನಿಜವಾಗಿಯೂ ನನ್ನ ಕವಿತೆ ಕರ್ನಾಟ ಭಾಷೆ ಎಂದು ಈ ಪದ್ಯದ ಭಾವ. ಇಲ್ಲಿ ಆಶ್ಚರ್ಯಕರವಾದ ವಿಷಯವೇನೆಂದರೆ ಶ್ರೀನಾಥನು ಕನ್ನಡಿಗನಲ್ಲ. ಕನ್ನಡ ತಿಳಿದವನೂ ಅಲ್ಲ. ಆದರೆ ಈ ತೆಲುಗುಕವಿಯ ಕವಿತೆ ಕರ್ನಾಟಭಾಷೆಯಂತೆ! ಇದು ನಾವು ಹೇಳುವ ಮಾತಲ್ಲ. ಶ್ರೀನಾಥನೇ ಹೇಳಿದ. ಇಲ್ಲಿ ಕರ್ನಾಟಭಾಷೆಯೆಂದರೆ ಕರ್ನಾಟಕ ಸಂಗೀತಕ್ಕೆ ಅನುಗುಣವಾದ ಭಾಷೆ ಎಂದು ತಿಳಿಯ ಬೇಕು. ಈ ಕವಿಯ ಪದ್ಯಗಳು ಸಂಸ್ಕೃತಪ್ರೌಢತೆ, ತೆಲುಗುನುಡಿಕಾರ ಯಾವುದೇ ಇರಲಿ, ಒಂದು ವಿಧವಾದ ನಾದ ಮಯವಾಗಿ ಕೇಳಲು ಮಧುರಾತಿಮಧುರವಾಗಿರುತ್ತದೆ. ಶ್ರೀನಾಥನ ಸೀಸಪದ್ಯಗಳನ್ನು ಕೇಳಿದವರಿಗೇ ಈ ರಹಸ್ಯ ತಿಳಿಯುತ್ತದೆ. ಮತ್ತೊಂದುಕಡೆ ಇವನೇ 'ದೇಶಭಾಷಲಂದು ತೆಲುಗು ಲೆಸ್ಸ' ಎಂದರು. ಈ ಸತ್ಯವನ್ನು ವಿಜಯನಗರ ಸಾಮ್ರಾಜ್ಯಾಧಿನಾಥನಾದ ಶ್ರೀಕೃಷ್ಣದೇವರಾಯನು ತನ್ನ 'ಆಮುಕ್ತಮಾಲ್ಯ'ದಲ್ಲಿ ದೇಶಭಾಷೆಗಳಲ್ಲಿ ತೆಲುಗು 'ಲೆಸ್ಸ' ಎಂದು ಹೇಳುವುದರ ಮೂಲಕ ರಾಜಮುದ್ರೆಯನ್ನು ಒತ್ತಿದನು. ಇಂದಿಗೂ ಸಂಗೀತಶಾಸ್ತ್ರಜ್ಞರು ತೆಲುಗನ್ನೇ ತಮ್ಮ ಕೃತಿಗಳಲ್ಲಿ ಬಹುತೇಕವಾಗಿ ಉಪಯೋಗಿಸುವುದುಂಟು. ಗುಣಕ್ಕೆ ಮತ್ಸರವಿಲ್ಲ. ಒಂದೊಂದು ಭಾಷೆಯಲ್ಲಿ ಒಂದೊಂದು ವಿಲಾಸವನ್ನು ಶಾರದೆ ತೋರಿದಳು. ಅದನ್ನು ಗ್ರಹಿಸಿ ಆನಂದಿಸುವುದು ರಸಜ್ಞರ ಗುಣ.

ದೇಶ ತ್ರಿಲಿಂಗ; ಆಡುವ ಮಾತು ಶಿವಮಯ; ಇನ್ನು ಇಲ್ಲಿ ಹುಟ್ಟಿ ಬೆಳೆಯುವ ಜನರ ಆಚಾರ ವ್ಯವಹಾರಗಳು ಶಿವಾತ್ಮಕವೇ ಎಂದು ಹೇಳಬಹುದು. ಈ ನಾಡಿನಲ್ಲಿ ಹುಟ್ಟಿದ ಮಕ್ಕಳಿಗೆ "ಓಂ ನಮಃ ಶಿವಾಯ" ಎಂಬ ಷಡಕ್ಷರಿ ಮಂತ್ರದಿಂದ ಅಕ್ಷರಾಭ್ಯಾಸವಾಗುತ್ತದೆ. ಜನ್ಮಾರಂಭದಿಂದ, ಪುನಃ ಶಿವನನ್ನು ಸೇರುವವರೆಗೂ ಈ ಜನರಿಗೆ ನಿರ್ಣೀತ ವಾದ ಕ್ರಿಯೆಗಳೆಲ್ಲಾ ಶಿವಾತ್ಮಕವೇ. ಇದನ್ನು ತಿಳಿದೇ ಅಪ್ಪಯ್ಯದೀಕ್ಷಿತರು :

ಆಂಧ್ರತ್ವಮಾಂಧ್ರಭಾಷಾ ಚ ಪ್ರಾಭಾಕರಪರಿಶ್ರಮಃ ।
ತತ್ರಾಪಿ ಯಾಜುಷೀ ಶಾಖಾ ನಾಲ್ಪಸ್ಯ ತಪಸಃ ಫಲಮ್ ॥

ಎಂದು ಹೇಳಿದ ಮಾತು ಸತ್ಯ.

ಸರ್ವತಂತ್ರಸ್ವತಂತ್ರತೆಯನ್ನು ಸಾರುವ ಸತ್ವೋದ್ರೇಕವುಳ್ಳ ಈ ಆಂಧ್ರರ ಸಾಹಿತ್ಯವನ್ನು ಕುರಿತು ಸ್ಥೂಲವಾಗಿ ತಿಳಿಯೋಣ. ಮತಕ್ಕೂ, ಸಾಹಿತ್ಯಕ್ಕೂ ನಿಕಟಸಂಬಂಧವಿದೆ. ಸಾಹಿತ್ಯದಿಂದ ಮತವನ್ನೂ ಸಂಸ್ಕೃತಿಯನ್ನೂ ತಿಳಿಯ ಬಹುದು. ಯಾವ ಮತದಲ್ಲೇ ಆಗಲಿ ಸಾಧನಾವಸ್ಥೆಯಲ್ಲಿ ಭೇದಪ್ರಭೇದಗಳು ಮಮತಾಭಿಮಾನಗಳು ಇರುವುದು ಸಹಜ. ಆದರೆ ಸಿದ್ಧಾವಸ್ಥೆಯಲ್ಲಿ ಈ ದ್ವಂದ್ವಗಳಿಗೆ ಸ್ಥಾನವಿಲ್ಲ. ಸಿದ್ಧರಾದ ಶೈವರಿಗೆ ವಿಷ್ಣುವು ಶಿವಭಕ್ತ, ವೈಷ್ಣವ ರಿಗೆ ಶಿವ ವಿಷ್ಣುಭಕ್ತ. ಜಗತ್ತೆಲ್ಲಾ ಶಿವನೋ, ಕೇಶವನೋ, ದೇವಿಯೋ ಆಗಿ ಕಾಣುವುದೇ ಹೊರತು ಭಿನ್ನವಾದ ವಿರೋಧಪ್ರಕೃತಿ ಎಳ್ಳಷ್ಟೂ ಯಾವ ಸಿದ್ಧನಿಗೂ ತೋರುವುದಿಲ್ಲ. ಸಿದ್ಧರಾದ ವೀರಶೈವರಿಗೆ ಶಿವಭಕ್ತಾಗ್ರೇಸರನಾದ ನಾರಾಯಣ ಸಾಕ್ಷಾತ್ ಜಗಜ್ಜನನಿಯಂತೆ ನಾರಾಯಣಿ ಪುಂರೂಪ. ಇವರಿಗೆ ಆಗಮಗಳಂತೆ ನಿಗಮಗಳೂ ಪರಮ ಪ್ರಮಾಣವೇ, ಯಾವುದಕ್ಕೂ ತಿರಸ್ಕಾರವಿಲ್ಲ. ಪರಶಿವನ ಅಂಶಾಂಶಗಳಾದ ಜೀವಕೋಟಿಗಳು, ಪಾಶಪ್ರಭಾವದಿಂದ ಆಟವಾಡುತ್ತಿವೆ. ಈ ಆಟ ಸಾಗುವುದೂ, ನಿಲ್ಲುವುದೂ ಆತನ ಇಚ್ಛಾನುಗ್ರಹಗಳ ಅಧೀನವೇ. ಅವನ ವಾತ್ಸಲ್ಯ ಅವ್ಯಾಜವಾಗಿ ಎಲ್ಲರ ಮೇಲೆ ಇದೆ. ಈ ದೃಷ್ಟಿಯಿಂದ ನೋಡುವುದಾದರೆ ಆಂಧ್ರಸಾಹಿತ್ಯ ಉನ್ನತ ಸ್ಥಾಯಿಯಲ್ಲಿ ನಿಲ್ಲುತ್ತದೆ. ದ್ವೇಷ, ಮಹಾಕವಿಗಳಲ್ಲಿ ಕಾಣುವುದಿಲ್ಲ.

ಆಂಧ್ರರ ಮೊದಲನೆಯ ಕಾವ್ಯ ಮಹಾಭಾರತ. ಇದನ್ನು ಕವಿತ್ರಯರೆಂಬ ಮೂರು ಕವಿಗಳು ಭಿನ್ನಭಿನ್ನ ಕಾಲ ಗಳಲ್ಲಿ ಬರೆದು ಪೂರೈಸಿದರು. ಅವರಲ್ಲಿ ಆದಿಕವಿ ನನ್ನಯ್ಯ. ನನ್ನಯ್ಯ ಶೈವಾಗಮರಹಸ್ಯಗಳನ್ನು ತಿಳಿದು ತದನು ಗುಣವಾಗಿ ವರ್ತಿಸಿದ "ನಿತ್ಯಸತ್ಯವ್ರತ ಮತ್ತು ಜಪಹೋಮತತ್ಪರ." ಎರಡನೆಯ ಕವಿ ತಿಕ್ಕನ್ನ. ಇವನು ನನ್ನಯ್ಯನ ಅನಂತರ ವಿರಾಟಪರ್ವದಿಂದ ಸ್ವರ್ಗಾರೋಹಣ ಪರ್ವದವರೆಗೂ ಹದಿನೈದು ಪರ್ವಗಳ ಭಾರತವನ್ನು ಬರೆದನು. ಹದಿಮೂರನೆಯ ಶತಾಬ್ದದ ಮತಗಳ ಘರ್ಷಣೆಯ ಝಂಝಾಮಾರುತದ ಹೊಡೆತದಿಂದ ಭಾರತಸಂಸ್ಕೃತಿಯನ್ನು ಉಳಿಸಿದ ಕಾರಣಪುರುಷ ಈತ. ತನ್ನ ಗ್ರಂಥವನ್ನು ಶಿವಶಕ್ತ್ಯಾತ್ಮಕವಾದ ಹರಿಹರನಾಥನಿಗೆ ಸಮರ್ಪಿಸಿದ ಈತ, "ಚಿತ್ತ ನಿತ್ಯಸ್ಥಿತ ಶಿವ"ನು ಮತ್ತು "ಮಹೇಶ್ವರಾಂಘ್ರಿಕಮಲಧ್ಯಾನೈಕಶೀಲ"ನು. ಇನ್ನು ಮೂರನೆಯ ಕವಿ ಶಂಭುದಾಸನೆಂಬ ಸಾರ್ಥಕ ಬಿರುದುಳ್ಳ ಎರ್ರನ್ನ. ಇವನು ಅರಣ್ಯಪರ್ವಶೇಷವನ್ನು ನನ್ನಯ್ಯನ ಹೆಸರ ಮೇಲೆ ಬರೆದ "ಪ್ರಬಂಧ ಪರಮೇಶ್ವರ"ನು.

ಅಂದಿನಿಂದ ಪರಮಪ್ರಾಮಾಣಿಕರಾಗಿ ಈ ಕವಿತ್ರಯ ಇಂದಿನವರೆವಿಗೂ ಆಂಧ್ರಸಾಹಿತ್ಯದಲ್ಲಿ ವಿಶೇಷ ಗೌರವ ವನ್ನು ಪಡೆಯುತ್ತಿದೆ. ಇನ್ನು ಮಧ್ಯಯುಗದಲ್ಲಿ ಸೂರ್ಯಚಂದ್ರರಂತೆ ಶ್ರೀನಾಥ, ಪೋತನಾಮಾತ್ಯರು ನಮ್ಮಲ್ಲಿ ಕಾಣುತ್ತಾರೆ. ಬಾಲ್ಯದಿಂದ ಸಾಯುವ ಗಳಿಗೆಯವರೆಗೂ ಕವಿತ್ವಪ್ರಪಂಚದಲ್ಲಿ ಮುಳುಗಿದ ಶ್ರೀನಾಥ ಆಂಧ್ರಸಾಹಿತ್ಯ ದಲ್ಲಿ ಅಜರಾಮರ. ಅಖಂಡವಾದ ಪಾಂಡಿತ್ಯ, ನಿರರ್ಗಳವಾದ ಕವಿತೆ, ಅಪ್ರತಿಹತವಾದ ವಾದನಾಪಟುತ್ವ ಅವನದು. ತೆಲುಗು ಸಾಹಿತ್ಯದ ರಾಶಿಯಲ್ಲಿ ಸುಮಾರು ಅರ್ಧಭಾಗಕ್ಕೆ ಅಧಿಕಾರಿಯಾದ ಶ್ರೀನಾಥ ಆ ಕಾಲದಲ್ಲಿ ವಿದ್ಯಾಧಿಕಾರಿ ಯಾಗಿದ್ದ. ಈ "ಕವಿಸಾರ್ವಭೌಮ" ನಮ್ಮ ಪಂಪನಂತೆ ರಾಜಾಧಿರಾಜರಿಂದ ಭೋಗಭಾಗ್ಯಗಳನ್ನು ಅನುಭವಿಸಿದ ಸೌಂದರ್ಯೋಪಜೀವಿ. ಆದರೂ ಹಲವಾರು ಶೈವಾಗಮರಹಸ್ಯಗಳು ಇವನಿಗೆ ರಕ್ತಗತವಾಗಿತ್ತು. ಇವನು "ಈಶ್ವರಾರ್ಚನಕಲಾಶೀಲ"ನೆಂದೂ, "ಬ್ರಾಹ್ಮೀದತ್ತ ವರಪ್ರಸಾದಿ"ಯೆಂದೂ, "ಚಿಂತಾಮಣಿ ಮಹಾಮಂತ್ರೋ ಪಾಸಕ"ನೆಂದೂ ಪ್ರಸಿದ್ಧಿ ಪಡೆದನು. ಹರವಿಲಾಸ, ನೈಷಧ, ಕಾಶೀಖಂಡ, ಭೀಮಖಂಡ, ಶಿವರಾತ್ರಿಮಹಾತ್ಮೆ ಮುಂತಾದ ಶೈವಗ್ರಂಥಗಳನ್ನು ಬರೆದನು. ಇವನ ಕೃತಿಗಳ ಆದಿಯಲ್ಲಿ ಹರಿಸ್ಮರಣೆ ಬಿಡದೇ ಮಾಡಿ ಕವಿತ್ರಯ ಹಾಕಿದ ಸಮನ್ವಯಮಾರ್ಗವನ್ನು ಮತ್ತಷ್ಟು ಸುಗಮಗೊಳಿಸಿದನು. ಅಣುವಣುವಿನಲ್ಲಿ ಅಂತರ್ಗತವಾದ ಪರಮೇಶ್ವರ ಲೀಲಾವಿಲಾಸವನ್ನು ಅನುಭವಿಸಿ ಬರೆದ ಶ್ರೀನಾಥನ ನೂರಾರು ಪದ್ಯಗಳು ಇಂದಿಗೂ ಸಹೃದಯರ ಹೃದಯಾಂತ ರಾಳಗಳಲ್ಲಿ ಪ್ರತಿಧ್ವನಿಸುತ್ತಿವೆ. ಒಂದು ಪದ್ಯವನ್ನು ಇಲ್ಲಿ ಸ್ಮರಿಸೋಣ :

ಆನಂದಂಬುನ ಅರ್ಧರಾತ್ರಮುನ ಚಂದ್ರಾಲೋಕಮುಲ್ ಗಾಯಗಾ
ನಾನಾಸೈಕತವೇದಿಕಾಸ್ಥಲಮುಲಿನ್ ನಲ್ದಿಕ್ಕುಲನ್ ಶಂಭುಕಾ-
ಶೀನಾಥುನ್ ತರುಣೇಂದುಶೇಖರು, ಶಿವುನ್, ಶ್ರೀಕಂಠುನಿನ್ಪಾಡುದನ್
ಮೇನೆಲ್ಲನ್ ಪುಲಕಾಂಕುರಪ್ರಕರಮುಲ್ ನಿಂಡಾರ ಮಿನ್ನೇಟಿಲೋನ್

ಅದು ಗಂಗಾನದೀಸೈಕತಸ್ಥಳ, ಅರ್ಧರಾತ್ರಿ, ಬೆಳದಿಂಗಳು ನಾಲ್ಕು ದಿಕ್ಕುಗಳನ್ನು ನೋಡುತ್ತಾ, ಶಂಭು, ಕಾಶೀನಾಥ, ತರುಣೇಂದುಶೇಖರ, ಶಿವ, ಶ್ರೀಕಂಠನನ್ನು ಕುರಿತು ಹಾಡುತ್ತಾ ಮೈಮರೆತು ಪುಲಕಿತಗಾತ್ರನಾಗಿ ಗಗನಗಂಗಾ

ತರಂಗಗಳಲ್ಲಿ ಲೀನವಾದವನು ಅಗಸ್ತ್ಯನಂತೆ. ಆದರೆ ಕಾಶೀಖಂಡದಲ್ಲಿ ಬರುವ ಅಗಸ್ತ್ಯನಲ್ಲ. ಆ ಅಗಸ್ತ್ಯನನ್ನು ಚಿತ್ರಿಸಿದವನೇ ನಮ್ಮ ಶ್ರೀನಾಥ ಎಂದು ನಾವು ತಿಳಿಯಬೇಕು. ಇನ್ನು ಈ ಯುಗದಲ್ಲಿ ಎರಡನೆಯ ಕವಿ ಪೋತನಾಮಾತ್ಯರು. ಪೋತನ ಕೇವಲ ಕವಿ ಮಾತ್ರವಲ್ಲ. ಇವನು ಜನ್ಮತಃ ಶೈವ. ಭಕ್ತಿಯಲ್ಲಿ ವೀರಶೈವ. ಬರವಣಿಗೆಯಿಂದ ನಮ್ಮ ಸಂಸ್ಕೃತಿಯನ್ನು ಸಾರುವ ಸಿದ್ಧಪುರುಷ, ಕ್ರಾಂತಿದರ್ಶಿ, ಸಹಜಪಾಂಡಿತ್ಯ ಬಿರುದಾಂಕಿತ. ಮಹಾಭಾಗವತವನ್ನು ರಚಿಸಿ ಆಂಧ್ರರ ಮನೆಮನೆಯಲ್ಲಿ ಇಂದಿಗೂ ಜ್ಯೋತಿಯಾಗಿ ನಮ್ಮ ಕುಮಾರವ್ಯಾಸನಂತೆ ಮೆರೆಯುತ್ತಿರುವ ಮಹನೀಯ. ಪೋತನನ ಪದ್ಯಗಳನ್ನು ಹಾಡದೆ, ವೇಮನನ ಸೂಕ್ತಿಗಳನ್ನು ಕೇಳದೆ ಇರುವ ಆಂಧ್ರ ವಿದ್ಯಾರ್ಥಿಯನ್ನು ಈಗಲೂ ನಾವು ನೋಡುವುದು ಕಷ್ಟ. ನಾರಾಯಣಕಥಾಕಥನದಕ್ಷನಾದ ಪೋತನ ಶಿವೋಪಾಸಕನೆಂದು ಅವನ ಭಾಗವತದ ಆರಂಭದಿಂದ ನಮಗೆ ತಿಳಿಯುತ್ತದೆ. ಒಂದು ದಿನ ಚಂದ್ರಗ್ರಹಣದಲ್ಲಿ ಗಂಗೆಗೆ ಹೋಗಿ ಅಲ್ಲಿ ಮಿಂದು ಸೈಕತದಮೇಲೆ ಪದ್ಮಾಸನಾಸೀನನಾಗಿ "ಮಹೇಶ್ವರ ಧ್ಯಾನ"ಮಗ್ನನಾದನಂತೆ. ಅಂತರಾಜಶೇಖರನಾದ ರಾಮಚಂದ್ರನು ಪ್ರತ್ಯಕ್ಷನಾಗಿ ಭಾಗವತವನ್ನು ಬರೆದು ಅದನ್ನು ತನಗೆ ಅಂಕಿತ ಮಾಡಬೇಕೆಂದೂ, ಇದರಿಂದ ಜನ್ಮರಾಹಿತ್ಯವನ್ನು ಅವನು ಪಡೆಯಬಹುದೆಂದೂ ರಾಮನೇ ಅನುಗ್ರಹಿಸಿದನಂತೆ. ಮಹೇಶ್ವರನಾದ ಪೋತನ ಶಿವಭಕ್ತನಾದ ರಾಮನಿಗೆ ಭಗವಲ್ಲೀಲಾ ವಿಲಾಸವನ್ನು ಸಾರುವ ಭಾಗವತವನ್ನು ಅಂಕಿತ ಮಾಡಿದನು. ವೀರಶೈವರಲ್ಲಿ ಶಿವನಿಗಿಂತ ಶಿವಭಕ್ತರೇ ಪ್ರಭಾವಶಾಲಿಗಳಂತೆ. ಇದು ಯಾವ ಈಶ್ವರ ವಿಲಾಸವೋ ಎಂತಹ ಸಂಸ್ಕೃತಿಯ ಪ್ರಭಾವವೋ ತಿಳಿಯುವುದು ಕಷ್ಟ. ಆದರೂ ಅಪೂರ್ವವಾದ ಈ ಕಾಲಕರ್ಮಸಂಯೋಗದಿಂದ ಆಂಧ್ರರಿಗೆ ಅಮೃತೋಪಮಾನವಾದ ಭಾಗವತ ಲಭ್ಯವಾಯಿತು. ಕೃತಿಯ ಪ್ರಾರಂಭದಲ್ಲಿಯೇ ಮಹಾಭಕ್ತನಾದ ಪೋತನಾರ್ಯ ಕೊಟ್ಟ ಸಂದೇಶವನ್ನು ಕೇಳೋಣ :

ಚೇತುಲಾರಂಗ ಶಿವನಿ ಪೂಜಿಂಪಡೇನಿ
ನೋರು ನೊವ್ವಂಗ ಹರಿಕೀರ್ತಿನುಡುವಡೇನಿ
ದಯೆಯು ಸತ್ಯಂಬು ಲೋನುಗಾ ದಲಪಡೇನಿ
ಕಲುಗನೇಟಿಕಿ ತಲ್ಲುಲ ಕಡುಪು ಚೇಟು

ಕೈಯ್ಯಾರೆ ಶಿವನನ್ನು ಪೂಜಿಸಬೇಕು, ಬಾಯಿ ನೋವಾಗುವಂತೆ ಹರಿಯನ್ನು ಜಪಿಸಬೇಕು, ಜೀವನದಲ್ಲಿ ದಯೆ, ಸತ್ಯ ಇರಬೇಕು. ಹಾಗೆ ಇಲ್ಲದೆ ಇರುವವನು ತಾಯಿಯ ಹೊಟ್ಟೆಯ ಕೇಡು ಎಂದು ಈ ಪದ್ಯದ ಭಾವ. ತಾಯಿಯ ಹೊಟ್ಟೆಯ ಕೇಡು ಎನ್ನುವುದರಲ್ಲಿ ಆವೇಶಪೂರಿತವಾದ ಸತ್ಯ, ಕಾವ್ಯಗೌರವವನ್ನು ಹೊಂದಿದೆ. ಕೈಯ್ಯಾರೆ ಶಿವನನ್ನು ಪೂಜಿಸಬೇಕು. ಇಲ್ಲಿ ಏಕಾಂತತೆ, ಪ್ರಶಾಂತಮನಸ್ಕತೆ ಧ್ವನಿಸುತ್ತದೆ. ನಿರ್ಗುಣೋಪಾಸಕರಿಗೆ ಕೊಟ್ಟ ಮಹಾಮಂತ್ರವೇ ಈ ಶಿವಪೂಜೆ. ಎರಡನೆಯ ಪಾದ ಸಗುಣೋಪಾಸಕರಿಗೆ ನೀಡಿದ ತಾರಕಮಂತ್ರ—ಹರಿನಾಮ ಸ್ಮರಣೆ. ಕಾಲಕ್ರಮವಾಗಿ ಈ ಎರಡೂ ಕ್ಷಯವಾದರೂ ಬಾಳಲ್ಲಿ ಬುದ್ಧ ಭಗವಾನರು ಹೇಳಿದ ದಯೆ ಇರಬೇಕು. ಆದರೆ ಈಗ ಶಿವನಿಲ್ಲ, ಹರಿಸ್ಮರಣೆಗೆ ವ್ಯವಧಿಯಿಲ್ಲ, ದಯೆ ತೋರಲು ಆಗುವುದಿಲ್ಲ. ಆದರೂ ಈ ಅಣುಯುಗದಲ್ಲಿ ಮಾನವನಿಗೆ ರಕ್ಷಾಕವಚವೆಂದರೆ "ಸತ್ಯ" ಎಂದು ಕ್ರಾಂತಿದರ್ಶಿಯಾದ ಪೋತನ ಮಹತ್ತರವಾದ ಸಂದೇಶವನ್ನು ಇಡೀ ಪ್ರಪಂಚಕ್ಕೆ ನೀಡಿದನು. ಉಪನಿಷತ್ ಧರ್ಮವಚನಾಮೃತಸಾರಮಿಳಿತವಾಗಿ ಈ ಪದ್ಯ ಅಮೃತಗುಳಿಕೆಯಾಗಿದೆ. ಇದು ಕೇವಲ ಆಂಧ್ರರ ಸಂಸ್ಕೃತಿಯೇ ಅಲ್ಲ. ಇದು ಸನಾತನ ಭಾರತಸಂಸ್ಕೃತಿಯೇ ಅಲ್ಲ. ಇಂದಿನ ವಿಶ್ವಸಂಸ್ಕೃತಿಯ ತಿರುಳನ್ನು ಸೂಚಿಸುತ್ತದೆ.

ಪ್ರಾಚೀನರಲ್ಲಿ ಮೂವರು, ಅರ್ವಾಚೀನರಲ್ಲಿ ಇಬ್ಬರು, ಆಧುನಿಕ ಯುಗದಲ್ಲಿ ಒಬ್ಬನೇ ಒಬ್ಬ ಅಸಹಾಯ ಶೂರನಾಗಿ ಇರುವುದನ್ನು ತೆಲುಗು ಸಾಹಿತ್ಯದಲ್ಲಿ ನಾವು ನೋಡಬಹುದು. ಆ ಒಬ್ಬನು ಯಾರೋ ಅಲ್ಲ. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ವಿಶ್ವನಾಥಸತ್ಯನಾರಾಯಣ. ಇವನು ಶಿವೋಪಾಸಕ, ಪಂಡಿತ ಕವಿ. ಆಜಾನುಬಾಹುವುಳ್ಳ ಇವನ ಮಾತು ಕಟುವಾದರೂ ಮನಸ್ಸು ನವನೀತ. ನಿರ್ಮಲವಾದ ಆತ್ಮ, ತ್ಯಾಗದ ಹೊನಲಿವರು. ಈಶ್ವರ ಸೃಷ್ಟಿಯಲ್ಲಿ ಯಾರೂ ಕಡಿಮೆಯಿಲ್ಲ, ಯಾರೂ ತ್ಯಾಜ್ಯವಿಲ್ಲ ಎಂದು ನಂಬಿದ ನಿಜವಾದ ಬ್ರಾಹ್ಮಣ. ಕವಿಲೋಕದಲ್ಲಿ ಮಾತ್ರ ವಿಹರಿಸುವ ಪುರುಷ ಅಲ್ಲ; ಜೀವನದಲ್ಲಿಯೂ ಸಹಜವಾಗಿ ಬಾಳಲು ಯತ್ನಿಸಿದ ಸತ್ಯನಿರತ, ಖಂಡಿತವಾದಿಯಾಗಿ ಲೋಕಕ್ಕೆ ವಿರೋಧಿಯಾದ. ಇವನು ಮಾಡಿದ ದಾನ-ಧರ್ಮಗಳು ಗುಪ್ತವಾಗಿದ್ದು ಹೊರಕ್ಕೆ ತೋರುವುದಿಲ್ಲ. ಉದಾಹರಣೆಗೆ, ವಾಹಕವೃತ್ತಿಯಲ್ಲಿ ಕೃಷಿಸಿ ಘರ್ಮಜಲದಿಂದ ಹರಿಯುತ್ತಿರುವ ಅನಾಚ್ಛಾದಿತನಾದ ಕಾರ್ಮಿಕನ (ರಿಕ್ಷಾವಾಲ) ಶರೀರಕ್ಕೆ, ತನಗೆ ಕೊಟ್ಟ ರೇಷ್ಮೆ ಶಾಲನ್ನು ಹೊದಿಸಿ ಮನೆಗೆ ಹೋದ ದಯಾಮಯ. ಹತ್ತಿರ ಸೇರುವ ಜನಗಳಿಗೆ ಅವರ ಸ್ನಿಗ್ಧವಾದ ಶಿಶುಹೃದಯ ವೇದ್ಯವಾಗುತ್ತದೆ. ಧಿಕ್ಷಣಾಹಂಕರವ ಬ್ರಹ್ಮೀರೂಪದಲ್ಲಿ ಗುಪ್ತವಾದ

ಆರ್ಧ್ರತೆ ಹೊರಚಿಮ್ಮುತ್ತದೆ. ಆಗ ದೇಶ ಕಾಲಗಳ ಅವಧಿಯನ್ನು ಮೀರಿ ಮಾತನಾಡುತ್ತಾರೆ. ಪಂಪನ ಪದ್ಯಕ್ಕೆ ಪರವಶನಾದ ಪುಟ್ಟಪ್ಪನವರ ಭಾವಕ್ಕೆ ಮುಗ್ಧನಾದ ಈತ ಬಸವಣ್ಣನವರ ಒಂದು ವಚನಕ್ಕೆ ಮಾರುಹೋಗಿ ಮೂರು ಘಂಟೆಗಳ ಕಾಲ ಅವಿಚ್ಛಿನ್ನವಾಗಿ ಮಾತನಾಡಿದ. 'ಗೀತಾಂಜಲಿ'ಯನ್ನು ಮೀರಿದೆ ನಮ್ಮ ಬಸವಣ್ಣನವರ ವಚನಗಳು ಎಂದು ಕತ್ತೆತ್ತಿ ಸಾರಿದರು. ಕುಲ, ಮತ, ಪ್ರಾಂತದ ಅಭಿಮಾನಿಗಳಿಗೆ ದೂರವಾಗಿ ಕವಿತಾಮಾಧುರ್ಯಕ್ಕೆ ಕಿಂಕರನಾಗುವ ರಸಜೀವಿ ಈತ. ಅಖಂಡವಾದ ಪಾಂಡಿತ್ಯ, ಅನುಪಮವಾದ ಮೇಧಾ, ಅಸದೃಶವಾದ ಕವಿತೆ, ಅನರ್ಗಳವಾದ ವಾಕ್‌ಝುರಿಯಿಂದ ಇಂದಿನ ತೆಲುಗು ಸಾಹಿತ್ಯಕ್ಕೇ ಅಲ್ಲ, ನಮ್ಮ ಭಾರತದ ಸಂಸ್ಕೃತಿಗೇ ವಿಶ್ವನಾಥ ಸತ್ಯನಾರಾಯಣ ಗಣ್ಯವ್ಯಕ್ತಿಯಾದನು. ಇವನ ಅಮೃತಲೇಖಣಿಯಿಂದ ಕಥಾನಕಗಳು, ಕಾದಂಬರಿಗಳು, ಪ್ರಬಂಧಗಳು, ಗೀತನಾಟಕಗಳು, ವಿಮರ್ಶೆಗಳು, ಮಹಾಕಾವ್ಯಗಳು ಪುಂಖಾನುಪುಂಖವಾಗಿ ಬಹಿರ್ಗತವಾದವು. ಭಟನಿಂದ ಪ್ರಭುವಿನವರೆಗೂ ಪರಿವ್ಯಾಪ್ತವಾದ ಭಾರತಸಂಸ್ಕೃತಿಯನ್ನು ತನ್ನ 'ವೇಯಿಪಡಗಲು' (ಸಾಸಿರ ಹೆಡೆಗಳು) ಎಂಬ ಕೃತಿಯಲ್ಲಿ ಚಿತ್ರಿಸಿದ ಉತ್ತಮ ಕಾದಂಬರಿಗಾರರು. ತ್ರಿಶೂಲವೆಂಬ ನಾಟಕವನ್ನೂ ಬರೆದರು. ಮಧ್ಯಾಕ್ಕರಗಳನ್ನು ಬರೆದು ಆಂಧ್ರಾಭಿಮಾನವನ್ನು ತೋರಿದರು. ವ್ಯಕ್ತಿತ್ವವೇ ನಶಿಸುತ್ತಿರುವ ಈ ಯುಗದಲ್ಲಿ ಮನುಷ್ಯತ್ವದಿಂದ ದಿವ್ಯತ್ವಕ್ಕೆ ಏರಿದ ರಾಮನೇ ಈ ಜಾತಿಗೆ ಆದರ್ಶಪುರುಷನೆಂದು ವಿಶ್ವನಾಥರು 'ರಾಮಾಯಣ ಕಲ್ಪವೃಕ್ಷ'ವನ್ನು ಬರೆದರು. ಇದಕ್ಕೆ ಜ್ಞಾನಪೀಠದ ಪ್ರಶಸ್ತಿಯೂ ಸಿಕ್ಕಿತು. ಸಾಹಿತೀವಿಶ್ವನಾಥನಾದ ಈ ಕಲ್ಪವೃಕ್ಷದ ಕವಿ ಆಂಧ್ರಸಾಹಿತ್ಯದಲ್ಲಿ ತುಟ್ಟತುದಿಯ ಸಾಂಪ್ರದಾಯಿಕ ಮಹಾಕವಿಯೆಂದು ಹೇಳಬಹುದು. ಕವಿತ್ರಯ, ಮಧ್ಯಮಯುಗದ ಕವಿದ್ವಯ, ಆಧುನಿಕ ಏಕೈಕ ಕವಿಯಿಂದ ಆಂಧ್ರಸಾಹಿತ್ಯದ ಸ್ಥೂಲರೂಪವನ್ನು ನೋಡಿದಂತಾಯಿತು.

ಇನ್ನೂ ಸೂಕ್ಷ್ಮವಾಗಿ ನೋಡಲು ವೀರಶೈವ ಕವಿಗಳ ಸಾಹಿತ್ಯ ತೆಲುಗಿನಲ್ಲಿ ಸ್ವಲ್ಪವಾದರೂ ಮಹತ್ವದ್ದಾಗಿದೆ. ಬಸವಣ್ಣನವರ ಸಮಕಾಲೀನರಾದ ಮಲ್ಲಿಕಾರ್ಜುನ ಪಂಡಿತರು ಮೊದಲನೆಯ ವೀರಶೈವ ಕವಿ ; ಎಂದು ಹೇಳಬಹುದು. ಇವರ ಅಜ, ರುದ್ರ ಶಿವ ಎಂಬ ಮಕುಟದಿಂದ ಸುಮಾರು ಸಾವಿರ ಕಂದ ಪದ್ಯಗಳುಳ್ಳ ಶಿವತತ್ವ ಸಾರವನ್ನು ಬರೆದರು. ಆದರೆ ಈಗ ನಮಗೆ ೪೮೯ ಪದ್ಯಗಳು ಮಾತ್ರ ಲಭಿಸಿವೆ. ಈ ಪದ್ಯಗಳೆಲ್ಲಾ ದುಂಧುಭಿಧ್ಯಾನದಂತೆ ಇವರಿಂದ ಬಹಿರ್ಗತವಾದ ಪಾಠಕನ ಹೃದಯವನ್ನು ಮುಟ್ಟುತ್ತವೆ. ಈ ಕೃತಿಯೇ ತೆಲುಗು ಶತಕ ಸಂಪ್ರದಾಯಕ್ಕೆ ಹಾದಿ ಹಾಕಿದೆ. ಶೈವಾಗಮಗಳ ಭಾವಗಳನ್ನು ತನ್ನ ಅನುಭವದಿಂದ ಮೇಳಮಾಡಿ ಈ ಪದ್ಯಗಳನ್ನು ಪಂಡಿತನು ರಚಿಸಿದಂತೆ ಕಾಣುತ್ತದೆ. ಕನ್ನಡದಲ್ಲಿ ಬಸವಣ್ಣ ಆಂಧ್ರದಲ್ಲಿ ಪಂಡಿತನೂ ಇಬ್ಬರೂ ಶಿವಭಕ್ತರೇ. ಇಬ್ಬರೂ ಶಿವಾನುಭವ ಸಂಪನ್ನರೇ ; ಇಬ್ಬರೂ ಶಾಪಾನುಗ್ರಹ ಸಮರ್ಥರೇ. ಆದರೆ ಬಸವಣ್ಣನವರ ಅನುಭವ ದೈನಂದಿನ ಜೀವನ ವ್ಯವಹಾರದಿಂದ ಹೊಕ್ಕು ದಿವ್ಯವಾಯಿತು. ಪಂಡಿತನಿಗೆ ಶಾಸ್ತ್ರಜನ್ಯಶಕ್ತಿಯಿಂದ ಬಂದ ಅನುಭವ ದಿವ್ಯವಾಗಿ ಪ್ರಾಮಾಣಿಕವಾಯಿತು. ಅಣ್ಣನವರ ವಚನಗಳು ಕವಿತಾಮಧುರ ಸ್ಪರ್ಶದಿಂದ ಜನರನ್ನು ಮಂತ್ರಮುಗ್ಧರನ್ನಾಗಿ ಮಾಡಲು, ಪಂಡಿತನ ಪದ್ಯಗಳು ಶಕ್ತಿ ಪ್ರಯುಕ್ತಿಗಳಿಂದ ಪಂಡಿತರನ್ನು ದಿಗ್ಭ್ರಮೆಗೊಳಿಸುತ್ತವೆ. ಈ ಭೇದಪ್ರಭೇದ-ಗಳು ಏನೇ ಆದರೂ ಇಬ್ಬರ ಲಕ್ಷ್ಯ ಒಂದೇ. ಇಬ್ಬರಿಗೂ ಶಿವನೇ ಪರಬ್ರಹ್ಮ. ಪಂಚಾಕ್ಷರಿಯೇ ಮಂತ್ರ. ಭಸ್ಮವೇ ರಕ್ಷಾಕವಚ. ಶಿವಭಕ್ತರೇ ಜೀವನ್ಮುಕ್ತರು. ಪಂಡಿತನಲ್ಲಿ ಷಟ್‌ಸ್ಥಲಾಚಾರಗಳ ಮಾತೇ ಕಾಣುವುದಿಲ್ಲ. ಆದರೆ ಆ ಅನುಭವ ಅವರ ಪದ್ಯಗಳಲ್ಲಿ ನಾವು ನೋಡಬಹುದು. ಅದ್ವೈತಖಂಡನೆ ಇಬ್ಬರಲ್ಲಿಯೂ ಸಮಾನವೇ. ಪಂಡಿತನು ದ್ವೈತ-ಶೈವನಾಗಿ ಕಾಣುತ್ತಾನೆ. ಬಸವ ದ್ವೈತದಿಂದ ಶಿವಾದ್ವೈತವನ್ನು ಮುಟ್ಟಿದ ಭಕ್ತನಾಗಿ ಕಾಣುತ್ತಾನೆ.

ಬಸವಣ್ಣನವರ ಭಕ್ತಿಗೆ ಪರವಶನಾಗಿ ಮಲ್ಲಿಕಾರ್ಜುನಪಂಡಿತನು ಅವರನ್ನು ನೋಡಬೇಕೆಂದು ಕಾತುರದಿಂದ ಕಲ್ಯಾಣಕ್ಕೆ ಹೊರಟರು. ಆದರೆ ಪನ್ನಿಪುರದಲ್ಲಿರುವಾಗಲೇ ಅಣ್ಣನವರು ಶಿವೈಕ್ಯರಾದರೆಂದು ಕೇಳಿ ದುಃಖಾಕ್ರಾಂತರಾಗಿ ಶ್ರೀಶೈಲಮಲ್ಲೇಶನಲ್ಲಿ ಲೀನವಾದನಂತೆ. ಪಂಡಿತನು ತನ್ನ ಶಿವತತ್ವಸಾರದಲ್ಲಿ ಅಣ್ಣನವರನ್ನು ಕುರಿತು ಮೂರು ಕಂದ ಪದ್ಯಗಳನ್ನು ಬರೆದರು. ಅವುಗಳನ್ನು ಇಲ್ಲಿ ಸ್ಮರಿಸುವುದು ಸಮುಚಿತ :

ಅಸಮೇಕ್ಷಣ ಶಿವಭಕ್ತುಂ
ಡಸಮ ಶ್ರೇಷ್ಠುಡನಿ ಪಲಿಕಿಯನ್ಯುಲ ತೋಡ
ಪೊಸ ಪೋರೈ ಬಂಡಾರು
ಬಸವನ ವಿಸಮೆತ್ತಿ ತ್ರಾಗಿ ಬತುಕಡೇ ರುದ್ರಾ

ಪ.ಸಂ.೪೩೧

ವಸುಧನುಮೇಶುಡು ದೈವಮು
ಪ್ರಸಾದಮು ಪವಿತ್ರ ಮೀಶು ಭಕ್ತುಲೇ ಕುಲಜುಲ್
ಪೊಸ ಪೋರನಿ ಬಂಡಾರುವು
ಬಸವನ ವಿಸಮೆತ್ತಿ ತ್ರಾಗಿ ಬ್ರತುಕಡೇ ರುದ್ರಾ

ಪ.ಸಂ. ೪೩೨

ಕುಸುಮ ಶರಾರೀ ಶಿವಲಿಂ
ಗ ಸಮೇತುಲು ಚಿಕ್ಕಬೊಂದಗಾದನಿ ನಿರ್ಮಾ
ಲ್ಯ ಸುಖಂಬನಿ ಬಂಡಾರುವು
ಬಸವನ ವಿಸಮೆತ್ತಿ ತ್ರಾವಿ ಬ್ರತುಕಡೇ ರುದ್ರಾ

ಪ.ಸಂ. ೪೩೩

ಶಿವಭಕ್ತನೇ ಶ್ರೇಷ್ಠ. ಉಮಾಪತಿಯೇ ದೈವ; ಪ್ರಸಾದವೇ ಪವಿತ್ರ; ಶಿವಭಕ್ತರೇ ಕುಲಜರು; ಲಿಂಗಧಾರಿಗಳೇ ಶಿವನಿರ್ಮಾಲ್ಯವನ್ನು ಅನುಭವಿಸಲು ಯೋಗ್ಯರು ಎಂದು ಬಂದ ಸ್ಪರ್ಧೆಯಲ್ಲಿ ವಿಷವನ್ನು ಕುಡಿದು ಭಂಡಾರಿಯಾದ ; ಬಸವಣ್ಣ ತಾನು ಬಾಳುವುದಲ್ಲದೇ ಜಗತ್ತಿನಲ್ಲಿ ತನ್ನ ವಿಶ್ವಾಸ ಹರಡುವಂತೆ ಮಾಡಿದ. ಮೇಲಿನ ಪದ್ಯಗಳ ಈ ಭಾವ ಗಳಿಂದ ಅಣ್ಣನವರ ಮತವೇ ಅಲ್ಲದೇ ಪಂಡಿತನ ಅಭಿಮತವೂ ವ್ಯಕ್ತವಾಯಿತು.

ಆಂಧ್ರವೀರಶೈವಕವಿಗಳಲ್ಲಿ ಗಣ್ಯನಾದ ಎರಡನೆಯವನು ನನ್ನಚೋಡ. ನನ್ನಚೋಡನು ಕವಿರಾಜಶಿಖಾಮಣಿ. ಇವನ ಕಾವ್ಯ ಕುಮಾರ ಸಂಭವ. ಇದರಲ್ಲಿ ಬರುವ ಕಥಾಸಂಧಾನವೇ ವಿಚಿತ್ರ. ಇವನೇ ತನ್ನ ಕವಿತೆಯನ್ನು ಕುರಿತು ವಸ್ತುಕವಿತೆ ಎಂದು ಹೇಳಿಕೊಂಡನು. ವಸ್ತುಕವಿತ್ವವೆಂದರೇ ವರ್ಣನಾತ್ಮಕ ಕವಿತೆ. ವರ್ಣನೆಗಳ ನಿಲಯವೇ ಪ್ರಕೃತಿ. ಪ್ರಕೃತಿಯನ್ನು ಬಣ್ಣಿಸಿದರೇ ಪರಮೇಶ್ವರನಿಗೆ ಪ್ರೀತಿ ಎಂಬ ವಿಶ್ವಾಸವುಳ್ಳ ಈ ಕವಿ ತೆಲುಗಿನಲ್ಲಿ ಪ್ರಬಂಧಶಾಖೆಗೆ ಆದ್ಯನಾದನು. ಪ್ರಬಂಧದಲ್ಲಿ ನವರಸಗಳು, ಹದಿನೆಂಟು ವರ್ಣನೆಗಳು, ಮೂವ್ವತ್ತಾರು ಅಲಂಕಾರಗಳಿರಬೇಕು. ಶೈವ ಧರ್ಮವನ್ನು ಕಾವ್ಯಧರ್ಮವನ್ನಾಗಿ ಮಾಡಿದ ಪರಮಶೈವನಿವನು. ನವರಸಗಳಿಂದ ಪ್ರಕೃತಿತತ್ವವನ್ನೂ, ಹದಿನೆಂಟು ಸ್ವರಗಳಿಂದ ವರ್ಣನೆಗಳನ್ನೂ, ಮೂವತ್ತಾರು ವ್ಯಂಜನಗಳಿಂದ ಅಲಂಕಾರಗಳನ್ನೂ ಈತನು ರೂಪಿಸಿದನು. ಶಿವಸ್ವರೂಪ ವಾದ ಸ್ವರಗಳು ಶಕ್ತಿರೂಪವಾದ ವ್ಯಂಜನಗಳು, ಶಿವಶಕ್ತ್ಯಾತ್ಮಕವಾದ ಶಬ್ದಪ್ರಪಂಚವೇ ತನ್ನ ವಸ್ತು ಕವಿತೆಯ ಮಹಾ ಕಾವ್ಯದ ಸಿದ್ಧಿಗೆ ಸಾಧನವೆಂದು ನಂಬಿದವನು ಇವನು. ಪಂಪ ತನ್ನ ಕಾವ್ಯನಾಯಕನನ್ನು ತನ್ನ ಅರಸನಿಗೆ ಹೋಲಿಸಿ ಅಭೇದತ್ವವನ್ನು ರೂಪಿಸಿದನು. ಇದೇ ಮಾರ್ಗದಲ್ಲಿ ತನಗೆ ಗುರುಗಳಾದ ಜಂಗಮ-ಮಲ್ಲಿಕಾರ್ಜುನನನ್ನು ಕಾವ್ಯಸ್ಥ ನಾಯಕನಾದ ಶಿವನೊಡನೆ ಅಭೇದವನ್ನಾಗಿ ತನ್ನ ಕೃತಿಯನ್ನು ಗುರುವಿಗೆ ಸಮರ್ಪಿಸಿದ. ಇದು ವೀರಶೈವಸಂಪ್ರ ದಾಯವೇ. ದಕ್ಷಾಧ್ವರಧ್ವಂಸದಲ್ಲಿ "ಶಿವದೂಷಕನ ನಾಲಿಗೆಯನ್ನು ಸೀಳಿ ಉಪ್ಪು ತುಂಬಬೇಕು. ದ್ರುಪದ್ರುವ ದೇಹಕ್ಕೆ ಸವರಿ, ಚರ್ಮಪಟವನ್ನು ಸುಲಿಯಬೇಕು" ಎಂದು ಪರಮತದ್ವೇಷವನ್ನು ಆ ರಾಜಕವಿ ಭಯಂಕರವಾಗಿ ಬಣ್ಣಿಸಿದ.

ಮೂರನೇ ವೀರಶೈವ ಕವಿ ಪಾಲ್ಕುರಿಕೆ ಸೋಮನಾಥ. ಪಂಡಿತಾರಾಧ್ಯಸಂಪ್ರದಾಯಕ್ಕೆ ಸೋಮನಾಥನು ಸೇರಿದವನು. ತನ್ನ ಮೊದಲ ಕೃತಿಯಾದ 'ಅನುಭವಸಾರದಲ್ಲಿ' ಮಲ್ಲಿಕಾರ್ಜುನ ಪಂಡಿತಾರಾಧ್ಯನನ್ನು ಬಾಯಿತುಂಬ ಹೊಗಳಿದನು. ಇಲ್ಲಿ ಬಸವಣ್ಣನವರ ಮಾತು ಕೇಳಿಬರುವುದಿಲ್ಲ. ಶ್ರೀಶೈಲಕ್ಕೆ ಬಂದು ಅಲ್ಲಿರುವ ಮಾಹೇಶ್ವರರ ಸಂಪರ್ಕದಿಂದ ಬಸವಣ್ಣನವರ ಚರಿತ್ರೆಯನ್ನು ಕೇಳಿ ಪರವಶನಾಗಿ, ಅವರ ಭಕ್ತಿಗೆ ಮರುಳಾದನು. ಬಸವ ಎಂಬ ಮೂರು ಅಕ್ಷರಗಳೇ ಸೋಮನಾಥನಿಗೆ ತಾರಕಮಂತ್ರವಾಯಿತು. ಬಸವಪುರಾಣ, ಬಸವೋದಾಹರಣ, ಬಸವಾಂಕ ಗದ್ಯಗಳು, ಬಸವಗೀತ, ಬಸವರಾಜೀಯಾದಿ ದರ್ಶನಗ್ರಂಥ, ವೃಷಾಧಿಪಶತಕವನ್ನು ಬರೆದು ತನ್ನ ಜೀವನವನ್ನೇ ಬಸವನಿಗೆ ಮೀಸಲಾಗಿಸಿದನು. ಜಗತ್ತೆಲ್ಲಾ ಅವನಿಗೆ ಬಸವಮಯವಾಗಿತ್ತು. ಪಂಡಿತಾರಾಧ್ಯಚರಿತ್ರೆಯಲ್ಲೂ ಬಸವಣ್ಣನವರ ಕಥೆಯನ್ನು ಸೇರಿಸಿದನು. ಪಂಡಿತಾರಾಧ್ಯಚರಿತ್ರೆ ಇವನ ಅಖಂಡ ಪಾಂಡಿತ್ಯಕ್ಕೆ ಪ್ರತಿಬಿಂಬ. ಇಲ್ಲಿ ಅನ್ಯಮತಗಳನ್ನು ಖಂಡಿಸಿ ವೀರಶೈವದರ್ಶನವನ್ನು ನಿಗಮಾಗಮಪ್ರಮಾಣಗಳಿಂದ ಪ್ರತಿಷ್ಠಾಪಿಸಿದನು. ಬಸವ ಪುರಾಣ ಒಂದು ದರ್ಶನಗ್ರಂಥವಾಯಿತು. ಕೇವಲ ಸಾಹಿತ್ಯದಲ್ಲಿ ಮಾತ್ರ ವೀರಶೈವವನ್ನು ಹೇಳಿ ಜೀವನದಲ್ಲಿ ಅದನ್ನು ಬಿಡದೇ ಆ ಧರ್ಮವನ್ನು ಚಾಚೂತಪ್ಪದೇ ಆಚರಿಸಿದ ಶೀಲಸಂಪನ್ನ ಸೋಮನಾಥಾರಾಧ್ಯ. ಬಸವಾದಿ ಶಿವಶರಣರ ವಚನಗಳ ಸಾರವನ್ನೆಲ್ಲಾ ಹೀರಿ ತನ್ನ ದರ್ಶನಗ್ರಂಥಗಳಲ್ಲಿ ಸಂದರ್ಭಾನುಗುಣವಾಗಿ ಉಪಯೋಗಿಸಿದ ದಾರ್ಶನಿಕ ಶಿಲ್ಪಿ ಇವನು. ಸೋಮನಾಥನಿಂದ ದ್ವಿಪದಶಾಖೆ ಪ್ರಾರಂಭವಾಗಿ ದೇಶೀಕವಿತೆ ಉನ್ನತಮಟ್ಟಕ್ಕೆ ಏರಿತು. ನನ್ನಚೋಡ ನಿಂದ 'ಪ್ರಬಂಧ ಕವಿತೆ' ಪಂಡಿತನಿಂದ 'ಶತಕ ಕವಿತೆ' ಸೋಮನಾಥನಿಂದ ಪುರಾಣಕವಿತೆ ದ್ವಿಪದಿಯಲ್ಲಿ ಪ್ರಾರಂಭ

ವಾಯಿತು. ವೀರಶೈವ ದರ್ಶನಗಳನ್ನು ಸಾಹಿತ್ಯದಲ್ಲಿ ತಿಳಿಯಬೇಕಾದರೆ ಮೇಲೆ ಹೇಳಿದ ಈ ಮೂರು ಜನರನ್ನು ನಾವು ಅಧ್ಯಯನ ಮಾಡಲೇಬೇಕು.

ಯಥಾವಾಕ್ಕುಲ ಅನ್ನಮಯ್ಯ, ಪಿಡುಪರ್ತಿ ಬಸವಾದಿಕವಿಗಳು ವೀರಶೈವಕವಿಗಳಲ್ಲಿ ಸ್ಮರಣಾರ್ಹರು. ನಂತರ ಬಂದ ಕೃಷ್ಣರಾಯನ ಕಾಲದಲ್ಲಿ ಹೇಳತಕ್ಕ ಮಹಾಕವಿಯೆಂದರೆ ಧೂರ್ಜಟಿ. ಧೂರ್ಜಟಿ 'ಕಾಳಹಸ್ತೀಮಾಹಾತ್ಮ್ಯ' 'ಕಾಳಹಸ್ತೀಶ್ವರಶತಕ'ಗಳನ್ನು ಬರೆದನು. ಇವನು ತನ್ನ ಗ್ರಂಥಗಳನ್ನು ಪೋತನನಂತೆ ನರಾಂಕಿತಮಾಡದೇ ಶಿವಾರ್ಪಣ ಮಾಡಿದ ಭಕ್ತಕವಿ. ಮತ್ತರಾದ ರಾಜರನ್ನೂ ಭೋಗಭಾಗ್ಯಗಳನ್ನೂ ತಿರಸ್ಕರಿಸಿ ಪರಮೇಶ್ವರನ ಲೀಲಾವಿಲಾಸವನ್ನು ಬಾಯಿತುಂಬ ಹೊಗಳಿದ. ಶೈವದರ್ಶನಗಳ ಪ್ರಭೇದಗಳನ್ನು ತಿಳಿದು ತನ್ನ ಕಾವ್ಯದಲ್ಲಿ ಆಯಾದರ್ಶನಗಳಿಗೆ ತಕ್ಕ ಸ್ಥಾನ ಬರುವಂತೆ ಇವನು ಕಥೆಯನ್ನು ರಚಿಸಿದ. ಇವನದು ಮಧುರಾತಿಮಧುರಕವಿತೆಯೆಂದು ಸಾಹಿತೀಸಮರಾಂಗಣ-ಸಾರ್ವಭೌಮನಾದ ಶ್ರೀಕೃಷ್ಣದೇವರಾಯನೇ ಹೊಗಳಿ ತನ್ನ ಆಸ್ಥಾನಕವಿಯನ್ನಾಗಿ ಇವನನ್ನು ಮನ್ನಿಸಿದನಂತೆ.

ಶಿವಾಧಿಕ್ಯತೆಯನ್ನು ಹೇಳುವ ಇವನ ಒಂದು ಪದ್ಯವನ್ನು ಮಾತ್ರ ಇಲ್ಲಿ ಸ್ಮರಿಸಿ ಈ ಪ್ರಬಂಧವನ್ನು ಇಲ್ಲಿ ಮುಗಿಸುತ್ತೇನೆ.

ಏಲೀಲನ್ನುತಿಯಿಂಪವಚ್ಚನುಪಮೋತ್ಪ್ರೇಕ್ಷಾಧ್ವನಿವ್ಯಂಗ್ಯಶ-
ಬ್ದಾಲಂಕಾರ ವಿಶೇಷಭಾಷಲಕಲಭ್ಯಂಬೈನ ನೀರೂಪಮುನ್
ಚಾಲುನ್ ಚಾಲು ಕವಿತ್ವಮುಲ್ ನಿಜಮುಲೇ ಸತ್ಯಂಬು ವರ್ಣಿಂಚುಚೂ-
ವೀ ಲಜ್ಜಿಂಪರುಗಾಕ ಮಾದೃಶ ಕವುಲ್ ಶ್ರೀಕಾಳಹಸ್ತೀಶ್ವರಾ

ಶ್ರೀಕಾಳಹಸ್ತೀಶ್ವರನಾದ ಓ! ದೇವದೇವ! ನಿನ್ನನ್ನು ಹೇಗೆ ನಾವು ಹೊಗಳುವುದು? ಉಪಮಾ, ಉತ್ಪ್ರೇಕ್ಷೆ ಧ್ವನಿಶಬ್ದಗಳಿಗೆ ಅತೀತನೂ, ಅಲಭ್ಯನೂ ಆದ ನಿನ್ನ ರೂಪವನ್ನು ಬಣ್ಣಿಸುವುದು ಹೇಗೆ ಸಾಧ್ಯ? ಇನ್ನು ಈ ಕವಿತೆ, ಸತ್ಯವನ್ನು ಬಣ್ಣಿಸುವುದಕ್ಕೆ ನನ್ನಂಥಾ ಕವಿಗಳು ನಾಚಿಕೆಯಿಲ್ಲದೇ ಇರುವರಲ್ಲಾ; ಎಂದು ಮಹಾಕವಿಯಾದ ಧೂರ್ಜಟಿ ಮಹದೇವನ ಸನ್ನಿಧಿಯಲ್ಲಿ ನಿಸ್ಸಹಾಯಕನಾಗಿ ನಿಲ್ಲುತ್ತಾನೆ. ನಿಜಪರಬ್ರಹ್ಮನಾದ ಶಿವ ವಾಚಾಮಗೋಚರನಲ್ಲವೆ?

---

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ! ಕೂಡಲಸಂಗಮದೇವ!

—ಬಸವಣ್ಣ

* * *

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿರ್ದ ಮಹಾಘನವರಿಯರು ಚೆನ್ನಮಲ್ಲಿಕಾರ್ಜುನ!

—ಅಕ್ಕಮಹಾದೇವಿ

# ಬಸವೇಶ್ವರರು ಮತ್ತು ಗಾಂಧೀಜಿ

ಬಿ. ಆರ್. ಪ್ರಾಣೇಶರಾವ್

ಭಾರತೀಯ ಸಂಸ್ಕೃತಿ ಅವಿಚ್ಛಿನ್ನವಾಹಿನಿ; ಅವಿರತವಾಹಿನಿ. ಅದು ಎಂದೂ ನಿಂತ ನೀರಲ್ಲ. ಪರಂಪರಾನುಗತವಾಗಿ ಬಂದ ಅಮೂಲ್ಯವಾದ ಶಾಶ್ವತ ಮೌಲ್ಯಗಳನ್ನು ಅದು ರಕ್ಷಿಸಿಕೊಂಡು ಬಂದಿದೆ. ಸತ್ಯ, ಧರ್ಮ, ದಯೆ, ಪ್ರೇಮ, ಅಹಿಂಸೆ ಮುಂತಾದುವು ಶಾಶ್ವತಜೀವನ ಮೌಲ್ಯಗಳು. ಪರದೇಶಗಳ ಸಂಸ್ಕೃತಿಗಳೊಡನೆ ಸಂಪರ್ಕ ಬೆಳೆದಾಗ ಆ ಸಂಸ್ಕೃತಿಗಳ ಉತ್ತಮ ಮೌಲ್ಯಗಳನ್ನು ತನ್ನದಾಗಿ ಮಾಡಿಕೊಂಡು ವೈವಿಧ್ಯತೆಯನ್ನು ಮೆರೆದಿರುವುದು ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆ.

ಭಾರತೀಯ ಸಂಸ್ಕೃತಿಯಲ್ಲಿ ಹಾಗೂ ಸಮಾಜದಲ್ಲಿ ದುಷ್ಟಸಂಪ್ರದಾಯಗಳು ತಲೆದೋರಿದಾಗ, ಹಳೆಯ ಮೌಲ್ಯಗಳು ಸವಕಲಾದಾಗ ಅವುಗಳನ್ನು ತೊಡೆದುಹಾಕುವ ಕೆಲಸ ಕಾಲಕಾಲಕ್ಕೆ ನಡೆದುಬಂದಿದೆ. ಬೇರೆ ದೇಶಗಳಲ್ಲಿ ಸಮಾಜಸುಧಾರಣೆ ಅಥವಾ ಪರಿವರ್ತನೆಗೆ ತೀವ್ರ ಕ್ರಾಂತಿಗಳು, ಹಿಂಸಾತ್ಮಕ ಆಂದೋಳನಗಳು ಅಗತ್ಯವಾಗಿ ಕಂಡುಬಂದಿವೆ. ಆದರೆ ಭಾರತದಲ್ಲಿ ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಶಾಂತಿಯುತವಾಗಿ ನಡೆದಿರುವುದು ಒಂದು ವೈಶಿಷ್ಟ್ಯ. ಹೀಗೆ ಸುಧಾರಣೆ ಅಥವಾ ಪರಿವರ್ತನೆಗಳನ್ನು ತರುವುದರಲ್ಲಿ ಮೊದಲಿನಿಂದಲೂ ಪ್ರವಾದಿಗಳು, ಸಂತರು, ಸುಧಾರಕರು ಅಪ್ರತಿಮ ಪಾತ್ರ ವಹಿಸಿದ್ದಾರೆ. ಹಳಸಿಹೋದ ಮೌಲ್ಯಗಳನ್ನು, ಕುರುಡು ಸಂಪ್ರದಾಯಗಳನ್ನು, ದುಷ್ಟ ಕಟ್ಟಳೆಗಳನ್ನು ಗುರುತಿಸಿ ಅವುಗಳನ್ನು ತೊಡೆದುಹಾಕಲು ಬದ್ಧಕಂಕಣರಾದವರು ಮಹಾತ್ಮರು; ಸಂತರು ಮತ್ತು ಸುಧಾರಕರು. ತಾವು ಕಂಡ ಸತ್ಯವನ್ನು, ತಾವು ಒಪ್ಪಿದ ಹೊಸ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಮೊದಲು ಪರಿವರ್ತಿತರಾಗಿ ಇಡೀ ಜನತೆಯನ್ನು ಪರಿವರ್ತನೆಯ ಹಾದಿಗೆ ಎಳೆಯುವುದು ಮಹಾತ್ಮರ ಮಾರ್ಗ. ಇದು ಒಮ್ಮೊಮ್ಮೆ ನಿಧಾನದ ಮಾರ್ಗವೆಂದು ಕಂಡರೂ ಇದರ ಫಲ ಶಾಶ್ವತ. ಇವರಿಂದ ಸಮಾಜಕ್ಕೆ ಆಗುವ ಪ್ರಯೋಜನ ಅಮಿತ.

ಈ ರೀತಿಯ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವ್ಯಕ್ತಿಗೆ ಪಾರಮ್ಯ. ವ್ಯಕ್ತಿಯ ಸುಧಾರಣೆಯಿಂದ ಸಮಾಜದ ಸುಧಾರಣೆ; ಸಾಮಾಜಿಕ ಪರಿವರ್ತನೆ. ಪರಿವರ್ತನೆಯ ಅಗತ್ಯವನ್ನು ಕಂಡ ಮಹಾತ್ಮರು ಹೊಸ ಮೌಲ್ಯಗಳ ಅನುಷ್ಠಾನದಿಂದ ಮೇಲ್ಪಂಕ್ತಿ ಹಾಕುತ್ತಾರೆ; ಕ್ರಾಂತಿದರ್ಶಿಗಳಾಗುತ್ತಾರೆ. ಸಮಾಜದಲ್ಲಿ ವ್ಯಕ್ತಿಗಳು ಹೆಚ್ಚುಹೆಚ್ಚಾಗಿ ನೂತನ ಮೌಲ್ಯಗಳನ್ನು ಒಪ್ಪಿಕೊಂಡು ಅನುಸರಿಸಿದಾಗ ಅವರ ಜೀವನಕ್ರಮದಲ್ಲಿ, ಜೀವನ ವಿಧಾನದಲ್ಲಿ ಬದಲಾವಣೆಯಾಗುತ್ತದೆ. ಕಡೆಗೆ ಇಡೀ ಸಮಾಜ ಪರಿವರ್ತಿತವಾಗುತ್ತದೆ. ಸದ್ದಿಲ್ಲದೆ ಕ್ರಾಂತಿ ನಡೆದು ಹೋಗುತ್ತದೆ. ಇಂತಹ ಶಾಂತಿಯುತ ಕ್ರಾಂತಿಪಥದ ನಿರ್ಮಾತೃಗಳು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ವಿಜೃಂಭಿಸಿದ ಶ್ರೀ ಬಸವೇಶ್ವರರು ಒಬ್ಬರಾದರೆ ಇಪ್ಪತ್ತನೇ ಶತಮಾನದಲ್ಲಿ ರಾರಾಜಿಸಿದ ಮಹಾತ್ಮ ಗಾಂಧಿ ಮತ್ತೊಬ್ಬರು.

ಶ್ರೀ ಬಸವೇಶ್ವರರು ಹುಟ್ಟು ಬಂಡಾಯಗಾರರು. ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಧಾರ್ಮಿಕ ಅನಾಚಾರ, ಸಾಮಾಜಿಕ ಅನ್ಯಾಯ, ಕುರುಡು ಸಂಪ್ರದಾಯ, ಹಾಗೂ ಜಾತೀಯ ಯಜಮಾನಿಕೆ ವಿರುದ್ಧ ಬಂಡಾಯ ಹೂಡಿದರು. ಹುಟ್ಟು ನಾಡಾದ ಕರ್ನಾಟಕ ಅವರ ಕಾಯಕದ ಕ್ಷೇತ್ರ. ಬಿಜ್ಜಳನ ಮಂತ್ರಿಯಾಗಿದ್ದ ಅವರು ಸಾಮಾಜಿಕ ಸ್ಥಿತಿಗತಿಗಳನ್ನು ಕ್ಷ-ಕಿರಣದಿಂದ ನೋಡಿ ಸಮಾಜದ ಸಮಗ್ರ ಸುಧಾರಣೆಗೆ ಹಾಗೂ ಪರಿವರ್ತನೆಗೆ ಅವಿರತವಾಗಿ ದುಡಿದರು.

ಹಲವು ಹತ್ತು ದೇವರು ದಿಂಡರುಗಳ ಆರಾಧನೆ ಹಾಗೂ ಮೂಢನಂಬಿಕೆಗಳಿಂದ ಗೋಜಲುಮಯವಾಗಿದ್ದ ಧಾರ್ಮಿಕ ಜೀವನದ ಪುನರುತ್ಥಾನಕ್ಕೆ ಕೈಹಾಕಿದರು ಬಸವಣ್ಣನವರು. ಭಗವಂತ ಏಕಮೇವಾದ್ವಿತೀಯ; ಜನರೆಲ್ಲರೂ

ಆತನ ಮಕ್ಕಳು. ಆದುದರಿಂದ ಎಲ್ಲರೂ ಸಹೋದರರು ಎಂಬ ಭಾವನೆಯನ್ನು ಬಿತ್ತರಿಸಿದರು. ಭಗವಂತನಲ್ಲಿ ಸಮರ್ಪಣಭಾವದ ಭಕ್ತಿಯೇ ಮುಕ್ತಿಗೆ ಮಾರ್ಗ ; ಮಾನವಸೇವೆ ಭಗವಂತನ ಸಾಕ್ಷಾತ್ಕಾರದ ಸಾಧನ ಎಂದು ಸಾರಿದರು. ಆ ದಿಸೆಯಲ್ಲಿ ಕಾಯಕ ಮಾಡಿದರು. ಜಾತಿ, ವರ್ಗ, ಲಿಂಗಭೇದವಿಲ್ಲದೆ ಎಲ್ಲರೂ ಒಂದೇ ಎಂಬ ತತ್ವವನ್ನು ಪ್ರತಿಪಾದಿಸಿದರು. ಅವರು ನಡೆಸುತ್ತಿದ್ದ 'ಅನುಭವ ಮಂಟಪ' ಅವರ ವಿಚಾರಗಳು ಮೂರ್ತಿವೆತ್ತ ವೇದಿಕೆಯಾಗಿತ್ತು.

ಬಸವಣ್ಣನವರಂತೆ ಗಾಂಧಿಯವರೂ ಭಗವಂತನ ಏಕತೆಯ ತತ್ವವನ್ನು ಪ್ರತಿಪಾದಿಸಿದರು. ಗಾಂಧಿಯವರಿಗೆ ಸತ್ಯವೇ ದೇವರು. ದೇವರ ಸೃಷ್ಟಿಗೆ ಒಳಗಾದ ಜೀವರಾಶಿಗಳೆಲ್ಲಾ ವಂದ್ಯ. ಪ್ರತಿಯೊಂದು ಜೀವವೂ ಪವಿತ್ರವಾದುದು. ಆದುದರಿಂದ ಕಾಯೇನ ವಾಚಾ ಮನಸಾ ಯಾವ ಜೀವಕ್ಕೂ ಹಿಂಸೆ ಮಾಡಬಾರದು. ಹಿಂಸೆ ಮಾಡಿದರೆ ಭಗವಂತನಿಗೆ ಅಪಚಾರ ಮಾಡಿದಂತೆ ಎಂದರು ಗಾಂಧಿ.

ಬಸವಣ್ಣನವರು ದಯೆಯು ಧರ್ಮದ ಮೂಲವೆಂದರೆ ಗಾಂಧಿ 'ಪ್ರೇಮ' ಜೀವನದ ಸೂತ್ರ ಎಂದರು. ಸತ್ಯ, ಅಹಿಂಸೆ, ಅಸಂಗ್ರಹ, ಅಭಯ, ಸಮಾನತೆ, ನೀತಿ—ಇಬ್ಬರು ಮಹಾತ್ಮರುಗಳೂ ಒಪ್ಪಿಕೊಂಡು ಅನುಷ್ಠಾನ ಮಾಡಿದ ಮೌಲ್ಯಗಳು.

ವರ್ಣ ಮತ್ತು ಜಾತಿಪದ್ಧತಿಯ ಉಗ್ರ ವಿರೋಧಿಗಳು ಬಸವೇಶ್ವರರು. 'ದುಡಿಮೆಯ ವಿಭಜನೆ'ಯ 'ವೈಜ್ಞಾನಿಕ ಬುನಾದಿ'ಯ ಮೇಲೆ ಆರಂಭವಾದ ವರ್ಣವ್ಯವಸ್ಥೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಗಾಂಧೀಜಿ ಸಮರ್ಥಿಸಿದ್ದುಂಟು. ಆದರೆ ಪ್ರಸ್ತುತ ಜಾತಿವ್ಯವಸ್ಥೆಗೂ ಹಿಂದಿನ ವರ್ಣವ್ಯವಸ್ಥೆಯ ಕಲ್ಪನೆಗೂ ಅಜಗಜಾಂತರ ಎಂದು ಗಾಂಧಿ ಹೇಳಿದರು. ಇಂದಿನ ಜಾತಿವ್ಯವಸ್ಥೆ ವರ್ಣವ್ಯವಸ್ಥೆಯ ವಿಕೃತಸ್ವರೂಪ. ಆದುದರಿಂದ ಜಾತಿಪದ್ಧತಿ ನಿರ್ಮೂಲವಾಗಬೇಕು ಎಂದು ಗಾಂಧಿ ಹೇಳಿದರು. ಜಾತಿರಹಿತ ವರ್ಗರಹಿತ ಸಮಾಜದ ಕಲ್ಪನೆಯನ್ನು ಬಾಪೂ ಮುಂದಿಟ್ಟರು.

ಬಸವಣ್ಣನವರು ಹಾಗೂ ಗಾಂಧಿಯವರು ಪ್ರತಿಪಾದಿಸಿದ ಕ್ರಾಂತಿಕಾರಿ ಮೌಲ್ಯ ಕಾಯಕದ ಮೌಲ್ಯ (Work ethics) 'ಕಾಯಕವೇ ಕೈಲಾಸ' ಎಂದರು ಬಸವೇಶ್ವರರು. 'ಅನ್ನದ ಕಾಯಕ'ದ ಮಹತ್ವವನ್ನು ಎತ್ತಿ ಹಿಡಿದರು ಗಾಂಧಿ. ಬದುಕಿನಲ್ಲಿ ದೇಹದ ಪರಿಶ್ರಮಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಇಬ್ಬರೂ ಒತ್ತಿ ಹೇಳಿದರು. ಬಸವೇಶ್ವರರ ಸಮಕಾಲೀನ ಸಮಾಜದಲ್ಲಿ ಮೇಲುಕೀಳು ಭಾವನೆಗಳು ತುಂಬಿ ತುಳುಕಾಡುತ್ತಿದ್ದುವು. ವ್ಯಕ್ತಿಯು ಮಾಡುತ್ತಿದ್ದ ಉದ್ಯೋಗಕ್ಕೆ ಅನುಗುಣವಾಗಿ ಅವನ ಸಾಮಾಜಿಕ ಸ್ಥಾನ ನಿರ್ಣಯವಾಗುತ್ತಿತ್ತು. ಗಾಂಧಿಯವರ ಕಾಲದಲ್ಲೂ ಅಷ್ಟೆ. ಜಾತಿ ಮತ್ತು ವರ್ಗನಿಬಿಡವಾದ ಭಾರತದಲ್ಲಷ್ಟೇ ಅಲ್ಲ, ಮುಂದುವರೆದವುಗಳೆಂದು ಹೇಳಿಕೊಳ್ಳುವ ರಾಷ್ಟ್ರಗಳ ಸಮಾಜ ರಚನೆಯಲ್ಲೂ ವರ್ಗಗಳನ್ನಾಧರಿಸಿ ಮೇಲುಕೀಳು ಭಾವನೆಗಳು ತಾಂಡವವಾಡುತ್ತಿವೆ. ಈ ಮೇಲು ಕೀಳು ಭಾವನೆಗಳು ತೊಲಗಿ ಸಾಮಾಜಿಕ ಸಮಾನತೆ ಮೂಡಬೇಕಾದರೆ ಎಲ್ಲ ವೃತ್ತಿ ಉದ್ಯೋಗಗಳಿಗೂ ಸಮಾನ ಗೌರವ ಕೊಡುವ ಪ್ರವೃತ್ತಿ ಬರಬೇಕು. ದುಡಿಮೆಯ ಘನತೆಯ ಮೌಲ್ಯ ರಕ್ತಗತವಾಗಬೇಕು. ಎಲ್ಲಿಯವರೆಗೆ ಈ ಮೌಲ್ಯದ ಅಂಗೀಕಾರವಿರುವುದಿಲ್ಲವೋ ಅಲ್ಲಿಯವರೆಗೆ ಸಾಮಾಜಿಕ ಅಸಮಾನತೆ, ಅನ್ಯಾಯ, ಶೋಷಣೆ ಇದ್ದೇ ಇರುತ್ತವೆ. ದುಡಿಮೆಯ ಘನತೆಯ ಮೌಲ್ಯ ರಾಷ್ಟ್ರಜೀವನದ ಪ್ರಧಾನ ಮೌಲ್ಯವಾಗಬೇಕು, ವಿಶ್ವಮಾನವ ತತ್ವವಾಗಬೇಕು.

ಅನ್ನದ ಕಾಯಕ ಎಂದರೆ ಪ್ರತಿಯೊಬ್ಬನೂ ತನ್ನ ಅಗತ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕೈಲಾದ ಮಟ್ಟಿಗೂ ದೇಹಶ್ರಮಪಡಬೇಕು. ಶರೀರಶ್ರಮದ ವ್ರತವನ್ನು ಸಾರ್ವತ್ರಿಕವಾಗಿ ಸ್ವೀಕರಿಸಿದರೆ ಸಮಾಜದಲ್ಲಿ ಎಲ್ಲ ರೀತಿಯ ದುಡಿಮೆಗೂ ಸಮಾನ ಗೌರವ ದೊರೆಯುತ್ತದೆ. ಬಸವಣ್ಣನವರು ಅನ್ನಕಾಯಕ ತತ್ವವನ್ನು ಆಧ್ಯಾತ್ಮಿಕ ತತ್ವವನ್ನಾಗಿಯೇ ಕಂಡರು. ಪ್ರತಿಯೊಬ್ಬನೂ ತನ್ನ ಜೀವಿಕೆಗಾಗಿ ಶ್ರಮಪಟ್ಟು ದುಡಿಯಲೇಬೇಕು. ದುಡಿದು ಉತ್ಪನ್ನ ಮಾಡಿದುದನ್ನು 'ದಾಸೋಹ' ಮಾಡಬೇಕು. ಜಂಗಮರಿಗೆ ಕೊಟ್ಟು ತಾನೂ ಭುಂಜಿಸಬೇಕು ; ಎಂದರು.

ಶರೀರಶ್ರಮ ಸಾಮಾಜಿಕ ಸಮಾನತೆಯನ್ನು ಬೆಸೆಯುವ ಸಾಧನ. ಅಂದಿನ ಸಾಮಾಜಿಕ ಪರಿಸರದಲ್ಲಿ ಸಮಾನತೆಯ ಸಿದ್ಧಿಯನ್ನು ಬಸವಣ್ಣನವರು ತೋರಿಸಿಕೊಟ್ಟರು. ಅನುಭವಮಂಟಪದಲ್ಲಿ ತೋಟಿ, ಮಡಿವಾಳ, ಬಡಗಿ, ಕುಂಬಾರ ಮತ್ತೆಲ್ಲ ರೀತಿಯ ಉದ್ಯೋಗಗಳನ್ನು ಅವಲಂಬಿಸಿದವರೂ ಉದ್ಯೋಗಭೇದ ಅಥವಾ ಲಿಂಗಭೇದವಿಲ್ಲದೆ ಸಮಾನವಾಗಿ ಕುಳಿತು ಉನ್ನತ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚಿಸುವಷ್ಟರ ಮಟ್ಟಿಗೆ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಔನ್ನತ್ಯವನ್ನು ಸಾಧಿಸಿದ್ದರು. ಅನ್ನಕಾಯಕದ ಅನುಷ್ಠಾನದ ಪರಮೋಚ್ಚ ಸಾಧನೆ ಅದಾಗಿತ್ತು.

ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸಂಜಾತರ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುತ್ತಿದ್ದ ಕಾಲದಲ್ಲೇ ಅನ್ನಕಾಯಕದ ಮಹತ್ವವನ್ನು ಅರಿತುಕೊಂಡರು. ಟಾಲ್‌ಸ್ಟಾಯ್ ಕೃತಿಗಳಿಂದ ಈ ತತ್ವದ ಮಹತ್ವ ಅವರಿಗೆ ತಿಳಿಯಿತು. ನಂತರ ರಸ್ಕಿನ್‌ನ 'ಅನ್ ಟು ದಿಸ್ ಲಾಸ್ಟ್' ಗ್ರಂಥ ಓದಿದ ಮೇಲೆ ಗಾಂಧಿಯವರ ಜೀವನ ಮಾರ್ಗವೇ ಬದಲಾಯಿತು. ಗಾಂಧಿಯವರ ಅಂತರಾಳದಲ್ಲಿ ಹುದುಗಿದ್ದ ಮುಖ್ಯ ಅನಿಸಿಕೆಗಳೆಲ್ಲಾ ರಸ್ಕಿನ್ನನ ಗ್ರಂಥ ದಲ್ಲಿ ಪ್ರತಿಬಿಂಬಿತವಾಗಿದ್ದುವು. ರಸ್ಕಿನ್ನನು ಪ್ರತಿಪಾದಿಸಿದ ಈ ಮೂರು ಮೂಲ ಸೂತ್ರಗಳು ಗಾಂಧಿಯವರ ಜೀವನ ಸೂತ್ರಗಳಾದುವು.

೧. ಎಲ್ಲರ ಒಳಿತಿನಲ್ಲಿ ಪ್ರತಿಯೊಬ್ಬನ ಒಳಿತೂ ಒಳಗೊಂಡಿದೆ.

೨. ವಕೀಲನ ವೃತ್ತಿಯಾಗಲೀ, ಹಜಾಮನ ವೃತ್ತಿಯಾಗಲೀ ಎರಡೂ ಸಮಾನ ಬೆಲೆ ಉಳ್ಳದ್ದು. ಏಕೆಂದರೆ ಸಮಾಜಕ್ಕೆ ಎಲ್ಲರ ಸೇವೆಯೂ ಅಗತ್ಯ.

೩. ಕೃಷಿಕನ ಹಾಗೂ ಕುಶಲಕರ್ಮಿಯ ದುಡಿಮೆಯೇ ಸಾರ್ಥಕ ದುಡಿಮೆ.

ಈ ಸೂತ್ರತ್ರಯವೇ ಸರ್ವೋದಯ ಸಿದ್ಧಾಂತದ ತಿರುಳಾಯಿತು. ರಸ್ಕಿನ್ನನ ಪುಸ್ತಕವನ್ನು ಗಾಂಧಿ ಗುಜರಾತೀ ಭಾಷೆಗೆ ಅನುವಾದ ಮಾಡಿ ಅದಕ್ಕೆ ಸರ್ವೋದಯ ಎಂದು ಹೆಸರು ಕೊಟ್ಟರು. ಪುಸ್ತಕವನ್ನು ಭಾಷಾಂತರ ಮಾಡಿ ದ್ದಷ್ಟೇ ಅಲ್ಲ; ಈ ತತ್ವಗಳಿಗನುಣವಾಗಿ ತಮ್ಮ ಜೀವನವನ್ನು ಪರಿವರ್ತನೆ ಮಾಡಿಕೊಂಡರು ಗಾಂಧಿ. ಆಗ ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯವರಿಗೆ ಭರಾಟೆಯ ವಕೀಲ ವೃತ್ತಿ ಇತ್ತು. ತಿಂಗಳಿಗೆ ನಾಲ್ಕಾರು ಸಾವಿರ ರೂಪಾಯಿ ಸಂಪಾದನೆಯಿತ್ತು. ವಕೀಲ ವೃತ್ತಿಯನ್ನು ಕೈಬಿಟ್ಟರು. ಫೀನಿಕ್ಸ್ ಆಶ್ರಮ ಆರಂಭಿಸಿದರು. ದೇಹಶ್ರಮದ ಆಧಾರದ ಮೇಲೆ ಆಶ್ರಮವಾಸಿಗಳು ಜೀವನ ನಡೆಸುವ ಹಾಗೂ ಸಾರ್ವಜನಿಕ ಕಾರ್ಯಗಳಿಗೆ ಜೀವನವನ್ನು ಮುಡುಪಾಗಿಡುವ ಪರಿಪಾಠ ಮೊದಲಾಯಿತು.

ಭಾರತಕ್ಕೆ ವಾಪಸಾದ ಮೇಲೆ ಸಹ ಗಾಂಧಿಯವರು ಸ್ಥಾಪಿಸಿದ ಆಶ್ರಮಗಳಲ್ಲಿ ದೇಹಶ್ರಮಕ್ಕೆ ಅರ್ಥಾತ್ ಅನ್ನ ಕಾಯಕ ತತ್ವಕ್ಕೆ ಪೂರ್ಣ ಮಾನ್ಯತೆ ಕೊಡಲಾಗಿತ್ತು. ಆಶ್ರಮದ ಎಲ್ಲ ಕೆಲಸಕಾರ್ಯಗಳಲ್ಲೂ ಪ್ರತಿಯೊಬ್ಬರೂ ಭಾಗ ವಹಿಸಬೇಕಾಗಿತ್ತು. ಶೌಚಾಲಯವನ್ನು ಶುಚಿ ಮಾಡುವುದರಿಂದ ಹಿಡಿದು ಅಡಿಗೆ ಮನೆಯ ಕೆಲಸದವರೆಗೆ ಎಲ್ಲರಿಗೂ ಸಮಾನವಾದ ಕೆಲಸದ ಹಂಚಿಕೆ ಇರುತ್ತಿತ್ತು. ಹೀಗಾಗಿ ಎಲ್ಲ ಕೆಲಸ ಕಾರ್ಯಗಳಿಗೂ ಸಮಾನ ಗೌರವವಿತ್ತು. ಶರೀರ ಶ್ರಮವು ಆಶ್ರಮ ಜೀವನದ ಏಕಾದಶ ಸೂತ್ರಗಳಲ್ಲಿ ಒಂದಾಗಿತ್ತು. ಬ್ರಿಟಿಷ್ ಪ್ರಭುತ್ವದ ಕಾನೂನನ್ನು ಉಲ್ಲಂಘಿಸಿ ವಿಚಾರಣೆಗೊಳಗಾಗಿದ್ದ ಒಂದು ಸಂದರ್ಭದಲ್ಲಿ "ನಿಮ್ಮ ವೃತ್ತಿ ಏನು ?" ಎಂದು ಗಾಂಧಿಯವರನ್ನು ನ್ಯಾಯಾಲಯ ದಲ್ಲಿ ಪ್ರಶ್ನಿಸಿದರು. "ನಾನೊಬ್ಬ ಕೃಷಿಕ ಮತ್ತು ನೇಯ್ಗೆಯವ" ಎಂದು ಗಾಂಧಿ ಉತ್ತರ ಕೊಟ್ಟರು !

'ದುಡಿಯದೇ ತಿನ್ನುವವ ಕಳ್ಳ' ಎಂದರು ಗಾಂಧಿ. ನ್ಯಾಯವಾದಿಯಾಗಲೀ, ವೈದ್ಯನಾಗಲೀ, ಬರಹಗಾರ ನಾಗಲೀ ಪ್ರತಿಯೊಬ್ಬನೂ ತನ್ನ ಜೀವನ ನಿರ್ವಹಣೆಗೆ ಸಾಧ್ಯವಾದಷ್ಟುಮಟ್ಟಿಗೂ ಶರೀರಶ್ರಮ ಪಡಬೇಕು ಎಂದು ಗಾಂಧಿ ಒತ್ತಿ ಹೇಳಿದರು. ಶರೀರಶ್ರಮದಿಂದಲೇ ಮಾನವರೆಲ್ಲರೂ ಪರಸ್ಪರ ಸಾಂಗತ್ಯ ಮತ್ತು ತಾದಾತ್ಮ್ಯ ಭಾವನೆ ಯನ್ನು ಮೂಡಿಸಿಕೊಳ್ಳಲು ಸಾಧ್ಯ ಎಂದು ಗಾಂಧಿ ಭಾವಿಸಿದ್ದರು. ರವೀಂದ್ರನಾಥ್ ಠಾಗೂರ್ ಮತ್ತು ಸಿ. ವಿ. ರಾಮನ್ ಅಂತಹವರು ಶರೀರಶ್ರಮ ಮಾಡಿ ಸಮಯವನ್ನು ಏಕೆ ವ್ಯರ್ಥಗೊಳಿಸಬೇಕು ? ಬೌದ್ಧಿಕ ಕಾರ್ಯಕ್ಕೆ ಎಲ್ಲ ಸಮಯವನ್ನೂ ಅವರು ಮೀಸಲಾಗಿಡುವುದು ಒಳ್ಳೆಯದಲ್ಲವೇ ?' ಎಂದು ಗಾಂಧಿಯವರನ್ನು ಪ್ರಶ್ನಿಸಿದ್ದುಂಟು. ಶರೀರಶ್ರಮದಿಂದ ಈ ಮಹಾನ್ ವ್ಯಕ್ತಿಗಳ ಬೌದ್ಧಿಕ ಕೃತಿಗಳಿಗೆ ಇನ್ನೂ ಹೆಚ್ಚು ಮೆರುಗು ಮತ್ತು ಮೌಲ್ಯ ಬರು ತ್ತದೆ ಎಂದು ಗಾಂಧಿ ಉತ್ತರ ಕೊಟ್ಟಿದ್ದರು.

ಆಧ್ಯಾತ್ಮಿಕ ಉನ್ನತಿ ಹಾಗೂ ಸಾಮಾಜಿಕ ಸಮಾನತೆಯನ್ನು ಉಂಟುಮಾಡುವ ಅನ್ನಕಾಯಕದ ಆರ್ಥಿಕ ಮೌಲ್ಯವೂ ಹಿರಿದಾದದ್ದು. ಸಮಾಜದಲ್ಲಿನ ಎಲ್ಲ ಜನರೂ ತಮಗೆ ಅಗತ್ಯವಾದ ಆಹಾರ, ಬಟ್ಟೆ, ವಸತಿ ಮತ್ತೆಲ್ಲ ವಸ್ತುಗಳನ್ನು ಹಾಗೂ ಸೇವೆಗಳನ್ನು ಪಡೆಯಲು ಶರೀರಶ್ರಮಪಟ್ಟು ಉತ್ಪನ್ನ ಮಾಡಿಕೊಳ್ಳುವುದಾದರೆ ಈ ಎಲ್ಲ ವಸ್ತು-ಸೇವೆಗಳು ಸಮೃದ್ಧವಾಗಿ ದೊರೆತು ಬಡತನ ಕೊನೆಗೊಳ್ಳುತ್ತದೆ. ಜೀವನ ಶ್ರೀಮಂತವಾಗುತ್ತದೆ. ಸ್ವಾತಂತ್ರ್ಯ, ಸ್ವಾವಲಂಬನೆ ಮತ್ತು ಸ್ವದೇಶಿ ತತ್ವಗಳು ವಿಜೃಂಭಿಸುತ್ತವೆ. ಪರಸ್ಪರ ಶೋಷಣೆ ತಪ್ಪುತ್ತದೆ. ಶುದ್ಧವಾದ ಸಮಾಜ ವಾದ ಅಥವಾ ಸರ್ವೋದಯ ಕರಗತವಾಗುತ್ತದೆ.

ಇನ್ನೊಂದು ಸಾಮಾಜಿಕ ಪಿಡುಗು ಅಸ್ಪೃಶ್ಯತೆ. ಇದರ ನಿರ್ಮೂಲನಕ್ಕೆ ಬಸವಣ್ಣನವರು ಸಲ್ಲಿಸಿದ ಸೇವೆ ಅಸದೃಶ. ಅಸ್ಪೃಶ್ಯರೆನಿಸಿದ್ದ ಅನೇಕರು ಬಸವಣ್ಣನವರ ಪ್ರಭಾವದಿಂದ ಸಾಮಾಜಿಕ ಮೇಲ್ಮೆ ಸಾಧಿಸಿದ್ದರು. ಅನುಭವ ಮಂಟಪದಲ್ಲಿ ಸಮಾನರಾಗಿ ಕಂಗೊಳಿಸುತ್ತಿದ್ದರು. ಗಾಂಧೀಜಿ ಬಸವಣ್ಣನವರ ಕೆಲಸವನ್ನೇ ವ್ಯಾಪಕವಾಗಿ ಮುಂದುವರೆಸಿದರು. ಅಸ್ಪೃಶ್ಯರೆನಿಸಿದವರನ್ನು ಹರಿಜನರೆಂದು ಕರೆದರು. ಹರಿಜನ ಹೆಣ್ಣುಮಗಳನ್ನು ದತ್ತು ತೆಗೆದುಕೊಂಡು ಪಿತೃವಾತ್ಸಲ್ಯವನ್ನೆರೆದರು. ಹರಿಜನರನ್ನು ಮಂದಿರಗಳಿಗೆ ಪ್ರವೇಶ ಮಾಡಿಸಿದರು. ಇದಕ್ಕಾಗಿ ಸತ್ಯಾಗ್ರಹಗಳನ್ನು ನಿರ್ದೇಶಿಸಿದರು. ಹರಿಜನ ಕೇರಿಗಳಲ್ಲಿ ಬಿಡಾರ ಮಾಡಿದರು. ಅಸ್ಪೃಶ್ಯರ ಕಷ್ಟಗಳನ್ನರಿತಿದ್ದು ಅವರೊಡನೆ ತಾದಾತ್ಮ್ಯಭಾವನೆ ಮೂಡಿಸಿಕೊಳ್ಳಲು 'ತಾವೊಬ್ಬ ಭಂಗಿ' ಎಂದು ಕರೆದುಕೊಂಡರು ಮಹಾತ್ಮರು. 'ಎನಗಿಂತ ಕಿರಿಯರಿಲ್ಲ' ಎಂದು ಬಸವಣ್ಣನವರು ಹೇಳಿದ್ದರಲ್ಲಿ ಯಾವ ನಮ್ರಭಾವವಿತ್ತೋ ಅದೇ ದಿವ್ಯ ನಮ್ರತೆ ಗಾಂಧಿಯವರು 'ನಾನೊಬ್ಬ ಭಂಗಿ' ಎಂದು ಹೇಳಿದಾಗ ಇತ್ತು.

ಶ್ರೀ ಬಸವೇಶ್ವರರಿಗೂ ಮಹಾತ್ಮ ಗಾಂಧಿ ಅವರಿಗೂ ಎಂಟು ಶತಮಾನಗಳ ಅಂತರವಿದ್ದರೂ ವಿಚಾರಗಳಲ್ಲಿ ವಿಶೇಷವಾದ ಸಾಮ್ಯವಿರುವುದನ್ನು ಕಾಣುತ್ತೇವೆ. ಇವರುಗಳು ಬೋಧಿಸಿದ ತತ್ವಗಳೂ ಅನುಷ್ಠಾನ ಮಾಡಿದ ಸೂತ್ರಗಳೂ ಕಾಲ ಮತ್ತು ದೇಶಗಳ ಎಲ್ಲೆಗಳನ್ನು ಮೀರಿದ ಅಮರ ತತ್ವಗಳು. ಅಂತೆಯೇ ಅವರುಗಳು ಮಾನವ ಇತಿಹಾಸದಲ್ಲಿ ಸದಾ ಮಿಂಚುತ್ತಿರುವ ಮಹಾತ್ಮರು.

---

ಕೆಱೆಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದಡೆ ರತ್ನಂಗಳ ಕಾಣಬಹುದು
ಕೂಡಲ ಸಂಗನ ಶರಣರು ಮನದೆರೆದು
ಮಾತನಾಡಿದರೆ ಲಿಂಗವ ಕಾಣಬಹುದು
ನಮ್ಮ ಕೂಡಲಸಂಗನ ಶರಣರು ಮನದೆಱೆದು ಮಾತನಾಡಿದಡೆ
ಲಿಂಗವ ಕಾಣಬಹುದು.

—ಬಸವಣ್ಣನವರು

# ಗಾಂಧೀಜಿ ಹಾಗೂ ಸಮಾಜ ಕಲ್ಯಾಣ

ಡಾ. ಎಚ್. ಎಮ್. ಮರುಳಸಿದ್ಧಯ್ಯ

ಆಧುನಿಕ ಸಮಾಜದಲ್ಲಿ ಸಮಾಜ ಕಲ್ಯಾಣಕಾರ್ಯ (Social Welfare Work) ಅಥವಾ ಸಮಾಜಕಾರ್ಯ(Social Work) ವನ್ನು ಒಂದು ವೃತ್ತಿಯೆಂದು ಪರಿಗಣಿಸಲಾಗುತ್ತಿದೆ. ಭಾರತಕ್ಕೆ ಸಮಾಜಕಲ್ಯಾಣಕಾರ್ಯವು ಹೊಸತಲ್ಲವಾದರೂ ಅದಕ್ಕೆ ವೃತ್ತಿಯ ಕವಚವನ್ನು ಕೊಟ್ಟುದು ಇತ್ತೀಚೆಗೆ, ಸುಮಾರು ಮೂವತ್ತೈದು ವರ್ಷಗಳ ಹಿಂದೆ. ಸಮಾಜಕಾರ್ಯವು ಒಂದು ವೃತ್ತಿಯಾಗಿ ಬೆಳೆಯಲು ಮಹಾತ್ಮಾ ಗಾಂಧಿಯವರು ನೇರವಾಗಿ ನೆರವಾಗದಿದ್ದರೂ ಅದಕ್ಕೆ ಫಲವತ್ತಾದ ಭೂಮಿಕೆಯನ್ನು ಸಿದ್ಧಗೊಳಿಸಿದರು. ಅವರು ಸಮಾಜಕಲ್ಯಾಣಕ್ಷೇತ್ರದಲ್ಲಿ ಮಾಡಿದ ಕಾರ್ಯ, ಆ ಬಗೆಗೆ ಅವರು ತಳೆದಿದ್ದ ನಿಲುಮೆಯನ್ನು ಪರಿಶೀಲಿಸುವಾಗ ಸಮಾಜಕಲ್ಯಾಣ ಮತ್ತು ಸಮಾಜಕಾರ್ಯಗಳ ತಾತ್ತ್ವಿಕ (Philosophical) ಹಾಗೂ ಸೈದ್ಧಾಂತಿಕ (Theoretical) ವಿವರವನ್ನು ಪ್ರಸ್ತಾಪಿಸುವುದು ಅಗತ್ಯವೆಂದು ಭಾವಿಸುತ್ತೇನೆ.

## ೧. ಸಮಾಜಕಲ್ಯಾಣ—ಸಮಾಜಕಾರ್ಯ

'ಸಮಾಜ ಕಲ್ಯಾಣ' ಎಂಬ ಪದದ ಅರ್ಥವ್ಯಾಪ್ತಿಯು ಇಷ್ಟೇ ಎಂದು ಹೇಳುವುದು ಕಷ್ಟ. "ಸಮಾಜಕ್ಕೆ ಯಾವುದು ಕಲ್ಯಾಣವೋ ಅದು ಸಮಾಜ ಕಲ್ಯಾಣ" ಎಂದು ಅರ್ಥೈಸಿದರೆ ಬಹು ವಿಶಾಲವಾದ ವ್ಯಾಪ್ತಿಯನ್ನು ಕಲ್ಪಿಸಿದಂತಾಗುತ್ತದೆ. "ದಾನ ಮಾಡುವುದು ಕಲ್ಯಾಣಕಾರ್ಯ" ಎಂದುಕೊಂಡರೆ ಬಹು ಸಂಕುಚಿತವಾದ ಅರ್ಥವನ್ನು ಅದಕ್ಕೆ ನೀಡಿದಂತಾಗುತ್ತದೆ. ಆದುದರಿಂದ ಈ ಶಬ್ದಕ್ಕೆ ನಿಷ್ಕೃಷ್ಟವಾದ ಅರ್ಥವ್ಯಾಪ್ತಿಯನ್ನು ಕಲ್ಪಿಸುವುದು ಕಷ್ಟವಾದರೂ ಸೈದ್ಧಾಂತಿಕ ದೃಷ್ಟಿಯಿಂದಲೂ, ವ್ಯಾವಹಾರಿಕ ದೃಷ್ಟಿಯಿಂದಲೂ ಅದು ಅವಶ್ಯಕ. ಸಮಾಜಕಲ್ಯಾಣ ಕಾರ್ಯದ ವಿವರಣೆಯ ಬಗ್ಗೆ ಸಮಾಜ ಕಾರ್ಯಕರ್ತರಲ್ಲಿಯೇ ಭಿನ್ನಾಭಿಪ್ರಾಯಗಳಿರುವುವಾದರೂ ಕೆಲವು ಪ್ರಾತಿನಿಧಿಕ ವಿವರಣೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

ಫ್ರೆಡ್‌ಲ್ಯಾಂಡರ್ ಪ್ರಕಾರ, "ಸಮಾಜಕಲ್ಯಾಣವು ಸಮಾಜಸೇವೆಗಳ ಮತ್ತು ಸಂಘಗಳ ವ್ಯವಸ್ಥೆ. ವ್ಯಕ್ತಿಗಳೂ, ಗುಂಪುಗಳೂ ತೃಪ್ತಿಕರವಾದ ಆರೋಗ್ಯ ಮತ್ತು ಜೀವನ ಮಟ್ಟಗಳನ್ನೂ, ವೈಯಕ್ತಿಕ ಮತ್ತು ಸಾಮಾಜಿಕ ಸಂಬಂಧಗಳನ್ನೂ ಪಡೆಯುವುದಕ್ಕಾಗಿ ಈ ವ್ಯವಸ್ಥೆಯು ರೂಪುಗೊಂಡಿರುತ್ತದೆ. ಜನರು ತಮ್ಮ ತಮ್ಮ ಕುಟುಂಬಗಳ ಮತ್ತು ಸಮುದಾಯದ ಅವಶ್ಯಕತೆಗಳಿಗೆ ಅನುಗುಣವಾಗಿ ತಮ್ಮ ಪೂರ್ಣ ಸತ್ವಗಳನ್ನು ಬೆಳೆಸಿಕೊಳ್ಳಲೂ, ತಮ್ಮ ಸೌಖ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲೂ ಅವರಿಗೆ ಅವಕಾಶವನ್ನು ಇವು ನೀಡುತ್ತವೆ.[1] ಅಂದರೆ ಮಾನವನಿಗೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆರೋಗ್ಯ ಅತ್ಯಗತ್ಯ ; ಇವನ್ನು ಒದಗಿಸುವುದೆಂದರೆ ಅವನ ಕಲ್ಯಾಣ ಮಾಡಿದಂತೆಯೇ. ವ್ಯಕ್ತಿಯಂತೆಯೇ ಅವನ ಗುಂಪೂ, ಸಮುದಾಯವೂ ಇಂಥ ಆರೋಗ್ಯವನ್ನು ಬಯಸುತ್ತವೆ. ಇವುಗಳ ಆರೋಗ್ಯವನ್ನು ಕಾಪಾಡುವುದೂ ಕಲ್ಯಾಣಕಾರ್ಯವೇ.

ಸಮಾಜಕಾರ್ಯವು ಸಮಾಜಕಲ್ಯಾಣವನ್ನು ಗುರಿಯಾಗಿರಿಸಿಕೊಂಡಿರುವ ಒಂದು ವೃತ್ತಿ. ಇದನ್ನು ಫ್ರೆಡ್‌ಲ್ಯಾಂಡರ್, "ಮಾನವ ಸಂಬಂಧಗಳ ಬಗೆಗಿನ ವೈಜ್ಞಾನಿಕ ಜ್ಞಾನವನ್ನೂ, ಕೌಶಲ್ಯಗಳನ್ನೂ ನೆಲೆಯನ್ನಾಗಿರಿಸಿಕೊಂಡಿರುವ ವೃತ್ತಿಸೇವೆ" ಎಂದೂ, ಇದು "ವ್ಯಕ್ತಿಗಳು ಸಾಮಾಜಿಕ ಹಾಗೂ ವೈಯಕ್ತಿಕ ತೃಪ್ತಿಯನ್ನೂ, ಸ್ವಾವಲಂಬನೆಯನ್ನೂ ಪಡೆಯಲು ಅವರಿಗೆ ವ್ಯಕ್ತಿಗತವಾಗಿ, ಗುಂಪಿನ ಮೂಲಕವಾಗಲಿ ನೆರವಾಗುತ್ತದೆ"[2] ಎಂದೂ ವಿವರಿಸುತ್ತಾರೆ.

---

1 W. A. Fried lander, *Introduction to Social Welfare*, Prentice-Half of India (Pvt) Ltd. New Delhi, 1963, p. 4.

2 *Ibid.*, p. 4.

ಹೆಚ್ಚೂ ಕಡಮೆ ಇಂಥ ಅರ್ಥವನ್ನೇ ಒಳಗೊಂಡಂತೆ ಭಾರತೀಯ ಸಮಾಜಕಾರ್ಯ ಸಮ್ಮೇಳನವು (Indian Conference of Social Work[3]) ಸಮಾಜಕಾರ್ಯವನ್ನು ಈ ರೀತಿ ವಿವರಿಸುತ್ತದೆ: "ವ್ಯಕ್ತಿಗಳು ಅಥವಾ ಗುಂಪುಗಳು ಅಥವಾ ಸಮುದಾಯವು ಸಂಪನ್ನವೂ, ಪೂರ್ಣವೂ ಆದ ಜೀವನವನ್ನು ಬದುಕಲು ಮಾನವೀಯ ತತ್ತ್ವವು ವೈಜ್ಞಾನಿಕ ಜ್ಞಾನ ಹಾಗೂ ತಾಂತ್ರಿಕ ಕೌಶಲ್ಯಗಳ ಮೇಲೆ ನಿಂತ ಕಲ್ಯಾಣಕ್ರಿಯೆಯೇ ಸಮಾಜಕಾರ್ಯ."[4]

ಅಂದರೆ ಸಮಾಜಕಾರ್ಯವು ಜನರಿಗೆ ತಮ್ಮ ಪೂರ್ಣ ವ್ಯಕ್ತಿತ್ವವಿಕಾಸವನ್ನು ಪಡೆಯಲೂ, ಅವರು ಗುಂಪುಗಳಲ್ಲಿ ಮಧುರವಾದ ಸಂಬಂಧಗಳನ್ನು ಬೆಳೆಸಿ ಸಂಪೋಷಿಸಿಕೊಳ್ಳಲೂ, ಸಮುದಾಯಗಳಲ್ಲಿ ಸುಖಮಯವಾದ ಬಾಳನ್ನು ಜೀವಿಸಲೂ ಅವರಿಗೆ ನೆರವಾಗುತ್ತದೆ. ಪ್ರಪಂಚದ ಯಾವ ರಾಷ್ಟ್ರದಲ್ಲಿಯೇ ಆಗಲಿ, ರಾಷ್ಟ್ರದ ಯಾವ ರಾಜ್ಯದಲ್ಲಿಯೇ ಆಗಲಿ, ರಾಜ್ಯದ ಯಾವ ಮೂಲೆಯಲ್ಲಿಯೇ ಆಗಲಿ ದಾರಿದ್ರ್ಯ, ನಿರುದ್ಯೋಗ, ಕೊಳೆ, ರೋಗ, ಅಜ್ಞಾನ, ಶೋಷಣೆ ಇತ್ಯಾದಿ ಯಾವುದೇ ಕಷ್ಟ-ಸಂಕಷ್ಟಗಳಿದ್ದರೂ ಅವು ಇಡಿಯ ಮಾನವ ಕೋಟಿಗೇ ಅಪಾಯಕಾರಿಯಾಗುತ್ತವೆ. ಆದುದರಿಂದ ಎಲ್ಲೆಲ್ಲಿ ಸಂಕಷ್ಟಗಳಿವೆಯೋ ಅಲ್ಲೆಲ್ಲಾ ಸಮಾಜಕಲ್ಯಾಣಕಾರ್ಯಗಳು ನಡೆಯಲೇಬೇಕು. ಸಮಸ್ಯೆಗಳು ಹುಟ್ಟದಂತೆ ನಿರೋಧಕಕಾರ್ಯಗಳೂ, ಅಸ್ತಿತ್ವದಲ್ಲಿರುವ ಸಮಸ್ಯೆಗಳಿಗೆ ಪರಿಹಾರಕಾರ್ಯಗಳೂ, ಇನ್ನೂ ಉತ್ತಮ ಸ್ಥಿತಿಗೆ ಜನರ ಜೀವನವು ಏರುವುದಕ್ಕಾಗಿ ಅಭಿವೃದ್ಧಿಕಾರ್ಯಗಳೂ ಯೋಜನೆಗೊಂಡು ಅನುಷ್ಠಾನಗೊಳ್ಳಬೇಕು. ಇಂಥ ಕಾರ್ಯಗಳಿಗೆ ಸಮಾಜಕಾರ್ಯವು ಬದ್ಧಕಂಕಣವಾದ ವೃತ್ತಿ.

ಆದರೆ ಇದಕ್ಕೆ ಕೆಲವು ವಿಧಾನಗಳೂ, ತಂತ್ರಗಳೂ, ಮೌಲ್ಯಗಳೂ ಇರಬೇಕಾಗುತ್ತವೆ. ಸಮಸ್ಯೆಗೆ ಮತ್ತು ಅರ್ಥಿಗೆ (Client) ಅನುಗುಣವಾದ ವಿಧಾನವನ್ನು ಅನುಗೊಳಿಸಬೇಕಾಗುತ್ತದೆ. ಆದುದರಿಂದಲೇ ವ್ಯಕ್ತಿಗೆ ಸಂಬಂಧಿಸಿದಂತಿರುವ ಸಮಸ್ಯೆಗಳನ್ನು ಪರಿಹರಿಸಲು ವ್ಯಕ್ತಿಗತ ಸಮಾಜಕಾರ್ಯ (Social Case Work), ಗುಂಪಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ವೃಂದಗತ ಸಮಾಜಕಾರ್ಯ (Social Group Work) ಹಾಗೂ ಸಮುದಾಯದ ಸಮಸ್ಯೆಗಳ ಪರಿಹಾರಕ್ಕೆ ಸಮುದಾಯ ಸಂಘಟನೆ (Community Organisation)—ಈ ಮೂರು ಮುಖ್ಯ ವಿಧಾನಗಳನ್ನು ರೂಪಿಸಿಕೊಳ್ಳಲಾಗಿದೆ.[5] ಇವಕ್ಕೆ ಪೂರಕವಾಗಿ ಸಾಮಾಜಿಕ ಸೇವಾ ಆಡಳಿತ (Social Service Administration)—ಮತ್ತು ಸಾಮಾಜಿಕ ಸಂಶೋಧನೆ (Social Research) ಎಂಬೆರಡು ವಿಧಾನಗಳನ್ನು ಅಳವಡಿಸಲಾಗಿದೆ. ಈ ಎಲ್ಲಾ ವಿಧಾನಗಳನ್ನು ಉಳ್ಳ ಈ ವೃತ್ತಿಯು ಪ್ರಜಾಪ್ರಭುತ್ವತತ್ತ್ವದ ಮೌಲ್ಯಗಳ ಮೇಲೆ ಆಧರಿಸಿ ನಿಂತಿದೆ.

ಸಮಾಜಕಾರ್ಯವನ್ನು ವೃತ್ತಿಯೆಂದು ಕರೆದೊಡನೆ ಅದಕ್ಕೆ ಕೆಲವು ವಿಶೇಷಲಕ್ಷಣಗಳಿರಬೇಕೆಂಬುದು ನಿರ್ವಿವಾದ. ಗೋರ್ಡನ್‌ಹೇರನ್‌ಹೇಳುವ ಹಾಗೆ,"ಸಮಾಜವುಅನುಮತಿ ನೀಡುವಷ್ಟರಮಟ್ಟಿಗೆ ಮಾಡುವ ಆಚಾರ (Practice)ವೇ ವೃತ್ತಿಯಾಗಿರುತ್ತದೆ. ಕಾರ್ಯ ಮಾಡಲೂ, ಆ ಕಾರ್ಯ ಮಾಡುವಂತೆ ಶಿಕ್ಷಣ ನೀಡಲೂ ಒಂದು ಕ್ಷೇತ್ರವೆಂದೇ ಪರಿಗಣಿತವಾಗಿ ಸಾಮಾಜಿಕ ಅನುಮತಿಯನ್ನು ಯಾವ ವೃತ್ತಿಯಾದರೂ ಪಡೆಯುವುದು ಋಜುತ್ವ ಅಥವಾ ಪ್ರಾಮಾಣಿಕತೆ (Integrity), ಜ್ಞಾನ (Knowledge) ಮತ್ತು ಕೌಶಲ್ಯಗಳು (Skills)—ಇವುಗಳಿಂದ ನಿರ್ದಿಷ್ಟಪಡಿಸಿದ ಕ್ರಿಯೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಅದು ಪಡೆದಿರುವುದಕ್ಕೆ ನಿದರ್ಶನವಾಗಿದೆ. ಪ್ರಾಮಾಣಿಕತೆಯಿಂದ ಕಾರ್ಯ ಮಾಡುವುದೆಂದರೆ ಆ ವೃತ್ತಿಕಾರರು ಸಾಮಾನ್ಯವಾಗಿ ಒಪ್ಪಿಕೊಂಡಿರುವ ಮೌಲ್ಯಗಳ ಚೌಕಟ್ಟಿನ ಒಳಗೆ, ಅದಕ್ಕೆ ವಿರುದ್ಧವಾಗಿರದೆ ಸಮರಸವಾಗಿ ಕಾರ್ಯಪ್ರವೃತ್ತವಾಗಿರುವುದು. ಜ್ಞಾನಯುಕ್ತವಾಗಿ ಕಾರ್ಯ ಮಾಡುವುದೆಂದರೆ ವಿವೇಚನೆ ಹಾಗೂ ತನ್ನ ಕ್ರಿಯೆಯಿಂದ ಆಗಬಹುದಾದ ಪರಿಣಾಮಗಳ ಪರಿಜ್ಞಾನದಿಂದ ಕಾರ್ಯಪ್ರವೃತ್ತವಾಗಿರುವುದು. ಕೌಶಲ್ಯಯುತವಾಗಿ ಕಾರ್ಯ ಮಾಡುವುದೆಂದರೆ ತನ್ನ ಉದ್ದೇಶಗಳೂ (Intentions), ತನ್ನ ಕ್ರಿಯೆಗಳೂ ಅತ್ಯಂತ ಸಾಮೀಪ್ಯ ಸಂಬಂಧವನ್ನು ಹೊಂದಿರುವಂತೆ ಕಾರ್ಯಪ್ರವೃತ್ತವಾಗಿರುವುದು."[6]

ಅಂದರೆ ಸಮಾಜಕಾರ್ಯವನ್ನು ವೃತ್ತಿಯಂತೆ ಆಚರಣೆಗೆ ತರಲು ವೈಜ್ಞಾನಿಕ ಜ್ಞಾನವು ಅಗತ್ಯವೆಂಬುದನ್ನು

---

[3] ಈ ಸಂಘವನ್ನು ಈಗ 'ಭಾರತೀಯ ಸಮಾಜಕಲ್ಯಾಣ ಮಂಡಳಿ' (Indian Council of Welfare) ಎಂದು ಕರೆಯಲಾಗುತ್ತಿದೆ.

[4] Quoted in *Social Work in India*, S. K. Khinduka, Kitab Mahal, Pvt. Ltd., 1965, p. 10.

[5] ಇದೇ ಲೇಖಕರ ಈ ಎರಡು ಪುಸ್ತಕಗಳನ್ನು ನೋಡಿರಿ: 'ಸಮಾಜಕಾರ್ಯ' (ದ್ವಿತೀಯ ಆವೃತ್ತಿ, ೧೯೬೮) ಮತ್ತು 'ಸಮುದಾಯ ಸಂಘಟನೆ' (೧೯೬೬), ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

[6] Gordon Hearn, *Theory Building In Social Work*, University of Toronto Press 1958, p. 7

ಎಲ್ಲ ಕಾರ್ಯಕರ್ತರೂ ಒಪ್ಪಿಕೊಳ್ಳುತ್ತಾರೆ. ವೈಜ್ಞಾನಿಕ ಜ್ಞಾನವು ಮನುಷ್ಯನ ವ್ಯಕ್ತಿತ್ವ, ಮಾನವ ಸಂಬಂಧಗಳು, ಸಾಮಾಜಿಕ ರಚನೆ, ಕ್ರಿಯೆ ಇತ್ಯಾದಿಗಳಿಗೆ ಸಂಬಂಧಿಸಿದುದು. ಇಂಥ ಜ್ಞಾನ-ಸಂಗ್ರಹ-ಪ್ರತಿಕ್ರಿಯೆಯಲ್ಲಿ ತರ್ಕಕ್ಕತೀತ ವಾದ ಒಳತಿಳಿವಿನ (Intutive) ಅನುಭವ (Experience), ಸುವ್ಯವಸ್ಥಿತವಾದ ವಾಸ್ತವಸ್ಥಿತಿಯ ಶೋಧನೆ (Inquiry), ಕಲ್ಪನೆ (Conceptualizing) ಪರೀಕ್ಷಣ (Testing) ಮತ್ತು ಸಮರಸತೆ (Concertizing) ಇವು ಸೇರಿರಬೇಕು. ಇವೆಲ್ಲವೂ ತಮತಮಗೆ ಸರಿಯಾದ ಸಂಪರ್ಕ (Communication) ಹೊಂದಿರಬೇಕಾಗುತ್ತದೆ. ಆದುದರಿಂದಲೇ ವೃತ್ತಿಯಾಗಿರುವ ಸಮಾಜಕಾರ್ಯವು ಈ ಮುನ್ನ ವಿವರಿಸಿದ ಜ್ಞಾನ, ವಿಧಾನ ಮತ್ತು ಮೌಲ್ಯ ಗಳನ್ನು ಹೊಂದಿರುವುದು.

ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ ಸಮಾಜಕಾರ್ಯವು ವಕಾಲತ್ತು, ಔಷಧೋಪಚಾರ, ಉಪಾಧ್ಯಾಯ ವೃತ್ತಿ ಇತ್ಯಾದಿ ವೃತ್ತಿಗಳಂತೆಯೇ ಒಂದು ವೃತ್ತಿ; ಒಂದು ಹವ್ಯಾಸವಲ್ಲ (Hobby). ಮಾನವಸಂಬಂಧಗಳ ಆಳ ವಾದ ಜ್ಞಾನವನ್ನು ಹೊಂದಿದ, ವಿಧಾನಗಳ ಮತ್ತು ತಂತ್ರಗಳ ಸಂಪೂರ್ಣ ಪರಿಚಯವಿರುವ, ಸಾಕಷ್ಟು ಕೌಶಲ ಗಳನ್ನು ಕರಗತಮಾಡಿಕೊಂಡ, ವೃತ್ತಿಸ್ವತ್ವ (Professional Self)ವನ್ನು ಬೆಳೆಸಿಕೊಂಡಿರುವ, ಪ್ರಜಾಪ್ರಭುತ್ವ ತತ್ತ್ವಗಳಲ್ಲಿ ದೃಢವಾದ ವಿಶ್ವಾಸವನ್ನು ತಳೆದಿರುವ, ವೃತ್ತಿ ನೀತಿಯನ್ನು (Professional Ethics) ಸದಾ ಕಣ್ಮುಂದೆ ಇರಿಸಿಕೊಂಡಿರುವ, ಸರಿಯಾದ ರೀತಿಯಲ್ಲಿ ವೃತ್ತಿಶಿಕ್ಷಣ (Training) ಪಡೆದಿರುವ ಕಾರ್ಯಕರ್ತನೇ ಸಮಾಜ ಕಾರ್ಯಕರ್ತನಾಗಿರತಕ್ಕದ್ದು. ಸಮಾಜಕಾರ್ಯಕರ್ತನು ತನ್ನ ಕಾರ್ಯಕ್ಕಾಗಿ ಸಂಭಾವನೆ (Remuneration)ಯನ್ನು ಪಡೆಯುವವನು; ಸಮಾಜವು ನೀಡುವ ಸಂಭಾವನೆಯೇ ಅವನ ಜೀವನನಿರ್ವಹಣೆಯ ಆಧಾರ. ಸಮಾಜಕಾರ್ಯ ಕರ್ತನು ಕೆಲವೊಂದು ನಿಯಮಗಳಿಗೆ ಬದ್ಧನಾಗಿರುವುದರ ಜೊತೆಗೆ ಅವನು ಸಾಮಾಜಿಕ ಉತ್ತರವಾದಿತ್ವ (Social Accountability)ವನ್ನೂ ಸ್ವೀಕರಿಸುತ್ತಾನೆ. ಅದೂ ಅಲ್ಲದೆ ಅವನು ಸಮಾಜ ಸುಧಾರಕ (Social Reformer) ನಲ್ಲ. ಅವನು ವೈಯಕ್ತಿಕವಾಗಿ ಸಮಾಜಕಲ್ಯಾಣ ಕಾರ್ಯದಲ್ಲಿ ತೊಡಗಿರದೆ ಕಲ್ಯಾಣಕಾರ್ಯಕ್ಕಾಗಿಯೇ ಮೀಸಲಾದ ಸೇವಾ ಕೇಂದ್ರ (Service Agency)ದಲ್ಲಿ ನೌಕರನಾಗಿ ದುಡಿಯುತ್ತಾನೆ. ಯಾಕೆಂದರೆ ಸೇವಾ ಕೇಂದ್ರಗಳ ಮೂಲಕವೇ ವ್ಯವಸ್ಥಿತವಾದ ಕಲ್ಯಾಣಕಾರ್ಯವಾಗುತ್ತದೆ ಎಂಬುದು ಅವನ ದೃಢ ವಿಶ್ವಾಸ.

ಸಮಾಜ ಕಲ್ಯಾಣ ಹಾಗೂ ಸಮಾಜಕಾರ್ಯದ ಈ ಸ್ಥೂಲ ವಿವರಣೆಯ ನಂತರ ಗಾಂಧೀಜಿಯವರ ಸಮಾಜ ಕಲ್ಯಾಣಕಾರ್ಯವನ್ನು ಪರಿಶೀಲಿಸೋಣ.

## ೨. ಗಾಂಧೀಜಿ ಹಾಗೂ ಸಮಾಜ ಕಲ್ಯಾಣ

ಮಹಾತ್ಮಾ ಗಾಂಧೀಜಿಯವರನ್ನು ನೆನೆದೊಡನೆ ನಮ್ಮ ಇದಿರು ನಿಲ್ಲುವುದು, ಮುಗುಳುನಗೆಯ, ಶುದ್ಧವಾದ ಅಂತಃಕರಣದ, ಸತ್ಯಕ್ಕೆ ಸದಾ ಕೈ ಎತ್ತಿರುವ, ಅಹಿಂಸೆಯನ್ನು ವ್ರತವಾಗಿ ಸ್ವೀಕರಿಸಿರುವ, ಸತ್ಯಾಗ್ರಹದ ಅಸ್ತ್ರವನ್ನು ಹಿಡಿದ, ಅನ್ಯಾಯವೆಲ್ಲಿ ನಡೆದರೂ ಅದನ್ನು ನಿವಾರಿಸಲು ಮುಂದಾಗುವ ವ್ಯಕ್ತಿತ್ವ; ಭಾರತೀಯ ಸಂಸ್ಕೃತಿಯ ಅತ್ಯು ತ್ತಮ ಮೌಲ್ಯಗಳಲ್ಲಿ ಅಚಲವಾದ ಶ್ರದ್ಧೆಯನ್ನಿರಿಸಿಕೊಂಡು, ಪ್ರಪಂಚದ ಸರ್ವಧರ್ಮಗಳ ಸಾರವನ್ನೆಲ್ಲಾ ಸ್ವೀಕರಿಸಿ, ಮಾನವ ಧರ್ಮದ ಪ್ರತಿಷ್ಠಾಪನೆಗೆ ಹೆಣಗುವ ವ್ಯಕ್ತಿ; ರಾಜಕೀಯ ಧಾರ್ಮಿಕ ಹಾಗೂ ಆರ್ಥಿಕ ವಲಯಗಳಿಗೆ ಇರುವ ಅನ್ಯೋನ್ಯ ಸಂಬಂಧವನ್ನು (ತಮ್ಮ ದೃಷ್ಟಿಯ ಪ್ರಕಾರವಾಗಿಯೇ ಆಗಲಿ) ಅರಿತುಕೊಂಡು ಅವೆಲ್ಲವನ್ನು ಒಳಗೊಂಡ ಜೀವನವನ್ನು ಇಡಿಯಾಗಿ ಕಂಡು, ಅದಕ್ಕನುಗುಣವಾಗಿ ನಡೆಯುವ ನಿಷ್ಠಾವಂತ ವ್ಯಕ್ತಿ.

ಇಂತಹ ಮನುಷ್ಯ ಸಮಾಜ ಕಲ್ಯಾಣಕಾರ್ಯವನ್ನಲ್ಲವೆ ಬೇರೇನನ್ನು ಮಾಡಿಯಾರು ? ಎನ್ನುವ ಪ್ರಶ್ನೆ ಸಹಜ ವಾಗಿ ಏಳುತ್ತದೆ. ಆದರೆ ಸಮಾಜ ಕಲ್ಯಾಣವನ್ನು ಒಂದು ವಿಶಿಷ್ಟ ಕಾರ್ಯಕ್ಷೇತ್ರವೆಂದು ನಾವು ಪರಿಗಣಿಸಿದರೆ ಗಾಂಧೀ ಜಿಯವರು ಮಾಡಿದ ಅನೇಕ ಕಾರ್ಯಗಳಲ್ಲಿ ಸಮಾಜ ಕಲ್ಯಾಣಕಾರ್ಯವೂ ಒಂದು ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದರೂ ಅವರ ತಾತ್ತ್ವಿಕದೃಷ್ಟಿ, ಅವರು ಪ್ರತಿಪಾದಿಸಿ, ಪ್ರತಿಷ್ಠಾಪಿಸಲು ಯತ್ನಿಸಿದ ಸರ್ವೋ ದಯ ಸಮಾಜದ ಕಲ್ಪನೆ, ಅವರು ಕೈಕೊಂಡ ವಿವಿಧ ರಚನಾತ್ಮಕ ಕೆಲಸಗಳನ್ನು ಗಮನಿಸಿದರೆ ಸಮಾಜ ಕಲ್ಯಾಣವು ಒಂದು ಪ್ರತ್ಯೇಕವಾದ ಕಾರ್ಯಕ್ಷೇತ್ರವಲ್ಲ; ಎನ್ನುವುದು ನಮಗೆ ವಿದಿತವಾಗುತ್ತದೆ. ಯಾಕೆಂದರೆ ಅದು ಮಾನವ ಜೀವನದ ಅವಿಭಾಜ್ಯ ಅಂಗವೇ ಆಗಿರುತ್ತದೆ.

ಎಲ್ಲೆಲ್ಲಿ ದುಃಖ-ದಾರಿದ್ರ್ಯಗಳಿವೆಯೊ, ಎಲ್ಲೆಲ್ಲಿ ಶೋಷಣೆ-ದೀನತೆಗಳಿವೆಯೊ ಅಲ್ಲೆಲ್ಲಾ ವಿಶಿಷ್ಟ ರೀತಿಯಲ್ಲಿ

ಕಾರ್ಯ ಕೈಕೊಳ್ಳುವುದು ಗಾಂಧೀಜಿಯವರ ಸಾಮಾಜಿಕ ಪ್ರಜ್ಞೆಯ ಕಾರಣದಿಂದ. ಮಕ್ಕಳ-ಮಹಿಳೆಯರ, ಹರಿಜನ-ಗಿರಿಜನರ, ಬಡವ-ಪತಿತರ, ಅಂಗ-ಮನೋವಿಕಲರ, ಕೊಳೆ ಕೊಂಪೆ-ಗ್ರಾಮಸ್ಥರ, ವಿವಿಧ ತೆರನ ಊನಅಶಕ್ತರ (Handicapped) ಸಮಸ್ಯೆಗಳಿಗೆಲ್ಲಾ ಪರಿಹಾರವನ್ನು ಕಂಡುಹಿಡಿದು, ಅವರ ದುಃಖವನ್ನು ಶಮನಮಾಡುವುದು ಅವರ ಕಾರ್ಯದ ಅವಿಭಾಜ್ಯ ಅಂಗ. ಸಾಮ್ರಾಜ್ಯಾಧಿಪತಿಗಳಾಗಿದ್ದ ಬ್ರಿಟಿಷರೊಡನೆ ಹೋರಾಡುವಂತಹ ರಾಜಕೀಯ ಕಾರ್ಯವಿರಲಿ, ಧಾರ್ಮಿಕ ಕಲಹಗಳ ಜ್ವಾಲೆಯನ್ನು ನಂದಿಸುವ ಗುರುತರ ಕಾರ್ಯವಿರಲಿ, ಪರಾವಲಂಬನೆಯನ್ನು ತೊಡೆದು ಸ್ವಾವಲಂಬನೆಯನ್ನು ಸಂಸ್ಥಾಪಿಸುವಂಥ ಆರ್ಥಿಕ ಕ್ರಾಂತಿಯ ಕಾರ್ಯವಿರಲಿ ಅವರು ದುಃಖಿತರನ್ನಾಗಲಿ, ಅವರ ಸಾಮಾನ್ಯ ಸಮಸ್ಯೆಗಳನ್ನಾಗಲಿ ಮರೆಯುವರಲ್ಲ, ಕಡೆಗಣಿಸುವವರಲ್ಲ, ಗೌಣವಾಗಿ ಕಾಣುವವರಲ್ಲ.

## ಹಿನ್ನೆಲೆ[7]

ಗಾಂಧೀಜಿಯವರ ಕಾರ್ಯವನ್ನು ಅರಿತುಕೊಳ್ಳಲು ಭಾರತದ ಸಮಾಜದ ಮತ್ತು ಹಿಂದೆ ನಡೆದ ಕಲ್ಯಾಣ ಕಾರ್ಯದ ಸ್ಥೂಲ ಪರಿಚಯ ಬೇಕಾಗುತ್ತದೆ. ಗಾಂಧೀಜಿಯವರು ಹುಟ್ಟಿದುದು ಸಾಂಪ್ರದಾಯಿಕ ಸಮಾಜದಲ್ಲಿ ಯಾದರೂ ಅವರು ಬದಲಾಗುತ್ತಿದ್ದ ಸಮಾಜದಲ್ಲಿ ಜೀವಿಸುತ್ತಿದ್ದರೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕೃಷಿಕರ ದೇಶವಾದ ಭಾರತವು ಸಂಯುಕ್ತ ಕುಟುಂಬ ಅಥವಾ ಅವಿಭಾಜ್ಯ ಕುಟುಂಬಕ್ಕೂ, ಜಾತಿ ವ್ಯವಸ್ಥೆಗೂ, ಗ್ರಾಮ ಪಂಚಾಯಿತಿಗೂ ಪ್ರಸಿದ್ಧವಾದ ಸಮಾಜ. ರಾಜಕೀಯ ದಾಳಿಗಳಾದರೂ, ಸಾಮ್ರಾಜ್ಯಗಳೆದ್ದು ಉರುಳಿದರೂ ಈ ಮೂರು ಮೂಲ ಸಾಂಸ್ಥಿಕ ವ್ಯವಸ್ಥೆಗಳು [Institutional Arrangements] ಹೆಚ್ಚೂಕಡಿಮೆ ಎಂದಿನಂತೆಯೇ ಉಳಿದುಕೊಂಡು ಬಂದವು. ಇಂಥ ಸಮಾಜದಲ್ಲಿ ವ್ಯಕ್ತಿಯು ಯಾವುದೇ ಸಂಕಷ್ಟಕ್ಕೆ ಗುರಿಯಾಗಿದ್ದರೂ ಅವನ ಕುಟುಂಬವಾಗಲಿ, ಅವನ ಬಳಗವಾಗಲಿ, ಅವನ ಜಾತಿಯಾಗಲಿ, ಇಲ್ಲವೆ ಅವನ ಗ್ರಾಮಪಂಚಾಯತಿಯಾಗಲಿ ಅವನ ನೆರವಿಗೆ ಬರುತ್ತಿತ್ತು. ಕೊನೆಗೆ ಧಾರ್ಮಿಕ ಕೇಂದ್ರಗಳಾದ ಮಠಗಳಲ್ಲಿ ನಿರಾಶ್ರಿತರು ಆಶ್ರಯ ಪಡೆಯುತ್ತಿದ್ದರು. ಪ್ರಯಾಣಿಕರಿಗೆ, ಸೈನಿಕರ ಕುಟುಂಬದವರಿಗೆ ರಾಜನ ನೆರವು ಸಿಗುತ್ತಿತ್ತು. ಆದುದರಿಂದ ತಬ್ಬಲಿಗಳು, ವಿಧವೆಯರು, ಮುದುಕರು, ದೈಹಿಕ ಮತ್ತು ಮನೋವಿಕಲರು, ಭಿಕ್ಷುಕರು ತಮ್ಮ ಸಮಸ್ಯೆಗಳನ್ನು ಬಹು ಆತ್ಮೀಯವೂ, ಅನೌಪಚಾರಿಕವೂ ಆದ ರೀತಿಯಲ್ಲಿ ಪರಿಹರಿಸಿಕೊಳ್ಳಲು ಸಾಧ್ಯವಾಗಿತ್ತು. ಈ ಮಾತು ಗ್ರಾಮೀಣ ಸಮುದಾಯಕ್ಕಂತೂ ಸತ್ಯಸ್ಯ ಸತ್ಯವಾಗಿತ್ತು. ನಗರ ಸಮುದಾಯದಲ್ಲಿಯೂ ಸಮಸ್ಯೆಗಳು ಉಲ್ಬಣಸ್ಥಿತಿಯಲ್ಲಿರಲಿಲ್ಲ.

ಆದರೆ ಬ್ರಿಟಿಷರ ಆಡಳಿತೆಯು ಆರಂಭವಾದಂದಿನಿಂದ ಸಾಮಾಜಿಕ ಬದಲಾವಣೆಯು ತೀವ್ರವಾಯಿತು. ಆಡಳಿತೆಯಲ್ಲಿ, ಕಾನೂನುಗಳಲ್ಲಿ ನವೀನ ಪರಿಸ್ಥಿತಿ ಏರ್ಪಟ್ಟಿತು ; ಶಿಕ್ಷಣ ಕ್ರಮದಲ್ಲಿ, ಕಲಿಯುವ ವಿಷಯದಲ್ಲಿ ಮಹತ್ತರವಾದ ಬದಲಾವಣೆ ಆಗತೊಡಗಿತು ; ಕ್ರಿಶ್ಚಿಯನ್ ಮಿಶನರಿಗಳ ಪ್ರಭಾವದಿಂದ ಧಾರ್ಮಿಕಕ್ಷೇತ್ರದಲ್ಲಿ ಆಂದೋಲನವೇ ಆಯಿತು ; ಔದ್ಯೋಗೀಕರಣ, ಸಾರಿಗೆ-ಸಂಪರ್ಕಗಳ ಹೆಚ್ಚಳ, ಪ್ರಜಾಪ್ರಭುತ್ವ ತತ್ತ್ವಗಳ ಪ್ರಸಾರ, ಅನ್ಯ ಸಂಸ್ಕೃತಿಗಳ ನಿಕಟಸಂಬಂಧ ಮುಂತಾದವುಗಳಿಂದ ಭಾರತೀಯ ಸಮಾಜದಲ್ಲಿ ಅನೇಕ ಬದಲಾವಣೆಗಳು ಆಗತೊಡಗಿದವು. ಈ ಬದಲಾವಣೆಯು ಭಾರತೀಯರಲ್ಲಿ ತಮ್ಮ ಸಮಾಜದಲ್ಲಿನ ಲೋಪದೋಷಗಳ ಬಗೆಗೆ, ಸಾಂಸ್ಕೃತಿಕ ಮೂಲ ಮೌಲ್ಯಗಳ ಬಗೆಗೆ ಹೊಸ ದೃಷ್ಟಿ ಮೂಡಿಸಿತು. ಪಾಶ್ಚಾತ್ಯ ಶಿಕ್ಷಣ ಪಡೆದವರು ಮುಂದಾಳಾದರು. ಹಿಂದೆ ಸಮಸ್ಯೆಗಳೆಂದು ಪರಿಗಣಿಸದ ಸಾಮಾಜಿಕ ಪ್ರಸಂಗಗಳು ಸಮಸ್ಯೆಗಳೆಂಬುದನ್ನು ಅರಿಯತೊಡಗಿದರು. ಹಳೆಯ ಸಮಸ್ಯೆಗಳಿಗೆ ಹೊಸ ಸಮಸ್ಯೆಗಳು ಸೇರಿಕೊಂಡವು.

ಬಾಲ್ಯವಿವಾಹ, ಬಾಲವಿಧವೆಯರ ಗೋಳು, ಸತೀ-ಸಹಗಮನದಂಥ ಕರುಣಾಮಯ ಪ್ರಸಂಗ, ಮಹಿಳೆಯ ದೀನಸ್ಥಿತಿ, ಅಸ್ಪೃಶ್ಯರ ಹೀನಾಯ ಪರಿಸ್ಥಿತಿ, ಬಡವರ ಕಷ್ಟ, ಗಿರಿಜನರ ಅಜ್ಞಾನ, ಗ್ರಾಮಸ್ಥರು ವಾಸಿಸುತ್ತಿರುವ ಕೊಳೆಕೊಂಪೆಗಳು ಇತ್ಯಾದಿಗಳು ಒಡೆದು ಕಾಣತೊಡಗಿದವು. ರಾಜಾರಾಮಮೋಹನರಾಯರಿಂದ ಇಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವಂಥ ಚಳುವಳಿಯು ಆರಂಭವಾಗಿ ಮಹಾತ್ಮಾ ಗಾಂಧೀಜಿಯವರೆಗೂ ಅನೇಕ ಹಂತಗಳಲ್ಲಿ ಸಾಗಿಬಂದಿತು. ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಾಸಮಾಜ, ರಾಮಕೃಷ್ಣಮಿಶನ್ ಇತ್ಯಾದಿ ಸಂಘಗಳು ಸ್ಥಾಪನೆಗೊಂಡು ಹಿಂದೂಧರ್ಮದಲ್ಲಿ ಯಾವುದು ನಿತ್ಯಸತ್ಯವಾದುದೊ ಅಂಥದನ್ನು ಸ್ವೀಕರಿಸಿ, ಬಲ

[7] ಹೆಚ್ಚಿನ ವಿವರಗಳಿಗಾಗಿ, M. S. Gore and I. E. Soares. 'Historical Back-ground of Social Work' in *Social Welfare In India*, Govt. of India, New-Delhi, 1960 ನೋಡಿರಿ.

ಪಡಿಸಲು ಯತ್ನಿಸತೊಡಗಿದವು. ಕ್ರೈಸ್ತ ಮಿಶನರಿಗಳ ಧಾರ್ಮಿಕ ಪ್ರಸಾರ, ಮತಾಂತರ ಕ್ರಿಯೆಗಳನ್ನು ನಿರೋಧಿಸುವುದು ಇವುಗಳ ಒಂದು ಪ್ರಮುಖ ಉದ್ದೇಶವಾದರೂ, ಸಮಾಜಸೇವೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತಳೆದುದೂ, ಆ ಬಗ್ಗೆ ಕಾರ್ಯಕೈಕೊಂಡುದೂ ಗಮನಾರ್ಹ ಅಂಶಗಳು.

ಧಾರ್ಮಿಕ ಪುನರುತ್ಥಾನ ಹಾಗೂ ಸಮಾಜೋದ್ಧಾರ ಕಾರ್ಯಗಳ ಜೊತೆಗೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯತೊಡಗಿತು ; ಕಾರ್ಮಿಕರ ಸಂಘಟನೆಯ ಆಂದೋಲನವೂ ಆರಂಭವಾಯಿತು. ಭಾರತೀಯರೆಲ್ಲಾ ಒಂದುಗೂಡಿ ಹೋರಾಡಬೇಕಾದುದು ಬರಿಯ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅಲ್ಲ, ಆದರೆ ಆರ್ಥಿಕ ಅಭಿವೃದ್ಧಿ, ಸಮಾಜವಾದದ ಪ್ರತಿಷ್ಠಾಪನೆ, ಕಲ್ಯಾಣರಾಜ್ಯದ ನನಸು ಇವುಗಳಿಗಾಗಿಯೂ ಹೋರಾಟ ಅಗತ್ಯವಾಗಿತ್ತು.ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸ್ಥಾಪನೆಯಾಗಿ ಆಂದೋಲನ ನಡೆದಿತ್ತು. ಉಗ್ರವಾದಿಗಳೂ, ಸೌಮ್ಯವಾದಿಗಳೂ ಭಿನ್ನ ದೃಷ್ಟಿಯನ್ನು ತಳೆದಿದ್ದರು. ಲೋಕಮಾನ್ಯತಿಲಕರು ರಾಜಕೀಯ ಸ್ವಾತಂತ್ರ್ಯ ಮೊದಲು, ಇತರ ಅಭಿವೃದ್ಧಿ ಕಾರ್ಯಗಳು ಅನಂತರ ಎನ್ನುವ ಉಗ್ರವಾದಿ, ಸಮಾಜವು ಎಲ್ಲ ದೃಷ್ಟಿಯಿಂದಲೂ ಸುಧಾರಿಸಬೇಕು, ರಾಜಕೀಯ ಸ್ವಾತಂತ್ರ್ಯವೇ ಮುಖ್ಯವಲ್ಲ, ಅದು ಈಗಲೇ ಬರಬೇಕೆಂದಿಲ್ಲ ಎಂಬಂತಹ ಸೌಮ್ಯವಾದಿ ಗೋಪಾಲಕೃಷ್ಣಗೋಖಲೆ. ಹೀಗೆ ಮುಖಂಡರು ಭಿನ್ನಾಭಿಪ್ರಾಯ ಹೊಂದಿದ್ದರು. ಗೋಪಾಲಕೃಷ್ಣ ಗೋಖಲೆಯವರು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸಾಯಿಟಿ' ಸ್ಥಾಪಿಸಿ, ಜನಜೀವನದಲ್ಲಿ ಸದ್ಭಾವನೆ, ಸಚ್ಚಾರಿತ್ರ್ಯ, ನಿಷ್ಠೆ ಮುಂತಾದ ಶಕ್ತಿವಿಶೇಷಗಳು ಬೆಳೆಯಲು ಕಾರಣರಾಗಿದ್ದರು. ಇಡಿಯ ಭಾರತವು ನವೀನ ಜೀವನದ ಹೊಸ್ತಿಲಲ್ಲಿತ್ತು. ಇಂಥ ಸಂದರ್ಭದಲ್ಲಿ ಗಾಂಧೀಜಿಯವರು ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದರು ; ಇತರ ಎಲ್ಲ ರಂಗಗಳಲ್ಲೂ ವಿಶಿಷ್ಟ ರೀತಿಯಲ್ಲಿಯೇ ಕಾರ್ಯಾಸಕ್ತರಾದರು.

ರಾಜಕೀಯ ಸ್ವಾತಂತ್ರ್ಯವು ಮುಖ್ಯವಾಗಿದ್ದರೂ ಅದನ್ನು ಪಡೆಯುವ ಮಾರ್ಗವು ಸತ್ಯವೂ, ಅಹಿಂಸಾಯುತವೂ ಆಗಿರಬೇಕು ಎಂಬುದು ಗಾಂಧೀಜಿಯವರ ನಿಲುವಾಯಿತು. ಅದೂ ಅಲ್ಲದೆ ರಾಜಕೀಯ ಸ್ವಾತಂತ್ರ್ಯ ಪಡೆಯುವದಷ್ಟೇ ಅವರಿಗೆ ಮುಖ್ಯವಾಗಿರಲಿಲ್ಲ. ಭಾರತೀಯ ಸಮಾಜದಲ್ಲಿನ ಅನೇಕ ಕಳಂಕಗಳನ್ನೂ, ಊನಗಳನ್ನೂ ತೊಡೆಯುವುದು ಮುಖ್ಯವಾಗಿತ್ತು. ಭಾರತದಲ್ಲಿನ ಬಡತನ, ರೋಗ, ಅಜ್ಞಾನ— ಇವು ಇಲ್ಲಿನೆಲ್ಲರಿಗೂ ಸಾಮಾನ್ಯವಾದವು. ಇವುಗಳ ಜೊತೆಗೆ ಅಸ್ಪೃಶ್ಯತೆ, ಧಾರ್ಮಿಕ ಸಂಘರ್ಷಣೆ ಇವೂ ಗಮನಸೆಳೆಯುವ ಸಮಸ್ಯೆಗಳೇ ಆಗಿದ್ದವು. ಆದುದರಿಂದ ಸಾಮಾಜದ ಉದ್ಧಾರವಾಗದಿದ್ದರೆ, ಮನುಷ್ಯನ ವ್ಯಕ್ತಿತ್ವವು ಉದಾತ್ತವಾದುದಾಗಿರದಿದ್ದರೆ ಬರಿಯ ರಾಜಕೀಯ ಸ್ವಾತಂತ್ರ್ಯದಿಂದ ಏನೂ ಪ್ರಯೋಜನವಿಲ್ಲವೆಂಬುದು ಅವರ ಅಭಿಪ್ರಾಯ (ಬಹುಶಃ ಕುಂಬಳಕಾಯಿಗೆ ಕಬ್ಬಿಣದ ಕಟ್ಟನಿಟ್ಟರೇನು ಉಪಯೋಗ ಎಂಬ ಶಿವಶರಣರ ಮಾತಿನಂತೆ). ಈ ಕಾರಣದಿಂದಲೇ ಅವರು ಸಮಾಜ ಕಲ್ಯಾಣ ಕಾರ್ಯಕ್ಕೆ ಮಹತ್ವವನ್ನಿತ್ತದ್ದು.

### ಕಲ್ಯಾಣಕಾರ್ಯಗಳು[8]

ಗಾಂಧೀಜಿಯವರು ಯಾವ ಸಾಮಾಜಿಕ ಸಮಸ್ಯೆಯನ್ನೂ ಕಡೆಗಣಿಸಿದವರಲ್ಲ; ಅವರ ದೃಷ್ಟಿಯು ಎಲ್ಲ ಸಮಸ್ಯೆಗಳ ಮೇಲೂ. ಆದುದರಿಂದ ಇವೇ ಗಾಂಧೀಜಿಯವರ ಸಮಾಜ ಕಲ್ಯಾಣಕಾರ್ಯಕ್ಷೇತ್ರಗಳೆಂದು ಬೊಟ್ಟು ಮಾಡಿ ಹೇಳುವುದು ಕಠಿಣವಾಗುತ್ತದೆ. ಅದೂ ಅಲ್ಲದೆ ರಾಮಾಯಣ, ಮಹಾಭಾರತದ ಕತೆಯಷ್ಟೇ ಅವರ ಸಮಾಜ ಸೇವಾ ಕ್ಷೇತ್ರದ ಪರಿಚಯವಾಗಿದೆ. ಆದುದರಿಂದ ಅವರ ಕಾರ್ಯದ ವಿವರವನ್ನು ಇಲ್ಲಿ ಕೊಡುವ ಬದಲು ಅವರ ತಾತ್ತ್ವಿಕ ಸೂತ್ರಗಳ ಬಗ್ಗೆ ಸ್ವಲ್ಪ ವಿವರವನ್ನು ಕೊಡಬಯಸುತ್ತೇನೆ. ಅವರ ಸೂತ್ರಗಳ ಪರಿಚಯದ ಹಿನ್ನೆಲೆಯಾಗಿ ಅವರ ಕಾರ್ಯಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು.

ಭಾರತ ಬಡವರ, ಹಳ್ಳಿಗರ ನಾಡು ಎಂಬುದು ಗಾಂಧೀಜಿಗೆ ಕಂಡುಂಡ ಸತ್ಯ. ಹಳ್ಳಿಗರ ಉದ್ಧಾರವಾಗದೆ ಭಾರತದ ಉದ್ಧಾರವಿಲ್ಲ; ಭಾರತೀಯರ ದಾರಿದ್ರ್ಯ ಹೋಗಬೇಕೆಂದರೆ ಹಳ್ಳಿಗರ ದಾರಿದ್ರ್ಯ ಹೋಗಬೇಕು. ಇದು ಅವರ ನಿರ್ಧಾರ. ಪರಾವಲಂಬನೆ ತಪ್ಪು ಮಾತ್ರವೇ ಅಲ್ಲ, ಪಾಪವೂ ಕೂಡ. ಆದುದರಿಂದ ಸ್ವಾವಲಂಬನೆಯನ್ನು ಜೀವನ–ರೀತಿಯನ್ನಾಗಿ ಮಾಡುವುದು ಅತಿ ಮುಖ್ಯ. ಪರಂಪರಾಗತವಾಗಿ ಬಂದ ಗುಡಿಕೈಗಾರಿಕೆಗಳಿಗೆ ಮಹತ್ವವನ್ನು ಕೊಟ್ಟು, ಅವನ್ನು ಅಭಿವೃದ್ಧಿಪಡಿಸಿದರೆ ಜನರ ಬಡತನ ಕಡಮೆಯಾಗುತ್ತದೆ. ಅದಕ್ಕಾಗಿ ಚರಕಾದಿಂದ ನೂಲು

[8] ವಿವರವಾದ ಅಭ್ಯಾಸಕ್ಕಾಗಿ, Ammu Menon Muzumdar, *Social Welfare in India* (Mahatma Gandhi's Contributions), Asia Publishing House, Bombay, 1964, ನೋಡಿ.

ತೆಗೆದು ಅರಿವೆ ತಯಾರಿಸುವುದಕ್ಕೆ ಪ್ರಮುಖ ಸ್ಥಾನವನ್ನು ಕೊಡಲಾಯಿತು. ಖಾದಿಯೇ ಮಂತ್ರವಾಗಿ ಪರದೇಶೀ ಭೂತವನ್ನು ಓಡಿಸಲು ಸಮರ್ಥವಾಗುತ್ತದೆಂಬುದು ಬಲವಾದ ವಿಶ್ವಾಸ, ಅವರಿಗೆ. ಜೊತೆಗೆ ಗ್ರಾಮವು ಪಂಚಾಯಿತಿಯ ಆಡಳಿತಕ್ಕೊಳಪಟ್ಟು ಸ್ವತಂತ್ರ ರಾಜ್ಯದಂತೆ ಅಭಿವೃದ್ಧಿಯಾಗಬೇಕು. ಗ್ರಾಮಸ್ಥರೆಲ್ಲರೂ ತಮ್ಮ ಆಡಳಿತದಲ್ಲಿ ನೇರವಾಗಿ ಪಾಲ್ಗೊಳ್ಳಬೇಕು. ಅಂದರೆ ಗ್ರಾಮ ಸ್ವರಾಜ್ಯದಿಂದ ಜನರಲ್ಲಿ ನಿಜವಾದ ಪ್ರಜಾಪ್ರಭುತ್ವ ಶಕ್ತಿ ಬೆಳೆಯುತ್ತದೆ. ಇಂಥ ಗ್ರಾಮ ಸ್ವರಾಜ್ಯದಿಂದ ಗ್ರಾಮಸ್ಥರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಸಮರ್ಥರಾಗುತ್ತಾರೆ. ಇಂಥ ನಂಬುಗೆಯಿದ್ದುದರಿಂದಲೇ ಗಾಂಧೀಜಿಯವರು ಗ್ರಾಮಾಭಿವೃದ್ಧಿಗೆ ಹೆಚ್ಚಿನ ಲಕ್ಷ್ಯ ಕೊಟ್ಟಿದ್ದು.

ಅಸ್ಪೃಶ್ಯತೆಯ ನಿವಾರಣೆಯು ಗಾಂಧೀಜಿಯವರು ಕೈಕೊಂಡ ಮತ್ತೊಂದು ಮಹತ್ವದ ಕಾರ್ಯ. ಭಾರತೀಯ ಸಂಸ್ಕೃತಿಗೆ ಅಂಟಿಕೊಂಡ ಕಳಂಕ ಅಸ್ಪೃಶ್ಯತೆ ಎಂಬುದು ಅವರ ಅಭಿಪ್ರಾಯ. ಅಸ್ಪೃಶ್ಯರನ್ನು ಹೀನಜಾತಿಯವರೆಂದು ಕಂಡು, ಮಲಮೂತ್ರ ಸ್ವಚ್ಛಗೊಳಿಸುವ ಕಾರ್ಯಕ್ಕೆಂದೇ ಅವರನ್ನು ಇರಿಸಿರುವುದು ದೊಡ್ಡ ಅನ್ಯಾಯವೆಂಬುದು ಅವರ ಮತ. ಅಸ್ಪೃಶ್ಯರೂ ದೇವರ ಮಕ್ಕಳು ; ಅವರೆಲ್ಲಾ ಹರಿಜನರು ; ಅವರನ್ನು ಉತ್ತಮರು ದೂರ ಇರಿಸಬಾರದು ; ಇದು ದೇವರಿಗೆ ಪ್ರಿಯವಾದದ್ದಲ್ಲ ಎಂದು ಹರಿಜನೋದ್ಧಾರಕ್ಕೆ ತೊಡಗಿದರು. ಹರಿಜನರಿಗೆ ಸಮಾನವಾದ ಹಕ್ಕು ಬಾಧ್ಯತೆಯಿರಬೇಕು, ಎಂದು ಪ್ರತಿಪಾದಿಸಿದರು. "ಹರಿಜನ ಯಾತ್ರೆ"ಯನ್ನು ಕೈಕೊಂಡರು ; 'ಹರಿಜನ' ಪತ್ರಿಕೆ ಹೊರಡಿಸಿದರು. ಅವರ ಉದ್ಧಾರದ ಅನೇಕ ಕಾರ್ಯಗಳನ್ನು ಕೈಕೊಂಡರು.

ಗಾಂಧೀಜಿಯವರು ಭಾರತೀಯ ಮಹಿಳೆಯ ಬಗ್ಗೆ ತುಂಬಾ ಅಭಿಮಾನವನ್ನು ತಳೆದವರು, ಆಳವಾದ ಗೌರವ ಉಳ್ಳವರು. ಆದರೆ ಭಾರತೀಯ ಮಹಿಳೆಯ ಸ್ಥಾನವನ್ನು ಕಂಡು ಅವರಿಗೆ ದುಃಖವಾಯಿತು. ಮಹಿಳೆಯನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳಬೇಕೋ ಆ ರೀತಿ ಪುರುಷನು ನಡೆಸಿಕೊಳ್ಳುತ್ತಲಿಲ್ಲ ; ಎಂಬುದು ಅವರ ಆಪಾದನೆ. ಸ್ತ್ರೀಗೂ ಸಮಾನ ಹಕ್ಕುಗಳಿರಬೇಕು ; ಪುರುಷನಂತೆಯೇ ಎಲ್ಲ ರಂಗಗಳಲ್ಲೂ ಪ್ರವೇಶಿಸಲು ಆಕೆಗೆ ಅವಕಾಶವಿರಬೇಕು, ಎಂದು ಪ್ರತಿಪಾದಿಸಿದರು. ಸ್ತ್ರೀಯು ದೇವತೆಯಾಗಿರುವಾಕೆ, ಆಕೆಯನ್ನು ದಾಸಿಯನ್ನಾಗಿ ನಡೆಸಿಕೊಂಡರೆ ಹೇಗೆ ? ಆಕೆ ಶಿಕ್ಷಣ ಪಡೆಯಬೇಕು. ಆರ್ಥಿಕವಲಯಕ್ಕೆ ಆಕೆಯಿಂದ ಕಾಣಿಕೆ ಬರಬೇಕು. ಆದುದರಿಂದಲೇ ಗಾಂಧೀಜಿಯವರು ಮಹಿಳೆಯರಿಗೂ ಮಹತ್ವದ ಸ್ಥಾನವನ್ನಿತ್ತರು. ಕಸ್ತೂರಿಬಾ ಅವರನ್ನು ಗಾಂಧೀಜಿಯವರು ಸರಿಯಾದ ತರಬೇತಿಯನ್ನಿತ್ತು ಮಹಿಳೆಯರ ಕಲ್ಯಾಣಕ್ಕಾಗಿ ದುಡಿಯಹಚ್ಚಿದರು.

ಜಾತಿದ್ವೇಷ, ಧಾರ್ಮಿಕ ಪಂಗಡಗಳೊಳಗಿರುವ ಕಲಹ ಸಮಾಜದ ಅವನತಿಗೆ ಕಾರಣಗಳಾಗುತ್ತವೆ. ಭಾರತದಲ್ಲಿ ಹಿಂದೂ-ಮುಸ್ಲಿಂ ಸಂಘರ್ಷಣೆಯು ಇದಕ್ಕೆ ಒಂದು ಉದಾಹರಣೆ. ಗಾಂಧೀಜಿಯವರು ಯಾವ ಧರ್ಮವನ್ನೂ ಕಡೆಗಣಿಸಿದವರಲ್ಲ. ಧರ್ಮ ಜನರನ್ನು ಒಡೆಯುವುದಿಲ್ಲ, ಒಂದುಗೂಡಿಸುತ್ತದೆ ಎಂಬುದು ಅವರ ಅಭಿಪ್ರಾಯ. ಆದುದರಿಂದ ಅವರು ಗೀತೆಯಂತೆಯೇ ಕುರಾನಿನ ಬಗೆಗೂ, ಬೈಬಲ್ಲಿನ ಬಗೆಗೂ, ಇತರ ಎಲ್ಲ ಧರ್ಮಗ್ರಂಥಗಳ ಬಗೆಗೂ ಸಮಾನ ಗೌರವಭಾವವನ್ನು ವ್ಯಕ್ತಪಡಿಸುತ್ತಿದ್ದರು. ಭಾರತದಲ್ಲಿ ರಾಜಕೀಯ ಕಾರಣಗಳಿಗಾಗಿ ಹಿಂದೂ-ಮುಸ್ಲಿಂ ಕಲಹವು ತೀವ್ರ ಸ್ವರೂಪ ತಾಳಿತು. ಗಾಂಧೀಜಿಯವರು ಸತತವಾಗಿ ಆ ಕಲಹದ ಪರಿಹಾರಕ್ಕಾಗಿ ಹೆಣಗಿಗಿದರು. ಪಾಕಿಸ್ತಾನದ ಸೃಷ್ಟಿಗೆ ಅವರು ವಿರುದ್ಧವಿದ್ದರೂ ಅನಿವಾರ್ಯವೆಂದು ಒಪ್ಪಿಕೊಳ್ಳಬೇಕಾಯಿತು. ಕೊನೆಗೂ ಅವರು ಜೀವ ಅರ್ಪಿಸಿದ್ದುದು ಧಾರ್ಮಿಕ ಸಂಘರ್ಷಣೆಯನ್ನು ಪರಿಹರಿಸಲು ಪ್ರಯತ್ನಿಸಿದ್ದುದಕ್ಕಾಗಿಯೇ.

ಗಾಂಧೀಜಿಯವರು ಮದ್ಯಪಾನ ನಿಷೇಧ, ಬಾಲ್ಯ ವಿವಾಹ ನಿಷೇಧ, ಶಿಶುಕಲ್ಯಾಣ, ಕುಷ್ಠರೋಗಿಗಳ ಕಲ್ಯಾಣ ಮುಂತಾದ ಕಾರ್ಯಗಳಲ್ಲೂ ಆಸಕ್ತಿ ತೋರಿಸಿದರು. ಸರಳ ಸುಂದರ ಜೀವನದಲ್ಲಿ ಬರುವ ತೊಡರುಗಳು ಎಂಥವಿದ್ದರೂ ಅವರು ಅವುಗಳ ಪರಿಹಾರದಲ್ಲಿ ಕ್ರಿಯಾತ್ಮಕ ಆಸಕ್ತಿ ತೋರಿಸಿದವರು. ಅವರ ಈ ಆಸಕ್ತಿ, ಅವರ ಈ ಕಾರ್ಯ ಜನರಲ್ಲಿ ನವಚೇತನ ಉಂಟುಮಾಡಿತು. ಲೋಕ ಸೇವಕ ಸಂಘ, ಹರಿಜನ ಸೇವಕ ಸಂಘ, ಆದಿಮ್‌ಜಾತಿ ಸೇವಕ ಸಂಘ ಮುಂತಾಗಿ ವಿವಿಧ ಸಾಂಘಿಕ ವ್ಯವಸ್ಥೆಯಾಗಿ ನತದೃಷ್ಟರ ಕಲ್ಯಾಣಕ್ಕೆ ಅವಕಾಶವಾಯಿತು.

## ಸಾತ್ವಿಕ ಸೂತ್ರಗಳು

ಗಾಂಧೀಜಿಯವರು ಸತ್ಯವೆಂದರೇನು ಎಂದು ತಮ್ಮ ಜೀವನದುದ್ದಕ್ಕೂ ಹುಡುಕಿದ ವ್ಯಕ್ತಿ ; ತಮ್ಮ ಆತ್ಮ ಚರಿತ್ರೆಯನ್ನು 'ಸತ್ಯಸಂಶೋಧನೆಯಲ್ಲಿ ಪ್ರಯೋಗ' ಎಂದೇ ಕರೆದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಆರಂಭವಾದ ಅವರ ಸತ್ಯಾನ್ವೇಷಣೆಯು ೧೯೪೮ರಲ್ಲಿ ಅವರು ಕೊನೆಯ ಉಸಿರನ್ನು ಬಿಡುವವರೆಗೂ ನಡೆದಿತ್ತು. ಅವರ

ಅವಿರತವಾದ ಹೋರಾಟದಲ್ಲಿ, ಅವರ ಕಾರ್ಯಗಳ ವಿವಿಧ ಹಂತಗಳಲ್ಲಿ ಅವರು ಕೆಲವಾರು ತಾತ್ತ್ವಿಕ ಸೂತ್ರಗಳನ್ನು ಆಚರಣೆಗೆ ತರಲು ಯತ್ನಿಸಿದರು. ಅವರ ಕಾರ್ಯವನ್ನು ಪರಿಶೀಲಿಸುವಾಗ ಅವರು ಪ್ರತಿಪಾದಿಸಿದ ಸೂತ್ರಗಳನ್ನು ಅಗತ್ಯವಾಗಿ ಗಮನಿಸಬೇಕು.

ಆದರೆ ಗಾಂಧೀಜಿಯವರ ಸಮಾಜ ಕಲ್ಯಾಣಕಾರ್ಯಗಳನ್ನಾಗಲಿ, ಅವರ ತಾತ್ತ್ವಿಕ ಸೂತ್ರಗಳನ್ನಾಗಲಿ ಪರಿಶೀಲಿಸುವಾಗ ಅವರ ಜೀವನ ದೃಷ್ಟಿಯು ವಿಶಾಲವಾದುದು, ಇಡಿಯ ಮಾನವ ಗುಂಪಿಗೆಲ್ಲಾ ಹರಡಿದುದು ಎಂಬುದನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು. ಸಂಪ್ರದಾಯಸ್ಥರೆಂದು ಕಂಡರೂ ಅವರದು ನವೀನ ದೃಷ್ಟಿ ; ಅವರ ತತ್ತ್ವಗಳು ಪ್ರಾಚೀನರ ಜೀವನ ಪದ್ಧತಿಯಿಂದ ಒಡಮೂಡಿರುವುವೆನ್ನಿಸಿದರೂ ಅರ್ವಾಚೀನ ಪರಿಸ್ಥಿತಿಗೆ ಅನೇಕ ಸಂದರ್ಭಗಳಲ್ಲಿ ಹೊಂದಿಕೊಳ್ಳುವಂಥವುಗಳು. ಇವು ಅವರ ಕಾರ್ಯಗಳಿಗೆಲ್ಲಾ ತಳಹದಿಯಾಗಿದ್ದುದರಿಂದ ಅವರು ಕೈಕೊಂಡ ಸಮಾಜ ಕಲ್ಯಾಣಕಾರ್ಯಕ್ಕೂ ತಳಹದಿಯಾಗಿದ್ದವು. ಇಲ್ಲಿ ಅವರು ನಂಬಿ ಅನುಸರಿಸಲು ಯತ್ನಿಸಿದ ಕೆಲವು ಸೂತ್ರಗಳನ್ನು ಪರಿಶೀಲಿಸೋಣ.

**೧. ಮಾನವನ ವ್ಯಕ್ತಿತ್ವಕ್ಕೆ ಮತ್ತು ಅವನ ರಾಷ್ಟ್ರಕ್ಕೆ ಮಾನ್ಯತೆ, ಗೌರವ ನೀಡಬೇಕು**

ಮನುಷ್ಯನನ್ನು ಮನುಷ್ಯನಂತೆಯೇ ಕಾಣಬೇಕು. ಪ್ರತಿಯೊಬ್ಬನಿಗೂ ಅವನದೇ ಆದ ವೈಶಿಷ್ಟ್ಯವಿರುತ್ತದೆ, ವ್ಯಕ್ತಿತ್ವವಿರುತ್ತದೆ. ಆ ವ್ಯಕ್ತಿತ್ವಕ್ಕೆ ಮಾನ್ಯತೆಯನ್ನು ನೀಡಬೇಕು, ಅದನ್ನು ಗೌರವಿಸಬೇಕು. ಯಾವುದೇ ಕಾರಣದಿಂದಲಾದರೂ ಯಾರ ವ್ಯಕ್ತಿತ್ವಕ್ಕೂ ಅಗೌರವವಾಗುವಂತೆ ವರ್ತಿಸಬಾರದು. ಉದಾಹರಣೆಗೆ, ಹೆಣ್ಣು-ಗಂಡುಗಳಲ್ಲಿ ಬಾಲಕ-ಹಿರಿಯರಲ್ಲಿ ಭೇದ ಕಲ್ಪಿಸಿ, ಗಂಡಿಗೆ ಮತ್ತು ಹಿರಿಯರಿಗೆ ಗೌರವವನ್ನಿತ್ತು, ಹೆಣ್ಣಿಗೆ ಮತ್ತು ಬಾಲಕನಿಗೆ ಅಗೌರವವಾಗುವಂತೆ ನಡೆದುಕೊಳ್ಳಕೂಡದು. ಯಾಕೆಂದರೆ ಯಾರ ವ್ಯಕ್ತಿತ್ವವೂ ನಿಕೃಷ್ಟವಲ್ಲ.

ಮಾನವನ ವ್ಯಕ್ತಿತ್ವಕ್ಕಿದ್ದಂತೆಯೇ ಅವನ ರಾಷ್ಟ್ರಕ್ಕೂ ಮಾನ್ಯತೆಯಿರಬೇಕು, ಅದಕ್ಕೆ ಗೌರವ ಸಲ್ಲಿಸಬೇಕು. ವ್ಯಕ್ತಿಯನ್ನು ಗೌರವಿಸುತ್ತೇನೆ, ಅವನ ರಾಷ್ಟ್ರವನ್ನು ಅಪಮಾನಗೊಳಿಸುತ್ತೇನೆ ಎಂದರೆ ತಪ್ಪಾಗುತ್ತದೆ. ಯಾಕೆಂದರೆ ಇದು ಅಸಾಧ್ಯದ ಆಚರಣೆ. ವ್ಯಕ್ತಿಯು ಅವನ ರಾಷ್ಟ್ರದ ಅವಿಭಾಜ್ಯ ಅಂಗ. ವ್ಯಕ್ತಿಗೆ ಗೌರವ ಸಲ್ಲಿಸುವುದೆಂದರೆ ಅವನಿಗೆ ಸ್ವಾತಂತ್ರ್ಯ ಹಾಗೂ ಸಮಾನತೆಯು ಇದೆಯೆಂದು ಒಪ್ಪಿಕೊಂಡಂತೆ. ರಾಷ್ಟ್ರಕ್ಕೆ ಮರ್ಯಾದೆ ನೀಡುವುದೆಂದರೆ ಅದಕ್ಕೆ ಸ್ವಾತಂತ್ರ್ಯವಿದೆ, ಅನ್ಯ ರಾಷ್ಟ್ರಗಳೊಡನೆ ಸಮಾನ ಸ್ಥಾನಮಾನದಿಂದ ವರ್ತಿಸಲು ಅದಕ್ಕೆ ಹಕ್ಕು ಇದೆ ಎಂಬುದನ್ನು ಮನ್ನಿಸಿದಂತೆ. ದಾಸ್ಯದಲ್ಲಿ ಒಂದು ರಾಷ್ಟ್ರವನ್ನು ಕೆಡವಿ ಅದಕ್ಕೆ ಮರ್ಯಾದೆಯನ್ನು ಸಲ್ಲಿಸುತ್ತೇನೆ, ಎಂದರೇನು ! ಅಂಥ ರಾಷ್ಟ್ರದ ರಾಷ್ಟ್ರಕನಿಗೆ ಗೌರವ ಸಲ್ಲಿಸುತ್ತೇನೆ, ಎಂದರೇನು ! ರಾಷ್ಟ್ರಕ್ಕೂ, ರಾಷ್ಟ್ರಕನಿಗೂ ಭೇದವನ್ನು ಕಲ್ಪಿಸಿ ಒಂದಕ್ಕೆ ಗೌರವವನ್ನು ಸಲ್ಲಿಸುವೆ, ಇನ್ನೊಂದಕ್ಕಿಲ್ಲ ಎಂಬುದು ಯಾವ ದೃಷ್ಟಿಯಿಂದಲೂ ಸರಿಯಾದುದಲ್ಲ. ಯಾಕೆಂದರೆ, ಯಾವಾಗ ರಾಷ್ಟ್ರಕ್ಕೆ ಮಾನ್ಯತೆಯನ್ನಿತ್ತು ಗೌರವವನ್ನು ಸಲ್ಲಿಸುವುದಿಲ್ಲವೊ ಆಗ ಅದರಲ್ಲಿನ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಪಚಾರವಾಗುವಂಥ ಕಾರ್ಯಗಳನ್ನು ಕೈಕೊಳ್ಳಬೇಕಾಗುತ್ತದೆ. ದಾಸ್ಯರಾಷ್ಟ್ರದಲ್ಲಿನ ವ್ಯಕ್ತಿಯು ತನ್ನ ವ್ಯಕ್ತಿತ್ವದ ವಿಕಾಸಕ್ಕೆ ಅವಕಾಶವನ್ನು ಪಡೆದಿರುವುದಿಲ್ಲ. ಗಾಂಧೀಜಿಯವರನ್ನು ಬ್ರಿಟಿಷರು ವ್ಯಕ್ತಿಯೆಂದು ಗೌರವಿಸುತ್ತಿದ್ದುದು ನಿಜ, ಆದರೆ ಅವರು ಭಾರತೀಯರೆಂದು ಅವರನ್ನು ಸೆರೆಮನೆಗೆ ದಬ್ಬುವಂತಹ ಅವಹೇಳನ ಕಾರ್ಯವನ್ನು ಅವರು ಕೈಕೊಂಡುದನ್ನು ಗಮನಿಸಿದರೆ ವ್ಯಕ್ತಿಗೂ, ರಾಷ್ಟ್ರಕ್ಕೂ ಇರುವ ಅನ್ಯೋನ್ಯತೆಯನ್ನು ಕಾಣಬಹುದು.

**೨. ಭೇದವಿಲ್ಲದೆ ಜನರನ್ನು ಸ್ವೀಕರಿಸಬೇಕು**

ಜನರೊಡನೆ ಬೆರೆತು ಜೀವಿಸುವಾಗ, ಅವರೊಡನೆ ಕೂಡಿ ಕಾರ್ಯದಲ್ಲಿ ಪಾಲುಗೊಂಡಾಗ ಅಥವಾ ಅವರಿಗೆ ಉಪಕಾರವಾಗಲೆಂದು ಕಾರ್ಯ ಕೈಕೊಂಡಾಗ ಅವರನ್ನು ಯಾವ ಭೇದಭಾವವಿಲ್ಲದೆಯೇ ಸ್ವೀಕರಿಸಬೇಕು. ಭೇದವನ್ನು ಕಲ್ಪಿಸುವುದೆಂದರೆ ಅವರನ್ನು ಮೇಲುಕೀಳೆಂದು ಗಣಿಸಿದಂತೆಯೇ. ಜನಾಂಗ, ಭಾಷೆ, ಪ್ರದೇಶ, ರಾಷ್ಟ್ರ, ಲಿಂಗ, ಜಾತಿ, ವಯಸ್ಸು, ಆರ್ಥಿಕಸ್ಥಿತಿ ಇತ್ಯಾದಿ ಯಾವ ವಸ್ತು ವಿಶೇಷವೇ ಇರಲಿ ಅದರ ಆಧಾರದಿಂದ ಜನರನ್ನು ವಿಭಾಗಿಸಿ, ಕೆಲವರನ್ನು ಸ್ವೀಕರಿಸಿ, ಅನ್ಯರನ್ನು ತಿರಸ್ಕರಿಸುವುದು ಸಲ್ಲದು. ಜನರ ಶಕ್ತಿದೌರ್ಬಲ್ಯಗಳನ್ನು ಗಮನಿಸಬಹುದಾದರೂ ಶಕ್ತಿಸಂಪನ್ನರನ್ನು ಪುರಸ್ಕರಿಸಿ, ದುರ್ಬಲರನ್ನು ಕಡೆಗಣ್ಣಿನಿಂದ ಕಾಣುವುದು ತಪ್ಪು. ಎಲ್ಲ ಜನರೂ ಸ್ವೀಕಾರಾರ್ಹ. ಒಬ್ಬೊಬ್ಬರಿಗೆ ಒಂದೊಂದು ತೊಡಕು. ಅವರವರ ಪರಿಸ್ಥಿತಿಗನುಗುಣವಾಗಿ ಅವರನ್ನು ಸ್ವೀಕರಿಸಬೇಕು. ಹೀಗೆ ಮಾಡದಿದ್ದರೆ ಅಸ್ವೀಕೃತರಾದವರ ವ್ಯಕ್ತಿತ್ವವನ್ನು ಅವಮಾನಗೊಳಿಸಿದಂತೆಯೇ. ಅದೂ ಅಲ್ಲದೆ, ಪಕ್ಷಪಾತ ದೃಷ್ಟಿಯಿಂದ

ಜನರನ್ನು ಸ್ವೀಕರಿಸಿದರೆ ಅವರಿಗೆ ಸರಿಯಾದ ಕಲ್ಯಾಣಕಾರ್ಯವನ್ನು ಯೋಜಿಸಿ ಕಾರ್ಯಗತಗೊಳಿಸುವುದು ಸಾಧ್ಯವಾಗುವುದಿಲ್ಲ. ಹೀಗೆಂದರೆ ಜನರನ್ನು ಯಾವ ಕಾರಣಕ್ಕೂ ವಿಭಿನ್ನ ದೃಷ್ಟಿಯಿಂದ ನೋಡಬಾರದು ಎಂದು ಅರ್ಥವಲ್ಲ. ಆವರವರ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಳ್ಳುವಷ್ಟರಮಟ್ಟಿಗೆ ಜನರನ್ನು ವಿಭಾಗಿಸಬಹುದು. ಉದಾಹರಣೆಗೆ, ಹರಿಜನರಿಗೂ ಅನ್ಯರಿಗೂ ಭೇದವನ್ನು ಕಲ್ಪಿಸಕೂಡದು ; ಆದರೆ ಸೌಲಭ್ಯಗಳನ್ನು ನೀಡುವ ದೃಷ್ಟಿಯಿಂದ ಹರಿಜನರಿಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ.

### ೩. ಅನ್ಯರ ಮೇಲೆ ತನ್ನ ವಿಚಾರಗಳನ್ನು ಹೇರಕೂಡದು

ಗಂಡು ಹೆಣ್ಣಿನ ಮೇಲೆ, ಒಡೆಯ ಆಳಿನ ಮೇಲೆ, ಗಂಡ ಹೆಂಡತಿಯ ಮೇಲೆ, ತಂದೆ ಮಗನ ಮೇಲೆ, ಅಣ್ಣ ತಮ್ಮನ ಮೇಲೆ, ಪಟ್ಟಣಿಗ ಹಳ್ಳಿಯವನ ಮೇಲೆ, ಆಳರಸ ಪ್ರಜೆಯ ಮೇಲೆ ಹೀಗೆ ಒಬ್ಬರು ಇನ್ನೊಬ್ಬರ ಮೇಲೆ ಅಥವಾ ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಮೇಲೆ ಅಭಿಪ್ರಾಯಗಳನ್ನು, ವಿಚಾರಗಳನ್ನು ಹೇರುವುದನ್ನು ನಾವು ನೋಡುತ್ತಿರುತ್ತೇವೆ. ಇದು ತಪ್ಪು. ತಮಗಿರುವ ಯಾವುದೋ ಒಂದು ಅನುಕೂಲ ಪರಿಸ್ಥಿತಿಯ ದುರುಪಯೋಗ ಪಡಿಸಿಕೊಂಡುದಕ್ಕೆ ಈ ರೀತಿಯ ನಡವಳಿಕೆಯು ಪ್ರತೀಕ.

ಅಭಿಪ್ರಾಯವನ್ನು ಬೇರೆಯವರ ಮೇಲೆ ಹೇರುವುದೆಂದರೆ ಅವರಿಗಿರುವ ವಿಚಾರಸ್ವಾತಂತ್ರ್ಯವನ್ನು ಗೌರವಿಸದಿರುವುದೇ ಆಗಿದೆ. ಇದು ಪ್ರಜಾಪ್ರಭುತ್ವ ತತ್ತ್ವಕ್ಕೆ ವಿರುದ್ಧವಾದದ್ದು. ನಮ್ಮ ನಮ್ಮ ಅಭಿಪ್ರಾಯವನ್ನು ನಾವು ಅಭಿವ್ಯಕ್ತಗೊಳಿಸಲು ನಮಗೆ ಹೇಗೆ ಸ್ವಾತಂತ್ರ್ಯವಿದೆಯೊ ಹಾಗೆಯೇ ಅನ್ಯರಿಗೆ ನಮ್ಮೀ ವಿಚಾರಗಳನ್ನು ಸ್ವೀಕರಿಸದಿರುವ ಸ್ವಾತಂತ್ರ್ಯವೂ ಇದೆ. ಆದುದರಿಂದ ರಾಜಕೀಯ ಮತ್ತಿತರ ಯಾವ ರೀತಿಯದೇ ಆದ ವಿಚಾರವನ್ನು ಅನ್ಯರ ಮೇಲೆ ಹೇರುವುದು ತಪ್ಪು. ವಿಚಾರವಿನಿಮಯದ ಮೂಲಕ, ಯಾವುದರಿಂದ ಸರ್ವರಿಗೂ ಒಳ್ಳೆಯದಾಗುವುದೊ ಅಂಥ ವಿಚಾರವನ್ನು ವೃಂದವಿಚಾರವನ್ನಾಗಿ ಸ್ವೀಕರಿಸುವುದು ಸರಿಯಾದ ರೀತಿ. ಹೀಗೆ ಮಾಡುವುದರಿಂದ ಯಾರೂ ಯಾರ ಮೇಲೂ ಅಭಿಪ್ರಾಯವನ್ನು ಹೇರಿದಂತಾಗುವುದಿಲ್ಲ. ತಾವು ಮಾಡುವ ಕಲ್ಯಾಣ ಕಾರ್ಯಕ್ರಮವನ್ನು ಅನ್ಯರ ಮೇಲೆ ಹೇರಬಾರದು ಎಂಬುದೂ ಇದರ ಅರ್ಥವಾಗುತ್ತದೆ.

### ೪. ಸ್ವಯಂ ಸಹಾಯವೇ ಅತ್ಯುತ್ತಮ ಸಹಾಯ

ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವುದು ಅತ್ಯುತ್ತಮವಾದದ್ದು. ತನ್ನ ಕಾರ್ಯ ಪೂಜೆಗೆ ಸಮಾನ. (ಇಲ್ಲಿ ಬಸವಣ್ಣನವರ "ತಾನುಂಬ ಊಟವನು ಅನ್ಯರಿಂದ ಮಾಡಿಸುವರೆ ?" ಎಂಬ ವಚನವು ನೆನಪಾಗುತ್ತದೆ.) ಅನ್ಯರ ಸಹಾಯಕ್ಕಾಗಿ ಕಾಯುವುದು ತನ್ನ ವ್ಯಕ್ತಿತ್ವಕ್ಕೇ ಕುಂದು. ಪರಾವಲಂಬನವೆಂದರೂ ಒಂದೆ, ದಾಸ್ಯವೆಂದರೂ ಒಂದೆ. ಈ ಮಾತು ವ್ಯಕ್ತಿಗೆ ಹೇಗೊ ಹಾಗೆ ರಾಷ್ಟ್ರಕ್ಕೂ ಅನ್ವಯಿಸುತ್ತದೆ. ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವುದರಿಂದ ದೈಹಿಕ ಹಾಗೂ ಮಾನಸಿಕ ಆಲಸ್ಯಕ್ಕೆ ಅವಕಾಶವಿರುವುದಿಲ್ಲ. ದೇಹ-ಮನಸ್ಸುಗಳು ಆಲಸ್ಯಕ್ಕೆ ತುತ್ತಾದರೆ ಆತ್ಮವೂ ತುಕ್ಕು ಹಿಡಿಯುತ್ತದೆ. ತನಗಿರುವ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದರಿಂದ ಒಳಿತಾಗುವುದಲ್ಲದೆ ಕೆಡಕಾಗುವುದಿಲ್ಲ. ತನ್ನ ಮೇಲೆ ತಾನು ಅವಲಂಬಿಸಿದರೆ ತನ್ನ ಕಾರ್ಯ ಶೀಘ್ರವಾಗಿ, ಸ್ವಚ್ಛವಾಗಿ, ಮನಸ್ಸು ಮುದಗೊಳ್ಳುವ ರೀತಿಯಲ್ಲಿ ನೆರವೇರುತ್ತದೆ. ಎಂಥ ದುರ್ಬಲನೂ ತನಗೆ ಸಾಧ್ಯವಾದಷ್ಟು ಮಟ್ಟಿಗೆ ತನ್ನ ಕಾರ್ಯವನ್ನು ಮಾಡಿಕೊಳ್ಳಬೇಕು.

ಹೀಗೆಂದರೆ ಅನ್ಯರ ನೆರವು ಬೇಡವೆಂದು ಅರ್ಥವಲ್ಲ. ಅನ್ಯರೊಡನೆ ಕೂಡಿ ಕೆಲಸಮಾಡಬೇಕೇ ಹೊರತು ಅನ್ಯರಿಗೆ ಹೊರೆಯಾಗಬಾರದು. ಪರಾವಲಂಬನದಿಂದ ವ್ಯಕ್ತಿತ್ವದ ಬೆಳವಣಿಗೆಯಾಗುವುದಿಲ್ಲ, ಇತರರಿಗೆ ತೊಂದರೆಯನ್ನು ಕೊಡಬೇಕಾಗುತ್ತದೆ. ತನಗಿರಬೇಕಾದ ಹಕ್ಕುಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದಲೆ ವ್ಯಕ್ತಿಯಾಗಲಿ, ರಾಷ್ಟ್ರವಾಗಲಿ ಪರಾವಲಂಬಿಯಾಗಬಾರದು. ತನಗೆ ಮಾಡಿಕೊಳ್ಳುವ ಯಾವ ಕಾರ್ಯವೂ ಕೀಳಲ್ಲ ; ಸ್ವದೇಶೀ ವಸ್ತುಗಳು ರಾಷ್ಟ್ರಕ್ಕೆಲ್ಲಾ ಮಾನ್ಯವಾದಂಥವು.

### ೫. ಜನರು ತಮ್ಮ ಎಲ್ಲ ಕಾರ್ಯಗಳಲ್ಲೂ ಪಾಲ್ಗೊಳ್ಳಬೇಕು

ಜನರಿಗೆ ಒಳ್ಳೆಯದಾಗಬೇಕು, ಕಲ್ಯಾಣವಾಗಬೇಕು ಎಂದು ಬಯಸುವುದಾದರೆ ಅವರೆಲ್ಲರೂ ತಮ್ಮ ಕಲ್ಯಾಣ ಕಾರ್ಯದಲ್ಲಿ ಪಾಲ್ಗೊಳ್ಳಬೇಕು. ತಮ್ಮ ತಮ್ಮ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಜನರು ತಮ್ಮ ಆಲಸ್ಯವನ್ನು ಹೊರದೂಡುತ್ತಾರೆ, ಅನ್ಯರ ಮೇಲೆ ಅವಲಂಬಿಸಿರುವುದಿಲ್ಲ, ತಾವೂ ಭಾಗಿಗಳಾಗಿದ್ದೇವೆ ಎಂಬ ಅಭಿಮಾನ

ಹಾಗೂ ಹೊಣೆಗಾರಿಕೆಯ ಭಾವನೆಯು ಅವರದಾಗುತ್ತದೆ. ಸ್ವಂತ ಕಾರ್ಯದಲ್ಲಿ ಪಾಲ್ಗೊಳ್ಳುವುದರಿಂದ ಜನರಿಗೆ ತಮ್ಮೊಳಗೆ ಹುದುಗಿರುವ ಸಾಮರ್ಥ್ಯವನ್ನು ಅಭಿವ್ಯಕ್ತಗೊಳಿಸಲು ಅವಕಾಶವಾಗುತ್ತದೆ; ಯಾವ ರೀತಿಯಲ್ಲಿ ಕೆಲಸ ಮಾಡಿದರೆ ತಾವು ಯಶಸ್ವಿಯಾಗಬಹುದು ಎಂಬುದನ್ನು ಅರಿಯಲು ಅವರಿಗೆ ಸಾಧ್ಯವಾಗುತ್ತದೆ; ಕೆಲಸ ಮಾಡುತ್ತಾ ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಳ್ಳಲು ಅನುವಾಗುತ್ತದೆ. ಅದೂ ಅಲ್ಲದೆ, ತಮಗೆ ಯಾವುದು ಬೇಕೊ ಅದರಲ್ಲಿ ಅವರು ಮನಃಪೂರ್ವಕ ಪಾಲ್ಗೊಳ್ಳುತ್ತಾರೆ. ಅವರು ಯಾವ ಕಾರ್ಯದಲ್ಲಾದರೂ ಪಾಲ್ಗೊಳ್ಳಲಿಲ್ಲವೆಂದರೆ ಆ ಕಾರ್ಯದ ಮಹತ್ವದ ಅರಿವು ಅವರಿಗಾಗಿರಲಿಕ್ಕಿಲ್ಲ ಅಥವಾ ಆ ಕಾರ್ಯವನ್ನು ಅವರು ಸ್ವೀಕರಿಸಿರುವುದಿಲ್ಲವೆಂದು ಅರ್ಥ.

ಸ್ವಾತಂತ್ರ್ಯದ ಜೀವನವನ್ನು ಬಾಳಲು ಜನರು ತಮ್ಮ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಜನರು ಪಾಲ್ಗೊಳ್ಳುವುದು ಸಮಾನ ಸ್ಥಾನಮಾನವನ್ನುಳ್ಳ ವ್ಯಕ್ತಿಗಳಾಗಿಯೇ. ಯಾರಿಗಾರೂ ಕಾರ್ಯ ಮಾಡುವುದಲ್ಲ, ಎಲ್ಲರೂ ಎಲ್ಲರಿಗಾಗಿ ಕಾರ್ಯ ಮಾಡಬೇಕು. ಇದರಿಂದ ಆಳವಾದ ಮತ್ತು ವ್ಯಾಪಕವಾದ ಒಳ್ಳೆಯ ಪರಿಣಾಮಗಳು ಸಮಾಜದ ಮೇಲೆ ಆಗುತ್ತವೆ.

**೬. ಸ್ವಯಂ ಶಿಸ್ತು (ಆತ್ಮದ ಶಿಸ್ತು) ಜೀವನದ ರೀತಿಯಾಗಿರಬೇಕು**

ವ್ಯಕ್ತಿಯು ಶಿಸ್ತಿನ ಶಿಪಾಯಿಯಾಗಿರಬೇಕು. ನಿಯಮಗಳಿಗೆ ಬದ್ಧನಾಗಿ ಇಂದ್ರಿಯಗಳನ್ನು ನಿಗ್ರಹಿಸಿ, ಆತ್ಮ ಶೋಧನೆ ಮಾಡುತ್ತಾ ಜೀವಿಸುವುದು ಅತ್ಯಗತ್ಯ. ಚಂಚಲವಾದ ಮನಸ್ಸನ್ನುಳ್ಳ, ಆಸೆ-ಆಮಿಷಗಳಿಗೆ ಪಕ್ಕಾದ ವ್ಯಕ್ತಿಯು ಯಾವ ಕಾರ್ಯವನ್ನೂ ಯಶಸ್ವಿಯಾಗಿ ಮಾಡಲಾರ. ವ್ಯಕ್ತಿಯು ತನ್ನ ಆತ್ಮದ ಶಕ್ತಿಯನ್ನು ಬೆಳೆಸಿಕೊಳ್ಳಲೂ, ನೈತಿಕ ಶಕ್ತಿಯನ್ನು ಪಡೆಯಲೂ ಶಿಸ್ತಿನ ಜೀವನವನ್ನು ನಡೆಸಬೇಕು. ಶಿಸ್ತಿನಿಂದ ಜೀವಿಸುವವನಿಗೆ ಯಾವ ಭಯ ಶಂಕೆಗಳೂ ಇರುವುದಿಲ್ಲ; ಎಂಥ ಕಠಿಣ ಪರಿಸ್ಥಿತಿಯಲ್ಲೂ ಧೈರ್ಯದಿಂದ ನಿಲ್ಲುವ ಶಕ್ತಿಯನ್ನು ಅವನು ಪಡೆಯುತ್ತಾನೆ; ಚಿತ್ತ ಸಮತೋಲನವನ್ನು ಕಳೆದುಕೊಳ್ಳುವುದಿಲ್ಲ. ಇಡಿಯ ಸಾಮ್ರಾಜ್ಯವೇ ಅವನಿಗೆ ಇದುರಾದರೂ ಅವನು ಅಂಜುವುದಿಲ್ಲ. ಯಾಕೆಂದರೆ, ಅವನ ಆತ್ಮವು ಅಕಳಂಕವಾದದ್ದೂ, ಶಿಸ್ತಿನ ಜೀವನದಿಂದ ಪರಿಪುಷ್ಟಿಗೊಂಡದ್ದೂ ಆಗಿರುತ್ತದೆ. ಹೋರಾಟದಲ್ಲಿ ಧುಮುಕಿದ ಸತ್ಯಾಗ್ರಹಿಯು ಇಂಥ ಆತ್ಮಶಕ್ತಿಯನ್ನು ಪಡೆದಿರಬೇಕಾಗಿರುತ್ತದೆ. ಸ್ವಯಂ ಶಿಸ್ತು ಎಂದರೆ ಯಾವುದೋ ಒಂದು ಉಪಕರಣವಲ್ಲ. ಆದರೆ ಅದು ಜೀವನದ ರೀತಿಯೇ ಆಗಿರುತ್ತದೆ. ಇಂಥ ಶಿಸ್ತನ್ನು ಪಡೆದವನೇ ಜನರಿಗೆ ಕಲ್ಯಾಣವನ್ನು ತೃಪ್ತಿಕರವಾದ ರೀತಿಯಲ್ಲಿ, ಪರಿಣಾಮಕರವಾದ ಕ್ರಮದಲ್ಲಿ ಮಾಡಲು ಶಕ್ತನಾಗುತ್ತಾನೆ.

**೭. ಸತ್ಯ, ಅಹಿಂಸೆಗಳು ವ್ಯವಹಾರಯೋಗ್ಯವಾದಂಥವು**

ಸತ್ಯಾನ್ವೇಷಣೆಯೇ ಮನುಷ್ಯನ ನಿಜವಾದ ಗುರಿ. ಸತ್ಯವನ್ನು ಹೊರತು ಅವನು ಮತ್ತೇನನ್ನು ಗಳಿಸಬೇಕಾಗಿದೆ? ಸತ್ಯದ ಆಯುಧವನ್ನು ಹಿಡಿದು ಸತ್ಯಾಗ್ರಹಿ ಹೊರಡುತ್ತಾನೆ. ಜೊತೆಗೆ ಪರಿಶುದ್ಧವಾದ ಅಹಿಂಸೆಯ ಅಸ್ತ್ರವನ್ನೂ ಅವನು ಹೊಂದಿರುತ್ತಾನೆ. ಸತ್ಯವೆಂಬುದು ಸರ್ವರಿಗೂ ಒಂದೇ. ಅದು ದೇವರು. ("ಸತ್ಯವೆಂಬುದು ಹರನು ಹರನೆಂಬುದೇ ಸತ್ಯ" ಎಂಬ ರಾಘವಾಂಕ ಕವಿಯ ಮಾತನ್ನು ಇಲ್ಲಿ ನೆನೆಯಬಹುದು.) ಸತ್ಯವನ್ನು ಹೊರತು ಅನ್ಯಮಾರ್ಗವನ್ನು ಹಿಡಿಯುವುದು ಸಲ್ಲದ್ದು. ಅಂತೆಯೇ ಅಹಿಂಸೆಯದು. ಅಹಿಂಸೆಯೆಂದರೆ ಪ್ರೇಮವೆಂದೂ ಅರ್ಥ. ಹಿಂಸೆ, ದ್ವೇಷ, ಅಸೂಯೆ ಇತ್ಯಾದಿಗಳನ್ನೆಲ್ಲ ತೊಡೆಯುವಂತಹ ಅಸ್ತ್ರವೇ ಅಹಿಂಸೆ. ಸತ್ಯಪಕ್ಷಪಾತಿಯಾದವನು ಅಹಿಂಸೆಯನ್ನು ಎಂದೂ ಕೈಬಿಡಕೂಡದು. ಹಿಂಸೆಯಿಂದ ಹಿಂಸೆ ಹುಟ್ಟೀತಲ್ಲದೆ ಶಾಂತಿ ಲಭಿಸದು. 'ಶಾಂತಿಗಾಗಿ ಯುದ್ಧ' ಎನ್ನುವುದು ವಿರೋಧಾಭಾಸ. ಆದುದರಿಂದ ಮಾನವನು ಸುಖ-ಶಾಂತಿಯಿಂದ ಬಾಳಬೇಕಾದರೆ ಸತ್ಯ ಅಹಿಂಸೆಗಳು ಅತಿ ಮುಖ್ಯ.

ಸತ್ಯ, ಅಹಿಂಸೆಗಳು ವ್ಯವಹಾರಯೋಗ್ಯವಾದವುಗಳಲ್ಲ ಎಂದು ತಿಳಿಯಕೂಡದು. ಇವು ಬರಿಯ ವ್ಯವಹಾರ ಯೋಗ್ಯವಾದವುಗಳು ಮಾತ್ರವೇ ಅಲ್ಲ, ಬಹು ಪರಿಣಾಮಕಾರಿಯಾದವುಗಳೂ ಹೌದು. ಇವುಗಳಲ್ಲಿ ಅಚಲವಾದ ಶ್ರದ್ಧೆ, ಇವುಗಳನ್ನು ಉಪಯೋಗಿಸುವಲ್ಲಿ ತಾಳ್ಮೆ ಹಾಗೂ ಎಚ್ಚರಿಕೆ ಇದ್ದರೆ ಇವು ಹೇಗೆ ವ್ಯವಹಾರಯೋಗ್ಯವೆಂಬುದು ಗೊತ್ತಾಗುತ್ತದೆ. ಸಮಾಜ ಕಲ್ಯಾಣ ಕ್ಷೇತ್ರದಲ್ಲಂತೂ ಹಿಂಸೆಗೆ ಎಳ್ಳಷ್ಟೂ ಸ್ಥಳವಿಲ್ಲ. ಅಲ್ಲಿ ಪ್ರೇಮ ಅಂದರೆ ಅಹಿಂಸೆಯೇ ಪ್ರಮುಖ ಆಯುಧ.

**೮. ಗುರಿಯು ಸಾಧನೆಯ ಕ್ರಮವನ್ನು ಸಮರ್ಥಿಸುವುದಿಲ್ಲ**

ಪ್ರತಿಯೊಬ್ಬನಿಗೂ ಹಲವಾರು ಗುರಿಗಳಿರುತ್ತವೆ. ಆ ಗುರಿಗಳನ್ನು ಸೇರಲು ಅವನು ಅನೇಕ ರೀತಿಯ ಸಾಧನ

ಗಳನ್ನು, ಮಾರ್ಗಗಳನ್ನು ಅಳವಡಿಸಿಕೊಂಡು ಸಾಗುತ್ತಾನೆ. ಇಂಥ ಪ್ರಸಂಗದಲ್ಲಿ ಗುರಿಗೂ ಸಾಧನೆಯ ಮಾರ್ಗಕ್ಕೂ ಇರುವ ಸಂಬಂಧ ಹಾಗೂ ಅವುಗಳು ತಮತಮಗೇ ಹೊಂದಿರುವ ಸ್ವಂತಿಕೆಯ ಗುಣವಿಶೇಷ—ಇವುಗಳನ್ನು ಗಮನಿಸುವುದು ಅಗತ್ಯ. ಗುರಿಯು ಉತ್ತಮತರದ್ದಿರಬಹುದು, ಅದು ಸ್ವೀಕಾರಾರ್ಹವಾಗಿರಬಹುದು, ಸಾಮಾಜಿಕ ಅನುಮತಿಯನ್ನು ಪಡೆದಿರಬಹುದು, ಅದನ್ನು ಸೇರುವುದರಿಂದ ಅನೇಕರಿಗೆ ಅಥವಾ ಸರ್ವರಿಗೂ ಸುಖವಾಗಬಹುದು. ಆದರೆ ಅದನ್ನು ಪಡೆಯುವ ಸಾಧನಗಳು ದುಷ್ಟವಾದವುಗಳಾಗಿದ್ದರೆ ಆ ಗುರಿಯು ಅಸ್ವೀಕಾರಾರ್ಹ. ಯೇನ ಕೇನ ಪ್ರಕಾರೇಣ ಎಂದು ಕ್ಷುಲ್ಲಕವಾದ ಮಾರ್ಗವನ್ನು ಹಿಡಿದು ಸಾಗುವುದು ಒಳಿತಲ್ಲ. ಗುರಿಯನ್ನು ಸಾಧಿಸದಿದ್ದರೂ ಪರವಾಯಿಲ್ಲ, ಸಾಧನೆಗಳು ಪರಮಶ್ರೇಷ್ಠವಾಗಿರಬೇಕು, ವಿಶುದ್ಧವಾಗಿರಬೇಕು. ಸ್ವಾತಂತ್ರ್ಯದಂಥ ಮಹತ್ವದ ಗುರಿಯೇ ಆಗಿರಲಿ ಹಿಂಸಾಮಾರ್ಗದಿಂದ ಅದನ್ನು ಪಡೆಯುವುದು ಸಲ್ಲದ ಕಾರ್ಯ. ಸಮಾಜಕಲ್ಯಾಣಕ್ಷೇತ್ರದಲ್ಲಿ ವಾಮಮಾರ್ಗವನ್ನು (ಒಳ್ಳೆಯ ಉದ್ದೇಶಕ್ಕಾಗಿಯೇ) ಹಿಡಿದು ಸಾಗುವಂಥ ಪ್ರಸಂಗಗಳು ಬರಬಹುದು ; ಅದರಿಂದ ಊನಶಕ್ತರಿಗೆ ತುಂಬಾ ಸಹಾಯವಾಗಬಹುದು. ಆದರೆ ಅದು ಒಳ್ಳೆಯ ಕಾರ್ಯವಲ್ಲ. ಕಾರ್ಯಕರ್ತನು ತನ್ನ ಉಪಕರಣಗಳ, ಮಾರ್ಗಗಳ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದಕ್ಕೇ ಮಹತ್ವವನ್ನು ಕೊಡಬೇಕು. ಗುರಿಯನ್ನು ಸಾಧಿಸಿದೆನೆಂದು ತನ್ನ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಅವನಿಗೆ ಹಕ್ಕು ಇರುವುದಿಲ್ಲ. ಯಾಕೆಂದರೆ ಗುರಿಗಿಂತಲೂ ಮಾರ್ಗವೇ ಮುಖ್ಯ.

**೯. ಸರಳ ಮತ್ತು ಶೋಷಣೆ ಮಾಡದಂಥ ಜೀವನ ನಡೆಸಬೇಕು**

ಮಾನವನ ಜೀವನವು ಆದಷ್ಟೂ ಸರಳವಾಗಿರಬೇಕಲ್ಲದೆ ಜಟಿಲವಾಗಿರಬಾರದು. ಅವನ ಮೂಲ ಆವಶ್ಯಕತೆಗಳು ಬಹು ಕಡಮೆ. ಅವುಗಳ ಜೊತೆಗೆ ಅನಾವಶ್ಯಕವಾದ ಬೇಡಿಕೆಗಳನ್ನು ಮುಂದೆ ಮಾಡಿ ತನ್ನ ಜೀವನವನ್ನು ಜಟಿಲವಾಗಿಯೂ, ಕ್ಲಿಷ್ಟವಾಗಿಯೂ ಮಾಡಿಕೊಳ್ಳುತ್ತಾನೆ. ಜಟಿಲವಾದ ಜೀವನ ನಿರ್ವಹಣೆಗೆ ಶೋಷಣೆಯ ಮಾರ್ಗವನ್ನು ಅವನು ಹಿಡಿಯಬೇಕಾಗುತ್ತದೆ. ಶೋಷಣೆಯು ಪ್ರಾಕೃತಿಕಸಂಪತ್ತಿನದ್ದಾಗಿರಬಹುದು, ಪಕ್ಷಿ-ಪ್ರಾಣಿಗಳದ್ದಿರಬಹುದು ಮನುಷ್ಯರದ್ದೇ ಇರಬಹುದು. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನಿರ್ಮಿಸುವುದು, ಬೃಹದ್‌ನಗರಗಳನ್ನು ಕಟ್ಟುವುದು, ರಾಶಿಗಟ್ಟಲೆ ವಸ್ತುಗಳನ್ನು ಉಪಯೋಗಿಸುವುದು—ಇವೆಲ್ಲಾ ಮಾನವನು ಮುಖ್ಯವಾದ ಮೌಲ್ಯಗಳನ್ನು ಮರೆತು, ಅಮುಖ್ಯವಾದ ಆಮಿಷಕ್ಕೆ ಒಳಗಾದುದರಿಂದಲೇ. ಗಣಿಗಳನ್ನು ತೋಡಿ ಖನಿಜಗಳನ್ನು ತೆಗೆಯುವುದು, ಕಾಡುಗಳನ್ನು ಕಡಿದು ದಿಮ್ಮಿಗಳನ್ನು ಕೊರೆಯುವುದು, ಪ್ರಾಣಿಗಳನ್ನು ಕೊಂದು ತಿನ್ನುವುದು, ಸಹಜೀವಿಯಾದ ಮನುಷ್ಯನ ಸ್ವಾತಂತ್ರ್ಯಹರಣಮಾಡಿ ಅವನನ್ನು ದಾಸನನ್ನಾಗಿ ಮಾಡಿಕೊಳ್ಳುವುದು ಇವೆಲ್ಲಾ ಶೋಷಣೆಗಳೇ. ಈ ಶೋಷಣೆಯು ಸರಳ ಜೀವನಕ್ಕೆ ಅನಗತ್ಯ. ಆತ್ಮಶಕ್ತಿಯ ಸಂವರ್ಧನೆಗೆ ಇವು ನೆರವಾಗುವ ಬದಲು ಮಾರಕವಾಗುತ್ತವೆ. ಆದುದರಿಂದ ಸಮಾಜ ಸೇವೆಗಳನ್ನು ಯೋಜಿಸುವವರು ಜನರಿಗೆ ಸರಳಸುಂದರ ಜೀವನನಿರ್ವಹಣೆಗೆ ಸಾಧ್ಯವಾಗುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಸರಳ ಜೀವನದಲ್ಲಿ ಜಟಿಲತೆಯಿಲ್ಲ, ಕಪಟವಿಲ್ಲ, ದ್ವೇಷಾಸೂಯೆಗಳಿಲ್ಲ. ಅಲ್ಲಿ ಪ್ರೇಮ, ಪ್ರೀತಿಗಳಿರುತ್ತವೆ. ನಿತ್ಯಸತ್ಯವಾದ ವಸ್ತುವಿನ ಸಾಕ್ಷಾತ್ಕಾರಕ್ಕೆ ಎಷ್ಟು ಅಗತ್ಯವೊ ಅಷ್ಟನ್ನು ಸರಳ ಜೀವನದಲ್ಲಿ ಎಲ್ಲರೂ ಪಡೆಯಬಹುದು.

**೧೦. ದೇವರಲ್ಲಿ ಜೀವಂತ ನಂಬುಗೆಯಿರಬೇಕು**

ಜೀವರೆಲ್ಲರ ಸೃಷ್ಟಿಕರ್ತ, ಪಾಲಕ ದೇವನೇ. ಅವನು ಸರ್ವವ್ಯಾಪಿ. ಅವನ ಅಸ್ತಿತ್ವವನ್ನು ಗುರುತಿಸಿ, ಅವನಲ್ಲಿ ಜೀವಂತ ನಂಬುಗೆಯನ್ನು ಇರಿಸಿಕೊಳ್ಳುವುದು ಅತ್ಯಗತ್ಯ. ದುಃಖಗಳನ್ನು ಅನುಭವಿಸುವಾಗ, ಅನಾಹುತಗಳು ನಡೆಯುವುದನ್ನು ಕಂಡಾಗ ದೇವನ ಅಸ್ತಿತ್ವದ ಬಗೆಗೆ ನಂಬುಗೆಯು ಬಾರದೇ ಹೋಗುವುದುಂಟು. ಇದಕ್ಕೆ ಕಾರಣ, ದೇವನ ಅಸ್ತಿತ್ವದ ಬಗೆಗೆ ಜನರಲ್ಲಿ ನಂಬುಗೆ ಇಲ್ಲದುದೇ ಆಗಿದೆ. ದೇವ ಸಂಗೀತವು ನಮ್ಮ ಒಳಗೆ ಸದಾ ನಡೆದಿರುತ್ತದೆ. ಸಂಸಾರ ತಾಪತ್ರಯದ ಗಡಿಬಿಡಿಯಲ್ಲಿ, ಇಂದ್ರಿಯಗಳ ಕರ್ಕಶ ಸದ್ದಿನಲ್ಲಿ ಆ ಸಂಗೀತವು ಮುಳುಗಿಹೋಗಿರುತ್ತದೆ. ಆದುದರಿಂದ ನಮಗೆ ದೇವನ ಬಗೆಗೆ ನಂಬುಗೆ ಇಲ್ಲ. ಇಂದ್ರಿಯಗಳನ್ನು ನಿಗ್ರಹಿಸಿ, ಮನಸ್ಸನ್ನು ವಿಶುದ್ಧಿಗೊಳಿಸಿ, ದೇವನಲ್ಲಿ ಜೀವಂತ ನಂಬುಗೆಯನ್ನು ಬೆಳೆಸಿಕೊಳ್ಳಬೇಕು. ದೇವನಲ್ಲಿರುವ ನಂಬುಗೆಯಿಂದ ನಮ್ಮ ಮನಸ್ಸಿಗೊಂದು ನೆಮ್ಮದಿ ಬರುತ್ತದೆ ; ನಮ್ಮ ಆತ್ಮಕ್ಕೊಂದು ಶಕ್ತಿ ಬರುತ್ತದೆ ; ನಾವು ಮಾಡುವ ಕಾರ್ಯಗಳಲ್ಲೆಲ್ಲಾ ಸಮರ್ಪಣಭಾವ ಮೂಡಿ ನಿಲ್ಲುತ್ತದೆ. ದೇವನ ಮಕ್ಕಳಾದ ನಾವೆಲ್ಲಾ ಸಂಕಷ್ಟದಲ್ಲಿ ಸಿಲುಕಿದವರಿಗೆ ನೆರವಾಗುವಾಗ ಉದಾತ್ತ ಭಾವನೆಯಲ್ಲದೆ ಮತ್ತೇನು ಪ್ರಕಾಶಕ್ಕೆ ಬಂದೀತು ?

## ೩. ಇಂದಿನ ಭಾರತದಲ್ಲಿ ಗಾಂಧೀಜಿ

ಗಾಂಧೀಜಿಯವರು ಕೈಕೊಂಡ ಕಾರ್ಯಗಳು, ಅವರು ನಂಬಿಕೊಂಡು ಬಂದ ತತ್ವಗಳು ಎಷ್ಟರಮಟ್ಟಿಗೆ ಇಂದಿನ ಭಾರತಕ್ಕೆ ಸಮಂಜಸವಾಗಿವೆ? ಈ ಪ್ರಶ್ನೆ ಎಲ್ಲ ರಂಗಗಳಲ್ಲೂ ಇದ್ದಂತೆ ಸಮಾಜಕಲ್ಯಾಣಕ್ಷೇತ್ರದಲ್ಲೂ ಇದೆ. ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯವನ್ನೂ ತಂದುಕೊಡಲಿಲ್ಲ. ಬ್ರಿಟಿಷರು ಅನಿವಾರ್ಯವಾಗಿ ಸ್ವಾತಂತ್ರ್ಯವನ್ನು ಕೊಡಲೇಬೇಕಾಗಿತ್ತು, ಕೊಟ್ಟರು—ಎನ್ನುವವರಿದ್ದಾರೆ ; ಗಾಂಧೀಜಿಯವರೇ ಸ್ವಾತಂತ್ರ್ಯ ಶಿಲ್ಪಿ, ರಾಷ್ಟ್ರಪಿತ, ಆತನ ಆದರ್ಶ-ಸಮಾಜ ನಿರ್ಮಾಣವೇ ನಮಗುಳಿದಿರುವ ಏಕೈಕ ಹಾಗೂ ಸರಿಯಾದ ಮಾರ್ಗ—ಎನ್ನುವವರೂ ಇದ್ದಾರೆ. ಎಂಥದೇ ಅಭಿಪ್ರಾಯವಿರಲಿ, ಗಾಂಧೀಜಿಯವರು ಇಂದಿನ ಸಮಾಜಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಂಡಾರು ? ಎಂಬುದೇ ನಮಗಿರುವ ಮುಖ್ಯ ಪ್ರಶ್ನೆ.

ಇಂದಿನ ಸರಕಾರದ ಧೋರಣೆಯು ಪ್ರಜಾಸತ್ತಾತ್ಮಕ ಸಮಾಜವಾದವನ್ನು ಪ್ರತಿಷ್ಠಾಪಿಸುವುದು ; ಔದ್ಯೋಗೀಕರಣದ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಮಾಡಿ ಬಡತನ ಮುಂತಾದ ಸಮಸ್ಯೆಗಳನ್ನು ಹೋಗಲಾಡಿಸುವುದು ; ಜಾತ್ಯತೀತ ಸಮಾಜವನ್ನು ನಿರ್ಮಿಸುವುದು. ಇಂಥ ಧೋರಣೆಯುಳ್ಳ ಸರಕಾರಕ್ಕೆ ಅನ್ಯರಾಷ್ಟ್ರಗಳನ್ನೂ ಗಮನದಲ್ಲಿರಿಸಿಕೊಳ್ಳುವುದು ಅಗತ್ಯವಾಗುತ್ತದೆ. ಅನೇಕ ಕಾರಣಗಳಿಂದ ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಪ್ರಪಂಚವೆಲ್ಲಾ ಒಂದು ಸಮುದಾಯವಾಗುವ ಸ್ಥಿತಿಯಲ್ಲಿದೆ. ಇಂಥ ಪ್ರಸಂಗದಲ್ಲಿ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವುದು, ಚರಖಾ ಮುಂತಾದ ಸಾಮಾನ್ಯ ಉಪಕರಣಗಳನ್ನು ಉಪಯೋಗಿಸುವುದು, ಕೇವಲ ಕೆಲವೇ ಮೂಲ ಅವಶ್ಯಕತೆಗಳನ್ನು ಪಡೆಯುವುದು ಇತ್ಯಾದಿ ವಿಚಾರಗಳು ಬಹುಶಃ ಬೆಲೆಯನ್ನು ಕಳೆದುಕೊಂಡಿವೆ ಎಂದೆನ್ನಿಸಬಹುದು. ಆದರೆ ಮಾನವನ ಮೂಲ ನೆಲೆಬೆಲೆಯನ್ನು ಗುರುತಿಸದೆ ಆಧುನಿಕ ರಾಕ್ಷಸಶಕ್ತಿಗಳಿಗೆ ಪಕ್ಕಾಗುವುದರಿಂದ ಶಾಂತಿಯನ್ನು ಪೋಷಿಸಿಕೊಂಡು ಹೋಗುವುದು ಎಷ್ಟರಮಟ್ಟಿಗೆ ಸಾಧ್ಯ ? ಎನ್ನುವ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ.

ಹರಿಜನರ, ಗಿರಿಜನರ, ಮಹಿಳೆಯರ, ಮಕ್ಕಳ, ಗ್ರಾಮಸ್ಥರ ಸಮಸ್ಯೆಗಳಲ್ಲಿ ಭಾರತವು ಮಹತ್ವರೀತಿಯಲ್ಲಿ ಆಸಕ್ತಿಯನ್ನು ತೋರಿಸಿ, ಅವುಗಳ ಪರಿಹಾರಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದೆ. ಆದರೆ ಗಾಂಧೀಜಿಯವರು ಕಟ್ಟಿದ ಸರ್ವೋದಯ ಸಮಾಜದ ಕನಸು ನನಸಾಗದೇ ಉಳಿದಿರುವುದಲ್ಲದೆ, ಅದು ನನಸಾಗುವ ಸೂಚನೆಗಳೇನೂ ಇಲ್ಲ.

ನನ್ನ ಪ್ರಬಂಧದ ವಿಷಯಕ್ಕೇ ಪ್ರಶ್ನೆಯನ್ನು ಪರಿಮಿತಗೊಳಿಸಿದರೆ, ಗಾಂಧೀಜಿಯವರು ವೃತ್ತಿಶಿಕ್ಷಣ ಪಡೆದ ಸಮಾಜಕಾರ್ಯಕರ್ತರಾಗಿರದಿದ್ದರೂ ಆಧುನಿಕ ಸಮಾಜಕಾರ್ಯದ ಅನೇಕ ಸೂತ್ರಗಳನ್ನು ಒಂದಲ್ಲ ಒಂದು ರೀತಿಯಲ್ಲಿ (ಅಪ್ರಜ್ಞಾಪೂರ್ವಕವಾಗಿಯೇ ಎಂದಿಟ್ಟುಕೊಂಡರೂ) ಅವರು ತಮ್ಮ ಕಾರ್ಯಕ್ಷೇತ್ರದಲ್ಲಿ ಉಪಯೋಗಿಸಿದರೆಂಬುದು ವೇದ್ಯವಾಗುತ್ತದೆ. ಅವರ ಕಾರ್ಯದಿಂದ ಆಧುನಿಕ ಸಮಾಜಕಾರ್ಯವು ಬೆಳೆಯಲು ನೆಲವು ಸರಿಯಾಗಿ ಹದಗೊಂಡಿತು ಎಂಬುದೂ ಅರ್ಥವಾಗುತ್ತದೆ. ಆದರೆ ಅವರು ಸಮಾಜೋದ್ಧಾರಕ (Social Reformer) ರಾದುದರಿಂದಲೂ ಬರಿಯ ಸಮಾಜಕಲ್ಯಾಣವೇ ಅವರ ಕಾರ್ಯಕ್ಷೇತ್ರವಾಗಿರಲಿಲ್ಲವಾದುದರಿಂದಲೂ ಅವರಿಗೂ ವೃತ್ತಿಶಿಕ್ಷಣ ಪಡೆದು ಸಂಭಾವನೆಯನ್ನು ಪಡೆಯುತ್ತಿರುವ ಸಮಾಜ ಕಾರ್ಯಕರ್ತನಿಗೂ ಕಾರ್ಯಗಳನ್ನು ಕೈಕೊಂಡು ಪೂರೈಸುವ ವಿಧಾನಗಳಲ್ಲೂ, ದೃಢವಾಗಿ ನಂಬಿ ಸ್ವೀಕರಿಸಿರುವ ಮೌಲ್ಯಗಳಲ್ಲೂ, ಕಾರ್ಯಸೂತ್ರಗಳಲ್ಲೂ ಮಹದಂತರವಿದೆ.[9] ಈ ಅಂಶವನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು. ಅವರು ಪ್ರತಿಪಾದಿಸಿದ ತಾತ್ವಿಕ ಸೂತ್ರಗಳು ಸಮಾಜ ಕಲ್ಯಾಣಕ್ಕೆ ಮಹತ್ವದ ಕೊಡುಗೆಗಳೆಂಬುದನ್ನೂ ನಾವು ಗಮನದಲ್ಲಿರಿಸಿಕೊಳ್ಳಬೇಕು.

---

[9] ಸಮಾಜಕಾರ್ಯ ಶಿಕ್ಷಣತಜ್ಞರೊಬ್ಬರ ಈ ನುಡಿಗಳನ್ನು ಗಮನಿಸಿರಿ :

"Gandhi's emphasis on the dignity of man and self-reliance, his belief in bringing about change in human beings through persuasion rather than imposition of one's views, his stress on the individual's freedom to decide for himself, his commitment to social justice and equality, his fight against exploitation of man by man all these are in harmony with the professional social workers' goals, values and approach. Most of us will find it difficult to agree with Gandhi's views on restrication of wants, abstinance, and a classless self sufficient village society...[and certain implications of his technique of Satyagraha including fasting, his giving equal importance to the values of truth and nonviolence]" S. H. Pathak, 'From the Editor' in the journal, *Social Work Forum*, Vol. VII, No. 3, October 1969, P. 106.

# ಜನಪದರು ಕಂಡ ಶರಣರು

ಟಿ. ಎಸ್. ರಾಜಪ್ಪ

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದೊಳಗೆ ನಡೆದ ಶಿವಶರಣರ ಕ್ರಾಂತಿ ಭಾರತೀಯ ಧಾರ್ಮಿಕ ಸಂಸ್ಕೃತಿಯ ಇತಿಹಾಸದಲ್ಲಿ ಹಲವಾರು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ವ್ಯಕ್ತಿಸ್ವಾತಂತ್ರ್ಯ, ಸ್ತ್ರೀಸ್ವಾತಂತ್ರ್ಯ, ದಯೆ, ಸಮತೆ, ವಿಶ್ವಬಾಂಧವ್ಯ ಇಂತಹ ಉದಾತ್ತ ತತ್ವಗಳನ್ನು ಎತ್ತಿಹಿಡಿದ ಈ ಕ್ರಾಂತಿಯ ಫಲವಾಗಿ ಶ್ರೀಸಾಮಾನ್ಯ ತನ್ನ ವ್ಯಕ್ತಿತ್ವವನ್ನು ಆಂತರಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಉದ್ಧರಿಸಿಕೊಳ್ಳಲು ಸಮರ್ಥನಾದನು. ಕನ್ನಡ ನಾಡಿನಲ್ಲಿ ತಲೆದೋರಿದ ಧಾರ್ಮಿಕ ಕ್ರಾಂತಿ ಮಾನವನ ಜೀವನದ ಕೆಲವು ಹೊಸ ಮೌಲ್ಯಗಳನ್ನು ಕಂಡುಕೊಂಡಿತು. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ, ಅಕ್ಕಮಹಾದೇವಿ, ಅಕ್ಕನಾಗಮ್ಮ ಮುಂತಾದ ವಿಶ್ವವಿಭೂತಿ ಪುರುಷರ ದಿವ್ಯ ನೇತೃತ್ವದಲ್ಲಿ ನಡೆದ ಈ ಆಂದೋಲನ ನಮ್ಮ ನಾಡಿನ ಸಂಸ್ಕೃತಿಯ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕುದಾಗಿದೆ. ಕಾಯಕದ ಮಹಿಮೆಯನ್ನು ಕಂಡುಕೊಂಡದ್ದು ಈ ಆವರಣದಲ್ಲಿ. ಸ್ವಾತಂತ್ರ್ಯ, ವಿಶ್ವಬಾಂಧವ್ಯ, ದಯೆ, ದಮೆ, ಶಾಂತಿ ಇಂತಹ ಅಪ್ರತಿಮ ಮೌಲ್ಯಗಳು ಈ ಕಾಲದಲ್ಲಿ ಪುನರ್ಜೀವನವನ್ನು ಪಡೆದವು.

ಮಾನವಕೋಟಿಯ ಸುಖ-ದುಃಖಗಳ, ಕಾರ್ಪಣ್ಯಗಳ ಬೇರು ತೀರ ಆಳವಾದುದು. ಈ ಜೀವನವೇ ಒಂದು ಮಹಾಪ್ರಸಂಗ, ನಿರಂತರ ಹರಿಯುವ ಹೊನಲು. ಈ ಮಹಾನದಿಯನ್ನು ಪರಮಾರ್ಥ ಸಾಧನೆ, ಶಿವಾನುಭವ, ಶಿವಭಕ್ತಿಗೆ ಪೂರಕವಾದ ಕಾಯಕ, ಶಿವನಾಮಸ್ಮರಣೆ, ದಾಸೋಹಗಳಷ್ಟೇ ದಾಟಿಸಬಲ್ಲವು. ಭಗವತ್ಸಂಕಲ್ಪವೋ ಏನೋ, ಭಕ್ತಿಮಾರ್ಗ, ಧರ್ಮಮಾರ್ಗ, ಜ್ಞಾನಮಾರ್ಗಗಳನ್ನು ತೋರಿಸಿಕೊಟ್ಟ ಶಿವಶರಣರು ಈ ಪುಣ್ಯಭೂಮಿಯಲ್ಲಿ ಜನ್ಮವೆತ್ತಿ, ತಮ್ಮ ಕಾಯಕದಿಂದ, ದಾಸೋಹಗಳಿಂದ ವಚನಗಳಿಂದ ನಮ್ಮನ್ನು ಉದ್ಧರಿಸಿದ್ದಾರೆ.

ಶರಣರ ಜೀವನ ಬಹುಮುಖವಾದುದು. ಕೆಲವರಂತೂ ಒಂದು ಕಡೆ ಸಾಧಕರು, ಇನ್ನೊಂದು ಕಡೆ ಸಮಾಜಸೇವಕರು; ಧರ್ಮದ ಬೆಳಕನ್ನು ಹೊತ್ತ ದೀವಟಿಗರು, ಕ್ರಾಂತಿಕಾರರು, ಆದರೂ ತಮ್ಮ ಜೀವನದ ಕಾಯಕವನ್ನು ನಮ್ರಭಾವದಿಂದ ಮಾಡುವ ಕರ್ಮಕುಶಲಿಗಳು. ಜೀವನವನ್ನು ತೆರೆದ ಕಣ್ಣಿಂದ ನೋಡಿದವರು, ಲೋಕದ ಕಷ್ಟಕಾರ್ಪಣ್ಯಗಳನ್ನು, ಕಂಡು ಕನಿಕರಗೊಂಡವರು, ಕಷ್ಟ-ಸುಖಗಳನ್ನು ತಾವೂ ಉಂಡವರು, ಸ್ತುತಿನಿಂದೆಗಳನ್ನು ಏಕಪ್ರಕಾರವಾಗಿ ಕಂಡವರು. ಈ ಎಲ್ಲ ಮುಖಗಳಿಂದ ನೂರಾರು ಅನುಭವಗಳನ್ನು ಪಡೆದ ಅವರ ಚೇತನ ಶ್ರೀಮಂತವಾಗಿದೆ.

ನಮ್ಮ ಜನಪದ ಸಾಹಿತ್ಯವನ್ನು ಪರಿಶೀಲಿಸಿದರೆ ನಿಜವಾಗಿಯೂ ಮಹಾಕಾವ್ಯಗಳೆಂದು ಕರೆಯಬಹುದಾದ ಹಲವಾರು ಕಾವ್ಯಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಗ್ರಂಥಸ್ಥ ಸಾಹಿತ್ಯಕ್ಕಿಂತ ಭಿನ್ನವಾದ ಕೆಲವು ವಿಶಿಷ್ಟ ಲಕ್ಷಣಗಳೂ ಎದ್ದು ತೋರುತ್ತವೆ. ಸಾಮಾನ್ಯ ಜನತೆಗಾಗಿ ರಚಿತವಾದ ಈ ಸಾಹಿತ್ಯವು ಜನತೆಯ ಜೀವನದಿಂದ ಬೆಳೆದು ಬಂದುದರಿಂದ ಜನಜೀವನಕ್ಕೂ ಈ ಸಾಹಿತ್ಯಕ್ಕೂ ನಿಕಟಸಂಬಂಧವಿದೆ. ಜನಜೀವನದ ವಿವಿಧ ಮುಖಗಳ ಪ್ರತಿಬಿಂಬವು ಇದರಲ್ಲಿ ಮೂಡಿದೆ. ಸಾಮಾನ್ಯ ಜನತೆಯ ಸುಖ, ದುಃಖ, ಆಸೆ, ಆಶಯ, ಗೆಳೆತನ, ಹಗೆತನ, ಜೀವನದ ಅನೇಕ ತೆರನಾದ ಪ್ರಸಂಗ ಮೊದಲಾದುವುಗಳು ಈ ಸಾಹಿತ್ಯದ ವಿಷಯಗಳಾಗಿವೆ. ರಾಮಾಯಣ, ಮಹಾಭಾರತ, ಪುರಾಣ ಕಥೆಗಳು, ಶರಣರ ಚರಿತ್ರೆಗಳು ಮತ್ತು ಅಸಂಖ್ಯಾತ ಬಿಡಿ ಹಾಡಿನ ರಾಶಿ ಮುತ್ತುಗಳೂ ಇವೆ.

ಶಿವಶರಣರ ಸಾಲಿನಲ್ಲಿ ಮೈದುನ ರಾಮಣ್ಣ, ಗುಂಡುಬ್ರಹ್ಮಯ್ಯ, ಕಲ್ಯಾಣದಣ್ಣ ಬಸವಣ್ಣ, ಚನ್ನಬಸವಣ್ಣ, ಉಳವಿಯ ಶರಣರು, ಘನಶರಣ ಹರಳಯ್ಯ, ತುರುಕರ ಪೀರಣ್ಣ, ನುಲುಗೆ ಚನ್ನಯ್ಯ, ಮಡಿವಾಳ ಮಾಚಯ್ಯ, ಗಟ್ಟಿ ಪಾಳಯ್ಯ, ಸತ್ಯಶರಣೆ ಅಕ್ಕನಾಗಮ್ಮ, ಶರಣೆ ಭುವನಮ್ಮ ಮುಂತಾದವರ ಮೇಲೆ ಜನಪದರು ಕಾವ್ಯಗಳನ್ನು ಹಾಡಿದ್ದಾರೆ. ಅಲ್ಲದೆ ಹರಳಯ್ಯ, ಕಿನ್ನರಿ ಬೊಮ್ಮಯ್ಯ, ಮೇದರ ಕೇತಯ್ಯ, ಇಳಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ,

ಜಾತಿಗಾರ ಚೌಡಯ್ಯ, ನೇಗಿ ಅಮುಗಯ್ಯ, ಕುಂಬಾರ ಗುಂಡಯ್ಯ, ಮಾದಾರ ಚನ್ನಯ್ಯ, ಶರಣೆ ಅಕ್ಕಮಹಾದೇವಿ ಮುಂತಾದವರನ್ನು ಕುರಿತು ಪಂತಿಯ ಹಾಡುಗಳಲ್ಲಿ ಹಾಡಿದ್ದಾರೆ.

**ಕಲ್ಯಾಣದಲ್ಲಿ ಬಸವಣ್ಣ :** ಐತಿಹಾಸಿಕ ವ್ಯಕ್ತಿಯಾಗಿದ್ದರೂ, ಐತಿಹಾಸಿಕಾಂಶಗಳು ಇದರಲ್ಲಿ ಗೌಣವಾಗಿ ಪೌರಾಣಿಕ ದೃಷ್ಟಿಯೇ ವಿಶೇಷವಾಗಿರುವುದರಿಂದ ಅದ್ಭುತ ಘಟನಾವಳಿಗಳು, ಪವಾಡಗಳು, ಉತ್ಪ್ರೇಕ್ಷೆಗಳು ಹಾಗೂ ಕಲ್ಪನಾಂಶಗಳು ಹೇರಳವಾಗಿವೆ. ಆದರೂ ಇದರಲ್ಲಿ ಇತಿಹಾಸ, ಪುರಾಣದ ಮುಸುಕನ್ನು ಹಾಕಿಕೊಂಡು ರಂಜಿಸುತ್ತಿದೆಯೆಂಬುದನ್ನೂ ಮರೆಯುವಂತಿಲ್ಲ. ಗ್ರಂಥಸ್ಥ ಹಾಗೂ ಜಾನಪದಗಳಲ್ಲಿ ಪರಸ್ಪರ ಕೊಡುಕೊಳುಗೆಗಳು ಅನಿವಾರ್ಯವಾದ್ದರಿಂದ ಶರಣರ ಜನಪದ ಕಾವ್ಯಗಳು ಶಿಷ್ಟಮೂಲದಿಂದ ಪ್ರಭಾವಗೊಂಡಿದ್ದರೂ ಆಶ್ಚರ್ಯಪಡಬೇಕಾಗಿಲ್ಲ.

ಕೈಲಾಸದಲ್ಲಿ ಪರಮೇಶ್ವರನ ಮುಂದೆ ನಂದಿ, ಭೃಂಗಿ ಇತ್ಯಾದಿ ಸಕಲ ಗಣಂಗಳು ವಿಷ್ಣು, ಬ್ರಹ್ಮ, ದೇವೇಂದ್ರ ಮುಂತಾದ ಎಲ್ಲ ದೇವತೆಗಳು ನೆರೆದಿದ್ದಾರೆ. ಶಿವನ ಸೇವಾನಿರತನಾಗಿದ್ದ ನಂದಿ ಬಹಳ ದುಗುಡದಿಂದ ಎದ್ದು ಭೂಲೋಕದಲ್ಲಿರುವ ಕಷ್ಟ ಮತ್ತು ಕರ್ಮ ಹೆಚ್ಚಾಗಿ ಅಂಧಕಾರ ಕವಿದಿರುವುದನ್ನು ನಿವೇದಿಸುತ್ತಾನೆ. ಈಶ್ವರನು ನಕ್ಕು ಅವರವರ ಕರ್ಮಫಲದಿಂದ ಅಂಧಕಾರವನ್ನು ಅನುಭವಿಸಬೇಕಾದುದು ಅನಿವಾರ್ಯವೆಂದು ಹೇಳುತ್ತಾನೆ. ಈ ಮಾತಿನಿಂದ ನಂದಿಗೆ ಸಮಾಧಾನವಾಗಲಿಲ್ಲ. ನಂದಿ ಅಳುತ್ತಾ ತಾನು ಭೂಲೋಕಕ್ಕೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಪರಮೇಶ್ವರನು ಅಪ್ಪಣೆಕೊಟ್ಟು ಮತ್ತೆ ಬಸವಣ್ಣ ಕೈಲಾಸಕ್ಕೆ ಬರುವಾಗ ಕೊರಳಲ್ಲಿ ಲಿಂಗವಿಲ್ಲದಿದ್ದರೆ ದ್ವಾರದಲ್ಲಿ ಪ್ರವೇಶ ದೊರೆಯುವುದಿಲ್ಲವೆಂದು ಎಚ್ಚರಿಕೆ ಕೊಡುತ್ತಾನೆ.

ಶಿವನ ಅಪ್ಪಣೆ ಪಡುದು ನಂದಿ ಬಸವಣ್ಣ<br>
ಅಯ್ಯಾ ಭೂಲೋಕ ನೋಡಕೆ ಬರುತ್ತಾರೆ ।<br>
ಕಟ್ಟಿತ್ತು ಭೂಲೋಕ ಹುಟ್ಟಿತ್ತು ಕಲಿಯುಗ<br>
ಕರ್ಮ ಹೆಚ್ಚಿ ಕತ್ತಲೆ ಗವುದಿತ್ತು<br>
ಅಡವೀ ಅರಣ್ಯದಲ್ಲಿ ಬಸವೇಶ ಬರುವಾಗ<br>
ಅಲ್ಲೊಬ್ಬ ರಾಜಾನು ಶಿವಶರಣ ।

ಬಸವಣ್ಣ ಭೂಲೋಕಕ್ಕೆ ಬರುತ್ತಾನೆ. ಅವನು ಅರಣ್ಯಮಾರ್ಗದಲ್ಲಿ ಬರುತ್ತಿರುವಾಗ ಶರಣನಾದ ದೊರೆ ದೀಪಕರಾಜ ಎದುರಾಗಿ ಪರಸ್ಪರ ಪರಿಚಯವಾದನಂತರ ಬಸವಣ್ಣ ರಾಜನ ಖಿನ್ನಮುಖವನ್ನು ನೋಡಿ ಚಿಂತೆಗೆ ಏನು ಕಾರಣವೆಂದು ಕೇಳುತ್ತಾನೆ.ಆಗ ದೊರೆ ಬೇಟೆಗೆ ಬಂದಿದ್ದುದಾಗಿಯೂ ಹಸಿವು ಬಾಯಾರಿಕೆಗಳಿಂದ ಬಳಲಿರುವುದಾಗಿಯೂ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾನೆ. ಬಸವಣ್ಣ ಇಲ್ಲಿಯೇ ಇರುವ ಗಂಗಾ ಸರೋವರದಲ್ಲಿ ನೀರು ಕುಡಿಯೆಂದು ದೊರೆಗೆ ಹೇಳುತ್ತಾನೆ. ಆದರೆ ದೊರೆ ತನ್ನ ಬಳಿ ಲಿಂಗವಿಲ್ಲವೆಂದೂ ಲಿಂಗಪೂಜೆಯಾಗದ ಹೊರತು ಅನ್ನ ನೀರು ಸೇವಿಸುವುದಿಲ್ಲವೆಂದು ಹೇಳಲು ಅವನ ಲಿಂಗನಿಷ್ಠೆಗೆ ಸಂತೋಷಪಟ್ಟು ಬಸವಣ್ಣ ತನ್ನ ಲಿಂಗವನ್ನೇ ದೀಪಕರಾಜನಿಗೆ ಕೊಡುತ್ತಾನೆ. ಕೊಡುವಾಗ ಲಿಂಗವನ್ನು ಭೂಮಿಯಮೇಲೆ ಇಡಬೇಡವೆಂದು ಎಚ್ಚರಿಕೆಯನ್ನು ಬಸವಣ್ಣ ಹೇಳುತ್ತಾನೆ. ಆದರೆ ರಾಜ ಲಿಂಗವನ್ನು ಭೂಮಿಯ ಮೇಲೆ ಇಟ್ಟೇಬಿಟ್ಟ.

ಭೂಮಿ ಮೇಲೆ ಲಿಂಗ ಮಡಗೀದ ತಕ್ಷಣವೆ<br>
ಭೂಮಿಗೆ ಬೇರಾಗಿ ಹಿಡಿದೀತು ।<br>
ಹೋದಂತ ಭಕ್ತ ಇನ್ನು ಬರಲಿಲ್ಲ ಎಂದು<br>
ನಂದೀಶ ಭಕ್ತನನ್ನು ಕೂಗುತಾನೆ ।<br>
ಲಿಂಗವನು ಕಳುಕೊಂಡು ಸುಮ್ಮನೆ ಬಂದು<br>
ಲಿಂಗ ಇಲ್ಲವೆಂದು ತಿಳಿಸೀದ<br>
ನಿನಗೂ ಲಿಂಗವಿಲ್ಲ ನನಗೂ ಲಿಂಗವಿಲ್ಲ<br>
ಇಬ್ಬರಿಗೂ ಲಿಂಗ ಇಲ್ಲವಲ್ಲೊ ।<br>
ಲಿಂಗವಿಲ್ಲದ ಕಾರಣ ಈ ಪೃಥ್ವಿ ಮೇಲಿರಬಾರ್ದು<br>
ಹಂಗಂತ ಕೈಲಾಸಕ್ಕೆ ಹೊರುಟಾರು ।

ಬರಿಗೈಯಲ್ಲಿ ಬಂದ ದೊರೆ ಲಿಂಗ ನೆಲದಲ್ಲಿ ಬೇರೂರಿದುದನ್ನು ಬಸವಣ್ಣನಿಗೆ ತಿಳಿಸಿದ. ಬಸವಣ್ಣ ನಂಬಲಿಲ್ಲ. ಅನಂತರ ಬಸವಣ್ಣ ಲಿಂಗವಿಲ್ಲದೆ ಧರೆಯ ಮೇಲಿರಬಾರದೆಂದು ಕೈಲಾಸಕ್ಕೆ ಹೊರಟ. ಅಲ್ಲಿ ಬಸವಣ್ಣನಿಗೆ ಕೈಲಾಸ ಪ್ರವೇಶ

ಲಭ್ಯವಾಗಲಿಲ್ಲ. ಹಿಂದಿರುಗಿದ ಬಸವಣ್ಣ ಶಿವನನ್ನು ಪ್ರಾರ್ಥಿಸಲು ಶಿವನು ದ್ವಾರಪಾಲಕರ ಬಳಿಗೆ ಬಂದು ವಿಚಾರಿಸಲಾಗಿ ದ್ವಾರಪಾಲಕರು ನಂದಿ ಬಂದಿದ್ದುದನ್ನು, ಲಿಂಗವಿಲ್ಲದ್ದರಿಂದ ಒಳಗೆ ಬಿಡಲಿಲ್ಲವೆಂದು ತಿಳಿಸುತ್ತಾರೆ. ಈಶ್ವರ ಬೇಸರದಿಂದ ರೋಮರೋಮದಲ್ಲೆಲ್ಲಾ ಲಿಂಗವನ್ನು ಧರಿಸಿರುವ ನಂದಿಯನ್ನು ತಡೆದದ್ದು ಉಚಿತವಲ್ಲವೆಂದು ಹೇಳಿ ನಂದಿಯನ್ನು ಕೈಲಾಸಕ್ಕೆ ಕರೆಯುತ್ತಾನೆ. ಯಾರು ನಂದಿಯನ್ನು ತಡೆದರೋ ಅವರು ಭೂಲೋಕದಲ್ಲಿ ಭವಿಗಳಾಗಿ ಹುಟ್ಟಲೆಂದು ಶಪಿಸುತ್ತಾನೆ. ಭೂಲೋಕಯಾತ್ರೆಮಾಡಿ ಬಂದ ನಂದಿಗೆ "ದಿತಿಶಂಭು" ಎಂದು ಹೆಸರಿಟ್ಟು ಭೂಲೋಕದಲ್ಲಿರುವ ಕಲ್ಯಾಣಪಟ್ಟಣದ ಬಿಜ್ಜಳನ ಆಸ್ಥಾನದಲ್ಲಿರುವಂತೆಯೂ ಬಾಗೇವಾಡಿಯ ಮಾದರಸ ಮತ್ತು ಮಾದಲಾಂಬಿಕೆಯರ ಗರ್ಭದಲ್ಲಿ ಹುಟ್ಟು ಎಂದು ಆಶೀರ್ವಾದಮಾಡಿ ಭೂಲೋಕಕ್ಕೆ ಕಳಿಸುತ್ತಾನೆ.

ಶಿವನ ಮಾತ ಕೇಳಿ ಶರಣೆಂದು ನಂದೀಶ
ಅವ್ರು ಬಂದಾರು ಬಾಗೇವಾಡುತಾಗಿ ।
ಬಾಗೇವಾಡಿಕೆ ಒಂದು ಲಿಂಗವಾಗಿ ಮೂಡಿ
ಆ ಲಿಂಗಕೊಂದು ರತುವ ನಡೆಸಿದರು ।
ಬಾಗೆವಾಡದಲ್ಲಿ ಶಿವಬ್ರಾಮುಣ ಕುಲದಲ್ಲಿ
ಮಂಡಲ್ ಮಾದರಸ ಇರುತ್ತಾರೆ ।
ಮಾದರಸನ ಮಡದಿ ಮಾದಲಾಂಬಿಕೆ ದೇವಿ
ನಂದೀಯ ರತುವ ನಡಸೀದ
ಅವುರ್ಗೆ ಸೊಪ್ಪನ್ದಲ್ಲಿ ಬಂದೇನ ನುಡಿದಾರು
ನನ್ನ ಸೇವೆ ನೀವು ಮಾಡಿದಿರಿ ಅಮ್ಮಯ್ಯ
ನಿಮ್ಗೆ ಮಗನಾಗಿ ನಾನೇ ಬರುತೀನಿ ।
ನಂದೀಶ್ವರ ಸರಣ ಆಡಿದ ಮಾತಿನಂತೆ
ಅವುರ ಗರ್ಭದಲ್ಲಿ ಸ್ವಾಮಿ ಬೆಳೆದಾರು
ನವಮಾಸೊಂಬತ್ತು ತಿಂಗ ನಡೆವಾವು ಸರಣಾರೆ
ಆಗ ತಾನೆ ಶರಣ ಮಗ ಜನಿಸೀತು ।
ಬಸುವಣ್ಣ ಅನುತೇಳಿ ನಾಮುಕರ್ಣವ ಮಾಡಿ
ಅವುರ್ಗೆ ಶಿವುಧಾರ್ಣೆ ಮಾಡಿದರು ಸಂಗಮೇಶ

ಶರಣ ದಂಪತಿಗಳು ಸಂತೋಷದಿಂದ ಸಾಕುತ್ತಿದ್ದರು. ವಿದ್ಯಾಭ್ಯಾಸಕ್ಕಾಗಿ ಮೇದಿನಿ ಮಠಕ್ಕೆ ಸೇರಿಸಿದರು. ಮಠದ ಹುಡುಗರೆಲ್ಲ ಹಲಗೆ ತೊಳೆಯಲು ಹೊಳೆಗೆ ಹೋದಾಗ ಶ್ಯಾಮು ಎನ್ನುವ ಹುಡುಗ ಆಕಸ್ಮಾತ್ ಕಾಲು ಜಾರಿ ಹೊಳೆಗೆ ಬೀಳುತ್ತಾನೆ. ಆದರೆ ಬಸವಣ್ಣನ ಮೇಲಿನ ಅಸೂಯೆಯಿಂದ ಕೆಲವು ಹುಡುಗರು ಬಸವಣ್ಣನೇ ಶ್ಯಾಮುವನ್ನು ಹೊಳೆಗೆ ತಳ್ಳಿದನೆಂದು ಗುರುಗಳ ಹತ್ತಿರ ದೂರು ಕೊಡುತ್ತಾರೆ. ಸುದ್ದಿ ಹರಡಿತು. ಶ್ಯಾಮುವಿನ ತಂದೆ ತಾಯಿಗಳು ಬಂದರು. ಬಸವಣ್ಣ ನಿಜಸಂಗತಿಯನ್ನು ಹೇಳಿದರೂ ಯಾರೂ ನಂಬಲಿಲ್ಲ. ಕೊನೆಗೆ ಎಲ್ಲರೂ ಗಂಗಾಸ್ನಾನಕ್ಕೆ ನಡೆಯಿರೆಂದು ಬಸವಣ್ಣ ಹೇಳುತ್ತಾನೆ. ಎಲ್ಲರೂ ಅಲ್ಲಿಗೆ ಬರುತ್ತಾರೆ. ಬಸವಣ್ಣನ ದೃಷ್ಟಿ ನೀರಿಗೆ ಬೀಳಲು ಶ್ಯಾಮು ನೀರಿನಿಂದ ಎದ್ದು ಬಂದು ತನ್ನನ್ನು ಯಾರೂ ನೂಕಲಿಲ್ಲವೆಂದು ಹೇಳುತ್ತಾನೆ. ಹೀಗೆ ಬಸವಣ್ಣ ಮೇದಿನಿ ಪವಾಡವನ್ನು ಗೆಲ್ಲುತ್ತಾನೆ. ಮಠದ ಹುಡುಗರ ಚೇಷ್ಟೆ ನಿಲ್ಲಲಿಲ್ಲ. ಹುಡುಗರೆಲ್ಲಾ ಸೇರಿ ಬೆನಕ ಎಂಬ ಹುಡುಗನನ್ನು ಸತ್ತವನಂತೆ ಮಲಗಿಸಿ ಯಾರು ಕೂಗಿದರೂ ಮಾತಾಡಬೇಡವೆಂದು ಅವನಿಗೆ ಎಚ್ಚರಿಕೆ ಕೊಟ್ಟು ಬಸವಣ್ಣನ ಹತ್ತಿರಕ್ಕೆ ಬಂದು ನೀನು ಸತ್ಯವಂತನೇ ಆಗಿದ್ದರೆ ಇವನನ್ನು ಮಾತಾಡಿಸು ಎಂದು ಸವಾಲು ಹಾಕುತ್ತಾರೆ. ಬಸವಣ್ಣ ಹುಡುಗ ಸತ್ತಿದ್ದಾನೆಂದು ಹೇಳಿದಾಗ ಎಲ್ಲರೂ ಗೊಳ್ಳೆಂದು ಕೇಕೆ ಹಾಕಿನಗುತ್ತಾರೆ. ಬೆನಕನ ಮುಖದ ಮೇಲಿನ ಮುಸುಕು ತೆಗೆದು ನೋಡಿದರೆ ಬೆನಕ ನಿಜವಾಗಿಯೂ ಸತ್ತಿದ್ದ. ಹುಡುಗಾಟಿಕೆ ಮಾಡಿದ್ದು ಸಾವಿಗೆ ಕಾರಣವಾಯಿತು. ಬೆನಕನ ತಂದೆತಾಯಿಗಳು ಬಸವಣ್ಣನ ಬಳಿಗೆ ಬಂದು ದುಃಖಿಸುತ್ತಾರೆ. ಆಗ ಬಸವಣ್ಣ ತನ್ನ ಸತ್ಯದಿಂದ ಸತ್ತವನನ್ನು ಬದುಕಿಸುತ್ತಾನೆ.

ಮಾದರಸ ಮಾದಲಾಂಬಿಕೆಯರು ಬಸವಣ್ಣನಿಗೆ ದಿತಿದೀಕ್ಷೆ ಕೊಡಿಸಬೇಕೆಂದು ಪ್ರಯತ್ನ ಮಾಡುತ್ತಾರೆ. ಬಸವಣ್ಣ ತನಗಾಗಲೇ ಶಿವದೀಕ್ಷೆಯಾಗಿದೆಯೆಂದು ದಿತಿದೀಕ್ಷೆಯನ್ನು ನಿರಾಕರಿಸಿದ. ತಾನು ಶಿವದೀಕ್ಷಿತನೆಂದು ಸಾಧಿಸಲು ಸ್ವರ್ಗದಲ್ಲಿದ್ದ ತನ್ನ ಬಂಧುಬಳಗವನ್ನೆಲ್ಲ ಊಟಕ್ಕೆ ಕರೆಸಿದನು.

ಶಿವದೀಕ್ಷ್ಯದ ಜೊತೆಗೆ ದಿತಿದೀಕ್ಷ್ಯವೂ ಉಂಟು
ದಿತಿದೀಕ್ಷ್ಯಕೆ ನಿಲ್ಲು ಬಸವಣ್ಣ ।
ಸಂಗಮನ ಆಲಯಕ್ಕೆ ಹೊರಟಾರು ಬಸವಣ್ಣ
ತಂದೆ ತಾಯ್ಗಳು ದುಕ್ಕ ಪಡುವಾರು ।
ನಾನು ಬತ್ತೀನಿ ಎಂದು ಅಕ್ಕನಾಗಮ್ಮ ತಾಯಿ
ಬಸವಣ್ಣನ ಜೊತೆಯಲ್ಲಿ ಹೊರುಟಾರು ।

ದಿತಿದೀಕ್ಷೆಯನ್ನು ತೆಗೆದುಕೊಳ್ಳುವಂತೆ ತಂದೆತಾಯಿಗಳು ಪಟ್ಟುಹಿಡಿಯಲು ಬಸವಣ್ಣ ಬೇಸರದಿಂದ ಮನೆಯನ್ನು ಬಿಟ್ಟು ಹೊರಟಾಗ ಅಕ್ಕ ನಾಗಮ್ಮನೂ ಅವನನ್ನೇ ಅನುಸರಿಸಿದಳು. ಸಂಗಮದೇವರು ಬಸವಣ್ಣನನ್ನು ಇಲ್ಲಿಗೇಕೆ ಬಂದೆಯೆಂದು ಕೇಳಿ ವಿಚಾರವನ್ನೆಲ್ಲ ತಿಳಿದುಕೊಂಡರು. ಪಿಪರಿಯಲ್ಲಿದ್ದ ಬಲದೇವಮಂತ್ರಿಗೆ ತನ್ನ ಅಳಿಯ ಬಸವಣ್ಣ ಕಾಣೆಯಾಗಿದ್ದಾನೆಂದು ಓಲೆ ಬಂತು. ಬಲದೇವ ಬಸವಣ್ಣನನ್ನು ಹುಡುಕುತ್ತಾ ಬಂದು ಸಂಗಮಾಲಯದಲ್ಲಿ ಬಸವಣ್ಣ ನಾಗಮ್ಮನನ್ನು ಕಂಡು ಬಸವಣ್ಣನನ್ನು ತನ್ನ ಪಟ್ಟಣಕ್ಕೆ ಕರೆತಂದು ತನ್ನ ಮಗಳಾದ ಗಂಗಾಂಬಿಕೆಯೊಡನೆ ವಿವಾಹ ಮಾಡಿದನು. ಕೆಲವಾರು ದಿವಸ ಅವರೆಲ್ಲ ಸಂತೋಷದಿಂದಿರಲು ಬಲದೇವರು ಸ್ವರ್ಗಸ್ಥರಾದರು.

ಒಮ್ಮೆ ಬಿಜ್ಜಳನ ಆಸ್ಥಾನಕ್ಕೆ ಸ್ವರ್ಗದಿಂದ ಓಲೆ ಬಂತು. ಸ್ವರ್ಗಸ್ಥ ಮಂತ್ರಿ ಬಲದೇವನಿಲ್ಲದೆ ಸ್ವರ್ಗದ ಓಲೆಯನ್ನು ಯಾರೂ ಓದುವಂತಿರಲಿಲ್ಲ. ಆಗ ಬಸವಣ್ಣನಿಗೆ ಕರೆ ಹೋಯಿತು. ಬಸವಣ್ಣ ಬಂದರು.

ದೊರೆಗಳಾಡಿದ ಮಾತಿಗೆ ತಿರಸ್ಕಾರ ಮಾಡದೆ
ಬಂದಾನು ಶರಣ ಬಸವಣ್ಣ
ಏನು ಕಾರಣ ನಮ್ಮ ಕರೆಸ್ತ್ರಿ ಮಾರಾಜ್ರೆ
ನಮ್ಮಿಂದ ನಿಮಗೇನಾಗಬೇಕು
ನಮ್ಮಲ್ಲಿ ಒಂದು ಲಿಪಿ ಬಂದೀದೆ ಬಸವಣ್ಣ
ಅದ ಓದಿ ಅರ್ಥವ ನೀವು ಹೇಳಬೇಕು.
ಕರದಲ್ಲಿ ಹಿಡುಕೊಂಡು ನೋಡಿದರು ಬಸವಣ್ಣ
ಇದು ದೇವಲೋಕದಿಂದ ಬಂದೀದೆ
ಇದರಂತರಂಗವ ಹೇಳತೀನಿ ಮಾರಾಜ್ರೆ
ಆನಂದವಾಗಿ ನೀವು ಕೇಳಬೇಕು.

ದೊರೆಯ ರತ್ನಸಿಂಹಾಸನದ ಆರಾಳು ಅಡಿಯಲ್ಲಿ ರತ್ನಸಿಂಹಾಸನ ಮತ್ತು ಏಳು ಕೊಪ್ಪರಿಗೆ ಹಣವೂ ಇದೆಯೆಂದು ಬಸವಣ್ಣನವರು ಹೇಳಿದಾಗ ದೊರೆ ಆ ಸ್ಥಳವನ್ನು ಅಗೆಸಿ ಪರೀಕ್ಷೆಮಾಡಿದಾಗ ರತ್ನಸಿಂಹಾಸನ ಮತ್ತು ಅಪಾರ ಐಶ್ವರ್ಯ ದೊರೆಯಿತು. ದೊರೆ ಅಪಾರ ಸಂತೋಷದಿಂದ ಬಸವೇಶ್ವರನಿಗೆ ಮುಖ್ಯಮಂತ್ರಿ ಪಟ್ಟ ಕಟ್ಟಿದ.

ಬಸವಣ್ಣ ಶರಣನಿಗೆ ಮಂತ್ರಿ ಪಟ್ಟವ ಕಟ್ಟಿ
ಅವರ್ಗೆ ಗುರುಮಠ ತಯ್ಯಾರತ್ ಮಾಡುತ್ತಾರೆ
ಪೂರುವ ಪಚ್ಚೀಮ ಒಂಬತ್ತು ಗಾವೀದ
ಉತ್ತರ ದಕ್ಷಿಣ ಹತ್ತು ಗಾವೀದ
ಗುರುಮಠ ಕಟ್ಟಿಸಿದ ಬಿಜ್ಜಳ
ಇಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಈ ಸಂದು ಸಂಪೂರ್ಣ ।

ಬಸವಣ್ಣ ಮಂತ್ರಿಯಾದಮೇಲೆ ಅರಮನೆಯಷ್ಟೇ ಗುರುಮನೆಯೂ ಅಗತ್ಯವಾಯಿತು. ಬಸವಣ್ಣ ಮಂತ್ರಿಯೂ ಆಗಿ ಕಲ್ಯಾಣದಣ್ಣನಾದ.

**ಚನ್ನಬಸವಣ್ಣ :** ಶರಣರ ಸಾಲಿನಲ್ಲಿ ಚನ್ನಬಸವಣ್ಣ ಅತ್ಯಂತ ಪ್ರತಿಭಾವಂತನಾದ ತರುಣ ಜಂಗಮ. ತನ್ನ ಮೇಧಾಶಕ್ತಿಯಿಂದ ಹಿರಿಯರ ಸಾಲಿಗೆ ಸೇರಿದವನು. ಬಸವಣ್ಣನವರು ಭಕ್ತಿಗೂ, ಅಲ್ಲಮಪ್ರಭು ವೈರಾಗ್ಯಕ್ಕೂ, ಚನ್ನಬಸವಣ್ಣ ಜ್ಞಾನಕ್ಕೂ ಹೆಸರಾದವರು. ಜ್ಞಾನನಿಧಿಯಾದ ಚನ್ನಬಸವಣ್ಣ ಪ್ರೌಢವಾದ ವಚನಗಳನ್ನೂ ಇತರ ಶಿವಾನುಭವ ಗ್ರಂಥಗಳನ್ನೂ ರಚಿಸಿ ಷಟ್‌ಸ್ಥಲಸಾಮ್ರಾಟ್, ಷಟ್‌ಸ್ಥಲಬ್ರಹ್ಮ ಎಂಬ ಕೀರ್ತಿಗೆ ಭಾಜನನಾಗಿದ್ದಾನೆ.

ಚನ್ನಬಸವಣ್ಣನನ್ನು ಕುರಿತು ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಅನೇಕ ಗ್ರಂಥಗಳು ರಚಿತವಾಗಿವೆ. ಪಾಲ್ಕುರಿಕೆ ಸೋಮನಾಥ, ವಿರೂಪಾಕ್ಷಪಂಡಿತ, ಅತ್ತಲೂರಿ ಪಾಪಕವಿಗಳು ರಚಿಸಿದ ಗ್ರಂಥಗಳು ಬಹಳ ಶ್ರೇಷ್ಠ ವಾದವು. ಚನ್ನಬಸವಣ್ಣನ ಹುಟ್ಟಿನ ಬಗ್ಗೆ ಅನೇಕ ಪವಾಡಗಳನ್ನು ಆರೋಪಿಸಲಾಗಿದೆ. ಹರಳಯ್ಯನವರ ಪ್ರಸಾದ ದಿಂದ ಅವನ ಜನನವಾಯಿತೆಂದು ಹೇಳಲಾಗುತ್ತದೆ. ಬಸವಣ್ಣನವರ ಅಕ್ಕ ನಾಗಲಾಂಬಿಕೆ ಇವನ ತಾಯಿಯಾದುದ ರಿಂದ ಇವನು ಬಸವಣ್ಣನವರ ಸೋದರಳಿಯ. 'ಶಿವತತ್ವಚಿಂತಾಮಣಿ'ಯಲ್ಲಿ ಚನ್ನಬಸವಣ್ಣ ಜಂಗಮ ಪ್ರಸಾದದಿಂದ ಹುಟ್ಟಿದನೆಂದು ಹೇಳಿದೆ. ಆದರೆ 'ಸಿಂಗರಾಜಪುರಾಣ'ದಲ್ಲಿ ಚನ್ನಬಸವಣ್ಣನ ತಂದೆ ಶಿವಸ್ವಾಮಿ ಎಂಬ ಪ್ರಸ್ತಾಪ ಬರು ತ್ತದೆ. ಒಟ್ಟಿನಲ್ಲಿ ಚನ್ನಬಸವಣ್ಣನ ಹುಟ್ಟಿನ ಸುತ್ತ ಹಬ್ಬಿಕೊಂಡ ಕಥೆಗಳ ಸಾಲಿಗೆ ಜನಪದ ಮೂಲದಿಂದಲೂ ಒಂದು ಕೊಡುಗೆ ಸೇರಿಕೊಂಡಿದೆ.

ನಂದಿ ಮಂಚದ ಮೇಲೆ ಕೂತರು ಬಸವಣ್ಣನವರು
ಅವರ ವಾಲೆಯ ತಗದು ಓದಿದರು
ಬಸವಣ್ಣನವರು ವಾಲೆ ಓದುವಂಥ ಕಾಲದಲ್ಲಿ
ನೀಲಮ್ಮ ತಾಯಿ ದುಃಖಪಡುತಾರೆ
ಕೈಲಾಸದಿಂದ ಬರುವಾಗ ನಮ್ಮ ಬಸವಣ್ಣನವರು
ಐದು ಪರಸಾದಲ್ಲಿ ಬಂದಾರು—ಆದರೆ
ಮಕ್ಕಳ ಪರಸಾದವ ತರಲಿಲ್ಲ
ನಡಿಗೆ ಪರಸಾದ ತಂದರು ನುಡಿಗೆ ಪರಸಾದ ತಂದರು
ಭಕ್ತಿಯ ಪರಸಾದ ಭಾವದ ಪರಸಾದವ—ಅವರಾದ್ರೆ ತಂದರು
ಮಕ್ಕಳೆಂಬೋ ಪರಸಾದವ ತರಲಿಲ್ಲ

ಬಸವಣ್ಣನವರು ಮಕ್ಕಳಿಲ್ಲದ ಕಾರಣ ತಾವು ಸ್ವೀಕರಿಸಲು ತಂದಿಟ್ಟಿದ್ದ ಹರಳಯ್ಯನವರ ಮಠದ ಪ್ರಸಾದ ಕೈತಪ್ಪಿ ಅಕ್ಕನಾಗಮ್ಮನವರಿಗೆ ಸಿಕ್ಕುತ್ತದೆ. ಅದನ್ನು ಅಕ್ಕನಾಗಮ್ಮ ತಿಳಿಯದೆ ಸೇವಿಸಿ ಗರ್ಭವತಿಯಾಗುತ್ತಾರೆ.

ಒಲದೀತು ಪರಸಾದ ಬೆಳದಿತೊಂದು ಮಗುವಾಗಿ
ಅಕ್ಕನಾಗಮ್ಮನ ಹೃದಯದೊಳಗೆ
ಶರಣರ ಮನೆ ಪ್ರಸಾದವ ಸಲಿಸಿದರು ನಾಗಮ್ಮ
ಶಿವಪೂಜೆ ಗುರುಮಠವ ಸಿಂಗರಿಸಿ

ಸ್ನಾನಕ್ಕೆ ಹೋಗಿದ್ದ ಬಸವಣ್ಣನವರು ಒಂದು ಗದ್ದುಗೆಯ ಮೇಲಿದ್ದ ಪ್ರಸಾದವನ್ನು ಕಾಣದೆ ದಿಗ್ಭ್ರಾಂತರಾಗಿ ಮಠದಲ್ಲಿರುವವರೆಲ್ಲರನ್ನೂ ವಿಚಾರಿಸಿ ಉತ್ತರ ಸಿಗದಿರಲು ಕೊನೆಗೆ ನಾಗಮ್ಮನಿಂದಲೇ ವಿಚಾರ ತಿಳಿಯಿತು. ಇದನ್ನು ಕೇಳಿದ ಬಸವಣ್ಣ ಆಕಾಶವೇ ತಲೆಯ ಮೇಲೆ ಬಿದ್ದಂತೆ ಕುಸಿದರು.

ಅನ್ನದ ಪರಸಾದ ಅಂತೇಳಿ ನೀನೀಗ
ಬಾಳ ಆಸೆಯಿಂದ ಸಲಿಸಿದೆಯ ನಾಗಮ್ಮ
ಅದರ ಕುಂದಕವ ನೀನು ತಿಳಿದಿಲ್ಲ
ಆದರ ಕುಂದಕವ ನೀನು ತಿಳಿಯದೆ ಹೋದೆ ನಾಗಮ್ಮ
ನಿನ್ನ ಹೊಟ್ಟೆಯಲ್ಲಿ ಕೇಳೆ ನನತಂಗಿ—ಈಗಾದ್ರೆ
ಬಂದು ಚನ್ನಣ್ಣನವರು ಬೆಳೆದವರೆ
ಗಂಡನಿಲ್ಲದ ಬಾಲೆ ಬಸಿರಾಗವಳೆ ಎನುತೇಳಿ
ಕೊಂಡುಗರು ಚಾಡಿ ನುಡಿಯುವರು ಬಿಜ್ಜಳನು
ನಮ್ಮನಾದರೆ ಅವನು ಕರೆಸುವನು ನಾಗಮ್ಮ
ಮುಂದದ ಕಟ್ಟೆ ಒಳಗೆ ನಿಲ್ಲಿಸುವನು
ನ್ಯಾಯದ ಸಭೆಯಲ್ಲಿ ಹೋಗಿ ನಿಲಬೇಕು ಎನುತೇಳಿ
ಬಸವಣ್ಣನವರು ಆಗ ನುಡಿದರು

ತನ್ನ ತಪ್ಪಿನ ಅರಿವಾದ ನಾಗಮ್ಮ ಭೂಮಿತಾಯಿ ಮೊರೆಹೋಗುತ್ತಾಳೆ. ಆದರೆ ಬಸವಣ್ಣನವರು ಒಡಹುಟ್ಟಿನ ದುಃಖ ಇನ್ನೆಲ್ಲಿ ಕಾಣಲೆಂದು ತಂಗಿಗೆ ಧೈರ್ಯ ಹೇಳಿ ಕೊನೆಗೆ ವೈರಿಗಳನ್ನು ಗೆಲ್ಲುವಂಥ ಮಾರ್ಗ ನೋಡಬೇಕೆಂದು ನಿಶ್ಚಯಿಸಿ

ನಾಗಮ್ಮನ ಬಸುರೊಸಗೆಗೆ ಏರ್ಪಾಡು ಮಾಡಿದರು. ಅನಂತರ ಕೊಂಡಕಾರ ಮಂಚಣ್ಣನಿಂದ ಅಕ್ಕನಾಗಮ್ಮ ಗರ್ಭವತಿಯಾಗಿರುವ ವಿಷಯ ತಿಳಿದ ಬಿಜ್ಜಳ ಗಂಡನಿಲ್ಲದೆ ಬಸುರಾದ ಅಕ್ಕನಾಗಮ್ಮನ ಬಗ್ಗೆ ಒಂದು ವಿಚಾರಣಾ ಸಭೆಯನ್ನು ಕರೆಯುತ್ತಾನೆ. ಬಸವಣ್ಣನವರನ್ನು ಸಭೆಗೆ ಬರಮಾಡಿಕೊಂಡ ಬಿಜ್ಜಳ :

ಗಂಡನಿಲ್ಲದೆ ಬಾಲೆ ಬಸುರಾಗವಳೆ ಎನುತೇಳಿ
ಈ ಸುತ್ತಾ ಕಲ್ಯಾಣವೆಲ್ಲ ಹೊಸಸುದ್ದಿ ನಿನತಂಗೆ
ಬಿಮ್ಮನಸಿ ಆದ ಬಗೆ ಹೇಗೆ ?

ಎಂದು ಕೇಳಿದಾಗ ಬಸವಣ್ಣನವರು—

ಯಾರೇನು ಮಾಡ್ಯಾರೊ ಶಿವನಿಟ್ಟ ಕುರುವಾಕ್ಕೆ
ಹೆರಳಯ್ಯನೆಂಬೊ ಶರಣರ ಮಠದ ಪರುಸಾದಕ್ಕೆ
ನನ್ನ ತಂಗಿ ನಾಗಮ್ಮ ಬಸುರಾದ ಎನುತೇಳಿ
ಸತ್ಯದ ನುಡಿಯ ಗುರುವು ನುಡಿದರು.

ಹರಳಯ್ಯನವರ ಪ್ರಸಾದದಿಂದ ಗರ್ಭಿಣಿಯಾದುದನ್ನು

ನಮ್ಮ ಏಳುನೂರು ಹೆಣ್ಣುಗಳ ಸಾಲಾಗಿ ನಿಲಿಸಯ್ಯ
ಅವರಿಗೆ ಪರಸಾದ ಕೊಡಿಸರಯ್ಯ
ಏಳುನೂರು ಹೆಣ್ಣುಗಳು ಬಿಮ್ಮನಸೆರಾದರೆ
ಸತ್ಯವಂತ ಹೌದು ಬಸವಯ್ಯ.

ಎಂದು ಬಿಜ್ಜಳನು ಬಸವಣ್ಣನವರನ್ನು ಗೇಲಿಮಾಡುತ್ತಾನೆ. ಆಗ ಕೊಂಡಕಾರ ಮಂಚಣ್ಣನು ಬಸವಣ್ಣನವರ ಕಣ್ಣಲ್ಲಿ ನೀರು ಬಂದುದನ್ನು ಕಂಡು :

ದೊರೆಯೆ ಬಸವಣ್ಣನವರಂದರೆ ಎಳ್ಳಟ್ಟು ತಪ್ಪಿಲ್ಲ
ಅವರ ತಂಗಿಯ ನಾಗಮ್ಮನವರ ಬರಮಾಡಿ.

ಕೊನೆಗೆ ಅಕ್ಕನಾಗಮ್ಮ ಬಿಜ್ಜಳನ ದರ್ಬಾರಿಗೆ ಬಂದಾಗ ಕೊಂಡಕಾರ ಮಂಚಣ್ಣ ಹುಣಸೆ ಬರಲಿನಲ್ಲಿ ರಕ್ತ ಚಿಮ್ಮುವವರೆಗೂ ಹೊಡೆದ. ಆದರೆ ನಾಗಮ್ಮ ಸತ್ಯವನ್ನು ಮರೆಮಾಚಲಿಲ್ಲ. ಕಾದ ಎಣ್ಣೆ ಕೊಪ್ಪರಿಗೆಯಲ್ಲಿ ಮುಳುಗುವಂತೆ ಸವಾಲು ಹಾಕಿದರು. ಶರಣೆ ಅಕ್ಕನಾಗಮ್ಮ ಕಾದ ಎಣ್ಣೆಯೊಳಗೆ ಈಜಾಡಿದರು ತಮ್ಮ ನಿಜದಿಂದ. ಶೂಲಕ್ಕೆ ಹಾಕಿದರೆ ಶೂಲ ಮೂರು ತುಂಡಾಯಿತು. ಹೀಗೆ ಕೊಂಡಕಾರ ಮಂಚಣ್ಣ ಒಡ್ಡಿದ ಅನೇಕ ಸವಾಲುಗಳನ್ನು ಗೆದ್ದು ನಾಗಮ್ಮ ಪವಾಡಗಳ ಮಾಲೆಯನ್ನೇ ಸೃಷ್ಟಿಸಿದಳು. ಕೊನೆಗೆ ಕೊಂಡಕಾರ ಮಂಚಣ್ಣ ಅತ್ಯಂತ ಭೀಕರ ಪರೀಕ್ಷೆಯನ್ನೊಡ್ಡಿದ. ಅಕ್ಕನಾಗಮ್ಮ ಹರಳಯ್ಯನವರ ಮನೆಯ ಅನ್ನದ ಪ್ರಸಾದದಿಂದಲೇ ಗರ್ಭಿಣಿಯಾಗಿದ್ದರೆ ಹೊಟ್ಟೆಯಲ್ಲಿರುವ ಮಗು ಮೂರು ಮಾತಾಡಲೆಂದು— ಆಗ ಅಕ್ಕನಾಗಮ್ಮನವರ ಗರ್ಭದಲ್ಲಿದ್ದ ಚನ್ನಬಸವಣ್ಣ :

ಸಾಸವ ಮಾಡಿದವನ ಮೀಸೆಯ ಕೀಳುತೀನಿ ಮಾವ
ಸೂಸಲಾಡುವೆ ತಲೆಗೋಳ—ಮಾವಯ್ಯ
ನಿನ್ನ ಜೀವಕೆ ಭಯಬೇಡ
ನಿಂದಕವನಾಡಿದವನ ಮುಂದಲೆಯ ಕಡಿತೀನಿ
ಚಂಡಾಡುವೆನವನ ತಲೆಗೋಳ—ಮಾವಯ್ಯ
ನಿನ್ನ ಜೀವಕ್ಕೆ ಭಯಬೇಡ
ನನ್ನ ಪಟ್ಟಣಕೆ ನಾನು ಬತ್ತೀನಿ ಮಾವಯ್ಯ
ಇನ್ನು ಅವನ ಪ್ರಾಣ ಮಡಗಲ್ಲ
ಹೊಟ್ಟೆಯ ಒಳಗೆ ಚನ್ನಣ್ಣನಾದರೆ
ಎತ್ತಿ ಮೂರು ಮಾತನಾಡಿದನು ಬಿಜ್ಜಳನ
ಪೆತ್ತಯ್ಯನ ಕಾಲದ ಮುತ್ತಿನ ಗದ್ದುಗೆಯು
ಚನ್ನಣ್ಣನಾಡಿದ ಮಾತಿಗೆ–ಪಟ್ಟನೆ
ಎರಡು ಪಾಲಾಗಿ ಹೊಡೆದೋಯ್ತು
ಅದುರಿತು ಆಕಾಶ ಉದುರಿತು ನಕ್ಷತ್ರ
ಗದಗಾಪರಿಸಿಗೊಂಡು ಶಿವನೆದ್ದ–ರವಪೀಠಕೆ

ಗಗನ ಮಂಡಲವೆ ನಡುಗೋಯ್ತು
ತಾಯಿ ಹೊಟ್ಟೆಯ ಒಳಗೆ ಮೂರು ಮಾತ ಆಡಿಬಿಟ್ಟು
ಮನದಲ್ಲೆ ಯೋಚನೆಯ ಮಾಡುತಾನೆ
ತನ್ನ ನಿಜರೂಪವ ಇಲ್ಲಿ ತೋರಬೇಕು ಎಂದು
ತಾ ಬರುವಂಥ ಮಾರ್ಗ ಅರಸಿದ.

ಚನ್ನಬಸವಣ್ಣ ಕಿರುಬೆರಳಿನಲ್ಲಿ ತಾಯಿ ಬೆನ್ನು ಸೀಳಿಕೊಂಡು ಸೋಮವಾರದ ದಿವಸ ಹೊರಬಂದ. ಸುದ್ದಿ ಸುರ ಲೋಕಕ್ಕೆ ಹೋಗಿ ಅವರು ಹೂವಿನ ಮಳೆ ಸುರಿಸಿದರು. ಚನ್ನಬಸವಣ್ಣ ಬಿಜ್ಜಳನನ್ನು ದಂಡಿಸುತ್ತಾನೆ. ಮುಂದೆ ಅವನು ಭೂಲೋಕವನ್ನು ಸಾಕುವ ಬಸವನಾಗಿ ಹೋಗಬೇಕೆಂದು ಬಸವಣ್ಣನವರು ಅವನನ್ನು ಒಕ್ಕಲಿಗ ಮುದ್ದಯ್ಯನ ವಶಕ್ಕೆ ಒಪ್ಪಿಸುತ್ತಾರೆ.

ನಮ್ಮ ಅಳಿಯನಲ್ಲಿಗ್ಯೆದು ಹದಿನೆಂಟು ಜಾತಿಗೆಲ್ಲಿ
ಅನ್ನ ಹಾಕುವರ್‍ಯಾರಪ್ಪ ಎನುತೇಳಿ–ಆಗಾಲೆ
ನಮ್ಮ ಕರ್ತ್ಯ ಬಸವಣ್ಣನವರು ಕೇಳುತಾರೆ.

ಬಸವಣ್ಣನವರು ಕೇಳಿದ ಪ್ರಶ್ನೆಗೆ ಹದಿನೆಂಟು ಜಾತಿಯುವರು ಯಾರೂ ಮಾತಾಡಲಿಲ್ಲ. ಒಕ್ಕಲಿಗ ಮುದ್ದಯ್ಯ ಬಾಗಿ ಶರಣೆಂದು :

ನಾನೂ ಇವನೂ ಗೇದು ಅನ್ನವ ಹಾಕತೀವಿ
ಎನುತೇಳಿ ಮುಂದಾಗಿ ನಿಲುತಾನೆ

ಹೀಗೆ ಚನ್ನಬಸವಣ್ಣ ಒಕ್ಕಲಿಗ ಮುದ್ದಯ್ಯನ ಜೊತೆಯಲ್ಲಿ ಬಸವನಾಗಿ ಸೇರಿಕೊಂಡ. ಆಗ :

ನರಮಾನವನ ಕೈಲಿ ಕೊಟ್ಟು ಬಿಟ್ಟು ನನ್ನನ್ನೆ
ಇವನ ಶಿಕ್ಷೇಯ ನಾನು ತಡೆಯಬಹುದೆ
ಮಕ್ಕಳಲ್ಲಿ ಬುದ್ಧಿ ತಪ್ಪಾದರೆ ಕೇಳಯ್ಯ
ಎರಡೇಟ ಅವರು ಹೊಡೆಯುವರು ನಿನಾದ್ರೆ
ಕಷ್ಟವ ಮಾಡಿ ಗೆಲ್ಲಬೇಕು
ಹೊತ್ತಿನಂತೆ ಎದ್ದು ಹೊಡೆದಂಥ ಮೂರೇಟು
ನಿನ್ನ ಪಾಲಿಗೆ ಸಲುವವು
ಸಂದೇಯಗಂಟ ಹೊಡದೇಟು ಬಸವಣ್ಣನವರ
ಚೆನ್ನ ಮೇಲಾದರೆ ಸಲ್ಲುವವು.

ಎಂದು ಬಸವಣ್ಣನವರು ಚನ್ನಬಸವಣ್ಣನವರಿಗೆ ಅಭಯುವನ್ನು ಕೊಡುತ್ತಾರೆ. ಮುದ್ದಯ್ಯನ ಅಪೇಕ್ಷೆಯುತೆ :

ಕೊಂಟಿಗೆ ಕಟ್ಟಿದರು ಎಂಭತ್ತುವರದ ಕೊಂಬಣಸು
ಚಿನ್ನದ ಮುಖರಂಥ ಹಾಕ್ಯವರೆ—ನಾಗಸರ
ಚಿನ್ನದ ಹುರಿಗೆಜ್ಜೆ ಧರಿಸಿದರು
ಚಿನ್ನದ ಕಾಲ್ಕಡಗ ಚಿನ್ನದ ಕಾರಗೆ
ಬಸವನ ಈಗ ಸುಂಗಾರ ಮಾಡಿದರು.

ಹೀಗೆ ಶರಣನಾಗಿ ಹುಟ್ಟಿದ ಚನ್ನಬಸವಣ್ಣ ಮರ್ತ್ಯಲೋಕವನ್ನು ಸಲಹುವ ಬಸವನಾಗಿ ನಿಲ್ಲುವುದೇ ಈ ಕಥೆಯ ಸ್ವಾರಸ್ಯ. ಈ ಕಾವ್ಯ ಬಸವೇಶ್ವರನ ವೈಭವವನ್ನೂ ವ್ಯಕ್ತಿತ್ವವನ್ನೂ ಮನಮುಟ್ಟುವಂತೆ ಚಿತ್ರಿಸುತ್ತದೆ. ಜೊತೆಗೆ ಚನ್ನಬಸವೇಶ್ವರನ ಅವತಾರದ ಸಂದರ್ಭ ಅದ್ಭುತ ರೀತಿಯಲ್ಲಿ ಈ ಕಾವ್ಯದಲ್ಲಿ ಮೂಡಿಬಂದಿದೆ.

ಬಸವಣ್ಣ, ಚನ್ನಬಸವಣ್ಣ ಜನಪದದಲ್ಲಿ ದೈವತ್ವದ ಮಟ್ಟಕ್ಕೇರಿರುವುದಕ್ಕೆ ನಮ್ಮ ಹಳ್ಳಿಗರು ಹೆಚ್ಚಾಗಿ ರೈತರು ತಮ್ಮ ವೃತ್ತಿಗೆ ಸಂಬಂಧಿಸಿದ ವಸ್ತು ಉಪಕರಣಗಳನ್ನು ಪೂಜ್ಯಭಾವನೆಯಿಂದ ನೋಡುವುದು ಅವರ ಮನೋಧರ್ಮ ವಾಗಿದೆ. ಬೇಸಾಯಗಾರನ ಜೀವನವನ್ನು ನಿಯಂತ್ರಿಸುವ ಮಳೆ, ಭೂಮಿ ಮತ್ತು ಎತ್ತುಗಳ ಬಗ್ಗೆ ರೈತ ಹೆಚ್ಚಿನ ಭಕ್ತಿಯನ್ನು ತೋರ್ಪಡಿಸಿದ್ದಾನೆ. ಹೀಗೆ ತನ್ನ ವೃತ್ತಿಜೀವನದ ಬೆನ್ನೆಲುಬಾದ ಎತ್ತಿನ ಬಗ್ಗೆ ರೈತವರ್ಗ ಮೊದಲಿ ನಿಂದಲೂ ಭಕ್ತಿಗೌರವಗಳನ್ನು ವ್ಯಕ್ತಪಡಿಸುತ್ತ ಬಂದಿರುವುದು ಸಹಜವೇ. ಯಾವುದೋ ಒಂದು ಹಂತದಲ್ಲಿ ಈ ಎತ್ತಿನ ಮೇಲಿನ ಭಕ್ತಿ ಬಸವಣ್ಣ, ಚನ್ನಬಸವಣ್ಣನವರ ಭಕ್ತಿಯಾಗಿ ಮಾರ್ಪಟ್ಟಿರಬೇಕು. ಬಸವಪುರಾಣ ನಿಧಾನವಾಗಿ

ನಮ್ಮ ಹಳ್ಳಿಗಳನ್ನು ಪ್ರವೇಶಮಾಡಿದ ಮೇಲೆ ಬಸವಣ್ಣ ನಂದಿಯ ಅವತಾರವೆಂಬ ಸಂಗತಿ ಹಳ್ಳಿಗರ ಮನಮುಟ್ಟಿತು. ಈಗಾಗಲೇ ನಂದಿ (ಎತ್ತು-ಬಸವ)ಯನ್ನು ತಮ್ಮ ಬಹು ಉಪಕಾರಿ ಪ್ರಾಣಿಯೆಂದು ಗೌರವದಿಂದ, ಪೂಜ್ಯಭಾವನೆಯಿಂದ ನೋಡುತ್ತಿದ್ದವರಿಗೆ ಅದೇ ನಂದಿ ಅವತಾರಪುರುಷ ಬಸವಣ್ಣ ಅಥವಾ ಚನ್ನಬಸವಣ್ಣನೆಂಬ ವಿಷಯ ಸರಳವಾಗಿ ಒಪ್ಪಿಗೆಯಾದುದರಲ್ಲಿ ಆಶ್ಚರ್ಯವೇನಿಲ್ಲ. ಇತಿಹಾಸ ಪುರಾಣಗಳು ಜನಪದಕ್ಕೆ ಇಳಿದಾಗ ವಿಭಿನ್ನ ರೂಪ ಪಡೆಯುತ್ತವೆ. ಜನಪದ ಸಹಜ ಕಲ್ಪನೆಗಳು ಅವುಗಳಲ್ಲಿ ಬೆರೆತು ಹೊಸ ಸೃಷ್ಟಿಯಾಗುತ್ತವೆಂಬುದಕ್ಕೆ ಇಲ್ಲಿರುವ ಬಸವಣ್ಣ ಚನ್ನಬಸವಣ್ಣನವರ ಕಾವ್ಯಗಳು ಉತ್ತಮ ಉದಾಹರಣೆಗಳಾಗಿವೆ.

ಇಳಿಹಾಳ ಬೊಮ್ಮಯ್ಯ, ನೇಗಿಯ ಅಮುಗಯ್ಯ, ಹೂಗಾರ ಮಾದಯ್ಯ, ಮೇದರ ಕೇತಯ್ಯ, ಕುಂಬಾರ ಗುಂಡಯ್ಯ, ಜಾತಿಗರ ಚೌಡಯ್ಯ, ಮಾದಾರ ಚನ್ನಯ್ಯ ಮೊದಲಾದ ಶರಣರ ಹಾಡುಗಳಲ್ಲಿ ಕಾಯಕದ ಮಹತ್ವವನ್ನು ಕಾಣಬಹುದು. ಕಾಯಕದ ಮಹತ್ವವನ್ನು ಅರಿತ ಜನಪದರು ಅವರ ಮಹಿಮೆಯನ್ನು ಎತ್ತಿ ಹಾಡಿದ್ದಾರೆ :

ಅಮುಗಯ್ಯ ನಿನ್ನಾಡು, ನಮಗಾಯ್ತು ಶಿವಮಂತ್ರ
ಯಮಗಾಯ್ತು ಕುತ್ತು ಶಿವಜೀವ। ಎತ್ತುದಕೆ
ಅಮರಾಯ್ತು ಜನಕೆ ಹೊಸಮತವು
ಗೆಜ್ಜೆ ಕಟ್ಟಿದ ಕಾಲು ಹೆಜ್ಜೆ ಹಾಕುತ ಕುಣಿದು
ಸಜ್ಜು ನಿನ್ನಾಡು ಬೆಳವಲಕೆ । ಚೌಡಯ್ಯ
ಗುಜ್ಜ ಕಣದೊಳಗೆ ಬೆಳತನಕ
ನಿತ್ಯದಲ್ಲಿ ಕೇತಯ್ಯ, ಕೆತ್ತುವನು ಬಿದಿರೆಳೆಯ
ಚಿತ್ತರದ ಬುಟ್ಟಿ ಮೊರ ಹೆಣೆದು । ಮಾರುವನು
ಉತ್ತಮರ ನಾಡು ಬೆಳವಲಕೆ
ಪಂಚಮುಖ ಮಾದೇವ ಪಂಚಬೀಜಗಳಾಗಿ
ಸಂಚಾಗಿ ಬಂದ ಬೊಮ್ಮಯ್ಯನ-ಕಾಯಕವ
ಮಂಚಿ ತೋರಿಸಲು ಜಗದೊಳಗೆ
ಬೀದಿ ಬೀದಿಗೆ ಗುಡಿಯ ಹಾದಿ ಹಾದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ । ಸೊನ್ನಾಲಿಗೆ
ಸಾಧು ಸಿದ್ಧನಿಗೆ ಮನೆಯಾಯ್ತು
ಅಲ್ಲಮ ಸಿದ್ಧರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆ ಬಂತು । ಬಸವಯ್ಯ
ಎಲ್ಲಿ ಹೋದಲ್ಲಿ ಚೆಲ್ಲಾದ.

ಶರಣರ ಹಾಡುಗಳಲ್ಲಿ ಬರುವ ವರ್ಣನೆಗಳು ನವೀನವಾಗಿಯೂ, ಅತ್ಯಂತ ಹೃದಯಂಗಮವಾಗಿಯೂ ಇವೆ. ಹಾಡಿದ ಕವಿಯು ಜನಪದನಾದುದರಿಂದ ನಿಸರ್ಗವನ್ನುಂಡ ಅವನ ಸರಳ ಹೃದಯವು ಅದನ್ನು ಬಣ್ಣಿಸುವುದರಲ್ಲಿ ಹಿಗ್ಗಿನ ಬುಗ್ಗೆಯಾಗಿದೆ. ಶರಣರ ಪವಾಡಗಳನ್ನೂ, ಲೀಲೆಗಳನ್ನೂ ಕಂಡು ಕೇಳಿದ ಜನಪದವು ಇವರನ್ನು ಹಾಡಿ ಕೊಂಡಾಡುತ್ತ ಬಂದಿದೆ. ಸದಾಚಾರಸಂಪನ್ನರಾದ ಶಿವಶರಣರ ಪ್ರಭಾವವು ಜನತೆಯ ಮೇಲೆ ಬಹಳವಾಗಿ ಆಗಿದೆ. ಅಂತೆಯೇ ಶರಣರ ವಿಷಯವಾಗಿ ಜನಪದ ಸಾಹಿತ್ಯವೂ ಅಪಾರವಾಗಿದೆ.

ಕಸುಕಾದ ದಾಳಿಂಬ ರಸತುಂಬಿ ಒಡೆದಂತೆ
ನಸುಗೆಂಪು ಒಡೆದು ಮೂಡಲವು-ಶಿವಭಕ್ತಿ
ಹಸುಗೆಂಪು ಹರಿದು ಜಗ ತುಂಬಿ

## ಆಧಾರ ಗ್ರಂಥಗಳು

ಶರಣ ಚರಿತಾಮೃತ : ಡಾ. ಸಿದ್ಧಯ್ಯ ಪುರಾಣಿಕ.
ಕನ್ನಡ ಜಾನಪದ ಗೀತಗಳು : ಡಾ. ಬಿ. ಎಸ್. ಗದ್ದಗಿಮಠ.
ಶಿವಶರಣೆಯರ ವಚನಗಳು : ಡಾ. ಆರ್. ಸಿ. ಹಿರೇಮಠ.
ಕನ್ನಡ ವೃತ್ತಿ ಗಾಯಕ ಕಾವ್ಯಗಳು : ಡಾ. ಜೀ. ಶಂ. ಪರಮಶಿವಯ್ಯ.
ಜನಪದ ಬಸವ ಪುರಾಣ : ಡಾ. ಪಿ. ಕೆ. ರಾಜಶೇಖರ.

# ಶೈವಾಗಮಗಳು

ಡಾ. ಎಚ್. ಪಿ. ಮಲ್ಲೇದೇವರು

ಭಾರತೀಯ ಸಾಹಿತ್ಯ, ಧರ್ಮ ಮತ್ತು ಸಂಸ್ಕೃತಿ ಇವುಗಳನ್ನರಿಯಬೇಕಾದರೆ ವೇದಾದಿಗಳ ಮತ್ತು ಆಗಮಶಾಸ್ತ್ರಗಳ ಅಧ್ಯಯನ ಅತ್ಯಗತ್ಯ. ವೇದಾದಿಗಳು ಬೆಳಕಿಗೆ ಬಂದಷ್ಟು ಆಗಮಶಾಸ್ತ್ರಗಳು ಬಂದಿರುವುದಿಲ್ಲ. ಆದುದರಿಂದ ಆಗಮ ಶಾಸ್ತ್ರಗಳ ಬಗ್ಗೆ ಸಂಶೋಧನೆ ಅವಶ್ಯಕವಾಗಿದೆ.

ಆಗಮವೆಂದರೇನು ? 'ಆಗಮ' ಶಬ್ದ ನಿರ್ವಚನವು ಇಂತಿದೆ. 'ಗಮ್' ಧಾತುವಿಗೆ 'ಆ' ಎಂಬ ಉಪಸರ್ಗವು ಸೇರಿ ಆಗಮ ಎಂದಾಗಿದೆ. ಸನಾತನಕಾಲದಿಂದಲೂ ಗುರುಪರಂಪರೆಯಿಂದ ಬಂದ ಅಥವಾ ದೇವರಿಂದ ಅನುಗ್ರಹಿಸಲ್ಪಟ್ಟ ಶಾಸ್ತ್ರಕ್ಕೆ 'ಆಗಮಶಾಸ್ತ್ರ'ವೆಂದು ಹೆಸರು.[1] ಸೃಷ್ಟಿಕಾಲದಲ್ಲಿ ಸಕಲ ಜೀವಾವಳಿಯ ಕಲ್ಯಾಣಕ್ಕಾಗಿ ಪರಮೇಶ್ವರನು[2] ಪಾರ್ವತಿಗೆ ಅನುಗ್ರಹಿಸಿದ ದಿವ್ಯಜ್ಞಾನರಾಶಿಗೆ[3] 'ಆಗಮಶಾಸ್ತ್ರ'ವೆಂದು ಹೆಸರು. 'ಗಮ್' ಧಾತುವು ಗತ್ಯರ್ಥವನ್ನು ಸೂಚಿಸುವುದು. ಗತ್ಯರ್ಥಸೂಚಕ ಧಾತುಗಳೆಲ್ಲವೂ 'ಜ್ಞಾನಾರ್ಥ'ವನ್ನು ಸೂಚಿಸುವುದರಿಂದ ಆಗಮವೆಂದರೆ "ಜ್ಞಾನ"[4] ಎಂದೂ ಅರ್ಥವಾಗುತ್ತದೆ. ಆಗಮಗಳಲ್ಲಿ ಪ್ರತಿಪಾದಿತವಾಗಿರುವುದು ಪ್ರಶಸ್ತ ಜ್ಞಾನ, ಪರಾತ್ಪರ ಜ್ಞಾನ, ಈ ಅಂಶವು ಆಗಮಗಳ ಉಕ್ತಿಯಿಂದಲೇ ಸ್ಪಷ್ಟವಾಗುತ್ತದೆ. ಸೂಕ್ಷ್ಮತಂತ್ರದಲ್ಲಿ "ಶಿವಜ್ಞಾನ"[5]ವೆಂತಲೂ ಕಾಲೋತ್ತರಾಗಮದಲ್ಲಿ "ಗುಹ್ಯಾದ್ಗುಹ್ಯತರ ಜ್ಞಾನ"[6]ವೆಂತಲೂ, ಮೃಗೇಂದ್ರಾಗಮದಲ್ಲಿ "ನಿರಾಕುಲ ಜ್ಞಾನ"[7]ವೆಂತಲೂ, ಲಕ್ಷ್ಮೀತಂತ್ರದಲ್ಲಿ 'ದಿವ್ಯಶಾಸ್ತ್ರ'[8]ವೆಂದೂ, ಶಿವಯೋಗವರ್ಣನವೆಂಬ ಹಸ್ತಪ್ರತಿಯಲ್ಲಿ "ಅವಬೋಧರೂಪ

---

1 "ಆಗಮೋ ನಾಮ ಆ ಮಹೇಶ್ವರಾತ್ ಗುರುಪಾರಂಪರ್ಯಾದಾಗತಂ ಶಾಸ್ತ್ರಂ" ಪಾಶುಪತ ಸೂತ್ರ ಕೌಂಡಿನ್ಯಭಾಷ್ಯ. (ಕರ್ನಾಟಕ ಲಾಕುಳಶೈವರ ಇತಿಹಾಸ ಪು. ೨)

2 ಸೃಷ್ಟಿಕಾಲೇ ಮಹೇಶಾನಃ ಪುರುಷಾರ್ಥಪ್ರಸಿದ್ಧಯೇ ।
ವಿಧತ್ತೇ ವಿಮಲಂ ಜ್ಞಾನಂ ಪಂಚಸ್ರೋತೋಽಭಿಲಕ್ಷಿತಂ ॥

ಮೃಗೇಂದ್ರಾಗಮ, ಉಪೋದ್ಘಾತ ಪ್ರಕರಣ. ಶ್ಲೋ. ೨೧

3 ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ ।
ಮತಂ ಚ ವಾಸುದೇವಸ್ಯ ತಸ್ಮಾದಾಗಮಮುಚ್ಯತೇ ॥

'ತಂತ್ರಸಾರ ಸಮುಚ್ಚಯ' ಭಾಗ ೧, ಪೀಠಿಕೆ ಪು. ೯

4 ಯೇ ಗತ್ಯರ್ಥಾಃ ಧಾತವಃ ತೇ ಜ್ಞಾನಾರ್ಥಾಃ ।

ಸಿದ್ಧಾಂತ ಕೌಮುದೀ

5 ಸೂಕ್ಷ್ಮತಂತ್ರಮಹಂ ವಕ್ಷ್ಯೇ ಶಿವಜ್ಞಾನೈಕ ಸಾಧನಂ ।
ಸಮಾಹಿತೇನ ಮನಸಾ ತಂತ್ರಂ ಗೋಪ್ಯಮಿದಂ ಶೃಣು ॥

ಸೂಕ್ಷ್ಮಾಗಮ, ಕ್ರಿಯಾಪಾದ, ಪಟಲ ೧–ಶ್ಲೋ. ೧೩

6 ಏತತ್ತೇ ಶಿವಸದ್ಭಾವಃ ಶಿವವಕ್ತ್ರಾದ್ವಿನಿಸೃತಾಃ ।
ಗುಹ್ಯಾದ್ಗುಹ್ಯತರಂ ಗುಹ್ಯಂ ಗೃಹೀತವ್ಯಂ ಪ್ರಯತ್ನತಃ ॥

ಕಾಲೋತ್ತರಾಗಮ ಪು. ೨೯ (Mss. No. 14444 Govt. Manuscript Library, Madras)

7 "ವಕ್ಷ್ಯೇ ನಿರಾಕುಲಂ ಜ್ಞಾನಂ ತದುಕ್ತೈರೇವ ಭೂಯಸಾ"

ಮೃಗೇಂದ್ರಾಗಮ, ಉಪೋದ್ಘಾತ ಪ್ರಕರಣ, ಶ್ಲೋ. ೨೭

8 ದಿವ್ಯಶಾಸ್ತ್ರಾಣ್ಯಧೀಯೀತ ನಿಗಮಾಂಶ್ಚೈವ ವೈದಿಕಾನ್ ।
ಸರ್ವಾನನುಚರೇತ್ ಸಮ್ಯಕ್ ಸಿದ್ಧಾಂತಾನಾತ್ಮಸಿದ್ಧಯೇ ॥

ಲಕ್ಷ್ಮೀತಂತ್ರ, ಪಟಲ ೨೮, ಶ್ಲೋ. ೨೯

ಜ್ಞಾನ"[9]ವೆಂದೂ, ಮೃಗೇಂದ್ರಾಗಮದಲ್ಲಿ "ವಿಮಲಜ್ಞಾನ"[10]ವೆಂದೂ, ಆಗಮಗಳಲ್ಲಿ ಹೇಳಿರುವುದು ಮೇಲಿನ ಅಭಿಪ್ರಾಯಕ್ಕೆ ನಿದರ್ಶನವಾಗಿದೆ. ವಾಚಸ್ಪತಿಮಿಶ್ರರು ಮಾನವನಿಗೆ ಅಭ್ಯುದಯ ಮತ್ತು ನಿಶ್ರೇಯಸ ಇವುಗಳನ್ನು ಹೊಂದಲು ಸಾಧಕವಾದ ಶಾಸ್ತ್ರವೇ ಆಗಮಶಾಸ್ತ್ರವೆಂದು[11] ಹೇಳಿದರು.

ಆಗಮಗಳಿಗೆ ಕೆಲವೆಡೆ 'ತಂತ್ರಶಾಸ್ತ್ರ'ಗಳೆಂದೂ ಕರೆದಿರುವರು. 'ತಂತ್ರ' ಶಬ್ದಕ್ಕೆ ಮೇದಿನೀಕೋಶಕಾರನು ಹತ್ತು ಅರ್ಥಗಳನ್ನು ಕೊಟ್ಟಿದ್ದಾನೆ. 'ತಂತ್ರ' ಶಬ್ದದ ನಿರ್ವಚನವು ಅಜಿತಾಗಮ,[12] ವಿಷ್ಣುಸಂಹಿತೆ,[13] ಈಶಾನ ಶಿವ ಗುರುದೇವ ಪದ್ಧತಿ, ಮೊದಲಾದ ಗ್ರಂಥಗಳಲ್ಲಿ[14] ಉಕ್ತವಾಗಿದೆ. ಈ ಎಲ್ಲ ಗ್ರಂಥಗಳ ಮಥಿತಾರ್ಥವನ್ನು ಸಂಗ್ರಹಿಸಿ ಹೇಳುವುದಾದರೆ, ತತ್ತ್ವ, ಮಂತ್ರ ಮೊದಲಾದವುಗಳ ಬಗ್ಗೆ ನಿಖರವಾದ ವಿಷಯವನ್ನು ತಿಳಿಸಿ ಮಾನವನಿಗೆ ಅಭಯವನ್ನೀಯುವುದೇ "ತಂತ್ರ"ಶಾಸ್ತ್ರದ ಉದ್ದೇಶ. ಯಾವುದಾದರೂ ಶಾಸ್ತ್ರವನ್ನು ಸಪ್ರಮಾಣಪೂರ್ವಕವಾಗಿ ಪ್ರತಿಪಾದಿಸುವ ಮಹತ್ವಪೂರ್ಣ ಆಧಾರಗ್ರಂಥಗಳಿಗೂ "ತಂತ್ರ"ವೆಂದು ಹೇಳಿರುವುದನ್ನು ಮರೆಯಲಾಗದು. ನಿದರ್ಶನಕ್ಕೆ ಸಾಂಖ್ಯತಂತ್ರ, ನ್ಯಾಯತಂತ್ರ, ವೈನಾಶಿಕತಂತ್ರ, ಯೋಗತಂತ್ರ, ಆಯುರ್ವೇದತಂತ್ರ ಮೊದಲಾದುವು.

ವೈಷ್ಣವಾಗಮಗಳು 'ಸಂಹಿತೆ' ಎಂದು ಕರೆಯಲ್ಪಟ್ಟಿವೆ. ಆದುದರಿಂದ 'ಆಗಮ' 'ತಂತ್ರ' 'ಸಂಹಿತೆ' ಇವುಗಳನ್ನು ಪರ್ಯಾಯ ಪದಗಳೆಂದು ಬಹುಮಟ್ಟಿಗೆ ಪರಿಗಣಿಸಬಹುದಾದರೂ, 'ಆಗಮಶಾಸ್ತ್ರ'ವು ಶೈವಧರ್ಮವನ್ನೂ, 'ತಂತ್ರಶಾಸ್ತ್ರ'ಗಳು ಶಾಕ್ತಧರ್ಮವನ್ನೂ, 'ಸಂಹಿತೆ'ಗಳು ವೈಷ್ಣವ ಧರ್ಮವನ್ನೂ, ಹೆಚ್ಚಾಗಿ ಪ್ರತಿಪಾದಿಸುವವು. ಆದರೆ ಇದು ಖಚಿತವಾದ ನಿಯಮವೇನಲ್ಲ.

ಆಗಮಗಳನ್ನು ವೇದಕ್ಕೆ ವಿರೋಧವಾದುವೆಂತಲೂ, ವೇದಕ್ಕೆ ಅವಿರೋಧವಾದುವೆಂತಲೂ ಎರಡು ವಿಭಾಗಗಳನ್ನು ಮಾಡಬಹುದು.[15]

ಶೈವಾಗಮಗಳ ವ್ಯಾಪ್ತಿ ಅಪಾರವಾದುದು. ಪ್ರತಿಯೊಂದು ಆಗಮದಲ್ಲಿಯೂ ಉಕ್ತವಾಗಿರುವ "ತಂತ್ರಾವತಾರ ಪಟಲ"ಗಳ ಅಧ್ಯಯನದಿಂದ, ಕಾಮಿಕಾದಿ ವಾತುಲಾಂತವಾದ ಇಪ್ಪತ್ತೆಂಟು ಪ್ರಧಾನ ಶಿವಾಗಮಗಳು, 'ವಕ್ತ್ರಾರಾ'ದಿ 'ವಿಶ್ವಾತ್ಮಕಾಂತ'ವಾದ ಇನ್ನೂರ ಇಪ್ಪತ್ತೈದು ಉಪಾಗಮಗಳು ಇರುವುವೆಂದು ತಿಳಿದು ಬರುವುದು. ಒಟ್ಟು ಎರಡು ನೂರ ಐವತ್ತಮೂರು ಆಗಮಗಳಿವೆ. ಕಾಮಿಕಾಗಮ, ಯೋಗಜಾಗಮ, ಚಿಂತ್ಯಾಗಮ, ಕಾರಣಾಗಮ, ಅಜಿತಾಗಮ, ದೀಪ್ತಾಗಮ, ಸೂಕ್ಷ್ಮಾಗಮ, ಸಹಸ್ರಾಗಮ, ಅಂಶುಮದಾಗಮ, ಸುಪ್ರಭೇದಾಗಮ ಈ ಹತ್ತು ಆಗಮಗಳಿಗೆ "ಶಿವಭೇದ"ವೆಂದೂ; ವಿಜಯಾಗಮ, ನಿಶ್ವಾಸಾಗಮ, ಸ್ವಾಯಂಭುವಾಗಮ, ಅನಲಾಗಮ, ವೀರಾಗಮ, ರೌರವಾಗಮ, ಮಕುಟಾಗಮ, ವಿಮಲಾಗಮ, ಚಂದ್ರಜ್ಞಾನಾಗಮ, ಮುಖಬಿಂಬಾಗಮ, ಪ್ರೋದ್ಗೀತಾಗಮ, ಲಲಿತಾಗಮ, ಸಿದ್ಧಾ

---

9 ಶಿವಂ ಶಿವಜ್ಞಾನಾತ್ಮಕಂ ಅವಬೋಧರೂಪಂ ಪರಮಶಿವೇ ವಿದ್ಯತೇ ।
ಶಿವಯೋಗವರ್ಣನ, ಪು. ೨

10 ವಿಧತ್ತೇ ವಿಮಲಂ ಜ್ಞಾನಂ
ಮೃಗೇಂದ್ರಾಗಮ, ಉಪೋದ್ಘಾತ ಪ್ರಕರಣ, ಶ್ಲೋ. ೨೮

11 'ಆಗಚ್ಛಂತಿ ಬುದ್ಧಿಮಾರೋಹಂತಿ ಯಸ್ಮಾತ್ ಅಭ್ಯುದಯ
ನಿಶ್ರೇಯಸೋಪಾಯಾಃ ಸ ಆಗಮಃ'
ತತ್ತ್ವವೈಶಾರದಿ, ೧–೭

12 ತನೋತಿ ವಿಪುಲಾನರ್ಥಾಂಸ್ತತ್ತ್ವ ಮಂತ್ರ ಸಮಾಶ್ರಿತಾನ್ ।
ತ್ರಾಣಂ ಚ ಕುರುತೇ ಪುಂಸಾಂ ತೇನ ತಂತ್ರಮಿತಿ ಸ್ಮೃತಮ್ ॥
ಅಜಿತಾಗಮ, ಕ್ರಿಯಾಪಾದ, ಪಟಲ, ೧. ಶ್ಲೋ. ೧೧೫

13 ಸರ್ವೇಽರ್ಥಾ ಯೇನ ತನ್ಯಂತೇ ತ್ರಾಯಂತೇ ಚ ಭಯಾಜ್ಜನಾಃ ।
ಇತಿ ತಂತ್ರಸ್ಯ ತಂತ್ರತ್ವಂ ತಂತ್ರಜ್ಞೈಃ ಪರಿಚಕ್ಷ್ಯತೇ ॥
ವಿಷ್ಣುಸಂಹಿತೆ, ಪಟಲ, ೨. ಶ್ಲೋ. ೧೦

14 ತನುತೇ ತ್ರಾಯತೇ ನಿತ್ಯಂ ತಂತ್ರಮಿತ್ಥಂ ವಿದುರ್ಬುಧಾಃ
ಪಿಂಗಲಮತ (ಹಸ್ತಪ್ರತಿ, ದರ್ಬಾರ್ ಗ್ರಂಥಭಂಡಾರ, ನೇಪಾಳ)

15 ಆಗಮಾ ದ್ವಿವಿಧಾ ಜ್ಞೇಯಾ ವೇದಾನಾಮವಿರೋಧಿನಃ ।
ವಿರೋಧಿನಶ್ಚ ತತ್ರೈತೇ ಶ್ರುತಿಮಾರ್ಗಾನುರೋಧಿನಃ ॥
ಕ್ರಿಯಾಸಾರ, ಉಪೋದ್ಘಾತ, ಭಾ. ೧, ಶ್ಲೋ. ೧೪

ಗಮ, ಸಂತಾನಾಗಮ, ಶರ್ವೋಕ್ತಾಗಮ, ಪಾರಮೇಶ್ವರಾಗಮ, ಕಿರಣಾಗಮ, ವಾತುಲಾಗಮ ಈ ಹದಿನೆಂಟು ಆಗಮಗಳಿಗೆ 'ರುದ್ರಭೇದ'ವೆಂದೂ ಹೆಸರು.

## ಆಗಮಗಳ ಕಾಲ

ವೇದಗಳು ಅನಾದಿ ಹಾಗೂ ಅಪೌರುಷೇಯ ಎಂದು ಸಂಪ್ರದಾಯವಾದಿಗಳು ಭಾವಿಸಿರುವಂತೆ, ಆಗಮಗಳು ಸಹ ಅನಾದಿ ಹಾಗೂ ಅಪೌರುಷೇಯವೆಂದು ಶಿವಾದ್ವೈತಿಗಳು ಭಾವಿಸಿದ್ದಾರೆ. ಆದರೂ ಆಧುನಿಕ ವಿಮರ್ಶಕರಿಗೆ ಗ್ರಾಹ್ಯವಾಗುವ ರೀತಿಯಲ್ಲಿ ಆಗಮಗಳ ಕಾಲವನ್ನು ನಿರ್ಣಯಿಸಲು ಯತ್ನಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಹತ್ವಪೂರ್ಣ ಗ್ರಂಥಗಳಾದ ವಚನಶಾಸ್ತ್ರಗಳಲ್ಲಿ ಮತ್ತು ತಮಿಳು ಸಾಹಿತ್ಯದಲ್ಲಿ ಅನರ್ಘ್ಯ ಕೃತಿಗಳಾದ ಶಿವಜ್ಞಾನಸಿದ್ಧಿಯಾರ್, ತಿರುಮಂದಿರಂ ಮೊದಲಾದ ಗ್ರಂಥಗಳಲ್ಲಿ ಆಗಮಗಳ ಬಗ್ಗೆ ಉಲ್ಲೇಖವಿರುವುದು ಸುಸ್ಪಷ್ಟ. ನೇಪಾಳದ ದರ್ಬಾರ್ (ಲೈಬ್ರರಿ) ಗ್ರಂಥಭಂಡಾರದಲ್ಲಿ ಸಂಗ್ರಹಿಸಲ್ಪಟ್ಟಿರುವ "ಕಿರಣಾಗಮ" ಹಸ್ತಪ್ರತಿಯು ಕ್ರಿ.ಶ. ೯೨೪ರಲ್ಲಿ ಮೂಲ ಗ್ರಂಥದಿಂದ ನಕಲು ಮಾಡಿಕೊಳ್ಳಲಾಯಿತೆಂದು ಉಲ್ಲೇಖವಿದೆ. ಶಂಕರಾಚಾರ್ಯರು "ಸೌಂದರ್ಯಲಹರಿ"[16]ಯಲ್ಲಿ ೬೪ ತಂತ್ರಗಳನ್ನು ಹೆಸರಿಸಿರುವುದು; ವೈಷ್ಣವಾಗಮಗಳಲ್ಲಿ ಶೈವಾಗಮಗಳ ಬಗೆಗೆ ಅಭಿಪ್ರಾಯ ವ್ಯಕ್ತವಾಗಿದ್ದರೂ, ಶೈವಾಗಮಗಳಲ್ಲಿ ವೈಷ್ಣವಾಗಮಗಳ ಬಗೆಗೆ ಎಲ್ಲೂ ಉಲ್ಲೇಖವಿಲ್ಲದಿರುವುದು; ಕಾಂಚೀಪುರದ ಕೈಲಾಸನಾಥ ದೇವಾಲಯದಲ್ಲಿರುವ ಪಲ್ಲವ ಶಾಸನವು ಪಲ್ಲವರಾಜನಾದ ರಾಜಸಿಂಹನು "ಆಗಮಾನುಸಾರಿ"ಯೆಂದೂ; ಅಮರಾವತಿಯ ಶಾಸನವು ಪಲ್ಲವರ ಮೂಲಪುರುಷನಾದ ದ್ರೋಣಾಚಾರ್ಯನನ್ನು ವರ್ಣಿಸುತ್ತ ಆತನು "ಸಮಸ್ತಾಗಮಪಾರದೃಶ್ವಾ" ಎಂದು ಹೇಳಿರುವುದು; ಉದಯಗಿರಿ ಗುಹೆ ದೇವಸ್ಥಾನ; ಕುಮಾರಗುಪ್ತನ ಬಿಲ್‌ಗದಾ ಕಲ್ಲಿನ ಸ್ತಂಭದ ಶಾಸನ ಇವುಗಳು; ಡಾ. ಎಸ್. ಸಿ. ನಂದೀಮಠರು, ಡಾ. ರಮಣನ್, ಡಾ. ಶಾಮಾಶಾಸ್ತ್ರಿಗಳು ಮತ್ತು ಡಾ. ಕೆ. ಸಿ. ಪಾಂಡೆ ಇವರ ಪ್ರಮಾಣಪೂರ್ವಕ ಸಂಶೋಧನಾತ್ಮಕ ಲೇಖನಗಳು; ಈ ಎಲ್ಲ ಆಧಾರಗಳಿಂದ[17] ಶಿವಾಗಮಗಳು ಕ್ರಿ.ಪೂ. ಒಂದನೆಯ ಶತಮಾನಕ್ಕೆ ಮೊದಲೇ ಅಸ್ತಿತ್ವದಲ್ಲಿದ್ದುವೆಂಬುದನ್ನು ಖಚಿತವಾಗಿ ಹೇಳಬಹುದು.

ಶೈವಾಗಮಗಳಲ್ಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದ ಎಂದು ನಾಲ್ಕು ಪಾದಗಳಿವೆ. ಈ ಪಾದಗಳಲ್ಲಿ ನಿರೂಪಿತವಾಗಿರುವ ವಿಷಯಗಳನ್ನು ಸಂಗ್ರಹಿಸಿ ಕೊಡಲಾಗಿದೆ.

## ಕ್ರಿಯಾಪಾದ

ಕ್ರಿಯಾಪಾದದಲ್ಲಿ ದೇವಾಲಯಗಳ ನಿರ್ಮಾಣ, ಮೂರ್ತಿಗಳ ಸ್ಥಾಪನೆ[18] ಮೊದಲಾದ ವಿಷಯಗಳ ಬಗ್ಗೆ ವಿವರಣೆಯಿದೆ. ದೇವಾಲಯವನ್ನು ಪ್ರಕೃತಿಸುಂದರವಾದ ಪ್ರಶಾಂತ ಪ್ರದೇಶದಲ್ಲಿ ನಿರ್ಮಿಸಬೇಕೆಂದೂ, ಅಂತಹ ಪ್ರದೇಶವನ್ನು ದೇವಾಲಯದ ನಿರ್ಮಾಣಕ್ಕಾಗಿ ಆರಿಸಿಕೊಂಡ ನಂತರ, ಅದನ್ನು ಉತ್ತು ಹಸನುಮಾಡಿ ಬೆಳಸನ್ನು ಬೆಳೆಸಿ, ಆ ಬೆಳಸನ್ನು ಪಶುಪಕ್ಷಿಗಳು ಯಥೇಚ್ಛವಾಗಿ ತಿನ್ನಲು ಬಿಡಬೇಕು. ಹೀಗೆ ಮಾಡುವುದರಿಂದ ದೋಷನ್ಯೂನತೆಗಳು ನಿವಾರಣೆಯಾಗುವುವೆಂದು ಶೈವಾಗಮಗಳು ಪ್ರತಿಪಾದಿಸಿವೆ. ಇಂತಹ ಪ್ರದೇಶದಲ್ಲಿ ದೇವಾಲಯದ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ಮಾಡಬೇಕು. ಅದನ್ನು ಹೇಗೆ ಕಟ್ಟಬೇಕೆಂಬುದರ ಬಗ್ಗೆ ದೀರ್ಘ ವಿವರಣೆಯಿದೆ. ಕ್ರಿಯಾಪಾದದಲ್ಲಿ ನಗರ ನಿರ್ಮಾಣದ ಬಗೆಗೂ ನಿರ್ದೇಶನವಿದೆ. ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳು ಬೇರೆ ಬೇರೆಡೆ ಇರಬೇಕೆಂದೂ, ರಸ್ತೆಗಳು ನೇರವಾಗಿ ಅಗಲವಾಗಿರಬೇಕೆಂದೂ ತಿಳಿಸುವುದಲ್ಲದೆ ಗೃಹರಚನೆಯ ಬಗೆಗೂ ವಿವರಣೆಯಿದೆ.

---

16 ಚತುಃಷಷ್ಟ್ಯಾ ತಂತ್ರೈಃ ಸಕಲಮಭಿಸಂಧಾಯ ಭುವನಂ.

'ಸೌಂದರ್ಯಲಹರೀ' ಶ್ಲೋ. ೩೧

17 A close study of the Hindu Society, tradition and the way of life of the people reveals that the society was very much influenced by the Āgamic thought. The flow of the Agamic thought must be very ancient.

'Saivagamas and Upanisads' Thesis. p. 39. By H. P. Malledevaru.

18 ಕಾಮಿಕಾಗಮ, ಭಾ. ೧, ಪಟಲ ೪–೬.

ಮೂರ್ತಿಗಳು[19] ಧ್ಯಾನ ಮತ್ತು ಮೋಕ್ಷಕ್ಕೆ ಸಾಧಕಗಳೆಂದು ವಿವರಿಸಿ, ಅಂತಹ ಮೂರ್ತಿಗಳನ್ನು ಹೇಗೆ ನಿರ್ಮಿಸಬೇಕೆಂಬುದರ ಬಗ್ಗೆ ಉಲ್ಲೇಖವಿದೆ. ಮೂರ್ತಿಗಳನ್ನು ಚಲ, ಅಚಲ, ಚಲಾಚಲವೆಂದು ಮೂರು ಪ್ರಕಾರವಾಗಿ ಹೇಳಲಾಗಿದೆ.[20] ಮೂರ್ತಿಗಳು ಸಕಲವೆಂದೂ, ಲಿಂಗವು ನಿಷ್ಕಲವೆಂದೂ ಪರಿಗಣಿಸಲ್ಪಟ್ಟಿವೆ. ಲಿಂಗಪೀಠದ ಮೇಲೆ ವೃತ್ತಾಕಾರ ಅಥವಾ ಗೋಳಕಾಕಾರವಾಗಿರುವ ಮೇಲ್ಭಾಗವು ಹೊಂದಿಸಲ್ಪಟ್ಟಿರುತ್ತದೆ. ನಾಗರ, ದ್ರಾವಿಡ ಮತ್ತು ವೇಸರ ಎಂಬುದಾಗಿ ಪೀಠವು ಮೂರು ಪ್ರಕಾರವಾಗಿರುತ್ತದೆ. ಈಶ್ವರನ ಪಂಚವಿಂಶತಿಲೀಲೆಗೆ ಸಂಬಂಧಿಸಿದ ಇಪ್ಪತ್ತೈದು ಮೂರ್ತಿ[21]ಗಳ ಬಗೆಗೆ ಮತ್ತು ಅವುಗಳನ್ನು ಯಾವ ಭಂಗಿಯಲ್ಲಿ ಎಷ್ಟೆಷ್ಟು ಪ್ರಮಾಣಗಳನ್ನಿಟ್ಟು ರಚಿಸಬೇಕೆಂಬುದರ ಬಗೆಗೆ ವಿವರಣೆಯಿದೆ.[22] ಲಿಂಗಗಳನ್ನು ಕೂಡ ವ್ಯಕ್ತ, ಅವ್ಯಕ್ತ ಮತ್ತು ವ್ಯಕ್ತಾವ್ಯಕ್ತ ಎಂದು ಮೂರು ಭಾಗ ಮಾಡಿದ್ದಾರೆ. ಮೂರ್ತಿಗಳು ಎಷ್ಟೇ ಸುಂದರವಾಗಿದ್ದರೂ ಪ್ರತಿಷ್ಠಾನವಿಧಿಯನ್ನು ನೆರವೇರಿಸಿದ ನಂತರವೇ ಅವು ಪೂಜಾರ್ಹವಾಗುವುವು. ಪ್ರಧಾನದೇವತೆ ಮತ್ತು ಪರಿವಾರದೇವತೆಗಳನ್ನು ದೇವಾಲಯದ ಯಾವ ಯಾವ ಭಾಗದಲ್ಲಿ ಪ್ರತಿಷ್ಠಿಸಬೇಕೆಂಬುದರ ಬಗೆಗೂ ಈ ಪಾದದಲ್ಲಿ ವಿವರಣೆ ಕಂಡುಬರುವುದು.

**ಚರ್ಯಾಪಾದ**

ಮಾನವನು ಪ್ರತಿದಿವಸ ಮಾಡಬೇಕಾದ ಕ್ರಿಯೆಗಳನ್ನು ಚರ್ಯಾಪಾದದಲ್ಲಿ ವಿವರಿಸಲಾಗಿದೆ. ಶೈವಾಗಮಗಳು ಬಾಹ್ಯ ಮತ್ತು ಆಂತರಿಕಶುದ್ಧಿ ಹೊಂದುವ ವಿಧಾನವನ್ನು ತಿಳಿಸುತ್ತವೆ. ಬಾಹ್ಯಶುದ್ಧಿಯನ್ನು ಸ್ನಾನಾದಿಗಳಿಂದ ಹೊಂದಬಹುದು. ಕಾಮಿಕಾಗಮವು[23] ವಾರುಣ, ಆಗ್ನೇಯ, ಮಂತ್ರ, ಮಾನಸ, ವಾಯುವ್ಯ ಮತ್ತು ಮಹೇಂದ್ರ ಹೀಗೆ ಆರು ತೆರನಾದ ಸ್ನಾನಗಳನ್ನೂ, ಆಯಾ ಸ್ನಾನಗಳನ್ನು ಮಾಡುವ ಕಾಲದಲ್ಲಿ ಉಚ್ಚರಿಸಬೇಕಾದ ಮಂತ್ರಗಳನ್ನೂ, ದೇಹದ ವಿವಿಧ ಭಾಗಗಳಿಗೆ ಮಂತ್ರೋಚ್ಚಾರಣೆಯೊಡನೆ ಮಾಡುವ ವಿಭೂತಿಧಾರಣೆಯನ್ನೂ ವಿವರಿಸುತ್ತದೆ. ಆಂತರಿಕ ಶುದ್ಧಿಯು ನೀತಿನಿಯಮಗಳಿಗೆ ಬದ್ಧವಾದ ಪರಿಶುದ್ಧ ಜೀವನ ಹಾಗೂ ಉಪಾಸನೆಯಿಂದ ಲಭಿಸುವುದು. ಬೇರೆಬೇರೆ ದೇವತೆಗಳು ಉಕ್ತವಾಗಿದ್ದರೂ ಶಿವನೇ ಪ್ರಧಾನ ದೇವತೆ, ಪಂಚಾಕ್ಷರೀ ಮಹಾಮಂತ್ರವೇ ಎಲ್ಲ ಮಂತ್ರಗಳಿಗಿಂತಲೂ ಮಿಗಿಲಾದುದು.

ಅರ್ಚನೆಯು 'ಸ್ವಾರ್ಥ' ಮತ್ತು 'ಪರಾರ್ಥ'ವೆಂಬುದಾಗಿ ಎರಡು ವಿಧ.[24] ಪ್ರತಿಯೊಬ್ಬ ಶೈವನು ಸ್ವಾರ್ಥ ಪೂಜೆಯನ್ನು ತನಗೋಸ್ಕರವಾಗಿ ಮಾಡಬೇಕು. ಪರಾರ್ಥ ಪೂಜೆಯನ್ನು ಪುರೋಹಿತನು ಭಕ್ತರಿಗೋಸುಗವಾಗಿ ದೇವಾಲಯದಲ್ಲಿ ಮಾಡುವನು. ಭಕ್ತನು ದೇವರಿಗೆ ನೈವೇದ್ಯವನ್ನು ಅರ್ಪಿಸಿದ ನಂತರವೇ ಆಹಾರ (ಪ್ರಸಾದ)ವನ್ನು ತೆಗೆದುಕೊಳ್ಳಬೇಕು.

ವೈದಿಕ ವ್ರತಾಚರಣೆಗಳಲ್ಲಿ ಕಾಷ್ಠ (ಅರಣಿ)ಗಳನ್ನು ಮಥಿಸಿ, ಅಗ್ನಿಯನ್ನು ಹೊಂದುವಂತೆಯೇ, ಶೈವಾಗಮಗಳಲ್ಲೂ ಅಗ್ನಿಯನ್ನು ಹೊಂದಬೇಕು. ಆದರೆ ಶೈವಾಗಮಗಳು ಅಗ್ನಿಯನ್ನು ವೈದಿಕಾಗ್ನಿ, ಮಿಶ್ರಾಗ್ನಿ ಮತ್ತು ಶೈವಾಗ್ನಿ"[25] ಎಂದು ಮೂರು ಬಗೆಯಾಗಿ ವಿಂಗಡಿಸುವುವು.

ದೇವತೆಗಳನ್ನು ಪ್ರತಿದಿವಸ ಅರ್ಚಿಸುವ ವಿಧಾನವನ್ನೂ, ವಿಶೇಷ ಸಂದರ್ಭಗಳಲ್ಲಿ ಪೂಜಿಸುವ ವಿಧಾನಗಳನ್ನೂ, ನಿತ್ಯೋತ್ಸವ ಮತ್ತು ಮಹೋತ್ಸವಾದಿಗಳನ್ನೂ ಶೈವಾಗಮಗಳು[26] ಪೂರ್ಣವಾಗಿ ವಿವರಿಸುವುವು.

ಮಾನವನ ಜೀವನವನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬುದಾಗಿ ನಾಲ್ಕು

---

[19] ಕಾರಣಾಗಮ, ಭಾ. ೧, ಪಟಲ ೩.

[20] ಸುಪ್ರಭೇದಾಗಮ, ಭಾ. ೨, ಪಟಲ ೨೩–೩೨.

[21] ಕಾಮಿಕಾಗಮ, ಭಾ. ೨, ಪಟಲಗಳು ೪೩–೪೬.

[22] ಕಾರಣಾಗಮ, ಭಾ. ೧, ಪಟಲ ೫೭–೧೦೧.

[23] ಕಾಮಿಕಾಗಮ, ಭಾ. ೧, ಪಟಲ ೩.

[24] ಕಾಮಿಕಾಗಮ, ಭಾ. ೧, ಪಟಲ ೪.

[25] ಕಾಮಿಕಾಗಮ, ಭಾ. ೧, ಪಟಲ ೮.

[26] ಕಾಮಿಕಾಗಮ, ಭಾ. ೨, ಪಟಲ ೪–೯.

ವಿಭಾಗಗಳನ್ನಾಗಿ ನಿರೂಪಿಸಿ, ಪ್ರತಿಯೊಂದು ಅವಸ್ಥೆಯಲ್ಲಿ ಮಾಡಬೇಕಾದ ಅವಶ್ಯಕರ್ತವ್ಯಗಳ ಬಗೆಗೆ ವಿವರಣೆಯಿರುವುದಷ್ಟೇ ಅಲ್ಲದೆ ಗೋತ್ರಾದಿ[27]ಗಳ ಬಗೆಗೂ ವಿವರಣೆಯಿದೆ.

ಶೈವಾಗಮಗಳು ಸಂಸ್ಕಾರಗಳನ್ನು ಪ್ರತಿಪಾದಿಸುವುವು. ಸುಪ್ರಭೇದಾಗಮವು ಹದಿನಾರು ಸಂಸ್ಕಾರಗಳನ್ನು ನಿರೂಪಿಸುವುದು. ಇಲ್ಲಿ ಪ್ರತಿಪಾದಿತವಾದ ಸಂಸ್ಕಾರಗಳು ಗೃಹ್ಯಸೂತ್ರಗಳಲ್ಲುಕ್ತವಾದ ಸಂಸ್ಕಾರಗಳಿಗೆ[28] ಕೆಲವಂಶಗಳಲ್ಲಿ ಸಮಾನವಾಗಿ ಕಂಡುಬಂದರೂ, ಇಲ್ಲಿಯ ಪ್ರಧಾನದೇವತೆಯು ಶಿವನೆಂಬುದನ್ನೂ, ಈ ಸಂದರ್ಭಗಳಲ್ಲಿ ಉಪಯೋಗಿಸುವ ಮಂತ್ರವು "ಶಿವಮಂತ್ರ"ವೆಂಬುದನ್ನೂ ಮರೆಯಲಾಗದು. ಉಪನಯನ[29] ಮತ್ತು ದೀಕ್ಷೆಗಳು[30] ಸಮಾನವೆಂಬಂತೆ ತೋರಿದರೂ ಅವುಗಳಿಗೆ ಅಂತರವಿವೆ. ಶಕ್ತಿವಿಶಿಷ್ಟಾದ್ವೈತದಂತೆ ಜೀವಿಗೆ ಮತ್ತು ಶಿವನಿಗೆ ಭೇದವನ್ನುಂಟುಮಾಡುವುವೇ ಮಲತ್ರಯಗಳು, ಮಲತ್ರಯಗಳಿಂದ ಪರಿವೃತನಾದ ಮಾನವನನ್ನು ಶುದ್ಧನನ್ನಾಗಿ ಮಾಡಿ ಆತನಿಗೆ ಅಧ್ಯಾತ್ಮಸ್ವಾತಂತ್ರ್ಯವನ್ನಿತ್ತು ಶಿವಾದ್ವೈತ ಸಾಹಿತ್ಯವನ್ನು ಅಭ್ಯಸಿಸುವುದಕ್ಕೆ ದೀಕ್ಷೆಯು[31] ಅನುವು ಮಾಡಿಕೊಡುವುದು. ಕಾಮಿಕಾಗಮ[32] ಸುಪ್ರಭೇದಾಗಮಗಳು[33] ಸಮಯದೀಕ್ಷೆ ಮತ್ತು ನಿರ್ವಾಣದೀಕ್ಷೆಯನ್ನು ವಿಶದವಾಗಿ ವಿವರಿಸುವುವು. ಗುರುವನ್ನು ಅರಸಿಕೊಂಡು ಬರುವಂಥ ಉತ್ತಮ ಶಿಷ್ಯನನ್ನು ಗುರುವು ಸ್ವೀಕರಿಸಿ, ವಿಧಿಪೂರ್ವಕವಾದ ಅರ್ಚನೆಗಳೊಡನೆ ಶಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನ್ನಿಟ್ಟು, ಆತನ ಮಲತ್ರಯಗಳು ಅಳಿಯುವಂತೆ ಅನುಗ್ರಹಿಸಿ, ಪ್ರಣವ ಪಂಚಾಕ್ಷರಿಯನ್ನು ಆತನ ಕರ್ಣದಲ್ಲಿ ಉಪದೇಶಿಸುವನು. ಅನಂತರವೇ ಶಿಷ್ಯನು ದೇವರನ್ನು ಅರ್ಚಿಸಲು ಮತ್ತು ಶೈವಧರ್ಮ ಸಾಹಿತ್ಯವನ್ನು ಅಭ್ಯಸಿಸಲು ಅರ್ಹನಾಗುವನು, ಇದೇ ಸಮಯದೀಕ್ಷೆ. ಈ ದೀಕ್ಷೆಯನ್ನು ಸ್ತ್ರೀಯರು ಮೊದಲ್ಗೊಂಡು ಎಲ್ಲರಿಗೂ ಅನುಗ್ರಹಿಸಬಹುದೆಂದು ಕೆಲವು ಗ್ರಂಥಗಳು[34] ಪ್ರತಿಪಾದಿಸಿವೆ. ಮಾನವನು ಸಮಯದೀಕ್ಷೆಯಿಂದ ಪರಿಶುದ್ಧನಾಗಿ ಅಧ್ಯಾತ್ಮ ಪಥದಲ್ಲಿ ಪ್ರಗತಿ ಪಡೆದಾಗ ನಿರ್ವಾಣದೀಕ್ಷೆಯನ್ನು ಪಡೆಯಲು ಅರ್ಹನಾಗುವನು. ಭವಬಂಧನಗಳ ಮುಕ್ತಿಯೇ ನಿರ್ವಾಣದೀಕ್ಷೆಯ ಗುರಿ. ಈ ದೀಕ್ಷೆಯು ಅಧ್ವ ಮತ್ತು ಮಲಗಳಿಂದ ಮಾನವನನ್ನು ಪೂರ್ಣವಾಗಿ ಮುಕ್ತನನ್ನು ಮಾಡಿ ಆತನ ನಿಜಸ್ವರೂಪವನ್ನರಿಯಲು ಸಹಾಯವೆಸಗುವುದು. ಶೈವಾಗಮಗಳಲ್ಲಿ ಮಹತ್ವಪೂರ್ಣವಾದ ದೀಕ್ಷೆಯ ಬಗೆಗೆ ಕೆಲವು ವ್ಯತ್ಯಾಸಗಳು ಕಂಡುಬಂದರೂ ಮುಖ್ಯಭಾಗಗಳಲ್ಲಿ ವ್ಯತ್ಯಾಸವಿಲ್ಲದೆ ಒಂದೇ ಅಭಿಪ್ರಾಯವನ್ನೊಳಗೊಂಡಿರುವುವು. ಆಮರಣ ಪರ್ಯಂತ ಎಂಟು ಸಮಯಗಳನ್ನು ಆಚರಣೆಯಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಶೈವಾಗಮಗಳು ವಿಧಿಸುತ್ತವೆ.

ಅಗ್ನಿಚಯನ, ಅಷ್ಟಕ, ಸಂಸ್ಕಾರ, ಸಪಿಂಡೀಕರಣ ಈ ಕ್ರಿಯೆಗಳಲ್ಲಿ ಸೂತ್ರ, ಸ್ಮೃತಿಶಾಸ್ತ್ರಗಳಿಗೆ ಮತ್ತು ಶೈವಾಗಮಗಳಿಗೆ ಸಮಾನವಾಗಿರುವ ಅಂಶಗಳು ಹಲವು ಕಂಡುಬಂದರೂ, ಅನೇಕ ಕ್ರಿಯೆಗಳಲ್ಲಿ ಭಿನ್ನತೆಯನ್ನು ಕೂಡ ಕಾಣಬಹುದು. ಮಾನವನು ಮೃತನಾದಾಗ ಹುಗಿಯಬಹುದು ಅಥವಾ ಸುಡಬಹುದು ಎಂದು ಶೈವಾಗಮಗಳು ಹೇಳಿವೆ. ಆದರೆ ಲಿಂಗಧಾರಿಯಾದವರು ಲಿಂಗೈಕ್ಯರಾದಾಗ ಸುಡಬಾರದೆಂದೂ, ಸಮಾಧಿಮಾಡಬೇಕೆಂದೂ ಕೆಲವು ಆಗಮಗಳು ಪ್ರತಿಪಾದಿಸಿವೆ.[35]

---

27 ಸುಪ್ರಭೇದಾಗಮ, ಚರ್ಯಾಪಾದ, ಪಟಲ ೧. ಚಿ. ೮೪.

28 Hindu Samskāra "By Dr. R. B. Pandey M.A.; D. Litt.

29 Upanayana Samskāra and its Significance according to Pārashara Gṛhya Sūtras" Journal of the Karnatak University, Humanities. Vol. IV. June 1960 by H. P. Malledevaru.

30 "ದೀಕ್ಷೆ" by H. P. Malledevaru.

31 ತನುತ್ರಯಗತಾನಾದಿ ಮಲತ್ರಯಮಸೌಗುರುಃ
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಯಮುಪಾದಿಶೇತ್ ॥

32 ಕಾಮಿಕಾಗಮ, ಭಾ. ೨, ಪಟಲ ೨೦-೨೩.

33 ಸುಪ್ರಭೇದಾಗಮ ಚರ್ಯಾಪಾದ, ಪಟಲ ೪.

34 'ಈಶಾನ ಶಿವಗುರುದೇವ ಪದ್ಧತಿ' ಭಾ. ೩-೧೪೭.

35 ಶಿವಲಿಂಗಧರೋ ವಿಪ್ರೋ ವಿಪನ್ನಸ್ತಂ ನ ದಾಹಯೇತ್ ।
ಯದಿ ವಾ ದಾಹಯೇತ್ತಸ್ಯ ಬ್ರಹ್ಮಹತ್ಯಾ ಸದಾ ಭವೇತ್ ॥
ಗೃಹೀ ವಾಽಥ ಯತಿರ್ವಾಪಿ ಲಿಂಗಧಾರೀ ತನುಂ ತ್ಯಜೇತ್ ।
ನ ದಹೇತ್ತಸ್ಯ ದೇಹಂ ತು ಸಮಾಧೌ ಗೋಪಯೇತ್ ಸದಾ ॥

ಚಂದ್ರಜ್ಞಾನಾಗಮ, ಚರ್ಯಾಪಾದ, ಪಟಲ ೧, ಶ್ಲೋ. ೯-೧೨

## ಯೋಗಪಾದ

ಯೋಗದ ವಿಷಯವನ್ನು ನಿರೂಪಿಸುವುದಕ್ಕಾಗಿ ಶಿವಾಗಮಗಳಲ್ಲೆಲ್ಲ ಪ್ರತ್ಯೇಕಪಾದವಿದ್ದರೂ, ಲಭ್ಯವಿರುವ ಅನೇಕ ಶೈವಾಗಮಗಳಲ್ಲಿ ಈ ಪಾದವು ಲುಪ್ತವಾಗಿರುವುದು ದುರದೃಷ್ಟಕರವಾದುದು. ಆದರೆ ಸುಪ್ರಭೇದಾಗಮ[36] ಮೃಗೇಂದ್ರಾಗಮ[37] ಮೊದಲಾದ ಕೆಲವು ಆಗಮಗಳಲ್ಲಿ ಯೋಗದ ಬಗೆಗೆ ವಿವರಣೆಯಿದೆ. ಜೀವಾತ್ಮ ಮತ್ತು ಪರಮಾತ್ಮ ಇವರ ಐಕ್ಯವೇ ಯೋಗಶಾಸ್ತ್ರದ ಗುರಿ. ಯೋಗದಲ್ಲಿ ಸಿದ್ಧಿ ಹೊಂದಬೇಕಾದರೆ ತನುಮನಗಳ ಮೇಲೆ ಮಾನವನಿಗೆ ಸಂಪೂರ್ಣ ಪ್ರಭುತ್ವವಿರಬೇಕು. ಶರೀರ ಮತ್ತು ಇಂದ್ರಿಯಗಳನ್ನು ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳ ಮೂಲಕ ಪರಿಶುದ್ಧಗೊಳಿಸಬೇಕು. ಅಶ್ವತ್ಥವೃಕ್ಷದ ಎಲೆಯಲ್ಲಿ ಅಸಂಖ್ಯಾತ ಗೆರೆಗಳು ಹೇಗೆ ಪಸರಿಸಿರುವುವೋ ಅಂತೆಯೇ ಮಾನವನ ಶರೀರದಲ್ಲೂ ಸು. ೭೨೦೦೦ ನಾಡಿಗಳಿರುವುವು.[38] ಪ್ರಧಾನವಾದ ಮೂರು ನಾಡಿಗಳು, ಅಷ್ಟು ಪ್ರಧಾನವಲ್ಲದ ಹತ್ತು ನಾಡಿಗಳು, ದಶವಾಯುಗಳು ಶರೀರದ ಯಾವ ಯಾವ ಭಾಗಗಳಲ್ಲಿದ್ದು ಏನು ಕಾರ್ಯ ಮಾಡುತ್ತವೆಂಬುದರ ಬಗೆಗೂ ವಿವರಣೆಯಿದೆ.

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಅಜ್ಞಾ ಈ ಆರು ಚಕ್ರಗಳ[39] ಬಗೆಗೂ ಸಂಪೂರ್ಣ ನಿರೂಪಣೆಯನ್ನಿತ್ತು, ಯೋಗಸಾಧನೆಯಲ್ಲಿ ಸಿದ್ಧಿಗಳು ತಾವಾಗಿ ಕರಗತವಾದರೂ, ಸಾಧಕನು ಸಿದ್ಧಿಗಳನ್ನು ತ್ಯಜಿಸಿ ಶಿವನೊಡನೆ ಐಕ್ಯಹೊಂದಬೇಕೆಂದೂ ಶೈವಾಗಮಗಳು ನಿರ್ದೇಶಿಸಿವೆ. ಯಮ, ನಿಯಮ, ಆಸನ, ಪ್ರಾಣಾ-ಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳ ಬಗೆಗೂ ದೀರ್ಘ ವಿವರಣೆಯಿದೆ.

ಯೋಗನಿರತನಾದ ಸಾಧಕನಿಗೆ ಭೇರೀನಾದ ಮತ್ತು ಶಂಖನಾದ ಮೊದಲಾದ ನಾದಗಳು ಆಂತರಿಕವಾಗಿ ಕೇಳಿಬರುವುವೆಂದೂ ಇವು ಪ್ರಗತಿಯ ಚಿಹ್ನೆಯೆಂದೂ ತಿಳಿಸಿವೆ.

ವಾತುಲಾಗಮ, ಸೂಕ್ಷ್ಮಾಗಮ, ಪಾರಮೇಶ್ವರಾಗಮ ಮೊದಲಾದ ಶಿವಾಗಮಗಳು ಲಿಂಗವನ್ನು ಪೂಜಿಸಿ, ಲಿಂಗದಲ್ಲಿ ನಿರ್ನಿಮೇಷ ದೃಷ್ಟಿಯಿಟ್ಟು ಧ್ಯಾನಮಗ್ನನಾಗುವುದೇ “ಶಿವಯೋಗ”ವೆಂದು, ಈ ಯೋಗವು ಬೇರೆ ಯೋಗಗಳಿಗಿಂತ ಪ್ರಶಸ್ತವೆಂದೂ ಪ್ರತಿಪಾದಿಸಿವೆ.

## ಜ್ಞಾನಪಾದ

ಜ್ಞಾನಪಾದದಲ್ಲಿ ತತ್ವಶಾಸ್ತ್ರವು ಪ್ರತಿಪಾದಿತವಾಗಿದೆ. ತತ್ವಶಾಸ್ತ್ರದಲ್ಲಿ ಪ್ರಧಾನವಾಗಿ ವಿವೇಚಿಸಬೇಕಾದ ಪತಿ (ದೇವರು), ಪಶು (ಜೀವ) ಮತ್ತು ಪಾಶ ಇವುಗಳು ಮತ್ತಿತರ ವಿಷಯಗಳು ಪ್ರತಿಪಾದಿತವಾಗಿವೆ.

ಪತಿ[40] ಎಂದರೆ ಪ್ರಭು, ಪರಮಾತ್ಮ. ಪತಿಯು ನಿಷ್ಕಲ. ಶೈವಾಗಮಗಳು ಅವನನ್ನು ಈಶ್ವರ, ಸದಾಶಿವ, ಶಿವ, ಲಿಂಗ ಎಂದೂ ವರ್ಣಿಸಿವೆ. ಆತನಲ್ಲಿ ಶಕ್ತಿಯು ಅವಿನಾಭಾವಸಂಬಂಧದಿಂದ ಯಾವಾಗಲೂ ಇರುತ್ತದೆ. ಶಿವ-ಶಕ್ತಿಯರೇ ಸೃಷ್ಟಿ, ಸ್ಥಿತಿ, ಲಯ, ತಿರೋಭಾವ ಮತ್ತು ಅನುಗ್ರಹ ಈ ಪಂಚಕೃತ್ಯಗಳಿಗೆ ಕಾರಣರು.

ಪಶುಗಳೆಂದರೆ ಆತ್ಮರುಗಳು,[41] ಶಿವನಿಂದ ಭಿನ್ನರಾದ ಇವರು ಚೈತನ್ಯಯುಕ್ತರಾಗಿದ್ದರೂ ಅವರ ಚೈತನ್ಯವು ಮಲತ್ರಯ (ಪಾಶ)ದಿಂದ ಆವೃತವಾಗಿರುವುದು. ಮಲತ್ರಯದಿಂದ ಬದ್ಧರಾದ ಈ ಆತ್ಮರು ತಮ್ಮ ನಿಜಸ್ಥಿತಿಯನ್ನು ಮರೆತಿರುತ್ತಾರೆ. ಬಹು ಜನ್ಮಗಳನ್ನು ಪಡೆದು ಮುಕ್ತಿ ಹೊಂದುವ ಅವಧಿಯನ್ನು ಶ್ರೀಗುರುವಿನ ಅನುಗ್ರಹ ಪಡೆದು ದೀಕ್ಷೆ ಹೊಂದುವುದರ ಮೂಲಕ ಕಡಿಮೆಮಾಡಿಕೊಳ್ಳಬಹುದೆಂದು ಶಿವಾಗಮಗಳು ಪ್ರತಿಪಾದಿಸಿವೆ.

ಆತ್ಮರುಗಳನ್ನು ಬಂಧನಕ್ಕೊಳಗುಮಾಡುವುದೇ ಪಾಶ. ಶಿವಾನಂದವನ್ನನುಭವಿಸಲಿಕ್ಕೆ ಅಡ್ಡಿಯಾಗಿರುವುದೇ

---

36 ಸುಪ್ರಭೇದಾಗಮ, ಯೋಗಪಾದ, ಪಟಲ ೧.

37 ಮೃಗೇಂದ್ರಾಗಮ, ಯೋಗಪಾದ, ಪಟಲ ೨.

38 ಸುಪ್ರಭೇದಾಗಮ, ಯೋಗಪಾದ, ಪಟಲ ೧, ಶ್ಲೋ. ೨.

39 ಸುಪ್ರಭೇದಾಗಮ, ಯೋಗಪಾದ, ಪಟಲ ೧, ಶ್ಲೋ. ೨೯-೫೦.

40 ಚಂದ್ರಜ್ಞಾನಾಗಮ, ಪಟಲ ೧, ಶ್ಲೋ. ೧೦-೧೧.

41 ಶೈವಾಗಮ (Mss. No. 66684 Adyar library, Madras).

ಪಾಶ.[42] ಆಣವ, ಕಾರ್ಮಿಕ ಮತ್ತು ಮಾಯಿಕ ಎಂಬುದಾಗಿ ಪಾಶಗಳು ಮೂರೆರನಾಗಿವೆ. ಮಲತ್ರಯದ ಬಗೆಗೆ ಆಗಮಗಳಲ್ಲಿ ವಿವರಣೆಯಿದೆ.

ಶಿವಸೃಷ್ಟಿ, ಬ್ರಹ್ಮಸೃಷ್ಟಿ,[43] ಮೂವತ್ತಾರು ತತ್ವಗಳು, ಷಡಧ್ವಗಳು, ಕಲೆಗಳು, ಪಂಚ ಸಾದಾಖ್ಯಗಳು ಮೊದಲಾದುವನ್ನು ಆಗಮಗಳು ದೀರ್ಘವಾಗಿ ವಿವರಿಸುತ್ತವೆ.

ತಮಿಳುನಾಡಿನ ಶೈವಸಿದ್ಧಾಂತ ಮತ್ತು ಕರ್ನಾಟಕದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಗಳಿಗೂ ಶೈವಾಗಮಗಳು ಬುನಾದಿಯಾಗಿವೆ. ವಾತುಲ, ಸೂಕ್ಷ್ಮ, ಕಾಲೋತ್ತರ. ಪಾರಮೇಶ್ವರ ಮೊದಲಾದ ಶೈವಾಗಮಗಳಲ್ಲಿ ವೀರಶೈವ ಧರ್ಮ ಮತ್ತು ತತ್ವಗಳಿಗೆ ಸಂಬಂಧಿಸಿದ ವಿಷಯಗಳು ಹೆಚ್ಚಾಗಿ ನಿರೂಪಿತವಾಗಿವೆ. ಒಟ್ಟಿನಲ್ಲಿ ಶೈವಾಗಮಗಳ ಅಧ್ಯಯನವು ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳ ಬಗೆಗೆ ಹೆಚ್ಚಿನ ಬೆಳಕನ್ನು ಬೀರುವುದು.

---

ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ ಘಾತವ ಮಾಡಿ
ಗಂಗೆಯ ಮುಳುಗಿದಡೇನಾಗುವುದಯ್ಯಾ ?
ಚಂದ್ರನು ಗಂಗೆಯ ತಡಿಯಲ್ಲಿದ್ದಡೇನು ಕಲಂಕ ಬಿಡದಾಯಿತ್ತಯ್ಯಾ ?
ಅದು ಕಾರಣ, ಮನವ ನೋಯಿಸದವನೆ, ಒಬ್ಬರ ಘಾತವ ಮಾಡದವನೇ
ಪರಮಪಾವನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ

—ಸಿದ್ಧರಾಮೇಶ್ವರ

* * *

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ ನಮೋ
ಭವಬಂಧನವ ಬಿಡಿಸಿ ಪರಮಸುಖವ ತೋಱಿದ ಗುರುವೆ ನಮೋ
ಭವಿಯೆಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ ನಮೋ
ಚನ್ನಮಲ್ಲಿಕಾರ್ಜುನನ ತಂದೆನ್ನ
ಕೈವಶಕ್ಕೆ ಕೊಟ್ಟ ಗುರುವೆ ನಮೋ ನಮೋ

—ಅಕ್ಕಮಹಾದೇವಿ

---

42 ಪಾಶತ್ವಂ ನಾಮ ಶಿವಾನಂದಾಭಿವ್ಯಕ್ತಿ ವಿರೋಧಿತ್ವಂ..................

ಶೈವ ಪರಿಭಾಷಾ, ಅಧ್ಯಾಯ ೪, ಪು. ೭೩

43 ಸುಪ್ರಭೇದಾಗಮ, ಜ್ಞಾನಪಾದ, ಪಟಲ ೧–೩.

# ಹರಿಹರನ ಗಿರಿಜಾಕಲ್ಯಾಣದಲ್ಲಿ ಒಂದು ಮೌನಕ್ರಿಯೆ

**ಪ್ರಭುಶಂಕರ**

ತಪಸ್ಸು ಮೌನವಾಗಿ ನಡೆಯುವ ಒಂದು ಕ್ರಿಯೆ. ಅದು ಮನಸ್ಸಿನ ವ್ಯಾಪಾರ. ಆರಾಧಕ ಮತ್ತು ಆರಾಧ್ಯ ವಸ್ತುವಿನ ನಡುವಣ ಆ ವ್ಯವಹಾರದಲ್ಲಿ ಮಾತಿಗೆ ಏನೇನೂ ಕೆಲಸವಿಲ್ಲ. ಜಗತ್ತಿನಲ್ಲಿ ಅನೇಕ ಕೋಲಾಹಲಗಳಿಗೆ ಕಾರಣವಾದ ಮಾತು ತಪಸ್ಸಿನಲ್ಲಿ ನಿಷ್ಕ್ರಿಯವಾಗುತ್ತದೆ, ಆಗಬೇಕು. ಮಾತಿನಾಚೆಗಿರುವ ಏನೋ ಒಂದು ಎಂದು ಪರವಸ್ತುವನ್ನು ವರ್ಣಿಸಲಾಗಿದೆ. ಆದ್ದರಿಂದ ಮಾತು ಅಲ್ಲಿ ಮೌನವಾಗಬೇಕು. 'ಶಬ್ದದೊಳಗಣ ನಿಶ್ಶಬ್ದ' ಎಂದು ಅಲ್ಲಮಪ್ರಭು ಗುಹೇಶ್ವರ-ಶರಣ ಸಂಬಂಧವನ್ನು ಉಲ್ಲೇಖಿಸಿ ಮಾತು ತಾನಾಗಿಯೇ ಮೌನವ್ರತವನ್ನು ತಳೆಯುವಂತೆ ಮಾಡಿದ. ತನ್ನಲ್ಲಿ ಪವಡಿಸಿರುವ ಪರವಸ್ತು ಮೈಮುರಿದು ಏಳಬೇಕಾದರೆ, ಎದ್ದು ಬೆಳಕನ್ನು ಚಿಮ್ಮಿಸಬೇಕಾದರೆ ಮಾತು ಸದ್ದಡಗಿ ತಟಸ್ಥವಾಗಬೇಕು. ಮಾತು ಸದ್ದಡಗಿ, ಚಲನೆಯುಡುಗಿ ತಿಳಿಜಲವಾದಾಗ ಅರಿವು ಮೀನಿನಂತೆ ಮೇಲಕ್ಕೆ ಈಸಿಬಂದು ವಿಹರಿಸುವುದು ಕಾಣುತ್ತದೆ.

ಇಬ್ಬರು ವ್ಯಕ್ತಿಗಳು ಪಕ್ಕಪಕ್ಕದಲ್ಲೇ ಬಹುದೀರ್ಘಕಾಲ ಇದ್ದೂ ಮೌನವಾಗಿರುವ ಒಂದು ಅಪರೂಪದ ಪ್ರಸಂಗ ಹರಿಹರನ ಗಿರಿಜಾ ಕಲ್ಯಾಣದಲ್ಲಿದೆ. ತಪಸ್ವಿಗಳ ಒಡೆಯನಾದ ಶಿವ ಒಬ್ಬ, ಅವನನ್ನು ಒಲಿಸಲು ಸರ್ವ ಪ್ರಯತ್ನಗಳನ್ನೂ ನಡೆಸುತ್ತಿರುವ ಗಿರಿಜೆ ಮತ್ತೊಬ್ಬಳು.

ಶಿವ ತಪಸ್ಸಿನಲ್ಲಿ ಮಗ್ನನಾಗಿ ಹೋಗಿದ್ದಾನೆ. ಅವನನ್ನೇ ವರಿಸುತ್ತೇನೆ ಎಂದು ಹಟತೊಟ್ಟಿರುವ ತನ್ನ ಮಗಳು ಪಾರ್ವತಿಯನ್ನು ಕರೆದುಕೊಂಡು ಪರ್ವತರಾಜ ಹೇಮಕೂಟಕ್ಕೆ ಬರುತ್ತಾನೆ. ಕೋಮಲೆಯಾದ ಮಗಳ ಸೇವೆಗಿರಲಿ ಎಂದು ಆತ ಜಯವಿಜಯೆ ಎಂಬ ಸಖಿಯರನ್ನೂ ಕರೆದು ತಂದಿದ್ದಾನೆ. ತಪೋಮಯವಾದ ಆ ಆವರಣವನ್ನು ಪ್ರವೇಶಿಸುವಾಗಲೇ ಅಲ್ಲಿ ಮೌನ ದಟ್ಟವಾಗಿ ಹೆಪ್ಪುಕಟ್ಟಿರುವುದನ್ನು ಕವಿ ಸೂಚಿಸುತ್ತಾನೆ. ಹೇಮಕೂಟಪರ್ವತದ ಮರಗಿಡಗಳಡಿಯಲ್ಲಿ, ಗುಹೆಗಳಲ್ಲಿ "ಶಿವಧ್ಯಾನ ನಾನಾ ತಪೋಭರಭರಿತವಾದ" ಮನುಮುನಿಗಳು ತಪಸ್ಸಿಗೆ ಕುಳಿತಿದ್ದಾರೆ. ಅವರಲ್ಲಂತೂ ಮಾತಿನ ಸೋಂಕಿಲ್ಲ, ಹಕ್ಕಿಗಳ ಧ್ವನಿಯೋ, ಗಾಳಿ ಬೀಸುವ ಶಬ್ದವೋ ಕೇಳುವುದಿಲ್ಲವೇ ಎಂದರೆ ಅದೂ ಇಲ್ಲ.

> ಕರೆಯವು ಕೋಗಿಲೆ ಮಧುಪಂ
> ಮೊರೆಯವು ಗಿಳಿ ಗಳಪವನಿಲನಲ್ಲಾಡಂ ಪೆರ್
> ಮರನಂ ಗಿಡುವಂ ಲತೆಯಂ
> ಗುರು ಶರ್ವ ಸಮಾಧಿ ಭೀತಿಯಿಂದಾ ನಗದೊಳ್

ಕೋಗಿಲೆಗಳು ಕೂಗುತ್ತಿಲ್ಲ, ತುಂಬಿಗಳು ಮೊರೆಯುತ್ತಿಲ್ಲ, ಗಿಳಿಗಳು ಹರಟುತ್ತಿಲ್ಲ, ದೊಡ್ಡಮರಗಳನ್ನಾಗಲೀ, ಗಿಡಗಳನ್ನಾಗಲೀ, ಕೊನೆಗೆ ಬಳ್ಳಿಗಳನ್ನೇ ಆಗಲಿ ಗಾಳಿಯು ಅಲ್ಲಾಡಿಸುತ್ತಿಲ್ಲ. ಕಾರಣ ಗುರು ಶರ್ವನ ಸಮಾಧಿ(ಯನ್ನು ಎಲ್ಲಿ ಕಲಕುತ್ತೇವೆಯೋ ಎಂಬ) ಭೀತಿಯಿಂದ! ಈ ಮೌನವನ್ನು ಕಲಕಿಯೂ ಕಲಕದಂತೆ ಕೇಳಿಸಿದ ಒಂದೇ ಒಂದು ಪಿಸುಮಾತು ನಂದಿ (ಬಹುಶಃ) ಹೇಳಿದ "ತಾಯೆ, ದೇವಿ, ಶಾಂತೆ, ಅನಂತ ಗುಣಾಭರಣೆ, ಕರುಣೆ, ಶರಣು" ಎಂಬುದು ಇದನ್ನೂ ಅವನು ಬಾಯಿಬಿಟ್ಟು ಹೇಳಿರಲಾರ. ಸಂಜ್ಞೆಯನ್ನೂ ಮಾಡಿದಂತಿಲ್ಲ. ಏಕೆಂದರೆ ಗಿರಿಜೆ ಅದಕ್ಕೆ ಯಾವ ಉತ್ತರವನ್ನೂ ಹೇಳಲಿಲ್ಲ. ಬದಲಾಗಿ

> ತೊಳಗುವ ಶಾರದ ನೀರದ
> ದೊಳಗಿಂ ಮಿಂಚಿಳಿವ ತೆರದೆ ಗಿರಿಸುತೆ ಶಶಿಯಂ
> ತಳದಧಿದೇವತೆ ಧರಣೀ
> ತಳಕ್ಕೆ ಬರ್ಪಂತೆ ಪುಷ್ಪಕದಿನಿಳಿತಂದಳ್ ॥*

---

* ಕುಮಾರವ್ಯಾಸನ ಅತ್ಯುತ್ಕೃಷ್ಟವಾದ ವರ್ಣನೆಗಳಲ್ಲಿ ಒಂದು ಊರ್ವಶಿ ಅರ್ಜುನನ ಬಳಿಗೆ ಬಂದ ಪ್ರಸಂಗ. ಅಲ್ಲಿ

ಇಲ್ಲಿ ಹರಿಹರನ ಪ್ರತಿಭೆ ಸೊಗಸಾಗಿ ಕೆಲಸ ಮಾಡಿದೆ. ಪಾರ್ವತಿ ಪುಷ್ಪಕದಿಂದ ಇಳಿಯಬೇಕು, ಅವಳು ಇರುವುದು ಮುಗಿಲಿನ ಎತ್ತರದಲ್ಲಿ. ಅವಳು ಇದ್ದದ್ದು ಚಂದ್ರಮಂಡಲದ ಅಧಿದೇವತೆಯಂತೆ. ಚಂದ್ರಮಂಡಲವೇ ಶುಭ್ರ, ಶ್ವೇತ, ಸುಂದರ. ಇನ್ನು ಅದಕ್ಕೆ ಒಬ್ಬಳು ಅಧಿದೇವತೆ ಇದ್ದರೆ—ಎಂದರೆ ಚಂದ್ರಮಂಡಲಕ್ಕೆ ಶುಭ್ರತೆ, ಬಿಳುಪು, ಸೌಂದರ್ಯಗಳನ್ನು ನೀಡುವ ದೇವಿ ಇದ್ದರೆ ಅವಳಂತೆ ಪಾರ್ವತಿ ಇದ್ದಾಳೆ. ಪುಷ್ಪಕದಿಂದ ಇಳಿದದ್ದೂ—ಹೊಳೆಯುತ್ತಿರುವ ಶರತ್ಕಾಲದ ಮೋಡದೊಳಗಿಂದ ಮಿಂಚು ಇಳಿಯುವಂತೆ. ಇಳಿದದ್ದೇನೋ ಸರಿ—ಆದರೆ ಪರಿಸ್ಥಿತಿಯ ಗಾಂಭೀರ್ಯ ತಿಳಿಯದ ಅವಳ ಕಾಲಂದುಗೆ ನಗ (=ಬೆಟ್ಟ)ವನ್ನೂ ಜಗವನ್ನೂ ತುಂಬುವಂತಹ ಮಧುರವಾದ ಧ್ವನಿಯನ್ನು ಹೊಮ್ಮಿಸುತ್ತದೆ; ಪುಟ್ಟ ಪಾದದ ಅಂದುಗೆಯ ಧ್ವನಿಯಾದುದರಿಂದಲೂ ಅದು ನಗವನ್ನೂ ಜಗವನ್ನೂ ತುಂಬಬೇಕಾದಷ್ಟಾದ್ದರಿಂದಲೂ ತಪಸ್ವಿಮಹಾದೇವನ ಮನಸ್ಸಿನ ಅಂಚನ್ನೂ ಅದು ಮುಟ್ಟಿರಲಾರದು!

ಆ ನಗವನ್ನೂ ಜಗವನ್ನೂ ತುಂಬಿದ್ದದ್ದು ದಿಕ್ಕುಗಳನ್ನೆಲ್ಲ ನಿರ್ಮಲಗೊಳಿಸಿದ್ದ ವಿರೂಪಾಕ್ಷನ ಪ್ರಭಾಮಂಡಲ. ಆ ಪ್ರಭಾಮಂಡಲದಲ್ಲಿ ತಪೋವೇಷದಿಂದ ತಪಸ್ವಿಯಾದ ಈಶ ತನ್ನಲ್ಲಿ ತಾನು ಮಗ್ನನಾಗಿ ಕುಳಿತಿದ್ದ. ಅಂತಹವನನ್ನು ತೋರಿಸಿ, ಬಹುಶಃ ಸನ್ನೆಯಿಂದಲೇ, ಇವನನ್ನು ಪ್ರೀತಿಯಿಂದ ಪೂಜಿಸು ಎಂದು ಪರ್ವತರಾಜ ಮಗಳಿಗೆ ಹೇಳಿದ.

ಶಿವನನ್ನು ನೋಡುತ್ತಲೇ ಅವಳಲ್ಲಿ ಹತ್ತುತೆರದ ಭಾವನೆಗಳು. ನಾನು ಹೀಗಿರುವಾಗ ತಪಸ್ಸು ಏಕೆ ಎಂಬ ಅಹಂಕಾರ; ನೀನೇ ಗತಿ ದಯೆಯನ್ನು ನೀಡು ಎಂಬ ಕಾರ್ಪಣ್ಯ, ದೈನ್ಯ: ತನಗೆ ತಾನೇ ಆನಂದಮಯನಾಗಿರುವವನು ಇನ್ನು ನನ್ನನ್ನು ಏಕೆ ಗಮನಿಸುತ್ತಾನೆ ಎಂಬ ನಿರ್ವೇದ, ನಾನಾ ವಿಧವಾದ ಭೋಗಗಳಿಂದ ಇವನನ್ನು ಎಂದು ಕೂಡಿಯೇನು ಎಂಬ ಆಸೆ. ಇಷ್ಟು ಭಾವನೆಗಳನ್ನು ಮನಸ್ಸಿನಲ್ಲಿ ತಳೆದು ಅವಳು ಶಿವನನ್ನು ನೋಡಿದಳು. "ಈತ ಶಿವ, ನನ್ನ ವಲ್ಲಭ, ಇವನನ್ನು ಅರ್ಚಿಸಿ ನಾನು ಸುಖದಿಂದ ಇರುತ್ತೇನೆ" ಎಂಬ ಭರವಸೆಯನ್ನು ತಂದೆಗೆ ನೀಡಿ ಅವನು ಹೋಗಬಹುದು ಎಂಬುದನ್ನು ಸೂಚಿಸಿದಳು. ಆತ ಹೊರಟ. ಹತ್ತು ಹೆಜ್ಜೆಗಳನ್ನೂ ಇಟ್ಟ. ಆದರೆ ಮಗಳ ಮೇಲಣ ಮೋಹ ಬಾಧಿಸಿತು. ಮತ್ತೆ ಹಿಂದಕ್ಕೆ ಬಂದ. "ಹೋಗುತ್ತೇನೆ" ಎಂದು ಹೇಳಿ ಮತ್ತೆಮತ್ತೆ ಮಗಳನ್ನು ಅಪ್ಪಿ ಹರಸಿ ಹಿಂದಕ್ಕೆ ಹೋದ."

ಮುಂದಿನ ಪೂಜಾಕ್ರಿಯೆಗಳೆಲ್ಲಾ ಪೂರ್ಣವಾಗಿ ಮೌನದಲ್ಲೇ ನಡೆಯುತ್ತವೆ, ಉಮೆ ತನ್ನ ಸಖಿಯರಿಗೆ ತನ್ನ ತಪೋನಿಶ್ಚಯವನ್ನು ತಿಳಿಸುವ ಕೆಲವು ಮಾತುಗಳನ್ನು ಬಿಟ್ಟು. ಹೂವುಗಳನ್ನು ಸಂಗ್ರಹಿಸುತ್ತಾಳೆ. ಬಗೆಬಗೆಯ ಹೂವುಗಳನ್ನು ತಿರಿದು 'ಪರಿಮಳದ ಅಧಿದೇವತೆ ಎಂಬಂತೆ, ಕುಮುದದ ಜೊತೆಯಲ್ಲೇ ಬಂದ ಚಂದ್ರಕಳೆ ಎಂಬಂತೆ ಕಮಲದ ಮಧ್ಯದಿಂದ ಎದ್ದು ಬಂದ ಲಕ್ಷ್ಮಿ ಎಂಬಂತೆ' ದೇವಿ ಹೂಗಳನ್ನು ಪೋಣಿಸಿ ಮಾಲೆ ಕಟ್ಟಿದಳು. ಹತ್ತು ರೀತಿಯ ಮಾಲೆಗಳನ್ನು ಕಟ್ಟಿ ದಣಿಯದಾದಳು. ತಾನು ಮಿಂದು ಅಲಂಕರಿಸಿಕೊಂಡು 'ಚಂದ್ರಕಲೆ ಕಣ್ಣು ತೆರೆದಂತೆ ಚಂದ್ರಧರನ' ಮುಂದೆ ಬಂದು ನಿಂತಳು. ಮುಂದಿನದೆಲ್ಲ ಮೌನವಾಗಿ ನಡೆಯುವ ಪೂಜಾಕ್ರಿಯೆಯ ವರ್ಣನೆ. ಹಗಲೂ ರಾತ್ರಿಯೂ ಕಾಮನು ಎಳೆದು ಎಳೆದು ಬಿಡುತ್ತಿರುವ ಹೂವಿನ ಬಾಣಗಳು ಎಂಬಂತೆ ಅವನ ಪಾದಗಳಿಗೆ ಪುಷ್ಪಾಂಜಲಿಯನ್ನು ಸಮರ್ಪಿಸಿದಳು. ತನ್ನ ಆನಂದಾಶ್ರುಗಳಿಂದ ಶಶಿಮೌಳಿಯ ಚರಣಗಳನ್ನು ತೊಳೆದಳು. ಶಿವನ ಕತ್ತಿಗೆ ಹಾರವನ್ನು ಹಾಕುವ ನೆಪದಲ್ಲಿ ಅವನನ್ನು 'ಮುಟ್ಟಿ ಮುಟ್ಟಿ ಪುಳಕಿಸಿದಳು!' ಶಿವನ ಇಡೀ ದೇಹವನ್ನು ಅವಳು ಕ್ರಮಕ್ರಮವಾಗಿ ನೋಡಿದ ರೀತಿ ಹರಿಹರನ ಮತ್ತೊಂದು ಪ್ರತಿಭಾ ಸೃಷ್ಟಿ:

> ಪೊಸ ಜಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್
> ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್
> ಮಿಸುಗೆ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ
> ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್ ॥

ಅವಳು ಭವಾನಿ, ಶಿವನ ಅರ್ಧಾಂಗಿಯಾಗಿದ್ದವಳು. ಈಗ ಮರುಜನ್ಮ ಪಡೆದು ಮತ್ತೆ ಶಿವನನ್ನೇ ಪಡೆಯಲು ತಪಸ್ಸಿನಲ್ಲಿ ನಿರತಳಾಗಿರುವವಳು. ಆದುದರಿಂದ ಅವಳು ತನ್ನ ಇಷ್ಟದೈವವನ್ನು, ಪೂಜಾಮೂರ್ತಿಯನ್ನು ನೋಡಬಹುದು. ಆದರೆ ಮಾನಿ! ಅವಳು ಅಭಿಮಾನವುಳ್ಳವಳು, ಶಿವನೂ ಇಷ್ಟಪಟ್ಟು ತನ್ನನ್ನು ವರಿಸಿದ ಮೇಲೆ ಅವನನ್ನು

---

ಊರ್ವಶಿಯ ಪ್ರವೇಶ: "ಬಂದಳೂರ್ವಶಿ ಬಳ್ಳಿ ಮಿಂಚಿನ ದುಂದಿಯಲಿ ಮುರಿದಿಳಿವ ಮರಿಮುಗಿಲಂದದಲಿ ದಂಡಿಗೆಯನಿಳಿದಳು ರಾಜಭವನದಲಿ." ಆರಣ್ಯಪರ್ವ. 8 : 13

ಕಣ್ಣುತುಂಬ ನೋಡುವ ಹಕ್ಕನ್ನು ಪಡೆಯಬೇಕಾದವಳು. ಆದ್ದರಿಂದ ಅವನನ್ನು ಪೂರ್ತಿಯಾಗಿ ಒಮ್ಮೆಲೇ ನೋಡುವಂತೆಯೂ ಇಲ್ಲ!—ಅದೂ ತನ್ನನ್ನು ಗಮನಿಸುತ್ತಿರುವ ಸಖಿಯರ ಮುಂದೆ. ಆದ್ದರಿಂದ, ಮೌನವಾಗಿ, ಯಾರು ಕಂಡರೂ ತಾನು ಶಿವನನ್ನೇನೂ ನುಂಗುವಂತೆ ನೋಡುತ್ತಿಲ್ಲ ಎಂಬುದನ್ನು ತೋರಿಸಿಕೊಳ್ಳುವಂತೆ, ಶಿವನನ್ನು ಅಂಶಅಂಶವಾಗಿ ನೋಡುತ್ತಿದ್ದಾಳೆ. ಆ ಮಾನಿನಿಯ ದೃಷ್ಟಿಗಳು ಶಿವನ ಶಿರೋಭಾಗದಲ್ಲಿ ನೆಲೆಸಲು ಹೋದಾಗ ಅವನ ಜಟೆಯಲ್ಲಿ ತೊಡರಿಕೊಂಡವಂತೆ. ಹರಿಹರನ ಪ್ರತಿಭಾಸೃಷ್ಟಿ ಇದು ಎಂದು ಹೇಳಿದ್ದಕ್ಕೆ ಕಾರಣ ಇಲ್ಲಿದೆ : ಕೂದಲು ಸಿಕ್ಕುಸಿಕ್ಕಾಗಿ ಜಟೆಯಾಗಿದೆಯಷ್ಟೆ. ಉಮೆಯ ದೃಷ್ಟಿಗಳು ಜಟಾಭಾಗದಲ್ಲಿ ಹರಿದಾಡಲು ಹೊರಟಾಗ ಅಲ್ಲಿ ತೊಡರಿಕೊಂಡಿವೆ. ಅಲ್ಲಿಂದ ಹೇಗೋ ಬಿಡಿಸಿಕೊಂಡು ಹಣೆಯ ಭಾಗಕ್ಕೆ ಬಂದುವು. ಅಲ್ಲಿ ಅವು ಧಾರಾಳವಾಗಿ ಓಡಾಡಿದುವಂತೆ. ಏಕೆಂದರೆ ಶಿವನ ವಿಶಾಲವಾದ ಲಲಾಟ ಅದು. ಅಲ್ಲಿಂದ ಕಪೋಲಭಾಗದಲ್ಲಿ ದೃಷ್ಟಿಗಳು ಹರಡಿಕೊಂಡುವು. ಮುಂದೆ ಕಣ್ಣುಗಳ ಭಾಗಕ್ಕೆ ಬಂದರೆ—ಅವು ಮುಚ್ಚಿಕೊಂಡಿವೆ. ಆದ್ದರಿಂದ ಅಲ್ಲೇ ಇವಳ ದೃಷ್ಟಿಗಳು ಮೆತ್ತಿಕೊಂಡುವು. ಶಿವನ ಕಣ್ಣುಗಳು ತೆರೆದಿದ್ದರೆ ಇವಳ ದೃಷ್ಟಿಗಳು ಅಲ್ಲಿ ನಿಲ್ಲುವ ಸಂಭವವೇ ಇಲ್ಲ, ಏಕೆಂದರೆ ಅವಳು ಮಾನಿ! ಮುಖದಲ್ಲೂ-ಬಾಯಭಾಗದಲ್ಲೂ ಅವು ಕೀಲಿಸಿ ನಿಂತುವು! ಶಿವನ ಕಂಠದಲ್ಲಿ ನೆಲಸಿದ ಕೂಡಲೇ ಇವಳ ದೃಷ್ಟಿಗಳು ಹೊಳೆದುವಂತೆ—ಸಹಜವೇ. ಏಕೆಂದರೆ ಶಿವನ ಕಂಠವು ಕಪ್ಪಾಗಿದೆ, ಅಲ್ಲಿ ನೆಲಸಿದ ವಿಷದಿಂದಾಗಿ! ಅಲ್ಲಿ ಬಿದ್ದ ಇವಳ ದೃಷ್ಟಿಗಳು ಹೊಳೆಯುತ್ತಿವೆ ! ಭುಜ ಪ್ರದೇಶದಲ್ಲೂ ಅವು ಹೊಳೆದುವು. ಅವನ ಎದೆಯ ಭಾಗಕ್ಕೆ ಹೋದಕೂಡಲೇ ಇವಳ ದೃಷ್ಟಿಗಳು ಮುಳುಗಿಯೇ ಹೋದುವು. ಪದ್ಮಾಸೀನನಾಗಿ ಕುಳಿತ ಭಗವಾನ್ ಚಂದ್ರಮೌಳಿಯು ತನ್ನ ಕೈಗಳನ್ನು ಧ್ಯಾನಮುದ್ರೆಯಲ್ಲಿ ಇಟ್ಟುಕೊಂಡಿದ್ದಾನೆ. ಅವುಗಳ ಮೇಲೆ ಬಿದ್ದ ಭವಾನಿಯ ದೃಷ್ಟಿಗಳು ಮತ್ತೆ ಹೊಳೆದುವು. ಕೊನೆಯದಂತೂ ಅತ್ಯಂತ ಉಚಿತವಾದ ನಿರೂಪಣೆ. ಶಿವನ ಪಾದಗಳನ್ನು ಕಂಡಕೂಡಲೇ ಅಲ್ಲಿ ಅವಳ ದೃಷ್ಟಿಗಳು "ಬಿದ್ದುವು." ಅದರಾಚೆಗೆ ಗಮನವಿಲ್ಲ. ಸಮರ್ಪಣೆಯ ಭಾವ ಪೂರ್ಣವಾಯಿತು.

ಮುಂದಿನ ಅವಳ ಕ್ರಿಯೆಗಳೂ ಕುತೂಹಲಕಾರಿಯಾದುವೇ. ಶರ್ವನ ಸರ್ವಾಂಗದಲ್ಲೂ ಅವಳ ದೃಷ್ಟಿ ಪ್ರಸರಿಸಿದ ಮೇಲೆ ಮುಂದೇನು! ಕ್ರಿಯಾಪದಗಳ ಸರಮಾಲೆಯಿಂದ ಅವಳ ಭಾವವೈವಿಧ್ಯವನ್ನು ಕವಿ ಸೂಚಿಸಿದ್ದಾನೆ:

ಬೆಮರ್ದಳ್ ಬೆರ್ಚುವಳು ಸಿವ
ಳಮರ್ದಳ್ ಪೆಱಸಾರ್ವಳಂಜಿ ನಿಲ್ವಳ ಸೋಂಕಲ್
ನಿಮಿರ್ವಳ್ ನೆನೆವಳ್ ಮುನಿವಳ್
ಸಮಸಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್

ಉತ್ಸಾಹ, ಭಯ, ಸಂಕೋಚ, (ತನ್ನ ಬಗೆಗೇ ?) ಕೋಪ—ಕೊನೆಗೆ ನಿಟ್ಟುಸಿರು ತಾಪ—ಇವು ಅವಳನ್ನು ಹಿಡಿದು ಬಿಟ್ಟು, ಹಿಡಿದು ಬಿಟ್ಟು ಮಾಡುತ್ತಿವೆ. ಮುಂದಿನ ಒಂದು ಕಂದಪದ್ಯದಲ್ಲಿ ಪಾರ್ವತಿಯ ಮನಸ್ಥಿತಿಯ ಎರಡು ಅತಿರೇಕಗಳನ್ನು ವರ್ಣಿಸಿದ್ದಾನೆ ಹರಿಹರ. ಶಿವನ ಸುಂದರವಾದ, ಕಾಂತಿಮಯವಾದ, ಸುಕುಮಾರವಾದ ಅವಯವಗಳನ್ನು ನಿರೀಕ್ಷಿಸಿ (ಅವನಲ್ಲಿ ಅನುರಕ್ತಳಾಗಿ ಬಂದಿರುವ ಗಿರಿಜೆ) ನಲಿಯುತ್ತಾಳೆ. ಆದರೆ ಸಂತೋಷದ ಆಧಿಕ್ಯ ಚಿರಾಯುವಾದದ್ದು. ಏಕೆಂದರೆ ಶಿವನ ವೈರಾಗ್ಯ ಬೆಟ್ಟದಂತೆ ಅಚಲವಾದದ್ದು. ಅದನ್ನು ನೆನೆದು, ಭಯದಿಂದ ನಡುಗಿ, ಆಕೆ ಸಿಡಿಮಿಡಿಗೊಂಡಳು! ಶಿವನನ್ನು ಹರಿಹರ ನಿರ್ದೇಶಿಸುವ ಪದವನ್ನು ಗಮನಿಸಿ—"ತಾರಾಚಳನಾಥ" ಬೆಳ್ಳಿಯ ಬೆಟ್ಟದ ಒಡೆಯ ಅವನು. ಅವನ ವೈರಾಗ್ಯವೂ ಅಚಲವಾದದ್ದು—'ತಾರಾಚಳನಾಥನ ಘನ ವೈರಾಗ್ಯ.'

ಮುಂದೆಯೂ ಮಾತಿಲ್ಲ. ನಗೆ, ಕಣ್ಣೀರು, ಬಳಲಿಕೆ, ಇವೇ ಕ್ರಿಯಾಪರವಾಗಿರುವುವು—ಇವೆಲ್ಲಾ ತೀರಿದಾಗ ಗಿರಿಜೆ ಹೊಸಹೊಸ ಹೂಗಳನ್ನು ತಂದು ತನ್ನ ಆರಾಧ್ಯಮೂರ್ತಿಯನ್ನು ಪೂಜಿಸುತ್ತಾಳೆ. ಆ ತಪೋಮೂರ್ತಿಯೇ ಕುಳಿತಿದ್ದಾನೆ, ನಿಶ್ಚಲನಾಗಿ, ಏಕಕಾಲದಲ್ಲಿ ಚಂದ್ರಸೂರ್ಯರಂತೆ! "ನೋಡುವವರ ಕಣ್ಣಿಗೆ ಶೀತಳವಾದ ಕಿರಣಗಳನ್ನು ಬೀರುವ ಚಂದ್ರಮನಂತೆ ; ಮುಟ್ಟುವವರ ಮೈಯಿಗೆ ತೀವ್ರವಾದ ಪ್ರತಾಪವನ್ನು ಕೊಡುವ ಸೂರ್ಯನಂತೆ!

ತಪಸ್ಸಿಗೆ ಬೇಕಾದದ್ದು ಮೌನದ ಆವರಣ. ಅದನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾನೆ ಹರಿಹರ. ಸಾಮಾನ್ಯವಾಗಿ ಭಕ್ತಿ, ಪೂಜೆಗಳ ಸಂದರ್ಭದಲ್ಲಿ ತನ್ನನ್ನು ತಾನು ಮರೆತು ಹೆಚ್ಚು ಎನ್ನುವಷ್ಟು ಮಾತಿನ ಭರವನ್ನು ತೋರಿಸುವ ಈ ಕವಿ ಜಗದೀಶ್ವರನನ್ನು ಒಲಿಸಲು ಜಗನ್ಮಾತೆ ತಾನು ಪೂಜಾನಿರತಳಾಗಿರುವುದನ್ನು ವರ್ಣಿಸುವ ಸಂದರ್ಭದಲ್ಲಿ ತನಗೆ ತಾನೇ ಸಂಯಮದ ವ್ರತವನ್ನು ನೀಡಿಕೊಂಡು ಅಭಿನಂದನೀಯವಾದ ರೀತಿಯಲ್ಲಿ ಯಶಸ್ಸನ್ನು ಸಾಧಿಸಿದ್ದಾನೆ.

# ಅರ್ಚನ

...ಅನ್ನದಾಸೋಹ, ಜ್ಞಾನದಾಸೋಹಗಳ ಉಜ್ಜ್ವಲ ಕಾಯಕದಲ್ಲಿ ತೊಡಗಿರುವ ಇಂತಹ ಶ್ರೀಗಳು ಆದರಣೀಯರೂ ಅಭಿನಂದನೀಯರೂ ಆಗಿದ್ದಾರೆ... ಶ್ರೀ ಸ್ವಾಮೀಜಿಯವರ ಅರವತ್ತನೆಯ ಹುಟ್ಟುಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಹೊರತರಲಿರುವ ಗ್ರಂಥವನ್ನು ನೋಡಿ ನಾನು ಆಶ್ಚರ್ಯಚಕಿತನಾಗಿದ್ದೇನೆ. ಗ್ರಂಥಪ್ರಕಟಣೆಯೂ ಮಹಾಸಾಹಸವಾಗಿರುವ ಈ ಕಾಲದಲ್ಲಿ ಸಾವಿರದ ನೂರರಷ್ಟು ಪುಟಗಳಿರುವ ಈ ಗ್ರಂಥದ ಆಕಾರಬಾಹುಳ್ಯ ಮಾತ್ರವೇ ನನ್ನ ಆಶ್ಚರ್ಯಕ್ಕೆ ಕಾರಣವಲ್ಲ; ನಾಡಿನ ಅನೇಕಾನೇಕ ಸುಪ್ರಸಿದ್ಧ ವಿದ್ವಾಂಸರ ವಿದ್ವತ್ಪೂರ್ಣವಾದ ಲೇಖನಗಳನ್ನು ಸಂಗ್ರಹಿಸಲು ಸಂಪಾದಕರಾದ ಡಾ॥ ಎಚ್. ಪಿ. ಮಲ್ಲೇದೇವರು ಪಟ್ಟಿರಬಹುದಾದ ಶ್ರಮವನ್ನು ನೆನೆದು, ಅವರು ಸಾಧಿಸಿರುವ ಸಿದ್ಧಿಯನ್ನು ಗಮನಿಸಿ ಕೂಡ ಆಶ್ಚರ್ಯಪಟ್ಟಿದ್ದೇನೆ. ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲ, ಇತರ ಧರ್ಮಗಳಿಗೂ ಸಂಬಂಧಿಸಿದಂತೆ ಅಮೂಲ್ಯವಾದ ಲೇಖನಗಳು ಈ ಅಭಿನಂದನ ಗ್ರಂಥದಲ್ಲಿ ಸೇರಿರುವುದನ್ನು ಗಮನಿಸಿದ್ದೇನೆ. ಈ ಗ್ರಂಥವನ್ನು ಇಷ್ಟು ಅಚ್ಚುಕಟ್ಟಾಗಿ ಸಂಪಾದಿಸಿರುವ ವಿದ್ವಾಂಸಮಿತ್ರರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಕುವೆಂಪು



